ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯಪಗಮಾದ್ವ ಕರ್ಣಾಟಕಪ್ರಕಾಶನಪರಾಭಿದಾಪ್ರತಿತಸಾಹಿತೀಶೋಭಿತಾ ॥ ವ್ಯಗಾಂಸಹಿತಪಾಸರಿನಿಹಿತಮುದ್ರಣಾಸಜ್ಜನೈರ್ದ್ಧಿಕಾಸುಪರಿಪೂರ್ಣಾಬುತಾವಿಕಶಿತಮಾನಸಂಸುಮುದಂ ॥

Vol. XIII.] BANGALORE:—MONDAY, JANUARY 4, 1886. [No. 1.

ಸಂಪುಟ ೧೩.] ಬೆಂಗಳೂರು:—ಸರ್ ೧೮೮೬ನೇ ಇಸವಿ ಜನವರಿ ೪ನೇ ತಾರೀಖು ಸೋಮವಾರ. [ಸಂಚಿಕೆ ೧

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮಿಷ್ಯನ್ ಮರ್ಚೆಂಟ್ಸ್.

ಬೆಂಗಳೂರು ತರಗುಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪನಿಯವರು, ಅವರಿಗೆ ಕೊಡಲ್ಪಡುವ ತರಾವರಿ ಕೆಲಸಗಳನ್ನು ಜಾಗರೂಕತೆಯಿಂದಲೂ ಶೀಘ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗದುಕೊಳ್ಳಲ್ಪಡುವದು.

ಪ್ರಕಟನೆ.

ಅನೇಕ ವಿಧವಾದ ವಾಯು ಉಪದ್ರವಕ್ಕೆ ಅಜೀರ್ಣತಯಿಲವೆಂಬ ಎಣ್ಣೆಯೂ, ವೀರ್ಯವೃದ್ಧಿಯಾಗತಕ್ಕದ್ದಕ್ಕೆ ತಿಲಾ ಎಣ್ಣೆಯೂ, ತಲೆನೋವು ಅರೆತಲೆನೋವು ವಗೈರೆಗೆ ತಲೆಗೆ ಹಚ್ಚಿಕೊಳ್ಳುವದಕ್ಕೆ ಎಣ್ಣೆಯೂ, ಹಲ್ಲುನೋವು ಉಪದ್ರವಗಳಿಗೆ ಒಂದುವಿಧವಾದ ಹಲ್ಲುಪುಡಿಯೂ ಸಿದ್ಧವಾಗಿರುತಿವೆ. ವ್ಯಾಧಿ ಪೀಡಿತರಾದವರು ಬೇಕಾದ ಔಷಧವನ್ನು ತರಿಸಿಕೊಳ್ಳಬಹುದು. ಕಡಮೆ ಕ್ರಯಕ್ಕೆ ಮಾರುವದು. ಇವರೊಡನೆ ಇಟ್ಟರತಕ್ಕ ನೋಟೀಸಿನಿಂದ ತಿಳಿದುಕೊಳ್ಳಬಹುದು.

ವಿಸಾಲರ್ಹಜುಅಲ್ಲೀಸಾಹೇಬ,

ಯೂನಾನಿ ವೈದ್ಯ ಬೆಂಗಳೂರು ದೊಡ್ಡಪೇಟೆ.

ನೋಟೀಸು.

ಪತಂಜಲಿಯೋಗಪ್ರದೀಪಿಕೆ ಮತ್ತು ಪಾತಂಜಲ ಯೋಗಸೂತ್ರಗಳು

ಕ್ರಯಕ್ಕೆ ಸಿದ್ಧವಾಗಿರುತಿವೆ.

ಅಪೇಕ್ಷೆಯುಳ್ಳವರು ಬೆಂಗಳೂರು ಗವರ್ನಮೆಂಟ್ ನಾರ್ಮಲ್ ಸ್ಕೂಲ್ ಹೆಡ್ ಮಾಸ್ಟರ್ ಹಿ. ನರಸಿಂಹಶಾಸ್ತ್ರಿಗಳಿಗಾಗಲಿ, ಕರ್ಣಾಟಕಬುಕ್ ಡಿಪೋ ವಾಸುದೇವಯ್ಯ ಕೃಷ್ಣಯ್ಯನವರಿಗಾಗಲಿ, ಇದರ ಬೆಲೆ ಚಾರ್ಜನ್ನು ಕಳುಹಿಸಿ ತರಿಸಿಕೊಳ್ಳಬಹುದು.

ಪಾತಂಜಲಯೋಗಸೂತ್ರ ಪ್ರತಿ ೧ಕ್ಕೆ		೧	೦	೦
ಪತಂಜಲಿಯೋಗಪ್ರದೀಪಿಕಾ	,,	೧	೪	೦
ಪೋಸ್ಟ್ ಚಾರ್ಜ್	,,	೦	೨	೦

ವೇ.ಪೇ.ಕಳುಹಿಸುವವರು ರೂ॥ ೧ಕ್ಕೆ ೧ಆಣೆ ಡಿಸ್ಕೌಂಟ್ ಸಹ ಕಳುಹಿಸಬೇಕು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JANUARY 4, 1886.

೧೮೮೬ನೇ ಜನವರಿ ೪ನೇ ತಾ॥ ಸೋಮವಾರ.

ಶ್ಲೋ॥ ಸರ್ವಜ್ಞತಾಂಶವಿನಿವೇಶಿತಚಿತ್ರಗೂಢವಾಣೀಶ್ವರಪ್ರಿಯಸುರಾಸುರಶೋಭಿತಾನುಕೃತ್ಯಮ ವದಿನಮನುಜಸಮಸ್ತರಾಮಿ ತ್ವಾಮೆಸಮಿರ್ಗ ಗಂಜನೀ ತ್ವಮೇವ॥

THE PAST YEAR.

ಕ್ರಿಸ್ತುಶಕದ ೧೮೮೫ನೇ ಇಸವಿ ಕಳೆದು ೧೮೮೬ನೇ ವರುಷಹುಟ್ಟಿ ಈಗ ಮೂರುದಿನಗಳಾಯಿತಷ್ಟೆ. ಇಂತಾ ಸಂವತ್ಸರಾದಿಯಲ್ಲಿ ಹಿಂದಿನವರುಷದ ವಿಶೇಷಾಂಶಗಳನ್ನು ಸಂಗ್ರಹವಾಗಿ ಅನುವಾದಮಾಡುವದು ಪತ್ರಿಕಾಲೇಖಕರಾದ ನಮಗೆಲ್ಲ ಅನಾದಿಸಿದ್ಧವಾದ ವಾಡಿಕೆಯಾದದರಿಂದ ಅಂತಾ ನಮ್ಮ ಕರ್ತವ್ಯವನ್ನು ಸಾಧ್ಯವಾದಮಟ್ಟಿಗೆ ನೆರವೇರಿಸುವೆವು.

ಪ್ರಥಮತಃ ನಮಗೀಗ ವಾಸಭೂಮಿಯಾಗಿರುವ ಮೈಸೂರುರಾಜ್ಯದ ವೃತ್ತಾಂತವನ್ನು ಬರೆಯುವಲ್ಲಿ ನಮ್ಮ ಜ್ಞಾಪಕಕ್ಕೊಳಗಾದ ಕೆಲವು ವಿಶೇಷಾಂಶಗಳಿಂದ ಗತ ಸಂವತ್ಸರವು ಸ್ಮರಣೀಯವಾಗಿ ಏರ್ಪಟ್ಟಿತು. ಕಳೆದವರುಷದ ಮಧ್ಯಕಾಲದೊಳು, ಈ ರಾಜ್ಯಕ್ಕೆ ಕ್ಷಾಮಭೀತಿಯುಂಟಾಗಿ ತತ್ಪ್ರಯುಕ್ತಗಳಾದ ಸನ್ನಾಹಗಳನ್ನು ಮಾಡುವದಕ್ಕೆ ಗವರ್ನಮೆಂಟಿನವರು ಪ್ರಯತ್ನಪಡುತಾಸ್ಥಿತಿಯು ಇಲ್ಲಿ ಪ್ರಾಪ್ತವಾಗುವದಾಗಿರಲು, ದೈವಾನುಗ್ರಹದಿಂ ಅಕಾಲವೃಷ್ಟಿಯಮೂಲಕ ಅದುತಪ್ಪಿ ಪ್ರಜೆಗಳು ಸಾವಧಾನಸ್ಥಿತಿಯೊಳಾದರೂ ಇರಲಿಕ್ಕೆ ಕಾರಣವಾಯಿತು. ಕಳೆದಸಾಲ್ ಉತ್ತರಭಾಗದಲ್ಲಿ ಅಶ್ರುತಪೂರ್ವವಾದ, ನಕ್ಷತ್ರಪತನದಿಂದ ಇಲ್ಲಿನ ಪ್ರಜೆಗಳೆಲ್ಲರಿಗೂ ಭಯಸಮಸ್ತ ಉಂಟಾಗಲಿಕ್ಕೆ ನಿಮಿತ್ತವಾಯಿತು. ಯಥಾ ಅದರಫಲವು ಅನ್ಯತ್ರ ಅದರೂ ಸಿದ್ಧಿಸದಿರಲಿಲ್ಲವು. ಕಳೆದವರುಷದಲ್ಲಿ ದೈನಿಕವಾದ ಪ್ರಜಾಕ್ಷೋಭೆಯೊಂದೂ ಇಲ್ಲಿ ಪ್ರಾಪ್ತವಾಗಲಿಲ್ಲವು. ಪರಂತು ಕಾಲಧರ್ಮವನ್ನನುಸರಿಸಿ ಯಥೋಚಿತ ರೋಗಾದ್ಯುಪದ್ರವಗಳು ಅಲ್ಲಲ್ಲಿ ತಲೆದೋರಿದ್ದವೇ ಹೊರ್ತು ವಿಶೇಷತಃ ಇಲ್ಲಿ ಉದಹರಿಸತಕ್ಕ ಅಂಶಗಳೊಂದೂ ಕಾಣಿಸಲಿಲ್ಲವು.

ಗತಸಂವತ್ಸರವು ಶುಭೋದರ್ಕವಾದ ಒಂದು ಮುಖ್ಯಾಂಶದಿಂ ನಮಗೆ ಅನವರತ ಸ್ಮರಣೀಯವಾಗಿರುತಿವೆ. ಅದೇನೆಂದರೆ,—ನಮ್ಮ ಮಹಾರಾಜರವರಿಗೆ ಬ್ರಿಟಿಷ್ ಗವರ್ನಮೆಂಟಿನವರೊಳು ಅಂತರವಾಗಿರುವ ರಾಜಭಕ್ತಿ ಕೃತಜ್ಞತಾದಿ ಭಾವಗಳು ಅನುಗುಣವಾಗಿ ಗೌರವಿಸಲ್ಪಟ್ಟು ತತ್ಸೂಚಕವಾಗಿ ಸಾರ್ವಭೌಮ ಮಹಾರಾಣಿ ಕೃಪ್ಪನ್ನರಾಜ ಒಡೆಯರ್ ಬಹದೂರವರಿಂದ ಪರಿಗ್ರಹಿಸತಾಗಿದ್ದ ಜಿ. ಸಿ. ಎಸ್. ಐ. ಎಂಬ ಘನತರವಾದ ಪಾತ್ರತ್ವವು ಅವರಪುತ್ರರಿಗೆ ಸಹ ಪ್ರಾಪ್ತವಾದದ್ದಲ್ಲದೆ, ತತ್ಕಾಲದೊಳು ಪ್ರಾರ್ಥಿತವಾಗಿದ್ದ ಜಾಸ್ತೀ ಸಬ್ಸಿಡಿಯನ್ನು ಇನ್ನೊಂದು ಹತ್ತುವರುಷಗಳತನಕ ನಿಲ್ಲಿಸಿಟ್ಟು ನಮ್ಮೀ ದೇಶಕ್ಕೆ ಪ್ರಾಪ್ತವಾಗಿರುವ ಅರ್ಥವಿಷಯಕವಾದ ತಗಾದೆಯನ್ನು ನಿವೃತ್ತಿಸಿಕೊಳ್ಳುವನ್ನಟ್ಟ ಅನುಕೂಲ್ಯವು ಸಹಕಲ್ಪಿಸಲ್ಪಟ್ಟಿತು. ಇಂತಾಪ್ರಯೋಜನವನ್ನು ಮಹಾರಾಜಾ ಸರ್ಕಾರದವರು ಪ್ರಯೋಜನಪಡಿಸಲಿಲ್ಲವು. ಹಿಂದೆ ಅನಾವಶ್ಯಕತ್ವೇನ ತೋರಬಂದು ತೆಗೆದುಹಾಕಲ್ಪಟ್ಟ ನೌಕರಿಯನ್ನೆಲ್ಲ ಮರಳಿ ನೆಲೆಗೊಳಿಸಿ ಅವುಗಳಿಗೆ ನಿಯಮಿತರಾದವರಿಗನುಗುಣವಾದ ವೇತನವನ್ನೇರ್ಪಡಿಸಿದರು. ಇದಲ್ಲದೆ ಗತ ಐವತ್ತುವರುಷಗಳ ಕಾಲ ನೆಲೆಗೊಂಡಿದ್ದ ಬ್ರಿಟಿಷ್ ಆಳ್ವಿಕೆಯಲ್ಲಿ ಸಹ ಇಲ್ಲದಂತಾ ನೂತನ ಕೆಲಸಗಳನ್ನು ಕಲ್ಪಿಸಿದರು. ಇವುಗಳಲ್ಲಿ ನಿವೃತ್ತನಾಗಿರುವ ಮೆಸ್ಟರ್ ರಿಕೆಟ್ಸಿಯವರು ಈಗ ವಹಿಸಿರುವ ಇನ್‌ಸ್ಪೆಕ್ಟರ್ ಜನರಲ್ ಆಫೀಸರೆಂಬ ಮತ್ತು ಸ್ಟ್ಯಾಟಿಸ್ಟಿಕಲ್ ಡೈರೆಕ್ಟರ್ ಜನರಲ್ ಆಫ್ ಅಗ್ರಿಕಲ್ಚರಲ್ ಮತ್ತು ಸ್ಟ್ಯಾಟಿಸ್ಟಿಕ್ಸ್ ಎಂಬ ಒಂದೆರಡು ಕೆಲಸಗಳ ಹೆಸರುಗಳನ್ನು ತಿಳಿಸಿದರೆ ಸದ್ಯಃ ಸಾಕಾಗಿರುತಿವೆ. ಅನೇಕರಿಗೆ ಅವರವರ ಸ್ವರೂಪಾನುಗುಣವಾಗಿ ತೆಲವುಗಳನ್ನು ಜಾಸ್ತೀ ಮಾಡಿದರು. ದೇವರಾಜ್ಯದಲ್ಲಿ ದುಂದಾದ ಪ್ರದೇಶಗಳಿಗೆ ಹೋಗಿ ಓದತಕ್ಕವರಿಗೆ ವಿದ್ಯಾರ್ಥಿವೇತನಗಳು ಕಲ್ಪಿಸಿದರು. ಮದರಾಸ್ ಅಗ್ರಿಕಲ್ಚರಲ್ ಕಾಲೇಜಿನಿಂದ ತೇರ್ಗಡೆಯಾಗಿ ಬಂದವರಿಗೆಲ್ಲ ಒಂದು ಜೀವನೋಪಾಯವನ್ನುಂಟುಮಾಡಿದರು. ಇಷ್ಟುಮಾತ್ರವೇ ಅಲ್ಲವು. ಈಗ ಪ್ರಾರಂಭವಾದಷ್ಟೆ ಮನೋನೈರ್ಭರ್ಯದಿಂದ ಮುಂದೆ ಮಾಡಲುದ್ದೇಶಿಸಿರುವ ಅಂಶಗಳನ್ನು ಸಹ ಪೂರ್ವಭಾವಿಯಾಗಿ ಪ್ರಜೆಗಳಿಗೆ ತಿಳಿಸುವದಕ್ಕು ತಕ್ಕಉತ್ಸಾಹವುಳ್ಳವರಾದರು. ಅದೇನೆಂದರೆ,—ತೆಗೆದುಹಾಕಲ್ಪಟ್ಟ ೩॥ ತಾಲ್ಲೂಕುಗಳನ್ನು ಮರಳಿನೆಲೆಗೊಳಿಸುವಂತೆ ಪ್ರತಿಜ್ಞೆಮಾಡಿದರು. ಲಕ್ಷಾಂತರರೂಪಾಯಿಗಳ ವ್ಯಯವನ್ನು ಸಹ ಸದ್ದೆಗೈಯದೆ ಪಾರಿಕಾಣಿಕೆಮಾಡುಗಾರಿಯನ್ನು ಮೂಡನಮಾಡುವಂತೆ ಪ್ರಾರ್ಥನ ಮಾಡಿದರು. ದೇಶಕ್ಕೆ ಅಂಗಭೂತವಾಗಿರುವ ಅಂಚೆ ಮತ್ತು ರೇಲ್ವೆಯನ್ನು ವಿಸ್ತರಿಸುವಂತೆ ನಿಶ್ಚಯಿಸಿದರು. ಇಂತಾ ಪ್ರತಿಜ್ಞೆಗಳನ್ನು ಈಡೇರಿಸಲಿಕ್ಕೆ ದೇಶದ ಸ್ಥಿತಿಯನ್ನು ಮುಂದುವರಿಸುವಬಗ್ಗೆ ಪರಿಮಿತ ಪರಿಜನರೊಡನೆ ದೇಶಸಂಚಾರ ಮಾಡಲಾರಂಭಿಸಿದರು. ಈಪ್ರಕಾರ ಉತ್ಪತ್ತಿವ್ಯಯಕ್ಕೆ ಮುಖ್ಯಾಧಾರಭೂತರಾಗಿದ್ದ ಕರ್ನಲ್ ಲೀ ಮಾಚೂರಿಯರವರು ಇಲ್ಲಿನ ನೌಕರಿಯಿಂದ ನಿವೃತ್ತರಾದರು. ಪರಂತು ಮಹಾರಾಜರವರು ಯೂರೋಪಿಯನರುಗಳ ಸಂಖ್ಯೆಯನ್ನು ಕಡಮೆ ಮಾಡುವದಕ್ಕೆ ಇಷ್ಟವಿಲ್ಲದೆ ವೃದ್ಧಿಪಡಿಸುತಲಿದಾರೆ.

ಇನ್ನು ಪ್ರಜೆಗಳ ಸ್ಥಿತಿಯು ಕುರಿತು ವಿಚಾರಿಸಲಾಗಿ ಅದು ಹಿಂದಿನ ಸಂವತ್ಸರಕ್ಕಿಂತಲೂ ಗತ ವರುಷದೊಳು ಸ್ವಲ್ಪಮಟ್ಟಿಗೆ ಬಲವಾದಂತೆ ತೋರಬರುವದಾಗಿದೆ. ಇಲ್ಲಿನವರಿಗೆ ಯಾವ ವಿಷಯದಲ್ಲಿಯೂ ಸ್ವಾಭಾವಿಕವಾದ ಅಕ್ಕರೆಯೂ ಪ್ರವೃತ್ತಿಯೂ ಇಲ್ಲವೆಂಬದು ಪ್ರಸಿದ್ಧವೇ ಇಷ್ಟೆ. ಆದರೆ ಇದುವರೆಗೂ ಅನ್ಯರ ಪ್ರೇರಣೆಸಹ ನಿರುಪಯುಕ್ತವಾಗಿತ್ತು. ಈಚೆಗೆ ಇಲ್ಲಿ ಅನ್ಯದೇಶೀಯರ ಸಮ್ಮರ್ದದಿಂದುಂಟಾದ ಶರೀರಗತಾಗ್ನಿಯ ಶೈತ್ಯನೈಕ್ಯದಿಂ ಇಲ್ಲಿನವರ ಶರೀರಗತವಾಗಿದ್ದ ಜಡತೆಯು ನಿವಾರಣವಾಗಿ, ಯಥೋಚಿತ ಜಾಗರೂಕತೆಯುಂಟಾದಂತೆ ಯೋಚಿಸಬೇಕಾಗಿದೆ. ಪರಂತು ನೈಜವಾದ ಕಾರ್ಪಣ್ಯಕ್ಕೆಮಾತ್ರ ಅದು ಮತ್ತಷ್ಟು ಸಹಕಾರಿಯಾಯಿತು. ಇಲ್ಲಿನವರಿಗೆ ಪ್ರಾಪ್ತವಾಗಲಿರುವ ಮೇಲ್ಮೆಯ ಜಾಗರೂಕತೆಯೆಂಬದು ಸಮಾಜಗಳನ್ನೇರ್ಪಡಿಸಲಿಕ್ಕೂ ಅವರಲ್ಲಿ ಯಾವದಾದರೊಂದು ವಿಷಯವನ್ನು ಕುರಿತು ವಿಚಾರಮಾಡಲಿಕ್ಕೂ ಪ್ರವೃತ್ತಿಯನ್ನುಂಟುಮಾಡತಕ್ಕದ್ದಾಗಿರುತಿವೆ. ಈಚೆಗೆ ಇಲ್ಲಿನ ಮ್ಯುನಿಸಿಪಲ್ ಕಂದಾಯದಾರರೆಲ್ಲರೂ ಕೇಟ್‌ಪೇಯರ್ಸ್ ಅಸೋಸಿಯೇಷನ್ ಎಂಬದಾಗಿ ತಮ್ಮೊಳಗೊಂದು ಸಮಾಜವನ್ನೇರ್ಪಡಿಸಿಕೊಂಡು ಅದರಲ್ಲಿ ಸಾಮುದಾಯಕವಾದ ಪ್ರಜಾಭಿಪ್ರಾಯವನ್ನು ವ್ಯಕ್ತಪಡಿಸುತ ರಾಜಕೀಯ ವಿಷಯಗಳನ್ನು ತಮಗೆ ಸಂಬಂಧಿಸಿದಮಟ್ಟಿಗೆ ಪಾಲಿಸಲಿಕ್ಕೆ ಪ್ರಾರಂಭಿಸಿದ್ದಾರೆ. ಇನ್ನೂ ಕೆಲವರು ತಮ್ಮ ಜಾತಿಮತ ಸಂಪ್ರದಾಯಗಳಲ್ಲಿ ಕಾಲವೈಪರೀತ್ಯದಿಂದುಂಟಾಗುತಲಿರುವ ವಿಪರ್ಯಾಸಗಳನ್ನು ದುರಾಚಾರಗಳನ್ನೂ ತಪ್ಪಿಸಿ ಶಾಸ್ತ್ರೀಯವಾಗಿ ಜನಗಳು ವರ್ತಿಸುವಬಗ್ಗೆ ಅವರನ್ನು ಪ್ರೇರಿಸಲಿಕ್ಕೂ ನಿಸ್ಸಹಾಯಕರಾದವರಿಗೆ ಯಥೋಚಿತ ಧನ ಸಹಾಯ ಮಾಡುವದಕ್ಕೂ ಸಾಧಕವಾಗಿ ನಿತಂತೂ ವಿವಾಹ ವಿಧಾಯಕ ಸಮಾಜವೆಂಬ ಒಂದು ಸಂಘವನ್ನೇರ್ಪಡಿಸಿ ಆ ವಿಷಯದಲ್ಲಿ ಅವರು ಅನವರತ ವ್ಯಾಪೃತರಾಗಿದಾರೆ. ಬೇರೆ ಕೆಲವರುಹೃದಯಾಹ್ಲಾದಕರವಾದ ಸಂಗೀತ ಭರತ ಮೊದಲಾದ ವಿದ್ಯೆಗಳನ್ನು ಅಭಿವೃದ್ಧಿಪಡಿಸಿ ತನ್ಮೂಲಕ ಅನುಭವಿಸಬೇಕೆಂಬ ಕೋರಿಕೆಯೊಡನೆ ಗಾಯನಸಮಾಜವೆಂದೊಂದನ್ನೇರ್ಪಡಿಸಿ ಅದರಅಭಿವೃದ್ಧಿಯಲ್ಲಿ ನಿರಂತರವೃತ್ತಿಯುಳ್ಳವರಾಗಿದಾರೆ. ಅನ್ಯರು ಕೆಲವರು ಮತಗ್ರಂಥಗಳನ್ನು ಪ್ರಚಾರದೊಳು ತಂದು ತನ್ಮೂಲಕ ಮತಾಭಿಮಾನವನ್ನು ವೃದ್ಧಿಗೊಳಿಸಬೇಕೆಂಬ ತಾತ್ಪರ್ಯದೊಡನೆ ಸತ್ಯಮಧ್ವೋದ್ಯೋತಕವಾದ ಹೆಸರುಗಳಿಂದ ಸಮಾಜಗಳನ್ನೇರ್ಪಡಿಸಿ ಅವುಗಳ ಸಹಾಯದಬಗ್ಗೆ ಅನ್ಯರು ಪ್ರೇರಿಸುತಲಿದಾರೆ. ಮುಖ್ಯವಾಗಿ ಇಂತಾ ಸಮಾಜಗಳ ಪ್ರಯತ್ನವು ನಮ್ಮವರಿಗೆ ಗತವರುಷದಲ್ಲಿ ಉಂಟಾಗಲಿಕ್ಕೆ ದಿವಾನ್ ಬಹದೂರ್ ರಘುನಾಥರಾಯರು ಮೊದಲಾಗಿ ಕೆಲವರು ದೊಡ್ಡಮನುಷ್ಯರ ಆಗಮನವೇ ಕಾರಣವೆಂದು ಹೇಳುವೆವು. ಪರಂತು ಇನ್ನು ಬಹುಕಾಲ ಜೀವಿಸಿ ತಮ್ಮತಮ್ಮ ಪ್ರಯೋಜನಗಳನ್ನು ನೆರವೇರಿಸಬೇಕೆಂದು ಕೋರುವೆವು.

ಪೂರ್ವದಂತೆ ಈ ದೇಶದಲ್ಲಿ ಜಾಯಿಂಟ್‌ಸ್ಟಾಕ್ ಕಂಪನಿಗಳ ಭ್ರಾಂತಿಯು ರೂಪಾಂತರದೊಡನೆ ಮರಳಿ ತಲೆದೋರಿ ಅವು ಈಗ ಅನೇಕರಿಗೆ ವಿನಾಶಕಾರಿಗಳಾಗಿ ಏರ್ಪಟ್ಟವೆ. ಗತ ಸಂವತ್ಸರದಲ್ಲಿ ನೂತನವಾಗಿ ಅಸಂಖ್ಯಾಕವಾದ ಕಂಪನಿಗಳೇರ್ಪಟ್ಟವು. ಇವುಗಳಲ್ಲಿ ಸೇರತಕ್ಕವರ ಉಪವೃತ್ತಿಯನ್ನು ಅವಲೋಕಿಸಿದಾಗ ಅವು ಪ್ರಚಲಿಸಲಿಕ್ಕೆ ಸಮರ್ಥವಾಗಿರುತಿವೆ. ಆದರೆ ಇವುಗಳ ಆಯುರ್ದಾಯವು ವಿಚಾರಣೆಕರ್ತರ ಹಸ್ತಗತವಾಗಿರುವದರಿಂದ ಇವುಗಳೆಲ್ಲವೂ ಬಾಲಾರಿಷ್ಟದಿಂ ತಪ್ಪಿ ಜೀವಿಸುವುವು ಸಂದೇಹವು.

ಶ್ರೀಶೃಂಗೇರಿಸ್ವಾಮಿಗಳವರು ಕಳೆದತಿಂಗಳಲ್ಲಿ ಉತ್ತರದೇಶಯಾತ್ರೆಯಬಗ್ಗೆ ದಯಮಾಡಿದರು. ಇವರು ಈಗ್ಯೆ ಹತ್ತು ಹನ್ನೆರಡುಸಂವತ್ಸರಗಳಿಂದ ಸ್ವದೇಶವು ಬಿಟ್ಟಗಲಿದವರಲ್ಲವು. ಶ್ರೀಸ್ವಾಮಿಗಳವರು ನಿರವಧಿಕವಾದ ಶಿಷ್ಯಸಂಪತ್ತುಳ್ಳವರಾದ್ದರಿಂದ ಅವರ ಸಂದರ್ಶನಾಭಿಲಾಷೆಯು ಶಿಷ್ಯಕೋಟಿಗೆ ಅತ್ಯುತ್ಕಟ ವಾಗಿರುವದೆಂಬದರೊಳನ್ನು ಮಾತ್ರವೂ ಸಂದೇಹವಿಲ್ಲವು. ಸ್ವಾಮಿಗಳು ತಮ್ಮ ಪೂರ್ವಗುರುಗಳಂತೆ ಅಂತರ್ಮು

ವಾಗಿದಾರೆಂದು ತಿಳಿಯಬರುವದರಿಂದ ಇವರಿಗೆ ದೇಶಸಂಚಾರಪ್ರಯುಕ್ತವಾದ ಶರೀರಾಲಸ್ಯವನ್ನು ಚಿಂತಿಸಲಿಕ್ಕೆ ಸಹ ಕಾರಣವಿರುವದಿಲ್ಲವು.

ಗತಸಂವತ್ಸರದ ಮಧ್ಯಕಾಲದಲ್ಲಿ ರಾಜಗುರುಗಳಾದ ಬ್ರಹ್ಮತಂತ್ರ ಪರಕಾಲಸ್ವಾಮಿಯವರು ಪರಧಾಮವನ್ನೈದಿದರು. ಅವರಸ್ಥಾನಕ್ಕೆ ಅನುರೂಪರಾದವರು ದೊರೆಯದೆ ಇದ್ದದರಿಂದಲೂ, ದೊರೆತವರು ಆಶ್ರಮ ವನಾವಶ್ಯಕವೆಂದು ನಿರಾಕರಿಸಿದ್ದರಿಂದಲೂ ಮಠವು ಕೆಲವುತಿಂಗಳಕಾಲ ಅನಾಥವಾಗಿದ್ದು ಬಳಿಕ ಈಗಿರುವ ಸ್ವಾಮಿಗಳಿಗೆ ಆಶ್ರಮಕೊಡಲ್ಪಟ್ಟಿತು. ಹಿಂದೆ ನಾವು ತಿಳಿಸಿದ ಅನೇಕಕಾರಣಗಳಿಂದ ಈ ಸ್ವಾಮಿಗಳು ತಮ್ಮ ಪ್ರಕೃತಸ್ಥಿತಿಯಂ ಕುರಿತು ಚಿಂತಿಸುತ ಪಕ್ಷಹೀನವಾದ ವಿಹಂಗದಂತಿದಾರೆ. ಸ್ವಾತಂತ್ರ್ಯಭಂಜಕವಾದ ಸ್ಥಿತಿಯುಂಟಾದಮೇಲೆ ಮಾತಬೇಕಾದ್ದೇನಿದೆ. ಹೀಗೆಯೇ ಗತವರುಷವು ಇನ್ನೂ ಕೆಲವು ಸಾಮಾನ್ಯವಿಷಯಗಳಿಂದೊಡಗೂಡಿದ್ದಾಗಿ ಅದು ಈಗ ಪರಿಗಣನೀಯವಾಯಿತು. ಸ್ವದೇಶಸ್ಥಿತಿ ಈರೀತಿಯಾಯಿತಷ್ಟೆ.

ಇನ್ನು ಅನ್ಯರಾಜ್ಯಗಳ ಸ್ಥಿತಿಯಂ ಸ್ಮರಿಸುವಲ್ಲಿ ಪ್ರಥಮತಃ ನೇಟಿವಸಂಸ್ಥಾನಗಳೇ ನಮ್ಮ ದೃಷ್ಟಿಗೆ ವಿಷಯವಾದವು. ಅವುಗಳಲ್ಲೊಂದಾದ ತಿರುವಾಂಕೂರು ಸಂಸ್ಥಾನವು, ವಿದ್ಯಾವಿನಯ ಗಾಂಭೀರ್ಯೌದಾರ್ಯಾದಿ ಸುಗುಣಗಳಿಂದಲಂಕೃತನಾದ ನಾಥನನ್ನು ಯೋಗಲಾಡಿಸಿಕೊಂಡು ವಿಪರ್ಯಸ್ತರೂಪದೊಡನೆ ಶೋಕಿಸುತಲಿರುವಾಗ್ಯೆ, ಸಮಾನಗುಣ ಲಾವಣ್ಯಯುಕ್ತನಾದ ಬೇರೊಬ್ಬ ಪತಿ ಯೇರ್ಪಟ್ಟು, ಮೃತಭರ್ತೃಕೆಯಾದ ನೀನು ಲೋಕಾಂತರಗತನಾದ ವಲ್ಲಭನಂಕುರಿತು ಚಿಂತಿಸುತ ವಿರೂಪದೊಡನೆ ಶೋಕಿಸುವದು ಅನುಚಿತವೆಂತಲೂ, ನಿನ್ನ ಸಂಪತ್ಸೌಭಾಗ್ಯಗಳನ್ನೆಲ್ಲ ಅನುಭವಿಸಲಿಕ್ಕೆ ಅನುಕೂಲಪತಿಯಾದ ನನ್ನ ಕರಗ್ರಹಣಂಗೈಯುವದು ಯುಕ್ತವೆಂತಲೂ ಹೇಳಿ ಸ್ವಾಧೀನ ಪಡಿಸಿಕೊಂಡದ್ದರಿಂದ ಕೇರಳೀಯರಿಗೆ ಸ್ವರಾಜಪರಿಪಾಲಿತರೆಂಬ ಪ್ರಾಶಸ್ತ್ಯವು ಊರ್ಜಿತಪಟ್ಟಿತು.

ಬರೋಡೆ ಮಹಾರಾಜರವರಿಗೆ ಮಧ್ಯೆ ಕೆಲವುಕಾಲ ದೈವಯೋಗದಿಂದ ಪ್ರಾಪ್ತವಾಗಿದ್ದ ವಿಧುರತ್ವವು ನಿವಾರಣವಾಗಿ ಅನುರೂಪಳಾದ ಮತ್ತೊಬ್ಬ ರಾಜಪುತ್ರಿಯನ್ನು ಪರಿಗ್ರಹಿಸಿದವಿಷಯವು ಅಮಿತಾನಂದವನ್ನುಂಟುಮಾಡಿತು.

ಗ್ವಾಲಿಯರ್ ಮಹಾರಾಜರವರಿಂದಪೇಕ್ಷಿಸಲ್ಪಡುತಲಿದ್ದ ಅವರಕೋಟೆಯೂ ಅದಕ್ಕೆ ಸೇರಿದಂತೆ ಇನ್ನೂ ಕೆಲವುಭಾಗವೂ ಬ್ರಿಟಿಷ್ ಗವರ್ನಮೆಂಟಿನವರಿಂದ ಇದುವರಿಗೂ ಅನುಭವಿಸಲ್ಪಡುತಲಿದ್ದವಷ್ಟೆ. ವೈಸರಾಯಿಯವರು ಈಚೆಗೆ ಅಲ್ಲಿಗೆ ದಯಮಾಡಿದ್ದ ಸಂದರ್ಭದೊಳು ಅವು ಮಹಾರಾಜರವರಿಗೆ ವಾಪಸಕೊಡಲ್ಪಟ್ಟವು. ಇದೊಂದು ಸದ್ಯೋಪಕಾಮಕವಾದ ವಿಷಯವಾಗಿರುತಿದೆ.

ಹೈದರಾಬಾದ ನಿಜಾಮರವರು ತಮ್ಮ ಮಂತ್ರಿಯೊಡನೆ ತಮ್ಮ ಪ್ರಭುತ್ವಕ್ಕೊಳಪಟ್ಟಭಾಗಗಳಲ್ಲೆಲ್ಲ ಸಂಚಾರಮಾಡಿ ಜನಗಳಸ್ಥಿತ್ಯನುಗುಣವಾಗಿ ತಮ್ಮ ಆಡಳತದೊಳು ಅನೇಕ ಬದಲಾವಣೆಗಳನ್ನು ಮಾಡಿದರು. ಅಲ್ಲದೆ ತಮ್ಮ ಸಹಾಯಾರ್ಥ ಕಲ್ಪಿಸಿಕೊಂಡ ನ್ಯಾಯವಿಧಾಯಕ ಸಭೆಯು ಉಂಟಾಗಿರುತಿದೆ.

ತಂಜಾವೂರು ರಾಜವಂಶವೆಂಬದೊಂದು ಈ ಇಂಡ್ಯದೇಶದಲ್ಲಿ ನೆಲಗೊಂಡಿತ್ತೆಂಬದನ್ನು ಜನಗಳಸ್ಮರಣೆಗೆ ತರತಕ್ಕಬಗ್ಗೆ ಲಾಂಛನದಂತಿದ್ದ ರಾಜಪುತ್ರಿಯವರು ಇನ್ನು ಕೆಲವುಕಾಲ ನಮ್ಮೊಡನೆ ಜೀವಿಸಿರುವದನ್ನು ಸಹಿಸದೆ ಅಕಾಲಮೃತ್ಯು ಅವರನ್ನು ತನ್ನ ವಶೀಕರಣ ಶಕ್ತಿಯಿಂದ ಸ್ವವಶಪಡಿಸಿಕೊಂಡಿತು. ಇವರೊಡನೆ ತಂಜಾವೂರು ರಾಜವಂಶವು ಅಸ್ತಂಗತವಾದಂತೆ ಹೇಳುವದಲ್ಲದೆ ಏತತ್ಪ್ರಯುಕ್ತವಾದ ಪ್ರ್ಯಾಸೀತಿಗಳಿಗೆ ಲೋಕಾಂತರಗತರಾದ ಲಾರ್ಡ್ ಡಲಹೌಸಿಯವರು ಗುರಿಯಾಗದೆಹೋಗಲಾರರು.

ಕೆಲವು ಸಣ್ಣ ನೇಟಿವ್ ಸಂಸ್ಥಾನಗಳು, ಅವುಗಳ ವಾರಸುದಾರರು ವ್ಯವಹಾರದಕ್ಷತೆಯನ್ನೈದಿದರಿಂದ ರಾಜ್ಯಗಳು ಅವರಿಗೆ ಕ್ರಮವಾಗಿ ಕೊಡಲ್ಪಟ್ಟವು

ಬ್ರಿಟಿಷ್ ಇಂಡ್ಯದೇಶದ ಸ್ಥಿತಿಯಂ ಪರ್ಯಾಲೋಚಿಸಲಾಗಿ, ಮದರಾಸ್ ಗವರ್ನರವರು ಕಳೆದ ಸಾಲಿನಲ್ಲಿ ವೈಸರಾಯಿಯವರ ಭೇಟಿಯಬಗ್ಗೆ ಸಿಂಲಾವಿಗೆ ದಯಮಾಡಿದ್ದೊಂದು; ಹೈಕೋರ್ಟ್ ಚೀಫ್ ಜಸ್ಟಿಸ್ ವಗೈರೆ ಕೆಲವು ಯೂರೋಪಿಯರ್ ಅಧಿಕಾರಿಗಳು ಕೆಲಸದಿಂದ ನಿವೃತ್ತರಾದ್ದೊಂದು; ಮುಂಬೈ ಗವರ್ನರವರು ಮದರಾಸ್ ಪ್ರಾಂತಕ್ಕೆ ದಯಮಾಡಿದ್ದೊಂದು, ಏವಂರೀತ್ಯಾ ಗತಸಂವತ್ಸರವು ಸಾಮಾನ್ಯ ವಿಷಯಗಳಿಂದೊಡಗೂಡಿದ್ದಾಗಿತ್ತು.

ಇಂಡ್ಯದೇಶಕ್ಕೆ ಅತರಾಫ್‌ನೊಳಿರುವ ಸ್ವತಂತ್ರ ನೇಟಿವ್‌ಸಂಸ್ಥಾನಗಳ ಸ್ಥಿತಿಯನ್ನು ಪರಿಭಾವಿಸಲಾಗಿ ಅದು ವಿಶೇಷತೃಪ್ತಿಕರವಾಗಿರಲಿಲ್ಲವು. ಬ್ರಿಟಿಷ್ ಸೇನಾಧ್ಯಕ್ಷರೆಂಬ ಪ್ರಾಶಸ್ತ್ಯವುಳ್ಳವರಾಗಿದ್ದ ಕಾಶ್ಮೀರದ ಮಹಾರಾಜರವರು ಕಾಲಗತಿಯನ್ನೈದಲು ಸದರೀ ರಾಜ್ಯಾಧಿಪತ್ಯವು ಅವರ ಕುಮಾರರಿಗೆ ಕೂಡಲೇ ಒಪ್ಪಿಸಲ್ಪಟ್ಟಿತು. ಪರಂತು ಅದು ಸ್ವತಂತ್ರ ರಾಜ್ಯವಾಗಿದ್ದರೂ ಬ್ರಿಟಿಷನವರ ಸಂಬಂಧವು ಯಥೋಚಿತ ಉಳಿಸಿಕೊಳ್ಳಲ್ಪಡದೆ ಹೋಗಲಿಲ್ಲವು

ಬರ್ಮಾರಾಜ್ಯದ ವಿಷಯವು ಪ್ರಜೆಗಳ ಹೃದಯದಲ್ಲಿ ನವೀನವಾಗಿರುವದರಿಂದ ನಾವು ಈಗ ವಿಶೇಷ ತಿಳಿಸಬೇಕಾದ್ದಿಲ್ಲವು. ಮುಖ್ಯವಾಗಿ ತೀಬಾ ಅರಸರಿಗೆ ಪ್ರಾಪ್ತವಾದ ದುಸ್ಥಿತಿಯನ್ನಾಲೋಚಿಸಿದರೆ.

> ಶ್ಲೋ॥ ಸಾರಮ್ಯಾ ನಗರೀ ಮಹಾಂಸ್ಸ ನೃಪತಿಸ್ಸಾಮಂತಚಕ್ರಂ ಚ ತತ್ಪಾರ್ಶ್ವೇ ತಸ್ಯ ಚ ಸಾ ವಿದಗ್ಧ ಪರಿಷತ್ತಾಶ್ಚಂದ್ರಬಿಂಬಾನನಾಃ । ಉದ್ವೃತ್ತಸ್ಸ ಚ ರಾಜಪುತ್ರನಿವಹಸ್ತೇ ಬಂದಿನಸ್ತಾಃ ಕಥಾಸ್ಸರ್ವಂ ಯಸ್ಯ ವಶಾದಗಾತ್ಸ್ಮೃತಿಪದಂ ಕಾಲಾಯ ತಸ್ಮೈ ನಮಃ॥

ಎಂದು ಸರ್ವಸಂಹರ್ತೃವಾದ ಕಾಲ ಮಹಿಮೆಯನ್ನು ತಿಳಿಯಲಸಾಧ್ಯವು.

ಇನ್ನು ಬ್ರಿಟಿಷರಾಜ್ಯದ ಅಡಳಿತವು ಕುರಿತು ವಿಚಾರಿಸುವಣ. ಇಂಡ್ಯದೇಶದಲ್ಲಿ ರಷ್ಯಾದವರ ಪ್ರಾಬಲ್ಯವು ವೃದ್ಧಿಯಾಗುವದಾಗಿದ್ದು ಅದು ಸರ್ವೋಪಾಯದಿಂದಲೂ ಸದ್ಯಃ ತಡೆಯಲ್ಪಟ್ಟಿತು. ಪರಂತು ರಷ್ಯಾದವರ ಉದ್ದೇಶಪ್ರಯತ್ನಗಳು ಮಾತ್ರ ಅದ್ಯಾಪಿ ಸಣ್ಣಗಲಿಲ್ಲವು.

ಕಾಬೂಲ್ ಅಮೀರರವರು ಕೆಲವುರಾಜಕೀಯೋದ್ದೇಶಗಳೊಡನೆ ವೈಸರಾಯಿಯವರ ಭೇಟಿಯಬಗ್ಗೆ ಇಂಡ್ಯದೇಶಕ್ಕೆ ಬಂದಿದ್ದರು. ಬ್ರಿಟಿಷನವರಿಗೆ ಇಂಡ್ಯದೇಶದೊಳು ಉಂಟಾಗಿರುವ ಪ್ರಾಭವವೆಂಬ ತೇಜಸ್ಸಿನಿಂದ ಅಬ್ದುಲ್ ರಹಿಮಾನರ ನೇತ್ರಗಳೆರಡೂ ಮಗ್ನವಾಗಲು ಅವರು ಮರಳಿ ಸ್ವದೇಶಕ್ಕೆ ಹೊರಟುಹೋದರು.

ಬ್ರಿಟಿಷನವರಿಗೆ ಸಾರ್ಡಮುಂತಾದ ಕೆಲವು ಪ್ರದೇಶಗಳಲ್ಲಿ ಯುದ್ಧ ಪ್ರಾಪ್ತವಾಗಿ ಪ್ರಾಣಹಾನಿಯೂ ಶರೀರಶ್ರಮವೂ ಕೆಲವುಮಟ್ಟಿಗೆ ಉಂಟಾದವು. ಬ್ರಿಟಿಷನವರ ಸ್ನೇಹಸಂಬಂಧವು ಅನ್ಯಸಂಸ್ಥಾನಾಧಿಪತಿಗಳೊಡನೆ ಏಕರೂಪವಾಗಿರುತಿದೆ. ಕಳೆದಸಾಲ್ ಶುರುವಿನಲ್ಲಿ ಚೀನಾದೇಶೀಯರಿಗೂ ಫ್ರೆಂಚ್ ಸರ್ಕಾರದವರಿಗೂ ಕಲಹವುಂಟಾಗಿ ಚೀನಾದವರಿಗೆ ಬಹಳ ನಷ್ಟ ಉಂಟಾಯಿತು. ಕಡೆಗೆ ಚೀನಾದವರೂ ಫ್ರೆಂಚನವರೂ ಸಮಾಧಾನಪೂರ್ವಕ ಯುದ್ಧಯಾತ್ರೆಯಂ ನಿಲ್ಲಿಸಿಬಿಟ್ಟರು. ಇದೇರೀತಿಯೊಳು ಗ್ರೀಸ್ ಮತ್ತು ಸರ್ವಿಯಾದೇಶೀಯರಿಗೆ ಯುದ್ಧ ಪ್ರಾಪ್ತವಾಗಿ ಕ್ರಮೇಣ ದೊಡ್ಡಸಂಸ್ಥಾನಾಧಿಪತಿಗಳ ಪ್ರವೇಶದತನಕ ಬಂದು ಕಡೆಗೆ ಒಂದುವಿಧವಾಗಿ ಪರ್ಯವಸಾನವನ್ನು ಹೊಂದಿತು. ಸಂವತ್ಸರಾಂತ್ಯದಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನ ಪುನರ್ವ್ಯವಸ್ಥೆಯಬಗ್ಗೆ ಪ್ರತಿನಿಧಿಗಳ ಚುನಾವಣೆಗೆ ಉಪಕ್ರಮವಾಗಿ ಕಡೆಗೆ ರಾಜಪಕ್ಷಾವಲಂಬಿತಳಾದ ಕನ್ಸರ್ವೆಟಿವ್‌ಗಳಸಂಖ್ಯೆಗಿಂತ ಲಿಬರಲ್ ಪಕ್ಷೀಯವರ ಸಂಖ್ಯೆಯು ಅಧಿಕವಾಗಲು ಪೂರ್ವದಂತೆ ಮಿ॥ ಗ್ಲಾಡ್‌ಸ್ಟನ್‌ಯವರೇ ಮರಳಿ ಪ್ರಧಾನ ಮಂತ್ರಿ ಕೆಲಸಕ್ಕೆ ಬರುವವರಾಗಿದಾರೆ. ಹೀಗೆಯೇ ಅಮೆರಿಕಾ ಮುಂತಾದ ಖಂಡಗಳ ಸ್ಥಿತಿಯನ್ನಾಲೋಚಿಸಿನೋಡಲು ವಿಚಾರಣೀಯವಾದ ಅಂಶಗಳೊಂದೂ ನಮ್ಮ ಬುದ್ಧಿಸ್ಥವಾಗಲಿಲ್ಲವು ಮುಖ್ಯವಾಗಿ ಗತಸಂವತ್ಸರದಲ್ಲಿ ಕೆಲವು ಕಡೆಗಳೊಳು ಉಯಾಲಿ ಜುಲಾಪ್ ಮುಂತಾದ ರೋಗೋಪದ್ರವಗಳಿಂದಲೂ ಭೂಕಂಪಾದ್ಯುತ್ಪಾತಗಳಿಂದಲೂ ಅಗ್ನಿಪ್ರವೇಶಾದ್ಯನರ್ಥಗಳಿಂದಲೂ ಸ್ವಲ್ಪಮಟ್ಟಿಗೆ ಜನಕ್ಷೋಭೆಯುಂಟಾಗದಿರಲಿಲ್ಲವು. ಆದರೆ ಸಾಮಾನ್ಯಾಕಾರೇಣ ಜನಗಳಿಗೂ ರಾಜ್ಯದಿಗಳಿಗೂ ಸುಖಪ್ರದವಾದ ಸ್ಥಿತಿಯೇ ನೆಲಗೊಂಡಿತ್ತು.

ಈ ನೂತನವರುಷವು ಸಕಲ ವಿಧದಿಂದಲೂ ಲೋಕಕ್ಕೆ ಶುಭಕರವಾಗಿರಬೇಕೆಂಬ ಇಷ್ಟದೇವತಾ ಪ್ರಾರ್ಥನಾಪೂರ್ವಕ ಇಲ್ಲಿಗೆ ವಿರಮಿಸುವೆವು

THE HINDU MUSIC

ಈಗ್ಯೆ ಒಂದೆರಡು ವಾರಗಳಹಿಂದೆ ಸಂಗೀತಶಾಸ್ತ್ರಜ್ಞರಾದ ಅಪೂರ್ವ ರಸಿಕರ ವಿಷಯವಂಕುರಿತು ಸ್ವಲ್ಪಮಟ್ಟಿಗೆ ವಿಚಾರ ಮಾಡಿದ್ದೆವಷ್ಟೆ. ಇದೇ ವಿಷಯವಂ ಕುರಿತು ಮದರಾಸ್ ಆಂಧ್ರಪ್ರಕಾಶಿಕೆಯು ತಿಳಿಸುವದೇನಂದರೆ— „ಸಂಗೀತಶಾಸ್ತ್ರವು ಅವ್ಯಕ್ತ ಮಾಧುರ್ಯವುಳ್ಳದಾದದರಿಂದ ಇತರ ವಿದ್ಯೆಗಳಂತೆ ಸುಲಭ ಸಾಧ್ಯವಲ್ಲವು. ಈ ವಿದ್ಯೆಯನ್ನು ಹತ್ತು ಹನ್ನೆರಡು ಸಂವತ್ಸರಗಳಕಾಲ ಗುರುಕುಲವಾಸಮಾಡಿ ಶ್ರಮಪಟ್ಟು ಅಭ್ಯಸಿಸಿದರೂ ಸಂಪೂರ್ಣ ಗುರುಕಟಾಕ್ಷವುಳ್ಳ ಕೆಲವರಿಗೆಮಾತ್ರವೇ ಸದರೀ ವಿದ್ಯೆಯು ಸಿದ್ಧಿಸುವದು. ಹೀಗಿರಲಾಗಿ, ಗೌರವಾರ್ಥ ಕೆಲವರು, ಖಡಿರ್, ವೀಣೆ ಮುಂತಾದವನ್ನು ಕೆಲವು ದಿನಗಳಭ್ಯಸಿಸಿ ತಾವೂ ಸಂಗೀತ ಶಾಸ್ತ್ರಜ್ಞರೆಂತಲೂ, ಅದರೊಳು ತಮಗೆ ಯಾವದಂಶವೂ ತಿಳಿಯುವದೆಂತಲೂ ಗರ್ವಪಡುತ್ತಾರೆ. ಇಂತವರನ್ನೆಕೆ ಸ್ವರಾವಳಿಯೊಡನೆ ಮುಕ್ತಾಯಮಾಡಿ ಗುರು ದಕ್ಷಿಣೆ ಕೊಡತಕ್ಕವರು ಕೆಲವರು, ಪಿಳ್ಳಾರಿ ಗೀತಮೊಡನೆ ತೃಪ್ತರಾಗತಕ್ಕವರು ಕೆಲವರು, ವರ್ಣಗಳತನಕ ಅಭ್ಯಾಸಮಾಡಿ ಇದು ತಮಗೆ ಪ್ರಾಪ್ತಿಯಿಲ್ಲವು, ಇನ್ನು ಇದು ಯಾಕೆಂದು ಬಿಡತಕ್ಕವರು ಕೆಲವರು. ಪ್ರಾಯಶಃ ಇಂತವರ ಸಂಖ್ಯೆಯೇ ಅಧಿಕವಾಗಿದೆಯಲ್ಲದೆ ಸಂಪೂರ್ಣ ಜ್ಞಾನವುಳ್ಳವರು ಕೇವಲ ವಿರಳರಾಗಿರುತ್ತಾರೆ. ಈ ಶಾಸ್ತ್ರದೊಳು ಪ್ರಥಮತಃ ಆವಶ್ಯಕವಾದ ಸ್ವರಜ್ಞಾನವನ್ನುಂಟುಮಾಡಲಿಕ್ಕೆ ಗೀತಗಳೆಂಬವೇ ಪ್ರಧಾನಗಳಾಗಿರುತಿವೆ ಅವು ಆಯಾ ರಾಗಗಳ ಆರೋಹಣ, ಅವರೋಹಣ, ಜನ್ಯ, ಜನಕ, ವರ್ಜ್ಯಸ್ವರ, ವಕ್ರಸ್ವರ, ಗ್ರಹ, ಮೂರ್ಛನಾದಿ ಬಹು ವಿಷಯಗಳನ್ನು ಬೋಧಿಸುತಿವೆ. ಇವೇ ಲಕ್ಷಣ ಗೀತಗಳೆನ್ನಿಸಿಕೊಳ್ಳುವವು. ಕೆಲವು ಲಕ್ಷ್ಯಲಕ್ಷಣರೂಪವಾಗಿ ಸಹ ಇರುವವು. ಸಾಹಿತ್ಯಜ್ಞಾನಕ್ಕೆ ವ್ಯಾಕರಣಶಾಸ್ತ್ರವು ಎಷ್ಟರ ಅವಶ್ಯಕವೋ ಅದರಂತೆ ಸಂಗೀತಜ್ಞಾನಕ್ಕೆ ಗೀತಗಳಷ್ಟರ ಅಪೇಕ್ಷಿತವು ಪೂರ್ವಕಾಲದಲ್ಲಿ ಈ ವಿದ್ಯಾಭ್ಯಾಸ ಮಾಡತಕ್ಕವರೆಲ್ಲರೂ ಗೀತಗಳನ್ನು ಬಹಳವಾಗಿ ಪಾಠಮಾಡುತಿದ್ದರು. ಒಬ್ಬೊಬ್ಬನಿಗೆ ೬೦—೭೦ ಗೀತಗಳು ಪಾಠವಾಗಿರುವದು. ಇದರಿಂದ ಅವನಿಗೆ ಜ್ಞಾನವು ಪರಿಶುದ್ಧವಾಗಿರಲಿಕ್ಕೆ ಕಾರಣವಾಗಿತ್ತು. ರಾಗಲಕ್ಷಣವು ಕಟಕದಲ್ಲಿ ಆರೋಹಣ ಅವರೋಹಣ ರೂಪವಾಗಿ ತಿಳಿಸಲ್ಪಟ್ಟಿದ್ದರೂ ಅದು ಸಮಗ್ರವಾಗಿರಲಾರದು. ಗೀತಗಳಲ್ಲಿ ಒಂದುರಾಗಕ್ಕೆ ನಾನಾವಿಧ ಸ್ವರಭೇದಗಳಂ ಬರೆದಿರುತ್ತಾರೆ. ಅಂತವುಗಳನ್ನು ಪಾಠಮಾಡುವದರಿಂದ ಪಂಡಿತಾಭಿಪ್ರಾಯವೂ, ಅವರ ಮಾರ್ಗವೂ, ರಾಗಲಕ್ಷಣವೂ ಸಂಪೂರ್ಣವಾಗಿ ತಿಳಿಯುವದು. ಇದು ಹ್ಯಾಗೆಂದರೆ—ಆನಂದಭೈರವಿಗೆ ನಟ ಭೈರವಿ ಮೇಳಕರ್ತವಾಗಿರುತಿದೆ. ನಟ ಭೈರವಿ ಒಂದರಿಂದ ೬೫ ಜನ್ಯರಾಗಗಳುಂಟಾದವು ಇವುಗಳಲ್ಲಿ ಒಂಭತ್ತನೆಯದಾದ ಆನಂದಭೈರವಿಗೆ ಆರೋಹಣದಲ್ಲಿ, ಸ|ಗ|ಮ|ಪ|ದ|ಪ|ಸ ಎಂದು ಕೆಲವರ ಮತವು. ಸಗರಿಮ ಪಧಪಸ ಎಂದು ಇನ್ನು ಕೆಲವರ ಮತವು. ಮೇಲೆ ಕಂಡ ಇಬ್ಬರ ಮತವೂ ಲಕ್ಷಣವಿರುದ್ಧವಾದ್ದಲ್ಲವು. ಹೀಗೆಯೇ ಪ್ರತಿ ರಾಗಕ್ಕೂ ಮತಭೇದದಿಂದ ರೂಪಭೇದಗಳುಂಟಾಗುತಿವೆ. ಒಂದು ರಾಗದಲ್ಲಿಯೇ ಅನೇಕ ಗೀತಗಳನ್ನು ಪಾಠಮಾಡುವದರಿಂದ ರಾಗಲಕ್ಷಣವು ಸ್ಪಷ್ಟವಾಗಿ ತಿಳಿಯುತಿದೆ. ಆದದರಿಂದಲೇ ಇದನ್ನೇ ಬಲವಾಗಿ ಪೂರ್ವವಿದ್ಯಾರ್ಥಿಗಳು ಅಭ್ಯಾಸಮಾಡುತಬಂದರು. ಈಚೆಗೆ ನವನಾಗರಿಕರು ಪ್ರಬಲಿಸುತಬಂದಂತೆಲ್ಲ ಅವುಗಳನ್ನಧಃಪಾತಾಳಕ್ಕೆ ತಳ್ಳಿ ಗೀತಗಳು ಅನಾವಶ್ಯಕಗಳು; ಪಲ್ಲವಿ ಶಿರೋವೇದನೆ, ರಾಗವು ಪರಿಹಾಸಾಸ್ಪದವಾದದ್ದು. ಆದದರಿಂದ ಈಗ ಸರ್ವತ್ರ ಪ್ರಬಲಗೊಂಡಿರುವ ಅಪೂರ್ವ ರಸಿಕರನ್ನು ಸಂತೋಷಗೊಳಿಸಲಿಕ್ಕೆ ಆವಶ್ಯಕಗಳಾದ ಪದಗಳು, ಜಾವಡಿಗಳು, ತುಗಂಹಾಡುಗಳು, ಮುಂತಾದವು ಮೊದಲು ಪಾಠ ಹೇಳುವಂತೆ ಉಪಾಧ್ಯಾಯರನ್ನು ಬಲಾತ್ಕರಿಸುತ್ತಾರೆ ಎಂಬದು.

ಮುಖ್ಯವಾಗಿ ಸದಸ್ಸಿನೊಳು ಕುಳಿತು ಸಭಿಕರ ಮನಸ್ಸನ್ನು ರಂಜಿಸಗೊಳಿಸುವದು ಸಾಮಾನ್ಯ ವಿಷಯವಲ್ಲವು. ನಾದಸ್ವರೂಪವಂ ತಿಳಿದು, ಶ್ರುತಿ ಜಾತ್ಯಾದಿಗಳನ್ನರಿತು ತಾಳದಶ ಪ್ರಾಣಗಳ ಜಾಡೆಗಳಂ ಗ್ರಹಿಸಿ, ಔಡವಷಾಡವ ಸಂಪೂರ್ಣಾದಿ ರಾಗಭೇದಗಳನ್ನು ತಿಳಿದುಕೊಂಡು ಹಿರಿಯರ ಮಾರ್ಗವನ್ನನುಸರಿಸುತ ಸುಖಮಾರ್ಗವು ಕಂಡುಹಿಡಿದು ಕೇಳುವವರಿಗೆ ಸಂತೋಷವನ್ನುಂಟುಮಾಡಬೇಕಾದ್ದು ಪಂಡಿತನಾದವನ ಕರ್ತವ್ಯವಾಗಿರುತಿದೆ ಲಕ್ಷಣಯುಕ್ತವಾದ ರಾಗಗಳನ್ನಾಗಲಿ ಗಾಯಕರಜ್ಞಾನಪ್ರವರ್ತಕವಾದ ಪಲ್ಲವಿಗಳನ್ನಾಗಲಿ, ನಾಲ್ಕುಜನ ಸಂತೋಷಿಸುವಂತೆ ಹಾಡತಕ್ಕವರು ಬಹಳದುರ್ಲಭರಾದರು. ಅವುಗಳ ಸ್ವರೂಪವಂ ತಿಳಿದುಕೊಳ್ಳಸತಕ್ಕವರು ಅವರಿಗಿಂತಲೂ ದುರ್ಲಭವಾದರು ಕಡೆಗೆ ಈಗಿನ ಸಂಗೀತ ಕಚ್ಚೇರಿಗಳೆಲ್ಲವು ಪ್ರಾಯೇಣ ಜಾವಡಿಗಳಿಂದಲೇ ಪರಿಸಮಾಪ್ತವಾಗಬೇಕಾದ್ದಾಗಿರುತಿದೆ, ತಥಾಪಿ ಹಾಡತಕ್ಕವರು ಹೆಂಗಸರಾದರೆ ಶೃಂಗಾರ ಪ್ರಧಾನಗಳಾದ ಜಾವಡಿಗಳನ್ನೇ ಹಾಡಬೇಕೆಂತಲೂ, ಗಂಡಸಾದರೆ ತುಗಹಾಡುಮುಂತಾದವನ್ನೇ ಹಾಡಬೇಕೆಂತಲೂ ನಿರ್ಧಾರ್ಯವಾಗಿರುವದರಿಂದ ಅದುವಿನಾ ಬೇರೊಂದನ್ನೂ ಈಗ ಕೇಳತಕ್ಕವರಿಲ್ಲವು. ಅಲ್ಲಿಗೂ ದ್ರವ್ಯಾಪೇಕ್ಷೆಯಿಲ್ಲದೆ ವಿನೋದಾರ್ಥ ಸ್ವಲ್ಪ ಹಾಡುವವರಾದರೇನೇ ಅದನ್ನಾದರೂ ಕೇಳತಕ್ಕದ್ದೇಯೊರ್ತು ದುಡ್ಡು ಖರ್ಚು ಬಾಬತಿನದಾಗಿದ್ದರೆ ಒಂದೂ ಬೇಕಿಲ್ಲವೆಂಬ ಸ್ಥಿತಿ ನೆಲಗೊಂಡಮೇಲೆ ಈ ಶಾಸ್ತ್ರವು ಎಷ್ಟರಮಟ್ಟಿಗೆ ಪ್ರಾಚುರ್ಯವನ್ನೈದಬಹುದೋ ಅದನ್ನು ಅಭಿಜ್ಞರೇ ಯೋಚಿಸಬಹುದು.

Occasional Notes.
ನೈಮಿತ್ತಿಕವಿಷಯನ್ಯಾಸ

The Viceroy's visit to Burmah—ವೈಸರಾಯಿಯವರು ಈ ಋತುವಿನಲ್ಲಿ ಬರ್ಮಾದೇಶಕ್ಕೆ ಹೋಗುವದಿಲ್ಲವೆಂದು ಖಂಡಿತವಾಗಿ ನಿರ್ಣಯವಾಗಿರುತದೆಂದು ಇಂಗ್ಲಿಷ್ಮಾರ್ಪತ್ರಿಕೆ ತಿಳಿಸುತವೆ.

Refugees from Nepal.—ಈಚೆಗೆ ನೇಪಾಲದೇಶದಲ್ಲಿ ನಡೆದ ಕಲಹದಿಂದ ತಪ್ಪಿಸಿಕೊಂಡು ಬಂಕೀಪುರಕ್ಕೆ ಬಂದವರು, ಅಲ್ಲಿನ ಕಲಹದವಿಷಯವನ್ನು ಕುರಿತು ಇದುವರಿವಿಗೆ ತಿಳಿಯಬಂದದಕ್ಕಿಂತಲೂ ಬೇರೇವಿಧವಾದ ಕಾರ್ಯಕಾರಣಗಳನ್ನು ಹೇಳುವಂತೆ ಕಾಣುತಿದೆ.

The Maharaja of Cashmere's visit to Delhi.—ಕಾಶ್ಮೀರದ ಮಹಾರಾಜರವರು ದೆಹಲಿಯೊಳು ನಡೆಯುವದಾಗಿರುವ ಕ್ಯಾಂಪಾಫ್ ಎಕ್ಸರ್ಸೈಸ್ನಲ್ಲಿ ಸೇನಾ ಸುವಿಭಾಗವನ್ನು ನೋಡುವದಕ್ಕಾಗಿ ಅಲ್ಲಿಗೆ ಬರುವವರಾಗಿದಾರೆಂದು ತಿಳಿಯಬರುತಿದೆ.

Annexation of Burmah.—ಮಹಾರಾಜ್ಞೀ ಸರ್ಕಾರದವರು ಬರ್ಮಾರಾಜ್ಯವನ್ನು ಬ್ರಿಟಿಷ್ ಆಧಿಪತ್ಯಕ್ಕೆ ಸೇರಿಸಿಕೊಳ್ಳಬೇಕೆಂದು ನಿರ್ಣಯಿಸಿದಂತೆ ಸುಬತಕ್ಕಮೂಲಕ ತನಗೆ ತಿಳ

ದುಬರುವದಾಗಿ ಇಂಡ್ಯ ಟೈಂಸ್‌ಪತ್ರಿಕೆಯ ಲಂಡನ್ ಬಾತಮೀದಾರನು ತುತಿವರ್ತಮಾನ ಕೊಟ್ಟಿರುತ್ತಾನೆ.

The Revenue of the London Times advertisements.—ಲಂಡನ್ ಟೈಂಸ್‌ಪತ್ರಿಕೆಯಲ್ಲಿ ಶಾಯಿಷ್ ಮಾಡಲ್ಪಡುವ ಪ್ರಕಟನೆಯ ರಿವಾಜಬಗ್ಗೆ ಸಾಲೀಯಾನಾ ನಾಲ್ವತ್ತು ಲಕ್ಷರೂಪಾಯಿಗಳೂ ಜನನಮರಣ ಪ್ರಕಟನೆಯಬಗ್ಗೆ ಸುಮಾರು ಒಂದುಲಕ್ಷರೂಪಾಯಿಗಳೂ ಹುಟ್ಟುವಳಿಯಾಗುವಂತೆ ತಿಳಿಯಲಾದೆವು.

Death of the Ameer of Bokhara.—ಬುಖಾರಾ ಅಮೀರರವರು ಮೃತಪಟ್ಟು ಅವರ ಸ್ಥಾನದಲ್ಲಿ ಅಬ್ದುಲ್ ಲಹಾದ ಯೆಂಬವರು ಪಟ್ಟಾಭಿಷಿಕ್ತರಾದರೆಂದು ತಿಳಿಯಬಂದ ವರ್ತಮಾನವು ಈಚೆಗೆ ಕಾಬೂಲ್‌ನಿಂದ ಬಂದ ವೃತ್ತಾಂತ ಪದಿಸೆಯಿಂದ ದೃಢಪಟ್ಟಿತು. ಹೊಸ ಅಮೀರರವನು ತನ್ನ ಸಹೋದರರಲ್ಲಿ ಅನೇಕರನ್ನು ಕೈದಿಮಾಡಿರುವದಲ್ಲದೆ ಪ್ರಜೆಗಳ ಪ್ರೀತಿ ಗೌರವಗಳಿಗೆ ಕೇವಲ ದೂರನಾಗಿರುತ್ತಾನೆ.

The Viceregal Legislative Council.—ಅಯೋಧ್ಯಾ ದೇಶದೊಳಗಣ ಮಹಮ್ಮದಾಬಾದ್ ತಾಲ್ಲೂಕುದಾರರಾದ ರಾಜಾ ಅಮೀರ್ ಹಸೇನ್ ಯವರು ವೈಸ್‌ರಾಯಿಯವರ ಮಂತ್ರಾಲೋಚಕ ಸಮಾಜದಲ್ಲಿ ಒಬ್ಬ ಮೆಂಬರಾಗಿ ನಿಯಮಿಸಲ್ಪಟ್ಟಿರುತ್ತಾರೆ. ಡಾಕ್ಟರ್ ಡಬ್ಲ್ಯು ಹಂಟರ್, ಸಿ. ಐ. ಇ. ಯವರು ಸಹ ಸದರೀ ಸಮಾಜದ ಮೆಂಬರಾಗಿ ಮರಳಿ ನಿಯಮಿಸಲ್ಪಟ್ಟರು.

ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೆ ನಾವು ಪ್ರಕಟಪಡಿಸುವದೇನಂದರೆ—

ಕೆಲವು ಕಾಲದಮೊದಲು ಈ ಪತ್ರಿಕೆಗೆ ಚಂದಾದಾರರಾಗಿರುತ್ತ, ಅಪೇಕ್ಷಿಸಿದಕಾಲಗಳಲ್ಲಿ ಚಂದಾಹಣಗಳನ್ನು ಜಾಬ್ತಾ ಕಳುಹಿಸಿ ಪ್ರೋತ್ಸಾಹಿಸುತಬಂದವರ ಹೆಸರನ್ನೂ, ಚಂದಾ ಹಣಗಳನ್ನು ನಮ್ಮ ನೋಟಿಸನ್ನು ನೋಡಿದಕೂಡಲೇ ಅಡ್ವಾನ್ಸ್ ಕಳುಹಿಸುವದಕ್ಕೆ ಬದ್ಧರಾಗಿ ಹೊಸದಾಗಿ ದಯಮಾಡ್ಸ್ಟ ಮಾಡುವವರ ಹೆಸರನ್ನೂ, ಚಂದಾದಾರರ ರಿಜಿಸ್ಟರಿನ ಸೇರಿಸಿಕೊಂಡು ಈ ವಾರದಮೊದಲು ಪತ್ರಿಕೆಯನ್ನು ಕಳುಹಿಸಿ ಕೊಡುತ್ತೇವೆಯಾಗಿ ನಮ್ಮ ಚಂದಾದಾರರೆಲ್ಲರೂ ದಯಮಾಡಿ ತಮ್ಮ ತಮ್ಮ ಚಂದಾ ಹಣಗಳನ್ನು ಕೂಡಲೇ ರವಾನಿಸಬೇಕೆಂದು ಪ್ರಾರ್ಥಿಸುವೆವು.

LOCAL AND PROVINCIAL NEWS.

ಒಳದೇಶಮತ್ತು ತಾಲ್ಲೂಕಾಜಾತಿವೃತ್ತಾಂತಗಳು

St. Martha's Hospital.—ಈಚೆಗೆ ಈ ಊರು ಯಲಹಂಕದ ಬಾಗಿಲುಬಳಿಯಿರುವ ಸಿವಿಲ್ ಜೆನರಲ್‌ಪಕ್ಕದಲ್ಲಿ, ರೋಮನ್ ಕ್ಯಾಥೊಲಿಕ್ ಪಾದ್ರಿಗಳಿಂದ ಹೊಸದಾಗಿ ಕಟ್ಟಲ್ಪಟ್ಟಿರುವ ಆಸ್ಪತ್ರೆಯಲ್ಲಿ ಈ ತಿಂಗಳ ಗುರ್ರೇತಾರೀಖುಮೊದಲು ಹೊರಗಿನಿಂದ ಬರತಕ್ಕ ರೋಗಿಗಳಿಗೆಮಾತ್ರ ಔಷಧಗಳುಕೊಡಲು ಪ್ರಾರಂಭವಾಯಿತು,

---

A address of welcome.—ಈಚೆಗೆ ಈ ಪುರದಲ್ಲಿ ಯೇರ್ಪಾಡಾಗಿರುವ ಲೇಡಿ ಪೀಯರ್ಸ್ ಅಸೋಸಿಯೇಷನ್ ಯೆಂಬ ಸಾಮಾಜಿಕರು ಕಳೆದ ತಿಂಗಳ ೨೭ನೇ ತಾರೀಖಿನಲ್ಲಿ, ಇಲ್ಲಿನ ಮ್ಯುನಿಸಿಪಲ್ ಸ್ಕೂಲ್ ಕಟ್ಟಡದಲ್ಲಿ ಸಭೆ ಸೇರಿ, ಶ್ರೀಮನ್ಮಹಾರಾಜರವರು ದೇಶಸಂಚಾರ ಮಾಡಿಕೊಂಡು ಬೆಂಗಳೂರಿಗೆ ದಯಮಾಡುವ ಸಂದರ್ಭದಲ್ಲಿ ಪ್ರಜೆಗಳ ತರಫೆ ಸ್ವಾಗತಪೂರ್ವಕ ಅವರಿಗೆ ಒಂದು ವಿಜ್ಞಾಪನಪತ್ರಿಕೆಯನ್ನೊಪ್ಪಿಸಬೇಕೆಂದು ನಿರ್ಣಯಿಸಿದ

The weather.—ಈಚೆಗೆ ಒಂದುವಾರದಮೊದಲು ರಾತ್ರಿಕಾಲದಲ್ಲಿ ಚಳಿ ಅಧಿಕವಾಗಿಯೂ ಬೆಳಗಿನಹೊತ್ತು ಬಲವಾದ ಮಂಜುಬೀಳುತಲೂ ಹತ್ತುಘಂಟೆಯಮೇಲೆ ಚುರುಕಾಗಿ ಬಿಸಿಲು ಕಾಯುತಲೂ ಇದ್ದು ನಿನ್ನೆಯಮೊದಲು ಸೂರ್ಯರಶ್ಮಿಇಲ್ಲದೆ ಮೋಡಮುಸಿಕಿಕೊಂಡು ಬಲವಾದ ಘಾಳಿ ಬೀಸುತಲಿದೆ. ಪದಾರ್ಥಗಳ ಧಾರಣೆಗಳು ಯೇಕರೂಪವಾಗಿದೆ. ರೋಗಾದ್ಯುಪದ್ರವಗಳು ವಿಶೇಷವಾಗಿ ಯಾವದೂ ಕಾಣಿಸಲಿಲ್ಲವು ಸದ್ಯಃ ದನಗಳಿಗೆ ನೀರೂ ಮೇವೂ ಸಿಕ್ಕುತವೆ.

Mr. C. H. Baly.—ಈದೇಶದ ಮರಮ್ಮತ್ ಇಲಾಖೆಯಲ್ಲಿದ್ದ ಮೆ. ಬೇಲಿಯವರು ಹೈದರಾಬಾದಿಗೆ ವರ್ಗಮಾಡಲ್ಪಡುವದಾಗಿ ಕಳೆದತಿಂಗಳ ೫ನೇ ಮಂಗಳವಾರದ ಇಂಡ್ಯ ಗವರ್ನಮೆಂಟ್ ಗೆಜೆಟಿನಲ್ಲಿ ಶಾಯಿಷ್ ಮಾಡಲ್ಪಟ್ಟಿತ್ತಷ್ಟೆ. ಸದರೀಯವರು ಮರಳಿ ಮೈಸೂರು ಸಂಸ್ಥಾನದ ನೌಕರಿಯಬಗ್ಗೆ ಈಚೆಗೆ ಇಲ್ಲಿಗೆ ವಾಪಸ್ ಬಂದರೆಂತಲೂ, ಮಾರಿಕಣಿವೇ ಕಲ್ಲೀ ಕಾಮಗಾರಿಗೆ ಅರ್ಥೋದಯಪತ್ತಿಯುಂಟಾಗುವತನಕ ಹೊಸಕೋಟೆಯಬಳಿ ನಡೆಯುವ ಕಾಮಗಾರೀಯನ್ನು ನೋಡುತಲಿರುವರೆಂತಲೂ ತಿಳಿಯಬರುತಿದೆ.

THE HATAPRADIPIKA

ಮೈಸೂರು ಗವರ್ನಮೆಂಟ್ ಮುದ್ರಾಕ್ಷರಶಾಲೆಯಲ್ಲಿ ಈಚೆಗೆ ಮುದ್ರಿಸಲ್ಪಟ್ಟ "ಹಠಪ್ರದೀಪಿಕೆ" ಎಂಬ ಯೋಗಶಾಸ್ತ್ರವಿಷಯಕವಾದ ಗ್ರಂಥದ ಪ್ರತಿಯೊಂದು ನಮಗೆ ಕಳುಹಿಸಲ್ಪಡಲು ಅದು ನಾವು ಕೃತಜ್ಞತೆಯೊಡನೆ ಅಂಗೀಕರಿಸಿದೆವು. ಈ ಶಾಸ್ತ್ರವು ಸಕಲ ಧರ್ಮಗಳಿಗೂ ಮೂಲಭೂತವಾದ್ದಾಗಿಯೂ, ಸಕಲಪುರುಷಾರ್ಥಸಾಧಕವಾದ್ದಾಗಿಯೂ ಇರುತಿದೆ. ಪ್ರಥಮತಃ ಈ ಯೋಗಶಾಸ್ತ್ರವನು, ಭಕ್ತಕಾರುಣಿಕನಾದ ಭಗವಂತನು ಪಾರ್ವತಿಗೆ ಉಪದೇಶ ಮಾಡಿದನು. ಪಾರ್ವತಿಯು ಬ್ರಹ್ಮನಿಗೂ, ಬ್ರಹ್ಮನು ಸನಕ ನಾರದ ವಸಿಷ್ಠಾದಿ ತನ್ನ ಮಾನಸಪುತ್ರರಿಗೂ, ಇದಲ್ಲದೆ ವಿಷ್ಣುವು ದತ್ತಾತ್ರೇಯ ರೂಪದಿಂದ ಅವತರಿಸಿ, ಮತ್ಸ್ಯೇಂದ್ರ, ಗೋರಕ್ಷ, ಜಾಲಂಧರಾದಿನವನಾಥರಿಗೂ ಇನ್ನೂ ಅನೇಕ ಸಹಸ್ರ ಜನ್ಮಋಷ್ಯರಿಗೂ ಉಪದೇಶ ಮಾಡಿದರು. ಮತ್ತು ಕೃಷ್ಣಾವತಾರದಲ್ಲಿ ಭಗವಂತನು ಅರ್ಜುನನಿಗೂ ಉದ್ಧವನಿಗೂ ಇದನ್ನುಪದೇಶ ಮಾಡಿದನಲ್ಲದೆ ತಾನೂ ಯೋಗೀಶ್ವರನೆಂದು ಪ್ರಸಿದ್ಧಿಯಂ ಪಡೆದನು. ಬಳಿಕ ಮತ್ಸ್ಯೇಂದ್ರಯೋಗಿಯು ಸ್ವಾತ್ಮಾರಾಮಯೋಗಿಗೆ ಉಪದೇಶಮಾಡಿದನು. ಈ ಯೋಗಿಶ್ರೇಷ್ಠನು ಲೋಕಾನುಗ್ರಹಾರ್ಥವಾಗಿಯೂ ಸುಬೋಧಾರ್ಥವಾಗಿಯೂ ಈ ಹಠಯೋಗ ಪ್ರದೀಪಿಕೆಯನ್ನು ಮಾಡಿದನು. ಇದರ ಅರ್ಥಾವಗಾಹನೆಯು ದುರವಗಾಹವೆಂದೆಣಿಸಿ ಪರಮಹಂಸಪರಿವ್ರಾಜಕ ಬ್ರಹ್ಮಾನಂದ ಸ್ವಾಮಿಗಳವರು ಜ್ಯೋತ್ಸ್ನಾ ಎಂಬ ವ್ಯಾಖ್ಯಾನವನ್ನು ರಚಿಸಿದರು. ಈ ಹಠಯೋಗ ಪ್ರದೀಪಿಕೆ ಯೆಂಬ ಗ್ರಂಥವು ಆಸನವಿಧಿಕಥನವೆಂದೂ ಪ್ರಾಣಾಯಾಮ ವಿಧಿಕಥನವೆಂದೂ, ಮುದ್ರಾನಿರೂಪಣ ಕಥನವೆಂದೂ, ರಾಜಯೋಗಸ್ವರೂಪ ನಿರೂಪಣ ಕಥನವೆಂದೂ, ನಾಲ್ಕು ಉಪದೇಶಗಳುಳ್ಳದ್ದಾಗಿಯೂ, ಸುಮಾರು ೩೮೯ ಶ್ಲೋಕಗಳುಳ್ಳದ್ದಾಗಿಯೂ ಇರುತಿವೆ. ಈ ವಿಶಿಷ್ಟ ಗ್ರಂಥದಿಂದಲೇ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣಾ, ಸಮಾಧಿಗಳೆಂಬ ಅಷ್ಟಾಂಗಗಳೂ ನಿರೂಪಿಸಲ್ಪಟ್ಟಿರುವದರಿಂದ ಪರಮ ಪುರುಷಾರ್ಥ ಸಾಧಕಗಳಾದ ಶ್ರವಣ, ಮನನ, ನಿದಿಧ್ಯಾಸನಾದಿಗಳೂ ಜ್ಞಾನ ಕರ್ಮ ಭಕ್ತಿಮುಂತಾದವುಗಳೂ ಈ ಅಷ್ಟಾಂಗಗಳಲ್ಲಿಯೇ ಅಂತರ್ಭೂತವಾಗಿರುತಿವೆ. ಪ್ರಥಮೋಪದೇಶದಲ್ಲಿ ನಿರೂಪಿಸಲ್ಪಟ್ಟ ಯಮನಿಯಮಗಳಿಂದ ಪಾಪನಿವೃತ್ತಿಯೂ, ಭಗವದನುಗ್ರಹವೂ ಆಸನದಿಂದ ಸಕಲರೋಗನಿವೃತ್ತಿಯೂ, ದ್ವಿತೀಯೋಪದೇಶದಲ್ಲಿ ನಿರೂಪಿಸಲ್ಪಟ್ಟ ಸೂರ್ಯಭೇದನಾದಿ ಸಪ್ತವಿಧ ಪ್ರಾಣಾಯಾಮದಿಂ ಅರಿಷಡ್ವರ್ಗನಿವೃತ್ತಿಯೂ, ಕಾಯಸಿದ್ಧಿಯೂ, ಕೇವಲ ಕುಂಭಕವೆಂಬ ಎಂಟನೇ ಪ್ರಾಣಾಯಾಮದಿಂದ ಸ್ವೇಚ್ಛಾಮರಣಸಿದ್ಧಿಯೂ ಆತ್ಮಾವರಣ, ನಾಶವೂ ಲಭಿಸುವದು. ಮೂರನೇ ಉಪದೇಶದಲ್ಲಿ ನಿರೂಪಿಸಲ್ಪಟ್ಟ ಮಹಾ ಮುದ್ರಾದಿ ದಶವಿಧ ಮುದ್ರೆಗಳಿಂ ಇಂದ್ರಿಯಜಯ, ಪ್ರಾಣಜಯ, ಮನೋಜಯ, ಮುಂತಾದ ಅನೇಕ ಸಿದ್ಧಿಗಳುಂಟಾಗುವವು. ನಾಲ್ಕನೇ ಉಪದೇಶದಲ್ಲಿ ನಿರೂಪಿಸಲ್ಪಟ್ಟ ರಾಜಯೋಗಾಂತರಂಗವಾದ ಧಾರಣಾ ಧ್ಯಾನ ಸಮಾಧಿಗಳಲ್ಲಿ ಧಾರಣೆಯಿಂದ ಪಂಚಭೂತ ಜಯವೂ ಪ್ರಕೃತಿವಶಿತ್ವ ಸರ್ವಜ್ಞತ್ವಾದಿ ಸರ್ವಸಿದ್ಧಿಗಳೂ, ಧ್ಯಾನದಿಂದ ಸಗುಣೇಶ್ವರ ಸಾಕ್ಷಾತ್ಕಾರವೂ, ಸತ್ಯ ಸಂಕಲ್ಪಸಿದ್ಧಿಯೂ ಸವಾದ್ಯಾಚರಣ ಶಕ್ತಿಯೂ ಸವಿಕಲ್ಪ ಸಮಾಧಿಯಿಂದ ಸ್ವರೂಪಾನುಭವವೂ ಉಂಟಾಗುವವು.

PAST AND PRESENT CONDITION OF ARYANS.

ಗತ ಶುಕ್ರವಾರದದಿನ ಮಧ್ಯಾಹ್ನ ೩ ಘಂಟೆಗೆ ಈ ಊರು ಕೋಟೆ ಮ್ಯುನಿಸಿಪಲ್ ಸ್ಕೂಲ ಸಾಧದಲ್ಲಿ ಕಡಪ ಜಿಲ್ಲಾ ಡೆಪ್ಯುಟಿಕಲೆಕ್ಟರ್ ಮ॥ ಸುಬ್ಬರಾಯರವರು ಆಂಧ್ರಭಾಷೆಯೊಳು, ಆರ್ಯರಾದ ನಮ್ಮ ಭೂತಭವಿಷ್ಯದ್ವರ್ತಮಾನಸ್ಥಿತಿಯನ್ನು ಅನೇಕ ನಿದರ್ಶನಗಳೊಡನೆ ಉಪಪಾದಿಸಿದರು. ಈ ಸಭೆಗೆ ಮೈಸೂರು ಡಿಸ್ಟ್ರಿಕ್ಟ ಸೆಷನ್ಸ ಜಡ್ಜ ಮೆ॥ ವಿ. ಎನ್. ನರಸಿಮ್ಹಯ್ಯಂಗಾರ್, ಅ॥ ಕ॥ ಮೆ॥ ಬಿ. ಜ. ಕೃಷ್ಣಯ್ಯಂಗಾರ್, ಅಮಲ್ದಾರ್ ಮ॥ ಶೀತಾ ರಾಮಯ್ಯನವರು. ರೆವಿನ್ಯೂ ಶಿರಸ್ತೇದಾರ್ ಮೆ॥ ರಾಘವಾಚಾರ್ಯರವರು ಮೊದಲಾದ ಬಹುಮಂದಿ ಸ್ಟೇಟ್ ಉದ್ಯೋಗಸ್ಥರೂ, ಬ್ರಹ್ಮಶ್ರೀ ವಾಸುದೇವ ಶಾಸ್ತ್ರಿಗಳು, ಗೋಪಾಲಶಾಸ್ತ್ರಿಗಳು ಮೊದಲಾದ ಅನೇಕಜನ ಪಂಡಿತರೂ ಬಂದಿದ್ದರು. ಸಭೆಯವರ ಅಪೇಕ್ಷಾನುಗುಣವಾಗಿ ವೈಸ್ ಪ್ರೆಸಿಡೆಂಟ್ ಮ॥ ಶ್ರೀನಿವಾಸಾಚಾರ್ಯರವರು ಅಗ್ರಾಸನವ ವಹಿಸಿ ಪರಿಮಿತ ಶಬ್ದಗಳಿಂದ ಪ್ರಸಕ್ತ ಸಮಾಜೋದ್ದೇಶವನ್ನೂ, ಪ್ರಾಸಂಗಿಕರ ಗೌರವಪ್ರಾಭವಗಳನ್ನೂ ಸಭಿಕರಿಗೆ ತಿಳಿಸಿದರು. ಮ॥ ಸುಬ್ಬರಾಯರವರು ಸಂಸ್ಕೃತ ಆಂಧ್ರ ಇಂಗ್ಲಿಷ್ ಈ ಮೂರು ಭಾಷೆಗಳಲ್ಲಿಯೂ ಸಮಾನಾಧಿಕರಣವಾದ ಪಾಂಡಿತ್ಯವುಳ್ಳವರಾಗಿದ್ದರೂ, ವಿಷಯ ಗೌರವವನ್ನು ಪರಿಭಾವಿಸಿ ಸರ್ವಜನ ಸಾಧಾರಣ್ಯೇನ ಯೆಲ್ಲರೂ ಅರಿಯತಕ್ಕಬಗ್ಗೆ ಆಂಧ್ರಭಾಷೆಯಲ್ಲಿಯೇ ವಿಚಾರ ಮಾಡಲಾರಂಭಿಸಿದರು. ಪ್ರಾಸಂಗಿಕರು ಸ್ವತಃ ಲೌಕಿಕರಾಗಿಯೂ ದೇಶಜನ ಪ್ರಕೃತಿಗಳನ್ನರಿತವರಾಗಿಯೂ ಇರುವದರಿಂದ ಉಪಪಾದಿತಾಂಶಗಳನ್ನು ವಿಷಯ ಸುವಿಭಾಗಗಳೊಡನೆಯೂ ತತ್ತತ್ಪ್ರಕರಣಾನುಗುಣವಾದ ರಸಭಾವಗಳೊಡನೆಯೂ ಮೂರುಘಂಟೆಯಕಾಲ ಅವಿಚ್ಛಿನ್ನವಾಗಿ ಪ್ರಸಂಗಿಸಿದರು. ರಾಯರವರು ಪ್ರಥಮತಃ ಆರ್ಯಶಬ್ದ ನಿರೂಪಣವಂಮಾಡಿ ಈ ಇಂಡ್ಯದೇಶೀಯರು ಪೂರ್ವದೊಳು, ಅಂದರೆ ಈಗ್ಯೆ ಸುಮಾರು ೩ಸಾವಿರಸಂವತ್ಸರಗಳಿಂದೆ ವಿದ್ಯಾಬುದ್ಧಿ ವಿವೇಕ ಐಶ್ವರ್ಯಾದಿಗಳಲ್ಲಿ ಅನ್ಯರಿಗೊಂದು ಪಮಾನವಂತೆ ಇತರುತಲಿದ್ದರೆಂಬ ಅಂಶಕ್ಕೆ ನಮಗೆ ಮೊರೆತಿರುವ ಗ್ರಂಥಾದಾರಗಳೇ ಸಾಕ್ಷಿಗಳುತವೆಂತಲೂ ಇಂತಾ ಮಹೋನ್ನತ ದಶೆಯೊಳಿದ್ದ ನಾವು ಕಾಲಗತಿಯಿಂದನಿಜಸ್ತ ಸಂಪತ್ತುಳ್ಳವರಾಗಿಯೂ ನಿರಸ್ಕೃತವಾದ ಸುಖ ಸಂತೋಷಗಳುಳ್ಳವರಾಗಿಯೂ, ವಿಪರ್ಯಸ್ತ ರೂಪ ಗುಣ ಶೀಲವುಳ್ಳವರಾಗಿಯೂ ಆದವಂತಲೂ, ಇದಕ್ಕೆ ಆಯಾಕಾಲದಲ್ಲಿ ನಮ್ಮನ್ನು ಪಾಲಿಸುತಲಿದ್ದ, ಧರ್ಮವಿರೋಧನ ಪ್ರವೃತ್ತರಾಗಿಯೂ, ಮನುಷ್ಯಹೃದಯಾಕರ್ಷಣ ನಿಪುಣರಾಗಿಯೂ, ಪರಧನಹರಣ ಸಮರ್ಥರಾಗಿಯೂ ಇದ್ದ ಅನ್ಯರಾಜರುಗಳೇ ಕಾರಣರೆಂತಲೂ, ಇಂತಾ ನಮ್ಮಸ್ಥಿತಿ ವೈಪರೀತ್ಯದಿಂದ ಹಿಂದೆ ನಮಗೆ ವುಂಟಾಗಿದ್ದ ಸಂಪತ್ಸಾರಸ್ವತಕೋಶಾದ್ಯುಪಕರಣಸಾಮಗ್ರಿಗಳೆಲ್ಲವೂ ನಾಶವಾದವೆಂತಲೂ ತಿಳಿಸಿದರು. ಯದ್ಯಪಿ ದುರ್ಜ್ಞೇಯನಿಮಿತ್ತಕವಾದ ಭಗವದ್ನಿಗ್ರಹೇಚ್ಛೆಯಿಂದಲೋ ದುಷ್ಪ್ರತೀಕಾರವಾದ ನಮ್ಮ ದೌರ್ಭಾಗ್ಯವಶದಿಂದಲೋ ಇಂತಾ ಸ್ಥಿತಿ ಪ್ರಾಪ್ತವಾಗಿ ಸರ್ವಾಂಶದಲ್ಲಿಯೂ ಸ್ವಾಭಾವಿಕಗಳಾದ ವೀರ್ಯ ಧೈರ್ಯಸ್ಥೈರ್ಯಾದಿಗಳನ್ನು ಕಳೆದುಕೊಂಡು ಪರಾಧೀನರಾದೆವು. ಇನ್ನು ಗತಿಸಿದ್ದನ್ನು ಕುರಿತು ಚಿಂತಿಸಿ ಯೇನೂ ಪ್ರಯೋಜನವಿಲ್ಲವು ಈಚೆಗೆ, ಅಂದರೆ ಬ್ರಿಟಿಷ್ ಆಳ್ವಿಕೆಯು ಈ ಇಂಡ್ಯದೇಶದಲ್ಲಿ ನೆಲಗೊಂಡಮೇಲೆ ನಮ್ಮ ಪೂರ್ವಸ್ಥಿತಿಯು ಲಭಿಸದೇಹೋದರೂ, ಮಧ್ಯಸ್ಥಿತಿ ತಪ್ಪ ಬಹ್ವಂಶಗಳಲ್ಲಿ ನಮಗೆ ಸುಖಸಂತೋಷಗಳುಂಟಾದವು. ನಮ್ಮನ್ನು ವಿದ್ಯಾವಂತರನ್ನಾಗಿ ಮಾಡುವದರಲ್ಲಿಗಾಗಲಿ, ಪರಸ್ಪರ ಸಮಾಗಮ ಸಂದರ್ಶನ ಸಲ್ಲಾಪೋಪಯುಕ್ತ ಶ್ರವಣಾವೇದನೋಪಯುಕ್ತಗಳಾದ ಅರ್ಥೋಪಾರ್ಜನಸಾಧನ ಸಂಪತ್ತಿಗಳನ್ನು ಘಟಿಯಿಸುವದರೊಳಗಾಗಲಿ, ಲೇಶವೂ ಇಂಗ್ಲಿಷ್‌ನವರು ಲೋಪಮಾಡುವದಿಲ್ಲವು. ಹಾಗಿರುತ್ತಲು ಅವರ ಪ್ರಯತ್ನವೆಲ್ಲವೂ ತಮ್ಮ ರಾಜಕೀಯೋದ್ದೇಶಕ್ಕೆ ಅನುಗುಣವಾದಷ್ಟುಮಟ್ಟಿಗೆ ನಮ್ಮನ್ನು ಅಭಿವೃದ್ಧಿ ಗೊಳಿಸತಕ್ಕವಾಗಿದೆಯೇ ಹೊರತು ಶ್ರೇಷ್ಠವಾದ ನಮ್ಮ ಪೂರ್ವಸ್ಥಿತಿಯನ್ನುಂಟುಮಾಡುವದಾಗಿಲ್ಲವು. ಆದರೆ ಅನವಧಿಕ ಸೌಜನ್ಯಮಾನ್ಯರಾದ ಬ್ರಿಟಿಷ್ ಗವರ್ನಮೆಂಟಿನವರು ನಮ್ಮ ವಿಷಯದೊಳು ಮಾಡಿರುವ ಪರಮೋಪಕಾರದಿಂ ತೃಪ್ತರಾಗದೆ ಅಪೇಕ್ಷಿತಾಂಶಗಳನ್ನೆಲ್ಲ ಅವರಿಂದ ನಿರೀಕ್ಷಿಸುವದು ಯುಕ್ತವಲ್ಲವಾದ್ದರಿಂದ ಪೂರ್ವದಂತೆ ಸರ್ವತೋಭದ್ರವಾದ ಸ್ಥಿತಿಯನ್ನು ಪಡೆಯಲಿಕ್ಕೆ ನಾವೇಸ್ವತಃ ಪ್ರಯತ್ನಪಡಬೇಕು. ಅಂತಾ ಪ್ರಯತ್ನವು ವಿದ್ಯೆಯಿಂದಲ್ಲದೆ ಬೇರೆಯಾತರಿಂದಲೂ ಸಾಧ್ಯವಾಗಲಾರದಾಗಿ ಆರ್ಯಸುಜ್ಞಾತವಾದ ಪ್ರಶಸ್ತಿಯನ್ನು ಹೋಗಲಾಡಿಸದೆ ಕಾಪಾಡಿಕೊಳ್ಳಬೇಕಾದರೆ ನಾವೆಲ್ಲರೂ ಶಾಸ್ತ್ರಜ್ಞಾನವನ್ನು ಸಂಪಾದಿಸಿ ಅದನ್ನು ಸರ್ವದ ನೋಪಯೋಗಿಯನ್ನಾಗಿಮಾಡಿ ಸದರೀ ಜ್ಞಾನವನ್ನು ಕಾರ್ಯತಃ ವ್ಯವಹಾರದೊಳು ತಂದುಕೊಳ್ಳಬೇಕಾದ್ದು ಪ್ರಥಮ ಕರ್ತವ್ಯವಾಗಿರುತಿದೆ. ಹೀಗೆ ಮಾಡುವದರಿಂದ ವಿಚಿತ್ರಗಳಾದ ಬುದ್ಧಿವ್ಯಾಪಾರಗಳಮೂಲಕ ಮಾನವರಿಗೆ ಸ್ವಾಭಾವಿಕಗಳಾದ ಶಿಲ್ಪ ಕೃಷಿ ವಾಣಿಜ್ಯಾದಿ ನಾನಾವಿಧಶಾಸ್ತ್ರಗಳನ್ನು ಸಾಂಗವಾಗಿ ಕಲಿಯಲಿಕ್ಕೂ, ತತ್ಸಹಕೃತವಾದ ಮೇಧಾವಿಶೇಷದಿಂ ಮರೂಪಗಳಾದ ಮಂ ಕಂತು ಹಿಡಿಯಲಿಕ್ಕೂ, ವಿತತಿ ವಿಶೇಷಗಳಾದ ಅದ್ಭುತಗಳಂ ತಿಳಿದುಕೊಳ್ಳಲಿಕ್ಕೂ, ನೂತನಾಂಶಗಳನ್ನು ಕಲ್ಪಿಸಿ ಜನಗಳ ಪ್ರಶಂಸೆಗೆ ಪಾತ್ರರಾಗಲಿಕ್ಕೂ, ಅನ್ಯದೇಶೀಯರಂತೆ ಉತ್ತಮ ಭಾಗ್ಯವನ್ನನುಭವಿಸಲಿಕ್ಕೂ ಅವಕಾಶವಾಗುವದಲ್ಲದೆ ಸಕಲಾಂಶದಲ್ಲಿಯೂ ಕೇವಲ ಶೋಚನೀಯವಾದ ಪ್ರಕೃತ ನಮ್ಮ ಸ್ಥಿತಿಯು ಕ್ರಮವಹಲಿಕ್ಕೆ ಕಾರಣವಾಗುವದು. ಆದದರಿಂದ ಸಕಲಾನುಕೂಲ್ಯವೂ ವುಂಟಾಗಿರುವ ಪ್ರಕೃತ ಸಂದರ್ಭದಲ್ಲಿ ಶಿಲ್ಪಕೃಷಿವಾಣಿಜ್ಯಾದಿಗಳಂ ಕಲಿತು ದೇಶದ ನಕ್ಷೇಮಕರಗಳಾದ ಕಾರ್ಯಗಳೊಳು ಸಾಧ್ಯವಾದಷ್ಟು ಪ್ರಯತ್ನ ಪಡಬೇಕಾದ್ದು ಆವಶ್ಯಕವಾದದರಿಂದ ಅಂತಾ ಪ್ರಯತ್ನಕ್ಕೆ ಸ್ವದೇಶಜನಾಭಿಮಾನವೂ ಪರಸ್ಪರ ಯೋಗಕ್ಷೇಮಾಸಕ್ತಿಯೂ, ಉಚಿತಕಾರ್ಯ ಪ್ರವೃತ್ತಿಯೂ, ಹೃದಯ ಸ್ಥೈರ್ಯವೂ, ಸ್ವಸ್ವಾತಂತ್ರ್ಯರಕ್ಷಣವೂ ಅವಶ್ಯಾಪೇಕ್ಷಿತವು ಇಂತಾಸುಗುಣಗಳು ಜನಗಳಿಗೆ ಸಾಮಾನ್ಯವಾಗಿ ವುಂಟಾಗಲಿಕ್ಕೂ, ಪರಿಮುಷಿತಗಳಾದ ನಮ್ಮ ಪೂರ್ವಗ್ರಂಥಗಳನ್ನು ಅಭ್ಯಾಸಮಾಡುವಬಗ್ಗೆ ಜನಗಳಿಗೆ ತಕ್ಕ ಪ್ರೋತ್ಸಾಹನನ್ನುಂಟುಮಾಡಲಿಕ್ಕೂ, ಒಬ್ಬರಿಬ್ಬರಿಂದ ಆಗುವದಿಲ್ಲವಾಗಿ, ಅನೇಕ ಉದ್ದೇಶಗಳಿಂದ ಮದರಾಸ್ ಪುನೆ ಮುಂತಾದ ಪ್ರಸಿದ್ಧ ಸ್ಥಳಗಳೊಳು, ವಿವಿಧಾಂಕಿತಗಳೊಡನೆ ನೆಲಗೊಂಡಿರ್ದ ಸಮಾಜದಂತೆ ಏತದರ್ಥ ಒಂದುಸಭೆ ಈಗ್ಯೆ ಎರಡುವರುಷಗಳಹಿಂದೆ ಕಡಪಯಲ್ಲಿ ಸ್ಥಾಪಿಸಲ್ಪಟ್ಟಿರುವಂತೆಯೂ ತತ್ಸಮಾನವಾದ ಪ್ರತ್ಯೇಕ ಸಭೆಯನ್ನಾಗಲಿ, ಅದಕ್ಕೆ ಸೇರಿದಂತೆ ಒಂದುಉಪಸಮಾಜವನ್ನಾಗಲಿ, ಈಪುರದೊಳು ಸ್ಥಾಪಿಸಿ ಅದಕ್ಕೆ ಯೆಲ್ಲರೂ ಸಹಾಯಕರಾಗಿರಬೇಕೆಂದು ಕೋರುವಂತೆಯೂ ಹೇಳಿ, ಕಡಪ ಸಭೆಯವಿಷಯದಲ್ಲಿ ಶೃಂಗೇರಿ ಮುಂತಾದ ಮಠಾಧಿಪರು ಕಳುಹಿಸಿದ ಪ್ರತ್ಯುತ್ತರಗಳನ್ನೂ ಹಿಂದಿನ ಸಂವತ್ಸರ ಅದರ ಆದಾಯ ವ್ಯಯಗಳನ್ನೂ ಮ॥ ಸುಬ್ಬರಾಯರವರು ತಿಳಿಸಿ ತಮ್ಮ ಪ್ರಸಂಗವಂ ಪೂರೈಸಿದರು. ಅನಂತರ ಪ್ರೆಸಿಡೆಂಟ್ ಮೆ॥ ಶ್ರೀನಿವಾಸಾಚಾರ್ಯರವರು ಪ್ರಾಸಂಗಿಕರ ವಾಗ್ವೈಖರಿಯಂ ಶ್ಲಾಘಿಸಿ ಉಪನ್ಯಾಸದ ಮುಖ್ಯೋದ್ದೇಶವನ್ನು ಬಹಳವಾಗಿ ಕೊಂಡಾಡಿ ಅದಕ್ಕೆ ಯೆಲ್ಲರೂ ಸಹಾಯಕರಾಗಿರಬೇಕೆಂದು ಕೋರುವಂತೆ ತಿಳಿಸಿದರು. ತರುವಾಯ ಈ ಅಭಿಪ್ರಾಯವನ್ನೇ ಶಬ್ದಾಂತರದಿಂ ಅಸಿಸ್ಟೆಂಟ್ ಕಮಿಶನರ್ ಮೆ॥ ಕೃಷ್ಣಯ್ಯಂಗಾರ್‌ರವರು ವ್ಯಕ್ತಪಡಿಸಿದರು. ಬಳಿಕ ಮೆ॥ ಸುಬ್ಬರಾಯರವರು ದೇಶಕ್ಷೇಮಾಭಿ

ಲಾಷೆಯೊಡನೆ ಐಶ್ವರ್ಯ ಪರಿಶ್ರಮ ಪಡುವದಕ್ಕಾಗಿ ಅವರಿಗೆ ಸಭಿಕರೆಲ್ಲರೂ ವಂದನಮಾಡಿದರು. ಬದಸ್ತೂರ್ ಪ್ರಾಸಂಗಿಕರು ಏತದ್ವಿಷಯಗಳಲ್ಲಿ ಜನಗಳಿಗೆ ಇರುವ ಸ್ವಸರ್ಗಿಕಗಳಾದ ಉತ್ಸಾಹವಂ ಪ್ರಶಂಸಿಸಿ ಅವರಿಗೂ ಅವರ ಪ್ರತಿನಿಧಿಯಾದ ಪ್ರೆಸಿಡೆಂಟರಿಗೂ ತಮ್ಮ ಕೃತಜ್ಞತಾದಿ ಭಾವವನ್ನು ತಿಳಿಸಿದರು. ಕಡೆಗೆ ಕರಾಸ್ಫಾಲನಪೂರ್ವಕ ಸಭೆ ಬರಖಾಸ್ತಾಯಿತು.

PANDIT SRI KESAVANANDASWAMY.

ಶ್ರೀಕೇಶವಾನಂದ ಸ್ವಾಮಿಗಳೆಂಬ ಪರಮಹಂಸ ಯತಿಯೊಬ್ಬರು ತಮ್ಮ ಶಿಷ್ಯವರ್ಗದೊಡನೆ ದೇಶಸಂಚಾರವಮಾಡುತ ಅಲ್ಲಿಯಲ್ಲಿ ಸಂಸ್ಕೃತ ಪ್ರಾಕೃತ ಮುಂತಾದ ಭಾಷೆಗಳಲ್ಲಿ, ತತ್ಕಾಲದ ಪ್ರಜಾಭಿಪ್ರಾಯಕ್ಕನುಗುಣವಾಗಿ ಒಂದೊಂದು ವಿಷಯವನ್ನುಕುರಿತು ಉಪನ್ಯಾಸ ಮಾಡುತಲಿದ್ದಾರೆಂದು ವಗೈರೆ ನಾವು ಪೂರ್ವವೇ ಕೇಳಿದ್ದೆವು. ಈಗ ಸದರೀ ಸ್ವಾಮಿಗಳವರು ಮುಂಬೈಯಲ್ಲಿದ್ದಾರೆ. ಇವರು ಕಳೆದತಿಂಗಳ ೨೧ನೇ ತಾರೀಖು ಮಂಗಳವಾರದಿನ ಮುಂಬೈ ಯೂನಿವರ್ಸಿಟಿ ಹಾಲ್‌ನಲ್ಲಿ ಪ್ರಸಂಗಿಸಿದರು. ಯೂನಿವರ್ಸಿಟಿ ಸಿಂಡಿಕೇಟಿಗಳು ಮುಂತಾದವರು ಸ್ವಾಮಿಗಳನ್ನು ಅವರು ಇಳಿದಿದ್ದ ಸ್ಥಳದಿಂದ ವಾದ್ಯವಿಶೇಷಗಳೊಡನೆ ಗೌರವಪೂರ್ವಕ ಕರೆದುಕೊಂಡುಹೋದರು. ಈ ಸ್ವಾಮಿಗಳ ಉಪನ್ಯಾಸವನ್ನು ಕೇಳಬೇಕೆಂಬ ಕುತೂಹಲದೊಡನೆ ಬಹುಮಂದಿ ದೊಡ್ಡಮನುಷ್ಯರು ಬಂದಿದ್ದರು. ಈ ಪರಮಹಂಸರು ಪ್ರಥಮತಃ ದೇವರ ಅಸ್ತಿತ್ವವನ್ನು ಸ್ಥಾಪಿಸುವದಕ್ಕೆ ಆಧಾರವಾಗಿ ಅನೇಕ ವೇದವಾಕ್ಯಗಳನ್ನುದಹರಿಸಿದರು. ತರುವಾಯ ಈ ಜಗತ್ತಿನೊಳು ಪ್ರಾಣಿಗಳು ಅನುಭವಿಸುವ ಸುಖದುಃಖಗಳ ವಿಷಯವನ್ನು ಕುರಿತು ವಿಚಾರಮಾಡಿ, ಅವು ಪೂರ್ವ ಮತ್ತು ಇಹಜನ್ಮಗಳಲ್ಲಿ ಮಾಡತಕ್ಕ ಕರ್ಮಾನುಗುಣವಾಗಿರುವವೆಂತಲೂ, ಸುಖದುಃಖಗಳಿಗೆ ಪ್ರಾಣಿಗಳನ್ನು ಒಳಪಡಿಸುವದರಲ್ಲಿ ಈಶ್ವರನು ಸ್ವಲ್ಪವೂ ಪಕ್ಷಪಾತಮಾಡುವದಿಲ್ಲವಾಗಿ ಆತನನ್ನು ಪಕ್ಷಪಾತಿಯೆಂದು ಹೇಳುವದು ಅಸಂಗತವೆಂತಲೂ, ವಾದಿಸಿದರು. ಬಳಿಕ ಆತ್ಮನಿಗೂ ದೇಹಕ್ಕೂ ಇರುವ ಭೇದವನ್ನು ಅನೇಕ ಪ್ರಮಾಣಗಳಿಂದಲೂ ಯುಕ್ತಿ ನ್ಯಾಯಗಳಿಂದಲೂ ನಿರೂಪಿಸಿ ಮೋಕ್ಷಪ್ರಾಪ್ತ್ಯುಪಾಯವನ್ನರುಹಿದರು. ಅನಂತರ ಪ್ರಜೆಗಳ ತಾತ್ಕಾಲಿಕಸ್ಥಿತಿಯಂಕುರಿತು ವಿಚಾರಮಾಡುತ, ಇಂಡ್ಯದೇಶೀಯರು ತಮ್ಮ ಪೂರ್ವವಿದ್ಯೆಯನ್ನು ಕುಡ್ಡಂಗ ಯೋಗಲಾಡಿಸಿಕೊಂಡರೆಂತಲೂ, ಅವರು ಪೂರ್ವಸ್ಥಿತಿಯನ್ನೈದಲಿಕ್ಕೆ ಬಹುಕಾಲ ಬೇಕಾಗುವದೆಂತಲೂ, ಈಗ ಇಂಗ್ಲಿಷ್‌ವಿದ್ಯೆಯ ಪ್ರಾಬಲ್ಯವು ಅತ್ಯಧಿಕವಾಗಿದ್ದರೂ ಸಂಸ್ಕೃತಭಾಷೆಯ ಪ್ರಚುರತ್ವಕ್ಕೆ ಅದುಬಾಧಕವಲ್ಲದೆ ಇರುವದರಿಂದ ಅದನ್ನು ಪ್ರಚಾರದೊಳು ತರುವದು ಬಹಳ ಯೋಗ್ಯವೆಂತಲೂ, ಅಂಥಾ ವಿದ್ಯಾಭ್ಯಾಸಕ್ಕೆ ಬ್ರಹ್ಮಚರ್ಯವು ಅಪೇಕ್ಷಿತವೆಂತಲೂ ತನ್ಮೂಲಕ ಶಾಸ್ತ್ರಾಭ್ಯಾಸಕ್ಕೆ ಬೇಕಾದ ವ್ಯವಧಾನವು ದೊರೆಯುವದೆಂತಲೂ ವಾದಿಸಿದರು. ಬಳಿಕ ಹಿಂದೂ ಸ್ತ್ರೀಗಳು ಇತರರಿಗಿಂತಲೂ ಬಹ್ವಂಶಗಳಲ್ಲಿ ವಿಜಾತೀಯ ರೆನಿಸಿಕೊಂಡಿರುತ್ತಾರೆ. ಸ್ತ್ರೀಯರು ತಮ್ಮ ಪತಿಗಳ ಸಹಧರ್ಮಚಾರಿಣಿಗಳೆಂದು ಕರೆಯಲ್ಪಡುವದರಿಂದ ಗಂಡಸರಂತೆ ಅವರು ಸಹ ವಿದ್ಯಾವಂತರಾಗುವದು ಯೋಗ್ಯವಾಗಿರುತಿದೆ. ಅವರು ಪುರುಷರಂತೆ ಶಾಸ್ತ್ರಾಭ್ಯಾಸಮಾಡಲಿಕ್ಕೆ ಬೇಕಾದಕಾಲವು ಈಗ ಇಲ್ಲವಾಗಿ ಅವರಿಗೆ ತಕ್ಕ ವ್ಯವಧಾನ ವುಂಟಾಗುವಂತೆ ಬಾಲ್ಯವಿವಾಹವನ್ನು ತ್ಯಜಿಸುವದು ಯುಕ್ತವಾಗಿರುತಿದೆ. ತದ್ವತಿ ಚಿಕ್ಕಹುಡಿಗಿಯರನ್ನು ವಯಸ್ಸಾದವರಿಗೆ ಕೊಡುವ ದುಸ್ಸಂಪ್ರದಾಯವನ್ನು ತೊರೆಯಬೇಕು. ಇದರಿಂದ ವಿಧವಾ ಪುನರ್ವಿವಾಹದ ಪ್ರಸಕ್ತಿಗೆ ಅವಕಾಶ ವಿರಲಾರದು. ಏಕತ್ರ ಸ್ತ್ರೀ ಪುರುಷರಿಗೆ ವಿದ್ಯಾಭ್ಯಾಸ ಮಾಡಿಸುವದುವು ದುಸ್ಸಂಪ್ರದಾಯವಾಗಿರುತಿದೆ. ಸ್ತ್ರೀ ಶಿಕ್ಷೆಗೆ ಪ್ರತ್ಯೇಕ ಉಪಾಧ್ಯಾಯರನ್ನಾಗಲಿ, ಸಾಧ್ಯವಾದರೆ ಉಪಾಧ್ಯಾಯಿನಿಯನ್ನಾಗಲಿ ಏರ್ಪಡಿಸಬೇಕು. ಸ್ತ್ರೀಯರಿಗೆ ಮನೋದಾರ್ಢ್ಯವಿಲ್ಲದ್ದರಿಂದ ಅವರು ಅಬಲೆಯರೆನ್ನಿಸಿಕೊಳ್ಳುವರು. ಐಹಿಕಾಮುಷ್ಮಿಕ ಸುಖಪ್ರದವಾದ ಗೀರ್ವಾಣಭಾಷೆಯನ್ನೇ ಅವರಿಗೆ ಮುಖ್ಯವಾಗಿ ಕಲಿಸತಕ್ಕದ್ದು. ಸಂಸ್ಕೃತವಿದ್ಯೆಯು ಯಾವಾಗ ಸಾರ್ವಜನೀನವಾದ ಭಾಷೆಯಾಗುವದೋ ಆಗ ಪ್ರಜೆಗಳಸ್ಥಿತಿಯು ಕ್ರಮಮುಖ್ಯ ವೃದ್ಧಿಯಾಗಬಹುದೆಂದು ಮುಂತಾಗಿ ಪ್ರಾಸಂಗಿಕರು ವ್ಯಕ್ತಪಡಿಸಲು, ಅಲ್ಲಿದ್ದ ಸಾಮಾಜಿಕರೆಲ್ಲರೂ ಸಂತೃಪ್ತರಾಗಿ ಕರಾಸ್ಫಾಲನ ಮಾಡಿದರು. ಶ್ರೀ ಕೇಶವಾನಂದಸ್ವಾಮಿಯವರು ಸ್ವಯಂವಿರಕ್ತರಾಗಿ ಪಾರಲೌಕಿಕ ಚಿಂತೆಯುಳ್ಳವರಾಗಿದ್ದಾಗ್ಯೂ ದೇಶ ಜನಕ್ಷೇಮನಿಮಿತ್ತಕಗಳಾದ ವಿಷಯಗಳನ್ನು ವಿಚಾರಮಾಡುತ ಅವುಗಳಂ ಸಭಾಮುಖದಲ್ಲಿ ಪ್ರಜೆಗಳಿಗೆ ತಿಳಿಸುವದ್ಯುಕ್ಷೇಮಚಿಂತನೆ ಯುಳ್ಳವರಾಗಿರುವದುಕುರಿತು ಅವರಂ ಪ್ರೀತಿಸಿ ಗೌರವಿಸುವರತಕ್ಕವರು ಬಹಳ ದುರ್ಲಭರಾಗಿರುತ್ತಾರೆ. ಶ್ರೀ ಸ್ವಾಮಿಗಳುವ್ಯಕ್ತಪಡಿಸಿದ ಅಂಶಗಳೆಲ್ಲವೂ ಸಾಧಾರಣವಾಗಿ ಯೆಲ್ಲರಿಂದಲೂ ಶ್ಲಾಘಿಸಲ್ಪಡದಿರಲಿಲ್ಲವು. ಪ್ರಾಸಂಗಿಕರಿಗೆ ಯೆಲ್ಲರೂ ಭಕ್ತಿ ಗೌರವದೊಡನೆ ನಮನ ಮಾಡಿದಮೇಲೆ ಸಭೆ ಬರಖಾಸ್ತಾಗಿ ಪೂರ್ವದಂತೆ ಸಕಲ ಮರ್ಯಾದೆಗಳೊಡನೆ ಸ್ವಾಮಿಗಳು ತಾವು ಇಳಿದಿದ್ದ ಸ್ಥಳಕ್ಕೆ ದಯಮಾಡಿದರು. ಇವರು ಬಹಳ ಪಂಡಿತರಾಗಿಯೂ ಯೋಗ್ಯರಾಗಿಯೂ ಇರುತ್ತಾರೆಂದು ಮುಂಬೈಪತ್ರಿಕೆಯೊಂದು ತಿಳಿಸುತಿದೆ.

GAYAN SAMAJ, AND JUSTICE MUTHU SAMY IYER ON HINDU MUSIC.

ಈಚೆಗೆ ಮುಂಬೈ ಗವರ್ನರವರು ಮದರಾಸಿಗೆ ದಯಮಾಡಿದ್ದ ಸಂದರ್ಭದೊಳು ಅವರ ಗೌರವಾರ್ಥ, ಕಳೆದತಿಂಗಳ ೨೧ನೇ ತಾರೀಖು ಸೋಮವಾರದಿನ ಸಾಯಂಕಾಲ, ಪಚ್ಚೆಯಪ್ಪಮೊದಲಿಯಾರ್‌ರವರ ಸ್ಮೂತಿಹಾಲ್‌ನಲ್ಲಿ ಮದರಾಸ್ ಗಾಯನ ಸಮಾಜದವರು ಸಭೆ ಸೇರಿದ್ದರು. ಲಾರ್ಡ್ ರೇಯವರು ಶರೀರಾಲಸ್ಯದಿಂ ಆಸಭೆಗೆ ದಯಮಾಡಲಿಲ್ಲವು. ಮದರಾಸ್ ಗವರ್ನರ್ ಮುಂತಾದ ದೊಡ್ಡಮನುಷ್ಯರು ಬಹುಮಂದಿ ಬಂದಿದ್ದರು. ಪ್ರಥಮತಃ ಶ್ರೀನಿವಾಸಯ್ಯಂಗಾರ್ಯೆಂಬವರು ಸ್ವಲ್ಪ ಹೊತ್ತು ಗಾನಮಾಡಿ ತಮ್ಮ ಪರಿಶ್ರಮವನ್ನು ವ್ಯಕ್ತಪಡಿಸಿದರು. ಹೀಗೆಯೇ ಅವರವರು ತಮ್ಮತಮ್ಮ ಗಾನವಿದ್ಯಾ ಕೌಶಲ್ಯವನ್ನು ತೋರ್ಪಡಿಸಿದಮೇಲೆ ವೈಸ್‌ಚೇರ್ಮನ್ ಆಗಿದ್ದವರಾದ ಆನರೆಬಲ್ ಜಸ್ಟಿಸ್ ಮುತ್ತುಸಾಮಿಅಯ್ಯರವರು ಯೆದ್ದು ನಿಂತುಕೊಂಡು ಉಪನ್ಯಾಸಮಾಡಿದರೇನೆಂದರೆ,— ನನಗೆ ಗಾನವಿದ್ಯೆಯೊಳು ಶಾಸ್ತ್ರೀಯವಾದ ಜ್ಞಾನವಾಗಲಿ ಅಭ್ಯಾಸವಾಗಲಿ ಸುತ್ರಾಂವಿಲ್ಲವು. ಆದರೆ ಈ ಸಭಾಮುಖದಲ್ಲಿ ನನ್ನನ್ನು ಏತದ್ವಿಷಯವಂಕುರಿತು ಉಪನ್ಯಾಸ ಮಾಡುವಂತೆ ನನ್ನ ಸ್ನೇಹಿತರು ಬಲಾತ್ಕರಿಸಿದ್ದರಿಂದ ನನಗೆ ತಿಳಿದಮಟ್ಟಿಗೆ ಪ್ರಕಟಪಡಿಸುವೆನು. ಸಾಧಾರಣವಾಗಿ ಹಿಂದೂಗಳು ಬೀದಿಯಲ್ಲಿ ಬಾರಿಸತಕ್ಕ ವಾದ್ಯಗಳನ್ನೂ ಗಾನಮಾಡುವಾಗ್ಯೆ ಗಾಯಕರು ಮಾಡತಕ್ಕ ಶಿರಃಕಂಪನ ಹಸ್ತಚಾಲನ ಮುಂತಾದ ದುಶ್ಚೇಷ್ಟೆಗಳನ್ನೂ ಹಿಡಿದು ಹಿಂದುಗಳ ಸಂಗೀತಶಾಸ್ತ್ರವು ಶ್ಲಾಘ್ಯವಲ್ಲವೆಂದು ಅನೇಕರು ಅಭಿಪ್ರಾಯಪಡುತ್ತಾರೆ. ಇದಲ್ಲದೆ ತಾಳ ಸ್ವರವಿಷಯಗಳಲ್ಲಿ ತಮ್ಮ ಸಾಮರ್ಥ್ಯವನ್ನು ತೋರ್ಪಡಿಸುವ ಉದ್ದೇಶದೊಡನೆ ಸಂಗೀತದ ಮುಖ್ಯೋದ್ದೇಶವಾದ ಶ್ರಾವ್ಯತೆಯನ್ನೂ ರಕ್ತಿಯನ್ನೂ ಹೋಗಲಾಡಿಸುತ್ತಾರೆ. ಇಂಥಾ ಬಾಹ್ಯದೋಷಗಳಿದ್ದಾಗ್ಯೂ ಹಿಂದೂ ಗಾನವಿದ್ಯೆಯು ಶಾಸ್ತ್ರೀಯವಾದ್ದೇಹೊರ್ತು ಬೇರಲ್ಲವು. ಈ ಗಾನವಿದ್ಯೆಯು ಶ್ರವಣಮಾತ್ರದಿಂದ ಈಶ್ವರನೊಳು ಭಕ್ತಿ ವಿಶೇಷವನ್ನೂ ಹೃದಯಾನಂದವನ್ನೂ ವುಂಟುಮಾಡತಕ್ಕದ್ದಾಗಿರುತಿದೆ. ಪೂರ್ವದೊಳಿದ್ದ ಇಂಗ್ಲಿಷ್ ಕವಿಗಳಲ್ಲೊಬ್ಬರಾದ ಮಿಲ್ಟನ್‌ಯೆಂಬವನು ಸಂಗೀತ ರಸಾನುಭವವಿಲ್ಲದವನು ಕೆಲಸಕ್ಕೆಬಾರದವನೆಂದು ತಿಳಿಸಿರುವದು ಅಯುಕ್ತವಲ್ಲವು. ಮುಖ್ಯವಾಗಿ ಸಾಮವೇದದಲ್ಲಿ ಸಂಗೀತ ಮಟ್ಟುಗಳು ಕಂಡುಬರುತಿವೆ. ಸಾಮವೇದದಲ್ಲಿ ಧಾ ನೀ ಸಾ ರೀ ಗಾ ಯೆಂಬ ಐದು ಸ್ವರಗಳು ಮಾತ್ರವೇ ಇರುತಿವೆ. ಇವು ಇಂಗ್ಲಿಷ್ ಸ್ವರಗಳಾದ ಎ. ಬಿ. ಸಿ. ಡಿ. ಇ. ಯೆಂಬವುಗಳಿಗೆ ಸಮಾನವಾಗಿರುವವು. ಪರಂತುಮೇರೆಕಂಡ ೫ ಸ್ವರಗಳು ನ್ಯೂನವೆಂದುತೋರಿ ಎಫ್. ಜಿ. ಯೆಂಬ ಇಂಗ್ಲಿಷ್ ಸ್ವರಗಳಿಗೆ ತುಲ್ಯವಾದ ಮಧ್ಯಮ ಪಂಚಮಗಳೆಂಬ ಯೆರಡು ಸ್ವರಗಳನ್ನು ಗಂಧರ್ವರು ಕಲ್ಪಿಸಿದರು. ಈಗ ನಮ್ಮ ಸಂಗೀತಶಾಸ್ತ್ರದಲ್ಲಿ ಸಪ್ತಸ್ವರಗಳೇರ್ಪಟ್ಟಿರುತಿವೆ. ಇದಕ್ಕೆ ಗಾಂಧರ್ವವೇದವೆಂಬ ವ್ಯವಹಾರಸಹ ವುಂಟು. ನಮ್ಮ ಪುರಾಣರೀತ್ಯಾ ರಾವಣನು ಪಾರ್ವತೀ ಪರಮೇಶ್ವರರ ರಜತಗಿರಿಯನ್ನು ತನ್ನ ಇಪ್ಪತ್ತು ಕೈಗಳಿಂದ ಕದಲಿಸಲು ಅವು ಅದರ ಕೆಳಗೆ ಸಿಕ್ಕಿ ತೆಗೆಯಲಿಕ್ಕೆ ಸಾಧ್ಯವದೆಹೋಗಲು ಆಗ ರಾವಣನು ಸಾಮವೇದವನ್ನು ಗಾನಮಾಡಿ ತನ್ಮೂಲಕ ಪರಮೇಶ್ವರನನ್ನು ಸಂತೋಷಪಡಿಸಿ ತನ್ನ ನಿರ್ಬಂಧದಿಂದ ತಪ್ಪಿಸಿಕೊಂಡಂತೆ ತಿಳಿಯಬರುತಿದೆ. ಪೂರ್ವದಿಂದಲೂ ಈ ಗಾನವಿದ್ಯೆಯು ಹಿಂದೂ ಅರಸರೊಳು ಪ್ರಾಶಸ್ತ್ಯವನ್ನೈದಿತ್ತು. ಈಚೆಗೆ ಸಂಗೀತವೆಂಬದು ಗಾಯಕರ ರಕ್ತಿಮಾರ್ಗವನ್ನವಲಂಬಿಸದೆ ಸ್ವರಕಲ್ಪನಾ ಸಾಮರ್ಥ್ಯವನ್ನು ತೋರಿಸುವದರಲ್ಲಿಯೂ ತಾಳಜ್ಞಾನವನ್ನು ವ್ಯಕ್ತಪಡಿಸುವದರಲ್ಲಿಯೂ ಅವರ ಬುದ್ಧಿ ಯೆಲ್ಲ ವಿನಿಯೋಗಿಸಲ್ಪಡುವದರಿಂದ ಗಾನವಿದ್ಯೆಯು ಸ್ವಲ್ಪ ಹೀನದಶೆಯನ್ನೈದಲಿಕ್ಕೆ ಕಾರಣವಾಯಿತು. ಇಂಥಾ ದೋಷನಿವಾರಣಾರ್ಥವಾಗಿಯೆ ಇಲ್ಲಿ ಗಾಯನ ಸಮಾಜವು ಯೇರ್ಪಡಿಸಲ್ಪಟ್ಟಿತು. ರೆವರೆಂಡ್ ಪಾಪ್ಲಿಫರ್ ಯೆಂಬವರು ಗಾಯನ ಸಮಾಜದ ಸೆಕ್ರೆಟರಿಯವರಿಗೆ ಈಚೆಗೆ ಬರೆದ ಒಂದು ಕಾಗದದಲ್ಲಿ ಇಂಗ್ಲಾಂಡಿನೊಳು ಹಿಂದೂ ಸಂಗೀತಶಾಸ್ತ್ರ ವಿಷಯಕವಾದ ಸಭೆಯೊಂದು ಏರ್ಪಡಿಸಲ್ಪಡುವದೆಂತಲೂ, ಅದಕ್ಕೆ ಆರತಾಪ್ರೋಫೆಸರ್ ಯೆಂಬವರೂ, ಮಹಾರಾಜಾ ಜಲೀಪ್ ಸಿಂಗರವರೂ ಅಗ್ರಾಸನಾಧಿಪತಿಗಳಾಗಿಯೂ, ಪ್ರಿನ್ಸ್‌ಆಫ್‌ವೇಲ್ಸ್‌ರವರು ಪೋಷಕರಾಗಿಯೂ ಇರುವಂತೆ ವಾಗ್ದಾನ ಮಾಡಿದರೆಂತಲೂ, ತಿಳಿಸುತ್ತಾರೆ. ಆರೀತಿ ನಡೆಯುವ ಪಕ್ಷದಲ್ಲಿ ಇಲ್ಲಿನ ಸಂಗೀತಶಾಸ್ತ್ರವು ಇಂಗ್ಲಾಂಡಿನಲ್ಲಿಯೂ ಅಲ್ಲಿನವಿದ್ಯೆಯು ಇಲ್ಲಿಯೂ ಸುಲಭವಾಗಿ ಪ್ರಚಾರದೊಳು ಬರಬಹುದೆಂದೂ ಯೆಣಿಸುವೆನು. ಇದಕ್ಕೆ ಅನುಗುಣವಾಗಿ ಪ್ರಸಿದ್ಧಸ್ಥಳಗಳಲ್ಲಿ ಗಾಯನ ಸಮಾಜಗಳನ್ನೇರ್ಪಡಿಸಬೇಕೆಂಬದೇ ಅವರ ಮುಖ್ಯೋದ್ದೇಶಗಳಲ್ಲಿ ಒಂದೆನಿಸುವದಾಗಿರುತಿದೆ. ಸಂಸ್ಕೃತಭಾಷೆಯು ಪ್ರಚಾರದೊಳು ಬರುವಂತೆಲ್ಲ ಸಂಗೀತಶಾಸ್ತ್ರವು ಸ್ವಕೀಯರೊಳು ಉತ್ತಮದಶೆಗೆ ಬರಬಹುದಾಗಿರುತಿದೆ. ಪ್ರಾಚೀನ ಈಸಂಗೀತಶಾಸ್ತ್ರದಲ್ಲಿ ಪಾಂಡಿತ್ಯವು ಸಂಪಾದಿಸುವವರಿಗೆ ಬಿ. ಎ. ಮುಂತಾದ ಡಿಗ್ರಿಗಳೇರ್ಪಡಬಹುದೆಂದು ವಗೈರೆಯಾಗಿ ಮುತ್ತುಸಾಮಿಅಯ್ಯರವರು ಪ್ರತಿಪಾದಿಸಿದರು. ತರುವಾಯ ಮದರಾಸ್ ಗವರ್ನರಾದ ಮೌ|| ಗ್ರಾಂಟ್ ಡಫ್‌ಯವರು ಗಾಯನಸಮಾಜಿಕರಿಗೂ, ಆಸಂದರ್ಭದಲ್ಲಿ ಗಾನಮಾಡಿದ ಗಾಯಕರಿಗೂ ತಮ್ಮ ಮನವನ್ನರುಹಿ, ಜಸ್ಟಿಸ್ ಮುತ್ತುಸಾಮಿಅಯ್ಯರವರ ಪ್ರಸಂಗವನ್ನುಕುರಿತು, ತಾವು ಬಹಳ ಸಂತೋಷಿಸಿದಂತೆಯೂ, ಗೌರವ್ಯರಾಗಿಯೂ ತಮ್ಮ ಪ್ರಿಯಮಿತ್ರರಾಗಿಯೂ ಇರುವ ಮೆ|| ಮುತ್ತುಸಾಮಿಅಯ್ಯರವರಿಗೆ ಇರುವ ಅನೇಕವಿಧ ಯೋಗ್ಯತೆಗಳನ್ನು ತಾವು ಅನುಭವಪೂರ್ವಕ ತಿಳಿದಿದ್ದರೂ, ಇವರಿಗೆ ಹಿಂದೂಸಂಗೀತಶಾಸ್ತ್ರದೊಳು ಇಷ್ಟರ ಪಾಂಡಿತ್ಯವಿರುವ ಅಂಶ ಇದುವರಿವಿಗೂ ತಾವು ಅರಿತಿರಲಿಲ್ಲವೆಂತಲೂ ಹೇಳಿದರು. ಬಳಿಕ ಆನರೆಬಲ್ ರಾಮರಾಯರವರು ಗವರ್ನರವರಿಗೆ ಗಾಯನ ಸಮಾಜದವರ ತರಫೆ ವಂದನಮಾಡಿದಮೇಲೆ ಸಭೆ ಬರಖಾಸ್ತಾಯಿತು.

SUMMARY OF NEWS.
ವೃತ್ತಾಂತ ಸಂಗ್ರಹವು

—:0:—

Degree Examination.—ಡಿಗ್ರೀ ಪರೀಕ್ಷೆಗೋ [illegible] ಉಮೇದ್‌ವಾರರು, ಸನ್ ೧೮೮೬ನೇ ಇಸವಿ [illegible]

The Buckingham Canal.—ನೆಲ್ಲೂರಿಂದ [illegible]

Installation of the Thakore of Palitana.—ಪಾಲಿಟಾನಾ, [illegible] —ಇಂಡ್ಯ ಟೈಂಸ್.

The First Prince of Travancore.—ತಿರುವಾಂಕೂರು ಮಹಾರಾಜರವರು [illegible] —ಕೇಸರಿ ಸ್ಟಾರ್.

Social reform in India.—[illegible]

Raja Rampal Singh.—[illegible]

BANGALORE:—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧವ್ರವೃತ್ತ್ಯುಪಗವಾರ್ತ್ತ ಕರ್ನಾಟಕಪ್ರಕಾಶನಪರಾಭಿದಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ಧಿಕಾಸುಪರಿಪೂಜಿತಾವಿಶತಿಮಾನಸಂಸಂಮುದಂ ॥

Vol. XIII] BANGALORE—MONDAY, JANUARY 11, 1886. [No. 2.

ಸಂಪುಟ ೧೩.] ಬೆಂಗಳೂರು:—ಸನ್ ೧೮೮೬ನೇ ಇಸವಿ ಜನವರಿ ೧೧ನೇ ತಾರೀಖ್ ಸೋಮವಾರ. [ಸಂಚಿಕೆ ೨.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ತೆಗೆದುಕೊಳ್ಳತಕ್ಕವರಿಗೆ, ವರುಷ ೧ಕ್ಕೆ		೧೨—೦—೦
ಇಂಗ್ಲಿಷ್ ಮಾತ್ರ ತೆಗೆದುಕೊಳ್ಳತಕ್ಕವರಿಗೆ ವರುಷ ೧ಕ್ಕೆ		೬—೦—೦
ಕನ್ನಡ ಮಾತ್ರ ತೆಗೆದು [illegible] ಮಾಡಿ [illegible] ವರುಷ ೧ಕ್ಕೆ .		೬—೦—೦
[illegible]	೧ಕ್ಕೆ	೦—೮—೦

[illegible]

ಪ್ರಕಟನದ ದರ.

ಮೊದಲನೇದಫೆ ಸಾಲಿಗೆ	೧ಕ್ಕೆ	೦—೨—೦
ಮರುದಫೆ ಸಾಲಿಗೆ	೧ಕ್ಕೆ	೦—೧—೦

NOTICE TO SUBSCRIBERS.

ಇದರಕೆಳಗೆ ಹೇಳಲ್ಪಡುವ ಅಂಶಗಳನ್ನು ನಮ್ಮ ಚಂದಾದಾರರೆಲ್ಲರು ಮುಖ್ಯವಾಗಿ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ಕೋರುತ್ತೇವೆ:—

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA

Price including Postage, Rs 5-6-0

ವೈದ್ಯಸಾರ ಸಂಗ್ರಹ.

[illegible]

[illegible] ಕ್ರಯ	ರೂ॥	೫—೦—೦
ಅಂಚೆಕೂಲಿ ಮತ್ತು ಅಂಚೆಯ ಕಾಸಲ್		೦—೬—೦

[illegible], ಅಪ್ಪಾಜಿರಾವ್, ಬೆಂಗಳೂರು.

ನೋಟೀಸ್.

ಇದರಕೆಳಗೆ ಬರೆಯಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ಕ್ರಯಕ್ಕೆ ಸಿಕ್ಕುವುವು:—

ಕನ್ನಡ ಟೀಕಾಸಹಿತವಾದ ಸಂಸ್ಕೃತಗ್ರಂಥಗಳು.

[illegible] ...		೧—೪—೦
[illegible] ...		೦—೧೨—೦
[illegible] ([illegible]) ...		೦—೩—೦
[illegible] ...		೦—೫—೦
[illegible] ...		೦—೪—೦
[illegible]		೦—೧—೦
[illegible] ...		೦—೮—೦
[illegible]		೦—೨—೦
ವೈದ್ಯಸಾರಸಂಗ್ರಹ ...		೫—೦—೦

ಕನ್ನಡ ಗ್ರಂಥಗಳು.

[illegible] ...		೦—೧—೦
[illegible] ...		೦—೪—೦
[illegible] ...		೦—೩—೬
[illegible]		೦—೨—೬
[illegible] ..		೦—೪—೦
[illegible] ...		೦—೨—೦
[illegible] ...		೦—೨—೬
[illegible] ...		೦—೮—೦
[illegible] ...		೦—೩—೦
[illegible]		೦—೨—೦
[illegible] ...		೦—೦—೦
[illegible]		೧—೦—೦
[illegible]		೨—೦—೦
[illegible] ...		೦—೧೨—೦
[illegible] ...		೩—೪—೬
[illegible] ...		೩—೪—೬
[illegible] ೧ನೇ ಸಂಚಿಕೆ. ...		೦—೦—೦
[illegible] ೨ನೇ ಸಂಚಿಕೆ.		೧—೮—೦
[illegible] ...		೦—೮—೦

ಸಂಸ್ಕೃತ ಮೂಲಗ್ರಂಥಗಳು.

[illegible] ..		೦—೫—೦
[illegible] ...		೦—೨—೦
[illegible] ..		೦—೨—೬
[illegible] ...		೦—೦—೬
[illegible] ...		೦—೩—೬
೧ [illegible] ...		೦—೧—೦

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮ್ಮಿಷನ್ ಮರ್ಚಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ವಳ್ಳಾಳಿ ತೆಗೆದುಕೊಳ್ಳಲ್ಪಡುವದು.

ನೋಟಿಸ್.

ಪಾತಂಜಲಯೋಗಪ್ರದೀಪಿಕೆ ಮತ್ತು ಪಾತಂಜಲ ಯೋಗಸೂತ್ರಗಳು ಕ್ರಯಕ್ಕೆ ಸಿದ್ಧವಾಗಿರುತಿವೆ.

ಅಪೇಕ್ಷೆಯುಳ್ಳವರು ಬೆಂಗಳೂರು ಗವರ್ನಮೆಂಟ್ ಗರಲ್ಸ್‌ಸ್ಕೂಲ್ ಹೆಡ್‌ಮಾಸ್ಟರ್ ಹಿ. ನರಸಿಂಹಶಾಸ್ತ್ರಿಗಳಿಗಾಗಲಿ, ಕರ್ಣಾಟಕಬುಕ್‌ಡಿಪ್ಪೊ ವಾಚಿಪೇಯಂ ಕೃಷ್ಣಯ್ಯನವರಿಗಾಗಲಿ, ಇದರಡಿಕಂಡ ಚಾರ್ಜನ್ನು ಕಳುಹಿಸಿ ತರಿಸಿಕೊಳ್ಳಬಹುದು.

ಪಾತಂಜಲಯೋಗಸೂತ್ರ ಪ್ರತಿ ೧ಕ್ಕೆ		೧	೦	೦
ಪರಯೋಗಪ್ರದೀಪಿಕಾ	„	೧	೪	೦
ಪೋಸ್ಟೇಜ್	„	೦	೨	೦

ಟೆಂಬರ್‌ಕಳುಹಿಸುವವರು ರೂ॥ ೧ಕ್ಕೆ ೧ಅಣೆ ಡಿಸ್ಕಾಂಟ್ ಸಹ ಕಳುಹಿಸಬೇಕು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JANUARY 11, 1886.

೧೮೮೬ನೇ ಜನವರಿ ೧೧ನೇ ತಾ॥ ಸೋಮವಾರ

ಶ್ಲೋ॥ ಸರ್ವಜ್ಞತಾಂಸರ್ವವಿವಾಕ್ಪಟುತಾಂಪ್ರಭೂತಿ ಮಾಹಿತ್ಯದುಷ್ಪ್ರಸರಧೀರತಯೋಪ್ರಣಾಮಃ॥ ತತ್ತ್ವಮಹಿಮೆಮನುಸನುಸ್ಥಿರಾಪಿ ತತ್ತ್ವಮೆವನೋಪರ ಜಯತೇಶೃತೀನಾಂ॥

THE ANNEXATION OF UPPER BURMAH.

“ದೈವೀವಿಚಿತ್ರಾಗತಿಃ”

ಅಂಬರೆಡ್ಡವಗತಿಯು ಕೇವಲ ವಿಚಿತ್ರವಾದ್ದೆಂಬದಕ್ಕೆ ಬರ್ಮ್ಮಾರಾಜ್ಯದ ಪ್ರಕೃತಸ್ಥಿತಿಯೇ ಸಾಕಾದ ನಿದರ್ಶನವಾಗಿರುತಿದೆ. ಪುತವರುಪರಾಗತವಾದ ನೇಟವ್‌ಪ್ರಭುತ್ವವು ಊರ್ಜಿತವಾಗಿ ನಡವಿ ರಾಜ್ಯದೊಳು ನೆಲಗೊಳಿಸಲ್ಪಡಬಹುದೆಂಬ ಪ್ರತ್ಯಾಶೆಯು ಏತತ್ಪರ್ಯಂತ ಸಾರ್ವತ್ರಿಕವಾಗಿತ್ತು. ಇಂತಾ ಪ್ರತ್ಯಾಶೆಯು, ಮಾಯೀ ಮಹಕೂರ್ ಗುರ್ರೇಶಾಲೀವೆನಲ್ಲಿ ಶ್ರೀಮನ್ಮಹಾರಾಜ್ಞೀಯವರ ಇಂದ್ಯದೇಶದ ಪ್ರತಿನಿಧಿಯಾದ ಲಾರ್ಡ್ ಡಫ್ರಿನ್‌ಯವರು ತಮ್ಮದಸ್ತುಖತಿನಿಂದ ಕೊಟ್ಟ ಪ್ರಸಿದ್ಧಪತ್ರಿಕೆಯಿಂದ ಏಕಾಂತಿಕವಾಗಿ ನಿವಾರಣವಾಯಿತಲ್ಲದೆ ಬರ್ಮ್ಮಾದೇಶೀಯರಿಗೆ ಚಿರಕಾಲದಿಂದುಂಟಾಗಿದ್ದ ಸ್ವರಾಜಪಾಲನಾ ಪ್ರಯುಕ್ತವಾದ ಪ್ರಾಶಸ್ತ್ಯಸಹ ನಿರ್ಮೂಲವಾಯಿತು ನವೀನಾರ್ಜಿತವಾದ ಈ ರಾಜ್ಯದ ವಿಷಯದಲ್ಲಿ ಇಂಡ್ಯ ಗವರ್ನಮೆಂಟನವರು ಮಾಡಿದ ನಿರ್ಣಯವೇನೆಂದರೆ—

ಫೋರ್ಟ್ ವಿಲ್ಲಿಯಂ, ೧ನೇ ಜನವರಿ ೧೮೮೬.

ಶ್ರೀಮನ್ಮಹಾರಾಜ್ಞೀ ಇಂಡ್ಯಚಕ್ರವರ್ತಿನೀಯವರ ಆಜ್ಞಾನುಸಾರ ಇದರಿಂದ ಸಕಲರಿಗೂ ತಿಳಿಯಪಡಿಸುವದೇನೆಂದರೆ—ಥೀಬಾ ಅರಸರಿಂದ ಹಿಂದೆ ಪರಿಪಾಲಿತವಾಗಿದ್ದ ರಾಜ್ಯವು ಮುಂದೆ ಅವರ ಪಾಲನೆಗೊಳಪಡಲಾರದಾಗಿ ಅದು, ಹರ್‌ಮ್ಯಾಜಸ್ಟೀಯವರ ರಾಜ್ಯಗಳಲ್ಲಿ ಒಂದು ಭಾಗವಾಗಿ ಸೇರಿಸಲ್ಪಟ್ಟಿರುವದರಿಂದ ಮಹಾರಾಜ್ಞೀಯವರಿಗೆ ಇಷ್ಟವಿರುವತನಕ ಇಂಡ್ಯದೇಶದ ವೈಸ್‌ರಾಯಿ ವ ಗವರ್ನರ್ ಜನರಲ್ಲವರು ಆಯಾಕಾಲದಲ್ಲಿ ಮೊಕರರ್ ಮಾಡಬಹುದಾದ ಅಧಿಕಾರಿಗಳಿಂದ ಪಾಲಿಸಲ್ಪಡುವದು.

ಡಫ್ರಿನ್,

ವೈಸ್‌ರಾಯಿ ವ ಗವರ್ನರ್ ಜನರಲ್.

ಮೇಲೆಕಂಡ ಪ್ರಸಿದ್ಧಪತ್ರಿಕೆಯ ದೆಸೆಯಿಂದ ಬ್ರಿಟಿಷ್ ಗವರ್ನಮೆಂಟನವರು ಬರ್ಮ್ಮಾರಾಜ್ಯವನ್ನು ಕೆಲವು ಅಲ್ಪಕಾರಣಗಳ ಮೇಲೆ ತಮ್ಮ ಸುಪರ್ದು ಮಾಡಿಕೊಂಡಂತೆ ವ್ಯಕ್ತವಾಗುತಿದೆಯಲ್ಲದೆ ಏತದಪೂರ್ವವಾದ ಅವರ ನಿರ್ಣಯಕ್ಕೆ ಅನುಗುಣಗಳಾದ ಅರ್ಥಗಳು ಅಲ್ಲಿ ನಡೆದಂತೆ ಸ್ವಲ್ಪವೂ ಕಂಡುಬರಲಿಲ್ಲವು. ಥೀಬಾಯವರ ನಡತೆಯುಲ್ಲಾಗಲಿ, ಗುಣದಲ್ಲಾಗಲಿ, ಬ್ರಿಟಿಷರವರಿಗೆ ವಿರುದ್ಧಫಲವನ್ನುಂಟುಮಾಡುವಂತಾ ಅಂಶಗಳ್ಯಾವವೂ ಇರಲಿಲ್ಲವೆಂಬದಕ್ಕೆ ಅವರಿಗೂ ಟ್ರೇಡಿಂಗ್ ಸಂಸ್ಥೆಯ ಬಾಂಬೇಡಾರರಿಗೂ ನಡೆದ ಸಂಧಾನಸಹಯೇ ಮುಖ್ಯ ನಿದರ್ಶನವಾಗಿರುತಿದೆ. ಇವರು ಬ್ರಿಟಿಷ್ ಗವರ್ನಮೆಂಟನವರಲ್ಲಿ ಯಾವಾಗ್ಯೂ ಭಕ್ತಿ ವಿಶ್ವಾಸವುಳ್ಳವರೆಂಬವನ್ನು ಅವರ ತಾಟಸ್ಥ್ಯ ಭಾವವು ನಿರೂಪಿಸಬರಲಿಲ್ಲವು. ಬರ್ಮ್ಮಾರಾಜ್ಯದ ವಿಷಯದಲ್ಲಿ ಇಂಡ್ಯ ಗವರ್ನಮೆಂಟನವರು ಮಾಡಿದ ತೀರ್ಮಾನವು ಇಂಡ್ಯದೇಶದ ಅರಸರಿಗೂ ಪ್ರಜೆಗಳಿಗೆ ಸಹ ಬೆಗುಪ್ಪೆಯನ್ನುಂಟುಮಾಡತಕ್ಕದ್ದಾಗಿರುತಿದೆ. ಈ ಸಂದರ್ಭದಲ್ಲಿ ಅನುಸರಿಸಬೇಕಾದ ನ್ಯಾಯಗಳನ್ನೂ, ಪುರಸ್ಕರಿಸಬೇಕಾದ ಪ್ರಜಾಭಿಪ್ರಾಯವನ್ನೂ, ಅನುಕರಿಸಬೇಕಾದ ನೀತಿಮಾರ್ಗವನ್ನೂ, ಲಕ್ಷ್ಯದೊಳಿಡಬೇಕಾದ ಘನತೆಯನ್ನೂ, ಆಲೋಚಿಸದೆ ಗವರ್ನರ್ ಜನರಲ್ ಸಾಹೆಬರವರೂ ಅವರ ಪಕ್ಷಾವಲಂಬಿಗಳಾದ ಇತರ ಅಧಿಕಾರಿಗಳು ಸಹ ಕೇವಲ ರಾಜ್ಯಪ್ರಾಪ್ತಿಯನ್ನೇ ಪ್ರಾಧಾನ್ಯೇನ ಭಾವಿಸಿದ್ದು ರಾಜ್ಯತಂತ್ರಜ್ಞರಿಗೆ ಅರ್ಹವಲ್ಲವು. ಥೀಬಾಯವರ ಪ್ರಭುತ್ವವು ಕಂಟಕವಾದ್ದೆಂದಲೂ, ನಿರರ್ಥಕವಾದ್ದೆಂತಲೂ, ಕೆಲವು ಇಂಗ್ಲಿಷ್ ಪತ್ರಿಕೆಗಳು, ಗವರ್ನಮೆಂಟನವರ ನಿರ್ಹೇತುಕಪ್ರವೃತ್ತಿಯನ್ನು ಪ್ರೇರಿಸಲೋಸುಗ ಅರಸರು ದೂಷಿಸುತಲಿದ್ದವು. ರಾಜ್ಯಪಾಲಕರಾದ ಅರಸರಿಗೂ, ಪ್ರಜೆಗಳಿಗೂ ಇರುವ ಅವಿನಾಭೂತವಾದ ಸಂಬಂಧದಲ್ಲಿ ಆಗಿಂದಾಗ್ಯೆ ಘಟ್ಟಿಂಬದಲ್ಪ ವಿಷಯಗಳು ತಲೆದೋರುವದೂ ಅವು ನಿರಾಕರಿಸಲ್ಪಡುವದು ಸಹ ಸಹಜವಾಗಿರುತಿವೆ. ಆದರೆ ಏತಂರೀತ್ಯಾಬಂದು ರಾಜ್ಯದ ಅರಸರ ಪಕ್ಕದಾರಿಗೇ ಮೂಲಚ್ಛೇದನ ವುಂಟುಮಾಡುವದು ಬಹಳ ಅನ್ಯಾಯವಾಗಿರುತಿದೆ. ಒಂದುವೇಳೆ ಥೀಬಾಯವರಲ್ಲಿ ಆಕ್ಷೇಪಣೀಯಗಳಾದ ಯಾವದೋಷಗಳಾಗಲಿ ಕಂಡುಬಂದಲ್ಲಿ ಅವರ ಮಕ್ಕಳಲ್ಲದ ದೂಷ್ಯರಾಗುವರೆ? ಬರ್ಮ್ಮಾರಾಜ್ಯಕ್ಕೆ ನ್ಯಾಯಸಮ್ಮತವಾದ ಬೇರೊಬ್ಬ ಅರಸರನ್ನು ಅಂಗೀಕರಿಸಿ ಅವರ ಆಧಿಪತ್ಯದೊಳು ಅದನ್ನೊಪ್ಪಿಸಿದ್ದರೆ ಬಹಳ ಕ್ಷೇಮವಾಗಿರುವದು. ಇಂತಾ ಉದಾರವಾದ ಕಾರ್ಯವನ್ನು ಮಹಾರಾಣೀ ಸರ್ಕಾರದವರು ನಡಿಸಿರುವರಾದರೆ ತನ್ಮೂಲಕ ಇತರ ನೇಟವ್ ಅರಸರಿಗೆ ಸಮಾಧಾನ ವುಂಟಾಗಿರುವದು. ಪ್ರಕೃತ ಅಪಳಗಳ ದೆಸೆಯಿಂದ, ಸನ್ ೧೮೫೭ನೇ ಇಸವಿಯೊಳು ಇಂಡ್ಯದೇಶೀಯರವಿಷಯದಲ್ಲಿ ಬ್ರಿಟಿಷ್ ಗವರ್ನಮೆಂಟನವರಿಗೆ ಇದ್ದ ಉತ್ತಮವಾದ ಪ್ರೀತಿವಿಶ್ವಾಸಗಳು ಕಾಲಕ್ರಮದಿಂ ಕ್ಷೀಣಿಸಿದವೆಂದು ಜನಗಳು ಈಗ ಭಾವಿಸಲಿಕ್ಕೆ ಕಾರಣವಾಯಿತು. ಇದರಿಂದ ಸ್ವಪ್ರಯೋಜನಕರವಾದ ಅಂಶಗಳಲ್ಲಿ ಬ್ರಿಟಿಷರವರು ನ್ಯಾಯ

ನೀತಿಗಳನ್ನು ಪರಿಭಾವಿಸುವವರಲ್ಲವೆಂಬ ಭಾವವು ತಲೆದೋರಲಿಕ್ಕೆ ಕಾರಣವಾಯಿತು. ಇಂಗ್ಲಿಷ್‌ನವರು ಕಾಲೋಚಿತವಾಗಿ ವರ್ತಿಸತಕ್ಕವರೇ ಹೊರತು ನಿಲಕಡೆ ಇಲ್ಲದವರೆಂಬ ಆಕ್ಷೇಪಣೆಗೆ ಅವಕಾಶವಾಯಿತು. ಇವರ ದೆಸೆಯಿಂದ ಮುಂದೆ ತಮ್ಮ ವಿಷಯದಲ್ಲಿಯೂ ಏತದ್ರೂಪವಾಗಿಯೇ ನಡೆಸಲ್ಪಡುವದೆಂಬ ಶಂಕೆಯು ನೇಟಿವ್ ಸಂಸ್ಥಾನಾಧಿಪತಿಗಳ ಹೃದಯದೊಳು ಅಂಕುರಿಸಲು ನಿಮಿತ್ತವಾಯಿತು. ಒಂದು ಸಂದರ್ಭದಲ್ಲಿ ಲಾರ್ಡ್ ಕ್ಯಾನಿಂಗಿನವರು, ಸ್ವದೇಶ ಅರಸರ ರಾಜ್ಯಭಾರವು ಅನ್ಯದೇಶೀಯರ ಪಾಲನೆಗಿಂತಲೂ ಶ್ಲಾಘ್ಯವಾಗಿರುವದೆಂತಲೂ, ಸದರೀ ಅನ್ಯದೇಶೀಯರು ಪ್ರಜೆಗಳ ತಾತ್ಪರ್ಯವನ್ನು ಚೆನ್ನಾಗಿ ತಿಳಿದು ನಡೆಸಲಾರರೆಂತಲೂ ತಿಳಿಸಿದ ಮಾತುಗಳು ಅನವರತ ಸ್ಮರಣೀಯಗಳಾಗಿರುತ್ತವೆ. ಮಹಾರಾಣೀಯವರ ಅಭಯವು ಸಾರ್ವಕಾಲಿಕವಾದ್ದೆಂದೂಹಿಸಲಿಕ್ಕೆ ಯಾರ ಮನವೂ ಈಗ ಒಡಂಬಡಲಾರದು. ಮತ್ತು ಶಾಸನರೂಪವಾದ ಅಂತಾಭರವಸೆ ಮಾತನ್ನು ತಪ್ಪದೆ ನಡೆಸುವದು ಆವಶ್ಯಕವೆಂದು ಗವರ್ನಮೆಂಟಿನವರಿಗೆ ಈಗ ತೋರದೆಯೋ ಧುಕೆ ವ್ಯಕ್ತವಾಗುತದೆ. ಮುಖ್ಯವಾಗಿ ದ್ರವ್ಯೋತ್ಪಾದಕಗಳಾದ ಬ್ರಹ್ಮದೇಶದ ಕುಮುದಿಕಾವನಗಳೂ, ಸರ್ವಕರಣಾರ್ಹ್ಯಯುತಗಳಾದ ಘನವನಗಳೂ, ನಾನಾವಿಧಫಲಪುಷ್ಪ ಶೋಭಿತಗಳಾದ ಆರಾಮಗಳೂ, ಗ್ಯಾರಿಕಾದಿ ಧಾತುಗಳುಳ್ಳ ಉಚ್ಚತರ ಗಿರಿ ಪಙ್ಕ್ತಿಗಳೂ, ಅಕ್ಷೋಭ್ಯವಾದ ರತ್ನಾಕರಗಳೂ, ಸಾರವತ್ತಾದ ನದೀ ಮಾತೃಕದೇಶವೂ, ನಾವಿಕ ಸಂಚಾರಾನುಕೂಲ್ಯವುಳ್ಳ ಮತ್ತು ಹೃದಯಾಕರ್ಷಕವಾದ ಇರಾವತೀ ನದಿಯೂ, ಅಕ್ಷೀಣವಾದ ಐಶ್ವರ್ಯವೂ, ನಿರುಪಹತವಾದ ಸಾಮ್ರಾಜ್ಯ ಪದವಿಯೂ, ಏಕಕಾಲದಲ್ಲಿ ಅವಲೀಲೆಯಾಗಿ ಹಸ್ತಗತವಾಗಿರುವಾಗ ಇವುಗಳಂ ಬಿಡಲಿಕ್ಕೆ ಬ್ರಿಟಿಷ್‌ನವರಿಗೆ ಮನ ಹ್ಯಾಗೆ ಒಡಂಬಡುವದು. ಏತೇನ ಇವರಿಂದ ಪರೋಪದಿಷ್ಟಗಳಾದ ನೀತಿ ಧರ್ಮಗಳೆಲ್ಲವೂ ಸ್ವಪ್ರಯೋಜನಕಾಲದಲ್ಲಿ ಸ್ವವಿಷಯಕಗಳಲ್ಲವೆಂದು ಸ್ಪಷ್ಟವಾಗುತ್ತವೆ.

THE DAILY CONSERVANCY SYSTEM.

ಬೆಂಗಳೂರು ಸಿಟಿ ರೇಟ್‌ಪೇಯರ್ಸ್ ಅಸೋಸಿಯೇಷನ್ ಸಂಘದವರು ಈಚೆಗೆ ಸಭೆ ಸೇರಿ ಪ್ರತಿನಿತ್ಯವೂ ಪಾಯಖಾನೆಗಳನ್ನು ಸಾಫ್‌ಮಾಡಿಸುವ ಪದ್ಧತಿಯನ್ನು ಮ್ಯೂನಿಸಿಪಾಲಿಟಿಯವರ ಅಪೇಕ್ಷಾನುಗುಣವಾಗಿ ಜಾರೀಯಲ್ಲಿ ತರುವದರಿಂದ ಜನಗಳಿಗೆ ಉಂಟಾಗತಕ್ಕ ಅನಾನುಕೂಲ್ಯಗಳನ್ನು ಕುರಿತು ವಿಚಾರಮಾಡಿ ಅದರಮೇಲೆ ಮ್ಯೂನಿಸಿಪಾಲಿಟಿಯವರಿಗೆ ಸದರೀ ಸಂಘದ ಸೆಕ್ರೆಟರಿಗಳ ರುಜು ನಿಶಾನಿಯಿಂದ ಅರ್ಜಿ ಬರೆದುಕೊಂಡರೆಂದು ತಿಳಿಯಲಾದೆವು. ಕಡೆಗೆ ಮೀಟಿಂಗಿನಲ್ಲಿ ಎರಡು ತೀರ್ಮಾನಗಳು ಮಾಡಲ್ಪಟ್ಟವು. ಅವುಗಳ್ಯಾವುವೆಂದರೆ—ಮೊದಲನೆಯದು, ಪೇಟೆಯೊಳಗಿರುವ ಪ್ರತಿಮನೆಯ ಸ್ವಂತಗಾರನಾಗಲಿ, ಅಥವಾ ಅನುಭವದಾರನಾಗಲಿ, ೪ ಅಡಿಗಳ ಆಳವೂ, ೪ ಅಡಿಗಳ ಉದ್ದವೂ ಉಳ್ಳ ಪಾಯಖಾನೆ ಗುಣಿಯನ್ನು ಅಗೆಯಿಸಬೇಕಲ್ಲದೆ ದುರ್ಗಂಧಪ್ರಚಾರಕ್ಕೆ ಅವಕಾಶವಿಲ್ಲದಂತೆ ಪ್ರತಿನಿತ್ಯವೂ ವಿಸರ್ಜನೆಯಾಗತಕ್ಕ ಮಲದಮೇಲೆ ಬೂದಿಯನ್ನಾಗಲಿ, ಕಸಕಡ್ಡಿಯನ್ನಾಗಲಿ, ಮಣ್ಣನ್ನಾಗಲಿ ಹಾಕತಕ್ಕದ್ದು. ಎರಡನೇದು, ಹೀಗೆ ಜಮಾಯಿಸತಕ್ಕ ಪಾಯಖಾನೆಯಿಂದ ಹಳ್ಳವು ತುಂಬುವದಕ್ಕೆ ಸ್ವಲ್ಪಮುಂದಾಗಿಯೇ ಅದನ್ನು ಸಾಗಿಸತಕ್ಕದ್ದು, ಎಂಬದು. ಈ ಎರಡು ಏರ್ಪಾಡುಗಳು ಪ್ರಜೆಗಳ ಅನುಕೂಲ್ಯಕ್ಕೂ, ಮ್ಯೂನಿಸಿಪಾಲಿಟಿಯವರ ಉದ್ದೇಶದಂತೆ ನೈರ್ಮಲ್ಯಕ್ಕೂ ಅನುಗುಣಗಳಾಗಿರುತ್ತವೆ. ಪ್ರತಿನಿತ್ಯ ಸಾಫ್‌ಮಾಡಿಸುವಪದ್ಧತಿಯು ಕಷ್ಟತರಸುಭವಾಗಿರುವದರೊಳಿಷ್ಟುಮಾತ್ರವೂ ಸಂಶಯವಿಲ್ಲವು. ಪರಂತು ಹಲಾಲ್‌ಖೋರರು ಮಾಡತಕ್ಕ ಗಲೀಜನ್ನು ಅವರ ಮನಸ್ವೀ ವರ್ತನವನ್ನೂ ಅವರು ಪದೇಪದೆ ಮಾಡುವ ಹಿಂಸೆಯನ್ನೂ ಪರಿಭಾವಿಸಿ ನೋಡಿದರೆ ಮಲರಾಶಿಯ ಸನ್ನಿಧಾನದೊಳಾದರೂ ಕುಳಿತಿರಬಹುದೆಂದು ತೋರುತ್ತದೆ. ಕದಾಚಿತ್ ಈ ಪರಿಭವವನ್ನಾದರೂ ಸಹಿಸಬಹುದೆಂದರೆ, ಬೆಂಗಳೂರು ಪೇಟೆಯ ಮನೆಗಳಪೈಕಿ ಸೇಕಡಾ ೯೮ ಮನೆಗಳು ಹಿತ್ತಲುಮಾರ್ಗ ಇಲ್ಲದವಾಗಿಯೂ, ಅನ್ಯಜಾತಿಯರ ಪ್ರವೇಶಕ್ಕೆ ಅವಕಾಶವಿಲ್ಲದವಾಗಿಯೂ ಇರುತ್ತವೆ. ಈ ವಿಷಯವು ದಿವ್ಯಸೌಧಾಶ್ರಯವುಳ್ಳವರಿಗೆ ಅವ್ಯಕ್ತವಾದದ್ದಾದರೂ ಇತರರಿಗೆ ಅನುಭೂತವಾದದ್ದಾಗಿರುತ್ತದೆ. ಇತರವಿಷಯಗಳಲ್ಲಿ ಅರ್ಥಪ್ರಯಕಾರಿಗಳಾದ ನಾಗರಿಕತೆಯು ಇಲ್ಲಿ ಬಹಳವಾಗಿ ತಲೆದೋರಿದ್ದಾಗ್ಯೂ ಗೃಹನಿರ್ಮಾಣವಿಷಯದೊಳು ಮಾತ್ರ ಅಪರಿಹಾರ್ಯವಾದ ಪ್ರತಿಬಂಧಕಗಳು ಹೇರಳವಾಗಿವೆ. ಅವುಗಳೆಲ್ಲ ಈಗ ಪ್ರತಿಕ್ರಿಯೆ ಮಾಡಬೇಕೆಂದೆಣ್ಣಿಸಿದರೆ ಸಾಧ್ಯವಲ್ಲವು. ಇಂತಾ ಸ್ಥಿತಿಯನ್ನು ಪರಿಗಣಿಸದೆ ತಾವು ಹಿಡಿದ ಪಟ್ಟನ್ನೇ ಸಾಧಿಸಬೇಕೆಂದು ಮ್ಯೂನಿಸಿಪಾಲಿಟಿಯವರು ಮುಷ್ಕರ ಹಿಡಿದರೆ ತನ್ಮೂಲಕ ಪ್ರಜೆಗಳಿಗೆ ಅನಾವಶ್ಯಕವಾದ ಅಸಮಾಧಾನವನ್ನೂ, ನಿರ್ಬಂಧವನ್ನೂ ಉಂಟುಮಾಡಿದಂತೆ ಯಾಗುವದೇ ಹೊರತು, ಉದ್ದಿಷ್ಟಪ್ರಯತ್ನವು ಕ್ರಮವಾಗಿ ಸಿದ್ಧಿಸಲಾರದು. ಈಗ ಕಂದಾಯದಾರರು ಮಾಡಿರುವ ತೀರ್ಮಾನವು ನಿರಾಕ್ಷೇಪಣೀಯವಾದದ್ದಾಗಿರುತ್ತದೆ. ಯಾತಕ್ಕೆಂದರೆ, ಪ್ರತಿನಿತ್ಯ ಸಾಫ್‌ಮಾಡಿಸುವದಕ್ಕೆ ಅವಕಾಶವಿಲ್ಲದ ಮನೆಯೊಳೆಲ್ಲ ಒಂದು ಗುಣಿ ಇರುತ್ತಾ ಅದು ಎಷ್ಟು ಅಂತರಾಂತರದೊಳಿದ್ದಾಗ್ಯೂ ಅದನ್ನು ಆರೇಳು ತಿಂಗಳಿಗೊಂದಾವರ್ತಿಯಾದರೂ ಸಾಫ್ ಮಾಡಿಸುತ್ತಲೂ ಇರುವದರಿಂದ ಇದು ನೂತನ ಏರ್ಪಾಡಾಗಲಾರದು. ದೇಹರಕ್ಷಣೆಗೆ ವಾತೋದಕಗಳು ಪ್ರಧಾನಗಳಾದ್ದರಿಂದ ಅವುಗಳ ಪಾರಿಶುದ್ಧ್ಯವನ್ನು ಹೋಗಲಾಡಿಸತಕ್ಕ ಅಂಶಗಳಂ ನಿವೃತ್ತಿಮಾಡಿಕೊಳ್ಳುವದು ನಮಗೆ ಕ್ಷೇಮಕರವಲ್ಲವೆ? ಮುಖ್ಯವಾಗಿ ಎಷ್ಟುವಿಧದಿಂದಾಲೋಚಿಸಿದರೂ ಮೇಲೆಕಂಡ ಎರಡು ತೀರ್ಮಾನಗಳು ಪ್ರಜೆಗಳ ತಾತ್ಕಾಲಿಕ ಗೃಹಸ್ಥಿತಿಗೂ, ಅವರ ಆಚಾರವ್ಯವಹಾರಗಳಿಗೂ, ಕಶ್ಮಲ ನಿವಾರಣಕ್ಕೂ, ಮ್ಯೂನಿಸಿಪಾಲಿಟಿಯವರ ಉದ್ದೇಶ ಸಾಫಲ್ಯಕ್ಕೂ ಅನುಗುಣಗಳಾಗಿರುವದರಿಂದ ಮ್ಯೂನಿಸಿಪಾಲಿಟಿಯವರು ಮೇಲೆಕಂಡ ಸಾಮಾಜಿಕರ ಅರ್ಜಿಯನ್ನು ಗೌರವಿಸಿ ಅದರಲ್ಲಿ ತಿಳಿಸಲ್ಪಟ್ಟಿರುವಂತೆ, ಪಾಯಖಾನೆಗಳನ್ನು ಪ್ರತಿನಿತ್ಯ ಸಾಫ್‌ಮಾಡಿಸಬೇಕೆಂಬ ನಿರ್ಬಂಧಕ್ಕೆ ಬದಲು ಅದು ತುಂಬಿದಾಗಲೆಲ್ಲ ನಿವೃತ್ತಿಮಾಡತಕ್ಕದ್ದೆಂಬ ಏರ್ಪಾಡನ್ನು ಮಾಡುವರಾದರೆ ಪ್ರಜೆಗಳ ಸುಖೋದಯಕ್ಕೆ ಪಾರವಿಲ್ಲದಿರುವದು. ಪಾಯಖಾನೆಗಳ ಅದಮಾಯಿಷಿಬಗ್ಯೆ ಮುಸಲ್ಮಾನರನ್ನು ಮ್ಯೂನಿಸಿಪಾಲಿಟಿಯವರು ಮೊಕರರ್ಮಾಡಿರುತ್ತಾರೆಂದು ಕೇಳುತ್ತೇವೆ. ಈಜಾತಿಯವರು ಅನ್ಯರುತಲ್ಲದೆ ಯಾವ ಕೆಲಸಕ್ಕಾದರೂ ಮುಂದಾಳಾಗಿ ನಿಲ್ಲತಕ್ಕವರೆಂಬದನ್ನು ನಾವು ಚೆನ್ನಾಗಿ ಬಲ್ಲೆವು. ಯದ್ಯಪಿ ಅಂತವರ ಪ್ರವೇಶಕ್ಕೆ ಸಹ ಅನುಕೂಲವಿಲ್ಲದ ಮನೆಗಳು ಈ ಪೂರಲ್ಲಿ ಅನೇಕ ಇರುವದರಿಂದ ಅವರಸಹಾಯಾರ್ಥ ಒಬ್ಬರಿಬ್ಬರು ಇತರ ಜಾತಿಯವರನ್ನು ಮೊಕರರ್ಮಾಡಿದರೆ ತತ್ಪ್ರಯುಕ್ತವಾದ ಪುಕಾರಿಗೆ ಅವಕಾಶವಿರಲಾರದು.

EFFECT OF CIVILISATION.

ಲೋಕದಲ್ಲಿ ಮನುಷ್ಯನ ಸುಖ ಸಂತೋಷಗಳಿಗೆ ಮುಖ್ಯಾಧಾರಭೂತವಾದದ್ದು ಅರ್ಥವೆಂಬದಾಗಿಯೂ, ಅದರ ಆರ್ಜನ ರಕ್ಷಣ ವಿನಿಯೋಗಗಳು ಪುರುಷನಿಗೆ ಪ್ರಬಲ ಕಾರ್ಯಗಳೆಂಬದಾಗಿಯೂ, ಅರ್ಥಶಾಸ್ತ್ರಜ್ಞರೆಲ್ಲರೂ ನಾನಾವಿಧದಿಂ ಬೋಧಿಸಿರುತ್ತಾರೆ. ಇದನ್ನು ನಾಗರಿಕತಾಪೇಕ್ಷಿಗಳಾದ ಪೂರ್ವಿಕರೂ, ತದ್ವಿರೋಧಿತರಾದ ವರ್ತಮಾನ ಕಾಲದವರು ಸಹ ಅಂಗೀಕರಿಸದಿರಲಿಲ್ಲವು. "ಅರ್ಥಮನರ್ಥಂ" ಎಂಬದಾಗಿ ಪೂರ್ವಿಕರು ನಿರ್ಣಯಿಸಿದ್ದರು, ಆದರೆ ವೈರಾಗ್ಯ ಪ್ರಕರಣವನ್ನು ಕುರಿತು ತಿಳಿಸುವಾಗ್ಯೆ ವಿರಕ್ತನಿಗೆ ಅದು ಅನರ್ಥಕಾರಿಯೆಂದು ಹೇಳಿದ್ದರೂ ಅದು ಈಗ ಸರ್ವತ್ರ ಅನ್ವಯಿಸತಕ್ಕದ್ದಾಗಿರುತ್ತದೆ. ಇದು ಅಂತಿರಲಿ.

ಪ್ರಥಮತಃ ಧನವೆಂಬದು ಆರ್ಜನ ರಕ್ಷಣ ವಿನಿಯೋಗಗಳೆಂಬ ಮೂರು ಪ್ರಧಾನ ಧರ್ಮಗಳುಳ್ಳದ್ದಾಗಿರುತ್ತದೆ. ಆರ್ಜನವೆಂಬದಕ್ಕೆ ಅಂಗಭೂತಗಳಾದ ಕೃಷಿವಾಣಿಜ್ಯ ಕುಶಲ ವಿದ್ಯೆಗಳೆಂಬ ಮೂರು ಮಾರ್ಗಗಳನ್ನು ಪೂರ್ವಿಕರೂ ಆಧುನಿಕರು ಸಹ ಅಂಗೀಕರಿಸಿರುತ್ತಾರೆ. ಆದರೆ ತದನುಸರಣದೊಳು ಮಾತ್ರ ವೈಲಕ್ಷಣ್ಯ ಉಂಟಾಗಿದೆ, ಹ್ಯಾಗೆಂದರೆ—ಪೂರ್ವಕಾಲದಲ್ಲಿ ಪ್ರಾಣಿಗಳೆಲ್ಲ ತತ್ರಾಪಿ ಮನುಷ್ಯನಿಗೆ ಆಹಾರೋಪಯುಕ್ತಗಳಾದ ಧಾನ್ಯಗಳನ್ನೂ ಇತರ ಪದಾರ್ಥಗಳನ್ನೂ ಸಾಗುವಳಿ ಮಾಡುತಲಿದ್ದರು. ಈಗ ವ್ಯವಸಾಯಯೋಗ್ಯವಾದಭೂಮಿಯಲ್ಲಿ ಅಡವಿಗಳನ್ನು ಬೆಳೆಸುವದೂ, ಆರಣ್ಯಕಮೃಗಗಳನ್ನು ಸುಖದಿಸಲಿಕ್ಕೆ ಬದಲಾಗಿ ಅವುಗಳಂ ಸುರಕ್ಷಿಸುವದೂ, ಬೂಂದ್, ಚಾ, ಸಿಂಕೋನಾ ಮುಂತಾದ ವಿಜಾತೀಯ ಪದಾರ್ಥಗಳನ್ನು ಅನ್ಯದೇಶೀಯರುಪಯೋಗಾರ್ಥ ಸಾಗುವಳಿ ಮಾಡುವದೂ ವ್ಯವಹಾರದೊಳು ಬಂದಿರುತ್ತದೆ. ವಾಣಿಜ್ಯವೆಂಬದು, ಸ್ಥಳ ವ್ಯಾಪಾರವೆಂತಲೂ ಅನ್ಯದೇಶ ವ್ಯಾಪಾರವೆಂತಲೂ ಎರಡು ಪ್ರಕಾರಗಳುಳ್ಳದ್ದಾಗಿರುತ್ತದೆಯಷ್ಟೆ. ಸ್ಥಳವ್ಯಾಪಾರವೆಂಬದು ಚಿಲ್ಲರೆಯಾಗಿ ಪದಾರ್ಥಗಳನ್ನು ಬೇಸಾಯಗಾರರಿಂದ ಖರೀದಿಗೆ ಕೊಂಡುಕೊಂಡು ಅದು ಲಾಭಕ್ಕೆ ಒಟ್ಟಾಗಿ ಮಾರುವದೆಂದರ್ಥವು. ಅನ್ಯದೇಶ ವ್ಯಾಪಾರವೆಂಬದು ಸ್ವದೇಶದೊಳುತ್ಪತ್ತಿಯಾಗದ ಪದಾರ್ಥಗಳನ್ನು ಅನ್ಯದೇಶಗಳಿಂದ ತರಿಸಿ ಸ್ವದೇಶದೊಳು ಮಾರುವಣ; ಬದಸ್ತೂರ್ ಅನ್ಯದೇಶದೊಳು ದುರ್ಲಭವಾದ ಪದಾರ್ಥಗಳನ್ನು ಸ್ವದೇಶದಿಂದ ಕಳುಹಿಸಿ ತನ್ಮೂಲಕ ಲಾಭ ಪಡೆಯುವಣ, ಈ ವಿಧವಾಗಿರುತ್ತದೆ. ಈಗ ಇವರೊಳುಂಟಾಗಿರುವ ವೈಲಕ್ಷಣ್ಯವೇನೆಂದರೆ—ಸ್ವದೇಶದ ಪದಾರ್ಥಗಳನ್ನು ಅನ್ಯದೇಶೀಯರು ಕೊಂಡಾಡುತಲಿದ್ದರೂ, ಅದಂ ಅಧಃಕರಿಸಿ ಸಾಧ್ಯವಾದಮಟ್ಟಿಗೆ ಅನ್ಯದೇಶ ಪದಾರ್ಥಗಳನ್ನು ಸ್ವದೇಶೀಯರಿಗಾಗಿ ತರಿಸಬೇಕೆಂಬ ಅಭಿರುಚಿ ಅಧಿಕವಾಯಿತು. ಇದಕ್ಕೆ ದೃಷ್ಟಾಂತವಾಗಿ, ಕೇವಲ ಶಹರಿಗೆ ದೂರದೊಳಿರುವ ಕುಗ್ರಾಮಗಳಲ್ಲಿಸಹ ದೀಪದ ಕಡ್ಡಿಯೂ ಕೆರೋಸೀನ್ ಎಣ್ಣೆಯೂ, ಇಂಗ್ಲಿಷ್ ದೀಪಗಳೂ, ತುವಾಳದಿಂದ ತಯಾರಾದ ವ್ಯವಸಾಯೋಪಕರಣಗಳೂ ಬೇಕಾದುದೆಲ್ಲ ದೊರೆಯುತಲಿವೆ. ಸರ್ವಕಾಲದಲ್ಲಿಯೂ ನ್ಯಾಯವಾದ ಖರೀದಿಗೆ ವಿಕ್ರಯಿಸಬಹುದಾಗಿದ್ದ ಬೆಳ್ಳಿ ಭಂಗಾರದ ಪದಾರ್ಥಗಳು ಈಗ ಖರೀದಿಯಷ್ಟು ಡಿಸ್ಕಾಂಟ್ ಯಾನೆ ನಷ್ಟಗಳುಳ್ಳವಾಗಿಪರಿಣಮಿಸುತ್ತವು.

ಇನ್ನು ಧನಸಂರಕ್ಷಣೆಯ ವಿಷಯವನ್ನಾಲೋಚಿಸಿದರೆ, ಪೂರ್ವದಲ್ಲಿ ಭೂಸ್ಥಾಪಿತಮಾಡುವದೂ ನಂಬಿಕೆಯಾದವರಬಳಿ ಕೊಡುವದೂ, ಆಭರಣಗಳಮೂಲಕ ರೂಪಾಂತರಮಾಡಿ ತಮ್ಮಲ್ಲೇ ಇಟ್ಟುಕೊಂಡಿರುವದೂ ವಾಡಿಕೆಯಾಗಿತ್ತು. ಈಗಿನ ಕಾಲದಲ್ಲಿ ಸದರೀ ಮೂರು ಮಾರ್ಗಗಳೂ ಅನ್ಯಥಾ ಪರಿಣಮಿಸಿದವು. ಹ್ಯಾಗೆಂದರೆ, ಅನಿವಾರ್ಯಗಳಾದ ವ್ಯಯಗಳಿಂದ ತಾವು ವಿಮುಕ್ತರಾಗತಕ್ಕಬಗ್ಯೆ ಅವುಗಳಿಗಾಗಿ ಪ್ರತ್ಯೇಕ ಧನವನ್ನು ಹೂಡಿಇಟ್ಟು ಅದರವೃದ್ಧ್ಯಂಶದಿಂದಅವುಗಳನ್ನು ನಿರ್ವಹಿಸಿಕೊಳ್ಳಬೇಕೆಂಬ ಕೋರಿಕೆ ಜನಗಳಿಗೆಅಧಿಕವಾಗುತಬಂದದಸಾಗೆಲ್ಲ ತತ್ಸಾಧನಭೂತಗಳಾದ ಬ್ಯಾಂಕ್‌ಗಳು ಫಂಡುಗಳು ಮುಂತಾದ ಏರ್ಪಡುತಬಂದದರಿಂದ ಅವುಗಳಲ್ಲಿ ದ್ರವ್ಯವನ್ನಿಡುವ ವಾಡಿಕೆ ಅಧಿಕವಾಯಿತು. ಪರಂತು, ಅವುಗಳೂರ್ಜಿತವಾಗತಕ್ಕವೋ, ಅಥವಾ ವಂಚಿತವಾದವೋ ಎಂಬ ವಿಷಯಮಾತ್ರ ಜನಗಳ ವಿಚಾರಾರ್ಹವಾಗದೆ ಹೋಯಿತು. ಈಗ ನೂತನ ವಿಷಯಗಳೆಲ್ಲವೂ ಯೋಗ್ಯವೆಂಬ ಭಾವ ಸಂಪೂರ್ಣವಾಗಿ ನೆಲಗೊಂಡಿದೆ. ಇದಕ್ಕೆ ಸಾಕ್ಷಾದ್ವಿರುದ್ಧವಾಗಿ, ಪುರಾತನ ವಿಷಯಗಳೇ ಶ್ಲಾಘನೀಯಗಳೆಂಬ ತಾತ್ಪರ್ಯವು ಪಾಶ್ಚಿಮಾತ್ಯರಿಗೆ ಅಂಕುರಿಸುತಲಿದೆ.

ಮೂರನೆಯದಾದ ವಿನಿಯೋಗವೆಂಬದು ಪ್ರತಿಮನುಷ್ಯನ ಉಚಿತಜ್ಞತೆಯನ್ನೂ ವಿವೇಕವನ್ನೂ ವ್ಯಕ್ತಪಡಿಸತಕ್ಕದ್ದಾಗಿರುವದರಿಂದ ಒಂದೆರಡನೆಯದಕ್ಕಿಂತಲೂ ಇದನ್ನು ಕುರಿತೇ ಅರ್ಥಶಾಸ್ತ್ರಜ್ಞರು ವಿಶೇಷತಃ ವಿಚಾರಮಾಡಿರುತ್ತಾರೆ. ಧನವು ತನಗಾಗಿಯೂ, ತನ್ನನ್ನು ನಂಬಿದವರಿಗಾಗಿಯೂ, ತನ್ನ ಪರಲೋಕಸಾಧನಾರ್ಥವಾಗಿಯೂ, ವಿನಿಯೋಗಿಸಲ್ಪಡತಕ್ಕದ್ದಾಗಿರುತ್ತದೆ. ಪರಲೋಕಚಿಂತನೆಯು ತದಂಗವಾದ ವ್ಯಾಪಾರಗಳೂ ತತ್ಪ್ರೇರಿತಗಳಾದ ದಾನಧರ್ಮಗಳೂ ನಿಷ್ಪ್ರಯೋಜನಗಳೆಂಬ ಭಾವವೀಗ ಸಾರ್ವತ್ರಿಕವಾಗಿರುವದಲ್ಲದೆ ಕದಾಚಿತ್ ತಾದೃಶ ಅಭಿಪ್ರಾಯವುಳ್ಳವರನ್ನು ಭ್ರಾಂತರೆಂದೆಣಿಸುವಷ್ಟು ನಾಗರಿಕತೆಯು ಪ್ರಚಾರದೊಳು ಬಂದಿರುತ್ತದೆ. ಸ್ವಜನರ ವಿಷಯವಾಗಿ ವಿನಿಯೋಗಿಸುವದಾದ್ರೂ ಡಾಂಭಿಕವೆಂತಲೂ ಪಕ್ಷಪಾತ ಸೂಚಕವೆಂತಲೂ, ಅಂತವರ ರಕ್ಷಣೆಯು ಐಹಿಕಸುಖಭಂಜಕವೆಂತಲೂ, ಅವರ ಸಂಭಾಷಣೆ ಸಹ ತಮ್ಮನಾಗರಿಕತೆಗೆ ದೂರವಾದ್ದೆಂತಲೂ ಸಿದ್ಧಾಂತವಾಗಿದೆ. ಸ್ವಾರ್ಥವಿನಿಯೋಗವು ಕುರಿತು ವಿಚಾರಿಸಿದರೆ, ಅದು ಈಗ ಪ್ರತಿಬಂಧಕ ರೂಪವಾಗಿ ಏರ್ಪಟ್ಟಿರುವ ಜಾತಿ ಮತ ಕುಲ ಸಂಪ್ರದಾಯ ಸನ್ನಿವೇಶ ಮೊದಲಾದವನ್ನೆಲ್ಲ ಆತ್ಯಂತಿಕವಾಗಿ ನಿವಾರಿಸತಕ್ಕದ್ದಾಗಿರುತ್ತದೆ. ರಾಜನೀತಿಗೆ ಅವಿರುದ್ಧವಾಗಿ ವರ್ತಿಸುವಣವೇ ಸಹಜಧರ್ಮವೆಂತಲೂ ತತ್ರಾಪಿ ಅನಿವಾರ್ಯವಾದವುಗಳಿಗೆ ವಿಶೇಷ ಅವಧಾನ ಕೊಡಬೇಕಾದ್ದು ಮುಖ್ಯಕರ್ತವ್ಯವೆಂತಲೂ ಎಣಿಸಲ್ಪಟ್ಟಿದೆ. ಇದರಿಂದ ಪೂರ್ವಸಂಪ್ರದಾಯಿಕ ಕರ್ತವ್ಯರಾದವರಾಗಲಿ ಸ್ವೀಯಗಳಾದ ಹೊರ ಭಾಷಾಚಾರಗಳಲ್ಲಿ ಅಭಿಮಾನವುಳ್ಳವರೇಯಾಗಲಿ ಇಂತದು ಮಾಡುತ್ತಾರೆಂಬದಕ್ಕೆ ಸ್ವಲ್ಪವೂ ಅವಧಾನವನ್ನಿಯ್ಯಲಾಗದೆಂಬದು.

ಹೀಗೆ ನಾಗರಿಕತೆಯೆಂಬದು ಪ್ರಚಾರದೊಳು ಬಂದು ಅತ್ಯಂತಿಕ ವಿನಿಮಯಕ್ಕೆ ಸಕಲವನ್ನೂ ಅದು ಒಳಪಡಿಸಿಕೊಂಡಿರುವದರಿಂದ ಇದನ್ನು ಸಲಕ್ಷಣವೆಂದಾಗಲಿ ಅಪಲಕ್ಷಣವೆಂದಾಗಲಿ ಅವರವರ ಅಭಿರುಚಿಗೆ ತಕ್ಕಂತೆ ಜನಗಳು ಭಾವಿಸಿಕೊಳ್ಳಬಹುದು.

THE LAND REVENUE.

ಸಾಹೇಬ್ ದಿವಾನ್ ಪೂರ್ಣಯ್ಯನವರ ರೀಜನ್ಸಿಯೊಳು, ಅಂದರೆ ೧೮೦೮—೯ನೇ ಇಸವಿಯಲ್ಲಿ ಈ ಸಂಸ್ಥಾನಕ್ಕೆ ೭೮ ಲಕ್ಷ ರೂಪಾಯಿಗಳು ಜಮೀನ್‌ಮೂಲಕ ಉತ್ಪತ್ತಿ ಯಾಯಿತು. ಸಾಹೇಬ್ ಮಹಾರಾಜಾ ಕೃಷ್ಣರಾಜ ಒಡೆಯರವರ ಪ್ರಭುತ್ವದ ಉತ್ತರಭಾಗದಲ್ಲಿ ಅಂದರೆ, ೧೮೩೦—೩೧ನೇ ಇಸವಿಯೊಳು ಸದರೀಬಾಬಿನ ಹುಟ್ಟುವಳಿಯು ೫೬ ಲಕ್ಷರೂಪಾಯಿಗಳಿಗೆ ತಗ್ಗಿಹೋಯಿತು. ಬ್ರಿಟಿಷ್ ಪ್ರಭುತ್ವದಲ್ಲಿ ಧಾತು ಈಶ್ವರಸಂವತ್ಸರಗಳು ಪ್ರಾಪ್ತವಾಗುವವರಿವಿಗೆ ಕ್ರಮಕ್ರಮವಾಗಿ ೩೩¼ ಲಕ್ಷ ರೂಪಾಯಿಗಳ ತನಕ ವೃದ್ಧಿಯಾಗುತಬಂತು. ಸರ್ವೇ ಜಮಾಬಂದಿ ಏರ್ಪಟ್ಟಾಗ್ಯೂ ದಿವಾನ್ ಪೂರ್ಣಯ್ಯನವರ ಪ್ರಭುತ್ವದಲ್ಲಿ ಹುಟ್ಟುವಳಿಯಾಗುತಲಿದ್ದಷ್ಟು ಮೊಬಲಗು ಈಗ ವಸೂಲಾಗುವದಿಲ್ಲವು. ಹಿಂದೆ ಇಲ್ಲಿ ನೆಲಗೊಂಡಿದ್ದ ಬಟಾಯಿಪದ್ಧತಿಯು ದೆಸೆಯಿಂದ ಜಮೀನ್ ಹುಟ್ಟುವಳಿಯು ದಿನೇದಿನೆ ಅಧಿಕವಾಗುತಬಂತು. ಈ ಪದ್ಧತಿಯು ಅನೇಕ ಅಕ್ರಮಗಳಿಗೆ ಅವಕಾಶವನ್ನುಂಟುಮಾಡತಕ್ಕದ್ದಾಗಿದ್ದರೂ, ತನ್ಮೂಲಕ ಬಡಮಂದಿ ಜೀವಿಸುತಲಿದ್ದರಲ್ಲದೆ. ಸರ್ಕಾರಕ್ಕೂ ಆದಾಯವಾಗುತಲಿತ್ತು. ಸರ್ವೇಸೆಟಲ್‌ಮೆಂಟ್ ಏರ್ಪಾಟಾದಾಗ ಸದರೀಪದ್ಧತಿ ಮೌಕೂಫ್‌ಮಾಡಲ್ಪಟ್ಟು ತರೀಜಮೀನ್‌ಗಳಿಗೆ ಕಂದಾಯ ಮನಸ್ವೀ ಹರಾಯಿಸಲ್ಪಟ್ಟಿತು. ಇದರಿಂದ ಜಮೀನ್‌ಗಳನ್ನು ದರಖಾಸ್ತುಮಾಡುವವರಿಲ್ಲದೆ ಈಗ ಬಹಳಮಟ್ಟಿಗೆ ಬಂಜರ್‌ಬಿದ್ದು ಸಾಲೀಯಾನಾ ಹುಲ್ಲುಬನ್ನಿಮೂಲಕ ಅತ್ಯಲ್ಪ ಮೊಬಲಗು ಉತ್ಪತ್ತಿಯಾಗಲಿಕ್ಕೆ ಕಾರಣವಾಯಿತು. ಈ ಕಾರಣದಿಂದಲೇ ಪ್ರಾಂತಕ್ಕೆ ಪೂರ್ವದಷ್ಟು ಉತ್ಪತ್ತಿಯನ್ನು ಸಹ ಈಗ ನಿರೀಕ್ಷಿಸಲು ಅವಕಾಶವಿಲ್ಲದೆಹೋಯಿತು. ಇದಲ್ಲದೆ ಕೆರೆಗಳೆಲ್ಲವೂ ಶಿಕಸ್ತಾಗಿ ಅದು ಮರಳ ದುರಸ್ತು

ಹೋಗುವದಕ್ಕೆ ದಿಕ್ಕಿಲ್ಲದೇಹೋಗುವದರಿಂದಅವುಗಳಲ್ಲಿ ನೀರುನಿಲ್ಲದೆ ಅವುಗಳ ಕೆಳಗಣ ಜಮೀನುಗಳೆಲ್ಲವೂ ಅನುಪಯುಕ್ತವಾಗಿ ಯೇರ್ಪಟ್ಟವೆ. ಈಗ ದೇಶದ ದುಃಸ್ಥಿತಿಯು ಪೂರ್ವಸ್ಥಿತಿಗೆ ಬರಬೇಕೆಂದಿದ್ದರೆ ಹಿಂದಿನ ಬಹಾಯಿ ಪದ್ಧತಿಯನ್ನಾಗಲಿ, ಅದಕ್ಕೆ ಸಮಾನವಾದ ಬೇರೊಂದು ಪದ್ಧತಿಯನ್ನಾಗಲಿ ಯೇರ್ಪಡಿಸಬೇಕಲ್ಲದೆ ಕೆರೆಗಳನ್ನೆಲ್ಲ ರಿಪೇರಿ ಮಾಡಿಸಬೇಕಾದ್ದು ಪ್ರಥಮಕರ್ತವ್ಯವಾಗಿರುತಿದೆ. ಇವು ಕ್ರಮಪಡಿಸಿದಹೊರ್ತು ಸಾಲೀಯಾನಾ ಸರ್ಕಾರಕ್ಕೆ ಉಂಟಾಗುತಲಿರುವ ಲಕ್ಷಾಂತರ ರೂಪಾಯಿಗಳ ನುಕ್ಸಾನ್ ಯೆಂದಿಗೂ ನಿವೃತ್ತಿಯಾಗಲಾರದು. ಸರ್ಕಾರದವರು ಸದ್ಯಃ ಒಂದುಕೆಲಸ ಮಾಡುವರಾದರೆ ಬಹಳ ಯೋಗ್ಯವಾಗಿರುವದು. ಅದೇನಂದರೆ, ಬುಜಟ್ ಬದ್ದಿರತಕ್ಕ ಕೆರೇಅಸರೆ ಜಮೀನುಗಳನ್ನು ಕಮ್ಮಿ ಕಂದಾಯಕ್ಕೆ ಅಥವಾ ಕ್ರಯಕ್ಕೆ ಕೊಡುವಂತೆಯೂ ಅವರ ದುಃಸ್ಥಿತಿಯನ್ನೆಲ್ಲ ಸಾಗುವಳೀದಾರರೇ ಅನುಭವಿಸಬಹುದೆಂತಲೂ ಭರವಸೆಕೊಟ್ಟು ಬೀಡು ಜಮೀನುಗಳಿರುವ ತಾಲ್ಲೂಕ್ ಅಮಲ್ದಾರರು ಅವುಗಳ ಆಸುಪಾಸು ಗ್ರಾಮಗಳ ರೈತರನ್ನು ಪ್ರೇರಿಸುವಂತೆ ಮಾಡಿದರೆ ಅಲ್ಪಸ್ವಲ್ಪ ಸಾಗುವಳಿಯಾಗಬಹುದು. ಕವಾತಿ ಅವುಗಳನ್ನು ಸಾಗುವಳೀ ಮಾಡತಕ್ಕವರು ಬೇದ ಅಪೇಕ್ಷಿಸುವದಾದರೆ ಸರ್ಕಾರದವರು ಸಹಾಯ ಮಾಡಿ ಫಲ ಕೈಗೆ ಬರುವಕಾಲದೊಳು ವಸೂಲ್ಮಾಡಿಕೊಳ್ಳುವದುಚಿತವಾಗಿರುತಿದೆ. ಜಲಾಭಾವದಿಂದಲಾಗಲಿ ಸಮರ್ಪಕವಾದ ಇತರಕಾರಣಗಳಿಂದಲಾಗಲಿ ಜಮೀನ್ ಸಾಗುವಳಿಯಾಗದಿದ್ದರೆ ಆಗ ಸಹ ಕಂದಾಯವನ್ನು ಬಲಾತ್ಕಾರಪೂರ್ವಕ ವಸೂಲ್ಮಾಡುವದರಿಂದ ರೈತರು ಅಸಮಾಧಾನಸಮೇತ, ಕಂದಾಯಕೊಡುವದರಲ್ಲಿಸುಕಟಪಡಲಿಕ್ಕೆ ಅವಕಾಶವಿಲ್ಲದಂತೆ ಫಸಲಿನಸ್ಥಿತಿಯನ್ನೂ, ತನ್ಮೂಲಕ ಆಗಬಹುದಾದ ದುಃಸ್ಥಿತಿಯನ್ನೂ, ಸಾಗುವಳಿಬಗ್ಗೆ ತಗಲಬಹುದಾದ ಖರ್ಚನ್ನೂ ಪರಿಭಾವಿಸಿ ಹಿಡುವಳೀದಾರನಿಗೂ ಸರ್ಕಾರಕ್ಕೂ ವಿಶೇಷ ನಷ್ಟ ವುಂಟಾಗದಿರುವ ಹಾಗೆ ಮುನಾಸಬ್ ರಿಮಿಷನ್ ಮಾಡುವದರಮೂಲಕ ರೈತರನ್ನು ಪ್ರೋತ್ಸಾಹಪಡಿಸಬೇಕಾದ್ದು ಆವಶ್ಯಕವಾಗಿರುತಿದೆ. ಈ ಕ್ರಮವನ್ನು ಮೊದಲು ಹಿಂದೆರಡು ತಾಲ್ಲೂಕುಗಳಲ್ಲಿ ಅಜಮಾಯಿಷೀ ತರೀಕ್ ಆಚರಣೆಯೊಳು ತಂದು ಅಲ್ಲಿ ಅದು ತೃಪ್ತಿಕರವಾಗಿ ಕಂಡುಬಂದರೆ ಇತರತ್ರ ಸಹ ಜಾರಿಯಲ್ಲಿ ತರಬಹುದು. ಇದರಿಂದ ಸರ್ಕಾರಕ್ಕೆ ಯಾವ ಬಾಧಕವೂ ವುಂಟಾಗುವದೆಂದು ತೋರಲಿಲ್ಲವು. ಹೀಗೆ ಯಾವದಾದರೊಂದು ಕ್ರಮ ಏರ್ಪಡಿಸಿದ ಹೊರತು ಈ ಸುಸ್ಥಾನದ ಜಮೀನ್ ದುಃಸ್ಥಿತಿಯು ಪೂರ್ವಸ್ಥಿತಿಯನ್ನೈದಲಾರದು. ಇಂತವುಗಳನ್ನಾಲೋಚಿಸದೆ ಸದ್ಯಃ ಅರ್ಥವ್ಯಯ ನಿಮಿತ್ತಕವಾದ ನೂತನ ಕಾರ್ಯವನ್ನು ಪ್ರಾರಂಭಿಸುವದರಿಂದ ಅನೇಕವಿಧ ಲುಕ್ಸಾನಿಗೆ ಕಾರಣವಾಗುತಿದೆ. ಉದ್ದಿಷ್ಟಕಾರ್ಯದ ಉಪಯುಕ್ತಾನುಪಯುಕ್ತವನ್ನು ಕುರಿತು ನಾವೀಗ ವಿಚಾರಮಾಡಲೆತ್ನಿಸುವದಿಲ್ಲವು. ಒಂದುವೇಳೆ ಅದು ಉಪಯುಕ್ತವಾದ್ದಾಗಿಯೇ ಇರಬಹುದು. ಪರಂತು ಅಂತಾ ಮಹತ್ಕಾರ್ಯಗಳಿಗೆ ಬೇಕಾದ ದ್ರವ್ಯಾನುಕೂಲ್ಯವನ್ನು ಕಲ್ಪಿಸಿಕೊಳ್ಳುವಬಗ್ಗೆ ಹಿಡಿಯುವ ಕಾಲವಿಳಂಬವನ್ನೂ ಅದು ಪ್ರಾರಂಭಿಸುವತನಕ ಬಡ್ಡೀಮೂಲಕವಾದ ನಷ್ಟವನ್ನೂ ಒಂದುವೇಳೆ ಕೊನೆಮುಟ್ಟದೆ ಹೋದರೆ ಅರ್ಥನಾಶವನ್ನೂ ತಾವತ್ಪರ್ಯಂತ ಪ್ರಾಪ್ತವಾಗಬಹುದಾದ ಇತರಮೂಲಕವಾದ ನಷ್ಟವನ್ನೂ ಮೊದಲು ಆಲೋಚಿಸಿ ಪ್ರವರ್ತಿಸಬೇಕಾಗಿರುತಿದೆ. ಸಾಲೀಯಾನಾ ೪ ಲಕ್ಷ ರೂಪಾಯಿಗಳಪ್ರಕಾರ ಮಿಗಿಲಿಸಿ ಜಲವಸತಿಗಾಗಿ ವ್ಯಯಮಾಡುವದಕ್ಕೆ ಬದಲು ಸಾಲೀಯಾನಾ ೨ ಲಕ್ಷ ರೂಪಾಯಿಗಳ ಪ್ರಕಾರ ಡಿಕಸ್ತು ಕೆರೆಗಳ ರಿಪೇರಿಯಬಗ್ಗೆ ಆಯಾ ಸ್ಥಳದ ರೈತರಮೂಲಕ ವ್ಯಯಮಾಡಿ ದುರಸ್ತು ಮಾಡಿಸುವದಲ್ಲದೆ ಮೇಲೆ ತಿಳಿಸಲ್ಪಟ್ಟಂತಾ ಯಾವದಾದರೊಂದುಏರ್ಪಾಡು ಮಾಡಿದರೆ ಯೆಷ್ಟು ಯೋಗ್ಯವಾಗಿಯೂ ಆದಾಯಕರವಾಗಿಯೂ ಇರುವದು. ವ್ಯಯಮಾರ್ಗದಲ್ಲಿ ಇಲ್ಲಿನ ಸರ್ಕಾರದವರಿಗೆ ನಿರ್ನಿರೋಧವಾಗಿ ಹೋಗುವ ದೃಷ್ಟಿಯು ಆದಾಯಮಾರ್ಗದಲ್ಲಿ ಮಗ್ನವಾಗುವದಕ್ಕಾಗಿ ಯೆಷ್ಟು ಆಶ್ಚರ್ಯಪಟ್ಟರೂ ಸಾಲದ್ದಾಗಿರುತಿದೆ.

Occasional Notes.
ನೈಮಿತ್ತಿಕವಿಷಯನ್ಯಾಸ

Imprisonment.—ಬರ್ಮಾರಾಜ್ಯದಹೊಸ ಅಧಿಕಾರದವರು ತಮ್ಮ ಸಹೋದರರಪೈಕಿ ಕೈಗೆ ದೊರೆತವರನ್ನೆಲ್ಲ ಕೈದಿನಲ್ಲಿಟ್ಟರು. ಸದರೀಯವರು ಜನಗಳ ಪ್ರೀತಿ ಗೌರವಗಳಿಗೆ ಕೇವಲ ವಿಷಯರಾಗಿರುತ್ತಾರೆಂದು ರಷಿಯಾದೇಶದವರ ಹೇಳಿಕೆಯು ದೃಢಪಡಲಿಲ್ಲವು.

The new Parliament.—ಈ ತಿಂಗಳ ೧೨ನೇ ತಾರೀಖಾದ ನಾಳೆಯದಿನ ಇಂಗ್ಲೆಂಡ ರಾಜ್ಯದ ಹೊಸ ಪಾರ್ಲಿಮೆಂಟಿ ಸಮಾಜಸೇರಿ ರಾಜ್ಯಕಾರ್ಯ ಪ್ರವರ್ತನಕ್ಕೆ ಅಪ್ಪಣೆಯಂ ಕೇಳಿಕೊಳ್ಳುವರು.

Tantia Bhil.—ಪ್ರಸಿದ್ಧ ದರೋಡೆಕಳ್ಳನಾದ ಟಾಂಟಯಾ ಭೀಲ್ ಯೆಂಬವನ ಬಂದೋಬಸ್ತಿಯಬಗ್ಗೆ ಪ್ರಬಲ ಸನ್ನಾಹಗಳು ನಡೆಯುತಲಿರುವುತಲೂ ಅವನಿಂದ ಆಗಿಂದಾಗ್ಯೆ ನಡೆಸಲ್ಪಡುವ ಕೇವಲ ಸಾಹಸಕರವಾದ ದರೋಡೆಗಳು ಕೂಡಲೇ ನಿಂತುಹೋಗುವದೆಂದು ನಿರೀಕ್ಷಿಸಲ್ಪಡುವದಾಗಿಯೂ ಮಧ್ಯರಾಷ್ಟ್ರದ ವಾರ್ತಾಹರನೊಬ್ಬನು ಒಂದಾನೊಂದು ಪತ್ರಿಕೆಗೆ ಬರೆದಿರುತ್ತಾನೆ.

The Gaekwar's jewels.—ಬರೋಡೇ ವಾರ್ತಾಹರನೊಬ್ಬಾತನು ಒಂದಾನೊಂದು ಪತ್ರಿಕೆಗೆ ಬರೆಯುತ್ತಾನೇನಂದರೆ—ಗಾಯಕವಾಡಿಯವರ ಜವಾಹಿರ್‌ಗಳು ವಿಶೇಷವಾಗಿ ಯಾವವೂ ಇಲ್ಲವು. ಅವೆಲ್ಲವೂ ಸಾಧಾರಣವಾದ ಒಂದುಪೆಟ್ಟಿಗೆಯಲ್ಲಿ ಅಡಗಿಸಿ ಇಡಬಹುದಾಗಿವೆ. ಅವುಗಳಪೈಕಿ ಸರ್ವೋತ್ತಮವಾದ ವಜ್ರಮಣಿಗಳ ಕಂಠಾಭರಣ ವೊಂದಿರುತಿದೆ. ಅದರ ಕ್ರಯ ಮೂವತ್ತುಲಕ್ಷ ರೂಪಾಯಿಗಳು. ಅದರ ಮಧ್ಯನಾಯಕವಜ್ರವನ್ನು ಗಾಯಕವಾಡಿಯವರು ಚಕ್ರವರ್ತಿನಿಯಾದಯೂಜನೀಯೆಂಬವರಿಂದ ಒಂಭತ್ತುಲಕ್ಷರೂಪಾಯಿಗಳಿಗೆಕೊಂಡುಕೊಂಡರೆಂಬದು

The Maharaja of Cashmere.—ಕಾಶ್ಮೀರದ ಮಹಾರಾಜರವರು ಅಲ್ಲಿನ ಕಮಾಂಡರ್ ಇನ್ ಚೀಫರವರಾದ ತಮ್ಮ ಸಹೋದರರು ರಾಂಸಿಂಗ್ ಯವರು, ಅಲ್ಲಿನ ರೆಸಿಡೆಂಟರಾದ ಕರ್ನಲ್ ಸೇಂಟ ಜಾನ್ ಮೊದಲಾದವರೊಡನೆ ಈತಿಂಗಳ ೫ನೇ ತಾರೀಖು ಮಂಗಳವಾರದದಿನದಲ್ಲಿಗ್ಯೆ ಸ್ಪೆಷಲ್ ಟ್ರೇಯಿನ್‌ನಲ್ಲಿ ಕಲ್ಕತ್ತೆಗೆ ದಯಮಾಡಲು ವೈಸ್ ರಾಯಿಯವರು ಡುಪೆರೀಕಾಂಗ್, ಅಂದರೆ ಪಾರ್ಶ್ವರಕ್ಷಕರಪೈಕಿ ಇಬ್ಬರೂ ಮತ್ತುಬಹುಮಂದಿ ದೊಡ್ಡಮನುಷ್ಯರೂ ದರ್ಭಂಗಾ ಮಹಾರಾಜರವರೂ ರಯಿಲ್‌ಸ್ಟೇಷನ್‌ಬಳಿ ಹಾಜರಿದ್ದು ಮಹಾರಾಜರವರನ್ನು ಬರಮಾಡಿಕೊಂಡರು.

LOCAL AND PROVINCIAL NEWS.
ಪಳೆಯಿಕ ಮತ್ತು ತಾಲ್ಲೂಕುಜಾತಿವೃತ್ತಾಂತಗಳು

Advancement of civilisation.—ಈ ಸಲದ ಕ್ರಿಸಮಿಸ್ ಹಬ್ಬವನ್ನು ಹಿಂದೂಜನಗಳು ಸಹ ಉತ್ಸಾಹದೊಡನೆ ಕೊಂಡಾಡಬೇಕೆಂದು ಆಲೋಚಿಸಿ ತಮ್ಮತಮ್ಮ ಮನೆಗಳಿಗೆ ಸುಣ್ಣ ಬಳಿದು ಕೆಲವುಕಡೆ ತೋರಣಗಳುಸಹ ಕಟ್ಟಿ ಅಲಂಕರಿಸಿದರೆಂದು ತಿಳಿಯಬರುತಿದೆ. ಇದು ರಾಜಭಕ್ತಿ ಮತ್ತು ನಾಗರಿಕತಾಭಿವೃದ್ಧಿ ಸೂಚಕವಾದದ್ದು.

The Malore murder case.—ಈಚೆಗೆ ಸುಮಾರು ಒಂದುತಿಂಗಳಹಿಂದೆ ಮಾಲೂರಲ್ಲಿ ಒಬ್ಬ ಲಜ್ಜೆಯವನು ಒಬ್ಬ ವರ್ತಕನ ಮಗನನ್ನು ಖೂನ್ಮಾಡಿದ ಮೊಕದ್ದಮೆಯಲ್ಲಿ ಪ್ರಥಮವಿಚಾರಣೆಆಗಿ ಅಪರಾಧಿಯು ಸೆಷನ್ ದರ್ಯಾಪ್ತಿಯ ಬಗ್ಗೆ ಹೈಕೋರ್ಟಿಗೆ ಕಮ್ಮಿಟಿ ಮಾಡಲ್ಪಟ್ಟಂತೆ ತಿಳಿಯಬರುತಿದೆ. ಈ ತಿಂಗಳ ೧೪ನೇತಾರೀಖು ಬೃಹಸ್ಪತಿವಾರದದಿನ ಹೈಕೋರ್ಟು ಸೆಷನ್ ದರ್ಯಾಪ್ತಿಗೆ ಪ್ರಾರಂಭವಾಗುವದು.

The Second Magistrateship, C. & M. Station.—ಇಲ್ಲಿನ ಸಿವಿಲ್ ವ ಮಿಲಿಟರಿಸ್ಟೇಷನ್ ಯೆರಡನೇ ಮ್ಯಾಜಿಸ್ಟ್ರೇಟರಾದ ಮೆ|| ಪಸ್ಕಿರಾಯವರು ತಮ್ಮ ಕೆಲಸವು ಬಿಡತಕ್ಕವರಾಗಿರುವದರಿಂದ ಅವರ ಕೆಲಸವು ಫಲಾನೆಯವರಿಗೆ ಕೊಡಲ್ಪಡುವದೆಂದು ಇದುವರಿವಿಗೆ ನಿಷ್ಕೃಷ್ಟವಾಗಲಿಲ್ಲವು. ಬಹುಶಃ ಜಮಾಬಂದಿಯಲ್ಲಿರುವ ಇತ್ಯಷ್ಟಿ ಡೆಪುಟೀರವರು ಇಲ್ಲಿಗೆ ವಾಪಸಬಂದಮೇಲೆ ವ್ಯವಸ್ಥೆಯಾಗಬಹುದಾಗಿ ಕಾಣುತಿದೆ. ಈ ಕೆಲಸಕ್ಕೆ ಇದುವರಿವಿಗೆ, ಅಡ್ವೋಕೇಟುಗಳು ಮೊದಲಾದ ಅನೇಕರು ಅಪ್ಲಿಕೇಷನ್ ಮಾಡಿಕೊಂಡಿರುತ್ತಾರಂತೆ.

The Mysore Goldmining Company.—ಮೈಸೂರುದೇಶದ ಚಿನ್ನದ ಗನಿಗಳಂ ಅಗೆಯುವದಕ್ಕಾಗಿ ಯೇರ್ಪಟ್ಟಿರುವ ಕಂಪೆನಿಯವರ ಭಾಗ್ಯವಿಶೇಷವೆಂಬದು ಜಮೀನ್ನಲ್ಲಿಮಾತ್ರವಲ್ಲದೆ ಸಮುದ್ರದಲ್ಲಿ ಸಹ ಅದನ್ನನುಸರಿಸಿ ಬರುತಲಿದೆ. ಹ್ಯಾಗಂದರೆ ಮೈಸೂರುದೇಶದ ಗನಿಗಳಲ್ಲಿ ಸಿಕ್ಕಿದ ೫೦,೦೦೦ ರೂಪಾಯಿಗಳ ಕ್ರಯ ಬಾಳುವಷ್ಟು ಚಿನ್ನ ಇಂಡಸ್ ಯೆಂಬ ಹೊಗೇ ಜಹಜಿನಲ್ಲಿ ಅನ್ಯದೇಶಕ್ಕೆ ಕಳುಹಿಸಲ್ಪಡಲು ಮಧ್ಯಮಾರ್ಗದಲ್ಲಿ ಸದರೀ ಜಹಜು ಮುಣಗಿಹೋಗಿ ಅದರೊಂದಿಗೆ ಚಿನ್ನವೂ ಹೋಯಿತು, ಪರಂತು ಸಮುದ್ರದಲ್ಲಿ ಮುಣಗಿ ನೋಡತಕ್ಕವರಕೈಗೆ ಸಿಕ್ಕಿ ಬೇರೇ ಜಹಜಿನಲ್ಲಿ ವಿಲಾಯಿತಿಗೆ ಹೋಗುತಲಿದೆ.

The Maharaja on tour.—ಶ್ರೀಮನ್ಮಹಾರಾಜರವರು ಪ್ರಕೃತ ಕುಣಿಗಲ್ ತಾಲ್ಲೂಕಿನ ಕಾಟನದಲ್ಲಿ ಜಗತ್ಪ್ರಸಿದ್ಧವಾದ ಶ್ರವಣಬೆಳಗೊಳಕ್ಕೆ ದಯಮಾಡುತ್ತಾರೆಂಬ ಸಂತೋಷ ಪಾರವಶ್ಯತೆಯಿಂದ ಅಲ್ಲಿನವರು ಮಹಾರಾಜರವರನ್ನು ಉಚಿತರೀತಿಯಿಂದ ಬರಮಾಡಿಕೊಳ್ಳುವದಕ್ಕಾಗಿ ಸರ್ವಸನ್ನಾಹಗಳನ್ನೂ ಮಾಡಿಕೊಂಡು ತಮ್ಮ ಅರಸರ ಆಗಮನವನ್ನು ಪ್ರತಿದಿನವೂ ನಿರೀಕ್ಷಿಸುತಲಿದ್ದಾರಂತೆ. ಸಾಬಕ್ ಕೃಷ್ಣರಾಜ ಒಡೆಯರವರ ಪ್ರಭುತ್ವದ ಅಂತ್ಯಕಾಲದಲ್ಲಿ ಮ್ಯೂಟನಿ, ಅಂದರೆ ಪ್ರಜೆಗಳು ಕಲಹಪ್ರವರ್ತಕರಾಗಿ ಖೂನೀಗಳು ನಡೆಸಿದ್ದು ಇದೇ ತಾಲ್ಲೂಕಿನಲ್ಲಾದದರಿಂದ ಅದೇಸ್ಥಳದ ಪ್ರಜೆಗಳಿಗೆ ಈಗ ಇಷ್ಟರ ರಾಜಭಕ್ತಿಯುಂಟಾದದ್ದು ಪ್ರಕೃತ ಮಹಾರಾಜರವರ ಭಾಗ್ಯವಿಶೇಷವೆಂದು ಹೇಳಬೇಕಾಗಿದೆ. ಕಾಲಕ್ರಮೇಣ ಯೆಲ್ಲವೂ ಬದಲಾಯಿಸದೆ ಇರಲಾರದಷ್ಟೆ!

The Pettah Market Show.—ಕಳೆದಸಂವತ್ಸರದ ಮೊದಲು, ಜನವರಿ ತಿಂಗಳಲ್ಲಿ, ಇಲ್ಲಿನ ಮಾರ್ಕೆಟ್ಟನ್ನು ಚಪ್ಪರತೋರಣಕದಳೀಸ್ತಂಭಗಳಿಂದಲಂಕರಿಸಿ, ಅಲ್ಲಿ ನಾನಾವಿಧ ಶಾಕಫಲಪುಷ್ಪಾದಿಗಳಂ ಜಮಾಯಿಸಿ ಜನಗಳನೋಟಕ್ಕಾಗಿ ಇಟ್ಟು, ಅವುಗಳಪೈಕಿ ಉತ್ತಮವಾದ ವಸ್ತುಗಳಂತಂದು ತೋರಿಸುವಂತಾವರಿಗೆ ಇನಾಂಗಳು ಕೊಡುವವಾಡಿಕೆ ಯೇರ್ಪಟ್ಟಿತಷ್ಟೆ. ಇದು ಜನವರಿತಿಂಗಳ ಪ್ರಾರಂಭದಲ್ಲಿ ನಡೆಯತಕ್ಕದ್ದಾಗಿದ್ದರೂ ಈಸಲ ಹಾಗಾಗದೆ ಹೋದದಕ್ಕೆ ಕಾರಣವು ವಿಚಾರಿಸಲಾಗಿ, ಶ್ರೀಮನ್ಮಹಾರಾಜರವರ ಆಗಮನವು ನಿರೀಕ್ಷಿಸಿ, ಜನವರಿ ೨೦ ತಾರೀಖ್‌ಗಳಮೇಲೆನಡೆಸಲ್ಪಡುವದೆಂದುತಿಳಿಯಬರುತಿದೆ.

CORRESPONDENCE

ಮ|| ರಾ|| ಕರ್ಣಾಟಕಪ್ರಕಾಶಿಕಾ ಎಡಿಟರವರಸು|| ಕ್ಕೆ ಮಹಾಶಯರೆ—

ಶ್ರೀಮನ್ಮಹಾರಾಜಾಧಿರಾಜ ಶ್ರೀಚಾಮರಾಜೇಂದ್ರಒಡೆಯರ್ ಬಹದೂರ್, ಜಿ. ಸಿ. ಎಸ್. ಐ. ಯವರು ಈ ತಿಂಗಳ ೨೭ನೇ ತಾರೀಖ್‌ನಲ್ಲಿ ಇಲ್ಲಿಗೆ ಬಿಜಮಾಡಿಸಿದ್ದಕ್ಕೆ ನಡೆದ ಉತ್ಸವಗಳು ವಿವರವಾಗಿ ತಮಗೆ ಇತರರಿಂದ ತಿಳಿಯಬಂದಿರಬಹುದು. ಆ ಉತ್ಸವಗಳಲ್ಲಿ ಮಹಾರಾಜರವರು ಮಾಡಿದ ದರ್ಬಾರ್ ಸಮಯದಲ್ಲಿ ಶಿವಮೊಗ್ಗೆಯಲ್ಲಿರುವ ಮ|| ರಾ|| ಗುಂಡಪ್ಪನವರಿಂದ ಓದಲ್ಪಟ್ಟ ಕನ್ನಡಅಡ್ರೆಸ್ ಇದರಡಿ ಬರೆದಿರುವದನ್ನ ತಮ್ಮ ಪತ್ರಿಕೆಯಲ್ಲಿ ದಯಮಾಡಿ ಪ್ರಸಿದ್ಧಪಡಿಸಲು ಪ್ರಾರ್ಥಿಸುತ್ತೇನೆ.

ಶ್ಲೋ|| ವೇಯಾಜ್ಞನಕಜಾಮಾತಾಜನಕೋ
ಜಗತಾಮಪಿ । ಸುತಾರಾಜಾಚಧರಣೀ
ಕಾರಣಂಸರ್ವಸುಖದಾಂ ||
ಸುಧಾಕಿರಣಮಂಡಿತನವಸುಧಾಭಮಂದಸ್ಮಿತ
ಸವಭ್ರಸಮಕಾಮಲಕುಟಿಲಕುಂತಳಕೋಮಳೆ |
ಬುಧವ್ರತತಿಮಂಡಿತ ವಿನುತಚಾಮರಾಜೇಂದ್ರನಂ
ಸದಾಸಲಹೆನನ್ನು ಸಕಲಮಾತೆಚಾಮುಂಡಿಕೆ||

ವಾರ್ಧಿಕಷಟ್ಪದಿ.

ಇಂದುಧರಕರುಣಿಸಿದನಿಂದುನಮ್ಮೆಲ್ಲರಾ|
ನಂದದಿಂತಮ್ಮಚರಣಾಂಬುಜವನಮಿಪಂತೆ|
ನುಡಿಕೆಮ್ಮಯಮನೋಭೀಷ್ಟಮದುಬೇಡರೇಂ
ಕೀರ್ತಿಕೌಮುದಿಯುತಮ್ಮ ||
ಚಂದದಿಂವರ್ತಿಸುತಪೃಥ್ವಿಮಂಡಲದೊಳಾ|
ನಂದಮಂಬೀರುತ್ತಮತ್ತುಮತ್ತರಳಸಲಿ|
ಸುಂದರಾಸ್ಯನೆನಿನ್ನಸುಪ್ರಜಾದೃತ್ಯಮುದತೆ
ಯನತಿಹರುಷದಿಂದ ||೧||
ಸ್ವಭುಜರಕ್ಷಿತಮಾದಮೇದಿನಿಜೊಳತಿಶಯದಿ|
ಸಂಭವಿಸುತಿಹನವನವೀನಸುಖವನುಭವದಿ|
ಸಂಬುಧಿಗೆಸಮನಾದ ಗಂಭೀರತೆಯುಳ್ಳೊಂದಿವ್ರಜ
ಗಳತಿಹರುಷದಿಂದ||
ಕುಂಭಿಣಿಯೊಳತಿವಿನೋದದಿಕಾಲಕಳೆವಸು|
ದಂಭವಂಕೆಣ್ಣಾರನೋಡಲ್ಕೆಮಂತ್ರಿನಿಕು|
ರುಂಬದಿಂದಿಂದುಬಂದೆಮ್ಮನುಧನ್ಯರಂಮಾಳ್ದನೀ
ಭೂಪತಿಲಕ ||೨||
ಪಾರ್ಥಿವಸುವತ್ಸರದಿಪೃಥ್ವೀಶನುನೋಡಿ|
ಸಾರ್ಥಕವುದಾಯಿತ್ತೆನಮ್ಮಗಳನಯನಯುಗ|
ಪುರ್ಥಿಕಲ್ಪದ್ರುಮನೆಮಾರ್ಗಶೀರ್ಷದಕೃಷ್ಣಷ
ಷ್ಠ್ಯಪರರವಿವಾರಗಳ್||
ಅರ್ಥಿಸುತಲಿದ್ದಂತೆಬಯಸಿಬಹುಕಾಲದಿಕೃ|
ತಾರ್ಥತೆಯನಡೆದು ವಿಖ್ಯಾತಿಯನುಲೋಕದೊಳ್|
ಪಾರ್ಥಿವಕುಲತಿಲಕಪ್ರೀತಿನೆರೆಗೊಂಡುದೈಜನ
ರಹೃತ್ತು ಹರದಲ್ಲಿ|| ||೩||
ಧರೆಯಲ್ಲಿತಾವ್ಮಾಳ್ದಪರಮೋಪಕಾರಗಳು|
ವರ್ಣಿಸಲ್ಕೆಮಗಳವೆಪರಚಾಮಭೂಪಾಲ|
ಸರಿಯಾರುನಮಗಿಂದುತೆಮ್ಮದರುಶನಮಾಯ್ತು
ಕರುಣಗುಣಪ್ರಧಾನಾ||
ಶರಶಿಂದುಶಿರದಜೋಗ್ಗಿಪುದೆನಮ್ಮಯಭಕುತಿ
ಹೊರತುಮತ್ತಿನ್ನನಾವರಿಯೆನೈಭೂನಾಥ|
ಪೊರೆಕೃಪಾನಿಧಿಯೆಂದು ಕೊಂಡಾಮಮಕೆನೀಂ
ಪೃಥ್ವಿಪತಿಕುಲತಿಲಕನೆ ||೪||
ನೀತಿಯುಲಿರಘುಮಶಸೋಮನುರಾಮನು|
ಖ್ಯಾತಿಯೊಳನಂಬರೀಷಾದಿನರರಾಯರು|
ವಹತಿನಲಿಸುರಕುಲಾಚಾರ್ಯನುಂಜೀವನಂವಿಕ್ರಮ
ದಿಶಕ್ರನನ್ನು||
ನೀತಳತುಮನದೊಳಗೆನೀತಿಯುಲಿಕೋವಿದನೆ
ಈಕುಹಿಮಗಿರಿಮೊದಲುಸಾಗರಾಂತವನಡರಿ|
ಭೂತಜಾತದಕ್ರಾಗಳ್ತಿಗೆ ಕಾರಣನುಮಾಗಿಪಾಲಿ
ಸೈಪೃಥ್ವಿಯನ್ನು ||೫||
ಚಂದ್ರಕಿರಣವನೋಡಿನಲಿಯುಮಚಕೋರಿ|
ಸಾಂದ್ರಜಲಧರಕೆತಾಜಾತಕಂನಲಿವಂತೆ |
ಇಂದ್ರಸಮನಾದೆಮ್ಮಚಾಮೇಂದ್ರನಂನೋಡುತಿಂ
ದೀಗನಾವ್ಧನ್ಯರು||
ಅದ್ರಿರಾಜನಕನ್ಯೆಗಾಜಕುಲಸನ್ಮಾನ್ಯೆ|
ಭದ್ರತತಿಗಳನಿತ್ತುರಕ್ಷಿಸಲಿಚಾಮಭೂ|
ಪೇಂದ್ರನಂಗುಣಸಾಂದ್ರನು ನೀಗಲೆಪಬಿಡದೆರಕ್ಷಿ
ಸುತ್ತಿರಲಾವಗಂ ||೬||
ಜಯಚಾಮಭೂಪಸಕಲಾವನೀನುತಚರಿತ|
ಜಯಜನರಹೃತ್ತುಮುದರಾಕಾಸುಧಾಕಿರಣ|
ಜಯಮಹೀಶೂರದೇಶಾವನೀಪಾಲಕನೆ ಜಯಕೃ
ಷ್ಣರಾಜತನುಜ||
ಜಯತುಕಲಿಕಲ್ಪತರುವೆನಿಸಿಮೆರೆಯುವನೆಜಯ
ಜಯಮಹೋದಾರ್ಯಗುಣಗಣವಿಭೂಷಿತನೆಜಯ
ಜಯವಿಜಯನಾಗಿರೈಪುತ್ರಮಿತ್ರಕಳತ್ರಪರಿವಾ
ರವರ್ಗದೊಡನೆ ||೭||

TELEGRAPHIC SUMMARY.
ತಂತಿವೃತ್ತಾಂತ ಸಂಗ್ರಹವು.

—:0.—

ಅಫಘಾನಿಸ್ತಾನ, ೬ನೇ ಜನವರಿ.—[illegible]

ಕಾನಿಸ್ಟಾಂಟಿನೋಪಲ್, ೩ನೇ ಜನವರಿ.—[illegible] ಡಿಸೆಂಬರ್ ೩೦ನೇ ತಾರೀಖಿನಲ್ಲಿ [illegible]

ಲಂಡನ್, ೪ನೇ ಜನವರಿ.—[illegible]

ಕಾನ್‌ಸ್ಟಾಂಟಿನೋಪಲ್, ೩ನೇ ಜನವರಿ.—[illegible]

ರಂಗೂನ, ೫ನೇ ಜನವರಿ.—[illegible]

[illegible]

ಕಾನ್‌ಸ್ಟಾಂಟಿನೋಪಲ್, ೪ನೇ ಜನವರಿ.—[illegible]

ಅಫಘಾನಿಸ್ತಾನ, ೪ನೇ ಜನವರಿ.—[illegible]

ಲಂಡನ್, ೬ನೇ ಜನವರಿ.—[illegible]

ಕಾನ್‌ಸ್ಟಾಂಟಿನೋಪಲ್, ೬ನೇ ಜನವರಿ.—[illegible]

ರಂಗೂನ, ೬ನೇ ಜನವರಿ.—[illegible]

[illegible]

SUMMARY OF NEWS
ವೃತ್ತಾಂತ ಸಂಗ್ರಹವು

—:0:—

The courts.—[illegible] ಹೈಕೋರ್ಟು, ಸ್ಮಾಲ್ ಕಾಸ್ ಕೋರ್ಟು, ಮ್ಯಾಜಿಸ್ಟ್ರೇಟ್ ಕೋರ್ಟುಗಳು [illegible]

Travancore.—ತಿರುವಾಂಕೂರು ಸಂಸ್ಥಾನದ [illegible]

A magisterial order.—[illegible]

Application for a summons against a Small Cause Court Judge.—[illegible]

THE FUTURE OF BURMAH.

ಬರ್ಮಾದೇಶವನ್ನು ಬ್ರಿಟಿಷ್ ಅಧಿಪತ್ಯಕ್ಕೆ ಸೇರಿಸಿಕೊಳ್ಳುವ ವಿಷಯದಲ್ಲಿ ನೇಟಿವ್ ವೃತ್ತಾಂತ ಪತ್ರಿಕೆಗಳ ಅಭಿಪ್ರಾಯಗಳು:—

ಲಕ್ನೋಪಟ್ಟಣದ ಹಿಂದುಸ್ಥಾನಿಯೆಂಬ ಪತ್ರಿಕೆ ಹೇಳುವದೇನಂದರೆ—ಬರ್ಮಾರಾಜ್ಯದ ವಿಷಯದಲ್ಲಿ ಯಾವರೀತಿ ನಡೆಸಲ್ಪಡುವದೋ, ಅಂದರೆ ಬ್ರಿಟಿಷ್ ರಾಜ್ಯಕ್ಕೆ ಸೇರಿಸಿಕೊಳ್ಳಲ್ಪಡುವದೋ ಅಥವಾ ಪ್ರತ್ಯೇಕವಾಗಿ ಮಾಡಲ್ಪಡುವದೋ ಆ ವಿಷಯ ಇನ್ನು ವ್ಯವಸ್ಥೆಯಾಗಲಿಲ್ಲವು. ಪ್ರಾಯಶಃ ಹೊಸ ಪಾರ್ಲಿಮೆಂಟು ಯೇರ್ಪಾಡಾದಮೇಲೆ ಈ ಅಂಶವು ವ್ಯವಸ್ಥೆಯಾಗಬಹುದು. ಕನ್ಸರ್ವೇಟಿವ್ ಕಕ್ಷಿಯವರೇ ಅಧಿಕಾರಪದದೊಳಿರುವರಾದರೆ ಸದರೀ ರಾಜ್ಯವು ಅವರಕೈಗೆ ಸಿಕ್ಕದೆ ತಪ್ಪಿಸಿಕೊಳ್ಳುವದಕ್ಕಾಗುವದಿಲ್ಲವು, ಪರಂತು ಲಿಬರಲ್ ಕಕ್ಷಿಯವರು ಅಧಿಕಾರಪದಕ್ಕೆ ಬರುವರಾದರೆ ಆಗ ಅವರು ಬರ್ಮಾದೇಶದ ರಾಜವಂಶದವರ ಪೈಕಿ ಒಬ್ಬರಿಗೆ ರಾಜ್ಯವು ಒಪ್ಪಿಸಿಬಿಡುವರು. ಸದರೀ ಕಕ್ಷಿಯವರಪೈಕಿ ಪ್ರಮುಖರಾದವರು ಅದನ್ನು ಬ್ರಿಟಿಷ್ ರಾಜ್ಯಕ್ಕೆ ಸೇರಿಸಿಕೊಳ್ಳಕೂಡದೆಂದು ಹಿಂದೆಯೇ ತಿಳಿಸಿ ಇರುತ್ತಾರೆ. ಬ್ರಿಟಿಷ್ ಗವರ್ನ್‌ಮೆಂಟಿನವರು ಯೋಚನೆಮಾಡಿದಾಗ್ಯೂ ಅದನ್ನು ಕೇವಲ ಜಾಗರೂಕತೆಯಿಂದ ಮಾಡಬೇಕು. ಬರ್ಮಾದೇಶವನ್ನು ಬ್ರಿಟಿಷ್ ರಾಜ್ಯಕ್ಕೆ ಸೇರಿಸಿಕೊಳ್ಳುವದರಿಂದಲು ಕಷ್ಟನಿಗೆ ಕಾರಣ ವುಂಟಾಗುವದು. ಒಬ್ಬ ವೈಸರಾಯಿನ ಐದುವರ್ಷದಕಾಲದ ಕ್ರೂರವಾದ ಆಳ್ವಿಕೆಗಿಂತಲೂ, ಇಂತಾ ಒಂದು ಕಾರ್ಯದಮೂಲಕ ರಾಜ್ಯದ ದಾರ್ಢ್ಯವೇ ತಪ್ಪಿಹೋಗುವದು. ಇದಕ್ಕೆ ಉಂಟಾದಕಾರಣ ಸ್ಪಷ್ಟವಾಗಿಯೇ ಇದೆ. ಸರ್ಕಾರದವರುಮೂವತ್ತೈದುವರ್ಷಗಳಹಿಂದೆ, ಮುಂದೆ ಯಾವರಾಜ್ಯವನ್ನೇ ಆಗಲಿ ತಮ್ಮ ಆಳತಕ್ಕೆ ಸೇರಿಸಿಕೊಳ್ಳುವದಿಲ್ಲವೆಂದು ಹೇಳಿರುವದು ಮಾತ್ರವಲ್ಲದೆ ಅದರಂತೆ ಆಚರಿಸುವಂತೆ ಸಹ ಒಪ್ಪಿಕೊಂಡರು. ಹೀಗಿರುವಲ್ಲಿ ಈಗ ಬರ್ಮಾರಾಜ್ಯವನ್ನು ಸೇರಿಸಿಕೊಂಡರೆ ನೇಟಿವ್‌ಸಂಸ್ಥಾನಾಧಿಪತಿಗಳ ಮತ್ತು ನೇಟಿವ್ ಪ್ರಜೆಗಳ ಹೃದಯಗಳಲ್ಲಿ ಯಾವಭಾವ ವುಂಟಾಗುವದು? ಬ್ರಿಟಿಷ್ ಗವರ್ನ್‌ಮೆಂಟಿನವರಲ್ಲಿ ಸಂಶಯ ವುಂಟಾಗುವದಲ್ಲದೆ ಅವರು ಕೊಟ್ಟ ಭರವಸೆಗಳಲ್ಲಿ ಇಟ್ಟ ನಂಬಿಕೆಯು ನಿಸ್ಸಂಶಯವಾಗಿ ತಪ್ಪಿಹೋಗುವದು. ಗವರ್ನ್‌ಮೆಂಟಿನವರು ತಾವು ಮಾಡುವ ಕೃತ್ಯಗಳು ಸರಿಯಾದವೆಂಬ ನಂಬಿಕೆ ಉಂಟುಮಾಡುವದಕ್ಕೆ ಯೆಷ್ಟುವಿಧ ಕಾರ್ಯಕಾರಣಗಳನ್ನುಂಟುಮಾಡಿದಾಗ್ಯೂ ಅದರ ನಿಜಸ್ಥಿತಿ ಇಂಡ್ಯದೇಶೀಯರಿಗೆ ತಿಳಿಯದಂತೆ ಮರೆಮಾಚುವದಕ್ಕಾಗುವದಿಲ್ಲವು. ತಮ್ಮನ್ನಾಳತಕ್ಕವರಲ್ಲಿ ಅಪರಿಮಿತವಾದ ನಂಬಿಕೆಯನ್ನಿಟ್ಟುಕೊಂಡಿದ್ದ ಪ್ರಜೆಗಳು ಅಂತಾ ತಮ್ಮ ಭಾವವನ್ನು ಬದಲಾಯಿಸಲಿಕ್ಕೆ ಸಂಕ್ರಮಣಾವಕಾಶ ವುಂಟಾಗುವದೆ ಇದರ ಫಲಿತಾರ್ಥವಾಗಿರುವದು.

ಭರದ್ವಾಜ್ ಸಂಜೀವಿನಿ.—ರಂಗೂನ್ನಲ್ಲಿನ ವ್ಯಾಪಾರ ಸಂಘದವರು ವೈಸ್‌ರಾಯಿಯವರಿಗೆ ಬರೆದುಕೊಂಡ ಅರ್ಜಿಯಲ್ಲಿ ಬರ್ಮಾದೇಶವನ್ನು ಬ್ರಿಟಿಷ್ ರಾಜ್ಯಕ್ಕೆ ಸೇರಿಸಿಕೊಳ್ಳಬೇಕೆಂದು ಪ್ರಾರ್ಥಿಸಿ, ಬರ್ಮಾ ಜನಗಳು ಬ್ರಿಟಿಷ್ ಆಳ್ವಿಕೆಯನ್ನು ಅಪೇಕ್ಷಿಸುವಲ್ಲಿ ಅವರನ್ನು ಮರಳಿ ನೇಟಿವ್ ಅರಸರ ಆಳ್ವಿಕೆಗೆ ಒಳಪಡಿಸುವದು ಕೇವಲ ಕ್ರೂರಕೃತ್ಯವಾಗಿರುವದಲ್ಲದೆ ಸಮೀಪವಿರುವ ಚೀನಾದೇಶಕ್ಕೆ ಹೋಗುವದಕ್ಕೆ ಮಾರ್ಗವುಂಟಾಗುವದಲ್ಲದೆ, ಇಂಗ್ಲಾಂಡದೇಶದಿಂದ ಬರುವ ಸರಕುಗಳ ವಿಕ್ರಯಕ್ಕೆ ಹೊಸ ಮಾರ್ಕೆಟುಗಳು ಅತ್ಯಾವಶ್ಯಕವಾಗಿರುತ್ತವೆಯೆಂದು ನಿವೇದಿಸಿಕೊಂಡಿರುತ್ತಾರೆ. ಇಂಗ್ಲಿಷ್ ವರ್ತಕರು ಬರ್ಮಾದೇಶದ ಸ್ವತಂತ್ರಾಧಿಕಾರವು ಹೋಗಲಾಡಿಸಿ ಹೊಸ ಮಾರ್ಕೆಟ್ಟುಗಳನ್ನುಂಟುಮಾಡಬೇಕೆಂದು ಪ್ರಾರ್ಥಿಸುತ್ತಾರೆ. ಇಂತಾ ಇಂಗ್ಲಿಷ್‌ವರ್ತಕರು ಹ್ಯಾಗೆ ಕ್ರಿಸ್ಟಿಯನ್ನರೆನ್ನಿಸಿಕೊಳ್ಳುವರು

ಸಮಾಚಾರಪತ್ರಿಕಾ.—ರಂಗೂನ್‌ವರ್ತಕರು ಬರ್ಮಾರಾಜ್ಯವನ್ನು ಸೇರಿಸಿಕೊಳ್ಳಬೇಕೆಂದು ತಮ್ಮ ಅರ್ಜಿಯಲ್ಲಿ ನಮೂದಿಸಿರುತ್ತಾರೆ. ಅವರ ಸಲಹೆಯಂತೆ ನಡೆಸಬಾರದು. ಇಂಗ್ಲಿಷ್‌ವರ್ತಕರ ಅರ್ಜಿಯಲ್ಲಿನ ಪ್ರತಿಪದ್ದೂ ಸ್ವಪ್ರಯೋಜನ ದೃಷ್ಟಿಯಿಂದ ಬರೆಯಲ್ಪಟ್ಟದ್ದು. ಅಂತಾ ಅವರ ಸಲಹೆಗಳಿಗೆ ಗವರ್ನ್‌ಮೆಂಟಿನವರು ಕಿವಿ ಕೊಡುವದಾದರೆ ಅಪರಿಮಿತ ಬಹಳ ನಷ್ಟಕ್ಕೆ ಗುರಿಯಾಗುವರು,

ಸೋಮಪ್ರಕಾಶ.—ತೀಬಾಯವರು ಬೌದ್ಧಮತಾವಲಂಬಿಯಾಗಿದ್ದರೂ ಅವರು ಕೇವಲ ಕ್ರೂರಸ್ವಭಾವವುಳ್ಳವರೆಂದು ಅನೇಕರು ಅವರನ್ನು ದೂಷಿಸುತ್ತಾರೆ. ಅಂತಾ ಆಕ್ಷೇಪಕರಿಗೆ ಏನೆಂದು ಉತ್ತರಹೇಳಬೇಕೋ ನಾವರಿಯೆವು. ಕ್ರಿಸ್ಟಿಯನ್ನರೆಲ್ಲರು ಕ್ರೈಸ್ತನ ಅವತಾರವೇ ಸರಿ, ಅವರು ಯಾವಾಗಲೂ ದುಷ್ಕೃತ್ಯಗಳು ಮಾಡಲಿಲ್ಲವೆ? ರಂಗೂನ್‌ವ್ಯಾಪಾರ ಸಂಘದವರು ನಿಸ್ಸಂಶಯವಾಗಿ ಕ್ರಿಸ್ಟಿಯನ್ ಅಭಿಪ್ರಾಯದಿಂದಲೇ ಬರ್ಮಾರಾಜ್ಯವನ್ನು ಸೇರಿಸಿಕೊಳ್ಳಬೇಕೆಂದು ಸಲಹೆಕೊಟ್ಟದ್ದು. ಬರ್ಮಾದೇಶೀಯರ ಸ್ವಾತಂತ್ರ್ಯವನ್ನು ತಪ್ಪಿಸುವದಕ್ಕಿಂತಲೂ ದುಷ್ಕೃತ್ಯ ಬೇರೆಯಿರಲಾರದು. ತೀಬಾಯವರು ಇದಕ್ಕಿಂತಲೂ ಕೆಟ್ಟಕೆಲಸಯಾವದೂಮಾಡಲಿಲ್ಲವು.

ಸುರಭಿ.—ಬರ್ಮಾರಾಜ್ಯವು ಬ್ರಿಟಿಷ್‌ರಾಜ್ಯಕ್ಕೆ ಸೇರಿಸಿಕೊಳ್ಳಲ್ಪಟ್ಟರೆ ಬ್ರಿಟಿಷ್‌ನವರು ಅಲ್ಲಿ ತಮ್ಮ ನಾಗರಿಕತೆಯನ್ನುಂಟುಮಾಡುವದಕ್ಕೆ ಯತ್ನಪಡುವರು. ಇಂಗ್ಲಿಷ್ ನಾಗರಿಕತೆಯೆಂಬ ಬೆಳಕಿನಿಂದ ಬರ್ಮಾದೇಶೀಯರು ಕಣ್ಣುಕಾಣದೋಗಲಾಡಿಸಿಕೊಂಡು ಪ್ರಾಣಮಾನ ಧನಗಳಂ ಕಳಕೊಳ್ಳುವರು. ಬಂಗಾಳೀದೇಶದಸ್ಥಿತಿಯು ಇದಕ್ಕೆ ನಿದರ್ಶನರೂಪವಾಗಿರುತದೆ. ಬರ್ಮಾಜನಗಳಪ್ರಯೋಜನಕ್ಕಾಗಿ ಇಂಗ್ಲಿಷಿನವರು ತೀಬಾಯವರನ್ನು ಪದಭ್ರಷ್ಟರನ್ನಾಗಿ ಮಾಡಿದರೆಂದು ಯೋಚಿಸುವದು ಕೇವಲ ಭ್ರಾಂತಿ ಕಲ್ಪಿತವಾದದ್ದು. ಇಂಗ್ಲಿಷ್ ಜನಗಳು ವ್ಯಾಪಾರಿಗಳಾದದರಿಂದ ಸ್ವಪ್ರಯೋಜನ ದೃಷ್ಟಿಯುಳ್ಳವರಾಗಿರುತ್ತಾರೆ.

ಸಂಗಬಾದ್‌ಪ್ರಭಾಕರ.—ಬರ್ಮಾರಾಜ್ಯವನ್ನು ಬ್ರಿಟಿಷ್‌ರಾಜ್ಯಕ್ಕೆ ಸೇರಿಸಿಕೊಳ್ಳುವ ಅಂಶವನ್ನು ಲಿಬರಲ್‌ಕಕ್ಷಿಗೆಸೇರಿದ ವೃತ್ತಾಂತಪತ್ರಿಕಾಲೇಖಕರು ಒಪ್ಪಿದ್ದಾಗಿ ನಮಗೆತಿಳಿಯಬಂದು ಅದಕ್ಕಾಗಿ ನಾವು ಬಹಳ ದುಃಖಿಸುತ್ತೇವೆ. ವ್ಯಾಪಾರಮೂಲಕವಾದ ಪ್ರಯೋಜನಗಳಿಗೆ ಅವಕಾಶವುಂಟಾದ ಸಂದರ್ಭಗಳಲ್ಲೆಲ್ಲ ಬ್ರಿಟಿಷ್ ಗವರ್ನ್‌ಮೆಂಟಿನವರು ನ್ಯಾಯವನ್ನೂ ನೀತಿಯನ್ನೂ ಲಕ್ಷ್ಯದಲ್ಲಿಡುವದಿಲ್ಲವೆಂದು ಅನೇಕ ಸಂದರ್ಭಗಳಲ್ಲಿ ನಾವು ತಿಳಿಸಿಯಿರುತ್ತೇವೆ. ಈಚೆಗೆಬಂದ ತಂತಿವೃತ್ತಾಂತ ದದೆಸೆಯಿಂದ ಇದರ ವ್ಯವಸ್ಥೆಯ ವಿಷಯದಲ್ಲಿ ಲಾರ್ಡ್ ಡಫರಿನ್‌ಯವರಿಗೆ ಸಂಪೂರ್ಣಾಧಿಕಾರ ಕೊಡಲ್ಪಟ್ಟಿರುವಂತೆ ತಿಳಿಯಬರುವದರಿಂದ ಅವರು ಹ್ಯಾಗೆ ವ್ಯವಸ್ಥೆಮಾಡುತ್ತಾರೋ ನೋಡಬೇಕಾಗಿದೆ.

ಸಹಚರ.—ಬರ್ಮಾರಾಜ್ಯವನ್ನು ಸೇರಿಸಿಕೊಳ್ಳುವದು ಪ್ರಬಲ ತಪ್ಪಿತವಾದದ್ದು. ಅನ್ಯರಾಜ್ಯಗಳನ್ನು ಸೇರಿಸಿಕೊಳ್ಳುವ ಯೇರ್ಪಾಡು ಲಾರ್ಡ್ ಡಲ್‌ಹೌಸಿಯವರ ಕಾಲದಲ್ಲೇ ತಪ್ಪಿಸಲ್ಪಟ್ಟಿತು. ಸನ್ ೧೮೫೮ನೇ ಇಸವಿಯಲ್ಲಿ ಮಹಾರಾಜ್ಞೀಯವರು ಕೊಟ್ಟ ಇಸ್ತಿಹಾರನಲ್ಲಿ ಮೇಲೆಕಂಡಂತೆಯೇ ತಿಳಿಸಿದರು. ಅದಕ್ಕೆ ಪ್ರತ್ಯಕ್ಷವಿರುದ್ಧವಾಗಿ ಈಗ ಬರ್ಮಾದೇಶವನ್ನು ಸೇರಿಸಿಕೊಳ್ಳುವದು ಕೇವಲ ಅನುಚಿತವಾಗಿರುವದು. ನಿಜಾಂ, [illegible] ರಾಜಕುಮಾರರು ಲಾರ್ಡ್ ಡಫರಿನ್‌ಯವರಿಗೆ ಕೊಟ್ಟ [illegible] ನಡೆಸುವದರಿಂದ ಯಾವಕೆಲಸವೂ ಆಗಲಾರದು. ತಮ್ಮ ಅರಸರ ಕುಟುಂಬದಲ್ಲಿ ಹುಟ್ಟಿದ ಯಾರನ್ನೇ ಆಗಲಿ ಸಿಂಹಾಸನದಮೇಲೆ ಕುಳ್ಳಿರಿಸಿದರೆ ಬರ್ಮಾದೇಶೀಯರು ತೃಪ್ತರಾಗಿರುವರು. ರಾಜ್ಯಗಳನ್ನು ಸೇರಿಸಿಕೊಳ್ಳುವ ಏರ್ಪಾಡನ್ನು ಕೂಡಲೇ ಬಿಟ್ಟುಬಿಡಬೇಕು. ಮಹಾರಾಜ್ಞೀಯವರಿಂದಲೂ ಅವರ ಮಂತ್ರಿಗಳಿಂದಲೂ ಪಾರ್ಲಿಮೆಂಟು ಸಭಾಸದರಿಂದಲೂ ಕೊಡಲ್ಪಟ್ಟ ಭರವಸೆಗಳಂತೆ ಗವರ್ನ್‌ಮೆಂಟಿನವರು ನಡೆಸಬೇಕು, ಎಂಬದು.

ACKNOWLEDGMENTS.

[illegible] ೧೮೮೫ನೇ [illegible] ಜನವರಿ [illegible] ೧೩ನೇ [illegible]

[illegible]	೬—೦—೦
,, ಮೈಸೂರು [illegible]	೫—೦—೦
,, [illegible]	೮—೦—೦
,, [illegible]	೬—೦—೦
,, [illegible]	೬—೦—೦
,, ಮೈಸೂರು [illegible]	೩—೦—೦
,, [illegible]	೬—೦—೦
,, [illegible]	೬—೦—೦
,, [illegible]	೩—೦—೦
,, [illegible]	೩—೦—೦
,, [illegible]	೬—೦—೦
,, [illegible]	೩—೦—೦
,, [illegible]	೫—೦—೦
,, [illegible]	೬—೦—೦
,, ಮೈಸೂರು [illegible]	೬—೦—೦
,, [illegible]	೦—೮—೦
,, ಮೈಸೂರು [illegible]	೩—೦—೦
,, [illegible]	೫—೦—೦
,, [illegible]	೬—೦—೦
,, [illegible]	೨—೦—೦
,, [illegible]	೧—೦—೦
ಜುಮ್ಲಾ	೧೦೫—೦—೦

BANGALORE:—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಶವಿವಿದಪ್ರವೃತ್ತ್ಯುಪಗಮಾರ್ಹ್ಯ ಕರ್ಣಾಟಕಪ್ರಕಾಶನಪರಾಭಿದಾ ಪ್ರತಿಶ್ರಸೋಮಿತಿಶೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾ ಸಜ್ಜನೈರ್ದ್ದಿಕಾಸು ಪರಿಪೂರಿತಾ ಧಿಕರತಿರ್ವಿತಾನಸಂಸುಮದಂ ॥

Vol. XIII.] BANGALORE—MONDAY. JANUARY 18, 1886 [No. 3.

ಸಂಪುಟ ೧೩.] ಬೆಂಗಳೂರು:—ಸರ್ ೧೮೯೬ನೇ ಇಸವಿ ಜನವರಿ ೧೮ನೇ ತಾರೀಖ್ ಸೋಮವಾರ. [ಸಂಚಿಕೆ ೩

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ಕೇಂದ್ರ ಕೊಳ್ಳುವವರಿಗೆ ವರುಷ ೧ಕ್ಕೆ	೧೨—೦—೦
ಇಂಗ್ಲಿಷ್ [illegible] ವರುಷ ೧ಕ್ಕೆ	೬—೦—೦
ಕನ್ನಡ [illegible] ವರುಷ ೧ಕ್ಕೆ .	೬—೦—೦
[illegible] ೧ಕ್ಕೆ	೦—೮—೦

ಸೂ.—[illegible]

ಪ್ರಕಟನೆಯ ವಿವಾಹ.

[illegible]	೧ಕ್ಕೆ	೦—೨—೦
[illegible]	೧ಕ್ಕೆ	೦—೧—೦

NOTICE TO SUBSCRIBERS.

[illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA.

Price including Postage, Rs. 5-6-0

ವೈದ್ಯಸಾರ ಸಂಗ್ರಹ.

[illegible]

[illegible]	ರೂ॥ ೫—೦—೦
[illegible] ಅಂಚೆ ಕಾಸಲ್	೦—೬—೦

[illegible] ಬೆಂಗಳೂರು.

ಸೋಟೀಸ್.

[illegible] ಸಂಸ್ಕೃತ ಮತ್ತು ಕನ್ನಡ [illegible] ಕರ್ಣಾಟಕ ಪ್ರಕಾಶಿಕಾ ಆಫೀಸ್ [illegible] ಸಲ್ಪಡುವವು,—

ಕನ್ನಡ ಟೀಕಾ ಸಹಿತವಾದ ಸಂಸ್ಕೃತ ಗ್ರಂಥಗಳು.

[illegible]	೧—೪—೦
[illegible]	೦—೧೨—೦
[illegible]	೦—೩—೦
[illegible]	೦—೫—೦
[illegible]	೦—೪—೦
[illegible]	೦—೧೪—೦
[illegible]	೦—೩—೦
[illegible]	೦—೨—೦
ವೈದ್ಯಸಾರಸಂಗ್ರಹ ...	೫—೦—೦

ಕನ್ನಡ ಗ್ರಂಥಗಳು.

[illegible]	೦—೯—೦
[illegible]	೦—೪—೦
[illegible]	೦—೩—೬
[illegible]	೦—೨—೬
[illegible]	೦—೪—೦
[illegible]	೦—೨—೦
[illegible]	೦—೨—೬
[illegible]	೦—೯—೦
[illegible]	೦—೩—೦
[illegible]	೦—೨—೦
[illegible]	೦—೦—೩
ಇಂಗ್ಲಿಷ್ ಕನ್ನಡ [illegible]	೧—೨—೦
[illegible]	೨—೦—೦
[illegible]	೦—೧೨—೦
[illegible]	೩—೪—೬
[illegible]	೩—೪—೬
[illegible] ಸ್ಟೇಟ್ [illegible]	
೧ನೇ ಸಂಚಿಕೆ. ...	೦—೮—೦
೭ನೇ ಸಂಚಿಕೆ.	೧—೮—೦
[illegible]	೦—೮—೦

ಸಂಸ್ಕೃತ ಮೂಲಗ್ರಂಥಗಳು.

[illegible]	೦—೫—೦
[illegible]	೦—೨—೬
[illegible]	೦—೨—೬
[illegible]	೦—೦—೬
[illegible]	೦—೩—೬
[illegible]	೦—೧—೦

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮಿಷನ್ ಮರ್ಚಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತರವಾ ಕೆಲಸಗಳನ್ನು ಜಾಗರೂಕತೆಯಿಂದಲೂ ಶೀಘ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ವಳ್ಳಾಳಿ ತೆಗೆದುಕೊಳ್ಳಲ್ಪಡುವದು.

ನೋಟಿಸ್.

ಹಠಯೋಗಪ್ರದೀಪಿಕೆ ಮತ್ತು ಪಾತಂಜಲ ಯೋಗಸೂತ್ರಗಳು ಕ್ರಯಕ್ಕೆ ಸಿದ್ಧವಾಗಿರುತ್ತವೆ.

ಅಪೇಕ್ಷೆಯುಳ್ಳವರು ಬೆಂಗಳೂರು ಗವರ್ನಮೆಂಟ್ ನಾರ್ಮಲ್ ಸ್ಕೂಲ್ ಹೆಡ್‌ಮಾಸ್ಟರ್ ಹಿ. ನರಸಿಂಹಶಾಸ್ತ್ರಿಗಳಿಗಾಗಲಿ, ಕರ್ಣಾಟಕಬುಕ್‌ಡಿಪೋ ಮಾಲೀಕರು ಕೃಷ್ಣಯ್ಯನವರಿಗಾಗಲಿ, ಇದರಡಿ ಕಂಡ ಚಾರ್ಜನ್ನು ಕಳುಹಿಸಿ ತರಿಸಿಕೊಳ್ಳಬಹುದು.

ಪಾತಂಜಲಯೋಗಸೂತ್ರ ಪ್ರತಿ ೧ಕ್ಕೆ	೧	೦	೦
ಹಠಯೋಗಪ್ರದೀಪಿಕಾ	„	೧ ೮	೦
ಪೋಸ್ಟೇಜ್	„	೦ ೨	೦

ವೀಪಿಪಿ ಕಳುಹಿಸುವವರು ರೂ॥ ೧ಕ್ಕೆ ೧ ಆಣೆ ಸ್ಟಾಂಪ್ ಸಹ ಕಳುಹಿಸಬೇಕು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JANUARY 18, 1896.

೧೮೯೬ನೇ ಜನವರಿ ೧೮ನೇ ತಾ॥ ಸೋಮವಾರ

ಶ್ಲೋ॥ ಸರ್ವಪ್ರಜಾಹಿತ [illegible] ನಾಶಿತ್ವ [illegible] ಜನಸಂಗಮ ನಃ ಸ್ವರಾವಿ [illegible] ಜನವಶ್ಯೋ ಷ್ಯೋಜಿನ॥

POVERTY OF RYOTS.

ರೈತರ ಅವಸ್ಥೆಗಳಿಗೆ ಸರ್ಕಾರದವರು ತೊಡುವ ನಿಗೇವಿನಯಿಂದಲ್ಲಿ ಬಹುಕಾಲದಿಂದ ನಾನಾವಿಧ ವಿಚಾರಗಳುಂಟಾಗಿರುತ್ತವೆ. ಸರ್ಕಾರದವರು ರೈತರಿಗೆ ಬಹುವಿಧ ರಿಯಾಯಿತಿಗಳನ್ನು ಮಾಡದಿರಲಿಲ್ಲವು. ಪರಂತು ಅವುಗಳು ಅದ್ಯಾಪಿ ನ್ಯೂನವಾದವಾಗಿಯೇ ಇರುತ್ತವೆ. ಪ್ರಭುತ್ವಮಾಡತಕ್ಕವರಿಗೂ ಅವರ ಪ್ರಜೆಗಳಿಗೂ ಇರುವ ವ್ಯಾಪಾರಿತಿ ನಿರ್ಣಯಗಳೆಂಬವು ಏಕರೂಪವಾದವಾಗಿಲ್ಲದ್ದರಿಂದ ನಿರೀಕ್ಷಿಸಿದ ಫಲವು ಸಿದ್ಧಿಸುವದಾಗಿಲ್ಲವು.

ಪೂರ್ವಕ್ಕಿಂತಲೂ ಈಗ ಕಂದಾಯ ಜಾಸ್ತಿಯೇ, ಸಾಗುವಳಿ ಜಮೀನಿಯಿಂದ ನಡೆಸಲ್ಪಡುತ್ತಿದೆಯೇ, ವ್ಯವಸಾಯೋಪಕರಣಗಳು ದುರ್ಲಭವೇ, ಬೆಳದ ಫಸಲನ್ನು ಸ್ವತಂತ್ರವಾಗಿ ವಿನಿಯೋಗಿಸಿಕೊಳ್ಳುರಿಕ್ಕೆ ಯೇನಾದರು ಪ್ರತಿಬಂಧಕವುಂಟೆ, ಈಗ ಕಾಲ ವೈಪರೀತ್ಯ ಯೇನಾದರೂ ಉಂಟಾಗಿದೆಯೇ ಯೆಂದು ಆಲೋಚಿಸಿದರೆ ಇವುಗಳೆಲ್ಲವನ್ನೂ ಒಂದುವಿಧದಿಂದ ಉಂಟೆಂತಲೂ ಮತ್ತೊಂದು ತೆರದಿಂದಿಲ್ಲವೆಂದೂ ಹೇಳಬೇಕಾಗಿರುತ್ತದೆ. ಹ್ಯಾಗಂದರೆ—

ಪೂರ್ವಕ್ಕಿಂತಲೂ ಈಗ ಕಂದಾಯದ ದರವೇನೂ ಬಹಳ ಕಡಿಮೆಯೇ ಪರಂತು ಒಬ್ಬ ಜಮೀನಿನವಾರದಾರನ ಮಾತ್ರ ಜಾಸ್ತಿ, ಅಂದರೆ ಹಿಂದೆ ಒಂದಾ ಕೊಳಗ ಜಮೀನಿರ್ದಕ್ಕೆ ಪಲ್ಲಿ ಪಾಲಾಗಿದ್ದರೆ ಅನುಭವದಲ್ಲಿ ನಾಲ್ಕು ಕೊಳಗ ಜಮೀನು ಇರುತ್ತಿತ್ತು. ಈಗ ಇದಕ್ಕೆ ಅವಕಾಶವಿಲ್ಲದೆ ಹೋಯಿತು. ಸಾಗುವಳಿಯ ಬಗ್ಗೆ ಜಮೀನು ದರಖಾಸ್ತು ಮಾಡಲಿಕ್ಕೆ ಹಿಡುವಳಿ ಜಮೀನನ್ನು ಬಿಡಲಿಕ್ಕೆ ಈಗ ಸ್ವಾತಂತ್ರ್ಯವುಂಟು, ಪರಂತು ಕಂದು ಕೊಡುಹುಟ್ಟ ವಳಿ ಕಡಮೆಯಾಗತಕ್ಕ ಜಮೀನಿಗೆ ಕಂದಾಯವನ್ನು ತಗ್ಗಿಸಲಿಕ್ಕೂ ಹೆಚ್ಚಾಗಿ ಉತ್ಪತ್ತಿಯಾಗತಕ್ಕ ಭೂಮಿಗೆ ದರವನ್ನು ಜಾಸ್ತಿ ಮಾಡಲಿಕ್ಕೂ ಈಗ ಸಾಧ್ಯವಲ್ಲವು. ವ್ಯವಸಾಯೋಪಕರಣಗಳು ಪೂರ್ವದಂತೆ ಈಗ ಒಡಳ ಸುಲಭವಾಗಿ ದೊರೆತಾಗ್ಯೂ ಪೂರ್ವದೊಳು ಮುಫತ್ ದೊರೆಯುತಲಿದ್ದ ದಕ್ಕೆಲ್ಲ ಈಗ ಬರೀದಿ ಕೊಟ್ಟೇ ತೀರಬೇಕಾಗಿದೆ. ಬೆಳದ ಫಸಲನ್ನು ವಿನಿಯೋಗಿಸಕೂಡದಂತಾ ಸುಂಕ ಸಿದ್ದಾಯಗಳ್ಯಾವವೂ ಈಗ ಇಲ್ಲದಿದ್ದಾಗ್ಯೂ, ಫಸಲ್ ವಿಕ್ರಯದ ಮೂಲಕ ಬರಬಹುದಾದ ನಗದಿಗಿಂತಲೂ ಆವಶ್ಯಕಗಳಾದ ಇತರ ಪದಾರ್ಥಗಳನ್ನು ಕೊಂಡುಕೊಳ್ಳುವವರಲ್ಲಿ ಪ್ರಾಪ್ತವಾಗುವ ನುಕ್ಸಾನ್ ಜಾಸ್ತಿಯಾಗಿರುತ್ತದೆ. ಕಾಲವೈಪರೀತ್ಯಕ್ಕೆ ಸ್ಥಿತಿ ವಿಪರ್ಯಯವೇ ಕಾರಣವು. ಹೀಗಿರಲಾಗಿ ಮಾಹೇ ಮಜಕೂರ್ ೧೧ನೇ ತಾರೀಖಿನ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಯು, ಜಮೀನ್ ಹಿಡುವಳೀದಾರರಿಂದ ಸಾಗುವಳೀದಾರರಿಗೆ ಉಂಟಾಗತಕ್ಕ ತೊಂದರೆಯೇ ಅವರ ನಿರ್ಭಾಗ್ಯಸ್ಥಿತಿಗೆ ಕಾರಣವೆಂದು ಅಭಿಪ್ರಾಯಪಡುತ್ತದೆ. ಸಾಗುವಳೀದಾರರೇ ಹಿಡುವಳೀದಾರರಾಗಿರುವ ಕಡೆಗಳಲ್ಲಿಯೂ, ಹಿಡುವಳೀದಾರರು ದಾರಾಸಾಮಿಗಳಾಗಿರುವ ಸ್ಥಳಗಳಲ್ಲಿಯೂ ಅವರು ಉತ್ತಮಸ್ಥಿತಿಯೊಳಿದಾರೆಂದು ಸ್ಪೆಕ್ಟೇಟರ್ ಪತ್ರಿಕೆಯ ವಾದವರಿಂದಲೇ ಸ್ಪಷ್ಟವಾಗುತ್ತದೆ. ಮುಖ್ಯವಾಗಿ ರೈತರಸ್ಥಿತಿಯಂಕುರಿತು ಆಲೋಚಿಸುವಾಗ್ಯೆ, ಅವಕ್ಕೆ ಹಿಡುವಳೀದಾರರು, ಸಾಗುವಳೀದಾರರು, ಕೇದ್ಯಗಾರರು, ಇವರು ಮಾತ್ರವೇ ವಿಷಯರಲ್ಲವು, ಪರಂತು ಒಂದು ಜಮೀನಿನ ಸಾಗುವಳೀ ಮತ್ತು ಬೀಜಪೇರಾವಿಗೆ ತಗಲುವ ಭಾಗವರನ್ನೂ, ಅದರಿಂದ ಆಗತಕ್ಕ ಹುಟ್ಟುವಳಿಯನ್ನೂ, ಅದ್ಮುಕಿ ಸರ್ಕಾರಕ್ಕೆ ಸಲ್ಲಬೇಕಾದ ಭಾಗವನ್ನೂ, ನಿಷ್ಕರ್ಷಿಸಿದರೆ ಇತರ ಅಂಶಗಳು ಗೊತ್ತಾಗಬಹುದು. ಅವರವರ ಶ್ರಮೆ ಮತ್ತು ಲಾಗವಡಿಗೆ ತಕ್ಕ ಫಲವು ಯಾವ್ವಾಗ್ಯೂ ಅವರಿಗೆ ಲಭಿಸದೆಹೋಗುವದಿಲ್ಲವು. ಪೂರ್ವಕಾಲದಲ್ಲಿ ಬಹುಮಾನವಾಗಿ ಸಾಗುವಳೀ ಮಾಡಿದರೆ ಯೆರಡರಲ್ಲಿ ಒಂದು ಭಾಗವೂ, ಕಂದಾಯಕ್ಕೆ ಸಾಗುವಳೀ ಮಾಡಿದರೆ ಮೂರರಲ್ಲೊಂದು ಭಾಗವೂ ಸರ್ಕಾರಕ್ಕೆ ಸಾಮಾನ್ಯವಾಗಿ ಸಲ್ಲುತಲಿದ್ದಂತೆ ತಿಳಿಯಬರುತ್ತದೆ. ಇದರ ಉದ್ದೇಶವೇನೆಂದರೆ, ಬಟಾಯಿ ಸಾಗುವಳಿಯಲ್ಲಿ ಕಾಲಗತಿಯಿಂದ ಉಂಟಾಗತಕ್ಕ ಲಾಭನಷ್ಟಗಳಿಗೆ ಸರ್ಕಾರದವರೂ ರೈತರೂ ಬಾಧ್ಯರಾಗಿದ್ದದರಿಂದ ಇಬ್ಬರಿಗೂ ಸಮಪಾಲಾಗಿ ಸಲ್ಲುತಲಿತ್ತು. ಈಗ ನಫೆ ನುಕ್ಸಾನಿಗೆ ಸರ್ಕಾರದವರು ಬಾಧ್ಯರಲ್ಲದ್ದರಿಂದ ಸಾಗುವಳೀ ಮತ್ತು ಆದಾಯ ನಷ್ಟಗಳ ಬಗ್ಗೆ ಎರಡು ಭಾಗಗಳನ್ನು ರೈತರಿಗೆ ಅವರು ಬಿಟ್ಟುಕೊಡಬೇಕಾಗಿಬಂತು. ಈ ಕಾಲದಲ್ಲಿ ಈ ಲೆಕ್ಕವು ಪ್ರಯೋಜನಕರವಲ್ಲವು. ಈಗ ಬೆಂಕಿ ಸಹ ಹಿಡಿದೇ ಮೂಲಕ ಪಡೆಯತಕ್ಕದ್ದಾಗಿರುವದರಿಂದಲೂ, ಒಬ್ಬ ಮನುಷ್ಯನ ಜೀವನವು ಕೇವಲ ಮೌಲ್ಯವುಳ್ಳದ್ದಾಗಿ ಏರ್ಪಟ್ಟಿರುವದರಿಂದಲೂ, ಈಗ ಜಮೀನ್ ಹುಟ್ಟುವಳಿಯಲ್ಲಿ ಅಷ್ಟಮಾಂಶ ಕಂದಾಯ ಹಾಕಿದರೆ ಪೂರ್ವಸ್ಥಿತಿಯುಂಟಾಗಬಹುದು. ಹಿಂದಿನಂತೆ ರೈತರಿಗೆ ಈಗ ನಡಿಸಬೇಕೆಂದು ಗವರ್ನಮೆಂಟಿನವರು ತಾತ್ಪರ್ಯಪಡುವದೂ ಅವರವರು ನಿರೀಕ್ಷಿಸುವದು ಸಹ ಈಗ ಸಾಧ್ಯವಲ್ಲವು. ಕಾಲಗತಿಯನ್ನು ಬದಲಾಯಿಸಲಿಕ್ಕೆ ಯಾರಿಂದಲೂ ಆಗಲಾರದು.

ಮತ್ತು ಅವು ಹಿಂದೇ ಕಾರ್ಯಕಾರಣಕ್ಕೆ ಒಳಪಡತಕ್ಕದ್ದಲ್ಲವಾದ್ದರಿಂದ ತಾತ್ಕಾಲಿಕಸ್ಥಿತಿಯನ್ನನುಸರಿಸಿ ಪ್ರತಿಕ್ರಿಯೆ ಮಾಡಬೇಕಾದ್ದು ಅತ್ಯಾವಶ್ಯಕವಾಗಿರುತ್ತದೆ. ಇದರಿಂದ ಸರ್ಕಾರಕ್ಕೆ ನುಕ್ಸಾನ್ ಆಗಲಾರದೇಯೆಂದು ಕೇಳುವಪಕ್ಷಕ್ಕೆ ಈಗ ಇತರ ಬಾಬುಗಳಮೂಲಕ ಲಭಿಸುವ ಪ್ರಯೋಜನವು ಜಮೀನ್ದಾಬಾಬಿನ ನಷ್ಟಕ್ಕೆ ಕಾರಣವಾಗಿರುತ್ತದೆಯೆಂದು ಸೂಕ್ಷ್ಮದರ್ಶಿಗಳು ಅಭಿಪ್ರಾಯ ಪಡಬಹುದು. ಮುಖ್ಯವಾಗಿ ನಾವು ಈಸಂದರ್ಭದಲ್ಲಿ ಸೂಚಿಸುವ ದೇನೆಂದರೆ—ಜಮೀನುಗಳಸ್ಥಿತಿಯನ್ನೂ ಅವು ನೀಗುವಳಿಮಾಡತಕ್ಕವರ ಉಪಪತ್ತಿಯನ್ನೂ ಪರಿಭಾವಿಸದೆಯೂ ಸ್ಥಳರಿವಾಜನ್ನು ಅನುಸರಿಸದೆಯೂ ಮನಸ್ವೀ ಕಂದಾಯವನ್ನು ದರಾಪ್ಮಾಡುತಲೂ ಅದು ವಸೂಲಾಗದೆಹೋದರೆ, ಜನಗಳನ್ನು ಪೀಡಿಸುತಲೂ, ಅಲ್ಲಿಗೂ ವಸೂಲಾಗದೆ ನಿಂತಮೊಬಲಗನ್ನು ಬಾಕೀಹಡದಲ್ಲಿ ಸೂರೇಸಾರಿ ದಾಖಲ್ಮಾಡುರ ಸರಸ್ವತೀ ಪ್ರಸನ್ನವಾದ ಬಾಕೀಯನ್ನು ನೋಡಿ ಅತ್ಯಪ್ತಿಪಡುತಲೂ ಇರುವದಕ್ಕೆ ಬದಲು ಕರಾರ್ವಾರು ಭಗತಕ್ಕ ದುಬ್ಬವಳಿ ಮೂಬಲಗ್ಯೆ ಅನುಗುಣವಾಗಿ ಆಯಾ ಸ್ಥಳ ಪದ್ಧತಿಯನ್ನನುಸರಿಸಿ ಕಂದಾಯವನ್ನು ತಗ್ಗಿಸಿ ಗವರ್ನಮೆಂಟಿನವರು ಪ್ರಜೆಗಳು ಸಹ ಕ್ಷೇಮಪಡಲಿಕ್ಕೆ ಕಾರಣವಾಗುವದು.

THE EXTRA SUBSIDY

ಈ ರಾಜ್ಯವು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಲ್ಪಟ್ಟಾಗ ಅವರಿಗೂ ಬ್ರಿಟಿಷ್ ಗವರ್ನಮೆಂಟಿನವರಿಗೂ ನಡೆದ ಕರಾರಿನ ೫ನೇ ಕಲಂನಲ್ಲಿ ವಿಧಿಸಲ್ಪಟ್ಟಿರುವಂತೆ ಜಾಸ್ತೀಯಾಗಿ ಹತ್ತುಲಕ್ಷ ರೂಪಾಯಿಗಳ ಪೇಷ್ಕಷ್ ಸಲ್ಲಬೇಕೆಂಬ ನಿಯಮವನ್ನು, ದೇಶದ ಆಗಿನಸ್ಥಿತಿಯಂ ಪರ್ಯಾಲೋಚಿಸಿ ಬ್ರಿಟಿಷ್ ಗವರ್ನಮೆಂಟಿನವರು ಮೊದಲು ಐದು ಸಂವತ್ಸರಗಳ ತನಕ ಜಾರೀಯಲ್ಲಿ ತಾರದೆ ನಿಲ್ಲಿಸಿಟ್ಟಿದ್ದರಷ್ಟೆ. ಈ ಐದು ಸಂವತ್ಸರಗಳಕಾಲದಲ್ಲಿ ದೇಶವು ಜಾಸ್ತೀ ಸಬ್ಸಿಡಿಯನ್ನು ಕೊಡುವದಕ್ಕೆ ಶಕ್ತವಾಗದೆ ಹೋದದರಿಂದ ಗವರ್ನಮೆಂಟಿನವರು ಇನ್ನೂ ಹತ್ತು ವರುಷಗಳ ತನಕ ಅದು ಮಾಫ್ ಮಾಡಿದ್ದಕ್ಕಾಗಿ ಅವರ ವಿಷಯದೊಳು ಈ ದೇಶೀಯರೆಲ್ಲರೂ ಬಹಳ ಕೃತಜ್ಞರಾಗಿರತಕ್ಕದ್ದು. ಇಂತಾ ಮಹತ್ಪ್ರಯೋಜನವನ್ನು ಮಹಾರಾಜಾ ಸರ್ಕಾರದವರು ಎಷ್ಟುಮಟ್ಟಿಗೆ ಸಾರ್ಥಕ ಪಡಿಸಿಕೊಳ್ಳುವರೆಂಬದೇ ನಮ್ಮ ಅನವರತ ನಿರೀಕ್ಷಣೆಯಾಗಿರುತ್ತದೆ. ಈ ಸಂಸ್ಥಾನದ ಆಕ್ಟಿಂಗ್ ಬ್ರಿಟಿಷ್ ರೆಸಿಡೆಂಟರಾದ ಮಿ. ಗಾರ್ಡಿಸ್ಟರ್ಡ್ಯಯವರು ಸಹ ತಾದೃಶ ಅಭಿಪ್ರಾಯವುಳ್ಳವರಾಗಿದ್ದಾರೆಂಬ ಅಂಶ ಈಚೆಗೆ ಅವರು ಚಿಕ್ಕಮಗಳೂರು ಮ್ಯುನಿಸಿಪಾಲಿಟಿಯವರ ವಿಜ್ಞಾಪನಪತ್ರಿಕೆಗೆ ಕೊಟ್ಟ ಪ್ರತ್ಯುತ್ತರದಿಂ ವ್ಯಕ್ತವಾಗುತ್ತದೆ. ಮುಂದಿನ ಹತ್ತು ವರುಷಗಳೊಳಗಾಗಿ ಈ ದೇಶದ ಹುಟ್ಟುವಳಿಯು ವೃದ್ಧಿಯಾಗಬಹುದೆಂದು ತಾವು ಸಂತೋಷದೊಡನೆ ನಿರೀಕ್ಷಿಸುತಲಿರುವಂತೆಯೂ, ಮುಖ್ಯವಾಗಿ ಈ ಮಲನಾಡು ಪ್ರಾಂತವು ಸಕಲಾಂಶದಿಂದಲೂ ಬಹಳ ಅಭಿವೃದ್ಧಿಸ್ಥಿತಿಗೆ ಬರಬಹುದೆಂದು ತಿಳಿದಿರುವಂತೆಯೂ ೭೬—೭೭—೭೮ನೇ ಇಸವಿಗಳಲ್ಲಿ ಪ್ರಾಪ್ತವಾದಂತಾ ಘೋರಕ್ಷಾಮವು ಮರಳಿ ತಲೆದೋರದೆ, ತತ್ಪ್ರಯುಕ್ತವಾದ ಸಂಕಷ್ಟಗಳೇನೂ ಈ ರಾಜ್ಯಕ್ಕೆ ಪ್ರಾಪ್ತವಾಗದಿರುವಪಕ್ಷಕ್ಕೆ, ಮೈಸೂರುಸರ್ಕಾರದವರು ಅರ್ಥನಿಷಯಕವಾದ ಅನಾನುಕೂಲಗಳನ್ನನುಭವಿಸದೆ ತಗಾದೆಗಳಿಗೆಲ್ಲ ಜವಾಬ ಹೇಳುವರೆಂದು ನಂಬುವಂತೆಯೂ ರೆಸಿಡೆಂಟರವರು ಅಭಿಪ್ರಾಯಪಟ್ಟರು.

ಈ ದೇಶದ ಕ್ಷೇಮಾಭಿವೃದ್ಧಿಗೂ ಪ್ರಜೆಗಳ ಸುಖ ಸಂತೋಷಗಳಿಗೂ ಕಾರಣಭೂತಗಳಾದ ಅಂಶಗಳು ಬಹಳವಾಗಿದ್ದಾಗ್ಯೂ ಅವುಗಳನಿರ್ವಹಣೆಯು ಕೇವಲ ಅಧಿಕಾರಿಗಳ ಇಷ್ಟಾನುಸಾರವಾಗಿ ಏರ್ಪಟ್ಟದರಿಂದಲೂ, ರಾಜ್ಯತಂತ್ರದಲ್ಲಿ ಯಾವದನ್ನು ತಿಳಿಸಿದಾಗ್ಯೂ ಪ್ರಯೋಜನವಿಲ್ಲವೆಂಬ ಭಾವ ದೃಷ್ಟಿಕರವಾದ್ದರಿಂದಲೂ ತತ್ಪ್ರಯುಕ್ತವಾದ ವಿಚಾರವು ಕಂಠಶೋಷಣವೆಂದೆಣಿಸಿ ಅದು ಬಿಟ್ಟವರಾದೆವು. ಆದರೆ ರೆಸಿಡೆಂಟರವರು ಇಲ್ಲಿನ ಉತ್ತಮಸ್ಥಿತಿಯನ್ನು ಬಹಳ ನಂಬಿಕೆಯೊಡನೆ ನಿರೀಕ್ಷಿಸುವಂತೆ ತಿಳಿಸಿದ್ದರಿಂದ ಅವರು ಈ ದೇಶೀಯರಿಗೆ ಸಧ್ಯಃ ಮಾಡಬೇಕಾದ ಉಪಕಾರವನ್ನು ಮಾಡಲಿಕ್ಕೆ ಹಿಂಜರಿಯಲಾರರೆಂದು ನಂಬುತ್ತೇವೆ. ಈದೇಶದ ನೇಟಿವ್ ಪ್ರಜೆಗಳಲ್ಲಿ ಕೆಲವರುಮಾತ್ರ ಅಧಿಕಾರಯುಕ್ತರಾಗಿ ಆರ್ಜಿತದ್ರವ್ಯಕ್ಕೆ ವಿನಿಯೋಗಮಾರ್ಗವು ಅವರಬುದ್ಧಿಸ್ಥವಾಗದೆ ಪೇಚಾಡುತಲಿರುವಂತೆಯೂ ಬಹುಮಂದಿಗೆ ಅನ್ನವಸ್ತ್ರಗಳಿಗೆ ಬೇಕಾದಷ್ಟು ಆಯತಿ ಸಹಲಭಿಸದೆ ಅವರೆಲ್ಲಗೋಳಾಡುತಲಿರುವಂತೆಯೂ ನೋಡುವದು ನಿಷ್ಪಕ್ಷಪಾತವಾದ ಪ್ರಭುತ್ವಾಂಗವಲ್ಲವೆಂಬದನ್ನು ಮಹಾರಾಜರವರಿಗೆ ಉಪದೇಶಿಸಬೇಕೆಂದು ಕೋರುವೆವು. ಈ ಉಪದೇಶವು ದಾರ್ಢ್ಯವನ್ನೈ ಶಿಥಿಲತ್ವಮೂಲಕ ರೆಸಿಡೆಂಟರವರೂ, ಪ್ರಜೆಗಳು ಸಹನಿರೀಕ್ಷಿಸುವಂತಾ ಶುಭಪರಂಪರೆಗಳು ಕೈಗೂಡುವಂತೆಯಾಗುವವು. ಆದದರಿಂದಮಿ || ಗರ್ಡಿಸ್ಟರ್ಡ್ಯಯವರು ಇದನ್ನೊಂದು ಕರ್ತವ್ಯತ್ವೇನ ಭಾವಿಸಬೇಕಾಗಿರುತ್ತದೆ.

THE ART OF DANCING.

ಈಗ್ಯೆ ಮೂರು ನಾಲ್ಕು ವಾರಗಳಹಿಂದೆ ಸಾಮಾನ್ಯವಾಗಿ ಹಿಂದೂ ಗಾನವಿದ್ಯೆಗೆ ಈಗಿನಕಾಲನೊಳುಂಟಾಗಿರುವ ಪ್ರಾಚುರ್ಯವನ್ನೂ, ಜನಗಳು ಅದನ್ನು ಪುರಸ್ಕರಿಸುವ ವಿಧವನ್ನೂ ಕುರಿತು ವಿಚಾರಮಾಡಿ ಭರತವಿದ್ಯೆಯ ಉತ್ಪತ್ತಿಸ್ಥಿತಿಲಯಗಳನ್ನು ಸಾಧ್ಯವಾದಮಟ್ಟಿಗೆ ತಿಳಿಸುವದಾಗಿ ಪ್ರತಿಜ್ಞೆ ಮಾಡಿದ್ದೆವಷ್ಟೆ. ತದ್ವತ್ ಈ ವಿಷಯವನ್ನು ಕುರಿತು ಈಗ ಸ್ವಲ್ಪ ವಿಚಾರಮಾಡುವದಾಗಿ ಅದು ಈ ಪತ್ರಿಕೆಯನ್ನೋದತಕ್ಕವರಿಗೆಲ್ಲ ಉಲ್ಲಾಸಕರವಾಗಿರಬಹುದೆಂದು ನಂಬುತ್ತೇವೆ.

ಇದಂಕುರಿತು ಈಗ ವಿಚಾರಮಾಡುವದಕ್ಕೆ ನಮ್ಮ ಮುಖ್ಯೋದ್ದೇಶವೇನಂದರೆ, ಈಚೆಗೆ ಜನಗಳಿಗೆ ನಾಟಕವೀಕ್ಷಣಾಸಕ್ತಿಯು ಅಧಿಕವಾಗುತ ಬಂದದರಿಂದಲೂ ಸಾಮಾನ್ಯವಾಗಿ ರಸಭಾವಾಪೇಕ್ಷಿತಗಳಾಗಿರುವ ಅಂತಾನಾಟಕಗಳಿಃ ಸರ್ವೋತ್ತಮವೆಂಬ ಜ್ಞಾನವು ಸಾಮಾನ್ಯವಾಗಿ ತಲೆದೋರುತಿರುವದರಿಂದಲೂ, ಈ ಸಂದರ್ಭದಲ್ಲಿ ಜನಗಳಿಗೆ ಅವುಗಳ ಸ್ವರೂಪವು ಸ್ವಲ್ಪ ತಿಳಿಸಬೇಕಾದ್ದು ಆವಶ್ಯಕವೆಂದೆಣಿಸಿ ಇದು ಬರೆಯಲಾದೆವು.

ಲೋಕದೊಳು ಸಕಲವಿದ್ಯೆಗಳಿಗಿಂತಲೂ ಭರತವಿದ್ಯೆ ಎಂಬದು ಅತಿ ಗಹನವಾದದ್ದಾಯೂ ಅನಿರ್ವಚನೀಯವಾದ ಆನಂದವನ್ನುಂಟುಮಾಡತಕ್ಕದ್ದಾಗಿಯೂ ಇರುತ್ತದೆಂಬದನ್ನು ಅಭಿಜ್ಞರಾದವರೆಲ್ಲರೂ ಅಂಗೀಕರಿಸದಿರಲಿಲ್ಲವು. ಆದದರಿಂದಲೇ ಮನುಷ್ಯನು ತನಗೆ ತ್ಯಾಗ ಅಭಿಮತಗಳಾದ ಶೋಧ್ಯಪದಾರ್ಥಗಳ ಸ್ವರೂಪ ಗುಣಗಳ ಪ್ರಯೋಜನವನ್ನರಿತು ಅದು ಪರಿಗ್ರಹಿಸುವದು ಯೋಗ್ಯವಾಗಿಯೂ ಸಂತೋಷಕರವಾಗಿಯೂ ಇರುವದೋ ತದ್ವತ್ ಈ ವಿದ್ಯೆಯ ಸ್ವರೂಪವು ಚೆನ್ನಾಗಿ ತಿಳಿದು ಸಂತೋಷಿಸಬೇಕಾದ್ದು ರಸಜ್ಞರಾದವರಿಗೆಲ್ಲ ಕರ್ತವ್ಯವೆಂಬದಾಗಿ ಪೂರ್ವಿಕರು ಅಭಿಪ್ರಾಯಪಟ್ಟಿರುತ್ತಾರೆ.

ಪ್ರಥಮತಃ ಭರತಶಬ್ದದ ವ್ಯುತ್ಪತ್ತಿಯನ್ನಿಲ್ಲಿ ತಿಳಿಸುವೆವು. ಸಂಸ್ಕೃತದಲ್ಲಿ "ನಾಮ್ನೈಕದೇಶೇ ನಾಮಗ್ರಹಣಂ" ಎಂಬ ನ್ಯಾಯದಿಂದ ಪ್ರಸಿದ್ಧಾರ್ಥವುಳ್ಳ ಒಂದು ಶಬ್ದದಲ್ಲಿ ಪ್ರಥಮಾಕ್ಷರವನ್ನು ಮಾತ್ರ ನುಡಿದರೆ ಆ ಶಬ್ದವು ಬುದ್ಧಿಗೆ ಗೋಚರವಾಗುವ ಪದ್ಧತಿ ಇರುವದರಿಂದ ಭಾವಶಬ್ದದಲ್ಲಿ ಆದಿವರ್ಣವಾದ ಭಕಾರವನ್ನೂ ರಾಗಶಬ್ದದಲ್ಲಿ ಮೊದಲನೆಯದಾದ ರೇಫವನ್ನೂ, ತಾಳಶಬ್ದದಲ್ಲಿ ಪ್ರಥಮವರ್ಣವಾದ ತಕಾರವನ್ನೂ ಕೇರಿಸಲು ನಾಟ್ಯಕ್ಕೆ ಭರತವೆಂಬ ಹೆಸರುಂಟಾಯಿತು. ಇದರಿಂದ ನಾಟ್ಯವೆಂಬದು ಭಾವ ರಾಗ ತಾಳ ಸಮ್ಮೇಳನ ರೂಪವೆಂದು ತಿಳಿಯಬೇಕು. ಇದು, ನಾಟ್ಯದಲ್ಲಿ ವರ್ಗೀಯರಿಂದ, ಅಂದರೆ ಇಮ್ಮೇಳದವರಿಂದ ನುಡಿಯಲ್ಪಡುವ ಪದ ವರ್ಣಾದಿಗಳಲ್ಲಿನ ಶಬ್ದಗಳ ಮೂಲಕ ತಿಳಿಯಬಹುದಾದ ಅರ್ಥಗಳಿಗೆ ಅನುಗುಣಗಳಾದ ರಸಭಾವಗಳು ಸಾತ್ವಿಕಾವಸ್ಥೆಗಳು ಮೊದಲಾದ ವಿಷಯಗಳನ್ನು ಅಭಿನಯಗಳಿಂದದೇಖಿಸುವಲಪೇಕ್ಷೆಗೊಳ್ಳುವ ಸಾಹಿತ್ಯರಸಜ್ಞರಿಗೂ ಹಾಡಲ್ಪಡುವ ರಾಗಗಳಲ್ಲಿ ಸ್ವರಸ್ಥಾನ ಮೂರ್ಛನಾ ಗಮಕ ವಿವೇಕಚಾತುರ್ಯಗಳಿಂದ ಆನಂದಿಸುವ ಸಂಗೀತ ಕುಶಲರಿಗೂ, ತ್ರ್ಯಶ್ರ, ಚತುರಶ್ರ, ಖಂಡ, ಮಿಶ್ರಸಂಕೀರ್ಣಗಳೆಂಬ ಜಾತಿಭೇದಗಳಿಂದಲೂ, ವಿರಾಮ, ದ್ರುತ, ಲಘು, ಗುರು, ಪ್ಲುತ, ಕಾಕಪಾದಗಳೆಂಬ ಷಡಂಗ ಭೇದಗಳಿಂದಲೂ, ಕಾಲಮಾರ್ಗಾದಿ ದಶಪ್ರಾಣಭೇದಗಳಿಂದಲೂ, ಅವುಗಳಿಂದುಂಟಾಗುವ ಧ್ರುವಾದಿ ಸಪ್ತವಿಧ ನಾಮರೂಪ ಭೇದಗಳಿಂದಲೂ, ಅವುಗಳಲ್ಲಿಯೂ ದ್ರುತ ಮಧ್ಯ ವಿಳಂಬಿತಗಳೆಂಬ ಗತಿ ಭೇದಗಳಿಂದಲೂ, ನಾನಾವಿಧ ಕ್ರಿಯಾಂಗಗಳುಳ್ಳ ಚಂಚತ್ಪುಟಾದಿ ತಾಳಭೇದಗಳಿಂದಲೂ, ಇವುಗಳ ಪ್ರಯೋಗಕರ್ತರ ಬುದ್ಧಿ ಚಮತ್ಕಾರ ಭೇದಗಳಿಂದಲೂ, ವಿಚಿತ್ರಗಳಾಗಿಯೂ ರಮಣೀಯಗಳಾಗಿಯೂ ಇರುವ ತಾಳಗಳಲ್ಲಿ ಕುತೂಹಲವುಳ್ಳರಿವಗೂ ಆಹ್ಲಾದವನ್ನುಂಟುಮಾಡತಕ್ಕದ್ದಾಗಿರುತ್ತದೆ. ಆದದರಿಂದ ಭರತವೆಂಬದು ಸರ್ವದೇವಾದರಣೀಯವಾದದ್ದಾಗಿಯೂ, ಋಗ್ಯಜುಸ್ಸಾಮಾಥರ್ವಣಗಳೆಂಬ ವೇದಪ್ರತಿಪಾದ್ಯವಾದದ್ದಾಗಿಯೂ ಇರುತ್ತದೆ. ಇದನ್ನು ವೇದಪ್ರತಿಪಾದ್ಯವೆಂದು ಹೇಳುವದಕ್ಕೆ ಕಾರಣವೇನಂದರೆ—ಋಗ್ವೇದದಿಂದ ವಾದ್ಯಗಳೂ, ಯಜುರ್ವೇದದಿಂದ ಅಭಿನಯವೂ, ಸಾಮವೇದದಿಂದ ಸಂಗೀತವೂ, ಅಥರ್ವಣವೇದದಿಂದ ಶೃಂಗಾರಾದಿ ನವರಸಗಳೂ ಪುಟ್ಟಿದವು. ಈ ನಾಟ್ಯತ್ರಿತಯವೆಂಬದೆಂತಾದ್ದೆಂದರೆ, ಪುರುಷನಿಗೆ ಪುರುಷಾರ್ಥ ಚತುಷ್ಟಯಗಳನ್ನುಂಟುಮಾಡತಕ್ಕದ್ದಾಗಿಯೂ, ಸಂಪತ್ಸಂತೋಷಾದಿಗಳನ್ನು ಘಟಿಯಿಸತಕ್ಕದ್ದಾಗಿಯೂ, ದುಃಖತ್ರಯನಿವಾರಕವಾದದ್ದಾಗಿಯೂ ಇರುತ್ತದೆ. ಇದನ್ನು ಸ್ವಲ್ಪ ಹೆಚ್ಚುಕಡಮೆಯಾಗಿ ಬ್ರಹ್ಮಾನಂದಸದೃಶವಾದದ್ದೆಂದು ಹೇಳಬಹುದು. ಭರತವಿದ್ಯೆಯು ತಾಂಡವವೆಂತಲೂ, ನಾಟ್ಯವೆಂತಲೂ ನೃತ್ತವೆಂತಲೂ ಮೂರು ಪ್ರಕಾರವಾದದ್ದಾಗಿರುತ್ತದೆ. ಇವುಗಳ ಲಕ್ಷಣಗಳು ಕ್ರಮವಾಗಿ ಮುಂದೆ ವಿವರಿಸಲ್ಪಡುವವು. ಭರತವಿದ್ಯೆಯ ಮುಖ್ಯಪ್ರವರ್ತಕರಾದ ಭರತಾಚಾರ್ಯರು ಗಂಧರ್ವಾಪ್ಸರಸ್ತ್ರೀಯರೊಡನೆ ಈಶ್ವರಸಭೆಯಲ್ಲಿ ಮಾಡಿದಂಥ ತ್ರಿಪುರವನ್ನು ಆಡಿತೋರಿಸಲು, ಇವುಗಳಲ್ಲಿ ರಕ್ತಿಸಾಲದೆಂದೆಣಿಸಿ, ಈಶ್ವರನು ತಂಡುವೆಂಬನಿಂದ ತಾಂಡವವನ್ನೂ, ಪಾರ್ವತಿಯಿಂದ ಲಾಸ್ಯವನ್ನೂ, ಭರತಾಚಾರ್ಯನಿಗೆ ಉಪದೇಶಮಾಡಿಸಿದನು. ತರುವಾಯ ಭರತಋಷಿಯು ತಾಂಡವವನ್ನು ಮಾತ್ರ ಅಭ್ಯಸಿಸಿ ಅದನ್ನು ಕೆಲವರು ಶಿಷ್ಯರಿಗೆ ಉಪದೇಶಿಸಿದನು. ಪಾರ್ವತಿಯು, ಬಾಣಾಸುರನ ಪಟ್ಟಣದೊಳಿದ್ದ ಕಾಲದಲ್ಲಿ ಲಾಸ್ಯವನ್ನು ಉಷಾಯೆಂಬವಳಿಗೆ ಮೊದಲು ಉಪದೇಶಿಸಿದಳು. ಆಕೆ ಸದರೀ ವಿದ್ಯೆಯಲ್ಲಿ ಸಂಪೂರ್ಣ ಚತುರಳೆನಿಸಿಕೊಂಡದರಿಂದ ಆಕೆಯಲ್ಲಿ ಗೋಪಸ್ತ್ರೀಯರು ಕೆಲವರು ಅದನ್ನಭ್ಯಸಿಸಿದರು. ತರುವಾಯ ಗೋಪಸ್ತ್ರೀಯರು ಸೌರಾಷ್ಟ್ರಸ್ತ್ರೀಯರಿಗೆ ಉಪದೇಶಮಾಡಲು ಅವರು ಅನ್ಯದೇಶದ ಸ್ತ್ರೀಯರಿಗೆಲ್ಲ ಬೋಧಿಸಲಾರಂಭಿಸಿದರು. ಆದದರಿಂದಲೇ ಇದು ಆಯಾದೇಶಗಳಲ್ಲಿ ತತ್ತದ್ದೇಶ ಭಾಷೆಗಳಿಂದ ಪ್ರಚಾರದೊಳು ಬರಲಿಕ್ಕೆ ಕಾರಣವಾಯಿತು.

ಈ ನಾಟ್ಯವಿದ್ಯೆಯು ಶುದ್ಧ ನಾಟ್ಯವೆಂತಲೂ ದೇಶೀಯ ನಾಟ್ಯವೆಂತಲೂ, ಬಹುಚಾರಿ ನಾಟ್ಯವೆಂತಲೂ, ಮೂರು ಪ್ರಕಾರಗಳುಳ್ಳದ್ದಾಗಿರುತ್ತದೆ. ಶುದ್ಧ ನಾಟ್ಯವು ಯಾವಾಗಲೂ ಶುಭಾವಹವಾದ್ದು. ದೇಶೀಯನಾಟ್ಯವು ಜನರಂಜಕವಾದ್ದು. ಬಹುಚಾರಿ ನಾಟ್ಯವು ಭಾಗ್ಯನಾಶಕವಾದದ್ದಲ್ಲದೆ ಅದು ಮಹದನಿಷ್ಟಪ್ರದವೆಂತಲೂ, ಅದನ್ನು ಸಾಮಾನ್ಯವಾಗಿ ಯಲ್ಲರೂ ಅಭ್ಯಸಿಸಲಾಗದೆಂತಲೂ ಪೂರ್ವಿಕರು ಅಭಿಪ್ರಾಯ ಪಟ್ಟಿರುತ್ತಾರೆ. ಆದಿಮೊದಲು ಶಾಸ್ತ್ರಸಮ್ಮತಗಳಾದ ಶುದ್ಧ ನಾಟ್ಯದೇಶೀ ನಾಟ್ಯಗಳೆರಡೇ ರಾಜಸಭೆಗಳಲ್ಲಿಯೂ, ರಾಜಸ್ತ್ರೀಯರ ಅಂತಃಪುರಗಳಲ್ಲಿಯೂ, ದೇವಾಲಯಗಳಲ್ಲಿಯೂ, ಪಂಡಿತ ಸಭೆಗಳಲ್ಲಿಯೂ ಆದಲ್ಪಡುತಲಿದ್ದವು.

Occasional Notes
ನೈಮಿತ್ತಿಕವಿಷಯನ್ಯಾಸ

The young Maharaja of Kolhapore.—ಬಾಲಕರಾದ ಕೊಲ್ಹಾಪುರದ ಮಹಾರಾಜರವರು ನೇಟಿವ್ ಅರಸುಮಕ್ಕಳ ಮತ್ತು ರಾಜಕೋಟಿ ದೊಡ್ಡಮನುಷ್ಯರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸ್ಥಾಪಿಸಲ್ಪಟ್ಟಿರುವ ಪಾಠಶಾಲೆಯಲ್ಲಿ ವಿದ್ಯಾಭ್ಯಾಸಕ್ಕೆ ಬಿಡಲ್ಪಟ್ಟಿರುತ್ತಾರೆ.

A general meeting—ಈ ತಿಂಗಳ ೨೭ನೇ ತಾರೀಖಿನಲ್ಲಿ, ಕಲ್ಕತ್ತೆಯೊಳು, ಇಂಡ್ಯದೇಶದ ಹೆಂಗಸರಿಗೆ ವೈದ್ಯವಿಷಯದಲ್ಲಿ ಸಹಾಯ ಮಾಡುವದಕ್ಕಾಗಿ ಏರ್ಪಟ್ಟ ಸಂಘದವರು ಸಭೆಸೇರಿ ಅದರಲ್ಲಿ ಇಂಡ್ಯರಾಜ್ಯದ ವೈಸರಾಯಿಯವರಾದ ಲಾರ್ಡ ದಫರಿನ್‌ಸಾಹೇಬರವರು ಅಗ್ರಾಸನವು ಅಲಂಕರಿಸುವರು.

The Viceroy's visit to Mandalay.—ಇಂಡ್ಯ ಕಮಾಂಡರ್ ಇನ್‌ಚೀಫರವರಾದ ಸರ್ ಫ್ರೆಡರಿಕ್ ರಾಬರ್ಟ್ಸಿಯವರು ವೈಸರಾಯಿಯವರ ಸಂಗಡ ಬರ್ಮಾದೇಶಕ್ಕೆ ಹೋಗಬಹುದಾಗಿ ಕಾಣುತ್ತದೆ. ವೈಸರಾಯಿಯವರು ಅಲ್ಲಿಗೆ ಹೋಗಿ ಬಂದಮೇಲೆ ಮದರಾಸ ಪ್ರಾಂತಕ್ಕೆ ಬಂದು ನೋಡಿಕೊಂಡು ಹೈದರಾಬಾದ್ ಮಾರ್ಗವಾಗಿ ಕಲ್ಕತ್ತೆಗೆ ವಾಪಸ ಹೋಗುವರು.

The present strength of the Cabul army.—ಕಾಬೂಲ್‌ರಾಜ್ಯದಸ್ಥಿತಿಯಂ ಚೆನ್ನಾಗಿ ಬಲ್ಲ ಒಬ್ಬ ಬಾತಮಿದಾರನು ಒಂದಾನೊಂದು ಪತ್ರಿಕೆಗೆ ಬರೆಯುತ್ತಾನೇನಂದರೆ—ಕಾಬೂಲ್ ಅಮೀರರವರು ಪಟಾಳ ಒಂದಕ್ಕೆ ೮೦೦ ಮಂದಿಯ ಮೇರೆ ೭೪ ಪಟಾಳ ಇನ್‌ಫೆಂಟ್ರಿಯೂ, ರಿಜಮೆಂಟ ಒಂದಕ್ಕೆ ೫೦೦ರ ಮೇರೆ ೨೭ ರಿಜಿಮೆಂಟ ಸವಾರಸೇನೆಯೂ, ೩೫೦ ತೋಫೆಗಳೂ ಇಟ್ಟಿರುತ್ತಾರೆ, ಎಂಬದು.

Another trading corporation.—ಮುಂಬೈ ಬರ್ಮಾ ವ್ಯಾಪಾರ ಸಂಘದವರಿಗೆ ಉಂಟಾಗುತಲಿರುವ ದೈನಂದಿನಾಭಿವೃದ್ಧಿಯಂ ನೋಡಿ, ಹತ್ತುಲಕ್ಷ ರೂಪಾಯಿಗಳ ಬಂಡವಾಳದೊಡನೆ, ಸೈಯಾಂ ಫಾರೆಸ್ಟ್ ಕಂಪೆನಿಯೆಂಬ ಹೆಸರಿನಿಂದ ಹೊಸದಾಗಿಯೊಂದು ಕಂಪೆನಿ ಮುಂಬೈಯಲ್ಲಿ ಯೇರ್ಪಾಡಾಯಿತೆಂದು ತಿಳಿಯಬರುತ್ತದೆ. ಒಂದು ಸ್ಥಳದಲ್ಲಿ ಅನೇಕ ಕಂಪೆನಿಗಳು ಯೇರ್ಪಟ್ಟಮೇಲೆ ಅದರಿಂದ ಉಂಟಾಗುವ ಪ್ರಯೋಜನ ಅನುಭವಪೂರ್ವಕ ಪ್ರಸಿದ್ಧವಾಗಿಯೇ ಇರುತ್ತದೆಯಷ್ಟೆ.

In c… of … cards in Hyderabad.—ಹೈದರಾಬಾದಿನಲ್ಲಿ ಯೇರ್ಪಟ್ಟಿರುವ ಪೈನಾನ್ಶಿಯಲ್ ಕಮ್ಮಿಟಿಯವರು ಸದರೀ ದೇಶದೊಳು ಪೋಸ್ಟುಕಾರ್ಡುಗಳನ್ನು ಜಾರೀಯೊಳು ತರುವದಕ್ಕೆ ಇನ್ನೂ ಸರಿಯಾದ ಸಂದರ್ಭ ಪ್ರಾಪ್ತವಾದಂತೆ ತಮಗೆ ತೋರಬರುವದಿಲ್ಲವೆಂಬ ಕಾರಣದಮೇಲೆ, ಪೋಸ್ಟು ಕಾರ್ಡುಗಳನ್ನು ಮತ್ತು ಲಿಫಾಫೆಗಳನ್ನು ಖರೀದಿ ಮಾಡುವದಕ್ಕಾಗಿ ಅಪೇಕ್ಷಿಸಲ್ಪಟ್ಟ ೨೫೦೦ ರೂಪಾಯಿಗಳನ್ನು ಮಂಜೂರ್ಮಾಡಕೂಡದೆಂದು ನಿರ್ಣಯಿಸಿದರು.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕ್‌ಜಾತಿವೃತ್ತಾಂತಗಳು.

The Chief Court Sessions—ಗತ ವಾರದಲ್ಲಿ ತಿಳಿಸಿದ್ದ ಪ್ರಕಾರ ಗತಗುರುವಾರದಿನ ಇಲ್ಲಿನ ಚೀಫ್‌ಕೋರ್ಟಿನಲ್ಲಿ ದುಯ್ಯಂ ಜಡ್ಜಿಯವರಾದ ಮೇತುಬುಕನ್ನರವರು ಸೆಷನ್‌ವಿಚಾರಣೆಗೆ ಉಪಕ್ರಮಿಸಿ, ಶನಿವಾರದತನಕ ಮಾಲೂರು ಖೂನೀಮೊಕದ್ದಮೆಯನ್ನು ದರ್ಯಾಪ್ತಿ ಮಾಡಿ, ಇದರ ತೀರ್ಮಾನವನ್ನು ಈಬಿನದ ಕೋರ್ಟಿನಲ್ಲಿ ತಿಳಿಸುವಂತೆ ಹೇಳಿದರು. ಇದಲ್ಲದೆ ಇನ್ನೆರಡು ಖೂನೀ ಮೊಕದ್ದಮೆ ಕಮ್ಮಿಟ್ ಮಾಡಲ್ಪಟ್ಟಿದೆ. ಅದು ಕುಣಿಗಲ್ ತಾಲ್ಲೂಕಿಗೆ ಸಂಬಂಧಪಟ್ಟದ್ದೆಂತಲೂ, ಮತ್ತೊಂದು ದರೋಡೇ ಮೊಕದ್ದಮೆ ಚಿತ್ರದುರ್ಗ ಸಬ್‌ಡಿವಿಜನಿಗೆ ಸೇರಿದ್ದೆಂತಲೂ ತಿಳಿಯಬರುತ್ತದೆ. ಇವುಗಳ ಪರಿಣಾಮವನ್ನು ಮುಂದಿನವಾರದಲ್ಲಿ ತಿಳಿಸುವೆವು. ಈ ತಿಂಗಳಲ್ಲಿ ಸುಮಾರು ಐದಾರು ಮೊಕದ್ದಮೆಗಳ ತನಕ

ವಿಚಾರಣೆಯಾಗಬಹುದಾಗಿರುವದರಿಂದ ಸುಮಾರು ಹದಿನೈದು ದಿನಗಳು ಹಿಡಿಯಬಹುದೆಂದು ತೋರುತ್ತದೆ.

His Highness the Maharaja.—ಶ್ರೀಮನ್ಮಹಾರಾಜರವರ ಸವಾರಿ ನಾಳೆಯ ಬೆಳಿಗ್ಗೆ ತುಮಕೂರ್ ರೈಲ್‌ಮಾರ್ಗವಾಗಿ ಇಲ್ಲಿಗೆ ವಾಪಸ್ ದಯಮಾಡುವದು. ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರೂ ಕ್ಲೋಸ್‌ಪೆಟ್ ಸಬ್‌ಡಿವಿಜನ್ ಅಸಿಸ್ಟೆಂಟರಾದ ಮೆ|| ಅಬ್ದುಲ್ ರಹಿಮಾನರೂ ಮಹಾರಾಜರವರನ್ನು ಬರಮಾಡಿಕೊಳ್ಳತಕ್ಕ ಬಗ್ಗೆ ಕುಣಿಗಲ್‌ಗೆ ಹೋದರು. ಸ್ವದೇಶಸಂಚಾರದಿಂ ಸಂತೃಪ್ತರಾಗಿ ಬರುವ ಮಹಾರಾಜರನ್ನು ಭಕ್ತಿಗೌರವ ಪುರಸ್ಸರವಾಗಿ ಬರಮಾಡಿಕೊಳ್ಳತಕ್ಕ ಬಗ್ಗೆ ಇಲ್ಲಿನ ರೆಸಿಡೆಂಟ್ಸ್ ಅಸೋಸಿಯೇಷನ್ ಸಮಾಜದವರು ತಕ್ಕ ಸನ್ನಾಹಗಳನ್ನು ಮಾಡಿಕೊಳ್ಳುತ್ತಾರೆಂತಲೂ ವಿಜ್ಞಾಪನಪತ್ರಿಕೆಯನ್ನು ಬರೆದು ರಜತ ಸಂಪುಟದೊಳಿಟ್ಟು ಮಹಾರಾಜಾಗಮನಕಾಲದೊಳೊಪ್ಪಿಸುವರೆಂತಲೂ ತಿಳಿಯಬರುತ್ತದೆ. ಇಂತಾ ಉದ್ದೇಶಪ್ರಯತ್ನಗಳು ಜನಗಳಿಗೆ ಇರುವದು ಶ್ಲಾಘ್ಯವಾದಾಗ್ಯೂ ಅವು ಉಚಿತರೀತಿಯಿಂ ಪುರಸ್ಕರಿಸಲ್ಪಡುವದಕ್ಕೆ ಬೇಕಾದ ಅವಕಾಶವು ದೊರೆಯುವದೆಂಬ ಬಗ್ಗೆ ಸಂದೇಹವಾಗಿದೆ

The 2d Magistrateship, C. and M. Station.—ಸಿವಿಲ್ ಮಿಲಿಟರಿ ಸ್ಟೇಷನಿನ ಎರಡನೇ ಛಾಸ್ ಮ್ಯಾಜಿಸ್ಟ್ರೇಟಾದ ಮ|| ಪಶೇರಾಯರು ಬ್ರಿಟಿಷ್ ರೆಸಿಡೆಂಟರವರ ಹುಕುಂ ಅನುಸರಿಸಿ ಹಾಸನಜಿಲ್ಲೆಗೆ ೧೮ನೇ ತಾರೀಖು ಗುರುವಾರದಿನ ತಮ್ಮ ಮ್ಯಾಜಿಸ್ಟ್ರೇಟ್ ಅಧಿಕಾರವನ್ನು ಸಿವಿಲ್ ಸರ್ಜನ್ ಕ್ಲಾರ್ಕ್ ಮೆ|| ಅಬ್ದುಲ್ ರಹಿಮಾನರಿಗೂ ತಾವು ನೋಡುತಲಿದ್ದ ರೆಸಿಡೆನ್ಸಿ ಟ್ರೆಜರಿ ಕೆಲಸವನ್ನು ರೆಸಿಡೆಂಟ್ ಆಫೀಸ್ ಕ್ಲಾರ್ಕ್ ಮ|| ದಯೋಸ್ ಎಂಬವರಿಗೂ ಒಪ್ಪಿಸಿ ಕೆಲಸದಿಂ ನಿವೃತ್ತರಾದಂತೆ ತಿಳಿಯಬರುತ್ತದೆ. ಮೆ| ಪೆರ್ರಿರಾಯರವರಿಗೆ ಈಗ ಐವತ್ತು ಮೂರು ವರುಷಗಳ ವಯಸ್ಸಾಗಿದ್ದಾಗ್ಯೂ ಇನ್ನೂ ಅನೇಕ ವರುಷಗಳ ಕಾಲ ನೌಕರಿ ಮಾಡಬಹುದಾದಷ್ಟು ದೇಹದಾರ್ಢ್ಯವುಳ್ಳವರಾಗಿದ್ದಾರೆ. ಪರಂತು ರೆಸಿಡೆಂಟರವರ ಹುಕುಂ ಪ್ರಕಾರ ಈಗ ನೌಕರಿಯಿಂದ ನಿವೃತ್ತರಾಗತಕ್ಕದ್ದಾಯಿತು. ಈಗ ಸದ್ಯಕ್ಕೆ ಮಾಡಲ್ಪಟ್ಟಿರುವ ಏರ್ಪಾಡು ಖಾಯಮ್ಮಾಗಿರಬಹುದೆಂದು ನಂಬುತ್ತೇವೆ.

The Sessions, C. and M. Station of Bangalore.—ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನಿನ ಸೆಷನ್ಸ್ ವಿಚಾರಣೆಯ ಬಗ್ಗೆ ಮಾಡಿಕೊಂಡ ೧೫ನೇ ತಾರೀಖು ಶುಕ್ರವಾರ ನಿಶ್ಚಯವಾಗಿದ್ದಿತು. ಪರಂತು ಆ ತಾರೀಖು ವರೆಗೆ ಮೊಕದ್ದಮೆ ಯಾವದೊಂದೂ ಕಮ್ಮಿಟ್ ಮಾಡಲ್ಪಡದೆ ಇದ್ದದರಿಂದ ಜಡ್ಜಿಯವರು ಸೆಷನ್ಸ್ ಮೊಕದ್ದಮೆಗಳ ವಿಚಾರಣೆಗೆ ಉಪಕ್ರಮ ಮಾಡಿದರು. ಸದರೀ ಕೋರ್ಟಿನೊಳು ವಿಚಾರಣೆಯಲ್ಲಿರುವ ಮೊಕದ್ದಮೆಗಳಲ್ಲೊಂದು ಮ್ಯುನಿಸಿಪಲ್ ಸಾನಿಟರಿ ಇನ್ಸ್‌ಪೆಕ್ಟರಾದ ಮ. ಸ್ಟ್ಯಾಂಡಿಷ್ ಲೀ ಎಂಬವರು ಮುನಿಸಿಪಲ್ ಕಮಿಷನರ್ ಮ್ಯುನಿಸಿಪಾಲಿಟಿ ಯವರ ಮೇಲೆ ಹೂಡಿರುವ ಮಾನನಷ್ಟದ ಮೊಕದ್ದಮೆಯಾಗಿರುತ್ತದೆ. ವಿಕ್ಟೋರಿಯಾ ರೋಡಿನಲ್ಲಿರುವ ಮೆ|| ಸ್ಟ್ಯಾಂಡಿಷ್ ಲೀಯವರ ಮನೆಯ ಮುಂಭಾಗದೊಳು ಚರಂಡಿ ಕಟ್ಟಿಸಿ ತನ್ಮೂಲಕ ಸುಸ್ಥಿತಿಗೆ ಮನ್ನಿಸಿಸಿ ಮಾಡಿಟಿಯವರು ನ್ಯೂನತೆಯನ್ನುಂಟುಮಾಡಿದರಾಗಿ ಅದರಿಂದ ಸದರೀ ಮನೆಯೇ ಪ್ರಯೋಜನವಿಲ್ಲವೆಂದು ಹೇಳಿ ತತ್ಪ್ರಯುಕ್ತವಾದ ನಷ್ಟವನ್ನು ಮ್ಯುನಿಸಿಪಾಲಿಟಿಯವರಿಂದ ಕೊಡಿಸಬೇಕೆಂದು ದಾವೆ ಹೂಡಿರುತ್ತಾರೆ. ಫಿರ್ಯಾದಿ ಪಕ್ಷ ಮೆ|| ಲಾರೆನ್ಸ್ ಮತ್ತು ಮೆ|| ಸ್ಮಿತ್‌ಯವರು ಪ್ರತಿವಾದಿಗಳ ಪರವಾಗಿ ಲಾಯರ್‌ಯವರೂ ಹಾಜರಾಗಿ ವ್ಯಾಜ್ಯ ನಡೆಸುತ್ತಿದ್ದಾರೆ. ಈ ಮೊಕದ್ದಮೆ ಬರುವ ತಿಂಗಳ ೬ನೇ ತಾರೀಖಿಗೆ ಅಡ್ಜರ್ನ್ ಮಾಡಲ್ಪಟ್ಟಿರುತ್ತದೆ.

Teruvengada Mudaly's case.—ಇಲ್ಲಿನ ಕಂಟೋನ್ಮೆಂಟ್ ನಿವಾಸಿಯಾದ ತಿರುವೆಂಗಡ ಮುದಲಿ ಎಂಬವನು ತನ್ನ ತಾಯಿಯನ್ನು ಖೂನಿ ಮಾಡಿದನೆಂದು ಆಪಾದಿಸಲ್ಪಟ್ಟು ಅವನಿಗೆ ಅಲ್ಲಿನ ಸೆಷನ್ಸ್ ಜಡ್ಜಿಯವರು ಕಳೆದ ತಿಂಗಳ ೧೮ನೇ ತಾರೀಖಿನಲ್ಲಿ ಮರಣದಂಡನೆಯಂ ವಿಧಿಸಿದರೆಂತಲೂ ಅದರ ಮೇಲೆ ಅಪರಾಧಿಯು ರೆಸಿಡೆಂಟರ ಬಳಿ ಅಪೀಲ್ ಮಾಡಿರುವಂತೆಯೂ ಪೂರ್ವವೇ ತಿಳಿಸಿದ್ದೇವಷ್ಟೆ. ಸದರೀ ಮೊಕದ್ದಮೆಯು ಈ ತಿಂಗಳ ೨೭ನೇ ತಾರೀಖಿನಲ್ಲಿ ಮಡಿಕೇರಿ ಮೊಕ್ಕಾಂನೊಳು ಮೆ|| ಗಾರ್ಡಿನರ್ ಸ್ಟರ್ಲಿಯವರಿಂದ ವಿಚಾರಿಸಲ್ಪಡುವದು. ಸೆಷನ್ ಕೋರ್ಟಿನಲ್ಲಿ ಫಿರ್ಯಾದಿಗೆ ಹಾಜರಾದ ಪಬ್ಲಿಕ್ ಪ್ರಾಸಿಕ್ಯೂಟರ್ ಮೆ|| ರಂಗರಾಚಾರ್ಯರವರಿಗೂ, ಗವರ್ನಮೆಂಟ್ ಹುಕುಂ ಪ್ರಕಾರ ಅಪರಾಧಿಯ ತರಫ್ ಹಾಜರಾಗಿ ವಾದಿಸಿದ ಅಡ್ವೋಕೇಟ್ ಮೆ|| ಕಾರ್ನರ್‌ರಿಗೂ ಈ ವಿಷಯದೊಳು ನೋಟೀಸ್ ಬಂದಂತೆ ತಿಳಿಯಬರುತ್ತದೆ. ಮ. ರಂಗಾಚಾರ್ಯರು ಖುದ್ದು ಎದುರು ನಡೆಸಬೇಕಾದ ಸರ್ಕಾರಿ ಮೊಕದ್ದಮೆಗಳು ಇಲ್ಲಿ ಬಹಳವಾಗಿರುವದರಿಂದ ಅವರು ಅಲ್ಲಿಗೆ ಹೋಗುವದಕ್ಕೆ ಹ್ಯಾಗೆ ಸಮರ್ಥರಾಗುವರೋ ನಾವರಿಯೆವು. ಮ. ಕಾರ್ನರ್‌ರಿಗೆ ಹೋಗುವದಕ್ಕೆ ಇಷ್ಟವಿದ್ದಂತೆ ಕೇಳುತ್ತೇವೆ. ಮುಖ್ಯವಾಗಿ ಅಷ್ಟು ದೂರ ಅಪರಾಧಿಯನ್ನು ಕರೆಕಳಿಸುವದು ನಿಷ್ಪ್ರಯೋಜನವು. ಇದಕ್ಕಾಗಿ ಇಬ್ಬರು ಲಾಯರ್‌ಗಳು ಹೋಗಬೇಕಾದರೆ ಅವರಿಗೆ ತಗಲುವ ಖರ್ಚು ವೆಚ್ಚಗಳನ್ನು ಗವರ್ನಮೆಂಟಿನವರು ಕೊಡಬೇಕಾದದರಿಂದ ಆ ವಿಷಯದೊಳ್ಯಾವ ಏರ್ಪಾಡೂ ಮಾಡಲ್ಪಟ್ಟಂತೆ ಕಾಣಿಸಲಿಲ್ಲವು. ಅಪೀಲ್ ಕೋರ್ಟಿನವರು ತಮ್ಮ ಅಧಿಕಾರಕ್ಕೆ ಒಳಪಡದ ಪ್ರದೇಶದಲ್ಲಿ ಈ ಮೊಕದ್ದಮೆಯನ್ನು ವಿಚಾರಿಸುವದು ಬಹಳ ಅಕ್ರಮವಾಗಿರುತ್ತದೆ. ಹಾಗಿದ್ದ ಪಕ್ಷಕ್ಕೆ ಇಂತಾ ನ್ಯೂನತೆಯಂ ನಿವಾರಿಸತಕ್ಕ ತತ್ಸಾಧನಾವಕಾಶವಿದೆ.

THE MAHARAJAH'S TOUR.

ಅಯ್ಯಾ,—ಮೊದಲು ನಿಶ್ಚಯಿಸಲ್ಪಟ್ಟಿದ್ದ ಕಾಲಕ್ಕೆ ಲೇಶವೂ ವ್ಯತ್ಯಾಸವಿಲ್ಲದಂತೆ ಶ್ರೀಮನ್ಮಹಾರಾಜರವರು ಸ್ವಪರಿವಾರಗಳೊಡನೆ ಈ ತಿಂಗಳ ತಾರೀಖ್ ೫ನೇ ಮಂಗಳವಾರ ೮ ಘಂಟೆಗೆ ಈ ತಾಲ್ಲೂಕು ಸರಹದ್ದಿನಲ್ಲಿ ವಿಚಿತ್ರಾಲಂಕಾರಗಳಿಂದ ನಿರ್ಮಿತವಾಗಿದ್ದ ಮಂಟಪಕ್ಕೆ ದಯಮಾಡಿ ಅಲ್ಲಿ ಸಬ್‌ಡಿವಿಜನ್ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಕೃಷ್ಣರಾಯರವರಿಂದ ಒಪ್ಪಿಸಲ್ಪಟ್ಟ ನಜರ್ ಮುಜರೆಗಳಂ ಅಂಗೀಕರಿಸಿ, ಅವರಿಂದ ಅಸಿಸ್ಟೆಂಟ್ ಇಂಜನಿಯರ್ ಮೆ|| ರಂಗರಾಯರವರೂ, ಅಮಲ್ದಾರ್ ಬಿ. ಕೇಶವಯ್ಯಂಗಾರ್ಯರು ಸಹ ಇಂಟ್ರಡ್ಯೂಸ್ ಮಾಡಲ್ಪಟ್ಟನಂತರ ಈ ಊರಿನ ದೊಡ್ಡಮನುಷ್ಯರಿಂದ ಸಮರ್ಪಿಸಲ್ಪಟ್ಟ ಫಲಪುಷ್ಪಗಳನ್ನು ಸ್ವಹಸ್ತದಿಂದ ಅಂಗೀಕರಿಸಿ ಕುಶಲಪ್ರಶ್ನೆಯಂ ಮಾಡಿ, ಅನಂತರ ಶ್ರೀಮನ್ಮಹಾರಾಜರವರ ರಥದಲ್ಲಿಯೇ ಮೆ|| ಆನಂದರಾಯರವರಿಗೆ ಸ್ಥಳ ನಿಯಮಿಸಿ ಅಲ್ಲಿಂದ ಬೇಲೂರು ವರೆವಿಗೆ ನೂತನವಸ್ತ್ರಾಲಂಕಾರಗಳಿಂದ ಶೋಭಿತವಾಗಿದ್ದ ೫ ಚಪ್ಪರಗಳಲ್ಲಿಯೂ ಪ್ರತಿಯೊಂದರಲ್ಲಿ ಐದೈದು ನಿಮಿಷ ಸಾವಧಾನದಿಂದ ಪ್ರಜೆಗಳಂ ಕಟಾಕ್ಷಿಸಿ ಮೆ|| ಅಮಲ್ದಾರ್ರವರನ್ನೂ ಲೋಕಲ್ ಅಲ್ಲಿನ ಪಟೇಲ್ ಮುಂತಾದ ಪ್ರಮುಖರಸ್ಥಿತಿಯಂ ಪರಾಂಬರಿಸಿ ೯ ಘಂಟೆಗೆ ಬಸದಿಯ ಪಶ್ಚಿಮಭಾಗದಲ್ಲಿ ನಿರ್ಮಿತವಾಗಿದ್ದ ಮಂಟಪಕ್ಕೆ ಸವಾರಿ ಚಿತ್ತೈಸುವಷ್ಟರಲ್ಲಿ ಶ್ರೀಸೌಮ್ಯಕೇಶವಸ್ವಾಮಿಯವರ ಶ್ರೀಕಾರಿಯು ಪೂರ್ಣಕುಂಭ ಮುಂತಾದ ಬಿರುದುಗಳ ಸಮೇತ ಬಂದು ಸೇರಿದ್ದಲ್ಲದೆ, ಪಂಡಿತರುಗಳಿಂದಲೂ ಶ್ರೀಯವರ ದೇವಸ್ಥಾನದ ಕೈಂಕರ್ಯಪರರ ದಿವ್ಯಪ್ರಬಂಧ ಮುಂತಾದ ವೇದ ಘೋಷಗಳಿಂದಲೂ ನೃತ್ಯಗೀತ ವಾದಿತ್ರಾದಿಗಳಿಂದಲೂ, ವಾದ್ಯಘೋಷಗಳಿಂದಲೂ ಪೂರಿತವಾದ ಈ ಮಂಟಪದಲ್ಲಿ ನಿಂತು ಶ್ರೀ ಹರಿಯಿಂದ ಅನುಗ್ರಹಿಸಲ್ಪಡಲು ಮಧ್ಯದಲ್ಲಿ ಇಲ್ಲದೆ ಅನಾನುಕೂಲತೆಯನ್ನು ಬಹುವಿನಯ ಸಂಪತ್ತಿ ಇಂದೊಡಗೂಡಿದ ಸುಕೋಮಲದೊಡನೆ ಮೆ|| ಅಮಲ್ದಾರರಿಗೆ ತಿಳಿಸಿ, ಬ್ರಾಹ್ಮಣರ ಅನುಗ್ರಹಪೂರ್ವಕವಾದ ಫಲ ಮಂತ್ರಾಕ್ಷತೆಗಳಂ ಸ್ವೀಕರಿಸಿ ಅಲ್ಲಿದ್ದ ಉದ್ಯೋಗಸ್ಥರಿಂದಲೂ, ನಮಿಯ ಬಳಿ ಹಾಕಲ್ಪಟ್ಟಿದ್ದ ಚಪ್ಪರಗಳಲ್ಲಿ ನೆರದಿದ್ದ ಪಟೇಲರು ಮುಂತಾದ ದೊಡ್ಡಮನುಷ್ಯರು ಸಾಹುಕಾರರಿಂದಲೂ ಒಪ್ಪಿಸಲ್ಪಟ್ಟ ನಜರ್ ಮುಜರೆಗಳಂ ಕಟಾಕ್ಷಿಸಿ ಇಂದ್ರಭವನದೋಪಾದಿಯಲ್ಲಿ ಅಲಂಕರಿಸಲ್ಪಟ್ಟಿದ್ದ ಬಂಗ್ಲೆಯಂ ಪ್ರವೇಶಮಾಡಿದರು. ಕೂಡ್ಲೆ ಮೆ|| ಅಮಲ್ದಾರರು ಮತ್ತು ರೆವಿನ್ಯೂ ಸೂಪರಿಂಟೆಂಡೆಂಟರಾದ ಮೆ|| ತಮ್ಮಯ್ಯನವರು ಮುಂತಾದವರಿಂದ ಒಪ್ಪಿಸಲ್ಪಟ್ಟ ಬಹುವಿಧ ಫಲಪುಷ್ಪಗಳಂ ಅಂಗೀಕರಿಸಿದರು.

೨. ಆ ಮೇಲೆ ೧೧½ ಘಂಟೆಗೆ ಸರಿಯಾಗಿ ಶ್ರೀಮನ್ಮಹಾರಾಜರವರು, ಅವರ ಹಿಂದೆ ಹಾದಚಾರಿಗಳಾಗಿ ಪಿರ್ಸಾಸಾಹೇಬರವರು, ಚೀಫ್ ಸೆಕ್ರಟರಿಗಳು ಮುಂತಾದ ಪರಿಜನಗಳು ಸಹ ಮಡಿಯಿಂದಲೇ ಶ್ರೀ ಸೌಮ್ಯಕೇಶವ ಸ್ವಾಮಿ ಸಂದರ್ಶನಾರ್ಥ ದಯಮಾಡಲು, ಮಹಾರಾಜರವರು ಮಾತ್ರ ದೇವಾಲಯದ ಗೋಪುರ ದ್ವಾರದಲ್ಲಿ ಜೇರೆ ಮಡಿಯನ್ನು ಧರಿಸಿ ಒಳಗೆ ಪ್ರದಕ್ಷಿಣೆಯಿಂದ ಭಕ್ತಿಯೊಡನೆ ದೇವರಸೇವೆಯಂ ಮಾಡಿ ತೀರ್ಥಪ್ರಸಾದಗಳನ್ನಂಗೀಕರಿಸಿ, ರಂಗನಾಯಕ ಮಹೇಶ್ವರಿಯ ವಿಗ್ರಹಗಳು ಲತೆಗಳು ಮುಂತಾದವುಗಳನ್ನು ನೋಡುವದಕ್ಕೆ ಬರುತ್ತಿರುವುದರೊಡನೆ ಶ್ರೀಲಕ್ಷ್ಮೀಕಾಂತನಸ್ವಾಮಿ ಅಮಲ್ದಾರ್ರವರ ವೃದ್ಧೇಶಸಭೆಗೊಳಿಸಿ ಸಿದ್ಧಪಡಿಸಿದ್ದ ಉಪಾಯದನುಕೂಲಕ ಮಹಾರಾಜರವರು ಅವರ ಪರಿಜನಗಳು ಸಹ ಎರಡು ಘಂಟೆಯ ಕಾಲ ಪರಾಂಬರಿಸಿ ಈ ಏಕಾಂತ ಸ್ಥಾನದಿ ಯಥಾಪ್ರಕಾರ ಆಸ್ಥಾನಕ್ಕೆ ದಯಮಾಡಿದರು. ಆ ಕಾಲಕ್ಕೆ ಸರಿಯಾಗಿ ಭಗವನ್ನಿವೇದಿತವಾದ ಬಹುವಿಧ ಭಕ್ಷ್ಯಗಳು ಪಕ್ವಾನ್ನಗಳು ಮುಂತಾಗಿ ಉಚಿತ ಮರ್ಯಾದೆಯಿಂದ ಬಂದದನ್ನು ಶ್ರೀಮನ್ಮಹಾರಾಜರವರು ಪಿವಾನರವರು ಮುಂತಾಗಿ ಎಲ್ಲರು ವಿಶ್ವಾಸದೊಡನೆ ಅಂಗೀಕರಿಸಿ ಹರ್ಷಿತರಾದರು.

೩. ದೇವಸ್ಥಾನದ ದಕ್ಷಿಣ ಪಾರ್ಶ್ವದಲ್ಲಿ ಸುಮಾರು ೨೦—೩೦ ಸಾವಿರ ರೂಪಾಯಿಗಳ ಲಾಗವಿನಿಂದ ನವರಾತ್ರಿಯಲ್ಲಿ ಶ್ರೀ ಸ್ವಾಮಿಯವರ ಉತ್ಸವಕ್ಕಾಗಿ ಪೂರ್ವರಾಜರಿಂದ ನಿರ್ಮಿತವಾಗಿದ್ದ ಕಲ್ಲುಮಂಟಪವು ದನಗಳಡೊಡ್ಡಿಗೆ ಗುರಿಯಾಗಿ ಬೀಳುವಸ್ಥಿತಿಗೆ ಬಂದದ್ದನ್ನು ಈ ಸಮಯದಲ್ಲಿ ನಮ್ಮ ಅಮಲ್ದಾರರವರು ಪ್ರಜೆಗಳಂ ಪ್ರೇರಿಸಿ, ಕಟ್ಟುವದಕ್ಕೆ ಅಪಾಯವಿಲ್ಲದಂತೆ ರಿಪೇರಿ ಮಾಡಿಸಿ ಆ ಮಂಟಪದ ಮುಂದೆ ಬಹು ವಿಚಿತ್ರವಾದ ವಸ್ತ್ರಾಲಂಕಾರಗಳೊಡನೆ ಚಪ್ಪರವನ್ನು ನಿರ್ಮಿಸಿದ್ದರು. ಶ್ರೀಮನ್ಮಹಾರಾಜರವರು ಅವರ ಪರಿಜನರು ಸಹ ಸಾಯಂಕಾಲ ೬ ಘಂಟೆಗೆ, ಬಂಗ್ಲೆಯಿಂದ ಸವಾರೀ ಆನೆಯ ಮೇಲೆ ತಮ್ಮ ಅಣ್ಣಂದರು ಮತ್ತು ಭಾವಮೈದುನರೊಡನೆಯೂ, ಇತರ ಆನೆಗಳ ಮೇಲೆ ಪಿರ್ಸಾ ಸಾಹೇಬರವರು, ಚೀಫ್ ಸೆಕ್ರೆಟರಿಯವರು ಇನ್ನು ಇತರ ಯೂರೋಪಿಯನ್ ದೊಡ್ಡಮನುಷ್ಯರು, ಈ ರೀತಿ ಜಯಮಾಡುವಲ್ಲಿ, ಎಡಬಲದೆ ಸಾಲ್ ದೀವಿಗೆಗಳು, ನೂರಾರು ಹಿಲಾಲ್‌ಗಳು, ನಾಲ್ಕಾರು ಕಡೆ ಮಹತಾಪುಗಳ ಬೆಳಕುಗಳು, ಇವುಗಳ ದೆಸೆಯಿಂದ ಈ ದಿವಸ ಅಮಾವಾಸ್ಯೆಯಾದರೂ ಶುದ್ಧ ಪೌರ್ಣಮಿಯೆಂಬ ಭ್ರಾಂತಿಯನ್ನುಂಟುಮಾಡುತಲಿತ್ತು. ಅಲ್ಲಿ ತಾಳಿ ಮೊದಲಾದ ಉತ್ಸವ ಸಂಭ್ರಮದೊಡನೆ ೮ ಘಂಟೆಗೆ ಸರಿಯಾಗಿ, ದರ್ಬಾರಿಗೋಸ್ಕರ ನಿರ್ಮಿತವಾಗಿದ್ದ ಚಪ್ಪರಕ್ಕೆ ದಯಮಾಡಿ, ಕಲ್ಲುಮಂಟಪವನ್ನು ರಾಜಾವರ್ತ ಬಣ್ಣದಿಂದ ಅಲಂಕರಿಸಿ, ಬೆಳ್ಳಿ ಭಂಗಾರದಿಂದ ನಿರ್ಮಿಸಿದ್ದ ಸಿಂಹಾಸನವನ್ನು ಅಲಂಕರಿಸಿ, ಪರಿಜನರು ಅವರವರ ಉಚಿತಸ್ಥಾನಗಳನ್ನು ಸ್ವೀಕರಿಸಲು ನೇಮಿಸಿದರು. ಕೂಡ್ಲೆ ಪ್ರಥಮತಃ ಅಮಲ್ದಾರರವರು ನಜರ್ ಮುಜರೆಯನ್ನು ಮಾಡಿ, ಅನಂತರ ಇಲ್ಲಿನ ದೊಡ್ಡಮನುಷ್ಯರಿಗೆಲ್ಲ ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ಅವರವರ ಯೋಗ್ಯತಾನುಗುಣವಾದ ಸುಗುಣಗಳನ್ನು ನಮ್ರತೆಯೊಡನೆ ವಿಜ್ಞಾಪಿಸಿ, ಅವರೆಲ್ಲರು ತಮ್ಮ ತಮ್ಮ ನಜರ್ ಮುಜರೆಗಳನ್ನು ಒಪ್ಪಿಸಿದನಂತರ ಸುಸ್ವರತೆಯಿಂದ ನಿರ್ಮಿತವಾದ ವಿಜ್ಞಾಪನ ಪತ್ರಿಕೆಯಂ ಪಂಡಿತರಾದ ಮ|| ರಾ|| ಶ್ರೀ ರಘುನಾಥಾಚಾರ್ಯರವರೂ, ಕನ್ನಡ ಪತ್ರಿಕೆಯಂ ಪ್ರಸಿಡೆಂಟ್ ಮೆ|| ತಮ್ಮಯ್ಯನವರೂ ಗಂಭೀರವಾಗಿ ಓದಿ, ವಿಚಿತ್ರವಾಗಿ ನೂತನ ಕೆಲಸ ಮಾಡಿದ್ದ ಗಂಧದ ಪೆಟ್ಟಿಗೆಯಲ್ಲಿಟ್ಟು ಕಿನ್ನಾಪ್ ಗಳಿಂದ ಆಚ್ಛಾದನೆಮಾಡಿ ಒಪ್ಪಿಸಿದ್ದನ್ನು ಶ್ರೀಮನ್ಮಹಾರಾಜರವರು ಸ್ವತಃ ಅಂಗೀಕರಿಸಿ, ವಿಜ್ಞಾಪನ ಪತ್ರಿಕೆಗೆ ಉತ್ತರವನ್ನೀಯುವಂತೆ ನೇಮಿಸಿದಪ್ರಕಾರ ದಿವಾನರವರು ಎದ್ದು ವಿಜ್ಞಾಪನಪತ್ರಿಕೆಯಲ್ಲಿ ಕಂಡಬರೀ ನದಿಯ ನೇತುವೆಯನ್ನು ಸೌಮ್ಯಕೇಶವ ಸ್ವಾಮಿ ದೇವಸ್ಥಾನದ ವಿಮಾನವನ್ನೂ, ನಿರ್ಮಿಸುವ ವಿಷಯದಲ್ಲಿ ಶ್ರೀಮನ್ಮಹಾರಾಜರವರು ಕುತೂಹಲ ಮನಸ್ಕರಾಗಿರುವಂತೆ ಸೂಚಿಸಿದರು. ಅನಂತರ ಕರಾಸ್ಫಾಲನ ಮಾಡಲ್ಪಟ್ಟಿತು. ಆ ಕಾಲದಲ್ಲಿ ಶ್ರೀಮನ್ಮಹಾರಾಜರವರ ಸಭೆಯು ಇಂದ್ರಸಭೆಗೆ ಸದೃಶವಾಗಿತ್ತೆಂದು ಸರ್ವರೂ ಸಂತೋಷದಾರವಶ್ಯತೆಯಿಂದ ಮಹಾರಾಜರವರಿಗೆ ಸದಾ ಮಂಗಳವುಂಟಾಗಲೆಂದು ಪ್ರಾರ್ಥಿಸಿದರು. ಶ್ರೀಮನ್ಮಹಾರಾಜರವರು ತಮ್ಮ ಪರಿಜನರಲ್ಲಿ ಯೂರೋಪಿಯನ್ನರನ್ನು ಬಿಟ್ಟು ಬಾಕೀಯವರೊಡನೆ ಅಲ್ಲಿಂದ ತೋಟೋತ್ಸವಕ್ಕೆ ದಯಮಾಡಿ ಸ್ವಾಮಿ ಸೇವೆಯಿಂದ ತೃಪ್ತರಾಗಿ ಪೂಜ್ಯರಾದ ಶ್ರೀ|| ಉ|| ವೇ|| ರಾಮಯ್ಯಂಗಾರ್ಯರ ಆಶೀರ್ವಾದವನ್ನು ಅಂಗೀಕರಿಸಿ, ಪುನಃ ಆನೆಯ ಮೇಲೆ ಜಿಜಯಂಗೈದು ಪೂರ್ವದಂತೆ ಉತ್ಸವದೊಡನೆ ಈ ಪಟ್ಟಣದ ೪ ಬೀದಿಗಳಲ್ಲಿಯೂ ದಯಮಾಡಿ ವಿಷ್ಣುಸಮುದ್ರ ಸವಿಾಪದಲ್ಲಿ ನಡೆದ ಬಾಣವಿನೋದಗಳನ್ನೀಕ್ಷಿಸಿ ಸುಮಾರು ೧೧ ಘಂಟೆಗೆ ಬಂಗ್ಲೆಗೆ ದಯಮಾಡಿ ಕೂಡ್ಲೆ ಸವಿಾಪದಲ್ಲಿದ್ದ ಅಮಲ್ದಾರರನ್ನು ಕರೆದು, ನೀವು ನಡೆಸಿದ ದೀಪೋತ್ಸವ ಮುಂತಾದ ಉತ್ಸವ ವಿಶೇಷಗಳು ಬಹು ಚೆನ್ನಾಗಿದ್ದು. ನಮಗೆ ಸ್ವಲ್ಪ ಶೀತಾಸ್ಪದವಾಗಿಲ್ಲದಿದ್ದರೆ ಇನ್ನು ಸಾವಕಾಶವಾಗಿರಬಹುದಾಗಿತ್ತೆಂದು ಅಪ್ಪಣೆಯಿತ್ತು, ಈ ಸುಬೇದಾರ್ರವರು ಈ ತಾಲ್ಲೂಕಿಗೆ ಬಂದಮೇಲೆ ನೆಮ್ಮದಿಯಾಗಿರುವಂತೆ ಪ್ರೋತ್ಸಾಹಪಡಿಸಿ, ಅವರಲ್ಲಿ ಯಜಮಾನ್ಯವುವಹಿಸಿದ್ದವರಾದ ಈ ರಶೆಟ್ಟರಿಂದ ತಯಾರಾಗಿ ಸಿದ್ಧ ಬಹುವಿಧಚೀಟಿಗಳು ಕಂಬಳಿ ದೋಪಿಗಳು ದರ್ಬಾರ್ ಕಾಲದಲ್ಲಿ ಒಪ್ಪಿಸಲ್ಪಡಲು ಅದು ಹರ್ಷದಿಂದ ಅಂಗೀಕರಿಸಿ, ಈರಶೆಟ್ಟರಿಗೆ ರೇಷ್ಮೇ ಕಲಾಬತ್ತಿಗಳಿಂದ ಮಾಡಿದ ಹುವ್ವಿನ ಹಚ್ಚಡ ಒಂದನ್ನು ಶ್ರೀಮನ್ಮಹಾರಾಜರವರು ದಯಮಾಡಿದರು. ಇಂತಾ ವಿಶೇಷಗಳು ನಮ್ಮ ಭಾಗ್ಯವಿಶೇಷದಿಂದ ಲಭಿಸಿತೆಂದು ಈ ಮಹೋತ್ಸವಕ್ಕೆ ಬಂದಿದ್ದ ಸುಮಾರು ೨೦-೩೦ ಸಾವಿರ ಪ್ರಜೆಗಳು ಏಕರೂಪವಾಗಿ ಕೊಂಡಾಡಿದರು.

೪. ತಾರೀಖ್ ೬ನೇ ಪ್ರಾತಃಕಾಲ ೬½ ಘಂಟೆಗೆ ಅಮಲ್ದಾರ್ರವರು ಅರ್ಪಿಸಿದ ಪುಷ್ಪ ತಾಂಬೂಲಗಳನ್ನು ಮುಗುಳ ನಗೆಯೊಡನೆ ಅಂಗೀಕರಿಸಿ, ಹಳೇಬೀದಿಗೆ ದಯಮಾಡುವಲ್ಲಿ ಮಧ್ಯೆ ರಚಿಸಿದ್ದ ವಿಚಿತ್ರವಾದ ನಾಲ್ಕು ಮಂಟಪಗಳಲ್ಲಿಯೂ ಕಾದಿದ್ದ ಪಟೇಲ್ ಮುಂತಾದ ರೈತರುಗಳು ಅಮಲ್ದಾರರ ಮೂಲಕ ಒಪ್ಪಿಸಿದ ಫಲಪುಷ್ಪಗಳನ್ನಂಗೀಕರಿಸಿ ೮½ ಘಂಟೆಗೆ ದಯಮಾಡಿದರು. ಕೂಡ್ಲೆ ಅಲ್ಲಿದ್ದ ಜನರ ನಜರ್ ಮುಜರೆಗಳನ್ನು ಅಂಗೀಕರಿಸಿ ದೇವಸ್ಥಾನದ ವಿಚಿತ್ರವಾದ ಶಿಲ್ಪ ಕೆಲಸವನ್ನು ೧೧ ಘಂಟೆಯ ವರೆವಿಗೆ ಪರಾಂಬರಿಸಿ ಡೇರೆಗೆ ದಯಮಾಡಿದರು. ಅನಂತರ ನಾಲ್ಕು ಘಂಟೆಗೆ ಅಲ್ಲಿಗೆ ಅರ್ಧಮೈಲಿನಲ್ಲಿರುವ ಕೇದಾರೇಶ್ವರ ದೇವಸ್ಥಾನ ಬಸ್ತಿ ಮುಂತಾದ್ದನ್ನು ಪರಾಂಬರಿಸಿ ವಾಪಸ್ ದಯಮಾಡಿದರು.

೫. ತಾರೀಖ್ ೭ನೇ ಪ್ರಾತಃಕಾಲ ಪುನಃ ಕೇದಾರೇಶ್ವರದೇವಸ್ಥಾನಕ್ಕೆ ದಯಮಾಡಿ ಅದರ ಆವರಣದಲ್ಲಿ ಶ್ರೀಮನ್ಮಹಾರಾಜರವರು ಮುಂದಾಗಿ, ನಮ್ಮ ಸಬ್‌ಡಿವಿಜನ್ ಸಾಹೇಬರವರನ್ನೂ, ಅಮಲ್ದಾರರನ್ನೂ, ಅರಮನೆ ಅಸಿಸ್ಟೆಂಟ್ ನರಸಿಂಹಯ್ಯಂಗಾರ್ಯರನ್ನೂ, ಅಸಿಸ್ಟೆಂಟ್ ಇಂಜನಿಯರ್ ರಂಗರಾಯರವರನ್ನು ಸಹ ನಿಲ್ಲಿಸಿ ಫೋಟೋ ತೆಗೆದುಕೊಂಡರು. ಅನಂತರ ಫಲಪುಷ್ಪ ತಾಂಬೂಲಗಳನ್ನು ಮೆ|| ಅಮಲ್ದಾರ್ರವರಿಂದ ಸ್ವೀಕರಿಸಿ, ಹಸನ್ಮುಖರಾಗಿ ಮೆ|| ಅಮಲ್ದಾರ್ರವರಿಗೆ ಅವರ ಕಾರ್ಯಕುಶಲತೆಯಿಂದ ಉಂಟಾದ ತೃಪ್ತಿಯನ್ನು ಸೂಚಿಸಿ ಜಾವಗಲ್ಲಿಗೆ ದಯಮಾಡಿದರು.

[illegible]

ಚಿಕ್ಕಮಗಳೂರು ನಿವಾಸಿಗಳಿಂದ ಶ್ರೀಮನ್ ಮಹಾರಾಜರವರಿಗೆ ದರ್ಬಾರ್ ಕಾಲದಲ್ಲಿ ಒಪ್ಪಿಸಲ್ಪಟ್ಟ ಅಡ್ರೆಸ್.

[illegible]

ಇಂದ್ರಸಭೆ ನಾಟ್ಯಸಹಾದು.

[illegible]

THE ANNEXATION OF UPPER BURMAH.

[illegible]

BANGALORE.—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮುವಿವಿಧಪ್ರವೃತ್ತ್ಯನಗವಾರ್ತ್ತಾ ಕರ್ಣಾಟಕಪ್ರಕಾಶನಪರಾಭಿದಾಪ್ರಥಿತಸಾಹಿತೀಕೊಭಿತಾ ॥ ಮೃಗಾಂಕಹಿತವಾಸರೆನಿಹಿತಮುದ್ರಣಾಸಜ್ಜಸ್ಸೈರ್ದ್ದಿಶಾಸುಪರಿಪೂಟಿತಾದಿಶತಿಮಾನಸಂಸುಮುದಂ

Vol. XIII] BANGALORE.—MONDAY, JANUARY 25, 1886. [No. 4.

ಸಂಪುಟ ೧೩.] ಬೆಂಗಳೂರು:—ಸೇ ೧೮೮೬ನೇ ಇಸವಿ ಜನವರಿ ೨೫ನೇ ತಾರೀಖು ಸೋಮವಾರ. [ಸಂಚಿಕೆ ೪

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

[illegible] ವರುಷ ೧ಕ್ಕೆ	೧—೦—೦
[illegible] ವರುಷ ೧ಕ್ಕೆ ...	೬—೦—೦
[illegible]	೬—೦—೧
[illegible] ೧ಕ್ಕೆ	೦—೮—೦

[illegible]

ಪ್ರಕಟನೆಯ ರಿವಾಜು.

[illegible]	೧ಕ್ಕೆ	೦—೨—೦
ಮೆರಡನೇದಫೆ [illegible]	೧ಕ್ಕೆ	೦—೧—೦

NOTICE TO SUBSCRIBERS

[illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA.

Price including Postage, Rs 5-0-0

ವೈದ್ಯಸಾರ ಸಂಗ್ರಹ.

[illegible]

[illegible] ... ... ರೂ||	೫—೦—೦
[illegible]	೦—೬—೦

[illegible] ವೆಂಕಟಾಚಾರ್, ಅಪ್ಸರಿ [illegible], ಬೆಂಗಳೂರು

ನೋಟೀಸ್.

[illegible] ಕರ್ಣಾಟಕ ಪ್ರಕಾಶಿಕಾ [illegible]

ಕನ್ನಡ [illegible] ಗ್ರಂಥಗಳು.	
[illegible] ...	೧—೮—೦
[illegible] ...	೦—೧೨—೦
[illegible] ([illegible]) ...	೦—೩—೦
[illegible] ...	೦—೫—೦
[illegible] ...	೦—೪—೦
[illegible] ...	೦—೧೪—೦
[illegible] ...	೦—೮—೦
[illegible] ...	೦—೬—೦
ವೈದ್ಯಸಾರಸಂಗ್ರಹ ...	೫—೦—೦
ಕನ್ನಡ ಗ್ರಂಥಗಳು.	
[illegible] ...	೦—೮—೦
[illegible] ...	೦—೪—೦
[illegible] ...	೦—೩—೬
[illegible]	೦—೨—೬
[illegible] ...	೦—೪—೦
[illegible] ...	೦—೨—೨
[illegible] ...	೦—೨—೬
[illegible] ...	೦—೮—೦
[illegible] ...	೦—೩—೦
[illegible] ...	೦—೨—೧
[illegible] ...	೦—೦—೨
[illegible]	೧—೧—೦
[illegible] ...	೨—೦—೦
[illegible] ...	೦—೧೨—೦
[illegible] ...	೩—೪—೬
[illegible] ...	೩—೪—೬
[illegible]	
[illegible] ...	೦—೮—೦
[illegible] ...	೦—೮—೦
[illegible] ...	೦—೮—೦
[illegible] ಗ್ರಂಥಗಳು	
[illegible] ...	೦—೫—೦
[illegible] ...	೦—೨—೬
[illegible] ...	೦—೨—೬
[illegible] ...	೦—೦—೬
[illegible] ...	೦—೧—೬
[illegible] ...	೦—೧—೦

[illegible]

NOTICE.

ಎಸ್. ರಾಮಸ್ವಾಮಯಂಗಾರ್ ಕಂಪೆನಿ.

ಜನರಲ್ ಕಮ್ಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗದುಕೊಳ್ಳಲ್ಪಡುವದು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JANUARY 25, 1886.

೧೮೮೬ನೇ ಜನವರಿ ೨೫ನೇ ತಾ|| ಸೋಮವಾರ

ಶ್ಲೋ|| ಸರ್ವಜ್ಞತಾಂಸರಸಿವಾಕ್ಯಸುತಾಂಪ್ರಸೂತೆ ನಾಶೀಶ್ವರಮುಪ್ರಿಸರಸೀರುಹಮೊಪ್ರಣಾಮಳ್ಯತ್ಸ್ವಾಸು ಜಪೆನಿಮೂಲ್ಪನುಸುಕೃರಾಮಿ ಪ್ರಾಮೆನಸೌಮಿಪರ ಣಾಜನರ್ಸೆತ್ಸ್ವಮಿವ|

OPENING OF PARLIAMENT.

ಪಾರ್ಲಿಮೆಂಟ್ ಸಭೆ ನಿಸ್ಸ್ರ.

THE QUEEN'S SPEECH.

ಮಹಾರಾಜ್ಞೀಯವರ ಪ್ರಸಂಗ.

ಲಂಡನ್, ತಾರೀಖು ೨೧ನೇ ಜನವರಿ, ೧೮೮೬.

ಈ ದಿನ ಪಾರ್ಲಿಮೆಂಟ್‌ಸಭೆಯನ್ನು ಶ್ರೀಮತ್ ಮಹಾರಾಜ್ಞೀಯವರು ಬುದ್ಧಿ ನಿಸ್ಸ್ರ ಮಾಡಿದರು. ಪರಂತು ಆಕೆಯವರ ಪ್ರಸಂಗವು ಲಾರ್ಡ್ ಚಾನ್ಸಲರವರಿಂದ ಓದಲ್ಪಟ್ಟಿತು. ಸದರೀ ಪ್ರಸಂಗದ ಸಾರಾಂಶ ವೇನಂದರೆ —ಈಗ ಅನ್ಯಸಂಸ್ಥಾನಾಧಿಪತಿಗಳಲ್ಲಿ ನೆಲೆಸಿರುವ ನಮ್ಮ ಸಂಬಂಧವು ಸ್ನೇಹಭಾವವುಳ್ಳದ್ದಾಗಿರುತಿದೆ. ಅಫ್ಘಾನಿಸ್ತಾನ್ ಸರಹದ್ದು ವಿಷಯದಲ್ಲಿ ರಷ್ಯಾ ಸರ್ಕಾರದವರೊಡನೆ ನಮಗೆ ಪ್ರಂಟಾಗಿದ್ದ ತಕರಾರ್‌ಗಳು ತೃಪ್ತಿಕರವಾಗಿಯೇ ವ್ಯವಸ್ಥೆಯನ್ನೈದುವವು. ರಷ್ಯಾ ಸರ್ಕಾರದವರೊಡನೆ ಪರ್ಯಾಲೋಚಿಸುತ ಸರಹದ್ದು ವ್ಯವಸ್ಥಾಪಕರಾದ ಕಮ್ಮಿಷನರ್‌ಗಳು ಎಲ್ಲೆಕಟ್ಟುಗಳನ್ನು ವಿಂಗಡಿಸುವದರೊಳು ನಿರತರಾಗಿದ್ದಾರೆ. ಈ ಕೆಲಸ ಇದುವರಿನಿಗೆ ಬಹಳಮಟ್ಟಿಗೆ ನಡೆದಿರಬಹುದೆಂದು ನಾವು ನಂಬುತ್ತೇವೆ. ಇದರಿಂದೆಯೆಂದ ಮಧ್ಯಏಷ್ಯಾ ಖಂಡದೊಳು ಸಾರ್ವತ್ರಿಕವಾದ ಸಮಾಧಾನಸ್ಥಿತಿಯು ನೆಲೆಗೊಳ್ಳಲಿಕ್ಕೆ ಕಾರಣವಾಗುವದು. ರೌಮೇಲಿಯಾ ತುರ್ಕಿಯ ವಿಷಯದಲ್ಲಿ ಸಮಾಧಾನಪೂರ್ವಕ ವ್ಯವಸ್ಥೆಯನ್ನೈದಿಸುವದರೊಳು ನಮ್ಮ ಮುಖ್ಯೋದ್ದೇಶವೇನಂದರೆ —ಸುಲ್ತಾನರವರ ಪ್ರಾಧಾನ್ಯವಾದ ಸ್ವಾತಂತ್ರ್ಯವನ್ನು ದೃಢವಾಗಿ ಕಾಪಾಡುವಲ್ಲಿ ಸದರೀ ತುಕಡಿಯ ಪ್ರಜೆಗಳ ಅಭೀಷ್ಟದಂತೆ ಸಹ ನಡಿಸಬೇಕೆಂಬದು. ಖಿದೈವಿಯವರೊಡನೆ ಪರ್ಯಾಲೋಚಿಸಿ ಸ್ಥಿರವಾದ ಮತ್ತು ಸಮರ್ಥವಾದ ಆದಿಪತ್ಯದೊಡನೆ ಈಜಿಪ್ಟ್ ರಾಜ್ಯದ ಸಂರಕ್ಷಣೆಯಬಗ್ಗೆ ಆವಶ್ಯಕಗಳಾದ ಏರ್ಪಾಡುಗಳೆಂದಾದಿ ತಿಳಿಸಲಿಕ್ಕೆ ತುರ್ಕೀಸಂಸ್ಥಾನದವರ ಅಭಿಮತದಮೇಲೆ ವಿಶೇಷಕಾ ಕಮ್ಮಿಷನರ್‌ಗಳು ನೇಮಕದಲ್ಪಟ್ಟಿದ್ದಾರೆ. ತೀಬಾ ಅರಸರೊಡನೆ ನಮಗೆ ಯುದ್ಧ ಸಂಪ್ರಾಪ್ತವಾದದಕ್ಕಾಗಿ ನಾವು ಬಹಳ ವಿಷಾದಿಸುತ್ತೇವೆ. ಪರಂತು ಸದರೀ ಅರಸರು, ಪಬ್ಲಿಕ್ ಕ್ಲಾಡ್ ದು ಮೊದಲು, ಅವಿಚ್ಛಿನ್ನವಾಗಿ, ನಮ್ಮ ಪ್ರಜೆಗಳಿಗೂ, ನಮ್ಮದೇಶದ ಪ್ರಯೋಜನಕ್ಕೂ ಸಾಕ್ಷಾದ್ವಿರುದ್ಧಕೃತ್ಯಗಳನ್ನೇ ನಡೆಸುತಬಂದರಾದದರಿಂದ, ನಮ್ಮ ಪ್ರತಿನಿಧಿಯಂ ವಾಪಸ್ ಕರೆಯಿಸಿಕೊಳ್ಳಬೇಕಾಯಿತಲ್ಲದೆ ಅಬಗ್ಗೆ ಪರಿಹಾರವನ್ನಪೇಕ್ಷಿಸಲು ಅದು ಕ್ರಮಪ್ರಕಾರ ಅಗೌರವದೊಡನೆನಿರಾಕರಿಸಲ್ಪಟ್ಟಿತು. ಬ್ರಿಟಿಷ್ ಪ್ರಜೆಗಳ ಸ್ವತ್ತುಗಳನ್ನು ಜಪ್ತೀ ಮಾಡಬೇಕೆಂದೆತ್ನಿಸಿ ದಾಗ್ಯೆ ತೀಬಾ ಅರಸರು ಮಾಧ್ಯಸ್ಥ್ಯವನಿರಾಕರಿಸಿದರು. ಬರ್ಮಾರಾಜ್ಯದಲ್ಲಿರುವ ಬ್ರಿಟಿಷ್ ಪ್ರಜೆಗಳ ಪ್ರಾಣಮಾನ ಧನಗಳಸಂರಕ್ಷಣೆಯೂ ಬರ್ಮಾರಾಜ್ಯದ ಮೇಲ್ಭಾಗದೊಳು ನೆಲೆಗೊಂಡಿದ್ದ ಅರಾಜಕ ಪ್ರಯುಕ್ತವಾದ ಅಪಾಯಸ್ಥಿತಿ ನಿಸ್ಸೃತ್ತಿಯೂ, ಆಯುಧಬಲದಿಂದಲೇ ಸಾಧ್ಯವಾಗತಕ್ಕದ್ದೆಂದು ಸದರೀಯವರ ವರ್ತನೆಗಳಿಂದ ನಾವು ನಿರ್ಧರಿಸಬೇಕಾದವರಾದೆವು. ಜನರಲ್ ಪ್ರೆಂಡರ್ ಗ್ಯಾಸ್ಟ್‌ಯವರ ಸೇನಾಧ್ಯಕ್ಷತೆಗೆ ಒಳಪಟ್ಟ ಯೂರೋಪಿಯನ್ ಮತ್ತು ನೇಟಿವ್ ಸೈನ್ಯಗಳ ಧೈರ್ಯಸಾಹಸಗಳಮೂಲಕ ಬರ್ಮಾರಾಜ್ಯವು ಕೂಡಲೇ ಸ್ವಾಧೀನವಾಯಿತು. ಉತ್ತರ ಬರ್ಮಾದೇಶದೊಳು ಸುಖಸ್ಥಿತಿಯನ್ನುಂಟುಮಾಡಲಿಕ್ಕೆ ಅದನ್ನು ನಮ್ಮ ರಾಜ್ಯದೊಡನೆ ಶಾಶ್ವತವಾಗಿ ಸೇರಿಸಿಕೊಳ್ಳುವದರಮೂಲಕ ಸಾಧ್ಯವಾಗತಕ್ಕದ್ದೆಂದು ನಾವು ನಿರ್ಣಯಿಸಿರುತ್ತೇವೆ. ಇಂಡ್ಯದೇಶಾಧಿಪತ್ಯವು ನಾವು ಸ್ವತಃ ಸ್ವೀಕರಿಸಿದ್ದು ಮೊದಲು ಇದುವರಿವಿಗೆ ಗತಿಸಿದ ಕಾಲವನ್ನಾಲೋಚಿಸಲಾಗಿ, ಯಾವ ಆಕ್ಟಿನದೆಸೆಯಿಂದ ಆ ರಾಜ್ಯಾಧಿಪತ್ಯವು ನಮ್ಮ ಸುಪರ್ದಾಯಿತೋ ಅಂತಾ ಆಕ್ಟು ಈಗ ಅಲ್ಲಿ ಹ್ಯಾಗೆ ಆಚರಣೆಯೊಳವೆಯೆಂಬದನ್ನು ವಿಚಾರಿಸಬೇಕಾದ್ದು ಆವಶ್ಯಕವಾಗಿರುತಿದೆ. ಈಗ ಕೃಷಿವಾಣಿಜ್ಯಗಳು ಅಭಿವೃದ್ಧಿಯನ್ನೈದದಬಗ್ಗೆ ನಾವು ಕೇವಲ ವಿಷಾದಿಸುವೆವು. ಐರ್ಲ್ಯಾಂಡ್‌ರಾಜ್ಯದ ಪ್ರಜೆಗಳಿಗೆ ಆಗ್ರಹವನ್ನುಂಟುಮಾಡುವ ಪ್ರಯತ್ನಗಳು ಮರಳಿ ನಡೆಸಲ್ಪಡುವದನ್ನೂ, ಸಂಯುಕ್ತ ರಾಜ್ಯಸಂಬಂಧವಿಷಯದೊಳು ವ್ಯಕ್ತಪಡಿಸಲ್ಪಡುವ ವಿದ್ವೇಷವನ್ನೂ ಕಂಡು ವಿಷಾದಿಸುತ್ತೇವೆ. ಸಂಯುಕ್ತ ರಾಜ್ಯಸಂಬಂಧ ಯಾವ ಆಕ್ಟಿನ ಮುಖ್ಯಬಲದಿಂದ ಪ್ರಂಟಾಯಿತೋ ಅಂತಾ ಆಕ್ಟನ್ನು ಯಾವವಿಧದಿಂದಲೂ ಬದಲಾಯಿಸಲಿಕ್ಕೆ ನಮಗೆ ಸುತರಾಂ ತಾತ್ಪರ್ಯ ವಿರುವದಿಲ್ಲವು, ಎಂಬದು. ಮಹಾರಾಣಿಯವರು ಮತ್ತು ಅಪ್ಪಣೆಕೊಟ್ಟದ್ದೇನಂದರೆ—ನ್ಯಾಯಸಮ್ಮತವಾದ ಹಕ್ಕುದಾರಿಗಳನ್ನೂ ಪ್ರಾತಿನಿಯತವಾದ ಸ್ವಾತಂತ್ರ್ಯವನ್ನೂ ಚಲಾಯಿಸುವ ಪರದೆಸೆಯಿಂದ ಐರ್ಲ್ಯಾಂಡ್ ರಾಜ್ಯದ ಪ್ರಜೆಗಳನ್ನು ಸಂರಕ್ಷಿಸಲಿಕ್ಕೆ ಯಾವ ಪ್ರಯತ್ನವೂ ಮಾಡಲ್ಪಡಲಾರದು. ದಿನೇ ದಿನೆ ಅಭಿವೃದ್ಧಿಯನ್ನೈದುತಲಿರುವ ಕೇಡುಕುಗಳನ್ನು ನಿವಾರಿಸಲಿಕ್ಕೆ ಕಾನೂನಿನೊಳು ಈಗ ಇರತಕ್ಕ ನಿಯಮಗಳು ಅನುಗುಣವಾದವಾಗಿರದಪಕ್ಷಕ್ಕೆ ಅಬಗ್ಗೆ ಆವಶ್ಯಕಗಳಾದ ಅಧಿಕಾರಗಳನ್ನು ತಮ್ಮ ಸರ್ಕಾರಕ್ಕೆ ಕಲ್ಪಿಸುವದರೊಳು ಪಾರ್ಲಿಮೆಂಟ್ ಸಭೆಯವರ ಅಭಿಮತವನ್ನು ಕೇವಲ ನಂಬಿಕೆಯೊಡನೆ ನಿರೀಕ್ಷಿಸುತಲಿರುವೆವೆಂದು ಹೇಳಿ ಬಳಿಕ ಸದರೀ ಸಭೆಯೊಳು ನಡೆಯಬೇಕಾದ ಕೆಲವು ಮುಖ್ಯ ವಿಚಾರಣೆಗಳನ್ನು ನಮೂದಿಸಿದರು.

ಮೇಲ್‌ಕಂಡ ಮಹಾರಾಜ್ಞೀಯವರ ಪ್ರಸಂಗವು ಈಗ ಅಧಿಕಾರ ಪದದೊಳಿರುವ ಲಾರ್ಡ್ ಸಾಲಿಸ್‌ಬರಿಯವರಿಂದ ಬೋಧಿತವಾದದ್ದಾಗಿದ್ದರೂ, ಮಹಾರಾಣಿಯವರು ಸ್ವತಃ ಅಪ್ಪಣೆ ಕೊಟ್ಟದ್ದರಿಂದ ಅದರಲ್ಲಿ ಉಪಪಾದಿತವಾದ ಯಾವ ವಂಶವೂ ಆಕೆಯವರ ಹೃದಯಂಗಮವಾದ ಭಾವವೆಂದೆಣಿಸಬೇಕಾಗಿದೆ. ಪ್ರಸಂಗದೊಳಗಣ ಪ್ರತಿವಾಕ್ಯವೂ ನಿಷ್ಕಪಟವಾದ ಅರ್ಥವನ್ನು ಬೋಧಿಸತಕ್ಕದ್ದಾಗಿರುತಿದೆ. ಪರಂತು ಅನೇಕ ವಿಷಯಗಳು ಲಿಬರಲ್‌ಪಕ್ಷದವರಿಗೆ ಅನಭಿಮತವಾದವಾಗಿರುತಿವೆ.

THE ART OF DANCING—No 2

ಸರ್ವಾಭೀಷ್ಟಪ್ರದವಾದ ನಾಟ್ಯವಿದ್ಯಾಪ್ರಭೇದವನ್ನು ಗತವಾರದಲ್ಲಿ ತಿಳಿಸಿದ್ದೆವಷ್ಟೆ. ಹೀಗೆಯೇ ಈ ನಾಟ್ಯವು ಚತುರ್ವಿಂಶತಿ ಲಕ್ಷಣಗಳುಳ್ಳದ್ದಾಗಿರುವದರಿಂದ ಅವನ್ನಿಲ್ಲಿ ತಿಳಿಸುವೆವು. ಶೃಂಗಾರ, ಉಗ್ರ, ಭೃಂಗಿ, ಚಿತ್ರಕ, ಚಾರಿ, ಚಾಳೀಯ, ಶುದ್ಧ, ಹಸ್ತಚಾಳೀಯ, ಮಾರ್ಗ, ಅಂಗಹಾರ, ಪಾದಚಾರಿ, ಪಾರ್ಶ್ವ, ಮುಖಚಾಳೀಯ, ಲತಾ, ದೇಶೀ, ಶ್ರೇಣಿ, ವಿಲಾ, ತಾಳಕ, ಭ್ರಾಂತ, ಭೂಚಾರಿ, ಆವೃತ್ತ, ವಿದ್ಯುದ್ಭ್ರಮರಿ, ವಿಶ್ರುತ, ಪುಷ್ಪಾಂಜಲಿ, ಎಂದು ೨೪ ಪ್ರಭೇದಗಳಾಗಿ ಏರ್ಪಟ್ಟಿರುತಿದೆ. ಈ ಶಾಸ್ತ್ರವು ಸರ್ವೋತ್ತಮವಾದದ್ದೆಂಬ ಭಾವದೊಡನೆ ಇದಕ್ಕೆ ಬಹುಮಂದಿ ಮುಖ್ಯಪ್ರವರ್ತಕರಾಗಿ ಏರ್ಪಟ್ಟರು. ಅವರಲ್ಲೆಂತೆಂದರೆ, ಸದಾಶಿವನು, ಬ್ರಹ್ಮ, ಭರತಮುನಿ, ಕಶ್ಯಪನು, ಮಾತಂಗನು, ಯಷ್ಟಿಕನು, ದುರ್ಗಾ, ಶಕ್ತಿ, ಶಾರ್ದೂಲನು, ಕೋಹಳನು, ವಿಶಾಖಿಲನು, ದತ್ತಿಲನು, ಕಂಬಳನು, ಅಶ್ವತರ್ಣನು, ವಾಯು, ವಿಶ್ವಾವಸು, ರಂಭಾ, ನಾರದನು, ಅರ್ಜುನನು, ತುಂಬುರನು, ಆಂಜನೇಯನು, ಮಾತೃಗುಪ್ತನು, ರಾವಣನು, ನಂದಿಕೇಶ್ವರನು, ಸ್ವಾತಿಗುಣನು, ದೇವರಾಜನು, ಕ್ಷೇತ್ರರಾಜನು, ರುದ್ರಸೇನನು, ಭೋಜರಾಜನು, ಪಾರಮಾರ್ಥಿಕನು, ಸೋಮೇಶನು, ವ್ಯಾಖ್ಯಾಕರನು, ಭಾರತಿ, ಲೋಲಟನು, ಉದ್ಭಟನು, ಶಂಕರನು, ಭಟ್ಟನು, ಅಭಿನಯಗುಪ್ತನು ಮೊದಲಾದವರು ಪ್ರಸಿದ್ಧರಾದವರಾಗಿರುತ್ತಾರೆ. ಇವರಿಂದ ರಚಿಸಲ್ಪಟ್ಟ ಗ್ರಂಥಗಳಲ್ಲೆಲ್ಲ ಅನೇಕ ನಷ್ಟವಾದರೂ ಅದ್ಯಾಪಿ ಕೆಲವು ಅಲ್ಲಲ್ಲಿ ಪ್ರಚಾರದೊಳವೆ. ಪೂರ್ವಕಾಲದ ನಮ್ಮ ಅರಸರುಗಳು ಇಂತಾ ಶಾಸ್ತ್ರಗಳನ್ನಭ್ಯಸಿಸತಕ್ಕವರಿಗೆ ವಿಶೇಷತಃ ಪ್ರೋತ್ಸಾಹವನ್ನುಂಟು ಮಾಡುತಲಿದ್ದದರಿಂದ ಈ ಭರತವಿದ್ಯೆಯನ್ನು ಲಕ್ಷಣ ಯುಕ್ತರಾದ ಸುಂದರಿಯರು ಪಂಡಿತರಾದ ಗುರುಗಳ ಮೂಲಕ ಚಿರಕಾಲ ಅಭ್ಯಾಸಮಾಡಿ ತಮ್ಮ ಪಾಂಡಿತ್ಯದಿಂ ಎಲ್ಲರನ್ನೂ ಸಂತೋಷಗೊಳಿಸುತಲಿದ್ದರು. ಕಾಲಕ್ರಮದಿಂದ ಯೆಲ್ಲವೂ ರೂಪಾಂತರಗಳನ್ನೈದಿದಂತೆ, ಅಭಿಮಾನಶಾಲಿಗಳಾದ ಪ್ರಭುಗಳೂ, ಪಂಡಿತರಾದ ಗುರುಗಳೂ, ಲಕ್ಷಣಯುಕ್ತರಾದ ಶಿಷ್ಯರೂ, ದುರ್ಲಭರಾದಂತೆ ಪ್ರಸಿದ್ಧ ಗ್ರಂಥಗಳೆಲ್ಲವೂ ನಾಮಮಾತ್ರಾವಶಿಷ್ಟವಾದವು. ಈ ವಿದ್ಯೆಗೆ ಇಂತಾ ದುರವಸ್ಥೆಯುಂಟಾದದರಿಂದಲೇ ಸಾಧನಾಂತರ ಲಕ್ಷಣಹೀನರಾದ ಪಾತ್ರಗಳು ಪ್ರಬಲಿಸಿ ಅವರೆಲ್ಲರೂ ತಮ್ಮ ಜೀವನಾರ್ಥ ಇದನ್ನು ಅಶಾಸ್ತ್ರೀಯವಾಗಿ ಅಭ್ಯಸಿಸಲಾರಂಭಿಸಿದರು. ಪ್ರಾಯೇಣ ಸರ್ವಾಂಶಗಳಲ್ಲೂ ಅಶಾಸ್ತ್ರೀಯವಾದ ಭರತವಿದ್ಯೆಯೇ ಈಗ ಯೆಲ್ಲಿನೋಡಿದರೂ ಪ್ರಬಲಿಸಿ ಇದೆ.

ಈ ಭರತವಿದ್ಯೆಗೆ ಮುಖ್ಯಾಂಗಗಳಾಗಿರುವ ಭಾವರಾಗ ತಾಳಗಳೆಂಬ ಮೂರು ವಿಷಯಗಳು ಅಪಾರಗಳಾಗಿದ್ದರೂ ಕೇವಲ ಅಭಿಜ್ಞರಾದ ವಿದ್ವಾಂಸರು ರಾಗ ತಾಳಗಳನ್ನು ಮಾತ್ರ ಬಹುಪ್ರಯಾಸದಿಂದ ಕದಾಚಿತ್ ತಿಳಿದರೂ ತಿಳಿಯಬಹುದು. ಭಾವವೆಂಬದು ಎಂತವರಿಗೂ ಅಸಾಧ್ಯವಾಗಿರುತಿದೆ, ಹ್ಯಾಗೆಂದರೆ, ನಾಟ್ಯಸಮಯದಲ್ಲಿ ಹಾಡಲ್ಪಡುವ ಶಬ್ದಗಳಿಂದ ಪ್ರತ್ಯೇಕವಾಗಿಯೂ, ಪರಸ್ಪರ ಸಮ್ಮೇಳನದಿಂದಲೂ, ನುಡಿಯುವವರ ಸ್ವರೂಪ, ಕೇಳುವವರ ಸ್ವರೂಪ, ಕಾಲ, ದೇಶ, ವ್ಯಕ್ತಿ ಮುಂತಾದವುಗಳಿಂದಲೂ ಸಾಕ್ಷಾತ್ತಾಗಿಯೂ ಪರಂಪರೆಯಾಗಿಯೂ ತೋರುವ ರಸಭಾವಗಳನ್ನು ಹಸ್ತಗಳಿಂದಲೂ, ಮುಖದಿಂದಲೂ ಶಿರಸ್ಸಿನಿಂದಲೂ, ಉಬ್ಬುಗಳಿಂದಲೂ, ತುಟಿಗಳಿಂದಲೂ, ದಂತಗಳಿಂದಲೂ, ಕಪೋಲಗಳಿಂದಲೂ ಎದೆ, ಕಂಠ, ಪಾರ್ಶ್ವಸ್ಥಾನ, ಭ್ರಮರಿ ಯೆಂಬವುಗಳಿಂದಲೂ, ಶಬ್ದಾರ್ಥಗಳನ್ನು ತಿಳಿಸುತ ನೋಡುವವರ ಮನಸ್ಸುಗಳಲ್ಲಿ ಸಂತೋಷ ದುಃಖಾದಿ ಭಾವಗಳನ್ನುಂಟುಮಾಡಿ, ಅವರನ್ನು ಪರವಶರನ್ನಾಗಿ ಮಾಡುವ ಪ್ರಬಲವಿದ್ಯೆಯೇ ಅಭಿನಯವೆಂಬದು. ಇದು ಆಂಗಿಕವೆಂತಲೂ, ವಾಚಿಕವೆಂತಲೂ, ಆಹಾರ್ಯವೆಂತಲೂ, ಸಾತ್ವಿಕವೆಂತಲೂ, ನಾಲ್ಕುವಿಧ ಪ್ರಕೃತಿದ್ದಾಗಿರುತಿದೆ. ಅಂಗಗಳಿಂದ ತೋರಿಸಲ್ಪಡತಕ್ಕದ್ದನ್ನು ಆಂಗಿಕಾಭಿನಯವೆಂದರಿವುದು. ಮಾತುಗಳಿಂದ ತಿಳಿಸಲ್ಪಡುವದು ವಾಚಿಕಾಭಿನಯನವು. ಇದು ಕಾವ್ಯನಾಟಕಾದಿಗಳಲ್ಲಿ ಬಹಳವಾಗಿ ಉಪಯೋಗಿಸಲ್ಪಟ್ಟಿರುತಿದೆ. ಆಹಾರ್ಯಾಭಿನಯವೆಂಬದು ಹಾರಕೇಯೂರಾದಿಗಳನ್ನು ಧರಿಸಿಕೊಳ್ಳುವದರಲ್ಲಿ ವಿನಿಯೋಗಿಸಲ್ಪಡುವದು ಸಾತ್ವಿಕಾದಿ ಭಾವಗಳ ನ್ನ ಅಭಿನಯಿಸುವದಕ್ಕೆ ಸಾತ್ವಿಕಾಭಿನಯವೆಂದು ಭಾವಜ್ಞರು ಅಭಿಪ್ರಾಯ ಪಟ್ಟಿರುತ್ತಾರೆ.

Occasional Notes
ನೈಮಿತ್ತಿಕವಿಷಯನ್ಯಾಸ

The Maharaja of Patiala—ಪತ್ತಿಯಾಲಾಸಂಸ್ಥಾನದ ಮಹಾರಾಜರವರು ವಿಷಮಶೀತಜ್ವರದಿಂದ ಬಹಳ ಅಸ್ವಸ್ಥರಾಗಿದಾರೆಂದು ಕೇಳುವದಕ್ಕೆ ವಿಷಾದಿಸುತ್ತೇವೆ.

The new Commander in Chief of Madras—ಮದರಾಸ್ ಸೈನ್ಯದ ಕಮ್ಯಾಂಡರ್ ಇನ್‌ಚೀಫರವರಾದ ಸರ್ ಹರ್‌ಬರ್ಟ ಮೆಕ್‌ಫರ್‌ಸನ್ ಸಾಹೆಬರವರು ಬರುವ ಫೆಬ್ರವರಿ ೩ನೇ ತಾರೀಖಿಗೆ ಮದರಾಸಿಗೆ ಬರುವರು.

An honorarium offered—ಪಂಜಾಬದೇಶದ ಅರಸುಮಕ್ಕಳ ವಿದ್ಯಾಭ್ಯಾಸಕ್ಕಾಗಿ ಲಾಹೋರಿನಲ್ಲಿ ಕಟ್ಟಲು ಆಲೋಚಿಸಿರುವ ಪಾಠಶಾಲೆಗೆ ಅನುಗುಣವಾದ ಒಂದು ಕಟ್ಟಡದ ನಮೂನೆಯನ್ನು ತಯಾರುಮಾಡಿ ಕೊಡತಕ್ಕವನಿಗೆ ೨,೦೦೦ ರೂಪಾಯಿಗಳು ಗೌರವಾರ್ಥ ಇನಾಂ ಕೊಡುವದಾಗಿ ಪಂಜಾಬ ಗವರ್ನಮೆಂಟನವರು ಹೇಳುತಲಿದಾರೆ. ಸದರೀ ಕಟ್ಟಡದ ಲಾಗುವದು ೧,೬೦,೦೦೦ ರೂಪಾಯಿಗಳಿಗಿಂತಲೂ ಜಾಸ್ತೀ ಆಗಕೂಡದು.

An expenditure sanctioned—ಇಂಡ್ಯಾರಾಜ್ಯದ ವೈಸ್‌ರಾಯಿಯವರಾದ ಲಾರ್ಡ ಡಫರಿನ್ ಸಾಹೆಬರವರು ಮದರಾಸಿಗೆ ಬರುವ ಸಂದರ್ಭದೊಳು ಹೈದರಾಬಾದ್‌ಮಾರ್ಗವಾಗಿ ಕಲ್ಕತ್ತೆಗೆ ವಾಪಸ್‌ಹೋಗುವರಾಗಿ ಆಕಾಲದಲ್ಲಿ ಸದರೀಸಾಹೆಬರವರನ್ನು ಉಚಿತಮರ್ಯಾದೆಯೊಡನೆ ಬರಮಾಡಿಕೊಂಡು ಗೌರವಿಸಬೇಕಾದ ಪ್ರಬಂಧಕಾರ್ಯಕ್ಕೆ ಹಿಡಿಯಬಹುದಾದ ಖರ್ಚುಗಳಬಗ್ಗೆ ಎರಡುಲಕ್ಷ ರೂಪಾಯಿಗಳು ಕೊಡತಕ್ಕದ್ದೆಂದು ಸದರೀ ಸಂಸ್ಥಾನದ ಫೈನಾನ್ಷಿಯಲ್ ಕಮಿಟಿಯವರು ಈಚೆಗೆ ಸಭೆಸೇರಿ ಆಲೋಚಿಸಿ ನಿರ್ಣಯಿಸಿರುತ್ತಾರೆ.

The revenue of Travancore—ಸನ್ ೧೮೮೪—೮೫ನೇ ಇಸವಿಗೆ ತಿರುವಾಂಕೂರು ಸಂಸ್ಥಾನದ ಹುಟ್ಟುವಳಿಯು ೬೮ ಲಕ್ಷರೂಪಾಯಿಗಳಿಗೆ ವೃದ್ಧಿಯಾಯಿತೆಂದು ಕೇಳುವದರಲ್ಲಿ ಪ್ರಜೆಗಳಿಗೆ ಸಂತುಷ್ಟಿಯೂ ಆಶ್ಚರ್ಯವುಂಟಾಗುವದು. ಹಿಂದೆ ಯಾವಾಗಲೂ ಇಷ್ಟು ಜಾಸ್ತೀ ಹುಟ್ಟುವಳಿಯಾದಂತೆ ದಾಖಲೆ ಕಾಣಬರುವದಿಲ್ಲವಾಗಿ ಇದಕ್ಕೆ ಕಾರಣಭೂತರಾದವರ ಬುದ್ಧಿ ವಿಶೇಷ ಮತ್ತು ಕುಶಲತೆಯು ಸಾಮಾನ್ಯವಾಗಿ ಯೆಲ್ಲರಿಗೂ ಆಶ್ಚರ್ಯವನ್ನುಂಟುಮಾಡತಕ್ಕದ್ದಾಗಿದೆ ಯೆಂದು ಒಂದಾನೊಂದು ಕೊಚ್ಚಿಪತ್ರಿಕೆ ಹೇಳುತಿದೆ.

The Viceroy's visit to Burmah.—ಇಂಡ್ಯಾಗವರ್ನಮೆಂಟಿಗೆ ಸೇರಿದ ಕ್ಲೈವ್‌ಯೆಂಬ ಹೊಗೇಜಹಜು ಈವಾರದಲ್ಲಿ ಕಲ್ಕತ್ತೆಗೆ ಬರುವದೆಂದು ನಿರೀಕ್ಷಿಸಲ್ಪಟ್ಟಿರುವದಾಗಿಯೂ, ಸದರೀ ಜಹಜಿನಲ್ಲಿ ವೈಸ್‌ರಾಯಿಯವರು ತಮ್ಮ ಪರಿಜನರೊಡನೆ ಬರುವ ಫೆಬ್ರವರಿ ಮೊದಲನೇತಾರೀಖಿನಲ್ಲಿ ಬರ್ಮಾದೇಶಕ್ಕೆ ಹೊರಡುವರೆಂತಲೂ, ಅವರಸಂಗಡ ಇಂಡ್ಯಾರಾಜ್ಯದ ಕಮಾಂಡರ್ ಇನ್‌ಚೀಫರವರಾದ ಸರ್ ಫ್ರೆಡರಿಕ್ ರಾಬರ್ಟ್‌ಸ್‌ಯವರು ಸಹ ಅಲ್ಲಿಗೆ ಹೋಗುವರೆಂತಲೂ ಇಂಗ್ಲಿಷ್‌ಮ್ಯಾನ್ ಪತ್ರಿಕೆ ಹೇಳುತಿದೆ.

A durbar at Kolhapur.—ಕಳೆದ ಕ್ರಿಸ್‌ಮಸ್ ಹಬ್ಬದ ಕಾಲದಲ್ಲಿ ಕೊಲ್ಹಾಪುರದೊಳು ಒಂದು ದರ್ಬಾರ್ ನಡೆದು, ಅದರಲ್ಲಿ, ದಕ್ಷಿಣಮಹಾರಾಷ್ಟ್ರ ಸಂಸ್ಥಾನಗಳಲ್ಲೆಲ್ಲ ಸಣ್ಣದಾದ ಜಮಖಂಡಿ ಅರಸರವರಿಗೆ, ಇಂಡ್ಯಾ ಗವರ್ನಮೆಂಟಿನವರ ತರಫೆ ಅಲ್ಲಿನ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ವಾಟ್‌ಸನ್‌ಯವರಿಂದ, ವಜ್ರ, ಕೆಂಪು, ಪಚ್ಚೆ ಮೊದಲಾದ ರತ್ನಗಳು ಕೆತ್ತಲ್ಪಟ್ಟ ಕೋಲ್‌ಬಳೆಗಳು, ಕಾಶ್ಮೀರದೇಶದ ಪುರಾತನ ಕಟ್ಟಡಗಳ ತಸ್ವೀರ್‌ಗಳುಳ್ಳ ಒಂದು ಬುಕ್ಕು, ಮ್ಯಾಕ್ಸಿಮುಲ್ಲರವರಿಂದ ರಚಿಸಲ್ಪಟ್ಟ ಒಂದು ಗ್ರಂಥದ ಮಹಾರಾಷ್ಟ್ರ ಭಾಷೆಯ ತರ್ಜುಮೆ ಪ್ರತಿಯೊಂದು, ಕಲಾಬತ್ತು ಶಾಲ್‌ಜೋಡಿಯೊಂದು, ಇವೆಲ್ಲವು ಕಿಲ್ಲತ್ ಕೊಡಲ್ಪಟ್ಟವು.

The Guekwar of Baroda—ಬರೋಡೇಸಂಸ್ಥಾನದ ಗಾಯಕವಾಡಿಯವರು ಶೀಘ್ರದಲ್ಲಿ ಮರಳಿಯೊಂದು ಕನ್ಯೆಯನ್ನು ವಿವಾಹಮಾಡಿಕೊಳ್ಳುವರೆಂತಲೂ, ಇದು ಹಿಂದಿನ ವಿವಾಹದಷ್ಟು ಸಂಭ್ರಮಗಳ್ಯಾವದೂ ಇಲ್ಲದೆ ಸಾಧಾರಣವಾಗಿ ನೌಜುವಾರಿಯೆಂಬಸ್ಥಳದೊಳು ನಡೆಯುವದೆಂತಲೂ ಕನ್ಯೆಯು ಸಾಬಕ್ ಮಹಾರಾಣಿಯವರಾದ ಚಿಮ್ನಿಬಾಯಿಯೆಂಬಾಕೆಯವರಿಗೆ ಸಮೀಪ ಬಂಧುವೆಂತಲೂ, ಮಹಾರಾಜರವರು ಮೃತರಾದ ತಮ್ಮ ಭಾರ್ಯೆಯವರಿಗೆ ಆಕೆಯವರ ಮರಣಕಾಲದಲ್ಲಿ ಮಾಡಿದ ವಾಗ್ದಾನವನ್ನು ನೆರವೇರಿಸುವದಕ್ಕಾಗಿ ಪ್ರಕೃತ ಪ್ರಯತ್ನ ಮಾಡಬೇಕಾಯಿತೆಂತಲೂ ಇಂಡ್ಯದೇಶದ ಅಪೆಕ್ಸಕೇಟರ್ ಯೆಂಬ ಪತ್ರಿಕೆ ಹೇಳುತಿದೆ.

Sale of stamps in the N W Provinces—ಕಳೆದ ಸಂವತ್ಸರದೊಳು ವಾಯವ್ಯದೇಶದಲ್ಲಿ ಕೋರ್ಟಫೀ ಸ್ಟ್ಯಾಂಪ್‌ಗಳ ವಿಕರೀಮೂಲಕ ೩೫,೪೬,೮೭೭ ರೂಪಾಯಿಗಳೂ, ಛಾಪಾಕಾಗದಗಳ ವಿಕರೀಮೂಲಕ ೧೧,೬೨,೧೩೩ ರೂಪಾಯಿಗಳೂ ಹುಟ್ಟುವಳಿಯಾಗಿರುತಿದ್ದು ಅಯೋಧ್ಯಾ ದೇಶದೊಳು ಕೋರ್ಟಫೀ ಮೂಲಕ ೯,೨೩,೦೨೩ ರೂಪಾಯಿಗಳೂ, ಛಾಪಾಕಾಗದಗಳಮೂಲಕ ೨,೯೮,೮೬೩ ರೂಪಾಯಿಗಳೂ ಹುಟ್ಟುವಳಿಯಾಗಿರುತವೆ. ಇವೆಲ್ಲವೂ ಸೇರಿ ಒಟ್ಟು ೫೯,೩೫,೮೪೨ ರೂಪಾಯಿಗಳುಸ್ಥಾವು ಹುಟ್ಟುವಳಿಯಾಗಿರುತವೆ. ಈಬಗ್ಗೆ ೩ ಚಾರ್ಜದ ೧,೫೫,೩೦೦ ರೂಪಾಯಿಗಳು ಜಾತಾ ೫೭,೯೦,೧೪೨ ರೂಪಾಯಿಗಳು ಏರ್ ಶಿಲ್ಕು ಉಳಿದಿರುತವೆ.

LOCAL AND PROVINCIAL NEWS
ಒಳದೇಶಮತ್ತು ತಾಲ್ಲೂಕುಪಾತ್ತವೃತ್ತಾಂತಗಳು.

H H the Maharanee—ಮಹಾರಾಣೀಯವರು ತಮ್ಮ ಪುತ್ರೀಪುತ್ರರೊಡನೆ ನಿನ್ನೆಯದಿನ ಸಾಯಂಕಾಲ ಸ್ಪೆಷಲ್‌ಟ್ರೈನ್‌ನಲ್ಲಿ ಮೈಸೂರಿಂದ ಇಲ್ಲಿಗೆ ದಯಮಾಡಿ ಸಕಲ ಮರ್ಯಾದೆಗಳೊಡನೆ ಅರಮನೆಗೆ ಸವಾರಿ ಚಿತ್ತೈಸಿದರು. ಇವರು ಇನ್ನೂ ಮೂರುನಾಲ್ಕು ವಾರಗಳತನಕ ಇಲ್ಲೇ ಇದ್ದು ಬಳಿಕ ಮಹಾರಾಜರೊಡನೆ ರಾಜಧಾನಿಗೆ ದಯಮಾಡುವರೆಂದು ತಿಳಿಯಬರುತಿದೆ

A protest—ಮಹಾರಾಜರವರ ಪ್ರಜೆಗಳೊಳು ಉಪಪನ್ನರಾಗಿಯೂ ಗೌರವ್ಯರಾಗಿಯೂ ಇರುವ ಕೆಲವರು, ಸ್ಟೇಟ್ ರೆಯಿಲ್ವೆಯನ್ನು ದಕ್ಷಿಣ ಮಹಾರಾಷ್ಟ್ರ ರೆಯಿಲ್ವೇ ಕಂಪೆನಿಯವರಿಗೆ ಅದಮಾನ ಹಾಕಕೂಡದೆಂತಲೂ, ಜನಗಳಿಗೆ ಉಪಯುಕ್ತವಾಗಿರುವ ರೆಯಿಲ್‌ರಸ್ತೆಯು ಉಳಿಸಿಕೊಳ್ಳಲ್ಪಡುವ ಪಕ್ಷಕ್ಕೆ ಋಣವಿಮೋಚನಾರ್ಥ ಬೇಕಾದ ದ್ರವ್ಯಸಹಾಯವನ್ನು ಮಾಡಲಿಕ್ಕೆ ತಾವು ಸನ್ನದ್ಧರಾಗಿರುವುದಾಗಿಯೂ ತಿಳಿಸಿದರೆಂದು ಕೇಳುತ್ತೇವೆ. ಮೈಸೂರು ದೇಶೀಯರಿಗೆ ಈಗ ಇಷ್ಟರ ಧೈರ್ಯ ಉಂಟಾದದ್ದು ಯಾವ ಅದೃಷ್ಟವೋ ತಿಳಿಯದು.

Increase of Travelling Batta—ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರ್‌ಗಳಿಗೆ ಇದುವರಿವಿಗೆ ರೋಜೀನಾ ಸಲ್ಲುತಲಿದ್ದ ೪ ರೂಪಾಯಿಗಳ ಭತ್ಯವನ್ನು ಈ ತಿಂಗಳ ಗುರ್ರೇತಾರೀಖ್ ಮೊದಲು ೫ ರೂಪಾಯಿಗಳಿಗೆ ಮಹಾರಾಜಾ ಸರ್ಕಾರದವರು ಜಾಸ್ತೀ ಮಾಡಿರುವದಾಗಿ ಈ ವಾರದ ಮೈಸೂರು ಗೆಜೆಟಿನ ಮೂಲಕ ತಿಳಿಯಲಾದೆವು ತಿಂಗಳಿಗೆ ೨೦ ದಿನಗಳು ಹೊರಗೆ ಸಂಚಾರಮಾಡುತಲಿರುವ ಕೆಲವರು ಡೆಪ್ಯುಟಿ ಕಮ್ಮಿಷನರ್‌ಗಳಿಗೆ ಈ ಏರ್ಪಾಡು ರೊಟ್ಟಿಮುರಿದು ತುಪ್ಪದಲ್ಲಿಬಿದ್ದಂತೆ ಯಾಯಿತು. ಅಲ್ಪ ವೇತನವುಳ್ಳ ಡೆಪ್ಯುಟಿ ಕಮ್ಮಿಷನರ್‌ಗಳಿಗೆ ಈ ಏರ್ಪಾಡು ಅಗತ್ಯವಾಗಿಯಾದರೂ ಸಹಾಯ ಮಾಡದಿದ್ದರೆ ಅವರು ಜೀವಿಸುವಬಗೆ ಹ್ಯಾಗೆ

H H the Maharaja—ಶ್ರೀಮನ್ ಮಹಾರಾಜರವರು ಸ್ವದೇಶ ಸಂಚಾರಮಾಡಿಕೊಂಡು ಪರಿಮಿತ ಪರಿವಾರದೊಡನೆ ಗತ ಮಂಗಳವಾರ ದಿವಸ ಸಾಯಂಕಾಲ ತುಮಕೂರ್ ರೆಯಿಲ್‌ಮಾರ್ಗವಾಗಿ ಗೊಲ್ಲಹಳ್ಳಿಯಿಂದ ಇಲ್ಲಿಗೆ ದಯಮಾಡಿದರು. ಮಹಾರಾಜಾಗಮನಾನುಗುಣವಾದ ಸಕಲ ಸಂವಿಧಾನಗಳೂ ಪೂರ್ವಭಾವಿಯಾಗಿ ಮಾಡಲ್ಪಟ್ಟಿದ್ದವು. ಬಹುಮಂದಿ ದೊಡ್ಡಮನುಷ್ಯರು, ಮಹಾರಾಜ ಸಂದರ್ಶನಾಪೇಕ್ಷೆಯೊಡನೆ ಸ್ಟೇಷನ್ ಪ್ಲಾಟ್ ಫಾರಂನಲ್ಲಿ ಕಾದಿದ್ದು ಅವರು ಬರಮಾಡಿಕೊಂಡರು. ಮಾಮೂಲ್‌ಪ್ರಕಾರ ನಡೆಯಬೇಕಾದ ರಾಜಾರ್ಹಗಳಾದ ಮರ್ಯಾದೆಗಳೆಲ್ಲವೂ ನಡೆದವು ಮಹಾರಾಜರವರ ಮುಖಕಮಲವು ದೇಶಸಂಚಾರ ಪ್ರಯುಕ್ತವಾದ ಆಲಸ್ಯದಿಂ ಸ್ವಲ್ಪ ವಿವರ್ಣತ್ವೇನ ತೋರಬಂದಾಗ್ಯೂ ಅವರ ಆರೋಗ್ಯ ಸಂತೋಷಗಳಲ್ಲಿ ಸ್ವಲ್ಪವೂ ಕೊರತೆಇಲ್ಲದೆ ಯಾತ್ರಾಪ್ರತಿಪಾದಿತವೆಂದು ಕೇಳಿ ನಾವು ಬಹಳ ಸಂತೋಷಿಸುವೆವು

Closing of the sessions.—ಈಸಲದ ಸೆಷನ್‌ವಿಚಾರಣೆಯು ಪೂರೈಸಿತು. ಮಾಲೂರು ಖೂನೀಮೊಕದ್ದಮೆಯಲ್ಲಿ ಒಂದೆರಡನೇ ಅಪರಾಧಿಗಳಮೇಲೆ ಮರಣದಂಡನೆಗೆ ತಕ್ಕ ಅಪರಾಧವು ಸಾಬೀತಾಗದೆಹೋದದರಿಂದ ಪಂಚಾಯತರ ಅಭಿಪ್ರಾಯಾನುಸಾರ, ಮೃತಪಟ್ಟವನನ್ನು ಅಕ್ರಮವಾದ ನಿರ್ಬಂಧಕ್ಕೊಳಪಡಿಸಿ ಹಿಂಸಿಸಿದಬಗ್ಗೆ ಮೊದಲನೇ ಅಪರಾಧಿಗೆ ೧ ವರುಷ ಕಠಿಣಕೈದೂ ೫೦ ರೂಪಾಯಿಗಳ ಜುಲ್ಮಾನೆಯೂ, ಎರಡನೆ ಅಪರಾಧಿಗೆ ಒಂದುವರುಷ ಸಿಂಪಲ್‌ಕೈದ್ ಸಜಾ ಸಹ ವಿಧಿಸಲ್ಪಟ್ಟಿತು. ಮತ್ತೊಂದು ಖೂನೀ ಮೊಕದ್ದಮೆಯಲ್ಲಿ ಇಬ್ಬರಿಗೆಮರಣದಂಡನೆಯೂ ಬೇರಿಬ್ಬರಿಗೆ ದ್ವೀಪಾಂತರವಾಸ ದಂಡನೆಯೂ ವಿಧಿಸಲ್ಪಟ್ಟಿತು. ಹೀಗೆಯೇ ಕೆಲವು ಮೊಕದ್ದಮೆಗಳು ಖುಲಾಸೆಗಳ ಮೂಲಕವಾಗಿಯೂ ಇನ್ನೂ ಕೆಲವು ಸಜಾಮೂಲಕವಾಗಿಯೂ ಪರಿಣಾಮವನ್ನೈದಿದವು.

The Narayanapillay Street murder.—ರೆಸಿಡೆಂಟರವರ ಹುಕುಂ ಅನುಸರಿಸಿ ಪಬ್ಲಿಕ್ ಪ್ರಾಸಿಕ್ಯೂಟರ್ ಮೆ|| ಶಿಂಗ್ರಾಚಾರ್ಯರವರು, ಕಂಟೋನ್ಮೆಂಟ್ ಖೂನಿಮೊಕದ್ದಮೆಯ ಅಪೀಲ್‌ನೊಳು ಕೆಳಕೋರ್ಟಿನ ಫೈಸಲನ್ನು ಪ್ರೋಟಿಸಿ ವಾದಿಸುವಬಗ್ಗೆ ನಿನ್ನೆಯದಿನ ಮಡಿಕೆರಿಗೆ ಪ್ರಯಾಣವಾದರೆಂತಲೂ, ಈಬಗ್ಗೆ ಇದರಿಗೆ ತಗಲಬಹುದಾದ ವಿಶಿಷ್ಟ ಖರ್ಚು ಗವರ್ನಮೆಂಟಿನಿಂದ ಕೊಡಲ್ಪಡುವದೆಂತಲೂ, ಇದೇ ಅಂಶ ಅಪರಾಧಿಯ ಕಡೇವಕೀಲರಿಗೆಸಹ ತಿಳಿಸಲ್ಪಡಲು ಅವರು ಸಹ ನಿನ್ನೆಯದಿನ ಮಡಿಕೇರಿಗೆ ಹೋದಂತೆಯೂ ತಿಳಿಯಬರುತಿದೆ. ಬೈಪಿಯು, ಮಡಿಕೇರಿಗೆ ಕಳುಹಿಸಲ್ಪಡದ್ದರಿಂದ ಅಪೀಲ್ ವಿಚಾರಣೆಕಾಲದಲ್ಲಿ ತನ್ನ ಕಡೆ ವಕೀಲರಿಗೆ ತಿಳಿಸಬೇಕಾದ ವಿಷಯಗಳನ್ನು ತಿಳಿಸಲಿಕ್ಕೆ ಅವನಿಗೆ ಅವಕಾಶವಿಲ್ಲವಾಯಿತು. ಖೂನೀ ಮೊಕದ್ದಮೆಗಳಲ್ಲಿ ಇಂತಾ ಆಡಳಿತವು ಕೇವಲ ಅಕ್ರಮವಾದ್ದೆಂದು ಯೆಂತವರಿಗಾದರೂ ತೋರದಿರಲಾರದು.

The Pettah Market Show.—ಬರುವ ತಿಂಗಳ ೪ನೇ ತಾರೀಖಿನಲ್ಲಿ ಈ ನಗರದ ಪೇಟೆ ಮಾರ್ಕೆಟಿನಲ್ಲಿ ನಡೆಯತಕ್ಕ ಶಾಕಫಲವರ್ಗ ಪ್ರದರ್ಶಕ ಸಭೆಯಬಗ್ಗೆ ಮ್ಯೂನಿಸಿಪಲ್ ಅಧಿಕಾರಿಗಳು ತಕ್ಕ ಏರ್ಪಾಡುಗಳನ್ನು ಮಾಡುತಲಿರುವಂತೆ ತಿಳಿಯಬರುತಿದೆ. ಆಯಾ ಪದಾರ್ಥಗಳ ಗುಣವಿವೇಚಕರು ಏರ್ಪಡಿಸಿರುವ ಇನಾಂ ಮೊಬಲಗು ಇಷ್ಟರ ಪ್ರಯತ್ನಕ್ಕೆ ಅನುಗುಣವಾಗಿಲ್ಲವು. ಯಾವ ಉದ್ದೇಶದೊಡನೆ ಇದು ನಡೆಸಲ್ಪಡುವದೋ ಅದು ಸಿದ್ಧಿಸಲಿಕ್ಕೆ ತಕ್ಕ ಪ್ರೋತ್ಸಾಹವನ್ನು ಜನಗಳಿಗೆ ಇದಕ್ಕಿಂತಲೂ ವಿಶೇಷತಃ ಉಂಟುಮಾಡಿದರೆ ಚನ್ನಾಗಿರುವದು. ಈ ಅಂಶವನ್ನು ಬಹುಮಾನಗಳಂ ಕೊಡತಕ್ಕಬಗ್ಗೆ ಏರ್ಪಟ್ಟಿರುವ ಕಮಿಟಿಯವರು ಮರ್ಯಾಲೋಚಿಸದಿರಲಾರರೆಂದು ನಂಬುತ್ತೇವೆ.

The examination result—ಕಳೆದ ಡಿಸೆಂಬರ್ ತಿಂಗಳ ಆದಿಭಾಗದಲ್ಲಿ ನಡೆದ ಮಿಡಲ್‌ಸ್ಕೂಲ್ ಪರೀಕ್ಷೆಯಲ್ಲಿ ತೇರ್ಗಡೆಯಾದವರ ಹೆಸರುಗಳೆಲ್ಲ

ಗ್ರೊ ಗತಿವಾರದಲ್ಲಿ ಖಾಯಿಸ್ಸಾಗಿ ಆಯಾ ಸ್ಕೂಲುಗಳಿಂದ ತೇರ್ಗಡೆಯಾದವರ ಹೆಸರುಮತ್ತು ಸಂಖ್ಯೆಯು ಅವುಗಳ ಪ್ರಿನ್ಸಿಪಲ್‌ಗಳಿಗೆ ತಿಳಿಸಲ್ಪಟ್ಟಿರುತಿವೆ.

	ಹೋಗಿದ್ದವರು.	ತೇರ್ಗಡೆಯಾದವರು
ಸೆಂಟ್‌ಜೋಸೆಫ್‌ಕಾಲೇಜ್	೩೦	೧೬
ಸೆಂಟ್ರಲ್‌ಕಾಲೇಜ್	೬೧	೧೧
ವೆಸ್ಲಿಯನ್‌ಹೈಸ್ಕೂಲ್	೬೨	೯೧
ಸಿಟಿ ಮ್ಯೂನಿಸಿಪಲ್ ಹೈಸ್ಕೂಲ್	೨೨	೭
ಸೆಂಟ್‌ಆಂಡ್ರೂಸ್ಕೂಲ್	೭	೨
ಲಂಡನ್‌ಮಿಷನ್‌ಸ್ಕೂಲ್	೪೦	೮
ಬಾಲ್ಡ್‌ವಿನ್‌ಸ್ಕೂಲ್	೭	೩
ಕೆಂಟೋನ್ಮೆಂಟ್‌ಸಭಾಸ್ಕೂಲ್	೮	೨
ಬಿಷಪ್ ಕಾಟನ್‌ಸ್ಕೂಲ್	೧೯	೨
ಸೆಂಟ್‌ಪಾಲ್ಸ್‌ಸ್ಕೂಲ್	೧೮	೧
ನಾರಾಯಣಸ್ವಾಮಿಸ್ಕೂಲ್	೨೦	೧

ಮೇಲೆಕಂಡ ಸಂಖ್ಯೆಯು ಕರಾರುವಾಕ್ಕಾ ಆಗಿರುವಪಕ್ಷಕ್ಕೆ ಈ ಸಂವತ್ಸರದೊಳು ಪ್ರಸಿದ್ಧವಾದ ಕಾಲೇಜ್‌ಗಳ ಸ್ಥಿತಿಯು ಚಿಂತನೀಯವಾದದ್ದು. ಸಿಟಿಮ್ಯೂನಿಸಿಪಲ್‌ಸ್ಕೂಲ್, ಅದರಹೆಡ್ ಮಾಸ್ಟರವರ ವಿಚಾರಣಾಧಿಕಾರದಲ್ಲಿ ಅಭಿವೃದ್ಧಿಯನ್ನೈದುತ ಕಾಲೇಜ್‌ಗಳ ಸಮಾನಸ್ಥಿತಿಗೆ ಇತ್ತೀಚಿನಲ್ಲಿ ಬಂದದಕ್ಕಾಗಿ ನಾವು ಸಂತೋಷಿಸುವೆವಲ್ಲದೆ ಮ|| ಶ್ರೀನಿವಾಸರಾಯರವರ ಹಿಂದಿನ ಪರಿಶ್ರಮದ ಫಲಾನುಭವಕಾಲವು ಈಗಪ್ರಾಪ್ತವಾದಂತೆ ಆಯಿತು.

CORRESPONDENCE.

ಅನಿರುದ್ಧನ ಜನಕನಾರೆಂಬ ವಿಚಾರದಲ್ಲಿ ದಿವಾನ್ ಬಹದೂರ್ ರಘುನಾಥರಾಯರವರು ವೇ|| ಗೋಪಾಲಶಾಸ್ತ್ರಿಗಳಿಗೆ ಬರೆದಉತ್ತರ.

ಮ|| ರಾ|| ಕರ್ಣಾಟಕಪ್ರಕಾಶಿಕಾಎಡಿಟರವರಿಗೆ

ಅಯ್ಯಾ,—ಕಳೆದ ಅಕ್ಟೋಬರ್‌ತಿಂಗಳ ೩ನೇ ತಾರೀಖಿನ ಪ್ರಕಾಶಿಕಾಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದ್ದ ವೇ|| ಗೋಪಾಲ ಶಾಸ್ತ್ರಿಗಳವರ ಬರವಣಿಗೆಯಲ್ಲಿ ಹೊಸತಾದ ಸಾಧಕಾಂಶಗಳ್ಯಾವವೂ ಕಂಡುಬರುವದಿಲ್ಲವು. ನನ್ನ ವಾದಕ್ಕೆ ಪೋಷಕಗಳಾದ ಪ್ರಮಾಣ ವಚನಗಳನ್ನು ನಾನು ಉದಹರಿಸಿರುತ್ತೇನೆ, ಅವುಗಳನ್ನು ಅವರು ದಯಮಾಡಿ ಆಕ್ಷೇಪಿಸಲಿಲ್ಲವು. ಅವರು ಉದಹರಿಸಿಸಿರುವ ಪ್ರಮಾಣವಚನಗಳು ಪ್ರಕೃತ ವಿಚಾರಕ್ಕೆ ಮಾತ್ರ ನಾನು ಉಪಯೋಗಿಸಿಕೊಳ್ಳುತ್ತೇನೆ ಅವುಗಳೂ ನಾನು ಉದಹರಿಸಿರುವ ವಚನಗಳೂ, ಕಾಮನ ಭಾರ್ಯೆಯು ಒಬ್ಬ ಅಸುರನಿಂದ ಜೋಪಿತಳಾಗಲೆಂದು ಬ್ರಹ್ಮನಿಂದ ಶಪಿಸಲ್ಪಟ್ಟಂತೆ ಸ್ಪಷ್ಟವಾಗಿ ಹೇಳುತಿವೆ. ಆಕೆಯು ಅದೇ ಮೇಲೆ ಮಾಯಾವತಿಯಾದಳು. ಆಕೆಯು ಹಿಮಾಚಲದಲ್ಲಿರುವಾಗ ಶಂಬರಾಸುರನು ಆಕೆಯನ್ನು ಬಲಾತ್ಕಾರಪೂರ್ವಕ ಕರೆದುಕೊಂಡುಹೋದನು.

೧ ರುದಂತಿಹಿಮವತ್ಪೃಷ್ಠೇ ಹಾಮಾತ್ಯಾಮ ಪ್ರಿಯಾಂರತೀಂ | ಶಂಬರೋಬ್ರಹ್ಮಣಾಶಪ್ತಾಂ ಜಹಾರಬಲವಾಂಸ್ತದಾ || ಸ್ಕಾಂದೇ|

೨. ಶಾಪಶಾಂತಿಃಸ್ತ್ವಜಃ || ಬಾಸುರೇಣವಶೀಕೃತಾ ಸಾತತೋಹಿಮಾಯಯಾ || ಪಿತಾಯ ತಾಂನಿಜಾಂತೇಮುಂಜಗಾಮಸಾಸ್ವಯಾಸುರಃ || — ತಾತ್ಪರ್ಯನಿರ್ಣಯೆ || ಅ|| ೧೨|| ಶ್ಲೋ|| ೧೯೦.

ಆಕೆಯು ಆತನಪತ್ನಿ, ಅಂದರೆ ಯಜ್ಞಾದಿಗಳಿಗೆ ಯೋಗ್ಯಳಾದ ಶಾಸ್ತ್ರೋಕ್ತಭಾರ್ಯೆಯಾಗಿ ಆತನೊಡನೆ ಸೇರಿ, ನ್ಯಾಯವಾದ ಪತ್ನಿ ಭಾರ್ಯೆಯರು ಮಾಡುವ ಕರ್ಮಗಳನ್ನೆಲ್ಲ ಮಾಡುತಲಿದ್ದಳು.

೩. ತಸ್ಯಮಾಯಾವತೀನಾಮ ಪತ್ನೀಸರ್ವಗೃಹೇಶ್ವರಿ || ವಿಷ್ಣುಪುರಾಣೆ ೮| ೫—ಅಂ| ೨೩— ಶ್ಲೋಕ ೬.

ಆಕೆಯು ಅನೇಕ ಸಂವತ್ಸರಗಳಕಾಲ ಆತನ ಪತ್ನಿಯಾಗಿ ಆತನ ಮನೆಯಲ್ಲೇ ವಾಸಮಾಡುತಲಿದ್ದಳು. ಆತನಮೂಲಕ ಆಕೆಗೆ ಪುತ್ರಸಂತಾನ ವುಂಟಾಗಲಿಲ್ಲವು. ಆತನಿಗೆ ಒಂದು ಗಂಡುಮಗು ದೊರೆತು ಅದನ್ನು ತನ್ನ ಪುತ್ರನೋಪಾದಿ ಆಕೆಯ ವಶಕ್ಕೆ ಕೊಟ್ಟನು. ಆಕೆಯು ಪುತ್ರಹೀನಳಾದದರಿಂದ ಸದರೀ ಮಗುವನ್ನು ಸಂತೋಷದೊಡನೆ ಪರಿಗ್ರಹಿಸಿದಳು. ನೀವಿಬ್ಬರೂ ಪೂರ್ವಜನ್ಮದಲ್ಲಿ ಭರ್ತೃಭಾರ್ಯೆಯರಾಗಿದ್ದವರೆಂದು ಪ್ರದ್ಯುಮ್ನನೆಂಬ ಹೆಸರುಳ್ಳ ಈ ಹುಡುಗನಿಗೂ ಮಾಯಾವತಿಗೂ ನಾರದರು ತಿಳಿಸಿದರು. ಪ್ರದ್ಯುಮ್ನನು ಆಗ ಶಂಬರನ ಸಂಗಡ ಯುದ್ಧಮಾಡಿ ಅವನನ್ನು ಸಂಹರಿಸಿ ಮಾಯಾವತಿಯನ್ನು ಕೃಷ್ಣನಮನೆಗೆ ಕರೆದುಕೊಂಡು ಹೋದನು. ಇವರಿಬ್ಬರೂ ನಿಮ್ಮ ಮಗನೂ ಸೊಸೆಯೂ ಯೆಂದು ಶ್ರೀ ಕೃಷ್ಣದೇವರು ತಿಳಿಸಿದರು. ಪರಂತು, ಮಾಯಾವತಿಯು ಶಂಬರನ ಪತ್ನಿಯೆಂದು ಪ್ರಸಿದ್ಧವಾಗಿದ್ದದರಿಂದ ತನ್ನ ಸೊಸೆಯೆಂದು ಅಂಗೀಕರಿಸುವದಕ್ಕಾಗುವದಿಲ್ಲವೆಂದು ಕೃಷ್ಣನ ಭಾರ್ಯೆಯು ಸಂದೇಹಿಸಲು ಕೃಷ್ಣನೂ ನಾರದನೂ ಸೇರಿ ಮಾಯಾವತಿಗೂ ಶಂಬರನಿಗೂ ಶರೀರಸಂಬಂಧ ವುಂಟಾಗಲಿಲ್ಲವಾಗಿ ಆಕೆಯನ್ನು ಪ್ರದ್ಯುಮ್ನನ ಹೆಂಡತಿಯಾಗಬಹುದೆಂದು ನಿರ್ಣಯಿಸಿದರು. ಅವರಿಬ್ಬರಿಗೂ ಬ್ರಹ್ಮಾಂಶವುಳ್ಳ ಅನಿರುದ್ಧನುದ್ಭವಿಸಿದನು ಇದಕ್ಕೆ ಪ್ರಮಾಣಗಳು—ಹರಿವಂಶ, ವಿಷ್ಣುಪರ್ವ ೧೦೮ನೇ ಅಧ್ಯಾಯ, ಮುಂಬೈ ಛಾಪೆ.

೪. ಪ್ರದ್ಯುಮ್ನಸ್ಯಸುತೋಜಜ್ಞೇ ವೈದರ್ಭ್ಯಾಂ ರಾಜಸತ್ತಮಾ || ಅನಿರುದ್ಧೋರಣೇರುದ್ಧೋಜಜ್ಞೇ ಸಮ್ಯಗಕೇತನಃ|| ಹರಿವಂಶೆ ವಿ|ಪ| ಅ| ೧೦೩— ಶ್ಲೋಕ್ ೨೩.

೫. ಜಹಾರಕೃಷ್ಣಸ್ಯಸುತಂಶಿಶುಂವೈ ಕಾಲಶಂಬರಃ||೮||

೬. ಅನಪತ್ಯಾತುತಸ್ಯಾಸಿ ದ್ಭಾರ್ಯಾರೂಪಗುಣಾನ್ವಿತ ||೬||ನಾಮ್ನಾಮಾಯಾವತೀನಾಮಮಾಯೆವಶುಭದರ್ಶನ || ದತ್ತೋತುವಾಸುದೇವಸ್ಯಪುತ್ರಃಪುತ್ರಮಿವಾತ್ಮಜಃ||೭|| ಮಾಯಾವತೀತುತಂ ದೃಷ್ಟ್ವಾಸುಪುಷ್ಪಿತನೂರುಹ ||೮|| ಹರ್ಷೇಣಮಹತಾಯುಕ್ತಾಪ್ರನಃಪುನರುದೈಕ್ಷುತ||

೭. ಮಾಯಾವತೀ—ಬಹಿತೆನಕ್ರತೋನಂಗೋ ದೃಷ್ಟೋಜಾತ್ಯಂತರೇಮಯಾ||೧೧||ಮಮಭರ್ತಾಸ್ಯ ಕೋಪತ್ವಂ ಬಲಮೀಶ್ವಪ್ರವರ್ತಿನಾ || ರಮ್ಯಾವ್ರಸಾದಿತೋದೇವಃಕಾಮಪತ್ನ್ಯಾತ್ರಿಲೋಚನಃ ||೪೪|| ಪರಿತುಷ್ಟೇನದೇವೇನ ವರಮಸ್ಯಾಸ್ತ್ವದೀಯತಾ|| ೪೬|| ತಸ್ಮಚ್ಚಶಂಬರಗೃಹಂಭಾರ್ಯಾಮಾಯಾವತೀಭವ ||೪೯|| ಅಂ| ೧೬|

ನಾರದಉವಾಚ—ತ್ವಂಮಾಯಾವತೀನಾಮ ಭಾರ್ಯಾವೈಶಂಬರಸ್ಯತು || ರತಿಂತಾಂವಿದ್ಧಿಕಲ್ಯಾಣೀಂತವಭಾರ್ಯಾಂಪುರಾತನೀಂ ||೫೦|| ಮಾಯಾಂಕರೋತಿಜಾಂತಸ್ಯ ಮೋಹನಾರ್ಥಂದುರಾತ್ಮನಾ ; ರತೀಃಸಂಸಾದನಾರ್ಥಾಯ ಪ್ರೇಷಯತ್ಸನಿತಾಂಸದಾ ||೫೨||

ಅಂ| ೧೭|| ನೋಬ್ರವೀತ್ಸಹಸಾದೇವೀಂರುಗ್ಮಿಣೀಂವೈಕಥಾಮಿದ | ಅಯಂಸದೇವಿಸುಪ್ರಾಪ್ತಃಸುತಸ್ತ್ವಪದರಸ್ತತಃ||೨೨ ಅನೇನಶಂಬರಂಹತ್ವಾ ಮಾಯಾಮಾಯುದ್ಧನಿನಾದಂ || ಹತಾಮಾಯಾಸ್ತುತಾಪರ್ವಾಯಾಷಿವೇದಮಾನಬಾಧಯಾತ ||೨೩|| ಸತೀಯಂತುಭಾರ್ಯಾಸ್ನೇಹಭಾರ್ಯಾನೈತೆನಮಸ್ಯತಿ || ಮಾಯಾವತೀತಿವಿಖ್ಯಾತ ಶಂಬರಸ್ಯಗೃಹೋಷಿತಾ||೨೪|| ಮಾಚೇತಿಶಂಬರಸ್ಯೆಯಂಪತ್ನೀತಿಭವತುನ್ಯಥಾ ಮನ್ಮಥೇತುಗತೆನಾಶಂಗತೆಚಾನುಗತಾಂಪುರಾ ||೨೫|| ಕಾಮಪತ್ನೀನಕಾಂತ್ಯೈಷಾಶಂಬರಸ್ಯರತಿಪ್ರಿಯಾ || ಮಾಯಾರೂಪೇಣತ್ಯೈತ್ಯಂಮೋಹಯತ್ಸನರುತ್ಸ್ವಭಾ||೨೬|| ನಚೈಷಾತಸ್ಯ ಕೌಮಾರೇವಸತಿಸ್ಮತಿಶೋಭನಾ||ಆತ್ಮಮಾಯಾಮಯಂಕೃತ್ವಾರೂಪಂಶಂಬರಮಾವಿಶತ್||೨೭ ಪತ್ನೀಷಾಮಮಪುತ್ರಸ್ಯಸ್ನುಷಾತವವಶಂಗತಾ ||೨೮||

ಅ| ೧೯|| ಪ್ರದ್ಯುಮ್ನಿಂವಚನಂಪ್ರಾಹಪ್ರಹಷ್ಟಂಮಮತಮಾಗಿರಾ ||೩೫|| ಶ್ರುಣುಷ್ವತ್ವಂ ಮಹಾಬಾಹೋ ವಿಜ್ಞಾಪ್ತಿಂಮೆರತೆಸ್ಸುತಾ || ವೃಷಾಯಾಮಮಸದ್ಯಾಸ್ತು ವಾಕ್ಯಂವಕ್ಷ್ಯಾಮಿತತ್ವತಃ ||೩೮|| ಕೃಷ್ಣಜನ್ಮಖಂಡೆ ಅಂ|| ೧೧೨||

ನಾರಾಯಣಉವಾಚ—ಸಮತೀತೇಚಸಪ್ತಾಹೆ ರುಕ್ಮಿಣೀಸೂತಿಕಾಗೃಹಾತ್||೧೧||ಗೃಹೀತ್ವಾಬಾಲಕಂದೈತ್ಯೋ ಜಗಾಮಸ್ವಾಲಯಂಜವಾತ್ || ಅಪುತ್ರಕಸ್ಯದೈತ್ಯಸ್ಯಪುತ್ರಂಪ್ರಾಪ್ಯಪ್ರಹರ್ಷತಃ || ೧೨ || ಮಾಯಾವತ್ಯೈದದೌಹೃಷ್ಟೋಹೃಷ್ಟಾ ಮಾಯಾವತೀಸತಿ|| ೧೩ ||ಏತದಾಮನ್ಮಥಂದೈತ್ಯೋಪವರ್ಧಯಹಿಸ್ತಿತಂ || ೧೯ ||ರತಿಂದದರ್ಶ ಕಾಮೇನಮೂರ್ಛಿತಾಂಸುರತೋತ್ಸುಕಾಂ ||೨೧ ||

ಶಂಬರಃ—ಮಹಾಪಾತಕಿನಾಂಶ್ರೇಷ್ಠಂಪ್ರಮತ್ತಂಮಾತೃಗಾಮಿನಾಂ || ದಿಕ್ತ್ವಾಂಚಪುಂಶ್ಚಲೀಂ ಮತ್ತಾಂಕಾಮುಕಿಂಹತಚೇತನಾಂ ||೨೩||ಅ|| ೧೧೮

ನಾರಾಯಣಃ—ಕೃಷ್ಣಪುತ್ರಶ್ಚಪ್ರದ್ಯುಮ್ನೋ ಮಹಾಬಲಪರಾಕ್ರಮಃ || ತತ್ಪುತ್ರೋಪ್ಯನಿರುದ್ಧಶ್ಚವಿಧಾತುರಂಶಏವಚ ||೨||

ಅನಿರುದ್ಧಃ—ಅಹಂಪೌತ್ರಶ್ಚಕೃಷ್ಣಸ್ಯನಾಥಸ್ಯಭ್ರಾತ್ರೀಕಾಮಾತ್ಮನೋಧುನ ||೧೩|| ರತಿಪುತ್ರಂರತಿಗಸಂಪ್ರಮತ್ತಂರಸಿಕಂಪ್ರಿಯೆ||೨೦||ಅ ||೧೧೫||

ಬಾಣಃ—ಪಿತಾಹಿಶಂಬರಂಹತ್ವಾಜಗ್ರಾಹತಸ್ಯಕಾಮಿನೀಂ ||ತತೋಜಾತೋಭವಾದೇವನಿರೋಧಂಸ್ವಕುಲಂ ಕ್ಷಮಂ ||೪೯||

ಅನಿರುದ್ಧಃ—ಪತಿವ್ರತಾರತೀಮಾತಾ ಪತಿಶೋಕೇನಸಂಪ್ರತಂ || ಶಂಬರಸ್ಯಗೃಹೇತಸ್ಥೌದ್ಯತಾತೆನಬಿಕೇನಚ || ೩೮ || ಛಾಯಾಂಮಾಯಾವತೀಂದತ್ವಾಮಾಯಯಾಶಯನೇನಚ || ರತೀಸ್ವಧರ್ಮಂಸಂರಕ್ಷತಮಾಸಾಕ್ಷೀಚತದ್ಗೃಹೆ ||೩೯||

ಇದರ ಯಾಥಾರ್ಥ್ಯ ಹೀಗಿರುವಲ್ಲಿ, ಮಾಯಾವತಿಯು ಶಂಬರನ ಭಾರ್ಯೆಯಲ್ಲವೆಂತಲೂ, ಅನಿರುದ್ಧನು ಮಾಯಾವತಿಗೂ ಪ್ರದ್ಯುಮ್ನನಿಗೂ ಹುಟ್ಟಿದ ಮಗನಲ್ಲವೆಂತಲೂ, ಅನಿರುದ್ಧನು ಬ್ರಹ್ಮಾಂಶ ಸಂಭೂತನಲ್ಲವೆಂತಲೂ, ಶಾಸ್ತ್ರಿಗಳವರು ಹ್ಯಾಗೆ ವಾದಿಸುತ್ತಾರೋ ನಾನರಿಯೆನು. ಈ ಪ್ರಮಾಣಗಳಿಗೆ ಪ್ರತ್ಯಕ್ಷ ವಿರುದ್ಧಗಳಾದ ಪ್ರಮಾಣಗಳು ಅವರಿಗೆ ಕಂಡುಬರುವಪಕ್ಷಕ್ಕೆ, ಮೇಲೆ ತಿಳಿಸಲ್ಪಟ್ಟ ಅಂಶಗಳು ಯಥಾರ್ಥವಾದವೆಂದು ಸ್ಪಷ್ಟವಾಗಿ ನಿರೂಪಿಸುವ ಪ್ರಮಾಣವಚನಗಳಿಗೆ ಅವುಗಳನ್ನು ಶಾಸ್ತ್ರಿಗಳೇ ಸಮನ್ವಯ ಮಾಡಬೇಕಾಗಿರುತಿದೆ ಆ ಕೆಲಸ ನನ್ನದಲ್ಲವು, ಯಾತಕ್ಕಂದರೆ, ಈ ವಿಷಯಕ್ಕೆ ಹರಿವಂಶವು ಪ್ರಬಲತಮ ಪ್ರಮಾಣವಾಗಿರುತಿದೆ, ಅದನ್ನು ನಾನು ಉದಹರಿಸಿರುತ್ತೇನೆ.

ಅನಿರುದ್ಧನು ಮಾಯಾವತಿಯ ಪುತ್ರನೆಂಬ ನನ್ನ ವಾದವನ್ನು ನಿರಾಕರಿಸುವದಕ್ಕಾಗಿ ಗೋಪಾಲಶಾಸ್ತ್ರಿಗಳವರು, ಹರಿವಂಶದ ವಿಷ್ಣುಪರ್ವ ೧೬೨ನೇ ಅಧ್ಯಾಯ, ೨೩ನೇ ಶ್ಲೋಕವನ್ನು ಉದಹರಿಸುತ್ತಾರೆ. ಅವರ ವಾದವನ್ನು ನಿರೂಪಿಸುವದಕ್ಕೆ ವೈದರ್ಭಿ ಎಂಬ ಒಂದೇಶಬ್ದ ಅದರಲ್ಲಿರುತಿದೆ, ಪರಂತು ಅದು ಮಾಯಾವತಿಗೆ ಬೇರೆಯೊಂದು ಹೆಸರಾಗಿರಬಹುದು. ಯಾತಕ್ಕಂದರೆ, ಹಾಗಿಲ್ಲದಿದ್ದರೆ, ಅದೇಗ್ರಂಥದ ೧೭೩ನೇ ಅಧ್ಯಾಯದ ೩೫ ಮತ್ತು ೩೭ನೇ ಶ್ಲೋಕಗಳು ಪ್ರತ್ಯಕ್ಷ ವಿರುದ್ಧಗಳಾಗಿರುವವು. ೩೫ನೇ ಶ್ಲೋಕದಲ್ಲಿ ಅನಿರುದ್ಧನು ಪ್ರದ್ಯುಮ್ನನ ಮಗನೆಂದು ತಿಳಿಸಲ್ಪಟ್ಟಿರುವದಲ್ಲದೆ, ೩೭ನೇ ಶ್ಲೋಕದಲ್ಲಿ ಆತನು "ರತಿಸುತನೆಂದು" ಹೇಳಲ್ಪಟ್ಟಿದೆ. ಸದರೀರತಿಯು ಮಾಯಾವತಿಯೆಂದು ಗೋಪಾಲಶಾಸ್ತ್ರಿಗಳವರುಒಪ್ಪಿಕೊಳ್ಳುತ್ತಾರೆ ಆದದರಿಂದ ವೈದರ್ಭಿಯೆಂಬದು ಮಾಯಾವತಿಗೆ ಬೇರೆಯೊಂದು ಹೆಸರಾಗಿರಬೇಕು.

ವಿಷ್ಣುಪುರಾಣದಿಂದ ತೋರಿಸಲ್ಪಡುವ ಪ್ರಮಾಣವಚನದ ವಿಷಯದಲ್ಲಿ—೫—೨೭—೬ ಮತ್ತು ೭—ಅದು ಹರಿವಂಶಕ್ಕೆ ವಿರುದ್ಧವಾದದ್ದಾಗಿಯಾದರೂ ಇರಬೇಕು, ಅಥವಾ ಅದರಲ್ಲಿ ಉದಹರಿಸಲ್ಪಡುವ ಅನಿರುದ್ಧನು ಅದೇ ಹೆಸರುಳ್ಳ ಬೇರೆಯೊಬ್ಬ ಮಗನಾಗಿಯಾದರೂ ಇರಬೇಕು, ಯಾತಕ್ಕಂದರೆ, ಈ ಪ್ರಮಾಣವಚನಗಳಿಗೆ ಪರಸ್ಪರ ವಿರೋಧವಿಲ್ಲದಂತೆ ಅರ್ಥ ಮಾಡಿಕೊಳ್ಳುವದು ಯೋಗ್ಯವಾಗಿರುತಿದೆ. ಬೇರೇದುಗನೆಂದು ಹೇಳುವದು ಯಾರವಕ್ಕೂ ಸಮಾಧಾನಕರವಾಗಿರುತಿದೆ. ಒಂದುವೇಳೆ ಅನ್ಯಥಾ ಇದ್ದಾಗ್ಯೂ ನನ್ನ ವಾದಕ್ಕೆ ಹರಿವಂಶವು ಆಧಾರವಾಗಿರುತಿದೆ. ಅದುಪುರಾಣಗಳಿಗಿಂತಲೂ ಪ್ರಬಲತರ ಪ್ರಮಾಣಗಳೆಂದು ಗೋಪಾಲಶಾಸ್ತ್ರಿಗಳು ಒಪ್ಪಿಕೊಂಡಿರುತ್ತಾರೆಂಬ ಅಂಶ ಬೆಂಗಳೂರಲ್ಲಿರತಕ್ಕವರಿಗೆ ಚೆನ್ನಾಗಿ ತಿಳಿದೇ ಇದೆ.

ಗೋಪಾಲಶಾಸ್ತ್ರಿಗಳವರು ಸನ್ ೧೮೫ನೇಇಸವಿ ಅಕ್ಟೋಬರ್ ೫ನೇ ತಾರೀಖಿನ ಪ್ರಕಾಶಿಕಾಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವ ತಮ್ಮ ಉಪನ್ಯಾಸದೊಳು ಇದರಡಿಬರುವಂತೆ ತಿಳಿಸುತ್ತಾರೆ.

೧. ಬ್ರಹ್ಮವೈವರ್ತ ಪುರಾಣವಪ್ಯೆಕಿ ಒಂದುಭಾಗವನ್ನು ಪ್ರಮಾಣವಾಗಿ ನಾನು ಅಂಗೀಕರಿಸಿ, ನನಗೆ ವಿರುದ್ಧವಾದ ಮತ್ತೊಂದು ಭಾಗವನ್ನು ಒಪ್ಪುವದಿಲ್ಲವೆಂದು ಅನ್ನುತ್ತಾರೆ.

ಬ್ರಹ್ಮ ವೈವರ್ತ ಪುರಾಣವು ನನ್ನ ಅಭಿಪ್ರಾಯಕ್ಕೆ ವಿರುದ್ಧವಾಗಿಲ್ಲವೆಂಬ ಅಂಶ ನಾನು ಉದಹರಿಸಿರುವ ಸದರೀ ಪುರಾಣ ವಚನಗಳಿಂದಲೇ ವ್ಯಕ್ತವಾಗುತಿದೆ. ಅವುಗಳಲ್ಲಿ, ಶಂಬರನು ಅನಿರುದ್ಧನನ್ನು ಮಾತೃಗಾಮಿಯೆಂದು ಕರೆಯುತ್ತಾನೆ. ತಾನು ರತಿಪುತ್ರನೆಂದು ಅನಿರುದ್ಧನು ತಾನೇ ಹೇಳಿಕೊಳ್ಳುತ್ತಾನೆ. ಅನಿರುದ್ಧನು ಶಂಬರನ ವಿತಂತುವಿಗೆ ಹುಟ್ಟಿದವನೆಂದು ಬಾಣನು ಹೇಳುತ್ತಾನೆ. ಅದಕ್ಕೆ ಪ್ರತ್ಯುತ್ತರರೂಪವಾಗಿ, ರತಿಯು ತನ್ನ ತಾಯಿಯೆಂದು ಅನಿರುದ್ಧನು ಹೇಳುತ್ತಾನೆ. ಅವುಗಳು ನನ್ನ ಬರವಣಿಗೆಗಳಿಗೆ ವಿರುದ್ಧವೋ?

೨. ಅನಿರುದ್ಧನು ರುಕ್ಮಿಎಂಬವನ ಮಗಳಮಗನೆಂಬ ತಮ್ಮ ವಾದಕ್ಕೆ ನಿರೂಪಕವಾಗಿ ಶಾಸ್ತ್ರಿಗಳವರು ಇದರಡಿ ಬರುವ ಶ್ಲೋಕವನ್ನು ಉದಹರಿಸುತ್ತಾರೆ. ಅದು ಯಾವದಂದರೆ

ಪ್ರದ್ಯುಮ್ನಸ್ಯಸುತೋಜಜ್ಞೇ ವೈದರ್ಭ್ಯಾಂ ರಾಜಸತ್ತಮ || ಅನಿರುದ್ಧೋರಣೇಯೋದ್ಧಾಜಜ್ಞೇ ಸಮ್ಯಗಕೇತನಃ|| ಹರಿವಂಶೆ| ವಿ| ಪ| ಅ|೧೦೩ ಶ್ಲೋ||೨೩.

ಶಾಸ್ತ್ರಿಗಳವರ ಅಭಿಪ್ರಾಯಕ್ಕೆ ಮೇಲಿನ ಶ್ಲೋಕವು ಹ್ಯಾಗೆ ಪೋಷಕ ವಾಗುತದೆಯೋ ಅದು ಸ್ಪಷ್ಟವಾಗಿ ತಿಳಿಯಲಿಲ್ಲವು ಒಂದುವೇಳೆ ಶಾಸ್ತ್ರಿಗಳವರು ವೈದರ್ಭಿಯೆಂಬ ಶಬ್ದವನ್ನು ಮುಖ್ಯವಾಗಿ ಹಿಡಿದಿರಬಹುದು. ಈ ಶಬ್ದಕ್ಕೆ ಉಂಟಾದ ಅರ್ಥವನ್ನು ಅದರ ಕೆಳಗಾದ ಬರುವ ಅಧ್ಯಾಯಗಳಿಂದ, ಅಂದರೆ ಮೇಲೆ ಉದಹರಿಸಲ್ಪಟ್ಟ ಗ್ರಂಥದ ೧೦೬ ಮತ್ತು ೧೦೭ನೇ ಅಧ್ಯಾಯಗಳಮೂಲಕ ತಿಳಿದುಕೊಳ್ಳಬಹುದು. ಅವರಿಂದ, ವೈದರ್ಭಿಯೆಂಬದು ಮಾಯಾವತಿಗೆ ಬೇರೆಯೊಂದು ಹೆಸರೆಂತಲೂ, ಅವಳು ರತಿಯೆಂತಲೂ, ಆಕೆಯು ಶಂಬರನ ಭಾರ್ಯೆಯೆಂತಲೂ, ಪ್ರದ್ಯುಮ್ನನ ಮಗನಾದ ಅನಿರುದ್ಧನ ತಾಯಿಯೆಂತಲೂ ಸ್ಪಷ್ಟವಾಗುತಿದೆ.

೩. ಅನಿರುದ್ಧನು ಮಾಯಾವತಿಯ ಅಥವಾ ರತಿಯಪುತ್ರನೆಂಬವನ್ನವಾದಕ್ಕೆ ವಿಷ್ಣುಪುರಾಣದ ೨೭ನೇ ಅಧ್ಯಾಯ, ೫ನೇ ಅಂಶವೂ, ಅಗ್ನಿಪುರಾಣವೂ ವಿರೋಧವಾಗಿರುತದೆಂದು ಶಾಸ್ತ್ರಿಗಳವರು ಹೇಳುತ್ತಾರೆ.

ಮಾಯಾವತಿಯು ಶಂಬರನ ಭಾರ್ಯೆಯೆಂಬ ನನ್ನ ವಾದಕ್ಕೆವಿಷ್ಣುಪುರಾಣವು ಪೋಷಕವಾಗಿರುತಿದೆ. ಅನಿರುದ್ಧನು ಅವರಿಗೆ ಹುಟ್ಟಿದವನೆಂದು ಸದರೀ ಪುರಾಣವು ಹೇಳುವದಿಲ್ಲವು. ಅದೂ ಅಲ್ಲದೆ, ಅನಿರುದ್ಧನು ಬೇರೆಯೊಬ್ಬ ಹೆಂಗಸಿಗೆ ಹುಟ್ಟಿದವನೆಂದು ಹೇಳುತಿದೆ. ಇವನು ಬೇರೇ ಅನಿರುದ್ಧನೋ ಅದೇ ಅನಿರುದ್ಧನೋ ನಾನು ಹೇಳಲಾರೆನು.

ಶಾಸ್ತ್ರಿಗಳಿಂದ ಉದಹರಿಸಲ್ಪಟ್ಟಿರುವ ಅಗ್ನಿಪುರಾಣ ವಚನದಿಂದ ಮಾಯಾವತಿಯು ತಾನು ಶಂಬರನ ಪತ್ನಿಯಲ್ಲವೆಂದು ಪ್ರದ್ಯುಮ್ನನಿಗೆ ಹೇಳಿದಂತೆ ಕಾಣಬರುತಿದೆ. ಇದರ ದೆಸೆಯಿಂದ ಆಕೆಯನ್ನುಶಂಬರನ ಭಾರ್ಯೆಯೆಂದು ಸಾಮಾನ್ಯವಾಗಿ ಯೆಲ್ಲರೂ ತಿಳಿದಿದ್ದಂತೆ ಸ್ಪಷ್ಟವಾಗುತಿದೆ.

೪. ಶಂಬರನು ಮಾಯಾವತಿಯನ್ನು ತನ್ನ ಹೆಂಡತಿಯೆಂದು ಹೇಳಿಕೊಳ್ಳುತ್ತಾನೆ. ವ್ಯಾಸರು ಮೊದಲಾದ ಋಷಿಗಳು ಮಾಯಾವತಿಯನ್ನು ಹಾಗೆ ಹೇಳುವದಿಲ್ಲವೆಂದು ಶಾಸ್ತ್ರಿಗಳು ಹೇಳುತ್ತಾರೆ.

ಮಾಯಾವತಿಯ ವಿಷಯದಲ್ಲಿ ಅಸುರನಾದ ಶಂಬರನು ಹೇಳಿಕೊಳ್ಳುವ ಭಾರ್ಯೆ ಎಂಬ ಮಾತು ಅಸಂಗತವಾಗಿರಬಹುದೆಂದು ಹೇಳಿ, ತನ್ಮೂಲಕ ಭಾರ್ಯೆ ಅಥವಾ ಪತ್ನಿಯೆಂಬ ಶಬ್ದ ಪ್ರಯೋಗದಿಂದ ಉಂಟುಮಾಡಲ್ಪಡುವ ತಮ್ಮ ಅಭಿಪ್ರಾಯಕ್ಕೆ ಉಂಟಾಗುವ ವಿರೋಧವನ್ನು ಶಾಸ್ತ್ರಿಗಳವರು ಕಳೆದುಕೊಳ್ಳಲು ಪ್ರಯತ್ನಪಡುತ್ತಾರೆ. ಹರಿವಂಶದ ೧೬೩ನೇ ಅಧ್ಯಾಯ, ೬ನೇಶ್ಲೋಕದಲ್ಲಿ ವೈಶಂಪಾಯನರೂ, ಅದೇಅಧ್ಯಾಯದ ೨೬ನೇ ಶ್ಲೋಕದಲ್ಲಿ ಮಾಯಾವತಿಯೂ, ಅದೇಗ್ರಂಥದ ೪೯ನೇ ಶ್ಲೋಕದಲ್ಲಿ ಶ್ರೀ ಶಿವನೂ, ವಿಷ್ಣುಪುರಾಣದ ೧೬೫ನೇ ಅಧ್ಯಾಯ, ೫೦ನೇಶ್ಲೋಕ, ೨೩ನೇ ಅಧ್ಯಾಯ ೬ನೇ ಶ್ಲೋಕ, ಇವುಗಳಲ್ಲಿ ನಾರದರೂ, ಸದರೀ ಪುರಾಣದ ೫ನೇ ಅಂಶದಲ್ಲಿ ಪರಾಶರರೂ ಮಾಯಾವತಿಯನ್ನು ಶಂಬರನ ಭಾರ್ಯೆ ಅಥವಾ ಪತ್ನಿಯೆಂದು ಕರೆಯುತ್ತಾರೆಂಬ ಅಂ

ಕವನ್ನು ಶಾಸ್ತ್ರಿಗಳವರು ತಮ್ಮ ಅನುಕೂಲ್ಯಕ್ಕಾಗಿ ಮರೆತುಹೋಗಿರುತ್ತಾರೆ.

೫ ಬ್ರಹ್ಮ ವೈವರ್ತ ಪುರಾಣದ ೧೧೮ನೇ ಅಧ್ಯಾಯದಲ್ಲಿನ ೨೦ ೫೮, ೭೧, ಮತ್ತು ೭೮ನೇ ಶ್ಲೋಕಗಳು ನನ್ನವಾದಕ್ಕೆ ಸಾಧಕವಾಗುವದಿಲ್ಲವೆಂದು ಸಹ ಶಾಸ್ತ್ರಿಗಳು ಹೇಳುತ್ತಾರೆ.

ಬ್ರಹ್ಮ ವೈವರ್ತ ಪುರಾಣವು ನನಗೆ ಸಾಧಕವಾಗಿರುತದೆಯೋ ಅಥವಾ ಇಲ್ಲವೋ ಯೆಂಬತಿಂಕವನ್ನು ಮೇಲೆ ಉದಹರಿಸಲ್ಪಟ್ಟಿರುವ ಪ್ರಮಾಣಗಳಡೆಸೆಯಿಂದ ತಿಳಿದುಕೊಳ್ಳಬಹುದು

ಈ ಸಂದರ್ಭದಲ್ಲಿ ನನ್ನ ಅಭಿಪ್ರಾಯ ತಪ್ಪಾಗಿರಲಿಲ್ಲವು ಅಥವಾ ಇದ್ದರೂ ಅದು ಶಾಸ್ತ್ರಿಗಳವರಿಗೆ ಸಾಧಕವಾಗಲಾರದು. ಪೂರ್ವಕಾಲದಲ್ಲಿ ವೇದೋಕ್ತ ಕರ್ಮಗಳೊಡನೆ ಕನ್ಯಾವಿತಂತುಗಳಿಗೆ ಪುನರ್ವಿವಾಹಮಾಡಿಸುವ ಪದ್ಧತಿ ಆಚರಣೆಯಲ್ಲಿರುತಲಿತ್ತೆಂದು ನಿರೂಪಿಸಲಿಕ್ಕೆ ನಾನು ಉದಹರಿಸಿದ ಅನೇಕ ನಿದರ್ಶನಗಳಪೈಕಿ ಇದೂ ಒಂದಾಗಿದೆ. ಕಲಿಯುಗದಲ್ಲಿ ವಿಧವಾವಿವಾಹವು ನಿಷೇಧಿಸಲ್ಪಟ್ಟಿರುತ್ತಿದೆಯೆಂಬ ಶಾಸ್ತ್ರಿಗಳ ವಾದದಿಂದಲೇ, ಕಲಿಯುಗಕ್ಕೆ ಹಿಂದೆ ಸದರೀ ವಿವಾಹವು ಆಚರಣೆಯಲ್ಲಿತ್ತೆಂದು ನಿರೂಪಿಸಲ್ಪಡುತಿದೆ. ಈ ನಿದರ್ಶನಗಳು ಸಾಕಾಗಿರುತಿವೆ, ಅಥವಾ ಸಾಲದ್ದೆಂಬ ಅಂಶವನ್ನು ಪ್ರಜೆಗಳೇ ನಿರ್ಧರಿಸಿಕೊಳ್ಳಲಿ. ಅನಿರುದ್ಧನವಿಷಯವನ್ನು ಕುರಿತು ಮರಳಿ ಬರೆಯುವದರಮೂಲಕ ನನ್ನ ಕಾಲವನ್ನು ನಾನು ವ್ಯರ್ಥಗೊಳಿಸಲಾರೆನು

HINDU WIDOW MARRIAGE

[illegible]

THE MYSORE GAZETTE

ಮೈಸೂರು ಗಜೆಟು.

— 0 —

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್‌ಕಮಿಷನರು ವಗೈರೆಯಿಂದ ಕೊಡೋಣಾಯ

ಇಷ್ತಿಹಾರ್ ನಾಮೆಗಳು

ರೆಸಿಡೆಂಟರ ಇಂಗ್ಲಿಷ್ ಇಷ್ತಿಹಾರ್‌ನಾಮೆ

[illegible]

(b) ೧೮೮೪ನೇ ಇಸವಿಯ IIIನೇ ನಂಬರ್ ...

(c) ಇಂಗ್ಲಂಡ್ ಯಾ ಐರ್‌ಲೆಂಡ್ ದೇಶದ ...

(d) ಬ್ರಿಟಿಷ್ ಇಂಡಿಯಾದೇಶದ ...

(e) ಬ್ರಿಟಿಷ್‌ದೇಶ ಯಾ ಇಂಡ್ಯದೇಶದ ...

[illegible]

BANGALORE—Printed and published for the Proprietor, at the KARNATIC PRESS—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಸ್ವವೃತ್ತ್ಯುದಗನಾರ್ಥ ಕರ್ಣಾಟಕಪ್ರಕಾಶನವೆರಾಧಿದಾವೃತಿತಸಾಹಿತೀಶೋಭಿತಾ ॥ ಮೃಗಾಂಕಹಿತಪಾಸರಸಿನಿಹಿತಮುದ್ರಣಾಸಜ್ಜನೈರ್ದ್ದಿ ಕಾಸುಪರಿಪೋಷಿತಾವಿಕಿತಮಾನಸಂಸುಮುದಂ

Vol. XIII] BANGALORE—MONDAY, FEBRUARY 1, 1886. [No. 5.

ಸಂಪುಟ ೧೩.] ಬೆಂಗಳೂರು:—ಸನ್ ೧೮೮೬ನೇ ಇಸವಿ ಫೆಬ್ರುವರಿ ೧ನೇ ತಾರೀಖ್ ಸೋಮವಾರ. [ಸಂಚಿಕೆ ೫.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷು ಮತ್ತು ಕನ್ನಡ ತಿಳಿಯುವರಿಗೆ [illegible] ವರುಷ ೧ಕ್ಕೆ ... ೧೦—೦—೦

ಇಂಗ್ಲಿಷು ಬಲ್ಲ [illegible] ವರುಷ ೧ಕ್ಕೆ ... ೬—೦—೦

ಕನ್ನಡವನ್ನು [illegible] ... ೬—೦—೦

ಶಿಂಗಳ ೧ಕ್ಕೆ ೦—೮—೦

[illegible]

ಪ್ರಕಟನೆಯ ರಿವಾಜ್.

ಮೊದಲನೇದಫಾಪಂಕ್ತಿ ೧ಕ್ಕೆ ೦—೨—೦

ಎರಡನೇದಫಾಪಂಕ್ತಿ ೧ಕ್ಕೆ ೦—೧—೦

NOTICE TO SUBSCRIBERS

[illegible]

೧ [illegible]

೨ [illegible]

೩ [illegible]

೪ [illegible]

NOTICE.

VAIDYASARA SANGRAHA

Price including Postage, Rs. 5 0 0

ವೈದ್ಯಸಾರ ಸಂಗ್ರಹ.

[illegible]

ಶ್ರೀ ವಿ. ವೆಂಕಟದಾಸ, [illegible], ಬೆಂಗಳೂರು.

ನೋಟೀಸ್

ಇದರ ಕೆಳಗೆ ಬರೆಯಲ್ಪಟ್ಟಿರುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ವಿಕ್ರಯಿಸಲ್ಪಡುವವು,—

ಕನ್ನಡ ಟೀಕಾಸಹಿತವಾದ ಸಂಸ್ಕೃತ ಗ್ರಂಥಗಳು.

[illegible] ...	೧—೪—೦
[illegible] ...	೦—೧೨—೦
ಭಗವದ್ಗೀತೆ (ಟೀಕಾಸಹಿತ) ...	೦—೩—೦
[illegible] ...	೦—೫—೦
[illegible] ...	೦—೪—೧
[illegible] ...	೦—೧೪—೦
[illegible] ...	೦—೨—೦
[illegible] ...	೦—೨—೦
ವೈದ್ಯಸಾರಸಂಗ್ರಹ ...	೫—೦—೦

ಕನ್ನಡ ಗ್ರಂಥಗಳು.

[illegible] ...	೦—೭—೬
[illegible] ...	೦—೪—೦
[illegible] ...	೦—೩—೬
[illegible] ...	೦—೨—೬
[illegible] ...	೦—೪—೦
[illegible] ...	೦—೨—೦
[illegible] ...	೦—೨—೬
[illegible] ...	೦—೭—೦
[illegible] ...	೦—೩—೦
[illegible] ...	೦—೨—೧
[illegible] ...	೦—೦—೩
[illegible] ...	೧—೧—೦
[illegible] ...	೨—೦—೦
[illegible] ...	೦—೧೨—೦
[illegible] ...	೩—೪—೬
[illegible] ...	೩—೪—೬
[illegible]	
೧ನೇ ಸಂಚಿಕೆ ...	೦—೮—೦
೨ನೇ ಸಂಚಿಕೆ ...	೦—೮—೦
[illegible] ...	೦—೮—೦

ಸಂಸ್ಕೃತ ಮೂಲಗ್ರಂಥಗಳು

[illegible]	೦—೫—೦
[illegible] ...	೦—೨—೬
[illegible] ...	೦—೨—೬
[illegible] ..	೦—೦—೬
[illegible] ...	೦—೩—೨
[illegible] ...	೦—೧—೦

[illegible]

NOTICE.

ಎಸ್. ರಾಮಸ್ವಾಮಯಂಗಾರ್ ಕಂಪೆನಿ.

ಜನರಲ್ ಕಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ಸಮಸ್ತ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

ನೋಟಿಸ್.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

೨೧ನೇ ಜನವರಿ ೧೮೮೬.

ಸನ್ ೧೮೮೬ನೇ ಇಸವಿ ಜನವರಿ ೩೦ನೇ ತಾರೀಖ್ ಶನಿವಾರದಿನ ಬೆಳಿಗ್ಗೆ ೩½ ಘಂಟೆಗೆ ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡದಲ್ಲಿನ ತಮ್ಮ ಆಫೀಸಿನಲ್ಲಿ ಸಿಟಿ ಮ್ಯುನಿಸಿಪಲ್ ಕಮ್ಮಿಷನರ್‌ಗಳು ಮೀಟಿಂಗ್ ಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳ ಪಟ್ಟಿ.

೧ ಚಾಲತಿ ನಗದು ಜಮಾಖರ್ಚು ಲೆಕ್ಕಗಳು, ಈಗ ನಡೆಯುತಲಿರುವ ಕಾಮಗಾರಿಗಳನ್ನು ಕುರಿತ ರಿಪೋರ್ಟ್, ಹುಕುಂ ಮಾಡಲ್ಪಟ್ಟಿರುವ ಹೊಸ ಕೆಲಸಗಳ ಪಟ್ಟಿ, ಸನ್ ೧೮೮೫ನೇ ಇಸವಿ ಡಿಸೆಂಬರ್ ಮಾಹೆಯಬಾಬತು ಮರಣಲೆಕ್ಕ ಮತ್ತು ಮ್ಯುನಿಸಿಪಲ್ ಸ್ಕೂಲ್ ಲೆಕ್ಕಗಳು.

೨ ಬಜೆಟ್ ಲೆಕ್ಕದಲ್ಲಿ ಸೇರಿಸಬೇಕಾದ ಕಾಮಗಾರಿಗಳು, ಮತ್ತು ಸಾಮಾನ್ಯವಾಗಿ ಟೌನಿನ ಅಭಿವೃದ್ಧಿಗೆ ಅವಶ್ಯಕವಾದ ವಿಶಿಷ್ಟ ಕಾಮಗಾರಿಗಳನ್ನು ಬಹಳಾಯಿಸುವ ಕೆಲಸಕ್ಕಾಗಿ ಸಬ್ ಕಮ್ಮಿಟಿಯನ್ನು ಏಕತ್ರಮಾಡುವ ವಿಷಯದಲ್ಲಿ ಯಾವದಾದರೆ ಒಂದು ಕ್ರಮ ಏರ್ಪಡಿಸಬೇಕೆಂದು ಮೈಸೂರು ಗವರ್ನಮೆಂಟ್ ಸೀನಿಯರ್ ಸರ್ಜಿಯನ್‌ರವರು ಬರೆದ ಸನ್ ೧೮೮೬ನೇ ಇಸವಿ ಜನವರಿ ೧೧ನೇ ಮರ್ಕಂ ೪೪ನೇ ನಂಬರ್ ಲೆಟರ್.

೩. ಸನ್ ೧೮೮೬—೮೭ನೇ ಸರ್ಕಾರ್ ಸಾಲ್‌ಬಾ॥ ಮ್ಯುನಿಸಿಪಲ್ ಫಂಡಿನ ಜಮಾಖರ್ಚು ಬಜೆಟ್ ಅಂದಾಜ್

೪. ಧರ್ಮಾಂಬುಧಿ ಕೆರೆಯಲ್ಲಿನ ನೀರು ಕೆಡದೆ ಇಟ್ಟುಕೊಳ್ಳತಕ್ಕದ್ದಾದ ವಿಷಯದಲ್ಲಿ ಕೆಲವು ಏರ್ಪಾಡುಗಳನ್ನು ತಿಳಿಸಿ ಮೈಸೂರು ಗವರ್ನಮೆಂಟ್ ಸೀನಿಯರ್ ಸರ್ಜಿಯನ್‌ರವರು ಬರೆದ ಸನ್ ೧೮೮೬ನೇ ಇಸವಿ ಜನವರಿ ೧೪ನೇ ಮರ್ಕಂ ೪೮ನೇ ನಂಬರ್ ಲೆಟರ್.

೫ ಮುನಿರೆಡ್ಡಿಪಾಳ್ಯ ಗ್ರಾಮದಲ್ಲಿ ಜನಗಳ ಆರೋಗ್ಯಾಭಿವೃದ್ಧಿಗಾಗಿ ಕೆಲವು ಏರ್ಪಾಡುಗಳನ್ನು ಸೂಚಿಸಿ, ೭೫ ರೂಪಾಯಿಗಳ ಅಂದಾಜ್ ಪಟ್ಟಿಯೊಡನೆ, ೩ನೇ ಡಿವಿಜನ್ ಮ್ಯುನಿಸಿಪಲ್ ಕಮ್ಮಿಷನರಾದ ಜಿ. ಕ್ಯಾಸರಯಸ್ವಾಮಿ ಅಯ್ಯರ್ ಯವರು ಬರೆದ ಸನ್ ೧೮೮೬ನೇ ಇಸವಿ ಜನವರಿ ೩ನೇ ಮರ್ಕಂ ಲೆಟರ್

೬ ಹೈಗ್ರೌಂಡಿನಲ್ಲಿ ಸಾಲ್‌ಮರಗಳ ರಸ್ತೆ ಮತ್ತು ಕುದುರೆ ಜೂಜು ದಿಣ್ಣೆಯ ರಸ್ತೆಗಳು ಸೇರುವ ಸ್ಥಳದ ಬಳಿ ನೋಡುವದಕ್ಕೆ ಕೇವಲ ಅಸಹ್ಯವಾದ ಸ್ಥಿತಿಯಲ್ಲಿರುವ ಒಂದು ಖಾಲೀ ಜಮೀನನ್ನೂ, ಟೌನಿನಲ್ಲಿ ಅದೇರೀತಿಯಾದ ಸ್ಥಿತಿಯಲ್ಲಿರುವ ಖಾಲೀ ಜಮೀನುಗಳನ್ನೂ ಸರ್ಕಾರಕ್ಕೆ ವಹಿಸಬೇಕೆಂದು ನಮೂದಿಸಿ ೩ನೇ ಡಿವಿಜನ್ ಮ್ಯುನಿಸಿಪಲ್ ಕಮ್ಮಿಷನರವರು ಬರೆದ ಸನ್ ೧೮೮೬ನೇ ಇಸವಿ ಜನವರಿ ೩ನೇ ಮರ್ಕಂ ಲೆಟರ್.

೭ ಉತ್ತಮಜಾತಿ ಬೆಂಗಸರನ್ನು ದಾಸಿ ಕೆಲಸಕ್ಕೆ ತರಬೇತಿ ಮಾಡುವದಕ್ಕಾಗಿ ಪ್ರಸವಾಶ್ರ ಪತ್ರೆಗೆ ಸೇರಿದಂತೆ ಒಂದು ಪಾಠಶಾಲೆ ಅಥವಾ ಒಂದು ತರಗತಿಯನ್ನು ಏರ್ಪಡಿಸಬೇಕೆಂದು ಸೂಚಿಸಿ ೧ನೇ ಡಿವಿಜನ್ ಮ್ಯುನಿಸಿಪಲ್ ಕಮಿಷನರ್ ಎ. ಎನ್. ರಾಘವಾಚಾರ್, ಯಸ್ವಾಮಿ ಅಯ್ಯರ್‌ಯವರು ಬರೆದ ಸನ್ ೧೮೮೬ನೇ ಇಸವಿ ಜನವರಿ ೮ನೇ ಮರ್ಕಂ ಲೆಟರ್

೮. ಮುನಿರೆಡ್ಡಿ ಪಾಳ್ಯದಲ್ಲಿರುವ ದೇವಸ್ಥಾನವನ್ನು ಟೌನ್ ಮ್ಯುನಿಸಿಪಲ್ ಸರಹದ್ದಿಗೆ ಸೇರಿಸಿಕೊಳ್ಳಬೇಕಾದ್ದು ಆವಶ್ಯಕವೆಂಬ ವಿಷಯದಲ್ಲಿ ಸಿವಿಲ್ ವ ಮಿಲಿಟರಿ ಸ್ಟೇಷನ್ ಮ್ಯುನಿಸಿಪಲ್ ಪ್ರೆಸಿಡೆಂಟರವರು ಸನ್ ೧೮೮೬ನೇ ಇಸವಿ ಜನವರಿ ೩ನೇ ಮರ್ಕಂ ೧೩೫ನೇ ನಂಬರ್ ಲೆಟರ್, ಮತ್ತು ಅದರಸಂಗಡ ಕಳುಹಿಸಿದ ಅದೇ ತಾರೀಖಿನ ಡಿಸ್ಟ್ರಿಕ್ಟ್ ಓವರ್ಸಿಯರವರ ಡೈರಿಯ ಯಕಸ್ಟ್ರಾಕ್ಟ್

೯. ಬೆಂಗಳೂರು ಷಹರ್‌ನಲ್ಲಿನ ವಾಯುಖಾನೆಗಳ ವಿಷಯದಲ್ಲಿ ಈಗ ಜಾರೀಯಲ್ಲಿರುವ ಬೈಲಾ ಯೆಂಬ ಉಪನಿಬಂಧನೆಯಲ್ಲಿ ಕೆಲವು ಬದಲಾವಣೆಗಳಂ ಮಾಡಬೇಕೆಂದುಕೋರಿ, ಬೆಂಗಳೂರು ಸಿಟಿ ರೇಟ್ ಪೇಯರ್ಸ್ ಅಸೋಸಿಯೇಷನ್ ಸೆಕ್ರೆಟರಿಗಳು ಬರೆದ ಸನ್ ೧೮೮೬ನೇ ಇಸವಿ ಜನವರಿ ೮ನೇ ಮರ್ಕಂ ಲೆಟರ್

೧೦ ರೈಲ್ವೆ ಕಟ್ಟಡದ ಬಳಿ ಒಂದು ಕಸಾಯಿ ಅಂಗಡಿ ಕಟ್ಟಿಸಬೇಕಾದ್ದು ಆವಶ್ಯಕ ವಾಗಿದೆಯೆಂದು ನಮೂದಿಸಿ ಮೈಸೂರು ರೈಲ್ವೆ ಬೆಂಗಳೂರು ಸ್ಟೇಷನ್ ಮಾಸ್ಟರು ಬರೆದ ಸನ್ ೧೮೮೬ನೇ ಇಸವಿ ಜನವರಿ ೪ನೇ ಮರ್ಕಂ ಲೆಟರ್

೧೧. ಲಾಲ್‌ಬಾಗಿಯಲ್ಲಿನ ಅನಾಥರಿಗೆ ಬಟ್ಟೆಗಳು ಸರಬರಾಯಿ ಮಾಡುವವರೊಳು ಹಿಡಿಯಬಹುದಾದ [illegible] ದಿನ ತಖ್ತೆ.

೧೨. ಸಿಲ್ವಾರ್ ಲಾಯವನ್ನು [illegible] ಮೊಹರೆಗಳನ್ನೂ ಬಹಾಯಿಸುವ ವಿಷಯದಲ್ಲಿ ಮೈಸೂರು ಗವರ್ನಮೆಂಟ್ ಮರಮ್ಮತ್ ಇಲಾಖಾ ಸೆಕ್ರೆಟರಿಯವರ ಹೆಸರಿಗೆ, ಸನ್ ೧೮೮೬ನೇ ಇಸವಿ ಜನವರಿ ೧೪ನೇ ತಾರೀಖುಳ್ಳ ತಮ್ಮ ಲೆಟರಿನ ನಕಲ್ ಮಲಫೂಫನಲೀ ಮೈಸೂರು ಗವರ್ನಮೆಂಟ್ ಮಿಲಿಟರಿ ಸೆಕ್ರೆಟರಿಯವರು ಬರೆದ ೧೨೨ನೇ ನಂಬರ್ ಲೆಟರ್.

೧೩. ಮ್ಯುನಿಸಿಪಲ್ ಸ್ಕೂಲ್ ಕಟ್ಟಡವನ್ನು ಕಲಾಸಿಪೇಟೆಗೆ ಬಹಾಯಿಸುವದರಲ್ಲಿ ಹಿಡಿಯಬಹುದಾದ ಖರ್ಚಿನ ಅಂದಾಜ್ ಪಟ್ಟಿ, ಸನ್ ಮತ್ತು ೧೮೮೫ನೇ ಇಸವಿ ಡಿಸೆಂಬರ್ ೧೪ನೇ ತಾರೀಖುಳ್ಳ ಹೆಡ್ ಮಾಸ್ಟರವರ ರಿಪೋರ್ಟ್.

A. Srinivasa Charlu,
Vice President,
City Municipal Commission.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, FEBRUARY 1, 1886.

೧೮೮೬ನೇ ಫೆಬ್ರುವರಿ ೧ನೇ ತಾ॥ ಸೋಮವಾರ.

ಶ್ಲೋ॥ ಸರ್ವಜ್ಞತಾಂನವಿಸವಾಕ್ಯಟುತಾಂಪ್ರಸೂತಿ ವಾಣೀತ್ವದುಕ್ತಿಸರಸೀರುಹಸೂಪ್ರಣಾಮಃ॥ತ್ವಾಮು ಪದವಿಮನುಸಕವಿಸ್ವರಂತಿ ತ್ವಾಮುಪಾಮಿಕರ ಣಾಂಜನೀತ್ವಮೇವ॥

A CASE OF LIBEL.

ಈವ್ರೋಡಿನೊಳು ಮಹಾರಾಜರವರ ಹೆಸರಿನಿಂದ ಸ್ಥಾಪಿಸಲ್ಪಟ್ಟಿರುವ ಸ್ಪಿನ್ನಿಂಗ್ ಮತ್ತು ವೀವಿಂಗ್ ಫ್ಯಾಕ್ಟರಿಂಗ್ ಕಂಪೆನಿಯ ಡೈರೆಕ್ಟರ್‌ಗಳು ಗತ ಬುಧವಾರದದಿನ ಸೇರಿದ ಮೀಟಿಂಗನಲ್ಲಿ, ಕಂಪೆನಿಯ ಏಜಂಟ್ ಮೆ॥ಸ್ಟಾಡ್ ಎಂಬವರು, ಬೆಂಗಳೂರು ಸ್ಪೆಕ್ಟೇಟರ್‌ಪತ್ರಿಕೆಯು, ಸದರೀಕಂಪೆನಿಯಮೇಲೆ ನಿರಾಧಾರಗಳಾದ ಮತ್ತು ಅಸೂಯಾಸೂಚಕಗಳಾದ, ಕೆಲಮಾತುಗಳನ್ನು ಧಾಯಿಷ್‌ಮಾಡಿದ್ದರಿಂದ, ಸದರೀ ಪತ್ರಿಕಾಧಿಪರಮೇಲೆ ಮಾನನಷ್ಟದಬಗ್ಗೆ ಫಿರ್ಯಾದ್ ಮಾಡಬೇಕೆಂಬದಾಗಿ ತೀರ್ಮಾನದಬಗ್ಗೆ ಸೂಚಿಸಿದರು. ೧೮೮೫ನೇ ಇಸವಿ ಅಕ್ಟೋಬರ್ ತಿಂಗಳ ೨,೩,೭,೨೪, ೩೧ನೇ ತಾ॥ಗಳಲ್ಲಿ ಮತ್ತು ಜನವರಿ ೨ನೇ ತಾರೀಖ್‌ವುಳ್ಳ ಸ್ಪೆಕ್ಟೇಟರ್ ಪತ್ರಿಕೆಯ ಸಂಚಿಕೆಗಳಲ್ಲಿ ಜನಗಳ ನಂಬಿಕೆಯನ್ನು ಹೋಗಲಾಡಿಸಿ ತನ್ಮೂಲಕ ದ್ರವ್ಯ ಹಾನಿಯನ್ನೂ ನಷ್ಟವನ್ನೂ ಉಂಟುಮಾಡುವಂತಾ ವಾಕ್ಯಗಳು ಬರೆಯಲ್ಪಟ್ಟದ್ದವು. ಅವುಗಳ ಪೈಕಿ "ಕಂಪೆನಿಯ ಸ್ಥಿತಿಯು ಕೃತ್ರಿಮವಾದದ್ದಾಗಿದೆ." "ಮತ್ತು" ಅಲ್ಲಿನ ಆಡಳಿತಗಳು ನಿಷ್ಕಲ್ಮಷವಾಗಿರುವದಿಲ್ಲವು ಎಂಬ ಯೆರಡು ವಾಕ್ಯಗಳು ಮುಖ್ಯವಾದವಾಗಿರುತಿವೆ. ಇವು ನಿರಾಧಾರಗಳಾದ ಅಪಲಾಪಗಳಾಗಿರುವದರಿಂದ, ಜನಗಳಿಗೆ ಕಂಪೆನಿಯ ಆಡಳಿತವು ಯೋಗ್ಯವಾಗಿ ನಡೆಸಲ್ಪಡುತಿದೆಯೆಂಬದನ್ನು, ಕಂಪೆನಿಯು ಅಭಿವೃದ್ಧಿ ಹೊಂದುತಿದೆಯೆಂಬದನ್ನೂ ಖನ್ನಾಗಿತಿಳಿಯ ತಕ್ಕಬಗ್ಗೆ ಸದರೀ ಪತ್ರಿಕಾಧಿಪರನ್ನೂ ಅದರ ಎಡಿಟರನ್ನು ಸಹ ದಂಡಿಸುವವಿಷಯದೊಳು ಪ್ರಯತ್ನಪಡಬೇಕಾದ್ದು ಡೈರೆಕ್ಟರ್‌ಗಳ ಕರ್ತವ್ಯವಾಗಿರುತಿದೆಯೆಂದು ಏಜಂಟರು ಅರುಹಿದರು. ತರುವಾಯ ಪ್ರತಿ ಡೈರೆಕ್ಟರೂ ಏಜಂಟರ ಅಭಿ

ಪ್ರಾಯವನ್ನು ಅಂಗೀಕರಿಸಿದರು. ಅರ್ಧಭಾಗಕ್ಕಿಂತಲೂ ಅಧಿಕವಾಗಿ ಕಂಪೆನಿಯ ಯಂತ್ರೋಪಕರಣಗಳು ನಿಜವಾಗಿ ತಮಗೆ ಸಂಬಂಧಪಟ್ಟದ್ದೆಂತಲೂ, ಅದರೊಳು ತಮ್ಮ ಒಬ್ಬರವೇ ಎರಡುಲಕ್ಷರೂಪಾಯಿಗಳತನಕ ಭಾಗಗಳವೆಯೆಂತಲೂ, ಬಾಕಿ ಎರಡುಲಕ್ಷರೂಪಾಯಿಗಳಲ್ಲಿ ಇಪ್ಪತ್ತೈದುಸಾವಿರ ರೂಪಾಯಿಗಳುವಿನಾ ಮಿಕ್ಕವೆಲ್ಲ ಮೈಸೂರು ಸರ್ಕಾರದವರೆಂತಲೂ, ೨೫,೦೦೦ ರೂಪಾಯಿಗಳು ಇಲ್ಲಿನ ನೇಟಿವ್ ದೊಡ್ಡಮನುಷ್ಯರು ಕೊಟ್ಟದಾರೆಂತಲೂ, ಇವುಗಳಿಗೆ ಸ್ಟೇಕಡಾ ೬ರಪ್ರಕಾರ ಬಡ್ಡಿಕೊಡುವುದಾಗಿ ತಾವು ವಾಗ್ದಾನಮಾಡಿರುವಂತೆಯೂ ಮೆ॥ ಸ್ಮಾಟಿಯವರು ತಿಳಿಸಿದರು. ಹೀಗಿರುವಲ್ಲಿ ಸ್ಪೆಕ್ಟೇಟರ್‌ಪತ್ರಿಕೆಯು ಇಂತಾ ಅನರ್ಥಕರವಾದ ವಾಕ್ಯಗಳನ್ನು ಪ್ರಕಟಿಸುವದನ್ನು ಅಡ್ಡಿಪಡಿಸಬೇಕಾದ್ದು ಆವಶ್ಯಕವಾದ್ದರಿಂದಲೂ, ಷೇರ್‌ದಾರರಿಗೆಲ್ಲ ಡೈರೆಕ್ಟರುಗಳು ಜವಾಬ್ದಾರರಾಗಿರುವದರಿಂದಲೂ, ಷೇರ್‌ದಾರರಪೈಕಿ ಬಹುಮಂದಿ ಇಂಗ್ಲಾಂಡಿನಲ್ಲಿರುವದರಿಂದ ಅವರು ಬೆಂಗಳೂರು ಸ್ಪೆಕ್ಟೇಟರ್‌ಪತ್ರಿಕೆಯಲ್ಲಿ ಛಾಯಿಷಾದ ಅಂಶವನ್ನು ಓದಿದರೆ ಬಹಳ ಅತೃಪ್ತಿಯನ್ನೈದುವರೆಂತಲೂ, ನುಡಿದರು. ಮೆ॥ ಸಾತ್‌ಯವರಿಗೂ ಏಜಂಟರಿಗೂ ಕರಾರಿನವೆದಿರುವಂತೆ ಸ್ಪೆಕ್ಟೇಟರ್‌ಪತ್ರಿಕೆಯಲ್ಲಿ ಸೂಚಿಸಲ್ಪಟ್ಟದ್ದರಿಂದ ಸದರೀ ಕರಾರನ್ನು ಮೆಸ್ಸರ್ಸ್ ಸ್ಮಾಟಿಯವರು, ಬೋರ್ಡಿನವರವಶಕ್ಕೆ ಕೊಡಲು ಅದು ಕಂಪೆನಿಯ ಪ್ರಯೋಜನಕ್ಕೆ ಯಾವಭಾಗದಲ್ಲಿಯೂ ನ್ಯೂನತೆಯನ್ನುಂಟುಮಾಡತಕ್ಕದ್ದಾಗಿರಲಿಲ್ಲವೆಂದು ಡೈರೆಕ್ಟರ್‌ಗಳು ಅಭಿಪ್ರಾಯಪಟ್ಟರು. ಕಡೆಗೆ ಮಾನನಷ್ಟದಬಗ್ಗೆ ಸ್ಪೆಕ್ಟೇಟರ್ ಪತ್ರಿಕಾಧಿಪರರಮೇಲೆ ಫಿರ್ಯಾದ್‌ಮಾಡತಕ್ಕದ್ದೆಂತಲೂ, ಮೊಕದ್ದಮೆಯನ್ನು ಕೂಡಲೇ ಲಾಯರಿಗೆ ಒಪ್ಪಿಸತಕ್ಕದ್ದೆಂತಲೂ ಡೈರೆಕ್ಟರೆಲ್ಲರೂಸೇರಿ ತೀರ್ಮಾನಮಾಡಿದರು. ಈಮೊಕದ್ದಮೆಯು ಶೀಘ್ರದಲ್ಲಿ ಕೋರ್ಟಿಗೆ ದಾಖಲಾಗುವದಾಗಿದೆ.

AROGYAMARG IDARSINI.

ಮಹಾರಾಜರ ಕಾಲೇಜಿನ ಅಸಿಸ್ಟೆಂಟಮಾಸ್ಟರಾದ ಮೆ॥ ರಘುನಾಥರಾಯರವರು ಗತವಾರದಲ್ಲಿ ಕಳುಹಿಸಿದ, ತಮ್ಮಿಂದ ವಿರಚಿತವಾದ ಆರೋಗ್ಯಮಾರ್ಗದರ್ಶಿನಿಯೆಂಬ ಗ್ರಂಥದ ಪ್ರತಿಯನ್ನು ಕೃತಜ್ಞತೆಯೊಡನೆ ಬರಮಾಡಿಕೊಂಡೆವು. ಈ ಗ್ರಂಥವು ೮೧ನೇ ಇಸವಿಯಲ್ಲಿ ಪ್ರಥಮತಃ ಪ್ರಕಟಿಸಲ್ಪಟ್ಟು ತತ್ಪ್ರಯುಕ್ತವಾದ ಪ್ರಯೋಜನವನ್ನು ವಿದ್ಯಾರ್ಥಿಗಳು ವಿಶೇಷತಃ ಕೈಗೊಂಡದ್ದರಿಂದ ಅದು ಎರಡನೆಯ ಆವರ್ತಿ ಈಗ ಮರಳಿ ಪರಿಶೋಧಿಸಿ ಪ್ರಕಟಿಸಲ್ಪಟ್ಟಿರುತ್ತದೆ. ಲೋಕದಲ್ಲಿ ಪುರುಷಾರ್ಥ ಚತುಷ್ಟಯಕ್ಕೂ ಕಾರಣಭೂತವಾದ ಆರೋಗ್ಯವಿಧಾನವನ್ನರಿಯಬೇಕಾದ್ದು ಪ್ರಾಣಿಸಾಮಾನ್ಯಕ್ಕೆ ಆವಶ್ಯಕವಾದದರಿಂದ ಅದಂ ಸುಲಭವಾಗಿ ಬೋಧಿಸುವ ಗ್ರಂಥವು ಇದುವರಿವಿಗೂ ಕರ್ಣಾಟಭಾಷೆಯಲ್ಲಿ ಪ್ರಾಯೇಣ ದುರ್ಲಭವಾಗಿತ್ತು. ಇಂತಾ ನ್ಯೂನತೆಯಂ ನಿವಾರಿಸುವಬಗ್ಗೆ ಮೆ॥ ರಘುನಾಥರಾಯರವರು ಲೋಕೋಪಕಾರಾರ್ಥ ಪ್ರವರ್ತಿಸಿದ್ದು ಕೇವಲ ಶ್ಲಾಘಿಸತಕ್ಕದ್ದಾಗಿರುತ್ತದೆ. ಇದಲ್ಲದೆ ವರ್ತಮಾನಕಾಲದವರಿಂದ ತಿರಸ್ಕೃತವಾದ ಕರ್ಣಾಟಭಾಷೆಯನ್ನು ಗೌರವಿಸಿ ಅದರಲ್ಲಿ ಜ್ಞಾತವ್ಯಾಂಶಗಳನ್ನು ಜನಗಳಿಗೆ ತಿಳಿಸಲೆತ್ನಿಸಿದ್ದು ಮತ್ತಷ್ಟು ಪ್ರಶಂಸಿಸತಕ್ಕದ್ದಾಗಿರುತ್ತದೆ. ಆರೋಗ್ಯಮಾರ್ಗದರ್ಶಿನಿಯು ಸಕಲಾಂಶದಲ್ಲಿಯೂ ಅನ್ವರ್ಥನಾಮವುಳ್ಳದ್ದಾಗಿರುತ್ತದೆಯಲ್ಲದೆ ಇದು ಎಂಟುಭಾಗಗಳಾಗಿ ವಿಭಜಿಸಲ್ಪಟ್ಟು ಅದರಲ್ಲಿ ಕ್ರಮವಾಗಿ, ವಾತೋದಕಾಹಾರವ್ಯಾಯಾಮ ನಿದ್ರಾದಿ ವಿಷಯಗಳು ಪ್ರಕರಣಾನುಗುಣವಾಗಿ ವಿಚಾರ ಮಾಡಲ್ಪಟ್ಟಿರುತ್ತವೆ. ಈ ಗ್ರಂಥದಲ್ಲಿ ವಿಚಾರಣೀಯವಾದ ಪ್ರತ್ಯಂಶವೂ, ಬಾಲಕರಿಗೆ ಅತ್ಯಂತೋಪಯುಕ್ತವಾದದ್ದಾಗಿಯೂ, ಜ್ಞಾತವ್ಯವಾದದ್ದಾಗಿಯೂ ಇರುತ್ತದೆ. ಈ ಗ್ರಂಥಕರ್ತರು ಪ್ರಸಿದ್ಧವಾದ ಅನೇಕ ಇಂಗ್ಲಿಷ್‌ಗ್ರಂಥಗಳ ಆಧಾರಗಳಮೇಲೆ ಈ ನೂತನ ಗ್ರಂಥವಂ ರಚಿಸಿದಂತೆ ಸ್ಪಷ್ಟವಾಗುವದರಿಂದ ಇದು ಪ್ರಮಾಣತ್ವೇನ ಅಂಗೀಕರಿಸಲಿಕ್ಕೆ ಅರ್ಹವಾಗಿರುತ್ತದೆ. ಮೆ॥ ರಘುನಾಥರಾಯರವರ ಪ್ರಯತ್ನವು ಯಾವಾಗಲೂ ಬಾಲಕರ, ತತ್ರಾಪಿ ಅಂಕುರಿತವಿಲಕ್ಷಣದ ಬಾಲಕಿಯರ ಜ್ಞಾನವರ್ಧಕವಾದದ್ದಾಗಿರುವದರಿಂದ ಎಲ್ಲರ ಪರಿಗ್ರಹಕ್ಕೂ ಅವರ ಗ್ರಂಥಗಳು ಅರ್ಹವಾದವೆಂಬದನ್ನು ಅವುಗಳೇ ಸೂಚಿಸುತ್ತವೆ.

Occasional Notes.
ನೈಮಿತ್ತಿಕವಿಷಯನ್ಯಾಸ

The Maharaja Holkar.—ಹೋಲ್ಕರ್ ಮಹಾರಾಜರವರು ಕೇವಲ ಅಸ್ವಸ್ಥದಶೆಯಲ್ಲಿರುವದರಿಂದ ಹವಾ ಬದಲಾಯಿಸುವದಕ್ಕಾಗಿ ಬಾರ್ವಾಹಿ ಯೆಂಬ ಸ್ಥಳಕ್ಕೆ ಹೋಗಿರುತ್ತಾರೆ.

The new tax.—ಈಚೆಗೆ ಯೇರ್ಪಡಿಸಲ್ಪಟ್ಟ ಆಮದಾನೀ ತೆರಿಗೆಯನ್ನು ಮೊಕರರ್ಮಾಡುವದಕ್ಕೆ ಬೇಕಾದ ಲವಾಜಮೆಯನ್ನಿಟ್ಟುಕೊಳ್ಳುವಂತೆ ಇಂಡ್ಯ ಗವರ್ನಮೆಂಟಿನವರು ಕೊಟ್ಟಹುಕುಂ ಅನುಸರಿಸಿ, ಮುಂಬೈ ಗವರ್ನಮೆಂಟನವರು ಕೂಡಲೇ ಪ್ರಯತ್ನಪಡುತಲಿದಾರೆ.

The Duke of Connaught.—ಮಹಾರಾಜ್ಞೀಯವರ ಪುತ್ರರಾದ ಡ್ಯೂಕಾಫ್ ಕಾನಾಟಿಯವರು ಇಂಗ್ಲಾಂಡಿನಲ್ಲೇ ಒಂದು ಕೆಲಸದಲ್ಲಿರತಕ್ಕದ್ದೆಂದು ಆಕೆಯವರು ನಿರ್ಣಯಿಸಿರುವಂತೆಯೂ, ಇನ್ನುಕೆಲವು ತಿಂಗಳೊಳಗಾಗಿ ಅವರು ಇಂಡ್ಯದೇಶಕ್ಕೆ ವಾಪಸಬರುವದಕ್ಕೆ ಅಪ್ಪಣೆಕೊಡಲ್ಪಡುವದೆಂದು ಉಂಟಾದ ಪ್ರವಾದವು ಸುಳ್ಳೆಂತಲೂ ವರಲಿಡ್ ಯೆಂಬ ಪತ್ರಿಕೆ ಹೇಳುತ್ತದೆ.

A liberal donation.—ಇಂಡ್ಯದೇಶದಲ್ಲಿ ಮೂಲೆಗಡಗಿರುವ ಪುರಾತನವಾದ ಶಾಸ್ತ್ರಗಳನ್ನು ಪ್ರಚಾರಕ್ಕೆ ತರಬೇಕೆಂಬ ಉದ್ದೇಶದೊಡನೆ ಯೇರ್ಪಟ್ಟಿರುವ ಇಂಡಿಯನ್ ಅಸೋಸಿಯೇಷನ್ ಯೆಂಬ ಸಂಘಕ್ಕಾಗಿ ಕಾಶ್ಮೀರದ ಮಹಾರಾಜರವರು ಡಾಕ್ಟರ್ ಮೋಹೇಂದ್ರಲಾಲ್ ಸರ್ಕಾರಿಯವರವಶಕ್ಕೆ ೯,೦೦೦ ರೂಪಾಯಿಗಳು ಕೊಟ್ಟಿರುತ್ತಾರೆ.

The Viceroy's visit to Burmah.—ಕಳೆದತಿಂಗಳ ೨೫ನೇತಾರೀಖಿನಲ್ಲಿ ಒಂದಾನೊಂದು ಪತ್ರಿಕೆಯ ರಂಗೂನ್ ಬಾತಮಿದಾರನು ಬರೆಯುತ್ತಾನೇನೆಂದರೆ—ಇಂಡ್ಯ ಗವರ್ನಮೆಂಟಿ ಹೋಂ ಇಲಾಖಾ ಸೆಕ್ರೆಟರಿಯಾದ ಮ. ಮೆಕೆಂಜಿಯವರು ಈದಿನ ಇಲ್ಲಿಗೆಬಂದರು. ವೈಸ್‌ರಾಯಿಯವರನ್ನು ಉಚಿತ ಮರ್ಯಾದೆಯೊಡನೆ ಬರಮಾಡಿಕೊಳ್ಳುವದಕ್ಕಾಗಿ ಸನ್ನಾಹಗಳು ನಡೆಯುತಲಿವೆ. ಉತ್ತರ ಬರ್ಮಾದೇಶದಲ್ಲಿ ನೌಕರಿಗಳಬಗ್ಗೆ ಬಂಗಾಳೀ ಬಾಬುಗಳಕಡೆಯಿಂದ ಲೋಕಲ್ ಗವರ್ನಮೆಂಟಿಗೆ ಅನೇಕ ದರಖಾಸ್ತುಗಳು ಬಂದಿರುತಿವೆ, ಎಂಬದು.

A notorious dacoit.—ಗುಜರಾತ್‌ದೇಶದ ಸೈಕಿ ಕಾಂಟಾಡಿಯೆಂಬ ಸ್ಥಳದೊಳು ಮೂರಾರಸಾಧೂನಿಯೆಂಬ ಪ್ರಸಿದ್ಧ ಕಳ್ಳನೊಬ್ಬನಿರುತ್ತಾನೆ. ಆತನನ್ನು ಹಿಡಿಯಬೇಕೆಂದು ಮಾಡಿದ ಪ್ರಯತ್ನಗಳೆಲ್ಲವು ವ್ಯರ್ಥವಾಗಿ ಅದ್ಯಾಪಿ ಅವನಿಂದ ಅಲ್ಲಿಯಲ್ಲಿ ಲೂಟಿಗಳು ನಡೆಯುತಲೇಯಿವೆ. ಈಚೆಗೆ ಅವನು ನಡೆಸಿದ ಕೇವಲ ಸಾಹಸಕರವಾದ ದರೋಡೆಯಲ್ಲಿ, ಪಾಲಿಯಾಮೆಂಬ ಸಂಸ್ಥಾನದ ನಾಯಬ್ ಕಾರ್ಬಾರಿಯನ್ನು ಹಿಡಿಕೊಂಡುಹೋಗಿ ಆತನಮೂಗನ್ನು ಕುಯಿದುಹಾಕಿದನು. ಈಕಳ್ಳನ ಭೀತಿಯು ಸದರೀ ಸಂಸ್ಥಾನದಲ್ಲಿ ಅತ್ಯಧಿಕವಾಗಲು ಅಲ್ಲಿನ ಪ್ರಜೆಗಳಿಗೆ ಧೈರ್ಯವನ್ನುಂಟುಮಾಡುವದಕ್ಕಾಗಿ ಅಲ್ಲಿಯೊಂದು ತುಕಡಿ ನೇಟಿವ್ ಕಾಲ್ಬಲವನ್ನು ಸದಾ ಇಟ್ಟಿರಬೇಕಾದ್ದು ಆವಶ್ಯಕವೆಂದು ಅಧಿಕಾರಿಗಳಿಗೆ ತೋರಬಂದು ಆವಿಷಯದಲ್ಲಿ ತಜವೀಜನಡೆಯುತಲಿರುವದಾಗಿ ತಿಳಿಯಬರುತ್ತದೆ.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕುಜಾತವೃತ್ತಾಂತಗಳು.

The provincial commander-in chief.—ಇಲ್ಲಿನ ಕಮಾಂಡಿಂಗ್ ಆಫಿಸರಾದ ಲೆಫ್ಟಿನೆಂಟ್ ಜನರಲ್ ರೌಲಾಂಡೆಯವರು ಗತ ಶುಕ್ರವಾರದದಿನ ಬೆಳಗ್ಯೆ ಮೆಯಿಲ್‌ಟ್ರೇನಿನಲ್ಲಿ ಮದರಾಸ್‌ನಿಂದ ಇಲ್ಲಿಗೆ ವಾಪಸಬಂದರು. ಇಂತಾ ಸಂದರ್ಭಗಳಲ್ಲಿ ಜರಗಬೇಕಾದ ಮರ್ಯಾದೆಗಳುಜರಿಗಿದವು

The sessions.—ಈತಿಂಗಳ ಚೀಫ್‌ಕೋರ್ಟ್ ಸೆಷನ್ ವಿಚಾರಣೆಯು, ಈದಿನ ಚೀಫ್‌ಜಡ್ಜ ಮ. ಪ್ಲ್ಯುಮರ್‌ಯವರಿಂದ ಪ್ರಕ್ರಮಿಸಲ್ಪಡುವದು. ಕಳೆದತಿಂಗಳಲ್ಲಿದ್ದಷ್ಟು ಮೊಕದ್ದಮೆಗಳು ಈಸಲ ಇಲ್ಲವೆಂದು ತಿಳಿಯಬರುತ್ತವೆ.

The Matriculation Examination.—ಕಳೆದ ಡಿಸಂಬರ್‌ತಿಂಗಳಲ್ಲಿ ನಡೆದ ಮೆಟ್ರಿಕ್ಯುಲೇಷನ್ ಪರೀಕ್ಷೆಯ ಫಲಿತಾಂಶವು ಬಹುಶಃ ಮುಂದಿನವಾರದಲ್ಲಿ ಹೊರಗಾಗಬಹುದೆಂದು ತೋರುತ್ತದೆ. ಎಫ್. ಎ. ಪರೀಕ್ಷೆಯ ಫಲಿತಾಂಶ ಸಹ ಆವಾರದಲ್ಲಿ ಹೊರಗಾಗಬಹುದು.

The Mysore State Railway.—ಮೈಸೂರುಸ್ಟೇಟ್‌ರೆಯಿಲ್ ಇಲಾಖೆಯನ್ನು ದಕ್ಷಿಣ ಮಹಾರಾಷ್ಟ್ರ ರೆಯಿಲ್ವೆ ಕಂಪೆನಿಯವರಿಗೆ ಕ್ಷಿಪ್ರದಲ್ಲಿ ಕೊಟ್ಟುಬಿಡಬೇಕೆಂದು ನಿರ್ಣಯವಾಗಿರುವಂತೆ ತಿಳಿಯಬರುತ್ತದೆ ಆಗಬೇಕಾದಕಾರ್ಯವು ಜಾಗ್ರತೆಯೊಳಾಗುವದೇಕ್ಷೇಮಕರವು.

A wedding.—ಮೈಸೂರು ಮಹಾರಾಜರವರ ದಿವಾನರಾದ ಮೆ॥ ಶೇಷಾದ್ರಿ ಅಯ್ಯರವರು ತಮ್ಮ ದ್ವಿತೀಯಪುತ್ರರಿಗೆ ಬರುವತಿಂಗಳ ಆದಿಭಾಗದಲ್ಲಿ ಈಪುರದೊಳು, ವಿವಾಹೋತ್ಸವವ ಬೆಳೆಸುವಂತೆ ನಿಶ್ಚೈಸಿದಾರೆಂತಲೂ, ತತ್ಪ್ರಯುಕ್ತಗಳಾದ ಸಕಲ ಸನ್ನಾಹಗಳೂ ನಡೆಯುತಲಿರುವಂತೆಯೂ ತಿಳಿಯಬರುತ್ತದೆ.

Investiture of power.—ನಂಜನಗೂಡು ಮುನ್‌ಸಫ್ ಮತ್ತು ೨ನೇಕ್ಲಾಸ್ ಮ್ಯಾಜಿಸ್ಟ್ರೇಟರಾದ ಮ. ನಂಜುಂಡಯ್ಯನವರು, ಕ್ರಿಮಿನಲ್ ಪ್ರೊಸಿಡ್ಯೂರ್‌ಕೋಡ್ ೩೫೫ನೇಸೆಕ್ಷನಿನ ನಿಯಮವನ್ನನುಸರಿಸಿ ಫಿರ್ಯಾದಿಗಳ ಮತ್ತು ಸಾಕ್ಷಿಗಳ ಸಾಕ್ಷ್ಯವನ್ನು ಕನ್ನಡಭಾಷೆಯಲ್ಲಿ ಸ್ವದಸ್ತೂರ್ ತೆಗದುಕೊಳ್ಳಲಿಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

Privilege leave.—ಕಡೂರುತಾಲ್ಲೂಕು ಅಮಲ್‌ದಾರ್ ಮ. ಸೀತಾರಾಯರವರಿಗೆ ಅವರು ಪಯೋಗಿಸಿಕೊಳ್ಳುವ ತಾರೀಖ್ ಲಗಾಯತು ೨ತಿಂಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುವಂತೆಯೂ ಅವರ ಗೈರ್‌ಹಾಜರಿಯಲ್ಲಿ ಸದರೀ ತಾಲ್ಲೂಕು ಶಿರಸ್ತೇದಾರ್ ಸುಬ್ಬಣ್ಣನವರು, ಅಮಲ್‌ದಾರ್ ಮ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೆಲಸಗಳನ್ನು ನೋಡುವಂತೆ ಮೊಕರರಾದರೆಂತಲೂ ಕೇಳುತ್ತೇವೆ.

The Mysore P. W. D.—ಬರುವ ಏಪ್ರಿಲ್‌ತಿಂಗಳ ಆದಿಭಾಗದಲ್ಲಿ ಈಸಂಸ್ಥಾನದ ಮರಮ್ಮತ್ ಇಲಾಖೆಯು ಪುನರ್ವ್ಯವಸ್ಥೆ ನಡೆಯುವದೆಂತಲೂ, ಆಸಂದರ್ಭದಲ್ಲಿ ಬೆಂಗಳೂರು, ಕೋಲಾರ, ಈ ಯೆರಡೂ ಸೇರಿ ಒಂದು ಡಿವಿಜನಾಗಿಯೂ, ಮೈಸೂರು ಹಾಸನ ಡಿಸ್ಟ್ರಿಕ್ಟ್‌ಗಳು ಸೇರಿ ಮತ್ತೊಂದು ಡಿವಿಜನಾಗಿಯೂ, ಶಿವಮೊಗ್ಗ ಕಡೂರು ಡಿಸ್ಟ್ರಿಕ್ಟುಗಳು ಇನ್ನೊಂದು ಡಿವಿಜನಾಗಿಯೂ, ತುಮಕೂರು ಚಿತ್ರದುರ್ಗ ಡಿಸ್ಟ್ರಿಕ್ಟುಗಳು ಸೇರಿ ಬೇರೊಂದು ಡಿವಿಜನ್ನಾಗಿಯೂ ಮಾಡಲ್ಪಡುವದೆಂತಲೂ ತಿಳಿಯಬರುತ್ತದೆ. ಈ ಇಲಾಖೆಯಲ್ಲಿ ಮಾಡಲ್ಪಡುವ ಯೇರ್ಪಾಡಿನ ಮೂಲಕ ಮರಮ್ಮತ್ ಇಲಾಖೆಯ ಆಡಳಿತಗಳು ಮುಂದೆ ಕ್ರಮವಾಗಿಯೂ ಸಲ್ಲೀಸಾಗಿಯೂ ನಡೆಯಬಹುದೆಂದು ನಂಬುತ್ತೇವೆ.

Temporary appointment.—ಕ್ರಿಮಿನಲ್ ಪ್ರೊಸಿಡ್ಯೂರ್‌ಕೋಡಿನ ೧೨ನೇ ಸೆಕ್ಷನಿನ ನಿಯಮಪ್ರಕಾರ, ಬೆಂಗಳೂರು ಸಿವಿಲ್ ಮ ಮಿಲಿಟರಿ ಸ್ಟೇಷನಿನ ಸಿವಿಲ್ ಮ ಸೆಷನ್ಸ್ ಕೋರ್ಟ್‌ಕ್ಲರ್ಕ್ ಮೆ॥ ಅಬ್ದುಲ್ ರಹಿಮಾನರು, ತತ್ಕಾಲದಲ್ಲಿ ಹುಕುಮಿಯಾಗಿ ಯೆರಡನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆಂತಲೂ, ೩೬-೩೭ನೇ ಸೆಕ್ಷನ್‌ಗಳಿಂದಲೂ, ೩—೪ನೇ ಷೆಡ್ಯೂಲ್‌ಗಳಿಂದಲೂ ಸದರೀ ಕ್ಲಾಸಿಗೆ ವಿಧಿಸಲ್ಪಟ್ಟಿರುವ ಸಾಧಾರಣ ಅಧಿಕಾರಗಳನ್ನು ಅವರು ಸಿವಿಲ್ ಮ ಮಿಲಿಟರಿ ಸ್ಟೇಷನಿನಲ್ಲಿ ಚಲಾಯಿಸತಕ್ಕದ್ದೆಂತಲೂ, ಗತವಾರದ ಇಂಡ್ಯ ಗೆಜೆಟಿನ ಇಷ್ತಿಹಾರ್‌ಮೂಲಕ ವ್ಯಕ್ತವಾಗುತ್ತದೆ. ಮೆ॥ ಅಬ್ದುಲ್ ರಹಿಮಾನರು ಸ್ವಭಾವತಃ ಉಪಶಾಂತರಾಗಿಯೂ, ದೊಡ್ಡಮನುಷ್ಯರಾಗಿಯೂ, ಗೌರವ್ಯರಾಗಿಯೂ, ಸಮರ್ಥರಾಗಿಯೂ ಇರುವದರಿಂದ ಇವರ ವಿಷಯದೊಳು ತೋರಿಸಲ್ಪಡುವ ಪುರಸ್ಕಾರಗಳು ಜನಗಳಿಂದ ಶ್ಲಾಘಿಸಲ್ಪಡದಿರಲಾರವು.

The State Forests.—ಈ ದೇಶದೊಳರಕ್ಷಿತವಾದ ಸ್ಟೇಟ್ ಫಾರೆಸ್ಟ್‌ಗಳಲ್ಲಿ ಸಾಲೀಯಾನಾ ರಾಸ್‌ಒಂದಕ್ಕೆ ನಾಲ್ಕಾಣೆಪ್ರಕಾರ ತೆರಿಗೆಕೊಟ್ಟು ಜನಗಳು ತಮ್ಮ ಕಾಲ್ನಡೆಗಳನ್ನೆಲ್ಲ ಮೇಯಿಸಿಕೊಳ್ಳಬಹುದೆಂದು ಮೈಸೂರು ಸರ್ಕಾರದವರು ಈಚೆಗೆ ಒಟ್ಟು ಹುಕುಂ ಕೊಟ್ಟಿರುವಂತೆ ತಿಳಿಯಬರುತ್ತದೆ. ಜಂಗಲಿನಲ್ಲಿ ಹುಲ್ಲುಬೆಳೆದು ಒಣಗುವದರಿಂದ ಕಾಡುಕಿಚ್ಚಿಗೆ ಆಸ್ಪದವಾಗಿ ತನ್ಮೂಲಕ ಕಾಡು ನಶಿಸಲಿಕ್ಕೆ ಕಾರಣವಾಗಿತ್ತು. ಇದಕ್ಕೆ ಮೂಲಭೂತವಾದ ಹುಲ್ಲೇ ಒಣಗಿಸಲ್ಪಡದಿದ್ದರೆ ಮೇಲೆಕಂಡ ದುಸ್ಥಿತಿ ಯುಂಟಾಗಲಾರದೆಂದು ಡೆಯಿಲೀಪೋಸ್ಟ್ ಪತ್ರಿಕೆಯು ಅಭಿಪ್ರಾಯಪಡುತ್ತದೆ. ಸರ್ಕಾರದವರಿಗೆ ಇಷ್ಟರ ಸೂಕ್ಷ್ಮದೃಷ್ಟಿಯುಂಟಾದಮೇಲೆ ರೈತರು ತಮ್ಮ ದನಗಳನ್ನು ಹುಲಿ ಯೆತ್ತಿಕೊಂಡು ಹೋಗುವದೆಂದು ಯಾತಕ್ಕೆ ಶಂಕಿಸಬಾರದು.

A nuisance.—ಕಳೆದತಿಂಗಳ ೨೯ನೇತಾ॥ ಒಳದೇಶದ ಡೆಯಿಲೀಪೋಸ್ಟ್ ಪತ್ರಿಕೆಗೆ ಇಲ್ಲಿನ ಶಹರ್ ಬಾತಮಿದಾರನೊಬ್ಬನು ಬರೆಯುತ್ತಾನೇನೆಂದರೆ—ಈಪುರದ ಕಿಡ್ಡೀಕಟ್ಟೆಯಲ್ಲಿ ಸಾಬಕ್‌ಗುಂಡೋಪಂತರವರಿಂದ ಧರ್ಮಾರ್ಥ ಕಟ್ಟಲ್ಪಟ್ಟಿರುವ ಸತ್ರವು ಈಚೆಗೆ ದೇಶಾಂತ್ರಿಗಳಿಗೆ ಅನುಪಯುಕ್ತವಾಗಿದೆ. ಸದರೀ ಕಟ್ಟಡವು ಪ್ರಾಯಶಃ ಧರ್ಮಕರ್ತರ ಸಂಬಂಧಿಗಳಿಂದ ಆಕ್ರಮಿಸಿಕೊಳ್ಳಲ್ಪಟ್ಟಿರುವದರಿಂದ ಪ್ರಯಾಣಸ್ಥರಿಗೆ ಅನುಕೂಲ್ಯವು ಸುತರಾಂಲಭಿಸಲಿಲ್ಲವು. ಬ್ರಿಟಿಷ್ ಪ್ರಭುತ್ವದೊಳು ಏತದರ್ಥ ಒಂದು ಜೋಡಿಗ್ರಾಮ ಸಹ ಕೊಡಲ್ಪಟ್ಟಿರುತ್ತದೆ. ಅದು ಈಗ ಜಾರೀಯಲ್ಲಿರಬಹುದೆಂದು ನಂಬುತ್ತೇನೆ. ಹಾಗಿದ್ದಲ್ಲಿ ಸರ್ಕಾರದವರ ಸಂಬಂಧವು ಇರುವದರಿಂದ ಈ ವಿಷಯದೊಳು ಗವರ್ನಮೆಂಟಿನವರು ಪ್ರವೇಶಿಸಿ ತಕ್ಕ ಏರ್ಪಾಡು ಮಾಡಬೇಕೆಂದು ಕೋರುವೆನು, ಎಂಬದು. ಧರ್ಮಾರ್ಥವಾದ ಸಕಲಾಂಶದಲ್ಲಿಯೂ ಗವರ್ನಮೆಂಟನವರ ಸಂಬಂಧವು ನಿಯತವಾದ್ದರಿಂದ ಅವರು ಪ್ರವೇಶಿಸಿ ತಕ್ಕ ವ್ಯವಸ್ಥೆ ಮಾಡುವದು ಯೋಗ್ಯವಾಗಿರುತ್ತದೆ.

Reconstitution of Hassan.—ಬರುವ ಏಪ್ರಿಲ್‌ತಿಂಗಳಮೊದಲು ಹಾಸನಸಬ್‌ಡಿವಿಜನನ್ನು ಪ್ರತ್ಯೇಕ ಒಂದು ಡಿಸ್ಟ್ರಿಕ್ಟನ್ನಾಗಿ ಪೂರ್ವದಂತೆ ಮಾಡತಕ್ಕದ್ದೆಂದು ಖಚಿತವಾದ ವ್ಯವಸ್ಥೆಯಾಗಿರುವಂತೆಯೂ, ಆಗ ಅಸಿಸ್ಟೆಂಟ್ ಕಂಟ್ರೋಲರ್ ಮ. ರಂಗಸ್ವಾಮಿ ಅಯ್ಯಂಗಾರ್ರವರು, ಚಿತ್ರದುರ್ಗ ಡಿಸ್ಟ್ರಿಕ್ಟಿಗೂ ಬೆಂಗಳೂರು ಡಿಸ್ಟ್ರಿಕ್ಟ್ ಸ್ಪೆಷಲ್ ಅಸಿಸ್ಟೆಂಟ್ ಕಮ್ಮಿಷನರ್ ಮ. ಕ್ಯಾರ್ಷಿಯವರು ಹಾಸನ ಡಿಸ್ಟ್ರಿಕ್ಟಿಗೂ ಡೆಪ್ಯುಟಿ ಕಮ್ಮಿಷನರ್‌ಗಳಾಗಿ ಮೊಕರರಾಗುವರೆಂತಲೂ

ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಯು ತಿಳಿಸುತಿದೆ. ಈ ಅಂಶ ಅಸಾಧ್ಯವೂ ಅಸಂಭಾವ್ಯವೂ ಅಲ್ಲವು. ಆದಪರಿಂದ ಕೆಲವುಮಟ್ಟಿಗೆ ಸ್ಪೆಕ್ಟೇಟರ್ ಪತ್ರಿಕೆಯ ಮಾತನ್ನು ನಾವೂ ನಂಬಬೇಕಾಗಿದೆ. ಮೆ|| ಆನುವರಾಯರವರ ಯೋಗ್ಯತೆಯೂ ಶೀಲಸ್ವಭಾವಗಳೂ, ಪುರಾಣೆಯೂ, ಜಗತ್ಪ್ರಸಿದ್ಧವಾದವಾಗಿರುವಲ್ಲಿ ಅವು ಉಚಿತಕಾಲದಲ್ಲಿ ಪುರಸ್ಕರಿಸಲ್ಪಡದೆಹೋದರೆ ಅದನ್ನೇನೆಂದು ಯೋಚಿಸಬೇಕು?

The weather.—ಈಗ್ಯೆ ಒಂದೆರಡುವಾರಗಳಿಂದ ಕಾಲಸ್ಥಿತಿಯು ಸರ್ವಾಂಶದಿಂದಲೂ ಭಿನ್ನಿಸಿ ಬಿಸಿಲಿನ ತೈಕ್ಷ್ಣ್ಯವು ವೃದ್ಧಿಯಾಗುತಬರುತಲಿದೆ. ಮ್ಯೂನಿಸಿಪಾಲಿಟಿಯವರ ಸಹಾಯದಿಂದ ಈ ಸಂವತ್ಸರ ಜಲದುರ್ಭಿಕ್ಷಕ್ಕೆ ಅವಕಾಶವಿಲ್ಲದಿದ್ದರೂ, ಸೊಳ್ಳೆ ತಗಣೆ ಮುಂತಾದವುಗಳ ಕಾಟವೊಳೆಸ್ಟುಮಟ್ಟಿಗೂ ಕೊರತೆಇಲ್ಲದಿರುವದೆಂದು ತೋರುತಿದೆ. ಯಾತಕ್ಕೆಂದರೆ ಈಗಸರ್ವತ್ರ ಕಟ್ಟಲ್ಪಟ್ಟಿರುವ V ನಮೂನೆ ಚರುಡಿಗಳಲ್ಲಿ ಹರಿಯುವ ಕಶ್ಮಲೋದಕಗಳು ಅಲ್ಲಲ್ಲಿ ನಿಂತು ಮತ್ತಷ್ಟು ದುರ್ಗಂಧವನ್ನುಂಟುಮಾಡುವದರಿಂದ ಪ್ರಾತಃಕಾಲದಲ್ಲಿ ನೊಣಗಳೂ, ಸಾಯಂಕಾಲದಮೇಲೆ ಸೊಳ್ಳೆಗಳೂ, ಗುಂಪು ಗುಂಪಾಗಿ ಸೇರಿಕೊಂಡು ಅಸಾಧುರ‍್ಯವಾದ ಧ್ವನಿಯೊಡನೆ ಮ್ಯೂನಿಸಿಪಾಲಿಟಿಯವರ ಸಹಾಯಕ್ಕಾಗಿ ಅವರು ಕೊಂಡಾಡುತ ಸಂಚಾರಮಾಡುತಲಿರುತಿವೆ. ಜಿನಿಸಿಗಳ ದಾರಣೆಗಳು ಜಾಸ್ತಿಯಾಗಿಯೂ, ಕದಾಚಿತ್ ಪದಾರ್ಥಗಳು ದುರ್ಲಭವಾಗಿಯೂ ಇರುತಿವೆ.

Enhancement of Examination fees.—ಬರುವ ಡಿಸಂಬರ್ ತಿಂಗಳವೊದಲು ಮಿಡಿಲ್‌ಸ್ಕೂಲ್ ವಗ್ಯೆರೆ ಒಂದೆರಡು ಪರೀಕ್ಷೆಗಳಿಗೆ ಕೊಡಬೇಕಾದ ಮೊಬಲಗನ್ನು ಜಾಸ್ತೀ ಮಾಡತಕ್ಕದ್ದೆಂದು ತೀರ್ಮಾನಿಸಲ್ಪಟ್ಟಂತೆ ತಿಳಿಯಬರುತಿದೆ. ಮಿಡಿಲ್‌ಸ್ಕೂಲ್ ಪರೀಕ್ಷೆಗೆ ವಿದ್ಯಾರ್ಥಿಗಳು ಕೊಡುತಲಿದ್ದ ಮೊಬಲಗು ೩ ರೂಪಾಯಿಗಳಿಂದ ೩½ ರೂಪಾಯಿತನಕಲೂ, ವಿದ್ಯಾರ್ಥಿನಿಯರು ಕೊಡಬೇಕಾದ ಮೊಬಲಗು ೨ರಿಂದ ೨½ ರೂಪಾಯಿಗಳತನಕಲೂ ಜಾಸ್ತೀ ಮಾಡಲ್ಪಡುವದು, ಅಪ್ಪರ್‌ಪ್ರೈಮೇರಿ ಪರೀಕ್ಷೆಗೆ ಹೋಗತಕ್ಕ ಗಂಡುಸರು ಕೊಡಬೇಕಾದ್ದು ೩ರೂಪಾಯಿಗಳಿಂದ ೩½ ರೂಪಾಯಿಗಳತನಕ ಜಾಸ್ತೀ ಮಾಡಲ್ಪಡುವದೆಂತಲೂ, ಸ್ತ್ರೀಯರಿಗೋಸ್ಕರ ಪರಿಕ್ಲೃಪ್ತವಾದ ಉನ್ನತಪರೀಕ್ಷೆಗೆ ಹೋಗತಕ್ಕವರು, ಯೂರೋಪಿಯನ್ ಈಸ್ಟಿಂಡಿಯನ್ ಮತ್ತು ನೇಟಿವ್ ಕ್ರಿಶ್ಚಿಯನ್ ಹೆಂಗಸರಾಗಿದ್ದರೆ ಅವರು ಮುಂದೆ ೩ಕ್ಕಬದಲು ೬ ರೂಪಾಯಿಗಳು ಕೊಡಬೇಕಾಗಿರುವದೆಂತಲೂ ಏರ್ಪಾಡಾದಂತೆ ತಿಳಿಯಬಾದವು. ಚಿಕ್ಕಿನ ಚಲ್ಲಾಟ ಇಲಿಗೆ ಪ್ರಾಣಸಂಕಟವೆಂಬಂತೆ ಯೂರೋಪಿಯನ್ನರುಗಳ ಪ್ರಯೋಜನಾರ್ಥ ಪರಿಕಲ್ಪಿತವಾದ ಏರ್ಪಾಡುಗಳು ಬಡಗಳ ಸಂಕಟಕ್ಕೆ ಕಾರಣವಾಗಿರುತಿವೆ.

Tea party at Shimoga.—ಮೈಸೂರು ದೇಶದ ಇತರ ಪ್ರದೇಶಗಳಿಗಿಂತಲೂ ಶಿವಮೊಗ್ಗಾ ಡಿಸ್ಟ್ರಿಕ್ಟ ನಾಗರಿಕತೆಯೊಳು ಪ್ರತಿನಿಮಿಷದಲ್ಲಿಯೂ ಅಭಿವೃದ್ಧಿಯನ್ನು ಹೊಂದುತಲಿದೆ. ಇದಕ್ಕೆ ತುಂಗೋದಕ ಮಾಹಾತ್ಮ್ಯವೇ ಕಾರಣವೆಂದು ಹೇಳುವೆವು. ಈಚಿಗೆ ಅಂದರೆ ಆಚೇವಾರದಲ್ಲಿ ಮೆ|| ಎಲಿಯಾಟ್ ಎಂಬ ಕಾಫೀಪ್ಲಾಂಟರು, ಸ್ವದೇಶಕ್ಕೆ ಹೋಗುವಬಗ್ಯೆ ಮಾರ್ಗವಶಾತ್ ಶಿವಮೊಗ್ಗೆಗೆಬಂದು ಅಲ್ಲಿ ಮೂರುದಿನಗಳು ಸ್ವಂತಕೆಲಸದಬಗ್ಯೆ ಮೊಕ್ಕಾಂಮಾಡಿದ್ದರು. ಕಳೆದತಿಂಗಳ ೨೬ನೇ ತಾರೀಖಿನ ದಿನ ಸಾಯಂಕಾಲ ಡೆಪ್ಯುಟಿ ಕಮಿಷನರ್ ಮೆ|| ವಿ. ಪಿ. ಮಾಧವರಾಯರವರು, ಮೆ||ಎಲಿಯಟಿಯವರಿಗೆ ತಮ್ಮ ಮನೆಯಲ್ಲಿ (ಟೀಪಾರ್ಟಿ) ಅಂದರೆ ಫಲಹಾರಾದಿ ಔತಣಮಾಡಿಸಿದರೆಂತಲೂ, ಅದಕ್ಕೆ ಇತರ ಯೂರೋಪಿಯನ್ ದೊಡ್ಡಮನುಷ್ಯರು ಸಹ ಕರೆಯಿಸಲ್ಪಟ್ಟಿದ್ದರೆಂತಲೂ, ಇದಲ್ಲದೆ ನಿಶ್ಚಯಿಸಲ್ಪಟ್ಟಕಾಲಕ್ಕೆ ಸರಿಯಾಗಿ ಸೆಷನ್ಸ್‌ಜಡ್ಜ್ ಮೆ|| ನರಹರಿರಾಯರವರು, ಅ|| ಕ|| ಪೆ|| ಸೈದನಸರುದ್ದೀನ್‌ಯವರು, ಅ||ಕ|| ಮೆ|| ಪಂಚನದರಾಯರವರು, ಮೆ||ನಾಗೇಶರಾಯರವರು, ಮುನ್‌ಸಫ್ ಮೆ|| ಪೊನ್ನುರಂಗ ಮೊದಲಿಯಾರ್ರವರು, ಪಬ್ಲಿಕ್‌ಪ್ರಾಸಿಕ್ಯೂಟರ್ ಮೆ. ರಾಮರಾಯರವರು, ಮೆ|| ಕೃಷ್ಣರಾಯರವರು, ವಗ್ಯೆರೆ ಅನೇಕ ನೇಟಿವ್ ದೊಡ್ಡಮನುಷ್ಯರು ಬಂದಿದ್ದರೆಂತಲೂ, ಕಳೆದತಿಂಗಳ ೨೮ನೇ ತಾರೀಖಿನ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಯು ತಿಳಿಸುತಿದೆ. ಇದಲ್ಲದೆ ಮೆ|| ಎಲಿಯಾಟಿಯವರು ಫಲಹಾರಕಾಲದಲ್ಲಿ ಅಲ್ಲಿ ಬಂದಿದ್ದವರಿಗೆ ಬಹ್ವಂಶಗಳನ್ನು ಕುರಿತು ಉಪಪಾದಿಸಿದರೆಂತಲೂ, ಅವುಗಳಪೈಕಿ ಈ ದೇಶಕ್ಕೆ ಸಂಬಂಧಿಸಿದವನೇಕವಾಗಿದ್ದವೆಂತಲೂ ಸದರೀ ಪತ್ರಿಕೆಯಮೂಲಕ ಅರಿತವರಾದೆವು.

Re-transfer.—ಶಿವಮೊಗ್ಗಾ ಡಿಸ್ಟ್ರಿಕ್ಟ ತೀರ್ಥಹಳ್ಳಿ ತಾಲ್ಲೂಕಿನೊಳು ಮಹಿಷೀ ಎಂಬ ಒಂದು ಪುಣ್ಯಕ್ಷೇತ್ರವಿರುತಿದೆ. ಈ ಕ್ಷೇತ್ರದಲ್ಲಿ ಶ್ರೀ ಆಂಜನೇಯರು ರೂಪಾಂತರದಿಂ ತಮ್ಮ ಮಾಹಾತ್ಮ್ಯವನ್ನು ಹೊರಪಡಿಸಿದಂತೆ ಅಲ್ಲಿನವರು ತಿಳಿಸುತ್ತಾರೆ. ಇದಲ್ಲದೆ ಅಲ್ಲಿ ಅಶ್ವತ್ಥನಾರಾಯಣ ದೇವಸ್ಥಾನ ಮುಂತಾದವು ನೆಲಗೊಂಡಿರುತಿವೆ. ಪ್ರತಿ ಸಂವತ್ಸರದಲ್ಲಿಯೂ ಭಕ್ತಾದಿಗಳು ಅಲ್ಲಿಗೆ ಹೋಗಿ ದೇವರಿಗೆ ಸೇವಾದಿಗಳನ್ನು ಮಾಡುತಲಿದ್ದಾರೆ. ಇಂತಾ ಕ್ಷೇತ್ರದಲ್ಲಿ ಸಂತರ್ಪಣೆ ಮುಂತಾದವು ಉತ್ಸವಕಾಲಗಳಲ್ಲಿ ನಡೆಯತಕ್ಕಬಗ್ಯೆ ಲೇಟ್ ದಿವಾನ್ ಪೂರ್ಣಯ್ಯನವರು ಲವಾಜಮಾ ಏರ್ಪಡಿಸಿದ್ದರು. ತೀರ್ಥಹಳ್ಳಿಯು ಮಾರ್ಗಸ್ಥಳವಾಗಿ ಏರ್ಪಟ್ಟದ್ದರಿಂದ ಅಲ್ಲಿನ ಸತ್ರಕ್ಕೆ ಲವಾಜಮೆ ಹೆಚ್ಚಿಸಲ್ಪಡಬೇಕಾದ ಸಂದರ್ಭವುಂಟಾಗಿ ಮೇಲ್ಕಂಡ ಮಹಿಷೀ ಸಂತರ್ಪಣೆ ಲವಾಜಮೆಯು ಅದಕ್ಕೆ ವರ್ಗಮಾಡಲ್ಪಟ್ಟಿತು. ಈಚಿಗೆ ಎಂಟುವರುಷಗಳ ಮೊದಲು ಮಹಿಷೀಯಲ್ಲಿ ದೇವಸ್ಥಾನದ ಉತ್ಸವಕಾಲಗಳೊಳು ನಡೆಯುತಲಿದ್ದ ಅನ್ನಸಂತರ್ಪಣೆಯು ನಿಂತುಹೋಗಿತ್ತು. ಈಚಿಗೆ ದಿವಾನರವರು ಸದರೀ ಪ್ರಾಂತಕ್ಕೆ ಸರ್ಕ್ಯೂಟ್ ಹೋಗಿದ್ದಾಗ್ಯೆ ಅಲ್ಲಿನ ಪ್ರಜೆಗಳು, ದೇವಸ್ಥಾನವನ್ನು ರಿಪೇರ್ ಮಾಡಿಸಬೇಕೆಂತಲೂ, ರಸ್ತೆ ಹಾಕಿಸಬೇಕೆಂತಲೂ, ಪೂರ್ವದಂತೆ ಅನ್ನಸಂತರ್ಪಣೆ ಲವಾಜಮೆಯನ್ನು ಮಹಿಷಿಗೆ ವರ್ಗಮಾಡಬೇಕೆಂತಲೂ ವಗ್ಯೆರೆ ಕೇಳಿಕೊಳ್ಳಲು ದಿವಾನರವರು ಪ್ರಜೆಗಳ ಪ್ರಾರ್ಥನೆಯನ್ನು ಗೌರವಿಸಿ ಅವರ ಇಷ್ಟಪ್ರಕಾರ ನಡೆಸುವಂತೆ ಹುಕುಂ ಕೊಟ್ಟರೆಂದು ಕೇಳುತ್ತೇವೆ.

Confirmation of the death sentence.—ಇಲ್ಲಿನ ಸಿವಿಲ್ ವ ಮಿಲಿಟರಿ ಸ್ಟೇಷನಿನಲ್ಲಿ ನಡೆದ ಖೂನೀ ಮೊಕದ್ದಮೆಯು ಅಪೀಲಾಗಿರುವಂತೆಯೂ, ಅದು ಮಡಿಕೇರಿ ಮೊಕ್ಕಾಂನಲ್ಲಿ ಬ್ರಿಟಿಷ್ ರೆಸಿಡೆಂಟರಾದ ಮಿ. ಗರ್ಡಿಲ್‌ಸ್ಟೋನ್‌ಯವರಿಂದ ದರ್ಯಾಫ್ತೀಮಾಡಲ್ಪಡುವದೆಂತಲೂ, ಏತದರ್ಥ ಗವರ್ನಮೆಂಟಿನ ಪ್ರಾಸಿಕ್ಯೂಟರೂ ಅಪರಾಧಿಯ ತರಫ್ ವಕೀಲರು ಸಹ ಮಡಿಕೇರಿಗೆ ಹೋದರೆಂತಲೂ ಗತವಾರದಲ್ಲಿ ತಿಳಿಸಿದ್ದೆವಷ್ಟೆ. ಸದರೀ ಮೊಕದ್ದಮೆಯಂ ದರ್ಯಾಫ್ತೀ ಮಾಡಿ ಉಭಯ ಕಕ್ಷಿಯವರ ವಾದವಂ ಕೇಳಿ ಅದರಮೇಲೆ ಸೆಷನ್ ಜಡ್ಜಿಯವರು ವಿಧಿಸಿದ ದಂಡನೆಯಂ ಕಾಯಂಮಾಡಿ ಅಪರಾಧಿಯು ಮರಣದಂಡನಾರ್ಹನೆಂದು ತೀರ್ಮಾನಿಸಿದರು. ಅಪರಾಧಿಯು ಕ್ಷಿಪ್ರದಲ್ಲಿ ತನ್ನ ದುಶ್ಚೇಷ್ಟಾವಿಲಸನದಿಂ ಪ್ರಾಪ್ತವಾದ ಕರ್ಮಫಲವನ್ನು ಅನುಭವಿಸುವನು. ಪರ್ಯವಸಾನವನ್ನೈದಿದ ಮೊಕದ್ದಮೆಯ ವಿಷಯವಾಗಿ ಯಾಗಲಿ ಪ್ರೈವಿಯ ನಿರಪರಾಧಿತ್ವವನ್ನು ಕುರಿತಾಗಲಿ, ಈಗ ನಾವು ವಿಚಾರ ಮಾಡಲು ಪ್ರವರ್ತಿಸುವವರಲ್ಲವು. ಪರಂತು ಕಕ್ಸೀರ್ ನಡೆದು ಬಹುದಿನಗಳಾಯಿತಲ್ಲದೆ ಆಬಗ್ಯೆ ಅಪರಾಧಿಯ ಭಾರ್ಯೆಯ ಕೈಫಿಯತ್ತು ಒಂದುವಿನಾ ಜೀವವಿಷವಾದ ಸಾಕ್ಷ್ಯಗಳೊಂದೂ ದಂಡನೆಗೆಸಾಧಕವಿಲ್ಲವು. ಹೆಂಡತಿಯಾದವಳು ಸಹ ಗಂಡನ ಅಪರಾಧವನ್ನು ತಿಂಗಳಕಟ್ಲೆ ಹೊರಪಡಿಸದೆ ಸುಮ್ಮನಿದ್ದು ಐದಾರು ತಿಂಗಳ ಮೇಲೆ ಗಂಡನಾದವನು ಬಂದು ಕರದದ್ದರಮೇಲೆ ತನ್ನ ಸ್ವಚ್ಛಂದ ಪ್ರವೃತ್ತಿಗೆ ವಿರೋಧ ಉಂಟಾಯಿತೆಂದೆಣಿಸಿ ಆಗ ಫಿರ್ಯಾದಿಯಾಗಿ ಹೊರಬಿದ್ದ ಒಬ್ಬ ಹೆಂಗಸಿನ ಮಾತಿನಮೇಲೆ ಒಬ್ಬನಿಗೆ ಮರಣದಂಡನೆಯಂ ವಿಧಿಸುವದು ಯುಕ್ತವಲ್ಲವೆಂಬದಂ ಸೆಷನ್‌ಕೋರ್ಟಿನವರಾಗಲಿ, ಅಪೀಲ್ ಕೋರ್ಟಿನವರಾಗಲಿ ಭಾವಿಸದೆ ಹೋದದಕ್ಕಾಗಿ ನಾವು ಚಿಂತಿಸಬೇಕಾಗಿದೆ.

Scott vs. Ricketts.—ಗತ ಮಂಗಳವಾರದದಿನ ಸಿವಿಲ್ ವ ಮಿಲಿಟರಿಸ್ಟೇಷನಿನ ಸೆಷನ್ಸ್ ಕೋರ್ಟಿನಲ್ಲಿ ಬ್ಯಾರಿಸ್ಟರ್ ಮೆ|| ಜೇಮ್ಸ್‌ಯವರು, ಮೆ|| ಸ್ಕಾಟ್‌ಎಂಬವರತರಫಿನೊಳು, ಮೈಸೂರುಶೀಮೆಯ ಪೋಲೀಸ್ ಇನ್‌ಸ್ಪೆಕ್ಟರ್ ಜನರಲವರಾದ ಮೆ|| ರಿಕ್ಕೆಟ್ಸ್‌ಯವರಮೇಲೆ ಮಾನನಷ್ಟದಬಗ್ಯೆ ಫಿರ್ಯಾದ್ ದಾಖಲ್ಮಾಡಬೇಕೆಂದು ಅಪೇಕ್ಷಿಸಲು, ಸೆಷನ್‌ಜಡ್ಜಿಯವರು ಸದರೀಫಿರ್ಯಾದನ್ನು ಅಂಗೀಕರಿಸಲಿಕ್ಕೆ ತಮಗೆ ಅಧಿಕಾರವಿದೆಯೋ ಇಲ್ಲವೋಯೆಂದು ಶಂಕಿಸಲು, ಅನೇಕ ದಾಖಲೆಗಳಿಂದ ಅಧಿಕಾರವುಂಟೆಂದೇರ್ಪಡಲು ಮೆ|| ರಿಕ್ಕೆಟ್ಸ್‌ಯವರಮೇಲಣ ಫಿರ್ಯಾದನ್ನು ದಾಖಲ್ಮಾಡಿಕೊಂಡರು. ಮೆ|| ರಿಕ್ಕೆಟ್ಸ್‌ಯವರು ಹಿಂದೆ ಅನೇಕಸಂದರ್ಭಗಳಲ್ಲಿ ಫಿರ್ಯಾದಿಯಾದ ಮೆ||ಸ್ಕಾಟಿಯವರು, "ದಗಾಖೋರರೆಂತಲೂ, ದುಶ್ಶೀಲರೆಂತಲೂ, ಮಹಾರಾಜಾರವರ ಸ್ಪಿನ್ನಿಂಗ್ ವ ಮಾನ್ಯುಫ್ಯಾಕ್ಚರಿಂಗ್ ಕಂಪನಿಗೆ ಅನೇಕರು ಷೇರ್‌ದಾರರಾಗಿರುವದರಿಂದ ಅಂತಾ ಕಂಪನಿಯತರಫೆ ಏಜಂಟರನ್ನಾಗಿ ಮೆಸ್ಟರ್ ಸ್ಕಾಟನ್ನು ನೇಕರರ್ಮಾಡಿರುವದನ್ನುನೋಡಿದರೆ ಇವರು ಪರಾರಿಯಾದಲ್ಲಿ ಮರಳಿ ಯೆಂದಿಗೂ ಬೆಂಗಳೂರಿಗೆ ಬರತಕ್ಕವರಲ್ಲವೆಂತಲೂ," ಏನಮಾಡಿ ಮಾನಚ್ಯುತಿಕರಗಳಾದ ಅನೇಕ ವಾಕ್ಯಗಳನ್ನು ಫಿರ್ಯಾದಿಗೆ ಅಗೌರವಪಡಿಸಬೇಕೆಂಬ ತಾತ್ಪರ್ಯದೊಡನೆ ನುಡಿದು ಪ್ರಕಟಪಡಿಸಿರುತ್ತಾರಾಗಿ ಇದರಿಂದ ಜನಗಳೊಳುಪುಂಟಾದ ಅಲಾಘವ ನಿವೃತ್ತಿಯಬಗ್ಯೆ ಈ ಫಿರ್ಯಾದ್ ದಾಖಲ್ಮಾಡಬೇಕಾಯಿತೆಂದು ಪ್ರಮಾಣಪೂರ್ವಕ ತಿಳಿಸಲ್ಪಟ್ಟಿತು. ಈ ಮೊಕದ್ದಮೆಯು ಮಾಹೇ ಮಜಕೂರ್ ೧೦ನೇ ತಾರೀಖ್‌ನಲ್ಲಿ ವಿಚಾರಿಸಲ್ಪಡುವದು. ಮೆ|| ಸ್ಕಾಟಿಯವರು ಹೇಗಲಾಡಿಸಿಕೊಂಡಂತೆ ಬಹಿರಂಗವಾಗಿ ಪ್ರಮಾಣಪೂರ್ವಕಹೇಳಿದ ಗೌರವವನ್ನು ಮರಳಿ ಹ್ಯಾಗೆಸಂಪಾದಿಸಲಿಕ್ಕೆ ಶಕ್ತರಾಗುವರೋ ನಾವರಿಯೆವು, ನಷ್ಟವಾದದ್ದು ಮರಳಿ ಲಭಿಸುವದುಹ್ಯಾಗೆ? ಲಭಿಸಿದರೆ ನಷ್ಟವಾಯಿತೆಂದು ಹ್ಯಾಗೆ ಹೇಳಬಹುದು, ಆದದರಿಂದ ಮಾನನಷ್ಟವನ್ನು ಫಿರ್ಯಾದಿಯೇ ಅಂಗೀಕರಿಸಿರುತ್ತಾರೆಯಾಗಿ ವಿವಾದಕ್ಕೆ ಅವಕಾಶವಿಲ್ಲವಷ್ಟೆ, ಎಂದು ಸ್ಪೆಕ್ಟೇಟರ್‌ಪತ್ರಿಕೆ ತಿಳಿಸುತಿದೆ.

CORRESPONDENCE.

ಮ||ರಾ||ಕರ್ಣಾಟಕಪ್ರಕಾಶಿಕಾ ಎಡಿಟರವರ ಸ||ಗೆ.

ಇ ರ ಸ್ವಾ —ಶ್ರೀಮನ್ ಚಾಮರಾಜೇಂದ್ರ ಒಡೆಯರ್ ಬಹದೂರವರ ಸ್ವಾರಿಯು ಇತರತಾಲ್ಲೂಕುಗಳಿಗೆ ದಯಮಾಡಿದ್ದಕಾಲದಲ್ಲಿ ಅಲ್ಲಲ್ಲಿ ನಡೆದ ಸೇವೆ ಮತ್ತು ಉತ್ಸವಗಳವಿಷಯವನ್ನು ತಿಳಿಯಲು ನಾವುಗಳು ಅತ್ಯಂತ ಆಸಕ್ತರಾಗಿದ್ದೆವು. ಅದರಂತೆಯೇ ಶ್ರೀಮನ್ ಮಹಾರಾಜರವರು ಈ ಅರಶೀಕೆರೆಗೆ ದಯಮಾಡಿದಕಾಲದಲ್ಲಿ ಇಲ್ಲಿನಡೆದ ಉತ್ಸವ ವಗ್ಯೆರೆ ವಿಷಯಗಳನ್ನು ತಿಳಿಯಲು ಅನೇಕರು ಕುತೂಹಲವುಳ್ಳವರಾಗಿ ಇರಬಹುದು. ಆದದರಿಂದ ಆಸಂಗತಿಗಳು ತಮ್ಮ ಪತ್ರಿಕೆಯಲ್ಲಿಬಂದವಿನಾ ಸರ್ವರಿಗೂ ಪ್ರಚುರವಾಗಲಾರದು. ನಾವುಗಳು ಕಾಗದಮೂಲಕ ನಮ್ಮ ಇಷ್ಟಬಂಧುಗಳಾದ ಒಬ್ಬರಿಬ್ಬರಿಗೆ ಬರದುಇರುತ್ತೇವೆ. ಅದು ಸರ್ವರಿಗೂ ತಿಳಿಯಲುಅಸಾಧ್ಯ ಇದುವರಿವಿಗೆ ಈವಿಷಯ ತಮಗೆ ಇತರರಮೂಲಕ ತಿಳಿದು ಇರಬಹುದೆಂತ ಯೋಚಿಸಿದ್ದೆನು. ಇದುವರಿವಿಗೂ ನಿರೀಕ್ಷಿಸಿದಾಗ್ಯೂ ಈ ವಿಚಾರ ತಮ್ಮ ಪತ್ರಿಕೆಯಲ್ಲಿ ಬರಲಿಲ್ಲವಾದ್ದರಿಂದ ಈ ಮೂಲಕ ತಮಗೂ ಮತ್ತು ತಮ್ಮ ಪತ್ರಿಕೆಯನ್ನು ಓದತಕ್ಕ ಜನಗಳಿಗೂ ತಿಳಿಯಪಡಿಸುತ್ತೇನೆ.

ಪ್ರೋಗ್ರಾಂ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿ ಇದ್ದಂತೆ ಶ್ರೀಮನ್ ಮಹಾರಾಜರವರು ಪರಿವಾರಸಮೇತ ಈತಾಲ್ಲೂಕು ಜಾವಗಲ್ಲಿಗೆ ಇದೇ ತಿಂಗಳ ೩ನೇ ತಾರೀಖು ಪ್ರಾತಃಕಾಲ ೮ ಘಂಟೆಗೆ ಚಿತ್ತೈಸಿದರು. ತಾಲ್ಲೂಕುಅಮಲ್‌ದಾರರು ಮತ್ತು ಅನೇಕ ರೈತರು ವರ್ತಕರು ಸಹ ತಾಲ್ಲೂಕು ಸರಹದ್ದಿನಲ್ಲಿ ಕಾದಿದ್ದು ಸ್ವಾರಿಯನ್ನು ಅತ್ಯಂತ ಮರ್ಯಾದೆಯೊಡನೆ ಬರಮಾಡಿಕೊಂಡರು. ಜಾವಗಲ್ ಪೂರುಮುಂದೆ ರಸ್ತೆಯಲ್ಲಿ ಹಾಕಿದ್ದ ಚಪ್ಪರದಬಳಿ ವಿಶೇಷವಾದಪ್ರಜೆಗಳು ಬಹುವಿಧ ವಾದ್ಯ ಘೋಷದೊಡನೆ ಎದುರುಗೊಂಡದ್ದಲ್ಲದೆ ಶ್ರೀ ಲಕ್ಷ್ಮೀನೃಸಿಂಹಸ್ವಾಮಿಯವರ ದೇವಸ್ಥಾನದಿಂದ ಬರತಕ್ಕ ಮರ‍್ಯಾದೆಗಳೆಲ್ಲವು ಬಂದಿದ್ದವು. ಬಹುಜನ ಬ್ರಾಹ್ಮಣರು ಆಶೀರ್ವಚನವನ್ನುಮಾಡಿ ಶ್ರೀಮನ್ ಮಹಾರಾಜರವರಿಗೆ ಫಲಮಂತ್ರಾಕ್ಷತೆಯನ್ನು ಸಮರ್ಪಿಸಿದರು. ಸ್ವಾರಿಯು ಮತ್ತು ಮಹಾರಾಜಶ್ರೀ ದಿವಾನರವರು ಪರಿವಾರಸಹ ಇಳಿಯಲು ಪೂರಿಗೆ ೨ ಫರ್ಲಾಂಗುದೂರದಲ್ಲಿ ಇರುವ ಅಮ್ಮನಗುಡಿತೋಪಿನಲ್ಲಿ ಡೇರಾಗಳುಹಾಕಲ್ಪಟ್ಟಿದ್ದವು. ಈ ಚಿಕ್ಕಗ್ರಾಮದಲ್ಲಿ ಮೊಕ್ಕಾಂಮಾಡಿದ ಉದ್ದೇಶವು ಈ ಪ್ರಾಂತ ವಿಶೇಷವಾಗಿ ಇರುವ ಹುಲಿಗಳ ಶಿಕಾರಿಬಗ್ಯೆ ಎಂತ ಕೇಳುತ್ತೇನೆ. ಆದಿನ ಆರೋಗಣೆ ಆದನಂತರ ಸ್ವಾರಿಯು ಪರಿವಾರದೊಡನೆ ಅಲ್ಲಿಗೆ ೩ಮೈಲೀಲಿರುವ ಬೂಚೇನಹಳ್ಳಿ ಕಾಡೆಂಬುವದಕ್ಕೆ ಶಿಕಾರಿಬಗ್ಯೆ ದಯಮಾಡಿಸಿತು. ತಾಲ್ಲೂಕು ಅಮಲ್‌ದಾರರು ಶ್ರೀಮನ್ ಮಹಾರಾಜರವರಿಗೆ ಹುಲಿ ಶಿಕಾರಿಮಾಡಿಸಲು ಸ್ಥಳೀಯ ಶಿಕಾರಿಗಳ ಸಹಾಯದಿಂದ ತಕ್ಕಏರ್ಪಾಡು ಮಾಡಿ ಶ್ರೀಮನ್ ಮಹಾರಾಜರವರಿಗೂ ಪರಿವಾರದವನಗಳಿಗು ಸಹ ಕೂತುಕೊಳ್ಳುವದಕ್ಕೆ ಯುಕ್ತವಾದ ಅಟ್ಟಗಳನ್ನು ಹಾಕಿಸಿದ್ದರು. ಸರ್ವರೂ ಅವರವರ ಅಪೇಕ್ಷೆಪ್ರಕಾರ ಅಟ್ಟನಮೇಲೆ ಕೂತುಕೊಂಡನಂತರ ಸೇವುಕುರುವಾಗಿ ಸುಮಾರು ೧ ಘಂಟೆಹೊತ್ತಿನಲ್ಲಿ ಒಂದು ದೊಡ್ಡದಾದ ಹುಲಿಯು ಶ್ರೀಮನ್ ಮಹಾರಾಜರವರು ಕುಳಿತಿದ್ದ ಅಟ್ಟನ ಸಮೀಪಕ್ಕೆ ಬರುತ್ತಾ, ಶ್ರೀಮನ್ ಮಹಾರಾಜರವರಿಗೆ ಸಂತೋಷಪಡಿಸಬೇಕೆಂತ ಅತ್ಯಂತ ಕುತೂಹಲದೊಡನೆ ಇದ್ದ ನಮ್ಮಗಳ ದೌರ್ಭಾಗ್ಯದಿಂದ, ಸ್ವಾರಿ ಯುದ್ಧಸ್ಥಳಕ್ಕೆ ಬಹಳದೂರವಾಗಿರುವ ಒಂದು ಗಂಡಿಯಿಂದ ಹಳ್ಳದಮೇಲಕ್ಕೆ ಹತ್ತಿ ಪಶ್ಚಿಮವಾಗಿ ಓಡಿಹೋದ ಹುಲಿಯನ್ನು ಶ್ರೀಮನ್ ಮಹಾರಾಜರವರೂ, ಮ||ರಾ|| ದಿವಾನರೂ ಮ||ರಾ||ಸೆಕ್ರೆಟೇರಿಯವರೂ ಕಂಡು ಸದರೀ ಮೃಗವು ಗುಂಡಿನ ಏಟಿಗೆ ದೂರವಾಗಿದೆಯೆಂದು ತಿಳಿದು ಇದ್ದಾಗ್ಯೂ ಶ್ರೀಮನ್ ಮಹಾರಾಜರವರು ಕುತೂಹಲದೊಡನೆ ಆಮೃಗದಮೇಲೆ ಗುಂಡು ಹಾರಿಸಲು ಅದು ತಪ್ಪಿಹೋಯಿತು. ಪುನಃ ಸಾಯಂಕಾಲದವರಿವಿಗೂ ಆಹುಲಿಯನ್ನು ಹುಡಿಕಿಸಿದ್ದಾಯಿತು, ಸಿಕ್ಕಲಿಲ್ಲವು. ರಾತ್ರಿ ೮ಘಂಟೆಗೆ ಸ್ವಾರಿಯು ಡೇರಾಕ್ಕೆ ಚಿತ್ತೈಸಿತು. ಅಷ್ಟರಲ್ಲಿ ಅರಶೀಕೆರೆ ಸಮೀಪದಲ್ಲಿ ಏರ್ಪಡಿಸಿದ್ದ ಶಿಕಾರೀಜನಗಳಿಂದ ಆಸ್ಥಳದಲ್ಲಿ ಹುಲಿಯು ದನಗಳನ್ನು ತಿಂದದ್ದಾಗಿ ವರ್ತಮಾನಬಂದು ಅದನ್ನು ಮಹಾಸನ್ನಿಧಾನದಲ್ಲಿ ಅರಿಕೆಮಾಡಿದ ಒಡನೆ ಆಮಾರನೇದಿವಸ ಅಲ್ಲಿಯೇ ಮೊಕ್ಕಾಂಮಾಡಲು ನಿಶ್ಚಯಿಸಿದ್ದಾಗ್ಯೂ ಕ್ಯಾಂಪು ಅಲ್ಲಿಂದತೆರಳಲು ಅಪ್ಪಣೆಆಯಿತು. ಆ ಮಾರನೇದಿವಸವಾದ ತಾರೀಖು ೪ರಲ್ಲು ಸ್ವಾರಿ ಅರಶೀಕೆರೆಗೆ ಚಿತ್ತೈಸಿತು. ವಿಶೇಷ ಸಂಭ್ರಮ ಮತ್ತು ಸಂತೋಷದಿಂದ ಗ್ರಾಮಸ್ಥರು, ಶೆಟ್ಟಿವರ್ತಕರು, ರೈತಜನಗಳು ಸಹ ಶ್ರೀಮನ್ಮಹಾರಾಜರವರನ್ನು ಬರಮಾಡಿಕೊಂಡರು. ಆದಿನ ಆರೋಗಣೆ ಆದನಂತರ ಸ್ವಾರಿಯು ಶಿಕಾರೀಗೋಸ್ಕರ ದಯಮಾಡಿಸಿದ್ದು ಸಾಯಂಕಾಲಕ್ಕೆ ವಾಪಸು ಚಿತ್ತೈಸಿತು. ಈಗ್ರಾಮವಾದ ಅರಶೀಕೆರೆಯು ಹಿಂದೆ ಮತ್ತು ಮುಂದೆ ಕಾಣದೆ ಇರುವ ಅಲಂಕಾರದಮೂಲಕ ಶೋಭಾಯಮಾನವಾಗಿತ್ತು. ಶ್ರೀಮನ್ಮಹಾರಾಜರವರನ್ನು ಆನೆಯಮೇಲೆ ಉತ್ಸವ ಮಾಡಿಸಿ ಕಣ್ಣುತುಂಬಾ ನೋಡಿ ಆನಂದಪೊಂದಲು ಅನೇಕರು ಆಸಕ್ತರಾಗಿದ್ದಾಗ್ಯೂ ಅರ್ಹವಾದ ಬೀದಿ ಇಲ್ಲದೆ ಅದನ್ನು ಮಾನಸಿಕವಡಿಪಡಿಸಿದ್ದಾಯಿತು. ಆದಾಗ್ಯೂ ಸ್ವಾರಿಯು ಶಿಕಾರೀಯಿಂದ ಕುದುರೇಮೇಲೆ ವಾಪಸು ದಯಮಾಡಿಸಿದವೇಳೆ ಗ್ರಾಮ ಪ್ರವೇಶಸ್ಥಳದಲ್ಲಿ ಬೆಂಗಳೂರಿಂದ ಕರೆಯಿಸಿದ್ದ ಬ್ಯಾಂಡ್ ವಾದ್ಯ ಮೊದಲಾದ ಮಂಗಳಧ್ವನಿಗಳ ಸಹಿತ ಮಾರ್ಗದಲ್ಲಿ ವಿಶೇಷ ದೀಪಗಳುಹಚ್ಚಿಸಿ ಶ್ರೀಮನ್ಮಹಾರಾಜರವರನ್ನು ಬಂಗ್ಲೆಗೆ ಪ್ರಜೆಗಳು ಕರೆದುಕೊಂಡು ಬಂದುಬಿಟ್ಟು ಅಪ್ಪಣೆಯನ್ನು ಹೊಂದಿದರು.

ಆ ಮಾರನೇದಿವಸ ಶ್ರೀಮನ್ ಮಹಾರಾಜರವರು ಈಸ್ಥಳಕ್ಕೆ ಅತ್ಯಂತ ಜಾಗರೂಕತೆವುಳ್ಳ

ಶ್ರೀ ಅಮರಗಿರಿ ತಿರುಪದಿಗೆ ದಯಮಾಡಿಸಿ ಅಲ್ಲಿ ದೇವಸ್ಥಾನದಲ್ಲಿ ಪ್ರಸಾದವನ್ನು ಸ್ವೀಕರಿಸಿ ಅರಸೀಕೆರೆಗೆ ವಾಪಸ್ ದಯಮಾಡಿದರು. ಮಹಾರಾಜಶ್ರೀ ದಿವಾನ್‌ರು ಮತ್ತು ಮ|| ರಾ|| ಬಸವ್ವರಾಜೆ ಅರಸಿನವರು ಸಹ ಇತರ ಜೊತ್ತುಮನುಷ್ಯರೊಡನೆ ತಿರುಪದಿ ಬೆಟ್ಟಕ್ಕೆ ದಯಮಾಡಿದ್ದರು. ಅನಂತರ ಸಾಯಂಕಾಲ ೪ ಘಂಟೆಗೆ ಸವಾರಿಯು ಬಂಗಲೆಯಿಂದ ಬಿಜಮಾಡಿ ಬಸ್ತಿ ಪ್ರಯಾಣ ಪ್ರವೇಶಿಸಿ ಅಲ್ಲಿಂದ ಪ್ರಜೆಗಳ ಪ್ರಾರ್ಥನೆ ನೆರವೇರಿಸಲು ಅರಸೀಕೆರೆತಾಲ್ಲೂಕು ನಿವಾಸಿಗಳು ಈ ಅರಸೀಕೆರೆಯಲ್ಲಿ ಮ|| ರಾ|| ಲೇಟ ದಿವಾನ್ ರಂಗಾಚಾರ್ಯರವರ ಜ್ಞಾಪಕಾರ್ಥವಾಗಿ ಕಟ್ಟಿಸಿರುವ ಸತ್ರಛತ್ರಗೃಹಪ್ರವೇಶವು ನೆರವೇರಿಸಿ ಅಲ್ಲಿ ಪ್ರಜೆಗಳು ಸಮರ್ಪಿಸಿದ ಅರ್ಜಿಯನ್ನು ಸ್ವೀಕರಿಸಿ ಅಲ್ಲಿಂದ ತಾಲ್ಲೂಕುಕಚ್ಚೇರಿಯ ಮುಂದೆ ಹಾಕಿಸಿದ್ದ ಮಂಟಪದಲ್ಲಿ ದರ್ಬಾರಾಯಿತು. ಅವರವನಿಯೇ ವಿಶೇಷವಾದ ಬಾಣಬಿರುಸುಗಳು ಹಚ್ಚಿಸಲ್ಪಟ್ಟವು. ಅನಂತರ ಮಹಾರಾಜರವರು ಬಂಗ್ಲೆಗೆ ಚಿತ್ತೈಸಿದರು. ಬೆಳಗಿನಜಾವ ಪ್ರಾತಃಕಾಲ ಪರಿವಾರ ಸಮೇತ ಮಹಾರಾಜರವರು ಹಾಸನಕ್ಕೆ ಚಿತ್ತೈಸಿದರು.

ಶ್ರೀಮನ್ನಿಖಿಲ ಮಹೀಮಂಡಲ ಮಂಡನಾಯಮಾನ ನಿಖಿಲದೇಶಾವತಂಸ ಕರ್ನಾಟಕಜನಪದ ಸುಖಪದಧಿಷ್ಠಾನಭೂತ ಶ್ರೀಮನ್ಮಹೀಶೂರಪುರವರಾಧೀಶ್ವರರಾದ ಶ್ರೀಮಚ್ಚಾಮರಾಜೇಂದ್ರ ಒಡೆಯರ್ ಬಹದೂರವರ ಸನ್ನಿಧಾನದಲ್ಲಿ.

ಅರಸೀಕೆರೆ ತಾಲ್ಲೂಕು ನಿವಾಸಿಗಳು ರಾಜಭಕ್ತಿ ವಿಶ್ವಾಸಪೂರ್ವಕವಾಗಿ ಬರೆಸಿ ಒಪ್ಪಿಸಿದ ವಿಜ್ಞಾಪನಪತ್ರಿಕೆ, ಮಹಾಸ್ವಾಮಿ.

ಮಹಾಸ್ವಾಮಿಯವರು ರಾಜ್ಯಧುರವನ್ನು ವಹಿಸಿದಾರಭ್ಯ ಸನ್ನಿಧಾನ ಸಂದರ್ಶನವನ್ನಪೇಕ್ಷಿಸುತಿದ್ದ ಪ್ರಜೆಗಳನ್ನು ಅನುವದಿಸರೋಸ್ಕರ ತಾಲ್ಲೂಕುಜಾತಿಗಳಮೇಲೆ ಮಹಾಸ್ವಾಮಿಯವರ ಸವಾರಿಚಿತ್ತೈಸಿ, ಅಲ್ಲಿನಪ್ರಜೆಗಳ ಮನಸ್ಸಂತೋಷ ಪಡಿಸುತ ಇಲ್ಲಿನಪ್ರಜೆಗಳ ಬಹುಕಾಲಪುಣ್ಯ ಪರಿಪಾಕ ಫಲರೂಪವಾಗಿ, ಈಸ್ಥಳವು ವಿಶೇಷ ಚಿಕ್ಕದಾಗಿದ್ದಾಗ್ಯೂ ಅನೇಕ ಮಾರ್ಗಗಳಿಂದೊಡಗೂಡಿರುವ ಈ ಅರಸೀಕೆರೆಗೆ ದಯಮಾಡಿ ನಮ್ಮಗಳನ್ನ ಆನುದಪಡಿಸಿದ ಈ ಶುಭದಿವಸಗಳು ನಮ್ಮ ಪುತ್ರಪೌತ್ರ ಪಾರಂಪರ್ಯವಾಗಿ ಜ್ಞಾಪಕದಲ್ಲಿಟ್ಟುಕೊಳ್ಳತಕ್ಕದ್ದಾಗಿವೆ, ಮಹಾಸ್ವಾಮಿ.

ಮತ್ತು ಬಹುಕಾಲ ಸ್ಮರಣೀಯವಾದ ಈಶುಭಮುಹೂರ್ತದಲ್ಲಿ ವಿಜ್ಞಾಪಿಸಲು ಯೋಗ್ಯವಾದ ಕೆಲವು ಅಂಶವನ್ನು ಅರಿಕೆ ಮಾಡಲು ಮಹಾಸನ್ನಿಧಾನದ ಚಿತ್ತಾವಧಾನವನ್ನು ಅಪೇಕ್ಷಿಸುತಲಿದೇವೆ.

ಹಿಂದೆ ಮಹಾಸ್ವಾಮಿಯವರ ಕೀರ್ತಿಯಲ್ಲಿ ಪ್ರಥಮ ಧರ್ಮಸಾಚಿವ್ಯಪದವು ಅಂಗೀಕರಿಸಿ ಪ್ರಜೋಪಯುಕ್ತಗಳಾದ ಕಾರ್ಯಗಳನ್ನು ವಿಶೇಷವಾಗಿ ನೆರವೇರಿಸಿದ ಮಹಾರಾಜಶ್ರೀ ರಂಗಾಚಾರ್ಯರವರ ವಿಷಯದಲ್ಲಿ ನಾವುಗಳು ಬಹಳ ಕೃತಜ್ಞರಾಗಿ, ಅವರ ಜ್ಞಾಪಕಾರ್ಥ ಶ್ರೀಮನ್ಮಹೀಶೂರ ನಗರಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಒಂದು ಕಟ್ಟಡಕ್ಕೋಸ್ಕರ ನಾವುಗಳು ಚಂದಾಮೂಲಕ ಸ್ವಲ್ಪಮಟ್ಟಿಗೆ ದ್ರವ್ಯಸಹಾಯ ಮಾಡಿದ್ದಲ್ಲದೆ ಇಲ್ಲಿಯೂ ಅವರಜ್ಞಾಪಕವು ಶಾಶ್ವತವಾಗಿನೆಲೆಗೊಳಿಸುವದಕ್ಕೋಸ್ಕರ, ಚಿಕ್ಕದಾಗಿಯೂ, ಮಾರ್ಗಸ್ಥರ ವಿಶ್ರಾಂತಿಗೆ ಅನುಕೂಲವಿಲ್ಲದೆಯೂ ಇರುವ ಈಅರಸೀಕೆರೆಯಲ್ಲಿ ಪಂಚಮಜಾತಿಯವರುವಿನಾ ಹಿಂದೂಜನಗಳ ಉಪಯೋಗಕ್ಕೋಸ್ಕರ ೫೦ ಸಂಸಾರಗಳು ಇಳಿಯಲು ಅನುಕೂಲಿಸುವಂತೆ ಒಂದು ಸತ್ರವು ಮ|ರಾ||ಸಬ್‌ಡಿವಿಜನ್‌ಯಿಂಜಿನಿಯರ್ ತಿರುನಾರಾಯಣಾಚಾರ್ಯರವರ ಸಕ್ಷೆ ಮತ್ತು ಕಟ್ಟಡದ ಮೇಲ್ವಿಚಾರಣೆಗೆ ಒಳಪಟ್ಟು ತಿರುಪದಿ ಸುಬ್ಬಣ್ಣನ ಕಂಟ್ರಾಕ್ಟುಮೂಲಕ ಸುಮಾರು ಎರಡು ವರುಷಗಳಿಂದ ಪ್ರಾರಂಭಿಸಿ ಪೂರೈಸುತಲಿದೆ. ಈ ಸತ್ರಕ್ಕಾಗಿ ಇದುವರಿವಿಗೆ ಚಂದಾಮೂಲಕ ೩ ಸಾವಿರ ರೂಪಾಯಿಗಳು ವ್ಯಯವಾಗಿರುತ್ತೆ. ಇದು ಪೂರೈಸಲು ಇನ್ನೂ ಒಂದುಸಾವಿರ ರೂಪಾಯಿಗಿಂತಲೂ ಜಾಸ್ತಿಯಾಗಿಯೇ ತಗಲಬಹುದು. ೧ ೨ ತಿಂಗಳಲ್ಲಿಯೇ ಅದನ್ನು ಪೂರೈಸುತ್ತೇವೆ. ಈ ಸತ್ರಕ್ಕೆ ಬರತಕ್ಕ ಮಾರ್ಗಸ್ಥರ ಅನುಕೂಲ್ಯಕ್ಕೋಸ್ಕರ ತಿಂಗಳೊಂಕ್ಕೆ ೭ ರೂಪಾಯಿ ಸಂಬಳದಲ್ಲಿ ಒಬ್ಬ ಬ್ರಾಹ್ಮಣ ಪರಿಚಾರಕನನ್ನೂ, ೪ ರೂಪಾಯಿ ಸಂಬಳದಲ್ಲಿ ಒಬ್ಬ ಶಿವಭಕ್ತ ಪರಿಚಾರಕನನ್ನೂ, ೪ರೂಪಾಯಿ ಸಂಬಳದಲ್ಲಿ ಒಬ್ಬ ಶೂದ್ರ ಝಾಡಮಾಲಿಯನ್ನೂ ರಾತ್ರಿವೇಳೆ ದೀಪ ಇಡುವದಕ್ಕೋಸ್ಕರ ೩ ರೂಪಾಯಿಮೇರೆ ಪ್ರತಿ ತಿಂಗಳಲ್ಲಿಯೂ ಒಟ್ಟು ೧೮ ರೂಪಾಯಿಖರ್ಚುವಾಡಬೇಕಾಯನ್ನು ಇಟ್ಟರುತ್ತೇವೆ ಮಹಾಸ್ವಾಮಿ.

ಈ ಸತ್ರವನ್ನು ಇಲ್ಲಿಂದ ಮುಂದೆ ಕಾಪಾಡಲು ನಮ್ಮಗಳಿಗೆ ಅಸಾಧ್ಯವಾದ್ದರಿಂದ ಮಹಾಸನ್ನಿಧಾನಕ್ಕೆ ಒಪ್ಪಿಸಿಕೊಂಡು ಸೂಲಾಬಾದ್ ಕಾಮಗಾರಿಯಲ್ಲದೆ ಮೇಲೆ ಕಂಡ ೨೦ ರೂಪಾಯಿ ಲವಾಜಮೆಯನ್ನು ಶಾಶ್ವತವಾಗಿ ಅಪ್ಪಣೆ ಕೊಡಿಸಬೇಕಲ್ಲದೆ ಮ. ರಾ. ರಂಗಾಚಾರ್ಯರವರ ಪ್ರತಿರೂಪವನ್ನು ಈ ಸತ್ರದಲ್ಲಿಡಲು ಅಪ್ಪಣೆ ಆಗಬೇಕು. ಮತ್ತು ಈ ಕಟ್ಟಡವನ್ನು ಶಾಶ್ವತವಾಗಿ ಕಾಪಾಡುತ, ಇದಕ್ಕಿಂತಲೂ ಅತಿಶಯವಾಗಿ ಶ್ರೇಯಸ್ಸು ರಾಜರೊಡನೆ ಆನಂದ ಪಡಿಸಬೇಕಲ್ಲದೆ ಮಹಾಸನ್ನಿಧಾನಕ್ಕೂ, ಮಹಾರಾಜ್ಞೀಯವರಿಗೂ ಯುವರಾಜರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದೂರವರಿಗು ಸಹ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನು ಸರ್ವದಾ ಕರುಣಿಸುತ್ತಿರುವಂತೆ ನಿಖಿಲ ಜಗದ್ರಕ್ಷಕನಾದ ಭಗವಂತನನ್ನು ವಿಶೇಷವಾಗಿ ಪ್ರಾರ್ಥಿಸುತ್ತೇವೆ ಮಹಾಸ್ವಾಮಿ.

ತಮ್ಮವಿಧೇಯ,
ಅರಸೀಕೆರೆ ನಿವಾಸಿ

TELEGRAPHIC SUMMARY.

ತಂತಿವೃತ್ತಾಂತ ಸಂಗ್ರಹವು.

ಲಂಡನ್, ೨೯ನೇ ಜನವರಿ, — [illegible]

[illegible]

ನಾಯರರ ಜನಗಳು.

[illegible]

ACKNOWLEDGMENT

[illegible]

ರು॥ ಆ॥	
[illegible]	೬—೦—೦
[illegible]	೬—೦—೦
[illegible]	೬—೦—೦
[illegible]	೬—೦—೦
[illegible]	೧—೦—೦
[illegible]	೩—೦—೦
[illegible]	೩—೦—೦
[illegible]	೬—೦—೦
[illegible]	೬—೦—೦
[illegible]	೧೦—೦—೦
[illegible]	೬—೦—೦
[illegible]	೬—೦—೦
[illegible]	೬—೦—೦
[illegible]	೧೦—೦—೦
[illegible]	೪—೦—೦
[illegible]	೩—೦—೦
[illegible]	೧—೦—೦
[illegible]	೧—೮—೦
[illegible]	೩—೦—೦
[illegible]	೩—೦—೦
[illegible]	೩—೦—೦
[illegible]	೩—೦—೦
[illegible]	೩—೦—೦
[illegible]	೧೨—೦—೦
[illegible]	೬—೦—೦
[illegible]	೬—೦—೦
[illegible]	೬—೦—೦
ಜುಮ್ಲಾ	೧೩೩—೦—೦

BANGALORE.—Printed and published for the Proprietor, at the KARNATIC PRESS —1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರನೃತ್ತ್ಯನಗಮಾರ್ಗ್ಗ ಕರ್ನ್ನಾಟಕಪ್ರಕಾಶನಪರಾಭಿದಾಪ್ರಥಿತಪಾಹಿತೀಶೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ಧಿಕಾಸುಪರಿಪೂಷಿತಾದಿಶತಿಮಾನಸಂಸುಮದಂ ॥

Vol. XIII] BANGALORE—MONDAY, FEBRUARY 8, 1886. [No 6.

ಸಂಪುಟ ೧೩.] ಬೆಂಗಳೂರು—ಸನ್ ೧೮೮೬ನೇ ಇಸವಿ ಫೆಬ್ರುವರಿ ೮ನೇ ತಾರೀಖ್ ಸೋಮವಾರ [ಸಂಚಿಕೆ ೬.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷು ಮತ್ತು ಕನ್ನಡ ತೆಗೆದುಕೊಳ್ಳತಕ್ಕವರಿಗೆ ವರುಷ ೧ಕ್ಕೆ . . .. ೧೨— —೦

ಇಂಗ್ಲಿಷು ಮಾತ್ರ ತೆಗೆದುಕೊಳ್ಳತಕ್ಕವರಿಗೆ ವರುಷ ೧ಕ್ಕೆ . . .. ೬—೦—೦

ಕನ್ನಡ ಮಾತ್ರ ತೆಗೆದುಕೊಳ್ಳತಕ್ಕವರಿಗೆ ಅಂಚೆ ಮೇರೆ ವರುಷಕ್ಕೆ . ೬—೦—೦

[illegible] ೧ಕ್ಕೆ ೦—೮—೦

ಸೂಚನೆ.—ಚಂದಾದಾರರು ಇಂಗ್ಲಿಷು ಶಾಖೆಯನ್ನಾಗಲಿ, ಕನ್ನಡ ಶಾಖೆಯನ್ನಾಗಲಿ ಅಥವಾ, ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾ [illegible] ಮುಂಗಡವಾಗಿಯೇ ಸಲ್ಲಿಸತಕ್ಕದ್ದು.

ಪ್ರಕಟನೆಯ ರಿವಾಜ್.

ಮೊದಲನೇದಕ್ಕೆ ಪಂಕ್ತಿ ೧ಕ್ಕೆ ೦—೩—೦

ಮರದನೇದಕ್ಕೆ ಪಂಕ್ತಿ ೧ಕ್ಕೆ ೦—೧—೨

NOTICE TO SUBSCRIBERS.

ಇದರ ಕೆಳಗೆ ಬರೆದಿರುವ ಅಂಶಗಳಿಗೆ ನಮ್ಮ ಚಂದಾದಾರರು ದಯವಿಟ್ಟು ಗಮನಕೊಡಬೇಕೆಂದು ಕೋರುತ್ತೇವೆ. [illegible]—

೧. ಕರ್ಣಾಟಕ ಪ್ರಕಾಶಿಕೆಯ ಚಂದಾ [illegible] [illegible] ಮಣಿಆರ್ಡರ್ [illegible] ಆದರೆ ಮಣಿಆರ್ಡರ್ [illegible] [illegible] [illegible] ಕಳುಹಿಸತಕ್ಕದ್ದು. ಹಾಗೆ [illegible] [illegible] ಲಾಭಿ [illegible] ದ ತಿಳಿಸಲ್ಪಡುತ್ತದೆ.

೨. ನೋಟುಗಳು ರವಾನಿಸತಕ್ಕವರು ಅರ್ಧ ನೋಟನ್ನು ರವಾನಿಸಿಟ್ಟು ಉಳಿದ ಅರ್ಧ ನೋಟಿನ [illegible] [illegible] [illegible] ಅರ್ಧ ನೋಟು [illegible] ನಮ್ಮ [illegible] ಬಂದ [illegible] ಅರ್ಧ ನೋಟನ್ನು ರವಾನಿಸತಕ್ಕದ್ದು

೩. ಸ್ಟಾಂಪುಗಳು ಕಳುಹಿಸತಕ್ಕವರು, ರೂ॥ ೧ಕ್ಕೆ ೧ಆಣೆ ಮೇರೆ [illegible] [illegible] ಕಳುಹಿಸತಕ್ಕದ್ದು. [illegible] ಸ್ಟಾಂಪುಗಳನ್ನು ಕಳುಹಿಸಕೂಡದು.

೪. ಪತ್ರಿಕೆಯ ಸಾಲ್ ಜನವರಿ ತಿಂಗಳಲ್ಲಿ ಪ್ರಾರಂಭವಾಗಿ ಡಿಸೆಂಬರ್ ಆಖೈರಿಗೆ ಪೂರೈಸಿ ಬರುವದರಿಂದ [illegible] [illegible] ಪತ್ರಿಕೆಗೆ ಚಂದಾದಾರರಾಗತಕ್ಕವರು ಆ ತಿಂಗಳು ಮೊದಲು ಡಿಸೆಂಬರ್ ಆಖೈರ್ ವರೆಗೆ ಆಗುವ [illegible] ತಿಂಗಳುಗಳಿಗೆ ಮಾಸಿಕ ಮೇರೆ ಚಂದಾ [illegible] [illegible] ಕಳುಹಿಸಲು ಅವಕಾಶವಿಲ್ಲವು.

NOTICE.

VAIDYASARA SANGRAHA.

☞ *Price including Postage, Rs 5-0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥಕ್ಕೆ ಚಂದಾದಾರರು [illegible] ಈ ಕೆಳಗೆ [illegible] [illegible] [illegible] ಪುಸ್ತಕ ಕೊಡಲ್ಪಡುವುದು [illegible] [illegible] ನಿಗೆ ಕೊಡಲ್ಪಡಲಾರದು.

ಕ್ರಿಯಾ [illegible] [illegible]

ಇದರ ಕ್ರಯ ... ... ರೂ॥ ೫—೦—೦

ಪಾಂಕಿಗ್ ಮತ್ತು ಅಂಚೇ ಹಾಸಲ್ ೦—೬—೦

ಟಿ. ವಿ. ವೆಂಕಟಾಚಾರ್, ಆಸ್ಪತ್ರೆ ರೋಡ್, ಬೆಂಗಳೂರು

ನೋಟೀಸ್.

ಇದರ ಕೆಳಗೆ ಬರೆದಿರುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ಕ್ರಯಕ್ಕೆ ದೊರೆಯುವವು,—

ಕನ್ನಡ ಟೀಕಾ ಸಹಿತವಾದ ಸಂಸ್ಕೃತ ಗ್ರಂಥಗಳು.

[illegible] ..	೧—೮—೦
[illegible] ...	೦—೧೨—೦
[illegible] ([illegible]) ..	೦—೩—೦
[illegible]	೦—೫—೦
[illegible] ...	೦—೪—
[illegible] . .	೦—೧೪—೦
[illegible] ...	೦—೭—೦
[illegible]	೦—೨—೦
ವೈದ್ಯಸಾರಸಂಗ್ರಹ .	೫—೦—೦

ಕನ್ನಡ ಗ್ರಂಥಗಳು

[illegible] ...	೦—೭—೦
[illegible] ...	೦—೮—೦
[illegible] ..	೦—೩—೬
ಸುಧಾಮಚರಿತ್ರೆ	೦—೨—೬
[illegible] . .	೦—೪—೦
[illegible]	೦—೨—೦
[illegible] ...	೦—೨—೬
[illegible] ...	೦—೭—
[illegible] ...	೦—೩—೦
[illegible]	೧—೨—
[illegible] ...	೦—೦—೩
ಇಂಗ್ಲಿಷು ಕನ್ನಡ [illegible]	೧— —೦
[illegible]	೨—೦—೦
[illegible] ...	೦—೨—೦
[illegible] ...	೩—೪—೬
[illegible] ...	೩—೪—೬
[illegible]	
೧ನೇ ಸಂಚಿಕೆ. ...	೦—೮—೦
೭ನೇ [illegible]	೧—೮—೦
[illegible] ...	೦—೮—೦

[illegible] ಗ್ರಂಥಗಳು

[illegible] . .	೦—೫—೦
[illegible] ...	೦—೭—೬
[illegible] ...	೦—೨—೬
[illegible] . .	೦—೦—೬
[illegible] ...	೦—೩—೬
೧ [illegible] ...	೦—೧—೦

[illegible] ಅಂಚೇ ಹಾಸಲ್ [illegible] [illegible]—[illegible] [illegible] [illegible] [illegible] [illegible]. [illegible] [illegible] ಅಂಚೇ ಹಾಸಲ್ [illegible] ಕೊಡಬೇಕಾಗುವದು.

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪನಿ.

ಜನರಲ್ ಕಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗುಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

ನೋಟಿಸ್.

ಇಂಗ್ಲಾಂಡ್ ದೇಶದ ತಯಾರೀ ಜಾಜಿಕಾಯಿ ಬಾಲೀ ಪೆಟ್ಟಿಗಳ ಹರಾಜ್.

ಇದರಡಿ ರುಜು ಮಾಡುವವರು, ಈ ತಿಂಗಳ ೧೨ನೇ ತಾರೀಖ್ ಶುಕ್ರವಾರ ಬೆಳಗ್ಗೆ ೮½ ಘಂಟೆಗೆ, ಮೈಸೂರು ಮಹಾರಾಜರವರ ಸೂಲುವ ಮತ್ತು ನೇಯುವ ಕಂಪನಿ ಯಂತ್ರದ ಕಾರ್ಖಾನೆಯಲ್ಲಿ ಮೇಲೆಕಂಡ ಪೆಟ್ಟಿಗೆಗಳನ್ನು ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸುವರು.

೫೦೦ರಿಂದ ೬೦೦ರವರಿವಿಗೆ ದೊಡ್ಡದಾದ ಬಾಲೀ ಪೆಟ್ಟಿಗೆಗಳು. ಹರಾಜಿನಲ್ಲಿ ತೆಗೆದುಕೊಳ್ಳತಕ್ಕವರ ಅನುಕೂಲ್ಯಕ್ಕಾಗಿ, ೬ರಿಂದ ೧೨ರವರಿವಿಗೆ ಸಣ್ಣ ಸಣ್ಣ ಲಾಟುಗಳಾಗಿ, ಕುಮಾರು ಒಂದುಗಳ ದಪ್ಪವುಳ್ಳ ಹಲಿಗೆಗಳು.

ಸದರೀ ಪೆಟ್ಟಿಗೆಗಳು ಜನಗಳು ನೋಡುವದಕ್ಕಾಗಿ ತೆಗೆದು ಇಡಲ್ಪಟ್ಟಿವೆ. ಇದನ್ನು ಕುರಿತು ಇನ್ನು ಯೇನಾದರು ತಿಳಿದುಕೊಳ್ಳತಕ್ಕದ್ದಾದರೆ ಸದರೀ ಕಾರ್ಖಾನೆಯ ಮ್ಯಾನೇಜರವರನ್ನು ಕೇಳಿ ತಿಳಿದುಕೊಳ್ಳಬಹುದು.

LAWRANCE, KRISHNASAMY & Co.,
No 7, Brigade Road,
Bangalore

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, FEBRUARY 8, 1886

೧೮೮೬ನೇ ಫೆಬ್ರುವರಿ ೮ನೇ ತಾ॥ ಸೋಮವಾರ

ಶ್ಲೊ॥ ಸರ್ವಸ್ವತಾಂಶವಸಿವಾಸ್ಯಾಕ್ಷರಂಪ್ರಸೂತೆ ವಾಕ್ಚಿತ್ತದುಷ್ಪ್ರಸರಣೀರುಪಸಿಂಹ್ರಣಾವಾಂತ್ಯಾಮ ಮವಿದುಷಾನಸ [illegible] ಸ್ವರಾ [illegible] [illegible] ಣಂಜನಶೀತ್ವಮೇವ।

GOSHA SYSTEM

ಇಂತ್ಯದೇಶದ ಸ್ತ್ರೀಯರೊಳು ಗೋಷಾ ಪದ್ಧತಿಯು ಯಾತಕಾಲದೊಳುಂಟಾಯಿತೊ, ಯಾವನಿಮಿತ್ತದಿಂದೇರ್ಪಟ್ಟಿತೊ, ಅದರ ಪ್ರಯೋಜನವೇನಾದ್ದೊ, ಅದನ್ನೀಗ ತೊರೆಯುವದರಿಂದ ಲಭಿಸುವ ಫಲವ್ಯಾವತೆರದ್ದೊ, ಇನ್ನು ಕುರಿತು ಇದರಡಿ ಸ್ವಲ್ಪ ವಿಚಾರವಮಾಡುವೆವು.

ಈಗ ನಮ್ಮವರಲ್ಲಿ ಸಾರ್ವಜನೀನವಾದದ್ದಾಗಿ ಏರ್ಪಟ್ಟಿರುವ ಪಾಶ್ಚಿಮಾತ್ಯರ ನಾಗರಿಕತೆಯು, ಅವರ ವರ್ತನವಿಂದುಂಟಾದದ್ದೆಂದು ಧಾರಾಳವಾಗಿ ಹೇಳಬಹುದಾದದ್ದಾಗಿರುತಿದೆ. ಈ ನವನಾಗರಿಕತೆಯೇ ಶ್ರೇಷ್ಠವಾದದ್ದೆಂದೂ ಅದೇ ಪರಿಗ್ರಹಾರ್ಹವೆಂತಲೂ ಈ ಗಿನವರು ಸಿದ್ಧಾಂತಮಾಡಿರುವದರಿಂದ ಅದರ ಗುಣದೋಷಗಳಂಕುರಿತು ನಾವೀಗ ಸ್ವಲ್ಪವೂವಿಚಾರಮಾಡುವದಿಲ್ಲವು.

ಮುಸಲ್ಮಾನರ ಪ್ರಾಬಲ್ಯವು ಈ ದೇಶದೊಳು ವೃದ್ಧಿಯನ್ನೈದುವದಿಕ್ಕೆ ಪೂರ್ವ ನಮ್ಮವರಲ್ಲಿಗೋಷಾಪದ್ಧತಿ ನೆಲೆಗೊಂಡಿತ್ತೆಂದು ಹೇಳುವದಕ್ಕೆ ನಮಗೆ ಯಾವ ಆಧಾರವೂ ದೊರಕಲಿಲ್ಲವು. ಮುಸಲ್ಮಾನರ ಪ್ರಾಬಲ್ಯವು ವೃದ್ಧಿಯನ್ನೈದುತಲ್ಲ ಅವರ ಪರಿಚಯ ಸಹವಾಸಗಳು ಹಿಂದೂಗಳಿಗೆ ಅಧಿಕವಾಗಲು, ಸದರೀ ಆಚಾರವು ಅರಸರಿಂದಲೂ ರಾಜಪುತ್ರರಿಂದಲೂ, ಕನ್ಯಾಪ್ರಜೆಗಳಿಂದವರಿಂದಲೂ ಅನುಷ್ಠಿಸಲ್ಪಡಲಿಕ್ಕೆ ಉಪಕ್ರಮವಾಯಿತು. ಮುಸಲ್ಮಾನರಲ್ಲಿ ಈ ಪದ್ಧತಿ ಮೊದಲು ಉಂಟಾಗಲಿಕ್ಕೆ ಕಾರಣವೇನೆಂದರೆ, ಮಿಸರ್ ಯೆಂಬ ದೇಶದ ಅರಸನಾದ ಫರೋ ಎಂಬವನು, ಭಗವದ್ಭಕ್ತನಾದ ಇಬ್ರಾಹಿಂ ಯೆಂಬವನ ಭಾರ್ಯೆಯಾದ ಸಹಾರಾ ಯೆಂಬ ಸುಂದರೀಮಣಿಯಮೇಲೆ ಮೋಹಿತನಾಗಿ ಅವಳ ಪತಿಯಂಕರೆದು ಈಕೆ ಯಾರ ಭಾರ್ಯೆ ಯೆಂದು ಕೇಳಿದನು. ಅರಸನು ತನ್ನ ಭಾರ್ಯೆಯಮೇಲೆ ದೃಷ್ಟಿಯುಳ್ಳವನಾಗಿದಾನೆಂಬದು ಇಬ್ರಾಹಿಂಯವನು ತಿಳಿದು, ತನ್ನ ಮಡದಿಯೆಂದರುಹಿದರೆ ಯೇನು ಪ್ರಮಾದ ಉಂಟಾಗುವದೋ ಯೆಂದು ಶಂಕಿಸಿ, ಆಕೆ ತನ್ನ ಸೋದರಿಯೆಂದು ನುಡಿದನು. ಅರಸನದಂಕೇಳಿ ಸಹಾರಾ ಎಂಬವಳನ್ನು ಕೂಡಲೇ ರಾಜಮಂದಿರಕ್ಕೆ ಕಳುಹಿಸುವಂತೆ ಇಬ್ರಾಹಿಂಗೆ ಅಜ್ಞಾಪಿಸಿದನು. ನಿರ್ವಿಣ್ಣನಾದ ತನ್ನ ಭಕ್ತನ ದುಃಖ ವಿಮೋಚನಾರ್ಥ ಭಗವಂತನು ಆಗ ಪ್ರತ್ಯಕ್ಷವಾಗಿ ಸಹಾರಾ ಯೆಂಬವಳ ವೃತ್ತಾಂತವನ್ನು ಅರಸರಿಗೆ ತಿಳಿಸಲು ಆತನು ಭಗ್ನೋತ್ಸಾಹಿಯಾಗಿ ಮೋಹವಂತೊರೆದುಬಿಟ್ಟನು. ಸಹಾರಾವಿನ ಲಾವಣ್ಯದಿಂದಕ್ಷಣದೊಳು ಆಕೆಯೂ ಅರಸನೂ ಇಬ್ರಾಹಿಂಯವನೂ ಮಹಾಪಾತಕಕ್ಕೆ ಒಳಗಾಗುತಲಿದ್ದುದು ಭಗವಂತನು ಪರ್ಯಾಲೋಚಿಸಿ ಇಷ್ಟರ ಅನರ್ಥಕಾರಿಯಾದ ನಿನ್ನಸೌಂದರ್ಯವನ್ನು ವಸ್ತ್ರದಿಂದಾಚ್ಛಾದಿಸಿಕೊಂಡು ಜನಮಧ್ಯದೋಳ್ ನೀನು ಸಂಚರಿಸತಕ್ಕದ್ದೆಂದು ಆಕೆಗೆ ಅಜ್ಞಾಪಿಸಿದನೆಂಬದಾಗಿ ಬಂದು ಐತಿಹ್ಯ ನೆಲಗೊಂಡಿದೆ. ಇದರಿಂದ ಸ್ತ್ರೀಯರ ಪಾತಿವ್ರತ್ಯ ಸಂರಕ್ಷಣಾರ್ಥವೇ ಈ ಕ್ರಮವು ಪೂರ್ವದೊಳು ಮುಸಲ್ಮಾನರಲ್ಲಿ ನೆಲಗೊಂಡಂತೆ ಯೆಣಿಸಬೇಕಾಗಿದೆ.

ಹಿಂದೂಗಳಲ್ಲಿಯೂ ಇಂತಾ ಅನರ್ಥಗಳು ಅನೇಕ ಉಂಟಾಗದಿರಲಿಲ್ಲವು. ಇದಕ್ಕೆ ಸೀತಾ, ಅಹಲ್ಯಾ ಮೊದಲಾದ ರಾಜಋಷಿ ಪತ್ನಿಗಳು ನಿದರ್ಶನರಾಗಿದಾರೆ. ಇವರ ಸೌಂದರ್ಯವು ಎಷ್ಟರ ಅನರ್ಥವನ್ನುಂಟುಮಾಡಿತೋ ಅದು ರಾಮಾಯಣಾದಿ ಗ್ರಂಥಗಳಿಂದಲೇ ಅರಿಯಬಹುದು. ಇವರ ಉಪಮಾನದಿಂದ ದುರ್ಬಲರಾದವರ ಹೆಂಗಸರನ್ನು ಬಲಿಷ್ಠರಾದ ಪುರುಷರು ಆಕ್ರಮಿಸಿಕೊಳ್ಳುತ್ತ ಹೋದಂತೆ ಏರ್ಪಡುತಿದೆಯೇ ಹೊರತು ಪ್ರಬಲರ ಭಾರ್ಯೆಯರು ದುರ್ಬಲರು ಅಪಹರಿಸಿದಂತೆ ವ್ಯಕ್ತವಾಗುವದಿಲ್ಲವು. ಶ್ರೀರಾಮನು ಸ್ವತಃ ಧೈರ್ಯ ಬಲ ವಿಕ್ರಮಶಾಲಿಯಾಗಿದ್ದರೂ ಸೀತಾದೇವಿಯೊಡನೆ ಅರಣ್ಯವಾಸದೊಳಿರುವಾಗ ತಾಪಸವೃತ್ತಿಯೊಳಿದ್ದದರಿಂದ ಋಷಿಕನ್ಯೆಯಂತಿದ್ದ ಸೀತೆಯ ಸೌಂದರ್ಯಾತಿಶಯದಿಂ ಮಗ್ನನಾದ ರಾವಣನು ತನ್ನ ಭುಜಬಲ ಪರಾಕ್ರಮೈಶ್ವರ್ಯ ಪ್ರಾಭವಾದಿಗಳನ್ನಾಲೋಚಿಸಿ ಪತಿಯಿಲ್ಲದದ್ದಾಗ ಅಬಲೆಯಾದ ಜಾನಕಿಯನ್ನಪಹರಿಸಿಕೊಂಡು ಹೋದನು. ಹೀಗೆಯೇ ದೇವೇಂದ್ರನು ತನ್ನ ತ್ರೈಲೋಕ್ಯಾಧಿಪತ್ಯದಿಂ ಗರ್ವಿತನಾಗಿ ಸಾತ್ವಿಕವೃತ್ತಿಯೊಳಿದ್ದ ಅಹಲ್ಯೆಯನ್ನು ಬಲಾತ್ಕಾರದಿಂ ಸ್ವವಶಪಡಿಸಿಕೊಂಡನು. ಏತೇನ ದುರ್ಬಲರಾದವರ ಹೆಂಗಸರಿಗೆ ಪ್ರಬಲರಾದ ಪುರುಷರಿಂದ ಯಾವಾಗಲಾದರೂ ಬಾಧೆಯುಂಟಾಗದೆ ತಪ್ಪಲಾರದಾಗಿ

ಪಾತಿವ್ರತ್ಯ ಸಂರಕ್ಷಣಾರ್ಥವೇ ಈ ಕಂತ ಗೋಷಾ ಪದ್ಧತಿಯನ್ನು ದುರ್ಬಲರಾದವರೇ ಪ್ರಥಮತಃ ಆಚರಿಸಬೇಕಾದ್ದು ಆವಶ್ಯಕವಾಗಿರುತಿದೆ. ಇದಕ್ಕೆ ಸಾಕ್ಷಾದ್ವಿರುದ್ಧವಾಗಿ ಸದರೀ ಕ್ರಮವು ಸಾಧ್ಯವಾದಮಟ್ಟಿಗೆ ಪ್ರಬಲರಿಂದಲೇ ಅದ್ಯಾಪಿ ಅನುಷ್ಠಿಸಲ್ಪಡುತಬರುತಿದೆ. ಭಗವದಾಜ್ಞೆಯಾದರೊ, ಲಾವಣ್ಯವಂ ಕುರಿತು ತಿಳಿಸಲ್ಪಟ್ಟದ್ದಾಗಿ ದಯೇಹೊರತು ಪ್ರಾಬಲ್ಯ ದೌರ್ಬಲ್ಯವನ್ನುದ್ದೇಶಿಸಿದ್ದಾಗಿಲ್ಲವು. ಗೋಷೆಯೊಳಿರುವ ಹೆಂಗಸರೆಲ್ಲರೂ ಸುಂದರಿಯರೆಂದು ಭಾವಿಸುವ ಪಕ್ಷಕ್ಕೆ ಅದು ಕೇವಲ ಭಾವನಾಧೀನವಾದ ವಿಷಯವಾದದರಿಂದ ಕುರೂಪಿಯಾದವಳನ್ನು ಸಹ ಸುಂದರಿಯೆಂದು ಹೇಳುವದರೊಳುಯಾರ ಆಕ್ಷೇಪಣೆಯೂ ಇರಲಾರದು.

ಮೇಲೆಕಂಡ ಕಾರ್ಯಕಾರಣಗಳನ್ನರಿತೋ ಅಥವಾ ಪ್ರಬಲರಂತೆ ನಟಿಸಬೇಕೆಂಬ ತಾತ್ಪರ್ಯದಿಂದಲೋ ಜನಗಳು ಪ್ರಸಕ್ತ ಸಂಪ್ರದಾಯವನ್ನು ಸಾಧ್ಯವಾದಮಟ್ಟಿಗೆ ಅನುಸರಿಸುತಬರುತಲಿದಾರೆ. ಇದಕ್ಕೆ ರಾಣಿವಾಸವೆಂಬ ವ್ಯವಹಾರ ಸಹ ವುಂಟಾಗಿರುವದರಿಂದ ಗೋಷೆಯನ್ನು ರಾಜಲಕ್ಷಣ ವೆನ್ನಬೇಕಾಯಿತು. ಈಗ ಪ್ರಾಬಲ್ಯದೊಳಿರುವ ಪಾಶ್ಚಿಮಾತ್ಯರ ರಾಜಲಕ್ಷಣವನ್ನಂಗೀಕರಿಸಬೇಕಾದರೆ ಗೋಷೆಯಂಬಿಟ್ಟು ಧಾರಾಳವಾಗಿ ವರ್ತಿಸಬೇಕಾಗಿರುತಿದೆ. ಸಾಧಾರಣ ಸ್ತ್ರೀಯರು ಸಹ ಇಂತಾ ರಾಜಲಕ್ಷಣವನ್ನಪೇಕ್ಷಿಸುವದು ಯುಕ್ತವಲ್ಲವು. ಒಂದುವೇಳೆ ಅಪೇಕ್ಷಿಸಿದರೆ ಅವರವರ ಯೋಗ್ಯತಾನುಸಾರ ಸ್ವಲ್ಪಮಟ್ಟಿಗೆ ಲಭಿಸಿದರೂ ಲಭಿಸಬಹುದು. ಅವನ್ಮಾತ್ರದಿಂದಲೇ ವಿಶೇಷ ಬಾಧಕ ವುಂಟಾಗಲಾರದು. ಸಕಲರಾಜಲಕ್ಷಣ ಸಮನ್ವಿತರಾದ ರಾಜಮಹಿಷಿಯರು ಪೂರ್ವಪದ್ಧತಿಯನ್ನುಲ್ಲಂಘಿಸಿ ವರ್ತಮಾನಕಾಲದ ರಾಜಲಕ್ಷಣವನ್ನಪೇಕ್ಷಿಸುವರಾದರೆ ಆಗ ಸಕಲ ನಿಯಮಗಳನ್ನೂ ಬಿಡಬೇಕಾಗುತಿದೆ. ಬಳಿಕ ಇದರ ಪರ್ಯವಸಾನವು ಯಾವರೂಪವಾದದ್ದಾಗಿರುವದೊ ಅದುಸೂಕ್ಷ್ಮದರ್ಶಿಗಳೇ ಆಲೋಚಿಸಬಹುದು. ಇಷ್ಟುಮಾತ್ರದಿಂದಲೇ ರಾಜಮಹಿಷಿಯರೆಲ್ಲರೂ ಮುಗ್ಧೆಯರೆಂತಲೂ ವಿದ್ಯಾವಿವೇಕ ಶೂನ್ಯರಾಗಿ ಪಶುಗಳೋಪಾದಿ ವರ್ತಿಸುವರೆಂದು ನೋಡಿ ಆನುದಿಸುವಷ್ಟು ಶ್ರದ್ಧಾಜಡರೆಂದು ನಮ್ಮನ್ನೀಗಿನವರು ಆಕ್ಷೇಪಿಸದಿರಲಾರರು. ಅವರನ್ನು ಮುಗ್ಧಾವಸ್ಥೆಯೊಳು ನೋಡಬೇಕೆಂಬ ತಾತ್ಪರ್ಯ ನಮಗೊಯೆಷ್ಟುಮಾತ್ರವೂ ಇಲ್ಲವು, ಆದರೆ ಈಗಿನ ಅನುಷ್ಠಿತ ಕ್ರಮ ಮಾತ್ರ ರಾಜಲಕ್ಷಣಕ್ಕೆ ಬಹಳ ದೂರವಾದದ್ದೆಂದು ಅವರವರೇ ಆಲೋಚಿಸಿದರೆ ಸ್ಫುರಿಸದೆ ಹೋಗಲಾರದು. ಪೂರ್ವದಿಂದಲೂ ನಮ್ಮ ರಾಜಸ್ತ್ರೀಯರು, ಸಕಲ ಶಾಸ್ತ್ರಪಾರಂಗತೆಯರಾಗಿಯೂ, ಸಕಲ ಕಲಾವಿಶಾರದರಾಗಿಯೂ, ಕದಾಚಿತ್ ಕ್ಷಾತ್ರವೃತ್ತಿಯನ್ನವಲಂಬಿಸುವಷ್ಟು ಧೈರ್ಯೋತ್ಸಾಹಗಳುಳ್ಳವರಾಗಿಯೂ ಇದ್ದಂತೆ ನಮ್ಮ ಪೂರ್ವಗ್ರಂಥಗಳೇ ನಿರೂಪಿಸುತಿವೆ. ಇದಕ್ಕೆ ನಿದರ್ಶನತ್ವೇನ ಈಗಲೂ ಹುಡುಕಿದರೆ ಅಲ್ಲಿಯಲ್ಲಿ ಒಬ್ಬರಿಬ್ಬರು ದೊರೆಯಬಹುದು. ಪರಂತು ವಿದೇಶಗಮನ, ವಿಜಾತೀಯರ ಸಹವಾಸ ಸಲ್ಲಾಪಗಳು, ವಿಜಾತೀಯ ಸಂಪ್ರದಾಯಾನುಸರಣ, ಏವಮಾದಿ ವಿಷಯಗಳನ್ನವರು ಬಹಳ ಗರ್ಹಿತವನ್ನಾಗಿ ಪರಿಭಾವಿಸುತಲಿದ್ದರು. ಮುಖ್ಯವಾಗಿ, ಮಾಹೇಮುಜಕೂರ ೧ನೇ ತಾರೀಖಿನ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಯು ಕೇವಲ ಪ್ರೀತಿ ಗೌರವ ಮತ್ತು ಹಿತಚಿಂತನೆಯೊಡನೆ ತಿಳಿಸಿದ ಆದರ ದೃಷ್ಟಾಂತಶ್ಲಾಘ್ಯವೆಂದು ತೋರಿದ ಒಂದು «ಸಲಹೆಯು» ನಮ್ಮನ್ನೀ ವಿಚಾರವಂ ಮಾಡುವಂತೆ ಪ್ರೇರಿಸಿತು. ಆದರೆ ಇದನ್ನು ಕುರಿತು ವಿಚಾರಮಾಡಿದಂತೆಲ್ಲ ಕಡೆಗೆ ಅದು ವೈಮನಸ್ಯದಿಂ ಪರಿಸಮಾಪ್ತವಾಗುವದಾಗಿ ಪ್ರಕೃತದೊಳ್ಳಿಗೆ ವಿರಮಿಸುವೆವು.

A SADHU AT KOTACHEROO.

ಅನಂತಪುರ ಡಿಸ್ಟ್ರಿಕ್ಟಿಗೆ ಸೇರಿದ ಪೆನಗೊಂಡಾ ತಾಲ್ಲೂಕಿನಲ್ಲಿ ವಕೀಲರಾಗಿರುವ ಮತ್ತು ಥಿಯಾಸಾಫಿಕಲ್ ಸೊಸೈಟಿಯ ಮೆಂಬರಾದ ಮ॥ ಚಕ್ರವರ್ತಿಯೆಂಬವರು ಸದರೀ ಸೊಸೈಟಿಗೆ ಬರೆದ ಒಂದು ಕಾಗದವು ಈ ತಿಂಗಳ ಥಿಯಾಸಫಿಸ್ಟ ಪತ್ರಿಕೆಯಲ್ಲಿ ಪ್ರಾಯಿಷಮಾಡಲ್ಪಟ್ಟಿರುತಿದೆಯಾಗಿ ಅದು ಭಾಷಾಂತರಪೂರ್ವಕ ಪ್ರಕಟಿಸುವೆವು.

ಅನಂತಪುರ ಡಿಸ್ಟ್ರಿಕ್ಟಿಗೆ ಸೇರಿದ ಪೆನಗೊಂಡಾ ತಾಲ್ಲೂಕಿನಲ್ಲಿ ಕೋಟಚೆರು ಎಂಬ ಒಂದುಗ್ರಾಮವಿರುತಿದೆ. ಸದರೀ ಗ್ರಾಮದಲ್ಲಿ ಸಾಧುಒಬ್ಬನು ವಾಸವಾಗಿದಾನೆ. ಅವನ ಸಂದರ್ಶನವು ಆಗಾಗ್ಯೆ ನನಗೆ ಲಭಿಸುತಲಿರುತಿದೆ. ಈಸಾಧುವಿನ ವಯಃಪರಿಮಿತಿಯೆಷ್ಟೆಂದು ಅರಿತವರೊಬ್ಬರೂ ಇಲ್ಲವು. ಈತನಚಹರೆಯಿಂದ ಈತನಿಗೆ ಕುಮಾರು ನಲವತ್ತುಸಂವತ್ಸರಗಳ ವಯಸ್ಸಿರಬಹುದೆಂತಲೂ, ಐವತ್ತು ಅರವತ್ತು ವರುಷಗಳಹಿಂದೆ ತಾವು ನೋಡಿದಕಾಲದಮೊದಲು ಈತತ್ಕ್ಷಣಪರ್ಯಂತ ಒಂದೇರೂಪವುಳ್ಳವನಾಗಿದಾನೆಂತಲೂ ಬಹಳ ವಯೋವೃದ್ಧರಾದವರೆಲ್ಲರು ಹೇಳುತ್ತಾರೆ. ಈತನ ಜಾತಿ ಕುಲಗೋತ್ರಗಳೊಬ್ಬರಿಗೂ ತಿಳಿಯದು. ಶ್ಯಾಮಲವರ್ಣದಿಂ ಮಧ್ಯಮವಾದ ಆಕೃತಿಯುಳ್ಳವನಾಗಿರುತ್ತಾನೆ. ಈಸಾಧುವಿನ ಸ್ಪರ್ಶದಿಂದ ಬಹುಮಂದಿಗೆ ನಾನಾವಿಧ ರೋಗಗಳು ಗುಣವಾದವು. ಎಲ್ಲರಿಗೂ ಗುಣವಾಯಿತೆಂದು ನಾನು ಹೇಳಲಿಲ್ಲವು. ಪರಂತು ಈ ಮಹಾತ್ಮನ ಸಂಪರ್ಕವು ಪುಣ್ಯವಿಶೇಷದಿಂ ಯಾರಿಗೆ ಲಭಿಸಿತೋ ಅಂತವರ ರೋಗವೆಲ್ಲವು ನಿವಾರಣವಾಯಿತು. ಈ ಪುಣ್ಯಪುರುಷನ ಅಂಗಸ್ಪರ್ಶಾಪೇಕ್ಷೆಯೊಡನೆ ನೂರು ಇನ್ನೂರು ಮೈಲುಗಳ ಫಾಸಲೆಯಿಂದ ಜನಗಳು ಅಸಂಖ್ಯಾಕವಾಗಿ ಬರುತಲಿದಾರೆ. ಮುಖ್ಯವಾಗಿ ಜನಗಳಿವನನ್ನು ಭಗವದಂಶ ಸಂಭೂತನನ್ನಾಗಿ ಭಾವಿಸಿಕೊಂಡಿದಾರೆ. ಈತಪಸ್ವಿಯನ್ನು ನಾನು ನೋಡಿರುವೆನಾಗಿ ಈತನ ಪ್ರಭಾವವನ್ನಿದರಡಿ ನಾನು ತಿಳಿದಿರುವಮಟ್ಟಿಗೆ ವಿವರಿಸುವೆನು. ಪ್ರಸಕ್ತ ಸಾಧುವಿಗೆ ಮನೆ ಗುಡಿಸಲು ಮುಂತಾದ ಆವರಣಗಳ್ಯಾವನ್ನೂ ಇಲ್ಲವು. ಇವನು ಶೀತವಾತಗಳನ್ನು ಲಕ್ಷ್ಯದೊಳಡದೆ ಯಾವಾಗಲು ನಿರಾವರಣವಾದ ಪ್ರದೇಶದಲ್ಲಿ ನಿರ್ವಸನನಾಗಿರುತಲಿದಾನೆ. ಯಾರಾದರು ಅಭಿಮಾನಪೂರ್ವಕ ಒಂದೆರಡು ಕಬಳಗಳನ್ನಿತ್ತರೆ ಅವಂ ಪರಿಗ್ರಹಿಸಿ ಭುಜಿಸುವನು, ಹಾಗಿಲ್ಲದೆ ಮನದೊಳು ಬೇಸತ್ತುಕೊಂಡು ಅದಂ ಹೊರಪಡಿಸದೆ ಆಹಾರವಂ ಕೊಡುವದಕ್ಕೆ ಹೋದರೆ ಅಂತವರ ಕಬಳಗಳನ್ನು ಮುಟ್ಟಲೊಲ್ಲನು. ಹೀಗೆ ಆಹಾರವಂ ಕೊಡತಕ್ಕವರ ಅಭೀಷ್ಟಗಳು ನೆರವೇರದೆ ಹೋಗುವದಿಲ್ಲವು. ಇವನು ನಿದ್ರೆಗೈದದ್ದನ್ನಾಗಲಿ, ಅನ್ಯರೊಡನೆ ಮಾತನಾಡಿದ್ದನ್ನಾಗಲಿ ಇದುವರಿವಿಗೆ ಯೊಬ್ಬರೂ ಕಂಡವರಿಲ್ಲವು. ಈತನನ್ನು ಮುಸಲ್ಮಾನರು ಮಸ್ತಾನ್ ಸಾಹೆಬೆಂತಲೂ, ಹಿಂದೂಗಳು ಮಹಾತ್ಮನೆಂತಲೂ ಕರೆಯುತ್ತಾರೆ. ಈ ತಪಸ್ವಿಯು ಸರಳ ಹೃದಯವುಳ್ಳವನಾಗಿಯೂ, ಉಪಶಾಂತನಾಗಿಯೂ, ನಿರ್ದುಷ್ಟನಾಗಿಯೂ, ದಯಾಳುವಾಗಿಯೂ ಇರುತ್ತಾನೆ. ಇವನ ವಿಷಯವಂ ಕುರಿತು ಅರಿಯತಕ್ಕಬಗ್ಯೆ ನನ್ನ ಮಿತ್ರನಾಗಿಯೂ, ನನ್ನಂತೆ ಥಿಯಸಾಫಿಕಲ್ ಸೊಸೈಟಿಯ ಮೆಂಬರಾಗಿಯೂ ಇರುವನೊಬ್ಬನು ಸಂಗಡ ಕರೆದುಕೊಂಡುಹೋಗಿ ಕೇಳಲು ಆಗಲಾ ಮಿತ್ರನು ಸಾಧುವಂ ನೋಡಿ ಇವನು ಚಿರಕಾಲದಿಂ ಯೋಗಾಭ್ಯಾಸ ಮಾಡುತಲಿದಾನೆಂತಲೂ, ಇಂತಾ ಅಭ್ಯಾಸದಿಂದಲೇ ಇವನೀಗ ತುರೀಯಾತೀತವೆಂಬ ಸಮಾಧ್ಯವಸ್ಥೆಯಲ್ಲಿ ಇರಲಿಕ್ಕೆ ಶಕ್ತನಾಗಿದಾನೆಂತಲೂ ಹೇಳಿದನು. ವಿವೇಕಿಗಳಾದ ನನ್ನ ಸಹೋದರರ್ಯಾರಾದರೂ ಈ ಮಹಾತ್ಮನ ಸಂದರ್ಶನಕ್ಕಾಗಿಕೋಟಚೆರುವಿಗೆಹೋಗಬೇಕೆಂದಪೇಕ್ಷಿಸಿದರೆ ಅಂತವರು ಪೆನುಗೊಂಡೆಗೆ ನನ್ನಬಳಿಗೆಬಂದರೆ ಅವರಂ ನಾನು ಉತ್ಸಾಹದೊಡನೆ ಆ ಧುಬಳಿಗೆಕರೆದುಕೊಂಡುಹೋಗುವೆನು. ಮತ್ತು ಅಪೇಕ್ಷಿತಗಳಾದ ಇತರಾಂಶಗಳನ್ನು ವಿವರಿಸಲಿಕ್ಕೆ ತುಂಬಾ ಸಂತೋಷಪೂರ್ವಕವಾಗಿದೇನೆ, ಎಂಬದು.

ಮೇಲೆ ಕಂಡ ಅಂಶವನ್ನು ಸುಳ್ಳೆಂದು ಹೇಳುವಷ್ಟು ಸಾಹಸವು ನಮಗಿಲ್ಲವು. ಯದ್ಯಪಿ ಈ ಭೂತಲದೊಳು ಮಹಾತ್ಮರನೇಕರು ಅಗೋಚರರಾಗಿ ಸಂಚರಿಸುತಲಿದಾರೆಂಬದಕ್ಕೆ ಅನೇಕ ದೃಷ್ಟಾಂತಗಳಿಲ್ಲದಿರಲಿಲ್ಲವು. ಪ್ರತ್ಯಕ್ಷ ಪ್ರಮಾಣವಾದಿಗಳನ್ನು ಅಂತಾ ಸತ್ಪುರುಷರ ಸಂದರ್ಶನದಿ ಸಮಾಧಾನಗೊಳಿಸಲಿಕ್ಕೆ ಸಾಧ್ಯವಲ್ಲದೆ ಹೋದದರಿಂದಲೇ ಅವರು ಮಹಾತ್ಮರೇಸುಳ್ಳೆಂಬದಾಗಿಯೂ, ಅವರ ಮಹಿಮೆಯಂ ತೋರಿಸುವವರು ವಂಚಕರೆಂತಲೂ ಅಲ್ಲಗಳೆಯುವರು. ನಾಸ್ತಿ ಶಾಸ್ತ್ರಪರಂ ಸಾಂಖ್ಯಂ ಎಂದು, ಸಾಂಖ್ಯಕ್ಕಿಂತಲೂ ಪ್ರಬಲ ಶಾಸ್ತ್ರವಾಗಲಿ, ಯೋಗಕ್ಕಿಂತಲೂ ಶ್ರೇಷ್ಠವಾದ ವಿದ್ಯೆಯಾಗಲಿ ಇಲ್ಲವೆಂದು ಪೂರ್ವಿಕರನೇಕರು ಅಭಿಪ್ರಾಯಪಟ್ಟಿರುತ್ತಾರೆ.

ದುಷ್ಪ್ರಾಪಾಮಪಿ ಯೋಗವಿದ್ಯಾಂ ... ನಗರಾರೂಢಮಂತ್ರ ... ಎಂಬದಾಗಿ ಯೋಗಿಯಾದವನು, ಐಹಿಕ ದುಃಖನಿವೃತ್ತಿಪೂರ್ವಕವಾದ ಮೋಕ್ಷಾನಂದವನ್ನು ಅನುಭವಿಸುವನೆಂಬದು ಜಗತ್ಪ್ರಸಿದ್ಧವಾಗಿರುವದರಿಂದ ಯಾರೊಳು ಯೇನು ಮಾಹಾತ್ಮ್ಯವಿರುವದೋ ತಿಳಿಯಲಸಾಧ್ಯವು. ಮುಖ್ಯವಾಗಿ ತಿಯಾಸಫಿಯನ್ನು ದೂಷಿಸಿ ತತ್ಪ್ರವರ್ತಕರಾದವರಿಬ್ಬರನ್ನು ಸ್ವರೂಪಾನಭಿಜ್ಞರಾದವರು ದೂಷಿಸುತಲಿರುತ್ತಾರೆಯಾಗಿ ಅಂತವರಿಗೆ ಪ್ರಾಮಾಣ್ಯಜ್ಞಾನವನ್ನುಂಟುಮಾಡಲಿಕ್ಕೆ ಮೇಲೆಕಂಡ ಕಾಗದವೇ ಸಾಕೆಂದು ಭಾವಿಸುವೆವು.

Occasional Notes.
ನೈಮಿತ್ತಿಕವಿಷಯನ್ಯಾಸ

A royal tour.—ಬರೋಡೆ ಮಹಾರಾಜರವರು ದಕ್ಷಿಣ ಇಂಡ್ಯದೇಶದ ಸಂಚಾರಾರ್ಥ ಶೀಘ್ರದಲ್ಲಿ ರಾಜಧಾನಿಯಿಂದ ತೆರಳುವರೆಂದು ಒಂದಾನೊಂದು ಪತ್ರಿಕೆಯಮೂಲಕ ತಿಳಿಯಬರುತಿದೆ. ದೇಶಾಟನದಿಂದ ಬಹುವಿಧ ಪ್ರಯೋಜನಗಳುಂಟಾಗುವದರಲ್ಲಿ ಸಂದೇಹ ವಿರಲಾರದು.

The Maharaja of Cashmere.—ಕಾಶ್ಮೀರದೇಶದ ಮಹಾರಾಜರವರು ತಾವು ಕಲ್ಕತ್ತೆಗೆ ಹೋಗಿ ಬಂದ ಜ್ಞಾಪಕಾರ್ಥ, ಅಲ್ಲಿ ಕುಷ್ಠರೋಗಿಗಳ ವಾಸಕ್ಕಾಗಿ ಕಟ್ಟಲ್ಪಟ್ಟಿರುವ ಶಾಲೆಯಲ್ಲಿ ಸ್ಥಳ ಸಾಲದೆ ಇರುವದರಿಂದ ಅದನ್ನು ಕಟ್ಟಿಸಬೇಕೆಂದು ಆಲೋಚಿಸುತಲಿದಾರಂತೆ.

The Indian Midland Railway.—ಇಂಡ್ಯದೇಶದ ಪೈಕಿ ಮಧ್ಯರಾಷ್ಟ್ರದಲ್ಲಿ ಹಾಕ ಉದ್ದೇಶಿಸಿರುವ ರೈಲುರಸ್ತೆಯ ಮೊದಲ್ಭಾಗವು ಮೆಸ್ಸರಸ್ ಶಿಬರ್ಡ, ಥಾಂಸನ್ ಕಂಪೆನಿಯವರಿಗೆ ಕಂಟ್ರಾಕ್ಟು ಕೊಡಲ್ಪಟ್ಟಿರುವದರಿಂದ ಅವರು ಕೂಡಲೇ ರಸ್ತೆಯ ಕಾಮಗಾರೀಗೆ ಪ್ರಾರಂಭಿಸುವವರಾಗಿದಾರೆ.

An appointment approved.—ಮೇಜರ್ ಜನರಲ್ ಸರ್ ಹೆಚ್. ಟಿ. ಮ್ಯಾಕ್ಫರ್ಸನ್‌ರವರು ಮದರಾಸ್ ಕಮಾಂಡರ್ ಇನ್ ಚೀಫ್ ಕೆಲಸಕ್ಕೆ ಮೊಕರರ್ಮಾಡಲ್ಪಟ್ಟದ್ದನ್ನು ಮಹಾರಾಜ್ಞೀಯವರು ಮಂಜೂರ್ಮಾಡಿರುವದಾಗಿ ಕಳೆದತಿಂಗಳ ೪ನೇ ತಾರೀಖಿನ ಲಂಡನ್ ಗೆಜೆಟಿನಲ್ಲಿ ಪ್ರಾಯಿಷ ಮಾಡಲ್ಪಟ್ಟಿದೆ.

The Trans-Caspian Railway.—ಕ್ಯಾಸ್ಪಿಯನ್ ಸಮುದ್ರದಬಳಿ ರಷಿಯಾದೇಶದವರು ಈಗ ಹಾಕುತಲಿರುವ ರೈಲುರಸ್ತೆಯ ಕಾಮಗಾರಿಯು ಅನೊವೆಂಬ ಸ್ಥಳದವರಿವಿಗೆ ಪೂರ್ತಿಯಾಗಿ ಆಸ್ಕಾಬಾದ್‌ವರಿವಿಗೆ ಗಾಡಿಹೋಗುತಲಿವೆ. ಇದುಮೊದಲು ಮೆರವ್‌ಯೆಂಬ ಸ್ಥಳದವರಿವಿಗೆ ರಸ್ತೆಯ ಕಾಮಗಾರಿಯು ವೇಗವೊಡನೆ ನಡೆಯುತಲಿದೆ.

His Highness the Nizam.—ಘನವಂತರಾದ ಹೈದರಾಬಾದ್ ನಿಜಾಮರವರು ಕಾಹಿಲೇಯಾಗಿ ... ಈಗ ಆರೋಗ್ಯವುಂಟಾಗಿದೆ, ಪರಂತು ಇನ್ನು ದೇಹದಾರ್ಢ್ಯ ವುಂಟಾಗಲಿಲ್ಲವಾಗಿ, ಡಾಕ್ಟರವರು ಕೊಟ್ಟ ಸಲಹೆಯನ್ನನುಸರಿಸಿ ಹವಾ ಬದಲಾಯಿಸುವ ಉದ್ದೇಶದೊಡನೆ ನೀಲಗಿರಿ ಪ್ರಾಂತಕ್ಕೆ ಬರುವ ಸಂದರ್ಭ ಕಾಣಬರುತಿದೆ ಯೆಂದು ಒಂದಾನೊಂದುಪತ್ರಿಕೆ ಹೇಳುತಿದೆ.

Growth of date palm.—ಖರ್ಜೂರದ ಗಿಡಗಳು ಅನಾವೃಷ್ಟಿಯಬೇಸೆಯಿಂದ ಒಣಗಿಹೋಗತಕ್ಕದ್ದಲ್ಲವಾಗಿಯೂ, ಅದರ ಫಲವು ದುರ್ಭಿಕ್ಷಕಾಲದಲ್ಲಿ ಪ್ರಜೆಗಳಿಗೆ ಬಹಳಮಟ್ಟಿಗೆ ಆಹಾರೋಪಯೋಗಿಯಾಗಿಯೂ ಇರುವದರಿಂದ ಅದನ್ನು ಬೆಳೆಸುವ ವಿಷಯದಲ್ಲಿ ಪ್ರೋತ್ಸಾಹ ವುಂಟುಮಾಡುವದಕ್ಕಾಗಿ ಇಂಡ್ಯಗವರ್ನಮೆಂಟನವರು ಅದನ್ನು ಅಜಮಾಯಿಷೀಮಾಡತಕ್ಕಬಗ್ಯೆ ಬಸೋರಾ ಯೆಂಬ ಪಟ್ಟಣದಿಂದ ಅದರಬಾಬತು ಐವತ್ತುಸೇರ್ ಬೀಜ ತರಿಸಿ ಅದನ್ನು ಕಾಡುಗಳಲ್ಲಿ ಹಾಕುವಂತೆ ಜಂಗ್ಲೀ ಇಲಾಖೆಯವರ ವಶಕ್ಕೆ ಕೊಟ್ಟಿರುತ್ತಾರೆ.

The Viceroy's tour.—ವೈಸ್ ರಾಯಿಯವರು ಬರ್ಮಾದೇಶ ಸಂಚಾರವಂ ಪೂರ್ತಿಮಾಡಿಕೊಂಡು ಬಂದಕೂಡಲೇ ರಂಗೂನಿನಿಂದ ಮದರಾಸಿಗೆ ಬಂದು ಅಲ್ಲಿ ಎರಡುಮೂರುದಿನಗಳಕಾಲ ವಿದ್ದು, ಕಡೆಗೆ ಬರುವ ಮಾರ್ಚಿತಿಂಗಳ ಆದಿಭಾಗದಲ್ಲಿ ಕಲ್ಕತ್ತೆ ಸೇರುವರು. ಇಂಡ್ಯರಾಜ್ಯದ ಕಮಾಂಡರ್ ಇನ್ ಚೀಫ್‌ರವರಾದ ಸರ್ ಫ್ರೆಡರಿಕ್ ರಾಬರ್ಟ್ಸ್ ರವರು ರಂಗೂನಿನಿಂದ ವೈಸ್‌ರಾಯಿಯವರ ಸಂಗಡ ಮದರಾಸಿಗೆ ಬಂದು ಸ್ವದೇಶದಿಂದ ಬರುವ ತಮ್ಮ ಲೇಡಿಯವರನ್ನು ಯೆದುರ್ಗೊಳ್ಳುವದಕ್ಕಾಗಿ ಮುಂಬೈಗೆ ಹೋಗಿ ಅಲ್ಲಿಂದ ವಾಯುವ್ಯದೇಶದ ಸರಹದ್ದು ಪ್ರಾಂತಕ್ಕೆ ಪ್ರಯಾಣವಾಗುವರು.

Wonderful rice.—ಅಸ್ಸಾಂದೇಶದ ಪೈಕಿ ಯೊಂದುಭಾಗದಲ್ಲಿ ಕೇವಲ ಆಶ್ಚರ್ಯಕರವಾದ ಒಂದುಬಗೆ ಬತ್ತ ಬೆಳೆಯುತದೆ. ಅದರಲ್ಲಿನ ಮುಖ್ಯಗುಣವೇನೆಂದರೆ, ಅದರ ಅಕ್ಕಿಯನ್ನು ಕಾಲುಘಂಟೆಯಕಾಲ ತಣ್ಣೀರಲ್ಲಾದರೂ ಹಾಲಿನಲ್ಲಾದರು ನೆನೆಹಾಕಿದ್ದರೆ ಅದು ಚೆಂದು ಪಕ್ವವಾಗಿ ಭುಜಿಸುವದಕ್ಕೆ ಯೋಗ್ಯವಾಗುತಿದೆ. ಈ ಧಾನ್ಯದಮೂಲಕ ದೇಶವು ಬಹಳಅಭಿವೃದ್ಧಿಸ್ಥಿತಿಗೆ ಬರುತಲಿದೆ. ಎಂದು ಅಲ್ಲಿನಬಾತಮಿದಾರನೊಬ್ಬನು ಒಂದಾನೊಂದು ಪತ್ರಿಕೆಗೆ ಬರೆಯುತ್ತಾನೆ.

A prohibition.—ರಷಿಯಾದೇಶದಲ್ಲಿ ಮಿಲಿಟರಿ ರೈಲುರಸ್ತೆಗಳು ಹಾಕಲ್ಪಡುವದು, ಸೇನೆಗಳ ಚಲನವೊದಲಾದವುಗಳನ್ನು ಕುರಿತ ವರ್ತಮಾನವನ್ನು ಪ್ರಾಯಿಷಮಾಡುವದು, ಈಹಕ್ಕು ದಾರಿಯು ಯುದ್ಧ ಇಲಾಖಾ ಮಂತ್ರಿಗಳತರಫ ಸರ್ಕಾರೀ ಪತ್ರಿಕೆಗೆ ಸೇರಿದ್ದಾದದರಿಂದ, ಸದರೀವರ್ತಮಾನವು ಇತರಪತ್ರಿಕೆಗಳಲ್ಲಿ ಪ್ರಕಟಿಸಲ್ಪಡಕೂಡದೆಂದು ರಷಿಯಾಸರ್ಕಾರದವರು ತಮ್ಮದೇಶದೊಳಗಣ ವೃತ್ತಾಂತಪತ್ರಿಕಾಧಿಪರಿಗೆಲ್ಲ ಹುಕುಂ ಕೊಟ್ಟಿರುತ್ತಾರೆ.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕುಜಾತಿವೃತ್ತಾಂತಗಳು.

Gratuity.—ಇಲ್ಲಿನ ಫಾರೆಸ್ಟು ಇಲಾಖೆಗೆಸೇರಿದ ಜಮಾಲುದೀನ್ ಯೆಂಬವನು ಗತಸಂವತ್ಸರದಲ್ಲಿ ಸರ್ಕಾರಿಕೆಲಸದಮೇಲೆಲಕ್ಯವಳ್ಳಿಜಂಗ್ಲೀಗೆಹೋಗಿದ್ದಾಗ್ಯೆ ಅವನನ್ನು ಕಾಡಾನೆಯು ಕೊಂದುಬಿಟ್ಟದರಿಂದ ಮೃತಪಟ್ಟವನಪ್ರಾಣಕ್ಕೆ ಪ್ರತ್ಯಾದಾಯವಾಗಿ, ಮೈಸೂರು ಸರ್ಕಾರದವರು ಅವನಕುಟುಂಬಕ್ಕೆ ನೂರು ರೂಪಾಯಿಗಳು ಗ್ರಾಚ್ಯುಇಟಿಕೊಟ್ಟರೆಂದು ತಿಳಿಯಬರುತದೆ.

Elephant tusks.—ಮೈಸೂರು ಶೀಮೆಯ ಸರಹದ್ದಿನೊಳಗೆ ಯಾವನಾಗಲಿ ಕಾಡಾನೆಗಳನ್ನು ಸುಟ್ಟು ಅದರ ದಂತವನ್ನಪೇಕ್ಷಿಸಿದರೆ ಅವನಿಗೆ ಸಾಧಾರಣವಾಗಿ ದಂತದ ಬಾಜಾರ್ ನಿರಖ್ ಪೈಕಿ ಮುಕ್ಕಾಲು ಕ್ರಯಕ್ಕೆ ಕೊಡತಕ್ಕದ್ದೆಂ

ದು ಮೈಸೂರು ಗವರ್ನಮೆಂಟಿನವರು ತೀರ್ಮಾನ ಮಾಡಿರುತ್ತಾರೆ.

— —

Famine Orphans.—ಅನಾಥರಕ್ಷಕ ಶಾಲೆಗಳೊಳಿರುವ ಅನನ್ಯಗತಿಕರಾದ ಬಾಲಕರ ಸಹಾಯಾರ್ಥ ಮೈಸೂರು ಸರ್ಕಾರದವರು ಕೊಡುತ್ತಲಿದ್ದ ಸಹಾಯದ್ರವ್ಯವನ್ನು ಕಳೆದತಿಂಗಳಮೊದಲು ಏಕಾಏಕಿ ನಿಲ್ಲಿಸಿಬಿಟ್ಟರೆಂತಲೂ, ಈ ಅಂಶವನ್ನವರು ಮೇಲೆಕಂಡ ಶಾಲಾಧಿಕಾರಿಗಳಿಗೆ ತಿಳಿಯಪಡಿಸಿದರೆಂತಲೂ, ಒಳದೇಶವಪತ್ರಿಕೆಯೊಂದು ಪ್ರಕಟಿಸುತಿದೆ.

——

To be hanged.—ಇಲ್ಲಿನ ಲಷ್ಕರಿನಲ್ಲಿ ತಿರುವೇಂಗಡಮೊದಲಿಯೆಂಬ ಒಬ್ಬಾತನು ತನ್ನ ತಾಯಿಯನ್ನು ಆರುತಿಂಗಳಹಿಂದೆ ಖೂನಿ ಮಾಡಿ ಅದು ಈಚೆಗೆ ಹೊರಗಾಗಿ ಆತನಿಗೆ ಲಷ್ಕರ್ ಸೆಷನ್‌ಕೋರ್ಟಿನವರು ಮರಣದಂಡನೆವಿಧಿಸಿ, ಅದರಮೇಲೆ ಆತನು ರೆಸಿಡೆಂಟರಿಗೆ ಅಪೀಲ್‌ಮಾಡಿಕೊಂಡು ಅಲ್ಲಿಯೂ ಸದರೀ ದಂಡನೆ ಕಾಯಂ ಮಾಡಲ್ಪಟ್ಟ ಸಂಗತಿಯನ್ನು ಹಿಂದಿನವಾರದ ಪತ್ರಿಕೆಯಮೂಲಕ ತಿಳಿಸಿ ಯಿರುತ್ತೇವೆಯಷ್ಟೆ. ಸದರೀ ನರಹತ್ಯಾಪಾತಕನಾದ ತಿರುವೇಂಗಡಮೊದಲಿಯು ನಾಳೆಯದಿನ ಪ್ರಾತಃಕಾಲ ೬ಘಂಟೆಗೆ ಇಲ್ಲಿನ ಸೆಂಟ್ರಲ್‌ಜೈಲಿನಲ್ಲಿ ಗಲ್ಲಿಗೆಹಾಕಲ್ಪಡುವನು.

— —

Wedding.—ಈ ಸಂಸ್ಥಾನದ ದಿವಾನರಾದ ಮ|| ಕೆ. ಶೇಷಾದ್ರಿ ಅಯ್ಯರವರ ದ್ವಿತೀಯಪುತ್ರಿಗೆ ವಿವಾಹಮಹೋತ್ಸವವು ಜರಗುವದೆಂದು ಹಿಂದಿನವಾರದಲ್ಲೇ ಸೂಚಿಸುತ್ತೇವೆಯಷ್ಟೆ. ಈದಿನ ಸದರೀ ಶುಭಮುಹೂರ್ತವು ಜರಗುವದು. ಕಳೆದ ಶನಿವಾರದವರೆಗೆ ಅದಾಲತ್ ಕಚ್ಚೇರಿ ಜನಗಳಿಗೂ ಕಚ್ಚೇರಿಯಲ್ಲೇ ಔತಣ ಹೇಳಿದುತೆ ತಿಳಿಯಬರುತದೆ. ಇವಲ್ಲದೆ ಈ ಪ್ರಾಂತೊಳು ಪ್ರಮುಖರಾದ ಪೇಟೆ ವರ್ತಕರಿಗೂ, ಇತರ ಖುಷಿಬಾಷಿ ಜನಗಳಿಗೂ ಲಗ್ನಪತ್ರಿಕೆಗಳುಕಳುಹಿಸಲ್ಪಟ್ಟಂತೆ ಕೇಳುತ್ತೇವೆ. ಆದರೆ ಕಚ್ಚೇರಿಗಳಿಗೆ ಪ್ರತ್ಯೇಕವಾಗಿ ರಜಾ ಕೊಟ್ಟಂತೆ ಕಾಣಲಿಲ್ಲವು. ಭಾಗಯುತರಾದ ಪೋಲೀಸ್ ಕಮ್ಮಿಶನರ್ ದಿವಾನರ ಮನೆಯವರುಗಳು ಈ ತರದ ಸೇವೆಯಲ್ಲಿನ ಭೋಜನಶಾಲೆಯಲ್ಲೇ ನಿಯುಕ್ತರಲ್ಲವೆ ಅದಕ್ಕಾಗಿ ಮೂರುದಿವಸಗಳ ರಜಾ ಸಹ ಕೊಡಲ್ಪಟ್ಟದೆ. ಈಗಿನ ದಿವಾನರ ಮನೆಯಲ್ಲಿ ನಡೆಯುವ ಶುಭವು ದಂಡಿನಲ್ಲಿ ನಡೆಯುತದೆ. ಹಿಂದಕ್ಕೆ ಇಂತಾ ಸಂದರ್ಭಗಳೊಳು ಬ್ರಾಹ್ಮಣ ಸಂತರ್ಪಣೆಯೂ ತಾಫಾ ಮಡುವೆಗಳೂ ನಡೆಯುತಲಿತ್ತು. ಈಗಿನ ದಿವಾನರವರು ಕಳೆದವರ್ಷದಲ್ಲಿ ತಮ್ಮ ಹಿರೀಮಗನ ವಿವಾಹವನ್ನು ಮೈಸೂರಲ್ಲಿ ವಿಶೇಷ ವಿಭವದೊಡನೆ ಜರಗಿಸಿದರು. ಈಗಲೂ ಹಿಂದಿನಂತೆಯೇ ನಡೆಯುವದೆಂದು ನಂಬುತ್ತೇವೆ. ಈಸಂದರ್ಭದಲ್ಲಿ ನವನಾಗರಿಕತೆಯುಳ್ಳವರ ಸಲಹೆಗಳಿಗೆ ಕಿವಿಕೊಡದೆ ಇಂತಾ ಶುಭಸಮಯಗಳಲ್ಲಿ ಅನಾದಿಯಾಗಿ ನಡೆಯುತಬಂದ ಹಿಂದೂ ಸಂಪ್ರದಾಯವನ್ನನುಸರಿಸಿ, ಪ್ರಸ್ತುತಗಳಿಗೆ ಅಂಗಗಳಾದ ಎಲ್ಲಬಗೆ ವಿಭವಗಳನ್ನೂ ಕೊಂಡಾಡುತ ಬರುವದಕ್ಕಾಗಿ ನಾವು ಬಹಳ ಸಂತೋಷಿಸುವವು.

— — —

Letters to the Editor.

ಆಹಾರಕ್ಕೂ ಧರ್ಮಾಧರ್ಮಗಳಿಗೂ ಇರುವಸಂಬಂಧ.

ಮಹಾಶಯರೆ! ನಾನು ಕೆಲವು ದಿವಸಗಳ ಹಿಂದೆ ಓದುತ್ತಲಿದ್ದ ಗ್ರಂಥಗಳಲ್ಲಿ ಆಹಾರಕ್ಕೂ ಧರ್ಮಾಧರ್ಮಗಳಿಗೂ ಇರುವ ಸಂಬಂಧ ಸಾಮಾನ್ಯರಾದವರು ಸಹ ತಿಳಿಯತಕ್ಕ ಅಂಶವಾಗಿ ಕಂಡುಬಂತು. ಈವಿಚಾರವಾಗಿ ಜನಗಳು ನಾನಾವಿಧ ಅಭಿಪ್ರಾಯವುಳ್ಳವರಾಗಿರುವದರಿಂದ ನಾನು ಓದಿ ತಿಳಿದಮಟ್ಟಿಗೆ ಇದರ ವಿಜ್ಞಾಪಿಸುತ್ತೇನೆ. ಈ ವಿಷಯವು ಸರಿಯಾದ್ದೆಂದು ತೋರಿದರೆ ಈಪತ್ರಕ್ಕೆ ಅವಕಾಶಕೊಡಬಹುದು. ಈನನ್ನ ಅಭಿಪ್ರಾಯವು ದೊಡ್ಡ ಪಂಡಿತರ ತಾತ್ಪರ್ಯವನ್ನು ಅನುಕರಿಸಿದ್ದಾಗಿರುತಿದೆ.

ಈಗಿನ ನವಶಿಕ್ಷಿತ ನವ್ಯಯುವಕರು ನೂತನವಾಗಿ ಹಿಂದೂ ಧರ್ಮವನ್ನು ಕುರಿತು ಆಲೋಚಿಸುವದರಲ್ಲಿ ಹೇಳುತ್ತಾರೇನೆಂದರೆ:—ಆಹಾರಕ್ಕೂ ಧರ್ಮಾಧರ್ಮಗಳಿಗೂ ಪರಸ್ಪರಸಂಬಂಧವಿಲ್ಲ; ಯಾರಿಗೆ ಯಾವದರಲ್ಲಿ ರುಚಿಯೋ, ಯಾರಿಗೆ ಯಾವದರಲ್ಲಿ ಇಚ್ಛೆಯೋ, ಅದನ್ನು ಭಕ್ಷಿಸಬಹುದು; ಅದರಿಂದ ಧರ್ಮಕ್ಕೆ ಕ್ಷತಿಯಿಲ್ಲ; ಶರೀರವು ಸುಸ್ಥವಾಗಿದ್ದರೆ ಸಾಕು; ಸ್ವಾಸ್ಥ್ಯಕ್ಕೂ ಆಹಾರಕ್ಕೂ ಸಂಬಂಧವೇ ಹೊರ್ತು ಧರ್ಮೋಪಾರ್ಜನೆಗೂ ಆಹಾರಕ್ಕೂ ಸಂಬಂಧವೆನ್ನುವದು ಅಶ್ರದ್ಧೆಯ ಮತ್ತು ಉಪಹಾಸಜನಕವಾದದ್ದು; ಯಾವದು ಇಚ್ಛೆಯೊ ಅದನ್ನು ಭಕ್ಷಣಮಾಡಿಕೊಂಡು, ಸತ್ಯವನ್ನು ನುಡಿಯುತ್ತಾ, ಚೌರ್ಯ, ಪರವಂಚನೆ, ಪರವಿತ್ತಪರದಾರಾಪಹರಣ, ಪರನಿಂದೆ ಮುಂತಾದ ಪಾಪಕೃತ್ಯಗಳಿಂದ ವಿರತರಾಗಿ ಈಶ್ವರೋಪಾಸನೆ ಮಾಡಿದರೆ ಧರ್ಮೋಪಾರ್ಜನೆಯಾಗುವದಿಲ್ಲವೆ? ಆಹಾರವ್ಯವಹಾರಗಳು ದೇಶಾಚಾರವೇ ವಿನಾ ಬೇರೆ ಅಲ್ಲವು; ಆಹಾರವು ಧರ್ಮಕ್ಕೆ ಅಂಗವಲ್ಲ; ಧರ್ಮವೆಂಬುವದು ಪೃಥಕ್ ಪದಾರ್ಥವಾಗಿದೆಯೆಂದು ಮುಂತಾಗಿ ಹೇಳುತ್ತಾರೆ. ಈ ವಿಶ್ವಾಸವು ಈಗಿನ ಸುಶಿಕ್ಷಿತ ಸಂಪ್ರದಾಯದವರಲ್ಲಿ ಕ್ರಮಕ್ರಮವಾಗಿ ಬದ್ಧಮೂಲವುಳ್ಳದ್ದಾಗುತ್ತಾ ಬರುತಲಿದೆ. ಈ ಭ್ರಾಂತ ವಿಶ್ವಾಸಪ್ರಸೂತ ಅನುಷ್ಠಾನವು ಸಹ ಉಕ್ತ ಸಂಪ್ರದಾಯದವರಲ್ಲಿ ದಿನೇದಿನೇ ಅಧಿಕವಾಗಿ ಪರಿವರ್ಧಿತವಾಗುತಲಿದೆ.

ಶಿಕ್ಷಿತ ಮಂಡಲಿಯಲ್ಲಿ ಮೇಲೆ ಹೇಳಲ್ಪಟ್ಟ ನಂಬಿಕೆಯು ಕೇವಲ ಭ್ರಾಂತಿಮೂಲಕವಾದದ್ದೆಂಬುವದಕ್ಕೆ ಸಂದೇಹವಿಲ್ಲ. ಆಹಾರಕ್ಕೂ ಧರ್ಮಾಧರ್ಮಗಳಿಗೂ ಸಂಬಂಧ ಉಂಟೆ ಇಲ್ಲವೆ? ಎಂಬ ಪ್ರಶ್ನೆಯನ್ನು ಚರ್ಚಿಸಬೇಕಾದರೆ, ಪ್ರಥಮತಃ, ಆಹಾರ ಪದಾರ್ಥದಿಂದ ಶರೀರದಲ್ಲಿ ಯಾವ ಕ್ರಿಯೆಗಳು ಸಾಧಿತವಾಗುತ್ತವೆ ಯೆಂಬದನ್ನುನೋಡಬೇಕು. ಈ ಅಂಶದಲ್ಲಿ ತಿಳುವಳಿಕೆಯನ್ನುಂಟುಮಾಡಲು ಹೆಚ್ಚಾಗಿತಿಳಿಸಬೇಕಾದ್ದಿಲ್ಲವು. ಭಕ್ಷಿತ ಪದಾರ್ಥದಲ್ಲಿ ಕೆಲವು ಅಂಶಮಟ್ಟಿಗೆ ಮಲಮೂತ್ರರೂಪವಾಗಿ ಬಹಿರ್ಗತವಾಗಿ ಅವಶಿಷ್ಟಾಂಶವು ಶರೀರದಪುಷ್ಟಿ ಸಾಧನವಾಗುತ್ತದೆ, ಆದರೆ, ರಕ್ತ, ಮಾಂಸ, ಅಸ್ಥಿ, ವಸಾ, ಶಿರಾ, ಮಸ್ತಿಷ್ಕ, (Brain) ಮುಂತಾದ ಶಾರೀರಕ ಉಪಕರಣಗಳಲ್ಲಿ ಸಂಯುಕ್ತವಾಗಿ ಶರೀರಕ್ಕೆ ಅಂಗೀಭೂತವಾಗಿ ಹೋಗುತ್ತದೆ, ಇನ್ನೂ ವಿಶದವಾಗಿ ಹೇಳಬೇಕಂದರೆ, ಭಕ್ಷಿತಪದಾರ್ಥವು ಹನ್ನೆರಡು ಘಂಟೆಯಕಾಲಾನಂತರ, ಮಲಮೂತ್ರವಲ್ಲಿ ಹೋದದ್ದು ನಿಶಾ, ಶರೀರತ್ವದಲ್ಲಿ ಪರಿಣತವಾಗುತ್ತದೆಂದು ಹೇಳಬಹುದು; ಅಂದರೆ, ಯಾವಯಾವ ಭೌತಿಕ ಪದಾರ್ಥವನ್ನು ಭಕ್ಷಣೆ ಮಾಡುತ್ತೇವೆಯೋ ಅವರಲ್ಲಿ ಅಧಿಕಾಂಶವು ನಿಶ್ಚಯವೊ ಶರೀರದಲ್ಲಿ ಸಂಚಿತವಾಗುತ್ತಾ ಶರೀರ ಧಾರಣಕ್ಕೂ ಶರೀರ ಪುಷ್ಟಿಗೂ ಸಾಧನವಾಗುತದೆ. ಹಾಗೆ ಆಹಾರ್ಯ ಪದಾರ್ಥವು ಶರೀರತ್ವದಲ್ಲಿಯೇ ಪರಿಣತವಾದರೆ, ವಿಚಾರ್ಯಮಾಣವಾದ ಪ್ರಶ್ನೆಯನ್ನು ಪ್ರಕಾರಾಂತರವಾಗಿ ಯೋಚಿಸಬಹುದು; ಏನೆಂದರೆ, ಆಹಾರವೇ ಶರೀರದಲ್ಲಿ ಪರಿಣಮಿಸುವದರಿಂದ ಶರೀರಕ್ಕೂ ಧರ್ಮಾಧರ್ಮಗಳಿಗೂ ಸಂಪರ್ಕವುಂಟೆ ಇಲ್ಲವೆ? ಎಂಬುವದನ್ನೇ ಯೋಚಿಸಬೇಕು. ಪ್ರಶ್ನೆಯಾದರೋ ಸಹಜವಾಗಿ ಬಂತು. ಒಳ್ಳೇದು, ನಾವು ಮತ್ತೊಂದು ಪ್ರಶ್ನೆಯನ್ನು ಮಾಡುತ್ತೇವೇನಂದರೆ, ಧರ್ಮದ ಅಂಕುರ, ಧರ್ಮದ ಪುಷ್ಟಿ, ಧರ್ಮದ ಪರಿಣತಿ, ಅಥವಾ ಚರಮ ಉನ್ನತಿಗಳು ಸಹ ಎಲ್ಲಿರುತ್ತೆ? ಈ ಪ್ರಶ್ನೆಗೆಯೆಲ್ಲರೂ ಉತ್ತರ ಹೇಳಬೇಕೇನಾದರೆ:—ಇವೆಲ್ಲಾ ಶರೀರದಲ್ಲಿಯೇ ಇರುವದೆಂದು ಹೇಳುವರು; ಅಂದರೆ, ಧರ್ಮಕ್ಕೆ ಆಧಾರವಾದ ಕ್ಷೇತ್ರವು ಶರೀರವೆಂದು ಹೇಳದ ಹಾಗಾಯಿತು, ಅರ್ಥಾತ್ ಧರ್ಮವು ಬೀಜವಾಯಿತು. ಶರೀರವು ಕ್ಷೇತ್ರವಾಯಿತು. ಧರ್ಮವು ಆತ್ಮನ ಶಕ್ತಿಯೇಹೌದು, ಆತ್ಮನ ಮಧ್ಯದಲ್ಲಿಯೇ ಧರ್ಮದ ಸೂಕ್ಷ್ಮವಾದ ಬೀಜವು ನಿಹಿತವಾಗಿದೆ. ಆದರೆ ಆ ಬೀಜದ ಅಂಕುರ,ಶಾಖೆ, ಪ್ರಶಾಖೆ, ಫಲಪುಷ್ಪಾದಿಗಳು ಶಾರೀರಕಯಂತ್ರ ಸಹಾಯದಿಂದ ಶರೀರ ಮಧ್ಯದಲ್ಲಿ ಉತ್ಪನ್ನವಾಗಿ ಪರಿವ್ಯಾಪ್ತವಾಗುತ್ತವೆ. ಕ್ಷೇತ್ರಕ್ಕೂ ಉದ್ಭಿದಕ್ಕೂ (Vegetable Kingdom) ಸಂಬಂಧ ವುಂಟೆಂಬುವದು ಪ್ರತ್ಯಕ್ಷಾನುಭೂತವಾಗಿದೆ. ಹಾಗೆ ಹೇಳುವದಾದರೆ, ಧರ್ಮಕ್ಕೂ ಶರೀರಕ್ಕೂ ಸಂಬಂಧ ವುಂಟೆಂದು ಅಗತ್ಯವಾಗಿ ಅಂಗೀಕರಿಸಬೇಕು. ಕ್ಷೇತ್ರಭೇದದಿಂದಲೂ ಜಲವಾಯುಗಳ ವಿಭಿನ್ನತೆಯಿಂದಲೂ ಭಿನ್ನಾಭಿನ್ನವಾದ ಉದ್ಭಿದಗಳು ಉತ್ಪತ್ತಿಯಾಗುತ್ತವೆ. ಮೃತ್ತಿಕಾ ಭೇದದಿಂದ ವೃಕ್ಷಲತಾ ತರುಗುಲ್ಮಾದಿಗಳ ಫಲಪುಷ್ಪಗಳ ಆಕೃತಿ ಘಟನಾ, ಸ್ವಾದು, ಗಂಧಗಳಲ್ಲಿ ತಾರತಮ್ಯ ಉಂಟಾಗುತದೆ. ಸ್ಥಾನವಿಶೇಷದಿಂದಲು ಮೃತ್ತಿಕೆಯ ಗುಣದಿಂದಲೂ ಸಹ ಉಂಟಾಗುವ ಒಂದೊಂದು ಫಲದ ಆಸ್ವಾದವು ಒಂದೊಂದು ಪುಷ್ಪದ ಸೌರಭವೂ ಅನ್ಯ ಸ್ಥಾನಗಳಲ್ಲಿ ಉಂಟಾಗುವದಿಲ್ಲ. ಬೆಂಗಳೂರಿನಲ್ಲಿ ಆಗುವ ಸೇವು (Apple) ಹಣ್ಣಿನ ರುಚಿಯು ಜೇರೆಕಡೆಯಲ್ಲಿ ಆಗುವ ಸೇವು ಹಣ್ಣಿಗೆ ಬರುವದಿಲ್ಲ ಅರಬಿಸ್ಥಾನದ ಖಿದಾನು ಮತ್ತೆಲ್ಲಿಯೂ ಆಗುವದಿಲ್ಲ. ಆ ಬೀಜವನ್ನು ತಂದು ಅನ್ಯತ್ರ ಹಾಕಿದರೆ ಫಲಗಳು ವಿಕೃತಗಳಾಗುತವೆ; ಖಿದಾನು ಹೋಗಿ ದಾಳಿಮವಾಗುತ್ತದೆ; ಕೊಡಗಿನ ಹಣ್ಣುಹೋಗಿ ಹುಳಿ ಕಿತ್ತಳೆ ಯಾಗುತದೆ. ಈ ದೇಶದ ಮಲ್ಲಿಕಾ ಬಕುಳ ಗುಲಾಬಿ ಚಂಪಕ ಮುಂತಾದ ಪುಷ್ಪಗಳನ್ನು ತೆಗೆದುಕೊಂಡುಹೋಗಿ ಇಂಗ್ಲಾಂಡಿನಲ್ಲಿ ಹಾಕಿದರೆ ಪುಷ್ಪವೇನೋ ಬಿಡುವದು; ಆದರೆ, ಇಲ್ಲಿನಹಾಗೆ ಸುಗಂಧ ವುಂಟಾಗಲಾರದು. ಇಂಗ್ಲಾಂಡ್‌ದೇಶದ ಮಣ್ಣಿನದೋಷದಿಂದ ಆ ದೇಶದ ಅಧಿಕಾಂಶ ಪುಷ್ಪಗಳಿಗೆ ಸುಗಂಧವಿರುವದಿಲ್ಲ. ನೋಟಕ್ಕೆಮಾತ್ರ ಶೋಭಾಯಮಾನವಾಗಿರುವದು. ಇದಕ್ಕೆ ಕಾರಣವೇನಂದರೆ, ಅಲ್ಲಿನ ಮೃತ್ತಿಕೆ ಜಲವಾಯುಗಳಲ್ಲಿರುವ ದೋಷಗಳು ಇಲ್ಲಿನ ಮೃತ್ತಿಕೆ ಜಲವಾಯುಗಳಲ್ಲಿರುವದಿಲ್ಲ, ಅಥವಾ ಇದ್ದರೂ, ಆ ದೋಷವು ಸ್ವಲ್ಪವಾಗಿ, ಫಲೋತ್ಪಾದಕ ಗುಣವೇ ಹೆಚ್ಚಾಗಿರುವುದೆಂದು ಹೇಳಬೇಕಾಗುತದೆ. ಪುಷ್ಪಗಳ ವಿಚಾರದಲ್ಲಿಯೂ ಹಾಗೆಯೇ ಸರಿ. ಪುಷ್ಪಗಳಿಗೆ ಸೌರಭ ವುಂಟುಮಾಡಬೇಕಾದ ಗುಣಗಳು ಆ ಸೀಮೆಯ ಮೃತ್ತಿಕೆಯಲ್ಲಿ ಅಪ್ರತುಲ ಅಥವಾ ಅಸಂಭವವಾಗಿರಬೇಕು.

ಕ್ಷೇತ್ರಕ್ಕೂ ಉದ್ಭಿದಕ್ಕೂ ಯಾವ ಸಂಪರ್ಕವಿರುತ್ತದೆಯೊ ಶರೀರಕ್ಕೂ ಧರ್ಮಕ್ಕೂ ಅದೇಸಂಬಂಧವಿರುತದೆ. ಅದನ್ನು ತಿಳಿಯಬೇಕಾದರೆ ಧರ್ಮವೆನ್ನುವದು ಯಾವ ಪದಾರ್ಥ, ಯೆಂತಾ ಸ್ವರೂಪವುಳ್ಳದ್ದೆಂಬದನ್ನು ತಿಳಿಯಬೇಕು. ಧರ್ಮವೆಂದರೆ ಬಾಳೇಹಣ್ಣಿನಹಾಗೆ ನುಂಗುವ ಪದಾರ್ಥವಲ್ಲ; ಧರ್ಮವು ಕಿವಿಯಲ್ಲಿ ಕೇಳತಕ್ಕ ಕಥೆಯಲ್ಲ; ಧರ್ಮವು ವಕ್ತೃತೆ (Lecture or speech) ಅಲ್ಲ; ಅಥವಾ ಉಪದೇಶಕ್ಕೆ ವಿಷಯವಲ್ಲ; ಧರ್ಮವು ಯಾವ ದೇಹದಮೇಲೂ ರೇಖಾಕಾರವಾಗಿ ಬರೆದಿರುವದಿಲ್ಲ; ಧರ್ಮವು ಕರಗಿನಲ್ಲಿ ಕಟ್ಟಿಡತಕ್ಕ ಪದಾರ್ಥವಲ್ಲ; ಧರ್ಮಬಾಹ್ಯಪದಾರ್ಥ ಯಾವದೂ ಅಲ್ಲ. ಧರ್ಮವನ್ನುವದು ದೇಹಾಂತರ್ಗತವಾದ ಆತ್ಮಾವಿನಶಕ್ತಿ ವಿಶೇಷವಾಗಿದೆ; ಧರ್ಮಾಧರ್ಮಗಳ ಅತಿ ಸೂಕ್ಷ್ಮವಾದ ಬೀಜವು ಆತ್ಮನ ಮಧ್ಯದಲ್ಲಿ ನಿಹಿತವಾಗಿ, ಆ ಧರ್ಮಾಧರ್ಮಗಳ ಸದಸತ್ಸಕಲ ಪ್ರವೃತ್ತಿಗಳ ಕ್ರಿಯೆಯು ಶರೀರಮಧ್ಯದಲ್ಲಿಯೇ ಸಾಧಿತವಾಗುತ್ತದೆ. ಶಾರೀರಕ ಯಂತ್ರಗಳಮೂಲಕ ಸಕಲಪ್ರವೃತ್ತಿಗಳೂ ಸ್ಫೂರಣವಾಗಿ ಪರಿಚಾಲನವಾಗಿ ಪರಿಪುಷ್ಟಿಯಾಗಿ ಹ್ರಾಸ ವೃದ್ಧಿಗಳನ್ನು ಹೊಂದುತ್ತವೆ. ಶಮದಮತಿತಿಕ್ಷಾಭಕ್ತಿ ಪ್ರೀತಿ ದಯೆ ಮುಂತಾದವುಗಳು ಧರ್ಮಪ್ರವೃತ್ತಿಯೆಂದೆನಿಸಿಕೊಳ್ಳುತ್ತವೆ. ಇವುಗಳಅಸ್ತಿತ್ವವೇ, ಅಂದರೆ,ಇರೋಣವೇ ಮನುಷ್ಯನಿಗೆ ಮನುಷ್ಯತ್ವಗುಣವನ್ನುಂಟುಮಾಡುವದು. ಇವುಗಳನ್ನು ಸಮುಚಿತ ಪರಿಚಾಲನದ್ವಾರಾ ಉನ್ನತಿಮಾಡಿ ಪುಷ್ಟೀಕರಿಸುವಹಾಗೆ ಮಾಡಿದರೆ ಪೂರ್ಣ ಮನುಷ್ಯತ್ವ ವುಂಟಾಗುತ್ತದೆ. ಧರ್ಮಪ್ರವೃತ್ತಿಗಳು ಕ್ರಮಕ್ರಮವಾಗಿ ಹ್ರಾಸಹೊಂದಿ ಅಭಾವವಾಗಿಹೋದರೆ ಮನುಷ್ಯನಿಗೆ ಪಶುತ್ವಪ್ರಾಪ್ತವಾಗಿ ಪಶುವಾಗಿಪರಿಣಮಿಸುತ್ತಾನೆ. ಕ್ರೋಧ,ಹಿಂಸೆ,ಈರ್ಷೆ,ಅಸೂಯೆ, ಮುಂತಾದ ಅಸತ್ಪ್ರವೃತ್ತಿಗಳು ಅಧರ್ಮವೆನ್ನಿಸಿಕೊಳ್ಳುತ್ತವೆ. ಮಾನವನು ಮನುಷ್ಯತ್ವದ ಉನ್ನತಿಯನ್ನು ಕೈಗೊಂಡರೆ ಈಅಧರ್ಮಪ್ರವೃತ್ತಿಗಳು ದಮನವಾಗುತ್ತವೆ.

ಧರ್ಮಾಧರ್ಮಗಳ ಉಕ್ತ ತ್ರಿವಿಧಪ್ರವೃತ್ತಿಗಳ ಕ್ರಿಯೆಯು ಶರೀರದಲ್ಲಿ ನಡೆಯುತ್ತದೆ. ಶಾರೀರಕ ಯಂತ್ರಸಹಾಯವಿಲ್ಲದಿದ್ದರೆ ಈಪ್ರವೃತ್ತಿಗಳ ಸ್ಫೂರಣ ಅಥವಾ ಪರಿಚಾಲನವಾಗುವದಿಲ್ಲ. ದೃಷ್ಟಾಂತಕ್ಕೋಸ್ಕರ ವಾಚಕರು ಊಹಿಸಿಕೊಳ್ಳಬಹುದೇನಂದರೆ—ಒಬ್ಬನಿಗೆ ಕ್ರೋಧಪ್ರವೃತ್ತಿಯು ಉತ್ತೇಜನವಾದ ಕೂಡಲೆ ಅದು ಶರೀರದಲ್ಲಿ ಸ್ಪಷ್ಟವಾಗಿ ಕಾಣಬಹುದು. ಒಳಗಣ ಕ್ರೋಧಶಕ್ತಿಯು ಸ್ಫೂರಿತವಾದ ಮುಹೂರ್ತದಲ್ಲಿಯೇ ಮಿಂಚಿನ ವೇಗದಿಂದ ಮಸ್ತಿಷ್ಕಕ್ಕೆ ಹೋಗಿ ಮಸ್ತಿಷ್ಕದಿಂದ ನಾಡಿನಾಡಿಯಲ್ಲಿಯೂ ರೆಪ್ಪೆ ಹೊಡೆಯುವದರೊಳಗಾಗಿ ಸಂಚಾರಿತವಾಗಿ ಒಳಗಿನ ಶರೀರಯಂತ್ರ ಸಮೂಹವು ಘನಘನ ವಿಕಂಪಿತವಾಗುತ್ತದೆ; ಹೊರಗೆ ಸಹ ಅಂಗ ಪ್ರತ್ಯಂಗವೂ ಥರಥರ ನಡಗುತ್ತದೆ; ಕಣ್ಣುಗಳು ರಕ್ತವರ್ಣವುಳ್ಳವುಗಳಾಗುತ್ತವೆ; ಮುಖದಲ್ಲಿ ವಿಕಟಭಂಗಿಯು ಪ್ರಕಾಶವಾಗುತ್ತದೆ; ಆ ಮನುಷ್ಯನು, ಆ ಪ್ರಬಲವಾದ ಶಕ್ತಿಯನ್ನು ಸಂವರಣೆಮಾಡಿಕೊಳ್ಳಲಾರದೆ ಅವನ ಹಸ್ತ ಪಾದಾದಿ ಅವಯವಗಳು ಆ ಕ್ರೋಧಶಕ್ತಿಯ ಅಧೀನಗಳಾಗಿ ಆ ನಿಮಿಷದಲ್ಲಿಯೇ ಏನೋ ಒಂದು ವಿಸದೃಶವಾದ ಕಾರ್ಯವು ನಡೆದುಹೋಗುತ್ತದೆ. ಇದರಲ್ಲಿ ಕ್ರೋಧಪ್ರವೃತ್ತಿಗೂ ಮನುಷ್ಯದೇಹಕ್ಕೂ ಯೆಂತಾ ವಿಶೇಷವಾದ ಸಂಬಂಧವಿರುತ್ತೆನ್ನುವದು ಚೆನ್ನಾಗಿ ಗೊತ್ತಾಗಬಹುದು. ಈ ಶಕ್ತಿಯ ಉತ್ಪತ್ತಿ, ಇದರ ಸ್ಥಿತಿ, ಇದರ ವೃದ್ಧಿ, ಇದರ ಕ್ರಿಯೆ, ಸಕಲವೂ ದೇಹ ಮಧ್ಯದಲ್ಲಿಯೇ ನೆರವೇರುತ್ತೆ. ದೇಹದ ಸಹಾಯವಿಲ್ಲದಿದ್ದರೆ ಇದರ ವಿಕಾಸಕ್ಕೆ ಮಾರ್ಗವಿಲ್ಲ. ಈಕ್ರೋಧವು ಹ್ಯಾಗೋ ಹಾಗೆಯೇ ಸಕಲ ಅಧರ್ಮಪ್ರವೃತ್ತಿಗಳ ಪ್ರಗಾಢವಾದ ಸಂಬಂಧವು ದೇಹಕ್ಕೆ ಸೇರಿರುತ್ತದೆ

ಸಕೇಶ.

NEWS LETTER

ಅಯ್ಯಾ—ತುಮಕೂರು ಟೌನ್ ಮ್ಯುನಿಸಿಪಾಲಿಟಿಗೆ ಡಿ|| ಟ್ರಜರಿ ಅಸಿಸ್ಟೆಂಟ್ ಮ|| ಕೃಷ್ಣರಾವ್,ಎಂ. ಏ. ಯವರು ಪ್ರೆಸಿಡೆಂಟರಾಗಿ ನಿಯಮಿಸಲ್ಪಟ್ಟದಾರೆ. ಇವರು ಈ ಕೆಲಸಕ್ಕೆ ಬಂದನಂತರ ಇತರಪೇಟೆದಿಂದ ರೈಲ್ ಮುಂತಾದ ಮಾರ್ಗದಲ್ಲಿ ಬಂದು ಹೋಗತಕ್ಕ ಜನಗಳ ತಿಳುವಳಿಕೆಗಾಗಿ ಪ್ರತಿ ಬೀದಿಗೂ ಆ ಬೀದಿಯ ಹೆಸರನ್ನುಕಂಡು ಒಂದುಬೋರ್ಡನ್ನು ಹಾಕಿಸಿರುತ್ತಾರೆ. ಬೀದಿಗಳು ಬೆಂಗಳೂರು ಬೀದಿಗಿಂತಲೂ ಶುಭ್ರವಾಗಿದೆ. ಚರಂಡಿಗಳಲ್ಲಿ ಮೊದಲಿನಹಾಗೆ ವಿಶೇಷ ನೀರು ನಿಲ್ಲುವದಿಲ್ಲ. ಕೆಲವರು ತಮ್ಮಮನೆಯ ಪಾಯಖಾನೆಯನ್ನು ಪಾಕ್ ಮಾಡಿಸುವದಕ್ಕೆ ಅನುಕೂಲವಿಲ್ಲದೆ ಅನೇಕ ದಿನಗಳವರಿವಿಗೂ ಜಮಾಯಿಸಿ ಬೆಂಗಳೂರು ನಿವಾಸಿಗಳಹಾಗೆಯೇ ಗೊಬ್ಬರದವರಿಗೆ ಮಾರುತ್ತಾರೆ. ಇದಕ್ಕೋಸ್ಕರ ಬೆಂಗಳೂರು ಟೌನ್ ಮ್ಯುನಿಸಿಪಲ್ ಪ್ರೆಸಿಡೆಂಟ್ ಮ|| ಶ್ರೀನಿವಾಸಾಚಾರ್ಯರವರು ಯೋಚಿಸಿರುವ ಪೈಲಾ ಎಂಬ ಉಪ ನಿಬಂಧನೆಯನ್ನು ಅವರಲ್ಲಿ ಜಾರೀಗೆ ತಂದಿರುವಪ್ರಕಾರ ಈಪಟ್ಟಣದಲ್ಲಿಯೂ ಜಾರೀಗೆ ತಂದರೆ ತುಂಬಾ ಸೌಖ್ಯವಾಗಿರುವದು. ಯಾವಾಗ್ಯೂ ನದಿಗಳಳತಕ್ಕ ಊರುಗಳಹಾಗೆ ನೀರಿಗೆ ದುರ್ಭಿಕ್ಷವಿಲ್ಲದೆ, ಈ ಟೌನ್ ಸುತ್ತಮುತ್ತಲಿರುವ ತೋಟಗಳಪಕ್ಕದಲ್ಲಿನ ಕಾಲುವೆಗಳಲ್ಲಿ ನೀರು ಹರಿಯುತಲಿತ್ತು. ಈಗ ಯೆರಡು ವರುಷಗಳಿಂದ ಈಊರು ಕೆರೆಗೆ ನೀರು ಬಾರದೆ, ಈಡಿವಿಜನೊಳಿರುವ ತಾಲ್ಲೂಕುಗಳಲ್ಲಿ ಮಳೆ ಬಂದು ಕೆರೆಕಟ್ಟೆಗಳು ತುಂಬಿ ಸೌಖ್ಯವಾಗಿರುವದು ನೋಡಿದರೆ ಈಪಟ್ಟಣನಿವಾಸಿಗಳ ದುರವೃಷ್ಟವೆಂದು ಯೆಣಿಸಬೇಕಾಗಿದೆ. ಈಕಷ್ಟವನ್ನು ತಕ್ಕಷ್ಟುಮಟ್ಟಿಗೂ ಪರಿಹರಿಸಲು ಬಾಧ್ಯರಾದ ನಮ್ಮ ಸರ್ಕಾರದವರು, ಚಿಕ್ಕಮಗಳೂರಲ್ಲಿ ೪-೫ ಸಾವಿರ ರೂಪಾಯಿಗಳು ಮುಟ್ಟಿಸಿ ಬೀದಿಬೀದಿಯಲ್ಲೂ ಶಾಶ್ವತವಾಗಿ ನೀರು ನಿಲ್ಲುವಹಾಗೆ ಭಾವಿಗಳನ್ನು ತೆಗೆಯಿಸಿದವರು ಈಪಟ್ಟಣದಲ್ಲಿಯೂ ಸರಿಯಾದ ಸ್ಥಳಗಳೊಳುಯಾತಕ್ಕೆ ತೆಗೆಯಿಸಬಾರದು? ಇನ್ನುಮೇಲೆ ಬಿಸಲುಕಾಲದಲ್ಲಿ

ಜಲದುರ್ಭಿಕ್ಷವು ಅಧಿಕವಾಗುತ್ತಾ ಬರುವದಾದ್ದರಿಂದ ಅಷ್ಟರಲ್ಲಿಯೇ ಸರ್ಕಾರದವರು ನಿಗೇಕೊಟ್ಟು ಜನಗಳ ಕಷ್ಟವನ್ನು ತಕ್ಕಮಟ್ಟಿಗೂ ನಿವಾರಣೆ ಮಾಡುವರೆಂದು ನಂಬುತ್ತೇನೆ. ಈ ಪಟ್ಟಣದ ನಿವಾಸಿಗಳು ನೀರು ಒಂದುವಿನಾ ಮಿಕ್ಕ ಯೆಲ್ಲಾ ವಿಷಯಗಳಲ್ಲಿಯೂ ಬೆಂಗಳೂರು ನಿವಾಸಿಗಳಿಗಿಂತಲೂ ಸೌಖ್ಯ ಪ್ರಿಯರಾಗಿದಾರೆ. ಬೆಂಗಳೂರು ಶಹರಿನಲ್ಲಿ ಹಲಸೂರುಪೇಟೆ, ಬಳ್ಳಾಪುರಪೇಟೆ, ಮುಂತಾದವರಿಗೆ ಜಲದುರ್ಭಿಕ್ಷ ಅಧಿಕವಾಗಿದೆ.

ಈ ಶಹರಿನಲ್ಲಿರುವ ಮುನ್ಸಫ್‌ಕೋರ್ಟು ಒಳ್ಳೇಸ್ಥಿತಿಯಲ್ಲಿದೆ. ಈ ಕೋರ್ಟು ಇನ್ಸ್‌ಪೆಕ್ಷನ್‌ಗಾಗಿ ಹೈಕೋರ್ಟು ಸೆಕೆಂಡ್ ಜಡ್ಜಿಯಾದ ಮೆ|| ತಂಬುಶೆಟ್ಟರವರು ಬರುವರೆಂದು ಪ್ರವಾದವುಂಟಾಗಿದೆ.

ಈ ಟೌನಿನಲ್ಲಿರುವ ಲಾಯರ್‌ಗಳಲ್ಲಿ ಕೆಲವರು ಇಂಗ್ಲಿಷ್ ಗ್ರಂಥಗಳನ್ನು ಓದಿದವರಾಗಿಯೂ, ಕೆಲವರು ಸಂಸ್ಕೃತ ಗ್ರಂಥಗಳನ್ನು ಓದಿ ಪಾರಂಗತರಾದವರಾಗಿಯೂ ಇದಾರೆ. ಇವರುಗಳ ಪ್ರಾಕ್ಟಿಸ್ ಇತರ ಲಾಯರ್‌ಗಳಿಗಿಂತ ಚೆನ್ನಾಗಿನಡೆಯುತ್ತಿದೆ. ಮತ್ತು ಇವರು ಒಳ್ಳೇ ಗೌರವ್ಯರಾಗಿಯೂ ಇದಾರೆ. ಚಿಕ್ಕನಾಯಕನಹಳ್ಳಿ ಪ್ರಾಂತಕ್ಕೆ ಜಮಾಬಂದಿಗಾಗಿ ಹೋಗಿದ್ದ ಡೆಪ್ಯುಟೀಕಮಿಷನರ್ ಮೆ|| ಕೃಷ್ಣಮೂರ್ತಿರಾವ್, ಬಿ. ಎಲ್. ಯವರು ಇನ್ನೂ ಇತರ ಸಬಾರ್ಡಿನೇಟ್ ಆಫೀಸರ್‌ಗಳೂ ಜನವರಿ ೨೯ನೇ ತಾರೀಖಿನದಿವಸ ಹೆಡ್‌ಕ್ವಾರ್ಟರಿಗೆ ದಯಮಾಡಿದರು.

ಈ ತುಮಕೂರು ಬ್ರೈಲ್ವೆ ಲೈನನ್ನು ಸದರ್ನ ಮರಾಟಾ ರೈಲ್ವೇ ಕಂಪನಿಯವರಿಗೆ ಪ್ರಸಿದ್ಧಿ ಕೊಟ್ಟುಬಿಟ್ಟರೆ ಅವರು ತ್ವರೆಯಿಂದ ಮುಂದಕ್ಕೆ ಲೈನ್ ಹಾಕುವರು. ಈ ಲೈನ್‌ಪಕ್ಕದಲ್ಲಿರುವ ದೊಡ್ಡದೊಡ್ಡ ಪಟ್ಟಣಗಳು ಆಬಾದಿಗೆ ಬರಬಹುದು. ಈ ಟೌನಿನಲ್ಲಿ ಪೋಲೀಸ್‌ಕಾವಲು ತುಂಬಾ ಬೇಕಾಗಿದೆ. ಕೆಲವುದಿನಗಳಿಂದ ಟೌನಿನಲ್ಲಿ ಯೇನೂ ಗಲಾಟೆ ಇಲ್ಲದ್ದರಿಂದ ಪೋಲೀಸಿನವರು ತುಂಬಾ ಅಲಕ್ಷ್ಯವಾಗಿರುತ್ತಾರೆ. ಇಂತಾ ಕಾಲವನ್ನು ನಿರೀಕ್ಷಿಸುತಲಿರುವ ಕಳ್ಳರು ಸಮಯನೋಡಿ ಮನೆಗಳಿಗೆ ಕನ್ನ ಹಾಕುವರು. ಮನೆ ಹತ್ತಿ ಬೇಯುವಾಗ ಭಾವಿ ತೋಡುವ ಸಾಮತಿಗೆ ಸರಿಯಾಗಿ ಆ ಕಾಲದಲ್ಲಿ ಪೋಲೀಸಿನವರು ಓಡ್ಯಾಡುವರು ಆಗ್ಯೆ ಸತ್ತೇ ಆಗುವದೇ ಇಲ್ಲ. ಇನ್ನುಮೇಲೆಯಾದರೂ ಅಧಿಕಾರಿಗಳು ತುಂಬಾ ನಿಗೇ ಕೊಡುವರೆಂದು ನಂಬುತ್ತೇನೆ. ಪೋಲೀಸ್ ಅಸಿಸ್ಟೆಂಟರು ತಾಲ್ಲೂಕ್ ಜಾತ್ ಸರ್ಕ್ಯುಟಿನಲ್ಲಿರುತ್ತಾರೆ. ಇವರು ಈ ಬಾಬಿನಲ್ಲಿ ತುಂಬಾ ಶ್ರದ್ಧೆಯಿಂದನೋಡಿ ಗ್ರಾಮಾಂತರದವಾಸಮಾಡುವ ಜನಗಳಿಗೆ ಕಳ್ಳರ ಭಯವಿಲ್ಲದಹಾಗೆ ಪ್ರತಿ ಒಂದು ಗ್ರಾಮದಲ್ಲಿಯೂ ಪೋಲೀಸ್ ಪಹರಾ ದುನಡೆಸುತಲಿದಾರೆ. ಈ ಪುರದಲ್ಲಿ ಗವರ್ನ್‌ಮೆಂಟ್ ಹೈಸ್ಕೂಲ್ ಮುಂತಾದ ವಿದ್ಯಾಶಾಲೆಗಳು ಬಹಳ ಉತ್ತಮಸ್ಥಿತಿಯಲ್ಲಿವೆ. ಇಲ್ಲಿ ಎರಡು ಮಿಷನ್ ಗರ್ಲ್ಸ್ ಸ್ಕೂಲ್‌ಗಳಿವೆ. ಇಲ್ಲಿನ ನಿವಾಸಿಗಳಾದ ಅನೇಕ ದೊಡ್ಡಮನುಷ್ಯರು ಮಿಷನ್‌ಸ್ಕೂಲಿಗೆ ತಮ್ಮ ಬಾಲೆಯರನ್ನು ಕಳುಹಿಸಲು ಇಷ್ಟವಿಲ್ಲದೆ ಗವರ್ನ್‌ಮೆಂಟಿನಿಂದ ಒಂದು ವಿದ್ಯಾಶಾಲೆಯನ್ನು ನಿರ್ಮಿಸಬೇಕೆಂದು ಮೆ|| ರೈಸ್ ಸಾಹೇಬರನ್ನು ಕೇಳಿಕೊಳ್ಳಲು ಅವರು ದಿವಾನರಲ್ಲಿ ಯೋಚಿಸಿ ಹೇಳುವದಾಗಿ ಅಪ್ಪಣೆ ಕೊಟ್ಟರೆಂಬದಾಗಿ ಹೇಳುತ್ತಾರೆ. ಈ ಸಂಗತಿಯನ್ನು ದಿವಾನರವರು ತಮ್ಮ ಘನವಾದ ಚಿತ್ತಕ್ಕೆ ತಂದು ಇಲ್ಲಿ ಒಂದು ಪಾಠಶಾಲೆಯನ್ನು ಈ ಟೌನಿಗೆ ತಕ್ಕಹಾಗೆ ಏರ್ಪಾಡು ಮಾಡಿದರೆ ಈ ಶಹರ್‌ಬಾಲೆಯರು ಮತ್ತು ಇತರ ಗ್ರಾಮಾಂತರದಲ್ಲಿರುವ ಬಾಲೆಯರು ಸಹ ಶ್ಲಾಘ್ಯವಾದ ವಿದ್ಯಾಪ್ರಯೋಜನವನ್ನು ಪಡೆಯಬಹುದು. ಈ ಟೌನಿನಸಮೀಪದಲ್ಲಿರುವ ದೇವರಾಯದುರ್ಗದ ಬೆಟ್ಟದಮೇಲಿರುವ ಬಂಗ್ಲೆ ರಮಣೀಯವಾಗಿದೆ. ನಮ್ಮ ಮಹಾರಾಜರವರು ವಸಂತಕಾಲದಲ್ಲಿ ಅಲ್ಲಿಗೆ ಬರಬಹುದು. ಈ ಪುರವು ಆಬಾದಾಗಿರುತ್ತೆ. ನಮ್ಮ ದೇಶದಲ್ಲಿಯೇ ಇಂತಾ ಶ್ಲಾಘ್ಯವಾದ ಸ್ಥಳವಿರುವಾಗ್ಯ ನೀಲಗಿರಿ ಪ್ರಾಂತಕ್ಕೆ ಹೋಗುವದು ದುಬಾರೀ ಖರ್ಚಿಗೆ ಕಾರಣವೇ ಹೊರತು ಮತ್ತೇನೂ ಸೌಖ್ಯ ತೋರಲಿಲ್ಲವು.

SUMMARY OF NEWS.

ವೃತ್ತಾಂತ ಸಂಗ್ರಹವು

—:0:—

[illegible]

EXTRACTS.

ಶಾಸ್ತ್ರ ಮತ್ತು ರೂಢಿ.

ಮುಂಬೈ ಹಿಂದೂ ಯೂನಿಯನ್ ಸಮಾಜದಲ್ಲಿ ಆನರೇಬಲ್ ಕಾಶೀನಾಥ ತ್ರ್ಯಂಬಕ್ ತೆಲಾಂಗ್ ಯೆಂಬವರು ಈಚೆಗೆ ಒಂದುಸಂದರ್ಭದಲ್ಲಿ ಅನಾದಿಯಾದ ನಮ್ಮಶಾಸ್ತ್ರ ಮತ್ತು ಆಚಾರಗಳನ್ನು ಕುರಿತು ತಿಳಿಸುತ್ತಾರೇನಂದರೆ:—

[illegible]

ಮುಂಬೈ ಇಲಾಖೆಯ ಅತಳತೆಯ ರಿಪೋರ್ಟು.

[illegible]

BANGALORE:—Printed and published for the Proprietor, at the KARNATIC Press.—1856.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಶವಿನಿವೃತ್ಯೈತ್ಯನಗವರ್ಣ್ಣಕರ್ಣ್ಣಾಟಕಪ್ರಕಾಶನನಿರಾಧಿದಿವ್ಯತತರಾಹಿತಿಶೋಭಿತಾ ॥ ವ್ಯಗ್ರಾಂಕಸಂತವಾಸರೇನಿಹಿತಮುದ್ರಣಾಸಜ್ಜನೈರ್ಧಿಕಾಸುವರಿಜೋಟಿತಾದಿಕಿತಿಮಾನಸಂಸಂಮುದಂ॥

Vol. XIII.] BANGALORE—MONDAY, FEBRUARY 15, 1886. [No. 7.

ಸಂಪುಟ ೧೩.] ಬೆಂಗಳೂರು—ಸನ್ ೧೮೮೬ನೇ ಇಸವಿ ಫೆಬ್ರವರಿ ೧೫ನೇ ತಾರೀಖು ಸೋಮವಾರ. [ಸಂಚಿಕೆ ೭.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

[illegible]

ಪ್ರಕಟನೆಯ ರುಸುಂ.

[illegible]

NOTICE TO SUBSCRIBERS

[illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA.

Price including Postage, Rs 5 0 0

ವೈದ್ಯಸಾರ ಸಂಗ್ರಹ.

[illegible]

ನೋಟೀಸ್.

[illegible]

[illegible]

[illegible]

NOTICE.

ಎ. ರಾಮಸ್ವಾಮಯಂಗಾರ್ ಕಂಪೆನಿ.

ಜನರಲ್ ಕಮ್ಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎ. ರಾಮಸ್ವಾಮಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ವರ್ತ್ತನೆ ತೆಗೆದುಕೊಳ್ಳಲ್ಪಡುವದು.

ಕರ್ಣ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, FEBRUARY 15, 1886.

೧೮೮೬ನೇ ಫೆಬ್ರವರಿ ೧೫ನೇ ತಾ॥ ಸೋಮವಾರ

> ಓಂ ॥ ಸರ್ವಜ್ಞತಾಂಕರ್ತೃವಾಕ್ಯತಾಂಪ್ರಸೂತಿ [illegible] ವನೆವಿನಾನುಸನುಸ್ವಾಮಿ ತ್ವಾಮೇವನಾವಿಸರ [illegible] ॥

CHARITY

ಲೋಕದಲ್ಲಿ ಮನುಷ್ಯನಿಗುಪಪತ್ತಿಗಳಿಂದಿರುವ ಯೋಗವು ವಿಚಾರಿಸುವಲ್ಲಿ ದಾನವನ್ನು ಪ್ರಥಮವಾಗಿಯೂ ಭೋಗವನ್ನೆರಡನೆಯದಾಗಿಯೂ, ನೀತಿಜ್ಞರು ತಿಳಿಸಿರುತ್ತಾರೆ. ಮತ್ತು ಸಕಲವಿದ್ಯೆಗಳಿಗಿಂತಲೂ ದಾನ ವಿದ್ಯೆಯು ಪ್ರಬಲವಾದದ್ದು. ತಥಾಪಿ ಉಚಿತವಾಗಿ ತನ್ನ ಔದಾರ್ಯವು ವಿನಿಯೋಗಿಸುವದು ಬಹಳ ಶ್ಲಾಘ್ಯವಾದದ್ದು. ಪಾಯಶಃ ಪೂರ್ವಕ್ಕಿಂತಲೂ ಈಗ ಧರ್ಮವೆಂಬದು ಬಹಳ ಲುಪ್ತವಾಯಿತೆಂತಲೇ ಹೇಳಬೇಕಾಗಿದೆ. ಕದಾಚಿತ್ ಯಾರಾದರೊಬ್ಬರಿಬ್ಬರು ಧರ್ಮಕಾರ್ಯವೆಂದು ಮಾಡಿದರೆ, ತೆಂಗಿನಕಾಯಿಯ ತಿರಳಂತೆ ರೆಡು ಪಾಪವು ಮಲ್ಲುವಂತೆ, ನಿಷ್ಪ್ರಯೋಜಕಗಳಾದ ಕೆಲಸಗಳಿಗೆ ವ್ಯಯವ್ಯಯ ಮಾಡುವರೇ ಹೊರತು ಪ್ರಾಣಿ ಹೃದಯಗಳಿಗೆ ಸುತೃಪ್ತಿಯುಂಟಾಗುವ ಕಾರ್ಯವು ಮಾಡುವದಿಲ್ಲವು. ಈ ದೇಶದೊಳಗಿರುವ ವರ್ತ್ತಕರು ಇರವೆ ಇಲ್ಲವು. ಆವರಿಂದಾರ್ಜಿತವಾದದ್ರವ್ಯವೆಲ್ಲವು ಅವರು ಜೀವಿಸಿರುವವರೆಗೂ ಅವರೊಳು ಗೂಢವಾಗಿದ್ದು ಅವರ ಕಾಲಾನಂತರ ತಮ್ಮ ಹಿರಿಯರು ಕೆಯ್ಯಿ ವರ್ತಿಸದಕ್ಕೆ ಅವರ ವಾರಸುದಾರರನ್ನು ಹೊಂದತಕ್ಕದ್ದಾಗಿದೆಯೇ ಹೊರತು ಅದರಲ್ಲಿಕ್ಕಿ ಅಲ್ಪಭಾಗವಾದರೂ ದೇಶಕ್ಷೇಮಾಭಿವೃದ್ಧಿಗೆ ವಿನಿಯೋಗಿಸಲ್ಪಡುವ ಸ್ಥಿತಿಯೊಳಿಲ್ಲವು. ಪ್ರಾಯೇಣ ಈಗಿನವರಲ್ಲಿ ಸ್ವಾರ್ಥಿಕರ ಔದಾರ್ಯ ಮುಂತಾದ ಸುಗುಣಗಳು ದುರ್ಲಭಗಳೆಂದು ಇತರರಾದರೂ ಹೇಳಬಲಾರರು, ಪರಮ ಸ್ವಾರ್ಥಿಕರ ಧರ್ಮಬುದ್ಧಿಯನ್ನೂ ಅವರ ಪರ್ಮ ಸಂಸ್ಥಾಪನಾಕ್ರಮವನ್ನೂ ಮೆಚ್ಚಿಸುವವರಲ್ಲಿ ಅತ್ಯಂತೋತ್ಸಾಹವು ಈಗ ಸಾರ್ವಜನೀನವಾಗಿದೆ. ಈದೇಶದಲ್ಲಿ ಧನಿಕನಿಗೂ ರಿಕ್ತನಿಗೂ ಯಾವ ವ್ಯತ್ಯಾಸವೂ ತೋರಬರುವದಿಲ್ಲವು. ಧನಿಕನಾದವನು ಸಹ ರಿಕ್ತನಂತೆ ಅರ್ಥಾನುಪಪತ್ತಿಯಂ ಪ್ರಬಲಗೊಳಿಸಿಕೊಂಡು, ಅದಂ ಅನ್ಯರಿಗೆ ತಕ್ಕ ವೇಷ ಭಾಷೆಗಳಿಂದನೆ ನಿರೂಪಿಸುತ್ತಿರುತ್ತಾನೆ. ಆದರಿಂದ ಸ್ವರೂಪತಃ ಅವನು ಧನಿಕನಾದರೂ ಕಾರ್ಯತಃ ದರಿದ್ರನಾಗಿಯೇ ಇರುತ್ತಾನೆ. ಈ ಸಂದರ್ಭದಲ್ಲಿ ಸ್ವಜಗುಣವು ತಮೋಪಿತಗುಣಗಳಿಂದ ಧ್ವಸ್ತವಾಗುತಿದೆ. ರಿಕ್ತನಾದವನ ಅನುಪಪತ್ತಿಯು ಯಾವಾಗಲೂ ಏಕರೂಪವಾದದರಿಂದ ಅವನನಿಕಟದಲ್ಲಿ ಇದೆ ಕೀರ್ತಿ ಗುಣಗಳೆಂಬ ಶಂಕೆಗೆ ಅವಕಾಶವಿರುವದಿಲ್ಲವು. ಇವಲ್ಲದೆ ಧನಿಕನಾದವನು ತನ್ನಲೌಭ್ಯವಂ ಪೋಷಿಸಲೋಸುಗ, ಅನ್ಯರಪ್ರಯೋಜನಕ್ಕಾಗಿವಿನಿಯೋಗಿಸಲ್ಪಡುವ ಧನವು ತನಗೇನುದ್ದಿಷ್ಟಪ್ರಯೋಜನವನ್ನುಂಟುಮಾಡಿದಂತೆಲೂ, ಅಂತಾ ವ್ಯಯವು ಅನ್ಯರ ದುರ್ಗುಣವು ವೃದ್ಧಿ ಪಡಿಸಲಿಕ್ಕೆ ಕಾರಣ ವಾಗುವದೆಂತಲೂ ವಾದಿಸುತ, ಧಾರ್ಮಿಕರನ್ನ ಧಿಃಕರಿಸಲಾರಂಭಿಸುತ್ತಾರೆ. ಶ್ಲಾಘ್ಯವಾದ ಧನವೆಂಬ ವಸ್ತುವು ಅಂತಾ ಮೂರ್ಖರನ್ನಿದ್ದು ತನ್ನ ಸ್ವರೂಪವು ಕೆಡಿಸಿಕೊಳ್ಳುವದಕ್ಕೋಸ್ಕರ ಬಹಳ ವಿಷಾದಿಸುತ್ತೇವೆ. ಅಂತಾ ವಸ್ತುವನ್ನು ಪಡೆಯಲಿಕ್ಕೆ ಮೇಲಿಕಂತ ಪುಣ್ಯಾತ್ಮರು ಶ್ರಮಪಡದಿರಲಿಲ್ಲವು. ಇತರಾಪೇಕ್ಷೆ ಯಾ ದ್ರವ್ಯಕೇಟರ ಮಾಡಬೇಕಾದರೆ ಅನೃತ, ಅನ್ಯಾಯ, ಕೂಟ ಸಾಕ್ಷ್ಯ, ಪರವಂಚನೆ, ಸ್ವಾಮಿದ್ರೋಹ ಮುಂತಾದವುಗಳ ಪ್ರಕಿಯಾವದಾದರೊಂದರ ಮೂಲಕವಾಗಿ ಯಾದರೂ ಪ್ರಯತ್ನಪಟ್ಟಹೊರತು ನ್ಯಾಯವಾಗಿ ಲಭಿಸುವದಕ್ಕಿಂತ ಅಧಿಕವಾಗಿ ದೊರೆಯಲಾರದು. ಇಂತೆ [illegible] ದನ ವ್ಯಯ ಮಾಡಬೇಕೆಂದು ಹೇಳುವದೇ ಅನುಚಿತವಲ್ಲವೆ? ದಾನ ಭೋಗಗಳೆರಡೂ ಯಿಲ್ಲದ ದ್ರವ್ಯಕ್ಕೆ ಮೂರನೆಯ ಗತಿಯು ನಿಯತವಾದದ್ದು ಎಂದು ತಿಳಿದೇ ಅವರು ಮುಂದೆ ವೃಂಟಾಗ ಬಹ ಪಾಪ ರಿಕ್ತತೆಯನ್ನು ಆರೋಪಿಸಿಕೊಂಡು ಅಭ್ಯಾಸಿಸಿಕೊಳ್ಳುತ್ತಾರೆ. ದಾನವಿಲ್ಲದಿದ್ದರೂ ಭೋಗವು ದುರ್ಲಭವೇ ಯೆಂದು ಯಾರಾದರು ಕೇಳಬಹುದು. ಅದನ್ನಾತ್ಯಂತಿಕವಾಗಿ ಯಿಲ್ಲವೆಂದು ಹೇಳಲಾರೆವು. ಭೋಗಾರ್ಥ ಅಂತವರ ದ್ರವ್ಯವು ಪಾಪ ಮುಂತಾದವುಗಳಿಗಾಗಿಯೂ, ರಥ ತುರಗ ಮೊದಲಾದ ಸ್ವಾನುಭೋಗೋಪ ಕರಣಗಳಿಗಾಗಿಯೂ, ಅತಿ ವ್ಯಯವಾಗುವಾಗ್ಯೆ ಅದಂ ಯಿಲ್ಲವೆಂದು ಹೇಳುವದು ಸಾಹಸವುನವುಗೆತ್ತಣದು ! ಅಲ್ಲಿಯೂ ಸ್ವಾರ್ಥವಿನಾ ಪರಾರ್ಥ ಲೇಶವೂ ಇರಲಾರದು. ಇಂತವನ್ನು ಭೋಗಕ್ಕೇನ ಶಾಸ್ತ್ರಜ್ಞರು ವ್ಯವಹರಿಸುಲಿಲ್ಲವಾಗಿ ಅದು ಯಿದ್ದರೂ ಯಿಲ್ಲವೆಂತಲೇ ಹೇಳಬೇಕಾಯಿತು. ಈ ದೇಶದಲ್ಲಿ ಮೇಲೆ ಕಂಡಂತಾ ಧನಿಕರು ಅನೇಕರಿರುತ್ತಾರೆ, ಅಂತವರು ವಿತ್ತರೊಡನೆ ಚಿರಕಾ ಹೋಗಿರುವದರಿಂದ ಅವರ ಅಪೇಕ್ಷಿತಾಂಶವನ್ನು ಶ್ರೀಹರಿ ಕೈಗೂಡುವಂತೆ ಮಾಡುವನಾಗಿ ಅವರ ವಿಷಯಕವಾದ ಪ್ರಸ್ತಾವವು ನಮಗಿನ್ನು ಬೇಕಿಲ್ಲವು.

ಹೀಗಿದ್ದಾಗ್ಯೂ ಈಶ್ವರನು ಅಮೋಘವಾದ ತನ್ನ ಶಕ್ತಿಯಂ ತೋರಿಸುವದಕ್ಕಾಗಿ ಸಕಲಗುಣಸಂಪನ್ನನಾದ ಪುಣ್ಯಪುರುಷನು ಸೃಜಿಸಿ ಆತನಿಗೆ ಸಕಲವಿಧ ಉಪಪತ್ತಿಗಳಂ ಕಲ್ಪಿಸಿ ಇತರರಿಗೆ ಉದಾಹರಣತ್ವೇನ ಈ ಭೂಲೋಕವನ್ನಲಂಕರಿಸಿರುವಂತೆ ಮಾಡುತ್ತಾನೆ. ಅಂತವರ ನಾಮೋಚ್ಚಾರಣೆಯು ದೋಷ ನಿವಾರಕವಾಗಿರ್ಪುದು. ಗೌರವವನ್ನೂ ದೊಡ್ಡಮನುಷ್ಯತನವನ್ನೂ ಅಪೇಕ್ಷಿಸುತ ಧನಿಕರೆಂದು ಹೆಸರಿಟ್ಟುಕೊಂಡಿರುವವರಿಗೆಲ್ಲ ದೃಷ್ಟಾಂತರೂಪವಾಗಿರುವ ಒಬ್ಬ ಧರ್ಮಾತ್ಮನ ಸದ್ಗುಣವು ಸ್ವಲ್ಪ ತಿಳಿಸುವದರ ಮೂಲಕ ಜಿಹ್ವಾಪ್ರಕ್ಷಾಳನ ಮಾಡಿಕೊಳ್ಳುವವು, ಅದೇನೆಂದರೆ—

ಈಪ್ಪೂರು ನಿವಾಸಿಯಾದ ಮೇಕಲ ಪಾಪಣ್ಣನೆಂಬಾತನು ಸಾಮಾನ್ಯಸ್ಥಿತಿಯೊಳಿರುತಲಿರುವಾಗ್ಯೆ ದೈವಾತ್ ಆತನಿಗೆ ನಿಕ್ಷೇಪವು ದೊರೆಯಿತು. ರಿಕ್ತರಿಗೆ ಧನವು ದೊರೆತರೆ ಮನಸ್ವೀ ಮಾಡಲಿಚ್ಛಿಸುವನೆ? ಹಾಗಿಲ್ಲವು. ಸದರೀ ಪಾಪಣ್ಣನೆಂಬಾತನು ದೈವಯೋಗದಿಂದ ತನಗೆ [illegible]ದ

ದ್ರವ್ಯಕ್ಕೆಲ್ಲ ಬೇರೆಬೇರೆವಿಧ ವ್ಯಯವು ಚಿಂತಿಸದೆ ಅದು ಶ್ರೀ ಹರಿಗೇ ಅರ್ಪಿಸಬೇಕೆಂಬ ಜ್ಞಾನದೊಡನೆ ಈವ್ಯೂರು ಅಣ್ಣಾಮ್ಮ ದೇವಸ್ಥಾನದ ಬಾಜಂದಲ್ಲಿ ಪ್ರಶಸ್ತವಾದ ಮತ್ತು ವಿಶಾಲವಾದ ಖಾಲೀ ಜಮೀನನ್ನು ಕ್ರಯಕ್ಕೆ ಕೊಂಡುಕೊಂಡು ಅಲ್ಲಿ ವಿಶಾಲ ರಮಣೀಯವಾದ ಸತ್ರ ನಿರ್ಮಾಣವು ಮಾಡಿದನು. ಇದರ ಕಾಮಗಾರಿಯು ಈಗ ಪ್ರಾಯಶಃ ಪೂರೈಸುತಬಂತು. ಇದಕ್ಕಾಗಿ ಈಗ ೫೫ ಸಹಸ್ರ ರೂಪಾಯಿಗಳು ವ್ಯಯವಾದವು. ಇನ್ನೂ ಪೂರ್ತಿಯನ್ನೈದಲಿಕ್ಕೆ ಎರಡುಮೂರು ಸಾವಿರ ರೂಪಾಯಿಗಳು ಬೇಕಾಗಬಹುದು. ಇಷ್ಟುಮಾತ್ರದಿಂದಲೇ ಈತನು ನಾವು ಹೀಗೆ ಪ್ರಶಂಸಿಸುತಲಿರಲಿಲ್ಲವು. ಹೀಗೆ ಈತನು ವಿಶ್ರಾಂತನಾಗಿರುವನಾದರೆ ಇತರರಂತೆ ಈತನೂ ಒಬ್ಬನೆನ್ನಿಸಿಕೊಂಡಿರುವನು. ಹಾಗಿಲ್ಲದೆ ನಿಯತವಾಗಿ ಬ್ರಾಹ್ಮಣ ಸಂತರ್ಪಣೆ ನಡೆಯುವಬಗ್ಗೆ ಬೇಕಾದ ಧೃತಿಯು ಕಲ್ಪಿಸಬೇಕೆಂಬ ತಾತ್ಪರ್ಯವುಳ್ಳವನಾಗಿದಾನೆಂದು ಕೇಳಲಿಕ್ಕೆ ಬಹಳ ಸಂತೋಷಿಸುತ್ತೇವೆ. ನವೀನವಾದ ಪ್ರಶಸ್ತ ಸತ್ರವನ್ನು ಯಾರಾದರು ನೋಡುವವರಾದರೆ ಅವರಿಗೆ ಅಲ್ಲಿನ ಸ್ಥಲ ಜಲ ಸನ್ನಿವೇಶಗಳು, ಸದರೀ ಪಾಪಣ್ಣನ ಪುಣ್ಯ ವಿಶೇಷವನ್ನು ನಿರೂಪಿಸದಿರಲಾರವು. ಈವ್ಯೂರಲ್ಲಿ ಇತರ ಅನೇಕ ಸತ್ರಗಳಿದ್ದಾಗ್ಯೂ ಅವುಗಳೆಲ್ಲಕ್ಕೂ ಇದು ಮಧ್ಯನಾಯಕಮಣಿಯಂತಿದೆ. ಪಾಪಣ್ಣನವರು ತನ್ನ ಉದ್ದೇಶವನ್ನು ಸಫಲಗೊಳಿಸಿ ಅದು ಸ್ಥಿರವಾಗಿ ನಡೆಯುವಬಗ್ಗೆ ತಕ್ಕ ಯೇರ್ಪಾಡು ಮಾಡುವರಾದರೆ ಆತನಪುಣ್ಯಕೀರ್ತಿಗಳು ರಾಯಬಹದೂರ್ ಕಿತಾಬಿಗೆ ಕಡಮೆಯಾಗಿರಲಾರವು. ಈತನಿಗಿಂತಲೂ ಅನೇಕಾಂಶದಲ್ಲಿ ಪ್ರಾಶಸ್ತ್ಯವುಳ್ಳ ಹಿರಿದಿದ ದಿವಾನಗಳೂ ಹೆಡ್ ಶಿರಸ್ತೇದಾರರುಗಳೂ, ಕಲೆಕ್ಟರ್‌ಗಳೂ, ಜಹಗೀರ್‌ದಾರರುಗಳೂ ಪ್ರಮುಖರೂ ಬಹುಮಂದಿ ಇರುತಲಿದ್ದರು. ಮತ್ತು ಈಗಲೂ ಇದಾರೆ. ಅವರ ಹೆಸರುಗಳನ್ನು ನಾವು ಕಥಾರೂಪವಾಗಿ ಕೇಳಬೇಕಾಗಿದೆಯೇ ಹೊರತು ತಮ್ಮ ಸ್ಮರಣೆ ಊರ್ಜಿತವಾಗಿರುವಂತೆ ಯಾವದೊಂದು ಕಾರ್ಯವನ್ನೂ ಮಾಡಿದವರಲ್ಲವು. ಕದಾಚಿತ್ ಒಂದೆರಡು ಮಾಡಿದ್ದಪಕ್ಷಕ್ಕೆ ಅವು ಅನ್ಯರ ದ್ರವ್ಯದಿಂದೇರ್ಪಡಿಸಿ ಕೀರ್ತಿ ಸಂಪಾದಿಸಿಕೊಂಡವಾಗಿವೆಯೇ ಹೊರತು ಸ್ವಾರ್ಜಿತ ದ್ರವ್ಯದಿಂದೇರ್ಪಟ್ಟದ್ದಾಗಿತೋರಲಿಲ್ಲವು. ಪಾಪಣ್ಣನವರಸ್ಮರಣೆಯನ್ನು ಬಹುಕಾಲವುಂಟುಮಾಡುವಂತಾ ಆತನ ಸತ್ರವೇ ಆತನಿಗೊಂದು ಮಹೋನ್ನತಿಯಾಗಿ, ಅಂದರೆ ಜ್ಞಾನಕಾರ್ಯ ಮಾಡಲ್ಪಟ್ಟ ಸ್ಥಾಪನೆಯಾಗಿರುತ್ತದೆ. ಮುಖ್ಯವಾಗಿ ದ್ರವ್ಯವನ್ನಾರ್ಜಿಸುವದಾಗಲಿ, ದಿವ್ಯ ಸೌಧಾಗ್ರದೊಳು ಕುಳಿತು ತನ್ನಿಷ್ಟಗೆ ತಾನು ಸುಖಿಸುವದಾಗಲಿ ಶ್ರೇಷ್ಠವಲ್ಲವು. ಮನುಷ್ಯ ಜೀವಿತ ಕಾಲವು ಅತ್ಯಲ್ಪವಾದದರಿಂದಲೂ, ಅಂತಾ ಅಲ್ಪ ಕಾಲದಲ್ಲಿ ಅವನ ಗುಣವನ್ನು ಪರೀಕ್ಷಿಸುವ ಉದ್ದೇಶದಿಂದಲೇ ಭಗವಂತನು ವಿಶೇಷ ಸಂಪತ್ತನ್ನು ಕೊಡುತ್ತಾನಾದದರಿಂದಲೂ ತನ್ನ ಕಾಲಾನಂತರ ಜನಗಳು ತನ್ನ ನಿಷ್ಟಕ್ಕಾಗಿ ಚಿಂತಿಸುವಂತೆ ವರ್ತಿಸಬೇಕಾದ್ದು ಮಾನುಷತ್ವ ಪ್ರಕೃತನಿಗೆಲ್ಲ ಅವಶ್ಯಕವೆಂಬದನ್ನು ಅನವರತರೇ ಆಲೋಚಿಸಿ ತಿಳಿದುಕೊಳ್ಳಬಹುದು.

THE CITY MUNICIPALITY

ಇಲ್ಲಿನ ಪಟ್ಟಣ ಮ್ಯುನಿಸಿಪಲ್ ಏರ್ಪಾಡುಗಳು ಕುರಿತು ಇವರಡಿ ಕುಂದಾದೆ ನಮಗೆ ಒಬ್ಬ ಬಾತ್ಮೀದಾರನು ಬರೆಯುತ್ತಾನೇನೆಂದರೆ.—

ಈ ಬೆಂಗಳೂರು ಪಟ್ಟಣದ ವೈಲಕ್ಷಣ್ಯವು ಅಪೇಕ್ಷಿಸುವ ನಾಗರಿಕರಿಗೆಲ್ಲ ಅತ್ಯಂತಸಂತೋಷವುಂಟಾಗುವಂದದಿ ಇಲ್ಲಿನ ಮ್ಯುನಿಸಿಪಾಲಿಟಿಯವರು ಬಹಳ ಜಾಗರೂಕತೆಯಿಂದಲೂ ಶ್ರದ್ಧೆಯಿಂದಲೂ, ಅನೇಕ ವಿಷಯಗಳನ್ನು ಕ್ರಮಕ್ಕೆ ತರುತಲಿದಾರೆ. ಮೊದಲು ಬೀದಿಗಳನ್ನೂ, ಬಳಿಕ ಮೋರಿಗಳನ್ನೂ, ತರುವಾಯ ಮನೆಗಳನ್ನೂ, ಅನಂತರ ಕೆರೆಕುಂಟೆಗಳನ್ನೂ, ಆಮೇಲೆ ಪಾಯಖಾನೆಗಳನ್ನೂ ಪರಿಷ್ಕರಿಸುವದರೊಳು ನಿರತರಾಗಿದಾರೆ. ಈವ್ಯೂರಲ್ಲಿ ಸುಚರಿಸತಕ್ಕವರ ನೇತ್ರಗಳಿಗೆ ಆನಂದವನ್ನುಂಟುಮಾಡುವದಕ್ಕೋಸ್ಕರ ಸದರೀ ಮ್ಯುನಿಸಿಪಾಲಿಟಿಯವರು ನಾನಾವಿಧ ತರದೂದುಗಳಿಂದ ಈ ಪಟ್ಟಣದ ಪೂರ್ವರೂಪವು ಕ್ರಮೇಣವುದ್ವಾಂಗ ಬದಲಾಯಿಸಬಹುದಾಗಿದೆ. ಅವರವರುಹನತ್ತಿಗೂ ಅಭಿರುಚಿಗೂ ತಕ್ಕಂತೆ ಅವರಿಗೆ ಅಪೋಹನಪತ್ತಿಯನ್ನುಂಟುಮಾಡುವದರಲ್ಲಿ ಸರ್ಕಾರದವರು ಅತ್ಯುತ್ಸಾಹಿಗಳಾಗಿದಾರೆ. ಈಗ ಈವ್ಯೂರಿನ ಧರ್ಮಾಂಬುದಿಕೆರೆಯ ವಿಷಯದೊಳು ಯೇರ್ಪಡಿಸಲ್ಪಟ್ಟಿರುವ ಕ್ರಮಗಳನ್ನು ನೋಡುವಲ್ಲಿ ಇದನ್ನು ಪೂರ್ವದ ಕೆರೆಯೆಂದು ಹೇಳಕೂಡದ್ದಾಗಿದೆ. ವಕ್ರಗಳಾಗಿದ್ದ ಕಟ್ಟೆಯ ಮೇಲ್ಭಾಗದ ರಸ್ತೆಗಳೀಗ ಕ್ರಮಪಡಿಸಲ್ಪಟ್ಟು ರಾಜ ಸಂಚಾರಯೋಗ್ಯಗಳಾಗಿವೆ. ಪಶ್ಚಿಮದ ಕಡೆಯೊಳು ಈಚೆಗೆ ರಚಿಸಲ್ಪಟ್ಟಿರುವ ಶ್ರೀನಿವಾಸ ಘಟ್ಟವು ಅತಿ ರಮಣೀಯವಾಗಿದೆ. ಈಗ ನಿರ್ಮಿಸಲ್ಪಟ್ಟಿರುವ ಜಲವಸತಿಯು ದೆಸೆಯಿಂದ ಕೆರೆಯು ಬಹಳಮಟ್ಟಿಗೆ ಜಲರಾಶಿಯಿಂದ ಉತ್ಕೃಷ್ಟವಾಗಿದೆ. ದಕ್ಷಿಣಪಕ್ಕದ ಕಟ್ಟೆಯ ಕೆಳಭಾಗದೊಳು ಕಲ್ಪಿತವಾದ ಆರಾಮವು ಅಕರ್ಷಕವಾಗಿದೆ. ಅಲ್ಲಿಯಲ್ಲಿ ಕಟ್ಟಲ್ಪಟ್ಟಿರುವ ಸೋಪಾನಗಳೂ, ಕಲ್ಪಿತವಾದ ಪುಷ್ಪವಾಟಿಕೆಗಳೂ, ಬಹಳ ಮನೋಹರವಾಗಿರುತಿವೆ. ಮುಖ್ಯವಾಗಿ ಅಲ್ಲಿನ ಸನ್ನಿವೇಶದಿಂದ ಮುಂದೆ ಬರುವ ಗ್ರೀಷ್ಮ ಋತುವನ್ನು ಊಹಿಸಿನೋಡಿದರೆ ಅದು ಮಹಾಕವಿವಾಕ್ಯ ಒಂದನ್ನು ಸ್ಮರಣೆಗೆ ತಾರದಿರುವದಿಲ್ಲವು, ಅದು ಯಾವದೆಂದರೆ—

> ಸುಭಗಸಲಿಲಾವಗಾಹಾಃಪಾಟಲಸಂಸರ್ಗ
> ಸುರಭಿವನವಾತಾಃ ಪ್ರಚ್ಛಾಯಸುಲಭ
> ನಿದ್ರಾದಿವಸಾಃಪರಿಣಾಮರಮಣೀಯಾಃ॥

ಉಪಭೋಗಾರ್ಹವಾದ ಈ ಒಂದು ಪ್ರದೇಶ ಸೌಕರ್ಯದಿಂದ ಇತರವಿಧ ನಿರ್ಬಂಧದಮನಾವು ಮರೆಯಬೇಕಾಗಿದೆಯೇ ಹೊರತು ಗೃಹಾಭಿಮುಖವಾಗಿ ಹಿಂದಿರಿಗಿದ ಕೂಡಲೇ ಅಪರ್ಯಾಪ್ತವಾದ ನಿರ್ಬಂಧ ಪರಂಪರೆಗಳು ಕಣ್ಣುಮುಂದೆ ಸಾಲಾಗಿ ನಿಂತು, ಪೂರ್ವಕ್ಷಣದ ಸುಖ ಸಂತೋಷಗಳನ್ನೆಲ್ಲ ಕ್ಷಣದೊಳು ನಿರ್ಮೂಲವಾಡತಕ್ಕವಾಗಿರುತಿವೆ. ಪಟ್ಟಣದೊಳಗೆ ಜನಸಂಚಾರಗಳಾಗಿದ್ದ ಕಾಲುದಾರಿಗಳೆಲ್ಲವೂ ರಾಜಮಾರ್ಗಗಳಾಗಿ ಪರಿಣಮಿಸಿದವು ಅನೇಕ ಸಹಸ್ರ ರೂಪಾಯಿಗಳ ವ್ಯಯದಿಂ ಕಟ್ಟಲ್ಪಟ್ಟ ಕಾಲುವೆಗಳೆಲ್ಲವೂ, ಸೋಪಾನಾವಳಿಗಳಾಗಿ ಪರಿಣಮಿಸಿದವು. ಪರಿಶೇಷಾತ್ ಇವು ಅಸ್ಪೃಶ್ಯವಾದವು. ಈಸ್ಥಿತಿಯಲ್ಲಿ ಜಲದೌರ್ಲಭ್ಯವು ಕುರಿತು ಎಷ್ಟು ಚಿಂತಿಸಿದರೂ ಸಾಲದೆಂದಿದೆ. ಮಡಿ ಶಬ್ದಕ್ಕೆ ಮಡಿವಾಳ ತಂದಿಟ್ಟ ಸಬನೆ ಬಟ್ಟಗಳೆಂದು ಅರ್ಥಮಾಡಿಕೊಂಡು ಉಪಯೋಗಿಸಿಕೊಂಡಾಗ್ಯೂ ಶರೀರ ಗತವಾದ ಕಶ್ಮಲ ನಿವಾರಣೆಕ್ಕೆ ಅನವಕಾಶವಾಗಿದೆ. ಪುರುಷರಸ್ಥಿತಿ ಹ್ಯಾಗಾದರೂ ಇರಲಿ, ಇನ್ನು ನಿರ್ಭಾಗ್ಯರಾದ ಸ್ತ್ರೀಯರ ಪರಿತಾಪವು ಚಿಂತಿಸಿದರೆ ಅದು ಅಪ್ರತೀಕಾರವಾಗಿದೆ. ರನ್ನು ಒಚ್ಚಲು ಮನೆಯ ಒಲೆಯ ಮೇಲಿರುವ ತಾಂಬ್ರವರ್ಣಿಯಲ್ಲಿಯೇ ಬಿಟ್ಟು ಸ್ನಾನವು ತೀರಿಸಿಕೊಳ್ಳುವಷ್ಟು ಅನುಕೂಲ್ಯವುಳ್ಳವರು ಕುರಿತಾಗಲಿ, ಅಂಗರಕ್ಷಕರು ಮತ್ತು ರಥಾದಿಯಾನ ಸೌಕರ್ಯಗಳುಳ್ಳವರು ಕುರಿತಾಗಲಿ ನಾವು ಈಗ ವಿಚಾರ ಮಾಡಲಾರಂಭಿಸಲಿಲ್ಲವು, ಪರಂತು ವೃದ್ಧಾಜವರಾಗಿಯೂ ವರ್ತಮಾನ ಕಾಲಿಕ ನಾಗರಿಕ ಶೂನ್ಯರಾಗಿಯೂ ಸ್ವಭಾವತಃ ಮಾನಿಗಳಾಗಿಯೂ ಇರತಕ್ಕ ರಿಕ್ತ ಸ್ತ್ರೀಯರ ಅನಾನುಕೂಲ್ಯವು ಹೇಳಲಶಕ್ಯವಾಗಿದೆ. ಇವರಿಗೆ ದೂರ ಪ್ರದೇಶಕ್ಕೆ ಹೋಗಲು ಶಕ್ತಿ ಸಾಲದು, ಒಂದುವೇಳೆ ಹೋದಾಗ್ಯೂ ನೀರು ದೊರೆಯುವದಿಲ್ಲವು, ಹಾಗೂ ಒಂದುವೇಳೆ ಯಿದ್ದು ಹೋದರೆ ಮಾನದೊಡನೆ ಮನೆಸೇರಬಹುದೆಂಬ ಪ್ರತ್ಯಾಶೆ ಯಿಲ್ಲದೆಯಿದೆ. ಇಂತಾ ನಿರ್ಭಾಗ್ಯರೇನು ಮಾಡಬೇಕೋ ನಾವರಿಯವು. ಇತರ ವಿನಯಿಕಗಳಾದ, ಅಂದರೆ, ಕ್ರಿಕೆಟ್, ಗೌಂಡೆ, ಲಾನ್‌ಟೆನಿಸ್‌ಕೋರ್ಟ್, (ಚೆಂಡಾಡುವ ಪ್ರದೇಶ) ಬ್ಯಾಂಡ್ ಮೊದಲಾದ ಭೋಗೋಪಕರಣಗಳಿಂದ ಸದರೀ ಪಾಮರ ಸ್ತ್ರೀಯರಂ ಸಂತೋಷ ಗೊಳಿಸುವದೆಂದರೆ ಅಸಾಧ್ಯವಾಗಿದೆ. ಅವರಿಗೆಷ್ಟು ವಿಧದಿಂದ ಹೇಳಿದರೂ ತಮ್ಮಜಡತೆಯಿಂದಿರದೆ ಸ್ನಾನ ಪಾನಕ್ಕೆ ಅನುಕೂಲ್ಯಕ್ಕೆ ಕಲ್ಪಿಸಿಕೊಳ್ಳಬೇಕೆಂತಲೂ, ಮಡಿ ಉಟ್ಟುಕೊಬೇಕೆಂತಲೂ, ತನಲೆ ಚೆಂಬುಗಳಂ ತೊಳೆಯಬೇಕೆಂತಲೂ, ಮೈಲಿಗೆ ಕೂಡದೆಂತಲೂ, ವಿಪರೀತ್ಯಾ ಅನುಚಿತವಾಕ್ಯಗಳಿಂದ ಬೇಸರಿಕೆಯನ್ನುಂಟುಮಾಡುತ್ತಾರೆ. ಈನಿರ್ಭಾಗ್ಯರ ಗೋಳನ್ನು ತೀರಿಸುವದಕ್ಕೆ ತಕ್ಕಯೇರ್ಪಾಡನ್ನು ಯಥೋಚಿತ ಮಾಡಿದರೆ ತತ್ಕಾಲಿಕ ಅಪರ ಬಾಯಿಮುಚ್ಚಿ ಬಳಿಕ ನಾವು ಕೆರೆ ಕೆಳಗಣ ಉದ್ಯಾನವನದಲ್ಲಿ ಕೌತುಕ ಲೀಲಾವಿಧಿಗಳಿಂದ ನಮ್ಮ ಕಾಲವು ಕಳೆಯಬಹುದೆಂದು ತೋರುತಿದೆ.

Occasional Notes

ನೈಮಿತ್ತಿಕವಿಷಯನ್ಯಾಸ

A rumour.—ಪದಭ್ರಷ್ಟರಾದ ಬರ್ಮಾ ಅರಸರವರಿಗೆ ಸಾಲೀಯಾನಾ ಆರು ಲಕ್ಷ ರೂಪಾಯಿಗಳು ಖರ್ಚಿಗೆ ಕೊಡಲ್ಪಡುವವೆಂದು ಒಂದು ಪ್ರವಾದ ವುಂಟಾಗಿದೆ

The High Court of Calcutta.—ಕಲ್ಕತ್ತಾ ಹೈಕೋರ್ಟಿನ ಚೀಫ್ ಜಸ್ಟಿಸ್ ಯವರಾದ ಸರ್ ರಿಚ್ಚರ್ಡ್ ಗಾರ್ತ್‌ಯವರು, ಬರುವ ತಿಂಗಳ ೨೮ನೇ ತಾರೀಖಿನಲ್ಲಿ ಸ್ವದೇಶ ಗಮನಾರ್ಥ ಸನ್ನಾಹ ಮಾಡುತಲಿದಾರೆ

A liberal subscription.—ಸಂಡೂರ್ ದೇಶದ ಅರಸು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಯೇರ್ಪಡಿಸಲ್ಪಟ್ಟಿರುವ ಕಾಲೇಜಿನ ಫಂಡಿಗೆ ಜೆಂಬು ಸಂಸ್ಥಾನದ ಅರಸರವರು ೫೦,೦೦೦ ರೂಪಾಯಿಗಳುಕೊಟ್ಟಿರುತ್ತಾನೆ.

A liberal donation.—ನೇಪಾಳ ದೇಶದ ಪ್ರಧಾನ ಮಂತ್ರಿಯವರಾದ ಮಹಾರಾಜಾ ಸರ್ ಜಂಗ್‌ಬಹದೂರ್‌ಜಂಗ್ ರಾಣಾ ಬಹದೂರವರು, ಹಿಂದೆ ತಾವು ವಿದ್ಯಾಭ್ಯಾಸ ಮಾಡಿದ ಕಲ್ಕತ್ತೆಯಲ್ಲಿ ಡಿವೋಟನ್ ಕಾಲೇಜಿಗೆ ಸಹಾಯಾರ್ಥ ೫,೦೦೦ ರೂಪಾಯಿಗಳು ಕೊಟ್ಟರೆಂದು ತಿಳಿಬಂದಿರುತದೆ.

An important Meeting.—ಬರುವ ಮಾರ್ಚಿ ಗುರ್ತ್ ತಾರೀಖ್ ಮೊದಲು ಮೂರುದಿನಗಳ ಕಾಲ, ಪಡಿವಾರ್ ಸಂಸ್ಥಾನದಲ್ಲಿ, ವ್ಯವಸಾಯ ವಿಷಯವನ್ನು ಕುರಿತು ಆಲೋಚಿಸತಕ್ಕಬಗ್ಗೆ ಒಂದು ಸಮಾಜ ಸೇರುವದು. ಕಾಪ್ನಾಡ ದೇಶದ ಪ್ರಮುಖರೆಲ್ಲರು ಅದಕ್ಕೆ ಸಹಾಯಕರಾಗುವದಾಗಿ ವಾಗ್ದಾನ ಮಾಡಿರುವದರಿಂದ ಬೃಹತ್ ಸಮಾಜ ಸೇರಬಹುದೆಂದು ನಿರೀಕ್ಷಿಸಲ್ಪಟ್ಟಿದೆ

The Viceroy's tour.—ವೈಸ್‌ರಾಯ್ ಯವರು ಮದರಾಸಿಗೆ ಬಂದು ವಾಪಸ್ ಹೋಗುವ ಕಾಲಕ್ಕೆ ಸರಿಯಾಗಿ ಹೈದರಾಬಾದ್ ಪ್ರಾಂತದೊಳು ಬಿಸಿಲು ಚುರುಕಾಗಿರುವದಾಗಿ ಅಲ್ಲಿಗೆ ಹೋಗುವದಿಲ್ಲವೆಂದು ನಿಶ್ಚಯ್ ಆಯಿತು. ವೈಸ್‌ರಾಯ್ ಯವರು ಸಮುದ್ರ ಮಾರ್ಗದಲ್ಲಿ ಕಲ್ಕತ್ತೆಗೆ ವಾಪಸ್ ಹೋಗಬೇಕೆಂದು ಯೋಚಿಸಿ ಇರುತ್ತಾರೆ, ಎಂದು ಪಸ್ನೈರ ದರ್ಪ ಪತ್ರಿಕೆ ಯೊಂದು ತಿಳಿಸುತದೆ.

The Commander-in Chief of Baroda.—ಬರೋಡೇ ಸಂಸ್ಥಾನದ ಸೇನೆಯ ಕಮಾಂಡರ್ ಇನ್ ಚೀಫ್‌ಕೆಲಸವು ಈಚೆಗೆ ಕೆಲವು ದಿನಗಳವರೆವಿಗೂ ಖಾಲೀಯಾಗಿದ್ದದರಿಂದ ಅದಕ್ಕೆ ಗಾಯಕ್ವಾಡಿಯವರ ಅಣ್ಣಂದಿರು ನಿಯಮಿಸಲ್ಪಟ್ಟರು. ಮಹಾರಾಜರವರು, ತಮ್ಮ ಸಹೋದರರೂ ದಾಯಾದಿಗಳೂ ವ್ಯರ್ಥವಾಗಿ ಕಾಲವನ್ನು ಕಳೆಯಬಾರದೆಂದು ಆಲೋಚಿಸಿ ಅವರೆಲ್ಲರಿಗೂ ಸಂಸ್ಥಾನದಲ್ಲಿ ದೊಡ್ಡ ದೊಡ್ಡ ನೌಕರಿಗಳಂ ಕೊಡಬೇಕೆಂದು ಯೋಚಿಸಿರುವಂತೆ ತಿಳಿಯಬರುತಿದೆ.

A report contradicted.—ಇಂಡ್ಯಾಗವರ್ನ್‌ಮೆಂಟಿನವರು ಇಂಡ್ಯದೇಶದ ನೇಟಿವ್ ಸೇನೆಯನ್ನು ವಿಮರ್ಶೆಯಿಂದ ಮರಳಿ ಯೇರ್ಪಾಡು ಮಾಡಬೇಕೆಂದು ಆಲೋಚಿಸುತಲಿದಾರೆಂದು ನೇಟಿವ್ ವೃತ್ತಾಂತಪತ್ರಿಕಾಕಾರರಲ್ಲಿ ಕೆಲವರು ಅಗಿಂದಾಗ್ಯೆ ಪ್ರಸ್ತಾಪಿಸುವದುಂಟು, ಕಲ್ಕತ್ತೆಯ ಇಂಗ್ಲಿಷಮ್ಯಾನ್ ಪತ್ರಿಕೆಯು, ಅಂತಾ ಅಭಿಪ್ರಾಯವು ಇಂಡ್ಯಗವರ್ನ್‌ಮೆಂಟಿಗೆ ಸುತರಾಂ ಇಲ್ಲವೆಂತಲೂ, ಮೇಲಿನ ಪ್ರವಾದ ನಿರಾಧಾರವಾದದ್ದೆಂತಲೂ ಸಂಪೂರ್ಣ ನಂಬಿಕೆಗೆ ಪಾತ್ರವಾದ ಮೂಲ ದಿಂದ ತಿಳಿಯಬರುವದಾಗಿ ಹೇಳುತಿದೆ.

The Indian and Colonial Exhibition.—ಇಂಡ್ಯದೇಶದಲ್ಲಿಯೂ ಮತ್ತು ಮಹಾರಾಜ್ಞೀಯವರ ಅಧಿಕಾರಕ್ಕೆ ಹೊಸದಾಗಿ ಸೇರಿದ ದೇಶಗಳಲ್ಲಿಯೂ ತಯಾರಾಗತಕ್ಕ ಪದಾರ್ಥಗಳ ಪ್ರದರ್ಶನಕ್ಕಾಗಿ ಈಗ ಲಂಡನ್ ಪಟ್ಟಣದೊಳು ಸ್ಥಾಪಿತವಾಗಿರುವ ಶಾಲೆಗೆ ರತ್ನಗಳು ಕಳುಹಿಸಿಕೊಡುವಂತೆ ಸಿಲೋನ್‌ದ್ವೀಪದ ವರ್ತಕರನ್ನು ಪ್ರೋತ್ಸಾಹ ಗೊಳಿಸುವ ವಿಷಯದಲ್ಲಿ ಪ್ರಯತ್ನಗಳು ನಡೆದು ಅದು ಸ್ವಲ್ಪಮಟ್ಟಿಗೆ ಕೈಗೂಡಿದಂತೆ ಕಾಣುತಿದೆ. ಅಲ್ಲಿನ ವರ್ತಕರು ಭಾರೀ ಬೆಲೆಯುಳ್ಳ ಮುತ್ತುಗಳು, ಪಚ್ಚೆಗಳು, ಮುತ್ತು ಗೋಮೇಧಿಕಗಳು ಅಲ್ಲಿಗೆ ಕಳುಹಿಸಿ ಕೊಡುವದಾಗಿ ವಾಗ್ದಾನ ಮಾಡಿರುತ್ತಾರೆ.

Enhancement of house tax in Calcutta.—ಕಲ್ಕತ್ತೆಯಲ್ಲಿ ಮನೆ ಕಂದಾಯವನ್ನು ನೂರಕ್ಕೆ ಹತ್ತರವರೆಗೆ ಹೆಚ್ಚಿಸಬೇಕೆಂದು ನಿರ್ಣಯವಾಗುವದಾಗಿ ಸ್ಥಳಿಕ ಗವರ್ನ್‌ಮೆಂಟಿನವರು ತೀರಿಸಿರುತ್ತಾರಾಗಿ ಹಾಗೆ ಮಾಡುವದು ಅನುಚಿತವೆಂದು ಅವರಮೇಲೆ ಆಕ್ಷೇಪಿಸಬೇಕೆಂದು ಯೋಚಿಸಲ್ಪಟ್ಟಿರುವದಾಗಿಯೂ, ಮ್ಯುನಿಸಿಪಲ್ ಕಮಿಷನರ್‌ಗಳಲ್ಲಿ ಕೆಲವರು ಇದಕ್ಕೆ ಪ್ರಯತ್ನಪಡುತಲಿದಾರೆಂತಲೂ, ಇಂತಾ ವಿಚಾರವನ್ನು ಕುರಿತು ಪಾರ್ಲಿಮೆಂಟ್ ಸಮಾಜದ ಪ್ರತಿ ಉಭಯ ಸಭೆಯವರಿಗೂ ಅರ್ಜಿ ಬರೆದುಕೊಳ್ಳಬೇಕೆಂದು ಆಲೋಚನೆಯುಂಟಾಗಿರುವದಾಗಿಯೂ ಒಂದಾನೊಂದು ಪತ್ರಿಕೆ ಹೇಳುತಿದೆ.

The Indian Copyright Bill.—ಇಂಡ್ಯದೇಶದಲ್ಲಿ, ಗ್ರಂಥಕರ್ತರಿಗೆ ತಾವು ರಚಿಸುವ ಗ್ರಂಥಗಳಲ್ಲಿನ ಬಾಧ್ಯತೆಯನ್ನು ಕಾಪಾಡಿಕೊಳ್ಳುವ ವಿಷಯದಲ್ಲಿ ಕಾಪಿರೈಟ್ ಆಕ್ಟ್ ಯೆಂಬ ಒಂದು ಕಾನೂನ್ ಸನ್ ೧೮೪೭ ಜಾರೀಯೊಳಿರುತಿದೆಯಷ್ಟೆ, ಸದರೀ ಕಾನೂನಿನ ನಿಬಂಧನೆಯಿಂದ ಈಚೆಗೆ ಹುಟ್ಟಿದ ಮಸವಿದಾ ಆಕ್ಟಿನ ವಿಷಯವು ಕುರಿತು ಇಂಡ್ಯ ಸ್ಟೇಟ್ ಸೆಕ್ರೆಟರಿಯಾಗಿದ್ದ ಲಾರ್ಡ್ ರಾಂಡಾಲ್‌ಪ್ ಚರ್ಚಿಲ್‌ಯವರು, ಇಂಡಿಯಾಗವರ್ನ್‌ಮೆಂಟಿಗೆ ಬರೆದ ಕಾಗದದಲ್ಲಿ, ಇಂಗ್ಲಿಷ್ ಗವರ್ನ್‌ಮೆಂಟಿನವರು ಪಾರ್ಲಿಮೆಂಟ್ ಸಮಾಜದವರ ಮುಂದಿಡುವದಕ್ಕೋಸ್ಕರ ಅದೇರೀತಿ ಒಂದು ಕಾನೂನನ್ನು ತಯಾರ್ಮಾಡುತಲಿರುವದರಿಂದ ಇಂಡ್ಯ ಗವರ್ನ್‌ಮೆಂಟಿನವರು ಸ್ವಲ್ಪಕಾಲದವರಿವಿಗೆ ತಡೆದಿರುವದುಚಿತವೆಂದು ತಿಳಿಸಲು ಇಲ್ಲಿನ ಪ್ರಯತ್ನ ಸದ್ಯಃ ಮಸ್ಸಾದವಾಗಲ್ಪಟ್ಟಿವೆ.

The ex-King of Burmah.—ಬರ್ಮಾರಾಜ್ಯದ ಅರಸರಾದ ಥೀಬಾಯವರ ಭಾರ್ಯೆಯವರು ಈಗ ಗರ್ಭಿಣಿಯಾಗಿರುತ್ತಾರೆಯಷ್ಟೆ. ಮುಂದೆ ಪುತ್ರೋತ್ಸವವಾಗುತದೆ ಯೆಂಬ ನಿರೀಕ್ಷಣೆಯಿಂದ ಅದನ್ನು ಜನನಕಾಲದಲ್ಲಿ ರತ್ನಖಚಿತವಾದ ಸ್ವರ್ಣತಟ್ಟೆಯಲ್ಲಿ ಹಿಡಕೊಳ್ಳಬೇಕೆಂಬ ಕುತೂಹಲದೊಡನೆ ೧೫,೦೦೦ ರೂಪಾಯಿಗಳ ಕ್ರಯಬಾಳುವಷ್ಟು ಚಿನ್ನವೂ ವಜ್ರಕೆಂಪುಗಳೂ ಪಿ. ಆರ್ ಅಡ್ರಿಯನ್ ಕಂಪೆನಿಯವರ ವಶಕ್ಕೆ ಕೊಟ್ಟು ಒಂದು ತಟ್ಟೆ ಮಾಡುವಂತೆ ಹುಕುಂ ಕೊಟ್ಟಿರುವತೆಯೂ,ಅದರ ಆಗುವದು ನಾಲ್ವತ್ತೈವತ್ತು ಸಾವಿರ ರೂಪಾಯಿಗಳ ವರಿವಿಗೆ ಅಂದಾಜಾಗಿದೆಯೆಂತಲೂ, ಬರ್ಮಾ ಸಂಸ್ಥಾನದ ಪದ್ಧತಿಯನ್ನನುಸರಿಸಿ, ಶಿಶು ಜನನ ವಾದಮೇಲೆ ಸದರೀ ತಟ್ಟೆಯು ಸೂಲಗಿತ್ತಿಗೆ ಇನಾಂ ಕೊಡಲ್ಪಡುವದೆಂತಲೂ, ಸೂಲಗಿತ್ತಿ ಕೆಲಸಕ್ಕೆ ಮಿಸ್ಟ್ರೆಸ್ ತಾ

ಸ್ಟರ್ ಷಾರ್ಲೀಟ್ ಯವರು ಮೊಕದ್ದಮ್ಮೆ ಹೂಡಲ್ಪಟ್ಟ ದಾದಿತಲೂ, ಅಯಿವತ್ತು ಸಾವಿರ ರೂಪಾಯಿಗಳ ಇನಾಮನ್ನು ಪಡಕೊಂಡು ಹೋಗುವದಕ್ಕೆ ಶ ಕ್ಯಂತೆ ಮಿಸ್ಟ್ರೆಸ್ ಷಾರ್ಲೀಟ್ ಯವರ ಪ್ರಯತ್ನವು ಅನುಕೂಲ ವಾದರೆ ಆಕೆಯು ಭಾಗ್ಯವು ಕೊಂಡಾಡಲ್ಪಡತಕ್ಕದ್ದೆಂತಲೂ ಒಂದಾನೊಂದು ಪತ್ರಿಕೆ ಹೇಳುತದೆ.

The annexation of Upper Burmah ಕಳೆದ ಡಿಸುಂಬರ್ ತಿಂಗಳ ೩೧ನೇ ತಾರೀಖಿನಲ್ಲಿ ಇಂಧ್ಯದೇಶದ ಸ್ಟೇಟ್ ಸೆಕ್ರೆಟರಿಯವರು ವೈಸ್ ರಾಯ್ ಯವರಿಗೆ ಕಳುಹಿಸಿದ ಒಂದು ದಸ್ತಾವೇಜಿನ ಆಖೈರುಭಾಗದಲ್ಲಿ, ಬರ್ಮಾ ರಾಜ್ಯದ ವಿಷಯದೊಳು ಬರೆಸಲ್ಪಟ್ಟಿರುವ ಪ್ರಕೃತ ಸಲ್ಪಾದು ಕುರಿತು ತಿಳಿಸುತ್ತಾರೇನಂದರೆ—"ಥೀಬಾ ಅರಸರವರು ಪದಭ್ರಷ್ಟರಾಗಿ ಮಾಡಲ್ಪಟ್ಟದರಿಂದಲೇ ನಿರ್ವಾಹ ವಿಲ್ಲದ ಬರ್ಮಾ ದೇಶವನ್ನು ಮಹಾರಾಜ್ಞೀಯವರ ರಾಜ್ಯಗಳಿಗೆ ದಾಖಲ್ಮಾಡಬೇಕಾಯಿತು. ಇವಕ್ಕೆ ಅನ್ಯಥಾ ಯಾವವಿಧ ಏರ್ಪಾಡು ಮಾಡಿದ್ದಾಗ್ಯೂ, ಯಾವವಿಧ ಕೆಡುಕುಗಳನ್ನು ಅಡಗಿಸುವ ಉದ್ದೇಶವುಳ್ಳ ಇಂಧ್ಯ ಗವರ್ನಮೆಂಟಿನವರು ಹಲವು ಸಂವತ್ಸರಗಳ ಕಾಲ ನಿಷ್ಫಲವಾಗಿ ಪ್ರಯತ್ನ ಪಡುತಲಿದ್ದರೋ ಅಂತಾ ಕೆಡುಕುಗಳೆಲ್ಲವು ಮರಳಿ ಪ್ರಸ್ತಾಪಿಸ್ಪಲ್ಪಡದೇ ಇರುವದೆಂಬದರೊಳಗೆಸ್ಟು ಮಾತ್ರವೂ ಸಂಶಯವಿಲ್ಲವು. ಇಂಗ್ಲೀಷ್ ಸಂಸ್ಥಾನದವರ ದೂರದೂರಿನವೂ, ಕಷ್ಟನಷ್ಟವೂ, ಬ್ರಿಟಿಷ್ ಪ್ರಜೆಗಳು ಅನುಭವಿಸುತಲಿದ್ದ ಬಾಧೆಯೂ, ಬ್ರಿಟಿಷ್ ವ್ಯಾಪಾರ ನಿರೋಧವೂ, ಅಣ್ಯ ಸಂಸ್ಥಾನದವರ ಒಳಸಂಚುಗಳೂ, ಶುದ್ಧಾಂಗವಾಗಿ ಮತ್ತು ಸ್ಥಿರವಾಗಿ ಬರ್ಮಾ ರಾಜ್ಯದಲ್ಲಿ ನಿವಾರಣವಾದವು. ಈ ನೂತನವಾದ ಬ್ರಿಟಿಷ್ ರಾಜ್ಯಗಳಲ್ಲಿ ನಾನಾವಿಧ ಪ್ರತಿಬಂಧಕಗಳ ಮಧ್ಯೆ ಪರಿಗಣಿಸಿಯಾಗಿರುವಂತಾ ವ್ಯಾಪಾರಾಭಿವೃದ್ಧಿಯೂ, ಐಶ್ವರ್ಯವೂ ಸುಭಿಕ್ಷವೂ, ಎಮತೀ ಪಟ್ಟಣದ ಪ್ರಜೆಗಳ ಸಂತೃಪ್ತಿಕ್ಕೆ ಕಾರಣವಾಗಿದ್ದ ಅಶಾಂತತ್ವಕ್ಕೆ ಬದಲು ಕ್ರಮೇಣ ನೆಲೆಗೊಳ್ಳಬಹುದೆಂದು ನಿರೀಕ್ಷಿಸಬಹುದೆಂಬದು.

Award of medals.—ಇವರಲ್ಲಿ ಬರುವ ಅಭಿಪ್ರಾಯವು ಇಂಧ್ಯ ದೇಶದಲ್ಲಿನ ಎಲ್ಲಾ ವೈದ್ಯ ಶಾಲೆಗಳ ವಿದ್ಯಾರ್ಥಿಗಳಿಗೆ ತಿಳಿಸಲ್ಪಟ್ಟಿದೆ, ಗವರ್ನಮೆಂಟು ಆಫೀಸ್ ಕೆಳಕೆ ೩೧ನೇ ಜನವರಿ ೧೮೮೬. ಆಯಾ, ಮಹಾರಾಜ್ಞೀ ಇಂಧ್ಯ ಚಕ್ರವರ್ತಿನೀ ಯವರು, ಇಂಧ್ಯ ದೇಶದ ವೈದ್ಯ ಶಾಲೆಗಳಲ್ಲಿ ಓದಿ ಲೈಸೆನ್ಸು ಹೊಂದುವ ಸ್ತ್ರೀಯರ ಪರೀಕ್ಷೆಗೆ ಹೋಗುವರಿಗೆ ಅವರ ಯೋಗ್ಯತಾನುಸಾರ ಮೆಡಲುಗಳ ಒಂದು ಬಹುಮಾನ ಕೊಡಬೇಕೆಂಬ ತಮ್ಮ ಅಭಿಪ್ರಾಯವನ್ನು ಲೇಡಿ ಡಫರಿನ್ ಯವರಿಗೆ ತಿಳಿಸಿದ್ದರಿಂದ ಲೇಡಿ ಡಫರಿನ್ ರವರು ಬೆಳ್ಳಿ ಮೆಡಲುಗಳನ್ನು ಕೊಡಬೇಕೆಂದು ಶಿಫಾರಸು ಮಾಡಿದ್ದರಿಂದ ಸೆನೇಟ್ ಕಮಿಟಿಯವರು ಇಟ್ಟಿರುವ ಅಭಿಪ್ರಾಯವನ್ನು ತಮಗೆ ತಿಳಿಸುವುದು, ಇಂಧ್ಯ ದೇಶದ ಹೆಂಗಸರಿಗೆ ವೈದ್ಯಕೀಯ ಶಿಕ್ಷಣಕ್ಕೆ ಸಹಾಯಕರಾದ ಸಭೆಯ ಪರವಾಗಿ ಮತ್ತು ಸದರಿ ಮೆಡಲುಗಳನ್ನು ಕೊಡಬೇಕಾದ ರೀತಿಯನ್ನು ನಿಶ್ಚಯಿಸಲು ಹೇಳಲ್ಪಟ್ಟಿರುವ ಸ್ಕಾಲರ್‌ಶಿಪ್ ಅಸಿಸ್ಟೆಂಟ್ ಸರ್ಜನ್ ತರಗತಿಯಲ್ಲಿ ಓದಿದ ಹೆಂಗಸರು ಅಸ್ಸಿಸ್ಟೆಂಟ್ ಅಪಾತಿಕೆರಿ ಪರೀಕ್ಷೆಯಲ್ಲಿ ಸರ್ಜರಿ, ಮೆಡಿಸಿನ್, ಮತ್ತು ಮಿಡ್‌ವೈಫರಿ ಮುಂತಾದ ಶಾಸ್ತ್ರಗಳಲ್ಲಿ ಹಿಯರಿ, ಹಾಸ್ಪಿಟಲ್ ಪ್ರಾಕ್ಟಿಕಲ್ ಪರೀಕ್ಷೆಯಲ್ಲಿ ಸರ್ವೋತ್ಕೃಷ್ಟ ಯೋಗ್ಯತೆಯುಂಟಾದವರಿಗೆ, ಒಂದೊಂದು ಯೂನಿವರ್ಸಿಟಿಗೆ ಒಂದೊಂದರ ಮೇರೆ, ಮಹಾರಾಜ್ಞೀ ಇಂಧ್ಯ ಚಕ್ರವರ್ತಿನೀ ಮೆಡಲ್ ಎಂಬ ಹೆಸರಿನಿಂದ ಚಿನ್ನದ ಮೆಡಲುಗಳು ಕೊಡಲ್ಪಡುವವು. ಘನವೆತ್ತ ವೈಸ್‌ರಾಯ್ ಯವರು ಅಯಿದು ಬೆಳ್ಳಿ ಮೆಡಲುಗಳು ನ್ಯಾಷನಲ್ ಅಸೋಸಿಯೇಷನ್ ಸಭೆಯವರ ಮಾರ್ಗವಾಗಿ ಕೊಡುವದಾಗಿ ಹೇಳಿರುತ್ತಾರೆ. ಅವನ್ನು ಸೆನೆಟ್ ಕಮಿಟಿಯವರು, ಆಗ್ರಾ, ಕಲ್ಕತ್ತಾ, ಲಾಹೋರ್, ಮತ್ತು ಮದರಾಸ್ ವೈದ್ಯಶಾಲೆಗಳಲ್ಲಿ ಅಸ್ಸಿಸ್ಟೆಂಟ್ ತರಗತಿಯಲ್ಲಿ ಓದಿ ಹೊಂದಿರುವ ವರೀಕ್ಷೆಯಲ್ಲಿ ತೇರ್ಗಡೆ ಯಾಗತಕ್ಕ ವಿದ್ಯಾರ್ಥಿನೀ ಯರಿಗೆ, ಒಂದೊಂದು ಶಾಲಶಾಲೆಗೆ ಒಂದೊಂದರಮೇರೆ, "ವೈಸ್‌ರಾಯ್‌ಮೆಡಲ್"ಎಂಬ ಹೆಸರಿನಿಂದ ಕೊಡಬೇಕೆಂದು ಯೋಚಿಸುತ್ತಾರೆ. ಮೇಲೆ ತಿಳಿಸಲ್ಪಟ್ಟ ಚಿನ್ನ ಬೆಳ್ಳಿ ಮೆಡಲುಗಳು ಯೆಂತಾ ಪರೀಕ್ಷೆಯಲ್ಲಿ ಯಾವ ಕರತೃಗೆ ಒಳಪಟ್ಟು ಕೊಡಲ್ಪಡಬೇಕೋ ಅವು ಆಲೋಚನೆಯಲ್ಲಿವೆ. ಅವು ಮುಂದೆ ಪ್ರಕಟಿಸಲ್ಪಡುವವು. ಈ ವಿಷಯವನ್ನು ತಕ್ಕರೀತಿಯಿಂದ ವೈದ್ಯಶಾಲೆಗಳಲ್ಲಿ ಓದತಕ್ಕ ವಿದ್ಯಾರ್ಥಿನೀಯರಿಗೆ ತಿಳಿಸಬೇಕೆಂದು ಘನತೆ ಪಡೆದ ಲೇಡೀ ಪ್ರೆಸಿಡೆಂಟರವರು ಅಪೇಕ್ಷಿಸುತ್ತಾರೆ, ಎಂಬದು.

LOCAL AND PROVINCIAL NEWS.
ಸ್ಥಳವರ್ತಮಾನ ಮತ್ತು ತಾಲ್ಲೂಕುಜಾತಿವೃತ್ತಾಂತಗಳು.

A royal Durbar.—ಈ ಸಂಸ್ಥಾನದಯುವರಾಜರಾದ ಕೃಷ್ಣರಾಜ ಒಡೆಯರವರ ಮೂರನೇ ವರ್ಷ ವರ್ಧಂತಿ ಮಹೋತ್ಸವ ಪ್ರಯುಕ್ತವಾಗಿ, ಕಳೆದ ಬೃಹಸ್ಪತಿವಾರದದಿನ ಮಧ್ಯಾಹ್ನಾತ್ಪರ ಮಹಾರಾಜರವರ ಅರಮನೆಯಲ್ಲಿ ಒಂದು ಪ್ರಬಲ ದರ್ಬಾರ್ ನಡೆದು ಅದಕ್ಕೆ ಬಹುಮಂದಿ ಯೂರೋಪಿಯನ್ ಮತ್ತು ನೇಟಿವ್ ದೊಡ್ಡಮನುಷ್ಯರು ಕರೆಸಲ್ಪಟ್ಟಿದ್ದರೆಂದು ತಿಳಿಯಬರುತಿದೆ.

Mr Hudson.—ಇಲ್ಲಿನ ಕಂಟ್ರೋಲರಾದ ಮಿ. ಹಡ್ಸನ್ ಯವರು ಬರುವ ತಿಂಗಳ ಗುರ್ರೀ ತಾರೀಖ್ ಮೊದಲು ಒಂದು ತಿಂಗಳ ಪ್ರಿವಿಲೇಜ್ ರಜಾ ತೆಗದುಕೊಳ್ಳುವರೆಂತಲೂ, ಅದು ಪೂರೈಸಿದ ಕೂಡಲೇ ಬರುವ ಏಪ್ರಿಲ್ ತಿಂಗಳ ಮೊದಲು ಇಲ್ಲಿನ ನೌಕರಿಯಿಂದ ೩೦೦ ಸಾವಿರ ರೂಪಾಯಿಗಳ ಗ್ರಾಚ್ಯುಟಿ ಪಡೆದು ನಿವೃತ್ತರಾಗುವರೆಂತಲೂ ತಿಳಿಯಬರುತಿದೆ. ಇವರು ಗ್ರಾಚ್ಯುಟಿಗೆ ಬದಲು ಪೆನ್ಶನ್ ಅಪೇಕ್ಷಿಸುವುದೆಯೂ ಆವಿಷಯದೊಳು ಗವರ್ನಮೆಂಟಿನವರು ಯಾವವಿಧ ಪ್ರತ್ಯುತ್ತರವನ್ನು ಅದ್ಯಾಪಿ ಕೊಡಲಿಲ್ಲ ಇದಾಗಿಂತಲೂ ಕೇಳುತ್ತೇವೆ.

A case of libel.—ಕಳೆದಮಾರ್ಚಿನ ದಿನ, ಮೈಸೂರು ಮಹಾರಾಜಾ ಸ್ಪಿನ್ನಿಂಗ್ ಮತ್ತು ಮ್ಯಾನ್ಯುಫಾಕ್ಚರಿಂಗ್ ಕಂಪನಿಯ ಮ್ಯಾನೇಜರವರು ಸೈಮನ್ ಯವರು, ಕಳೆದ ಡಿಸುಂಬರ್ ೨೭, ೨೮, ೨೯ ಮತ್ತು ೧೮೮೬ನೇ ಜನವರಿ ೨, ಈತಾರೀಖುಗಳ ಸ್ಪೆಕ್ಟೇಟರ್ ಪತ್ರಿಕೆಯಲ್ಲಿ ಸದರೀ ಕಂಪನಿಯ ಮೇಲೆ ಮಾನಚ್ಯುತಿಕರವಾಗಿ ದೂಷಿಸಿ ಬರೆದಿರುವದರಿಂದ ಸದರೀ ಪತ್ರಿಕೆಯ ಪ್ರೊಪ್ರೈಟರುಗಳು ಮತ್ತು ಎಡಿಟರಮೇಲೆ, ಸಿವಿಲ್ ವ ಮಿಲಿಟರಿ ಸ್ಟೇಷನ್ ಸಿವಿಲ್ ವ ಸೆಷನ್ ಕೋರ್ಟಿನಲ್ಲಿ ೨೦,೦೦೦ ರೂಪಾಯಿಗಳಿಗೆ ಮಾನನಷ್ಟ ದಾವಾ ದಾಖಲ್ಮಾಡಿ ಇದರ ವ್ಯವಸ್ಥೆಯಬಗ್ಗೆ ಈತಿಂಗಳ ೨೬ನೇ ತಾರೀಖ್ ಗೊತ್ತಾಗಿದೆ.

The Wedding festivities.—ಕಳೆದಸೋಮವಾರದ ದಿನ ಈ ಸಂಸ್ಥಾನದ ದಿವಾನರವರಾದ ಮ|| ಶೇಷಾದ್ರಿ ಅಯ್ಯರವರ ದ್ವಿತೀಯಪುತ್ರನ ವಿವಾಹೋತ್ಸವವು ಅತಿ ವಿಜೃಂಭಣೆಯೊಡನೆ ನಡೆಯಿತು. ಏತದರ್ಥ ದಿವಾನರವರ ಬಂಗ್ಲೆಯ ಮುಂಭಾಗದಲ್ಲಿ ವಿವಿಧಾಲಂಕಾರಗಳೊಡನೆ ನಿರ್ಮಿತವಾದ ವಿವಾಹ ಮಂಟಪವು ಬಹಳ ಮನೋಜ್ಞವಾಗಿದ್ದಂತೆಯೂ, ಮುಹೂರ್ತಕಾಲದಲ್ಲಿ ಮಹಾರಾಜರ ಸಾನ್ನಿಧ್ಯದಿಂದಲೂ, ಗೌರವ್ಯರಾದ ಬಹುಮಂದಿ ದೊಡ್ಡಮನುಷ್ಯರ ಸಮೂಹದಿಂದಲೂ ಮಂಗಳವಾದ್ಯಗಳ ಉದ್ಘೋಷದಿಂದಲೂ, ವಾರಾಂಗನೆಯರ ನೃತ್ತಗೀತಗಳಿಂದಲೂ ವಿವಾಹಮಂಟಪವು ಬಹಳಶೋಭಾಯಮಾನವಾಗಿದ್ದಂತೆಯೂ ತಿಳಿಯಲಾದೆವು. ಶ್ರೀಮನ್ಮಹಾರಾಜರವರು ಪೂರ್ವಸಂಪ್ರದಾಯವನ್ನನುಸರಿಸಿ ಪಾಣಿಗ್ರಹಣ ಕಾಲದಲ್ಲಿ ವಧೂವರರಿಗೆ ವಿಶ್ವಾಸಪೂರ್ವಕವಾಗಿ ಅಮೌಲ್ಯವಾದ ಒಂದುಮುಕ್ತಾಹಾರವನ್ನೂ ಅನರ್ಘಗಳಾದ ವಸ್ತ್ರಗಳನ್ನೂ ದಯಪಾಲಿಸಿದರು. ಪ್ರತಿನಿತ್ಯವೂ ವಿವಿಧಭಕ್ಷ್ಯ ಭೋಜ್ಯ ವರ್ಗಗಳೊಡನೆ ಅನೇಕಜನ ಬ್ರಾಹ್ಮಣರಿಗೆ ಸಂತರ್ಪಣೆಯು ನಡೆಯಿತು. ಮತ್ತು ವಿವಾಹಕಾಲದಲ್ಲಿ ಸ್ಥಾನಪ್ರಯುಕ್ತಗಳಾದ ನಿರ್ಬಂಧಗಳೆಂದೂ ಇಲ್ಲದೆ ಜನಗಳೆಲ್ಲರೂ ಸ್ವಾತಂತ್ರ್ಯಯುಕ್ತವಾದ ಆನಂದವನ್ನು ಅನುಭವಿಸಿದರೆಂಬ ಅಂಶವು ನಮಗೆ ವಿಶೇಷ ಸಂತೋಷವನ್ನುಂಟುಮಾಡಿತು.

ಗತಗುರುವಾರದದಿನರಾತ್ರಿ ಈಪ್ರಾಂತ್ಯದಲ್ಲಿ ಸದರೀ ವಧೂವರರಿಗೆ ಆನೆಯ ಮೇಲೆ ಮೆರವಣಿಗೆಯು ನಡೆಯಿತು. ಅದು ತತ್ಸಂದರ್ಭೋಚಿತಗಳಾದ ನಾನಾವಿಧಾಲಂಕಾರಗಳಿಂದಲೂ, ಬಾಣ ಬಿರಸು ಮುಂತಾದ ವಿನೋದಗಳಿಂದಲೂ, ದರ್ಶನೀಯವಾಗಿಯೂ ಪ್ರಶಂಸನೀಯವಾಗಿಯೂ ಇತ್ತು. ಇಂತಾ ಶುಭ ಸಮೋಹವನ್ನು ಇಷ್ಟ ಮಿತ್ರರೊಡನೆ ಸುಪೂರ್ಣವಾಗಿ ಅನುಭವಿಸುವದರೊಳಗಾಗಿ ಮಧ್ಯೆ ದಿವಾನರವರಿಗೆ ಮನೋನೈಶ್ಚಿಂತ್ಯವನ್ನು ಹೋಗಲಾಡಿಸುವಂತಾ ವಿಷಯ ವೊಂದು ಅಚಿಂತಿತವಾಗಿ ಪ್ರಾಪ್ತವಾದಂತೆಯೂ ಅದರಿಂದ ಸುಕಲ್ಪಿತವಾಗಿದ್ದ ಮುಂದಿನ ಏರ್ಪಾಡುಗಳೆಲ್ಲ ನಿಂತು ಹೋದಂತೆಯೂ ಕೇಳಿ ನಾವು ಬಹಳ ಚಿಂತಾಕ್ರಾಂತರಾದೆವು. ಅಪ್ರತೀಕಾರವಾದ ದೈವಸಂಕಲ್ಪಕ್ಕೆ ಅನ್ಯಥಾ ನಡೆಯಲಿಕ್ಕೆ ಯಾರಿಗೆ ತಾನೇ ಸಾಧ್ಯವಹುದು !

The First Arts Examination.—ಕಳೆದ ಡಿಸುಂಬರ್ ತಿಂಗಳಲ್ಲಿ ನಡೆದ ಮದರಾಸ್ ಯೂನಿವರ್ಸಿಟಿ ಎಫ್. ಎ. ಪರೀಕ್ಷೆಗೆ ಮೈಸೂರು ದೇಶದಿಂದ ಹೋಗಿದ್ದ ಉಮೇದವಾರರಪೈಕಿ ಇದರ ಕೆಳಗೆ ಕಾಣಿಸಲ್ಪಡುವ ಹೆಸರುಗಳುಳ್ಳವರು ತೇರ್ಗಡೆಯಾಗಿರುತ್ತಾರೆ

ಬೆಂಗಳೂರು.

ಬಾಲಸುಬ್ರಹ್ಮಣ್ಯ ಮೊದಲಿ, ಎಸ್.
ದಾಸಪ್ಪ, ಬಿ. *
ಗೋಪಾಲಕೃಷ್ಣಯ್ಯರ್. ಎಸ್.
ಗೋವಿಂದರಾವ್, ಬಿ.
ಕೃಷ್ಣಯ್ಯಂಗಾರ್, ಕೆ.
ಕೃಷ್ಣಮೂರ್ತಿ, ಟಿ.
ಕುಪ್ಪುಸಾಮಿಮೊದಲಿ. ಸಿ.
ರಾಮಸ್ವಾಮಯ್ಯ, ಬಿ.
ರಂಗರಾವ್, ಎಂ
ರಂಗರಾವ್, ಎಚ್. ಆರ್.
ಶ್ರೀಕಂಠಯ್ಯ, ಡಿ. ವಿ.
ಶ್ರೀನಿವಾಸರಾವ್ ಎಚ್.
ಸುಬ್ಬಣ್ಣ, ಬಿ
ಸುಬ್ಬರಾವ್, ಬಿ.
ವೆಂಕಟರಾಮಯ್ಯ, ಟಿ.

ಮೈಸೂರು.

ಕೃಷ್ಣಪ್ಪ, ಎಂ.
ಕೃಷ್ಣರಾವ್, ಬಿ
ಕೃಷ್ಣಸಾಮಿ. ಎ.
ಲಕ್ಷ್ಮಣರಾವ್, ಟಿ. ಜಿ.
ಮಾಲ್ಹಾರಿರಾವ್, ಕೆ.
ನಂಜಪ್ಪ, ಸಿ.
ನಾರಣಯ್ಯಂಗಾರ್, ಎಂ. ಟಿ.
ರಾಮಯ್ಯ, ಬೆಂಗಳೂರು.
ರಾಮಯ್ಯ, ಕೋಲಾರ.
ರಾಮಯ್ಯ, ಎಂ.
ಸೀತಾರಾಮಯ್ಯಂಗಾರ್, ಬಿ. ಜಿ.
ಸುಬ್ಬರಾವ್, ಕೆ.
ವರದರಾಜಅಯ್ಯಂಗಾರ್, ಎಂಬಿ. *
ವೇದಾಂತಯ್ಯಂಗಾರ್, ಕೆ.
ವೆಂಕಟನಾರಾಯಣ, ಜಿ.
ವೆಂಕಟರಂಗಾಚಾರಿ, ಎಂ,
ವೇಣುಗೋಪಾಲಯ್ಯಂಗಾರ್, ಕೆ.
ವೀರಣ್ಣ, ಎಸ್.

ಶಿವಮೊಗ್ಗಾ.

ಆನಂದರಾವ್, ಸಿರಸಿ.
[illegible]
ಗೋವಿಂದರಾಜುಲುನಾಯುಡು, ಎ.
ಕೇಶವಯ್ಯಂಗಾರ್, ಬಿ.
ನಾರಾಯಣಯ್ಯಂಗಾರ್, ಎಂ. ಎ.
ರಾಮಣ್ಣ, ಬಿ.
ಸುಬ್ಬರಾವ್, ಕೆ.
ವೆಂಕಟಪ್ಪಯ್ಯ, ಪಿ.

* ಈಗುರ್ತಿನ ಹೆಸರುಳ್ಳವರು ಅವ್ವಲ್ ತರಗತಿಯಲ್ಲಿ ತೇರ್ಗಡೆಯಾದವರು.

TELEGRAPHIC SUMMARY.
ತಂತಿವೃತ್ತಾಂತ ಸಂಗ್ರಹವು.

ಲಂಡನ್, ೭ನೇ ಫೆಬ್ರುವರಿ—ಪ್ರತಿ ಸಂಗ್ರಹ [illegible] ರೋಜ್‌ಬರಿ [illegible]

ಕಿರ್ಕ್ಸ್ಟ, ೫ನೇ ಫೆಬ್ರವರಿ—[illegible] ಸೇನೆಯನ್ನು ಒಡೆದು [illegible] ದೊಡ್ಡ ಸಂ[illegible] [illegible] ಬರೆದ [illegible] ಶಿಕ್ಷೆಯನ್ನು [illegible] ಕೊಡಲಿಕ್ಕೆ [illegible] ನಿರ್ಣಯಿಸಿದ್ದರು.

ಲಂಡನ್, ೬ನೇಫೆಬ್ರವರಿ—ಮಂತ್ರಿ ಸಂಸ್ಥಾನ [illegible] ಮೇಲೆ [illegible] ದೊಡ್ಡ ಸಂಸ್ಥಾನಾಧಿಪತಿಗಳು [illegible] [illegible]

ಕಾನ್‌ಸ್ಟಾಂಟಿನೋಪಲ್, ೫ನೇ ಫೆಬ್ರವರಿ—ರಷ್ಯಾ [illegible] ದೊಡ್ಡ ಸಂಸ್ಥಾನಾಧಿಪತಿಗಳು [illegible] ಸರ್ಕಾರ [illegible] ತುರ್ಕೀ ಸರ್ಕಾರ [illegible] ಒಪ್ಪಿರುತ್ತಾರೆ.

ಬುಕಾರೆಸ್ಟ್, ೫ನೇ ಫೆಬ್ರವರಿ—ತುರ್ಕೀ, ಸರ್ವಿಯಾ [illegible] ಸರ್ವಿಯಾ [illegible] ಸರ್ಕಾರ [illegible] ಮಾಡಿರುತ್ತಾರೆ.

ಕಲ್ಕತ್ತಾ, ೯ನೇ ಫೆಬ್ರವರಿ—ಇಂಧ್ಯ ರಾಜ್ಯದ [illegible] ದೊಡ್ಡ ಮನುಷ್ಯರು ಒಂದು ಕಮಿಟಿಯಾಗಿ [illegible] ಅವರು ಯಾರೆಂದರೆ—ಮಿ. [illegible] ಅಧ್ಯಕ್ಷರು. [illegible] [illegible] ಮಿ|| [illegible] [illegible] [illegible] ಮಿ. [illegible] [illegible] ಯವರು

ಲಂಡನ್, ೧೦ನೇ ಫೆಬ್ರವರಿ—[illegible] ರಾಜಧಾನಿಯಲ್ಲುಂಟಾಗಿದ್ದ ಗಲಭೆ [illegible] ಅಧಿಕಾರಿಗಳು [illegible] ಅದ್ಯಾಪಿ [illegible]

ಕಾನ್‌ಸ್ಟಾಂಟಿನೋಪಲ್, ೧೧ನೇಫೆಬ್ರವರಿ—ತುರ್ಕೀ ಸಂಸ್ಥಾನಕ್ಕೂ ಬಲ್ಗೇರಿಯಾ ಸಂಸ್ಥಾನಕ್ಕೂ [illegible] ರಷ್ಯಾ ಸರ್ಕಾರದ [illegible] ದೊಡ್ಡ ಸಂಸ್ಥಾನಾಧಿಪತಿಗಳು [illegible] ರಷ್ಯಾ ಸರ್ಕಾರದವರು ಬಲ್ಗೇರಿಯಾ [illegible] ತುರ್ಕೀ [illegible] ಬಲ್ಗೇರಿಯಾ ಸರ್ಕಾರ [illegible] ಸಂಬಂಧ [illegible] ಆಕ್ಷೇಪಿಸುತ್ತಾರೆ.

ಮುಂಬೈ, ೧೧ನೇ ಫೆಬ್ರವರಿ—ಲಂಡನ್ ಪಟ್ಟಣದಿಂದ ಒಂದು ಮುಂಬೈ ಗೆಜೆಟ್ ಪತ್ರಿಕೆಯಲ್ಲಿ [illegible] ವೈಸ್‌ರಾಯ್ ಯವರು [illegible] ಮುಂಬೈ ಗೆಜೆಟ್ [illegible] ಲಂಡನ್ ಪಟ್ಟಣ [illegible] ಪತ್ರಿಕೆಯಿಂದ [illegible] ವೈಸ್‌ರಾಯ್ [illegible] ಲಂಡನ್ [illegible] ಪತ್ರಿಕೆಯಿಂದ ಒಪ್ಪಿಸುತ್ತಾರೆ. ಅದರಲ್ಲಿ ಅಲ್ಲಿನ ಪ್ರಧಾನ ಮಂತ್ರಿ [illegible] [illegible] [illegible] ಅಧಿಕಾರಿಗಳ [illegible] ಅನುಸರಿಸಿ [illegible] [illegible] ಅಲ್ಲಿ ನಡೆದ [illegible] [illegible] [illegible] [illegible] ವೈಸ್‌ರಾಯ್ ಯವರಿಗಾಗಿ [illegible] ಒಂದು [illegible] [illegible]

Letters to the Editor.

ಆಹಾರಕ್ಕೂ ಧರ್ಮಾಧರ್ಮಗಳಿಗೂ ಇರುವಸಂಬಂಧ.

(ಕಳೆದವಾರದ ಶೇಷವು)

ಸಮಸ್ತ ಧರ್ಮಪ್ರವೃತ್ತಿಗೂ ದೇಹಕ್ಕೂ ಇದೇರೀತಿಯಾದ ಅಭೇದ್ಯ ನಿತ್ಯಸಂಬಂಧವಿರುತದೆ. ಭಕ್ತಿಯು ಆತ್ಮಾವಿನಲ್ಲಿ ಉದ್ದೀಪಿತವಾದ ಕೂಡಲೇ, ಭಕ್ತಿತರಂಗವು ನಾಡಿನಾಡಿಯಲ್ಲಿಯೂ ಪ್ರವಹಿಸಿ ಶರೀರವು ಅವಶವಾಗುತ್ತಾಬಂದು ಭಕ್ತಿರಸ ಹೊರಗೆ ಉಕ್ಕುತ್ತ ನೇತ್ರಗಳಲ್ಲಿ ಆನಂದಾಶ್ರುವು ಸುರಿಯಲಾರಂಭಿಸಿ ಭಕ್ತಿವಿಷಯಕವಾದ ಪದಾರ್ಥವು ಯೆದುರಿಗಿದ್ದರೆ ಅವರ ಚರಣ ತಲದಲ್ಲಿ ಮಸ್ತಕವು ತಾನಾಗಿಯೇ ಬಗ್ಗುವದು. ಭಕ್ತಿ ಕ್ರಿಯೆಗಳು ಒಳಗೆ ಹೊರಗೆ ಪರಿಚಾಲಿತವಾಗುವವು. ಭಕ್ತಿ ಲಕ್ಷಣಗಳು ಶರೀರದೊಳಗಿನಿಂದ ಭೇದಿಸಿಕೊಂಡು ಬಾಹ್ಯಾವಯವಗಳಲ್ಲಿ ಲಕ್ಷಿತವಾಗುವವು. ಈ ರೀತಿಯಾಗಿ ಸದಸತ್ಪ್ರವೃತ್ತಿಗಳಾದ ಆತ್ಮಾವಿನ ಸರ್ವಪ್ರಕಾರ ಶಕ್ತಿಯ ಕ್ರಿಯೆಗಳು, ಮೊದಲು ದೇಹದೊಳಗೆ ಸಮುದ್ಭೂತವಾಗಿ ದೈಹಿಕ ಯಂತ್ರದಲ್ಲಿಯೂ ಶಾರೀರಕ ಅವಯವಗಳಲ್ಲಿಯೂ ಮಸ್ತಿಷ್ಕ ನರನಾಡಿ ಮಾಂಸಹೃದಯಾದಿ ಇತರಕೋಶಗಳಲ್ಲಿಯೂ ಹಸ್ತಪಾದನೇತ್ರ ನಾಸಿಕೆಗಳಲ್ಲಿಯೂ ಪರಿಚಾಲಿತವಾಗಿ ಸಂಪರ್ಕವಾಗಿ ವ್ಯಾಪಿಸುತ್ತದೆ. ದೇಹವೆಂದರೆ ಏನು! ಆತ್ಮಾವಿನ ಸಕಲಶಕ್ತಿಯ ಕ್ರಿಯಾಸಾಧನಜನ್ಯವಾದ ಯಂತ್ರಸಮುಚ್ಚಯವಾಗಿದೆ. ದೇಹಯಂತ್ರವಿಲ್ಲದಿದ್ದರೆ ಯಾವ ಕ್ರಿಯೆಯೂ ಸಾಧಿತವಾಗುವದಿಲ್ಲ. ಧರ್ಮಾದಿ ಸಕಲ ಪ್ರವೃತ್ತಿಗಳ ಕ್ರಿಯೆಗಳೂ ದೇಹಯಂತ್ರ ಸಹಾಯದಿಂದಲೇ ಸಾಧಿತವಾಗುತ್ತವೆ. ದೇಹವನ್ನು ಬಿಟ್ಟು ಧರ್ಮಾಧರ್ಮಗಳ ಸ್ಫೂರಣವು ಅಸಂಭವವಾದದ್ದು. ಆದ್ದರಿಂದ ಶರೀರಕ್ಕೂ ಧರ್ಮಾಧರ್ಮಗಳಿಗೂ ಸಂಬಂಧವಿಲ್ಲವೆಂದು ಹೇಳುವದು ಉನ್ಮತ್ತ ಪ್ರಲಾಪವನ್ನಿಸಿಕೊಳ್ಳುತ್ತದೆ.

ಇದುವರಿವಿಗೂ ಹೇಳಿದ್ದರಲ್ಲಿ ಧರ್ಮಾಧರ್ಮಗಳಿಗೂ ದೇಹಕ್ಕೂ ಇರುವ ಸಂಬಂಧವು ಅತಿ ಗುರುತರವಾದದ್ದು, ಪ್ರಗಾಢವಾದದ್ದು, ನಿತ್ಯವಾದದ್ದು ಮತ್ತು ಅಭೇದ್ಯವಾದದ್ದೆಂದು ತಿಳಿಸಿದಹಾಗಾಯಿತು. ಇನ್ನು ಸ್ವಲ್ಪಮುಂದೆ ಆಲೋಚಿಸಿ ನೋಡುವಣ. ಪ್ರಪಂಚದಲ್ಲಿ ಕೆಲವು ಮನುಷ್ಯರಶರೀರದಲ್ಲಿ ಧರ್ಮಪ್ರವೃತ್ತಿಯೂ ಮತ್ತೆ ಕೆಲವರ ಶರೀರದಲ್ಲಿ ಅಧರ್ಮಪ್ರವೃತ್ತಿಯೂ ಸ್ವಭಾವವಾಗಿಯೇ ಪ್ರಬಲವಾಗಿದೆ. ಒಬ್ಬನು ಕೇವಲ ಕೋಪಸ್ವಭಾವವುಳ್ಳವನಾಗಿ ಎಷ್ಟು ಪ್ರಯತ್ನಪಟ್ಟರೂ ಅವನು ಕೋಪವನ್ನು ಸ್ವಲ್ಪವಾದರೂ ದಮನಮಾಡಲು ಶಕ್ತನಾಗುವದಿಲ್ಲ. ಹಾಗೆಯೇ ಕೆಲವರು ಹಿಂಸಾಪರರಾಗಿಯೂ, ಕೆಲವರು ಲೋಭಾನ್ವಿತರಾಗಿಯೂ ಮತ್ತೆ ಕೆಲವರು ದ್ವೇಷಾಸೂಯಾಪರರಾಗಿಯೂ, ಹೀಗೆ ಒಬ್ಬರಿಗಿಂತ ಒಬ್ಬರು ಅಧಿಕವಾದ ಕುಪ್ರವೃತ್ತಿಗಳಲ್ಲಿ ಮೀರಿಸುವರಾಗಿದಾರೆ. ಮತ್ತೊಂದು ಕಡೆಯಲ್ಲಿ ಕೆಲವರಲ್ಲಿ ಧರ್ಮಪ್ರವೃತ್ತಿಗಳು ಅತಿ ಪ್ರಬಲವಾಗಿರುತವೆ. ಒಬ್ಬನು ಸ್ವಭಾವಸಿದ್ಧವಾಗಿ ಅತಿ ದಯಾಳುವಾಗಿರುತ್ತಾನೆ; ಕೆಲವರು ಬಹಳ ಭಕ್ತಿಯುಳ್ಳವರಾಗಿದ್ದಾರೆ, ಕೆಲವರು ಅತ್ಯಂತಧೀರರು; ಕೆಲವರು ಕೇವಲ ಕ್ಷಮಾಶೀಲರು, ಹೀಗಿರುತ್ತಾರೆ. ಅನ್ಯರು ಸಹಸ್ರ ಪ್ರಯತ್ನ ಮಾಡಿದರೂ ಆ ಧರ್ಮಪ್ರವೃತ್ತಿಯುಳ್ಳವರಾಗುವದಿಲ್ಲವಲ್ಲದೆ ಅಧರ್ಮಪ್ರವೃತ್ತಿಯನ್ನು ದಮನಮಾಡಲಾರರು. ಒಬ್ಬೊಬ್ಬನು ಸಹಜವಾಗಿ ಆ ಸಕಲ ಸತ್ಪ್ರವೃತ್ತಿಗೆ ದಾಸನಾಗಿ ಅಸತ್ಪ್ರವೃತ್ತಿಗಳನ್ನು ದಮನಮಾಡಿ ವಶೀಕರ್ತನಾಗುತ್ತಾನೆ. ಮನುಷ್ಯದೇಹದಲ್ಲಿ ಈರೀತಿಯಾಗಿ ಸ್ವಭಾವಸಿದ್ಧವಾಗಿ ಸದಸತ್ಪ್ರವೃತ್ತಿಗಳ ತಾರತಮ್ಯಕ್ಕೆ ಕಾರಣವೇನು? ಇಲ್ಲಿ ಮೇಲೆ ಹೇಳಿರುವ ಉಪಮಾನವನ್ನು ಸ್ಮರಿಸಿಕೊಳ್ಳಬೇಕು. ಕ್ಷೇತ್ರಭೇದದಿಂದ ಉದ್ಭಿದಗಳ ಫಲಪುಷ್ಪಗಳ ತಾರತಮ್ಯಕ್ಕೆ ಕಾರಣವನ್ನು ಯೋಚಿಸಿ ನೋಡಿ, ಯಾವಗುಣವುಳ್ಳ ವೃತ್ತಿಕೆಯೋ ಅದಕ್ಕೆ ತಕ್ಕ ಫಲವಾಗುತ್ತದೆ, ಅಂತಾ ಪುಷ್ಪವೇ ಆಗುತ್ತೆ. ಮಣ್ಣಿನ ಗುಣದಿಂದ ಫಲದ ಸ್ವಾದು, ಮಣ್ಣಿನ ಗುಣದಿಂದ ಪುಷ್ಪದ ಗಂಧ ಉಂಟಾಗುವವು. ಇದೇರೀತಿಯಾಗಿಯೇ ಧರ್ಮಾಧರ್ಮಗಳ ಉತ್ಪತ್ತಿ, ಸ್ಥಿತಿ, ವೃದ್ಧಿ ಪರಿಪುಷ್ಟಿಯು ದೇಹದಲ್ಲಿಯೇ ಆಗುವದರಿಂದ ದೈಹಿಕ ಉಪಾದಾನಗಳ ತಾರತಮ್ಯವೇ ಅವಶ್ಯವಾಗಿ ಸದಸತ್ಪ್ರವೃತ್ತಿಗಳ ತಾರತಮ್ಯವಾಗಿರುತ್ತದೆ. ವೃತ್ತಿಕೆಯಲ್ಲಿ ಯಾವರೀತಿಯಾದ ಭಿನ್ನಭಿನ್ನ ಭೌತಿಕ ಪದಾರ್ಥವಿರುವದೋ, ಮನುಷ್ಯದೇಹದಲ್ಲಿಯೂ ಅದೇರೀತಿಯಾಗಿ ಭೌತಿಕ ಪದಾರ್ಥಗಳು ಸಮ್ಮಿಶ್ರವಾಗಿವೆ. ಆಯಾ ಭೌತಿಕಪದಾರ್ಥದ ಇತರ ವಿಶೇಷದಿಂದ (a [illegible]) ಪ್ರವೃತ್ತಿ ವಿಶೇಷಗಳ ತಾರತಮ್ಯ ಉಂಟಾಗುತ್ತದೆ. ಕ್ರೋಧ ಅಥವಾ ಇಂದ್ರಿಯಾಸಕ್ತಿಯು ಯಾರದೇಹದಲ್ಲಿ ಪ್ರಬಲವೋ ಅಂತವನ ದೇಹದಲ್ಲಿ ಆ ಅಸತ್ಕ್ರಿಯಾ ಜನಕವಾದ ಭೌತಿಕ ಪದಾರ್ಥವು ಹೆಚ್ಚಾಗಿರಬೇಕು. ಇದೇ ರೀತಿಯಾಗಿ ಯಾವ ಭೌತಿಕಪದಾರ್ಥಗಳಿಂದ ಭಕ್ತಿ ಯಾ ದಯೆ ಇವುಗಳ ವೃತ್ತಿಕ್ರಿಯಾಸಾಧಿತವಾಗುತ್ತದೋ, ಅಂತಾ ಪದಾರ್ಥಗಳು ಸಮಧಿಕವಾಗಿ ಶರೀರದಲ್ಲಿದ್ದರೆ ಆ ಸತ್ಪ್ರವೃತ್ತಿಗಳ ಕ್ರಿಯೆಗಳೇ ಹೆಚ್ಚಾಗಿರುತ್ತವೆ. ಇದರಿಂದ ಶರೀರದಲ್ಲಿ ಉಪಾದಾನ ಭೂತ ಭೌತಿಕ ಪದಾರ್ಥಗಳ ಪರಿಮಾಣದ ತಾರತಮ್ಯದಿಂದ ಆಯಾ ಪ್ರವೃತ್ತಿಗಳೆಂದರೆ ಧರ್ಮಾಧರ್ಮಗಳ ತಾರತಮ್ಯ ಉಂಟಾಗುತ್ತದೆಂದು ಗೊತ್ತಾದಹಾಗಾಯಿತು. ಪ್ರಸ್ತುತ ವಿಚಾರ್ಯವಾದ ಪ್ರಶ್ನೆಯ ವಿಚಾರದಲ್ಲಿ ಇನ್ನು ಹೆಚ್ಚು ಹೇಳಬೇಕಾದ್ದಿಲ್ಲವು. ನಾವು ಮೇಲೆ ಹೇಳುವದರಲ್ಲಿ ಆಹಾರ್ಯ ಪದಾರ್ಥದಿಂದಲೇ ಶರೀರದ ಸಮಸ್ತ ಉಪಾದಾನವೂ ಸಂಗ್ರಹೀತವಾಗುತ್ತದೆಂತಲೂ ಶರೀರವು ಘಟಿತ ಮತ್ತು ಪರಿಪುಷ್ಟಿಯಾಗುತ್ತದೆಂತಲೂ ಅಂದರೆ ಭುಕ್ತಪದಾರ್ಥವೇ ಶರೀರತ್ವದಲ್ಲಿ ಪರಿಣಮಿಸುವದೆಂದು ತೋರಿಸಿದ್ದೇವೆ, ಮತ್ತು ಶರೀರಕ್ಕೂ ಧರ್ಮಾಧರ್ಮಗಳಿಗೂ ಎಷ್ಟು ಸನಿಹವಾದ ಸಂಬಂಧವೆಂಬವನ್ನು ಸಹ ತೋರಿಸಿದ್ದೇವೆ. ಇದರಿಂದ ಆಹಾರ್ಯ ಪದಾರ್ಥಕ್ಕೂ ಧರ್ಮಾಧರ್ಮಗಳಿಗೂ ಕೇವಲ ಸಂಬಂಧವಿದೆಯೆನ್ನುವದು ಸ್ಪಷ್ಟವಾಗುತದೆ, ಇನ್ನು ಹೆಚ್ಚು ವಿಶದಪಡಿಸಬೇಕಾದ್ದಿಲ್ಲವು. ಆಹಾರ್ಯ ದ್ರವ್ಯದ್ವಾರಾ ಯಾವಯಾವ ಭೌತಿಕ ಪದಾರ್ಥಗಳು ನಮ್ಮ ದೇಹದಲ್ಲಿ ಸಂಚಿತವಾಗುವವೋ ಆಯಾ ಪದಾರ್ಥಗಳ ಗುಣಾನುಸಾರವಾಗಿ ನಮ್ಮ ಪ್ರವೃತ್ತಿ ವಿಶೇಷಗಳ ತಾರತಮ್ಯ ಉಂಟಾಗುತ್ತದೆ. ಈ ಕಾರಣದಿಂದಲೇ ಪ್ರತಿ ಒಬ್ಬನ ಪ್ರವೃತ್ತಿ ವಿಶೇಷದ ನ್ಯೂನಾಧಿಕ್ಯ ಉಂಟಾಗುವದು. ಮನುಷ್ಯರಲ್ಲಿ ಜಾತಿಜಾತಿಯಾಗಿ ವಿಂಗಡಿಸಿ ವಿಚಾರಮಾಡಿ ನೋಡಿದರೂ ಇದೇರೀತಿಯಾದ ಪ್ರಮಾಣವು ದೊರಕುವದು. ಅರ್ಧಸತ್ವ ಮತ್ತು ಆಮ ಮಾಂಸ ಭಕ್ಷಣ ಸಾಪೇಕ್ಷ ಜಾತಿಯವರು ಸ್ವಭಾವತಃ ಅನ್ಯಜಾತಿಯವರಿಗಿಂತ ಹೆಚ್ಚು ಹಿಂಸಾಪರರೆಂದು ಅನೇಕ ಯೂರೋಪದೇಶದ ಪಂಡಿತರು ಬಹು ದೃಷ್ಟಾಂತಗಳಿಂದ ಸಿದ್ಧಾಂತ ಮಾಡಿರುತ್ತಾರೆ. ಇದಕಾರಣ ಯೂರೋಪಿಯನ್ ಜನರು ಕೂಡ ಆಹಾರಕ್ಕೂ ಧರ್ಮಾಧರ್ಮಗಳಿಗೂ ಸಂಬಂಧವುಂಟೆಂಬುವದನ್ನು ಪ್ರಕಾರಾಂತರವಾಗಿ ಅಂಗೀಕರಿಸುತ್ತಾರೆ. ಮನುಷ್ಯಕೋಟಿಯನ್ನು ಬಿಟ್ಟು ಜೀವಕೋಟಿರಾಶಿಯಲ್ಲಿ ಪರೀಕ್ಷೆ ಮಾಡಿದರೂ ವೃತ್ತಿ ವಿಶೇಷಕ್ಕೂ ಆಹಾರ್ಯ ಪದಾರ್ಥಕ್ಕೂ ಸಂಬಂಧ ವುಂಟೆಂಬದಕ್ಕೆ ಯಥೇಷ್ಟ ಪ್ರಮಾಣ ದೊರಕುವದು. ರಕ್ತಮಾಂಸಾಶಿಗಳಾದ ಸರ್ಪವ್ಯಾಘ್ರಾದಿ ಜಂತುಗಳು ಸ್ವಭಾವ ಸಿದ್ಧವಾಗಿಯೇ ಹಿಂಸಾ ಪರಾಯಣಗಳಾಗಿವೆ.

ಸೂಕ್ಷ್ಮದರ್ಶಿಗಳಾದ ಆರ್ಯ ಋಷಿಗಳು ಈ ವಿಷಯಕ ಸೂಕ್ಷ್ಮವಾದ ತತ್ವವನ್ನು ಕಂಡುಹಿಡಿದಿದ್ದಾರೆ ಆ ತತ್ವವನ್ನು ತಿಳಿದವರಾಗಿ ಧರ್ಮರಕ್ಷಣೆ, ಧರ್ಮ ವೃದ್ಧಿಗೋಸ್ಕರ ಖಾದ್ಯಾಖಾದ್ಯಗಳ ವಿಧಿ ನಿಷೇಧಗಳನ್ನು ಪರ್ಯಾಪ್ತ ಮಾಡಿರುತ್ತಾರೆ. ಕೇವಲ ಸ್ವಾಸ್ಥ್ಯರಕ್ಷಣೆಗೋಸ್ಕರವೇ ಖಾದ್ಯಾಖಾದ್ಯಗಳ ವಿಧಿನಿಷೇಧಗಳನ್ನು ಮಾಡಿಲ್ಲವು. ಕೇವಲ ಅನಿತ್ಯವಾದ ಈ ಜಡಪಿಂಡದೇಹದ ಕಲ್ಯಾಣಕ್ಕೋಸ್ಕರವೇ ಅವರು ಶಾಸ್ತ್ರರಚನೆಯನ್ನು ಮಾಡಿದವರಾಗಿಲ್ಲ. ಅವರಮೂಲ ಮತ್ತು ಚರಮ ಉದ್ದೇಶಗಳು ಧರ್ಮೋನ್ನತಿ, ಆತ್ಮನ ಉನ್ನತಿಗಳಾಗಿದ್ದವು. ಆ ಉನ್ನತಿ ಸಾಧನಕ್ಕೆ ಶರೀರವು ಯಾತರಿಂದ ಶಕ್ತಿಯುಳ್ಳದ್ದಾಗಿರಬೇಕೋ ಅದನ್ನು ಪದಪದದಲ್ಲಿಯೂ ಹೇಳಿರುತ್ತಾರೆ. ಬ್ರಹ್ಮಚರ್ಯದಲ್ಲಿರುವ ಸನ್ಯಾಸಿಗಳಿಗೂ, ವಿಧವೆಗಳಿಗೂ ಆಮಿಷಭಕ್ಷಣನಿಷೇಧ ಮಾಡಲ್ಪಟ್ಟದೆ. ಈ ನಿಷೇಧದ ತಾತ್ಪರ್ಯವು ಕೇವಲ ಸ್ವಾಸ್ಥ್ಯರಕ್ಷಣೆಮಾತ್ರವಲ್ಲ ಋಷಿಗಳು ಅಂತರ್ದೃಷ್ಟಿಶಾಲಿಗಳಾಗಿದ್ದರು; ಅವರುಮಹಾಪುರುಷರಾಗಿದ್ದರು; ಅವರು ಧರ್ಮಸಾಧನವು ಕೇವಲ ಉಪದೇಶಕ್ಕೆ ಮಾತ್ರ ವಿಷಯವಾದ್ದಲ್ಲವೆಂದು ಚೆನ್ನಾಗಿ ತಿಳಿದಿದ್ದರು. ಶರೀರವು ಧರ್ಮಸಾಧನಕ್ಷೇತ್ರವು, ಅಂತಾಕ್ಷೇತ್ರದಲ್ಲಿ ವೃತ್ತಿಕಾದೋಷವಿದ್ದರೆ ಸಹಸ್ರ ಪ್ರಯತ್ನಮಾಡಿದರೂ, ಸಹಸ್ರಾವರ್ತಿ ಜಲಸೇಕ ಮಾಡಿದರೂ, ಸಹಸ್ರ ಉಪದೇಶವಾದರೂ ಫಲೋದಯವಾಗಲಾರದು. ಅದರೆ ಕ್ಷೇತ್ರದಲ್ಲಿ ಉಪಯುಕ್ತವಾದ ವೃತ್ತಿಕೆಯು ಇದ್ದು ಸುಶಿಕ್ಷೆಯೆಂಬ ವಾಯುಸಂಲಗ್ನವಾಗಿ, ಅನುಷ್ಠಾನವೆಂಬ ದೃಷ್ಟಾಂತ, ಉಪದೇಶವೆಂಬ ಜಲಸೇಕ ಮಾಡುತಿದ್ದರೆ, ಅವಶ್ಯವಾಗಿ ಫಲಲಾಭವಾಗುವದು. ಫಲವಾದರೋ ವೃತ್ತಿಕಾ ಜಲವಾಯುಗಳ ಗುಣಾನುಸಾರವಾಗಿ ಬರುವದು. ಧರ್ಮತರುವಿಗೂ, ಧರ್ಮ ಕ್ಷೇತ್ರರೂಪವಾದ ಶರೀರಕ್ಕೂ ಈರೀತಿಯಾದ ಸಂಬಂಧವಿರುವದರಿಂದ, ಧರ್ಮೋಪಾರ್ಜನ, ಧರ್ಮಸಾಧನೆ ಮಾಡಬೇಕೆಂದು ಇಷ್ಟವುಳ್ಳವರಾಗಿದ್ದರೆ ಮೊದಲು ಆ ಕ್ಷೇತ್ರ[illegible]ಯಲ್ಲಿ ದೃಷ್ಟಿ ಕೊಡಬೇಕು. ಕ್ಷೇ[illegible] ನಿಷ್ಕಾರಿಯಾಗಿ ಮಾಡುವ ಪದಾರ್ಥಗ[illegible] ಕ್ಷೇತ್ರದಲ್ಲಿ ಸಂಚಿತವಾಗುವಹಾಗೆ ಮಾ[illegible]ದು. ಈ ವಿಷಯದಲ್ಲಿ ಯೆಲ್ಲರೂ ಸಾವಧಾನರಾ[illegible] ಪೂರ್ವದಲ್ಲಿಯೇ ಮಹಾಪುರುಷರು ಈ ಮಹಾತತ್ವವನ್ನು ಅರಿತು ಮಾಡಿರುವ ವಿಧಿನಿಷೇಧಗಳ ಪಕ್ಷಪಾತರಾಗಿ ಖಾದ್ಯಾಖಾದ್ಯಗಳ ಸಂಗ್ರಹ ಮಾಡಬೇಕು. ಹಾಗೆ ಮಾಡದೆ ಖಾದ್ಯಾಖಾದ್ಯಕ್ಕೂ ಧರ್ಮಾಧರ್ಮಗಳಿಗೂ ಸಂಬಂಧವಿಲ್ಲವೆಂದು ವೃಥಾ ಪ್ರಲಾಪವನ್ನು ಮಾಡಕೂಡದು. ವಿಜಾತೀಯರ ಶಿಕ್ಷಾ ಗರ್ವದಿಂದ ಅಹಂಕೃತರಾಗಿ ವಿಧರ್ಮಿಗಳ ಕುಹಕಜಾಲಕ್ಕೆ ಮುಗ್ಧರಾಗಿ ಋಷಿವಾಕ್ಯಗಳನ್ನು ಅವಹೇಳನ ಮಾಡುತ್ತಾ ಪತನಶೀಲವಾದ ಆತ್ಮಾವನ್ನು ಅತಲದ ಅತಲದಲ್ಲಿ ಮುಳುಗಿಸಬಾರದು.

ಮಹಾಶಯರೆ! ಇಷ್ಟು ಹೇಳಿದಮೇಲೆ ಸ್ವವಿಷಯವನ್ನು ಕುರಿತು ಹೇಳದಿರಬಾರದು. ನನ್ನ ವಿಚಾರವಾಗಿ ನಾನು "ಸ್ವಾನುಷ್ಠಾನಸಮಯೆ ಮುನಿಯೋಪಿನಪಂಡಿತಃ" ಯೆಂದು ತಮ್ಮ ತಿಳಿಯಕೋರುವದು. ಕಳೆದುಹೋದ ಬಹುಕಾಲ ಸ್ಥಾನಾಂತರ ವಾಸದಿಂದ ಧರ್ಮಕ್ಷೇತ್ರವಾದ ಈ ನನ್ನ ಅನಿತ್ಯ ಜಡಪಿಂಡ ಶರೀರವೃತ್ತಿಕೆಯಲ್ಲಿ ತನ್ಮ ಕಡೆಯ ಜಲವಾಯು ಸಂಲಗ್ನದಿಂದುಂಟಾಗಿದ್ದ ದೋಷಪ್ರಕ್ಷಾಳನಾರ್ಥವಾಗಿ ಋಷ್ಯಶೃಂಗರ ಆಶ್ರಮವಾದ ಈ ಪ್ರಾಂತಕ್ಕೆ ಬಂದು ವಾಸವಾಗಿದ್ದೇನೆ ಇದು ಮಹಾಕ್ಷೇತ್ರವು. ಇಲ್ಲಿ ಕಾಮಕ್ರೋಧಾದಿಗಳನ್ನು ಪ್ರಬಲಪಡಿಸತಕ್ಕ ಭೌತಿಕವಾದ ತಾಲ್ಯನ್ನ ಸುಘೃತ ಪಯೋದಧ್ಯಾದಿಗಳು ಔಷಧಕ್ಕೆ ಬೇಕಾದರೂ ಸಿಕ್ಕುವದಾಗಿಲ್ಲ. ತ[illegible] ಮಾಡಿ ಅರಿಷಡ್ವರ್ಗಗಳು ಪ್ರಯತ್ನವಿನಾ ತಾವಾಗಿಯೇ ದಮನವಾಗಿ ಹೋಗಿ ಕ್ಷೇತ್ರವು ಧರ್ಮಾಂಕುರಕ್ಕೆ ವಿಶುದ್ಧವಾಗಿ ಸಿದ್ಧವಾಗಿದೆ. ಆದರೆ ವಿಷಾದವಿಷಯವೇನೆಂದರೆ, ಆ ಧರ್ಮಾಂಕುರವನ್ನು ವೃದ್ಧಿಪಡಿಸುವ ದೃಷ್ಟಾಂತರೂಪವಾದ ಅನುಷ್ಠಾನಪರರಾಗಲಿ, ಅಥವಾ ಜಲಸೇಕರೂಪವಾದ ಉಪದೇಶಕೊಡುವ ಋಷಿಗಳಾಗಲಿ ಯಾರೂ ದೃಷ್ಟಿಗೋಚರವಾಗುವದಿಲ್ಲವಾದ್ದರಿಂದ ಕರ್ತವ್ಯಾಕರ್ತವ್ಯ ವಿಮೂಢನಾಗಿದ್ದೇನೆ.

ಇತಿ ಪ್ರಿಯಂವದ,
ಯಪಹಳ್ಳಿ ನಿಸ ಗಿ

EXTRACTS

ಶಾಸ್ತ್ರ ಮತ್ತು ರೂಢಿ.

ಶಾಸ್ತ್ರಗಳೊಳಗಿನ ನೇಮಗಳಲ್ಲಿ ಲೆಕ್ಕ ಬದಲುಗಳನ್ನು ಶಾಸ್ತ್ರಗಳಿಂದಲೇ ಕೊಡೋಣಾದ ಅಧಿಕಾರದಿಂದ ಮಾಡುವ ಕಾಲವು ಈಗ ಒದಗಿದೆಯೆಂಬದು ವ್ಯಾಖ್ಯಾನದ ಮೊದಲಿನ ಭಾಗದಿಂದ ಸ್ಪಷ್ಟವಾಗಿ ಕಂಡಿತು. ಶಾಸ್ತ್ರಗಳೊಳಗಿನ ಕೆಲವು ನಿರ್ದಿಷ್ಟನೇಮಗಳು ಮೊದಲು ಅನುಸರಿಸಲ್ಪಡಲಿಲ್ಲವೆಂಬದು ಪುರಾಣಗಳೊಳಗಿನ ಕೆಲವು ದೃಷ್ಟಾಂತಗಳಮೇಲಿಂದ ಕಂಡುಬರುತದೆ. ಅವುಗಳಲ್ಲಿ ಮುಖ್ಯ ೩ ದೃಷ್ಟಾಂತಗಳು ಈ ಕೆಳಗೆ ತೋರಿಸಿದಂತವುಗಳಾಗಿವೆ. ಬ್ರಾಹ್ಮಣರಾದ ದ್ರೋಣ, ಭೀಷ್ಮ ಮತ್ತು ಪರಶುರಾಮ ಇವರು ಬ್ರಾಹ್ಮಣ ಧರ್ಮಕ್ಕೆ ವಿರೋಧವಾಗಿಯೆ ಕ್ಷತ್ರಿಯರಾದ ವಿವಸ್ವತ ಮತ್ತು ಇಕ್ಷ್ವಾಕು ಮುಂತಾದವರು ಕ್ಷತ್ರಿಯ ಧರ್ಮಕ್ಕೆ ವಿರೋಧವಾಗಿಯೂ ವರ್ತಿಸಿದ್ದಾರೆ. ಅರ್ವಾಚೀನ ಕಾಲದಲ್ಲಿಯಾದರೂ ಪೇಶ್ವೆ, ಬಾಪು ಗೋಖಲೆ, ಗಂಗಾಧರಪಂತ, ತಾತ್ಯಾ ಪಟವರ್ಧನ ಮುಂತಾದವರು ಬ್ರಾಹ್ಮಣರಾಗಿದ್ದಾಗ್ಯೂ ಕ್ಷತ್ರಿಯಧರ್ಮವನ್ನು ಅವಲಂಬಿಸಿದರು. ಈ ಉದಾಹರಣೆಗಳಿಂದ ಬ್ರಾಹ್ಮಣರು ಕ್ಷತ್ರಿಯರ ಕರ್ಮಗಳನ್ನು ಹಾಗೂ ಕ್ಷತ್ರಿಯರು ಬ್ರಾಹ್ಮಣರ ಕರ್ಮಗಳನ್ನು ನಡೆಸಿದ್ದು ಸ್ಪಷ್ಟವಾಗುತ್ತದೆ.

೨. ಪಂಜಾಬಿನಲ್ಲಿ ಬ್ರಾಹ್ಮಣರು ಮದ್ಯಪಾನದಲ್ಲಿ ನಿರತರಾಗಿರುತ್ತಾರೆ. ಆದರೆ ಈ ಪ್ರಾಂತದಲ್ಲಿ ಮದ್ಯಪಾನವು ಪಂಚಮಹಾಪಾತಕಗಳಲ್ಲಿ ಒಂದಾಗಿದ್ದು ದೇಹಾಂತ ಪ್ರಾಯಶ್ಚಿತ್ತದ ಹೊರ್ತು ವಿಮೋಚನೆ ಇಲ್ಲವೆಂತ ಎಣಿಸಲ್ಪಡುತಿತ್ತು ಆದರೆ ಈಗ ಈ ನೇಮವು ಸರಿಯಾಗಿ ಅನುಸರಿಸಲ್ಪಡುವದಿಲ್ಲ. ಮದ್ಯಪಾನವು ಕುರಿತು ಇರುವ ಕಠಿಣ್ಯಪ್ರತಿಬಂಧವು ಹೆಚ್ಚು ಉಪಯೋಗಪ್ರದವಿದ್ದು ಯೆಂಬದರ ಕುರಿತು ಸಂಶಯವಿಲ್ಲ. ಆ[illegible] ನೇಮಕ್ಕೆ ವಿರೋಧವಾದ ವರ್ತನೆಯ[illegible] ಜನರು ಎಷ್ಟರಮಟ್ಟಿಗೆ ಸಹನಮಾ[illegible]ದು ಯೆಲ್ಲರಿಗೂ ವಿದಿತವಾಗಿರುವಸಂ[illegible]ಗಿರುತ್ತೆ.

೩. [illegible] ಕನ್ಯೆ ವಿವಾಹವು ನಿಷೇಧ ವ್ಯಕ್ತವಾಗಿದ್ದಾಗ್ಯೂ ಕೆಲವು ಜಾತಿಗಳಲ್ಲಿ ಮಾತುಲಕನ್ಯೆಯೇ ಯೋಗ್ಯವಧುಯೆಂತ ತಿಳಿಯಲ್ಪಡುತದೆ. ಇದರಮೇಲಿಂದ ರೂಢಿಯ ಬಲದಿಂದ ಶಾಸ್ತ್ರಕ್ಕೆ ವಿರೋಧವಾದ ನಡತೆಗಳನ್ನು ಜನರು ಸಹನಮಾಡುತ್ತಾರೆಂಬದು ಸ್ವಾಭಾವಿಕವಾಗಿ ಕಂಡುಬರುತದೆ.

೪. ಬರೆದಿಟ್ಟ ಗ್ರಂಥಗಳ ಮೇಲಿಂದ ವೇದಾಧ್ಯಯನ ಮಾಡಬಾರದೆಂತ ಸ್ಮೃತಿಯ ಪ್ರತಿಬಂಧವಿದ್ದಾಗ್ಯೂ ಅನೇಕ ಶಾಸ್ತ್ರಿಯರು ಸಹ ವೇದಾಧ್ಯಯನ ಮಾಡಿದ್ದು ಬರೆಬಿಟ್ಟ ಪುಸ್ತಕಗಳ ಮೇಲಿಂದಲೇ ಆಗಿರುತದೆ.

೫. ಪತಿ ತೀರಿದ ಬಳಿಕ ವಿಧವೆಯು ಸಹಗಮನ ಮಾಡಬೇಕೆಂತ ಸ್ಮೃತಿ ನೇಮವಿರುತ ಇಂಗ್ಲಿಷರವರ ಆಜ್ಞೆಯು ನಮ್ಮದೇಶದಲ್ಲಿ ಸುರುವಾದಂದಿನಿಂದ ಈ ನೇಮವು ಪೂರ್ಣವಾಗಿ ತ್ಯಜಿಸಲ್ಪಟ್ಟದೆ

೬. ಧರ್ಮಸುಧಾಕರದಲ್ಲಿ ವಧುವರರ ವಯಸ್ಸನ್ನು ಕುರಿತು ನಿಯಮವುಂಟು ಈ ನಿಯಮ ಪ್ರಕಾರ ವಧುವಿನ ವಯಸ್ಸು ೧೬ ವರ್ಷಗಳು ಮತ್ತು ವರನ ವಯಸ್ಸು ೩೦ ವರ್ಷಗಳು, ಇದಕ್ಕೂ ಕಡಮೆ ವಯಸ್ಸಿನ ವಧುವರರ ವಿವಾಹಗಳು ಶಾಸ್ತ್ರಸಮ್ಮತವಲ್ಲ ಆದರೆ ಈಗ ಪ್ರಚಾರದಲ್ಲಿ ಮೇಲಿನ ವಯಸ್ಸಿನ ನೇಮವನ್ನು ಅನುಸರಿಸದೆ ಕಡಮೆ ವಯಸ್ಸಿನಲ್ಲಿ ವಿವಾಹಗಳು ಆಗುವ ಪ್ರಚಾರ ನಡವದೆ. ಇದು ಕೇವಲ ರೂಢಿ ಬಲದಿಂದಲೇ ಆಗಿರುತದೆ.

೭. ಹಿಂದೂ ಧರ್ಮಶಾಸ್ತ್ರವು ಕುರಿತು ರಾವ್ ಸಾಹೇಬ್ ವಿಶ್ವನಾಥ ನಾರಾಯಣ ಮಂಡಲಿಕರವರು ರಚಿಸಿದ ಗ್ರಂಥದಲ್ಲಿ "ಕೃತಾತ್ಯಂತಹೋಲಿಕಾ ಲಿಕ್ಷ್ಮೀ" ಎಂಬ ವಾಕ್ಯವುಂಟು. ಇದರಿಂದ ಹೋಳಿಯು ಹುಡುಗರಿಂದ ಹುಟ್ಟದ ಭೀಭತ್ಸಪ್ರಚಾರವೆಂತ ತಿಳಿಯುತ್ತದೆ. ಆದರೆ ಈಗ ಹುಡುಗರು ಮಾತ್ರವಲ್ಲ, ವಿದ್ವಾಂಸ ಶಾಸ್ತ್ರಿಗಳು ಸಹ ವಾರ್ಷಿಕ ಸಂಸ್ಕಾರಗಳಲ್ಲಿ ಇದೊಂದೆಂದು ಯೆಣಿಸುತ್ತಾರೆ. ಈ ಸಂಸ್ಕಾರವು ಶಾಸ್ತ್ರಸಮ್ಮತವಾದದ್ದು ಅಲ್ಲ. ಶಿಷ್ಟಜನರು ಮೊದಲು ಅನುಸರಿಸಿದ್ದು ಅಲ್ಲ. ಆದರೂ ರೂಢಿಯ ಬಲದಿಂದ ಶಾಸ್ತ್ರಸಮ್ಮತವೆಂತ ಜನರ ತಿಳುವಳಿಕೆಯಾಗಿದೆ. [illegible] ಉದಾಹರಣೆಗಳ ಮೇಲಿಂದ ಸ್ಮೃತಿನೇಮಗಳಿಗಿಂತಲೂ ರೂಢಿಯ ಬಲವೇ ನಮ್ಮ ದಿನಚರಿಯ ವರ್ತನೆಯಲ್ಲಿ ಹೆಚ್ಚಾಗಿ ಕಂಡುಬರುತದೆ.

BANGALORE.—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಶಾಮವಿವಿಧವೃತ್ತ್ಯುಪಗನಾರ್ಥ ಕರ್ಣಾಟಕಪ್ರಕಾಶಿಕಾಪರಾಭಿದಾಪ್ರಥಿತಾಹಿತಿಕೋಭಿತಾ ॥ ಮೃಗಾಂಕಶಿತವಾಸರೆನಿಹಿತಮುದ್ರಣಾಸಜ್ಜನೈರ್ದ್ರಿಶಾಸುಪರಿಪೂರಿತಾದಿಕಿಶಿಮಾನಸಾಸುಮುದಂ॥

Vol. XIII.] BANGALORE—MONDAY, FEBRUARY 22, 1886. [No. 8.

ಸಂಪುಟ ೧೩.] ಬೆಂಗಳೂರು:—ಸನ್ ೧೮೮೬ನೇ ಇಸವಿ ಫೆಬ್ರವರಿ ೨೨ನೇ ತಾರೀಖ್ ಸೋಮವಾರ. [ಸಂಖ್ಯೆ ೮.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ [illegible] ... ... ೧೨—[illegible]—೦

ಇಂಗ್ಲಿಷ್ [illegible] ... ... ೬—೦—೦

ಕನ್ನಡ [illegible] ... ೬—೦—೦

[illegible] ೧ಕ್ಕೆ ೦—೮—೦

[illegible]

ಪ್ರಕಟನೆಯ ರಿವಾಜ್.

[illegible] ೧ಕ್ಕೆ ೦—೨—೦

[illegible] ೧ಕ್ಕೆ ೦—೧—೦

NOTICE TO SUBSCRIBERS

[illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA.

Price including Postage, Rs 5-0-0

ವೈದ್ಯಸಾರ ಸಂಗ್ರಹ.

[illegible]

[illegible] ... ... ರೂ॥ ೫—೦—೦

[illegible] ೦—[illegible]—೦

[illegible], ಬೆಂಗಳೂರು.

ನೋಟೀಸ್.

[illegible]

ಕನ್ನಡ [illegible] ಸಂಸ್ಕೃತ ಗ್ರಂಥಗಳು.

[illegible]	...	೧—೮—೦
[illegible]	...	೦—೧೨—೦
[illegible] (ಪಟ್ಟಂ[illegible])	...	೦—೩—೦
[illegible]		೦—೫—೦
[illegible]	..	೦—೪—೦
[illegible]	... ...	೦—೧೪—೦
[illegible]	...	೦—೭—೦
[illegible]	... ...	೦—[illegible]—೦
ವೈದ್ಯಸಾರ ಸಂಗ್ರಹ	...	೫—೦—೦

ಕನ್ನಡ ಗ್ರಂಥಗಳು.

[illegible]	...	೦—೭—೦
[illegible]	...	೦—೪—೦
[illegible]	...	೦—೩—೬
[illegible]	... ...	೦—೨—೬
[illegible]	...	೦—೪—೦
[illegible]	...	೦—[illegible]—೦
[illegible]	...	೦—೨—೬
[illegible]	...	೦—೭—೦
[illegible]	...	೦—೩—೦
[illegible]	... ...	೦—೨—[illegible]
[illegible]	...	೦—೦—[illegible]
ಇಂಗ್ಲಿಷ್ ಕನ್ನಡ [illegible]		೧—೦—೦
[illegible]	... ...	೨—೦—೦
[illegible]	...	೦—೧೨—೦
[illegible]	...	೩—೪—೬
[illegible]	...	೩—೪—೬
[illegible] ಸ್ಟೇಟ್ [illegible]		
೧ನೇ ಸಂಚಿಕೆ.	...	೦—೮—೦
[illegible] ೨ನೇ ಸಂಚಿಕೆ.		೧—೮—೦
[illegible]	...	೦—೮—೦

ಸಂಸ್ಕೃತ [illegible] ಗ್ರಂಥಗಳು.

[illegible]	...	೦—೫—೦
[illegible]	...	೦—೨—೬
[illegible]	...	೦—೨—೬
[illegible]	...	೦—೦—೬
[illegible]	...	೦—[illegible]—೬
೧ [illegible]	...	೦—೧—೦

[illegible]

NOTICE.

ಎಸ್. ರಾಮಸ್ವಾಮಯಂಗಾರ್ ಕಂಪೆನಿ.

ಜನರಲ್ ಕಮ್ಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗದುಕೊಳ್ಳಲ್ಪಡುವದು.

ನೋಟಿಸ್.

ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿ.

ಸನ್ ೧೮೮೬ನೇ ಇಸವಿ ಫೆಬ್ರವರಿ ೨೬ನೇ ತಾರೀಖ್ ಶುಕ್ರವಾರದ ದಿನ ಪ್ರಾತಃಕಾಲ ೧೧ ಘಂಟೆಗೆ ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡದಲ್ಲಿನ ತಮ್ಮ ಆಫೀಸಿನಲ್ಲಿ ಸಿಟಿ ಮ್ಯೂನಿಸಿಪಲ್ ಕಮ್ಮಿಷನರ್‌ಗಳು ಆರ್ಡಿನರಿ ಮೀಟಿಂಗ್‌ನಲ್ಲಿ ಕುಳಿತು ಆಲೋಚನೆಗೆ ತರಲ್ಪಡುವ ವಿಷಯಗಳ ಪಟ್ಟಿ.

೧. ಚಾಲತಿ ನಗದು ಜಮಾಖರ್ಚು ಲೆಕ್ಕಗಳು, ಈಗ ನಡೆಯುತಲಿರುವ ಕಾಮಗಾರೀಗಳನ್ನು ಕುರಿತ ರಿಪೋರ್ಟು, ಸನ್ ೧೮೮೬ನೇ ಇಸವಿ ಜನವರಿ ಮಾಹೇ ಬಾಬತು ಮೃತಪಟ್ಟವರ ಲೆಕ್ಕ ಮತ್ತು ಮ್ಯೂನಿಸಿಪಲ್ ಸ್ಕೂಲ್‌ಗಳ ಲೆಕ್ಕಗಳು.

೨. ಸನ್ ೧೮೮೬—೮೭ನೇ ಸರ್ಕಾರ್ ಸಾಲ್ ಬಾಬತು ಜಮಾಖರ್ಚಿನ ಬಜೆಟ್ ಅಂದಾಜನ್ನು ಆಖ್ಯೆರಾಗಿ ಅಂಗೀಕರಿಸುವದು.

೩. ಬೀದಿಗಳಲ್ಲಿ ಕುಡಿಸುವ ಕಟ್ಟಡಗಳನ್ನು ಬಿಡಿಸಿ ಬಿಡುವ ಪಾಡಿಕೆಯನ್ನು ತಿರುಚನಪಳ್ಳಿ ಮ್ಯೂನಿಸಿಪಾಲಿಟಿಯವರು ಇಟ್ಟುಕೊಂಡಿರುವದರಿಂದ ಸದರೀ ಪಾಡಿಕೆಯನ್ನು ಅವಲಂಬಿಸಬೇಕಾದ್ದು ಆವಶ್ಯಕವೆಂದು ಬೋರ್ಡಿನವರ ಆಲೋಚನೆಗೆ ತರಬೇಕೆಂದು ಸಮೂದಿಸಿ ಮೈಸೂರು ಗವರ್ನಮೆಂಟ್ ಸೀನಿಯರ್ ಸರ್ಜನ್‌ರವರು ಬರೆದ ೧೮೮೬ನೇ ಇಸವಿ ಫೆಬ್ರವರಿ ೧೧ನೇ ಮರ್ಕೂಂ ನಂಬರ್ ಲೆಟರ್.

೪. ಸನ್ ೧೮೮೪—೮೫ನೇ ಇಸವಿಯಲ್ಲಿ ಟೌನ್ ಆಸ್ಪತ್ರಿಗೂ ಪ್ರಸವಚಿಕಿತ್ಸಾಪತ್ರಿಗೂ ಸರಬರಾಯ್ ಮಾಡಿದ ಔಷಧ ವಗೈರೆಗಳ ಖರ್ಚನ್ನು ಮೈಸೂರು ಗವರ್ನಮೆಂಟ್ ಸೀನಿಯರ್ ಸರ್ಜನ್‌ರವರು ೧೩೪೧-೧-೩ ರೂಪಾಯಿಗಳಿಗೆ ಬಿಲ್ಲುಗಳೊಡನೆ ಬರೆದ ೧೮೮೬ನೇ ಇಸವಿ ಫೆಬ್ರವರಿ ೧೨ನೇ ಮರ್ಕೂಂ ೧೬೮ನೇ ನಂಬರ್ ಲೆಟರ್.

೫. ಸಿಟಿ ಮ್ಯೂನಿಸಿಪಾಲಿಟಿ ಕಲಾಲುಖೋರರು ತಮಗೆ ತಲೆವ್ ಜಾಸ್ತೀ ಮಾಡಬೇಕೆಂದು ಪ್ರಾರ್ಥಿಸಿ ಬರೆದುಕೊಂಡ ಅರ್ಜಿ.

೬. ಸ್ಕೂಲ್‌ಮಾಸ್ಟರ್ ಮರಿಯಪ್ಪನೆಂಬವರು, ಅರಳೇಪೇಟೆಯಲ್ಲಿ ಒಂದು ಕನ್ನಡ ಪಾಠಶಾಲೆಗೆ ಮ್ಯೂನಿಸಿಪಾಲಿಟಿಯಿಂದ ಗ್ರಾಂಟಿನೆಯಿಡ್ ಕೊಡಬೇಕೆಂದು ಪ್ರಾರ್ಥಿಸಿ, ಸದರೀ ಪೇಟೆಯ ಜನಗಳ ಮುಚಲಿಕಾಸಹಿತ ಬರೆದುಕೊಂಡ ಅರ್ಜಿ.

೭. ಜನಗಳ ಅನುಕೂಲ್ಯಕ್ಕಾಗಿ ಪೇಟೆಯಲ್ಲಿ ಎರಡು ಔಷಧ ಶಾಲೆಗಳನ್ನಿಡಬೇಕೆಂದು ಮೈಸೂರು ಗವರ್ನಮೆಂಟ್ ಸೀನಿಯರ್ ಸರ್ಜನ್‌ರವರು ಕೊಟ್ಟ ಸಲಹೆ.

A. SRINIVASA CHARLU,
Vice-President,
City Municipal Commission.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, FEBRUARY 22, 1886.

೧೮೮೬ನೇ ಫೆಬ್ರವರಿ ೨೨ನೇ ತಾ॥ ಸೋಮವಾರ.

ಶ್ಲೋ॥ ಸರ್ವಜ್ಞತಾಂ ಸದಸಿ ವಾಕ್ಪಟುತಾಂ ಪ್ರಸೂತೆ ವಾಣಿ ತ್ವದಂಘ್ರಿ ಸರಸೀರುಹಯೋಃ ಪ್ರಣಾಮಃ॥ ತ್ವಾಮನಿಮನಸಿ ಕಮನು ಸ್ಮರಾಮಿ ತ್ವಾಮೇವ ನೌಮಿ ಶರಣಂ ಜನನಿ ತ್ವಮೇವ॥

JOINT STOCK COMPANIES IN MYSORE.

ಕೆಲವು ಕಾಲದಿಂದೀಚೆಗೆ ಇಂಡ್ಯಾದೇಶೀಯರಿಗೆ ವೈಲಕ್ಷಣ್ಯವುಳ್ಳ ಜನಗಳ ಪರಿಚಯ ಸಾಹಚರ್ಯದಿಂ ನಾಗರಿಕತೆಯುಂಟಾಗಿ, ಅದರಬಿಸಿಯಿಂದ ಐಕಮತ್ಯವು ಹುಟ್ಟುತಬರುತಲಿದೆ. ಇದಕ್ಕೆ ನಿದರ್ಶನವಾಗಿ ಧನವನ್ನಾರ್ಜಿಸುವದು, ಅದುರಕ್ಷಿಸುವದು, ವೃದ್ಧಿಗೊಳಿಸುವದು, ತಮ್ಮೊಳಗೆ ಬರತಕ್ಕ ನಫೆಯಲ್ಲಿ ತಾವು ಜೀವಿಸುವದಲ್ಲದೆ ಉತ್ತರೋತ್ತರ ತಮ್ಮ ಕುಟುಂಬದವರು, ತಾವು ಮಾಡಿದ ಧರ್ಮಸ್ಥಾಪನೆಗಳು ಸಹ ಜೀವಿಸಬೇಕೆಂಬ ತಾತ್ಪರ್ಯದೊಡನೆ ಕಂಪೆನಿಗಳೆಂತಲೂ, ಬ್ಯಾಂಕುಗಳೆಂತಲೂ, ಫಂಡುಗಳೆಂತಲೂ, ಸಂಘಗಳೆಂತಲೂ, ಏರ್ಪಡಿಸಲಾರಂಭಿಸಿದರು. ಈ ಮೈಸೂರು ದೇಶೀಯರು ಸ್ವತಃ ಪರಿಭಾವನೆಶಕ್ತಿ ಇಲ್ಲದವರಾದರೂ ಅನುಕರಣದೊಳು ಅನ್ಯಾದೃಶಜ್ಞಾನವುಳ್ಳವರಾದದರಿಂದ, ಅನ್ಯದೇಶೀಯರನ್ನು ನೋಡಿ ತಾವು ನಾನಾವಿಧ ಹೆಸರುಗಳೊಡನೆ ಸಂಘಗಳನ್ನು ಸ್ಥಾಪಿಸಲಾರಂಭಿಸಿದರು. ಪ್ರಾಯೇಣ ಮೋಸಗಾರರಾದ ಬ್ಯಾಂಕ್ ಏಜಂಟುಗಳಿಂದಲೂ, ನಿರಕ್ಷರಕುಕ್ಷಿಗಳಾದ ಡೈರೆಕ್ಟರುಗಳಿಂದಲೂ ದಗಾಖೋರರಾದ ಸಾಲಗಾರರಿಂದಲೂ, ಸಾಲಕೊಟ್ಟವರು ನಿರ್ನಾಮರಾಗಿ ಹೋಗತಕ್ಕಬಗ್ಗೆ ಏರ್ಪಟ್ಟಿರುವ ಇನ್‌ಸಾಲ್ವೆಂಟ್ ಆಕ್ಟಿನಿಂದಲೂ ಬ್ಯಾಂಕುಗಳು ಯೋಗ್ಯತಾಯುತ ಬಂದಹಾಗೆಲ್ಲ ಮರಳಿ ಒಂದೊಂದಾಗಿ ಮೈದಪ್ ಆದವು. ಇದರ ದೆಸೆಯಿಂದ ಬಹುಮಂದಿ ಏಜಂಟರೂ ಡೈರೆಕ್ಟರ್‌ಗಳೂ, ಧನಿಕರಾಗಿ ಹೋದರು. ಬಹಳ ಪ್ರಯಾಸದಿಂದಾರ್ಜಿಸಿ, ಗುಬ್ಬಚ್ಚಿಯು ಧಾನ್ಯಕಣವಂ ಶೇಖರಿಸುವಂತೆ, ಕೂಡಹಾಕಿ ಅದನ್ನು ತಮ್ಮ ಪ್ರಾಣಕ್ಕಿಂತಲೂ ಅತಿಶಯವಾಗಿ ಕಾಪಾಡುತಲಿದ್ದ ಷೇರ್‌ದಾರರು ಬಹುಮಂದಿ, ವೃದ್ಧ್ಯಂಶದ ಆಶೆಯಿಂದ, ಸದರೀ ಬ್ಯಾಂಕ್‌ಗಳ ಪರಿಣಾಮವನ್ನಾಲೋಚಿಸದೆ, ಅವುಗಳಲ್ಲಿ ಷೇರ್‌ಗಳನ್ನು ತೆಗದುಕೊಂಡು, ಕಡೆಗೆ ಸರ್ವಸ್ವವು ಕಳೆದುಕೊಂಡು ನಾಶಾರಾದರು. ಬಳಿಕ ಬ್ಯಾಂಕ್‌ಗಳೆಂದು ಸ್ಮರಿಸಲಿಕ್ಕೆ ಸಹ ಜನಗಳು ಬಹಳ ಭೀತರಾಗಿದ್ದರು. ಈ ಭ್ರಾಂತಿಯು ಮಧ್ಯೆ ಕೆಲವು ಸಂವತ್ಸರಗಳ ಕಾಲ ಉಪಶಾಂತವಾಗಿತ್ತು. ಈಚೆಗೆ ಒಂದೆರಡು ಸಂವತ್ಸರಗಳಿಂದ ಅದು ರೂಪಾಂತರದಿಂ ಮರಳಿ ತಲೆದೋರಿ ಅನೇಕರಂ ನಾಶಗೊಳಿಸಲಾರಂಭಿಸಿದೆ. ಗತ ಸಂವತ್ಸರದ ಮೊದಲು ಇದುವರಿವಿಗೂ ಈ ಮೈಸೂರು ಸೀಮೆಯಲ್ಲಿ ವಿವಾಹ ಫಂಡ್‌ಗಳೆಂತಲೂ, ಉಪನಯನ ಸಹಾಯ ಸಂಘವೆಂತಲೂ, ಋತು ಶಾಂತಿಪ್ರಸ್ತ ಸಹಾಯವೆಂತಲೂ, ಮರಣ ಸಹಾಯ ಸಂಘವೆಂತಲೂ ನಾನಾವಿಧ ಹೆಸರುಗಳೊಡನೆ ಘೋಷಕ ಕರ್ತೃಗಳಗೂ ಸುಮಾರು ಮೂವತ್ತು ನಾಲ್ವತ್ತು ಫಂಡುಗಳೇರ್ಪಡುತಬಂದವು. ಪ್ರಾಯೇಣ ಇವುಗಳೆಲ್ಲವೂ ಒಂದರಮೇಲೊಂದು ಪೋಟಿಗೆ ಏರ್ಪಟ್ಟವಾಗಿಯೂ ಒಂದರಿಂದೊಂದನ್ನು ನಾಶಪಡಿಸಬೇಕೆಂಬ ದುಶ್ಶೀಲವುಳ್ಳದ್ದಾಗಿಯೂ ಇರುತಿವೆ. ಇವುಗಳ ಸ್ಥಿತಿಯನ್ನಾಲೋಚಿಸಿದರೆ, ಕೆಲವು ರಿಜಿಸ್ಟ್ರೀಷನ್ ಫೀ ಕೊಡಲಿಕ್ಕೆ ಮಾರ್ಗವಿಲ್ಲದವಾಗಿಯೂ, ಮತ್ತು ಕೆಲವು ಪ್ರಿಂಟಿಂಗ್‌ಛಾರ್ಜ್ ಕೊಡುವದಕ್ಕೆ ಉಪಪತ್ತಿ ಇಲ್ಲದವಾಗಿಯೂ, ಬೇರೆ ಕೆಲವು ಸಾಲಿಸಿಟರ್ ಖರ್ಚಿಗೇನೇ ಅನುಕೂಲವಿಲ್ಲದವಾಗಿಯೂ ಇರುತಿವೆ. ನಮ್ಮ ಮಾತುಗಳೀಗ ಯಾರಿಗಾದರೂ ಅತಿಶಯೋಕ್ತಿಯೆಂದು ತೋರಿದರೆ ಅಂತವರೆಲ್ಲರೂ ಡಿಸ್ಟ್ರಿಕ್ಟ್‌ಜಾತಿಗಳಲ್ಲಿರುವ ಬ್ಯಾಂಕ್‌ಗಳಸ್ಥಿತಿಯನ್ನು ಅಜಮಾಯಿಷೀ ಮೂಲಕ ತಿಳಿದು ತೃಪ್ತರಾಗಬಹುದು. ಇದಲ್ಲದೆ ಇಂತಾ ಸಹಾಯಸಂಘಗಳನ್ನು ಏರ್ಪಡಿಸಿ ಅವು

ಗಳಿಗೆ ಮುಖ್ಯಪ್ರವರ್ತಕರಾಗಿರುವವರ ಉದ್ದೇಶಗಳು ಫಲಾನೇ ರೂಪವೆಂದು ಅವರು ಮಾಡತಕ್ಕ ಪ್ರೊಸೀಡಿಂಗ್ಸುಗಳದೆಸೆಯಿಂದಲೇ ಸ್ಪಷ್ಟವಾಗುತ್ತದೆ. ಈಚೆಗೆ ಕಡೂರು ಡಿಸ್ಟ್ರಿಕ್ಟಿನೊಳೇರ್ಪಟ್ಟ ಒಂದು ಸಂಘದ ಪ್ರೊಸೀಡಿಂಗಸನ್ನು ನೋಡಲಾಗಿ ಅದು ಕೇವಲ ಅನ್ಯಥಾ ಪ್ರಯೋಜನೋದ್ದೇಶದೊಡನೆ ಸ್ಥಾಪಿಸಲ್ಪಟ್ಟಂತೆಯೇ ತೋರುತ್ತಿದೆಯಲ್ಲದೆ ಅದರಿಂದ ಷೇರುದಾರರು ಒಳ್ಳೆಯ ಪ್ರಯೋಜನವನ್ನೈದುವರೆಂಬ ಭರವಸೆ ನಮಗೆಷ್ಟುಮಾತ್ರವೂ ಇಲ್ಲವು.

ಯಾತಕ್ಕೆಂದರೆ ಸದರೀ ಬ್ಯಾಂಕಿನ ಪ್ರಕೃತ ಮೂಲಧನವು ೧೨,೦೦೦ ರೂಪಾಯಿಗಳಾಗಿ ಏರ್ಪಡಿಸಲ್ಪಟ್ಟಿರುತ್ತದೆ. ಮಾಹೇಯಾನಾ ಇದಕ್ಕೆ ನೂರಾ ಬಡ್ಡಿ, ಅಂದರೆ ಸೇಕಡಾ ೧ ರೂಪಾಯಿ ಪ್ರಕಾರ ನಫೆಬಂದಾಗ್ಯೂ ತಿಂಗಳೊಂದಕ್ಕೆ ೧೨೦ ರೂಪಾಯಿಗಳಿಗಿಂತ ಅಧಿಕವಾಗಿ ಲಾಭವಂನಿರೀಕ್ಷಿಸುವದಕ್ಕಾಗುವದಿಲ್ಲವು. ಸದರೀ ಕಂಪೆನಿಯು, ಒಂದು ತಾಲ್ಲೂಕು ಶಿಬ್ಬಂದಿಗೆ ಮೇಲ್ಪಟ್ಟು ಮಾಹೇಯಾನಾ ಸುಮಾರ್ ೧೫೦ ರೂಪಾಯಿಗಳ ತನಕ ಶಿಬ್ಬಂದಿ ಖರ್ಚು ಉಳ್ಳದ್ದಾಗಿದೆ. ಈಖರ್ಚುಗಳೆಲ್ಲ ಷೇರದಾರರಿಗೆ ನಫೆ ಬರಲಿಕ್ಕೆ ಮಾಡಿರುವ ಆಲೋಚನೆಯಾವರೂಪವಾದದಾಗಿಯಾದರೂ ಇರಲಿ, ಆಪ್ತರಿಗೆ ಕಠಿಣವಾದದ್ದಾಗಿಯೂ, ಬಡವಾಳಕ್ಕೆ ಹಾನಿತರತಕ್ಕದ್ದಾಗಿಯೂ ಇರುವದೆಂಬದರಲ್ಲಿಷ್ಟುಮಾತ್ರವೂ ಸಂದೇಹವಿಲ್ಲವು. ಈಸ್ಥಿತಿಯೊಳು ಷೇರ್‌ದಾರರೆಷ್ಟು ಲಾಭವು ಪಡೆಯುವರೋ ನಾವರಿಯೆವು. ಇನ್ನೂ ಕೆಲವು ಕಂಪೆನಿಗಳಲ್ಲಿ ಷೇರ್‌ದಾರರಿಗೆ ಬಟವಾಡೆ ಮಾಡಬೇಕಾದ ತಗಾದೆ ಜೋರಾದರೆ, ಆಗ ತಮಗೆ ಬೇಕಾದಂತಾ ನಾಲ್ವರನ್ನು ಸೇರಿಸಿ ಅವರ ಮೂಲಕ ಸಪರಿತ್ರೆಗಾದೆ ತಪ್ಪುವಂತೆ ಒಂದು ರಿಜೊಲ್ಯೂಷನ್ ಮಾಡುತ್ತಾರೆ. ಮೊದಲು ರೂಲ್ಸಿನಲ್ಲಿ "ಈ ಕಂಪೆನಿಯ ಷೇರ್‌ದಾರರು, ಈ ರೂಲ್ಸುಗಳಿಗೆ ಅನುಗುಣವಾಗಿ ಮುಂದೆ ಮಾಡಲ್ಪಡುವ ನಿಬಂಧನೆಗಳಿಗೆಲ್ಲ ಬದ್ಧರಾಗಿರತಕ್ಕದ್ದು" ಎಂಬದಾಗಿ ಒಂದು ಕಲಂ ಸೇರಿಸಿರುವದರಿಂದ ಷೇರ್‌ದಾರರು ಪ್ರತ್ಯುತ್ತರ ಹೇಳಲಾರದೆ ವಿಷಾದದೊಡನೆ ತಮ್ಮ ಅಜ್ಞಾನವು ನಿಂದಿಸಿ ಕೊಳ್ಳಲಾರಂಭಿಸಿದಾರೆ. ಇಂತಾ ಸಂಘಗಳೇರ್ಪಡಿಸಿ ತನ್ಮೂಲಕ ಜನಗಳಿಗೆ ನುಕ್ಸಾನನ್ನೂ, ಅತೃಪ್ತಿಯನ್ನೂ ಉಂಟುಮಾಡುವದಕ್ಕಿಂತಲೂ, ಇಂತಾ ಕುಂಠಿತಪ್ರಯತ್ನಗಳನ್ನು ಮಾಡದಿದ್ದರೆ ಗೌರವವಾಗಿರುವದು ಇವು ನಂಬಿ ಅನೇಕಜನ ಹೊಗಸರೂ ಮಕ್ಕಳುಸಹದ ರಬಾಸ್ತುಮಾಡಿ, ಯಾಚಿಸಿಕೂಡಿಟ್ಟಿರುವ ಕ್ಷುದ್ರಿ ಕಾಸುಗಳನ್ನೆಲ್ಲ ಇವರುಗಳಿಗೆ ದಾರೆ ಹೊಯ್ಯುವದಕ್ಕೆ ಪ್ರಾರಂಭಿಸಿರುವದರಿಂದ ಅಂತವರ ನಷ್ಟಕ್ಕೆ ಇವೆಲ್ಲವು ಕಾರಣವಾಗಿ ಏರ್ಪಟ್ಟವೆ. ಮೈಸೂರುದೇಶೀಯರಿಗೆ ಅಜ್ಞಾನಕೃತವಾದ ನಷ್ಟವು ಅನುಭವಸಿದ್ಧವಾದರೂ ಅದು ಇಷ್ಟುತ್ವರೆಯೊಳು ಮರೆತುಹೋದವಕ್ಕಾಗಿ ನಾವು ಬಹಳ ವಿಷಾದಿಸುವೆವು.

THE MAHA BHARATA IN ENGLISH

ಶ್ರೀ ಮಹಾಭಾರತವು ಕಲ್ಕತ್ತೆಯ ನಿವಾಸಿಯಾದ ಬಾಬೂ ಪ್ರತಾಪ ಚಂದ್ರರಾಯ ಎಂಬವರಿಂದ ಇಂಗ್ಲಿಷ್ ಭಾಷೆಯಲ್ಲಿ ವಾಕ್ಯರೂಪವಾಗಿ ಭಾಷಾಂತರ ಮಾಡಲ್ಪಟ್ಟು ಸಂಚಿಕೆಗಳಾಗಿ ಕಳುಹಿಸಲ್ಪಡುತಲಿರುವವನ್ನು ಪ್ರಾಯೇಣ ಎಲ್ಲರೂ ಅರಿತಿರುತ್ತಾರೆ ಯಷ್ಟೆ. ಸದರೀ ದೊಡ್ಡ ಮನುಷ್ಯರು ಶಾರೀರ ಮಾನಸಿಕ ಶ್ರಮವನ್ನೂ ಅದಕ್ಕೆ ಆವಶ್ಯಕವಾದ ಅರ್ಥೋಪಪತ್ತಿಯನ್ನೂ ಚಿಂತಿಸದೆ ಪ್ರಸಕ್ತಪ್ರಯತ್ನವು ಮಾಡಿ ಇದುವರಿವಿಗೂ ನಿರ್ವಿಘ್ನವಾಗಿ ನಡೆಸುತಲಿದಾರೆ. ಲೋಕೋಪಕಾರಕವಾದ ಅವರ ಪರಿಶ್ರಮವನ್ನೂ ಧರ್ಮಬುದ್ಧಿಯನ್ನೂ ಪರಿಭಾವಿಸಿ ಸಂಸ್ಥಾನಾಧಿಪತಿಗಳೂ ಜಮೀನ್ದಾರರೂ ಪ್ರಮುಖರೂ ತಮ್ಮ ತಮ್ಮ ಶಕ್ತ್ಯುತ್ಸಾಹಾನುಗುಣವಾಗಿ ಅರ್ಥ ಸಹಾಯ ಮಾಡುತಲಿರುವದನ್ನು ಆಗಿಂದಾಗ್ಯೆ ಈ ಪತ್ರಿಕಾ ಮೂಲಕ ಪ್ರಕಟಿಸುತಲಿರುತ್ತೇವೆ. ಇದುವರಿವಿಗೆ ಈ ಗ್ರಂಥದ ತ್ರಿಪ್ರ್ಯೇಕಭಾಗವು ಭಾಷಾಂತರವಾಗಿದೆ. ಇನ್ನು ಎರಡು ಭಾಗವು ಪೂರೈಸಬೇಕಾಗಿರುವದರಿಂದ ಇದಕ್ಕೆ ದ್ರವ್ಯಾನುಕೂಲ್ಯವು ಬಹಳ ಬೇಕಾಗಿರುತ್ತದೆ. ಬಾಬೂ ಪ್ರತಾಪ ಚಂದ್ರರಾಯರವರ ಪ್ರಯತ್ನಕ್ಕೆ ಸಹಾಯ ಮಾಡಿದವರ ಪೈಕಿ ಕೆಲವು ಸಂಸ್ಥಾನಾಧಿಪತಿಗಳನ್ನು ಇದರಡಿ ತಿಳಿಸುವೆವು.

ಇಂಡ್ಯಸ್ಟೇಟಿಸೆಕ್ರಟರಿಯವರು		೧೨೫೦
ಬೆಂಗಾಲ್ ಗವರ್ನಮೆಂಟನವರು		೫೦೦೦
ವಾಯವ್ಯಸೀಮೆಯ	,,	೩೦೦೦
ಪಂಜಾಬ	,,	೩೦೦೦
ಮುಂಬೈ	,,	೨೫೦೦
ಮದರಾಸ್	,	೧೫೦೦
ಆಸಾಂ	,,	೧೦೦೦
ಬ್ರಿಟಿಷ್‌ಬರ್ಮಾ	,,	೫೦೦
ಮಾರ್ಕ್ವಿಸ್ ರಿಪನ್‌ಯವರು		೧೦೦೦
ಕಾಶ್ಮೀರದ ಮಹಾರಾಜರು		೪೫೦೦
ಬರೋಡಾಗಾಯಕವಾಡಿಯವರು		೧೨೫೦
ಪತಿಯಾಲಾ ಮಹಾರಾಜರವರು		೧೦೦೦
ಹೈದರಾಬಾದ್ ನಿಜಾಮರವರು.		೪೫೧೦
ಹೋಳ್ಕರ್ ಮಹಾರಾಜರವರು.		೧೩೦೦
ಮಹಾರಾಣಿ ಸ್ವರ್ಣಮಾಯಿಯವರು.		೧೨೦೦
ಮೈಮನ್‌ಸಿಂಗ್ ನಿವಾಸಸ್ಥರಾದ ರಾಜಾಸೂರ್ಯಕುಮಾರಾಚಾರ್ಯರು.		೫೫೦೦
ರಾಜಾಗೋವಿಂದಲಾಲ್‌ರಾಯರವರು.		೬೫೦೦
ಕಂಕಿನಿಯಾ ಜಮೀನ್ದಾರರು.		೩೦೦೦
ಮೈಸೂರು ಮಹಾರಾಜರವರು.		೫೦೦೦

ಈಸಂದರ್ಭದಲ್ಲಿ ನೇಟಿವ್ ಸಂಸ್ಥಾನಾಧಿಪತಿಗಳ ಔದಾರ್ಯವು ಕೇವಲ ಪ್ರಶಂಸನೀಯವಾದ್ದಾಗಿದೆ ಮೆ|| ಪ್ರತಾಪಚಂದ್ರ ರಾಯರವರಿಗೆ ಇದುವರಿವಿಗೆ ಲಭಿಸಿದ ಸಹಾಯವು ಅತ್ಯಲ್ಪವಾಗಿಯೂ, ಮುಂದೆ ಅಪೇಕ್ಷಿತ ಭಾಗವು ಅಧಿಕವಾಗಿಯೂ ಯಿರುವದರಿಂದ ಲೋಕೋಪಕಾರಕವಾದ ತಮ್ಮ ಪ್ರಯತ್ನಕ್ಕೆ ಸಹಾಯ ಮಾಡುವದರದೆಸೆಯಿಂದ ಪ್ರಾರ್ಥನೆಯ ಬಗ್ಗೆ ಸದರೀ ದೊಡ್ಡಮನುಷ್ಯರು ಮೆ|| ಸಿದ್ದೇಶ್ವರಮಿತ್ರರೆಂಬವರನ್ನು ಕಳುಹಿಸಿರುತ್ತಾರೆ. ಅವರೀಗ ದೇಶ ಸಂಚಾರ ಮಾಡಿಕೊಂಡು ಮದರಾಸಿಗೆ ಬಂದಿರುವರು ಕ್ರಮೇಣ ಅವರು ಈ ದೇಶಕ್ಕೂ ಬರಬಹುದೆಂದು ತೋರುತಿದೆ. ಮುಖ್ಯವಾಗಿ ಉದಾರರಾಗಿಯೂ, ಸ್ವದೇಶಾಭಿಮಾನವುಳ್ಳವರಾಗಿಯೂ ಯಿರುವವರೆಲ್ಲ ತಮ್ಮ ಔದಾರ್ಯಾಭಿಮಾನಗಳಂ ವ್ಯಕ್ತಪಡಿಸಲಿಕ್ಕೆ ಇದೊಂದು ಒಳ್ಳೆಯ ಸಂದರ್ಭವಾಗಿರುವದರಿಂದ, ಯೆಲ್ಲರೂ ಶಕ್ತ್ಯನುಸಾರ ಸಹಾಯಮಾಡುವರಾದರೆ ಮೇಲೆ ಕಂಡ ದೊಡ್ಡಮನುಷ್ಯರ ಪ್ರಯತ್ನವು ಸಾಫಲ್ಯವನ್ನೈದುವದರ ಮೂಲಕ ಅವರಿಗೆ ಪುಣ್ಯ ಕೀರ್ತಿಗಳುಂಟಾಗುವವು.

Occasional Notes
ನೈಮಿತ್ತಿಕವಿಷಯನ್ಯಾಸ

Tax upon all foreigners—ಫ್ರೆಂಚ್ ಸರ್ಕಾರದವರು ತಮ್ಮ ದೇಶದೊಳಿರತಕ್ಕ ಅನ್ಯದೇಶೀಯರಿಗೆಲ್ಲ ತೆರಿಗೆ ಹಾಕಬೇಕೆಂಬ ಆಲೋಚನೆಯುಳ್ಳವರಾಗಿದಾರೆಂದು ತಿಳಿಯಬರುತಿದೆ.

Introduction of postage stamps.—ಇಂದೂರು ಮಹಾರಾಜರವರು ತಮ್ಮ ರಾಜ್ಯದಲ್ಲಿ ಪೋಸ್ಟೇಜ್ ಸ್ಟ್ಯಾಂಪುಗಳನ್ನು ಬಾಬಾ ಹಾಕಿಸಿ ಜಾರೀಯೊಳು ತಂದಿರುತ್ತಾರೆ.

The Maharaja Holkar's ill health—ಹೋಲ್ಕಾರ್ ಮಹಾರಾಜರವರು ಕೇವಲ ಅಸ್ವಸ್ಥ ಸ್ಥಿತಿಯಲ್ಲಿರುವದಲ್ಲದೆ ಅವರಿಗೆ ತಗಲಿರುವ ರೋಗವು ಅಪಾಯಶಂಕೆಯನ್ನುಂಟುಮಾಡತಕ್ಕ ಮಾರ್ಗವನ್ನವಲಂಬಿಸಿರುವುತೆ ತಿಳಿಯಬರುತಿದೆ.

The Viceroy's visit to Cashmere—ಬರುವ ಮೇ ತಿಂಗಳಲ್ಲಿ ವೈಸರಾಯ್‌ಯವರು ಕಾಶ್ಮೀರ ಮಹಾರಾಜರ ದೇಶವನ್ನು ನೋಡುವದಕ್ಕಾಗಿ ಅಲ್ಲಿಗೆ ಹೋಗುವರು

Claims against Theeba—ಪದಭ್ರಷ್ಟರಾದ ಬರ್ಮಾದೇಶದ ಅರಸರಾದ ತೀಬಾಯವರು ಕೊಡಬೇಕಾದ ಸಾಲಗಳು ೧೩ ಲಕ್ಷಕ್ಕೆ ಕಡಿಮ್ಮೆ ಇಲ್ಲದೆಯೂ ೧೫ಲಕ್ಷರೂಪಾಯಿಗಳಿಗೆ ಅಧಿಕವಿಲ್ಲದೆಯೂ ಇರಬಹುದೆಂದು ಲೆಕ್ಕ ಮಾಡಲ್ಪಟ್ಟಿದೆ

Goa, its present and past—ಈಗ್ಯೆ ಇನ್ನೂರು ವರುಷಗಳ ಹಿಂದೆ ಗೋವಾ ಎಂಬ ಗೋಕರ್ಣದಲ್ಲಿ ೨ ಲಕ್ಷ ಪೋರ್ಚುಗೀಸ್ ಜನಗಳು ವಾಸವಾಗಿದ್ದರು. ಈಗ ನೂರು ಮಂದಿಗಿಂತ ಅಧಿಕವಿಲ್ಲವು. ಕಾಲಗತಿಯಿಂದ ಯೆಲ್ಲವೂ ಬದಲಾಯಿಸಿ ಹೋಯಿತು.

Divisions of Upper Burmah—ಬ್ರಿಟಿಷ್ ರಾಜ್ಯಕ್ಕೆ ದಾಖಲಾದ ಬರ್ಮಾ ದೇಶದ ಏರ್ಪಾಡಂಕುರಿತು, ಅಲ್ಲಿನ ಚೀಫ್‌ಕಮಿಷನರ್ ಮೆ|| ಬರ್ನ್ಸ್‌ರ್ಡ್‌ಯವರ ಏರ್ಪಾಡಿನ ಪ್ರಕಾರ ಸದರೀ ದೇಶವು ೧೨ ಡಿಸ್ಟ್ರಿಕ್ಟುಗಳಾಗಿ ವಿಭಾಗಿಸಲ್ಪಡುವದಾಗಿದೆಯೆಂದು ತಿಳಿಯ ಬರುತಿದೆ.

H. H. The Nizam—ಹೈದರಾಬಾದ್‌ಸಂಸ್ಥಾನದ ನಿಜಾಮರವರು ಕೆಲವು ದಿನಗಳಿಂದ ಗೋಲಕೊಂಡೆಯಲ್ಲಿರುತಲಿದಾರೆ ಇವರು ಈಗ ಬಹಳ ಮಟ್ಟಿಗೆ ಆರೋಗ್ಯ ಸ್ಥಿತಿಯೊಳಿರುತಲಿದಾರೆ. ಪರಂತು ಇವರಿಗ ಪ್ರಾಪ್ತವಾಗಿದ್ದ ಎದೆನೋವು ಮಾತ್ರ ಅಷ್ಟಾಪನಿಸ್ಸೆಷವಾಗಿ ಗುಣವಾಗಲಿಲ್ಲವು

The Chief Commissioner of Burmah—ಬರ್ಮಾದೇಶದ ಚೀಫ್‌ಕಮಿಷನರಾದ ಮೆ||ಬರ್ನಾರ್ಡ್ ಯವರು ಕಾಹಿಲೇ ಸಬಬ್ ಸ್ವಲ್ಪಕಾಲ ರಜಾ ಪಡೆದುಕೊಳ್ಳುವರು. ಇವರ ಗೈರ್ಹಾಜರಿ ಕಾಲದಲ್ಲಿ ಬಂಗಾಳೇ ಗವರ್ನಮೆಂಟ್ ಸೆಕ್ರೆಟರಿಯಾದ ಮೆ|| ಪೀಕಾಕ್‌ಯವರು ಇವರ ಕೆಲಸವು ನೋಡಬಹುದೆಂದು ಕಾಣುತದೆ

Official Gazette in Japan—ಯೂರೋಪ್ ದೇಶದಲ್ಲಿ ಸರ್ಕಾರೀ ಗೆಜೆಟುಗಳು ಯಾವರೀತಿ ಛಾಯಿಷ್ ಮಾಡಲ್ಪಡುತಿವೆಯೋ, ನ್ಯೂಸ್ ಪೇಪರ್ ಆಫೀಸುಗಳಲ್ಲಿ ಕೆಲಸಗಳು ಹ್ಯಾಗೆ ನಡೆಸಲ್ಪಡುತಿವೆಯೋ ಅವನ್ನು ತಿಳಿದು ಕೊಂಡು ಬರುವಂತೆ ಅಲ್ಲಿಗೆ ಒಬ್ಬ ಆಫೀಸರನ್ನು ಕಳುಹಿಸ ಬೇಕೆಂದು ಜಪಾನ್‌ದ್ವೀಪದ ಸರ್ಕಾರದವರು ಯೋಚಿಸುತಲಿದಾರೆ.

A meeting.—ಮುಂಬೈಯಲ್ಲಿ ಕೇವಲ ಪ್ರಸಿದ್ಧರಾಗಿರುವ ಸರ್‌ಜಂಸೆಟಜಿ. ಜೀ ಜೀ ಬಾಯ್‌ಯವರಿಗೆ, ಪರ್ಷಿಯಾ ಸರ್ಕಾರದವರಕಡೆಯಿಂದ ಬಂದು ಚಿನ್ನದ ಮೊಹರ್, ಅಂದರೆ ಬಿರುದನ್ನು ಕೊಡುವದಕ್ಕಾಗಿ, ಮುಂಬೈಯಲ್ಲಿರುವ ಪರ್ಷಿಯಾ ದೇಶದ ರಾಯಭಾರಿಯವರು ಶೀಘ್ರದಲ್ಲಿ ಪಾರ್ಸಿ ಜನಗಳ ಸಮಾಜವೊಂದನ್ನು ಸೇರಿಸ ಬೇಕೆಂದು ಯೋಚಿಸುತಲಿದಾರೆ.

Forest leases in Burmah—ಮುಂಬೈ-ಬರ್ಮಾ ವ್ಯಾಪಾರ ಸಂಘದವರಿಗೆ ಈಗ ಕೊಡಲ್ಪಟ್ಟಿರುವ ಕಾಡು ಗುತ್ತಿಗೆಯನ್ನು ಗವರ್ನಮೆಂಟಿನವರು ಸದರೀ ಕಂಪೆನಿಯವರಿಗೇನೇ ಕೊಡುತಬರುವದರಿಂದ ಅನ್ಯರ್‍ಯಾರಿಗೂ ಅವಕಾಶವಿಲ್ಲದೆಹೋಗುತದೆಂಬ ಭಾವ ಅಲ್ಲಿಸಾಮಾನ್ಯವಾಗಿ ಎಲ್ಲರಿಗೂ ಉಂಟಾಗಲು, ಹಾಗೆಮಾಡುವದು ಅಯುಕ್ತವೆಂದು ಆಕ್ಷೇಪಿಸುವದಕ್ಕಾಗಿ ರಂಗೂನ್‌ನಲ್ಲಿ ಒಂದು ಪ್ರಯತ್ನ ನಡೆಯುತಲಿದೆ.

The income of a millionnaire—ಮೆ|| ವಾಂಡರ್ ಬಿಲ್ಟ್ ಎಂಬಾತನ ಮರಣ ಕಾಲದಲ್ಲಿ ಆತನ ವರಮಾನವು ಇದರಡಿ ಬರುವಂತೆ ಲೆಕ್ಕಮಾಡಲ್ಪಟ್ಟಿತು—ಸರ್ಕಾರೀ ಪತ್ರಗಳ ಮೂಲಕ ಸಾಲೀಯಾನಾ ೩,೦೩,೫೪೦ ಪೌಂಡುಗಳು, ರೈಲ್ ಕಂಪೆನಿಗಳ ಮೂಲಕ ೧೫,೪೦,೦೦೦ ಪೌಂಡುಗಳು, ಚಿಲ್ಲರೆ ಬಾಪ್ತುಗಳಿಂದ ೧,೨೦,೧೪೪ ಪೌಂಡುಗಳು, ಒಟ್ಟು ೨೩,೬೩,೦೦೦ ಪೌಂಡುಗಳು. ಇವನ್ನು ಹಂಚಲಾಗಿ ದಿನ ೧ಕ್ಕೆ ೬,೦೦೦ ಡಾಲರ ಪೌಂಡುಗಳು, ಘಂಟೆ ೧ಕ್ಕೆ ೨೫೦ ಪೌಂಡುಗಳು, ನಿಮಿಷಂಕ್ಕೆ ೪ ಪೌಂಡುಗಳು ಬಂದಂತೆ ಏರ್ಪಟ್ಟಿತು.

Dismissal of native officials—ಕಳೆದ ಸಂವತ್ಸರದಲ್ಲಿ, ತಂಜಾವೂರು ಕಲೆಕ್ಟರವರು, ಸದರೀ ಡಿಸ್ಟ್ರಿಕ್ಟು ಜಮೀನ್‌ಕಂದಾಯದಲ್ಲಿ ರಿಮಿಷನ್ ಕೊಡಬೇಕೆಂದು ಕೇಳಿಕೊಂಡು ಆಬಗ್ಯೆ ತಯಾರಾದ ಲೆಕ್ಕಗಳಲ್ಲಿ ಕೆಲವು ಅಕ್ರಮಗಳು ಕಂಡುಬಂದದರಿಂದ ಸದರೀ ಡಿಸ್ಟ್ರಿಕ್ಟು ನೌಕರರಪೈಕಿ ಹದಿನೈದುಮಂದಿಯನ್ನು ಗವರ್ನಮೆಂಟನವರು ಈಚೆಗೆ ಕೆಲಸದಿಂದ ನಿವೃತ್ತಿಮಾಡಿದರೆಂದು ತಿಳಿಯಬರುತಿದೆ.

Loss in the late Burma war—ಇಂಗ್ಲಿಷರವರಿಗೂ ಬರ್ಮಾ ಅರಸರಿಗೂ ಈಚೆಗೆ ನಡೆದ ಯುದ್ಧಕಾಲದಲ್ಲಿ ಪ್ರಾಪ್ತವಾದ ನಷ್ಟದ ತಪಸೀಲ್ ಹ್ಯಾಗೆಂದರೆ, ಜನವರಿ೨೮ನೇ ತಾರೀಖಿನಲ್ಲಿ ೫೩ ಮಂದಿ, ೨೯ನೇ ತಾರೀಖಿನಲ್ಲಿ ೧೭ಜನ, ೩೧ನೇ ತಾರೀಖ್‌ನಲ್ಲಿ ೨೨ಜನ, ಈರೀತಿ ಬರ್ಮಾಸೈನಿಕರು ಮೃತಪಟ್ಟರು. ಇವಲ್ಲದೆ ಓಡಿಹೋದವರ ಬಾಬತು ೨೫ಕುದುರೆಗಳು, ೫೦ಒಂಟೆಗಳು, ಅನೇಕ ಆಯುಧಗಳು, ೨೪ ಗಾಡಿಗಳ ಬೋಜೆ ಸಾಮಾನುಗಳು, ಇವೆಲ್ಲವು ಇಂಗ್ಲಿಷನವರ ಸ್ವಾಧೀನವಾದಂತೆ ತಿಳಿಯಬರುತದೆ

A public demonstration—ಲಾರ್ಡ್‌ಹೋಬಾರ್ಟ್ ಎಂಬವರು ಲಂಡನ್ ಪಟ್ಟಣದಿಂದ ವಾಪಸ್ ಬಂದಮೇಲೆ ತಮ್ಮ ಸ್ಥಲವಾದ ಕೃಷ್ಣಪುರ್ ಡಿಸ್ಟ್ರಿಕ್ಟಿಗೆ ಹೋದಕಾಲದಲ್ಲಿ ಅಲ್ಲಿನ ಪ್ರಜೆಗಳೆಲ್ಲರೂ ಅತ್ಯುತ್ಸಾಹ ದೊಡನೆ ಸದರೀ ಯವರನ್ನು ಬರಮಾಡಿಕೊಂಡು ಅವರಲ್ಲಿ ಪ್ರೀತಿ ಗೌರವವು ತೋರಿಸುವ ಬಗ್ಯೆ ಅವರ ಗಾಡಿಯನ್ನು ೨ ಮೈಲುಗಳ ತನಕ ಕೈಯಿಂದಲೇ ಸೆಳೆದುಕೊಂಡು ಹೋದರೆಂತಲೂ, ಇಂತಾ ಪ್ರೀತಿ ಗೌರವ ಪ್ರದರ್ಶನದೊಳು ಸ್ತ್ರೀಯರು ಸಹ ಹಿಂದಿನಂತೆ ಪ್ರವರ್ತಿಸಿದ್ದರೆಂತಲೂ ತಿಳಿಯ ಬರುತಿದೆ

The Baroda State Library—ಬರೋಡೇ ಸಂಸ್ಥಾನದ ಪುಸ್ತಕಶಾಲೆಯು೧೮೭೭ನೇ ಇಸವಿಯಲ್ಲಿ ರಾಜಾಸರ್ ಟಿ ಮಾಧವರಾಯರವರ ದಿವಾನಗಿರಿಯೊಳು ಸ್ಥಾಪಿಸಲ್ಪಟ್ಟಿತು ಗಾಯಕವಾಡಿ ಮಹಾರಾಜರವರು ಈಚಗೆ ನಡೆದ ತಮ್ಮ ವಿವಾಹೋತ್ಸವದ ಗೌರವಾರ್ಥ ಪುಸ್ತಕಗಳು ತೆಗದುಕೊಳ್ಳುವದಕ್ಕಾಗಿ ಸದರೀಪುಸ್ತಕ ಶಾಲೆಗೆ ೧೦೦೦ ರೂಪಾಯಿಗಳು ಕೊಟ್ಟರು. ಈಶಾಲೆಯು ಅಲ್ಲಿವಿದ್ಯಾಭಿವೃದ್ಧಿಗಾಗಿ ಏರ್ಪಟ್ಟಿರುವ ಸ್ಥಾಪನಗಳ ಪೈಕಿ ಒಂದಾಗಿ ಗೌರವಿಸಲ್ಪಡುತಿದೆ. ಅದರ ಖರ್ಚುಗಳ ಪೈಕಿ ಅರ್ಧಕ್ಕಿಂತಲೂ ಅಧಿಕವಾಗಿ ಸಂಸ್ಥಾನದಿಂದ ಕೊಡಲ್ಪಡುತಿದೆ.

An appeal to the Viceroy—ಸನ್ ೧೮೭೯ನೇ ಇಸವಿಯ ಮೊದಲು, ಈಗ ಪದ ಭ್ರಷ್ಟರಾಗಿರುವ ಬರ್ಮಾ ಅರಸರವರು, ತಮ್ಮ ಬಂಧುಗಳ ಪೈಕಿ ಅನೇಕರನ್ನು ಖೂನ್ ಮಾಡಿಸಿ, ನವರತ್ನ ಖಚಿತಗಳಾದ ಅವರ ಆಭರಣಾದಿಗಳನ್ನೆಲ್ಲ ಅಪಹರಿಸಿದರೆಂತಲೂ, ಅದಂಸದರೀ ಅರಸರೀಗಮದರಾಸ್‌ನಲ್ಲಿ ತಮ್ಮ ಬಳಿ ಇಟ್ಟುಕೊಂಡಿದಾರೆಂತಲೂ, ಖೂನ್ ಮಾಡಲ್ಪಟ್ಟವರ ಸಂತತಿಯವರು ಈಗ ರಿಕ್ತಸ್ಥಿತಿಯೊಳಿರುವದರಿಂದ ಅನ್ಯಾಕ್ರಾಂತವಾದ ಸ್ವತ್ತುಗಳನ್ನು ಮರಳಿ ಅವರಿಗೆ ಕೊಡಿಸ ಬೇಕೆಂತಲೂ, ಬರ್ಮಾಜನಗಳು ಅನೇಕರು ಗವರ್ನರ್‌ಜನರಲ್ಲವರಿಗೆ ಅರ್ಜಿ ಬರೆದುಕೊಂಡಿದುತ್ತಾರೆಂದು ಕೇಳಲಾದೆವು ಸ್ಥಿತಿ ವಿಪರ್ಯಯ ಕಾ

ಬದಲ್ಲಿ ಇಂತಾ ದೌರ್ಜನ್ಯವೂ ಏರ್ಪಾಡುಗಳೂ ಬರುವದೇನೂ ಆಶ್ಚರ್ಯವಲ್ಲವು.

Snow fall—ಕಳೆದ ತಿಂಗಳ ೧೮ನೇ ತಾರೀಖಿನಲ್ಲಿ ಲಂಡನ್ ಪಟ್ಟಣದ ಸಬರ್ಬಸ್‌ನೊಳು ಬೆಳಗ್ಗೆ ೬ ಘಂಟೆಯ ಮೊದಲು, ಮಧ್ಯಾಹ್ನದತನಕ ಒಂದೇ ವಿಧವಾಗಿ ಹಿಮವೃಷ್ಟಿಯಾದಂತೆಯೂ, ಅದರಿಂದ ಸದರೀ ಪಟ್ಟಣದೊಳಗಣ ಮುಖ್ಯವಾದ ರಾಜಬೀದಿಗಳು ಮೂರಾವರ್ತಿ ಮಾರ್ಕಮಾಡಲ್ಪಟ್ಟಂತೆಯೂ, ಕಾಯಮಾಗಿರತಕ್ಕ ೫೬೦ ಮಂದಿ ಬೀದಿ ಗುಡಿಸತಕ್ಕವರಲ್ಲದೆ ಈಬಗ್ಗೆ ಜಾಸ್ತೀ ೬೦೦೦ ಮಂದಿ ಕೂಲಿಯವರನ್ನು ಯಿಡಬೇಕಾಯಿತೆಂತಲೂ, ೧,೩೨೨ ಕುದುರೆಗಾಡಿಗಳಲ್ಲಿ ಮಂಜುಗಡ್ಡೆಗಳು ಸಾಗಿಸಲ್ಪಟ್ಟವೆಂತಲೂ, ೨೮೫ ಗಳ ನಮ್ಮ್ರಕನ್ನು ಬೀದಿಗಳಲ್ಲಿ ಚಲ್ಲಿ ೬೩೦ವಿರ ಗಾಡಿಗಳ ಬೋಜೆಯುಳ್ಳ ಮಂಜುಗಡ್ಡೆಗಳು ಕೆಬರಿಸಲ್ಪಟ್ಟವೆಂತಲೂ ಲಂಡನ್ ಪಟ್ಟಣದ ಪತ್ರಿಕೆಯೊಂದು ತಿಳಿಸುತದೆ.

Abolition of state imposts on trade - ಕೊಲ್ಹಾಪುರ ಸಂಸ್ಥಾನದ ರಾಜಪ್ರತಿನಿಧಿಯವರು ತಮ್ಮ ಅಧಿಕಾರಕ್ಕೆ ಒಳಪಟ್ಟ ದೇಶಗಳೊಳು ವ್ಯಾಪಾರದ ಮೇಲೆ ವಸೂಲಾಗುತಲಿರುವ ಸರ್ಕಾರ ತೆರಿಗೆಯನ್ನು ಬರುವ ಜೂನ್ ೬ನೇ ತಾರೀಖ್ ಮೊದಲು ವಜಾ ಮಾಡಬೇಕೆಂದು ನಿರ್ಣಯಿಸಿರುತ್ತಾರೆ. ಮುಂಬೈ ಗವರ್ನಮೆಂಟವರು, ತಮ್ಮ ಪ್ರಸಿಡೆನ್ಸಿ ಯೊಳಗಣ ನೇಟಿವ್ ಸಂಸ್ಥಾನಗಳ ಪೈಕಿ ಕೊಲ್ಹಾಪುರದ ರಾಜಪ್ರತಿನಿಧಿಯವರು ವ್ಯಾಪಾರಕ್ಕೆ ಪ್ರತಿಬಂಧಕವಾಗಿದ್ದ ನಿರ್ಬಂಧವನ್ನು ತೊಲಗಿಸಿದ ಬಗ್ಗೆ ಸದರೀಯವರಿಗೆ ತಮ್ಮ ಸಂತೋಷವು ತಿಳಿಸಿ, ವ್ಯಾಪಾರಕ್ಕೆ ಪ್ರೋತ್ಸಾಹವನ್ನುಂಟುಮಾಡತಕ್ಕ ಬಗ್ಗೆ ಇತರ ನೇಟಿವ್ ಸಂಸ್ಥಾನಾಧಿಪತಿಗಳೆಲ್ಲರು ಸಮಾನವಾದ ಕಾರ್ಯಗಳಂ ಮಾಡುವದಕ್ಕೆ ಮೇಲಿನ ನಿರ್ಣಯವು ಒಂದು ಪ್ರೇರಕ ಸಾಮಗ್ರಿಯಾಗಿರುವದೆಂದು ತಾವು ನಿರೀಕ್ಷಿಸುವದಾಗಿ ವ್ಯಕ್ತಪಡಿಸಿರುತ್ತಾರೆ.

Birthday rejoicings.—ಮೊನ್ನೇ ಮಜಕೂರು ೬ನೇ ತಾರೀಖಿನಲ್ಲಿ ಶ್ರೀಮನ್ ಮಹಾರಾಜ್ಞೀಯವರ ಪ್ರಧಾನ ಮಂತ್ರಿಯವರು, ತಮ್ಮ ಭಾರ್ಯೆಯ ೭೪ನೇ ವರ್ಷ ವರ್ಧಂತಿಯ ಪ್ರಯುಕ್ತ ತಮ್ಮ ನೌಕರರಿಗೆಲ್ಲ ಔತಣ ಮಾಡಿಸಿದರು. ಹಿಂದೂಗಳಲ್ಲಿ ಭೋಜನಾನಂತರ ತಾಂಬೂಲ ಲೆಗದುಕೊಂಡು ಹೋಗುವದು ವಾಡಿಕೆಯಷ್ಟೆ. ಯೂರೋಪಿಯನ್‌ಗಳಲ್ಲಿ ಹಾಗಿಲ್ಲವು. ಒಬ್ಬರ ಭಾರ್ಯೆಯೊಡನೆ ಮತ್ತೊಬ್ಬರು ಕಳಂಕವಿಲ್ಲದೆ ನಾಟ್ಯವಾಡುವದು ಸಹಜವಾಗಿರುತ್ತದೆ. ಅದರಂತೆ ಆದಿನ ಮಂತ್ರಿಯವರ ಭಾರ್ಯೆಯು, ತನ್ನ ಪರಿಚಾರಕರೊಡನೆಯೂ, ಮಂತ್ರಿಯವರು ಪರಿಚಾರಕಿಯರೊಡನೆಯೂ, ಬಹಳ ಹೊತ್ತು ಕಲೆತು ನರ್ತನ ಮಾಡುತಲಿದ್ದರೆಂದು ತಿಳಿಯ ಬರುತಿದೆ ಇದೇ ನಮ್ಮವರು ಸಹ ಅಪೇಕ್ಷಿಸುತಲಿರುವದು. ಮತ್ತು ಇದೇ ಸೌಲಭ್ಯ ವೆನ್ನಿಸಿಕೊಳ್ಳತಕ್ಕದ್ದು.

An ingenious reply.—ಒಂದು ತೋಟದ ಯಜಮಾನನು ತನ್ನ ತೋಟವು ಪ್ರವೇಶಿಸಿ ಅಲ್ಲಿದ್ದ ನೌಕರರಂ ಕರೆದು ಇಲ್ಲಿರುವ ಯೆಲ್ಲಾವಿಧ ಫಲಗಳಪೈಕಿ ಯಾವದು ತಿನ್ನಲಿಕ್ಕೆ ಚೆನ್ನಾಗಿರುವದೋ ತಿಳಿಸಿರೆಂದು ಕೇಳಲು, ಅವರೊಳೊಬ್ಬನು, ಸ್ವಾಮಿ, ಯೆಲ್ಲಾಫಲಕ್ಕಿಂತಲೂ ಕಸ್ಟಫಲವುಬಹಳ ಒಳ್ಳೆಯದೆಂದು ವಿನಯದಿಂದರುಹಿದನು. ಆರಾತ್ರಿ ಸದರೀ ಯಜಮಾನನು ಮಲಗಿಕೊಳ್ಳಲಿಕ್ಕೆ ಮುಂಚಿತವಾಗಿ ನೌಕರರಂ ಕರೆದು ಬೆಳಗ್ಗೆ ೬ಘಂಟೆಗೆ ಮುಂದಾಗಿ ತನ್ನನ್ನು ಎಬ್ಬಿಸುವಂತೆ ಆಜ್ಞಾಪಿಸಿ ಮಲಗಿ ಕೊಂಡನು. ಮೇಲೆ ಕಂಡಂತೆ ಚಮತ್ಕಾರವಾಗಿ ಜವಾಬ್ ಹೇಳಿದ ನೌಕರನು ಬೆಳಗ್ಗೆ ೪ಘಂಟೆಗೆ ಹೋಗಿ, ತನ್ನ ಯಜಮಾನನನ್ನು ಎಬ್ಬಿಸಿದನು. ಅವನು ಅದಕ್ಕೆ ಕುಪಿತನಾಗಿ, ಎಲೋ, ೬ಘಂಟೆಗೆ ಎಬ್ಬಿಸುವಂತೆ ಹೇಳಿದರೆ ೪ಘಂಟೆಗೆ ಮುಂಚಿತವಾಗಿಯೇ ಬಂದು ತೊಂದರೆಪಡಿಸುವಿಯಾ ಎಂದು ಆಗ್ರಹಪಟ್ಟನು. ಆಗ ನೌಕರನು ಮಹಾಪ್ರಭೋ, ಇನ್ನು ಎರಡು ಘಂಟೆಗಳ ಕಾಲ ನಿದ್ರೆ ಹೋಗಬಹುದೆಂದು ತಿಳಿಸುವ ಬಗ್ಗೆ ಎಚ್ಚರಿಸಿದನೆಂದು ಪ್ರತ್ಯುತ್ತರ ಹೇಳಿದನು.

A curious question of legal ethics —ಈಚೆಗೆ ಕೆಲವು ದಿನಗಳಿಂದ ಮುಂಬೈ ಹೈಕೋರ್ಟನಲ್ಲಿ ಕೇವಲ ವಿಚಿತ್ರವಾಗಿಯೂ ಕಾನೂನಿನ ದೆಸೆಯಿಂದ ನಿರ್ಣಯವಾಗತಕ್ಕದ್ದಾಗಿಯೂ ಇರುವ ಒಂದು ಮೊಕದ್ದಮೆಯು ಅಪೀಲ್ ದರ್ಯಾಪ್ತಿಯೊಳದೆ—ಅಂದರೆ, ಹಿಂದೂ ಜಾತಿಯವರಲ್ಲಿ ಒಬ್ಬನ ಹೆಂಡತಿಯು ತನ್ನಗಂಡನ ಸ್ವತ್ತವನ್ನು ಕಳವು ಮಾಡಿದಳೆಂಬ ಕಾರಣದಮೇಲೆ ದಂಡಿಸಲ್ಪಡುವದು ನ್ಯಾಯ ಸಮ್ಮತವಾದದ್ದೇ ಯೆಂಬದು. ಸೋಲಾಪುರದ ಸೆಷನ್ಸ್ ಜಡ್ಜಿಯವರಾದ ಮ. ಟಾಗೋರ್‌ಯೆಂಬವರು, ನಾಲ್ಕು ಸಾವಿರ ರೂಪಾಯಿಗಳ ಕ್ರಯ ಬಾಳುವಷ್ಟು ಚಿನ್ನ ಜೆಳ್ಳಿ ವಡಿವೆಗಳನ್ನು ಒಬ್ಬ ಹೆಂಗಸು ತನ್ನ ಗಂಡಸಿಂದ ಕಳವು ಮಾಡಿದಳೆಂದು ಅವಳಿಗೆ ಯೆರಡು ವರುಷಗಳ ಕಠಿಣ ಕೈದುಸಜಾ ವಿಧಿಸಿದರು. ಅದರಮೇಲೆ ಅವಳು. ಸದರೀ ಒಡವೆಗಳು ತನಗೆ ಸ್ತ್ರೀಧನವಾಗಿ ಬಂದವೆಂತಲೂ ಅದರಲ್ಲಿ ತನ್ನ ಗಂಡನಿಗೆ ಯಾವಸಂಬಂಧವೂ ಯಿರುವದಿಲ್ಲವೆಂತಲೂ ಸಮೂದಿಸಿ ಮುಂಬೈ ಹೈಕೋರ್ಟಿಗೆ ಅಪೀಲುಮಾಡಿಕೊಂಡಿರುತ್ತಾಳೆ. ಅದು ಅಲ್ಲಿ ಇನ್ನು ಫೈಸಲಾಗಲಿಲ್ಲವೆಂದು ಮುಂಬೈಪತ್ರಿಕೆಯೊಂದರಮೂಲಕ ತಿಳಿಯಬರುತಿದೆ.

The Indian Penal Code—ಈಗಜಾರೀಯಲ್ಲಿರತಕ್ಕ ಇಂಡಿಯನ್‌ಪೀನಲ್ ಕೋಡಿಗೂ ಈಗ್ಯೆ ಇನ್ನೂರುಸವತ್ಸರಗಳಹಿಂದೆ, ಇಂಗ್ಲೀಷನವರು ವ್ಯಾಪಾರಾರ್ಥ ಪ್ರಥಮತಃ ಹಿಂದೂಸ್ಥಾನದ ದಡದಲ್ಲಿ ಬಂದು ಇಳಿದು ಕೋಠೀದಾರರಾಗಿ ವ್ಯಾಪಾರ ನಡೆಸುತಲಿರುವಾಗ್ಯೆ ಅಮಲಿನೊಳಿದ್ದ ಕಾನೂನಿಗೂ ಬಹಳ ಭೇದವುಂಟಾಗಿರುತಿದೆ. ಆಗ್ಯೆ ರಾತ್ರಿ ಕಾಲದೊಳು ೯ಘಂಟೆಗಳೊಳಗಾಗಿ ಹೊರಗೆ ಸಂಚಾರ ಮಾಡಿಕೊಂಡು ಕೋಠಿಗಳಿಗೆ ಬಂದು ಸೇರದಿದ್ದರೆ ಅಂತವರಿಗೆಲ್ಲ ೧೦ ರೂಪಾಯಿಗಳ ಜುಲ್ಮಾನೆಯಾಗಲಿ, ಒಂದು ದಿನ ಕೈದ್ ಸಜಾ ಆಗಲಿ ವಿಧಿಸಲ್ಪಡುತಲಿತ್ತು. ಬಾಯಿಗೆ ಬಂದಂತೆ ಬಯಿದರೆ ಯಾಗಲಿ ತಪ್ಪು ಪ್ರಮಾಣ ಮಾಡಿದರೆ ಯಾಗಲಿ, ಅಂತವರಿಗೆ ಆರು ರೂಪಾಯಿಗಳ ಅಪರಾಧವೂ, ೩ಘಂಟೆಯಕಾಲ ಕೈದ್‌ಸಜವೂ ವಿಧಿಸಲ್ಪಡುತಲಿತ್ತು. ಅನ್ಯತ ವಾದತಕ್ಕವರಿಗೆ ದಫೆಂಕ್ಕೆ ೬ ರೂಪಾಯಿಗಳ ಜುಲ್ಮಾನೆ ಹಾಕಲ್ಪಡುತಲಿತ್ತು. ನಿಷಾ ಮಾಡಿದವರಿಗೆ ದಫೆ ೧ಕ್ಕೆ ೨ರೂ|| ಜುಲ್ಮಾನೆಯೂ, ೬ ಘಂಟೆಯಕಾಲ ಕೈದ್, ಪ್ರತಿ ಭಾನುವಾರ ಸಾಯಂಕಾಲದಲ್ಲಿ ಸರಿಯಾದ ಕಾರಣ ವಿನಾ ಚರ್ಚಿಗೆ ಬಾರದಿರತಕ್ಕವರಿಗೆ ೮ ಆಣೆಗಳ ಜುಲ್ಮಾನೆ, ಅಥವಾ, ಒಂದು ವಾರ ಕೈದ್, ಇದಲ್ಲದೆ ಅಕ್ರಮವಾದ ತಕ್ಸೀರ್‌ಗಳಿಗೆಲ್ಲ ಬಹಳ ಕಠಿಣ ಶಿಕ್ಷೆ, ಏವಂರೀತ್ಯಾ ಜನಗಳು ಶಿಕ್ಷಿಸಲ್ಪಡುತಲಿದ್ದರು. ಈ ರೀತಿ ವಸೂಲಾಗತಕ್ಕ ಜುಲ್ಮಾನೆ ಮೊಬಲಗುಗಳೆಲ್ಲವು ರಿಕ್ತರಿಗೆ ದಾನ ಮಾಡಲ್ಪಡುತ ಲಿದ್ದವು.

An old offender.—ಡಿಸಿಲ್ವಾ ಯೆಂಬ ಹೆಸರುಳ್ಳ ಈಸ್ಟಿಂಡಿಯನೊಬ್ಬನು ಧರ್ಮಾರ್ಥವೆಂದು ಒಂದು ಚಂದಾಪಟ್ಟಿಯನ್ನು ತಯಾರ್ಮಾಡಿ ಅದಕ್ಕೆ ಅನೇಕ ದೊಡ್ಡ ಮನುಷ್ಯರ ಹೆಸರುಗಳನ್ನು ತಾನೇ ಬರೆದುಕೊಂಡು ಅದನ್ನು ಇತರರಿಗೆ ತೋರಿಸಿ ಮೋಸಮಾಡುತ ಅವರಿಂದ ಸುಮಾರು ೪೦೦ ರೂಪಾಯಿಗಳ ವರಿವಿಗೆ ಪಡೆದನು. ಈದಗಾಟೋರನ ಮೋಸವು ಪತ್ತೇಯಾಗಿ ಕಡೆಗೆ ಸೆಷನ್ ದರ್ಯಾಫ್ತಿಬಗ್ಗೆ ಕಮಿಟ್ ಮಾಡಲ್ಪಟ್ಟನು. ಕಳೆದತಿಂಗಳ ಸೆಷನ್ ದರ್ಯಾಫ್ತಿಯೊಳು ಹೈಕೋರ್ಟನವರು ಅವನಿಗೆ ೭ ಸಂವತ್ಸರಗಳ ಕಠಿಣ ಕೈದ್ ಸಜಾ ವಿಧಿಸಿದರು. ಸೆಷನ್ ಜಡ್ಜಿಯವರು ತೀರ್ಮಾನ ಕಾಲದೊಳು ಅಪರಾಧಿಯಂ ಕುರಿತು ತಿಳಿಸಿದರೇನಂದರೆ, ಓ ಅಪರಾಧಿಯೆ, ೧೮೬೦ನೇ ಇಸವಿಯಲ್ಲಿ ಕಳವು ಮಾಡಿದ ತಕಸೀರಬಗ್ಗೆ ೧೮ ತಿಂಗಳ ಕಠಿಣ ಸಜಾವನ್ನನುಭವಿಸಿದಿ, ಬಿಡುಗಡೆಯಾದಕೂಡಲೇ ೧೮೬೧ನೇ ಇಸವಿಇಸ್ತ್ಯೆರಲ್ಲಿ ಸೃಷ್ಟನೆಯಬಗ್ಯೆ ನಿನಗೆ ೭ ಸಂವತ್ಸರಗಳ ದ್ವೀಪಾಂತರವಾಸದಂಡನೆ ವಿಧಿಸಲ್ಪಟ್ಟಿತು. ೧೮೭೪ನೇ ಇಸವಿಯಲ್ಲಿ ಒಂದು ತರವಾರಿ ಈಗಡವನ್ನು ಹಜುಮಾಡಿದ್ದಕ್ಕಾಗಿ ೬ತಿಂಗಳ ಕೈದ್ ಸಜಾವನ್ನನುಭವಿಸಿದ. ೧೮೭೬ನೇಇಸವಿಯಲ್ಲಿ ಮರಳಿ ಸೃಷ್ಟನೆಯ ಮೊಕದ್ದಮೆಬಗ್ಯೆ ೭ಸಂವತ್ಸರಗಳ ದ್ವೀಪಾಂತರ ವಾಸ ದಂಡನೆಯನ್ನನುಭವಿಸಿದಿ. ೧೮೮೩ನೇ ಯಿಸವಿಯಲ್ಲಿ ಒಂದು ದಸ್ತಾವೇಜನ್ನು ಫೋರ್ಜರೀ ಮಾಡಿದಬಗ್ಯೆ ೧ ಸಂವತ್ಸರ ಕಾಲ ದ್ವೀಪಾಂತರ ವಾಸವಂ ಮಾಡಿದಿ, ಈ ರೀತಿ ೨೬ ಸಂವತ್ಸರಗಳಕಾಲದಿಂದ ಅಕ್ರಮವು ವಿಸ್ತಟನಾಗಿ ಕಾಲಹರಣಮಾಡುತಲಿದ್ದರೂ, ಅದ್ಯಾಪಿ ನಿನ್ನದುವೃತ್ತಿಯಂ ಬಿಡದೆಯಿರುವದರಿಂದ, ದ್ವೀಪಾಂತರ ವಾಸದಂಡನೆಗೆನೀನುಅಂಜಲಾರಿಯೆಂದೆಣಿಸಿ ನಿನಗೆ ಈಸಂದರ್ಭದಲ್ಲಿ ೭ ಸಂವತ್ಸರಗಳ ಗಠಿಣ ಕೈದ್ ಸಜಾವಿಧಿಸಿರುತ್ತೇವೆಂಬನು.

LOCAL AND PROVINCIAL NEWS.

ಒಳದೇಶಮತ್ತು ತಾಲ್ಲೂಕ್‌ಜಾತೆವೃತ್ತಾಂತಗಳು.

Privilege leave.—ಅರಸೀಕೆರೆ ಅಮಲ್‌ದಾರ್ ಮೆ|| ರಾಮಸ್ವಾಮಿ ಅಯ್ಯರವರಿಗೆ ಅವರು ಉಪಯೋಗಿಸಿ ಕೊಳ್ಳುವ ತಾರೀಖ್ ಲಾಗಾಯಿತು ೧೫ ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟರುವಂತೆಯೂ ಅವರ ಗೈರ್ ಹಾಜರೀಯಲ್ಲಿ ತಾಲ್ಲೂಕ್ ಶಿರಸ್ತೇದಾರರು ಕೆಲಸ ನೋಡುವಂತೆ ವ್ಯವಸ್ಥೆಯಾಗಿರುವಂತೆಯೂ ತಿಳಿಯ ಬರುತಿದೆ.

The matriculation result.—ಕಳೆದ ಡಿಸಂಬರ‌ತಿಂಗಳಲ್ಲಿ ನಡೆದಮೆಟ್ರಿಕ್ಯುಲೇಷನ್‌ಪರೀಕ್ಷೆಯ ಫಲಿತಾಂಶವು ಗತವಾರದಲ್ಲಿ ಹೊರಗಾಯಿತು. ಈ ವರ್ಷದಲ್ಲಿ ೯೦ ಜನ ವಿದ್ಯಾರ್ಥಿಗಳು ತೇರ್ಗಡೆಯಾಗಿರುತ್ತಾರೆ. ಈ ಸಲ ಲಂಡನ್ ಮಿಷನ್ ಸ್ಕೂಲಿನಿಂದ ಹೋಗಿದ್ದವರು ಅನೇಕರು ತೇರ್ಗಡೆಯಾದಂತೆ ತಿಳಿಯಬರುತಿದೆ. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಮ್ಯಾಸ್ಟರ್‌ಗಳಸಂಖ್ಯೆಯೂ ತಲಬೂ ಜಾಸ್ತೀಯಾಗುವಹಾಗೆ ಅಲ್ಲಿಲ್ಲಿ ತೇರ್ಗಡೆಯಾಗತಕ್ಕವರಸಂಖ್ಯೆ ಕಡಮೆಯಾಗುತಬರುತಿದೆ ಏಕಕಾಲದಲ್ಲಿ ಎಲ್ಲವೂ ಜಾಸ್ತೀಯಾದರೆ ಅವುಗಳನ್ನು ಹ್ಯಾಗೆ ಹೊರಬಹುದು.

Retirement.—ಓವರ್ ಕಚ್ಚೇರಿ ಇಂಗ್ಲಿಷ ರಿಕಾರ್ಡ ಕೀಪರಾದ ಮ. ಅಂಬ್ರೋಸ್ ಎಂಬವರು ದಿವಾನರ ಹುಕುಂ ಅನುಸರಿಸಿ ಪೆನ್ಷನ್ನಿಕ್ಕೆ ಹೋಗಿರುವಂತೆಯೂ, ಅವರ ನೌಕರಿ ಸ್ಕ್ಯೂವರ್ ನ್ಯೂಮರೆರಿ ತರೀಕ್ ತಲಬ್ ಪಡೆಯುತಲಿರುವ ಮ. ಬೈರ್ತೆ ಎಂಬವರಿಗೆ ಕೊಡಲ್ಪಡುವದೆಂತಲೂ ತಿಳಿಯಬರುತಿದೆ ಮ. ಅಂಬ್ರೋಸ್ ಯವರು ಹೋಗಿರುವ ಸ್ಥಳ ಗೊತ್ತಾಗಿ ವಾಪಸ್ ಬಂದರೆ ಪೆನ್ಷನ್ ಮೇಲೆ ನಿವೃತ್ತರಾಗಬಹುದೆಂದು ತೋರುತಿದೆ. ದಿವಾನರವರ ಉದಾರ ಭಾವದಿಂದ ಅನೇಕ ಜನ ಸಾರ್ವಿಸ್ ಆದವರೂ ಸಾಲಗಾರರು ಸಹ ನೌಕರಿಯೊಳಿರುತಲಿದಾರೆ. ವಾರಂಟ್ ಮಂತಾವು ಬಂದರೆ ಯಾವೇನು ಮಾಡಬಹುದು;

Col A C Hay.—ಮಿಲಿಟರಿ ಸೆಕ್ರಿಟರಿಯಾಗಿಯೂ ಅಮೃತ ಮಹಲ್ ಇನ್‌ಚಾರ್ಜ್ ಆಫಿಸರಾಗಿಯೂ ಇರುವ ಕರ್ನಲ್ ಹೇಯವರಿಗೆ ಅವರುಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಮೂರುತಿಂಗಳ ಪ್ರಿವಿಲೀಜ್‌ರಜಾ ಕೊಡಲ್ಪಟ್ಟರುವಂತೆ ತಿಳಿಯಬರುತ್ತಿದೆ. ಬಹುಶಃ ಇವರು ವಿಲಾಯಿತಿಗೆ ಹೋಗ ಬಹುದೆಂದು ತೋರುತಿದೆ. ಕರ್ನಲ್ ಹೇಯವರ ಗೈರ್‌ಹಾಜರೀ ಕಾಲದಲ್ಲಿ ಮಿಲಿಟರಿ ಸೆಕ್ರಿಟರಿಕೆಲಸವನ್ನು ಲೆಫ್ಟಿನೆಂಟ್ ಜೋನ್ಸ ಎಂಬವರೂ, ಅಮೃತ ಮಹಲ್ ಇಲಾಖಾ ಕೆಲಸವನ್ನು ಮೆ. ಗೋಪಾಲಯ್ಯಂಗಾರ್ರವರೂ ನಿರ್ವಹಿಸತಕ್ಕದ್ದೆಂದು ವ್ಯವಸ್ಥೆಯಾಗಿರುತಿದೆ

H. H. the Maharaja's Departure.—ಮೈಸೂರು ಸಂಸ್ಥಾನದಿಂದ ವಿದ್ಯಾರ್ಥಿ ವೇತನವಂ ಪಡೆದು ಪುನೇ ಶಾಸ್ತ್ರಶಾಲೆಯಲ್ಲಿ ಓದುತಲಿದ್ದ ಮೆ||ಬಸವಪಟ್ಟಣದ ಸುಬ್ಬರಾಯರೆಂಬವರು ಸಿವಿಲ್ ಇಂಜನಿಯರಿಂಗಪರೀಕ್ಷೆಯಲ್ಲಿ ತೇರ್ಗಡೆಯಾದದರಿಂದ ಸದರೀಯವರಿಗೆ ಶ್ರೀಮನ್ಮಹಾರಾಜಾ ಸರ್ಕಾರದವರು ಮೈಸೂರು ಮರಮ್ಮತ್ ಇಲಾಖೆಯೊಳು ಮಾಹೇವಾರಾ ೧೦೦ ರೂಪಾಯಿಗಳ ತಲಬ್‌ನಲ್ಲಿ ಅಜಮಾಯಿಷೀ ತರೀಕ್ ಅಪ್ರಂಟಿಸ್ ಇಂಜನಿಯರಾಗಿ ನೌಕರರ್ಮಾಡಿರುತ್ತಾರೆಂದು ಕೇಳುವದಕ್ಕೆ ನಾವು ಬಹಳಸಂತೋಷಿಸುತ್ತೇವೆ ಇಂತಾ ಪ್ರೋತ್ಸಾಹವು ಇತರರಿಗೆ ಪ್ರವೃತ್ತಿಯನ್ನುಂಟುಮಾಡುವದಲ್ಲದೆ ಈ ಮೂಲಕ ಮಹಾರಾಜರ ಪ್ರಜೆಗಳಂ ಇತರಾಪೇಕ್ಷೆ ಯಾ ಶಾಸ್ತ್ರಜ್ಞರಾಗಬಹುದಾಗಿರುತಿದೆ.

M A Examination.—ಕಳೆದ ತಿಂಗಳಲ್ಲಿ ಎಂಎ ಪರೀಕ್ಷೆಗೆ ವೆಸ್ಲಿಯನ್ ಮಿಷನ್ ಹೈಸ್ಕೂಲ್ ಪ್ರಿನ್ಸಿಪಲರಾದ ರೆವರೆಂಡ್ ಜೆ. ವೇಟಸ್ ಯವರೂ, ಸೆಂಟ್ರಲ್‌ಕಾಲೇಜ್ ಅಸಿಸ್ಟೆಂಟ್ ಮ್ಯಾಸ್ಟರಾದ ಮ. ಕೃಷ್ಣರಾವ್ ಬಿ. ಎ. ಯವರೂ ಹೋಗಿದ್ದರೆಂದು ತಿಳಿಯಬರುತಿದೆ. ಇವರಿಬ್ಬರಪೈಕಿ ಮೊದಲನೇಯವರು ಇಂಗ್ಲಿಷ್ ಮತ್ತು ಸಂಸ್ಕೃತದೊಳಗೂ ಯೆರಡನೆಯವರು ಚರಿತ್ರ ಮನೋಭಾವವಿವೇಚಕಶಾಸ್ತ್ರ (ಮೆಂಟಲ್‌ಫಿಲಾಸಫಿ) ಇವುಗಳೊಳಗೂ ಪರೀಕ್ಷೆ ಕೊಟ್ಟರೆಂದು ತಿಳಿಯಲಾದೆವು. ಮೆ|| ವೇಟಸ್‌ಯವರು, ಅತಿ ಗಹನವಾದ ಸಂಸ್ಕೃತ ಭಾಷೆಯಲ್ಲಿ ತಮ್ಮ ವ್ಯಾಸಂಗ ಬಲದಿಂ ಸಂಪೂರ್ಣ ಜ್ಞಾನವಂ ಸಂಪಾದಿಸಿ ಅದರಲ್ಲಿಯೇ ಈಇಂಡ್ಯದೇಶದಲ್ಲಿರುವ ಚಟ್ಟೆರ್ ಪರೀಕ್ಷೆಯ ಕೊಟ್ಟದ್ದು ಅವರ ಸಾಮರ್ಥ್ಯವನ್ನು ಬಹಳವಾಗಿ ವ್ಯಕ್ತಪಡಿಸದಿರುವದಿಲ್ಲವು.

Reward of perseverance and merit.- ಮೈಸೂರು ದೇಶೀಯರಿಗೆ ಇಲ್ಲಿ ಯೋಗ್ಯವಾದ ಪುರಸ್ಕಾರವು ದುರ್ಲಭವಾದರೂ ಅವರು ಅನ್ಯದೇಶದಲ್ಲಿ ವಿಶೇಷ ಪ್ರಸಿದ್ಧಿಗೆ ಬರುತಲಿರುವದಕ್ಕಾಗಿ ನಾವು ಬಹಳ ಸಂತೋಷಿಸುತ್ತೇವೆ. ಮುಂಬೈ ಪ್ರಸಿಡೆನ್ಸಿಯೊಳು ನೌಕರಿಯಲ್ಲಿದ್ದ ಮೆ|| ವಿಶ್ವೇಶ್ವರಯ್ಯನವರು, ಅಸಿಸ್ಟೆಂಟ್ ಇಂಜನಿಯರ್ ಗ್ರೇಡಿಗೆ ಬಡ್ತೀಮಾಡಲ್ಪಟ್ಟರೆಂತಲೂ, ಮುಂದೆ ಸದರೀ ಕೆಲಸದಲ್ಲಿ ಅವರು ಕಾಯಂಮಾಡಲ್ಪಡುವರೆಂತಲೂ, ಇವರಿಗೆ ಮಾಹೇವಾರಾ ೩೦೦ ರೂಪಾಯಿಗಳು ತಲಬ್ ಸಲ್ಲುವದೆಂತಲೂ ತಿಳಿಯಬರುತಿದೆ. ಇತರರು ಇದನ್ನು ಒಂದು ದೃಷ್ಟಾಂತವಾಗಿ ಅಂಗೀಕರಿಸಿ ಯಾತಕ್ಕೆ ಆರೀತಿ ವರ್ತಿಸಬಾರದು.

CORRESPONDENCE.

ಮ||ರಾ|| ಕರ್ಣಾಟಕಪ್ರಕಾಶಿಕಾಎಡಿಟರವರಸನ್ನಿಧಿಗೆ.

ಶ್ರೀ ಶೃಂಗೇರಿ ಶ್ರೀಸಚ್ಚಿದಾನಂದಶಿವಾಭಿನವನೃಸಿಂಹ ಭಾರತೀ ಸ್ವಾಮಿಗಳವರು ಉತ್ತರದೇಶ ಸಂಚಾರಾರ್ಥ ಶೃಂಗೇರಿಯಿಂದ ಹೊರಟು ಶಿವಮೊಗ್ಗೆಗೆ ಎರಡು ಮೈಲೀ ದೂರದಲ್ಲಿರುವ ಅರಿಕೆರೆ ಎಂಬ ಗ್ರಾಮಕ್ಕೆ ಕಳೆದ ತಿಂಗಳ ೧೮ನೇ ತಾರೀಖು ಸೋಮವಾರ ಪ್ರಾತಃಕಾಲ ಸುಮಾರು ೮½ ಘಂಟೆಗೆ ದಯಮಾಡಿದರು. ಮರುದಿನ ಮಹಾರಾಜಶ್ರೀ ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟೀ ಕಮ್ಮೀಷನರ್ ಮಾಧವರಾವ್ ಯವರು ಅನೇಕ ದೊಡ್ಡ ಮನುಷ್ಯರೊಡನೆ ಅರಿಕೆರೆಯವರಿಗೆ ದಯಮಾಡಿ ಶ್ರೀ ಜಗದ್ಗುರುಗಳವರನ್ನೆದುರ್ಗೊಂಡು, ಮಂಗಳಕರಗಳಾದ ವಾದ್ಯಘೋಷ ಬ್ರಾಹ್ಮಣರ ವೇದ ಘೋಷ ಮುಂತಾದ ಅನೇಕ ಮರ್ಯಾದೆಗಳೊಡನೆ ಸ್ವರ್ಣಮಯವಾದ ಪಾಲಕಿಯಲ್ಲಿ ಶ್ರೀ ಸ್ವಾಮಿಗಳನ್ನು ಬಿಜಮಾಡಿಸಿ ಸಮಾಲಂಕೃತವಾದ ಶಿವಮೊಗ್ಗಾ ನಗರಿಯಲ್ಲಿ ಉ

ಶ್ವಪಹನ್ನು ಮಾಡಿಸುತ್ತಾ ತಮ್ಮ ಮಂದಿರಕ್ಕೆ ಕರೆದುಕೊಳ್ಳುಂಡು ಹೋಗಿ ಜಗದ್ಗುರುಗಳಿಗೆ ಪಾದಪೂಜಾದಿ ಸತ್ಕಾರಗಳನ್ನು ಮಾಡಿ ಸಹಸ್ರ ಜನ ಸಂತರ್ಪಣೆಯನ್ನು ಮಾಡಿಸಿದರು. ಶ್ರೀ ಜಗದ್ಗುರುಗಳವರು ಆ ದಿನ ಸಾಯಂಕಾಲ ಶ್ರೀ ಚಂದ್ರಮೌಳೀಶ್ವರನಿಗೆ ನಡೆಯಬೇಕಾದ ಪೂಜಾವಿಧಾನಗಳೆಲ್ಲವಂ ನಡೆಸಿದ ಅನಂತರ ಪುನಃ ಅರಿಕೆರೆಗೆ ದಯಮಾಡಿ ಬುಧವಾರದ ತನಕ ಅಲ್ಲಿಯೇ ಇದ್ದು ಗುರುವಾರ ಪ್ರಾತಃಕಾಲ ಈ ಊರಿನಲ್ಲಿರುವ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನಕ್ಕೆ ದಯಮಾಡಿ ಅಲ್ಲಿ ಶ್ರೀ ಚಂದ್ರಮೌಳೀಶ್ವರನ ಪೂಜಾದಿ ಕಾರ್ಯಗಳಂ ನೆರವೇರಿಸಿದರು. ಊರಿನವರೆಲ್ಲರೂ ಸೇರಿ ೩ ದಿನಗಳ ತನಕ ಸ್ವಾಮಿಗಳವರಿಗೆ ಮಾಡಿದ ಭಿಕ್ಷೆಯು ಬಹು ಸುಭ್ರಮವಾಗಿತ್ತು. ೨ನೇ ತಾರೀಖು ಭಾನುವಾರ ಪ್ರಾತಃಕಾಲ ಡಿಸ್ಟ್ರಿಕ್ಟು ಜಡ್ಜ್ ಮಹಾರಾಜಶ್ರೀ ನರಹರಿ ರಾಯರವರ ಮಂದಿರಕ್ಕೆ ಅವರ ಪ್ರಾರ್ಥನಾ ಪ್ರಕಾರವಾಗಿ ಜಗದ್ಗುರುಗಳವರು ಬಿಜಮಾಡಿ ಅವರು ಮಾಡಿದ ಪಾದ ಪೂಜಾದಿ ಸತ್ಕಾರಗಳನ್ನು ಸ್ವೀಕರಿಸಿದರು. ಈ ರೀತಿ ಶ್ರೀ ಜಗದ್ಗುರುಗಳವರು ೬ನೇ ಶುಕ್ರವಾರದವರಿಗೆ ಶಿಷ್ಯ ಮಂಡಲಿಯನ್ನು ಸಂತೋಷಗೊಳಿಸುತ ಬಿಜಮಾಡಿದ್ದರು. ಈ ೧೩ ದಿನಗಳಲ್ಲಿಯೂ ಸಾವಿರಾರು ಮಂದಿಗೆ ಅನ್ನ ಸಂತರ್ಪಣೆ, ಯಾರು ಯಾರು ಯಾವಯಾವ ವಿದ್ಯೆಯಲ್ಲಿ ಸಮರ್ಥರೋ ಆ ವಿದ್ಯೆಯಲ್ಲಿ ಸ್ವಾಮಿಗಳವರ ಸನ್ನಿಧಿಯಲ್ಲಿ ಪರಿಕ್ಷೆ, ಅವರವರ ಯೋಗ್ಯತಾನುಸಾರ ದ್ರವ್ಯ ಮೂಲಕವಾಗಿಯೂ, ವಸ್ತ್ರ ಮೂಲಕವಾಗಿಯೂ ಬಹುಮಾನಗಳು ಅವಿಚ್ಛಿನ್ನವಾಗಿ ನಡೆಯುತಲಿದ್ದವು. ಸ್ವಾಮಿಗಳವರ ತಪಃ ಪ್ರಭಾವ, ವಿದ್ಯಾ ಕೌಶಲ್ಯ, ಸರ್ವ ಸಮತೆ, ಮುಂತಾದ ಗುಣಗಳು ಆಬಾಲ ವೃದ್ಧರಿಗೂ ಸಂತೋಷವನ್ನುಂಟುಮಾಡಿತು. ಸಾಮಾನ್ಯವಾಗಿ ಜನಗಳೆಲ್ಲರೂ ಸ್ವಾಮಿಗಳವರ ಚರಣ ಕಮಲವಂ ಸೇವಿಸಿ ತಮಗೆ ಸಮಾನರಾದ ಧನ್ಯರಿಲ್ಲವೆಂದು ಹೇಳುತ್ತಾ ಆನಂದಾಂಬುಧಿಯೊಳು ಮಗ್ನರಾಗಿದ್ದರು. ೩ನೇ ತಾರೀಖು ಶನಿವಾರ ಶ್ರೀ ಜಗದ್ಗುರುಗಳವರು ಸೊಗಾನೆಗೆ ಪ್ರಯಾಣ ಬೆಳಸಲಿಕ್ಕೆ ಶಿವಮುಗ್ಗೆಗೆ ಬಿಜಮಾಡಿ ಅಲ್ಲಿ ಶಿಷ್ಯರೆಲ್ಲರೂ ಸೇರಿ ಮಾಡಿದ ಪಾದಪೂಜಾದಿ ಸತ್ಕಾರಗಳನ್ನು ಅಂಗೀಕರಿಸಿ ಅವರನ್ನು ಆನಂದ ಗೊಳಿಸಬೇಕೆಂಬ ಉದ್ದೇಶದಿಂದ ಪ್ರಥಮತಃ ಈ ಪೂರಿನಲ್ಲಿರುವ ಫಾರೆಸ್ಟರ್ ವೆಂಕಪ್ಪಯ್ಯನವರ ಮನೆಗೆ ಬಿಜಮಾಡಿದರು. ಅಲ್ಲಿ ಸವಾರಿಯೊಡನೆ ದಯಮಾಡಿದ್ದ ತ್ರಿಮತಸ್ಥರಾದ ವಿದ್ವಾಂಸರೂ, ಈ ಪ್ರಾಂತದಲ್ಲಿನ ಅನೇಕಮಂದಿ ಪಂಡಿತರೂ, ದೊಡ್ಡಮನುಷ್ಯರಾದ ಅನೇಕ ಮಂದಿ ಉದ್ಯೋಗಸ್ಥರೂ ಸೇರಿದ್ದರು. ಮಠದ ಸರ್ವಾಧಿಕಾರಿಗಳೂ ಸ್ವಾಮಿಗಳವರೊಡನೆ ಇದ್ದರು. ಆಗ ಜಗದ್ಗುರುಗಳಿಗೆ ಪಾದಪೂಜೆಯಾದ ನಂತರ ಅಲ್ಲಿ ಸೇರಿದ್ದ ಬ್ರಾಹ್ಮಣರ ಸಮೂಹದಲ್ಲಿ ಗುಂಡಪ್ಪ ನೆಂಬುವರು ಈ ಕೆಳಗೆ ಬರೆದಿರುವ ವಿಜ್ಞಾಪನಾ ಪತ್ರಿಕೆಯನ್ನು ಶ್ರೀ ಸ್ವಾಮಿಗಳ ಸನ್ನಿಧಾನದಲ್ಲಿ ಅರ್ಪಿಸಿದರು.

ಶ್ರೀಕರ್ಣಾಟಕದೇಶೀಕಚಾಮುಭೂಪ ಸುಸೇವಿತ | ಶ್ರೀಕಂಠಾಕ್ಷಿಮಹಾಮಾಲಾ ವಿರಾಜಿತಗಳಸ್ಥಳ || ೧ || ಅನಾದಿಸಿದ್ಧಸಿದ್ಧಾಂತಪ್ರಚಾರಣಧುರಂಧರ | ಅಷ್ಟಾಂಗಯೋಗನಿರತಶಿಷ್ಯೈರುಪಸುಸೇವಿತ ||೨|| ಸರ್ವಶಾಸ್ತ್ರಾರ್ಥತತ್ವಜ್ಞ ನಿರ್ವ್ಯಾಜಕರುಣಾಕರ | ಯತಿರಾಜದಯಾಸಿಂಧೋದೀನಾನಸ್ಮಾನ್ವಿಲೋಕಯ || ೩|| ಕುಭಾಗಮನವೃತ್ತಾಂತಂಶ್ರುತ್ವಾದೃಷ್ಟ್ವಾಂಚಸದ್ಗುರುಂ | ಅಮಂದಾನಂದಸಂದೋಹಸಿಂಧುಮಗ್ನಾವಯಂವಿಭೋ || ೪ || ಯತೀಂದ್ರಾದ್ಯತನ್ಮುರ್ಮ್ಯದರ್ಶನೌತ್ಸುಕ್ಯಹೇತುನಾ | ಸವಿಸ್ಮಯಾವಯಂಸರ್ವೇಶಿಷ್ಯಾಶ್ಚಾರ್ಥನೆರತಾಃ ||೫|| ವೇದವೇದಾಂತಶಾಸ್ತ್ರಾರ್ಥವಿಚಾರಣವಿಚಕ್ಷಣ | ಪದಾಂಬುಜಮುದಾನತ್ವಾಕೃತಾರ್ಥಾಸ್ಮಜಗದ್ಗುರೋ || ೬|| ಚಂದ್ರಮೌಳೀಶ್ವರಸ್ಸಾಕ್ಷಾತ್ಪರಮಾತ್ಮಾಸನಾತನಃ | ಅನಾದ್ಯಗುರುಮಸ್ಮಾಸ್ವೈರಪಿಶ್ರಾಸಕರೋತ್ವಯಂ ||೭|| ಜಗದ್ಗುರುಂಜಗದ್ವಂದ್ಯಂಸತತಂಪ್ರಿಯವಾದಿನಂ | ನತ್ವಾಶ್ಯಶಿರಸಾಸ್ವಾಮಿನ್ ಚರಿತಾರ್ಥಾಭವಂಯಪ್ರಭೋ || ೮ || ಶಿವನಯನಸುಮಾಲಾವಕ್ಷಸಂವೇದಬಾಹ್ಯಪ್ರಬಲಸಮಯವಾದಧ್ವಂಸಿನಂಪೂಜನೀಯಂ || ಶಿವವಿತರಣದಕ್ಷಂವಾದ್ಯಶಾನಾಂಜನಾನಾಂಶರಣಮುಪಗತೋಹಂಕೋಸವೋಮಸ್ತಿಲೋಕೇ || ೯ || ಸಾಮಾನ್ಯಾಪಿಮದುಕ್ತಿಃ ಗುರ್ವಾಶ್ರಯಣೇನನಕಿಮುಸಾಮಾನ್ಯಾಭಾತ್ಯೈಕ್ಷ್ಯಕೃತಾಮಯಿಯುಂನಹಿನಹಿಶಕ್ತ್ಯಾಜಗದ್ಗುರುಂನೌಮಿ ||

ಶ್ರೀಯತಿರಾಜಕೃಪಾರ್ಣವ.

ಈ ವಿಜ್ಞಾಪನೆಯನ್ನು ಕೇಳಿ ಶ್ರೀ ಜಗದ್ಗುರುಗಳು ಸಂತೋಷಪಟ್ಟು ಫಲ ಮಂತ್ರಾಕ್ಷತೆಗಳಂ ಕೊಟ್ಟು ಆಶೀರ್ವದಿಸಿ ಯಥಾ ಯೋಗ್ಯವಾಗಿ ಶ್ರೀ ಮಠದಿಂದ ಮರ್ಯಾದೆಯನ್ನು ಮಾಡಿ ಕಳುಹಿಸಿದರು. ಈರೀತಿಯಾಗಿ ಅನೇಕರಿಗೆ ಸನ್ಮಾನ ಮಾಡಿದ ನಂತರ ಸಕಲರ ಮರ್ಯಾದೆಯನ್ನು ಅಂಗೀಕರಿಸುತ ಸುಮಾರು ಮಧ್ಯಾಹ್ನ ಮೂರು ಘಂಟೆಯ ಮೇಲೆ ಅನೇಕ ವಿದ್ವನ್ಮಂಡಲ ಪರಿವೃತರಾಗಿ ಸೊಗಾನೆ ಎಂಬ ಗ್ರಾಮಕ್ಕೆ ಪ್ರಯಾಣವಂ ಬೆಳಸಿದರು.

ಹೊಳಲುಕೆರೆ, ತಾ|| ೧೨ನೇ ಫೆಬ್ರುವರಿ ೧೮೮೬.

ಈ ದಿನ ಮಧ್ಯಾಹ್ನ ೨ ಘಂಟೆ ಹೊತ್ತಿನಲ್ಲಿ ಈ ಪೂರು ಪೇಟೆಸಾಲಿನ ಹಿಂಭಾಗದಲ್ಲಿರುವ ಹುಲ್ಲುಮನೆಗಳಲ್ಲಿ ಮಧ್ಯೆ ಒಂದಕ್ಕೆ ಅಕಸ್ಮಾತ್ತಾಗಿ ಬೆಂಕಿ ತಗಲಿ ಸುತ್ತ ಮುತ್ತಲಿದ್ದ ೫-೬ ಮನೆಗಳು, ಹುಲ್ಲು ಹಿತ್ತಲು ಈ ಮೇರೆ ಸುಟ್ಟು ನೆಲಸಮನಾದವು. ಬೆಂಕಿ ಹತ್ತಿದ ಒಡನೆ ಸಮೀಪದಲ್ಲಿದ್ದ ತಾಲ್ಲೂಕು ಅಮಲ್ದಾರ್ರವರಿಗೆ ವರ್ತಮಾನ ತಿಳಿದದ್ದರಿಂದ ಅವರೂ ಶಿರಸ್ತೇದಾರರು ಸಹ ಬಂದರು. ಇವರ ರೆವಿನ್ಯೂ ಪೋಲೀಸ್ ನೌಕರರು ಮತ್ತು ಇತರ ಜನಗಳೆಲ್ಲ ಬಹಳ ಸಹಾಯ ಮಾಡಿದರು. ಸುಮಾರು ೧|| ಘಂಟೆ ಕಾಲದಲ್ಲಿ ಬೆಂಕಿ ಪೂರಾ ಆರಿಸಲ್ಪಟ್ಟಿತು. ಅಂತರಿಕ್ಷದಲ್ಲೆಲ್ಲ ಹೊಗೆ ತುಂಬಿತ್ತು ಘಾಳಿಯು ಬಹಳವಾಗಿ ಬೀಸುತಲಿದ್ದದರಿಂದ ಸಮೀಪದಲ್ಲಿರುವ ಮನೆಯವರಿಗೂ ಹುಲ್ಲು ಕಣದವರಗೂ ಬಹಳ ಗಾಬರಿಯಾಗಿತ್ತು. ಧಾನ್ಯ ಸಮೇತ ಇರುವ ಹುಲ್ಲಿನಣಿಕ್ಕೆ ವ್ಯಾಪಿಸಿದ್ದರೆ ಬಹಳ ನಷ್ಟವಾಗುತಲಿತ್ತು. ದೈವವಶಾತ್ ಅಷ್ಟಕ್ಕೆ ಆಸ್ಪದವಾಗಲಿಲ್ಲವು. ಸುಮಾರು ೫೦೦ ರೂಪಾಯಿ ಬೆಲೆ ಬಾಳುವ ಜಿನಿಸಿ ಮತ್ತು ಮಾಲ್ ಸಹ ನಷ್ಟವಾಯಿತು. ಹಗಲಾದ್ದರಿಂದ ಜನಗಳಿಗೂ ಜಾನವಾರುಗಳಿಗೂ ಅಪಾಯ ಸಂಭವಿಸಲಿಲ್ಲವು. ಮನೆ ಮತ್ತು ಸಾಮಾನುಗಳು ನಾಶಮಾಡಿಕೊಂಡ ಬಡಜನಗಳ ಗೋಳನ್ನು ಹೇಳಲಶಕ್ಯವು. ಅದೈಕಿ ಬಹಳವಾಗಿ ಅಳುತಲಿದ್ದ ಒಬ್ಬ ಹೆಂಗಸನ್ನು ನಮ್ಮ ದಯಾಳುಗಳಾದ ಅಮಲ್ದಾರರವರು ಅಳಜೇತ ಸರ್ಕಾರದಿಂದ ಯೇನಾದರೂ ಸಹಾಯ ಮಾಡಿಸುತ್ತೇವೆಂದು ಸಮಾಧಾನ ಪಡಿಸಿದರು. ಪೋಲೀಸ್ ಇನ್ಸ್ಪೆಕ್ಟರವರು ಭೋಜನೋತ್ತರ ಈ ಸ್ಥಳಕ್ಕೆ ದಯಮಾಡಿಸುವಷ್ಟರಲ್ಲಿಯೇ ಮುಕ್ಕಾಲುಪಾಲು ಭಯ ಸಮಾಧಾನಕ್ಕೆ ಬಂದಿತ್ತು. ಕಳ್ಳಬಿದ್ದರೆ ಕೈಗೆ ಸಿಕ್ಕಿದ್ದು ತೆಗೆದುಕೊಂಡು ಹೋಗುತ್ತಾನೆ, ಕೊಳ್ಳಿಬಿದ್ದರೆ ಯೆಲ್ಲಾ ಸುಡುತ್ತದೆ, ಎಂಬಗಾದೆಯು ಪದೇಪದೆ ನನ್ನ ಕಿವಿಗೆ ಬೀಳುತಲಿತ್ತು. ಬಿಸಿಲುಕಾಲ ಪ್ರಾರಂಭದಲ್ಲಿಯೇ ಈಗತಿಯಾದರೆ ಮುಂದೆ ಹ್ಯಾಗೆ ನಿರ್ವಹಿಸಬೇಕೆಂಬ ಭಯ ಸರ್ವತ್ರ ವುಂಟಾಗಿದೆ.

ಮೈಸೂರು ಸ್ಟೇಟ್ ರೆಯಿಲ್ವೇಯು ದಕ್ಷಿಣ ಮಹಾರಾಟಾ ರೆಯಿಲ್ವೇ ಕಂಪೆನಿಯವರಿಗೆ ಕೊಡಲ್ಪಟ್ಟಿತೆಂಬ ವರ್ತಮಾನವನ್ನು ಕೇಳಿ ಸ್ವದೇಶಾಭಿಮಾನಿಗಳಿಗೆಲ್ಲ ಬಹಳ ಅಸಮಾಧಾನ ವುಂಟಾಗಿರುವದು ಸರಿಯಷ್ಟೆ. ಈಗ ರೆಯಿಲ್ವೆ ಇಲಾಖೆಯಲ್ಲಿರುವ ನೌಕರರನ್ನು ಕಂಪೆನಿಯವರು ಇಟ್ಟುಕೊಳ್ಳುವದಿಲ್ಲವೆಂತಲೂ ಮುಂದೆ ಬೇಕಾಗುವ ನೌಕರರನ್ನು ಅವರೇ ಬೇರೇ ತರುತ್ತಾರೆಂಬ ವರ್ತಮಾನವನ್ನೂ ಕೇಳಿದರೆ ಮೈಸೂರು ದೇಶೀಯರಿಗೂ ಮತ್ತು ಯಿಲ್ಲಿ ನೆಲಗೊಂಡಿರುವ ಪರದೇಶಸ್ಥರಿಗು ಸಹ ಬಹಳ ವ್ಯಸನವೇಸರಿ. ಈ ದೇಶದ ಆದಾಯಕ್ಕೆ ಪರದೇಶದವರೇ ಬಾಧ್ಯರಾದರು. ಯತ್ನವಿಲ್ಲ, ಮತ್ತೊಂದು ಸಂಗತಿಯು ಕೆಲವು ರೈತರಿಗೆ ಆತಂಕವನ್ನು ವುಂಟುಮಾಡಿದೆ ಏನಂದರೆ —

ರೆಯಿಲ್ವೇ ಹಾಕುವಬಗ್ಗೆ ಇದುವರಿವಿಗೆ ಮಾಡಿರುವ(Trace)ಅಂದರೆ "ಗುರ್ತು" ಅನೇಕ ಹಿಡುವಳೀ ಜಮೀನುಗಳಲ್ಲಿ ಬಿದ್ದಿದೆ. ರೆಯಿಲ್ವೇ ಇಂದ ಆಕ್ರಮಿಸಲ್ಪಟ್ಟ ಅಂತಾ ಜಮೀನಿನ ಭಾಗಕ್ಕೆ ಬಹಳ ಸ್ವಲ್ಪವಾದ ಬೆಲೆಯನ್ನು ಕೊಟ್ಟು ಬಲಾತ್ಕಾರದಿಂದ ಅಂತಾ ಭಾಗವನ್ನು ಹಿಡುವಳೀದಾರರಿಂದ ತೆಗೆದುಕೊಳ್ಳುತ್ತಾರೆಂಬದು. ಈ ವಿಷಯದಲ್ಲಿ ಮೈಸೂರುಸರ್ಕಾರದವರು ರೆಯಿಲ್ವೇ ಕಂಪೆನಿಯವರ ಸಂಗಡ ಏನು ಕರಾರು ಮಾಡಿಕೊಂಡಿದ್ದಾರೆಂಬುವದನ್ನು ತಾವಾಗಲೀ ತಮ್ಮ ಪತ್ರಿಕಾಪ್ರಚಾರಕರಾಗಲಿ ದಯವಿಟ್ಟು ಪ್ರಜಾರಂಜನೆಯೇ ಮುಖ್ಯವಾದ ಅಭಿಪ್ರಾಯವುಳ್ಳ ತಮ್ಮ ಪತ್ರಿಕೆಯ ಮೂಲಕವಾಗಿ ಪ್ರಕಟಪಡಿಸಿ ಮೇಲೆ ಬರೆದ ಪ್ರಕಾರ ರೈತರಿಗೆ ವುಂಟಾಗಿರುವ ಸಂದೇಹವನ್ನು, ಆತಂಕವನ್ನು ಸಹ ನಿವಾರಣೆ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

ಇಲ್ಲಿಗೆ ತಾ|| ೧೬ಕ್ಕೆ ದಕ್ಷಿಣ ಮಹರಾಟ್ಟ ರೆಯಿಲ್ವೇ ಕಂಪೆನಿ ಇಂಜಿನೀಯರಾದ ಕರ್ನಲ್ ಲಿಂಡ್ಸೆಯವರು ಪರಿವಾರಸಮೇತರಾಗಿಯೂ ಮತ್ತು ಮೈಸೂರು ಯಗ್ಜಿಕ್ಯೂಟಿವ್ ಇಂಜನಿಯರ್ ಮೆ. ಮೆಕ್ಕಚ್ಚನ್ ಸಾಹೇಬರವರೂ ರೆಯಿಲ್ವೇ ನಿಶಾನನ್ನು ಪರಾಂಬರಿಸುವಬಗ್ಗೆ ದಯಮಾಡುತ್ತಾರಂತೆ. ತಾರೀಖ್ ೧೭ಕ್ಕೇನೇ ಮುಂದಕ್ಕೆ ಅಜ್ಜಂಪುರ ಕಡೆ ಪ್ರಯಾಣ ಮಾಡುವವಾಗಿಯೂ ವರ್ತಮಾನವಿದೆ.

ಹೊಸದುರ್ಗದಿಂದ ಅನಗೋಡಿಗೆ ಹೋಗುವ ರಸ್ತೆ ಈ ಪೂರಮುಂದೆ ಯಿರುವ ಕೆರೆ ಅಂಗಳದಲ್ಲಿ ಹೋಗುತದೆ ಎಂಬುವದು ಇಲ್ಲಿಂದ ಚನ್ನಗಿರಿಗೆ ಹೋಗುವ ರಸ್ತೆಯಲ್ಲಿ ನೆಟ್ಟಿರುವ ಕೈಕಂಭದಿಂದ ತಿಳಿಯ ಬರುತ್ತೆ. ಅದರ ಪ್ರಕಾರ ಅನಗೋಡು ಕಡೆಗೆ ಕೆರೇಅಂಗಳಕ್ಕೆ ಬಂದರೆ ಅದು ರಸ್ತೆಯನ್ನುವದು ಎಷ್ಟುಮಾತ್ರವೂ ತಿಳಿಯಲಸಾಧ್ಯವಾಗಿದೆ. ಒಂದು ಕಾಲುದಾರಿಮಾತ್ರವಿದೆ, ಇದನ್ನು ಹಿಡಿದುಕೊಂಡು ಹೋದರೆ ಕೆರೇ ನೀರಿನ ಹತ್ತಿರ ತೆಗದುಕೊಂಡು ಹೋಗಿಬಿಡುತ್ತದೆ. ಮುಂದೆ ಹೋಗ ಬೇಕಾದರೆ ನೀರಿನಪೊಳಗೆ ನುಗ್ಗಬೇಕೋ ಎಂಬ ಭ್ರಮೆ ವುಂಟಾಗುತ್ತೆ ಈ ರಸ್ತೆ ಮಾಡುವದಕ್ಕಾಗಿ ಸರ್ಕಾರಕ್ಕೆ ಏಳೆಂಟು ಸಾವಿರ ರೂಪಾಯಿಗಳವರಿಗೆ ಖರ್ಚಾಗಿದೆ. ಈ ರಸ್ತೆಯಲ್ಲಿ ಯಿದುವರಿಗೆ ಒಂದು ನರಪ್ರಾಣಿಯಾದರೂ ಅನಗೋಡಿಗೆ ಹೋಗುವದಕ್ಕೆ ಆಗಲಿ ಅಥವಾ ಮತ್ತೆಲ್ಲಿಗಾಗಲಿ ಸಂಚರಿಸಿತೆಂದು ನಂಬುವದಕ್ಕೆ ಅಸಾಧ್ಯವಾಗಿದೆ. ಇದರಿಂದ ಮತ್ತೇನು ಪ್ರಯೋಜನವೋ ತಿಳಿಯದು. ಸರ್ಕಾರದ ಹಣ ಬಹಳ ಅಗ್ಗವಾಗಿದೆ. ಇಂಜನಿಯರ್ ಇಲಾಖೆಯವರು ಮಾಡುವ ಕೆಲಸಗಳು ಎಷ್ಟು ಆವಶ್ಯಕವಾದವುಗಳೋ ಆಲೋಚಿಸಬಹುದು. ಅಯ್ಯಾ ಎಡಿಟರವರೆ, ನಾನು ತಮ್ಮ ಪತ್ರಿಕೆಯಲ್ಲಿ ಬಹಳ ಜಾಗವನ್ನು ಆಕ್ರಮಿಸಿಕೊಂಡೆನು, ದಯಮಾಡಿ ಕ್ಷಮಿಸಬೇಕೆಂದು ಪ್ರಾರ್ಥಿಸುವ,

ತಮ್ಮ ವಿಧೇಯನಾದ,
A-B. ಲೋಕೋಪಕಾರಿ.

ಈ ಗ್ರಾಮದಲ್ಲಿ ಇದುವರಿವಿಗೂ ಒಂದು ಗವರ್ನಮೆಂಟ್ ಸ್ಕೂಲ್ ಇತ್ತು. ಅದರಲ್ಲಿ ಬಾಲಕರಿಗೆ ವಿದ್ಯೆ ಸರಿಯಾಗಿ ಹೇಳದ್ದರಿಂದ ಜನಗಳಿಗೆ ಅಭಿರುಚಿ ಕಡಮೆಯಾಗಿ ಒಂದು ಕೂಲೀಮಠವನ್ನು ಸ್ಥಾಪಿಸಿಕೊಂಡರು. ಈ ಗ್ರಾಮದಲ್ಲಿರುವ ಹೆಣ್ಣುಮಕ್ಕಳು ಬುದ್ಧಿ ಇಲ್ಲದೆ ಅನ್ಯಾಯವಾಗಿ ಕಾಲಹರಣೆ ಮಾಡುತ್ತಾರೆಂಬ ಆಲೋಚನೆಯಿಂದ ಈ ತಾಲ್ಲೂಕು ಅಮಲ್ದಾರ್ ಮ|| ರಾ|| ರಾಮಸ್ವಾಮಯ್ಯನವರು ಧರ್ಮ ದೃಷ್ಟಿಯಿಂದ ಆಲೋಚಿಸಿ ಕೆಲವು ಜನ ದೊಡ್ಡ ಮನುಷ್ಯರನ್ನು ಸೇರಿಸಿಕೊಂಡು ಮೀಟಿಂಗ್ ಮಾಡಿ ಕೆಲವರ ಚಂದಾಮೂಲಕ ಒಂದು ಗರಲ್ಸ್ ಸ್ಕೂಲ್ ಸ್ಥಾಪಿಸಿ ಜನವರಿ ತಾರೀಖ್ ೨೦ರ ಲಾಗಾಯತು ಸ್ಕೂಲ್ ನಡುವದಕ್ಕೆ ಪ್ರಾರಂಭಿಸಿದರು. ಈ ಗ್ರಾಮದಲ್ಲಿಯೇ ಯೋಗ್ಯರಾದ ಒಬ್ಬ ಮಾಸ್ಟರನ್ನು ಮಾಹೇಯಾನಾ ೭ ರೂಪಾಯಿ ತಲಬ್ ಮಾಡಿ ನೇಮಿಸಿರುತ್ತಾರೆ. ಈಗ ೨೦ ಜನ ಹುಡಿಗಿಯರು ಓದುತಲಿದಾರೆ. ಈ ಸ್ಕೂಲ್ ಕಾಯಮಾಗಿ ನಡೆಯುವದಕ್ಕೂ ಅಭಿವೃದ್ಧಿಗೆ ಬರುವದಕ್ಕು ಸಹ ಗವರ್ನಮೆಂಟನವರು ವಹಿಸಿದರೆ ಶಾಶ್ವತವಾಗಿ ನಡೆಯುವದಕ್ಕೂ, ಬಡವರ ಮಕ್ಕಳುಬುದ್ಧಿವಂತರಾಗಲಿಕ್ಕೂ, ಇದನ್ನು ಪ್ರಾರಂಭಿಸಿದವರಿಗೆ ಕೀರ್ತಿಬರುವದಕ್ಕೂ ಅನುಕೂಲ ವುಂಟಾಗುವದೆಂದು ತೋರುತಿದೆ ಮಹಾಸ್ವಾಮಿ.

೧೪-೨-೮೬ } ತಮ್ಮ ವಿಧೇಯನಾದ,
ಅರಸೀಕೆರೆ. } ಅರಸೀಕೆರೆ ನಿವಾಸಿ.

[ಈ ಬಾತಮೀದಾರರ ಬರುವಣಿಗೆಯ ಪೈಕಿ ಮಿಕ್ಕಭಾಗವನ್ನು ವ್ಯರ್ಥ ಕಲಹಾಸ್ಪದವೆಂದು ಭಾವಿಸಿ ಪ್ರಕಟಸಲಿಲ್ಲವು.] ಎಡಿ. ಕ. ಪ್ರ.

TELEGRAPHIC SUMMARY.

ತಂತಿವೃತ್ತಾಂತ ಸಂಗ್ರಹವು.

ಕಾನ್‌ಸ್ಟಾಂಟಿನೋಪಿಲ್, ೧೯ನೇ ಫೆಬ್ರವರಿ — ತುರ್ಕೀಯವರಿಗೂ ಬಲ್ಗೇರಿಯಾ [illegible] ನಡೆದ [illegible] ಕಾರ್ಯಕಾರಣಗಳನ್ನು [illegible] ಸರ್ಕಾರದವರು [illegible] ಅವರ [illegible] ಸ್ವತಂತ್ರರಾದ [illegible] ನಡೆದ [illegible] ಪ್ರಕಾರ [illegible] ಜವಾಬ್ ಕೊಟ್ಟರು. [illegible]

ಮುಂಬೈ, ೧೬ನೇ ಫೆಬ್ರವರಿ — [illegible] ಅಧಿಕಾರದಲ್ಲಿ [illegible] ಉತ್ತರ ದಕ್ಷಿಣ [illegible] ಇಂಡ್ಯಾ [illegible].

[illegible] ರಾಜ್ಯದ [illegible].

ಲಂಡನ್, ೧೫ನೇ ಫೆಬ್ರವರಿ — ಡ್ಯೂಕ್ ಆಫ್ ಕನಾಟ್ ರವರು [illegible] ಇಂಡ್ಯ [illegible] ಬಂಗಾಳೀ [illegible].

ರಂಗೂನ್, ೧೭ನೇ ಫೆಬ್ರವರಿ — ಮಾಂಡಲೇ ಪಟ್ಟಣ [illegible].

ಲಂಡನ್, ೧೮ನೇ ಫೆಬ್ರವರಿ — ಈಚೆಗೆ ಲಂಡನ್ [illegible] ನಡೆದ ಕಲಹದಲ್ಲಿ ನಷ್ಟಪಟ್ಟ ಜನಗಳ [illegible] ೩,೫೦೦ ರೂಪಾಯಿಗಳು [illegible] ೪೫,೦೦೦ [illegible], ಅಂದರೆ ೪,೫೦,೦೦೦ ರೂಪಾ [illegible].

ಸೇಂಟ್ ಪೀಟರ್ಸ್‌ಬರ್ಗ್, ೧೭ನೇ ಫೆಬ್ರವರಿ — ತುರ್ಕೀಯವರಿಗೂ ಬಲ್ಗೇರಿಯಾ ದೇಶದವರಿಗೂ ನಡೆದ [illegible].

ಲಂಡನ್, ೧೯ನೇ ಫೆಬ್ರವರಿ — [illegible] ಇಂಡ್ಯಾ [illegible] ನೋಟಿಸ್ ಕೊಟ್ಟರು.

BANGALORE —Printed and pu lished for the Proprietor, at the KARNATIC PRESS —1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

[illegible]

Vol. XIII] BANGALORE—MONDAY, MARCH 1, 1886. [No. 9

ಸಂಪುಟ ೧೩.] ಬೆಂಗಳೂರು—ಸನ್ ೧೮೮೬ನೇ ಇಸವಿ ಮಾರ್ಚಿ ೧ನೇ ತಾರೀಖ್ ಸೋಮವಾರ. [ಸಂಚಿಕೆ ೯.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

[illegible]

ಪ್ರಕಟನೆಯ ರಿವಾಜ್

[illegible]

NOTICE TO SUBSCRIBERS

[illegible]

NOTICE.

VAIDYASARA SANGRAHA.

☞ Price including Postage, Rs 5 0 0

ವೈದ್ಯಸಾರ ಸಂಗ್ರಹ.

[illegible]

ಪಿ. ವೆಂಕಟಾಚಾರ್, ಆಪೀಸ್ [illegible] ಬೆಂಗಳೂರು.

ನೋಟೀಸ್.

[illegible]

[illegible]	...	೧—೪—೦
[illegible]	...	೦—೧೨—೦
[illegible]	...	೦—೩—೦
[illegible]	...	೦—೫—೦
[illegible]	...	೦—೪—[illegible]
[illegible]	...	೦—೧೪—೦
[illegible]	...	೦—೭—೦
[illegible]	...	೦—೨—೦
ವೈದ್ಯಸಾರ ಸಂಗ್ರಹ	...	೫—೦—೦

[illegible]

NOTICE.

ಎಸ್. ರಾಮಸ್ವಾಮಯಂಗಾರ್ ಕಂಪೆನಿ.

ಜನರಲ್ ಕಮ್ಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯಂಗಾರ್ ಕಂಪೆನಿಯವರು, ಅವರಿಗೆ ಒಪ್ಪಿಸುವ ಸರ್ವ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ಪಳ್ಳಾಳ ತೆಗೆದುಕೊಳ್ಳಲ್ಪಡುವದು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MARCH 1, 1886

೧೮೮೬ನೇ ಮಾರ್ಚಿ ೧ನೇ ತಾ॥ಸೋಮವಾರ

[illegible]

THE ANNEXATION OF BURMAH

ಈಗ ಬ್ರಿಟಿಷರಾಜ್ಯಕ್ಕೆ ಸೇರಿಸಲ್ಪಟ್ಟ ಬರ್ಮಾದೇಶದ ಯುದ್ಧ ಖರ್ಚನ್ನು ಇಂಡ್ಯಾದೇಶ ಉತ್ಪತ್ತಿಯಿಂದಲೇ ಕೊಡಬೇಕಾದ್ದು ನ್ಯಾಯವೆಂದು ಸ್ಟೇಟ್ ಸೆಕ್ರೆಟರಿಯವರು ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಒಂದು ಸಂದರ್ಭದೊಳು ಸೂಚಿಸಿ, ಅದರಂತೆ ನಿರ್ಣಯವಾಯಿತೆಂದು ರೂಟರ್ಯವರ ತಂತಿ ವರ್ತಮಾನದ ಮೂಲಕ ತಿಳಿಯಲಾದೆವು. ಬರ್ಮಾರಾಜ್ಯದ ಮೇಲೆ ಮಾಡಲ್ಪಟ್ಟ ಯುದ್ಧಯಾತ್ರೆಯು ಕೇವಲ ಕೆಲವು ಜನ ಬ್ರಿಟಿಷ್ ವರ್ತಕರ ಪ್ರಯೋಜನವನ್ನುದ್ದೇಶಿಸಿದ್ದಾಗಿರುತ್ತಿದೆಂದು ಹಿಂದಿನ ಪತ್ರಿಕಾ ಮೂಲಕ ಸೂಚಿಸಿದ್ದೆವಷ್ಟೆ. ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ಈ ವಿಷಯವನ್ನು ಕುರಿತು ನಡೆದ ವಿಚಾರದೊಳು, ಬರ್ಮಾರಾಜ್ಯವನ್ನು ಸ್ವಾಧೀನಪಡಿಸಿ ಕೊಳ್ಳಲಿಕ್ಕೆ ಬ್ರಿಟಿಷರವರಿಗಿದ್ದ ಅಂತರವಾದ ಬೇರೊಂದು ಅಭಿಪ್ರಾಯ ಸಹ ಹೊರಪಟ್ಟಿತು. ಅದೇನೆಂದರೆ, ತೀಬಾ ಅರಸರ ಸ್ನೇಹದ ಮೂಲಕ ಫ್ರೆಂಚಿನವರ ಪ್ರಾಬಲ್ಯವು ಅಲ್ಲಿ ಅಧಿಕವಾಗುತ್ತ ಬಂದದರಿಂದಲೂ, ಅಲ್ಲಿ ಅವರು ಗೂಢವಾಗಿ ನಡೆಸುತಲಿದ್ದ ಪಿತೂರಿಗಳಿಂದ ಮುಂದೆ ಬ್ರಿಟಿಷರವರ ನಿರುಪಾಧಿಕವೃತ್ತಿಗೆ ಕೊರತೆಯುಂಟಾಗಬಹುದೆಂದು ತೋರಿ ಬಂದದರಿಂದಲೂ ಫ್ರೆಂಚಿನವರ ಪ್ರಾಬಲ್ಯವನ್ನು ಮುರಿಯುವದಕ್ಕೆ ಬರ್ಮಾ ಅರಸರನ್ನು ಪದಭ್ರಷ್ಟರನ್ನಾಗಿ ಮಾಡಿ ರಾಜ್ಯವನ್ನಾಕ್ರಮಿಸದ ಹೊರತು ಸಾಧ್ಯವಲ್ಲವೆಂದು ಭಾವಿಸಿಯೇ ಅದಂ ಸೇರಿಸಿಕೊಳ್ಳಲ್ಪಟ್ಟಿತೆಂಬದು. ಬ್ರಿಟಿಷರವರು ತಮ್ಮ ಪ್ರಯೋಜನವನ್ನು ಕಾಪಾಡಿಕೊಳ್ಳಬೇಕಾದ್ದು, ಸುಖಸಮಾಧಾನಕರವಾದ ಸ್ಥಿತಿಯಂ ಜನಗಳಿಗೆ ಕಲ್ಪಿಸಬೇಕಾದ್ದು ಅಕ್ರಮವೆಂದು ನಾವು ನುಡಿಯುವದಿಲ್ಲವು. ಪರಂತು ಅದಕ್ಕೆ ಅನುಕೂಲವಾದ ಬೇರೆವಿಧ ಏರ್ಪಾಡೊಂದೂ ಮಾಡದೆ, ಹಿಂದಿನಾದಿದ ಪ್ರತಿಜ್ಞೆಗಳಿಗೂ, ಅಭಯಗಳಿಗೂ, ಸಾಕ್ಷಾದ್ವಿರುದ್ಧವಾಗಿ ರಾಜ್ಯವು ಆಕ್ರಮಿಸಿ ಕೊಂಡದ್ದು ಸರ್ವಾತ್ಮನಾ ಯೋಗ್ಯವಲ್ಲವೆಂದು ಇಂಡ್ಯಾದೇಶೀಯರೆಲ್ಲರೂ ಏಕರೂಪವಾದ ಅಭಿಪ್ರಾಯವುಳ್ಳವರಾಗಿರುವಾಗ್ಯೆ ಯುದ್ಧ ಖರ್ಚನ್ನು ಕೊಡುವದಕ್ಕೆ ಅವರು ಹ್ಯಾಗೆ ಬದ್ಧರಾಗುವರೋ ನಾವರಿಯೆವು. ಮತ್ತು ಯುದ್ಧ ಖರ್ಚನ್ನು ಇಂಡ್ಯಾದೇಶೀಯರ ಮೇಲೆ ಹೊರಿಸಲಿಕ್ಕೆ ಬ್ರಿಟಿಷರವರಿಗೆ ಮನಸ್ಸು ಎಂತೊಪ್ಪಿತೋ ತಿಳಿಯಲಿಲ್ಲವು. ಈಗ್ಯೆ ಸುಮಾರು ೨೫ ವರುಷಗಳ ಹಿಂದೆ ಮಹಾರಾಜ್ಞಿಯವರು ತಮಗೆ ನೂತನರಾಜ್ಯ ಸಂಪಾದನಾಭಿಲಾಷೆ ಇಲ್ಲವೆಂದು ತಿಳಿಸಿದ್ದ ವಾಕ್ಯವೀಗ ಏನಾಯಿತು? ಪ್ರಸ್ತುತ ವೈಸರಾಯಿಯವರಾದ ಲಾರ್ಡ್ ಡಫ್ರಿನ್ಯವರು, ಇಂಡ್ಯಾ ದೇಶಕ್ಕೆ ಬಂದು ಜಹಜಿಳಿದ ಕೂಡಲೇ ತಮ್ಮ ಮಾರ್ಗದರ್ಶಕರಾದ ಲಾರ್ಡ್ ರಿಪನ್ಯವರು ನಡೆಸಿದ ಕ್ರಮವನ್ನು ತಮ್ಮ ವರ್ತನದಿಂ ಪೋಷಿಸಬೇಕೆಂಬದೂ, ಸದರೀ ಯವರ ರಾಜ್ಯತಂತ್ರ ಕ್ರಮದಿಂ ಪ್ರಜಾಗತಕ್ಕೆ ಪ್ರಯೋಜನಾಂಶವನ್ನು ವೃದ್ಧಿಗೊಳಿಸಬೇಕೆಂಬದೂ ತಮ್ಮ ಮುಖ್ಯೋದ್ದೇಶವಾಗಿರುತಿದೆಂದು ನುಡಿದ ಪ್ರತಿಜ್ಞಾ ವಚನವು ಈಗ ಎತ್ತ ಹೋಯಿತು? ಇವುಗಳಿಗೆಲ್ಲ ವಿರುದ್ಧವಾಗಿ ಬಹು ಮಂದಿಯೂರೋಪಿಯನ್ನರಿಗೆ ಸಂತೋಷವಾಗಿಯೂ ಅನೇಕ ಲಕ್ಷ ನೇಟಿವ್‌ಗಳಿಗೆ ಅಸಂತೋಷಕರವಾಗಿಯೂ ಇರುವಂತೆ, ಮಾಡಲ್ಪಟ್ಟ ಪ್ರಸ್ತುತ ಯುದ್ಧದ ಬಗ್ಯೆ ತಗಲಿದ ಖರ್ಚನ್ನು ಯಾರು ವಹಿಸಬೇಕು? ಯಾರು ತೀಬಾ ಅರಸರ ಕಂಟಕಪ್ರಭುತ್ವದಿಂ ಸುಕವಪಟ್ಟಂತೆ ನಟಿಸಲೆತ್ನಿಸಿದರೋ ಅಂತಾ ವರ್ತಕ ಕಂಪೆನಿಯವರದನ್ನು ಯಾತಕ್ಕೆ ಭರಿಸಲಾಗದು? ಲಾರ್ಡ್ ಡಫ್ರಿನ್ಯವರ ಸ್ಥಾನಾಪನ್ನರಾಗಿದ್ದ ಲಾರ್ಡ್ ರಿಪನ್ಯವರು ಅಧಿಕಾರ ಪದದೊಳಿದ್ದಿರುವರಾದರೆ, ಒಂದು ದೇಶದ ಅರಸನ್ನು ಸ್ಥಾನಭ್ರಷ್ಟರನ್ನಾಗಿ ಮಾಡಿ ಅಲ್ಲಿನ ಜನಗಳ ಸ್ವಾತಂತ್ರ್ಯವನ್ನು ಅಪಹರಿಸುವ ಪ್ರಯತ್ನವನ್ನವರು ಎಂದಿಗೂ ಮಾಡಿರಲಾರರು. ಬಹುಮಂದಿಗೆ ಅತೃಪ್ತಿಯುಂಟಾಗುವಂತೆ ಆರ್ಜಿಸಿದ ರಾಜ್ಯವು ತನ್ನ ಖರ್ಚನ್ನು ತಾನು ಭರಿಸಲಿಕ್ಕೆ ಶಕ್ತವಾಗಿದೆಯೋ ಅಂದರೆ ಅದೂ ಕಾಣಿಸಲಿಲ್ಲವು. ಬ್ರಿಟಿಷ ಬರ್ಮಾರಾಜ್ಯದ ಚೀಫ್ ಕಮ್ಮಿಷನರಾದ ಮೆ॥ ಬರ್ನಾರ್ಡ್‌ಯವರು ಇಂಡ್ಯಾಗವರ್ನಮೆಂಟಿಗೆ ಬರೆದ ಒಂದು ಕಾಗದದಲ್ಲಿ ಉಲ್ಲದ್ದವಾದ ಬರ್ಮಾದೇಶವು, ಬ್ರಿಟಿಷ್ ಆಳ್ವಿಕೆಯನ್ನು ಪೋಷಿಸುವಷ್ಟು ಉಪಪನ್ನವಾಗಿಲ್ಲವೆಂತಲೂ, ಪ್ರಸ್ತುತ ಸ್ಥಿತಿಯಲ್ಲಿ ಸಾಲೀಯಾನಾ ೬೫ ಲಕ್ಷ ರೂಪಾಯಿಗಳಿಗಿಂತ ಅಧಿಕವಾಗಿಹುಟ್ಟುವಳಿ ಅಂದಾಜ್ ಮಾಡುವದಕ್ಕಾಗುವದಕ್ಕಿಲ್ಲವೆಂತಲೂ, ಸದರೀ ಮೊಬಲಗು ಅಲ್ಲಿನ ಸೈನಿಕ ಖರ್ಚಿಗೆ ಸಹ ಸಾಕಾಗುವದಿಲ್ಲವೆಂತಲೂ, ಮುಲ್ಕೀ ಆತಳತಕ್ಕೆ ಬೇಕಾದ ವ್ಯಯವು ಅಲ್ಲಿ ಒದಗಲಾರದೆಂತಲೂ, ತಿಳಿಸಿರುತ್ತಾರೆ. ಇಂತಾ ದೆಸೆಯಲ್ಲಿ ಸದರೀ ರಾಜ್ಯವನ್ನು ಬ್ರಿಟಿಷರವರು ವಹಿಸಿದ್ದು ನಷ್ಟಕರವೇ ಹೊರತು ಅದರಿಂದ ಸಾಧಿಸಬೇಕಾದ ಕಾರ್ಯವಾಗಲಿ, ಪಡೆಯಬೇಕಾದ ಪ್ರಯೋಜನವಾಗಲಿ ಏನೂಯಿಲ್ಲವೆಂದು ಅವರು ತಿಳಿಸಿದ ಮಾತುಗಳಿಂದಲೇ ಸ್ಪಷ್ಟವಾಗುತಿದೆ. ಹೀಗೆ ಯಾವಭಾಗದಲ್ಲಿಯೂ ಪ್ರಯೋಜನವಿಲ್ಲದ ವಿಷಯಕ್ಕೆ ಯಾವವಿಧ ಸಂಬಂಧವೂ ಇಲ್ಲದ ಜನಗಳ ಮೇಲೆ ಭಾರವನ್ನು ಹೊರಿಸಿ ಅವರಂ ಸಂಕಟಗೊಳಿಸುವದು, ರಾಜನೀತಿಗೂ ಧರ್ಮಕ್ಕೂ ಬಹಳ ವಿರುದ್ಧವಾಗಿರುವದು.

THE LATE MR. VENKATACHAR.

ಕೋಲಾರ್ ಮುನ್ಸಫ್ ಕೋರ್ಟಿನಲ್ಲಿ ವಕೀಲರಾಗಿದ್ದ ಮ॥ರಾ॥ ಶ್ರೀ॥ ವೆಂಕಟಾಚಾರ್ಯರೆಂಬವರಿಗೆ ವಹಶೀಮುಚಕೂರ್ ೨೪ನೇ ತಾರೀಖ್ ಬುಧವಾರದದಿನ ಪ್ರಾಪ್ತವಾದ ಆಕಸ್ಮಿಕ ಮರಣಕ್ಕಾಗಿ ಅವರ ಇಷ್ಟಮಿತ್ರರೊಡನೆ ನಾವು ಸಹ ಬಹಳ ವಿಷಾದಿಸುತ್ತೇವೆ. ಈಗ ಮೃತಪಟ್ಟವರು ಈ ಸಂಸ್ಥಾನದ ಆಸ್ಥಾನ ಪಂಡಿತರಲ್ಲಿ ಪ್ರಸಿದ್ಧ

…ನಾಗಿದ್ದ ಶ್ರೀಮಾನ್ ಆಲವಂಧ್ಯಂ ಶ್ರೀನಿವಾಸಾಚಾರ್ಯರ ಕುಮಾರರು ಇವರಿಂದ ಪಂಡಿತ ಪುತ್ರರೆಂಬ ಪ್ರಾಶಸ್ತ್ಯಕ್ಕೂ, ಗೀರ್ವಾಣ ಮುಂತಾದ ಭಾಷಾಭ್ಯಾಸಮಾಡಿ ಪಾಂಡಿತ್ಯವು ಪಡೆದಿದ್ದವರಿಂದ ಸ್ವತಃ ಪಂಡಿತರೆಂಬ ಪ್ರಶಸ್ತಿಗೂ, ವರ್ತಮಾನಕಾಲದ ನ್ಯಾಯ ನಿಬಂಧನೆಗಳನ್ನಭ್ಯಸಿಸಿ ಅವುಗಳಲ್ಲಿ ವಿಶೇಷ ಜ್ಞಾನವು ಸಂಪಾದಿಸಿದ್ದದರಿಂದ ವಕೀಲರೆಂಬ ಪ್ರತಿಷ್ಠೆಗೂ, ಕಕ್ಷಿಗಾರರ, ಬಹಳ ಸುಲಭರಾಗಿದ್ದದರಿಂದ ಸುಶೀಲನೆಂಬ ಪ್ರಶಂಸೆಗೂ ಪಾತ್ರರಾಗಿದ್ದರು. ಇವರು ವಕೀಲ ಕೆಲಸದೊಳು ಪ್ರವರ್ತಿಸಿದ ಮೊದಲು ಇವರಲ್ಲಿ ಕಕ್ಷಿಗಾರರಿಗೆ ನಂಬಿಕೆಯೂ ಗೌರವವೂ ಅಧಿಕವಾಗುತಬಂದಹಾಗೆಲ್ಲ ಇವರ ಆಯತಿಯು ಕ್ರಮೇಣ ಜಾಸ್ತೀಯಾಗುತ ಈಗ ಮಾಹೆವಾರ ೫೦೦ ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ಇವರಿಗೆ ಸಂಪಾದನೆ ಯಾಗುತಲಿದ್ದಂತೆ ತಿಳಿಯಲಾದೆವು. ಮೆ॥ ವೆಂಕಟಾಚಾರ್ಯರವರಿಗೆ ಈಗ ೪೦ ವರುಷಗಳವಯಸ್ಸಿಗಿಂತ ಮೇಲ್ಪಟ್ಟಿರಲಿಲ್ಲವು ಇವರಿಗೆ ಸಂತಾನವಾದದರಲ್ಲಿ ಕೊರತೆಯಿಲ್ಲವಿದ್ದಾಗ್ಯೂ ತತ್ಪ್ರಯುಕ್ತವಾದ ಸಂತೋಷವನ್ನು ಅನುಭವಿಸಲಿಕ್ಕೆ ಮಾತ್ರ ಪ್ರಾಪ್ತಿ ಯಿರಲಿಲ್ಲವು ಜನಿಸಿದ ಮಕ್ಕಳ್ ಸಂಖ್ಯೆಯಧಿಕವಾದರೂ ಒಂದು ಹೆಣ್ಣುಮಗು ವಿನಾ ಮಿಕ್ಕವೆಲ್ಲವೂ ಮೃತಪಟ್ಟವು. ದರಿದ್ರನಾದವನು ಹಸಿ ತನ್ನ ಸ್ಥಿತಿಯಂ ಪರಿಗಣಿಸದೆ ಪುತ್ರನನ್ನಪೇಕ್ಷಿಸುವದು ಲೋಕವಾಡಿಕೆಯಾಗಿರುವಲ್ಲಿ ಧನಿಕನಾದವನು, ತನ್ನ ಕಾಲಾನಂತರ ಸ್ವಾರ್ಜಿತವನ್ನು ಅನುಭವಿಸುವ ಬಗ್ಗೆ ಸಂತಾನವನ್ನಪೇಕ್ಷಿಸುವದು ಧರ್ಮವಲ್ಲವೆ? ಆದದರಿಂದ ಮೆ॥ ವೆಂಕಟಾಚಾರ್ಯರವರು, ಸ್ವತಃ ಪಂಡಿತರಾಗಿಯೂ, ಅನವರತವೂ ಧರ್ಮಶಾಸ್ತ್ರಾವಲೋಕನವ್ಯಸನಿಗಳಾಗಿಯೂ, ಉಪಪನ್ನರಾಗಿಯೂ ಇದ್ದದರಿಂದ ಹೀಗೆ ತಮಗೆ ಬಾರಬಾರ ಸಂತಾನನಾಶವು ಹೋಗುವದಂ ಕಂಡು ಪುನರ್ವಿವಾಹ ಮಾಡಿಕೊಳ್ಳಲಿಕ್ಕೆ ಎತ್ನಿಸಿದಾಗ, ಇವರ ಪ್ರಥಮಭಾರ್ಯೆಯು, ದೈವಸಂಕಲ್ಪವು ನಮಗೆ ಪ್ರತಿಕೂಲವಾಗಿರುವಾಗ ಮತ್ತೊಂದು ವಿವಾಹದಿಂ ಅದು ನಿವೃತ್ತಿಯಾಗುವದೆಂದೆಣಿಸುವದು ಶುದ್ಧ ಭ್ರಾಂತಿಯೆಂದು ಹೇಳಿ ಸಮ್ಮತಿಸದೆ ಹೋಗಲು, ಚತುರೋಪಾಯದಿಂದಾಕೆಯನ್ನೊಡಂಬಡಿಸಿ, ಆಕೆಯ ಕಣ್ಣುಮುಂದೆಯೇ ನಿರ್ಭಾಗ್ಯಳಾದ ಮತ್ತೊಬ್ಬ ಕನ್ಯೆಯನ್ನು ನಿರ್ನಿರೋಧವಾಗಿ ಈಗ ವ್ಯವಹಾರದೊಳಿರುವ ಹಿಂದೂ ವಿವಾಹಕ್ರಮವನ್ನನುಸರಿಸಿ ಕನ್ಯಾಶುಲ್ಕದಿಂದ ಅರ್ಥಾತುರರಾದ ಸದರೀ ಕನ್ಯೆಯ ಮಾತಾಪಿತೃಗಳಂ ತೃಪ್ತಿಗೊಳಿಸಿ, ವಿವಾಹ ಮಾಡಿಕೊಳ್ಳುವಂತೆ "ಅಪುತ್ರಸ್ಯಗತಿರ್ನಾಸ್ತಿ" ಎಂಬ ಒಂದು ಧರ್ಮಶಾಸ್ತ್ರ ವಚನವೇ ಅವರನ್ನು ಬಲವಾಗಿ ಪ್ರೇರಿಸಿದಂತೆ ಕಾಣುತಿದೆ ಇದಲ್ಲದೆ ಇವರು ಸ್ವತಃ ವಕೀಲರಾಗಿದ್ದದರಿಂದ ಬಹುಭಾರ್ಯಾ ಪರಿಗ್ರಹವು ಅನುಚಿತವೆಂಬ ಇಂಡಿಯನ್ ಪೀನಲ್ ಕೋಡಿನ ನಿಯಮವೂ, ಅದರವಿನಾಯತಿಗಳೂ, ಅದರ ಮೇಲಣ ವ್ಯಾಖ್ಯಾತರ ಅಭಿಪ್ರಾಯಗಳೂ, ತಮಗೆ ಯಾವವಿಧದಿಂದಲೂ ಅನ್ವಯಿಸತಕ್ಕದ್ದಲ್ಲವೆಂಬ ಅಂಶವನ್ನು ನಿರ್ಧರಿಸಿ ತಿಳಿದುಕೊಂಡ ತರುವಾಯಲೇ ಪುನರ್ವಿವಾಹಕ್ಕೆ ತ್ನಿಸಿದಂತೆ ತೋರುತಿದೆ.

ಇಷ್ಟು ಲಕ್ಷಣದಿಂ ಮಾಡಿಕೊಂಡ ವಿವಾಹವು ನಡೆದು ಇನ್ನೂ ಒಂದು ವರುಷವಾಗಲಿಲ್ಲವು. ಈ ವಿವಾಹಿತೆಯು ಅಪ್ರಾಪ್ತವಯಸ್ಕಳಾಗಿ, ಪ್ರಕೃತ ಸಂಪ್ರದಾಯವನ್ನನುಸರಿಸಿ ಋತುಜನ್ಮದೊಳನ್ನು ಸಂತೋಷಾನುಭವಕ್ಕೆ ಅಪಾತ್ರಳನ್ನಾಗಿ ಮಾಡಿದ ತನ್ನದುರ್ವಿಧಿಯನ್ನಿಂದಿಸುತ ಶೋಕಿಸುತಲಿದ್ದಾಳೆ. ನವ್ಯೋಢೆಯಾದ ಈಕೆಯ ದುಃಖವೇ ಅತಿಶಯವಾಗಿರುವಾಗ್ಯೆ ತನ್ನ ಪತಿಯಿಂದ ಸಕಲ ಸಂತೋಷವನ್ನನುಭವಿಸುತಲಿದ್ದ ಮೊದಲನೆಯ ಭಾರ್ಯೆಯು ಇನ್ನೆಷ್ಟು ವ್ಯಸನಪಡಬೇಕೋ ಅದು ಜನಗಳೇ ಆಲೋಚಿಸಬಹುದು. ವೆಂಕಟಾಚಾರ್ಯರವರು, ತಮ್ಮ ವಿಶೇಷವಾದ ಪ್ರಾಶಸ್ತ್ಯಕ್ಕೆ ಅನವಶ್ಯಕವೆಂದು ತೋರಿದ್ದ ಶೌರ್ಯವೆಂಬದು ತಮ್ಮಲ್ಲಿ ನ್ಯೂನವಾಗಿದ್ದದಂ ಕಂಡು, ಅದು ಸಂಪಾದಿಸುವ ಬಗ್ಗೆ ಬೇಕಾದ ಆಯುಧಸಾಮಗ್ರಿಗಳನ್ನೆಲ್ಲ ಒಂದೊಂದಾಗಿ ಶೇಖರಿಸಲಾರಂಭಿಸಿದರು. ಹೀಗಿರಲು ತಾವು ಈಚೆಗೆ ಪಡೆದ ಶಸ್ತ್ರಕೌಶಲ್ಯವನ್ನು ಅಜಮಾಯಿಷೀ ಮಾಡುವಬಗ್ಗೆ ತಾವು ತರಿಸಿದ ಒಂದು ರಿವಾಲ್ವರ್(ಬಂದೂಕ್)ನ್ನು ಬಾರ್ ಮಾಡಿರುವಲ್ಲಿ ಗತಮಂಗಳವಾರದ ದಿನ ಪೊಲೀಸ್ ಇನ್ಸ್‌ಪೆಕ್ಟರು ಹಠಾತ್ ಅವರಮನೆಗೆಹೋದಾಗ ಪರಸ್ಪರ ಶಸ್ತ್ರಕೌಶಲ್ಯ ಪ್ರಯುಕ್ತವಾದ ಪ್ರಶಂಸೆಗಳಿಗೆ ಉಪಕ್ರಮವಾಗಲು ವೆಂಕಟಾಚಾರ್ಯರು, ತಮ್ಮ ಮರಣಕ್ಕೆ ಸಹಕಾರಿಯಾದ ರಿವಾಲ್ವರನ್ನು, ಬಾರ್ ಮಾಡಿದ್ದ ಅಂಶವನ್ನು ತಿಳಿಸದೆಯೇ ಇನ್ಸ್‌ಪೆಕ್ಟರ ಕೈಯಲ್ಲಿನೋಡಿರೆಂದು ಕೊಟ್ಟರು. ತರುವಾಯ ಇನ್ಸ್‌ಪೆಕ್ಟರು ವೆಂಕಟಾಚಾರ್ಯರ ಅಪೇಕ್ಷೆಯಂತೆ ತಮ್ಮ ಕೈಯಲ್ಲಿ ತೆಗದುಕೊಂಡು ಅದರ ತಯಾರಿಯನ್ನು ನೋಡಿ ಮೆಚ್ಚಿ ಬಹಳ ಬಿಗಿಯಾಗಿದ್ದ ಅದರ ಕುದುರೆಯನ್ನು ಸಳೆಯಬಿಡಲು ತತ್‌ಕ್ಷಣವೇ ಅದರ ಗೋಲಿಯೊಂದು ಪುರೋಭಾಗದೊಳು ಕುಳಿತಿದ್ದ ಸದರೀ ವೆಂಕಟಾಚಾರ್ಯರ ಶರೀರದ ದಕ್ಷಿಣಭಾಗವು ಪ್ರವೇಶಿಸಿ ಆಚೆ ಪಾರಿಹೋಯಿತು. ಇಷ್ಟರಲ್ಲಿಯೇ ಅವರು ಮೂರ್ಛಿತರಾಗಿ ನೆಲದ ಮೇಲೆ ಬಿದ್ದುಬಿಟ್ಟರು, ನಡುವು ಕೂಡಲೇ ಅವರು ಮೃತಪಡಲಿಲ್ಲವಾಗಿ ಸ್ವಲ್ಪಹೊತ್ತಿನ ಮೇಲೆ ಪ್ರಜ್ಞೆಬಂತು. ಮುಖ್ಯವಾಗಿ ಇನ್ಸ್‌ಪೆಕ್ಟರು ನಿರ್ದೋಷಿಯೆಂಬದನ್ನು ಮಾಜಿಸ್ಟ್ರೇಟರ ಮುಂದೆ ಸ್ವತಃ ನಿರೂಪಿಸಿ ಅವರನ್ನು ತಪ್ಪಿಸುವ ತನಕಲೂ, ಮುಂದೆಮಾಡಬೇಕಾದ ತಮ್ಮ ಆಸ್ತಿಯ ವಿನಿಯೋಗ ಕ್ರಮವನ್ನು ಲಿಖಿತಮೂಲಕವಾಗಿ ಏರ್ಪಡಿಸುವತನಕಲೂ ಜೀವಿಸಿದ್ದರು "ಗಹನಾಕರ್ಮಣೋಗತಿಃ" ಯೆಂಬಂತೆ ಕರ್ಮಫಲವು ನಿಷ್ಕರ್ಷಿಸಲಿಕ್ಕೆ ಅಸಾಧ್ಯವು. ಮೆ॥ ವೆಂಕಟಾಚಾರ್ಯರ ಪಾಂಡಿತ್ಯವೂ, ಅವರಿಂದ ಆರ್ಜಿಸಲ್ಪಟ್ಟ ದ್ರವ್ಯವೂ, ಅವರು ಪಡೆದಿದ್ದ ಮಿತ್ರರೂ, ಅವರು ಸಂಪಾದಿಸಿದ್ದ ಶಸ್ತ್ರಗಳೂ ಅವರಿಗೆ ಸುಖವನ್ನುಂಟುಮಾಡಲಿಕ್ಕೆ ಬದಲು ಕ್ರಮವಾಗಿ ಒಂದುಭಾರ್ಯೆಯಿರುವಾಗ ಮತ್ತೊಂದು ಕನ್ಯೆಯಂ ವಿವಾಹ ಮಾಡಿಕೊಳ್ಳಲಿಕ್ಕೂ, ಸದರೀ ಕನ್ಯೆಯು ತನಗೆ ಪ್ರಾಪ್ತವಾದ ವೈಧವ್ಯಕ್ಕಾಗಿ ಯಾವಜ್ಜೀವ ತನ್ನ ಸವತಿಯೊಡನೆ ದುಃಖಿಸುತಲಿರಲಿಕ್ಕೂ, ತಮ್ಮ ಮರಣಕ್ಕೆ ನಿಮಿತ್ತರಾಗಲಿಕ್ಕೂ, ತಮ್ಮ ವಧೆಗೆ ಸಹಕಾರಿ ಯಾಗಲಿಕ್ಕೂ, ಕಾರಣವಾದದಕ್ಕಾಗಿ ಯೆಷ್ಟು ಚಿಂತಿಸಿದರೂ ಸಾಲದ್ದಾಗಿರುತಿದೆ.

ಇಂತಾಅನರ್ಥಗಳನ್ನು ಚಿಂತಿಸಿಯೇ ಬುದ್ಧರು ಮುಂತಾದ ಮಹಾತ್ಮರು ಸಾತ್ವಿಕವೃತ್ತಿಯನ್ನೇ ಬಹಳವಾಗಿ ಕೊಂಡಾಡುತ, ಅದಕ್ಕೆ ಅಹಿಂಸೆಯೇ ಪರಮ ಧರ್ಮವೆಂಬ ನಿಯಮವನ್ನೇರ್ಪಡಿಸಿ, ಪ್ರಾಣಿಹಿಂಸಕಗಳಾದ ಆಯುಧಾದಿಗಳು ಯಾವಾಗ್ಯೂ ಸಾಧುವಾದವನಿಗೆ ಅಸ್ಪೃಶ್ಯವೆಂದು ನಿರ್ಣಯಿಸಿರುತ್ತಾರೆ. ಶಸ್ತ್ರ ಜೀವಿಯಾದ ಕ್ಷತ್ರಿಯನಿಗೆ ಸಹ ಅಕಾಲದೊಳು ಆಯುಧಗಳು ಅನಾವಶ್ಯಕವಾಗಿರುವಾಗ್ಯೆ ಸ್ವಭಾವತಃ ಬ್ರಾಹ್ಮಣರಾಗಿಯೂ, ಅಹಿಂಸಾದಿ ಪಂಚಶೀಲಗಳೇ ಮುಖ್ಯಗುಣಗಳುಳ್ಳವರಾಗಿಯೂ, ಯಾವಾಗಲು ಸಾತ್ವಿಕ ವೃತ್ತಿಯನ್ನೇ ಅವಲಂಬಿಸಬೇಕಾದವರಾಗಿಯೂ ಇರತಕ್ಕವರಿಗೆಲ್ಲ ಅನನುರೂಪಗಳಾದ ಅಭಿರುಚಿಗಳೂ, ಅವುಗಳಿಗೆ ಸಹಕಾರಿಗಳಾಗಿಯೂ, ಪ್ರಾಣಿಹಿಂಸಕಗಳಾಗಿಯೂ ಯಿರುವ ಆಯುಧಗಳೂ ಯಾತಕ್ಕೋ ನಾವರಿಯೆವು. ಮುಖ್ಯವಾಗಿ ಮನುಷ್ಯನಿಗೆ ದುರ್ವಿಷಯಾಸಕ್ತಿಯು ಉನ್ಮತ್ತಕವಾದರೆ ಕಡೆಗೆ ಅದುಅವನ ವಿನಾಶಕ್ಕೆ ಕಾರಣವಾಗುವದೆಂಬ ನೀತಿಜ್ಞರಮಾತು ಎಂದಿಗೂ ಸುಳ್ಳಾಗಲಾರದು.

PRAYER FOR MERCY,

ಸಾಬಕ್ ಚೀಫ್ ಕಮ್ಮಿಷನರವರ ಹುಜೂರ್ ಖಜಾನೆಯಲ್ಲಿ ಸನ್ ೧೮೮೪ನೇ ಇಸವಿ ಮಾರ್ಚಿ ತಿಂಗಳೊಳು ದಗಲಾಟೆಯಾದ ವಿಷಯವೂ, ಆಗ್ಯೆ ಖಜಾನೇಬಕ್ಷಿಯಾಗಿದ್ದ ಮ॥ರಾ॥ ಸೇತೂರಾಯರವರು ಕಣ್ಣುಮರೆಯಾದದ್ದೂ, ಇವರ ಪತ್ತೇಹಚ್ಚುವದರಲ್ಲಿ ಸಾಧ್ಯವಾದಮಟ್ಟಿಗೆ ತರದೂದ್ ಮಾಡಿ ಆಖೈರಿಗೆ ಜಾಮೀನ್‌ದಾರರೊಬ್ಬರನ್ನು ಸರ್ಕಾರ್ ದಾಖಲ್ ಮಾಡಿಕೊಂಡು ಸಾಲದ್ದಕ್ಕೆ ಅವರ ಜಂಡಿಗಿ ಜಿತರಫ್ ಸಹ ಹರಾಜ್ ಮಾಡಲ್ಪಟ್ಟದ್ದೂ, ಈಸಂದರ್ಭದಲ್ಲಿ ಅಸಿಸ್ಟೆಂಟ್ ಕಮಿಷನರಾಗಿದ್ದ ಸೇತೂರಾಯರ ಜ್ಯೇಷ್ಠಪುತ್ರರಾದ ನರಸಿಂಗರಾಯರೆಂಬವರು ತಮ್ಮ ಕುಟುಂಬಕ್ಕೆ ಪ್ರಾಪ್ತವಾದ ಅಪಕೀರ್ತಿಯಂ ತಡೆಯದೆ ಮೃತಪಟ್ಟದ್ದೂ ಪ್ರಾಯೇಣ ಯೆಲ್ಲರ ಜ್ಞಾಪಕದಲ್ಲಿಯೂ ಇರಬಹುದಷ್ಟೆ. ಆಗ ಸೇತೂರಾಯರವರನ್ನು ಪತ್ತೇಮಾಡಿದವರಿಗೆ ೧೦೦೦ ರೂಪಾಯಿಗಳ ಇನಾಂ ಕೊಡುವಂತೆ ಕೊಟ್ಟದ್ದ ಇಷ್ತಿಹಾರ್ ಈವರೆವಿಗೂ ರದ್ದುಮಾಡಲ್ಪಡದೆ ಇತ್ತು. ಸೇತೂರಾಯರು, ದೇಶಭ್ರಷ್ಟರಾಗಿ ಕಡೆಗೆ ಹೈದರಾಬಾದ್ ಶಹರಿನಲ್ಲಿ ಅಜ್ಞಾತವಾಸದಿಂ ಜೀವಿಸುತಲಿದ್ದರು. ಹೀಗಿರಲಾಗಿ ಅದೇಶಹರಿನಲ್ಲಿ ವಾಸವಾಗಿರುವ ಈದೇಶೀಯನೊಬ್ಬಾತನು, ತನ್ನನ್ನು ಹಿಡಿದುಕೊಡಲಾರನೆಂಬ ಭರವಸೆಯ ಮೇಲೆ ಅತನಬಳಿಗೆ ಆಗಿಂದಾಗ್ಯೆ ಹೋಗಿ ಬರುತಲಿದ್ದರು. ರದ್ದಾಗದಿದ್ದ ಸಾಬಕ ಇಸ್ತಿಹಾರಿನ ಬಲದಮೇಲೆ ದ್ರವ್ಯಾರ್ಜನೋದ್ದೇಶದಿಂದ ಆತನು ಸೇತೂರಾಯರನ್ನು, ಹಿಡದು ಕೊಟ್ಟನು. ಬಳಿಕ ಅವರು ಕ್ರಮಪ್ರಕಾರ ರಕ್ಷ ಬಂದೋಬಸ್ತಿಯೊಡನೆ ಗತ ಬುಧವಾರದದಿನ ರಾತ್ರಿ ಇಲ್ಲಿಗೆ ಮದರಾಸ್ ರೈಲ್ ಮಾರ್ಗವಾಗಿ ತರಲ್ಪಟ್ಟರು. ಇವರನ್ನು ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರು ಈಗ ದರ್ಯಾಪ್ತೀ ಮಾಡುತಲಿದ್ದಾರೆ.

ಈಗ ಸೇತೂರಾಯರವರು, ಅಪರಾಧಿಯೇ ಆದರೆ ಇವರು ಮಾಡಿದ ಕೃತ್ಯದ ಸ್ವರೂಪ ವೆಂತಾದ್ದು, ಅದಕ್ಕೆ ಅನುಗುಣವಾದ ದಂಡನೆಯನ್ನನುಭವಿಸಲಿಕ್ಕೆ ಇವರೀಗ ಎಷ್ಟುಮಟ್ಟಿಗೆ ಅರ್ಹರಾಗಿದ್ದಾರೆ, ಎಂಬದುಕುರಿತು ಇವರಡಿ ವಿಚಾರಮಾಡುವೆವು

ಸೇತೂರಾಯರು ಯಾವ ಖಜಾನೆಯ ಬಕ್ಷಿಯಾಗಿದ್ದರೋ ಆ ಖಜಾನೆಯಲ್ಲಿ ನಡೆದ ಗಲಾಟೆಗೆ ಇವರು ಜವಾಬ್ದಾರರಲ್ಲವೆಂದು ಒಬ್ಬರೂ ಹೇಳಲಾರರು. ಪ್ರಸಕ್ತ ಗಲಾಟೆ ಯೆಂಬದು ಖುರ್ದುಬರ್ದ್ ರೂಪವಾದದ್ದೋ, ದಸ್ತುರೂಪವಾದದ್ದೋ ಯೆಂದು ವಿಚಾರಿಸಿದರೆ, ಸುಮಾರ್ ೬೭,೦೦೦ ರೂಪಾಯಿಗಳ ತನಕ ಖುರ್ದು ಬುರ್ದು ಮಾಡುವದಕ್ಕೆ ಬಹುಕಾಲ ಬೇಕಾಗುವದಾಗಿ, ಪ್ರತಿತಿಂಗಳಲ್ಲಿಯೂ ನಡಿಯಲ್ಪಡುತಲಿದ್ದ ರುಜುಪಟ್ಟಿಯೂ, ರೋಜ್‌ವಾರ್ ಲೆಕ್ಕಗಳೂ, ಮೇಲ್‌ವಿಚಾರಣೆಯೂ, ಲೆಕ್ಕ ಬರೆವ ಮುತ್ಸದ್ದಿಗಳು ಸಹ ಸುಳ್ಳಾಗವೇಕಾಗುತಿವೆ. ಆದದರಿಂದ ಇದು ಖುರ್ದುಬುರ್ದು ಯೆನ್ನಿಸಿಕೊಳ್ಳಲಾರದು. ಏಕಾಏಕಿ ೬೭,೦೦೦ ರೂಪಾಯಿಗಳನ್ನು ಒಬ್ಬನು ದಸ್ತುಮಾಡಿದಂತೆ ಹೇಳುವ ಪಕ್ಷಕ್ಕೆ, ಇಷ್ಟರ ರೂಪಾಯಿಗಳನ್ನು ಹೊರುವದಕ್ಕೆ ಎಷ್ಟುಜನ ಬೇಕಾಗಿರುವದೋ ಅದು ಕಾಪಾಡಿ ಇಡಲಿಕ್ಕೆ ಯೆಂತಾ ಯೋಗ್ಯವಾದ ಸ್ಥಳ ಬೇಕಾಗಿರುವದೋ ಅದು ಜನಗಳೇ ಆಲೋಚಿಸಬಹುದು. ಕರೆನ್ಸೀ ನೋಟುಗಳಾಗಿರುವ ಪಕ್ಷಕ್ಕೆ ಅವು ಫರ್ಸ್ತ ಖಜಾಂಚಿಯ ಸ್ವಾಧೀನದಲ್ಲಿ ಇಡಕೂಡದೆಂಬ ನಿಯಮವು ಏರ್ಪಟ್ಟಿರುವಾಗ್ಯೆ ಬಕ್ಷಿಯವರೊಬ್ಬರೇ ದಸ್ತುಮಾಡಿದರೆಂದು ಹೇಳುವದಕ್ಕಾಗುವದಿಲ್ಲವು. ಇದು ಹ್ಯಾಗಾದರೂ ಇರಲಿ, ಇವರು ತಲೆ ತಪ್ಪಿಸಿಕೊಂಡದ್ದೇ ತಕ್ಸೀರ್ ಸಾಬೀತಿಗೆ ಸಾಕಾಗಿರುತಿದೆಂದು ಹೇಳುವ ಪಕ್ಷಕ್ಕೆ, ಸೇತೂರಾಯರು ಇಲ್ಲಿಂದ ಹೊರಟು ಹೋಗುವಾಗ್ಯೆ ತಮ್ಮ ಮೇಲ್ಪಟ್ಟ ಅಫಸರಿಗೆ ಒಂದು ಕಾಗದ ಬರೆದಿದ್ದಂತೆ ಕೇಳುತ್ತೇವೆ. ನಿಜವಾಗಿ ತಕ್‌ಸೀರ್‌ಮಾಡಿ ಪರಾರೀಯಾದವನು ಮುಂಚಿತವಾಗಿ ಕಾಗದ ಬರೆದು ತಾವು ಹೋಗತಕ್ಕ ಸ್ಥಳ ಕಾಲಗಳನ್ನು ತಿಳಿಸಿ ಹೋದ ನಿದರ್ಶನವೆಲ್ಲಿಯೂ ಕಾಣಿಸಲಿಲ್ಲವು. ಕದಾಚಿತ್ ಕಾಗದ ಬರೆದಾಗ್ಯೂ ಈಗಿನ ಪ್ರವಾದದಂತೆ ಹಣದ ಖರ್ಚಿಯಬಗ್ಗೆ ಹೋಗಿ ಬರುವಂತೆ ತಿಳಿಸಿದ್ದನ್ನು ನಾವು ಯಾವಾಗಲೂ ಕೇಳಿದ್ದಿಲ್ಲವು. ಇವನ್ನೆಲ್ಲ ಆಲೋಚಿಸಲಾಗಿ ಯಾವದೋ ಪ್ರಮಾದದಿಂದ ಯೇನೋ ಅಚಾತುರ್ಯನಡೆದಂತೆಯೂ, ಸ್ವಂತ ಜವಾಬ್ದಾರಿಯನ್ನು ಕಾಪಾಡಿಕೊಳ್ಳುವ ಬಗ್ಗೆ ಬಕ್ಷಿಯವರು ಪರಸ್ಥಳಕ್ಕೆ ಹೋದಂತೆಯೂ ಸ್ಪಷ್ಟವಾಗುತಿದೆ. ಸೇತೂರಾಯರವರು, ತಮ್ಮ ಜಾಮೀನ್‌ದಾರರಿಂದಲೂ ಜಂಡಿಗಿಯಿಂದಲೂ, ಕಮ್ಮಿಯಾದ ಮೊಬಲಗು ಭರ್ತಿಯಾಗಬಹುದೆಂದು ತಿಳಿದು, ಪುತ್ರಶೋಕಕ್ಕಾಗಿಯೂ, ಅಪಮಾನಕ್ಕಾಗಿಯೂ ರಿಕ್ತತೆಗಾಗಿಯೂ ಚಿಂತಿಸುತ ಇಲ್ಲಿ ಮರಳಿ ತಲೆತೋರಿಸದೆ ದೂರದೇಶದಲ್ಲಿಅಜ್ಞಾತವಾಸಮಾಡಿಕೊಂಡಿದ್ದರು. ಇವರಸಾತ್ವಿಕತನವೇ ಇವರುಮಿತ್ರದ್ರೋಹಿಯ ವಶವಾಗಲಿಕ್ಕೆ ಕಾರಣವಾಯಿತು. ಇವರಿಗೆ ಈಗ ೭೭ ವರುಷಗಳ ವಯಸ್ಸಾದಂತೆ ಕೇಳುತ್ತೇವೆ. ತತ್ಕಾಲದೊಳು ಇವರಿಗೆ ಪರಲೋಕ ಚಿಂತೆಯೊಂದು ವಿನಾ ಮತ್ಯಾವದೂ ಇಲ್ಲವು. ಈಗಿನ ನಾಗರಿಕರಂತೆ ಇವರು ತಮ್ಮ ತಕ್ಸೀರನ್ನು ಮರೆಮಾಚಲಿಕ್ಕೂ ಅದಕ್ಕೆ ಅನ್ಯರನ್ನು ಗುರಿಮಾಡಲಿಕ್ಕೂ ಬೇಕಾದ ಉಪಾಯಗಳನ್ನರಿತವರಲ್ಲವು. ಇವರಿಗೆ ನ್ಯಾಯವಾಗಿ ಪೆನ್‌ಷನ್ ಲಭಿಸಿದ್ದರೆ ಮಹೇಯಾನಾ ೩೦೦ ರೂಪಾಯಿಗಳಿಗೆ ಕಡಮೆಯಾಗಿರಲಾರದಾಗಿ, ತನ್ಮೂಲಕ ಬಹುಮಂದಿ ಬಡವರು ಜೀವಿಸಬಹುದಾಗಿತ್ತು. ಇವರಿಗೆ ೬೦೦ ರೂಪಾಯಿಗಳ ತಲಬ್ ಬರುತಲಿದ್ದಾಗಲೇ ಇವರು ಆಸ್ತಿಇಡದೆ ಯೆಲ್ಲವನ್ನೂ ಧರ್ಮವ್ಯಯ ಮಾಡುತಲಿದ್ದರೆಂಬ ಅಂಶ, ಅದು ನೋಡುತಲಿದ್ದ ಪ್ರಜೆಗಳಿಗೂ, ಕಡೆಗೆ ಅವರ ಆಸ್ತಿಯನ್ನೆಲ್ಲ ಜಪ್ತಿ ಮಾಡಿದ ಸರ್ಕಾರದವರಿಗೂ ತಿಳಿದೇ ಇದೆ. ಮುಖ್ಯವಾಗಿ ಸರ್ವಾಂಶದಿಂದಲೂ, ಸೇತೂರಾಯರು ಗತ ಆರುವರುಷಗಳ ಕಾಲವಾಗಿ ಅನ್ಯದೇಶದಲ್ಲಿ ಅನುಭವಿಸುತಲಿದ್ದ ನಾನಾ ವಿಧ ಸಂಕಟಗಳು ಅವರಅಪರಾಧಕ್ಕೆ ಸಾಕಾದ ಪ್ರತಿಕ್ರಿಯೆಯಾಗಿರುವದರಿಂದ, ಮಹಾರಾಜಾಸರ್ಕಾರದವರು, ಹಿಂದೆಅನ್ಯರವಿಷಯದಲ್ಲಿತೋರಿಸಿದಕೃಪೆಯನ್ನು ಇವರ ವಿಷಯದೊಳು ಸಹ ಈಗ ತೋರಿಸಿದರೆ ಸಮಸ್ತ ಜನಗಳಿಗೂ ನಿರಂತರವಾದ ಸಂತೋಷವನ್ನುಂಟು ಮಾಡಿದಂತೆ ಯಾಗುವದು. ಪ್ರಕೃತ ದಿವಾನರಾದ ಮೆ॥ ಶೇಷಾದ್ರಿಅಯ್ಯರವರು ಪರೋಪಕಾರಬುದ್ಧಿಯುಳ್ಳವರಾಗಿಯೂ, ಪ್ರತಿಷ್ಠಾಪರರಾಗಿಯೂ ಇಂತಾ ಸಂದರ್ಭಗಳಲ್ಲಿ ನಡಿಸಬೇಕಾದ ಕ್ರಮಗಳನ್ನರಿತವರಾಗಿಯೂ, ಯಿರುವದರಿಂದ ಮಹಾರಾಜರವರ ಸನ್ನಿಧಿಯಲ್ಲಿ ಸಾರ್ವಜನೀನವಾದ ಪ್ರಾರ್ಥನೆಯನ್ನರುಹಿ ನಿರ್ಗತಿಕರಾದ ವೃದ್ಧರನ್ನು ಖುಲಾಸೆ ಮಾಡಿಸಬೇಕೆಂದು ಕೋರುವೆವು. ಸೇತೂರಾಯರಪ್ರಕೃತಸ್ಥಿತಿಯಂ ಕುರಿತು ಯೆಲ್ಲರೂ ಚಿಂತಿಸುತ ಅವರ ಪರ್ಯವಸಾನವನ್ನು ಅತ್ಯಾದರದೊಡನೆ ನಿರೀಕ್ಷಿಸುತಲಿದ್ದಾರೆ. ಈ ಸಂದರ್ಭದಲ್ಲಿ ಮತ್ತೊಂದಂಶವನ್ನು ತಿಳಿಸಲು ಮರತವೇನಂದರೆ, ರಾಯರ ದುರ್ದಶೆಯಂ ತಪ್ಪಿಸುವ ವಿಷಯದಲ್ಲಿ ಯೆಲ್ಲರೂಏಕ ಕಂಠ್ಯದೊಡನೆ ಪ್ರವರ್ತಿಸಿ ತಮ್ಮ ಕೋರಿಕೆಯನ್ನು ಪತ್ರಿಕಾ ಮೂಲಕ ಮಹಾರಾಜರ ಸನ್ನಿಧಿಯಲ್ಲಿ ವಿಜ್ಞಾಪಿಸಿಕೊಂಡರೆ ಅವರು ಬಹುಮಂದಿ ಪ್ರಾರ್ಥನೆಗೆ ಅನ್ಯಥಾ ಜರಿಗಿಸಲಾರರೆಂಬ ಭರವಸೆ ನಮಗೆ ಅಧಿಕವಾಗಿರುವದರಿಂದ ಈ ಸಂದರ್ಭದಲ್ಲಿ ಜನಗಳು ತಮ್ಮ ಕರ್ತವ್ಯವನ್ನುಚಿತವಾಗಿ ನೆರವೇರಿಸುವರೆಂದು ನಂಬುತ್ತೇವೆ.

OVER WORKED BUT UNDER PAID.

ಈ ದೇಶದ ಸರ್ಕಾರ್ ನೌಕರಿಗಳಂ ಕುರಿತು ಆಲೋಚಿಸಲಾಗಿ ಇಲ್ಲಿ ಬಹುಕಾಲದಿಂದ ವಿಚಿತ್ರವಾದ ಪದ್ಧತಿಯೊಂದು ನಡೆದುಬರುವಂತೆ ವ್ಯಕ್ತವಾಗುತಿದೆ. ಜನಗಳೀಕ್ರಮವನ್ನು ಚೆನ್ನಾಗಿ ಅರಿತಿದ್ದಾಗ್ಯೂ ಅದರ ಕಾರಣ ಮಾತ್ರ ಅವರ ಬುದ್ಧಿಸ್ಥವಾಗುವದಿಲ್ಲವು. ಶ್ರೀಮನ್ಮಹಾರಾಜರವರಿಗೆ, ಖಾಸಗೀ ಮತ್ತು ರಾಜ್ಯಭಾರಕ್ಕೆ ಸಂಬಂಧಪಟ್ಟ ಯೆರಡು ಇಲಾಖೆಗಳಿರುವ ಅಂಶ ಪ್ರಸಿದ್ಧವೆಯಷ್ಟೆ. ಸದರೀ ಯೆರಡು ಇಲಾಖೆಗಳಲ್ಲಿಯೂ ಮುತ್ಸದ್ದೀಪೇಷಾ, ಸಿಪಾಯೀಪೇಷಾ ಯೆಂಬದಾಗಿ ಯೆರಡು ಪ್ರಭೇದಗಳೇರ್ಪಟ್ಟಿರುತಿವೆ.

ಈ ಉಭಯರ ವಿಷಯದಲ್ಲಿಯೂ ತಲಬ್, ಬತ್ತಾ, ಪೆನ್ಶನ್ ಮುಂತಾದವೆಲ್ಲ ಕ್ರಮವಾಗಿ ನಡೆಸಲ್ಪಡಲಿಲ್ಲವು. ಪರಂತು ಹಾಗೆ ನಡೆಸುವ ಕ್ರಮ ಮಾತ್ರ ನಾನಾವಿಧವಾದ್ದಾಗಿರುತ್ತದೆ. ಜಿರಾಯ್ತಿ, ಷಾಗಿರ್ದಪೇಷಾ, ಮೋತೀಖಾನಾ, ಜವಾಹಿರ್ ಖಾನಾ ಯೆಂಬದಾಗಿ ಅನೇಕ ಇಲಾಖೆಗಳು ಮಹಾರಾಜರವರ ಸ್ವಂತಕ್ಕೆ ಸೇರಿದವಾಗಿರುತ್ತವೆ. ಈ ಇಲಾಖೆಗಳ ಮುತ್ಸದ್ದಿಗಳು, ಮೊಗಲೈ ಕಸ್ರ್ಯ, ಕರ್ನಾಟಕಸಾಗು, ಜೋಲಂಗಿ ಮುಂತಾದ ಖು ದರಿಸತಕ್ಕವರಾಗಿಯೂ, ಮಾಹೇಯಾನಾ ೧೫ ರೂಪಾಯಿಗಳಿಗಿಂತ ಮೇಲ್ಪಡದ ತಲಬ್ ಪಡೆಯತಕ್ಕವರಾಗಿಯೂ, ಸರ್ಕಾರ್ ಕೆಲಸಕ್ಕಾಗಿ ಪರಸ್ಥಳಗಳಿಗೆ ಹೋದಾಗ್ಯೂ ಭತ್ಯವಿಲ್ಲದೆ, ಸರ್ವಿಸ್ ವಯಃಪ್ರಯುಕ್ತಗಳಾದ ನಿಯಮಗಳಂ ಮೀರಿ ನೌಕರಿ ಮಾಡುತ್ತ, ಕಾಲಾಂತರದೊಳ್ಯಾವಾಗಲಾದರೂ ಕೆಲಸದಿಂದ ನಿವೃತ್ತರಾದರೆ ಪ್ರಾಯಶಃ ತಲಬ್ ಪೆನ್ಶನ್ ಪಡೆಯತಕ್ಕವರಾಗಿಯೂ ಇರುತ್ತಾರೆ. ಇದಲ್ಲದೆ ಇವರ ವಾರಸ್‌ದಾರರ ಹಕ್ಕುದಾರಿಗಳು ಸಂದರ್ಭೋಚಿತವಾಗಿ ಪುರಸ್ಕರಿಸಲ್ಪಡುವವು.

ಎಸ್ಟಾಬ್ಲಿಷ್‌ಮೆಂಟ್ ಜನಗಳಿಗೆ ತಕ್ಕ ಉಡುಪುಗಳು ಸರ್ಕಾರದಿಂದ ಕೊಡಲ್ಪಟ್ಟಾಗ್ಯೂ ಇವರ ದುಸ್ತುಗಳೊಂದು ನಿರ್ದಿಷ್ಟವಾಗಿರುವದಿಲ್ಲವು. ಇವರು ಕವಾಯತ್ ಮುಂತಾದ ಶಿಕ್ಷಾಕ್ರಮವನ್ನರಿತವರಲ್ಲವು ಮತ್ತು ಈ ಜನಗಳಿಗೆ ಸ್ವಲ್ಪ ತಲಬ್ ೫ ರೂಪಾಯಿಗಳಿಗೆ ಒಳಪಟ್ಟಿದ್ದುದರಿಂದ ಇವರಿಗೆ ಪೆನ್ಶನ್ ಪ್ರತ್ಯೇಕ ಅವಕಾಶವಿಲ್ಲವು. ಒಂದು ವೇಳೆ ಇಂತವರು ತಮ್ಮ ಕೆಲಸದಿಂದ ನಿವೃತ್ತರಾದರೆ ಆ ಕೆಲಸವೆ ತೆಗೆದುಹಾಕಲ್ಪಡುವದರಿಂದ ಅದು ಅವರ ವಾರಸುದಾರರಿಗೆ ಲಭಿಸುವದೆಂದು ಖಚಿತಸಲಿಕ್ಕೆ ಸಹ ಕಾರಣವಿರುವದಿಲ್ಲವು. ಹೀಗಿದ್ದಾಗ್ಯೂ ಇವರ ನೌಕರಿ ಮಾತ್ರ ವಂಶಿಗುಣವಾದ್ದಾಗಿರುತ್ತದೆ.

ರಾಜ್ಯಭಾರಕ್ಕೆ ಸೇರಿದ ಇಲಾಖೆಗಳಲ್ಲಿ ಸಹ ಮೇಲೆ ಕಂಡಂತೆ ಯೆರಡು ಬಗೆಯವರಿರುತ್ತಾರೆ. ಉದ್ಯೋಗಸ್ಥರೆಲ್ಲರೂ ಮೊದಲನೆಯದಕ್ಕೆ ಸೇರಿದವರಾದದರಿಂದ, ಇವರಿಗೆ ಮಹಾರಾಣೀ ಸರ್ಕಾರದಲ್ಲಿ ನೆಲೆಗೊಂಡಿರುವ ರೂಲ್ಸುಗಳನ್ನನುಸರಿಸಿ ಕ್ರಮಪ್ರಕಾರ ತಲಬ್ ಬತ್ತಾ ಪೆನ್ಶನ್ ವಗೈರೆ ಕೊಡಲ್ಪಡುತ್ತವೆ. ಪರಂತು ನೌಕರರನ್ನಿಡುವದೂ, ತೆಗೆದುಹಾಕುವದು ಸಹ ಅಲ್ಲಿನ ನಿಯಮವನ್ನನುಸರಿಸಿದ್ದಲ್ಲವು. ನೌಕರರ ಮೊಕದ್ದಮೆಯಾಗಲಿ; ನಿವೃತ್ತಿಯಾಗಲಿ ಆಯಾ ಇಲಾಖಾಧಿಕಾರಿಗಳ ಇಷ್ಟಾನುಸಾರವಿದ್ದದ್ದರಿಂದ, ತುಂಬ ಸಿಪಾಯಿ ಹೋದದ್ದು ಮಾತ್ರವಲ್ಲದೆ ಹದಿನೈದು ವರುಷಗಳಿಗಿಂತ ಕಡಮೆ ಸರ್ವಿಸ್ ಪುಳ್ಳವನು ಗ್ರಾಚ್ಯುಯಿಟಿ ಪಡೆದು ನಿವೃತ್ತನಾಗಲಿಕ್ಕೆ, ಮೂವತ್ತೈದು ಸಂವತ್ಸರಗಳಿಗಿಂತ ಜಾಸ್ತೀ ಸರ್ವಿಸ್ ಪುಳ್ಳವನು ನೌಕರಿಯೊಳಿದ್ದು ಬಡ್ತಿಯನ್ನು ಹೊಂದಲಿಕ್ಕೂ, ಅವಕಾಶ ಪುಂಟಾಗಿ ಎಂದಿಗೂ ಜಾರಿಯಲ್ಲಿ ಬಂದಿರುತ್ತದೆ. ರಾಜಧಾನಿಯಾದ ಮೈಸೂರಲ್ಲಿ ಯಾರು ಯೆಷ್ಟು ದಿನಗಳಿದ್ದಾಗ್ಯೂ ಅವರಿಗೆ ಭತ್ಯವು ನಿಯತವಾಗಿ ಏರ್ಪಟ್ಟದರಿಂದ ಇದೊಂದು ವಿವಾದಾಲನುಕೂಲ್ಯವು ಈಚೆಗೆ ಉಂಟುಮಾಡಲ್ಪಟ್ಟಿತು.

ಸಿಪಾಯಿ ಪೇಷಾ ಜನರು ಕುರಿತು ವಿಚಾರಮಾಡಿದರೆ, ಇವರೊಳು ಸವಾರರು ಮತ್ತು ಬಾರ್‌ನವರೆಂದು ಯೆರಡು ಬಗೆಯವರಿರುವದಾಗಿ ಸ್ಪಷ್ಟವಾಗುತ್ತದೆ. ಇವರಿಗೆ ಸಂಬಂಧಪಟ್ಟಂತೆ ಆನೆ ಒಂಟೆ ಮುಂತಾದವುಗಳ ಇಲಾಖೆಗಳ್ಯಾವವೂ ಇಲ್ಲವಾದರೂ, ಅಮೃತಮಹಲ್ ಇಲಾಖೆಯೊಂದು ಮಾತ್ರ ನೆಲೆಗೊಂಡಿರುತ್ತದೆ. ಇದು ಮಿಲಿಟರಿ ಖಾತೆಯವರ ವಿಚಾರಣಾಧಿಕಾರದೊಳಿದ್ದಾಗ್ಯೂ, ಮಿಲಿಟರಿ ಕೆಲಸಗಳಿಗೆ ಉದ್ದಿಷ್ಟವಲ್ಲದಿರುವದರಿಂದಲೂ, ಈಗ ಅದರ ನೌಕರರಿಲ್ಲದರೂ, ಅನ್ಯರಾಗಿರುವದರಿಂದಲೂ, ಅದರ ಪ್ರಯೋಜನವು ಮಿಲಿಟರಿಯವರಿಗೆ ಕಡಮೆಯಾಯಿತು. ಆದದರಿಂದ ಸವಾರ್‌ಬಾರ್‌ಫೌಜ್‌ಗಳೆರಡು ಮಾತ್ರವೇ ಉಳಿದವು. ಸವಾರರು ಇಂಗ್ಲಿಷ್‌ಕ್ರಮವನ್ನನುಸರಿಸಿ ಕವಾಯತ್ ಮುಂತಾದವುಗಳೊಳು ಸಮರ್ಥರೆನಿಸಿಕೊಂಡಿವಾರೆ. ಇವರಿಗೆ ಮಾಹೇಯಾನಾ ಸಲ್ಲತಕ್ಕ ತಲಬಿಗಿಂತಲೂ ಮಾಡಬೇಕಾದ ನೌಕರಿಯು ಅತ್ಯಧಿಕವಾಗಿರುತ್ತದೆ. ಇವರ ತಲಬನಲ್ಲಿಯೇ ಕುದುರೆಯ ಖರೀದಿಗಾಗಿ ಕಂತು ಪ್ರಕಾರ ಕಟಾವ್‌ಮಾಡಿಕೊಂಡು ಕೊಡತಕ್ಕ ಬಾಕಿ ಮೊಬಲಗಿನಿಂದಲೇ ಜೀವನ ಜಾಡತೆ ಕುದುರೆಯ ದಾಣಾಚಾರ ಸಹ ಒದಗಿಸಿಕೊಳ್ಳಬೇಕಾಗಿರುತ್ತದೆ. ಇವರು ಪ್ರತಿನಿತ್ಯವೂ ಬಂದು ಪ್ರೂರು ಪ್ರಕಾರ ಈ ದೇಶದೊಳೆಲ್ಲ ಸಂಚರಿಸಿದಾಗ್ಯೂ ಭತ್ಯವು ದೊರಿಯುವದಿಲ್ಲವು. ಇವರಿಗೆ ಮಹಾರಾಜರ ಖಾಸ ನೌಕರಿಮಾತ್ರವಲ್ಲದೆ ದೇವಸ್ಥಾನಗಳ ಚಾಕರಿಯೂ ಮಠಾಧಿಪತಿಗಳ ಹಾಜರ್‌ಬಾಬುಯೂ, ಯೂರೋಪಿಯನ್ ಆಫಿಸರ್‌ಗಳ ಇಸ್ತಗಬಾಲೂ, ಪ್ರೋಶೆಸ್ ಗಸ್ತಿಯೂ ಇದರ ಮೇರೆ ಅಂಬೇಕೆಲಸವು ಸಹ ಇವರಂ ತಪ್ಪಿದ್ದಲ್ಲವು. ಕ್ರಮೇಣ ಫೌಜಿನ ಸಂಖ್ಯೆಯು ಕಡಮೆಯಾದದರಿಂದಲೂ ತತ್ಪೂರ್ವದ ಅಫಿಸರ್‌ಗಳ ಇಸಂವಜಾ ಆದದರಿಂದಲೂ ಬಡ್ತಿಗೆ ಪ್ರತ್ಯಾಶೆಯಿಲ್ಲವಾಯಿತು. ಇವರಿಗೇರ್ಪಟ್ಟಿರುವ ಪೆನ್ಶನ್ ಕ್ರಮ ಸಹ ಬಹಳ ವಿಲಕ್ಷಣವಾದದ್ದಾಗಿರುತ್ತದೆ. ಮುಸಲಾಸಿಲ್ಲೇದಾರನೊಬ್ಬನು ಮಾಹೇಯಾನಾ ೬೫ ರೂಪಾಯಿಗಳ ತಲಬ ಪಡೆಯುತಲಿದ್ದಾಗ್ಯೂ ಕಡೆಗೆ ಪೆನ್ಶನನಾಗುವಾಗ್ಯೆ ಅವನಿಗೆ ೫ ರೂಪಾಯಿಗಳಿಗಿಂತ ಜಾಸ್ತೀಯಾಗಿ ಒಂದು ಕಾಸಾದರೂ ದೊರೆಯುವದಿಲ್ಲವು. ದಫೇದಾರ್ ಜಮೇದಾರ್ ಜಸರ್‌ದಾರ್ ಎಂದು ಮುಂತಾದ ಅಧ್ಯಾಯಗಳನ್ನು ಪಡೆದಾಗ್ಯೂ ಅರವತ್ತು ರೂಪಾಯಿಗಳಿಗೊಳಪಟ್ಟ ತಲಬುಳ್ಳ, ೧೦ ರೂಪಾಯಿಗಳ ಪೆನ್ಶನೂ ವಿನಾ ಇವರು ಬೇರೊಂದನ್ನೂ ಆಶಿಸಬೇಕಾದ್ದಿಲ್ಲವು. ಇಲ್ಲಿನ ರಿಸಾಲ್‌ದಾರ್ ಹೋದೆಯು ಬ್ರಿಟಿಷ ಸೈನ್ಯದಲ್ಲಿರುವ ಕೆಪ್ಟನ್ ಕೆಲಸಕ್ಕೆ ಸಮನಾದ್ದೆಂದು ಹೇಳಬಹುದು, ಪರಂತು ರಿಸಾಲ್‌ದಾರರು ಪಡೆಯತಕ್ಕ ತಲಬು ೧೫೦ ರೂ||ಗಳಿಗೆ ಮೇಲ್ಪಟ್ಟದ್ದಾಗಿಯೂ, ಪೆನ್ಶನ್ ೫೦ ರೂಪಾಯಿಗಳಿಗೆ ಮೀರದ್ದಾಗಿಯೂ ಇರುತ್ತವೆ. ರಿಜಿಮೆಂಟದಾರಿಯು ಬ್ರಿಟಿಷ ಸೈನ್ಯದೊಳಿರುವ ಕರ್ನಲ್ ಕೆಲಸಕ್ಕೆ ಸಮನಾದದ್ದಾಗಿರುತ್ತದೆ. ಇವರಿಗೆ ಮಾಹೇಯಾನಾ ಈಗ ೩೦೦ ರೂಪಾಯಿಗಳ ತಲಬ್ ಸಲ್ಲುತಲಿದೆ. ಇವರು ಕೆಲಸವ ಬಿಡುವಾಗ್ಯೆ ೬೦ ರೂಪಾಯಿಗಳಿಗಿಂತ ಮೇಲ್ಪಟ್ಟ ಪೆನ್ಶನ್ ದೊರೆಯುವದೆಂತೆ ಇರಲಿಲ್ಲವು. ಈ ಇಲಾಖೆಯೊಳು ವಿಚಿತ್ರವಾದ ಜೇಲ್ ಯೆಂಬ ಪದ್ಧತಿ ನೆಲೆಗೊಂಡಿದೆ. ಯೇನಂದರೆ, ರಿಸಾಲ ಮತ್ತು ರಿಜಿಮೆಂಟಗಳಲ್ಲಿರತಕ್ಕ ನರು, ಪಾತೆ, ಖಿದ್ನ, ಕುಳವಾರ್‌ಪಟ್ಟ ಮಾಹೇವಾರಿ ಜಮಾ ಖರ್ಚು ಮುಂತಾದವು ಬರೆಯಬೇಕಾಗಿರುತ್ತದೆ ಯಲ್ಲದೆ, ಸಿವಿಲ್‌ಕೋರ್ಟಿನಿಂದ ಹಾಲದ ಬಗ್ಗೆ ಬರತಕ್ಕ ಅಟ್ಯಾಚ್‌ಮೆಂಟಗಳಿಗೂ ಸಮ್ಮನ್ ವಾರಂಟುಗಳಿಗೂ, ಆವಶ್ಯಕಗಳಾದ ಕಾಗದಪತ್ರಗಳನ್ನು ನಡೆಸಬೇಕಾಗಿರುತ್ತದೆ. ಮಹಾರಾಜರವರ ಖಾಸ ಬಾರ್ ಫೌಜಿನವರು ಹ್ಯಾಗೆ ರಾಜಬಂಧುಗಳ ಮನೆಬಾಗಿಲುಗಳೊಳು ಪಹರೆ ಇರಬೇಕಾಗಿದೆಯೋ ಬರಸ್ಕೂತ್ ರಾಜ್ಯಭಾರಕ್ಕೆ ಸೇರಿದ ಬಾರ್‌ನವರು ಖಜಾನೆಗಳಲ್ಲಿಯೂ ಅಧಿಕಾರಿಗಳ ಮನೆಗಳಲ್ಲಿಯೂ ಬಂದೋಬಸ್ತಿಗಾಗಿ ಬಗ್ಗೆ ಕಾಯಬೇಕಾಗಿರುತ್ತದೆ. ಮೇಲೆ ಕಂಡ ಹರವೋ ಇಲಾಖೆಗಳಲ್ಲಿರತಕ್ಕ ಬ್ಯಾಂಡಿನವರು ತಲಬ್ ವಿಷಯದೊಳು ನಿರ್ಭಾಗ್ಯರಾಗಿದ್ದಾಗ್ಯೂ ಸಾಮರ್ಥ್ಯವಿಷಯದೊಳು ಬ್ರಿಟಿಷ ರಿಜಿಮೆಂಟನ್ನಲ್ಲಿರುವವರ ಕಿರಿಯ ಬಾಗಿಸತಕ್ಕವರಾಗಿರುತ್ತಾರೆ.

ಮೇಲೆ ಕಂಡ ಕ್ರಮಗಳನ್ನೆಲ್ಲ ನೋಡಲಾಗಿ ಇವು ಯಾವಕಾಲದಲ್ಲಿ ಯಾವಕಾರಣದಿಂ ಹುಟ್ಟಿದವೆಂಬ ಅಂಶವ್ಯಾಗೆ ಅಗೋಚರವೋ ಹಾಗೆಯೇ ಮುಂದೆ ಯಾವ ಕಾಲದಲ್ಲಿ ಹ್ಯಾಗೆ ಪರಿಣಾಮವನ್ನೈದುವದೆಂಬದು ಸಹ ಈಗ ತಿಳಿಯಕೂಡದ್ದಾಗಿದೆ. ಸಕಲವೂ ಕಾಲಾಧೀನವಾಗಿರುವದರಿಂದ ಇತರ ವಿಷಯಗಳಂತೆ ಇವೂ ಬದಲಾಯಿಸುವವೆಂಬದರೊಳೇನೂ ಸಂದೇಹವಿಲ್ಲವು.

THE MAHA SIVARATHREE

ಬರುವ ಗುರುವಾರದದಿನ ಮಹಾ ಶಿವರಾತ್ರಿಯಾದದರಿಂದ ತತ್ಪ್ರಯುಕ್ತ ವಿಶಿಷ್ಟ ಸರ್ಕಾರ್ ಇಲಾಖೆಗಳಿಗೂ ಮಾಮೂಲ್‌ಪ್ರಕಾರ ರಜಾ ಕೊಡಲ್ಪಡುವದು. ಸದರೀ ದಿನದೊಳು ಶೈವರಾದ ಹಿಂದೂಗಳೆಲ್ಲ ತಮ್ಮತಮ್ಮ ಜಾತಿ ಮತ ಸಂಪ್ರದಾಯಾನುಸಾರ, ಉಪಪತ್ತಿಗೆ ತಕ್ಕಂತೆ ದೇವತಾಪೂಜೆ ಉಪವಾಸಾದಿಗಳಂ ಮಾಡುವದು ವಾಡಿಕೆಯಾಗಿರುತ್ತದೆ. ಪೂರ್ವಕಾಲದೊಳು ಇದುಜನಗಳೆಷ್ಟು ವಿಶೇಷವಾಗಿ ಕೊಂಡಾಡುತಲಿದ್ದರೋ ಅಷ್ಟರ ವೈಭವವು ಈಗ ಇಲ್ಲದೆ ಹೋಗಲಿಕ್ಕೆ ಕಾಲಮಹಿಮೆಯೇ ಕಾರಣವಲ್ಲದೆ ಬೇರೊಂದಿಲ್ಲವು. ಶಿವಸರ್ವೋತ್ಕೃಷ್ಟತ್ವವನ್ನು ಹೇಳತಕ್ಕ ಪುರಾಣಗಳಲ್ಲಿ ಸ್ಕಾಂದವು ಮುಖ್ಯವಾದದ್ದು. ಅದರೊಳೊಂದು ಭಾಗವಾದ ಶಿವರಹಸ್ಯ ಖಂಡದಲ್ಲಿ ಈ ವಿಷಯವು ಬಹಳ ಸ್ಪಷ್ಟವಾಗಿ ತಿಳಿಸಲ್ಪಟ್ಟಿರುವದರಿಂದ ಅದನ್ನಿಹರಡಿ ತಿಳಿಸುವೆವು. ಜಗತ್ಕರ್ತನಾದವನ್ಯಾರೆಂಬ ವಿಷಯದಲ್ಲಿ ಬ್ರಹ್ಮ ವಿಷ್ಣುಗಳಿಗೆ ಪರಸ್ಪರ ಕಲಹ ಪುಂಟಾಗಲು ಆಗ ದೇವಪುರುಷನೂ, ಆಕಾಶವಾಣಿಯೂ ನಿಮ್ಮಿಬ್ಬರಿಗಿಂತಲೂ ಅತೀತನಾದಬೇರೊಬ್ಬ ಕರ್ತನಿರುವದರಿಂದ ನೀವು ವಿವಾದಿಸಕೆಲಸವಿಲ್ಲವೆಂದು ಹೇಳಿದವು. ರಾತ್ರಿ ೧೨ ಘಂಟೆಯ ಸಮಯದಲ್ಲಿ ತೇಜೋಮಯವಾದ ಲಿಂಗವು ಉದ್ಭವವಾಯಿತೆಂದು ಸದರೀಗ್ರಂಥದಲ್ಲಿ ತಿಳಿಸಲ್ಪಟ್ಟಿರುತ್ತೆ. ರಾತ್ರಿಕಾಲದೊಳು ಈವಿಷಯವು ಘಟಿಸಿದ್ದರಿಂದಲೇ ಶಿವರಾತ್ರಿಯೆಂದು ಇದಕ್ಕೆ ಹೆಸರುಂಟಾಯಿತು. ರಾತ್ರಿ ಒಂದು ಯಾಮ ಹೊತ್ತಿನಮೇಲೆ ಲಿಂಗವು ಕಾಣಿಸಿದ್ದದರಿಂದ ಆ ಕಾಲಕ್ಕೆ ಲಿಂಗೋದ್ಭವ ಕಾಲವೆಂದು ವ್ಯವಹಾರ ಪುಂಟಾಯಿತು. ಪ್ರತಿ ತಿಂಗಳಲ್ಲಿಯೂ ಬಹುಳ ಚತುರ್ದಶೀದಿನ ಶೈವಮತಸ್ಥರು ಸಾಯಂಕಾಲದವರೆಗೆ ಉಪವಾಸವಿದ್ದು ಲಿಂಗೋತ್ಪತ್ತಿ ಕಾಲಾನಂತರ ಭೋಜನಮಾಡುತ್ತಾರೆ. ಬ್ರಾಹ್ಮಣರಿಗೆ ಆ ಸಮಯವು ಭೋಜನಕಾಲಾತಿಕ್ರಮವಾದದರಿಂದ ಭೋಜನಕ್ಕೆ ಅವಕಾಶವಿಲ್ಲದೆ ಹೋಯಿತು. ಮಾಘಬಹುಳ ಚತುರ್ದಶೀಯ ದಿವಸ ನಾಳೆ ಗುರುವಾರವು ಕೇವಲ ಮುಖ್ಯದಿನವಾದದರಿಂದ ಆ ದಿನದೊಳು ಮಾತ್ರ ಪ್ರಾಯಶಃ ಯೆಲ್ಲರೂ ಭಕ್ತಿ ವಿಶ್ವಾಸಗಳೊಡನೆ ಅದು ಕೊಂಡಾಡುತ್ತಾರೆ. ಒಂದಾನೊಂದು ಕಾಲದಲ್ಲಿ ಭಗವಂತನು ಒಂದೊಂದು ಮತಸ್ಥರಿಗೊಂದೊಂದು ಬಗೆಯಾಗಿ ತನ್ನ ರೂಪವನ್ನು ತೋರಿಸಿರುತ್ತಾನೆ. ಹೀಗೆಯೇ ಒಂದು ಕಾಲವಿಶೇಷದಲ್ಲಿ ಭಗವಂತನು ಭೂಭಾರವಿಚ್ಛೇದನಾರ್ಥ ಯದುವಂಶದಲ್ಲಿ ಶ್ರಾವಣದ ಬಹುಳ ಅಷ್ಟಮೀದಿನ ರಾತ್ರಿ ಅವತರಿಸಿದ್ದರಿಂದ ಆದಿನ ಸಹ ಮೇಲೆ ಕಂಡ ಶಿವರಾತ್ರಿಯಂತೆ ವಿಷ್ಣು ಮತಾವಲಂಬಿಗಳಿಗೆಲ್ಲ ಮುಖ್ಯವಾಗಿ ಏರ್ಪಟ್ಟಿತು. ಆದಿನದಲ್ಲಿ ಭಗವದವತಾರಕಾಲವು ಶಿವರಾತ್ರಿಯಂತೆ ನಿಶೀಥಯೊಳಾದಾಗ್ಯೂ ಆಚಾರಭೇದದಿಂ ಕೆಲವರು ಉಪವಾಸವೂ ಬೇರೆ ಕೆಲವರು ಭೋಜನವೂ ಮಾಡುತ್ತಾರೆ. ಪರಂತು ಸದರೀ ಇಬ್ಬರಿಗೂ ಪ್ರಮಾಣವಿಲ್ಲದೆ ಹೋಗಲಿಲ್ಲವು. ಮುಖ್ಯವಾಗಿ ಪೌರಾಣಿಕಗಳಾದ ಏತನ್ಮಾಸ ವಿಶೇಷಾಂಶಗಳು ಯೆಲ್ಲದೇಶದಲ್ಲಿಯೂ, ಯೆಲ್ಲಮತಸ್ಥರೊಳಗೂ ಸ್ವಲ್ಪ ಹೆಚ್ಚು ಕಡಮೆಯಾಗಿ ಕೊಂಡಾಡಲ್ಪಡುತ್ತವೆ. ಪ್ರಸಕ್ತ ಶಿವರಾತ್ರಿ ಮಾಹಾತ್ಮ್ಯಕ್ಕೆ ಮೂಲಸ್ಥಾನವಾದ ಚೋಳದೇಶದೊಳಿರುವ ತಿರುವಯ್ಯಾರ್ ಯೆಂಬ ಕ್ಷೇತ್ರಕ್ಕಿಂತಲೂ ತಿರುಣಾಮಲೆ ಯೆಂಬ ಪ್ರದೇಶದಲ್ಲಿ ಇದು ಬಹಳ ವಿಶೇಷವಾಗಿ ನಡೆಯುತ್ತಿದೆ.

Occasional Notes.
ನೈಮಿತ್ತಿಕವಿಷಯನ್ಯಾಸ

Installation of the Maharaja of Cashmere.—ಕಾಶ್ಮೀರದೇಶದ ಮಹಾರಾಜರವರಿಗೆ ಬರುವ ಏಪ್ರಿಲ್ ತಿಂಗಳ ಆದಿ ಭಾಗದಲ್ಲಿ ಪಟ್ಟಾಭಿಷೇಕೋತ್ಸವ ನಡೆಸಬೇಕೆಂದು ನಿರ್ಣಯವಾಗಿರುತ್ತದೆ

Surrender of Morar and Gwalior.—ಈತಿಂಗಳ ಕಡೇವಾರದಲ್ಲಿ ಮುರಾರ್ ಮತ್ತು ಗ್ವಾಲಿಯರ್ ಕೋಟೆಗಳು ಸಿಂಧಿಯಾ ಮಹಾರಾಜರವರಿಗೆ ವಾಪಸ್ ಕೊಡಲ್ಪಡುವವು. ಆಕಾಲದಲ್ಲಿ ಸೈನಿಕ ಸಂಬಂಧವಾದ ತಮಾಷೆಗಳು ಬಹಳವಾಗಿ ನಡೆಯುವದಲ್ಲದೆ ಅದಕ್ಕೆ ಆಗ್ರಾದಲ್ಲಿರುವ ಗ್ಯಾರಿಸನ್ ಸೇನೆ ಸಹ ಬರುವದು.

Postage labels.—ಇಂದೂರ್ ಸಂಸ್ಥಾನದ ಮಹಾರಾಜರವರ ಹೆಸರಿನೊಳು ಪ್ರಕಟಿಸಿರುವ ಪೋಸ್ಟೇಜ್ ಲೇಬಲ್‌ಗಳು ಅಲ್ಲಿನ ಚಲಾವಣೆಯೊಳು ತರಲ್ಪಟ್ಟಿರುವಂತೆ ಕೇಳುತ್ತೇವೆ. ಇದೇ ರೀತಿ ಈ ಸಂಸ್ಥಾನದವರು ಸಹ ಯಾಕೆ ಮಾಡಬಾರದು?

A memorial to the Viceroy.—ಕುಂಭಕೋಣ ನಿವಾಸಿಗಳು ಕೆಲವರು ಬಾಲ್ಯವಿವಾಹ ಪದ್ಧತಿಯನ್ನು ನಿರ್ಬಂಧಗೊಳಿಸಬೇಕೆಂದು ಶ್ರೀ ವೈಸರಾಯವರಿಗೆ ಅರ್ಜಿ ಬರೆದುಕೊಂಡಿರುವಂತೆ ಮದರಾಸ್ ಪತ್ರಿಕೆ ಯೊಂದು ತಿಳಿಸುತ್ತದೆ. ಶಹಬಾಸ್!

Turko Bulgarian agreement.—ತುರ್ಕೀ ಸರ್ಕಾರಕ್ಕೂ ಬಲ್ಗೇರಿಯ ಸರ್ಕಾರಕ್ಕೂ ನಡೆದ ಕರಾರಿನ ಷರತ್ತುಗಳ ಪೈಕಿ ಸಂದರ್ಭ ಪುಂಟಾದ ಕಾಲದಲ್ಲಿ ಬಲ್ಗೇರಿಯಾ ಅರಸರು ತುರ್ಕೀಯವರಿಗೆ ಐವತ್ತು ಸಾವಿರದ ಮೊದಲು ಹೊಂಬತ್ತು ಸಾವಿರದವರಿವಿಗೆ ಫೌಜು ಸರಬರಾಯ್ ಮಾಡಬೇಕಾಗಿರುವದೆಂಬ ಕಲಂವಿನಾ ಮಿಕ್ಕವನ್ನೆಲ್ಲ ರಷಿಯಾ ಸರ್ಕಾರದವರು ಒಪ್ಪಿರುತ್ತಾರೆ.

Administration of Upper Burmah.—ಈಚೆಗೆ ಬ್ರಿಟಿಷ್‌ರಾಜ್ಯಕ್ಕೆ ಸೇರಿಸಲ್ಪಟ್ಟ ಉತ್ತರಬರ್ಮಾದೇಶದ ಆಡಳಿತಕ್ಕೆ ಕೆಲವರು ಕವಿನಾರ್ಟಿಡ್ ಸಿವಿಲಿಯನ್ ಆಫಿಸರ್‌ಗಳು ನಿಯಮಿಸಲ್ಪಡುವರು. ಬರುವ ನವಂಬರ್ ತಿಂಗಳವರಿವಿಗೆ ಸದರೀ ದೇಶದ ಬಂದೋಬಸ್ತಿಯ ಬಗ್ಯೆ ಅಲ್ಲಿಡಲ್ಪಟ್ಟಿರುವ ಸೇನೆಯ ಸಂಖ್ಯೆಯು ಮರಳಿ ಕಡಿಮ್ಮೆ ಮಾಡಲ್ಪಡುವ ಸಂಭವತೋರಲಿಲ್ಲವು

The Calcutta High Court.—ಕಲ್ಕತ್ತಾ ಹೈಕೋರ್ಟಿನ ಚೀಫ್‌ಜಸ್ಟಿಸ್ ಯಪರಾದ ಸರ್ ರಿಚರ್ಡ್ ಗಾರ್ಥ್‌ಯವರು ಕಾಹಿಲೇ ಸಬಬ್ ಬರುವ ತಿಂಗಳ ೨೪ನೇ ತಾರೀಖಿನಲ್ಲಿ ಸ್ವದೇಶಕ್ಕೆ ಹೊರಟುಹೋಗುತ್ತಾರಾಗಿ ಸದರೀಯವರ ಕೆಲಸವು ಸರ್‌ಕೋಮರ್‌ಪೆಥಾರಾಂ ಎಂಬವರಿಗೆ ಕೊಡಲ್ಪಟ್ಟು ಅವರದಂ ಖಂಡಿತವಾಗಿ ಅಂಗೀಕರಿಸಿರುವಂತೆ ಇಂಗ್ಲಿಷ್‌ಮನ್ ಪತ್ರಿಕೆ ಹೇಳುತ್ತದೆ.

The late Sumangalacharyar.—ಸಿಹ್ಮಳದ್ವೀಪದಲ್ಲಿ ಕೇವಲ ಪ್ರಸಿದ್ಧರಾಗಿದ್ದ ಬೌದ್ಧ ಯತಿಯಾದ ಸುಮಂಗಲಾಚಾರ್ಯರೆಂಬವರು ಕಳೆದ ತಿಂಗಳ ಮೂರನೇ ತಾರೀಖಿನಲ್ಲಿ ಕಾಲಗತಿಯನ್ನೈದಿದರೆಂತಲೂ, ಅವರ ಕಳೇಬರವನ್ನು ಬೌದ್ಧಮತ ಸಂಪ್ರದಾಯದಂತೆ ಬಹಳ ವಿಭವದೊಡನೆ ದಹನ ಮಾಡಿದರೆಂತಲೂ, ಆ ಕಾಲದಲ್ಲಿ ಕರ್ನಲ್ ಆಲ್‌ಕಾಟಿಯವರು ಸಹ ಹಾಜರಿದ್ದರೆಂತಲೂ ತಿಳಿಯ ಬರುತ್ತದೆ. ಶ್ರೀ ಸುಮಂಗಲಾಚಾರ್ಯರು ಬಹಳ ತಪಸ್ವಿಯಾಗಿದ್ದರಲ್ಲದೆ ಒಳ್ಳೆಯ ಪಂಡಿತರೆನ್ನಿಸಿಕೊಂಡಿದ್ದರು.

An offer accepted.—ವೈದ್ಯ ಶಾಸ್ತ್ರಾಭ್ಯಾಸಮಾಡತಕ್ಕವರಿಗೆ ಕಲಿಸುವದಕ್ಕಾಗಿ, ಹೆಂಗ್ಯಾರೋಗ ಚಿಕಿತ್ಸೆಗೆ ಅವಕಾಶವುಂಟಾಗಿರುವಂತೆ, ಹೆಂಗಸರ ಆಸ್ಪತ್ರೆಯೊಂದನ್ನು ಕಟ್ಟಿಸುವದಕ್ಕಾಗಿ ಮುಂಬೈವಾಸಸ್ಥರಾದ ಮ. ಹರಿಕಿಸನ್‌ದಾಸ್ ನರೋತ್ತಮದಾಸ್ ಎಂಬವರು ಕೊಟ್ಟ ಒಂದು ಲಕ್ಷ ರೂಪಾಯಿಗಳನ್ನು ಮುಂಬೈ ಗವರ್ನಮೆಂಟಿನವರು ಕ್ರಮವಾಗಿ ಅಂಗೀಕರಿಸಿ, ಸದರೀ ಕಟ್ಟಡ ಕೆಲಸ ಪೂರ್ತಿಯಾಗುವದಕ್ಕೆ ಹಿಡಿಯಬಹುದಾದ ಒಂದೂವರೆ ಲಕ್ಷ ರೂಪಾಯಿಗಳನ್ನು ಕೊಡುವರು.

Education in Baroda.—ಬರೋಡೇ ಸಂಸ್ಥಾನದಲ್ಲಿ ವಿದ್ಯಾಭ್ಯಾಸವು ದಿನೇ ದಿನೇ ಬಹಳ ಅಭಿವೃದ್ಧಿಸ್ಥಿತಿಗೆ ಬರುತಲಿದೆ. ರೈತಾದಿಜನ

ಗಳಿಗೂ ಇತರ ಸಾಮಾನ್ಯ ಜನಗಳಿಗೂ ವಿದ್ಯಾ ಭ್ಯಾಸಕ್ಷಿಣ್ಯವನ್ನುಂಟುಮಾಡುವದೇ ಸದರೀ ಸಂಸ್ಥಾನದ ಮುಖ್ಯೋದ್ದೇಶವಾಗಿ ಕಾಣುತಿದೆ. ಅ ಜಮಾಯಿಷೀ ತರೀಖ್ ಕಳೆದ ತಿಂಗಳ್ ಗುರ್ರೇ ತಾರೀಖ್ ಲಾಗಾಯತ್ ಸುಗೀತ ಪಾಠಶಾಲೆಯೊಂದೇರ್ಪಡಾಗಿದೆ. ಅದರಿಂದ ನಿರೀಕ್ಷಿಸಲ್ಪಡುವ ಪ್ರಯೋಜನವು ಕೈಗೂಡುವದಾದರೆ ಅನ್ಯತ್ರ ಗವರ್ನಮೆಂಟ ಪಾಠಶಾಲೆಗಳಲ್ಲಿ ನೆಲಗೊಂಡಿರುವ ಪದ್ಧತಿಗಿಂತಲೂ ಇದು ಅಭಿವೃದ್ಧಿಕವಾದದ್ದೆಂದು ಹಿಂದೂನೊಂದು ಪತ್ರಿಕೆ ಹೇಳುತಿದೆ.

Order for dogs training.—ಜರ್ಮನೀ ಚಕ್ರವರ್ತಿಯವರ ಮಿಲಿಟರಿ ಇಲಾಖಾ ಮಂತ್ರಿಯವರು, ರಾತ್ರಿ ಕಾಲದಲ್ಲಿ ಗಸ್ತು ತಿರಗತಕ್ಕ ಪಹರೆಯವರಿಗೆ ನಾಯಿಗಳು ಎಷ್ಟುಮಟ್ಟಿಗೆ ಸಹಾಯ ಮಾಡಬಲ್ಲವೆಂಬದನ್ನು ಆಜಮಾಯಿಷೀ ಮಾಡಿ ತಿಳದುಕೊಳ್ಳ ಬೇಕೆಂಬ ತಾತ್ಪರ್ಯದೊಡನೆ ಅವು ತರಬೇಯತ್ ಮಾಡತಕ್ಕದ್ದೆಂದು ಈಚೆಗೆ ಹುಕುಂ ಮಾಡಿರುವದಾಗಿ ಕೇಳುತ್ತೇವೆ. ಪ್ರಾಚೀಕೋಟಿಗಳಲ್ಲಿ ನಾಯಿಯಂತಾ ವಿವೇಕ ವಿಶ್ವಾಸಗಳುಳ್ಳದ್ದು ಮತ್ತೊಂದೂ ಇಲ್ಲವಾಗಿ ಅವರ ಉಪಯೋಗ ವಿಷಯದಲ್ಲಿ ಸ್ವಲ್ಪವೂ ಸಂದೇಹಿಸಬೇಕಾದ್ದಿಲ್ಲವು. ಪೂರ್ವದೊಳು ಒಂದೊಂದು ನಾಯಿ ಒಂದೊಂದು ಸಂದರ್ಭದಲ್ಲಿ ಮಾಡಿದ ಸಾಹಸವು ಈಗಲೂ ಸ್ಮರಣೆಗೆ ಬಾರದಿರುವದಿಲ್ಲವು.

Palace jewels in Burmah.—ಬರ್ಮ್ಹಾದೇಶದ ಅರಸರವರು ಬ್ರಿಟಿಷರವರಿಗೆ ವಿಧೇಯರಾಗಿ ಹೋದತರುವಾಯ ಅರಮನೆಯ ಹೆಂಗಸರು ಅವರವರ ವಸ್ತ್ರಾಭರಣಗಳು ಮೊದಲಾದ ತಮ ತಮಗೆ ಬೇಕಾದ ಪದಾರ್ಥಗಳನ್ನೆಲ್ಲ ತೆಗದುಕೊಂಡು ಹೋಗುವಂತೆ ಒಂದು ದಿನವೆಲ್ಲ ಅವರಿಗೆ ವಿರಾಮ ಕೊಡಲ್ಪಟ್ಟದರಿಂದ ಜವಾಹಿರ್‌ಗಳು ವಿಶೇಷವಾಗಿ ಯಾವದೂ ಕಂಡು ಬರಲಿಲ್ಲವು. ಪರಂತು ಇಟ್ಟುಕೊಳ್ಳುವದಕ್ಕೆ ಸ್ಥಳವೂ ಸಾಗಿಸಿಕೊಂಡು ಹೋಗುವದಕ್ಕೆ ಅನುಕೂಲ್ಯವೂ ಪೃಶ್ಚವರಿಗೆ ವಿನೋದಕರವಾಗಿಯೂ ಬೆಲೆಯುಳ್ಳವಾಗಿಯೂ ಇರುವ ಪದಾರ್ಥಗಳು ರಾಶಿಗಳಾಗಿ ಬಿದ್ದಿರುತವೆ. ನೂರಾರು ಜವಾಹಿರ್ ಪೆಟ್ಟಿಗೆಗಳೂ, ಸಂಪುಟಗಳು ಮೊದಲಾದವೂ ಒಡೆದು ಹಾಕಲ್ಪಟ್ಟು ಖಾಲೀಯಾಗಿ ಬಿದ್ದಿರುವದನ್ನು ನೋಡುವದಕ್ಕೆ ದೇಶವನ್ನು ಹಿಡಕೊಂಡವರಿಗೆ ಬಹಳ ಬೇಜಾರಾಗಿರಬೇಕೆಂದು ಒಂದಾನೊಂದು ಪತ್ರಿಕೆಯು ಮಾಂಡಲೇಬಾತಮೀದಾರನು ಬರೆಯುತ್ತಾನೆ. ಜವಾಹಿರ್ ಪೆಟ್ಟಿಗೆಗಳ ಮೇಲಿನ ದೃಷ್ಟಿಯಿಂದ ಒಳಗೆ ನುಗ್ಗಿದವರಿಗೆ ಖಾಲೀ ಪೆಟ್ಟಿಗೆಗಳನ್ನು ನೋಡುವದು ದುಃಖಕರವಾಗಿಯೂ ಬೇಜಾರಾಗಿಯೂ ಇರಬೇಕಾದ್ದು ಸಹಜವೇ ಸರಿ.

A public meeting in Bombay.—ಇಂಡ್ಯರಾಜ್ಯವಹಿವಾಟತದ ತನಿಖಿಯಬಗ್ಗೆ ಪಾರ್ಲಿಮೆಂಟ ಸಮಾಜಕ್ಕೆ ಸೇರಿದಂತೆ ಒಂದು ಕಮಿಟಿ ಈಗ ಯೇರ್ಪಡಾಗಿರುವದು ಸರಿಯಷ್ಟೆ. ಈ ಕಮಿಟಿಯು ಪ್ರಕೃತ ಹೌಸ್ ಆಫ್ ಕಾಮನ್ಸ್ ಸಮಾಜವು ಯೆಷ್ಟು ದಿನಗಳತನಕ ನೆಲಗೊಂಡಿರುವದೋ ಅಷ್ಟು ದಿನಗಳ ತನಕಲೇ ಇರುವದು. ಸದರೀ ಹೌಸ್ ಆಫ್ ಕಾಮನ್ಸ್ ಸಮಾಜವು ಯಾವಾಗ ಒಡೆದು ಹೋಗುವದೋ ಅದನ್ನು ಹೇಳುವದಕ್ಕಾಗುವದಿಲ್ಲವು, ಮತ್ತು ಇದು ಅಂದರ್ ಕಮಿಟಿನಲ್ಲಿ ಸೇರತಕ್ಕದ್ದು. ಆದದರಿಂದ ಇಂಡ್ಯರಾಜ್ಯವಹಿವಾಟತವನ್ನು ತನಿಖೀ ಮಾಡತಕ್ಕಬಗ್ಗೆ ಮಹಾರಾಜ್ಞೀಯವರ ತರಫ ಒಂದು ಸಭಾ ಯೇರ್ಪಡಾದರೆ ಇದು ಅದಕ್ಕಿಂತಲೂ ಉಪಯುಕ್ತವಾಗಿರುವದು, ಮತ್ತು ಅದು ಇಂಡ್ಯದೇಶಕ್ಕೆ ಬಂದು ಯೆಲ್ಲವನ್ನು ಖುದ್ದು ನೋಡಬೇಕಾಗುವದು, ಎಂದು ಪ್ರಕೃತ ಕಾರಣಗಳ ಸಮೂಹದಿಂದ ಪ್ರಕೃತ ಮಂತ್ರಿ ಸಮಾಜಕ್ಕೆ ಒಂದು ಅರ್ಜಿ ಬರೆದುಕೊಳ್ಳುವದಕ್ಕಾಗಿ ಈ ದಿನ ಸಾಯಂಕಾಲ ೫|| ಘಂಟೆಗೆ ಇಲ್ಲಿನ ಫ್ರಾಂಜೀ ಕಾವಸ್‌ಜೀ ಹಾಲ್‌ಯೆಂಬಕಟ್ಟಡದಲ್ಲಿ ಸಮಾಜಸೇರುವದು, ಎಂದು ಮುಂಬೈ ಇಂದುಪ್ರಕಾಶ್ ಪತ್ರಿಕೆ ಹೇಳುತಿದೆ.

NOTICE.

ಇದರಿಂದ ನಮ್ಮ ಚಂದಾದಾರರಿಗೆ ನಾವು ಶ್ರುತಪಡಿಸುವದೇನಂದರೆ.

ಈ ಸಾಲಿ ಶುರುವಲ್ಲಿ ನಾವು ಪ್ರಕಟಿಸಿದ ನಿರ್ಣಯಕ್ಕೆ ಅನುಗುಣವಾಗಿ ನಮ್ಮ ಚಂದಾದಾರರ ಪೈಕಿ ಅನೇಕರು ತಮ್ಮ ಚಂದಾ ಹಣವನ್ನು ಅಡ್ವಾನ್ಸಾಗಿ ಕಳುಹಿಸಿದಬಗ್ಗೆ ಅವರಿಗೆ ನಾವು ಬಹಳ ಕೃತಜ್ಞರಾಗಿರುತ್ತೇವೆ. ಆದರೆ ಇದುವರಿವಿಗೆ ಚಂದಾ ಹಣವನ್ನು ಕಳುಹಿಸದೆ ಇರತಕ್ಕವರಿಗೆ ನಾವು ಜ್ಞಾಪಕ ಕೊಡಬೇಕಾದ್ದು ಕರ್ತವ್ಯವಾಗಿರುವದರಿಂದ ಅಂತವರೆಲ್ಲರು ಈ ನೋಟಿಸ ನೋಡಿದ ಕೂಡಲೇ ಚಂದಾ ಮೊಬಲಗನ್ನು ಕಳುಹಿಸಿಕೊಡಬೇಕೆಂದು ಇದರಿಂದ ಸೂಚಿಸಿರುತ್ತೇವೆ.

LOCAL AND PROVINCIAL NEWS.

ಒಳದೇಶಮತ್ತು ತಾಲ್ಲೂಕ್‌ಜಾತ್‌ವೃತ್ತಾಂತಗಳು.

Departure of His Highness the Maharaja.—ಶ್ರೀಮನ್ಮಹಾರಾಜರವರು ಗತ ಶನಿವಾರದದಿನ ಮಧ್ಯಾಹ್ನ ೧೨ ಘಂಟೆಗೆ ಸರಿಯಾಗಿ ಸ್ಪೆಷಿಯಲ್ ಟ್ರೇನಿನೊಳು ರೆವ್ಮಿ ಪಟ್ಟ ಮಹಿಷಿಯೊಡನೆ ರಾಜಧಾನಿಯಾದ ಮೈಸೂರಿಗೆ ದಯಮಾಡಿದರು. ಆಕಾಲದಲ್ಲಿ ಮಾಮೂಲ್ ಪ್ರಕಾರ ನಡೆಯಬೇಕಾದ ತೋಪೆವಗೈರೆ ಮರ್ಯಾದೆಗಳೆಲ್ಲವು ಜರಿಗಿದವು. ಮಹಾರಾಜರವರ ಭೇಟಿಯಬಗ್ಗೆ ಬಹುಮಂದಿದೊಡ್ಡಮನುಷ್ಯರು ಸ್ಟೇಷನಿಗೆ ಹೋಗಿದ್ದರು.

The British Resident.—ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಮ||ಗರ್ಡ್ನರ್‌ಸ್ಟಾರ್ಯವರು ಈಗ್ಯೆ ಒಂದೆರಡುತಿಂಗಳ ಕಾಲವಾಗಿ ಕೊಡಗು ಪ್ರಾಂತಕ್ಕೆ ಸರ್ಕ್ಯೂಟ ಹೋಗಿದ್ದರಷ್ಟೆ, ಈ ಸಾಹೆಬರು ತಮ್ಮ ಪರಿವಾರದೊಡನೆ ಗತ ಶುಕ್ರವಾರದದಿನ ಸಾಯಂಕಾಲ ಮೈಸೂರು ಮಾರ್ಗವಾಗಿ ಇಲ್ಲಿಗೆ ವಾಪಸು ದಯಮಾಡಿದರು. ಆ ಕಾಲದೊಳು ನಡೆಯತಕ್ಕ ಮರ್ಯಾದೆಗಳೆಲ್ಲ ನಡೆದವು.

Car feasts.—ಕೋಲಾರ್ ಡಿಸ್ಟ್ರಿಕ್ಟಿಗೆ ಸೇರಿದ ನಂದಿ ಮತ್ತು ಅವನಿ ಯೆಂಬ ಪ್ರದೇಶಗಳಲ್ಲಿ ಮಾರ್ಚಿ ಮಹಿನೆ ೮ನೇ ತಾರೀಖಿನಲ್ಲಿ ಉತ್ಸವವು ಪ್ರಾರಂಭವಾಗಿ ಒಂದು ವಾರದತನಕ ನಡೆಯುವವಾದ್ದರಿಂದ ಅದಂ ನೋಡುವಬಗ್ಗೆ ಅಲ್ಲಿಗೆ ಬಹುಮಂದಿ ಹೋಗಬಹುದೆಂದು ತೋರುತಿವೆ. ಇಂತಾ ಉತ್ಸವಕಾಲಗಳಲ್ಲಿ ಸಾಮಾನ್ಯವಾಗಿ ನಡೆಯತಕ್ಕ ಕಲಹ ಕಳ್ಳತನಗಳಿಗೆ ಅವಕಾಶವುಂಟಾಗದಂತೆ ಪೋಲೀಸ್‌ನವರುಜಾಗರೂಕರಾಗಿರುವರೆಂದು ನಂಬುತ್ತೇವೆ.

Execution.—ಕುಣಿಗಲ್ ತಾಲ್ಲೂಕು ನಿವಾಸಿಯಾದ ಅಣ್ಣಯ್ಯಗೌಡನೆಂಬವನನ್ನು ಖೂನ ಮಾಡಿದವರಿಬ್ಬರು ಕಳೆದ ತಿಂಗಳ ಸೆಷನ್‌ವಿಚಾರಣೆಯೊಳು ದಸ್ತ್ಯಾಪ್ತೀ ಮಾಡಲ್ಪಟ್ಟು ಸೆಷನ್ ಜಡ್ಜಿಯರು ಅವರಿಗೆ ಫಾಸೀ ಸಜಾ ವಿಧಿಸಿದರು. ಅವರ ಫೈಸಲನ್ನು ಮಿಕ್ಕ ಇಬ್ಬರುಜಡ್ಜಿಗಳು ಸೇರಿ ಕಾಯಂಮಾಡಿದ್ದರಿಂದ ಅಪರಾಧಿಗಳಿಬ್ಬರು ನಾಳೆ ದಿನ ಈ ಪ್ರೂರು ಸೆಂಟ್ರಲ್ ಜೈಲಿನಲ್ಲಿ ಗಲ್ಲಿಗೆ ಹಾಕಲ್ಪಡುವರು. ನಗುತಮಾಡಿದ ಕರ್ಮ ಫಲವನ್ನು ಅಳುತ ಅನುಭವಿಸದಿದ್ದರೆ ತಪ್ಪುವದು ಹ್ಯಾಗೆ.

Application for the attachment of a reward.—ಇದರಡಿ ಕಂಡ ಅಂಕಕ್ಕೆ ಕಳೆದ ತಿಂಗಳ ೨೬ನೇ ತಾರೀಖ್ ಶುಕ್ರವಾರದ ಒಳದೇಶದ ಎಗ್ಸಾಮಿನರ್ ಪತ್ರಿಕೆಯು ಉತ್ತರವಾದಿಯಾಗಿರುವದರಿಂದ ಅದನ್ನಿದರಡಿ ಪ್ರಕಟಿಸುತೇವು. ಈಗ ದರ್ಯಾಪ್ತು ಯೊಳರುವ ಸಾಹುಕಾರ ಖಜಾನಾ ಬಕ್ಷಿ ಮ|| ನೀಲೂರಾಯರನ್ನು ನೇಣಿನಿಂದ ನಾಟ್ಯರಂಗದಲ್ಲಿ ತಂದು ನಿಲ್ಲಿಸಿದ ಸೂತ್ರಧಾರಕರಾದ ಮೈಸೂರು ಕೇಶಗಿರಿಯರೆಂಬವರು ಈಗ ಮೈಸೂರು ಗವರ್ನಮೆಂಟಿನವರಿಂದ ನಿರೀಕ್ಷಿಸುತಲಿರುವ ಸನ್ಮಾನವನ್ನು ಸತಲಿಸದೆ ಬೇಗನೆ ಹಿಡಿಯಬೇಕೆಂದು ಇಲ್‌ಜೆಂಗ್ಷನ್ ಬಗ್ಯೆ ಆತನಮೇಲೆ ಡಿಕ್ರಿಪಡೆದಿರುವ ಸಾಲಗಾರರೆಲ್ಲರೂ ಇಲ್ಲಿನ ಮುನ್ಸಫ್‌ಕೋರ್ಟಿನಲ್ಲಿ ಅರ್ಜಿಕೊಟ್ಟಿರುತ್ತಾರೆಂದು ಕೇಳುತ್ತೇವೆಂಬದು. ಗತ್ಯಂತರವಿಲ್ಲದಿದ್ದ ಸಾಲಗಾರರು ಈ ಸಮಯನ್ನು ಎಷ್ಟುಕಾಲದಿಂದ ನಿರೀಕ್ಷಿಸುತಲಿದ್ದಾರೋ ತಿಳಿಯಲಿಲ್ಲವು. ಒಂದು ವೇಳೆ ಇದು ಹೀಗೆಯೇವಿರೇಯಾದರೆ ಕ್ರಮಕ್ಕೆ ರೋಕಕಂಟಕವೇ ಯಲ್ಲವೆ ಸನ್ಮಾನರೂಪವಾಗಬೇಕಾದ್ದು.

Suspension.—ಗತ ಸಂವತ್ಸರದ ಪೋಲೀಸ ಆಡಳಿತದಲ್ಲಿ ಪ್ರಾಧಾನ್ಯೇನ ನಮೂದಿಸಲ್ಪಡತಕ್ಕದಾಗಿದ್ದ ಕೃಷ್ಣಾಬಾಯಿಯೆಂಬ ರಜಪುತ್ರಹೆಂಗಸಿನ ಮೊಕದ್ದಮೆಯ ಸ್ವರೂಪವೂ, ಕಡೆಗೆ ಅವಳು ಪತ್ತೆಯಾಗಿ, ವಿಚಾರಣೆಯಾದದ್ದೂ, ಆ ಸಂದರ್ಭದಲ್ಲಿ ಅನೇಕರ ಹೆಸರು ನಮೂದಿಗೆ ಬಂದದ್ದೂ, ಅದಕ್ಕೆ ಸಂಬಂಧಿಸಿದ ಕೆಲವು ಕಾರಣದ ಮೇಲೆ, ಇಲ್ಲಿನ ಇನ್ಸ್‌ಪೆಕ್ಟರಾಗಿದ್ದ ಮೆ. ಒಕಾನರ್ ಯೆಂಬವರು ಕೆಲವುಕಾಲ ಸಸ್ಪೆಂಡ ಮಾಡಲ್ಪಟ್ಟಿದ್ದದ್ದೂ, ಇಷ್ಟರಲ್ಲಿ ಯೆವರೊಳೊಬ್ಬರೂ ಮರೆತು ಹೋಗಿರಲಾರರಷ್ಟೆ. ಮೆ. ಒಕಾನರ್‌ಯವರು ಕವರ್ನಮೆಂಟ ಪ್ರಯತ್ನದಿಂ ತಮ್ಮ ನೌಕರಿಯಂ ಮರಳಿ ಸಂಪಾದಿಸಿ ಕೊಂಡು ಮಲನಾಡು ಪ್ರಾಂತಕ್ಕೆ ವರ್ಗವಾಗಿ ಹೋದರು. ಹೀಗಿರುವಾಗ್ಯೆ ಮ|| ರಿಕ್ಕೆಟ್ಸಿಯವರು ಈಚೆಗೆ ಆಪ್ರಾಂತಕ್ಕೆ ಹೋಗಿರುವಾಗ್ಯೆ ಯಾವದೋ ಒಂದುಕಾರಣದ ಮೇಲೆ ಅವರು ಮರಳಿ ಸಸ್ಪೆಂಡ ಮಾಡಿರುವಂತೆ ಗತ ಶುಕ್ರವಾರದ ಒಳದೇಶದ ಬೆಯಿಲೀ ಪೋಸ್ಟ್ಪತ್ರಿಕೆಯು ತಿಳಿಸುತಿದೆ. ಓ! ಪೋಲೀಸಿನವರೆ ! ನಿಮ್ಮ ತಲೆಮೇಲೆ ಕುಳಿತಿರತಕ್ಕವರು ಮೆ. ರಿಕ್ಕೆಟ್ಸಿಯವರಲ್ಲದೆ ಅನ್ಯರೊಬ್ಬರೂ ಅಲ್ಲವು, ಆದದರಿಂದ ನಿಮಗೆ ಊರ್ಧ್ವದೃಷ್ಟಿ ಈಗ ಸಲ್ಲದಾಗಿ ಅಧೋದೃಷ್ಟಿಯೇ ಒಳ್ಳೆಯದು.

Defamation No II.—ಅರಲೀಕಾಬಾನ್‌ಯಲ್ಲಿ ಷೇರ್‌ದಾರರಾಗಿಯೂ ಡೈರೆಕ್ಟರಾಗಿಯೂ ಯಿರುವ ಅಂಚೆಬಕ್ಷಿ ಮ|| ಮರಿಗುಂಡಯ್ಯನವರು, ಮತ್ತೊಬ್ಬ ಷೇರ್‌ದಾರ್ ವ ಡೈರೆಕ್ಟರಾದ ಮ|| ಜೇಂಸ್ ಸ್ಕಾಟ ಯೆಂಬವರಮೇಲೆ ಮಾನನಷ್ಟದಬಗ್ಯೆ ತಂದಿದ್ದ ಮೊಕದ್ದಮೆಯು ಕಂಟೋನ್ಮೆಂಟ ಡಿಸ್ಟ್ರಿಕ್ಟ ಕೋರ್ಟಿನಲ್ಲಿಯೇ ದರ್ಯಾಫ್ತಿಯಾಗಿ ಪರಸ್ಪರ ಸಮಾಧಾನವಾಗತಕ್ಕಬಗ್ಯೆ ಮಾಡಲ್ಪಟ್ಟ ಪ್ರಯತ್ನವನ್ನು ವಾದಿ ಅಂಗೀಕರಿಸದೆ ಹೋಗಲು ಮೊಕದ್ದಮೆ ಕ್ರಮಪ್ರಕಾರ ವಿಚಾರಣೆಯಾಗಿ ಮೆ. ಸ್ಕಾಟ ಎಂಬವರಮೇಲೆ ತಕ್ಸೀರ್‌ಸಾಬೀತಾದ್ದರಿಂದ ಅವರಿಗೆಕೋರ್ಟಿನವರ ಐವತ್ತು ರೂಪಾಯಿಗಳ ಜುಲ್ಮಾನೆ ವಿಧಿಸಿದರು. ಸದರೀ ದಂಡನಾ ದ್ರವ್ಯವನ್ನು ಪ್ರತಿವಾದಿಯು ಕೂಡಲೇ ಕೊಟ್ಟಬಿಟ್ಟಂತೆ ತಿಳಿಯಲಾದೆವು. ಪರಂತು ಸದರೀ ಮೊಬಲಗುಪೈಕಿ ಎಷ್ಟರ ಮಟ್ಟಿಗೆ ವಾದಿಗೆ ಕಂಪೆನ್ಸೇಷನ್ ತರೀಕ್ ಕೊಡಲ್ಪಟ್ಟತೊ ತಿಳಿಯಲಿಲ್ಲವು. ಮುಖ್ಯವಾಗಿ ಲೋಕದೊಳು ಎಲ್ಲವು ಭಾವನಾಧೀನವಾದದರಿಂದ ಯಾವದನ್ನು ನಾವು ಹ್ಯಾಗೆಹ್ಯಾಗೆಭಾವಿಸಿದರೆ ಅದು ಅದರಂತೆಲ್ಲ ತೋರುವದು ಸಹಜವು. ಮಾನನಷ್ಟಕರವಾದದ್ದು ಮಾನನಷ್ಟಕರವಲ್ಲದೆಯೂ, ನಷ್ಟಕರವಲ್ಲದ್ದು ನಷ್ಟಕರವಾಗಿಯೂ ತೋರುವದಕ್ಕೆ ಮನೋಧರ್ಮವೇ ಕಾರಣವು.

The Directors, M. M. S. & M. Co. vs. the *Spectator*.—ಮೈಸೂರು ಮಹಾರಾಜರವರ ಸ್ಪಿನ್ನಿಂಗ್ ವ ಮಾನ್ಯುಫ್ಯಾಕ್ಚರಿಂಗ್ ಕಂಪೆನಿಯ ಡೈರೆಕ್ಟರ್‌ಗಳು ಒಳದೇಶದ ಸ್ಪೆಕ್ಟೇಟರ್ ಪತ್ರಿಕಾಧಿಪರಮೇಲೆ ಇಲ್ಲಿನ ಸಿವಿಲ್ ವ ಮಿಲಿಟರಿ ಸ್ಟೇಷನಿನ ಡಿಸ್ಟ್ರಿಕ್ಟಕೋರ್ಟಿನಲ್ಲಿ ತಂದಿರುವ ಮಾನನಷ್ಟ ಮೊಕದ್ದಮೆಯಂ ಕುರಿತು ಹಿಂದಿನ ವಾರದ ಪತ್ರಿಕೆಯಲ್ಲಿಯೇ ಸೂಚಿಸಿದ್ದೆವಷ್ಟೆ. ಈಚೆಗೆ ಅಂದರೆ ಗತಶುಕ್ರವಾರದ ದಿನ ನಿರ್ಣಯಾರ್ಹಗಳಾದ ಅಂಶಗಳಂ ನಿರ್ಧರಿಸತಕ್ಕಬಗ್ಯೆ ಉಭಯಪಕ್ಷದ ಲಾಯರ್‌ಗಳೂ ಹಾಜರಾಗಿ ಪ್ರಾರಂಭಕಾಲದಲ್ಲಿ ತೋರಬಂದ ಕೆಲವು ಆಕ್ಷೇಪಣೆಗಳನ್ನು ಪ್ರತಿವಾದಿಗಳ ತರಫ ವಕೀಲರು ತಿಳಿಸಲು ಅದರಮೇಲೆ ಕೋರ್ಟಿನವರು ಅವು ಅಂಗೀಕರಿಸದೆ ತಿರಸ್ಕರಿಸಿಬಿಟ್ಟತರುವಾಯ ಫಿರ್ಯಾದ್ ಭಾಗದೊಳು ಕೆಲವು ವಜಾಮಾಡಲ್ಪಟ್ಟುಕಡೆಗೆ ಫೈಸಲಾತಿಯಬಗ್ಯೆ ಇದರಡಿಕಂಡ ಇಷ್ಯೂಗಳನ್ನೇರ್ಪಡಿಸಿದರು, ಅವುಗಳ್ಯಾವವೆಂದರೆ —೧—ಫಿರ್ಯಾದ್ ಅರ್ಜಿಯಲ್ಲಿ ನಮೂದಿಸಲ್ಪಟ್ಟಿರುವ ಮಾತುಗಳಪೈಕಿ ಯೆಲ್ಲಾ ಆಗಲಿ ಅಥವಾ ಒಂದು ಭಾಗವಾಗಲಿ, ಅಬದ್ಧವಾಗಿಯೂ ಅಸೂಯಾ ಜನಕವಾಗಿಯೂ ಮಾನನಷ್ಟಕರವಾದಗಿಯೂ ಇರುತಿವೆಯೋ ಇಲ್ಲವೆ ೨—ಫಿರ್ಯಾದ್ ಅರ್ಜಿಯಲ್ಲಿ ಕಾಣಿಸಿರುವ ಆಕ್ಷೇಪಣೀಯಾಂಶಗಳನ್ನು ತಿಳಿಸುವಣವು ವೃತ್ತಾಂತಪತ್ರಿಕಾ ಸ್ವಾತಂತ್ರ್ಯಕ್ಕೆ ಒಳಪಟ್ಟದ್ದೇ ಅಲ್ಲವೆ. ಆರನೆಯ ಕಲಂನೊಳು ತಿಳಿಸಿರುವಂತೆ, ಮೇಲೆಕಂಡ ವಿಷಯಗಳನ್ನು ಪತ್ರಿಕೆಯಲ್ಲಿ ಛಾಯಿಷ್‌ಮಾಡಿದ ಮಾತ್ರದಿಂದಲೇ ಕಂಪೆನಿಯ ಸರುಕುಗಳಿಗೆ ಲಾಘವವಾಗುತಿದೆಂದು ನುಡಿದ ಮಾತು ಯುಕ್ತವಾದ್ದೇ ಅಲ್ಲವೆ. ೮—ಒಂದುವೇಳೆ ಇದರಿಂದ ನಷ್ಟವುಂಟಾಗಿರುವ ಪಕ್ಷಕ್ಕೆ ವಾದಿಗಳು ಯೆಷ್ಟರತನಕ ಅರ್ಹರಾಗಿರುತ್ತಾರೆ, ಎಂಬ ನಾಲ್ಕು ಬಾಬ್‌ಗಳು ಮುಂದೆ ನಿರ್ಧರಿಸಲ್ಪಡಬೇಕಾದವಾಗಿರುತಿವೆ. ಈ ಮೊಕದ್ದಮೆಯ ಅಖೈರ್ ವಿಚಾರಣೆಯು ಈ ತಿಂಗಳ ೧೯ನೇ ೨೦ನೇ ತಾರೀಖ್‌ಗಳಲ್ಲಿ ನಡೆಯುವಂತೆ ಏರ್ಪಾಡಾಗಿರುತಿದೆ. ಪ್ರಸಕ್ತ ಮೊಕದ್ದಮೆಯು ನ್ಯಾಯಸ್ಥಾನದಲ್ಲಿ ವಿಮರ್ಶೆಯೊಳಿರುವದರಿಂದ ಇದು ಕುರಿತ ನಮ್ಮ ಅಭಿಪ್ರಾಯವನ್ನು ಮೊಕದ್ದಮೆ ಫೈಸಲಾದ ತರುವಾಯ ಫಲಿತಾಂಶದೊಡನೆ ತಿಳಿಸುವೆವು.

TELEGRAPHIC SUMMARY.

ತಂತಿವೃತ್ತಾಂತ ಸಂಗ್ರಹವು.

ಲಂಡನ್, ೨೭ನೇ ಫೆಬ್ರವರಿ.—ನಿನ್ನೆಯದಿನ [illegible]

ಡಾಕ್ಟರ್ ಹಂಟರ್‌ಯವರು ಸದರೀ ನಿರ್ಣಯದಲ್ಲಿ ಕೆಲವು [illegible] ಕೊಂಡರು.

ಇಂಡ್ಯ ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಕಿಂಬರ್ಲಿಯವರಿಂದ ಸೂಚಿಸಲ್ಪಟ್ಟ [illegible] ಕೊಂಡರು. [illegible] ಮಾಡಿದರು.

ಈಗ ಬ್ರಿಟಿಷ ರಾಜ್ಯಕ್ಕೆ ಸೇರಿಸಲ್ಪಟ್ಟ [illegible] ಪಟ್ಟಿಲ್ಲವು.

BANGALORE:—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯುಪಗವಾರ್ಥ್ಥ ಕರ್ಣ್ಣಾಟಕಪ್ರಕಾಶನವರಾಭಿದಾಪ್ರಥಿತಾಹಿತೀಕೊಭಿತಾ ॥ ಮೃಗಾಂಕಹಿತಪಾಸರನಿಹಿತಮುದ್ರಣಾಸಜ್ಜನ್ಯೈರ್ದ್ವಿಕಾಸುವರಿಶೋಭಿತಾವಿಕಸಿತಮನಸಾಸುಸಂಮುದ

Vol. XIII.] BANGALORE—MONDAY. MARCH 8, 1886. [No. 10

ಸಂಪುಟ ೧೩.] ಬೆಂಗಳೂರು:—ಸರ್ ೧೮೮೬ನೇ ಇಸವಿ ಮಾರ್ಚಿ ೮ನೇ ತಾರೀಖು ಸೋಮವಾರ. [ಸಂಚಿಕೆ ೧೦.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ [illegible] ವರುಷ ೧ಕ್ಕೆ	೧೦—೦—೦
ಇಂಗ್ಲಿಷ್ [illegible] ೧ಕ್ಕೆ	೬—೦—೦
ಕನ್ನಡ [illegible] ಪತ್ರಿಕೆ ವರುಷಕ್ಕೆ .	೬—೦—೦
[illegible] ೧ಕ್ಕೆ	೦—೮—೦

ಷರಾ.—[illegible] ಇಂಗ್ಲಿಷ್ [illegible]

ಪ್ರಕಟನೆಯ ರಿವಾಜು.

[illegible]	೧ಕ್ಕೆ	೦—೨—೦
[illegible]	೧ಕ್ಕೆ	೦—೧—೦

NOTICE TO SUBSCRIBERS

[illegible] ನಂದಿ:—

೧. ಕರ್ನಾಟಕ ಪ್ರಕಾಶಿಕೆ [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA.

☞ *Price including Postage, Rs.5-0-0*

ವೈದ್ಯಸಾರ ಸಂಗ್ರಹ.

[illegible]

[illegible]	ರೂ॥	೫—೦—೦
[illegible] ಮತ್ತು ಅಂಚೇ ಹಾಸಲ್		೦—೬—೦

ಟಿ.ವಿ. ವೆಂಕಟ್ರಾವ್, ಅಸ್ಸಿಸ್ಟೆಂಟ್, [illegible]

ನೋಟೀಸ್.

ಇದರಕೆ ವಿಶರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ನಾಟಕ ಪ್ರಕಾಶಿಕಾ ಆಫೀಸಿನಲ್ಲಿ ಕ್ರಯಕ್ಕೆ ಸಲ್ಪಡುವವು.—

ಕನ್ನಡ ಟೀಕಾಸಹಿತ [illegible] ಸಂಸ್ಕೃತ ಗ್ರಂಥಗಳು.

[illegible] ...	೧—೪—೦
[illegible] ...	೦—೧೨—೦
ಛಪ್ಪನ್ನ (ಷಟ್ಪಂಚಾಶತ್) ...	೦—೩—೦
[illegible]	೧—೫—೦
[illegible] ...	೦—೪—೦
[illegible]	೦—೧೪—೦
[illegible] ...	೦—೬—೦
[illegible] ...	೦—೨—
[illegible] ...	೫—೦—೦

ಕನ್ನಡ ಗ್ರಂಥಗಳು.

[illegible] ...	೦—೬—೦
[illegible] ...	೦—೪—೦
[illegible] ...	೦—೩—೬
[illegible]	೦—೨—೬
[illegible] ...	೦—೪—೦
[illegible] ...	೦—೨—೦
[illegible] ..	೦—೨—೬
[illegible] ...	೦—೬—೦
[illegible] ..	೦—೩—೦
[illegible]	೦—೨—೦
[illegible] ...	೦—೦—೬
ಇಂಗ್ಲಿಷ್ ಕನ್ನಡ [illegible]	೧—೧—೦
[illegible]	೨—೦—೦
[illegible] ...	೦—೧೨—೦
[illegible] ...	೩—೪—೬
[illegible] ...	೩—೪—೬
[illegible] ೧ನೇ ಸಂಚಿಕೆ. ...	೦—೮—೦
[illegible] ೨ನೇ ಸಂಚಿಕೆ.	೧—೮—೦
[illegible] ...	೦—೮—೦

ಸಂಸ್ಕೃತ [illegible] ಗ್ರಂಥಗಳು.

ವಿಷ್ಣುಸಹಸ್ರನಾಮ. ...	೦—೫—೦
[illegible] ಸಹಸ್ರನಾಮ. ...	೦—೨—೬
[illegible] ...	೦—೨—೬
[illegible] ...	೦—೦—೬
[illegible] ...	೦—೧—೬
೧ [illegible] ...	೦—೧—೦

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಮ್ ಕೆಲಸಗಳನ್ನು ಜಾಗರೂಕತೆಯಿಂದಲೂ ಶೀಘ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿತಗದುಕೊಳ್ಳಲ್ಪಡುವದು.

ನೋಟೀಸು

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ.

ಈತಾರೀಖು ಲಾಗಾಯತು ಈ ಕೆಳಗೆ ರುಜು ಮಾಡಿರುವವರು ಪಾರ್ಟನರ್ಸ್ ಯಾನೆ ಪಾಲ್ದಾರರಾಗಿ ಸೇರಿರುವದರಿಂದ, ಇನ್ನುಮೇಲೆ ಸಮಸ್ತವಿಧವಾದ ಲಾಕ್ಕೆ ಸಂಬಂಧಪಟ್ಟ ಕೆಲಸಗಳು, "ದೀ ಅಂತೆ ಆನಂದರಾವ್, ಅಡ್ವೋಕೇಟ್ಸ್" ಯೆಂಬ ಹೆಸರಿನಿಂದ ನಡೆಸಲ್ಪಡುತವೆ. ಮೆ॥ ವೆಂಕಟರಾಮೈಯನವರು ಜ್ಯೂನಿಯರ್ ಪಾರ್ಟನರ್.

ಮೈಸೂರು, ೧ನೇ ಮಾರ್ಚಿ, ೧೮೮೬ } ಯಂ. ಟೀ. ಅ. ಆನಂದರಾವ್, ಅಡ್ವೋಕೇಟ್ಸ್.

ಕರ್ಣ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MARCH 8, 1886.

೧೮೮೬ನೇ ಮಾರ್ಚಿ ೮ನೇ ತಾ॥ ಸೋಮವಾರ.

ಶ್ಲೋ॥ ಸರ್ವಜ್ಞತಾಂಸದಸಿವಾಕ್ಪಟುತಾಂಪ್ರಸೂತೆ ವಾತ್ಸಲ್ಯದುಷ್ಪ್ರಸರೋರುಹಮೊಪ್ರಣಾಮಃ॥ತ್ವಾಮ ವದಾಮಮನುಹಮನುಸ್ಮರಾಮಿ ತ್ವಾಂಮಪಸ್ಸೋಮಿಕರ ಗಾಜವದಿತ್ವಸೋಪ॥

RETIREMENT OF MR H. HUDSON

ಈಗ್ಯೆ ಬಹುಕಾಲದಿಂದ ಈದೇಶದಲ್ಲಿ ಉನ್ನತಾಧಿಕಾರದೊಳಿದುತ, ಬಹುಮಂದಿ ದೊಡ್ಡಮನುಷ್ಯರ ಪ್ರೀತಿ ಗೌರವಗಳಿಗೆ ವಿಷಯರಾಗಿ ಪ್ರಸಿದ್ಧರೆನಿಸಿಕೊಂಡಿರ್ಪ ಇಲ್ಲಿನ ಕಂಟ್ರೋಲರವರಾದ ಮೆ॥ಹಡ್ಸನ್‌ಯವರು ಮುಂದಿನವಾರದೊಳುತಮ್ಮಕೆಲಸವಂಬಿಟ್ಟು ನಿವೃತಿಸುಖಾಭಿಲಾಷೆಯೊಡನೆ ಸ್ವದೇಶಕ್ಕೆ ಪ್ರಯಾಣವಾಗುವರೆಂದು ಕೇಳುತ್ತೇವೆ. ಮೆ॥ ಹಡಸನ್‌ಯವರ ಸಂಬಂಧವು ಇಲ್ಲಿಗೆ ಇವರೊಡನೆ ನಿವೃತ್ತಿಯಾಗುವದಾಗಿ ಇವರಂ ಕುರಿತ ಕೆಲವು ಅಂಶಗಳನ್ನು ಈ ಸಂದರ್ಭದಲ್ಲಿ ಜನಗಳ ತಿಳುವಳಿಕೆಯಬಗ್ಯೆ ಇವರತಿಳಿಸುವೆವೆಂತೆನೆ,—

ಮೆ॥ ಹಡಸನ್‌ಯವರು ೧೮೩೭ನೇ ಇಸವಿಯಲ್ಲಿ ಜನಿಸಿ ೧೬ ಸಂವತ್ಸರಗಳತನಕ ವಿದ್ಯಾಭ್ಯಾಸಮಾಡುತಲಿದ್ದು, ೧೮೫೪ನೇ ಇಸವಿ ಮಾರ್ಚಿತಿಂಗಳಲ್ಲಿ ಬಂಗಾಳೇ ಸಿವಿಲ್ ಆಡಿಟರ್ ಆಫೀಸಿನಲ್ಲಿ ಒಬ್ಬ ಕ್ಲರ್ಕಾಗಿ ಪ್ರವೇಶಿಸಿದರು. ೧೮೫೦ನೇ ಇಸವಿಯಲ್ಲಿ ಬಂಗಾಳೆ ಅಕೌಂಟೆಂಟ್ ಜನರಲ್ಲವರ ಆಫೀಸಿನೊಳು ಅಸಿಸ್ಟೆಂಟರಾಗಿ ನೋಕರರಾದರು. ೧೮೫೭ನೇ ಇಸವಿಯಲ್ಲಿ ಇಂಡ್ಯಗವರ್ನಮೆಂಟಿನ ಅಕೌಂಟೆಂಟ್ ಜನರಲ್ಲವರ ಆಫೀಸ್ ಜನರಲ್‌ಖಾತಾ ಹಿತೆ ಅಸಿಸ್ಟೆಂಟಕೆಲಸಕ್ಕೆ ಬಡ್ತೀ ಮಾಡಲ್ಪಟ್ಟು ಸದರೀ ಕೆಲಸದಲ್ಲಿ ೬೧ನೇ ಇಸವಿಯತನಕ ಇರುತಲಿದ್ದರು. ಬಳಿಕ ೧೮೬೧ನೇ ಇಸವಿ ಆಗಸ್ಟು ತಿಂಗಳಲ್ಲಿ ಇಂಡ್ಯದೇಶದ ಆಡಿಟರ್ ಜನರಲ್ಲವರಿಗೆ ನಾಲ್ಕನೆಯ ಅಸಿಸ್ಟೆಂಟರಾಗಿ ನೋಕರರಾದರು. ೧೮೬೩ನೇ ಇಸವಿ ಜನವರಿತಿಂಗಳಲ್ಲಿ ಆಕ್ಟಿಂಗ್ ಆಡಿಟರ್ ವ ಅಕೌಂಟಂಟರಾಗಿ ನೋಕರರ್ನ್ಮಾಡಲ್ಪಟ್ಟು ಪ್ರಥಮತಃ ಈ ದೇಶಕ್ಕೆಬಂದರು. ೧೮೬೩ನೇ ಇಸವಿ ಏಪ್ರಿಲ್ ತಿಂಗಳಲ್ಲಿ ಇಲ್ಲಿನ ನೌಕರಿಯೊಳಿರುತಲಿದ್ದಾಗ್ಯೂ ಅಕೌಂಟೆಂಟ್ ಜನರಲವರ ೩ನೇ ಅಸಿಸ್ಟೆಂಟಕೆಲಸಕ್ಕೆ ಬಡ್ತೀ ಮಾಡಲ್ಪಟ್ಟರು. ತರುವಾಯ ೧೮೬೩ನೇ ಇಸವಿ ಜನವರಿತಿಂಗಳಲ್ಲಿ ಮೈಸೂರು ಡೆಪ್ಯುಟಿ ಅಕೌಂಟೆಂಟ್ ಜನರಲ್ಲಾಗಿ ಪೋಕರರಾದರು. ಆವಮೊದಲು ಇದುವರಿವಿಗೂ, ಅಂದರೆ ೨೩ಸಂವತ್ಸರಗಳಕಾಲ ಸದರೀಕೆಲಸವನ್ನು ಅವಿಚ್ಛಿನ್ನವಾಗಿ, ಬಹುಮಂದಿ ಚೀಫ್ ಕಮಿಷನರ್‌ಗಳ ಪ್ರಶಂಸೆಗೆ ವಿಷಯವಾಗುವಂತೆ ನಿರ್ವಹಿಸುತಬಂದರು. ಇಷ್ಟುಮಾತ್ರವಲ್ಲದೆ, ೧೮೬೮ನೇ ಇಸವಿ ಆಕ್ಟೋಬರ್ ತಿಂಗಳಲ್ಲಿ ಮೈಸೂರು ಮತ್ತು ಕೊಡಗು ದೇಶದ ರಿಜಿಸ್ಟ್ರಾರ್‌ಜನರಲ್ಲಾಗಿ ಆಕ್ಟಿಂಗ್‌ತರೀಕ್ ನೋಕರರಾದವಲ್ಲದೆ ೧೮೬೯ನೇ ಇಸವಿಯೊಳು ಸದರೀ ಕೆಲಸದಲ್ಲಿ ಕಾಯಂ ಮಾಡಲ್ಪಟ್ಟರು. ೧೮೭೦ನೇಇಸವಿಯಲ್ಲಿ ಸ್ಟ್ಯಾಂಪ್ ಸೂಪರಿಂಟೆಂಡೆಂಟ್ ಕೆಲಸವನ್ನೂ, ೧೮೮೦ನೇ ಇಸವಿಯಲ್ಲಿ ತಮ್ಮ ಇತರ ಕೆಲಸಗಳೊಡನೆ ಮೈಸೂರು ಗವರ್ನಮೆಂಟ್‌ಪ್ರೆಸ್ ಸೂಪರಿಂಟೆಂಡೆಂಟ್ ವ ಮೈಸೂರು ಗಜೆಟ್ ಕಂಪೈಲರ್ ಕೆಲಸಗಳಚಾರ್ಜನ್ನೂ ವಹಿಸಿ ಎಲ್ಲವಂ ತೃಪ್ತಿಕರವಾಗಿ ನಿರ್ವಹಿಸುತಬಂದರು.

ಮೆ॥ ಹಡಸನ್‌ಯವರು ಈದೇಶಕ್ಕೆ ಬರುವದಕ್ಕೆ ಪೂರ್ವ, ಇಲ್ಲಿನ ಪದ್ಧತಿಯನ್ನನುಸರಿಸಿ ಕನ್ನಡ ಭಾಷೆಯಿಂದಲೇ ಇಲ್ಲಿನ ವಿಶಿಷ್ಟ ಜಮಾಖರ್ಚು ಲೆಕ್ಕಗಳೂ ತಯಾರ್ಮಾಡಲ್ಪಡುತಲಿದ್ದವು. ಇಂಡ್ಯ ಗವರ್ನಮೆಂಟನವರು ಬಜೆಟ್ ಪದ್ಧತಿಯಂ ನೆಲೆಗೊಳಿಸಲು, ಅವರು ಸದರೀ ಕ್ರಮವನ್ನು ಈ ದೇಶದಲ್ಲಿಯೂ ಜಾರೀಯೊಳು ತರತಕ್ಕದ್ದೆಂದು ಹುಕುಂಮಾಡಿದರು. ಆಗ ಕನ್ನಡ ಲೆಕ್ಕಗಳೆಲ್ಲವೂ ಬದಲಾಯಿಸಲ್ಪಟ್ಟು ಈಗಿನ ಕ್ರಮವು ನೆಲಗೊಂಡಿತು. ಆಗ ಮೆ॥ ಹಡಸನ್‌ಯವರು ಸ್ವಸಾಮರ್ಥ್ಯದಿಂದ ಅನೇಕಕ್ರಮಗಳನ್ನು ಏರ್ಪಡಿಸಿ, ಅವಂ ಜಾರೀಯೊಳುತಂದರು. ಮೆ॥ ಬೌರಿಂಗ್‌ಯವರು ಈದೇಶದಲ್ಲಿ ನೆಲಗೊಳಿಸಿದ ಕ್ರಮಗಳೆಲ್ಲವೂ ಇವರೊಡನೆ ಹೋದಂತೆ ಹೇಳಬಹುದಾಗಿವೆ. ಯಾತಕ್ಕೆಂದರೆ ಮೆ॥ ಹಡಸನ್‌ಯವರು, ಮೆ॥ಬೌರಿಂಗ್‌ಯವರಿಂದ ಇಲ್ಲಿಗೆ ಕರೆಯಿಸಲ್ಪಟ್ಟವರಾಗಿಯೂ ಅವರಮಾರ್ಗವನ್ನೇ ಅನುಸರಿಸಬೇಕೆಂಬ ಕೋರಿಕೆಯುಳ್ಳವರಾಗಿಯೂ, ಅವಂ ಕಾಪಾಡುವದರೊಳು ದೃಢಪ್ರಯತ್ನವುಳ್ಳವರಾಗಿಯೂ ಇದ್ದದರಿಂದ ಇವರಿರುವತನಕ ಸದರೀ ಕ್ರಮಗಳು ಅಬಾಧಿತವಾಗಿರುವವು ಮುಂದೆ ಬರತಕ್ಕವರ ಇಷ್ಟಾನುಗುಣವಾಗಿ ಯೆಲ್ಲವೂ ರೂಪಾಂತರವನ್ನೈದುವದೇ ಹೊರ್ತು ಈಗಿನ ಪದ್ಧತಿಯೇ ಪೋಷಿಸಲ್ಪಡುವದೆಂಬ ನಂಬಿಕೆ ನಮಗಿಲ್ಲವು. ಮೆ॥ ಹಡಸನ್‌ಯವರು ಯಾವಾಗಲು ಮಿತವ್ಯಯದೊಳು ದೃಷ್ಟಿಯುಳ್ಳವರಾಗಿರುತ್ತಾರೆ. ಇವರ ಅನುಭವವನ್ನೂ ದೂರದೃಷ್ಟಿಯನ್ನೂ, ಫಿನಾನ್ಷಿಯಲ್ ವಿಷಯದಲ್ಲಿ ಇವರು ಕೊಟ್ಟಿರುವ ಸರಕ್ಯುಲರ್‌ಗಳೇ ನಿರೂಪಿಸುತಿವೆ. ಮೆ॥ ಹಡಸನ್‌ಯವರು, ಸ್ವಭಾವತಃ ಉಪಕಾರಿಗಳಾಗಿಯೂ, ಪ್ರಜಾಭಿಮಾನವುಳ್ಳವರಾಗಿಯೂ ಸಾಧ್ಯವಾದಮಟ್ಟಿಗೆ ಅನ್ಯರಿಗೆ ಸಹಾಯಮಾಡಬೇಕೆಂಬ ತಾತ್ಪರ್ಯವುಳ್ಳವರಾಗಿಯೂ, ಇರುತ್ತಾರೆ. ಮೆ॥ ಬೌರಿಂಗ್‌ಯವರ ಕಾಲದಲ್ಲಿ ಈ ದೇಶಕ್ಕೆ ಕರೆಯಿಸಲ್ಪಟ್ಟ ಯೂರೋಪಿಯನ್ ಆಫಿ

ಸರಿಗಳ ಪೈಕಿ ಇವರೊಬ್ಬರು ಉಳಿದಿದ್ದರು ಈಗ ಇವರೊಡನೆ ಪೂರ್ವ-ಸಂಬಂಧವು ನಿಶ್ಶೇಷವಾದಂತೆಯಾಯಿತು. ಮುಖ್ಯವಾಗಿ ಚಿರಪರಿಚಿತರಾದ ಮೆ|| ಹಡೆಸರ್ಸಯವರು ಏತದ್ದೇಶೀಯರಿಗೆ ಮಾಡಿದ ಉಪಕಾರವು ಚಿರಸ್ಮರಣೀಯವಾದದ್ದಾಗಿರುತ್ತದೆ. ಇವರಿಗೆ ಅವಿಚ್ಛಿನ್ನವಾದ ಆಯುರಾರೋಗ್ಯಾದಿಗಳಂ ಶ್ರೀಹರಿ ಕೃಪೆಗೈಯಬೇಕೆಂದು ಕೋರುವೆವು

AGRICULTURAL LOANS

ನ್ಯಾಯವಿಧಾಯಕ ಸಭೆಯ ಮೆಂಬರುಗಳು ವೈಸರಾಯಿ ವ ಗವರ್ನರ್ ಜನರಲ್ಲವರ ಮಂಜೂರಾತಿಯಂ ಪಡೆದು ಮದರಾಸ್ ಗವರ್ನರವರು ಸರ್ ೧೮೮೪ನೇ ಇಸವಿ ೧೨ನೇ ನಂಬರ್, (ಕೃಷಿಜೀವಿಗಳಿಗೆ ಸಾಲ ಕೊಡತಕ್ಕ ವಿಷಯವೊಳು ಹುಟ್ಟಿದ) ಆಕ್ಟಿನ ೧೦ನೇ ಸೆಕ್ಷನ್ ಅನುಸರಿಸಿ ಇದರಡಿ ಕಂಡ ನಿಬಂಧನೆಗಳನ್ನು ಮಾಡಿರುತ್ತಾರೆ. ಇದರಡಿ ಕಂಡ ಉದ್ದೇಶಗಳಿಗಾಗಿ ವ್ಯವಸಾಯಾರ್ಹಗಳಾದ ಜಮೀನುಗಳ ಸ್ವಂತಗಾರರಿಗೂ, ಹಿಡುವಳೀದಾರರಿಗೆ ಸಹ ಪ್ರತಿ ಸಂದರ್ಭದಲ್ಲಿಯೂ, ಒಂದುಸಾವಿರ ರೂಪಾಯಿಗಳಿಗೆ ಮೀರದಂತೆ ಸಾಲ ಕೊಡಬಹುದು. (೧) ಬೀಜ ಮತ್ತು ಉಳುವ ಎತ್ತುಗಳನ್ನು ಕೊಂಡುಕೊಳ್ಳುವಣ, (೨) ಬೆಂಕಿ ಅಥವಾ ಪ್ರವಾಹದದೆಸೆಯಿಂದ ನಷ್ಟವಾದ ಮನೆಗಳನ್ನು ಮರಳಿ ಕಟ್ಟಿಕೊಳ್ಳುವಣ, ಜಮೀನ್ ಅಭಿವೃದ್ಧಿಗಾಗಿ ಕೊಡತಕ್ಕಸಾಲಗಳಬಗ್ಯೆ ೧೮೮೩ನೇ ಇಸವಿಯಲ್ಲಿ ಹುಟ್ಟಿದ ಆಕ್ಟಿನೊಳು ನಮೂದಾಗದೆ ಯಿರುವಂತಾ, ವ್ಯವಸಾಯೋದ್ದೇಶಗಳಿಗೆ ಸಂಬಂಧಪಟ್ಟ ಇತರ ಉದ್ದೇಶಗಳು, ಇವುಗಳಿಗಾಗಿ ಸಾಲದಬಗ್ಯೆ ಜುಬಾನೀಯಾಗಿ ದರಖಾಸ್ತು ಮಾಡಬಹುದು. ಪರಂತು, ಅಂತಾ ಸಂದರ್ಭದಲ್ಲಿ ದರಖಾಸ್ತುಗಳನ್ನಂಗೀಕರಿಸತಕ್ಕ ಆಫಿಸರರು ಅದು ಕೂಡಲೇ ಲಿಖಿತಮೂಲಕವಾಗಿ ತೆಗದುಕೊಳ್ಳತಕ್ಕದ್ದು. ಸಾಲದ ಪ್ರತಿದರಖಾಸ್ತನ್ನೂ ಕಲೆಕ್ಟರಿಗಾಗಲಿ ಡಿವಿಜನ್ ಇನ್‌ಚಾರ್ಜ್ ಆಫಿಸರರಿಗಾಗಲಿ, ತಾಲ್ಲೂಕ ತಹಸೀಲ್‌ದಾರರಿಗಾಗಲಿ, ಡೆಪ್ಯುಟಿ ತಹಸೀಲ್‌ದಾರರಿಗಾಗಲಿ, ಮಾಡಿಕೊಳ್ಳಬಹುದು ದರಖಾಸ್ತು ಮಾಡಲ್ಪಟ್ಟ ಮೊಬಲಗು ೨೫೦ ರೂಪಾಯಿಗಳಿಗೆ ಮೀರದೆ ಯಿದ್ದರೆ ಅವನ್ನು ತಹಸಿಲ್‌ದಾರರಾಗಲಿ, ಡೆಪ್ಯುಟಿ ತಹಸೀಲ್‌ದಾರರಾಗಲಿ ಕೊಡಬಹುದು ೫೦೦ ರೂಪಾಯಿಗಳಿಗೆ ಮೇಲ್ಪಡದ ಸಾಲವನ್ನು ಸಬ್‌ಡಿವಿಜನ್ ಆಫಿಸರು ಕೊಡತಕ್ಕದ್ದಲ್ಲದೆ ಅದಕ್ಕೆ ಮೇಲ್ಪಟ್ಟ ಮೊಬಲಗೆಲ್ಲವೂ, ಕಲೆಕ್ಟರಿಂದಲೇ ಕೊಡಲ್ಪಡತಕ್ಕದ್ದು ದರಖಾಸ್ತನ್ನು ಅಂಗೀಕರಿಸುವ ಆಫಿಸರರು ಪ್ರಥಮತಃ ದರಖಾಸ್ತುದಾರನ ಯೋಗ್ಯತೆಯನ್ನೂ, ಸಾಲವನ್ನು ತೀರಿಸುವದಕ್ಕೆ ಆತನಿಗೆ ವುಂಟಾಗಿರುವ ಉಪಪತ್ತಿಯನ್ನೂ ಸಾಲ ಕೊಡುವದರೊಳಗಣ ಔಚಿತ್ಯವನ್ನೂ ವಿಚಾರಪೂರ್ವಕ ನಿರ್ಧರಿಸಿಕೊಳ್ಳತಕ್ಕದ್ದು. ದರಖಾಸ್ತು ಮೊಬಲಗು, ಸ್ವತಃ ಕೊಡುವದಕ್ಕೆ ಅನುಗುಣವಾಗಿದ್ದರೆ ಆಗ ದರಖಾಸ್ತುದಾರನ ವಿಷಯಕವಾದ ಮೇಲೆ ಕಂಡ ಅಂಶಗಳನ್ನೆಲ್ಲ ವಿಚಾರಿಸಿ ತಿಳಿದುಕೊಂಡು ಸಮರ್ಪಕವಾಗಿ ಕಂಡುಬಂದರೆ ಕೂಡಲೇ ಸಾಲ ಕೊಡತಕ್ಕ ಆಫಿಸರರು ದರಖಾಸ್ತಿನಮೇಲೆ ತನ್ನ ಅಭಿಪ್ರಾಯವನ್ನು ಬರೆಯತಕ್ಕದ್ದು ದರಖಾಸ್ತು ಮೊಬಲಗು ಸ್ವತಃ ಕೊಡಕೂಡದ್ದಾಗಿದ್ದರೆ ದರಖಾಸ್ತುದಾರನ ವಿಷಯಕವಾದ ತನ್ನ ತನಿಖೆಯ ಫಲಿತಾಂಶದೊಡನೆ ಸದರೀ ದರಖಾಸ್ತನ್ನು ಕ್ರಮವಾದ ಕಲೆಕ್ಟರಿಂದ ಮೊಕರರ್ ಮಾಡಲ್ಪಟ್ಟವರಿಗಾಗಲಿ, ಅಂತಾ ಸಾಲದ ಮೊಬಲಗನ್ನು ಕೊಡುವದಕ್ಕೆ ಅಧಿಕಾರವುಳ್ಳವರಿಗಾಗಲಿ, ಕಳುಹಿಸತಕ್ಕದ್ದು. ಸಾಗುವಳೀ ಲಾಯಖ್ ಜಮೀನಿನ ಯಜಮಾನನಾಗಲಿ, ಹಿಡುವಳೀದಾರನಾಗಲಿ, ಕಂದಾಯ ಬಾಕೀದಾರನಾಗಿದ್ದರೆ ಅಂತವನಿಗೂ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ಸ್ ಆಕ್ಟನ್ನನುಸರಿಸಿ, ಒಂದುಸಲ ಸಾಲಪಡೆದಿರುವವನಿಗೂ, ಈ ರೂಲ್ಸ್‌ಗಳನ್ನನುಸರಿಸಿ ಕಲೆಕ್ಟರವರ ಪ್ರತ್ಯೇಕ ಹುಕುಂ ವಿನಾ ಸಾಲ ಕೊಡಕೂಡದು. ಮಸಲಾ ಅಂತವರಿಗೆ ಕೊಡಬೇಕಾದ ಸಂದರ್ಭದಲ್ಲಿ ತನಗೆ ವುಂಟಾದ ಕಾರಣಗಳನ್ನು ಸ್ವತಃ ರಿಕಾರ್ಡ್ ಮಾಡತಕ್ಕದ್ದು ಇದರಡಿ ಕಂಡ ಷರತ್‌ಗಳಿಗೆ ವಾಗ್ದಾನ ಮಾಡುವ ಪಕ್ಷದಲ್ಲಿಯೇ ಸಾಲ ಕೊಡತಕ್ಕದ್ದು ಬೀಜ ಕೊಂಡುಕೊಳ್ಳತಕ್ಕಬಗ್ಯೆ ಕೊಡಲ್ಪಡುವ ಸಾಲದ ಮೊಬಲಗು ಒಂದು ವರುಷದೊಳಗಾಗಿ ವಾಪಸ್ ಮಾಡಲ್ಪಡತಕ್ಕದ್ದು. ದನಗಳು ಕೊಂಡುಕೊಳ್ಳುವದಕ್ಕಾಗಲಿ ಈ ಆಕ್ಟಿನ ಅಥವಾ ಈ ನಿಬಂಧನೆಗಳ ಅರ್ಥರೀತ್ಯಾ ಬೇರೆ ಯಾವ ಉದ್ದೇಶಕ್ಕಾಗಲಿ ಕೊಡತಕ್ಕ ಸಾಲವು ೨ ವರುಷಗಳೊಳಗಾಗಿಯಾಗಲಿ, ಅಥವಾ ರೆವಿನ್ಯೂ ಬೋರ್ಡಿನವರ ಮಂಜೂರಾತಿಯಮೇಲೆ ಕಲೆಕ್ಟರವರಿಗೆ ಯುಕ್ತವೆಂದು ತೋರಿದಗೆ ೧೦ ವರುಷಗಳೊಳಪಟ್ಟ ಒಂದು ವಾಯಿದೆಯೊಳಾಗಲಿ, ವಾಪಸ್ ಮಾಡತಕ್ಕದ್ದು ಯಾವನೇ ಆಗಲಿ ತಾನು ಪಡೆದ ಸಾಲದ ಮೊಬಲಗು ಪೈಕಿ ಪೂರಾ ಅಥವಾ ಒಂದುಭಾಗವಂ ಮೇಲೆ ಕಂಡ ವಾಯಿದೆಯೊಳಗಾಗಿ ಬೇಕಾದಾಗ ವಾಪಸು ಮಾಡಬಹುದು ಸಾಲಕೊಡುವ ಆಫಿಸರರು ನಿಷ್ಕರ್ಷೆ ಸಬಹುದಾದ ವಾಯಿದೆಗಳಲ್ಲಿ ಬಡ್ಡಿ ಸಹಿತನೆ ಸಾಲ ವಾಪಸ್ ಮಾಡಲ್ಪಡತಕ್ಕದ್ದು ಕಲೆಕ್ಟರ ಅಥವಾ ಡಿವಿಜನ್ ಆಫಿಸರರ ಹುಕುಂ ಅನುಸರಿಸಿ ಸಾಕಾದ ಕಾರಣಗಳಮೇಲೆ ವಾಯಿದೆಗಳನ್ನು ಮುಂದಕ್ಕೆ ತಳ್ಳಬಹುದು ಪರಂತು ಅಂತಾ ಸಂದರ್ಭಗಳಲ್ಲಿ ವಾಯಿದೆಯಂ ಎತ್ತಾಯಿಸುವದಕ್ಕೆ ವುಂಟಾದ ಕಾರಣವನ್ನು ಆಬಗ್ಯೆ ಹುಕುಂ ಕೊಡುವ ಆಫಿಸರರು ಬರೆದಿಡತಕ್ಕದ್ದು ಸಾಧಾರಣವಾಗಿ ಸಾಲದಬಡ್ಡಿಯು ಸಾಲೀಯಾನಾ ಸೇಕಡಾ ೬ ರೂಪಾಯಿಗಳಿಗೆ ಮೇಲ್ಪಡದಂತೆ, ಸಾಲಕೊಡತಕ್ಕ ತಾರೀಖು ವೊದಲು ಲೆಕ್ಕಮಾಡಿ, ವಸೂಲ್ಮಾಡತಕ್ಕದ್ದು ಪರಂತು ಲೋಕಲ್ ಗವರ್ನಮೆಂಟನವರು ತಮ್ಮ ಪರ್ಯಾಲೋಚನೆಯ ಮೇಲಿನ ವಿಶೇಷ ಕಾರಣಗಳಮೇಲೆ ಬಡ್ಡೀ ದರವನ್ನು ಕಡಮೆ ಮಾಡಲಿಕ್ಕೂ ಬಡ್ಡೀ ವಸೂಲ್ ಮಾಡದೆ ಯಿರುವದಕ್ಕೂ ಕೊಡಬೇಕಾದ ಭಾಗದಲ್ಲಿ ಸೋಡಿಮಾಡಲಿಕ್ಕೂ ಸ್ವತಂತ್ರರಾಗಿರತಕ್ಕದ್ದು ಕೆಳಗೆ ಕಂಡ ನಮೂನೆಯ ಪ್ರಕಾರ ಸಾಧಾರಣವಾಗಿ ಲವಣಾನ ಪತ್ರಗಳು, ಸಾಲಪಡೆದಂತಾ ಜಮೀನ್‌ದಾರ್ ವ ಹಿಡುವಳೀದಾರರಿಂದ, ಸಾಲ ವಾಪಸ್ ಮಾಡುವ ಬಾಬತೀ ಬಗ್ಯೆ ಬರೆಸಿಕೊಳ್ಳಲ್ಪಡತಕ್ಕದ್ದಲ್ಲದೆ ಸಾಲದ ಮೊಬಲಗು ನೂರು ರೂಪಾಯಿಗಳಿಗೆ ಮೇಲ್ಪಟ್ಟ್ಯಾಗಲೆಲ್ಲ ಸದರೀ ಅವಮಾನ ಪತ್ರಗಳನ್ನ ಅವಶ್ಯ ಪಡೆಯತಕ್ಕದ್ದು ಸಾಲ ಮಂಜೂರಾದಮೇಲೆ ಅದು ಕೊಡತಕ್ಕ ಆಫಿಸರರು ದರಖಾಸ್ತುದಾರರಿಗಾಗಲಿ, ಮಂಜೂರಾದ ಅವರ ದರಖೆ ಏಜಂಟರಿಗಾಗಲಿ ಹಣ ಬಾವತೀಮಾಡಿ ರಸೀದ್ ಪಡೆಯತಕ್ಕದ್ದು. ದನಗಳಿಗಾಗಿ ಸಾಲ ಪಡೆದರೆ ಆಗ ಕಲೆಕ್ಟರೇ ಸ್ವತಃ ದನಗಳನ್ನು ಖರೀದೀಮಾಡಿ ದರಖಾಸ್ತುದಾರನ ವಶ ಪಡಿಸತಕ್ಕದ್ದು ಎಂಬದು ಮೇಲೆ ಕಂಡ ನಿಬಂಧನೆಗಳು ಕೃಷಿ ಜೀವಿಗಳಿಗೆ ಉಪಯುಕ್ತವೆಂಬದರೊಳು ಸ್ವಲ್ಪಮಾತ್ರವೂ ಸಂಶಯವಿಲ್ಲವು ಮತ್ತು ರೈತರಿಗೆ ಸೌಲಭ್ಯವನ್ನುಂಟುಮಾಡಬೇಕೆಂಬ ತಾತ್ಪರ್ಯದೊಡನೆ ಗವರ್ನಮೆಂಟನವರು ಈ ನಿಯಮವನ್ನೇರ್ಪಡಿಸಿದಂತೆ ತೋರುತ್ತಿದೆ ಜನೋಪಕಾರ ದೃಷ್ಟಿಯುಳ್ಳ ಸರ್ಕಾರದವರ ಉದ್ದೇಶ ಪ್ರಯತ್ನಗಳು ಶ್ಲಾಘ್ಯಗಳೇಯಹುದು. ಪರಂತು ಸದರೀ ನಿಬಂಧನೆಗಳನ್ನು ಜಾರೀಯಲ್ಲಿ ತರುವಾಗ್ಯೆ ಮಧ್ಯೆ ವುಂಟಾಗಬಹುದಾದಂತಾ ಅಂತರಾಳಕಗಳಾದ ಪ್ರತಿಕೂಲ್ಯಗಳಿಗೆ ಅವಕಾಶ ವುಂಟಾಗದಂತೆ ಜಾಗ್ರತೆಯಾಗಿ ತನಿಖೀ ಮಾಡುತಲಿದ್ದರೆ ಇದರಿಂದ ರೈತರಿಗೆ ವಿಶೇಷ ಸೌಲಭ್ಯವೂ ಸರ್ಕಾರದವರಿಗೆ ಕೀರ್ತಿಯೂ ವುಂಟಾಗುವದು ಈ ಯೇರ್ಪಾಡು ಬಹುಜನೋಪಯುಕ್ತವಾಗಿರುವದರಿಂದ ಇದನ್ನು ಇತರ ನೇಟಿವ್‌ಸಂಸ್ಥಾನಾಧಿಪತಿಗಳು ಸಹ ಅಂಗೀಕರಿಸಿ ಅದರಂತೆ ನಡಿಸುತ್ತಬಂದರೆ ಬಹಳ ಪ್ರತಿಷ್ಠಾನಹವಾಗಿರುವದು.

Occasional Notes
ನೈಮಿತ್ತಿಕವಿಷಯನ್ಯಾಸ

Depreciation of silver—ಬೆಳ್ಳಿನಾಣ್ಯಗಳ ಕ್ರಯ ದಿನೇದಿನೆ ಕಡಿಮ್ಮಾಗುತಬರುವದರಿಂದ ಇಂಡ್ಯದೇಶದ ರೆವಿನ್ಯೂಗೆ ಲಭ ಯಿವ್ರುಹಾಗು ವದೆಂದು ಇಂಡ್ಯ ಗವರ್ನಮೆಂಟನವರು ಮರಳಿ ಸ್ಟೇಟ್ ಸೆಕ್ರಟರಿಯವರಿಗೆ ಬರೆದಿರುವದು ತಿಳಿಯಬರುತ್ತಿದೆ

A title to be conferred—ವೈಸರಾಯ್ ಸಾಹೇಬರವರು ಕಲ್ಕತ್ತೆಗೆ ಬಂದು ಸೇರಿದಕೂಡಲೆ ಬರ್ಮಾರಾಜ್ಯದ ಮೊದಲನೇ ಕಮಿಷನರಾದ ಮೆ|| ಬರ್ನಾರ್ಡ್‌ಯವರಿಗೆ ಕೆ ಸಿ ಎಸ್ ಐ. ಎಂಬ ಪ್ರಶಸ್ತಿಯು ಕೊಡಲ್ಪಡುವದೆಂದು ಊಹಿಸಲ್ಪಟ್ಟಿದೆ

An honour conferred—ಸಂಸ್ಕೃತಭಾಷೆಯಲ್ಲಿ ಪಂಡಿತ ರೆನ್ನಿಸಿಕೊಂಡಿರುವ ಮಾನಿಯರ್ ವಿಲ್ಲಿಯಂಸ್‌ಯೆಂಬವರಿಗೆ ಮಹಾರಾಜ್ಞೀಯವರು ಕೆ ಸಿ ಎಸ್ ಐ ಎಂಬ ಪ್ರಶಸ್ತಿಯಂ ಕೊಟ್ಟಿರುತ್ತಾರೆ

A donation—ಇಂಡ್ಯದೇಶದ ಹೆಂಗಸರಿಗೆ ಸ್ತ್ರೀಮೂಲಕ ಚಿಕಿತ್ಸೆಯಂ ಮಾಡಿಸುವದಕ್ಕಾಗಿ ಲಾರ್ಡ್ ಡಫರಿನ್‌ಸಾಹೇಬರವರ ಬಾಯಿಯವರಿಂದ ಏರ್ಪಡಿಸಲ್ಪಟ್ಟ ಫಂಡಿಗೆ ಮಹಾರಾಜ್ಞೀಯವರು ನೂರುಪೌಂಡ್, ಅಂದರೆ, ಒಂದುಸಾವಿರದಷ್ಟಲ್ಲದೆ ರೂಪಾಯಿಗಳು ಕಳುಹಿಸಿ ಇರುತ್ತಾರೆ

Death of General Wilson—ವೈಸರಾಯಿಯವರ ಮಂತ್ರಾಲೋಚಕ ಸಮಾಜದಲ್ಲಿ ಮಿಲಿಟರಿಮೆಂಬರಾಗಿದ್ದ ಜನರಲ್ ವಿಲ್ಸನ್‌ಯವರು ಈಚೆಗೆ ಕೆಲವು ದಿನಗಳಿಂದ ಕಾಹಿಲೆಯಾಗಿದ್ದರಷ್ಟೆ. ಸದರೀಯವರು ಈತಿಂಗಳ ಗುರ್ರೇತಾರೀಖಿನಲ್ಲಿ ಕಲ್ಕತ್ತೆಯೊಳು ಮೃತಪಟ್ಟರೆಂದು ಕೇಳಲು ವಿಷಾದಿಸುತ್ತೇವೆ

Jail buildings in Hyderabad—ಹೈದರಾಬಾದ್ ಸರ್ಕಾರದವರು ಅಲ್ಲಿ ಹೊಸದಾಗಿ ಜೆಯಿಲ್ ಕಟ್ಟತಕ್ಕಬಗ್ಯೆ ಹಿಂದೆ ಅಂದಾಜ್ ಮಾಡಿದ್ದ ಮೊತ್ತವನ್ನು ಈಗ ಒಂದುಲಕ್ಷ ರೂಪಾಯಿಗಳಿಗೆ ಜಾಸ್ತೀ ಮಾಡಬೇಕೆಂದು ಅಲ್ಲಿನ ಪೈಸಾಸ್ ಕಮಿಟಿಯವರು ಯೋಚಿಸುತಿದ್ದಾರೆ ರುತ್ತಾರೆ

Private Secretaries to Mr. Gladstone—ಇಂಡ್ಯರಾಜ್ಯದ ಸಾಬಕ್ ವೈಸರಾಯಿಯವರಾದ ಲಾರ್ಡ್ ರಿಪನ್‌ಯವರಿಗೆ ಪ್ರೈವೇಟ್ ಸೆಕ್ರೆಟರಿಯಾಗಿದ್ದ ಮೆ|| ಪ್ರಿಮ್ರೋಸ್ ಎಂಬವರು, ಮಹಾರಾಜ್ಞೀಯವರ ಪ್ರಧಾನಮಂತ್ರಿಯವರಾದ ಮೆ| ಗ್ಲೆಡ್‌ಸ್ಟನ್‌ಯವರ ಪ್ರೈವೇಟ್ ಸೆಕ್ರೆಟರಿಯಾಗಿ ನಿಯಮಿಸಲ್ಪಟ್ಟಿರುತ್ತಾರೆ

China's claim in Burmah—ಚೀನಾ ಸರ್ಕಾರದವರು ಬರ್ಮಾದೇಶದಲ್ಲಿ ಭಾಮೋ ಯೆಂಬದು ಸೇರಿ ತಮಗೆ ಕೆಲವು ಭೂಮಿ ಬರಬೇಕೆಂದು ಕೇಳುವದಲ್ಲದೆ ತಮಗೆ ಕಪ್ಪ ಸಹ ಕೊಡಬೇಕೆಂದು ಕೇಳುತ್ತಾರೆ ಇಂಗ್ಲಿಷಿನವರು ಅವರಿಗೆ ಕಪ್ಪ ಕೊಡುವರೆಂದು ತೋರಲಿಲ್ಲವು, ಅಥವಾ ಕೊಟ್ಟಾಗ್ಯೂ ಅಫ್ಘಾನಿಸ್ತಾನ್ ಅಮೀರರಿಗೆ ಕೊಡುವಂತೆ ಸಹಸಿಡಿ ಕೊಡಬಹುದು.

The S M Railway—ದಕ್ಷಿಣ ಮಹಾರಾಷ್ಟ್ರ ರೆಯಿಲ್‌ರಸ್ತೆಯ ಪೈಕಿ ಪಶ್ಚಿಮ ದರ್ಖನ್ ಪ್ರಾಂತದ ಮೊದಲನೇಭಾಗದಲ್ಲಿ, ಅಂದರೆ, ಪುನೇ ಇಂದ ಕೋರಿಗಾಂ ಎಂಬದರವರಿವಿಗೆ, ಎಂಭತ್ತು ಮೈಲುಗಳ ದೂರ, ವರ್ಷಾಕಾಲತೀರಿದಕೂಡಲೇ ಪ್ರಯಾಣಸ್ಥರಗಾಡಿ ನಡೆಯಲು ಪ್ರಾರಂಭವಾಗುವದು. ಬಳ್ಳಾರಿ ಮತ್ತು ಗೋವಾ ಶಾಖೆಗಳಲ್ಲಿ ಕಾಮಗಾರೀಗಳು ತೃಪ್ತಿಕರವಾಗಿನಡೆಯುತಲಿವೆ

Rewards offered—ಯೂರೋಪಿಯನೇ ಆಗಲಿ, ನೇಟವೇ ಆಗಲಿ, ಬರ್ಮಾದೇಶ ಭಾಷೆಯಲ್ಲಿ ಮೇಲಿನ ಮತ್ತು ಕೆಳಗಿನ ತರಗತಿ ಪರೀಕ್ಷೆ ಕೊಡತಕ್ಕ ಆಫಿಸರಗಳು ಮತ್ತು ಸೋಲ್ಜರಗಳಿಗೆ ಕ್ರಮವಾಗಿ ೩೬೦ ಮತ್ತು ೪೦೦ ರೂಪಾಯಿಗಳ ಇನಾಂ ಕೊಡುವದಾಗಿ ಫಾಯಿಷ್ ಮಾಡಲ್ಪಟ್ಟಿರುವಂತೆ ಒಂದಾನೊಂದು ಪತ್ರಿಕೆಯವರ ಪರೀ ಬಾತಮೀದಾರನು ಬರೆಯುತ್ತಾನೆ.

The Gaekwar's brother—ಬಡೋದೆಗಾಯಕವಾಡಿಯವರ ಸಹೋದರರಾದ ಗಣಪತಿ ರಾವ್‌ಸಾಹೆಬ್‌ರವರು ಇಂಗ್ಲಾಂಡಿಗೆಹೋಗಿ ಆಕ್ಸ್‌ಫೋರ್ಡ್‌ಯೂನಿವರ್ಸಿಟಿಯಲ್ಲಿ ಒಂದುವರುಷಕಾಲ ವಿದ್ಯಾಭ್ಯಾಸ ಮಾಡಿ ಈಚೆಗೆ ಕೆಲವು ದಿನಗಳ ಹಿಂದೆ ಬಡೋದೆಗೆ ವಾಪಸ್‌ಬಂದರಷ್ಟೆ. ಸದರೀಯವರು ಬ್ಯಾರಿಸ್ಟರ್ ಪರೀಕ್ಷೆಗೆ ಓದುವದಕ್ಕಾಗಿ ಮರಳಿ ಇಂಗ್ಲಾಂಡಿಗೆ ಹೋಗಬೇಕೆಂದು ಆಲೋಚಿಸುತಲಿರುವಂತೆ ಒಂದಾನೊಂದು ನೇಟಿವ್‌ಪತ್ರಿಕೆ ಹೇಳುತಿದೆ

The Mysore State Railway—ದಕ್ಷಿಣ ಮಹಾರಾಷ್ಟ್ರ ರೆಯಿಲ್‌ವೇ ಕಂಪೆನಿಯವರು ಮೈಸೂರು ಸ್ಟೇಟ್ ರೆಯಿಲ್‌ವೇಯನ್ನು ತೆಗೆದುಕೊಂಡು ಅವನ್ನು ತಮ್ಮ ರಸ್ತೆಗೆ ಸೇರಿಸುವದಕ್ಕೆ ಬೇಕಾದ ಒಡಂಬಡಿಕೆ ಇಪ್ಪತ್ತೆಂಟು ಕರಾರುಗಳನ್ನು ಸಾಲ ಪಡೆದಂತೆ ಇಂಗ್ಲಾಂಡಿನಿಂದ ಪ್ರತಿವೃತ್ತಾಂತ ಬಂದುದೆಯೂ ಮೈಸೂರು ಸ್ಟೇಟ್ ರೆಮಿಡ್ಯೂರಸ್ತೆಯಂ ಸದರೀ ಕಂಪೆನಿಯವರಿಗೆ ಕೊಡಬಹುದಂತೆ ಇಂಡ್ಯಗವರ್ನಮೆಂಟನವರಿಂದ ಹುಕುಂ ಹುಟ್ಟುವದೆಂತಲೂ ಪಯೋನಿಯರ್ ಪತ್ರಿಕೆ ಹೇಳುತಿದೆ.

Applications for appointments—ಸರ್ಕಾರದವರು ಯಾವದಾದರು ನೌಕರಿಗಳಂ ಕಲ್ಪಿಸಬೇಕೆಂದು ಯೋಚಿಸುವದಾಗಿ, ಅಥವಾ ಕಲ್ಪಿಸಿದ್ದಾಗಿ ತಿಳಿಯಬಂದಲ್ಲಿ ಅವುಗಳಿಗೆ ತಮಗೆ ಇರುವ ಹಕ್ಕುದಾರಿಯಂ ಸಿದ್ಧಪಡಿಸಿಕೊಳ್ಳುವ ಉದ್ದೇಶದೊಡನೆ ಆಫಿಸರಗಳು, ಸರ್ಕಾರೀಯಾಗಿ ಆಗಲಿ ಅಥವಾ ಅನ್ಯಮಾರ್ಗಗಲಿ ಖುದ್ದು ಗವರ್ನಮೆಂಟಗೆ ಬರೆದುಕೊಳ್ಳುವ ವಾಡಿಕೆ ಯುಂಟಾಗಿರುವದರಿಂದ, ಮಂತ್ರಾಲೋಚಕ ಸಮಾಜದೊಳಗೂ ಕೂಡಿ ಮದರಾಸ್ ಗವರ್ನರವರು, ಮುಂದೆ ಇಂತಾ ಅರ್ಜಿಗಳನ್ನು ಹಾಗೆ ಬರೆದುಕೊಳ್ಳತಕ್ಕ ಆಫಿಸರನು ತನ್ನ ಇಲಾಖಾ ಮೊಖ್ತೇಸರನ ಮಾರಿಫತ್ತು ಕಳುಹಿಸತಕ್ಕದ್ದೆಂದು ಹುಕ್ಕುಂ ಮಾಡಿರುತ್ತಾರೆ.

King Theebaw's grievances—ಬರ್ಮಾರಾಜ್ಯದ ಸಾಬಕ್ ಅರಸರಾದ ತೀಬಾಯವರಿಗೆ ಪ್ರಾಪ್ತವಾಗಿರುವ ಕಷ್ಟಗಳ ವಿಷಯದಲ್ಲಿ ಮಗವಾಸಿ ಯೆಂಬ ಪತ್ರಿಕೆ ತಿಳಿಸುವದೇನಂದರೆ, ದುರ್ದಶೆ ಹೊಂದಿದ ಶತ್ರುವಿನ ವಿಷಯದಲ್ಲಿ ಹ್ಯಾಗೆ ನಡಿಸಬೇಕೊ ಅದನ್ನು ಇಂಗ್ಲಿಷಿನವರು ಕಲಿಯಲಿಲ್ಲವು ನೆಲಕ್ಕೆ ಬಿದ್ದ ಶತ್ರುವನ್ನು ತುಳುದುಹಾಕುವದು ತಮಗೆ ಕೀರ್ತಿಪ್ರದವೆಂದು ಭಾವಿಸುತ್ತಾರೆ. ತೀಬಾ ಅರಸನು ಈಗ ಬೈದಿಯಾಗಿ ಕ್ರೋಲೀಸ್ ಪಹರೆಯಲ್ಲಿರುತಲಿದ್ದಾನೆ ತೀಬಾಯವರ ವಿಷಯದಲ್ಲಿ ಈರೀತಿ ನಡಿಸುವದಕ್ಕೆ ಅವನು ಏನುತಪ್ಪಿತಮಾಡಿದರು? ಅವರು ಕೊಲೆಯಾಗಲಿ ಕಳ್ಳತನವಾಗಲಿ ವ ಡಂಭವು ರಣ್ಣವಚಿತವಾ ಸಿಹ್ಮಾನಾಟಕಾರಿಯು ಈಗನಿಮ್ಮ ಬಾಗಿಲಬಳಿ ಬಂದುಭಿಕ್ಷೆ ಬೇಡುತಲಿದ್ದಾರೆ, ಇದು ನಿಮಗೆ ಸಂತೋಷಕರವಲ್ಲವೆ ‹ ಇಂಗ್ಲಿಷಿನವರೆ! ನಿಜವಾಗಿ ನಿಮ್ಮ ನಡತೆ ನೀಚವಾದದ್ದು ದೊಡ್ಡವರನ್ನು ಹ್ಯಾಗೆ ಗೌರವಿಸಬೇಕೊ ಅದು ನಿಮಗೆ ತಿಳಿಯದು, ಎಂಬದು.

Discovery of a large diamond.—ಹೈದರಾಬಾದಿಗೆ ಯೆಂಬತ್ತುಮೈಲಿಗಳ ಫಾಸಲೆಯಲ್ಲಿರುವ ಒಬ್ಬ ಬಡರೈತನಿಗೆ ಒಂದು ದೊಡ್ಡ ವಜ್ರದ ಕಲ್ಲು ಸಿಕ್ಕಲು ಅವನು ಅದರ ಸ್ವರೂಪವನ್ನರಿಯದೆ ಅದನ್ನು ಒಂದು ಕಲ್ಲಿನಮೇಲಿಟ್ಟು ಒಡೆದುಹಾಕಿದನು. ಅದರ ಶಕಲಗಳ ಪೈಕಿ ದೊ

ಕ್ಕದು ಯೇಳುರೂಪಾಯಿಗಳ ತೂಕವಿತ್ತು. ಎಲ್ಲವೂ ಸೇರಿ ಇಪ್ಪತ್ತುಲಕ್ಷ ರೂಪಾಯಿಗಳ ಕ್ರಯ ಬಾಳುವದೆಂದು ಅಂದಾಜ್ ಕಟ್ಟಿದರು. ಹೈದರಾಬಾದ್ ಸುಸ್ಥಾನದ ದಿವಾನ್ ಪೇಷ್ಕಾರರಾದ ಚಂದೂಲಾಲ್‌ಯವರು, ಸದರೀ ವಜ್ರವು ನಿಜಾಂ ಸರ್ಕಾರಕ್ಕೆ ಸೇರತಕ್ಕದ್ದೆಂದು ಹೇಳಿ ತಮ್ಮವಶ ಮಾಡಿಕೊಂಡರು, ಪರಂತು ಸದರೀ ಬಿನರ್ಸ್ಟೈನ್‌ನಿಗೆ ಯೇನು ಇನಾಂ ಕೊಟ್ಟರೊ ಅದು ಮಾತ್ರ ತಿಳಿಯಲಿಲ್ಲವು, ಎಂದು ಬಿಂದಾನೊಂದು ಪತ್ರಿಕೆಯ ಹೈದರಾಬಾದ್ ಬಾತಮಿದಾರನು ಬರೆಯುತ್ತಾನೆ.

The Income Tax.—ಇನ್‌ಕಂಟ್ಯಾಕ್ಸ್‌ಯೆಂಬ ಆದಾಯಾನೀ ತೆರಿಗೆ ಯೇರ್ಪಾಟಾದ ವಿಷಯದಲ್ಲಿ ಭರತವಾಸಿ ಯೆಂಬ ಪತ್ರಿಕೆ ಹೇಳುವದೇನೆಂದರೆ, ವೈಸ್‌ರಾಯ್‌ಯವರು ಹಿಂದೇ ವರುಷದಲ್ಲಿ ಇನ್‌ಕಂಟ್ಯಾಕ್ಸ್ ಕಾನೂನನ್ನು ಮಂಜೂರ್ಮಾಡಿಬಿಟ್ಟರು ಇದಕ್ಕೆ ಪ್ರಾರಂಭ ಯಾವರೀತಿ ಹಣ ವಸೂಲಾಗಬೇಕೊ, ಯಾವ ಆಫಿಸರ್‌ಗಳೂ ಶಿಬ್ಬಂದಿಗಳೂ ನೌಕರರ್ಮಾಡಲ್ಪಡಬೇಕೊ, ಇವನ್ನು ನಿರ್ಣಯ ಮಾಡಿದ್ದರು. ತಾವು ಮಾಡುವ ಕಾರ್ಯವನ್ನು ಆಕ್ಷೇಪಿಸುವದಕ್ಕೆ ಶಕ್ತರ್ಯಾರೂ ಇಲ್ಲವೆಂದು ವೈಸ್‌ರಾಯ್‌ಯವರು ಚೆನ್ನಾಗಿ ಬಲ್ಲರು, ಇದರಿಂದಲೇ ಮುಂದಾಗಿಯೇ ಅದಕ್ಕೆ ಬೇಕಾದ ಯೋಜನೆಗಳನ್ನೆಲ್ಲ ಮಾಡಿದ್ದರು. ಹಳೇ ಆಫಿಸರ್‌ಗಳನ್ನು ನೌಕರಿಯಲ್ಲಿಟ್ಟುಕೊಂಡರೆ ಜನಗಳಿಗೆ ಯಾವವಿಧ ಕಷ್ಟವೂ ಉಂಟಾಗಲಾರದೆಂದು ಗವರ್ನ್‌ಮೆಂಟ್‌ನವರು ನಂಬಿ ಯಿರುತ್ತಾರೆ, ನಮಗೆ ಅಷ್ಟು ನಂಬಿಕೆ ಇಲ್ಲವು. ಅದರಿಂದ ಬಡವರಿಗೆ ಮತ್ತಷ್ಟು ಕಷ್ಟ ಪ್ರಾಪ್ತವಾಗುವದು. ಹಳೇ ಆಫಿಸರ್‌ಗಳು ಚೆನ್ನಾಗಿ ತಿಳಿದವರಾಗಿರತಕ್ಕವರು, ಅವರಿಗೆ ಹೊಸದಾಗಿ ತಿಳಿದು ಕೊಳ್ಳಬೇಕಾದ ಅಂಶ ಯಾವದೂ ಇರಲಾರದು, ಎಂಬದು.

LOCAL AND PROVINCIAL NEWS

ಒಳದೇಶವುತ್ತು ತಾಲ್ಲೂಕಜಾತಿವೃತ್ತಾಂತಗಳು.

Holiday.—ಈ ತಿಂಗಳ ೧೦ನೇ ತಾರೀಖ್ ಬುಧವಾರ ಶ್ರೀಮನ್ಮಹಾರಾಜರವರ ವರ್ಧಂತಿಯಾದದರಿಂದ ಆಬಗ್ಗೆ ಈ ಸಂಸ್ಥಾನದ ವಿಶಿಷ್ಟ ಇಲಾಖೆಗಳಿಗೂ ರಜಾ ಕೊಡಲ್ಪಟ್ಟಿದೆ.

Dismissal.—ಮುಜರಾಬಾದ್ ಪೋಲೀಸ್ ಇನ್ಸ್‌ಪೆಕ್ಟರಾದ ಮೆ|| ಏತಾನಪ್ಪಯವರು ಸರಪಾಯಿ ಮಾಡಲ್ಪಟ್ಟಿರುವಂತೆ ಹಿಂದಿನಪತ್ರಿಕೆಯಲ್ಲಿ ತಿಳಿಸಿದ್ದೆವಷ್ಟೆ. ಈಚೆಗೆ ಅದು ಬರತರಫಿಯಾಗಿ ಪರಿಣಮಿಸಿತೆಂದು ತಿಳಿಯಲಾದೆವು.

The Central Jail.—[illegible] ಸೆಂಟ್ರಲ್‌ಜೈಲ್ ಸೂಪರಿಂಟೆಂಡೆಂಟರಾದ [illegible] ತಮ್ಮ ಕಾಹಿಲೇ ರಜಾವನ್ನು [illegible] ತಿಕ್ಕೊಂಡು ಕಳೆದ ಮಂಗಳವಾರದಿನ [illegible] ಮ್ಯಾಕೆಂಜ್ಯೂಯವರಿಂದ ತಮ್ಮ ಕೆಲಸದ ಚಾರ್ಜನ್ನು ಮರಳಿ ವಹಿಸಿದರು.

Return of the Dewan.—ಈ ಸಂಸ್ಥಾನದ ದಿವಾನರಾದ ಮೆ|| ಕೆ. ಶೇಷಾದ್ರಿ ಅಯ್ಯರವರು ತಮ್ಮ ಅಂಡರ್ ಸೆಕ್ರೆಟರಿಯವರೊಡನೆ, ವೈಸ್‌ರಾಯ್‌ಯವರ ಭೇಟಿಯಬಗ್ಗೆ ಮದರಾಸಿಗೆ ಹೋಗಿದ್ದರಷ್ಟೆ. ಅಲ್ಲಿನ ತಮ್ಮ ಕಾರ್ಯವು ನೆರವೇರಿಸಿಕೊಂಡು ಕಳೆದ ಶನಿವಾರ ಪ್ರಾತಃಕಾಲ ಇಲ್ಲಿಗೆ ವಾಪಸು ಬಂದರು.

A civil dispensary.—ಮೈಸೂರು ಗವರ್ನ್‌ಮೆಂಟಿನವರ ಮಂಜೂರಾತಿಯಮೇರೆ ಸಿವಿಲ್ ಸರ್ಜನ್‌ರವರು ಕೊಟ್ಟಸುಕುಂ ಅನುಸರಿಸಿ ಈತಿಂಗಳ ಗುರ್ರೇತಾರೀಖಿನಲ್ಲಿ ಚಿನ್ನಪಟ್ಟಣದೊಳು ಸಿವಿಲ್ ಡಿಸ್ಪೆನ್ಸರಿ, ಅಂದರೆ ಔಷದಶಾಲೆ ಒಂದು ಏರ್ಪಾಡಾಯಿತು.

The Civil Court Nizir.—ಇಲ್ಲಿನ ಸಿವಿಲ್ ವ ಮಿಲಿಟರಿ ಸ್ಟೇಷನಿನ ಸಿರ್ವಾಸ ಜಸ್ಟಿಯರಾದ ಕರ್ನಲ್ ಹಿಲ್‌ಯವರ ಸಿಫಾರಸ್ಸಿನಮೇಲೆ, ಸದರೀ ಕೋರ್ಟಿನ ನಾಜರಿಗೆ ಇದುವರಿವಿಗೆ ಸ್ಥಿರ ಚರ ಸ್ವತ್ತುಗಳ ಅಮಲ್‌ಜಾರೀಗಳ ತನಿಖೆಬಗ್ಗೆ ಸಲ್ಲುತಿದ್ದ ೨೦ ರೂಪಾಯಿಗಳ ರುಸುಮಿಗೆ ೨೦ ರೂಪಾಯಿಗಳ ಇಜಾಫೆ ಕೊಡಲ್ಪಟ್ಟಿತೆಂದು ತಿಳಿಯಬರುತಿದೆ.

The M. S. Railway.—ಮೈಸೂರು ಸ್ಟೇಟ್ ರೈಲ್ವೆಯು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯವರಿಗೆ ಕೊಡಲ್ಪಟ್ಟಂತೆಯೂ ಅದರ ಚಾರ್ಜನ್ನು ವಹಿಸತಕ್ಕಬಗ್ಗೆ ರೈಲ್ವೆಇಲಾಖೆಯವರು ಕೆಲವರು ಇಲ್ಲಿಗೆ ಬಂದಿರುತ್ತಾರೆಂತಲೂ ಪ್ರವಾದವುಂಟಾಗಿದೆ. ಯದ್ಯಪಿ ಈಪ್ರವಾದವನ್ನು ಸುಳ್ಳೆಂದೆಣಿಸಲಾಗದು. ಮುಂದೆ ಈಇಲಾಖಾ ನೌಕರರಗತಿ ಏನು ?

Extortion and bribery.—ಬೆಂಗಳೂರು ತಾಲೂಕು ಪೋಲೀಸ್ ಜಮೆದಾರ್ ಸುಬ್ಬರಾವ್ ಎಂಬಾತನು ಸುಲಿಗೆ ವ ತಸ್ತು ರುಸುವತ್ ಚಾರ್ಜಿನ ಮೇರೆ ಟೌನ್ ಮ್ಯಾಜಿಸ್ಟ್ರೇಟರಿಂದ ದರ್ಯಾಫ್ತು ಮಾಡಲ್ಪಟ್ಟು ತಕ್ಸೀರ್ ಸಾಬೀತಾಗಿ ನೂರಐವತ್ತುರೂಪಾಯಿಗಳ ಜುರ್ಮಾನೆ ಅದಂ ಕೊಡದವಕ್ಷಕ್ಕೆ ೬ ತಿಂಗಳ ಕಠಿಣಕೈದ್ ಸಜಾ, ಈಮೇರೆ ದಂಡಿಸಲ್ಪಟ್ಟನು.

The contemplated arrangements.—ಎಲ್ಲಿನಕಂಟ್ರೋಲರಾದ ಮೆ||ಪಟೆರ್ಸನ್‌ಯವರು ಕೆಲಸದಿಂದ ನಿವೃತ್ತರಾಗುವಂತೆ ಈ ಪತ್ರಿಕೆಯ ಮತ್ತೊಂದು ಭಾಗದಲ್ಲಿ ತಿಳಿಸಿದ್ದೇವೆಯಷ್ಟೆ. ಮೆ|| ಪಟೆರ್ಸನ್‌ಯವರು, ಈಗ ನಿರ್ವಹಿಸುತಲಿರುವ ಕೆಲಸಗಳ ಪೈಕಿ ಕಂಟ್ರೋಲರ್ ಮತ್ತು ಖಜಾನೇ ಛಾರ್ಜಗಳನ್ನು ಆಸಿಸ್ಟೆಂಟ್ ಕಂಟ್ರೋಲರ್ ಮೆ|| ರಂಗಸ್ವಾಮಿ ಅಯ್ಯಂಗಾರ್ರವರಿಗೂ, ರಜಿಸ್ಟ್ರೇಷನ್ ಇಲಾಖಾ ಚಾರ್ಜನ್ನು ಅವರ ಅಣ್ಣಂದಿರಾದ ಮೆ|| ಕೃಷ್ಣಮಾಚಾರ್ಯರಿಗೂ, ಪ್ರೆಸ್ ಸೂಪರಿಂಟೆಂಡೆಂಟ್ ಮತ್ತು ಕಂಪೈಲರ್ ಕೆಲಸಗಳ ಚಾರ್ಜನ್ನು ಮೆ|| ರೆನಾಲ್ಡ್‌ಯವರಿಗೂ ಒಪ್ಪಿಸಿ ತಮ್ಮ ಪಾರನು ನಿವೃತ್ತಿಸಿಕೊಳ್ಳುವರಾಗಿದಾರೆಂತಲೂ, ಈ ವಿವರವಾಗಿ ಏರ್ಪಾಡು ನಡೆಯತಕ್ಕದ್ದೆಂದು ಉನ್ನತಾಧಿಕಾರಿಗಳು ನಿರ್ಣೈಸಿದಾರೆಂತಲೂ ತಿಳಿಯಬರುತಿದೆ. ಪ್ರಸಕ್ತ ಈ ಯೇ[illegible] ಮೂವರು ಆಫಿಸರ್‌ಗಳಿಗೆ [illegible]ಗಿರುವ ಸಂಬಳಗಳಿಗಿಂತ ಜಾಸ್ತಿಯಾಗಿ ಸಲ್ಲುವದೆಂದು ಕೇಳುತ್ತೇವೆ.

M. A. Examination.—ಈಸಲದ ಎಂ. ಏ. ಪರೀಕ್ಷೆಗೆ ಈಪ್ರಾಂತದ ಇಬ್ಬರು ಹೋಗಿದಾರೆಂದು ಹಿಂದಿನಪತ್ರಿಕೆಯಲ್ಲಿಯೇ ಸೂಚಿಸಿದ್ದವೆಷ್ಟೆ. ಸದರೀ ಇಬ್ಬರೂ ಈಸಲ ತೇರ್ಗಡೆಯಾಗಲಿಲ್ಲವೆಂದು ಕೇಳಲಿಕ್ಕೆ ನಾವು ಬಹಳ ಅತೃಪ್ತರಾಗಿದ್ದೇವೆ. ಪರಂತು ಇದು ಸ್ವಲ್ಪಮಟ್ಟಿಗೆ ಶಮನಗೊಳಿಸಲಿಕ್ಕೆ ತಕ್ಕದಾಗುವಂತೆ ಪ್ರೊಫೆಸರ್ ಸಂಸ್ಕೃತ ಆಫಿಸರ್ ಮೆ|| ತಿರುಮಲಾಚಾರ್ಯರ ಸಹೋದರರಾದ ಮೆ. ಬಿ. ಕಳಕೋಟಾಚಾರ್ಯರು ಫಿಜಿಯಾಲಜಿ (ಅಂದರೆ ಶಾರೀರಕ ಮತ್ತು ಜೀವತತ್ವ ನಿರ್ಣಾಯಕ ಶಾಸ್ತ್ರ)ವನ್ನು ಪ್ರಾಧಾನ್ಯೇನ ಪರೀಕ್ಷಾ ಗ್ರಂಥವಾಗಿ ಪರಿಗ್ರಹಿಸಿ ಅದರಲ್ಲಿ ತೇರ್ಗಡೆಯಾದರೆಂಬ ವೃತ್ತಾಂತವು ನಮಗೆ ವಿಶೇಷ ಸಂತೋಷವನ್ನುಂಟುಮಾಡಿತು. ಬವಸ್ಸೂತ್ ಮೈಸೂರು ದೇಶೀಯರಿಬ್ಬರು ಬಿ. ಎಲ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಮೈಸೂರುದೇಶೀಯರ ಪ್ರಾಬಲ್ಯಕ್ಕೆ ಪ್ರತಿಬಂಧಕವಾಗಿ ಭಾವಿಸಲ್ಪಡುತಲಿದ್ದ ವಿದ್ಯಾಪ್ರಯುಕ್ತವಾದ ನ್ಯೂನತೆಯನ್ನು ತೊಲಗಿಸಿಕೊಂಡು ಅನ್ಯರ ವಾಗ್ಬಂಧನವುಮಾಡುವಷ್ಟು ಯೋಗ್ಯತೆಯನ್ನು ಭಗವಂತನು ಉಂಟುಮಾಡಿದ್ದಕ್ಕಾಗಿ ಆತನು ಯೆಷ್ಟು ಕೊಂಡಾಡಿದರೂ ಸಾಲದು. ಮುಖ್ಯವಾಗಿ ಪುರುಷ ಪ್ರಯತ್ನವನ್ನು ಲೋಪವಿಲ್ಲದೆ ಮಾಡಿದರೆ ಅದರ ಫಲಾಫಲಗಳು ದೈವಾಧೀನವಾದದರಿಂದ ಅದು ಮುಂದೆ ಹ್ಯಾಗಾದರು ಆಗಬಹುದು.

Mr D Sethu-Row's case.—ಸಾಬಿಕ್ ಖಜಾನೇಬಕ್ಷಿಯಾದ ಮೆ|| ಸೇತೂರಾಯರವರು ಬೆಂಗಳೂರು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಿಂದ ದರ್ಯಾಫ್ತುಮಾಡಲ್ಪಡುತಲಿದಾರೆಂದು ಗತವಾರದಲ್ಲಿಯೇ ಸೂಚಿಸಿದ್ದೆವಷ್ಟೆ. ಕಡೆಗೆ ಇಂಡಿಯನ್ ಪೀನಲ್‌ಕೋಡ್‌ ಗರ್ರನೇ ಸೆಕ್ಷನ್‌ರೀತ್ಯಾ ನಂಬಿಕೆ ದ್ರೋಹ ಮಾಡಿದರೆಂಬ ತಕ್ಸೀರ್ ಮೆ|| ಸೇತೂರಾಯರಮೇಲೆ ಅಪಾದನೆಯಾಗಿ ರುಜುವಾತಾದದರಿಂದ ಅವರಿಗೆ ೬ತಿಂಗಳ ಸಾದಾರಣಕೈದೂ, ೩೫೦ ರೂಪಾಯಿಗಳ ಜುರ್ಮಾನೆಯೂ, ಅದು ಕೊಡದೆ ತಪ್ಪಿದರೆ ೬ವಾರಗಳ ಜಾಸ್ತಿಕೈದೂ ವಿಧಿಸಲ್ಪಟ್ಟವು. ಮೆ|| ಸೇತೂರಾಯರವರು ದಿವಾನರಮೂಲಕ ಮಹಾರಾಜರಿಗೆ ಸ್ವಾಪರಾಧವು ಕ್ಷಮಿಸಬೇಕೆಂದು ಬರೆದುಕೊಂಡಿರುವಂತೆ ತಿಳಿಯಬರುತಿದೆ. ನಾಳೇ ಬುಧವಾರವು ಶ್ರೀಮನ್ಮಹಾರಾಜರವರ ವರ್ಧವರ್ಧಂತಿ ಯಾದದರಿಂದ ಇಂತಾ ಸಂತೋಷಕರವಾದ ಶುಭದಿನದಲ್ಲಿ ಶ್ರೀಮನ್ಮಹಾರಾಜರವರು ಸ್ವಾಭಾವಿಕವಾದ ಅನುರಾಗವನ್ನು ವ್ಯಕ್ತಪಡಿಸಿ ನಿರ್ಭಾಗ್ಯರಾದ ಸದರೀ ಮುದುಕರನ್ನು ಖುಲಾಸೇಮಾಡುವಂತೆ ಹುಕುಂಮಾಡಿದರೆ ಬಹುಮಂದಿಗೆ ಸಂತೋಷಕರವಾಗಿರುವದು. ಇಂತಾ ಸಂದರ್ಭಗಳಲ್ಲಿ ಖೈದಿಗಳನ್ನು ಖುಲಾಸೆಮಾಡುವದು ಸಂತೋಷಸೂಚಕವಾಗಿ ಭಾವಿಸಿ ನಡೆಸುತಬರುವದರಿಂದ ಅದನ್ನು ಈಸಂದರ್ಭದಲ್ಲಿ ತಿಳಿಸಬೇಕಾದವರಾದೆವು.

Change of official designation.—ದಿವಾನರವರ ರೆವಿನ್ಯೂ ವ ಜನರಲ್‌ಇಲಾಖಾ ಸೆಕ್ರೆಟರಿ ಯೆಂಬ ಹೆಸರು ಮುಂದೆ ಚೀಫ್ ಸೆಕ್ರೆಟರಿ ಯೆಂಬದಾಗಿ ವ್ಯವಹರಿಸಲ್ಪಡತಕ್ಕದ್ದೆಂದು ಶ್ರೀಮನ್ಮಹಾರಾಜಾ ಸರ್ಕಾರದವರು ಆಜ್ಞಾಪಿಸಿರುವಂತೆ ಗತ ಶನಿವಾರದ ಗೆಜೆಟಿನಮೂಲಕ ತಿಳಿಯಲಾದೆವು. ಪರಂತು ಅದರಿಂದ ಚೀಫ್ ಸೆಕ್ರೆಟೆರಿಗೆ ಸಲ್ಲತಕ್ಕ ತಲಬ್ ವ್ಯಕ್ತವಾಗಲಿಲ್ಲವು. ಈಗ ಮೆ|| ವಿಜಯೇಂದ್ರರಾಯರವರಿಗೆ ಗತ ಜನವರಿ ತಿಂಗಳ ಮೊದಲು ೨೦೦ ರೂಪಾಯಿಗಳ ಇಜಾಫೆ ಯೊಡನೆ ೧೧೦೦ರೂಪಾಯಿಗಳ ತಲಬ್ ಸಲ್ಲುತಿದೆಂದು ಕೇಳುತ್ತೇವೆ. ಈರಾಜ್ಯವು ಶ್ರೀಮನ್ಮಹಾರಾಜರಿಗೆ ಒಪ್ಪಿಸಲ್ಪಡುವದಕ್ಕೆ ಒಂದು ಸಂವತ್ಸರದ ಹಿಂದೆ ಇಲ್ಲಿನ ಆಡಳಿತ ಕ್ರಮವನ್ನು ನೇಟಿವ್ ಪ್ರಭುತ್ವಕ್ಕೆ ಅನುರೂಪವಾಗಿ ಮಾಡಬೇಕಾದ ಭಾರವು ಆಗ್ಯೆ ಚೀಫ್‌ಕಮ್ಮಿಷನರಾಗಿದ್ದ ಸರ್‌ಜೇಂಸ್ ಗಾರ್ಡ್ಡನ್‌ಯವರಿಗೆ ಪ್ರಾಪ್ತವಾದದರಿಂದಲೂ, ಆಗ್ಯೆ ರಿವಿನ್ಯೂ ಕಮ್ಮಿಷನರಾಗಿ ಏರ್ಪಡತಕ್ಕವರೇ ಮುಂದೆ ದಿವಾನರಾಗಬೇಕೆಂದು ವ್ಯವಸ್ಥೆಯಾಗಿದ್ದದರಿಂದಲೂ, ಚೀಫ್ ಕಮ್ಮಿಷನರವರ ಸೆಕ್ರೆಟರಿ ಕೆಲಸವು ಯೆರಡುಭಾಗವಾಗಿ ವಿಂಗಡಿಸಲ್ಪಟ್ಟು ಜನರಲ್ ಇಲಾಖಾ ಚಾರ್ಜು ಆಗಿನ ಸೆಕ್ರೆಟರಿಯಾದ ಮೆ|| ಕನ್ನಿಂಗ್ಹಾಂಯವರಿಗೂ, ರಿವಿನ್ಯೂ ಇಲಾಖಾ ಸೆಕ್ರೆಟರಿ ಕೆಲಸವು ಅರಮನೆಕಂಟ್ರೋಲರಾಗಿದ್ದ ಮೆ|| ರಂಗಾಚಾರ್ಯರವರಿಗೂ ಕೊಡಲ್ಪಟ್ಟಿತು. ಇಂಡ್ಯ ಗವರ್ನ್‌ಮೆಂಟಿನವರ ನಿರ್ಣಯರೀತ್ಯಾ ಮೆ || ರಂಗಾಚಾರ್ಯರವರು ರಿವಿನ್ಯೂ ಕಮ್ಮಿಷನರೆಂದು ಕರೆಯಲ್ಪಡಬೇಕಾಗಿದ್ದಾಗ್ಯೂ ಆಗ ನೌಕರಿಯೊಳಿದ್ದ ಬಹುಮಂದಿ ಯೂರೋಪಿಯನ್ ಆಫಿಸರರಿಗೆ ಅದು ಅಸಮ್ಮತವಾಗಿದ್ದದರಿಂದ ರಿವಿನ್ಯೂ ಸೆಕ್ರೆಟೆರಿಯೆಂತಲೇ ಕರೆಯಲ್ಪಡುತಲಿದ್ದರು. ರಾಜ್ಯ ಒಪ್ಪಿಸಲ್ಪಟ್ಟಮೇಲೆ ಮೆ || ರಂಗಾಚಾರ್ಯರು ದಿವಾನರಾಗಿ ಏರ್ಪಟ್ಟರು. ಮೆ || ಕನ್ನಿಂಗ್ಹಾಂಯವರು ಪೂರ್ವಭಾವಿಯಾಗಿಯೇ ಇಲ್ಲಿನ ಸಂಬಂಧವು ನಿವೃತ್ತಿ ಮಾಡಿಕೊಂಡರು. ಈ ಸಂದರ್ಭದಲ್ಲಿ ಈರೀತ್ಯಾ ಇಬ್ಬರು ಸೆಕ್ರೆಟರಿಗಳ ಕೆಲಸಗಳು ಏಕಕಾಲದಲ್ಲಿ ಖಾಲೀಯಾದದರಿಂದ ಕಡೆಗೆ ಅವು ಮೆ|| ವಿಜಯೇಂದ್ರರಾಯರವರಿಗೆ ಅವಶ್ಯ ಕೊಡಬೇಕಾಗಿಬಂತು. ಮೆ|| ರಂಗಾಚಾರ್ಯರವರು ಜೀವಿಸಿದ್ದ ತನಕ ಇವರ ಸೆಕ್ರೆಟೆರಿಯಕೆಲಸವೂ ತಲಬು ಸಹ ಒಂದೇ ವಿಧವಾಗಿದ್ದವು. ಬಳಿಕ ಮೆ||ರಂಗಾಚಾರ್ಯರವರು ಮೃತಪಟ್ಟಮೇಲೆ ಸೆಕ್ರೆಟರಿಗೆ ಕೆಲಸದ ಗಲಾಟೆಯೂ, ವಿಶೇಷ ಜವಾಬ್ದಾರಿಯೂ, ಅವರಿಗೆ ಅನೇಕರು ಅಸಿಸ್ಟೆಂಟ್‌ಗಳೂ ಕ್ರಮೇಣ ಏರ್ಪಡುತ ಬಂದದರಿಂದ, ಈಗ ೨೦೦ರೂಪಾಯಿಗಳ ಇಜಾಫೆಯೊಡನೆ ಚೀಫ್ ಸೆಕ್ರೆಟೆರಿಯಾಗಿ ಮಾಡಲ್ಪಟ್ಟರೆಂದು ಕೇಳುವದಕ್ಕೆ ಸಂತೋಷಿಸುವೆವಲ್ಲದೆ ಇವರಿಗೆ ಉಂಟಾದ ಉನ್ನತಾಧಿಕಾರಕ್ಕಾಗಿ ನಾವು ಶುಭವಾದನ ಮಾಡುವೆವು.

Vidushy Srirungammagar, on female education.—ಈಚೆಗೆ ಮದರಾಸಿನಿಂದ ಬಂದಿರುವ ವಿದುಷೀ ಶ್ರೀರಂಗಮ್ಮಾಳ್ ಎಂಬಾಕೆಯು ಗತ ಶುಕ್ರವಾರದ ದಿನ ಸಾಯಂಕಾಲ ಇಲ್ಲಿನ ಪಹರ್ ಮ್ಯೂನಿಸಿಪಲ್ ಸ್ಕೂಲ್ ಸೌಧದಲ್ಲಿ ಸ್ತ್ರೀವಿದ್ಯಾಭ್ಯಾಸವು ಕುರಿತು ಆಂಧ್ರಭಾಷೆಯಲ್ಲಿ ಉಪನ್ಯಾಸ ಮಾಡಿದಳು. ಈಕೆಯ ಪ್ರಸಂಗವು ಕೇಳುವದರೊಳು ಅನೇಕರು ಉತ್ಸಾಹ ಪೂರ್ಣರಾಗಿದ್ದಾಗ್ಯೂ ತತ್ಕಾಲದೊಳು ಕಲ್ಪಿಸಲ್ಪಟ್ಟಿದ್ದ ಕೆಲವು ನಿರ್ಬಂಧದ ದೆಸೆಯಿಂದ ಅನೇಕರು ಅತೃಪ್ತಿಯೊಡನೆ ಹಿಂದಿರಿಗಿಹೋದರು. ಆದದರಿಂದ ಅಲ್ಲಿಗೆ ಬಂದಿದ್ದವರ ಸಂಖ್ಯೆಯು ಕೇವಲ ಪರಿಮಿತವಾಗಿತ್ತು. ಸದರೀ ಸಭೆಗೆ ಮೆ|| ವೆಂಕಟವರದಯ್ಯಂಗಾರ್, ಮೆ|| ಷಣ್ಮುಗವೇಲುಪಿಳ್ಳೆಯವರು, ಮೆ|| ಶ್ರೀನಿವಾಸಾಚಾರ್ಯರವರು ವಗೈರೆ ಕೆಲವುಮಂದಿ ನೇಟಿವ್ ದೊಡ್ಡಮನುಷ್ಯರು ಬಂದಿದ್ದರು. ೭ ಘಂಟೆಗೆ ಸರಿಯಾಗಿ ಶ್ರೀರಂಗಿಯವಳು ಬರಲು ಆಗ ಮೆ|| ಗೋಪಾಲಸ್ವಾಮಿ ಅಯ್ಯರವರು ದ್ರವಿಡ ಭಾಷೆಯಲ್ಲಿ ಆಕೆಯ ಪೂರ್ವವೃತ್ತಾಂತವನ್ನು ಸಂಗ್ರಹವಾಗಿ ಸಭಿಕರೆಲ್ಲರಿಗೂ ತಿಳಿಸಿದ ಬಳಿಕ ಶ್ರೀರಂಗಮ್ಮನು ಉಪನ್ಯಾಸ ಮಾಡಲಾರಂಭಿಸಿದಳು. ಸದರೀ ಉಪನ್ಯಾಸದ ಮುಖ್ಯತಾತ್ಪರ್ಯವೇನೆಂದರೆ—

ಪ್ರಥಮತಃ, ಈಶ್ವರ ನಿರ್ಮಿತಗಳಾದ ಪ್ರಾಣಿವರ್ಗಗಳೊಳು ಪ್ರಾಧಾನ್ಯೇನ ಮಾನವನಿಗೆ ಉಂಟಾಗಿರುವ ವಿಶೇಷವನ್ನು ನಿರೂಪಿಸಿ, ಅವನಿಗೆ ಯುಕ್ತಾಯುಕ್ತ ವಿವೇಕರೂಪವಾಗಿಯೂ, ಕರ್ತವ್ಯಗಳಲ್ಲಿ ಭ್ರಮಪ್ರಮಾದ ಚಾಪಲ್ಯಾದಿದೋಷನಿವಾರಣ ಪೂರ್ವಕ ಹೃದಯಕ್ಕೆ ಪ್ರಸಾದ ನಿವೃತ್ತಿ ಸ್ಥೈರ್ಯಗಳನ್ನುಂಟುಮಾಡತಕ್ಕದ್ದಾಗಿಯೂ ಇರುವಜ್ಞಾನವತ್ಯಂತಾಪೇಕ್ಷಿತವೆಂತಲೂ, ಅಂತಾ ಜ್ಞಾನವು ಶಾಸ್ತ್ರಾರ್ಥ ಪರಿಚಯದಿಂದಲೇ ಉಂಟಾಗತಕ್ಕದ್ದೆಂತಲೂ, ನಿಶ್ಚಯಾತ್ಮಕವಾದ ಅಂತಾ ಜ್ಞಾನ ಸಂಪಾದನಕ್ಕೆ ಶಾಸ್ತ್ರಜ್ಞರ ಸಹವಾಸ ಸಲ್ಲಾಪಗಳೂ, ಸದುಪದೇಶವೂ, ಅತ್ಯಂತಾಪೇಕ್ಷಿತವೆಂತಲೂ, ಸ್ತ್ರೀಪುರುಷ ಭೇದವು ಶಾರೀರಕ ಪ್ರಯುಕ್ತವಾದಾಗ್ಯೂ ತದಂತರ್ಗತವಾದ ಆತ್ಮನು ಭಿನ್ನನಲ್ಲವಾಗಿ ಮೇಲೆ ಕಂಡ ಪ್ರಯೋಜನವನ್ನು ಪಡೆದು ಸ್ವರೂಪಾನುಗುಣವಾದ ಸುಖ ಸಂತೋಷಗಳನ್ನೈದಲಿಕ್ಕೆ ಸ್ತ್ರೀ ಪುರುಷಭೇದವು ಯಾವಾಗಲೂ ಕಾರ್ಯಕಾರಿಯಲ್ಲವೆಂತಲೂ, ಅತಏವ ಶಾಸ್ತ್ರಾಭ್ಯಾಸರೂಪವಾದ ವಿದ್ಯೆಯನ್ನು ಹೆಂಗಸರಿಗೆ ಸಹ ಕಲ್ಪಿಸತಕ್ಕದ್ದು ಅತ್ಯಂತಾವಶ್ಯಕವೆಂತಲೂ, ವಾದಿಸಿದಳು. ಇದಲ್ಲದೆ ಅಭಿಜ್ಞರಾದ ಭಾರ್ಯೆಯರ ಮೂಲಕ ಪಡೆಯುವ ಗೃಹಸ್ಥಾಶ್ರಮವೇ ಪುರುಷರಿಗೆ ಆನುದದನಕವಾಗಿರುವದರಿಂದ, ಜ್ಞಾನವಿಹೀನರಾದ ಮೂಢರೊಡನೆ ಮಾಡುವ ಸಲ್ಲಾಪ ಸಹವಾಸಗಳಿಗಿಂತಲೂ ಕುಟುಂಬಿನೀಯರ ಅಭಿಜ್ಞತಾ ಚಾತುರ್ಯಗಳಿಂದ ಉಂಟಾಗತಕ್ಕ

ಸಂತೋಷವು ಅತಿಶಯವಾಗಿರುವದು. ಕದಾಚಿತ್ ಕೆಲವರ ಗುಣವಿಪರ್ಯಯದಿಂದ ವಿದ್ಯಾಮೂಲಕ ಪ್ರಯೋಜನಕ್ಕೆ ಅನರ್ಥವನ್ನು ಸಾರ್ವತ್ರಿಕವನ್ನಾಗಿ ಭಾವಿಸಿ, ಮಾನುಷಜನ್ಮಕ್ಕೆ ಭೂಷಣವಾಗಿಯೂ, ಸಕಲ ಪ್ರಯೋಜನ ಸಂಪಾದಕವಾಗಿಯೂ ಇರುವ ಜ್ಞಾನವನ್ನುಂಟುಮಾಡದಿರುವದು ಅನುಚಿತವಾದದರಿಂದ ಹಾಗೆ ಮಾಡದೆ ಪ್ರಕೃತವಿಷಯ ಪ್ರಚಾರವನ್ನು ಮಾಡಿಸಬೇಕೆಂದು ವಾದಿಸಿ, ಇದಕ್ಕೆ ಸಾಧಕಗಳಾದ ಅನೇಕ ಪೂರ್ವ ಪ್ರಮಾಣಗಳನ್ನು ದಹರಿಸಿದಳು. ಶ್ರೀರಂಗಮ್ಮನ ಪಾಂಡಿತ್ಯವೂ, ವಾಕ್ಪಟುತ್ವವೂ, ವಿಚಾರಮಾರ್ಗಕ ಜ್ಞಾನವೂ ಅಸಾಧಾರಣವಾದವೆಂಬದು ಆಕೆಯ ಪ್ರಸಂಗದಿಂದಲೇ ವ್ಯಕ್ತವಾಗದಿರಲಿಲ್ಲವು. ಪ್ರಸಕ್ತ ಪ್ರಾಸಂಗಿಕಳು ಮದರಾಸಿನೊಳು ಗೌರವ್ಯವಾದ ಒಂದು ಕುಟುಂಬದಲ್ಲಿ ಜನಿಸಿ ವಿದ್ಯಾಪ್ರಯುಕ್ತವಾದ ಪ್ರಾಧ್ಯಮೆಯು ಸುವಾದಿಸಲಿಕ್ಕಾಗಿ ಬಹುಕಾಲ ಕಷ್ಟಪಟ್ಟು, ಬರುದೇಶ ಸಂಚಾರವಮಾಡಿ ಅಲ್ಲಿಯಲ್ಲಿ ತನ್ನ ಪಾಂಡಿತ್ಯವನ್ನು ಗೀರ್ವಾಣಾಂಧ್ರ ದ್ರವಿಡ ಭಾಷೆಗಳಿಂದ ವ್ಯಕ್ತಪಡಿಸಿ ಈಗ ಬಹುಮಂದಿ ಪಂಡಿತ ಪ್ರಶಂಸೆಗೆ ವಿಷಯಳಾಗಿದಾಳೆ. ಶ್ರೀರಂಗಮ್ಮನು ಜ್ಞಾನವಯೋವೃದ್ಧಳಾಗಿರುವದರಿಂದ, ಸ್ತ್ರೀವಿದ್ಯಾಭ್ಯಾಸ ವಿಷಯದೊಳು ಸ್ವಾನುಭವದಿಂದ ತಿಳಿಸುವ ಪ್ರತ್ಯಂಶವೂ ಅನುಮೋದಿಸತಕ್ಕವಾಗಿರುತಿವೆ. ದೇಹವು ನಶ್ವರವೆಂದು ಈಕೆಯು ಬಹಳವಾಗಿ ವಾದಿಸಿದ್ದರಿಂದ ಈ ಸು ಪಡೆದ ಜ್ಞಾನವು ತನ್ನೊಡನೆ ಲೀನವಾಗದಿರುವಂತೆ ಅದು ನಾಲ್ವರಿಗೆ ವಿನಿಯೋಗಿಸತಕ್ಕಿಸದರೆ ಮತ್ತುಷ್ಟು ಕೀರ್ತಿಕರವಾಗಿರುವದೆಂಬ ಅಂಶ ಆಕೆಗೆ ತೋರದಿರಲಾರದೆಂದು ನಂಬುತ್ತೇವೆ.

EXTRACT.

ರಾಜಕೀಯ ಸುಧಾರಣೆಯೋ ಸಾಮಾಜಿಕ ಸುಧಾರಣೆಯೋ ?

ಯಾವದು ಮುಂದಾಗಬೇಕು ? ಅಥವಾ ಇವುಗಳಲ್ಲಿ ಯಾವದಕ್ಕೆ ನಾವು ಹೆಚ್ಚು ಮಹತ್ವ ಕೊಡಬೇಕು ? ಎಂಬ ವಿಷಯವು ಈಗ ಜನರ ಮುಂದೆ ಬಂದಿರುತ್ತದೆ. ಕೆಲವರು ಸಾಮಾಜಿಕ ಸುಧಾರಣೆಯೇ ಮೊದಲಿಗೆ ಆಗಬೇಕೆಂತಲೂ ಕೆಲವರು ರಾಜಕೀಯ ಸುಧಾರಣೆಯೇ ಮೊದಲಿಗೆ ಬೇಕೆಂತಲೂ ಹೇಳುತ್ತಾರೆ. ಮತ್ತು ಇತ್ತಲಾಗೆ ಮುಂಬೈ, ಮದರಾಸ್, ಬಂಗಾಳ ಮುಂತಾದ ಹಿಂದುಸ್ಥಾನದ ಮುಖ್ಯಮುಖ್ಯ ಭಾಗಗಳಲ್ಲಿಯ ಪ್ರಮುಖರು ರಾಜಕೀಯ ವಿಷಯಗಳಲ್ಲಿ ವಿಶೇಷವು ನನ್ನುಕೊಡ ಹತ್ತಿರುವದನ್ನು ಕಂಡು, ಹಲವು ಆಂಗ್ಲೋ ಇಂಡಿಯನರು ಮುಂದೆಬಂದು, ನೀವು ಮೊದಲಿಗೆ ನಿಮ್ಮ ಸಮಾಜಗಳನ್ನು ಸುಧಾರಿಸಿರಿ ; ನಿಮ್ಮಕೂಸುಗಳ ವಿವಾಹವನ್ನು ನಿಲ್ಲಿಸಿರಿ ; ನಿಮ್ಮವಿಧವೆಗಳಿಗೆ ಮದುವೆಮಾಡಿರಿ, ನಿಮ್ಮ ಹೆಂಗಸರಿಗೆ ಬೂಟಿಸ್ ಸ್ಟಾಕಿಂಗ್ಸುಗಳನ್ನು ಹಾಕಿ ಬೀದಿಗಳಲ್ಲಿ ಮೆರೆಸಿರಿ ; ಎಂದು ನೀತಿವರಿಗೆ ಹಿತೋಪದೇಶ ಮಾಡಹತ್ತಿದ್ದಾರೆ. ಇವರಿಗೆ ಇತ್ತಲಾಗಿ ಮಲಬಾರಿಯರೂ ಅತ್ತಲಾಗೆ ಆರ್. ರಘುನಾಥರಾಯರೂ ಬ್ರಹ್ಮೋ, ಪ್ರಾರ್ಥನಾ ಉಪಾಸನಾ ಮುಂತಾದ ಸಮಾಜಗಳವರೂ ಪುಷ್ಟಿಕೊಡುವಂತೆ ಆಗಿದೆ. ಈ ಸಮಾಜಗಳಲ್ಲಿ ಹಲವುಗಳ ಅನುಯಾಯಿಗಳಂತೂ ಈ ಸಂಸಾರದಲ್ಲಿ ಜಯ ಸಿಕ್ಕಬೇಕಾದರೆ ನಮ್ಮ ವಿಧವೆಯರಿಗೆ ಮದುವೆಮಾಡಿಸುವದೂ ನಮ್ಮ ಸನ್ಯಾಸಿಗಳಿಗೆ ಜುಟ್ಟುಯಿಟ್ಟು ಯಜ್ಞೋಪವೀತ ಹಾಕುವದೂ ಇವುಗಳಹೊರ್ತು ಅನ್ಯಸಾಧನವೇಯಿಲ್ಲವೆಂದು ತಿಳಕೊಳ್ಳುತ್ತಾರೆ! ವಿಧವಾವಿವಾಹ ಮತ್ತು ಮತನಾಶ ಮಾಡಿದರೇನೆ ನಮ್ಮಸ್ಥಿತಿಯು ಮೇಲಾಗುವದು, ನಮ್ಮದೇಶದ ಐಶ್ವರ್ಯವು ಹೆಚ್ಚುವದು ; ವ್ಯಾಪಾರ ವೃದ್ಧಿಯಾಗುವದು, ಸಾರಾಂಶ, ಮಾನವಪ್ರಾಣಿಗಳಿಗೆ ಅಗತ್ಯವಿರುವ ಐಹಿಕಸುಖ ವೆಂಬದೇನುಂಟೋ ಅದೆಲ್ಲವೂ ಈ ಎರಡು ಸುಲಭಸಾಧನಗಳಿಂದಲೇ ಪಡಕೊಳ್ಳಬಹುದು. ಈ ಪ್ರಕಾರ ಈ ಸಮಾಜಕರ ಅಭಿಪ್ರಾಯವಿದ್ದಂತೆ ತೋರಿಕೊಳ್ಳಬೇಕಾಗುತ್ತದೆ. ಇಂತವರ ಈ ಅನಿಚಾರವಾಹಾಗೂ ಉತಾವಿಳ ಪ್ರಯತ್ನಗಳಿಂದ ನಮ್ಮಅತ್ಯಂತ ಹಿತಚಿಂತಕರಾದ ಆಂಗ್ಲೋ ಇಂಡಿಯನರಿಗೆ ತಕ್ಕಷ್ಟು ಬಲ ಸಿಕ್ಕುತ್ತದೆಯೋ ಹೊರ್ತು ಇವುಗಳಿಂದ ಇದುವರಿಗೆ ಆದ ಪ್ರತ್ಯಕ್ಷಲಾಭವೆಂದರೆ ಏನೂಯಿಲ್ಲ. ನಮಗೆ ಹಿತೋಪದೇಶಗಳನ್ನು ಮಾಡಲು ಬರುವ ಥೋರೆಗಳ ಹೇತು ದ್ವಯಗಳು ಸಾಧಾರಣ ವಿಚಾರಮಾಡಿದವರಿಗೆಲ್ಲರಿಗೂ ತಿಳಿಯದೆ ಇರಲಿಕ್ಕಿಲ್ಲ. ಬಾಹ್ಯಾತ್ಕಾರಕ್ಕೆ ಇವರು ನಮ್ಮ ಹಿತಚಿಂತಕರೇ, ನಮ್ಮಮೇಲೆ ಗಿಯರಿಗೆ ಎಷ್ಟುಕಾರುಣ್ಯ ತೋರಿಸುತ್ತಾರೆ ! ನಮ್ಮವಿಧವೆಯರಿಗೆನೋಡಲು ಇವರಹೊಟ್ಟೆಕ್ಕ್ವಾಗಿಸುಡುತ್ತದೆ ! ನೋಡಿರಿ. ಮತ್ತು ಇವರು ನಮ್ಮಸ್ಥಿತಿಯನ್ನೇ ಸುಧಾರಿಸಿಕೊಳ್ಳಲಿಕ್ಕೆ ಹೇಳವನೆ ಅವರದೇನು ಅನ್ಯಾಯ ? ತಿರುಗಾ ನಾವು ಅವರ ಉಪಕಾರ ನೆನಿಸಬೇಕಲ್ಲವೋ ? ಇಂಥಹಿತೋಕ್ತಿಗಳನ್ನು ಹೇಳುವಲ್ಲಿ ಅವರಿಗೆ ಇನ್ನೇನು ಹೇತುವಿದ್ದೀತು ! ಎಂದು ಪ್ರಥಮ ದರ್ಶನಕ್ಕೆ ನಮ್ಮಮನಸ್ಸಿನಲ್ಲಿ ಬಂದಹೊರ್ತು ಇರಲಾರದು. ಆದರೆ ಸ್ವಲ್ಪ ವಿಚಾರಮಾಡಿದರೆ ಕಂಡುಬರುವದೇನಂದರೆ,—ಹಿಂದುಸ್ಥಾನದಲ್ಲಿ ಅಲ್ಲಲ್ಲಿಯ ಜನರು ಈಗ ರಾಜಕೀಯವಿಷಯಗಳಲ್ಲಿ ವಿಶೇಷಮನಸ್ಸು ಹಾಕತೊಡಗಿದ್ದಾರೆ. ದಿನೇದಿನೆ ವಿಶೇಷಹಕ್ಕುಗಳನ್ನು ಚೇಡಹತ್ತಿದ್ದಾರೆ ಇವರು ಆಗಿಂದಾಗ್ಯೆ ಹೀಗೆಬೇಡುತ್ತಹೋದರೆ ಸರಕಾರದವರು ಸ್ವಲ್ಪ ಸ್ವಲ್ಪವಾಗಿಯಾದರೂ ಇವರಿಗೆ ಎಷ್ಟೋಹಕ್ಕುಗಳು ಕೊಡಬೇಕಾಬೀತು. ಅಂದರೆ ಈಗ ನಮ್ಮೊಳಗೂ ಅವರೊಳಗೂ ಇರುವಭೇದವು ಇನ್ನುಕೆಲವುವರುಷಗಳಲ್ಲಿ ಇಲ್ಲದಂತಾಬೀತು ; ಆದ್ದರಿಂದ ಈಗಲೇ ಇವರಲಕ್ಷ್ಯವನ್ನು ಇತ್ತಲಾಗಿನಿಂದ ತಪ್ಪಿಸಬೇಕೆಂಬದೇ ಇವರ ಮುಖ್ಯ ಅಭಿಪ್ರಾಯವು. ಮತ್ತು ಇದರಿಂದಲೇ ಇವರು ಇತ್ತಲಾಗೆ ನಮಗೆ ಹಿತೋಕ್ತಿಗಳನ್ನು ಹೇಳವರೂ ನೇಟವರು ಸಮಾಜಕಸ್ಥಿತಿಯಲ್ಲಿ ಇನ್ನು ಬಹಳಹಿಂದಕ್ಕಿರುವದರಿಂದ ರಾಜಕೀಯ ಹಕ್ಕುಗಳನ್ನು ಪಡೆಯಲಿಕ್ಕಾಗಲಿ ರಾಜ್ಯತಳತೆಯಲ್ಲಿ ಕೈಹಾಕಲಿಕ್ಕಾಗಲಿ ಯೋಗ್ಯರಲ್ಲವೆಂದು, ವಿಲಾಯತಿಯ ಪತ್ರಗಳದ್ವಾರ ಬೊಬ್ಬೆಯಿಟ್ಟು, ಇಂಗ್ಲಿಷಜನರ ಅಭಿಪ್ರಾಯವನ್ನು ಸಹ ದೂಷಿತ ಮಾಡುವಕ್ಕೆ ಪ್ರಯತ್ನಮಾಡುತ್ತಾರೆ.

ದಿ ಆನರೇಬಲ್ ಕೆ. ಟಿ. ತೇಲಂಗರವರು ಈಳೆ ವಿಚಾರ ಇದೇವಿಷಯವನ್ನುಕುರಿತು ಇಲ್ಲಿಯಪ್ರಾಮಿಜೆ ಕಾಪಸಿಜೆ ಕೆಷ್ಟದವಲ್ಲಿ ವ್ಯಾಖ್ಯಾನಕೊಟ್ಟರು. ಅದರಲ್ಲಿ ಅವರು ಅಂದದ್ದರ ಸಾರಾಂಶವೇನಂದರೆ : ಹಿಂದುಸ್ಥಾನದ ನೇಟಿವರಾದ ನಮಗೆ ಎರಡೂ ಸುಧಾರಣೆಗಳ ಅಗತ್ಯವುಂಟು. ಎರಡರಲ್ಲಿ ಒಂದುಬೇಕು ಎಂದುಬೇಡವೆನ್ನುವದು ಹುಚ್ಚುತನವು. ರಾಜಕೀಯ ಸುಧಾರಣೆಯು ನಮಗೆ ಯೆಷ್ಟುಅಗತ್ಯವುಂಟೋ ಅಷ್ಟೇಸಾಮಾಜಿಕ ಸುಧಾರಣೆಯೂಬೇಕು. ಮತ್ತು ಇವರ ಅಗತ್ಯವು ಯೆಷ್ಟುಇರುತ್ತದೋ ಅಷ್ಟೇ ರಾಜಕೀಯ ಸುಧಾರಣೆಯ ಆವಶ್ಯಕತೆಯೂ ಇರುತ್ತದೆ. ಇವುಗಳಲ್ಲಿ ಯಾವದು ಮೊದಲು ಯಾವದುನಂತರ ಆಗಬೇಕೆಂದು ಹೇಳುವದು ಕಠಿಣವು. ಎರಡೂ ಸಂಗಡಲೇ ಆಗಬೇಕು. ಆದರೂ ಇವುಗಳಲ್ಲಿ ಯಾವದಕ್ಕೆ ನೀವು ವಿಶೇಷ ಮಹತ್ವಕೊಡುತ್ತೀರೆಂದುಕೇಳಿದರೆ ರಾಜಕೀಯ ಸುಧಾರಣೆಗೇನೆಎಂದು ಹೇಳಬೇಕಾಗಿದೆ. ಸಾಮಾಜಿಕ ಸುಧಾರಣೆಯನ್ನೇ ಮೊದಲಿಗೆ ಮಾಡಿಕೊಳ್ಳಿರಿ, ನಂತರ ರಾಜಕೀಯ ಸುಧಾರಣೆಗೆ ಕೈಹಾಕಬಹುದೆಂದು ಹೇಳಿದರೆ, ಇದು ಕೇವಲ ಅಶಕ್ಯವಾದ ಮಾತಾಗಿದೆ. ಇದು ಯಾವ ಜನಾಂಗದ ಚರಿತ್ರೆಯಲ್ಲಿಯೂ ಆದದ್ದಿಲ್ಲ. ಸ್ವತಃ ಇಂಗ್ಲಿಷಜನರ ಚರಿತ್ರೆಯನ್ನೇ ನೋಡುವಾ ನೂರು ಇನ್ನೂರು ವರುಷಗಳ ಹಿಂದೆ ಇಂಗ್ಲಿಷ ಜನಾಂಗದವರು ತಮ್ಮ ರಾಜಕೀಯ ಹಕ್ಕುಗಳ ಸಲುವಾಗಿ ತಮ್ಮ ಸರಕಾರದ ಸರಕೂಡ ಜಗಳಾಡುತ್ತಿದ್ದಾಗ ಇವರ ಸಾಮಾಜಿಕಸ್ಥಿತಿ ಹೇಗಿತ್ತು ? ಇವರ ಹೆಂಗಸರಿಗೆ ಆಗ ಎಷ್ಟುಸ್ವತಂತ್ರವಿತ್ತು ? ಮತ್ತು ಈಗಲಾದರೂ ಇವರು ರಾಜಕೀಯ ಸುಧಾರಣೆಯಲ್ಲಿ ಕ್ರೀಸ್ತರೆಂದೆನ್ನಿಸಿಕೊಳ್ಳುವವರು ತಮ್ಮ ಹೆಂಗಸರಿಗೆ ಪೂರ್ಣಸ್ವತಂತ್ರಕೊಡುತ್ತಾರೋ? ವಿಲಾಯತಿಯಲ್ಲಿ ಎಷ್ಟೋಹೆಂಗಸರು ಪಾರ್ಲಿಮೆಂಟಿನಸಭೆಯಲ್ಲಿ ಕೇರಬೇಕೆಂದು ಪ್ರಯತ್ನಮಾಡುತ್ತಾರೆ. ಅವರಿಗೆ ಯಾಕೆ ಈಹಕ್ಕುಕೊಡುವದಿಲ್ಲ? ಈಮಾತುಗಳೆಲ್ಲ ನಮ್ಮ ಆಂಗ್ಲೋ ಇಂಡಿಯನರು ವಿಚಾರಮಾಡತಕ್ಕವುಗಳಾಗಿವೆ. ಮೊದಲು ತಮ್ಮ ಸ್ಥಿತಿಯನ್ನು ಆಲೋಚಿಸಿಕೊಂಡು ನಂತರ ಅನ್ಯರಿಗೆ ಬುದ್ಧಿಕಲಿಸಹೋಗಬೇಕು.

ಮುಬಾರದ ಮಾಜಿ ಅಮೀರನಿಗೆ ೭ ಹುಡುಗರೂ, ೯ ಹುಡುಗಿಯರೂ, ೨೮ ಹೆಂಡತಿಯರೂ, ೩೮ ದಾಸಿಯರೂ, ೧೮ ಪ್ರತಿಕರೂ, ೯ ಅಡಿಗೆಮಾಡುವರು, ೮ ಹೊಲಿಯುವವರೂ, ೩೦ ಕಸೂತಿಯನ್ನು ತೆಗೆಯುವರೂ, ೪೦ ಮಡಿವಾಳರೂ,೨ ಷ್ಟು ಜನ ಸ್ತ್ರೀ ಪರಿಚಾರಕರೂ; ೮ ಜೋಯಿಷರೂ ೬ ಗೃಹವೈದ್ಯರೂ, ೭ ಉಪಾಧ್ಯರೂ ಇವೆಲ್ಲರೂ ಪುರುಷರೇ. ಇವರಹೊರ್ತು ೮೮ ನಪುಂಸಕರು ಈ ಪರಿವಾರದವರು ಈಗಲೂ ಇರುತ್ತಾರೆ. ಈಗ ಗಾದಿಯಮೇಲಿರುವ ಅಬ್ದುಲ್ ಅಹಮ್ಮದರವರು ಈ ಪರಿವಾರದವರನ್ನು ಉತ್ತಮರೀತಿಯಿಂದ ಪೋಷಣೆಮಾಡುತ್ತಾರೆ. ತಮ್ಮ ಹೆಂಡೆಯ ಎಲ್ಲ ಹೆಂಡರಿಗೂ ಪ್ರತ್ಯೇಕ ಒಂದೊಂದು ಮನೆ ಕಟ್ಟಿಸಿಕೊಟ್ಟು ಪ್ರತಿ ಒಬ್ಬರಿಗೆ ಪ್ರತಿದಿನ ಎರಡು ರೂಪಾಯಿಗಳಂತೆ ಖರ್ಚಿಗೆ ಸಿಕ್ಕುವಂತೆ ವ್ಯವಸ್ಥೆಯನ್ನು ಮಾಡಿರುತ್ತಾರೆ. ತಂದೆಯ ಕಾಲದಲ್ಲಿರುತ್ತಿದ್ದ ನೌಕರರನ್ನು ದೂರ ಮಾಡಿದರೂ ಆಗಿನ ಅನುಭವಿಕ ಹಾಗೂ ವೃದ್ಧ ಕಾಮಗಾರರಿಗೆ ಮಾಸ್ರ ಉತ್ತಮರೀತಿಯಿಂದ ಪೆನ್ಶನ್ ಸಿಕ್ಕುವಂತೆ ಮಾಡಿರುತ್ತಾರುತೆ.

ಬ್ರಹ್ಮೀ ಯುದ್ಧ ಖರ್ಚು ಹಿಂದುಸ್ಥಾನ ಸರ್ಕಾರದವರೇ ಕೊಡಬೇಕೆಂದು ಪಾರ್ಲಿಮೆಂಟಿ ಸಭೆಯಲ್ಲಿ ನಿರ್ಣಯವಾದಲ್ಲಿಟ್ಟಿತು. ಹೊಸ ಮಂತ್ರಿ ಮಂಡಲದೊವನ ನಿಯಮಿಸಲ್ಪಟ್ಟ ಹಿಂದುಸ್ಥಾನದ ಅಂಡರ್ ಸೆಕ್ರೆಟರಿಗಳಾದ ಕನ್ಸರ್ವೆಟಿವ್ ದೊರೆಗಳು ಈ ಮಾತು ಪಾರ್ಲಿಮೆಂಟಿನವರಿಗೆ ಸೂಚಿಸಿದ್ದರಮೇಲಿಂದ ಮೇಲಿನ ನಿರ್ಣಯವಾದಲ್ಲಿಟ್ಟಿತು. ಇದರಲ್ಲಿ ವಿಶೇಷ ಸಂಗತಿಯೇನಂದರೆ- ಬ್ರಹ್ಮೀ ಯುದ್ಧವನ್ನು ಮಾಡಿದ್ದು ಅನ್ಯಾಯವೆಂದು ಹೇಳಿದ ಲಿಬರಲ್ ಪಕ್ಷದವರೇ ಈಗ ಅದು ನ್ಯಾಯವಾದದ್ದೆಂದು ಹೇಳುತ್ತಾರೆ. ಇದು ಸ್ವಲ್ಪ ಆಶ್ಚರ್ಯವೇ ಸರಿ ಲಿಬರಲ್ ಪಕ್ಷದವರಾಗಲಿ ಕನ್ಸರ್ವೆಟಿವ್ ಪಕ್ಷದವರಾಗಲಿ ಯಾವದಾದರೊಂದೇ ಪಕ್ಷದವರು ನಮಗೆ ನ್ಯಾಯ ಮಾತ್ರಾರೆಂದು ನಾವು ತಿಳಿಯುವದು ಕೇವಲ ಮೂರ್ಖತನವೆಂದು ಇದರಮೇಲಿಂದ ಸ್ಪಷ್ಟವಾಗುವದೆ. ಇರಲಿ ಬ್ರಹ್ಮೀ ಯುದ್ಧಖರ್ಚು ಸುಮಾರು ೩೦ ಲಕ್ಷ ರೂಪಾಯಿ ಆದೀತೆಂದು ಅಂದಾಜ್ ಮಾಡಿದೆ. ಈ ಅದ್ಭುತರಕಮು ಹಿಂದುಸ್ಥಾನವು ವಿನಾ ಕಾರಣ ಯಾಕೆ ಕೊಡಬೇಕು ? ಈ ಯುದ್ಧವನ್ನು ಪ್ರಾರಂಭಿಸಿದ್ದು ಯಾರಸಲುವಾಗಿ? ಹಿಂದುಸ್ಥಾನಕ್ಕೂ ಬ್ರಹ್ಮದೇಶಕ್ಕೂ ಏನು ಸಂಬಂಧವಿತ್ತು? ಇಂಗ್ಲಿಷ ಸರ್ಕಾರದ ಸ್ವಾಮ್ಯವೃದ್ಧಿಯೆಯೆಂದೂ ಅಣಗಲಾರದ ದಾಹವೂ, ಮಂಚೆಸ್ಟರ ಬರ್ಮಿಂಘಾಂ ಮೊದಲಾದ ಬ್ರಿಟಿಷ ಪ್ರಾಂತಸ್ಥರ ವ್ಯಾಪಾರಾಭಿವೃದ್ಧಿಯ ಅಭಿಲಾಷೆಯೂ ಒಟ್ಟಿಗೆ ಈ ಯುದ್ಧಕ್ಕೆ ಕಾರಣವಾದವು. ಇಲ್ಲದಿದ್ದರೆ ಥೀಬಾ ಅರಸನು ಹಿಂದುಸ್ಥಾನಕ್ಕೆ ಯೇನೂಮಾಡಿದ್ದಿಲ್ಲ. ಆತನು ತನ್ನ ಪ್ರಜೆಗಳಿಗೆ ನ್ಯಾಯವಾಗಿ ಪರಿಪಾಲನೆ ಮಾಡದಿದ್ದರೆ ಹಿಂದುಸ್ಥಾನಕ್ಕೆ ಅದರಿಂದೇನೂ ನಷ್ಟವಾಗುತ್ತಿದ್ದಿಲ್ಲ. ಬರುವ ಸೋಮವಾರ ಪ್ರೊವಿನ್ಶಿಯಲ್ ಕಮ್ಮಿಟಿಯ ವಿಷಯ ಆಲೋಚಿಸಲಿಕ್ಕೆ ಇಲ್ಲಿ ಒಂದು ಸಾರ್ವಜನಿಕ ಸಭೆಯಾಗುವದದೆ. ಅಗಲೆ ಬ್ರಹ್ಮೀಯುದ್ಧದ ಖರ್ಚಿನ ವಿಷಯ ಸಹ ಆಲೋಚನೆಮಾಡಿ ಇದರ ಅರ್ಧಭಾಗವನ್ನಾದರೂ ಇಂಗ್ಲಾಂಡವು ವಹಿಸುವಂತೆ ಇಂಗ್ಲಿಷ ಜನಾಂಗದವರ ನ್ಯಾಯಬುದ್ಧಿಯನ್ನು ಜಾಗ್ರತಪಡಿಸಬೇಕಾಗಿ ನಾವು ಸೂಚಿಸುತ್ತೇವೆ.

TELEGRAPHIC SUMMARY

ತಂತಿವೃತ್ತಾಂತ ಸಂಗ್ರಹವು.

—:0:—

ಲಂಡನ್, ೩ನೇ ಫೆಬ್ರವರಿ—[illegible]

ಬುಕಾರೆಸ್ಟ್, ೧ನೇ ಮಾರ್ಚ—[illegible]

[illegible] ಕಾನ್ಸ್ಟಾಂಟಿನೋಪಲ್, ೩ನೇ [illegible]—[illegible]

[illegible]

ಲಂಡನ್, ೩ನೇ ಮಾರ್ಚ—[illegible]

ಬುಕಾರೆಸ್ಟ್, ೩ನೇ ಮಾರ್ಚ—[illegible]

[illegible] ಸೌತಿಂಪ್ಟನ್, ೩ನೇ ಮಾರ್ಚ—[illegible]

ACKNOWLEDGMENT

[illegible]

ರೂ|| ಆ||

[illegible]	೭—೦—೦
[illegible]	೧—೮—೦
[illegible]	೧೦—೦—೦
[illegible]	೩—೦—೦
[illegible]	೫—೨—೦
[illegible]	೮—೦—೦
[illegible]	೧೨—೦—೦
[illegible]	೦—೮—೦
[illegible]	೫—೦—೦
[illegible]	೩—೦—೦
[illegible]	೧೬—೬—೦
[illegible]	೩—೬—೦
[illegible]	೫—೦—೦
[illegible]	೧೦—೦—೦
[illegible]	೬—೦—೦
[illegible]	೨—೦—೦
[illegible]	೧೪—೦—೦
[illegible]	೬—೦—೦
[illegible]	೬—೦—೦
[illegible]	೯—೦—೦
[illegible]	೪—೦—೦
[illegible]	೬—೦—೦

BANGALORE:—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

[illegible]

Vol. XIII.] BANGALORE—MONDAY, MARCH 15, 1886. [No. 11.

ಸಂಪುಟ ೧೩.] ಬೆಂಗಳೂರು:—ಸನ್ ೧೮೮೬ನೇ ಇಸವಿ ಮಾರ್ಚಿ ೧೫ನೇ ತಾರೀಖು ಸೋಮವಾರ. [ಸಂಚಿಕೆ ೧೧.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

[illegible] ... ... ೧೦—೦—೦

[illegible] ೧ ವರ್ಷ ... ... ೬—೦—೦

[illegible] ... ೬—೦—೦

[illegible] ೧ ವರ್ಷ ೦—೮—೦

[illegible]

ಪ್ರಕಟನೆಯ ರಿವಾಜ್.

[illegible] ೧ ವರ್ಷ ೦—೨—೦

[illegible] ೧ ವರ್ಷ ೦—೧—೦

NOTICE TO SUBSCRIBERS

[illegible]:—

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA.

Price including Postage, Rs 5-0-0

ವೈದ್ಯಸಾರ ಸಂಗ್ರಹ.

[illegible]

[illegible] ... ... ರೂ|| ೫—೦—೦

[illegible] ೦—೬—೦

[illegible]

ನೋಟೀಸ್.

[illegible]

[illegible]

[illegible] ...	೧—೪—೦
[illegible] ...	೦—೧೨—೦
[illegible] (ಸಟ್ಟಂಗಾಸ್) ...	೦—೩—೦
[illegible] ...	೦—೫—೦
[illegible] ...	೦—೪—೧
[illegible]	೦—೧೪—೦
[illegible] ...	೦—೭—೦
[illegible]	೦—೨—೦
ವೈದ್ಯಸಾರಸಂಗ್ರಹ ...	೫—೦—೦

ಕನ್ನಡ ಗ್ರಂಥಗಳು.

[illegible] ...	೦—೯—೦
[illegible] ...	೦—೪—೦
[illegible] ...	೦—೩—೬
[illegible]	೦—೨—೬
[illegible] ...	೦—೯—೦
[illegible] ...	೦—೨—೦
[illegible] ...	೦—೨—೬
[illegible] ...	೦—೭—೩
[illegible] ...	೦—೩—೦
[illegible]	೦—೨—೦
[illegible] ...	೦—೦—೩
[illegible]	೧—೦—೦
[illegible]	೨—೦—೦
[illegible] ...	೦—೧೨—೦
[illegible] ...	೩—೪—೬
[illegible] ...	೩—೪—೬
[illegible]	
೧ನೇ ಸಂಚಿಕೆ. ...	೦—೮—೦
[illegible] ೨ನೇ ಸಂಚಿಕೆ.	೧—೮—೦
[illegible] ...	೦—೮—೦

ಸಂಸ್ಕೃತ ಗ್ರಂಥಗಳು.

[illegible] . .	೦—೫—೦
[illegible] ...	೦—೨—೬
[illegible] ...	೦—೨—೬
[illegible] ...	೦—೦—೬
[illegible] ...	೦—೩—೬
೧ [illegible] ...	೦—೧—೦

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

ನೋಟಿಸ್

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,

ಈ ತಾರೀಖು ಲಾಗಾಯತು ಈ ಕೆಳಗೆ ರುಜು ಮಾಡಿರುವವರು ವಕೀಲನವರ ಯಾನೆ ಪಾರ್ಟನರ್ ಆಗಿ ಸೇರಿರುವದರಿಂದ, ಇನ್ನುಮೇಲೆ ಸಮಸ್ತವಿಧವಾದ ಲಾಗಳಿಗೆ ಸಂಬಂಧಪಟ್ಟ ಕೆಲಸಗಳು, "ಬಿ. ಅಂತೆ ಅನಂದರಾವ್, ಅಡ್ವೋಕೇಟ್ಸ್" ಎಂಬ ಹೆಸರಿನಿಂದ ನಡೆಸಲ್ಪಡುತವೆ. ಮ|| ವೆಂಕಟರಾಮಯ್ಯನವರು ಜ್ಯೂನಿಯರ್ ಪಾರ್ಟನರ್.

ಬೆಂಗಳೂರು, ೧೫ನೇ ಮಾರ್ಚಿ, ೧೮೮೬ } ಯಂ. ಬಿ. ಅ ಅನಂದರಾವ್, ಅಡ್ವೋಕೇಟ್ಸ್.

ನೋಟಿಸ್.

ಪ್ರಸವ ಕ್ಕಾಗಿಯೂ ಹೆಂಗಸರ ಮತ್ತು ಮಕ್ಕಳ ಚಿಕಿತ್ಸೆಯ ಬಗ್ಗೆ ಬೆಂಗಳೂರಲ್ಲಿ ಸ್ಥಾಪಿಸಲ್ಪಟ್ಟಿರುವ ಆಸ್ಪತ್ರೆಯಲ್ಲಿ ಸೂಲಗಿತ್ತಿ ಮತ್ತು ಹೆಡ್ ದಾದಿ ಕೆಲಸಕ್ಕೆ ಗೌರವ್ಯಳಾದ ಉತ್ತಮ ಜಾತಿ ಹೆಂಗಸೊಬ್ಬಳು ಬೇಕಾಗಿದೆ.

ಮಾಹೆಯಾನಾ ತಲಬ ೧೫ ರೂಪಾಯಿಗಳು.

ಅಪೇಕ್ಷೆಯುಳ್ಳವರು ಮೈಸೂರು ಗವರ್ನಮೆಂಟ ಸೀನಿಯರ್ ಸರ್ಜನ್ ಡಾಕ್ಟರ್ ಟಿ. ಜೆ ಮೆಗ್ಯಾನ್ ಸಾಹೇಬರವರಿಗೆ ಬರೆದುಕೊಳ್ಳುವದು.

ಬೆಂಗಳೂರು,
೮ನೇ ಮಾರ್ಚಿ ೧೮೮೬.

ನೋಟಿಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.

ಸೂರ್ಯಾಸ್ತಮಯವಾದ ಮುಕ್ಕಾಲು ಘಂಟೆಯ ಮೊದಲು ಸೂರ್ಯೋದಯ ವಾಗುವದಕ್ಕೆ ಒಂದು ಘಂಟೆಯ ಮುಂದಿನವರಿವಿಗೆ, ಯಾವ ತರಹೆ ಗಾಡಿಯನ್ನೇ ಆಗಲಿ, ಅದರ ಯೆರಡು ಪಾರ್ಶ್ವದಲ್ಲೂ ದೀಪಗಳು ಹಚ್ಚದೆ ನಡೆಸಕೂಡದು. ಹಾಗೆ ನಡೆಸಿದವರಿಗೆ ೨೦ ರೂಪಾಯಿಗಳಿಗೆ ಮೀರದ ಜುಲ್ಮಾನೆ ವಿಧಿಸಲ್ಪಡುವದೆಂತಲೂ ಮ್ಯೂನಿಸಿಪಲ್ ಬೈಲಾ ೧೮ನೇ ಸೆಕ್ಷನ್ ವಿಧಿಸುತದೆಯಾಗಿ ಅವಕ್ಕೆ ಯೆಲ್ಲರೂ ಮುಖ್ಯನಿಗೇ ಕೊಡಬೇಕು.

ಪೊಲೀಸ್, ಆಫೀಸ್. ೧೧—೩—೮೬ } E. Hewitson, *Dist. Supdt. of Police, C. & M. Station, Bangalore*

ಪ್ರಕಟನೆ.

ಕರ್ಣಾಟಕ ಪ್ರಪನ್ನಾಮೃತವೆಂಬ ಶ್ರೀರಾಮಾನುಜಾಚಾರ್ಯರವರ ಚರಿತ್ರೆಯು.

ಇದರಲ್ಲಿ ದಿವ್ಯಸೂರಿಗಳ ಚರಿತ್ರೆಗಳೂ ಅಡಗಿವೆ. ಈ ಪುಸ್ತಕವು ತಯಾರಾಗಿ ವಿಕರಿಗೆ ಸಿದ್ಧವಾಗಿರುತ್ತೆ. ಇದರಕೂಡ ನಾಲ್ಕು ದಿವ್ಯದೇಶದ ಮತ್ತು ಯೆಲ್ಲಾ ಪೂರ್ವಾಚಾರ್ಯರುಗಳ ಚಿತ್ರಪಟ ಒಂದು ಸೇರಿಸಲ್ಪಟ್ಟಿರುತ್ತೆ. ಕಾಪಿಗಳು ಕೊಂಚವೇ ಇರುವದರಿಂದ ಜಾಗ್ರತೆಯಾಗಿಯೇ ತರಿಸಿಕೊಳ್ಳಬಹುದು. ಕ್ರಯವನ್ನು ಕೆಲವರ ಅಪೇಕ್ಷೆಯಂತೆ ಸದ್ಯಕ್ಕೆ ಕಮ್ಮಿ ಮಾಡಿರುತ್ತೇನೆ.

ನಾಳೆ ಏಪ್ರಿಲ್ ೧೫ ರೊಳಗಾಗಿ ಅಪೇಕ್ಷಿಸುವವರಿಗೆ	೧	೦	೦
ಅನಂತರ ...	೧	೮	೦
ಟಪಾಲ್ ...	೦	೨	೦

ಎಂ. ಜಿ. ರಾಮಯ್ಯಂಗಾರ್,
ಮ್ಯಾನೇಜರ್,
ಹಿಂದೂಸುತರ ಕಾಲೇಜು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MARCH 15, 1886.

೧೮೮೬ನೇ ಮಾರ್ಚಿ ೧೫ನೇ ತಾ|| ಸೋಮವಾರ.

ಶ್ಲೋ|| ಸರ್ವಜ್ಞತಾಂ [illegible] ವಾಗೀಶ್ವರ [illegible] ತ್ವಾಮುಪಾಸ್ಮಹೇ [illegible]

A KNOWLEDGE OF SANSCRIT FOR BENCH AND BAR.

ಲೋಕದಲ್ಲಿ ಒಂದು ದೇಶದ ಪ್ರಜೆಗಳ ಸುಖಸಮಾಧಾನಸ್ಥಿತಿಗೆ ಅವರು ಪಾಲಿಸತಕ್ಕ ಅರಸನ ರಾಜ್ಯತಂತ್ರಕ್ರಮವೇ ಮುಖ್ಯಕಾರಣಗಳಲ್ಲೊಂದೆಂಬ ಅಂಶವನ್ನೊಬ್ಬರೂ ನಿರಾಕರಿಸಲಾರರಷ್ಟೆ. ಸದರೀ ರಾಜ್ಯತಂತ್ರಕ್ರಮವೆಂಬದು ಆ ದೇಶದ ನ್ಯಾಯನಿಬಂಧನೆಗಳನ್ನೂ ಪೂರ್ವಪದ್ಧತಿಯನ್ನೂ ಅನುಸರಿಸಿ ನಡೆಸತಕ್ಕ ಆತಳತವಾಗಿರುತಿದೆ. ಕದಾಚಿತ್ ಇವುಗಳೊಳೇನಾದರೂ ವಿಪರ್ಯಾಸವುಂಟಾದರೆ ಅದರಿಂದ ಪ್ರಬಲಾನರ್ಥಗಳು ಪ್ರಾಪ್ತವಾಗದಿರುವದಿಲ್ಲವು. ಅತಏವ ಅವುಗಳ ಜ್ಞಾನವು ಪಾಲಕನಾದವನಿಗೆ ಅತ್ಯಾವಶ್ಯಕವೆಂದೇರ್ಪಟ್ಟತು. ಸದರೀ ಜ್ಞಾನಸಂಪಾದನಕ್ಕೆ ಆದೇಶದ ಭಾಷೆಯು ಮುಖ್ಯ ಸಹಾಯಕವಾಗಿರುತಿದೆ. ಒಂದು ದೇಶವನ್ನು ಕುರಿತ ವಿಷಯಗಳನ್ನು ಮತ್ತೊಂದು ದೇಶಭಾಷೆಯಿಂದ ಕೆಲವು ಮಟ್ಟಿಗೆ ಅರಿಯಬಹುದಾದರೂ, ಆದೇಶಭಾಷೆಯಲ್ಲಿ ಹುಟ್ಟಿದ ಮೂಲಗ್ರಂಥಾವಲೋಕನದಿಂ ಪುಂಟಾಗುವಷ್ಟು ದೃಢತರಜ್ಞಾನವು ಇತರವಿಧದಿಂ ಸಿದ್ಧಿಸಲರಿಯದು. ಈ ವಿಷಯವು ಪ್ರಭುತ್ವವನ್ನು ಮಾಡತಕ್ಕ ಅರಸನಾದವನಿಗೇ ಆವಶ್ಯಕವೆಂದೇರ್ಪಡುವಲ್ಲಿ, ಅವನ ಪ್ರತಿನಿಧಿಯಾಗಿ ಕಾರ್ಬಾರ್ ನಡೆಸುವವರಿಗೆ ಅದು ಮತ್ತೆಷ್ಟು ಆವಶ್ಯಕವೋ ಅದಂ ಅಭಿಜ್ಞರಾಲೋಚಿಸಬಹುದು. ತತ್ತ್ವಾಪಿ ಪ್ರಜೆಗಳ ಪ್ರಾಣಮಾನ ಸಂರಕ್ಷಕರಾಗಿ ಏರ್ಪಟ್ಟರತಕ್ಕ ನ್ಯಾಯವಿಮರ್ಶಕರಿಗೆ ಇದು ಕೇವಲ ಅಪೇಕ್ಷಿತಾಂಶವಾಗಿರುತಿದೆ. ಈ ತಾತ್ಪರ್ಯವು ಏಕದೇಶಿಕವಾದದ್ದಲ್ಲವು. ಇದೇ ವಿಷಯದಲ್ಲಿ ದಿವಾನ್ ಬಹದೂರ್ ಮ|| ರಘುನಾಥರಾಯರವರು ತಮ್ಮ ತಾತ್ಪರ್ಯವನ್ನು ಹಿಂದೆ ಅನೇಕ ಸಂದರ್ಭದಲ್ಲಿ ವ್ಯಕ್ತಪಡಿಸಿರುತ್ತಾರೆ. ಈಚೆಗೆ ಪ್ರಸಿದ್ಧರಾದ ವಿದ್ವಾಂಸರನೇಕರು ಇದನ್ನು ಅಂಗೀಕರಿಸಿದ್ದರಿಂದ ಇದನ್ನು ಸಾರ್ವಜನೀನವಾದ ಅಭಿಪ್ರಾಯವೆಂದು ಎಣಿಸಬೇಕಾಗಿದೆ. ಈ ಕಾಲದ ಲಾಯರ್‌ಗಳಿಗೂ ಜಡ್ಜಿಗಳಿಗೂ, ಸಂಸ್ಕೃತಭಾಷಾಜ್ಞಾನವು ಅತ್ಯಾವಶ್ಯಕವೆಂಬದಂ ಕುರಿತು ಮ|| ರಘುನಾಥರಾಯರವರು ಬರೆದ ಒಂದು ಸಣ್ಣ ಗ್ರಂಥವನ್ನು ಅವರು ನಮಗೆ ಕಳುಹಿಸಿದರು. ಈ ಗ್ರಂಥದಲ್ಲಿ ರಾಯರವರು ನಾಲ್ಕು ವಿಷಯಗಳಂ ಕುರಿತು ಪ್ರಾಧಾನ್ಯೇನ ವಿಚಾರಮಾಡಿರುತ್ತಾರೆ

೧—ಹಿಂದೂ ಧರ್ಮಶಾಸ್ತ್ರವನ್ನು ಚೆನ್ನಾಗಿ ವ್ಯವಹರಿಸಲಿಕ್ಕೆ ಸಂಪೂರ್ಣವಾದ ಸದರೀ ಶಾಸ್ತ್ರಜ್ಞಾನವು ಲಾಯರ್‌ಗಳಿಗೂ ಜಡ್ಜಿಗಳಿಗೆ ಸಹ ಆವಶ್ಯಕವಾಗಿರುತಿದೆ. ೨—ಧರ್ಮಶಾಸ್ತ್ರವನ್ನು ಶುದ್ಧವಾಗಿ ಅರಿಯ ಬೇಕಾದರೆ ಅದು ಬರೆಯಲ್ಪಟ್ಟಿರುವ ಮೂಲ ಭಾಷೆಯ ಜ್ಞಾನವು ಬೇಕಾಗಿರುತಿದೆ. ೩—ಅಂತಾಭಾಷೆಯು ಸಂಸ್ಕೃತವಾಗಿಯೂ, ಮಾತೃಭಾಷೆಯಾದವ್ದಾಗಿಯು ೩, ಯಿರುತಿದೆ. ೪—ಲಾಯರ್‌ಗಳಾಗಿಯೂ, ನ್ಯಾಯಾಧಿಪತಿಗಳಾಗಿಯೂ ಆಗಬೇಕೆಂಬ ಕೋರಿಕೆಯುಳ್ಳವರೆಲ್ಲರೂ, ಸಂಸ್ಕೃತಭಾಷಾ ನಿಬದ್ಧವಾದ ಹಿಂದೂಲಾವನ್ನು ಓದಿ ತೇರ್ಗಡೆಯಾಗಬೇಕೆಂಬದು ಇದು ಇತರರಿಗೆಯುಕ್ತವೆಂದು ತೋರಿದಾಗ್ಯೂ ಗವರ್ನಮೆಂಟಿನವರಿಗೆ ಮಾತ್ರ ಸಮರ್ಪಕವಲ್ಲವಾಯಿತು. ಮೇಲೆ ಕಂಡ ನಿಯಮವು ಹಿಂದೂಗಳಿಗೆ ಸಾಧ್ಯವಾಗುವಂತೆ, ಇತರರಿಗೆ ಆಗಲಾರದು. ಅಂತಾ ಹಿಂದೂಗಳಿಗೆ ಜಡ್ಜೀಕೆಲಸವು ಸಕೃತ್ಕೊಡಲ್ಪಡುವದರಿಂದ ಮಿಕ್ಕ ಸಂವರ್ಗಗಳಲ್ಲೆಲ್ಲ ಸಾಮಾನ್ಯೇನ ನೌಕರರಾಗತಕ್ಕ ಬ್ರಿಟಿಷ ಸಿವಿಲಿಯನ ಆಫಿಸರ್‌ಗಳ ಪ್ರಯೋಜನಕ್ಕೂ ಅವರನ್ನು ಅಭಿವೃದ್ಧಿ ಗೊಳಿಸಬೇಕೆಂಬ ಸಂಕಲ್ಪವುಳ್ಳ ಗವರ್ನಮೆಂಟಿನವರ ಉದ್ದೇಶಕ್ಕೂ ಬಾಧಕವಾದ ಮೇಲೆ ಕಂಡ ಸಲಹೆಯನ್ನು ಗವರ್ನಮೆಂಟಿನವರು ಅಂಗೀಕರಿಸದೆ ಹೋದಬಗ್ಗೆ ನಾವು ಆಶ್ಚರ್ಯಪಡಬೇಕಾದುದಿಲ್ಲವು. ಏತದ್ವಿಷಯಕವಾದ ಲೇಖನವನ್ನು ಮ|| ರಘುನಾಥರಾಯರವರು ಪರ್ಯಾಲೋಚನೆಯಬಗ್ಗೆ ಗವರ್ನಮೆಂಟಿನವರಿಗೆ ಕಳುಹಿಸಿದರು. ಅದರ ಗುಣದೋಷಗಳು ವಿಚಾರ ಮಾಡಿ ನೋಡುವನ್ನು ಕ್ರಮವಾ ಸ್ವತಃ ವಹಿಸಲಿಕ್ಕೆ ಇಷ್ಟವಿಲ್ಲದೆ ಅವರು ಅವನ್ನು ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರ ಬಳಿಗೆ ಕಳುಹಿಸಿದರು ಅವರು ತಮ್ಮ ಜವಾಬ್ದಾರೀಯನ್ನು ನಿವೃತ್ತಿಸಿಕೊಳ್ಳುವಬಗ್ಗೆ ಪ್ರೆಸಿಡೆನ್ಸೀ ಕಾಲೇಜ ಪ್ರಿನ್ಸಿಪೂಲರವರಿಗೆ ಕಳುಹಿಸಿದರು. ಅವರು ಅದನ್ನು ತಮ್ಮಿಂದ ಆಚೆ ತೊಲಗಿಸತಕ್ಕಬಗ್ಗೆ, ಯಿಬ್ಬರು ಲಾ ಪ್ರೊಫೆಸರ್‌ಗಳ ಮತ್ತು ಸಂಸ್ಕೃತ ಪಂಡಿತರಬಳಿಗೆ ಕಳುಹಿಸಿಬಿಟ್ಟರು ಸದರೀ ಪಂಡಿತನು ರಾಯರ ಅಭಿಪ್ರಾಯವು ಅಯುಕ್ತವಾದದ್ದೆಂದು ತಿಳಿಸಿದ ಅಭಿಪ್ರಾಯಕ್ಕೆ ಕಡೆಗೆ ಯೆಲ್ಲರೂ ರುಜುಮಾಡಿದರು. ಬಳಿಕ ಗವರ್ನಮೆಂಟಿನವರು ಇಷ್ಟುಜನ ತಾತ್ಪರ್ಯವನ್ನು ಗೌರವಿಸಿ ಪ್ರಸಕ್ತಸೂಚನೀಯಾಂಶವನ್ನು ನಿರಾಕರಿಸಿದರು. ಸಾಮಾನ್ಯವಾಗಿ ಸಂಸ್ಕೃತ ಭಾಷಾ ಜ್ಞಾನವಿಲ್ಲದೆಯಿರುವದರಿಂದ ಆ ಭಾಷೆಯಲ್ಲಿರುವ ಗ್ರಂಥಗಳಿಗೆ ಮಾಡಲ್ಪಡುವ ನ್ಯೂನಾರ್ಥಗಳಿಂದಲೂ ಅಪಾರ್ಥಗಳಿಂದಲೂ, ಹಿಂದೂ ಧರ್ಮಶಾಸ್ತ್ರವನ್ನು ಕೋರ್ಟಿನವರು ವ್ಯವಹಾರದೊಳು ತರುವಾಗ್ಯೆ ಅದು ಬಹಳಮಟ್ಟಿಗೆ ಭಂಗವನ್ನೈದುತಿದೆಂದು ತಿಳಿಸಿದ ಮ|| ರಘುನಾಥರಾಯರ ಅಭಿಪ್ರಾಯವನ್ನು ಲಾ ಪ್ರೊಫೆಸರ್‌ಗಳ ಪೈಕಿ ಅಗ್ರಿಮರಾದ ಮ|| ಮಿಚೇಲ್‌ಯವರು ನಿರಾಕರಿಸಲಿಲ್ಲವು. ಪರುತು ಅವರ ಅಭಿಪ್ರಾಯವೇನೆಂದರೆ, ಸಂಪೂರ್ಣವಾಗಿ ನ್ಯಾಯಶಾಸ್ತ್ರ ಪ್ರವೀಣನಾಗ ಬೇಕಾದರೆ ಸಂಸ್ಕೃತದಲ್ಲಿ ಒಳ್ಳೆಯ ಜ್ಞಾನವುಳ್ಳನಾಗಿರಬೇಕು. ಸಕಲವಿಷಯಗಳಿಂದಲೂ ನಿಜವಾದ ಸುಶೋಧವನ್ನುಂಟುಮಾಡತಕ್ಕ ಹಿಂದೂ ಧರ್ಮಶಾಸ್ತ್ರಗ್ರಂಥವೊಂದು ನಮಗೆ ಬೇಕಾದರೆ ಅ ರೀತಿಯೊಳದು ಬರೆಯತಕ್ಕವನು ನ್ಯಾಯಶಾಸ್ತ್ರವೇತ್ತನಾಗಿಯೂ, ಪೂರ್ವದೇಶೀಯನಾಗಿಯೂ, ಇರಬೇಕೆಂದು ಮ|| ಮೆರ್ಯನವರು ತಿಳಿಸಿದ್ದರು. ಸಂಸ್ಕೃತ ಜ್ಞಾನವುಳ್ಳಂತಾವರನ್ನೇ ಜಡ್ಜಿಗಳನ್ನಾಗಿ ನೌಕರರನ್ನಾಡಬೇಕೆಂಬದೂ ಲಾಯರ್‌ಗಳು ಮುಂತಾದವರು ಅದನ್ನು ಅಭ್ಯಸಿಸುವಂತೆ ಪ್ರೋತ್ಸಾಹ ಗೊಳಿಸಬೇಕೆಂಬದೂ ಯೋಗ್ಯವಲ್ಲವು ಹಿಂದೂ ಧರ್ಮಶಾಸ್ತ್ರವನ್ನೋದತಕ್ಕ ಪ್ರತಿ ವಿದ್ಯಾರ್ಥಿಯೂ, ಅದರುತೀರ್ಮಾನವಮಾಡತಕ್ಕ ಪ್ರತಿ ಜಡ್ಜಿಯೂ, ತದ್ರೀತಿ ವ್ಯವಹರಿಸತಕ್ಕ ಪ್ರತಿ ಲಾಯರೂ, ಸಂಸ್ಕೃತ ಭಾಷೆಯನ್ನು ಅಭ್ಯಸಿಸಬೇಕಾದ ಅವಶ್ಯಕತೆ ಯೇನೂ ಇರುವದಿಲ್ಲವು ಇದಲ್ಲದೆ ಧರ್ಮಶಾಸ್ತ್ರಪ್ರವರ್ತಕರಾಗಿದ್ದ ಪೂರ್ವಿಕರು, ತಮ್ಮ ಗ್ರಂಥಗಳಲ್ಲಿ ಅನೇಕ ತಡವೆ ಸ್ಪಷ್ಟವಾಗಿ ತಿಳಿಸಿರುತ್ತಾರೇನೆಂದರೆ,—ದೃಢವಾದ ಆಚಾರವು ನೆಲಗೊಂಡಿದ್ದು ಅದು ಕದಾಚಿತ್ ಪ್ರಮಾಣ ಗ್ರಂಥಕ್ಕೆ ಭಿನ್ನಿಸಿದರೆ ಆಗ ಗ್ರಂಥಕ್ಕಿಂತಲೂ ಆಚಾರಕ್ಕೆ ಪ್ರಾಬಲ್ಯ ಅಧಿಕವು. ನ್ಯಾಯವಿಷಯಕರಿಗೆ ಸಹಾಯಕವಾದಂತಾ ಆಧಾರಗಳನ್ನು ಕೇವಲ ಶಾಸ್ತ್ರಬಲದಿಂದಲೇ ಅನುಸರಿಸಲಾಗದು, ಪರಂತು ವ್ಯವಸ್ಥಿತವಾದ ಆಚಾರಗಳಿಗೂ ಪ್ರಜೆಗಳ ಪ್ರಾಪಂಚಿಕ ಸ್ಥಿತಿಗೆ ಅಪೇಕ್ಷಿತವಾದ ವಿಷಯಗಳಿಗೂ ಅನುಗುಣವಾದ ರೀತಿಯೊಳು ಶಾಸ್ತ್ರವೆತ್ತಿಯ ಉದ್ದೇಶವನ್ನು ಹಿಡದು ಅವು ಅಂಗೀಕರಿಸಬೇಕೆಂತಲೂ, ಆಚಾರಾನುಗುಣವಾಗಿ ಅವು ಬದಲಾಯಿಸಲ್ಪಡಬಹುದೆಂತಲೂ ಸದರೀ ಗ್ರಂಥಗಳಲ್ಲೇ ತಿಳಿಸಲ್ಪಟ್ಟಿರುತಿದೆ. ಇದು ನೋತಲಾಗಿ ಸಂಪ್ರದಾಯಾನುಸಾರ ಜರಿಗಿಸತಕ್ಕವರಿಗೆ ಶಾಸ್ತ್ರ ಜ್ಞಾನವು ಬೇಕಾದುದಿಲ್ಲವು. ಆದದರಿಂದ ಜಡ್ಜಿಗಳಿಗೂ ಲಾಯರ್‌ಗಳಿಗೂ ಸಂಸ್ಕೃತ ಭಾಷಾಭ್ಯಾಸವು ಆವಶ್ಯಕವಿಲ್ಲವೆಂಬದು.

ಮೆ|| ಮಿಚೇಲ್‌ಯವರ ಯುಕ್ತಿ ನ್ಯಾಯಗಳು ಕೇವಲ ದುರ್ಬಲವಾದವಾಗಿರುತಿವೆ ಮ|| ರಘುನಾಥರಾಯರವರು ತಿಳಿಸುವಂತೆ ಅರ್ಥ ಮತ್ತು ಪ್ರಮೇಯ ಸಾಧ್ಯವಾದ ಸಂಸ್ಕೃತ ಭಾಷೆಯಲ್ಲಿ ಜ್ಞಾನವು ಸಂಪಾದಿಸಬೇಕೆಂದು ಬಲಾತ್ಕರಿಸುವದಕ್ಕಿಂತಲೂ, ಶಾಸ್ತ್ರೋದ್ದೇಶವನ್ನರಿಯದೆ ಅಪಾರ್ಥಮಾಡಿಕೊಂದು ಅನ್ಯಥಾ ಜರಿಗಿಸುವ ಜಡ್ಜಿಗಳೂ ಲಾಯರ್‌ಗಳುಸಹ ಈಗಿನಂತೆ ಇರಬೇಕೆಂಎಲೇ ಮೆ|| ಮಿಚೇಲ್‌ಯವರ ತಾತ್ಪರ್ಯವೆಂದು ತೋರುತಿದೆ. ಇದರಿಂದ ಪ್ರಂಟಾಗಬಹುದಾದ ಅನರ್ಥಗಳಾಗಲಿ, ನ್ಯೂನತೆಗಳಾಗಲಿ ಅವರಬುದ್ಧಿಸ್ಥವಾಗಲಿಲ್ಲವು. ಶಾಸ್ತ್ರಕ್ಕಿಂತಲೂ ಆಚಾರವು ಬಲೀಯವಾದದರಿಂದ ಅದರಜ್ಞಾನವು ಅನಾವಶ್ಯಕವೆಂಬ ಎರಡನೆಯ ಆಕ್ಷೇಪಣೆಯು ಮೊದಲನೆಯದಕ್ಕೆ ವಿರುದ್ಧವಾದದ್ದಾಗಿರುತಿದೆ, ಹ್ಯಾಗೆಂದರೆ, ಶಾಸ್ತ್ರವಚನಗಳಿಗಿಂತಲೂ, ಸಂಪ್ರದಾಯಾನು ಸರಣದೊಳು ತಿಳುವಳಿಕೆಯು ನ್ಯಾಯವಿಮರ್ಶೆಗೆ ಆವಶ್ಯಕವೆಂದು ಹೇಳವರ, ಸಂಸ್ಕೃತಜ್ಞಾನವಿಲ್ಲದ್ದರಿಂದಲೂ, ಅಥವಾ ಆಚ್ಯುಸಜ್ಞಾನ ಸಂಪಾದನದಿಂದಲೂ, ಆಚಾರಗಳಲ್ಲಿ ಈಗ ಪ್ರಂಟಾಗಿರುವಂತಾ ಪ್ರಮಾದಗಳು ಏರ್ಪಡಬೇಕಾದ ಆವಶ್ಯಕತೆವಿಲ್ಲವಾಯಿತಷ್ಟೆ. ಶಾಸ್ತ್ರಕ್ಕೂ ಆಚಾರಕ್ಕೂ ಪ್ರಂಟಾಗಿರುವ ತಾರತಮ್ಯಗಳಿಗೆ ಜನಗಳ ಅಜ್ಞಾನವೇ ಕಾರಣವೆಂದು ಯೆಲ್ಲರೂ ಯೇಳುತಲಿರುವಾಗ್ಯೆ ಇದನ್ನು ಯಾರುತಾನೆ ಅಂಗೀಕರಿಸುವರು. ಈ ಕಾರಣಗಳಿಂದ ಆಚಾರವೆಂಬದು ಶಾಸ್ತ್ರಸಕ್ತಿಗಳ ಆಧಾರವೆಂದರೇ ಏರ್ಪಟ್ಟಿರುವಂತೆ ಹೇಳಬೇಕಲ್ಲದೆ ಮೊದಲನೆಯದಕ್ಕಿಂತಲೂ ಯೆರಡನೆಯದು ಶ್ರೇಷ್ಠವೆಂದು ಭಾವಿಸಲಾಗದು. ಯಾವಾಗ ಶಾಸ್ತ್ರವು ಪ್ರಬಲವನ್ನಿಸಿಕೊಂಡಿತೋ ಕೂಡಲೇ ಅದರ ಜ್ಞಾನವು ಬೇಕಾಯಿತು. ಅದರ ಆವಶ್ಯಕತೆ ಯಾವಾಗ ಪ್ರಂಟಾಯಿತೋ ಅದು ಬರೆಯಲ್ಪಟ್ಟಿರುವ ಭಾಷಾಭ್ಯಾಸವು ಅವಶ್ಯ ಕರಣೀಯವಾಯಿತು ಏವಂಚ ಸಂಸ್ಕೃತ ವ್ಯಾಸಂಗ ಅನಾವಶ್ಯಕವೆಂಬದಕ್ಕೆ ಮೇಲೆಕಂಡ ಕಾರಣಗಳೊಂದೂ ಬಲೀಯವಲ್ಲವು

BREACH OF MUNICIPAL BYE LAW

ಗವರ್ನಮೆಂಟನವರು ಏರ್ಪಡಿಸುವ ನ್ಯಾಯ ನಿಬಂಧನೆಗಳೆಲ್ಲವೂ ಪ್ರಜೆಗಳ ಕ್ಷೇಮವನ್ನುದ್ದೇಶಿಸದವಾಗಿವೆಯೇ ಹೊರ್ತು ಬೇರಿಲ್ಲವು ಅವುಗಳ ಉದ್ದೇಶವು ತಿಳಿದು ಅದರಂತೆ ನಡೆದರೆ ತನ್ಮೂಲಕ ಜನಗಳಿಗೆ ಸುಖವೂ, ಗವರ್ನಮೆಂಟನವರಿಗೆ ಕೀರ್ತಿಯೂ ಪ್ರಂಟಾಗಲಿಕ್ಕೆ ಕಾರಣವಾಗುವದು. ಸ್ವಪರ ನಷ್ಟವನ್ನರಿಯದೆ ರಾಜಾಜ್ಞೆಯನ್ನುಲ್ಲಂಘಿಸಿದರೆ, ಮೂರು ವಿಧ ದೋಷಕ್ಕೆ ಪಾತ್ರರಾಗಬೇಕಾಗುತಿದೆ ಮೊದಲನೆಯದು, ಲಕರಣಾಕರಣ, ಅಂದರೆ ನಿಷಿದ್ಧ ಕಾರ್ಯವನ್ನು ಮಾಡುವದು, ಯೆರಡನೆಯದು, ಅದರಿಂದ ಪ್ರಂಟಾಗತಕ್ಕ ಅನರ್ಥ ಪರಂಪರೆಗಳಿಗೆ ಅನ್ಯರೊಡನೆ ತಾವೂ ಪಾತ್ರರಾಗುವದು ; ಮೂರನೆಯದು, ಪ್ರಜಾರಂಜಕರಾಗಬೇಕೆಂಬವರ ಕೋರಿಕೆ ಯನ್ನು ತಮ್ಮ ವರ್ತನಗಳಿಂ ಭಂಗಗೊಳಿಸುವದು. ಇವುಗಳಲ್ಲೊಂದೊಂದೇ ಮನುಷ್ಯನಹಾನಿಗೆಸಾಕಾಗಿರುವಲ್ಲಿ ನಾಲ್ಕೂ ಏಕತ್ರ ಸೇರಿದರೆ ಹೇಳಬೇಕಾದುದೇ ಇಲ್ಲವು ರಾತ್ರಿಕಾಲದಲ್ಲಿ, ತತ್ರಾಪಿ ಕತ್ತಲೆಯೊಳು ರಾಜಬೀದಿಗಳಲ್ಲಿ ಗಾಡಿಗಳು ಸಂಚರಿಸುವದರಿಂದ ಪ್ರಂಟಾಗತಕ್ಕ ಅನೇಕ ಅಪಾಯಗಳನ್ನು ಕಂಡು ಅವು ಮರಳಿ ಪ್ರಂಟಾಗದಿರುವಂತೆ ಮ್ಯೂನಿಸಿಪಾಲಿಟಿಯವರು ದೀಪಗಳಿಲ್ಲದೆ ಗಾಡಿಗಳನ್ನು ನಡಿಸಲಾಗದೆಂದು ನಿಬಂಧನೆ ಮಾಡಿದ್ದಾರೆ, ಮತ್ತು ಇಂತಾ ನಿಬಂಧನೆಯನ್ನುಲ್ಲಂಘಿಸತಕ್ಕವರು ದಂಡಿಸಲ್ಪಡುವರೆಂದು ಸಹ ಏರ್ಪಡಿಸಿರುತ್ತಾರೆ ಅದರಂತೆ ಅನೇಕರು ದಂಡಿಸಲ್ಪಡದಿರಲಿಲ್ಲವು ಹೀಗಿದ್ದಾಗ್ಯೂ ಈಚಗೆಸದರೀ ನಿಬಂಧನೆಯನ್ನು ಗಾಡಿಯವರುತಿರಸ್ಕರಿಸಿ ರಾತ್ರಿ ಕಾಲದಲ್ಲಿ ಗಾಡಿಗಳನ್ನು ಮನಸ್ವೀನಡಿಸಲಿಕ್ಕೆ ಉಪಕ್ರಮಿಸಿದ್ದರಿಂದ ಜನಗಳು ಪಾರಾಳವಾಗಿ ಸಂಚರಿಸಲಿಕ್ಕಿಲ್ಲದೆ ಪದೇಪದೆ ಅಪಾಯಗಳುಂಟಾಗುತಲಿವೆ. ದೀಪಗಳಿಲ್ಲದೆ ಗಾಡಿಗಳನ್ನು ನಡಿಸಲಿಕ್ಕೆ ಅವಕಾಶ ಕೊಡಕೂಡದೆಂಬ ಅಂತವು ಪೋಲೀಸಿನವರಿಗೆ ತಿಳಿದೇ ಇದೆ, ಪರಂತು ಅದರಂತೆ ನಡಿಸಲಿಕ್ಕೆ ಅವರ ದಾಕ್ಷಿಣ್ಯ ಸ್ವಭಾವವು ಅವಕಾಶ ಕೊಡುವದಿಲ್ಲವು. ಇದನ್ನೆಲ್ಲ ಪರ್ಯಾಲೋಚಿಸಿ ಸಿವಿಲ್ ವ ಮಿಲಿಟರಿ ಸ್ಟೇಷನ್, ಡಿಸ್ಟ್ರಿಕ್ಟ ಪೋಲೀಸ್ ಸೂಪರಿಂಟೆಂಡೆಂಟ ಮೆ|| ಹ್ಯೂಯಿಟ್ಸನ್ ಯವರು ಈ ವಾರದೊಳು ಕೊಟ್ಟಿರುವ ನೋಟಿಸನ್ನು ಈಪತ್ರಿಕೆಯ ಮೊದಲನೆಯ ಪುಟದಲ್ಲಿ ಪ್ರಕಟಿಸಿರುತ್ತೇವೆಯಾಗಿ ಅದರಿಂದ ರಾತ್ರಿ ಕಾಲದಲ್ಲಿ ಗಾಡಿಯ ಉಭಯಪಾರ್ಶ್ವಗಳಲ್ಲೂ ಲಾಂದರೆಗಳಿಡದೆ ಗಾಡಿ ನಡೆಸಿದರೆ ಅಂತವರು ಭಾರೀ ಜುಲ್ಮಾನೆಯಮೂಲಕ ಖಂಡಿತವಾಗಿ ದಂಡಿಸಲ್ಪಡುವರೆಂದು ವ್ಯಕ್ತವಾಗುತಿದೆ. ಆದದರಿಂದ ಇನ್ನುಮೇಲಾದರೂ ಜನಗಳು ಮ್ಯೂನಿಸಿಪಲ್ ಬೈಲಾದಿನ 18ನೇ ಸೆಕ್ಸನಿಗೆ ತಕ್ಕ ನಿಗಕೊಟ್ಟು ಹಾಗರೂಕರಾಗಿ ವರ್ತಿಸುತ ನಷ್ಟಕ್ಕೆ ಗುರಿಯಾಗದಿರ ಬೇಕೆಂಬದಾಗಿ ಇದರಿಂದ ಯೆಲ್ಲರಿಗೂ ಮತ್ತೊಂದುಸಲ ತಿಳಿಸುವವು.

Occasional Notes
ನೈಮಿತ್ತಿಕವಿಷಯನ್ಯಾಸ

A promise—ಬರುವ ನವಂಬರ್ ತಿಂಗಳಲ್ಲಿ ತಾವು ಹೈದರಾಬಾದಿಗೆ ಬರುವದಾಗಿ ವೈಸರಾಯಿಯವರು ನಿಜಾಮರವರಿಗೆ ವಾಗ್ದಾನಮಾಡಿರೋದರೆಂಬ ಪ್ರಸ್ತಾಪವು ಪ್ರಂಟಾಗಿದೆಯೆಂದು ಮದರಾಸ ಪತ್ರಿಕೆ ಯೊಂದರಮೂಲಕ ತಿಳಿಯಬರುತಿದೆ

A sad disappointment—ಈಗ ಕಲ್ಕತ್ತಾ ಹೈಕೋರ್ಟಿನಲ್ಲಿ ಖಾಲೀಯಾಗಿರುವ ಜಡ್ಜೀಗಳಕೆಲಸಮೂರೂ ಇಂಗ್ಲಿಷಜನರಿಗೇ ಕೊಡಲ್ಪಡುವದೆಂದುಕೇಳಿ ಕಲ್ಕತ್ತೆಯ ನೇಟಿವ್ ವೃತ್ತಾಂತಪತ್ರಿಕೆಗಳೆಲ್ಲವೂ ನೈರಾಶ್ಯವ ಹೊಂದುತಿವೆ.

The Nizam's railway—ನಿಜಾಂ ಸರ್ಕಾರದ ರೆಯಿಲ್‌ವೆಯನ್ನು ಬಡಾಯಿಸುವ ಕೆಲಸವು, ಅಂದರೆ ವರಂಗಲ್‌ಯೆಂಬ ಸ್ಥಳದವರಿವಿಗೆ ೯೩ ಮೈಲ್‌ಗಳದೂರ ಕಾಮಗಾರಿ ಪೂರ್ತಿಯಾಗಿ, ಬರುವತಿಂಗಳ ಆದಿಭಾಗದಲ್ಲಿ ಜನಗಳಸಂಚಾರಕ್ಕೆ ಗಾಡಿ ಬಿಡಲ್ಪಡುವದು.

The Finance Committee—ಇಂಡ್ಯಾದೇಶದ ಖರ್ಚುಗಳ ತನಿಖಿಯಬಗ್ಗೆ ಏರ್ಪಡಾಗಿರುವ ಕಮ್ಮಿಟಿಯ ಮೆಂಬರಾದ ಮ|| ಯಲಿಯಾಟ ಯವರು ಈಗ ಕಲ್ಕತ್ತೆಯೊಳಿರುತ ಮುಂದೆ ನಡೆಸಬೇಕಾದ ಕ್ರಮಗಳನ್ನು ವ್ಯವಸ್ಥೆ ಮಾಡುತಲಿದಾರೆ. ಈ ಕಮಿಟಿಯ ಮೆಂಬರ್‌ಗಳು ಸಿಂಲಾನಲ್ಲಿಸೇರಿ ಅಲ್ಲಿಂದ ತನಿಖಿಯಬಗ್ಗೆ ದೇಶದಮೇಲೆ ಪ್ರಯಾಣವಾಗುವರು.

Affairs in Greece—ಗ್ರೀಸ್‌ರಾಜ್ಯದ ಪ್ರಕೃತಸ್ಥಿತಿಯು ಕೇವಲ ಭಯಂಕರವಾಗಿರುವಂತೆಯೂ, ಆಥೆನ್ಸ್ ಷಹರ್‌ನಲ್ಲಿರುವ ಯುದ್ಧಇಲಾಖಾಮಂತ್ರಿಯವರು ೪೦ವರುಷಗಳಿಗೆ ಒಳಪಟ್ಟ ವಯಸ್ಸುಳ್ಳ ವಿಶಿಷ್ಟಪರ್ತಕರೂ, ಕೈಕೆಲಸದವರು ಸಹ ಸೈನಿಕರಾಗಿ ದಾಖಲಾಗಬೇಕೆಂದು ಹುಕುಂಕೊಟ್ಟಿದಾರೆಂತಲೂ ತಿಳಿಯಬರುತಿದೆ.

Conference of Ambassadors.—ಮಾಹೇ ಮಜಕೂರು ೧೮ನೇ ತಾರೀಖ್‌ನಲ್ಲಿ ರೂಮಿಲಿಯಾ ತುಕಡಿಯ ವಿಷಯವಂ ಕುರಿತು ವಿಚಾರ ಮಾಡತಕ್ಕಬಗ್ಗೆ ದೊಡ್ಡ ಸಂಸ್ಥಾನಾಧಿಪತಿಗಳ ತರಫೆ ರಾಯಭಾರಿಗಳೆಲ್ಲರು ಪ್ರಥಮಾವರ್ತಿ ಸಭೆ ಸೇರುವಂತೆನಿರ್ಣಯವಾಗಿರುವದಾಗಿ ಈತಿಂಗಳ ೯ನೇ ತಾರೀಖ್‌ನಲ್ಲಿ ಕಾನ್‌ಸ್ಟಾಂಟಿನೋಪಿಲ್‌ನಿಂದ ಬಂದ ತಂತಿ ವೃತ್ತಾಂತದ ಮೂಲಕ ತಿಳಿಯಲಾದೆವು.

A boarding house for Brahmo girls—ಕಲ್ಕತ್ತೆಯೊಳಿರುವ ಬ್ರಹ್ಮಸಮಾಜಕ್ಕೆ ಸೇರಿದ ಹುಡಿಗಿಯರ ಉಪಯೋಗಾರ್ಥ ಒಂದು ಭೋಜನಶಾಲೆಯಂ ಸ್ಥಾಪಿಸಬೇಕೆಂಬ ಆಲೋಚನೆ ಅಲ್ಲಿನವರಿಗೆ ಪ್ರಂಟಾಗಿದೆ, ಪರಂತು ಈನೂತನಪದ್ಧತಿಯನ್ನು ಹಾನಿಕರವಾದದ್ದೆಂದು ಭಾವಿಸತಕ್ಕ ಪೂರ್ವ ಸಂಪ್ರದಾಯ ಬದ್ಧರಾದ ಹಿಂದೂಗಳಿಗೆಲ್ಲ ಸದರೀವಿಷಯವು ಅಸಮ್ಮತವಾಗಿದೆಯೆಂದು ಕೇಳುತ್ತೇವೆ.

The Marquis of Salisbury's resignation—ಯುದ್ಧಮೂಲಕವಾದ ಅಪಾಯವಂ ನಿವಾರಿಸುವದಕ್ಕೆ ಸಂಸ್ಥಾನಾಧಿಪತಿಗಳ ಒರಂಬಡಿಕೆಗಳುವಿನಾ ಬೇರೊಂದೂಇಲ್ಲದಸಂದರ್ಭದಲ್ಲಿ, ಐರಿಷ್‌ವಿಚಾರಕ್ಕಾಗಿ ಕನ್ಸರ್ವೆಟರ ಸಮಾಜದ ಮುಖ್ಯಪ್ರವರ್ತಕರಾದ ಮಾರ್ಕ್ವಿಸ್ ಆಪ್ ಸಾಲಿಸಬರಿಯವರು ಪ್ರಧಾನಮಂತ್ರಿಕೆಲಸಕ್ಕೆ ರಾಜೀನಾಮೆಕೊಟ್ಟಬಗ್ಗೆ ಬರ್ಲಿನ ಪಟ್ಟಣದಲ್ಲಿರುವರಾಜಕೀಯ ಸಮೂಹದೊಳು ವಿಶೇಷತಃ ಆಕ್ಷೇಪಿಸಲ್ಪಟ್ಟರೆಂದು ಅಲ್ಲಿನಪತ್ರಿಕೆಯೊಂದುತಿಳಿಸುತಿದೆ.

The Maharaja Dhuleepsing—ಈಗ ಪಂಜಾಬ್ ಯೆಂದು ಕರೆಯಲ್ಪಡುತಲಿರುವ ಪಾಂಚಾಳದೇಶವನ್ನು ಬ್ರಿಟಿಷ ರಾಜ್ಯದೊಡನೆ ಸೇರಿಕೊಂಡದ್ದು ಮೊದಲು ಇದುವರಿವಿಗೂ, ಅಂದರೆ ಗತ ೩೭ಸಂವತ್ಸರ ಕಾಲವಾಗಿ ಅಲ್ಲಿನ ಮಹಾರಾಜರಾದ ದಲೀಪಸಿಂಗ್‌ರವರು ಇಂಗ್ಲಾಂಡ್‌ನಲ್ಲೇ ವಾಸವಾಗಿರುತಲಿದಾರೆಯಷ್ಟೆ ಬರುವತಿಂಗಳ ಆದಿಭಾಗದಲ್ಲವರು ಇಂಡ್ಯದೇಶಕ್ಕೆ ಬರುವ ಪ್ರಯತ್ನದೊಳದಾರೆಂದು ಕೇಳುತ್ತೇವೆ. ಪಂಜಾಬ ದೇಶ ಹುಟ್ಟುವಳಿಯಿಂದ ಇವರಿಗೆ ಸಾಲೀಯಾನಾ ಕೊಡಲ್ಪಡುತಲಿರುವ ೨೫ ಲಕ್ಷ ರೂಪಾಯಿಗಳು ಈಗ ಇಂಗ್ಲಾಂಡಿನ ವಾಸಕ್ಕೆ ಸಾಲದೆ ಇರುವದರಿಂದಲೂ, ಇವರಿಗೆ ನ್ಯಾಯವಾಗಿ ಸಲ್ಲಬೇಕಾಗಿರುವ ಸ್ವಂತ ಆಸ್ತಿ ಸಿಪ್ ಕೊಡಲ್ಪಡದೆಯಿರುವದರಿಂದಲೂ ಇವನ್ನೆಲ್ಲ ವ್ಯವಸ್ಥೆ ಪಡಿಸಿಕೊಳ್ಳಬೇಕೆಂಬ ತಾತ್ಪರ್ಯದೊಡನೆ ಇಲ್ಲಿಗೆ ಬರುತ್ತಾರೆಂದು ಲಂಡನ್ ಟೈಂಸ್ ಪತ್ರಿಕೆ ತಿಳಿಸುತಿದೆ.

Accouchment of the Ex Queen of Burmah.—ಪದಭ್ರಷ್ಟರಾದ ಬರ್ಮಾ ಅರಸರ ಭಾರ್ಯೆಯವರಿಗೆ ಆಜೇ ಭಾನುವಾರದದಿನರಾತ್ರಿ ಸ್ತ್ರೀಶಿಶು ಜನಿಸಿದಂತೆಯೂ, ಆಕಾಲದಲ್ಲಿ ಚಿಕಿತ್ಸಾರ್ಥ ಡಾಕ್ಟರ ೬ ರ್ಫೋಡಿಯೆಂಬವರುಹಾಜರಿದ್ದರೆಂತಲೂ, ಬಾಣಂತಿ ಮತ್ತು ಮಗುಸಹ ಈಗ ಕ್ಷೇಮವಾಗಿದಾರೆಂತಲೂ ಕೇಳಲಾದೆವು. ತೀಬಾಅರಸರಿಗೆ ಪ್ರಾಪ್ತವಾದ ಪ್ರಕೃತಸ್ಥಿತಿ

ಯಲ್ಲವೆ ಇಂತಾ ಸಂತೋಷವನ್ನು ಸೌಮಾನ್ಯವೇನ ಭಾವಿಸುವಂತೆಮಾಡಿರು.

The Greek Minister in London — ಲಂಡನ್‌ಪಟ್ಟಣದಲ್ಲಿರುವ ಗ್ರೀಸ್‌ರಾಜ್ಯದ ಮಂತ್ರಿಯವರು ಪ್ರಧಾನಮಂತ್ರಿಯವರಾದ ಮೆಸ್ಟರ್ ಗ್ಲ್ಯಾಡ್‌ಸ್ಟನ್‌ಯವರ ಸಂದರ್ಶನಕ್ಕೆ ಹೋಗಿದ್ದವೇಳೆಯಲ್ಲಿ ಮೆ॥ ಗ್ಲ್ಯಾಡ್‌ಸ್ಟನ್‌ಯವರು 'ಗ್ರೀಸ್‌ರಾಜ್ಯದ ಕ್ಷೇಮಲಾಭದೊಳು ತಾವು ವಿಶೇಷ ಅಕ್ಕರೆಯುಳ್ಳವರಾಗಿದ್ದಾಗ್ಯೂ ಇತರ ಸಂಸ್ಥಾನಾದಿಪತಿಗಳ ತಾತ್ಪರ್ಯಕ್ಕೆ ತಾವು ಅನ್ಯಥಾನಡೆಯಕೂಡದಿರುವದರಿಂದ, ಯೂರೋಪ್‌ದೇಶದ ಸಮಾಧಾನಸ್ಥಿತಿಯಂ ಹೋಗಲಾಡಿಸಲಿಕ್ಕೆ ಗ್ರೀಕ್ ಸರ್ಕಾರದವರು ಪ್ರಯತ್ನಪಡಲಾರರೆಂಬ ಭರವಸೆಯುಳ್ಳವರಾಗಿರುವಂತೆ ತಿಳಿಸಿದರು

— —

The liberty of the Press — ಬಂಗಾಳೆಯಲ್ಲಿರತಕ್ಕ ಕೆಲವು ದೇಶಭಾಷಾ ವೃತ್ತಾಂತಪತ್ರಿಕಾ ಲೇಖಕರೆಲ್ಲರು ಒಂದು ಆಲೋಚನೆ ಮಾಡುತಲಿದಾರೆಂದು ಕೇಳುತ್ತೇವೇನಂದರ—ಈಗ್ಯೆ ಐವತ್ತೆರಡು ಸಂವತ್ಸರಗಳಹಿಂದೆ ಸರ್ ಚಾರ್ಲಸ್ ಮೆಟಕ್ಯಾಫೆಯೆಂಬವರು ದೇಶಭಾಷಾ ವೃತ್ತಾಂತಪತ್ರಿಕೆಗಳಿಗೆ ಸ್ವಾತಂತ್ರ್ಯವನ್ನು ದಯಮಾಡಿದುದ್ದಾದ ಜ್ಞಾಪಕಾರ್ಥ ಬರುವ ಸೆಪ್ಟಂಬರ್‌ತಿಂಗಳ ೧೫ನೇ ತಾರೀಖಾದದರಿಂದ ದೇಶಭಾಷಾ ವೃತ್ತಾಂತಪತ್ರಿಕೆಗಳಿಗೆಲ್ಲ ಒಂದು ಪ್ರಯುಕ್ತನಾದ ವರಮೂಲಕ ಸಮ್ಮೇಳನವು ವಿಶೇಷತ್ವೇನ ಕೊಂಡಾಡಬೇಕೆಂಬದು

— —

Oodeypore — ಉದಯಪುರ ಸಂಸ್ಥಾನವು ಬ್ರಿಟಿಷ ಪ್ರಕೃತ ಅರಸರ ಉತ್ತಮ ಪ್ರಭುತ್ವದೊಳು, ರಾಜಪುತಾನಾ (ರಾಜಸ್ಥಾನ) ದೇಶದೊಳಿರುವ ಬೇರೆ ಮುಂತಾದ ೧೮ ಸಂಸ್ಥಾನಗಳೆಲ್ಲಕ್ಕಿಂತಲೂ ಸರ್ವತೋಭದ್ರವಾದ ಸ್ಥಿತಿಯಲ್ಲಿ ಅಭಿವೃದ್ಧಿಯನ್ನೈದುತಲಿರುವಂತೆ ಕೇಳಲಿಕ್ಕೆ ನಾವು ಬಹಳಸಂತೋಷಿಸುತ್ತೇವೆ ಸನ್ ೧೮೮೪ನೇ ಇಸವಿ ಡಿಸೆಂಬರ ೩೧ನೇ ತಾರೀಖಿಗೆ ಖೈದಾದ, ೧೮೮೫ನೇ (ಅಲ್ಲಿನ ಸಂವತ್) ಸಾಲಿನಲ್ಲಿ ಸದರೀ ಸಂಸ್ಥಾನಕ್ಕೆ ೩೬,೮೩,೧೨೬ ರೂಪಾಯಿಗಳು ಒಟ್ಟು ಉತ್ಪನ್ನವೆಂದು ಬಂದಿದೆಯೂ, ಆ ವ್ಯಕಿ ೩೨,೦೪,೮೩೭ ರೂಪಾಯಿಗಳ ಖರ್ಚು ಹೋಗಿ ೪,೭೮,೨೮೯ ರೂಪಾಯಿಗಳು ಉಳಿದವೆಂದೆಲೂ ತಿಳಿಯಬರುತಿದೆ ಕೋಟ್ಯಾಂತರ ರೂಪಾಯಿಗಳ ಬಿಯತಿಯುಳ್ಳ ದೊಡ್ಡ ಸಂಸ್ಥಾನಗಳ ಸ್ಥಿತಿಯನ್ನಾಲೋಚಿಸಿ ನೋಡಿದರೆ ಉದಯಪುರಕ್ಕೆ ಇದು ಉತ್ತಮ ದಶೆಯೊಳಿದೆಯೆಂದೇ ಹೇಳಬಹುದಾಗಿದೆ

A new hospital for women. — ಮೈಸೂರದೊಳು ಉದಯಪುರದಲ್ಲಿ ಸ್ತ್ರೀಯರಿಗಾಗಿ ಪ್ರತ್ಯೇಕ ಆಸ್ಪತ್ರೆಯೊಂದು ಕಟ್ಟಲ್ಪಡುವದಾಗಿದೆಯೆಂದು ತಿಳಿಯಬರುತಿದೆ ಸನ್ ೧೮೮೫ನೇ ಇಸವಿಯಲ್ಲಿ ಹಿಂದಿನಸಂವತ್ಸರಕ್ಕಿಂತಲೂ, ೧೭೫ ಮಂದಿ ಹೆಚ್ಚಿಗೆಯಾಗಿ, ಸ್ಥಳ ಮತ್ತು ಪರಸ್ಥಳ ರೋಗಿಗಳು ಸದರೀಆಸ್ಪತ್ರೆಗೆ ಚಿಕಿತ್ಸಾರ್ಥ ಬಂದಿರುತ್ತಾರೆ ರೋಗಿಗಳು ಈಗ ಸದರೀ ಆಸ್ಪತ್ರೆಗೆ ಪೂರ್ವಕ್ಕಿಂತಲೂ ವಿಶೇಷ ನಂಬಿಕೆಯೊಡನೆ ನಿರ್ಭೀತರಾಗಿ ಬರುತಲಿದಾರೆಂತಲೂ, ಯುರೋಪಿಯನ್ನರ ಔಷದ ಮತ್ತು ಚಿಕಿತ್ಸೆಗಳ ವಿಷಯದಲ್ಲಿ ಪೂರ್ವದೊಳು ಜನಗಳಿಗೆ ಉಂಟಾಗಿದ್ದ ಭೀತಿ ಈಗ ಕ್ರಮೇಣ ತಪ್ಪಿಹೋದಂತೆಯೂ ಕೇಳುತ್ತೇವೆ

— —

Matrimonial restrictions — ಬ್ರಿಟಿಷಪಾರ್ಲಿಮೆಂಟಿನಲ್ಲಿ ಹುಟ್ಟಿರುವ ವೈವಾಹಿಕ ನಿಬಂಧನೆಗಳನ್ನನುಸರಿಸಿ, ಬೆಳಿಗ್ಯೆ ೮ಘಂಟೆಗೆ ಮುಂಚಿತವಾಗಿ ವಿವಾಹ ಮಾಡತಕ್ಕವರು ದಂಡನಾರ್ಹರೆಂದು ಗೊತ್ತಾಗಿದೆ ಸದರೀ ಆಕ್ಟು ಇಂಡ್ಯದೇಶಕ್ಕೆ ಸಂಬಂಧಿಸದಿದ್ದರೂ ಮಧ್ಯಾಹ್ನಕಾಲ ವಿವಾಹವನ್ನು ಕೂಡಾ ನಿಷೇಧಿಸುತಿದೆ ಇಂಗ್ಲಂಡಿನಲ್ಲಿ ಈಚೆಗೆ ಸ್ಥಾಯಿಸ್ಥಾಪಿಸಲ್ಪಟ್ಟಿರುವ ಒಂದು ಹೊಸ ಶಾಸನವನ್ನನುಸರಿಸಿ ಬೆಳಿಗ್ಯೆ ೮ ಗಂಟೆಯ ಮೊದಲು, ಸಾಯಂಕಾಲ ೪ ಗಂಟೆಯೊಳಗಾಗಿ ಜರಗತಕ್ಕ ವಿವಾಹಗಳೇ ನ್ಯಾಯವಾದವೆಂದು ನಿರ್ಧರಿಸಲ್ಪಟ್ಟಿದೆ ಇಂತಾ ಒಂದು ಆಕ್ಟನ್ನು ಇಂಡ್ಯದೇಶದಲ್ಲಿ ಸಹ ಜಾರೀಯಲ್ಲಿ ತಂದರೆ ತಿಥಿ ವಾರ ನಕ್ಷತ್ರಗಳಿಗಾಗಿ ಹೇಚಾಡತಕ್ಕ ಜ್ಯೋತಿಷ್ಕರ ಬಾಧೆ ತಪ್ಪುವದಲ್ಲದೆ ಒಂದು ಕೂಟ ವಿನಾ ಮಿಕ್ಕ ನಾಡಿ, ರಾಶಿ, ಗಣ, ದಿನ, ರಜ್ಜು, ಮುಂತಾದಕೂಟಗಳ ಅನುಕೂಲ್ಯಗಳಂ ನೋಡಬೇಕಾದ ಶ್ರಮವಿಲ್ಲದೆ ಇರುವದು. ಕುಂಬಕೋಣ ನಿವಾಸಿಗಳು, ಪುನರ್ವಿವಾಹ ವಿಷಯದಲ್ಲಿ ಮೈಸೂರಾಯಿಯವರ ಅವಮಾನದಬಗ್ಯೆ ಬರೆದು ಕಳುಹಿಸಿದ ಅನೇಕಾಂಶಗಳಲ್ಲಿ ಇದನ್ನೂ ಒಂದಾಗಿ ಸೇರಿಸಿದ್ದರೆ ಬಹಳ ಚೆನ್ನಾಗಿರುವದು ಅವರ ಉದ್ದೇಶ ಪ್ರಯತ್ನಗಳಿಗೆ ಅನುಕೂಲವಾದ ಈ ಅಂಶವವರಿಗೆಯಾ ತಕ್ಕತೋಚದೆಹೋಯಿತೆ ಇದು ತಿಳಿಯಲಿಲ್ಲವು, ಎಂದು ಪಗ್ಯೆರೆ ಒಂದಾನೊಂದು ಮದರಾಸ್ ಪತ್ರಿಕೆ ಅಭಿಪ್ರಾಯ ಪಡುತಿದೆ.

The Babu Keshub Chunder Sen Memorial Fund — ಬ್ರಹ್ಮಸಮಾಜಕ್ಕೆ ಮುಖ್ಯಪ್ರವರ್ತಕರಾಗಿದ್ದ ಸಾಬಕ್ ಬಾಬೂ ಕೇಶವ ಚಂದ್ರಸೇನಯವರ ಮೆ॥ ಮೋರಿಯಲ್‌ಫಂಡಿಗೆ ಈಗ ೧೮,೫೦೦ ರೂಪಾಯಿಗಳವರೆಗೆ ಚಂದಾವಸೂಲಾಗಿರುತಿದೆ ಕಲ್ಕತ್ತೆಯಲ್ಲಿ ಅವರಹೆಸರಿನೊಳು ಕಟ್ಟಲ್ಪಟ್ಟಿರುವ ಟೌನ್‌ಹಾಲಿನಲ್ಲಿಡತಕ್ಕಬಗ್ಯೆ ಬೇಕಾದ ಅವರ ಒಂದು ತಸ್ವೀರಿಗಾಗಿ ೩,೦೦೦ ರೂಪಾಯಿಗಳು ವ್ಯಯವಾದಲ್ಪಡುವದು ಇದಲ್ಲದ ಆಲ್ಬರ್ಟ ಹಾಲ್‌ಬಗ್ಯೆ ಅವಶ್ಯಕವಾಗಿರುವ ಮತ್ತೊಂದು ತಸ್ವೀರಿಗೆ ೫೦೦ ರೂಪಾಯಿಗಳು ವಿನಿಯೋಗಿಸಲ್ಪಡುವದು ಪ್ರತ್ಯೇಕ ೩,೦೦೦ರೂಪಾಯಿಗಳು ತೆಗೆದಿಡಲ್ಪಟ್ಟು ಅದರಿಂದ ಪ್ರತಿಸಂವತ್ಸರದಲ್ಲೂ ಶಾಸ್ತ್ರ ಪರೀಕ್ಷೆಯಂ ಕೊಟ್ಟು ಘನತರ ಪ್ರಶಸ್ತಿಯಂಪಡೆಯತಕ್ಕ ವಿದ್ಯಾರ್ಥಿಗಳಿಗೆ ಗೌರವಾರ್ಥ ೮೦ ರೂಪಾಯಿಗಳಕ್ಕೆ ಬಾಳುವ ಒಂದುಸ್ವರ್ಣಮುದ್ರೆಯೂ ಪುಸ್ತಕಗಳಿಗಾಗಿ ೮೦ ರೂಪಾಯಿಗಳೂ ಕೊಡಲ್ಪಡುವವು. ಕಲ್ಕತ್ತಾ ಯೂನಿವರ್ಸಿಟಿಯ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗತಕ್ಕ ಪ್ರಥಮ ವಿದ್ಯಾರ್ಥಿಗೆ ೧೭೦ ರೂಪಾಯಿಗಳವರೆಗೆ ಧನ ಮತ್ತು ಪುಸ್ತಕರೂಪವಾಗಿ ಸಹಾಯಮಾಡರತಕ್ಕಬಗ್ಯೆ ಮಿಕ್ಕ ನಾಲ್ಕುಸಾವಿರರೂಪಾಯಿಗಳೂ ಉದ್ದೇಶ್ಯವಾಗಿವೆಯೆಂದು ತಿಳಿಯಬರುತಿದೆ

The Nizam's liberality — ಹೈದರಾಬಾದ್ ನಿಜಾಮರವರು ಮದರಾಸ್‌ನಿಂದ ಪ್ರಯಾಣವಾಗುವಕ್ಕೆ ಮುಂಚಿತವಾಗಿ ಅಲ್ಲಿರುವ ಅನಾಥರಿಗೆಲ್ಲ ಜಾತಿ ಮತ ನಿಯಮಗಳೊಂದೂ ಇಲ್ಲದಂತೆ ಹಂಚಿಕೊಡತಕ್ಕಬಗ್ಯೆ ೫,೦೦೦ರೂಪಾಯಿಗಳನ್ನು ಪೊಲೀಸ್ ಕಮಿಶನರವರಕ್ಕೆ ಕೊಟ್ಟುಹೋದರೆಂದು ತಿಳಿಯಬರುತಿದೆ. ನಿಜಾಮರವರ ಕೋರಿಕೆಯನ್ನನೇರವೇರಿಸತಕ್ಕಬಗ್ಯೆ ಗತ ಮಂಗಳವಾರ ದಿವಸ ಏರ್ಪಾಡು ಮಾಡಲ್ಪಟ್ಟಿತು. ಅದಿನ ಮಧ್ಯಾಹ್ನ ೧ ಘಂಟೆಯಮೊದಲು ಪೀಪಲ್ಸ್ ಪಾರ್ಕಿನಲ್ಲಿ ಅನಾಥರು ಜಮಾಯಿಸಲಾರಂಭಿಸಿದರು ಪೊಲೀಸ್ ಕಮಿಶನರವರು ಅದರೊಳು ಕೇವಲ ಅನಾಥರಾಗಿಯೂ, ಅಂಗಹೀನರಾಗಿಯೂ ಇರತಕ್ಕವರನ್ನೆಲ್ಲ ಚುನಾಯಿಸಿ ಅಂತವರಿಗೆಲ್ಲ ಇಸಂ ಒಂದಕ್ಕೆ ಒಂದುರೂಪಾಯಿ ಪ್ರಕಾರ ಕೊಟ್ಟರು. ಈಕಾರ್ಯವನ್ನು ನಿಜಾಮರವರು ಸ್ವತಃ ಮಾಡಲುದ್ದೇಶಿಸಿದ್ದರು. ಪರಂತು ಬಹಳ ಗಲಾಟೆಯಾಗುವದೆಂದಾಲೋಚಿಸಿ ಈರೀತಿಯಾದಏರ್ಪಾಡು ಮಾಡಬೇಕಾಯಿತು.

Professor Monier Williams, C. I. E, — ಮುಂಬೈ ಪ್ರೆಸಿಡೆನ್ಸಿಯಲ್ಲಿ ಸರ್ವೇಯರ್ ಜನರಲ್ಲಾಗಿದ್ದ ಸಾಬಕ್ ಕರ್ನಲ್ ಮಾನಿಯರ್ ವಿಲಿಯಂಸ್‌ಯವರ ಕುಮಾರರಾದ ಪ್ರೊಫೆಸರ್ ಮಾನಿಯರ್ ವಿಲಿಯಂಸ್‌ಯವರಿಗೆ ಶ್ರೀಮನ್ಮಹಾರಾಜ್ಞೀಯವರು ಕೆ. ಸಿ. ಐ. ಇ ಎಂಬ ಬಿರ್ದ್ಯಾಬನ್ನು ಕೃಪೆಗೈದರೆಂದು ಗತವಾರದಲ್ಲಿತಿಳಿಸಿದ್ದೆವಷ್ಟೆ, ಇವರಂಕುರಿತ ಕೆಲವುಅಂಶಗಳನ್ನು ಈಚೆಗೆ ಮುಂಬೈಪತ್ರಿಕೆಯೊಂದು ಪ್ರಕಟಿಸುತಿದೆಯಾಗಿ ಈ ಪತ್ರಿಕೆಯನ್ನೋದತಕ್ಕವರ ತಿಳುವಳಿಕೆಯಬಗ್ಯೆ ಅದು ಇದರಡಿ ಸೂಚಿಸುವೆವು ಪ್ರೊಫೆಸರ್ ಮಾನಿಯರ್ ವಿಲಿಯಂಸ್‌ಯವರು ೧೮೧೯ನೇ ಇಸವಿಯೊಳು ಮುಂಬೈಯಲ್ಲಿ ಜನಿಸಿ ಕೆಲವು ಕಾಲ ಪ್ರೈವೇಟು ಸ್ಕೂಲ್‌ಗಳಲ್ಲಿ ವಿದ್ಯಾಭ್ಯಾಸ ಮಾಡುತಲಿದ್ದು ಬಳಿಕ ಲಂಡನಿಗೆ ಹೋಗಿ ಅಲ್ಲಿನ ಅರಸರ ಕಾಲೇಜನಲ್ಲಿ ದಾಖಲಾದರು ತರುವಾಯ ಅಲ್ಲಿಂದ ಆಕ್ಸ್‌ಫರ್ಡಿನಲ್ಲಿರುವ ಪ್ರಸಿದ್ಧವಾದ ಬ್ಯಾಲಿಯಲ್ ಕಾಲೇಜಿಗೆ ಶಾಸ್ತ್ರಾಭ್ಯಾಸದಬಗ್ಯೆ ಹೋದರು. ಇಷ್ಟರಲ್ಲಿಯೇ ಇವರಿಗೆ ಇಂಡ್ಯದೇಶದ ರೈಟರ‍್‌ಕೆಲಸ ಒಂದು ಪ್ರಾಪ್ತವಾಯಿತು ಆದಾಗ್ಯೂ ಜಾಗ್ರತೆಯಾಗಿಯೇ ಅದರ ಸಂಬಂಧದಿಂ ನಿವೃತ್ತಿಮಾಡಿಕೊಂಡು, ಹಾಲಿಬರಿ ಯೆಂಬ ಪ್ರದೇಶದೊಳಿರುವ ಇಂಡ್ಯ ಕಾಲೇಜನಲ್ಲಿ ಸೇರಿ ಪೂರ್ವದೇಶ ಗ್ರಂಥಗಳಲ್ಲಿ ಪರೀಕ್ಷೆ ಕೊಟ್ಟು ಪ್ರಥಮ ಸನ್ಮಾನವು ಪಡೆದರು. ಅಲ್ಲಿಂದ ಮರಳಿ ಆಕ್ಸ್‌ಫರ್ಡಿಗೆ ಹೋಗಿ ಅಲ್ಲಿನ ಯೂನಿವರ್ಸಿಟಿ ಕಾಲೇಜನೊಳೊಬ್ಬರೆಂಬರಾಗಿ ಸೇರಿದರು ೧೮೪೪ನೇ ಇಸವಿಯಲ್ಲಿ ಡಿಗ್ರೀ ಪಟ್ಟವು ಪಡೆದರು ೧೮೪೪ನೇ ಇಸವಿಯ ಮೊದಲು ೧೮೫೮ನೇ ಇಸವಿಯ ತನಕ ೧೪ ಸಂವತ್ಸರಗಳ ಕಾಲ ಹಾಲಿಬರಿಯಲ್ಲಿ ಸಂಸ್ಕೃತ ಪಂಡಿತರಾಗಿದ್ದು ಬಳಿಕ ಅಲ್ಲಿಂದ ಚೆಲ್‌ಟನ್‌ಹಾಂ ಯೆಂಬ ಪ್ರದೇಶದಲ್ಲಿರುವ ಕಾಲೇಜನೊಳು ೨ ವರುಷಗಳ ಕಾಲ ಪೂರ್ವದೇಶ ಗ್ರಂಥ ವ್ಯಾಸಂಗ ವಿಚಾರಣಾಧಿಕಾರವು ವಹಿಸಿದ್ದರು ೧೮೬೦ನೇ ಇಸವಿಯಲ್ಲಿ ಬಾಡರ್ ಕಾಲೇಜನಲ್ಲಿ ಸಂಸ್ಕೃತ ಪಂಡಿತರಾಗಿ ಗೊತ್ತುಮಾಡಲ್ಪಟ್ಟರು. ಬ್ರಿಟಿಷ್ ಇಂಡಿಯಾ, ಯೂರೋಪ್, ಅಮೆರಿಕಾ, ಈ ದೇಶಗಳಲ್ಲಿ ನೆಲಗೊಂಡಿರುವ ಓರಿಯಂಟಲ್ ಸೊಸೈಟಿಗಳಿಗೆ ಸಭಾಸದರಾಗಿಯೂ, ಪೂರ್ವದೇಶೀಯಗಳಾದ ಅನೇಕ ಗ್ರಂಥಗಳಿಗೆ ಅಧಿಕಾರಿಯಾಗಿಯೂ, ಆಕ್ಸ್‌ಫರ್ಡ್ ಮತ್ತು ಕಲಕತ್ತಾ ಯೂನಿವರ್ಸಿಟಿಯವರಿಂದ ಗೌರವಾರ್ಥ ಕೊಡಲ್ಪಟ್ಟ ಡಿ. ಸಿ. ಎಲ್. ಮತ್ತು ಎಲ್. ಎಲ್. ಡಿ. ಗಳೆಂಬ ಪ್ರಶಸ್ತಿಗಳಂ ಪಡೆದರತಕ್ಕವರಾಗಿಯೂ ಇರುತ್ತಾರೆ, ಆಕ್ಸ್‌ಫರ್ಡಿನಲ್ಲಿ ಒಂದು ಶಾಸ್ತ್ರ ಪಾಠಶಾಲೆಯನ್ನು ಸ್ಥಾಪಿಸಬೇಕೆಂಬ ಉದ್ದೇಶದೊಡನೆ ಇಂಡ್ಯದೇಶಕ್ಕೆ ಇವರು ಮೂರುದಫಾ ಬಂದಿದ್ದರು ಸನ್ ೧೮೮೦ನೇ ಇಸವಿಯಲ್ಲಿ ಇವರಿಗೆ ಸಿ. ಐ. ಇ. ಎಂಬ ಪ್ರಶಸ್ತಿಯುಂಟುಮಾಡಲ್ಪಟ್ಟಿತು. ಸಂಸ್ಕೃತ ಮುಂತಾದ ಪೂರ್ವದೇಶ ಭಾಷೆಗಳಲ್ಲಿಯೂ, ಇಂಗ್ಲಿಷ್ ವಗೈರೆ ಪಶ್ಚಿಮ ದೇಶಭಾಷೆಗಳಲ್ಲಿಯೂ, ಬಹಳ ಸಮರ್ಥರೆನಿಸಿಕೊಂಡು ಬಹುಜನ ನೇಟಿವ್ ಮತ್ತು ಯೂರೋಪಿಯನ್ ಸಂಸ್ಥಾನಾಧಿಪತಿಗಳ ಪ್ರೀತಿ ಗೌರವಗಳಿಗೆ ಪಾತ್ರರಾಗಿದಾರೆ, ಎಂಬದು

— —

The late visit of the Nizam to Madras. ಘನವನ್ನು ಹೊಂದಿದ ಮೈಸೂರಾಯಿಯವರು ಗತ ಶರದೃತುವಿನಲ್ಲಿ, ಹೈದರಾಬಾದ್‌ನಿಜಾಮರವರಿಗೆ ಎರಡ ಒಂದು ಕರೀತಾವಿನಲ್ಲಿ, ಅವಶ್ಯಕಗಳಾದ ಇತರ ಕಾರ್ಯಗಳಂತೇನೂ ನಿರೋಧ ಉಂಟಾಗದಿದ್ದರೆ, ಕ್ಯಾಂಪಾಫ್ ಎಕ್ಸರ್‌ಸೈಜ ಪೂರೈಸಿದ ಬಳಿಕ ತಾವು ಹೈದರಾಬಾದಿಗೆ ಬರುವಂತೆ ಬರೆದಿದ್ದರು. ಗತ ಏಳೆಂಟು ತಿಂಗಳ ಕಾಲದಿಂ ಹೈದರಾಬಾದ್ ಸಂಸ್ಥಾನದ ಆಡಳಿತ ಕ್ರಮದೊಳುಂಟಾಗಿದ್ದ ಗಲಾಟೆಗಳೆಲ್ಲವೂ ಮೈಸರಾಯಿಯವರ ಸಾಕ್ಷಾತ್ಕಾರದಿಂ ನಿವೃತ್ತಿಯಾಗಬಹುದೆಂದು ನಿರೀಕ್ಷಿಸಲ್ಪಟ್ಟಿತ್ತು. ಮೈಸರಾಯಿಯವರಿಗೆ ಬರ್ಮಾ ರಾಜ್ಯಕ್ಕೆ ಹೋಗಬೇಕಾದ ಅವಶ್ಯಕತೆಯುಂಟಾದದರಿಂದ ಅವರು ಅಲ್ಲಿಂದ ವಾಪಸ ಬರುವಾಗ್ಯೆ ಮದರಾಸಿನಲ್ಲಿ ನಿಜಾಮರವರನ್ನು ನೋಡುವಂತೆ ಪ್ರಾಪ್ತವಾಯಿತು ನಿಜಾಮರವರಿಗೂ ಅವರ ಮಂತ್ರಿಯಾದ ಸಾಲಾರ್‌ಜಂಗರವರಿಗೂ ಇದುವರಿವಿಗೆ ಉಂಟಾಗಿದ್ದ ಅಂತರಂಗವಾದ ಸ್ನೇಹಸಂಬಂಧವು ಕೆಲವುಮಟ್ಟಿಗೆ ತೊಲಗಿದ್ದದೇ ಸರ್ಕಾರದೊಳುಂಟಾಗಿದ್ದ ಕಳವಳಕ್ಕೆ ಕಾರಣವೆಂಬದನ್ನು ಪ್ರಾಯೇಣ ಯೆಲ್ಲರೂ ಅರಿತೇ ಇದಾರೆ. ರಾಜ್ಯ ಒಪ್ಪಿಸಲ್ಪಟ್ಟಾಗ್ಯೆ ನಿಜಾಮರೂ, ಅವರ ಮಂತ್ರಿಯು ಸಹ ಬಾಲಕರಾಗಿದ್ದರು. ಪರಂತು ಯೆರಡನೆಯವರು ಮೊದಲನೆಯವರಿಗಿಂತ ಅನೇಕ ಭಾಗಗಳಲ್ಲಿ ವ್ಯಾಪಕರಾಗಿದ್ದರೂ ನಿಜಾಮರವರು, ತಮ್ಮ ಅಧಿಕಾರವು ಸ್ವತಃ ಚಲಾಯಿಸದೆ ಪ್ರಭುತ್ವಮಾಡಲಿಕ್ಕೆ ಇಷ್ಟವಿಲ್ಲದವರಾಗಿರುತ್ತಾರೆ ಅವರ ಮಂತ್ರಿಯಾದರೋ, ಪ್ರಭುತ್ವವಿಲ್ಲದೆಯೇ ಅಧಿಕಾರವು ನಡೆಸಲಿಕ್ಕೆ ಅರಿತವರಾಗಿರುತ್ತಾರೆ ಅಂದರೆ ನಿಜಾಮರು ನಾಮಮಾತ್ರಕ್ಕೆ ಅರಸರೆನಿಸಿಕೊಂಡು ತಮ್ಮ ಅಧಿಕಾರವು ಅನ್ಯರು ಚಲಾಯಿಸುವದನ್ನು ನೋಡುವದಕ್ಕೆ ಇಷ್ಟವಿಲ್ಲದವರಾಗಿಯೂ, ಅವರ ಮಂತ್ರಿಯವರು ಸರ್ವಾಧಿಕಾರವನ್ನೂ ಸ್ವತಃ ಜರಿಗಿಸಬೇಕೆಂಬ ಕೋರಿಕೆಯುಳ್ಳವರಾಗಿಯೂ ಇರುತ್ತಾರೆಂದು ಭಾವವು ಇಂತಾ ಪರಸ್ಪರಾಭಿಪ್ರಾಯಗಳೇ ಅವರ ವೈಷಮ್ಯಕ್ಕೆ ಕಾರಣವಾಯಿತು ಪರಂತು ಕಲಹನಿಮಿತ್ತಕವಾದ ವಿಷಯಸ್ವರೂಪವನ್ನಾವರಿಯೆವು. ದೇಶದ ಅರ್ಥವಿಷಯಕವಾದ ಸ್ಥಿತಿಯು ಅಪೇಕ್ಷಿಸಿದ್ದಂತೆ ಇಲ್ಲವು. ಪ್ರಭುತ್ವವಿಷಯದಲ್ಲಿ ನಿಜಾಮರವರು ಇದುವರಿವಿಗೆ ಚಲಾಯಿಸುತಿದ್ದ ಅಧಿಕಾರಕ್ಕಿಂತಲೂ ವಿಶೇಷವಾಗಿ ಸ್ವತಃ ನಡೆಸಬೇಕೆಂಬ ಕೋರಿಕೆಯುಳ್ಳವರಾಗಿರುವಂತೆ ತಿಳಿಯಬರುತಿದೆ ಮೈಸರಾಯಿಯವರು ಉಭಯರ ವಾದವನ್ನೀಸಂದರ್ಭದಲ್ಲಿ ಕೇಳಿರಬಹುದೆಂದು ನಂಬುತ್ತೇವೆ. ಅಲ್ಲದೆ ಈ ವಿಷಯದೊಳು ಸ್ನೇಹಪೂರ್ವಕವಾದ ಅವರ ಪ್ರವೇಶವೂ, ಹಿತೋಪದೇಶವು ಸಹ ನಿಜಾಮರಿಗೂ ಅವರ ಮಂತ್ರಿಯವರಿಗೂ ಇದ್ದ ಮೈತ್ರಿಯನ್ನು ಮರಳಿ ನೆಲಗೊಳಿಸುವವರ ಮೂಲಕ ದೇಶದ ಕ್ಷೇಮವನ್ನಭಿವೃದ್ಧಿಗೊಳಿಸಲಿಕ್ಕೆ ಕಾರಣವಾಗುವದೆಂದೆಣಿಸುವೆವು. ಬ್ರಿಟಿಷ್ ರೆಸಿಡೆಂಟರಾದ ಮೆ॥ಕಾರ್‌ಡ್ರೇಯವರು ನಿಜಾಮರಪರಿಜನರಿಗೆ ಮೈಸರಾಯಿಯವರ ಭೇಟಿಯಂಮಾಡಿಸಿದರು. ಆಗ ಅವರಪೈಕಿ ಪ್ರತಿಯೊಬ್ಬರೂ ೫ ಮೊಹರಾಗಳನ್ನು ನಜರೊಪ್ಪಿಸಲು, ಮೈಸರಾಯಿಯವರದಂ ಸ್ಪರ್ಶಿಸಿ ವಾಪಸ್ ಮಾಡಿದರು. ತರುವಾಯ ನಿಜಾಮರೊಡನೆ ಅಂತರಂಗಪ್ರದೇಶವಾದ ಪಾರ್ಶ್ವಗೃಹಕ್ಕೆ ದಯಮಾಡಿ ಅಲ್ಲಿ ಒಂದು ಘಂಟೆಯಕಾಲ ಮಾತನಾಡುತಲಿದ್ದು ಬಳಿಕ ಇಬ್ಬರೂ ಮರಳಿ ದರ್ಬಾರ್ ಸಾಧಕ್ಕೆ ಬಂದರು. ಅಲ್ಲಿ ಗಂಧ ಪುಷ್ಪತಾಂಬೂಲ ಮೊದಲಾದ ಮರ್ಯಾದೆಗಳಾದಮೇಲೆ ನಿಜಾಮರವರು ದೆವ್ಮಬಿಡಾರಕ್ಕೆ ದಯಮಾಡಿದರು. ಒಳಗೆ ನಡೆದ ಸಂಭಾಷಣೆ ಕಾಲದೊಳು ಫಾರೀನಸೆಕ್ರಿಟರಿಯಾದ ಮೆ॥ ಡುರಾಂಡೆಯವರೊಬ್ಬರು ವಿನಾ ಅನ್ಯರೊಬ್ಬರಿಗೂ ಅಲ್ಲಿ ಪ್ರವೇಶವಿಲ್ಲದ್ದರಿಂದ ಅಲ್ಲಿ ನಡೆದ ಸಂಭಾಷಣಾಕ್ರಮವನ್ನರಿತವರೊಬ್ಬರೂ ಇಲ್ಲವು. ಅದೇದಿನ ಸಾಯಂಕಾಲ ಮೈಸರಾಯಿಯವರು ನಿಜಾಮರ ಭೇಟಿಯಬಗ್ಯೆ ಅವರ ಬಿಡದಿಗೆ ದಯಮಾಡಿದ್ದರು. ಮಾರನೆಯದಿನ ಮೆ॥ ಡುರಾಂಡಯವರು ಮೈಸರಾಯಿಯವರ ಆಜ್ಞಾನುಸಾರ ನಿಜಾಮರವರ ಭೇಟಿಯಬಗ್ಯೆ ಹೋಗಿದ್ದರು. ಇದು ಸಹ ಯಾವದೋ ಒಂದ ಕಾರ್ಯೋದ್ದೇಶದೊಡನೆ ಮಾಡಿಕೊಳ್ಳಲ್ಪಟ್ಟ ಭೇಟಿಯಾದದರಿಂದ ಆಕಾಲದಲ್ಲಿ ಸಂಸ್ಥಾನದ ಮುಂದಿನ ಆಡಳಿತಕ್ಕೆ ಸಂಬಂಧಪಟ್ಟ ಮುಖ್ಯವಿಷಯಗಳು ಒಮ್ಮೆ ವಿಚಾರಪೂರ್ವಕ ನಿರ್ಣಯಿಸಲ್ಪಟ್ಟಿರಬಹುದೆಂದು ತೋರುತಿದೆ. ಪರಂತು ಅಲ್ಲಿ ನಡೆದ ವಿಷಯವನ್ನೊಬ್ಬರೂ ಅರಿತವರಿಲ್ಲವು.

— —

Grievances of the people of India. ತತ್ಕಾಲದೊಳು ಇಂಡ್ಯ ದೇಶೀಯರಿಗೆ ಉಂಟಾಗಿರತಕ್ಕ ಸುಖದುಃಖಗಳನ್ನುಕುರಿತು ಕಲ್ಕತ್ತೆಯ ಅಮೃತಬಜಾರ್‌ಪತ್ರಿಕೆಯು ತಿಳಿಸುತಿದೇನಂದರೆ, ಇಂಡ್ಯದೇಶೀಯರಿಗೆ ಉಂಟಾಗಿರತಕ್ಕ ಕೋಟನೀಯಾಂಶಗಳಪೈಕಿ, ವಿಶೇಷ ಆಯತಿಯೂ ಜವಾಬ್ದಾರಿಯೂವುಳ್ಳ ಕೆಲಸಗಳನ್ನುಭರ್ತಿಮಾಡುವ ಉದ್ದೇಶದಿಂದ ಇಲ್ಲಿನ ಅಧಿಕಾರಿಗಳು ಅನ್ಯದೇಶೀ

ಯರು ಕರೆಸುವದು ಮೊದಲನೆಯದಾಗಿರುತಿದೆ, ಹಾಗೆ ಅನ್ಯದೇಶದಿಂದ ಬಂದು ಪೊಕರರಾಗತಕ್ಕ ಅಧಿಕಾರಿಗಳ ತಲಬ್ ಅದೇ ಕೆಲಸವನ್ನು ನಿರ್ವಹಿಸತಕ್ಕ ಸ್ವದೇಶೀಯರ ತಲಬಿಗಿಂತ ನಾಲ್ಕರಮೊದಲು ಹತ್ತರತನಕ ಜಾಸ್ತೀಯಾಗಿರುವದು ಎರಡನೆಯದಾಗಿರುತಿದೆ. ಸದರೀ ಅಧಿಕಾರಿಗಳು ರಜಾರಫ್ತು ಮುಂತಾದದು ಪಡೆಯುವದಕ್ಕೆ ಸಕಲವಿಧಸೌಲಭ್ಯವೂ ಅವರಿಗೆ ಮಂಜೂರುಮಾಡಲ್ಪಟ್ಟಿರುವದಲ್ಲದೆ ಬೇಕಾದಷ್ಟು ತೃಪ್ತಿಕರಗಳಾದ ಅನುಕೂಲ್ಯಗಳಂ ಕಲ್ಪಿಸುವದರಮೂಲಕ ಅವರು ಸ್ವದೇಶಕ್ಕೆಹೋಗಿ ಅಲ್ಲಿ ತಮ್ಮ ಕಾಲವನ್ನು ವಿನೋದದಿಂದ ಕಳೆಯುವಂತೆಯೂ, ಅವರ ಕೆಳಗೂ ಉದ್ಯೋಗಸ್ಥರು ಇಜಾಫೆ ಪಡೆಯುವಂತೆಯೂ, ಏರ್ಪಟ್ಟಿರುವದು ಮೂರನೆಯ ವಿಷಯವಾಗಿರುತಿದೆ. ಈ ಅಧಿಕಾರಿಗಳು, ತಮಗೆ ಅನುಕೂಲವಾದುದೆಲ್ಲ ಪೆನ್ಷನ್‌ಗಳು ಪಡೆಯುವದು ಮಾತ್ರವಲ್ಲದೆ ಅವರು ಅವನ್ನೆಲ್ಲ ಅನ್ಯದೇಶದಲ್ಲಿ ವ್ಯಯಮಾಡುವದು ನಾಲ್ಕನೆಯದಾಗಿರುತಿದೆ. ಇವಲ್ಲದೆ ಇಲ್ಲಿನ ಪ್ರಜೆಗಳಿಗೆ ಚಿಂತನೀಯವಾದ ಬೇರೊಂದು ವಿಷಯವುಂಟು, ಪರಂತು ಅದರ ಸ್ವರೂಪವನ್ನವರು ಚೆನ್ನಾಗಿ ಅರಿಯದ್ದರಿಂದ ಆವಿಷಯವಾಗಿ ಅವರು ಫಿರ್ಯಾದು ಮಾಡದಿರಬಹುದೆಂದು ತೋರುತ್ತೆ. ಮೇಲೆ ತಿಳಿಸಲ್ಪಟ್ಟಂತಾ ಅಧಿಕಾರಿಗಳಿಗೆ, ವಿಶೇಷ ಪರಿಭಾವನೆಯೊಡನೆ, ದಾಖಲಿನ ಪೆನ್ಷನ್‌ಗಳನ್ನು ಕೊಡತಕ್ಕರೀತಿಯು ಕೇವಲ ವಿಷಾದಕರವಾದದ್ದು. ಲಾರ್ಡ್‌ಪಬ್ಬಣಸೋಳರ ವ ಇತ್ಯ ಆಫೀಸಿನಲ್ಲಿ ಸಾಧಾರಣವಾಗಿ ಜಾರೀಯಲ್ಲಿರತಕ್ಕ ನಿಬಂಧನೆಯ ಪ್ರಕಾರ, ಕೆಲವು ಸಂವತ್ಸರಗಳ ನೌಕರಿಯ ತರುವಾಯ ಪೆನ್ಷನ್‌ಮೇಲೆ ತೊಲಗಿಸಲ್ಪಡುವದು ಮಾತ್ರವಲ್ಲದೆ ಅವರ ತಲಬಿಗೆ ಅನುಗುಣವಾದ ಪೆನ್ಷನ್ ಕೊಡಲ್ಪಡುವದು. ಪರಂತು ಇಂಡ್ಯ ದೇಶದ ಸ್ಥಿತಿಯನ್ನು ಅದಕ್ಕಿಂತ ಉತ್ತಮವೆಂದು ಹೇಳಬಹುದಾಗಿದೆ. ಗತ ಯೆರಡು ತಿಂಗಳಲ್ಲಿ ಯಿಬ್ಬರು ಆಫಿಸರ್‌ಗಳಿಗೆ ಸ್ಪೆಷಲ್‌ಪೆನ್ಷನ್ ಕೊಡತಕ್ಕದ್ದೆಂದು ಏರ್ಪಾಡಾಯಿತು. ಇವರೊಳು ಲಾಹೂರ್‌ನೊಳಿರುವ ಡಾಕ್ಟರ್‌ಲೀಟ್ನರ್ ಎಂಬವರೊಬ್ಬರಾಗಿಯೂ, ಚೀಫ್‌ಜಸ್ಟಿಸ್ ಸರ್ ರಿಚ್ಚರ್ಡ್‌ಗಾರ್ತ್‌ಯವರು ಎರಡನೆಯವರಾಗಿಯೂ ಇರುತ್ತಾರೆ. ಮುಸಲಾ ಸರ್‌ರಿಚ್ಚರ್ಡ್‌ಗಾರ್ತ್‌ಯವರ ವಿಷಯವು ಕುರಿತು ಆಲೋಚಿಸಿದರೆ ಸ್ಪೆಷಲ್ ಪೆನ್ಷನ್ ಕೊಡಬೇಕಾದಷ್ಟು ಮಹನತ್ ಯಾ ಉಪಕಾರವನ್ನು ಅವರು ಈದೇಶಕ್ಕಾಗಲಿ, ಅಥವಾ ಪ್ರಜೆಗಳಿಗಾಗಲಿ ಮಾಡಿದಂತೆ ಇದುವರಿವಿಗೆ ನಮ್ಮ ಸ್ಮರಣೆಗೆ ಬರಲಿಲ್ಲವು. ಇಂಡ್ಯ ದೇಶದ ರೈತರಲ್ಲಿರುವ ದ್ರವ್ಯದಿಂದವರನ್ನು ತೃಪ್ತಿಗೊಳಿಸಲರಿಯದ ಗವರ್ನಮೆಂಟಿನವರು, ಈ ಮೂಲಕವಾಗಿಯಾದರೂ ರೈತರು ಸಂತೋಷಿಸಲೆಂದೆಣಿಸಿ ಈರೀತಿ ಮಾಡಲುದ್ದೇಶಿಸಿರಬಹುದಲ್ಲವೆ, ಎಂಬದು

The Formal Annexation of Upper Burmah.—ಮಾಹೇಮಜಕೂರ್ ೫ನೇತಾರೀಖಿನಲ್ಲಿ ಬ್ರಿಟಿಷಸರ್ಕಾರದವರು ಇದರಡಿಕಂಡ ಪ್ರಸಿದ್ಧ ಪತ್ರಿಕೆಯನ್ನು ಪ್ರಾಯಿಷಿಮಾಡಿರುತ್ತಾರೆ:— "ಘನವುಳ್ಳ ವೈಸ್‌ರಾಯಿಯವರ ಆಜ್ಞಾನುಸಾರ ಇದರಿಂದ ತಿಳಿಯಪಡಿಸುವದೇನೆಂದರೆ, ನವೀನಾರ್ಜಿತವಾದ ಬರ್ಮ್ಹ ರಾಜ್ಯವು ಶ್ರೀಮನ್ಮಹಾರಾಜ್ಞೀಯವರ ದೇಶಗಳೊಡನೆ ಸ್ಥಿರವಾಗಿ ದಾಖಲ್ಮಾಡಲ್ಪಟ್ಟದರಿಂದ ಇನ್ನು ಮೇಲೆ ಅದು ಬ್ರಿಟಿಷ್ ಆಫಿಸರ್‌ಗಳ ಸಾಕ್ಷಾತ್ಪರಿಪಾಲನೆಯೊಳಿರುವದಲ್ಲದೆ ಅದು ಮರಳಿ ಬರ್ಮ್ಹ ಅರಸರೊಬ್ಬರೂ ಆಳಲಾರರು. ಮಹಾರಾಜ್ಞೀ ಚಕ್ರವರ್ತಿನೀಯವರೇ ಉಭಯಭಾಗಕ್ಕೂ ಪಾಲಕರಾಗಿ ಏರ್ಪಟ್ಟದರಿಂದ ಬರ್ಮ್ಹ ದೇಶೀಯರೆಲ್ಲರೂ ಆಕೆಯವರ ಸ್ವಂತ ಪ್ರಜೆಗಳಾಗಿರುತ್ತಾರೆ. ಸದರೀಪ್ರಜೆಗಳ ಯೋಗಕ್ಷೇಮವು ಬ್ರಿಟಿಷ್ ಗವರ್ನಮೆಂಟಿನವರ ಪಾಲನೆಗೊಳಗಾದದರಿಂದ, ಸಮಸ್ತ ಜಾತಿಯವರ ಆಚಾರಗಳು, ಅವರಿಗೆ ವುಂಟಾಗಿರುವ ಹಕ್ಕುದಾರಿಗಳು, ಅವರು ಪಡೆದಿರತಕ್ಕ ಸ್ವಾತಂತ್ರ್ಯಗಳು, ಅವರಿಗೆ ಸಂಬಂಧಿಸಿದ ಮತ ವಿಷಯಕವಾದ ಸ್ಥಾಪನೆಗಳು, ಇವುಗಳೆಲ್ಲ ಗೌರವಿಸಲ್ಪಡುವವಲ್ಲದೆ ದೇಶದ ಇತರ ಭಾಗಗಳಂತೆ ಪ್ರಜೆಗಳ ಪ್ರಾಣ ಮಾನ ಧನಗಳು ಸಂಪೂರ್ಣವಾಗಿ ಸಂರಕ್ಷಿಸಲ್ಪಡುವವು. ವೈದಿಕ ಲೌಕಿಕರುಮೊದಲಾದವರು, ಬ್ರಿಟಿಷ ಪ್ರಭುತ್ವವನ್ನು ರಾಜಭಕ್ತಿಯೊಡನೆ ಅಂಗೀಕರಿಸಿ ವೈಸರಾಯಿಯವರಿಂದ ನಿಯಮಿತರಾದ ಅಧಿಕಾರಿಗಳಿಗೆ ಸಹಾಯಕರಾಗಿ ನಿಂತರೆ, ಬ್ರಿಟಿಷ ಸರ್ಕಾರಕ್ಕೆ ಅವರು ಮಾಡತಕ್ಕ ಶ್ಲಾಘ್ಯಗಳಾದ ನೌಕರಿಗಳೆಲ್ಲವೂ ತಕ್ಕ ಸಹಾಯ ಪ್ರೋತ್ಸಾಹಗಳೊಡನೆ ಉಚಿತ ರೀತಿಯಿಂದ ಸನ್ಮಾನಿಸಲ್ಪಡುವವು. ಯಾವ ಮಾರ್ಗದಿಂದಲಾದರು ಜುಲ್ಮೀಗಳನ್ನೂ, ಫಿತೂರೀಗಳನ್ನೂ ಪರೋಪತೆಗಳನ್ನೂ ಸಮೂಲವಾಗಿ ಅಡಗಿಸಬೇಕೆಂಬದೇ ಗವರ್ನಮೆಂಟಿನವರ ದೃಢಾಭಿಪ್ರಾಯವಾಗಿರುತಿದೆ. ದುರ್ಬೋಧಕರಿಂದ ಮೋಹಿತರಾದವರೆಲ್ಲರೂ, ತಮ್ಮದುಷ್ಕೃತ್ಯಗಳಂತೊರೆದು ಶಾಂತಿಕರಾದ ನಿವಾಸಿಗಳಾಗಿರಲಿಕ್ಕೆ ಅನುಕೂಲವಾದ ಈಸಂದರ್ಭವನ್ನು ಅವರು ಕಳೆಯಕೊಳ್ಳಬೇಕೆಂದು ಗವರ್ನಮೆಂಟಿನವರು ಅಪೇಕ್ಷಿಸುವದಿಲ್ಲವು ಗವರ್ನಮೆಂಟಿನವರಿಗೆ ವಿರುದ್ಧವಾಗಿ ಪ್ರತಿಭಟಿಸುತಲಿರತಕ್ಕವರೆಲ್ಲರೂ ತಮ್ಮ ಆಯುಧಗಳಂ ತಂದೊಪ್ಪಿಸಿ ಶರಣಾಗತರಾಗಿ ತಮತಮಗೆನಿಯತಗಳಾಗಿರುವ ಕೃಷಿ ವಾಣಿಜ್ಯಾದಿ ಜೀವನಗಳೊಳು ಪ್ರವರ್ತಿಸಬೇಕೆಂದು ಅಪೇಕ್ಷಿಸಲ್ಪಟ್ಟಿರುತ್ತಾರೆ. ಬರ್ಮ್ಹರಾಜ್ಯದಲ್ಲಿ ಗವರ್ನಮೆಂಟಿನವರಿಗೆ ಪ್ರತಿಕೂಲವಾಗಿ ವಿಜೃಂಭಿಸುತ ಆಯುಧಗಳಂ ಧರಿಸತಕ್ಕವರೆಲ್ಲರೂ ಬರುವ ಜೂನ್ ತಿಂಗಳ ೩ನೇ ತಾರೀಖಿನೊಳಗಾಗಿ ಬ್ರಿಟಿಷಆಫಿಸರ್‌ಯಾರಿಗಾಗಲಿ, ಸ್ವತಃ ಬಂದು ಶರಣಾಗತರಾದರೆ ಅಂತವರ ಪ್ರಾಣವು ಕಾಪಾಡಲ್ಪಟ್ಟು ಅವರ ಅಪರಾಧಾನುಗುಣವಾಗಿ ವೈಸ್‌ರಾಯಿಯವರ ಆಜ್ಞಾನುಸಾರ ಕೃಪೆಯೊಡನೆ ಸಾಮ್ಯವಾಗಿ ನಡಿಸಲ್ಪಡುವರೆಂದು ಭರವಸೆಕೊಡಲ್ಪಟ್ಟಿರುತ್ತಾರೆ. ಪಿರ್ಗಿ ಎಂಬಪ್ರದೇಶದಲ್ಲಿ ಖೂನಮಾಡಲ್ಪಟ್ಟ ಅರ್ಲ್, ರಾಬರ್ಟ್‌ಸನ್, ಮಾರ್ಕರ್ ಎಂಬ ಮೂವರವಧೆಗೂ, ಜಮಿನ್ಸಿಯೆಂಬ ಸ್ಥಳದಲ್ಲಿ ಕೊಲ್ಲಲ್ಪಟ್ಟ ಗ್ರೇಯೆಂಬವರ ಪ್ರಾಣಹಾನಿಗೂ, ಮುಖ್ಯಪ್ರವರ್ತಕರಾಗಿದ್ದವರೂ, ಪ್ರೇರಕರಾದವರು ಸಹ ಮೇಲೆ ಕಂಡ ಕ್ಷಮಾಪಣೆಗೆ ಅವಿಷಯರಾಗಿರುತ್ತಾರೆ. ಪ್ರಸಿದ್ಧರಾದ ದರೋಡೆಯವರು ವಿನಾ, ಈ ಇಷ್ತಿಹಾರಿಗೆ ಪೂರ್ವದೊಳು ಸಂಸ್ಥಾನಕ್ಕೆ ವ್ಯತಿರಿಕ್ತವಾಗಿ ತಕ್ಸೀರ್‌ಗಳನ್ನು ಮಾಡಿರುವವರೆಲ್ಲರೂ ಸದರೀ ತಾರೀಖಿನೊಳಗಾಗಿ ತಾವಾಗಿ ಬಂದು ಶರಣಾಗತರಾದರೆ ಅವರ ಅಪರಾಧಗಳೆಲ್ಲವು ಕ್ಷಮಿಸಲ್ಪಡುವವು. ಕಲಹಿಗಳೂ ದರೋಡೆಯವರು ಸಹ ಇಂತಾ ದಯೆಗೆ ಒಂದುವೇಳೆ ಅಪಾತ್ರರಾದರೆ ಅವರವಿಷಯದೊಳು ನ್ಯಾಯವಾಗಿ ನಡಿಸಲ್ಪಡುವದೆಂದು ಇದರಿಂದ ಎಚ್ಚರಿಸಲ್ಪಟ್ಟಿರುತ್ತಾರೆ. ದರೋಡೆಗಳು ಮತ್ತು ಕಲಹಗಳ ನಿಮಿತ್ತದಿಂ ಬೈಲಿನಲ್ಲಿರತಕ್ಕವರ ಇಷ್ಟಬಂಧುಗಳೆಲ್ಲರೂ ದೇಶದೊಳು ಸಮಾಧಾನಸ್ಥಿತಿಯಂ ನೆಲಗೊಳಿಸುವದರಲ್ಲಿ ಅಧಿಕಾರಿಗಳಿಗೆ ಸಹಾಯಕರಾಗಿರಬೇಕೆಂದು ಅಪೇಕ್ಷಿಸಲ್ಪಡುತ್ತಾರೆ. ತತ್ಕಾಲದಲ್ಲಿ ನೆಲಗೊಂಡಿರುವ ಸಂಕಟಗಳೆಲ್ಲವೂ ನಿವಾರಣವಾದರೆ ಬಳಿಕ ಈಗ ಬೈಲಿನಲ್ಲಿರುವ ದರೋಡೆಯವರ ಮತ್ತು ಕಲಹಿಗಳ ದಂಡನೆಗಳನ್ನು ತಗ್ಗಿಸುವ ವಿಷಯವು ಆಲೋಚಿಸಲ್ಪಡುವದೇ ಹೊರ್ತು ಅದು ಈಗಿನಂತೆ ನೆಲಗೊಂಡಿರುವ ಪರ್ಯಂತ ಖುಲಾಸೆಯನ್ನು ಸ್ವಲ್ಪವೂ ನಿರೀಕ್ಷಿಸಬೇಕಾದ್ದಿಲ್ಲವು, ಎಂಬದು.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕಜಾತಿವೃತ್ತಾಂತಗಳು.

His Highness the Maharaja.—ಶ್ರೀಮನ್ಮಹಾರಾಜರವರು, ಪದ್ಧತಿಮೇರೆ, ಬರುವತಿಂಗಳ ಆದಿಭಾಗದಲ್ಲಿ, ತಮ್ಮ ಪರಿಜನರೊಡನೆ, ಬೇಸಿಗೆಯಬಗ್ಗೆ ನೀಲಗಿರಿಗೆ ದಯಮಾಡಿ, ಮೇ ತಿಂಗಳ ಆಖೈರ್‌ವರಿವಿಗೆ ಅಲ್ಲೀ ಇರುವರೆಂದು ಕೇಳುತ್ತೇವೆ.

Execution.—ಹೊಸದುರ್ಗ ತಾಲ್ಲೂಕು ಶಿವನಕಟ್ಟೆಯೆಂಬ ಗ್ರಾಮದ ಹಲಗಾ ಯೆಂಬವನು ಅದೇ ಗ್ರಾಮದಲ್ಲಿ ಖೂನಮಾಡಿದಬಗ್ಗೆ ಚೀಫ್‌ಕೋರ್ಟಿನವರಿಂದ ವಿಧಿಸಲ್ಪಟ್ಟ ದಂಡನೆಯನ್ನನುಸರಿಸಿ ಕಳೆದ ಮಂಗಳವಾರ ಬೆಳಗ್ಯೆ ೬ ಘಂಟೆಗೆ ಇಲ್ಲಿನ ಸೆಂಟ್ರಲ್‌ಜೈಲಿನಲ್ಲಿ ಗಲ್ಲಿಗೆ ಹಾಕಲ್ಪಟ್ಟನು.

The weather.—ಈಚೆಗೆ ಹವಾ ಸ್ವಲ್ಪಬದಲಾಯಿಸಿತೆಂದು ಹೇಳಬೇಕಾಗಿದೆ. ಕಳೆದಸೋಮವಾರದದಿನ ಸಾಯಂಕಾಲ ಎಕಾಏಕಿ ಮೋಡ ಮುಸುಕಿ ರಾತ್ರಿ ೭ಘಂಟೆಯಮೇಲೆ ಸುಮಾರು ಅಪ್ಪಷ್ಟ ಮಳೆಯಾಯಿತು. ಮಂಗಳವಾರದದಿನವೂ ಪರಸ್ಥಳಗಳಲ್ಲಿ ಅಲ್ಪಮಳೆ ಆದಂತೆ ಕಾಣುತಿದೆ. ಪದಾರ್ಥಗಳಧಾರಣೆ ಏಕರೂಪವಾಗಿಯೇ ಇದೆ.

H. H. the Maharaja's birthday.—ಕಳೆದ ಬುಧವಾರದದಿನ ಶ್ರೀಮನ್ಮಹಾರಾಜರವರ ವರ್ಧಂತಿ ಉತ್ಸವವಾದದರಿಂದ ಅದಕ್ಕಾಗಿ ಅದರ ಹಿಂದಿನರಾತ್ರಿ, ಇಲ್ಲಿನ ಬ್ರಿಟಿಷ್ ರೆಸಿಡೆಂಟರಾದ ಮಿ| ಗ್ಡಿಲ್‌ಸ್ಟರ್‌ಯವರು, ಅಸಿಸ್ಟೆಂಟ್ ರೆಸಿಡೆಂಟರು, ಚೀಫ್‌ಜಡ್ಜಿಯವರು, ಚೀಫ್‌ಕೋರ್ಟ್ಟ ಇತರ ಜಡ್ಜಿಗಳು, ದಿವಾನರವರು, ಇವರೆಲ್ಲರೂ ಸ್ಪೆಶಲ್ ಟ್ರೈನಿನಲ್ಲಿ ಮೈಸೂರಿಗೆ ಹೋಗಿದ್ದು, ಬ್ರಿಟಿಷ್ ರೆಸಿಡೆಂಟರೂ ಚೀಫ್‌ಕೋರ್ಟ್ ಜಡ್ಜಿಗಳೂ ಕಳೆದ ಶುಕ್ರವಾರದದಿನ ಬೆಳಗ್ಯೆ ಸ್ಪೆಶಲ್ ಟ್ರೈನಿನಲ್ಲಿ ಬೆಂಗಳೂರಿಗೆ ವಾಪಸ್ ಬಂದರು.

Director of Public Instruction.—ಈ ಸಂಸ್ಥಾನದ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರಾಗಿದ್ದು, ಈಚೆಗೆ ಕೆಲವು ಸಂವತ್ಸರಗಳ ಮೊದಲು, ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖಾ ಸೆಕ್ರೆಟರಿ ಯೆಂಬ ನೂತನಾಭಿದಾನದೊಡನೆ ಕೆಲಸ ನೋಡುತಲಿದ್ದ ಮಿ. ಎಲ್. ರೈಸ್‌ಯವರನ್ನು ಇನ್ನು ಯೆರಡು ವರುಷಗಳ ಕಾಲ ಡೈರೆಕ್ಟರೆಂಬ ಹೆಸರಿನಿಂದ ಈ ಸಂಸ್ಥಾನದ ನೌಕರಿಯಲ್ಲಿಟ್ಟುಕೊಳ್ಳಬೇಕೆಂದು ಮಹಾರಾಜಾ ಸರ್ಕಾರದವರು ನಿರ್ಣಯಿಸಿರುವಂತೆ ಒಳದೇಶದ ಪತ್ರಿಕೆ ಯೊಂದರಮೂಲಕ ತಿಳಿಯಲಾದೆವು.

Railway extension.—ನಂ. ೨೧೦.-ಸರ್ ೧೮೭೦ನೇ ಇಸವಿXನೇ ನಂಬರ್ ಲ್ಯಾಂಡ್ ಅಕ್ವಿಜೇಷನ್ ಆಕ್ಟಿನ ೬ನೇ ಸೆಕ್ಷನ್ ನಿಯಮಗಳನ್ನನುಸರಿಸಿ ಇದರದೆಸೆಯಿಂದ ತಿಳಿಯಪಡಿಸುವದೇನಂದರೆ, ಬೆಂಗಳೂರಿಂದ ಯಲಹಂಕ, ದೊಡ್ಡಬಳ್ಳಾಪುರ, ಗೌರೀಬಿದನೂರು, ಈ ಮಾರ್ಗವಾಗಿ ಹಿಂದೂಪುರಕ್ಕೆ ಹಾಕಲ್ಪಡುವ ರೈಲ್ವೆ ಲೈನಿಗಾಗಿ ಬೇಕಾಗುವ ತಮಾಂ ಜಮೀನುಗಳಿಗಾಗಿ ಮೇಲ್ಕಂಡ ಆಕ್ಟು ಅನುಸರಿಸಿ ಕಂಪೆನ್ಸೇಷನ್‌ಯಾನ ಈತು ಮೊಬಲಗು ಕೊಟ್ಟು ಸರಕಾರಕ್ಕೆ ತೆಗದ್ಗೊಳ್ಳಲ್ಪಡುತ್ತೆ. ಆ ಜಮೀನುಗಳಿಗೆ ಸಂಬಂಧಪಟ್ಟ ದವರು ಸದರೀ ರೈಲ್ವೆ ಲೈನನ್ನು ಈಗ ಸರ್ವೆ ಮಾಡುವಂತಾವರಿಗೆ ಅವರ ಕೆಲಸವನ್ನು ನಡಿಸುವದರಲ್ಲಿ ಯಾವ ವಿಧವಾದ ಆತಂಕವೂ ಪಡಿಸಕೂಡದು.

Holi feast.—ಈಸಲ ಕಾಮನಹಬ್ಬವು ತಮ್ಮಟಧ್ವನಿ ವಾದ್ಯಾದಿಗಳೊಡನೆ ಪ್ರಾರಂಭವಾಗಿ, ಬಿದಿರು, ಸೌದೆ, ಮೊಸರು, ಇವು ಮಾರದವರಿಗಾಗಿ ಆಸುಪಾಸಿನ ಗ್ರಾಮಗಳಿಂದ ಬೆಂಗಳೂರು ಷಹರಿಗೆ ಬರತಕ್ಕ ಬಡಹೆಂಗಸರ ವಿಷಯದಲ್ಲಿ ಸುಪ್ರಸನ್ನಾನುರಾಗವನು ತೋರಿಸುತಲಿದೆ. ವಿದ್ಯಾವೈಲಕ್ಷಣ್ಯಗಳು ಹೆಚ್ಚುತಬರುವಹಾಗೆಲ್ಲ ಹಿಂದೆ ಈಹಬ್ಬದಲ್ಲಿ ನಡೆಸಲ್ಪಡುತಬಂದ ವಿನೋದಗಳೆಲ್ಲವು ಕಡಮೆಯಾಗುತಬಂದವು. ಪರಂತು ಬೀದಿಗಳಲ್ಲಿಹೋಗುವ ದೊಡ್ಡಮನುಷ್ಯರಮೇಲೆ ಪಿಚಿಕಾರಿಯಿಂದ ಗುಲಾಬಿನೀರು ಚೆಲ್ಲುವದು, ಮಾನವತಿಯರಾದ ಹೆಂಗಸರನ್ನುನೋಡಿ ಬಂಡಮಾತುಗಳಾಡುವದು ಮೊದಲಾದ ಇನ್ನು ಕೆಲವು ದುಷ್ಟಚೇಷ್ಟೆಗಳು ಅದ್ಯಾಪಿ ತಪ್ಪಲಿಲ್ಲವು ಇಂತಾ ದುಷ್ಕೃತ್ಯಗಳನ್ನು ತಪ್ಪಿಸುವವಿಷಯದಲ್ಲಿ ಅಧಿಕಾರಿಗಳು ತಕ್ಕಏರ್ಪಾಡು ಮಾಡಬೇಕಾದ್ದು ಅತ್ಯಾವಶ್ಯಕವೆಂದು ತೋರುತಿದೆ.

TELEGRAPHIC SUMMARY.
ತಂತಿವೃತ್ತಾಂತ ಸಂಗ್ರಹವು.

ರಂಗೂನ್, ೫ನೇ ಮಾರ್ಚಿ.—[illegible]

ಕಾನ್‌ಸ್ಟಾಂಟಿನೋಪಲ್, ೭ನೇ ಮಾರ್ಚಿ.—[illegible]

ಕಾನ್‌ಸ್ಟಾಂಟಿನೋಪಲ್, ೮ನೇ ಮಾರ್ಚಿ.—[illegible]

ಬರ್ಲಿನ್, ೯ನೇ ಮಾರ್ಚಿ.—[illegible]

[illegible], ೯ನೇ ಮಾರ್ಚಿ.—[illegible]

ಕಾನ್‌ಸ್ಟಾಂಟಿನೋಪಲ್, ೧೦ನೇ ಮಾರ್ಚಿ.—[illegible]

[illegible]

[illegible]

ಲಂಡನ್, ೧೧ನೇ ಮಾರ್ಚಿ.—[illegible]

[illegible]

[illegible]

ರಂಗೂನ್, ೧೨ನೇ ಮಾರ್ಚಿ.—[illegible] ೧೨,೦೦೦ [illegible]

BANGALORE:—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಸಾಮವಿವಿಧಪ್ರವೃತ್ತ್ಯುಪಗಮಾರ್ಹ್ಯ ಕರ್ಣಾಟಕಪ್ರಕಾಶನಪರಾಭಿದಾಪ್ರಥಿತಸಾಹಿತೀಲೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ವಿಕಾಸುಪರಿಶೋಧಿತಾದಿಕಶಿಮಾನಸಂ ಸುಮುದಂ॥

VOL. XIII] BANGALORE—MONDAY, MARCH 22, 1886. [No. 12.

ಸಂಪುಟ ೧೩.] ಬೆಂಗಳೂರು:—ಸನ್ ೧೮೮೬ನೇ ಇಸವಿ ಮಾರ್ಚಿ ೨೨ನೇ ತಾರೀಖು ಸೋಮವಾರ. [ಸಂಚಿಕೆ ೧೨.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ತೆಗೆದುಕೊಳ್ಳತಕ್ಕವರಿಗೆ, ಮುಂಗಡ ೧ ವರ್ಷಕ್ಕೆ ... ... ೧೨—೦—೦

ಇಂಗ್ಲಿಷ್ ಮಾತ್ರ ತೆಗೆದುಕೊಳ್ಳತಕ್ಕವರಿಗೆ ಮುಂಗಡ ೧ ವರ್ಷಕ್ಕೆ .. .. ೬—೦—೦

ಕನ್ನಡ ಮಾತ್ರ ತೆಗೆದುಕೊಳ್ಳತಕ್ಕವರಿಗೆ ಮುಂಗಡ ಕೊಟ್ಟರೆ ವರುಷಕ್ಕೆ . ೬—೦—೦

ಬಾಕಿ ೧ ವರ್ಷಕ್ಕೆ ೦—೮—೦

ಸೂಚನೆ.—ಸಂಚಿಕೆಯೊಂದಕ್ಕೆ ಇಂಗ್ಲಿಷ್ ಭಾಗಕ್ಕೆ ೨ ಆಣೆ, ಕನ್ನಡ ಭಾಗಕ್ಕೆ ೧ ಆಣೆ, ಮೇಲ್ಕಂಡ ಚಂದಾ ಕೊಡತಕ್ಕವರು [illegible] ಪತ್ರಿಕೆ ತರಿಸಬಹುದು. [illegible]

ಪ್ರಕಟನೆಯ ರಿವಾಜ್.

ಒಂದು ಸಲಕ್ಕೆ ಲೈನ್ ಒಂದಕ್ಕೆ ೧ ವರ್ಷಕ್ಕೆ ೦—೨—೦

ಮರು ಸಲಕ್ಕೆ ಲೈನ್ ಒಂದಕ್ಕೆ ೧ ವರ್ಷಕ್ಕೆ ೦—೧—೦

NOTICE TO SUBSCRIBERS.

ಇದರ ಕೆಳಗೆ ಕಂಡ ಅಂಶಗಳನ್ನು ನಮ್ಮ ಚಂದಾದಾರರು ಮುಖ್ಯವಾಗಿ ನೆನಪಿನಲ್ಲಿಡಬೇಕೆಂದು ಕೋರುತ್ತೇವೆ:—

೧. ಕರ್ಣಾಟಕ ಪ್ರಕಾಶಿಕೆಯ ಚಂದಾ ಬಗ್ಗೆ ಹಣವನ್ನು [illegible] [illegible]

೨. ನೋಟುಗಳ ರವಾನಿಸತಕ್ಕವರು ಅರ್ಧ ನೋಟು [illegible] [illegible]

೩. [illegible] [illegible]

೪. [illegible] [illegible]

NOTICE.

VAIDYASARA SANGRAHA.

Price including Postage, Rs. 5-0-0

ವೈದ್ಯಸಾರ ಸಂಗ್ರಹ.

ಈ ಗ್ರಂಥಕ್ಕೆ ಬೇಕಾದವರು [illegible] [illegible]

[illegible] ... .. ರೂ॥ ೫—೦—೦

ಅಂಚೆ ಖರ್ಚು ಅಂಚೇಕಾಸಲ್ ೦—೬—೦

ಆ. ವಿ. ವೆಂಕಟಾಚಾರ್, ಅಸ್ಪತ್ರೆರೋಡ್, ಬೆಂಗಳೂರು.

ನೋಟೀಸ್.

ಇದರ ಕೆಳಗೆ ವಿವರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ಮಾರಲ್ಪಡುತ್ತವೆ.—

ಕನ್ನಡ ಟೀಕೆ ಸಹಿತವಾದ ಸಂಸ್ಕೃತ ಗ್ರಂಥಗಳು.

[illegible]	...	೧—೪—೦
[illegible]	...	೦—೧೨—೦
[illegible] (ದ್ವಿತೀಯಾಂತಾಕ್)	...	೦—೩—೦
[illegible]		೦—೫—೦
[illegible]	...	೦—೪—೦
[illegible]	... ...	೦—೧೪—೦
[illegible]	...	೦—೬—೦
[illegible]	... ...	೦—೭—೦
ವೈದ್ಯಸಾರಸಂಗ್ರಹ	...	೫—೦—೦

ಕನ್ನಡ ಗ್ರಂಥಗಳು.

[illegible]	...	೦—೬—೦
[illegible]	...	೦—೪—೦
[illegible]	...	೦—೩—೬
[illegible]	... ...	೦—೨—೬
[illegible]	...	೦—೪—೦
[illegible]	...	೦—೨—೦
[illegible]	...	೦—೨—೬
[illegible]	...	೦—೬—೦
[illegible]	...	೦—೩—೦
[illegible]	... ...	೦—೨—೦
[illegible]	...	೦—೦—೨
ಇಂಗ್ಲಿಷ್ ಕನ್ನಡ [illegible]		೧—೦—೦
[illegible]	... ...	೨—೦—೦
[illegible]	...	೦—೧೨—೦
[illegible]	...	೩—೪—೬
[illegible]	...	೩—೪—೬
[illegible]		
೧ನೇ ಸಂಚಿಕೆ.	...	೦—೮—೦
[illegible] ೨ನೇ ಸಂಚಿಕೆ.		೦—೮—೦
[illegible]	...	೦—೮—೦

ಸಂಸ್ಕೃತ ಮೂಲಗ್ರಂಥಗಳು.

ವಿಷ್ಣುಸಹಸ್ರನಾಮ,	...	೦—೫—೦
[illegible]	...	೦—೨—೬
[illegible]	...	೦—೨—೬
[illegible]	...	೦—೦—೬
[illegible]	...	೦—೩—೬
[illegible]	...	೦—೧—೦

[illegible] [illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮ್ಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

ನೋಟಿಸ್.

ಪ್ರಸವ ಕ್ಕಾಗಿಯೂ ಹೆಂಗಸರ ಮತ್ತು ಮಕ್ಕಳ ಚಿಕಿತ್ಸೆಯ ಬಗ್ಗೆಯೂ ಬೆಂಗಳೂರಲ್ಲಿ ಸ್ಥಾಪಿಸಲ್ಪಟ್ಟಿರುವ ಆಸ್ಪತ್ರೆಯಲ್ಲಿ ಸೂಲಗಿತ್ತಿ ಮತ್ತು ಹೆತ್ತ ದಾದಿ ಕೆಲಸಕ್ಕೆ ಗೌರವ್ಯಳಾದ ಉತ್ತಮ ಜಾತಿ ಹೆಂಗಸೊಬ್ಬಳು ಬೇಕಾಗಿದೆ.

ಮಾಹೇಯಾನಾ ತಲಬ್ ೧೨ ರೂಪಾಯಿಗಳು, ಅಪೇಕ್ಷೆ ಯುಳ್ಳವರು ಮೈಸೂರು ಗವರ್ನಮೆಂಟ್ ಸೀನಿಯರ್ ಸರ್ಜನ್ ಡಾಕ್ಟರ್ ಟಿ. ಜೆ. ಮೆಗ್ಗಾನ್ ಸಾಹೇಬರವರಿಗೆ ಬರೆದುಕೊಳ್ಳುವದು.

ಬೆಂಗಳೂರು,

೮ನೇ ಮಾರ್ಚಿ ೧೮೮೬.

ಪ್ರಕಟನೆ.

ಕರ್ಣಾಟಕ ಪ್ರಪನ್ನಾಮೃತವೆಂಬ ಶ್ರೀರಾಮಾನುಜಾಚಾರ್ಯರವರ ಚರಿತ್ರೆಯು.

ಇವರಲ್ಲಿ ದಿವ್ಯಸೂರಿಗಳ ಚರಿತ್ರೆಗಳೂ ಅಡಗಿವೆ. ಈ ಪುಸ್ತಕವು ತಯಾರಾಗಿ ಬಿಕರಿಗೆ ಸಿದ್ಧವಾಗಿರುತ್ತೆ. ಇದರ ಕೂಡ ನಾಲ್ಕು ದಿವ್ಯದೇಶದ ಮತ್ತು ಯೆಲ್ಲಾ ಪೂರ್ವಾಚಾರ್ಯರುಗಳ ಚಿತ್ರಪಟ ಒಂದು ಸೇರಿಸಲ್ಪಟ್ಟಿರುತ್ತೆ. ಕಾಪಿಗಳು ಕೊಂಚವೇ ಇರುವದರಿಂದ ಜಾಗ್ರತೆಯಾಗಿಯೇ ತರಿಸಿಕೊಳ್ಳಬಹುದು. ಕ್ರಯವನ್ನು ಕೆಲವರ ಅಪೇಕ್ಷೆಯಂತೆ ಸದ್ಯಃ ಕಮ್ಮಿ ಮಾಡಿರುತ್ತೇನೆ.

ನಾಳೆ ಏಪ್ರಿಲ್ ೧ನೇ ರೊಳಗಾಗಿ ಅಪೇಕ್ಷಿಸುವವರಿಗೆ	೧	೦	೦
ಅನಂತರ ...	೧	೮	೦
ಟಪಾಲುಹಾಸಲ್ ...	೦	೨	೦

ಎಂ. ಜಿ. ಕಾಮೈಯಂಗಾರ್,

ಮ್ಯಾನೇಜರ್,

ಹಿಂದೂಮತ ಪ್ರಕಾಶಿಕಾ.

ನೋಟಿಸ್.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ತಾರೀಖು ೧೮ನೇ ಮಾರ್ಚಿ, ೧೮೮೬.

ಸನ್ ೧೮೮೬ನೇ ಇಸವಿ ಮಾರ್ಚಿ ೩೧ನೇ ತಾರೀಖು ಬುಧವಾರದ ದಿನ ಪ್ರಾತಃಕಾಲ 7½ ಘಂಟೆಗೆ ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡದಲ್ಲಿನ ತಮ್ಮ ಆಫೀಸಿನಲ್ಲಿ ಸಿಟಿ ಮ್ಯುನಿಸಿಪಲ್ ಕಮ್ಮಿಷನರಗಳು ಆರ್ಡಿನರಿ ಮೀಟಿಂಗ್ ಸೇರುವಾಗ ಆವರ ಆಲೋಚನೆಗೆ ತರಲ್ಪಡುವ ವಿಷಯಗಳ ಪಟ್ಟಿ.

೧. ಚಾಲತಿ ನಡದು ಪಬ್ಲಿಕ್ ವರ್ಕ್ಸ್ ಲೆಕ್ಕಗಳು, ಈಗ ನಡೆಯುತಲಿರುವ ಕಾಮುಗಾರಿಗಳನ್ನು ಕುರಿತ ರಿಪೋರ್ಟ್, ಸನ್ ೧೮೮೬ನೇ ಇಸವಿ ಫೆಬ್ರವರಿ ಮಾಹೆ ಬಾಬತು ಮೃತಪಟ್ಟವರ ಲೆಕ್ಕ, ಮ್ಯುನಿಸಿಪಲ್ ಸ್ಕೂಲಿನ ಲೆಕ್ಕಗಳು.

೨. ಮುನಿರೆಡ್ಡಿ ಪಾಳ್ಯವೆಂಬ ಗ್ರಾಮಕ್ಕೆ ಸೇರಿದ ಒಂದು ಪೇಮಸ್ಥಾನವನ್ನು ಮ್ಯುನಿಸಿಪಲ್ ಸರಹದ್ದಿಗೆ ಸೇರಿಸಿಕೊಳ್ಳಬೇಕೆಂದು ಸೂಚಿಸಿ, ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರು ಬರೆದ ೧೮೮೬ನೇ ಇಸವಿ ಫೆಬ್ರವರಿ ೨೪ನೇ ಮಾರ್ಚಿವುಳ್ಳ ೨೩೭೩ನೇ ನಂಬರ್ ಡಾಕೆಟ್.

೩. ಬೆಂಗಳೂರು ಮಾರ್ಕೆಟ್ಟಿನಲ್ಲಿರುವ ಸರ್ಕಾರ್ ಛತ್ರವನ್ನು ಅಭಿವೃದ್ಧಿಗೊಳಿಸತಕ್ಕೆ ಒಟ್ಟು ಅಂದಾಜ್ ಮಾಡಲ್ಪಟ್ಟಿರುವ ೧೧೦೮ ರೂಪಾಯಿಗಳು ಮಂಜೂರಾಗಿ ಬಂದ ೧೮೮೬ನೇ ಇಸವಿ ಮಾರ್ಚಿ ೬ನೇ ಮಾರ್ಚಿ ೬೧೦೮ ೯—೫೯೬೫ನೇ ನಂಬರುಳ್ಳ ಮೈಸೂರು ದಿವಾನರವರ ಪ್ರೊಸೀಡಿಂಗ್ಸ್.

೪. ಕಬ್ಬನ್ ತೋಟಕ್ಕೆ ಸೇರಿದಂತೆ ಇರುವ ಸಂಪಂಗಿಹಳ್ಳಿ ಗ್ರಾಮದ ಸುತ್ತಲು ಹಾಕಲ್ಪಟ್ಟಿರುವ ಮುಳ್ಳು ಗೋಡೆಗಳು ಶಿಥಿಲಗಳಾಗಿರುವುದಾಗಿ ತಿಳಿಸಿ, ಅದರ ಮೇಲೆ ಮಾಡಬೇಕಾದ ಕೆಲವು ವಿಚಾರಣೆಗಳನ್ನು ಸಮೂದು ಮಾಡಿ ೬ನೇ ಡಿವಿಜನಿನ ಮ್ಯುನಿಸಿಪಲ್ ಕಮ್ಮಿಷನರ್ ಮೆ. ಕ್ಯಾಮಿರಾನ್ ಯವರು ಬರೆದ ೧೮೮೬ನೇ ಇಸವಿ ಮಾರ್ಚಿ ೧೫ನೇ ತಾರೀಖುಳ್ಳ ಕಾಗದವು.

೫. ಸಂಪಂಗಿಹಳ್ಳಿ ಕೆರೆಯಬಳಿ ಇರುವ ಕಟ್ಟಡದ ಮಾರ್ಗವಾಗಿ ಹೋಗುತಲಿರುವ ಚರಂಡಿಯನ್ನು ಮುಚ್ಚಬೇಕೆಂದು ಬರೆದ ಅರ್ಜಿಯನ್ನು ಮರಳಿ ಪರ್ಯಾಲೋಚಿಸಬೇಕೆಂಬದಾಗಿ ಬೆಂಗಳೂರು ಬ್ಯಾಂಕ್ ಏಜೆಂಟ್ ಮೆ. ವಾಲ್ಕರ್ ಯವರು ಬರೆದ ೧೮೮೬ನೇ ಇಸವಿ ಫೆಬ್ರವರಿ ೨೬ನೇ ತಾರೀಖುಳ್ಳ ಕಾಗದವು.

೬. ೧೮೮೬ನೇ ಇಸವಿ ಜನವರಿ ಮತ್ತು ಫೆಬ್ರವರಿ ತಿಂಗಳಲ್ಲಿ ಸೇಟ್ ಮಾರ್ಥಾಯವರ ಆಸ್ಪತ್ರೆಯೊಳು ಚಿಕಿತ್ಸೆ ಮಾಡಲ್ಪಟ್ಟ ಪರಸ್ಥಳ ರೋಗಿಗಳ ಸಂಖ್ಯೆಯನ್ನು ತೋರಿಸುವ ತಖ್ತೆ.

೭. ಬೆಂಗಳೂರು ಪಾಠಶಾಲೆಗಳ ಡೆಪ್ಯುಟಿ ಇನ್ಸ್ಪೆಕ್ಟರವರು ಲಿಂಡರ್ಮಿಸಿನ್ ಪೈಸ್ಕೂಲನ್ನು ತನಿಖೆಮಾಡಿ ಅದರ ಮೇಲೆ ತಮ್ಮ ರಿಪೋರ್ಟಿನ ಒಂದು ನಕಲೊಡನೆ ಬರೆದ ಸನ್ ೧೮೮೬ನೇ ಇಸವಿ ಮಾರ್ಚಿ ೮ನೇ ತಾರೀಖುಳ್ಳ ೩೩೬೦ನೇ ನಂಬರ್ ಡಾಕೆಟ್.

೮. ಪಾಕ್ಸಿಸ್ಟರ್ ಮುತ್ತಯ್ಯನೆಂಬಾತನು, ತನಗೆ ತೆಲುಬ್ ಇಜಾಫೆ ಮಾಡಬೇಕೆಂದು ಬರೆದ ಅರ್ಜಿ.

೯. ಸಹರ್ ಮ್ಯುನಿಸಿಪಲ್ ಮಾರ್ಕೆಟ್ಟುಗಳಲ್ಲಿ ತೆರಿಗೆ ವಸೂಲ್ ಮಾಡುವ ಸ್ವಾತಂತ್ರ್ಯದಬಗ್ಗೆ ಕೊಡಲ್ಪಟ್ಟ ದರಖಾಸ್ತುಗಳ ವ್ಯವಸ್ಥೆ.

೧೦. ಕಸಾಯಿಖಾನೆಗಳನ್ನು ಕುರಿತು ಹುಟ್ಟಿರುವ ಬೈಲಾ ನಿಬಂಧನೆಯು ನಿಯಮಗಳನ್ನು ಜಾರಿಯಲ್ಲಿ ತರುವಬಗ್ಗೆ ಹಂಗಾಮಿತರೀಕ್ ಮೊಕರರ್ ಮಾಡಲ್ಪಟ್ಟ ಶಿಬ್ಬಂದಿ ಖರ್ಚು ನಡಚ್ಚಿ, ಮತ್ತು ಈ ತಾರೀಖಿನ ವರೆಗೆ ನಡೆದ ಕೆಲಸಗಳ ತಖ್ಸೀಲ್.

೧೧. ಮ್ಯುನಿಸಿಪಲ್ ಕಲೆಕ್ಟರ ರಿಪೋರ್ಟಿನೊಡನೆ ಆ ಕ್ವಾರ್ಟರ್ಲಿ ರೆವಿನ್ಯೂವನ್ನು ಕುರಿತು ದಿವಾನರವರ ಚೀಫ್ ಸೆಕ್ರೆಟರಿಯವರು ಬರೆದ ೧೮೮೬ನೇ ಇಸವಿ ಫೆಬ್ರವರಿ ೨೪ನೇ ಮಾರ್ಚಿವುಳ್ಳ ೬೨೩೬ ೩೩೧೦ನೇ ನಂಬರ್ ಡಾಕೆಟ್.

A. SRINIVASA CHARLU,

Vice-President,

City Municipal Commission.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MARCH 22, 1886.

೧೮೮೬ನೇ ಮಾರ್ಚಿ ೨೨ನೇ ತಾ॥ ಸೋಮವಾರ.

ಶ್ಲೋ॥ ಸರ್ವಜ್ಞತಾಂಕರದಸುವಾಕ್ಪಟುತಾಂಪ್ರಸೂತೆ ವಾಣಿತ್ವದುಪ್ರಿಚರಸೀರುಹಯೋಃಪ್ರಣಾಮಃ॥ ತ್ವಾಮೇವ ದೇವಿ ಮನುಷಾಃ ಸಮನುಸ್ಮರಾಮಿ ತ್ವಾಮೇವ ನೌಮಿ ಕರಣಾಜನನಿ ತ್ವಮೇವ॥

THE MYSORE STATE RAILWAY.

ಈ ಸಂಸ್ಥಾನಕ್ಕೆ ಆಸ್ತಿರೂಪೇಣ ಭಾವಿಸಲ್ಪಟ್ಟದ್ದ ಮೈಸೂರು ರೈಲ್ವೆಯು ಬರುವ ತಿಂಗಳ ಗುರ್ನೆ ತಾರೀಖಿನಲ್ಲಿ ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪೆನಿಯವರಿಗೆ ಒಪ್ಪಿಸಲ್ಪಡುವದಾಗಿರುವ ವಿಷಯವಂ ಕುರಿತು ನಮ್ಮ ಅಭಿಪ್ರಾಯವನ್ನು ಹಿಂದೆ ಅನೇಕಾವರ್ತಿ ಈ ಪತ್ರಿಕಾಮೂಲಕ ತಿಳಿಸಿರುತ್ತೇವೆಯಷ್ಟೆ. ಈ ತಿಂಗಳ ೧೮ನೇ ತಾರೀಖಿನಲ್ಲಿ ಋಷ್ಯಶೃಂಗ ಪರ್ವತಾಗ್ರದಿಂದ "ದೀಪರ್ಷದರ್ಶಿ" ಎಂಬೊಬ್ಬಾತನು ಸ್ಟೇಟ್ ರೈಲ್ವೇ ವಿಷಯದಲ್ಲಿ ಈಗ ಉದ್ದೇಶಿಸಲ್ಪಟ್ಟಿರುವ ಏರ್ಪಾಟಂ ಕುರಿತು ನಾನಾವಿಧವಾಗಿ ವಿಚಾರಮಾಡುತ ಕಡೆಗೆ ಇದು ನಿಷ್ಪ್ರಯೋಜನಕಾರ್ಯವೆಂಬ ಭಾವದೊಡನೆ ಬರೆದ ಕಾಗದವನ್ನು ಇದರಡಿ ಪ್ರಕಟಿಸಿರುತ್ತೇವೆಯಾಗಿ ಇದರ ಗುಣದೋಷಗಳನ್ನು ಈ ಪತ್ರಿಕೆಯನ್ನೋದತಕ್ಕವರೇ ವಿಚಾರಪೂರ್ವಕ ತಿಳಿದುಕೊಳ್ಳಬಹುದು:—

ಅಯ್ಯಾ,—ಸನ್ ೧೮೮೦ನೇ ಇಸವಿ ಫೆಬ್ರವರಿ ತಿಂಗಳ ೧೮ನೇ ತಾರೀಖ್‌ನಲ್ಲಿ ಪ್ರಥಮತಃ ಮೈಸೂರಿಗೆ ರೈಲ್‌ಗಾಡಿಗಳು ಬಿಡಲ್ಪಟ್ಟದ್ದರಿಂದ ಮೈಸೂರು ದೇಶೀಯರಿಗೆ ಆದಿನ ಹ್ಯಾಗೆ ಸ್ಮರಣೀಯವಾದ್ದಾಗಿ ಏರ್ಪಟ್ಟಿತೋ ಅದರಂತೆ ಬರುವತಿಂಗಳ ಮೊದಲನೆಯ ತಾರೀಖ್ ಸದರೀ ರೆಯಿಲ್‌ರಸ್ತೆಯನ್ನು ಅನ್ಯರಿಗೆ ಅಡಮಾನ ಹಾಕುವದರ ಮೂಲಕ ಪ್ರಶಸ್ತಿಯನ್ನು ಹೊಂದಿವಾದ್ದಾಗಿರುತಿವೆ. ಗತ ನಾಲ್ಕೈದು ವರುಷಗಳ ಕಾಲವಾಗಿ ಈ ಸಂಸ್ಥಾನಕ್ಕೆ ನೆಲಗೊಂಡಿದ್ದ ಒಂದುವಿದ ಪ್ರಾಶಸ್ತ್ಯವು ಹೋಗಬೇಕಾದ ಕಾಲವು ಈಗ ಪ್ರಾಪ್ತವಾದಂತೆ ತೋರುತಿದೆ. ಸಕಲವೂ ಕಾಲ ಕರ್ಮಾಧೀನವಾಗಿರುವದರಿಂದ ಯಾವಕಾಲದೊಳೇನು ಪ್ರಂಟಾಗುವದೋ ಅದು ತಿಳಿಯಕೂಡದು. ಮೈಸೂರು ಸರ್ಕಾರದವರು ನಡೆಸತಕ್ಕ ಆಡಳಿತ್ರಮಗಳ್ಯಾವಾಗಲೂ ಗೂಢವಾದ್ದರಿಂದ ಅವು ಸಾಮಾನ್ಯೇನ ಹೊರಗಾಗತಕ್ಕವಲ್ಲವೆಂಬದು ಜಗತ್ಪ್ರಸಿದ್ಧವೇ ಯಷ್ಟೆ. ಆದಾಗ್ಯೂ ಅವು ಹ್ಯಾಗಾದರೂ ಹೊರಗೆ ಬಾರದಿರುವದಿಲ್ಲವು. ಮೈಸೂರು ಸ್ಟೇಟ್ ರೆಯಿಲ್ ರಸ್ತೆಯನ್ನು ದಕ್ಷಿಣ ಮರಾಠಾ ರೆಯಿಲ್ವೇ ಕಂಪೆನಿಯವರಿಗೆ ಅಡಮಾನ ಮಾಡುವ ವಿಷಯವಾಕುರಿತು ಸರ್ಕಾರಿಯಾಗಿ ಯಾವದೊಂದಂಶವೂ ಇದುವರಿವಿಗೆ ತಿಳಿಯಬರಲಿಲ್ಲವು. ಪರಂತು ವೃತ್ತಾಂತಪತ್ರಿಕೆಗಳ ದೆಸೆಯಿಂದಲೂ, ಜನ ವಾಕ್ಯಗಳಿಂದಲೂ ಸದರೀ ಅಡಮಾನ ವಿಷಯ ವ್ಯವಸ್ಥೆಯಾದಂತೆ ತಿಳಿಯಲಾದೆನು. ಗತ ಸಂವತ್ಸರದ ದಸರಾ ದರ್ಬಾರ್ ಕಾಲದಲ್ಲಿ ದಿವಾನರವರು ಈ ರೆಯಿಲ್ವೇ ವಿಷಯವಾಗಿ ತಿಳಿಸಿದ್ದಪ್ರಕಾರವೇ ಈಗ ಅದು ಕೊಡಲ್ಪಟ್ಟಂತೆ ತಿಳಿಯಬರುವದರಿಂದ ಅವರ ವಾಕ್ಯಗಳನ್ನು ಮರಳಿ ಇದರಡಿ ಅನುವಾದ ಮಾಡುವೆನೆಂತೆನೆ —

"ಗುಬ್ಬಿಯಿಂದ ಹುಂಡಿಕ್ಕೆ ಹರಿಹರದವರಿಗೂ ... ರಸ್ತೆ ಯನ್ನು ಬದಾಯಿಸುವದಕ್ಕೆ ... ೬೦,೦೦೦ ರೂ॥ ... ೬೩,೦೦,೯೦೦ ... [illegible]

[illegible]

ಪ್ರಸಕ್ತ ಏರ್ಪಾಡಿನಿಂದ ಮಹಾರಾಜಾ ಸರ್ಕಾರಕ್ಕೆ ಎಷ್ಟುಮಟ್ಟಿಗೆ ಪ್ರಯೋಜನ ಪ್ರಂಟಾಗಬಹುದೆಂಬದನ್ನು ನನ್ನಂತೆ ಅನೇಕರು ಆಲೋಚಿಸದಿರಲಾರರು. ಈಗಪ್ರೂರ್ತಿಯಾಗಿರುವ ರೈಲ್ವೇ ಲೈನನ್ನು ಭೋಗ್ಯಮಾಡಿದ್ದರಿಂದ ಬ್ರಿಟಿಷರವರಿಗೆ ಕೊಡಬೇಕಾದ ಸಾಲವು ಪೂರ್ತಿಯಾಗಿ ತೀರಿದಂತೆ ಯಾಗವಿಲ್ಲವು. ಬ್ರಿಟಿಷರವರ ಸಾಲದ ತಗಾದೆಗೆ ಮತ್ತೊಬ್ಬರಿಂದ ಅದೇಬಡ್ಡಿಗೆ ದಣ ತೆಗದುಕೊಟ್ಟಂತೆಯಾಯಿತು. ಈ ಮೊಬಲಗು ಜಾತಾ ಬ್ರಿಟಿಷ್ ಸರ್ಕಾರಕ್ಕೆ ಸುಮಾರ್ ಹನ್ನೆರಡುಲಕ್ಷ ರೂಪಾಯಿಗಳ ತನಕ ಬಡ್ಡಿ ಸಹಿತ ಕೊಡಬೇಕಾಗಿರುತಿದೆ. ರೆಯಿಲ್ವೇ ಕಂಪೆನಿಯವರು ಕೊಟ್ಟ ೬೫ ಲಕ್ಷ ರೂಪಾಯಿಗಳು ನಾಲ್ವತ್ತು ವರುಷಗಳ ತರುವಾಯಲಾದರೂ ಕೈಯಿಂದ ತೆರತಕ್ಕದ್ದೇ ಹೊರತು ಅನ್ಯಥಾ ವಿಲೇಯಾಗತಕ್ಕದ್ದಲ್ಲವು. ಈಗ ಇಂಗ್ಲಿಷ್ ಸರ್ಕಾರಕ್ಕೆ ಕೊಡುತಲಿರುವ ಬಡ್ಡೀಬಾಬತು ಖರ್ಚು ತಗ್ಗಬಹುದೆಂತಲೂ, ಅದನ್ನು ಲಾಭಕರವಾದ ಇತರ ವಿಷಯಗಳಿಗಾಗಿ ವಿನಿಯೋಗಿಸಬಹುದೆಂತಲೂ ದಿವಾನರವರು ಅಭಿಪ್ರಾಯಪಟ್ಟರು. ಮುಂದೆ ಇದು ಹ್ಯಾಗೆತಗ್ಗುವದೋ ನಾನರಿಯೆನು. ಗವರ್ನಮೆಂಟನವರ ಅಂದಾಜ್ ಪ್ರಕಾರ ಸೇಕಡಾ ೩ ರೂಪಾಯಿಗಳಂತೆ ಹುಟ್ಟುವಳಿಯಾದಾಗ್ಯೂ ಅವರುಒಟ್ಟು ಲಾಗನಡು ಮೊಬಲಗಿಗೆ ಸೇಕಡಾ ೩½ ರೂಪಾಯಿಗಳ ಪ್ರಕಾರ ಬಡ್ಡೀ ಕೊಡುಮತೆ ಜಾವಿನಾಗಿರುವದರಿಂದ ೮ ಆಣೆ ಕೈಯಿಂದ ಸ್ವತಃ ಕೊಡಬೇಕಲ್ಲದೆ ಕಂಪೆನಿಯವರ ಕಾಲುವಾಸಿ ನಷ್ಟಗೆ ಸಹ ಅವರೇ ಜವಾಬ್ ಹೇಳಬೇಕಾಗಿರುತಿದೆ. ಇದರಿಂದ ಸರ್ಕಾರಕ್ಕೆ ೭೮,೦೦೦ರೂಪಾಯಿಗಳು ಜಾಸ್ತಿ ತಗಲುವದೆಂದು ತಿಳಿಸಿ ದಿವಾನರವರು ಮುಂಚಿತವಾಗಿಯೇ ತಪಸ್ತೂದರು. ಇದೇ ಅಂದಾಜಿನ ಪ್ರಕಾರ ನೋಡಿದಾಗ್ಯೂ ೪೫ ವರುಷಗಳ ಕಾಲ ಕೊಡಬೇಕಾದ ಜಾಸ್ತೀ ಬಡ್ಡೀ ಬಾಬತು ೩೫ ಲಕ್ಷ ರೂಪಾಯಿಗಳು ಆಗುತಿವೆ. ಇದಲ್ಲದೆ ಹರಿಹರದತನಕ ರೈಲ್‌ರಸ್ತೆ ಪೂರೈಸಲಿಕ್ಕೆ ಇನ್ನೂ ಅರವತ್ತು ಮೂರುಲಕ್ಷ ರೂಪಾಯಿಗಳು ಬೇಕಾಗಿರುವುತೆ ದಿವಾನರವರೇ ತಿಳಿಸಿರುವದರಿಂದ ಇಷ್ಟರ ಭಾಗವನ್ನು ರೆಯಿಲ್ವೇ ಕಂಪೆನಿಯವರು ಈಗ ಸ್ವತಃ ಇಟ್ಟು ರಸ್ತೆ ಪೂರೈಸಬೇಕೆಂಬದೊಂದು ಕರಾರಾಗಿರುತಿವೆ ಈ ಅರವತ್ತು ಮೂರು ಲಕ್ಷ ರೂಪಾಯಿಗಳನ್ನೂ ಈಗ ಆಮದ್ ರಸ್ತೆನೊಳರುವ ರಸ್ತೆಯ ಬಾಬತು ೬೫ಲಕ್ಷ ರೂಪಾಯಿಗಳನ್ನೂ ಅವುಗಳ ಬಡ್ಡಿಸಹಿತ ಮೈಸೂರು ಸರ್ಕಾರದವರು ಕೊಡುವದಕ್ಕೆ ಸನ್ನದ್ಧರಾದರೇನೆ ರೆಯಿಲ್ವೆಯಂ ಕುರಿತು ಅವರು ಮರಳಿ ಚಿಂತಿಸಬಹುದು. ಮೇಲೆ ಕಂಡ ಎರಡು ಬಾಬುಗಳು ಸೇರಿ ಅಸಲ್ ಕೋಟಿ ಇಪ್ಪತ್ತೆಂಟುಲಕ್ಷ ರೂಪಾಯಿಗಳಿಗೆ ಮೇಲ್ಪಡುವದರಿಂದ ಪ್ರಸಕ್ತ ಏರ್ಪಾಡು ಸಾಲಕ್ಕೆ ಸಾಧಕವಾಯಿತೆಂದು ಹ್ಯಾಗೆಹೇಳಬಹುದು. ಮೊಬಲಗು ಅನುಕೂಲಿಸಿದ ಒಡನೆ ರೆಯಿಲ್ವೆಯನ್ನು ಭೋಗ್ಯದಿಂ ಬಿಡಿಸಿಕೆಳ್ಳಬಹುದೆಂದು ಪರಿಭಾವಿಸುವದುಟ್ಟ ಸಾಹಸವು ಕೇವಲ ಅಬದ್ಧವಡತಕ್ಕದ್ದಾಗಿರುತಿವೆ. ಪ್ರಕೃತಸ್ಥಿತಿಯಲ್ಲಿ ಇದು ಬ್ರಿಟಿಷ್ ಗವರ್ನಮೆಂಟನವರಿಗೆ ಪ್ರಂಟಾಗಿರುವ ಅರ್ಥಾತುರತ್ವವನ್ನು ನಿವಾರಿಸಿಕೊಳ್ಳತಕ್ಕಬಗ್ಯೆ ಅವರು ಮಾಡಿದ ಉಪಾಯವೆಂದು ತೋರುತಿವೆಯೆ ಹೊರ್ತು ಬೇರೊಂದೂ ಅಲ್ಲವು. ಸದ್ಯಕ್ಕೆ ಇಲ್ಲದೇ ಹೋದಾಗ್ಯೂ ಮೈಸೂರು ಸರ್ಕಾರಕ್ಕೆ ಇದರಡಿಕಂಡ ಬಾಬತು ಸಾಲದತಗಾದೆಗಳು ಯೆಂದಿಗಾದರೂ ತಪ್ಪತಕ್ಕದ್ದಲ್ಲವು. ರೆಯಿಲ್ವೇ ಕಂಪೆನಿಯವರಿಂದ ತೆಗದುಕೊಂಡಿರುವ ಅಡಮಾನಬಾಬತು ೬೫,೦೦,೦೦೦ರೂ॥ಹರಿಹರದ ರೈಲ್ವೆಬಾಬತು ಲಾಗುವದು ೬೩,೦೦,೦೦೦ರೂ॥ ಬ್ರಿಟಿಷ ಗವರ್ನಮೆಂಟಗೆಬಾಕಿಕೊಡಬೇಕಾಗಿರುವದು ೧೨,೦೦,೦೦೦ರೂ॥ ಈ ಕೋಟಿ ನಲವತ್ತು ಮೂರು ಲಕ್ಷ ರೂಪಾಯಿಗಳು ಪ್ರಸಿದ್ಧವಾದ ಸಾಲವಾಗಿರುತಿದೆ. ಇದಲ್ಲದೆ ತುಮಕೂರು ರೈಸಿಗಾಗಿ ತೆಗೆಯಲ್ಪಟ್ಟ ೨೦,೦೦ ೦೦೦ ರೂಪಾಯಿಗಳ ಸಾಲ ಹ್ಯಾಗೆ ವಿಲೇವಾರಿಪಟ್ಟಿತೋ ತಿಳಿಯಲಿಲ್ಲವು ಇದರಮೇಲೆ ಬಡ್ಡೀಭರ್ತಿಗೆ ಕೈಯಿಂದಾ ಜಾಸ್ತಿ ಕೊಡಬೇಕಾಗಿರುತಿದೆ. ಯಿನ್ನೊಂದು ಶತಮಾನವಾದರೂ ಈ ಸಂಸ್ಥಾನಕ್ಕೆ ಸ್ವಂತ ರೈಲ್ವೆಯ ಆಶೆಯು ಪ್ರಂಟಾಗುವದೆಂದು ಸ್ವಲ್ಪ ವಿವೇಕವುಳ್ಳವ ನ್ಯಾವನೂ ಹೇಳಲಾರನು. ಇಂತಾ ನಿಷೇಧೋಕ್ತಿಗೆ ಕಾರಣವೇನಂದರೆ,—

ಈ ಸಂಸ್ಥಾನವು ದುರ್ಭರವಾದ ಋಣದಿಂ ಸಂಕಟ ಪಡುತಲಿರುವದು ಸಾಕಾದಪಂಡು ಪ್ರಬಲ ಕಾರಣವಾಯಿತಷ್ಟೆ. ಇನ್ನು ಕ್ರಮೇಣ ಇತರ ಕಾರಣಗಳನ್ನು ತಿಳಿಸುವೆನು. ದೇಶದ ಹುಟ್ಟುವಳಿಯು ಪೂರ್ವಸ್ಥಿತಿಗೆ ಮರಳಬರುವದೆಂದು ಯಾರೂ ನಿರೀಕ್ಷಿಸ ಕೆಲಸವಿಲ್ಲವೆಂಬದಾಗಿ ದಿವಾನರವರು ಭರವಸೆಯುಂಟುಮಾಡಿರುತ್ತಾರೆ. ಸರ್ವ ವಿಧದಿಂದಲೂ ಅವರು ತಮ್ಮ ವರ್ತನದಿಂ ಆ ಧೈರ್ಯವನ್ನು ಜನಗಳಿಗೆ ವೃದ್ಧಿಗೊಳಿಸುತ ಬರುತ್ತಾರೆಯಾಗಿ ತಾದೃಶ ನಿರೀಕ್ಷಣೆಗೇನೂ ಅವಕಾಶ ವಿರುವದಿಲ್ಲವು. ಇದಕ್ಕೆ ತಕ್ಕಂತೆ ದೈವವೂ ಸಹಕಾರಿಯಾಗಿದೆ. ಶುಕ್ಲಕೃಷ್ಣಪಕ್ಷಗಳಂತೆ ಈದೇಶಕ್ಕೆ ದುರ್ಭಿಕ್ಷವೆಂಬದು ನಿಯತವಾದ್ದಾಗಿ ಏರ್ಪಟ್ಟಿತು ಅಂತಾ ಸಂದರ್ಭಗಳೆಲ್ಲಲ್ಲ ಸಾಲವಾದರೂ ಮಾಡಿ ತಮ್ಮ ಕರ್ತವ್ಯವನ್ನು ನೆರವೇರಿಸ ಬೇಕಾದಷ್ಟು ನಿರ್ಬಂಧವು ಸರ್ಕಾರದವರಿಗೆ ಬಲವತ್ತರವಾಗಿದೆ. ಖರ್ಚುಕಡಮೆ ಮಾಡಬೇಕಾದ ವಿಷಯವನ್ನು ಚಿಂತಿಸಬೇಕಾದ್ದಿಲ್ಲವು. ಸಾಬಕ್‌ದಿವಾನ್ ಮೆ॥ರಂಗಾಚಾರ್ಯರವರು ಬಹುಮಂದಿಯ ಜೀವನಕ್ಕೆ ಭಂಗವನ್ನುಂಟುಮಾಡಿದ್ದರ ಮೂಲಕ ಸರ್ಕಾರಕ್ಕೆ ಆದಾಯವನ್ನುಂಟುಮಾಡಿದರೆಂಬ ವ್ಯರ್ಥವಾದ ಜನಾಪವಾದಕ್ಕೆ ಕಾರಣರಾದರೇ ಹೊರತು, ಶತವಿಧ ನಿಷ್ಠುರದೊಡನೆ ಮಾಡಿದ ಅವರ ಕಾರ್ಯಗಳು ವಿಶೇಷ ಫಲದಾಯಕಗಳಾಗದೆ ಹೋದವು. ಬರುತಬರುತ ಇಲ್ಲಿನ ಆಡಳತ ಖರ್ಚು ಬ್ರಿಟಿಷಪ್ರಭುತ್ವದೊಳಗಿದ್ದ ವ್ರಯವ ವಿಕಾರಿಸತಕ್ಕದಾಗಿರುವದು. ನಿರ್ಭಾಗ್ಯರಾದ ಬ್ರಿಟಿಷನವರು ತಮ್ಮಕಾಲದಲ್ಲಿ ಮನಸ್ವೀ ವ್ರಯಮಾಡಿ ದೇಶವನ್ನು ನಾಶವಡಿಸಿ ಹೋದರೆಂಬ ಅಪಖ್ಯಾತಿಗೆ ವಿಷಯರಾದರು. ಏತೇನ ಈಗಿನ ಖರ್ಚುಗಳು ಪೂರ್ವಕ್ಕಿಂತ ಕಡಮೆಯಾಗಿರುವದೆಂದು ಒಬ್ಬರೂ ಭಾವಿಸಕೆಲಸವಿಲ್ಲವು. ನಮ್ಮ ದಿವಾನರವರು ಪರಪ್ರಿಯ ಸಂಪಾದನವೇ ಪರಮ ಧರ್ಮವೆಂದು ಭಾವಿಸತಕ್ಕವರಾದ್ದರಿಂದಲೆ, ಸಾಬಕ್ ದಿವಾನರವರು ಈಗ್ಯೆ ಮೂರು ನಾಲ್ಕು ಸಂವತ್ಸರಗಳಹಿಂದೆ ತೆಗದುಹಾಕಿದ ಡಿಸ್ಟ್ರಿಕ್ಟುಗಳು ಮತ್ತು ತಾಲ್ಲೂಕುಗಳನ್ನೆಲ್ಲ ಮರಳಿ ಸ್ಥಾಪಿಸುವ ಪ್ರಯತ್ನದೊಳವಾರೆ. ಇವುಗಳೆಲ್ಲ ಏರ್ಪಟ್ಟರೆ ಆಗ ಉದ್ದೇಶವು ಪೂರ್ತಿಯಾಗುವದಲ್ಲದೆ ಬ್ರಿಟಿಷ್ ಆಧಿಪತ್ಯವೇ ನಾಮಾಂತರದೊಡನೆ ಮರಳಿನೆಲಗೊಂಡಂತೆ ಯಾಗುವದು. ಯಾವವಿಧವಾಗಿ ಚಿಂತಿಸಿದಾಗ್ಯೂ ಋಣ ವಿಮೋಚನಕ್ಕೆ ಮಾರ್ಗವಿಲ್ಲವು. ಜಾಸ್ತಿ ಸಬಸಿಡಿಯ ತಗಾದೆಯು, ಯಾರ ಸುಕೃತ ವಿಶೇಷದಿಂದಲೋ ಸದ್ಯಃ ಹತ್ತುವರುಷಗಳವರಿವಿಗೆ ತಪ್ಪಿದೆ. ಅಂತಾ ಅವಧಿಯುಕ್ಕಗತಿಸಿ ಜಾಸ್ತಿ ಮೊಬಲಗು ಕೊಡಬೇಕಾದ ಕಾಲವು ತ್ವರೆಯಲ್ಲಿ ಬರುವದಾಗಿ ತನ್ಮೂಲಕವಾದ ಅನುಪಪತ್ತಿಮುಂದೆ ಪ್ರಬಲವಾಗಿರುವದು. ಇಷ್ಟರ ಅಸಂದರ್ಭದೊಳು ರೆಯಿಲ್ವೆಯನ್ನು ಮರಳಿ ಬಿಡಿಸಿಕೊಳ್ಳಬಹುದೆಂಬ ಭ್ರಾಂತಿಯೊಡನೆ ೪೫ ವರುಷಗಳ ಕಾಲ ಕೈಯಿಂದ ಬಡ್ಡಿ ತೆರುತಲಿದ್ದು ಆಖೈರಿಗೆ ಬಿಡಿಸಿಕೊಳ್ಳಲಿಕ್ಕೆ ಮಾರ್ಗ ವಿಲ್ಲದಿದ್ದರೆ ಉಭಯವಿಧ ನಷ್ಟಗಳಿಗೆ ಗುರಿಯಾಗಬೇಕಾಗುವದು. ಮುಖ್ಯವಾಗಿ ಮೆ. ರಂಗಾಚಾರ್ಯರೇ ದಿವಾನರಾಗಿಯೂ, ಸರ್‌ಜೇಂಸ್ ಗಾರ್ಡನ್‌ಯವರೇ ರೆಸಿಡೆಂಟರಾಗಿಯೂ ಇದ್ದಿರುವದಾದರೆ ಈ ವಿಧವಾದ ಏರ್ಪಾಡುಗಳಿಗೆ ಅವರು ಸ್ವಲ್ಪವೂ ಒದಂಬಡಲಾರರು. ಕೋಟಿರೂಪಾಯಿಗಳ ಆಮದಿಯುಳ್ಳ ಸಂಸ್ಥಾನಕ್ಕೆ ಯೆರಡು ಕೋಟಿ ರೂಪಾಯಿಗಳ ಸಾಲವಿದ್ದರೆ ಅದು ಹ್ಯಾಗೆ ಊರ್ಜಿತ ವಾಗುವದೋ ಅದನ್ನು ಪ್ರಜೆಗಳಾದರೂ ಆಲೋಚಿಸದಿರಲಾರರೆಂದು ನಂಬುತ್ತೇನೆ.

ಋಷ್ಯಶೃಂಗ ಪರ್ವತ,
೧೮ನೇ ಮಾರ್ಚಿ. ದೀರ್ಘದರ್ಶಿ.

Occasional Notes
ನೈಮಿತ್ತಿಕವಿಷಯನ್ಯಾಸ

Marriage festivities.—ಬರುವಬುಧವಾರದವಿನ ಕಪೂರ್ತಲಾಪ್ ಮಹಾರಾಜರವರಿಗೆ ವಿವಾಹೋತ್ಸವವು ಜರುಗುವದೆಂದು ತಿಳಿಯಲಾದೆವು.

The Queen's sympathy.—ಬರ್ಗೇರಿಯಾ ದೇಶದ ವಿಷಯದಲ್ಲಿ ಶ್ರೀಮನ್ಮಹಾರಾಜ್ಞೀಯವರು ಸ್ವತಃ ವಿಶೇಷ ಅನುತಾಪ ಪ್ರಕಟರಾಗಿದಾರೆಂಬ ಅಂಶ ಇದರಿಂದ ಸ್ಪಷ್ಟವಾಗುತಿದೇನಂದರೆ—ಪ್ರಿನ್ಸ್ ಅಲೆಗ್ಜಾಂಡರವರ ತಸ್ವೀರನ್ನು ಬರೆದು ತಮಗೆ ಕೊಡತಕ್ಕಬಗ್ಯೆ ಒಬ್ಬ ಶಿಲ್ಪಿಯನ್ನು ವಿರ್ಥ ಬರ್ಗೇರಿಯಾವಿಗೆ ಕಳುಹಿಸಿದಾರೆಂಬದು.

The Duke of Connaught.—ಶ್ರೀಮನ್ಮಹಾರಾಜ್ಞೀಪುತ್ರರಾದ ಡ್ಯೂಕಾಫ್ ಕಾನಾಟ್‌ಯವರನ್ನು ಇಂಡ್ಯದೇಶಕ್ಕೆ ಕಳುಹಿಸುವದಕ್ಕೆ ಅವರ ಮಾತುಶ್ರೀಯವರು ಸಮ್ಮತಿಸಿದ್ದರಿಂದ ಅವರು ಬರುವ ಜನ್ ತಿಂಗಳಲ್ಲಿ ತಮ್ಮ ಭಾರ್ಯೆಯೊಡನೆ ಇಂಡ್ಯ ದೇಶಕ್ಕೆ ಪ್ರಯಾಣವಾಗುವರೆಂತಲೂ, ಅವರ ಮಕ್ಕಳೆಲ್ಲರೂ, ಪೂರ್ವದಂತೆ ಮಹಾರಾಣಿಯವರ ಪೋಷಣೆಯಲ್ಲಿರುವರೆಂತಲೂ, ಟ್ರೂತ್‌ಯೆಂಬಪತ್ರಿಕೆ ತಿಳಿಸುತಿದೆ.

A centenarian.—ಸಿದ್ಧಳಸ್ತ್ರೀಯೊಬ್ಬಳು ಗತ ಮಂಗಳವಾರದ ದಿನ ಮೃತಪಟ್ಟಳೆಂತಲೂ ಅವಳಿಗೆ ಈಗ ೧೦೦ ವರುಷಗಳ ವಯಸ್ಸಾದುದೆಯೂ ಕೇಳುತ್ತೇವೆ. ಸದರೀ ಹೆಂಗಸು ಸನ್ ೧೭೮೬ನೇ ಇಸವಿ ಜನವರಿ ೬ನೇ ತಾರೀಖಿನಲ್ಲಿ

ಜನಿಸಿದಳು, ಮೃತವಾದಲಿಕ್ಕೆ ಪೂರ್ವ ೧೦ ಘಂಟೆಯು ಕಾಲದವರೆಗೆ ದೃಢಾಂಗಳಾಗಿ ಕೆಲಸ ಮಾಡುತಲಿದ್ದಳು. ಮತ್ತು ಚಕ್ಷುಶ್ಶ್ರೋತ್ರಾದ್ಯವಿಂದ್ರಿಯ ಶಾವಿಚವು ಚೆನ್ನಾಗಿತ್ತು. ಅವಳು ಇದುವರಿವಿಗೂ ತನ್ನ ಜ್ಯೇಷ್ಠಪುತ್ರಿಯೊಡನೆ ಇರುತಲಿದ್ದಳು. ಆಕೆಗೆ ಹದಿಮೂರುಮಂದಿ ಮೊಮ್ಮಕ್ಕಳು, ೫ ಜನ ಮುಮ್ಮಕ್ಕಳು, ಅಳಿಯಂದರು, ಮೊಮ್ಮಗಳ ಪತಿ, ಇವರೆಲ್ಲರೂ ಜೀವಿಸಿದ್ದಾರೆ. ಇದರಿಂದ ಪುರುಷಾಯುಸ್ಸು ಇಷ್ಟೆಂಬ ನಿಯಮವೂ, ಆಯುಃಪರಿಮಾಣವು ಈಶ್ವರ ಕಲ್ಪಿತವೆಂಬವೂ ಸುಳ್ಳಾಗವೇಕಾಯಿತು ಮುಖ್ಯವಾಗಿ ಮನುಷ್ಯನ ಬದುಕಾಲ ಜೀವನವಾಗಲಿ, ಅಕಾಲಮರಣವಾಗಲಿ, ಅವನ ವರ್ತನದಿಂದ ವುಂಟಾಗತಕ್ಕದ್ದಾಗಿರುತಿದೆ.

LOCAL AND PROVINCIAL NEWS

ಒಳದೇಶಮತ್ತು ತಾಲ್ಲೂಕುಜಾತಿವೃತ್ತಾಂತಗಳು.

— o —

The Dewan.—ಮೈಸೂರು ಸಂಸ್ಥಾನದ ದಿವಾನರಾದ ಮೆ॥ ಶೇಷಾದ್ರಿಅಯ್ಯರವರು ಮದರಾಸ್ ಯೂನಿವರ್ಸಿಟಿಯ ಫೆಲ್ಲೊ ಆಗಿ ವೊಂಬದಾಗಿ ದಾಖಲಾದರೆಂಬದು ಕೇಳಿಸುತ್ತೇವೆ.

The Commander in Chief.—ಮದರಾಸ್ ಕಮಾಂಡರಿನ್‌ಚೀಫ್‌ರಾಗಿ ಈಚೆಗೆ ನೇಮಕರಾದ ಜನರಲ್ ಸರ್ ಹರ್ಬರ್ಟ್ ಮೆಕ್‌ಫರ್ಸನ್‌ರವರು, ಮಾಹೇ ಮಜಕೂರ್ ೩೧ನೇ ತಾರೀಖ್ ಬುಧವಾರದವಿನ ಇಲ್ಲಿಗೆ ಬಂದು ಬರುವತಿಂಗಳ ೨ನೇ ತಾರೀಖಿನಲ್ಲಿ ವಾಪಸ ಹೋಗುವರೆಂದು ತಿಳಿಯಬರುತಿದೆ.

Anniversary of the Installation.—ಬರುವ ಬೃಹಸ್ಪತಿವಾರವು ಶ್ರೀಮನ್ಮಹಾರಾಜರವರಿಗೆ ಪಟ್ಟಾಭಿಷೇಕವಾದ ಶುಭದಿವಸವಾದದರಿಂದ ತತ್ಪ್ರಯುಕ್ತ ಸರ್ಕಾರ್ ಇಲಾಖೆಗಳಿಗೂ ಕೋರ್ಟುಗಳಿಗು ಸಹ ರಜಾ ಕೊಡಲ್ಪಡುವದು. ಮಾಹೇ ಮಜಕೂರ್ ೨೫ನೇ ತಾರೀಖಿಗೆ ಇಲ್ಲಿನ ನೇಟಿವ್ ಪ್ರಭುತ್ವವು ನೆಲೆಗೊಂಡು ಪೂರ್ತಿಯಾಗಿ ಐದುಸಂವತ್ಸರಗಳಾಗುತಿವೆ.

Going on furlough.—ಇಲ್ಲಿನ ಅಸಿಸ್ಟೆಂಟ್ ರೆಸಿಡೆಂಟರಾಗಿಯೂ, ಕೊಡಗು ಕಮಿಷನರ ಸೆಕ್ರೆಟರಿಯಾಗಿಯೂ ಇರುವ ಮೇಜರ್ ನ್ಯೂಯಲ್ ಯವರು ಈ ತಿಂಗಳ ಆಖೈರಿನಲ್ಲಿ ಫರ್ಲೋ ರಜಾ ದಮೇಲೆ ಇಂಗ್ಲಾಂಡಿಗೆ ಹೋಗುವರೆಂತಲೂ, ಅವರ ಕೆಲಸಕ್ಕೆ ಉತ್ತರ ಹಿಂದುಸ್ತಾನದೊಳಿರುವ ಪೊಲಿಟಿಕಲ್ ಏಜಂಟ್ ಮೇಜರ್ ಪ್ರೀಡೆಕ್ಸ್ ಎಂಬವರು ಆಫೀಸಿಯೇಟಿಂಗ್ ನೇಮಕರಾಗುವರೆಂತಲೂ, ಅಲಹಾಬಾದ್ ಪಯೋನಿಯರ್ ಪತ್ರಿಕೆ ತಿಳಿಸುತಿದೆ. ಈ ಪ್ರವಾದವು ಇಲ್ಲಿ ಇಲ್ಲದ್ದರಿಂದ,ಇದು ಎಷ್ಟರಮಟ್ಟಿಗೆ ನಿಜವೋ ನಾವರಿಯೆವು.

Transfers of Amildars.—ಬರುವತಿಂಗಳ ಆದಿ ಭಾಗದಲ್ಲಿ ಇದರಡಿ ಕಂಡ ಅಮಲ್ದಾರರ ವರ್ಗಾವರ್ಗಿಗಳು ನಡೆಯುವದಾಗಿದೆಯೆಂದು ತಿಳಿಯ ಬರುತಿದೆ. ಮೆ॥ ಶೀತಾರಾಮಯ್ಯನವರು ಬೆಂಗಳೂರಿಂದ ಮಾಲೂರಿಗೆ, ಮೆ॥ ಲಕ್ಷ್ಮಣರಾಯರು ಮೈಸೂರಿಂದ ಬೆಂಗಳೂರಿಗೆ, ಮೆ॥ ಶ್ರೀನಿವಾಸರಾಯರು, ಮಂಡ್ಯದಿಂದ ಮೈಸೂರಿಗೆ, ಮೆ॥ವೆಂಕಟಾಚಲಯ್ಯನವರು, ಹೆಗ್ಗಡದೇವನಕೋಟೆಯಿಂದ ತುಮಕೂರಿಗೆ,ಮೆ॥ ರಾಮಚಂದ್ರರಾಯರವರು, ತುಮಕೂರಿಂದನಗರದಿವಿಜನ್‌ಪೈಕಿ ಯಾವದಾದರೊಂದು ತಾಲ್ಲೂಕಿಗೆ,ಮೆಸ್ಟರ್ ಅಲ್ಲಿನಕ್ಕಿಲ್ಲವಾದರೂ ಕ್ಯಾಂಪಿಪೇಟೆ ಅಮಲ್ದಾರ್ ಮೆ॥ ರಾಮಯ್ಯಂಗಾರೂ) ಪೆನ್ಷನ್‌ಮೇಲೆ ನಿವೃತ್ತರಾಗುವರು.

An increased scholarship.—ಈ ದೇಶೀಯರಾದ ವಿದ್ಯಾರ್ಥಿಗಳು ಕೆಲವರು ಈಗ ಪುನಾಗೆ ಹೋಗಿ ಅಲ್ಲಿನ ಶಾಸ್ತ್ರ ಪಾಠಶಾಲೆಯಲ್ಲಿ ಓದುತಲಿದಾರೆಯಷ್ಟೆ, ಅವರಪೈಕಿ ಶ್ರೀನಿವಾಸರಾವ್ ಯೆಂಬವರಿಗೆ ಇದುವರಿಗೆ ಕೊಡಲ್ಪಡುತಲಿದ್ದ ವಿದ್ಯಾರ್ಥಿ ವೇತನವು ಮಾಹೇಯಾನಾ ೨೫ರಿಂದ ೫೦ ರೂಪಾಯಿಗಳಿಗೆ ಜಾಸ್ತಿ ಮಾಡಲ್ಪಟ್ಟಿತೆಂತಲೂ,ಇತರ ಸಹಾಧ್ಯಾಯಿಗಳಿಗಿಂತ ಇವರು ವಿಶೇಷಾಭಿವೃದ್ಧಿಯನ್ನೈದಿದಾರೆಂತಲೂ, ಇವರಿಗೆ ಮೈಸೂರು ಗವರ್ನಮೆಂಟನವರು ಸಹ ತಿಂಗಳಿಗೆ ೧೫ರೂಪಾಯಿಗಳಂತೆ ವೇತನ ಕೊಡುತಲಿದಾರೆಂತಲೂ ಒಳದೇಶದ ಡೇಯಿಲೀಪ್ರೋಸ್ಟ್ ಪತ್ರಿಕೆ ತಿಳಿಸುತಿದೆ. ಈಸಲದ ಪರೀಕ್ಷೆಯೊಳವರು ಬಹಳ ತೃಪ್ತಿಕರವಾಗಿ ತೇರ್ಗಡೆ ಯಾಗಬಹುದೆಂದು ನಂಬುತ್ತೇವೆ.

The Markonahally project.—ಮೈಸೂರು ಸರ್ಕಾರದವರಿಂದ ಉದ್ದೇಶಿಸಲ್ಪಟ್ಟಿರುವ ಮಾರೀಕಣಿವೆ ಕಾಮಗಾರಿಗೆ ಸಂಬಂಧಿಸಿದ ನಮೂನೆಗಳೂ ಅಂದಾಜ್‌ಪಟ್ಟಿ ವಗೈರೆಗಳೂ ಸೂಪರಿಂಟಂಡಿಂಗ್ ಇಂಜನಿಯರವರ ಆಫೀಸನಲ್ಲಿ ತಯಾರ್ಮಾಡಲ್ಪಡುತಿವೆ. ಈ ಕಾಮಗಾರಿಯವಿಚಾರಣೆಗೆ ಅವಶ್ಯಕವಾಗಿರುವ ಆಫೀಸರ್‌ಗಳು ಮತ್ತು ಅವರ ತಾಬೇದಾರೀ ನೌಕರರು ವಾಸಮಾಡುವ ಬಗ್ಯೆ ಮನೆಗಳು ಕಟ್ಟುವದಕ್ಕಾಗಿಯೂ, ಅವರಿಗೆ ಜಲವಸತಿಯಂ ಕಲ್ಪಿಸುವದಕ್ಕಾಗಿಯೂ, ಮಹಾರಾಜಾ ಸರ್ಕಾರದವರು, ವಿನಾಯಕನ ಪ್ರಾಜೆಕ್ಟಿನಂತೆ ೫೦,೦೦೦ ರೂಪಾಯಿಗಳು ಸದ್ಯಕ್ಕೆ ಸಾಂಗ್ಷನ್ ಮಾಡಿದರೆಂದು ತಿಳಿಯಬರುತ್ತಿದೆ.

M. D. Sethu Row.—ಶಾಬಕ್ ಜಜಿ ನೇಟಿವ್ ಮೆ॥ಸೇತೂರಾಯರವರವಿಷಯದಲ್ಲಿಗವರ್ನಮೆಂಟನವರು ಬಿಡುಗಡೆಯಮೂಲಕ ಉಪಕಾರ ಮಾಡುವರೆಂಬಭಾವವು ಅದ್ಯಾಪಿ ಪ್ರಜೆಗಳಿಗೆತಪ್ಪಿದ್ದಿಲ್ಲವು. ವರ್ಷವರ್ಷಂತಿಯದಿನ ಸದರೀರಾಯರಿಗೆ ಬಂಧವಿಮೋಚನ ವಾಗುವದೆಂದು ಯೆಲ್ಲರೂ ಉತ್ಸಾಹದೊಡನೆ ನಿರೀಕ್ಷಿಸಿದ್ದರು. ಆ ಸಂದರ್ಭದಲ್ಲಿ ಅವರಕೋರಿಕೆ ಈಡೇರಲಿಲ್ಲವು, ಮುಂದಿನವಾರದೊಳೊಂದು ಅವಧಿ ಇರುವದರಿಂದ ಅದನ್ನು ಯೆಲ್ಲರೂ ಆತುರದೊಡನೆ ನಿರೀಕ್ಷಿಸುತಲಿದಾರೆ. ಆಗಲಾದರೂ ಗವರ್ನಮೆಂಟನರು ಈವಿಷಯವನ್ನು ಪರ್ಯಾಲೋಚಿಸಿ ಯುಕ್ತವಾಗಿ ನಡೆಸಿದರೆ ಯೋಗ್ಯವಾಗಿರುವದು. ಮೆ॥ ಸೇತೂರಾಯರವರು ಇದುವರಿಗೆ ಸ್ವಪರಕರ್ಮ ಫಲವನ್ನು ಬಹುವಿಧವಾಗಿ ಅನುಭವಿಸಿ ಬಟ್ಟಿ ದಾಗಿ ಇನ್ನೇ ಸಾಕಾಗಿರುತಿದೆ.

A murder case.—ಈಚೆಗೆ ಈ ವೂರು ಪೇಟೆಯಲ್ಲಿ ನಡೆದ ಒಂದು ಖೂನೀ ಮೊಕದ್ದಮೆಯನ್ನು ಕುರಿತು ಮಾಹೇ ಮಜಕೂರ್ ೧೭ ವ ೧೮ನೇ ತಾರೀಖ್‌ಗಳುಳ್ಳ ಒಳದೇಶದ ಡೇಯಿಲೀಪ್ರೋಸ್ಟು ಪತ್ರಿಕೆಯು ಇದರಡಿಕಂಡಂತೆ ತಿಳಿಸುತಿದೆ. ಈ ವೂರು ಜೇಲಿಯಲ್ಲಿರುವ ಷೇಕ್ ಅಹಮದ್ ಯೆಂಬವನಬಳಿ ನೌಕರಿಯೊಳಿದ್ದ ೨೨ ವರುಷಗಳ ವಯಸ್ಸುಳ್ಳ ಹುಸೇನ್‌ಯೆಂಬವನನ್ನು ಈ ತಿಂಗಳ ೧೧ನೇ ತಾರೀಖಿನದಿನ ಅವನಯೆಜಮಾನನುಹೊಡೆಯಲು ಘಾಯತಗಲಿ ರಕ್ತಸುರಿಯಲಿಕ್ಕೆ ಪ್ರಾರಂಭವಾಯಿತು. ಕೆಂಗೇರಿಬಾಗಿಲಿನ ಸ್ಟೇಷನಿನಲ್ಲಿದ್ದ ಪೊಲೀಸ್‌ಜವಾನನು ಸದರೀ ಹುಡುಗನನ್ನು ಆಸ್ಪತ್ರಿಗೆ ಕರೆದುಕೊಂಡುಹೋಗಿ ಹಾವುಕಚ್ಚಿದ್ದರಿಂದ ಚಿಕಿತ್ಸೆಮಾಡಿರೆಂದು ಹೇಳಿದನು. ಅಲ್ಲಿನ ಪ್ರವೀಣರೊಬ್ಬರು ಅಪರಸ್ವರೂಪವನ್ನರಿಯದೆ ಮಾಡಿದ ಪ್ರತಿಕ್ರಿಯೆಯಿಂದ ತಮ್ಮಲ್ಲಿ ಭರ್ತಿಯಾಗಿದ್ದ ಒಂದುಸೀಸೆ ಬ್ರಾಂಡಿಯಾಯಿತೆಯೊಷ್ಟು ಮತ್ಯಾವಪ್ರಯೋಜನವೂ ವುಂಟಾಗಲಿಲ್ಲವು. ಇಷ್ಟರೊಳಗಾಗಿ ಅವನು ಅಲ್ಲೇ ಮೃತಪಟ್ಟನು. ಅವನತಂದೆಯು ಮುರ್ದೆಯನ್ನು ದಫನುಮಾಡುವಬಗ್ಯೆ ತೆಗೆದುಕೊಂಡುಹೋಗಿಕ್ಕತ್ತಿಸುವಲ್ಲಿ ಪೊಲೀಸ್‌ನವರು ಕ್ರಮನ್ರಕಾರ ಟೌನ್‌ಮ್ಯಾಜಿಸ್ಟ್ರೇಟರನ್ನು ಧಫನಿಗೆ ಹುಕುಂ ಕೊಡಬೇಕೆಂದು ಕೇಳಲು, ಅವರು ಅವನ ಮರಣಕಾರಣವನ್ನು ತಿಳಿಸುವ ಡಾಕ್ಟರ್ ಸರ್ಟಿಫಿಕೇಟನ್ನು ಹಾಜರ್ ಮಾಡಿದಹೊರತು ಅಚಾಗಿಸಕೂಡದೆಂದುಅಪ್ಪಣೆಮಾಡಿದರು. ಹಿಂದೆ ಮುಂದೆ ಅರಿಯದ ಆಸ್ಪತ್ರಿ ಅಸಿಸ್ಟೆಂಟರೊಬ್ಬರು ರೋಗದಿಂದಮೃತಪಟ್ಟಂತೆ ಸರ್ಟಿಫಿಕೇಟುಕೊಡಲು ಬಳಿಕ ಮುರ್ದೆ ದಫನ್‌ಮಾಡಲ್ಪಟ್ಟಿತು. ಹೀಗಿರುವಲ್ಲಿ ೧೫ನೇ ತಾರೀಖಿನಲ್ಲಿ ಮೇಲ್ಕಂಡ ಅಂಶಗಳನ್ನು ನಮೂದಿಸಿ ಯೆರಡು ಹೆಸರಿಲ್ಲದ ಅರ್ಜಿಗಳು ಡಿ॥ ಮತ್ತು ಟೌನ್ ಮ್ಯಾಜಿಸ್ಟ್ರೇಟುಗಳಿಗೆ ಕಳುಹಿಸಲ್ಪಟ್ಟವು. ಅದರಮೇಲೆ ಕೆಪ್ಟನ್ ಮ್ಯಾಕಿಂಟೈರ್‌ಯವರು ಸದರೀವಿಷಯವನ್ನು ವಿಚಾರಿಸುವಂತೆ ಡಿಟೆಕ್ಟಿವ್ ಇನ್‌ಸ್ಪೆಕ್ಟರಿಗೆ ಹುಕುಂಮಾಡಲು ಅವರು ಅದೇರೀತಿನಡೆಸಿದರು. ಈಗ ತಿಳಿಯಬರುವದರಲ್ಲಿ ಮೃತಪಟ್ಟವನು ಖೂನ್‌ಮಾಡಲ್ಪಟ್ಟನೆಂದಲೂ, ಖೂನ್‌ಮಾಡಿದವನು ವಿತಂತು ಮಗಳನ್ನು ಅಕ್ರಮಿಸಿಕೊಂಡಿದ್ದನೆಂತಲೂ ಇದೇ ಪರಸ್ಪರ ವೈಮನಸ್ಯಕ್ಕೂ ಕಡೆಗೆ ಅವನಮರಣಕ್ಕೂ ಕಾರಣವಾಯಿತೆಂತಲೂ ತಿಳಿಯಬರುತಿದೆ

The Mysore State Railway.—ಬರುವತಿಂಗಳ ಗುಡ್‌ಫ್ರೈಡೇ ತಾರೀಖಿನಲ್ಲಿ ಮೈಸೂರುಸ್ಟೇಟ್ ರೈಲ್ವೆಯ ಚಾರ್ಜನ್ನುವಹಿಸಲಿಕ್ಕೆ ಮದರಾಸ್ ರೈಲ್ವೆ ಕಂಪೆನಿಯವರ ತರಫ್ ಕರ್ನಲ್ ಹಿಕ್ ಯೆಂಬವರು ಇಲ್ಲಿಗೆ ಬಂದಿರುತ್ತಾರೆಂದು ತಿಳಿಯಬರುತಿದೆ. ಇಲ್ಲಿನ ರೈಲ್ವೆರಸ್ತೆಯನ್ನು ಬರುವ ತಿಂಗಳಲ್ಲಿ ಅನ್ಯರ ಸ್ವಾಧೀನಕ್ಕೆ ಕೊಡುವದರಿಂದ ಮುಂದಿನ ರಮ್ಮ ಪರಿಣಾಮವನ್ನು ಕುರಿತು ಸದರೀ ಇಲಾಖೆಯ ನೌಕರರೆಲ್ಲರೂ ಬಹಳ ಚಿಂತಿಸುತಲಿದಾರೆಂದು ಕೇಳುತ್ತೇವೆ. ಈಗಿರತಕ್ಕ ನೌಕರರಮಾಸೇರನ್ನೆಲ್ಲ ಬದಲಾಯಿಸ ಬೇಕೆಂಬ ಅಭಿಪ್ರಾಯವು ರೈಲ್ವೇ ಕಂಪೆನಿಯವರಿಗೆ ಇರುವಂತೆ ತಿಳಿಯಬರುತಿದೆ. ಕಂಪೆನಿಯವರ ತರಫ್ ಇಂಜನಿಯರ್ ಮೆ॥ ಬ್ರೈಯರ್ಸ್ ಎಂಬವರು ಇಲ್ಲಿಗೆ ಬಂದಿರುತ್ತಾರಲ್ಲದೆ ಇವರು ಗುಬ್ಬಿಯಿಂದ ಹರಿಹರದವರೆಗೆ ಬಡಾಯಿಸಲ್ಪಡುವ ರಸ್ತೆಯವಿಚಾರಣೆಯಬಗ್ಯೆ ತುಮಕೂರಿಗೆ ಸಮೀಪದೊಳು ಕಾಯಂ ಮೊಕ್ಕಾಂ ಮಾಡುವರು. ಮೈಸೂರು ಮರಮ್ಮತ್ ಇಲಾಖೆಗೆ ಸೇರಿದ ಮೆ॥ ಮೆಕಹಚ್ಚಿನ್‌ಯೆಂಬವರ ನೌಕರಿಯನ್ನು ರೈಲ್ವೆ ಕಂಪೆನಿಯವರು ಸ್ವತಃ ಉಪಯೋಗಿಸಿಕೊಳ್ಳುವರು. ದಕ್ಷಿಣ ಮಹರಾಷ್ಟ್ರ ರೈಲ್ವೇ ಕಂಪೆನಿಯವರು ತಮ್ಮ ತರಫ್ ಒಬ್ಬ ಏಜಂಟನ್ನು ನೇಮಕರನ್ನಾಡುವವರೆಗೆ ಈಗ ಮೈಸೂರು ಸ್ಟೇಟ್ ರೈಲ್ವೇಇಲಾಖೆಯಲ್ಲಿ ಮ್ಯಾನೇಜರಾಗಿರುವ ಮೆ॥ ಬೇಚರ್ ಯೆಂಬವರನ್ನು ಹಂಗಾಮಿಯಾಗಿ ನೌಕರಿಯಲ್ಲಿಟ್ಟುಕೊಂಡಿರತಕ್ಕದ್ದೆಂದು ಇಂಡ್ಯಗವರ್ನಮೆಂಟನ ಫಾರಿನ್‌ಸೆಕ್ರೆಟರಿಯವರು ಇಲ್ಲಿನ ಬ್ರಿಟಿಷ್ ರೆಸಿಡೆಂಟರಿಗೆ ತಂತಿಮೂಲಕ ತಿಳಿಯಪಡಿಸಿರುತ್ತಾರೆ. ಪರಂತು ರೈಲ್ವೇ ಕಂಪೆನಿಯವರು ಅನುಭವಶಾಲಿಯಾದ ತಮ್ಮಕಡೆ ಏಜಂಟೊಬ್ಬನನ್ನು ಇಲ್ಲಿಗೆ ಕಳುಹಿಸತಕ್ಕಬಗ್ಯೆ ತಕ್ಕ ಏರ್ಪಾಡು ಮಾಡುತಲಿದಾರೆಂದು ತಿಳಿಯಬರುತಿದೆ. ಟ್ರಾಫಿಕ್ ಸೂಪರಿಂಟೆಂಡೆಂಟರಾದ ಮೆ॥ ಪುಟ್ಟಣ್ಣಶೆಟ್ಟಿಯವರ ನೌಕರಿಯು ಅನಾವಶ್ಯಕವಾಗಿರುವದರಿಂದ ಅವರ ವಿಷಯದಲ್ಲಿ ಮೈಸೂರು ಸರ್ಕಾರದವರು ಮುಂದೆ ಯೇರ್ಪಾಡು ಮಾಡಬೇಕಾಗಿರುತಿದೆ. ಮೆ॥ ಪುಟ್ಟಣ್ಣಶೆಟ್ಟಿಯವರಿಗೆ ಮೈಸೂರು ಗವರ್ನಮೆಂಟನವರು ಒಂದು ತಾಲ್ಲೂಕು ಮಾಮಲೇ ಕೆಲಸ ಕೊಡುವರಾಗಿದಾರೆಂದು ಪ್ರವಾದ ಉಂಟಾಗಿದೆ. ಈಗ ಇಲ್ಲಿನ ರೈಲ್ವೇ ಇಲಾಖೆಯಲ್ಲಿರತಕ್ಕ ನೌಕರರಪೈಕಿ ಸಮರ್ಥರಾದವರನ್ನೆಲ್ಲ ಕಂಪೆನಿಯವರನ್ನು ನೌಕರಿಯಲ್ಲಿ ಉಳಿಸಿಕೊಳ್ಳಬಹುದು. ಹಾಗೆ ಒಂದುವೇಳೆ ಒಂದುವೇಳೆ ನಡೆಯದಿದ್ದಾಗ್ಯೂ ಅವರು ಇಲ್ಲೇ ಇರಲ್ಪಡುವರೆಂಬ ಅಂಶ ಮಾತ್ರ ಅನುಮಾನಿಸತಕ್ಕದ್ದಾಗಿದೆ. ಮೈಸೂರು ಸ್ಟೇಟ್ ರೈಲ್ವೆ ಲೋಕಮೋಟಿವ್ ಸೂಪರಿಂಟೆಂಡೆಂಟರಾದ ಮೆ॥ ಮಲಾಯಿಎಂಬವರಿಗೆ ರಜಾಕೊಡಬಹುದೆಂಬದಾಗಿ ಫಾರಿನ್‌ಸೆಕ್ರೆಟರಿಯವರು ದಿವಾನರವರಿಗೆ ತಂತಿಮೂಲಕ ತಿಳಿಯಪಡಿಸಿರುತ್ತಾರೆ.

CORRESPONDENCE.

ಈಗ್ಗ್ರಾಮದಲ್ಲಿರುವ ಸ್ಕೂಲ್‌ಸ್ಥಿತಿಯಂಕುರಿತು ನಮ್ಮಸ್ನೇಹಿತ “ನಿವಾಸಿ”ಯು, ಕಳೆದ ಫೆಬ್ರವರಿ ೨೨ನೇ ತಾರೀಖಿನ ತಮ್ಮ ಪತ್ರಿಕೆಗೆ ಬರೆದ ಕಾಗದವನ್ನು ನೋಡಿ ಬಹಳ ವ್ಯಸನಪಡುತ್ತೇನೆ. ಈ ಸ್ಕೂಲನ್ನು ದೊಡ್ಡದೊಡ್ಡ ಅಧಿಕಾರಿಗಳು (ಅಂದರೆ, ಇಲಾಖಾ ಇನ್‌ಸ್ಪೆಕ್ಟರ್‌ಗಳು, ಮೆ॥ಹಿಲ್ ಸಾಹೆಬರವರು, ಮೆ॥ರೈಸ್‌ಸಾಹೆಬರವರು, ಮೆ॥ಕೃಷ್ಣರಾವ್,ಎಂ.ಎ. ಯವರು) ಆಗಿಂದಾಗ್ಯೆ ನೋಡಿ ಒಳ್ಳೆಯ ಅಭಿಪ್ರಾಯವನ್ನು ಕೊಡುತಬಂದಹಾಗೆ ವಿಸಿಟರ್ಸ್ ಬುಕ್ಕಿನಿಂದ ಸ್ಪಷ್ಟವಾಗಿ ಕಾಣುತ್ತೆ. ನಮ್ಮ ಸ್ನೇಹಿತರ ಬರವಣಿಗೆಯು ವಿಸಿಟರ್ಸ್ ಬುಕ್ಕಿನಲ್ಲಿರುವ ದೊಡ್ಡ ಅಧಿಕಾರಿಗಳ ಅಭಿಪ್ರಾಯಗಳಿಗೆ ವಿರುದ್ಧವಾಗಿರುವಣದರಿಂದ ಅದರಲ್ಲಿರುವ ನಿಜತ್ವವೂ ನಿಷ್ಪ್ರಹತ್ವವೂ ಯೆಷ್ಟು ತೂಕವುಳ್ಳವೋ ಆಯಂಶವನ್ನು ನಮ್ಮ ವಾಚಕರೇ ಊಹಿಸಬಹುದು.

ಕೆಲವು ದಿನಗಳ ಕೆಳಗೆ ಒಬ್ಬ ದೊಡ್ಡಮನುಷ್ಯರಮನೆಯಲ್ಲಿರತಕ್ಕ ವಿದ್ಯಾರ್ಥಿಯು ೯ ಕಾಸುಗಳನ್ನು ತೆಗೆದುಕೊಂಡು ಪೇಟೆಯಿಂದ ಕೆಲವು ಬಾಳೇಹಣ್ಣುಗಳಂ ತಂದು ತನ್ನ ಜೊತೇ ಹುಡುಗರೊಡನೆ ತಿಂದನಂತರ,ಅವನಮನೆಯವರು ಆ ಹುಡುಗನು ಸದರೀ ೯ ಕಾಸುಗಳನ್ನು ಕದ್ದೊಯ್ದನೆಂತಲೂ, ಮತ್ತು ಬಾಳೇಹಣ್ಣು ತಿಂದಹುಡುಗರು ಸಹ ಅಪರಾಧಗಳಾದರೆಂತಲೂ, ಕಚ್ಚೇರಿಗೆ ಕರೆದುಕೊಂಡುಹೋಗಿ ಆಹುಡುಗರನ್ನು ಬಹಳಕೂಂದನೆ, ಹಡಿಸಿದ್ದರಿಂದ ವಿದ್ಯಾರ್ಥಿಗಳೆಲ್ಲರು ಮೇಲ್ಕಂಡ ದೊಡ್ಡಮನುಷ್ಯರ ಮನೆಯ ವಿದ್ಯಾರ್ಥಿಯು ಸ್ಕೂಲಿಗೆ ಬಂದರೆ ತಾವು ಬರುವದಿಲ್ಲವೆಂದು ಕಟ್ಟುಮಾಡಿಕೊಂಡರು. ಇದು ನ್ಯಾಯವಾಗಿ ಕಂಡುಬಂದದರಿಂದಲೂ ಮತ್ತು ಸದರೀ ವಿದ್ಯಾರ್ಥಿಯ ದುರ್ನಡತೆಯು ಬಹಳವು ಸಿದ್ಧವಾದದ್ದಾಗಿದ್ದದರಿಂದಲೂ ಅದಕ್ಕೆ ಪೂರ್ವ ಅನೇಕಸಲಅವನುಎಚ್ಚರಿಸಿದಾಗ್ಯೂ ಕಡೆಗೆ ಅಸಾಧ್ಯವಾದ್ದರಿಂದಲೂ ಅವನವಿಷಯದಲ್ಲಿ ಆಮುನೆಯವರೊಡನೆ ಸ್ಕೂಲ್ ಮಾಸ್ಟರು ಖಂಡಿತವಾಗಿ ಹೇಳಬೇಕಾಗಿ ಬಂತು. ಇದರಿಂದಲೂ ಮತ್ತು ಹಿಂದಣ ಕೆಲವು ಅಸಮಾಧಾನ ಸಂಗತಿಗಳ ದೆಸೆಯಿಂದಲೂ ಬಡಸ್ಕೂಲ್‌ಮಾಸ್ಟರಮೇಲೆ ಕೋಪದಿಂದ ಈ ಹೊಸ ಕೂಲೀಮಠವು ಸ್ಥಾಪನೆಯಾಗಿರುತದೆಯೇ ಹೊರ್ತು ಸ್ಕೂಲಿನ ಮತ್ತ್ಯಾವ ಲೋಪದಿಂದಲೂ ಆಗಿರುವದಿಲ್ಲವು. ನಮ್ಮ ಸ್ನೇಹಿತರ ಬರವಣಿಗೆಯಲ್ಲಿಯೇ ಸಂಪೂರ್ಣ ನಂಬಿಕೆಯನ್ನಿಟ್ಟರೆ ದೊಡ್ಡ ಅಧಿಕಾರಿಗಳ ಬರವಣಿಗೆಗಳೆಲ್ಲ ಸುಳ್ಳಾಗಬೇಕಾಗುತ್ತೆ.

೭ ರೂಪಾಯಿಗಳ ಸಂಬಳುಳ್ಳ ಮಾಸ್ಟರ್‌ಗಳೂ ನಮ್ಮ ಸ್ನೇಹಿತರಂತಾ ಮೇಲ್‌ತನಿಖೀ ಆಫಿಸರರೂ ಅಲ್ಪ ಸಂಬಳದಲ್ಲಿಯೇ ನೇಮಕರಾಗಿ ವ್ಯವಸ್ಥೆಯಾದರೆ ಸರ್ಕಾರಕ್ಕೆ ತುಂಬಾ ಫಾಯಿದೆಯುಂಟಾಗಬಹುದು. ಆದ್ದರಿಂದ ಗವರ್ನಮೆಂಟನವರು ಇದನ್ನು ಯೋಚಿಸಿ ನಮ್ಮ ಸ್ನೇಹಿತರ ಕೋರಿಕೆಯನ್ನು ನೆರವೇರಿಸಬಹುದು.

ಇದೇರೀತಿ ನಮ್ಮ ಸ್ನೇಹಿತರು ಇತರಬಾಬಿಗಳಲ್ಲಿಯೂ ಕುಶಲತೆಯನ್ನು ಸ್ವಲ್ಪ ಉಪಯೋಗಿಸಿ ಸಹಾಯ ಮಾಡಿದರೆ ಹಾಲೀ ಮೈಸೂರು ಸರ್ಕಾರವು ಹಣದ ಕೊರತೆಯಿಂದ ಪಡುತಲಿರುವ ಅನಾನುಕೂಲದಿಂ ವಿಮುಕ್ತವಾಗಿ, ನಮ್ಮಸ್ನೇಹಿತರಿಗೆ ಆಚಂದ್ರಾರ್ಕ ಕೀರ್ತಿ ಪ್ರಾಶಸ್ತ್ಯಗಳುಂಟಾಗಬಹುದು.

ಪ್ರವಾಸಿ.

ಈಗ ಪ್ರಾಯೇಣ ವೃತ್ತಾಂತಪತ್ರಿಕೆಗಳಲ್ಲಿ ಸ್ತ್ರೀ ವಿದ್ಯಾಭ್ಯಾಸ, ಸ್ತ್ರೀ ಪುನರ್ವಿವಾಹ ಈ ಯೆರಡುವಿಷಯಗಳೇ ಬಹಳವಾಗಿ ವಿಚಾರ ಮಾಡಲ್ಪಡುತಿವೆ ಪೂರ್ವದೊಳು ಈಯೆರಡೂ ನಡೆಯುತಲಿದ್ದವೆಂಬದನ್ನು ಅವುಗಳ ನಿಷೇಧಕರು ಸಹ ಅಂಗೀಕರಿಸಿರುತ್ತಾರೆ. ಹಿಂದೆ ನಡೆಯುತಲಿದ್ದವನ್ನು ಮರಳಿ ಯೇರ್ಪಡಿಸಲಿಕ್ಕೆ ಪ್ರಯತ್ನಪಡುವದರೊಳು ನಿಷೇಧವ್ಯಾತಕ್ಕೆ ಬಲವತ್ತರವಾಗಿದೆಯೆಂದು ಯೋಚಿಸಿದರೆ, ಪೂರ್ವದಲ್ಲಿ ಇವುಗಳಿಂದ ಏನೋ ದುಷ್ಫಲ ವುಂಟಾದದರಿಂದಲೇ ಈಗ ಈ ವಿಧ ನಿಷೇಧ ವುಂಟಾಗಲಿಕ್ಕೆ ಕಾರಣವಾಯಿತೆಂದೆಣಿಸಬೇಕಾಗಿದೆ ವಿದ್ಯೆಯು ನಾಗರಿಕ

ತೆಯನ್ನುಂಟುಮಾಡುವದೆಂಬದನ್ನು ನಾನು ಅಂಗೀಕರಿಸಿದಾಗ್ಯೂ ಪ್ರಕೃತಿಯ ಗುಣವನ್ನು ಅದು ಬದಲಾಯಿಸಲಿಕ್ಕೆ ಶಕ್ತವಾಗುವದೆಂದು ಮಾತ್ರ ಹೇಳಲಾರೆನು. ಇದಕ್ಕೆ ದೃಷ್ಟಾಂತವಾಗಿ ವಿದ್ಯಾಮತರೆನಿಸಿಕೊಂಡಿರುವ ಪ್ರಸಿದ್ಧರಾದ ಸ್ತ್ರೀ ಪುರುಷರ ಹೆಸರುಗಳು ಕೆಲವನ್ನಿಲ್ಲಿ ತಿಳಿಸುತ್ತೇನೆ.

ಸ್ತ್ರೀಗಳು—ಬೃಹಸ್ಪತ್ಯಾಚಾರ್ಯರಭಾರ್ಯೆಯಾದತಾರೆ. ಗೌತಮಋಷಿಯ ಪತ್ನಿಯಾದ ಅಹಲ್ಯೆ. ರಾಜಪುತ್ರಿಯಾದಯಾಮಿನೀಪೂರ್ಣತಿಲಕಾ

ಪುರುಷರು—ರಾವಣನು, ಇಂದ್ರನು, ಚಂದ್ರನು, ಬಿಲ್ಹಣನು, ಕಾಳಿದಾಸನು, ಭವಭೂತಿ, ಷೇಕ್ಸ್‌ಪಿಯರ್, ಮುಂತಾದವರು. ಮೇಲೆಕಂಡವರೆಲ್ಲರೂ ಸಾಮಾನ್ಯರಲ್ಲವು. ಎಲ್ಲರೂ ಪಂಡಿತರಾಗಿಯೂ,ಸಮರ್ಥರಾಗಿಯೂಇದ್ದರು ಹೀಗೆಯೇ ವಿದ್ಯಾಹೀನರಾದವರಪೈಕಿ ಅನೇಕರು ಒಳ್ಳೇ ಗುಣಗಳುಳ್ಳವರಾಗಿಯೂ ಲೋಕೋಪಕಾರಿಗಳಾಗಿಯೂಇದ್ದಾರೆಂಬದಕ್ಕೆಅನೇಕರಹೆಸರನ್ನು ನಮೂದಿಸಬಲ್ಲೆನು, ಪರಂತು ಸ್ವಾಭಾವಿಕವಾದ ಪ್ರಕೃತಿಯಗುಣಕ್ಕೆ ಸಹಕಾರಿಯಾಗಿರುವದೆಂಬದಕ್ಕೆ ಮೇಲೆಕಂಡ ದಾಖಲೆಗಳೇ ಸಾಕಾಗಿರುತಿವೆ. ಹಾಗಿಲ್ಲದೆ ಬೇರೇ ಗುಣವನ್ನು ಅದು ಪ್ರಾಪ್ತಮಾಡುವದೆಂದು ಹೇಳುವಪಕ್ಷಕ್ಕೆ ಅದನ್ನು ಯಾರಾದರೂ ನಿದರ್ಶನದೊಡನೆ ತಿಳಿಸಬೇಕೆಂದು ಕೋರುತ್ತೇನೆ. ವಿಷಯವಿಮರ್ಶಕ

SUMMARY OF NEWS
ವೃತ್ತಾಂತ ಸಂಗ್ರಹವು

ಹುಬ್ಬಳ್ಳಿಯಿಂದ ರಾಣೀಬೆನ್ನೂರಿನವರಿವಿಗೆ ಬರುವ ಆಗಸ್ಟುತಿಂಗಳಲ್ಲಿ ರೇಯಿಲ್‌ಗಾಡಿಯು ಬಿಡಲಿಕ್ಕೆ ಪ್ರಾರಂಭವಾಗತಕ್ಕದ್ದೆಂದುಗೊತ್ತಾಗಿದೆ.

ಕೊಲ್ಹಾಪುರದಲ್ಲಿ ಸ್ಥಾಪಿಸಲ್ಪಟ್ಟಿರುವಸ್ವತಂತ್ರ ಸ್ತ್ರೀ ವೈದ್ಯಾಲಯದಲ್ಲಿ ೧೨ಮಂದಿ ಸ್ತ್ರೀ ವೈದ್ಯರು ಮೊಕರರ್ಮಾಡಲ್ಪಡುವರಂತೆ.

ಬರುವ ಏಪ್ರಲ್ ತಿಂಗಳಲ್ಲಿ ಎರಡು ಧೂಮಕೇತುಗಳು ಕಾಣಿಸುವವೆಂದು ಒಬ್ಬಾನೊಬ್ಬ ಕಾಲಜ್ಞಾನು ಅಭಿಪ್ರಾಯಪಟ್ಟಿರುತ್ತಾನೆ.

ಆಕಾಶದಲ್ಲೀಗ ಒಟ್ಟು ಮೂರುಕೋಟಿ ನಕ್ಷತ್ರಗಳು ಕಾಣಿಸುತಿವೆಯೆಂದು ಇಬ್ಬರು ಫ್ರೆಂಚ್ ಜ್ಯೋತಿಷ್ಕರು ಗುಣಿಸಿರುತ್ತಾರೆ.

ಮಿರಜ್ ಸಂಸ್ಥಾನದ ಶ್ರೀಮಂತರಾದ ಬಾಲಾಸಾಹೇಬರಿಗೆ ಇದೇತಿಂಗಳ ೫ನೇತಾರೀಖಿನಲ್ಲಿ ಅಧಿಪತ್ಯ ಒಪ್ಪಿಸಲ್ಪಟ್ಟತೆಂದುಕೇಳುತ್ತೇವೆ.

ಇಟಲೀದೇಶದಲ್ಲಿ ಪಾರಿವಾಳಗಳ ವೇಗವನ್ನು ಈಚೆಗೆ ಒಬ್ಬರು ಪರೀಕ್ಷೆಮಾಡಿದರು. ಸ್ವಿಯಾದಲ್ಲಿ ಎರಡು ಪಾರಿವಾಳಗಳನ್ನು ಗೂಡಿನಿಂದ ತೆಗದು ೪೮ಮೈಲು ಅಂತರದಮೇಲಿರುವ ನಿಲಸ್ ಎಂಬ ಸ್ಥಳಕ್ಕೆ ತೆಗೆದುಕೊಂಡು ಹೋಗಿ ಅಲ್ಲಿಂದ ಅವುಗಳನ್ನುಬಿಡಲು ಅವು ಸರಿಯಾಗಿ ೩೦ ನಿಮಿಷಗಳಲ್ಲಿ ಮರಳಿ ಬಂದು ತಮ್ಮ ಗೂಡುಗಳನ್ನು ಸೇರಿಕೊಂಡವು. ಆಪಕ್ಷಿಗಳವೇಗವು ಒಂದುಘಂಟೆಗೆ ೯೯ ಮೈಲುಗಳು, ಅಥವಾ ಒಂದು ಮಿನಿಟಗೆ ಅವು ೨೯೦೪ ಗಜಗಳು ಹಾರುತಿವೆ.

ರಷ್ಯಾ ಸರ್ಕಾರದ ಎಲ್ಲಾ ರೇಯಿಲ್ವೇ ಸ್ಟೇಷನ್‌ಗಳಲ್ಲಿಯೂ(ಗ್ರಿವೆನ್ಸಬುಕ್ಕು)ಅಂದರೆಸಂಕಟದಪುಸ್ತಕವೆಂಬದೊಂದು ಪುಸ್ತಕವು ಇಡಲ್ಪಟ್ಟಿರುತದೆ. ಪ್ರಯಾಣಸ್ಥರು ಫಿರ್ಯಾದನ್ನಾಗಲಿ ತಕರಾರ್‌ಗಳನ್ನಾಗಲಿ ಅದರಲ್ಲಿ ಬರೆಯತಕ್ಕದ್ದು. ಅದು ಪ್ರತಿ ತಿಂಗಳಗೊಂದಾವರ್ತಿ ಮುಖ್ಯ ಆಫೀಸಿಗೆ ಕಳುಹಿಸಲ್ಪಟ್ಟು ಅಲ್ಲಿ ಆ ಪುಸ್ತಕದೊಳು ಪ್ರಯಾಣಸ್ಥರಿಂದ ಬರೆದಿಡಲ್ಪಟ್ಟ ಫಿರ್ಯಾದಿಗಳು ವಿಚಾರಣೆ ಮಾಡಲ್ಪಡುವವು. ಹಿಂದುಸ್ಥಾನದಲ್ಲಿ ಸಹ ಇದರಂತೆಯೇ ಮಾಡಿದರೆ ಕೆಲವುಕಾಲದಲ್ಲಿಯೇ ಬಹಳ ಉತ್ತಮಪ್ರಯೋಜನ ವುಂಟಾದೀತು. ರೈಲ್ವೇ ಕಂಪೆನಿಯವರು ಅನ್ಯಾಯವನ್ನೂ, ಜುಲುಮಿಯನ್ನೂ ಬಲಪಡಿಸುತ್ತಾರೆ.

TELEGRAPHIC SUMMARY.
ತಂತಿವೃತ್ತಾಂತ ಸಂಗ್ರಹವು.

ಲಂಡನ್, ೧೭ನೇ ಮಾರ್ಚ್—ಇ [illegible] ಅಧಿಕಾರಣೆಯಬಗ್ಗೆ ಹಾಪ್ ಕಾಮನ್ಸ್ [illegible] ಸಂಬಂಧಿಸಿದಂತೆ ಏರ್ಪಡಕ್ಕೆ ಸೆಲೆಕ್ಟ್ ಕಮಿಟಿಗೆ ಈ ಕಡೆ ಕಂಡವರು ಸೇರಿರುತ್ತಾರೆ

ಡ್ಯೂಕ್ ಆಫ್ ಸಾಕ್‌ಲ್ಯಾಂಡ್

ಡ್ಯೂಕ್ ಆಫ್ ಬಕ್ಕಿಂಗ್‌ಹಾಂ.

ಮಾರ್ಕ್ವಿಸ್ ಆಫ್ ರಿಪನ್.

ಅರ್ಲ್ ಆಫ್ ಡರ್ಬಿ

ಅರ್ಲ್ ಕಿಂಬರ್ಲಿ,

ಅರ್ಲ್ ಗ್ರಾನ್‌ವಿಲ್

ಅರ್ಲ್ ಆಫ್ ಡೆಲ್ಹೌಸಿ.

ಅರ್ಲ್ ನಾರ್ತ್‌ಬ್ರೂಕ್.

ಅರ್ಲ್ ಆಫ್ ಲಿಟನ್.

ಅರ್ಲ್ ಆಫ್ ಎಲ್ಗಿನ್.

ಅರ್ಲ್ ಆಫ್ [illegible]

ವೈಕೌಂಟ್ [illegible]

ಲಾರ್ಡ್ [illegible].

ಲಾರ್ಡ್ [illegible].

ಲಾರ್ಡ್ [illegible],

ಲಾರ್ಡ್ [illegible].

ಲಂಡನ್, ೧೮ನೇ ಮಾರ್ಚ್—ಒಟ್ಟು ೧,೫೧೧ [illegible] ೧೮,೫೯,೧೦,೦೦ [illegible] ೧೩೦,೦೦,೦೦೦ [illegible]

ಲಂಡನ್, ೧೯ನೇ ಮಾರ್ಚ್—[illegible] ಸೆಕ್ರೆಟರಿಯಾಗಿರುವ ಮಿ|| [illegible] ಕೆಲಸಕ್ಕೆ ರಾಜೀನಾಮೆ ಕೊಟ್ಟರು.

ಲಂಡನ್, ೧೭ನೇ ಮಾರ್ಚ್—ಜಮೀನ್ದಾರರು ತಮ್ಮ ಜಮೀನುಗಳನ್ನು [illegible] ದ್ರವ್ಯವನ್ನು [illegible] ವಿಚಾರಣೆಗೊಳಪಡಿಸುತ್ತಾರೆ. ಮಿ|| ಚೇಂಬರ್‌ಲೇನ್ ಮತ್ತು ಮಿ|| ಟ್ರೆವಲಿಯನ್ [illegible] ಕೆಲಸಗಳಿಗೆ ರಾಜೀನಾಮೆ [illegible] ಮಿ|| ಗ್ಲಾಡ್‌ಸ್ಟನ್‌ರವರು [illegible] ಪ್ರಯತ್ನದೊಳಿದಾರೆ.

ಲಂಡನ್ ೧೮ನೇ ಮಾರ್ಚ್, ರಾಜೀನಾಮೆಯನ್ನು [illegible] ಮಿ|| ಚೇಂಬರ್‌ಲೇನ್ ಮತ್ತು ಟ್ರೆವಲಿಯನ್ ಇವರಿಬ್ಬರಿಗಂ ಮಿ|| ಗ್ಲಾಡ್‌ಸ್ಟನ್‌ರವರು [illegible]

[illegible] ಮಿ|| [illegible] ಆಯುಧಗಳಿಂದೊಡಗೂಡಿರುವ [illegible] ಮಾಡಿಸಿದರು.

ಕೈರೋ ೧೮ನೇ ಮಾರ್ಚ್, ಸುವಾಕಿನ್ [illegible] ಆಫೀಸರ್‌ಗಳ [illegible] ಬ್ರಿಟಿಷ್ ಆಫೀಸರ್‌ಗಳ [illegible] ಮಾಡಿದರು

EXTRACT.

ಸಾರಸ್ವತ ಬ್ರಾಹ್ಮಣರು ಕುರಿತು ಈಚೆಗೆ ಗೋಕರ್ಣಕ್ಷೇತ್ರದಿಂದ ಒಬ್ಬ ಬಾತಮೀದಾರನು ಮುಂಬೈ ಕನ್ನಡಸುವಾರ್ತೆಗೆ ಇದರಡಿಕಂಡಂತೆಬರೆದಿರುತ್ತಾನೇನಂದರೆ,—ಪ್ರಾಚೀನಕಾಲದಲ್ಲಿ ನಮ್ಮ ಸಾರಸ್ವತಬ್ರಾಹ್ಮಣರು ವಿಂಧ್ಯಾದ್ರಿಯ ಉತ್ತರದೊಳಿರುತ್ತಿದ್ದು ಅಲ್ಲಿಂದ ಪರಶುರಾಮನು ಗೋಮಾಚಲದಲ್ಲಿರುವ ಗ್ರಾಮಗಳಲ್ಲಿ ಅಂದರೆ ಗೋಮಾಂತಕವೆನ್ನಲ್ಪಡುವ ಈಗಪೋರ್ಚುಗೀಸ್ ರಾಜ್ಯಭಾರಕ್ಕೆ ಒಳಪಟ್ಟಭಾಗದಲ್ಲಿ ಕರೆಸಿ ಇಟ್ಟದ್ದರಿಂದಅದ್ಯಾಪಿ ಅಲ್ಲಿ ಸಾರಸ್ವತರಸಂಖ್ಯೆಯು ಕೊಂಚ ಇರುತಲಿದೆ. ಈದೇಶದಲ್ಲಿ ಪಂಚದ್ರಾವಿಡರ ಹೆಚ್ಚು ಸಮುದಾಯವಿತ್ತು. ಈದ್ರಾವಿಡರಲ್ಲಿ ಅನೇಕ ಕರ್ಹಾಡ ಚಿತ್ಪಾವನ ಮೊದಲಾದ ಹಲವು ಜಾತಿಗಳು ಏಕ ಪಙ್ತಿಯಿಂದ ಪರಸ್ಪರ ಭೋಜನ ಪ್ರತಿಭೋಜನಾದಿಗಳನ್ನುಮಾಡುತ್ತಿದ್ದರು. ಇವರಿಗೆ ದೇಹಸಂಬಂಧಮಾತ್ರ ಇರಲಿಲ್ಲವು. ವಿಂಧ್ಯಾದ್ರಿಯ ದಕ್ಷಿಣಕ್ಕೆ ಬಂದಿರುವ ಸಾರಸ್ವತ ಬ್ರಾಹ್ಮಣರ ಸಾಧ್ಯಕದಾನವು ಸ್ಕಂದಪುರಾಣಸಹ್ಯಾದ್ರಿ ಖಂಡದಲ್ಲಿ ವಿಸ್ತಾರವಾಗಿ ವರ್ಣಿಸಲ್ಪಟ್ಟಿರುತ್ತಿದೆ. ಗೋಮಾಂತಕವುಪೋರ್ಚುಗೀಸ್ ಸರಕಾರದ ಕಾರ್ಬಾರಕ್ಕೆ ಒಳಪಟ್ಟಾಗ ಆಗಿನ ರಾಜನಿಬಂಧನೆಯಿಂದ ಕೆಲವರು ವ್ಯತ್ತಿರೋಭಯಿಂ ಕ್ರಿಸ್ತಧರ್ಮವನ್ನು ಆಶ್ರಯಿಸಿದರು. ಅವರನ್ನು ಬ್ರಾಹ್ಮಣ ಕ್ರಿಸ್ತರು ಅನ್ನುತ್ತಾರೆ. ಆಸಮಯದಲ್ಲಿ ಕನಡಾಪ್ರಾಂತದೊಳಗೆ ಸೇರಿದ್ದ ಜನರಲ್ಲಿಯೂ, ಎರಡುಪಕ್ಷಗಳಾಗಿ ಅವುಗಳಲ್ಲಿ ಹೆಚ್ಚಿನ ಸಮುದಾಯದವರು ಶೇಣವಿಯೆಂಬ ನಾಮಾಭಿದಾನವನ್ನು ಧರಿಸಿದವರಾಗಿರುತ್ತಾರೆ. ಅವರ ಗುರುಸ್ಥಾನವು ಕೌಳಿಮಠವಾಗಿರುತ್ತದೆ. ನಮ್ಮಜನರ ಮುಖ್ಯಮಠ ಗೋಕರ್ಣ,ಶಿರಾಲಿ ಮತ್ತು ಚಿತ್ರಪುರ ಮೊದಲಾದವುಗಳಾಗಿರುತ್ತವೆ. ಇವುಗಳಿಗೆಲ್ಲ ಶ್ರೀ ಪಾಂಡುರಂಗಾಶ್ರಮ ಸ್ವಾಮಿಯವರೇ ಗುರುಗಳಾಗಿರುತ್ತಾರೆ. ನಮ್ಮಜನರಲ್ಲಿ ಮೊದಲು ವೈದಿಕ, ತಾಂತ್ರಿಕ ಇವೆರಡು ಮಾರ್ಗಗಳೇನಡೆಗೊಂಡಿದ್ದವು. ಬದಲೆ ನಮ್ಮವರ್ಗಕ್ಕೆ ಈ ದೇಶದಲ್ಲಿ ಪ್ರಬಲವಾದ ಆಶ್ರಯಾಭಾವದಮೂಲಕ ವೈದಿಕ ವೇದಶಾಸ್ತ್ರವೊದಲಾದವುಗಳನ್ನು ವರಿಸುವದಕ್ಕೆ ಅನಾನುಕೂಲತೆಯಾಗಿ ರಾಜಸ್ಥಾನಗಳಲ್ಲಿ ನೌಕರಿಯಿಂದಜೀವಿಸುವದಕ್ಕೆ ಉದ್ಯುಕ್ತರಾದಕಾರಣ ಇತರರು ನಮ್ಮನ್ನು ಕೇವಲ ತುಚ್ಛರಾಗಿ ಯಣಿಸುವದಕ್ಕೆ ಕಾರಣವಾಯಿತು. ಮತ್ತು ರಾಜಸೇವೆಗೆ ಅನುಕೂಲವಾಗುವ ಲೌಕಿಕ ವಿದ್ಯಾಭ್ಯಾಸದ ಯೋಗದಿಂದ ಸಂಸ್ಕೃತ ವಿದ್ಯಾಸಂಗ್ರಹಕ್ಕೆ ಸಹಾಯವಿಲ್ಲದೆ ಈವಿದ್ಯೆಯು ಅಂದರೆ ಸಂಸ್ಕೃತವಿದ್ಯೆಯು ಪ್ರಾಯಶಃ ನಮ್ಮಲ್ಲಿ ಕ್ಷಯವಾಯಿತು. ಅಯ್ಯೋ! ನಮ್ಮ ಈಜನರಮತಿಯು ಕೇವಲ ಸ್ಫಟಿಕದಂತೆ ಸ್ವಚ್ಛವಾದ್ದು, ಇವರು ವಿದ್ಯಾಪ್ರಸಾರದ ಮಾರ್ಗಪ್ರವೇಶಕ್ಕೆ ನಿರಾಶ್ರಯರಾದದರಿಂದಲೆ ವಿದ್ಯಾಹೀನತೆಯ ಪ್ರಾಬಲ್ಯಕ್ಕೆ ಕಾರಣವಲ್ಲದೆ ಕದಾಚಿತ್ ಆಶ್ರಯದೊರೆತು ಆರಂಭಿಸಿದ ವಿದ್ಯೆಯಲ್ಲಿ ಸಹ ಪ್ರವೀಣರಾಗುವದು ದುಸ್ತರವಾಗಿರುತದೆ. ಪ್ರಪಂಚದಲ್ಲಿ ಇದ್ದವನಿಗೆ ವಿದ್ಯಾಸಂಗ್ರಹಣದಲ್ಲಿ ಅಭಿರುಚಿಯಿರುವದಿಲ್ಲವು. ವಿದ್ಯೆಯನ್ನಾಶ್ರಯಿಸುವ ಇಚ್ಛೆಯುಳ್ಳವನು ಪ್ರಪಾನುಕೂಲತೆಯಿಲ್ಲದೆ ಬಳಲುವರು.

“ಮೈಸೂರು ಮಹಾರಾಜರಿಗೆ ವೈಸ್‌ರಾಯ್‌ಯವರನ್ನು ಕಂಡುಹೋಗುವಬಗ್ಗೆ ಮದರಾಸಿಗೆ ಹೋಗಲಿಕ್ಕೆ ಹಣವಿಲ್ಲದಿದ್ದರೂ ಕುದುರೇ ಜಾನವಾರುಬಗ್ಗೆ ಯಥೇಷ್ಟ ಹಣವುಂಟು” ಎಂದು ಮೊನ್ನೆ ದರ್ಬಾರ್ ಪ್ರಭುಗಳು ಮದರಾಸಿಗೆ ಬಂದಾಗ ಮೈಸೂರು ಮಹಾರಾಜರು ಅವರಭೇಟಿಗೆ ಹೋಗದ್ದರಿಂದ ಜನರು ಕುಕಿಸ ಆರಂಭಿಸಿದ್ದಾರೆ. ದರ್ಬಾರ್ ಪ್ರಭುಗಳು ಇಷ್ಟು ಹತ್ತಿರ ಬಂದಿದ್ದಾಗ್ಯೆ ಮಹಾರಾಜರು ಅವರನ್ನು ಕಾಣಿಸಿಕೊಳ್ಳದಿದ್ದದ್ದು ಸ್ವಲ್ಪ ವಿಲಕ್ಷಣವೇ ಸರಿ. ಆದ್ದರಿಂದ ಜನರಾದರೂ ಈ ಸಂಗತಿಯನ್ನು ತಮ್ಮತಮ್ಮೊಳಗೆ ಚರ್ಚಿಸುವದು ಸಹಜವೆ. ಮಹಾರಾಜರಂತಾದೊಡ್ಡಪುರುಷರ ಸವಾರಿಯುಹಿಂದುಕದೆಯಿಂದ ಇನ್ನೊಂದುಕಡೆಗೆ ತೆರಳುವದಂದರೆ ಸಾಧಾರಣ ಸಂಗತಿಯಲ್ಲ. ಸಾಮಾನ್ಯ ಜನರೋ! “ಜೋಗಿಎದ್ದರೆಒಬಾಸನಹೆಗಲಮೇಲೆ!” ಎಂಬಸಾಮತಿ ಮಹಾರಾಜರವಿಷಯದಲ್ಲಿ ಆಗಲಾರದು. ಮಹಾರಾಜರು ಸುತ್ತಮುತ್ತಲಿನ ಅನ್ಯಸಂಗತಿಗಳನ್ನು ವಿಚಾರ ಮಾಡಬೇಕಾಗುತ್ತದೆ. ಮತ್ತು ಅಂತಾ ಯೋಗ್ಯವಾದ ವಿಶೇಷಕಾರಣವಿದ್ದಲ್ಲಿ ಇಂತಾಸಂದರ್ಭವನ್ನು ದೂರಗೊಳಿಸಲು ವ್ಯಕ್ತರಾಗುತ್ತಿದ್ದಿಲ್ಲ. ಈ ವಿಶೇಷ ಕಾರಣವು ಯಾವದೆಂಬದು ಮಾತ್ರ ಮೈಸೂರು ಸರಕಾರದವರು ಬಹಿರಂಗಪಡಿಸಿದ ವಿನಹ ಜನರಿಗೆ ತಿಳಿಯುವದು ಹ್ಯಾಗೆ? ಮತ್ತು ಎಂದಿನವರಿಗೆ ಈ ನಿಜ ಕಾರಣವು ಜನರಿಗೆ ತಿಳಿಯಲಿಕ್ಕಿಲ್ಲವೊ ಅದುವರಿಗೆ ಜನರು ಅದನ್ನು ಹುಡಿಕಿತೆಗಿಯಲು ಪ್ರಯತ್ನಿಸುವದು ನ್ಯಾಯವು. ಈಗ ಜನರ ಊಹೆಯು ಮಾತ್ರ ಎಲ್ಲೆಲ್ಲಿಗೆ ಹೋದೀತು, ಮತ್ತು ಎಲ್ಲಿಗೆ ಕಡದೀತೆಂಬದು ನಾವು ಹೇಳಲಾರೆವು. ಕೆಲವರು ಅನ್ನುವದೇನಂದರೆ.—ಮಹಾರಾಜರು ಹಿಂದುಸ್ಥಾನ ಸರ್ಕಾರದವರಕಡೆ ಮಾಡಿದ ಕೆಲವು ಅರಿಕೆಗಳನ್ನು ಅವರು ಮಾನ್ಯಮಾಡದ್ದರಿಂದ ಮಹಾರಾಜರು ಬಹಳ ವ್ಯಸನದಲ್ಲಿರುತ್ತಾರಾದ ಕಾರಣ ಇವರು ಈಗ ದರ್ಬಾರ್ ಪ್ರಭುಗಳ ಭೇಟಿಗೆ ಹೋಗಲಿಲ್ಲ. ಇನ್ನೂ ಕೆಲವರು ಹೇಳುವದೇನಂದರೆ—ವೈಸ್‌ರಾಯ್‌ಯವರ ಭೇಟಿಗೆ ಬರತಕ್ಕ ನಿಜಾಮರು ಮುಂತಾದ ದೊಡ್ಡ ದೊಡ್ಡವರ ಮುಂದರಿಯಲ್ಲಿ ತಾವು ಹೋದರೆ ತಮ್ಮ ವರ್ಚಸ್ವದ ಕಡಮೆತನವನ್ನು ತಾವೇ ವಿಶೇಷ ತೋರಪಡಿಸಿಕೊಂಡಂತೆ ಆದೀತೆಂದು ಮನಸ್ಸಿನೊಳಗೆ ಹೆದರಿ ಹೋಗಲಿಲ್ಲ. ಇನ್ನೂ ಕೆಲವರು—ಮಹಾರಾಜರ ಜನ್ಮದಿನಸದ ಮಹೋತ್ಸವವೂ ಶಿವರಾತ್ರಿಯ ಮಹೋತ್ಸವವೂ ಇದೇ ಸಮಯಕ್ಕೆ ಬಂದದ್ದರಿಂದಲೂ ಇಂತಾಸಮಯದಲ್ಲಿ ಮಹಾರಾಜರ ಸವಾರಿಯು ಮೈಸೂರಲ್ಲಿ ಹಾಜರಿರುವದು ಆವಶ್ಯಕವಾಗಿರುವದರಿಂದಲೂ ಮಹಾರಾಜರು ಮದರಾಸಿಗೆ ಹೋಗದೆ ಬೆಂಗಳೂರಿನಿಂದ ನೆಟ್ಟಗೆ ಮೈಸೂರಿಗೆ ತೆರಳಬೇಕಾಯಿತು ಅನ್ನುವರು. ಈ ಪ್ರಕಾರ ಒಬ್ಬೊಬ್ಬರು ಒಂದೊಂದು ರೀತಿಯಿಂದ ಊಹೆಯನ್ನು ಕಟ್ಟುತಲಿದಾರೆ. ಈಗ ಇದರಲ್ಲಿ ಯಾವಕಾರಣವನ್ನು ಕುರಿತು ವಿಚಾರ ಮಾಡಿದರೂ ಅದರಲ್ಲಿ ಅಯೋಗ್ಯವಾದ ಒಂದು ಸಂಗತಿಯಾದರೂ ಕಾಣಬರಲಿಲ್ಲ. ತಮ್ಮ ರಾಜ್ಯಕ್ಕೆ ಬಂದ ಕಷ್ಟ ಸಮಯದಲ್ಲಿ ಸಂರಕ್ಷಣೆ ಮಾಡಬೇಕೆಂದು ಶರಣುಬಂದಾಗ ನಮ್ಮ ಸರ್ಕಾರದವರು ಸಹಾಯ ಮಾಡದೇ ಇದ್ದದ್ದು ನ್ಯಾಯವೋ! ಇದರ ಹೊರತು ಸಹಾಯ ಮಾಡುವವರ ಬದಲಿಗೆ ಇವರ ಸಂಕಟ ಸಮಯದಲ್ಲೇ, ಮೈಸೂರು ರಾಜ್ಯವು ತಮ್ಮ ಸ್ವಾಧೀನದಲ್ಲಿರುವಾಗ ತಮ್ಮ ಅಂತಾ ದುಂದುತನದಿಂದಲೇ ತಾವು ಆ ರಾಜ್ಯಕ್ಕೆ ಮಾಡಿದ ಸಾಲಕ್ಕೆ ವಿಶೇಷ ಆಗಾದೆಯನ್ನು ಹಚ್ಚಿ, ಮೈಸೂರು ರಾಜ್ಯಕ್ಕೆ ಶಾಶ್ವತ ಐಶ್ವರ್ಯಕ್ಕೆ ಮೂಲವಾದ ರೈಲ್ವೆ ಮಾರ್ಗವನ್ನು ಸಹ ಒಂದು ಯೂರೋಪಿಯನ್ ಕಂಪೆನಿಗೆ ಮಾರಹೇಳಿ, ಅದರ ಕ್ರಯದ ಹಣವನ್ನು ಅಲ್ಲಾಹಿದಾ ತಮ್ಮ ಬೊಕ್ಕಸದಲ್ಲಿ ಬರುವಂತೆ ಏರ್ಪಾಡುಮಾಡಲಿಕ್ಕೆ ಸಿದ್ಧವಾದ, ನಮ್ಮ ಇಂಗ್ಲಿಷ್ ರಾಜಕರ್ತರ ನೀತಿಯು ಆ ಬಡ ಮೈಸೂರು ಮಹಾರಾಜರಿಗೆ ಎಷ್ಟು ಮೆಚ್ಚಿಕೆ ಬರುದು! ಇದಲ್ಲದೆ ಮಹಾರಾಜರವರ ಖಾಸ್ ಖರ್ಚಿಗೆ ಕೊಡತಕ್ಕ ಹತ್ತುಲಕ್ಷ ರೂಪಾಯಿಗಳಿಂದಲೇ ಅವರು ತಮ್ಮ ಬಂಧು ಬಳಗದವರ ಖರ್ಚು, ತಮ್ಮ ಅರಮನೇ ಖರ್ಚು, ಖಾಸಗಿ ಪ್ರಯಾಣದ ಖರ್ಚು ಮುಂತಾದ ಸಕಲ ಖರ್ಚುಗಳನ್ನೂ ನಿರ್ವಹಿಸಿಕೊಳ್ಳಬೇಕಾಗುತ್ತದಂತೆ. ಇದರಿಂದ ಮಹಾರಾಜರ ಖಾಸಗಿ ಖರ್ಚು ಸಾಧಾರಣ ಗೃಹಸ್ಥರ ಖರ್ಚಿಗೆ ವಿಶೇಷ ಕಡಮೆಯಾಗಿರಲಾರದೆಂತ ಇಲ್ಲಿಯ ಒಂದಾನೊಂದು ಇಂಗ್ಲಿಷ್ ಪತ್ರದ ಬೆಂಗಳೂರು ವಾರ್ತಿಕನು ತಿಳಿಸುತ್ತಾನೆ. ಮಹಾರಾಜರು ಹೋಗದೆ ಇದ್ದದ್ದಕ್ಕೆ ಯಾವ ಕಾರಣವಿದ್ದರೂ, ಅವರು ಹೋಗದೇಯಿದ್ದದ್ದು ಉಚಿತವ್ವೋ ಅನುಚಿತವ್ವೋ ಎಂದು ಒಂದುಪ್ರಶ್ನೆ ಪ್ರಾಪ್ತವಾಗುತ್ತದೆ. ಇದಕ್ಕೆ ಸಮರ್ಪಕವಾದ ಉತ್ತರಕೊಡಬೇಕಾದರೆ, ಅನುಚಿತವಾಯಿತೆಂತಲೇ ನಾವು ಹೇಳಬೇಕಾಗಿದೆ. ಇದರಹೊರ್ತು ಈಗ ಮದರಾಸಿಗೆಹೋಗಿ ದರ್ಬಾರ್ ಪ್ರಭುಗಳ ಭೇಟಿಯನ್ನ ತೆಗದುಕೊಂಡಿದ್ದರೆ—ತಮ್ಮಕಷ್ಟಗಳನ್ನೆಲ್ಲ ಸ್ವತಃ ತಮ್ಮ ಬಾಯಿಯಿಂದಲೇ ಹೇಳಿಕೊಳ್ಳಬಹುದಾಗಿತ್ತು. ಮತ್ತು ಹಾಗೆಮಾಡಿದ್ದರೆ ಹಿಂದುಸ್ಥಾನ್ ಸರಕಾರದವರಕಡೆಯಿಂದಏನಾದರು ಸಹಾಯವನ್ನು ನಿರೀಕ್ಷಿಸಬಹುದಾಗಿತ್ತು. ಆದರೆ ಇಂತಾ ಅಪೂರ್ವಸಮಯವನ್ನು ಮಹಾರಾಜರು ಈಗ ತಾವಾಗಿ ಕಳಕೊಂಡಂತಾಯಿತು.

ಕನ್ನಡಸುವಾರ್ತೆ.

Bangalore.—Printed and published for the Proprietor, at the Karnatic Press.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಾಮವಿವಿಧಪ್ರವೃತ್ತ್ಯನಗಮಾರ್ತ್ಯ ಕರ್ಣಾಟಕಪ್ರಕಾಶನಪರಾಭಿದಾಪ್ರಥಿತಸಾಹಿತೀಲೋಪಿತಾ ॥ ಮೃಗ್ಯಾಂತಹಿತವಾಸನಿನಿಹಿತಮುದ್ರಣಾಸದ್ವನ್ನರ್ಬ್ರಿಕಾಸುಪರಿಪೂರಿತಾದಿಕತಿಮಾನಸಂಸುಮದಂ॥

Vol. XIII] | BANGALORE—MONDAY MARCH 29, 1886 | [No. 13.

ಸಂಪುಟ ೧೩.] | ಬೆಂಗಳೂರು:— ಸನ್ ೧೮೮೬ ನೇ ಇಸವಿ ಮಾರ್ಚಿ ೨೯ ನೇ ತಾರೀಖು ಸೋಮವಾರ. | [ಸಂಚಿಕೆ ೧೩.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲೀಷು ಮತ್ತು ಕನ್ನಡ [illegible] ವರುಷ ೧ಕ್ಕೆ ...	೧೨—೦—೦
ಇಂಗ್ಲೀಷುಬಲ್ಲ [illegible] ವರುಷ ೧ಕ್ಕೆ ...	೬—೦—೦
ಕನ್ನಡವನ್ನು [illegible] ವರುಷ ೧ಕ್ಕೆ ...	೬—೦—೦
[illegible] ೧ಕ್ಕೆ	೦—೮—೦

[illegible]

ಪ್ರಕಟನೆಯ ರಿವಾಜು.

ಹಿಂದಿನ ಪೇಟೆ ಫಾವಟ್ಟೆ	೧ಕ್ಕೆ	೦—೨—೦
ಮುಂದಿನ ಪೇಟೆ ಫಾವಟ್ಟೆ	೧ಕ್ಕೆ	೦—೧—೦

NOTICE TO SUBSCRIBERS

[illegible]

೧ [illegible]

೨ [illegible]

೩ [illegible]

೪ [illegible]

NOTICE.

VAIDYASARA SANGRAHA.

Price including Postage, Rs. 5 0 0

ವೈದ್ಯಸಾರ ಸಂಗ್ರಹ.

[illegible]

[illegible] ...	ರೂ॥ ೫—೦—೦
[illegible] ಮತ್ತು [illegible]	[illegible]

[illegible] ವೆಂಕಟಾಚಾರ್, ಅಸಿಸ್ಟೆಂಟ್, ಬೆಂಗಳೂರು

ನೋಟೀಸ್.

[illegible] ಕರ್ಣಾಟಕ ಪ್ರಕಾಶಿಕಾ [illegible]

ಕನ್ನಡ [illegible] ಗ್ರಂಥಗಳು.	
[illegible] ...	೧—೪—೦
[illegible] ...	೦—೧೨—೦
[illegible] (ಮತ್ತು [illegible]) ...	೦—೩—೦
[illegible] ...	೦—೫—೦
[illegible] ...	೦—೪—೦
[illegible] ...	೦—೧೪—೦
[illegible] ...	೦—೩—೦
[illegible] ...	೦—೨—೦
[illegible]	೫—೦—
ಕನ್ನಡ ಗ್ರಂಥಗಳು.	
[illegible] ...	೦—೭—[illegible]
[illegible] ...	೦—೪—೦
[illegible] ...	೦—೩—೮
[illegible] ...	೦—೨—೬
[illegible] ...	೦—೪—೦
[illegible] ...	೦—೨—೦
[illegible] ...	೦—೨—೬
[illegible] ...	೦—೭—೧
[illegible] ...	೧—೩—೦
[illegible] ...	೦—೨—
[illegible] ...	೦—೦—೩
[illegible]	೧—
[illegible] ...	೨—೦—೦
[illegible] ...	೦—೧೨—೦
[illegible] ...	೩—೪—೬
[illegible] ...	೩—೪—೬
[illegible]	
೧ [illegible] ...	೦—೮—೦
[illegible]	೦—೮—೦
[illegible] ...	೦—೮—೦
ಸಂಸ್ಕೃತ [illegible]	
[illegible] ...	೦—೫—೦
[illegible] ...	೦—೮—೦
[illegible] ...	೦—೨—೦
[illegible] ...	೦—೬—೦
[illegible] ...	೦—೩—೦
[illegible] ...	೦—೧—೦

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪನಿ.

ಜನರಲ್ ಕಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪನಿಯವರು, ಅವರಿಗೆ ಕೊಡಲ್ಪಡುವ ತಮ್ಮಾ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿತೆಗೆದುಕೊಳ್ಳಲ್ಪಡುವದು.

ನೋಟಿಸ್.

ಪ್ರಸವ ಕ್ಕಾಗಿಯೂ ಹೆಂಗಸರ ಮತ್ತು ಮಕ್ಕಳ ಚಿಕಿತ್ಸೆಯ ಬಗ್ಗೆಯೂ ಬೆಂಗಳೂರಲ್ಲಿ ಸ್ಥಾಪಿಸಲ್ಪಟ್ಟಿರುವ ಆಸ್ಪತ್ರೆಯಲ್ಲಿ ಸೂಲಗಿತ್ತಿ ಮತ್ತು ಚಿಜ ಪಾದಿ ಕೆಲಸಕ್ಕೆ ಗೌರವ್ಯಳಾದ ಉತ್ತಮ ಜಾತಿ ಹೆಂಗಸೊಬ್ಬಳು ಬೇಕಾಗಿದೆ.

ಮಾಹೆಯಾನಾ ಬಲಪ್ ೧೨ ರೂಪಾಯಿಗಳು.

ಅಪೇಕ್ಷೆ ಯುಳ್ಳವರು ಮೈಸೂರು ಗವರ್ನಮೆಂಟ ಸೀನಿಯರ್ ಸರ್ಜನ್ ಡಾಕ್ಟರ್ ಟಿ. ಜೆ. ಮೆಗ್ಗಾನ್ ಸಾಹೇಬರವರಿಗೆ ಬರೆದುಕೊಳ್ಳುವದು.

ಬೆಂಗಳೂರು,

೮ನೇ ಮಾರ್ಚಿ ೧೮೮೬.

ಪ್ರಕಟನೆ.

ಕರ್ಣಾಟಕ ಪ್ರಪನ್ನಾಮೃತವೆಂಬ ಶ್ರೀರಾಮಾನುಜಾಚಾರ್ಯರವರ ಚರಿತ್ರೆಯು.

ಇದರಲ್ಲಿ ದಿವ್ಯಸೂರಿಗಳ ಚರಿತ್ರೆಗಳೂ ಅದಗಿವೆ. ಈ ಪುಸ್ತಕವು ತಯಾರಾಗಿ ಬಕರಿಗೆ ಸಿದ್ಧವಾಗಿರುತ್ತೆ. ಇದರಕೂಡ ನಾಲ್ಕು ದಿವ್ಯದೇಶದ ಮತ್ತು ಯೆಲ್ಲಾ ಪೂರ್ವಾಚಾರ್ಯರುಗಳ ಚಿತ್ರಪಟ ಒಂದು ಸೇರಿಸಲ್ಪಟ್ಟಿರುತ್ತೆ. ಕಾಪಿಗಳು ಕೊಂಚವೇ ಇರುವದರಿಂದ ಜಾಗ್ರತೆಯಾಗಿಯೇ ತರಿಸಿಕೊಳ್ಳಬಹುದು. ಕ್ರಯವನ್ನು ಕೆಲವರ ಅಪೇಕ್ಷೆಯಂತೆ ಸದ್ಯಃ ಕಡಿಮ್ಮೆ ಮಾಡಿರುತ್ತೇನೆ.

ನಾನೆ ವಕ್ಕಲು [illegible] ಅಥವ ಅಪೇಕ್ಷಿಸ ದವರಿಗೆ	೧ ೦ ೦
ಅನಂತರ	೧ ೮ ೦
ಟಪಾಲ್‌ಖರ್ಚು ...	೧ — ೦

ಎಂ. ಪಿ. ರಾಮಯ್ಯಂಗಾರ್,

ಮ್ಯಾನೇಜರ್,

ಹಿಂದೂಮತಪ್ರಕಾಶಿಕಾ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MARCH 29, 1886.

೧೮೮೬ನೆ ಮಾರ್ಚಿ ೨೯ನೇ ತಾ॥ ಸೋಮವಾರ

[illegible]

IS VEGETARIANISM THE TRUE CAUSE OF OUR DEGENERACY?

ನಮ್ಮ ಪೂರ್ವಿಕರಿಗಿಂತ ನಾವು ಬಹುತರ ದುರ್ಬಲರಾಗಿಯೂ ನಿರ್ವೀರ್ಯರಾಗಿಯೂ ನಿಸ್ತೇಜಸ್ಕರಾಗಿಯೂ, ಸ್ಥೈರ್ಯ ಧೈರ್ಯ ಶೌರ್ಯ ಮೇಧಾದಿ ಗುಣ ಹೀನರಾಗಿಯೂ ಆಗಿರುವುದಕ್ಕೆ ಕಾರಣಗಳನ್ನು ನಾನಾ ವಿಧವಿಂ ನಾವು ಪರ್ಯಾಲೋಚಿಸುತಲೂ, ಅಂತಾ ನ್ಯೂನತೆಗಳಿಂದ ನಿವೃತ್ತರಾಗುವುದಕ್ಕೆ ತಕ್ಕ ಉಪಾಯಾಂತರಗಳಂ ಹುಡುಕುತಲೂ, ಇದ್ದಾಗ್ಯೂ ಉದ್ದಿಷ್ಟಾಂಶವು ಸಫಲವಾಗುವುದಕ್ಕಾಗಿ ಕದಾಚಿತ್ ಹಿಂತಿರುಗಲೂ ಇದೇವಯಷ್ಟೆ. ಏತದರ್ಥ ನಾವು ಈಗ್ಗೆ ಬಹುಕಾಲದಿಂದ ಅನುಭವಿಸುತಲಿರುವ ಶಾರೀರ ಮಾನಸಿಕ ಕ್ಲೇಶಗಳೆಲ್ಲವು ವ್ಯರ್ಥಗಳಾಗುವದಲ್ಲದೆ ಕ್ಷಾಮ್ಯವಾಯಿತು. ಈ ವಿಷಯವಾಗಿ ನಾವು ಇದುವರೆವಿಗೂ ಊಹಿಸಿದ್ದದೊಂದೂ ಕಾರಣವಲ್ಲದೇ ಹೋಯಿತು. ಮಾಡಲ್ಪಟ್ಟ ಪ್ರಯತ್ನಗಳೆಲ್ಲವೂ ಇನ್ನು ನಿಷ್ಪ್ರಯೋಜನಗಳಾಗಬೇಕಾದವು. ಯಾತಕ್ಕೆಂದರೆ, ಅವರ್ಯಾಪ್ತವಾದ ನೇಟಿವ್‌ರನು ದಾಯಕ್ಕೆ ಇದುವರೆವಿಗೂ ಸ್ಫುರಿಸದೇ ಇದ್ದ ನೂತನ ಕಾರಣ ವೊಂದು ಪಯೋನಿಯರ್ ಪತ್ರಿಕೆಯ ಬಾತಮೀದಾರನ ದಿವ್ಯ ಜ್ಞಾನದೊಳು ಕಂಡುಬರಲು, ಆತನು ಅದನ್ನು ಲೋಕಹಿತಾರ್ಥವಾಗಿ ಪಯೋನಿಯರ್ ಪತ್ರಿಕೆಯಲ್ಲಿ ಪ್ರಕಟಿಸಿದ್ದರಮೂಲ ಸ್ವಮ್ಮನಸ್ಸಿಯೊಳರ್ಪ ಅನೇಕ ಕೋಟಿ ಹಿಂದೂಗಳನ್ನು ಏಕಕಾಲವಲ್ಲಿ ಎಚ್ಚರಿಸಲಾರಂಭಿಸಿ ತಿಳಿಸುತ್ತಾನೇನೆಂದರೆ.

“ಪೂರ್ವ ಕಾಲವೊಳಿದ್ದ ಹಿಂದೂ ಗಳಗಿಂತ ಈಗಿನವರು ಬಹಳ ದುರ್ಬಲ ರಾಗಿಯೂ, ಅಲ್ಪ ಬುದ್ಧಿ ಯುಳ್ಳವರಾಗಿಯೂ, ಸ್ವಭಾವತಃ ಭೀರುಗಳಾಗಿಯೂ ಇದಾರೆಂಬ ಅಂಶವು ಈಗ ನಿರ್ವಿವಾದವಾದದ್ದಾಗಿ ಏರ್ಪಟ್ಟದರಿಂದ ಹಿಂದೂಗಳು ಸಹ ಅದನ್ನು ಧಾರಾಳವಾಗಿ ನಿಜವೆಂದೊಪ್ಪಿಕೊಳ್ಳುತಾರೆ. ಆರ್ಯರು ಪ್ರಥಮತಃ ಈ ಇಂಡ್ಯ ದೇಶಕ್ಕೆ ಬಂದ ಕಾಲವಲ್ಲಿ ಅವರು ಪಡೆದಿದ್ದ ದೇಹ ದಾರ್ಢ್ಯವೂ, ಬುದ್ಧಿ ಕುಶಲತೆಯೂ, ಸ್ಥೈರ್ಯ ಧೈರ್ಯ ಪರಾಕ್ರಮಗಳೂ, ಪ್ರಾಮಾಣಿಕತೆಯೂ ಅನ್ಯಾದೃಶಗಳಾಗಿದ್ದವು. ಅವರು ಬಹಳ ಮೇಧಾ ವಿಶೇಷ ವುಳ್ಳವರಾಗಿದ್ದರೆಂಬದನ್ನು ಅವರ ಪೂರ್ವಗ್ರಂಥಗಳೇ ಸೂಚಿಸುತಿವೆ. ಮತ್ತು ಅವರು ಕೇವಲ ಪಾಪ ಭೀರುಗಳಾಗಿದ್ದರೆಂಬದನ್ನು, ಬರೀಮಾತಿನ ನಂಬಿಕೆಯಮೇಲೆ ದ್ರವ್ಯಾದ್ಯುಪಯುಕ್ತ ಲಿಖಿತ ಮೂಲಕವಾದ ಆಧಾರಗಳೊಂದೂ ಯಿಲ್ಲದೆ ಲೇವಾದೇವಿ ಮಾಡುತಲಿದ್ದರೆಂಬದೂ, ಕದಾಚಿತ್ ಪತ್ರನೊದಲಾದವು ಬರೆದಲ್ಲಿ ಅವುಗಳಿಗೆ ಜಗತ್ಸಾಕ್ಷಿಯಾದ ಸೂರ್ಯ ಚಂದ್ರರನ್ನೇ ಸಾಕ್ಷಿತ್ವೇನ ಬರೆಯುತ ತಾವನ್ಯಾತ್ರದಂತದೇ ಬೀತಿಗೊಂದು ಧರ್ಮವಾಗಿ ನಡೆಯುತಲಿದ್ದರೆಂಬದೂ ಸೂಚಿಸದೆ ಯಿರಲಿಲ್ಲವು. ಇಂತಾ ಉತ್ತಮ ಸ್ಥಿತಿಯೊಳಿದ್ದ ಹಿಂದೂಗಳು, ಕ್ರಮೇಣ, ಒಂದು ಸಾವಿರ ವರುಷಗಳಿಂದೀಚೆಗೆ ಬಹುಮಂದಿ ಶತ್ರುರಾಜರ ನಿರಂಕುಶ ಪ್ರವೃತ್ತಿಯಿಂದ ಈ ಇಂಡ್ಯ ದೇಶವು ವಿಧ್ವಸ್ತಪ್ರಾಯವಾದ್ದಾದರು ಮೊದಲು ಸರ್ವಪ್ರಕಾರದಿಂದಲೂ ಬಿನ್ನಿಸಿ ಶೋಚನೀಯವಾದ ಪ್ರಕೃತಸ್ಥಿತಿಗೆ ಬಂದಿರುತ್ತಾರೆ. ಇಂತಾ ಸ್ಥಿತಿವಿಪರ್ಯಯಕ್ಕೆ ಆರ್ಯರು ಅಂಗೀಕರಿಸುತಲಿದ್ದ ಮಾಂಸಾಹಾರ ನಿವೃತ್ತಿಯೇ ಮುಖ್ಯಕಾರಣವಾಗಿರುತಿವೆ. ಬಹುಕಾಲದ ವರಕ ಆರ್ಯರೂ, ಅವರ ಉತ್ತರಕಾಲೀನರು ಸಹ ಮಾಂಸಭುಕ್ಕುಗಳಾಗಿದ್ದರೆಂದು ಮನು ಮುಂತಾದ ಗ್ರಂಥಗಳಿಂದ ಅರಿಯಬಹುದಾಗಿರುತಿವೆ. ಇವಲ್ಲದೆ ಬ್ರಾಹ್ಮಣರಾದವರು ಕೂಡ ವೈದಿಕ ಕರ್ಮೋದ್ದೇಶದಿಂದ ಮಾಂಸಭಕ್ಷಣ ಮಾಡುತಲಿದ್ದರೆಂದು ಸ್ಪಷ್ಟವಾಗಿ ತಿಳಿಯಬರುತಿದೆ. ಶಾಕವರ್ಗಗಳ್ಯಾವಾಗಲು ಅದು ವಿಶೇಷ ಸೇವಿಸತಕ್ಕ ಹಿಂದೂವಿನ ಪ್ರಾಣತ್ರಾಣ ಧಾರಕಗಳಾಗಿರುವವದರಿಂದ ಇಂಡ್ಯದೇಶೀಯರಿಗೆ ಸ್ಥಿತಿಗೆ ಅದೇ ಕಾರಣವಾಯಿತೆಂದು ನಿರ್ಧರಿಸಿ ತಿಳಿಸಬಹುದಾಗಿದೆ. ಪುರುಷನ ಶರೀರ ಮನೋ

ಕಾರ್ಯಗಳಿಗೂ, ಶುದ್ಧ ಅಥವಾ ಮಿಶ್ರ ಮಾಂಸಾಹಾರಕ್ಕೂ, ಕಾರ್ಯಕಾರಣ ರೂಪವಾದ ಒಂದು ಬಗೆ ಸಂಬಂಧ ನೆಲಗೊಂಡಿರುತಿದೆಂಬವನ್ನು ನಿದರ್ಶನಗಳೊಡನೆ ನಿರೂಪಿಸಬಹುದಾಗಿದೆ. ಮುಖ್ಯವಾಗಿ ಪೂರ್ವಸ್ಥಿತಿಯನ್ನಪೇಕ್ಷಿಸತಕ್ಕವರಿಗೆಲ್ಲ ಶಾಕಾಹಾರಕ್ಕಿಂತಲೂ ಮಾಂಸಾಹಾರವೇ ಅಪೇಕ್ಷಿತವಾದ್ದೆಂಬದು ವಗೈರೆ'

ಪಯೋನಿಯರ್ ಪತ್ರಿಕೆಯ ಬಾತಮೀದಾರನ ಲೇಖನವನ್ನು ಸಮಗ್ರವಾಗಿ ನಾವು ಓದಿ ನೋಡುವಲ್ಲಿ, ನೇಟಿವ್‌ಗಳು ತಮ್ಮ ಪ್ರಾರ್ಚೀನರಂತೆ ಆಗಬೇಕಾಗಿದ್ದರೆ ಪ್ರತಿ ನಿತ್ಯರೂ ಅಗಣಿತವಾದ ಗೋವಧೆಗಳನ್ನು ಅವಶ್ಯ ಮಾಡತಕ್ಕದ್ದೆಂಬ ಭಾವಾರ್ಥವು ದ್ಯೋತಿತವಾಗುತಿದೆ. ಪ್ರಾರ್ಚೀನರಿಗಿಂತಲೂ ಈಗಿನವರು ಸಕಲ ವಿಷಯಗಳಲ್ಲಿಯೂ ವ್ಯಾಸ್ತ್ಯರಾಗಿದಾರೆಂಬವನ್ನು ಯಾರೂ ನಿರಾಕರಿಸುವದಿಲ್ಲವು. ಪ್ರಾಚೀನದಲ್ಲಿ ಬಾಗಿಲುಗಳಿಗೆ ಹಿಂಬೂಗಳು ಬೀಗಗಳು ಹಾಕುತ್ತಲಿದ್ದಿಲ್ಲವೆಂತಲೂ, ಕೇವಲ ಮಾತಿನ ಖಾತರಿಯ ಮೇಲೆ ಸೂರ್ಯಚಂದ್ರರ ಸಾಕ್ಷ್ಯಾಧಾರದಿಂದ ಲೇವಾದೇವಿ ನಡೆಸುತ್ತಿದ್ದರೆಂತಲೂ ತಿಳಿಸಿದ್ದನ್ನು ಸಹ ನಿಜವೆಂದೇ ಹೇಳುವೆವು. ಪರಂತು ಇವು ಅತ್ಯಂತಿಕವಾಗಿ ಬದಲಾಯಿಸಲ್ಪಡುವದಕ್ಕೆ ಸರಿಯಾದ ಕಾರಣಮಾತ್ರ ತಿಳಿಸಲ್ಪಡಲಿಲ್ಲವು. ಪ್ರಾಚೀನದಲ್ಲಿ ಚಿಪ್ಸ ಮುಂತಾದ ಪೇಟೆಂಟ ಬೀಗಗಳಾಗಲಿ, ನೂರಾರು ರೂಪಾಯಿಗಳ ಕ್ರಯಗಳುಳ್ಳ ಕಬ್ಬಿಣದ ಪೆಟ್ಟಿಗೆಗಳಾಗಲಿ ಈ ದೇಶದಲ್ಲಿರಲಿಲ್ಲವು. ಇಂತಾ ಅನ್ಯದೇಶ ಪದಾರ್ಥಗಳು ಇಲ್ಲಿ ಬಹಳವಾಗಿ ಬರಲಿಕ್ಕೆ ಪ್ರಾರಂಭವಾದಮೇಲೆ ಅವುಗಳನ್ನು ಇಲ್ಲಿನವರು ವಿಶೇಷವಾಗಿ ಉಪಯೋಗಿಸಲಾರಂಭಿಸಿದರು. ಇಂತಾ ಬಂದೋಬಸ್ತುಗಳು ಎಷ್ಟೆಷ್ಟು ಬಲವಾಗುತ ಬಂದವೋ ಅಷ್ಟನ್ನೂ ಕಳವುಗಳು ಜಾಸ್ತಿಯಾಗಲಿಕ್ಕೆ ಕಾರಣವಾದವು ಮತ್ತು ಪ್ರಾಮಾಣಿಕತೆಯು ಲೋಪಕ್ಕೆ, ಕಾರಣಗಳಾದ ಕೋರ್ಟುಗಳ ಬಾಹುಳ್ಯವೂ, ದುರ್ವ್ಯವಹಾರಗಳನ್ನರಿಯದಿದ್ದರೂ ಜನಗಳಿಗೆ ಅದನ್ನು ವಿವಿಧೋಪಾಯದಿಂ ಬೋಧಿಸತಕ್ಕ ಕಸಬುದಾರರಾದ ಲಾಯರಿಗಳೇ ಬೇಕೆಂಬ ನಿಯಮವೂ, ಕೊಟ್ಟವನ ಲಸುಬನ್ನು ಕೊಡದೆ ಉಡಾಪೆ ಮಾಡಲಿಕ್ಕೆ ಸಹಕಾರಿಗಳಾದ ಲಿಮಿಟೇಶನ್ ಮತ್ತು ಇನ್ಸಾಲ್‌ವೆಂಟ ಆಕ್ಟುಗಳೂ, ಪ್ರಾಚೀನದಲ್ಲಿರಲಿಲ್ಲವಾದದರಿಂದ ಜನಗಳು ಪರಸ್ಪರ ಮಾತಿನೊಳು ನಂಬಿಕೆಯೂ, ಅದುಂ ವಿಶ್ವಾಸಘಾತಕತನವು ಪಾತಕಸಂಪಾದಕವೆಂಬ ಭೀತಿಯೂ ಪ್ರಬಲವಾಗಿದ್ದರು ಮೇಲೆ ಕಂಡ ಬಾತಮೀದಾರನ ಅಭಿಪ್ರಾಯದಂತೆ ಅನ್ಯರಾಜರ ಪ್ರವೇಶ ಪ್ರಾರಂಭವಾದದು ಮೊದಲು ಅವರಿಗೆ ಅಪರಿಚಿತಗಳಾದ ನ್ಯಾಯ ನಿಬಂಧನೆಗಳು ನೆಲಗೊಳ್ಳುತ ಬಂದದರಿಂದ ಇಂತಾ ಸೌಲಭ್ಯವನ್ನು ವ್ಯರ್ಥಗೊಳಿಸಬಾರದೆಂದು ತಿಳಿದು ಜನಗಳು ಮಾರ್ಗಾಂತರವನ್ನನುಸರಿಸಲಾರಂಭಿಸಿದರು. ಏತನ್ಮೇಲೆ ಕಂಡ ವಿಷಯಗಳಿಂದುಂಟಾದ ಸ್ಥಿತಿ ವಿಪರ್ಯಯಕ್ಕೆ ತಾವೇ ಕಾರಣರೆಂಬದನ್ನು ಪಯೋನಿಯರ್ ಪತ್ರಿಕೆಯ ಬಾತಮೀದಾರನು ತಿಳವಳಿಕೆಕೊಳ್ಳಬೇಕಾಗಿರುತಿದೆ.

ಮನುಷ್ಯನಿಗೆ ಪ್ರಾಯಶಃ ಪ್ರಾಪ್ತವಾಗತಕ್ಕ ಸುಗುಣ ದುರ್ಗುಣಗಳಿಗೆ ಅವನ ಪ್ರಕೃತಿಯೂ, ಅವನು ಸೇವಿಸತಕ್ಕ ಆಹಾರಗಳೂ, ವಾಸಮಾಡುವ ದೇಶವೂ, ಅಲ್ಲಿನ ವಾತೋದಕಾದಿಗಳೂ, ಅವನಿಗೆ ಲಭಿಸುವ ಜನಗಳ ಪರಿಚಯ ಸಾಹಚರ್ಯಗಳೂ, ಮುಖ್ಯ ಕಾರಣಗಳಾಗಿರುತಿವೆಂಬ ಅಭಿಪ್ರಾಯವನ್ನು ಪ್ರಾಯೇಣ ಯೆಲ್ಲರೂ ಅಂಗೀಕರಿಸಿರುತ್ತಾರೆ. ಸತ್ವ ರಜಸ್ತಮಸ್ಸುಗಳೆಂಬ ಗುಣತ್ರಯಗಳಲ್ಲೊಕಿ ಒಂದೊಂದು ಒಂದೊಂದು ಜಾತಿಯವರಿಗೆ ಆವಶ್ಯಕವೆಂದೇರ್ಪಟ್ಟದರಿಂದ ತದನುಗುಣಗಳಾದ ಆಹಾರ ವಿಹಾರಾದಿ ನಿಯಮಗಳನ್ನು ಪ್ರಾಚೀನರು ಏರ್ಪಡಿಸಿದರು, ಹ್ಯಾಗಂದರೆ,—ಐಹಿಕ ಭೋಗಭಾಗ್ಯಗಳನ್ನೆಲ್ಲ ತೊರೆದು ತಾಪಸ ವೃತ್ತಿಯನ್ನವಲಂಬಿಸಿ ಮುಕ್ತನಾಗಬೇಕಾದವನಿಗೆ ಸಾತ್ವಿಕ ಭಾವವೊಂದುವಿನಾ ಬೇರೊಂದೂ ಒಳ್ಳೆಯ ಫಲವನ್ನುಂಟುಮಾಡಲಾರದು. ಅಂತಾ ಸತ್ವಗುಣಾಭಿವೃದ್ಧಿಗೆ ಅನುಕೂಲಗಳಾದ ಆಹಾರ ವಿಹಾರ ಸಹವಾಸ ಸಲ್ಲಾಪಾದಿಗಳನ್ನು ಬಿಟ್ಟು ಸಾಕ್ಷಾದ್ವಿರುದ್ಧ ಸಲಕ್ಷಣಗಳಾದವನ್ನು ಪರಿಗ್ರಹಿಸಿದರೆ ಸದರೀಗುಣ ಪ್ರಾಪ್ತವಾಗಲಾರದು. ಇದೇರೀತಿ ರಜಸ್ತಮೋಗುಣಗಳೆಂಬ ಮಿಕ್ಕ ಎರಡರ ವಿಷಯದಲ್ಲಿ ಸಹ ಹೀಗೆಯೇ ಊಹಿಸಿಕೊಳ್ಳಬಹುದು. ಇಂತಾ ಗುಣಗಳು ಮನುಷ್ಯರಿಗೆ ಮಾತ್ರ ಪ್ರಾಪ್ತವಾಗತಕ್ಕದ್ದಲ್ಲವು. ಇವು ಸಾಮಾನ್ಯವಾಗಿ ಸಕಲಪ್ರಾಣಿ ನಿಯತವಾದವು, ಇದಕ್ಕೆ ದೃಷ್ಟಾಂತವಾಗಿ ಗತವಾರದ ಮುಂಬೈ ಕನ್ನಡ ಸುವಾರ್ತಾಪತ್ರಿಕೆಯಲ್ಲಿ ಕಂಡುಬಂದ ಒಂದು ವಿಷಯವನ್ನು ಇದರಡಿ ತಿಳಿಸುವೆವು.

"ಎಡ್ಮಂಡ ಎಂಬವರು ಒಂದಾನೊಂದು ಪತ್ರಿಕೆಗೆ ಬರಿಯುತ್ತಾರೇನಂದರೆ,—ತಮ್ಮ ಸಮೀಪದಲ್ಲಿರುವ ಸಿಕ್ಕವು ಮರಿಹಾಕಿದ ನೂರುದಿವಸಗಳಲ್ಲಿಯೇ ಮೊಲೆಯುಣ್ಣುವ ಮೂರುಮರಿಗಳನ್ನು ಬಿಟ್ಟುಸತ್ತುಹೋದದರಿಂದ ಅವುಗಳಿಗೆ ಹಾಲಿಲ್ಲದೆ ಆಪ್ಪಕಿ ಒಂದುಮರಿಯು ಸತ್ತುಹೋಯಿತು. ಉಳಿದ ಎರಡುಮರಿಗಳು ಸಾಯಲಿಕ್ಕಾದವು. ತನ್ನ ಚಾಕರನು ಒಂದು ಹೆಣ್ಣುನಾಯಿಯ ಕೈಯಿಂದ ಮೊಲೆಯುಣ್ಣಿಸುತಿದ್ದನು ಈಗ ಅವುಗಳು ತಮ್ಮ ಮಾಂಸಾಹಾರವನ್ನು ಮರೆತು ಕಾಯಿಪಲ್ಯ ವಗೈರೆ ಮುಲ್ಲಾಪದಾರ್ಥಗಳನ್ನೂ ಬಾಳೆಯನ್ನೂ ತೆಗದುಕೊಳ್ಳುತ್ತವೆ. ಮತ್ತು ತನ್ನ ಚಾಕರನ ಹುಡುಗಿಯಸಂಗಡ ನಾಯಿಯಂತೆ ಬೇಕಾದ ಕಡೆ ತಿರುಗಾಡುತಿವೆ"

ಇದರಿಂದ ನಾಯಿಯಹಾಲು ಸತ್ವಗುಣವುಳ್ಳದ್ದೆಂತಲೂ, ಅದು ನೈಜಗುಣವನ್ನು ಹೋಗಲಾಡಿಸಿ ಬೇರೆಗುಣವನ್ನುಂಟುಮಾಡತಕ್ಕದ್ದೆಂತಲೂ ಏರ್ಪಡುತಿದೆ. ಪ್ರಾಯಶಃ ನಾಯಿಯಮಾಂಸ ಸಹ ಸಮಾನಗುಣವುಳ್ಳದ್ದಾಗಿರಬಹುದು. ಇದೇನಿಯಮವು ಇತರ ಮೃಗಗಳ ವಿಷಯಗಳಲ್ಲಿ ಕೂಡ ಅನ್ವಯಿಸುವದರಿಂದ ಅವುಗಳನ್ನು ಸೇವಿಸತಕ್ಕವರಿಗೆ ತಾದೃಶಗುಣಗಳೇ ಪ್ರಾಪ್ತವಾಗುತಿವೆಂಬದು ಅನುಭವಸಿದ್ಧವಾದ ವಿಷಯವಾಗಿರುತಿದೆ. ಸತ್ವಾದಿಗುಣಗಳು ರಕ್ತ ಮಾಂಸ ತ್ವಕ್ಕು ಮಜ್ಜಾದಿಗಳೊಡನೆ ಪ್ರಾಪ್ತವಾಗುತಿವೆ. ಇವುಗಳ ಗುಣಗಳನ್ನನುಸರಿಸಿ ಮಂತ್ರ ಶಾಸ್ತ್ರಜ್ಞರು ಆಸನ ಪ್ರಭೇದಗಳಂ ಕಲ್ಪಿಸಿರುತ್ತಾರೆಂತೆಂದರೆ ಕೃಷ್ಣಮೃಗವು ಯಾವಾಗಲು ಸಾಧು ಸ್ವಭಾವವುಳ್ಳದಾದ್ದರಿಂದ ಅದರ ಸ್ವಾಭಾವಿಕ ಗುಣವು ಚರ್ಮಗತವಾಗಿರುವದಾದಕಾರಣ, ಅದನ್ನು ಆಸನತ್ವೇನ ಉಪಯೋಗಿಸಿಕೊಂಡಲ್ಲಿ ತದ್ಗುಣವು ಶರೀರದೊಳು ಪ್ರಾಬಲ್ಯವಂಹೊಂದಿ ತನ್ಮೂಲಕ ಜ್ಞಾನಕ್ಕೆ ವಿಕಾಸ ಪ್ರಾಪ್ತವಾಗುವದಲ್ಲದೆ ತ್ವರೆಯೊಳು ಮಂತ್ರಸಿದ್ಧಿಯುಂಟಾಗುವದು. ಹೀಗೆಯೇ ಒಂದೊಂದು ಮೃಗಚರ್ಮವನ್ನುಪಯೋಗಿಸುವದರಿಂದ ಒಂದುಬಗೆಯಾದ ಗುಣವುಂಟಾಗಿ ತದನುಸಾರವಾದ ಫಲವೇ ಮಂತ್ರಗಳಿಂದ ಉಂಟಾಗುವದೆಂದು ಪ್ರಾವೀಣರು ನಿರ್ಣಯಿಸುತ್ತಾರೆ.

ಮುಖ್ಯವಾಗಿ ಆಹಾರವೇ ಗುಣ ವಿಪರ್ಯಾಸಕ್ಕೆ ಕಾರಣವೆಂಬದನ್ನು ಪಯೋನಿಯರ್ ಪತ್ರಿಕೆಯ ಬಾತಮೀದಾರನು ಕೂಡ ಒಪ್ಪಿಕೊಳ್ಳುವದರಿಂದ ಇದು ನಿರ್ವಿವಾದವಾದದ್ದಾಗಿರುತಿದೆ. ಮನುಷ್ಯನಿಗೆ ಪ್ರಾಪ್ತವಾಗತಕ್ಕ ಸತ್ವ ರಜಸ್ತಮೋಗುಣಗಳಿಗೆ ಅವನು ಮಾಡತಕ್ಕ ವಿದ್ಯಾಭ್ಯಾಸವು ಸಹಕಾರಿಯಾಗಿರುವದಲ್ಲದೆ ಪ್ರತ್ಯೇಕಗುಣವನ್ನುಂಟು ಮಾಡತಕ್ಕ ಶಕ್ತಿಯು ಅದಕ್ಕೆ ಯಿಲ್ಲವೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಪರಂತು ಈ ವಿಷಯದಲ್ಲಿ ಭಿನ್ನಾಭಿಪ್ರಾಯಗಳುಂಟಾಗಿರುವದರಿಂದ ಈಸಂದರ್ಭದಲ್ಲಿ ನಮ್ಮ ತಾತ್ಪರ್ಯಕ್ಕಿಂತಲೂ, ಪ್ರಸಿದ್ಧರಾಗಿದ್ದ ಕೌಪರ್ ಯೆಂಬ ಇಂಗ್ಲಿಷ ಪಂಡಿತರು ಯಾವದೋ ಒಂದು ಸಂದರ್ಭದಲ್ಲಿ ತಿಳಿಸಿದ ಅಭಿಪ್ರಾಯವು ಗೌರವಿಸತಕ್ಕದ್ದಾಗಿಯೂ, ಪ್ರಕೃತ ಸಂದರ್ಭೋಚಿತವಾದ್ದಾಗಿಯೂ ಯಿರುವದರಿಂದ ಅದನ್ನಿದರಡಿ ಅನುವಾದ ಮಾಡುವೆವು. "ಮನುಷ್ಯನೆಷ್ಟು ವಿದ್ಯಾವಂತನೆನಿಸಿಕೊಂಡಿದ್ದರೂ, ಅವನಿಗೆ ಔದಾರ್ಯವೂ, ದೂರ ದೃಷ್ಟಿಯೂ, ಗೌರವ ಪುರಸ್ಕರಣವೂ, ಪ್ರಾಮಾಣಿಕಾನುಭವವೂ, ಸದ್ವರ್ತನಾಸಕ್ತಿಯೂ ಜಾಗರೂಕತೆಯೂ, ಉಪಾಯವೂ, ಪ್ರಾಮಾಣಿಕತೆಯೂ, ಸರಸತೆಯೂ, ಸ್ವಾಭಾವಿಕವಾಗಿ ಪ್ರಾಪ್ತವಾಗ ಬೇಕಾದವೇ ಹೊರತು ಉಪಾಧ್ಯಾಯರಿಂದ ಲಭಿಸತಕ್ಕದ್ದಲ್ಲವೆಂಬದಂ ನೀವು ಮರೆಯಬೇಡಿರಿ." ಎಂಬದು. ಇದರಿಂದ ವಿದ್ಯೆಗೆ ನೈಜಗುಣವಿಲ್ಲವೆಂದು ಸ್ಪಷ್ಟವಾಗುತಿದೆ.

ಜೈಮಿನಿ ಮಹರ್ಷಿಯು ಅವತರಿಸಿ ಕರ್ಮಬ್ರಹ್ಮವಾದವನ್ನು ಸ್ಥಾಪಿಸಿದ್ದರಿಂದ ಭಾಟ್ಟರು ಮಂಡನಮಿಶ್ರರು ಮುಂತಾದವರು ಅದನ್ನು ಪ್ರಚಾರದೊಳು ತರಲಾರಂಭಿಸಿದರು. ಉಪಕ್ರಮಾದಿ ಷಡ್ವಿಧ ಲಿಂಗಗಳಂ ಅವಮಾನುಕವಾದ ವೇದವಾಕ್ಯ ವಿಚಾರ ಪೂರ್ವಕ ಜ್ಯೋತಿಷ್ಟೋಮಾದಿ ಯಾಗ ಪ್ರಮುಖ ವಿಧಾನಕ್ರಮವನ್ನೂ, ಅದರಿಂದ ಮೋಕ್ಷಸಿದ್ಧಿಯನ್ನೂ ಜನಗಳಿಗೆ ಬಹುವಾಗಿ ಬೋಧಿಸಿದ್ದರಿಂದ ಅವರು ಕರ್ಮವೇ ಪ್ರಧಾನ್ಯವೆಂದೆಣಿಸಿ, ನಾನಾವಿಧ ಪಶುಗಳುಳ್ಳ ಕ್ರತುಗಳನ್ನು ಮಾಡ ತೊಡಗಿದರು. ಈ ಆಚಾರವು ಊರ್ಜಿತವಾದದರಿಂದ ಬಾಹು ಯುತ್ತಿದ್ದಲ್ಲಿ ಯಾಗ ರೂಪವಾಗಿ ಇಷ್ಟಷ್ಟು ಕಡೆಗೆ ಪಶುವಧೆಯು ಅಪರಿಮಿತ ವಾಯಿತು. ಈ ಕಾರಣದಿಂದ ಆಗ್ಯೆ ಜನಗಳಿಗೆ ಮಾಂಸಪ್ರಾಶನಕ್ಕೆ ಅವಕಾಶವು ಬಹಳವಾಗಿ ಪ್ರಾಪ್ತವಾಗಿತ್ತು. ತರುವಾಯ ಶ್ರೀಮಚ್ಛಂಕರಾಚಾರ್ಯರು ಅವತರಿಸಿ ಕರ್ಮಬ್ರಹ್ಮವಾದವನ್ನು ಶತತಃ ಖಂಡಿಸಿ ಅದ್ವೈತವನ್ನು ಸ್ಥಾಪಿಸಿದಮೇಲೆ ಕರ್ಮಪ್ರಾಧಾನ್ಯವು ಕಡಮೆಯಾಗುತಬಂದು. ಪರಂತು ಅಭಿಮತ ವಸ್ತುವನ್ನು ತೊರೆಯಲಿಕ್ಕೆ ಯಂತವರಿಗೂ ಸಾಧ್ಯವಲ್ಲವಾಗಿ, ತಮ್ಮ ಜಿಹ್ವಾಚಾಪಲ್ಯ ನಿವೃತ್ಯರ್ಥ ಕರ್ಮಗಳಿಗೆ ಬದಲಾಗಿ ದೇವತಾ ಸಂಪ್ರೀಣನೋದ್ದೇಶದಿಂ ಬಲಿಗಳನ್ನು ಕೊಡುವ ಆಚಾರವು ಕಲ್ಪಿಸಿಕೊಂಡರು. ಈ ಪ್ರಾಣಿಹಿಂಸೆಯು ಯೆಲ್ಲಿಗೂ ನಿಲ್ಲದೆ ಜನಗಳೆಲ್ಲರೂ ತಾಮಸರಾಗಿ ಹೋದದರಿಂದ ಪರಮಸತ್ವ ಗುಣನಿಧಿಯಾದ ಬುದ್ಧನು ಅವತರಿಸಿ, ಅಹಿಂಸಾದಿ ಪರಮ ಧರ್ಮಗಳನ್ನು ಜನಗಳಿಗೆ ಚನ್ನಾಗಿ ಬೋಧಿಸಿ, ಜೀವಹಿಂಸೆ ಮಾಡುವದನ್ನು ಪ್ರಾಯೇಣ ತಪ್ಪಿಸಿದರು. ಈಪದ್ಧತಿಯು ಕಡೆಗೆ ನಡಬರಿಯುತನಕ ವ್ಯಾಪಿಸಿತು. ಅಂದಿನ ದಂದರೆಯಾಗಿ ಅನುವರ್ತಿಸಿ ಬಂದ ಆಚಾರವನ್ನು ಹೋಗಲಾಡಿಸುವ ಬಗ್ಯೆ ಮಹಾನುಭಾವರಾದ ಬೌದ್ಧ ಶಂಕರಾಚಾರ್ಯ ಪ್ರಭೃತಿಗಳು ಪಟ್ಟಶ್ರಮವನ್ನೆಲ್ಲ ಈಗ ಭಸ್ಮಾಹುತಿಯಂತೆ ವ್ಯರ್ಥಗೊಳಿಸಬೇಕೆಂದು ಪಯೋನಿಯರ್ ಪತ್ರಿಕೆಯ ಬಾತಮೀದಾರನು ಅಪೇಕ್ಷಿಸುವದಕ್ಕಾಗಿ ಎಷ್ಟು ಆಶ್ಚರ್ಯಪಟ್ಟರೂ ತೀರದು. ಸಾವಿರಾರು ಸಂವತ್ಸರಗಳ ಹಿಂದೆ ನಿಂತುಹೋದ ಪದ್ಧತಿಯನ್ನು ಮರಳಿ ನೆಲಗೊಳಿಸುವದರಿಂದ ಯಾವ ವಿಧ ಪ್ರಯೋಜನವೂ ಪ್ರಾಪ್ತವಾಗಲಾರದು. ಮನುಷ್ಯನಿಗೆ ಮಾಂಸಾಹಾರವು ದೂಷ್ಯವಾದ್ದೆಂತಲೂ, ಬಹುವಿಧದುರ್ಗುಣಾಸ್ಪದವಾದದ್ದೆಂತಲೂ, ಬಹುಮಂದಿಯೂರೋಪಿಯನ್‌ಗಳು ಭಾವಿಸಿ ಅದನ್ನೊಬ್ಬೊಬ್ಬರಾಗಿ ಬಿಡಲಾರಂಭಿಸಿದಾರೆ. ಮಾಂಸ ಭಕ್ಷಣದಿಂದ ಸ್ವಾಭಾವಿಕವಾದ ಭೂತದಯಾದಾಕ್ಷಿಣ್ಯಾದಿ ಗುಣಗಳೆಲ್ಲ ಹೋಗುತಿದೆಂದು ಇಂಗ್ಲಿಷ ವೈದ್ಯಶಾಸ್ತ್ರಜ್ಞರೊಬ್ಬರು ಅನೇಕ ನಿದರ್ಶನಗಳೊಡನೆ ತಿಳಿಸಿರುತ್ತಾರೆ. "ಮಾಂಸಂ ಮಾಂಸೇನವರ್ಧತೇ" ಎಂದು ಮಾಂಸಾಹಾರವು ಪುಷ್ಟಿಕರವಾದ್ದಾಗಿರಬಹುದು. ಆದರೆ ತತ್ಸಮಾನ ಗುಣವುಳ್ಳ ಬೇರೆ ಒಂದು ಪದಾರ್ಥ ಲಭಿಸದಿದ್ದರೆ ಆಗ ಒಂದುವೇಳೆ ಅದನ್ನು ಗತಿಯಿಲ್ಲದೆ ಅಂಗೀಕರಿಸಬೇಕಾಗಿರುತಿದೆ. ಅಂತಾ ಸಂದರ್ಭಗಳಲ್ಲಿಯೂ ಅದರಲ್ಲಿ ಗುಣಾಂಶಕ್ಕಿಂತ ದುರ್ಗುಣವೇ ಅಧಿಕವಾಗಿರುವಂತೆ ಕಂಡುಬಂದರೆ ಅದನ್ನು ಶುದ್ಧಾಂಗವಾಗಿ ತ್ಯಜಿಸತಕ್ಕದ್ದು ವಿವೇಕಿಗಳ ಧರ್ಮವಾಗಿರುತಿದೆ. ಹಾಗಿಲ್ಲದ ಪಕ್ಷಕ್ಕೆ ಮನುಷ್ಯನಬಾಳು ಕಕ್ಕೇಕಾಯಿ ತಿಂದ ನರಿಯಗತಿಯಂತೆ ಆಗುವದು. ಶಾಕವರ್ಗದಲ್ಲಿ ಮಾಂಸಕ್ಕಿಂತಲೂ ಪುಷ್ಟಿಕರವಾದ್ದಾಗಿಯೂ, ರುಚಿಕರವಾದ್ದಾಗಿಯೂ, ಆರೋಗ್ಯಕರವಾದ್ದಾಗಿಯೂ, ಇರುವ ಪದಾರ್ಥಗಳು ಬಹಳ ಇರುತಿವೆ. ಮೊಸಲಾ ಪಕ್ವವಾದ ಕುರಿಯ ಮಾಂಸವು ಉದರದಲ್ಲಿ ಪಚನವಾಗಲಿಕ್ಕೆ ೩ ಘಂಟೆಯಕಾಲ ಹಿಡಿದರೆ ಉರಳಗೆಡ್ಡೆಯು ಜೀರ್ಣವಾಗಲಿಕ್ಕೆ ೨|| ಘಂಟೆಯ ಕಾಲ ಹಿಡಿಯುತಿದೆ. ಬದಸೂರ್ತ ಹಂದಿಯ ಮಾಂಸಕ್ಕೆ ೩| ಘಂಟೆಯಕಾಲ ಬೇಕಾದರೆ ಇದಕ್ಕೆ ೧೫ ನಿಮಿಷಗಳು ಜಾಸ್ತೀ ಹಿಡಿಯುತಿದೆ ಇದರಿಂದ ಮರಿ ಕುರಿಯ ಮಾಂಸಗಳಿಗಿಂತಲೂ ನಾವು ಬಳಸುವ ಉರಳಗೆಡ್ಡೆಗೆ ಜೀರ್ಣಕಾಲವು ಅಧಿಕವಾಗಿ ಬೇಕೆಂದು ಏರ್ಪಟ್ಟಿತು. ಹೀಗೆಯೇ ಗೋಧಿ, ತುಪ್ಪ, ಹಾಲು, ಅವರೆ, ತೊಗರಿ, ಉದ್ದು ಮುಂತಾದವುಗಳೆಲ್ಲ ಜೀರ್ಣಿಸಬೇಕಾದರೆ ಮೂರು ನಾಲ್ಕು ಘಂಟೆಗಳ ಕಾಲ ಬೇಕಾಗಿರುತಿದೆ ಗುಣಗಳಲ್ಲಿ ಇವುಗಳೊಂದೂ ಮಾಂಸಗಳಿಗೆ ಕಡಮೆಯಾಗಿರಲಾರವು. ಇಂತಾ ಪದಾರ್ಥಗಳನ್ನೆಲ್ಲ ಬಿಟ್ಟು ಪ್ರಾಣಿಹಿಂಸಕವಾಗಿಯೂ, ಬಹುವಿಧ ರೋಗಾಸ್ಪದವಾಗಿಯೂ, ಅನೇಕ ದುರ್ಗುಣೋತ್ಪಾದಕತಾ ಶಕ್ತಿಯುಳ್ಳದ್ದಾಗಿಯೂ ಇರುವ ಅತಿಹೇಯವಾದ ಮಾಂಸಾಹಾರವನ್ನು ಬಿಟ್ಟದ್ದರಿಂದಲೇ ನಮ್ಮ ವೀರ್ಯಶೌರ್ಯ ಸ್ಥೈರ್ಯಸಾಹಸಾದಿಗುಣಗಳೆಲ್ಲವೂ ಕ್ಷಯಿಸಿಹೋದವೆಂದು ಹೇಳುವದು ಕೇವಲ ಹಾಸ್ಯಾಸ್ಪದವಾಗಿರುತಿದೆ. ಮುಖ್ಯವಾಗಿ ನಾವು ಇಲ್ಲಿ ತಿಳಿಸುವದೇನಂದರೆ,—ನಮ್ಮ ಸ್ಥಿತಿಯು ಬದಲಾಯಿಸಲ್ಪಟ್ಟಿತೆಂಬದು ನಿಜವು ಪರಂತು ಅದಕ್ಕೆ ಆಹಾರವು ಕಾರಣವಾಗಲಾರದು. ಪ್ರಕೃತಸ್ಥಿತಿಯಿಂದ ತಪ್ಪಿಸಿಕೊಳ್ಳಬೇಕಾದ್ದು ಸದರೀ ಬಾತಮೀದಾರನ ಅಭಿಪ್ರಾಯದಂತೆ ನಮಗೆ ಪ್ರಥಮಕರ್ತವ್ಯವಾಗಿರುವದರಿಂದ ನಮ್ಮ ದೇಶೀಯರೆಲ್ಲರೂ ಅದರ ಮೂಲಕಾರಣವನ್ನು ಪರ್ಯಾಲೋಚಿಸಿ ಕಂಡುಹಿಡಿದು ಅದಕ್ಕೆ ತಕ್ಕ ಪ್ರತಿಕ್ರಿಯೆಯನ್ನು ಮಾಡಿ ಆರ್ಯರು ಶಪರೆಂಬ ಕೀರ್ತಿ ಪ್ರತಿಷ್ಠೆಗಳನ್ನು ಕಾಪಾಡಿಕೊಳ್ಳಬೇಕೆಂದು ಕೋರುವೆವು

Occasional Notes
ನೈಮಿತ್ತಿಕವಿಷಯನ್ಯಾಸ

A donation.—ಇಂದ್ಯವೇದವ ಹೊಗಸರಿಗೆ ಸಜಾತೀಯರಾದ ಸ್ತ್ರೀಯರಮೂಲಕ ಚಿಕಿತ್ಸೆಯಂ ಮಾಡಿಸುವದಕ್ಕಾಗಿ ಲಾರ್ಡ ಡಫರಿನ್‌ಸಾಹಬರವರ ಭಾರ್ಯೆಯವರಿಂದ ಏರ್ಪಡಿಸಲ್ಪಟ್ಟಿರುವ ಫಂಡಿಗೆ, ಜೋಧಾಪೂರ ಸಂಸ್ಥಾನದ ದೀಗಂಬರವರು ಇದುವರಿವಿಗೂ ಕೊಟ್ಟ ಸಹಾಯದ್ರವ್ಯವಲ್ಲದೆ ಮರಳಿ ೧೨,೦೦೦ ರೂಪಾಯಿಗಳು ಕೊಟ್ಟರೆಂದು ಕೇಳುತ್ತೇವೆ.

A third widow marriage.—ಅಮೃತಸರದಲ್ಲಿ ಇದುವರಿವಿಗೆ ಜರಿಗಿದ ಎರಡು ವಿಧವಾ ವಿವಾಹಗಳಲ್ಲದೆ ಮಾಹೇಮಜಕೂರು ೧೫ನೇ ತಾರೀಖಿನಲ್ಲಿ ಮೂರನೆಯದೊಂದು ಸಹ ನಡೆಯಿತೆಂತಲೂ, ಹದಿನಾರುವರುಷಗಳ ವಯಸ್ಸುಳ್ಳ ಯಶೋದೆಯೆಂಬ ಬಾಲವಿಧವೆಯನ್ನು ಭಾರ್ಯಾವಿಹೀನನಾಗಿದ್ದ ಭಗವಾನ್‌ದಾಸ್ ಎಂಬಾತನು ವಿವಾಹ ಮಾಡಿಕೊಂಡನೆಂತಲೂ, ಭರ್ತೃಭಾರ್ಯೆಗಳಿಬ್ಬರೂ ಬ್ರಾಹ್ಮಣರೆಂತಲೂ ತಿಳಿಯಬರುತಿದೆ ಅಭಿಮತಾವಶ್ಯಕತೆಗಳೇರಪಡದ್ದಲ್ಲಿ ಯಾವದು ತಾನೇ ನಡೆಯದೇನಿಲ್ಲವಬು.

The Gaekwars brother.—ಬರೋಡೆಯ ಮಹಾರಾಜರವರಸಹೋದರರಾದ ಶ್ರೀಮಂತಸಂಪತರಾಯರವರು, ಇನ್ನು ಮೂರುಸಂವತ್ಸರಗಳಕಾಲ ಇಂಗ್ಲಾಂಡಿನಲ್ಲಿ ಓದಬೇಕೆಂಬ ಉದ್ದೇಶದೊಡನೆ ಮಾಹೇ ಮಜಕೂರ್ ೩೦ನೇ ತಾರೀಖ್ ಮಂಗಳವಾರದ ದಿನ ರಾತ್ರಿ ಬರೋಡೆ ಯಿಂದ ಮುಂಬೈ ಮಾರ್ಗವಾಗಿ ಇಂಗ್ಲಾಂಡಿಗೆ ಪ್ರಯಾಣವಾದರೆಂದು ತಿಳಿಯ ಬರುತಿದೆ ಈ ಪ್ರಕಾರ ರಾಜ ಬಂಧುಗಳು ಪ್ರವರ್ಧಮಾನರಾಗಿ ಸಮರ್ಥರೆನಿಸಿಕೊಂಡರೆ ತಮ್ಮ ಅರಸರಿಗೆ ರಾಜ್ಯದ ಆಳ್ವಿಕೆಯಲ್ಲಿ ಸಹಾಯಕರಾಗಿರಲಿಕ್ಕೆ ಅನುಕೂಲವಾಗಿರುವದು.

Greece and war.—ಗ್ರೀಸ್‌ದೇಶದಲ್ಲಿ ಜನಗಳಿಗೆ ಯುದ್ಧಸಂಬಂಧವಾದ ಆವೇಗವು ಇನ್ನೂ ಅಭಿವೃದ್ಧಿಯನ್ನೈದುತಲಿದೆಯೇಹೊರತು ಉಪಶಮಿಸಲಿಲ್ಲವು. ಗವರ್ನ್‌ಮೆಂಟಿನವರು ಅನವರತ ಯುದ್ಧಸನ್ನಾಹಗಳನ್ನು ಮಾಡುತಲಿದ್ದಾರೆಂದು ಕೇಳಲಾದೆವು.

A medical Hall.—ಮದರಾಸಿನಲ್ಲಿರುವ ವೈದ್ಯರ ಮತ್ತು ಶಸ್ತ್ರಚಿಕಿತ್ಸಕರ ಕಾಲೇಜ್‌ಗಳಿಗೆ ಸೇರಿದಂತೆ ಕಟ್ಟಬೇಕೆಂದು ಉದ್ದೇಶಿಸಲ್ಪಟ್ಟದ್ದ ಮೆಡಿಕಲ್‌ಹಾಲ್ ಎಂಬ ಒಂದು ಹೊಸ ಕಟ್ಟಡದ ಕಾಮಗಾರಿಯು ಮಾಹೇ ಮಜಕೂರ್ ೩ನೇ ತಾರೀಖಿನದಿನ ಶ್ರೀಮನ್ ಮಹಾರಾಜ್ಞೀಯವರಿಂದ ಉಪಕ್ರಮಿಸಲ್ಪಟ್ಟಿತು.

An annual report to Hyderabad.—ಹೈದರಾಬಾದ್ ಸಂಸ್ಥಾನದಲ್ಲಿ, ಎಡ್ಮಿನಿಸ್ಟ್ರೇಷನ್ ರಿಪೋರ್ಟನ್ನು ತಯಾರು ಮಾಡಬೇಕೆಂಬ ಪ್ರಯತ್ನವು ಈಗ್ಯೆ ಹನ್ನೆರಡು ವರುಷಗಳಕಾಲವಾಗಿ ನಡೆಯುತ್ತಲಿದ್ದರೂ, ಇದುವರೆವಿಗೆ ಅದು ನೆರವೇರಲಿಲ್ಲವು. ಈಗ ಅದು ಸಿದ್ಧವಾಗಿ ಪ್ರೆಸ್ಸಿಗೆ ಕಳುಹಿಸಲ್ಪಟ್ಟು ಅಚ್ಚುಹಾಕಲ್ಪಡುತಲಿರುವುದಾಗಿ ಹೈದರಾಬಾದ್ ಪತ್ರಿಕೆಯೊಂದು ತಿಳಿಸುತಿದೆ.

Duchess of Connaught's accouchement.—ಮಾಹೇ ಮಜಕೂರ್ ೧೮ನೇ ತಾರೀಖು ಗುರುವಾರದದಿನ ಬೆಳಗ್ಗೆ ಶ್ರೀಮನ್ಮಹಾರಾಜ್ಞೀಯವರ ಪುತ್ರರಾದ ಡ್ಯೂಕ್ ಆಫ್ ಕಾನ್ ಟ್ ಅವರಿಗೆ ಹೆಣ್ಣುಮಗು ಹುಟ್ಟಿತೆಂದು ಇಂಗ್ಲಾಂಡಿನಿಂದ ಕೇಬಲ್‌ಮೂಲಕ ಬಂದ ವರ್ತಮಾನವು ನಮಗೆ ಅತ್ಯಾನಂದವನ್ನುಂಟುಮಾಡಿತು. ತಾಯಿಯೂ ಮಗುವು ಸಹ ಈಗ ಕ್ಷೇಮವಾಗಿದ್ದಾರೆಂದು ತಿಳಿಯಬರುತಿದೆ.

Graduates' Association at Bombay.—ಮುಂಬೈ ಯೂನಿವರ್ಸಿಟಿಗೆ ಸೇರಿದ ಬಹುಮಂದಿ ಗ್ರಾಜ್ಯುಯೇಟುಗಳು ಬಿ. ಎ., ಎಂ. ಎ. ಮೊದಲಾದ ಪರೀಕ್ಷೆಗಳಲ್ಲಿ ತೇರ್ಗಡೆಯಾದವರೆಲ್ಲರೂ ಸೇರಿ, ಸಂದರ್ಭವುಂಟಾದಾಗ ತಮ್ಮ ಅಪೇಕ್ಷಿತಾಂಶಗಳನ್ನು ಕ್ರಮವಾದ ಅಧಿಕಾರಿಗಳಿಗೆ ತಿಳಿಸಿ ದೇಶಾನುಗುಣಗಳಾದ ಪ್ರಯೋಜನಗಳನ್ನು ಪಡೆಯಲಿಕ್ಕೆ ಅನುಕೂಲಿಸುವಂತೆ ಒಂದು ಸಮಾಜವನ್ನೇರ್ಪಡಿಸಿರುತ್ತಾರೆಂದು ಕೇಳುತ್ತೇವೆ.

Prime Minister of Cashmere.—ಕಾಶ್ಮೀರ್ ಸಂಸ್ಥಾನದ ದಿವಾನರಾದ ಮ|| ಅನಂತರಾಂ ಎಂಬವರು ಕಾಯಿಲೆ ನಿಮಿತ್ತ ತಮ್ಮ ಕೆಲಸವನ್ನು ಬಿಟ್ಟು ವಿಶ್ರಾಂತಿಗಾಗಿ ಬಂದದರಿಂದ ಅವರ ಸ್ಥಾನದಲ್ಲಿ ಮ|| ಗೋವಿಂದಶಾ ಎಂಬವರು ನೇಮಕರಾಗಿದ್ದರು. ಈ ದಿವಾನ್‌ಗಿರಿಗೆ ಲಚ್ಮಣದಾಸ್, ನೀಲಂಬರಮುಕರ್ಜಿ ಎಂಬ ಇಬ್ಬರು ಹಕ್ಕುದಾರರಿರುತ್ತಾರೆ. ಪರಂತು ಈಗ ಹೊಸದಾಗಿ ನೇಮಕರಾದ ಮಂತ್ರಿಯವರು ಸಂಸ್ಥಾನದಲ್ಲಿ ಇದುವರೆವಿಗೆ ದೊಡ್ಡ ನೌಕರಿಗಳಲ್ಲಿದ್ದವರಾಗಿಯೂ, ಉಚಿತನೆಂದು ಮನ್ನಿಸಲ್ಪಟ್ಟ ಹಿರಿಯರುಗಳನ್ನೆಲ್ಲ ಪ್ರೋತ್ಸಾಹಿಸತಕ್ಕವರಾಗಿಯೂ ಇರುವದರಿಂದಲೇ ಅವರನ್ನು ಮಹಾರಾಜರವರು ಪ್ರಧಾನ್ಯೇನ ಆರಿಸಿ ನೇಮಕರಾಗ್ಮಾಡಿದರು. ಮ|| ಗೋವಿಂದಶಾ ಯವರು ಸಾಯೆಬ್ ದಿವಾನ್ ಕಿರಪರಾಮ್ ಎಂಬವರ ಸಂತತಿಯವರಾಗಿರುವುದಾಗಿ ತಿಳಿಯಬರುತಿದೆ.

H. H. the Maharaja of Indore.—ಇಂದೂರ್ ಸಂಸ್ಥಾನದ ಮಹಾರಾಜರಾದ ಹೋಲ್ಕರವರಿಗೆ ಅನಾರೋಗ್ಯ ಉಂಟಾಗಿ ಸ್ವಲ್ಪಕಾಲದ ಹಿಂದೆ ಚಾವಾಹಿ ಎಂಬ ಪ್ರದೇಶಕ್ಕೆ ಹೋಗಿದ್ದರಷ್ಟೆ. ಅಲ್ಲಿ ವಾಯುಬದಲಾವಣೆ ಆಗಿ ಪರದೇಶೀಯನಾದ ಸನ್ಯಾಸಿಯೊಬ್ಬನು ಕೊಟ್ಟ ಔಷಧಬಲದಿಂದ ಮಹಾರಾಜರಿಗೆ ಬಹಳಮಟ್ಟಿಗೆ ಗುಣವಾಗಿ ಅವರು ಪೂರ್ವಾಪೇಕ್ಷಯಾ ವಿಶೇಷ ಆರೋಗ್ಯದೊಡನೆ ರಾಜಧಾನಿಗೆ ವಾಪಸ್ ಬಂದರೆಂದು ಕೇಳುತ್ತೇವೆ. ಅಲ್ಲಿನ ಬ್ರಿಟಿಷ್ ರೆಸಿಡೆಂಟರಾದ ಸರ್. ಲೆಪಲ್ ಗ್ರಿಫಿನ್‌ಯವರು ಸಹ ಬಹುದೂರದೇಶ ಸಂಚಾರಮಾಡಿಕೊಂಡು ವಾಪಸ್ ಬಂದರು. ಇಂದೂರ್ ಷಹರಿನಲ್ಲಿರುವ ಮುಖ್ಯ ಸಾಹುಕಾರರ ಮೇಲೆ ಮಹಾರಾಜರು ತಂದಿದ್ದ ಮೊಕದ್ದಮೆಯು, ಮುಂದಿನವಿಚಾರಣೆಯು ಮಾಹೇ ಮಜಕೂರ್ ೩ನೇ ತಾರೀಖ್ ಗುರುವಾರದದಿನ ನಡೆಯತಕ್ಕದ್ದೆಂದು ಏರ್ಪಾಡಾಗಿತ್ತು.

An agricultural association.—ಗತ ಸೋಮವಾರದದಿನ ಸಾಯಂಕಾಲ ಮದರಾಸ್ ಕಾಸ್ಮಾಪಾಲಿಟನ್ ಕ್ಲಬ್ಬಿನಲ್ಲಿ ಗೌರವ್ಯರಾದ ಅಲ್ಲಿನ ಬಹುಮಂದಿ ನೇಟಿವ್ ದೊಡ್ಡಮನುಷ್ಯರು ಸಭೆ ಸೇರಿದ್ದರು. ಮದರಾಸ್ ಷಹರಿನಲ್ಲಿಯೂ ಅದಕ್ಕೆ ಸೇರಿದ ಡಿಸ್ಟ್ರಿಕ್ಟ್ ಜಾಗಾಗಳಲ್ಲಿಯು ಸಹ ಅಗ್ರಿಕಲ್ಚರಲ್ ಅಸೋಸಿಯೇಷನ್ ಎಂಬ ಸಮಾಜವನ್ನು ಏರ್ಪಡಿಸಬೇಕೆಂಬದೆ ಸದರೀ ಸಭೆಯ ಮುಖ್ಯೋದ್ದೇಶವಾಗಿರುತಿದೆ. ಆ ಕಾಲದಲ್ಲಿ ಆನರಬಲ್ ಸುಬ್ರಹ್ಮಣ್ಯ ಅಯ್ಯರವರು, ಮ|| ರಾ|| ಗಣಾದ ಭಾಷ್ಯ ಅಯ್ಯಂಗಾರ್ರವರು, ರಾಮಸ್ವಾಮಿ ಮೊದಲಿಯಾರ್ರವರು, ಚೆಂಚಲರಾಯರವರು ಮೊದಲಾದ ಅನೇಕಜನ ದೊಡ್ಡಮನುಷ್ಯರು ಹಾಜರಿದ್ದರು. ಮ|| ಪಿ. ರಂಗಯ್ಯನಾಯಕರವರು ಈಗಿನ ವ್ಯವಸಾಯಕ್ರಮದೊಳಿರುವ ಬಹುವಿಧ ದೋಷಗಳನ್ನು ತಿಳಿಸಿ ಅವನ್ನು ಪರಿಹರಿಸಲಿಕ್ಕೆ ಆವಶ್ಯಕಗಳಾದ ಕೆಲವು ಸುಲಭ ಸಾಧನಗಳನ್ನು ಸಭಿಕರಿಗೆ ಅರುಹಿದರು. ಅಗ್ರಿಕಲ್ಚರಲ್ ಕಾಲೇಜಿಗೆ ಸೇರಿದ ಮ|| ಸ್ವಾಮಿಅಯ್ಯಂಗಾರ್ ಎಂಬವರು ವ್ಯವಸಾಯ ವಿಷಯವಾಗಿ ವಿಚಾರ ಮಾಡಿದಮೇಲೆ ಈಗ ಹಿಂದೂದೇಶದ ಕೃಷಿ ಪರಿಷ್ಕರಣಕ್ಕೆ ಆವಶ್ಯಕಗಳಾಗಿರುವ ಯೋಜನೆಗಳನ್ನು ಪರ್ಯಾಲೋಚಿಸಿ ಜನಗಳಿಗೆ ತಿಳಿಸತಕ್ಕಬಗ್ಗೆ ತತ್ಕಾಲದಲ್ಲಿ ಸಮಾಜ ಒಂದು ಅಪೇಕ್ಷಿತವಾಗಿರುವದರಿಂದ ಅದನ್ನೇರ್ಪಡಿಸಬೇಕೆಂದು ಮ|| ರಂಗನಾಥ ಮೊದಲಿಯಾರ್ರವರು ಸೂಚಿಸಿದರು. ಬಳಿಕ ಸದರೀ ಕಮಿಟಿ ಯೇರ್ಪಾಡಾಗಿ ಅದಕ್ಕೆ ಸರ್. ಟಿ. ಮಾಧವರಾಯರು, ಆನರಬಲ್ ಸುಬ್ರಹ್ಮಣ್ಯಯ್ಯನವರು, ಮ|| ರಾ|| ರಂಗಯ್ಯನಾಯಕರವರು, ರಂಗನಾಥ ಮೊದಲಿಯಾರ್ರವರು, ದಿವಾನ್ ಬಹದೂರ್ ಆರ್. ರಘುನಾಥರಾಯರವರು, ಚಂಚಲರಾಯರವರು ವಗೈರೆ ದೊಡ್ಡ ಮನುಷ್ಯರು ಮೆಂಬರ್‌ಗಳಾಗಿ ಚುನಾಯಿಸಲ್ಪಟ್ಟರು. ಇದಕ್ಕೆ ಮ|| ಸ್ವಾಮಿ ಅಯ್ಯಂಗಾರ್ರವರು ಈ ಕಮಿಟಿಯ ಸೆಕ್ರೆಟರಿಯಾಗಿ ನೇಮಕರಾಗಬೇಕೆಂದು ಮ|| ರಾಮಸ್ವಾಮಿಮೊದಲ್ಯಾರವರು ಪಟ್ಟ ಅಭಿಪ್ರಾಯವನ್ನು ಯೆಲ್ಲರೂ ಅಂಗೀಕರಿಸಿದರು. ಬಳಿಕ ಸಭೆ ಬರಖಾಸ್ತಾಯಿತು. ಮೇಲ್ಕಂಡ ಸಮಾಜಕ್ಕೆ ಸೇರಿರುವ ದೊಡ್ಡ ಮನುಷ್ಯರನ್ನೂ ಅವರು ವಹಿಸಿರುವ ಕಾರ್ಯ ಗೌರವವನ್ನೂ ಪರ್ಯಾಲೋಚಿಸಿ ನೋಡಿದಲ್ಲಿ ಈ ಪ್ರಯತ್ನವು ದೇಶಕ್ಷೇಮಾಭಿವೃದ್ಧಿಗೆ ಮುಖ್ಯಸಾಧಕವಾದ್ದೆಂದು ತೋರಬರುತಿದೆ. ಇಂತಾ ಸಮಾಜಗಳು ಕೃಷಿಪ್ರಚುರವಾದ ದೇಶಗಳಿಗೆಲ್ಲ ಅತ್ಯಂತಾವಶ್ಯಕವಾಗಿರುತಿದೆ. ಅಂತಾ ದೇಶಗಳಪೈಕಿ ಈ ಮೈಸೂರು ರಾಜ್ಯವು ಒಂದೆನಿಸಿಕೊಂಡಿರುವದರಿಂದ ಇಲ್ಲಿಯೂ ಅಂತಾ ಸಭೆಯೊಂದು ನೆಲಗೊಂಡರೆ ಬಹಳ ಪ್ರಯೋಜನಕರವಾಗಿರುವದು. ಇದಕ್ಕೆ ಬೇಕಾದ ಅನುಕೂಲ್ಯಗಳಪೈಕಿ ಯಾವದು ತಾನೆ ಇಲ್ಲಿ ಕಮ್ಮಿಯಾಗಿದೆ. ಐಶ್ವರ್ಯದೊಳೇನಾದರೂ ಕೊರತೆಯೆ? ಜಮೀನ್ದಾರುಗಳಿಗೆ ರಾಜ್ಯನಾಮೆ ಕೊಡತಕ್ಕವರ ಸಂಖ್ಯೆಯೊಳಾಗಲಿ, ಡರ್ಬಾರ್‌ಹಾಕ್ಕಿಹುಡುಕುವವರಲ್ಲಾಗಲಿ ಏನಾದರು ಕಡಮೆಯೆ? ಪ್ರತಿನಿಧಿಸಭೆ ನ ಬಂದು ರಾಜ್ಯತಂತ್ರ ವಿಷಯಗಳಲ್ಲಿ ಸಲಹೆಗಳನ್ನು ಕೊಡುವಷ್ಟು ಚತುರರಾದ ನಮ್ಮ ರೈತರೇ, ಯಾವರೂ ನಿಷ್ಪ್ರಯೋಜಕರಾಗಿದ್ದಾರೆಯೇ? ಕಾಲವ್ಯಷ್ಟಿ ಯೇನಾದರೂ ಅಭಾವವೆ? ಪ್ರೋತ್ಸಾಹದೊಳೇನಾದರೂ ನ್ಯೂನತೆಯೇ? ಕೃಷಿಶಾಸ್ತ್ರಜ್ಞಾನವನ್ನು ಉಂಟುಮಾಡುವದರಲ್ಲಿ ದೋಷವೇ? ಒಂದೂ ಕಾಣೆನು. ಯೇನೂ ಪ್ರಯೋಜನವಿಲ್ಲವು.

LOCAL AND PROVINCIAL NEWS
ಒಳದೇಶಮತ್ತು ತಾಲ್ಲೂಕ್‌ಜಾತವೃತ್ತಾಂತಗಳು.

The Dewan.—ಗತ ಗುರುವಾರದದಿನ ಇಲ್ಲಿನ ದಿವಾನರಾದ ಮ|| ಶೇಷಾದ್ರಿ ಅಯ್ಯರವರು ತಮ್ಮ ಚೀಫ್ ಸೆಕ್ರೆಟರಿಯವರೊಡನೆ ಚಿನ್ನದ ಗಣಿಗಳ ಅಜಮಾಯಿಷಿಬಗ್ಗೆ ಕೋಲಾರ್‌ಪ್ರಾಂತಕ್ಕೆ ಹೋಗಿದ್ದು ಶುಕ್ರವಾರದದಿನ ವಾಪಸ್ ಬಂದರೆಂದು ತಿಳಿಯಬರುತಿದೆ.

Col. A. C. Hay.—ಶ್ರೀಮನ್ಮಹಾರಾಜರವರ ಮಿಲಿಟರಿ ಸೆಕ್ರೆಟರಿಯವರಾದ ಕರ್ನಲ್ ಹೇ ಸಾಹೇಬರವರು, ಗತ ಮಂಗಳವಾರದದಿನ ದ್ಯ್ಸ್ವನ್ನು ತಮ್ಮ ಕೆಲಸದಚಾರ್ಜನ್ನು ಲೆಫ್ಟಿನೆಂಟ್ ಜೋನ್ಸ್ ಎಂಬವರಿಗೂ, ಅಮೃತಮಹಲ್ ಇಲಾಖಾ ಚಾರ್ಜನ್ನು ಮ|| ಗೋಪಾಲೈಯ್ಯಂಗಾರ್ರಿಗೂ ಒಪ್ಪಿಸಿ, ರಜಾಮೇಲೆ ಇಂಗ್ಲಾಂಡಿಗೆ ಹೊರಟುಹೋದರೆಂದು ಅರಿತೆವು.

The Mysore State Railway.—ಮೈಸೂರು ಸ್ಟೇಟ್‌ರೈಲ್ವೆಯು ಅದರ ಸಿಬ್ಬಂದಿ ಯೊಡನೆ ಬರುವ ತಿಂಗಳ ಗುಡ್ ಫ್ರೈಡೇ ಸಾದ ನಾಳೇಗುರುವಾರದದಿನ ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪೆನಿಯವರಿಗೆ ಒಪ್ಪಿಸಲ್ಪಡುವದೆಂದು ನಂಬತಕ್ಕಮೂಲಕ ತಿಳಿಯಬರುವಂತೆ ಒಳದೇಶದ ದೇಶೀಯ ಪತ್ರಿಕೆ ತಿಳಿಸುತಿದೆ. ಈಗ ರೈಲ್ವೆ ಡಿಪಾರ್ಟ್‌ಮೆಂಟ್ ನೌಕರರೆಲ್ಲರೂ ತಮ್ಮ ಕಾಲದಿಂದ ಮುಂದಿನ ಕಂಪೆನಿಯವರ ಕೆಲಸಕ್ಕೆ ಸೇರಬೇಕೆಂತಲೂ, ಮೈಸೂರು ಸರ್ಕಾರದವರು ಅವನ್ನು ತೆಗೆದುಕೊಂಡು ಅವರಿಗೆ ಮುಂದೆ ಪೆನ್ಷನ್‌ಬಗ್ಗೆ ಜವಾಬ್ದಾರಿಯಾಗುವರೆಂತಲೂ, ಇದರಿಂದ ನೌಕರರಿಗೇನೂ ಬಾಧಕ ಉಂಟಾಗಲಾರದೆಂತಲೂ ಕೇಳುತ್ತೇವೆ.

The weather.—ಈಗ ದಿನೇದಿನೆ ಬಿಸಲಿನ ತೈಕ್ಷ್ಣ್ಯವು ಅಧಿಕವಾಗುತ ಬೆಳಗ್ಯೆ ೧೦ ಘಂಟೆಯ ಮೊದಲು ಸಾಯಂಕಾಲ ೫ ಘಂಟೆಯವರೆಗೆ ಹೊರಗಿನ ಸಂಚಾರವು ದುಸ್ಸಹವಾಗಿರುತಿದೆ. ಮ್ಯೂನಿಸಿಪಾಲಿಟಿಯವರ ಪುಣ್ಯದಿಂದ ಊರೊಳು ದರ್ಮಾಂಬುಧಿಕೆರೆಯಲ್ಲಿ ಇದುವರೆವಿಗೆ ಸ್ವಲ್ಪಮಟ್ಟಿಗೆ ನೀರುಇದ್ದಾಗ್ಯೂ, ಮನೆ ಬಾವಿಗಳಲ್ಲಿ ಹುಚ್ಚಾಗಿ ನೀರು ಬತ್ತಿಹೋದದರಿಂದ ಜನಗಳು ಜಲ ದೌರ್ಲಭ್ಯದಿಂದ ಸಂಕಟಪಡುತ ಅದಕ್ಕಾಗಿ ಅಸಮಾಧಾನದೊಡನೆ ಬಹುದೂರ ಹೋಗಿ ಬರುತಲಿದ್ದಾರೆ. ಅಂತವರಿಗೆಲ್ಲ ನಾವು ತಿಳಿಸುವದೇನಂದರೆ—ಶೀಘ್ರದಲ್ಲಿ ಅನೇಕಲಕ್ಷರೂಪಾಯಿಗಳ ಲಾಗುವತುಳ್ಳ ಮಾರೀ ಕೆರೆಯ ಕಾಮಗಾರಿಯು ಉಪಕ್ರಮಿಸಲ್ಪಡುವದಾಗಿರುವದರಿಂದ ಅದನ್ನು ನೀವು ಪುನಶ್ಚರಣೆ ಮಾಡುತಲಿರುವಿರಾದರೆ ನಿಮಗೆ ಜಲದುರ್ಭಿಕ್ಷವು ನಿವೃತ್ತಿಯಾಗುವದೆಂಬದು.

Privilege leave.—ತಿಪ್ಪಟೂರು ತಾಲ್ಲೂಕು ಅಮಲ್ದಾರ್ ಮ|| ವೀರಾಸಾಮಿ ಮೊದಲಿಯಾರ್ರವರು, ೨ ತಿಂಗಳ ಪ್ರಿವಿಲೇಜ್‌ರಜಾ ಪಡೆದುಕೊಂಡರೆಂತಲೂ, ಅವರ ಗೈರಹಾಜರಿಕಾಲದಲ್ಲಿ ತಾಲ್ಲೂಕು ಶಿರಸ್ತೇದಾರ್ ಮಿಸ್ಟರ್ ವೆಂಕಟಾದ್ರಿನಾಯಕರು ಕೆಲಸನೋಡುತಲಿರುವರೆಂತಲೂ, ತಿಪ್ಪೂರುತಾಲ್ಲೂಕು ಅಮಲ್ದಾರ್ ಮಿಸ್ಟರ್ ಶ್ರೀನಿವಾಸ ಅಯ್ಯಂಗಾರ್ರವರು ೧½ ತಿಂಗಳ ಪ್ರಿವಿಲೇಜ್‌ರಜಾ ತಗದುಕೊಂಡದರಿಂದ ಆಕಾಲದಲ್ಲಿ ತುಮಕೂರ್ ಡಿಸ್ಟ್ರಿಕ್ಟ್ ರೆವಿನ್ಯೂ ಶಿರಸ್ತೇದಾರ್ ಮ|| ಸುಬ್ಬಯ್ಯನವರು ಸದರೀ ಕೆಲಸವನ್ನು ನೋಡುವಂತೆ ಏರ್ಪಾಡಾಗಿರುತ್ತೆಂತಲೂ, ಗತವಾರದ ಗೆಜೆಟಿನಮೂಲಕ ತಿಳಿಯಲಾದೆವು.

Impending arrangements.—ಈ ಸಂಸ್ಥಾನದ ಆಡಳಿತದಲ್ಲಿ ನಡೆಯುವದಾಗಿರುವ ಅನೇಕ ಏರ್ಪಾಡುಗಳು ಮುಂದಿನ ಸರ್ಕಾರೀ ಸಾಲ್ ಶುರುವಿನಲ್ಲಿ ಜಾರಿಯೊಳು ತರಲ್ಪಡುವವೆಂದು ಪ್ರಸಿದ್ಧವಾಗಿದ್ದದರಿಂದಲೂ, ಅಂತಾಕಾಲವು ಈಗ ಸನ್ನಿಹಿತವಾಗಿರುವದರಿಂದಲೂ, ಅದ್ಯಾಪಿ ಸರ್ಕಾರಿಯಾಗಿ ಯಾವಅಂಶವೂಹೊರಗಾಗದಿರುವದರಿಂದಲೂ, ಯಾವಾಗ ಯೇನು ಪ್ರಕಟವಾಗುವದೋ ಯೆಂದು ಜನಗಳು ಆತುರದೊಡನೆ ನಿರೀಕ್ಷಿಸುತಲಿದ್ದಾರೆ. ಪ್ರತಿನಿತ್ಯವೂ ಕಚ್ಚೇರಿಗಳಿಂದ ಬರತಕ್ಕವರು ತಾವೂ ಅಂತರಂಗಕ್ಕೆ ಸೇರಿದವರೆಂತಲೂ, ನಡೆಯುವದೆಲ್ಲ ತಮಗೂ ತಿಳಿಯುವದೆಂತಲೂ ಭಾವಿಸುತ ಪ್ರತಿಕ್ಷಣದಲ್ಲಿಯೂ ಅವರು ಮಾಡತಕ್ಕ ಮಾನಸಿಕ ಏರ್ಪಾಡುಗಳಿಂದ ಭಗ್ನೋತ್ಸಾಹಿಗಳಾಗುವ ಪರಸ್ಥಳದ ನೌಕರರು ಚಂಚಲಪಡುತಲಿದ್ದಾರೆ.

A sad disappointment.—ನಾಬಕೀಲಜಾನಾಬಕ್ಷಿ ಸೇತೂರಾಯರ ವಿಷಯವು ಪರ್ಯಾಲೋಚಿಸಲ್ಪಡಲಿಕ್ಕೆ ಮತ್ತೊಂದು ಅವಧಿಯಿರುವಂತೆ ಗತ ವಾರದಲ್ಲಿ ತಿಳಸಿದ್ದೆವಷ್ಟೆ. ಅಂತಾ ಕಾಲವು ಗತ ಗುರುವಾರ ಮಾದದರಿಂದ ಆದಿನವಾದರೂ ನಿರ್ಭಾಗ್ಯರಾದ ಸದರೀ ಮುದುಕರಿಗೆ ಸಂತೋಷಕರವಾದ್ದಾಗಿರಬಹುದೆಂದು ಅನೇಕರು ನಿರೀಕ್ಷಿಸಿದ್ದರು. ಅದೂ ಪೂರ್ವ ದಿನಗಳಂತೆಯೇ ಗತಿಸಿದ್ದರಿಂದ ಯಿನ್ನು ಯೆರಡುವರೆ ತಿಂಗಳಕಾಲದವರೆಗೆ ಯಾವ ಪ್ರತ್ಯಾಶೆಯೂ ಯಿಲ್ಲವು. ಓ ಸೇತೂರಾಯರೆ! ನೀವೊಂದು ಮುಹೂರ್ತ ಕಾಲವಾದರೂ ಬೂಟ್ಸ್ ಹ್ಯಾಟ್ಸ್‌ಗಳನ್ನು ಧರಿಸಿರುವಿರಾದರೆ ನಿಮಗೆ ಇಂತಾದುರ್ವಿಧಿ ಉಂಟಾಗಿರಲಾರದಷ್ಟೆ. ನಿಮ್ಮಗತಿಗೆ ನಿಮ್ಮ ಶ್ರದ್ಧಾಜಡತೆಯೇ ಕಾರಣವಾಯಿತು.

Murder.—ಈಗ್ಯೆ ಸುಮಾರ್ ಒಂದೆರಡು ವಾರಗಳಹಿಂದೆ ಹೊಸಕೋಟೆ ತಾಲ್ಲೂಕು ಸೂಲಿಬೆಲೆ ಕಸಬೆಯಲ್ಲಿರುವ ಒಂದುಕುಟುಂಬಕ್ಕೆ ಸೇರಿದ ಬ್ರಾಹ್ಮಣನೊಬ್ಬನು ಮಕ್ಕಳೊಡನೆ ಸ್ವಜಾತಿಯವಳೊಬ್ಬಳನ್ನು ಖೂನಿ ಮಾಡಿದನೆಂದು ತಿಳಿಯಬರುತಿದೆ. ಸದರೀದುರ್ಘಟನೆಯನ್ನು ಅಜಮಾಯಿಷಿಮಾಡಿದ್ದರೊಳು ಮೃತಪಟ್ಟವಳು ಬಲಾತ್ಕಾರದಿಂಕೊಲ್ಲಲ್ಪಟ್ಟಂತೆ ಏರ್ಪಟ್ಟಿತು. ಈ ಮೊಕದ್ದಮೆಯು ಈಗ ಟೌನ್‌ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಿಸಲ್ಪಡುತಲಿದೆ. ಇದಕ್ಕೆ ಸಂಬಂಧಿಸಿದವನು ಬ್ರಾಹ್ಮಣಘಾತಕನಾದ್ದರಿಂದ ಬ್ರಹ್ಮಶಬ್ದಕ್ಕೆ ಬ್ರಹ್ಮಹತ್ಯವೇ ಅರ್ಥವೆಂದು ತಿಳದು ಆ ಅರ್ಥವನ್ನು ಅನುಷ್ಠಾನದೊಳು ತಂದುಕೊಂಡಂತೆ ತೋರುತಿದೆ. ಮತ್ತು ಬ್ರಿಟಿಷ್ ಪಾರ್ಲಿಮೆಂಟ್ ಸಬ್‌ಜೆಕ್ಟ್‌ಗಳಾದ ನಮ್ಮನ್ನು ಯೂರೋಪಿಯನ್ನರಗಳೆ ವಿಚಾರಿಸಬೇಕೆಂದು ಈಸ್ಟಿಂಡಿಯನ್ನರಗಳು ಅಪೇಕ್ಷಿಸುವಂತೆ ಬ್ರಹ್ಮವಂಶಜನಾದ ತನ್ನನ್ನು ಬ್ರಹ್ಮನೇ ವಿಚಾರಿಸಿ ಮಾಡಬೇಕೆಂದು ಸದರೀ ಅಪರಾಧಿಯು ಕೋರಬಹುದಾದ್ದರಿಂದ ಅವನ ಮೊಕದ್ದಮೆಯನ್ನು ಶೀಘ್ರದಲ್ಲಿಯೇ ಬ್ರಹ್ಮಸಭೆಗೆ ಕಮಿಟ್ ಮಾಡಿಬಿಟ್ಟರೆ ಅಲ್ಲಿನ ನ್ಯಾಯಾನುಗುಣವಾಗಿ ವರ್ತಿಸಬಹುದು.

Formation of *Sante*.—ಕೊಡಗು ಪಡುನಾಲ್ಕುನಾಡು ತಾ|| ಸುಬೇದಾರ್ ಮ|| ರಾ|| ಕೊಂಗಂಡರ ಮುದ್ದೈಯನವರು, ತಮ್ಮ ತಾಲ್ಲೂಕು ಕಸಬೆಯಲ್ಲಿ ಮಾಹೇ ಮಜಕೂರ್ ೧೩ನೇ ತಾರೀಖ್ ಶನಿವಾರದದಿನ ಹೊಸದಾಗಿ ಒಂದು ಸಂತೆಯನ್ನೇರ್ಪಡಿಸಿದರು. ಅದಕ್ಕೆ ಪೂರ್ವ ದಿನದಲ್ಲಿ ಕರ್ಣಾಟಕಸಂಪ್ರದಾಯವನ್ನನುಸರಿಸಿ, ಮಹದೇವ ಪೇಟೆ ಮುಂತಾದ ಕಡೆಗಳಿಂದ ಪ್ರಸಿದ್ಧರಾದ ಶೆಟ್ಟಿ ವರ್ತಕರನ್ನೂ ಪಟೇಲ್ ಮೊದಲಾದ ಗ್ರಾಮಾಧಿಕಾರಿಗಳನ್ನೂ ಸಹ ಏತದರ್ಥಕರೆಸಿದರು. ೧೩ನೇ ತಾ|| ಬೆಳಗ್ಯೆ ನುಡಿಸ್ವಮಹೋತ್ಸವವು ನಡೆಯಿತು. ಆಕಾಲದಲ್ಲಿ ಸುಮಾರ್ ಸಾವಿರಾರುಜನ ಸೇರಿದ್ದರು. ಸಂತೆ ಮೈದಾನದಲ್ಲಿ ನಿರ್ಮಿಸಲ್ಪಟ್ಟಿದ್ದ ಮಂಟಪದಲ್ಲಿ ನುಡಿಸ್ವಜಕ್ಕೆ ಪೂಜೆ ನಡೆದ ಬಳಿಕ ಯೆಲ್ಲರಿಗೂ ಪುಷ್ಪ ತಾಂಬೂಲಗಳು ಕೊಡಲ್ಪಟ್ಟವು. ತರುವಾಯ ಪ್ರತಿ ಶನಿವಾರವೂ ಸದರೀಸ್ಥಳದಲ್ಲಿ ಸಂತೆ ಸೇರತಕ್ಕದ್ದೆಂದು ಸುಬೇದಾರರು ಡಂಗೋರ ಹೊಡಿಸಿದರು. ಇದಕ್ಕಾಗಿ ಪರಸ್ಥಳದಿಂದ ಬಂದಿದ್ದ ಶೆಟ್ಟಿ ವರ್ತಕರು ಮೊದಲಾದ ಗೌರವ್ಯರಿಗೆಲ್ಲ ಅವರವರ ಮರ್ಯಾದಾನುಸಾರ ಭೋಜನ ಫಲಹಾರಗಳು ನಡಿಸಲ್ಪಟ್ಟವೆಂದು ಅಲ್ಲಿನ ವಾತಮೀದಾರರೊಬ್ಬನು ಬರೆಯುತ್ತಾನೆ.

CORRESPONDENCE.

ಇದರೊಳಕಂಡ ಕಾಗದಗಳಲ್ಲಿ ತಿಳಿಸಲ್ಪಟ್ಟಿರುವ ಅಭಿಪ್ರಾಯಗಳಿಗೆ ನಾವು ಜವಾಬ್‌ದಾರರಲ್ಲವು.—ಎಡಿ.

ಅಯ್ಯಾ,—ಸನ್ ೧೮೮೫ನೇ ಇಸವಿ ಡಿಸೆಂಬರ್ ತಿಂಗಳ ಶಾಸ್ತ್ರಸಂಜೀವಿನಿಯ ಪ್ರತಿಯೊಂದು ಆಕಸ್ಮಾತ್ತಾಗಿ ನನಗೆ ದೊರೆಯಲು, ಅದುನೋಡುವಲ್ಲಿ, ಶ್ರೀ ಶಿವಗಂಗೆಮಠದ ಗುರುಗಳು ಅಲ್ಲಿರುವ ಪ್ರಥಮಶಾಖೆಗಳ ಮನೆಗೆ ಭಿಕ್ಷೆಗೆ ಹೋಗುವಂತೆ ಮೊದಲು ಗೊತ್ತುಮಾಡಿಕೊಂಡಿದ್ದು ಆಮೇಲೆ ಅಡಿಗೆಸಿದ್ಧವಾದಬಳಿಕ ಭಿಕ್ಷೆಗೆಬರುವದಿಲ್ಲವೆಂದು ಹೇಳಿದ ಕಾರಣವೂ, ಆ ಕಾಲದಲ್ಲಿ ಸುಬ್ಬಾಭಟ್ಟರೆಂಬವರು ಮಾಡಿದ ಉಪನ್ಯಾಸದೊಡನೆ ಕೆಲವು ಶಾಸ್ತ್ರಾರ್ಥವೂ ಅದರಲ್ಲಿ ಬರೆಯಲ್ಪಟ್ಟಿದ್ದವು. ಆ ಪತ್ರಿಕಾಕರ್ತರ ಮುಖ್ಯಾಭಿಪ್ರಾಯವನ್ನು ನೋಡಲಾಗಿ ಶುಕ್ಲ ಯಜುಶ್ಶಾಖಿಗಳ ಮನೆಯಲ್ಲಿ ಅವರಿಂದ ಪಕ್ವವಾದ ಅನ್ನಾದಿಗಳನ್ನು ಸ್ವಾಮಿಗಳು ಭಿಕ್ಷಾರೂಪವಾಗಿ ಪರಿಗ್ರಹಿಸುವದು ಶಾಸ್ತ್ರೀಯವೆಂದು ವಿದಿತವಾಗುತ್ತದೆ. ಸದರೀ ಪುಸ್ತಕದಲ್ಲಿ ಹಾಗೆ ತೋರಿದಾಗ್ಯೂ, ಶಿವಗೆ ಶುಕ್ಲ ಯಜುಶ್ಶಾಖಿಗಳ ಮನೆಯಲ್ಲಿ ಪ್ರಾಯಶಃ ನಿಯಮಸ್ಥರು ಭೋಜನ ಮಾಡುವ ಪದ್ಧತಿ ಇಲ್ಲವು, ಹೀಗಿರುವಲ್ಲಿ ಗುರುಗಳವರು ಮೊದಲು ಭಿಕ್ಷೆಗೆ ಬರುತ್ತೇವೆಂದು ಹೇಳಿ ಆ ಮೇಲೆ ಬರುವದಿಲ್ಲವೆಂದು ಹೇಳಲು ಕಾರಣವೇನೋ ಗೊತ್ತಾಗಲಿಲ್ಲವಾದ್ದರಿಂದ ಅಶಾಸ್ತ್ರೀಯವಾಗಿದ್ದರೆ ಬರುವದಿಲ್ಲವೆಂದು ಮೊದಲೇ ಹೇಳಬೇಕಾಗಿತ್ತು, ಶಾಸ್ತ್ರೀಯವಾಗಿದ್ದರೆ ಭಿಕ್ಷೆಗೆ ಹೋಗಬಹುದಾಗಿತ್ತು. ಈಗ ಅಚ್ಚುಹಾಕಿರುವ ಪುಸ್ತಕದಲ್ಲಿ ಕಂಡ ಯುಕ್ತಿಯು ಸಮಂಜಸವಾಗಿಲ್ಲದೆ ಇದ್ದಲ್ಲಿ ಅದನ್ನು ಉದಾಸೀನ ಮಾಡದೆ ಪುಸ್ತಕವನ್ನು ಬರೆದು ಸಿದ್ಧಾಂತವನ್ನು ತೋರಿಸಿದಲ್ಲಿ ಶ್ರೀ ಶಿವಗಂಗಾ ಮಠದ ಶಿಷ್ಯರೆಲ್ಲರೂ ಮನೋಕೊರತೆಯನ್ನು ಬಿಡುವರು, ಅಥವಾ ಬೆಂಗಳೂರು ಪಂಡಿತರಿಂದಾಗಲಿ ಶಿಷ್ಯಜನ ಸಂಶಯ ನಿವೃತ್ತಿಗಾಗಿ "ಪ್ರಥಮಶಾಖಾ ನಿರ್ಣಯವಿಚಾರವು" ಬರೆಸಬೇಕು. ಹಾಗಿಲ್ಲದೆ ಇದ್ದಲ್ಲಿ ಶಿಷ್ಯಸಂಶಯ ನಿವೃತ್ತಿಯಾಗಲಾರದಾದ್ದರಿಂದ ಶ್ರೀ ಶಿವಗಂಗಾ ಗುರುಪೀಠದವರು ಉದಾಸೀನ ಮಾಡದೆ ಸದರೀ ಪುಸ್ತಕದ ಮೇಲೆ ಸ್ವಾಭಿಪ್ರಾಯವನ್ನು ತಿಳಿಯಪಡಿಸಿ ಶಿಷ್ಯರನ್ನುದ್ಧಾರ ಮಾಡಬೇಕೆಂದು ಪ್ರಾರ್ಥಿಸುವದೆಂಬವಾಗಿ ಶಾಸ್ತ್ರಸಂಜೀವಿನಿಯ ಲೇಖಕರು ಬರೆದಿರುತ್ತಾರೆ.

ಸದರೀ ಪತ್ರಿಕೆಗೆ ಉತ್ತರವಾಗಿ ತಿಳಿಸುವದೇನೆಂದರೆ,—ಶ್ರೀ ಶೃಂಗೇರಿ ಜಗದ್ಗುರುಗಳವರು ಅಜ್ಞಜನ ಸಂದೇಹ ನಿವೃತ್ತಿಗೋಸ್ಕರ ಬರೆಯಬೇಕಾದದ್ದು ಏನೆಂದರೆ, ಯಾಜ್ಞವಲ್ಕ್ಯ, ಕಣ್ವಕಾತ್ಯಾಯನಾದಿ ಮಹರ್ಷಿಗಳೂ, ಶುಕ್ಲ ಯಜುಶ್ಶಾಖಿಗಳಾದ ಬ್ರಾಹ್ಮಣರು ಸಹ ಇತರ ಶಾಖಾ ಪ್ರವರ್ತಕರಾದ ಮಹರ್ಷಿಗಳು ಮತ್ತು ಇತರ ಶಾಖಾಧ್ಯೇತೃಗಳಾದ ಬ್ರಾಹ್ಮಣರು ಇವರುಗಳಿಗಿಂತಲೂ ನ್ಯೂನರೆಂಬ ಭಾವವೊದಗೆ ಕೆಲವರು ಅಜ್ಞರು ದೂಷಿಸುತ್ತಾರಾದದರಿಂದ ಈ ವಿಷಯದಲ್ಲಿ ನಿರ್ಣಾಯಕವಾದ ಶ್ರೀಮುಖಪತ್ರ ಒಂದು ಅಪ್ಪಣೆ ಕೊಡಬೇಕೆಂದು ಬರೆಸಿದ ವಿಜ್ಞಾಪನಪತ್ರದ ಅಭಿಪ್ರಾಯ ಕುರಿತವಾಗಿ ಅಪ್ಪಣೆಕೊಡುವದೇನೆಂದರೆ, ಮಾಧವೀಯಾದಿ ಮಹಾ ನಿಬಂಧನಗ್ರಂಥಗಳನ್ನು ಪರಿಶೋಧಿಸುವಲ್ಲಿ ಅದರೊಳು ವಾಜಸನೇಯಶಾಖೆಗಳಿಗೂ, ತಚ್ಛಾಖಾ ಪ್ರವರ್ತಕರಾದ ಯಾಜ್ಞವಲ್ಕ್ಯಾದಿ ಮಹರ್ಷಿಗಳಿಗೂ, ತಚ್ಛಾಖಾಧ್ಯೇತೃಗಳಿಗೂ ನ್ಯೂನತಾ ಪ್ರತಿಪಾದಕಪ್ರಮಾಣಗಳು ದೊರಕುವದಿಲ್ಲವು. ಮತ್ತು ಈ ಶಾಖಾಂತರ್ಗತವಾಕ್ಯಗಳು ಪೂರ್ವೋತ್ತರ ಮೀಮಾಂಸಾಸೂತ್ರಭಾಷ್ಯ-ವಾರ್ತಿಕಾದಿಗಳಲ್ಲಿ ಸಹ ಉದಹರಿಸಲ್ಪಟ್ಟಿರುತ್ತವೆ. ಯಾಜ್ಞವಲ್ಕ್ಯರು ಸಾಕ್ಷಾತ್ಸೂರ್ಯರಿಂದ ಅಧ್ಯಯನಮಾಡಿ ಕಣ್ವಕಾತ್ಯಾಯನ ಮಾಧ್ಯಂದಿನಾದಿಗಳಿಗೆ ಉಪದೇಶ ಮಾಡಿರುತ್ತಾರೆಂಬ ಅಂಶವು ವಿಷ್ಣುಪುರಾಣ ಭಾಗವತಾದಿಗಳಲ್ಲಿ ಸ್ಫುಟವಾಗಿ ತಿಳಿಸಲ್ಪಟ್ಟಿದೆಯಲ್ಲದೆ ಇತರಾಂಶಗಳ್ಯಾವವೂ ಹೇಳಲ್ಪಡದಿಲ್ಲವು. ವಾರ್ತಿಕಕಾರರಾದ ಶ್ರೀಮತ್ಸುರೇಶ್ವರಾಚಾರ್ಯರು ವಾಜಸನೇಯ ಶಾಖಿಗಳೆಂಬದಾಗಿ ಶ್ರೀವಿದ್ಯಾರಣ್ಯಪ್ರಣೀತ ಶಂಕರವಿಜಯದಲ್ಲಿ ಸ್ಫುಟವಾಗಿ ತಿಳಿಸಲ್ಪಟ್ಟಿರುತ್ತೆ. ಚತುರ್ವೇದ ಮಹಾವಾಕ್ಯಚತುಷ್ಟಯದಲ್ಲಿ ಸೇರಿದ ಎರಡನೇ ಮಹಾವಾಕ್ಯವು ಈ ಶುಕ್ಲಯಜುರ್ಭಾಗದಲ್ಲಿರುತ್ತೆಂಬದು ಬರೆಬರುತ್ತಾರೆ. ಆದದರಿಂದ ವಾಜಸನೇಯ ಶಾಖೆಯೂ ತಚ್ಛಾಖಾ ಪ್ರವರ್ತಕರಾದ ಮಹರ್ಷಿಗಳೂ ತದಧ್ಯೇತೃ ಬ್ರಾಹ್ಮಣರುಗಳು ಸಹ ಸಮಾನರೇ ಹೊರತು ಅವರಿಗೆ ಯಾವ ವಿಧವಾದ ನ್ಯೂನಾಧಿಕ್ಯಗಳಿಲ್ಲದ್ದರಿಂದ ಯಜನಯಾಜನಾದಿ ಷಟ್ಕರ್ಮಗಳನ್ನೂ ಭೋಜನ ಪ್ರತಿಭೋಜನಾದಿಗಳನ್ನೂ ಪರಸ್ಪರ ನಡೆಸುವದರಲ್ಲಿ ಯಾವವಿಧವಾದ ಸಂದೇಹವಿಲ್ಲವು. ಎಲ್ಲಾ ದೇಶದಲ್ಲಿಯೂ ಇದೇಪ್ರಕಾರ ಆಚರಣೆ ಇದೆ. ಆದಕಾರಣ ಅಜ್ಞಜನ ಪ್ರವಾದಕ್ಕೆ ವೇದಶಾಸ್ತ್ರ ಪುರಾಣಗಳಲ್ಲಿ ಯಾವವಿಧವಾದ ಪ್ರಮಾಣವೂ, ಸತ್ಪ್ರಮಾಣಕ ಸಂಪ್ರದಾಯವನ್ನು ಶಿಷ್ಟಾಚಾರವೂ ಇಲ್ಲವಾದ್ದರಿಂದ ಈ ವಿಷಯದಲ್ಲಿ ಯಾವವಿಧವಾದ ಸಂದೇಹಕ್ಕೂ ಅವಕಾಶವಿಲ್ಲವು. ಈ ಶುಕ್ಲಯಜುಶ್ಶಾಖಿಗಳಾದ ಬ್ರಾಹ್ಮಣರನ್ನು ಇತರ ಶಾಖಿಗಳು ನಿಂದಿಸಿದನಿಮಿತ್ತ ಶ್ರೀಮತ್ಕಶ್ಯಪಿಗಳಿವರ ಆದೂರಕರವಿಷಯದಲ್ಲಿ ಜೀವಿವಿಧವಾಗಿ ಆಲೋಚನೆಮಾಡಲ್ಪಡುವದೆಂದು ಶ್ರೀಮುಖವನ್ನು ಕೊಟ್ಟಿರುತ್ತಾರೆ. ಆ ಶ್ರೀಮುಖವನ್ನು ಶಾಸ್ತ್ರಸಂಜೀವಿನೀಯವರು ಸದರೀ ಡಿಸೆಂಬರ್ ತಿಂಗಳ ಸಂಚಿಕೆಯಲ್ಲಿ ಛಾಪಿಸಿರಬಹುದು. ಮತ್ತು ಬೆಂಗಳೂರು ಮುಂತಾದ ಅನೇಕ ಗ್ರಾಮಗಳ ವಿದ್ವಜ್ಜನಗಳು ವಿಮರ್ಶಾಪೂರ್ವಕವಾಗಿ ಶ್ರೀ ಶೃಂಗೇರಿ ಸ್ವಾಮಿಗಳವರ ಶ್ರೀಮುಖದಂತೆ ಪತ್ರಿಕೆಗಳನ್ನು ಬರೆದಿರುತ್ತಾರೆ. ಆ ಪತ್ರಿಕೆಗಳುಕೂಡ ಅದೇ ಪುಸ್ತಕದಲ್ಲಿ ಛಾಪಿಸಲ್ಪಟ್ಟವೆ. ಪುಸ್ತಕದಲ್ಲಿ ಇಲ್ಲದ ಅಂಶವನ್ನು ಅಂದರೆ ಅಡಿಗೆ ಸಿದ್ಧವಾದ ಬಳಿಕ ಬರುವದಿಲ್ಲವೆಂದು ಹೇಳಿದಂತೆ ಪ್ರಕಟಿಸಿರುವದು ಪಾತಕಜನಕವಾದ ಸುಳ್ಳಾಗಿರುತ್ತದೆ.

ಮತ್ತು ಶೃಂಗೇರಿ ಸ್ವಾಮಿಗಳವರು ಒಪ್ಪಿರುವ ಶಾಸ್ತ್ರಾರ್ಥವನ್ನೂ ಮೇಲೆಕಂಡ ವಿದ್ವನ್ಮಹಾಜನರು ಉದಹರಿಸಿರುವ ಮೀಮಾಂಸಾದಿ ಶಾಸ್ತ್ರಾಭಿಪ್ರಾಯವನ್ನು ಸಹ ಶಾಸ್ತ್ರಸಂಜೀವಿನೀಯವರು ಗ್ರಹಿಸದೆ, ಮೇಲೆಕಂಡ ಸ್ವಾಮಿಗಳವರೂ ವಿದ್ವನ್ಮಹಾಜನರೂ ಉದಹರಿಸಿರುವ ಶಾಸ್ತ್ರಾಭಿಪ್ರಾಯಕ್ಕೆ ವಿರುದ್ಧವಾಗಿ ಆಕ್ಷೇಪಿಸುವದು ಶ್ರೀ ಶಿವಗಂಗಾ ಸ್ವಾಮಿಗಳವರನ್ನೇ ಕುರಿತು ಸಂಶಯ ನಿವೃತ್ತ್ಯರ್ಥ ಶಾಸ್ತ್ರಸಂಜೀವಿನೀಯವರು ಕೇಳುವದರಿಂದ ಸಂಶಯನಿವೃತ್ತಿಯಾಗಬಹುದೆಂಬದನ್ನು ಆಗಲಾರದೆಂಬದನ್ನು ಜನರೇ ಯೋಚಿಸಬಹುದು.

ಪ್ರಥಮಶಾಖಾಧ್ಯಾಯ ನಿರ್ಣಯವೆಂಬ ಪುಸ್ತಕದ ೩ನೇ ಪತ್ರದಲ್ಲಿ ತಿಳಿಸಲ್ಪಟ್ಟಿರುವ ವ್ಯಾಸ, ಜೈಮಿನಿ, ಸುಮಂತ, ವೈಶಂಪಾಯನರೇ ಮೊದಲಾದ ಮಹರ್ಷಿಗಳೂ ಇತರ ಬ್ರಾಹ್ಮಣರೂ ಪ್ರಥಮಶಾಖಾ ಪ್ರವರ್ತಕನಾದ ಬ್ರಹ್ಮದತ್ತ[illegible] ಸತ್ರಯಾಗದಲ್ಲಿ ಭೋಜನ ಮಾಡಿರುತ್ತಾರೆಂದು ಹೇಳುವ ಭಾರತವಾಕ್ಯವನ್ನೂ ಕಣ್ವಶಾಖೆಯಾದ ಮಂಡನಮಿಶ್ರನ ಮನೆಯಲ್ಲಿ ಶ್ರಾದ್ಧದಲ್ಲಿ ಶ್ರೀಮಚ್ಛಂಕರಾಚಾರ್ಯರು ವಿಷ್ಣುಸ್ಥಾನದಲ್ಲಿ ಭೋಜನಮಾಡಿ ಅನಂತರ ವಾದದಿಂದ ಅವರುಜೈಸಿ ಅವರಿಗೆ ಸನ್ಯಾಸವನ್ನಿತ್ತು ವಾರ್ತಿಕಾಚಾರ್ಯರೆಂಬ ಹೆಸರನ್ನು ಕೊಟ್ಟು ತಮ್ಮ ಸನ್ನಿಧಾನವಾದ ಶೃಂಗೇರೀ ವ್ಯಾಖ್ಯಾನ ಸಿಂಹಾಸನದಲ್ಲಿ ಇಟ್ಟುಕೊಂಡರೆಂಬ ಮೊದಲಾದ ಮಾಧವಾಚಾರ್ಯ[illegible]ದಿ ಕೃತ ಶಂಕರವಿಜಯವಾಕ್ಯವನ್ನೂ, ಸದರೀ ಪುಸ್ತಕದ ೧೦೧—೧೭೧ ಈ ಪತ್ರಗಳಲ್ಲಿ, ಯಾಗಕರ್ಮಗಳಿಗಿಂತಲೂ ಎಲ್ಲಾ ಯಜ್ಞಗಳಿಗಿಂತಲೂ ಶ್ರೇಷ್ಠವಾದ ಪಿತೃಯಜ್ಞವೆಂಬ ಶ್ರಾದ್ಧದಲ್ಲಿ ಶುಕ್ಲಯಜುಶ್ಶಾಖಿಗಳಿಗೆ ನಿಮಂತ್ರಣಕ್ಕೆ ಹೇಳಬೇಕೆಂದು ಪ್ರತಿಪಾದಿಸುವ ಮನು, ಪರಾಶರ, ಆಪಸ್ತಂಬ, ಗೌತಮ, ವಸಿಷ್ಠಾದಿ ಧರ್ಮಶಾಸ್ತ್ರಪಂಕ್ತಿಗಳನ್ನೂ ಮಾಧವೀಯಾದಿ ಮಹಾನಿಬಂಧನಕಾರರ ತಾತ್ಪರ್ಯವನ್ನು ಸಹ ಪ್ರಕಟಿಸದೆ ಈ ಶಾಸ್ತ್ರಸಂಜೀವಿನೀಯವರು ಶುಕ್ಲ ಯಜುಶ್ಶಾಖಿಗಳ ಮನೆಯಲ್ಲಿ ಪ್ರಾಯಶಃ ನಿಯಮಸ್ಥರು ಭೋಜನ ಮಾಡುವ ಪದ್ಧತಿ ಇಲ್ಲವೆಂದು ಪ್ರಕಟಿಸಿರುವದು ನೋಡಿದರೆ ಶಾಸ್ತ್ರದಲ್ಲಿ ಜನರಿಗೆ ತಿಳುವಳಿಕೆಯನ್ನುಂಟುಮಾಡಬೇಕೆಂಬದೇ ಅವರ ಅಭಿಪ್ರಾಯವಲ್ಲವೆಂದು ತೋರುತ್ತದೆ.

ಶ್ರುತಿಸ್ಮೃತಿಗಳಿಗೆ ವಿರುದ್ಧವಾದ ಆಚಾರವು ಪರಂಪರಾಪ್ರಾಪ್ತವಾಗಿ ಬಂದಿದ್ದಾಗ್ಯೂ ಅದನ್ನು ಗ್ರಹಿಸಕೂಡದೆಂತಲೂ, ಶ್ರುತಿಸ್ಮೃತಿಗಳಿಗೆ ಅವಿರುದ್ಧಗಳಾದ ಆಚಾರಗಳನ್ನೇ ಯಾವಾಗಲು ಗ್ರಹಿಸಬೇಕೆಂತಲೂ ಮನು ಪರಾಶರಾದಿಗಳಿಂದ ಹೇಳಲ್ಪಟ್ಟಿದೆ. ಸ್ಮೃತಿಸಾರಸಮುಚ್ಚಯದಲ್ಲಿಯೂ ಮಾಧವೀಯದಲ್ಲಿಯೂ, ಯಸ್ಮಿನ್ ದೇಶೇಯದಾಚಾರಃ ಪಾರಂಪರ್ಯಕ್ರಮಾಗತಃ । ಶ್ರುತಿಸ್ಮೃತ್ಯವಿರುದ್ಧೋಯಸ್ಸಗ್ರಾಹ್ಯೋನತರಸ್ಸದಾ|| ಎಂದು ತಿಳಿಸಲ್ಪಟ್ಟಿದೆ.

—

ಅರಸೀಕೆರೆ ತಾ|| ೧೮ನೇ ಮಾರ್ಚಿ ೮೬.

ಈ ದೇಶದಲ್ಲಿ ಬ್ರಿಟಿಷರವರ ಆಳ್ವಿಕೆಗೆ ಮುಂಚೆ ವಿದ್ಯೆಯನ್ನು ನಮ್ಮ ಬ್ರಾಹ್ಮಣರಲ್ಲಿ ಇತ್ತೀಚೆ ಹೊರತು ಇತರಮತದವರಲ್ಲಿ (ಸಾವಿರಕ್ಕೆ ೨ ಜನರು ಕೂಡ ವಿದ್ಯಾವಂತರಾಗಿ) ಇದ್ದಹಾಗೆ ತೋರಲಿಲ್ಲವು. ಇದಕ್ಕೆ ಕಾರಣವನ್ನು ಊಹಿಸಿದರೆ, ಈಗಿರುವ ಅಗಿನ ರಾಜರು ವಿದ್ಯಾಭ್ಯಾಸದ ಏರ್ಪಾಡುಗಳನ್ನು ಮಾಡಲಿಲ್ಲವು, ನಮ್ಮ ಸಂಸ್ಕೃತ ಪ್ರಾಕೃತ ಗ್ರಂಥಗಳಲ್ಲಿ ರಾಮಾಯಣ ಭಾರತ ಮೊದಲಾದ ಪುಸ್ತಕಗಳು ಬ್ರಾಹ್ಮಣರಲ್ಲಿ ಸೇರಿದಾ ಒಬ್ಬರಿಬ್ಬರೊಳಿದ್ದವೇ ಹೊರತು ಬಾಕೀ ಜನಗಳು ಅನುಸ್ವಪ್ನದಲ್ಲಿಯೂ ನೋಡುವದಕ್ಕೆ ಸಾಧ್ಯವಾಗಿರಲಿಲ್ಲವು. ಬ್ರಾಹ್ಮಣರಾದರೋ ಇತರಮತದವರನ್ನು ವಿದ್ಯಾವಂತರಾಗಿ ಮಾಡಿದರೆ ತಮ್ಮನ್ನು ಶ್ಲಾಘಿಸುವದಿಲ್ಲವೆಂದೆಣಿಸಿ ಒಬ್ಬರಿಗೂ ವಿದ್ಯೆಯ ಗುಟ್ಟನ್ನು ತಿಳಿಸುತಿರಲಿಲ್ಲವು. ಜ್ಯೋತಿಶ್ಶಾಸ್ತ್ರದಲ್ಲಿ ಸಾಧಾರಣವಾಗಿ ದಿನಮಲ್ಲಿ ತಿಳಿಯಬೇಕಾದರೆ ಗ್ರಾಮದ ಪುರೋಹಿತರನ್ನು ಒಂದುಮುಷ್ಟಿ ಕಾಳಿಂದ ಸುಲಿಸಿದವರ ದಿನಮಲ್ಲಿ ತಿಳಿಯಬೇಕಾಗಿತ್ತು. ಈಗಲಾದರೋ! ಕರುಸ್ತು[illegible] ವಿದ್ಯಾವಂತ[illegible] ನ್ನು [illegible] ಸಂಸ್ಕೃತ[illegible] ಪ್ರಾಕೃತದಲ್ಲಿ ಸಹ [illegible] ಗಳು [illegible] ಸುಲಭ [illegible] ಪ್ರಾಕೃತ [illegible] ವಣವಾದ ಸಂಗತಿಗಳನ್ನು ತಿಳಿಯದವರು [illegible] ಒಂದು [illegible] ಗಮಕೊಂಡರೆ [illegible] ನ್ನು ಒಬ್ಬರ ಸಹಾಯವಿಲ್ಲದೆ ತಿಳಿದುಕೊಳ್ಳಬಹುದು. ಇಂತಾಕಾಲದಲ್ಲಿ ಸಹ ನಮ್ಮ ವ್ಯವಹಾರದಲ್ಲಿ ಬಾಕೀ ಮತದವರಿಗಿಂತ ಕಡಮೆಯಾಗಿದ್ದರೂ ಪ್ರಸ್ತುತದಲ್ಲಿ ಇತರ ಮತದವರಿಗಿಂತ ಇವರಲ್ಲಿ ಜಾಸ್ತಿಯೇ ಇರಬಹುದು. ವಿದ್ಯೆಯಲ್ಲಿ ನೋಡಿದರೆ ನೇಕಡಾ ಒಬ್ಬ ಕೂಡಾ ವಿದ್ಯಾವಂತ ನಿರಲಾರನೆಂದು ತೋರುತ್ತೆ. ಇಂತಾ ನಾಗರೀಕ ಕಾಲದಲ್ಲಿ ಸಹ ಬುದ್ಧಿವಂತರಾದ ನಮ್ಮವರು ಹೀಗೆ ಇರುವ ದ್ಯಾವಕ್ಕೆಂದು ವಿಚಾರಿಸಿದರೆ, ಬಡವರಾದವರು ವಿದ್ಯೆಯಂ ಕಲಿಯಬೇಕೆನುವದಕ್ಕೆ ಅವರ ಶಕ್ತತೆಯೇ ಕಾರಣವು. ಬಲವಂತರು ವಿದ್ಯಾಪೇಕ್ಷೆ ಪಡಕ್ಕೆ ಮಕ್ಕಳನ್ನು ಬಿಟ್ಟರೆ ತಮ್ಮ ವ್ಯಾಸಂಗಕ್ಕೆ ಕೊರತೆ ಯುಂಟಾಗುತ್ತೆಂಬುವದಲ್ಲದೆ ಬಾಕೀ ಮತದವರು ವಿದ್ಯೆ ಕಲಿಯುವದಕ್ಕೆ ನಡೆಸುವ ತರ[illegible]ದುಗಳನ್ನು ತಿಳಿಯುವದಕ್ಕೆ ದೇಶಾಂತರಗಳಿಂದ ಬರುವ ವೃತ್ತಾಂತಪತ್ರಿಕೆಗಳನ್ನು ತರಿಸಿ ಓದದೆ ಇರುವದು ಕಾರಣವೆಂದು ತೋರುತ್ತೆ. ಏನ ಮಾಡಿ ಕಾರಣಗಳಿಂದರೋ ನಮ್ಮ ಜನಗಳಲ್ಲಿ ವಿದ್ಯಾಹೀನರು ದುರ್ಲಭರೆಂದು ಹೇಳಬೇಕಾಗಿದೆ. ಇನ್ನುಮೇಲಾದರೂ ನಮ್ಮವರಲ್ಲಿ ಧನವಂತರಾದವರೆಲ್ಲರೂ ಪೇಪರ್‌ಗಳನ್ನು ತರಿಸಿ ದೇಶಾಂತರಗಳ ಸಂಗತಿಗಳನ್ನು ತಿಳಿದುಕೊಂಡು ವಿದ್ಯಾವಿಷಯವಾಗಿ ಸಂಪು ಪಟ್ಟರೆ ಎಲ್ಲಾದಿನಿಂದ ಬಡವರಮಕ್ಕಳೂ ಧನಿಕರಮಕ್ಕಳು ಸಹ ಸಂಸ್ಕೃತವೆ ಮೊದಲಾದ ವಿದ್ಯೆಗಳನ್ನು ಕಲಿತು ಪಾರಂಗತರಾಗುವಂತೆ ಮಾಡಿದರೆ ಶುದ್ಧ ಶುಂಠರಾಯಿಗಳಾಗಿರತಕ್ಕ ಬಹುಜನಗಳ ಮಕ್ಕಳು ಬುದ್ಧಿವಂತರಾಗಬಹುದೆಂದು ತೋರುತ್ತೆ. ಈ ಸಂಗತಿಯನ್ನು ಯೆಲ್ಲಾ ಜನಗಳಿಗೂ ಬೇರೆವಿಧವಾಗಿ ತಿಳಿಸಲು ಅಸಾಧ್ಯವೆಂದು ತೋರಿ ತಮ್ಮ ಪೇಪರಿನ ಮೂಲಕ ಅರಿಕೆಮಾಡಿದರೆ ಸರ್ವರಿಗೂ ತಿಳಿಯಬರಬಹುದೆಂದು ನಂಬಿ ಪ್ರಕಟಿಸಿದ್ದೇನೆ. ಈ ಕಾರ್ಯವನ್ನು ನೆರವೇರಿಸುವದಕ್ಕೆ ಪ್ರಬಲರಾದ ಬಹುಜನರನ್ನು ಭಗವಂತನು ಪ್ರೇರಿಸಿದರೆ ನಡೆಯಬಹುದೆಂದು ತೋರುತ್ತದೆ.

ತಮ್ಮ ವಿಧೇಯ,
ಅರಸೀಕೆರೆ ನಿವಾಸಿ.

—

ಅಯ್ಯಾ—ಈ ಕೆಳಗೆ ನಾನು ಪ್ರತಿಪಾದಿಸುವ ವಿಷಯವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಕೋರುತ್ತೇನೆ. ಶಿವಮೊಗ್ಗಾ ಡಿಸ್ಟ್ರಿಕ್ಟ ತೀರ್ಥಹಳ್ಳಿ ತಾಲ್ಲೂಕು ಆಗುಂಬೆ ಮಾಗಣೆ ಹೊನ್ನೂರು ಗ್ರಾಮದ ಪಟೇಲನ ಮೇಲೆ ೧೮೮೬ನೇ ಇಸವಿಯಲ್ಲಿ ಒಂದು ಮೊಕದ್ದಮೆಯು ತರಲ್ಪಟ್ಟಿತು. ಅದು ಅವನಮೇಲೆ ಸಾಬೀತಾಗಲು ಅವನು ಕೂಡಲೇ ಪಟೇಲಿ ಕೆಲಸದಿಂದ ರಿಮೂವ್ ಮಾಡಲ್ಪಟ್ಟನು. ಅವನೆ ಆಕೆಲಸವು ಅವನ ಮಗನ ಹೆಸರಿಗೆ ಬರೆಯಲ್ಪಟ್ಟಿತು. ಸದರೀ ಮಗನು ಬಾಲಕನಾಗಿದ್ದದರಿಂದ ಅವನಿಗಾಗಿ ಮತ್ತೊಬ್ಬರು ಇವನ ತನಿಖೆ ಕೆಲಸವನ್ನು ನೋಡುತಬಂದರು. ಹೀಗಿರುವಲ್ಲಿ ಈಚೆಗೆ ಅದೇ ಕೆಲಸಕ್ಕೆ ಇನ್ನೊಬ್ಬನು ಮೊಕರರ್ ಮಾಡಲ್ಪಟ್ಟನು. ನನಗೆ ತಿಳಿಯಬಂದಿರುವ ಮಟ್ಟಿಗೆ ನಿಜವಾಗಿರುವ ಪಕ್ಷಕ್ಕೆ ಆ ಮನುಷ್ಯನು ಗತವರುಷದಲ್ಲಿ ಯಾವದೋ ಶಿಕ್ಷೆ ಹೊಂದಿದನು. ಅಂತವನನ್ನು ಜವಾಬ್‌ದಾರಿಯುಕ್ತ ಪಟೇಲಿಕೆಲಸದಲ್ಲಿ ಮೊಕರರ್ ಮಾಡುವದು ಅನುಚಿತವಾದದರಿಂದ ಅವನನ್ನು ಕೂಡಲೇ ನಿವೃತ್ತಿ ಮಾಡಬೇಕೆಂದು ಕಳೆದ ಮಾರ್ಚಿ ತಿಂಗಳಲ್ಲಿ ಡಿಸ್ಟ್ರಿಕ್ಟಿನಿಂದ ತಾಲ್ಲೂಕಿಗೆ ಹುಕುಂ ಬಂದಿರುತ್ತದೆ. ಪರಂತು ಏನೋ ಒಂದು ಕಾರಣದಿಂದ ಆ ಹುಕುಂ ಇದುವರೆಗೂ ಜಾರಿಯಲ್ಲಿ ತರಲ್ಪಡಲಿಲ್ಲವು. ಇದಕ್ಕೆ ತಕ್ಕಂತೆ ಅವನ ಅವಳಿದ್ದು ಇಲ್ಲಿ ಬಹುದುಮಂದಿ ವ್ಯವಹಾರ ದುಸ್ತರವಾದ ಸಂಕಟವನ್ನು ದುಃಖವನ್ನೂ ಅನುಭವಿಸುವದಕ್ಕೆ ದ್ಯಾಗಿರುತ್ತದೆ. ಮತ್ತು ಒಬ್ಬರಿಗೆ ವರಕ್ಕೆ ಅವರ ಮಹಿಮೆ ಕಾರಣವಾಗಿರುತ್ತದೆಂಬದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಮುಂದೆ ಹೀಗುತಿದ ವಿಶ್ವಕರ್ಮರುಗಳು ಜಾತಿಭ್ರಷ್ಟೆಯಾಗಿ ಬಹುಕಾಲ ಮಹಲ್ದಾರರ ಸಹವಾಸದೊಳಿದ್ದದ್ದರಿಂದ ಅವಳಿಗೆ ತ್ರಿಮತದವರು ಬಹಿಷ್ಕಾರಹಾಕಿ ಜಾತಿಯಿಂದ ಹೊರಪಡಿಸಿಬಿಟ್ಟರು. ಅವಳ ಸಂಪರ್ಕ ನಮಗೆ ಶುದ್ಧಾಂಗನಾಗಿಲ್ಲದೆಯಿತ್ತು. ಈಗ ಈ ರಾಗದಕ್ಕೆ ವಿಷಯವಾದವನಿಗೂ ಜಾತಿಭ್ರಷ್ಟೆಯಾದ ಸದರೀ ಹೆಂಗಸಿನೂ ಗಂಟುಬಿದ್ದದರಿಂದ ಆ[illegible] ಹೋಗತಕ್ಕ ಸ್ಥಳಗಳಿಗೆಲ್ಲ ಅವಳನ್ನು ಬಹಿರಂಗವಾಗಿ ಸಂಗಡ ಕರೆದುಕೊಂಡು ಹೋಗುತಲಿದ್ದಾನೆ. ಇದು ಆತನ ನಷ್ಟಕ್ಕೂ ಇತರರ ನಷ್ಟಕ್ಕು ಸಹ ಕಾರಣವಾಗಿದೆ. ಇದನ್ನು ಶ್ರೀ ಮಠದವರು ವಿಚಾರಿಸಿ ತಕ್ಕರೀತಿಯಿಂದ ವ್ಯವಸ್ಥೆ ಮಾಡಿದರೆ ಯೋಗ್ಯವಾಗಿರುವದು. ಮುಖ್ಯವಾಗಿ ಇದರಿಂದ ಒಬ್ಬನನ್ನು ವ್ಯರ್ಥವಾಗಿ ದೂಷಿಸಿ ತನ್ಮೂಲಕ ಅವನ ಪ್ರಯೋಜನಕ್ಕೆ ಭಂಗವನ್ನುಂಟುಮಾಡಬೇಕೆಂಬದು ಲವಲೇಶವೂ ನನಗೆ ಸ್ವಲ್ಪವೂ ಇಲ್ಲವು. ಆದರೆ ಈಗಿನ ಅವನವರನ್ನು ಪ್ರಬಲಮಂದಿಯ ಸಂಕಟಕ್ಕೂ, ಅಸಮಾಧಾನಕ್ಕೂ ಕಾರಣವಾಗಿರುವದರಿಂದ ಮುಂದೆಯಾದರೂ ಸರಿಯಾಗಿ ವರ್ತಿಸಿ ಗೌರವ್ಯನೆನಿಸಿಕೊಳ್ಳಬೇಕೆಂಬ ಹಿತಚಿಂತನೆಯೊಡನೆ ಈ ವಿಷಯವನ್ನು ತಮಗೆ ಬರೆದಿರುವೆನು.

೧೨—೩—೮೬

ತಮ್ಮ ವಿಧೇಯ,
ಹಿತ ಚಿಂತಕನು.

BANGALORE:—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

[illegible]

Vol. XIII] BANGALORE—MONDAY, APRIL 5, 1886. [No. 14.

ಸಂಪುಟ ೧೩.] ಬೆಂಗಳೂರು — ಸನ್ ೧೮೮೬ನೇ ಇಸವಿ ಏಪ್ರಿಲ್ ೫ನೇ ತಾರೀಖು ಸೋಮವಾರ. [ಸಂಚಿಕೆ ೧೪.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ [illegible] ವರುಷ ೧ಕ್ಕೆ	೧೨—೦—೦
ಇಂಗ್ಲಿಷ್ [illegible] ವರುಷ ೧ಕ್ಕೆ	೬—೦—೦
ಕನ್ನಡ [illegible] ವರುಷಕ್ಕೆ	೬—೦—೦
[illegible] ೧ಕ್ಕೆ	೦—೮—೦

[illegible]

ಪ್ರಕಟನೆಯ ರಿವಾಜ್.

[illegible]	೧ಕ್ಕೆ	೦—೨—೦
[illegible]	೧ಕ್ಕೆ	೦—೧—೦

NOTICE TO SUBSCRIBERS

[illegible]

೧ [illegible]

೨ [illegible]

೩ [illegible]

೪ [illegible]

NOTICE.

VAIDYASARA SANGRAHA

Price including Postage, Rs 5-0-0

ವೈದ್ಯಸಾರ ಸಂಗ್ರಹ.

[illegible]

[illegible]	ರೂ|| ೫—೦—೦
[illegible]	೦—೬—೦

[illegible], ಬೆಂಗಳೂರು

ನೋಟೀಸ್.

[illegible]—

[illegible]

[illegible]	೧—೪—೦
[illegible]	೦—೧೨—೦
[illegible]	೦—೩—೦
[illegible]	೦—೫—೦
[illegible]	೦—೪—೦
[illegible]	೦—೧೪—೦
[illegible]	೦—೩—೦
[illegible]	೦—೨—೦
ವೈದ್ಯಸಾರಸಂಗ್ರಹ	೫—೦—೦

ಕನ್ನಡ ಗ್ರಂಥಗಳು.

[illegible]	೦—೩—೦
[illegible]	೦—೪—೦
[illegible]	೦—೩—೬
[illegible]	೦—೨—೬
[illegible]	೦—೪—೦
[illegible]	೦—೨—೦
[illegible]	೦—೨—೬
[illegible]	೦—೩—೦
[illegible]	೦—೩—೦
[illegible]	೦—೨—೦
[illegible]	೦—೦—೩
[illegible]	೧—೦—೦
ಜ್ಞಾನಸಿಂಧು,	೨—೦—೦
[illegible]	೦—೧೨—೦
[illegible]	೩—೪—೬
[illegible]	೩—೪—೬
[illegible] ೧ನೇ ಸಂಚಿಕೆ.	೦—೮—೦
[illegible] ೨ನೇ ಸಂಚಿಕೆ	೦—೮—೦
[illegible]	೦—೮—೦

ಸಂಸ್ಕೃತ ಗ್ರಂಥಗಳು

[illegible]	೦—೫—೦
[illegible]	೦—೨—೬
[illegible]	೦—೨—೬
[illegible]	೦—೦—೬
[illegible]	೦—೩—೬
[illegible]	೦—೧—೦

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮ್ಮಿಷನ್ ಮರ್ಚಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿತೆಗೆದುಕೊಳ್ಳಲ್ಪಡುವದು.

ಪ್ರಕಟನೆ.

ಕರ್ನಾಟಕ ಪ್ರಪನ್ನಾಮೃತವೆಂಬ ಶ್ರೀರಾಮಾನುಜಾಚಾರ್ಯರವರ ಚರಿತ್ರೆಯು.

ಇದರಲ್ಲಿ ದಿವ್ಯಸೂರಿಗಳ ಚರಿತ್ರೆಗಳು ಅಡಗಿವೆ. ಈಪುಸ್ತಕವು ತಯಾರಾಗಿ ಬಿಕರಿಗೆ ಸಿದ್ಧವಾಗಿರುತ್ತೆ. ಇದರಕೂಡ ನಾಲ್ಕು ದಿವ್ಯದೇಶದ ಮತ್ತು ಯೆಲ್ಲಾ ಪೂರ್ವಾಚಾರ್ಯರುಗಳ ಚಿತ್ರದ ಪಟ ಒಂದು ಸೇರಿಸಲ್ಪಟ್ಟಿರುತ್ತೆ. ಕಾಪಿಗಳು ಕೊಂಚವೇ ಇರುವದರಿಂದ ಜಾಗ್ರತೆಯಾಗಿಯೇ ತರಿಸಿಕೊಳ್ಳಬಹುದು. ಕ್ರಯವನ್ನು ಕೆಲವರ ಅಪೇಕ್ಷೆಯಂತೆ ಸದ್ಯಃ ಕಮ್ಮಿಮಾಡಿರುತ್ತೇನೆ.

ನಾಳೆ ಏಪ್ರಿಲ್ ೧೫ ರೊಳಗಾಗಿ ಅಪೇಕ್ಷಿಸುವವರಿಗೆ	೧	೦	೦
ಅನಂತರ	೧	೪	೦
ಟಪಾಲ್‌ಹಾಸಲ್	೦	೨	೦

ಬೆಂಗಳೂರು, ೪ನೇ ಮಾರ್ಚಿ ೧೮೮೬.

ಎಂ ಜಿ ಶಾಮಯ್ಯಂಗಾರ್,

ಮ್ಯಾನೇಜರ್,

ಹಿಂದೂಮತಪ್ರಕಾಶಿಕಾ.

ಪ್ರಸಿದ್ಧಪತ್ರಿಕೆ.

ಆನೇಕಲ್ ತಾಲ್ಲೂಕು ರಾಜಾಪುರದ ಮಠದ ಮಾಜೀ ಪಟ್ಟದ ಬಸವಲಿಂಗ ರಾಜ ಸ್ವಾಮಿಗಳು, ಈ ಮಠದ ಹಾಲೀ ಸ್ವಾಮಿಗಳವರ ಅಧಿಕಾರವನ್ನು ಇತರ ೩ ಮಠಗಳವರು ರದ್ದು ಪಡಿಸಿರುವದರಿಂದ ತಮಗೆ ಅಧಿಕಾರ ಏನೆಯಂತೆ ಇವರನ್ನು ಮಠದಿಂದ ಹೊರಪಡಿಸಿ ಮಠವು ಮತ್ತು ಸ್ವತ್ತುಗಳು ಸಹ ತಮ್ಮ ಸ್ವಾಧೀನಕ್ಕೆ ಕೊಡಿಸಬೇಕೆಂದು ಸುಪ್ರಿಂಕೋರ್ಟಿನವರ ಕೋರ್ಟಿನಲ್ಲಿ ದಾವಾ ತಂದ ಮೊಕದ್ದಮೆಯಲ್ಲಿ ವಿಚಾರಣೆಯಮೇಲೆ ಜಡ್ಜಿಯವರು ವಿಸ್ತಾರವಾಗಿ ಜಡ್ಜಿಮೆಂಟ್ ಬರೆದಿರುತ್ತಾರೆ. ಅದರ ಸಾರಾಂಶವೇನೆಂದರೆ—ಈ ೩ ಮಠಗಳವರ ಫೈಸಲನ್ನು ರದ್ದುಪಡಿಸಿ ಬೆಂಗಳೂರು ಜೋಟಿ ಸಭೆಯವರ ಇರಾದೆಯಂತೆ ಈ ಮಠದ ಪಟ್ಟಾಧಿಕಾರವನ್ನು ಚನ್ನಬಸವರಾಜ ಸ್ವಾಮಿಗಳವರಿಗೇನೇ ಕಾಯಂಮಾಡಿರುತ್ತಾರೆ

ಚನ್ನಬಸವರಾಜಸ್ವಾಮಿಗಳವರಕಡೆ ಗುಮಾಸ್ತೆ,

ತಾ. ೪-೪-೮೬. ಬ ರಾಮಯ್ಯ

ನೋಟಿಸ್.

ಸಮಸ್ತಜನಗಳಿಗೂ ತಿಳಯಪಡಿಸುವದೇನೆಂದರೆ

ಗುಬ್ಬೀ ತಾಲ್ಲೂಕು ಕಸಬಾ ಕಡಬದ ಅಮಾನೀ ಕೆರೇಹಿಂದಿನ ಕೊಗ್ಗೀ ಮೇಡುಗದ್ದೆ ಹೈದರಾಬಾದ್ ಕೃಷ್ಣಯ್ಯಂಗಾರ್ರ ಮಾರೀಫತ್ ಸಾಗುವಳೀ ಮಾಡಿಸಿರುವ ಜಮೀನ್ ಅಂದರೆ, ನಮ್ಮ ತಂದೆಗಳಾದ ಮಾಜೀ ಹುಜೂರ್ ಅಂಚೇಕಚ್ಚೇರಿ ಶಿರಸ್ತೇದಾರ್ ವರಯೂರು ನೃಸಿಂಹಯ್ಯಂಗಾರ್ರ ಹೆಸರಿನ ಪಟ್ಟೇ ಬಾಬತು ಜಮೀನನ್ನು ಯಾರಾದರೂ ಭೋಗ್ಯ, ಗುತ್ತಿಗೆ, ದಾನ, ಖರೀದಿ ವಗೈರೆಗೆ ಈ ಕೆಳಗೆ ರುಜು ಮಾಡಿರುವವರ ಅನುಮತಿಯಿಲ್ಲದೆ ದಸ್ತೈವಜು ಮೂಲಕ ಪಡೆದಿದ್ದರೆ ಅದು ಊರ್ಜಿತವಾಗುವದಿಲ್ಲ. ಮುಂದೆ ಪಡೆದು ಕೊಂಡರೂ ಅದರಿಂದುಂಟಾಗುವ ನಷ್ಟಗಳಿಗೆಲ್ಲ ಅವರೇ ಬಾಧ್ಯರಹಬೇಕಾಗಿರುವದೆಂದು ತಿಳಿಯಬೇಕು.

ಕೋಲಾರ, } ಎ ನ ವೇದಾಂತಾಚಾರ್.
೩೧-೩-೮೬ }

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, APRIL 5, 1886

೧೮೮೬ನೇ ಏಪ್ರಿಲ್ ೫ನೇ ತಾ|| ಸೋಮವಾರ.

ಶ್ಲೋ|| [illegible]

THE EXCISE COLLECTIONS AT THE RAILWAY STATION.

ಪರಸ್ಥಳಗಳಿಂದ ರೈಲುರೋಡಿನಮಾರ್ಗವಾಗಿ ಈ ಪ್ರಾಂತಕ್ಕೆ ಬರತಕ್ಕ ಪ್ರಯಾಣಸ್ಥರು, ಗಾಡಿಬಿಟ್ಟು ಇಳಿದಕೂಡಲೇ ಬಾಗಿಲುಗಳಲ್ಲಿ ಕಾದಿರುವ ಸುಂಕದ ಜವಾನರಮೂಲಕ ಪಡುವ ಪರಿಭವವನ್ನು ನಾನಾಪ್ರಕಾರವಾಗಿ ಈ ಪತ್ರಿಕಾಮೂಲಕ ಪ್ರಕಟಿಸಿ ಅವಕ್ಕೆ ತಕ್ಕ ಪ್ರತಿಕ್ರಿಯೆ ಮಾಡಬೇಕೆಂದು ಅನೇಕ ಸಂದರ್ಭಗಳಲ್ಲಿ ಸೂಚಿಸಿರುತ್ತೇವೆಯಷ್ಟೆ. ಈವಿಷಯವು ಅದ್ಯಾಪಿ ಅವ್ಯವಸ್ಥಿತವಾಗಿರುವದರಿಂದಲೂ ಪ್ರತಿನಿತ್ಯವೂ [illegible] ಮುಂದೆ ಸಂಭವಿಸುತಲಿರುವದರಿಂದಲೂ, [illegible] ಕುರಿತು ಮರಳಿ ಇಲ್ಲಿ ಪ್ರಸ್ತಾಪಿಸಬೇಕಾದದಾದೆವು. ಇದೇವಿಷಯವಾಗಿ ಈಚೆಗೆ ಪ್ರಯಾಣಿಕನೊಬ್ಬನು ಒಳದೇಶದ ಸ್ಪೆಕ್ಟೇಟರ್‌ಪತ್ರಿಕೆಗೆ ಬರೆದ ಕಾಗದದಲ್ಲಿ ಸುಂಕದ ಜವಾನರು ನಡಿಸತಕ್ಕ ದಾಂಧಲೆಗಳನ್ನು ಬಹಳ ಅತ್ಯಸ್ತ್ರಯೊಡನೆ ವರಿಸಿರುತ್ತಾನೆ. ಹ್ಯಾಗೆಂದರೆ.

ನಾನು ಈಚೆಗೆ ಪರಸ್ಥಳಕ್ಕೆ ಹೋಗಿದ್ದು ಬಂದು ಇಲ್ಲಿನ ಕಂಟೋನ್ಮೆಂಟ್ ರೈಲ್ವೇಸ್ಟೇಷನಿನಲ್ಲಿ ಗಾಡಿಯಿಳಿದು ಹೊರಗೆಬರುವಷ್ಟರೊಳು ಮಾರ್ಗಾಯಾಸದಿಂ ಬಡಲಿರುವ ನಿರ್ಭಾಗ್ಯರಾದ ಪ್ರಯಾಣಸ್ಥರಗಂಟುಗಳನ್ನು ನಿಷ್ಕಂಟಕರಾದ ಜವಾನರಿಬ್ಬರು ಸೆಳೆದು ಬಿಚ್ಚಿ ಮನಸ್ವೀ ಬಿಸಾಡುತಲಿದ್ದದಂ ಕಂಡು ಅಚುಂಬಿತವಾದ ಈಕೃತ್ಯವನ್ನು ನಾನು ಇದುವರಿವಿಗೆ ಎಲ್ಲಿಯೂ ನೋಡದೆ ಇದ್ದದರಿಂದ ಇದರ ಕಾರಣವನ್ನು ತಿಳಿದುಕೊಳ್ಳಬೇಕೆಂಬ ಉತ್ಸಾಹದೊಡನೆ ಅಲ್ಲಿದ್ದವರು ಇದೇನೆಂದು ವಿಚಾರಿಸಲಾಗಿ ಅದಕ್ಕೆ ಅವರು ಸರಕಾರದ ಜವಾನರಿಬ್ಬರು ಸುಂಕದವರೆಂತಲೂ ಸುಂಕ ಕೊಡಬೇಕಾಗಿರುವ ಪದಾರ್ಥಗಳ್ಯಾವದಾದರೂ ಅವರಲ್ಲಿಯಿದೆಯೇಯೆಂದು ಹುಡುಕುತ್ತಾರೆಂತಲೂ ತಿಳಿಸಿದರು. ಗವರ್ನಮೆಂಟಿನವರು ವಿಧಿಸಿರುವ ತೆರಿಗೆಯನ್ನು ಕೊಡದೆ ಒಬ್ಬರೂ ನಿರಾಕರಿಸಕೂಡದು. ಪರಂತು ಸುಂಕದಜವಾನರ ಧಾಂಧಲೆಯು ನನಗೆ ಮಿತಿಯಿಲ್ಲದ ಆಶ್ಚರ್ಯವನ್ನುಂಟುಮಾಡಿತು. ಸುಂಕದಜವಾನರು [illegible] ಕ್ಕೆ ಮುಂಚಿತವಾಗಿ ೧ ಘಂಟೆಯಮೊದಲು ಬಾಗಿಲ್ಲಿಕಾಯುತಲಿದ್ದು ಪ್ರಯಾಣಸ್ಥರು ಇಳಿದಕೂಡಲೆ, ಗಂಟುಗಳನ್ನೆಲ್ಲ (ಅವು ಎಷ್ಟುರ [illegible] ಉಳ್ಳವಾದವಾಗಿಯೇಇರಲಿ) ಸ್ವತಃ ಬಿಚ್ಚಿ ಮೂಲೆಗೊಂದಾಗಿ ಎಸೆಯುತ್ತಾರೆ. ಬಳಿಕ ಕತ್ತಲೆಯಲ್ಲಿ ಹೋದಷ್ಟು ಹೋಗಲಾಗಿ ಕೈಗೆ ದೊರೆತುದನ್ನು ಮರಳಿ ಸೇರಿಸಿ ಗಂಟುಕಟ್ಟಿಕೊಂಡು ದೈವವೇ ಎಂದು ಸಂಕಟಪಡುತ ಹೊರಟುಹೋಗುತ್ತಾರೆ. ತತ್ರಾಪಿ ಪತಿಕರಾದ ಸ್ತ್ರೀಯರ ವಿಷಯದಲ್ಲಿ, ಜೀಮಾನಿಗಳಾದ ಸರಕಾರೀ ಜವಾನರು ನಡಿಯಿಸ

ಕ್ಕ ವರ್ತನೆಯೂ, ನುಡಿಯತಕ್ಕ ಮಾತುಗಳೂ, ಬಹಳ ದುಃಖಿಸತಕ್ಕವಾಗಿರುತ್ತವೆ. ಅವರಲ್ಲಿಯೂ, ದೌರ್ಭಾಗ್ಯ ವಶಾತ್ ಒಬ್ಬಳಾಗಿಯೂ ಸಕೃತ್ ಸುಂದರಿಯಾಗಿಯೂ ಬಂದರೆ, ಅಂತವಳನ್ನು "ಸುಂಕದ ಅಜಮಾಯಿಷೀ" ಎಂಬ ಕುಂಟಿತೋದ್ದೇಶದೊಡನೆ ಸದರೀ ಜವಾನರು, ಪರಿಶೋಧಿಸುವ ವಿಧವನ್ನು ಪತ್ರಿಕಾಮೂಲಕ ತಿಳಿಸಲಿಕ್ಕೆ ಬಹಳ ನಾಚಿಕೆಯಾಗಿರುತ್ತದೆ. ಕದಾಚಿತ್ ಮುಸಲ್ಮಾನರ ವಸ್ಯರ ಘೋಷಾ ಹೆಂಗಸರಾಗಿದ್ದರೆ ಅವರ ಮರ್ಯಾದೆಯು ಕತ್ತುವಿಗೊಬೇಡವು, ಎಂಬದು. ಮೇಲೆ ತಿಳಿಸಲ್ಪಟ್ಟ ಅಂಶಗಳಲ್ಲೊಂದಾದರೂ ಸುಳ್ಳಲ್ಲವು. ಸುಂಕದ ಜವಾನರು ಮಾನಮರ್ಯಾದೆಗಳಿಲ್ಲದೆ, ಅಗೌರವವಾಗಿ ಮಾತನಾಡುತ್ತ, ಅಬಲೆಯರಾದ ಸ್ತ್ರೀಯರವಿಷಯದಲ್ಲಿ ಬಹಳ ಅಕ್ರಮವಾಗಿ ನಡೆಸುತ್ತಾರೆ. ಹೀಗೆ ಜನಗಳನ್ನು ಹಿಂಸಿಸಿ ವಸೂಲ್ಮಾಡುವದರಮೂಲಕ ಉಂಟಾಗತಕ್ಕ ಪ್ರಯೋಜನವು ಅತ್ಯಲ್ಪವಾಗಿರುತ್ತದೆ. ಹೀಗೆ ಪ್ರತಿಮನುಷ್ಯನಿಂದಲೂ ವಸೂಲಾಗತಕ್ಕ ಸುಂಕವು ಒಂದಾಣೆಗಳಿಗಿಂತಲೂ ಜಾಸ್ತಿಯಾಗಿರಲಾರದು. ಅಂತಾ ಅಲ್ಪಪ್ರಯೋಜನವನ್ನೂ ಇದರಿಂದ ಜನಗಳಿಗೆ ಉಂಟಾಗುವ ತೊಂದರೆಯನ್ನೂ ಅನುಮಾನವನ್ನೂ ಭಾವಿಸಿದರೆ ಇದು ಕೇವಲನಿಷ್ಪ್ರಯೋಜಕವಾದದ್ದಾಗಿರುತ್ತದೆ. ಮಸಲಾ ಒಬ್ಬ ಪ್ರಯಾಣಸ್ಥನು ವಿಳ್ಳೇದೆಲೆತುದರೆ, ಅವನು ತನ್ನಉಪಯೋಗಕ್ಕೆ ಬೇಕಾದಷ್ಟು ಮಾತ್ರವೇ ತರುತ್ತಾನಲ್ಲದೆ, ಅದನ್ನು ಮಾರಿ ಲಾಭಸಂಪಾದಿಸುವಷ್ಟು ಜೀರೆತರುವದಿಲ್ಲವು. ಹಾಗೆ ತರತಕ್ಕವರು ಸಹ ಕೇವಲ ದುರ್ಲಭರಾಗಿಯೂ, ಇಲ್ಲಿನ ನಿಬಂಧನೆಯು ಸ್ನರಿಯದವರಾಗಿಯೂ, ಇರುತ್ತಾರೆ. ಮುಖ್ಯವಾಗಿ, ಕುಂಬಳಕಾಯಿ ಹೋಗುವದನ್ನು ಅರಿಯದೆ ಸಾಸುವೇಕಾಳಿನ ಸಲುವಾಗಿ ದುಃಖಿಸುವ ಮಂದಮತಿಯಂತೆ ಗವರ್ನಮೆಂಟನವರು ಈ ಸುಂಕಕ್ಕಾಗಿ ಕಾದಾಡುವದು ಹಾಸ್ಯಾಸ್ಪದವಾಗಿರುತ್ತದೆ. ಅನೇಕಜನ ಸ್ತ್ರೀ ಪುರುಷರ ಮಾನಭಂಗಕ್ಕೆ ಮುಖ್ಯಕಾರಣವಾಗಿ ಏರ್ಪಟ್ಟಿರುವ ಈ ಸುಂಕದ ಮೂಲಕ ಮಾಹೆಯಾನಾ, ಇಲ್ಲಿನ ಒಬ್ಬ ಅಸಿಸ್ಟೆಂಟ್ ಕಮ್ಮಿಷನರಿಗೆಸಲ್ಲುವ ಮೊಬಲಗಿನಷ್ಟು ಸಹ ಉತ್ಪತ್ತಿಯಾಗಲಾರದೆಂದು ತೋರುತ್ತದೆ. ಆದದರಿಂದ ಜನಗಳ ಪ್ರಯೋಜನಾರ್ಥ ಈ ಪದ್ಧತಿಯನ್ನು ತ್ವರೆಯೊಳು ತಪ್ಪಿಸಬೇಕೆಂದು ಕೋರುವೆವು. ಅಥವಾ, ಸ್ಪೆಕ್ಟೇಟರ್ ಪತ್ರಿಕೆಯು ಬಾತಮಿದಾರನು ತಿಳಿಸಿದ ಪ್ರಕಾರ ತಕ್ಕ ಏರ್ಪಾಡು ಮಾಡಬೇಕಾದ್ದು ಅವಶ್ಯಕವಾಗಿರುತ್ತದೆ.

ಅವ್ಯವಸ್ಥೆಯುದರೆ, ದೊಡ್ಡಮನುಷ್ಯರನ್ನು ಮನಸ್ಸಿಗೆ ಅಸ್ಥಿರಮಾಡಿ ಅಗೌರವವಮಾತುಗಳನ್ನಾಡದೆ ಅವರಮಾತುಗಳ ಪ್ರಕಾರ ನಡೆಯುವಂತೆ ಜವಾನರಿಗೆ ಖಂಡಿತವಾದ ಹುಕುಂ ಕೊಡಬೇಕು. ಜನಗಳಿಗೆ ಸೋಪಯೋಗಾರ್ಥ ಇಟ್ಟುಕೊಂಡ ಸ್ಥಿರಗತಿಗಳನ್ನು ಗಡಿಬಿಡಿಯಾಗಿ ಕೆಡಿಸಿಕೊಂಡುಹೋಗಬಹುದೆಂಬ ಒಂದುಪರಿಮಾಣವನ್ನು ಏರ್ಪಡಿಸತಕ್ಕದ್ದು. ಪರಸ್ಥಳಗಳಿಂದ ಬರತಕ್ಕ ಸ್ತ್ರೀಯರನ್ನು ಪರಿಶೋಧಿಸಲಿಕ್ಕೆ ಪ್ರತ್ಯೇಕ ಹೆಂಗಸರನ್ನು ನೌಕರರನ್ನಾಗಿ ನೇಮಿಸತಕ್ಕದ್ದಲ್ಲದೆ, ಅಕ್ಷೇಪಣೀಯವಾದ ಈಗಿನ ಅಜಮಾಯಿಷೀಕ್ರಮವನ್ನು ತಪ್ಪಿಸಬೇಕು. ಹೆಂಗಸರು ಪುರುಷರ ಗುಂಪಿಗೆ ಸೇರದಿರುವಂತೆ ಅವರಿಗಾಗಿ ಪ್ರತ್ಯೇಕವಾದಒಂದುಮಾರ್ಗವನ್ನು ಕಲ್ಪಿಸತಕ್ಕದ್ದು. ಜವಾನರು ಉಪಶಾಂತರಾಗಿ, ಗೌರವದೊಡನೆ ನಡೆಯುವಂತೆ ಅವರಿಗೆ ಆಜ್ಞಾಪಿಸತಕ್ಕದ್ದು. ಈರೀತಿನಡೆಸಲ್ಪಟ್ಟರೇನೆ ಜನಗಳಮಾನವು ಉಳಿಯುವದೇ ಹೊರ್ತು ಇಲ್ಲವಾದರೆ ಇದರಿಂದ ಮಹದನರ್ಥಗಳುಂಟಾಗಲಿಕ್ಕೆ ಕಾರಣವಾಗುವದು.

ರೈಲ್ವೆಷ್ಟೇಷನ್‌ಗಳಲ್ಲಿ ಮೂರನೇತರಗತಿ ಪ್ರಯಾಣಸ್ಥರಿಗಾಗಿ ಒಂದು ಸ್ಥಳವೇರ್ಪಟ್ಟದ್ದಾಗ್ಯೂ ಹೆಂಗಸರಿಗೆ ಮಾತ್ರ ಪ್ರತ್ಯೇಕ ಮರೆಯಾದ ಸ್ಥಳವೇರ್ಪಟ್ಟಿಲ್ಲವು. ಇತರಹೆಂಗಸರು ಈ ರೋಗವನ್ನು ವಿಶೇಷವಾಗಿ ಪರಿಭಾವಿಸದಿದ್ದಾಗ್ಯೂ ಸುಗಾರಿಗಳನೇಕರು ಬಹುಮಂದಿ ಪುರುಷ ಸಂಮರ್ದದಲ್ಲಿ ಕುಳಿತುಕೊಳ್ಳಲಿಕ್ಕೆ ಬಹಳವಾಗಿ ನಾಚಿಕೊಂಡು ಸಂಕಟಪಡುತ್ತಾರೆ. ಹೊಲತಿಯೊಬ್ಬಳು ಬೂಟ್ಸ್ ಹಾಪ್ಸ್‌ಗಳನ್ನು ಹಾಕಿಕೊಂಡು ಸ್ಟೇಷನ್‌ಪ್ಲಾಟ್‌ಫಾರಮಿಗೆ ಬಂದರೆ ತಾವನ್ಮಾತ್ರದಿಂದಲೇ ಆವಳು ದೊಡ್ಡ ಘರಾಣೆಗೆ ಸೇರಿದವಳಂತೆ ಭಾವಿಸಲ್ಪಡುತ್ತಾಳೆ. ಹಿಂದೂ ಸ್ತ್ರೀಯರು ಎಷ್ಟು ದೊಡ್ಡ ಮನೆಸ್ಥರಾಗಿದ್ದರೂ ಎಷ್ಟು ಮಾನಿಗಳಾಗಿದ್ದರೂ ಯೆಷ್ಟು ಗೌರವ್ಯರಾದರೂ ಅವರೆಲ್ಲರೂ ಜಾತಿಮತ ಭೇದವಿಲ್ಲದೆ ಕುರಿಗಳಂತೆ ಒಬ್ಬರಮೇಲೆ ಒಬ್ಬರು ಒಂದೇಸ್ಥಳದಲ್ಲಿಬದ್ದು ಸಾಯಬೇಕಾಗಿರುತ್ತದೆ. ಕೇವಲ ಭೂತದಯೆ ಪಶ್ಚಾತ್ತಾಪದೊಡನೆ ಇಂತವರಿಗಾಗಿ ಇಡಲ್ಪಟ್ಟಿರುವ ಪಾನೋದಕಸ್ಥಾನವೆಂತಾದ್ದೆಂದರೆ, ಮೇರೆಕಂಡ "ಲೇಡಿಗಳು" ಮತ್ತು ಜಂಟಲ್‌ಮೆನ್‌ಗಳೆನಿಸಿಕೊಳ್ಳತಕ್ಕವರು ಮೂತ್ರಪುರೀಷ ವಿಸರ್ಜನ ಮಾಡತಕ್ಕ ಪ್ರದೇಶಕ್ಕೆ ಸೇರಿದ್ದಾಗಿರುತ್ತದೆ. ಇದನ್ನು ಅತಿಶಯೋಕ್ತಿಯೆಂದು ಒಬ್ಬರೂ ಭಾವಿಸಕೂಡದು. ನಮ್ಮ ಮಾತನ್ನು ದೃಢಪಡಿಸಲಿಕ್ಕೆ ಇಲ್ಲಿನ ಪೇಟೆ ರೈಲ್ವೇ ಸ್ಟೇಷನೇ ಸಿದ್ಧವಾಗಿದೆ. ಲಕ್ಷಾಂತರ ರೂಪಾಯಿಗಳ ಪ್ರಯೋಜನವನ್ನು ಯಾರಮೂಲಕ ರೈಲ್ವೇ ಇಲಾಖೆಯವರುಅನುಭವಿಸುತ್ತಾರೆಯೋ ಅಂತಾ ಜನಗಳ ವಿಷಯದಲ್ಲಿ ಇವಕ್ಕಿಂತಲೂ ಸತ್ಕಾರ್ಯೋಪಕಾರವನ್ನು ಅವರು ಮಾಡಬಲ್ಲರು. ಮುಖ್ಯವಾಗಿ ಪ್ರಯಾಣಸ್ಥರ ಮಾನಭಂಗಕ್ಕೆ ಸುಂಕದ ಜವಾನರೂ, ಮಿಗಿಲಿದ್ದಕ್ಕೆ ರೈಲ್ವೇ ಇಲಾಖೆಯವರೂ ಕಂಕಣ ಕಟ್ಟಿಕೊಂಡು ನಿಂತಿರುವಂತೆ ತೋರುತ್ತದೆ. ಇದರ ಪರ್ಯವಸಾನವು ಮುಂದೆ ಚಿಂತಿಸತಕ್ಕದ್ದಾಗಿರುವದಾದ್ದರಿಂದ ಈಗಲೇ ಮುಂಜಾಗ್ರತೆ ಪಟ್ಟು ಒಂದುವಿಧ ಏರ್ಪಾಡು ಮಾಡಿದರೆ ಯೆಲ್ಲರಿಗೂ ಕ್ಷೇಮ ವುಂಟಾಗುವದು.

Occasional Notes
ನೈಮಿತ್ತಿಕವಿಷಯನ್ಯಾಸ

The Calcutta High court.—ಕಲ್‌ಕತ್ತಾ ಹೈಕೋರ್ಟ್ ಚೀಫ್ ಜಡ್ಜಿಯವರಾಗಿದ್ದ ಸರ್ ಡಬ್ಲ್ಯು. ಕಾಮರ್ ಪೆಥರಾಂ ಗಾರ್ತ್‌ಯವರು ಕಳೆದತಿಂಗಳ ೨೪ನೇ ತಾರೀಖ್ ಬುಧವಾರದವಿನ ಸ್ವದೇಶ ಗಮನೋದ್ಯುಕ್ತರಾಗಿ ಕಲ್‌ಕತ್ತೆಯಿಂದ ಪ್ರಯಾಣವಾದರು. ಅವರ ಸ್ಥಾನಕ್ಕೆ ಬಂದ ಸರ್‌ಕೋಮರ್ ಪೆಥರಾಂ ಎಂಬರೂ ಅದೇದಿನ ತಮ್ಮಸ್ಥಾನವುವಹಿಸಿದರು.

Cost of war preparations in Turkey and Greece.—ಯುದ್ಧಕ್ಕಾಗಿ ಜಹಜುಗಳು ಮೊದಲಾ ದಸೈನ್ಯಗಳ ತಯಾರೀಬಗ್ಗೆ ತುರ್ಕಿಯವರಿಗೆ ಐದುಕೋಟಿ ಫ್ರಾಂಕ್‌ಗಳು ಖರ್ಚಾದುದಾಯೂ, ಗ್ರೀಕ್ ಸರ್ಕಾರಕ್ಕೆ ಸದರೀಬಗ್ಗೆ ನಾಲ್ಕುಕೋಟಿ ಫ್ರಾಂಕುಗಳು ಖರ್ಚಾದುದಾಯೂ ಅಂದಾಜಾಗಿರುತ್ತದೆ. ಸದರೀ ಎರಡು ದಿವಾಳೀಕೋರ್ ಸಂಸ್ಥಾನಗಳೂ ಒಂಭತ್ತುಕೋಟಿ ಫ್ರಾಂಕುಗಳು, ಅಂದರೆ ಮೂರುವರೆ ಕೋಟಿ ರೂಪಾಯಿಗಳು ವ್ಯರ್ಥ ಮಾಡಿತೆಂದು ಒಂದಾನೊಂದು ಪತ್ರಿಕೆ ಹೇಳುತ್ತದೆ.

Arrest of a notorious dacoit.—ಪುರಂಧರ ತಾಲ್ಲೂಕಿನಲ್ಲಿ ಪ್ರಸಿದ್ಧ ದರೋಡೇ ಕಳ್ಳನಾಗಿದ್ದುಕೊಂಡು ಅಲ್ಲಿಯೂ ಅಹಮದುನಗರ ಡಿಸ್ಟ್ರಿಕ್ಟ್‌ಗಳಲ್ಲೂ ಪ್ರಬಲ ತಕ್ಸೀರ್‌ಗಳು ನಡೆಸುತಬಂದದಲ್ಲದೆ, ವಾಸುದೇವ ಬಲವಂತ ಫಡ್ಕೆ ಯೆಂಬವನ ಮತ್ತು ತಾಂತಿಯಾತೋಪಿ ಯೆಂಬವನ ದರೋಡೇ ಗುಂಪಿಗೆ ಸೇರಿದ್ದ ಸೋಪನಾ ಯೆಂಬವನು ಈಚೆಗೆ ಹೈದರಾಬಾದ್ ದೇಶದಲ್ಲಿ ದಸ್ತಗಿರಿ ಮಾಡಲ್ಪಟ್ಟು ಪುನೇಗೆ ತರಲ್ಪಟ್ಟಿರುವದಾಗಿಯೂ, ಸದರೀ ಕಳ್ಳನನ್ನು ದಸ್ತಗೀರ್ ಮಾಡಿದವರಿಗೆ ಇನಾಂ ಕೊಡುವಂತೆ ಗವರ್ನಮೆಂಟಿನವರು ಮಂಜೂರ್ಮಾಡಿರುವರೆಯೂ ಪುನೇ ಅಬ್ಸರ್‌ವರ್ ಪತ್ರಿಕೆಯ ಮೂಲಕ ತಿಳಿಯಬರುತ್ತದೆ.

An offer declined.—ಪದಭ್ರಷ್ಟರಾದ ಬರ್ಮ್ಮದೇಶದ ಅರಸರಾದ ಥೀಬಾಯವರ ಭಾರ್ಯೆಯವರ ಪ್ರಸವಕಾಲದಲ್ಲಿ ಮಗುವನ್ನು ಬರಮಾಡಿಕೊಳ್ಳುವದಕ್ಕಾಗಿ ನವರತ್ನಖಚಿತವಾದ ಒಂದು ಚಿನ್ನದ ತಟ್ಟೆ ತಯಾರ್ ಮಾಡಿಸುತಲಿದ್ದಾರೆಂದು ಹಿಂದೆ ತಿಳಿಸಿದ್ದೆವಷ್ಟೆ. ಆಕೆಯವರ ಪ್ರಸವಕಾಲದಲ್ಲಿ ಹಾಜರಿದ್ದ ಸರ್ಜ್ಜನ್ ಮೇಜರ್ ಬ್ಯಾರ್ಥೋಲೋಮ್ಯುಯವರಿಗೆ ಅರಸರವರು ಅದಂ ಇನಾಂಕೊಡಲು ಗವರ್ನಮೆಂಟಿನ ಹುಕುಂಅನುಸರಿಸಿ ಸದರೀಸರ್ಜ್ಜನ್‌ರವರು ಸದರೀ ತಟ್ಟೆಯನ್ನು ತೆಗೆದುಕೊಳ್ಳುವದಿಲ್ಲವೆಂದು ಹೇಳಿಬಿಟ್ಟರು. ಪ್ರಸವಕಾಲದಲ್ಲಿ ಹಾಜರಿದ್ದ ಸೂಲಗಿತ್ತಿ ಸರ್ಕಾರ್ ನೌಕರಳಲ್ಲವಾಗಿ ಆಕೆಗೆ ಕೊಡಲ್ಪಟ್ಟ ಹತ್ತುಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ಕ್ರಯ ಬಾಳತಕ್ಕ ಒಂದು ತಟ್ಟೆಯನ್ನು ಆಕೆಯು ತೆಗೆದುಕೊಂಡಳು.

Amalgamation of District and Post Office Savings Bank.—ಪೋಸ್ಟಾಫೀಸ್ ಮತ್ತು ಡಿಸ್ಟ್ರಿಕ್ಟ್ ಸೇವಿಂಗ್ಸ್ ಬ್ಯಾಂಕುಗಳನ್ನು ಒಂದಾಗಿ ಸೇರಿಸಬೇಕಾದ ವಿಷಯದಲ್ಲಿ ಮುಂತಾದ ಲೋಕೋಪಯೋಗಿ ಸಮಾಚಾರಗಳೊಳಗಣ ಗವರ್ನರ್ ಜನರಲ್ ಸಾಹೇಬರವರು ನಿರ್ಣಯಿಸಿರುವದೇನೆಂದರೆ.—ಡಿಸ್ಟ್ರಿಕ್ಟ್ ಮತ್ತು ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕುಗಳು ಒಂದಾಗಿ ಸೇರಿಸಲ್ಪಡತಕ್ಕದ್ದು, ಮತ್ತು ಟ್ರೆಜರೀಗಳ ಯೇರ್ಪಾಡುಗಳಿಗಿಂತಲೂ ಪೋಸ್ಟಾಫೀಸ್ ಯೇರ್ಪಾಡುಗಳು ಬಹಳ ವಿಸ್ತಾರವಾಗಿಯೂ ಪ್ರಜೆಗಳಿಗೆ ವಿಶೇಷ ಅನುಕೂಲ್ಯವುಳ್ಳವಾಗಿಯೂ ಇರುವದರಿಂದ ಡಿಸ್ಟ್ರಿಕ್ಟ್ ಸೇವಿಂಗ್ಸ್ ಬ್ಯಾಂಕುಗಳು ಮೌಕೂಫ್ ಮಾಡಲ್ಪಟ್ಟು ಅವುಗಳ ಲೆಕ್ಕಗಳೆಲ್ಲವು ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕುಗಳಿಗೆ ವರ್ಗಮಾಡಲ್ಪಡತಕ್ಕವು. ೧೮೮೬ನೇ ಇಸವಿ ಜನವರಿ ೧ನೇ ಮರ್ಯಾದೆಯುಳ್ಳ ಗವರ್ನಮೆಂಟ್ ನಿರ್ಣಯದಲ್ಲಿ, ೪ನೇ ಏಪ್ರಿಲ್ ಗುರ್ವೀ ತಾ|| ಲಾಗಾಯತು ಗವರ್ನಮೆಂಟ್ ಡಿಸ್ಟ್ರಿಕ್ಟ್‌ಸೇವಿಂಗ್ಸ್‌ಬ್ಯಾಂಕುಗಳೆಲ್ಲವಜಾಮಾಡಲ್ಪಟ್ಟು ಅವುಗಳ ಲೆಕ್ಕಗಳೆಲ್ಲವು ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕುಗಳಿಗೆ ವರ್ಗ ಮಾಡಲ್ಪಡುವವೆಂದು ತಿಳಿಸಲ್ಪಟ್ಟದೆ. ಮದರಾಸ್ ಮತ್ತು ಮುಂಬೈ ಬ್ಯಾಂಕುಗಳ ಆಡಳಿತಕ್ಕೆ ಒಳಪಟ್ಟಿರುವ ಡಿಸ್ಟ್ರಿಕ್ಟ್ ಟ್ರೆಜರಿಗಳಿಗೆ ಸೇರಿದ ಸೇವಿಂಗ್ಸ್ ಬ್ಯಾಂಕುಗಳು ೧೮೮೬ನೇ ಇಸವಿ ಜೂನ್‌ಗುರ್ವೀ ತಾರೀಖ್ ಲಾಗಾಯತು ವಜಾ ಮಾಡಲ್ಪಡುವವೆಂದು ಈಗ ತಿಳಿಸಲ್ಪಡುತ್ತದೆ. ಹಾಗೆ ವಜಾಮಾಡಲ್ಪಡುವಕಾಲದೊಳು ಈಸೇವಿಂಗ್ಸ್ ಬ್ಯಾಂಕ್‌ಗಳಲ್ಲಿಯೇನಾದರೂ ಶಿಲ್ಕುಗಳು ಇರುವದಾದರೆ ಅವುಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕ್‌ಗಳಿಗೆ ವರ್ಗಮಾಡಲ್ಪಡುವವು. ಈ ಹುಕುಂ ತಲುಪಿದ ತಾರೀಖ್‌ಲಾಗಾಯತು ಮದರಾಸ್‌ಮತ್ತು ಮುಂಬೈಪ್ರೆಸಿಡೆನ್ಸಿ ಡಿಸ್ಟ್ರಿಕ್ಟ್ ಟ್ರೆಜರಿಗಳಿಗೆ ಸೇರಿದ ಸೇವಿಂಗ್ಸ್ ಬ್ಯಾಂಕ್‌ಗಳಲ್ಲಿ ಹೊಸ ಲೆಕ್ಕಗಳನ್ನು ಇಡಕೂಡದು. ಯಾರಾದರು ಈ ಬ್ಯಾಂಕುಗಳಲ್ಲಿ ಲೆಕ್ಕ ಇಟ್ಟುಕೊಳ್ಳಲಿಕ್ಕೆ ಅಪೇಕ್ಷಿಸಿದರೆ ಅಂತವರು ಪೋಸ್ಟಾಫೀಸಿಗೆ ತಿಳಿಸಿಕೊಳ್ಳುವಂತೆ ಹುಕುಂ ಕೊಡಬೇಕು. ಈ ಬ್ಯಾಂಕುಗಳಲ್ಲಿ ಡಿಪಾಜಿಟ್ ಇಟ್ಟಿರತಕ್ಕವರು ಈ ಬ್ಯಾಂಕುಗಳು ಬಂದಾಗುವ ಕಾಲದೊಳಗಾಗಿ, ಲೆಕ್ಕಗಳ ವರ್ಗದಬಗ್ಗೆ ಈಗ ಜಾರಿಯಲ್ಲಿರುವ ನಿಬಂಧನೆಯನ್ನನುಸರಿಸಿ, ತಮ್ಮ ಲೆಕ್ಕಗಳನ್ನು ಯಾವದಾದರು ಪೋಸ್ಟಾಫೀಸ್ ಸೇವಿಂಗ್ಸ್‌ಬ್ಯಾಂಕಿಗೆ ವರ್ಗ ಮಾಡಬೇಕೆಂದು ಬರೆದುಕೊಳ್ಳತಕ್ಕದ್ದು. ಮದರಾಸ್ ಮತ್ತು ಮುಂಬೈ ಅಕೌಂಟೆಂಟ್ ಜನರಲ್‌ಗಳೂ ಪೋಸ್ಟಾಫೀಸ್ ಇನ್‌ಸ್ಪೆಕ್ಟರ್ ಜನರಲವರೂ ಮೇಲೆ ತಿಳಿಸಿದಂತೆ ವರ್ಗ ಮಾಡಿಕೊಳ್ಳುವ ವಿಷಯದಲ್ಲಿ ಪ್ರೋತ್ಸಾಹ ಪ್ರಯತ್ನ ಮಾಡುವದಕ್ಕೆ ಅಧಿಕಾರ ಕೊಡಲ್ಪಟ್ಟಿದ್ದಾರೆ, ಎಂಬದು.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕುವಾರ್ತಾವೃತ್ತಾಂತಗಳು.

The Hindu new year's day.—ಈದಿನ ಯುಗಾದಿ ಹಬ್ಬವಾದದರಿಂದ ಈಸಂಸ್ಥಾನದವಿಶಿಷ್ಟ ಇಲಾಖೆಗಳಿಗೂ ರಜಾಕೊಡಲ್ಪಟ್ಟಿರುತ್ತದೆ.

Transfer.—ಇಲ್ಲಿನ ಸೆಂಟ್ರಲ್‌ಕಾಲೇಜಿನಲ್ಲಿ ಅಸಿಸ್ಟೆಂಟ್‌ಮಾಸ್ಟರಾಗಿದ್ದ ಮ|| ನಾರಿಸ್ ಎಂಬವರು, ಇಲ್ಲಿನ ಮರಮ್ಮತ್ ಇಲಾಖೆಯಲ್ಲಿ ಚೀಫೊಂದು ಕೆಲಸಕ್ಕೆ ವರ್ಗಮಾಡಲ್ಪಟ್ಟರೆಂದು ತಿಳಿಯಬರುತ್ತದೆ.

Chief Court Criminal Sessions.—ನಾಳೆಯದಿನ ಇಲ್ಲಿನ ಚೀಫ್‌ಕೋರ್ಟ್ ಕ್ರಿಮಿನಲ್ ಸೆಷನ್ಸ್ ವಿಚಾರಣೆಗೆ ಪ್ರಾರಂಭವಾಗಿ ಮ|| ಜಸ್ಟಿಸ್ ತಂಬುಶೆಟ್ಟರವರಿಂದ ನಡೆಸಲ್ಪಡುವದು. ಇದುವರಿವಿಗೆ ಒಂದು ಖೂನೀಮೊಕದ್ದಮೆಮಾತ್ರವೇ ಕಮಿಟಾಗಿರುವಂತೆ ಕಾಣುತ್ತದೆ.

A memento.—ಈ ಸಂಸ್ಥಾನದ ಕಂಟ್ರೋಲರಾಗಿದ್ದ ಮ|| ಹವರ್ಸ್‌ಯವರು ತಮ್ಮ ತಾಬೇದಾರಿ ಉದ್ಯೋಗಸ್ಥರನ್ನು ತಮ್ಮ ಜ್ಞಾಪಕದಲ್ಲಿಟ್ಟುಕೊಳ್ಳುತಿರತಕ್ಕಬಗ್ಗೆ ಕಳೆದ ಶುಕ್ರವಾರದದಿನ ಕಬ್ಬನ್ ಹೋಟಲಿನಲ್ಲಿ ಸದರೀಯವರನ್ನೆಲ್ಲ ಗುಂಪಾಗಿ ಫೋಟೋಗ್ರಾಫ್ ತೆಗೆಯಿಸಿಕೊಂಡರು.

The new Assistant Resident.—ಈಸಂಸ್ಥಾನದ ಅಸಿಸ್ಟೆಂಟ್ ರೆಸಿಡೆಂಟರಾದ ಮೇಜರ್ ನೆವಿಲ್‌ಯವರು ಫರ್ಲೋ ರಜಾ ಪಡೆದುಕೊಂಡು ಹೋಗುತ್ತಾರಾಗಿ ಅವರ ಕೆಲಸವನ್ನು ಬದಲೀ ನೋಡುವಂತೆ ನೋಕರರ್ ಮಾಡಲ್ಪಟ್ಟಿರುವ ಮೇಜರ್ ಫ್ರೇಜರ್‌ಯವರು ಈದಿನ ಇಲ್ಲಿಗೆ ಬರುವರೆಂದು ನಿರೀಕ್ಷಿಸಲ್ಪಟ್ಟದೆ.

Bonus.—ಕಂಟ್ರೋಲರಾದ ಮ|| ಹವರ್ಸ್‌ಯವರು ಈ ತಿಂಗಳ ಗುರ್ವೀತಾರೀಖಿನಲ್ಲಿ ತಮ್ಮಕೆಲಸದ ಚಾರ್ಜುಗಳನ್ನೆಲ್ಲ ಆಯಾ ಆಫೀಸರ್‌ಗಳಿಗೆ ಒಪ್ಪಿಸಿ ಕೆಲಸದಿಂದ ನಿವೃತ್ತರಾದರು. ಇವರಿಗೆ ೮೦೦೦ ರೂಪಾಯಿಗಳ ಬೋನಸ್ ಮೂರು ತಿಂಗಳತಲಬ ಒಟ್ಟು ಏಳುಸಾವಿರಚಿಲ್ಲರೆರೂಪಾಯಿಗಳು ಮೈಸೂರು ಗವರ್ನಮೆಂಟಿನವರಿಂದ ಕೊಡಲ್ಪಟ್ಟವು.

The Registrar of the Resident's Court.—ಇಲ್ಲಿನ ಬ್ರಿಟಿಷ್‌ರೆಸಿಡೆಂಟರ ಕೋರ್ಟ್ ರಿಜಿಸ್ಟ್ರಾರಾದ ಮ|| ಅನಂತಸ್ವಾಮಿರಾಯರವರು, ಬ್ರಿಟಿಷ್ ರೆಸಿಡೆಂಟರ ಅನುಮತಿಯಮೇಲೆ, ಮಹಾರಾಜಾ ಸರ್ಕಾರದಲ್ಲಿ ಒಬ್ಬ ಅಸಿಸ್ಟೆಂಟ್ ಕಮ್ಮಿಷನರಾಗಿ ನೌಕರರ್ಮಾಡಲ್ಪಟ್ಟು ಹಾಸನ ಡಿಸ್ಟ್ರಿಕ್ಟಿಗೆ ನಿಯಮಿಸಲ್ಪಡುವರೆಂದು ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ಹೇಳುತ್ತದೆ.

Erratum.—ಗತವಾರದಲ್ಲಿ ಪ್ರಕಟಿಸಲ್ಪಟ್ಟ ಪ್ರಥಮಸಾಹಿತ್ಯ ವಿಷಯಕವಾದ ಒಂದುಕಾಗದದಲ್ಲಿ "ಶೃಂಗೇರಿಮಠದ ನಿರೂಪವು ಅದೇಗ್ರಂಥದಲ್ಲಿ ಪ್ರಕಟಿಸಲ್ಪಟ್ಟದೆ" ಎಂದು ಇರುವದಕ್ಕೆ ಬದಲಾಗಿ "ಡಿಸೆಂಬರ್‌ತಿಂಗಳ ಸಂಚಿಕೆಯಲ್ಲಿಛಾಪಿಸಿಸದೆ" ಎಂಬದಾಗಿ ಪ್ರಮಾದವಶಾತ್ ಛಾಪಿಸಲಾಗಿರುವದರಿಂದ ಅದನ್ನು ಜನಗಳು ಮೇಲೆ ಕಂಡಂತೆ ಸರಿಯಾಗಿ ಓದಿಕೊಳ್ಳುವರೆಂದು ನಂಬುತ್ತೇವೆ.

The Civil Court, C and M. Station.—ಸಿವಿಲ್ ವ ಮಿಲಿಟರಿ ಸ್ಟೇಷನ್ ಸಿವಿಲ್‌ಕೋರ್ಟ್ ಚೀಫ್ ಕ್ಲರ್ಕಾಗಿದ್ದ ಮ|| ಅಬ್ದುಲ್ ರಹಮಾನ್‌ಯವರು ಈಗ ನೋಡುತಿರುವ ಯೆರಡನೇ ಮ್ಯಾಜಿಸ್ಟ್ರೇಟ್‌ಕೆಲಸದಲ್ಲಿ ಕಾಯಂಮಾಡಲ್ಪಟ್ಟರೆಂತಲೂ ಅದರ ದೆಸೆಯಿಂದ, ಸಿವಿಲ್‌ಕೋರ್ಟ್‌ನಲ್ಲಿ ಹಂಗಾಮಿಯಾಗಿ ಮಾಡಲ್ಪಟ್ಟದ್ದ ಯೇರ್ಪಾಡುಗಳೆಲ್ಲವೂ ಕಾಯಂಮಾಡಲ್ಪಟ್ಟವೆಂತಲೂ ತಿಳಿಯಬರುತ್ತದೆ.

Mr. A. Adolphus, B. A.—ಬೆಂಗಳೂರು ಸೆಂಟ್ರಲ್ ಕಾಲೇಜ್ ಅಸಿಸ್ಟೆಂಟ್ ಮ್ಯಾಸ್ಟರಾದ ಮ|| ಅಡಾಲ್ಫಸ್ ಯವರು, ಕಾಕಿನಾಡಾ ಕಾಲೇಜಿಗೆ ಹೊರಟು ಹೋಗುತ್ತಾರಾಗಿ, ಅವರು ಇಲ್ಲಿನ ಕಾಲೇಜಿನಲ್ಲಿ ಮಾಡಿದ ಶ್ಲಾಘ್ಯವಾದ ನೌಕರಿಯ ಜ್ಞಾಪಕಾರ್ಥ ಕಾಲೇಜ್ ವಿದ್ಯಾರ್ಥಿಗಳು

ಅವರಿಗೆ ಒಂದು ವಿಜ್ಞಾಪನಪತ್ರಿಕೆಯನ್ನು ಬರೆದುಕೊಡಬೇಕೆಂದು ಆಲೋಚಿಸುತಲಿರುವುದಾಗಿ ಕೇಳುತ್ತೇವೆ.

Pettah Municipal school.—ಪೇಟೆಮ್ಯುನಿಸಿಪಲ್ ಸ್ಕೂಲಿನಲ್ಲಿ ಮೆಟ್ರಿಕ್ಯುಲೇಶನ್ ಕ್ಲಾಸ್ ಏರ್ಪಡಿಸುವದರ ಮೂಲಕ ಜಾಸ್ತೀ ಖರ್ಚಾಗುವದೆಂತಲೂ, ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಬೇಕಾದ ಗ್ರಂಥಗಳು ಹೇಳುವದಕ್ಕೆ ಪಾಠಶಾಲೆಗಳು ಬಹಳವಾಗಿರುತವೆಯೆಂತಲೂ ಯೋಚಿಸಿ, ಸದರೀ ಮ್ಯುನಿಸಿಪಲ್ ಸ್ಕೂಲ್ ಕಮಿಟಿಯವರು ಅದರಲ್ಲಿ ಮೆಟ್ರಿಕ್ಯುಲೇಶನ್ ತರಗತಿ ಯೇರ್ಪಾಡು ಮಾಡುವದಿಲ್ಲವೆಂದು ನಿರಾಕರಿಸಿದಂತೆ ತಿಳಿಯುಬರುತಿದೆ.

The new Commander-in Chief of Madras.—ಮದರಾಸ್ ಸೇನೆಯ ಹೊಸಕಮಾಂಡರ್ ಇನ್‌ಚೀಫ್‌ರವರಾದ ಸರ್ ಹೆರ್ಬರ್ಟ್ ಮ್ಯಾಕ್‌ಫರ್ಸ್ಸನ್ನವರು ತಮ್ಮ ಪರಿಚನ ಸಮೂಹದೊಡನೆ ಕಳೆದ ಬುಧವಾರದಿನ ಈಚಂದಿಗೆ ಬಂದು ಇಲ್ಲಿನ ಬ್ರಿಟಿಷ್ ರೆಸಿಡೆಂಟರ ಬಂಗ್ಲೆಯಲ್ಲಿ ಇಳಿದಿದ್ದರು. ಸದರೀ ಬೆಂಗಳೂರು ಕಳೆದಬೃಹಸ್ಪತಿವಾರದ ದಿನ ಮಧ್ಯಾಹ್ನದ್ಹೊತ್ತಿನ ಸುಮಾರು ಹಾಜರುಂಬ ಕೆಟ್ಟದವನ್ನ ಏರ್ಪಡಿಸಿ ಇಲ್ಲಿನ ಸಿವಿಲ್ ವ ಮಿಲಿಟರಿ ಆಫೀಸರಿಗೆಲ್ಲ ಜೇಟಿ ಕೊಟ್ಟರು. ಅದೇದಿನ ಸಾಯಂಕಾಲ ಈ ಸ್ಟೇಷನ್ನಿನಲ್ಲಿರುವ ಸೇನೆಗಳ ರಿವ್ಯೂ ನಡೆಯಿತು. ಸರ್‌ಹೆರ್ಬರ್ಟ್ ಮ್ಯಾಕ್‌ಫರ್ಸನ್‌ರವರು ಮೈಸೂರು ಮಾರ್ಗವಾಗಿ ನೀಲಗಿರಿಗಳಿಗೆ ಹೋದರು.

Re-constitution of Districts.—ಮಹಾರಾಜಾ ಸರ್ಕಾರದವರು, ಈಗ ನೂತನವಾಗಿ ಏರ್ಪಡಿಸಿದ ಡಿಸ್ಟ್ರಿಕ್ಟುಗಳಿಗೆ ವ ತಾಲ್ಲೂಕುಗಳಿಗೆ ಬೇಕಾದ ಲವಾಜಮಾ ಏರ್ಪಾಡುಗಳ ಕುರಿತು ಬಹಳ ಪರ್ಯಾಲೋಚಿಸುತ ಲಿದ್ದಾರೆಂತಲೂ, ಕೆಲವುಕಾಲದಿಂದ ನಿರೀಕ್ಷಿಸುತಲಿದ್ದ ಈಸಂದರ್ಭದಲ್ಲಿ ಕೆಲವರಿಗೆ ಹೊಸದಾಗಿ ಅಸಿಸ್ಟೆಂಟ್ ಕಮಿಷನರ್‌ಕೆಲಸ ಕೊಡಲ್ಪಡುವದೆಂತಲೂ, ಅದಕ್ಕೋಸ್ಕರ ಇಸಂ ಚುನಾವಣೆಯು, ಕೆಲವುಕಾರಣಗಳಿಂದ ಗವರ್ನಮೆಂಟಿನವರಿಗೆ ಆಲೋಚನೀಯವಾಗಿ ಏರ್ಪಟ್ಟಿವೆಯೆಂತಲೂ ಕೇಳುತ್ತೇವೆ. ಮಹಾರಾಜಾ ಸರ್ಕಾರದವರಿಗೆ ಪ್ರಜಾರಂಜಕರಾಗಬೇಕೆಂಬ ಅಪೇಕ್ಷೆಯು ಉತ್ಕಟವಾಗಿರುವದರಿಂದಲೂ, ಅವರು ಕೀರ್ತಿ ಪ್ರತಿಷ್ಠಾ ಸಂಪಾದನದೊಳು ಅತ್ಯಾಸಕ್ತರಾಗಿರುವದರಿಂದಲೂ ಈಗ ಬಹುಜನ ಕ್ಷೇಮಾಸ್ಪೃಕಿಗಳಾದ ಏರ್ಪಾಡುಗಳು ಮಾಡಿದ ಅಂಶವು ಅನೇಕರಿಗೆ ಸಂತೋಷಕರವಾಗಿರುತಿದೆ. ಈಗ ಮಾಡತಕ್ಕ ಏರ್ಪಾಡುಗಳೆಲ್ಲವು ಒಬ್ಬರಿಗೂ ಅತೃಪ್ತಿಯನ್ನುಂಟುಮಾಡದವಾಗಿರಬೇಕೆಂದು ಕೋರುವೆವು. ಸಮರ್ಥರಾಗಿಯೂ ವಿದ್ಯಾವಂತರಾಗಿಯೂ ಇರತಕ್ಕವರು ಬಹುಮಂದಿ ಈಗ ನಿರುದ್ಯೋಗಿಗಳಾಗಿ ಯಿರುವದರಿಂದ ಅವರ ಪವಿತ್ರವನ್ನು ಉಚಿತವಾಗಿ ಈ ಸಂದರ್ಭಗಳಲ್ಲಿ ಪುರಸ್ಕರಿಸಲ್ಪಡದೆಹೋದರೆ ಹಿಂದಣಲೋಪವೇ ಮರಳಿ ತಲೆದೋರಿ ವ್ಯರ್ಥವಾದ ಗದ್ದಲಕ್ಕೆ ಕಾರಣವಾಗುವದು. ಇದರಿಂದ ತಾತ್ಕಾಲಿಕವಾದ ಬಾಧಕವೊಂದೂ ಗವರ್ನಮೆಂಟಿನವರಿಗೆ ಪ್ರಾಪ್ತವಾಗದೆಹೋದಾಗ್ಯೂ, ಅವರ ಪ್ರಯತ್ನೋದ್ದೇಶಗಳಿಗೆ ಭಂಗವನ್ನುಂಟುಮಾಡದೆ ಇರಲಾರದು. ಈ ವಿಷಯವಾಗಿ ಗವರ್ನಮೆಂಟಿನವರನ್ನು ಎಚ್ಚರಿಸಲಿಕ್ಕೆ ಅವರ ಹಿಂದಿನ ಅನುಭವವೇ ಸಾಕಾಗಿರುವದರಿಂದ ನಮ್ಮ ಲೇಖನಿಯನ್ನು ವ್ಯರ್ಥಗೊಳಿಸಲಾರೆವು. ಮುಖ್ಯವಾಗಿ ಹಿಂದೆ ಅನುಸರಿಸಲ್ಪಟ್ಟ ರಾಜ್ಯತಂತ್ರಕ್ರಮವು ಸರ್ವತ್ರ, ಅಂದರೆ ಹೈದರಾಬಾದ್ ತಿರುವಾಂಕೂರ್ ಬರೋಡೆ ಮುಂತಾದ ಇತರಕಡೆಗಳಲ್ಲೆಲ್ಲ ವಿಫಲವಾಗಿ ಬಹುವಿಧ ಅನರ್ಥಗಳನ್ನುಂಟುಮಾಡಿತೆಂಬ ಅಂಶವು ಮಹಾರಾಜಾ ಸರ್ಕಾರದವರ ಅಂತರಂಗಕ್ಕಾದರೂ ತಿಳಿದೇಯಿರಬಹುದಾದದರಿಂದ ಅದನ್ನೆಲ್ಲ ಅವರು ಈಸಂದರ್ಭದೊಳು ಪರ್ಯಾಲೋಚಿಸದಿರಲಾರರೆಂದು ನಂಬುತ್ತೇವೆ.

Promotions.—ಈಪತ್ರಿಕೆಯಮತ್ತೊಂದು ಭಾಗದಲ್ಲಿ ಪ್ರಕಟಿಸಲ್ಪಟ್ಟಿರುವ ಮೈಸೂರು ಗೆಜೆಟನದೆಸೆಯಿಂದ ಈ ತಿಂಗಳುಮೊದಲು ನಡೆಯುವದಾಗಿದ್ದ ಏರ್ಪಾಡುಗಳ ತಪಶೀಲ್ ಜನಗಳಿಗೆ ತಿಳಿಯಬರಬಹುದು. ಈಏರ್ಪಾಡುಗಳಿಂದ, ಎರಡು ಡಿಸ್ಟ್ರಿಕ್ಟುಗಳೂ ಐದು ತಾಲ್ಲೂಕುಗಳು ಸಹ ಮರಳಿ ಏರ್ಪಾಟಾದಂತೆಯಾಯಿತು. ಇದರಿಂದ ಬಹುಮಂದಿ ಜನರಿಗೆ ಯುಕ್ತವಾಗಿ ಮಾಡಿದರೆ ಜೀವನಕ್ಕೆ ಆಧಾರಉಂಟುಮಾಡಿದಂತೆ ಆಗುವದು. ಹೀಗೆ ಜಾಸ್ತೀಮಾಡಲ್ಪಟ್ಟಖರ್ಚಿಗೆ ಏಕೆಂದು ರೂಪವಾಗಿ ಆದಾಯ ತೋರಿಸಲ್ಪಟ್ಟಿತು. ಅದುಹ್ಯಾಗಂದರೆ, ಕಂಟ್ರೋಲರ್ ಮೆ|| ಹವಲ್ದಾರಯವರು ತಮ್ಮ ತಂಬಿಸೊಡನೆ ಇತರ ಕೆಲಸಗಳನ್ನು ನೋಡುತಲಿದ್ದಬಗ್ಗೆ ಅವುಗಳಿಗೆಲ್ಲ ಪ್ರತ್ಯೇಕ ರುಸುಂ ಪಡೆಯುತಲಿದ್ದರು ಅವರು ಕೆಲಸದಿಂದ ನಿವೃತ್ತರಾದಮೇಲೆ ಸದರೀ ರುಸುಂಗಳೆಲ್ಲ ಮೌಕೂಫ್ ಮಾಡಲ್ಪಟ್ಟವು. ಈಗಕಂಟ್ರೋಲರಾಗಿ ಮೊಕರರಾದ ಮೆ|| ರಂಗಸ್ವಾಮಿಅಯ್ಯಂಗಾರ್ರವರಿಗೆ ಈ ತಿಂಗಳ್ ಮೊದಲು ೬೦೦ ರೂಪಾಯಿಗಳು ಸಲ್ಲುವವು. ಇದರಿಂದ ಅವರಿಗೆ ೫೦೦ರೂಪಾಯಿಗಳ ಇಜಾಫೆಕೊಟ್ಟಂತೆಯಾಯಿತು. ಕಂಟ್ರೋಲರ್ ತಲಬ್ ಮುಂದೆ ಒಂದು ಡಿ|| ಕಮಿಷನರ ತಲಬಿಗೆ ಸಮನಾಗಿ ಮಾಡಲ್ಪಡುವದೆಂತಲೂ, ಸಾಲಿಯಾನಾ ಇಜಾಫೆ ಮೂಲಕ ಅವರ ಸಂಬಳ ಅಲ್ಲಿಕ್ಕೆ ಸರಿಮಾಡಲ್ಪಡುವದೆಂತಲೂ ತಿಳಿಯಬರುತಿದೆ. ಒಜಾನೆಗಾಗಿ ಫ್ರಂಡ್‌ದಂತೆ ಜೋರೀ ರುಸುಂ ಸಲ್ಲಲಾರದು.

ರಿಜಿಸ್ಟ್ರಾರ್ ಜನರಲ್ಲವರಿಗೆ ಇದುವರಿವಿಗೂ ೫೦೦ ರೂಪಾಯಿಗಳ ಅಲೋವೆನ್ಸ್ ಕೊಡಲ್ಪಡುತಲಿತ್ತು. ಸದರೀ ಕೆಲಸಕ್ಕೆ ಲೆಜಿಸ್ಲೇಟಿವ್ ಸೆಕ್ರೆಟರಿ ಮೆ|| ವೆಂಕಟವರದಯ್ಯಂಗಾರ್ರವರು ಮೊಕರರಾದದರಿಂದ ಅವರಿಗೆ ೧೦೦ ರೂಪಾಯಿಗಳು ಇಜಾಫೆಯೊಡನೆ ಮುಂದೆ ೪೦೦ ರೂಪಾಯಿಗಳು ಕೊಡಲ್ಪಡುವವು. ಎಡ್ಯುಕೇಷನಲ್ ಸೆಕ್ರೆಟರಿ ಮೆ|| ರೈಸ್‌ಯವರಿಗೆ ಶಾಸನಗಳ ಪರಿಶೀಲನಾರ್ಥ ೧೫೦ ರೂಪಾಯಿಗಳ ಇಜಾಫೆ ಕೊಡಲ್ಪಟ್ಟಿತು. ಮುಂದೆ ಇವರಿಗೆ ೧೫೦ ರೂಪಾಯಿಗಳು ಸಲ್ಲುವವು. ಮೆ|| ಲಿನಾರ್ಡ್‌ಯವರಿಗೆ ಗವರ್ನಮೆಂಟ್ ಪ್ರೆಸ್ ಸೂಪರಿಂಟೆಂಡೆಂಟ್ ಕೆಲಸ ಸಹ ಸೇರಿಸಿಕೊಡಲ್ಪಟ್ಟದರಿಂದ ನೂರುರೂಪಾಯಿಗಳು ಜಾಸ್ತೀ ಮಾಡಲ್ಪಟ್ಟಿತು. ಈವಿಧ ಏರ್ಪಾಡಿನಿಂದ ಮಹಾರಾಜಾ ಸರ್ಕಾರಕ್ಕೆ ಒಂದುಸಾವಿರ ರೂಪಾಯಿಗಳು ಕಡಿಮೆಯಾಗುತಿವೆ

CORRESPONDENCE

ಇದರಡಿಕೆಂತ ಕಾಗದಗಳಲ್ಲಿ ತಿಳಿಸಲ್ಪಟ್ಟಿರುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲವು —ಎಡಿ.

ಅಯ್ಯಾ,—ತಮ್ಮ ಕಳೆದವಾರದ, ಅಂದರೆ ಮಾಚಿ ಗುದಷ್ಟು ೨೨ನೇ ತಾರೀಖಿನ ಪತ್ರದಲ್ಲಿ ಮೈಸೂರು ರೈಲ್ವೆಯನ್ನ ಮೈಸೂರು ಸರ್ಕಾರದವರು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪನಿಯವರಿಗೆ ಕೊಟ್ಟಹಾಗೂ, ಮತ್ತು ಸದರೀ ಕಂಪನಿಯವರು ಮೈಸೂರು ಲೈನನ್ನು ಏಪ್ರಿಲ್‌ಗುರ್‍ಲೀ ತಾರೀಖಿನ ದಿವಸ ಛಾರ್ಜ ವಹಿಸುವಹಾಗೂ, ಮತ್ತು ಈಗ ಮೈಸೂರುರೈಲ್ವೇ ಇಲಾಖೆಯಲ್ಲಿರುವ ಉದ್ಯೋಗಸ್ಥರನ್ನೆಲ್ಲ ಕಂಪನಿಯವರು ತಮ್ಮ ನೌಕರಿಯಲ್ಲಿ ಇಟ್ಟುಕೊಳ್ಳದೆ ಇರುವಹಾಗೂ, ಇದರಿಂದ ನವರೀ ನೌಕರರು ಗಾಬರಿಯೂ, ವ್ಯಸನವೂ ಪಡುತಿರುವಹಾಗೂ ಬರೆಯೋಣವಾಗಿದೆ. ಈ ವಿಷಯವಾಗಿ ನಾನು ಸ್ವಲ್ಪ ಬರೆಯಲು ಉದ್ಯೋಗಿಸಿದ್ದೇನೆ. ಇದರಿಂದ ಈ ಮೈಸೂರು ರೈಲ್ವೇ ಇಲಾಖೆಯಲ್ಲಿರತಕ್ಕವರೆಲ್ಲರೂ ತಾವು, ಗಾಬರಿ ಪಡಬೇಕಾದ ಅವಶ್ಯಕವಿಲ್ಲವೆಂದು ತಿಳಿಯಲಿಕ್ಕೆ ಬಹಳ ಸಂತೋಷಿಸುವರು. ಆದದರಿಂದ ತಾವು ನನ್ನಮೇಲೆ ಕರುಣವಿಟ್ಟು ತಮ್ಮ ಮುಂದಿನವಾರದ ಪತ್ರಿಕೆಯಲ್ಲಿ ಅಗತ್ಯ ಛಾಪಿಸಬೇಕೆಂದು ಪ್ರಾರ್ಥಿಸುತ್ತೇನೆ. ದಕ್ಷಿಣ ಮಹಾರಾಷ್ಟ್ರ ರೈಲ್ವೇ ಏಜಂಟರಾದ ಮೆ|| ಜೆ. ಎ. ಸ್ಟೀವರ್ಟ್ ಸಾಹೇಬರವರು ಈಗ ಸುಮಾರು ಒಂದೆರಡು ತಿಂಗಳ ಕೆಳಗೆ ಮೈಸೂರು ಲೈನನ್ನು ಸ್ವಾಧೀನ ಮಾಡಿಕೊಳ್ಳುವದಕ್ಕೆ ಪೂರ್ವದಲ್ಲಿ ಇನ್ಸ್‌ಪೆಕ್ಷನ್‌ಮಾಡಿವಿಲಾಯತಿಯಲ್ಲಿರೋ ಡೈರೆಕ್ಟರ್ಸ್‌ಯವರಿಗೆ ತಮ್ಮ ರಿಪೋರ್ಟ್ ಕಳುಹಿಸುವ ಉದ್ದೇಶದಿಂದ ಬೆಂಗಳೂರಿಗೆ ಬಂದಿದ್ದರು. ಈ ವಿಷಯ ತಮಗೆ ತಿಳಿದೇ ಇದೆ.

ಬೆಂಗಳೂರಿಂದ ವಾಪಸ್ ಬಂದು ತಮ್ಮ ಇನ್ಸ್‌ಪೆಕ್ಷನ್ ರಿಪೋರ್ಟ್ ಬರೆದರು. ಮತ್ತು ಅವುಗಳ ಹೆಚ್ಚಿನಪ್ರತಿಯನ್ನು ಡಿಪಾರ್ಟ್‌ಮೆಂಟುಗಳಿಗೆಲ್ಲ ಒಂದೆರಡು ಪ್ರತಿಗಳನ್ನು ಕೊಟ್ಟು ಕಳುಹಿಸಿದರು. ಅವರಲ್ಲೊಂದು ಪ್ರತಿಯನ್ನು ನಾನು ನೋಡಿದೆನು. ಆ ರಿಪೋರ್ಟಿನ ಸಾರಾಂಶದ ಪೈಕಿ ರೈಲ್ವೇ ಉದ್ಯೋಗಸ್ಥರಿಗೆ ಲಗಾವಂಗತಕ್ಕ ಭಾಗವನ್ನು ಇದರಡಿ ಬರೆಯಲು ಯತ್ನಿಸಿದ್ದೇನೆ.

ಮೈಸೂರು ರೈಲ್ವೇಯಲ್ಲಿರತಕ್ಕ ಈಗಿನ ಉದ್ಯೋಗಸ್ಥರನ್ನೆಲ್ಲ ಇಟ್ಟುಕೊಳ್ಳಬೇಕಾಗುತ್ತೆ. ಇರತಕ್ಕವರೇ ಸ್ವಲ್ಪ. ಅಂದರೆ ದಾರವಾತ ಆಫೀಸಿನಲ್ಲಿ ಮತ್ತು ದಕ್ಷಿಣ ಮಹಾ ರಾಷ್ಟ್ರ ರೈಲ್ವೆಯಲ್ಲಿರುವ ಖರ್ಚಿಗೂ ಮತ್ತು ಮೈಸೂರು ರೈಲ್ವೇಯಲ್ಲಿರುವ ಖರ್ಚಿಗೂ ಬಹಳ ವ್ಯತ್ಯಾಸವಿದೆ. ಇದಕ್ಕೆ ಕಾರಣ, ಬೆಂಗಳೂರುಪ್ರಾಂತದಲ್ಲಿ ಪದಾರ್ಥಗಳು ವಿಶೇಷ ಅಗ್ಗ, ದೇಶ ಸುಭಿಕ್ಷ, ಇಲ್ಲಿ ಅಂದರೆ ದಕ್ಷಿಣ ಮಹಾರಾಷ್ಟ್ರ ದೇಶದಲ್ಲಿ ಹಾಗಲ್ಲ. ಹರಿಹರದಿಂದ ಗುಬ್ಬಿ ವರೆಗೆ ಲೈನ್ ಪೂರ್ತಿಯಾಗಿ ಗಾಡಿ ಓಡಾಡಲಿಕ್ಕೆ ಸಿದ್ಧವಾಗಿ, ಈಎರಡು ಲೈನ್‌ಗಳೂ ಸೇರುವವರಿವಿಗೆ ಈಗ ಇರತಕ್ಕ ಏರ್ಪಾಡಲ್ಲಿ ಏನೂ ಬದಲಾವಣೆ ಮಾಡಬಾರದು. ಮೆ|| ಬೀಚರ್‌ಯವರು ರೈಲ್ವೆ ಮ್ಯಾನೇಜರಾಗಿ ಸದ್ಯಕ್ಕೆ ಇರುವಬಗ್ಗೆ ಗವರ್ನಮೆಂಟ್ ಆಫ್ ಇಂಡಿಯಾ ಯವರನ್ನ ಕೇಳಿಕೊಳ್ಳಬೇಕು. ಮತ್ತು ಮೆ|| ಬೀಚರ್‌ಯವರು ರಿವರ್ಕ್‌ ವಗೈರೇ ಲೆಕ್ಕಗಳನ್ನು ಬೋರ್ಡಿಗೆ, ಮೆ|| ಸ್ಟೀವರ್ಟ್ ಸಾಹೆಬರವರ ಮುಖಾಂತರ ಕಳುಹಿಸಬೇಕು. ಬಾಕೀಯವರೆಲ್ಲರೂ ತಮ್ಮತಮ್ಮ ಕೆಲಸಗಳಲ್ಲಿ ಹಾಗೆಯೇ ಇರಬೇಕು. ಎಂಬದು

ಹೀಗೆ ಬರೆದಿರುವದರಿಂದ ಈಗಿರತಕ್ಕ ಉದ್ಯೋಗಸ್ಥರೆಲ್ಲ ಯಾವವಿಧವಾದ ಭಯವೂ ಪಡತಕ್ಕ ಕಾರಣವಿಲ್ಲವೆಂದು ಸ್ಪಷ್ಟವಾಗಿದೆ. ಮೆ|| ಫ್ರುಟ್ಟಣ್ಣಶೆಟ್ಟಿಯವರನ್ನು ಕೆಲವು ದಿವಸಗಳ ಮಟ್ಟಿಗೂ, ಮತ್ತು ಇಂಜಿನಿಯರ್ ಮೊದಲಾದವರನ್ನೆಲ್ಲ ಅದೇಪ್ರಕಾರವೂ ಈಎರಡು ಲೈನ್‌ಗಳೂ ಸೇರುವವರಿವಿಗೂ ಮೈಸೂರು ಗವರ್ನಮೆಂಟಿನವರ ಅನುಮತಿಯೊಡನೆ ಕಂಪನಿಯವರು ಇಟ್ಟುಕೊಳ್ಳಬಹುದು ಅದೇಪ್ರಕಾರ ಈಗ ಇಲ್ಲಿ ಅನೇಕರು ಗವರ್ನಮೆಂಟ್ ಸರ್ವಿಸಿನವರು ಇದ್ದಾರೆ. ಮಿಸ್ಟರ|| ಫ್ರುಟ್ಟಣ್ಣಶೆಟ್ಟರನ್ನು ಕಂಪೆನಿಯವರು ಇಟ್ಟುಕೊಳ್ಳಲಿಕ್ಕೆ ಬಹಳ ಸಂತೋಷವುಳ್ಳವರಾಗಿರಬೇಕಾಗಿದೆ. ಯಾತಕ್ಕೆಂದರೆ, ಇದುವರಿವಿಗೆ ಅಲ್ಲಿ ಟ್ರಾಫಿಕ್ ಡಿಪಾರ್ಟಮೆಂಟಿಗೆ ಹೆಡ್‌ಆಫೀಸರಾಗಿದ್ದು ಅಲ್ಲಿನತಳತ, ಅಂದರೆ ವ್ಯಾಪಾರ ಲಕ್ಷಣಗಳನ್ನು ತಿಳಿದವರಾಗಿರುವಕಾರಣ ಇವರಿಗಿಂತ ಮತ್ತೊಬ್ಬರು ಯಾರೂ ಅಲ್ಲಿ ಟ್ರಾಫಿಕ್ ಡಿಪಾರ್ಟಮೆಂಟಿನ ಚಾರ್ಜಿನಲ್ಲಿರಲಿಕ್ಕೆ ಅರ್ಹರಾಗಿ ಕಾಣೆನು. ಇಲ್ಲಿಂದ ಒಬ್ಬರು ಅಲ್ಲಿಗೆ ಬಂದು ಮಾಹಿತಿ ಮಾಡಿಕೊಳ್ಳುವದು ಕ್ರಮದ ಕೆಲಸವಾಗಿರುತದೆ ಮೆ|| ಫ್ರುಟ್ಟಣ್ಣಶೆಟ್ರಿಗೆ ೩೦೦ ರೂಪಾಯಿ ಸಂಬಳ ಈಗ ದೊರೆಯುತದೆ, ಮತ್ತು ೧೦-೧೫ವರುಷಗಳಸರ್ವಿಸಾಗಿದೆ. ಈಸರ್ವಿಸ್‌ಬಿಟ್ಟು ಪೆನಷನ್ ವಗೈರೆ ಯಾವದಾದರು ಒಂದು ವಿಧವಾದ್ದನ್ನು ಮೈಸೂರು ಗವರ್ನಮೆಂಟಿನವರಿಂದ ಪಡೆದು ಕಂಪೆನಿಯವರ ಸರ್ವಿಸ್‌ನಲ್ಲಿ ಇರಲಿಕ್ಕೆ ಅಡ್ಡಿಯಿಲ್ಲವು. ಈ ವಿಷಯಕ್ಕೆ ಕಂಪೆನಿಯವರು ಅತ್ಯಂತ ಸಂತೋಷವುಳ್ಳವರಾಗಿರಬಹುದು.

ಹುಬ್ಬಳ್ಳಿಯಿಂದ ರಾಣೆಬಿನ್ನೂರು ವರಿವಿಗೆ ೬೩ ಮೈಲಿಗಳ ಫಾಸಲೆ ರೈಲ್ವೆಯು ಮುಂದಿನ ಜೂಲೈ ಗುರ್‍ರಿಗೆ ಟ್ರಾಫಿಕ್‌ಗೆ ಗಾಡಿಬಿಡುತ್ತಾರೆ. ಪುನೇಯಿಂದ ಕೋರಿಗಾಂ ವರಿವಿಗೆ ಬರುವ ನವಂಬರ್ ತಿಂಗಳಲ್ಲಿ ಬಿಡುತ್ತಾರೆ. ಮತ್ತು ಬಳ್ಳಾರಿಯಿಂದ ಗುಂಡಕಲ್‌ವರಿವಿಗೆ ೩೦ಮೈಲಿಗಳದೂರ ರೈಲ್‌ರಸ್ತೆಯು ಮದರಾಸ್ ರೈಲ್ವೇ ಕಂಪೆನಿಯವರಿಂದದಕ್ಷಿಣ ಮಹಾರಾಷ್ಟ್ರ ರೈಲ್ವೇಕಂಪೆನಿಯವರು ಖರೀದಿಗೆ ತೆಗದುಕೊಂಡರು. ಬಳ್ಳಾರಿಯಿಂದ ಗುಂಡಕಲ್‌ವರಿವಿಗೆ ಸದರ್ನಮರಾಟಾ ರೈಲ್ವೇಕಂಪೆನಿಯವರ ಗಾಡಿಗಳು ಮುಂದಿನ ಜೂಲೈ ಗುರ್‍ರಿ ತಾರೀಖಿಗೆ ಓಡ್ಯಾಡುವದು.

ಇಲ್ಲಿ ಹೋದವಾರವೆಲ್ಲ ಮನ್ಮಥನ ಹಬ್ಬ ಬಹಳ ಸಂಭ್ರಮದಿಂದ ನಡೆಯಿತು. ಅದನ್ನು ವಿಸ್ತರಿಸಲು ಸಾವಕಾಶವಿಲ್ಲ. ಮದರಾಸ್ ಸೇನೆಯ ಕಮಾಂಡರ್ ಇನ್ ಚೀಫ್‌ರಾದ ಸರ್ ಮೆಕ್‌ಫರ್ಸನ್ ಸಾಹೆಬರವರು ಬಳ್ಳಾರಿಯಿಂದ ಇಲ್ಲಿಗೆ ನಾಳೆ ೨೬ನೇ ತಾರೀಖಿನ ದಿನ ಬರುತ್ತಾರೆ.

ತಮ್ಮ ೨೨ನೇ ತಾರಿಖಿನ ಪತ್ರವನ್ನು ಈ ದಿವಸ ಸಾಯಂಕಾಲ ೬ ಘಂಟೆ ವೇಳೆಯಲ್ಲಿ ಚಂದ್ರೋದಯದ ಆಫೀಸಿನಲ್ಲಿ ನೋಡಿ ಈ ಪತ್ರ ತತ್‌ಕ್ಷಣವೇ ಬರೆಯಲು ಯತ್ನಿಸಿದೆನು.

ಧಾರವಾಡ, ೨೫ನೇ ಮಾರ್ಚ.	ತಮ್ಮವಿಧೇಯ, ಬೀಲಿ.

TELEGRAPHIC SUMMARY

ತಂತಿವೃತ್ತಾಂತ ಸಂಗ್ರಹವು.

ಲಂಡನ್, ೨೭ನೇ ಮಾರ್ಚ—ಡ್ಯೂಕಾಫ್ ಕನಾಟಿಯವರು, ಬಂಗಾಳೇಸೇನೆಯ ಪೈಕಿ ರಾವಲ್‌ಪಿಂಡಿ ಡಿವಿಜನ್ ಕಮಾಂಡರಾಗಿ ಮೊಕರರ್ಮಾಡಲ್ಪಟ್ಟಿರುವಂತೆ ಸರ್ಕಾರೀಯಾಗಿ ತಿಳಿಸಲ್ಪಟ್ಟಿರುತಿದೆ, ಪರಂತು ಅವರು ಇಲ್ಲಿಂದ ಇಂಡ್ಯಾ ರಾಜ್ಯಕ್ಕೆ ಹೊರಡುವ ಕಾಲ ಇನ್ನೂ ಗೊತ್ತಾಗಲಿಲ್ಲವು.

ಅಥೆನ್ಸ್, ೨೬ನೇ ಮಾರ್ಚ—ಇಲ್ಲಿನ ಆಯುಧಶಾಲೆಯಲ್ಲೂ ಹಡಗುಗಳು ಕಟ್ಟುವ ಸ್ಥಳದಲ್ಲೂ ಬಹಳ ಅಕ್ಕರೆಯೊಡನೆ ಸನ್ನಾಹಗಳು ನಡೆಸಲ್ಪಡುತಲಿವೆ. ಯೆರಡು ತರಹೆಕೋತಲ್ ಸೈನ್ಯವು ಯುದ್ಧ ನೌಕರಿಯಬಗ್ಗೆ ಕೂಡಲೇ ಕರೆಯಲ್ಪಟ್ಟಿವೆ.

ರೋಂ, ೨೬ನೇ ಮಾರ್ಚ—ರಷಿಯಾ ಸರ್ಕಾರದವರಕಡೆ ಇಲ್ಲಿರುವ ರಾಯಭಾರಿಯವರು, ಪ್ರಿನ್ಸ್ ಅಲೆಗ್ಝಾಂಡರವರು ಕಾಲ ವ್ಯವಸ್ಥೆಯಿಲ್ಲದೆ ರೋಮಿಲಿಯಾ ದೇಶದ ಗವರ್ನರಾಗಿ ಮೊಕರರ್ಮಾಡಬೇಕೆಂದು ಇಟಲೀ ಸರ್ಕಾರದವರು ತಿಳಿಸುವ ಅಭಿಪ್ರಾಯವನ್ನು ರಷಿಯಾ ಸರ್ಕಾರದವರು ಒಪ್ಪುವದಿಲ್ಲವೆಂದು ಕೌಂಟಿಬಿಲಾಟಿ ಯೆಂಬವರಿಗೆ ತಿಳಿಸಿದರು.

ಲಂಡನ್, ೨೯ನೇ ಮಾರ್ಚ-ಆಫ್‌ಘಾನಿಸ್ತಾನ ದೇಶದ ಸರಹದ್ದು ವ್ಯವಸ್ಥೆಯಬಗ್ಗೆ ಯೇರ್ಪಟ್ಟಿರುವ ಕಮಿಷನ್‌ಪೈಕಿ ರಷಿಯಾ ಸರ್ಕಾರದವರ ಕಡೆ ಕಮಿಷನರ್‌ಗಳು ತಮಗಿರುವ ಕೆಲವು ಹಕ್ಕುಗಳನ್ನು ತಿಳಿಸಿ ಅವನ್ನು ಬ್ರಿಟಿಷರವರ ತರಫ್ ಕಮಿಷನರಿಗಳು ಒಪ್ಪದೆ ಹೋಗಲು ಅಲ್ಲಿನ ಕೆಲಸಗಳು ಬಂದಾಗಿರುವಂತೆ ಟೈಂಸ್‌ಪತ್ರಿಕೆಯಲ್ಲಿ ತಂತಿವೃತ್ತಾಂತ ಛಾಯಿಷ್ ಆಗಿರುತದೆ. ಈಗ ವ್ಯವಸ್ಥೆಯಾಗಬೇಕಾದವಿಷಯವು ಆಯಾಯ ಗವರ್ನಮೆಂಟಿಗೆ ತಿಳಿಸಲ್ಪಟ್ಟಿದೆ.

ಮರುಚಕ್, ೨೫ನೇ ಮಾರ್ಚ—ಖುಶಿಕಾ ಯೆಂಬ ಪ್ರದೇಶದ ಮೊದಲು ಮುರ್ಘಾಬ್ ಎಂಬ ನದಿಯ ವರಿವಿಗೆ ಹೊಸ ಸರಹದ್ದನ್ನು ತೋರಿಸುವ ಸ್ತಂಭ ನಿರ್ಮಾಣಕೆಲಸ ಪೂರ್ತಿಯಾಯಿತು.

ಲಂಡನ್, ೨೯ನೇ ಮಾರ್ಚ—ಮಹಾರಾಣಿಯವರು, ಬರುವ ಮೇ ೪ನೇ ತಾರೀಖಿನಲ್ಲಿ ನಡೆಯುವ ಇಂಡ್ಯಾದೇಶ ಸಂಬಂಧವಾದ ಮತ್ತು ಹೊಸವಾಗಿ ತಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳಲ್ಪಟ್ಟ ದೇಶಗಳ ಸಂಬಂಧವಾದ ವಿವಿಧವಸ್ತು ಪ್ರದರ್ಶನಕಾರ್ಯವನ್ನು ತಾವೇ ಖುದ್ದು ಪ್ರಾರಂಭಿಸಬೇಕೆಂಬ ಅಭಿಪ್ರಾಯವನ್ನು ಸೂಚಿಸಿರುತ್ತಾರೆ.

ಕ್ಷಕರ್ಶನವೂ, ನುಡಿಯುತಕ್ಕ ಮಾತುಗಳೂ, ಬಹಳ ದುಃಖಿಸತಕ್ಕವಾಗಿರುತ್ತವೆ. ಅವರಲ್ಲಿಯೂ, ದೌರ್ಭಾಗ್ಯ ಮಾತ್ ಒಬ್ಬಳಾಗಿಯೂ ಸಕೃತ್ ಸುಂದರಿಯಾಗಿಯೂಬಂದರೆ, ಅಂತವಳನ್ನು "ಸುಂಕದ ಅಜಮಾಯಿಷೀ" ಎಂಬ ಕುಂತಿಕೋ ದ್ವೇಶದೊಡನೆ ಸವರೀ ಜವಾನರು, ಪರಿಶೋಧಿಸುವ ವಿಧವನ್ನು ಪತ್ರಿಕಾಮೂಲಕ ತಿಳಿಸಲಿಕ್ಕೆ ಬಹಳನಾಚಿಕೆಯಾಗಿರುತ್ತದೆ. ಕದಾಚಿತ್ ಮುಸಲಿಮಾನರು ಪಗ್ಗರಿ ಘೋಷಾ ಹೆಂಗಸರಾಗಿದ್ದರೆ ಅವರ ದುರ್ದೆಶೆಯು ಕತ್ತುವಿಗೂಚೇದವು, ಎಂಬದು, ಮೇಲೆ ತಿಳಿಸಲ್ಪಟ್ಟ ಅಂಶಗಳಿಂದಾದರೂ ಕುಳ್ಳಿಲ್ಲವು. ಸುಂಕದ ಜವಾನರು ಮಾನಮರ್ಯಾದೆಗಳಿಲ್ಲದೆ, ಅಗೌರವವಾಗಿ ಮಾತನಾಡುತ್ತ, ಅಬಲೆಯರಾದ ಸ್ತ್ರೀಯರವಿಷಯದಲ್ಲಿ ಬಹಳ ಅಕ್ರಮವಾಗಿ ನಡೆಸುತ್ತಾರೆ. ಹೀಗೆ ಜನಗಳನ್ನು ಹಿಂಸಿಸಿ ವಸೂಲ್ಮಾಡುವವರಮೂಲಕ ಉಂಟಾಗತಕ್ಕ ಪ್ರಯೋಜನವು ಅತ್ಯಲ್ಪವಾಗಿರುತ್ತದೆ. ಹೀಗೆ ಪ್ರತಿಮನುಷ್ಯನಿಂದಲೂ ವಸೂಲಾಗತಕ್ಕ ಸುಂಕವು ಕಾಸುಗಳಿಗಿಂತಲೂ ಜಾಸ್ತಿಯಾಗಿರಲಾರದು. ಇಂತಾ ಅಲ್ಪಪ್ರಯೋಜನವನ್ನೂ ಇದರಿಂದ ಜನಗಳಿಗೆ ಉಂಟಾಗುವ ತೊಂದರೆಯನ್ನೂ ಅನವಾನವನ್ನೂ ಭಾವಿಸಿದರೆ ಇದು ಕೇವಲನಿಷ್ಪ್ರಯೋಜಕವಾದದ್ದಾಗಿರುತ್ತದೆ. ಮಗಳಾ ಒಬ್ಬ ಪ್ರಯಾಣಸ್ಥನು ವಿಳ್ಳೇದೆಲೆತುದರೆ, ಅವನು ತನ್ನ ಉಪಯೋಗಕ್ಕೆ ಬೇಕಾದಷ್ಟು ಮಾತ್ರವೇ ತರುತ್ತಾನಲ್ಲದೆ, ಅದನ್ನು ಮಾರಿ ಲಾಭಸಂಪಾದಿಸುವಷ್ಟು ಬೇರೆತರುವದಿಲ್ಲವು. ಹಾಗೆ ತರತಕ್ಕವರು ಸಹ ಕೇವಲ ದುರ್ಲಭರಾಗಿಯೂ, ಇಲ್ಲಿನ ನಿಬಂಧನೆಯನ್ನರಿಯದವರಾಗಿಯೂ, ಇರುತ್ತಾರೆ. ಮುಖ್ಯವಾಗಿ, ಕುಂಬಳಕಾಯಿ ಹೋಗುವದನ್ನು ಅರಿಯದೆ ಸಾಸುವೇಕಾಳನ ನಷ್ಟಕ್ಕಾಗಿ ದುಃಖಿಸುವ ಮಂದಮತಿಯಂತೆ ಗವರ್ನಮೆಂಟಿನವರು ಈ ಸುಂಕಕ್ಕಾಗಿ ಹೋರಾಡುವದು ಹಾಸ್ಯಾಸ್ಪದವಾಗಿರುತ್ತದೆ. ಅನೇಕರ ಸ್ತ್ರೀ ಪುರುಷರ ಮಾನಭಂಗಕ್ಕೆ ಮುಖ್ಯಕಾರಣವಾಗಿ ಏರ್ಪಟ್ಟಿರುವ ಈ ಸುಂಕದ ಮೂಲಕ ಮಹೇಯಾನಾ, ಇಲ್ಲಿನ ಒಬ್ಬ ಅಸಿಸ್ಟೆಂಟ್ ಕಮ್ಮಿಷನರಿಗೆಸಲ್ಲುವ ಮೊಬಲಗಿನಷ್ಟು ಸಹ ಉತ್ಪತ್ತಿಯಾಗಲಾರದೆಂದು ತೋರುತ್ತದೆ. ಆದದರಿಂದ ಜನಗಳ ಪ್ರಯೋಜನಾರ್ಥ ಈ ಪದ್ಧತಿಯನ್ನು ತ್ವರೆಯೊಳು ತಪ್ಪಿಸಬೇಕೆಂದು ಕೋರುವೆವು. ಅಥವಾ, ಸ್ಪೆಕ್ಟೇಟರ್ ಪತ್ರಿಕೆಯ ಬಾತಮೀದಾರನು ತಿಳಿಸಿದ ಪ್ರಕಾರ ತಕ್ಕಏರ್ಪಾಡು ಮಾಡಬೇಕಾದ್ದು ಆವಶ್ಯಕವಾಗಿರುತ್ತದೆ.

ಅವ್ರಯಾಣವಾದರೆ, ಹೊತ್ತನುನುಷ್ಯರನ್ನು ಮನಸ್ವೀ ಅಡ್ಡಿಮಾಡಿ ಅಗೌರವವಾತುಗಳನ್ನಾಡದೆ ಅವರವಾತುಗಳಪ್ರಕಾರನಡೆಯುವಂತೆ ಜವಾನರಿಗೆ ಉಚಿತವಾದಹುಕುಂ ಕೊಡಬೇಕು. ಜನಗಳಿಗೆ ಸೋಪಯೋಗಾರ್ಥ ಇಷ್ಟುವುಟ್ಟ ಗಥಾರಾಳವಾಗಿ ತೆಗೆದುಕೊಂಡುಹೋಗಬಹುದೆಂಬ ಒಂದುಪರಿಮಾಣವನ್ನು ಏರ್ಪಡಿಸತಕ್ಕದ್ದು. ಪರಸ್ಥಳಗಳಿಂದ ಬರತಕ್ಕ ಸ್ತ್ರೀಯರನ್ನು ಪರಿಶೋಧಿಸಲಿಕ್ಕೆ ಪ್ರತ್ಯೇಕ ಹೆಂಗಸರನ್ನು ನೋಕರ್ರ್ಮಾಡತಕ್ಕದ್ದಲ್ಲದೆ, ಅಕ್ಷೇಪಣೀಯವಾದ ಈಗಿನ ಅಜಮಾಯಿಷೀಕ್ರಮವನ್ನು ತಪ್ಪಿಸಬೇಕು ಹೆಂಗಸರು ಪುರುಷರ ಗುಂಪಿಗೆ ಸೇರದಿರುವಂತೆ ಅವರಿಗಾಗಿ ಪ್ರತ್ಯೇಕವಾದಒಂದುಮಾರ್ಗವನ್ನು ಕಲ್ಪಿಸತಕ್ಕದ್ದು. ಜವಾನರು ಉಪಶಾಂತರಾಗಿ, ಗೌರವದೊಡನೆ ನಡೆಯುವಂತೆ ಅವರಿಗೆ ಆಜ್ಞಾಪಿಸತಕ್ಕದ್ದು. ಈರೀತಿನಡೆಸಲ್ಪಟ್ಟರೇನೆ ಜನಗಳಮಾನವು ಉಳಿಯುವದೇಹೊರ್ತು ಇಲ್ಲವಾದರೆ ಇದರಿಂದ ಮಹದನರ್ಥಗಳುಂಟಾಗಲಿಕ್ಕೆ ಕಾರಣವಾಗುವದು.

ರೈಲ್ವೆಸ್ಟೇಷನ್‌ಗಳಲ್ಲಿ ಮೂರನೇತರಗತಿ ಪ್ರಯಾಣಸ್ಥರಿಗಾಗಿಒಂದುಸ್ಥಳಏರ್ಪಟ್ಟಿದ್ದಾಗ್ಯೂ ಹೆಂಗಸರಿಗೆ ಮಾತ್ರ ಪ್ರತ್ಯೇಕ ಮರೆಯಾದ ಸ್ಥಳವೇರ್ಪಟ್ಟಿಲ್ಲವು. ಇತರಹೆಂಗಸರು ಈ ರೋಗವನ್ನು ವಿಶೇಷವಾಗಿ ಪರಿಭಾವಿಸದಿದ್ದಾಗ್ಯೂ ಸಂಸಾರಿಗಳನೇಕರು ಬಹುಮಂದಿ ಪುರುಷ ಸಮ್ಮರ್ದವಲ್ಲಿ ಕುಳಿತುಕೊಳ್ಳಲಿಕ್ಕೆ ಬಹಳವಾಗಿ ನಾಚಿಕೊಂಡು ಸಂಕಟಪಡುತ್ತಾರೆ. ಹೊಲತಿಯೊಬ್ಬಳು ಬೂಟ್ಸು ಹಾಟ್ಸುಗಳನ್ನು ಹಾಕಿಕೊಂಡು ಸ್ಟೇಷನ್‌ಪ್ಲಾಟ್‌ಫಾರಮಿಗೆ ಬಂದರೆ ತಾವನ್ಮಾತ್ರದಿಂದಲೇ ಅವಳು ದೊಡ್ಡ ಘರಾಣೆಗೆ ಸೇರಿದವಳಂತೆ ಭಾವಿಸಲ್ಪಡುತ್ತಾಳೆ. ಹಿಂದೂ ಸ್ತ್ರೀಯರು ಎಷ್ಟು ದೊಡ್ಡ ಮಹಸ್ಥರಾಗಿದ್ದರೂ ಎಷ್ಟರ ಮಾನಿಗಳಾಗಿದ್ದರೂ ಯೆಷ್ಟುಗೌರವ್ಯರಾದರೂ ಅವರೆಲ್ಲರೂ ಜಾತಿಮತಭೇದವಿಲ್ಲದೆ ಕುರಿಗಳಂತೆ ಒಬ್ಬರಮೇಲೆ ಒಬ್ಬರು ಒಂದೇಸ್ಥಳದಲ್ಲಿಬಿದ್ದು ಸಾಯಬೇಕಾಗಿರುತ್ತದೆ. ಕೇವಲ ಭೂತದಯೆ ಪಶ್ಚಾತ್ತಾಪದೊಡನೆ ಇಂತವರಿಗಾಗಿ ಇಡಲ್ಪಟ್ಟಿರುವ ಪಾನೋದಕಸ್ಥಾನವೆಂತಾದ್ದಂದರೆ, ಮೇಲೆ ಕಂಡ "ಬೇಡಿಗಳು" ಮತ್ತು ಜಂಟಲ್‌ಮೆನ್‌ಗಳಿಸಿಕ್ಕೊಳ್ಳತಕ್ಕವರು ಮೂತ್ರಪುರೀಷ ವಿಸರ್ಜನ ಮಾಡತಕ್ಕ ಪ್ರದೇಶಕ್ಕೆ ಸೇರಿದ್ದಾಗಿರುತ್ತದೆ. ಇದನ್ನು ಅತಿಶಯೋಕ್ತಿಯೆಂದು ಒಬ್ಬರೂ ಭಾವಿಸಕೂಡದು. ನಮ್ಮ ಮಾತನ್ನು ದೃಢಪಡಿಸಲಿಕ್ಕೆ ಇಲ್ಲಿನ ಪೇಟೆ ರೈಲ್ವೇ ಸ್ಟೇಷನೇ ಸಿದ್ಧವಾಗಿದೆ. ಲಕ್ಷಾಂತರ ರೂಪಾಯಿಗಳ ಪ್ರಯೋಜನವನ್ನು ಯಾರಮೂಲಕ ರೈಲ್ವೇ ಇಲಾಖೆಯವರು ಅನುಭವಿಸುತ್ತಾರೆಯೋ ಅಂತಾ ಜನಗಳ ವಿಷಯದಲ್ಲಿ, ಇದಕ್ಕಿಂತಲೂ ಮತ್ಯಾವ ಉಪಕಾರವನ್ನು ಅವರು ಮಾಡಬಲ್ಲರು. ಮುಖ್ಯವಾಗಿ ಪ್ರಯಾಣಸ್ಥರ ಮಾನಭಂಗಕ್ಕೆ ಸುಂಕದ ಜವಾನರೂ, ಮಿಗಿಲಿದ್ದಕ್ಕೆ ರೈಲ್ವೇ ಇಲಾಖೆಯವರೂ ಕಂಕಣ ಕಟ್ಟಿಕೊಂಡು ನಿಂತಿರುವಂತೆ ತೋರುತ್ತದೆ. ಇದರ ಪರ್ಯವಸಾನವು ಮುಂದೆ ಚಿಂತಿಸತಕ್ಕದ್ದಾಗಿರುವದಾದ್ದರಿಂದ ಈಗಲೇ ಮುಂಜಾಗ್ರತೆ ಪಟ್ಟು ಒಂದುವಿಧ ಏರ್ಪಾಡು ಮಾಡಿದರೆ ಯೆಲ್ಲರಿಗೂ ಕ್ಷೇಮ ವುಂಟಾಗುವದು.

Occasional Notes
ನೈಮಿತ್ತಿಕವಿಷಯನ್ಯಾಸ

The Calcutta High court.—ಕಲಿಕತ್ತಾ ಹೈಕೋರ್ಟ್ ಚೀಫ್ ಜಡ್ಜಿಯವರಾಗಿದ್ದ ಸರ್ ಕಾಂಬರ್ ಪೆಥರಾಮ್‌ಯವರು ಕಳೆದ ತಿಂಗಳ ೨೪ನೇ ತಾರೀಖ್ ಬುಧವಾರದದಿನ ಸ್ವದೇಶ ಗಮನೋದ್ಯುಕ್ತರಾಗಿ ಕಲಿಕತ್ತೆಯಿಂದ ಪ್ರಯಾಣವಾದರು. ಅವರ ಸ್ಥಾನಕ್ಕೆ ಬಂದ ಸರ್ ಫ್ರಾನ್ಸಿಸ್ ಮೆಕ್ಲೀನ್ ಎಂಬವರೂ ಅದೇದಿನ ತಮ್ಮ ಸ್ಥಾನವನ್ನಹಿಸಿದರು.

Cost of war preparations in Turkey and Greece.—ಯುದ್ಧಕ್ಕಾಗಿ ಜಹಜುಗಳು ಮೊದಲಾ ದಸ್ಸನ್ಯಗಳ ತಯಾರೀಬಗ್ಗೆ ತುರ್ಕೀಯವರಿಗೆ ಅಯಿದುಕೋಟಿ ಫ್ರಾಂಕುಗಳು ಖರ್ಚಾದಂತೆಯೂ, ಗ್ರೀಕ್ ಸರ್ಕಾರಕ್ಕೆ ಸದರೀಬಗ್ಗೆ ನಾಲ್ಕುಕೋಟಿ ಫ್ರಾಂಕುಗಳು ಖರ್ಚಾದಂತೆಯೂ ಅಂದಾಜಾಗಿರುತ್ತದೆ. ಸದರೀ ಎರಡು ದಿವಾಳೀ ಖೋರ್ ಸಂಸ್ಥಾನಗಳೂ ಒಂಭತ್ತುಕೋಟಿ ಫ್ರಾಂಕುಗಳು, ಅಂದರೆ ಮೂರುವರೆ ಕೋಟಿ ರೂಪಾಯಿಗಳು ವ್ಯರ್ಥ ಮಾಡಿತೆಂದು ಒಂದಾನೊಂದು ಪತ್ರಿಕೆ ಹೇಳುತ್ತದೆ.

Arrest of a notorious dacoit.—ಪುರಂಧರ ತಾಲ್ಲೂಕಿನಲ್ಲಿ ಪ್ರಸಿದ್ಧ ದರೋಡೇ ಕಳ್ಳನಾಗಿದ್ದುಕೊಂಡು ಅಲ್ಲಿಯೂ ಅಕ್ಕಪಕ್ಕದ ಡಿಸ್ಟ್ರಿಕ್ಟುಗಳಲ್ಲೂ ಪ್ರಬಲ ತಕ್ಸೀರ್‌ಗಳು ನಡೆಸುತಬಂದದಲ್ಲದೆ, ವಾಸುದೇವ ಬಲವಂತ ಫಡ್ಕೆ ಯೆಂಬವನ ಮತ್ತು ತಾಂತಿಯಾತೋಪಿ ಯೆಂಬವನ ದರೋಡೇ ಗುಂಪಿಗೆ ಸೇರಿದ್ದ ಸೋಬನಾ ಯೆಂಬವನು ಈಚೆಗೆ ಹೈದರಾಬಾದ್ ದೇಶದಲ್ಲಿ ದಸ್ತಗಿರಿ ಮಾಡಲ್ಪಟ್ಟು ಪುನೇಗೆ ತರಲ್ಪಟ್ಟಿರುವದಾಗಿಯೂ, ಸದರೀ ಕಳ್ಳನನ್ನು ದಸ್ತಗೀರ್ ಮಾಡಿದವರಿಗೆ ಇನಾಂ ಕೊಡುವಂತೆ ಗವರ್ನಮೆಂಟಿನವರು ಮುಂಜೂರ್ಮಾಡಿರುವಂತೆಯೂ ಪುನೇ ಅಬ್ಸರ್ವರ್ ಪತ್ರಿಕೆಯ ಮೂಲಕ ತಿಳಿಯಬರುತ್ತದೆ.

An offer declined—ಪದಭ್ರಷ್ಟರಾದ ಬರ್ಮಾದೇಶದ ಅರಸರಾದ ತೀಬಾಯವರ ಭಾರ್ಯೆಯವರ ಪ್ರಸವಕಾಲದಲ್ಲಿ ಮಗುವನ್ನು ಬರಮಾಡಿಕೊಳ್ಳುವದಕ್ಕಾಗಿ ನವರತ್ನಖಚಿತವಾದ ಒಂದು ಚಿನ್ನದ ತಟ್ಟೆ ತಯಾರ್ ಮಾಡಿಸುತಲಿದ್ದಾರೆಂದು ಹಿಂದೆ ತಿಳಿಸಿದ್ದೆವಷ್ಟೆ. ಆಕೆಯವರ ಪ್ರಸವಕಾಲದಲ್ಲಿ ಹಾಜರಿದ್ದ ಸರ್ಜನ್ ಮೇಜರ್ ಬ್ರಾಂಫೀಲ್ಡಿಯವರಿಗೆ ಅರಸರವರು ಅದಂ ಇನಾಂಕೊಡಲು ಗವರ್ನಮೆಂಟಿನ ಹುಕುಂಅನುಸರಿಸಿ ಸಡರೀಸರ್ಜನ್‌ರವರು ಸದರೀ ತಟ್ಟೆಯನ್ನು ತೆಗೆದುಕೊಳ್ಳುವದಿಲ್ಲವೆಂದು ಹೇಳಿಬಿಟ್ಟರು. ಪ್ರಸವಕಾಲದಲ್ಲಿ ಹಾಜರಿದ್ದ ಸೂಲಗಿತ್ತಿ ಸರ್ಕಾರ ನೌಕರಳಲ್ಲವಾಗಿ ಆಕೆಗೆ ಕೊಡಲ್ಪಟ್ಟ ಹತ್ತುಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ಕ್ರಯ ಬಾಳತಕ್ಕ ಒಂದು ತಟ್ಟೆಯನ್ನು ಆಕೆಯುತೆಗೆದುಕೊಂಡಳು

Amalgamation of District and Post Office Savings Banks.—ಪೋಸ್ಟಾಫೀಸ್ ಮತ್ತು ಡಿಸ್ಟ್ರಿಕ್ಟ್ ಸೇವಿಂಗ್ಸ್ ಬ್ಯಾಂಕುಗಳನ್ನು ಒಂದಾಗಿ ಸೇರಿಸಬೇಕಾದ ವಿಷಯದಲ್ಲಿ ಮಂತ್ರಾಲೋಚಕ ಸಮಾಜದೊಳಗಣ ಗವರ್ನರ್ ಜನರಲ್ ಸಾಹೇಬರವರು ನಿರ್ಣಯಿಸಿರುವದೇನಂದರೆ.— ಡಿಸ್ಟ್ರಿಕ್ಟ್ ಮತ್ತು ಪೋಸ್ಟಲ್ ಸೇವಿಂಗ್ಸ್ ಬ್ಯಾಂಕುಗಳು ಒಂದಾಗಿ ಸೇರಿಸಲ್ಪಡತಕ್ಕದ್ದು, ಮತ್ತು ಟ್ರಿಜರೀಗಳ ಯೇರ್ಪಾಡುಗಳಿಗಿಂತಲೂ ಪೋಸ್ಟಾಫೀಸ್ ಯೇರ್ಪಾಡುಗಳು ಬಹಳ ವಿಸ್ತಾರವಾಗಿಯೂ ಪ್ರಜೆಗಳಿಗೆ ವಿಶೇಷ ಅನುಕೂಲ್ಯವುಳ್ಳದ್ದಾಗಿಯೂ ಇರುವದರಿಂದ ಡಿಸ್ಟ್ರಿಕ್ಟ್ ಸೇವಿಂಗ್ಸ್ ಬ್ಯಾಂಕುಗಳು ಮೌಕೂಫ್ ಮಾಡಲ್ಪಟ್ಟು ಅವುಗಳ ಲೆಕ್ಕಗಳೆಲ್ಲವು ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕುಗಳಿಗೆ ವರ್ಗಮಾಡಲ್ಪಡತಕ್ಕವು. ೧೮೯೬ನೇ ಇಸವಿ ಜನವರಿ ೮ನೇ ಮರ್ಕ್ಯುವುಳ್ಳ ಗವರ್ನಮೆಂಟ್ ನಿರ್ಣಯದಲ್ಲಿ, ೧೮೯೬ನೇ ಏಪ್ರಿಲ್ ಗುರ್ರೇ ತಾ|| ಲಾಗಾಯತು ಗವರ್ನಮೆಂಟ್ ಡಿಸ್ಟ್ರಿಕ್ಟ್‌ಸೇವಿಂಗ್ಸ್‌ಬ್ಯಾಂಕುಗಳೆಲ್ಲವಜಾಮಾಡಲ್ಪಟ್ಟು ಅವುಗಳ ಲೆಕ್ಕಗಳೆಲ್ಲವು ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕುಗಳಿಗೆ ವರ್ಗ ಮಾಡಲ್ಪಡುವದೆಂದು ತಿಳಿಸಲ್ಪಟ್ಟದೆ. ಮದರಾಸ್ ಮತ್ತು ಮುಂಬೈ ಬ್ಯಾಂಕುಗಳ ಆಡಳಿತಕ್ಕೆ ಒಳಪಟ್ಟಿರುವ ಡಿಸ್ಟ್ರಿಕ್ಟ್ ಟ್ರಿಜರಿಗಳಿಗೆ ಸೇರಿದ ಸೇವಿಂಗ್ಸ್ ಬ್ಯಾಂಕುಗಳು ೧೮೯೬ನೇ ಇಸವಿ ಜೂನ್ ಗುರ್ರೇ ತಾರೀಖ್ ಲಾಗಾಯತು ವಜಾ ಮಾಡಲ್ಪಡುವವೆಂದು ಈಗ ತಿಳಿಸಲ್ಪಡುತ್ತದೆ. ಹಾಗೆ ವಜಾಮಾಡಲ್ಪಡುವಕಾಲದೊಳು ಈಸೇವಿಂಗ್ಸ್ ಬ್ಯಾಂಕಗಳಲ್ಲಿಯೇನಾದರೂ ಶಿಲ್ಕುಗಳು ಇರುವದಾದರೆ ಅವು ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕಗಳಿಗೆ ವರ್ಗ ಮಾಡಲ್ಪಡುವವು. ಈ ಹುಕುಂ ತಲಪಿದ ತಾರೀಖ್ ಲಾಗಾಯತು ಮದರಾಸ್ ಮತ್ತು ಮುಂಬೈ ಪ್ರೆಸಿಡೆನ್ಸಿ ಡಿಸ್ಟ್ರಿಕ್ಟ್ ಟ್ರಿಜರಿಗಳಿಗೆ ಸೇರಿದ ಸೇವಿಂಗ್ಸ್ ಬ್ಯಾಂಕಗಳಲ್ಲಿ ಹೊಸ ಲೆಕ್ಕಗಳನ್ನು ಇಡಕೂಡದು. ಯಾರಾದರು ಈ ಬ್ಯಾಂಕುಗಳಲ್ಲಿ ಲೆಕ್ಕ ಇಟ್ಟುಕೊಳ್ಳಲಿಕ್ಕೆ ಅಪೇಕ್ಷಿಸಿದರೆ ಅಂತವರು ಪೋಸ್ಟಾಫೀಸ್ಸಿಗೆ ತಿಳಿಸಿಕೊಳ್ಳುವಂತೆ ಹುಕುಂ ಕೊಡಬೇಕು. ಈ ಬ್ಯಾಂಕುಗಳಲ್ಲಿ ಡಿಪಾಜಿಟ್ ಇಟ್ಟಿರತಕ್ಕವರು ಈ ಬ್ಯಾಂಕುಗಳು ಬಂದಾಗುವ ಕಾಲದೊಳಗಾಗಿ, ಲೆಕ್ಕಗಳ ವರ್ಗದಬಗ್ಗೆ ಈಗ ಜಾರೀಯಲ್ಲಿರುವ ನಿಬಂಧನೆಗಳನ್ನನುಸರಿಸಿ, ತಮ್ಮ ಲೆಕ್ಕಗಳನ್ನು ಯಾವದಾದರು ಪೋಸ್ಟಾಫೀಸ್ ಸೇವಿಂಗ್ಸ್‌ಬ್ಯಾಂಕಿಗೆ ವರ್ಗ ಮಾಡಬೇಕೆಂದು ಬರೆದುಕೊಳ್ಳತಕ್ಕದ್ದು. ಮದರಾಸ್ ಮತ್ತು ಮುಂಬೈ ಅಕೌಂಟೆಂಟ್ ಜನರಲ್‌ಗಳೂ ಪೋಸ್ಟಾಫೀಸ್ ಡೈರೆಕ್ಟರ್ ಜನರಲವರೂ ಮೇಲೆ ತಿಳಿಸಿದಂತೆ ವರ್ಗ ಮಾಡಿಕೊಳ್ಳುವ ವಿಷಯದಲ್ಲಿ ಪ್ರೋತ್ಸಾಹ ವುಂಟು ಮಾಡುವದಕ್ಕೆ ಅಧಿಕಾರ ಕೊಡಲ್ಪಟ್ಟದಾರೆ, ಎಂಬದು.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕುಜಾತವೃತ್ತಾಂತಗಳು.

The Hindu new year's day.—ಈದಿನ ಯುಗಾದಿ ಹಬ್ಬವಾದದರಿಂದ ಈಸಂಸ್ಥಾನದವಿಸ್ಟು ಇಲಾಖೆಗಳಿಗೂ ರಜಾಕೊಡಲ್ಪಟ್ಟಿರುತ್ತದೆ.

Transfer.—ಇಲ್ಲಿನ ಸೆಂಟ್ರಲ್‌ಕಾಲೇಜಿನಲ್ಲಿ ಅಸಿಸ್ಟೆಂಟ್‌ಮಾಸ್ಟರಾಗಿದ್ದ ಮೆ|| ನಾರಿಸ್ ಎಂಬವರು, ಇಲ್ಲಿನ ಮರಮ್ಮತ್ ಇಲಾಖೆಯಲ್ಲಿ ಬೇರೊಂದು ಕೆಲಸಕ್ಕೆ ವರ್ಗಮಾಡಲ್ಪಟ್ಟರೆಂದು ತಿಳಿಯಬರುತ್ತದೆ.

Chief Court Criminal Sessions.—ನಾಳೆಯದಿನ ಇಲ್ಲಿನ ಚೀಫ್‌ಕೋರ್ಟ್ ಕ್ರಿಮಿನಲ್ ಸೆಷನ್ ವಿಚಾರಣೆಗೆ ಪ್ರಾರಂಭವಾಗಿ ಮೆ|| ಜಸ್ಟಿಸ್ ತಂಬುಶೆಟ್ಟರವರಿಂದ ನಡೆಸಲ್ಪಡುವದು. ಇದುವರಿವಿಗೆ ಒಂದು ಖೂನೀಮೊಕದ್ದಮೆ ಮಾತ್ರವೇ ಕಮಿಟಾಗಿರುವಂತೆ ಕಾಣುತ್ತದೆ.

A memento.—ಈ ಸಂಸ್ಥಾನದ ಕಂಟ್ರೋಲರಾಗಿದ್ದ ಮೆ|| ಹಚಿನ್ಸನ್‌ಯವರು ತಮ್ಮ ತಾಬೇದಾರಿ ಉದ್ಯೋಗಸ್ಥರನ್ನು ತಮ್ಮ ಜ್ಞಾಪಕದಲ್ಲಿಟ್ಟುಕೊಳ್ಳುಂಡಿರತಕ್ಕಬಗ್ಗೆ, ಕಳೆದ ಶುಕ್ರವಾರ ದಿನ ಕಬ್ಬನ್ ಹೊಟೆಲ್‌ನಲ್ಲಿ ಸದರೀಯವರನ್ನ ಗುಂಪಾಗಿ ಫೋಟೋಗ್ರಾಫ್ ತೆಗೆಯಿಸಿಕೊಂಡರು.

The new Assistent Resident.—ಈಸಂಸ್ಥಾನದ ಅಸಿಸ್ಟೆಂಟ್ ರಸಿಡೆಂಟರಾದ ಮೇಜರ್ ನೆವಿಲ್‌ಯವರು ಫರ್ಲೋ ರಜಾ ಪಡೆದುಕೊಂಡು ಹೋಗುತ್ತಾರಾಗಿ ಅವರ ಕೆಲಸವನ್ನು ಬದಲೀ ನೋಡುವಂತೆ ನೋಕರರ್ ಮಾಡಲ್ಪಟ್ಟಿರುವ ಮೇಜರ್ ಫ್ರೇಜರ್‌ಯವರು ಈದಿನ ಇಲ್ಲಿಗೆ ಬರುವರೆಂದು ನಿರೀಕ್ಷಿಸಲ್ಪಟ್ಟಿದೆ.

Bonus.—ಕಂಟ್ರೋಲರಾದ ಮೆ|| ಹಚಿನ್ಸನ್ ಯವರು ಈ ತಿಂಗಳ ಗುರ್ರೇತಾರೀಖಿನಲ್ಲಿ ತಮ್ಮ ಕೆಲಸದ ಚಾರ್ಜ್‌ಗಳನ್ನೆಲ್ಲ ಆಯಾ ಅಧಿಕಾರಿಗಳಿಗೆ ಒಪ್ಪಿಸಿ ಕೆಲಸದಿಂದ ನಿವೃತ್ತರಾದರು ಇವರಿಗೆ ೪೦೦೦ ರೂಪಾಯಿಗಳ ಬೋನಸ್ ಮೂರು ತಿಂಗಳತಲಬ್ ಒಟ್ಟು ಏಳುಸಾವಿರಚಿಲ್ಲರೆರೂಪಾಯಿಗಳು ಮೈಸೂರು ಗವರ್ನಮೆಂಟಿನವರಿಂದ ಕೊಡಲ್ಪಟ್ಟವು.

The Registrar of the Resident's Court.—ಇಲ್ಲಿನ ಬ್ರಿಟಿಷ್‌ರೆಸಿಡೆಂಟರ ಕೋರ್ಟ್ ರಿಜಿಸ್ಟ್ರಾರಾದ ಮೆ|| ಅನಂತಸ್ವಾಮಿರಾಯರವರು, ಬ್ರಿಟಿಷ್ ರೆಸಿಡೆಂಟರ ಅನುಮತಿಯಮೇಲೆ, ಮಹಾರಾಜಾ ಸರ್ಕಾರದಲ್ಲಿ ಒಬ್ಬ ಅಸಿಸ್ಟೆಂಟ್ ಕಮ್ಮಿಷನರಾಗಿ ನೋಕರರ್ಮಾಡಲ್ಪಟ್ಟು ಹಾಸನ ಡಿಸ್ಟ್ರಿಕ್ಟಿಗೆ ನಿಯಮಿಸಲ್ಪಡುವರೆಂದು ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ಹೇಳುತ್ತದೆ.

Erratum.—ಗತವಾರದಲ್ಲಿ ಪ್ರಕಟಿಸಲ್ಪಟ್ಟ ಪ್ರಥಮಶಾಖೆಯ ವಿಷಯಕವಾದ ಒಂದುಕಾಗದದಲ್ಲಿ "ಶೃಂಗೇರಿಮಠದ ನಿರೂಪವು ಅದೇಗ್ರಂಥದಲ್ಲಿ ಪ್ರಕಟಿಸಲ್ಪಟ್ಟದೆ" ಎಂದು ಇರುವದಕ್ಕೆ ಬದಲಾಗಿ "ಡಿಸೆಂಬರ್‌ತಿಂಗಳ ಸಂಚಿಕೆಯಲ್ಲಿಛಾಪಿಸಿಸದೆ" ಎಂಬದಾಗಿ ಪ್ರಮಾದವಶಾತ್ ಛಾಪಿಸಾಗಿರುವದರಿಂದ ಅದನ್ನು ಜನಗಳು ಮೇಲೆ ಕಂಡಂತೆ ಸರಿಯಾಗಿ ಓದಿಕೊಳ್ಳುವರೆಂದು ನಂಬುತ್ತೇವೆ.

The Civil Court, C and M. Station.—ಸಿವಿಲ್ ವ ಮಿಲಿಟರಿ ಸ್ಟೇಷನ್ ಸಿವಿಲ್‌ಕೋರ್ಟ್ ಚೀಫ್ ಕ್ಲರ್ಕಾಗಿದ್ದ ಮೆ|| ಅಬ್ದುಲ್ ರಹಮಾನ್ ಯವರು ಈಗ ನಡೆಯುತ್ತಿರುವ ಯೆರಡನೇ ಮ್ಯಾಜಿಸ್ಟ್ರೇಟ್‌ಕೆಲಸದಲ್ಲಿ ಕಾಯಂಮಾಡಲ್ಪಟ್ಟರೆಂತಲೂ ಅದರ ದೆಸೆಯಿಂದ, ಸಿವಿಲ್‌ಕೋರ್ಟ್‌ನಲ್ಲಿ ಹುಂಗಾಮಿಯಾಗಿ ಮಾಡಲ್ಪಟ್ಟಿದ್ದ ಯೇರ್ಪಾಡುಗಳೆಲ್ಲವೂ ಕಾಯಂಮಾಡಲ್ಪಟ್ಟವೆಂತಲೂ ತಿಳಿಯಬರುತ್ತದೆ.

Mr. A. Adolphus, B. A.—ಬೆಂಗಳೂರು ಸೆಂಟ್ರಲ್ ಕಾಲೇಜ್ ಅಸಿಸ್ಟೆಂಟ್ ಮ್ಯಾಸ್ಟರಾದ ಮೆ|| ಅಡಾಲಿಫಸ್ ಯವರು, ಕಾಕಿನಾಡಾ ಕಾಲೇಜಿಗೆ ಹೊರಟು ಹೋಗುತ್ತಾರಾಗಿ, ಅವರು ಇಲ್ಲಿನ ಕಾಲೇಜನಲ್ಲಿ ಮಾಡಿದ ಶ್ಲಾಘ್ಯವಾದ ನೌಕರಿಯ ಜ್ಞಾಪಕಾರ್ಥ ಕಾಲೇಜ ವಿದ್ಯಾರ್ಥಿಗಳು

ಅವರಿಗೆ ಒಂದು ವಿಜ್ಞಾಪನಪತ್ರಿಕೆಯನ್ನೂ ಬುಕ್ಕನ್ನೂ ಕೊಡಬೇಕೆಂದು ಆಲೋಚಿಸುತಲಿರುವುದಾಗಿ ಕೇಳುತ್ತೇವೆ.

Pettah Municipal school.- ಪೇಟೆಮ್ಯೂನಿಸಿಪಲ್ ಸ್ಕೂಲಿನಲ್ಲಿ ಮೆಟ್ರಿಕ್ಯುಲೇಷನ್ ಕ್ಲಾಸ್ ತೀರ್ಪಡಿಸುವವರ ಮೂಲಕ ಜಾಸ್ತೀ ಖರ್ಚಾಗುವದೆಂತಲೂ, ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಬೇಕಾದ ಗ್ರಂಥಗಳು ಹೇಳುವದಕ್ಕೆ ಪಾಠಶಾಲೆಗಳು ಬಹಳವಾಗಿರುತವೆಯೆಂತಲೂ ಯೋಚಿಸಿ, ಸದರೀ ಮ್ಯೂನಿಸಿಪಲ್ ಸ್ಕೂಲ್ ಕಮಿಟಿಯವರು ಅದರಲ್ಲಿ ಮೆಟ್ರಿಕ್ಯುಲೇಷನ್ ತರಗತಿ ಯೇರ್ಪಾಡು ಮಾಡುವದಿಲ್ಲವೆಂದು ನಿರಾಕರಿಸಿದಂತೆ ತಿಳಿಯಬರುತಿದೆ.

The new Commander-in-Chief of Madras.—ಮದರಾಸ್ ಸೇನೆಯ ಹೊಸನಾಯಕನ ಇನ್‌ಚೀಫ್ ರವರಾದ ಸರ್ ಹೆರ್ಬರ್ಟ್ ಮ್ಯಾಕ್ ಫರ್ಸನ್‌ಯವರು ತಮ್ಮ ಪರಿಜನ ಸಮೂಹದೊಡನೆ ಕಳೆದ ಬುಧವಾರದವಿವಸ ಈಪಟ್ಟಣಕ್ಕೆ ಬಂದು ಇಲ್ಲಿನ ಬ್ರಿಟಿಷ್ ರೆಸಿಡೆಂಟರ ಬಂಗ್ಲೆಯಲ್ಲಿ ಇಳಿದಿದ್ದರು. ಸದರೀ ಮೊಕ್ಕಾಮುಸ್ವಾರು ಕಳೆದಬೃಹಸ್ಪತಿವಾರದ ದಿನ ಮಧ್ಯಾನ್ಹ೩ ಘಂಟೆಯ ಮೇಲೆ ಹಾಸ್ಪಿಟಲ ಕಚ್ಚೇರಿ ಮುಂತಾದ ಇಲ್ಲಿನ ಸಿವಿಲ್ ವ ಮಿಲಿಟರಿಡಿಪಾರ್ಟ್‌ಮೆಂಟುಗಳನ್ನೆಲ್ಲಾ ನೋಡಿ ಕೊಟ್ಟರು. ಅದೇದಿನ ರಾತ್ರಿ ಈ ಪ್ಲೇಸನ್ನಿಲ್ಲಿರುವ ಸೇನೆಗಳ ರಿವ್ಯೂ ನಡೆಯಿತು. ಸರ್‌ಹರ್ಬರ್ಟ್ ಮ್ಯಾಕ್‌ಫರ್ಸನ್‌ರವರು ಮೊನ್ನೆ ಮೈಸೂರಿಗೆ ಹೋಗಿ ನೀಲಗಿರಿಗೆಹೊರಟು ಹೋದರು.

Re-constitution of Districts.—ಮಹಾರಾಜಾ ಸರ್ಕಾರದವರು, ಈಗ ನೂತನವಾಗಿ ಏರ್ಪಡಿಸಿದ ಡಿಸ್ಟ್ರಿಕ್ಟುಗಳಿಗೆ ವ ತಾಲ್ಲೂಕುಗಳಿಗೆ ಬೇಕಾದ ಲವಾಜಮಾ ಏರ್ಪಾಡಂತು ಬಹಳ ಪರ್ಯಾಲೋಚಿಸುತ ಲಿವಾರೆಂತಲೂ, ಕೆಲವುಕಾಲದಿಂದ ನಿರೀಕ್ಷಿಸುತಲಿದ್ದ ಈಸಂದರ್ಭದಲ್ಲಿ ಕೆಲವರಿಗೆ ಹೊಸದಾಗಿ ಅಸಿಸ್ಟೆಂಟ್ ಕಮಿಷನರ್ ಕೆಲಸ ಕೊಡಲ್ಪಡುವದೆಂತಲೂ, ಅದಕ್ಕೆ ತಕ್ಕ ಇಸಂ ಚುನಾವಣೆಯು, ಕೆಲವು ಕಾರಣಗಳಿಂದ ಗವರ್ನ್‌ಮೆಂಟಿನವರಿಗೆ ಆಲೋಚನೀಯವಾಗಿ ಏರ್ಪಟ್ಟಿದೆಯೆಂತಲೂ ಕೇಳುತ್ತೇವೆ. ಮಹಾರಾಜಾ ಸರ್ಕಾರದವರಿಗೆ ಪ್ರಜಾರಂಜಕರಾಗಬೇಕೆಂಬ ಅಪೇಕ್ಷೆಯು ಉತ್ಕಟವಾಗಿರುವದರಿಂದಲೂ, ಅವರು ಕೀರ್ತಿ ಪ್ರತಿಷ್ಠಾ ಸಂಪಾದನದೊಳು ಅತ್ಯಾಸಕ್ತರಾಗಿರುವದರಿಂದಲೂ ಈಗ ಬಹುಜನ ಕ್ಷೇಮಾಪೇಕ್ಷಿಗಳಾದ ಶಿವ ನಿಯಮಗಳಂ ಮಾಡಿದ ಅಂಶವು ಅನೇಕರಿಗೆ ಸಂತೋಷಕರವಾಗಿರುತಿದೆ. ಈಗ ಮಾಡತಕ್ಕ ಏರ್ಪಾಡುಗಳೆಲ್ಲವು ಒಬ್ಬರಿಗೂ ಅತೃಪ್ತಿಯನ್ನುಂಟುಮಾಡದವಾಗಿರಬೇಕೆಂದು ಕೋರುವೆವು. ಸಮರ್ಥರಾಗಿಯೂ ವಿದ್ಯಾವಂತರಾಗಿಯೂ ಇರತಕ್ಕವರು ಬಹುಮಂದಿ ಈಗ ನಿರುದ್ಯೋಗಿಗಳಾಗಿ ಇರುವದರಿಂದ ಅವರ ಪರಿಶ್ರಮವು ಉಚಿತವಾಗಿ ಇಂತಾಸಂದರ್ಭಗಳಲ್ಲಿ ಪುರಸ್ಕರಿಸಲ್ಪಡದೆಹೋದರೆ ಹಿಂದಿನರೋದನವೇ ಮರಳಿ ತಲೆದೋರಿ ವ್ಯರ್ಥವಾದ ಗಲ್ಲಲಿಕ್ಕೆ ಕಾರಣವಾಗುವದು. ಇದರಿಂದ ತಾತ್ಕಾಲಿಕವಾದ ಬಾಧಕವೊಂದೂ ಗವರ್ನ್‌ಮೆಂಟಿನವರಿಗೆ ಪ್ರಾಪ್ತವಾಗದೆಹೋದಾಗ್ಯೂ, ಅವರ ಪ್ರಯತ್ನೋದ್ದೇಶಗಳಿಗೆ ಭಂಗವನ್ನುಂಟು ಮಾಡದೆ ಇರಲಾರದು. ಈವಿಷಯವಾಗಿ ಗವರ್ನ್‌ಮೆಂಟಿನವರನ್ನು ಎಚ್ಚರಿಸಲಿಕ್ಕೆ ಅವರ ಹಿಂದಿನ ಅನುಭವವೇ ಸಾಕಾಗಿರುವದರಿಂದ ನಮ್ಮ ಲೇಖಿನಿಯನ್ನು ವ್ಯರ್ಥಗೊಳಿಸಲಾರೆವು. ಮುಖ್ಯವಾಗಿ ಹಿಂದೆ ಅನುಸರಿಸಲ್ಪಟ್ಟ ರಾಜ್ಯತಂತ್ರಕ್ರಮವು ಸರ್ವತ್ರ, ಅಂದರೆ ಹೈದರಾಬಾದ್ ತಿರುವಾಂಕೂರ್ ಬರೋಡೆ ಮುಂತಾದ ಇತರಕಡೆಗಳಲ್ಲೆಲ್ಲ ವಿಫಲವಾಗಿ ಬಹುವಿಧ ಅನರ್ಥಗಳನ್ನುಂಟುಮಾಡಿತೆಂಬ ಅಂಶವು ಮಹಾರಾಜಾ ಸರ್ಕಾರದವರ ಅಂತರಂಗಕ್ಕಾದರೂ ತಿಳಿಯದೇಯಿರಬಹುದಾದದರಿಂದ ಅದನ್ನೆಲ್ಲ ಅವರು ಈಸಂದರ್ಭದೊಳು ಪರ್ಯಾಲೋಚಿಸದಿರಲಾರರೆಂದು ನಂಬುತ್ತೇವೆ.

Promotions.—ಈಪತ್ರಿಕೆಯಮತ್ತೊಂದು ಭಾಗದಲ್ಲಿ ಪ್ರಕಟಸಲ್ಪಟ್ಟಿರುವ ಮೈಸೂರು ಗೆಜೆಟಿನವೆಕೆಯಿಂದ ಈ ತಿಂಗಳುಮೊದಲು ನಡೆಯುವದಾಗಿದ್ದ ಏರ್ಪಾಡುಗಳ ತಫಶೀಲ್ ಜನಗಳಿಗೆ ತಿಳಿಯಬರಬಹುದು. ಈಏರ್ಪಾಡುಗಳಿಂದ, ಎರಡು ಡಿಸ್ಟ್ರಿಕ್ಟುಗಳೂ ಐದು ತಾಲ್ಲೂಕುಗಳು ಸಹ ಮರಳಿ ಏರ್ಪಾಡಾದಂತೆಯಾಯಿತು. ಇದರಿಂದ ಬಹುಮಂದಿ ಬಡವರಿಗೆ ಯುಕ್ತವಾಗಿಮಾಡಿದರೆ ಜೀವನಕ್ಕೆ ಆಧಾರಉಂಟುಮಾಡಿದಂತೆ ಆಗುವದು. ಹೀಗೆ ಜಾಸ್ತೀಮಾಡಲ್ಪಟ್ಟಖರ್ಚಿಗೆ ಏನೊಂದು ರೂಪವಾಗಿ ಆದಾಯ ತೋರಿಸಲ್ಪಟ್ಟಿತು. ಅದುಹ್ಯಾಗಂದರೆ, ಕಂಟ್ರೋಲರ್ ಮೆ|| ಹಡಸನ್‌ಯವರು ರಮ್ಮತಲೆಬಸೊಡನೆ ಇತರ ಕೆಲಸಗಳನ್ನುನೋಡುತಲಿದ್ದಬಗ್ಗೆ ಅವುಗಳಿಗೆಲ್ಲ ಪ್ರತ್ಯೇಕ ರುಸುಂ ಪಡೆಯುತಲಿದ್ದರು ಅವರು ಕೆಲಸದಿಂದ ನಿವೃತ್ತರಾದಮೇಲೆ ಸದರೀ ರುಸುಂಗಳೆಲ್ಲ ಮಾಫೂಫ್ ಮಾಡಲ್ಪಟ್ಟವು. ಈಗಕಂಟ್ರೋಲರಾಗಿ ಹೊಸಬರಾದ ಮೆ|| ರಂಗಸ್ವಾಮಿಅಯ್ಯಂಗಾರ್ರವರಿಗೆ ಈ ತಿಂಗಳ ಮೊದಲು ೩೦೦ ರೂಪಾಯಿಗಳು ಸಲ್ಲುವವು. ಇದರಿಂದ ಅವರಿಗೆ ೫೦ ರೂಪಾಯಿಗಳ ಇಜಾಫೆಕೊಟ್ಟಂತೆ ಆಯಿತು. ಕಂಟ್ರೋಲರ್ ತಲಬ ಮುಂದೆ ಒಂದು ಡಿ|| ಡೆ||ಕಮಿಷನರ್ ತಲಬಿಗೆ ಸಮನಾಗಿ ಮಾಡಲ್ಪಡುವದೆಂತಲೂ, ಸಾಲೀಯಾನಾ ಇಜಾಫೆ ಮೂಲಕ ಅವರ ಸಂಬಳ ಅದಕ್ಕೆ ಸರಿಮಾಡಲ್ಪಡುವದೆಂತಲೂ ತಿಳಿಯಬರುತದೆ. ಖಜಾನೆಗಾಗಿ ಪ್ರಾಪ್ತವಾದಂತೆ ಬೇರೇ ರುಸುಂ ಸಲ್ಲಲಾರದು.

ರಿಜಿಸ್ಟ್ರಾರ್ ಜನರಲ್ಲವರಿಗೆ ಇದುವರಿವಿಗೂ ೫೦ ರೂಪಾಯಿಗಳ ಅಲೋವನ್ಸ್ ಕೊಡಲ್ಪಡುತಲಿತ್ತು. ಸದರೀ ಕೆಲಸಕ್ಕೆ ಲೆಜಿಸ್ಲೆಟಿವ್ ಸೆಕ್ರೆಟರಿ ಮೆ|| ಮಾಕ್ಕೊವರದಯ್ಯಂಗಾರ್ರವರು ಹೊಸಬರಾದದರಿಂದ ಅವರಿಗೆ ೧೦೦ ರೂಪಾಯಿಗಳು ಇಜಾಫೆಯೊಡನೆ ಮುಂದೆ ೪೦೦ ರೂಪಾಯಿಗಳು ಕೊಡಲ್ಪಡುವವು. ಎಡ್ಯುಕೇಷನಲ್ ಸೆಕ್ರೆಟರಿ ಮೆ|| ರೈಸ್‌ಯವರಿಗೆ ಶಾಸನಗಳ ಪರಿಶೀಲನಾರ್ಥ ೧೫೦ ರೂಪಾಯಿಗಳ ಇಜಾಫೆ ಕೊಡಲ್ಪಟ್ಟಿತು. ಮುಂದೆ ಅವರಿಗೆ ೧೫೦ ರೂಪಾಯಿಗಳು ಸಲ್ಲುವವು. ಮೆ|| ಲಿನಾರ್ಡಯವರಿಗೆ ಗವರ್ನ್‌ಮೆಂಟ್ ಪ್ರೆಸ್ ಸೂಪರಿಂಟೆಂಡೆಂಟ್ ಕೆಲಸ ಸಹ ಸೇರಿಸಿ ಕೊಡಲ್ಪಟ್ಟದರಿಂದ ನೂರುರೂಪಾಯಿಗಳು ಜಾಸ್ತೀ ಮಾಡಲ್ಪಟ್ಟಿತು. ಈವಿಧ ಏರ್ಪಾಡಿನಿಂದ ಸಾಲೀಯಾನಾ ಸರ್ಕಾರಕ್ಕೆ ಒಂದುಸಾವಿರ ರೂಪಾಯಿಗಳು ಕೊರತೆಯಾಗುತಿವೆ.

CORRESPONDENCE

ಇದರಡಿಕೆಂಡ ಕಾಗದಗಳಲ್ಲಿ ತಿಳಿಸಲ್ಪಟ್ಟಿರುವ ಅಭಿಪ್ರಾಯಗಳಿಗೆ ನಾವು ಜವಾಬ್‌ದಾರರಲ್ಲವು. —ಎ.ಡಿ.

ಅಯ್ಯಾ,—ತಮ್ಮ ಕಳೆದವಾರದ, ಅಂದರೆ ಮಾರ್ಚ್ ಗುಡಿಪ್ಪ ೨೯ನೇ ತಾರೀಖಿನ ಪತ್ರದಲ್ಲಿ ಮೈಸೂರು ರೈಲ್ವೆಯನ್ನ ಮೈಸೂರು ಸರ್ಕಾರದವರು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯವರಿಗೆ ಕೊಟ್ಟಹಾಗೂ, ಮತ್ತು ಸದರೀ ಕಂಪೆನಿಯವರು ಮೈಸೂರು ಲೈನನ್ನು ಏಪ್ರಿಲ್‌ಗುಪ್ರೀ ತಾರೀಖಿನ ದಿವಸ ಚಾರ್ಜ್‌ತಹಿಸುವಹಾಗೂ, ಮತ್ತು ಈಗ ಮೈಸೂರುರೈಲ್ವೇ ಇಲಾಖೆಯಲ್ಲಿರುವ ಉದ್ಯೋಗಸ್ಥರನ್ನೆಲ್ಲ ಕಂಪೆನಿಯವರುತಮ್ಮನೌಕರಿಯಲ್ಲಿ ಇಟ್ಟಕೊಳ್ಳದೆ ಇರುವಹಾಗೂ, ಇದರಿಂದ ಸದರೀನೌಕರರು ಗಾಬರಿಯೂ, ವ್ಯಸನವೂ ಪಡುತಿರುವಹಾಗೂ ಬರೆಯೋಣವಾಗಿದೆ. ಈ ವಿಷಯವಾಗಿ ನಾನು ಸ್ವಲ್ಪ ಬರೆಯಲು ಉದ್ಯೋಗಿಸಿದ್ದೇನೆ. ಇದರಿಂದ ಈ ಮೈಸೂರು ರೈಲ್ವೇ ಇಲಾಖೆಯಲ್ಲಿರತಕ್ಕವರೆಲ್ಲರೂ ತಾವು, ಗಾಬರಿ ಪಡಬೇಕಾದ ಅವಶ್ಯಕವಿಲ್ಲವೆಂದು ತಿಳಿಯಲಿಕ್ಕೆ ಬಹುಳ ಸಂತೋಷಿಸುವರು. ಆದದರಿಂದ ತಾವು ನನ್ನಮೇಲೆ ಕರುಣವಿಟ್ಟು ತಮ್ಮ ಮುಂದಿನವಾರದ ಪತ್ರಿಕೆಯಲ್ಲಿ ಅಗತ್ಯ ಛಾಪಿಸಬೇಕೆಂದು ಪ್ರಾರ್ಥಿಸುತ್ತೇನೆ. ದಕ್ಷಿಣ ಮಹಾರಾಷ್ಟ್ರ ರೈಲ್ವೇ ಏಜಂಟರಾದ ಮೆ|| ಜೆ. ಎ. ಸ್ಟೀವರ್ಟ್ ಸಾಹೇಬರವರು ಈಗ ಸುಮಾರು ಒಂದೆರಡು ತಿಂಗಳ ಕೆಳಗೆ ಮೈಸೂರು ಲೈನನ್ನು ಸ್ವಾಧೀನ ಮಾಡಿಕೊಳ್ಳುವದಕ್ಕೆ ಪೂರ್ವದಲ್ಲಿ ಇನ್ಸ್‌ಪೆಕ್ಷನ್‌ಮಾಡಿವಿಲಾಯತಿಯಲ್ಲಿಬೋರ್ಡ್ ಆಫ್ ಡೈರೆಕ್ಟರ್ಸ್‌ಯವರಿಗೆ ತಮ್ಮ ರಿಪೋರ್ಟ್ ಕಳುಹಿಸುವ ಉದ್ದೇಶದಿಂದ ಬೆಂಗಳೂರಿಗೆ ಬಂದಿದ್ದರು. ಈ ವಿಷಯ ತಮಗೆ ತಿಳಿದೇ ಇದೆ.

ಬೆಂಗಳೂರಿಂದ ವಾಪಸ್ ಬಂದು ತಮ್ಮ ಇನ್ಸ್‌ಪೆಕ್ಷನ್ ರಿಪೋರ್ಟ್ ಬರೆದರು. ಮತ್ತು ಅವುಗಳ ಹೆಡ್ಸ್ ಆಫ್ ಡಿಪಾರ್ಟ್‌ಮೆಂಟುಗಳಿಗೆಲ್ಲ ಒಂದೆರಡು ಪ್ರತಿಗಳನ್ನು ಕೊಟ್ಟು ಕಳುಹಿಸಿದರು. ಅದರಲ್ಲೊಂದು ಪ್ರತಿಯನ್ನು ನಾನು ನೋಡಿದೆನು. ಆ ರಿಪೋರ್ಟಿನ ಸಾರಾಂಶದ ಪೈಕಿ ರೈಲ್ವೇ ಉದ್ಯೋಗಸ್ಥರಿಗೆ ಲಗಾವಾಗತಕ್ಕ ಭಾಗವನ್ನು ಇದರಡಿ ಬರೆಯಲು ಯತ್ನಿಸಿದ್ದೇನೆ.

ಮೈಸೂರು ರೈಲ್ವೇಯಲ್ಲಿರತಕ್ಕ ಈಗಿನ ಉದ್ಯೋಗಸ್ಥರನ್ನೆಲ್ಲ ಇಟ್ಟುಕೊಳ್ಳಬೇಕಾಗುತ್ತೆ. ಇರತಕ್ಕವರೇ ಸ್ವಲ್ಪ. ಅಂದರೆ ದಾರವಾಡ ಆಫೀಸಿನಲ್ಲಿ ಮತ್ತು ದಕ್ಷಿಣ ಮಹ ರಾಷ್ಟ್ರ ರೈಲ್ವೆಯಲ್ಲಿರುವ ಖರ್ಚಿಗೂ ಮತ್ತು ಮೈಸೂರು ರೈಲ್ವೇಯಲ್ಲಿರುವ ಖರ್ಚಿಗೂ ಬಹಳ ವ್ಯತ್ಯಾಸವಿದೆ. ಇದಕ್ಕೆಕಾರಣ, ಬೆಂಗಳೂರುಪ್ರಾಂತದಲ್ಲಿ ಪದಾರ್ಥಗಳು ವಿಶೇಷ ಅಗ್ಗ, ದೇಶ ಸುಭಿಕ್ಷ, ಇಲ್ಲಿ ಅಂದರೆ ದಕ್ಷಿಣ ಮಹಾರಾಷ್ಟ್ರ ದೇಶದಲ್ಲಿ ಹಾಗಲ್ಲ. ಹರಿಹರದಿಂದ ಗುಬ್ಬಿ ವರೆಗೆ ಲೈನ್ ಪೂರ್ತಿಯಾಗಿ ಗಾಡಿ ಓಡಾಡಲಿಕ್ಕೆ ಸಿದ್ಧವಾಗಿ, ಈಎರಡು ಲೈನ್‌ಗಳೂ ಸೇರುವವರಿವಿಗೆ ಈಗ ಇರತಕ್ಕ ಏರ್ಪಾಡಿನಲ್ಲಿ ಏನೂ ಬದಲಾವಣೆ ಮಾಡಬಾರದು. ಮೆ||ಬೀಚರ್‌ಯವರು ರೈಲ್ವೆ ಮ್ಯಾನೇಜರಾಗಿ ಸದ್ಯಕ್ಕೆ ಇರುವಬಗ್ಗೆ ಗವರ್ನ್‌ಮೆಂಟ್ ಆಫ್ ಇಂಡಿಯಾ ಯವರನ್ನ ಕೇಳಿಕೊಳ್ಳಬೇಕು. ಮತ್ತು ಮೆ|| ಬೀಚರ್‌ಯವರು ರಿವರ್ಸ್ ವಗೈರೇ ಲೆಕ್ಕಗಳನ್ನು ಬೋರ್ಡಿಗೆ, ಮೆ|| ಸ್ಟೀವರ್ಟ್ ಸಾಹೇಬರವರ ಮುಖಾಂತರ ಕಳುಹಿಸಬೇಕು. ಬಾಕೀಯವರೆಲ್ಲರೂ ತಮ್ಮತಮ್ಮ ಕೆಲಸಗಳಲ್ಲಿ ಹಾಗೆಯೇ ಇರಬೇಕು. ಎಂಬದು

ಹೀಗೆ ಬರೆದಿರುವದರಿಂದ ಈಗಿರತಕ್ಕ ಉದ್ಯೋಗಸ್ಥರೆಲ್ಲ ಯಾವವಿಧವಾದ ಭಯವೂ ಪಡಲಿಕ್ಕೆ ಕಾರಣವಿಲ್ಲವೆಂದು ಸ್ಪಷ್ಟವಾಗಿದೆ. ಮೆ|| ಕೃಷ್ಣಸ್ವಾಮಿಶೆಟ್ಟಿಯವರನ್ನು ಕೆಲವು ದಿವಸಗಳ ಮಟ್ಟಿಗೂ, ಮತ್ತು ಇಂಜಿನಿಯರ್ ಮೊದಲಾದವರನ್ನೆಲ್ಲಅದೇಪ್ರಕಾರವೂ ಈಎರಡು ಲೈನ್‌ಗಳೂ ಸೇರುವವರಿವಿಗೂ ಮೈಸೂರು ಗವರ್ನ್‌ಮೆಂಟಿನವರ ಅನುಮತಿಯೊಡನೆ ಕಂಪನಿಯವರು ಇಟ್ಟುಕೊಳ್ಳಬಹುದು. ಅದೇಪ್ರಕಾರ ಈಗ ಇಲ್ಲಿ ಅನೇಕರು ಗವರ್ನ್‌ಮೆಂಟ್ ಸರ್ವೀಸಿನವರು ಇದ್ದಾರೆ ಮಸ್ಟರ್|| ಕೃಷ್ಣಸ್ವಾಮಿಶೆಟ್ರನ್ನು ಕಂಪನಿಯವರು ಇಟ್ಟುಕೊಳ್ಳಲಿಕ್ಕೆ ಬಹಳ ಸಂತೋಷವುಳ್ಳವರಾಗಿರಬೇಕಾಗಿದೆ. ಯಾತಕ್ಕೆಂದರೆ, ಇದುವರಿವಿಗೆ ಅಲ್ಲಿ ಟ್ರಾಫಿಕ್ ಡಿಪಾರ್ಟ್‌ಮೆಂಟಿಗೆ ಹಿತಲಾಭಸಿರಾಗಿದ್ದು ಅಲ್ಲಿಸಂತತಲತ, ಅಂದರೆ ವ್ಯಾಪಾರ ಲಕ್ಷಣಗಳನ್ನು ತಿಳಿದವರಾಗಿರುವಕಾರಣ ಇವರಿಗಿಂತ ಮತ್ತೊಬ್ಬರು ಯಾರೂ ಅಲ್ಲಿ ಟ್ರಾಫಿಕ್ ಡಿಪಾರ್ಟ್‌ಮೆಂಟಿನ ಛಾರ್ಜಿನಲ್ಲಿರಲಿಕ್ಕೆ ಅರ್ಹರಾಗಿ ಕಾಣೆನು. ಇಲ್ಲಿಂದ ಒಬ್ಬರು ಅಲ್ಲಿಗೆ ಬಂದು ಮಾಹಿತಿ ಮಾಡಿಕೊಳ್ಳುವದು ಕ್ರಮದ ಕೆಲಸವಾಗಿರುತದೆ. ಮೆ|| ಕೃಷ್ಣಸ್ವಾಮಿಶೆಟ್ರಿಗೆ ೩೦೦ ರೂಪಾಯಿ ಸಂಬಳ ಈಗ ದೊರೆಯುತದೆ, ಮತ್ತು ೧೦ ವರುಷಗಳಸರ್ವೀಸಾಗಿದೆ. ಈಸರ್ವಿಸ್‌ಬಿಟ್ಟು ಪೆನ್ಷನ್ ವಗೈರೆ ಯಾವದಾದರು ಒಂದು ವಿಧವಾದ್ದನ್ನು ಮೈಸೂರು ಗವರ್ನ್‌ಮೆಂಟಿನವರಿಂದ ಪಡದು ಕಂಪೆನಿಯವರ ಸರ್ವಿಸಿನಲ್ಲಿ ಇರಲಿಕ್ಕೆ ಅಡ್ಡಿಯಿಲ್ಲವು. ಈ ವಿಷಯಕ್ಕೆ ಕಂಪೆನಿಯವರು ಅತ್ಯಂತ ಸಂತೋಷವುಳ್ಳವರಾಗಿರಬಹುದು.

ಹುಬ್ಬಳ್ಳಿಯಿಂದ ರಾಣೇಬೆನ್ನೂರು ವರಿವಿಗೆ ೭೨ ಮೈಲಿಗಳ ಫಾಸಲೆ ರೈಲ್ವೆಯು ಮುಂದಿನ ಜಾಲೈ ಗುರ್ರೆಗೆ ಟ್ರಾಫಿಕ್‌ಗೆ ಗಾಡಿಬಿಡುತ್ತಾರೆ. ಪುನೇಯಿಂದ ಕೊರಿಗಾಂ ವರಿವಿಗೆ ಬರುವ ನವೆಂಬರ್ ತಿಂಗಳಲ್ಲಿ ಬಿಡುತ್ತಾರೆ. ಮತ್ತು ಬಳ್ಳಾರಿಯಿಂದ ಗುಂತಕಲ್‌ವರಿವಿಗೆ ೩೦ಮೈಲಿಗಳದೂರ ರೈಲ್‌ರಸ್ತೆಯು ಮದರಾಸ್ ರೈಲ್ವೇ ಕಂಪೆನಿಯವರಿಂದದಕ್ಷಿಣ ಮಹಾರಾಷ್ಟ್ರ ರೈಲ್ವೇಕಂಪೆನಿಯವರು ಖರೀದಿಗೆ ತೆಗಮುಕೊಂಡರು. ಬಳ್ಳಾರಿಯಿಂದ ಗುಂತಕಲ್‌ವರಿವಿಗೆ ಸದರ್ನ್‌ಮರಾಟಾ ರೈಲ್ವೇಕಂಪೆನಿಯವರ ಗಾಡಿಗಳು ಮುಂದಿನ ಜಾಲೈ ಗುರ್ರೆ ತಾರೀಖಿಗೆ ಓಡ್ಯಾಡುವದು.

ಇಲ್ಲಿ ಹೋದವಾರವೆಲ್ಲ ಮುಸ್ಲಮಾನರ ಹಬ್ಬ ಬಹಳ ಸಂಭ್ರಮದಿಂದ ನಡೆಯಿತು. ಅದನ್ನು ವಿಸ್ತರಿಸಲು ಸಾವಕಾಶವಿಲ್ಲ. ಮದರಾಸ್ ಸೇನೆಯ ಕಮಾಂಡರ್ಇನ್‌ಚೀಫ್‌ರಾದ ಸರ್ ಮೆಕ್‌ಫರ್ಸನ್ ಸಾಹೇಬರವರು ಬಳ್ಳಾರಿಯಿಂದ ಇಲ್ಲಿಗೆ ನಾಳೆ ೨೬ನೇ ತಾರೀಖಿನ ದಿನ ಬರುತ್ತಾರೆ.

ತಮ್ಮ ೨೯ನೇ ತಾರಿಖಿನ ಪತ್ರವನ್ನು ಈ ದಿವಸ ಸಾಯಂಕಾಲ ೬ ಘಂಟೆ ವೇಳೆಯಲ್ಲಿ ಚಂದ್ರೋದಯದ ಆಫೀಸಿನಲ್ಲಿ ನೋಡಿ ಈ ಪತ್ರವನ್ನು ತತ್‌ಕ್ಷಣವೇ ಬರೆಯಲು ಯತ್ನಿಸಿದೆನು.

ದಾರವಾಡ, ೨೫ನೇ ಮಾರ್ಚ್.	ತಮ್ಮವಿಧೇಯ, ಜೇಲಿ.

TELEGRAPHIC SUMMARY

ತಂತಿವೃತ್ತಾಂತ ಸಂಗ್ರಹವು.

ಲಂಡನ್, ೨೭ನೇ ಮಾರ್ಚ್—ತ್ಯೂಕಾಫ್ ಕಾನಾಟಿಯವರು ಬಾಗಾಳೇಸೇನೆಯ ಪೈಕಿ ರಾವಲ್‌ಪಿಂಡಿ ಡಿವಿಜನ್ ಕಮಾಂಡರಾಗಿ ನೇಮಕಮಾಡಲ್ಪಟ್ಟಿರುವಂತೆ ಸರ್ಕಾರೀಯಾಗಿ ತಿಳಿಸಲ್ಪಟ್ಟಿರುತಿದೆ, ಪರಂತು ಅವರು ಇಲ್ಲಿಂದ ಇಂಡ್ಯಾ ರಾಜ್ಯಕ್ಕೆ ಹೊರಡುವ ಕಾಲ ಇನ್ನೂ ಗೊತ್ತಾಗಲಿಲ್ಲವು.

ಅರ್ಥೆನ್ಸ್, ೨೬ನೇ ಮಾರ್ಚ್—ಇಲ್ಲಿನ ಆಯುಧಶಾಲೆಯಲ್ಲೂ ಜಹಜುಗಳು ಕಟ್ಟುವ ಸ್ಥಳದಲ್ಲೂ ಬಹಳ ಅಕ್ಕರೆಯೊಡನೆ ಸನ್ನಾಹಗಳು ನಡೆಸಲ್ಪಡುತಲಿವೆ. ಯೆರಡು ತರಹೆಕೋಡಿಕೆ ಸೈನ್ಯವು ಯುದ್ಧ ನೌಕರಿಯಬಗ್ಗೆ ಕೂಡಲೇ ಕರೆಯಲ್ಪಟ್ಟವೆ.

ರೋಂ, ೨೬ನೇ ಮಾರ್ಚ್—ರಷಿಯಾ ಸರ್ಕಾರದವರಕಡೆ ಇಲ್ಲಿರುವ ರಾಯಭಾರಿಯವರು, ಪ್ರಿನ್ಸ್ ಅಲೆಗ್ಸಾಂಡರವರು ಕಾಲ ವ್ಯವಸ್ಥೆಯಿಲ್ಲದೆ ರೋಮಿಲಿಯಾ ದೇಶದ ಗವರ್ನರಾಗಿ ನೇಮಕರಾಗಬೇಕೆಂದು ಟರ್ಕೀ ಸರ್ಕಾರದವರು ತಿಳಿಸುವ ಅಭಿಪ್ರಾಯವನ್ನು ರಷಿಯಾ ಸರ್ಕಾರದವರು ಒಪ್ಪುವದಿಲ್ಲವೆಂದು ಕೌಂಟಬಲ್ಲಾಟಿ ಯೆಂಬವರಿಗೆ ತಿಳಿಸಿದರು.

ಲಂಡನ್, ೨೯ನೇ ಮಾರ್ಚ್-ಅಫ್ಘಾನಿಸ್ತಾನ ದೇಶದ ಸರಹದ್ದು ವ್ಯವಸ್ಥೆಯಬಗ್ಗೆ ಯೇರ್ಪಟ್ಟಿರುವ ಕಮಿಷನ್‌ಪೈಕಿ ರಷಿಯಾ ಸರ್ಕಾರದವರ ಕಡೆ ಕಮಿಷನರ್‌ಗಳು ತಮಗಿರುವ ಕೆಲವು ಹಕ್ಕುಗಳನ್ನು ತಿಳಿಸಿ ಅವನ್ನು ಬ್ರಿಟಿಷಿನವರ ತರಫ್ ಕಮಿಷನರ್‌ಗಳು ಒಪ್ಪದೆ ಹೋಗಲು ಅಲ್ಲಿನ ಕೆಲಸಗಳು ಬಂದಾಗಿರುವಂತೆ ಟೈಂಸ್‌ಪತ್ರಿಕೆಯಲ್ಲಿ ತಂತಿವೃತ್ತಾಂತ ಪ್ರಕಟಿಸಿ ಆಗಿರುತದೆ. ಈಗೆ ವ್ಯವಸ್ಥೆಯಾಗಬೇಕಾದವಿಷಯವು ಆಯಾಯ ಗವರ್ನ್‌ಮೆಂಟಿಗೆ ತಿಳಿಸಲ್ಪಟ್ಟಿದೆ.

ಮರುಚಕ್, ೨೮ನೇ ಮಾರ್ಚ್—ಖುಜಾರ್ ಯೆಂಬ ಪ್ರದೇಶದ ಮೊದಲು ಮುರ್ಘಾಬ್ ಎಂಬ ನದಿಯ ವರಿವಿಗೆ ಹೊಸ ಸರಹದ್ದನ್ನು ತೋರಿಸುವ ಸ್ತಂಭ ನಿರ್ಮಾಣಕೆಲಸ ಪೂರ್ತಿಯಾಯಿತು.

ಲಂಡನ್, ೨೪ನೇ ಮಾರ್ಚ್—ಮಹಾರಾಣೀಯವರು, ಬರುವ ಮೇ ೪ನೇ ತಾರೀಖಿನಲ್ಲಿ ನಡೆಯುವ ಇಂಡ್ಯದೇಶ ಸಂಬಂಧವಾದ ಮತ್ತು ಹೊಸವಾಗಿ ತಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳಲ್ಪಟ್ಟ ದೇಶಗಳ ಸಂಬಂಧವಾದ ವಿವಿಧವಸ್ತು ಪ್ರದರ್ಶನಕಾರ್ಯವನ್ನು ತಾವೇ ಖುದ್ದು ಪ್ರಾರಂಭಿಸಬೇಕೆಂಬ ಅಭಿಪ್ರಾಯವನ್ನು ಸೂಚಿಸಿರುತ್ತಾರೆ.

SUMMARY OF NEWS.
ವೃತ್ತಾಂತ ಸಂಗ್ರಹವು

—— o ——

The Hon'ble Dadaboy Nowroji —ಆನರೇಬಲ್ ದಾದಾಭಾಯಿ ನವರೋಜಿಯವರು ಈ ಹೊತ್ತಿನ ಮೈಲ್ ಸ್ಟೀಮರ್‌ನಲ್ಲಿ ವಿಲಾಯತಿಯತಿಗೆಹೋದರು. ಹಿಂದುಸ್ಥಾನದ ಆಡಳಿತವನ್ನು ಕುರಿತು ವಿಚಾರಮಾಡಲಿಕ್ಕೆ ನೇಮಿಸಿದ ಕಮಿಟಿಯವರ ಮುಂದೆ ಸಾಕ್ಷಿಕೊಡುವದೇ ಇವರ ಪ್ರಯಾಣದ ಉದ್ದೇಶವೆಂದು ಹೇಳುತ್ತಾರೆ.

Astrological calculation.- ಆಕಾಶದಲ್ಲಿ ನಕ್ಷತ್ರಗಳೆಷ್ಟು ಇರುವವೆಂಬದನ್ನು ನೋಡುವದಕ್ಕಾಗಿ ಎಂ. ಎಸ್. ಪಾನ ಮತ್ತು ಹೆನ್ರಿಲೇನ್ ಯೆಂಬ ಇಬ್ಬರು ಫ್ರೆಂಚ್ ಜೋತಿಷರರು ೧೨೦ ಇಂಚಿನ ದುರ್ಬೀನಿನ ಸಹಾಯದಿಂದ ಆಕಾಶದ ಒಂದು ಭಾಗದ ಫೋಟೊಗ್ರಾಫನ್ನು ತೆಗದುಕೊಂಡಿರುತ್ತಾರೆ. ಅದರೊಳಗೆ ೫೦೦೦ ನಕ್ಷತ್ರಗಳು ಬಂದಿರುತ್ತವೆ. ಈತರದ ೬ಸಾವಿರ ಫೋಟೊಗ್ರಾಫನ್ನು ತೆಗದರೆ ಅದಕ್ಕೆ ದ್ವಿಗುಣವಾಗಿ ಆಕಾಶದ ಗಣನೆಯನ್ನು ಮಾಡಲಿಕ್ಕೆ ಬರುವದೆಂತಲೂ ಈ ಕೆಲಸಕ್ಕೆ ೧೦ ವರುಷಗಳು ಬೇಕಾಗುವದೆಂತಲೂ, ನಕಷೆಯನ್ನು ತೆಗದುಕೊಂಡನಂತರ ಆಕಾಶದಲ್ಲಿ ೨ಂಕೋಟಿ ನಕ್ಷತ್ರಗಳಿಗಿಂತಲೂ ಕಡಿಮೆಯಿಲ್ಲವೆಂದು ತಿಳಿಯಬಂದೀತೆಂತಲೂ, ಅವರು ಊಹಿಸುತ್ತಾರೆ.

Coorg —ಕೊಡಗಿಗೆ ಚೀಫ್‌ಕಮಿಶನರ್ ಸಾಹೆಬರವರು ದಯಮಾಡಿಸಿ ಹೆಚ್ಚುಕಡಿಮೆ ಎಲ್ಲಾನಾಡುಗಳಲ್ಲಿ ಮೊಕ್ಕಾಂಮಾಡಿ ಬಹು ಖುಡಿತವಾದ ತಮ್ಮ ಕಾರ್ಬಾರ್‌ಗಳನ್ನು ನಡಿಸುತ್ತಾ ಪ್ರತಿಒಂದು ಇಲಾಖೆಯನ್ನು ಬಹಳ ಪರಿಷ್ಕಾರವಾಗಿ ಪರಿಶೋಧಿಸುತ್ತಾ ಮುಖ್ಯವಾಗಿ ಸರಕಾರಿ ಮತ್ತು ಯೆಲ್ಲಾ ಒಳ ಬಾತೆಗಳನ್ನು ಪರೀಕ್ಷಿಸುವದರಲ್ಲಿ ಅವರು ತೆಗದುಕೊಂಡ ಶ್ರಮೆಯನ್ನು ಕೊಂಚ ಆಲೋಚಿಸಿದರೆ ಇಂದಿನವರಿಗು ಬಂದವೆಲ್ಲಾ ಚೀಫ ಕಮಿಶನರ್‌ಗಳಿಗಿಂತಲೂ ಘನ ಹೊಂದಿದ ಗರ್ಡಲಿಸ್ಟನ್ ಸಾಹೆಬರವರು ಬಹು ನ್ಯಾಯವಾದಿಗಳೆಂತಲೂ, ಪರೋಪಕಾರಿಗಳೆಂತಲೂ, ಬಡವರ ಪರಿಪಾಲಕರೆಂತಲೂ ತಪ್ಪದೆ ನಂಬಬೇಕಾಗಿದೆ. ಆದರೆ ಕೆಲವರು ಅವರನ್ನು ಕೋಪಗಾರರೆಂತಲೂ ಖಡಿತಗಾರರೆಂತಲೂ ಮಾತುಮಾತಿಗೆ ಬಿಡಾಯಿಸಿಕೊಳ್ಳುವರೆಂತಲೂ ವಿಧವಿಧವಾಗಿ ಮನಸ್ಸು ಬಂದಂತೆಲ್ಲಾ ನಿಂದಿಸುತ್ತಾರೆ. ಅದಂತಿರಲಿ ರಾಜ್ಯಭಾರಮಾಡುವ ಅಧಿಕಾರಿಯು ಎಲ್ಲರಿಗೂ ಒಳ್ಳೆಯವನಾಗಿರುವದು ಅಸಾಧ್ಯ. ಈ ಮಾಯಾ ಪ್ರಪಂಚದಲ್ಲಿರುವ ಪರಿಯಂತ ನಿಂದೆ ಯಾರಿಗೂ ಯೆಂದಿಗೂ ತಪ್ಪುವದಿಲ್ಲ. ನ್ಯಾಯವಾಗಿ ಆಲೋಚಿಸಿ ನೋಡಿದರೆ ನಮ್ಮ ಚೀಫ್ ಕಮಿಶನರ್ ಸಾಹೆಬರವರು ಬಹಳ ಒಳ್ಳೆಯವರೇ ಸರಿ. ಯಾತಕ್ಕಂದರೆ ಅವರು ತಕ್ಕುಬಿಕ್ಕುಗಾರರ ಚಾಡಿಮಾತುಗಳನ್ನು ಕೇಳುವವರಲ್ಲ. ದಂಭಗಾರರ ಡಂಭಾಚಾರದ ಕಲಾಬತ್ತು ರುಮಾಲುಗಳು ಕೊಟ್ಟು ಡೆಂಬೂಟ್ ಬೂಟ್ಸುಗಳನ್ನು ಕೀಟು ಚಾಟುರಾಗದ ಮಾತುಗಳನ್ನು ಕೊಂಚವಾದರು ಮೆಚ್ಚುವವರಲ್ಲ. ಅಂತಾ ಪ್ರಭುಗಳನ್ನು ದೂಷಿಸುವದು ನ್ಯಾಯವೇ ಪೊಂಡುರಂಗ.

The Regent of Kollapore —ಕೊಲ್ಲಾಪುರದ ರೀಜಂಟರಾದ ಅಬಾ ಸಾಹೇಬ್ ಕಾಗಲಕರರವರು ಕಳೆದ ಶನಿವಾರರಾತ್ರಿ ೯॥ ಘಂಟೆಗೆ ಪರಲೋಕವನ್ನೈದಿದರೆಂದು ಕೇಳಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಕೊಲ್ಲಾಪುರಸಂಸ್ಥಾನ ಎಷ್ಟು ದುರಾದೃಷ್ಟವಾದದ್ದೋ ತಿಳಿಯದು. ನೇಟವ್‌ಅರಸರ ಆಳ್ವಿಕೆಯೇ ಆಸಂಸ್ಥಾನದ ದೈವದಲ್ಲಿಲ್ಲವೆಂದು ಹೇಳಬೇಕಾಗಿದೆ. ಈಗ ಮೂರು ಅರಸರುಗಳಿಂದ ಅರಾಜ್ಯವು (ಬಾಲ್ಯತ್ವ) ದಲ್ಲಿರುತ್ತದೆ. ಅಬಾಸಾಹೇಬರು ರೀಜಂಟಿಯ ಅಧಿಕಾರವನ್ನು ನಡಿಸಲಾರಂಭಿದಾರಭ್ಯ ಈ ದೀರ್ಘ (ಬಾಲ್ಯತ್ವ) ವನ್ನು ಮಹಾರಾಷ್ಟ್ರಜನರು ಸ್ವಲ್ಪ ಮರೆಯುತ್ತಾ ಬಂದಿದ್ದರು. ಆದರೆ ಅದು ಪುನಃ ಅವರ ಕಣ್ಣುಮುಂದೆ ನಿಂತಂತಾಯಿತು. ಅಬಾ ಸಾಹೇಬರ ಸಂಕ್ಷಿಪ್ತ ಚರಿತ್ರವನ್ನು ಒಂದಾನೊಂದು ಮಹಾರಾಷ್ಟ್ರ ಪತ್ರದಿಂದ ನಮ್ಮ ವಾಚಕರಿಗಾಗಿ ಈ ಕೆಳಗ ಪ್ರಕಟಿಸುತ್ತೇವೆ.

ಶ್ರೀ ಅಬಾಸಾಹೇಬರು ಕೈಲಾಸವಾಸಿ ಬಾಬಾಸಾಹೇಬ್ ಮಹಾರಾಜರವರ ಸೋದರಮಾವನವರಾದ ನಾನಾಸಾಹೇಬ್ ಘಾಟಗೆ ಕಾಗಲಕರ್ ಎಂಬವರ ಚಿರಂಜೀವರು. ಇವರು ಸನ ೧೮೬೮ರಲ್ಲಿ ಕಾಗಲದ ಗಾದಿಯಮೇಲೆ (ದತ್ತಕರಾಗಿ) ಕೂತರು. ಇತರ ರಾಜಕುಮಾರರಸಂಗಡ ಇವರು ಚಿಕ್ಕಂದಿನಲ್ಲಿ ಬಹಳದಿವಸಗಳವರಿಗೆ ಕೊಲ್ಲಾಪುರದಲ್ಲಿಯೇ ವಿದ್ಯಾಭ್ಯಾಸಮಾಡಿದರು. ಕುದುರೆಸವಾರಿಮಾಡುವದೂ, ರಥವನ್ನು ನಡಿಸುವದೂ, ಶಿಕಾರಿಮಾಡುವದೂ, ಮೊದಲಾದ ಷೋಕಿಗಳು ಇವರಿಗೆ ಬಾಲ್ಯದಿಂದಲೇ ಬಹಳ ಇರುತ್ತಿದ್ದರಿಂದ ಆ ಮೂರರಲ್ಲಿಯೂ ಅವರು ಬಹಳ ಹುಷಾರಾಗಿದ್ದರು. ಇವರು ಆಂಗ್ಲೇಯಭಾಷೆಯನ್ನು ತಡೆಯದೆ ಬೇಗಬೇಗನೆ ಮೊದಲಿನಿಂದ ಮಾತಾಡುತ್ತಿದ್ದರು. ನಾನಾದೇಶಗಳಲ್ಲಿ ಸಂಚಾರಮಾಡಿ ಅಲ್ಲಲ್ಲಿಯ ರೀತಿ ನಡತೆಗಳನ್ನು ತಿಳಕೊಳ್ಳಬೇಕೆಂಬ ಕಾಂಕ್ಷೆಯು ಇವರಿಗೆ ಚಿಕ್ಕಂದಿನಿಂದ ಇದ್ದದರಿಂದ ಅವರು ಈವರಿಗೆ ಪ್ರವಾಸಮಾಡಿದಷ್ಟು ಇನ್ಯಾವ ರಾಜಪುತ್ರನಾದರೂ ಮಾಡಿರಲಿಕ್ಕಿಲ್ಲ. ಇಡೀ ಹಿಂದುಸ್ಥಾನವೆಲ್ಲ ತಿರುಗಿದನಂತರ ಅಬಾಸಾಹೇಬರವರು ಲಂಕೆಯೆಂಬ ಸಿಹ್ಮಳದ್ವೀಪಕ್ಕೆ ಹೋಗಿಬಂದು ಗತವರುಷದಲ್ಲಿ ಯೂರೋಪ್‌ಖಂಡದಲ್ಲಿ ಸಹ ಪ್ರವಾಸಮಾಡಿ ಬಂದರೆಂಬದು ಎಲ್ಲರಿಗೂ ಗೊತ್ತಿರಬಹುದು. ಮುಂದಿನವರುಷ ಅಮೇರಿಕಾಖಂಡಕ್ಕೆ ಹೋಗುವ ಇರಾದೆಯುಳ್ಳವರಾಗಿದ್ದರು. ಆದರೆ ಈಶ್ವರ ಇಚ್ಛೆಯಿಂದ ಅವರ ಮನೋಭಿಲಾಷೆಯು ಸಿದ್ಧಿಸಲಿಲ್ಲ. ಅವರಿಗೆ ಚಿಕ್ಕಂದಿನಲ್ಲಿ ರಾ|| ರಾ|| ಕೃಷ್ಣಾಜಿ ಭಿಕಾಜಿಗೋಖಲೆಯಂಥ ವಿದ್ವಾಂಸ ಗೃಹಸ್ಥರ ಸುಶಿಕ್ಷಣವು ದೊರಕಿದ್ದರಿಂದ ಅವರ ವಿದ್ಯಾಭ್ಯಾಸವು ಚನ್ನಾಗಿ ಆಯಿತು. ಕಾಗಲಸಂಸ್ಥಾನದ ಅಧಿಕಾರವು ತಮ್ಮ ಕೈಯಲ್ಲಿ ಬಂದಂದಿನಿಂದ ಇವರು ಆಸಂಸ್ಥಾನವನ್ನು ಬಹಳ ಚನ್ನಾಗಿ ವ್ಯವಸ್ಥೆಯೊಳಗಿಟ್ಟಿದ್ದರು. ಇವರ ಕಾರ್ಕರ್ದಿಯೊಳಗೆ ಇತರೆ ಸಂಸ್ಥಾನಗಳಿಗಿಂತಲೂ ಅಲ್ಲಿಯ ಪ್ರಜೆಗಳು ಬಹಳ ಸುಖಿಯಾಗಿದ್ದರು. ಸನ ೧೮೮೨ನೇ ಇಸವಿಯಲ್ಲಿ ಮುಂಬೈ ಸರಕಾರದವರು ಇವರನ್ನು ಕೊಲ್ಲಾಪುರದ ರೀಜಂಟ್ ಇನ್ ಕೌನ್ಸಿಲರಾಗಿ ನೇಮಿಸಿದರು. ಈ ದೊಡ್ಡ ರಾಜ್ಯಾಧಿಪತ್ಯವು ಚಿಕ್ಕಂದಿನಿಂದ ಕೊಲ್ಲಾಪುರದಜನರಿಗೆ ಬಹಳ ಸೌಖ್ಯವನ್ನುಂಟುಮಾಡಿದರು. ವ್ಯಾಪಾರೋತ್ತೇಜನಾರ್ಥವಾಗಿ ಅಲ್ಲಿಗೆ ಬರುವಸರಕುಗಳ ಮೇಲಿನ ಸುಂಕವನ್ನು ಅವರು ತೆಗದುಹಾಕಿದರು. ತರುಣ ಮಹಾರಾಜರವರೂ (ಜ್ಯೇಷ್ಠಪುತ್ರರು) ಬಾವಾಸಾಹೇಬರವರೂ (ಕನಿಷ್ಠಪುತ್ರರು) ಮೊದಲಾದ ಅವರಪುತ್ರ, ಮಿತ್ರ, ಕಳತ್ರ, ಪತ್ನಿ, ಬಾಂಧವರನ್ನು ಸಹ ದುಃಖ ಸಮುದ್ರದಲ್ಲಿ ಮುಳುಗಿಸಿ ತಾವು ಸ್ವರ್ಗವಾಸಿಗಳಾದರು. ಜ್ವರಬಂದು ಲೀವರ್ ಕೆಟ್ಟುಹೋದದ್ದೇ ಇವರಮರಣದ ಮುಖ್ಯಕಾರಣವು.—ಕನ್ನಡಸುವಾರ್ತೆ.

THE MYSORE GAZETTE
ಮೈಸೂರು ಗೆಜೆಟ.

—— o: ——

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರವರ ದಿವಾನರವರಿಂದ ಕೊಡೋಣವಾದ ಇಸ್ತಿಹಾರ್‌ನಾಮೆಗಳು.

ತಾರೀಖು ೨೯ನೇ ಮಾರ್ಚ ೧೮೮೬.

ನಂ. ೨೨೬—ಸನ ೧೮೮೬ನೇ ಇಸವಿ ಏಪ್ರಿಲ್ ಗುರ್ರೀಲಾಗಾಯಿತು ಕಣಕುಪ್ಪ ತಾಲ್ಲೂಕು ಜಗಳೂರು ತಾಲ್ಲೂಕಿಂದ ತಪ್ಪಿಸಿ ಪುನಃ [illegible] ಏರ್ಪಾಡಾಗಿರತಕ್ಕದ್ದು.

೫೦—೧೮೮೭ನೇ ಇಸವಿಯಲ್ಲಿ ಹಾಯಿದ ಅನ ಕೊಂಡಾದ ಕಿವಿಕೂಡ್ಲ ಸಕ್ಯೂಟೆಯಲ್ಲಿ ಕಂಡಂತೆ ತಾಹಿರ ಗಾಹುಪ್ಪ ತಾಲ್ಲೂಕಿನ ಸರಹದ್ದುಗಳನ್ನನುಸರಿಸಿ ಜಗಳೂರು ತಾಲ್ಲೂಕು ಪುನಃ ಏರ್ಪಾಡಾಗಿರುತ್ತೆ. ಜಗಳೂರು ಸಬ್ ತಾಲೂಕು ೧೮೮೬ನೇ ಇಸವಿ ಏಪ್ರಿಲ್ ಗುರ್ರೀಲಾಗಾಯಿತು ಮಾಕೂಫ್ ಮಾಡಲ್ಪಟ್ಟಿದೆ.

ನಂ. ೨೨೭.—೧೮೮೬ನೇ ಇಸವಿ ಏಪ್ರಿಲ್ ಗುರ್ರೀಲಾಗಾಯಿತು ಹೊಳಲಕೆರೆ ತಾಲ್ಲೂಕು ಪುನಃ ಏರ್ಪಾಡಾಗಿರತಕ್ಕದ್ದು.

ನಂ. ೨೨೮—ಸನ ೧೮೮೬ನೇ ಇಸವಿ ಏಪ್ರಿಲ್ ಗುರ್ರೀಲಾಗಾಯಿತು ಚಿತ್ರದುರ್ಗ ಡಿಸ್ಟ್ರಿಕ್ಟು ಪುನಃ ಏರ್ಪಾಡಾಗಿರತಕ್ಕದ್ದು ಮೇಲ್ಕಂಡ ತಾರೀಖಿಲಾಗಾಯಿತು ಅದಕ್ಕೆ ವರ್ಗಾಯಿಸಲ್ಪಡತಕ್ಕದ್ದೆಂದು ಹುಕುಂಮಾಡಲ್ಪಟ್ಟ ಇವರಡಿಯಲ್ಲಿ ೭ ತಾಲ್ಲೂಕುಗಳು ಸದರೀ ಡಿಸ್ಟ್ರಿಕ್ಟು ಸರಹದ್ದಿನೊಳಗೆ ಇರತಕ್ಕದ್ದು.

(೧) ಶಿವಮೊಗ್ಗಾ ಡಿಸ್ಟ್ರಿಕ್ಟಿನಿಂದ.

೧ ದಾವಣಗೆರೆ ತಾಲ್ಲೂಕು—೨೨೬ನೇ ನಂಬರಿನ್ನ ಈ ತಾರೀಖಿನ ಇಸ್ತಿಹಾರ್ ನಾಮೆಯಿಂದ ಬದಲಾಯಿಸಲ್ಪಟ್ಟಿರೋದಿಗೆ.

(೨) ತುಮಕೂರು ಡಿಸ್ಟ್ರಿಕ್ಟಿನಿಂದ.

೧ ಚಳ್ಳಕೆರೆ—೨೨೭ನೇ ನಂಬರಿನ್ನ ಈ ತಾರೀಖಿನ ಇಸ್ತಿಹಾರ್ ನಾಮೆಯಿಂದ ಬದಲಾಯಿಸಲ್ಪಟ್ಟಿರೋದಿಗೆ.

೨ ಹೊಳಲ್ಕೆರೆ—೨೨೭ನೇ ನಂಬರಿನ್ನ ಈ ತಾರೀಖಿನ ಇಸ್ತಿಹಾರ್ ನಾಮೆಯಿಂದ ಏರ್ಪಾಡಾದ ಮೇರೆಗೆ.

೩ ಜಗಳೂರು—೨೨೬ನೇ ನಂಬರಿನ್ನ ಈ ತಾರೀಖಿನ ಇಸ್ತಿಹಾರ್ ನಾಮೆಯಿಂದ ಏರ್ಪಾಡಾದಮೇರೆಗೆ

೪ ಹಿರಿಯೂರು.

೫ ಹೊಸದುರ್ಗ.

೬ ಚಿತ್ರದುರ್ಗ—೨೨೬ನೇ ನಂಬರಿನ್ನ ಈ ತಾರೀಖಿನ ಇಸ್ತಿಹಾರ್ ನಾಮೆಯಿಂದ ಬದಲಾಯಿಸಲ್ಪಟ್ಟಿರೋದಿಗೆ.

೭ ಚಿತ್ರದುರ್ಗದ ಹೆಡ್‌ಕ್ವಾರ್ಟರ ನೋಡನೆ ಇದ್ದ ದಾವಣಗೆರೆ ಚಿತ್ರದುರ್ಗ ಸಬ್ ಡಿವಿಜನ್ ಇದರಿಂದ ಮಾಕೂಫ್ ಮಾಡಲ್ಪಟ್ಟಿರುತ್ತೆ.

ನಂ. ೨೨೯—ಸನ ೧೮೮೬ನೇ ಇಸವಿ ಮಾರ್ಚ ೨೯ನೇ ತಾರೀಖು ೨೨೮ನೇ ನಂಬರ್ ಇಸ್ತಿಹಾರ್‌ನಾಮೆಯನ್ನನುಸರಿಸಿ, ಪುನಃ ಏರ್ಪಾಡಾದ ಚಿತ್ರದುರ್ಗದ ಡಿ|| ಡಿ ಚೀಫ್ ಅಡಿಶಿನಲ್ ಕ್ಯಾಪ್ಟನ್ ಶಿವಮೊಗ್ಗಾ ಡಿ|| ಜಡ್ಜಿಯವರ ಅಧಿಕಾರಕ್ಕೂ, ಕ್ರಿಮಿನಲ್ ಅಡಿಶಿನಲ್ [illegible] ಶಿವಮೊಗ್ಗಾ ಸೆಷನ್ ಡಿವಿಜನ್ನಿಗೂ ಒಳಪಟ್ಟಿರತಕ್ಕದ್ದು

ಚಿತ್ರದುರ್ಗ ಮುನಸಿಫ್ ಅಧಿಕಾರದ ಸ್ಥಳ ಸರಹದ್ದಿನೆ ದಾವಣಗೆರೆ ತಾಲ್ಲೂಕು ಹೊರತು, ಚಿತ್ರದುರ್ಗದ ಡಿಸ್ಟ್ರಿಕ್ಟೆಲ್ಲಾ ಒಳಪಟ್ಟಿರತಕ್ಕದ್ದು. ಸದರೀ ದಾವಣಗೆರೆ ತಾಲ್ಲೂಕು ಈ ತಾರೀಖಿನ ೨೨೬ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಬದಲಾಯಿಸಲ್ಪಟ್ಟಿರುವ ಸರಹದ್ದುಗಳನ್ನನುಸರಿಸಿ, ಶಿವಮೊಗ್ಗಾ ಡಿ|| ಹೊನ್ನಾಳಿ ಮುನಸಿಫರ ಅಧಿಕಾರದೊಳಗೇ ಇರಬೇಕು [illegible] ಯಿಂದಿರತಕ್ಕದ್ದು.

ನಂ. ೨೩೦—ಸನ ೧೮೮೬ನೇ ಇಸವಿ ಮೇ ೧ನೇ ಗುರ್ರೀಲಾಗಾಯಿತು, ಹೊಳಲ್ಕೆರೆ ಡಿ|| ತೈರ ಮಾಲೂರು ತಾಲೂಕು ಪುನಃ ಮೇಲ್ಪಾಡಾಗಿರತಕ್ಕದ್ದು.

ಮಾಲೂರು ಸಬ್ ತಾಲ್ಲೂಕು ೧೮೮೬ನೇ ಮೇ ೧ನೇ ಗುರ್ರೀಲಾಗಾಯಿತು ಮಾಕೂಫ್ ಮಾಡಲ್ಪಡತಕ್ಕದ್ದು.

ನಂ. ೨೩೧—ಸನ ೧೮೮೬ನೇ ಇಸವಿ ಮೇ ೧ನೇ ಗುರ್ರೀಲಾಗಾಯಿತು ಮಳವಳ್ಳಿ ತಾಲ್ಲೂಕು ಪುನಃ ಮೇಲ್ಪಾಡಾಗಿರತಕ್ಕದ್ದು

೨ ಮಳವಳ್ಳಿ ವ ಮದ್ದೂರು ಈ ಎರಡು ಸಬ್ ತಾಲ್ಲೂಕುಗಳು, ೧೮೮೬ನೇ ಇಸವಿ ಮೇ ೧ನೇ ಗುರ್ರೀಲಾಗಾಯಿತು ಮಾಕೂಫ್ ಮಾಡಲ್ಪಟ್ಟಿರುತ್ತೆ.

ನಂ ೨೩೩—ಅರಕಲಗೂಡು ತಾಲೂಕು, ಸನ ೧೮೮೬ನೇ ಇಸವಿ ಮೇ ೧ನೇ ಗುರ್ರೀಲಾಗಾಯಿತು ಪುನಃ ಮೇಲ್ಪಾಡಾಗಿ ಏರ್ಪಡಿಸತಕ್ಕದ್ದು

೨ ಅರಕಲಗೂಡು ಸಬ್ ತಾಲೂಕು ೧೮೮೬ನೇ ಇಸವಿ ಮೇ ೧ನೇ ಗುರ್ರೀಲಾಗಾಯಿತು ಮಾಕೂಫ್ ಮಾಡಲ್ಪಟ್ಟಿರುತ್ತೆ.

ನಂ. ೨೩೪—ಸನ ೧೮೮೬ನೇ ಇಸವಿ ಮೇ ೧ನೇ ಗುರ್ರೀಲಾಗಾಯಿತು ಹಾಸನ ಡಿ|| ಪುನಃ ಮೇಲ್ಪಾಡಾಗಿರತಕ್ಕದ್ದು. ಸದರೀ ಡಿಸ್ಟ್ರಿಕ್ಟಿನ ಸರಹದ್ದಿನಲ್ಲಿ ಈ ಕೆಳಗೆ ಬರೆದಿರುವ ತಾರೀಖಿಲಾಗಾಯಿತು ಅದಕ್ಕೆ ಇದರಡಿಯಿಂದ ವರ್ಗಾಯಿಸಲ್ಪಟ್ಟ ಇದರಡಿಯಲ್ಲಿ ೭ ತಾಲ್ಲೂಕುಗಳು ಸೇರಿರತಕ್ಕದ್ದು

(೧) ಕಡೂರು ಡಿಸ್ಟ್ರಿಕ್ಟಿನಿಂದ.

೧ ಹಾಸನ—೨೩೮ನೇ ನಂಬರಿನ್ನ ಈ ತಾರೀಖಿನ ಇಸ್ತಿಹಾರ್ ನಾಮೆಯಿಂದ ಬದಲಾಯಿಸಲ್ಪಟ್ಟಿರೋದಿಗೆ

೨ ಮಂಜರಾಬಾದ್ — ೩ ಬೇಲೂರು — ೪ ಅರಸೀಕೆರೆ

(೨) ಮೈಸೂರು ಡಿಸ್ಟ್ರಿಕ್ಟಿನಿಂದ.

೧ ಚನ್ನರಾಯಪಟ್ಟ

೨ ಅರಕಲಗೂಡು—೨೩೩ನೇ ನಂಬರಿನ್ನ ಈ ತಾರೀಖಿನ ಇಸ್ತಿಹಾರನಾಮೆಯಿಂದ ಮೇಲ್ಪಾಡಾಗಿರುವಮೇರೆಗೆ.

೩ ಹೊಳೆನರಸೀಪುರ—೨೩೮ನೇ ನಂಬರಿನ್ನ ಈ ತಾರೀಖಿನ ಇಸ್ತಿಹಾರ್ ನಾಮೆಯಿಂದ ಬದಲಾಯಿಸಲ್ಪಟ್ಟಮೇರೆಗೆ.

೭ ಹಾಸನದ ಹೆಡ್‌ಕ್ವಾರ್ಟರ್ಸ್‌ನೊಡನೆಯಿದ್ದ ಹಾಲೀ ಹಾಸನದ ಸಬ್ ಡಿವಿಜನ್ ಇದರಿಂದ ಮಾಕೂಫ್ ಮಾಡಲ್ಪಟ್ಟಿರುತ್ತೆ

ನಂ. ೨೩೬—ಈ ಕೆಳಗೆ ನಮೂದಾಗಿರುವ ನೌಕರರಿಗೆ ೧೮೮೬ನೇ ಇಸವಿ ಏಪ್ರಿಲ್ ಗುರ್ರೀಲಾಗಾಯಿತು ಮಾಡಲ್ಪಟ್ಟಿರುತ್ತವೆ.

೧. ಮಿಸ್ಟರ್ ಟಿ ಆನಂದರಾವ್, ಬಿ. ಎ. ಯವರು ಹಾಸನ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

೨. ಶಿಕಾರಿಪುರ ಟೌನ್ ಮ್ಯಾಜಿಸ್ಟ್ರೇಟರಾದ ಪಿ. ಮುದ್ದಪ್ಪನವರು ಚಿತ್ರದುರ್ಗ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಾಗಿರತಕ್ಕದ್ದು. ಕುಣಿಗಲ್ ಡಿಸ್ಟ್ರಿಕ್ಟಿಗೆ ದಾಖಲಾಗತಕ್ಕದ್ದು.

೩ ಅರಕಲಗೂಡು ಡೆಪ್ಯುಟಿ ಅಮಲ್‌ದಾರ್ ಶಿವಶಿಂಗರ ಸೋಮಪ್ಪನವರು ಅಡಿಮಾಯಿಷೀ ಕರೀಕ್ ಹಾಸನ ಡಿ|| ಸೆಕ್ಷಿ ಅರಕಲಗೂಡು ತಾ|| ೨ನೇ ಗ್ರೇಡ್ ಅಮಲ್‌ದಾರ್ ವ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು

೪. ಮಳವಳ್ಳಿ ಡಿ|| ಅಮಲ್‌ದಾರ್ ಸಂಜಾಂದ [illegible] ಯವರು, ಅಡಿಮಾಯಿಷೀ ಕರೀಕ್ ಮೈಸೂರು ಡಿ|| ಮಳವಳ್ಳಿ ತಾ|| ೨ನೇ ಗ್ರೇಡ್ ಅಮಲ್‌ದಾರ್ ವ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

೫ ಕುಣಿಗಲ್ ಡೆಪ್ಯುಟಿ ಅಮಲ್‌ದಾರ್ ನಿಜಾಮುದ್ದೀನ್ ಅಲ್ಲಿ ಖಾನ್‌ಯವರು, ಅಡಿಮಾಯಿಷೀ ಕರೀಕ್ ಮಾಲೂರು ತಾ|| ೨ನೇ ಗ್ರೇಡ್ ಅಮಲ್‌ದಾರ್ ವ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು. ಕುಣಿಗಲ್ ತಾಲ್ಲೂಕಿಗೆ ದಾಖಲಾಗತಕ್ಕದ್ದು.

೬. ಕುಂದಿಯ ಡೆಪ್ಯುಟಿ ಅಮಲ್‌ದಾರ್ ಎ ವೆಂಕಟರಾಯರು, ಅಡಿಮಾಯಿಷೀ ಕರೀಕ್ ಚಿತ್ರದುರ್ಗ ಡಿ|| ಹೊಳಲಕೆರೆ ತಾಲ್ಲೂಕು ೨ನೇ ಗ್ರೇಡ್ ಅಮಲ್‌ದಾರ್ ವ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು. ಕುಣಿಗಲ್ ತಾಲೂಕಿಗೆ ದಾಖಲಾಗತಕ್ಕದ್ದು.

೭. ಜಗಳೂರು ಡೆಪ್ಯುಟಿಅಮಲ್‌ದಾರ್ ಪಿ. ಶ್ರೀನಿವಾಸರಾಯರು, ಅಡಿಮಾಯಿಷೀ ಕರೀಕ್ ಚಿತ್ರದುರ್ಗ ಡಿ|| ಜಗಳೂರು ತಾಲ್ಲೂಕು ೨ನೇ ಗ್ರೇಡ್ ಅಮಲ್‌ದಾರ್ ವ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

೮. ಶ್ರೀನಿವಾಸಪುರದ ಡೆಪ್ಯುಟಿ ಅಮಲ್‌ದಾರ್ ಗುಲಾಂ ಮಹಮ್ಮದ್‌ಖಾನ್‌ಯವರು, ಡೆಪ್ಯುಟಿ ಅಮಲ್‌ದಾರ್ ವ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಶಿವಮೊಗ್ಗಾ ಡಿ|| ಕುಂಸೀಗೆ ವರ್ಗಾಮಾಡಲ್ಪಟ್ಟಿರುತ್ತಾರೆ

೯. ಹಾಸನದ ಡೆಪ್ಯುಟೀಅಮಲ್‌ದಾರ್ ಮಹಮ್ಮದ್ ಅಲ್ಲೀಖಾನ್‌ಯವರು, ಡೆಪ್ಯುಟಿಅಮಲ್‌ದಾರ್ ವ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಶಿವಮೊಗ್ಗೆಗೆ ವರ್ಗಮಾಡಲ್ಪಟ್ಟಿರುತ್ತಾರೆ ಇವರು, ಚಿತ್ರದುರ್ಗ ಡಿ|| ಮುಳಬಾಗಿಲು ತಾಲೂಕಿನ ತಾಳ್ವಸ್ತು ವೆಂಕಟರಾಯರು ಒಪ್ಪಿಸಿಕೊಂಡಕೂಡಲೆ ಸದರೀ ಸಬ್ ತಾಲ್ಲೂಕಿಗೆ ದಾಖಲಾಗತಕ್ಕದ್ದು.

೧೦ ಮಾಲೂರು ಡೆಪ್ಯುಟಿಅಮಲ್‌ದಾರ್ ಗುಲಾಂ ಹೈದರ್‌ಖಾನ್‌ರು ಗುಡಿಬಂಡೆಗೆ ವರ್ಗಮಾಡಲ್ಪಟ್ಟಿರುತ್ತಾರೆ. ಇವರು ಮಾಲೂರು ತಾಲೂಕು ಚಾರ್ಜನ್ನು ನಿಜಾಮುದ್ದೀನ್ ಅಲ್ಲೀಖಾನ್‌ಯವರು ಒಪ್ಪಿಸಿಕೊಂಡನಂತರ, ಗುಡಿಬಂಡೆ ಸಬ್ ತಾಲೂಕಿಗೆ ದಾಖಲಾಗತಕ್ಕದ್ದು

೧೧ ಗುಡಿಬಂಡೆ ಡೆಪ್ಯುಟಿ ಅಮಲ್‌ದಾರ್ ಶ್ರೀಕಂಠಯ್ಯನವರು ಶ್ರೀನಿವಾಸಪುರ ಡೆಪ್ಯುಟಿ ಅಮಲ್‌ದಾರೀ ಕೆಲಸಕ್ಕೆ ವರ್ಗಮಾಡಲ್ಪಟ್ಟಿರುತ್ತಾರೆ.

ನಂ. ೨೪೧—ಗೋರೂರು ಸಬ್ ಅಮಲ್‌ದಾರ್ ಶ್ಯಾಮಯ್ಯಂಗಾರ್ರವರಿಗೆ ಅವರು ಉಪಯೋಗಿಸಿಕೊಳ್ಳತಕ್ಕ ರಜಾ ಸೇರಿ ೬ ತಿಂಗಳ ಕ್ವಾರ್ಟರ್‌ಲಿ ರಜಾ ಕೊಡಲ್ಪಟ್ಟಿದೆ

ನಂ ೨೪೨—ಇದರಡಿ ಬರುವ ನೌಕರರುಗಳ ೧೮೮೬ನೇ ಏಪ್ರಿಲ್ ಗುರ್ರೀಲಾಗಾಯಿತು ಜಾರಿಯಲ್ಲಿ ಬರತಕ್ಕದ್ದು

ಅಸಿಸ್ಟೆಂಟ್ ಕಂಟ್ರೋಲರ್ ಮಿ||ಎ. ರಂಗಸ್ವಾಮಯ್ಯಂಗಾರ್, ಬಿ. ಎ ಬಿ ಎಲ್. ಯವರು, ಮೈಸೂರು ಗವರ್ನ್‌ಮೆಂಟ್ ಕಂಟ್ರೋಲರಾಗಿಯೂ, ಎಕ್ಸ್ ಆಫಿಷಿಯೊ ಸ್ಟ್ಯಾಂಪ್ ಸೂಪರಿಂಟೆಂಡೆಂಟರಾಗಿಯೂ, ಹುಜೂರು ಟ್ರೆಷರಿ ಆಫೀಸರಾಗಿಯೂ ಇರತಕ್ಕದ್ದು.

ಮಿ|| ಎಸ್. ವೆಂಕಟವರದಯ್ಯಂಗಾರ್, ಬಿ. ಎ. ಬಿ. ಎಲ್ ಯವರು ದಿವಾನರವರ ಲೆಜಿಸ್ಲೆಟಿವ್ ಸೆಕ್ರೆಟರಿ, ಇನ್ಸ್‌ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಮತ್ತು ರಿಜಿಸ್ಟ್ರಾರ್ ಆಫ್ ಆಫಿಷಿಯೊ ರಿಜಿಸ್ಟ್ರಾರಾಗಿರತಕ್ಕದ್ದು.

ಮಿ. ಟಿ. ಟಿ ಶಿನಾರ್ಡ್‌ಯವರು, ಕಮಾರ್ಷಿಯಲ್ ಸ್ಟೋರ್ ಮತ್ತು ಸ್ಟೇಷನರಿ ಸೂಪರಿಂಟೆಂಡೆಂಟ್ ಕೆಲಸದೊಂದಿಗೆ ಮೈಸೂರು ಗೆಜೆಟ್ ಕಂಪೈಲರಾಗಿಯೂ ಗವರ್ನ್‌ಮೆಂಟ್ ಪ್ರೆಸ್ ಸೂಪರಿಂಟೆಂಡೆಂಟರಾಗಿಯೂ ಇರತಕ್ಕದ್ದು.

ಮಿ|| ಬಿ. ಎಲ್ ಗ್ರೀನ್‌ಯವರು ಈಗಿರುವ ದಿವಾನರವರ ಚೀಫ್ ಸೆಕ್ರೆಟರಿ ಕೆಲಸದೊಂದಿಗೆ ಮೈಸೂರು ಹೆಡ್ ಕ್ವಾರ್ಟರ್ಸ್‌ನಲ್ಲಿ ಶಾಸನಗಳು ಮೊದಲಾದ ಪುರಾತನ ವಿಷಯಗಳ ಶೋಧನೆಗಾಗಿ ಮಾಡಲ್ಪಟ್ಟ ಇಲಾಖೆಯ ಡೈರೆಕ್ಟರಾಗಿರತಕ್ಕದ್ದು

ನಂ. ೧, ೧೧ನೇ ಏಪ್ರಿಲ್—ಹಾಸನ ಡಿ|| ಡೆಪ್ಯುಟಿ ಕಮ್ಮಿಷನರಾದ ಮಿ|| ಟಿ ಆನಂದರಾಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿಲಾಗಾಯಿತು ೨ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ದಿವಾನರವರ ಅಂಡರ್ ಸೆಕ್ರೆಟರಿಯಾದ ಮಿ|| ಪಿ. ಎನ್. ಕೃಷ್ಣಮೂರ್ತಿಯ್ಯನವರು, ಮಿ|| ಆನಂದರಾಯರವರ ಗೈರುಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಹಾಸನ ಡಿ|| ಡೆಪ್ಯುಟಿಕಮ್ಮಿಷನರ್ ವ ಡಿ|| ಮ್ಯಾಜಿಸ್ಟ್ರೇಟ್ ಕೆಲಸವನ್ನು ಬದಲೀನೋಡುವಂತೆ ನೇಮಕಮಾಡಲ್ಪಟ್ಟಿರುತ್ತಾರೆ.

BANGALORE:—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

[illegible]

Vol. XIII] BANGALORE—MONDAY APRIL 12, 1886. [No. 15.

ಸಂಪುಟ ೧೩.] ಬೆಂಗಳೂರು:—ಸನ್ ೧೮೮೬ನೇ ಇಸವಿ ಏಪ್ರಿಲ್ ೧೨ನೇ ತಾರೀಖ್ ಸೋಮವಾರ. [ಸಂಚಿಕೆ ೧೫.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

[illegible] ೧ಕ್ಕೆ ... ೧೨—[illegible]

[illegible] ೧ಕ್ಕೆ ... ೬—೦—೦

[illegible] ೬—೦—೦

[illegible] ೧ಕ್ಕೆ ೧—೮—೦

[illegible]

ಪ್ರಕಟನೆಯ ರಿವಾಜ್.

[illegible] ೧ಕ್ಕೆ ೦—೨—೦

[illegible] ೧ಕ್ಕೆ ೦—೧—೬

NOTICE TO SUBSCRIBERS

[illegible]

೧ [illegible]

೨ [illegible]

೩ [illegible]

೪ [illegible]

NOTICE.

VAIDYASARA SANGRAHA.

☞ *Price including Postage, Rs 5 0-0*

ವೈದ್ಯಸಾರ ಸಂಗ್ರಹ.

[illegible]

[illegible] ... ... ರೂ|| ೫—೦—೦

[illegible] ೦—೬—೦

[illegible], ಬೆಂಗಳೂರು

ನೋಟೀಸ್.

[illegible]

[illegible]	೧—೪—೦
[illegible]	೦—೧೨—೦
[illegible]	೦—೩—೦
[illegible]	೦—೫—೦
[illegible]	೦—೪—[illegible]
[illegible]	೦—೧೨—೦
[illegible]	೦—೬—೦
[illegible]	೦—೬—೦
ವೈದ್ಯಸಾರಸಂಗ್ರಹ	೫—೦—೦
ಕನ್ನಡ ಗ್ರಂಥಗಳು	
[illegible]	೦—೬—[illegible]
[illegible]	೦—೪—೦
[illegible]	೦—೩—೬
[illegible]	೦—೨—೬
[illegible]	೦—೪—೦
[illegible]	೦—೨—೦
[illegible]	೦—೨—೬
[illegible]	೦—೬—[illegible]
[illegible]	೦—೩—೦
[illegible]	೦—೨—[illegible]
[illegible]	೦—೦—[illegible]
[illegible]	೧—೦—೦
[illegible]	೨—೦—೦
[illegible]	೦—೧೨—೦
[illegible]	೩—೪—೬
[illegible]	೩—೪—೬
[illegible]	
[illegible]	೦—೮—೦
[illegible]	೦—೮—೦
[illegible]	೦—೮—೦
ಸಂಸ್ಕೃತ ಗ್ರಂಥಗಳು	
[illegible]	೦—೫—೦
[illegible]	೦—೨—೬
[illegible]	೦—೨—೬
[illegible]	೦—೦—೬
[illegible]	೦—೩—೬
[illegible]	೦—೧—[illegible]

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮ್ಮಿಷನ್ ಮರ್ಚಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇಲೆ ವಳ್ಳಾಳಿತೆಗೆದುಕೊಳ್ಳಲ್ಪಡುವದು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, APRIL 12, 1886

೧೮೮೬ನೇ ಏಪ್ರಿಲ್ ೧೨ನೇ ತಾ|| ಸೋಮವಾರ

ಶ್ಲೋ|| ಸರ್ವಜ್ಞತಾಂಸದಸಿವಾಕ್ಪಟುತಾಂಪ್ರಸೂತೆ ವಾಣಿತ್ವರಂಪ್ರಸರಣೀಯಶಃಪ್ರಣಾಮಃ ತ್ವಾಮ ನಹಿಮನುಜಃಮನುಷ್ಯರಾಮ ತ್ವಾಮಮನಸೌಮಿಶರ ಣಂಜನನೀತ್ವಮೇವ||

STRAY NOTES BY A "NATIVE THINKER"

ಹಿಂದೂ ಪರ್ಯಾಲೋಚಕರೆಂಬ ಅಭಿದಾನದೊಡನೆ ನಾನಾ ವಿಷಯಗಳನ್ನು ಆಗಿಂದಾಗ್ಯೆ ವೃತ್ತಾಂತಪತ್ರಿಕೆಗಳಿಗೆ ತತ್ರಾಪಿ ವಿಶೇಷತಃ ಮದರಾಸ್ ಟೈಂಸ್‌ಪತ್ರಿಕೆಗೆ ಬರೆಯುತಲಿರುವ ಮೊದ್ದಮನುಷ್ಯರು ಫಲಾನೆಯವರೆಂತಲೂ ಅವರ ಲೋಕಾನುಭವವು ಮಹತ್ತರವಾದದ್ದೆಂತಲೂ ಅವರ ಅಭಿಪ್ರಾಯಗಳು ಅವರ [illegible]ಯಗಳೆಂತಲೂ ಪ್ರಾಯೇಣ ಜನಗಳೆಲ್ಲರೂ ತಿಳಿದಿದ್ದಾರೆಯಷ್ಟೆ ಸದರೀದೊಡ್ಡಮನುಷ್ಯರು ತಮ್ಮನಿಜನಾಮಧೇಯವನ್ನು ಸ್ಪಷ್ಟವಾಗಿ ತಿಳಿಸದಿದ್ದಮಾತ್ರದಿಂದಲೇ ತಾವು ಫಲಾನೆಯವರೆಂಬ ಅಂಶ ಹೊರಗಾಗಲಾರದೆಂದು ಭಾವಿಸಿರುವಂತೆ ತೋರುತಿದೆ. ಏನಂತು ಅವರನ್ನು ಅವರಲೇಖನವೇ ಹೊರಪಡಿಸುವದರಿಂದ ಈಗ ನಾವು ಅವರಹೆಸರನ್ನು ಬಹಿರಂಗವಾಗಿ ಜನಗಳಿಗೆತಿಳಿಸುವದಿಲ್ಲವೆ ಅವರಅಭಿಪ್ರಾಯಗಳುಹಾಗಾಗಲು ದೂರದೃಷ್ಟಿಯುಳ್ಳವಾಗಿಯೂ ವರ್ತಮಾನ ಕಾಲಿಕಗಳಾದ ವಿದ್ಯಾನಾಗರಿಕತೆ ಅಭಿರುಚಿಗಳಿಗೆ ಅನುಗುಣವಾದವಾಗಿಯೂ, ಇರುವವೆಂದು ಹೇಳುವೆವು. ಮೇಲ್ಕಂಡ ದೊಡ್ಡಮನುಷ್ಯರು ಅಗರ್ಪ್ರಮಂತರಾಗಿಯೂ ಅನೇಕಸುಸ್ಥಾನಗಳಲ್ಲಿ [illegible] ಗಿರಿಮಾಡಿದವರಾಗಿಯೂ ರಾಜನೀತಿ ಕೌಶಲ್ಯದಿಂದ ಪ್ರಚುರನವರ ಪ್ರಶಂಸೆಗೆ ವಿಶೇಷತಃ ಪಾತ್ರರಾದವರಾಗಿಯೂ, ಯಾವಾಗಲು ಇಂಗ್ಲೀಷ್ ಗವರ್ನಮೆಂಟ್ ರವರು [illegible]ಯನ್ನೇ ಅಂತರವಾಗಿ [illegible]ಲಾಗಿಯೂ ಇರುವ ರಾಜಾ ಸರ್. ಟಿ. ಮಾಧವರಾಯರವರಾಗಿರುತ್ತಾರೆ. ಈ ದೊಡ್ಡ ಮನುಷ್ಯರು ಆಚೀವಾರದಲ್ಲಿ ಮದರಾಸ್ ಟೈಂಸ್ ಪತ್ರಿಕೆಗೆ ಬರೆದ ಕೆಲವು ವಿಷಯಗಳು ಜನಗಳು ಅವಶ್ಯತಿಳಿದು ಪರ್ಯಾಲೋಚಿಸತಕ್ಕವಾಗಿರುವದರಿಂದ ಅವು ಇದರಡಿ ಪ್ರಕಟಿಸುವೆವು. ಅವುಗಳ್ಯಾವವೆಂದರೆ,—

ಕ್ರಿಸ್ತುಶಕದ ೧೮೮೧ನೇ ಇಸವಿಯಲ್ಲಿ ಇಂಡ್ಯಾದೇಶದೊಳು ೧೫ವರುಷಗಳಪ್ರಾಯಸ್ಸಿಗೆ ಒಳಪಟ್ಟು ವಿವಾಹವಾಗಬೇಕಾಗಿದ್ದವರು ಒಂದುಕೋಟಿ ಎಪ್ಪತ್ತೊಂಭತ್ತುಲಕ್ಷ ಕನ್ಯೆಯರಿದ್ದಾರೆಂದೇ ಏರ್ಪಟ್ಟಿತು. ಅದುವರಿವಿಗೆ ವಿವಾಹವಾಗಿದ್ದ ಹುಡಿಗಿಯರು ೧೬ಲಕ್ಷವೆಂದಿಯೆಂತಲೂ, ಇದಲ್ಲದೆ ಬಾಲವಿಧವೆಯರು ಅಸಂಖ್ಯಾಕರಾಗಿದ್ದರೆಂತಲೂ ವ್ಯಕ್ತವಾಗುತಿದೆ. ಆದದರಿಂದ ಅಗಣಿತವಾದ ಬಾಲವಿಧವಾಸಮೂಹವನ್ನು ಕುರಿತು ಕೇವಲ ಅನುತಾಪದೊಡನೆ ರಾಯರವರು ತಿಳಿಸುತ್ತಾರೇನೆಂದರೆ, ಅಬಲೆಯರಾದ ವಿತಂತುಗಳೇ! ನಿಮಗೆ ಈಶ್ವರನು ಈಗಲೇ ಸಾಕಾದಷ್ಟು ದುರ್ದೆಶೆಯನ್ನು ಮೇಲವನ್ನು ಸಹ ಉಂಟುಮಾಡಿರುವಲ್ಲಿ ಒಬ್ಬ ಕುಮಾರನನ್ನು ಸ್ವೀಕಾರ ಮಾಡಿಕೊಳ್ಳುವದರ ಮೂಲಕ ಅವುಗಳನ್ನು ಮತ್ತಷ್ಟು ವೃದ್ಧಿಪಡಿಸಿಕೊಳ್ಳಬೇಡಿರಿ. ಮೃತಭರ್ತೃಸಂಬಂಧವಾದ ಆಸ್ತಿಗಳೇನಾದರೂ ನಿಮಗಿದ್ದರೆ ಅವುಗಳನ್ನು ಹಂಚಿಕೊಳ್ಳಬಹುದೆಂಬ ದುರಭಿಪ್ರಾಯದೊಡನೆ ನಿಮ್ಮ ಇಷ್ಟಬಾಂಧವರುಗಳು ಸ್ವೀಕಾರ ಮಾಡಿಕೊಳ್ಳುವಂತೆ ನಿಮ್ಮನ್ನು ಬಹಳ ಪ್ರೋತ್ಸಾಹಗೊಳಿಸುವರು. ಪರಂತು ಅದಕ್ಕೆ ನೀವು ನಮ್ಮಂತೆ ಸದಾ ಹುಷಾರಾಗಿರಿ. ಬಂದದ್ದೆಲ್ಲ ಬರಲಿ, ಯಾವದು ಬಂದಾಗ್ಯೂ ಬಾಧಕವಿಲ್ಲವು. ಸ್ವೀಕಾರ ಮಾಡಿಕೊಳ್ಳುವಂತೆ ನಿಮ್ಮನ್ನು ಒಬ್ಬರೂ ಬಲಾತ್ಕರಿಸಲಾಗದು. ಯಾವಾಗಲು ಇತರರ ಸಲಹೆಗಳಿಗೆ "ಬೇಡ"ವೆಂಬ ನಿಷೇಧೋಕ್ತಿಯೇ ನಿಮ್ಮ ಪ್ರತ್ಯುತ್ತರವಾಗಿರಲಿ, ನಿಮ್ಮ ಐಶ್ವರ್ಯವನ್ನು, ಸ್ಥಿತಿಯನ್ನೂ ಕಾಪಾಡಿಕೊಳ್ಳಿರಿ. ನಿಮಗೆ ವಯಃಪ್ರಾಪ್ತವಾದ ಅಂಗಶ್ಯಾಲ್ಯಗಳುಂಟಾದಾಗ ಯುಕ್ತವೆಂದು ತೋರಿದರೆ ಆಗ ನಿಮಗೆ ಆವಶ್ಯಕವಿದ್ದಲ್ಲಿ ಸ್ವೀಕಾರಮಾಡಿಕೊಳ್ಳಬಹುದು. ಹ್ಯಾಗಾದರೂ ಇರಲಿ, ಈಗ ಸದ್ಯಃ ಇಂತಾ ವಿಷಯಗಳಲ್ಲಿ ಆತುರಪಡಕೆಲಸವಿಲ್ಲವು. ಒಂದು ವೇಳೆ ನಿಮ್ಮ ಆಲೋಚಕರು ನಿಮ್ಮನ್ನು ಆತುರಗೊಳಿಸಿದರೆ, ಅವರ ಉದ್ದೇಶವು ನಿಜವಾಗಿ ಸಂದೇಹಿಸತಕ್ಕದ್ದಾಗಿರುವದು, ಎಂಬದು.

ಮೇಲೆ ಕಂಡ ಅಭಿಪ್ರಾಯವನ್ನು ನಾವು ಸಹ ಅನುಮೋದಿಸುವೆವು. ಯಾತಕ್ಕೆಂದರೆ, ಇಂತಾ ಸ್ವೀಕಾರಗಳು ಅನೇಕ ಸಂದರ್ಭಗಳಲ್ಲಿ ವಿಫಲಗಳಾಗುತಿವೆ ಸಾಮಾನ್ಯವಾಗಿಸ್ವೀಕೃತತಾಯಿಗೂ ಪುತ್ರನಿಗೂ ಅನ್ಯೋನ್ಯೈಕಮತ್ಯಗಳೆಂಬವು ಕಾಣ್ಬಾಂಗ ಇರುವದಿಲ್ಲವು. "ಕೂರಾತ್ಯೂರಕರಂ ಕಿಂ ಪತಿಪುತ್ರವಿಹೀನ ಮಂಗವಾಹ್ಯದಯಂ" ಎಂಬವಾಗಿ ಅಪುತ್ರವತಿಯಾಗಿಯೂ, ತತ್ರಾಪಿ ಪತಿವಿಹೀನೆಯಾಗಿಯೂ ಇರುವ ಹೆಂಗಸಿನ ಮನಸ್ಸು ವಿಧ [illegible] ಇರುವದಾಗಿ ಅವಳು ಅನ್ಯರ ಸ್ವೀಕರಿಸುವ ಅಂಗೀಕರಿಸುವ ಸ್ವೀಕೃತ ಪುತ್ರನಲ್ಲಿ ಅವಳಿಗೆ ಅನುರಾಗವೆಂಬುದು ಸ್ವಾಂಗವಿಲ್ಲದೆ ಹೋಗುತಿದೆ. ದತ್ತಪುತ್ರನಲ್ಲಿ ವೈಮನಸ್ಯವೆಂಬದುಂಟಾದ ಕೂಡಲೇ ಅವಳು ತನ್ನ ಆಸ್ತಿಯನ್ನೆಲ್ಲ ಹಾಳುಮಾಡಲಾರಂಭಿಸುವಳು, ಅಥವಾ ಮನಸ್ಸೋಪ್ರಿಯ ಮಾಡಿಬಿಡುವಳು. ಅನೇಕವೇಳೆಯಲ್ಲಿ ಇತರರಂತೆ ತನಿಗೆ ಲಭಿಸಬಹುದಾದ ಪ್ರಯೋಜನಗಳನ್ನು ಹೋಗಲಾಡಿಸಿಕೊಂಡು ಬೇರೊಂದು ಕುಟುಂಬಕ್ಕೆ ಪುತ್ರನಾಗಿ ಅಲ್ಲಿಯೂ ತನ್ನ ಆಸ್ತಿಯು ಕಲಾಲಾಗುವದಂ ಕಂಡು ಸದರೀ ಪುತ್ರನು ತನ್ನ ಸ್ವೀಕೃತ ತಾಯಿಯನ್ನು ಹಿಂಸಿಸುವನು. ಅಥವಾ ಮನೆಯಿಂದಟಡಿಸಿಬಿಡುವನು, ಅಲ್ಲದೆ ತಾನಾದರೂ ಓಡಿಹೋಗುವನು. ಇಂತಾಸಂದರ್ಭಗಳಲ್ಲಿ ಉಭಯತಾಪಿ ಪ್ರಯೋಜನವಿಲ್ಲದೆ ಅವರಿಬ್ಬರು ಮಹದನರ್ಥಗಳಿಗೆ ಪಾತ್ರರಾಗಬೇಕಾಗುತ್ತಾರೆ. ಮುಖ್ಯವಾಗಿ ಇಂತಾ ಸ್ವೀಕಾರಗಳನ್ನು ಮಾಡಿಕೊಂಡು ಬಳಿಕ ಪೇಚಾಡುವದಕ್ಕಿಂತಲೂ ತಮ್ಮಜೀವಿತಕಾಲವನ್ನು ಇಷ್ಟಾನುಸಾರ ಯುಕ್ತವಾದರೀತಿಯಲ್ಲಿ ಕಳೆದುಬಿಡುವದೇ ಯೋಗ್ಯವೆಂದು ತೋರುತಿದೆ.

Occasional Notes.
ನೈಮಿತ್ತಿಕವಿಷಯನ್ಯಾಸ

Another son to the Nizam.—ಗತಬುಧವಾರದದಿನದಬೆಳಿಗ್ಯೆ ಹೈದರಾಬಾದ ನಿಜಾಮರವರಿಗೆ ಮತ್ತೊಬ್ಬ ಕುಮಾರನುತ್ಪನ್ನನಾದನೆಂತ ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ.

The Governor of Madras.—ಘನವನ್ನುಹೊಂದಿದ ಮದರಾಸ್ ಗವರ್ನರವರು ಈದಿನ ಸಾಯಂಕಾಲ ೫ ಘಂಟೆಗೆ ಸ್ಪೆಷಲ್ ಟ್ರೇನಿನಲ್ಲಿ ನೀಲಗಿರಿಗೆದಯಮಾಡುವರೆಂದು ತಿಳಿಯಬರುತಿದೆ.

The Maharajas of Indore and Gwalior.—ಇಂದೂರ್ ಮತ್ತು ಗ್ವಾಲಿಯರ್ ಸಂಸ್ಥಾನಗಳ ಮಹಾರಾಜರುಗಳು ಕೇವಲ ಅಪಾಯಸ್ಥಿತಿಯೊಳಿದ್ದಾರೆಂಬ ಅಶುಭ ಕೇಳಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಗಂಗಾನದಿಯ ದಡದಲ್ಲಿರುವ ಬಿತೂರ್ ಎಂಬ ಪ್ರದೇಶಕ್ಕೆ ಗ್ವಾಲಿಯರ್ ಮಹಾರಾಜರವರು, ಹೋದರೆಂದು ತಿಳಿಯಬರುತಿದೆ.

Royal marriage.—ನೇಪಾಳಸಂಸ್ಥಾನದ ಮಹಾರಾಜರಿಗೂ, ಪರ್ವತರಾಜರಪುತ್ರಿಗೂ ಬರುವತಿಂಗಳಲ್ಲಿ ವಿವಾಹವು ನಡೆಯುವಂತೆ ನಿಷ್ಕರ್ಷೆಯಾಗಿದೆಯೆಂತಲೂ, ಕಾಠಮಾಂಡುವಿನಲ್ಲಿ ಸದರೀ ವಿವಾಹೋತ್ಸವವು ಜರಗಿಸತಕ್ಕಬಗ್ಯೆ ಪ್ರಬಲಸನ್ನಾಹಗಳು ನಡೆಸಲ್ಪಡುವಂತೆಯೂ, ಬಾಣಬಿರುಸುಗಳ ವಿಚಾರಕೆಗಾಗಿಯೇ ಕಲ್ಕತ್ತೆಯಿಂದ ಒಂದು ಯೂರೋಪಿಯನ್ ಕೋರಿಯವರು ಹೋಗಿದ್ದಾರೆಂತಲೂ, ತಿಳಿಯಬರುತಿದೆ.

A complimentary dinner.—ಕಳೆದತಿಂಗಳ ೧೯ನೇ ತಾರೀಖಿನಲ್ಲಿ ಇಂಡಿಯಾ ದೇಶದ ಸಾರ್ವಭೌಮರ ಶಾಸನಾಂತರ್ಗತಚೀಫರವರಿಗೆ ನಾರ್ಥಬ್ರೂಕ್ ಇಂಡ್ಯ ಕ್ಲಬ್ಬಿನಲ್ಲಿ ಮಹನ ಪ್ರದರ್ಶಕ ಔತನವೊಂದು ನಡೆಯಿತು. ಆಕಾಲದೊಳು ಅಲ್ಲಿ ಲಾರ್ಡ್ ನೇಪಿಯರ್ ಆಫ್ ಮಾಗ್ದಾಲಾ ಯವರು, ಲಾರ್ಡ್ ರಿಪ್ಪನ್‍ಯವರು, ಇಂಡ್ಯ ಕೌನ್ಸಿಲಿಗೆ ಸೇರಿದ ಅನೇಕ ಮೆಂಬರ್‌ಗಳು ಹಾಜರಿದ್ದರು. ಇಂಡ್ಯದೇಶದ ಸೈನ್ಯಕ್ಕೂ ತಮಗೂ ವ್ಯಾಪಾರಿಗಿದ್ದ ಚಿರಕಾಲಿಕ ಸಂಬಂಧವನ್ನು ಕುರಿತು ಸರ್ ಡೋನಾಲ್ಡ್ ಸ್ಟೀವರ್ಟ್‍ಯವರು ಸಂಕ್ಷೇಪವಾಗಿ ತಿಳಿಸಿದರು.

The Income Tax.—ಈಗ ಜಾರಿಯೊಳು ತರಲ್ಪಟ್ಟಿರುವ ಇನ್‌ಕಂಟ್ಯಾಕ್ಸನ್ನು ಕುರಿತು ಮುಂಬೈ ಕನ್ನಡಸುವಾರ್ತೆ ಪತ್ರಿಕೆ ತಿಳಿಸುವದೇನಂದರೆ.—ವಾಚಕರೇ, ಈತಿಂಗಳ ೧ನೇ ತಾರೀಖು ಚನ್ನಾಗಿ ನೆನಪಿನಲ್ಲಿದ ತಕ್ಕದ್ದಾಗಿದೆಯಲ್ಲವೆ? ಯಾತಕ್ಕಂದರೆ ಆದಿನವು ಇನ್‌ಕಂಟ್ಯಾಕ್ಸ ಎಂಬ ಮಹಾದೇವಿಯ ಜನ್ಮದಿನವು. ಇನ್ನು ಇವಳು ಮೆಲ್ಲಮೆಲ್ಲನೆ ಪ್ರೌಢೆಳಗೆಲ್ಲ ಸಂಚಾರ ಮಾಡುತ ದಿನೇದಿನೆ ಯೆಲ್ಲರಿಗೂ ತನ್ನ ಪ್ರತಾಪವನ್ನು ತೋರಿಸದೆ ಯೆಂದಿಗೂ ಬಿಡಲಾರಿಯಳು. ಇವಳು ಜನಿಸಬಾರದೆಂದು ನೇಟಿವ್ ಪತ್ರಿಕಾಕರ್ತರು ಮಾಡಿದ ಪ್ರಯತ್ನವೆಲ್ಲವು ಕಡೆಗೆ ನಿಷ್ಫಲವಾದವು. ಇವಳು ಎಷ್ಟು ಆಯುಸ್ಸನ್ನು ಪಡೆದಿರುವಳೋ ತಿಳಿಯದು, ಹ್ಯಾಗಾದರುಇರಲಿ. ಇವಳು ಇದೊಂದೇ ವರುಷವೇ ತನ್ನಕಾಣಿಕೆಯನ್ನು ತೆಗದುಕೊಂಡು ಮರಳಿ ಗೋಚರವಾಗದೆ ಅದೃಶ್ಯವಾಗಲೆಂದು ದೇವರನ್ನುಕುರಿತು ಪ್ರಾರ್ಥಿಸುವೆವು.

Departure of ex-king Theebaw to Rutnagherry.—ಪದಭ್ರಷ್ಟರಾದ ಬರ್ಮ್ಮ ಅರಸರ ನಿವಾಸದಬಗ್ಯೆ ರತ್ನಗಿರಿಯಲ್ಲಿ ಮಾಡಬೇಕಾಗಿದ್ದ ಆವಶ್ಯಕಗಳಾದ ಏರ್ಪಾಡುಗಳೆಲ್ಲವು ಪೂರೈಸಿದವೆಂದು ಕೇಳುತ್ತೇವೆ. ತೀಬಾ ಅರಸರು ಮೊನ್ನೆಯದಿನ ಮಧ್ಯಾಹ್ನ ತಮ್ಮ ತಾಯಿ, ಮತ್ತು ತಮ್ಮ ಇಬ್ಬರು ಭಾರ್ಯೆಗಳು ಮುಂತಾದವರೊಡನೆ ರತ್ನಗಿರಿಗೆ ಪ್ರಯಾಣಮಾಡಿದರು. ಈ ಅರಸರ ಉಸ್ತುವಾರಿಯಬಗ್ಯೆ ಬಲವಾದ ಪಹರೆಯವರು ಸಹ ಸಂಗಡ ಹೋದರೆಂದು ತಿಳಿಯಬರುತಿದೆ. ರಾಜ್ಯ ಭೋಗಗಳನ್ನೆಲ್ಲ ತೊರೆದು ತಾವಾಗಿ ಶರಣಾಗತರಾಗುವಷ್ಟು ಉಪಶಾಂತರಾದ ತೀಬಾ ಅರಸರು, ಬ್ರಿಟಿಷ್ ಗವರ್ನಮೆಂಟಿನವರ ಮೇಲೆ ಯೇನು ಕಾರ್ಯಭಾಗ ನಡಿಸಲಿಕ್ಕೆ ಅನ್ಯರಾಜ್ಯದೊಳು ತತ್ರಾಪಿ ಪ್ರಕೃತಸ್ಥಿತಿಯಲ್ಲಿ ಹ್ಯಾಗೆ ಶಕ್ತರಾಗುವರು? ಇಂದ್ರಪದದಿಂದ ಸಾಮಾನ್ಯಸ್ಥಿತಿಗೆ ತರಲ್ಪಟ್ಟ ಈ ಅರಸರು ಇನ್ನು ಅವರ ದೇಶಕ್ಕೆ ಹೋಗಕೂಡದೆಂದು ಅವರಿಗೆ ಆಜ್ಞಾಪಿಸಿದರೆಸಾಲದೆ? ಹಾಗೆ ಮಾಡಿದ ಪಕ್ಷಕ್ಕೆ ಅವರು ಬ್ರಿಟಿಷ್ ಇಂಡ್ಯದೇಶದ ಸರಹದ್ದಿನೊಳಗಾಗಿ ಬೇಕಾದ ಕಡೆಗಳಲ್ಲೆಲ್ಲ ಸಂಚರಿಸುತಲಿರಲಿಕ್ಕೆ ಅನುಕೂಲವಾಗಿರುವದು. ಈಗ, ಕಲ್ಪಿಸಲ್ಪಟ್ಟಿರುವ ನಿರ್ಬಂಧಕ್ಕೆ ಅನುಗುಣವಾದ ಅಪರಾಧ ವೇನೂ ಬ್ರಿಟಿಷ್ ಗವರ್ನಮೆಂಟಿನವರ ವಿಷಯದಲ್ಲಿ ಅವರು ಮಾಡಲಿಲ್ಲನೆಂಬ ಅಂಶ ಪ್ರಸಿದ್ಧವಾಗಿರುತಿದೆ.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕ್‍ಜಾತಿವೃತ್ತಾಂತಗಳು

Public holiday.—ಈದಿನ ಶ್ರೀರಾಮನವಮಿ ಯಾದದರಿಂದ ತತ್ಪ್ರಯುಕ್ತ ಇಲ್ಲಿನಸರ್ಕಾರ್ ಇಲಾಖೆಗಳಿಗೆಲ್ಲ ರಜಾ ಕೊಡಲ್ಪಟ್ಟಿದೆ.

Transfer.—ಈವೂರು ಹೆಡ್‍ಕ್ವಾರ್ಟರ್ಸ್‌ನಲ್ಲಿ ಕೆಲಸನೋಡುತಲಿರುವ ಎಗ್ಸಿಕ್ಯೂಟಿವ್ ಇಂಜನಿಯರ್ ಮೆ|| ಸುಬ್ಬರಾಯರ್ ಬಿ. ಎ. ಬಿ. ಸಿ. ಇ ಯವರು ಈಗ ಪುನರ್ವ್ಯವಸ್ಥಾಪಿತವಾದ ಹಾಸನ ಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪಡುವರೆಂದು ಕೇಳುತ್ತೇವೆ.

H. H. the Maharaja.—ಶ್ರೀಮನ್ಮಹಾರಾಜರವರು ಪದ್ಧತಿಪ್ರಕಾರ ನಾಳೇ ಮಂಗಳವಾರದದಿನ ರಾಜಧಾನಿಯಿಂದ ಹೊರಟು ನೇಗೂರು ಘಾಟೀಮಾರ್ಗವಾಗಿ ನೀಲಗಿರಿಗೆದಯಮಾಡುವರೆಂದು ತಿಳಿಯಬರುತಿದೆ. ಬರುವ ಬುಧವಾರದದಿನ ದಿವಾನರವರು ರೈಲ್‍ಮಾರ್ಗವಾಗಿ ಮೇಟ್ಪಾಳ್ಯಕ್ಕೆ ಇಲ್ಲಿಂದ ಹೊರಡುವರೆಂದು ಕೇಳುತ್ತೇವೆ.

Acknowledgement.—ಮೈಸೂರು ಅರಮನೆ ವಿದ್ವಾಂಸರಾದ ಬ್ರಹ್ಮಶ್ರೀ ಜಯಾಚಾರ್ಯರೆಂಬವರಿಂದ ನೂತನವಾಗಿ ರಚಿಸಲ್ಪಟ್ಟ ಪಾಕಶಾಸ್ತ್ರಗ್ರಂಥದ ಪ್ರತಿಯೊಂದು ನಮಗೆ ಕಳುಹಿಸಲ್ಪಟ್ಟಿತಾಗಿ ಅದನ್ನು ನಾವು ಕೃತಜ್ಞತೆಯೊಡನೆ ಅಂಗೀಕರಿಸಿದೆವು. ಇದರಮೇಲಣ ನಮ್ಮ ಅಭಿಪ್ರಾಯವನ್ನು ಮುಂದೆ ತಿಳಿಸುವೆವು.

A suit for maintenance.—ಗತ ಗುರುವಾರದದಿನ ಇಲ್ಲಿನ ಮುನ್ಸಿಫ್‍ಕೋರ್ಟಿನಲ್ಲಿ ಜೀವನಾಂಶಕ್ಕಾಗಿ ಪಾಪಮ್ಮನೆಂಬಾಕೆಯು ತನ್ನ ಮಾವನು ವಗೈರೇರಮೇಲೆ ಹೂಡಿರುವ ಮೊಕದ್ದಮೆಯು ವಿಚಾರಣೆಯಾಯಿತು. ವಾದಿಯತರಫೆ ಮೆ|| ನರಸಿಂಹಯ್ಯಂಗಾರ್ಯರವರೂ ಮಿಸ್ಟರ್ ರಾಮಾನುಜಾಚಾರ್ಯರು ಸಹ ಹಾಜರಿದ್ದರು. ಪ್ರತಿವಾದಿಯಕಡೆ ಮೆ|| ಶಿಂಗ್ರಾಚಾರ್ಯರವರೂ, ಮಿಸ್ಟರ್ ಸಾಂಬಶಿವಅಯ್ಯರವರೂ ಹಾಜರಿದ್ದರು. ಪ್ರತಿವಾದಿಗಳಕಡೆ ಅಡ್ವೋಕೇಟುಗಳು ತಿಳಿಸಿದದೇನಂದರೆ—ವಾದಿಯು ಪತಿವ್ರತೆಯಾಗಿದ್ದಿರುವಳಾದರೆ ಒಂದುವೇಳೆ ಜೀವನಾಂಶಕ್ಕೆ ಅರ್ಹಳಾಗಿರಬಹುದು. ಪರಂತು ಅವಳು ಸ್ವೈರಿಣಿಯಾದ್ದರಿಂದ ಜೀವನಾಂಶಕ್ಕೆ ಸ್ವತಃ ಅನರ್ಹಳಾಗಿ ಮಾಡಿಕೊಂಡಳು. ವಾದಿಯು ಒಬ್ಬ ಮುಸಲ್ಮಾನನೊಡನೆ ಹಾದರವಾಡತಲಿದ್ದಂತೆ ತೋರುತಿದೆ. ಈಗ್ಯೆ ನಾಲ್ಕುವರುಷಗಳಹಿಂದೆ ವಾದಿಯಗಂಡನು ಭರ್ತೃಭಾರ್ಯಾ ಸಂಬಂಧವಾದ ಸ್ವಾತಂತ್ರ್ಯ ಸಂರಕ್ಷಣೆಯಬಗ್ಯೆ ತನ್ನಭಾರ್ಯೆಯಮೇಲೆ ಫಿರ್ಯಾದ್‍ಮಾಡಿದ್ದಂತೆ ಕಾಣುತಿದೆ ಪರಂತು ಆತನಪರವಾದ ಫೈಸಲನ್ನು ಜಾರಿಇಯಲ್ಲಿಕರವೆ ಅವನು ಸುಮ್ಮನಿದ್ದದರಿಂದ ಅವನಭಾರ್ಯೆಯು ತನ್ನ ತೌರುಮನೆಯಲ್ಲಿಯೇ ಯಿರಲಿಕ್ಕೆ ಕಾರಣವಾಯಿತು. ವಾದಿಯಮಾವನು ಕೊಟ್ಟ ಕೈಫಿಯತ್‍ನಿಂದ ತಿಳಿಯಬರುವ ದೇನಂದರೆ—ಈಗ್ಯೆ ಹದಿನೈದುದಿನಗಳಿಂದ ವಾದಿಯವರ್ತನವನ್ನು ತಾನು ಬಹಳ ಜಾಗರೂಕನಾಗಿಕಾದು ಅಜಮಾಯಿಷೀಮಾಡಿದಂತೆಯೂ, ಕಡೆಗೆ ಒಂದು ದಿನಬೆಳಿಗ್ಯೆ ಒಬ್ಬ ಮುಸಲ್ಮಾನನು ಅವಳಮನೆಯ ಬಾಗಿಲನ್ನುತಟ್ಟಿ ಒಳಗೆಪ್ರವೇಶಿಸಿ ವಾದಿಯನ್ನು ಸಂಗಡ ಕರೆದುಕೊಂಡುಹೋದನೆಂತಲೂ ಅದಕ್ಕೆ ಪೂರ್ವದೊಳಾಗಲಿ ಅದರ ತರುವಾಯಲಾಗಲಿ, ಸದರೀ ಮುಸಲ್ಮಾನನನ್ನು ತಾನು ಕಂಡದ್ದಿಲ್ಲವೆಂತಲೂ, ಅಥವಾ ಅವನು ಅವಳನ್ನುಸಾಗಿಸಿಕೊಂಡು ಹೋದದಕ್ಕಾಗಿಯಾಗಲಿ, ವ್ಯಭಿಚಾರಮಾಡಿದ್ದಕ್ಕಾಗಿಯಾಗಲಿ ಅವನಮೇಲೆ ಯಾವ ಕಾರ್ಯಭಾಗವೂ ನಡೆಸಲ್ಪಡಲಿಲ್ಲವೆಂತಲೂ ಈ ವಿಷಯವನ್ನುಕುರಿತು ಇದುವರಿವಿಗೆ ತಾನು ಪೋಲೀಸಿನವರಿಗೆ ತಿಳಿಸಲಿಲ್ಲವೆಂತಲೂ, ಕುಲಸ್ಥರೆಲ್ಲರೂ ಸೇರಿ ವಾದಿಯನ್ನು ಜಾತಿಯಿಂದ ತಳ್ಳಿಹಾಕಿದಕಾಲದಲ್ಲಿ ಹುಡಿಗಿಯಾಗಲಿ, ಅವಳ ತಾಯಿತಂದೆಗಳಾಗಲಿ ಹಾಜರಿರಲಿಲ್ಲವೆಂತಲೂ ಇದಕ್ಕಿಂತ ವ್ಯಭಿಚಾರ ಸಂಬಂಧವಾದ ಬೇರೆ ಯಾವಕೃತ್ಯವನ್ನಾಗಲಿ ನಡೆಸಿದಳೆಂದು ವಾದಿಯಮೇಲೆ ನಿರೂಪಿಸಲಾರನೆಂತಲೂ, ಕೈಫಿಯತ್‍ಕೊಟ್ಟನು. ಈಮೊಕದ್ದಮೆಯಲ್ಲಿ ಮುನ್ಸಿಫರವರು ತಮ್ಮ ಫೈಸಲನ್ನು ಗತ ಶುಕ್ರವಾರದದಿನ ತಿಳಿಸುವಂತೆ ಹೇಳಿದ್ದರು.

THE MYSORE GAZETTE
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಶ್ರೀ ಸಾಹೇಬ್ ಬಹದೂರವರ ದಿವಾನರವರಿಂದ ಹೊರಟಿರುವ ಇಷ್ತಿಹಾರನಾಮೆಗಳು.

[illegible]

ನಂ. ೨೩೭.—[illegible]

ಹಾಸನದ ಮುನ್ಸಿಫ್ ಕೋರ್ಟು

ತಾಲ್ಲೂಕುಗಳು—ಹಾಸನ (೧೮೮೬ನೇ ಇಸವಿ ಮಾರ್ಚಿ ೨೯ನೇ ಮಾರ್ಚಿ ೨೩೮ನೇ ನಂಬರು ಇಷ್ತಿಹಾರ್ ನಾಮೆಯಂತೆ ಬದಲಾಯಿಸಲ್ಪಟ್ಟ ಪ್ರಕಾರ.

[illegible]

ಮೈಸೂರು ಮುನ್ಸಿಫ್ ಕೋರ್ಟು.

ತಾಲ್ಲೂಕುಗಳು—[illegible] (೧೮೮೬ನೇ ಇಸವಿ ಮಾರ್ಚಿ ೨೯ನೇ ಮಾರ್ಚಿ ೨೩೨ನೇ ನಂಬರು ಇಷ್ತಿಹಾರ್ ನಾಮೆಯಂತೆ ಬದಲಾಯಿಸಲ್ಪಟ್ಟ ಪ್ರಕಾರ) [illegible]

ಶ್ರೀರಂಗಪಟ್ಟಣದ ಮುನ್ಸಿಫ್ ಕೋರ್ಟು

ತಾಲ್ಲೂಕುಗಳು—ಶ್ರೀರಂಗಪಟ್ಟಣ, (೧೮೮೬ನೇ ಇಸವಿ ಮಾರ್ಚಿ ೨೯ನೇ ಮಾರ್ಚಿ ೨೩೧ ಮ ೨೩೨ನೇ ನಂಬರ್ ಇಷ್ತಿಹಾರ್ ನಾಮೆಗಳಿಂದ ಬದಲಾಯಿಸಲ್ಪಟ್ಟ ಪ್ರಕಾರ) [illegible] (೧೮೮೬ನೇ ಇಸವಿ ಮಾರ್ಚಿ ೨೯ನೇ ಮಾರ್ಚಿ ೨೩೧ ಮ ೨೩೨ನೇ ನಂಬರ್ ಇಷ್ತಿಹಾರ್ ನಾಮೆಗಳಿಂದ ಬದಲಾಯಿಸಲ್ಪಟ್ಟ ಪ್ರಕಾರ)

[illegible]

[illegible] (೧೮೮೬ನೇ ಇಸವಿ ಮಾರ್ಚಿ ೨೯ನೇ ಮಾರ್ಚಿ ೨೩೧ನೇ ನಂಬರ್ ಇಷ್ತಿಹಾರ್ ನಾಮೆಯಿಂದ [illegible] ಪ್ರಕಾರ.

[illegible] ಮುನ್ಸಿಫ್ ಕೋರ್ಟು.

ತಾಲ್ಲೂಕುಗಳು—[illegible] (೧೮೮೬ನೇ ಇಸವಿ ಮಾರ್ಚಿ ೨೯ನೇ ಮಾರ್ಚಿ ೨೩೩ ಮ ೨೩೪ನೇ ನಂಬರ್ ಇಷ್ತಿಹಾರ್ ನಾಮೆಗಳಿಂದ ಬದಲಾಯಿಸಲ್ಪಟ್ಟ ಪ್ರಕಾರ)

[illegible] (೧೮೮೬ನೇ ಇಸವಿ ಮಾರ್ಚಿ ೨೯ನೇ ಮಾರ್ಚಿ ೨೩೩ನೇ ನಂಬರ್ ಇಷ್ತಿಹಾರ್ ನಾಮೆಯಿಂದ [illegible] ಪ್ರಕಾರ)

[illegible] (೧೮೮೬ನೇ ಇಸವಿ ಮಾರ್ಚಿ ೨೯ನೇ ಮಾರ್ಚಿ ೨೩೩ನೇ ನಂಬರ್ ಇಷ್ತಿಹಾರ್ ನಾಮೆಯಿಂದ ಬದಲಾಯಿಸಲ್ಪಟ್ಟ ಪ್ರಕಾರ)

[illegible]

ತಾ|| ೧ನೇ ಏಪ್ರಿಲ್ ೧೮೮೬

ನಂ. ೪.—[illegible]

[illegible]

೩. [illegible] ೧೮೮೬ನೇ ಇಸವಿ ಏಪ್ರಿಲ್ ೧ನೇ ಮಾರ್ಚಿ [illegible]

ನಂ. ೫.—[illegible] ಮುನ್ಸಿಫ್ ಕೋರ್ಟುಗಳ [illegible] ೧೮೮೬ನೇ ಇಸವಿ ಏಪ್ರಿಲ್ ೧ನೇ [illegible]

[illegible] ಮುನ್ಸಿಫ್ ಕೋರ್ಟು.

ತಾಲ್ಲೂಕುಗಳು.—೧. [illegible], ೧೮೮೬ನೇ ಇಸವಿ ಏಪ್ರಿಲ್ ೧ನೇ ಮಾರ್ಚಿ ೪ನೇ ನಂಬರ್ ಇಷ್ತಿಹಾರ್ ನಾಮೆಯಂತೆ ಬದಲಾಯಿಸಲ್ಪಟ್ಟ ಪ್ರಕಾರ. ೨. [illegible]—೧೮೮೬ನೇ ಇಸವಿ ಮಾರ್ಚಿ ೨೯ನೇ ಮಾರ್ಚಿ ೨೩೦ನೇ, [illegible] ೧೮೮೬ನೇ ಇಸವಿ ಏಪ್ರಿಲ್ ೧ನೇ ಮಾರ್ಚಿ ೪ನೇ ನಂಬರ್ ಇಷ್ತಿಹಾರ್ ನಾಮೆಗಳಿಂದ ಬದಲಾಯಿಸಲ್ಪಟ್ಟ ಪ್ರಕಾರ. ೩. [illegible]—೧೮೮೬ನೇ ಇಸವಿ ಏಪ್ರಿಲ್ ೧ನೇ ಮಾರ್ಚಿ ೪ನೇ ನಂಬರ್ ಇಷ್ತಿಹಾರ್ ನಾಮೆಯಂತೆ [illegible] ಪ್ರಕಾರ. ೪. [illegible] ೫. [illegible]—೧೮೮೬ನೇ ಇಸವಿ ಮಾರ್ಚಿ ೨೯ನೇ ಮಾರ್ಚಿ ೨೩೧ನೇ ನಂಬರ್ ಇಷ್ತಿಹಾರ್ ನಾಮೆಯಂತೆ ಬದಲಾಯಿಸಲ್ಪಟ್ಟ ಪ್ರಕಾರ. ೬. [illegible]

[illegible] ಮುನ್ಸಿಫ್ ಕೋರ್ಟು.

ತಾಲ್ಲೂಕುಗಳು. ೧. [illegible]. ೨. [illegible]. ೩. [illegible] ೪. [illegible],—೧೮೮೬ನೇ ಇಸವಿ ಏಪ್ರಿಲ್ ೧ನೇ ಮಾರ್ಚಿ ೪ನೇ ನಂಬರ್ ಇಷ್ತಿಹಾರ್ ನಾಮೆಯಂತೆ ಬದಲಾಯಿಸಲ್ಪಟ್ಟ ಪ್ರಕಾರ.

ಚಿಕ್ಕಬಳ್ಳಾಪುರದ ಮುನ್ಸಿಫ್ ಕೋರ್ಟು.

ತಾಲ್ಲೂಕುಗಳು. ೧. ಚಿಕ್ಕಬಳ್ಳಾಪುರ,—೧೮೮೬ನೇ ಇಸವಿ ಏಪ್ರಿಲ್ ೧ನೇ ಮಾರ್ಚಿ ೪ನೇ ನಂಬರ್ ಇಷ್ತಿಹಾರ್ ನಾಮೆಯಂತೆ ಬದಲಾಯಿಸಲ್ಪಟ್ಟ ಪ್ರಕಾರ. ೨. [illegible],—೧೮೮೬ನೇ ಇಸವಿ ಏಪ್ರಿಲ್ ೧ನೇ ಮಾರ್ಚಿ ೪ನೇ ನಂಬರ್ ಇಷ್ತಿಹಾರ್ ನಾಮೆಯಂತೆ ಬದಲಾಯಿಸಲ್ಪಟ್ಟ ಪ್ರಕಾರ. ೩. [illegible]. ೪. [illegible].

ಕೋಲಾರ ಮುನ್ಸಿಫ್ ಕೋರ್ಟು

ತಾಲೂಕುಗಳು, ೧. ಕೋಲಾರ.—೧೮೮೬ನೇ ಇಸವಿ ಮಾರ್ಚಿ ೨೯ನೇ ಮಾರ್ಚಿ ೨೩೦ನೇ ನಂಬರ್ ಇಷ್ತಿಹಾರ್ ನಾಮೆಯಂತೆ ಬದಲಾಯಿಸಲ್ಪಟ್ಟ ಪ್ರಕಾರ. ೨. [illegible]. ೩. [illegible]—೧೮೮೬ನೇ ಇಸವಿ ಮಾರ್ಚಿ ೨೯ನೇ ಮಾರ್ಚಿ ೨೩೧ನೇ ನಂಬರು ಇಷ್ತಿಹಾರ್ ನಾಮೆಯಂತೆ ಬದಲಾಯಿಸಲ್ಪಟ್ಟ ಪ್ರಕಾರ ೪. [illegible] ೫. [illegible],—೧೮೮೬ನೇ ಇಸವಿ ಮಾರ್ಚಿ ೨೯ನೇ ಮಾರ್ಚಿ ೨೩೦ನೇ ನಂಬರು ಇಷ್ತಿಹಾರ್ ನಾಮೆಯಂತೆ [illegible] ಪ್ರಕಾರ.

ನಂ. ೬.—೧೮೮೬ನೇ ಇಸವಿ ಜೂನ್ ೪ನೇ ತಾರೀಖು ಲಗಾಯತು "ಮೈಸೂರು ಸಬಾರ್ಡಿನೇಟ್ ಜಡ್ಜ್ ಕೋರ್ಟ್" ಎಂಬ ಹೆಸರಿನಿಂದ ಸಬಾರ್ಡಿನೇಟ್ ಜಡ್ಜಿ ಕೋರ್ಟು ಒಂದು ಮೈಸೂರಲ್ಲಿ ಸ್ಥಾಪಿಸಲ್ಪಡತಕ್ಕದ್ದು. ಮೈಸೂರು ಸಬಾರ್ಡಿನೇಟ್ ಜಡ್ಜಿಯು, ಮೈಸೂರು ಡಿಸ್ಟ್ರಿಕ್ಟ್ ಕೋರ್ಟಿನ ಸ್ಥಳ ಸರಹದ್ದುಗಳಲ್ಲಿ ಸಿವಿಲ್ ಅಧಿಕಾರವನ್ನು ಚಲಾಯಿಸತಕ್ಕದ್ದು.

೭. ೧೮೮೩ನೇ ಇಸವಿಯ ಮೈಸೂರು ಸಿವಿಲ್ ಕೋರ್ಟುಗಳ ರಿಗ್ಯುಲೇಷನ್ ಯಾನೆ ನಿಬಂಧನೆಯ ೧೬ನೇ ಸೆಕ್ಷನಿನ ನಿಯಮಗಳನ್ನನುಸರಿಸಿ ಗವರ್ನಮೆಂಟಿನವರು ಮೈಸೂರು ಸಬಾರ್ಡಿನೇಟ್

ಜಡ್ಜಿಯವರಿಗೆ, ಅಂತಾ ಕೋರ್ಟುಗಳ ವಿಚಾರಣೆಗೆ ಒಳಪಟ್ಟ ನೂರು ರೂಪಾಯಿಗಳ ವರೆಗಿನ ಮೊಬಲಗುಳ್ಳ ಮೈಸೂರು, ತಿರುಮಕೂಡಲು ನರಸೀಪುರ, ಮತ್ತು ಹುಣಸೂರು, ಈ ತಾಲ್ಲೂಕುಗಳ ಸ್ಥಳ ಸರಹದ್ದುಗಳಿಗೆ ಸೇರಿದ ದಾವೆಗಳನ್ನು ವಿಚಾರಣೆ ಮಾಡಲಿಕ್ಕೆ ಸ್ಮಾಲ್‌ಕಾಜ್ ಕೋರ್ಟು ಅಧಿಕಾರ ಕೊಡಲ್ಪಟ್ಟಿರುತಿದೆ.

೧೮೮೬ನೇ ಇಸವಿ ಜೂನ್ ೮ನೇ ಮೊದಲ್ಗೊಂಡು ಮೈಸೂರು ಅಡಿಷನಲ್ ಮುನಸಿಫ್ ಕೋರ್ಟ್ ಮೌಕೂಫ್ ಮಾಡಲ್ಪಡತಕ್ಕದ್ದಲ್ಲದೆ ಸದರೀ ಕೋರ್ಟಿನ ಸಿವಿಲ್ ಅಧಿಕಾರವು ಮೈಸೂರು ಮುನಸಿಫ್ ಕೋರ್ಟಿಗೆ ವರ್ಗ ಮಾಡಲ್ಪಡತಕ್ಕದ್ದು. ೧೮೮೫ನೇ ಇಸವಿ ಜನವರಿ ೩೦ನೇ ಮರ್ಕುಮ್ಮು ೭೯ನೇ ನಂಬರ್ ಇಷ್ತಿಹಾರ್‌ನಾಮೆಯ ಮೂಲಕ ಮೈಸೂರು ಮುನಸಿಫ್‌ರವರಿಗೆ ಕೊಡಲ್ಪಟ್ಟಿದ್ದ ಸ್ಮಾಲ್‌ಕಾಜ್ ಕೋರ್ಟುಗಳ ಅಧಿಕಾರಗಳನ್ನು ಮೇಲೆ ಕಂಡ ತಾರೀಖ್‌ಲಾಗಾಯ್ತು ಅವರು ಚಲಾಯಿಸುವದನ್ನು ನಿಲ್ಲಿಸಬಿಡತಕ್ಕದ್ದು.

ನಂ. ೭—೧೮೮೬ನೇ ಇಸವಿ ಏಪ್ರಿಲ್ ೧ನೇ ತಾರೀಖ್ ಮೊದಲು ಇದರಡಿ ಕಂಡ ಅಸಿಸ್ಟೆಂಟ್ ಕಮಿಷನರ್‌ಗಳ ಬಡ್ತಿಗಳು ಮತ್ತು ಮೊಕರರ ರಾತಿಗಳು ಮಂಜೂರ್ ಮಾಡಲ್ಪಟ್ಟಿವೆ.

ಅಸಿಸ್ಟೆಂಟ್‌ಕಮಿಷನರ್‌ಗಳಾದ, ಮೆ|| ಜಿ ಚಿಧಂಬರೈಯ್ಯರ್, ಮತ್ತು ಮೆ|| ಬಿ. ಕೆ. ವೆಂಕಟವರದಯ್ಯಂಗಾರ್ಯರು ಒಂದನೇ ಗ್ರೇಡ್ ಅಸಿಸ್ಟೆಂಟ್ ಕಮಿಷನರ್‌ಗಳಾಗಿರತಕ್ಕದ್ದು.

ಮೂರನೇ ಗ್ರೇಡ್ ಅಸಿಸ್ಟೆಂಟ್ ಕಮಿಷನರ್‌ಗಳಾದ, ಮೆ|| ಚೆಲುವಯ್ಯಂಗಾರ್ಯವರು, ಮೆ|| ಮಹಮ್ಮದಲ್ಲೀಯವರು, ಮೆ|| ಮಾದಯ್ಯನವರು, ಇವರುಗಳು ಎರಡನೇ ಗ್ರೇಡ್ ಅಸಿಸ್ಟೆಂಟ್ ಕಮಿಷನರ್‌ಗಳಾಗಿರತಕ್ಕದ್ದು.

ನಾಲ್ಕನೇ ಗ್ರೇಡ್ ಅಸಿಸ್ಟೆಂಟ್ ಕಮಿಷನರ್‌ಗಳಾದ ಮೆ|| ಬಿ. ಜಿ. ಕೃಷ್ಣಯ್ಯಂಗಾರ್ಯವರು, ಮೆ|| ಟಿ. ರಾಘವೇಂದ್ರಾಯರವರು, ಮಿಸ್ಟರ್ ಡಿ. ಅಪ್ಪಾಜಿರಾಯರವರು, ಮೆ|| ಎನ್ ಕೃಷ್ಣರಾಯರವರು, ಮೆ|| ಬಿ. ಕೃಷ್ಣಯ್ಯಂಗಾರ್ಯವರು, ಮೆ|| ಸಿ. ಶ್ರೀನಿವಾಸಯ್ಯಂಗಾರ್ಯವರು ೩ನೇ ಗ್ರೇಡ್ ಅಸಿಸ್ಟೆಂಟ್ ಕಮಿಷನರ್‌ಗಳಾಗಿರತಕ್ಕದ್ದು.

ರೆಸಿಡೆಂಟರವರ ಕೋರ್ಟ್ ರಿಜಿಸ್ಟ್ರಾರಾದ ಮೆ|| ಎಸ್. ಅನಂತಸ್ವಾಮಿರಾಯರವರು, (ನಿವೃತ್ತರಾದಕೂಡಲೆ ಹಾಜರಾಗತಕ್ಕದ್ದು.) ದಿವಾನರವರ ಛೀಫ್ ಮ್ಯಾನೇಜರ್ ಮಿಸ್ಟರ್ ನಾರಾಯಣರಾಯರವರು, ಶಿವಮೊಗ್ಗಾ ಮುನಸಿಫ್ ಮೆ|| ಪೊನ್ನುರಂಗಮೊದಲಿಯಾರ್ಯವರು, (೧೮೮೬ನೇ ಇಸವಿ ಜೂನ್ ೮ನೇ ತಾರೀಖಿನಲ್ಲಿ ಹಾಜರಾಗತಕ್ಕದ್ದು.) ಇವರುಗಳು ನಾಲ್ಕನೇ ಗ್ರೇಡ್ ಅಸಿಸ್ಟೆಂಟ್ ಕಮಿಷನರ್‌ಗಳಾಗಿರತಕ್ಕದ್ದು.

ನಂಜನಗೂಡು ಮುನಸಿಫ್ ಮೆ|| ನಂಜುಂಡಯ್ಯ ಎಂ. ಎ ಬಿ. ಎಲ್‌ಯವರು, (೧೮೮೬ನೇ ಇಸವಿ ಜೂನ್ ೮ನೇ ತಾರೀಖಿನಲ್ಲಿ ಹಾಜರಾಗತಕ್ಕದ್ದು) ಮಂಜರಾಬಾದ್ ತಾಲ್ಲೂಕು ಅಮಲ್‌ದಾರ್ ಮೆ|| ಎನ್. ನರಸಿಂಹಯ್ಯಂಗಾರ್ಯವರು, ಅಜಮಾಯಿಷೀ ತರೀಕ್ ಅಸಿಸ್ಟೆಂಟ್ ಕಮಿಷನರ್‌ಗಳಾಗಿರತಕ್ಕದ್ದು.

ಇದರಡಿ ಕಂಡ ವರ್ಗಾವರ್ಗಿಗಳು ಮಂಜೂರ್ ಮಾಡಲ್ಪಟ್ಟಿವೆ

ಫ್ರಾಂಚೈಸ್ ಸರ್ವಿಸ್ ಇನ್‌ಛಾರ್ಜ್‌ನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಮಿಸ್ಟರ್ ಬಿ. ತಿರುಮಲಾಚಾರ್ಯರವರು ಜನರಲ್ ಡ್ಯೂಟಿ (ಸಾಮಾನ್ಯಕೆಲಸದಬಗ್ಯೆ) ಕೋಲಾರ್ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಡತಕ್ಕದ್ದು. ಮೆ|| ಬಿ. ಕೆ. ವೆಂಕಟವರದಯ್ಯಂಗಾರ್ಯವರಿಂದ ನಿವೃತ್ತರಾದಮೇಲೆ ಹಾಜರಾಗತಕ್ಕದ್ದು.

ಕೋಲಾರ್ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮೆ|| ವೆಂಕಟವರದಯ್ಯಂಗಾರ್ಯವರು ಫ್ರಾಂಚೈಸ್ ಸರ್ವಿಸ್ ಇನ್‌ಛಾರ್ಜ್‌ನೊಳರತಕ್ಕ ಬಗ್ಯೆ ಮೈಸೂರು ಡಿ||ಗೆ ವರ್ಗ ಮಾಡಲ್ಪಡತಕ್ಕದ್ದು. ಅವರು ಈಗ ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ನಿರ್ವಹಿಸುತಲಿರುವ ವಿಶೇಷ ಕೆಲಸವು ಪೂರೈಸಿದಮೇಲೆ ಹಾಜರಾಗತಕ್ಕದ್ದು.

ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮಿಸ್ಟರ್ ನರಸಿಂಹಯ್ಯಂಗಾರ್ಯವರು, ಚಿತ್ರದುರ್ಗ ಡಿಸ್ಟ್ರಿಕ್ಟ್ ಪೋಲೀಸ್ ಇನ್‌ಚಾರ್ಜಿನಲ್ಲಿರತಕ್ಕಬಗ್ಯೆ ಸದರೀ ಡಿಸ್ಟ್ರಿಕ್ಟಿಗೆ ಕಳುಹಿಸಲ್ಪಟ್ಟು ಕೂಡಲೇ ಕೆಲಸದಮೇಲೆ ಹಾಜರಾಗತಕ್ಕದ್ದು.

ಕೋಲಾರ್ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರ್ ಮೆ|| ರಘುನಾಥರಾಯರವರು ಟ್ರಿಜರಿ ಅಸಿಸ್ಟೆಂಟ್ ಕಮಿಷನರಾಗಿ ಚಿತ್ರದುರ್ಗದ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಡತಕ್ಕದ್ದು. ಕೂಡಲೇ ಕೆಲಸದಮೇಲೆ ಹಾಜರಾಗತಕ್ಕದ್ದು.

ಸ್ಪೆಷಲ್ ನ್ಯೂಮರರಿ ಅಸಿಸ್ಟೆಂಟ್ ಕಮಿಷನರ್ ಮೆ|| ಕ್ಯಾರ್ನೆಯವರು ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರೀ ಚಾರ್ಜಿನಲ್ಲಿರತಕ್ಕದ್ದು.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಯುಟೀ ಕಮಿಷನರ್ ಮೆ|| ಮಹಮ್ಮದಲ್ಲೀಯವರಿಂದ ನಿವೃತ್ತರಾದಮೇಲೆ ಮೆ|| ನಾಮಕಲ್‌ರಾಯರವರು ಸರಹದ್ದುಪ್ರಾಂತದಲ್ಲಿ ಅಥವಾ ಇತರ ಪೋಲೀಸ್ ಕೆಲಸಗಳ ನೌಕರಿಯಬಗ್ಯೆ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ರಿಪೋರ್ಟ್ ಮಾಡತಕ್ಕದ್ದು.

ನಂ ೮—ಸನ್ ೧೮೮೬ನೇ ಇಸವಿ ಜೂನ್ ೮ನೇ ಮೊದಲ್ಗೊಂಡು ಇದರಡಿಕಂಡ ಮುನಸಿಫ್‌ಗಳ ಬಡ್ತೀ ಮತ್ತು ವರ್ಗಾವರ್ಗಿಗಳು ಮಂಜೂರ್ ಮಾಡಲ್ಪಟ್ಟಿವೆ.

೨ನೇ ಗ್ರೇಡ್ ಮುನಸಿಫ್ ಸುಬ್ಬರಾಯರವರು ಬೆಂಗಳೂರಲ್ಲಿ ೧ನೇ ಗ್ರೇಡ್ ಮುನಸಿಫರಾಗಿರತಕ್ಕದ್ದು.

೩ನೇ ಗ್ರೇಡ್ ಮುನಸಿಫರಾದ ನರಸಿಂಹಯ್ಯಂಗಾರ್ಯ ೨ನೇ ಗ್ರೇಡ್ ಮುನಸಿಫರಾಗಿರತಕ್ಕದ್ದು.

ಬೆಂಗಳೂರು ಮುನಸಿಫ್ ಅಣ್ಣಾಜಿರಾಯರವರು ಶಿವಮೊಗ್ಗಾ ಮುನಸಿಫರಾಗಿರತಕ್ಕದ್ದು.

ಮದ್ದಗಿರಿ ಮುನಸಿಫ್ ಮಂಗಪತಿನಾಯಡರವರು ಹಾಸನ ಮುನಸಿಫರಾಗಿರತಕ್ಕದ್ದು.

ಹಾಸನದ ಮುನಸಿಫ್ ಬುರ್ಹಾನ್‌ಷರೀಫ್‌ಯವರು ಮದ್ದಗಿರಿ ಮುನಸಿಫರಾಗಿರತಕ್ಕದ್ದು.

ನಂ. ೯—ಬಡ್ತೀ ಮಾಡಲ್ಪಟ್ಟ ಖಾನ್ ಬಹದೂರ್ ಮೆ|| ಮಹಮ್ಮದಲ್ಲೀಯವರಿಗೆ ಬದಲಾಗಿ, ೧ನೇ ಕ್ಲಾಸ್ ಅಸಿಸ್ಟೆಂಟ್ ಕಮಿಷನರ್ ಮೆ|| ರಣ್ಮಗವೇಲುಪಿಳ್ಳೆಯವರು ಬೆಂಗಳೂರು ಟೌನ್ ಮ್ಯಾಜಿಸ್ಟ್ರೇಟರಾಗಿ ಮೊಕರರ್.

೩ನೇ ಗ್ರೇಡ್ ಅಸಿಸ್ಟೆಂಟ್ ಕಮಿಷನರ್ ಮೆ|| ಸಿ. ಶ್ರೀನಿವಾಸಯ್ಯಂಗಾರ್ಯವರು ೧೮೮೬ನೇ ಇಸವಿ ಜೂನ್ ೮ನೇ ಮೊದಲ್ಗೊಂಡು ಲಾಗಾಯ್ತು ಮೈಸೂರು ಸಬಾರ್ಡಿನೇಟ್ ಜಡ್ಜಿಯರಾಗಿ ಮೊಕರರ್.

೪ನೇ ಗ್ರೇಡ್ ಅಸಿಸ್ಟೆಂಟ್ ಕಮಿಷನರ್ ಮೆ|| ರಘುನಾಥರಾಯರವರು ೧೮೮೬ನೇ ಜೂನ್ ೮ನೇ ಮೊದಲ್ಗೊಂಡು ಲಾಗಾಯ್ತು ೩ನೇ ಗ್ರೇಡ್ ಅಸಿಸ್ಟೆಂಟ್ ಕಮಿಷನರಾಗಿ ಮೊಕರರ್.

ನಂ. ೧೦—ಶಿವಮೊಗ್ಗಾ ತಾಲ್ಲೂಕು ಅಮಲ್‌ದಾರ್ ರಾಮಸ್ವಾಮಯ್ಯಂಗಾರ್ಯವರು ರೆವಿನ್ಯೂ ಸರ್ವೇ ಇಲಾಖೆಯಲ್ಲಿ ಪ್ರೊಬೇಷನರಾಗಿ ಮೊಕರರ್. ಕೂಡಲೇ ಕೆಲಸದಮೇಲೆ ಹಾಜರಾಗತಕ್ಕದ್ದು.

ನಂ. ೧೧—ಇದರಡಿ ಕಂಡ ಅಮಲ್‌ದಾರ್‌ಗಳ ವ ಡೆಪ್ಯುಟೀ ಅಮಲ್‌ದಾರರುಗಳ ವರ್ಗಾವರ್ಗಿಗಳು ಮತ್ತು ಮೊಕರರ ರಾತಿಗಳು ಮಂಜೂರ್ ಮಾಡಲ್ಪಟ್ಟಿವೆ.

ದೊಡ್ಡಬಳ್ಳಾಪುರ ತಾಲ್ಲೂಕು ಅಮಲ್‌ದಾರ್ ಸೀತಾರಾಮಯ್ಯನವರು ಸರ್ವೇ ಇಲಾಖೆಗೆ ವರ್ಗ ಮಾಡಲ್ಪಟ್ಟ ರಾಮಸ್ವಾಮಯ್ಯಂಗಾರ್ರಿಗೆ ಬದಲಾಗಿ ಶಿವಮೊಗ್ಗಾ ತಾಲ್ಲೂಕು ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

ಕುಣಿಗಲ್ ತಾಲ್ಲೂಕು ಅಮಲ್‌ದಾರ್ ಕುಪ್ಪುಸ್ವಾಮಿನಾಯಡರವರು, ದೊಡ್ಡ ಬಳ್ಳಾಪುರ ತಾಲ್ಲೂಕು ಅಮಲ್‌ದಾರ್ ವ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

ಕ್ಲೋಸ್‌ಪೇಟೆ ತಾಲ್ಲೂಕು ಅಮಲ್‌ದಾರ್ ಶಾಮಯ್ಯಂಗಾರ್ಯವರು ಕುಣಿಗಲ್ ತಾಲ್ಲೂಕು ಅಮಲ್‌ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

ಚಿಕ್ಕಮಗಳೂರು ತಾಲ್ಲೂಕು ಅಮಲ್‌ದಾರ್ ವೆಂಕಟರಮಣಯ್ಯನವರು ಕ್ಲೋಸ್‌ಪೇಟೆ ತಾಲ್ಲೂಕು ಅಮಲ್‌ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

ತುಮಕೂರು ತಾಲ್ಲೂಕ್ ಅಮಲ್‌ದಾರ್ ರಾಮಚಂದ್ರರಾಯರವರು ಚಿಕ್ಕಮಗಳೂರು ತಾಲ್ಲೂಕ್ ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

ಬಾಗೇಪಲ್ಲಿ ತಾಲ್ಲೂಕು ಅಮಲ್‌ದಾರ್ ಅಬ್ದುಲ್ ಅಜೀಜ್‌ಯವರು ತುಮಕೂರು ತಾಲ್ಲೂಕ್ ಅಮಲ್‌ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

ಶ್ರೀನಿವಾಸಪುರದ ಡಿ|| ಅಮಲ್‌ದಾರ್ ಸೀತಾರಾಮಯ್ಯನವರು ಬಾಗೇಪಲ್ಲಿ ತಾಲ್ಲೂಕು ೫ನೇ ಗ್ರೇಡ್ ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು. ಕೂಡಲೇ ಕೆಲಸದಮೇಲೆ ಹಾಜರಾಗತಕ್ಕದ್ದು.

ದಿವಾನರವರ ಆಫೀಸ್ ಕ್ಲಾರ್ಕ್ ಗೋಪಾಲರಾಯರವರು ಶ್ರೀನಿವಾಸಪುರದ ಡಿ|| ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

ಅರಸೀಕೆರೆ ಅಮಲ್‌ದಾರ್ ರಾಮಸ್ವಾಮಯ್ಯನವರು ಅಜಮಾಯಿಷೀ ತರೀಕ್ ಅಸಿಸ್ಟೆಂಟ್ ಕಮಿಷನರಾಗಿ ಮೊಕರರಾದ ನರಸಿಂಹಯ್ಯಂಗಾರ್ರಿಗೆ ಬದಲಾಗಿ ಮಂಜರಾಬಾದ್ ತಾಲ್ಲೂಕ್ ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

ಹುಳಿಯಾರದ ಡಿ|| ಅಮಲ್‌ದಾರ್ ಕೃಷ್ಣರಾಯರವರು ಅರಸೀಕೆರೆ ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

ಕೋಲಾರ ಡಿ|| ಟ್ರೆಜರೀ ಹೆಡ್ ಅಕೌಂಟೆಂಟ್ ಸೀತಾರಾಮಯ್ಯನವರು ಹುಳಿಯಾರದ ಡೆಪ್ಯುಟೀ ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು. ಕೂಡಲೇ ಕೆಲಸದಮೇಲೆ ಹಾಜರಾಗತಕ್ಕದ್ದು.

೧೮೮೬ನೇ ಇಸವಿ ಮಾರ್ಚಿ ೩೧ನೇ ಮರ್ಕುಂ ೬೩೬ ನಂಬರ್ ಇಷ್ತಿಹಾರಿನ ಪ್ರಕಾರ ಮೊಳಕಾಲ್ಮೂರು ತಾಲ್ಲೂಕು ಅಮಲ್‌ದಾರರಾಗಿ ಮೊಕರರಾದ ವೆಂಕಟರಾಯರವರು ವರ್ಗವಾದ ನಾರಣಾಚಾರ್ಯರಿಗೆ ಬದಲಾಗಿ ಶಿಕಾರಿಪುರ ತಾಲ್ಲೂಕ್ ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಅಜಮಾಯಿಷೀ ತರೀಕ್ ಇರತಕ್ಕದ್ದು. ಕೂಡಲೇ ಕೆಲಸದಮೇಲೆ ಹಾಜರಾಗತಕ್ಕದ್ದು

ದೇವನಹಳ್ಳಿ ಡೆಪ್ಯುಟೀ ಅಮಲ್‌ದಾರ್ ಕಸ್ತೂರಿ ರಂಗಾಚಾರ್ಯರವರು ಮೊಳಕಾಲ್ಮೂರು ತಾಲ್ಲೂಕ್ ೫ನೇ ಗ್ರೇಡ್ ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಅಜಮಾಯಿಷೀ ತರೀಕ್ ಇರತಕ್ಕದ್ದು.

ಮೈಸೂರು ಡಿಸ್ಟ್ರಿಕ್ಟ್ ರೆವಿನ್ಯೂ ಸರಿಸ್ತೇದಾರ್ ಶ್ರೀಕಂಠಯ್ಯನವರು ವರ್ಗಮಾಡಲ್ಪಟ್ಟ ಸ್ವೇತಾದ್ರಿಅಯ್ಯಂಗಾರ್ರಿಗೆ ಬದಲಾಗಿ ತಿಪಟೂರು ತಾಲ್ಲೂಕು ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಅಜಮಾಯಿಷೀ ತರೀಕ್ ಇರತಕ್ಕದ್ದು.

ಮೈಸೂರು ತಾಲ್ಲೂಕು ಅಮಲ್‌ದಾರ್ ಲಕ್ಷ್ಮಣರಾಯರವರು ದೇವನಹಳ್ಳಿ ತಾಲ್ಲೂಕು ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಮಲ್‌ದಾರ್ ವೀರಾಸ್ವಾಮಿ ಮೊದಲಿಯಾರ್ಯವರು ಮೈಸೂರು ತಾಲ್ಲೂಕು ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

ಚಳ್ಳಕೆರೆ ತಾಲ್ಲೂಕು ಅಮಲ್‌ದಾರ್ ಗುಂಡಪ್ಪನವರು ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

ಮದ್ದಗಿರಿ ತಾಲ್ಲೂಕು ಅಮಲ್‌ದಾರ್ ವೆಂಕಟಪ್ಪಯ್ಯರವರು ಚಳ್ಳಕೆರೆ ತಾಲ್ಲೂಕು ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

ಹೊಸದುರ್ಗದ ಡೆಪ್ಯುಟೀ ಅಮಲ್‌ದಾರ್ ಕುಬೇರಾಚಾರ್ಯರವರು ಮಧುಗಿರಿ ತಾಲ್ಲೂಕು ೫ನೇ ಗ್ರೇಡ್ ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಅಜಮಾಯಿಷೀ ತರೀಕ್ ಇರತಕ್ಕದ್ದು.

ಬೆಂಗಳೂರು ಡಿಸ್ಟ್ರಿಕ್ಟ್ ಪ್ರೊಬೇಷನರ್ ಕುಮಾರಸ್ವಾಮಿನಾಯಕರು ಹೊಸದುರ್ಗದ ಡೆ|| ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು.

ಮಂಡ್ಯ ತಾಲ್ಲೂಕು ಅಮಲ್‌ದಾರ್ ಶ್ರೀನಿವಾಸರಾಯರವರು ಇತರ ಕೆಲಸದಮೇಲಿರುವ ರಾಜು ಮೊದಲಿಯಾರ್ರಿಗೆ ಬದಲಾಗಿ ಬೌರಿಂಗ್‌ಪೇಟೆ ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು. ಕೂಡಲೇ ಹಾಜರಾಗಬೇಕು.

ಚೆನ್ನಗಿರಿ ತಾಲ್ಲೂಕು ಅಮಲ್‌ದಾರ್ ನರಸಣ್ಣನವರು ಮಂಡ್ಯ ತಾಲ್ಲೂಕು ಅಮಲ್‌ದಾರ್ ವ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರತಕ್ಕದ್ದು. ಕೆಲಸದಿಂದ ನಿವೃತ್ತರಾದ ಕೂಡಲೇ ಹಾಜರಾಗತಕ್ಕದ್ದು.

ನಂ. ೧೨—ಇದರಡಿ ಕಂಡ ಅಮಲ್‌ದಾರ್ರುಗಳ ಬಡ್ತೀಗಳು ೧೮೮೬ನೇ ಇಸವಿ ಏಪ್ರಿಲ್ ೧ನೇ ತಾರೀಖ್ ಮೊದಲು ಮಂಜೂರಾಗಿರುತ್ತವೆ.

ನಂಜನಗೂಡು ತಾಲ್ಲೂಕು ಅಮಲ್‌ದಾರ್ ರಘುನಾಥರಾಯರವರು ೧ನೇ ಕ್ಲಾಸ್ ಅಮಲ್‌ದಾರರಾಗಿರತಕ್ಕದ್ದು.

ನಾಗಮಂಗಲ ತಾಲ್ಲೂಕು ಅಮಲ್‌ದಾರ್ ಸೈಯದ್ ಅಹಮ್ಮದ್‌ಯವರೂ ಚಿಕ್ಕಮಗಳೂರು ತಾಲ್ಲೂಕು ಅಮಲ್‌ದಾರ್ ರಾಮಚಂದ್ರರಾಯರವರೂ ೨ನೇ ಗ್ರೇಡ್ ಅಮಲ್‌ದಾರರುಗಳಾಗಿರತಕ್ಕದ್ದು.

ದೇವನಹಳ್ಳಿ ತಾಲ್ಲೂಕು ಅಮಲ್‌ದಾರ್ ಲಕ್ಷ್ಮಣರಾಯರವರು, ತುಮಕೂರು ತಾಲ್ಲೂಕು ಅಮಲ್‌ದಾರ್ ಅಬ್ದುಲ್ ಅಜೀಜ್‌ಯವರು, ನೆಲಮಂಗಲ ತಾ|| ಅಮಲ್‌ದಾರ್ ಗೋಪಾಲಯ್ಯಂಗಾರ್ಯವರು, ಚಿಕ್ಕಬಳ್ಳಾಪುರ ತಾಲ್ಲೂಕು ಅಮಲ್‌ದಾರ್ ರಾಮಸ್ವಾಮಯ್ಯಂಗಾರ್ಯವರು, ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಮಲ್‌ದಾರ್ ರಾಮಸ್ವಾಮಯ್ಯನವರು, ಸಾಗರ ತಾಲ್ಲೂಕು ಅಮಲ್‌ದಾರ್ ಲಿಂಗಪ್ಪನವರು, ೩ನೇ ಕ್ಲಾಸ್ ಅಮಲ್‌ದಾರರುಗಳಾಗಿರತಕ್ಕದ್ದು.

ನಗರ ತಾಲ್ಲೂಕು ಅಮಲ್‌ದಾರ್ ದುಮ್ಮಿಂಗೋಯವರು, ಕಾನಕಾನಹಳ್ಳಿ ತಾಲ್ಲೂಕ್ ಅಮಲ್‌ದಾರ್ ಕೃಷ್ಣರಾಯರವರು, ಕುಣಿಗಲ್ ತಾಲ್ಲೂಕು ಅಮಲ್‌ದಾರ್ ಶ್ಯಾಮಯ್ಯಂಗಾರ್ಯವರು, ತಿರುಮಕೂಡ್ಲು ನರಸೀಪುರ ತಾಲ್ಲೂಕು ಅಮಲ್‌ದಾರ್ ಕೃಷ್ಣಯ್ಯಂಗಾರ್ಯವರು, ಹುಣಸೂರು ತಾಲ್ಲೂಕು ಅಮಲ್‌ದಾರ್ ಲಕ್ಷ್ಮಣರಾಯರವರು, ಹಾವಗೆಡ ತಾಲ್ಲೂಕು ಅಮಲ್‌ದಾರ್ ಕೃಷ್ಣರಾಯರವರು, ದಾವಣಗೆರೆ ತಾಲ್ಲೂಕು ಅಮಲ್‌ದಾರ್ ಹೊನ್ನಪ್ಪನಾಯಕರು, ಬೆಂಗಳೂರು ತಾಲ್ಲೂಕ್ ಅಮಲ್‌ದಾರ್ ಸೀತಾರಾಮಯ್ಯನವರು, ಮಂಜರಾಬಾದ್ ತಾಲ್ಲೂಕು ಅಮಲ್‌ದಾರ್ ರಾಮಸ್ವಾಮಯ್ಯನವರು, ಗುಬ್ಬಿ ತಾಲ್ಲೂಕು ಅಮಲ್‌ದಾರ್ ಹೇಮಾಹನುಮಂತಯ್ಯನವರು, ಶಿವಮೊಗ್ಗಾ ತಾಲ್ಲೂಕ್ ಅಮಲ್‌ದಾರ್ ಸೀತಾರಾಮಯ್ಯನವರು, ೪ನೇ ಗ್ರೇಡ್ ಅಮಲ್‌ದಾರರುಗಳಾಗಿರತಕ್ಕದ್ದು.

ನಂ. ೧೩—ಶ್ರೀಮನ್ಮಹಾರಾಜರವರು ಇದರಡಿ ಕಂಡ ಮೊಕರರ ರಾತಿಯನ್ನು ಮಂಜೂರ್ ಮಾಡಿರುತ್ತಾರೆ.

ಮಹಾರಾಜರವರ ಹಾಜರ್‌ಭಾಷಿಯೊಳರುವ ಅಸಿಸ್ಟೆಂಟ್ ಕಮಿಷನರ್ ಮೆ|| ಎ. ನರಸಿಂಹಯ್ಯಂಗಾರ್ಯವರು, ೧೮೮೬ನೇ ಇಸವಿ ಏಪ್ರಿಲ್ ೧ನೇ ತಾರೀಖ್ ಮೊದಲು ಮಹಾರಾಜರವರ ದರ್ಬಾರ್ ಬಕ್ಷಿಯರಾಗಿರತಕ್ಕದ್ದು.

ನಂ. ೧೪—ಮೈಸೂರು ಡಿ|| ಪ್ರೊ|| ಅಸಿಸ್ಟೆಂಟ್ ಕಮಿಷನರ್ ಮೆ|| ಮಾದಯ್ಯನವರಿಗೆ ಮಾಹೇ ಮಜಕೂರ್ ೧೫ನೇ ತಾರೀಖ್ ಲಾಗಾಯ್ತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯ್ತು ೧½ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

ನಂ ೧೯.—೧೮೮೬ನೇ ಇಸವಿ ಏಪ್ರಿಲ್ ೧ನೇ ತಾರೀಖು ೮ನೇ ನಂಬರ್ ನೋಟಿಫಿಕೇಶನಿನ ಮೂಲಕ ಹಾಸನಕ್ಕೆ ವರ್ಗಮಾಡಲ್ಪಟ್ಟ ಮುನ್ಸಫ ತುಂಗವತಿನಾಯಕರವರು, ೧೮೮೬ನೇ ಇಸವಿ ಮೇ ೧ನೇ ತಾರೀಖು ಲಾಗಾಯತು ತಮ್ಮ ಇತರ ಕೆಲಸಗಳೊಡನೆ ಹಾಸನ ಡಿಸ್ಟ್ರಿಕ್ಟ್ ಟ್ರೆಜರೀ ಆಫಿಸರಾಗಿ ನೇಮಕರನ್ಮಾಡಲ್ಪಟ್ಟಿರುತ್ತಾರೆ.

ಚಿಕ್ಕಮಗಳೂರು ಮುನ್ಸಫ್ ಮ॥ ವ್ಯಾಂಡರ್ ಲೂಯಿಯವರು ತಮ್ಮ ಇತರ ಕೆಲಸಗಳೊಡನೆ ಕಡೂರು ಡಿಸ್ಟ್ರಿಕ್ಟ್ ಟ್ರೆಜರೀ ಆಫೀಸರಾಗಿ ನೇಮಕರನ್ಮಾಡಲ್ಪಟ್ಟಿರುತ್ತಾರೆ.

ನಂ. ೨೦—ಸೆಟ್ಲ್‌ಮೆಂಟ್ ಸೂಪರಿಂಟೆಂಡೆಂಟ್ ಮ॥ ಸ್ಪಾರ್ಕ್ಸ್‌ಯವರಿಗೆ, ೧೮೮೬ನೇ ಇಸವಿ ಮಾರ್ಚ್ ೨೯ನೇ ತಾರೀಖು ಲಗಾಯತು ಕಾಹಿಲೇಸಬಬ್ ೬ ವಾರಗಳ ರಜಾ ಕೊಡಲ್ಪಟ್ಟಿರುತ್ತೆ.

ಅಸಿಸ್ಟೆಂಟ್ ಕಮಿಷನರ್ ಮ। ಕ್ಲಾರ್ಕ್‌ಯವರು ಮ॥ ಸ್ಪಾರ್ಕ್ಸ್‌ಯವರ ಗೈರ್ಹಾಜರಿಯಲ್ಲಿ, ಅಥವಾ ಮತ್ತೊಂದು ಹುಕುಂ ಕೊಡುವತನಕ ತಮ್ಮ ಇತರ ಕೆಲಸಗಳಿಗೆ ಕುಂದಕವಿಲ್ಲದಂತೆ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರಾಗಿ ಆಕ್ಟಿಂಗ್ ತರೀಕ್ ನೇಮಕರನ್ಮಾಡಲ್ಪಟ್ಟಿರುತ್ತಾರೆ.

ನಂ ೨೫—ಚೆನ್ನಗಿರಿ ತಾಲ್ಲೂಕು ಅಮಲ್ದಾರ್ ನರಸಣ್ಣನವರಿಗೆ ಮಾರ್ಚ್ ಮಜಕೂರು ೫ನೇ ತಾರೀಖ್ ಲಾಗಾಯತು ೧ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ

ಶಿವನಸಮುದ್ರ ಡಿ॥ ಶೆ॥ ಡೆ। ಮುನಿಸಿ ಮ॥ ಕೋಯಲೆಹೋಯವರು ನರಸಣ್ಣನವರ ಗೈರ್ಹಾಜರೀಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವತನಕ ಚೆನ್ನಗಿರಿ ತಾಲ್ಲೂಕ್ ಚಾರ್ಜನಲ್ಲಿ ತಕ್ಕದ್ದು.

ನಂ. ೨೬—೪ನೇ ಕ್ಲಾಸ್ ಡೆಪ್ಯುಟೀ ಕಮಿಷನರ್ ಮ॥ ಸಿ ಸುಬ್ಬರಾಯರವರು ೧೮೮೬ನೇ ಇಸವಿ ಏಪ್ರಿಲ್ ಗುರ್ತು ತಾರೀಖ್ ಮೊದಲು ೩ನೇ ಕ್ಲಾಸ್ ಡೆಪ್ಯುಟೀಕಮಿಷನರ್ ಕೆಲಸಕ್ಕೆ ಬಡ್ತೀ ಮಾಡಲ್ಪಟ್ಟಿರುತ್ತಾರೆ

ನಂ. ೨೭—ದಿವಾನರವರ ಆಕ್ಟಿಂಗ್ ಅಂಡರ್ ಸೆಕ್ರೆಟರಿ ಮ॥ ಕೃಷ್ಣಯ್ಯ ಬಿ ಎ. ಯವರು ಸದರೀಕೆಲಸದಲ್ಲಿ ಖಾಯಂಮಾಡಲ್ಪಟ್ಟಿರುತ್ತಾರೆ

SUMMARY OF NEWS
ವೃತ್ತಾಂತ ಸಂಗ್ರಹವು

The Indian Revenue —ಹಿಂದ್ಯಾ ದೇಶದ ಹುಟ್ಟುವಳಿಯು ದಿನೇದಿನೆ ಹೆಚ್ಚುತ ಬರುತಲಿದೆ. ಈಗ ೭೫,೭೯,೮೮,೦೦೦ ರೂಪಾಯಿಗಳು ಉತ್ಪತ್ತಿಯಾಗುತಿವೆ. ಐರ್ಲ್ಯಾಂಡ್ ವ ಗ್ರೇಟ ಬ್ರಿಟನ್ ರಾಜ್ಯದ ಹುಟ್ಟುವಳಿಯೂ ಇದಕ್ಕಿಂತಲೂ ಜಾಸ್ತೀಯಾಗಿಲ್ಲವು ಯುರೋಪ ಖಂಡದೊಳಗಣ ದೊಡ್ಡ ದೊಡ್ಡ ಸಂಸ್ಥಾನಗಳ ಆಯತಿಗಿಂತ ನಮ್ಮ ದೇಶದ ಉತ್ಪತ್ತಿಯು ಹೆಚ್ಚಾಗಿರುತಿದೆ.

The electric light.—ವಿದ್ಯುಲ್ಲತೆಯ ದೀಪದ ಸಹಾಯದಿಂದ ಮನುಷ್ಯರ ಶರೀರದೊಳಗಿನ ರೋಗಗಳು ಸಹ ನಾಶವಾಗುತವೆ. ನ್ಯೂಯಾರ್ಕ ನೊಳರುವ ಪೋಸ್ಟ್‌ಗ್ರಾಜ್ಯುಏಟ ಎಂಬ ವೈದ್ಯಶಾಲೆಯಲ್ಲಿ ೨೨ ವರುಷ ಪ್ರಾಯವುಳ್ಳ ಒಬ್ಬ ಮನುಷ್ಯನಿಗೆ ಉಂಟಾದ ರೋಗವು ವಿದ್ಯುಲ್ಲತೆಯ ದೀಪದ ಸಹಾಯದಿಂದಲೇ ನಾಶವಾಗಿ ಅವನು ಒಂದು ಕ್ಷಣದಲ್ಲಿ ಆರೋಗ್ಯವನ್ನೈದಿದನೆಂದು ತಿಳಿಯಬರುತಿದೆ.

The electric tree.—ಇಬ್ಬರು ಜರ್ಮನ್ ಪರಿಶೋಧಕರು ನ್ಯಾಗಿನಿ ಯೆಂಬ ಸ್ಥಳದಲ್ಲಿ ವಿದ್ಯುಲ್ಲತೆಯ ಒಂದು ಗಿಡವನ್ನು ಕಂಡುಹಿಡಿದಿರುತ್ತಾರೆ. ಅವರು ಆ ಊರಿಗೆ ೧೨ ದಿವಸಗಳ ಮಾರ್ಗದ ಅಂತರದಲ್ಲಿರುವಾಗ ಅವರ ದಿಗ್ದರ್ಶಿನಿಯು, ನಿರುಪಯುಕ್ತವಾದ್ದರಿಂದ. ಹಾಗಾಗುವದಕ್ಕೆ ಕಾರಣವೇನೆಂದರೆ, ವಿದ್ಯುಲ್ಲತೆಯ ವೇಗವು ಬಹಳ ಇದ್ದಂತಾ ಒಂದು ಬಾವಿಯಲ್ಲಿ ಎಷ್ಟು ಗುಣವಿರುವದೋ ಅಷ್ಟರ ಗುಣವಿರುವ ಗಿಡವು ಸವಿಾಪಿಸಿತ್ತು ಅವರಿಬ್ಬರಲ್ಲೊಬ್ಬನು ಆ ಗಿಡವನ್ನು ಮುಟ್ಟಲು, ಅವನು ನೆಲದ ಮೇಲೆಬಿದ್ದುಬಿಟ್ಟನು. ಎಸಾರ್ಫಸ್‌ಕಾರ್ಬನ್ ಎಂಬ ಸ್ವಚ್ಛವಾದ ವಾಯುವಿನ ಅಂಶವು ಅದರಲ್ಲಿ ಉಂಟೆಂದು ಪೃಥಕ್ಕರಣದಿಂದ ಗೊತ್ತಾಗುತಿದೆ. ಆ ಗಿದಕ್ಕೆ "ಎಲ್ಪಸಿಯಾ ಎಲೆಕ್ಟ್ರಿಸಿಯಾ" ಎಂಬ ಹೆಸರು ಕೊಟ್ಟಿರುತ್ತಾರೆ.

Salt —ಉಪ್ಪು ದನಗಳಿಗೂ ಗೊಬ್ಬರಕ್ಕೂ ಮಾತ್ರ ಉಪಯೋಗ ವುಳ್ಳದ್ದಾಗಿ ಮನುಷ್ಯರಿಗೆ ಅದು ನಿರುಪಯುಕ್ತವಾಗುವಂತೆ ಮಾಡಿಕೊಟ್ಟವರಿಗೆ ಹಿಂದುಸ್ಥಾನ ಸರಕಾರದ ಅಂಡರ್ ಸೆಕ್ರೆಟರಿಗಳಾದ ಮಿಸ್ಟರ್ ಗಾಡ್ಲೆ ಎಂಬವರು ೫೦೦೦ ರೂಪಾಯಿಗಳನ್ನು ಇನಾಂ ಕೊಡುವಂತೆ ಪ್ರಕಟಿಸಿರುತ್ತಾರೆ. ಸನ್ ೧೮೫೭ನೇ ಇಸವಿಯಲ್ಲಿ ನಡೆದ ಮ್ಯೂಟನಿಗೆ ತರುವಾಯ ಇಂಡ್ಯಾದೇಶದ ಪ್ರಜೆಗಳಮೇಲೆ ದುರ್ಭರವಾದ ಸುಮ್ಮಕಿ ತೆರಿಗೆಯು ಹೊರಿಸಲ್ಪಟ್ಟಿದೆ. ಸಮುದ್ರದ ದಂಡೆಯಮೇಲಿನ ಕಲ್ಲು ಬಂಡೆಯ ಹತ್ತಿರವಿರುವ ಬೊಲಸು ಉಪ್ಪನ್ನು ಒಟ್ಟುಗೂಡಿಸಿದ್ದನ್ನು ಶಿಪಾಯಿಗಳು ಚೆಲ್ಲಿಬಿಡುವದಕ್ಕೆ ಯತ್ನಿಸುವಾಗ ಅನೇಕಜನ ಕೂಲಿಯವರು ಅಳುತಿದ್ದದನ್ನು ನಾನು ನೋಡಿದೆನಲ್ಲದೆ ಅದನ್ನು ತಮಗೆ ತಿರಿಗಿ ಸಂಪಾದಿಸಿಕೊಳ್ಳಲಿಕ್ಕೆ ಸಹಾಯ ಮಾಡಬೇಕೆಂದು ಅವರು ನನ್ನನ್ನು ಕೇಳಿದರು ಆದರೆ ಅದು ನನಗೆ ಅಸಾಧ್ಯವಾಗಿ ಏರ್ಪಟ್ಟಿತು. ಆ ಬಡ ಪ್ರಾಣಿಗಳು ಅಷ್ಟು ಶ್ರಮದಿಂದ ಕೂಡಿಟ್ಟಿದ್ದ ಉಪ್ಪನ್ನು ಚೆಲ್ಲಿಬಿಡಬೇಕೆಂದರೆ ಶಿಪಾಯಿಗಳು ಆಗ್ರಹಪಟ್ಟರೆ ನಾವು ಸ್ವಂತಉಪಯೋಗಕ್ಕೆ ಕೊಂಡ ಉಪ್ಪನ್ನು ಅವರಿಗೆ ಕೊಡುತ್ತಿದ್ದೆನು. ಸುಮಾರು ೩೦ ವರುಷಗಳಿಂದ ನಡೆಯುವ ಮತ್ತು ಬಡವರಿಗೆ ಬಹಳ ತೊಂದರೆಯಾಗಿರುವ ಈ ತೆರಿಗೆಯನ್ನು ತೆಗೆದುಹಾಕತಕ್ಕದ್ದೆಂದು ಡ್ಯೂಕ್ ಆಫ್ ಕನಾಟ ಪ್ರಭುಗಳು ಹಿಂದುಸ್ಥಾನದಲ್ಲಿ ಬ್ರಿಟಿಷ ರಾಜ್ಯಾರ ನಡೆಸುವವರನ್ನು [illegible] ಸಿಫಾರಸು ಮಾಡುತ್ತಾರೆ. ಆದರೆ ಕೋರ್ಟು ಆಫ್ ಡೈರೆಕ್ಟರಬತ್ಸವರಿಗೆ ಪ್ರತಿನಿತ್ಯ ಆಹಾರದಲ್ಲಿಯೂ ಉಪಯೋಗಿಸಲ್ಪಡುವಂತಾ ಅವರರಾಜ್ಯದಲ್ಲಿರುವ ಉಪ್ಪಿನಮೇಲಿನ ತೆರಿಗೆಯು ಜುಲಿಮೀರೂಪವಾಗಿರುತಿದೆಂದು ಒಬ್ಬ ಯೂರೋಪಿಯನ್ ಗೃಹಸ್ಥರು ಒಂದಾನೊಂದು ಪತ್ರಿಕೆಗೆಬರೆಯುತ್ತಾರೆ.

DUTIES OF JOURNALISTS

ವೃತ್ತಾಂತಪತ್ರಿಕಾಧಿಪತಿಕರ ಕರ್ತವ್ಯವನ್ನು ಕುರಿತು ಇದರಡಿಕಂಡಂತೆ ಮುಂಬೈ ಕನ್ನಡ ಸುವಾರ್ತೆ ಪತ್ರಿಕೆಗೆ ಒಬ್ಬ ಪತ್ರವ್ಯವಹಾರರು ಬರೆದಿರುತ್ತಾನೆಂದರೆ —

ಮನುಷ್ಯನು ಈ ಜಗತ್ತಿನಲ್ಲಿ ತನ್ನ ಕರ್ತವ್ಯವೇನು, ತಾನು ಮಾಡತಕ್ಕದ್ದೇನು, ಎಂದು ತಿಳಿದುಕೊಳ್ಳಬೇಕಾದ್ದು ಯುಕ್ತವಾಗಿಯೂ ಅಗತ್ಯವಾಗಿಯೂ ಇರುತಿದೆ. ಅದರಂತೆ ತನ್ನ ತಮ್ಮ ದೇಶದ ಅಥವಾ ಪ್ರಾಂತದ ಸಾಮಾನ್ಯಜನರದೆಡೆ ಚಾಲಕರೆಂತಲೂ, ಅವರಿಗೆ ಹಿತಕರವಾದ ಮಾರ್ಗಗಳನ್ನು ತೋರಿಸತಕ್ಕವರೆಂತಲೂ ಎನ್ನಿಸಿಕೊಳ್ಳುವ ವೃತ್ತಾಂತಪತ್ರಿಕಾ ಲೇಖಕರಾದವರು ತಮ್ಮಕರ್ತವ್ಯವನ್ನು ಚೆನ್ನಾಗಿತಿಳಿದಿರಬೇಕಾದ್ದು ಬಹಳ ಅಗತ್ಯವೆಂಬದನ್ನು ನಾವು ಇಲ್ಲಿ ಪ್ರತ್ಯೇಕ ತಿಳಿಸಬೇಕಾದ್ದಿಲ್ಲವು. ಇವರು ತಮ್ಮ ಕಣ್ಣುಗಳನ್ನು ಯಾವಾಗಲು ತೆರದಿಡಬೇಕಾಗಿರುತಿದೆ ಇಷ್ಟೇಅಲ್ಲ, ಸಾಮಾನ್ಯಜನರ ಪದಕ್ಕಿಂತಲೂ ಇವರು ವಿಶೇಷ ದೀರ್ಘದರ್ಶಿಯಾಗಿರಬೇಕಾಗಿರುತಿದೆ ಇತರ ಜನರದೃಷ್ಟಿಯಿಂದಲೇ ಇವರೂ ಈ ಜಗತ್ತನ್ನೂ ಜಗತ್ತಿನ ವ್ಯವಹಾರಗಳನ್ನು ಸಹ ನೋಡಿದರೆ ಪ್ರಯೋಜನವಿಲ್ಲವು ವರ್ತಮಾನ ಪತ್ರಕರ್ತರೆಂಬ ಅಭಿದಾನಕ್ಕೆ ಪಾತ್ರರಾಗಬೇಕಾದರೆ ಅವರಲ್ಲಿರಬೇಕಾಗುವ ಗುಣಗಳಲ್ಲಿಮುಖ್ಯವಾದವು ಯಾವವೆಂದರೆ-(೧) ದೀರ್ಘದರ್ಶಿತ್ವ (೨)ಪ್ರಾಮಾಣಿಕತೆ (೩) ನಿಷ್ಪಕ್ಷಪಾತತೆ (೪) ನಿರ್ದಾಕ್ಷಿಣ್ಯತ್ವ ಮತ್ತು (೫) ಧೈರ್ಯ, ಇವುಗಳಲ್ಲದೆ ನಿಸ್ಸಂಗಸರ್ವಜ್ಞತೆ ಮುಂತಾದ ಇನ್ನೂ ಅನೇಕ ಅಮೂಲ್ಯಗುಣಗಳು ಅವಶ್ಯವಾಗಿ ಬೇಕಾಗಿರುತಿವೆ ಆದರೆ ಸದ್ಯಕ್ಕೆ ಮೇಲೆಕಂಡ ಐದುಗುಣಗಳನ್ನುಕುರಿತು ಮಾತ್ರ ಇಲ್ಲಿ ವಿಚಾರಮಾಡುವೆವು ದೂರದೃಷ್ಟಿ ಅಥವಾ ದೀರ್ಘದರ್ಶಿತ್ವ ಜನರ ಗೌರವಕ್ಕೆ ಅರ್ಹರೆನ್ನಿಸಿಕೊಳ್ಳುವ ವರ್ತಮಾನ ಪತ್ರಕರ್ತರಲ್ಲಿ ವಿಶೇಷವಾಗಿರಬೇಕು. ಯಾವಸಂಗತಿಯೊಳಾಗಲಿ ಯಾವ ವಿಷಯದಲ್ಲಾಗಲಿ ಉಪರ್ಯುಪರಿ ವಿಚಾರ ಮಾಡುವದು ಇವರಿಗೆ ಅನುಚಿತವು, ಯಾತಕ್ಕಂದರೆ, ಇಂಥಾವಿಚಾರಗಳಪರಿಣಾಮವು ಅಂತ್ಯದಲ್ಲಿ ಯಾರಿಗೂ ಹಿತಕರವಾಗುವದಿಲ್ಲವು ಮತ್ತು ಇಂಥಾವಿಚಾರಗಳು ಯಾವಾಗಲು ನಿಶ್ಚಯವಾಗಿ ತಪ್ಪಿಹೋಗತಕ್ಕವಾದ್ದಾಗಿರುವದರಿಂದ, ವರ್ತಮಾನ ಪತ್ರಕರ್ತರು ಆಗಿಂದಾಗ್ಯೆ ಇಂಥಾ ವಿಚಾರಕ್ರಮವನ್ನುಕೈಗೊಂಡರೆ ಜನರಿಗೆ ಇದರಿಂದ ಅಭಿಮಾನವು ಕಡಮೆಯಾಗಿ ಅವರಗೌರವಕ್ಕೆ ಹಾನಿಯುಂಟಾಗುವದು. ಇವಲ್ಲದೆ ಪ್ರಬಲವಿಷಯಗಳಲ್ಲಿ ಯೋಗ್ಯವಾದ ಮಾರ್ಗವನ್ನು ತೋರಿಸಿ, ಯುಕ್ತವಾದ ವಿಚಾರಗಳನ್ನು ಮಾಡುವದು ಇವರ ಧರ್ಮವಾಗಿರುತಿದೆ. ಇವರು ಸಾಮಾನ್ಯರಂತೆ ತಪ್ಪುಮಾರ್ಗಗಳಲ್ಲಿ ಸಂಚರಿಸಿದರೆ ವರ್ತಮಾನ ಪತ್ರಕರ್ತರಿಗೂ ಸಾಮಾನ್ಯರಿಗೂ ಭೇದವೇನಿರುವದು? ಪ್ರತಿ ಒಂದು ಸಂಗತಿಯನ್ನೂ (೧)ದೂರದೃಷ್ಟಿಯೊಡನೆ ವಿಚಾರಮಾಡಿ, ತಮಗೆ ಕಂಡುಬಂದ ಅಂಶಗಳನ್ನು (೨) ಪ್ರಾಮಾಣಿಕತೆಯಿಂದಲೂ (೩) ನಿಷ್ಪಕ್ಷಪಾತವಾಗಿಯೂ (೪) ನಿರ್ದಾಕ್ಷಿಣ್ಯವಾಗಿಯೂ (೫)ಧೈರ್ಯವಾಗಿಯೂ ಹೊರಪಡಿಸುವದೇ ವರ್ತಮಾನಪತ್ರಕರ್ತರೆನ್ನಿಸಿಕೊಳ್ಳುವವರಿಗೆ ಭೂಷಣಾಸ್ಪದವಾಗಿರುತಿದೆ ಇದಲ್ಲದೆ ಈ ಐದುಗುಣಗಳಲ್ಲೈಕಿ ಯಾವದೊಂದರಲ್ಲಾಗಲಿ ಸ್ವಲ್ಪ ನ್ಯೂನತೆಯಾದರೆ ಅದು [illegible] ಹಿತಕರವಾದ್ದಾಗಿಯೂ [illegible] ದುಷ್ಟಾವಲಂಬನೆಯಾದಂತ ಪತ್ರಕ್ಕೆ ಸರ್ವ ಮತ್ತವು ಎಂದಿಗೂ ಬರಲಾರವು ಯಾವತ್ತುಗತಿಯನ್ನಾದರೂ ಸ್ವತಂತ್ರವಾಗಿ ವಿಚಾರಿಸಬೇಕಲ್ಲದೆ, ಯಾವಪಕ್ಷವನ್ನೂ ಅವಲಂಬಿಸಕೂಡದು, ಹಾಗೆಯೇ ಸ್ವತಂತ್ರವಾಗಿ ವಿಚಾರ ಮಾಡಬೇಕಾದ ನಿರ್ಣಯಗಳನ್ನು ವಿಚಾರಮಾಡದೆ ಸರಕಾರದವರ ಭಯದಿಂದಲಾಗಲಿ ದೊಡ್ಡವರದಾಕ್ಷಿಣ್ಯದಿಂದಲಾಗಲಿ ಮುಚ್ಚಿಡಬಾರದು [illegible] ಕ್ಕಾದರೆ, ಜೀತಿಗಳ ದಾಕ್ಷಿಣ್ಯಕ್ಕೆ ಒಳಗಾಗುತ್ತಾರೋ ಅವರಲ್ಲಿ ನಿಷ್ಪಕ್ಷಪಾತವೆಂಬ ಗುಣ ಹ್ಯಾಗೆ ನೆಲೆಗೊಂಡಿರುವದು? ಅವರು ಹ್ಯಾಗೆ ಪ್ರಮಾಣಿಕರಾಗುವರು? ಮತ್ತು ನಿಜವಾಗಿ ಧೈರ್ಯವೆಂಬದರ ಹೆಸರಾದರೂ ಇವರಲ್ಲಿ ಉಳಿಯಬಲ್ಲದೇ? ಈ ಐದುಗುಣಗಳು ಪರಸ್ಪರ ಮತ್ತು ಬಹುನಿಕಟಸಂಬಂಧವುಳ್ಳವುಗಳು ಇವುಗಳಲ್ಲಿ ಯಾವದಾದರೊಂದನ್ನು ನಾವು ಬೆಳೆಸಿದರೆ, ಉಳಿದವುಗಳೆಲ್ಲವು ಸ್ವತಃ ವೃದ್ಧಿಯಾಗುತಿವೆ. ಯಾವದಾದರೊಂದು ನಮ್ಮಲ್ಲಿ ಲೋಪವಾದರೆ ಉಳಿದವೆಲ್ಲವೂ ಅಳಿದುಹೋಗುವವು. ಯಾವವರ್ತಮಾನಪತ್ರಕರ್ತರಲ್ಲಿ ಈ ಯೆಲ್ಲಾಗುಣಗಳು ನಿಯತಗಳಾಗಿ ಇರುವವೋ ಅವರೇ ಜನಗಳ ಪ್ರೀತಿ ಗೌರವಗಳಿಗೆಪಾತ್ರರಾಗುವರು, ಮತ್ತು ಅಂತವರೇ ತಮ್ಮದೇಶದ ಹಿತಚಿಂತಕರೆನ್ನಿಸಿಕೊಳ್ಳುವರಲ್ಲದೆ ಅವರಿಂದಲೇ ದೇಶಕ್ಕೆ ನಿಜವಾಗಿಯೇ ಉಂಟಾಗುವದು. ಈಗುಣಗಳನ್ನು ವೃದ್ಧಿಪಡಿಸಿಕೊಳ್ಳುವದು ಸುಲಭವಲ್ಲವು ಬಾಯಿಯಿಂದನುಡಿಯಲಿಕ್ಕೂ, ಪತ್ರಿಕಾಮೂಲಕ ಬರೆಯಲಿಕ್ಕೂ ಇವು ಬಹಳ ಸುಲಭವಾಗಿವೆ. ಯಾತಕ್ಕಂದರೆ ಪರರಿಗೆ ಉಪದೇಶ ಮಾಡುವದಕ್ಕಿಂತ ಸುಲಭಕೆಲಸವು ಈಜಗತ್ತಿನಲ್ಲಿ ಬೇರೊಂದೂ ಇಲ್ಲವೆಂದು ಹೇಳಬಹುದು. ಆದರೆ ತಮ್ಮ ಉಪದೇಶದೊಳಗಣ ಒಂದು ಶತಾಂಶವಾದರೂ ಪ್ರಚಾರದಲ್ಲಿ ತರುವದಾದರೆ ಉಪದೇಶಕರಿಗೆ ಸಹ ಬಹಳ ಅಸಾಧ್ಯವಾಗಿರುತಿದೆ. ಆದದರಿಂದ ಮೇಲೆಕಂಡ ಗುಣಗಳೆಲ್ಲವೂ ವರ್ತಮಾನ ಪತ್ರಕರ್ತರಲ್ಲಿರಬೇಕೆಂದು ಹೇಳುವದು ಸುಲಭವು. ಆದರೆ ಅವುಗಳನ್ನು ವೃದ್ಧಿಪಡಿಸಿಕೊಳ್ಳುವದು ಮಾತ್ರ ಬಹಳ ಪ್ರಯಾಸಕರವು. ಪತ್ರಿಕಾಲೇಖಕರ ಯೋಗ್ಯತೆಯನ್ನು ಹೊರಪಡಿಸುವಂತಾ ಗಹನ ವಿಷಯಗಳು ಪ್ರಾಪ್ತವಾಗಿ ಅವುಗಳು ಕುರಿತು ವಿಚಾರ ಮಾಡಬೇಕಾದಾಗ ಬಹುವಿಧ ನಿರ್ಬಂಧಗಳಿಗೆ ಒಂದೊಂದಾವರ್ತಿ ಗುರಿಯಾಗಬೇಕಾಗುತ್ತದೆ ಅಂತಾ ಸಮಯಗಳಲ್ಲಿ ಸಹ ಇವರು ತಮ್ಮ ಶ್ರೇಷ್ಠವಾದ ಗುಣಗಳ ಪ್ರಭಾವವನ್ನೂ ವಿಶೇಷವಾಗಿ ತಮ್ಮ ಧೈರ್ಯವನ್ನೂ ತೋರಿಸಬೇಕಾಗಿದೆ. ಮತ್ತು ಇಂತಾ ಸಮಯದಲ್ಲಿ ಧೈರ್ಯಗುಂದಿ ಹೆದರಿಯುವಂತೆ ಸ್ವಪ್ರಯೋಜನದಿಂದಲಾಗಲಿ, ಅನ್ಯರ ದಾಕ್ಷಿಣ್ಯದಿಂದಲಾಗಲಿ ಅನ್ಯಥಾ ವರ್ತಿಸಿದರೆ ಇವರ ಕೀರ್ತಿ ಪ್ರತಿಷ್ಠೆಗಳೆಲ್ಲವೂ ನಶಿಸಿಹೋಗುವವು. ಒಂದಾವರ್ತಿ ಯಾರ ಹಿತಚಿಂತನೆಯನ್ನು ನಾವು ಮಾಡುತ್ತೇವೆಯೋ ಅವರೇ ಮತ್ತೊಂದಾವರ್ತಿ ನಮಗೆ ಅಹಿತರಾಗುತ್ತಾರೆ ಯಾರ ಪ್ರಯೋಜನವನ್ನು ನಾವು ಬಹಳ ಜಾಗ್ರತೆಯಿಂದ ಪೋಷಿಸುತ ಯಾರಿಗೆ ನಾವು ನಮ್ಮಕೈಲಾದಮಟ್ಟಿಗೆ ಆಗಿಂದಾಗ್ಯೆ ಪ್ರಾಮಾಣಿಕವಾಗಿಯೂ ಮನಃಪೂರ್ವಕವಾಗಿಯೂ ಹಿತೋಕ್ತಿಗಳನ್ನು ಹೇಳುವೆವೋ ಅವರೇ ನಮ್ಮ ಹಿತೋಕ್ತಿಗಳನ್ನೂ ನಮ್ಮ ಉದ್ದೇಶಗಳನ್ನೂ ಅನ್ಯಥಾ ಗ್ರಹಿಸಿ ಸಾಧಾರಣಗಳಾದ ನಮ್ಮ ಮಾತುಗಳ ಅರ್ಥಗಳನ್ನೇ ವಿಪರೀತವಾಗಿ ಭಾವಿಸಿ ನಮ್ಮನ್ನು ದೂಷಿಸುವರು; ಎಂತವರ ನಿರರ್ಥಕ ದೂಷಣೆಗಳಿಗೆ ಒಳಗಾಗದಂತೆ ನಾವು ಮುಂಜಾಗ್ರತೆ ವಹಿಸಿದರೋ ಅಂತವರೇ ನಮ್ಮ ಮಾತುಗಳಲ್ಲಿ ಇಲ್ಲದ ಕುಂದನ್ನು ಕಂಡುಹಿಡಿಯುವರು. ಇವೆಲ್ಲ ಪ್ರಥಮದೃಷ್ಟಿಗೆ ಸ್ವಲ್ಪವಿಪರೀತವಾಗಿ ಕಂಡರೂ ವಿಚಾರ ಮಾಡಿದರೆ ಇದು ನಿಜವೆಂದು ತಿಳಿಯಬಹುದು. ಅಂತ್ಯದಲ್ಲಿ ಇದರ ಪರಿಣಾಮವು ಎಂದಿಗೂ ಕೆಡಲಾರದೆಂಬದನ್ನು ಪ್ರಾಮಾಣಿಕರಾದ ಪತ್ರಕರ್ತರೆಲ್ಲರೂ ದೃಢವಾಗಿ ನಂಬತಕ್ಕದ್ದು, ಇಂತಾ ಸಮಯದಲ್ಲಿ ಇವರು ಸ್ವತಃ ಸಮಾಧಾನ ಮಾಡಿಕೊಳ್ಳಬೇಕೆಂದರೆ ಕಾಲವೂ ಪ್ರಸಂಗವೂ ನಮ್ಮ [illegible] ಕನ್ನಡಿಗಳಾಗಿವೆ [illegible] ನಾವು ನಿಧಾನದಿಂದ [illegible] ಸಮಯವೂ ತಕ್ಕಪ್ರಸಂಗವೂ ಬಂದರೆ ಆಗ ಯಾರು ನಮ್ಮನ್ನು ದೂಷಿಸುತ್ತಾರೆಯೋ ಈಗ ಯಾರಿಗೆ ನಮ್ಮಲ್ಲಿ ಕೌಟಿಲ್ಯವು ತೋರುವದೋ ಅವರೇ ನಮ್ಮ ಪ್ರಾಮಾಣಿಕತೆಗೆ ಸಾಕ್ಷಿಗಳಾಗುವರು. ಇವರನ್ನು ನಾವು ವೃಥಾ ದೂಷಿಸಿದೆವಲ್ಲಾ ಎಂದು ಅವರ ಮನಸ್ಸೇ ಅನುತಾಪಿಸದೆ ಇರಲಾರದು.

ವರ್ತಮಾನ ಪತ್ರಿಕೆಗಳಿಗೆ ಅವಶ್ಯವಾಗಿ ಬೇಕಾಗಿರುವ ಸರ್ವಜ್ಞತೆಯನ್ನು ಕುರಿತು ನಾಲ್ಕು ಶಬ್ದಗಳನ್ನು ನುಡಿದು ಈ ಪ್ರಸಂಗವನ್ನು ಕೊನೆಮುಟ್ಟಿಸುವೆವು ವರ್ತಮಾನಪತ್ರಕರ್ತನು ಪ್ರತಿ ಒಂದು ವಿಷಯದಲ್ಲಿಯೂ ನಿಪುಣನಾಗಿರುತ ಸಂದರ್ಭವುಂಟಾದಾಗ ಎಂತಾ ವಿಷಯಗಳನ್ನಾದರೂ ವಿಚಾರಮಾಡಲಿಕ್ಕೆ ಸನ್ನದ್ಧನಾಗಿರಬೇಕು ಎಂದು ಜನಗಳು ಭಾವಿಸುತ್ತಾರೆ. ಆದರೆ ಒಬ್ಬಮನುಷ್ಯನು ಸರ್ವವಿಷಯಗಳಲ್ಲಿಯೂ ನಿಪುಣನಾಗಿರುವದು ದುರ್ಲಭವಾಗಿರುವದರಿಂದ [illegible] ವಪತ್ರಿಕೆಯೂ ಇಂತಾಸರ್ವಜ್ಞತೆಯನ್ನು ತೋರಿಸಬೇಕೆನ್ನುವದೋ, ಅದು, ಒಬ್ಬೊಬ್ಬರು ಒಂದೊಂದೇವಿಷಯವನ್ನು ಕುರಿತು ವಿಚಾರಮಾಡುವಂತೆ "ಎಡಿಟೋರಿಯಲ್‌ಸ್ಟಾಫ್" ಅಂದರೆ ಕೆಲವು ಜನ ಎಡಿಟರ್ (ಲೇಖಕರು) ಗಳನ್ನು ಪಡೆಯಬೇಕಾದ್ದಾಗಿರುತಿದೆ. ಆಗ ಆಪತ್ರಿಕೆಯು ಎಂತಾ ವಿಷಯವನ್ನು ಕುರಿತು ವಿಚಾರ ಮಾಡುವದಕ್ಕೂ ಸಮರ್ಥವಾಗುವದು ವಿಲಾಯತಿ ಮುಂತಾದ ಪ್ರದೇಶಗಳಲ್ಲಿ ಇದೇ ಕ್ರಮದಿಂದ ವರ್ತಮಾನ ಪತ್ರಿಕೆಗಳು ನಡೆಸಲ್ಪಡುತಿವೆಯಂತೆ. ಆದರೆ ಈದೇಶದಲ್ಲಿ ಯಾವ ಪತ್ರಿಕೆಗಾಗಲಿ ಕೆಲವುಜನ ಎಡಿಟರ್‌ಗಳಿರುವಂತೆ ತೋರಲಿಲ್ಲವು ಮತ್ತು ವರ್ನಾಕ್ಯುಲರ್ ಅವುಗಳೊಳಗೂ ಕನ್ನಡ ವರ್ತಮಾನ ಪತ್ರಿಕೆಗಳ "ಲೇಖಕರುಗಳು" ತಮ್ಮ ಎಡಿಟರ್ ಕೆಲಸವಲ್ಲದೆ ಒಂದೊಂದಾವರ್ತಿ ಕಂಪಾಜಿಟರ್, ಪ್ರೆಸ್‌ಮ್ಯಾನ್, ಇಂಕರ್ ಮುಂತಾದ ತಮ್ಮ ಆಫೀಸಿನಲ್ಲಿರಬೇಕಾದ ಉದ್ಯೋಗಗಳ ಚಾರ್ಜ್‌ಗಳನ್ನು ಸಹಾ ಗುಪ್ತವದೆ ಆಕ್ಟಿಂಗತರೀಕ್ ವಹಿಸಬೇಕಾಗುವದು.

BANGALORE.—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯುಪಗಮಾರ್ಹ ಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಸಾಹಿತೀಶೋಭಿತಾ ‖ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ವಿಶಾಸುಪರಿಶೋಭಿತಾದಿಶತಿಮಾನಸಂಸಂಮುದಂ

Vol. XIII] BANGALORE—MONDAY, APRIL 19, 1886. [No. 16.

ಸಂಪುಟ ೧೩. | ಬೆಂಗಳೂರು:—ಸನ್ ೧೮೮೬ನೇ ಇಸವಿ ಏಪ್ರಿಲ್ ೧೯ನೇ ತಾರೀಖ್ ಸೋಮವಾರ. [ಸಂಚಿಕೆ ೧೬.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ತೆಗೆದುಕೊಳ್ಳತಕ್ಕವರಿಗೆ, ವರುಷ ೧ಕ್ಕೆ	...	೧೨—೦—೦
ಇಂಗ್ಲಿಷ್ ಪತ್ರಿಕೆ ತೆಗೆದುಕೊಳ್ಳತಕ್ಕವರಿಗೆ ವರುಷ ೧ಕ್ಕೆ	...	೬—೦—೦
ಕನ್ನಡದಲ್ಲಿ ತೆಗೆದುಕೊಳ್ಳತಕ್ಕವರಿಗೆ [illegible] ಮೇಲ್ ತ್ತಿಕೆ ವರುಷಕ್ಕೆ.		೬—೦—೦
ಬಿಡಿ	೧ಕ್ಕೆ	೦—೮—೦

ಸೂಚನೆ:—[illegible] ಇಂಗ್ಲಿಷ್ ಕಾಗದವನ್ನಾಗಲಿ, ಕನ್ನಡ ಕಾಗದವನ್ನಾಗಲಿ ಅಥವಾ, ಎರಡನ್ನಾಗಲಿ ತೆಗೆದುಕೊಳ್ಳಬಹುದು. [illegible] ಮುಂದಾಗಿಯೇ ಸಲ್ಲಿಸಬೇಕು.

ಪ್ರಕಟನೆಯ ದರಖಾಸ್ತು.

ಕಿರಿ ಸಾಲು ಒಂದಕ್ಕೆ	೧ಕ್ಕೆ	೦—೨—೦
ಮೊದಲ ಸಾಲು ಒಂದಕ್ಕೆ	೧ಕ್ಕೆ	೦—೧—೦

NOTICE TO SUBSCRIBERS

ಇದರಡಿ ಬರೆಯಲ್ಪಡುವ ಅಂಶಗಳಿಗೆ ನಮ್ಮ ಚಂದಾದಾರರೆಲ್ಲರು ಮುಖ್ಯವಾಗಿ ಗಮನಕೊಡಬೇಕೆಂದು ಕೋರುತ್ತೇವೆ ಮೀ [illegible]—

೧ [illegible]

೨ [illegible]

೩ [illegible]

೪ [illegible]

NOTICE.

VAIDYASARA SANGRAHA.

☞ Price including Postage, Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥವು [illegible]

[illegible]	...	... ರೂ||	೫—೦—೦
[illegible] ಮತ್ತು ಅಂಚೇ ಖರ್ಚು			೦—೬—೦

[illegible], ಬೆಂಗಳೂರು.

ನೋಟೀಸ್.

ಇದರಡಿ ವಿವರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ಕ್ರಯಕ್ಕೆ ಸಲ್ಪಡುತ್ತವೆ,—

ಕನ್ನಡ ಟೀಕಾಸಹಿತವಾದ ಸಂಸ್ಕೃತ ಗ್ರಂಥಗಳು.

ಕಾಲಾಮೃತ.	...	೧—೮—೦
ಮುಹೂರ್ತದರ್ಪಣ	...	೦—೧೨—೦
ಭಗವದ್ಗೀತೆ (ಷಟ್ಪಂಚಾಶಿಕ)	...	೦—೩—೦
[illegible]	...	೦—೫—೦
ಬಾಲರಾಮಾಯಣ	...	೦—೪—೦
[illegible]	...	೦—೧೪—೦
[illegible]	...	೦—೭—೦
ಬಾಲಗ್ರಹ	...	೦—೬—೦
ವೈದ್ಯಸಾರಸಂಗ್ರಹ	...	೫—೨—೦

ಕನ್ನಡ ಗ್ರಂಥಗಳು.

[illegible]	...	೦—೭—೦
[illegible]	...	೦—೪—೦
[illegible]	...	೦—೩—೬
[illegible]	...	೦—೨—೬
[illegible]	...	೦—೪—೦
[illegible]	...	೦—೨—೨
[illegible]	...	೦—೨—೬
[illegible]	...	೦—೭—೦
[illegible]	...	೦—೩—೦
[illegible]	...	೧—೨—೦
[illegible]	...	೦—೦—೩
ಇಂಗ್ಲಿಷ್ ಕನ್ನಡ [illegible]		೧—೦—೬
[illegible]	...	೨—೦—೦
[illegible]	...	೦—೧೨—೦
[illegible]	...	೩—೪—೬
[illegible]	...	೩—೪—೬
[illegible] ಸ್ಟೇಟ್ [illegible] ೧ನೇ ಸಂಚಿಕೆ.	...	೧—೮—೦
[illegible] ೨ನೇ ಸಂಚಿಕೆ.		೧—೮—೦
[illegible]	...	೦—೮—೦

ಸಂಸ್ಕೃತ ಮೂಲಗ್ರಂಥಗಳು.

ವಿಷ್ಣುಸಹಸ್ರನಾಮ.	...	೦—೫—೦
ಸೂರ್ಯಸಹಸ್ರನಾಮ.	...	೦—೨—೬
[illegible]	...	೦—೨—೬
ಬಾಲರಾಮಾಯಣ	...	೦—೦—೬
[illegible]	...	೦—೨—೬
೧ ನೇ [illegible]	...	೦—೧—೦

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮಿಷನ್ ಮರ್ಚಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ಸಮಸ್ತ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇಲೆ ದಳ್ಳಾಳಿತನವು ತೆಗೆದುಕೊಳ್ಳಲ್ಪಡುವದು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, APRIL 19, 1886.

೧೮೮೬ನೇ ಏಪ್ರಿಲ್ ೧೯ನೇ ತಾ|| ಸೋಮವಾರ

ಓಂ|| ಸರ್ವಜ್ಞತಾಂ ಸದಸಿವಾಕ್ಪಟುತಾಂ ಪ್ರಸೂತೇ ವಾಣೀತ್ವದಂಘ್ರಿಸರಸೀರುಹಸೇವನಾನಾಂ||ತ್ವಾಮೇವದೇವಿಮನಸಾಸಮನುಸ್ಮರಾಮಿ ತ್ವಾಮೇವಸಾಮಿಕರಭಂಜನಸಿ ತ್ವಮೇವ||

MAHARAJA DHULIPSING.

ಪಂಜಾಬ್ ದೇಶದ ಮಹಾರಾಜಾ ರಣಜಿತ್‌ಸಿಂಗರವರ ಪುತ್ರರಾದ ದಲೀಪ್ ಸಿಂಗರವರು ಇಂಗ್ಲಾಂಡಿನಿಂದ ಮುಂಬೈಗೆ ಬರುವದಕ್ಕಾಗಿ ಕಳೆದ ತಿಂಗಳ ೩೦ನೇ ತಾರೀಖಿನಲ್ಲಿ ಜಹಜ್ ಹತ್ತಿದರೆಂದು ಮಾಹೇ ಮಜಕೂರ್ ೧೯ನೇ ತಾರೀಖಿನಲ್ಲಿ ಅವರು ನಮಗೆ ಬರೆದ ಕಾಗದದ ಮೂಲಕ ತಿಳಿಯಲಾದೆವು. ಈರಾಜಪುತ್ರರು ಕುರಿತು ಸಂಕ್ಷೇಪವಾಗಿ ಕೆಲವಂಶಗಳನ್ನು ಇದರಡಿ ತಿಳಿಸುವೆವೆಂತೆನ,

೧೮೪೯ನೇ ಇಸವಿಯಲ್ಲಿ ಪಂಜಾಬದೇಶವು ಆಗ್ಯೆ ಗವರ್ನರ್ ಜನರಲಾಗಿದ್ದ ಲಾರ್ಡ್ ಡೆಲ್‌ಹೌಸಿಯವರಿಂದ ಯುದ್ಧಮೂಲಕ ಜೆಯಿಸಲ್ಪಟ್ಟು ಬ್ರಿಟಿಷ್ ರಾಜ್ಯಕ್ಕೆ ದಾಖಲ್ ಮಾಡಿಕೊಳ್ಳಲ್ಪಟ್ಟಿತು. ಆಗ್ಯೆ ದಲೀಪ್‌ಸಿಂಗರವರು ೧೧ವರುಷದ ವಯಸ್ಸುಳ್ಳಬಾಲಕರಾಗಿದ್ದರು. ಇವರು ತಮ್ಮ ತಾಯಿಯೊಡನೆ ತಮಗೆ ಪಾಲಕರಾಗಿದ್ದ ಬ್ರಿಟಿಷ್ ಗವರ್ನ್‌ಮೆಂಟಿನವರ ಅನುಮತಿಯ ಮೇರೆ ಇಂಗ್ಲಾಂಡಿಗೆ ಹೋದರು. ಕೆಲವು ಸಂವತ್ಸರಗಳ ತರುವಾಯ ಅವರ ತಾಯಿಯು ಆದೇಶದಲ್ಲಿಯೇ ಮೃತವದಳು, ಬಳಿಕ ಅವರು ಚಕ್ರವರ್ತಿನೀಯವರ ಪ್ರೇರಣೆಯಮೇಲೆ ಕ್ರಿಸ್ತು ಮತವನ್ನವಲಂಬಿಸಿದರು ವಿವಾಹ ಮಾಡಿಕೊಳ್ಳಬೇಕೆಂಬ ಅಭಿಲಾಷೆಯುಂಟಾದಾಗ ಅವರು ಕಾಪ್ಟ್‌ಜಾತಿ ಹೆಂಗಸನ್ನು ಮದುವೆ ಮಾಡಿಕೊಂಡರು. ಆಕೆಗೆ ಈಗ ಮಕ್ಕಳು ಸಹ ಇರುವಂತೆ ತಿಳಿಯ ಬರುತಿದೆ. ಕಾಲಕ್ರಮದಿಂದ ಇವರಿಗೆ ಉಂಟಾಗಿದ್ದ ಅನ್ಯದೇಶ ವಾಸಾಪೇಕ್ಷೆಯೂ, ಇತರ ಮತಾಭಿಮಾನವೂ ತೊಲಗಿ ಸ್ವದೇಶ ವಾಸವೂ ಸ್ವಮತಾವಲಂಬನದೊಳು ಅಭಿರುಚಿಯೂ ಉಂಟಾಗಿದೆ ಇದಕ್ಕಾಗಿ ಯಿವರು ಬಹು ಪ್ರಯತ್ನದಿಂ ಇಂಡಿಯಾದೇಶಕ್ಕೆ ಮರಳಿ ಬರುತಲಿದಾರೆ. ದಲೀಪ್‌ಸಿಂಗರವರು ಸ್ವದೇಶವಾದ ಪಂಜಾಬಿಗೆಹೋಗಕೂಡದೆಂದು ಮಹಾರಾಣೀ ಸರ್ಕಾರದವರು ಅವರಿಗೆ ಹುಕುಂ ಮಾಡಿರುವಂತೆ ತಿಳಿಯ ಬರುತಿದೆ. ಇಂಡ್ಯ ದೇಶೀಯರಾದ ಸಿಕ್ ಜನಗಳು ಈ ರಾಜ ಪುತ್ರರನ್ನು ತಮ್ಮಮತಕ್ಕೆ ಮರಳಿ ಸೇರಿಸಿಕೊಳ್ಳುವರೆಂದು ನಮಗೆ ತೋರಲಿಲ್ಲವು. ಇವರರಾಜ್ಯ ಕೋಶಗಳು ಹ್ಯಾಗೆ ಅನ್ಯರಪಾಲಾದವೋ ಹಾಗೆಯೇ ಇವರ ಜಾತಿ ಮತ ನಿಯಮಗಳು ಸಹ ರೂಪಾಂತರವನ್ನೈದಿದವು. ಇಂತಾ ಸ್ಥಿತಿಯಲ್ಲಿ ಮಹಾರಾಜಪುತ್ರರೆಂಬ ಹೆಸರಿನೊಡನೆ ಮರಳಿ ಈದೇಶಕ್ಕೆ ಬರುವದು ಅವರಿಗೂ ಅವರ ದೇಶೀಯರಿಗು ಸಹ ಬಹಳ ಅವಮಾನಕರವೆಂಬದರೊಳೆಷ್ಟುಮಾತ್ರವೂ ಸಂಶಯವಿಲ್ಲವು ಈಗಇಂಡ್ಯದೇಶದಲ್ಲಿ ಸಂಸ್ಥಾನಾಧಿಪತಿಗಳೆನಿಸಿಕೊಂಡು, ಆಯುಧಧಾರಿಗಳಾಗಿ ಪ್ರಭುತ್ವಮಾಡುತಲಿರುವ ಸಜಾತೀಯ ಅರಸರಿಂದಲೇ ಬ್ರಿಟಿಷ್ ಗವರ್ನ್‌ಮೆಂಟಿನವರಿಗೆ ಯಾವವಿಧ ಭೀತಿಯೂ ಯಿಲ್ಲದಿರುವಾಗ, ರಾಜ್ಯಕೋಶಗಳಿಲ್ಲದವರಾಗಿಯೂ,ಸ್ವಜಾತೀಯರ ಅಭಿಮಾನಕ್ಕೆ ಬಾಹ್ಯರಾದವರಾಗಿಯೂ, ಇಲ್ಲಿನಸಂಬಂಧವನ್ನು ಬಾಲ್ಯದಶೆಯಲ್ಲಿಯೇ ನಿವೃತ್ತಿಸಿಕೊಂಡವರಾಗಿಯೂ ಅನುಪಪನ್ನರಾಗಿಯೂ, ವಿಮತಸ್ಥರಾಗಿಯೂ ಇರುವವರೊಬ್ಬರು ರಾಜಕೀಯೋದ್ದೇಶಗಳೊಂದೂ ಯಿಲ್ಲದೆ ಕೇವಲ ಸ್ವದೇಶವನ್ನು ನೋಡಬೇಕೆಂಬ ಕುತೂಹಲದೊಡನೆ ಇತರರಂತೆ ಬರುವವರಿಗೋಸ್ಕರ ಬಯಪದುವದಂ ನೋಡಿದರೆ ಬ್ರಿಟಿಷ್‌ನವರು ಹಿಂದೂಗಳಿಗೆ ಇನ್ನೂ ಯಥೋಚಿತ ಸ್ವತ್ವನಿವೆಯೆಂದು ಭಾವಿಸಿರುವಂತೆ ತೋರುತಿದೆ. ಮುಖ್ಯವಾಗಿ ಮಹಾರಾಜಾ ದಲೀಪ್‌ಸಿಂಗರವರು ಪಂಜಾಬ್ ಸಿಂಹಾಸನಾರೋಹಣಕ್ಕಾಗಿ ಬರುವವರಲ್ಲವಾದದರಿಂದ ಅವರ ಸಂಚಾರ ವಿಷಯದಲ್ಲಿ ಗವರ್ನ್‌ಮೆಂಟಿನವರು ವ್ಯರ್ಥ ನಿರ್ಬಂಧಗಳನ್ನುಂಟುಮಾಡುವದು ಯುಕ್ತವಾಗಿಲ್ಲವು.

ADMINISTRATIVE CHANGES.

(Communicated.)

ಮೈಸೂರು ದೇಶೀಯರಿಗೆ ಈಗ ಏಕಾಏಕಿ ಉಂಟಾದ ಸ್ಥಿತಿ ವಿಪರ್ಯಯವನ್ನು ನಿರೂಪಿಸಲಿಕ್ಕಾಗಿ ಪ್ರವರ್ತಿಸಿದ ಗತವಾರದ ಮೈಸೂರು ಗೆಜೆಟನ್ನು ನೋಡಲಾಗಿ ಅದು ನಮಗೆ ಅತ್ಯಾಶ್ಚರ್ಯವನ್ನುಂಟುಮಾಡದಿರಲಿಲ್ಲವು. ಮತ್ತು ಅದರದೆಸೆಯಿಂದ ಈಗ್ಯೆ ಐದಾರು ಸಂವತ್ಸರಗಳ ಮೊದಲು ಈದೇಶದ ರಾಜ್ಯಭಾರ ಕ್ರಮದೊಳುಂಟಾಗಿದ್ದ ಅವವ್ಯಸ್ಥೆಯು ಅತ್ಯಂತಿಕವಾಗಿ ನಿವಾರಣವಾಗುತತೋರುತಿದೆ. ಲೋಕದಲ್ಲಿ ಪ್ರತಿಮನುಷ್ಯನೂ ಸ್ವಪ್ರಯೋಜನಾನುಗುಣವಾಗಿ ವಿಷಯ ಗೌರವವಂಕಲ್ಪಿಸುವದು ಸ್ವಾಭಾವಿಕವಾದದರಿಂದ ಪ್ರಸಕ್ತ ಏರ್ಪಾಡುಗಳ ಮೂಲಕ ಪ್ರಯೋಜನವನ್ನೈದಿದವರೆಲ್ಲರು ಅದಂ ಶ್ಲಾಘಿಸದಿರಲಾರರೆಂದು ನಂಬುತ್ತೇವೆ. ಈಗಿನ ಏರ್ಪಾಡಿನಲ್ಲಿ ಬಹುಮಂದಿ ಅಸಿಸ್ಟೆಂಟ್ ಕಮಿಷನರ್‌ಗಳಿಗೂ ಅನೇಕಜನ ಅಮಲ್‌ದಾರರುಗಳಿಗೂ ಧಾರಾಳವಾಗಿ ಕೊಡಲ್ಪಟ್ಟ ಬಡ್ತೀಗಳಿಗಾಗಿ ಅವರೆಲ್ಲರಿಗೂ ನಾವು ಈಪತ್ರಿಕಾಮೂಲಕ ಶುಭವಾದನಮಾಡುವೆವು. ಇತರವಿಧಗಳಾದಅವ್ಯವಸ್ಥೆಗಳು ಪ್ರಾದಾನ್ಯೇನ ಇಲ್ಲಿ ನಮೂದಿಗೆ ಬಾರದಿದ್ದಾಗ್ಯೂ ಸರ್ಕಾರ್‌ನೌಕರಿಗಳ ವಿಲೇವಾರಿಯೊಳಗಣ ತಾರತಮ್ಯಗಳೇ ಬಹಳವಾಗಿವಿಚಾರಾರ್ಹಗಳಾಗಿದ್ದವು. ಈಗ ಅಂತವುಗಳಿಗೇನೂ ಅವಕಾಶವಿಲ್ಲವಾಯಿತಷ್ಟೆ. ಈದೇಶಿಯರಾದ ಕೆಲವರಿಗೆ ಬಡ್ತೀಗಳೂ ಒಬ್ಬರಿಬ್ಬರಿಗೆ ಸ್ವತಂತ್ರಾಧಿಕಾರಗಳೂ ಕೊಡಲ್ಪಟ್ಟದರಿಂದ ಇನ್ನು ಸ್ವಪರಪ್ರಯುಕ್ತಗಳಾದ ಭೇದಗಳು ಶಂಕಿಸಲ್ಪಡಲಿಕ್ಕೆ ಮಾರ್ಗವಿಲ್ಲವಾಯಿತು. ಅನ್ಯದೇಶೀಯರನೇಕರಿಗೆ ಬರಸ್ತಾರ್ ಇಜಾಫೆಗಳಾದದರಿಂದ ಅವರು ಅನಾದರಣೆಮಾಡಲ್ಪಟ್ಟಂತೆ ಅತೃಪ್ತಿಗೊಳ್ಳಲಿಕ್ಕೆ ಕಾರಣವಿಲ್ಲವಾಯಿತು. ಮುಸಲ್ಮಾನರಲ್ಲಿ ಒಬ್ಬರಿಗೆ ಒಂದುಡಿಸ್ಟ್ರಿಕ್ಟಿನ ಅಧಿಕಾರವೂ ಇನ್ನು ಕೆಲವರಿಗೆ ಬಡ್ತಿಗಳೂ ಮಾಡಲ್ಪಟ್ಟದರಿಂದ ಹಿಂದೂಗಳ ಪ್ರಾಬಲ್ಯಕ್ಕಾಗಿ ಅವರು ಅಸಮಾಧಾನ ಪಡಲು ನಿಮಿತ್ತವಿಲ್ಲವಾಯಿತು.

ಇತರ ಮತಸ್ಥರನೇಕರವಕ್ಕು ದಾರಿಗಳು ವಿಶೇಷ ಈ ಗೌರವಿಸಲ್ಪಟ್ಟದರಿಂದ ಬ್ರಾಹ್ಮಣ ಪ್ರಾಬಲ್ಯಕ್ಕಾಗಿ ಅವರು ಚಿಂತಿಸಲು ಆಸ್ಪದವಿಲ್ಲವು ಮುಂದೆ ಖಾಲಿಯಾಗತಕ್ಕ ಕೆಲಸಗಳಗೆಲ್ಲ ಪ್ಯಾಸ್ ಮಾಡಿದವರನ್ನೇ ನೌಕರರನ್ನಾಗಿ ಮಾಡಬೇಕೆಂದು ದಿವಾನರು ಹುಕುಂಕೊಟ್ಟಿರುವದರಿಂದ ವಿದ್ಯಾಭ್ಯಾಸ ಪ್ರಯುಕ್ತವಾದ ಪರಿಶ್ರಮವು ಈ ದೇಶದಲ್ಲಿ ಉಚಿತವಾಗಿ ಪುರಸ್ಕರಿಸಲ್ಪಡುವದಿಲ್ಲವೆಂದು ವಿದ್ಯಾರ್ಥಿಗಳು ವಿಷಾದಿಸಲಿಕ್ಕೆ ಅನವಕಾಶವಾಯಿತು

ಈರೀತಿ ದಿವಾನರವರ ಏರ್ಪಾತುಗಳೆಲ್ಲವೂ ಪ್ರಾಯೇಣ ಉದ್ಯೋಗಸ್ಥರಲ್ಲಿ ಸಾರ್ವಜನೀನವಾದ ಸಂತೋಷವನ್ನುಂಟುಮಾಡತಕ್ಕವಾಗಿರುತ್ತಿವೆ. ಹೀಗಿದ್ದಾಗ್ಯೂ ದುರಭಿಮಾನಿಗಳಾದ ಕೆಲವರು ಮಾತ್ರ ಇದರಿಂದ ತೃಪ್ತಿಯನ್ನೈದದೆ ತಮ್ಮ ದೇಶಕ್ಕೆ ಋಣವು ಮಹತ್ತರವಾಗಿರುವಂತೆಯೂ ಜಾಸ್ತೀ ಸಬ್‌ಸಿಡಿಯನು ಇಲಕವಾದ ತಗಾದೆಯನ್ನು ಅದು ತೀರಿಸುವ ಸ್ಥಿತಿಯೊಳಿಲ್ಲವೆಂತಲೂ, ಇಂತಾಸ್ಥಿತಿಯು ತಮಗೂ ತಮ್ಮ ಅರಸರಿಗೂ, ತಮ್ಮ ದೇಶಕ್ಕು ಸಹ ಶ್ರೇಯಸ್ಕರವಲ್ಲವೆಂತಲೂ ಒಂದುಭಾಗದಲ್ಲಿ ಅತ್ಯಸ್ತವಾಗಿ ಸಂಕಟಪಡುತ್ತಲಿದ್ದಾರೆ. ಅದು ನಿಯತವಾಗಿಯೂ ಉತ್ತರೋತ್ತರಾಭಿವೃದ್ಧಕವಾಗಿಯೂ ಇರುವದರಿಂದ ಇದಕ್ಕಾಗಿ ಈಗ ವಿಚಾರಪಡುವದು ಅನುಚಿತವು ಬ್ರಿಟಿಷ್ ಗವರ್ನಮೆಂಟಿನವರಿಗೆ ಕೊಡಬೇಕಾದ ಸಬ್‌ಸಿಡಿಯ ತಗಾದೆಯು ಮುಂಬಿನ ಹತ್ತು ವರುಷಗಳತನಕ ನಿಲ್ಲಿಸುವದೇ ಋಣವನ್ನು ಮಹಾರಾಜಾ ಸರ್ಕಾರದವರ ನಿರ್ಣಯಕಾಲದ ಅದ್ದಕ್ಕೆ ಮುಖ್ಯ ಕಾರಣವಾಗಿರಬಹುದೆಂದು ನಮ್ಮಲ್ಲಿ ಅನೇಕರು ಭಾವಿಸುತ್ತಾರೆ. ಈ ರಾಜ್ಯಾಧಿಪತ್ಯವು ಮಹಾರಾಜರವರಿಗೆ ಒಪ್ಪಿಸಲ್ಪಟ್ಟಬಳಿಕ ಎರಡು ಡಿಸ್ಟ್ರಿಕ್ಟುಗಳೂ, ಅನೇಕ ತಾಲ್ಲೂಕುಗಳೂ ಮೌಕೂಫಾದವು. ಈಮೂಲಕ ಖರ್ಚು ಕಡಮೆಯಾಗುವದೆಂದು ಭಾವಿಸಿದ್ದು ಕೇವಲ ಭ್ರಾಂತಿಕಲ್ಪಿತವೆಂದು ಏರ್ಪಟ್ಟಿತಲ್ಲದೆ ಖರ್ಚು ಕಡಮೆ ಯಾಗಲಿಕ್ಕೆ ಬದಲು ಸರ್ಕಾರ್ ಕೆಲಸಗಳಿಗೆ ಅಡಚಣೆಯೂ, ಅಂತಾ ಏರ್ಪಾಡುಗಳಂ ಮಾಡಿದವರಿಗೆ ನೈಷ್ಕುರ್ಯವೂ ವುಂಟಾದವು. ಈಗಿನ ದಿವಾನರವರ ದೃಷ್ಟಿ ಅಂತಾದ್ದಲ್ಲವೆಂಬದಕ್ಕೆ ಅವರ ಪ್ರತಿ ಆತಳತವೂ ಸಾಕಾದ ನಿದರ್ಶನವಾಗಿರುತಿದೆ. ಇವುಗಳ ಮುಂದಿನ ವ್ಯವಸ್ಥಾನವಂ ಕುರಿತು ಅವರೂ ಚಿಂತಿಸುವ ಸ್ಥಿತಿಯೊಳಿಲ್ಲವು. ನಾವೂ ಅದುಂಕುರಿತು ಈಗ ವಿಚಾರ ಮಾಡುವದಿಲ್ಲವು. ಆದರೆ ಈಗಿನ ಆಡಳತಕ್ರಮವು ಅವರಮಟ್ಟಿಗೆ ಕೀರ್ತಿಯನ್ನುಂಟುಮಾಡತಕ್ಕದ್ದಾಗಿರುತಿದೆ. ದೇಶದ ತಾತ್ಕಾಲಿಕ ಸ್ಥಿತಿಯನ್ನು ಪರ್ಯಾಲೋಚಿಸಿ ನೋಡಲಾಗಿ ಪ್ರಕೃತ ಏರ್ಪಾಡುಗಳೆಲ್ಲವು ದಿವಾನರವರ ಅತ್ಯೌದಾರ್ಯವನ್ನು ಸೂಚಿಸ ತಕ್ಕವಾಗಿರುತಿವೆ ಹ್ಯಾಗೆಂದರೆ,—ದೇಶದ ಬಂದೋಬಸ್ತಿಯಬಗ್ಗೆ ತಾಲ್ಲೂಕುಗಳನ್ನು ಏರ್ಪಡಿಸ ಬೇಕಾದ್ದು ಅನಿವಾರ್ಯವಾಗಿದ್ದರೂ ಏಕಕಾಲದಲ್ಲಿ ಅನೇಕಜನ ಅಮಲ್ದಾರರುಗಳಿಗೆ ನಿಶ್ಶಂಕವಾಗಿ ಎಷ್ತೀಗಳು ಕೊಟ್ಟದ್ದು ದಿವಾನರವರಿಗೆ ತಾಬೇದಾರರಲ್ಲಿರುವ ವಾತ್ಸಲ್ಯವನ್ನು ವ್ಯಕ್ತಪಡಿಸದಿರಲಿಲ್ಲವು. ಆ ಕಳತನಿರ್ವಹಣೆಯ ಅನುಕೂಲ್ಯಕ್ಕಾಗಿ ಡಿ|| ಗಳನ್ನು ತಕ್ಕಲವಾಜಮೆಗಳೊಡನೆ ಏರ್ಪಡಿಸಬೇಕಾದ್ದು ಜರೂರಾಗಿದ್ದರೂ ಅಸಿಸ್ಟೆಂಟುಗಳ ಬಡ್ತೀ ಮುತ್ತು ನೌಕರರಾತಿಗಳು ದಿವಾನರವರ ಔದಾರ್ಯಪ್ರದರ್ಶಕಗಳಾಗಿರುತಿವೆ. ನೌಕರ್‌ಪೇಷಾ ಜನಗಳನ್ನು ತೃಪ್ತಿಗೊಳಸಬೇಕಾದ್ದು ಆವಶ್ಯಕವಾಗಿದ್ದರೂ, ಜಾಸ್ತೀ ಸರ್ವಿಸ ವುಳ್ಳವರ ಗೋಜಿಗೆ ಹೋಗದೆ ಅವರಿಗೆಲ್ಲ ಇಜಾಫೆ ಮಾಡಿದದ್ದು ದಿವಾನರವರ ಅನುರಾಗವನ್ನು ವ್ಯಕ್ತಪಡಿಸುತಿದೆ. ಮುಂದೆ ಖಾಲೀಯಾಗತಕ್ಕ ಕೆಲಸಗಳಗೆಲ್ಲ ವಿದ್ಯಾವಂತರನ್ನೇ ನೌಕರರ ಮಾಡಬೇಕೆಂದು ಕೊಟ್ಟ ಹುಕುಂ ಅವರ ವಿದ್ವತ್ಪಕ್ಷಪಾತತೆಯನ್ನು ಪ್ರಕಟಪಡಿಸುತಿದೆ. ಮುಖ್ಯವಾಗಿ ಈಗಿನ ದಿವಾನರವರು ಪ್ರತಿಷ್ಠಾಪರರಾದದರಿಂದ ತಾವು ಮಾಡಬೇಕಾದ ಕರ್ತವ್ಯವನ್ನು ನಿರ್ವಂಚನೆಯಾಗಿ ನಡಿಸುತ್ತಿದ್ದಾರೆ. ಇನ್ನು ಅವರು ಮಾಡಬೇಕಾದ ಕಾರ್ಯ ಬೇರೆ ಇರುವಂತೆ ನಮಗೆ ತೋರಲಿಲ್ಲವು

REVIEW

ಕರ್ಣಾಟಕ ಪ್ರಪನ್ನಾಮೃತವೆಂಬ ಗ್ರಂಥದ ಪ್ರತಿ ಯೊಂದು ವಿಮರ್ಶೆಯಬಗ್ಯೆ ನಮ್ಮ ಬಳಿಗೆ ಕಳುಹಿಸಲ್ಪಟ್ಟು ಈಗ್ಯೆ ಅನೇಕವಾರಗಳಾದರೂ ಅದುಂ ಕುರಿತ ನಮ್ಮ ಅಭಿಪ್ರಾಯವನ್ನು ಇದುವರಿವಿಗೂ ತಿಳಸದೆ ವಿಳಂಬಮಾಡಿದ್ದಕ್ಕಾಗಿ ಏತಗ್ರಂಥ ಪ್ರಚಾರಕರ ಕ್ಷಮೆಯುಂಬೇಡುವೆವು. ಈ ವಾಕ್ಯಗ್ರಂಥವು ಕೇವಲ ಒಂದು ಮತಸಂಬಂಧವಾದದ್ದಾಗಿದ್ದರೂ, ಇದು ಜ್ಞಾನವಯೋವೃದ್ಧರಾದ ಬಹುಮಂದಿ ಮಹನೀಯರ ಚರಿತ್ರವನ್ನು ಬೋಧಿಸುವದಾಗಿರುವದರಿಂದ ಪ್ರಾಚೀನ ವಿಷಯಜ್ಞಾನ ಸಂಪಾದನಾಭಿಲಾಷಿಗಳಾದವರೆಲ್ಲರೂ, ಇದು ಉತ್ಸಾಹದೊಡನೆ ಪರಿಗ್ರಹಿಸುವರೆಂದು ನಂಬುತ್ತೇವೆ. ದರ್ಶನ ಪ್ರವರ್ತಕರಾದವರನೇಕರ ಅಸಾಧಾರಣ ಗುಣಮಹಿಮೆಗಳನ್ನು ವ್ಯಕ್ತಪಡಿಸುವದರಿಂದ ಅಂತವರೊಳು ಪ್ರೀತಿ ಗೌರವವುಳ್ಳ ತನ್ಮತಾವಲಂಬಿಗಳೆಲ್ಲರು ಸದರೀಗ್ರಂಥವನ್ನು ಗೌರವಿಸುವರೆಂದು ನಂಬುತ್ತೇವೆ. ಈಗ್ಯೆ ನೂರಾರು ಸಂವತ್ಸರಗಳ ಹಿಂದೆ ಕರ್ನಾಟಕ ಭಾಷೆಯ ಸ್ಥಿತಿಯನ್ನೂ ಆಗಿನ ಪಂಡಿತರ ವಾಕ್ಯ ಶೈಲಿಯನ್ನೂ ಪ್ರಯೋಗಕ್ರಮವನ್ನೂ ತಿಳಸುವದರಿಂದ ಶಬ್ದಶಾಸ್ತ್ರಜ್ಞರು ಭಾಷಾವಿಚಾರಸ್ಥ ಸಾದನ್ವೇಷಣ ಇದಂ ಪರಿಗ್ರಹಿಸುವರೆಂದು ಭಾವಿಸುತ್ತೇವೆ. ಈ ಗ್ರಂಥವು, ವಿಶಿಷ್ಟಮತ ಶ್ರೀರಾಮಾನುಜಾಚಾರ್ಯರ ವೃತ್ತಾಂತವನ್ನೂ ಸಾಮಾನ್ಯವಾಗಿ ಅವರ ಗುರುಶಿಷ್ಯ ಪರಂಪರೆಗೆ ಸೇರಿದವರ ವಿಚಾರವನ್ನೂ ತಿಳಸತಕ್ಕದ್ದಾಗಿರುತಿದೆ. ಇದರೊಡನೆ ಪೂರ್ವಾಚಾರ್ಯರುಗಳ ಚಿತ್ರಪಟವೊಂದು ಸೇರಿಸಲ್ಪಟ್ಟಿರುತಿದೆ. ಈವಿಧ ಗ್ರಂಥಗಳು ಸಂಸ್ಕೃತಾದಿ ಭಾಷೆಗಳಲ್ಲಿ ಅನೇಕ ಇದ್ದಾಗ್ಯೂ ಇದುವರಿವಿಗೆ ಕರ್ಣಾಟಭಾಷೆಯಲ್ಲಿ ಇಂತಾ ದೊಂದೂ ಇರಲಿಲ್ಲವು. ಅಪೂರ್ವವಾದ ಈ ಪುಸ್ತಕವನ್ನು ಸಂಪಾದಿಸಿ ಲೋಕೋಪಕಾರಾರ್ಥ ಪ್ರಕಟಿಸಿದ ಮೆ|| ರಾಮಯ್ಯಂಗಾರ‍್ಯರ ಪ್ರಯತ್ನವು ಶ್ಲಾಘಿಸಲ್ಪಡತಕ್ಕದ್ದಾಗಿದ್ದರೂ, ಅದಂ ಪ್ರಕಟಿಸುವ ವಿಷಯದಲ್ಲಿ ಅವರು ಮಾಡಿದ ಏರ್ಪಾಡು ಪುಸ್ತಕ ಗ್ರಂಥಕ್ಕೆ ವಿಶೇಷಗುಣವನ್ನಾರೋಪಿಸತಕ್ಕದ್ದಾಗಿರಲಿಲ್ಲವು. ಇತರ ವಿಷಯಗಳಲ್ಲಿ ಇದು ಸಾಮಾನ್ಯವಾಗಿರುತಿದೆ. ಪರಂತು ಮೇಲೆ ತಿಳಸಲ್ಪಟ್ಟ ಕಾರಣಗಳಿಂದ ಯೆಲ್ಲರಿಗೂ ಇದು ಉಪಯುಕ್ತವಾದದ್ದೆಂದು ಹೇಳಬಲ್ಲೆವು. ಇದು ಪ್ರಥಮಪ್ರಯತ್ನವಾದದರಿಂದ ಇದರೊಳನೇಕ ನ್ಯೂನತೆಗಳು ಕಂಡುಬಾರದಿರಲಾರವು. ಆದರೆ ಗುಣಜ್ಞರು ಅದಂ ಪರಿಗಣಿಸದೆ ಪ್ರಪನ್ನಾರ್ಹವಾದ ಅಮೃತಪಾನವ ಮಾಡಿ ಸಂತೋಷವನ್ನು ಪಡಿಸುವದರ ಮೂಲಕ ಗ್ರಂಥಕರ್ತರಿಗೂ ಅದಂ ಪ್ರಕಟಿಸಿದವರಿಗು ಸಹ ಕೀರ್ತಿಪ್ರತಿಷ್ಠೆಗಳನ್ನುಂಟುಮಾಡಬೇಕೆಂದು ಕೋರುವೆವು

ಅರಮನೆಯ ವಿದ್ವಾಂಸರಾದ ಬ್ರಹ್ಮಶ್ರೀ ಜಯಾಚಾರ್ಯರೆಂಬವರಿಂದ ರಚಿಸಲ್ಪಟ್ಟಿರುವ ಪಾಕಶಾಸ್ತ್ರವನ್ನು ಸಮಗ್ರವಾಗಿ ನೋಡಿದೆವು. ಇದೇ ಹೆಸರುಳ್ಳ ಗ್ರಂಥಗಳು ಒಂದೆರಡು ಪೂರ್ವದಲ್ಲಿಯೇ ಅನ್ಯರಿಂದ ಪ್ರಕಟಿಸಲ್ಪಟ್ಟಿದ್ದರೂ, ಈಗನಮಗೆ ಕಳುಹಿಸಲ್ಪಟ್ಟಿರುವ ಸಂಚಿಕೆಯು ಇತರಾಪೇಕ್ಷೆಯಾ ವೈಲಕ್ಷಣ್ಯವುಳ್ಳದ್ದಾಗಿರುತಿದೆ. ಈಗ್ರಂಥದ ಪ್ರಥಮಭಾಗವು ನಾಲ್ಕು ಪ್ರಕರಣಗಳುಳ್ಳದ್ದಾಗಿಯೂ, ಒಂದೊಂದು ಪ್ರಕರಣವು ಅನೇಕ ವಿಧಾನಗಳುಳ್ಳದ್ದಾಗಿಯೂ, ಇರುತಿದೆ. ಇದಲ್ಲದೆ, ಆಯಾ ದೇಶಕ್ರಮವನ್ನನುಸರಿಸಿ ಅಡಿಗೆಯರೀತಿಯೂ, ಪದಾರ್ಥ ಸಂಯೋಜನಕ್ರಮವೂ, ತತ್ತತ್ಪರಿಮಾಣಗಳೂ, ದಮ್ಗುಣಗಳು ಸಹ ತಿಳಸಲ್ಪಟ್ಟಿವೆ. ಕೆಲವುಗ್ರಂಥಗಳೊಳು ಪದಾರ್ಥಗಳ ಗುಣದೋಷಗಳನ್ನು ತಿಳಸುವ ಸಂದರ್ಭಗಳಲ್ಲಿ ಪಾಕ ವಿಧಾನವೂ, ಅದನ್ನರುಹುವಾಗ್ಯೆ ಪದಾರ್ಥಗಳ ಪರಿಮಾಣವೂ, ಅದುವಿವರಿಸಲ್ಪಡುವಾಗ್ಯೆ ಅವುಗಳ ಸಂಯೋಜನಕ್ರಮವೂ ತಿಳಿಸಲ್ಪಡುವದಿಲ್ಲವು. ಈಗ್ರಂಥವು ಹಾಗಿಲ್ಲದೆ ಆವಶ್ಯಕಗಳಾದವುಗಳೆ ಕಂದಜ್ಞಾನಗಳನ್ನು ಏಕಕಾಲದಲ್ಲಿ ಜನಗಳಿಗೆ ಸುಲಭವಾಗಿ ಉಂಟುಮಾಡತಕ್ಕದ್ದಾಗಿರುತಿದೆ. ವಾಕ್ಯಸೌಲಭ್ಯದಿಂದ ಇದುವಿದ್ಯಾರ್ಥಿನೀಯರಿಗೆ ಸಹ ಅತ್ಯಂತೋಪಯುಕ್ತವಾಗಿರುತಿದೆ. ಈ ಗ್ರಂಥಕರ್ತರು ಅರಮನೆಯ ಸರಸ್ವತೀ ಭಂಡಾರ ಮತ್ತು ಸರಸ್ವತೀಪ್ರಸಾದ ಪಾಠಶಾಲೆ ಇವುಗಳಲ್ಲಿ ಇರತಕ್ಕ ಭಾವಪ್ರಕಾಶಿಕಾ, ಚಾಪಟ, ನಿಘಂಟು ರತ್ನಾಕರ ಮೊದಲಾದ ವೈದ್ಯಶಾಸ್ತ್ರಗಳ ಸಹಾಯದಿಂದಲೂ, ಸಂಸ್ಕೃತ ದ್ರಾವಿಡ ಮಹಾರಾಷ್ಟ್ರ ಭಾಷಾನಿಬದ್ಧವಾದ ಪಾಕಶಾಸ್ತ್ರ ಗ್ರಂಥಗಳ ಸಹಾಯದಿಂದಲೂ, ಪಂಡಿತರ ಸಹಾಯದಿಂದಲೂ, ಈ ಪುಸ್ತಕವನ್ನು ಸರ್ವರೂ ಸುಲಭವಾಗಿ ತಿಳಯುವಂತೆ ರಚಿಸಿರುತ್ತಾರೆ. ಇದಲ್ಲದೆ ಈ ಪಾಕಶಾಸ್ತ್ರದಲ್ಲಿ ತಿಳಸಲ್ಪಟ್ಟಿರುವ ಸಕಲಪದಾರ್ಥಗಳನ್ನೂ ಸಮರ್ಥರಾದವರಿಂದ ನಿದಾನಪ್ರಕಾರ ಮಾಡಿಸಿ ಪರೀಕ್ಷಿಸಿರುವಂತೆ ತಿಳಯಬರುತಿದೆ. ಈ ಪುಸ್ತಕವು ಪುರಾತನ ಗ್ರಂಥಗಳ ಆಧಾರವುಳ್ಳದ್ದರಿಂದ ಪ್ರಾಮಾಣಿಕವಾದದ್ದಾಗಿಯೂ, ಅದರಂತೆ ಮಾಡಿ ಪರೀಕ್ಷಿಸಿದ್ದರಿಂದ ಅನುಭವಸಿದ್ಧವಾದದ್ದಾಗಿಯೂ ಇರುತಿದೆ. ಪ್ರಾಯೇಣ ಈ ಪಾಕಶಾಸ್ತ್ರದಲ್ಲಿ ತಿಳಸಲ್ಪಟ್ಟಿರುವ ಪದಾರ್ಥ ಸಂಯೋಜನ ಪಕ್ವಕ್ರಮಗಳು ದೇಶದ ಮನೋವಸ್ಥಾಯಿಗಳಿಗೆ ಅನುಗುಣವಾಗಿ ಭಿನ್ನಗಳಾಗಿರುವದರಿಂದ ಹೀಗೇಯೆಂದು ನಿರ್ಧರಿಸಿ ತಿಳಸಲಿಕ್ಕೆ ಆಗುವದಿಲ್ಲವು. ಆದರೆ ಸಾಮಾನ್ಯವಾದ ಒಂದು ಪರಿಪಾಕ ವಿಧಾನಕ್ರಮವನ್ನು ಅರುಹಿದರೆ ಅದರಮೇಲೆ ಅವರ ಅಭಿರುಚಿಗೆ ತಕ್ಕಂತೆ ಕ್ರಮಪಡಿಸಿಕೊಳ್ಳಬಹುದಷ್ಟೆ. ಈಗ ಒಂದು ಕ್ರಮವನ್ನೇ ನಿರ್ಧರಿಸಿ ಸಾಧ್ಯವಾದಮಟ್ಟಿಗೆ ಯೆಲ್ಲರಿಗೂ ಉಪಯೋಗಿಸುವಂತೆ ಮಾಡಿದ್ದು ಗ್ರಂಥಕರ್ತರ ಪರಿಶ್ರಮವನ್ನು ಸೂಚಿಸುತಿದೆ. ಪದಾರ್ಥಗಳಲ್ಲಿ ಕೆಲವೀಗ ತೀಕ್ಷ್ಣಾಗ್ನಿಯೂ, ಇನ್ನು ಕೆಲವಿಗೆ ಮಂದಾಗ್ನಿಯೂ, ಬೇರೆಕೆಲವಿಗೆ ಅಗ್ನಿಸಾನ್ನಿಧ್ಯವೂ ಅಪೇಕ್ಷಿತವಾಗಿರುವದರಿಂದ ಪಚನಕಾಲದಲ್ಲಿರಬೇಕಾದ ಅಗ್ನಿಪರಿಮಾಣವನ್ನು ತಿಳಸಿದ್ದರೆ ಬಾಲಕರಿಗೆ ಉಪಯುಕ್ತವಾಗಿರುವದು. ಮುಖ್ಯವಾಗಿ ಆಹಾರವು ದೇಹಾಧಾರವಾದದರಿಂದಲೂ, ಅಂತಾ ಆಹಾರಗಳೇ ನಾನಾವಿಧ ರೋಗೋತ್ಪತ್ತಿಗೆ ಕಾರಣಗಳಾಗಿರುವದರಿಂದಲೂ, ಸದರೀ ರೋಗಗಳೇ ಶರೀರ ನಾಶಹೇತುವಾಗುವದರಿಂದಲೂ, ತಾದೃಶಮರಣವು ಐಹಿಕಭೋಗಭಾಗ್ಯಾನುಭವ ವಿರೋಧಕವಾದದ್ದರಿಂದಲೂ, ಲೌಕಿಕ ಸುಖಾಪೇಕ್ಷೆಯುಳ್ಳವರಿಗೆ ಚಿರಜೀವಿತ್ವವೂ, ಅದಕ್ಕೆ ಆರೋಗ ದೃಢಗಾತ್ರತೆಯೂ, ಅದಕ್ಕೆ ನಿರ್ದುಷ್ಟ ಆಹಾರಗಳೂ, ಅದಕ್ಕೆ ತತ್ತದ್ಗುಣ ಪರಿಶೀಲನಾಜ್ಞಾನವೂ, ಅದಕ್ಕೆ ತಚ್ಛಾಸ್ತ್ರಾವಲೋಕನವೂ ಅತ್ಯಾವಶ್ಯಕಗಳಾಗಿರುವದರಿಂದ ಈಗ ವಿಚಾರಾರ್ಹವಾಗಿರುವ ಪಾಕಶಾಸ್ತ್ರಗ್ರಂಥವು ಸಕಲರಿಗೂ ಕೇವಲ ಆವಶ್ಯಕವಾದದ್ದಾಗಿರುತಿದೆ. ಈಗ್ರಂಥದ ವಿಷಯ ವಿಭಾಗಾದಿಕ್ರಮಗಳು ಜಗನ್ಮೋಹಿನೀ ಮುದ್ರಾಕ್ಷರಶಾಲೆಗೆ ವಿಶೇಷ ಪ್ರತಿಷ್ಠೆಯನ್ನುಂಟುಮಾಡತಕ್ಕದ್ದಾಗಿರುತಿದೆ. ಬ್ರಹ್ಮಶ್ರೀ ಜಯಾಚಾರ್ಯರ ಯೋಗ್ಯತೆಯನ್ನೂ ಲೋಕೋಪಕಾರ ದೃಷ್ಟಿಯನ್ನೂ ಅವರಗ್ರಂಥವೇ ನಿರೂಪಿಸುವದರಿಂದ ನಾವು ವಿಶೇಷ ತಿಳಸತಕ್ಕದ್ದೇನಿರುತಿದೆ.

Occasional Notes
ನೈಮಿತ್ತಿಕವಿಷಯನ್ಯಾಸ

Birth of a son and heir.—ಎರಡುವಾರಗಳಹಿಂದೆ ಹೈದರಾಬಾದ್‌ನಿಜಾಮರವರಿಗೆ ಮರಳ ಪುತ್ರೋತ್ಸವವಾಯಿತೆಂದು ಕೇಳಲಿಕ್ಕೆ ಬಹಳ ಸಂತೋಷಿಸುತ್ತೇವೆ

The Duke of Connaught.—ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀಯವರ ಪುತ್ರರಾದ ಡ್ಯೂಕ್ಆಫ್ ಕಾನಾಟಿಯವರು ಬರುವ ಜೂನ್ ತಿಂಗಳ ಆಖೈರ್‌ಭಾಗದಲ್ಲಿ ಇಂಡ್ಯದೇಶಕ್ಕೆ ವಾಪಸ್ ಬಂದು ಕೆಲವುದಿನಗಳು ಮುಂಬೈಯಲ್ಲಿ ಅಲ್ಲಿನ ಗವರ್ನರೊಡನೆ ವಿನೋದವಾಗಿದ್ದು ತರುವಾಯ ತಮ್ಮ ಕೆಲಸವು ಕೈಗೊಳ್ಳುವರೆಂದು ಕಾಣುತಿದೆ

A title conferred.—ಮದರಾಸ್ ಗವರ್ನಮೆಂಟಿನವರು ಮಾಡಿದ ಶಿಫಾರಸ್ಸನ್ನು ಅಂಗೀಕರಿಸಿ, ವೈಸರಾಯ್ ಸಾಹೇಬರವರ್, ವಿಜಯನಗರದ ಮಹಾರಾಜರವರ ದಿವಾನರಾದ ಮೆ|| ಪಿ ಜಗನ್ನಾಥರಾಯರೆಂಬವರಿಗೆ ಅವರ ಜೀವಮಾನದವರಿವಿಗೆ ಅನುಭವಿಸುವಂತೆ ರಾಯಬಹದೂರೆಂಬ ಅಲ್ಕಾಬ ಕೊಟ್ಟಿರುತ್ತಾರೆ

A compromise.—ಮಹಾರಾಜಾ ಸರ್. ಜೋತೀಂದ್ರ ಮೋಹನ್ ಠಾಕೂರ್‌ಯವರಿಗೂ ರಾಜಾ ಸರ್. ಸೂರೇಂದ್ರ ಮೋಹನ್ ಠಾಕೂರ್‌ಯವರಿಗೂ ಕೆಲವುತಿಂಗಳವರೆದು ಕಲ್ಕತ್ತಾ ಹೈಕೋರ್ಟಿನಲ್ಲಿ ನಡೆಯುತಲಿದ್ದ ವ್ಯವಹಾರವು ಬಂಗಾಳೆ ಲೆಫ್ಟಿನೆಂಟ್ ಗವರ್ನರವರ ಮಾಧ್ಯಸ್ಥಿಕೆಯಿಂದ ಸಮಾಧಾನದಲ್ಲಿ ವ್ಯವಸ್ಥೆಯಾಗಿರುತಿದೆ.

Spoils of conquest.—ಬರ್ಮಾದೇಶದ ರಾಜಧಾನಿಯಾದ ಮಾಂಡಲೆ ಪಟ್ಟಣದೊಳಗಿರುವ ಅರಮನೆಯ ಸಾಮಾನುಗಳಷ್ಟಕಿ ಉತ್ತಮವಾದವೆಲ್ಲವು ಸಿಂಲಾ ಎಂಬ ಸ್ಥಳದಲ್ಲಿ ಹರಾಜಾಗಿ ಕಟ್ಟಲ್ಪಟ್ಟಿರುವ ಗವರ್ನಮೆಂಟ್‌ಹೌಸಿಗೂ, ಅಲ್ಲಿನ ಜವಾಹಿರ್‌ಗಳೆಲ್ಲವೂ ಹರಾಜ್‌ಬಗ್ಯೆ ಲಂಡನ್ ಪಟ್ಟಣಕ್ಕೂ ಸಾಗಿಸಲ್ಪಡುವವೆಂದು ತಿಳಿಯಬರುತಿವೆ. ಬರ್ಮಾದೇಶದ ಐಶ್ವರ್ಯದಮೇಲಿನ ದೃಷ್ಟಿಯೊಂದೇ ನಿರಪರಾಧಿಯಾದ ಅಲ್ಲಿನ ಅರಸರನ್ನು ನಿಷ್ಕಾರಣವಾಗಿ ಹಿಡಿದು ತಂದು ಬಂದೀಖಾನೆಯಲ್ಲಿಟ್ಟಿರತಕ್ಕವರಿಗೆ ಇದಕ್ಕಿಂತಲೂ ಉಚಿತವಾದ ಮಾರ್ಗ ತೋರುವದೆ!

Increase of Scindiah's army.—ಗ್ವಾಲಿಯರ್ ಕೋಟೆಯು ಸಿಂಧಿಯಾ ಮಹಾರಾಜರವರಿಗೆ ವಾಪಸ್ ಕೊಡಲ್ಪಟ್ಟಮೇಲೆ, ಸದರೀ ಮಹಾರಾಜರವರು, ತಮ್ಮ ಸೇನೆಗೆ ಜೀರೆ ಮೂರುಸಾವಿರ ಮಂದಿಯನ್ನು ಸೇರಿಸಿ ಬತಾಯಿಸುವದಕ್ಕೆ ಹುಕುಂ ಆಗಬೇಕೆಂದು ಕೇಳಿಕೊಳ್ಳಲು ಆದರಂತೆ ಇಂಡ್ಯ ಗವರ್ನಮೆಂಟಿನವರು ಮಂಜೂರ್ ಮಾಡಿದರು. ಸದರೀ ಸೇನೆಗೆ ೩,೦೦೦ ರೈಫಿಲ್ ಬಂದೂಕಿಗಳು ಬೇಕೆಂದು ಮಹಾರಾಜರವರು ಅಪೇಕ್ಷಿಸಿದ ಅಂಶ ಇಂಡ್ಯ ಗವರ್ನಮೆಂಟಿನವರ ಪರ್ಯಾಲೋಚನೆಯಲ್ಲಿರುತಿದೆ

Liberality of a princess.—ಭೋಪಾಲ್ ದೇಶದ ಬೇಗಂಯವರು ಈಚೆಗೆ ಕಲ್ಕತ್ತೆಗೆ ಹೋಗಿದ್ದು ಅಲ್ಲಿಂದವಾಪಸ್‌ಬರತಕ್ಕವದಕ್ಕೆ ಮುಂಚಿತವಾಗಿಅಲ್ಲಿನ ಡಿಸ್ಟ್ರಿಕ್ಟ್ ದರ್ಮಸಂಘದವರವಶಕ್ಕೆ ೧೫೦೦ ರೂಪಾಯಿಗಳು ಕೊಟ್ಟದ್ದಲ್ಲದೆ ವೈದ್ಯಶಾಸ್ತ್ರವನ್ನು ಅಥವಾ ಕಾನೂನನ್ನು ಓದಿ ಬರತಕ್ಕಬಗ್ಯೆ ಒಬ್ಬ ಮುಸಲ್ಮಾನ್ ವಿದ್ಯಾರ್ಥಿಯನ್ನು ಇಂಗ್ಲಾಂಡಿಗೆ ಕಳುಹಿಸುವದಕ್ಕಾಗಿ ವಿದ್ಯಾಭ್ಯಾಸದ ಇಲಾಖೆ ಡೈರೆಕ್ಟರವರ ವಶಕ್ಕೆ ೩,೦೦೦ ರೂಪಾಯಿಗಳು ಕೊಟ್ಟರೆಂದು ತಿಳಯಬರುತಿದೆ. ಉಪಪನ್ನರಾದವರು, ಮುಖ್ಯವಾಗಿ ಸಂಸ್ಥಾನಾದಿಪತಿಗಳು ಜಾತಿ ಮತ ತಾರತಮ್ಯವಿಲ್ಲದೆ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹವನ್ನುಂಟುಮಾಡುವದು ಅವರ ಕರ್ತವ್ಯದಲ್ಲಿ ಕೇವಲ ಮುಖ್ಯವಾದದ್ದಾಗಿರುತಿದೆ.

A laudable arrangement.—ಕಲ್ಕತ್ತೆಯೊಳು ಸ್ಥಾಪಿಸಲ್ಪಟ್ಟಿರುವ ವೈದ್ಯಶಾಸ್ತ್ರದಶಾಲೆಯೊಳು ಶಾಸ್ತ್ರಾಭ್ಯಾಸ ಮಾಡಲಪೇಕ್ಷೆಯುಳ್ಳ ವಿದ್ಯಾರ್ಥಿನೀಯರು ವಿದ್ಯಾರ್ಥಿಗಳೊಡನೆ ಕಲೆತು ಯೂನಿವರ್ಸಿಟಿ ಮೆಟ್ರಿಕ್ ಪರೀಕ್ಷೆಗೆ ಹೋಗುವವಿಷಯದಲ್ಲಿ ವ್ಯಕ್ತಪಡಿಸಿದ ಅಸಮಾಧಾನವಂ ಪರ್ಯಾಲೋಚಿಸಿ ಸದರೀ ಮೆಟ್ರಿಕ್ ಪರೀಕ್ಷೆಗೆ ಸಮಾನವಾದ ಬೇರೆಯೊಂದು ಪರೀಕ್ಷೆಯನ್ನು ಸದರೀ ವಿದ್ಯಾರ್ಥಿನೀಯರಿಗಾಗಿ ಏರ್ಪಡಿಸತಕ್ಕದ್ದೆಂದು ಬಂಗಾಳೇ ಗವರ್ನಮೆಂಟಿನವರು ನಿರ್ಣಯಿಸಿರುವಂತೆ ತಿಳಯಬರು

ತಿವೆ ಇದು ಬಹಳವಿವೇಕಪೂರ್ವಕವಾದ ಮತ್ತು ಇತರ ಪ್ರಾಂತಾಧಿಕಾರಿಗಳು ಅನುಕರಿಸತಕ್ಕ ಏರ್ಪಾಡಾಗಿರುತ್ತದೆ

Royal presents.—ಉತ್ತರ ಆರ್ಕಾಡು ಡಿಸ್ಟ್ರಿಕ್ಟಿಗೆ ಸೇರಿದ ಚಂದ್ರಗಿರಿ ತಾಲ್ಲೂಕು ದೊಡ್ಡ ತಿರುಪತಿ ಶ್ರೀ ವೆಂಕಟರಮಣದೇವರಿಗೆ ಈ ಸರ್ಕಾರದಿಂದ ಸಾಲೀಯಾನಾ ೫೦೦ ವರಹಾ ತಸದೀಕ್ ನಡೆಯುವದರಿಂದ ಅಲ್ಲಿನ ಒಂದು ಛತ್ರವೂ ದೇವಸ್ಥಾನದಲ್ಲಿ ಅನೇಕ ಸೇವೆಗಳೂ, ನಡೆಯುತಲಿರುವದು ಪ್ರಸಿದ್ಧವೇ ಇಯಷ್ಟೆ. ಶ್ರೀಮನ್ಮಹಾರಾಜರವರು ಈಚೆಗೆ ಸದರೀ ದೇವಸ್ಥಾನಕ್ಕೆ ಎರಡು ಆನೆಗಳನ್ನು ಅವುಗಳ ಅಂಬಾರಿ ಸಹಿತ ದೇವರ ಸೇವಾರ್ಥ ದಯಪಾಲಿಸಿದರೆಂತಲೂ, ಅಲ್ಲಿನ ಹಿಂದೂ ಮಹಾರಾಜರು ಅಲ್ಲಿಗೆ ಹೋಗುವ ಮಹನೀಯರಿಗೆ ಅವರ ಪೂರ್ವದ ತಲಬನ್ನಾಗಲೇ ಹೆಚ್ಚಿಸಿ ೩೫ ರೂಪಾಯಿಗಳ ತನಕ ಬಡ್ತಿ ಮಾಡಿದರೆಂತಲೂ ತಿಳಿಯಬರುತ್ತದೆ. ಬ್ರಿಟಿಷ್ ತಿಜೋರಿಯಲ್ಲಿ ಸಾಬಕ ಮಹಾರಾಜಾ ಸರ್ಕಾರದವರಿಂದ ಕೊಡಲ್ಪಟ್ಟ ಎರಡು ಲಕ್ಷ ರೂಪಾಯಿಗಳ ಆಭರಣಗಳು ರಖದ್ದು ಆಗಬೇಕೆಂದು ಹುಕುಂ ಆಗಿತ್ತು. ಇದುವರೆಗೆ ಸದರೀ ಪ್ರಕಾರ ರಖದ್ದಿಯಾಗದಿರಲಿಕ್ಕೆ ಕಾರಣವೇನೋ ಅದು ಗೊತ್ತಿಲ್ಲವು ಈಗ ಮಹಾರಾಜಾ ಸರ್ಕಾರದವರು ತಮ್ಮ ಪ್ರಾಕ್ತನರಿಂದ ಕೊಡಲ್ಪಟ್ಟ ಆಭರಣಾದಿಗಳನ್ನು ರಖದ್ದಿ ಮಾಡಿ ಅವುಗಳ ಮೇಲೆ ತಮ್ಮ ವಿಲಾಸವನ್ನು ಹಾಕತಕ್ಕದ್ದು ಯೋಗ್ಯವಾಗಿಯೂ, ಗೌರವವಾಗಿಯೂ ಇರುತ್ತದೆ.

LOCAL AND PROVINCIAL NEWS
ಒಳದೇಶ ಮತ್ತು ತಾಲ್ಲೂಕ ಜಾತಿ ವೃತ್ತಾಂತಗಳು

The Dewan.—ಈ ಸಂಸ್ಥಾನದ ದಿವಾನರಾದ ಮ|| ಶೇಷಾದ್ರಿ ಅಯ್ಯರವರು ನಾಳೆಯದಿನ ಸಾಯಂಕಾಲ ಮೈಲ್ ಟ್ರೈನಿನಲ್ಲಿ ಉದಕಮಂಡಲಕ್ಕೆ ಹೋಗುವರೆಂದು ತಿಳಿಯಬರುತ್ತದೆ.

An increase of pay.—ಈ ಸಂಸ್ಥಾನದ ಅಂಚೆ ಬಕ್ಷಿ ಮರಿಗುಂಡ್ಯಯ್ಯನವರಿಗೆ ಈ ಮಾಹೆ ಪಜಕೂರ್ ಗುರ್ರೇ ತಾರೀಖು ಮೊದಲು ೫೦ ರೂ ೩೦ ರೂಪಾಯಿಗಳಿಗೆ ತಲಬ್ ಏಸ್ತೀಯಾಯಿತೆಂದು ಕೇಳುವದಕ್ಕೆ ಸಂತೋಷಪಡುತ್ತೇವೆ.

Assistant to the British Resident.—ಇಲ್ಲಿನ ಅಸಿಸ್ಟೆಂಟ್ ಬ್ರಿಟಿಷ್ ರೆಸಿಡೆಂಟರಾದ ಮೇಜರ್ ನ್ಯೂಯಿಲ್ ಯವರಿಗೆ ಬದಲು ಮೊಕರರಾದ ಮೇಜರ್ ಫ್ರೇಜರ್ ಯೆಂಬವರು ಗತ ಮಂಗಳವಾರದದಿನ ದಪ್ರೂವಾಹ್ನದಲ್ಲಿ ಅಸಿಸ್ಟೆಂಟ್ ರೆಸಿಡೆಂಟ್ ಕೆಲಸದ ಚಾರ್ಜನ್ನು ಮೇಜರ್ ಮೂಲ್ಟಬೀಯವರಿಂದ ವಹಿಸಿದರು.

Mr. Singaracharlu.—ಇಲ್ಲಿನ ಪಬ್ಲಿಕ್ ಪ್ರಾಸಿಕ್ಯೂಟರಾದ ಮ|| ಶಿಂಗರಾಚಾರ್ಯರವರಿಗೆ ಈಗ ಖಾಲೀಯಾಗಿರುವ ನಂಜನಗೂಡು ಮುನ್ಸಫ್ ಕೆಲಸ ಕೊಡಲ್ಪಡುವದೆಂದು ತಿಳಿಯಬರುವದರಿಂದ ಪ್ರಾಯಶಃ ಇದು ನಿಜವಾಗಿರಬಹುದೆಂದು ತೋರುತ್ತದೆ. ಈ ಸಂದರ್ಭದಲ್ಲಿ ಖಾಲೀಯಾಗತಕ್ಕ ಪಬ್ಲಿಕ್ ಪ್ರಾಸಿಕ್ಯೂಟರ್ ಕೆಲಸಕ್ಕೆ ಲಾಯಖಾದ ಸ್ವದೇಶೀಯರ ಹಕ್ಕುದಾರಿಗಳು, ಹಿಂದೆ ಪುರಸ್ಕರಿಸಲ್ಪಡದೆ ಹೋದಾಗ್ಯೂ ಈಗಲಾದರೂ ಪುರಸ್ಕರಿಸಲ್ಪಟ್ಟು ತಕ್ಕ ಪ್ರೋತ್ಸಾಹ ಉಂಟುಮಾಡಲ್ಪಡುವದೆಂದು ನಂಬುತ್ತೇವೆ.

Change in the Maharaja's Council.—ಶ್ರೀಮನ್ಮಹಾರಾಜರವರ ಕೌನ್ಸಿಲ್ ಮೆಂಬರುಗಳ ಬದಲಾವಣೆಯು ಕ್ಷಿಪ್ರದಲ್ಲಿ ನಡೆಯುವದಾಗಿದೆಯೆಂತಲೂ, ಅದು ಇದುವರೆವಿಗೆ ನಡೆಯದಿರಲಿಕ್ಕೆ ಭರ್ತಿಯ ಬಗ್ಗೆ ಲಾಯಖಾದವರು ದೊರೆಯದೆ ಇದ್ದದ್ದೇ ಕಾರಣವೆಂತಲೂ ಕೇಳುತ್ತೇವೆ. ಈಗಿನ ಏರ್ಪಾಡಿನಲ್ಲಿ ಇಲ್ಲಿನ ಟೌನ್ ಮ್ಯುನಿಸಿಪಲ್ ಪ್ರೆಸಿಡೆಂಟರಾದ ಮ|| ಶ್ರೀನಿವಾಸಾಚಾರ್ಯರವರಿಗೆ ಕೌನ್ಸಿಲರ್ ಕೆಲಸ ಕೊಡಲ್ಪಡುವದೆಂಬ ಪ್ರವಾದ ಉಂಟಾಗಿದೆ

Holiday.—ಈ ಮಾಹೇ ಪಜಕೂರ್ ೨೨ನೇ ತಾರೀಖ್ ಗುರುವಾರದ ಮೊದಲು ೨೮ನೇ ತಾರೀಖ್ ಬುಧವಾರದ ತನಕ ಉಭಯದಿನಗಳೂ ಸೇರಿ ಈ ಸಂಸ್ಥಾನಕ್ಕೆ ಸಂಬಂಧಪಟ್ಟ ಮತ್ತು ಸಿವಿಲ್ ವ ಮಿಲಿಟರಿ ಸ್ಟೇಷನಿಗೆ ಸೇರಿದ ವಿಶಿಷ್ಟ ಇಲಾಖೆಗಳಿಗೂ ಕೋರ್ಟುಗಳಿಗೆ ಸಹ ಈಸ್ಟರ್ ಹಬ್ಬದ ಬಗ್ಗೆ ರಜಾ ಕೊಡಲ್ಪಟ್ಟಿರುತ್ತದೆ. ಅದು ಮೊದಲುಗೊಂಡು ಇಲ್ಲಿನ ಚೀಫ್ ಕೋರ್ಟು ಮತ್ತು ಸಿವಿಲ್ ಕೋರ್ಟುಗಳು ಬಿಸಲು ಕಾಲ ಪ್ರಯುಕ್ತ ಜೂನ್ ತಿಂಗಳ ೭ನೇ ತಾರೀಖ್ ವರಿವಿಗೆ ಮುಚ್ಚಲ್ಪಡುವದು.

The weather.—ಬಿಸಲಿನ ಝಳವು ದಿನೇ ದಿನೆ ಒಂದೊಂದು ಡಿಗ್ರಿಯಾಗಿ ಹೆಚ್ಚುತಲಿರುವಂತೆ ಉಷ್ಣಪರಿಮಾಣಕ ಯಂತ್ರದ ಮೂಲಕ ತಿಳಿಯಲಾದೆವು ಬೆಳಗ್ಗೆ ೭ ಘಂಟೆಯ ಮೊದಲು ಸಾಯಂಕಾಲ ೬ ಘಂಟೆಯ ತನಕ ಬಿಸಿಲು ತೀಕ್ಷ್ಣವಾಗಿ ದುಸ್ಸಹವಾಗಿರುತ್ತದೆ. ಜಲಮುರ್ಭಿಕ್ಷವೂ ದಾರಿಕೆವಾಸಿಯೂ ಹೆಚ್ಚುತಲಿವೆ. ಬಾಜಾರಿನಲ್ಲಿ ಧಾನ್ಯ ಸಮೃದ್ಧಿಯು ಸಾಲದು. ಅಲ್ಲಿ ಅಲ್ಲಿ ರೋಗ ಗಾವ್ಯನದ್ರವಗಳು ತಲೆದೋರಿವೆ. ಮೊನ್ನೆ ಮಂಗಳವಾರ ಸಾಯಂಕಾಲದ ವೇಳೆಯಲ್ಲಿ ಮೋಡವಾಗುತ ಮಳೆ ಬರುವಂತೆ ತೋರಬರುತಲಿತ್ತು ಪರಂತು ಒಂದು ಹನಿ ಸಹ ಬೀಳದೆ ಆಡಂಬರದೊಡನೆ ಪರಿಸಮಾಪ್ತವಾಯಿತು.

Registration Department, C. and M. Station.—ಈ ರಾಜ್ಯವು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಲ್ಪಡಲಿಕ್ಕೆ ಪೂರ್ವ ರಿಜಿಸ್ಟ್ರೇಷನ್ ಇಲಾಖೆಯು ಈ ದೇಶಕ್ಕೆಲ್ಲ ಒಂದೇಯಾಗಿ ಒಬ್ಬ ಅಧಿಕಾರಿಯ ವಿಚಾರಣೆಯೊಳಗಿರುತಲಿತ್ತು. ರಾಜ್ಯ ಒಪ್ಪಿಸಲ್ಪಟ್ಟ ಬಳಿಕ ಸಿವಿಲ್ ವ ಮಿಲಿಟರಿ ಸ್ಟೇಷನ್ ಸರಹಾಂತದಲ್ಲಿಯೂ ಪ್ರತ್ಯೇಕ ಬಗಳ ತಪ್ಪುತ್ತದ್ದಾಗಿ ಏರ್ಪಟ್ಟದರಿಂದ ಅದರಂತೆ ರಿಜಿಸ್ಟ್ರೇಷನ್ ಇಲಾಖೆ ಸಹ ಬೇರೆಯಾಯಿತು. ಪರಂತು ಅಲ್ಲಿನ ಇನ್ಸ್‌ಪೆಕ್ಟರ್ ಜನರಲ್ಲವರ ಕೆಲಸವನ್ನು ಸಹ ಮೈಸೂರು ಶೀಮೆಯ ಇನ್ಸ್‌ಪೆಕ್ಟರ್ ಜನರಲ್ಲವರೇ ನಿರ್ವಹಿಸುತಲಿದ್ದರು. ಈ ಏರ್ಪಾಡು ಕಳೆದ ತಿಂಗಳ ಆಖೈರಿ ತನಕ, ಅಂದರೆ, ಮ|| ಹೆತಸೆಯವರು ಕೆಲಸದಿಂದ ನಿವೃತ್ತರಾಗುವ ತನಕ ನಿರುಪಾಧಿಕವಾಗಿ ಸಲುಗೊಂಡಿತ್ತು. ಈಚೆಗೆ ಇನ್ಸ್‌ಪೆಕ್ಟರ್ ಜನರಲ್‌ಯವರು ಅನ್ಯರೊಬ್ಬರು ಮೊಕರರಾದದರಿಂದ ಸಿವಿಲ್ ವ ಮಿಲಿಟರಿ ಸ್ಟೇಷನಿನ ಸಂಬಂಧವನ್ನು ತಪ್ಪಿಸಿ ಇದು ಮೊದಲು ಇನ್ಸ್‌ಪೆಕ್ಟರ್ ಜನರಲ್ ಕೆಲಸವನ್ನು ಮುಂದೆ ಅಸಿಸ್ಟೆಂಟ್ ರೆಸಿಡೆಂಟರೇ ನೋಡುವಂತೆ ರೆಸಿಡೆಂಟರವರು ಹುಕುಂ ಮಾಡಿರುತ್ತಾರೆ,

ಇದೇ ರೀತಿ ವಿದ್ಯಾಭ್ಯಾಸದ ಇಲಾಖಾ ವಿಚಾರಣಾಧಿಕಾರ ಸಹ ಅಲ್ಲಿನವರಿಂದಲೇ ಮುಂದೆ ನಿರ್ವಹಿಸಿಕೊಳ್ಳಲ್ಪಡುವದೆಂದು ಕೇಳುತ್ತೇವೆ.

The Rasika Manasollasini Nataka Sabha.—ಈಗ್ಯೆ ಐದಾರು ತಿಂಗಳ ಹಿಂದೆ ಈ ಪ್ರಾರಿಂದ ಬಳ್ಳಾರಿ ಪ್ರಾಂತಕ್ಕೆ ಹೋದ ಇಲ್ಲಿನ ರಸಿಕಮಾನಸೋಲ್ಲಾಸಿನೀ ನಾಟಕ ಸಭೆಯವರು ಸ್ವಸಾಮರ್ಥ್ಯದಿಂದ ಬಳ್ಳಾರಿಯವರನ್ನು ಸಂತೋಷಗೊಳಿಸಿ ಅವರ ಮೂಲಕ ವಿಶೇಷ ಪ್ರಯೋಜನವು ಪಡೆದು ಅಲ್ಲಿಂದ ಈಗ ಮದರಾಸಿಗೆ ಬಂದಿದಾರೆಂತಲೂ, ಅಲ್ಲಿ ಅವರ ನಾಟಕಗಳನ್ನು ಜನಗಳು ಬಹಳವಾಗಿ ಮೆಚ್ಚಿದಾರೆಂತಲೂ, ಪ್ರತಿರಾತ್ರಿಯಲ್ಲಿಯೂ ಐನೂರು ಆರುನೂರು ರೂಪಾಯಿಗಳಿಗೆ ಕಡಮೆ ಇಲ್ಲದಂತೆ ವಸೂಲಾಗುತಲಿದೆಯೆಂತಲೂ, ವಿಜಯನಗರದ ಮಹಾರಾಜರವರು ಒಂದು ರಾತ್ರಿ ದಯಮಾಡಿ ೧೫೦ ರೂಪಾಯಿಗಳ ತನಕ ಇನಾಂ ಕೊಟ್ಟರೆಂತಲೂ ತಿಳಿಯಬರುತ್ತದೆ. ಇದಲ್ಲದೆ ಕಂಪೆನಿಯವರಪೈಕಿ ಮುಖ್ಯರಾದ ಕೆಲವರಿಗೆ ಬಂಗಾರದ ತೋಡಾಗಳು ಹಾಕಲ್ಪಟ್ಟವು. ಇನ್ನು ಕೆಲವರು ಅವರವರ ಯೋಗ್ಯತಾನುಸಾರ ಸನ್ಮಾನಿಸಲ್ಪಟ್ಟರು. ಈಗ ಸದರೀ ನಾಟಕ ಕಂಪೆನಿಯವರು ಮದರಾಸ್ ಪ್ರೆಸಿಡೆನ್ಸಿಯಲ್ಲಿ ಪಡೆದ ಪ್ರಾಶಸ್ತ್ಯವೂ ಹೊಂದಿದ ಪ್ರಯೋಜನವೂ ಬಲವತ್ತರವಾಗಿರುತ್ತದೆ. ಆದಾಗ್ಯೂ ಆಯತಿಯು ವೃದ್ಧಿಯಾದಂತೆಲ್ಲ ಖರ್ಚು ಪತ್ರವೂ ಅಧಿಕವಾಗುವದು ಸಹಜವಾಗಿರುತ್ತದೆ, ಅನೇಕ ಸಹಸ್ರ ರೂಪಾಯಿಗಳ ಆಯವು ಮೂಲಕ ದನದೇವತೆಯು ಕಂಪೆನಿಯವರ ಮಾನಸೋಲ್ಲಾಸಿನಿಯಾಗಿದ್ದರೂ ಆಕೆಯ ಜ್ಯೇಷ್ಠಸೋದರಿಯ ಪ್ರಾಬಲ್ಯದಿಂದ ಅವರ ಜೀವನವು ನಿರುಪಾಧಿಕವಾಗಿಲ್ಲವೆಂತಲೂ, ಮೆಂಬರ್‌ಗಳ ಪರಿಶ್ರಮಕ್ಕೆ ದೇಶಾವಲೋಕನವೇ ಪ್ರತಿಫಲವೆಂತಲೂ ಪತ್ರಿಕೆ ನಮಗೆ ಈಚೆಗೆ ಅಲ್ಲಿಂದ ಬಂದ ಕಾಗದದ ಮೂಲಕ ಏರ್ಪಡುತ್ತದೆ. ಅರ್ಥವಿಷಯಕವಾದ ಪ್ರಾಮಾಣಿಕತೆಗೆ ಕಂಪೆನಿಯವರೇ ಜವಾಬ್ದಾರರು. ನಾಟಕ ಪ್ರಯುಕ್ತವಾದ ಕೀರ್ತಿಪ್ರತಿಷ್ಠೆಗಳಿಗೆ ಸಮುದಾಯಕವಾಗಿ ಇಲ್ಲಿನ ಜನಗಳೇ ವಿಷಯರಾಗಿರುವದರಿಂದ ಈ ದೇಶದ ನಾಟಕ ಕಂಪೆನಿಯವರು ಅನ್ಯದೇಶೀಯರಿಂದ ಗೌರವಿಸಲ್ಪಡುವದು ನಮ್ಮ ಭಾಗ್ಯ ವಿಶೇಷವೆಂತಲೇ ಹೇಳುವೆವು.

THE REVISED SCALE FOR DEPUTY COMMISSIONERS OF MYSORE

ಈಗ ಮೈಸೂರು ಶೀಮೆಯಲ್ಲಿರತಕ್ಕ ಡೆಪ್ಯುಟಿ ಕಮಿಷನರ್‌ಗಳ ಮತ್ತು ಅಸಿಸ್ಟೆಂಟ್ ಕಮಿಷನರ್‌ಗಳ ತಲಬುಗಳ ವಿಷಯದೊಳು ಈಚೆಗೆ ಜೆಜ್ಞಾಸೆಯುಂಟಾಗಲು ಅದರ ಮೇಲೆ ದಿವಾನರವರು, ಈ ಮಾಹೇ ಪಜಕೂರು ೯ನೇ ತಾರೀಖಿನಲ್ಲಿ ಹುಕುಂ ಮಾಡಿರುತ್ತಾರೇನೆಂದರೆ —

ಈ ರಾಜ್ಯವು ಮಹಾರಾಜರವರಿಗೆ ಒಪ್ಪಿಸಲ್ಪಡಲಿಕ್ಕೆ ಪೂರ್ವದಲ್ಲಿ ಇಂಡ್ಯ ಗವರ್ನ್‌ಮೆಂಟಿನವರಿಂದ ಮಂಜೂರ್ ಮಾಡಲ್ಪಟ್ಟ ಇಲ್ಲಿನ ಡೆಪ್ಯುಟಿ ಕಮಿಷನರ್‌ಗಳ ಪಟ್ಟಿಯೇನೆಂದರೆ —

೧ ಕ್ಲಾಸಿನ ಗೆ ೮೦೦ ರೂ ಗಳಿಂದ ೧,೨೦೦ ರ ವರೆಗೆ ಸಾಗಿಸುತ್ತಿ [illegible]
೧ ಒಂದನೆ ಕ್ಲಾಸ್ ೧,೨೦೦ ರೂ
೨ ಎರಡನೆ ಕ್ಲಾಸ್ ೧,೦೦೦ ರೂ
೩ ಮೂರನೆ ಕ್ಲಾಸ್ ೮೦೦ ರೂ ಗಳಿಂದ ೧,೦೦೦ ರ ವರೆಗೆ
೪ ನಾಲ್ಕನೆ ಕ್ಲಾಸ್ [illegible] ೮೦೦ ರೂ

೨. ಮೇಲ್ಕಂಡ ಪಟ್ಟಿಯು, ೧೮೮೨ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ಎರಡು ಡಿಸ್ಟ್ರಿಕ್ಟುಗಳು ಮೊಕೂಫಾದದರಿಂದ ಅವಶ್ಯಕವೆಂದು ಕಂಡುಬಂದ ಕೆಲವು ಬದಲಾವಣೆಗಳೊಡನೆ ಇದುವರೆವಿಗೂ ಜಾರೀಯಲ್ಲಿತ್ತು. ಸದರೀ ಡಿಸ್ಟ್ರಿಕ್ಟುಗಳು ಮರಳಿ ಏರ್ಪಡಿಸಲ್ಪಟ್ಟದರಿಂದ ಸದರೀ ಪಟ್ಟಿಯು ಸಮಗ್ರವಾಗಿ ೧೮೮೬ನೇ ಇಸವಿ ಏಪ್ರಿಲ್ ಗುರ್ರೇ ತಾರೀಖ್ ಮೊದಲು ಜಾರೀಯಲ್ಲಿ ಬರುವದು.

೩. ಮಹಾರಾಜಾ ಸರ್ಕಾರದವರು, ಕೋಲಾರು ಡಿಸ್ಟ್ರಿಕ್ಟು ಇನ್‌ಚಾರ್ಜಿನೊಳಿರುವ ಸ್ಪೆಷಲ್ ಡೆಪ್ಯುಟಿ ಕಮಿಷನರ್ ಮ|| ಮೈಕಲ್‌ಜಾನ್‌ಯವರು, ೧೮೮೩ನೇ ಇಸವಿ ಏಪ್ರಿಲ್ ಗುರ್ರೇ ತಾರೀಖ್ ಲಗಾಯತು ಅವರ ಉದ್ಯೋಗಕ್ಕೆ ಕ್ಲುಪ್ತವಾಗಿರುವ ಪ್ರಕಾರ, ಅಂದರೆ ೧,೨೦೦ ರೂಪಾಯಿಗಳ ತಲಬ್ ಪಡೆಯತಕ್ಕದ್ದೆಂದು ಆಜ್ಞಾಪಿಸಿರುತ್ತಾರೆ.

೪. ೧೮೮೧ನೇ ಇಸವಿ ಮೇ ೧೮ನೇ ತಾರೀಖಿನಲ್ಲಿ ಬೆಂಗಳೂರು ಡಿ|| ಡೆ|| ಕ|| ಕೆಪ್ಟನ್ ಮ್ಯಾಕಿಂಟೈರ್ ಯವರೊಡನೆ ನಡೆದ ಏರ್ಪಾಡನ್ನನುಸರಿಸಿ ಅವರ ತಲಬ್ ೧,೨೦೦ ರೂಪಾಯಿಗಳೆಂದು ಗೊತ್ತು ಮಾಡಲ್ಪಟ್ಟಿರುತ್ತದೆ.

೫ ೧೮೮೬ನೇ ಇಸವಿ ಏಪ್ರಿಲ್ ಗುರ್ರೇ ತಾರೀಖ್ ಮೊದಲು, ನಾಲ್ಕನೇ ಗ್ರೇಡ್ ಡೆಪ್ಯುಟಿ ಕಮಿಷನರ್ ಮ|| ಸಿ. ಸುಬ್ಬರಾಯರವರು ಮೂರನೇ ಗ್ರೇಡ್‌ಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

೬. ಈಗ ೩ನೇ ಗ್ರೇಡ ಡೆಪ್ಯುಟಿ ಕಮಿಷನರ್ ಕೆಲಸ ಒಂದು ಖಾಲಿಯಾಗಿರುವದರಿಂದ ಅದು ಸದ್ಯಃ ಬಡ್ತಿ ಮಾಡಲ್ಪಡಲಾರದು. ಏತನ್ಮಧ್ಯೆ ನಾಲ್ಕನೇ ತರಗತಿಯಲ್ಲಿ ಇಬ್ಬರಿಗೆ ಬದಲು ಮೂರು ಮಂದಿ ಇರುವರು.

೭. ಡೆಪ್ಯುಟಿ ಕಮಿಷನರ್‌ಗಳ ತರಗತಿವಾರ್ ಪಟ್ಟಿ ಹ್ಯಾಗಂದರೆ.

೧,೫೦೦ ರೂ|| ತಲಬಿನಲ್ಲಿ ಒಬ್ಬ ಸ್ಪೆಷಲ್ ಡೆಪ್ಯುಟಿ ಕಮಿಷನರ್—ಮ|| ಮೈಕಲ್‌ಜಾನ್‌ಯವರು.

೧,೨೦೦ ರೂ|| ತಲಬಿನಲ್ಲಿ ಒಬ್ಬ ೧ನೇ ಕ್ಲಾಸ್ ಡೆಪ್ಯುಟಿ ಕಮಿಷನರ್—ಮೇಜರ್ ಮ್ಯಾಕಿಂಟೈರ್‌ಯವರು.

೧,೦೦೦ ರೂ|| ತಲಬಿನಲ್ಲಿ ಒಬ್ಬ ೨ನೇ ಕ್ಲಾಸ್ ಡೆ|| ಕಮಿಷನರ್—ಮ|| ಅಬ್ದುಲ್ ಖಾದರ್‌ಖಾನ್ ಬಹದೂರ್.

೮೦೦ ರೂಪಾಯಿಗಳಲ್ಲಿ ಮೂವರು ಡೆಪ್ಯುಟಿ ಕಮಿಷನರ್‌ಗಳು—
ಮ|| ಪಿ. ಎನ್. ಕೃಷ್ಣಮೂರ್ತಿಗಳು.
ಮ|| ಸಿ. ಸುಬ್ಬರಾಯರವರು.
ಮೂರನೇದು ಖಾಲಿ.

೬೦೦ ರೂಪಾಯಿಗಳಲ್ಲಿ ಇಬ್ಬರು ಡೆಪ್ಯುಟಿ ಕಮಿಷನರ್‌ಗಳು—
ಮ|| ಮಾಧವರಾಯರವರು, ಮ|| ಆನಂದರಾಯರವರು, ಖಾನ್‌ಬಹದೂರ್ ಮ|| ಮಹಮ್ಮದಲ್ಲಿಯವರು—ನಾಲ್ಕನೇ ತರಗತಿಯಲ್ಲಿ ಸ್ಪೂಪರ್‌ನ್ಯೂಮರರಿ.

V. ಡೆಪ್ಯುಟಿ ಕಮಿಷನರ್‌ಗಳ ಮತ್ತು ಅಸಿಸ್ಟೆಂಟ್ ಕಮಿಷನರ್‌ಗಳ ಒಟ್ಟು ಖರ್ಚು ಇದರಂತೆ ಕಂಟ್ರೋಲರ್‌ಯವರು ದಾಖಲ್ಮಾಡಬೇಕೆಂದು ಕೋರುವೆವು.

ನಾಲ್ಕರಲ್ಲೊಂದು ಭಾಗ ಪೋಲೀಸಿಗೆ.
ಮೂರರಲ್ಲೊಂದು ಭಾಗ ರೆವಿನ್ಯೂಗೆ.
ಡಿಟೋ ಉ ಮತ್ತು ಜಸ್ಟಿಸ್

ಮೈಸೂರು ಶೀಮೆಯ ಅಸಿಸ್ಟೆಂಟ್ ಕಮಿಷನರ್‌ಗಳ ಪುನರ್ನಿರ್ಮಿತವಾದ ಪಟ್ಟಿ.

ಹೆಡ್‌ಕ್ವಾರ್ಟರ್‌ನಲ್ಲಿ—ಪ್ಯಾಲೇಸ್ಸಿಗೆ ಒಬ್ಬರು, ದಿವಾನರ ಆಫೀಸಿಗೆ ಒಬ್ಬರು, ಸರಹದ್ದು ಪ್ಯಾಂಟಿಕ್ಕೆ ಅಥವಾ ಇತರ ಪೋಲೀಸ್ ಕೆಲಸಗಳ ಬಗ್ಗೆ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ಲವರ ತಾಬೆಯಲ್ಲೊಬ್ಬರು

ಪೋಲೀಸಿನಲ್ಲಿ—ಬೆಂಗಳೂರು ಡಿಸ್ಟ್ರಿಕ್ಟ್ ಪೋಲೀಸ್ ಇನ್‌ಚಾರ್ಜಿನಲ್ಲಿ ಬೆಂಗಳೂರು ಪೋಲೀಸ್ ಸೂಪರಿಂಟೆಂಡೆಂಟರವರು ಇರುವದರಿಂದ ಇನ್ನು ಯೇಳುಮಂದಿ.

ಪದರಲ್—(ಶಿವಮೊಗ್ಗಾ ಡಿಸ್ಟ್ರಿಕ್ಟ ದೊಡ್ಡದಾಗಿರುವದರಿಂದಲೂ, ಅಲ್ಲಿ ಪ್ರತ್ಯೇಕ ಒಂದು ಸಬ್ ಡಿವಿಜನ್ ಏರ್ಪಡದಿರುವದರಿಂದಲೂ, ಅಲ್ಲಿಗೆ ಪ್ರತ್ಯೇಕ ಒಬ್ಬ ಅಸಿಸ್ಟೆಂಟನೊಡನೆ ೯ ಮಂದಿ.

ಡಿಸ್ಟ್ರಿಕ್ಟ್ ಖಜಾನೆಗಳು—ಚಿಕ್ಕಮಗಳೂರು ಮತ್ತು ಹಾಸನ ಖಜಾನೆಗಳ ಛಾರ್ಜಗಳು ಆಯಾ ಪ್ರದೇಶದ ಮುನಸಫೆಗಳಿಗೆ ೫೦ ರೂಪಾಯಿಗಳ ಜಾಸ್ತೀ ರುಸುಂ ನಿಶೀ ಕೊಡಲ್ಪಟ್ಟಿರುವದರಿಂದ ಆರುಮಂದಿ.

ಸಬ್‌ಡಿವಿಜನ್ ಛಾರ್ಜನಲ್ಲಿ—ಕ್ಲೋಸ್‌ಪೇಟೆ ಮತ್ತು ಸ್ಟ್ರೆಂಜ್‌ರಾಕ್ಸ್ ಸಬ್‌ಡಿವಿಜನ್‌ಗಳು ಸೇರಿ ಇಬ್ಬರು.

ಮೈಸೂರು ಸಹರಿಗೆ—(ಬೆಂಗಳೂರು ಟೌನ್ ಮಾಜಿಸ್ಟ್ರೇಟರು ಪ್ರತ್ಯೇಕ ಆಫೀಸರಾದ್ದರಿಂದ) ಒಬ್ಬರು, ಒಟ್ಟು ೩೮.

೬೦೦ ರೂ ತಲಬಿನಲ್ಲಿ ಒಂದನೇ ಕ್ಲಾಸಿನವರು ಮೂವರು.
೪೦೦ ರೂ ಡಿಟೋ ಎರಡನೇ ಡಿಟೋ ಆರ್‍ವರು.
೩೦೦ ರೂ ಡಿಟೋ ಮೂರನೇ ಡಿಟೋ ಎಂಟುಜನ
೨೫೦ ರೂ ಡಿಟೋ ನಾಲ್ಕನೇ ಡಿಟೋ ೧೧ ಜನ.

ಮೊದಲನೇ ತರಗತಿಯವರು.
ಮ|| ಸೈಯದ್ ನಸರುದ್ದೀನ್‌ಯವರು.
,, ಚಿದಂಬರಂ ಅಯ್ಯರವರು.
,, ಬಿ. ಕೆ ವೆಂಕಟವರದಯ್ಯಂಗಾರ್ಯವರು

ಎರಡನೇ ತರಗತಿಯವರು.
ಮ|| ಅಬ್ದುಲ್ ರಹಿಮಾನರವರು.
,, ಬಿ. ತಿರುಮಲಾಚಾರ್ಯರವರು.
,, ನಾಮಕಲ್‌ರಾಯರವರು.
,, ಚೆಲುವಯ್ಯಂಗಾರ್ಯವರು.
,, ಮಹಮ್ಮದಲ್ಲಿಯವರು.
ಮತ್ತು ಮ|| ಮಾದಯ್ಯನವರು.

ಮೂರನೇ ತರಗತಿಯವರು
ಮ|| ಕುಪ್ಪುಸಾಮಿ ಮೊದಲಿಯಾರ್ಯವರು.
,, ಪಂಚನದರಾಯರವರು.
,, ಪಾರ್ಡಯವರು.
,, ಬಿ. ಜಿ. ಕೃಷ್ಣಯ್ಯಂಗಾರ್ಯವರು,
,, ರಾಘವೇಂದ್ರರಾಯರವರು.
,, ಅಪ್ಪಾಜಿರಾಯರವರು.
,, ಕೃಷ್ಣರಾಯರವರು.
,, ಬಿ. ಕೃಷ್ಣಯ್ಯಂಗಾರ್ಯವರು.
,, ಶ್ರೀನಿವಾಸಯ್ಯಂಗಾರ್ಯವರು.

ನಾಲ್ಕನೇ ತರಗತಿಯವರು.
ಮ|| ರಘುನಾಥರಾಯರವರು,
,, ನಾಗೇಶರಾಯರವರು.
,, ಕೃಷ್ಣಸ್ವಾಮ್ಯಯ್ಯಂಗಾರ್ಯವರು.
,, ದಳವಾಯಿ ದೇವರಾಜೇ ಅರಸಿನವರು.
,, ಕೇ. ರಾಮಚಂದ್ರರಾಯರವರು.

THE MYSORE GAZETTE
ಮೈಸೂರು ಗೆಜೆಟು

——— ೧ ———

ಶ್ರೀಮನ್ಮಹಾರಾಜ ರಾಜಾರಾಜೇಶ್ವರ ಬಹದೂರವರ ಶಿವಾನಸರವರಿಂದ ಕೊಡಲ್ಪಟ್ಟ ಇಸ್ತಿಹಾರ್‌ನಾಮೆಗಳು

೧೮೮೬ನೇ ಇಸವಿಯ ೧ನೇ ನಂಬರ್ ರೆಗ್ಯುಲೇಷನ್

ಇದರಿಂದ ರೆಗ್ಯುಲೇಷನ್ ಯಾನೆ ನಿಬಂಧನೆಯು ೧೮೮೬ನೇ ಇಸವಿ ಮಾರ್ಚಿ ೧೧ನೇ ತಾರೀಖಿನಲ್ಲಿ ಸ್ಥಾಪನವಸ್ನೆ ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರವರ ಸಂಜಾನಾಧಿಕಾರಿ ಸರಕಾರದವರು ಕಿರುವರಿಕೆಯ ಒಪ್ಪಿ ಇದರ ಫಾಯಿದೆ ಮಾಡಲ್ಪಟ್ಟಿರುತ್ತೆ

೧೮೭೪ನೇ ಇಸವಿಯ XIನೇ ನಂಬರ್ ಆಕ್ಟಿನ ರಿಡಿಯಿಂದ ತಿದ್ದುವಂತಾದ ೧೮೬೨ನೇ ಇಸವಿಯ Xನೇ ನಂಬರ್ ಆಕ್ಟಿಗೆ ಬದಲು, ೧೮೮೨ನೇ ಇಸವಿಯ Xನೇ ನಂಬರ್ ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡನ್ನು ಮೈಸೂರು ದೇಶದಲ್ಲಿ ಜಾರಿಯೊಳಕ್ಕೆ ತರತಕ್ಕ ಬಗ್ಗೆ ಏರ್ಪಟ್ಟ ರೆಗ್ಯುಲೇಷನ್ ಯಾನೆ ನಿಬಂಧನೆ

ಆಲೋಚನೆ ಸಭೆಯೊಳಗಣ ಇ ಸ್ಪಾಟಿನ ಗವರ್ನರ್ ಜನರಲ್ ಅವರಿಂದ ಮಂಜೂರುಮಾಡಲ್ಪಟ್ಟ ೧೮೮೨ನೇ ಇಸವಿ ೧೦ನೇ ನಂಬರ್ ಆಕ್ಟನ್ನು ಮೈಸೂರಿನ ಮೇಲೆ ಜಾರಿಗೆ ತರಬೇಕಾದ್ದು ಉಚಿತವಾದ್ದರಿಂದ ಸದರಿ ಆಕ್ಟು ಇದರ ಮೂಲಕ ಬದಲಾವಣೆಗಳು, ತಿದ್ದುಪಾಡುಗಳು, ಆಧಿಕ್ಯಗಳು ಇವುಗಳೊಂದಿಗೆ ಮೈಸೂರು ದೇಶದಲ್ಲಿ ಜಾರಿಗೆ ತರತಕ್ಕದ್ದೆಂದು ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರವರು ವಿಧಿಸುತ್ತಾರೆ ಹ್ಯಾಗೆಂದರೆ—

೧ ರಾಜಧಾನಿ ಪಟ್ಟಣಗಳಿಗೂ ರಾಜಧಾನಿ ಪೊಲೀಸ್ ಮ್ಯಾಜಿಸ್ಟ್ರೇಟರ ಕೋರ್ಟುಗಳಿಗೂ, ರಾಯಲ್ ಛಾರ್ಟರ್ ನಿಂದ ಸ್ಥಾಪಿಸಲ್ಪಟ್ಟ ಹೈಕೋರ್ಟುಗಳಿಗೂ ಪ ಜಾಬಿನ ಚೀಫ್ ಕೋರ್ಟಿಗೂ, ರಂಗೂನ್ ರಿಕಾರ್ಡರ ಮತ್ತು ಬ್ರಿಟಿಷ್ ಬರ್ಮಾ ಜುಡಿಷಿಯಲ್ ಕಮಿಷನರ್ ಕೋರ್ಟುಗಳಿಗೂ ಜಸ್ಟಿಸ್ ಆಫ್ ಪೀಸ್ ಎಂಬ ನ್ಯಾಯಾಧಿಪತಿಗಳ ನೇಮಕ ಮತ್ತು ಅಧಿಕಾರ ಯಾನೆ ಅಬೀವಲ್ ಕಾರ್ಪಸ್ ... ಬಾಲಾಪರಾಧ ಅಧಿಕಾರಗಳ ಇವುಗಳಿಗೆ ಸಂಬಂಧಪಟ್ಟ ನಿಬಂಧನೆಗಳು, ಮತ್ತು ವ್ಯವಹಾರಸಂಸ್ಥಾನದ ಹೊರಗೆ ಇರುವ ಸೀಮೆಯವಾಗಿ ಗೊತ್ತಾದ ಸ್ಥಳಗಳಿಗೂ, ಕೋರ್ಟುಗಳಿಗೂ ಆಫೀಸರುಗಳಿಗೂ ಬೋರ್ಡ್ ಕವರ್ನ್ಮೆಂಟುಗಳಿಗೂ ಸಂಬಂಧಪಟ್ಟ ವಿಶಿಷ್ಟ ನಿಬಂಧನೆಗಳನ್ನು ಬಿಟ್ಟುಬಿಡಬೇಕು. ಅದರ ಇದರಲ್ಲಿ ಇರುವ ಯಾವ ಅಂಶವಾದರೂ ಯೂರೋಪಿಯನ್ ಬ್ರಿಟಿಷ್ ಸಬ್ಜೆಕ್ಟುಗಳ ಮೇಲಿನ ಕ್ರಿಮಿನಲ್ ವ್ಯವಹಾರದಲ್ಲಿ ಅಧಿಕಾರ ಕೊಡುತ್ತದೆಂದು ಭಾವಿಸತಕ್ಕದ್ದಲ್ಲ

೨ ಲೋಕಲ್ ಗವರ್ನಮೆಂಟಿನವರಿಂದ ಮಾಡಲ್ಪಟ್ಟ ಆಕ್ಟಿಗೆ ಆಲೋಚನೆ ಸಭೆಯೊಳಗಣ ಗವರ್ನರ್ ಜನರಲ್‌ರವರ ಅನುಮತಿಯನ್ನು ಪಡೆಯಬೇಕೆಂದು ವಿಧಿಸುವ ಅಥವಾ ಆಲೋಚನೆ ಸಭೆಯೊಳಗಣ ಗವರ್ನರ್ ಜನರಲ್ ರು ಯಾವ ದಾದರು ಒಂದು ಅಧಿಕಾರವನ್ನು ಚಲಾಯಿಸತಕ್ಕದ್ದೆಂದು ವಿಧಿಸುವ ವಿಶಿಷ್ಟ ನಿಬಂಧನೆಗಳೂ ಬಿಟ್ಟುಬಿಡಲ್ಪಡಬೇಕು

೩ ೫೮, ೫೯, ೧೯೬, ೨೧೬, ೨೦೭, ೨೧೩, ೨೧೬, ೨೧೭, ೨೧೮, ೨೨೮, ೨೨೭, ೩೩೭, ೩೪೭, ೩೪೮, ೪೨೪, ೪೪೩, ೪೬೬, ೪೯೭, ೪೯೮, ೫೦೭, ೫೪೯, ೫೬೮, ೫೧೯ ಮತ್ತು ೬೩೭ನೇ ಸೆಕ್ಷನ್‌ಗಳಲ್ಲಿ ಹೈಕೋರ್ಟಿಗೆ ಸಂಬಂಧಪಟ್ಟ ವಿಶಿಷ್ಟ ನಿಬಂಧನೆಗಳೂ ಸದರಿ ಹೈಕೋರ್ಟಿನ ಪ್ರಸ್ತಾಪ ಅವುಗಳಿಂದ ಮಾಡಲ್ಪಡದೆ ಇದ್ದರೆ ಹ್ಯಾಗೋ ಹಾಗೆಯೇ ಬಿಟ್ಟುಬಿಡಲ್ಪಡತಕ್ಕವು

೪. ಬ್ರಿಟಿಷ್ ಇಂಡಿಯಾ ಎಂಬ ಮಾತುಗಳಿಗೆ ಬದಲಾಗಿ ಮೈಸೂರು ಸಂಸ್ಥಾನವೆಂದು ಓದಿಕೊಳ್ಳಬೇಕು

೫ ಯಾವದಾದರು ಲೋಕಲ್ ಗವರ್ನ್ಮೆಂಟ್ ಅಥವಾ ಪ್ರತಿಯೊಂದು ಲೋಕಲ್ ಗವರ್ನ್ಮೆಂಟ್ ಅಥವಾ ಸದರಿ ಲೋಕಲ್ ಗವರ್ನ್ಮೆಂಟ್ ಎಂಬ ಮಾತುಗಳಿಗೆ ಬದಲಾಗಿ ಮೈಸೂರು ದೇಶದ ಸರ್ಕಾರದವರು ಎಂದು ಓದಿಕೊಳ್ಳಬೇಕು

೬ ಡಿ|| ಕಮಿಷನರ್ ಪೆಂಡೆಂಟ್ ಮತ್ತು ಅಸಿಸ್ಟೆಂಟ್ ಡಿ|| ಕಮಿಷನರ್ ಪೆಂಡೆಂಟ್ ಎಂಬ ಮಾತುಗಳಿಗೆ ಬದಲಾಗಿ ಡೆಪ್ಯುಟಿ ಮತ್ತು ಅ|| ಕಮಿಷನರ್ ಎಂದು ಓದಿಕೊಳ್ಳಬೇಕು

೭ (ರಿಜಿಸ್ಟರ್) ಎಂಬ ಮಾತಿಗೆ ಬದಲಾಗಿ ಡಿಪ್ಯುಟಿ ಕಮಿಷನರ್ ಎಂದು ಓದಿಕೊಳ್ಳಬೇಕು

೮. ಶ್ರೀಮತ್ ಮಹಾರಾಣಿಯೆಂದು ಮಾತುಗಳಿಗೆ ಬದಲಾಗಿ ಮೈಸೂರು ಶ್ರೀಮತ್ ಮಹಾರಾಜರು ಎಂದು ಓದಿಕೊಳ್ಳಬೇಕು

೯. (ಶ್ರೀಮತ್ ಮಹಾರಾಣಿಯವರ ಸೈನ್ಯ) ಎಂಬ ಮಾತುಗಳಿಗೆ ಬದಲಾಗಿ ಶ್ರೀಮನ್ಮಹಾರಾಜರವರ ಫೌಜ್ ಎಂದು ಓದಿಕೊಳ್ಳಬೇಕು

೧೦ ೧ನೇ ಪತ್ರದ ಪ್ರಕರಣದಲ್ಲಿ ೧೮೮೨ನೇ ಇಸವಿ ಎಂಬ ಮಾತುಗಳಿಗೆ ಬದಲಾಗಿ ೧೮೮೬ನೇ ಇಸವಿ ಜೂನ್ ಎಂದು ಓದಿಕೊಳ್ಳಬೇಕು

೧೧ ೧ನೇ ಪತ್ರದ ಎರಡನೇ ಪ್ಯಾರಾದಲ್ಲಿ (a) (b) (c) (d) ಮತ್ತು (e) ಗುರುತುಗಳ ಕಲಂಗಳಿಗೆ ಬದಲಾಗಿ ಮೈಸೂರು ದೇಶದ ಪೊಲೀಸ್ ಆಕ್ಟುಗಳು ಎಂದು ಓದಿಕೊಳ್ಳಬೇಕು

೧೨ ೩ನೇ ಪ್ರಕರಣದಲ್ಲಿ ಪೊಲೀಸ್ ಮ್ಯಾಜಿಸ್ಟ್ರೇಟು ಎಂಬ ಮಾತುಗಳು ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಿಂದ ಅಥವಾ ಕೋರ್ಟಿನಿಂದ ತೀರ್ಮಾನಿಸಬೇಕು ಎಂಬ ಮಾತುಗಳನ್ನು ಬಿಟ್ಟುಬಿಡಬೇಕು

೧೩ ಹೈಕೋರ್ಟು ಅಥವಾ ಯಾವದಾದರೂ ಹೈಕೋರ್ಟು ಅಥವಾ ಒಂದು ಹೈಕೋರ್ಟು ಅಥವಾ ಹೈಕೋರ್ಟು ಎಂಬ ಮಾತುಗಳಿಗೆ ಬದಲಾಗಿ ಚೀಫ್ ಕೋರ್ಟು ಎಂದು ಓದಿಕೊಳ್ಳಬೇಕು ಮತ್ತು ೪ನೇ ಪ್ರಕರಣ (i) ಗುರುತಿನ ಕಲಮಿಗೆ ಬದಲಾಗಿ ಇದರ ಕೆಳಗಿನ ಮಾತುಗಳನ್ನು ಸೇರಿಸಬೇಕು ಚೀಫ್ ಕೋರ್ಟು ಎಂಬ ಮಾತು ಮೈಸೂರು ಸಂಸ್ಥಾನದೊಳಗೆ ಕ್ರಿಮಿನಲ್ ಅಪೀಲಿಗಾಗಿ ಅಥವಾ ಪುನರ್ವಿಚಾರಣೆಗಾಗಿ ಇರತಕ್ಕ ಅತ್ಯಂತ ದೊಡ್ಡ ಕೋರ್ಟು ಎಂದು ಅರ್ಥಕೊಡುತ್ತೆ

೧೪ ೪ನೇ ಪ್ರಕರಣದ (i) ಗುರುತಿನ ಕಲಮಿನಲ್ಲಿ ಒಬ್ಬ ವಕೀಲನು ಮತ್ತು ಒಬ್ಬ ಅಟಾರ್ನಿ ಎಂಬ ಮಾತುಗಳನ್ನು ಬಿಟ್ಟುಬಿಡಬೇಕು

೧೫ ೬ನೇ ಪ್ರಕರಣದ ೧ನೇ ಪ್ಯಾರಾದಲ್ಲಿ ಐದು ಎಂಬ ಶಬ್ದಕ್ಕೆ ಬದಲಾಗಿ ನಾಲ್ಕು ಎಂದು ಓದಿಕೊಳ್ಳಬೇಕು

೧೬ ೭ನೇ ಪ್ರಕರಣದಲ್ಲಿ ಪ್ರೆಸಿಡೆನ್ಸಿ ಟೌನ್ ಎಂಬ ಮಾತುಗಳಿಗೆ ಬದಲಾಗಿ ಆ ಸ್ಥಳವು ಎಂದು ಓದಿಕೊಳ್ಳಬೇಕು

೧೭ ೯ನೇ ಪ್ರಕರಣಕ್ಕೆ ಬದಲಾಗಿ ಕೆಳಗಿನ ಮಾತುಗಳನ್ನು ಓದಿಕೊಳ್ಳಬೇಕು

೯ ನೇ ಪ್ರಕರಣ ಸರಕಾರದವರು ಮೈಸೂರು ಸಂಸ್ಥಾನದ ಒಳಗೆ ಸೆಷನ್ಸ್ ಜಡ್ಜಿಯ ವಿನಾ ಇತರ ಸೆಷನ್ಸ್ ಜಡ್ಜುಗಳನ್ನು ನೇಮಿಸುತ್ತಾರೆಂತ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟುಗಳ ಅಧಿಕಾರವನ್ನು ಕೊಡಬಹುದು

೧೮ ೧೧ನೇ ಪ್ರಕರಣದಲ್ಲಿ (ಗೋವರ್ನರ್ ಜನರಲ್ ರು ಎಂಬ ಮಾತುಗಳಿಗೆ ಬದಲಾಗಿ ... ಎಂದು ಓದಿಕೊಳ್ಳಬೇಕು

೧೯ ೧೮ನೇ ಪ್ರಕರಣದ ೬ನೇ ಕಲಮನ್ನು ಬಿಟ್ಟುಬಿಡಬೇಕು

೨೦ ೧೯ನೇ ಪ್ರಕರಣದಲ್ಲಿ ಆಲೋಚನೆ ಸಭೆಯ ಗವರ್ನರ್ ಜನರಲ್ ಎಂಬ ಮಾತುಗಳಿಗೆ ಬದಲಾಗಿ ಮೈಸೂರು ಸರ್ಕಾರದವರು ಎಂದು ಓದಿಕೊಳ್ಳಬೇಕು

೨೧ ೧೯ನೇ ಪ್ರಕರಣದ ೧ನೇ ಕಲಮಿಗೆ ಬದಲಾಗಿ ಹಾಗೆ ನೇಮಿಸಲ್ಪಟ್ಟವರು ಈ ಆಕ್ಟಿನ ಪ್ರಕಾರ ವಿಚಾರಣೆ ನಡೆಸುವಾಗ ಅವರಿಗೆ ಈ ಆಕ್ಟಿನಲ್ಲಿ ಹೇಳಿರುವ ಅಧಿಕಾರಗಳನ್ನು ಚಲಾಯಿಸಬಹುದು ... ಸದರಿ ಸಭೆ ಸದರಿ ವಿಚಾರಣೆ ನಡೆಸುವ ಪೊಲೀಸ್ ಅಧಿಕಾರಿ ಮಾಡಬಹುದು ಎಂದು ಓದಿಕೊಳ್ಳಬೇಕು

೨೨ ೨೫ನೇ ಪ್ರಕರಣದ ೫ನೇ ಪ್ಯಾರಾದ ಬದಲಾಗಿ ಇದರ ಕೆಳಗಿನ ಮಾತುಗಳನ್ನು ಸೇರಿಸಬೇಕು

"೨೫ ಪ್ರಕರಣದ ಪ್ರಕಾರ ಮಾಡುವ ವಿಚಾರಣೆಗಳು ಗ್ರಾಮ ಪಟೇಲರು ನಡೆಸತಕ್ಕದ್ದು ಅನಂತರ ಅ ವರು ತಮ್ಮ ಫಲಿತಾಂಶವನ್ನು ದರ್ಖಾಸ್ತು ಮಾಡುವದಕ್ಕೆ ಅಧಿಕಾರವುಳ್ಳ ಅತ್ಯಂತ ಸಮೀಪವಾಗಿರುವ ಮ್ಯಾಜಿಸ್ಟ್ರೇಟರಿಗೆ ತಿಳಿಸಬೇಕು

೨೩ ೧೮೬ನೇ ಪ್ರಕರಣದಲ್ಲಿ (ಬ್ರಿಟಿಷ್ ಇಂಡಿಯಾದಲ್ಲಿ) ... ಎಂಬ ಮಾತುಗಳನ್ನು ಬಿಟ್ಟುಬಿಡಬೇಕು

೨೪ "೧೮೮ನೇ ಪ್ರಕರಣಕ್ಕೆ ಬದಲಾಗಿ ಇದರ ಕೆಳಗಿನ ಪ್ರಕರಣವನ್ನು ಸೇರಿಸತಕ್ಕದ್ದು.

೧೮೮ ಮೈಸೂರು ಸಂಸ್ಥಾನದ ಹೊರಗಿನ ಯಾವ ಪ್ರದೇಶದಲ್ಲಿ ಮೈಸೂರು ಶ್ರೀಮನ್ಮಹಾರಾಜರವರ ಯಾವ ಪ್ರಜೆಯಾದರು ಅಪರಾಧ ಮಾಡಿದರೆ ಮೈಸೂರು ಸಂಸ್ಥಾನದೊಳಗೆ ಸಿಕ್ಕಿದ ಸ್ಥಳದಲ್ಲಿ ಸದರಿ ಅಪರಾಧ ನಡೆದಿದ್ದರೆ ಹ್ಯಾಗೋ ಹಾಗೆ ಆತನನ್ನು ಅವನ ಮೇಲೆ ವ್ಯವಹರಿಸಬಹುದು

ಆದರೆ ಸ್ಥಾನಿಕವಾದ ಸ್ಥಳದಲ್ಲಿ ಸದರಿ ಅಪರಾಧಕ್ಕೆ ಆಕಸ್ಮಿಕವಾಗಿ ಸಿಕ್ಕಿದ ದರ್ಖಾಸ್ತು ಸಲ್ಲಿಸಬೇಕು ಮತ್ತು ಬ್ರಿಟಿಷ್ ಗವರ್ನಮೆಂಟಿನವರು ತಮ್ಮ ಮುಖಾಂತರ ಆ ಅಪರಾಧಿಯನ್ನು ಒಪ್ಪಿಸುವಂತೆ ಕೇಳುವದಕ್ಕೆ ಅರ್ಹವಾದ ಕಕ್ಷಿ ಇದ್ದರೆ ದರ್ಬಾರಿನವರು ಮೊದಲು ಕೇಳಿದ ಹೊರತು, ಬ್ರಿಟಿಷ್ ಸರ್ಕಾರಿನವರು ಅಪರಾಧಿಯನ್ನು ತಮ್ಮ ವಶಕ್ಕೆ ಒಪ್ಪಿಸುವಂತೆ ಕೇಳತಕ್ಕ ಬಗ್ಗೆ ಇರುವ ಹಕ್ಕನ್ನು ಬಿಟ್ಟುಬಿಡುತ್ತಾರೆಯೋ ಎಂಬುವದನ್ನು ನಿಶ್ಚಯಿಸಿಕೊಳ್ಳಬೇಕು

೨೫ ೧೯೫ನೇ ಪ್ರಕರಣದಲ್ಲಿ ಪೊಲಿಟಿಕಲ್ ಏಜಂಟ್ ಅಥವಾ ಎಂಬ ಮಾತುಗಳನ್ನು ಬಿಟ್ಟುಬಿಡಬೇಕು.

೨೬ ೧ನೇ ಮತ್ತು ೧೯೭ನೇ ಪ್ರಕರಣಗಳನ್ನು ಬಿಟ್ಟುಬಿಡಬೇಕು

೨೭ ೧೯೮ನೇ ಪ್ರಕರಣಕ್ಕೆ ಇದರ ಕೆಳಗಿನ ಕಲಮನ್ನು ಸೇರಿಸಬೇಕು

ಏನಂದರೆ —

"(c) ಗುರುತಿನ ಕಲಮಿಗೆ ಅನುಗುಣವಾಗಿ ಒಬ್ಬ ಮ್ಯಾಜಿಸ್ಟ್ರೇಟ್ ತನ್ನೇನು ಶಿಕ್ಷೆಯನ್ನು ವಿಧಿಸಿದಾಗ ಅಪರಾಧಿಯು ಅಥವಾ ಅನೇಕ ಅಪರಾಧಿಗಳು ಇದರ ಅಪರ ಶಿಕ್ಷೆ ಯಾವನಾದರೂ ಒಬ್ಬ ಅಪರಾಧಿಯು ಸದರಿ ಶಿಕ್ಷೆಯಿಂದ ಸದರಿ ಮ್ಯಾಜಿಸ್ಟ್ರೇಟರಿಂದ ವಿಚಾರಣೆ ಮಾಡಲ್ಪಡುವದಕ್ಕೆ ಬದಲಾಗಿ ಇನ್ನೊಬ್ಬ ಮ್ಯಾಜಿಸ್ಟ್ರೇಟರಿಗೆ ಅಥವಾ ಉನ್ನತಕ್ಕೆ ಅಥವಾ ಸೆಷನ್ ಕೋರ್ಟಿಗೆ ಕಮಿಟ್ ಮಾಡಲ್ಪಡುವಂತೆ ಯಾಚಿಸಿ ಕೇಳಿಕೊಳ್ಳತಕ್ಕ ಹಕ್ಕುಳ್ಳವನಾಗಿರುತ್ತಾನೆ

೨೮ ೧೯೯ನೇ ಪ್ರಕರಣದಲ್ಲಿ ಇಂಡಿಯಾ ಗವರ್ನ್ಮೆಂಟ್ ಅಥವಾ ಎಂಬ ಮಾತುಗಳನ್ನು ಬಿಟ್ಟುಬಿಡಬೇಕು ಮತ್ತು ಅವರನ್ನು ಸ್ಥಾನಾಂತರ ಪಡಿಸುವದಕ್ಕೆ ಅಧಿಕಾರವುಳ್ಳ ಗವರ್ನಮೆಂಟ್ ಎಂಬ ಮಾತುಗಳಿಗೆ ಬದಲಾಗಿ ಇಂಡಿಯಾ ಗವರ್ನಮೆಂಟ್ ಎಂದು ಓದಿಕೊಳ್ಳಬೇಕು

೨೯ ೨೧೧ನೇ ಪ್ರಕರಣದ ಎರಡನೇ ಪ್ಯಾರಾದಲ್ಲಿ "ಮತ್ತು ಎಲ್ಲಿ ಬಿಡಿಸಿ ಆಪಾದನೆಯಿಟ್ಟವನು ಎಂಬ ಮಾತುಗಳು ಮೊದಲ್ಗೊಂಡು ಪ್ರಕರಣದ ಅಂತ್ಯವರೆವಿಗೂ ಬಿಟ್ಟುಬಿಡಬೇಕು

೩೦ ೨೧೪ನೇ ಪ್ರಕರಣವನ್ನು ಬಿಟ್ಟುಬಿಡಬೇಕು

೩೧ ೨೧೫ನೇ ಪ್ರಕರಣದಲ್ಲಿ ಅಥವಾ ೨೧೬ನೇ ಪ್ರಕರಣ ಎಂಬ ಮಾತುಗಳನ್ನು ಮತ್ತು ಅಂಕಗಳನ್ನು ಬಿಟ್ಟುಬಿಡಬೇಕು

೩೨ ೨೧೯ನೇ ಪ್ರಕರಣದ ಎರಡನೇ ಪ್ಯಾರಾವನ್ನು ಬಿಟ್ಟುಬಿಡಬೇಕು

೩೩ ೩೨೭ನೇ ಪ್ರಕರಣದಲ್ಲಿ (i) ಗುರುತಿನ ಕಲಮಿಗೆ ಬದಲಾಗಿ ಜಿಲ್ಲೆ ನ್ಯಾಯಾಧಿಪತಿಗಳು ಎಂಬ ಮಾತುಗಳನ್ನು ಸೇರಿಸಬೇಕು

೩೪ ೩೯೬ನೇ ಪ್ರಕರಣದಲ್ಲಿ ಹೈಕೋರ್ಟಿನ ವಿನಾ ಇತರ ಯಾವ ಕೋರ್ಟಿಗೆ ಯಾದರೂ ಪ್ರಸ್ತಾವ ಎಂಬ ಮಾತುಗಳನ್ನು ಬಿಟ್ಟುಬಿಡಬೇಕು

೩೫ ೨೮೬, ೨೮೭, ೨೮೯ನೇ ಪ್ರಕರಣಗಳನ್ನು ೨೯೭ನೇ ಪ್ರಕರಣ ೧ನೇ ಪ್ಯಾರಾವನ್ನು, ೨೯೮ನೇ ಪ್ರಕರಣ ೩ನೇ ನಿಯಮವನ್ನು ೨೯೯ನೇ ಪ್ರಕರಣ ೩ನೇ ಪ್ಯಾರಾವನ್ನು ೩೦೧, ೩೦೪, ೩೦೫, ೩೦೬, ೩೦೭, ೩೦೮, ೩೧೯, ೩೨೧, ೩೨೩, ೩೩೩, ೩೩೪, ೩೩೫ ೩೩೬, ೩೫೨, ೩೫೩, ಮತ್ತು ೩೫೮ನೇ ಪ್ರಕರಣಗಳನ್ನು ಬಿಟ್ಟುಬಿಡಬೇಕು

೩೬ ೩೭೪ನೇ ಪ್ರಕರಣದ ೩ನೇ ಪ್ಯಾರಾದಲ್ಲಿ ಹೈಕೋರ್ಟಿನ ವಿನಾ ಇತರ ಎಂಬ ಮಾತುಗಳನ್ನು ಬಿಟ್ಟುಬಿಡಬೇಕು

೩೭ ೪೦೪ನೇ ಪ್ರಕರಣದ (b) ಗುರುತಿನ ಕಲಮನ್ನು ಬಿಟ್ಟುಬಿಡಬೇಕು

೩೮ ೪೧೫ನೇ ಪ್ರಕರಣವನ್ನು ಬಿಟ್ಟುಬಿಡಬೇಕು

೩೯ ೪೧೬ನೇ ಪ್ರಕರಣದಲ್ಲಿ "೪೧೫ನೇ ಪ್ರಕರಣದ ಅಡಿಯಲ್ಲಿ ಯೆನ್ನುವ ಮಾತುಗಳನ್ನು ಬಿಟ್ಟುಬಿಡಬೇಕು.

೪೦ ೪೪೩, ೪೪೪, ೪೪೫, ೪೪೬, ೪೪೭, ೪೪೮, ೪೪೯, ೪೫೦, ೪೫೧, ೪೫೨, ೪೫೩, ೪೫೪, ೪೫೫, ೪೫೬, ೪೫೭ ಮತ್ತು ೪೫೮ನೇ ಪ್ರಕರಣಗಳನ್ನು ಬಿಟ್ಟುಬಿಡಬೇಕು

೪೧ ೪೬೪ನೇ ಪ್ರಕರಣದಲ್ಲಿ ೪೬೧ನೇ ಪ್ರಕರಣ ಅಥವಾ ಎಂಬ ಮಾತುಗಳನ್ನೂ ಅಂಕಗಳನ್ನು ಬಿಟ್ಟುಬಿಡಬೇಕು

೪೨ ೪೬೩ನೇ ಪ್ರಕರಣದಲ್ಲಿ ಮೇಲೆ ಹೇಳಲ್ಪಟ್ಟ ಕೆಲಸವಾದ ಬದಲು ಯೂರೋಪಿಯನ್ ಬ್ರಿಟಿಷ್ ಸಬ್ಜೆಕ್ಟ್ ನ ಎಂಬ ಮಾತುಗಳನ್ನು ಬಿಟ್ಟುಬಿಡಬೇಕು

೪೩ ೪೭೭ನೇ ಪ್ರಕರಣದಲ್ಲಿ ೪೭೮ನೇ ಪ್ರಕರಣದ ನಿಬಂಧನೆಗಳಿಗೆ ಒಳಪಟ್ಟು ಎಂಬ ಮಾತುಗಳನ್ನು ಬಿಟ್ಟುಬಿಡಬೇಕು

೪೪ ೪೭೮ನೇ ಪ್ರಕರಣದಲ್ಲಿ ಎರಡನೇ ಪ್ಯಾರಾವನ್ನು ಬಿಟ್ಟುಬಿಡಬೇಕು

೪೫ ೪೮೧ನೇ ಪ್ರಕರಣವನ್ನು ಬಿಟ್ಟುಬಿಡಬೇಕು

೪೬. ೫೦೩ನೇ ಪ್ರಕರಣದ ಎರಡನೇ ಪ್ಯಾರಾಗೆ ಬದಲಾಗಿ ಇದರ ಕೆಳಗಿನಂತದ್ದನ್ನು ಸೇರಿಸಬೇಕು.

"ಸ್ಥಾನೀಯ ಬ್ರಿಟಿಷ್‌ಇಂಡಿಯಾದಲ್ಲಿ ವಾಸವಾಗಿರುವವನ ದಲ್ಲಿ ಬ್ರಿಟಿಷ್ ಗವರ್ನ್ಮೆಂಟಿನವರು ಈ ವಿಷಯಕ್ಕಾಗಿ ನೇಮಿಸುವ ಉದ್ಯೋಗಸ್ಥರಿಗೆ ಸದರಿ ಕಮಿಷನ್ ಕಳುಹಿಸಬಹುದು

೪೭. ೫೦೮ನೇ ಪ್ರಕರಣವನ್ನು ಬಿಟ್ಟುಬಿಡಬೇಕು

೪೮ ೫೧೫ನೇ ಪ್ರಕರಣದಲ್ಲಿ ೫೧೭ನೇ ಪ್ರಕರಣದಲ್ಲಿ ಹೇಳಲ್ಪಟ್ಟಂತೆ ಯಿಲ್ಲದಿದ್ದರೆ ಎಂಬ ಮಾತುಗಳನ್ನು ಮತ್ತು ಅಂಕಗಳನ್ನು ಬಿಟ್ಟುಬಿಡಬೇಕು, ಮತ್ತು ಇದರ ಕೆಳಕಂಡ ಮಾತುಗಳನ್ನು (d) ಗುರುತಿನ ಕಲಮಿನ ಕಡೆಯಲ್ಲಿ ಸೇರಿಸಬೇಕು —

ಅಥವಾ

"(e) ಸದರಿ ಕಾರ್ಯ ನ್ಯಾಯಾಧಿಪತಿಗಳಿಗೆ ಬಲವತ್ತರವಾಗಿ ಕಂಡರೆ

೪೯ ಸದರಿ ಪ್ರಕರಣದ ೩ನೇ ಕಲಮಿನ ಕಡೆಯಲ್ಲಿ ಇದರ ಕೆಳಕಂಡದ್ದನ್ನು ಸೇರಿಸಬೇಕು ಏನಂದರೆ —

"ಅಥವಾ

೪ ಸದರಿ ಕೋರ್ಟುಗಳಲ್ಲಿ ಸೆಷನ್ ಕೋರ್ಟು ಗಳಲ್ಲಿ ಒಬ್ಬ ವಕೀಲನ ಆಪಾದನೆ ಪಟ್ಟ ಮನುಷ್ಯನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು,

೫೦. ೫೨೬ನೇ ಪ್ರಕರಣದ ಕಡೆಯಲ್ಲಿ ಇದರ ಕೆಳಕಂಡ ಪ್ರಕರಣವನ್ನು ಸೇರಿಸಬೇಕು

ಏನಂದರೆ—

"೫೨೬ A ಯಾವ ಕ್ರಿಮಿನಲ್ ಮೊಕದ್ದಮೆಯಲ್ಲಿ ಯಾಗಲಿ ಅಪೀಲ್‌ನಲ್ಲಿ ಯಾಗಲಿ ೫೨೬ನೇ ಪ್ರಕರಣ ಪಬ್ಲಿಕ್ ಪ್ರಾಸಿಕ್ಯೂಟರಾಗಲಿ, ಪನ್ನುಸರಿಸಿ ಅರ್ಜಿ ಫಿರ್ಯಾದಿಯಾಗಲಿ, ಆಪಾದಿತ ಮಾಡಿಕೊಳ್ಳುವಲ್ಲಿ ಅಡ್ವೊಕೇಟನಾಗಲಿ ೫೨೬ನೇ ಪ್ರಕರ ಣವನ್ನು ಅನುಸರಿಸಿ ಸದರಿ ಮೊಕದ್ದಮೆಯ ವಿಷಯವಾಗಿ ಅರ್ಜಿ ಮಾಡಿಕೊಳ್ಳಬೇಕೆಂದು ತನ್ನ ಅಭಿಪ್ರಾಯವನ್ನು ಸದರಿ ಮೊಕದ್ದಮೆ ಅಥವಾ ಅಪೀಲು ಹಿಡಿದ ಕೈಸಲಾಗತಕ್ಕದ್ದೋ ಆ ಕೋರ್ಟಿಗೆ ತಿಳಿಸಿದರೆ ಸದರಿ ಕಕ್ಷಿಯು ಆಪಾದನೆಪಟ್ಟ ಮನುಷ್ಯನನ್ನು ಡಿಫೆನ್ಸ್ ಕೊಡುವದಕ್ಕೆ ಮುಕ್ಕಾಂ ಮಾಡುವದಕ್ಕೆ ಮುಂಚೆ ತಕ್ಕ ವಿಚಾರಣೆ ಅಥವಾ ಅಪೀಲು ತೀರ್ಮಾನ ವಿಚಾರ ಅಪೀಲು ನಿಜಾರಣೆ ಬರುವುದಕ್ಕೆ ಮುಂಚೆ ತಾನಿ ಅಪೀಲು ನಿಲ್ಲಿಸುವುದಕ್ಕೆ ಆರ್ಜಿ ಮಾಡಿದ ಮನುಷ್ಯನು ಮುನ್ನಿನ ದಿನವೇ ತಿಳುವಳಿಕೆ ಕೊಡಬೇಕು ... ಮತ್ತು ಆಪಾದಿತನು ಆ ಕೋರ್ಟಿನವರು ದರ್ಖಾಸ್ತಿಯನ್ನು ನಿಲ್ಲಿಸಿ, ಈ ಪ್ರಕರಣದ ಮಾತುಗಳನ್ನು ೫೨೬ನೇ ಪ್ರಕರಣದಲ್ಲಿ ಕೊಡಲ್ಪಟ್ಟಿರುವ ಅಧಿಕಾರವನ್ನು ಚಲಾಯಿಸತಕ್ಕದ್ದು

೫೧. ೫೨೮ನೇ ಪ್ರಕರಣವನ್ನು ಬಿಟ್ಟುಬಿಡಬೇಕು

೫೨ ೫೩೦ನೇ ಪ್ರಕರಣಕ್ಕೆ ಇದರ ಕೆಳಕಂಡದ್ದನ್ನು ಸೇರಿಸಬೇಕು

ಏನಂದರೆ—

"ಈ ಪ್ರಕರಣವನ್ನು ಅನುಸರಿಸಿ ಒಂದು ಹುಕುಮನ್ನು ಹೊರಡಿಸುವ ಮ್ಯಾಜಿಸ್ಟ್ರೇಟರು ಸದರಿ ಹುಕುಮಿನ ನಕಲನ್ನು ಹೊರಡಿಸಿದ ದಿನದಿಂದ ಹತ್ತು ದಿವಸದೊಳಗಾಗಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಕಳುಹಿಸತಕ್ಕದ್ದು

೫೩ ೫೩೩ನೇ ಪ್ರಕರಣಕ್ಕೆ ಬದಲಾಗಿ ಇದರ ಕೆಳಕಂಡದ್ದನ್ನು ಸೇರಿಸಬೇಕು

ಮೈಸೂರು ಸಂಸ್ಥಾನದ ಮ್ಯಾಜಿಸ್ಟ್ರೇಟರು ಹಾಗೂ ಚೀಫ್ ಕೋರ್ಟಿನವರು ಅಲ್ಲದೆ ಇನ್ನಾವ ಸಬಾರ್ಡಿನೇಟ್ ಕೋರ್ಟುಗಳ ರಿಕಾರ್ಡುಗಳನ್ನು ಪರಿಶೀಲಿಸುವ ಕ್ಕೆ ಹಕ್ಕುಳ್ಳವರು ... ಸದರಿ ಸಂಬಂಧದಿಂದ ಅಗತ್ಯ (a) ತಮ್ಮ ಕೆಳಗಿನ ಎಲ್ಲಾ ಕ್ರಿಮಿನಲ್ ಕೋರ್ಟುಗಳ ಇದಕ್ಕೆ ಪ್ರತಿ ಕೆಲಸಗಳನ್ನು ... ಮತ್ತು ಶೇಕರಿಸುವುದಕ್ಕೆ ಆವಶ್ಯಕವಾದ ಸಾಮಾನ್ಯ ಹುಕುಮುಗಳನ್ನು ಮಾಡಬಹುದು

(b) ಸದರಿ ಕೋರ್ಟುಗಳಲ್ಲಿ ಇ ವಹಾರ ನಡೆಸಲಿಕ್ಕೆ ನಮೂನೆಯನ್ನು ಇಡುವ ರೀತಿ ಮತ್ತು ಆ ಹುಕುಮುಗಳು ... ಅಂತಾ ನಮೂನೆಗಳನ್ನು ಕೊಡಬಹುದು

(c) ತಮ್ಮ ಸ್ವಂತ ನಡವಳಿಕೆ ಮತ್ತು ಅಧಿಕಾರಗಳನ್ನು ಮತ್ತು ತಮ್ಮ ಹೊಣೆಯುಳ್ಳ ಕ್ರಿಮಿನಲ್ ಕೋರ್ಟುಗಳ ನಡವಳಿಕೆ ಮತ್ತು ಅಧಿಕಾರಗಳನ್ನು ಕ್ರಮಪಡಿಸುವ ಕ್ಕೆ ತಕ್ಕ ನಿಯಮಗಳನ್ನು ಮಾಡಬಹುದು

(d) ಈ ಕೋಡಿಗೆ ಅನುಗುಣವಾಗಿ ಜ್ಯಾನಿಗಳ ವ ಆಯಾ ಕೋರ್ಟುಗಳನ್ನು ಸಾಗವುಗೊಡುವ ವಾರಂಟುಗಳ ಜಾರಿಯನ್ನು ಕ್ರಮಪಡಿಸುವದಕ್ಕೂ ಆ ಹಕ್ಕುಗಳನ್ನು ಮಾಡುವುದಕ್ಕೂ ಪರಂ ದು ಈ ಪ್ರಕರಣವನ್ನನುಸರಿಸಿ ಮಾಡುವ ನಮೂನೆಗಳು ಮತ್ತು ರಿಕಾರ್ಡು ಈ ಕೋರ್ಟಿನ ಈ ಹುಕುಮುಗಳಲ್ಲದೆ ಜಾರಿಯಲ್ಲಿರುವ ಇತರ ಯಾವ ಎ ಧನೆಗಳಿಗೆ ವ್ಯತಿರಿಕ್ತವಾಗಿ ರಬಾರದು

ಈ ಪ್ರಕರಣವನ್ನು ಅನುಸರಿಸಿ ಮಾಡಲ್ಪಡುವ ಎಲ್ಲಾ ಹುಕುಮುಗಳು ಸರ್ಕಾರಿ ಗೆಜೆಟ್‌ನಲ್ಲಿ ಪ್ರಕಟ ಮಾಡಲ್ಪಡಬೇಕು.

೫೪ ೫೪೯ನೇ ಪ್ರಕರಣದಲ್ಲಿ ಆದಿಯಿಂದ ೧೨ನೇ ಪ್ರಕರಣ ಎಂಬ ಮಾತುಗಳಿಗೆ ಇರುವ ಅಂಕೆಗಳನ್ನು ತಾ ಗುರುತುಗಳನ್ನು ಬಿಟ್ಟುಬಿಡಬೇಕು

೫೫ ಇಂಡಿಯಾ ಗವರ್ನ್ಮೆಂಟ್ ಫಾರೀನ್ ಡಿಪಾರ್ಟ್ ೧೮೮೦ನೇ ಇಸವಿ ಜುಲೈ ೧೯ನೇ ತಾರೀಖಿನ ನಂಬರು ೧೯೭೩ J ಗುರುತುಳ್ಳ ನೋಟಿಫಿಕೇಷನ್ ೧೮೭೪ನೇ ಇಸವಿಯ ೧೦ನೇ ನಂಬರ್ ಕ್ರಿಮಿನಲ್ ಪ್ರೊಸೀಡ್ಯೂರ್ ಎಂಬ ಆಕ್ಟಿಗೆ ಎಷ್ಟರವರೆಗೆ ಸಂಬಂಧಪಟ್ಟಿದೆಯೋ ಅಷ್ಟರವರೆಗೆ, ಮತ್ತು ೧೮೭೬ನೇ ಇಸವಿ ಜುಲೈ ೨೬ನೇ ನಂಬರು ೧೯೨೯ J ಗುರುತುಳ್ಳ ನೋಟಿಫಿಕೇಷನ್ ಮತ್ತು ೧೮೭೭ನೇ ಇಸವಿ ಮಾರ್ಚ್ ೧೩ನೇ ತಾರೀಖಿನ ನಂಬರು ೨೬೬ I J ಗುರುತುಳ್ಳ ನೋಟಿಫಿಕೇಷನಿನ ಮೊದಲ ನೇ ಪ್ಯಾರಾ ಸಹ ೧೮೮೬ನೇ ಇಸವಿ ಜುಲೈ ೧ನೇ ತಾರೀಖು ಮೊದಲುಗೊಂಡು ಇದರಿಂದ ರದ್ದುಮಾಡಲ್ಪಟ್ಟಿವೆ

Bangalore.—Printed and published for the Proprietor, at the Karnatic Press.—1886

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯಸಗನಾರ್ಣ್ಯ ಕರ್ಣಾಟಕಪ್ರಕಾಶನವರಾಭಿದಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾಗಜ್ಜನೈರ್ದ್ರಿಕಾಸುಪರಿಶೋಧಿತಾದಿಕಶಿಮಾಸಸಂಸುಮದಾ॥

Vol. XIII] BANGALORE—MONDAY, APRIL 26, 1886. [No. 20/17

ಸಂಪುಟ ೧೩.] ಬೆಂಗಳೂರು—ಸನ್ ೧೮೮೬ನೇ ಇಸವಿ ಏಪ್ರಿಲ್ ೨೬ನೇ ತಾರೀಖ್ ಸೋಮವಾರ. [ಸಂಚಿಕೆ ೨೦.೧೭

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ಕಾಗದಗಳೆರಡಕ್ಕೂ ಸೇರಿ, ವರುಷ ೧ಕ್ಕೆ		೧೨—೦—೦
ಇಂಗ್ಲಿಷ್ ಕಾಗದ ಒಂದಕ್ಕೆ ಮಾತ್ರ ವರುಷ ೧ಕ್ಕೆ		೬—೦—೦
ಕನ್ನಡ ಕಾಗದ ಒಂದಕ್ಕೆ ಮಾತ್ರ ಪೋಸ್ಟೇಜ್ ಸಹಿತ ವರುಷ ೧ಕ್ಕೆ ,		೬—೦—೦
ಬಿಡಿಕಾಪಿ	೧ಕ್ಕೆ	೦—೪—೦

ಷರಾ,—ಚಂದಾದಾರರು ಇಂಗ್ಲಿಷ್ ಕಾಗದವನ್ನಾಗಲಿ, ಕನ್ನಡ ಕಾಗದವನ್ನಾಗಲಿ ಅಥವಾ, ಯೆರಡನ್ನಾಗಲಿ ತೆಗದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸತಕ್ಕದ್ದು.

ಪ್ರಕಟನೆಯ ರಿವಾಜ್.

ಮೊದಲನೇದಫಾ ಸಾಲ್ಪಿಗೆ	೧ಕ್ಕೆ	೦—೨—೦
ಮರದನೇದಫಾ ಸಾಲ್ಪಿಗೆ	೧ಕ್ಕೆ	೦—೧—೦

NOTICE TO SUBSCRIBERS

ಇವರಡಿ ತಿಳಿಸಲ್ಪಡುವ ಅಂಶಗಳಿಗೆ ನಮ್ಮ ಚಂದಾದಾರರೆಲ್ಲರು ಲಕ್ಷ್ಯ ನಿಗೇ ಕೊಡಬೇಕೆಂದು ಕೋರುತ್ತೇವೆ ಯೇನೆಂದರೆ:—

೧. ಕರ್ಣಾಟಕ ಪ್ರಕಾಶಿಕೆಯ ಚಂದಾದಾರರಾಗಲಿ [illegible] ಮೇಲೆ ಕಾಗದ ಬರೆಯುವಾಗ [illegible]

೨. ನೋಟುಗಳನ್ನು ಕಳುಹಿಸುವವರು ಅರ್ಧ ನೋಟುಗಳನ್ನು [illegible]

೩. [illegible] ರೂ|| ೧ಕ್ಕೆ [illegible]

೪. [illegible]

NOTICE.

VAIDYASARA SANGRAHA

Price including Postage, Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆ ಯುಳ್ಳವರು [illegible]

ಗ್ರಂಥ [illegible]	... ...	ರೂ|| ೫—೦—೦
ಪೋಸ್ಟ್ ಮತ್ತು ಅಂಚೇಸಾಸಲ್		೦—೬—೦

[illegible] ಬೆಂಗಳೂರು

ನೋಟೀಸ್.

ಇದರಡಿ ವಿವರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ಮಾರಲ್ಪಡುವವು,—

ಕನ್ನಡ ಟೀಕಾಸಹಿತವಾದ ಸಂಸ್ಕೃತ ಗ್ರಂಥಗಳು.

ಕಾಲಾಮೃತ.	...	೧—೪—೦
ಮುಹೂರ್ತದರ್ಪಣ	...	೦—೧೨—೦
ಭಸ್ಮಸ್ತ (ಪ್ರಶ್ನ ಶಾಸ್ತ್ರ)	...	೦—೩—೦
ಚಾಣಕ್ಯನೀತಿಯೆಂಬ ಬುಧಭೂಷಣ.		೦—೫—೦
ಬಾಲರಾಮಾಯಣ	...	೦—೪—೦
ಅಮರ	... ...	೦—೧೪—೦
ಶಿವಾನಂದಲಹರಿ.	...	೦—೮—೦
ಬಾಲಗ್ರಹ.	.. ...	೦—೨—೦
ವೈದ್ಯಸಾರಸಂಗ್ರಹ	...	೫—೦—೦

ಕನ್ನಡ ಗ್ರಂಥಗಳು.

ಗುರುಮನ್ವಿಲಾಸ	..	೦—೮—೦
ಕಿಶೋರೀ[illegible]	...	೦—೪—೦
[illegible]		೦—೩—೬
[illegible]	... ..	೦—೨—೬
[illegible]	...	೦—೪—೦
[illegible]	..	೦—೨—೦
[illegible]	...	೦—೨—೬
[illegible]	...	೦—೮—೦
[illegible]	...	೦—೩—೦
[illegible]	.. ..	೦—೨—೦
[illegible]	...	೦—೦—೩
ಇಂಗ್ಲಿಷ್ ಕನ್ನಡ ನಿಘಂಟು [illegible]		೧—೦—೦
[illegible]	... ...	೨—೦—೦
[illegible]	...	೦—೧೨—೦
[illegible]	...	೩—೪—೬
[illegible]	...	೩—೪—೬
[illegible]		
೧ನೇ ಸಂಚಿಕೆ.	...	೦—೮—೦
೨ನೇ ಸಂಚಿಕೆ		೧—೮—೦
[illegible]	...	೦—೮—೦

ಸಂಸ್ಕೃತ ಮೂಲಗ್ರಂಥಗಳು.

[illegible]	..	೦—೫—೦
[illegible]	...	೦—೨—೬
[illegible]	..	೦—೨—೬
[illegible]	...	೦—೦—೬
[illegible]	...	೦—೧—೬
[illegible]	...	೦—೧—೦

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮ್ಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗದುಕೊಳ್ಳಲ್ಪಡುವದು.

ನೋಟಿಸ್.

ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿ.

೧೭ನೇ ಏಪ್ರಿಲ್ ೧೮೮೬.

ಸನ್ ೧೮೮೬ನೇ ಇಸವಿ ಏಪ್ರಿಲ್ ೩೦ನೇ ತಾರೀಖ್ ಶುಕ್ರವಾರ ಪ್ರಾತಃಕಾಲ ೭½ ಘಂಟೆಗೆ ಸಿಟಿ ಮ್ಯೂನಿಸಿಪಲ್ ಕಮ್ಮಿಷನರ್‌ಗಳು, ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡದಲ್ಲಿನ ತಮ್ಮ ಆಫೀಸಿನಲ್ಲಿ ಆರ್ಡಿನರಿ ಮೀಟಿಂಗ್ ಸೇರುವಕಾಲದೊಳು ಅವರ ಆಲೋಚನೆಗೆ ತರಲ್ಪಡುವ ವಿಷಯಗಳು.

೧ ಚಾಲತಿ ನಗದು ಜಮಾಖರ್ಚು ಲೆಕ್ಕಗಳು, ಸನ್ ೧೮೮೬ನೇ ಇಸವಿ ಮಾರ್ಚಿ ಮಾಹೆಯಾಖೈರು ವರಿಗೆ ಲೆಕ್ಕ, ಮತ್ತು ಮ್ಯೂನಿಸಿಪಲ್ ಸ್ಕೂಲ್ ಲೆಕ್ಕಗಳು.

೨. ಬೆಂಗಳೂರಿನಲ್ಲಿರುವ ಲಂಡನ್ ಮಿಷನ್ ಸ್ಕೂಲ್ ಪ್ರಿನ್ಸಿಪಲ್‌ರವರಾದ ರೆವರೆಂಡ್ ಜಿ. ಎಚ್ ವಾಲ್ಟರ್‌ಯವರು ತಮ್ಮ ಸ್ಕೂಲ್ ಬಾಜೂದಲ್ಲಿ ವಿದ್ಯಾರ್ಥಿಗಳು ಆಡುವದಕ್ಕಾಗಿ ಈಗ ಮಾಡಲ್ಪಟ್ಟಿರುವ ಸ್ಥಳವನ್ನು ಬಡಾಯಿಸುವದಕ್ಕಾಗಿ, ಪೇಟೆಬಾಗಿಲ ಹೊರಗಡೆ ಅದಕ್ಕೆ ಸೇರಿದಂತೆ ಇರುವ ಖಾಲೀಜಮೀನನ್ನು ಕೊಡಬೇಕೆಂದು ಬರಿದುಕೊಂಡ ಸನ್ ೧೮೮೬ನೇ ಇಸವಿ ಮಾರ್ಚಿ ೨೩ನೇ ಮಾರ್ಚ್ಯುಯಿಲ್ಲ ಲೆಟರ್.

೩. ಫ್ರೆಂಡ್‌ಇನ್‌ನೀಡ್ ಸೊಸೈಟಿಯ ಆನರರಿ ಸೆಕ್ರೆಟರಿಯವರು ಸದರೀ ಸೊಸೈಟಿಯ ಜನರಲ್ ಮೀಟಿಂಗ್‌ನಲ್ಲಿ ನಡೆಸಿದ ನಡವಳಿಕೆಯ ಸಾರಾಂಶವನ್ನು ತಿಳುವಳಿಕೆಯಬಗ್ಗೆ ಕಳುಹಿಸಿ ಬರೆದ ಲೆಟರ್.

೪. ಪಬ್ಲಿಕ್ ಡಿವಿಜನ್ ಯಗ್ಜಿಕ್ಯೂಟಿವ್ ಇಂಜಿನಿಯರವರು, ಪೇಟೆ ರೆಯಿಲ್ ಸ್ಟೇಷನ್‌ಬಾಜೂದಲ್ಲಿ ಒಂದು ಸತ್ರವನ್ನು ಕಟ್ಟಿಸಬೇಕಾದ ವಿಷಯವನ್ನು ಕುರಿತು ಬರೆದ ಸನ್ ೧೮೮೬ನೇ ಇಸವಿ ಏಪ್ರಿಲ್ ೧೩ನೇ ಮರ್ಖ್ಯಂ ೪೨೮—೯೬೭ನೇ ನಂಬರ್ ಲೆಟರ್.

೫. ಉತ್ತಮ ಜಾತಿ ಹೆಂಗಸರನ್ನು ದಾಯಿ ಕೆಲಸಕ್ಕೆ ತರಬೇಯತ್ ಮಾಡುವ ವಿಷಯದಲ್ಲಿ ಕೇಳಿದ್ದ ಒಂದು ಅಂಶಕ್ಕೆ ಜವಾಬಾಗಿ, ಮೈಸೂರು ಗವರ್ನಮೆಂಟ್ ಸೀನಿಯರ್ ಸರ್ಜನರಿಂದ ಬಂದ ಸನ್ ೧೮೮೬ನೇ ಏಪ್ರಿಲ್ ೧೫ನೇ ಮರ್ಖ್ಯಂ ೬೫೫ನೇ ನಂಬರ್ ಲೆಟರ್.

೬. ಮೊಹರೀ ಕಾಮಗಾರೀಗಳನ್ನು ಪ್ರಾರಂಭಿಸುವದಕ್ಕೆ ಹಿಡಿಯಬಹುದಾದ ಖರ್ಚುಗಳಪಟ್ಟಿ.

೭. ನಗರ್ತರಪೇಟೆಯಲ್ಲಿ ಒಂದು ಹೊಸರಸ್ತೆ ಹಾಕಬೇಕೆಂದು ಅಲ್ಲಿನ ವಾಸಸ್ಥರು ಬರೆದುಕೊಂಡ ಅರ್ಜಿ.

A. Srinivasa Chari,
Vice-President.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, APRIL 26, 1886

೧೮೮೬ನೇ ಏಪ್ರಿಲ್ ೨೬ನೇ ತಾ|| ಸೋಮವಾರ

THE LATE RAJA OF PUDUCOTA.

ಪುದುಕೋಟೆ ಸಂಸ್ಥಾನದ ಅರಸರಾದ ರಾಮಚಂದ್ರ ತೊಂಡಮಾನ್‌ಯವರು ಮಾಹೇ ಮಜಕೂರ್ ೧೫ನೇ ತಾರೀಖ್ ಗುರುವಾರದದಿನ ಸಾಯಂಕಾಲ ೫½ ಘಂಟೆಯ ವೇಳೆಯಲ್ಲಿ ಪಾಂಚಭೌತಿಕವಾದ ತಮ್ಮ ಪ್ರಾಕೃತ ಶರೀರವನು ತೊರೆದು ನಿತ್ಯ ಸುಖವನ್ನೈದಿದರೆಂಬುದಂ ಕೇಳಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಈ ಅರಸರವರು ಈಗ್ಯೆ ಸ್ವಲ್ಪದಿನಗಳ ಮೊದಲು ಶರೀರ ಸೌಖ್ಯವೊಪ್ಪನೆ ನರಳುತಲಿದ್ದು, ತನ್ನಿವಾರಣೆಯಬಗ್ಯೆ ಮಾಡಲ್ಪಟ್ಟ ಚಿಕಿತ್ಸೆಗಳೆಲ್ಲವು ವ್ಯರ್ಥಗಳಾಗಿ,ಕಡೆಗೆ ಅವರು ಮೃತ್ಯುವಶರಾಗುವಂತೆ ಪರಿಣಮಿಸಿತು ಈ ಅರಸರವರ ವಿಯೋಗವು ಅವರ ಪ್ರಜೆಗಳೆಲ್ಲರಿಗೂ ಮಹತ್ತರವಾದ ದುಃಖವನ್ನುಂಟುಮಾಡಿದೆ ಯೆಂಬದಾಗಿ ಅಲ್ಲಿನ ಬಾತಮಿದಾರನ ಕಾಗದದ ಮೂಲಕ ತಿಳಿಯ ಬರುತಿದೆ.

ಮೊದಲು ನಿಂದಲೂ ಪುದುಕೋಟೆ ಸಂಸ್ಥಾನದ ಅರಸರು ಬ್ರಿಟಿಷ್ ಗವರ್ನಮೆಂಟಿನವರಿಗೆ ಮಿತ್ರರಾಗಿಯೂ, ಸಹಾಯಕರಾಗಿಯೂ ಯಿರುತ್ತಾರೆ. ಬ್ರಿಟಿಷನವರು ದಕ್ಷಿಣ ದೇಶದಲ್ಲಿ ಔತ್ಕೃಷ್ಟ್ಯ ಸಂಪಾದನಕ್ಕಾಗಿ ಪೇಚಾಡಿದ ಕಾಲದೊಳು ಅವರಿಗೆ ಸದರೀ ಅರಸರು ಸೈನ್ಯಮೂಲಕವಾಗಿಯೂ ಇತರ ವಿಧವಾಗಿಯೂ ಸಹಾಯ ಮಾಡಿದರು. ಈರಾಜ ವಂಶಕ್ಕೆ ಬಹುಕಾಲದತನಕ ೨೧ ತೋಪುಗಳ ಸಲ್ಯೂಟಿಯು ಜರುಗುತಲಿದ್ದು. ಇವರು ಬ್ರಿಟಿಷ್ ಸರ್ಕಾರಕ್ಕೆ ನಗದಿ ಯೇನೂ ಕೊಡುವದಿಲ್ಲವು ಡ್ಯೂಕ್ ಆಫ್ ಎಡಿಂಬರೋ ಯವರು ಮದರಾಸಿಗೆ ಬಂದಿದ್ದ ಕಾಲದೊಳು ಗತ ೨೦ ಸಂವತ್ಸರಗಳಿಗೆ ಮೇಲ್ಪಟ್ಟು ನಡೆದು ಬರುತಲಿದ್ದ ಮರ್ಯಾದೆಗಳೆಲ್ಲವೂ, ವಾಪಸ್ ತೆಗದುಕೊಳ್ಳಲ್ಪಟ್ಟವು. ಪರಂತು ಇದರ ಕಾರಣ ಮಾತ್ರ ಅದ್ಯಾಪಿ ಪ್ರಕಟವಾಗಲಿಲ್ಲವು. ಅದರಿಂದೀಚೆಗೆ ಅರಸರಿಗೆ ೧೧ ತೋಪುಗಳೂ, ಅರಸರೆಂಬ ಪ್ರಶಸ್ತಿಯು ಸಹ ಕೊಡಲ್ಪಟ್ಟವು. ಪುದುಕೋಟೆ ಅರಸರಿಗೆ ಸ್ವೀಕಾರ ಸ್ವಾತಂತ್ರ್ಯವು ವುಂಟುಮಾಡಲ್ಪಟ್ಟಮೇಲೆ ಅವರು ಈಚೆಗೆ ಒಬ್ಬ ಪುತ್ರನನ್ನು ಸ್ವೀಕಾರ ಮಾಡಿಕೊಂಡರು. ಕೆಲವು ಸಂವತ್ಸರಗಳ ಹಿಂದೆ ಸಂಸ್ಥಾನಕ್ಕೆ ಸಾಲವು ಅಧಿಕವಾಗುತ ಬಂದು ಅದು ಬ್ರಿಟಿಷನವರ ಪರ್ಯಾಲೋಚನೆಗೆ ವಿಷಯವಾಗಲು, ಆಗ ಅವರು ಅಲ್ಲಿನ ಆಡಳಿತ ಕ್ರಮವನ್ನು ಕುರಿತು ವಿಚಾರಿಸುವಂತೆ ಪೊಲಿಟಿಕಲ್ ಏಜಂಟರಿಗೆ ಆಜ್ಞಾಪಿಸಿದರು. ಬಳಿಕ ಪೊಲಿಟಿಕಲ್ ಏಜಂಟರು ಪ್ರವೇಶಿಸಿ, ರಕ್ಷಾಪ್ರ್ಯವಸ್ಥೆಗಳು ನಡತೆ ಏರ್ಪಾಟು ಉಳಿಯುವ ಮೊಬಲಗಿನಲ್ಲಿ ಸಾಲೀಯಾನಾ ನಾಲ್ಕು ವರೆ ಲಕ್ಷ ರೂಪಾಯಿಗಳಂತೆ ಕೊಟ್ಟು ಸಾಲವನ್ನು ತೀರಿಸಬೇಕೆಂದು ಏರ್ಪಾಡುಮಾಡಿ ಮುಂದೆ ಅರಸರ ಅರ್ಜಿ ವಿಷಯಕವಾದ ತಗಾದೆಗಳಲ್ಲಿ ಬ್ರಿಟಿಷ್ ಗವರ್ನಮೆಂಟಿನವರು ಸುತರಾಂ ಪ್ರವೇಶಿಸಲಾರರೆಂದು ಖಂಡಿತವಾಗಿ ತಿಳಿಸಿದರು. ಪುದುಕೋಟೆ ಸಂಸ್ಥಾನವು ತಂಜಾವೂರು ತಿರುಚನಾಪಲ್ಲಿ ಮತ್ತು ಮಧುರೆ ಡಿಸ್ಟ್ರಿಕ್ಟುಗಳಿಗೆ ಮಧ್ಯೆ ಇರುತಿದೆ. ಗವರ್ನಮೆಂಟನವರ ಸಾಲಿರ್ಯಾನತೇ ರಿಪೋರ್ಟಿನ ಪ್ರಕಾರ ಇದು ೫ ಲಕ್ಷ ರೂಪಾಯಿಗಳ ಒಟ್ಟು ಆಯತಿ ಉಳ್ಳದ್ದಾಗಿಯೂ,ಅದ್ರಲ್ಲಿ ೩ ಲಕ್ಷ ರೂಪಾಯಿಗಳತನಕ ಇನಾಂ ಮತ್ತು ಜಹಗಿರಗಳಾಗಿಯೂ, ಬಾಕಿ ಎರಡುಲಕ್ಷ ರೂಪಾಯಿಗಳು ಅರಸರವರಿಗೆ ಹುಟ್ಟುವಳಿಯಾಗತಕ್ಕದಾಗಿಯೂ ಇರುತಿದೆ. ಈ ಅರಸರಿಗೂ ಬ್ರಿಟಿಷ್ ಸರ್ಕಾರಕ್ಕೂ ತಹನಾಮೆಯೊಂದೂ ನಡೆಯಲಿಲ್ಲವಾಗಿ ಬ್ರಿಟಿಷನವರಿಗೆ ನಗದಿಕೊಡಬೇಕಾದ

ಆವಶ್ಯಕತೆ ಇಲ್ಲವಾಯಿತು. ಅಲ್ಲಿನ ಜುಡಿಷಿಯಲ್ ವಿಚಾರಣಾಧಿಕಾರವು ಅರಸರವರಿಗೆ ಸಂಬಂಧಿಸಿದ್ದಾಗಿರುತಿದೆ ಆದಾಗ್ಯೂ ಮದರಾಸ್‌ಗವರ್ನಮೆಂಟಿನವರು ಅಲ್ಲಿನಪ್ರಜೆಗಳಿಂದ ಬರತಕ್ಕ ಫಿರ್ಯಾದಿಗಳನ್ನು ಅಂಗೀಕರಿಸಿ ಅವು ಅರಸರವರ್ಯಾಲೋಚನೆಯ ಬಗ್ಗೆ ತಮ್ಮ ಪರಾಮರ್ಶೆ ಕಳುಹಿಸುವ ಪದ್ಧತಿಯನ್ನು ಮಾತ್ರ ಉಳಿಸಿಕೊಂಡಿರುತ್ತಾರೆ ಪ್ರಸಕ್ತ ಸಂಸ್ಥಾನವು ೧೦೪೬ ಚದರಮೈಲುಗಳ ವಿಸ್ತೀರ್ಣವುಳ್ಳದ್ದಾಗಿಯೂ, ೧೮೭೧ನೇ ಇಸವಿಯ ಜಾನೇಷುಮಾರಿ ಲೆಕ್ಕ ಪ್ರಕಾರ ೧೦೬, ೧೮೮ ಪ್ರಜಾಸಂಖ್ಯೆಯುಳ್ಳದ್ದಾಗಿಯೂ ಇರುತಿದೆ. ಈ ಜನಗಳಲ್ಲಿಕಿ ಪ್ರಾಯೇಣ ಕೃಷಿಜೀವಿಗಳೇ ಅಧಿಕವಾಗಿರುತ್ತಾರೆ. ದೇಶವು ಸಾಧಾರಣವಾಗಿ ಸಮಭೂಮಿಯುಳ್ಳ ಮೈದಾನ ಪ್ರಾಂತವಾಗಿಯೂ ಅಲ್ಲಿಯಲ್ಲಿ ಪರಿಮಿತವಾದ ಚಿಕ್ಕ ಗುಡ್ಡಗಳುಳ್ಳದ್ದಾಗಿಯೂ, ಅವುಗಳಲ್ಲಿ ಕೆಲವು ಪುರಾತನಗಳಾದ ಅಡವಿಗಳುಳ್ಳದ್ದಾಗಿಯೂ, ಇರುತಿದೆ. ಈಸಂಸ್ಥಾನವಲ್ಲಿ ಸಾಗುವಳಿಗೆ ಬೇಕಾದ ಜಲವಸತಿಯನ್ನುಂಟು ಮಾಡತಕ್ಕ ದೊಡ್ಡ ಸಣ್ಣ ಕೆರೆಗಳು ೩೦೦೦ ವರೆವಿಗೆಯಿವೆ. ರಾಜವಂಶದವರು ಮಾತ್ರ ೧,೧೦,೦೦೦ ಎಕ್ರೆಗಳ ಜಮೀನನ್ನು ಈಗ ಅನುಭವಿಸುತಲಿದ್ದಾರೆ. ೯೫,೬೦೭ ಎಕ್ರೆಗಳಜಮೀನ್ ದೇವಸ್ಥಾನಗಳಿಗೆ ಸಂಬಂಧಿಸಿದ ಮಾನ್ಯಗಳಾಗಿರುತಿವೆ. ೯,೫೮೬ ಎಕ್ರೆಗಳ ಜಮೀನ್ ಸತ್ರ ಉಪಯೋಗಿಯಾಗಿದೆ. ಬ್ರಾಹ್ಮಣರಿಗೆ ಅನೇಕ ಶರತಿಗಳಮೇಲೆ ಕೊಡಲ್ಪಟ್ಟಿರುವ ನೌಕರಿ ಇನಾಂಗಳ ಜಮೀನ್ ಲಕ್ಷ ಎಕ್ರೆಗಳಿಗೆ ಮೇಲ್ಪಟ್ಟದ್ದಾಗಿರುತಿವೆ. ಈಗ ಅರಸರವರಿಗೆ ೫೭ ವರುಷಗಳ ವಯಸ್ಸಾಗಿರುವಂತೆ ತಿಳಿಯಬರುತಿದೆ ಇವರು ಕೇವಲ ಉದಾರಶೀಲರಾಗಿಯೂ ದೇವಬ್ರಾಹ್ಮಣ ಭಕ್ತಿಯುಳ್ಳವರಾಗಿಯೂ ಪ್ರಜಗಳಿಗೆ ಅತಿ ಸುಲಭರಾಗಿಯೂ ಬ್ರಿಟಿಷ್ ಗವರ್ನಮೆಂಟಿನವರ ಪ್ರೀತಿ ಗೌರವಗಳಿಗೆ ಪಾತ್ರರಾಗಿಯೂಯಿದ್ದರು ಇಂತವರಿಗೆ ಈಗ ಪ್ರಾಪ್ತವಾದ ಮರಣವು ಕೇವಲ ಶೋಚನೀಯವೆಂಬುದರೊಳೇನೂ ಸಂದೇಹವಿಲ್ಲವು

DECLINE OF CHARITY IN MYSORE

ಈ ಮೈಸೂರು ದೇಶವನ್ನು, ಶ್ರೀಮನ್ ಮಹಾರಾಜಾ ಕೃಷ್ಣರಾಜ ಒಡೆಯರ್ ಬಹದೂರರವರು ೧೭೯೯ನೇ ಇಸವಿಯಮೊದಲು ೩೧ನೇ ಇಸವಿಯ ತನಕ ಪಾಲಿಸುತಲಿದ್ದರು. ಈ ಮಧ್ಯಕಾಲದಲ್ಲಿ ಅವರು ಅನೇಕ ಅಗ್ರಹಾರಗಳು, ಸತ್ರಗಳು, ಕೆರೆಗಳು, ತೋಪುಗಳುಮೊದಲಾದವು ಸರ್ಕಾರದಿಂದ ಏರ್ಪಡಿಸಿದರಲ್ಲದೆ, ಇಂತಾ ಧರ್ಮಕಾರ್ಯಗಳನ್ನು ಮಾಡುವಂತೆ ತಮ್ಮ ಪ್ರಜೆಗಳನ್ನು ಪ್ರೇರಿಸಿ ಹಾಗೆಮಾಡಿದವರಿಗೆ ತಕ್ಕ ಪ್ರೋತ್ಸಾಹವನ್ನುಂಟುಮಾಡುತಲಿದ್ದರು. ತರುವಾಯ ಈ ರಾಜ್ಯವು ಬ್ರಿಟಿಷ್ ಗವರ್ನಮೆಂಟನವರಿಂದ ಮಹಾರಾಜರವರ ಹೆಸರಿನಲ್ಲಿ ಪಾಲಿಸಲ್ಪಡಲಿಕ್ಕೆ ಪ್ರಾರಂಭವಾಗಲು, ಸರ್ ಮಾರ್ಕ್ ಕಬ್ಬನ್ ಸಾಹೇಬರವರು ಇಲ್ಲಿನ ಚೀಫ್‌ಕಮಿಷನರಾಗಿ ೧೮೬೧ ನೇ ಇಸವಿ ತನಕ ರಾಜ್ಯಭಾರ ಮಾಡುತಲಿದ್ದರು. ಇವರು ತಮ್ಮ ಪ್ರಭುತ್ವಕಾಲವಲ್ಲಿ ಸದರೀ ಧರ್ಮಗಳೆನ್ನೆಲ್ಲ ಕಾಪಾಡಿದರಲ್ಲದೆ ನೂತನಗಳಾದ ಅನೇಕ ಕೆರೆ, ಭಾವಿ, ಸತ್ರ, ತೋಪು ಸಾಲ್‌ಗಿಡಗಳು ಮುಂತಾದವನ್ನೇರ್ಪಡಿಸಿದರು. ಇದಲ್ಲದೆ ಅನಾಥರ ಸಂರಕ್ಷಣಾರ್ಥ ಲಂಗರ್‌ಖಾನೆಯನ್ನು ಸಹ ನೆಲಗೊಳಿಸಿದರು. ಅವರ ತಾತ್ಪರ್ಯವು ಈ ಪ್ರಕಾರ ಇದ್ದದುಕಂಡು ಅನೇಕಮಂದಿ ಸರ್ಕಾರ್ ನೌಕರರೂ, ವರ್ತಕರೂ, ಜಮೀನ್‌ದಾರರು ಸಹ ಧರ್ಮಕಾರ್ಯಗಳನ್ನು ಮಾಡಲಾರಂಭಿಸಿದರು. ಅಂತವರೊಬ್ಬರಿಬ್ಬರ ಹೆಸರುಗಳನ್ನು ಇದರಡಿತಿಳಿಸುವೆವು. ಕೊಲ್ಲಂ ವೆಂಕಟ್ರಾಯರವರು, ಗುಂಡೋಪಂತರು, ಅಮಲ್‌ದಾರ್ ರಾಮಪ್ಪನವರು, ಸೂರಪ್ಪನವರು, ಸಭಾಪತಿ ಮೊದಲಿಯಾರ್ರವರು, ನರಸಪ್ಪನವರು, ದೊಡ್ಡಿ ಅಪ್ಪಯ್ಯನವರು, ದಾಮೋದರದಾಸ್ ಸೇಟ್‌ರವರು, ಏಕಾಂಬ್ರ ರಾಮಾನುಜಯವರು ಮುಂತಾದವರು ಆ ತರುವಾಯ ಅಂದರೆ, ೧೮೬೧ನೇ ಇಸವಿಯ ಮೊದಲು ಈಚೆಗೆ ಕ್ರಮೇಣ ಉದ್ಯೋಗಸ್ಥರಿಗೆ ಆಯತಿಯು, ಪೂರ್ವಕ್ಕಿಂತಲೂ ಮೂರುನಾಲ್ಕರಷ್ಟು ಜಾಸ್ತಿಯಾಗುತಬಂತು. ವರ್ತಕರಿಗೆ ವಿಶೇಷ ಸ್ವಾತಂತ್ರ್ಯವೇರ್ಪಟ್ಟಿತು, ಜನಗಳಿಗೆ ವಿದ್ಯಾ ನಾಗರಿಕತೆಗಳು ವೃದ್ಧಿಯಾದವು. ಹೀಗಾದಾಗ್ಯೂ ಧರ್ಮಬುದ್ಧಿ ಎಂಬುದು ಮಾತ್ರ ವೃದ್ಧಿಯನ್ನೈದಲಿಕ್ಕೆ ಬದಲು ಇದ್ದದ್ದೂ ನಶಿಸಿ ಹೋಯಿತು. ಇಂತಾ ಧರ್ಮಕಾರ್ಯಗಳು ಈಗಿನ ಕಾಲದಲ್ಲಿ ನಿರರ್ಥಕಗಳೆನ್ನುವ ಕವಾಚಿತ್ ಅನರ್ಥಕರಗಳೆಂಬಭಾವನೆಯು ಸಹ ಅಧಿಕವಾಗುತಬಂದವರಿಂದ ಹೊಸದಾಗಿ ಏರ್ಪಡಲಿಕ್ಕೆ ಬದಲಾಗಿ ಇದ್ದದನ್ನು ಕೂಡ ಈಗ ನಾಶಪಡಿಸಬೇಕೆಂಬ ತಾತ್ಪರ್ಯವು ಜನಗಳಿಗೆ ಪ್ರಬಲಾಗಿದೆ. ಸರ್ ಮಾರ್ಕ್ ಕಬ್ಬನ್ ಯವರು ಈವಿಷಯದಲ್ಲಿ ಹಿಂದೆ ಕೊಟ್ಟದ್ದ ಇಸ್ತಿಹಾರ್‌ಗಳನ್ನು ಈಗಿನ ಸರ್ಕಾರದವರು ಕಬ್ಬತೇ ರದ್ದುಮಾಡದೆ ಹೋದಾಗ್ಯೂ ತಮ್ಮ ತಾತ್ಪರ್ಯವನ್ನು ಕಾರ್ಯತಃ ತೋರಿಸದಿರಲಿಲ್ಲವು ಬಹುಜನೋಪಯುಕ್ತಗಳಾದ ಕೆರೆಗಳ ಸಂರಕ್ಷಣಾರ್ಥ ಕೊಡಲ್ಪಟ್ಟದ್ದ ಕೊಡಗಿ ಇನಾಂಗಳು ಸರ್ಕಾರ್ ದಾಖಲಾದವು. ತಲಾವ್ ಕಾಮಗಾರಿಗಳನ್ನು ಸರ್ಕಾರದವರೇ ಮಾಡಲಿಕ್ಕೆ ಸಾಧ್ಯವಲ್ಲವೆಂಬ ಅಂಶವನ್ನು ಹಿಂದಿನ ಸಂವತ್ಸರದ ದರ್ಬಾರ್ ಕಾಲದಲ್ಲಿ ದಿವಾನರವರು ಬಹಿರಂಗವಾಗಿ ತಿಳಿಸಿದರು. ಇದರಿಂದ ಮುಂದೆ ಜಲಾಧಾರಗಳು ನೂತನವಾಗಿ ಏರ್ಪಡುವದಿಲ್ಲವೆಂಬ ಆಶ ಸ್ಪಷ್ಟವಾಯಿತು. ಸರ್ಕಾರದ ಪ್ರವೃತ್ತಿಯು ಅಧಿಕಾರಿಗಳ ಬದ್ಧಿಗೆ ಸುಲಭವಾಗಿ ಏರ್ಪಟ್ಟಿತು. ಕಾಲಸ್ಥಿತಿಯು ಅವ್ಯವಸ್ಥಿತವಾದ್ದರಿಂದ ಕಡೆಗೆ ಕುಡಿಯುವದಕ್ಕೆ ನೀರು ದೊರೆಯುವದು ಪ್ರಯಾಸವಾಗಿ ಪರಿಣಮಿಸಿತು ಸರ್ಕಾರ್ ಅನ್ನಸತ್ರಗಳು ಮೌಕೂಫ್ ಅಥವಾ ತಗ್ಗಿಸಲ್ಪಟ್ಟವು ಅಥವಾ ಕೆಲವು ಒಳಪಟ್ಟವು. ಬೆಂಗಳೂರಿಂದ ಮದ್ರಾಸಿಗೆ ಹೋಗುವ ರಸ್ತೆಯಲ್ಲಿರುವ ಚಿಕ್ಕಜಾಲ ಗ್ರಾಮದ ಬಳಿ ದೊಡ್ಡಿ ಅಪ್ಪಯ್ಯನವರು ಸರ್ಕಾರದಿಂದ ಇನಾಂ ಪಡೆದು ಕಟ್ಟಿರುವಸತ್ರದಲ್ಲಿ ಮುಸಾಫರರಿಗೆ ಸೀದಾ ಈಗ್ಯೆ ಬಹುಕಾಲದಿಂದ ಕೊಡಲ್ಪಡುತಲಿತ್ತಷ್ಟೆ. ಅವರ ಮೊಮ್ಮಕ್ಕಳಾದ ಸಾಹುಕಾರ್ ಮುನಿವೆಂಕಟರಮಣಶೆಟ್ಟರವರು ಸದರೀ ಪದ್ಧತಿಯನ್ನು ಈಚೆಗೆ ಶಾಶ್ವತಂಗವಾಗಿ ನಿಲ್ಲಿಸಿಬಿಟ್ಟರು ಈ ಕ್ರಮವು ಗುಂತಕಲ್ ತರೆ ಸತ್ರ, ತುಮಕೂರು ನರಸಪ್ಪನವರಸತ್ರ, ಕೋಲಾರದ ಸುಬ್ಬರಾಯರವರಸತ್ರ ಮುಂತಾದವುಗಳ ವಿಷಯದಲ್ಲಿ ಸಹ ಅನುಸರಿಸಲ್ಪಟ್ಟಿವೆಯೆಂದು ಕೇಳುತ್ತೇವೆ. ಕಾಲಗತಿಯಿಂದ ಈ ದೇಶದಲ್ಲಿ ಜನಗಳಿಗೆ ಧರ್ಮಬುದ್ಧಿ ಎಂಬದು ಅತ್ಯಂತಿಕವಾಗಿ ಕುಂದಿಹೋಯಿತು. ಅವರೆ ಇವರಿಗೆ ಜ್ಞಾನ ಭಕ್ತಿ ವೈರಾಗ್ಯಗಳೆಂಬವು ಮಾತ್ರ ಅಚಲಿತವಾಗಿವೆ. ಅದು ಹ್ಯಾಗಂದರೆ,-ಅರ್ಥಾರ್ಜನೆಯೊಳು ಜ್ಞಾನವೂ, ಪತ್ನೀಪುತ್ರರಲ್ಲಿ ಭಕ್ತಿಯೂ, ಇಷ್ಟ ಮಿತ್ರರಲ್ಲಿ ವೈರಾಗ್ಯವೂ ನಿರೂಢಗಳಾಗಿವೆ. "ಯಥಾರಾಜಾ ತಥಾಪ್ರಜಾಃ" ಎಂಬಂತೆ ಗವರ್ನಮೆಂಟನವರಿಗೇ ಧರ್ಮ ಜ್ಞಾನವು ಲುಪ್ತವಾಗಿರುವಾಗ್ಯೆ ಅವರಿಂದ ಪಾಲಿತರಾದ ಪ್ರಜೆಗಳೆನ್ನಿಷ್ಟು ಧರ್ಮಬುದ್ಧಿಯುಳ್ಳವರಾಗಿರುವರು? ಧರ್ಮವು ಅರಣ್ಯಗತವಾದಮೇಲೆ ಕಾಲವೃಷ್ಟಿ ಎಲ್ಲಿಂದು? ಕಾಲವೃಷ್ಟಿಯು ಅಭಾವವಾದಮೇಲೆ ಫಲಸಮೃದ್ಧಿ ಎಲ್ಲಿಯದು, ಫಲಸಮೃದ್ಧಿಇಲ್ಲದೆ ಹೋದಮೇಲೆ ಸುಖಜೀವನ ವೆಂಬದು ನಿರೀಕ್ಷಿಸುವಬಗೆ ಹ್ಯಾಗೆ! ಏಮಚ ನಿನ್ನಬಾಳ್ವಿಕೆ ನಿನ್ನ ಮನದಿಂದಿರ್ಪುದು, ನಿನ್ನ ವರ್ತನ ನಿನ್ನ ಅಭಿರುಚಿಯಂತಿರುವದು ಎಂಬ ಲೋಕೋಕ್ತಿಯಂತೆ ಈ ದೇಶೀಯರ ಸ್ಥಿತಿ ವಿಪರ್ಯಯಕ್ಕೆ ಅವರವರ ಮನೋವರ್ತನಗಳೇ ಸಾಕಾದ ಕಾರಣಗಳಾಗಿರುತಿವೆ.

Occasional Notes
ನೈಮಿತ್ತಿಕವಿಷಯನ್ಯಾಸ

Maharaja Dhulip Sing —ಪಂಜಾಬದೇಶದ ಅರಸರಾದ ಮಹಾರಾಜಾ ದುಲೀಪ್‌ಸಿಂಗರವರು ಪದಭ್ರಷ್ಟರಾಗಿ ಬಹುಕಾಲದಮೊದಲು ತಮ್ಮಕುಟುಂಬದೊಡನ ಇಂಗ್ಲಾಂಡ್‌ದೇಶದಲ್ಲಿ ವಾಸವಾಗಿರುತಲಿದ್ದದು ಪ್ರಸಿದ್ಧವಾಗಿದೆಯಷ್ಟೆ. ಈಚೆಗೆ ಅವರ ಚಿತ್ತವೃತ್ತಿಯು ಬದಲಾಯಿಸಿ, ಸ್ವದೇಶಜನಗಳಲ್ಲಿ ಸೇರಬೇಕೆಂಬ ಅತ್ಯುತ್ಕಟಾಪೇಕ್ಷೆಯಿಂದ ಈಗ ತಮ್ಮ ಕುಟುಂಬಸಮೇತರಾಗಿ ಹೊರಟು ಇಂಡ್ಯಾದೇಶಕ್ಕೆ ಬರುತಲಿದಾರೆ ಈಚೆಗೆಬಂದ ತಂತಿವೃತ್ತಾಂತದಮೂಲಕ ಸದರೀಯವರು ಈಚೆಗೆ ಒಂದು ಇಸ್ತಿಹಾರ್ ಪ್ರಮೋಷ ಮಾ. ತನ್ಮೂಲಕ ಕೆದುಕುಉಂಟುಮಾಡಲು ಪ್ರಯತ್ನಪಡುತ್ತಾರೆಂಬ್ಬ ಕಾರಣದ ಮೇಲೆ ಇಂಡ್ಯಾ ಗವರ್ನಮೆಂಟಿನ ಹುಕುಂ ಅನುಸರಿಸಿ ಯೇಡನ ಪಟ್ಟಣದಲ್ಲಿ ತಡೆಯಲ್ಪಟ್ಟದ್ದಾಗಿ ತಿಳಿಯಬರುತಿದೆ

Grant of a site —ಮುಂಬೈಯಲ್ಲಿ ಮಹಮ್ಮದಿಯನ್ ಜನಗಳ ವಿದ್ಯಾಭ್ಯಾಸಕ್ಕಾಗಿ ಒಂದು ಪಾಠಶಾಲೆಯನ್ನು ಕಟ್ಟಿಸಬೇಕೆಂದು ಅಲ್ಲಿನ ಮಹಮ್ಮದನ್ ದೊಡ್ಡಮನುಷ್ಯರು ಪ್ರಯತ್ನಪಟ್ಟು ಅದಕ್ಕಾಗಿ ಸ್ಥಳಬೇಕೆಂದು ಗವರ್ನಮೆಂಟವರನ್ನು ಕೇಳಲು ಅಲ್ಲಿನ ಮ್ಯುನಿಸಿಪಲ್‌ಹಾಲಿಗೆ ಸೇರಿದಂತೆ ಇರುವ ಬೈಲಿನಲ್ಲಿ ಸ್ಥಳಕೊಟ್ಟಿರುತ್ತಾರೆ. ಈಕಟ್ಟಡಕ್ಕೆ ಸುಮಾರು ೧,೩೦,೦೦೦ರೂಪಾಯಿಗಳು ಹಿಡಿಯಬಹುದೆಂದು ಅಂದಾಜಾಗಿದೆ. ಅದರಲ್ಲಿಕಿ ಮಹಮ್ಮದನ್ ಜನಗಳು ಒಂದುಲಕ್ಷರೂಪಾಯಿಗಳು ಜಮಾಯಿಸುವರು, ಉಳಿದಮೊಬಲಗನ್ನು ಗವರ್ನಮೆಂಟನವರು ಕೊಡುವರು.

Resignation of service. —ಮದರಾಸ್‌ನಲ್ಲಿ ಕೇವಲ ಪ್ರಸಿದ್ಧವಾಗಿರುವ ಅರ್ಬತ್‌ನಾಟ್ ಕಂಪೆನಿಯವರ ಮುಖ್ಯ ಮೆ॥ ರಾಮಸ್ವಾಮಿ ಮೊದಲಿಯಾರ್ ಸಿ. ಐ. ಇ ಯವರು ಮಾಡುತಿರುವ ಧರ್ಮಕಾರ್ಯಗಳು ಸಾಮಾನ್ಯವಾಗಿ ಎಲ್ಲರಿಗೂ ತಿಳಿದೇಯಿದೆಯಷ್ಟೆ. ಸದರೀದೊಡ್ಡಮನುಷ್ಯರು ಸದರೀ ಕಂಪೆನಿಯಲ್ಲಿ ಮಾಡಿದ್ದ ಸುಮಾರು ನೌಕರಿಯಬಗ್ಗೆ ಅವರಿಗುಂಟಾದ ಕೃತಜ್ಞತಾದಿ ಬಹುಮಾನ ಕಟ್ಟಿತಿರುವವರಿ ಸದರೀ ಮೊದಲಿಯಾರ್ರವರ ಹೆಸರಿನಲ್ಲಿ, ಮದರಾಸ್ ಯೂನಿವರ್ಸಿಟಿ ಪರೀಕ್ಷೆಯಲ್ಲಿ ಉತ್ತಮತರಗತಿಯೊಳು ತೇರ್ಗಡೆಯಾಗುವ ವಿದ್ಯಾರ್ಥಿಗೆ ಒಂದು ಸ್ವರ್ಣಪದಕವು ಕೊಡುವದಕ್ಕೆ ತಕ್ಕ ಏರ್ಪಾಡು ಮಾಡುತಿರುವದಲ್ಲದೆ ಸದರಿ ಮಾರ್‌ರವರಿಗೆ ಒಂದುಚಿನ್ನದತಟ್ಟೆ ಬಹುಮಾನವಾದ ಬೇಕೆಂದು ನಿಶ್ಚಯಿಸಿರುವಂತೆ ಕೇಳಸಂಕೊಳ್ಳುತ್ತೇವೆ.

The Punjab Chiefs school —ಪಂಜಾಬ್‌ದೇಶದಲ್ಲಿ ಕೇವಲ ಅರಸುಮಕ್ಕಳ ವಿದ್ಯಾಭ್ಯಾಸಕ್ಕಾಗಿಯೇ ಏರ್ಪಡುವದಾಗಿರುವ ಪಾಠಶಾಲೆಯ ಕಮಿಟಿಯವರವರಕ್ಕೆ ೧,೫೦,೦೦೦ರೂಪಾಯಿಗಳು ವಸೂಲಾಗಿ ಬಂದಿರುತಿವೆ ಇದರಲ್ಲಿಕಿ ಪತಿಯಾಲಾ ಮಹಾರಾಜರವರು ೫೦,೦೦೦ ರೂ॥ ಬಹವಲ್‌ಪುರದ ನವಾಬರು ೩೫,೦೦೦ ರೂ॥ ಕಾಶ್ಮೀರದ ಮಹಾರಾಜರವರೂ, ಮಾಲೆರ್‌ಕೋಟ್ಲಾ ನವಾಬರವರೂ ಕೂಡಿ ೧೦,೦೦೦ ರೂ॥ ಮೇರಿಸಿರೋತ್ತದಲ್ಲಿ ಆಯಾಸ್ಥಳಗಳೊಳು ಚಂದಾವಸೂಲ್ಪಟ್ಟ ಅಥವಾ ವಸೂಲಾದ ೩೬೦೧೫ ರೂಪಾಯಿಗಳು ಸೇರಿರುವದಿಲ್ಲವು. ಇದರಲ್ಲಿ ಕಪುರ್ತಲಾ ಅರಸರವರ ಬಾ॥ ೫೦,೦೦೦ ಜೀಂದ್‌ಅರಸರ ಬಾಬತು ೧೦,೦೦೦ ರೂಪಾಯಿಗಳು ಸೇರಿರುತಿವೆ ಇದಲ್ಲದೆ ಕಳೆದತಿಂಗಳ ೩೧ನೇ ತಾರೀಖ್‌ವರಿವಿಗೆ, ಈಗ ರಾಜ್ಯವಾಳುತಲಿರುವ ಅರಸುಗಳಿಂದಲೂ ನೇಟಿವ್ ದೊಡ್ಡಮನುಷ್ಯರಿಂದಲೂ ವಸೂಲ್‌ಬಂದ ಅಥವಾ ವಾಗ್ದಾನ ಕೊಡಲ್ಪಟ್ಟ ಮೊತ್ತವು ೧,೫೬,೫೩೨ ರೂಪಾಯಿಗಳು ಪಂಜಾಬ್ ಗವರ್ನಮೆಂಟಿನವರು ಅಷ್ಟು ಮೊಬಲಗು ಕೊಡುವರು. ಇಂಡ್ಯಾ ಗವರ್ನಮೆಂಟನವರು ೧೫,೦೦೦ ರೂಪಾಯಿಗಳು ಕೊಡುವರು. ಆದದರಿಂದ ಈತಾರೀಖ್‌ವರಿವಿಗೆ, ಕಮಿಟಿಯವರಿಗೆ ಇರುವ ಒಟ್ಟು ಆಯತಿಯು ೩ ೫೨,೮೭೬ ರೂಪಾಯಿಗಳು.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕ್‌ಜಾತಿವೃತ್ತಾಂತಗಳು.

Deputy Commissioner of Bangalore. ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರ್ ಮೇಜರ್ ಮ್ಯಾಕಿಂಟೈರ್‌ಯವರಿಗೆ ಬರುವತಿಂಗಳ ಮೂರನೇ ತಾ॥ ಮೊದಲು ೧೮ವರ ಪ್ರಿವಿಲೇಜ್‌ರಜಾಕೊಡಲ್ಪಟ್ಟಿರುತಿವೆ. ಇವರಗೈರ್‌ಹಾಜರೀಯಲ್ಲಿ ಡಿಸ್ಟ್ರಿಕ್ಟ್‌ಕೆಲಸವನ್ನು ನೋಡುವವರುಯಾರೋ ಗೊತ್ತಿಲ್ಲವು.

Promotions in the Public Works Department.—ಇಲ್ಲಿನ ಮರಮ್ಮತಿ ಇಲಾಖೆಗೆ ಸೇರಿದ ಐದರದಿಕಂತ ಇಂಜನಿಯರ್‌ಗಳು ಮಾರ್ಚಿ ಮಾರ್ ಗುರ್ರೇಕ್ ತಾರೀಖ್‌ಮೊದಲು ಒಂದು ಗ್ರೇಡ್ ಬಡ್ತೀಹೊಂದಿರುತ್ತಾರೆ. ಮೆ॥ ಸುಬ್ಬರಾಯರವರು, ಮೆ॥ಚಾಲರ್ಯಯವರು, ಮೆ॥ತಿವಾರಿಯವರು, ಮೆ॥ವೆಂಕಟಾಚಾರ್ಯರು, ಮೆ॥ ಗೋವಿಂದಾಚಾರ್ಯರು, ಮೆ॥ ರಂಗರಾಯರವರು, ಮೆ॥ ಪ್ರಹ್ಲಾದರಾಯರವರು, ಮೆ॥ ನಟೇಶಶಾಸ್ತ್ರಿಗಳು, ಇವರು ಕಾಯಂವಾಗಿಯೂ, ಮೆ॥ ಆನಂದತೀರ್ಥರಾಯರವರು, ಹಂಗಾಮಿಯಾಗಿಯೂ, ಒಂದುಗ್ರೇಡ್ ಬಡ್ತೀ ಮಾಡಲ್ಪಟ್ಟಿರುತ್ತಾರೆ

Privilege leave. ಶಿವಮೊಗ್ಗಾ ಡಿಸ್ಟ್ರಿಕ್ಟ್ ತೀರ್ಥಹಳ್ಳಿತಾಲ್ಲೂಕು ಅಮಲ್‌ದಾರ್ ಮೆಸ್ಟರ್ ತಿರುಮಲಾಚಾರ್ಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್‌ಲಾಗಾಯತು ಎರಡುತಿಂಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತಿದೆ. ಶಿವಮೊಗ್ಗಾ ಡೆಪ್ಯುಟಿ ಕಮಿಷನರವರ ಆಫೀಸ್ ಹೆಡ್ ಅಕೌಂಟೆಂಟ್ ಮೆ॥ ವೀರರಾಘವುಲು ನಾಯಡರವರು, ಮೆ॥ ತಿರುಮಲಾಚಾರ್ಯರವರ ಗೈರ್‌ಹಾಜರೀಯಲ್ಲಿ ಅಥವಾ ಮತ್ತೊಂದುಹುಕುಂ ಕೊಡಲ್ಪಡುವತನಕ ತೀರ್ಥಹಳ್ಳಿತಾಲ್ಲೂಕು ಅಮಲ್‌ದಾರ್‌ನ ಮೂರನೇಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್‌ಆಗಲಿಕ್ಕೆ ನೇಮಕರಾಗ್ಮಲ್ಪಟ್ಟಿರುತ್ತಾರೆ.

Mr D Sethu Row.—ಶ್ರೀಮನ್ ಖಜಾನಾಬಕ್ಷಿ ಸೇತೂರಾಯರವರಂದಂತವಿಷಯವಾಗಿ ಹಿಂದೆ ಈ ಪತ್ರಿಕೆಯಲ್ಲಿ ಅನೇಕಾವರ್ತಿ ಪ್ರಸ್ತಾಪಿಸಿ ಸುಮ್ಮನಾದೆವಷ್ಟೆ ಈಚೆಗೆ ನಾವು ಕೇಳುವವರಲ್ಲಿ ಸೇತೂರಾಯರವರಿಗೆ ವಿಧಿಸಲ್ಪಟ್ಟದ್ದ ಜುರ್ಮಾನೆ ಮೊಬಲಗನ್ನು ಮಾತ್ರ ಶ್ರೀಮನ್ಮಹಾರಾಜಾ ಸರ್ಕಾರದವರು ಮಾಫಿಮಾಡಿದರೆಂತಲೂ, ಪೆನ್ಷನ್ ವಿಷಯವು ಎರಡನೆಯ ಸಾರಿ ಪರಿಶೀಲನ ಕ್ವೀನ್ಸ್ ವಾದದಿಂದ ಪ್ರೈವಿ ಕೌನ್ಸಿಲ್ ಅನುಸರಿಸಿ ಕೆಲಸವಾದ ದಿನವೇ ಖುಲಾಸೆ ಮಾಡುವರೆಂತಲೂ, ತಿಳಿಯಬರುತಿದೆ.

Ready for sale —ಮೈಸೂರು ಸೀಮೆಯ ಅ॥ ಕಮಿಷನರ್‌ಗಳು ಮತ್ತು ಅಮಲ್‌ದಾರರು ವಗೈರೆ ಪರೀಕ್ಷೆಗಳಿಗಾಗಿ ಕ್ಲುಪ್ತವಾಗಿರುವ ಗ್ರಂಥಗಳಲ್ಲಿಕಿ ಅನೇಕ ದೊರೆಯದೆ ಪರೀಕ್ಷೆಗೆ ಹೋಗತಕ್ಕವರಿಗೆ ಬಹಳ ಅಡಚಣೆಯಾಗಿದೆಯಷ್ಟೆ, ಇದು ಪರ್ಯಾಲೋಚಿಸಿ ಮೈಸೂರು ಸರ್ಕಾರದವರು, ಪರೀಕ್ಷಾ ಗ್ರಂಥಗಳನ್ನೆಲ್ಲ ಮರಳಿ ಮುದ್ರಿಸುವಂತೆ ಹುಕುಂ ಮಾಡಿದರೆಂತಲೂ, ಅವುಗಳಲ್ಲಿಕಿ ಬಹಳ ದುರ್ಲಭವಾದ ರೆವಿನ್ಯು ಮ್ಯಾನ್ಯುಯಲ್ ಎಂಬಗ್ರಂಥವು ಪ್ರಿಂಟಾಗಿ ವಿಕ್ರಯಿಗೆ ಸಿದ್ಧವಾಗಿದೆಯೆಂತಲೂ, ಅದರಕ್ರಯ ೮ ರೂಪಾಯಿಗಳೆಂತಲೂ, ತಿಳಿಯಬರುತಿದೆ.

Journalistic enterprise —ಈದೇಶದೊಳು ವೃತ್ತಾಂತಪತ್ರಿಕೆಗಳಲ್ಲಿ ಜನಗಳಿಗೆ ಹ್ಯಾಗೆ ಅಭಿಮಾನ ಗೌರವಗಳು ಅಧಿಕವಾಗುತ ಬರುತಿವೆಯೊ, ಹಾಗೆಯೇ ವೃತ್ತಾಂತಪತ್ರಿಕೆಗಳಸಂಖ್ಯೆಯುವೃದ್ಧಿಯಾಗುತಬರುವಂತೆ ಕಾಣುತಿದೆ. ಈಗ ಈ ವಾರದಲ್ಲಿ ಸ್ಪೆಕ್ಟೇಟರ್ ಮತ್ತು ಡೆಯಿಲೀ ಪೋಸ್ಟ್ ಎಂಬದಾಗಿ ಎರಡುಡೆಯಿಲೀ ಪೇಪರ್‌ಗಳು ಪ್ರಕಟಿಸಲ್ಪಡುವರೆಂದಿವೆಯಷ್ಟೆ, ಇಲ್ಲಿನವರೊಪ್ರತ್ಯಾಪಿಮಾನಗಳಿಗೆ ಅವು ಸಾಲವೆಂದೆಣಿಸಿ ಕೆಲವರು ಸೇರಿಬರುವ ತಿಂಗಳ ಗುರ್ರೆ ತಾರೀಖ್‌ಮೊದಲು ಇಲ್ಲಿನ ಕಂಟೋನ್ಮೆಂಟಿನಲ್ಲಿ ಮಾರ್ನಿಂಗ್ ಮೆಯಿಲ್ ಎಂಬದಾಗಿ ಒಂದು ಇಂಗ್ಲೀಷ್‌ಪತ್ರಿಕೆಯನ್ನು ವಾರಕ್ಕೆ ಮೂರಾವರ್ತಿ ಪ್ರಕಟಿಸುವವರಾಗಿದ್ದಾರೆಂದು ತಿಳಿಯಬರುತಿದೆ. ಅವರಪ್ರಕಟನೆ ಪತ್ರಿಕೆಯನ್ನು ನೋಡಿದೆವು. ಅದು ಗರ್ಭದಲ್ಲಿರುವಾಗಲೇ ವಿಶೇಷ ಆಡಂಬರಮಾಡುವಾಗ್ಯೆ ಜನಿಸಿದಮೇಲೆ ಹ್ಯಾಗಿರುವದೋ ಎಂಬ ಅನುಮಾನ ನಮ್ಮನ್ನು ಬಲವಾಗಿಬಾಧಿಸುತಿದೆ. ಆದರೆ ಗರ್ಭಗತವಾದ ಶಿಶುವಿಗೆ ಇರುವಜನ್ಮಾಂತರ ಜ್ಞಾನವು ಜನಿಸಿದ ಕೂಡಲೇ ಹೋಗಿ ಮಾಯೆಯೆಂಬದು ಹ್ಯಾಗೆ ಆವರಿಸಿಕೊಳ್ಳುವದೋ ಹಾಗೆ ಈ ಪತ್ರಿಕೆಸಹ ಪ್ರಥಮಪ್ರವೇಶದತನಕ, ಸಕಲ ಸನ್ನಾಹಯುಕ್ತವಾದ್ದಾಗಿರಬಹುದೆಂದು ನಂಬುತ್ತೇವೆ. ಅದರ ಭವಿಷ್ಯಸ್ಥಿತಿಯನ್ನು ಕುರಿತು ತಿಳಿಸಲಿಕ್ಕೆ ಅದೇ ಈಗ ಸ್ವರೂಪ ಸಂಶಯಾಸ್ಪದವಾಗಿರುವಲ್ಲಿ ನಾವು ಈಗ ಹ್ಯಾಗೆಹೇಳಬಲ್ಲೆವು.

The weather.—ಈ ವಾರದಲ್ಲಿ ಬಿಸಿಲು ದಿನೆದಿನೆ ಅತಿ ಚುರುಕಾಗುತ ಬರುತಿದೆ. ಮನೇಬಾವಿಗಳಲ್ಲಿ ಪ್ರಾಯಶಃ ನೀರು ಬತ್ತಿಹೋಗಿ ಜನಗಳು ಬಿಂದಿಗೆಗಳೊಡನೆ ಬೀದಿಬೀದಿ ತಿರುಗಾಡುತ್ತಾರೆ. ಈಚೆಗೆ ಬಾವಿಗಳಲ್ಲಿ ಈರೀತಿ ನೀರು

ಬತ್ತಿಹೋಗುವದಕ್ಕೆ ಕಾರಣ ವೇನಿರಬಹುದೆಂದು ಯೋಚಿಸಲಾಗಿ, ಮೊದಲು ಕಾಲುವರ್ಷ ಸರಿಯಾಗಿ ನಡೆಯದೆ ಭೂಮಿಯೊಳು ನೀರಿಲ್ಲದೆ ಹೋಗುತ್ತಿದೆ. ಎರಡು—ಪ್ರತಿಸಂವತ್ಸರವೂ ಹೊಸ ಬಾವಿಗಳು ಹಳೇದಕ್ಕಿಂತಲೂ ಬಹಳ ಆಳವಾಗಿ ತೆಗೆಯಲ್ಪಡುವದರಿಂದ ಹಳೇ ಬಾವಿಗಳಲ್ಲಿ ನೀರು ನಿಲ್ಲುವದಿಲ್ಲವು. ಇದಕ್ಕೆ ನಿದರ್ಶನವಾಗಿ ಒಂದೊಂದು ಬಾವಿಯು ಮೂರು ನಾಲ್ಕುದಫಾ ಇಳಿಸಲ್ಪಟ್ಟ ಕೋಟಿಬಾವಿ ಆಗುತ್ತಲಿದೆ. ಕಾಲುವೆಗಳಲ್ಲಿನೀರು ದಾರಾಳವಾಗಿ ಹರಿಯುತಲಿದ್ದದರಿಂದ ಅದರಬಲದಿಂದ ಬಾವಿಗಳಿಗೆ ನೀರುಬರುತಲಿತ್ತು. ಕೆರೆಯಲ್ಲೇ ನೀರು ತುಂಬುವದಿಲ್ಲವಾಗಿ ಬಾವಿಗಳಿಗೆ ನೀರುಬರುವದಕ್ಕೆ ಅವಕಾಶವಿಲ್ಲವಾಯಿತು. ಮ್ಯುನಿಸಿಪಾಲಿಟಿಯವರು ಒಳ್ಳೆಯಜಾಗಾದಲ್ಲಿ ಬೀಜಗೊಂಡದಮೇರೆ ಅಗಲವಾಗಿಯೂ ಆಳವಾಗಿ ಬಾವಿಗಳು ತೆಗೆಯಿಸಿದರೆ ಜನಗಳಿಗೆ ಬಹಳ ಸಹಾಯವಾಗಿರುವದು. ಈ ನರುಕಲ್ಲಾತಿಕ್ಕಾದ ಪ್ರದೇಶವಾದದರಿಂದ ಬಾವಿಗಳಾಗುವದು ಸುಲಭವಾಗಿಯೇ ಇರುವದು

(General Increase—ಈದೇಶದಲ್ಲಿಸರ್ಕಾರದವರು ಈಚೆಗೆಕೆಲವುತಾಲ್ಲೂಕುಗಳನ್ನೂ ಒಂದೆರಡು ಡಿಸ್ಟ್ರಿಕ್ಟುಗಳನ್ನೂ ಮರಳಿಫರ್ಮಾಯಿಸಿ ಅಮಲ್ದಾರರು ಅಸಿಸ್ಟೆಂಟ್ ಕಮ್ಮೀಷನರ್‌ಗಳು ವಗೈರೇರಿಗೆಲ್ಲ ಬಡ್ತೀಮಾಡಿದಅಂಶವನ್ನು ಹಿಂದಿನ ಪತ್ರಿಕೆಗಳಮೂಲಕತಿಳಿಸಿದ್ದೇವೆಯಷ್ಟೆ. ಈಗ ಮರಮತ್ತಿನಲಾಖಾ ಇಂಜನಿಯರುಗಳಿಗೆಲ್ಲ ಬಡ್ತೀಯಾದಂತೆ ಪೂರ್ಣಯ ಗೆಜೆಟಿನಮೂಲಕ ತಿಳಿಯಬರುತಿದೆ ಹೀಗೆಯೇ ದಿವಾನರವರು ವಿಶಿಷ್ಟಯಿಲಾಖಾ ನೌಕರರಿಗೆಲ್ಲಮುನಾಸಬ್ ಬಡ್ತೀ ಮಾಡುತಲಿದ್ದಾರೆಂದು ಕೇಳುತ್ತೇವೆ. ಸಾಬಿಕ್ ಚೀಫ್‌ಕಮ್ಮೀಷನರ್‌ಗಳಾದ ಸರ್ ಮಾರ್ಕ್ ಕಬ್ಬನ್ ಮ|| ಬೌರಿಂಗ್ ಇವರಿಬ್ಬರೂ, ಹ್ಯಾಗೆ ನೌಕರಿದಾರರೆಲ್ಲರಿಗೂ ದಾರಾಳವಾಗಿ ಇಜಾಫೆಕೊಟ್ಟರೋ ಅದೇರೀತಿ ಈಗ ದಿವಾನರಾದ ಮ|| ಶೇಷಾದ್ರಿಅಯ್ಯರವರು, ಎಲ್ಲರಿಗೂ ಬಡ್ತೀಮಾಡುತ್ತಿದ್ದಾರೆ ಶಿವಾಯೆ ಮೇರೆಕಂಡ ಯೂರೋಪಿಯನ್ ಆಫೀಸರ್‌ಗಳಿಬ್ಬರೂ ಖಜಾನೆಯಲ್ಲಿ ಉಳಿಯತಕ್ಕಸಿಲ್ಕು ಮೊಬಲಗನ್ನು ಹುಟಿಕೊಟ್ಟು ಪ್ರಾಶಸ್ತ್ಯವನ್ನು ಪಡೆದರು ಈಗ ದಿವಾನರಾದರೋ ಸಾಗಿಲ್ಲದೆ ವಸೂಲೀಮೊಬಲಗಿಗೆ ತಕ್ಕಂತೆ ಇಜಾಫೆಮಾಡಿ ಕೀರ್ತಿಯಂ ಪಡೆಯತಕ್ಕವರಾಗಿರುತ್ತಾರೆ. ದಿವಾನರವರು ತಮ್ಮ ಔದಾರ್ಯವನ್ನು ಈರೀತಿ ವ್ಯಕ್ತಪಡಿಸಬೇಕಾದಕ್ಕೆ ಕಾರ್ಯಕಾರಣಗಳು ಈಗ ಇಲ್ಲಿ ತಲೆದೋರಿರುವಂತೆ ಕಾಣುತಿದೆ. ಇವರನ್ನು ಸರ್ಕಾರಿ ನೌಕರರೆಲ್ಲರೂ ಸ್ಮರಿಸಿಕೊಳ್ಳಲಿಕ್ಕೆ ಇದೊಂದು ಕಾರಣವಾಯಿತು.

೧೮೮೫—೮೬ನೇ ಇಸವಿಗೆ ಒಂದುಕೋಟಿ ನಾಲ್ಕುಲಕ್ಷದವರಿವಿಗೆ ಖರ್ಚು ಅಂದಾಜಾಗಬಹುದು. ಜಮೆಯೂ ಅದಕ್ಕೆ ತಕ್ಕಂತೆಯೇ ಇರುವದು. ಪರಂತು ಜಮಾಖರ್ಚು ಸರಿಯೋದಾಗ್ಯೂ ಖರ್ಚುಬಾಬತು ಹ್ಯಾಗಾದರೂಕೊಟ್ಟೇ ತೀರಬೇಕು. ಜಮಾಬಾಬತು ಮೊಬಲಗು ಕರಾರ್ವಾಕ್ ವಸೂಲಾಗಿ ಖಜಾನೆಗೆ ಬರುತದೆಂದು ನಂಬುವದಕ್ಕಾಗುವದಿಲ್ಲವು. ದೈವಾತ್ ಖರ್ಚಿಗಿಂತಲೂ ಜಮೆ ಕಮ್ಮಿಯಾಗುವಪಕ್ಷಕ್ಕೆ ಸಾಲವಾದರೂ ಮಾಡಬೇಕು, ಅಥವಾ ರೈತರಮೇಲೆ ಹೊಸಕೆರಿಗೆಯಾದರೂ ಹಾಕಬೇಕು. ಇದುವರಿವಿಗೇನೇ ಸಂಸ್ಥಾನಕ್ಕೆ ಹೊರಿಸಲಾಗದಷ್ಟು ಸಾಲವಾಗಿರುವದರಿಂದ ಅದನ್ನು ಹೆಚ್ಚಿಸುವದು ಉಚಿತವಾಗಿರಲಾರದು. ಹೊಸತೆರಿಗೆ ಹಾಕುವವಿಷಯದಲ್ಲಿ ಹರ್ ಮ್ಯಾಜಸ್ಟೀ ಸರ್ಕಾರದಲ್ಲಿ ಇನ್‌ಕಂಟ್ಯಾಕ್ಸ್ ಎಂಬ ಆದಾಯತೆರಿಗೆ ಜಾರಿಯೊಳುಬಂದುಯಿದೆ. ಅವರ ಉದ್ದೇಶಹ್ಯಾಗಾದರೂ ಇರಲಿ, ಅದನ್ನು ಮೈಸೂರು ದೇಶದೊಳು ಸಹಜಾರಿಯಲ್ಲಿತಂದರೆ ಬಾಜೂರಾಜ್ಯದಲ್ಲಿರುವಂತೆಯೇ ಈ ದೇಶದಲ್ಲೂ ಆಗುವದು. ಅದು ಜನಗಳಿಗೆ ಕಷ್ಟವಾಗಿದ್ದಾಗ್ಯೂ ಪುಕಾರೇ ಮಾಡುವದಕ್ಕೆಮಾತ್ರ ಅವಕಾಶವಿಲ್ಲವು. ಇವೆಲ್ಲವು ಮೈಸೂರು ದೇಶವನ್ನಾಳತಕ್ಕವರ ಅವಧಾನಕ್ಕೆ ಬಂದೇಇರುವವು.

How our money goes—ವಿಸ್ತಾರವಾದ ದೇಶವೂ, ಉದಾರಿಯಾದ ಪ್ರಭುವೂ, ಅಪೇಕ್ಷ್ಯವಾದ ಅನುಕೂಲ್ಯಗಳೂ ಉಂಟಾಗಿರುವ ಈಗಿನಂತಾ ಸಂದರ್ಭಗಳಲ್ಲಿ ಸಹ ಕೃಪಣನೊಬ್ಬನು ಅವಿಚಾರವಾಗಿ ಕುಂಬಳಕಾಯಿ ಹೋಗುವದಕ್ಕಾಗಿ ಚಿಂತಿಸದೆ ಸಾಸಿವೆಯ ನಷ್ಟಕ್ಕಾಗಿ ಪೇಚಾಡುತ ತನ್ನದೇಶದ ದ್ರವ್ಯವು ವ್ಯರ್ಥವಾಗುವದಕ್ಕಾಗಿ ಚಿಂತಿಸುತ ತನ್ನ ವಾದಕ್ಕೆ ದೃಷ್ಟಾಂತವಾಗಿ ದಿವಾನರವರು ಉದಾರ ಸ್ವಭಾವವೊಡನೆ ಈಚೆಗೆ ಮಾಡಿದ ಒಂದು ಪ್ರೊಸೀಡಿಂಗನ್ನು ನಮೂದಿಸಿ, ಅದರ ಮೇಲೆ ತನ್ನಅಭಿಪ್ರಾಯವನ್ನು ತಿಳಿಸುತ್ತಾನೆ. "ಮಾಹೆಮಜಕೂರ್ ೧೪ನೇ ತಾರೀಖಿನಲ್ಲಿ ಕೊಡಲ್ಪಟ್ಟ ಹುಕುಂ ಅನುಸರಿಸಿ, ಮಿಲಿಟರಿ ಸೆಕ್ರೆಟರಿಯವರೂ ಅಮೃತಮಹಲ್ ಇಲಾಖಾ ಆಫೀಸರರು ಸಹ ೧೮೮೬ನೇ ಇಸವಿ ಜನವರಿ ಗುರ್ರೇ ತಾರೀಖ್‌ಮೊದಲು, ಅದೇತಿಂಗಳ ೧೮ನೇ ಮಜಕೂರ್ ದಿವಾನರವರ ಮತ್ತೊಂದು ಪ್ರೊಸೀಡಿಂಗ್ಸ್‌ನಲ್ಲಿ ವಿಧಿಸಲ್ಪಟ್ಟಿರುವ ಟ್ರಾವಲಿಂಗ್ ಅಲೋವೆನ್ಸ್ ರುಸುಂ ಪಡೆಯತಕ್ಕದ್ದೆಂದು ನಿಷ್ಕರ್ಷೆಯಾಗಿರುತಿದೆ. ಹ್ಯಾಗಂದರೆ—ಬತ್ತಾ ವಿಷಯಕ್ಕೆ ಅತರಾಯಗಳು. ಮೈಲೇಜ್ ಮ್ಯಾಲ್ ೧ಕ್ಕೆ ೮ಆಣೆ ೧೮೮೦ನೇ ಇಸವಿ ನವೆಂಬರ್ ೨೬ನೇ ಮಜಕೂರ್ ೧೩ನೇ ನಂಬರುಳ್ಳ ಚೀಫ್ ಕಮ್ಮೀಷನರವರ ಇಸ್ತಿಹಾರಿನಲ್ಲಿ ಇವರಡಿಕಂಡ ಆಫೀಸರ್‌ಗಳು ಸಹ ಡೆಪ್ಯುಟೀಕಮ್ಮೀಷನರ್‌ಗಳಂತೆ ರುಸುಂ ಪಡೆಯಬಹುದೆಂದು ತಿಳಿಸಲ್ಪಟ್ಟಿರುವದರಿಂದ ಅವರುಸಹ ಈ ಫೆಬ್ರವರಿತಿಂಗಳ ಗುರ್ರೇ ತಾರೀಖುಮೊದಲು ಮೇರೆಕಂಡಂತೆ ರುಸುಂಪಡೆಯಲಿಕ್ಕೆ ಅರ್ಹರಾಗಿರುತ್ತಾರೆ. ಎಗ್ಜಿಕ್ಯೂಟಿವ್ ಮತ್ತು ಡಿಸ್ಟ್ರಿಕ್ಟು ಇಂಜನಿಯರುಗಳು, ಡಿ|| ಜಡ್ಜಿಗಳು, ಕಂಟ್ರೋಲರರು, ರಿಜಿಸ್ಟ್ರೇಷನ್ ಇಲಾಖಾ ಇನ್ಸ್‌ಪೆಕ್ಟರ್ ಜನರಲ್ಲವರು, ಎಡ್ಯುಕೇಷನ್ ಸೆಕ್ರೆಟರಿಯವರು, ಸಿವಿಲ್ ಸರ್ಜನ್‌ಗಳು ಮುಖ್ಯವಾಗಿ ಈದೇಶದ ದ್ರವ್ಯವು ನಾನಾಮಾರ್ಗದಿಂದ ವ್ಯಯವಾಗುತಲಿದೆ. ಅನಾವಶ್ಯಕ ವಿಷಯಗಳಲ್ಲಿ ಅತ್ಯೌದಾರ್ಯವು ಅನಪೇಕ್ಷಿತವಾಗಿ ತೋರಿಸಲ್ಪಡುವದೇ ದ್ರವ್ಯನಾಶಕ್ಕೆ ಕಾರಣವೆಂಬದನ್ನು ಸಮುದ್ರಗಳಾದರೂ ತಿಳಿಯದಿರಲಾರರು. ಆಯತಿಗಿಂತ ಮೇಲ್ಪಟ್ಟವ್ಯಯವೂ, ಪ್ರತಿಬಂಧವಿಲ್ಲದ ಪ್ರಭುತ್ವವೂ, ಏಕಮತ್ಯ ವಿಹೀನರಾದ ಪ್ರಜೆಗಳೂ, ಸ್ವಾಭಿಮಾನವಿಲ್ಲದ ಅಧಿಕಾರಿಗಳೂ, ಅನಿಯತವಾದಕಾಲಸ್ಥಿತಿಯೂ, ಈರಾಜ್ಯಕ್ಕೆ ಪ್ರಥಮವಾಗಿ ಯೋಗ್ಯಮೇಲೆ ಇದರ ದ್ರವ್ಯವು ಮೇರೆ ಇಲ್ಲದಂತೆ ಅನಾವಶ್ಯವಾಗಿ ವ್ಯಯವಾಗಲಿಕ್ಕೆ ಸ್ವತಃ ಚಿಂತಿಸಿ ಪ್ರಯೋಜನವೇನು?" ಎಂಬದು. ಈ ಅಭಿಪ್ರಾಯವು ಈಗಿನಕಾಲಕ್ಕೆ ಭ್ರಾಂತಿಶೂನ್ಯನ ತೋರದಿರಲಾರದು

LETTERS TO THE EDITOR.

ಇದರಡಿಕಂಡ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲವು —ಎಡಿಟರ್

ಈಸಂವತ್ಸರ ಶ್ರೀ ಮೇಲುಕೋಟೆ ಚೆಲುವರಾಯಸ್ವಾಮಿಯವರ ವೈರಮುಡಿ ಉತ್ಸವ ಸಂಭ್ರಮವನ್ನು ತಮ್ಮಪತ್ರಿಕೆಯಲ್ಲಿ ಇದುವರಿವಿಗೂ ನಿರೀಕ್ಷಿಸುವ ಪತ್ರಿಕಾಪಾಠಕರಿಗೆ ದೌರ್ಲಭ್ಯದಿಂದುಂಟಾದ ಅಸಮಾಧಾನವನ್ನು ಬದಲಾಯಿಸಬೇಕೆಂಬ ಕುತೂಹಲದಿಂದ ಇದರಡಿ ವಿಜ್ಞಾಪಿಸುವದನ್ನು ಘನವಾದ ತಮ್ಮ ಅವಧಾನಕ್ಕೆ ತಾರದೆ ಇರಲಾರಿರಿಯೆಂದು ನಂಬುತ್ತೇನೆ.

ಆದರೆ ಈ ಉತ್ಸವವು ಫಾಲ್ಗುಣಶುದ್ಧ ಪ್ರಥಮೆಯಲ್ಲಿ ಪ್ರಾರಂಭಿಸಿದ್ದು ಬಹುಳ ಅಮಾವಾಸ್ಯೆವರಿಗೂ ಕಾಟೋಕಾಟಿಯಾಗಿ ಮಧ್ಯೆ ವಿಚ್ಛಿತ್ತಿಇಲ್ಲದೆ ೧ತಿಂಗಳವರಿಗೂ ನಡೆದು ಪ್ರಕಾಶಿಸಿತು. ಇದನಂತರವೂ ಈಚಿತ್ರಾಪೌರ್ಣಮಿವರಿಗೆ ಶ್ರೀರಾಮನವಮೀ ವಸಂತೋತ್ಸವವೂ ಬೆಳೆಯಿತು ಪ್ರತಿಯೊಂದು ಉತ್ಸವವೂ ಒಂದಕ್ಕಿಂತಒಂದು ಅತಿಶಯಹೊಂದಿತ್ತು. ಇವುಗಳಲ್ಲಿ ಪ್ರಧಾನವಾದ ಈ ಸಂವತ್ಸರ ಫಾಲ್ಗುಣ ಶುದ್ಧ ದಶಮಿಯಲ್ಲಿ ನೆರವೇರಿದ ವೈರಮುಡಿ ಉತ್ಸವಕ್ಕೆ ಕುತೂಹಲವುಳ್ಳ ಭಕ್ತರು ಪೂರ್ವಾಪೇಕ್ಷೆಯಾ ದ್ವಿಗುಣವಾಗಿ ಸೇರಿದ್ದರು ಅವರುಗಳಲ್ಲಿ ಬಹುಜನ ದೂರದೇಶದವರೂ, ಮತ್ತು ದೊಡ್ಡಮನುಷ್ಯರುಗಳೂ, ಘನವುಳ್ಳ ವಿದ್ವಾಂಸರುಗಳು ಸಹ ವಿಶೇಷವಾಗಿ ಸಮೂಹವನ್ನು ಅಲಂಕರಿಸುತ್ತಾಯಿದ್ದರು. ಉತ್ಸವವನ್ನು ನಿರ್ವಹಿಸತಕ್ಕಸರ್ಕಾರ್ ಆಫೀಸರ್‌ಗಳು, ಅಂದರೆ ಮ|| ರಾ|| ಸಬ್‌ಡಿವಿಜನ್ ಆಫೀಸರವರು ತಿರುಮಲಾಚಾರ್ಯರು, ಮಹಾರಾಜಶ್ರೀ ರಂಗಪಟ್ಟಣದತಾಲ್ಲೂಕು ಅಮಲ್ದಾರ್ ರಾಘವೇಂದ್ರರಾಯರವರು, ಮತ್ತು ಮಹಾರಾಜಶ್ರೀ ಪೋಲೀಸ್ ಇನ್ಸ್‌ಪೆಕ್ಟರವರು ಇವರುಗಳ ಭಕ್ತಿ ಶ್ರದ್ಧೆ ಉತ್ಸಾಹಗಳಿಂದ, ವೈರಮುಡಿ ಉತ್ಸವವು ಕಳೆದ ಸಂವತ್ಸರಕ್ಕಿಂತಲೂ ಶತಗುಣಾತಿಶಯವನ್ನು ಹೊಂದಿ ಬಹಿರಾದ ಆಬಾಲವೃದ್ಧರ ಮನಸ್ಸನ್ನು ಪರಮಾನಂದಗೊಳಿಸಿತು. ಹ್ಯಾಗಂದರೆ—ಈ ಉತ್ಸವದಲ್ಲಿ ಪ್ರಧಾನವಾದವು ಕಲ್ಯಾಣೋತ್ಸವವು, ನಾಗವಲ್ಲ್ಯುತ್ಸವ, ವೈರಮುಡಿ ಕಿರೀಟ ಧಾರಣೋತ್ಸವ ರಥೋತ್ಸವ, ಅವಭೃಥೋತ್ಸವ, ಈಪ್ರತಿ ಉತ್ಸವದಲ್ಲೂ ಶ್ರೀ ಕಾಂಚೀಪುರದ ವರದರಾಜಸ್ವಾಮಿಯವರ ಉತ್ಸವದ ಸಂಭ್ರಮದಂತೆ ವಿಶೇಷ ಮಹತಾಬೇ ಬಾಣ ಬಿರುಸು ದೀವಟಿಗೆಗಳು, ಮತ್ತು ವಿಶೇಷ ವಾದ್ಯಗಳು, ವಿಶೇಷ ನಗರಾಲಂಕಾರಗಳು, ಮುಖ್ಯವಾದ ದೇವರ ಅಲಂಕಾರಗಳು, ಕಾಲಕ್ಲುಪ್ತ, ಜನಗಳ ನೆಮ್ಮದಿ, ಈ ಮೊದಲಾದ ರಮಣೀಯ ಸಂದರ್ಭಗಳು ಅನುಸರಿಸಲ್ಪಟ್ಟದ್ದರಿಂದ ಇಷ್ಟು ಕುತೂಹಲವುಂಟಾಯಿತು. ಪ್ರಧಾನವಾದ ವೈರಮುಡಿ ಉತ್ಸವದಲ್ಲಿ ಈ ಎಲ್ಲಾ ಉತ್ಸವಗಳಿಗಿಂತಲೂ ಚತುರ್ಗುಣ ಹೆಚ್ಚಾಗಿನಡೆದ ಸಂಭ್ರಮವನ್ನು ವರ್ಣಿಸಲು ಶಕ್ತಿ ಇಲ್ಲದ್ದಕ್ಕೆ ಸಂಕೋಚ ಪಡಬೇಕಾಗಿದೆ. ವಸ್ತುತಃ ಆ ವೈರಮುಡಿ ಕಿರೀಟಧಾರಣ ಸೇವೆಯು ಪಂಡಿತ ಪಾಮರ ಸಾಧಾರಣ್ಯೇನ ಆಬಾಲವೃದ್ಧರಲ್ಲಿ ಯಾರಮನಸ್ಸನ್ನೂ ಆಕರ್ಷಿಸದೆಯಿರಲಿಲ್ಲವು. ಮುಖ್ಯವಾಗಿ ಮನುಷ್ಯರಿಗೆ ಮನೋವಾಕ್ಕಾಯಗಳು, ಸರ್ವೋತ್ತಮನಾದ ವನಧ್ಯಾನ ಆರಾಧನೆ ಗಾನಗಳಿಂದ ಉಜ್ಜೀವಿಸುವದಕ್ಕೆ ದೇವರಿಂದ ಕೊಡಲ್ಪಟ್ಟಿದ್ದಾಗ್ಯೂ ಯೋಗಾಭ್ಯಾಸಾದಿಗಳಿಂದ ದೊರತು ಅದೃಶ್ಯನಾದ ಭಗವಂತನು ಮೇಲ್ಕಂಡ ಧ್ಯಾನಾದಿಗಳಿಗೆ ಸಂಸಾರಿಗಳಿಗೆ ಅಶಕ್ಯನಾದ್ದರಿಂದ ಸಂಸಾರಿಗಳ ಪ್ರಯೋಜನಕ್ಕಾಗಿ ಅವತರಿಸಿದ, ಸಾಕ್ಷಾದ್ಭಗವಚ್ಛಾಸ್ತ್ರಮೂಲಕವಾದ ಇಂತಾ ಅರ್ಚನಪ್ರಕಾರವೆಂಬ ವಿಗ್ರಹಾರಾಧನ ಮಹೋತ್ಸವಗಳು ಪ್ರಬಲಿಸದೆ ಇದ್ದಪಕ್ಷದಲ್ಲಿ ಸಂಸಾರಿಗಳಗತಿ ಯಾವರೀತಿಯಿಂದ ಕ್ಷೇಮವನ್ನು ಹೊಂದುವದೋ ಮತ್ತು ಈಮಾರ್ಗವನ್ನನುಸರಿಸದೆ ಇತರ ಪ್ರಕಾರದಿಂದ ಶೂನ್ಯಸ್ಥಳಗಳಲ್ಲಿ ಶೂನ್ಯ ಸಜಾತೀಯನಾಗಿ ದೇವರನ್ನು ಹ್ಯಾಗೆ ಧ್ಯಾನಿಸುವರೊ, ಹ್ಯಾಗೆ ಆರಾಧಿಸುವರೊ, ಹ್ಯಾಗೆಗಾನಮಾಡುವರೊ, ಹ್ಯಾಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡುವರೊ ಭಗವಂತನಲ್ಲಿ ತಮ್ಮ ಪ್ರೀತಿಯನ್ನು ಯಾವರೀತ್ಯಾ ಬಹಿರಂಗಪಡಿಸುವರೊ, ಅದನ್ನು ವಿಚಾರಿಸಲು ಬಹಳ ವಿಷಾದ ಪಡಬೇಕಾಗಿದೆ. ಮತ್ತು ಉತ್ಸವಾರಂಭಮೊದಲ್ಗೊಂಡು ೧೫ ದಿವಸದವರಿಗೆ ಶ್ರೀಯತಿರಾಜಸ್ವಾಮಿಗಳವರ ಮಠದಲ್ಲಿ ಮ|| ರಾ|| ಮದ್ರಾಸ್‌ಬ್ಯಾಂಕ್ ಏಜಂಟ್ ಮ್ಯಾನೇಜರು ಮನ್ನಿ ರಂಗಾಚಾರ್ಯರವರು, ಅನ್ನಸ್ಯಕ್ಷುಧಿತಂ ಪಾತ್ರಂ ಎಂಬರೀತ್ಯಾ ವೈಷಮ್ಯವಿಲ್ಲದೆ ಅಹೋರಾತ್ರಿ ಸಂಖ್ಯೆಇಲ್ಲದೆ ಜನಗಳಿಗೆ ನಡೆಸಿದ ಸಂತರ್ಪಣೆಯಲ್ಲಿದೆ ಶ್ರೀವಾನಮಾಮಲೆಮಠ ಮೊದಲಾದದರಲ್ಲೂ ಫರ್ಷ್ಟ್ ಅಮಲ್ದಾರರು ಮ|| ರಾ|| ಮೊಕಟರಂಗಯ್ಯಂಗಾರ್ರು ಮೊದಲಾದವರು ನಡಿಸಿದ ವಿಶೇಷಸಂತರ್ಪಣೆಗಳೂ ಶ್ರೀ ಪರಕಾಲಸ್ವಾಮಿಗಳಮಠದಲ್ಲಿನಡೆದ ಸಂತರ್ಪಣೆಗಳೂ ಮಹೋತ್ಸವಸಂಭ್ರಮಕ್ಕೆ ವಿಶೇಷ ಸಹಕಾರಿಗಳಾಗಿದ್ದವು. ಸುಮಾರ್ ೫೦ಸಾವಿರಪ್ರಜೆಗಳುಸೇರಿದ್ದಾಗ್ಯೂ ಯಾರಿಗೂ ರೋಗಾದ್ಯುಪದ್ರವಗಳ ಪ್ರಸಕ್ತಿಯೂ ಚೌರ್ಯ ಮತ್ತು ಕಾಮಕ್ರೋಧ ಪ್ರಸಕ್ತಿಗಳೂ ಇಲ್ಲದೆ ಭಗವದ್ಭಕ್ತಿಯೇ ಅಭಿವೃದ್ಧಿಯಾಗುವಂತೆ ಭಗವಂತನು ಸಂರಕ್ಷಿಸಿದವಿಷಯದಲ್ಲಿ ಕೃತಜ್ಞತೆಯು ಮರೆಯತಕ್ಕದ್ದಲ್ಲವಾಗಿಯಿದೆ.

ಮೇಲುಕೋಟೆ ಸಂಸ್ಕೃತ ಪಾಠಶಾಲಾ ವಿದ್ಯಾಭಿವೃದ್ಧಿಯ ರಿಪೋರ್ಟು.

ಸನ್ ೧೮೫೩—೫೪ನೇ ಇಸವಿಗಳಲ್ಲಿ ಈಪಾಠಶಾಲೆಯೊಳು ನಡೆದ ವಿದ್ಯಾಭಿವೃದ್ಧಿಯನ್ನು ಕ್ರಮವಾದ ರಿಪೋರ್ಟಿನ ಮೂಲಕ ಪಾಠಶಾಲಾಭಿಮಾನಿಗಳಾದ ಸಭಿಕರ ಅವಧಾನಕ್ಕೆ ತರಬೇಕೆಂದು ಪಾಠಶಾಲಾಧ್ಯಕ್ಷರು ಮ|| ಶ್ರೀ|| ಅ|| ನರಸಿಂಹಾಚಾರ್ಯರು ನನಗೆ ಅಪ್ಪಣೆ ಕೊಟ್ಟದ್ದರಿಂದ ಆಪ್ರಕಾರ ಪ್ರಕಟಪಡಿಸಲು ಸಭಿಕರ ಅಮೂಲ್ಯವಾದ ಕೆಲವುಕಾಲವನ್ನು ಆಕ್ರಮಿಸುವ ವಿಷಯದಲ್ಲಿ ಕ್ಷಮೆಯನ್ನ ಕೇಳಿಕೊಳ್ಳುತ್ತೇನೆ.

ಮೊದಲು ಈಪಾಠಶಾಲಾ ಶುರುವಾಗಾಯಿತ್ತು ಯಾವರಿವಿಗೆ ನಡೆದ ಕೆಲವುಸಂಗತಿಗಳನ್ನು ಸಂಕ್ಷೇಪವಾಗಿ ತಿಳಿಸಿದನಂತರ ಪ್ರಕೃತೋದ್ದೇಶವನ್ನು ನೆರವೇರಿಸಿಕೊಳ್ಳುವೆನು.

೧. ಶ್ರೀಮನ್ಮಹೀಶೂರ ಮಹಾರಾಜಾಸಾಹೇಬ ಬಹದೂರವರಿಂದ ಪರಿಪೋಷಿತವಾದ ಈ ಪಾಠಶಾಲೆಯು ಸನ್ ೧೮೫೫ನೇ ಇಸವಿ ರಾಕ್ಷಸ ಸಂವತ್ಸರದಲ್ಲಿ ಲೇಟ್ ಚೀಫ್‌ಕಮಿಷನರವರಾದ ಸರ್ ಮಾರ್ಕ್ ಕಬ್ಬನ್‌ಸಾಹೇಬರವರಿಂದ, ಸಂಸ್ಕೃತ ವಿದ್ಯಾಭ್ಯಾಸಿಗಳ ಅನುಕೂಲ್ಯಕ್ಕಾಗಿ ಮುಜರೈ ಫಂಡಿನಲ್ಲಿ ೨೩ ರೂಪಾಯಿ ಲವಾಜಮೆಯೊಡನೆ ಈ ಊರೊಳು ಸ್ಥಾಪಿಸಲ್ಪಟ್ಟಿತು.

೨. ಅನಂತರ ಚೀಫ್‌ಕಮಿಷನರಾಗಿಬಂದ ಮ|| ಬೌರಿಂಗ್ ಸಾಹೆಬರವರು ೬೮ನೇ ಇಸವಿಯಲ್ಲಿ ಈ ಮೇಲುಕೋಟೆ ಸ್ವಾಮಿಗೆ ದಯಮಾಡಿದ್ದ ವೇಳೆಯಲ್ಲಿ ಇದರ ಅಭಿವೃದ್ಧಿಯನ್ನ ಪರಾಂಬರಿಸಿ, ಎಜ್ಯುಕೇಷನ್ ಇಲಾಖೆಗೆಸೇರಿಸಿಕೊಂಡು ೪೦ ರೂಪಾಯಿಗಳವರಿಗೆ ಪ್ರಮೋಷನ್ ಮಾಡಿತಮ್ಮ ಘನವಾದ ಔದಾರ್ಯವನ್ನು ತೋರ್ಪಡಿಸಿದರು.

೩. ಬಳಿಕ ಮ|| ರೈಸ್‌ಸಾಹೆಬರವರು, ಡೈರೆಕ್ಟರ್ ಪದವಿಯನ್ನುಹೊಂದಿದಕೂಡ್ಲೆ ತಮ್ಮಿಂದ ಅನೇಕಾವರ್ತಿ ಇನ್ಸ್‌ಪೆಕ್ಷನ್ಮಾಡಲ್ಪಟ್ಟಾಗ ಅವರಿಗೆ ಸಂತೋಷವನ್ನುಂಟು ಮಾಡುತ್ತಾಬಂದ ಈ ಗೀರ್ವಾಣವಿದ್ಯಾಶಾಲೆಗೆ ೭೬ನೇ ಇಸವಿಯಲ್ಲಿ ೪೦ರೂಪಾಯಿನಿಂದ ೬೦ರೂಪಾಯಿಗಳಿಗೆ ಹೆಚ್ಚಿಸಿ ಇದುವರಿವಿಗೆ ಪೋಷಿಸುತ್ತಾಬಂದರು

೪. ಅನಂತರ ಅ|| ನರಸಿಂಹಾಚಾರ್ಯರು, ಈಪಾಠಶಾಲೆಗೆ ಸಮ್ಮಂಧಿಸಿದಂತೆ ಜನೋಪಕಾರವಾದ ಪುಸ್ತಕ ಭಂಡಾರವನ್ನು, ಮ|| ರಾ|| ಸೆಷನ್ಸ್‌ಜಡ್ಜಿಯವರು ವಿ. ಎನ್. ನರಸಿಂಹಯ್ಯಂಗಾರ್ರು, ಮ|| ರಾ|| ರಾ|| ಕಲ್ಲಪಿಳ್ಳೆಯ್ಯಂಗಾರ್ರು, ಮ|| ರಾ|| ಸವಾರ್‌ಕಚೇರಿ ಪೆನ್ಷನರ್ ಕಂ. ನರಸಿಂಹಾಚಾರ್, ಮ|| ರಾ|| ಶ್ರೀಮಠ ಶೇಷಾಚಾರ್ಯರು, ಮ|| ರಾ|| ಪಾದ್ರಿ ನರಸಿಂಹಾಚಾರ್ಯರು ಮೊದಲಾದ ಅಭಿಮಾನಿಗಳ ಸಹಾಯದಿಂದ ಏರ್ಪಡಿಸಿ, ಅದನ್ನು ಸ್ಥಾಪಿಸುವದಕ್ಕೆ ಇಲ್ಲಿನ ಶ್ರೀ ಯವತೆದೇವಸ್ಥಾನದ ದಾ|| ಮ|| ರಾ|| ವೆಂಕಟರಂಗಯ್ಯಂಗಾರವರ ಅಭಿಪ್ರಾಯವನ್ನು ಅನುಮೋದಿಸಿ, ಹಾರ್ಸ್ ಡಿಸ್ಟ್ರಿಕ್ಟ್ ಅ|| ಕಮಿಷನರಾಗಿದ್ದ ಹಾಲೀ ಚೀಫ್‌ಸೆಕ್ರೆಟರಿಯಾಗಿರುವ ಮ|| ರಾ|| ವಿಜಯೇಂದ್ರರಾಯರವರ ಸಹಾಯದಿಂದ ಶ್ರೀ ಯವತೆ ದೇವಸ್ಥಾನದ ಉತ್ತರ ಭಾಗದಲ್ಲಿ ಹಾಲೀ ಇದ್ದ ಆ ಸ್ಥಾನವನ್ನ ಪಡೆದು ಅದರತಾಂಡೋಜೀ ಮುಂತಾದ ವೈಲಕ್ಷಣ್ಯಕ್ಕಾಗಿ ೧೨೦ ರೂಪಾಯಿಗಳ ಸಹಾಯವು ಗವರ್ನ್‌ಮೆಂಟಿನಿಂದ ಸ್ಯಾಂಕ್ಷನ್ ಪಡೆದ ಅರ್ಹವನ್ನಾಗಿಮಾಡಿ ಅದರಲ್ಲಿ ನೆಲಗೊಳಿಸಿದರು.

೫. ಮತ್ತು ಈ ಭಂಡಾರಕ್ಕೆ ಮ|| ರಾ|| ವಿ. ಎನ್. ನರಸಿಂಹಯ್ಯಂಗಾರ್ರು ಪ್ರಸಿಡೆಂಟರಾಗಿ, ಇದಕ್ಕೆ ತಕ್ಕರೂಲ್ಸುಗಳನ್ನು ಮಾಡಿ ಕೆಲವು ಪನ್ನೀಚರ್ ಮತ್ತು ಕೆಲವು ಪುಸ್ತಕಗಳ ಸಹಾಯವನ್ನು ಸ್ವತಃ ಸಹಕರಿಸಿ ಇದನ್ನು ಅಭಿವೃದ್ಧಿಯಲ್ಲಿ ತಂದರು.

೬. ಆದರೆ ಹೀಗಿರುವಲ್ಲಿ ದೈವವಶಾತ್ ೮೩ನೇ ಇಸವಿ ಮೇ ಮಾಹೆಯಲ್ಲಿ ಇದಕ್ಕೆ ಅತ್ಯಂತ ಸಹಕಾರಿಗಳಾಗಿದ್ದ ರಾ|| ಕಲ್ಲಪಿಳ್ಳೆಯ್ಯಂಗಾರ್ರು ದೈವಾಧೀನರಾದರು. ಅನಂತರ ಇದಕ್ಕೆಮುಖ್ಯಾಭಿಮಾನಿಗಳಾದ ಸೆಷನ್‌ಜಡ್ಜಿಯವರಾದ ಮ|| ನರಸಿಂಹಯ್ಯಂಗಾರ್ರು, ಕಮಿಟಿಸೇರಿಸಿ ವಿಭಾಟಂಗವಾಡಿ ಲವರಸ್ಥಾನದಲ್ಲಿ ಅರ್ಪಾದನರನ್ನ

ರ್ತಿಮಾಡಿ ಅಭಿವೃದ್ಧಿಗೆ ತಕ್ಕ ರೂಲ್ಸನ್ನು ಏರ್ಪಡುಮಾಡಿ ವ್ಯವಸ್ಥೆಪಡಿಸಿದರು.

೭. ಅನಂತರ ಅದರಲ್ಲಿ ಕೆಲವರು ಬಹಿರಂಗದಲ್ಲಿ ಸಮ್ಮತಿಪಟ್ಟು ಅಂತರಂಗದಲ್ಲಿ ಯಾವದೋ ಒಂದುಭಾವದಿಂದ ದೂಷಿಸುತ್ತ ನಡೆಸದೆ ಸ್ವತಂತ್ರವಾದ ಪ್ರತಿ ಪಾಠಶಾಲೆಯನ್ನು ಕಲ್ಪಿಸಿ ಈ ಪಾಠಶಾಲಾಭಿವೃದ್ಧಿಗೆ ಕೂಡಿದಮಟ್ಟಿಗೂ ಕುಂದುಕವನ್ನು ಪ್ರಂಬುಮಾಡಲಾರಂಭಿಸಿದರು

೮. ಆದರೂ ಅವರನ್ನು ಸಮಾಧಾನಪಡಿಸಿಕೊಳ್ಳಬೇಕೆಂದು ಅಭಿಮಾನಿಗಳಿಂದ ಮಾಡಲ್ಪಟ್ಟ ಪ್ರಯತ್ನಗಳೆಲ್ಲ ಸಫಲವಾಗದೆ ಕೊನೆಗೆ ಅವರಗಲಭೆಯು ದಿವಾನ್‌ಸಾಹೆಬರವರಿಗೂ ಸಂದೇಹವನ್ನುಂಟುಮಾಡಿತಲ್ಲದೆ ವಿಚಾರಪೂರ್ವಕ ಕಮಿಟಿಯವರು, ಡೈರೆಕ್ಟರವರು ಮತ್ತು ಸ|| ಡಿ|| ಆಫಿಸರವರು ಇವರುಗಳ ರಿಪೋರ್ಟಿನ ಮೂಲಕ ಇದರ ನಿಜವಾದ ಒಳ್ಳೇಸ್ಥಿತಿಯು ತಿಳಿಯಬಂದನಂತರ ಶ್ರೀಮಾನ್ ದಿವಾನ್ ಸಾಹೆಬರವರ ಈಗಿನ ಹೊಸ ಏರ್ಪಾಟನ್ನನುಮೋದಿಸಿ ಯನಾಶ್ರೂಷ್ಯ ಈಪಾಠಶಾಲೆಯು ಘೋಷಿಸಲ್ಪಟ್ಟಿತು.

೯. ಆದರೆ ಈಸಮಯದಲ್ಲಿ ಷುರುವಾಗಾಯಿತು ಘೋಷಿಸಿದ ಎಲ್ಲಾ ಪ್ರಭುಗಳವಿಷಯದಲ್ಲೂ ಅವಶ್ಯ ತೋರಿಸಬೇಕಾದ ನಮ್ಮ ಕೃತಜ್ಞತೆಯೊಡನೆ ಪ್ರಕೃತ ಪೋಷಕರಾದ ದಿವಾನ್‌ಸಾಹೆಬರವರವಿಷಯದಲ್ಲಿ ನಮ್ಮ ಕೃತಜ್ಞತೆಯು ಅಪಾರವಾದದ್ದಾಗಿರುವದು. ಇದುವರಿವಿಗೆ ಷುರುವಾಗಾಯಿತು ಈ ಪಾಠಶಾಲೆಯ ಅಡಳತಗಳು ಓದಲ್ಪಟ್ಟವಾಗಿ ಇನ್ನು ಪ್ರಕೃತ ಪ್ರಸಂಗವನ್ನು ಓದಿ ವಿಜ್ಞಾಪಿಸುವೆನು.

೧. ಸನ್ ೧೮೮೫ನೇ ಏಪ್ರಿಲ್ ೧ನೇ ತಾರೀಖು ಷುರುವಾಗಾಯಿತು ಕಮಿಟಿಯವರಿಂದ ಏರ್ಪಡಿಸಲ್ಪಟ್ಟ ಹೊಸಯೋಜನೆ ೯ದಿನ ಕ್ರಮದಂತೆ ಇದುವರಿಗೂ ನಡೆದುಬರುವದರಲ್ಲಿ ಕಳೆದವರ್ಷ ಬಾಲಬೋಧನೆತರಗತಿಯಲ್ಲಿ ಓದುತಲಿದ್ದ ೧೫ಮಂದಿವಿದ್ಯಾರ್ಥಿಗಳು ಸಂಗ್ರಹ ರಾಮಾಯಣಕ್ಕೂ, ಸಂಗ್ರಹ ರಾಮಾಯಣ ತರಗತಿಯವರು ರಘುವಂಶದ ತರಗತಿಗೆ ೧೭ ವಿದ್ಯಾರ್ಥಿಗಳೂ, ರಘುವಂಶದ ತರಗತಿಯಿಂದ ೧೧ ವಿದ್ಯಾರ್ಥಿಗಳು ಮಾಘಕ್ಲಾಸಿಗೂ, ಮಾಘತರಗತಿಯಿಂದ ೧೦ವಿದ್ಯಾರ್ಥಿಗಳು ನೈಷದಕ್ಲಾಸಿಗೂ, ವಿಶ್ವಗುಣಾದರ್ಶ ಓದುತಲಿದ್ದವರು ೬ಮಂದಿ ಭಾರತ ಚಂಪೂ ಚಂದ್ರಾಲೋಕದತರಗತಿಗೂ, ಮತ್ತು ೭ನೇತರಕ್ಕ ಸಂಗ್ರಹ ಪ್ರಾರಂಭಿಸಿದವರು ೪ಮಂದಿ ಮುಕ್ತಾವಳೀ ತರ್ಕ ಮತ್ತು ನಾಟಕಾಲಂಕಾರಗಳಿಗೂ, ಗದಾಧರೀಯ ತರಗತಿಯಲ್ಲಿ ಪಂಚಲಕ್ಷಣಿ ಚತುರ್ದಶಲಕ್ಷಣಿ ಓದುತಲಿದ್ದವರು ಇಬ್ಬರು ಅವಯವ ಸಾಮಾನ್ಯನಿರುಕ್ತಿವರಿವಿಗೂ, ಲಘುಕೌಮುದಿಯವರು ಇಬ್ಬರು ಸಿದ್ಧಾಂತ ಕೌಮುದೀ ವ್ಯಾಕರಣಕ್ಕೂ ಅರ್ಹರಾಗಿ ಕೂಡಿದ ಮಟ್ಟಿಗೂ ಅಭಿವೃದ್ಧಿಸ್ಥಿತಿಯಲ್ಲಿ ಬಂದಿರುತ್ತಾರೆ.

೨ ಕಳೆದ ವರ್ಷದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ೭೪ಮಂದಿ ಇದ್ದರು ಈವರ್ಷ ೯೬ ಸಂಖ್ಯೆಯವರುಇರುತ್ತಾರೆ. ಈರೀತಿಯಾದ ಅಭಿವೃದ್ಧಿಗೆ ಹೊಸ ಏರ್ಪಾಡಿನಲ್ಲಿ ಏರ್ಪಟ್ಟ ಪಂಡಿತರುಗಳ ಸಾಹಸವೇ ಕಾರಣವೆಂದು ದೃಢವಾಗಿ ಹೇಳಬೇಕಾಗಿದೆ. ಮತ್ತು ಕಳೆದ ಸಂವತ್ಸರ ಮೈಸೂರು ಕಾಲೀಜಿನಲ್ಲಿ ಇಲ್ಲಿನ ವಿದ್ಯಾರ್ಥಿಗಳ ಪೈಕಿ ಕೆಲವರು ಉದ್ಗ್ರಂಥಗಳಲ್ಲಿ ಪರೀಕ್ಷೆಕೊಟ್ಟು ಅಪೈಕಿ ನಾಲ್ವರು ಬಹುಮಾನ ಪಡೆದಿರುತ್ತಾರೆ. ಮೇಲ್ಕಂಡ ಗಲಭೆಯು ಇಲ್ಲದಪಕ್ಷಕ್ಕೆ ಮತ್ತೂ ವಿಶೇಷಾಭಿವೃದ್ಧಿ ಆಗುತಲಿತ್ತು.

೩. ಶ್ರೀಮನ್ಮಹಾರಾಜಾ ಸರ್ಕಾರದವರ ದಿವಾನ್ ಸಾಹೆಬರವರ ೩೪೮೦—೮೭ನೇ ನಂಬರ್ ಪ್ರೋಸೀಡಿಂಗ್ಸ್‌ನಲ್ಲಿ ಯಥಾಪ್ರಕಾರ ಇದು ಘನತೆಯೊಡನೆ ಘೋಷಿಸಲ್ಪಟ್ಟು ಇಲ್ಲಿಂದ ಮುಂದೆ ಮೈಸೂರು ಮಹಾರಾಜರವರ ಸಂಸ್ಕೃತ ಕಾಲೀಜಿನ ಪಾಠ ಕ್ರಮಗಳನ್ನನುಸರಿಸಿ ವಿದ್ಯಾರ್ಥಿಗಳಿಗೆ ಪಾಠಗಳನ್ನು ಹೇಳಿ ಅಭಿವೃದ್ಧಿ ಪಡಿಸಬೇಕೆಂದು ಪಗೈರೆ ನಮೂದಾಗಿರುವ ಪ್ರಕಾರ ಸದರೀ ಕಾಲೀಜಿನಿಂದ ಪಾಠ ಕ್ರಮದ ಫಾರಂಗಳನ್ನು ತರಿಸಿಕೊಂಡು ಅದರಂತೆ ಏಪ್ರಿಲ್ ಲಾಗಾಯಿತು ಇಲ್ಲಿಯೂ ಜಾರೀಯಲ್ಲಿ ತರುವ ವಿಷಯದೊಳು ಪಾಠಶಾಲಾ ಕಮಿಟಿಯವರ ಅನುಮೋದನವು ಕೇಳಿಕೊಳ್ಳಲ್ಪಡುತ್ತೆ.

೪. ಅವರೆ ಇಂತಾ ಪಾಠಶಾಲೆಗೆ ಪರ್ಮನೆಂಟ್ ಸೊಲಜಿರುವದು ಅಗೌರವಕ್ಕೂ ವಿದ್ಯಾರ್ಥಿಗಳ ಅನುತ್ಸಾಹಕ್ಕೂ ಅವೈಲಕ್ಷಣ್ಯಕ್ಕೂ ಕಾರಣವಾಗಿದೆಯಾಗಿ ಇದನ್ನು ಕಮಿಟಿಯವರಅವಧಾನಕ್ಕೆ ಮೊದಲು ತೆಗದುಕೊಳ್ಳಬೇಕಾಗಿರುತ್ತೆ. ಮತ್ತು ಇಂತಾ ಸಾಂವತ್ಸರಿಕ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ಹೆಚ್ಚಿಸುವವರದ್ವಾರಾ ಪ್ರೋತ್ಸಾಹ ಪಡಿಸಬೇಕು.

೫. ಮತ್ತು ಕಮಿಟಿಯವರು ಇದರ ಅಭಿವೃದ್ಧಿಗೆ ತಕ್ಕ ಏರ್ಪಾಡನ್ನು ಆಗಾಗ್ಯೆ ಮೀಟಿಂಗ್‌ನಲ್ಲಿ ಆಲೋಚಿಸಿ ಘೋಷಿಸುತ್ತಾ ಬರಬೇಕೆಂದು ಪ್ರಾರ್ಥಿಸುತ್ತೇನೆ

ಮೇಲುಕೋಟೆ ಸಂಸ್ಕೃತ ಪಾಠಶಾಲಾ, ತಾರೀಖ್ ೧೮ನೇ ಏಪ್ರಿಲ್ ೧೮೮೬ನೇ ಇಸವಿ

ಈದಿನ ಮಧ್ಯಾಹ್ನ ೩ಗಂಟೆಯಲ್ಲಿ ಪಾಠಶಾಲಾಹಾಲ್‌ನಲ್ಲಿ ಇಲ್ಲಿನ ಮೆಂಬರ್‌ಗಳು ಸೇರಿ ಇದರತಿಳಿಸಲ್ಪಡುವನಿರ್ಣಯಗಳನ್ನು ಕುರಿತುನಡಿಸಿದ ಪ್ರೊಸೀಡಿಂಗ್ಸ್. ಹಾಜರಿದ್ದ ಮೆಂಬರ್‌ಗಳು

ಮ|| ರಾ|| ಅ|| ನರಸಿಂಹಾಚಾರ್ಯರು.
ಮ|| ರಾ|| ಕಂಬ. ನರಸಿಂಹಾಚಾರ್ಯರು
ಮ|| ರಾ|| ಬಾದ್ರಿ ನರಸಿಂಹಾಚಾರ್ಯರು
ಮ|| ರಾ|| ದೇ|| ಹೆ|| ವೆಂಕಟ್ರಂಗಯ್ಯನವರು.

(೧) ಈದಿನದ ಪಾಠಶಾಲಾ ಸಾಂವತ್ಸರಿಕ ವಿದ್ಯಾಪರೀಕ್ಷೆಯಾದ ತರುವಾಯ ಪಾಠಶಾಲಾ ಕಾರ್ಯದರ್ಶಿಯಾದ ರಾಮಾನುಜಯ್ಯಂಗಾರ್ರವರ ಪಾಠಕರು ಸನ್ ೧೮೮೫/೮೬ನೇ ಇಸವಿ ಸಾಂವತ್ಸರಿಕ ರಿಪೋರ್ಟು ಓದಲ್ಪಟ್ಟಿತು.

(೨) ಸದರೀ ರಿಪೋರ್ಟಿನಲ್ಲಿ ಮುಖ್ಯವಾಗಿ ಈಪಾಠಶಾಲೆಗೆ ಸಂಬಂಧಪಟ್ಟ ವಿದ್ಯಾರ್ಥಿಗಳು ಪ್ರಥಮತರಗತಿಯಲ್ಲು ಅಂದರೆ ೭ನೇತರಗತಿ ವಿದ್ಯಾರ್ಥಿಗಳು ೧೫ಜನ ೬ನೇಕ್ಲಾಸಿಗೂ, ೬ನೇತರಗತಿಯವರು ೧೭ವಿದ್ಯಾರ್ಥಿಗಳು ೫ನೇ ಕ್ಲಾಸಿಗೂ, ೫ನೇತರಗತಿಯ ೧೧ವಿದ್ಯಾರ್ಥಿಗಳು ೪ನೇಕ್ಲಾಸಿಗೂ, ೪ನೇತರಗತಿಯವರು ೧೦ಜನ ೩ನೇತರಗತಿಗೂ, ೩ನೇತರಗತಿಯವರು ೬ಜನ ೨ನೇಕ್ಲಾಸಿಗೂ, ೨ನೇಕ್ಲಾಸ್ ವಿದ್ಯಾರ್ಥಿಗಳು ೪ಜನ ಪ್ರಥಮತರಗತಿಗೆ ಅರ್ಹರಾಗಿ ಅಭಿವೃದ್ಧಿಯಲ್ಲಿ ಬಂದಿರುತ್ತಾರೆಯೆಂದು ನಮೂದಿಸಿರುವಂತೆ ಪ್ರಕೃತಪರೀಕ್ಷೆಯಲ್ಲಿ ಪ್ರತಿತರಗತಿಯಲಲ್ಲಿ ಅನೇಕ ವಿದ್ಯಾರ್ಥಿಗಳಿಗಿಂತಲೂ ಜಾಸ್ತಿಯಾಗಿ ಸದುತ್ತರ ಕೊಟ್ಟದ್ದರಿಂದ ತೃಪ್ತಿಕರವಾಗಿದೆ.

(೩) ಮತ್ತು ೮೫/೮೬ನೇ ಸಾಲಿನ ವಿದ್ಯಾರ್ಥಿಗಳ ಸಂಖ್ಯೆಯು ಬಹುಶಃ ಕಡಮೆಯಾಗುವಂತೆ ಮಧ್ಯೆ ಅನೇಕ ಕುಂದುಕಗಳು ಸಂಭವಿಸಿದಾಗ್ಯೂ ಪ್ರಕೃತ ನೇಮಿಸಲ್ಪಟ್ಟಿರುವ ಉಪಾಧ್ಯಾಯರುಗಳ ಪ್ರಯತ್ನದಿಂದಲೂ ಬೋಧನಾಕ್ರಮಗಳಿಂದಲೂ ವಿದ್ಯಾರ್ಥಿಗಳಸಂಖ್ಯೆಯು ಯಥಾಸ್ಥಿತಿಯಂದರೆ ಹಿಂದಿನ ಸಂವತ್ಸರದಂತೆಯೇ ನ್ಯೂನತೆಇಲ್ಲದೆ (೯೬)ಮಂದಿ ಇರುವದಕ್ಕೆ ಸಂತೋಷಿಸಬೇಕಾಗಿದೆ.

(೪) ಈಗಿನ ಶ್ರೀಮನ್ಮಹಾರಾಜಾಸಾಹೇಬ್ ಬಹದ್ದರವರ ದಿವಾನ್ ಸಾಹೆಬರವರ ೩೪೮೦—೮೭ನೇ ನಂಬರ್ ಪ್ರೋಸೀಡಿಂಗ್ಸ್‌ನಂತೆ ಶ್ರೀಮನ್ಮಹಾರಾಜರವರ ಸಂಸ್ಕೃತ ಕಾಲೇಜಿನ ಕ್ರಮಕ್ಕೆ ಅನುಸಾರವಾಗಿ ಇಲ್ಲಿಯೂ ನಡಿಸಬೇಕಾದ್ದಕ್ಕೆ ಸದರೀಕಾಲೀಜಿನಿಂದ ಪಾಠಶಾಲಾಕ್ರಮ ಫಾರಂಗಳನ್ನು ತರಿಸಿಕೊಂಡು ಈ ಏಪ್ರಿಲ್ ಲಾಗಾಯಿತು ಜಾರೀಯಲ್ಲಿ ತಂದಿರುವದು ಶ್ಲಾಘನೀಯವಾಗಿಯಿದೆ.

(೫) ಅಧ್ಯಕ್ಷರು ಈಕ್ರಮಗಳನ್ನು ಅಭಿವೃದ್ಧಿಯಲ್ಲಿ ತರುವಬಗ್ಯೆ ಉಪಾಧ್ಯಾಯರುಗಳನ್ನು ಪದೇಪದೇ ಎಚ್ಚರಿಸಬೇಕಲ್ಲದೆ ಅದರ ಕ್ರಮವನ್ನು ಕುರಿತು ಅಲ್ಲಿನ ರಿಜಿಸ್ಟರ್ ಬುಕ್ಕಿನಲ್ಲಿ ಷರಾಮಾಡುತ್ತಾ ಬರಬೇಕು.

(೬) ಈಪಾಠಶಾಲೆಯ ಪ್ರತಿತರಗತಿಗಳಿಗೂ ಪರೀಕ್ಷೆಮಾಡಬೇಕೆಂತಲೂ ಕೆಲವು ರಿಕ್ತರಾದ ವಿದ್ಯಾರ್ಥಿಗಳಿಗೆ ಪುಸ್ತಕ ಸಹಾಯ ಮಾಡಬೇಕೆಂತಲೂ ಇಂತಾ ಸಾಂವತ್ಸರಿಕ ಪರೀಕ್ಷಾಕಾಲದಲ್ಲಿ ಸದುತ್ತರಕೊಟ್ಟ ವಿದ್ಯಾರ್ಥಿಗಳಿಗೆ ವಿಶೇಷ ಬಹುಮಾನಗಳಿಂದ ಪ್ರೋತ್ಸಾಹಪಡಿಸಬೇಕೆಂತಲೂ ಕಾರ್ಯದರ್ಶಿಯವರು ಸೂಚಿಸುವದು ಮುಂದೆ ಸ್ಪೆಷಲ್‌ಮೀಟಿಂಗ್‌ಗಳಲ್ಲಿ ಆಲೋಚಿಸಲ್ಪಡತಕ್ಕದ್ದಾಗಿದೆ.

(೭) ೪ನೇ ನಂಬರ್ ಪ್ರೊಸೀಡಿಂಗ್ಸ್‌ನ ಕ್ರಮಗಳು ಪೂರ್ತಿಯಾಗಿ ಜಾರೀಯಲ್ಲಿ ಬರುವಂತೆ ಅಧ್ಯಕ್ಷರು ನಿಗೇ ಕೊಡಬೇಕೆಂದು ಕೇಳಿಕೊಳ್ಳಲ್ಪಡುತ್ತಾರೆ. ಮೇಲೆ ಕಂಡ ವಿಷಯಗಳನ್ನು ಎಲ್ಲಾ ಮೆಂಬರ್‌ಗಳೂ ಒಪ್ಪಿ ಇರುತ್ತಾರೆ ಈಬಳಿ ಮೆಂಬರ್‌ಗಳ ಸೈನಾಗಿವೆ.

ಅಯ್ಯಾ—ಇದರಡಿಕಂಡ ೧೩ ಪ್ರಶ್ನೆಗಳಿಗೆ ತಮ್ಮ ಪತ್ರಿಕೆಯನ್ನು ಓದತಕ್ಕವರು ತಕ್ಕ ಪ್ರಮಾಣಗಳೊಡನೆ ಉತ್ತರ ಹೇಳಿ ನನಗೆ ಪ್ರಂಬಾಗಿರುವ ಅನುಮಾನವನ್ನು ನಿವೃತ್ತಿಸಬೇಕೆಂದು ಕೋರುತ್ತೇನೆ.

೧—ಈ ಜನ್ಮದಲ್ಲಿ ಅನುಭವಕ್ಕೆ ಬರತಕ್ಕ ವಿಶಿಷ್ಟ ಸುಖದುಃಖಗಳು ಜನ್ಮಾಂತರ ಕರ್ಮಜನ್ಯಗಳೇ, ಇಹಜನ್ಮದ ಕರ್ಮಜನ್ಯಗಳೇ ?

೨—ಜನ್ಮಾಂತರ ಕರ್ಮಜನ್ಯವೇ ಆಗಿದ್ದಪಕ್ಷಕ್ಕೆ ಇಹಜನ್ಮದ ಕರ್ಮಫಲಗಳು ಯಾವವು? ಅವು ಇಹಜನ್ಮದಲ್ಲಿ ಅನುಭವಕ್ಕೆ ಬರುವದಿಲ್ಲವೆ ?

೩—ಈ ಜನ್ಮದ ಕರ್ಮಫಲವು ಇಹಜನ್ಮದಲ್ಲಿಯೇ ಅನುಭವಕ್ಕೆ ಬಾರದೆ ಹೋಗುವ[illegible]ರಣವೇನು ? ಮತ್ತು ಈಜನ್ಮದಲ್ಲಿ ಅನುಭವಕ್ಕೆ ಬರುವದಿಲ್ಲವೆಂಬವಿಷಯದಲ್ಲಿಯೂ, ಮುಂದಿನ ಜನ್ಮದಲ್ಲಿ ಅನುಭವಿಸತಕ್ಕದ್ದೆಂಬವಿಷಯದಲ್ಲಿಯೂ ಪ್ರಮಾಣವಚನಗಳು ಯಾವಗ್ರಂಥಗಳಲ್ಲಿ ಹೇಳಲ್ಪಟ್ಟವೆ ?

೪—ಅಥವಾ ಇಹಜನ್ಮದ ಕರ್ಮಫಲಗಳಲ್ಲಿ ಕೆಲವು ಇಹಜನ್ಮದಲ್ಲಿ ಅನುಭವಕ್ಕೆ ಬರುತ[illegible], ಕೆಲವು ಬಾರದೆಹೋಗುವದು ಸಹಜವು ಹೀಗೆ ಉಂಟಾಗುವದಕ್ಕೆ ನಿಮಿತ್ತವೇನು, [illegible] ಈ ವಿಷಯದಲ್ಲಿ ಪ್ರಮಾಣವೇನು?

೫—ಇಹಜನ್ಮದ ಕರ್ಮಫಲಗಳಲ್ಲಿ ಕೆಲವು ಮುಂದೆಯೂ ಕೆಲವು ಇಲ್ಲಿಯೂ ಅನುಭವಿಸತಕ್ಕದ್ದೆಂದು ನಿಶ್ಚಯವಾಗಿದ್ದಲ್ಲಿ ಯಾವಯಾವ ಕರ್ಮಫಲವು ಇಹದಲ್ಲಿ ಅನುಭವಕ್ಕೆ ಬರುತವೆ, ಯಾವಯಾವ ಕರ್ಮಫಲವನ್ನು ಮುಂದಕ್ಕೆ ಅನುಭವಿಸಬೇಕಾಗುವದು ? ಇವರವಿವರ ಯೆಲ್ಲಿ ತಿಳಿಸಲ್ಪಟ್ಟದೆ.

೬—ಅತ್ಯುತ್ಕಟ ಕರ್ಮಫಲಗಳು ಇಹದಲ್ಲೇ ಲಭಿಸುವದಾಗಿ ಒಂದುವಚನವಿದೆಯಲ್ಲಾ, ಆವಚನ ಯಾವಗ್ರಂಥದಲ್ಲಿ ಯಾರಿಂದ ಹೇಳಲ್ಪಟ್ಟಿದ್ದು?

೭—ಆವಚನವೇ ಪ್ರಮಾಣವಾಗಿದ್ದಲ್ಲಿ ಅತ್ಯುತ್ಕಟ ಕರ್ಮಗಳು ಯಾವಯಾವದು, ಇದರವಿವರ ಯಾವಗ್ರಂಥದಲ್ಲಿ ಹೇಳಲ್ಪಟ್ಟಿದೆ.

೮—ಹಾಗಾದರೆ ಅತ್ಯುತ್ಕಟವಲ್ಲದ ಇತರ ಸಾಧಾರಣವಾದ ಕರ್ಮಫಲ ಇಹದಲ್ಲಿ ಸುತರಾಂ ಅನುಭವಕ್ಕೆ ಬರೂವದೇಯಿಲ್ಲವೇ?

೯—ಹಾಗೆ ಸಾಧಾರಣಕರ್ಮಫಲ ಇಹದಲ್ಲಿ ಅನುಭವಕ್ಕೆಬಾರದೆ ಹೋದಪಕ್ಷಕ್ಕೆ ಆಗಾಮಿಜನ್ಮದ ಅನುಭವಾಪೇಕ್ಷಾ ರಹಿತನಾದಮನುಷ್ಯನು ಅಂತಾಸಾಧಾರಣ ಕರ್ಮಾಚರಣದಲ್ಲಿ ಪಡೆಯತಕ್ಕ ಉತ್ಸಾಹ ನಿಷ್ಪ್ರಯೋಜಕವಾಯಿತಲ್ಲಾ, ತಾದೃಶ ಉತ್ಸಾಹ ವ್ಯರ್ಥವೋ ?

೧೦—ಹಾಗೆ ವ್ಯರ್ಥವಾಗುವಪಕ್ಷಕ್ಕೆ ಆಯಾ ಕಾಮ್ಯ ಕರ್ಮಾಚರಣದಿಂದ ತತ್ತತ್ಕಾಲಾವಧಿಯಲ್ಲಿ ತತ್ತತ್ಕರ್ಮ ಜನ್ಯಫಲಗಳು ಪ್ರಾಪ್ತವಾಗುತವೆಂಬದಾಗಿ ಹೇಳುವ ವಿಶಿಷ್ಟಶಾಸ್ತ್ರವಚನಗಳಿಗೆ ವೈಯರ್ಥ್ಯವೂ ಅಸತ್ಯವಾದ ಕಲ್ಪನವೂ ಉಂಟಾಗುತದಲ್ಲಾ, ಇದಕ್ಕೆಸಮಾಧಾನವೇನು ?

೧೧—ಮತ್ತು ಇಹಜನ್ಮ ಕೃತಕರ್ಮ ಫಲಗಳು ಇಹಜನ್ಮದಲ್ಲಿಯೇ ಅನುಭವಕ್ಕೆ ಬರುವದಿಲ್ಲವೆಂಬ ಸಿದ್ಧಾಂತ ಪುಣ್ಯಕರ್ಮಗಳಿಗೆ ಮಾತ್ರವೇನೋ, ಪಾಪಕರ್ಮಗಳಿಗೂ ಉಂಟೊ ?

೧೨—ಹಾಗೆ ಪಾಪಕರ್ಮಗಳು ಆಗಾಮಿ ಜನ್ಮ ಫಲದಾಯಿಗಳೆಂದು ಏರ್ಪಡುವ ಪಕ್ಷದಲ್ಲಿ ಪ್ರಾಯಶ್ಚಿತ್ತ ಶಾಸ್ತ್ರಕ್ಕೆ ವೈಯರ್ಥ್ಯ ಉಂಟಾಯಿತಲ್ಲಾ, ಇದಕ್ಕೆ ಸಮಾಧಾನವೇನು ?

೧೩—ಒಂದುವೇಳೆ ಪ್ರಾಯಶ್ಚಿತ್ತಾದಿ ಕರ್ಮಗಳಿಂದ ಇಹಜನ್ಮದ ಪಾಪಗಳುನಾಶಹೊಂದುವದೆಂಬದು ನಿಜವಾಗುವಪಕ್ಷಕ್ಕೆ ಈಪ್ರಾಯಶ್ಚಿತ್ತವೆಂಬುವದನ್ನು ಒಂದುಕರ್ಮವಾಗಿ ಇಹಜನ್ಮದಕರ್ಮ ಪರ್ಯಾಯದಲ್ಲಿ ಸೇರಿಸಿದಹಾಗೆ ಆಯಿತಲ್ಲಾ, ಅಂತಾ ಪ್ರಾಯಶ್ಚಿತ್ತರೂಪವಾದ ಇಹಜನ್ಮದ ಕರ್ಮಫಲಮಾತ್ರ ಈ ಜನ್ಮದಲ್ಲಿ ಹ್ಯಾಗೆಸಿದ್ಧಿಸಿತು ?

ಸಂಶಯಾತ್ಮ.

EXTRACT

ಲೋಕದಲ್ಲಿ ಮನುಷ್ಯರು ತಮ್ಮ ಹೃದಯಗಳಲ್ಲಿ ಹುಟ್ಟುವಭಾವಗಳನ್ನು ಆಯಾಕಾಲಗಳಲ್ಲಿ ಮಾತುಗಳಿಂದ ಅನ್ಯರಿಗೆ ತಿಳಿಸುವದರಿಂದಲೂ ಹಾಗೆಯೇ ಅನ್ಯರ ತಾತ್ಪರ್ಯಗಳನ್ನು ತಿಳಿದುಕೊಳ್ಳುವದರಿಂದಲೂ ತಮ್ಮ ಹೃದಯಗಳನ್ನೂ ಅನ್ಯರಹೃದಯಗಳನ್ನು ಸಹ ತೃಪ್ತಿಪಡಿಸುವದರಿಂದ ಪ್ರಪಂಚದಲ್ಲಿ ಇತರಗಳಾದ ಎಲ್ಲಾಪ್ರಾಣಿ ವರ್ಗಗಳಿಗಿಂತಲೂ ಉತ್ತಮ ಜನ್ಮವುಳ್ಳವರಾಗಿದ್ದಾರೆ.

ಅವರಲ್ಲಿಯೂ, ತಮ್ಮ ಮನಸ್ಸುಗಳಲ್ಲಿ ತೋರುವ ಅರ್ಥಗಳನ್ನು ಬಾಯಿಮಾತುಗಳಿಂದ ಸರಿಯಾಗಿ ಅನ್ಯರಿಗೆ ತಿಳಿಸಲಾರದೆ ವಿರುದ್ಧವಾದ [illegible]ತನನ್ನು ನುಡಿಯುವವರುಕೆಲವರು. ೨ ಅಂತಾತಾತ್ಪರ್ಯವನ್ನು ಪೂರ್ಣವಾಗಿ ನುಡಿಯಲಾರದೆ ಮೊತನಾದತಕ್ಕವರು ಕೆಲವರು. ೩ ತಾವು ಭಾವಿಸಿದ ಅರ್ಥವನ್ನೆಲ್ಲ ಚಮತ್ಕಾರ ವಿಲ್ಲದೆ ಸರಿಯಾಗಿ ತಿಳಿಸತಕ್ಕವರು ಕೆಲವರು. ೪. ಅಂತಾ ತಮ್ಮಭಾವಗಳನ್ನು ನಾನಾವಿಧ ಚಮತ್ಕಾರವುಳ್ಳ ವಾಕ್ಯಗಳಿಂದ ಅನ್ಯರಿಗೆ ತಿಳಿಸುವವರು ಕೆಲವರು. ಇಂತಾ ಮನುಷ್ಯರು ಕ್ರಮವಾಗಿ ಅಧಮರು, ಮಧ್ಯಮರು, ಉತ್ತಮರು, ಉತ್ತಮೋತ್ತಮರು ಎಂಬದಾಗಿ ೪ ಪ್ರಕಾರಗಳುಳ್ಳವರಾಗಿರುತ್ತಾರೆ. ಅಂದರೆ,—೧ನೇ ಯವರು [illegible] ವಿರುದ್ಧವಾದ [illegible]ಯೋಜನವನ್ನು ಪಡೆಯುತ್ತಾರೆ. ೨ನೇಯವರು ತಾವು ಕೋರಿದ ಅಂಶಗಳಪೈಕಿ ಕೆಲವನ್ನುಮಾತ್ರ ಹೊಂದುತ್ತಾರೆ. ೩ನೇಯವರು ತಾವು ಅಪೇಕ್ಷಿಸಿದ ಪ್ರಯೋಜನಗಳನ್ನೆಲ್ಲ ಸರಿಯಾಗಿಯೊಂದುತ್ತಾರೆ. ೪ನೇ ಯವರಾದರೋ ತಾವು ಅಪೇಕ್ಷಿಸಿದಪ್ರಯೋಜನಗಳನ್ನು ವಿಶೇಷವಾಗಿ ಪಡೆಯುತ್ತಾರೆ.

ಇದರಿಂದ ಇವರುಗಳಲ್ಲಿ ಅಧಮತ್ವ ಮುಂತಾದ ಧರ್ಮಗಳುಂಟಾದವೆಂದು ತಿಳಿಯಬಹುದು. ಹೀಗೆ ನಾಲ್ಕನೆಯವರ ವಾಕ್ಯಗಳಲ್ಲಿ ಪರಹೃದಯಗಳಿಗೆ ಆಹ್ಲಾದಕರವಾದ ಚಮತ್ಕಾರ ವೆಂಬುವದು ಎರಡು ಬಗೆಯಾಗಿರುತದೆ. ಹ್ಯಾಗುವರೆ,—೧ನೇದು ಶಬ್ದಗಳ ಚಮತ್ಕಾರವು, ೨ನೇದು ಅರ್ಥಗಳಿಂದುಂಟಾಗುವದು ೩ನೇದು ತಿಳಿಸತಕ್ಕ ಭಾವಗಳಿಗೆ ಅನುಗುಣಗಳಾದ ಅಕ್ಷರಗಳು, ಪದಗಳು, ಇವುಗಳ ಸಂಧಿ, ಅನ್ವಯ, ಶಯ್ಯಾ, ರೀತಿ, ವೃತ್ತಿ, ಯೆಂಬವು ಅಲಂಕಾರ ಶಾಸ್ತ್ರದಲ್ಲಿ ಪ್ರಸಿದ್ಧಗಳಾಗಿರುತಿವೆ. ೪ನೇದು, ಇದಲ್ಲದೆ ರಸಾಲಂಕಾರ ಧ್ವನಿಲಕ್ಷಣ ಮುಂತಾದ ಅನೇಕ ವಿಷಯಗಳುಸಹ ಅಲಂಕಾರ ಶಾಸ್ತ್ರದಲ್ಲಿ ಪ್ರಸಿದ್ಧಗಳಾಗಿರುತಿವೆ. ಹೀಗೆ ಚಮತ್ಕಾರವುಳ್ಳವಾಕ್ಯಗಳು ಹೇಳುವವನ ತಾತ್ಪರ್ಯವನ್ನು ಚೆನ್ನಾಗಿಯೂ ವಿಶೇಷ ವಾಗಿಯೂ, ಸರಸವಾಗಿಯೂ, ಅನ್ಯರಿಗೆ ತಿಳಿಯಪಡಿಸುವವರಿಂದ ಅವುಗಳನ್ನು ಕೇಳುವಂತಾವರಿಗೆ ಹೃದಯ ರಂಜನೆಯುಂಟಾಗುತಿದೆಯಾಗಿ ಪಂಡಿತರ ಮಾತುಗಳು ಪ್ರಾಯಿಕವಾಗಿ ಇಂತಾ ಚಮತ್ಕಾರವುಳ್ಳವಾಗಿಯೇ ಯಿರುತಿವೆ. ಆದದರಿಂದ ಸಕಲ ಜನಗಳೂ ಸದರಹು ಚಮತ್ಕಾರ ವಿಷಯಗಳನ್ನು ತಿಳಿದು ಮಾತಾಡಿದರೆ ಅನ್ಯರ ಮನೋರಂಜನ ಮುಂತಾದ ನಾನಾವಿಧ ಪ್ರಯೋಜನಗಳುಂಟಾಗುವವು ಎಂಬದಾಗಿ ಒಂದು ಪತ್ರಿಕೆ ತಿಳಿಸುತಿದೆ.

BANGALORE.—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧವೃತ್ತ್ಯನಗಮಾರ್ಹ ಕರ್ಣಾಟಕಪ್ರಕಾಶಿಕಾಭಿಧಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ವಿಕಾಸುವರಿಪೊಷಿತಾದಿಶತಿಮಾನಸಂಸುಮುದಂ॥

Vol. XIII] BANGALORE—MONDAY, MAY 3, 1886. [No. 18.

ಸಂಪುಟ ೧೩.] ಬೆಂಗಳೂರು:—ಸನ್ ೧೮೮೬ನೇ ಇಸವಿ ಮೇ ೩ನೇ ತಾರೀಖು ಸೋಮವಾರ. [ಸಂಚಿಕೆ ೧೮.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ಕೆಲಸಕೊಳ್ಳುವವರ್ಗೆ. ವರುಷ ೧ಕ್ಕೆ		೧೦—೦—೦
ಇಂಗ್ಲಿಷ್ ಪತ್ರಿಕೆ ಕೊಳ್ಳುವವರ್ಗೆ. ವರುಷ ೧ಕ್ಕೆ		೬—೦—೦
ಕನ್ನಡ ಪತ್ರಿಕೆ ಕೊಳ್ಳುವವರ್ಗೆ. ವರುಷ ೧ಕ್ಕೆ ...		೬—೦—೦
ಬಿಡಿ	೧ಕ್ಕೆ	೦—೪—೦

ಷರಾ.—ಚಂದಾದಾರರು ಇಂಗ್ಲಿಷ್ ಪತ್ರಿಕೆಯನ್ನಾಗಲಿ, ಕನ್ನಡ ಪತ್ರಿಕೆಯನ್ನಾಗಲಿ ಅಥವಾ, ಎರಡನ್ನಾಗಲಿ ಕೇಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸಬೇಕು.

ಪ್ರಕಟನೆಯ ರಿವಾಜ್.

ಇಂಗ್ಲಿಷ್ ಪಂಕ್ತಿ	೧ಕ್ಕೆ	೦—೨—೦
ಕನ್ನಡ ಪಂಕ್ತಿ	೧ಕ್ಕೆ	೦—೧—೦

NOTICE TO SUBSCRIBERS

ಇದರಕೆಳಗೆ ಹೇಳಿರುವ ಅಂಶಗಳನ್ನು ಚಂದಾದಾರರು ಗಮನಿಸಬೇಕೆಂದು ಕೋರುತ್ತೇವೆ:—

೧ ಕರ್ಣಾಟಕ ಪ್ರಕಾಶಿಕೆಯ ಚಂದಾಹಣವನ್ನಾಗಲಿ ... [illegible]

೨ ... [illegible]

೩ ... [illegible]

೪ ... [illegible]

NOTICE.

VAIDYASARA SANGRAHA

Price including Postage, Rs. 5 0-0

ವೈದ್ಯಸಾರ ಸಂಗ್ರಹ.

... [illegible]

ನೋಟೀಸ್.

ಇದರಕೆಳಗೆ ಕಂಡಿರುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ... [illegible]

ಕನ್ನಡ ಟೀಕಾಸಹಿತವಾದ ಸಂಸ್ಕೃತ ಗ್ರಂಥಗಳು.

...	...	೧—೪—೦
...	...	೦—೧೨—೦
ಭಗವದ್ಗೀತಾ (...)		೦—೩—೦
...		೦—೧೦—೦
...		೦—೪—೦
...	...	೦—೧೨—೦
...		೦—೨—೦
...		೦—೨—೦
...	...	೫—೦—೦

ಕನ್ನಡ ಗ್ರಂಥಗಳು.

...	...	೦—೭—'
...	...	೦—೪—೦
...		೦—೩—೬
...	...	೦—೨—೬
...	...	೦—೪—೦
...		—೨—೦
...		—೨—೬
...		೦—೭—೦
...		೦—೩—೦
...	...	೦—೨—೧
...		೦—೨—೩
...		೦—೨—೦
...	...	೧—೨—೦
...	...	೦—೧೨—೦
...		೩—೪—೬
...		೩—೪—೬
...	...	೦—೮—೦
...	...	೧—೮—೦
...		೦—೮—೦

ಸಂಸ್ಕೃತ ಮೂಲಗ್ರಂಥಗಳು

...	.	೦—೫—೦
...		೦—೨—೬
...		೦—೨—೬
...		೦—೨—೬
...		೦—೩—೬
...		೦—೧—೦

... [illegible]

NOTICE.

ಎಸ್. ರಾಮಸ್ವಾಮಿಯಂಗಾರ್ ಕಂಪೆನಿ.

ಜನರಲ್ ಕಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಿಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಮು ಕೆಲಸಗಳನ್ನು ಜಾಗರೂಕತೆಯಿಂದಲೂ ಶೀಘ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ಒಂದಕ್ಕೆ ೧ ಮಧ್ದಿನ ಮೇರೆ ದಳ್ಳಾಳಿತೆಗೆದುಕೊಳ್ಳಲ್ಪಡುವದು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MAY 3, 1886.

೧೮೮೬ನೇ ಮೇ ೩ನೇ ತಾ॥ ಸೋಮವಾರ

REMISSION OF ASSESSMENT.

ಈದೇಶದಲ್ಲಿ ಮುಂಬೈ ರೆವಿನ್ಯೂಸರ್ವೇಸೆಟಲ್‌ಮೆಂಟ್ ಪದ್ಧತಿ ನೆಲಗೊಂಡದರಿಂದ ಸಾಬಕ್‌ಚೀಫ್ ಕಮಿಷನರವರ ಕಾಲದಲ್ಲಿ ಸಾಗುವಳೀ ಮತ್ತು ಫಸಲಿನ ಸ್ಥಿತಿಯನ್ನನುಸರಿಸಿ ಸರ್ವೇ ಆಕಾರವು ಪ್ರಾರಾವಸೂಲ್ಮಾಡಲ್ಪಡುತಲಿತ್ತು. ಈಜಮೀನಿಗೆನೀರು ಒದಗಿಸುವ ಜಲಾಧಾರಗಳನ್ನು ಸರ್ಕಾರದವರು ದುರಸ್ತಿಸಲ್ಲಿಟ್ಟುಕೊಂಡಿದ್ದರು. ಶ್ರೀಮನ್ಮಹಾರಾಜರವರಿಗೆ ದೌಲತ್ ಆದಮೇಲೆ ಸಾಬಕ್ ದಿವಾನ್ ಮ॥ರಂಗಾಚಾರ್ಯರವರು, ಕಾಮಗಾರಿಖರ್ಚಗೆ ಸಾಂಗ್‌ಷನ್ ಮಾಡದೆ ತರೀ ಜಮೀನ್‌ಗಳಲ್ಲಿ ಫಸಲ್ ನಷ್ಟವಾದರೆ ಹಂಗಾಮಿಯಾಗಿ ರಿಮಿಷನ್ ಮಾಡುವಂತೆ ಹುಕುಂ ಕೊಟ್ಟರು. ಸದರೀ ಹುಕುಮನ್ನು ಜಾರಿಯಲ್ಲಿ ತರತಕ್ಕ ಜಮಾಬಂದಿ ಆಫೀಸರರು ತಮ್ಮ ಇಷ್ಟಾನುಸಾರ ಅರ್ಥಮಾಡಲಿಕ್ಕೆ ಬುದ್ಧಿ ವಾಕ್ಯಧಂತೆ ಅದು ಅವಕಾಶವುಳ್ಳದ್ದಾಗಿತ್ತು. ಈಗಿನ ದಿವಾನರಾದ ಮ॥ ಶೇಷಾದ್ರಿಅಯ್ಯರವರು, ಡೆಪ್ಯುಟೀಕಮಿಷನರ್‌ಗಳ ಅಭಿಪ್ರಾಯಾನುಸಾರ ಸದರೀಅವ್ಯವಸ್ಥಿತ ಹುಕುಮನ್ನು ಜಾರೀಯಲ್ಲಿ ತರುವದಕ್ಕಿಂತಲೂ ಪ್ರಾರಾಕಂದಾಯವನ್ನು ವಸೂಲ್ಮಾಡುವದೇ ನ್ಯಾಯವೆಂದು ತಾತ್ಪರ್ಯ ಪಟ್ಟಿರುತ್ತಾರೆಂದು ಕೇಳುತ್ತೇವೆ. ರಾಜ್ಯವು ಮಹಾರಾಜರಿಗೆ ಒಪ್ಪಿಸಲ್ಪಟ್ಟಬಳಿಕ ಕಾಮಗಾರೀ ಖರ್ಚು ಕಡಮೆಯಾಗಿ ಸಾಲೀಯಾನಾ ಏಳೇಳುಲಕ್ಷ ರೂಪಾಯಿಗಳಿಗೆ ಇಳಿಸಲ್ಪಟ್ಟಿತು. ಈ ಸಾಲಿನಲ್ಲಿ ೨೦ ಲಕ್ಷ ರೂಪಾಯಿಗಳವರಿಗೆ ಹೊಸ ಕಾಮಗಾರೀಗಳಿಗೆ ದಿವಾನರವರು ಸಾಂಗ್ಷನ್ ಮಾಡಿದರೆಂದು ಕೇಳುತ್ತೇವೆ. ಇದುನಿಜವಾಗಿದ್ದಾಗ್ಯೂ, ಸದರೀ ಮೊಬಲಗು ಸಾಗುವಳೀ ಅನುಪಯುಕ್ತ ಕಾಮಗಾರಿಗಳಿಗೂ, ಇಂಜನಿಯರ್ ಇಲಾಖಾ ಆಫೀಸರ್‌ಗಳ ತಲವ ಅಜಾಫೆಗಳಿಗೂ ಉಪಯೋಗವಾಗಬಹುದೇಹೊರತು ಸಾಗುವಳಿಗೆ ಉಪಯುಕ್ತಗಳಾದ ಕಾಮಗಾರಿಗಳಿಗೆ ವಿನಿಯೋಗಿಸಲ್ಪಡತಕ್ಕದ್ದಲ್ಲ. ಏನಂದರೆ ಮರಾಮತ್ ಪದ್ಧತಿಯಂತೆ ಇಲ್ಲಿಕೆರೆ ಗಳಕಾಮಗಾರಿಗಳು ಉದಾಸೀನ ಮಾಡಲ್ಪಡುತ್ತೆ, ಮುಂಬೈ ಪದ್ಧತಿಯಂತೆ ರೈತರಿಂದ ಪ್ರಾರಾ ಕಂದಾಯ ವಸೂಲ್ಮಾಡಲ್ಪಡುತಿದೆ. ಈರೀತಿ ಮಾಡಿದಮೇಲೆ ರಾಜ್ಯಭಾರ ಕ್ರಮವು ಹೊಸದೆನ್ನಿಸಿಕೊಳ್ಳಲಾರದು. ಮುದ್ದಾಂಗವಾಗಿ ಹೊಸಕಾರ್ಯವು ಹುಟ್ಟಲಾರದು, ಮತ್ತುಹಳೇದುನಿಲ್ಲಲಾರದು. ಮದರಾಸಿನಮತ್ತು ಮುಂಬೈ ಪ್ರಸಿಡೆನ್ಸಿಗಳ ಮಧ್ಯೆ ಇರುವ ಈ ಮೈಸೂರು ರಾಜ್ಯದಲ್ಲಿ, ಎರಡು ಪ್ರಸಿಡೆನ್ಸಿಗಳ ಹುಕುಂಗಳ ಪೈಕಿ ಒಂದೊಂದರಲ್ಲಿ ಕೆಲವುಭಾಗ ಸೇರಿಸಿದರೇನೇ ಹೊಸ ಹುಕುಮಾಗಿ ಗೌರವಿಸಲ್ಪಡುವದು. ಈ ಪ್ರಕಾರ ಸೇರಿಸಲಿಕ್ಕಾಗಿಯೇ ಕೌನ್ಸಿಲರ್‌ಗಳೂ ಲೆಜಿಸ್ಲೇಟಿವ್ ಇಲಾಖೆಯವರೂ ಇಲ್ಲಿ ಏರ್ಪಟ್ಟಿರುತ್ತಾರೆ. ಪರಂತು ಜನಗಳಿಗೆ ಉಪಯುಕ್ತವಾದ ಯಾವ ಹುಕುಮಾಗಲಿ ಈ ಇಲಾಖೆಯಿಂದ ಜಾರೀಗೆ ಬರುವದೆಂಬ ನಿಯಮವಿರುವಂತೆ ಜನಗಳಿಗೆ ಮಾತ್ರ ಗೊತ್ತಿಲ್ಲವು.

PROSECUTION FOR DEFAMATION AGAINST THE CALCUTTA STATESMAN

ಯಥಾರ್ಥವಾದೀ ಬಹುಜನವಿರೋಧಿ ಎಂಬ ಲೋಕೋಕ್ತಿಯಂತೆ ಸತ್ಯವಾದಿತ್ವವು ಈಕಾಲದಲ್ಲಿ ವಿಶೇಷತಃ ಅನರ್ಥಫಲ ಪ್ರದವಾಗದಿರುವದಿಲ್ಲವು. ಮತ್ತು ವಾಚಕನೂತಾಂಭಿತನು ಸಹ ಸಾಮ್ರಾಜ್ಯನಾಗುವಂತೆ ತಾತ್ವಿಕನೂ ಸತ್ಯವ್ರತಿಯುಳ್ಳವನೂ ಗೌರವ್ಯನಾಗಲಾರನು ಎಂಬದಕ್ಕೆ ಇದರದಿ ಕಂತ ವಿಷಯವೇ ಸಾಕಾದ ದೃಷ್ಟಾಂತವಾಗಿರುತಿದೆ. ಕಲ್ಕತ್ತೆ ಸ್ಟೇಟ್ಸ್‌ಮ್ಯಾನ್ ಪತ್ರಿಕೆಯು ಯಾವಾಗಲು ಹಿಂದೂ ಪಕ್ಷಾವಲಂಬಿಯೆಂಬದೂ, ಹಿಂದೂ ಸಂಸ್ಥಾನಗಳ ಅಭ್ಯುನ್ನತಿಯಂ ಚಿಂತರವಾಗಿ ಕೋರತಕ್ಕದ್ದೆಂಬದೂ, ತನಗೆ ಪ್ರಿ ಸಿದ್ಧಿ ಘಟಕಗಳಾದ ಅಂಶಗಳೇನಾದರು ಪ್ರಾಪ್ತವಾದೊಡೆ ಅವುಹೊರಪಡಿಸಿ, ತಕ್ಕ ಪ್ರತಿಕ್ರಿಯೆಯ ಮೂಲಕ ಕ್ರಮಪಡಿಸಬೇಕೆಂಬ ದೃಢಸಂಕಲ್ಪವು ಳ್ಳದ್ದೆಂಬದೂ, ರೆನ್ನ ಸಂಕಲ್ಪನಿರ್ವಹಣೆಯೊಳು ಉಂಟಾಗಬಹುದಾದ ನಾನಾ ವಿಘ್ನಗಳನ್ನು ಸ್ವಲ್ಪವೂ ಲೆಕ್ಕಿಸದೆ ಅರುಚಿಯಿರುವದನ್ನು ಉಪಕಾಂತಿ ಯುಳ್ಳದ್ದೆಂಬದೂ ಜಗತ್ಪ್ರಸಿದ್ಧವಾಗಿದೆಯಷ್ಟೆ. ಸದರೀ ಪತ್ರಿಕೆಯು ತನ್ನ ಸ್ವೈಜಗುಣಗಳನ್ನು ಅನೇಕ ಸಂದರ್ಭಗಳಲ್ಲಿ ನಾನಾ ರೂಪವಾಗಿ ಪ್ರಕಟಗಗೆ ವ್ಯಕ್ತಪಡಿಸಿ ಅವರ ಪ್ರಶಂಸೆಗೆ ಪಾತ್ರವಾಗಿರುತಿದೆ. ಈಗ ಅಂತವರೊಳು ನಾವೊಬ್ಬರಾಗಿವೆ ಕಿ ಸ್ಟೇಟ್ಸ್‌ಮ್ಯಾನ್ ಪತ್ರಿಕೆಯು ತನಗೆ ಯಾವವಿಧದಿಂದಲೂ ಸ್ಥಿತಿ ವಿಪರ್ಯ ಮುಂಟಾಗಲಿಲ್ಲವೆಂಬ ಭಾವವನ್ನು ಜನಗಳಿಗೆ ತೋರ್ಪಡಿಸಿ ಅವರ ನಂಬಿಕೆಯನ್ನು ದೃಢಪಡಿಸುವಬಗ್ಗೆ ಈ ಬಗೆ ಮತ್ತೊಂದು ಪ್ರಯತ್ನ ಮಾಡಿ ಅದನ್ನು ಕೋರ್ಟುಮೂಲಕ ಸ್ಥಿರಪಡಿಸಿಕೊಳ್ಳ ಲೆತ್ನಿಸಿ ಇದೆ ಹ್ಯಾಗಂದರೆ.—

ಅನ್ಯವಹಾರ ದೇಶದೊಳಿರುವ ಬರದ್ವಾನ್ ಸಂಸ್ಥಾನದ ಮಹಾರಾಜರಿಗೆ ಪಾಲಕರಾಗಿ ಮೊದಲಾಗಿರುವ ಕಾರ್ಯನಿರ್ವಾಹಕ ಸಭೆಯವರ ಪೈಕಿ ಮಿ॥ ಮಿಲ್ಲರ್ ಎಂಬವರು ಸದರೀ ಸಂಸ್ಥಾನದಲ್ಲಿ ನಡೆಸಿದ ದಾಂಧಲೆಗಳನ್ನು ಹೊರಪಡಿಸಿ, ಅರಸರು ಬಾಲ್ಯಾವಸ್ಥೆಯೊಳಿರುವಾಗ್ಯೆ ನಡೆಸಲ್ಪಡುವ ರಂತಾ ಅಕ್ರಮಗಳು ಬ್ರಿಟಿಷವರ ಪ್ರಾಮಾಣಿಕತೆಗೆ ಲೋಪವನ್ನುಂಟುಮಾಡದಿರಲಾರವೆಂದು ಭಾವಪಟ್ಟು, ಅಲ್ಲಿನ ಅವ್ಯವಸ್ಥೆಗಳನ್ನೆಲ್ಲ ಕ್ರಮವಾಗಿ ಕಳೆದತಿಂಗಳ ೧೧ನೇ ತಾರೀಖಿನಲ್ಲಿ ಸದರೀ ಸ್ಟೇಟ್ಸ್‌ಮ್ಯಾನ್ ಪತ್ರಿಕೆ ಫಾಯಿಷ್ಟುವಾಡಿತೇನಂದರೆ.

ಬರದ್ವಾನ್ ಸಂಸ್ಥಾನದ ಸಾಬಕ್ ಮಹಾರಾಜರವರಿಗೆ ಆಪ್ತರಾದವರು ಕೆಲವರು, ಗತ ೬ಸಂವತ್ಸರಗಳ ಕಾಲದಿಂದ ಜಾಯಿಂಟ್ ಮ್ಯಾನೇಜರ್‌ಗಳಾದ ಬನ್‌ಬಿಹಾರಿ ಮತ್ತು ಮಿ॥ ಮಿಲ್ಲರ್ ಎಂಬವರು ಚಾಲ್ತೀ ಖರ್ಚಿಗಾಗಿ ಮತ್ತು ಸರ್ಕಾರ ಪತ್ರಗಳು ತೆಗೆದಿಡತಕ್ಕಬಗ್ಗೆ ಅವಶ್ಯಕತೆಯಿಂದ ಮಹಾರಾಜರವರ ಪಾಲಕರಿಂದ ತೆಗೆದುಕೊಳ್ಳುತಿದ್ದ ಐವಜ್ ಏನಾಯಿತೋ ಅದು ವಿಚಾರಿಸಬೇಕೆಂದು ಬಲ ಹ್ಯರಿಸುತ್ತಾರೆ. ಅದೇಕಾಲದಲ್ಲಿ ಸದರೀ ಇಬ್ಬರು ದೊಡ್ಡಮನುಷ್ಯರು ಸ್ಥಳಕ ಮತ್ತು ಲಂಡನ್ ಪಟ್ಟಣದ ವರ್ತಕರಿಗೆ ಪಾವತೀ ಮಾಡದಂತೆ ತಿಳಿಸುವ ಮೊಬಲಗಿನ ಮತ್ತು ಅರಸರ ಖಜಾಂಚಿಯಿಂದ ಮಾರಲ್ಪಟ್ಟ ಹಳೇನ್ಯಾ

ಗಳ ಬಾಬತು ೪ ಲಕ್ಷ ರೂಪಾಯಿಗಳ ತಪಸೀಲನ್ನು ಸಹ ಈಗ ಮೇಲೆ ಕಂಡವರು ತಿಳಿಯಲಪೇಕ್ಷಿಸುತ್ತಾರೆ. ಇದಕ್ಕೆ ತಕ್ಕ ಉತ್ತರವು ದುರ್ಲಭವಾಗಿದೆ. ಸರ್ ಆಲ್ಪ್ರೆಡ್ ಲಾರ್ಯಲ್ಲ ಯವರಬಳಿ ತೆಗೆದುಕೊಂಡ ಕಿಲ್ಲತ್‌ಬಗ್ಗೆ ಸಾಬಕ ಮಹಾರಾಜರವರು ವಿವಾಹ ಮಾಡಿಕೊಂಡ ಕನ್ಯೆಗೆ ಕೊಡುವಬಗ್ಗೆ ಎಂದು ಮೆ॥ಸ್ಟರ್ ಮಿಲ್ಲರ್‌ಯವರು ಖಜಾನೆಯಿಂದ ತೆಗೆದುಕೊಂಡ ನಾಲ್ಕು ಲಕ್ಷ ಚಿಲ್ಲರೆ ರೂಪಾಯಿಗಳು ಹೋದದಾರಿ ಪತ್ತೇ ಇಲ್ಲವು. ಸಾಬಕ ಮಹಾರಾಜರವರಿಗಾಗಿ ಮಿಸ್ಟರ್ ಮಿಲ್ಲರ್‌ಯವರು ಮೆಸ್ಸರ್ಸ್ ಮೇಸಾರ್ಸ್ ಮತ್ತು ಹಾರಿಸ್ ಎಂಬವರ ಮಾರೀಫತ್ ತರಿಸಿದ ಕೆಲವು ಇಂಗ್ಲಿಷ್ ಪದಾರ್ಥಗಳಿಗಾಗಿ ಅವುಗಳ ನಿಜವಾದ ಕ್ರಯಕ್ಕಿಂತಲೂ ೭ ಲಕ್ಷ ರೂಪಾಯಿಗಳು ಜಾಸ್ತಿಯಾಗಿ ಮಹಾರಾಜರವರಿಗೆ ನಷ್ಟವಾದವು. ಸಾಬಕ ಮಹಾರಾಜರವರು ಮೃತಪಟ್ಟ ಒಂದುವಾರದೊಳಗಾಗಿ ಮೆ॥ ಮಿಲ್ಲರ್‌ಯವರು ತಮ್ಮ ಸಂಬಳವನ್ನು ೫೦೦ ರಿಂದ ೧,೦೦೦ ಕ್ಕೆ ಬಡ್ತಿಮಾಡಿಕೊಂಡು ತಾವು ಬದುಕುವತನಕ ತಮಗೂ ತಮ್ಮ ಭಾರ್ಯೆಗೂ ಮಾಹೆಯಾನಾ ೬೦೦ ರೂಪಾಯಿಗಳ ಆಯುತಿಗೆ ತಕ್ಕ ಮಾರ್ಗ ಸಂಕಲ್ಪಿಸಿ ಕೊಡಬೇಕೆಂಬುವಾಗಿ, ಅತಿಸುಲಭರಾಗಿಯೂ, ಬಾಲಕರಾಗಿಯೂ ಇರುವ ಪ್ರಕೃತ ಮಹಾರಾಜರನ್ನು ಬಲಾತ್ಕರಿಸಿ ಅವರಿಂದ ಕ್ರಮವಾದ ಪತ್ರವೊಂದು ಬರೆಸಿಕೊಂಡರು. ಮೆ॥ ಮಿಲ್ಲರ್‌ಯವರು ಸದರೀ ಪತ್ರವನ್ನು ಸ್ವತಃ ಬರೆದು ಮಹಾರಾಜರವರ ದಸ್ತಕತ್‌ಬಗ್ಗೆ ತಗೆದುಕೊಂಡುಹೋದಾಗ ಅವರು ಅದಕ್ಕೆ ತಾವು ಈಗ ರುಜುಹಾಕುವದಿಲ್ಲವೆಂತಲೂ ಮುಂದೆ ಯಾವಾಗಲಾದರೂ ಹಾಕುತ್ತೇವೆಂತಲೂ ಹೇಳಿ ಬಹು ವಿಧವಾಗಿ ನಿರಾಕರಿಸಿದರು. ಪರಂತು ಮೆ॥ ಮಿಲ್ಲರ್‌ಯವರು ಅದು ಕೇಳದೆ ರುಜು ಮಾಡದ ಹೊರ್ತು ಮಹಾರಾಜರನ್ನು ಹೊರಗಬಿಡದೆ ಹೋದರು. ಇದಲ್ಲದೆ ಮೆ॥ ಮಿಲ್ಲರ್‌ಯವರು ತಾವು ಇಂಗ್ಲಾಂಡಿಗೆ ಹೋಗತಕ್ಕೆಂಬ ನೆವದಮೇಲೆ ಒಂದು ಸಂವತ್ಸರ ಸಂಬಳವನ್ನು ಅಡ್ವಾನ್ಸಾಗಿ ಗತ ಐದು ಸಂವತ್ಸರ [illegible] ಎರಡಾವರ್ತಿ ತೆಗೆದುಕೊಂಡರು. ಪ್ರತಿ ಸಂವತ್ಸರದಲ್ಲಿಯೂ ದಾಲೀಖರ್ಚುಬಗ್ಗೆ ೧೫,೦೦೦ ರೂಪಾಯಿಗಳ ಪ್ರಕಾರ ಒಟ್ಟು ೬೦,೦೦೦ ರೂಪಾಯಿಗಳ ತನಕ ಪಡೆದರು. ಸಾಧಾರಣವಾದ ಕಿಲ್ಲತ್ತನ್ನು ಸರ್ ಆಲ್ಪ್ರೆಡ್ ಲಾರ್ಯಲ್ಲ ಯವರಿಂದ ತೆಗೆದುಕೊಳ್ಳತಕ್ಕಬಗ್ಗೆ ೮ ಲಕ್ಷ ರೂಪಾಯಿಗಳು ಮಹಾರಾಜರಿಂದ ಆಕರ್ಷಿಸಲ್ಪಟ್ಟವು. ಅವರ ಸಾನೀ ಉದ್ಯೋಗಸ್ಥರಾದ ಬರ್ ಬಿಹಾರಿ ಯೆಂಬುವರು ಮಹಾರಾಜರವರನ್ನು ಪ್ರಾಣಸಹಿತ ಸುಲುಕೊಂಡು ಭಕ್ಷಿಸುವದರೊಳು ನಿರತರಾಗಿದ್ದಾರೆ. ಸಾಮಾನ್ಯವಾದ ಒಂದು ಕಿಲ್ಲತ್ತನ್ನು ಯಾ ಪ್ರತಿಷ್ಠಾ ವಸ್ತ್ರವನ್ನು ಗವರ್ನಮೆಂಟನವರು ಜುಲ್ಮೀರೂಪವಾದ ೮ಲಕ್ಷ ರೂಪಾಯಿಗಳಿಗೆ ನಿಜವಾಗಿ ಮಹಾರಾಜರವರಿಗೆ ಮಾರಿರುವರೆ? ೩೦,೦೦೦ ರೂಪಾಯಿಗಳಿಗಿಂತ ಕಡಮೆ ಕ್ರಯವುಳ್ಳ ಒಂದು ಕಿಲ್ಲತ್‌ಬಗ್ಗೆ ಒಬ್ಬ ಬಾಲಕನಿಂದ ಅಜ್ಞಾನದಿಂದಲಾಗಲಿ ಅಥವಾ ಬಲಾತ್ಕಾರದಿಂದಲಾಗಲಿ ಕೊಡಲ್ಪಟ್ಟ ೮ಲಕ್ಷ ರೂಪಾಯಿಗಳು ಪ್ರಾಯಶಃ ಯಾರಿಗೆ ಸೇರಿರಬಹುದು? ಇದರ ಯಾಥಾರ್ಥ್ಯವನ್ನು ಗವರ್ನಮೆಂಟನವರು ತಿಳಿಯಬೇಕೆಂಬ ಅಪೇಕ್ಷೆಯುಳ್ಳವರಾಗಿದ್ದರೆ, ಇದಂ ಕುರಿತು ಮಹಾರಾಜರ ಇತರ ನೌಕರರನ್ನು ಕೇಳಿ ತಿಳಿದುಕೊಳ್ಳಬಹುದು. ಈಚೆಗೆ ತಿಳಿಯಬರುವವರಲ್ಲಿ ಮುಖ್ಯವಾದ ನಗದ್ ಜಮಾಖರ್ಚು ಪುಸ್ತಕಗಳೂ ಅರಮನೆಯ ಒಂದು ಕೊಠಡಿಯಲ್ಲಿ ಇದೆಯೆಂದು ಹೇಳುವ ಬಾಕೀ ಮೊಬಲಗಿಗೆ ಸಂಬಂಧಪಟ್ಟ ಕೆಲವು ಮುಖ್ಯಕಾಗದಪತ್ರಗಳುಳ್ಳ ಮತ್ತೊಂದು ಪುಸ್ತಕವೂ ಏಕಾಏಕ ಅಂತರ್ಧಾನವಾದಂತೆ ತಿಳಿಯಬರುತಿದೆ. ಮತ್ತು ನಿಜವಾದ ಅರಮನೆ ಪಾಹಿರ್‌ಗಳೆಲ್ಲವೂ ಕಣ್ಣುಮರೆಯಾಗಿ ಅವುಗಳಸ್ಥಾನದೊಳು ಕೃತ್ರಿಮವಾದವು ಇತಲ್ಪಟ್ಟಿವೆ. ಲೆಕ್ಕ ಬುಕ್ಕುಗಳು ಪರೀಕ್ಷಾರ್ಥ ಕೋರ್ಜ್‌ನವರಿಂದ ಅಪೇಕ್ಷಿಸಲ್ಪಟ್ಟಾಗ ತಪ್ಪು ಲೆಕ್ಕಗಳಿಂದ ತಯಾರಾಗತಕ್ಕ [illegible] ಬೇರೊಂದು ಪುಸ್ತಕ ಹಾಜರ್‌ಮಾಡಲ್ಪಟ್ಟಿತು, ಎಂದು ಪಗ್ಗೆರೆ ಸ್ಟೇಟ್ಸ್‌ಮನ್ ಪತ್ರಿಕೆಯು ಬರೆಯಲು ಈಗ ಮೆ॥ ಮಿಲ್ಲರ್‌ಯವರು ಸದರೀ ಪತ್ರಿಕಾಲೇಖಕರಮೇಲೆ ಮಾನನಷ್ಟದಬಗ್ಗೆ ಫಿರ್ಯಾದುಮಾಡುತ್ತಾರೆ. ಸ್ಟೇಟ್ಸ್‌ಮನ್ ಪತ್ರಿಕಾಲೇಖಕರು ಪ್ರಾಮಾಣಿಕರೆಂಬುದರೊಳಗೂ ನಿರಾಧಾರಗಳಾದ ವೃತ್ತಾಂತಗಳನ್ನು ಪ್ರಕಟಿಸಿ ತಮಗೆ ಒಂದು ಅಪಪ್ರಥೆಯನ್ನುಂಟುಮಾಡಿಕೊಳ್ಳತಕ್ಕ ಸ್ವಭಾವವುಳ್ಳವರಲ್ಲವೆಂಬವರೊಳಗೂ ಸ್ವಲ್ಪವೂ ಸಂಶಯವಿಲ್ಲವು. ಪರಂತು ಈ ಮೊಕದ್ದಮೆಯು ನ್ಯಾಯಸ್ಥಾನದಲ್ಲಿ ವಿಮರ್ಶೆಯೊಳಿರುವದರಿಂದಲೂ, ಉಭಯಪಕ್ಷದವರ ಸಾಧಕ ಬಾಧಕಾಂಶಗಳು ಪ್ರಕಟವಾಗದಿರುವದರಿಂದಲೂ, ಈಗಲೇ ಇದರಮೇಲೆ ನಮ್ಮ ಅಭಿಪ್ರಾಯವನ್ನು ತಿಳಿಸುವದು ಅನುಚಿತವು. ಮುಖ್ಯವಾಗಿ ನೇಟಿವ್ ಸಂಸ್ಥಾನಗಳ ಸ್ಥಿತಿಯನ್ನು ಒಳಹೊಕ್ಕು ನೋಡಿದರೆ ಆಗ ಅಲ್ಲಿನ ಹುಳುಕುಗಳೆಲ್ಲ ಹೊರಗಾಗುವವೇ ಹೊರ್ತು ಎಲ್ಲವಾದರೆ ಅನಿವಾರ್ಯವಾಗಿರುವದು.

THE ADAVITA DOCTRINE.

(Communicated)

ಲೋಕದಲ್ಲಿ ಮೋಕ್ಷಾಪೇಕ್ಷೆಯುಳ್ಳ ಪುರುಷನಿಗೆ, ಚತುರ್ವಿಧ ಪುರುಷಾರ್ಥಗಳಲ್ಲೊಂದಕ್ಕೆ ಉತ್ತಮವಾದ ಮೋಕ್ಷಕ್ಕೆ ಸಾಧಕಗಳಾದ ಜ್ಞಾನವೃಷ್ಟಿ ದ್ವೈತಬುದ್ಧಿ ನಿವೃತ್ತಿಗೆ ಸಾಧಕವಾದ ತತ್ವವಿಚಾರವು ಕೇವಲ ಆವಶ್ಯಕವಾಗಿರುತಿದೆ. ಆದದರಿಂದ ಈ ವಿಷಯಕವಾದ ನನ್ನ ಲೇಖನವು ಅಂತವರಿಗೆ ತಕ್ಕ ಪ್ರಯೋಜನವನ್ನುಂಟುಮಾಡದಿರಲಾರದೆಂದು ನಂಬುತ್ತೇನೆ.

"ಏಕೋನಾರಾಯಣೋಪರಿಃ" "ಅದ್ವಿತೀಯಂಬ್ರಹ್ಮ" ಅಂದರೆ ಬ್ರಹ್ಮಾತಿರಿಕ್ತವಾದದ್ದು ಬೇರೊಂದೂ ಇಲ್ಲವು. ನಾರಾಯಣ ಎಂಬ ಇತ್ಯಾದಿ ಭಿನ್ನ ನಾಮಗಳುಳ್ಳ ಏಕಬ್ರಹ್ಮ ಪದಾರ್ಥವೇ [illegible] ತಿಳಿಯತಕ್ಕದ್ದು. ಅದರೆ ಈ ಪ್ರಪಂಚವು, ಉದಕಸ್ಥಿತ ಪ್ರತಿಬಿಂಬದಂತೆ, ಬ್ರಹ್ಮಸ್ಥಿತ ಬಿಂಬ ಪ್ರತಿಬಿಂಬ ವ್ಯವಸ್ಥೆಯುಳ್ಳ ಮಾಯೆಯಿಂದ ಕಲ್ಪಿತವಾಗಿರುವ ಭ್ರಾಂತ್ಯಾತ್ಮಕವಾದ ಕಾರ್ಯ [illegible] ವಾಗಿರುತಿದೆಯಾಗಿ, ಅದಕ್ಕೆ ಅನ್ಯ [illegible] ಬಾಯಿತು. ಪ್ರಪಂಚ ಪ್ರತಿ [illegible] ಪರಬ್ರಹ್ಮನಾದ ಸ್ವಯಂಭುವನೊಳು ಅಧ್ಯಾಸದಿಂದ ಸತ್ಯಜ್ಞಾನ ಉಂಟಾಗುತಿದೆಯೆಂದು ಭಾವವು. ಅಂತಾ ಅಧ್ಯಾಸಕ್ಕೆ ಶಕ್ತಿಯೆಂತಲೂ, ಮಾಯೆಯೆಂತಲೂ, ಪ್ರಕೃತಿಯೆಂತಲೂ ಅನೇಕ ಹೆಸರುಗಳಿರುತಿವೆ. "ಯದ್ದೃಶ್ಯಂತನ್ನಶ್ಯಂ" ಅಂದರೆ ದೃಶ್ಯಮಾನವಾದ ಪದಾರ್ಥವು ನಶಿಸತಕ್ಕದ್ದೆಂಬದು ಅನುಭವಸಿದ್ಧವಾದ ವಿಷಯವಾಗಿರುತಿದೆ. ಆದದರಿಂದ "ಬ್ರಹ್ಮಸತ್ಯಂಜಗನ್ಮಿಥ್ಯಾ" ಎಂಬ ವಾಕ್ಯವು ನಿಜವಾಗಬೇಕಾಗುತಿದೆ. ಹ್ಯಾಗಂದರೆ, ಈ ಜಗತ್ತು ಉತ್ಪತ್ತಿ ನಾಶಗಳಿಂದೊಡಗೂಡಿ ಅನಿತ್ಯವಾಗಿದೆ ಯೆಂಬವಕ್ಕೆ ಸಾಕಾದಷ್ಟು ಅನೇಕ ಹೇತುಗಳು ಪ್ರತ್ಯಕ್ಷಗಳಾಗಿರುವಲ್ಲಿ, ಜಗತ್ತು ಸತ್ಯವೆಂದು ಸುತರಾಂ ಹೇಳುವದಕ್ಕೆ ಸಾಧ್ಯವಲ್ಲವು. ಈ ಪ್ರಪಂಚವನ್ನು ಅಸತ್ಯವೆಂದು ಹೇಳುವಾಗ್ಯೆ, ಪ್ರಪಂಚ ಭ್ರಾಂತಿಯು, ತಕ್ಕ ನಿತ್ಯಕಾರಣದಿಂದಲ್ಲದೆ ಅನ್ಯಥಾ ಉಂಟಾಗಲರಿಯದು. ಈ ಕಾರಣದಿಂದ ಪಾರಮಾರ್ಥಿಕ ಜ್ಞಾನರೀತ್ಯಾ ಬ್ರಹ್ಮ ಸತ್ಯವೆಂತಲೂ, ಜಗನ್ಮಿಥ್ಯೆಯೆಂತಲೂ ಸಿದ್ಧಾಂತ ಮಾಡಬೇಕಾಗುತಿದೆ. ಆದರೆ ಇದರಮೇಲೆ ಪೂರ್ವಪಕ್ಷದವರು ಮಾಡುವ ಆಕ್ಷೇಪವೇನೆಂದರೆ— ಕಾರ್ಯಕಾರಣಗಳನ್ನು ಸಮೀಪಿಸುತ ಅವುಗಳೊಡನೆ ಅಣುಪ್ರಪಂಚ ಸಹ ನಿತ್ಯವೆಂದು ವಾದಿಸುವ ತಾರ್ಕಿಕರ ಪಕ್ಷಕ್ಕೆ ಅನುಕೂಲವಾಗಿ, ಪ್ರಕೃತೀಶ್ವರನಿಗೆ ಭೇದವೆನ್ನುವ ದ್ವೈತ ಸಿದ್ಧಾಂತ ರೀತ್ಯಾ, ಪ್ರಪಂಚದೊಳು ಸಾಮಾನ್ಯವಾಗಿರುವ ಘಟೋತ್ಪತ್ತಿ ಕರ್ತನಾದ ಕುಲಾಲನೂ, ಮುಖ್ಯಕಾರಣವಾದ ಮಣ್ಣೂ, ಇತರಕಾರಣಗಳಾದ ದಂಡಚಕ್ರಾದಿಗಳೂ ಹ್ಯಾಗೆ ಆವಶ್ಯಕಗಳೋ ಅದೇರೀತಿ, ಈ ಪ್ರಪಂಚಕ್ಕೆ ಕರ್ತನಾದ ಈಶ್ವರನೂ ಸಮವಾಯಿ ಅಸಮವಾಯಿ ನಿಮಿತ್ತಕಾರಣಗಳಾದ ದಂಡ ಚಕ್ರಾದಿ ಸಾಧನರೂಪಗಳಾದ ಜಡಚಿತ್ತುಗಳೂ ಅಜನಜೀಶ್ವರನಿಗೆ ಅತ್ಯಂತ ಭೇದವಿರುವಂತೆ ಯಾತಕ್ಕೆ ಹೇಳಬಾರದೆಂಬದು. ಲೋಕದಲ್ಲಿ ಸಾಮಾನ್ಯವಾಗಿರುವ ಘಟೋತ್ಪತ್ತಿಗೆ ಅಂತಾ ಕೆಲವು ಸಾಧನಾಂತರಗಳಾದ ದಂಡ ಚಕ್ರಾದಿ ಸಮುದಾಯವು ಆವಶ್ಯಕವಾಗಿರುವಲ್ಲಿ ಈ ಮಹತ್ಪ್ರಪಂಚಸೃಷ್ಟಿಗೆ ಎಂತಾ ಸಮುದಾಯವಿರಬೇಕಾದೀತೋ ಅದು ಸಹ ನಿರ್ಧರಿಸಲ್ಪಡಬೇಕಾಗುತ್ತೆ. ಹಾಗೆ ಮಾಡಲಿಕ್ಕೆ ಯಾರಿಗೂ ಸಾಧ್ಯವಲ್ಲವೆಂಬದು ಶಾಸ್ತ್ರಗಳಲ್ಲಿಯೇ ತಿಳಿಸಲ್ಪಟ್ಟಿರುತದೆ. ಮತ್ತು ಎಂತಾ ಸಾಧನವುಳ್ಳ ಸೃಷ್ಟಿಗಾದರೂ ಬೇರೆ ಕೆಲವು ಉಪಸಾಧನಗಳು ಆವಶ್ಯಕವೆಂದೆಣಿಸಬೇಕಾಗಿರುತಿದೆ. ಈ ರೀತಿ ಊಹಿಸಲಿಕ್ಕೆ ಪ್ರಕ್ರಮಿಸಿದರೆ ಅದು ಎಂದಿಗೂ ಕೊನೆಮುಟ್ಟದೆ ಅನವಸ್ಥಾದೋಷಬಂದು ಪ್ರಾಪ್ತವಾಗುತಿದೆ. ಆದದರಿಂದ ಇಂತಾ ಸಾಮಾನ್ಯ ಲೋಕೋಪಮಾನಗಳು ಸರ್ವೇಶ್ವರನ ವಿಷಯದೊಳು ಕಲ್ಪಿಸಿ ವ್ಯರ್ಥವಾಗಿ ಶ್ರಮಪಡುವದಕ್ಕಿಂತಲೂ ಸ್ವೇಶ್ವರವಾದಿಗಳಿಂದ ಅಂಗೀಕರಿಸಲ್ಪಡುವ ಈಶ್ವರ ಲಕ್ಷಣವಾದ ಸ್ವಯಂಭುವತ್ವ, ಸರ್ವಜ್ಞತ್ವ, ಸರ್ವ ವ್ಯಾಪಕತ್ವ, ಸರ್ವ ನಿಯಂತೃತ್ವಾದ್ಯಂಶಗಳು ಒಬ್ಬನಲ್ಲಿಯೇ ಇದೆಯೆಂದು ಹೇಳುವದು ಸರ್ವಪರ್ಯಾಪ್ತವಾದವರಿಂದ ಸಾಧನಾಂತರ ಕಲ್ಪನಾಶ್ರಮಕ್ಕೆ ಅವಕಾಶವಿಲ್ಲದಿರುವದು. ಅಂತಾ ಕಾರಣವೇ ಮುಖ್ಯವಾಗಿರುವ ಪಕ್ಷಕ್ಕೆ ಪ್ರಪಂಚದಲ್ಲಿ ಉಂಟಾಗತಕ್ಕ ಸರ್ವಾವಸ್ಥೆಗಳಿಗೂ ಅಂತಾ ಈಶ್ವರನು ಸಹ ಪಾತ್ರನಾಗಬೇಕಾಗುವದಲ್ಲದೆ, ಯೆಲ್ಲರಿಂದಲೂ ಒಪ್ಪಿಕೊಳ್ಳಲ್ಪಡತಕ್ಕ ಈಶ್ವರನ ನಿಷ್ಪಕ್ಷಪಾತಕ್ಕೆ ಭಂಗ ಉಂಟಾಗಬೇಕಾಗುತಿದೆ ಮತ್ತು "ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೇ" ಇತ್ಯಾದಿ ಶ್ರುತಿಗಳಿಂದ ಈ ಪ್ರಪಂಚದಲ್ಲಿ ಬ್ರಹ್ಮನಿಲ್ಲದ ಸ್ಥಳವಿಲ್ಲವಾಗಿ ಸರ್ವತ್ರ ಪಿಚಿತವಾಗಿರುವಂತೆ ಪ್ರಸಿದ್ಧವಾಗಿರುವದರಿಂದ "ಏಕಸ್ಮಿನ್ [illegible]" ಎಂಬ ನ್ಯಾಯಶಾಸ್ತ್ರಯುಕ್ತಿಗೆ ವ್ಯತಿರಿಕ್ತವಾಗಿ ಒಂದು ಸ್ಥಳದೊಳು ಒಂದು ನಿಮಿಷದಲ್ಲಿ ಯೆರಡು ಪದಾರ್ಥಗಳಿರುವ ಸಂದರ್ಭ ಉಂಟಾಗುವ ಪಕ್ಷಕ್ಕೆ ಪರಬ್ರಹ್ಮ ಪರಿಪೂರ್ಣವಾಗಿರುವ ಬ್ರಹ್ಮಾಂಡದಲ್ಲಿ ತದ್ವ್ಯತಿರಿಕ್ತವಾದ ಒಂದು ಪದಾರ್ಥವುಂಟಾಗಬಹುದೇ ಹೊರ್ತು ಇತರತ್ರ ಸಾಧ್ಯವಲ್ಲವು. ಆದದರಿಂದಲೇ ಬ್ರಹ್ಮಲಕ್ಷಣವಂ ಕುರಿತು ತಿಳಿಸುವಾಗ್ಯೆ ಇತರ ವಸ್ತು ಶೂನ್ಯತ್ವವೂ ಸ್ವಯಂ ಪ್ರಕಾಶಕತ್ವವೂ ಯಾವದರಲ್ಲಿ ಪರ್ಯವಸಿಸುವವೋ ಅದೇ ಬ್ರಹ್ಮವೆಂದು ಹೇಳಲ್ಪಟ್ಟಿದೆ. ಹಾಗಾಗದ ಪಕ್ಷಕ್ಕೆ ಚಿತ್ತೆಂಬ ಅಚಿತ್ತೆಂದ ಪ್ರಪಂಚವು ಸಹ ನಿತ್ಯವಾಗಿ, ಚಾರ್ವಾಕಲೋಕಾಯತ ಮತಸ್ಥರ ಅಭೀಷ್ಟಪ್ರಕಾರ ನಿರೀಶ್ವರವಾದವನ್ನು ಪ್ರಬಲಗೊಳಿಸುವದು. ಹಾಗೆ ಆಲೋಚಿಸಿದಾಗ್ಯೂ ಈ ಪ್ರಪಂಚವು ಅಸ್ಥಿರವಾಗಿ ಅದರಲ್ಲಿರುವ ಜ್ಞಾನೋದ್ದೇಶ್ಯಗಳು ಅನ್ಯತ್ರ ಯೊಂದುತ ಬೇರೊಂದನ್ನು ಆಶ್ರಯಿಸಿರುವಂತೆ ಯೆಣಿಸಲ್ಪಡುವದಲ್ಲದೆ ಸ್ವಯಂಭುವತ್ವ, ಸ್ವತಂತ್ರತ್ವ ಇವುಗಳಿಗೆ ವ್ಯತಿರಿಕ್ತವಾಗಿರುತದೆ. ಆದದರಿಂದ ಇದನ್ನು ನಿದ್ಯವೆಂತಲೇ ಹೇಳಬೇಕಾಗುತಿದೆ. ಇನ್ನು ಇದಕ್ಕೆ ಮಧ್ಯಸ್ಥವಾಗಿರುವ ವಿಶಿಷ್ಟಾದ್ವೈತಮತ ರೀತ್ಯಾ ಕ್ಷೀರೋದಕಗಳು ಬೆರೆತಿರುವಂತೆ, ಪ್ರಕೃತೀಶ್ವರ ವಿಶಿಷ್ಟವಾಗಿ, ಸ್ಥೂಲಚಿದಚಿದ್ವಿಶಿಷ್ಟವೆಂತಲೂ ಸೂಕ್ಷ್ಮಚಿದಚಿದ್ವಿಶಿಷ್ಟವೆಂತಲೂ ಹೇಳುವ ಸಿದ್ಧಾಂತವನ್ನಾಲೋಚಿಸಲಾಗಿ, ಅದಕ್ಕೆ ಸ್ವಲ್ಪವೂ ಅರ್ಥವಿಲ್ಲದೆ ದ್ವೈತಾದ್ವೈತರೂಪವಾಗಿರುತಿದೆ. ಹ್ಯಾಗಂದರೆ, ಕ್ಷೀರೋದಕವತ್ ಎಂಬುವಲ್ಲಿ ಕ್ಷೀರೋದಕಗಳಿಗೆ ಇರುವ ಅನ್ಯೋನ್ಯ ಸಮ್ಮೇಳನವು ವ್ಯಕ್ತವಾಗುತಿದೆಯಲ್ಲದೆ ಒಂದಿರುವಕಡೆ ಮತ್ತೊಂದಿಲ್ಲದೆ (ಸಹಸ್ರಪತ್ರ ಪತ್ರಚ್ಛೇದವತ್) ಎಂಬುವಂತೆ ಯಾವಾಗಲೂ ಅವುಗಳೆರಡಕ್ಕೂ ಸಂಪೂರ್ಣ ಭೇದವಿರುತಿದೆ, ಇದಕ್ಕೆ ದೃಷ್ಟಾಂತವಾಗಿ, ಅಗ್ನಿದರ್ಶನಾನಂತರ ಕ್ಷೀರಮಿಳಿತವಾದ ಉದಕವು ಹಿಂಗಿ ಕ್ಷೀರಮಾತ್ರ ತಂಗುವಂತೆ ವಿಚಾರತೀಕ್ಷ್ಣತ್ವದಿಂ ಉಂಟಾಗತಕ್ಕ ಅದ್ವೈತಸಿದ್ಧಿಯಿಂದ ಭ್ರಾಂತ್ಯಾತ್ಮಕವಾದ ಈ ಪ್ರಪಂಚ ಪ್ರಕೃತಿನಾಶವಾಗಿ ಸ್ವಯಂಭೂ ಬ್ರಹ್ಮ ಒಂದೇ ತಂಗುವದು. ಆದದರಿಂದ ಈಶ್ವರ ಪ್ರಕೃತಿಗಳು ಪರಸ್ಪರ ಸಂಯುಕ್ತವಾಗಿವೆ ಎಂಬ ವಿಶಿಷ್ಟಾದ್ವೈತವಾದವು ವಿಸ್ತಾರವಾಗಿ ಕಡೆಗೆ ಅದೂ ಅದ್ವೈತವಾಗಿಯೇ ಪರಿಣಮಿಸುತಿದೆ. ಇದಲ್ಲದೆ ಮೇಲೆ ಕಂಡ ಬ್ರಹ್ಮನೊಡನೆ ನಿತ್ಯವೆಂಬ ಪ್ರಕೃತಿವಾದವೂ ಬ್ರಹ್ಮ ಅಸತ್ಯವೆಂಬ ನಿರೀಶ್ವರವಾದವೂ, ಏಕತ್ರ ಸೇರಿ ಭ್ರಾಂತಿರೂಪವಾಗಿರುತಿದೆ. ಸದರೀ ಭ್ರಾಂತಿಯು ತೊಲಗುಪ್ರಮಟ್ಟಿಗೆ ನೆಲಗೊಂಡಿರುವ ತನಕ ಕ್ರಮಕ್ರಮೇಣ ಅಂದರೆ ದ್ವೈತಭಾವವೂ ವಿಶಿಷ್ಟಾದ್ವೈತಭಾವವೂ ವ್ಯಾವಹಾರಿಕ ದಶೆಯಲ್ಲಿ ಅಂಗೀಕರಿಸಲ್ಪಡತಕ್ಕವಾಗಿರುತಿವೆ. ಪಾರಮಾರ್ಥಿಕ ದಶೆಯಲ್ಲಿ ಬ್ರಹ್ಮವು ಸತ್ಯವಾಗಿಯೂ ಪ್ರಪಂಚವು ಮಿಥ್ಯೆಯಾಗಿಯೂ ಪರಿಣಮಿಸುತಿವೆ. ಇದರಮೇಲೆ ಉಂಟಾಗುವ ಮತ್ತೊಂದು ಪೂರ್ವಪಕ್ಷವೇನಂದರೆ, ದೃಶ್ಯಮಾನವಾದ ಪ್ರಪಂಚವೇ ಮಿಥ್ಯೆಯಾಗಿರುವಲ್ಲಿ ಬ್ರಹ್ಮನು ಸಹ ಯಾತಕ್ಕೆ ಅಸತ್ಯವಾಗಕೂಡದು. ಮತ್ತು ಯೆಲ್ಲರಿಗೂ ಅನುಭೂತವಾಗಿರುವ ಪ್ರಪಂಚವೇ ಭ್ರಾಂತಿಯಾಗುವಲ್ಲಿ ತದುತ್ಪತ್ತಿ ಕಾರಣವು ಸಹ ಯಾತಕ್ಕೆ ಭ್ರಾಂತಿರೂಪವಾಗಿರಕೂಡದು ಎಂಬ ಸರ್ವಶೂನ್ಯವಾದಕ್ಕೆ ಸಮಾಧಾನವೇನಂದರೆ—ಆಧಾರವಿಲ್ಲದೆ ಆಧೇಯವಿರುವದಿಲ್ಲವಾದ್ದರಿಂದ ಭ್ರಾಂತಿಯೆಂಬ ಆಧೇಯಕ್ಕೆ ಆಧಾರವು ಬೇಕಾಗಿರುತದೆ. ಆದದರಿಂದ ಈ ಪೂರ್ವಪಕ್ಷವು ಸ್ಥಿರವಾಗಿ ನಿಲ್ಲಲಾರದು. ಬಾಹ್ಯಾಭ್ಯಂತರಗಳೆರಡೂ ಸತ್ಯವೆಂದು ವಾದಿಸುವ ಸರ್ವಾಸ್ತಿತ್ವವಾದಿಗಳು ಭಾವಾಭಾವಗಳೆರಡೂ ಒಂದೇ ನಿಮಿಷದಲ್ಲಿ ಉಂಟಾಗುವದೆಂದು ಹೇಳುವ ಪಕ್ಷಕ್ಕೆ ಅಂಗೀಕರಿಸಬಹುದು. ಪರಂತು ಹಾಗಿಲ್ಲವು. ಈ ಎರಡರ ಅತಿರಿಕ್ತ ಪ್ರಕ್ರಿಯೆಗಳು ಹ್ಯಾಗಾದರೂ ಇರಲಿ, ಸರ್ವಶೂನ್ಯತ್ವವನ್ನು ಬಾಹ್ಯಾರ್ಥಪ್ರತೀತಿಯನ್ನು ಒಟ್ಟಿಗೂ, ಸರ್ವಾಸ್ತಿತ್ವವನ್ನು "[illegible] ಜಗತಿ" ಎಂಬುವದು ಒಪ್ಪಿಗೂ ವೇದಾಂತಿಗಳು ಪಕ್ಷಾಂತರವಾಗಿ ಅಂಗೀಕರಿಸುತ್ತಾರೆ. ನ್ಯಾಯಮತದಂತೆ ರೀತ್ಯಾ ಈಶ್ವರನು ಶೂನ್ಯದಿಂದ ಪ್ರಪಂಚವನ್ನು ಸೃಜಿಸಿ ತನಗೆ ಭಿನ್ನವಾಗಿಟ್ಟನೆಂಬ ತಾತ್ಪರ್ಯವನ್ನು ನೋಡಲಾಗಿ, ಯಜ್ಜಾತಿಗೆ ತಜ್ಜಾತಿ ಹುಟ್ಟುವದೆಂಬ ಲಕ್ಷಣರೀತ್ಯಾ ಶೂನ್ಯದಿಂದ ಹುಟ್ಟಿದ ಪ್ರಪಂಚವು ಸಹ ಶೂನ್ಯವಾಗಬೇಕಾಯಿತು. ಆದದರಿಂದ ಈಶ್ವರ ಜೀವ ಭ್ರಾಂತಿ ವ್ಯತಿರಿಕ್ತವಾದ [illegible] ಪ್ರಪಂಚವು ಶೂನ್ಯ [illegible] ಸಂದೇಹವಿಲ್ಲವು. ಮೇಲೆ ತಿಳಿಸಲ್ಪಟ್ಟ ರೀತಿ ವ್ಯವಹಾರಿಕ ಸತ್ಯಪ್ರಕಾರ, ಅಂಕುರಾದಿಕವು ಸಕರ್ತೃಕವೆಂಬ ಲೋಕನ್ಯಾಯಾನುಸಾರ ಭ್ರಾಂತ್ಯಾತ್ಮಕವಾದ ಯಾವ ಕಾರ್ಯಕ್ಕಾಗಲಿ ಕಾರಣವನ್ನು ಅಂಗೀಕರಿಸಲೇ ಬೇಕಷ್ಟೆ. ಈ ಪ್ರತಿಬಿಂಬ ಪ್ರಪಂಚಕ್ಕೆ ಕಾರ್ಯಕಾರಣಗಳು ಮನೋಗ್ರಾಹ್ಯಗಳಾಗಿರುತಿವೆ. ಆದದರಿಂದ ಈ ಪ್ರಪಂಚಕ್ಕೆ ಕಾರಣಭೂತವಾದದ್ದು ಬ್ರಹ್ಮವೆಂತಲೂ, ಕಾರ್ಯವು ಪ್ರಕೃತಿ ಅಥವಾ ಕರ್ತನ ಶಕ್ತಿಯೆಂಬ ಮಾಯೆಯೆಂತಲೂ ತಿಳಿಯತಕ್ಕದ್ದು. ಪ್ರಪಂಚಕೆ ಕಾರಣಭೂತವಾದವನ್ನು ತಿಳಿಸಲ್ಪಟ್ಟ ತರುವಾಯ ತನ್ನು ಜೀವನೆಂಬವನ್ಯಾರೋ ಅವನಿಗೆ ಬೇಕಾದುದು ಯಾವದೋ ಆಬಗ್ಗೆ ಅವನು ಮಾಡಬೇಕಾದ ಪ್ರಯತ್ನವೆಂತಾದ್ದೋ ಅವನ ಪ್ರಯತ್ನಕ್ಕೆ ಉದ್ದಿಷ್ಟನಾದ ಈಶ್ವರನ್ಯಾವನೋ ಅದು ಇದರಲ್ಲಿ ತಿಳಿಸುವೆವು.

ಜೀವನು—ಪೃಥ್ವ್ಯಪ್ತೇಜೋವಾಯ್ವಾಕಾಶಗಳೆಂಬ ಪಂಚಭೂತಾತ್ಮಕವಾದ ಅನ್ನಮಯಕೋಶದೊಡನೆಗೂ, ಕರ್ಮೇಂದ್ರಿಯಗಳಾದ ವಾಕ್ಪಾಣಿಪಾದ ಪಾಯೂಪಸ್ಥಗಳೊಡನೆ ಕೂಡಿಕೊಂಡಿರುವ ಪಂಚಪ್ರಾಣಗಳುಳ್ಳ ಪ್ರಾಣಮಯಕೋಶದೊಡನೆಯೂ, ತ್ವಕ್ಚಕ್ಷುಃಶ್ರೋತ್ರ ಜಿಹ್ವಾಘ್ರಾಣ

ಗಳೊತನೆಯೂ, ಸಂಚಿತಪ್ರಾರಬ್ಧಯುಕ್ತವಾದ ಕರ್ತೃರೂಪವಾದಂತಾ ಬುದ್ಧಿಯುಳ್ಳ ವಿಜ್ಞಾನಮಯ ಕೋಶದೊತನೆಯೂ, ಆನಂದಾದಿವೃತ್ತಿಗಳೊತನೆ ಅವಿದ್ಯಾಯುಕ್ತವಾದ ಆನಂದಮಯ ಕೋಶದೊತನೆಯೂ ಸೇರಿರುವ ಪಂಚಕೋಶಗಳು "ನಾನೇ" ಎಂಬ ಭ್ರಾಂತಿಯುಳ್ಳ ಆತ್ಮನೇ ಜೀವನೆನಿಸಿರ್ಪನು. ಭಿನ್ನಾವಸ್ಥೆಯಲ್ಲಿ (ಅಂದರೆ ನಾನಾದೇಹ ಇರುವಾಗ) ಕೇವಲ ಕೂಟಸ್ಥಾತ್ಮನೆಂತಲೂ, ಅವನು ಸತ್ಯಜ್ಞಾನಾನಂದ ಸರ್ವಗತತ್ವ ನಿರ್ವಿಕಾರತ್ವಾದಿ ಗುಣಗಳುಳ್ಳವನೆಂತಲೂ, ಹೇಳುತ್ತಾರೆ. ಆಕಾಶದ ದೃಷ್ಟಾಂತದಲ್ಲಿ ಘಟಾಕಾಶಾದಿ ನಾಮಗಳು ಹ್ಯಾಗೆ ಉಂಟಾಗುತ್ತಿವೆಯೋ ಅದೇಪ್ರಕಾರ ಬ್ರಹ್ಮನಿಗೆ ವ್ಯಷ್ಟಿಯುಪಸ್ಥಿಯಲ್ಲಿ ಕೂಟಸ್ಥನಾಮಗಳೂ, ಸಮಷ್ಟಿಯವಸ್ಥೆಯಲ್ಲಿ ಬ್ರಹ್ಮನೆಂಬಹೆಸರೂ, ಉಂಟಾಗುತಿವೆಯಾಗಿ ಉಭಯಲಕ್ಷಣವಿಲ್ಲಯೂ ಭೇದವಿಲ್ಲವು. ಸಮಷ್ಟಿಯೆನಿಸಿದ ಬ್ರಹ್ಮನೇ ಪರಮಾತ್ಮನೆಂತಲೂ ಆ ಪರಮಾತ್ಮನು ಸರ್ವಜ್ಞತ್ವ ಸರ್ವಶಕ್ತಿಮತ್ವ ಸರ್ವನಿಯಂತೃತ್ವಾದಿ ಶಕ್ತಿಗಳುಳ್ಳ ಮಾಯೋಪಾಧಿತ್ವದಿಂದ ಈಶ್ವರನೆಂತಲೂ ವ್ಯವಹರಿಸಲ್ಪಡುತ್ತಾನೆ. ಇವರಿರ್ವರು ಜೀವಾತ್ಮ ಪರಮಾತ್ಮರೆಂಬ ಎರಡುವಿಧ ಪ್ರಭೇದಗಳುಳ್ಳವನಾಗಿರುತ್ತಾನೆ. ಜೀವಾತ್ಮನು, ಕೂಟಸ್ಥನೆಂತಲೂ, ಚಿದಾಭಾಸನೆಂದಲೂ ದ್ವಿವಿಧನಾಗಿರುವನು. ಪರಮಾತ್ಮನು ಬ್ರಹ್ಮನೆಂತಲೂ ಈಶ್ವರನೆಂತಲೂ ಎರಡು ಪ್ರಕಾರನಾಗಿರುತ್ತಾನೆ. ಕೂಟಸ್ಥನಿಗೆ ಬ್ರಹ್ಮ ಸಮಷ್ಟಿಯಾಗಿಯೂ ಚಿದಾಭಾಸರೂಪನಾದ ಜೀವನಿಗೆ ಈಶ್ವರನು ಸಮಷ್ಟಿಯೆಂತಲೂ ತಿಳಿಯತಕ್ಕದ್ದು.

ಆದರೆ ಬ್ರಹ್ಮಸ್ವರೂಪನಾದ ಜೀವನಿಗೆ ಸಂಚಿತಾದಿ ಕರ್ಮಫಲವನ್ನನುಭವಿಸದೇ ಸಾಂಸಾರಿಕಸಂಬಂಧವೂ ಜಗತ್ಪ್ರವೃತ್ತಿಯೂ ಪ್ರಾಪ್ತವಾದವು. ಈಜೀವನಿಗೆ ಈದೇಹಾದಿ ಸಂಘಾತವು ನಾನಲ್ಲವೆಂಬ ಜ್ಞಾನವು ಯಾವಾಗಲು ಇರುವದಾದರೆ ಶಬ್ದಾದಿವಿಷಯದೊಳಾದರೂ, ತತ್ಸಂಬಂಧಿಗಳ ವಿಷಯದೊಳಾದರೂ ವಿಶೇಷ ಪ್ರಯತ್ನಗೈಯಲಾರನು. ಈ ದೇಹವೇ ನಾನೆಂಬ ಜ್ಞಾನವಿರುವದಿಲ್ಲವಾಗಿ ಕರ್ತೃತ್ವವು ಸಿದ್ಧಿಸುವದಿಲ್ಲವು ಅದು ಇಲ್ಲದಪಕ್ಷದಲ್ಲಿ ಇಂದ್ರಿಯ ವ್ಯಾಪಾರಗಳಿಗೆ ಅವಕಾಶವಿರುವದಿಲ್ಲವು ಇಂದ್ರಿಯವ್ಯಾಪಾರರಹಿತರಿಗೆ ಪ್ರತ್ಯಕ್ಷಗಳಾದ ಸುಖಾದಿಗಳು ಸಿದ್ಧಿಸಲಾರವು. ಇದಕಾರಣ ದೇಹಾಭಿಮಾನದಿಂದ ಕರ್ತೃತ್ವವೂ ಅದರಿಂದ ಇಂದ್ರಿಯ ಪ್ರವೃತ್ತಿಯೂ, ತನ್ಮೂಲಕ ಸುಖಾದಿಗಳೂ, ಅದರಿಂದ ಸುಖದುಃಖಗಳೂ ಪ್ರಾಪ್ತವಾಗುವವು. ಬಾಹ್ಯದರ್ಶನಗಳನ್ನೂ ದೇಹದರ್ಶನಗಳನ್ನೂ ಇಂದ್ರಿಯದರ್ಶನಗಳನ್ನೂ ಅಂತಃಕರಣದರ್ಶನಗಳನ್ನೂ ಸಾಕ್ಷಿಭೂತನಾದ ಆತ್ಮನು ಕಲ್ಪಿಸಿ ಸಂಚರಿಸುತಲಿರುವದೇ ಮಿಥ್ಯಾರೂಪವಾದ ಅವಿದ್ಯೆಯೆನ್ನಿಸಿಕೊಳ್ಳುತಿವೆ. ಈ ಅವಿದ್ಯಾಬಲದಿಂದ ದೇಹೇಂದ್ರಿಯಾದಿ ಸುಖಗಳೊಳು ಮಗ್ನನಾಗಿ ಶರೀರಧರ್ಮಗಳು ತನ್ನವೇನೆಂದು ತಿಳಿದುಕೊಂಡಿತ ಯಾವಾಗ ದೇಹವು ಪ್ರತ್ಯೇಕವು ಆತ್ಮಸ್ವರೂಪನಾದ ನಾನುಬೇರೆಯೆಂಬ ನಿಶ್ಚಯಜ್ಞಾನವುಂಟಾಗುತಿವೆಯೋ ಆಗಲೆ ಶರೀರಧರ್ಮಗಳನ್ನೆಲ್ಲ ತೊರೆದು ನಿಜಸುಖವನ್ನು ಅನುಭವಿಸುತ್ತಾನೆ. ಈ ಆತ್ಮಸುಖವು ವಿಷಯಾನಂದಪರಿತ್ಯಾಗ ಪೂರ್ವಕವಾಗ ಪ್ರಕಾಶಿಸುವದು. ಸ್ವರೂಪಾನಂದಕ್ಕೂ, ಸ್ವರೂಪಜ್ಞಾನಕ್ಕೂ, ಪ್ರತಿಬಂಧಕವಾದ ಮಿಥ್ಯಾಜ್ಞಾನವು ಆತ್ಮಬ್ರಹ್ಮವೆಂಬ ಜ್ಞಾನದಿಂದ ಹೋಗತಕ್ಕದ್ದು ಯಥಾರ್ಥಜ್ಞಾನವಿಲ್ಲದೆ ಮಿಥ್ಯಾಜ್ಞಾನ ನಿವಾರಕವಾಗಲಾರದು. ಈ ಮಿಥ್ಯಾಜ್ಞಾನವು ನಿರಂತರ ಶ್ರವಣ, ಮನನಾದಿ ರೂಪವಾದ ವೇದಾಂತವಿಚಾರದಿಂ ಪ್ರಾಪ್ತವಾಗತಕ್ಕದ್ದಾಗಿರುತಿವೆ. ಅದು ಸಾಧನ ಚತುಷ್ಟಯ ಸಂಪತ್ತಿಲ್ಲವರಿಗೆ ಸಿದ್ಧಿಸಲಾರದು. ಸಾಧನ ಚತುಷ್ಟಯ ಸಂಪತ್ತಿಯೆಂದರೆ—ನಿತ್ಯಾನಿತ್ಯ ವಸ್ತುವಿವೇಕವೂ, ಐಹಿಕ ಪಾರಲೌಕಿಕ ಭೋಗಗಳಲ್ಲಿ ವೈರಾಗ್ಯವೂ ಅಂತರ್ಬಾಹ್ಯೇಂದ್ರಿಯ ನಿಗ್ರಹಾದಿ ಷಟ್ಕ ಸಂಪತ್ತಿಯೂ, ಮೋಕ್ಷೇಚ್ಛೆಯೂ ಯೆಂದರಿಯುವದು ಮನುಷ್ಯನಿಗಿವು ಸಿದ್ಧಿಸಿದರೇನೆ ಶ್ರವಣ ಮನನಾದಿಗಳ ಮೂಲಕ ಸ್ವರೂಪಜ್ಞಾನವಂಪಡೆದು ಆತ್ಮಸುಖವನ್ನನುಭವಿಸಲಿಕ್ಕೆ ಸಾಧ್ಯವಾಗುವದಾಗಿ ಪ್ರವೃತ್ತಿನಿವೃತ್ತಿ ಮಾರ್ಗಗಳಿಗೆ ಸಾಧನಭೂತಗಳಾದ ಸಂಕಲ್ಪಿಸಿಕೊಳ್ಳಬೇಕಾದ್ದು ಪ್ರತಿಮನುಷ್ಯನಿಗೂ ಪ್ರಥಮಕರ್ತವ್ಯವಾಗಿರುತಿದೆ. ಇಂತಾ ಕರ್ತವ್ಯದೊಳು ಜನಗಳಿಗೆ ಈಗಿನಕಾಲದಲ್ಲಿ ಅಪ್ರಾಮಾಣ್ಯಜ್ಞಾನವೂ ಔದಾಸೀನ್ಯವೂ ಅಧಿಕವಾಗುತಬರುವದರಿಂದ ಅವರಿಗೆ ... ದೈವಭಕ್ತಿಯೂ ಪರಲೋಕಭೀತಿಯೂ, ಲೋಕಾಪವಾದಶಂಕೆಯೂ ಇಲ್ಲವೆಯಾಗಿ ಎಲ್ಲರೂ ಮನಸ್ವೀ ವರ್ತಿಸಲಿಕ್ಕೆ ಕಾರಣವಾಗಿ ಏರ್ಪಟ್ಟಿತು.

Occasional Notes
ನೈಮಿತ್ತಿಕವಿಷಯನ್ಯಾಸ

A rumour.—ಬೈಸಾಖ್ಯಾಂತದಲ್ಲಿ ಕಲಕತ್ತೆ ಹೈಕೋರ್ಟಿನ ಚೀಫ್ ಜಸ್ಟೀಸ್ ಯವರ್ಗದವರಾಂಟಗೆ ವರ್ತಮಾನಬಂದಿರುತಿವೆ, ಪರಂತು ಅದರಕಾರಣವನ್ನು ತಿಳಿಯಬರಲಿಲ್ಲವು.

The Russian-Caspian Railway.—ರಷ್ಯಾದೇಶದವೊದಲು ಕಾಸ್ಪಿಯನ್ ಸಮುದ್ರದಮಾರ್ಗವಾಗಿ ಹಾಕಲ್ಪಡುತಲಿರುವ ರೈಲು ರಸ್ತೆಯಕಾಮಗಾರಿಯು, ಆಫ್ಘಾನಿಸ್ತಾನದ ಪೂರ್ವಭಾಗದಲ್ಲಿ ಅನಾಂಯೆಂಬದರ ವರಿವಿಗೆ, ಪ್ರಾಪ್ತಿಯಾಗಿರುತಿದೆ.

A rumour.—ಮುಂಬೈ ಗೆಜೆಟ್‌ಪತ್ರಿಕೆಯು ಸಿಂಲಾ ಬಾತಮೀದಾರನು ಬರೆಯುತ್ತಾನೇನಂದರೆ ಕೋರ್ಟ್-ಗ್ಯಾರಿಸ್ಟರ್ ಮೋಕದ್ದಮೆಯು ಪ್ರಕಟವಾಗೆಂದು ಅದರ ದರ್ಯಾಪ್ತಿಯಬಗ್ಗೆ ಇಲ್ಲಿಂದ ಒಬ್ಬ ದೊಡ್ಡ ಅಧಿಕಾರಿಯು ಕಳುಹಿಸಲ್ಪಡಬಹುದೆಂತ ... .

A rumour.—ಕಲ್ಕತ್ತಾ ಹೈಕೋರ್ಟಿನ ಹೊಸ ಚೀಫ್‌ಜಸ್ಟೀಸ್‌ರಾದ ಸರ್. ಕೋಮರ್ ಪೆದರಾಂಯವರು, ಬ್ಯಾರಿಸ್ಟರುಗಳು ಬಾಕೀಬಾಯಿಗಳನ್ನು ಆಗದುಕೊಳ್ಳತಕ್ಕಾಗಿ ಮೋಕದ್ದಮೆಗಳನ್ನು ಕರೆಯುವಕಾಲದಲ್ಲಿ ಅವರು ಹಾಜರಿರಬೇಕಾದ್ದು ಅವಶ್ಯವೆಂಬ ನಿರ್ಬಂಧವನ್ನುಂಟುಮಾಡುವವರಾಗಿರುವರೆಂಬ ಪ್ರವಾದವು ಹುಟ್ಟಿರುವಂತೆ ಅಲ್ಲಿನ ಪತ್ರಿಕೆಯೊಂದು ಹೇಳುತಿದೆ.

A reward.—ಬಂಗಾಳೀ ಸಿವಿಲ್ ಸರ್ವಿಸ್ಸಿಗೆ ಸೇರಿದ ಮಿ|| ಆರ್ ಎಂ. ದತ್ ಯೆಂಬವರು ಸಂಸ್ಕೃತ ಭಾಷೆಯೊಳು ... ಗೌರವಾರ್ಹವಾದ ... ಗವರ್ನ್ಮೆಂಟಾದಬಗ್ಗೆ ... ದ್ದ ೫,೦೦೦ರೂಪಾಯಿ ... ಯನ್ನು ಹೊಂದಿದರೆಂದು ತಿಳಿಯಬರುತಿದೆ. ಬಹುಕಾಲ ಶ್ರಮಿಸಿ ದೊಡ್ಡಪರೀಕ್ಷೆಗಳಂ ಕೊಡತಕ್ಕಂತಾವರಿಗೆ ಬಹುವಿಧ ಪ್ರೋತ್ಸಾಹಗಳುಂಟುಮಾಡಲ್ಪಡಬೇಕಾದ್ದು ಕೇವಲ ಆವಶ್ಯಕವಾದದ್ದಾಗಿರುತಿದೆ.

Snowdrifts in Russia.—ರಷಿಯಾ ದೇಶದಲ್ಲಿ ಮಂಜಿನಿಂದ ರೈಲ್‌ಗಾಡಿಗಳಿಗೆ ಆಗಿಂದಾಗ್ಗೆ ಅಪಾಯ ಸಂಭವಿಸುತಲಿದೆ. ಎರಡು ಪ್ಯಾಸೆಂಜರ್‌ಗಳು ಹಿಂದಿನ ಪ್ರಯಾಣಸ್ಥಳದಿಂದ ಹೊರಟು ಹೋಗುತ್ತಿರುವಾಗ ಮಂಜಿನಲ್ಲಿ ಮುಳುಗಿಹೋಗಲು ೧,೩೦೦ಮಂದಿ ಕೂಲಿಯವರನ್ನಿಟ್ಟುಕೊಂಡು ಮಂಜುಗಡ್ಡೆಗಳನ್ನು ಒಡಿಸಿ ರಸ್ತೆಯನ್ನು ಸಾಫುಮಾಡಿ ತರುವಾಯ ಗಾಡಿಗಳನ್ನು ನಡೆಸಿಕೊಂಡು ಹೋಗಬೇಕಾಯಿತೆಂದು ಒಂದಾನೊಂದುಪತ್ರಿಕೆ ಹೇಳುತಿದೆ.

A judicious selection.—ಧಾರವಾಡದಲ್ಲಿ ಸ್ಥಾಪಿಸಲ್ಪಟ್ಟಿರುವ ಟ್ರೇನಿಂಗ್ ಕಾಲೇಜ್ ಅಂದರೆ, ಪೂರ್ವದೇಶ ಭಾಷಾಭ್ಯಾಸಕ್ಕಾಗಿ ಯೋಜಿಸಲ್ಪಟ್ಟಿರುವ ಶಾಸ್ತ್ರ ಪಾಠಶಾಲೆಯ ಪ್ರಥಮೋಪಾಧ್ಯಾಯರಾದ ಡಾಕ್ಟರ್ ಲೀಟ್ನರ್‌ಯೆಂಬವರು ಒಂದು ವಿಶೇಷಕಾರ್ಯದಮೇಲೆ ಕಾಶ್ಮೀರದೇಶಕ್ಕೆ ಹೋಗಿರುವದರಿಂದ ಅವರ ಗೈರ್ಹಾಜರಿಕಾಲದಲ್ಲಿ ಪಾಠಶಾಲೆಯ ಪ್ರಥಮೋಪಾಧ್ಯಾಯ ಕೆಲಸವನ್ನು ನೋಡತಕ್ಕಬಗ್ಗೆ ಅದರ ಕಮಿಟಿಯವರು ಪಂಡಿತ ರಾಜೇಂದ್ರಶಾಸ್ತ್ರಿ ಎಂ ಎ. ಯವರನ್ನು ಚುನಾಯಿಸಿ ಇರುತ್ತಾರೆಂದು ಕೇಳಲಿಕ್ಕೆ ಬಹಳ ಸಂತೋಷಿಸುತ್ತೇವೆ ಇದು ಕೇವಲ ವಿವೇಕಪೂರ್ವಕವಾದ ಏರ್ಪಾಟಾಗಿರುತಿದೆ.

Recovery from ill health.—ಸಿಂಧಿಯಾ ಮಹಾರಾಜರವರು ಈಚಿಗೆ ಕೆಲವುದಿನಗಳಿಂದ ಬಹಳ ಕಾಹಿಲೆಯಾಗಿದ್ದು ಅದರಿಂದುಂಟಾದ ದೌರ್ಬಲ್ಯದವೆಸಿಯಿಂದ ಹಾಸಿಗೆಯಿಂದ ಏಳುವದಕ್ಕೆ ಸಹ ಶಕ್ತಿಯಿಲ್ಲದೆ ಇರುತಲಿದ್ದರು. ಈಚೆಗೆ ರೋಗವು ನಿಶ್ಶೇಷವಾಗಿ ನಿವೃತ್ತಿಯಾಗಿ ಹೊರಗೆ ಗಾಳಿಸವಾರಿ ಹೊರಡುತ್ತಾರೆ. ಮಹಾರಾಜರವರು ಒಳ್ಳೆಯ ಹವಾ ಅನುಭವಿಸಬೇಕೆಂಬ ಉದ್ದೇಶದಿಂದಲೂ, ಮುಂದಿನ ತಮ್ಮ ರಾಜ್ಯದ ತಳತಕ್ಕೆ ಸಂಬಂಧಪಟ್ಟ ರಾಜಕೀಯ ವಿಷಯಗಳನ್ನು ಕುರಿತು ವೈಸರಾಯಿಯವರ ಸಂಗಡ ಮಾತನಾಡಬೇಕೆಂಬ ಉದ್ದೇಶದಿಂದಲೂ ಶೀಘ್ರದಲ್ಲಿ ಸಿಂಲಾವಿಗೆ ಹೋಗಬೇಕೆಂದು ಯೋಚಿಸುತಲಿದಾರೆಂದು ಉತ್ತರದೇಶದ ಪತ್ರಿಕೆ ಯೊಂದರಮೂಲಕ ತಿಳಿಯಬರುತಿದೆ.

Maharaja Dhuleep Singh.—ಸಿಂಲಾವಿಂದ ... ಪತ್ರ ಗೆಜೆಟ್ ಪತ್ರಿಕೆಗೆ ಕಳುಹಿಸಲ್ಪಟ್ಟ ತಂತಿವೃತ್ತಾಂತದಲ್ಲಿ ನಮೂದಿಸಿರುವದೇನಂದರೆ—ಗವರ್ನ್ಮೆಂಟಿನವರು ಮಹಾರಾಜಾ ಧುಲೀಪ್‌ಸಿಂಗ ರವರಿಗೆ ಅವರಮುಖ್ಯರ್ಗಳಿಗಾಗಿ ಗೌರವವಾದ ಒಂದು ಮೊತ್ತವನ್ನು ಕೊಡುವುದಾಗಿ ಹೇಳಿದರು. ಪರಂತು ಅವರು ಅಪೇಕ್ಷಿಸಿದವೊಬ್ಬರು ಇಂಗ್ಲೆಂಡ್‌ದೇಶದ ಕಂಪಾಯದಾರರಮೇಲೆ ಹೊಸದಾಗಿ ಒಂದು ಭಾರವನ್ನು ಹೊರಿಸತಕ್ಕದ್ದಾಗಿರವದು ಅವರಿಗೆ ಭಾರೀ ಆಮದಾಗಿ ಉಂಟಾಮಾಡಲ್ಪಟ್ಟಿದ್ದರೂ ಗವರ್ನ್ಮೆಂಟಿನವರು ಆಗಾಗ್ಗೆ ಅರ್ಥಸಹಾಯಮಾಡುತಲಿದ್ದರು. ಆದಾಗ್ಯೂ ಅವರಿಗೆ ಅರ್ಥವಿಷಯಕವಾದ ಸಂಕಟಗಳುಂಟಾಗದೆಯೋ ಗಲಿಲ್ಲವು ಇಂಗ್ಲೆಂಡಿಗೆ ಬರುವದರಲ್ಲಿ ಅಕ್ಷೀಕಲಹ ಉಂಟುಮಾಡಿ ದವರ್ಮೂಲಕ ತಾವು ಅಪೇಕ್ಷಿಸುತವನ್ನು ಕೊಡುವುದಕೆ ಗವರ್ನ್ಮೆಂಟಿನವರನ್ನು ಬಲಾತ್ಕರಿಸುವದು ಅಥವಾ ಪಾಪರ ಹೋಗುವದುವೆಂಬವೇ ಮಹಾರಾಜರ ಉದ್ದೇಶವೆಂದು ಸ್ಪಷ್ಟವಾಗಿಕಾಣುತಿದೆ. ಅವರು ಇಲ್ಲಿಗೆಬಂದು ಗದ್ದಲ ಯಾವದೂಮಾಡದೆ ಇರುತಲಿರುವದರಲ್ಲಿ ಯಾವ ಅಪೇಕ್ಷೆಯೂ ಇಲ್ಲವು. ಹಾಗೆಯೇ ಅವರೂ ಗವರ್ನ್ಮೆಂಟಿಗೆ ಹೇಳಿಬಂದರು. ಅವರ ಕೋಪಪ್ರಕಟನೆಯು ಸೆಟೆಯಿಂದ ಅಸ್ಪಷ್ಟವಾಗಿ ಕಾಣಬರುತಿದೆ. ಆದದರಿಂದ ತೃಪ್ತಿಕರವಾದ ಯಾವದಾದರೊಂದು ವ್ಯವಸ್ಥೆಯಾಗುವತನಕ ಅವರು ಏಡನ್ ಪಟ್ಟಣದೊಳಿರುವರು, ಎಂಬವಿಂತವನ್ನು ಪ್ರಸಿದ್ಧಪಡಿಸುವದು ಉಚಿತವಾಗಿರುವದು, ಎಂಬದು.

ನೋಟೀಸ್.

ಈಚೆಗೆ ನಡೆದ ಏರ್ಪಾಟುಗಳಲ್ಲಿ ಈ ಪತ್ರಿಕೆಯ ಚಂದಾದಾರರನೇಕರು ಪರಸ್ಥಳಗಳಿಗೆ ವರ್ಗಮಾಡಲ್ಪಟ್ಟಿದ್ದರೂ ಅವರು ತಮ್ಮ ಹೆಸರನ್ನು ಸಲಾನೆ ಊರಿಗೆ ರವಾನಿಸಬೇಕೆಂಬ ಅಂಶವನ್ನು ನಮಗೆ ಇದುವರಿವಿಗೆ ತಿಳಿಸದೆ ಇರುವದರಿಂದ ವ್ಯರ್ಥ ಖರ್ಚುಗಳಾಟಿಗೆ ಕಾರಣವಾಗುತಿದೆಯಾಗಿ ಪೇಪರ್ ರವಾನಿಸಬೇಕಾದ ಸ್ಥಳವನ್ನು ದಯವಿಟ್ಟು ನಮಗೆ ತಿಳಿಸಬೇಕೆಂದು ಕೋರುವೆವು.

ನೋಟಿಸ್.

ಒದರಿಂದ ನಮ್ಮ ಚಂದಾದಾರರೆಲ್ಲರಿಗೂ ನಾವು ಪ್ರಕಟಿಸುವದೇನಂದರೆ—ಚಾಲ್ತೀಸಾಲಿನಲ್ಲಿ ಇದುವರಿವಿಗೆ ನಾಲ್ಕು ತಿಂಗಳು ಕಳೆದು ೫ ನೇ ತಿಂಗಳು ಹುಟ್ಟಿದಾಗ್ಯೂ ಅನೇಕಮಂದಿ ಚಂದಾದಾರರು ತಮ್ಮ ಚಂದಾ ಹಣಗಳನ್ನು ಕಳುಹಿಸದೆ ಬಾಕೀ ಇಟ್ಟುಕೊಂಡು ಜವಾಬುಕೊಡದೆ ಇರುತ್ತಾರೆ. ಈಸಾಲಿನ ಮುರುವಿನಲ್ಲಿ ಅಡ್ವಾನ್ಸು ಕಳುಹಿಸುವವರಿಗೇ ಪೇಪರ್ ಕಳುಹಿಸುವುದೆಂಬ ಏರ್ಪಾಡು ಮಾಡಿರುವದಾಗಿ ನಾವು ತಿಳಿಯಪಡಿಸಿದಪ್ರಕಾರ ಇದುವರಿವಿಗೆ ಬಡಸ್ತಾರ್ ನಡೆಸುತಬಂದೆವು. ಆದರೆ ಈ ಏರ್ಪಾಟನ್ನು ರಿಕ್ತರಾದವರು ಇದುವರಿವಿಗೆ ಕಾಪಾಡುತ ಬಂದಾಗ್ಯೂ ಉಪಸನ್ನರಾದವರಕೊಡ್ಡ ಮನುಷ್ಯರೆನವೆಂಬದು ನಮ್ಮನ್ನು ಮೋಹಗೊಳಿಸಿ ನಮ್ಮ ಸಂಕಲ್ಪಕ್ಕೆ ಅನ್ಯಥಾನಡೆಯುವಂತೆ ಮಾಡಿತು. ಈಗಲೂ ಬಾಕೀದಾರರಾದ ಚಂದಾದಾರರಿಲ್ಲರ ದಯವಿಟ್ಟು ತಾವುಕೊಡಬೇಕಾಗಿರುವ ಚಂದಾಮೊಬಲಗನ್ನು ಈ ತಿಂಗಳ ೧೫ನೇ ತಾರೀಖಿನೊಳಗಾಗಿ ಕಳುಹಿಸದಪಕ್ಷಕ್ಕೆ ಅವರಹೆಸರುಗಳ ಮಾತ್ರವಲ್ಲದೆ ಮಹತ್ತಾದ ಚಿಟಸೀರಗಳನ್ನು ಈಪತ್ರಿಕೆಯಲ್ಲಿ ಪ್ರಕಟಿಸಿ ಅಂತವರಿಗೆ ಪತ್ರಿಕೆಯನ್ನು ಮುಂದೆ ನಿಲ್ಲಿಸಿಬಿಡುವೆವಲ್ಲದೆ ಬಳಕ ನಿಷ್ಟುರಮಾರ್ಗದಿಂ ಬಾಕೀಗಳನ್ನು ಬರಮಾಡಿಕೊಳ್ಳಬೇಕಾಗಿರುವದು.

ಟಿ. ಸಿ. ಶ್ರೀನಿವಾಸಾಚಾರ್ಯರು,
ಕರ್ಣಾಟಕಪ್ರಕಾಶಿಕಾ ಪ್ರೊಪ್ರೈಟರ್
ಮಂಗಳೂರು, ತಾ|| ೩ ನೇ ಮೇ, ೧೮೮೬

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕುಜಾತಿವೃತ್ತಾಂತಗಳು.

The Dewan's Staff.—ಇಲ್ಲಿನ ದಿವಾನರವರು ಉದಕಮಂಡಲಕ್ಕೆ ಹೋದಕಾಲದಲ್ಲಿ ತಮ್ಮ ಚೀಫ್ ಸೆಕ್ರೆಟರಿ ಮತ್ತು ಒಬ್ಬ ರೈಟರ್, ಇವರಿಬ್ಬರನ್ನು ಮಾತ್ರ ಸಂಗಡ ಕರೆದುಕೊಂಡುಹೋದದರಿಂದ ಅಲ್ಲಿನ ಕೆಲಸಗಳಿಗೆ ಜನಗಳು ಸಾಲದೆ ಹೋಗಿ ಇಲ್ಲಿಂದ ಇನ್ನು ಕೆಲವರನ್ನು ಕರೆಯಿಸಿಕೊಂಡದ್ದಾಗಿ ತಿಳಿಯಬರುತಿದೆ.

Easter holidays.—ಈಸ್ಟರ್ ಎಂಬ ಕ್ರಿಸ್ತಿಯನ್ ಹಬ್ಬದಬಗ್ಗೆ ಸರ್ಕಾರ್ ಇಲಾಖೆಗಳಿಗೆ ಮಾಮೂಲಾಗಿ ಕೊಡಲ್ಪಡುತಲಿರುವ ರಜಾ ಕಳೆದತಿಂಗಳ ೨೨ನೇ ತಾರೀಖು ಬೃಹಸ್ಪತಿವಾರದದಿನ ಪ್ರಾರಂಭವಾಗಿ ೨೭ನೇ ಮಂಗಳವಾರಕ್ಕೆ ಪ್ರಾಪ್ತಿ ೨೮ನೇ ತಾರೀಖ್ ಮೊದಲು ಸಿವಿಲ್ ಕೋರ್ಟುಗಳು ವಿನಾ ಮಿಕ್ಕ ಎಲ್ಲಾ ಇಲಾಖೆಗಳಲ್ಲೂ ಕೆಲಸಗಳಿಗೆ ಪ್ರಾರಂಭವಾಯಿತು. ಸಿವಿಲ್ ಕೋರ್ಟುಗಳು ಬೇಸಿಗೆಯ ರಜಾಬಗ್ಗೆ ಮುಚ್ಚಲ್ಪಟ್ಟಿರುವದರಿಂದ ಅವು ಬರುವ ಜೂನ್ ೧ನೇ ತಾರೀಖಿನಿಂದ ಕೆಲಸಗಳಿಗೆ ಪ್ರಾರಂಭವಾಗುವವು.

The Registrarship of the British Resident's Court.—ಇಲ್ಲಿನ ಬ್ರಿಟಿಷ್ ರೆಸಿಡೆಂಟರಕೋರ್ಟ್ ರಿಜಿಸ್ಟ್ರಾರಾಗಿದ್ದ ಮಿ|| ಅನಂತನಾರಾಯಣರವರು ಮಹಾರಾಜಾ ಸರ್ಕಾರದಲ್ಲಿ ಅಸಿಸ್ಟೆಂಟ್ ಕಮಿಷನರಾಗಿ ನೇಮಕರಾದ್ದರಿಂದ ಈಗ ಖಾಲಿಯಿರುವ ಅವರಕೆಲಸವು ಖಾಯಂ ರೆಸಿಡೆನ್ಸಿ ಮಿ|| ಲ್ಯಾಯಲ್ ಯವರು ಬಂದಮೇಲೆಯೇ ಭರ್ತಿ ಮಾಡುವರೆಂದು ಕೇಳುತ್ತೇವೆ. ಸದರೀ ಕೆಲಸವು ಯಾರಿಗೆ ಕೊಡಲ್ಪಡುವದೋ ಅದುಮಾತ್ರ ಅದ್ಯಾಪಿ ಹೊರಗಾಗಲಿಲ್ಲವು.

Enrollment.—ಈಸಲದ ಬಿ. ಎಲ್. ಪರೀಕ್ಷೆಗೆ ಈದೇಶದಿಂದ ಹೋಗಿದ್ದು ಶೇರ್ಪಡೆಯಾದ ಮಿ|| ಗರುಡಾಚಾರ್ ಬಿ. ಎ. ಯವರು ಇಲ್ಲಿನ ಚೀಫ್ ಕೋರ್ಟಿನಲ್ಲಿ ಅಡ್ವೊಕೇಟಾಗಿ ಎನ್‌ರೋಲಾದದರಿಂದ ಇವರು ಮೈಸೂರು ಡಿಸ್ಟ್ರಿಕ್ಟ್ ಸರ್ಕಲ್ಲಿನ ಕಿರಿಯದಿಸ್ಟ್ರಿಕ್ಟ್ ಸರ್ಕಲ್ಲಿನ ಪ್ರಾಕ್ಟೀಸ್‌ಮಾಡುವವರಾಗಿದಾರೆಂದು ತಿಳಿಯಬರುತಿದೆ. ಇವರು ಬಹುಕಾಲ ಅನ್ಯದೇಶದಲ್ಲಿ ಮಾಡಿದ ವಿದ್ಯಾಸಂಗಕ್ಕೂ ತಕ್ಕ ಪ್ರಯೋಜನವನ್ನಾದರೂ ಕೊರತೆಯಿಲ್ಲದಂತೆ ತಮ್ಮ ಸ್ವದೇಶದಲ್ಲಿ ಅನುಭವಿಸಬೇಕೆಂದು ಕೋರುವೆವು.

Mr. J. B. Lyall—ಈ ಸಂಸ್ಥಾನದ ಕಾಯಂ ಬ್ರಿಟಿಷ್ ರೆಸಿಡೆಂಟರಾದ ಮೆ॥ ಜೆ. ಬಿ. ಲೈಲ್‌ಸಾಹೆಬರವರು ತಮ್ಮ ಫರ್ಲೋ ರಜಾವನ್ನು ಖೂತೆ ಮಾಡಿಕೊಂಡು ಈ ತಿಂಗಳ ೧೦ನೇ ತಾರೀಖಿನಲ್ಲಿ ಮದರಾಸಿಗೆ ವಾಪಸ್ ಬರುವರೆಂದು ನಿರೀಕ್ಷಿಸಲ್ಪಟ್ಟಿರುವದರಿಂದ ಅವರು ಇಲ್ಲಿಗೆ ಬಂದು ತಮ್ಮ ಕೆಲಸವನ್ನು ಮರಳಿ ವಹಿಸಿದ ಕೂಡಲೆ ಆಕ್ಟಿಂಗ್ ರೆಸಿಡೆಂಟರಾದ ಮೆ॥ ಗರ್ಡನ್ಸ್ವರ್ಥ್ ಯವರು ಫರ್ಲೋ ರಜಾಮೇಲೆ ಹೊರಟುಹೋಗುವರೆಂದು ತಿಳಿಯಬರುತಿದೆ. ಇಲ್ಲಿನ ಕಾಯಂ ರೆಸಿಡೆಂಟರಾದ ಮೆ॥ ಲೈಲ್‌ಯವರ ಪುನರಾಗಮನವು ಇಲ್ಲಿನ ಅಧಿಕಾರಿಗಳ ಪೈಕಿ ಕೆಲವರಿಗೆ ಅಪಾರ ಸಂತೋಷವನ್ನೂ ಕೆಲವರಿಗೆ ಸಂಪೂರ್ಣ ಅಪ್ರೀತಿಯನ್ನೂ ಉಂಟುಮಾಡತಕ್ಕದ್ದಾಗಿರುವದೆಂದು ನಂಬುತ್ತೇವೆ

The Maharaja's Cotton Mill Company and the *Spectator*—ಮಹಾರಾಜರವರ ಹೆಸರಿನಲ್ಲಿ ಈ ಊರೊಳಗೆ ಸ್ಥಾಪಿತವಾಗಿರುವ ಅರಳೀಯಂತ್ರದ ಕಂಪೆನಿಯವರು ಸ್ಪೆಕ್ಟೇಟರ್ ಪತ್ರಿಕೆಯ ಎಡಿಟರ್ ಮತ್ತು ಪ್ರೊಪ್ರೈಟರವರಮೇಲೆ ತಂದಿರುವ ಮಾನನಷ್ಟ ಮೊಕದ್ದಮೆಯು ಲಷ್ಕರ್ ಸಿವಿಲ್‌ಕೋರ್ಟಿನಲ್ಲಿ ಕಳೆದತಿಂಗಳ ೨೯ ಮತ್ತು ೩೦ನೇ ತಾರೀಖುಗಳಲ್ಲಿ ಮರಳಿ ವಿಚಾರಣೆಗೆ ಬಂದು, ವಾದಿಕಡೆ ಅಡ್ವೊಕೇಟುಗಳಾದ ಬ್ಯಾರಿಸ್ಟರ್ ಹೇಸ್ ಮತ್ತು ಬ್ಯಾರಿಸ್ಟರ್ ವಿಲ್ಲಿಗ್ರಾಬಿಯವರೂ, ಪ್ರತಿವಾದಿಯಕಡೆ ಅಡ್ವೊಕೇಟು ಮೆ॥ ಸ್ಮಿತ್ ಮತ್ತು ಅಡ್ವೊಕೇಟು ಮೆ॥ ಲಾಜರೋಯವರೂ ಹಾಜರಾಗಿ ತಮ್ಮತಮ್ಮ ಕಕ್ಷಿಗೆ ಸಾಧಕಗಳಾದ ಅಂಶಗಳನ್ನೆಲ್ಲಕುರಿತು ವಾದಿಸಿದರು. ಕನ್ಸಾಲಿಡೇಟೆಡ್ ಜಡ್ಜಿಯವರು ಉಭಯವಾದಿಗಳ ವಾದವನ್ನೂ ಕೇವಲ ಸಹನೆಯಿಂದಲೂ ಆಸ್ಥೆಯಿಂದ ಲೂ ಕೇಳಿ ತಮ್ಮ ಫೈಸಲ್ ಹೇಳತಕ್ಕ ಬಗ್ಗೆ ಈ ತಿಂಗಳ ೧೫ನೇ ತಾರೀಖಿಗೆ ಮೊಕದ್ದಮೆಯನ್ನು ಅಡ್ಜರ್ನ್ ಮಾಡಿರುತ್ತಾರೆ.

Transfer—ಸೆಂಟ್ರಲ್ ಕಾಲೇಜಿನಲ್ಲಿ ಅಸಿಸ್ಟೆಂಟ್ ಮಾಸ್ಟರಾಗಿದ್ದ ಮೆ॥ ವಾಸುದೇವಯ್ಯನವರು ದಿವಾನರವರ ಲೆಜಿಸ್ಲೇಟಿವ್ ಡಿಪಾರ್ಟ್‌ಮೆಂಟಿನಲ್ಲಿ ಡೆಪ್ಯೂಟಿ ಟ್ರಾನ್ಸ್ಲೇಟರ್ ಕೆಲಸಕ್ಕೆ ೧೫೦ ರೂಪಾಯಿಗಳ ಸಂಬಳದೊಡನೆ ವರ್ಗವಾಗಲ್ಪಟ್ಟರೆಂತಲೂ, ಇನ್ನಿಗೆ ಮುಂದೆ ಮಾಹೆಯಾನಾ ೫೦ ರೂಪಾಯಿಗಳ ತಲವನ್ನು ಬಡವೆಂತಲೂ ತಿಳಿಯಬರುತಿದೆ ಇನ್ನುಳಿದ ಅನುಕರಣೆ ಮೆ॥ ಕೃಷ್ಣಮಾಚಾರ್ಯ ಅಯ್ಯಂಗಾರ್ರುವರು ಸದರೀ ಇಲಾಖೆ ಹೆಡ್ ಟ್ರಾನ್ಸ್ಲೇಟರ್ ವ ಮ್ಯಾನೇಜರಾಗಿ ನೊಕರರಾದ ರೆಂತ ಕೇಳುತ್ತೇವೆ. ಮೇಲೆ ಕಂಡ ಸದರೀ ಇಬ್ಬರು ಉದ್ಯೋಗಸ್ಥರು ಬಹಳ ಸಮರ್ಥರಾದ ದರಿಂದ ಇವರ ಚುನಾವಣೆಯು ಕೇವಲ ಶ್ಲಾಘ್ಯವಾಗಿರುತಿದೆ.

How is it accounted for.—ಈ ದೇಶದ ಅಸಿಸ್ಟೆಂಟ್ ಕಮ್ಮಿಷನರ್‌ಗಳು, ಅಮಲ್ದಾರರು, ಡೆಪ್ಯುಟಿ ಅಮಲ್ದಾರರು, ಶೇಖ್‌ದಾರರುಗಳು ವಗೈರೆ ರಿಗಾಗಿ ಪ್ರತ್ಯೇಕವಾಗಿ ಏರ್ಪಡಿಸಲ್ಪಟ್ಟ ಪರೀಕ್ಷೆಗಳಲ್ಲಿ ತೇರ್ಗಡೆಯಾಗದವರಿಗೆ ಮುಂದೆ ಸದರಿ ಕೆಲಸಗಳು ಖಾಲಿಯಾದಾಗ ಕೊಡಲ್ಪಡಲಾರದೆಂತಲೂ, ಬಡ್ತಿ ಸಹ ಆಗಲಾರದೆಂತಲೂ ದಿವಾನರವರು ಗತಸಂವತ್ಸರದಲ್ಲಿ ಹುಕುಂಕೊಟ್ಟದ್ದು ತಮಗೆ ಜ್ಞಾಪಕದೊಳದೆ, ವರುತು ಆಕಾಲದಲ್ಲಿ ದಿವಾನರವರು ತಮ್ಮಮಾತಿಗೆ ಎಷ್ಟು ಬಿಟ್ಟಿದೆ ಬದ್ಧರಾಗಿ ನಡೆಯುವರೋ ನೋಡಬೇಕೆಂಬ ಕೋರಿಕೆಯೊಡನೆ ಇದುವರೆಗೂ ಕಾಲವನ್ನು ನಿರೀಕ್ಷಿಸುತಲಿದ್ದೇವು. ಈಗ ದೈವಯೋಗದಿಂದ ಅಂತಾ ಕಾಲವು ಪರೀಕ್ಷಾರ್ಥ ಈಗ ಪ್ರಾಪ್ತವಾಯಿತು. ಈಚೆಗೆ ದಿವಾನರವರು ಮಾಡಿದ ಏಜಾಫೆಗಳನ್ನು ನೋಡಲಾಗಿ ಮೇಲೆ ಕಂಡ ಪರೀಕ್ಷೆಗಳನ್ನು ಕೊಡುವದರಾಗಿಯೂ, ಸಕ್ರತಿ ಕೊಟ್ಟಿತ ಪ್ಪಿಹೋದವರಾಗಿಯೂ, ಇರುವರು ಅನೇಕರು ಬಡ್ತಿಗಳನ್ನೂ ನೊಕರಿಯನ್ನೂ ಪಡೆದಂತೆ ವ್ಯಕ್ತವಾಗುತಿದೆ. ಇದಕ್ಕೆ ದಿವಾನರವರು ಈಗ ಏನು ಸಮಾಧಾನ ಹೇಳುವರೋ ತಿಳಿಯಲಿಲ್ಲವು.

A rumour.—ಒಳದೇಶದವರ ಪತ್ರಿಕೆ ಹೇಳುವದೇನೆಂದರೆ—ಮೈಸೂರು ಚೀಫ್ ಕೋರ್ಟ್ ಚೀಫ್ ಜಡ್ಜಿಯಾದ ಮೆ॥ ಫ್ರಾಫ್‌ಯವರು ಬೇಸಿಗೆಯ ರಜಾಕ್ಕೆ ಸೇರಿದಂತ ಮೂರು ನಾಲ್ಕು ತಿಂಗಳ ಪ್ರಿವಿಲೇಜ್ ರಜಾಮೇಲೆ ಕ್ಷಿಪ್ರದಲ್ಲಿ ಇಂಗ್ಲಾಂಡಿಗೆ ಹೊರಟುಹೋಗುವರೆಂತಲೂ, ಅವರ ಗೈರುಹಾಜರಿ ಕಾಲದಲ್ಲಿ ಅವರ ಕೆಲಸಕ್ಕೆ ಎರಡನೇ ಜಡ್ಜಿಯಾದ ಮೆ॥ ಡಂಬೆಲ್ಟನ್‌ರೂ, ಅವರ ಕೆಲಸಕ್ಕೆ ಮೂರನೇ ಜಡ್ಜಿಯಾದ ಮೆ॥ ರಾಮಚಂದ್ರರಾಯರವರೂ ಅವರ ಕೆಲಸಕ್ಕೆ ನಗರಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿಯಾದ ಮೆ॥ ನರಹರಿರಾಯರು, ಅಥವಾ ತುಮಕೂರು ಡೆಪ್ಯುಟಿ ಕಮ್ಮಿಷನರಾದ ಮೆ॥ ಕೃಷ್ಣಮೂರ್ತಿರಾಯರವರೂ ನಿಯಮಿಸಲ್ಪಡುವರೆಂದು ಈಗ್ಯೆ ಮೂರುನಾಲ್ಕು ದಿನಗಳಿಂದ ಸರ್ಕಾರಿ ಇಲಾಖೆಗಳಲ್ಲಿ ಬಲವಾದ ಪ್ರವಾದ ವುಂಟಾಗಿರುತಿದೆ, ಎಂಬದು. ಈ ದೇಶದೊಳು ಸರ್ಕಾರ್ ಅದಾಲತ್ತುಗಳು ಅಧಿಕಾರಿಗಳ ಇಷ್ಟಾನಿಷ್ಟಗಳಿಗೆ ಅನುಗುಣವಾಗಿ ಮೊದಲು ಪ್ರವಾದರೂಪವಾಗಿ ಹುಟ್ಟಿ ತರುವಾಯ ಅದು ಕಾರ್ಯತಃ ಆಚರಣೆಯೊಳು ಬರುವ ಪಾಡಿಕೆ ನೇಟಿವ್ ಆಫಳತ ಯೇರ್ಪಟ್ಟ ಮೇಲೆ ನೆಲೆಗೊಂಡು ನಡೆದುಬರುತ್ತಿರುವದರಿಂದ ಹಿಂಗೂ ಆಸು ಭಾವ್ಯವಲ್ಲವು.

The Mysore Gazette—ಗತವಾರದ ಮೈಸೂರು ಗೆಜೆಟನ್ನು ನೋಡಲಾಗಿ ಅದರೊಳು ಜೋಡಿ ಕಾಯಂಗುತ್ತಾ ಗ್ರಾಮಗಳ ಹರಾಜ ತಪಶೀಲೂ ಸ್ಪೆಷಲ್ ಟೆಸ್ಟ್ ಪರೀಕ್ಷಾ ವಿಚಾರವೂ, ವಾರಸ್ ಸರ್ಟಿಫಿಕೇಟುಗಳೂ, ಕಡೆಗೆ ಕಾಲಸ್ಥಿತಿ ರಿಪೋರ್ಟುಗಳೂ ವಿನಾ ಬೇರೆ ಯಾವದೊಂದು ವಿಶೇಷಾಂಶವೂ ನಮ್ಮದೃಷ್ಟಿಗೆ ಬೀಳಲಿಲ್ಲವು. ಈ ಪೈಕಿ ಬೆಂಗಳೂರು ಕಡೂರು ಡಿಸ್ಟ್ರಿಕ್ಟುಗಳ ಬಾಬತು ಮಾರ್ಚಿ ತಿಂಗಳ ಕಾಲಸ್ಥಿತಿ ರಿಪೋರ್ಟುಗಳು ಎರಡು ಛಾಪಿಸಿಸಲಾಗಿರುತಿವೆ. ಬೆಂಗಳೂರು ಜಿಲ್ಲೆಯ ೬೫ ಹೋಬಳಿ ಚಿಕ್ಕಮಗಳೂರು [illegible] ಹೋಬಳಿ ಅದಂತೆ ತಿಳಿಯಬರ [illegible] ಹಾವಾಗಲೂ ಮಲೆನಾಡು ಪ್ರಾಂತದಲ್ಲಿ ಮಳೆ ಅಧಿಕವಾಗಿರುವದು ಸಹಜವಷ್ಟೇ. ಕಾಲ್ನಡೆಗಳು ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಫೆಬ್ರುವರಿ ತಿಂಗಳಗಿಂತಲೂ ೨೪ ಅಧಿಕವಾಗಿ ನೀರಿಗೆ ಬಿಟ್ಟಿ ೧,೧೪೫ ಸತ್ತವು. ಈ ಪೈಕಿ ೧೪೯ ಕಾಡು ಮೃಗಗಳಿಂದಲೂ ಮಿಕ್ಕವು ಇತರ ಕಾರಣಗಳಿಂದಲೂ ನಾಶವಾದಂತೆ ಸಮೂದಿಸಲ್ಪಟ್ಟಿದೆ. ಕಡೂರು ಡಿಸ್ಟ್ರಿಕ್ಟಿನಲ್ಲಿ ಫೆಬ್ರುವರಿ ತಿಂಗಳಗಿಂತಲೂ ೧೧೧ ಕಾಲ್ನಡೆಗಳು ಕಡಮೆಯಾಗಿ ಒಟ್ಟು ೩೯೭ ಛಾತಿಯಾದಂತೆ ತಿಳಿಯಬರುತಿದೆ. ಬೆಂಗಳೂರಿಗಿಂತ ಕಡೂರು ಡಿಸ್ಟ್ರಿಕ್ಟು ಅರಣ್ಯಪ್ರದೇಶವಾಗಿದ್ದಾಗ್ಯೂ ಕಾಡು ಮೃಗಗಳಿಂದ ಅಲ್ಲಿ ವಿಶೇಷ ನಷ್ಟವಿಲ್ಲವು. ನಷ್ಟವಾದ ಜಾನವರ್‌ಗಳ ಸಂಖ್ಯೆ ಈ ಡಿಸ್ಟ್ರಿಕ್ಟಿನಲ್ಲಿ ಅತ್ಯಧಿಕವಾಗಿರುತಿದೆ. ಈ ಡಿಸ್ಟ್ರಿಕ್ಟಿ ಜಾನವರ್‌ಗಳು ಗಾಯಿಬಸಾಯಿಗಳಿಂದ ವಿಶೇಷವಾಗಿ ಕಡಿಮೆಯಿಸಲ್ಪಡುತ್ತೆ. ಆದರೆ ಅವುಗಳ ಸಂಖ್ಯೆಯನ್ನು ತೋರಿಸುವ ಪ್ರತ್ಯೇಕ ಪಟ್ಟಿ ಇಲ್ಲವಾದದರಿಂದ ಇತರ ಕಾರಣಗಳಲ್ಲಿ ಇದೂ ಸೇರಿಸಲ್ಪಡುತಿದೆ. ಅದಾಗ್ಯೂ ಪಶುಹತ್ತಿಯು ಈ ವೂರಲ್ಲಿ ಅತ್ಯಧಿಕವೆಂದು ಹೇಳಬೇಕಾಗುತಿದೆ. ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ೨,೫೦೦ ರೂಪಾಯಿಗಳ ಕಿಮ್ಮತ್ತು ಬಾಳುವ ಜಮೀನ್ ದರಖಾಸ್ತು ಮಾಡಲ್ಪಟ್ಟಿದೆಂದೂ ಒಂದರೂ ಪಾಯಿಗಳ ಜಮೀನಿಗೆ ರಾಜೀನಾಮೆ ಕೊಡಲ್ಪಟ್ಟಿದೆಯೂ ನಮೂದಾಗಿರುತಿದೆ. ರಾಜೀನಾಮೆಗೆ ಕಾರಣವೇನು ಇದುವರೆವರಿಂದ ಮುಂದಿನ ತಿಂಗಳಲ್ಲಿ ಬರಬಹುದೆಂದೇನಿಸದಿದ್ದಾಗ್ಯೂ ದರಖಾಸ್ತಿಗೆ ಕಾಲಾವಧಿಯಿಲ್ಲವು. ಮುಂಗಾರಿ ಮಳೆಗೆ ಉಪಕ್ರಮವಾಗಲಿಲ್ಲವು. ಕಳೆದ ಸಂವತ್ಸರದಲ್ಲಿ ಫಸಲ್ ಚನ್ನಾಗಿ ಆಗದೆ ರೈತರು ಕಳವಳಗೊಂಡಿದಾರೆ. ಹೀಗಿರಲಾಗಿ ಇಷ್ಟು ನೊಬಲಗಳ್ಳಿ ಜಮೀನಿಗೆ ದರಖಾಸ್ತು ಬರಲಿಕ್ಕೆ ಕಾರಣವು ಡಿಸ್ಟ್ರಿಕ್ಟಿನಿಂದ ಕಳುಹಿಸಲ್ಪಟ್ಟ ಲೆಕ್ಕ ತಪ್ಪಾಗಿಯಾದರು ಇರಬೇಕು, ಅಥವಾ ಬಂಗಾರ ದೊರೆಯುವದೆಂಬ ದುರಾಶೆಯಾದರೂ ದರಖಾಸ್ತುದಾರರಿಗಿದ್ದಿರಬೇಕು. ಇಲ್ಲದಿದ್ದರೆ ಜಾಗನವರುಗಳ ಕಟ್ಟವೂ, ಜಾಸ್ತಿಜನರ ಗಳ ವರಹಾಪ್ತೋಫ ಗಿಲಿದಲ್ಲಿ ಸ್ಪುಟವಾಗಲಾರದು. ಕಡೂರು ಡಿಸ್ಟ್ರಿಕ್ಟಿನಲ್ಲಿ ೫೫೭ ರೂಪಾಯಿಗಳ ಜಮೀನಿಗೆ ರಾಜೀನಾಮೆಯೂ ೬೩೭ ರೂಪಾಯಿಗಳ ಜಮೀನಿಗೆ ದರಖಾಸ್ತು ಬಂದಂತೆ ತಿಳಿಸಲ್ಪಟ್ಟಿದೆ. ಇದೊಂದ ವೇಳೆ ನಿಜವಾಗಿದ್ದರೂ ಇರಬಹುದು.

TELEGRAPHIC SUMMARY
ತಂತಿವೃತ್ತಾಂತ ಸಂಗ್ರಹವು.

ಲಂಡನ್, ೨೫ನೇ ಏಪ್ರಿಲ್—[illegible]

ಲಾರ್ಡ್ [illegible] [illegible]

ಇದನ್ನು [illegible]

[illegible] ೨೬ನೇ ಏಪ್ರಿಲ್—[illegible]

ಲಂಡನ್, ೨೬ನೇ ಏಪ್ರಿಲ್—[illegible]

ಲಂಡನ್, ೨೭ನೇ ಏಪ್ರಿಲ್—[illegible]

ಅಥೆನ್ಸ್, ೨೮ನೇ ಏಪ್ರಿಲ್—[illegible]

ಅಥೆನ್ಸ್, ೨೯ನೇ ಏಪ್ರಿಲ್—[illegible]

ಅಥೆನ್ಸ್, ೩೦ನೇ ಏಪ್ರಿಲ್—[illegible]

EXTRACT

The Maharaja Dhulip Singh.—ದಂಡಾಪಹೀನರ ಸಾಹೆಬ್ ಮಹಾರಾಜರಾದ ದುಲೀಪ್ ಸಿಂಗರವರು ತಮ್ಮ ಭಾರ್ಯಾಪುತ್ರರೊಡನೆ ಕಳೆದ ಮಾರ್ಚಿ ತಿಂಗಳ ೩೦ನೇ ತಾರೀಖಿನಲ್ಲಿ ಉತ್ತರವ ಸ್ಥಾನದಿಂದ ಹೊರಟು ಯೇಡನ್ ಪಟ್ಟಣಕ್ಕೆ ಬಂದದರಿಂದ ಅವರು ಈಗಿನ ಪ್ರಯಾಣವನ್ನು ಕುರಿತೂ, ಅವರು ಯೇಡನ್ ಪಟ್ಟಣದೊಳು ಅವರ ವಹಿಸಲ್ಪಟ್ಟ ಅಂಶವನ್ನು ಕುರಿತೂ ಅಧಿಕಾಂಶಗಳು ಕೆಲವು ತಿಳಿಯಬಂದವು. ಮಹಾರಾಜರವರಸಂಗಡ ಅವರ ಭಾರ್ಯೆ, ಇಪ್ಪತ್ತೊಂದು ವರುಷದ ವಯಸ್ಸುಳ್ಳ ಒಬ್ಬ ಪುತ್ರನು, ಹದಿನೇಳುವರುಷಗಳ ವಯಸ್ಸುಳ್ಳ ಒಬ್ಬ ಪುತ್ರನು, ಒಂಬತ್ತು ಗಂಡುಮಗು, ಮೂವರು ಹೆಣ್ಣುಮಕ್ಕಳು, ಇವರೆಲ್ಲರುಬಂದರು. ಮಹಾರಾಜರವರು ತಮ್ಮ ಸಾನಿಧ್ಯಯಾಣಸ್ಥರೆಲ್ಲರೊಡನೆಯೂ ಸರಸವಾಗಿ ಮಾತನಾಡುತಯಿದ್ದರ ಕ್ಷಾಣದವರಿಗೂ ವಿನಯದಿಂದ ನಡೆಯುತಲಿದ್ದರು. ಮಾರ್ಚಿ ೩೧ನೇ ತಾರೀಖಿನ ರಾತ್ರಿ ಮಹಾರಾಜರು ಬಂದ ಹೋಗಿಜಹಜು ಯೇಡನ್ ಹಾರ್ಬರಿನಲ್ಲಿ ಪ್ರವೇಶಿಸಿದಕೂಡಲೆ ಅಲ್ಲಿನ ರೆಸಿಡೆಂಟರಾದ ಬ್ರಿಗೇಡಿಯರ್ ಜನರಲ್‌ಹಾಗಿ ನ್ಸೆಂಬವರು ಜಹಜಿಗೆ ಹೋಗಿ ಇಂಡ್ಯಗವರ್ನಮೆಂಟಿನ ಹುಕುಂ ಅನುಸರಿಸಿ ಅವರು ಅಲ್ಲಿಂದ ಮುಂದಕ್ಕೆ ಹೋಗುವದಕ್ಕೆ ಅವಕಾಶಕೊಡುವದಕ್ಕೆ ಆಗುವದಿಲ್ಲವೆಂದು ಮಹಾರಾಜರವರಿಗೆ ತಿಳಿಸಿದರು ಹೀಗಾಗುವದೆಂದು ಮಹಾರಾಜರವರಿಗೆ ತಿಳಿಯದೆಯಿರಲಿಲ್ಲವು. ಪ್ರಯಾಣಕಾಲದಲ್ಲಿ ತಮ್ಮನ್ನು ಜಿಬ್ರಾಲ್ಟರ್‌ನಲ್ಲಿ ನಿಲ್ಲಿಸಬಹುದೆಂಬ ಹೆದರಿಕೆ ಮಹಾರಾಜರವರಿಗೆ ಉಂಟಾಗದೆ ಹೋಗಲಿಲ್ಲವು. ಸ್ಯೂಯಜ್ ಕಾಲುವೆ ಪ್ರವೇಶಕ್ಕೂ ಯೇಡನ್ ಪಟ್ಟಣಕ್ಕೂ ಮಧ್ಯಮಾರ್ಗದಲ್ಲಿ ಮಹಾರಾಜರವರು ತಾವು ಅದುವರೆಗೂ ಹಾಕಿಕೊಂಡಿದ್ದ ಟೋಪಿ ಮೊದಲಾದ ಯೂರೋಪಿಯನ್ ಉಡುಪುಗಳನ್ನೆಲ್ಲ ತೆಗೆದುಹಾಕಿಬಿಟ್ಟು ನೇಟಿವ್ ದುಸ್ತುಗಳೂ ಪಂಜಾಬದೇಶದ ಪಗ್ರಿಯೂ ಹಾಕಿಕೊಂಡು ಯೂರೋಪಿಯನ್ ಪದ್ಧತಿಮೇಲೆ ಸಲಾಂಮಾಡುವದನ್ನು ಬಿಟ್ಟು ಪೂರ್ವದೇಶದಪದ್ಧತಿಯನ್ನಾಚರಿಸಲು ಪಡದದ್ದೆಲ್ಲವರಿಗಲ್ಲ ಬಹಳ ಆಶ್ಚರ್ಯವುಂಟಾಯಿತು. ಮಯಿನ್ ಸ್ಟೀಮರು ಅದಿನರಾತ್ರಿಯೆಲ್ಲ ಯೇಡನ್ನಲ್ಲೇ ಇತ್ತು. ಮಾರನೇದಿನ ಬೆಳಿಗ್ಗೆ ಮಹಾರಾಜರವರು ತಮ್ಮ ಭಾರ್ಯಾಪುತ್ರರೊಡನೆಯೂ ಒಬ್ಬ ಸಿಕ್‌ಜಾತಿ ನೌಕರನೊಡನೆಯೂ ಹಡಗಿಳಿದು ರೆಸಿಡೆಂಟರ ಬಂಗ್ಲೆಗೆ ಹೋಗಿ ಅಲ್ಲೇ ಇರುತಲಿದಾರೆ. ಗವರ್ನಮೆಂಟರವರ ಹುಕುಮಿಗೆ ಅವರು ಪ್ರತಿಬಂಧಿಸಲಿಲ್ಲವು ವರುತು ತಮ್ಮನ್ನು ದಸ್ತಗಿರಿಮಾಡಿದ ಅಂತವನ್ನೂ, ತಾವಾಗಿ ಜಹಜನ್ನು ಬಿಟ್ಟು ಬರಲಿಲ್ಲವೆಂತಲೂ ತಿಳಿಸಿ, ಇದು ನ್ಯಾಯವಿರೋಧಕವಾದದ್ದೆಂದು ಅವಕಾಶವನ್ನುಂಟುಮಾಡುವದೆಂದು ಸೂಚಿಸಿದರು.—ಮುಂಬೈ ಗೆಜೆಟ್

THE MYSORE GAZETTE
ಮೈಸೂರು ಗಜೆಟು.

ಶ್ರೀಮನ್ಮಹಾರಾಜ ರಾಜಾಸಾಹೆಬ ಬಹದೂರವರ ದಿವಾನರವರಿಂದ ಕೊಡಲಾದ ಪ್ರಸಿದ್ಧ ರಾದಾವೆ ಗಳು

[illegible] ೨೨ನೇ ಏಪ್ರಿಲ್ ೧೮೮೬.—ನಂ. ೪೩.—[illegible]

[illegible] ೨೪ನೇ ಏಪ್ರಿಲ್ ೧೮೮೬.—ನಂ. ೪೪.—[illegible]

ನಂ. ೪೫.—[illegible]

ನಂ. ೪೬.—[illegible]

ಶಿವಮೊಗ್ಗ, [illegible] ೨೬ನೇ ಏಪ್ರಿಲ್ ೧೮೮೬.—ನಂ. ೧೫೬೫.—[illegible]

BANGALORE:—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

[illegible]

Vol. XIII] BANGALORE—MONDAY, MAY 10, 1886. [No. 19.
ಸಂಪುಟ ೧೩.] ಬೆಂಗಳೂರು:—ಸರ್ ೧೮೮೬ನೇ ಇಸವಿ ಮೇ ೧೦ನೇ ತಾರೀಖು ಸೋಮವಾರ. [ಸಂಚಿಕೆ ೧೯.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ತೆಗೆದುಕೊಳ್ಳತಕ್ಕವರಿಗೆ, ವರುಷ ೧ಕ್ಕೆ		೧೧—೦—೦
ಇಂಗ್ಲಿಷ್ ಮಾತ್ರ ತೆಗೆದುಕೊಳ್ಳತಕ್ಕವರಿಗೆ ವರುಷ ೧ಕ್ಕೆ		೬—೦—೦
ಕನ್ನಡ ಮಾತ್ರ ತೆಗೆದುಕೊಳ್ಳತಕ್ಕವರಿಗೆ ಪೋಸ್ಟ್ ಖರ್ಚು ಸಹಿತ ವರುಷಕ್ಕೆ .		೬—೦—೦
ಬಿಡಿ	೧ಕ್ಕೆ	೦—೮—೦

ಸೂ.—ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ, ಕನ್ನಡ ಭಾಗವನ್ನಾಗಲಿ ಅಥವಾ, ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಪಾವತಿ ಮಾಡತಕ್ಕದ್ದು

ಪ್ರಕಟನೆಯ ರಿವಾಜ್.

ಒಂದು ಸಲದ ಪ್ರಕಟನೆಗೆ	೧ಕ್ಕೆ	೦—೨—೦
ಮರು ಸಲದ ಪ್ರಕಟನೆಗೆ	೧ಕ್ಕೆ	೦—೧—೦

NOTICE TO SUBSCRIBERS

ಇದರಿಂದ ತಿಳಿಸಲ್ಪಡುವ [illegible] ನಮ್ಮ ಚಂದಾದಾರ ರೆಲ್ಲರು ಮುಖ್ಯವಾಗಿ ಗಮನಿಸಬೇಕೆಂದು ಕೋರುತ್ತೇವೆ ಏನೆಂದರೆ:—

೧. ಕರ್ಣಾಟಕ ಪ್ರಕಾಶಿಕೆಯ ಚಂದಾಹಣವನ್ನಾಗಲಿ ಯಾ ವತ್ತು ಕೆಲಸಗಳನ್ನಾಗಲಿ [illegible] [illegible] [illegible] [illegible] [illegible] [illegible] [illegible] [illegible] ತಿಳಿಸತಕ್ಕದ್ದು. [illegible] [illegible] [illegible]

೨. [illegible] ಅರ್ಧ ನೋಟು [illegible] [illegible] [illegible] [illegible] ಅರ್ಧ ನೋಟು [illegible] ಕಳುಹಿಸತಕ್ಕದ್ದು

೩. [illegible] ರೂ॥ ೧ಕ್ಕೆ [illegible] [illegible]

೪. [illegible] ಜನವರಿ [illegible] ಡಿಸೆಂಬರ್ [illegible] [illegible] [illegible] [illegible] ಡಿಸೆಂಬರ್ [illegible] [illegible] [illegible] [illegible] ಅವಶ್ಯಕವಿಲ್ಲವು

NOTICE.

VAIDYASARA SANGRAHA

Price including Postage, Rs 5-0-0

ವೈದ್ಯಸಾರ ಸಂಗ್ರಹ.

ಈ ಗ್ರಂಥವು [illegible] ಈ [illegible] [illegible] [illegible] [illegible]

[illegible]

[illegible]	... ...	ರೂ॥	೫—೦—೦
ಪೋಸ್ಟ್ ಮತ್ತು ಅಂಚೇ [illegible]			೦—೬—೦

[illegible] ವೆಂಕಟರಾವ್, [illegible], ಬೆಂಗಳೂರು.

ನೋಟೀಸ್.

ಇದರಿಂದ ತಿಳಿಸಲ್ಪಡುವದು ಏನಂದರೆ ಸಂಸ್ಕೃತ ಮತ್ತು ಕನ್ನಡ ಗ್ರಂಥ ಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ವಿಕ್ರಯಿ ಸಲ್ಪಡುತ್ತವೆ.—

ಕನ್ನಡ ಟೀಕಾಸಹಿತವಾದ ಸಂಸ್ಕೃತಗ್ರಂಥಗಳು.

[illegible]	.	೧—೪—೦
[illegible]	...	೦—೧೨—೦
ಭಗವದ್ಗೀತಾ (ಷಟ್ಟಂಚಾಕ್)	...	೦—೩—೦
[illegible]		೦—೫—೦
[illegible]	..	೦—೪—೦
[illegible]	... ...	೦—೧೪—೦
[illegible]	...	೦—೭—೦
[illegible]	.. ...	೦—೨—೦
ವೈದ್ಯಸಾರಸಂಗ್ರಹ	..	೫—೦—೦

ಕನ್ನಡ ಗ್ರಂಥಗಳು.

[illegible]	...	೦—೭—೦
[illegible]	...	೦—೪—೦
[illegible]	...	೦—೩—೬
[illegible]	... ...	೦—೨—೬
[illegible]	...	೦—೪—೦
[illegible]	...	೦—೨—೦
[illegible]	...	೦—೨—೬
[illegible]	...	೦—೭—೦
[illegible]	...	೦—೩—೦
[illegible]	... ...	೦—೨—೦
[illegible]	.	೦—೦—೯
ಇಂಗ್ಲಿಷ್ ಕನ್ನಡ [illegible]		೧—೦—೦
[illegible]	... ...	೨—೦—೦
[illegible]	...	೦—೧೨—೦
[illegible]	...	೩—೪—೬
[illegible]	...	೩—೪—೬
[illegible] ೧ನೇ ಸಂಚಿಕೆ.	...	೦—೮—೦
[illegible] ೨ನೇ ಸಂಚಿಕೆ.		೧—೮—೦
[illegible]	...	೦—೮—೦

ಸಂಸ್ಕೃತ ಮೂಲಗ್ರಂಥಗಳು.

ವಿಷ್ಣುಸಹಸ್ರನಾಮ	.	೦—೫—೦
[illegible]	...	೦—೨—೬
[illegible]	...	೦—೨—೬
[illegible]	...	೦—೦—೬
[illegible]	...	೦—೪—೬
೧ [illegible]	...	೦—೧—೦

[illegible] [illegible] [illegible] [illegible] [illegible] [illegible] [illegible] [illegible] [illegible] [illegible]

NOTICE.

ಎಸ್. ರಾಮಸ್ವಾಮಯಂಗಾರ್ ಕಂಪೆನಿ.

ಜನರಲ್ ಕಮ್ಮಿಷನ್ ಮರ್ಚಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿತೆಗದುಕೊಳ್ಳಲ್ಪಡುವದು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MAY 10, 1886

೧೮೮೬ನೇ ಮೇ ೧೦ನೇ ತಾ॥ ಸೋಮವಾರ

THE INSTALLATION OF THE YOUNG RAJA OF PUDUKOTTA

ಪುದುಕೋಟೆ ಸಂಸ್ಥಾನದ ಅರಸರಾದ ರಾಮಚಂದ್ರ ತೊಂಡಮಾನ್‌ಯವರು ಕಳೆದತಿಂಗಳ ೧೩ನೇ ತಾರೀಖಿನಲ್ಲಿ ಕಾಲಗತಿಯನ್ನೈದಿದರೆಂಬ ವೃತ್ತಾಂತವನ್ನು ಈಗ್ಯೆ ಯೆರಡುವಾರಗಳಹಿಂದೆ ಈಪತ್ರಿಕಾಮೂಲಕ ತಿಳಿಸಿದ್ದೆವಷ್ಟೆ. ಅವರ ಸ್ವೀಕೃತಪುತ್ರರಾದ ರಾಜಾ ವಿಜಯರಾಜ ಮಾರ್ತಾಂಡ ಭೈರವ ತೊಂಡಮಾನ್ ಬಹದೂರವರಿಗೆ, ಈತಿಂಗಳ ಮೂರನೇತಾರೀಖಿನಲ್ಲಿ ರಾಜಧಾನಿಗೆ ಸಮೀಪದೊಳಿರುವ ಗೋಕರ್ಣಕ್ಷೇತ್ರದಲ್ಲಿರುವ ಈಶ್ವರಾಲಯದೊಳು ಪಟ್ಟಾಭಿಷೇಕೋತ್ಸವಾಂಗವಾದ ಕೆಲವು ವೈದಿಕ ಕರ್ಮಗಳು ನಡೆದವು. ಆಕಾಲದಲ್ಲಿ ದಿವಾನರು ಮುಂತಾದ ಸಂಸ್ಥಾನದ ಮುಖ್ಯಾಧಿಕಾರಿಗಳೆಲ್ಲರೂ, ಹಾಜರಿದ್ದರು. ಇಂತಾ ಶುಭಸಮಯವನ್ನು ಸಂಸ್ಥಾನದ ಪ್ರಜೆಗಳೆಲ್ಲರಿಗೂ ಅರುಹುವಂತೆ ಮರ್ಯಾದಾರ್ಥ ೨೧ ತೋಫುಗಳು ಹಾಕಲ್ಪಟ್ಟವು. ಪಟ್ಟಾಭಿಷೇಕಾಂಗವಾದ ಕ್ರಿಯಾ ಕಲಾಪಗಳೆಲ್ಲ ಯಥಾವಿಧಿ ಜರಿಗಿದಮೇಲೆ ರಾಜಪುತ್ರರು ದಿವ್ಯ ವಸನಾಭರಣಾಲಂಕೃತರಾಗಿ ಸಕಲ ಮರ್ಯಾದೆಗಳೊಡನೆ ಪುರದ ವಾಯುವ್ಯ ಮತ್ತು ದಕ್ಷಿಣ ಬೀದಿಗಳಮಾರ್ಗವಾಗಿಅರಮನೆಗೆ ದಯಮಾಡಿದರು. ಅನಂತರ ರಾಜಕುಮಾರರು ಸಿಂಹಾಸನಾರೋಹಣಮಾಡಿದ ಕಾಲದಲ್ಲಿ ಪೂರ್ವದಂತೆ ಮರಳಿ ೨೧ ತೋಫುಗಳು ಹಾಕಲ್ಪಟ್ಟವು. ಆಕಾಲದಲ್ಲಿ ಗೌರವ್ಯರಾದ ಬಹುಮಂದಿದೊಡ್ಡಮನುಷ್ಯರೂ, ವರ್ತಕರೂ, ರಾಜಬಂಧುಗಳೂ, ಪುರಜನರೂ ಹಾಜರಿದ್ದರಲ್ಲದೆ ರಾಜಪುತ್ರರಿಗೆ ಎಲ್ಲರೂ ಭಕ್ತಿಭರಾವನತಗಾತ್ರರಾಗಿ ನಜರ್‌ಮುಜರೆಗಳಂಮಾಡಿದರು. ಬಳಿಕ ಯೆಲ್ಲರಿಗೂ ಪುಷ್ಪ ತಾಂಬೂಲಗಳುಕೊಡಲ್ಪಟ್ಟವು. ಪಟ್ಟಾಭಿಷೇಕಕ್ಕೆ ವಿಲಾಯತೀ ಸರ್ಕಾರದವರ ಹುಕುಮನ್ನು ಅಲ್ಲಿನವರು ನಿರೀಕ್ಷಿಸುತಲಿರುವಂತೆ ಕೇಳುತ್ತೇವೆ ಇಂಡ್ಯ ಗವರ್ನಮೆಂಟನವರು, ರಾಜಪುತ್ರರಿಗೆ ಪಟ್ಟಾಭಿಷೇಕ ಕಾಲದಲ್ಲಿ ಮರ್ಯಾದಾರ್ಥ ಶ್ಲಾಘ್ಯವಾದ ಒಂದು ಕುದುರೆ, ಅನರ್ಘವಾದ ಒಂದು ಉಂಗರ, ಮತ್ತು ಒಂದು ಕತ್ತಿ ಇವು ಕಳುಹಿಸುವವರಾಗಿದಾರೆಂದು ತಿಳಿಯಬರುತಿದೆ. ಈ ರಾಜಪುತ್ರರಿಗೆ ಈಗ ೧೦½ ಸಂವತ್ಸರಗಳ ವಯಸ್ಸಾಗಿರುತಿದೆ. ಇವರು ಕೇವಲ ಬಾಲಕರಾಗಿರುವಲ್ಲಿ ಯಾವ ಭರವಸೆಯಮೇಲೆ ಇವರಿಗೆ ಆಧಿಪತ್ಯವನ್ನು ಬ್ರಿಟಿಷ್ ಸರ್ಕಾರದವರು ಈಗ ಒಪ್ಪಿಸಬೇಕೆಂದಿದಾರೆಯೋ ತಿಳಿಯಲಿಲ್ಲವು. ಅಪ್ರಾಪ್ತವಯಸ್ಸಿನೊಳು ಅವ್ಯವಸ್ಥಿತವಾಗಿ ರಾಜ್ಯಗಳನ್ನು ಕೊಟ್ಟುಬಿಡುವದರಿಂದ ಬ್ರಿಟಿಷ್‌ನವರಜವಾಬ್ದಾರಿಯು ತಪ್ಪುವದೆಂತಲಾಗಲಿ, ಈರೀತಿನಡತುವದರಿಂದ ನೇಟಿವ್‌ಗಳು ಸಂತೋಷಿಸುವರೆಂತಲಾಗಲಿ, ನಾವು ಯೆಳ್ಳುಮಾತ್ರವೂ ಎಣಿಸಲಾರೆವು. "ಮೆಜಾರಟಿ"ಎಂಬದುಕೇವಲ ವಯಃಪ್ರಯುಕ್ತವಾದದ್ದಲ್ಲವು. ತಮಗೆ ಪ್ರಾಪ್ತವಾಗತಕ್ಕಜವಾಬ್ದಾರಿಯ ಸ್ವರೂಪವನ್ನೂ, ತಮ್ಮ ಆಧಿಪತ್ಯಕ್ಕೊಳಪಡಿಸತಕ್ಕ ಅನೇಕಲಕ್ಷಪ್ರಜೆಗಳ ಯೋಗಕ್ಷೇಮಾಭಿವೃದ್ಧಿಯಲ್ಲಿ ತಾವು ವಹಿಸಿರಬೇಕಾದ ಅಕ್ಕರೆಯನ್ನೂ, ತಮ್ಮಕರ್ತವ್ಯವನ್ನು ಉಪೇಕ್ಷಿಸುವದರಿಂದ ಪ್ರಾಪ್ತವಾಗತಕ್ಕ ಬಾಧಕಗಳನ್ನೂ ಚೆನ್ನಾಗಿ ಅರಿಯುವಣಿವೇವ್ಯವಹಾರದಕ್ಷಯಮುಖ್ಯಲಕ್ಷಣವಾಗಿರುತಿದೆ. ಬ್ರಿಟಿಷ್‌ಗವರ್ನಮೆಂಟನವರು ಇದುವರಿರಿಗೆ ಒಪ್ಪಿಸಿರುವ ರಾಜ್ಯಗಳ ಸ್ಥಿತಿಯಂನೋಡಲಾಗಿ ಆಯಾಸಂಸ್ಥಾನಾಧಿಪತಿಗಳ ವಯಃಪರಿಮಾಣವೂ, ಅಲ್ಲಿರತಕ್ಕ ಬ್ರಿಟಿಷ್ ರೆಸಿಡೆಂಟರುಗಳ ಸಾಲಂಕೃತಾಭಿಪ್ರಾಯಗಳೂ, ಪ್ರಯೋಜನೋದ್ದೇಶದೊಡನೆ ವಸ್ತುಸ್ಥಿತಿಯನ್ನು ಅನ್ಯಥಾತಿಳಿಸಿ ಇಲ್ಲದಗುಣಗಳನ್ನುಆರೋಪಿಸತಕ್ಕ ಅಲ್ಲಿನ ವೃತ್ತಾಂತ ಪತ್ರಿಕೆಗಳ ವಾಕ್ಯಗಳೂ ಬ್ರಿಟಿಷ್ ಗವರ್ನಮೆಂಟನವರನ್ನು ಸಂಪೂರ್ಣವಾಗಿ ವಂಚಿಸಿದವೆಂದು ಎಣಿಸಬೇಕಾಗಿದೆ. ಈಪುದುಕೋಟೆ ಸಂಸ್ಥಾನದ ವಿಷಯದಲ್ಲಿ ಮುಂದೆ ಇಂತಾ ಆಕ್ಷೇಪಣೆಗಳಿಗೆ ಅವಕಾಶವಿಲ್ಲದಂತೆ ರಾಜಪುತ್ರರ ಪುರೋವೃದ್ಧಿಯೊಳು ದೃಷ್ಟಿಯಿಟ್ಟು ಅವರು ಹಿಂದೂ ಯೆಂಬ ಭಾವನೆಯೊಡನೆಯೂ, ಮುಂದೆ ಹಿಂದೂವಾಗಿಯೇ ಇರಬೇಕೆಂಬ ಕೋರಿಕೆಯೊಡನೆಯೂ ಈಗಲಿಂದ ತಕ್ಕ ಏರ್ಪಾಡು ಮಾಡಿ ಅವರನ್ನು ಅಭಿವೃದ್ಧಿಗೆ ತಂದರೆ ಚೆನ್ನಾಗಿರುವದು.

AGRICULTURISTS' LOANS ACT 1884.

ಸರ್ ೧೮೮೪ನೇ ಇಸಿವಿಯಲ್ಲಿ ಇಂಡ್ಯ ಗವರ್ನಮೆಂಟನವರು ಇಂಡ್ಯದೇಶದ ಕೃಷಿಜೀವಿಗಳಿಗೆ ಪ್ರೋತ್ಸಾಹವನ್ನುಂಟುಮಾಡಬೇಕೆಂಬ ತಾತ್ಪರ್ಯದೊಡನೆ ಸಾಗುವಳೀದಾರರಿಗೆ ಸರ್ಕಾರದಿಂದ ಮುಂದಾಗಿ ಸಾಲಕೊಟ್ಟು ಅನುಕೂಲಕಾಲದಲ್ಲಿ ಅವರಿಂದ ವಸೂಲ್ಮಾಡಿಕೊಳ್ಳತಕ್ಕದ್ದೆಂದು ನಿರ್ಣಯಿಸಿ ಆಬಗ್ಯೆ ಒಂದು ಕಾನೂನನ್ನು ಏರ್ಪಾಡುಮಾಡಿದರು. ಕೊಡಗುದೇಶದ ಆಫೀಷಿಯೇಟಂಗ್ ಚೀಫ್‌ಕಮಿಷನರಾದ ಮೆ॥ ಗರ್ಡಿಲೆಸ್ಟನ್‌ಯವರು ಸದರೀಆಕ್ಟಿನ ೪ನೇ ಸೆಕ್ಷನ್ನನುಸರಿಸಿ ಕೊಡಗುದೇಶದಲ್ಲಿ ಜಾರಿಯೊಳು ತರುವಬಗ್ಯೆ ಹೊಸದಾಗಿ ಕೆಲವುನಿಬಂಧನೆಗಳನ್ನುಮಾಡಿ ಅದರಮೇಲೆ ಜನಗಳಅಭಿಪ್ರಾಯವನ್ನು ಅರಿಯತಕ್ಕಬಗ್ಯೆ ಪ್ರಾಯಿಷ್‌ಮಾಡಿರುತ್ತಾರೆ. ಈರೂಲ್ಸ್ ಗಳನ್ನ ನಾವು ಸಮಗ್ರವಾಗಿ ನೋಡಿದೆವಲ್ಲದೆ ಇವು ಈವಾರದಇಂಗ್ಲಿಷ್‌ಭಾಗದ ಪತ್ರಿಕೆಯಲ್ಲಿ ಪ್ರಕಟಿಸಿರುತ್ತೇವೆ.

ಈಗ ಮೆ॥ ಗರ್ಡಿಲೆಸ್ಟನ್‌ಯವರು ಮಾಡಿರುವ ನಿಬಂಧನೆಗಳು ಸಾಗುವಳೀದಾರರಿಗೆ ಬಹಳ ಸಹಾಯಕಗಳಾಗಿರುತಿವೆ. ಬೇಸಾಯಗಾರರು ಅನುಪವನ್ನರಾಗಿ ಸರ್ಕಾರ್ ಸಹಾಯವನ್ನು ಅಪೇಕ್ಷಿಸುವ ಸ್ಥಿತಿಯೊಳಿದ್ದು ಇದರಡಿಕಂಡಬಾಬುಗಳ ಪೈಕಿ ಯಾವದಕ್ಕಾಗಿಯಾದರೂ ಸಾಲಕೇಳದರೆ

Mr J. B. Lyall.—ಈ ಸಂಸ್ಥಾನದ ಕಾಯಂ ಬ್ರಿಟಿಷ್ ರೆಸಿಡೆಂಟರಾದ ಮೆ|| ಜೆ. ಬಿ. ಲೈಲ್‍ಸಾಹೇಬರವರು ತಮ್ಮ ಫರ್ಲೊ ರಜಾವನ್ನು ಪೂರೈಸಿ ಮಾಡಿಕೊಂಡು ಈ ತಿಂಗಳ ೧೦ನೇ ತಾರೀಖಿನಲ್ಲಿ ಮದರಾಸಿಗೆ ವಾಪಸ್ ಬರುವರೆಂದು ನಿರೀಕ್ಷಿಸಲ್ಪಟ್ಟಿರುವದರಿಂದ ಅವರು ಇಲ್ಲಿಗೆ ಬಂದು ತಮ್ಮ ಕೆಲಸವನ್ನು ಮರಳಿ ವಹಿಸಿದ ಕೂಡಲೆ, ಆಕ್ಟಿಂಗ ರೆಸಿಡೆಂಟರಾದ ಮೆ|| ಗರ್ಡನ್ವರ್ಸ್ಟನ್ನಿಯವರು ಫರ್ಲೊ ರಜಾಮೇಲೆ ಹೊರಟುಹೋಗುವರೆಂದು ತಿಳಿಯಬರುತಿದೆ. ಇಲ್ಲಿನ ಕಾಯಂ ರೆಸಿಡೆಂಟರಾದ ಮೆ|| ಲೈಲ್‍ರವರ ಪುನರಾಗಮನವು ಇಲ್ಲಿನ ಅಧಿಕಾರಿಗಳ ಪೈಕಿ ಕೆಲವರಿಗೆ ಅಪಾರ ಸಂತೋಷವನ್ನೂ ಕೆಲವರಿಗೆ ಸಂಪೂರ್ಣ ಅತೃಪ್ತಿಯನ್ನೂ ಉಂಟುಮಾಡತಕ್ಕದ್ದಾಗಿರುವದೆಂದು ನಂಬುತ್ತೇವೆ

The Maharaja's Cotton Mill Company and the *Spectator*.—ಮಹಾರಾಜರವರ ಹೆಸರಿನಲ್ಲಿ ಈ ಊರೊಳು ಸ್ಥಾಪಿತವಾಗಿರುವ ಅರಳೆಯಂತ್ರದ ಕಂಪೆನಿಯವರು ಸ್ಪೆಕ್ಟೇಟರ್‍ಪತ್ರಿಕೆಯ ಎಡಿಟರ್ ಮತ್ತು ಪ್ರೊಪ್ರೈಟರಮೇಲೆ ತಂದಿರುವ ಮಾನನಷ್ಟ ಮೊಕದ್ದಮೆಯು ಬೆಂಗಳೂರು ಸಿವಿಲ್‍ಕೋರ್ಟಿನಲ್ಲಿ ಕಳೆದ ತಿಂಗಳ ೨೮ ಮತ್ತು ೩೦ನೇ ತಾರೀಖುಗಳಲ್ಲಿ ಮರಳಿ ವಿಚಾರಣೆಗೆ ಬಂದು, ವಾದಿಕಡೆ ಅಡ್ವೊಕೇಟುಗಳಾದ ಬ್ಯಾರಿಸ್ಟರ್ ಹೇಸ್ ಮತ್ತು ಬ್ಯಾರಿಸ್ಟರ್ ವಿಲ್ಲಿಗ್ರಾನ್ಸಿಯವರೂ, ಪ್ರತಿವಾದಿಯಕಡೆ ಅಡ್ವೊಕೇಟ್ ಮೆ|| ಸ್ಮಿತ್ ಮತ್ತು ಅಡ್ವೊಕೇಟ್ ಮೆ|| ಲಾಜರೋಯವರೂ ಹಾಜರಾಗಿ ತಮ್ಮತಮ್ಮ ಕಕ್ಷಿಗೆ ಸಾಧಕಗಳಾದ ಅಂಶಗಳನ್ನೆಲ್ಲಕುರಿತು ವಾದಿಸಿದರು. ಕೋರ್ಟ್ ಜಡ್ಜ್‍ಸಾಹೇಬರವರು ಉಭಯವಾದಿಗಳ ವಾದವನ್ನೂ ಕೇವಲ ಸಾವಧಾನದಿಂದಲೂ ಅತ್ಯಂತ ಲಕ್ಷ್ಯದಿಂದಲೂ ಕೇಳಿ ತಮ್ಮ ಫೈಸಲ್ ಹೇಳತಕ್ಕಬಗ್ಗೆ ಈ ತಿಂಗಳ ೧೧ನೇ ತಾರೀಖಿಗೆ ಮೊಕದ್ದಮೆಯನ್ನು ಅಡ್ಜರ್ನ್ ಮಾಡಿರುತ್ತಾರೆ.

Transfer.—ಸೆಂಟ್ರಲ್‍ಕಾಲೇಜಿನಲ್ಲಿ ಅಸಿಸ್ಟೆಂಟ್ ಮಾಸ್ಟರಾಗಿದ್ದ ಮೆ|| ವಾಸುದೇವಯ್ಯನವರು ದಿವಾನರವರ ಆಫೀಸಿನ ಲೆಜಿಸ್ಲೆಟಿವ್ ಡಿಪಾರ್ಟಮೆಂಟಿನಲ್ಲಿ ಡೆಪ್ಯುಟಿ ಸೆಕ್ರೆಟರಿ ಕೆಲಸಕ್ಕೆ ೧೦೦ರೂಪಾಯಿಗಳ ಸಂಬಳದ ಮೇಲೆ ವರ್ಗವಾದ್ದಲ್ಲದೆ, ಇವರಿಗೆ ಮುಂದೆ ಮಾಹೆಯಾನಾ ೩೦ರೂಪಾಯಿಗಳ ಅಲೌನ್ಸ್ ಕೊಡುವವೆಂತಲೂ ತಿಳಿಯುತಿವೆ. ಇವರ ಸ್ಥಳದಲ್ಲಿ ಅಸಿಸ್ಟೆಂಟ್ ಮೆ|| ಶ್ರೀನಿವಾಸ ಅಯ್ಯಂಗಾರ್ಯರವರು ಸದರೀ ಇಲಾಖೆಯ ಡೆಪ್ಯುಟಿ ಸೆಕ್ರೆಟರಿ ವ ಮ್ಯಾನೇಜರಾಗಿ ನೇಮಕರಾದರೆಂದು ಕೇಳುತ್ತೇವೆ. ಮೇಲೆ ಕಂಡ ಸದರೀ ಇಬ್ಬರು ಉದ್ಯೋಗಸ್ಥರು ಬಹಳ ಸಮರ್ಥರಾದದರಿಂದ ಇವರ ಚುನಾವಣೆಯು ಕೇವಲ ಶ್ಲಾಘ್ಯವಾಗಿರುತದೆ.

How is it accounted for.—ಈ ದೇಶದ ಅಸಿಸ್ಟೆಂಟ್ ಕಮಿಷನರ್‍ಗಳು, ಅಮಲ್ದಾರರು, ಡೆಪ್ಯುಟಿ ಅಮಲ್ದಾರರು, ಪ್ಲೀಡರ್‍ಗಳು ವಗೈರೆ ರಿಗಾಗಿ ಪ್ರತ್ಯೇಕವಾಗಿ ಏರ್ಪಡಿಸಲ್ಪಟ್ಟ ಪರೀಕ್ಷೆಗಳಲ್ಲಿ ತೇರ್ಗಡೆಯಾಗದವರಿಗೆ ಮುಂದೆ ಸದರಿ ಕೆಲಸಗಳು ಖಾಲೀಯಾದಾಗ ಕೊಡಲ್ಪಡಲಾರವೆಂತಲೂ, ಬಡ್ತಿ ಸಹ ಆಗಲಾರದೆಂತಲೂ ದಿವಾನರವರು ಗತಸಂವತ್ಸರದಲ್ಲಿ ಹುಕುಂಕೊಟ್ಟಿದ್ದಂತೆ ನಮಗೆ ಜ್ಞಾಪಕವಿರುತದೆ. ಪರಂತು ಆಕಾಲದಲ್ಲಿ ದಿವಾನರವರು ತಮ್ಮ ಮಾತಿಗೆ ಎಷ್ಟುಮಟ್ಟಿಗೆ ಬದ್ಧರಾಗಿ ನಡೆಯುವರೋ ನೋಡಬೇಕೆಂಬ ಕೋರಿಕೆಯೊಡನೆ ಇದುವರೆವಿಗೂ ಕಾಲವನ್ನು ನಿರೀಕ್ಷಿಸುತಲಿದ್ದೆವು. ಈಗ ದೈವಯೋಗದಿಂದ ಅಂತಾ ಕಾಲವು ಪರಿಪೂರ್ಣ ಈಗ ಪ್ರಾಪ್ತವಾಯಿತು. ಈಚೆಗೆ ದಿವಾನರವರು ಮಾಡಿದ ಇಜಾಫೆಗಳನ್ನು ನೋಡಲಾಗಿ ಮೇಲೆ ಕಂಡ ಪರೀಕ್ಷೆಗಳನ್ನು ಕೊಡದವರಾಗಿಯೂ, ಸಕೃತ ಕೊಡುತ್ತ ಪಾಸ್ ಹೊಂದದವರಾಗಿಯೂ, ಇರುವರು ಅನೇಕರು ಬಡ್ತಿಗಳನ್ನೂ ನೇಮಕಗಳಿತಿಯನ್ನೂ ಪಡೆದಂತೆ ವ್ಯಕ್ತವಾಗುತಿದೆ. ಇದಕ್ಕೆ ದಿವಾನರವರು ಈಗ ಏನು ಸಮಾಧಾನ ಹೇಳುವರೋ ತಿಳಿಯಲಿಲ್ಲವು.

A rumour.—ಓ ಲದೇಶವಪಿಯುಲೀಪ್ರೋಗ್ಸ್ ಪತ್ರಿಕೆ ಹೇಳುವದೇನೆಂದರೆ—ಮೈಸೂರು ಚೀಫ್ ಕೋರ್ಟ ಚೀಫ್ ಜಡ್ಜಿಯಾದ ಮೆ|| ಶ್ರ್ಯಮ್ ಯವರು ಬೇಸಿಗೆಯ ರಜಾಕ್ಕೆ ಸೇರಿದಂತೆ ಮೂರು ನಾಲ್ಕುತಿಂಗಳ ಪ್ರಿವಿಲೇಜ್ ರಜಾಮೇಲೆ ಕ್ಷಿಪ್ರದಲ್ಲಿ ಇಂಗ್ಲಾಂಡಿಗೆ ಹೊರಟುಹೋಗುವರೆಂತಲೂ, ಅವರ ಗೈರ್‍ಹಾಜರೀ ಕಾಲದಲ್ಲಿ ಅವರ ಕೆಲಸಕ್ಕೆ ಯೆರಡನೇ ಜಡ್ಜಿಯರಾದ ಮೆ|| ತುಂಬುಕೆಸ್ಟರೂ, ಅವರ ಕೆಲಸಕ್ಕೆ ಮೂರನೇ ಜಡ್ಜಿಯರಾದ ಮೆ|| ರಾಮಚಂದ್ರರಾಯರವರೂ ಅವರ ಕೆಲಸಕ್ಕೆ ನಗರದಿವಿಜನ್ ಡಿಸ್ಟ್ರಿಕ್ಟ ಜಡ್ಜಿಯರಾದ ಮೆ|| ನರಹರಿರಾಯರು, ಅಥವಾ ತುಮಕೂರು ಡೆಪ್ಯುಟಿ ಕಮಿಷನರಾದ ಮೆ|| ಕೃಷ್ಣಮೂರ್ತಿರಾಯರವರೂ ನಿಯಮಿಸಲ್ಪಡುವರೆಂದು ಈಗ್ಯೆ ಮೂರುನಾಲ್ಕುದಿನಗಳಿಂದ ಸರ್ಕಾರಿ ಇಲಾಖೆಗಳಲ್ಲಿ ಬಲವಾದ ಪ್ರವಾದ ಹುಟ್ಟಿರುತಿದೆ, ಎಂಬದು. ಈ ದೇಶದೊಳು ಸರ್ಕಾರ ಆದಳಿತಗಳು ಅಧಿಕಾರಿಗಳ ಇಷ್ಟಾನಿಷ್ಟಗಳಿಗೆ ಅನುಗುಣವಾಗಿ ಮೊದಲು ಪ್ರವಾದರೂಪವಾಗಿ ಹುಟ್ಟಿ ತರುವಾಯ ಅದು ಕಾರ್ಯತಃ ಆಚರಣೆಯೊಳು ಬರುವ ವಾಡಿಕೆ ನೇಟಿವ್ ಆಡಳಿತ ಯೇರ್ಪಟ್ಟಮೇಲೆ ನೆಲಗೊಂಡು ನಡೆದುಬರುವದರಿಂದ ಇದೂ ಅಸಂಭಾವ್ಯವಲ್ಲವು.

The Mysore Gazette.—ಗತವಾರದ ಮೈಸೂರು ಗೆಜೆಟನ್ನು ನೋಡಲಾಗಿ ಅದರೊಳು ಜೋಡಿ ಕಾಯಂಗುತ್ತಾ ಗ್ರಾಮಗಳ ಹರಾಜ್ ತಪಸೀಲು ಸ್ಪೆಷಲ್ ಟೆಸ್ಟ್ ಪರೀಕ್ಷಾ ವಿಚಾರವೂ, ವಾರದ ಸರ್ಟಿಫಿಕೇಟುಗಳೂ, ಕಡೆಗೆ ಕಾಲಸ್ಥಿತಿ ರಿಪೋರ್ಟುಗಳೂ ವಿನಾ ಬೇರೆ ಯಾವದೊಂದು ವಿಶೇಷಾಂಶವೂ ನಮ್ಮದೃಷ್ಟಿಗೆ ಬೀಳಲಿಲ್ಲವು. ಈಪೈಕಿ ಬೆಂಗಳೂರು ಕಡೂರು ಡಿಸ್ಟ್ರಿಕ್ಟುಗಳ ಬಾಬತು ಮಾರ್ಚಿ ತಿಂಗಳ ಕಾಲಸ್ಥಿತಿ ರಿಪೋರ್ಟುಗಳು ಎರಡು ಭಾಮುಷಾಗಿರುತಿವೆ. ಬೆಂಗಳೂರಲ್ಲಿ ೧ ಗಳೆಯು ೭೩ ಸೆಂಟ್ಸ್. ಚಿಕ್ಕಮಗಳೂರ್ [illegible] ಸೆಂಟ್ಸ್ ಆದಂತೆ ತಿಳಿಯಬರ [illegible] ವಾಗಲೂ ಮರೆನಾದು ಪ್ರಾಂತದಲ್ಲಿ ಮಳೆ ಅಧಿಕವಾಗಿರುವದು ಸಹಜ. ಕಾಲ್ನಡೆಗಳು ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಫೆಬ್ರುವರಿ ತಿಂಗಳಿಗಿಂತಲೂ ೭೪ ಅಧಿಕವಾಗಿ ಸೇರಿ ಒಟ್ಟು ೧,೧೦೮೩ ಸತ್ತಿವೆ. ಈ ಸೈಕಿ ೭೯೯ ಕಾಡು ಮೃಗಗಳಿಂದಲೂ ಮಿಕ್ಕವು ಇತರ ಕಾರಣಗಳಿಂದಲೂ ನಾಶವಾದಂತೆ ನಮೂದಿಸಲ್ಪಟ್ಟಿದೆ. ಕಡೂರು ಡಿಸ್ಟ್ರಿಕ್ಟಿನಲ್ಲಿ ಫೆಬ್ರುವರಿ ತಿಂಗಳಿಗಿಂತಲೂ ೧೧೮ ಕಾಲ್ನಡೆಗಳು ಕಡಮೆಯಾಗಿ ಒಟ್ಟು ೩೭೭ ಘಾತಿಯಾದಂತೆ ತಿಳಿಯಬರುತಿದೆ. ಬೆಂಗಳೂರಿಗಿಂತ ಕಡೂರು ಡಿಸ್ಟ್ರಿಕ್ಟು ಅರಣ್ಯಪ್ರದೇಶವಾಗಿದ್ದಾಗ್ಯೂ ಕಾಡು ಮೃಗಗಳಿಂದ ಅಲ್ಲಿ ವಿಶೇಷ ನಷ್ಟವಿಲ್ಲವು. ನಷ್ಟವಾದ ಜಾನವರ್‍ಗಳ ಸಂಖ್ಯೆ ಈ ಡಿಸ್ಟ್ರಿಕ್ಟಿನಲ್ಲಿ ಅತ್ಯಧಿಕವಾಗಿರುತಿದೆ. ಈ ಡಿಸ್ಟ್ರಿಕ್ಟಿ ಜಾನವರ್‍ಗಳು ಗಾಯಿಖಾನೆಯಿಗಳಿಂದ ವಿಶೇಷವಾಗಿ ಕಟಾಯಿಸಲ್ಪಡುತ್ತ ಅವರೆ ಅವುಗಳ ಸಂಖ್ಯೆಯನ್ನು ತೋರಿಸುವ ಪ್ರತ್ಯೇಕ ಹೆಡ್ ಇಲ್ಲವಾದದರಿಂದ ಇತರ ಕಾರಣಗಳಲ್ಲಿ ಇದೂ ಸೇರಿಸಲ್ಪಡುತಿವೆ. ಆದಾಗ್ಯೂ ಪಶುಹತ್ತಿಯು ಈ ಊರಲ್ಲಿ ಅತ್ಯಧಿಕವೆಂದು ಹೇಳಬೇಕಾಗುತಿದೆ. ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ೬,೫೦೦ ರೂಪಾಯಿಗಳ ಕಂದಾಯ ಬಾಕಿಯ ಜಮೀನ್ ದರಖಾಸ್ತುಮಾಡಲ್ಪಟ್ಟಂತೆಯೂ ೭೮ ರೂಪಾಯಿಗಳ ಜಮೀನಿಗೆ ರಾಜೀನಾಮೆ ಕೊಡಲ್ಪಟ್ಟಂತೆಯೂ ನಮೂದಾಗಿರುತಿದೆ. ರಾಜೀನಾಮೆಗೆ ಕಾರಣವಿಧಿ ಇರುವದರಿಂದ ಮುಂದಿನ ತಿಂಗಳಲ್ಲಿ ಬರುಬಹುದೆಂದೇಸಿದ್ದಾಗ್ಯೂ ದರಖಾಸ್ತಿಗೆ ಕಾಲಾವಧಿಯಿಲ್ಲವು. ಮುಂಗಾರೆ ಮಳೆಗೆ ಉಪಕ್ರಮವಾಗಲಿಲ್ಲವು. ಕಳೆದ ಸಂವತ್ಸರದಲ್ಲಿ ಫಸಲಿ ಚೆನ್ನಾಗಿ ಆಗದೆ ರೈತರು ಕಳವಳಗೊಂಡಿದಾರೆ. ಹೀಗಿರಲಾಗಿ ಇಷ್ಟುಹೊಲಗಳುಳ್ಳ ಜಮೀನಿಗೆ ದರಖಾಸ್ತು ಬರಲಿಕ್ಕೆ ಕಾರಣವು ಡಿಸ್ಟ್ರಿಕ್ಟಿನಿಂದ ಕಳುಹಿಸಲ್ಪಟ್ಟ ಲೆಕ್ಕ ತಪ್ಪಾಗಿಯಾದರು ಇರಬೇಕು, ಅಥವಾ ಭಂಗಾರ ದೊರೆಯುವದೆಂಬ ದುರಾಶೆಯಾದರೂ ದರಖಾಸ್ತುದಾರರಿಗೆ ಹುಟ್ಟಿರಬೇಕು. ಇಲ್ಲದಿದ್ದರೆ ಜಾನವರ್‍ಗಳ ನಷ್ಟವೂ, ಜಾಸ್ತಿ ಜಮೀನ್‍ಗಳ ದರಖಾಸ್ತೂ ಈ ಕಾಲದಲ್ಲಿ ಸಂಭವಿಸಲಾರದು. ಕಡೂರು ಡಿಸ್ಟ್ರಿಕ್ಟಿನಲ್ಲಿ ೫೮ ರೂಪಾಯಿಗಳ ಜಮೀನಿಗೆ ರಾಜೀನಾಮೆಯೂ ೬೬೩ ರೂಪಾಯಿಗಳ ಜಮೀನಿಗೆ ದರಖಾಸ್ತೂ ಬಂದಂತೆ ತಿಳಿಸಲ್ಪಟ್ಟಿದೆ. ಇದೊಂದರ ನೋಟ ನಿಜವಾಗಿದ್ದರೂ ಇರಬಹುದು.

TELEGRAPHIC SUMMARY.
ತಂತಿವೃತ್ತಾಂತ ಸಂಗ್ರಹವು.

[illegible]

EXTRACT
The Maharaja Dhulip Singh.—ಪಂಜಾಬ್ ದೇಶದ ಸಾಬಕ ಮಹಾರಾಜರಾದ ಧುಲೀಪ್ ಸಿಂಗರವರು ತಮ್ಮ ಭಾರ್ಯಾಪುತ್ರರೊಡನೆ ಕಳೆದ ಮಾರ್ಚಿ ತಿಂಗಳ ೩೧ನೇ ತಾರೀಖಿನಲ್ಲಿ ಲಂಡನ್ ಪಟ್ಟಣದಿಂದ ಹೊರಟು ಯೇಡನ್ ಪಟ್ಟಣಕ್ಕೆ ಬಂದದರಿಂದ ಅವರು ಈಗಿನ ಪ್ರಯಾಣವನ್ನು ಕುರಿತೂ, ಅವರ ಯೋಗಕ್ಷೇಮವನ್ನು ಬಂದೆರೊಳು ಅಚ್ಚುಮಾಡಲ್ಪಟ್ಟ ಅಂಶವನ್ನು ಕುರಿತೂ ಅಧಿಕಾಂಶಗಳು ಕೆಲವು ತಿಳಿಯಬಂತು. ಮಹಾರಾಜರವರ ಸಂಗಡ ಅವರ ಭಾರ್ಯೆ, ಇಪ್ಪತ್ತೊಂದು ವರುಷಗಳ ವಯಸ್ಸುಳ್ಳ ಒಬ್ಬ ಪುತ್ರನು, ಹದಿನೇಳುವರುಷಗಳ ವಯಸ್ಸುಳ್ಳ ಒಬ್ಬ ಪುತ್ರನು, ಐದು ಗಂಡುಮಗು, ಮೂವರು ಹೆಣ್ಣುಮಕ್ಕಳು, ಇವರೆಲ್ಲರುಬಂದರು. ಮಹಾರಾಜರವರು ತಮ್ಮ ನಾನಾ ಪ್ರಯಾಣಗಳಲ್ಲಿರೆಲ್ಲರೊಡೆಯೂ ಸರಸವಾಗಿ ಮಾತನಾಡುತ ಯೆಲ್ಲರ ಶ್ಲಾಘನೆಗೂ ವಿಷಯರಾಗಿರುತಲಿದ್ದರು. ಮಾರ್ಚಿ ೩೦ನೇ ತಾರೀಖಿನ ರಾತ್ರಿ ಮಹಾರಾಜರು ಬಂದ ಹೋಗೆಹಡಗು ಸೇರ್ಡ ಹಾರ್ಬರ್‍ನಲ್ಲಿ ಪ್ರವೇಶಿಸಿದಕೂಡಲೆ ಅಲ್ಲಿನ ರೆಸಿಡೆಂಟರಾದ ಬ್ರಿಗೇಡಿಯರ್ ಜನರಲ್ ಹಾಗೆ ನೆಂಬವರು ಹಡಗಿಗೆಹೋಗಿ ಇಂಡ್ಯಗವರ್ನಮೆಂಟಿನ ಹುಕುಂ ಅನುಸರಿಸಿ ಅವರು ಅಲ್ಲಿಂದ ಮುಂದಕ್ಕೆ ಹೋಗುವದಕ್ಕೆ ಅವಕಾಶಕೊಡುವದಕ್ಕೆ ಆಗುವದಿಲ್ಲವೆಂದು ಮಹಾರಾಜರವರಿಗೆ ತಿಳಿಸಿದರು. ಹೀಗಾಗುವದೆಂದು ಮಹಾರಾಜರವರಿಗೆ ತಿಳಿಯದೆಯಿರಲಿಲ್ಲವು. ಪ್ರಯಾಣಕಾಲದಲ್ಲಿ ತಮ್ಮನ್ನು ಜಬ್ಬಲ್ಪುರ್‍ನಲ್ಲಿ ನಿಲ್ಲಿಸಿಬಿಡುವರೆಂಬ ದರಿಕೆ ಮಹಾರಾಜರವರಿಗೆ ಉಂಟಾಗದೆಯೋ ಇಲ್ಲವು. ಸ್ಯೂಯಜ್ ಯೆಂಬ ಪ್ರದೇಶಕ್ಕೂ ಯೇಡನ್ ಪಟ್ಟಣಕ್ಕೂ ಮಧ್ಯಮಾರ್ಗದಲ್ಲಿ ಮಹಾರಾಜರವರು ತಾವು ಅದುವರೆವಿಗೂ ಹಾಕಿಕೊಂಡಿದ್ದ ಟೋಪಿ ಮೊದಲಾದ ಯೂರೋಪಿಯನ್ ಉಡುಪುಗಳನ್ನೆಲ್ಲ ತೆಗೆದುಹಾಕಿಬಿಟ್ಟು ನೇಟಿವ್ ಉಡುಪುಗಳೂ ಪಂಜಾಬ್‍ದೇಶದ ಪಗ್ರಿಯೂ ಹಾಕಿಕೊಂಡು ಯೂರೋಪಿಯನ್ ಪದ್ಧತಿಮೇರೆ ಸ್ನಾನಮಾಡುವದನ್ನು ಬಿಟ್ಟು ಪೂರ್ವೇಕದಪದ್ಧತಿಯನ್ನಾಚರಿಸಲು ಉಪಕ್ರಮಿಸಿದ್ದವರಿಗೆಲ್ಲ ಬಹಳ ಆಶ್ಚರ್ಯವುಂಟಾಯಿತು. ಮರುದಿವಸ ಸ್ಟೀಮರು ಆದಿನರಾತ್ರಿಯೆಲ್ಲ ಯೇಡನ್ನಲ್ಲೇ ಇತ್ತು. ಮಾರನೇದಿನ ಬೆಳಿಗ್ಗೆ ಮಹಾರಾಜರವರು ತಮ್ಮ ಭಾರ್ಯಾ ಪುತ್ರರೊಡನೆಯೂ ಒಬ್ಬ ಸಿಕ್ಕಜಾತಿ ನೌಕರನೊಡನೆಯೂ ಇಳಿದು ರೆಸಿಡೆಂಟರ ಬಂಗ್ಲೆಗೆಹೋಗಿ ಅಲ್ಲೇ ಇರುತಲಿದಾರೆ. ಗವರ್ನ್ಮೆಂಟವರ ಹುಕುಮಿಗೆ ಅವರು ಪ್ರತಿಭಟಿಸಲಿಲ್ಲವು. ಪರಂತು ತಮ್ಮನ್ನು ದಸ್ತಗಿರಿಮಾಡಿದ ಅಂತವನ್ನೂ, ತಾವಾಗಿ ಹಡಗನ್ನು ಬಿಟ್ಟು ಬರಲಿಲ್ಲವೆಂತಲೂ ತಿಳಿಸಿ, ಇದು ಪ್ರಬಲವಿಚಾರಣೆಗೆ ಅವಕಾಶವನ್ನುಂಟುಮಾಡುವದೆಂದು ಸೂಚಿಸಿದರು.—ಮುಂಬೈ ಗೆಜೆಟ್.

THE MYSORE GAZETTE
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಶ್ರೀ ದಿವಾನರವರ ಹುಜೂರಿನಿಂದ ಹೊರಟಿರುವ ಪ್ರೊಸೀಡಿಂಗ್ಸ್‍ಗಳು.

[illegible]

BANGALORE:—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಶ್ರೀಮದ್ವಿವಿಧಪ್ರವೃತ್ತ್ಯುದಗನಾರ್ಥ್ಯ ಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ಸ್ಥಿರಾಸುಪರಿಪೋಷಿತಾದಿಶತಿಮಾನಸಾನಂದಂ ॥

Vol. XIII] BANGALORE—MONDAY, MAY 10, 1886. [No. 19.

ಸಂಪುಟ ೧೩.] ಬೆಂಗಳೂರು:—ಸನ್ ೧೮೮೬ನೇ ಇಸವಿ ಮೇ ೧೦ನೇ ತಾರೀಖ್ ಸೋಮವಾರ. [ಸಂಚಿಕೆ ೧೯.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ಸೇರಿರುವ ಕಾಪಿಗಳಿಗೆ, ವರುಷ ೧ಕ್ಕೆ		೧೨—೦—೦
ಇಂಗ್ಲಿಷ್ ಮಾತ್ರ ಸೇರಿರುವ ಕಾಪಿಗಳಿಗೆ ವರುಷ ೧ಕ್ಕೆ ...		೬—೦—೦
ಕನ್ನಡವಾದ್ರೆ ಸೇರಿರುವ ಕಾಪಿಗಳಿಗೆ [illegible] ಪೋಸ್ಟ್ ಖರ್ಚು ಸಹಾ		೬—೦—೦
ಬಿಂಗಳ	೧ಕ್ಕೆ	೦—೮—೦

ಷರಾ.—[illegible] ಇಂಗ್ಲಿಷ್ [illegible] ಅಥವಾ, [illegible] ಮುಂಗಡವಾಗಿಯೇ ಸಲ್ಲಿಸತಕ್ಕದ್ದು.

ಪ್ರಕಟನೆಯ ರಿವಾಜ್.

ಒಂದು ಸೇರಿದ ಭಾಷೆಗೆ	೧ಕ್ಕೆ	೦—೨—೦
ಎರಡು ಸೇರಿದ ಭಾಷೆಗೆ	೧ಕ್ಕೆ	೦—೧—೦

NOTICE TO SUBSCRIBERS.

ಇದರಡಿ ಬರೆಯಲ್ಪಡುವ ಅಂಶಗಳಿಗೆ ನಮ್ಮ ಚಂದಾದಾರರೆಲ್ಲರು ಮುಖ್ಯವಾಗಿ ಗಮನಕೊಡಬೇಕೆಂದು ಕೋರುತ್ತೇವೆ ಯೇನಂದರೆ:—

೧. ಕರ್ಣಾಟಕ ಪ್ರಕಾಶಿಕೆಯ ಚಂದಾಬಗ್ಗೆ [illegible] ಕಳುಹಿಸತಕ್ಕವರು [illegible] ಕಳುಹಿಸಿದಲ್ಲಿ [illegible] ಅವನ್ನು [illegible] ಸ್ಪಷ್ಟವಾಗಿ ಬರೆಯತಕ್ಕದ್ದು. ಹಾಗೆ ಮಾಡದೆ ಹೋಗುವವರಿಂದ [illegible] ತಿಳಿಸಲ್ಪಡುತ್ತದೆ.

೨. ನೋಟುಗಳ ರವಾನಿಸತಕ್ಕವರು ಅರ್ಧ ನೋಟುಗಳ ರವಾನಿಸಿದಲ್ಲಿ [illegible] ಅರ್ಧ ನೋಟುಗಳ [illegible] ರವಾನಿಸತಕ್ಕದ್ದು.

೩. [illegible] ಕಳುಹಿಸತಕ್ಕವರು ರೂ॥ ೧ಕ್ಕೆ [illegible] ಕಳುಹಿಸತಕ್ಕದ್ದು. [illegible] ಕಳುಹಿಸಕೂಡದು.

೪. [illegible] ಡಿಸೆಂಬರ್ [illegible] ಪತ್ರಿಕೆಗೆ ಚಂದಾದಾರರಾಗಬೇಕಾದ್ದರಿಂದ [illegible] ಡಿಸೆಂಬರ್ [illegible] ಚಂದಾ [illegible] ಕಳುಹಿಸಲು ಅವಶ್ಯಕವಿಲ್ಲವು.

NOTICE.

VAIDYASARA SANGRAHA.

Price including Postage, Rs. 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥಕ್ಕೆ [illegible] ಕಳುಹಿಸಲ್ಪಡುವದು. [illegible]

ಗ್ರಂಥ [illegible]	ರೂ॥	೫—೦—೦
ಪೋಸ್ಟ್ ಮತ್ತು ಅಂಚೆ ಹಾಸಲ್		೦—೬—೦

ಟಿ.ಡಿ. ವೆಂಕಟಾರಾವ್, ಅಸ್ಪತ್ರೆ [illegible], ಬೆಂಗಳೂರು.

ನೋಟೀಸ್.

ಇದರಡಿ ಬರೆಯಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ನಾಟಕ ಪ್ರಕಾಶಿಕಾ ಆಫೀಸಿನಲ್ಲಿ ಕ್ರಯಕ್ಕೆ ಸಿಗುವವು,—

ಕನ್ನಡ ಟೀಕಾ ಸಹಿತವಾದ ಸಂಸ್ಕೃತಗ್ರಂಥಗಳು.

ಕಾಲಾಮೃತ. ...	೧—೪—೦
ಮುಹೂರ್ತದರ್ಪಣ. ...	೦—೧೨—೦
ಭಾಷ್ಯತ್ರ (ಪಲ್ಯಂಕಾಶಿಕ್) ...	೦—೩—೦
ತಾತಿಕ್ಯನೀತಿಯೆಂಬ ಸುಭಾಷಿತ.	೦—೫—೦
ಬಾಲರಾಮಾಯಣ ...	೦—೪—೧
[illegible]	೦—೧೪—೦
[illegible] ...	೦—೬—೦
[illegible]	೦—೨—೮
ವೈದ್ಯಸಾರಸಂಗ್ರಹ ...	೫—೪—೦

ಕನ್ನಡ ಗ್ರಂಥಗಳು.

[illegible] ...	೦—೬—೦
[illegible] ...	೦—೪—೦
[illegible] ...	೦—೩—೬
ಸುಧಾ[illegible]	೦—೨—೮
[illegible] ...	೦—೪—೦
[illegible] ...	೦—೨—೦
[illegible] ...	೦—೨—೬
[illegible] ...	೦—೬—೦
[illegible] ...	೦—೩—೦
[illegible]	೦—೨—೦
[illegible] ...	೦—೦—೩
ಇಂಗ್ಲಿಷ್ ಕನ್ನಡ ಸೇರಿದ [illegible]	೧—೧—೮
[illegible]	೨—೦—೦
[illegible] ...	೦—೧೨—೦
[illegible] ...	೩—೪—೬
[illegible] ...	೩—೪—೬
ಆಕ್ಸಿಯಮ್ ಸ್ಟೈಟ್ ಎಂಬ [illegible] ೧ನೇ ಸಂಚಿಕೆ. ...	೦—೮—೦
[illegible] ೨ನೇ ಸಂಚಿಕೆ.	೦—೮—೦
[illegible] ...	೦—೮—೦

ಸಂಸ್ಕೃತ ಮೂಲಗ್ರಂಥಗಳು.

ವಿಷ್ಣುಸಹಸ್ರನಾಮ. ...	೦—೫—೦
ಸೂರ್ಯಸಹಸ್ರನಾಮ. ...	೦—೨—೬
[illegible] ...	೦—೨—೬
ಬಾಲರಾಮಾಯಣ ...	೦—೮—೬
[illegible] ...	೦—೩—೬
೧ ಕಾಂಡ [illegible] ...	೦—೧—೦

ಮೇಲೆ ಬರೆದಿರುವದರಲ್ಲಿ ಅಂಚೇ ಹಾಸಲ್ ಸೇರಿರುವದಿಲ್ಲವು. [illegible] ಅಂಚೆ ಹಾಸಲ್ ಸಹ ಸೇರಿಸಿ ಕಳುಹಿಸಬೇಕು. ಇಲ್ಲವಾದರೆ [illegible] ಅಂಚೆ ಹಾಸಲ್ [illegible] ಕೊಡಬೇಕಾಗುವದು.

NOTICE.

ಎಸ್. ರಾಮಸ್ವಾಮಯಂಗಾರ್ ಕಂಪನಿ.

ಜನರಲ್ ಕಮ್ಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯಂಗಾರ್ ಕಂಪನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿತೆಗೆದುಕೊಳ್ಳಲ್ಪಡುವದು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MAY 10, 1886.

೧೮೮೬ನೇ ಮೇ ೧೦ನೇ ತಾ॥ ಸೋಮವಾರ.

THE INSTALLATION OF THE YOUNG RAJA OF PUDUKOTTA.

ಪುದುಕೋಟೆ ಸಂಸ್ಥಾನದ ಅರಸರಾದ ರಾಮಚಂದ್ರ ತೊಂಡಮಾನ್‌ಯವರು ಕಳೆದತಿಂಗಳ ೧೫ನೇ ತಾರೀಖಿನಲ್ಲಿ ಕಾಲಗತಿಯನ್ನೈದಿದರೆಂಬ ವೃತ್ತಾಂತವನ್ನು ಈಗ್ಯೆ ಯೆರಡುವಾರಗಳಹಿಂದೆ ಈಪತ್ರಿಕಾಮೂಲಕ ತಿಳಿಸಿದ್ದೆವಷ್ಟೆ. ಅವರ ಸ್ವೀಕೃತಪುತ್ರರಾದ ರಾಜಾ ವಿಜಯರಾಜ ಮಾರ್ತಾಂಡ ಭೈರವ ತೊಂಡಮಾನ್ ಬಹದೂರವರಿಗೆ, ಈತಿಂಗಳ ಮೂರನೇತಾರೀಖಿನಲ್ಲಿ ರಾಜಧಾನಿಗೆ ಸಮೀಪದೊಳಿರುವ ಗೋಕರ್ಣಕ್ಷೇತ್ರದಲ್ಲಿರುವ ಈಶ್ವರಾಲಯದೊಳು ಪಟ್ಟಾಭಿಷೇಕೋತ್ಸವಾಂಗವಾದ ಕೆಲವು ವೈದಿಕ ಕರ್ಮಗಳು ನಡೆದವು. ಆಕಾಲದಲ್ಲಿ ದಿವಾನರು ಮುಂತಾದ ಸಂಸ್ಥಾನದ ಮುಖ್ಯಾಧಿಕಾರಿಗಳೆಲ್ಲರೂ, ಹಾಜರಿದ್ದರು. ಇಂತಾ ಶುಭಸಮಯವನ್ನು ಸಂಸ್ಥಾನದ ಪ್ರಜೆಗಳೆಲ್ಲರಿಗೂ ಅರುಹುವಂತೆ ಮರ್ಯ್ಯಾದೆಗೆ ೨೧ ತೋಫುಗಳು ಹಾಕಲ್ಪಟ್ಟವು. ಪಟ್ಟಾಭಿಷೇಕಾಂಗವಾದ ಕ್ರಿಯಾ ಕಲಾಪಗಳೆಲ್ಲ ಯಥಾವಿಧಿ ಜರಿಗಿದಮೇಲೆ ರಾಜಪುತ್ರರು ದಿವ್ಯ ವಸನಾಭರಣಾಲಂಕೃತರಾಗಿ ಸಕಲ ಮರ್ಯ್ಯಾದೆಗಳೊಡನೆ ಪುರದ ವಾಯುವ್ಯ ಮತ್ತು ದಕ್ಷಿಣ ಬೀದಿಗಳಮಾರ್ಗವಾಗಿಅರಮನೆಗೆ ದಯಮಾಡಿದರು. ಅನಂತರ ರಾಜಕುಮಾರರು ಸಿಂಹಾಸನಾರೋಹಣಮಾಡಿದ ಕಾಲದಲ್ಲಿ ಪೂರ್ವದಂತೆ ಮರಳಿ ೨೧ ತೋಫುಗಳು ಹಾಕಲ್ಪಟ್ಟವು. ಆಕಾಲದಲ್ಲಿ ಗೌರವ್ಯರಾದ ಬಹುಮಂದಿದೊಡ್ಡಮನುಷ್ಯರೂ, ವರ್ತಕರೂ, ರಾಜಬಂಧುಗಳೂ, ಪುರಜನರೂ ಹಾಜರಿದ್ದರಲ್ಲದೆ ರಾಜಪುತ್ರರಿಗೆ ಎಲ್ಲರೂ ಭಕ್ತಿಭರಾವನತಗಾತ್ರರಾಗಿ ನಜರ್‌ಮುಜರೆಗಳಂಮಾಡಿದರು. ಬಳಿಕ ಯೆಲ್ಲರಿಗೂ ಪುಷ್ಪ ತಾಂಬೂಲಗಳುಕೊಡಲ್ಪಟ್ಟವು. ಪ್ರಭುತ್ವ ಪರಿಗ್ರಹ ಪ್ರೂರ್ವಕವಾದ ಪಟ್ಟಾಭಿಷೇಕಕ್ಕೆ ವಿಲಾಯತೀ ಸರ್ಕಾರದವರ ಹುಕುಮನ್ನು ಅಲ್ಲಿನವರು ನಿರೀಕ್ಷಿಸುತಲಿರುವಂತೆ ಕೇಳುತ್ತೇವೆ ಇಂಡ್ಯ ಗವರ್ನ್‌ಮೆಂಟನವರು, ರಾಜಪುತ್ರರಿಗೆ ಪಟ್ಟಾಭಿಷೇಕ ಕಾಲದಲ್ಲಿ ಮರ್ಯ್ಯಾದಾರ್ಥ ಶ್ಲಾಘ್ಯವಾದ ಒಂದು ಕುದುರೆ, ಅನರ್ಘವಾದ ಒಂದು ಉಂಗರ ಮತ್ತು ಒಂದು ಕತ್ತಿ ಇವು ಕಳುಹಿಸುವವರಾಗಿದಾರೆಂದು ತಿಳಿಯಬರುತಿದೆ. ಈ ರಾಜಪುತ್ರರಿಗೆ ಈಗ ೧೯ಸಂವತ್ಸರಗಳ ವಯಸ್ಸಾಗಿರುತಿದೆ. ಇವರು ಕೇವಲ ಬಾಲಿಶರಾಗಿರುವಲ್ಲಿ ಯಾವ ಭರವಸೆಯಮೇಲೆ ಇವರಿಗೆ ಆಧಿಪತ್ಯವನ್ನು ಬ್ರಿಟಿಷ್ ಸರ್ಕಾರದವರು ಈಗ ಒಪ್ಪಿಸಬೇಕೆಂದಿದಾರೆಯೋ ತಿಳಿಯಲಿಲ್ಲವು. ಅಪ್ರಾಪ್ತವಯಸ್ಸಿನೊಳು ಅವ್ಯವಸ್ಥಿತವಾಗಿ ರಾಜ್ಯಗಳನ್ನು ಕೊಟ್ಟುಬಿಡುವದರಿಂದ ಬ್ರಿಟಿಷ್‌ನವರಜವಾಬ್ದಾರಿಯು ತಪ್ಪುವದೆಂತಲಾಗಲಿ, ಈರೀತಿಮಾಡುವದರಿಂದ ನೇಟಿವ್‌ಗಳು ಸಂತೋಷಿಸುವರೆಂತಲಾಗಲಿ, ನಾವು ಯೆಷ್ಟುಮಾತ್ರವೂ ಎಣಿಸಲಾರೆವು. "ಮೆಜಾರಟಿ" ಎಂಬದು ಕೇವಲ ವಯಃಪ್ರಯುಕ್ತವಾದದ್ದಲ್ಲವು. ತಮಗೆ ಪ್ರಾಪ್ತವಾಗತಕ್ಕ ಜವಾಬ್ದಾರಿಯ ಸ್ವರೂಪವನ್ನೂ, ತಮ್ಮ ಆಧಿಪತ್ಯಕ್ಕೊಳಪಡತಕ್ಕ ಅನೇಕಲಕ್ಷಪ್ರಜೆಗಳ ಯೋಗಕ್ಷೇಮಾಭಿವೃದ್ಧಿಯಲ್ಲಿ ತಾವು ವಹಿಸಬೇಕಾದ ಅಕ್ಕರೆಯನ್ನೂ, ತಮ್ಮಕರ್ತವ್ಯವನ್ನು ಉಪೇಕ್ಷಿಸುವದರಿಂದ ಪ್ರಾಪ್ತವಾಗತಕ್ಕ ಬಾಧಕಗಳನ್ನೂ ಚೆನ್ನಾಗಿ ಅರಿಯುವಣವೇ ವ್ಯವಹಾರದಕ್ಷತೆಯಮುಖ್ಯಲಕ್ಷಣವಾಗಿರುತಿದೆ. ಬ್ರಿಟಿಷ್‌ಗವರ್ನ್‌ಮೆಂಟಿನವರು ಇದುವರಿವಿಗೆ ಒಪ್ಪಿಸಿರುವ ರಾಜ್ಯಗಳ ಸ್ಥಿತಿಯಂನೋಡಲಾಗಿ ಆಯಾಸಂಸ್ಥಾನಾಧಿಪತಿಗಳ ವಯಃಪರಿಮಾಣವೂ, ಅಲ್ಲಿರತಕ್ಕ ಬ್ರಿಟಿಷ್ ರೆಸಿಡೆಂಟಿಗಳ ಸಾಲಂಕೃತಾಭಿಪ್ರಾಯಗಳೂ, ಪ್ರಯೋಜನೋದ್ದೇಶದೊಡನೆ ವಸ್ತುಸ್ಥಿತಿಯನ್ನು ಅನ್ಯಥಾತಿಳಿಸಿ ಇಲ್ಲದ ಗುಣಗಳನ್ನು ಆರೋಪಿಸತಕ್ಕ ಅಲ್ಲಿನ ವೃತ್ತಾಂತ ಪತ್ರಿಕೆಗಳ ವಾಕ್ಯಗಳೂ ಬ್ರಿಟಿಷ್ ಗವರ್ನ್‌ಮೆಂಟನವರನ್ನು ಸಂಪೂರ್ಣವಾಗಿ ವಂಚಿಸಿದವೆಂದು ಎಣಿಸಬೇಕಾಗಿದೆ. ಈಪುದುಕೋಟೆ ಸಂಸ್ಥಾನದ ವಿಷಯದಲ್ಲಿ ಮುಂದೆ ಇಂತಾ ಆಕ್ಷೇಪಣೆಗಳಿಗೆ ಅವಕಾಶವಿಲ್ಲದಂತೆ ರಾಜಪುತ್ರರ ಪುರೋವೃದ್ಧಿಯೊಳು ದೃಷ್ಟಿಯಿಟ್ಟು ಅವರು ಹಿಂದೂ ಯೆಂಬ ಭಾವನೆಯೊಡನೆಯೂ, ಮುಂದೆ ಹಿಂದೂವಾಗಿಯೇ ಇರಬೇಕೆಂಬ ಕೋರಿಕೆಯೊಡನೆಯೂ ಈಗಲಿಂದ ತಕ್ಕ ಏರ್ಪಾಡು ಮಾಡಿ ಅವರನ್ನು ಅಭಿವೃದ್ಧಿಗೆ ತಂದರೆ ಚೆನ್ನಾಗಿರುವದು.

AGRICULTURISTS' LOANS ACT 1884.

ಸನ್ ೧೮೮೪ನೇ ಇಸವಿಯಲ್ಲಿ ಇಂಡ್ಯ ಗವರ್ನ್‌ಮೆಂಟನವರು ಇಂಡ್ಯದೇಶದ ಕೃಷಿಜೀವಿಗಳಿಗೆ ಪ್ರೋತ್ಸಾಹವನ್ನುಂಟುಮಾಡಬೇಕೆಂಬ ತಾತ್ಪರ್ಯದೊಡನೆ ಸಾಗುವಳೀದಾರರಿಗೆ ಸರ್ಕಾರದಿಂದ ಮುಂದಾಗಿ ಸಾಲಕೊಟ್ಟು ಅನುಕೂಲಕಾಲದಲ್ಲಿ ಅವರಿಂದ ವಸೂಲ್ಮಾಡಿಕೊಳ್ಳತಕ್ಕದ್ದೆಂದು ನಿರ್ಣೈಸಿ ಆಬಗ್ಯೆ ಒಂದು ಕಾನೂನನ್ನು ಏರ್ಪಾಡುಮಾಡಿದರು. ಕೊಡಗುದೇಶದ ಆಫಿಷಿಯೇಟಿಂಗ ಚೀಫ್‌ಕಮ್ಮಿಷನರಾದ ಮೆ॥ ಗಾರ್ಡಿನ್‌ಸ್ಟನ್ ಯವರು ಸದರೀಆಕ್ಟಿನ ೧೦ನೇ ಸೆಕ್ಷನ್ನನುಸರಿಸಿ ಕೊಡಗುದೇಶದಲ್ಲಿ ಜಾರಿಯೊಳು ತರುವಬಗ್ಯೆ ಹೊಸದಾಗಿ ಕೆಲವುನಿಬಂಧನೆಗಳನ್ನುಮಾಡಿ ಅದರಮೇಲೆ ಜನಗಳಅಭಿಪ್ರಾಯವನ್ನು ಅರಿಯತಕ್ಕಬಗ್ಯೆ ಘೋಷಿಸಿಮಾಡಿರುತ್ತಾರೆ. ಈರೂಲ್ಸ್‌ಗಳನ್ನ ನಾವು ಸಮಗ್ರವಾಗಿ ನೋಡಿದೆವಲ್ಲದೆ ಇವು ಈವಾರದಇಂಗ್ಲಿಷ್‌ಭಾಗದ ಪತ್ರಿಕೆಯಲ್ಲಿ ಪ್ರಕಟಿಸಿರುತ್ತೇವೆ.

ಈಗ ಮೆ॥ ಗಾರ್ಡಿನ್‌ಸ್ಟನ್‌ಯವರು ಮಾಡಿರುವ ನಿಬಂಧನೆಗಳು ಸಾಗುವಳೀದಾರರಿಗೆ ಬಹಳಸಹಾಯಕಗಳಾಗಿರುತಿವೆ. ಬೇಸಾಯಗಾರರು ಅನುದವನ್ನರಾಗಿ ಸರ್ಕಾರ್ ಸಹಾಯವನ್ನು ಅಪೇಕ್ಷಿಸುವ ಸ್ಥಿತಿಯೊಳದ್ದು ಇದರಡಿಕಂಡಬಾಬುಗಳ ಪೈಕಿ ಯಾವದಕ್ಕಾಗಿಯಾದರೂ ಸಾಲಕೇಳದರೆ

ಗವರ್ನಮೆಂಟಿನವರು ಸುಲಭಬಡ್ಡಿಗೆ ಮುಂಗಡ ವಾಗಿಕೊಡುವರು.

೧. ಬೀಜ ಮತ್ತು ಎತ್ತುಗಳ ಖರೀದಿಬಗ್ಗೆ;

೨. ಮನೇರಿಪೇರಿಬಗ್ಗೆ ಮತ್ತು ಜೌಕಿ ಮುಂತಾದವುಗಳಿಂದ ನಷ್ಟವಾಗಿಹೋದ ದನ ದೊಡ್ಡಿಗಳನ್ನು ಕಟ್ಟುವಬಗ್ಗೆ;

೩. ಇತರ ಪ್ರಬಲಕಾರಣಗಳಿಂದ ಬೇಸಾಯಕ್ಕೆ ಉಂಟಾಗತಕ್ಕ ನಷ್ಟಗಳಬಗ್ಗೆ;

ಇದರಡಿಕಂಡ ಷರತ್ತುಗಳಮೇಲೆ ಸಾಲಪಡೆಯಬಹುದು

೧. ಬಡ್ಡಿಯೊಡನೆ ಅಸಲನ್ನು ಕಂತುಪ್ರಕಾರ ಪಾವತಿಮಾಡತಕ್ಕದ್ದು.

೨. ಸಾಲೀಯಾನಾ ನೇಕಡಾ ೬| ರೂ|| ಗಳ ಪ್ರಕಾರಬಡ್ಡಿವಸೂಲ್ಮಾಡಲ್ಪಡತಕ್ಕದ್ದು.

೩. ವಾಯಿದೇಕಾಲಕ್ಕೆ ಸರಿಯಾಗಿಸಾಲವನ್ನು ತೀರಿಸದೆಹೋದರೆ ಕಮ್ಮಿಷನರವರಿಗೆಯುಕ್ತತೋರಿದಲ್ಲಿ ಬಡ್ಡಿಯನ್ನು ಕದಮೆಯಾದರೂ ಮಾಡಬಹುದು. ಅಥವಾ ೬. ರೂಪಾಯಿಗಳಿಗೆ ಮೀರದಂತೆ ಹೆಚ್ಚಿಸಲಾದರೂಬಹುದು

೪. ೨೦೦ ರೂಪಾಯಿಗಳೊಳಗಾಗಿ ಅಪೇಕ್ಷಿಸಲ್ಪಡುವ ಸಾಲದ ಮೊಬಲಗನ್ನು ಕಮ್ಮಿಷನರೇ ಕೊಡಬಹುದು. ಸಾಲದಮೊಬಲಗು ೨೦೦ರೂಪಾಯಿಗಳಿಗೆ ಮೇಲ್ಪಟ್ಟದ್ದರೆ ಆಗ ಚೀಫ್‌ಕಮ್ಮಿಷನರವರ ಮಂಜೂರಾತಿಯಮೇಲೆ ಕೊಡಬಹುದು. ಮತ್ತು ಸಾಲದ ಮೊಬಲಗು ಜಮೀನ್ ಕಂದಾಯದಂತೆ ಭಾವಿಸಿ ವಸೂಲ್ಮಾಡಲ್ಪಡತಕ್ಕದ್ದು.

ಜನಗಳಿಗೆ ಸಹಾಯ ಮಾಡಬೇಕೆಂಬ ಪ್ರಾಮಾಣಿಕವಾದ ಅಭಿಪ್ರಾಯದೊಡನೆ ಗವರ್ನಮೆಂಟಿನವರು ಹ್ಯಾಗೆ ಈ ಏರ್ಪಾಡನ್ನು ಮಾಡಿದರೋ ಬದಸ್ತೂರ್ ಜನಗಳು ಪ್ರಾಮಾಣಿಕರಾಗಿ ವರ್ತಿಸುತ ತತ್ಪ್ರಯುಕ್ತವಾದ ಪ್ರಯೋಜನವನ್ನನುಭವಿಸುವರೆಂದು ನಂಬುತ್ತೇವೆ.

Occasional Note
ನೈಮಿತ್ತಿಕವಿಷಯನ್ಯಾಸ

Birth of a Daughter to the Nizam ಗತ ಶನಿವಾರದದಿನ ಬೆಳಿಗ್ಗೆ ಹೈದರಾಬಾದ್ ನಿಜಾಮರವರಿಗೆ, ಪುತ್ರೀ ಜನನವಾದ ಶುಭ ವೃತ್ತಾಂತವು ಕೇಳಿ ಬಹಳ ಸಂತೋಷಿಸುತ್ತೇವೆ.

Scarcity in Cabul.—ಕಾಬೂಲ್‌ನಲ್ಲಿ ಪದಾರ್ಥ ದೌರ್ಲಭ್ಯವು ಅಧಿಕವಾಗಿದ್ದರೂ, ಪ್ರಬಲ ಕ್ಷಾಮವಾತ್ರ ಉಂಟಾಗುವ ಸಂಭವವಿಲ್ಲವು. ಯಾತಕ್ಕೆಂದರೆ, ಈಗ ಪರಸ್ಥಳಗಳಿಂದ ಧಾನ್ಯಗಳು ಅಲ್ಲಿಗೆ ಬಹಳವಾಗಿ ರಫ್ತಾಗಲಿಕ್ಕೆ ಪ್ರಾರಂಭವಾಗಿರುವಂತೆ ತಿಳಿಯ ಬರುತಿದೆ.

A girl found dead in a box.—ಈಚೆಗೆ ಸೇಲಂ ಪಟ್ಟಣದಿಂದ ರಷ್ಯಾ ಚಕ್ರವರ್ತಿಯವರಿಗೆ ಟಪಾಲ್‌ಮೂಲಕ ದೊಡ್ಡ ಪೆಟ್ಟಿಗೆ ಒಂದು ಕಳುಹಿಸಲ್ಪಟ್ಟಿತು. ಚಕ್ರವರ್ತಿಯವರ ಆಜ್ಞಾನುಸಾರ ಅವರ ಸೇವಕನೊಬ್ಬನು ಸದರೀ ಪೆಟ್ಟಿಗೆಯನ್ನು ತೆಗೆದು ನೋಡುವಾಗ್ಯೆ ಅದರಲ್ಲಿ ಸುಂದರಿಯಾದ ಒಬ್ಬ ಹುಡಿಗಿಯು ಮುರ್ದೆ ಇರಲ್ಪಟ್ಟದ್ದುದು ಕಂಡು ಚಕ್ರವರ್ತಿಯವರು ಬಹಳ ಆಶ್ಚರ್ಯಪಟ್ಟರಂತೆ.

The Liability of the Hyderabad State ಈಗ ಹೈದರಾಬಾದ್ ಸಂಸ್ಥಾನಕ್ಕೆ ಇರತಕ್ಕ ಸಾಲವನ್ನು ನಿಷ್ಕರ್ಷಿಸಿ ತಿಳಿಸತಕ್ಕಬಗ್ಗೆ ಈಗ್ಯೆ ಕೆಲವುಕಾಲದ ಹಿಂದೆ ಒಂದು ಕಮಿಟಿ ಯೇರ್ಪಾಡಾಗಿತ್ತು. ಸುಮಾರ್ ೫೦ ಮಂದಿಯು ೫ ಕೋಟಿ ರೂಪಾಯಿಗಳ ತನಕ ಸಂಸ್ಥಾನದಿಂದ ತಮಗೆ ಸಲ್ಲಬೇಕಾಗಿದೆಯೆಂದು ದಾವೇ ತಂದರು. ಅವುಗಳಲ್ಲಿ ಕೆ ಸರಿಯಾದ ಆಧಾರವಿಲ್ಲದೆ ಹೋದದರಿಂದ ಯೆರಡೂವರೆ ಕೋಟಿ ರೂಪಾಯಿಗಳ ವರಿವಿಗೆ ದಾವೆಯು ತಳ್ಳಿಹಾಕಲ್ಪಟ್ಟಿತು. ೯೬ ಲಕ್ಷರೂಪಾಯಿಗಳು ಬರಬೇಕೆಂದು ಈಗ ಒಬ್ಬನು ದಾವೇ ಮಾಡಿರುತ್ತಾನೆ. ಸದರೀ ಮೊಬಲಗು ಪೈಕಿ ೪೪ ಲಕ್ಷ ರೂಪಾಯಿಗಳು ಖರ್ಚುಬಡ್ಡಿಬಾಬತೆಂದು ತಿಳಿಯಬರುತಿದೆ. ಇದರಿಂದ ಋಣವು ರಾಜ್ಯಾಂಗವೆದೇರ್ಪಟ್ಟಿತು.

The Gustin Dacoity Case.—ಮದರಾಸ್ ರಿವಿನ್ಯೂ ಬೋರ್ಡ್ ಮೆಂಬರಾದ ಮಿ|| ಗ್ಯಾರಿಸ್ಟ್‌ನ್ ಯೆಂಬವರನ್ನು ದರೋಡೆಯುವರು ಮಾರ್ಗದಲ್ಲಿ ಹೊಡೆದ ಮೊಕದ್ದಮೆ ಯೊಂದು ವಿಶೇಷ ಪ್ರಾಬಲ್ಯವನ್ನೈದಿ ಅದು ಮದರಾಸ್ ಹೈಕೋರ್ಟಿನಲ್ಲೀಗ ವ್ಯವಸ್ಥೆಯಾಯಿತು ಈ ಮೊಕದ್ದಮೆಯಲ್ಲಿ ಒಬ್ಬ ಯೂರೋಪಿಯನ್ ಆಫೀಸರರು ಸಂಬಂಧಪಟ್ಟದ್ದರಿಂದ ತದ್ಜಾತಿಯರಿಗೂ, ಜೋಡನಾಯಕನೂರು ಜಮೀನ್‌ದಾರರು ಸೇರಿದ್ದದರಿಂದ ನೇಟಿವ್‌ಗಳಿಗೂ ಅಮಿತವಿಶೇಷ ಆಸಕ್ತಿಯನ್ನುಂಟುಮಾಡಿತು. ಗತಒಂಬತ್ತು ದಿನಗಳಿಂದ ಅನುಸ್ಯೂತವಾಗಿವಿಚಾರಣೆಯಾಗುತಲಿದ್ದ ಈಮೊಕದ್ದಮೆಯ ಪರ್ಯವಸಾನವನ್ನು ಮದರಾಸ್ ಪ್ರೆಸಿಡೆನ್ಸಿಯ ಪ್ರಜೆಗಳೆಲ್ಲರೂ ಅತ್ಯಾದರದೊಡನೆ ನಿರೀಕ್ಷಿಸಿದ್ದರು. ಗತ ಶನಿವಾರದ ದಿನ ಇದು ಫ್ರೂರೈಸಿ ಜೂರೀಗಳ ಅಭಿಪ್ರಾಯವನ್ನಂಗೀಕರಿಸಿ ಚೀಫ್‌ಜಸ್ಟಿಸ್‌ಯವರು ೧೨ನೇ ಅಪರಾಧಿ ಯೊಬ್ಬನು ವಿನಾ ಮಿಕ್ಕವರನ್ನೆಲ್ಲ ಖುಲಾಸೆಮಾಡಿ ಅವನಿಗೆ ೧೪ತಿಂಗಳ ಖಠಿಣ ಖೈದ್ ಸಜಾ ವಿಧಿಸಿದರು. ಜಮೀನ್‌ದಾರರು ಖುಲಾಸೆ ಮಾಡಲ್ಪಟ್ಟಾಗ ಕೋರ್ಟಿನಲ್ಲಿದ್ದವರೆಲ್ಲರೂ ಬಹಳವಾಗಿ ಸಂತೋಷಿಸಿದರು. ಈಮೊಕದ್ದಮೆಯ ಸ್ವರೂಪವನ್ನು ಕೇಳದವರೆಲ್ಲರು ಆಶ್ಚರ್ಯಪಡದಿರಲಿಲ್ಲವು. ಇದರವೃತ್ತಾಂತವನ್ನು ಸಂಗ್ರಹವಾಗಿ ಇದರಡಿ ತಿಳಿಸುವೆವು ಹ್ಯಾಗುಂದರೆ—ಮಧುರೆಜಿಲ್ಲಾವಿಗೆ ಸೇರಿದ ದೇವಕೋಟ ಎಂಬಸ್ಥಳದಲ್ಲಿ ಈಪ್ರವಾಸನ ನಾಯಕರಾದ ಗ್ಯಾರಿಸ್ಟ್‌ನ್ ಯೆಂಬವರ ಹೆಸರಿನೊಳು ಕೆಲವು ಜಮೀನುಗಳಿದ್ದವು ಗವರ್ನಮೆಂಟಿ ನೌಕರರಾದ ತಾವು ಈರೀತಿ ಜಮೀನ್ ಯಿಟ್ಟುಕೊಂಡಿರುವದು ಅಕ್ರಮವೆಂದು ಮಿ|| ಗ್ಯಾರಿಸ್ಟ್‌ನ್‌ಯೆಂಬುವು ಭಾವಿಸಿ ಅದರಮೇಲೆ ಹಿದುವಳೀ ಜಮೀನನ್ನೆಲ್ಲ ತಮ್ಮ ಭಾರ್ಯಾ ಪುತ್ರರ ಪ್ರಯೋಜನಾರ್ಥ ಟ್ರಸ್ಟೀಗಳ ಸುಫರ್ದು ಮಾಡಿದರು ಆದಾಗ್ಯೂ ಮಿ|| ಗ್ಯಾರಿಸ್ಟ್‌ನ್‌ಯವರು ಸದರೀ ಜಮೀನ್‌ಗಳ ಲಾಭನಷ್ಟಗಳಲ್ಲಿ ವಿಶೇಷಲಕ್ಷ್ಯತೆಯುಳ್ಳವರಾಗಿದ್ದದರಿಂದ ಆಗಿಂದಾಗ್ಯೆ ರಜಾಕಾಲಗಳಲ್ಲಿ ಅಲ್ಲಿಗೆ ಹೋಗಿ ಜಮೀನ್‌ವಿಚಾರ ಮಾಡುತಲಿದ್ದರು. ಹೀಗಿರುವಲ್ಲಿ ಸದರೀ ಡಿಸ್ಟ್ರಿಕ್ಟ ಕಲೆಕ್ಟರಾದ ಮಿ|| ಕ್ರೋಶ್ ಯೆಂಬವರಿಗೂ ಮಿ| ಗ್ಯಾರಿಸ್ಟ್‌ನ್ ಯೆಂಬವರಿಗೂ ಯಾವದೋ ಒಂದು ವಿಷಯದಲ್ಲಿ ವೈಮನಸ್ಯ ಉಂಟಾದದರಿಂದ ಅವರು ಮಿ| ಗ್ಯಾರಿಸ್ಟ್‌ನ್‌ಯವರನ್ನು ಹೊಡೆಸುವಂತೆ ಜಮೀನ್‌ದಾರರಿಗೆ ತಿಳಿಸಿದರೆಂತಲೂ, ಅವರುಅವರ ಮಾತಿನಪ್ರಕಾರ ತಮ್ಮಕಡೆಯವರಮೂಲಕ ಮಾರ್ಗದಲ್ಲಿ ಬರುವಾಗ್ಯೆ ಮಿ| ಗ್ಯಾರಿಸ್ಟ್‌ನ್‌ಯವರನ್ನು ಹೊಡೆಸಿದರೆಂತಲೂತಿಳಿಯಬರುತಿದೆ.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕಜಾತಿವೃತ್ತಾಂತಗಳು.

Fee of Public Prosecutors.— ಮೈಸೂರು ಚೀಫ್ ಜಡ್ಜಿಯವರ ಶಿಫಾರಸ್ಸಿನಮೇಲೆ ದಿವಾನರವರು ಪಬ್ಲಿಕ್ ಪ್ರಾಸಿಕ್ಯೂಟರ್‌ಗಳಿಗೆ ಮ್ಯಾಜಸ್ಟ್ರೇಟುಗಳಿಂದ ವಿಧಿಸಲ್ಪಡುವ ದಂಡನೆಗಳನ್ನು ಪೋಷಿಸುವಬಗ್ಗೆ ಕೊಡಲ್ಪಡುತಲಿದ್ದ ರುಸುಮನ್ನು ೧೬ರೂಪಾಯಿಗಳಿಗೆ ಇಳಿಸಿದರೆಂದು ತಿಳಿಯಬರುತಿದೆ.

A want.—ಈ ಪ್ರೂರು ಪೇಟೆ ಮಾರ್ಕೆಟಿನಲ್ಲಿ ಒಂದು ಘಡಿಯಾರ ಇರಲ್ಪಡದಿರುವದು ಬಹಳಕೊರತೆಯೆಂದುಒಳದೇಶಪಡೆಯಿಲೀಪ್ರೋಸ್ಟ ಪತ್ರಿಕೆ ತಿಳಿಸುತಿದೆ. ನಮಗೆ ಸಕಲಸೌಭಾಗ್ಯಗಳು ಕೈಗೂಡಲಿಕ್ಕೆ ಇದೊಂದೇಯಷ್ಟೆ ಕೊರತೆಯಾಗಿರುವದು ?

The weather.—ಗತವಾರದಿಂದೀಚೆಗೆ ಇಲ್ಲಿನ ಕಾಲಸ್ಥಿತಿಯು ಶುದ್ಧಾಂಗವಾಗಿ ಬದಲಾಯಿಸಿದೆ. ಗತ ಗುರುವಾರದದಿನ ರಾತ್ರಿ ಬಿದ್ದ ಪ್ರಬಲ ವರ್ಷದದೆಸೆಯಿಂದ ಅಲ್ಲಿಯಲ್ಲಿ ಕೆಲವು ಮಟ್ಟಿಗೆ ನೀರು ಬಿದಿರುತಿದೆ. ರಾತ್ರಿಕಾಲದಲ್ಲಿ ವರ್ಷ ಸೂಚನೆ ಬಲವಾಗಿ ಕಂಡುಬರುತ ಕೆಲವು ಹನಿಗಳುಸಹ ಬೀಳುತಿವೆ. ಮಧ್ಯಾನ್ಹಕಾಲದಲ್ಲಿ ಸೂರ್ಯರಶ್ಮಿ ಮಂದವಾಗಿದ್ದರೂ ಶಕೆ ಅಧಿಕವಾಗಿದೆ.

Dispensaries.—ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಗೆ ಗುಬ್ಬಿಯಿಂದ ಒಬ್ಬ ಬಾತಮೀದಾರನು ಬರೆಯುತ್ತಾನೇನೆಂದರೆ. ಈಪ್ರೂರಲ್ಲಿಯೂ ತರೀಕೆರೆಯಲ್ಲಿಯೂ ಜನಗಳಿಗೆ ವೈದ್ಯಶಾಲೆಯ ಆವಶ್ಯಕತೆಯು ಅಧಿಕವಾಗಿದೆ. ಆಸ್ಪಿಟಲ್ ಅಸಿಸ್ಟೆಂಟರು ದೊರೆತಕೂಡಲೇ ಗವರ್ನಮೆಂಟಿನವರು ಸದರೀ ಯೆರಡುಸ್ಥಳಗಳಲ್ಲಿಯೂ ಯೆರಡು ವೈದ್ಯಶಾಲೆಗಳನ್ನಿಡುವ ಆಲೋಚನೆಯೊಳದಾರೆಂದು ಕೇಳುತ್ತೇವೆ.

Seringapatam Temple.—ಶ್ರೀರಂಗ ಪಟ್ಟಣದಲ್ಲಿರುವ ಶ್ರೀರಂಗನಾಥದೇವರ ದೇವಸ್ಥಾನದ ರಿಪೇರಿಯಬಗ್ಗೆ ಮೈಸೂರು ಸರ್ಕಾರದವರು ೨೫೦೦೦ರೂಪಾಯಿಗಳನ್ನು ಇಂಜಿನಿಯರ್‌ಇಲಾಖೆಯವರ ವಶಕ್ಕೆ ಕೊಟ್ಟಿರುತ್ತಾರೆಂಬ ಅಂಶ ಅನೇಕರಿಗೆ ಸಂತೋಷವನ್ನುಂಟುಮಾಡದಿರಲಾರದೆಂದು ನಂಬುತ್ತೇವೆ. ಶಿಥಿಲವಾಗಿರುವ ಪುರಾತನವಾದ ಈದೇವಸ್ಥಾನವು ಕ್ರಮಪಡುವದರಿಂದ ಉಂಟಾಗತಕ್ಕ ಸಂತೋಷಕ್ಕಿಂತಲೂ ಇಂಜನಿಯರ್ ಇಲಾಖೆಯವರ ಕಾಲಹರಣಕ್ಕೆ ಅದು ವಿಷಯವಾದದರಿಂದ ಉಂಟಾಗುವದು ಅಧಿಕವಾದಾಗಿರುತಿದೆ.

The British Resident.—ಈಸಂಸ್ಥಾನದ ಕಾಯಂ ಬ್ರಿಟಿಷ್ ರೆಸಿಡೆಂಟರಾದ ಮಿ|| ಲ್ಯೈಲ್ ಯವರು, ಈದಿನ ಮದರಾಸಿಗೆ ಬರುವರೆಂದು ತಿಳಿಯಬರುತಿದೆ, ಹಾಗಿದ್ದ ಪಕ್ಷಕ್ಕೆ ಮಿ|| ಲ್ಯೈಲ್ ಯವರು ನಾಳೇನಾಳಿದ್ದರಲ್ಲಿಯೇ ರೆಸಿಡೆಂಟಿ ಕೆಲಸದ ಚಾರ್ಜನ್ನು ಮಿ|| ಗರ್ಡಲ್‌ಸ್ಟನ್‌ಯವರಿಂದ ತೆಗೆದುಕೊಳ್ಳಬಹುದೆಂದು ನಂಬುತ್ತೇವೆ. ಮಿ|| ಗರ್ಡಲ್‌ಸ್ಟನ್‌ಯವರು ಇಲ್ಲಿಂದ ರಜಾಪಡೆದು ಇಂಗ್ಲಾಂದಿಗೆಹೋಗುವರೆಂದು ತಿಳಿಯಬರುತಿದೆ

Major A H Macintire.—ಬೆಂಗಳೂರು ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರ್ ಮೇಜರ್ ಮಾಕಿಂಟೈರ್ ಯವರು, ಗತವಾರದಲ್ಲಿ ನಾವು ತಿಳಿಸಿದ್ದಪ್ರಕಾರ ೧೪ ದಿನಗಳ ರಜಾಪಡೆದು ನೀಲಗಿರಿಗೆ ಹೋಗಿರುವದರಿಂದ ಅವರ ಗೈರ್‌ಹಾಜರಿಯಲ್ಲಿ ಟೌನ್ ಮ್ಯಾಜಸ್ಟ್ರೇಟರಾದ ಮಿ|| ಷಣ್ಮುಗವೇಲು ಪಿಳ್ಳೆಯವರು, ಡಿಸ್ಟ್ರಿಕ್ಟ ಕೆಲಸವನ್ನು ನಂಗಾಮಿಯಾಗಿ ನೋಡುತಲಿರುವಂತೆ ತಿಳಿಯಬರುತಿದೆ.

Amalgamation of offices.— ದಿವಾನರವರ ಠಫಸಿಗೆಸೇರಿದ ಅಕೌಂಟ್ ಇಲಾಖೆಯುಅಂಡರ್ ಸೆಕ್ರೆಟರಿಯವರ ವಿಚಾರಣಾಧಿಕಾರದೊಳಿರುತಲಿದೆಯಷ್ಟೆ. ಮುಂದೆ ಈ ಇಲಾಖೆಯು ಕಂಟ್ರೋಲರ್ ಇಲಾಖೆಗೆ ಸೇರಿಸಲ್ಪಟ್ಟು ಅವರ ವಿಚಾರಣೆಯೊಳಡಲ್ಪಡುವದೆಂತಲೂ, ಈಏರ್ಪಾಡಿನಿಂದಸ್ವಲ್ಪಮಟ್ಟಿಗೆಖರ್ಚು ಕೂಡದಲೆಯಾಗುವದೆಂತಲೂ ಒಳದೇಶದ ಡೆಯಿಲೀಪ್ರೋಸ್ಟಪತ್ರಿಕೆತಿಳಿಸುತಿದೆ

Stamp duty on Title Deeds of Coffee land.—ಟೈಟಲ್‌ಡೀಡ್‌ಗಳ ವಿಷಯವಾಗಿ ದಿವಾನರವರು ಈಚೆಗೆ ಒಂದು ಹುಕುಂಕೊಟ್ಟಿರುತ್ತಾರೆ. ಪೂರ್ವದ ರಟ್ಟೆಯನ್ನನುಸರಿಸಿ ಕಾಫೀ ಜಮೀನ್ ಹಿದುವಳೀದಾರನಿಗೆ ಕೊಡಲ್ಪಡುವ ಟೈಟಲ್‌ಡೀಡ್‌ಭೋಗ್ಯ ಪ ದಾನಪತ್ರಗಳಂತೆ ಭಾವಿಸಲ್ಪಡಲಾರದು. ಅದು ಇದುವರಿವಿಗೆ ಅನುಭವದಲ್ಲಿದ್ದ ಜಮೀನ್‌ಗಳ ರಿವಿನ್ಯೂ ಪೈಸಲಾತಿಯ ಒಂದುರಿಕಾರ್ಡಾಗಿರುತಿದೆ. ಪೂರ್ವದಲ್ಲಿ ಕೊಟ್ಟದ್ದ ಟೈಟಲ್‌ಡೀಡ್‌ಗಳಿಗೆ ಬದಲಾಗಿ ಮರಳಿಕೊಡಲ್ಪಡುವ ಕ್ಕವುಗಳಿಗೆ ಸ್ಟಾಂಪ್‌ಡ್ಯೂಟಿ ವಸೂಲ್ಮಾಡಲ್ಪಡಕೂಡದು. ಕಾಫೀಸಾಗುವಳಿಬಗ್ಯೆ ಹೊಸದಾಗಿ ಜಮೀನ್ ದರಖಾಸ್ತು ಮಾಡಿದರೆ ಅಬಗ್ಯೆ ಕೊಡತಕ್ಕ ಟೈಟಲ್‌ಡೀಡ್‌ಗಳಿಗೆ ೮೯ ಅಥವಾ ಅಂದಾಜಕ್ರಯ ಮೊಬಲಗಿಗೆ ಅನುಗುಣವಾಗಿ ಭೋಗ್ಯಪತ್ರಗಳಂತೆಸ್ಟಾಂಪ್‌ಹಚ್ಚತಕ್ಕದ್ದು, ಎಂಬದು.

Judicial appointment.—ಈ ಮೈಸೂರು ಬಾರ್‌ನಲ್ಲಿರುವ ಅಡ್ವೋಕೇಟ್ ಮೆ|| ಲಾರೆನ್ಸ್ ಬಿ. ಎ. ಬಿ. ಎಲ್. ಯವರಿಗೆ ಸಿವಿಲ್ ಮಿಲಿಟರಿ ಸ್ಟೇಷನಿನಪಬ್ಲಿಕ್ ಪ್ರಾಸಿಕ್ಯೂಟರ್‌ಕೆಲಸವು ಕೊಡಲ್ಪಡುವದಾಗಿದಯೆಂತಲೂ, ಅದನ್ನು ಅವರು ಬಹುಶಃ ಅಂಗೀಕರಿಸುವರೆಂತಲೂ ತಿಳಿಯಬರುತಿದೆ. ಇಲ್ಲಿ ಈಗಖಾಲೀಯಾಗಿರುವ ಪಬ್ಲಿಕ್‌ಪ್ರಾಸಿಕ್ಯೂಟರ್ ಕೆಲಸಕ್ಕೆ ಮಿ|| ಶೇಷಗಿರಿರಾಯರವರು ಲಾಯಖೆಂದು ಚೀಫ್‌ಜಡ್ಜಿಯವರು ಶಿಫಾರಸಿಮಾಡಿದ್ದಾರೆಂತಲೂ ಸದರೀ ಕೆಲಸಕ್ಕೆ ೧೫೦ ರೂಪಾಯಿಗಳು ಸಲ್ಲುವದೆಂತಲೂ ಕೇಳುತ್ತೇವೆ. ಮೆ|| ಶೇಷಗಿರಿರಾಯರವರು ಪಬ್ಲಿಕ್ ಪ್ರಾಸಿಕ್ಯೂಟರ್ ಕೆಲಸವನ್ನು ಅಂಗೀಕರಿಸುವ ಪಕ್ಷಕ್ಕೆ ಅವರು ನಗರಡಿವಿಜನಿಗೆ ಹೋಗಬೇಕೆಂದು ಮೈಸೂರುಗವರ್ನಮೆಂಟಿನವರು ತಿಳಿಸಿದರೆಂಬದಾಗಿ ಅರಿತೆವು. ಮೆ|| ಶೇಷಗಿರಿರಾಯರವರು ನಗರಡಿವಿಜನಿಗೆ ಹೋಗಲಾರರೆಂಬದನ್ನು ಭಾವಿಸಿಯೇ ಈರೀತಿ ಸೂಚಿಸಲ್ಪಟ್ಟಂತೆ ತೋರುತಿದೆ. ಪ್ರಕಾರಾಂತರವಾದ ಇಂತಾ ನಿಷೇಧೋಕ್ತಿಯು ಸಾಧಾರಣವಾಗಿ ಯೆಲ್ಲರಿಗೂ ತೋರತಕ್ಕದ್ದಲ್ಲವು.

Resignation.—ಸೆಂಟ್ರಲ್‌ಕಾಲೇಜ್ ಅಸಿಸ್ಟೆಂಟ್ ಮ್ಯಾಸ್ಟರಾದ ಮಿ|| ವಾಸುದೇವಯ್ಯನವರಿಗೆ ಲೆಜಿಸ್ಲೇಟಿವ್ ಇಲಾಖೆಯಲ್ಲಿ ಟ್ರಾನ್ಸ್ಲೇಟರ್‌ಕೆಲಸವಾದದರಿಂದ ಅವರು ಕಾಲೇಜ್ ಸಂಬಂಧವನ್ನು ನಿವೃತ್ತಿಸಿಕೊಂಡರೆಂದು ಗತವಾರದಲ್ಲಿ ತಿಳಿಸಿದ್ದೆವಷ್ಟೆ ಸದರೀ ಕಾಲೇಜ್‌ನಲ್ಲಿ ಭೌತಿಕಶಾಸ್ತ್ರ ಮುಂತಾದ ಗ್ರಂಥಗಳಲ್ಲಿ ಪಾಠ ಹೇಳತಕ್ಕಬಗ್ಯೆ ಈಗ್ಯೆ ಒಂದೆರಡುವರುಷಗಳಹಿಂದೆ ಮದರಾಸಿನಿಂದ ಐದುನೂರೈದು ಕರೆಯಿಸಲ್ಪಟ್ಟ ಮೆ|| ಪರಮಶಿವಯ್ಯರ್ ಬಿ ಎ.ಯವರು, ಪ್ರಸ್ತುತದಲ್ಲಿ ತಮ್ಮ ಕಾಲೇಜ್ ಸಂಬಂಧವನ್ನು ನಿವೃತ್ತಿಸಿಕೊಂಡು ಲಾಯರಾಗುವರೆಂದು ಕೇಳುತ್ತೇವೆ. ಈ ಕಾಲೇಜ್‌ನಲ್ಲಿದ್ದ ಸಮರ್ಥರಾದವರೆಲ್ಲ ಒಬ್ಬೊಬ್ಬರಾಗಿ ಅದೆ ಜರಿಗಿಕೊಂಡರು. ಇರುವವರಿಗೆ ಅಸ್ಥಿರತೆಯು ಕಡಮೆಯಾಯಿತು, ವಿದ್ಯಾರ್ಥಿಗಳಿಗೆ ಗೌರವವು ತಪ್ಪಿತು. ಗವರ್ನಮೆಂಟಿನವರಿಗೆ ಅದರ ವಿಚಾರ ಬೇಕಿಲ್ಲವು. ಸಾಲೀಯಾನಾ ಅದರ ಖರ್ಚುಮಾತ್ರ ವೃದ್ಧಿಯಾಗದಿರಲಿಲ್ಲವು ಕಾಲೇಜ್ ಕಟ್ಟಡವು ಜನಗಳ ದೃಷ್ಟಿಯನ್ನಾಕರ್ಷಿಸದಿರಲಿಲ್ಲವು. ರವ್ವಾತ್ ಪ್ರತಿವರುಷದಲ್ಲಿಯೂ ಅಲ್ಲಿನ ಫಲಿತಾಂಶವು ಜನಗಳ ತಿರಸ್ಕಾರಾಗಿಸದಿರಲಿಲ್ಲವು. ಏನುಸಾಧುವಣ; ಪಾಠಶಾಲೆಯಲ್ಲಿ ಸೆಂಟ್ರಲ್ ಕಾಲೇಜ್, ಆಸ್ಪತ್ರೆಯಲ್ಲಿ ಪೇಟೇ ಡಿಸ್ಪೆನ್ಸರಿಯೂ, ಸರೋವರದಲ್ಲಿ ಮಧ್ಯಸರೋವರವೂ, ಕೆರೆಗಳಲ್ಲಿ ಧರ್ಮಾಂಬುಧಿ ಕೆರೆಯೂ, ಛತ್ರದಲ್ಲಿ ಸರ್ಕಾರ್ ಛತ್ರವೂ, ಆಫೀಸಿನಲ್ಲಿ ಪ್ರಿಂಟಿಂಗ್ ಆಫೀಸೂ ಕೊರ್ಟುಗಳಲ್ಲಿ ಇಲ್ಲಿನ ಮುನ್ಸಿಫ್‌ಕೋರ್ಟು ಅದೃಷ್ಟವಶದಿಂದ ಇಲ್ಲಿನವರಿಗೆ ಪ್ರಾಪ್ತವಾಗಿರುವಲ್ಲಿ ಅವು ಇವರಿಗೆ ಈಗ ತಪ್ಪಬೇಕೆಂದರೆ ಹ್ಯಾಗೆ ತಪ್ಪುವವು?

Cost of Establishment for the newly constituted Districts.—ಕಳೆದ ತಿಂಗಳ ಆದಿಭಾಗದಲ್ಲಿ ಮರಳಿ ಏರ್ಪಡಿಸಲ್ಪಟ್ಟ ಡಿಸ್ಟ್ರಿಕ್ಟಗಳ ಮತ್ತು ತಾಲ್ಲೂಕುಗಳ ಶಿಬ್ಬಂದಿಖರ್ಚು ಇದರಡಿ ಕಂಡಂತೆ ಇರತಕ್ಕದ್ದೆಂದು ದಿವಾನರವರು ಹುಕುಂಮಾಡಿರುತ್ತಾರೆ

ಡಿಸ್ಟ್ರಿಕ್ಟ	ಇಂಗ್ಲಿಷ್	ಇಲಾಖೆಗೆ	೧೯೩ರೂ	ಗಳಲ್ಲಿ	೪೩ಸಂ.
,,	ರೆವಿನ್ಯೂ	,,	೭೫೦	,,	೧೨
,,	ಟ್ರೆಜರಿ	,,	೨೮೦	,,	೯
,,	ಜ್ಯುಡಿಷಲ್	,,	೧೦೫	,,	೩
,,	ಪೋಲೀಸ್	,,	೧೨೦	,,	೪
,,	ರಿಜಿಸ್ಟ್ರೇಷನ್		೨೫	,,	೧
,,	ಸ್ಟಾಂಪ್‌ಕಂತ್ರಾಟ್		೨೫	,,	೧..
ಮುಜ್ರೈವಗೈರೆ ಚಿಲ್ಲರೆನೌಕರರು			೧೯೬	,,	೨೫

ಈಗ ಜುಮ್ಲಾ ೧೫೫೯ ರೂಪಾಯಿಗಳು ಡಿಸ್ಟ್ರಿಕ್ಟ ಆಫೀಸ ಶಿಬ್ಬಂದಿ ಖರ್ಚುಬಗ್ಯೆ ತಗಲುತಿವೆ.

ಹಾಸನ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟಗಳಲ್ಲಿ ಒಬ್ಬರು ಜನರಲ್ ಅಸಿಸ್ಟೆಂಟ ಕಮ್ಮಿಷನರ್‌ಗಳಿಗೆ ೧೫೦ ರೂಪಾಯಿಗಳಲ್ಲಿ (೯೩೦) ಶಿಬ್ಬಂದಿಖರ್ಚು ಮಂಜೂರ್ಮಾಡಲ್ಪಟ್ಟಿರುತಿದೆ.

ತಾಲ್ಲೂಕು ಲವಾಜಮೆಯು ೨೦೬ ರೂಪಾಯಿಗಳತನಕ (೧೫೨೩೦) ಮಂಜೂರಾಗಿರುತಿದೆ.

ಈಗ ತೆಗದುಹಾಕಲ್ಪಟ್ಟ ಯೆರಡು ಸಬ್‌ಡಿವಿಜನ್‌ಗಳಿಗೆ ಮೊದಲು ತಗಲುತಲಿದ್ದ ಖರ್ಚು ೧೬೯೨ರೂ|| ಈಗ ಇವು ಡಿಸ್ಟ್ರಿಕ್ಟಾಗಿ ಮಾಡಲ್ಪಟ್ಟದರಿಂದ ೫೦೦೧೪ ರೂಪಾಯಿಗಳು ತಗಲುತಿವೆ.

ಮೌಕೂಫಾದ ೭ ಸಬ್ ತಾಲ್ಲೂಕುಗಳಿಗೆ ೯೦೦ ರೂಪಾಯಿಗಳು ವ್ಯಯವಾಗುತಲಿದ್ದವು. ಈಗ ಇವು ೬ ತಾಲ್ಲೂಕ್‌ಗಳಾದದರಿಂದ ೧೫೧೫ ರೂಪಾಯಿಗಳು ಹಿಡಿಯುವವು. ಈಬಗ್ಯೆ ಹಿಂದೆ

ಖರ್ಚಾಗುತಲಿದ್ದ ೨೬೧೦ ರೂಪಾಯಿಗಳನ್ನು ಈಗ ಹಿದಿಯಾದಕ್ಕೆ ೨೦೨೪ ರೂಪಾಯಿಗಳಲ್ಲಿ ವಹಾಮಾಡಿ ನೋಡಲಾಗಿ ಪ್ರಕೃತ ಏರ್ಪಾಡಿನಿಂದ ಮಾಹೇಯಾನಾ ೮೭೬೦ ರೂಪಾಯಿಗಳ ಖರ್ಚು ಜಾಸ್ತೀಯಾದಂತೆ ಏರ್ಪಟ್ಟಿತು.

— —

Retirement.—ಈ ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯಲ್ಲಿ ಈಗ್ಯೆ ಅನೇಕ ಸಂವತ್ಸರಗಳ ಮೊದಲು ಸ್ಕೂಲ್ ಮ್ಯಾಸ್ಟರ್‌ಕೆಲಸದಲ್ಲಿದ್ದ ಮ||ಕ್ಯಾಫರ್ಖಯವರಿಗೆ ಸದರೀ ಇಲಾಖೆಯ ಕೆಲಸವು ಈಗ್ಯೆ ಯೆರಡು ವರುಷಗಳಿಗೆ ಹಿಂದೆ ತಪ್ಪಿ ಹೋದದರಿಂದ, ಅದು ಮೊದಲು ಲೆಜಿಸ್ಲೇಟವ್ ಇಲಾಖೆಯ ಮ್ಯಾನೇಜರ್‌ಕೆಲಸವನ್ನು ನೋಡುತಲಿದ್ದರು. ಈಚೆಗೆ ಸದರೀ ಇಲಾಖೆಗೆ ಕ್ರಮವಾದ ಶಿಬ್ಬಂದಿಗಳೇರ್ಪಟ್ಟು ಅವರ ಮ್ಯಾನೇಜರ್‌ಕೆಲಸಕ್ಕೆ ಅನ್ಯರೊಬ್ಬರು ಮೊಕರರಾದದರಿಂದ ಮ||ಕ್ಯಾಫರ್ಖಯವರಿಗೆ ಆಕೆಲಸ ಸಹ ಇಲ್ಲದೆ ಹೋಯಿತು. ಈಗ ಇವರಿಗೆ ಸಲ್ಲುತಲಿರುವ ೩೦೦ ರೂಪಾಯಿಗಳ ತಲಬಿಗೆ ಅನುಗುಣವಾದ ಬೇರೆ ಯಾವ ಕೆಲಸವೂ ಸದ್ಯಃ ಕೊಡಲಿಕ್ಕೆ ಸಾಧ್ಯವಿಲ್ಲದೆ ಇರುವದರಿಂದಲೂ, ಇವರಿಗೆ ಈಗ ೨೫ಸಂವತ್ಸರಗಳ ಸರವಿಸ್ಸಾಗಿರುವದರಿಂದಲೂ, ಇವರು ಪೆಂಷನ್‌ಮೇಲೆ ನಿವೃತ್ತರಾಗತಕ್ಕದ್ದೆಂಬದಾಗಿ ಅಪೇಕ್ಷಿಸಲ್ಪಟ್ಟರುತ್ತಾರೆಂದು ತಿಳಿಯಬರುತಿದೆ. ಇವರಿಗೆ ಇದುವರೆನಿಗೆ ದಿವಾನರವರಿಂದ ಖಂಡಿತವಾದ ಹುಕುಂ ಯಾವದೂ ಬಾರದೆ ಒರುವಕಾರಣ ಪ್ರತಿ ಕ್ಷಣದಲ್ಲಿಯೂ ಅವರು ಅದನ್ನೇ ಅತ್ಯಾಸಕ್ತಿಯೊಡನೆ ನಿರೀಕ್ಷಿಸುತ ಲಿದಾರೆಂದು ಕೇಳುತ್ತೇವೆ. ಮ||ಕ್ಯಾಫರ್ಖಯವರು ಸ್ವಭಾವತಃ ಸಾತ್ವಿಕರಾಗಿಯೂ, ದೊಡ್ಡ ಮನುಷ್ಯರಾಗಿಯೂ, ದೊಡ್ಡ ಸಂಸಾರಿಯಾಗಿಯೂ, ಕನ್ನಡ ಚೆನ್ನಾಗಿಬಲ್ಲವರಾಗಿಯೂ, ಅನುಭವಶಾಲಿಯಾಗಿಯೂ ಯಿರುವದರಿಂದ ಇವರೊಬ್ಬರನ್ನು ಇನ್ನೂ ಕೆಲವುಕಾಲ ನೌಕರಿಯೊಳು ಉಳಿಸಿಕೊಳ್ಳುವದರಿಂದ ಸಂಸ್ಥಾನಕ್ಕೆ ವಿಶೇಷ ನಷ್ಟವುಂಟಾಗಲಾರದು. ಇವರ ವಿಷಯದಲ್ಲಿ ದಿವಾನರವರು ಪ್ರಸನ್ನ ಹೃದಯರಾಗಿ ರಕ್ಷ ಉಪಕಾರವನ್ನುಮಾಡಿ ಕೆಲವು ಕಾಲವತನಕ ನೌಕರಿಯೊಳಟ್ಟಿರಬೇಕೆಂದು ಕೋರುವೆವು.

— —

The Chief Court of Mysore, and the Civil Court C & M. S.—ಇಲ್ಲಿನ ಚೀಪ್ ಕೋರ್ಟಿ ಚೀಪ್ ಜೆಡ್ಜಿಯರಾದ ಮೆ|| ಫ್ರ್ಯಾಮರ್ ಯವರೂ, ಸಿವಿಲ್ ವ ಮಿಲಿಟರಿ ಸ್ಟೇಷನಿನ ಸಿವಿಲ್ ಜೆಡ್ಜಿಯರಾದ ಕರ್ನಲ್ ಹಿಲ್‌ಯವರೂ, ಫರ್ಲೋ ರಜಾದಮೇಲೆ ಇಂಗ್ಲಾಂಡಿಗೆ ಹೋಗುವರೆಂತಲೂ ಈ ಇಬ್ಬರಿಗೆ ಬದಲಾಗಿ ಪ್ರಸಿದ್ಧರಾದ ಬೇರೆ ಇಬ್ಬರು ಆಫಿಸರರು, ಅಕ್ಟಿಂಗ್ ತರೀಕ ಮೊಕರರ್ಮಾಡಲ್ಪಡುವರೆಂತಲೂ ಸಂಬತಕ್ಕವರ ಮೂಲಕ ತಿಳಿಯಬರುವಂತೆ ಈಚಿಗೆ ಒಳದೇಶದ ಡೆಯಿಲೀಪ್ರೋಗ್ರೆಸ್ ಪತ್ರಿಕೆ ತಿಳಿಸಿತು. ಸದರಿ ಸದರೀಪತ್ರಿಕೆಯವಾರ್ತೆ ನಿರಾಧಾರವಾದ್ದೆಂದು ನಾವುಬಲ್ಲೆವು. ಯಾತಕ್ಕೆಂದರೆ,—ಕರ್ನಲ್ ಹಿಲ್ ಯವರುಫರ್ಲೋರಜಾಪಡೆದುಇಂಗ್ಲಾಂಡಿಗೆಹೋಗಿ ವಾಪಸ್ ಬಂದದ್ದು ಸುಮಾರ್ ಒಂದು ಸಂವತ್ಸರಕ್ಕಿಂತ ಮೇಲ್ಪಟ್ಟಿಲ್ಲವು. ಮೆ. ಫ್ರ್ಯಾಮರ್‌ಯವರು ಫರ್ಲೋ ರಜಾ ಪಡೆಯಲಿಕ್ಕೆ ಇನ್ನೂ ಆಯವಾಗಿಲ್ಲವು ಮೇಲೆಕಂಡ ಅಂಶವನ್ನು ನಮಗೆ ಬದಲಾಗಿ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಯೇ ಖಂಡಿಸ ಲೆತ್ನಿಸಿದ್ದರಿಂದ ಅದರ ವಾಕ್ಯವನ್ನಿಲ್ಲಿ ಅನುವಾದಮಾಡುವವೆಂತನೆ—ಒಬ್ಬ ಬಾತಮೀದಾರನು ಬರೆಯುತ್ತಾನೇನಂದರೆ. ಡೆಯಿಲೀಪ್ರೋಗ್ರೆಸ್‌ಪತ್ರಿಕೆಯು ಮೈಸೂರು ಚೀಪ್‌ಜೆಡ್ಜಿಯರಾದ ಮೆ||ಫ್ರ್ಯಾಮರ್‌ಯವರಿಗೂ, ಸಿವಿಲ್ ವ ಮಿಲಿಟರಿ ಸ್ಟೇಷನಿನ ಸಿವಿಲ್ ವ ಸೆಷನ್ಸ್ ಜಡ್ಜಿಯರಾದ ಕರ್ನಲ್ ಹಿಲ್‌ಯವರಿಗೂ ಧಾರಾಳವಾಗಿ ಫರ್ಲೋ ರಜಾಕೊಟ್ಟು ಅವರಿಗೆ ಬದಲಾಗಿ ಪೋಲೀಸ್ ವ ಫಾರೆಸ್ಟ್ ಇನ್ಸ್‌ಪೆಕ್ಟರ್‌ಜನರಲಾದ ಮೆ|| ರಿಕ್ಕೆಟ್ಸ್ ಯವರನ್ನೂ, ಮಿಲಿಟರಿ ಸ್ಟೇಷನಿನ ಡಿ|| ಮ್ಯಾಜಿಸ್ಟ್ರೇಟರಾದ ಮೇಜರ್ ಮಾಲ್ಟಿಬೀ ಯವರನ್ನೂ ಮೊಕರರ್ಮಾಡಿತು. ಮೆ|| ಫ್ರ್ಯಾಮರ್‌ಯವರಾಗಲಿ, ಕರ್ನಲ್ ಹಿಲ್‌ಯವರಾಗಲಿ, ಫರ್ಲೋರಜಾ ಅಪೇಕ್ಷಿಸಿದವರಲ್ಲವು, ಮತ್ತು ಆರೀತಿಹೋಗಬೇಕೆಂಬ ಕೋರಿಕೆಯು ಅವರಿಗೆ ಸದ್ಯಃ ಇಲ್ಲವೆಂದು ತಿಳಿಸುವ ಈಮಾತನ್ನು ಕೇಳಿ ಸದರೀಪತ್ರಿಕೆಯು ಆಶ್ಚರ್ಯ ಪಡದಿರುವದೆ?

CORRESPONDENCE.

ಇದರಡಿಕಂಡ ಕಾಗದಗಳಲ್ಲಿ ತೀರಲ್ಪಟ್ಟಿರುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲವು —ಎಡಿ ಕ. ಪ್ರ

ಮ||ರಾ||ಕರ್ನಾಟಕಪ್ರಕಾಶಿಕಾ ಎಡಿಟರವರಸ||ಕ್ಕೆ.

ಅಯ್ಯಾ—ಶಾಸ್ತ್ರಸಂಜೀವಿನೀ ಪತ್ರಿಕಾಲೇಖಕರು ಶುಕ್ಲ ಯಜುಶ್ಶಾಖಿಗಳ ಮನೆಯಲ್ಲಿ ಪ್ರಾಯಶಃ ನಿಯಮಸ್ಥರು ಭೋಜನ ಮಾಡತಕ್ಕ ಪದ್ಧತಿ ಎಲ್ಲವೆಂದು ಶಾಸ್ತ್ರವಿರುದ್ಧವಾಗಿ ಪ್ರಕಟಿಸಿರುವದರಿಂದ ಹಾಗೆ ಪ್ರತಿಪಾದಿಸುವ ಶಾಸ್ತ್ರವನ್ನು ಬರೆಯಬೇಕೆಂದು ಪಾಪಿದೆ ನಿತಿ ಶಾಸ್ತ್ರಸಂಜೀವಿನೀಯವರಿಗೆ ಬರೆದಿರುವ ಯೆರಡು ಕಾಗದಗಳಿಗೂ ಅವರು ಉತ್ತರವನ್ನು ಕೊಡಲಿಲ್ಲವಾದದರಿಂದ ಈ ಕಾಗದಗಳನ್ನು ಪ್ರಕಟಿಸತಕ್ಕಬಗ್ಯೆ ತಮ್ಮ ಬಳಿಗೆ ಕಳುಹಿಸಿರುತ್ತೇನೆಯಾಗಿ ಅವು ತಮ್ಮ ಪೇಪರ್‌ನಲ್ಲಿ ಪ್ರಕಟಿಸಬೇಕೆಂದು ಕೋರುತ್ತೇನೆ.

ದಕ್ಷಿಣಾಮೂರ್ತಿಶಾಸ್ತ್ರಿಗಳವರಿಗೆ-ಶಿವಗಂಗೆ ಗುರುಮೂರ್ತಿಭಟ್ಟಕೃತ ನಮಸ್ಕಾರಃ.

ಸನ್ ೧೮೮೬ನೇ ಇಸವಿ ಜನವರಿ ತಿಂಗಳ ಶಾಸ್ತ್ರಸಂಜೀವಿನೀ ಸಂಚಿಕೆಯಲ್ಲಿ, ಅಡಿಗೆ ಸಿದ್ಧವಾದ ಬಳಿಕ ಬರುವದಿಲ್ಲವೆಂದು ಶಿವಗಂಗೆ ಗುರುಗಳು ಹೇಳದಂತೆ ಪ್ರಥಮಶಾಖಾ ನ್ಯಾಯನಿರ್ಣಯವೆಂಬ ಪುಸ್ತಕದಲ್ಲಿ ಛಾಪಿಸಿ ಇದ್ದಂತೆಯೂ, ಶುಕ್ಲ ಯಜುಶ್ಶಾಖಿಗಳ ಮನೆಯಲ್ಲಿ ಪ್ರಾಯಶಃ ನಿಯಮಸ್ಥರು ಭೋಜನ ಮಾಡುವ ಪದ್ಧತಿ ಇಲ್ಲವೆಂತಲೂ, ಶಾಸ್ತ್ರವಿರುದ್ಧವಾಗಿ ಪ್ರಕಟಿಸಿರುವದಕ್ಕೆ ಮಾರ್ಚಿ ತಿಂಗಳ ೭ನೇ ತಾರೀಖಿನ ಕರ್ಣಾಟಕ ಪ್ರಕಾಶಿಕಾ ಯಲ್ಲಿ ಪ್ರಕಟಿಸಿರುವ ಅಂಶಗಳು ವಿಪ್ರ ರಾಜನರಿಗೂ ತಮಗೂ ಆ ಪತ್ರಿಕೆಯಿಂದ ತಿಳಿದಿರಬಹುದು. ತಾವು ಪ್ರಕಟಿಸಿರುವ ಅಂಶಗಳಿಗೆ ೭ನೇ ಪ್ರತ್ಯುತ್ತರವಾಗಿ ತಿಳಿಯಪಡಿಸುವದೇನಂದರೆ-

ಆಪಸ್ತಂಬ ಧರ್ಮಸೂತ್ರದಲ್ಲಿ ೭ನೇ ಪ್ರಶ್ನೆಯ ೧೭ನೇ ಖಂಡದಲ್ಲಿ ವೇದಾಧ್ಯಾಯಿಃ, ಅನೂಚಾನಪುತ್ರಃ, ಶ್ರೋತ್ರಿಯಃ, ಇತ್ಯಾದಿ ಶಬ್ದಗಳಿಂದ ಋಗ್ವೇದಿ ಪ್ರಥಮಶಾಖಿ ತೈತ್ತಿರೀಯಾದಿ ಬ್ರಾಹ್ಮಣರಿಗೆ ಶ್ರಾದ್ಧದಲ್ಲಿ ಭೋಜನ ಯೋಗ್ಯತ್ವವನ್ನು ಹೇಳಿರುವದಲ್ಲದೆ ವಿಶೇಷಾಕಾರವಾಗಿ ತ್ರಿನಾಚಿಕೇತಿ ಶಬ್ದದಿಂದ ತೈತ್ತಿರೀಯರಿಗೂ ಪ್ರಥಮಶಾಖಿಗಳಿಗೂ ನಿಮಂತ್ರಣಕ್ಕೆ ಹೇಳಬೇಕೆಂದು ಆಪಸ್ತಂಬರಿಂದಲೂ ಆ ಸೂತ್ರಭಾಷ್ಯಕಾರರಿಂದಲೂ ಹೇಳಲ್ಪಟ್ಟದೆ.

ಇದೇಪ್ರಕಾರವಾಗಿ ಗೌತಮ ಧರ್ಮಸೂತ್ರದಲ್ಲಿ ೭ನೇ ಪಾಠ ೧೫ನೇ ಖಂಡದಲ್ಲಿ, ಪದಂಗವಿತ್, ಸ್ನಾತಕಃ, ಮಂತ್ರಬ್ರಾಹ್ಮಣವಿತ್, ಧರ್ಮಜ್ಞಃ, ಬ್ರಹ್ಮದೇಯಾನುಸಂತಾನಃ, ಎಂಬುವದು ಮೊದಲಾದ ಸಾಮಾನ್ಯಶಬ್ದಗಳಿಂದ ಶುಕ್ಲಯಜುಶ್ಶಾಖಿ ತೈತ್ತಿರೀಯಾದಿ ಸರ್ವಶಾಖಾ ಬ್ರಾಹ್ಮಣರಿಗೂ ಸಮಾನತೆಯಾ ಶ್ರಾದ್ಧ ನಿಮಂತ್ರಣ ಯೋಗ್ಯತ್ವವು ಹೇಳಲ್ಪಟ್ಟಿರುವದಲ್ಲದೆ ತ್ರಿನಾಚಿಕೇತವೆಂಬ ವಿಶೇಷ ಪದದಿಂದ ಶುಕ್ಲಯಜುಶ್ಶಾಖಿಗಳೂ ತೈತ್ತಿರೀಯರೂ ಸಮಾನತೆಯಾ ಶ್ರಾದ್ಧ ನಿಮಂತ್ರಣಕ್ಕೆ ಯೋಗ್ಯರೆಂದು ಗೌತಮರಿಂದಲೂ ಆ ಧರ್ಮಸೂತ್ರ ಭಾಷ್ಯಕಾರರಾದ ಮಸ್ಕರೀಯೆಂಬವರಿಂದಲೂ ಹೇಳಲ್ಪಟ್ಟಿದೆ.

ಈಪ್ರಕಾರವಾಗಿಯೇ ಪರಾಶರ ಮಾಧವೀಯದಲ್ಲಿ ಉದಹರಿಸಿರುವ ಯಾಜ್ಞವಲ್ಕ್ಯ ಸ್ಮೃತಿ ವಚನದಲ್ಲಿಯೂ, ಬೋಧಾಯನ ಧರ್ಮಸೂತ್ರದಲ್ಲಿಯೂ, ಶಾತಾತಪಸ್ಮೃತಿವಚನದಲ್ಲಿಯೂ, ಯಮಸ್ಮೃತಿವಚನದಲ್ಲಿಯೂ, ಮನುಸ್ಮೃತಿ ವಚನದಲ್ಲಿಯೂ, ವಸಿಷ್ಠಸ್ಮೃತ್ಯಾದಿಗಳಲ್ಲಿಯೂ, ಸಾಮಾನ್ಯ ಶಬ್ದಗಳಿಂದಲೂ, ವಿಶೇಷಶಬ್ದದಿಂದಲೂ, ಪ್ರಥಮಶಾಖಿ ತೈತ್ತಿರೀಯ ಸಾಮಗಾದಿ ಸರ್ವಬ್ರಾಹ್ಮಣರಿಗೂ ಪಙ್ಕ್ತಿ ಪಾವನತ್ವವೂ ಶ್ರಾದ್ಧ ಭೋಜನ ಯೋಗ್ಯತ್ವವೂ ಹೇಳಲ್ಪಟ್ಟಿರುವದಲ್ಲದೆ ಆಯಾ ಸೂತ್ರಸ್ಮೃತಿ ಭಾಷ್ಯ ವ್ಯಾಖ್ಯಾನಕಾರರಾದ ಮಾಧವಾಚಾರ್ಯ ವಿಜ್ಞಾನೇಶ್ವರಾದಿಗಳಿಂದಸಹ ಹೇಳಲ್ಪಟ್ಟದೆ. ಮತ್ತು ಮೇಲೆಕಂಡ ಆಪಸ್ತಂಬ ಗೌತಮ ಮನು ಪರಾಶರ ಯಾಜ್ಞವಲ್ಕ್ಯಸ್ಮೃತಿಸೂತ್ರಗಳಲ್ಲಿ ಪಂಚಾಗ್ನಿಃಯೆಂಬ ಶಬ್ದದಿಂದ ಆಯಾ ಸೂತ್ರ ಸ್ಮೃತಿ ಭಾಷ್ಯ ವ್ಯಾಖ್ಯಾನಗಳಲ್ಲಿ ಪಂಚಾಗ್ನಿ ವಿದ್ಯೆಯುಳ್ಳ ಪುರುಷರು ಹೇಳಲ್ಪಟ್ಟಿರುತ್ತಾರೆ. ಶುಕ್ಲಯಜುರ್ವೇದದಲ್ಲಿಯೂ ಸಾಮವೇದದಲ್ಲಿಯೂ ಪಂಚಾಗ್ನಿ ವಿದ್ಯೋಪಾಸನೆಯು ಇರುವದ್ದರಿಂದ ಆಯಾ ಶಾಖಾವ್ಯವಸ್ಥಾ ವಿಕಲ್ಪದಿಂದ ಹೇಳಲ್ಪಟ್ಟ ಪಂಚಾಗ್ನಿ ವಿದ್ಯೋಪಾಸನವುಳ್ಳ ಶುಕ್ಲ ಯಜುಶ್ಶಾಖಿಗಳಿಗೂ ಸಾಮಗರಿಗು ಸಹ ನಿಮಂತ್ರಣಕ್ಕೆ ಹೇಳಬೇಕೆಂದು ಮೇಲೆ ಕಂಡ ಆಪಸ್ತಂಬಾದಿಗಳು ಹೇಳರುತ್ತಾರೆ. ಏವಂಚ ಯೆಲ್ಲಾ ಸೂತ್ರಗಳಲ್ಲಿಯೂ ಯೆಲ್ಲಾಸ್ಮೃತಿಗಳಲ್ಲಿಯೂ ಪರಾಶರ ಮಾಧವೀಯ ಮೊದಲಾದ ಯೆಲ್ಲಾ ನಿಬಂಧನ ಗ್ರಂಥಗಳಲ್ಲಿಯೂ ಶುಕ್ಲ ಯಜುಶ್ಶಾಖಿಗಳಾದ ಬ್ರಾಹ್ಮಣರಿಗೆ ಶ್ರೇಷ್ಠವಾದ ಶ್ರಾದ್ಧದಲ್ಲ ನಿಮಂತ್ರಣಕ್ಕೆ ಹೇಳಬೇಕೆಂದು ಹೇಳಿರುವಾಗ್ಯೆ ಅನ್ಯವಾದ ಭೋಜನ ಪ್ರತಿಭೋಜನಾದಿ ವಿಷಯಗಳಲ್ಲಿಹೇಳತಕ್ಕದ್ದೇನು. ಶಾಸ್ತ್ರ ಸಂಜೀವಿನೀಯವರು ಅಂದರೆ ಶಾಸ್ತ್ರಾರ್ಥವನ್ನು ವೃದ್ಧಿ ಪಡಿಸತಕ್ಕಂಥಾವರಾದವರು ಮೇಲೆಕಂಡ ಶಾಸ್ತ್ರಾರ್ಥವನ್ನು ಗ್ರಹಿಸದೆ ಶುಕ್ಲ ಯಜುಶ್ಶಾಖಿಗಳ ಮನೆಯಲ್ಲಿ ಪ್ರಾಯಶಃ ನಿಯಮಸ್ಥರು ಭೋಜನಮಾಡುವ ಪದ್ಧತಿಯಿಲ್ಲವೆಂದು ಸರ್ವಶಾಸ್ತ್ರ ವಿರುದ್ಧವಾಗಿ ಪ್ರಕಟಿಸಿರುವದನ್ನು ನೋಡಿದರೆ ಬಹಳ ಆಶ್ಚರ್ಯವಾಗಿರುತ್ತೆ ಆದಾಗ್ಯೂ ಶಾಸ್ತ್ರಾರ್ಥವನ್ನು ವೃದ್ಧಿಪಡಿಸತಕ್ಕಂತಾವರಾದ ತಾವು ಶಾಸ್ತ್ರಾರ್ಥವನ್ನು ಬರೆಯುತ್ತೀರೆಂಬ ಅಭಿಪ್ರಾಯದಿಂದಲೂ ಮೇಲೆ ಕಂಡ ಸೂತ್ರ ಸ್ಮೃತಿಭಾಷ್ಯ ವ್ಯಾಖ್ಯಾನಗಳನ್ನು ಕರ್ನಾಟಕಪ್ರಕಾಶಿಕಾ ಪತ್ರಿಕೆಯಲ್ಲಿ ಪ್ರಕಟಿಸುವದಕ್ಕೆ ಅಸಮ್ಮತವಾದ್ದರಿಂದಲೂ ಬೇರೆ ಕಾಗದದಲ್ಲಿ ಬರೆದು ಇದರೊಡನೆ ತಮಗೆ ಕಳುಹಿಸಿಯಿದೇನೆ. ಅವುಗಳನ್ನು ವಿಚಾರಮಾಡಿ ೮ ದಿವಸಗಳೊಳಗಾಗಿ ಉತ್ತರವನ್ನು ಬರೆಯಬೇಕು. ಈ ಪತ್ರಿಕೆಯನ್ನೂ ತಾವು ಬರೆವಉತ್ತರವನ್ನು ಸಹ ಮೇಲೆಕಂಡ ಪತ್ರಿಕೆಯಲ್ಲಿ ಪ್ರಕಟಿಸುತ್ತೇನೆ

ಈಕಾಗದಕ್ಕೆ ಸದರೀ ಶಾಸ್ತ್ರಸಂಜೀವಿನಿಯವರಿಂದ ಪ್ರತ್ಯುತ್ತರ ಬಾರದೆಯಿದ್ದಕಾರಣ ಅವರಿಗೆ ಇದರಡಿಕಂಡ ಕಾಗದವು ಮರಳಿ ಬರೆಯಲ್ಪಟ್ಟಿತು.

ಸನ್ ೧೮೮೬ನೇ ಇಸವಿ ಜನವರಿ ತಿಂಗಳ ಶಾಸ್ತ್ರಸಂಜೀವಿನೀ ಸಂಚಿಕೆಯಲ್ಲಿ ಶುಕ್ಲ ಯಜುಶ್ಶಾಖಿಗಳ ಮನೆಯಲ್ಲಿ ಪ್ರಾಯಶಃ ನಿಯಮಸ್ಥರು ಭೋಜನ ಮಾಡುವ ಪದ್ಧತಿ ಇಲ್ಲವೆಂದು ಪ್ರಕಟಿಸಿರುವದು ಸರಿಯಷ್ಟೇ. ಸದರೀ ಪ್ರಕಟನೆಯು ಶಾಸ್ತ್ರ ವಿರುದ್ಧವೆಂದು ಏಪ್ರೆಲ್ ತಾರೀಖ್ ೧೯ರಲ್ಲಿ ತಮ್ಮ ಚಿತ್ತಕ್ಕೆ ತಂದಿರುತ್ತೇನೆ, ಮೇಲೆ ಕಂಡ ಕಾಗದದಲ್ಲಿ ನಮೂದಿಸಿರುವ ಶಾಸ್ತ್ರಾರ್ಥಕ್ಕೂ ಮತ್ತು ತಾವು ಪ್ರಕಟಿಸಿರುವ ಪದ್ಧತಿಗೂ ಅನುಕೂಲವಾದ ಯಾವದಾದರು ಶಾಸ್ತ್ರ ಇದ್ದ ಪಕ್ಷದಲ್ಲಿ ೪ ದಿವಸಗಳೊಳಗಾಗಿ ಜವಾಬ್ ಅಪ್ಪಣೆ ಕೊಡಬೇಕೆಂದು ಬೇಡಿಕೊಂಡಿದ್ದೆನು, ಇದುವರಿವಿಗೂ ತಾವು ಜವಾಬ್‌ಬರೆಯಲಿಲ್ಲವು. ತಮ್ಮ ಜವಾಬ್ ಬಾರದೇ ಇರುವದನ್ನುನೋಡಿದರೆ ನಾನು ಬರೆದುಕೊಂಡ ಶಾಸ್ತ್ರಾರ್ಥಕ್ಕೆ ವಿರೋಧವಾಗಿ ನಡೆದುಕೊಳ್ಳತಕ್ಕದ್ದು ತಮಗೆ ಅಸಮ್ಮತವಾಗಿದ್ದಂತೆ ತಿಳಿಯಬರುತ್ತೆ ಹಾಗಿದ್ದಪಕ್ಷದಲ್ಲಿಶಾಸ್ತ್ರವಿರುದ್ಧಪದ್ಧತಿಗೆ ತಾವು ಮನಸ್ಸುಕೊಡದೆ ಶಾಸ್ತ್ರ ಸಮ್ಮತವಾದ ಆಚರಣೆಯ ವಿಷಯದಲ್ಲಿ ತಿಳುವಳಿಕೆಪತ್ರವನ್ನು ಅಪ್ಪಣೆಕೊಡಿಸಬೇಕು. ಶಾಸ್ತ್ರವಿರುದ್ಧಪದ್ಧತಿಯನ್ನು ತಮ್ಮ ಶಾಸ್ತ್ರಸಂಜೀವಿನಿಯಲ್ಲಿ ಜನರ ತಿಳುವಳಿಕೆಬಗ್ಯೆ ಪ್ರಕಟಿಸಿರುವದರಿಂದ ಸದರೀ ಪದ್ಧತಿಯನ್ನು ಅಜ್ಞರು ಆಚರಿಸಿದ ಪಕ್ಷದಲ್ಲಿ ಪಾಪಕ್ಕೆ ಗುರಿಯಾಗುತಾರಾದಕಾರಣ ಈ ವಿಷಯದಲ್ಲಿ ಶಾಸ್ತ್ರೋಕ್ತ ಧರ್ಮಾಚರಣೆಯನ್ನು ಜನರ ತಿಳುವಳಿಕೆಗೆ ತರತಕ್ಕದ್ದು ಆವಶ್ಯಕವಾದದರಿಂದ ತಮ್ಮ ಉತ್ತರವನ್ನಾಗಲಿ, ನಾನು ತಮಗೆ ಬರೆದ ಕಾಗದವನ್ನಾಗಲಿ, ಪ್ರಕಟನಪತ್ರಿಕೆಯಲ್ಲಿ ಪ್ರಸಿದ್ಧಪಡಿಸತಕ್ಕದ್ದು ಆವಶ್ಯಕವಾಗಿರುತಿದೆ. ಈ ಕಾಗದ ಕಂಡಕೂಡ್ಲೆ ೩ ದಿವಸಗಳೊಳಗಾಗಿ ಜವಾಬ್ ಅಪ್ಪಣೆ ಕೊಡಬೇಕೆಂದು ಕೋರುತ್ತೇನೆ. ಆಬಳಿಕ ಪೂರ್ವದ ಕಾಗದವೂ ಇದೂ ಪ್ರಕಟಿಸಲ್ಪಡುವವು. ತಮ್ಮಂತಾ ವಿದ್ವಾಂಸರಿಗೆ ಬರೆಯತಕ್ಕದ್ದೇನಿರುತ್ತೆ, ಇತಿ ನಮಸ್ಕಾರಃ.

ತಾ||೨೮ನೇ ಏಪ್ರಿಲ್, ೧೮೮೬

ಗುರುಮೂರ್ತಿಭಟ್ಟ.

TELEGRAPHIC SUMMARY.
ತಂತಿವೃತ್ತಾಂತ ಸಂಗ್ರಹವು.

ಪಾದಿಹಾಲ್ಫಾ, ೮ನೇ ಮೇ—ಡಾಂಗೋಲಾಯೆಂಬ ಪ್ರದೇಶದಿಂದ ಈಚೆಗೆ ಬಂದ ವೃತ್ತಾಂತ ದಮೂಲಕ, ಬಹುಮಂದಿ ಮಹದೀಜನಗಳು ಅಲ್ಲಿ ಗುಂಪುಗೂಡುತಲಿದಾರೆಂದು ತಿಳಿಯಬರುತಿದೆ.

ಫಿಲಡೆಲ್ಫಿಯಾ ತಾ|| ೫ನೇ ಮೇ—ನಿನ್ನೆಯದಿನ ರಾತ್ರಿ ಇಲ್ಲಿ ಸೋಷಿಯಾ ಲಿಸ್ಟಜನಗಳ ದೊಡ್ಡ ಸಭೆಯೊಂದು ಸೇರಿತು, ಆ ಕಾಲದಲ್ಲಿ ಹದಿನೈದು ಸಾವಿರಮಂದಿಗಿಂತ ಜಾಸ್ತಿಯಾಗಿ ಹಾಜರಿದ್ದರು. ಈಚೆಗೆ ಇಲ್ಲಿ ನಡೆದ ಕಲಹಕ್ಕೆ ಸದರೀ ಸೋಷಿಯಾಲಿಸ್ಟ ಜನಗಳು ಪ್ರೇರಕರೆಂಬದಾಗಿ ಇಲ್ಲಿನ ಅಧಿಕಾರಿಗಳಿಗೆ ತಿಳಿಯಬಂದದ್ದರಿಂದ ಅವರು ಸದರೀ ಸಮಾಜವನ್ನು ನಿಲ್ಲಿಸ ತಕ್ಕಬಗ್ಯೆ ಕೂಡಲೇ ಬೇಕಾದ ಏರ್ಪಾಡುಗಳನ್ನೆಲ್ಲ ಮಾಡಿ ಪೋಲೀಸಿನವರನ್ನು ಕರೆಯಿಸಿ ಜನಗಳನ್ನೆಲ್ಲ ಓಡಿಸಿಬಿಟ್ಟರು. ಸದರಿ ಮೊದಲು ಪೋಲೀಸಿನವರು ಬಲಾತ್ಕರಿಸಿದಾಗ ಜನಗಳು ಅವರ ಮಾತನ್ನುಧಿಕ್ಕರಿಸಿಬಿಡಲು ಕೂಡಲೇ ಅದು ಪ್ರಬಲ ಲಹರೂಪವಾಗಿ ಪರಿಣಮಿಸಿತು. ಆಗಪೋಲೀಸ ನವರನ್ನು ಅಲ್ಲಿನಜನಗಳು ಗೋಲಿಗಳಿಂದ ಹೊಡೆಯಲಿಕ್ಕೆ ಉಪಕ್ರಮಿಸಲುಅವರಲ್ಲೈಕೆ ೫೦ಮಂದಿ ಮೃತಪಟ್ಟರು, ಅನೇಕರಿಗೆ ಪ್ರಾಣಹಾನಿಯಾಯಿತು. ಕಲಹಿಗಳಕಡೆ೬೦ಮಂದಿಮೃತಪಟ್ಟರು.

ಸುವಾಕಿಂ ತಾ|| ೫ನೇ ಮೇ—ಮುಂದೆ ಇಲ್ಲಿ ಖಾಯಮಾಗಿ ಇಟ್ಟಿರತಕ್ಕದ್ದೆಂದು ನಿಶ್ಚಯ ಯಾಗಿರುವ ಈಜಿಪ್ಟಸೈನ್ಯಗಳು ಇಲ್ಲಿಗೆ ಬಂದುಸೇರಿದವು. ಇಲ್ಲಿದ್ದ ಮದರಾಸ್ ರಿಜಿಮೆಂಟ್ ಈದಿನ ಹಿಂದ್ಯದೇಶಕ್ಕೆ ಹೊರಟಿತು.

ಲಂಡನ್ ೫ನೇ ಮೇ—ಈಸ್ಟರ್ ಹಬ್ಬದ ಬಗ್ಯೆ ಬರಖಾಸ್ತಾಗಿದ್ದ ಪಾರ್ಲಿಮೆಂಟ್ ಸಮಾಜವು ಮರಳಿಸೇರಿತು ನಿನ್ನೆಯರಾತ್ರಿ ಸೇರಿದ್ದ ಹೌಸಾಫ್ ಕಾಮನ್ಸ್ ಸಮಾಜದಲ್ಲಿ ಸರ್. ಜೆ ಪೀಸ್ ಯೆಂಬವರು ಇಂಡ್ಯಗವರ್ನಮೆಂಟಿನವರಿಂದ ನಡೆಸಲ್ಪಡುತಲಿರುವ ಅಫೀಂ ಸಾಗುವಳೀ ತಯಾರಿ, ಮತ್ತು ಅದರವ್ಯಾಪಾರಗಳನ್ನು ನಿಲ್ಲಿಸಬೇಕೆಂದು ತಿಳಿಸಿದರು. ಇಂಡ್ಯದೇಶದ ಅಂಡರ್ ಸ್ಟೇಟ್ ಸೆಕ್ರೆಟೇರಿಯವರಾದ ಮೆ|| ಸ್ಟ್ಯಾಫರ್ಡ್ ಹಾವರ್ಡ್ ಯೆಂಬವರು ಸದರೀ ಅಭಿಪ್ರಾಯವನ್ನು ನಿಷೇಧಿಸಿ ತಿಳಿಸಿದರೇನಂದರೆ,—ಮೇಲೆ ತಿಳಿಸಲ್ಪಟ್ಟಂತೆ ನಡೆಸುವಪಕ್ಷಕ್ಕೆ ಇಂಡ್ಯದೇಶದ ಹುಟ್ಟುವಳಿಯು ಕಡಮೆಯಾಗುವದೇ ಅಲ್ಲದೆ ಲಕ ಪ್ರಯೋಜನವು, ಮತ್ತು ನೇಟವ್ ಸಂಸ್ಥಾನಾಧಿಪತಿಗಳೊಡನೆ ನಡೆದಿರತಕ್ಕ ತಹಾನಾಮೆಗಳ ವಿಷಯದಲ್ಲಿ ಮರಳಿ ಪ್ರವೇಶಿಸಬೇಕಾಗುವದಾಗಿ ಅದರಿಂದ ಸುಮಾರ್ ಒಂದುಕೋಟಿ ಹತ್ತುಲಕ್ಷ ರೂಪಾಯಿಗಳತನಕ ಕಂಪೆನ್‌ಸೇಷನ್ ಕೊಡಬೇಕಾಗುವದು ಎಂಬದು. ತರುವಾಯ ಸಾಮಾಜಿಕರು ಈ ವಿಚಾರವನ್ನು ನಿಲ್ಲಿಸಿಬಿಟ್ಟರು.

ನಿನ್ನೆಯದಿನ ಹೌಸಾಫ್ ಕಾಮನ್ಸ್‌ಸಮಾಜದಲ್ಲಿ ಮೆ|| ಗ್ಲ್ಯಾಡಸ್ಟನ್‌ಯವರು ಒಂದಂಶಕ್ಕೆ ಜವಾಬ ಹೇಳುವಾಗ್ಯೆ ತಿಳಿಸಿದರೇನಂದರೆ—ದೊಡ್ಡ ಸಂಸ್ಥಾನಾಧಿಪತಿಗಳ ತೀರ್ಮಾನಕ್ಕೆ ಪ್ರತ್ಯುತ್ತರಕೊಡುವಬಗ್ಯೆ ಗ್ರೀಸ್‌ಸಂಸ್ಥಾನದವರಿಗೆ ಕೊಡಲ್ಪಟ್ಟದ್ದ ಅವಧಿಯು ಪೂರೈಸಿತು. ನಿರಾಯುಧರಾಗತಕ್ಕ ವಿಷಯದಲ್ಲಿ ಗ್ರೀಸ್‌ಸಂಸ್ಥಾನದವರಿಂದ ಇದುವರಿವಿಗೆ ನಿಶ್ಚಯವಾದ ಪ್ರತ್ಯುತ್ತರ

ಹಿಂದೂ ಬರಲಿಲ್ಲವು. ಈ ವಿಷಯದಲ್ಲಿ ಅವರು ಹಿಂದೆ ಕೊಟ್ಟ ಜವಾಬ ಸಾಲದ್ದಾಗಿಯೂ ಅತೃಪ್ತಿಕರವಾದ್ದಾಗಿಯೂ ಯಿದೆ.

ಲಂಡರ್, ೫ನೇ ಮೇ, ಮಧ್ಯಾಹ್ನಾತ್ಪರ—ಈ ದಿನ ದೊಡ್ಡ ಸಂಸ್ಥಾನಾಧಿಪತಿಗಳು, ಸಾಮುದಾಯಕವಾದ ಮತ್ತೊಂದು ಹೊಸಕಾಗದವನ್ನು ಗ್ರೀಸ್‌ಸಂಸ್ಥಾನಕ್ಕೆ ಕಳುಹಿಸುವರು.

ಫಿಲಡೆಲ್ಫಿಯಾ, ತಾ|| ೬ನೇ ಮೇ—ಸೋಷಿಯಾಲಿಸ್ಟು ಜನಗಳ ದಾಂಧಳೆಯನ್ನು ನಿರೋಧಿಸತಕ್ಕಬಗ್ಗೆ ಅಮೆರಿಕಾವಿನಲ್ಲಿ ಸರ್ವತ್ರ ಖಾಡಿತವಾದ ಏರ್ಪಾಡುಗಳು ನಡೆಸಲ್ಪಡುತಿವೆ

ಅಥೆನ್ಸ್, ತಾ|| ೭ನೇ ಮೇ, ಪ್ರಾತಃಕಾಲ—ದೊಡ್ಡ ಸಂಸ್ಥಾನಾಧಿಪತಿಗಳು ಸಾಮುದಾಯಕವಾಗಿ ಕಳುಹಿಸಿದ ಕಾಗದಕ್ಕೆ ಗ್ರೀಕ್‌ಸಂಸ್ಥಾನದವರು ತಾವು ಯಾವ ಸಮಾಧಾನವನ್ನೂ ತಿಳಿಸುವದಿಲ್ಲವೆಂಬದಾಗಿ ಪ್ರತ್ಯುತ್ತರಕೊಟ್ಟರು. ಅನ್ಯ ಸಂಸ್ಥಾನಾಧಿ ಪತಿಗಳ ತರಫ್ ಬಂದಿದ್ದ ಮಂತ್ರಿಗಳೆಲ್ಲರೂ ಈದಿನ ಅಥೆನ್ಸ್‌ನಿಂದ ಹೊರಡುವರು ಸರಹದ್ದು ಪ್ರಾಂತದಲ್ಲಿ ಗ್ರೀಕ್‌ಸೈನ್ಯವು ಜಮಾಯಿಸುತಲಿದೆ.

ಲಂಡನ್, ೭ನೇ ಮೇ-ನಿನ್ನೆಯದಿನರಾತ್ರಿ ಪ್ರಧಾನಮಂತ್ರಿಯವರು ಒಂದಂಶಕ್ಕೆ ಜವಾಬಹೇಳುವಾಗ್ಯೆ, ಸಂಸ್ಥಾನಾಧಿಪತಿಗಳ ಸಾಮುದಾಯಕವಾದ ಕಾಗದಕ್ಕೆ ಗ್ರೀಕ್‌ಸರ್ಕಾರದವರು ಕೊಡತಕ್ಕಜವಾಬ ಸಾಲದ್ದಾಗಿರುವದಾದರೆ ದೊಡ್ಡ ಸಂಸ್ಥಾನಾಧಿಪತಿಗಳ ಉದ್ದೇಶವನ್ನು ನೆರವೇರಿಸಿಕೊಳ್ಳತಕ್ಕಬಗ್ಗೆ ಕೂಡಲೇ ತಕ್ಕ ಏರ್ಪಾಡುಗಳು ಮಾಡಲ್ಪಡುವದೆಂಬದು.

ಐರ್ಲ್ಯಾಂಡ್ ರಾಜ್ಯದ ಚೀಫ್ ಸೆಕ್ರಟೆರಿಯಾದ ಮೆ|| ಜಾರ್ನ್ ಮಾರ್ಲೀಎಂಬವರು, ಆರುಸ್ ಆಕ್ಟನ್ನು ಹಂಗಾಮಿಯಾಗಿ ಇಟ್ಟರತಕ್ಕಬಗ್ಗೆ ತಯಾರ್ಮಾಡಲ್ಪಟ್ಟ ಒಂದು ಮಸವಿದಾವನ್ನು ಹೌಸಾಫ್‌ಕಾಮನ್ಸ್ ಸಾಮಾಜಿಕರಮುಂದಿಟ್ಟರು.

EXTRACTS.

ಜಪಾನದೊಳಗಿನ ಬೌದ್ಧಮತಸ್ಥರು ಬುದ್ಧಧರ್ಮೋಪದೇಶವನ್ನು ಮಾಡುವದಕ್ಕೋಸ್ಕರ ಯೂರೋಪ್ ಅಮೇರಿಕಾ ಖಂಡಗಳಿಗೆ ಕೆಲವು ಧರ್ಮಾಧ್ಯಕ್ಷರನ್ನು ಕಳುಹಿಸಬೇಕೆಂದಿದಾರಂತೆ.

ಕಲಘ್ಗಿ ತಾಲ್ಲೂಕ ಮುಕ್ಕಲ್ಲ ಎಂಬದರಲ್ಲಿ ಒಂದು ಆಕಳ ಬೆನ್ನಿನಮೇಲೆ ೧ ಕುದರೆಯ ಕಾಲೂ, ೩ ಕಾಲುಗಳೂ, ಹೊಟ್ಟೆಯಕೆಳಗೆ ಮೊಲೆಯೂ, ಬಾಲವೂ ಕೂಡಿದ್ದ ಒಂದು ವಿಚಿತ್ರವಾದ ಕರುವನ್ನು ಈದಿತೆಂತಲೂ, ಹುಟ್ಟಿದ ಕೆಲವು ಘಂಟೆಗಳೊಳಗಾಗಿ ಆಕಳೂ ಕರವು ಸಹ ಸತ್ತುಹೋದವೆಂತಲೂ ತಿಳಿಯಬರುತಿದೆ.

ಈಗ ಪದಭ್ರಷ್ಟರಾಗಿ ಇಂಗ್ಲಿಷ್ ಗವರ್ನ್‌ಮೆಂಟಿನವರ ಅಧೀನದೊಳು ನಿರ್ಬಂಧದಲ್ಲಿರುವ ಥೀಬಾ ಅರಸರು ಮೊದಲುಗೊಂಡು ಬರ್ಮಾದೇಶದಲ್ಲಿ ಇದುವರಿವಿಗೆ ೫,೪೭೭೦೧ ಅರಸರು ರಾಜ್ಯಭಾರ ಮಾಡಿದರೆಂದು ಪ್ರಾಚೀನ ಲೇಖನಗಳಿಂದ ಗೊತ್ತಾಗುತದೆ ಹೀಗಿರುವಾಗ ಆದೇಶವನ್ನು ಬ್ರಿಟಿಷ್ ರಾಜ್ಯಕ್ಕೆ ಸೇರಿಸಿದ್ದರಿಂದ ಏಷ್ಯಾ ಖಂಡದೊಳಗೆ ಬಹುಕಾಲದಿಂದ ನಡೆದುಬರುತಲಿದ್ದ ಒಂದು ರಾಜ್ಯವು ನಷ್ಟವಾದಂತಾಯಿತು. ಬೇರೆ ಅನೇಕ ಲೇಖನಗಳಿಂದ ತಿಳಿಯಬರುವದೇನಂದರೆ, ಒಂದುಸಾವಿರವರುಷಗಳ ಮೊದಲು ಓ ಆಂಗರ್ಝಾ ಎಂಬ ಬೇಟೆಗಾರನೊಬ್ಬನು ತನ್ನ ಪರಾಕ್ರಮದಿಂದಲೂ ದೈವಾನುಕೂಲತೆಯಿಂದಲೂ ಆರಾಜ್ಯವನ್ನು ತನ್ನ ಸ್ವಾಧೀನ ಮಾಡಿಕೊಂಡನೆಂಬದು.

ಯಂತ್ರದ ಸಹಾಯದಿಂದ ಹಾಲು ಹಿಂಡುವ ಹೊಸಯುಕ್ತಿಯು—ಈ ಯಂತ್ರದ ಸಹಾಯದಿಂದ ಆಕಳಿಗೆ ಸ್ವಲ್ಪವಾದರೂ ಪ್ರಯಾಸವಾಗದೆಬಹಳ ಸುಲಭವಾಗಿ ಜಾಗ್ರತೆಯಲ್ಲಿಹಾಲು ಹಿಂಡಿಕೊಳ್ಳಬಹುದು. ಈ ಯಂತ್ರವನ್ನು ಯೆಂತಾ ಅಜ್ಞಾನಿಯಾದರು ಉಪಯೋಗಿಸಲಾಪನು. ಈ ಯಂತ್ರಕ್ಕೆ ಅರ್ಧಚಂದ್ರಾಕೃತಿಯುಳ್ಳ ರಬ್ಬರಿನ ಎರಡು ಹಲಿಗೆಗಳು ಇರುತವೆ ಯಂತ್ರವು ಕೈಯಲ್ಲಿ ಹಿಡಿದುಕೊಳ್ಳಲಿಕ್ಕೆ ಅನುಕೂಲವಾಗಿರುವದು, ಅದಕ್ಕೆ ಒಂದು ಹಗ್ಗವಿರುತ್ತದೆ. ಅದನ್ನು ಎಳವರೆ ಆ ರಬ್ಬರಿನ ತಗಡುಗಳು ಕೈಯಿಂದ ಹಿಂಡಿದಂತೆಯೇ ಆಕಳ ಮೊಲೆಗಳನ್ನು ಒತ್ತುತವೆ. ಈ ಯುಕ್ತಿಯನ್ನು ಮಿಸ್ಟರ್ ರೂಬ್ಯೆನ್ ಡಿ. ರೋಫ್ ಎಂಬವರು ಕಂಡುಹಿಡದಿರುತ್ತಾರೆ.

ನೇಟಿವ್ ಸಂಸ್ಥಾನಗಳ ಸಿರಿಯು ಅಣಗಿತು! ಮುಖ ಚಂದ್ರನು ಬಾಡಿದನು! ಕೀರ್ತಿ ಯೆಂಬ ಸೂರ್ಯನು ಕಪ್ಪಾದನು! ಧೈರ್ಯವು ಕುಂದಿತು! ಆಶೆಯು ನಾಶವಾಯಿತು! ಸುಬಿಕೆಯು ನಷ್ಟವಾಯಿತು! ಇವುಗಳ ಉದ್ಘಾಟನಕ್ಕೆ ಕಾಶ್ಮೀರ, ಭೂಪಾಲ್, ಮತ್ತು ಧಿಖೀಂದ್ ಸಂಸ್ಥಾನಗಳಲ್ಲಿ ಇಂಗ್ಲೀಷರೆಸಿಡೆಂಟರೆಂಬ ಯಮದೇವತೆಗಳು ಅವತರಿಸುವರೆಂಬದಾಗಿ ಪ್ರವಾದಗಳು ಹೇಳುವ ವಾಕ್ಯವೇ ನಮ್ಮ ದುಃಖಕ್ಕೆ ಮೂಲವು. ಈಶ್ವರ ಚಿತ್ತಕ್ಕೆ ಬಂದಂತೆ ಆಗಲಿ! "ತಪ್ಪಿಸಿಕೊಳ್ಳಲಾರದಕ್ಕೆ ಸ್ವಸಂತೋಷದಿಂದ ಒಪ್ಪಿಕೊಳ್ಳಬೇಕು" ಎಂಬ ನೀತಿವಾಕ್ಯವನ್ನು ಚೆನ್ನಾಗಿ ಲಕ್ಷ್ಯದಲ್ಲಿಡತರುವದೇ ಹಿತಕರವಾದದ್ದು, ಈಗ ರಾಜ್ಯಾಧಿಕಾರವೇ ಅವರದಾಗಿದೆ. ಸರ್ವಶಕ್ತಿಗಳೂ ಅವರಲ್ಲಿಯೇ ನೆಲೆಗೊಂಡಿವೆ. ರಕ್ಷಿಸಲೂ ಶಿಕ್ಷಿಸಲೂ ಅವರೇ ಸಮರ್ಥರಾಗಿದ್ದಾರೆ.—ಚಂದ್ರೋದಯ.

ಬರ್ಮಾದೇಶದ ರಾಜಧಾನಿಯಾದ ಮಾಂಡಲೇಪಟ್ಟಣದಲ್ಲಿ ದರೋಡೆಯವರು ಊರೊಳಗಿನ ಮುಖ್ಯಮುಖ್ಯ ಸ್ಥಳಗಳಿಗೆಲ್ಲ ಬೆಂಕಿ ಹಚ್ಚಿದ್ದರಿಂದ ಎಲ್ಲೆಲ್ಲಿ ನೋಡಿದರೂ ಗದ್ದಲವಾಗಿರುತದೆ. ಕಳೆದತಿಂಗಳ ೩ನೇ ತಾರೀಖಿನ ದಿನ ಅರಮನೆಗೆ ಸೇರಿದ ಕೆಲವು ಭಾಗವು ಅಗ್ನಿದೇವತೆಗೆ ಆಹಾರವಾಯಿತು. ಬೆಂಕಿಯನ್ನು ಹಚ್ಚಿದವರನ್ನೂ ಹಚ್ಚಲಿಕ್ಕೆ ಪ್ರೇರಿಸಿದವರನ್ನೂ ದಸ್ತಗಿರಿಮಾಡಿದ್ದಾರೆ. ಆಸಪಾಸಪ್ರದೇಶಗಳಲ್ಲಿನ ದರೋಡೆಯವರು ಮೊದಲಿನಂತೆಯೇ ತಮ್ಮ ಕೆಲಸವನ್ನು ತ್ವರೆಗೊಳಿಸುತಲಿದಾರೆ. ಉಪಶಾಂತಿಯುಂಟಾಗುವದಕ್ಕೆ ಬದಲಾಗಿ ಮೊದಲಿನಂತೆಯೇ ಯೆಲ್ಲಿನೋಡಿದರೂ ಸುಲಿಗೆ ಜುಲ್ಮಿ ವಗೈರೆ ಭಯಂಕರವಾದ ದುಷ್ಟಕೃತ್ಯಗಳು ದಿನೇದಿನೆ ಅಭಿವೃದ್ಧಿಯನ್ನು ಹೊಂದುತಲಿವೆ ಎಂದು ಅಲ್ಲಿಂದ ಬಂದ ತಂತಿವೃತ್ತಾಂತಮೂಲಕ ತಿಳಿಯಬರುತಿದೆ.

ಸರಾಸರಿ ಮನುಷ್ಯನ ಆಯುಃಪರಿಮಾಣವು ೩೩ ವರುಷಗಳು. ನಾಲ್ಕರಲ್ಲಿ ಒಂದುಪಾಲು ಜನರು ೭ ವರುಷ ಪ್ರಾಯದವರಾಗುವದಕ್ಕಿಂತ ಮುಂಚಿತವಾಗಿಯೂ, ನಾಲ್ಕರಲ್ಲಿ ಅರ್ಧಪಾಲು ಜನರು ೧೭ ವರುಷ ಪ್ರಾಯದವರಾಗುವದಕ್ಕಿಂತ ಮುಂಚಿತವಾಗಿಯೂ ಮೃತಪಡುತ್ತಾರೆ. ಪ್ರತಿ೧೦೦೦ ಜನರಲ್ಲಿ ಒಬ್ಬನು ಮಾತ್ರ ೧೦೦ ವರುಷಗಳ ತನಕ ಬದುಕುತ್ತಾನೆ. ಪ್ರತಿ೧೦೦ರವಲ್ಲಿ ೬ ಜನರು ಮಾತ್ರ ೭೦ರತನಕ ಬಾಳುತ್ತಾರೆ. ಮತ್ತು ೫೦೦ರಲ್ಲಿ ಒಬ್ಬನಿಗಿಂತಲು ಹೆಚ್ಚಾಗಿ ಜನರು ೪೦ರ ತನಕ ಬಾಳುವದಿಲ್ಲ ಪೃಥ್ವಿಯ ಮೇಲೆ ೧೦೦೦,೦೦೦,೦೦೦ ಜನರು ಇರುತ್ತಾರೆ, ಇವರಪೈಕಿ ೩೩,೩೩೩,೩೩೩ ಜನರು ಪ್ರತಿ ವರುಷವೂ, ೯೧೪೨೪ ಜನರು ಪ್ರತಿನಿತ್ಯವೂ, ೩೭೮೦ ಜನರು ಪ್ರತಿ ಘಂಟೆಗೂ, ೬೦ ಜನರು ಪ್ರತಿ ಮಿನಿಟಗೂ, ಪ್ರತಿ ಸೆಕಂಡಿಗೂ ಒಬ್ಬನಂತೆ ಈರೀತಿ ಸಾಯುತ್ತಾರೆ ಸರಾಸರಿ ತಾಳೆಹಾಕಿ ನೋಡಿದರೆ ಜನನಮರಣಗಳ ಸಂಖ್ಯೆಯು ಸರಿಯಾಗುತ್ತದೆ. ವಿವಾಹಿತರಗಿಂತಲೂ, ಅವಿವಾಹಿತರು ಹೆಚ್ಚುಕಾಲ ಬಾಳುತ್ತಾರೆ; ಇವರೆಲ್ಲಕ್ಕಿಂತಲೂ, ಮುಖ್ಯವಾಗಿ ವಿಚಾರಶೀಲರಾದವರೂ ಉದ್ಯೋಗಿಗಳಾದಂತಾವರೂ ಹೆಚ್ಚು ಕಾಲ ಬಾಳುತ್ತಾರೆ ಎಂದು ಡಾಕಾ ಈಸ್ಟ ಎಂಬ ಪತ್ರಿಕೆ ತಿಳಿಸುತದೆ.

ಮಹಾರಾಜಾ ದಿಲೀಪಸಿಂಗರವರು ತಮ್ಮ ಜನ್ಮಭೂಮಿಯಾದ ಪಂಜಾಬನ್ನು ನೋಡಕೂಡದೆಂಬದು ಹಾಗಿರಲಿ; ಹಿಂದುಸ್ಥಾನವನ್ನು ಸಹ ನೋಡಬಾರದೆ? ನಮ್ಮ ಸರಕಾರದವರು ಮಹಾರಾಜರವರಮೇಲೆ ಇಷ್ಟು ಉಗ್ರ ಮನಸ್ಸುಳ್ಳವರಾಗಲಿಕ್ಕೆ ಅವರು ಮಾಡಿದ ಅಪರಾಧವೇನು? ಅವರು ಹಿಂದುಸ್ಥಾನದೊಳಗೆ ಕಾಲಿಟ್ಟ ಕೂಡಲೇ ಇಲ್ಲಿನ ಜನರು ಕಲಹಿಸಲಿಕ್ಕೆ ಪ್ರೋತ್ಸಾಹಪಡಿಸುವರೆಂಬ ಹೆದರಿಕೆ ನಮ್ಮ ಸರಕಾರದವರ ಮನಸ್ಸಿನಲ್ಲಿ ವುಂಟಾಗಿ ಹೀಗೆಮಾಡಿರಬಹುದೆಂದೆಣಿಸುತ್ತೇವೆ. ಛೀ, ರಾಜಕಾರ್ಯ ಧುರಂಧರರೂ, ಬಲಾಢ್ಯರೂ, ಎಂಬ ಹೆಸರುಗೊಂತ ನಮ್ಮ ಸರಕಾರದವರು ಅಸಂಭವವಾದ ಇಂತಾ ವಿಚಾರಗಳನ್ನು ಮಾಡುವದು ಅನುಚಿತವು. ದಿಲೀಪಸಿಂಗರವರು ಹಿಂದುಸ್ಥಾನದ ಜನರ ವಿಷಯದಲ್ಲಿ ಮೊದಲು ತೋರಿಸಿದ ತಾತ್ಸಾರವನ್ನು ಸ್ಮರಿಸಿದರೆ ಅವರಿಗೆ ಇಲ್ಲಿಯ ಜನರು ಕಿಂಚಿತ್ತಾದರೂ ವಾತ್ಸಲ್ಯವನ್ನು ತೋರಿಸುವರೆಂಬಸಂಭವವಿಲ್ಲ. ದೊಡ್ಡವರ ಸಂಕಟವು ಎಷ್ಟಾದರೂದೊಡ್ಡದೆ! ಆದ್ದರಿಂದ ಅವರಿಗೆ ಕೆಡಕಾಗಬೇಕೆಂಬದು ನಮ್ಮ ಅಭಿಪ್ರಾಯವಿಲ್ಲವು. ಆದಕಾರಣ ಸರಕಾರದವರ ಮನಸ್ಸಿನಲ್ಲಿ ಹುಟ್ಟಿದ ಸಂಶಯವು ನಿವೃತ್ತಿಯಾಗಿ, ಮಹಾರಾಜರವರು ಮತ್ತಷ್ಟು ದುಃಖಾಬ್ಧಿಯಲ್ಲಿ ಮುಳುಗದೆ, ದೋಷವಿಮುಕ್ತರಾಗಿ ಬೇಗನೆ ಹಿಂದುಸ್ಥಾನಕ್ಕೆ ಸುಖವಾಗಿ ಬಂದು ಸೇರಬೇಕೆಂದು ಪ್ರಾರ್ಥಿಸುತ್ತೇವೆ.—ಸುವಾರ್ತೆ.

ನಮ್ಮ ಹೆಂಗಸರ ಸಾಮರ್ಥ್ಯವನ್ನೂ, ಅನ್ಯದೇಶಗಳ ವಿಧವಿಧವಾದ ಆಹಾರ ನೀರು ಘಾಳಿಗಳನ್ನು ಸಹಿಸಿಕೊಳ್ಳುವ ಸಹನಶಕ್ತಿಯನ್ನೂ, ವಿದ್ಯೆಯಲ್ಲಿ ಆಸಕ್ತಿಯನ್ನೂ, ಕೀರ್ತಿಯಲ್ಲಿ ಅಭಿಲಾಷೆಯನ್ನೂ ಕಂಡು ಸ್ಮಶ್ರುಧಾರಿಗಳಾದ ನಮ್ಮಂತಾ ಗಂಡಸರು ನಿಜವಾಗಿ ನಾಚಿಕೊಂಡು ತಲೆ ಬಾಗಿಸಬೇಕಾಯಿತು! ಒಂದು ಕೋಣೆಯಿಂದ ಮತ್ತೊಂದಕ್ಕೆ ಹೋಗುವದೇ ನಮ್ಮ ಪ್ರಯಾಣವು, ಒಲೆಯಹತ್ತಿರ ಹೆಂಡರ ಮುಂದೆ ಹೇಳಿಕೊಳ್ಳುವ ಸ್ವಂತ ಸ್ತುತಿಗಳೇ ನಮ್ಮ ಸಾಹಸಕೃತ್ಯಗಳು, ಹೀಗಿರುವಂತಾ ನಾವು ವಿಲಕ್ಷಣರಾದ ಜನರಲ್ಲಿ ಮೋರೆಯನ್ನು ತೋರಿಸುತ ಅಡ್ಡಾಡುವದು ಕಠಿಣವಾಯಿತು! ಸ್ತ್ರೀ ಜಾತಿಯಲ್ಲಿ ಜನ್ಮತಾಳಿರುವ ರಮಾಬಾಯಿ ಯೆಂಬ ಈ ವಿದ್ವನ್ಮಣಿಯು ಅನೇಕ ದಿವಸಗಳ ವರಿವಿಗೆ ನೂರಾರುಗಾವದಗಳ ಜಲಪ್ರವಾಸದ ಶ್ರಮವನ್ನು ಸಹಿಸಿ, ಕೋಮಲವಾದ ತನ್ನ ಶರೀರವನ್ನು ಮಳೆ ಛಳಿ ಬಿಸಿಲು ಇವುಗಳಿಗೆ ಅರ್ಪಿಸಿ, ವಿದ್ಯಾಭ್ಯಾಸ ವೃತ್ತಿಯನ್ನು ಕೈಗೊಂಡು ಈಗ ವೈದ್ಯಶಾಸ್ತ್ರದಲ್ಲಿ ಪಾರಂಗತಳಾಗಿರುತ್ತಾಳೆ. ಇದಲ್ಲದೆ ಸದ್ಯಃ ಅಮೆರಿಕಾ ಖಂಡದಲ್ಲಿ ತನ್ನ ಜನ್ಮಭೂಮಿಯ ವರ್ಣನೆಯನ್ನೂ, ತನ್ನ ದೇಶಬಾಂಧವರಾದ ಭಗಿನೀಗಳಸ್ಥಿತಿ ಗತಿಗಳನ್ನೂ ಕುರಿತು ನಾನಾವಿಧವಾಗಿ ಅಲ್ಲಿನ ಸ್ತ್ರೀ ಪುರುಷ ಮಂಡಲದಲ್ಲಿ ಆಗಿಂದಾಗ್ಯೆ ಉಪನ್ಯಾಸ ಮಾಡಲಿಕ್ಕೆ ಪ್ರಾರಂಭಿಸಿರುತ್ತಾಳೆ. ಇವಳ ವಾಕ್ಚಾತುರ್ಯವನ್ನು ಕುರಿತು ಅಲ್ಲಿನ ವರ್ತಮಾನ ಪತ್ರಿಕೆಗಳು ವಿಶೇಷವಾಗಿ ಶ್ಲಾಘಿಸುತಿವೆ. ಇವಳು ಜಾಗ್ರತೆಯಲ್ಲಿ ಈ ದೇಶಕ್ಕೆ ಬರತಕ್ಕವಳಾಗಿದ್ದಾಳೆಂದು ಸಹ ವರ್ತಮಾನವುಂಟು. ಆದರೆ, ಇವಳು ಲಂಡನ್ ನಗರದಲ್ಲಿ ಕ್ರಿಶ್ಚಿಯನ್‌ಮತ ದೀಕ್ಷೆಯನ್ನು ವಹಿಸಿದ್ದರಿಂದ ಹಿಂದುಸ್ಥಾನದ ಜನರಿಗೆ ಇವಳ ವಿಷಯದಲ್ಲಿ ವಿಶೇಷ ಅಭಿಮಾನವಿರುವದಿಲ್ಲವು. ಇವಳ ಸಂಗಡ ಹೋಗಿದ್ದ ಸೌ|| ಆನಂದಬಾಯಿ ಜೋಷಿಯು ಮಾತ್ರ ತನ್ನ ಬ್ರಾಹ್ಮಣ ಧರ್ಮವನ್ನು ಬಿಡದೆ ಆಚರಿಸುತ ಅಮೆರಿಕಾದಲ್ಲಿ ವೈದ್ಯಶಾಸ್ತ್ರಾಭ್ಯಾಸ ಮಾಡಿ ಪಂಡಿತಳೆನಿಸಿಕೊಂಡು ಸುಖವಾಗಿದ್ದಾಳೆ—ಚಂದ್ರೋದಯ.

ಪ್ರತಿವರುಷವು ಬಿ. ಎ, ಎಮ್. ಎ, ಎಲ್. ಎಲ್. ಬಿ, ಎಂಬ ಬಿರುದುಗಳನ್ನು ಧರಿಸತಕ್ಕವರ ಸಂಖ್ಯೆಯು ಹ್ಯಾಗೆ ವೃದ್ಧಿಯಾಗುತದೋ ಹಾಗೆಯೇ ಯಂತ್ರ, ಶಿಲ್ಪ ಮುಂತಾದ ಉಪಯುಕ್ತ ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಪಡೆದವರ ಸಂಖ್ಯೆಯು ಯಾವಾಗ ಜಾಸ್ತಿಯಾಗುವದೋ ಆಗ್ಯೆ ವಿದ್ಯಾಭಿವೃದ್ಧಿಯನ್ನು ಶ್ಲಾಘಿಸಲಿಕ್ಕೆ ಅದು ಯೋಗ್ಯವಾದಸಮಯವೆಂದು ಅರಿಯಬಹುದು. ವಿದ್ಯಾಭ್ಯಾಸದ ಇಲಾಖೆಯಪದ್ಧತಿಗಳಲ್ಲಿರುವ ನ್ಯೂನತೆಗಳನ್ನು ವರ್ಣಿಸತೀರದು. ಈಗ ಸ್ಕೂಲುಗಳಲ್ಲಿ ಕಲಿಸತಕ್ಕ ಪುಸ್ತಕಗಳಪೈಕಿ ಅನೇಕ ಗ್ರಂಥಗಳು ಜಾಗರೂಕತೆಯೊಡನೆ ರಚಿಸಲ್ಪಟ್ಟವುಗಳಾಗಿರುವದಿಲ್ಲವು. ದೃಷ್ಟಾಂತಕ್ಕಾಗಿ-ಒಬ್ಬ ಒಕ್ಕಲಿಗನು ತನ್ನಮಗನನ್ನು ಸ್ಕೂಲಿಗೆ ಕಳುಹಿಸಿದರೆ ಅಲ್ಲಿ ಕಲಿತವಿಷಯಗಳಮೇಲೆ ೧೦ ರೂಪಾಯಿ ಸಂಬಳವುಳ್ಳ ಕುಲಕರ್ಣಿ ಕೆಲಸವನ್ನಾಗಲಿ ೧೫ರೂಪಾಯಿ ಸಂಬಳವುಳ್ಳ ಕಾರಕೂನಕೆಲಸವನ್ನಾಗಲಿ ನಡಿಸುವ ಯೋಗ್ಯತೆಮಾತ್ರ ಅವನಲ್ಲಿ ಉಂಟಾದೀತೇಹೊರ್ತು ಆಕೆಲಸಗಳನ್ನು ತ್ಯಜಿಸಿ ಬೇಸಾಯದಕೆಲಸಗಳಲ್ಲಿ ಸೇರಿದರೆ ರುಜು ಮಾಡಲಿಕ್ಕೆ ಸಹ ಅರಿಯದ ತನ್ನ ನೆರೆಹೊರೆಯವರಿಗಿಂತಲು ಆಕೆಲಸದಲ್ಲಿ ತನ್ನ ಪಾಂಡಿತ್ಯವನ್ನು ವಿಶೇಷವಾಗಿ ತೋರಿಸಲಿಕ್ಕೆ ಅವಕಾಶವಿರುವದಿಲ್ಲವು. ಈಗಿನಪದ್ಧತಿಯಂತೆ ಬೇಸಾಯಗಾರರ ಮಕ್ಕಳಿಗೆ ಲಭಿಸುವ ವಿದ್ಯೆಯಿಂದ ಮಾಡಿಕೊಂಡ ಉದ್ದೇಶದಂತೆ ಅವರ ಬೇಸಾಯದಸ್ಥಿತಿಯು ಕ್ರಮಪಡುವದಕ್ಕೆ ಬದಲು ಬೇಸಾಯಕೆಲಸಗಳ ವಿಷಯದಲ್ಲಿ ಔದಾಸೀನ್ಯತೆ ಉಂಟಾಗತಕ್ಕ ದೃಷ್ಟಾಂತಗಳೇ ಹೆಚ್ಚಾಗಿ ಕಂಡುಬರುತಿದೆ. ಸ್ತ್ರೀಯರ ವಿದ್ಯಾಭ್ಯಾಸದ ವಿಷಯದಲ್ಲಿ ನಮಗೆ ಇದೇವಿಧ ಕೊರತೆಯು ಕಂಡುಬರುತಿದೆ. ಪುರುಷರ ಮತ್ತು ಸ್ತ್ರೀಯರ ಕರ್ತವ್ಯಗಳು ಭಿನ್ನಭಿನ್ನವಾಗಿರುವದರಿಂದ ಅವರುಕಲಿಯಬೇಕಾದವಿಷಯಗಳು ಸಹ ಭಿನ್ನಗಳಾಗಿರುವದು. ಎಲ್ಲಾ ಸ್ತ್ರೀಯರ ಪಾಠಶಾಲೆಗಳಲ್ಲಿಯೂ ಪುರುಷರ ಉಪಯೋಗದಬಗ್ಯೆ ರಚಿಸಲ್ಪಟ್ಟಿರುವ ಪುಸ್ತಕಗಳನ್ನೇ ಕಲಿಸುವ ಪದ್ಧತಿಯು ನೆಲಗೊಂಡಿದೆ. ಸ್ತ್ರೀಯರು ತಮಗೆ ಅನುಗುಣಗಳಾದ ಕೆಲಸಗಳಲ್ಲಿ ಅಜ್ಞಾನಿಗಳಾದ ಅವರ ಅಕ್ಕತಂಗಿಯರಿಗಿಂತಲು ಮೇಲೆನ್ನಿಸಿಕೊಳ್ಳುವದಕ್ಕೆ ಬದಲು ಅನೇಕರಲ್ಲಿ ದುರಭಿಮಾನಮಾತ್ರ ವೃದ್ಧಿಯಾಗುತಬರುತಿದೆಯೆಂಬದಕ್ಕೆ ಅನೇಕದೃಷ್ಟಾಂತಗಳು ಕಂಡುಬರುತಿವೆ. ಇದುಂತಿರಲಿ, ಕನರಾಜಿಲ್ಲಾಗಳ ಹುಡಿಗಿಯರಲ್ಲಿ ಅನೇಕರು ತಮ್ಮಮನೆಯ ಜನರೊಡನೆಯೂ ನೆರೆಹೊರೆಯವರೊಡನೆಯೂ, ಇಷ್ಟಮಿತ್ರರೊಡನೆಯೂ ಮಾತಾಡುವ ಭಾಷೆಯು ಕನ್ನಡಭಾಷೆಯಾಗಿದ್ದಾಗ್ಯೂ ಅವರು ಸ್ಕೂಲಿಗೆಹೋದರೆ ಅನೇಕಕಡೆಗಳಲ್ಲಿ ಮಹಾರಾಷ್ಟ್ರ ಕಲಿಯಬೇಕಾಗುತದೆ. ಇದರಿಂದ ತಮ್ಮ ಸ್ವಂತಭಾಷೆಯಲ್ಲಿ ಒಳ್ಳೆಯ ಜ್ಞಾನವಂ ಪಡೆಯಲಿಕ್ಕೆ ಸಾಧ್ಯವಿಲ್ಲದೆ ಸ್ಕೂಲಗಳಲ್ಲಿಅಲ್ಪಕಾಲದತನಕ ಅಭ್ಯಾಸಮಾತುವ ಭಿನ್ನಭಾಷೆಯಲ್ಲಿ ಸಹ ಪೂರ್ಣಜ್ಞಾನವುಂಟಾಗಲಿಕ್ಕೆ ಸಾಧ್ಯವಿಲ್ಲದೆ ಅನೇಕ ಹುಡಿಗಿಯರು ಪಾಠಶಾಲೆಯಲ್ಲಿ ಕಳೆದ ಸಮಯವು ಬಹುಶಃ ವ್ಯರ್ಥವಾಗಿಹೋಗುತದೆ. ಕನ್ನಡದೇಶದಲ್ಲಿ ಹುಡಿಗಿಯರಿಗೆ ಕನ್ನಡಕಲಿಸದೆ ಮಹಾರಾಷ್ಟ್ರಭಾಷೆಯನ್ನು ಯಾಕೆ ಕಲಿಸಕೊಡದೆಂಬದು ನಮಗಂತೂ ತೋರದಿರಲಿಲ್ಲವು. ಈ ದೋಷಗಳನ್ನೆಲ್ಲ ಕೇವಲ ವಿದ್ಯಾಭ್ಯಾಸದ ಇಲಾಖೆಯವರಮೇಲೆ ಹೊರಿಸುವದು ಯೋಗ್ಯವಲ್ಲ, ಸ್ಕೂಲಗಳಲ್ಲಿ ನಡೆಯತಕ್ಕ ಅಭ್ಯಾಸಗಳಲ್ಲಿರುವ ದೋಷಗಳನ್ನು ಆಗಿಂದಾಗ್ಯೆ ತಕ್ಕ ಅಧಿಕಾರಿಗಳಿಗೆ ತಿಳಿಸುವದು ಜನಗಳ ಕರ್ತವ್ಯವಾಗಿದೆ. ಸ್ಕೂಲಿಗೆ ಕಳುಹಿಸಿದ ಮಾತ್ರದಲ್ಲಿಯೇ ತಮ್ಮ ಕರ್ತವ್ಯವನ್ನು ಮಾಡಿದಹಾಗೆ ಆಯಿತೆಂದೆಣಿಸಿ ಸುಮ್ಮನಿರುವ ನಮ್ಮಜನರ ವರ್ತನವು ಇದಕ್ಕೆ ಮುಖ್ಯ ಕಾರಣವಾಗಿರುತಿದೆ. ಇನ್ನು ಮೇಲಾದರೂ ವಿದ್ಯಾಭ್ಯಾಸದ ಇಲಾಖೆಯವರು ತಮ್ಮ ಪಾಠಶಾಲೆಗಳೊಳಗಿನ ದೋಷಗಳನ್ನು ದೂರಪಡಿಸಲಿಕ್ಕೆ ಯತ್ನಿಸಬೇಕಲ್ಲದೆ ಜನಗಳು ತಮ್ಮಮಕ್ಕಳಿಗೆ ಲಭಿಸತಕ್ಕ ವಿದ್ಯಾಭ್ಯಾಸದ ಕ್ರಮವನ್ನುಕುರಿತು ವಿಚಾರಮಾಡಲಿಕ್ಕೆ ಕಾಲವನ್ನು ಕೆಲವುಮಟ್ಟಿಗೆ ವ್ಯಯಮಾಡುವರೆಂದು ನಂಬುತ್ತೇವೆ. ನಮ್ಮಜನರು ಒಂದು ಸಂಗತಿಯನ್ನು ವಿಶೇಷವಾಗಿ ಎಚ್ಚರದೊಳಿತಬೇಕು. ಅದು ಯಾವದಂದರೆ,—ಕೇವಲ ಪಾಠಶಾಲೆಯ ಸ್ಪರ್ಶದಿಂದಾಗಲಿ ಅದರಲ್ಲಿ ಕಳೆಯುವ ಕಾಲ ಪರಿಮಾಣದಿಂದಾಗಲಿ ನಿಜವಾದ ಯೋಗ್ಯತೆಯು ಉಂಟಾಗಲರಿಯದು, ಕಲಿಯತಕ್ಕವಿಷಯಗಳನ್ನೂ ಕಲಿಯತಕ್ಕರೀತಿಯನ್ನೂ ಅದು ಅವಲಂಬಿಸಿದ್ದಾಗಿರುತಿದೆ.—ಸುವಾರ್ತೆ.

BANGALORE.—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯುಪಗಮಾರ್ದ್ರ ಕರ್ಣಾಟಕಪ್ರಕಾಶನವರಾಭಿಧಾಪ್ರಥಿತಸಾಹಿತೀಶೋಭಿತಾ ॥ ಪ್ರಗಾಂತಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ಧಿಕಾನುಪರಿಶೋಭಿತಾದಿಶತಿಮಾನಸಂಸುಮುದಂ॥

Vol. XIII] BANGALORE —MONDAY, MAY 17, 1886 [No. 20.

ಸಂಪುಟ ೧೩.] ಬೆಂಗಳೂರು:—ಸನ್ ೧೮೮೬ನೇ ಇಸವಿ ಮೇ ೧೭ನೇ ತಾರೀಖ್ ಸೋಮವಾರ. [ಸಂಚಿಕೆ ೨೦.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷು ಮತ್ತು ಕನ್ನಡ ಸೇರುಕೊಳ್ಳುವವರಿಗೆ, ವರುಷ ೧ಕ್ಕೆ	. .	೧೨—೦—೦
ಇಂಗ್ಲಿಷು ಮಾತ್ರ ಸೇರುಕೊಳ್ಳುವವರಿಗೆ ವರುಷ ೧ಕ್ಕೆ	. .	೬—೦—೦
ಕನ್ನಡವು ಮಾತ್ರ ಸೇರುಕೊಳ್ಳುವವರಿಗೆ [illegible] ವರುಷಕ್ಕೆ	.	೬—೦—೦
ಬಿಂಗಿ	೧ಕ್ಕೆ	೦—೮—೦

ಸೂ.—ಚಂದಾದಾರರು ಇಂಗ್ಲಿಷು [illegible] ಅಥವಾ, [illegible] ಸೇರುಕೊ[illegible]. ಚಂದಾಹಣವನ್ನು ಮುಂದಾಗಿ [illegible] [illegible]

ಪ್ರಕಟನೆಯ ರಿವಾಜ್.

ಹಿಂದಲನೇದ ಪಂಕ್ತಿ	೧ಕ್ಕೆ	೦—೨—೦
ಮೊದಲನೇದ ಪಂಕ್ತಿ	೧ಕ್ಕೆ	೦—೧—೦

NOTICE TO SUBSCRIBERS

ಇದರ ಕೆಳಗೆ ಬರೆದ [illegible] ಚಂದಾದಾರರು [illegible] ನಮ್ಮ [illegible]:—

೧ [illegible]

೨. [illegible]

೩ [illegible]

೪. [illegible]

NOTICE.

VAIDYASARA SANGRAHA

Price including Postage, Rs 5-0 0

ವೈದ್ಯಸಾರ ಸಂಗ್ರಹ.

ಈ ಗ್ರಂಥ [illegible]

[illegible]	ರೂ॥	೫—೦—೦
ಪಾಂಕೆಟ್ ಮತ್ತು ಅಂಚೇ ಹಾಸಲ್		೦—೬—೦

[illegible], ಅಸ್ಪತ್ರೆ [illegible], ಬೆಂಗಳೂರು.

ನೋಟೀಸ್.

ಇದರ ಕೆಳಗೆ ಬರೆದಿರುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ಕ್ರಯಕ್ಕೆ ಸಲ್ಪಡುತ್ತವೆ.—

ಕನ್ನಡ ಟೀಕಾಸಹಿತವಾದ ಸಂಸ್ಕೃತ ಗ್ರಂಥಗಳು.

[illegible]	. .	೧—೪—೦
[illegible]	...	೦—೧೨—೦
[illegible] (ಪಟ್ಟಂ[illegible])	...	೦—೩—೦
[illegible]	...	೦—೫—೦
[illegible]	...	೦—೪—೦
[illegible]	.. ...	೦—೧೪—೦
[illegible]	...	೦—೬—೦
[illegible]	. . .	೦—೨—೦
ವೈದ್ಯಸಾರಸಂಗ್ರಹ	...	೫—೦—೦

ಕನ್ನಡ ಗ್ರಂಥಗಳು.

[illegible]	...	೦—೬—೦
[illegible]	...	೦—೪—೦
[illegible]	...	೦—೩—೬
[illegible]	... ..	೦—೨—೬
[illegible]	...	೦—೪—೦
[illegible]	...	೦—೨—೦
[illegible]	...	೦—೨—೬
[illegible]	...	೦—೬—೦
[illegible]	...	೦—೩—೦
[illegible]	... ...	೦—೨—೦
[illegible]	...	೦—೦—೬
ಇಂಗ್ಲಿಷು ಕನ್ನಡ [illegible]		೧—೦—೬
[illegible]	... ...	೨—೦—೦
[illegible]	...	೦—೧೨—೦
[illegible]	...	೩—೪—೬
[illegible]	...	೩—೪—೬
[illegible] ೧ನೇ ಸಂಚಿಕೆ.	...	೦—೮—೦
[illegible] ೨ನೇ ಸಂಚಿಕೆ.		೦—೮—೦
[illegible]	...	೦—೮—೦

ಸಂಸ್ಕೃತ ಮೂಲಗ್ರಂಥಗಳು.

[illegible]	.	೦—೫—೦
[illegible]	...	೦—೨—೬
[illegible]	...	೦—೨—೬
[illegible]	...	೦—೦—೬
[illegible]	...	೦—೩—೬
೧ [illegible]	...	೦—೧—೦

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮ್ಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇಲೆ ದಳ್ಳಾಳಿಕೆಗದುಕೊಳ್ಳಲ್ಪಡುವದು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MAY 17, 1886

೧೮೮೬ನೇ ಮೇ ೧೭ನೇ ತಾ॥ ಸೋಮವಾರ

THE COORG JAMA RAIYATS REGULATION

ಕೊಡಗಿನಲ್ಲಿರತಕ್ಕ ಜಮ್ಮಾ ರೈತರು ಯಾವ ನೌಕರೀಪರತ್ತುಗಳಮೇಲೆ ಜಮೀನುಗಳನ್ನು ಅನುಭವಿಸುತಲಿದ್ದಾರೆಯೋ ಅಂತಾ ನೌಕರೀಪರತ್ತುಗಳನ್ನು ವಿವರಿಸಿ ತಿದ್ದುಪಡಿಮಾಡಿ ಕ್ರಮಪಡಿಸತಕ್ಕಬಗ್ಗೆ ಈಚೆಗೆ ಕೊಡಗು ಚೀಫ್‌ಕಮ್ಮಿಷನರವರು ಮಾಡಿದ ಒಂದು ರೆಗ್ಯುಲೇಷನ್ ಯಾನೆ ನಿಬಂಧನೆಯ ಪ್ರತಿಯೊಂದು ಗುಣದೋಷ ವಿಮರ್ಶೆಯಬಗ್ಯೆ ನಮ್ಮಬಳಿಗೆ ಕಳುಹಿಸಲ್ಪಟ್ಟಿತು. ಸದರೀ ರೆಗ್ಯುಲೇಷನನ್ನು ಈವಾರದ ಇಂಗ್ಲಿಷ್‌ಪತ್ರಿಕೆಯಲ್ಲಿ ಪ್ರಕಟಿಸಿರುತ್ತೇವೆ. ಈ ನಿಬಂಧನೆಯ ಮುಖ್ಯೋದ್ದೇಶವೇನೆಂದರೆ,—ಜಮ್ಮಾ ರೈತರು ತಮ್ಮ ಹಿಡುವಳೀಯಲ್ಲಿರುವ ಜಮೀನು ನಿಮಿತ್ತ ಮಾಡಿಕೊಳ್ಳುವ ಕರಾರು ಅನುಸರಿಸಿ, ಅವರು ಯುದ್ಧ ಮುಂತಾದ ಕಾಲದಲ್ಲಿ ಸರ್ಕಾರಕ್ಕೆ ಕುಮ್ಮಕ್ ಮಾಡಬೇಕಾದದ್ದಲ್ಲದೆ ಮಿಕ್ಕ ಕಾಲಗಳಲ್ಲಿ ತಮ್ಮ ಸರಹದ್ದಿನೊಳು ತಕ್ಸೀರುಗಳು ನಡೆಯದಂತೆ ನೋಡಿಕೊಳ್ಳುತಲೂ, ನಡೆದವನ್ನು ಪತ್ತೇ ಮಾಡುತಲೂ ಪ್ರಜೆಗಳ ಸುಖಸಮಾಧಾನಗಳಂ ಕಾಪಾಡುತಲೂ ಇರತಕ್ಕದ್ದು. ಈ ಜಮ್ಮಾ ರೈತರು ಆಯಾ ಗ್ರಾಮ ಪಟೇಲರ ಅಧಿಕಾರದೊಳಗಿರುತ ಅವರಿಗೆ ಬೇಕಾದಕುಮ್ಮಕ್ ಮಾಡುತಲಿರಬೇಕು ಈ ರೈತರು ಪ್ರಸಿದ್ಧರಾದ ತಕ್ಸೀರದಾರರನ್ನೂ ಗುಮಾನೀ ಆಸಾಮಿಗಳನ್ನೂ ಬಡ್‌ಚಾಲ್ ಆಸಾಮಿಗಳನ್ನೂ ದಸ್ತಗಿರ್ ಮಾಡುವ ಅಧಿಕಾರಪ್ರಾಪ್ತರಾಗಿರುತ್ತಾರೆ ಇವರು ಸಕಲವಿಧದಲ್ಲಿಯೂ ಈಶೀಮೆಯ ಪೋಲೀಸ್‌ನವರಿಗೆ ಸಮಾನರಾದವರಾಗಿರುವವರಿಂದ ಪೊಲೀಸ್ ಪದಯದೇ ಅವರಂತೆ ಸಕಲಕೆಲಸಗಳನ್ನು ಸ್ವತಃ ಜರಿಗಿಸುವರು. ಇವರು ತಮ್ಮ ಕರ್ತವ್ಯವನ್ನು ಮಾಡದೆ ಉಪೇಕ್ಷಿಸಿ ನ್ಯಾಯವಾದ ಹುಕುಮನ್ನು ಉಲ್ಲಂಘಿಸುವಪಕ್ಷಕ್ಕೆ ಒಬ್ಬ ಮ್ಯಾಜಿಸ್ಟ್ರೇಟರಿಂದ ಆಪಾದಿಸಲ್ಪಟ್ಟು ೫೦ ರೂಪಾಯಿಗಳ ಜುಲ್ಮಾನೆ, ಒಂದು ತಿಂಗಳ ಸಾಧಾರಣ ಖೈದ್ ಸಜಾ ಇವುಗಳದ್ವಾರಕ ದಂಡಿಸಲ್ಪಡಲಿಕ್ಕೆ ಅರ್ಹರಾಗಿರುತ್ತಾರೆ. ಹೀಗೆ ಯೆರಡಾವರ್ತಿ ಸಜಾಅನುಭವಿಸಿದರೆ ಆಗ ಚೀಫ್‌ಕಮ್ಮಿಷನರವರು ಆಪಾದನೆಮಾಡ ಮನುಷ್ಯನ ಜಮ್ಮಾ ಹಿಡುವಳೀ ಹಕ್ಕನ್ನುತಪ್ಪಿಸಿ ಸದರೀ ಜಮೀನಿಗೆ ಶಾಶ್ವತವಾಗಿಯಾಗಲಿ ಅಥವಾ ಚೀಫ್ ಕಮಿಷನರವರಿಗೆ ಯುಕ್ತ ತೋರುವಕಾಲವ ರನಕಾಗಲಿ ಸಾಗು ಜಮೀನು ದರದಂತೆ ಕಂದಾಯ ವಸೂಲ್ಮಾಡು ವಂತೆ ಹುಕುಂ ಮಾಡಬಹುದು.

ಈ ರೆಗ್ಯುಲೇಷನಿನ ಮೂಲಕ ಕೊಡಗುದೇಶೀಯರ ಪ್ರಾಚೀನವಾದ ಧನಗಳಿಗೆ ಸಿರುಪಾಯುತೆಯನ್ನುಂಟುಮಾಡಿದಂತೆಯಾಗುತಿದೆಯಾಗಿ ಪ್ರಸಕ್ತ ನಿಬಂಧನೆಯು ಅಬಾಧಿತವಾಗಿ ಶೋಧಿಸಲ್ಪಡಬೇಕೆಂದುಕೋರುವೆವು. ಜಮ್ಮಾರೈತರನ್ನು ಪಟೇಲರ ತಾಬೆಯೊಳಗಡೆ ಅವರನ್ನು ಪ್ರತ್ಯೇಕವಾಗಿಟ್ಟು ಅವರ ಸ್ವಂತ ಜವಾಬ್ದಾರಿಯಮೇಲೆ ಕೆಲಸ ಜರಿಗಿಸುವಂತೆ ಮಾಡುವದಲ್ಲದೆ ಅವರ ಮೇಲೆ ಆಯಾನಾಡಿನ ಪಾರುಪತ್ತೇಗಾರರು ಅಮಲ್‌ಚಲಾಯಿಸುವಂತೆ ಏರ್ಪಾಡು ಮಾಡಿರುವದು ಪಟೇಲರಿಗೂ ರೈತರಿಗೂ ಆಗಿಂದಾಗ್ಯೆ ವೈಮನಸ್ಯಗಳುಂಟಾಗದಿರಲಿಕ್ಕೆ ಕಾರಣವಾಯಿತು.

ENGLISH EDUCATION.

ಹಿಂದೂಜನಗಳ ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ಕಾರಣಗಳ್ಯಾವದಾದರೂ ಇರಲಿ, ಸರ್ಕಾರುಕೆಲಸಗಳ ಪ್ರತ್ಯಾಶೆಯೊತನೆ ವಿದ್ಯಾಭ್ಯಾಸ ಮಾಡದೇ ಇರೆಂದು ಗವರ್ನಮೆಂಟಿನವರು ಯೆಷ್ಟಾವರ್ತಿ ಯಾದರೂ ಹೇಳಲಿ, ಪರಂತು ಪ್ರಾಯೇಣ ಸದರೀ ವಿದ್ಯಾಭ್ಯಾಸ ಮಾಡತಕ್ಕವರೆಲ್ಲರಿಗೂ ಸರ್ಕಾರ್ ಕೆಲಸವಿನಾ ಬೇರೊಂದೂ ಉದ್ದೇಶವಿರಲಾರದು. ಸರ್ಕಾರ್ ನೌಕರಿಯೇ ಕೇವಲ ಸಾಧನೀಯವಾದ ಪುರುಷಾರ್ಥವೆಂಬ ಅಭಿಪ್ರಾಯಕ್ಕೆ ಮದರಾಸಿನವರಸೈಕಿ ವಿದ್ಯಾವಂತರಾಗಿರುವವರಸಂಖ್ಯೆಯನ್ನೂ, ಅಲ್ಲಿ ಅವರು ಪುರಸ್ಕರಿಸಲ್ಪಡತಕ್ಕ ವಿಧವನ್ನೂ, ಸರ್ಕಾರ್ ನೌಕರಿಗಳ ಅಸ್ಥಿರತ್ವವನ್ನೂ ನೋಡಲಾಗಿ ಬಹಳ ಆಶ್ಚರ್ಯವುಂಟಾಗುತಿದೆ. ಮಾಹೇ ಮಜಕೂರ್ ಗುರ್ರೇತಾರೀಖು ಶನಿವಾರದದಿನ ಸಾಯಂಕಾಲ ಪ್ರೆಸಿಡೆನ್ಸೀ ಕಾಲೀಜ್ ಸೌಧದಲ್ಲಿ ಹೈಕೋರ್ಟ್ ಜಡ್ಜಿಯರಾದ ಮ॥ ಮುತ್ತುಸಾಮಿಅಯ್ಯರವರು, ಅಲ್ಲಿ ನೆರದಿದ್ದ ಬಾಲಕರನ್ನುದ್ದೇಶಿಸಿ ಉಪನ್ಯಾಸಮಾಡಿದಾಗ, ಈಗ ಮದರಾಸ್ ಯೂನಿವರ್ಸಿಟಿಗೆಸಂಬಂಧಪಟ್ಟಂತೆ ೧,೫೦೦ಮಂದಿಗಿಂತ ಜಾಸ್ತಿಯಾಗಿ ಬಿ. ಎ. ಪ್ಯಾಸ್ ಮಾಡಿದವರು ಇದಾರೆಂತಲೂ, ೬,೦೦೦ ಮಂದಿ ಅಂಡರ್ ಗ್ರಾಜ್ಯುಯೇಟ್ (ಎಫ್. ಎ.) ಗಳೂ ಮೆಟ್ರಿಕ್ಯುಲೇಷನ್‌ಪ್ಯಾಸ್ ಮಾಡಿದವರು ಸಹ ಇರುತ್ತಾರೆಂತಲೂ ತಿಳಿಸಿದರು. ಇದಲ್ಲದೆ ಮದರಾಸ್ ಕ್ರಿಶ್ಚಿಯನ್ ಕಾಲೀಜ್ ಒಂದರಲ್ಲಿ ತತ್ಕಾಲದೊಳು ಎಫ್. ಎ, ಬಿ. ಎ. ಈ ಎರಡುಗತಿಗಳಲ್ಲಿಮಾತ್ರ ೫೩೭ ಮಂದಿ ಓದುತಲಿರುವಂತೆ ತಿಳಿಯಬರುತಿದೆ. ಸದರೀ ಸಂಖ್ಯೆಯಪೈಕಿ ಮದರಾಸ್ ಕಸಬೇಯವರು, ೧೬೫, ಗಂಜಾಂ ಡಿಸ್ಟ್ರಿಕ್ಟಿನವನು ೧, ವಿಶಾಖಪಟ್ಟಣದವರು ೧೧ಜನ, ಗೋದಾವರೀಡಿಸ್ಟ್ರಿಕ್ಟಿನವನೊಬ್ಬನು, ಕೃಷ್ಣಾಡಿಸ್ಟ್ರಿಕ್ಟಿನವರು ೧೩, ಹೈದರಾಬಾದ್‌ನವರು ೨, ನೆಲ್ಲೂರಿನವರು ೨೩, ಚೆಂಗಲ್ಪಟ್ಟಿನವರು ೬೦, ಉತ್ತರ ಆರ್ಕಾಟ್ ಡಿಸ್ಟ್ರಿಕ್ಟಿನವರು ೫೨, ದಕ್ಷಿಣ ಆರ್ಕಾಡಿನವರು ೯, ಪುದುಚ್ಚೇರಿಯವರು ೨, ಪುದುಕೋಟೆಯವರು೩, ತಂಜಾವೂರಿನವರು೭೮, ತಿರುಚನಾಪಲ್ಲಿಯವರು೧೦,ಮಧುರೇಯವರು೨೫ ತಿರುನೆಲ್ವೇಲಿಯವರು ೨೯, ಶೇಲ್ಯದವರು ೨೩, ಕೊಯಂಬತ್ತೂರಿನವರು ೧೭, ಕರ್ನೂಲಿನವರು ೨, ಕಡಪೆಯವರು ೭, ಮಲಯಾಳದವರು ೧೮, ಮೈಸೂರಿನವರು೨೦, ದಕ್ಷಿಣಕನಡಾಡಿಸ್ಟ್ರಿಕ್ಟಿನವರು ೬ ತಿರುವಾಂಕೂರಿನವರು ೧೨, ಕೊಚ್ಚಿಯವರು೫, ಸಿಲೋನ್‌ದ್ವೀಪದವರು ೨, ಜೆಲ್ಲಾಂನವರು೧, ಕೊಡಗಿನವರು೫, ಈಪ್ರಕಾರ ಆಯಾಡಿಸ್ಟ್ರಿಕ್ಟುಗಳಿಂದಬಂದು ವಿದ್ಯಾರ್ಥಿಗಳು, ತಮ್ಮ ಉಪಪತ್ತ್ಯನುಪಪತ್ತಿಗಳನ್ನು ಸಹ ಚಿಂತಿಸದೆ ಇಷ್ಟಮಿತ್ರರನ್ನೆಲ್ಲಬಿಟ್ಟು ದೇಹ ಸೌಖ್ಯಮಂಬಯಸದೆ ಕಾಲದಲ್ಲಿ ನಿದ್ರೆ ಮತ್ತು ಆಹಾರಗಳಂ ಉಪೇಕ್ಷಿ

ದೊಳಗನೆ ಓದುತಲಿದಾರೆ. ಇವರ ಶ್ರಮವನ್ನು ಗವರ್ನಮೆಂಟನವರು ಪುರಸ್ಕರಿಸತಕ್ಕ ಕ್ರಮ ಹ್ಯಾಗುದರೆ—ಗತವಾರದ ಫೋರ್ಟಸೇಂಟಿಜಾರ್ಜ್ ಗೆಜೆಟಿನಲ್ಲಿ ಗತಸಂವತ್ಸರದೊಳು ಆಯಾಡಿಸ್ಟ್ರಿಕ್ಟ್ ಲವಾಜಮೆಯನ್ನು ತಗ್ಗಿಸಿದ್ದರಿಂದ ನೌಕರಿಯೋವವರಹೆಸರು, ಅಧಿಕಾರ, ವೇತನ ಮೊದಲಾದ ತಪ್ಸೀಲಗಳುಳ್ಳ ಪಟ್ಟಿಯೊಂದು ಪ್ರಕಟಿಸಲ್ಪಟ್ಟದೆ. ನಾವು ವಿಶೇಷ ಅಕ್ಕರೆಯಿಂದನೆ ಸದರೀ ಪಟ್ಟಿಯನ್ನು ಸಮಗ್ರವಾಗಿ ಓದಿ ನೋಡಿದೆವು ಅನಂತಪುರಡಿಸ್ಟ್ರಿಕ್ಟ್ ಮತ್ತು ಮದರಾಸಿನಲ್ಲಿ೫೫ ಚಿತ್ತೂರಿನಲ್ಲಿ೧, ದಕ್ಷಿಣ ಅರ್ಕಾಡಿನಲ್ಲಿ೩, ಬಳ್ಳಾರಿಯಲ್ಲಿ ೧೭, ದಕ್ಷಿಣ ಕನಡಾದಿನಲ್ಲಿ ೩೦, ಚೆಂಗಲ್ಪಟ್ಟನಲ್ಲಿ ೨೫, ಕಡಪೆಯಲ್ಲಿ ೪, ಗಂಜಾಂನಲ್ಲಿ ೩, ಗೋದಾವರಿಯಲ್ಲಿ ೩, ಕರ್ನೂಲಿನಲ್ಲಿ ೧, ಮಲಬಾರಿನಲ್ಲಿ೬, ನೆಲ್ಲೂರಿನಲ್ಲಿ ೫೫, ಸೇಲಂನಲ್ಲಿ ೩, ತಿರುನಲ್ವೇಲಿಯಲ್ಲಿ ೩, ತಿರುಚನಾಪಲ್ಲಿಯಲ್ಲಿ ೧೪, ವಿಶಾಖಪಟ್ಟಣದಲ್ಲಿ ೪, ಮದರಾಸಿಸೆಕ್ರೇಟರಿಯೇಟ ಡಿಪಾರ್ಟಮೆಂಟಿನಲ್ಲಿ ೧೧೩, ಸೀಕಸ್ಟಂ ಆಫೀಸನಲ್ಲಿ೭, ಜನರಲ್ ಸ್ಟಾಂಪ ಆಫೀಸನಲ್ಲಿ ೧೩, ಇನಾಂ ಕಮಿಶ್ನರ ಆಫೀಸನಲ್ಲಿ ೧೭, ಈ ಪ್ರಕಾರ ಒಂದು ಸಂವತ್ಸರದಲ್ಲಿ ೩೯೦ ಮಂದಿಗಿಂತ ಮೇಲ್ಪಟ್ಟವರಿಗೆ ಜೀವನಗಳು ಹೋದವದರಿಂದ ಅವರಕುಟುಂಬಗಳು ಜೀವನಾಧಾರವಿಲ್ಲದೆ ಮೊರೆಯಿಡುತಲಿರುವಂತೆ ತಿಳಿಯಬರುತಿದೆ. ರಿಡಕ್ಷನ್‌ಎಂಬುದು ಅದ್ಯಾಪಿ ಪೂರೈಸಿದಂತೆ ತೋರಲಿಲ್ಲವಾಗಿ ಈವರುಷದೊಳು ಇನ್ನೆಷ್ಟುಕುಟುಂಬಗಳಿಗೆ ಜೀವನನಾಶವುಂಟಾಗಬೇಕಾಗಿದೆಯೋ ತಿಳಿಯಲಿಲ್ಲವು ಇದಲ್ಲದೆ ಸಾವರ್ನವಾಗಿ ವಿದ್ಯಾರ್ಜನೆಗೆ ಕವಡೆ ಮಾಡಬೇಕೆಂಬ ಸಂಕಲ್ಪದೊಡನೆ ಒಂದು ಕಮಿಟಿ ಯೋಜನೆಯಾಗಿ ಅವರ ಮೆಂಬರಗಳು ಪ್ರಥಮತಃ ಸೈನಿಕ ಖರ್ಚ ತನಿಖೆಗೆ ಉಪಕ್ರಮಿಸಿದ್ದಾರೆ. ಇವರ ತನಿಖೆಗೆ ಇನ್ನೆಷ್ಟು ಕುಟುಂಬಗಳನ್ನು ಬಲಿ ಕೊಡಬೇಕಾಗುವದೋ ತಿಳಿಯಲಿಲ್ಲವು. ಪ್ರತಿಸಂವತ್ಸರದಲ್ಲಿ ಪ್ಯಾಸಮಾಡುವಂಥಾ ವಿದ್ಯಾರ್ಥಿಗಳ ಸಂಖ್ಯೆಯು ಈಗಿರತಕ್ಕ ಉದ್ಯೋಗಸ್ಥರ ಸಂಖ್ಯೆಗಿಂತಲೂ ಹೆಚ್ಚಾಗಿದೆ. ಉದ್ಯೋಗಸ್ಥರಿಗೆಸರಿಯಾದ ಪಗಾರ ಕೊಡುವದು ಸಹ ಬಹಳ ದುರ್ಲಭವಾಗಿದೆ. ವಿದ್ಯೆಯು ಕೇವಲ ಅಭ್ಯಾಸದಿಂದಲೇ ಯಾಗಲಿ, ಬುದ್ಧಿಜಾತಿಯಿಂದಲೇ ಯಾಗಲಿ, ಲಭಿಸುವದೆಂದು ಎಣಿಸಲಾಗದು ಇದಕ್ಕೆ ಅವರವರ ವಂಶ ಸಹ ಬಹಳಮಟ್ಟಿಗೆ ಕಾರಣವಾಗುತಿದೆ. ಗವರ್ನಮೆಂಟನವರು ಲಕ್ಷಾಂತರ ರೂಪಾಯಿಗಳನ್ನು ವ್ಯಯಮಾಡಿ ಸ್ಕೂಲಿಗಳನ್ನಿದವದಕ್ಕೆ ತನ್ಮೂಲಕ ಪ್ರಬಲಗತಕ್ಕ ನ್ಯೂನತೆಯನ್ನು ಮತ ದಾರುಪದ್ಯೇಣ ವಿದ್ಯಾಹೀನರಾಗಿರುವವರು ವಿಶೇಷತಃ ಅನುಭವಿಸಬೇಕಾಗುವದು. ಪ್ರತಿ ಸಂವತ್ಸರದಲ್ಲಿಯೂ ಯೂನಿವರ್ಸಿಟಿಯ ಗ್ಜಾಮಿನೇಶನ್ನಗಳಲ್ಲಿ ತೇರ್ಗಡೆಯಾಗತಕ್ಕ ವಿದ್ಯಾರ್ಥಿಗಳ ಸಂಖ್ಯೆಯು ಪ್ರತಿ ಇತರ ಜಾತಿಯವರಿಗಿಂತಲೂಬ್ರಾಹ್ಮಣರಸಂಖ್ಯೆಅಧಿಕವಾಗಿರುತಿದೆ. ಹೈದರಾಬಾದ ಮುಂತಾದ ಸಂಸ್ಥಾನಗಳಲ್ಲಿ ಸರಕಾರದವರು ಇದುವರಿವಿಗೆ ಸ್ಕೂಲಿಗಳನ್ನಿಡಿಸಿ ಜನಗಳಿಗೆ ವಿದ್ಯಾಭ್ಯಾಸ ಮಾಡಿಸದೇ ಇದ್ದಾಗ್ಯೂ ಬಹುಮಂದಿ ಬ್ರಾಹ್ಮಣರೂ,(ಕಾಯಸ್ತ)ಕ್ಷತ್ರಿಯರೂ ಸ್ವತಃ ವ್ಯಾಸಂಗಮಾಡಿ ಫಾರಸೀಮುಂತಾದ ಭಾಷೆಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿ ಸರ್ಕಾರದ ನೌಕರಿಗಳನ್ನು ಪಡೆದಿರುತ್ತಾರೆ. ಏತೇನ ಬ್ರಾಹ್ಮಣರು ಅನ್ಯರಿಗಿಂತಲೂ ವಿದ್ಯಾಪ್ರಯೋಜನವನ್ನು ಬಹಳವಾಗಿ ಅಪೇಕ್ಷಿಸುವ ಸ್ಥಿತಿಯೊಳಿರುವದರಿಂದ ಅವರಿಗೆ ಅದೇ ಮುಖ್ಯ ಕಸಬಾಗಿ ಯೇರ್ಪಟ್ಟು ಅವರ ಸಂಖ್ಯೆಯು ಅಧಿಕವಾಗುವುದಕ್ಕೆ ಕಾರಣವಾಯಿತು ಈಗ ಹತ್ತು ಹದಿನೈದು ಸಂವತ್ಸರಗಳ ಕಾಲ ಶ್ರಮಪಟ್ಟು ವಿದ್ಯಾಭ್ಯಾಸ ಮಾಡಿ ದೊಡ್ಡ ಪರೀಕ್ಷೆಗಳನ್ನು ಕೊಟ್ಟಾಗ್ಯೂ ಅಂತವರಿಗೆ ಒಂದು ಅಟೆಂಡರ ಕೆಲಸ ಕೂಡ ದೊರೆಯುವದು ಪ್ರಯಾಸವಾಗಿರುತಿದೆ. ಹೀಗಿರುವಲ್ಲಿ ಮದರಾಸ ಗವರ್ನಮೆಂಟನವರು ಈಚೆಗೆ ತಂಜಾವೂರು, ಕಡಪೆ ಡಿಸ್ಟ್ರಿಕ್ಟಗಳಲ್ಲಿರುವ ಬ್ರಾಹ್ಮಣರಿಗೆ ಅಲ್ಲಿ ನೌಕರಿಗಳನ್ನು ಕೊಡುವದಿಲ್ಲವೆಂದು ಗೆಜೆಟಿನಲ್ಲಿ ಪ್ರಸಿದ್ಧಿಮಾಡಿದರು. ಇದಕ್ಕೆಕಾರಣವನ್ನು ಯೋಚಿಸಲಾಗಿ ತೋರುವದೇನಂದರೆ—ಸದರೀ ಡಿಸ್ಟ್ರಿಕ್ಟಗಳಲ್ಲಿ ಇತರಾಪೇಕ್ಷಯಾ ಬ್ರಾಹ್ಮಣರಸಂಖ್ಯೆ ಅಧಿಕವಾಗಿರುವದು, ಅಥವಾ ಸರಕಾರಿ ನೌಕರರಮೇಲೆ ಬರತಕ್ಕ ಫಿರ್ಯಾದುಗಳು ಪ್ರತಿ ಬ್ರಾಹ್ಮಣರಮೇಲೆ ಅಧಿಕವಾಗಿಬರುವದು, ಈ ಎರಡಕ್ಕಿಂತಬೇರೊಂದೂ ಇಲ್ಲವು ಒಂದುಜಾತಿಯವರು ಏಕತ್ರಸೇರಿದ್ದ ಪಕ್ಷಕ್ಕೆ ಅವರನ್ನು ಇತರ ಡಿಸ್ಟ್ರಿಕ್ಟಗಳಿಗೆ ವರ್ಗಮಾಡಬಹುದು. ಅಂತವರಮೇಲೆ ಫಿರ್ಯಾದಿ ಹೆಚ್ಚಾಗಿಬಂದರೆ, ಪರಸ್ಥಳದವರನ್ನು ಕರೆಸಿಕೊಳ್ಳಬಹುದು, ಹಾಗಿಲ್ಲದೆ ಜಾತಿಯನ್ನು ನಮೂದಿಸಿ ಮೇಲೆಕಂಡತೆ ಹುಕುಂ ಕೊಟ್ಟದ್ದು ಮದರಾಸ ಗವರ್ನಮೆಂಟನವರ ಅಲ್ಪತನವನ್ನು ಹೊರಪಡಿಸದಿರುವದಿಲ್ಲವು, ಉತ್ತಮಜಾತಿಯವರ ಪ್ರಾಬಲ್ಯದಲ್ಲಿಯೂ ಅವರ ವಿದ್ಯಾಬುದ್ಧಿವಿವೇಕ ಚಾತುರ್ಯಾದಿಗಳಲ್ಲಿಯೂ ಗವರ್ನಮೆಂಟನವರಿಗೆ ಈಗ ಉಂಟಾಗಿರುವ ಅಸಹಿಷ್ಣುತೆಯೇ ಇವುಗಳಿಗೆಲ್ಲ ಮುಖ್ಯಕಾರಣವಾಗಿರುತಿದೆ. ಬ್ರಾಹ್ಮಣಾಪೇಕ್ಷಯಾ ಇತರರಲ್ಲಾದರೂ ಅವರಿಗೆ ಅಭಿಮಾನ ಪ್ರೇಮಂದರೆ ಅವರಲ್ಲಿಸಹ ಇರುವಂತೆ ಕಾಣಿಸಲಿಲ್ಲವು.

ಸ್ಕೂಲಫೀಗಳನ್ನೆಲ್ಲ ೧೦ —ಾರುತೆ ಜಾಸ್ತಿ ಮಾಡಬೇಕೆಂತಲೂ, ಅವುಗಳನ್ನು ಜನರಿಂದ ಕುದಾಯಿಮಂತೆ ಒಂದುಸಾರಿ ರುಸುಮನ್ನೆಲ್ಲ ಕಿಸ್ತುವಾರಾಗಿ ಒಂದೆರಡಾವರ್ತಿಯಲ್ಲೇ ವಸೂಲ್ಮಾಡತಕ್ಕದ್ದೆಂತಲೂ ಹುಕುಂ ಕೊಟ್ಟಿರುತ್ತಾರೆ. ಪರೀಕ್ಷೆಗಳಿಗೆ ಕಟ್ಟತಕ್ಕ ಮೊಬಲಗಿನ ದರಗಳನ್ನೆಲ್ಲ ಕ್ರಮವಾಗಿ ಮೂರು ನಾಲ್ಕರಷ್ಟು ಹೆಚ್ಚಿಸುತ ಬಂದರು. ವಿದ್ಯಾರ್ಥಿಗಳು ಸಮರ್ಥರಾಗಿ ಹೆಸ್ಸಾಗಿ ಜವಾಬಕೊಟ್ಟದಾಗ್ಯೂ ಬಹುಮಂದಿಯನ್ನು ಏಕಕಾಲದಲ್ಲಿ ಪ್ಯಾಸಮಾಡಿಸುವದಿಲ್ಲವು. ಅಂತವರು ಯಾರಾದರೂ ರಿವಣೆ ಇಮತ್ತೇನೆಂದುಕೇಳಿ ತಮ್ಮಜವಾಬಕಾಗದಗಳನ್ನುವಾಪಸಕೊಡಬೇಕೆಂದುಅಪೇಕ್ಷಿಸಿದರೆತಮ್ಮ ಗುಟ್ಟು ಹೊರಗಾಗುವದೆಂಬ ಶಂಕೆಯಿಂದ ಸುತರಾಂ ... ಪ್ರತಿಗಳ ತೋರದವರನ್ನು ... ಕೇಳಿದ ಹೊದಾಗ್ಯೂ ಅವರು ತಮ್ಮ ... ಸಹ ದಾರಾಳವಾಗಿ ಕೇರಿ ಉಚ್ಚರಿಸಲಾಗದೆಂದು ನಿರ್ಬಂಧರಿಸಿರುತ್ತಾರೆ ವಿದ್ಯಾವಂತರ ಅಭಿಪ್ರಾಯಗಳನ್ನು ಕೇಳಿ ಪುರಸ್ಕರಿಸುವವಿಷಯವನ್ನು ಕುರಿತು ತಿಳಿಸಿದೆ ಕಾಮದೇ ಇಲ್ಲವು. ಇತರವಿಷಯ ಜನಗಳು ಜೀವಿಸುವದನ್ನುನೋಡಿ ಸಂತೋಷಿಸುವಷ್ಟು ಸ್ಥೈರ್ಯವು ಗವರ್ನಮೆಂಟನವರಿಗೆ ಇಲ್ಲದ್ದರಿಂದ ಕಷ್ಟಾರ್ಜಿತದ್ರವ್ಯದಲ್ಲಿ ಸಹ (ಇಂಕಂ ಟ್ಯಾಕ್ಸಮೂಲಕ) ಭಾಗಭಾಕಿಗಳಾಗಿದ್ದಾರೆ. ಮುಖ್ಯವಾಗಿ ಇವುಗಳನ್ನೆಲ್ಲ ನೋಡುವಲ್ಲಿ ಗವರ್ನಮೆಂಟನವರಿಗೆ ಹಿಂದೂಗಳವಿಷಯದಲ್ಲಿ ಅಭಿಮಾನವೆಂಬದು ಕುದ್ಯಾಂಗೆ ಇಲ್ಲವೆಂದೇರ್ಪಡುತಿದೆ. ಗವರ್ನಮೆಂಟನವರು ಹಿಂದೂಜನಗಳ ಪ್ರಾಭವಾಭಿವೃದ್ಧಿಯಲ್ಲಿ ಬಹಳ ಅಕ್ಕರೆಯುಳ್ಳವರಾಗಿದ್ದೇವೆಂದು ತಿಳಿಸುತ ಸಾಕ್ಷಾದ್ವಿರುದ್ಧಗಳಾದ ಕೃತ್ಯಗಳನ್ನು ನಡೆಸುತಲಿರುತ್ತಾರೆ. ನೇಟಿವಗಳನ್ನೇ ಉನ್ನತಾಧಿಕಾರಗಳಲ್ಲಿ ನೊಕರರ್ಮಾಡಬೇಕೆಂಬ ಉತ್ಸಾಹವುಳ್ಳವರಾಗಿದೇವೆಂದು ಹೇಳುತ ಗವರ್ನಮೆಂಟ ನೌಕರಿಯು ಸಾಧಾರಣವಾಗಿ ಕೊಡಲ್ಪಡಲಾರದೆಂದು ನಿರಾಕರಿಸುತ್ತಾರೆ. ಇಂಡ್ಯದೇಶೀಯರೆಲ್ಲರೂ ವಿದ್ಯಾವಂತರಾಗುವದುನೋಡಿ ಸಂತೋಷಿಸಬೇಕೆಂಬ ಕೋರಿಕೆಯುಳ್ಳವರಾಗಿದೇವೆಂದು ನುಡಿಯುತ ಅವರಿಗೆಉನ್ನತವಿದ್ಯಾಭ್ಯಾಸ ಅಂದರೆ ವಿಶೇಷಶಾಸ್ತ್ರಜ್ಞಾನವನ್ನುಂಟುಮಾಡಕೂಡದೆಂದುಸುಚುತ ಅಂತಾ ತಪ್ಪಂಜಕಗಳಾದ ಪ್ರಯತ್ನಗಳನ್ನೇ ಮಾಡುತ್ತಾರೆ. ಇಂಡ್ಯದೇಶೀಯರಿಗೆ ಸ್ವಾತಂತ್ರ್ಯ ಕಲ್ಪನದೊಳು ದೃಢಾಭಿಪ್ರಾಯವುಳ್ಳವರಾಗಿದೇವೆಂದು, ಪ್ರಕಟಿಸುತ ಜನಗಳು ತಮ್ಮ ಸಂಕಟವನ್ನು ಸಹ ತಿಳಿಸಕೂಡದೆಂಬಷ್ಟು ನಿರ್ಬಂಧಗಳನ್ನುಂಟುಮಾಡುತಲಿದಾರೆ. ಇಂಡ್ಯದೇಶದ ಐಶ್ವರ್ಯಾಭಿವೃದ್ಧಿಯಲ್ಲೇ ಆಸಕ್ತರಾಗಿದೆವೆಂದು ಪ್ರಶಂಸಿಸಿಕೊಳ್ಳುತ ಅದನ್ನು ಸಾಧ್ಯವಾದಷ್ಟುಮಟ್ಟಿಗೆ ನಿರ್ಭಾಗ್ಯಸ್ಥಿತಿಗೆ ತರುವ ಪ್ರಯತ್ನದೊಳಿದಾರೆ. ನೇಟಿವ ಸಂಸ್ಥಾನಾಧಿಪತಿಗಳ ಕೀರ್ತಿ ಪ್ರಾಶಸ್ತ್ಯಗಳೇ ತಮ್ಮದೆಂತಲೂ ಅವರ ಸುಖಸಂತೋಷಗಳೇ ತಮಗೆ ಅಪೇಕ್ಷಿತವಾದವೆಂತಲೂ ಹೊಗಳಿಕೊಳ್ಳುತ ಅವರನ್ನು ಅನಾಮಧೇಯರನ್ನಾಗಿ ಮಾಡಲಿಕ್ಕೆ ಬೇಕಾದ ಉಪಾಯಗಳನ್ನು ಹುಡುಕುತಲಿರುತ್ತಾರೆ. ನಮಗೆ ರಾಜ್ಯಾಭಿಲಾಷೆ ಸುತರಾಂ ಇರುವದಿಲ್ಲವೆಂದು ಹೊರಗೆ ಹೇಳುತ ಒಳಗೆ ಯಾವರಾಜ್ಯವು ದಾಖಲಿಗೆ ಯೋಗ್ಯವಾಗಿದೆಯೆಂದು ಹೊಂಚುಹಾಕಿ ನೋಡುತಲಿರುತ್ತಾರೆ. ನೇಟಿವಸಂಸ್ಥಾನಗಳ ಆಧಿಪತ್ಯವನ್ನು ಕ್ರಮವಾಗಿ ಅವುಗಳ ವಾರಸದಾರರಿಗೇನೇ ಕೊಡುತ್ತೇವೆಂದು ಪ್ರಕಟಿಸುತ ಬಲಾತ್ಕಾರದಿಂದ ರಾಜ್ಯಗಳನ್ನು ದಾಖಲ್ಮಾಡಿಕೊಳ್ಳುತಲಿದಾರೆ ಪ್ರಜೆಗಳ ಜಾತಿ ಮತಸಂಬಂಧಗಳಾದ ವಿಷಯಗಳಲ್ಲಿ ತಾವು ಕುದ್ಯಾಂಗ ಪ್ರವೇಶಿಸುವದಿಲ್ಲವೆಂದು ಸಿದ್ಧವಿಸುತ ಯೆಲ್ಲವರಲ್ಲಿಯೂ ತಮ್ಮಅಧಿಕಾರವನ್ನು ಚಲಾಯಿಸುತಲಿರುತ್ತಾರೆ. ಮುಖ್ಯವಾಗಿ ಬ್ರಿಟಿಷ ಪಾಲಿಸಿ ಎಂಬ ಶಬ್ದಕ್ಕೆ ಈಗ ಜನಗಳು ತಿಳಿದುಕೊಂಡಿರುವದು ಅರ್ಥವಲ್ಲವು. ಇವರ ತಕ್ತ್ಯರ್ಥವು ಅವಲಾಭವೆಂದು ಅರಿಯುವದು.

Occasional Note
ನೈಮಿತ್ತಿಕವಿಷಯಸ್ಯಾಸ

The late Rabahadur T. Gopala Row B. A.—ಮದರಾಸ ಪ್ರೆಸಿಡೆನ್ಸೀಕಾಲೇಜಿನಲ್ಲಿ ಹಿಸ್ಟರೀ ಪ್ರೊಫೆಸರಾಗಿದ್ದ ರಾವಬಹದ್ದುರ ಟಿ. ಗೋಪಾಲರಾಯರವರು ಗತ ಸೋಮವಾರದಿನರಾತ್ರಿ ಮೈಲಾಪೂರಿನಲ್ಲಿ ಕಾಲಗತಿಯನ್ನೈದಿದರೆಂಬ ವೃತ್ತಾಂತವನು ಕೇಳಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಈಪೊಸ್ತ ಮನುಷ್ಯರು ಪ್ರಸಿದ್ಧಸುಧಿತರಾಗಿಯೂ ಗೌರವ್ಯರಾಗಿಯು ಯಿದ್ದರು. ಇವರು ಪ್ರಥಮತಃ ೧೮೪೫ನೇಇಸವಿಯಲ್ಲಿ ಕುಂಭಕೋಣಂ ಪ್ರೊವಿನ್ಶಿಯಲ ಸ್ಕೂಲಿನೊಳು ಮಾಹೆಯವಾರಾ ೬೦ ರೂಪಾಯಿಗಳ ಸಂಬಳದ ... ಸಿಸ್ಟಂಟ ಮಾಸ್ಟರಾಗಿ ನೇಮಕರಾದವರಾದ ಅಲ್ಲಿಂದ ಕ್ರಮೇಣ ಅಭಿವೃದ್ಧಿಗೊಂಡು ಈಗ ಮಾಹೆಯವಾರಾ ೭೦೦ ರೂಪಾಯಿಗಳ ಸಂಬಳ ಪಡೆಯುತಲಿದ್ದರು. ಇವರಿಗೆ ಪ್ರಾಯವಾಗಿದ್ದ ಬಹುಮೂತ್ರರೋಗವೇ ಇವರ ಮರಣಕ್ಕೆ ಈಗ ಕಾರಣವಾಯಿತೆಂದು ತಿಳಿಯಬರುತಿದೆ. ಮಿಸ್ಟರ ಗೋಪಾಲರಾಯರವರಿಗೆ ಈಗ ೫೭ ವರುಷಗಳ ವಯಸ್ಸಾಗಿದ್ದರೂ ಇವರ ಬೋಧಕಶಕ್ತಿಯು ಅತ್ಯಾಶ್ಚರ್ಯಕರವಾಗಿದ್ದಾಗಿತ್ತು. ಇವರ ಪಾಂಡಿತ್ಯವು ಅಸಾಧಾರಣವಾದದ್ದೆಂಬದಕ್ಕೆ ಇವರ ವಿದ್ಯಾರ್ಥಿಗಳೇ ಮುಖ್ಯ ನಿದರ್ಶನವಾಗಿದಾರೆ. ಮಿ॥ ಗೋಪಾಲರಾಯರವರ ಮರಣವು ಅಪ್ರತೀಕಾರವಾದ ಪ್ರಬಲ ನಷ್ಟರೂಪವಾಗಿರುತಿದೆ. ಇವರ ಪುತ್ರರೊಬ್ಬರುಈಗ ಈಸಂಸ್ಥಾನದನೌಕರಿಯೊಳಿರುವಂತೆ ತಿಳಿಯಬರುತಿದೆ.

Mr Grant Duff – ಮದರಾಸ ಗವರ್ನರಾದ ಮಿ॥ ಗ್ರಾಂಟಡಫೆಯವರು ಕುರಿತು ಕಲ್ಕತ್ತಾ ಇಂಡ್ಯನ ಮಿರರಯೆಂಬ ಪತ್ರಿಕೆಯು ತಿಳಿಸುವದೇನಂದರೆ,—"ಮದರಾಸ ಗವರ್ನರಾದ ಮಿಸ್ಟರ ಗ್ರಾಂಟಡಫೆಯವರು ಈದೇಶಕ್ಕೆ ಇದುವರಿವಿಗೆ ಗವರ್ನರಾಗಿ ಬಂದವರೆಲ್ಲರಿಗಿಂತಲೂ ಬಹಳ ವಿಚಿತ್ರ ಸ್ವಭಾವವುಳ್ಳವರಾಗಿರುತ್ತಾರೆ. ಇವರು ಈದೇಶಕ್ಕೆಬಂದು ೪½ ವರುಷಗಳಾಗುದೆಬದಾಗ್ಯೂ ಅರ್ಧಘಳಿಗೆಯ ಕಾಲವಾದರೂ ಸ್ವದೇಶೀಯರಾದ ದೊಡ್ಡಮನುಷ್ಯರೊಡನೆ ಕಲೆತು ಮಾತನಾಡಿದವರಲ್ಲವು. ಒಬ್ಬರಿಬ್ಬರುವಿನಾ ಇಂಗ್ಲಿಷಜನಗಳನ್ನು ಸಹ ಇವರುನೋಡಿದವರಲ್ಲವು. ಈದೇಶದ ವೃತ್ತಾಂತಪತ್ರಿಕೆಗಳು ವೃತ್ತಾಂತಪತ್ರಿಕೆಯೆಂಬ ವ್ಯವಹಾರಕ್ಕೆ ಸಹ ಯೋಗ್ಯವಾದವಲ್ಲವೆಂದು ಭಾವಿಸಿ ಅವುಕ್ಕೆಯಿಂದಸಹ ಮುಟ್ಟುವದಿಲ್ಲವು" ಎಂಬದು. ಈ ಅಭಿಪ್ರಾಯವನ್ನು ಪೋಷಿಸಿ ಮದರಾಸ ಆಂಧ್ರಪ್ರಕಾಶಿಕಾ ಪತ್ರಿಕೆಯು ತಿಳಿಸುತಿದೇನಂದರೆ,—ಈ ಅಂಶವು ನಿಜವಾದದ್ದೇ. ಏತದ್ದೇಶಸಂಬಂಧವಾದ ವಿಷಯಗಳನ್ನೆಲ್ಲ ಮಿ॥ ಡಫೆಯವರು ಕೇವಲ ಅಲ್ಪತ್ವೇನ ಭಾವಿಸಿದ್ದಾರೆ. ಆದರೆ ಅವರಿಗೆ ಈದೇಶದಲ್ಲಿರತಕ್ಕವೆಲ್ಲವೂ ತುಚ್ಛವಾಗಿ ತೋರಿದಮೇಲೆ ಅವರು ಇಲ್ಲಿ ಯಾತಕ್ಕೆಯಿರಬೇಕೆಂದು ಯಾರಾದರು ಕೇಳಬಹುದು. ಆದರೆ ಈದೇಶೀಯರು ಮಾತ್ರ ಕೆಲಸಗಳಲ್ಲಿಯೂ, ಅವರಶೀಲಸ್ವಭಾವಗಳಲ್ಲಿಯೂ, ಅವರಪರಿಚಯಸಾಹಚರ್ಯಗಳಲ್ಲಿಯೂ ಒಂದುವೇಳೆ ಗವರ್ನರವರಿಗೆ ಜಿಗುಪ್ಸೆಯುಂಟಾಗಿದ್ದರೂ ಅವರಸಂಬಂಧವಾದ ಅರ್ಥದಲ್ಲಿಮಾತ್ರ ಅವರು ಸ್ವಲ್ಪವೂ ಬೇಸರಗೊಳ್ಳಲಾರರು. ಆದದರಿಂದಲೇ ಇಲ್ಲಿ ಪ್ರಂಟಾದ ಇಷ್ಟರ ಉತ್ಪಾತಗಳಿಗೆಲ್ಲ ಒಡ್ಡಿಕೊಂಡು ಕ್ಲುಪ್ತಕಾಲವಾದ ೫ಸಂವತ್ಸರಗಳನ್ನು ಹ್ಯಾಗಾದರೂ ಕಳೆಯಬೇಕೆಂದು ದ್ವೇಶಿಸಿದ್ದಾರೆ. ರಾಜ್ಯಾವಳತದಲ್ಲಿ ಅವರಿಲ್ಲಿಯಿದ್ದು ನಿರ್ವಹಿಸಬೇಕಾದದ್ದೊಂದೂ ಯಿರುವದಿಲ್ಲವು. ಅವರ ಕೆಲಸಗಳನ್ನೆಲ್ಲ ನಡಿಸಲಿಕ್ಕೆ ಮಿಸ್ಟರ ಥಾಮಸ ಮಿ॥ ಸರಿವೆ ಮುಂತಾದ ಆಲೋಚಕರೇಸನ್ನದ್ಧರಾಗಿದಾರೆ. ಆದರೆ ಗವರ್ನರವರು ಈದೇಶದಲ್ಲಿ ಹ್ಯಾಗೆ ತಮ್ಮಕಾಲವನ್ನು ಕಳೆಯುತ್ತಾರಂದರೆ, ಅದಕ್ಕೆಅನೇಕಮಾರ್ಗಗಳುಂಟು. ಈದೇಶದಲ್ಲಿ ವೃಕ್ಷಲತಾದಿಗಳ ಗುಣೋತ್ಪತ್ತಿ ವಿಮರ್ಶಕ ಶಾಸ್ತ್ರಜ್ಞಾನ ಸಂಪಾದನಕ್ಕೆ ಯೋಗ್ಯಗಳಾದ ವೃಕ್ಷಗಳನೇಕ ಯಿರುತಿವೆ. ಹೃದಯಾಹ್ಲಾದಕಗಳಾದ ಪರ್ವತಗಳೂ, ಗುಹೆಗಳೂ, ಆರಾಮಗಳೂ, ಕಟ್ಟಡಗಳೂ ಅನೇಕವಾಗಿರುತಿವೆ ಮೃಗಯಾವಿನೋದಕ್ಕೆ ಅನುಕೂಲಗಳಾದ ಮತ್ತು ಆರಣ್ಯಕಮೃಗಗಳಿಂದೊಡಗೂಡಿರುವ ಪ್ರದೇಶಗಳು ಸಿದ್ಧವಾಗಿವೆ. ಇನ್ನಿಗೂ ಹೊತ್ತುಹೋಗದೆ ಅಷ್ಟಸ್ವಲ್ಪವಿದ್ದರೆ ಇಂಗ್ಲಿಷಪತ್ರಿಕೆಗಳೂ ಇಂಗ್ಲಿಷಗ್ರಂಥಗಳೂ ಹಾಜರಾಗಿರುತಿವೆ. ಕದಾಚಿತ ಇವುಗಳೆಲ್ಲೆಲ್ಲ ಅವರಿಗೆ ಬೇಸರಿಕೆ ಪ್ರಂಟಾದರೆ ಆಗಅವರನ್ನುಸಂತೋಷಪಡಿಸಲಿಕ್ಕೆ ನೃತ್ಯ ಗೀತ ವಾದ್ಯಗಳು ಇರದೇ ಯಿವೆ. ಒಂದು ಪ್ರಸಿದ್ಧಸಿಯ ಬಾಲಕರಾದವರಿಗೆ ಕಾಲಹರಣಕ್ಕೆ ಇಷ್ಟುವಿಧ ಮಾರ್ಗಗಳೇರ್ಪಟ್ಟಿರುವಲ್ಲಿ ಇವುಗಳನ್ನೆಲ್ಲಬಿಟ್ಟು ಅವರು ಮಾಡ ...ಕಾದ್ದೇನಿದೆ ಅಯ್ಯೊ! ಈಗ ಅವರು ಮಾಡುವದೇ ... ದಲ್ಲಿ ತಾವು ಸಾಲದೆಯೆಂದು ವಾಗ ... ತಲಿಗೆ ಇತರ ಕೆಲಸಗಳನ್ನು ಸಹ ಮಾಡಬೇಕೆಂದು ಅಪೇಕ್ಷಿಸುವದು ಯೆಷ್ಟರಅನ್ಯಾಯವು! ಛೀ, ಛೀ, ಜನಗಳಿಗೆ ಇದು ಕುದ್ಯಾಂಗ ಯೋಗ್ಯವಲ್ಲವು.

LOCAL AND PROVINCIAL NEWS
ಸ್ಥಳದೇಶಮತ್ತುತಾಲ್ಲೂಕುಪ್ರಾಂತೀಯವೃತ್ತಾಂತಗಳು.

Chief Court Sessions—ಬರುವತಿಂಗಳ ೧ನೆತಾರೀಖಿನಲ್ಲಿ ಇಲ್ಲಿನ ಚೀಫಕೋರ್ಟು ಸೆಶನ ವಿಚಾರಣೆಯು ಪ್ರಾರಂಭವಾಗುವದು.

A new hospital.—ಮೈಸೂರುಸರ್ಕಾರದವರ ಹುಕುಂಅನುಸರಿಸಿ ಬೆಂಗಳೂರು ತಾಲೂಕು ಸುಪ್ಪೇಹಳ್ಳಿಯೆಂಬಗ್ರಾಮದಲ್ಲಿ ಜನಗಳ ಉಪಯೋಗಾರ್ಥ ಒಂದು ಆಸ್ಪತ್ರಿ ಮತ್ತುವೈದ್ಯಶಾಲೆ ಏರ್ಪಾಡಾಗಿರುವಂತೆ ತಿಳಿಯಬರುತಿದೆ.

A deserted village.—ಕಡೂರುತಾಲ್ಲೂಕಿಗೆ ಸೇರಿದ ನಾಗಲಾಪುರವೆಂಬ ಬೇಚಿರಾಗ ಗ್ರಾಮದಲ್ಲಿ ಮನೆಗಳು ಕಟ್ಟತಕ್ಕಬಗ್ಗೆ ಕೆಲವು ಮಂದಿ ರೈತರಿಗೆ ಮೈಸೂರು ಸರ್ಕಾರದವರು ಮುಫತ್ತಾಗಿ ಮರಗಳು ಕೊಟ್ಟರೆಂದು ಕೇಳಲಿಕ್ಕೆ ಸಂತೋಷಿಸುತ್ತೇವೆ.

A lunatic at large.—ನಾಗರ್ಕೊಯಿಲ್ ಲ್ಯೂನಾಟಿಕ ಅಸೈಲಂನಿಂದ ಈಚೆಗೆ ತಪ್ಪಿಸಿಕೊಂಡುಹೋದ ಎಲ್ಲಪ್ಪನೆಂಬವನು ಮೈಸೂರು ಸಂಸ್ಥಾನದ ಸರಹದ್ದಿನೊಳಳ್ಳಾದರೂ ದೊರತರೆ ಅವನನ್ನು ಮರಳಿ ವಸ್ತಗಿರಿ ಮಾಡತಕ್ಕದ್ದೆಂದು ಮೈಸೂರು ಗವರ್ನಮೆಂಟನವರು ಹುಕುಂಮಾಡಿರುತ್ತಾರೆ.

The Mysore Railway —ಮೈಸೂರು ಗವರ್ನಮೆಂಟಿನವರ ಅಪೇಕ್ಷೆಯಂತೆ ದಕ್ಷಿಣ ಮಹಾರಾಷ್ಟ್ರ ರೈಲ್ವೇಕಂಪೆನಿಯವರು ಇಲ್ಲಿನ ರೈಲ್ವೇ ಇಲಾಖಾ ಟ್ರಾಫಿಕ ಸೂಪರಿಂಟೆಂಡೆಂಟರಾದ ಮಿ|| [illegible]ರನ್ನು ಇನ್ನು ಕೆಲವು ದಿನಗಳ ಕಾಲ ತಮ್ಮ ನೌಕರಿಯೊಳಿಟ್ಟುಕೊಂಡಿರುವರೆಂತಲೂ, ಮುಂದೆ ಇವರಿಗೆ ಪೆನ್‌ಷನ್ ಈ ಸರ್ಕಾರದಿಂದಲೇ ಕೊಡಲ್ಪಡುವದೆಂತಲೂ, ಇವರು ಅಸಿಸ್ಟೆಂಟ ಟ್ರಾಫಿಕ ಮ್ಯಾನೇಜರೆಂದು ಕರೆಯಲ್ಪಡುವರೆಂತಲೂ ತಿಳಿಯಬರುತಿದೆ.

A disused temple — ಮುಳಬಾಗಲು ತಾಲ್ಲೂಕು ಮಾರುಪದಹಳ್ಳಿಯಲ್ಲಿರುವ ವರದರಾಜಸ್ವಾಮಿ ದೇವಾಲಯವು ಶಿಥಿಲವಾಗಿ ನಿಷ್ಪ್ರಯೋಜನವಾಗಿರುವದರಿಂದ ಅದರ [illegible] ಜಮೀನನ್ನು ಸರ್ಕಾರ್ ದಾಖಲ್ಮಾಡಿಕೊಳ್ಳುವಂತೆ ಮಹಾರಾಜಾ ಸರ್ಕಾರದವರು [illegible] ಕೊಟ್ಟಿರುತ್ತಾರೆಂದು ಬಳ್ಳಾರಿ [illegible] ಪತ್ರಿಕೆ ತಿಳಿಸುತಿದೆ [illegible] ಇದೆ [illegible] ಸ್ಕರವಾದ ಕಾರ್ಯವು

A [illegible] ಈ ಸ್ಥಾನದ [illegible] ಮಿ|| ಶೇಷಾದ್ರಿ[illegible] ನವರು ಸರ್ವಜನ [illegible] ಪರರಾಗಿ, [illegible] ಮುಂದೆ ಅವರ [illegible]ಗಳನ್ನು [illegible] ಕಲಿತ [illegible] ಪ್ರಾಪ್ತಿಗೊಳಿಸಿದರಲ್ಲದೆ, ಇ [illegible] ಗೊಳಿಸುವಿಕ್ಕೆ [illegible] ಪ್ರಯತ್ನ ಪಡಲಿಲ್ಲವಲ್ಲವೆಂದು [illegible] ಹೀಗಿರುವಾಗ [illegible] ಟಾದವರು [illegible]ಯವರು ಇಲ್ಲಿಂದ ಹಾರಿ ಹೋಗತಕ್ಕ [illegible] ರೊಳಗಾಗಿ [illegible] ಸ್ಮರಣ ದ ಉಪಕಾರವನ್ನು [illegible] ಕೆಲವು ತಾತ್ಪರ್ಯದೊಳಗೆ ಮಿ|| ಶೇಷಾದ್ರಿಅಯ್ಯರವರ ತಲೆಬನ್ನು ೫೦೦ ರೂಪಾಯಿಗಳಿಗೆ ಬಹುಮಾನವಾದರೂ ಕೊಡುವ [illegible] ಗವರ್ನಮೆಂಟಿನವರಿಗೆ ಸಿಫಾರಸ್ಸು ಮಾಡಿದ್ದಾರೆಂದು ಕೇಳುತ್ತೇವೆ

Mysore Financial Deptt.—ಮರಮ್ಮತ್ತು ಇಲಾಖಾ [illegible] ಮಿ|| [illegible]ರವರು ಇಲ್ಲಿನ [illegible] ನಿವೃತ್ತಿಸಿಕೊಂಡು ಹೋಗುವದರಿಂದ ಅವರ ಕೆಲಸವನ್ನು [illegible] ಅಕೌಂಟಂಟ ಜನರಲ್ ಮಿ|| ರಂಗಸ್ವಾಮಿ [illegible] ಗಾರ್ರವರು ನಡೆಯುವಂತೆ [illegible] ಇಲಾಖಾ ಕೆಲಸವನ್ನು [illegible] ವರಿಗೆ [illegible] ಕೇಳುತ್ತೇವೆ ಮಿ|| ರಂಗಸ್ವಾಮಿಅಯ್ಯಂಗಾರ್‌ರವರಿಗೆ [illegible] ಪಡೆಯುವದಲ್ಲದೆ [illegible] ವಿಶ್ರಮಿಸುವ [illegible] ಕಡಿಮೆಯಾಗಿರುವದರಿಂದ [illegible] ಕೆಲಸ [illegible] ಅವರಿಗೆ ಕೊಡುವುದೋ [illegible] ತಿಳಿದಿಲ್ಲವಾದ್ದರಿಂದ [illegible] ಶವಾಗಿರುತಿದೆ

Govt Printing Office —ಗವರ್ನಮೆಂಟು ಪ್ರಿಂಟಿಂಗ ಆಫೀಸು ಸೂಪರಿಂಟೆಂಡೆಂಟರಾಗಿದ್ದ ಮಿ|| [illegible]ರವರು ನಿವೃತ್ತರಾದಮೇಲೆ ಅವರ [illegible] ಮ[illegible] ಪೋಷಿಸುವ [illegible] ತ್ಯಕತಿ [illegible] ಇವರು [illegible] ಮಿ|| [illegible] ವಿಚಾರಣಾಧಿಕಾರಕ್ಕೆ [illegible] ಹುಡುಗರು [illegible] ಸ್ಯವಾಗುವದಲ್ಲದೆ ಎಂಬ ವೃತ್ತಾಂತವು [illegible] ಸಂತೋಷವನ್ನುಂಟುಮಾಡುತಿದೆ

Births and deaths —ಕಳೆದತಿಂಗಳ ೨೩ನೇ ತಾರೀಖಿಗೆ ಕೈದಾದವಾರದ [illegible] ರಿಪೋರ್ಟಿನಿಂದ ಮೈಸೂರು ಬೆಂಗಳೂರು ಷಹರ್‌ಗಳ ಸ್ಥಿತಿ ತಿಳಿಯಬರುತಿದೆ. ಮೈಸೂರಲ್ಲಿ ಹುಟ್ಟಿದ [illegible] ಜನಗಳಿರುತ್ತಾರೆ. ಸದರೀವಾರದಲ್ಲಿ ಜನನ [illegible], ಮರಣ೩೮, ಬೆಂಗಳೂರು ಷಹರ್‌ನಲ್ಲಿ [illegible] ಜನಗಳಿರುತ್ತಾರೆ. ಇಲ್ಲಿ ಜನನ೩೪, ಮರಣ೧೭, ಇದರಿಂದ ಮೈಸೂರಲ್ಲಿ ಮರಣಜಾಸ್ತಿಯಾಗಿರುವಕಾರಣ ಬೆಂಗಳೂರಿಗಿಂತಲೂ ಮೈಸೂರು ಅನಾರೋಗ್ಯ ಪ್ರದೇಶವೆಂದು ತೋರುತಿದೆ. ಆದಾಗ್ಯೂ ಇಲ್ಲಿ ಮರಣಕ್ಕೆ ತಕ್ಕಂತೆ ಜನನವೂ ಯಿರುವದರಿಂದ ಇಲ್ಲಿಗಿಂತ ಮೈಸೂರು ಸ್ವಲ್ಪ ವೀರ್ಯವೃದ್ಧಿಕರವಾದ ಸ್ಥಳವೆಂದು ತೋರುತಿದೆ.

Charitable institution —ಕೋಲಾರ್ ಡಿಸ್ಟ್ರಿಕ್ಟ ಶ್ರೀನಿವಾಸಪುರ ತಾಲ್ಲೂಕು ಕಸಬಾ [illegible] ಸುಬ್ಬರಾಯಪ್ಪನೆಂಬವರು ಊರಿಗೆ ಸಮೀಪದಲ್ಲಿ ಸ್ವಂತಲಾಗವದಿನಿಂದ ಪ್ರಯಾಣಸ್ಥರಿಗೆ [illegible]ಗಳಿಗೆ ಅನುಕೂಲವಾಗಿ ಒಂದು ಸತ್ರವನ್ನು ಕಟ್ಟಿ ಅದು ಶಾಶ್ವತವಾಗಿ ನಡೆಯತಕ್ಕಬಗ್ಗೆ ಉಪಪನ್ನರಾದವರ ಸಹಾಯವನ್ನಪೇಕ್ಷಿಸುತ ಈಗ ದೇಶಸಂಚಾರ ಮಾಡುತಲಿದ್ದಾರೆ ಇವರು ತಮ್ಮ ಆಸ್ತಿಯ ಪೈಕಿ ಕೆಲವು ಭಾಗವನ್ನು [illegible] ನಿಯೋಗಿಸಿದ್ದರೂ ಅದು [illegible] ಸಾಲದೇ ಇರುವದರಿಂದ ಇವರು ಅನ್ಯರ ಸಹಾಯವನ್ನು ಕೋರಬೇಕಾಯಿತು ಇದುವರಿವಿಗೆ ಅನೇಕರು ತಮ್ಮ ಶಕ್ತ್ಯನುಸಾರ ದ್ರವ್ಯಮೂಲಕವಾಗಿಯೂ ಧಾನ್ಯಮೂಲಕವಾಗಿ [illegible] ಸಹಾಯಮಾಡಿರುತ್ತಾರೆ ಇವರು ತಮ್ಮ [illegible] ನೆರವೇರಿಸುವ [illegible] ಪಡೆದುಕೊಳ್ಳುತ್ತಾರಾಗಿ [illegible]ರಾದವರು ದ್ರವ್ಯಸಹಾಯಮಾಡಿ ಇವರು [illegible] ಸಫಲಗೊಳಿಸ ಬೇಕೆಂದು ಕೋರುತ್ತೇವೆ

Retirement ಗವರ್ನಮೆಂಟು ಪ್ರಿಂಟಿಂಗ್ ಆಫೀಸ್ ಮ್ಯಾನೇಜರಾದ ಮಿ|| ರಂಗಯ್ಯನವರು ಸ್ವತಃ ವಿಶ್ರಾಂತಿಸುಖವನ್ನಪೇಕ್ಷಿಸತಕ್ಕವರಲ್ಲವಾದರೂ, ಇವರು ಇದುವರಿವಿಗೆ ಮಾಡುತಲಿದ್ದ ಕೆಲಸವನ್ನು ನೋಡಿ ಗವರ್ನಮೆಂಟಿನವರು. ಇವರಿಗೆ ಬಲಾತ್ಕಾರದಿಂ ವಿರಾಮವನ್ನುಂಟುಮಾಡುವ ಅಭಿಪ್ರಾಯವುಳ್ಳವರಾಗಿದ್ದಾರೆಂದು ತಿಳಿಯಬರುತಿದೆ ಮುಖ್ಯವಾಗಿ ಮಿ|| ರಂಗಯ್ಯನವರು ಈ ಜನ್ಮದಲ್ಲಿ ತಮಗೆ ಪ್ರಿಂಟಿಂಗ್ ಸಂಬಂಧ ತಪ್ಪು ಬರಲಿಲ್ಲವೆಂಬ ದೃಢವಾದನಂಬಿಕೆಯೂ ಅದರ ಮೇಲೆ [illegible] ಉಳ್ಳವರಾಗಿದ್ದಾರೆ ಇಂತಹವರನ್ನು ಹಿಂದುವೇಳೆ ಗವರ್ನಮೆಂಟಿನವರು ಕೆಲಸದಿಂದ ನಿವೃತ್ತರಾಗಬೇಕೆಂದು [illegible] ರಿಸಿದರೆ [illegible] ತಮ್ಮ ಕೆಲಸದ ಚಾರ್ಜನ್ನು ಕೊಡದ [illegible] ಮುಂದೆ ನೋಡುವ [illegible] ಕೆಲ [illegible] ಇರುವ [illegible] ಹೋಗುವದು ಊಹಿಸು [illegible] ಕಾಣಬರುವದುಅಸಾಧ್ಯವು

Transfer—ಮೈಸೂರು [illegible] ಇಲಾಖೆಯಲ್ಲಿ ಅ[illegible] ಇನ್‌ಸ್ಪೆಕ್ಟರಾಗಿದ್ದ ಮಿ|| ಶ್ರೀನಿವಾಸಯ್ಯಂಗಾರ್ ರವರು ಚಿತ್ರದುರ್ಗ ಡಿಸ್ಟ್ರಿಕ್ಟ್ ಪೋಲೀಸ್ [illegible] ಕೆಲಸಕ್ಕೆ ವರ್ಗವಾಗುವರೆಂದು ತಿಳಿಯಬರುತಿದೆ ಸೆಲವರ್ಷಗಳ [illegible] ಸೂಪರಿಂಟೆಂಡೆಂಟ್ ಕೆಲಸವ [illegible]ವರಿಗೆ ಗವರ್ನಮೆಂಟಿನವರು ಸ್ಥಾಪಿಸಿದ್ದೆವೆಂದು [illegible] ತ್ರಿಕಾಲದ ಪತ್ತು ರೂಪಾಯಿಗಳನ್ನು ತಗ್ಗಿಸಿ ಅನುಭವವಿಲ್ಲದ [illegible] ಅವರಿಂದ ಕೆಲಸ ಬಿಡಿಸಿ ಅಲ್ಲಿ ಅವರು [illegible] ಕಡೆಗೆ ಈಗ [illegible] ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ವರ್ಗಮಾಡಿರುತ್ತಾರೆ. ಮುಖ್ಯವಾಗಿ [illegible] ಯ್ಯಂಗಾರ್ರವರ ಸ್ವಯುಕ್ತತಾನಷ್ಟವೇ ಕಾರಣವಾದದರಿಂದ ಈಗ [illegible] ಹೇಳುತ್ತವಕ್ಕಿಲ್ಲವು

A school of arts in Bangalore —ಇಲ್ಲಿನ ಸಿವಿಲ್ ಮತ್ತು ಮಿಲಿಟರಿ ಸ್ಟೇಷನಿನಲ್ಲಿರುವ ಕೆಲವು ಜನ ನೇಟಿವ್ ದೊಡ್ಡಮನುಷ್ಯರು ಸೇರಿ, ಕಲ್ಕತ್ತಾ, ಮುಂಬೈ, ಮದರಾಸ್, ಲಾಹೋರ್, ಪಟ್ಟಣಗಳಲ್ಲಿರುವಂತೆ ಇಲ್ಲಿಯೂ ಕುಶಲವಿದ್ಯಾ ಪಾಠಶಾಲೆ ಒಂದನ್ನು ಸ್ಥಾಪಿಸುವವರಾಗಿದ್ದಾರೆಂತಲೂ, ಇದರ್ಥ ಒಂದು ಕಮಿಟಿ ಏರ್ಪಡಾಗುವದೆಂತಲೂ, ಯೂರೋಪಿಯನ್‌ಗಳು ಮುಸಲ್ಮಾನರು ವಗೈರೆಲ್ಲರೂ ಇದಕ್ಕೆ ಅಭಿಮಾನಿಗಳಾಗಿದ್ದಾರೆಂತಲೂ, ಈ ಪಾಠಶಾಲೆಗೆ ಅನುಕೂಲವಾದ ಪ್ರದೇಶವು ದೊರೆತಕೂಡಲೇ ಕ್ರಿಯಕ್ಕೆ ಕೊಂಡುಕೊಳ್ಳಲ್ಪಡುವದೆಂತಲೂ ತಿಳಿಯಬರುತಿದೆ. ಇಷ್ಟು ದೊಡ್ಡ ಷಹರಿನಲ್ಲಿ ಇಂತಾ ಪಾಠಶಾಲೆ ಒಂದು ಇರಬೇಕಾದ್ದು ಆವಶ್ಯಕವೆ ಅದರೆ ಅಸ್ತಿಭಾರ ಭದ್ರವಿಲ್ಲದ ಕಟ್ಟಡದಿಂದ ಯೆಂದಿಗಾದರೂ ಅಪಾಯ ವುಂಟಾಗದಿರಲಾರದಾಗಿ ಪ್ರಯತ್ನಕ್ಕೆ ಮುಂಚೆ ಚನ್ನಾಗಿ ಆಲೋಚಿಸಿ ತಕ್ಕ ಸಾಧನಗಳನ್ನು ಕಲ್ಪಿಸಿಕೊಂಡು ಪ್ರಾರಂಭಿಸಿದರೆ ಚನ್ನಾಗಿರುವದು.

Fire wood —ಬೆಂಗಳೂರು ಷಹರಿಗೆ ಬರತಕ್ಕ ಕಟ್ಟಿಗೆ, ಹುಲ್ಲು ಮುದಿಗಳಿಗೂ ತಲೆ ಹೊರೆಗಳಿಗೂ ಸುಂಕ ವಸೂಲ್ಮಾಡಲ್ಪಡುತಿದೆ ಯೆಂತಲೂ, ಅದರಿಂದ ಇಲ್ಲಿನ ನಿವಾಸಸ್ಥರಿಗಲ್ಲಾ ಬಹಳ ನುಕ್ಸಾನು ತೊಂದರೆಯೂ ವುಂಟಾಗಿದೆಯೆಂತಲೂ ತಿಳಿಯಬರುತಿದೆ ಜನಗಳು ಚೋರೀ ಮತ್ತು ದಗಾ ಮೂಲಕ ಸೈಡಿ ಘಾಟಿಗಳಲ್ಲಿ ಕಟ್ಟಿಗೆಗಳನ್ನು ಕಡಿದುಕೊಂಡು ಹಾಸಲ್ ಕೊಡದೆ ಸರ್ಕಾರಕ್ಕೆ ವಂಚನೆಮಾಡುವದರಿಂದ ಈ ವಿಧಾನ ಮಾಡುವದಾಯಿತಂತೆ ತೋರುತಿದೆ ಪರಂತು ಈ ಹುಕುಮಿನ ಸ್ವರೂಪವನ್ನು ಜನಗಳು ಚನ್ನಾಗಿ ಅರಿತುಕೊಂಡು ಅವರ ಭ್ರಾಂತಿ ನಿವಾರಣವಾಗಲಾರದು ಒಂದುವೇಳೆ ಇದು ಹೊಸ ಕಂದಾಯವಾಗಿ ಏರ್ಪಡುವ ಪಕ್ಷಕ್ಕೆ ಹರ್ ಮಾಮೂಲ್ [illegible] ಏರ್ಪಡಿಸಿರುವ ಅರ್ಕಾರಿಗಳಿಗಿಂತಲೂ ಇದು ಕಠಿಣ ಅಧಿಕವಾಗಿ ಜನಗಳಿಗೆ ತೊಂದರೆಯನ್ನುಂಟುಮಾಡತಕ್ಕದ್ದೆಂಬದರೊಳು ಸಂದೇಹವಿಲ್ಲವು ತಕ್ಕ್ರೂರಿ ಸುಂಕದೊಡನೆ ಮೇಲೆ ಕಾಡ ರೈತರಿಗೆ ಸಹ ಕೇಳಿದರೆ ಸರ್ಕಾರಿ ನೌಕರರ ಸುಲಿಗೆಗೆ ಬಡಜನಗಳು ತಪ್ಪಿಸಿಕೊಳ್ಳುವದು ಅಸಾಧ್ಯವು

H. H the Maharaja's trip to Ooty. ಈಸಲ ಮಹಾರಾಜರವರು ತಮ್ಮ ಪರಿವಾರದೊಡನೆ ನೀಲಗಿರಿಯಿಂದ ನೆಟ್ಟಗೆ ಇಲ್ಲಿಗೆ ಬಾರದೆ ಮೈಸೂರಿಗೆ ದಯಮಾಡುವರೆಂದು ತಿಳಿಯಬರುತಿದೆ ಮಹಾರಾಜರವರ ಸವಾರಿಯು, ನೀಲಗಿರಿಗೆ ದಯಮಾಡುವ ವಿಷಯದಲ್ಲಿ ಒಳದೇಶದ ಪತ್ರಿಕೆಗಳಲ್ಲ ಬಹುವಿಧವಾಗಿ ವಿಚಾರಮಾಡಿ ನಿಷ್ಪ್ರಯೋಜನವೆಂದು ತಿಳಿದು ಕಡೆಗೆ ಸುಮ್ಮನಾದವಷ್ಟೆ ಈಗ ಈ ವಿಷಯವನ್ನು ಕುರಿತು ಮದರಾಸ್ ಮೊದಲಾದ ಅನ್ಯದೇಶಗಳಲ್ಲಿರುವ ವೃತ್ತಾಂತಪತ್ರಿಕೆಗಳು ವಿಚಾರಮಾಡುವದಕ್ಕೆ ಉಪಕ್ರಮಿಸಿವೆ. ಮದ್ರಾಸ್ ಸುಜನರಂಜನಿ ೧೮ನೇತಾರೀಖುಳ್ಳ ಮದರಾಸ್ ಪತ್ರಿಕೆಯೊಂದು ಪ್ರಸಕ್ತವಿಷಯವಂ ಕುರಿತು ತಿಳಿಸುತಿದೇನೆಂದರೆ —ಪ್ರತಿ ಸಂವತ್ಸರದಲ್ಲಿ ಬಿಸಿಲು ಕಾಲವನ್ನು ಕಳೆಯುವ ಉದ್ದೇಶದೊಡನೆ ಮೈಸೂರು ಮಹಾರಾಜರವರು ತಮ್ಮ ದೇಶದಲ್ಲಿರುವ ಒಳ್ಳೆ ಗಿರಿ ಪ್ರದೇಶಗಳನ್ನೆಲ್ಲ ಬಿಟ್ಟು ನೀಲಗಿರಿಗೆ ಹೋಗುವದು ವ್ಯರ್ಥವ್ಯಯ ನಿಮಿತ್ತವೆಂದು ಸ್ವದೇಶಾಭಿಮಾನಿಗಳಾದ ಅವರ ಪ್ರಜೆಗಳೆಲ್ಲರೂ ಭಾವಿಸುತ್ತಾರೆ ಗತ ಹನ್ನೊಂದು ವರುಷಗಳ ಮೊದಲು ಮಹಾರಾಜರವರು ನೀಲಗಿರಿಗೆ ಹೋಗಿ ಸಂವತ್ಸರದಲ್ಲಿ ಮೂರುತಿಂಗಳಕಾಲ ಅಲ್ಲಿರುತ್ತಾರೆ. ಮಹಾರಾಜರವರು ನೀಲಗಿರಿಯಲ್ಲಿರತಕ್ಕ ಕಾಲವು ಅಲ್ಪವಾಗಿದ್ದಾಗ್ಯೂ ಖರ್ಚು ಮಾತ್ರ ಸಂಪೂರ್ಣವಾಗುತಿದೆ. ಸರ್ ಮಾರ್ಕ್ ಕಬ್ಬನ್ ಸಾಹೇಬರವರು ಬೆಂಗಳೂರಿಗೆ ೩೦ ಮೈಲುಗಳ ಫಾಸಲೆಯೊಳಗಿರುವ ನಂದೀದುರ್ಗವನ್ನೇರಿ ಕಾಲಕ್ಷೇಪ ಮಾಡುತಿದ್ದನೋ ಆ ಜಾಗವು ಯೋಗ್ಯವಾಗಿದ್ದದು ಕಂಡು ತಮ್ಮ ಕಚೇರಿ ಸಾಹೇಬರತೊಡನೆ ಬಿಸಿಲುಕಾಲವನ್ನೆಲ್ಲ ಅಲ್ಲಿ ಕಳೆಯುತಿದ್ದ ಅಂಶ ಪ್ರಾಯೇಣ ಯೆಲ್ಲರ ಜ್ಞಾಪಕದೊಳು ಇರಬಹುದಷ್ಟೆ. ಈಗಲೂ ಅನೇಕರು ಯೂರೋಪಿಯನ್‌ಗಳು ನೀಲಗಿರಿಗೆ ಸಮಾನವಾಗಿರುವ ನಂದೀ ಬೆಟ್ಟಕ್ಕೆ ಹೋಗಿಬರುತಲಿದ್ದಾರೆ ಸ್ವದೇಶದಲ್ಲಿ ಸಮೀಪದೊಳು ಅಲ್ಪವ್ಯಯದಿಂದ ವಿಶೇಷವಾಗಿ ವುಂಟಾಗತಕ್ಕ ಸುಖ ಸಂತೋಷಗಳನ್ನುಪೇಕ್ಷಿಸಿ ಅನ್ಯರಾಜ್ಯದಲ್ಲಿ ದೂರಪ್ರದೇಶದೊಳು ವಿಶೇಷ ಧನವ್ಯಯದಿಂದ ಶರೀರ ಶ್ರಮದೊಡನೆ ಲಭಿಸತಕ್ಕ ಅಲ್ಪಸುಖವಂ ಕೋರಿ ತಿಂಗಳುಗಟ್ಟಲೆ ರಾಜ್ಯವಂಬಿಟ್ಟು ಹೋಗುವದು ಯುಕ್ತವಲ್ಲವು, ಎಂಬದು. ಇದು ನಮಗೆ ಹಳೇವಾರ್ತೆ ಹೊರತು ಹೊಸದಲ್ಲವು

The Mysore State Railway.—ಮೈಸೂರು ಸ್ಟೇಟರೈಲ್ವೆಯು ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪೆನಿಯವರಿಗೆ ಅಧೀನಮಾಡಲ್ಪಟ್ಟ ವಿಷಯವೂ, ಸದರೀ ರೈಲ್‌ರಸ್ತೆಯನ್ನು ಅವರು ಹರಿಹರದವರೆಗೆ ಬೆಳಾಯಿಸಿ ಬಳ್ಳಾರಿ ಧಾರ್ವಾಡ ರೈಲುರಸ್ತೆಗಳಿಗೆ ಸೇರಿಸುವ ಅಂಶವೂ ಯೆಲ್ಲರಿಗೂ ತಿಳಿದೇಯಿದೆಯಷ್ಟೆ. ಸದರಿ ಮರಾಟಾರೈಲ್ವೇ ಕಂಪೆನಿಯವರು ಮೈಸೂರು ಬೆಂಗಳೂರು ತುಮಕೂರು ಈ ಮೂರು ಸ್ಟೇಷನ್‌ಗಳಲ್ಲಿರಬೇಕಾದ ಲವಾಜಮೆಯನ್ನು ಏರ್ಪಡಿಸಿ ಹೆಡ್‌ಕ್ವಾರ್ಟರ್ ಆಫೀಸನ್ನು ಧಾರ್ವಾಡಕ್ಕೆ ವರ್ಗಮಾಡುವಬಗ್ಗೆ ತಕ್ಕ ಪ್ರಯತ್ನಗಳಂ ಮಾಡುತಲಿದ್ದಾರೆಂತಲೂ, ಈಗ ಇಲ್ಲಿ ನೌಕರಿಯೊಳಿರುವವರಿಗೆಲ್ಲ ಮುಂದಾಗಿಯೇ ನೋಟೀಸ್‌ಗಳಂ ಕೊಟ್ಟಿದ್ದಾರೆಂತಲೂ ತಿಳಿಯಬರುತಿದೆ. ಬರುವ ಜೂಲೈ ಗುರ್ತೀಲ ಗಾಯಿತು ಮೈಸೂರು ಗವರ್ನಮೆಂಟಿನವರಿಗೆ ಕರಾರ್ ಅನುಸರಿಸಿ ಸದರೀ ರೈಲ್ವೇ ಅಂತಳತದ್ವ ತಪ್ಪಿಹೋಗುವದು. ಮುಂಬೆನಪಿಯಬಹುದಾದ ಅನೇಕ ಏರ್ಪಾಡುಗಳಿಗೆ ಸೂಚನೆಯಾಗಿ ರೈಲ್ವೇ ಇಲಾಖಾ ಮ್ಯಾನೇಜರಾದ ಮಿ|| ಬೀಚರ್‌ಯವರು ಕೊಟ್ಟಿರುವ ಒಂದು ಪ್ರಕಟನೆಯು ಈವಾರದ ಮೈಸೂರು ಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟಿರುತಿದೇನೆಂದರೆ ...೧೮೮೬ನೇ ಇಸವಿ ಜೂಲೈ ೧ನೇ ತಾರೀಖ್‌ಮೊದಲು ಮೈಸೂರು ಸ್ಟೇಟರೈಲ್ವೇಯಲ್ಲಿ ೧—೩ನೇ ತರಗತಿಗಳ ಪ್ರಯಾಣಸ್ಥರ ಚಾರ್ಜ್ ಮೈಲಿ ಒಂದಕ್ಕೆ ಕ್ರಮವಾಗಿ ೧೮ ಮತ್ತು ೯ ಪೈಗಳಿಗೆ ಹೆಚ್ಚಿಸಲ್ಪಟ್ಟಿರುತಿದೆ ಈಗ ೧—೩ನೇತರಗತಿಗಳಿಗೆ ಮೈಲಿ ೧ಕ್ಕೆ ಕ್ರಮವಾಗಿ೧೩ ೬ ಪೈಗಳಪ್ರಕಾರ ಇರುವದರಿಂದ ಮುಂದೆ೬—೩ಪೈಗಳು ಜಾಸ್ತೀಮಾಡಿದಂತೆಯಾಯಿತು. ಈರೀತಿ ದರವನ್ನು ಹೆಚ್ಚಿಸಿದ್ದರಿಂದ ಆಗಾಗ್ಯೆ ಮೈಸೂರಿಗೆ ಹೋಗಿಬರತಕ್ಕ ಅಧಿಕಾರಸ್ಥರಿಗೆ ದುಬಾರಿಯಾಗುವದೆಂದು ಯೋಚಿಸಿದರೆ ಸರ್ಕಾರದಿಂದ ಪ್ರತಿಸ್ಥಾನಕ್ಕೂ ಆಯಾ ತರಗತಿಗೆ ತಕ್ಕಂತೆ ಮೈಲೇಜ್ ಕೊಡಲ್ಪಡುತಿದೆಯಾಗಿ, ಅವರಿಗೆ ನಷ್ಟವಿಲ್ಲವು. ಮೈಸೂರು ಸರ್ಕಾರಕ್ಕೆ ನಷ್ಟವಲ್ಲವೇ ಅಂದರೆ, ಕೆಲವು ವರುಷಗಳತನಕ ಹುಟ್ಟುವಳಿಯನ್ನೆಲ್ಲ ಅವರೇ ಅನುಭವಿಸುವದರಿಂದ ಅವರಿಗೂ ನಷ್ಟವಿಲ್ಲವು. ಪರಂತು ಮೈಸೂರಲ್ಲಿ ಜರಗತಕ್ಕ ತಮಾಷೆಗಳನ್ನು ನೋಡುವಬಗ್ಗೆ ಒಂದೆರಡನೆ ತರಗತಿಗಳಲ್ಲಿ ಪ್ರಯಾಣಮಾಡುವವರುಮಾತ್ರ ಈ ನಷ್ಟದಲ್ಲಿ ಕೆಲವು ಭಾಗವನ್ನು ಅನುಭವಿಸಬೇಕಾಗುವದು

The Spectator Libel Case —ಮೈಸೂರು ಮಹಾರಾಜರವರ ಸ್ಪಿನ್ನಿಂಗ್‌ವಿವಾನ್ಯು ಫ್ಯಾಕ್ಟರಿಂಗ ಕಂಪೆನಿಯ ಡೈರೆಕ್ಟರ್‌ಗಳು, ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಯ ಪ್ರೊಪ್ರೈಟರ್‌ಗಳ ಮತ್ತು ಎಡಿಟರ್‌ಗಳಮೇಲೆ ತಂದಿದ್ದ ಮಾನ ನಷ್ಟ ಮೊಕದ್ದಮೆಯ ಸ್ವರೂಪವನ್ನೂ, ಅದು ಆಗಿಂದಾಗ್ಯೆ ಇಲ್ಲಿನಸಿವಿಲ್ ಮತ್ತು ಮಿಲಿಟರಿಸ್ಟೇಷನಿನ ಸಿವಿಲ್‌ಕೋರ್ಟಿನಲ್ಲಿ ವಿಚಾರಿಯಾಗುತಲಿದ್ದದ್ದನ್ನೂ ಪ್ರಾಯೇಣ ಎಲ್ಲರೂ ತಿಳಿದೇಯಿದ್ದಾರೆಯಷ್ಟೆ. ಗತ ಶನಿವಾರದದಿನ ಕರ್ನಲ್ ಹಿಲ್‌ಯವರು ಈ ಮೊಕದ್ದಮೆಯನ್ನು ಕೋರ್ಟು ಖರ್ಚಿನೊಡನೆ ತಳ್ಳಿಹಾಕಿ ಪ್ರತಿವಾದಿಗಳು ನಿರ್ದೋಷಿಗಳೆಂದು ನ್ಯಾಯತೀರ್ಪುಕೊಟ್ಟರು. ಈಗ್ಯೆ ಎರಡು ಮೂರುತಿಂಗಳಕಾಲವಾಗಿ ಕೋರ್ಟಿನವರ ಮತ್ತು ಪ್ರಜೆಗಳ ಅವಧಾನವನ್ನು ಈ ಮಾನನಷ್ಟ ಮೊಕದ್ದಮೆಯು ಬಹಳವಾಗಿ ಆಕರ್ಷಿಸಿತ್ತು. ಸ್ಪೆಕ್ಟೇಟರ್ ಪತ್ರಿಕಾಧಿಪರು ನಿರ್ದೋಷಿಗಳೆಂದು ಏರ್ಪಟ್ಟದ್ದಕ್ಕಾಗಿಯೂ, ಅವರ ಆಕ್ಷೇಪಣೆಗಳೆಲ್ಲವೂ ಯುಕ್ತವಾದವೆಂದು ಏರ್ಪಟ್ಟದ್ದಕ್ಕಾಗಿಯೂ, ನಾವು ಬಹಳ ಸಂತೋಷಿಸುತ್ತೇವೆ. ಇದರಿಂದ ಫಿರ್ಯಾದಿಗಳಿಗೆ [illegible] ಹೋಗಿ ಹೆದರಿಕೊಂಡು ಹಿಂದಿರಿಗಿದಂತೆ ಕಂಪೆನಿಯವರು ತಮ್ಮ ಗೌರವವನ್ನು ಸ್ವಲ್ಪಅಲ್ಲಾಡಿಸಿ ನೋಡಿದಂತಾಯಿತು. ಜನಗಳಿಗೆ ಕಂಪೆನಿಯ ವಿಷಯದಲ್ಲಿ ಸಂಶಯಹೋಗಿ ವಿಶ್ವಾಸಮೂಲಕ ಅದರ ಅಭಿವೃದ್ಧಿಗೆ ಬುಡಕಟ್ಟಾಗುವದಾದದರಿಂದ ಈಮೊಕದ್ದಮೆ ತರಬೇಕಾಯಿತೆಂದು ಹೇಳಿದ ವಾದಿಗಳು ಈಗ ಏನುಮಾಡಬೇಕೆಂದು ಆಲೋಚಿಸಿದ್ದಾರೆಯೋ ತಿಳಿಯಲಿಲ್ಲವು. ಮುಖ್ಯವಾಗಿ ಇಂತಾ ಆಕ್ಷೇಪಣೆಗಳಿಗೆ ಅವಕಾಶ ಕೊಡದಿರುವದು ಉತ್ತಮಪಕ್ಷವು; ಹಾ

ಇಲ್ಲದವನ್ನೆಲ್ಲ ತಲೆಬಾಗಿಸಿಕೊಂಡು ಮೌನದಿಂದನೆ ಇರುವದು ಸಾಧ್ಯವುವು ಸ್ವತಃ ಕೆದರಿಕೊಳ್ಳಗೆ ಹೋಗುವದರಿಂದ ಹೊರಗಾಗದೆ ಗೂಢವಾಗಿರುವ ವಿಷಯಗಳುಕೂಡ ಪ್ರಕಟವಾಗಲಿಕ್ಕೆ ಕಾರಣವಾಗುತಿದೆ. ಇದಕ್ಕೆ ಸಮಾನವಾದ ಮತ್ತೊಂದು ಮೊಕದ್ದಮೆಯು ಈಗ ಮದರಾಸಿನಲ್ಲಿ ವಿಚಾರಣೆಯಾಗುತ್ತಲಿರುವಂತೆ ತಿಳಿಯಬರುತಿದೆ. ಇದರಲ್ಲಿ ಸಹ ಮೆ|| ರಿಕೈಟ್ಸಿಯವರು ನಿರ್ದೋಷಿಯೆಂದು ಏರ್ಪಟ್ಟರೆ ಆಗ ಕಂಪೆನಿಯವರ ಪ್ರಯತ್ನವು ಸಾರ್ಥಕವಾಗಬಹುದು.

Medical attendance fees—ನೇಟಿವ್ ಅಸಿಸ್ಟೆಂಟ್ ಸರ್ಜನ್‌ಗಳೂ, ವಾರ್ಡ್ ಆಫಿಸರಗಳೂ, ಸಿವಿಲ್ ಅಪಾತಿಕೆರಿಗಳೂ, ಆಸ್ಪಿಟಲ್ ಅಸಿಸ್ಟೆಂಟುಗಳೂ, ಚಿಕಿತ್ಸಾರ್ಥ ಜನಗಳ ಮನೆಗಳಿಗೆ ಹೋಗತಕ್ಕ ಸಂದರ್ಭಗಳಲ್ಲಿ ಇದರಡಿ ಕಂಡ ದರಗಳ ಪ್ರಕಾರವೇ ರುಸುಂ ಛಾರ್ಜ್ ಮಾಡತಕ್ಕದ್ದೆಂದು ದಿವಾನರವರು ಆಜ್ಞಾಪಿಸಿ ನಿರ್ಣಯಿಸಿರುತ್ತಾರೆ, ಹ್ಯಾಗೆಂದರೆ—ಆಸ್ಪಿಟಲ್ ಅಸಿಸ್ಟೆಂಟುಗಳ ದರ್ಜೆಗೆ ಮೇಲ್ಪಟ್ಟ ಮೆಡಿಕಲ್ ಆಫೀಸರ್‌ಗಳೆಲ್ಲರೂ, ದೊಡ್ಡ ಶಹರಗಳಲ್ಲಿ ಸಾಧಾರಣ ಚಿಕಿತ್ಸೆಗಳಬಗ್ಗೆ ಹೋದರೆ, ದಿನಂಕ್ಕೆ ಬೆಳಗ್ಯೆ ೨ ರೂಪಾಯಿಗಳ ೩, ರಾತ್ರಿ ೩ ರೂಪಾಯಿಗಳೂ, ಸಣ್ಣ ಶಹರಗಳಲ್ಲಿ ಅದೇ ಪ್ರಕಾರ ೧—೨ ರೂಪಾಯಿಗಳೂ, ಛಾರ್ಜ್ ಮಾಡಬಹುದು. ಒಂದು ಪ್ರಸವಕ್ಕೆ ಅಥವಾ ರತ್ನಸಂಬಂಧವಾದ ಪ್ರಬಲ ಚಿಕಿತ್ಸೆಗೆ, ತರುವಾಯ ಆವಶ್ಯಕವಾದಾಗೆಲ್ಲ ಹೋಗಿಬರುವ ಛಾರ್ಜ್ ದೇಬಲ್‌ದೊಡ್ಡ ಶಹರಗಳಲ್ಲಿ ೩೦ ರೂಪಾಯಿಗಳು, ಸಣ್ಣ ಶಹರಭಾಗಗಳಲ್ಲಿ ೧೫ ರೂಪಾಯಿಗಳು ಈರೀತಿ ತೆಗೆದುಕೊಳ್ಳತಕ್ಕದ್ದು. ಆಸ್ಪಿಟಲ್ ಅಸಿಸ್ಟೆಂಟ್ ರುಸುಂಗಳು ಅವರು ಹೋಗತಕ್ಕ ಪ್ರದೇಶಕ್ಕೂ ಶಹರಿಗೂ ಇರುವ ಫಾಸಲೆ ಮತ್ತು ಕಾಲ ಮುಂತಾದವುಗಳನ್ನು ಅನುಸರಿಸಿ ಗೊತ್ತುಮಾಡಬೇಕಾದವಾಗಿರುತಿವೆ. ಒಬ್ಬ ಆಸ್ಪಿಟಲ್ ಅಸಿಸ್ಟೆಂಟನು ತಾನು ಇರತಕ್ಕ ಊರುಗಳಲ್ಲಿಯೇ ಒಬ್ಬ ರೋಗಿಯ ಮನೆಗೆ ಹೋದರೆ ಸಾಧಾರಣ ವಿಷಯಗಳಲ್ಲಿ ದಿನ ೧ಕ್ಕೆ ಬೆಳಗ್ಯೆ ೮ ಆಣೆಗಳ ಪ್ರಕಾರವೂ ರಾತ್ರಿ ಕಾಲದಲ್ಲಿ ೧ ರೂಪಾಯಿ ಪ್ರಕಾರವೂ ಛಾರ್ಜ್ ಮಾಡಬಹುದು. ಇದಲ್ಲದೆ ಆಸ್ಪಿಟಲ್ ಅಸಿಸ್ಟೆಂಟ್ ತಾನು ಹೋಗತಕ್ಕ ಸ್ಥಳ ೮ ಮೈಲುಗಳಿಗೆ ಒಳಪಟ್ಟದ್ದರೆ ಆಗ ಮೈಲು ಒಂದಕ್ಕೆ ೨ ಆಣೆಗಳಂತೆಯೂ, ೮ ಮೈಲುಗಳಿಗೆ ಮೇಲ್ಪಟ್ಟದ್ದರೆ ನಾಲ್ಕಾಣೆಗಳ ಪ್ರಕಾರವೂ, ಕೇಳಿಸಿ ವಸೂಲ್ಮಾಡಲಿಕ್ಕೆ ಅರ್ಹನಾಗಿರುತ್ತಾನೆ ಈ ಛಾರ್ಜುಗಳು ಅವರಿಗೆ ಸಲ್ಲತಕ್ಕ ಟ್ರಾವಲಿಂಗ್ ಅಲೋವೆನ್ಸ್ ಯಾನೆ ಭತ್ಯಕ್ಕೆ ಸೇರುವದಿಲ್ಲವು. ಆದರೆ ಸದರೀ ಬತ್ತ್ಯವು, ಅವನು ಪ್ರಯಾಣ ಮಾಡತಕ್ಕದ್ದು ಮೈದಾನ್ ಅಥವಾ ಮಲನಾಡ ಪ್ರಾಂತವಾಗಿದ್ದರೆ ಅದನ್ನನುಸರಿಸಿಯೂ, ಮಳೆಕಾಲವಾಗಿಯಾದರೂ ಅಥವಾ ಇತರಕಾಲವಾಗಿಯಾದರೂ ಇದ್ದರೆ ಅದನ್ನನುಸರಿಸಿಯೂ, ಬದಲಾಯಿಸಲ್ಪಡುವದು. ಒಬ್ಬ ಆಸ್ಪಿಟಲ್ ಅಸಿಸ್ಟೆಂಟನು ತಾನುಇರುವ ಊರಿಗೆ ೧೦ ಮೈಲಿಗಳ ದೂರದಲ್ಲಿ ಮೈದಾನ್‌ಪ್ರಾಂತದ ಮತ್ತೊಂದುಸ್ಥಳಕ್ಕೆ ಹೋಗುವನಾದರೆ ಆಗ ಅವನು ದಫಾ ೧ಕ್ಕೆ ೨ ರೂಪಾಯಿಗಳ ರುಸುಂವುನ್ನೂ ೧। ರೂಪಾಯಿಗಳ ಭತ್ಯವನ್ನೂ ಪಡೆಯಲಿಕ್ಕೆ ಅರ್ಹನಾಗಿರುವನು. ವರ್ಷರುತುವಿನಲ್ಲಿ ಮಲನಾಡಿಗೆ ಹೋದರೆ ಆಗ ಬತ್ಯದ್ವಿಗುಣವಾಗಿ ಕೊಡಲ್ಪಡುವದು. ಲೋಕಲ್‌ಫಂಡ್ ಡಿಸ್ಪೆನ್ಸರಿಗಳ ಛಾರ್ಜಿನಲ್ಲಿರತಕ್ಕ ಆಸ್ಪಿಟಲ್ ಅಸಿಸ್ಟೆಂಟುಗಳು ತಮ್ಮ ಡಿಸ್ಪೆನ್ಸರಿಗಳಿಗೆ ಬರತಕ್ಕವರಿಂದ ರುಸುಂ ಪಡೆಯಕೂಡದಲ್ಲದೆ, ತಮ್ಮ ಹೆಡ್‌ಕ್ವಾಟರ್‌ನಲ್ಲಿ ಕಾಹಿಲೆ ಮುಂತಾದ ಕಾರಣಗಳಿಂದ ಡಿಸ್ಪೆನ್ಸರಿಗೆ ಹೋಗುವದಕ್ಕೆ ಅಶಕ್ತರಾಗಿರುವಂತಾ ಬಡವರಿಗೆಲ್ಲ ತಮ್ಮ ಮನೆಗಳಲ್ಲೇ ಚಿಕಿತ್ಸೆ ಮಾಡತಕ್ಕದ್ದು.

CORRESPONDENCE.

ಕೊಡಗು ಡಿಸ್ಟ್ರಿಕ್ಟ್ ಏಳುಸಾವಿರ ಸೀಮೆ ತಾಲ್ಲೂಕು ಕೊಲ್ಲಿ ಹೋಬಳಿ ಕೊಡ್ಲಿಪೇಟೆ ಕನ್ನಡ ಸ್ಕೂಲ್‌ಮ್ಯಾಸ್ಟರ್ ಕವಣ ತಿದ್ದಪ್ಪನು ಮಾಡುವ ವಿಜ್ಞಾಪನೆ ಅದಾಗಿ.

ಅಯ್ಯಾ,—ತಮ್ಮಿಂದ ಏಂದಂತವನ್ನು ತಿಳಿದುಕೊಳ್ಳಲೋಸುಗ ವಿಜ್ಞಾಪಿಸುತ್ತೇನೆ, ಅದಕ್ಕೆ ದಯವಿಟ್ಟು ತಾವು ಜವಾಬ್ ಕೊಡಬೇಕೆಂದು ಕೋರುತ್ತೇನೆ.

ತಾಳ, ಮೃದಂಗ, ಗೆಜ್ಜೆ, ಶ್ರುತಿ, ವೀಣೆ, ಈ ಐದಕ್ಕೆ ಅಧಿದೇವತೆಗಳ್ಯಾರು, ಮತ್ತು ಯಾರಿಂದ ಯಾತಕ್ಕೋಸ್ಕರ ಉತ್ಪತ್ತಿ ಆದವು, ಮತ್ತು ಸಪ್ತಸ್ವರಾಧಿದೇವತೆಗಳ್ಯಾರು, ನಾಯಕಸಾನಿಯರು ಸಭೆಯಲ್ಲಿ ಬಂದು ಕುಳಿತಕಾಲದಲ್ಲಿಯೂ, ಹಾಡುವ ಕಾಲದಲ್ಲಿಯೂ ನರ್ತನಕಾಲದಲ್ಲಿಯೂ ಯಾರಿಗೆ ಯಾವಾಗ ಮರ್ಯಾದೆಯಂಮಾಡಬೇಕು, ಇವರಮೇಲೆ ದೇಶದವರಿಗೆ ಉಂಟಾಗಿರತಕ್ಕ ಹಕ್ಕಿಗೆ ಕಾರಣವೇನು, ಕೆಳದೇಶಕ್ಕೆ ಸೇರಿದಸಂಪ್ರದಾಯ ಯಾವದು, ಯೆಂಬದರ ತಪಸೀಲ ತಿಳದುಕೊಳ್ಳಬೇಕಾಗಿರುವದರಿಂದ ತಾವು ಜವಾಬ್ ಕೊಡಬೇಕೆಂದು ಕೋರುತ್ತೇನೆ.

THE MYSORE GAZETTE
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಶ್ರೀಸಾಹೇಬ ಬಹದೂರವರ ದಿವಾನರವರಿಂದ ಕೊಡಲ್ಪಟ್ಟಾದ ಇಸ್ತಿಹಾರ್‌ನಾಮೆಗಳು

ನಂ. [illegible]—ಸನ್ ೧೮೭೭ನೇ ಇಸವಿ III ನೇ ನಂಬರ್ [illegible] ರಿಜಿಸ್ಟ್ರೇಷನ್ ಆಕ್ಟು [illegible] ನೇ ಸೆಕ್ಷನ್ [illegible] ಪ್ರಕಾರ [illegible]—ರಿಜಿಸ್ಟ್ರೇಷನ್ ಡಿಸ್ಟ್ರಿಕ್ಟು ವ ಸಬ್ ಡಿಸ್ಟ್ರಿಕ್ಟುಗಳು, [illegible] ನೇ ಇಸವಿ [illegible] ನೇ [illegible] ೨೨೮—೨೨೭—೨೨೯—೨೩೧—೨೩೧—೨೩೩ [illegible] ಮೊದಲು [illegible] ಸರ್ಕಾರ [illegible] ಡಿಸ್ಟ್ರಿಕ್ಟು ವ ತಾಲ್ಲೂಕು [illegible]

೨ [illegible] ಸಬ್ ರಿಜಿಸ್ಟ್ರೀ ಆಫೀಸುಗಳು [illegible]

೩ [illegible] ರಿಜಿಸ್ಟ್ರೇಷನ್ ಡಿಸ್ಟ್ರಿಕ್ಟು ವ ಸಬ್ ಡಿಸ್ಟ್ರಿಕ್ಟುಗಳು [illegible]

I ಬೆಂಗಳೂರು ಡಿಸ್ಟ್ರಿಕ್ಟು ಸಬ್ ಡಿಸ್ಟ್ರಿಕ್ಟುಗಳು.

೧ ಬೆಂಗಳೂರು ಟೌನ್ ೨ ಕೊಲ್ಲೂರು ೨ ಚನ್ನಪಟ್ಟ ೩ ಆನೇಕಲ್ ೪ ದೊಡ್ಡಬಳ್ಳಾಪುರ ೫ ಹೊಸಕೋಟೆ ೬ ನೆಲಮಂಗಲ ೭ ಮಾಗಡಿ ೮ ದೇವನಹಳ್ಳಿ ೯ ಕಾನಕಾನಹಳ್ಳಿ. ೧೦ ಹೊಸಹಳ್ಳಿ (ಕೋಲಾರ ಡಿಸ್ಟ್ರಿಕ್ಟಿನಿಂದ ವರ್ಗ ಮಾಡಲ್ಪಟ್ಟದ್ದು)

II ಮೈಸೂರು ಡಿಸ್ಟ್ರಿಕ್ಟು ಸಬ್ ಡಿ||

೧ ಮೈಸೂರು ೨ ಸೇರಿಂಗಪಟ್ಟಣ? ಕೃಷ್ಣರಾಜಪುರ. ೩ ಯಡತೊರೆ ೪ ನಂಜನಗೂಡು ೫ ಚಾಮರಾಜನಗರ ೬ ಯಳಂದೂರು ೭ ಹುಣಸೂರು ೮ ಗುಂಡಲ್‌ಪೇಟೆ ೯ ಹೆಗ್ಗಡದೇವನಕೋಟೆ

III ಶ್ರೀ ಚಿಕ್ಕೋಡೆ? ಸಬ್ ಡಿ||

೧ ಶ್ರೀರಂಗಪಟ್ಟಣ ೨ ಅಷ್ಟಗ್ರಾಮ ೩ ಮಂಡ್ಯ ೪ ನಾಗಮಂಗಲ. ೫ ಮಳವಳ್ಳಿ.

IV ತುಮಕೂರು ಡಿಸ್ಟ್ರಿಕ್ಟು ಸಬ್ ಡಿ||

೧ ತುಮಕೂರು ೨ ತಿಪಟೂರು. ೩ ಸಿರ್ರಾ. ೪ ಚಿಕ್ಕನಾಯಕನಹಳ್ಳಿ ೫ ಕುಣಿಗಲ್ ೬ ಶಿರಾ ೭ ಕುಣಿಗಲ್. ೮ ಕೊರಟಗೆರೆ. ೯ ಪಾವುಗಡ ೧೦ ಮಧುಗಿರಿ ೧೧ ಗುಬ್ಬಿ. (ಬೆಂಗಳೂರು ಡಿಸ್ಟ್ರಿಕ್ಟಿನಿಂದ ವರ್ಗ ಮಾಡಲ್ಪಟ್ಟದ್ದು)

V ಚಿತ್ರದುರ್ಗ ಡಿಸ್ಟ್ರಿಕ್ಟು ಸಬ್ ಡಿ||

೧ ಚಿತ್ರದುರ್ಗ ೨ ಹಿರಿಯೂರು ೩ ಚಳ್ಳಕೆರೆ ೪ ದಾವಣಗೆರೆ (ತಾಲ್ಲೂಕು) ೫ ಜಗಳೂರು (ಡಿ ಟೌನ್) ೬ ಹೊಳಲ್ಕೆರೆ ೭ ಹೊಸದುರ್ಗ. ೮ ದಾವಣಗೆರೆ (ಶಿವಮೊಗ್ಗ ಡಿಸ್ಟ್ರಿಕ್ಟಿನಿಂದ ವರ್ಗ ಮಾಡಲ್ಪಟ್ಟದ್ದು)

VI ಕೋಲಾರ ಡಿಸ್ಟ್ರಿಕ್ಟು ಸಬ್ ಡಿ||

೧ ಕೋಲಾರ ೨ ಚಿಕ್ಕಬಳ್ಳಾಪುರ ೩ ಸಿಡ್ಲಘಟ್ಟ ೪ ಗೌರಿಬಿದನೂರು ೫ ಮುಳಬಾಗಲು ೬ ಮಾಲೂರು. ೭ ಬಂಗಾರಪೇಟೆ, ೮ ಚಿಂತಾಮಣಿ ೯ ಬಾಗೇಪಲ್ಲಿ, ೧೦ ಗುಡಿಬಂಡೆ ೧೧ ಶ್ರೀನಿವಾಸಪುರ

VII ಕಡೂರು ಡಿಸ್ಟ್ರಿಕ್ಟು ಸಬ್ ಡಿ||

೧ ಚಿಕ್ಕಮಗಳೂರು ೨ ಕೊಪ್ಪ. ೩ ತರೀಕೆರೆ ೪ ಕಡೂರು ೫ ಮೂಡಿಗೆರೆ ೬ ಮುಡಿಹಳ್ಳಿ

VIII ಹಾಸನ ಡಿಸ್ಟ್ರಿಕ್ಟು ಸಬ್ ಡಿ||

೧ ಹಾಸನ ೨ ಮಂಜರಾಬಾದ್ ೩ ಬೇಲೂರು ೪ ಅರಸೀಕೆರೆ ೫ ಚನ್ನರಾಯಪಟ್ಟ (ಶ್ರೀ ಚಿಕ್ಕೋಡೆ ಸಬ್ ಡಿವಿಜನ್‌ನಿಂದ ವರ್ಗ ಮಾಡಲ್ಪಟ್ಟದ್ದು) ೬ ಅರಕಲಗೂಡು, ೭ ಹೊಳೆನರಸೀಪುರ ಮೈಸೂರು ಡಿಸ್ಟ್ರಿಕ್ಟಿನಿಂದ ವರ್ಗ ಮಾಡಲ್ಪಟ್ಟದ್ದು

IX ಶಿವಮೊಗ್ಗ ಡಿ|| ಸಬ್ ಡಿ||

೧ ಶಿವಮೊಗ್ಗ ೨ ಶಿಕಾರಿಪುರ? ಹೊನ್ನಾಳಿ ೩ ಶಿಕಾರ

೮ ನಗರ ೫ ತೀರ್ಥಹಳ್ಳಿ ೬ ಶಿಕಾರಿಪುರ. ೭ ಚನ್ನಗಿರಿ ೮ ಸಾ. ಹುಲ್ಲೇ. ೯ ಹೊನ್ನಾಳಿ.

ನಂಬರ್—೬೦. ತಾ|| ೧೦ನೇ ಮೇ ೧೮೮೬—ಇದರಿಂದ ತಿಳಿಯಪಡಿಸುವದೇನೆಂದರೆ—ಮಾಹೇ ಮಜಕೂರ ಗುರ್ರೇ ತಾರೀಖ್ ಮೊದಲು ಚಿತ್ರದುರ್ಗ ಡಿಸ್ಟ್ರಿಕ್ಟ್ ಖಜಾನೆಯು ಯಡಲ್ಪಟ್ಟರುತಿದೆ.

ನಂಬರ್—೬೧. ತಾ|| ೧೧ನೇ ಮೇ ೧೮೮೬—೧೮೮೬ನೇ ಇಸವಿ ಏಪ್ರಿಲ್ ೬ನೇ ಮರ್ರ್ಕುಂ ೧೮ನೇ ನಂಬರುಳ್ಳ ಇಸ್ತಿಹಾರ್‌ನಲ್ಲಿ, ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟ್ ಮೆ|| ಸ್ಪಾರ್ಕ್ಸ್‌ಯವರಿಗೆ ಮೆಡಿಕಲ್ ಸರ್ಟಿಫಿಕೇಟ್ ಮೇರೆ ಕೊಡಲ್ಪಟ್ಟದ್ದ ರಜಾವಿಗೆ ಜಾಸ್ತಿಯಾಗಿ ಇನ್ನೊಂದುತಿಂಗಳ ರಜಾ ಕೊಡಲ್ಪಟ್ಟರುತಿವೆ

ನಂ. ೬೨—ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರಾದ ಮೆ|| ಸುಬ್ಬಾಶಾಸ್ತ್ರಿಯವರು ಎಂ ಎ ಬಿ ಎಲ್‌ಯವರು, ಹಾಸನ ಡಿಸ್ಟ್ರಿಕ್ಟಿಗೆ ಕಳುಹಿಸಲ್ಪಟ್ಟರುತ್ತಾರೆ.

ನಂ. ೬೩—ತಾ|| ೧೨ನೇ ಮೇ ೧೮೮೬—ಇದರಿಂದ ತಿಳಿಯಪಡಿಸುವದೇನಂದರೆ, ಮಾಹೇ ಮಜಕೂರ್ ಗುರ್ರೇ ತಾರೀಖ್ ಲಾಗಾಯಿತು ಹಾಸನ ಡಿಸ್ಟ್ರಿಕ್ಟ್ ಖಜಾನೆಯು ಇಡಲ್ಪಟ್ಟರುತಿದೆ

ನಂ. ೬೪—ಮಂಡ್ಯ ತಾಲ್ಲೂಕ ಟಿರಸ್ತೇದಾರ್ ಸುಬ್ಬಣ್ಣನವರಿಗೆ, ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು, ಹಂಗಾಮಿಯಾಗಿ ಕೊಡಲ್ಪಟ್ಟರುವದರಿಂದ, ಸದರೀ ತಾಲ್ಲೂಕಿಗೆ ಕಳುಹಿಸಲ್ಪಟ್ಟರುವ ಕಾಯಂ ಅಮಲ್‌ದಾರರಿಂದ ನಿವೃತ್ತಿಸಲ್ಪಡುವವರಿಗೆ ಅವರು ಆ ಅಧಿಕಾರಗಳನ್ನು ಚಲಾಯಿಸುತಲಿರತಕ್ಕದ್ದು

ನಂ ೬೫—ಕಡೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮೆ|| ರಾಘವೇಂದ್ರರಾಯರವರು, ೧೮೮೬ನೇ ಇಸವಿ ಏಪ್ರಿಲ್ ೨೨ನೇ ಮರ್ರ್ಕುಂ ೮೦ನೇ ನಂಬರ್ ಇಸ್ತಿಹಾರ್‌ನಲ್ಲಿ ಕೊಡಲ್ಪಟ್ಟದ್ದ ೨ ತಿಂಗಳ ಪ್ರಿವಿಲೇಜ್ ರಜಾವನ್ನು ೧೮೮೬ನೇ ಇಸವಿ ಮೇ ಗುರ್ರೇ ತಾರೀಖಿನ ಮಧ್ಯಾಹ್ನದ ಮೊದಲು ಉಪಯೋಗಿಸಿಕೊಂಡಿರುತ್ತಾರೆ

ನಂ—೨೧೧೨—೩೮೬—ತಾ|| ೧೩ನೇ ಮೇ ೧೮೮೬—ಮ್ಯಾಲಿಸ್ ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್ ಮೆ|| ಸ್ಟ್ಯೂವರ್ಟ್‌ಯವರಿಗೆ ಮಾಹೇ ಮಜಕೂರ್ ೩ನೇ ತಾರೀಖ್ ಮೊದಲು, ಎರಡುವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟರುತಿದೆ

ನಂ—೨೧೪೩—೩೮೮—ತಾ|| ೧೫ನೇ ಮೇ ೧೮೮೬—ಮೈಸೂರು ಸೀಮೆಯ ಪಬ್ಲಿಕ್‌ವರ್ಕ್ಸ್ ಅಕೌಂಟ್ಸ್ ಎಗ್ಜಾಮಿನರಾದ ಮೆ|| ಬೀಚರ್‌ಯವರ ನೌಕರಿಯು ಇಂಡ್ಯ ಗವರ್ನ್‌ಮೆಂಟಿನವರ ಸುಫರ್ದಿನಲ್ಲಿ ಮರಳಿ ಇಡಲ್ಪಟ್ಟದ್ದರಿಂದ, ಮೈಸೂರು ಕಂಟ್ರೋಲರವರು ಪಬ್ಲಿಕ್‌ವರ್ಕ್ಸ್ ಇಲಾಖಾ ಛಾರ್ಜನ್ನು ವಹಿಸುವ ತಾರೀಖ್ ಮೊದಲು, ಜನರಲ್ ವ ಪಬ್ಲಿಕ್‌ವರ್ಕ್ಸ್ ಅಕೌಂಟ್ಸ್ ಆಫೀಸ್‌ಗಳು ಒಂದಾಗಿ ಸೇರಿ, ಸದರೀ ಆಫೀಸರ ವಿಚಾರಣೆಯೊಳರತಕ್ಕದ್ದೆಂದು ಹುಕುಂ ಮಾಡಲ್ಪಟ್ಟರುತಿದೆ

EXTRACTS

ಇನ್‌ಕಂಟ್ಯಾಕ್ಸ್ ಆಕ್ಟಿನ ವಿಷಯದಲ್ಲಿ ಚರ್ಚೆ ನಡೆಯುತಿರುವಾಗ್ಯೆ ರಾಜ್ಯದ ಆಡಳಿತೆ ಸಂಬಂಧವಾಗಿ ಈಗ ನಡೆಯತಕ್ಕ ಖರ್ಚನ್ನು ಯೋಗ್ಯವಾದರೀತಿಯಿಂದ ಎಷ್ಟರಮಟ್ಟಿಗೆ ಕಡಮೆಮಾಡಬಹುದೆಂಬ ವಿಷಯದಲ್ಲಿ ವಿಚಾರಣೆಮಾಡತಕ್ಕಬಗ್ಯೆ ಫೈನಾನ್ಷಿಯಲ್ ಕಮಿಟಿಯು ನೇಮಿಸಲ್ಪಡುವದೆಂದು ಲಾರ್ಡ್ ಡಫರಿನ್‌ಯವರು ತಿಳಿಸಿದ್ದಪ್ರಕಾರ ಕಮಿಟಿಯು ಏಕತ್ರವಾಗಿ ಕಮಿಟಿಯ ಕೆಲಸವು ನಡಿಯಲಿಕ್ಕೆ ಪ್ರಾರಂಭವಾಗಿದೆ ಬೋರ್ಡ್ ಗವರ್ನ್‌ಮೆಂಟಿನವರ ಮೂಲಕ ಪಡೆದ ಅನುಭವದಮೇರೆಯಿಂದ ಕಮಿಟಿಯವರು ವಿಚಾರಮಾಡತಕ್ಕ ಸಂಗತಿಗಳಲ್ಲಿ ಪ್ರಾವಿನ್ಷಿಯಲ್ ಕಂಟ್ರಾಕ್ಟಿನ ತಿದ್ದುಪಡಿಯೇ ಮುಖ್ಯವಾದ್ದೆಂದು ಕಂಡುಬರುತಿದೆ. ಪ್ರಾವಿನ್ಷಿಯಲ್ ಕಂಟ್ರಾಕ್ಟೆಂದರೆ, ಆಯಾ ಇಲಾಖೆಗಳಲ್ಲಿ ಆಗತಕ್ಕ ಹುಟ್ಟುವಳಿಯಲ್ಲಿ ಫಲಾನೇವಿಧವುಳ್ಳ ಹುಟ್ಟುವಳಿಯನ್ನು ಇಂತಾ ಖರ್ಚಿನ ಬಗ್ಯೆ ಇಲಾಖೆಯವರು ತಮ್ಮ ಸ್ವಂತ ಅಧಿಕಾರದ ಮೇಲೆ ಉಪಯೋಗಿಸಿಕೊಳ್ಳುವಣವೆಂತರ್ಥವು ಈರೀತಿ ಮಾಡಬಹುದೆಂದು ಹಿಂದುಸ್ಥಾನ್ ಸರಕಾರದವರು ನಿರ್ಣಯಿಸಿದರು ಈ ಏರ್ಪಾಟಿನ ಮಾಯಿದೆಯು ೧೮೮೭ನೇ ಇಸವಿ ಮಾರ್ಚ್ ೩೧ನೇ ತಾರೀಖಿಗೆ ತೀರುವದಾದರಿಂದ ಮುಂದೆ ಆಗತಕ್ಕ ಕಂಟ್ರಾಕ್ಟಿನಲ್ಲಿ ಆವಶ್ಯಕಗಳಾಗಿರುವ ಬದಲಾವಣೆಗಳನ್ನು ಯಂತಾಖರ್ಚುಗಳು ಉಳಿಸಿಕೊಳ್ಳಲ್ಪಟ್ಟವೆ, ಅಂತಾ ಹುಟ್ಟುವಳಿ ಮತ್ತು ಖರ್ಚುಗಳು ಎಷ್ಟುಮಟ್ಟಿಗೆ ಹೆಚ್ಚುವೆ ಅವು ಯಾವಕಾರಣಗಳಿಂದ ಹ್ಯಾಗೆ ಹೆಚ್ಚಿದವು ಮುಂತಾದ ವಿಷಯಗಳಲ್ಲಿಯೂ, ಆಯಾ ಡಿಪಾರ್ಟ್‌ಮೆಂಟುಗಳ ಜನರ ಸಂಖ್ಯೆಯನ್ನು ತಗ್ಗಿಸುವದಕ್ಕಾಗಲಿ ಅಥವಾ ಅವುಗಳ ಇತರ ಖರ್ಚನ್ನು ಕಡಮೆ ಮಾಡುವದಕ್ಕಾಗಲಿ ಸಾಧ್ಯವೇಯೆಂಬ ವಿಷಯದಲ್ಲಿ ಯೋಗ್ಯವಾದ ಅಭಿಪ್ರಾಯಗಳಂ ಕೊಡಲಿಕ್ಕೆ ಶಕ್ತರಾದ ಸ್ಥಳಾಧಿಕಾರಿಗಳ ಅಭಿಪ್ರಾಯದೊಡನೆ ತಮ್ಮ ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ಇಲಾಖೆಯವರಿಗೆ ಕಮಿಟೀಯವರು ಬರೆದಿರುವಂತೆ ಆಯಾ ಇಲಾಖೆಯವರು ಸಹ ಸ್ಥಳಾಧಿಕಾರಿಗಳಿಗೆ ಬರೆದಿರುತ್ತಾರೆ. ಈ ವಿಚಾರದ ಪರಿಣಾಮವೇನಾಗುವದೆಂಬದನ್ನು ಊಹಿಸುವದು ಪ್ರಯಾಸವಲ್ಲವು ಮಸಲಾ ಒಂದುಡಿಪಾರ್ಟ್‌ಮೆಂಟಿನ ಮುಖ್ಯಾಧಿಕಾರಿಯನ್ನು ಆಡಿಪಾರ್ಟ್‌ಮೆಂಟಿನ ಖರ್ಚನ್ನು ಯಾವರೀತಿಯಿಂದ ಕಡಮೆ ಮಾಡಬಹುದೆಂತ ವಿಚಾರಿಸಿದರೆ, ಸದರೀ ಅಧಿಕಾರಿಯು ತನ್ನ ಸಂಬಳವನ್ನಾಗಲಿ, ತನ್ನ ಇಷ್ಟಮಿತ್ರರಾದ ಅಥವಾ ಕಡೇ ದೇಶಬಾಂಧವರಾದ ತನ್ನ ಒಳನೌಕರರ ಏಳವನ್ನಾಗಲಿ, ಕಡಮೆ ಮಾಡಬೇಕೆಂತ ಎಂದಿಗೂ ಅಭಿಪ್ರಾಯವಂ ಕೊಡಲಾರನು ಇದು ಕೇವಲ ಅನುಭವಸಿದ್ಧವಾದ ವಿಷಯವು, ಇದುವರಿಗಿನ ವಾದಿಕೆಯಂತೆ ಬಹುಶಃ ಕೆಲವು ಪಟೀಲರನ್ನು ಅಥವಾ ಬಡಶಾನ್‌ಬೋಗರನ್ನು ಕಡಮೆ ಮಾಡಬೇಕೆಂತಲಾಗಲಿ, ಅಥವಾ ಈಗಲೇ ಜೀವನಕ್ಕೆ ಸಾಲದ ಅವರ ಸಂಬಳವನ್ನೇ ತಗ್ಗಿಸಬಹುದೆಂತಲಾಗಲಿ ಅಭಿಪ್ರಾಯಗಳು ಮುಂದೆ ಕೊಡಲ್ಪಡುವವೇ ಹೊರತು ಯುಕ್ತವಾಗಿ ನಡೆಸಲ್ಪಡುವದೆಂಬ ನಂಬಿಕೆ ನಮಗೆ ಸುತರಾಂ ಇಲ್ಲವು ಕಳೆದ ವರುಷದಲ್ಲಿ ಖರ್ಚು ಕಮ್ಮಿ ಮಾಡುವ ವಿಷಯದಲ್ಲಿ ಚರ್ಚೆ ನಡೆಯುವಾಗ್ಯೆ ಒಬ್ಬ ಅಧಿಕಾರಿಯು ಹಣದ ಕೊರತೆಯಿಂದ ಬಳಲುವ ಸರ್ಕಾರಕ್ಕೆ ಸಹಾಯಮಾಡುವ ಕೋರಿಕೆಯಿಂದ ತಮ್ಮ ಡಿಪಾರ್ಟ್‌ಮೆಂಟಿನ ಕೆಲವುಜನ ಕಾನ್‌ಸ್ಟೇಬಲರಿಗೂ, ಶಿಪಾಯಿಗಳಿಗೂ, ಪೆನ್ಷನ್‌ಕೊಟ್ಟು ಅವರಲ್ಲಿ ಕೆಲವರ ಬದಲು ಅನ್ಯರನ್ನು ನಿಯಮಿಸಬಾರದೇಯೆಂದು ಮುಂಚೆ ಸರ್ಕಾರಕ್ಕೆ ಶಿಫಾರಸ್‌ಮಾಡಿದ್ದು ಅನೇಕರ ಜ್ಞಾಪಕದಲ್ಲಿ ಇರಬಹುದು ಈಗಲೂ ಖರ್ಚು ಮಾಡುವದೇ ಅಸಾಧ್ಯವೆಂದು ಕೆಲವರೂ ಬಡಶಿಪಾಯಿಗಳ ಮತ್ತು ಕಾರ್‌ಕೂನರನ್ನು ಬಲಿಕೊಡುವ ವಿಷಯದಲ್ಲಿ ಬೇರೆ ಕೆಲವರೂ ಅಭಿಪ್ರಾಯ ಕೊಡುವರೆಂಬ ವಿಷಯದಲ್ಲಿ ಕಿಂಚಿತ್ತಾದರೂ ಸಂಶಯವಿಲ್ಲವು ನಮ್ಮ ಸರ್ಕಾರಕ್ಕೆ ಈಗ ಪ್ರಾಪ್ತವಾಗಿರುವ ದಾರಿದ್ರ್ಯಾವಸ್ಥೆಯನ್ನು ಅವರು ತಡೆಯಲಾರದೆ ಜನಗಳಮೇಲೆ ಹೊರೆಯನ್ನು ಹೊರಿಸುತಲಿದಾರೆಯಾಗಿ ಅದು ನಿವೃತ್ತಿಸಬೇಕೆಂದು ಯಾರಾದರೂ ತಮ್ಮ ಅಭಿಪ್ರಾಯವನ್ನು ಕೊಡುವರೆಂಬ ಪ್ರತ್ಯಾಶೆಯು ನಮಗೆ ಸ್ವಲ್ಪವೂ ಇಲ್ಲವು ಈಗ ಕಮಿಟಿಯ ಮೆಂಬರ್‌ಗಳೆಲ್ಲರೂ ಸರ್ಕಾರ್ ಅಧಿಕಾರಿಗಳಾಗಿರುತ್ತಾರೆ. ತಮ್ಮಂತಾ ಬೇರೆಅಧಿಕಾರಸ್ಥರ ವಿಷಯದಲ್ಲಿ ಇವರಿಗೆ ಸ್ವಾಭಾವಿಕವಾಗಿ ವಾತ್ಸಲ್ಯವಿರುವದಾದ ಕಾರಣ ಜನಗಳು ಅನಾವಶ್ಯಕವೆಂತ ತಿಳಿಯುವ ಡಿಪಾರ್ಟ್‌ಮೆಂಟುಗಳನ್ನು ತಗ್ಗಿಸುವ ವಿಷಯದಲ್ಲಾಗಲಿ, ಜನರಿಗೆ ಭಾರೀಎಂದುತೋರುವ ಸಂಬಳಗಳನ್ನು ಕಡಮೆಮಾಡುವ ವಿಷಯದಲ್ಲಾಗಲಿ, ಇವರ ಮನಸ್ಸಿನಲ್ಲಿ ಆಲೋಚನೆ ಹುಟ್ಟುವ ಸಂಭವವೇ ಇಲ್ಲ. ಸರ್ಕಾರೀ ಅಧಿಕಾರಸ್ಥರಲ್ಲದ ಒಬ್ಬಿಬ್ಬರು ಸ್ಥಳಿಕ ಮೆಂಬರಾಗಿ ನಿಯಮಿಸಲ್ಪಟ್ಟ ಬಹುಜನಾಭಿಪ್ರಾಯದ ಮುಂದೆ ಇವರ ಅಭಿಪ್ರಾಯವು ಕಾರ್ಯಕಾರಿ ಯಾಗಲರಿಯದು.

BANGALORE—Printed and published for the Proprietor, at the KARNATIC PRESS—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಶಾಮವಿವಿಧಪ್ರವೃತ್ತ್ಯುಪಗಮಾರ್ಹ ಕರ್ಣಾಟಕಪ್ರಕಾಶನಪರಾಭಿದಾಪ್ರಥಿತಸಾಹಿತೀಶೋಭಿತಾ ‖ ಮೃಗಾಂಕಹಿತವಾಸರನಿಹಿತಮುದ್ರಣಾಸಜ್ಜನೈರ್ದ್ವಿಕಾಸುವರಿಪೋಷಿತಾದಿಶತಿಮಾನಸಂಸುಮುದಂ

Vol. XIII] BANGALORE—MONDAY, MAY 24, 1886. [No. 21.

ಸಂಪುಟ ೧೩.] ಬೆಂಗಳೂರು:—ಸನ್ ೧೮೮೬ನೇ ಇಸವಿ ಮೇ ೨೪ನೇ ತಾರೀಖ್ ಸೋಮವಾರ. [ಸಂಚಿಕೆ ೨೧.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷು ಮತ್ತು ಕನ್ನಡ ಶೇರುಕೊಳ್ಳತಕ್ಕವರಿಗೆ ವರುಷ ೧ಕ್ಕೆ	...	೧೨—೦—೦
ಇಂಗ್ಲಿಷು ಮಾತ್ರ ಶೇರುಕೊಳ್ಳತಕ್ಕವರಿಗೆ ವರುಷ ೧ಕ್ಕೆ	...	೬—೦—೦
ಕನ್ನಡ ಮಾತ್ರ ಶೇರುಕೊಳ್ಳತಕ್ಕವರಿಗೆ ಈ ಪತ್ರಿಕೆ ವರುಷಕ್ಕೆ		೬—೦—೦
ಬಿಂಗಿ	೧ಕ್ಕೆ	೦—೮—೦

[illegible]

ಪ್ರಕಟನೆಯ ರಿವಾಜ್.

ಇಂಗ್ಲೀಷ್ ಶೀಟಿನ ಲೈನ್	೧ಕ್ಕೆ	೦—೨—೦
ಕನ್ನಡ ಶೀಟಿನ ಲೈನ್	೧ಕ್ಕೆ	೦—೧—೦

NOTICE TO SUBSCRIBERS.

[illegible]

೧. [illegible]

೨. [illegible]

೩. [illegible]

೪. [illegible]

ನೋಟೀಸ್.

ಇದರಡಿ ವಿವರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ಕ್ರಯ ಸಲ್ಪಡುವವು,—

ಕನ್ನಡ ಟೀಕಾಸಹಿತವಾದ ಸಂಸ್ಕೃತಗ್ರಂಥಗಳು.

[illegible]	...	೧—೪—೦
[illegible]	...	೦—೧೨—೦
[illegible] (ಪಟ್ಟಂದಾರಕ್)	...	೦—೩—೦
[illegible]		೦—೫—೦
[illegible]	...	೦—೪—೦
[illegible]	...	೦—೧೪—೦
[illegible]	...	೦—೬—೦
[illegible]	...	೦—೨—೦
ವೈದ್ಯಸಾರಸಂಗ್ರಹ	..	೫—೦—೦

ಕನ್ನಡಗ್ರಂಥಗಳು.

[illegible]	...	೦—೬—[illegible]
[illegible]	...	೦—೪—೦
[illegible]	...	೦—೩—೬
[illegible]	...	೦—೨—೬
[illegible]	...	೦—೪—೦
[illegible]	...	೦—೨—೦
[illegible]	...	೦—೨—೬
[illegible]	...	೦—೬—೦
[illegible]	...	೦—೩—೦
[illegible]	...	೦—೨—೦
[illegible]	...	೦—೦—[illegible]
ಇಂಗ್ಲಿಷು ಕನ್ನಡ [illegible]		೧—೦—೦
[illegible]	...	೨—೦—೦
[illegible]	...	೦—೧೨—೦
[illegible]	...	೩—೪—೬
[illegible]	...	೩—೪—೬
[illegible] ೧ನೇ ಸಂಚಿಕೆ.	...	೦—೦—೦
[illegible] ೨ನೇ ಸಂಚಿಕೆ.		೧—೮—೦
[illegible]	...	೦—೮—೦

ಸಂಸ್ಕೃತ ಮೂಲಗ್ರಂಥಗಳು.

[illegible]	..	೦—೫—೦
[illegible]	...	೦—೨—೬
[illegible]	...	೦—೨—೬
[illegible]	...	೦—೦—೬
[illegible]	...	೦—೩—೬
[illegible]	...	೦—೧—೦

[illegible]

ಪ್ರಕಟನೆ.

ಬೆಂಗಳೂರು ಷಹರ್ ಮ್ಯೂನಿಸಿಪಾಲಿಟಿ.

ಸನ್ ೧೮೮೬ನೇ ಇಸವಿ ಮೇ ೨೯ನೇ ತಾರೀಖ್ ಶನಿವಾರದವದಿನ ಪ್ರಾತಃಕಾಲ ೩½ ಘಂಟೆಗೆ ಬೆಂಗಳೂರು ಡಿಸ್ಟ್ರಿಕ್ಟು ಆಫೀಸ್ ಕಟ್ಟಡದಲ್ಲಿನ ತಮ್ಮ ಆಫೀಸಿನಲ್ಲಿ ಸಿಟೀ ಮ್ಯೂನಿಸಿಪಲ್‌ಕಮ್ಮಿಷನರುಗಳು ಆರ್ಡಿನೆರಿ ಮೀಟಿಂಗ್ ಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳ ಪಟ್ಟಿ.

೧. ಚಾಲ್ತೀ ನಗದು ಜಮಾಖರ್ಚು ಲೆಕ್ಕಗಳು, ಈಗ ನಡೆಯುತಲಿರುವ ಕಾಮಗಾರೀಗಳನ್ನು ಕುರಿತ ರಿಪೋರ್ಟು, ಸನ್ ೧೮೮೬ನೇ ಇಸವಿ ಏಪ್ರಿಲ್ ಮಾಹೇ ಬಾಬತು ಮೃತಪಟ್ಟವರಲೆಕ್ಕ.

೨. ದಿವಾನರವರ ರೆಜಿಸ್ಟೇಟಿವ್‌ಡಿಪಾರ್ಟ್‌ಮೆಂಟಿ ಸೆಕ್ರೆಟರಿಯವರು, ೧೮೮೬ನೇ ಇಸವಿ ಮೇ ೮ನೇ ಮರ್ಕ್ಯುಂಪೃಷ್ಠ ೧೯ನೇ ನಂಬರು, ತಮ್ಮ ಡಾಕೆಟಿನೊಡನೆ ಜೋಡಿನವರ ಅಭಿಪ್ರಾಯಕ್ಕಾಗಿ ಕಳುಹಿಸಿರುವ ಬೆಂಗಳೂರು ಷಹರನೊಳಗಣ ತಕ್ಕ ಜಟಕಾ ಗಾಡಿಗಳ ಮೇಲಣ ಅಧಿಕಾರದಬಗ್ಯೆ ಏರ್ಪಡಿಸಲ್ಪಟ್ಟಿರುವ ರೆಗ್ಯುಲೇಷನ್ ಯಾನೆ ಮಸವಿದಾವಿನ ಅಚ್ಚುಹಾಕಿದ ಪ್ರತಿಯೊಂದು.

೩. "ಟ್ರಾಜೆಡೀಹಾಲ್" ಯೆಂಬ ಹೆಸರುಳ್ಳ ಕಟ್ಟಡದಲ್ಲಿ ಮಿ॥ ವಾಲ್ಕರ್ ಯೆಂಬವರಿಂದ ಈಚೆಗೆ ಕಟ್ಟಲ್ಪಟ್ಟಿರುವ ಒಂದು ಚರುಡಿಯಂ ಕುರಿತು ಪ್ಯಾಲೆಸ್ ಡಿವಿಜನಿನ ಯೆಗ್ಸಿಕ್ಯೂಟಿವ್ ಇಂಜನಿಯರಿಗೆ ತಿಳಿಸಿದ್ದ ದಾಖಲೆಗೆ ಜವಾಬಾಗಿ ಅವರು ಬರೆದ ೧೮೮೬ನೇ ಇಸವಿ ಮೇ ೮ನೇ ಮರ್ಕ್ಯುಂಪೃಷ್ಠ ಕಾಗದವು.

೪. ಮ್ಯೂನಿಸಿಪಲ್ ಗಾರ್ಡನ್‌ನೊಳು ೩೦ರೂ ಪಾಯಿಗಳ ಅಂದಾಜ್‌ನಲ್ಲಿ ಒಂದು ಸ್ಟೋರ್ ರೂಂ ಕಟ್ಟತಕ್ಕಬಗ್ಯೆ ಮಾಡಲ್ಪಟ್ಟ ಸೂಚನೆ.

೫. ಚಾಲ್ತೀ ಸರ್ಕಾರ್ ಸಾಲಿಗೆ ೬ನೇ ನಂಬರ್ ಡಿವಿಜನಿನಲ್ಲಿರತಕ್ಕ ಮನೆಗಳನ್ನು ಪಾಕೀಜಾ ಬಗ್ಯೆ ಕಂಟ್ರಾಕ್ಟಿಗೆ ಕೊಡುವದಕ್ಕಾಗಿ ಇಟ್ಟಿರುವ ಷರತ್ತುಗಳುಳ್ಳ ಕರಾರಿನ ಮಸವಿದಾ.

೬. ಗವೀಪುರ ಗ್ರಾಮದ ಪೈಕಿ ಯೊಂದು ಭಾಗವನ್ನು ಷಹರ್ ಮ್ಯೂನಿಸಿಪಲ್ ಸರಹದ್ದಿಗೆ ಸೇರಿಸುವದನ್ನು ದಿವಾನರವರು ಮಂಜೂರ್ಮಾಡಿರುವ ಪ್ರೊಸೀಡಿಂಗ್ಸ್.

A. Srinivasa Charlu,
Vice-President.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MAY 24, 1886.

೧೮೮೬ನೇ ಮೇ ೨೪ನೇ ತಾ॥ ಸೋಮವಾರ.

NATIVE ADMINISTRATION.

ನೇಟಿವ್ ಸಂಸ್ಥಾನದಲ್ಲಿರುವ ಪ್ರಜೆಗಳಿಗೆ ಹಿಂದೂ ಅರಸರ ಪ್ರಭುತ್ವವು ಸುಖಾವಹವಾದದ್ದೋ ಅಥವಾ ಬ್ರಿಟಿಷ್ ಆಫೀಸರುಗಳ ಪ್ರಭುತ್ವವು ಕ್ಷೇಮಕರವಾದದ್ದೋ ಯೆಂದು ವಿಚಾರಮಾಡಿ ಕಡೆಗೆ ಅನೇಕರು ಅನೇಕವಿಧ ಅಭಿಪ್ರಾಯಗಳಂ ಪಡೆದಿರುತ್ತಾರೆ. ಪರಂತು ಯಾರು ಯಾವದನ್ನು ತಿಳಿಸಿದಾಗ್ಯೂ ಅದಕ್ಕೆ ತಕ್ಕ ಆಧಾರವಿಲ್ಲದಿದ್ದರೆ ಅದು ಗೌರವಿಸಲ್ಪಡಲಾರದಷ್ಟೆ, ಆದದರಿಂದ ಪ್ರಸಕ್ತ ವಿಚಾರಕ್ಕೆ ನಿದರ್ಶನತ್ವೇನ ಇತರ ನೇಟಿವ್ ಸಂಸ್ಥಾನಗಳಗಿಂತಲೂ ಈ ಸಂಸ್ಥಾನವನ್ನೇ ಪ್ರಾಧಾನ್ಯೇನ ನಮೂದಿಸಿ ಈ ವಿಷಯದೊಳು ನಮಗಿರುವ ಅನುಭವವನ್ನು ಇದರಡಿ ತಿಳಿಸುವೆವೆಂತೆನೆ.

ಪೂರ್ವದಿಂದಲೂ ಈ ಮೈಸೂರು ರಾಜ್ಯವು ನೇಟಿವ್ ಅರಸರದಾಗಿರುತಿದೆ. ಈ ರಾಜ್ಯಕ್ಕೆ ೧೭೯೯ ನೇ ಇಸವಿ ಯಲ್ಲಿ ಬ್ರಿಟಿಷನವರು ಪ್ರಥಮತಃ ಪ್ರವೇಶಿಸಿದರು. ೧೮೩೧ ನೇ ಇಸವಿಯ ತನಕ ನೇಟಿವ್ ಅರಸರ ರಾಜ್ಯತಂತ್ರ ಕ್ರಮವನ್ನನುಸರಿಸಿ ಹಿಂದೂಗಳಿಂದಲೇ ಇದು ಪಾಲಿಸಲ್ಪಡುತಲಿತ್ತು. ಈ ಪೈಕಿ ಕೆಲವುಕಾಲ ಬ್ರಿಟಿಷ್ ರೆಸಿಡೆಂಟರವರ ವಿಚಾರಣೆಯಲ್ಲಿ ನೇಟಿವ್ ದಿವಾನರಿಂದ (ಬರೋಡೆ ರಾಜ್ಯವು ಸರ್. ಟಿ. ಮಾಧವರಾಯರವರ ಅಧಿಪತ್ಯಕ್ಕೊಳಪಟ್ಟದ್ದಂತೆ) ಪಾಲಿಸಲ್ಪಡುತಲಿತ್ತು. ಆಗ್ಯೆ ರೈತರು ಸುಖಪ್ರಚುರವಾದ ಸ್ಥಿತಿಯೊಳಿರುತಲಿದ್ದರು. ಮತ್ತು ಸಂಸ್ಥಾನದ ಖಜಾನೆಯು ಭರ್ತಿಯಾಗಿತ್ತು. ಬಳಿಕ ಈ ರಾಜ್ಯವು ಸ್ವರಾಜರ ಪಾಲನೆಗೆ ಒಳಪಟ್ಟಿತು. ಆ ಕಾಲದಲ್ಲಿ, ಪಾಲನಾ ಕ್ರಮ ಮಾತ್ರ ಏಕರೂಪವಾಗಿದ್ದಾಗ್ಯೂ ಕ್ರಮವಾದ ಮೇಲ್ವಿಚಾರಣೆ ಇಲ್ಲದೆ ಹೋದದರಿಂದ ರೈತರ ಮತ್ತು ಖಜಾನೆಯ ಸ್ಥಿತಿಯು ಬಹಳ ವೈಪರೀತ್ಯವನ್ನು ಹೊಂದಿತು. ೧೮೩೨ನೇ ಇಸವಿಯಿಂದೀಚೆಗೆ ಬ್ರಿಟಿಷನವರ ಸಾಕ್ಷಾತ್ಪಾಲನೆಗೆ ಇದು ಒಳಗಾಯಿತು. ಆದಾಗ್ಯೂ ನೇಟಿವ್ ರಾಜ್ಯತಂತ್ರಕ್ರಮವನ್ನೇ ಅಂಗೀಕರಿಸಿ ಕ್ರಮವಾದ ವಿಚಾರಣೆಯೊಡನೆ ಬ್ರಿಟಿಷ್ ಆಫೀಸರುಗಳು ಆಡಳಿತವಂ ನಡೆಸುತಬಂದದರಿಂದ ಮರಳಿ ರೈತರಿಗೆ ಸುಖವುಂಟಾಗಲಿಕ್ಕೂ, ಖಜಾನೆ ಭರ್ತಿಯಾಗಲಿಕ್ಕೂ ಕಾರಣವಾಯಿತು. ಈ ಕ್ರಮವು ೧೮೬೨ನೇ ಇಸವಿಯ ತನಕ ಅವಿಚ್ಛಿನ್ನವಾಗಿ ನೆಲಗೊಂಡಿತ್ತು. ತರುವಾಯ ಇದು ಇಂಗ್ಲೀಷ್‌ರಾಜ್ಯತಂತ್ರಕ್ರಮದಮೇಲೆ ಪಾಲಿಸಲ್ಪಡಲಿಕ್ಕೆ ಪ್ರಾರಂಭವಾಯಿತು. ಆ ಕಾಲದಲ್ಲಿ ರೈತರಿಗೆ ವಿಶೇಷ ಸ್ವಾತಂತ್ರ್ಯವೇರ್ಪಟ್ಟದ್ದರೂ ಸುಖ ಮಾತ್ರ ಅವರಿಗೆ ಒಂದೇ ವಿಧವಾಗಿತ್ತು. ಭರ್ತಿಯಾಗಿದ್ದ ಖಜಾನೆಯು ಬ್ರಿಟಿಷ್ ಆಫೀಸರರ ಮತ್ತು ಅವರ ಆಶ್ರಿತರ ಪಾಲಾಯಿತು. ಈ ಸ್ಥಿತಿಯು ೧೮೮೦ ನೇ ಇಸವಿಯ ತನಕ ಏಕರೂಪವಾಗಿತ್ತು. ಅನಂತರ ಈ ರಾಜ್ಯವು ನೇಟಿವ್ ಅರಸರ ಸಾಕ್ಷಾತ್ಪಾಲನೆಗೆ ಮರಳಿ ಒಪ್ಪಿಸಲ್ಪಟ್ಟು ಅದ್ಯಾಪಿ ಅವರಿಂದ ಪಾಲಿಸಲ್ಪಡುತ ಬರುತಲಿದೆ. ಈಗ ಹಿಂದಿನ ಇಂಗ್ಲೀಷ್ ರಾಜ್ಯತಂತ್ರ ಕ್ರಮವನ್ನನುಸರಿಸಿಯೇ ಪ್ರಭುತ್ವ ಮಾಡುವಂತೆ ಏರ್ಪಟ್ಟು ಈಗ್ಯೆ ೬ ವರುಷಗಳಾಗುತಬಂತು. ಈ ಕಾಲದಲ್ಲಿ ರೈತರು ವಿಶೇಷತಃ ಸುಖವಾಗಿದಾರೆಂದು ಹೇಳಲಿಕ್ಕೆ ನಿದರ್ಶನಗಳ್ಯಾವದೂ ಕಂಡುಬರಲಿಲ್ಲವು. ಖಜಾನೆಯು ಮರಳಿ ಭರ್ತಿಯಾಗುವದೆಂಬ ಪ್ರತ್ಯಾಶೆಗೆ ಅವಕಾಶವಿಲ್ಲದೇ ಇದೆ. ಸಾಲವು ಅನೇಕ ವಿನ್ಯಾಸಗಳೊಡನೆ ದಿನೇದಿನೇ ಅಭಿವೃದ್ಧಿಯನ್ನೈದುತ ಲಿದೆ. ಮುಖ್ಯವಾಗಿ ಪ್ರಕೃತ ರಾಜ್ಯತಂತ್ರಕ್ರಮದಿಂದ ಬ್ರಿಟಿಷ್ ಆಫೀಸರುಗಳ ಸ್ಥಾನದಲ್ಲಿ ನೇಟಿವ್‌ಗಳು

NOTICE.

VAIDYASARA SANGRAHA

☞ *Price including Postage, Rs 5-0-0*

ವೈದ್ಯಸಾರ ಸಂಗ್ರಹ.

[illegible]

[illegible]	... ...	ರೂ॥ ೫—೦—೦
[illegible]		೦—೬—೦

[illegible], ಬೆಂಗಳೂರು.

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮ್ಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ಶೀಘ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿತೆಗೆದುಕೊಳ್ಳಲ್ಪಡುವದು.

ನೌಕರರಾದದ್ದೊಂದು ವಿನಾ ಮತ್ತ್ಯಾವ ಪ್ರಯೋಜನವೂ ವುಂಟಾದಂತೆ ಕಾಣಿಸಲಿಲ್ಲವು. ಮೇಲೆ ಕಂಡ ಕಾರಣಗಳಿಂದ ನೇಟವ್ ರಾಜ್ಯ ತಂತ್ರಕ್ರಮವು, ಇಂಗ್ಲಿಷ್ ಅಧಿಕಾರ ಪ್ರಭುತ್ವಕಾಲದಲ್ಲಿ ಕ್ರಮವಾಗಿಯೂ ಅಪೇಕ್ಷಿತವಾದ್ದಾಗಿಯೂ ಯುತ್ತೆಂದು ಏರ್ಪಡುತಿದೆ. ಹಿಂದಿನ ಅನುಭವರೀತ್ಯಾ ನೇಟವ್ ರಾಜ್ಯ ತಂತ್ರಕ್ರಮವು ನೇಟವ್ ಅಧಿಕಾರಿಗಳಿಂದಲೇ ತೃಪ್ತಿಕರವಾಗಿ ಕಾಪಾಡಲ್ಪಡಲಿಲ್ಲವೆಂದು ಏರ್ಪಟ್ಟಿರುವಲ್ಲಿ ವಿದೇಶೀಯರಾದ ಇಂಗ್ಲಿಷಿನವರ ರಾಜ್ಯತಂತ್ರವನ್ನು ನೇಟವ್‌ಗಳು ಕ್ರಮವಾಗಿಕಾಪಾಡುವರೆಂದು ಭಾವಿಸಲಿಕ್ಕೆ ಸ್ವಲ್ಪವೂ ಅವಕಾಶವಿಲ್ಲವು. ಈ ನ್ಯಾಯವು ಇತರನೇಟವ್ ಸಂಸ್ಥಾನಗಳ ವಿಷಯದಲ್ಲಿ ಅನ್ವಯಿಸುವದಿಲ್ಲವು. ಯಾತಕ್ಕೆಂದರೆ, ಸದರೀ ಸಂಸ್ಥಾನಗಳು ನೇಟವ್ ಆಡಳಿತಕ್ರಮದಿಂದಲೇ ಪಾಲಿಸಲ್ಪಡುತಲಿರುವದರಿಂದ ಅಲ್ಲಿ ವಿಶೇಷವಿಷಮಯಗಳಿಗೆ ಅವಕಾಶವುಂಟಾಗಲಿಲ್ಲವು, ಮತ್ತು ಅಲ್ಲಿ ಇಂತಾಬೇಧಗಳು ಯಾವಾಗ್ಯೂ ತೋರಬರಲಾರದು.

CHANGE IN THE OFFICIALS DIGNITY

ಪೂರ್ವ ಕಾಲಕ್ಕಿಂತಲೂ ಈಗಿನ ಕಾಲದಲ್ಲಿ ಸರ್ಕಾರ್‌ಉದ್ಯೋಗಸ್ಥರಿಗೆ ಗೌರವವು ಬಹಳ ಕಡಮೆಯಾಯಿತೆಂದು ಸಾಧಾರಣವಾಗಿಜನಗಳೆಲ್ಲರೂ ಭಾವಿಸುತ್ತಾರೆ. ಇದು ನಿಜವೆ, ಹಾಗಿದ್ದರೆ ಇದಕ್ಕೆಕಾರಣವೇನು ? ಯೆಂಬದು ಕುರಿತು ಸ್ವಲ್ಪ ಇದರಡಿ ವಿಚಾರಮಾಡುವೆವು.

ಯಾವಕಾಲದಲ್ಲಿ ಯಾವ ಉದ್ಯೋಗವು ಎಷ್ಟರಅಧಿಕಾರವುಳ್ಳದ್ದಾಗಿರಬೇಕೋ ಆಕಾಲದೊಳು ಅದಕ್ಕೆ ಅಷ್ಟರಅಧಿಕಾರವು ನಿಯತವಾಗಿರಲೇಇರುತಿದೆ. ಯಾವ ಉದ್ಯೋಗಸ್ಥನೇಯಾಗಲಿ ಸಾಕ್ಷಾದ್ವಾ ಪರಂಪರೆಯಾ,ಉಪಕಾರಅಥವಾಅಪಕಾರಗಳನ್ನು ಮಾಡುವಶಕ್ತಿವುಳ್ಳವನಾಗಿದ್ದರೆ ಜನಗಳು ಅಂತವನನ್ನುಗೌರವಿಸುವರು. ಉಪಕಾರ ಅಪಕಾರಶಬ್ದಗಳು ಶಬ್ದತಃ ಪ್ರತ್ಯೇಕವಾದವ್ವಾದರೂ ಅರ್ಥದೊಳೆರಡೂ ಒಂದೇಯಾಗಿರುತಿದೆ, ಹ್ಯಾಗಂದರೆ—ಮಾಡಕೂಡದ್ದನ್ನು ಮಾಡುವಣ, ಮಾಡತಕ್ಕದ್ದನ್ನು ಮಾಡದೇಬಿಡುವಣ, ಈಯೆರಡೂ ಪರ್ಯವಸಾನದಲ್ಲಿ ಜನಗಳ ಭಾವನಾಧೀನವಾಗಿರುತಿದೆ. ಹೀಗಿದ್ದಾಗ್ಯೂ ಗೌರವವು ಕಡಮೆಯೆಂದು ಹೇಳಲಿಕ್ಕೆ ಕಾರಣವೇನುದರೆ—ಕಾಲಗತಿಯಿಂದ ಸರ್ವವೂ, ಬದಲಾಯಿಸುವಂತೆಲ್ಲ ಜನಗಳಿಗೆ ತಿಳುವಳಿಕೆಹೆಚ್ಚಿ ಅವರು ತಮ್ಮ ವರ್ತನದೊಳಗಣ ಗುಣದೋಷಗಳನ್ನು ಸ್ವತಃ ತಿಳಿದುಕೊಳ್ಳುವಷ್ಟು ಶಕ್ತಿವುಳ್ಳವರಾಗುವದರಿಂದಲೂ, ರಾಜ್ಯಭಾರ ಕ್ರಮದೊಳು ಪಾಲ್ಕರಿಗೆ ಅನುಭವವ್ರಹೆಚ್ಚಿ ನಿಯತಗಳಾದ ನ್ಯಾಯನಿಬಂಧನೆಗಳನ್ನು ಏರ್ಪಡಿಸಿದ್ದರಿಂದಲೂ, ವೇಷಭಾಷಾಚಾರಾದಿಗಳಲ್ಲಿ ಸರ್ಕಾರದವರ ಪ್ರವೇಶವಿಲ್ಲದೇಹೋದದರಿಂದಲೂ ಅಧಿಕಾರಸ್ಥರ ಗೌರವಪ್ರಾಭವಗಳು ಸ್ವತಃವ ತಗ್ಗಿ ಹೋಗಲಿಕ್ಕೆ ಕಾರಣವಾಯಿತು. ಇದಲ್ಲದೆ ನ್ಯಾಯವಾಗಿ ತಗ್ಗಬೇಕಾದದಕ್ಕಿಂತಲೂ ಈಗ ಅತ್ಯಧಿಕವಾಗಿ ಕಡಮೆಯಾಗಲಿಕ್ಕೆ ಕಾರಣವೇನುದರೆ,— ಉನ್ನತಾಧಿಕಾರಿಗಳು ಗೌರವ್ಯರಾಗಿಯೂ ನಿಷ್ಪಕ್ಷಪಾತಿಗಳಾಗಿಯೂ ಏರ್ಪದದೇ ಹೋಗುವದಲ್ಲದೆ ಅಲ್ಪ ವಿಷಯಗಳಿಗೆಲ್ಲ ತಾವುಪ್ರತ್ಯಕ್ಷವಾಗಿ ಪ್ರವೇಶಿಸುವದರಿಂದಲೂ, ನೌಕರರು ಬೇಕಾದದಕ್ಕಿಂತ ಅಧಿಕವಾಗಿ ದೊರೆಯುವದರಿಂದಲೂ, ನೌಕರಿಗಳು ಬರುತಬರುತ ಕಡಮೆಯಾಗುತ ಬರುವದರಿಂದಲೂ ಲಾಘವಕ್ಕೆ ಕಾರಣವಾಯಿತು. ಇನ್ನೂ ವಿಚಾರಿಸಿದರೆ, ಉದ್ಯೋಗಸ್ಥರು ಲೌಭ್ಯಕ್ಕೆಪಳಗಾಗಿ ನೀಚಕೆಲಸಗಳಿಗೆ ಹಿಂಜರಿಯದೆ ಪ್ರವರ್ತಿಸುವದರಿಂದಲೂ ಸಾಲಗಾರರಾಗುವದರಿಂದಲೂ ಹೀಗಾಗುತಿದೆಂದು ಹೇಳಬಹುದಾಗಿದೆ.

Occasional Note
ನೈಮಿತ್ತಿಕವಿಷಯನ್ಯಾಸ

Greek Troops sent to the frontier — ಗ್ರೀಕ್ ಸೈನಿಕವ್ಯೂಹವನ್ನು ಒಡೆದು ಬಿಡುವ ವಿಷಯದಲ್ಲಿ ಕೊಡಲ್ಪಟ್ಟದ್ದ ಹುಕುಂ ರದ್ದುಮಾಡಲ್ಪಟ್ಟತಲ್ಲದೆ ಸರಹದ್ದು ಪ್ರಾಂತಕ್ಕೆ ಹೋಗುವಂತೆ ಗ್ರೀಕ್ ಸೈನ್ಯಕ್ಕೆ ಹುಕುಂ ಕೊಡಲ್ಪಟ್ಟಂತೆ ತಿಳಿಯ ಬರುತಿದೆ.

Fighting on the Greek frontier — ಗ್ರೀಕ್‌ಸರಹದ್ದು ಪ್ರಾಂತದಲ್ಲಿ ನಿನ್ನೆಯದಿವಸ ಗ್ರೀಕ್ ಸೈನ್ಯಕ್ಕೂ ತುರ್ಕೀಸೈನ್ಯಕ್ಕೂ ಯುದ್ಧಪ್ರಾರಂಭವಾಗಿ ಜರಗುತಲಿದೆ. ಅರ್ಥೆಸ್ ಯೆಂಬ ಪ್ರದೇಶದಿಂದ ಬಂದ ಡೆಸ್ಪ್ಯಾಚಿನ ದೆಸೆಯಿಂದ,ತುರ್ಕೀಸೈನ್ಯವು ಅನಲಿಪಸಿಸ್‌ಯೆಂಬತುಕಡಿಯನ್ನು ಆಕ್ರಮಿಸಿಕೊಳ್ಳಲಿಕ್ಕೆ ಪ್ರಯತ್ನಪಟ್ಟಂತೆಯೂ, ಪರಂತು ಗ್ರೀಕ್‌ಸೈನ್ಯವು ಅದನ್ನು ಹಿಂದಕ್ಕೆ ಬಲಾತ್ಕಾರದಿಂ ಹಿಮ್ಮೆಟ್ಟಿಸಿದಂತಲೂ ತಿಳಿಯಬರುತಿದೆ.

Exhibition at S. Kensington — ಇಂಗ್ಲಾಂಡಿನೊಳು ಕೆನ್‌ಸಿಂಗ್ಟನ್ ಯೆಂಬ ಪ್ರದೇಶಕ್ಕೆದಕ್ಷಿಣದಿಕ್ಕಿನಲ್ಲಿ ಬರುವವಾರ್ತೈತಿಂಗಳೊಳು ನಡೆಯುವದಾಗಿರುವ ವಿವಿಧವಸ್ತು ಪ್ರದರ್ಶಕ ಸಭೆಗೆ ಇಂಡಿಯಾದೇಶದಿಂ ಬಹುಜನ ನೇಟವಿಗಳು ಹೋಗುವದಾಗಿರುವದರಿಂದ ಅವರಿಗಾಗಿ ಪ್ರತ್ಯೇಕ ಸ್ಟೀಮರನ್ನೂ ಬ್ರಾಹ್ಮಣ ಪಾಚಕರನ್ನೂ ಯೇರ್ಪಡಿಸಿ ಪ್ರತಿ ಕೋಸ್ಟ್ ಅಂದರೆ ಸಮುದ್ರತೀರ ಪ್ರದೇಶಗಳಲ್ಲಿ ಸ್ಟೀಮರು ನಿಂತುಹೋಗುವಂತೆ ಏರ್ಪಾಡು ಮಾಡಲ್ಪಡುವದೆಂದು ಮದರಾಸ್ ಪತ್ರಿಕೆಯೊಂದುತಿಳಿಸುತಿದೆ.

Burman virgin ladies — ಬರ್ಮ್ಮಾ ದೇಶದಲ್ಲಿ ಕನ್ಯೆಯರು ಸ್ವತಃ ಒಬ್ಬನು ವರಿಸಿ ವಿವಾಹಮಾಡಿಕೊಳ್ಳೋಣವೂ, ಪತಿಯು ತನಗೆ ಅತ್ಯಪ್ರಿಕರವಾಗಿ ನಡೆದರೆ ಗ್ರಾಮಾಧಿಕಾರಿಗಳ ಬಳಿಗೆ ಹೋಗಿ ಸದರೀ ಸಂಗತಿಯನ್ನು ಆತನಿಗೆ ತಿಳಿಸಿ ಗಂಡನನ್ನು ತ್ಯಜಿಸಬಿಡೋಣವೂ, ಪತಿಯ ಗೈರಹಾಜರೀಯಲ್ಲಿ ಸಾಗುವಳೀ ಮುಂತಾದ ಸಕಲ ಕಾರ್ಯಗಳನ್ನು ನಡಿಸೋಣವೂ ವಾಡಿಕೆಯಾಗಿದೆ. ಇದಲ್ಲದೆ, ಅಲ್ಲಿನ ಸ್ತ್ರೀಯರು ಬಹಳ ಸುಂದರರಾಗಿಯೂ, ವಿಶೇಷ ಸ್ವಾತಂತ್ರ್ಯವುಳ್ಳವರಾಗಿಯೂ ಇರುತ್ತಾರೆ.

Duke of Buckingham — ಸಾಬಕ್ ಮದರಾಸ್ ಗವರ್ನರಾದಡ್ಯೂಕಾಫ್ ಬಕ್ಕಿಂಗ್ ಹಾಂಯವರಿಗೆ ಸಾಲೀಯಾನಾ ೩೦೦೦೦ ರೂಪಾಯಿಗಳತಲಬ್ ದೊರೆಯತಕ್ಕ ನೌಕರಿಯೊಂದು ಈಚೆಗೆ ಕೊಡಲ್ಪಟ್ಟತೆಂದು ತಿಳಿಯಬರುತಿದೆ. ಇವರಿಗೆ ಹಿಂದೆ ಈ ದೇಶದಲ್ಲಿ ಮಾಹೇಯಾನಾ ಕೊಡಲ್ಪಡುತಲಿದ್ದ ೧೦೦೦೦ ರೂಪಾಯಿಗಳಿಗೂ, ಈಗ ಇಂಗ್ಲಾಂಡಿನಲ್ಲಿ ದೊರೆಯುವ ೩೦೦೦೦ ರೂಪಾಯಿಗಳಿಗೂ ಯೆಷ್ಟರ ಭೇದವಿದೆ. ಇದರಿಂದ ಇಂಡ್ಯದೇಶದ ದ್ರವ್ಯಕ್ಕಿಂತಲೂ ಇಂಗ್ಲಿಷ್ ನಾಣ್ಯಗಳ ಮೌಲ್ಯವು ಅಧಿಕವೆಂದು ಭಾವಿಸಲ್ಪಟ್ಟರಬಹುದು. ಇದೇ ದ್ರವ್ಯವು ನೇಟವ್‌ಗಳಿಗೆ ಕೊಡಲ್ಪಡಬೇಕಾದ ಸಂದರ್ಭದಲ್ಲಿ ಅದರ ಮೌಲ್ಯವು ಇಂಗ್ಲಿಷ್ ನಾಣ್ಯಗಳಿಗಿಂತಲೂ ಅಧಿಕವಾಗುತದೆ. ಆಹಾ! ಇವರ ಶಕ್ತಿಯನ್ನು ಇನ್ನೆಷ್ಟುವಿಧವಾಗಿ ವರ್ಣಿಸಿದರೂ ತೀರದು.

Infanticide — ತಿರುತ್ತುರೆಪ್ಪೂಂಡಿ ಎಂಬಪ್ರದೇಶಕ್ಕೆ ಸಮೀಪದಲ್ಲಿರುವ ಒಂದು ಗ್ರಾಮದಲ್ಲಿ ವಾಸವಾಗಿರುವ ೫೦ ಸಂವತ್ಸರಗಳ ವಯಸ್ಸುಳ್ಳ ಮಿನಾಕ್ಷಿಯೆಂಬ ಒಬ್ಬ ಹೆಂಗಸು ಹಡದ ಕೂಡಲೇ ಲಜ್ಜೆಯಿಂದ ಮಗುವನ್ನು ಸಮೀಪದೊಳಿರುವ ಹರಿಶ್ಚಂದ್ರ ನದಿಯಲ್ಲಿ ಎಸದು ಬಿಟ್ಟಳೆಂತಲೂ, ಈ ಕೃತ್ಯವು ಪತ್ತೇಯಾಗಿ ಸೆಷನ್ ವಿಚಾರಣೆಯಬಗ್ಯೆ ಕಮ್ಮಿಟಿ ಮಾಡಲ್ಪಟ್ಟಳೆಂತಲೂ, ಸೆಷನ್ ಜಡ್ಜಿಯು ಅವಳಿಗೆ ೧೮ ತಿಂಗಳಕಾಲಕಠಿಣಶಿಕ್ಷೆ ಸಜಾ ವಿಧಿಸಿದನೆಂತಲೂ ತಿಳಿಯ ಬರುತಿದೆ. ಅಹಾ! ಕಾಲಮಹಿಮೆಯಿಂದ ವಯೋವೃದ್ಧರಿಗೆಯೌವನವೂ ವಿಧವೆಯರಿಗೆ ಸದವತ್ವವೂ ವುಂಟಾಗುತ ಬರುತಿದೆ.

A curious custom.— ರೊಮಿಲಿಯಾದಪಟ್ಟಣದ ಪ್ರಜೆಗಳಲ್ಲಿ ವಿಚಿತ್ರವಾದ ಒಂದು ಆಚಾರವು ನೆಲಗೊಂಡಿರುತಿದೇನುದರೆ —

ಅಲ್ಲಿನ ಪರ್ವತದ ಮೇಲ್ಭಾಗದಲ್ಲಿ ಪ್ರತಿ ಸಂವತ್ಸರದಲ್ಲಿಯೂ ನಡೆಯತಕ್ಕ ಉತ್ಸವ ಕಾಲದಲ್ಲಿ ಪ್ರಾಡಾಂಗನೆಯರೆಲ್ಲರೂ ದಿವ್ಯ ವಸ್ತ್ರಾಭರಣಾಲಂಕೃತರಾಗಿ ಬಂದು ಮಿತ್ರರೊಡನೆ ದೇರೆಗಳಲ್ಲಿ ಸೇರಿರುವ ಕಾಲದಲ್ಲಿ, ವಿವಾಹಾಪೇಕ್ಷೆಯುಳ್ಳ ಬಾಲಕರು ಒಂದೊಂದು ತಾಬನ್ನೂ ಅಮೂಲ್ಯಗಳಾದ ಪದಾರ್ಥಗಳನ್ನೂತೆಗೆದುಕೊಂಡು ಅಲ್ಲಿಗೆಹೋಗಿ ಆಸಾರೀಸಮೂಹದಲ್ಲಿ ತಮಗೆ ಬೇಕಾದವರನ್ನು ವರಿಸಿದರೆ ಆಗ ಅಲ್ಲಿರುವ ಸನ್ಯಾಸಿಯೊಬ್ಬನು ಅವರಿಗೆ ವಿವಾಹಮಾಡಿಸುವ ಪದ್ಧತಿ ಯುಂಟಾಗಿರುತಿದೆ. ಈ ಕ್ರಮವು ಈಗಿನ ಕಾಲದಲ್ಲಿ ನಮ್ಮ ಬಾಲಕರಿಗೆ ಅಪೇಕ್ಷಿತವಾದದ್ದಾಗಿಯೂ, ಹಿಂದೂ ಧರ್ಮಶಾಸ್ತ್ರ ಸಮ್ಮತವಾದದ್ದಾಗಿಯೂ ಇರುತಿದೆ. ಈಗ ಸ್ತ್ರೀ ವಿದ್ಯಾಭ್ಯಾಸವು ಬಹಳ ಅಭಿವೃದ್ಧಿಯನ್ನೈದುತಬರುವದರಿಂದ ಅವರು ಸಹ ಇದಕ್ಕೆ ಸಮ್ಮತಿಸಬಹುದೆಂದು ನಂಬುತ್ತೇವೆ.

Vegetarianism — ಈಗ ಇಂಗ್ಲಿಷಿನವರು ಮಾಂಸಾಹಾರದಿಂದ ವುಂಟಾಗತಕ್ಕ ಕೆಡಕುಗಳನ್ನು ಅನುಭವ ಪೂರ್ವಕವಾಗಿ ತಿಳಿದು ಸದರೀ ಅಭ್ಯಾಸವನ್ನು ಕ್ರಮವಾಗಿ ತೊರೆಯುತಲಿದಾರೆ. ಇದಕ್ಕೆ ದೃಷ್ಟಾಂತರವೇನುದರೆ,-ಲಂಡನ್ ಪಟ್ಟಣದ ಶಹರ್ ಒಂದರಲ್ಲಿ ಈಗ ಸುಮಾರ್ ಮೂರುಸಾವಿರ ಜನಕ್ಕಿಂತ ಜಾಸ್ತಿಯಾಗಿ ಮಾಂಸಾಹಾರವುಬಿಟ್ಟು ಶಾಕವರ್ಗವು ಪರಿಗ್ರಹಿಸಿದವರಿರುತ್ತಾರೆಂದು ತಿಳಿಯಬರುತಿದೆ. ಪುಣ್ಯಭೂಮಿಯಾದ ಈ ಆರ್ಯಾವರ್ತದಲ್ಲಿ ಮಾಂಸಾಹಾರವು ಉತ್ತಮಜಾತಿಯವರಿಗೆ ನಿಂದ್ಯವೆಂದು ಏರ್ಪಟ್ಟು ಈಗ್ಯೆ ೫೦೦ವರ ಸಂವತ್ಸರಗಳ ಮೊದಲು ಆವಾಡಿಕತಪ್ಪಿಹೋಗಿದ್ದರೂ, ಅನ್ಯರಸಹವಾಸದಿಂದ ಉತ್ತಮಜಾತಿಯರಿಗೆಸಹ ಮಾಂಸದಲ್ಲಿ ಅಭಿರುಚಿಯು ಜಾಸ್ತಿಯಾಗಿ ಅವರು ಈಗ ಗೂಢವಾಗಿ ಅದಂಬಳಸುತ್ತಿರುವದರಿಂದ ಈದೇಶದಲ್ಲಿ ಮಾಂಸಭಕ್ಷಣವು ದಿನೇದಿನೆ ಅಧಿಕವಾಗುತ ಬರುತದೆ. ಮುಖ್ಯವಾಗಿ ಈಗಿನವರು ಪಂಚಮಕಾರ ಸ್ವೀಕಾರಾರ್ಹರಾಗಿರುವದರಿಂದ ಇತರರಿಗೆ ಯಾವದು ತಾನೆ ಬಾಧಕವು.

H. H. the Nizam — ಹೈದರಾಬಾದ್ ನಿಜಾಮರವರಿಗೆ ಇಂಗ್ಲಿಷ್‌ವಿದ್ಯಾಭ್ಯಾಸಕ್ಕೆ ಬೇಕಾದ ವ್ಯವಧಾನವು ಈಚೆಗೆ ದುರ್ಲಭವಾದದರಿಂದ ಅವರು ಅದಂ ಬಿಟ್ಟರೆಂತಲೂ, ಗತ ಯೆರಡುಸಂವತ್ಸರಗಳ ಕಾಲದಮೊದಲು ಪ್ರತಿ ತಿಂಗಳಲ್ಲಿಯೂ ಏತದರ್ಥ ೬೦೦ ರೂಪಾಯಿಗಳ ತನಕ ಒಬ್ಬ ಯೂರೋಪಿಯನ್ ಉಪಾಧ್ಯಾಯರಿಗೆತಲಬ್‌ಕೊಡಲ್ಪಡುತಲಿದ್ದವೆಂತಲೂ, ಇದರಿಂದ ಅವರು ಭಾಗ್ಯವಂತರಾದರಲ್ಲದೆ ಅಭಿಮಾನದೊಡನೆ ಅವರು ಈಗಲೂ ಬೇರೆನೌಕರಿಯೊಳು ಉಳಿಸಿಕೊಳ್ಳಲ್ಪಟ್ಟದಾರೆಂತಲೂ ತಿಳಿಯಬರುತಿದೆ. ಯಾವವಕ್ಕಾಗಿ ಇಂಗ್ಲಿಷ್ ವಿದ್ಯಾಭ್ಯಾಸವು ಕೇವಲ ಅಪೇಕ್ಷಿತವೆಂದು ಭಾವಿಸಲ್ಪಟ್ಟತೋ ಅಂತಾ ವಿಷಯಗಳಲ್ಲೆಲ್ಲ ನಮ್ಮ ಸಂಸ್ಥಾನಾಧಿಪತಿಗಳು ಅನ್ಯಾದೃಶವಾದ ಪ್ರಜ್ಞಾವಿಶೇಷವನ್ನು ವಿದ್ಯಾಗುರುಗಳಿಗೆ ಶ್ರಮವನ್ನಿಯದೇ ಅಪ್ರೇರಿತವಾಗಿ ಅತ್ಯಲ್ಪಕಾಲದೊಳು ಪಡೆದಿರುವಾಗ್ಯೆ ಇವರಿಗಿನ್ನು ವಿದ್ಯಾಭ್ಯಾಸ ಯಾತಕ್ಕೆ, ವಿದ್ಯಾಗುರುಗಳಿಂದಪ್ರಯೋಜನವೇನು.

An appeal — ಕಾಪೇವಾಡೀ ಸಂಸ್ಥಾನದ ಗ್ರಾಜ್ಯುಯೇಟ್ ಅಂದರೆ ಬಿ. ಎ ಪರೀಕ್ಷೆ ಕೊಟ್ಟವನೊಬ್ಬನು ಸಾಮಾನ್ಯವಾಗಿ ಪ್ರಜೆಗಳಿಗೆಲ್ಲಒಂದು ವಿಜ್ಞಾಪನೆ ಪತ್ರಿಕೆಯಂ ಬರೆದು ಛಾಯಿಪ್ ಮಾಡಿರುತ್ತಾನೆಂದು ತಿಳಿಯಬರುತಿದೆ. ಅದರಲ್ಲಿ ತಿಳಿಸಲ್ಪಟ್ಟಿರುವದೇನುದರೆ—"ನಾನು ಧನಪ್ರಯಮಾಡಿ ವಿಶೇಷಶ್ರಮಪಟ್ಟು ಚನ್ನಾಗಿ ವಿದ್ಯಾಭ್ಯಾಸ ಮಾಡಿದಾಗ್ಯೂ ನನಗೆ ಜೀವನೋಪಾಯವು ಯಾವದೂ ದೊರೆಯದೇ ಹೋಯಿತು. ನನ್ನ ವಿದ್ಯಾಭ್ಯಾಸದ ಖರ್ಚಿಗಾಗಿ ತೆಗದ ಸಾಲದಬಗ್ಯೆ ಸಾಲಗಾರರೊಂದುಕಡೆ ನಿರ್ಬಂಧಪಡಿಸುತಲಿದಾರೆ. ಆದದರಿಂದ ನನ್ನ ಸ್ಥಿತಿಯನ್ನಾಲೋಚಿಸಿ ನಾನು ತಿಳಿಸುವದೇನುದರೆ, ಹರಿಶ್ಚಂದ್ರನು ಮೊದಲಾದವರಂತೆ ಆತ್ಮವಿಕ್ರಯ ಮಾಡಿಕೊಳ್ಳಲಿಕ್ಕೆ ನಾನು ಒಡಂಬಟ್ಟಿರುವದರಿಂದ ಯಾರಾದರೂ ದೊಡ್ಡಮನುಷ್ಯರು ನನ್ನನ್ನು ಕ್ರಯಕ್ಕೆ ಕೊಂಡುಕೊಳ್ಳುವರಾದರೆ ಅವರಿಗೆ ನಾನು ಯಾವಜ್ಜನ್ಮವೂ ಗುಲಾಮನಾಗಿರುವೆನಲ್ಲದೆ ಅವರು ಕೊಡುವ ದ್ರವ್ಯವನ್ನು ಸಾಲಗಾರರಿಗೆ ಕೊಟ್ಟು ಋಣಬಾಧೆಯಂ ತೀರಿಸಿಕೊಳ್ಳುವೆನು. ಈ ಲೋಕದಲ್ಲಿ ಸಕಲವೃತ್ತಿಗಳೂ ಅರ್ಥವನ್ನೂ ಪ್ರಾಬಲ್ಯವನ್ನೂ ಆಶ್ರಯಿಸಿರುವದರಿಂದ ಈ ಯೆರಡೂ ಇಲ್ಲದವನು ವಿದ್ಯಾವಂತನಾಗುವದರಿಂದ ಏನೂ ಪ್ರಯೋಜನವಿಲ್ಲವು ಎಂಬದು.

ಇದೇವಿಷಯವನ್ನುಕುರಿತು ನಾವು ಗತವಾರದಪತ್ರಿಕೆಯಲ್ಲಿ ವಿಸ್ತಾರವಾಗಿ ವಿಚಾರಮಾಡಿರತ್ತೇವೆ. ಪ್ರಷ್ಯಾ ದೇಶದಲ್ಲಿ ಪ್ರಜೆಗಳು ತಮ್ಮ ಬಾಲಕರನ್ನು ಪಾಠಶಾಲೆಗಳಿಗೆ ಕಳುಹಿಸದೇಇದ್ದರೆ ಅವರನ್ನು ಸರ್ಕಾರದವರು ಬಲಾತ್ಕರಿಸುತ್ತಾರೆಂದು ತಿಳಿಯಬರುತಿದೆ. ಈದೇಶದಲ್ಲಾದರೋ ವಿದ್ಯಾಭ್ಯಾಸವನ್ನು ನಿಲ್ಲಿಸುವವಿಷಯದಲ್ಲಿ ಗವರ್ನಮೆಂಟಿನವರ ನಿರ್ಬಂಧವು ಅಪೇಕ್ಷಿತವಾಗಿರುತಿದೆ. ವಿದ್ಯಾರ್ಥಿಗಳಿಗೆ ಈಗ ತಕ್ಕ ಪ್ರಯೋಜನವು ದುರ್ಲಭವಾಗಿಹೋದದುಮಾತ್ರವಲ್ಲದೆ, ಇದರಿಂದ ಅವರು ಬಹುವಿಧಕಷ್ಟಗಳಿಗೆ ಗುರಿಯಾಗಬೇಕಾಗುತಿದೆ. ತಥಾಪಿ ಇವರಿಗೆ ಕವಿನಾಂ ಟಿಕ್‌ಪರೀಕ್ಷೆಯ ಪ್ರತ್ಯಾಶೆಯೂ ತತ್ಪ್ರಯುಕ್ತವಾದ ವಿದೇಶಗಮನವೂ ವುಂಟಾಗುವಪಕ್ಷಕ್ಕೆ ಕೇಳಬೇಕಾದುದಿಲ್ಲವು.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕ್‌ವಾರ್ತ್ತೆಗಳು.

Queen's birthday — ಈದಿನ ಶ್ರೀಮನ್ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀಯವರ ೬೮ನೇಯ ವರುಷವರ್ಧಂತಿ ಯಾದದರಿಂದ ಈ ಶುಭದಿನವನ್ನು ಆಕೆಯವರ ಪಾಲನೆಗೆ ಒಳಪಟ್ಟ ಪ್ರಜೆಗಳೆಲ್ಲ ಕೊಂಡಾಡ ಬೇಕಾದ್ದು ರಾಜಭಕ್ತಿ ವಿಶ್ವಾಸ ಸೂಚಕವಾಗಿರುತಿದೆಯಷ್ಟೆ. ಏತದರ್ಥ ಇಲ್ಲಿನ ಸಿವಿಲ್ ನ ಮಿಲಿಟರಿ ಸ್ಟೇಷನ್ನಲ್ಲಿರತಕ್ಕ ವಿಶಿಷ್ಟ ಸರ್ಕಾರ್ ಇಲಾಖೆಗಳಿಗೂ ಈ ಸಂಸ್ಥಾನಕ್ಕೆ ಸೇರಿದ ಸರ್ಕಾರ್ ಇಲಾಖೆಗಳಿಗು ಸಹ ಈ ದಿನ ರಜಾಕೊಡಲ್ಪಟ್ಟಿರುತಿದೆ.

Mr. Mahadeva Sastry — ಮೆ|| ಮಹಾದೇವಶಾಸ್ತ್ರಿಗಳು ದಕ್ಷಿಣ ಮಹರಾಷ್ಟ್ರ ರೆಯಿಲ್ವೇ ಕಂಪೆನಿಯವರಲ್ಲಿ ನೌಕರಿಯನ್ನು ಅಂಗೀಕರಿಸುವದಿಲ್ಲವೆಂದು ನಿರಾಕರಿಸಿದರೆಂತಲೂ, ಅದರಮೇಲೆ ಈ ಗವರ್ನಮೆಂಟಿನವರು ತಾವೇ ಅವರಿಗೆನೌಕರಿ ವಿಲೇಮಾಡುವಂತೆ ವಾಗ್ದಾನಮಾಡಿದರೆಂತಲೂ ತಿಳಿಯ ಬರುತಿದೆ. ಫಲವತ್ತಾದ ದೇಶವೂ ವಿಷ್ಯಾನ ಗುಣವಾಗಿ ನಡಿಸತಕ್ಕ ಪ್ರಭುವೂ ಏರ್ಪಟ್ಟಿರುವಲ್ಲಿ ಮೇಲೆ ಕಂಡ ದೊಡ್ಡ ಮನುಷ್ಯರು ಅನ್ಯತ್ರ ನೌಕರಿಯನ್ನು ಯಾತಕ್ಕೆ ಅಂಗೀಕರಿಸಬೇಕು ? ಅವರು ನಿರಾಕರಿಸಿದ್ದೇವಿವೇಕವು.

Mysore State Railway — ಮೈಸೂರು ಸ್ಟೇಟ್‌ರೈಲ್ವೇ ನೌಕರರ ಹೆಸರುಗಳ ಪಟ್ಟಿಯನ್ನು ಆಯಾ ಇಲಾಖಾಧಿಕಾರಿಗಳ ಸಿಫಾರಸ್ಸಿನೊಡನೆ ದಕ್ಷಿಣ ಮಹರಾಷ್ಟ್ರ ರೈಲ್ವೇ ಕಂಪೆನಿಯವರಿಗೆ ಈಸರ್ಕಾರದವರು ಕಳುಹಿಸುವದಾಗಿದಾರೆಂದು ತಿಳಿಯಬರುತಿದೆ. ಈರೈಲ್ವೇ ಇಲಾಖೆಯು ಸದರ್ನ್‌ಮರಾಠಾ ರೈಲ್ವೇ ಕಂಪೆನಿಯವರಿಗೆಒಪ್ಪಿಸಲ್ಪಡುವದರಿಂದ ಮುಂದೆ ನೌಕರರ

ನ್ನು ಜಾನಾಯಿಸುವಬಗ್ಗೆ ಈಪಟ್ಟ ಅಪೇಕ್ಷಿಸಲ್ಪಟ್ಟಂತೆ ತೋರುತಿದೆ.

Tumkur ಬಳದೇಶದ ಸ್ಪೆಕ್ಟೇಟರ್ ಪತ್ರಿಕೆಗೆ ತುಮಕೂರಿಂದ ಒಬ್ಬ ಬಾತಮಿದಾರನು ಬರೆಯುತ್ತಾನೇನೆಂದರೆ,-ತುಮಕೂರು ತಾಲ್ಲೂಕು ತಿಮ್ಮಲಾಪುರದ ಜೋಡೀದಾರರಿಗೆ ಲ್ಯಾಂಡ್ ಇಂಪ್ರೂವ್‌ಮೆಂಟ್ ಆಕ್ಟನ್ನನುಸರಿಸಿ ಸದರೀ ಗ್ರಾಮದ ಆಧಾರದಮೇಲೆ ಬಡ್ಡೀಇಲ್ಲದೆ ೭೦೦ರೂಪಾಯಿಗಳ ಸಾಲ ಕೊಡುವಂತೆ ಮೈಸೂರು ಸರ್ಕಾರದವರು ಸಾಂಗ್‌ಷನ್ ಮಾಡಿದಾರೆಂತಲೂ ಈ ಸಾಲದಮೊಬಲಗು ಪ್ರತಿಸಂವತ್ಸರದಲ್ಲಿ ಮಾರ್ಚಿ೩೧ನೇ ತಾರೀಖಿಗೆ ಸರಿಯಾಗಿ ಖಿಸ್ತುವಾರ್ ಪಾವತೀಮಾಡುವ ಷರತ್ತಿನಮೇಲೆ ಕೊಡಲ್ಪಟ್ಟಿತೆಂತಲೂ ತಿಳಿಯಬರುತಿದೆ.

— —

Mr T. R. A. Thumbu Chettiyar — ಇಲ್ಲಿನ ಚೀಫ್‌ಕೋರ್ಟ್ ಎರಡನೇಜಡ್ಜಿಯಾದ ಮೆ|| ತುಂಬುಶೆಟ್ಟರವರು ಮೈಸೂರುದೇಶದ ಅಧಿಕಾರಕ್ಕಾಗಿ ಸಾಬಕ ಬ್ರಿಟಿಷ ಗವರ್ನಮೆಂಟಿನವರ ಆಳ್ವಿಕೆಯಲ್ಲಿ ಮದರಾಸ ಪ್ರೆಸಿಡೆನ್ಸೀಯಿಂದ ಕರೆಯಿಸಲ್ಪಟ್ಟವರಾಗಿರುತ್ತಾರೆ. ಈ ರಾಜ್ಯವು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಲ್ಪಟ್ಟ ಮೇಲೆ ಇವರು ಶುದ್ಧವಾಗಿ ಸ್ಟೇಟ್ ಅರೇಂಜ್‌ಮೆಂಟ್ ಕರಿಮನ್ನೇ ಅಂಗೀಕರಿಸಿದ್ದರಿಂದ ಹಿಂದೆ ಬ್ರಿಟಿಷ ಸರ್ಕಾರದಲ್ಲಿ ಇವರುಮಾಡಿದ ನೌಕರಿಯ ಸರ್ವಿಸ್ಸಿಗೆ ತಕ್ಕ ಪೆನ್ಷನನ್ನು ಲಭ್ಯವಾಗುವದೆಂಬುದಕ್ಕೆ ಹಾಲೀ ಇಲ್ಲಿ ನಡೆಯುತಲಿರುವ ಕಲಸದಲ್ಲಿ ದೊರೆಯದಕ್ಕೆ ಇವರಿಗೆ ಪ್ರಕಾರ ಮದರಾಸ ಗವರ್ನಮೆಂಟಿಗೆ ಕಂಟ್ರಿಬ್ಯೂಷನ್ ಕೊಡುತ್ತಬಂದರು. ಮಹಾರಾಜರಿಗೆ ದೌಲತ್ ಒಪ್ಪಿಸಲ್ಪಟ್ಟ ದಿನದಿಂದ ಇದುವರಿವಿಗೆ ಮೆ|| ತುಂಬುಶೆಟ್ಟರವರು ಕೊಡುತಬಂದ ಮೇಲೆಕಂಡ ಮೊಬಲಗುಗಳನ್ನೆಲ್ಲ ಮೈಸೂರುಸರ್ಕಾರದವರು ಅವರಿಗೆ ವಾಪಸ ಮಾಡಿ ಮುಂದೆ ಸದರೀ ಕಂಟ್ರಿಬ್ಯೂಷನನ್ನು ತಾವೇ ಕೊಡುವಂತೆ ಸಮ್ಮತಿಸಿದರೆಂದು ತಿಳಿಯಬರುತಿದೆ. ಮೆ|| ತುಂಬುಶೆಟ್ಟರವರ ಸರ್ವಿಸ್ಸು ಮೈಸೂರು ಸರಕಾರಕ್ಕೆ ಅಗತ್ಯವಾದ್ದಾಗಿಯೂ ಗೌರವಾಸ್ಪದವಾದ್ದಾಗಿಯೂ ಇರುವದೇ ಇದಕ್ಕೆ ನಿದರ್ಶನವಾಗಿರುತಿದೆ.

SUMMARY OF NEWS

ವೃತ್ತಾಂತ ಸಂಗ್ರಹವು

ಪ್ರೆಸಿಡೆಂಟ್ ಚಾರ್ಲ್ಸ್ ಬರ್ನಾರ್ಡ ಯೆಂಬವರು "ಪೆಚ್ಚುರಿ" ಎಂಬ ಒಂದು ಮಾಸಪತ್ರಿಕೆಗೆ ಬರೆಯುತ್ತಾರೇನೆಂದರೆ,-ಗೋಧಿಯು ಬಹುಪ್ರಾಚೀನಕಾಲದ ಧಾನ್ಯವಾಗಿರುತಿದೆ. ಈ ಧಾನ್ಯವನ್ನು ಬಿತ್ತುವಿಕೆ ಪ್ರಾರಂಭವಾದಿ ಈಗ್ಯೆ ೪೬೯೮ ವರುಷಗಳಾದವೆಂದು ಚೀನಾಜನರ ಲೇಖನದಿಂದ ತಿಳಿಯಬರುತಿದೆಂಬದು.

— —

ಕೆಲವುದಿನಗಳಹಿಂದೆ ವೈಸರಾಯಿ ಸಾಹೇಬರವರು ಕಾಶ್ಮೀರ ಮಹಾರಾಜರವರ ಭೇಟಿಯಬಗ್ಯೆ ಹೋಗಿದ್ದರು. ಆಗ ಮಹಾರಾಜರವರು ಬಂದೂಕಿನಿಂದ ಗುರಿಯಿಟ್ಟುಹೊಡೆಯುವ ತಮ್ಮಹಸ್ತಲಾಘವವನ್ನು ತೋರಿಸಿದರು. ಮತ್ತು ಮೇಲೆ ಹಾರುತಲಿರುವ ನಾಣ್ಯವನ್ನು ಅದರ ಆಸಾಮಿಕ್ಕೆ ಗುರಿಯಿಟ್ಟು ಬಂದೂಕಿನಿಂದ ಹೊಡೆದದ್ದನ್ನು ನೋಡಿ ವೈಸರಾಯಿಯವರೂ ಅಲ್ಲಿ ನೆರದಿದ್ದವರು ಸಹ ಬಹಳ ಸಂತೋಷಪಟ್ಟರಂತೆ.

— —

ಶ್ರೀಕಾಶೀಕ್ಷೇತ್ರದಲ್ಲಿರುವ ಉತ್ತರದೇಶೀಯ್ಯನಾದ ಒಬ್ಬ ಶಾಸ್ತ್ರಿಯು ಮಹಾಯಾತ್ರೆಗೆ ಹೋಗಿರುತ್ತಾನೆ. ಅವನು ಸ್ವಾಜೀವನಾಮಿನ ಕಾಲದಲ್ಲಿ ದೀವಿಗೆಗೆ ಎಣ್ಣೆಯಬದಲು ನೀರನ್ನೇ ಉಪಯೋಗಿಸುತ್ತಾನೆಂದು ತಿಳಿದು, ಅಲ್ಲಿನಕೆಲವರು ಬಿಕ್ಷುಕ ಬ್ರಾಹ್ಮಣರು ಇದನ್ನು ಪರೀಕ್ಷೆಮಾಡುವದಕ್ಕೋಸ್ಕರ ತಮ್ಮ ಮನೆಯಿಂದ ನೀರನ್ನು ತೆಗೆದುಕೊಂಡುಹೋಗಿ ಆತನ ದೀವಿಗೆಯಲ್ಲಿ ಹಾಕಿದರಲ್ಲದೆ ದೀಪದಮೇಲೆಸಹಾ ಹಾಕಿದರು. ಆದರೆ ಆ ದೀಪವು ಆರಿಹೋಗದೆ ನೀರೆಲ್ಲ ಎಣ್ಣೆಯಂತೆ ಉರಿದು ಹೋಯಿತಂತೆ.

— —

ಹಿಮವತ್ಪರ್ವತದ ದಕ್ಷಿಣಭಾಗದಲ್ಲಿ (ಬಾಯಿಲ್) ಅಥವಾ (ಭಾವರ್) ಎಂಬದೊಂದುಬಗೆ ಹುಲ್ಲುಹುಟ್ಟುತದೆ. ಆಹುಲ್ಲಿನಿಂದ ಉತ್ತಮತರದ ಕಾಗದವನ್ನು ಮಾಡಬಹುದು. ಅದು ಕಾಗದ ತಯಾರೀ ಕಾರ್ಖಾನೆಗಳಲ್ಲಿ ಬಹಳ ಬಳಕೆಯಾಗುತದೆ. ಡಾಕ್ಟರ್ ಕಿಂಗ್ ಎಂಬವರು ಅದರ ಅಭಿವೃದ್ಧಿಯನ್ನು ನೋಡುವದಕ್ಕೋಸ್ಕರ ಕಲಕತ್ತೆಯೊಳಗಿನ ಸರಕಾರೀತೋಟದಲ್ಲಿ ಹಾಕಿಸಿದರು, ಆದರೆ ಅವರಪ್ರಯತ್ನವು ಚೆನ್ನಾಗಿ ಸಫಲವಾಗಲಿಲ್ಲವು. ಆಹುಲ್ಲನ್ನು ಉಪಯೋಗಿಸುವ ಪ್ರಯತ್ನವು ಈಗ ಮದರಾಸ ಪ್ರೆಸಿಡೆನ್ಸಿಯಲ್ಲಿ ನಡೆದಿರುತದೆ. ಮದರಾಸ್ ಪ್ರೆಸಿಡೆನ್ಸೀಯಲ್ಲಿರುವ ಬೆಟ್ಟದಮೇಲೆ ಇದರಪೈರು ಚೆನ್ನಾಗಿಬಡೀತೆಂದು ತಿಳಿಯಬರುತಿದೆ. ನಮ್ಮ ಜಂಗಲ್‌ಪ್ರೀಯಾಡಿಮೆಂಟ್ಯ ಸರಕಾರದವರು ಸಹ ಆ ಹುಲ್ಲನ್ನು ಹಾಕಿಸುವ ಪ್ರಯತ್ನವು ಮಾಡಿದರೆ ಈ ಪ್ರೆಸಿಡೆನ್ಸೀಯಲ್ಲಿರತಕ್ಕ ಕಾಗದ ಕಾರಖಾನೆಗಳಿಗೆ ಅನುಕೂಲವಾಗಿರುವದಲ್ಲದೆ ಸರಕಾರದವರ ಹಣದಚೀಲವಾದರೂ ತುಂಬಬಹುದು.

— —

ಬರ್ಮಾದೇಶದಲ್ಲಿ ನಮ್ಮ ಇಂಗ್ಲಿಷಜನಾಂಗದವರು ಹಲವುವಿಧವಾಗಿ ತಮ್ಮಅಮಲನ್ನು ಜಾರೀಯಲ್ಲಿ ತರವೇಕೆಂದು ಪ್ರಯತ್ನಪಡುತಿದ್ದಾರೆ. ಪರಂತು ಇದುವರಿವಿಗೂ ಅಲ್ಲಿನ ಜನರು ಇವರಸ್ಥಾನದಲ್ಲಿ ಮನಸ್ಸಿಲ್ಲದೆ ಇವರು ನಡೆಸುವ ಲಷ್ಕರಿನ ಬಲಾವಿಗೆ ಒಳಪಟ್ಟು ತಮ್ಮ ಜೀವಗಳನ್ನು ಕೊಡುತಲಿದ್ದಾರೆ. ಆದರೆ ತಮ್ಮಜೊತೆಗೆ ಮುಂದಾಗಿ ಇವರಪೈಕಿ ಕೆಲವರನ್ನು ಕರದುಕೊಂಡು ಹೋದಹೊರತು ಕ್ರಮಕ್ಕೆ ಬರುವದಿಲ್ಲ. ಒಟ್ಟಿಗೆ ಬ್ರಹ್ಮದೇಶದ ಗಡಬಡಿಯು ಇನ್ನೂ ಶಾಂತವಾಗಲಿಲ್ಲ. ಒಂದುಕಡೆ ಖೂನಿ, ಒಂದುಕಡೆ ಕೊಲೆಪಾತಕ, ಒಂದುಕಡೆ ಶೋಭನಬಾಯಿಗೆ ಕಟ್ಟಿಸುವದು, ಒಂದುಕಡೆ ಮಾರಿ ಹಬ್ಬ, ಮತ್ತೊಂದುಕಡೆ ಜಬಗನಪ್ರಾಪ್ತಿ, ಒಂದುಕಡೆ ಅಗ್ನಿಸ್ಪೋಟ, ಈಪ್ರಕಾರ ನಿಶೀಥಕೃತ್ಯಗಳುಮಾತ್ರ ಜಾರಿಯಲ್ಲಿರದೇಹೋಗಲಿಲ್ಲವು. ಇದೆಲ್ಲ ಬರ್ಮಾಜನರು ಮನದಲ್ಲಿ ತಾಳಿದ ಸ್ವಾಭಿಮಾನದಿಂದುಂಟಾದವು. ಆದರೆ ಪರಿಣಾಮದಲ್ಲಿ ಎಷ್ಟೆಷ್ಟುವಿಧ ತನಾಷೆಗಳನ್ನು ಕೇಳಬೇಕಾಗುತ್ತದೋ ತಿಳಿಯಲಿಲ್ಲವು.

— —

ಕಳೆದ ಶುಕ್ರವಾರದದಿನ ಮಧ್ಯಾಹ್ನದಲ್ಲಿ ಕಲಕತ್ತೆಯ ಹೈಕೋರ್ಟಿನೊಳಗೆ ವಿಲಕ್ಷಣವಾದ ಒಪ್ಪಂದುಸಂಗತಿಯೊಂದು ಸಂಭವಿಸಿತು. ಅದೇನೆಂದರೆ,—ಕೋರ್ಟಿನ ಟ್ರಾನ್ಸಲೇಟರರಲ್ಲೊಬ್ಬನು ರಿಕಾರ್ಡಿನ ಕೊಠಡಿಯೊಳಗೆ ಒಂದು ಪಾರಿವಾಳ ಪಕ್ಷಿಯು ಕೂತುಕೊಂಡಿರುವದನ್ನು ಕಂಡನು. ವೇನಿನ ಆಕೃತಿಯಂತೆ ಸುರುಳಿಮಾಡಿ ರೇಷ್ಮೆದಾರದಿಂದ ಕಟ್ಟಿದ ಒಂದು ಸಣ್ಣ ಕಾಗದದತುಂಡು ಅದರ ಕುತ್ತಿಗೆಯಲ್ಲಿ ನೇತಾಡುತಿತ್ತು. ಆಹಕ್ಕಿಯನ್ನು ಹಿಡಿದು ಆಕಾಗದವನ್ನು ಪರೀಕ್ಷಿಸಿನೋಡಲು ಅದರಲ್ಲಿ ಕಂಡುಬಂದದ್ದೇನಂದರೆ,—ಆಪಕ್ಷಿಯರೂಪವು ಆಕಾಗದದಮೇಲೆ ಬರೆಯಲ್ಪಟ್ಟದ್ದು ಅದರಮಧ್ಯದಲ್ಲಿ ಫಾರ್ಸೀಭಾಷೆಯಲ್ಲಿ ಒಂದು ಬರಹವು ಬರೆದಿತ್ತು. ಆಪಾರಿವಾಳವನ್ನೂ ಆ ಬರಹವನ್ನೂ ಚೀಫ್ ಜಸ್ಟಿಸ್ಸಿಯವರಬಳಿಗೆ ತೆಗೆದುಕೊಂಡುಹೋಗಲು ಅವರು ಆ ಕಾಗದವನ್ನು ಭಾಷಾಂತರಮಾಡಿಸಿದರು. ಅದರೊಳಗೆ ಬರೆಯಲ್ಪಟ್ಟದ್ದೇನೆಂದರೆ-ಜಸ್ಟಿಸ್ ರೊಮೇಶಚಂದರ್ ಮಿತ್ರ ಮುಂತಾದವರಮುಂದೆ ಹೈಕೋರ್ಟಿನಲ್ಲಿ ನಡೆಯುವ ಮೊಕದ್ದಮೆಯೊಳು ಮಹರ್ ಅಬ್ದುಲ್‌ರಹಿಮಾನರು ಜಯವನ್ನು ಹೊಂದುವರು ಎಂಬದು. ಆಲೇಖನದಕೆಳಗೆ ರುಜುಹಾಕಲ್ಪಟ್ಟರಲಿಲ್ಲ, ಇದಲ್ಲದೆ ಅದನ್ನು ಬರೆದವರ್ಯಾರು, ಮತ್ತು ಆಪಕ್ಷಿಯು ಅಲ್ಲಿ ಹ್ಯಾಗೆ ಬಂತುಯೆಂಬದುಕೂಡ ತಿಳಿಯಲಿಲ್ಲವು.

— —

ಟಪಾಲು ಏರ್ಪಾಡು— ಎಲ್ಲಾ ಇಲಾಖೆಯವರಗಿಂತಲೂ, ಟಪಾಲ್ ಇಲಾಖೆಯವರು ಬಹಳ ಹುಷಾರಾಗಿಯೂ ಉದ್ಯೋಗವುಳ್ಳವರಾಗಿಯೂ ಕಾಣುತ್ತಾರೆ. ಜನರಕ್ಕೆಯಿಂದದುಡ್ಡನ್ನು ಹ್ಯಾಗೆ ಕಸುಗೊಳ್ಳಬೇಕೋ ಆ ಯುಕ್ತಿಯು ಅವರಿಗೆ ಪೂರ್ಣವಾಗಿ ಗೊತ್ತಾಗಿರುತದೆ. ಈಗ ಒಂದು ಹೊಸಮಾದರಿಯ ಲಕೋಟೆಗಳನ್ನು ತಯಾರ್ ಮಾಡಿರುತ್ತಾರೆ. ಅವು ಈ ತಿಂಗಳ ೧ನೇ ತಾರೀಖಿನಿಂದ ಉಪಯೋಗಿಸಬಹುದೆಂದು ಗೊತ್ತಾಗಿದೆ. ಈಗಿರುವ ಅರ್ಧಆಣೆಲಕೋಟೆ ೧ಆಣೆಲಕೋಟೆಗಳಿಗಿಂಲೂ, ಸ್ವಲ್ಪ ದೊಡ್ಡದುದರೆ ಚೆಟ್ಟಾಬಕವಾಡಿ ಅದರ ಕ್ರಯವನ್ನು ಹೆಚ್ಚಿಸಿರುತ್ತಾರೆ. ಈಗಿರುವ ಲಕೋಟೆಗಳು ನಿರುಪಯುಕ್ತವಾದ್ದಲ್ಲವು. ಆದರೆ ಹೊಸ ಉಮೇದವಾರರಿಂದ ಜಾಸ್ತೀಯಾಗಿ ದುಡ್ಡುಸುರಿಯುವದಕ್ಕೆ ಇದೊಂದು ಹೊಸ ಯುಕ್ತಿಯು. ಅರ್ಧಆಣೆ ದರದ ದೊಡ್ಡ ಲಕೋಟೆ—ಕ್ರಯ೪ಪೈ. ಒಂದೇಸಾರಿ ೪ ತೆಗದುಕೊಂಡರೆ ೧ಆ. ೭ಪೈ. ೫ಪೈ. ನಫೆಯಾಯಿತು. ಒಂದು ಆಣೆ ಲಕೋಟೆ—ಪ್ರತಿ ಒಂದಕ್ಕೆ ೧ಆ. ೭ಪೈ. ಒಂದೇಸಾರಿ ೧೬ತೆಗದುಕೊಂಡರೆ ೯ಆ. ೩ಪೈ. ಒಂದು ಪೈ. ಲಾಭವಾಯಿತು. ಇದರಂತೆಯೇ ರಿಜಿಸ್ಟರು ಮಾಡುವ ಲಕೋಟೆ ಒಂದೊಂದಕ್ಕೆ ೫ಆ. ೫ಪೈ. ಒಂದೇಸಾರಿ ೧೬ತೆಗದುಕೊಂಡರೆ ೫ರೂ. ೫ಆ ೪ಪೈ. ರಿಜಿಸ್ಟರು ಮಾಡುವ ದೊಡ್ಡ ಲಕೋಟೆ—ಒಂದಕ್ಕೆ ೫ರೂ. ೧೨ಆ ೬ಪೈ. ೫ಪೈಉಳಿಯಿತು. ರಿಜಿಸ್ಟರುಲಕೋಟೆಯನ್ನು ರಿಜಿಸ್ಟರು ಮಾಡಿಸುವದಾದರೆ ರಿಜಿಸ್ಟರು ಫೀಜ್‌ಹೋಗಲಾಗಿ ಎಂಟಿನಂತೆ ಕೊಡಬೇಕಾಗುವ ಜಾಸ್ತೀಹಾಸಲನ್ನು ಕೊಡಲೇಬೇಕು ೫ಆ.೪ಪೈ ಬಾಬತಿನರಿಜಿಸ್ಟರು ಮಾಡುವ ದೊಡ್ಡಲಕೋಟೆಗಳನ್ನು ತೆಗದುಕೊಂಡರೆ ಅದರಲ್ಲಿ ಜಾಸ್ತೀಅರ್ಧಆಣೆಯ ಹಾಸಲುಸಹ ಬಂತೆಂದು ಯಾರೂ ತಿಳಿಯಕೂಡದು; ಯಷ್ಟಿಲವರಿಂದುಂಟಾಗುವಲಾಭವೇನಂದರೆ. ಅದನ್ನು ಹುಚ್ಚುತನವಾಗಿ ಒಡೆಯಲಿಕ್ಕೆ ಆಸ್ಪದವಿಲ್ಲ. ಅಂದರೆ ಅದರೊಳಗೆ ನೋಟುಗಳನ್ನು ಇಟ್ಟರೆ ಅವುಕಳವಾಗುವದೆಂಬ ಅಂಜಿಕೆಇಲ್ಲ. ಪರಂತು ಮೇಲೆಕಂಡ ಈಎಲ್ಲಾ ಹೊಸ ಲಕೋಟೆಗಳ ಕಾಗದವು ದಪ್ಪನಾಗಿರುವದರಿಂದ ಕಾಗದದ ತೂಕವು ಸಹಜವಾಗಿ ಹೆಚ್ಚಾದಂತಾಯಿತು. ಈ ವಿಷಯವಾಗಿ ಸಹ ಏನಾದರೂ ಅನುಕೂಲವಾದಏರ್ಪಾಡು ಮಾಡಿದ್ದರೆ, ನಿಜವಾಗಿಜನರಿಗೊಂದುಬಗೆ ಲಾಭವನ್ನು ಮಾಡಿಕೊಟ್ಟರೆಂದು ತಿಳಿಯಬಹುದಾಗಿತ್ತು.

— —

ಲಾರ್ಡ ಡಫ್ರಿನ್‌ಯವರು ಈ ಇಂಡ್ಯದೇಶಕ್ಕೆ ವೈಸ್‌ರಾಯಿ ವ ಗವರ್ನರ್ ಜನರಲ್ಲಾಗಿ ಮೊಕರರಾಗಿ ಬಂದು ಈಗ್ಯೆ ಒಂದು ವರುಷಕ್ಕೆ ಮೇಲ್ಪಟ್ಟಿತು. ಇದುವರಿವಿಗೆ ಇವರು ತಮ್ಮ ನೈಜಗುಣಂತಾದ್ದೆಂದು ಹೊರಪಡಿಸಿದವರಲ್ಲವು. ಪರಂತು ಈ ಸ್ವಲ್ಪಕಾಲದಲ್ಲಿಯೇ ಇವರು ಮಾಡಿದ ಕೆಲಸಗಳ ಸ್ವರೂಪವನ್ನು ಆಲೋಚಿಸಿ ನೋಡಲಾಗಿ, ಇವರ ಗುಣವಿಂತಾದ್ದೆಂದು ನಿಶ್ಚಯಿಸಿ ತಿಳಿಯಲಿಕ್ಕೆ ಪ್ರಜೆಗಳಿಗೆ ಸಾಕಾದ ಅವಕಾಶವನ್ನು ಸ್ವತಃ ಉಂಟುಮಾಡಿದರೆಂದು ಯೆಣಿಸಬೇಕಾಗಿದೆ. ಇವರು ಈ ದೇಶಕ್ಕೆ ಬಂದದ್ದು ಮೊದಲು ಚಮತ್ಕಾರಗಳಾದ ಮೋಹಕವಾಕ್ಯಗಳಿಂದ ಜನಗಳನ್ನು ಬೆರಗುಮಾಡುತಲಿದ್ದಾರೆಯಲ್ಲದೆ ಕಾರ್ಯತಃ ಒಂದೂ ಮಾಡಿದವರಲ್ಲವು. ಒಂದೂ ಮಾಡದೆ ಮೌನದೊಡನೆ ಇದ್ದಿರುವರಾದರೆ ಒಳಸತ್ವವೇಂತಿರುವದೋ ಎಂಬ ಅನುಮಾನಕ್ಕಾದರೂ ಅವಕಾಶವುಂಟಾಗಿರುವದು. ಹಾಗಿಲ್ಲದೆ ಪ್ರತಿ ಸಂದರ್ಭದಲ್ಲಿಯೂ ಇವರು ಅಭಿನಯದೊಡನೆ ತಿಳಿಸುತಬಂದ ವಾಕ್ಯಗಳನ್ನೂ ಸಂವತ್ಸರಕಾಲವಾಗಿ ಮಾಡಿದಕಾರ್ಯಗಳನ್ನೂ ನೋಡಿದರೆ, ಅವು ಪರಸ್ಪರ ವಿರುದ್ಧಗಳಾಗಿಯೂ ಜನಗಳಿಗೆ ಅನಭಿಮತವಾದವಾಗಿಯೂ ಇರುತಿವೆ. ಮತ್ತು ಪ್ರಜಾಭಿಪ್ರಾಯಗಳನ್ನು ಗೌರವಿಸುವವರಂತೆ ತೋರಲಿಲ್ಲವು. ಲಾರ್ಡ ಡಫ್ರಿನ್‌ಯವರು, ವೈಸ್‌ರಾಯಿ ಕೆಲಸಕ್ಕೆ ಬಂದ ಕೂಡಲೇ ರಷ್ಯಾ ದೇಶೀಯರು ಇಂಡಿಯಾದೇಶದಮೇಲೆ ದಂಡೆತ್ತಿಬರುವರೆಂಬ ಜಿಗುಪ್ಸೆಯೊಡನೆ ಅಫ್‌ಘಾನಿಸ್ಥಾನ ಅಮೀರರನ್ನು ರಾವಲ್‌ಪಿಂಡಿ ಯೆಂಬ ಪ್ರದೇಶಕ್ಕೆ ಕರೆಸಿ ಈದೇಶೀಯರ ಅನೇಕಲಕ್ಷರೂಪಾಯಿಗಳನ್ನು ವ್ಯರ್ಥಗೊಳಿಸಿದರು. ಬಳಿಕ ಬರ್ಮಾದೇಶದಲ್ಲಿರುವ ಕೆಲವುಮಂದಿ ಇಂಗ್ಲಿಷ್ ವರ್ತಕರಿಗೂ ಆದೇಶದ ಅರಸರಿಗೂ ಮಧ್ಯೆ ಉಂಟಾಗಿದ್ದ ವೈಮನಸ್ಯವನ್ನು ಹೋಗಲಾಡಿಸುವೆವೆಂಬ ಕಾರಣದಮೇಲೆ ಬರ್ಮಾದೇಶಕ್ಕೆ ಕೆಲವುಮಂದಿ ಜೀಟಿಗಾರರುತಾವರನ್ನು ಕಳುಹಿಸಿ ಅದು ಸ್ವಾಧೀನಪಡಿಸಿಕೊಂಡು ಬ್ರಿಟಿಷ್‌ರಾಜ್ಯಕ್ಕೆ ದಾಖಲ್ಮಾಡಿಕೊಂಡರು. ಭೂಮ್ಯಾತುರವುಹೆಚ್ಚಿ ಅದರಿಂದ ನ್ಯಾಯಾನ್ಯಾಯಗಳನ್ನು ಚಿಂತಿಸದೆ ಒಂದು ರಾಜ್ಯವನ್ನು ಸ್ವಾಧೀನಮಾಡಿಕೊಂಡಬಗ್ಯೆ ತಗಲಿದ ಖರ್ಚನ್ನೆಲ್ಲ ಈದೇಶೀಯರಮೇಲೆ ಹೊರಿಸಿದರು. ಅಲ್ಲಿಯಲ್ಲಿ ಇಡಲ್ಪಟ್ಟದ್ದ ಸೈನ್ಯಗಳನ್ನೆಲ್ಲ ದಿನಲೀದಪ್ಪದಲ್ಲಿ ಗುಂಪುಗೂಡಿಸಿ ಆಮೂಲಕವಾಗಿಯೂ ಅನೇಕಲಕ್ಷರೂಪಾಯಿಗಳನ್ನು ವ್ಯರ್ಥವಾಗಿ ವ್ಯಯಮಾಡಿದರು. ಈಸೈನಿಕ ಸಾಮರ್ಥ್ಯಪ್ರದರ್ಶನೋದ್ಯೋಗವು ಕೇವಲ ತಮ್ಮಬಲ ಸಂಪತ್ತನ್ನು ತೋರಿಸಿ ತನ್ಮೂಲಕ ಶತ್ರುಗಳಿಗೆ ಭೀತಿಯನ್ನುಂಟುಮಾಡಬೇಕೆಂಬ ಉದ್ದೇಶದೊಡನೆಮಾಡಿದ್ದಾಗಿತೋರುತಿದೆ. ಇನ್ನುಮೇಲಾದರೂ ಲಾರ್ಡ ಡಫ್ರಿನ್‌ಯವರು, ಪ್ರಜಾಹಿತಕರಗಳಾದ ಕೆಲಸಗಳ್ಯಾವವನ್ನಾಗಲಿ ಮಾಡುವರೇನೋಯೆಂದು ನಿರೀಕ್ಷಿಸುತಲಿದ್ದೆವು. ಈಗ ಇವರು ಇದಕ್ಕೆ ಸಾಕ್ಷಾದ್ವಿರುದ್ಧವಾಗಿ ವರ್ತಿಸುವರೆಂದು ತೋರುತಿದೆ. ಈಗ ಇವರುಮಾಡಲುದ್ದೇಶಿಸಿರುವಂತೆ ತಿಳಿಯಬರುವ ಕೆಲವುಕೆಲಸಗಳಿಂದ ಇದುವರಿವಿಗೆ ಇವರಲ್ಲಿ ಜನಗಳಿಗೆ ಉಂಟಾಗಿರುವಅಭಿಪ್ರಾಯಗಳು ನಿವೃತ್ತಿಯಾಗಿ ಅನ್ಯಥಾ ಜ್ಞಾನ ಉಂಟಾಗುತಲಿದೆ. ಇವರು ಕಾಶ್ಮೀರಮಹಾರಾಜರೊಡನೆ ನೂತನವಾದ ಒಂದು ಒಪ್ಪಂಬಡಿಕೆ ಮಾಡವೇಕೆಂದಿರುವದನ್ನು ಆಲೋಚಿಸಿ ನೋಡಿದರೆ ಇವರ ನಿಷ್ಪಾಪ ವಿಷಯದಲ್ಲಿ ಬಹಳ ಸಂದೇಹಿಸಬೇಕಾಗಿದೆ. ಇದಲ್ಲದೆ ಇವರು ದೇಶಕ್ಷೇಮಾಭಿವರ್ಧಕಗಳಾದ ಕಾರ್ಯಗಳನ್ನೆಲ್ಲ ಉಪೇಕ್ಷಿಸಿ, ಸಂಸ್ಥಾನಾಧಿಪತಿಗಳ ಒಳ ಆಡಳಿತದಲ್ಲೆಲ್ಲ ಪ್ರವೇಶಿಸಿ ವ್ಯರ್ಥವಾದ ವೈಮನಸ್ಯಗಳನ್ನುಂಟುಮಾಡುವ ಸ್ವಭಾವವುಳ್ಳವರಾಗಿರುತ್ತಾರೆ. ಬರ್ಮಾ ದೇಶವನ್ನು ಆಕ್ರಮಿಸಿ ಕೊಂಡವರೊಡನೆ, ಅನ್ಯದೇಶ ಸಂಬಂಧವಾದ ಗದ್ದಲಗಳೆಲ್ಲ ನಿವಾರಣವಾಗಿ ವ್ಯಾಪಾರಗಳು ನಿರ್ವಿರೋಧವಾಗಿ ಜರುಗುವದೆಂದು ಯೆಣಿಸಿರುವಾಗ್ಯೆ ಈಗ ಹಿಮವತ್ಪರ್ವತಕ್ಕೆ ಉತ್ತರದೊಳಿರುವ ತಿಬೆಟ್ ರಾಜ್ಯಕ್ಕೆ ವ್ಯಾಪಾರ ವಿಷಯಕ್ಕಾಗಿ ಒಬ್ಬ ರಾಯಭಾರಿಯನ್ನು ಕಳುಹಿಸಬೇಕೆಂದುದ್ದೇಶಿಸಿರುವಂತೆ ತಿಳಿಯಬರುತಿದೆ. ತಿಬೆಟ್ ಜನಗಳು ತಮ್ಮ ದೇಶದಲ್ಲಿ ಅನ್ಯದೇಶೀಯರ್ಯಾರೂ ಯಾವ ಕಾರಣಗಳಿಂದಾಗಲಿ ಪ್ರವೇಶಿಸ ಕೂಡದೆಂದು ಈಗ್ಯೆ ನೂರು ಸಂವತ್ಸರಗಳ ಹಿಂದೆಯೇ ತೀರ್ಮಾನಿಸಿರುವಾಗ ಆ ದೇಶದಲ್ಲಿ ವ್ಯಾಪಾರವಿಷಯದೊಳು ಸ್ನೇಹಪೂರ್ವಕವಾದ ಒಡಂಬಡಿಕೆಗಳು ಮಾಡಲಿಕ್ಕೆಂದು ಒಬ್ಬ ರಾಯಭಾರಿಯನ್ನು ಕಳುಹಿಸುವದರಿಂದ ಅನರ್ಥ ವೈಮನಸ್ಯಕ್ಕೆ ಅವರುಗುರಿಮಾಡಿಸುವಕವನ್ನುಂಟುಮಾಡುವ ಅಭಿಪ್ರಾಯವು ಲಾರ್ಡ ಡಫ್ರಿನ್‌ಯವರಿಗೆ ಉಂಟಾಗಿರಬಹುದೆಂದೂಹಿಸಬೇಕಾಗಿದೆ. ಈಗ ಬರ್ಮಾದೇಶಕ್ಕೆ ಉಂಟಾದ ದುಸ್ಥಿತಿಯನ್ನು ತಿಬೆಟ್ ಜನಗಳು ಅರಿಯದಿರಲಾರರು. ಈ ಸಮಯದಲ್ಲಿ ತಾವು ಬ್ರಿಟಿಷರವರ ಅಭಿಪ್ರಾಯದಂತೆ ವರ್ತಿಸದೇ ಹೋದರೆ ಬರ್ಮಾದೇಶೀಯರ ಗತಿಯೇ ತಮಗೂ ಉಂಟಾಗುವದೆಂಬದು ತಿಬೆಟ್ ಜನಗಳು ತಿಳಿದಿದಾರೆಂಬ ನಂಬಿಕೆಯು ವೈಸ್‌ರಾಯಿಯವರಿಗೆ ಉಂಟಾಗಿರಬಹುದು. ಹೀಗೆಯೇ ಇವರು ಜನಗಳಿಗೆ ಅನಭಿಮತಗಳಾದ ಕಾರ್ಯಗಳನ್ನೇ ಮಾಡುತ ಅವರಿಗೆ ನಾನಾವಿಧ ನಷ್ಟಗಳನ್ನುಂಟುಮಾಡುವದರಲ್ಲಿ ಆಸಕ್ತಿಯುಳ್ಳವರಾಗಿದಾರೆ. ಇವರ ವರ್ತನದ ಕುರಿತು ಇಲ್ಲಿನ ವೃತ್ತಾಂತ ಪತ್ರಿಕೆಗಳು ಆಗಿಂದಾಗ್ಯೆ ಖಂಡಿಸುತಲಿರುವದರಿಂದಲೂ, ಅಲ್ಲಿಯಲ್ಲಿ ಜನಗಳು ಗುಂಪು ಗೂಡಿ ಬಹಿರಂಗವಾಗಿ ಇವರ ರಾಜ್ಯತಂತ್ರ ಕ್ರಮವನ್ನು ಆಕ್ಷೇಪಿಸಿ ಅವಕ್ಕೆ

ಪ್ರತಿಭಟಿಸುತ ಲಿರುವದರಿಂದಲೂ, ಲಾರ್ಡ ಡಫ್ರಿನ್ ಯವರಿಗೆ ಅತೃಪ್ತಿಯುಂಟಾಗಲು ಈಗ ಅವರು ಜನಗಳ ಸ್ವಾತಂತ್ರ್ಯವನ್ನು ಬುದ್ಧಿಪೂರ್ವಕವಾಗಿ ಅಡ್ಡಿಪಡಿಸಬೇಕೆಂಬ ಆಲೋಚನೆಯೊಡನೆ ಇದುಕುರಿತು ಸ್ಟೇಟ ಸೆಕ್ರೆಟರಿಯವರಿಗೆ ಬರೆದಿರುತ್ತಾರೆಂದು ತಿಳಿಯಬರುತಿದೆ. ಇದರಿಂದ ಲಾರ್ಡ ಲಿಟನ್ ಯವರಂತೆ ಇವರೂ ಪ್ರಜಾಸ್ವಾತಂತ್ರ್ಯ ವಿರೋಧಿಯೆಂದು ತೋರುತಿದೆ. ಪರಂತು, ಮಿಸ್ಟರ್ ಗ್ಲಾಡ್‌ಸ್ಟನ್ ಯವರು ಮಹಾರಾಜ್ಞಿಯವರ ಪ್ರಧಾನಮಂತ್ರಿಯಾಗಿರುವ ತನಕ ಇಂಥಾ ದುಷ್ಕೃತ್ಯಗಳಿಗೆ ಅವರು ಅವಕಾಶ ಕೊಡಲಾರರೆಂದು ನಾವು ದೃಢವಾಗಿ ನಂಬಬಹುದು. ಈ ದೇಶೀಯರ ವಿಷಯದಲ್ಲಿ ಲಾರ್ಡ ಡಫ್ರಿನ್ ಯವರಿಗೆ ವುಂಟಾಗಿರುವ ಅನುತಾಪಗಳನ್ನು ವ್ಯಕ್ತಪಡಿಸಲಿಕ್ಕೆ ಯೋಗ್ಯಗಳಾದ ಸಂದರ್ಭಗಳಲ್ಲೆಲ್ಲ ಕೇವಲ ಶುಷ್ಕೋಪಚಾರ ವಾಕ್ಯಗಳಿಂದ ಪರ್ಯವಸಾನವಂ ಹುಟ್ಟಿಸಿ ಕಾರ್ಯತಃ ಒಂದೂ ಮಾಡದೇ ಹೋದದರಿಂದ ಇವರಲ್ಲಿ ಈಗ ಜನಗಳಿಗೆ ನಂಬಿಕೆಯು ಕಡಮೆಯಾಗುತ ಬರುತಿದೆ.—ಆಂಧ್ರಪ್ರಕಾಶಿಕಾ.

ಈ ಪ್ರಪಂಚದಲ್ಲಿ ಸುಮಾರ್ ೭೦ವಿಧವಾದ ಪದಾರ್ಥಗಳಿರುವಂತೆ ಗೊತ್ತುಮಾಡಲ್ಪಟ್ಟಿದೆ. ಇವುಗಳಪೈಕಿ ಅಫೀಮಿನಂತಾ ಆಕರ್ಷಕಶಕ್ತಿವುಳ್ಳದ್ದಾಗಿಯೂ, ವಿರುದ್ಧಗುಣವನ್ನುಂಟುಮಾಡತಕ್ಕದ್ದಾಗಿಯೂ, ಕಟುವಾದ್ದಾಗಿಯೂ ಯಿರತಕ್ಕಪದಾರ್ಥ ಒಂದೂ ಇರಲಾರದು. ಮುಖ್ಯವಾಗಿ ಇಂತಾ ವಿರುದ್ಧಗುಣವುಳ್ಳ ಪದಾರ್ಥವನ್ನು ಅಮಾನಿಯಾಗಿಟ್ಟುಕೊಂಡು ಇಂಡ್ಯ ಗವರ್ನಮೆಂಟನವರು ಚೀನಾದೇಶೀಯರಿಗೆ ಮಾರುವದರಿಂದ ಇವರಿಗೆ ಸಾಲಿಯಾನಾ ೩ಕೋಟಿರೂಪಾಯಿಗಳ ತನಕ ಹುಟ್ಟುವಳಿಯಾಗುತಿದೆ. ವಿಶೇಷ ಆಯತಿಯುಳ್ಳದ್ದೆಂದು ಏರ್ಪಟ್ಟದರಿಂದಲೇ ಗವರ್ನಮೆಂಟನವರು, ಅದರಹಕ್ಕುದಾರಿಯನ್ನು ಸ್ವತಃ ಉಳಿಸಿಕೊಂಡು ಅನ್ಯರೊಬ್ಬರೂ ತಯಾರುಮಾಡತಕೂಡದೆಂದು ನಿರ್ಬಂಧಗೊಳಿಸಿ ನೇಟಿವ್‌ಸಂಸ್ಥಾನಾಧಿಪತಿಗಳ ಪ್ರಯೋಜನಕ್ಕೆಲ್ಲ ಭಂಗವನ್ನುಂಟುಮಾಡಿರುತ್ತಾರೆ. ಅಫೀಂವ್ಯಾಪಾರ ಮಾಡಲಿಕ್ಕೆ ವುಂಟಾಗಿರುವ ಕಾರಣಗಳನ್ನು ಇಂಡಿಯಾ ಗವರ್ನಮೆಂಟನವರು ತಿಳಿಸುತ್ತಾರೇನಂದರೆ,— ಚೀನಾದೇಶೀಯರಿಗೆ ಅಫೀಂ ಅಗತ್ಯವಾಗಿಬೇಕಾಗಿರುವದರಿಂದ ಅವರಿಗೆ ನಾವು(ಇಂಡಿಯಾ ಗವರ್ನಮೆಂಟನವರು(ಸರಬರಾಯಿಮಾಡದಿದ್ದರೆ ಅವರು ಮತ್ತೆಲ್ಲಿಯಾದರೂ ತೆಗೆದುಕೊಳ್ಳದಿರಲಾರರು. ನಾವು ಗವರ್ನಮೆಂಟನವರು) ಅಫೀಂ ಬಿಕರೀಮಾಡದೆಹೋಗುವದರಿಂದಲೇ ಚೀನಾದವರಿಗೆ ಅಫೀಂ ತಿನ್ನುವಅಭ್ಯಾಸವು ನಿಂತುಹೋಗಲಾರದು.ಇದರಿಂದ ಈವಿಧವಾದಾಯವನ್ನು ಅನ್ಯರು ಅನುಭವಿಸುವದಕ್ಕಿಂತಲೂ ನಾವೇ ಇಂಡಿಯಾಗವರ್ನಮೆಂಟನವರೇ ಯಾತಕ್ಕೆ ಅನುಭವಿಸಲಾಗದೆಂಬದು? ಈ ಸಮಾಧಾನವು ಹ್ಯಾಗಿದೆಯಂದರೆ, ಒಂದುಊರಿಗೆ ಸಮೀಪದೊಳಿದ್ದ ಒಂದುಮಾವಿನತೋಪಿಕ್ಕೆ ಕೇಲವರುಹುಡುಗರು ಗುಂಪುಕೂಡಿಕೊಂಡುಹೋಗಿ ಅಲ್ಲಿನಮರಗಳಲ್ಲಿದ್ದ ಹಣ್ಣುಗಳನ್ನು ಅಪಹರಿಸಲಿಕ್ಕೆತ್ನಿಸಿದಾಗ, ಅವರಪೈಕಿ ಸ್ವಲ್ಪವಿವೇಕಿಯಾದ ಮತ್ತೊಬ್ಬಹುಡುಗನು ಹೀಗ ಅಪಹರಿಸುವದು ಅಕ್ರಮವಲ್ಲವೇ ಯೆಂದು ಕೇಳಿದ್ದಕ್ಕೆ ಅಲ್ಲಿದ್ದ ಮಿಕ್ಕಹುಡುಗರೆಲ್ಲರೂ, ಈಗಿಡಗಳ ಹಣ್ಣುಗಳನ್ನು ನಾವು ಅಪಹರಿಸದೇಬಿಟ್ಟುಹೋಗುವದರಿಂದ ತೋಟದವನಿಗೆ ನಷ್ಟವುಂಟಾಗದೆ ಹೋಗಲಾರದು, ಯಾತಕ್ಕಂದರೆ, ಇನ್ನು ಸ್ವಲ್ಪಹೊತ್ತಿನಮೇಲೆ ಬೇರೆ ಕೆಲವರಾದರೂ ಬಂದು ಈಹಣ್ಣುಗಳನ್ನು ಅಪಹರಿಸದೇಇರಲಾರರಾದದರಿಂದ ಸದರೀ ಫಲಪ್ರಾಪ್ತಿಯನ್ನು ನಾವೇ ಯಾತಕ್ಕೆ ಅನುಭವಿಸಕೂಡದು ಎಂಬದಾಗಿ ಜವಾಬ ಹೇಳಿದರಂತೆ. ಇದೇಪ್ರಕಾರ ಇಂಡಿಯಾ ಗವರ್ನಮೆಂಟನವರು ಚೀನಾ ದೇಶೀಯರ ಧನವು ಹ್ಯಾಗಾದರೂ ಅನ್ಯತ್ರ ಹೋಗದಿರಲಾರದಾಗಿ ಅದನ್ನು ನಾವೇ ಪಡೆಯುವೆವೆಂದು ಹೇಳುತ್ತಾರೆ. ಆಚೇವಾರದೊಳು ಮದರಾಸ ಹೈಕೋರ್ಟನಲ್ಲಿ ವಿಚಾರಣೆಯಾಗಿ ಫೈಸಲಾದ ಬೋಡಿನಾಯಕನೂರ್ ಜಮೀನ್ದಾರರ ಮೊಕದ್ದಮೆಯ ಸ್ವರೂಪವನ್ನು ಸಂಗ್ರಹವಾಗಿ ಗತವಾರದಲ್ಲಿ ಈ ಪತ್ರಿಕಾಮೂಲಕ ತಿಳಿಸಿದ್ದೆವಷ್ಟೆ. ಇದರಲ್ಲೊಂದು ವಿಶೇಷಾಂಶವಿದೆ ಯೇನಂದರೆ—ಮದರಾಸ ಪ್ರೆಸಿಡೆನ್ಸಿಯಲ್ಲಿ ನ್ಯಾಯದೇವತೆಗೆ ಆಶ್ಚರ್ಯವನ್ನುಂಟುಮಾಡುವಂತಾ ಮಹತ್ಕಾರ್ಯಗಳನ್ನು ಪೋಲೀಸನವರು ಮಾಡುತಲೂ, ಕಲಿಕಾಲಧರ್ಮವೆಂಬ ವಾಕ್ಯವನ್ನು ಅವರು ಅನವರತ ಸಾರ್ಥಕಪಡಿಸುತಲೂ ಇರುವದು ಪ್ರಸಿದ್ಧ ವಿಷಯವಾಗಿದೆ. ಮಧುರೆ ಡಿಸ್ಟ್ರಿಕ್ಟಿನಂತೆ ಇತರ ಡಿಸ್ಟ್ರಿಕ್ಟುಗಳಲ್ಲಿಯೂ ಈ ಇಲಾಖೆಯ ಚರಿತ್ರೆಯು ಬಹಳ ನಿಂದ್ಯವಾಗಿಯೂ, ಜನಗಳಿಗೆ ಮಹದನರ್ಥಕಾರಿಯಾಗಿಯೂ ಯೇರ್ಪಟ್ಟಿದೆಯಲ್ಲದೆ ಇದರಿಂದ ಸ್ವಲ್ಪವಾದರೂ ಪ್ರಯೋಜನವಿರುವಂತೆ ತೋರಲಿಲ್ಲವು. ಮತ್ತು ಈ ಕೆಲಸದಲ್ಲಿ ಮೊಕರರ್ಮಾಡಲ್ಪಡತಕ್ಕ ಉದ್ಯೋಗಸ್ಥರು ಪ್ರಾಯೇಣ ಅನರ್ಹರಾಗಿರುತ್ತಾರೆ ಮತ್ತು ಅವರು ನ್ಯಾಯಾನ್ಯಾಯ ಸ್ವರೂಪವನ್ನರಿಯಲಾರದೆ ಸನ್ಮಾರ್ಗವಂಬಿಟ್ಟು ವರ್ತಿಸುವರು. ಮೊದಲು ಸಕಲಜನ ಶ್ಲಾಘ್ಯವಾಗಿದ್ದ ಈ ಇಲಾಖೆಯು ಪ್ರಸ್ತುತಸ್ಥಿತಿಗೆ ಬಂದದಕ್ಕಾಗಿ ಆಶ್ಚರ್ಯಪಡಬೇಕಾಗಿದೆ. ಇದರಿಂದ ಈಗ ಜನಗಳಿಗೆ ವುಂಟಾಗತಕ್ಕ ಫಲವೇನಂದರೆ,—ಸದಾಭೀತಿ, ದೇಹಹಿಂಸೆ, ಮೊಕದ್ದಮೆಗಳ ಬನಾವಣೆ, ರುಷುವತ್ತಿನ ಪ್ರಾಬಲ್ಯ, ಜುಲ್ಮಿ, ಮಾನಭಂಗ, ಇವುಗಳು ಮುಖ್ಯವಾದವಾಗಿರುತಿವೆ ಪ್ರಪಂಚದೊಳೆತ್ತ ನೋಡಿದಾಗ್ಯೂ ಪೋಲೀಸ್‌ಇಲಾಖೆಯೆಂಬದು ಏಕರೂಪವಾಗಿರುತಿದೆ ಕಾಲದೂತರೆಂಬವರನ್ನೂ, ಕಲಿಪುರುಷರೆಂಬವರನ್ನೂ ನಾವು ಇದುವರಿವಿಗೂ ನೋಡಿದ್ದಿಲ್ಲವು. ಈಗ ನಾವು ಇವರುನೋಡುತ ಅವರಬಾಧೆಯನ್ನು ಅನುಭವಿಸಬೇಕಾದಪ್ರಾಪ್ತಿ ನಮಗೆ ವುಂಟಾಗಿದೆ.

ಮದರಾಸ ಪ್ರೆಸಿಡೆನ್ಸಿಯಲ್ಲಿ ತಿರುವನಂದಪುರಂ, ಕೊಚ್ಚಿ, ಪುದುಕೋಟೆ, ಸಂಡೂರು, ಬಗನಪಲ್ಲಿ, ವಗೈರೆ ಕೆಲವು ಪ್ರಸಿದ್ಧ ಸಂಸ್ಥಾನಗಳಿರುವವಲ್ಲದೆ ನೂರುಮಿಪ್ಪತ್ತಾರು ಸಣ್ಣ ಪಾಳೇಪಟ್ಟು ಸಂಸ್ಥಾನಗಳಿರುತಿವೆ. ವೆಂಕಟಗಿರಿಸಂಸ್ಥಾನದವರು ೩೭೨,೧೮೫ ರೂಪಾಯಿಗಳು, ರಾಮನಾಥಪುರ ಸಂಸ್ಥಾನದವರು ೩,೧೩,೯೯೮ ರೂಪಾಯಿಗಳು, ಶಿವಗಂಗೆಯವರು, ೨,೮೮,೩೧೭ ರೂಪಾಯಿಗಳು,ಪಿಟ್ಟಾಪುರದವರು ೨,೫೦,೧೦೯ ರೂಪಾಯಿಗಳು, ಈರೀತಿ ಸರ್ಕಾರಕ್ಕೆ ಸಾಲೀಯಾನಾ ಪೇಷ್‌ಕಷಕೊಡುತಲಿರುತ್ತಾರೆ. ಮೇಲೆತಿಳಿಸಿದ ೧೨೬ ಸಂಸ್ಥಾನಗಳಪೈಕಿ ಗಂಜಾಂ ಮತ್ತು ವಿಶಾಖಪಟ್ಟಣ ಡಿಸ್ಟ್ರಿಕ್ಟುಗಳಲ್ಲಿ ೫೦, ತಿರುನಲ್ವೇಲಿಯಲ್ಲಿ ೨೨, ಕರ್ನೂಲಿನಲ್ಲಿ ೧, ಇತರ ಜಿಲ್ಲಾಗಳಲ್ಲಿ ನಾಲ್ಕೈದು ಈಪ್ರಕಾರ ಇರುತಿವೆ. ಉತ್ತರದೇಶದ ಜಮೀನ್ದಾರಗಳಿಗಿಂತಲೂ ದಕ್ಷಿಣದೇಶದ್ದು ಬಹಳ ಸಾರವತ್ತಾಗಿರುತಿದೆ. ಕೆಲವರು ಜಮೀನ್ದಾರರುವಿನಾ ಮಿಕ್ಕವರಸ್ಥಿತಿಯು ಕೇವಲ ಅನುತಾಪಕರವಾದ್ದಾಗಿದೆ. ಇವರು ಮನಸ್ವೀ ವ್ಯಯಮಾಡುತಲೂ, ತಮ್ಮ ಆಯತಿಗಿಂತ ಹತ್ತುಪಾಲು ಅಧಿಕವಾಗಿ ಸಾಲಮಾಡುತಲೂ, ಅದುತೀರಿಸಲಿಕ್ಕೆ ಶಕ್ತಿಯಿಲ್ಲಬೇಹೋದರೆ ಆಗ ಸಾಲಗಾರರು ಆಸ್ತಿಯನ್ನು ಹರಾಜ್‌ಹಾಕಿಸುತಲೂ ಇರುತ್ತಾರೆ. ಇಂತಾ ದೌರ್ಭಾಗ್ಯಸ್ಥಿತಿಯೇ ಇವರಿಗೆ ಪ್ರಾಯೇಣ ವುಂಟಾಗಿದೆ. ಇದಕ್ಕೆ ನಿದರ್ಶನವಾಗಿ ಈಚೆಗೆ ಒಬ್ಬ ಜಮೀನ್ದಾರನಮೇಲೆ ಸಾಲಗಾರರು ಸಿವಿಲ್ ವಾರಂಟ ತೆಗದುಕೊಂಡದರಿಂದ ಆತನು ಮನೆಬಿಟ್ಟು ಹೊರಗೆ ಬರಲಾರದೆ ಸರ್ವದಾ ಮನೆಬಾಗಲಂಮುಚ್ಚಿಕೊಂಡು ಒಳಗೆ ಅಜ್ಞಾತವಾಸಮಾಡುತಲಿದ್ದನು. ಆದರೆ ಜಮೀನ್ದಾರರೆಲ್ಲರೂ ಹೀಗೆಯೇ ಇದಾರೆಂದು ಹೇಳಲಾಗದು. ಪರಂತು ಇವರೊಳು ಕೆಲವರುಮಾತ್ರ ಸಾಲಗಾರರಾಗಿರಲಿಕ್ಕೆ ವಿದ್ಯಾವಿಹೀನರಾಗಿರುವದೇ ಕಾರಣವೆಂದು ಹೇಳಬಹುದಾಗಿದೆ. ತುರೀಯಾವಸ್ಥೆಯೊಳಿರುವ ಇವರು ಈಗ ವಿದ್ಯಾಭ್ಯಾಸಮಾಡಿ ಪ್ರಜ್ಞಾವಂತರಾಗಬೇಕೆಂದು ಪ್ರಯತ್ನಪಟ್ಟರೆ ಸುತರಾಂ ಸಾಧ್ಯವಾಗಲಾರದು. ತಮ್ಮ ಕಾಲಾನಂತರ ತಮ್ಮ ಸಂತತಿಯವರಾದರೂ ಗೌರವ್ಯರಾಗಿರಬೇಕಾದ್ದು ಆವಶ್ಯಕವೆಂದೆಣಿಸಿ ಈಗ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುವದು ಯೋಗ್ಯವಾಗಿರುತಿದೆ. ಹಾಗಿಲ್ಲದಿದ್ದರೆ "ಮಾತಾಶತ್ರುಪಿತಾವೈರಿ ಯೇನಬಾಲೋನಪಾಠಿತಃ" ಎಂಬ ಒಬ್ಬ ಕವಿವಾಕ್ಯದಂತೆ ವಿದ್ಯೆಯಂಕಲಿಸದ ಮಾತಾಪಿತೃಗಳೇ ಅವರ ಮಕ್ಕಳಿಗೆ ಶತ್ರುಗಳೆನಿಸಿಕೊಳ್ಳುವರು. ತತ್ರಾಪಿ, "ಋಣಕರ್ತಾಪಿತಾಶತ್ರುಃ" ಎಂಬಂತೆ ಸಾಲಗಾರನಾಗಿಯೂ ಇದ್ದರೆ ತಿಳಿಸಬೇಕಾದುದಿಲ್ಲವು. ಕಡೆಗೆ ಅಪಂಡಿತನಾದ ಪುತ್ರನೂ ಋಣಪೀಡಿತನಾದ ತಂದೆಯೂ ಪರಸ್ಪರ ಶತ್ರುಗಳಾಗುವರು. ಉಪಾಧ್ಯಾಯರನ್ನಿಟ್ಟು ಮನೆಗಳಲ್ಲಿಯೇ ವಿದ್ಯೆಯಂ ಕಲಿಸುತ ಇದ್ದ ಸ್ಥಳಮಂಬಿಟ್ಟು ಕದಲದೆ ಇರುವದು ಯೋಗ್ಯವೆಂದು ಯೆಷ್ಟುಮಾತ್ರವೂ ಹೇಳಲಾರೆವು. ವಿದ್ಯೆಯೆಂಬದು, ಗ್ರಂಥಾವಲೋಕನದಿಂದಲೂ, ದೇಶ ಸಂಚಾರದಿಂದಲೂ, ಬಹುಜನಪರಿಚಯ ಸಾಹಚರ್ಯದಿಂದಲೂ ಉಂಟಾಗತಕ್ಕ ಜ್ಞಾನವಾಗಿರುತಿವೆ. ಪಾಳೇಪಟ್ಟುಗಳಲ್ಲಿರುವ ರೈತರ ಮಕ್ಕಳೊಡನೆ ವಿದ್ಯಾಭ್ಯಾಸ ಮಾಡಿಸುವೆವಂದರೆ ಸಂಸ್ಥಾನಾಧಿಪತಿಗಳೆನಿಸಿಕೊಂಡಿರುವವರಿಗೆ ಗೌರವಾಸ್ಪದವಾಗಿರಲಾರದು. ಆದದರಿಂದ ಈ ಸಂಸ್ಥಾನದವರೆಲ್ಲರೂ ತಮ್ಮ ಮಕ್ಕಳನ್ನು ಕಾಲೀಜ್‌ಗಳಿಗೆ ಕಳುಹಿಸಿ ಅಲ್ಲಿ ಅವರನ್ನು ತರಬಿಯತಮಾಡಿಸುವಣವು ಯೋಗ್ಯವಾಗಿಯೂ ಸಾಧ್ಯವಾಗಿಯೂ ಇರುತಿದೆ. ಆದರೆ ಒಂದುಅಂಶ ಮಾತ್ರ ಸ್ವಲ್ಪ ಆಲೋಚಿಸಬೇಕಾಗಿದೆ, ಯೇನಂದರೆ, ಪುರಾಣೇದಾರರಾದ ಈ ಜಮೀನ್ದಾರರ ಮಕ್ಕಳು ಸಾಮಾನ್ಯರಾದ ಇತರ ಬಾಲಕರೊಡನೆ ವಿದ್ಯಾಭ್ಯಾಸ ಮಾಡುವಣವು ಗೌರವವಲ್ಲವು. ಇವರ ವಿದ್ಯಾಭ್ಯಾಸಕ್ಕಾಗಿ ಪ್ರತ್ಯೇಕ ಯೇರ್ಪಾಡು ಮಾಡಿದರೆಚೆನ್ನಾಗಿರುವದು ಈಗಬಂಗಾಳೆಯಲ್ಲಿ ವ್ಯವಸ್ಥಾಪಿತವಾಗಿರುವ ರಾಜಕುಮಾರರ ಕಾಲೀಜಿನಂತೆ ಈ ಮದರಾಸ ಪ್ರೆಸಿಡೆನ್ಸಿಯಲ್ಲಿಯೂ ಒಂದು ಶಾಸ್ತ್ರಪಾಠಶಾಲೆಯನ್ನು ಏರ್ಪಡಿಸಿದರೆ ಅವರಲ್ಲಿ ಗೌರವ್ಯರಾದಸಂಸ್ಥಾನಾಧಿಪತಿಗಳು, ಪಾಳೇಗಾರರು, ಪ್ರಮುಖರು, ದಿವಾನರು, ಮುಂತಾದವರ ಮಕ್ಕಳು ವಿದ್ಯಾಭ್ಯಾಸ ಮಾಡುವದಕ್ಕೂ, ಅವರವರ ದರ್ಜೆಗೆ ತಕ್ಕ ಜನಗಳ ಸಹವಾಸ ನೆಲಗೊಳ್ಳಲಿಕ್ಕೂ, ತನ್ಮೂಲಕ ಗೌರವ ಪ್ರಾಭವಗಳನ್ನು ಕಾಪಾಡಿಕೊಳ್ಳಬೇಕೆಂಬ ಅಭಿರುಚಿಯುಂಟಾಗಲಿಕ್ಕೂ ಅವಕಾಶವುಂಟಾಗುವದು. ಇಂತಾಪಾಠಶಾಲೆಯೊಂದು ಸ್ಥಾಪಿಸಲ್ಪಡುವಪಕ್ಷಕ್ಕೆ ಅದಕ್ಕೆ ಜಮೀನ್ದಾರರೆಲ್ಲರೂ ತಮ್ಮ ಶಕ್ತ್ಯನುಗುಣವಾಗಿ ಸಹಾಯಮಾಡುವರೆಂಬದರೊಳೇನೂ ಸಂಶಯವಿಲ್ಲವು. ಯಾತಕ್ಕಂದರೆ, ಇವರ ಧನವೆಲ್ಲವೂ ಬೇರೇಮಾರ್ಗಗಳಲ್ಲಿ ದಾರಾಳವಾಗಿ ವಿನಿಯೋಗಿಸಲ್ಪಡುವದರಿಂದ ಪ್ರಯೋಜನಕರವಾದ ಇಂತಾ ವಿಷಯದಲ್ಲಿ ಸಹ ಇವರು ಯಥೋಚಿತ ಸಹಾಯ ಮಾಡಬಹುದು. ಕಾಲಗತಿಯನ್ನೈದಿದ ಜಯರಾಂ ಶೆಟ್ಟರ ತಮ್ಮಂದಿರಾದ ವಿಜಯರಾಘವುಲು ಶೆಟ್ಟರವರು ಮದರಾಸ ಪ್ರೊಥಾಂಡ್ ಬೀದಿಯಲ್ಲಿ ಒಂದು ಪ್ರೊಪ್ರೈಟರಿ ಸ್ಕೂಲನ್ನು ಕೇವಲ ಜಮೀನ್ದಾರರ ಮತ್ತುದೊಡ್ಡಮನುಷ್ಯರ ಮಕ್ಕಳ ವಿದ್ಯಾಭ್ಯಾಸಾರ್ಥ ಸ್ಥಾಪಿಸಿದರು. ಸದರೀ ದೊಡ್ಡಮನುಷ್ಯರು ಗತಿಸಿದಮೇಲೆ ಆ ಪಾಠಶಾಲೆಯನ್ನು ಕಾಪಾಡುವವರಿಲ್ಲದೆ ಹೋದದರಿಂದ ಅದು ಕ್ರಮೇಣ ಕ್ಷೀಣಗತಿಯನ್ನೈದಿ ಕಡೆಗೆ ಮೌಕೂಫಾಯಿತು. ಈಗ ಗವರ್ನಮೆಂಟನವರು ಅಂತಾಪಾಠಶಾಲೆಯನ್ನು ಸ್ಥಾಪಿಸಿದರೆ ಜಮೀನ್ದಾರರಿಗೆ ಸಹಾಯಮಾಡಿದಾತೆ ಯಾಗುತಿದೆ. ರಾಜಕೀಯೋದ್ದೇಶಕ್ಕೆ ಸಹ ಈಜಮೀನ್ದಾರರಮಕ್ಕಳ ವಿದ್ಯಾಭ್ಯಾಸವು ಆವಶ್ಯಕವಾದ್ದಾಗಿರುತಿದೆ, ಹ್ಯಾಗಂದರೆ-ವಿದ್ಯೆಯು ಮೌಢ್ಯವನ್ನುಹೋಗಲಾಡಿಸುವದಾಗಿ ತನ್ಮೂಲಕ ಧೈರ್ಯವೆಂಬದು ತೊಲಗಿ ಪ್ರಾಣಭೀತಿಯೊಡನೆ ಗೋವುಗಳಂತೆ ಪರಮ ಸಾತ್ವಿಕರಾಗುವರಾಗಿ ಇವರ ಮೂಲಕ ಕಲಹಾದಿಗಳಿಗೇನೂ ಮುಂದೆಅವಕಾಶವಿರಲಾರದು. ಎರಡನೇದು—ವಿದ್ಯೆಯಿಂದ ಮಿತವ್ಯಯ ಮಾಡಬೇಕೆಂಬ ಬುದ್ಧಿ (ಕದಾಚಿತ್ ಇದೇ ಪರಮಲೌಭ್ಯವಾಗಿಪರಿಣಮಿಸುವದುಂಟು)ಉಂಟಾಗುವದಾದದರಿಂದ ತನ್ಮೂಲಕದುಬಾರಿಖರ್ಚುಗಳಿಗೆ ಅವಕಾಶವಿರಲಾರದು. ಮತ್ತು ಇದರಿಂದ ಸಾಲವು ಏರ್ಪಡದು. ಕಡೆಗೆ ಅದರ ಪ್ರಾಬಲ್ಯದಿಂದ ಸರಕಾರಕ್ಕೆ ಸಲ್ಲಬೇಕಾದ ಪೇಷ್‌ಕಷ್‌ಗೆ ರೋಧವುಂಟಾಗಲಾರದು. ಪೇಷ್‌ಕಷನ್ನು ಬರಮಾಡಿಕೊಳ್ಳುವಬಗ್ಗೆ ಗವರ್ನಮೆಂಟನವರು ಜಮೀನ್ದಾರರ ಆಡಳಿತದಲ್ಲಿ ಪ್ರವೇಶಿಸಿ ಸಾಲವನ್ನು ತೀರಿಸುವಷ್ಟು ತೊಂದರೆಗಳಿಗೆ ಮಾರ್ಗವಿರಲಾರದು. ಸಾಲಗಾರರು ತಾವುಕೊಡುವ ಸಾಲದಮೊಬಲಗಾಗಿ ಚಿಂತಿಸುತಲಿರಲಿಕ್ಕೆ ಕಾರಣವಿರಲಾರದು. ಇವರ ವ್ಯಾಜ್ಯಗಳಿಂದ ಸಿವಿಲ್‌ಕೋರ್ಟುಗಳಕಾಲವು ವ್ಯರ್ಥವಾಗುವದಕ್ಕೆ ಆಸ್ಪದವಿರಲಾರದು. ಕಡೆಗೆ ಪಾಳೇಪಟ್ಟು ಹರಾಜ್ ಹಾಕಲ್ಪಟ್ಟಿತೆಂಬ ಅಪಪ್ರಥೆಗೆ ಗುರಿಯಾಗಬೇಕಾದುದಿಲ್ಲವಾಗಿ ಇದಕ್ಕೆ ಗವರ್ನಮೆಂಟನವರು ಅವಶ್ಯನಿಗೇಕೊಟ್ಟು ಮೇಲೆಕಂಡಂತೆ ಒಂದುಪಾಠಶಾಲೆಯನ್ನು ಸ್ಥಾಪಿಸಬೇಕಾದುದು ಕೇವಲ ಆವಶ್ಯಕವೆಂದೆಣಿಸುವೆವೆಂಬದಾಗಿ ಮದರಾಸ ಆಂಧ್ರಪ್ರಕಾಶಿಕೆಯೆಂಬ ಪತ್ರಿಕೆ ತಿಳಿಸುತಿದೆ.

THE MYSORE GAZETTE
ಮೈಸೂರು ಗೆಜೆಟ.

—:—

ಶ್ರೀಮನ್ಮಹಾರಾಜ ರಾಜಾಸಾಹೇಬ್ ಒಡೆಯರವರ ದಿವಾನರವರಿಂದ ಕೊಡಲ್ಪಟ್ಟ ಇಸ್ತಿಹಾರ್‌ನಾಮೆಗಳು

ನಂ. ೬೮. ತಾ॥ ೧೩ನೇ ಮೇ ೮೬—ನಂಜೀಡುಗ್ಗಡಿವಿಜನ್ ಗವರ್ನಮೆಂಟ ಪ್ರಾಸಿಕ್ಯೂಟರಾದ ಪಿ. ಶಿಂಗರಾಚಾರ್ಯರವರು ೨ನೇಗ್ರೇಡ್ ಮುನ್ಸಫರಾಗಿ ಮೊಕರರ್ಮಾಡಲ್ಪಟ್ಟರಾಗಿ, ೧೮೮೬ನೇ ಇಸವಿ ಜೂನ್ ೯ನೇ ತಾರೀಖ್ ಲಾಗಾಯಿತು ನಂಜನಗೂಡು ಮುನ್ಸಫರಾಗಿರತಕ್ಕದ್ದು.

ನಂ. ೬೯. ತಾ॥ ೧೭ನೇಮೇ, ೮೬—ತುಮಕೂರ್ ಡಿಸ್ಟ್ರಿಕ್ಟು ಅಸಿಸ್ಟೆಂಟ ಕಮ್ಮಿಷನರ್ ಮೆ॥ ಬಿ. ಜೆ. ಕೃಷ್ಣಯ್ಯಂಗಾರ‍್ರವರಿಗೆ ೧೮೮೬ನೇ ಇಸವಿ ಜೂನ್ ೭ನೇ ತಾರೀಖ್ ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ೨ ತಿಂಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತಿದೆ.

ನಂ. ೭೨. ತಾ॥ ೧೮ನೇ ಮೇ ೧೮೮೬.—ಹಾಸನಡಿಸ್ಟ್ರಿಕ್ಟು ಡೆಪ್ಯುಟೀಕಮ್ಮಿಷನರ್ ಮೆ॥ ಟಿ. ಆನಂದರಾವ್ ಬಿ. ಎ. ಯವರಿಗೆ ೧೮೮೬ನೇ ಇಸವಿ ಏಪ್ರೆಲ್ ೧ ಮತ್ತು ಮೇ ೩ನೇತಾರೀಖಿನಂಗಳುಳ್ಳ ೧ ಮತ್ತು ೫೧ನೇ ನಂಬರ್ ಇಸ್ತಿಹಾರ್‌ನಾಮೆಗಳಲ್ಲಿ ಕೊಡಲ್ಪಟ್ಟಿದ್ದ ರಜಾವಿಗೆ ಜಾಸ್ತೀಯಾಗಿ ಮೆಡಿಕಲ್ ಸರ್ಟಿಫಿಕೇಟಿನಮೇಲೆ ಒಂದು ತಿಂಗಳ ರಜಾ ಕೊಡಲ್ಪಟ್ಟಿರುತಿದೆ.

ನಂ. ೭೩. ತಾ॥ ೧೯ನೇ ಮೇ, ೧೮೮೬-ಶಿವಮೊಗ್ಗಾಡಿಸ್ಟ್ರಿಕ್ಟು ಡೆಪ್ಯುಟೀಕಮ್ಮಿಷನರವರ ಆಫೀಸ ರೆವಿನ್ಯೂ ಹೆಡ್‌ಮುನಿಷಿ ಜೆ. ಕೋಹಿಲ್‌ಹೋಯವರು ಕುಂಸೀ ಡೆಪ್ಯುಟೀ ಅಮಲ್‌ದಾರರಾದ ಗುಲಾಂ ಅಹಮದ್‌ಖಾನರ ಗೈರ್‌ಹಾಜರೀಯಲ್ಲಿ, ಅಥವಾ ಮತ್ತೊಂದು ಹುಕುಂ ಕೊಡುವತನಕ ಕುಂಸಿಯ ಸಬ್ ತಾಲ್ಲೂಕು ಡೆಪ್ಯುಟೀ ಅಮಲ್‌ದಾರ್ ವ ಮೂರನೇಕ್ಲ್ಯಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ಮಾಡಲ್ಪಟ್ಟಿರುತ್ತಾರೆ.

ಶಿವಮೊಗ್ಗಾ ತಾಲ್ಲೂಕ ಶಿರಸ್ತೇದಾರ್ ನರಸಿಮ್ಮಲುನಾಯುಡರವರು ಶಿವಮೊಗ್ಗಾ ತಾಲ್ಲೂಕು ಅಮಲ್‌ದಾರ್ ಶೀತಾರಾಮೈಯ್ಯನವರ ಗೈರ್‌ಹಾಜರಿಯಲ್ಲಿ ಅಥವಾ ಮತ್ತೊಂದುಹುಕುಂ ಕೊಡುವತನಕ ಸದರೀ ತಾಲ್ಲೂಕು ಅಮಲ್‌ದಾರ್ ವ ಮೂರನೇಕ್ಲ್ಯಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ಮಾಡಲ್ಪಟ್ಟಿರುತ್ತಾರೆ.

BANGALORE:—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

[illegible]

VOL XIII.] BANGALORE—MONDAY, MAY 31, 1886. [No. 22.

ಸಂಪುಟ ೧೩.] ಬೆಂಗಳೂರು—ಸನ್ ೧೮೮೬ನೇ ಇಸವಿ ಮೇ ೩೧ನೇ ತಾರೀಖ್ ಸೋಮವಾರ. [ಸಂಚಿಕೆ ೨೨

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

[illegible]

[illegible]	...	[illegible]
[illegible]	...	[illegible]
[illegible]		[illegible]
[illegible]		[illegible]

[illegible]

ಪ್ರಕಟನೆಯ ರವಾಜ್.

[illegible]	[illegible]	[illegible]
[illegible]	[illegible]	[illegible]

NOTICE TO SUBSCRIBERS

[illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA.

Price including Postage, Rs 5-0-0

ವೈದ್ಯಸಾರ ಸಂಗ್ರಹ.

[illegible]

[illegible] ... ... ರೂ|| [illegible]

[illegible]

[illegible]

ನೋಟೀಸ್.

[illegible]

[illegible]

[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]

[illegible]

[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]

[illegible]

[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]
[illegible]	...	[illegible]

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮಿಷನ್ ಮರ್ಚಂಟ್ಸ್.

ಬೆಂಗಳೂರು ಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ಸಮಸ್ತ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇವಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MAY 31, 1886.

೧೮೮೬ನೇ ಮೇ ೩೧ನೇ ತಾ|| ಸೋಮವಾರ

OUR MAHARAJAS.

ಈಚೆಗೆ ಕೆಲವು ನೇಟಿವ್ ಸಂಸ್ಥಾನಾಧಿಪತಿಗಳಿಗೆ ಇಂಗ್ಲಾಂಡಿಗೆ ಹೋಗಿಬರಬೇಕೆಂಬ ಭ್ರಾಂತಿಯೊಂದು ತಲೆದೋರಿದೆ. ಗೊಂಡಲ್ ಸಂಸ್ಥಾನದ ಅರಸರವರು ಒಂದಾವರ್ತಿ ಇಂಗ್ಲಾಂಡಿಗೆ ಹೋಗಿಬಂದು ವೈದ್ಯಶಾಸ್ತ್ರಾಭ್ಯಾಸಕ್ಕಾಗಿ ಮರಳಿ ವಾಪಸ್ ಹೋದರು. ಗಾಯಕವಾಡಿ ಮಹಾರಾಜರವರು ಇಂಗ್ಲಾಂಡಿಗೆ ಹೋಗಬೇಕೆಂಬ ಉತ್ಕಟೇಚ್ಛೆಯೊಡನೆ ಮುಂಬೈವರಿವಿಗೆ ಬಂದು ಸಮುದ್ರಯಾನವು ತಮ್ಮ ದೇಹಸ್ಥಿತಿಗೆ ಅನನುಗುಣವಾದದ್ದೆಂಬ ಕಾರಣದಿಂ ರಾಜಧಾನಿಗೆ ವಾಪಸು ಹೋದರು. ಸದರೀ ಮಹಾರಾಜರವರು ಪರೀಕ್ಷಾರ್ಥ ಗೋವಾ (ಗೋಕರ್ಣಕ್ಷೇತ್ರ) ತನಕ ಸ್ಟೀಮರ್‌ನಲ್ಲಿ ಪ್ರಯಾಣಮಾಡಲು, ಕೂಡಲೇ ತಮಗೆ ಉಂಟಾದ ವಿರುದ್ಧಗುಣದಿಂದ ತಮ್ಮ ಸಂಕಲ್ಪವನ್ನು ಬಿಟ್ಟವರಾದರು. ಒಂದುವೇಳೆ ಮಹಾರಾಜರವರ ಪ್ರಕೃತಿ ಧರ್ಮಕ್ಕೆ ಸಮುದ್ರಯಾನವು ಅನುಗುಣವಾಗಿದ್ದಿರುವ ಪಕ್ಷಕ್ಕೆ ಅವರು [illegible] ಹೊರಟು ಹೋಗಿರುವರೆಂದು ನಂಬುತ್ತೇವೆ. ಹೈದರಾಬಾದ್ ನಿಜಾಮರವರು ಇಂಗ್ಲಾಂಡಿಗೆ ಹೋಗಬೇಕೆಂಬ ಅಪೇಕ್ಷೆಯುಳ್ಳವರಾಗಿದ್ದಾರೆಂದು ಆಗಿಂದಾಗ್ಯೆ ವೃತ್ತಾಂತಪತ್ರಿಕೆಗಳು ತಿಳಿಸುತಲಿವೆ ಮತ್ತು ಏತತ್ಪರ್ವ ಸಕೃತ್ ಪ್ರಯತ್ನಗಳು ಸಹ ಮಾಡಲ್ಪಡದಿರಲಿಲ್ಲವು. ನಿಜಾಮರವರು ಯಾವಾಗ ಯೂರೋಪಿಗೆ ತೆರಳುವರೋ ಅದನ್ನೀಗ ತಿಳಿಸಕೂಡದ್ದಾಗಿದ್ದರೂ ಯಾವಾಗಲಾದರು ಅವರು ಹೋಗದಿರಲಾರರೆಂಬ ನಂಬಿಕೆ ನಮಗೆ ಬಲವತ್ತರವಾಗಿದೆ. ಮನುಷ್ಯನಿಗೆ ಸದಸದ್ವಿಷಯಗಳಲ್ಲಿಗು [illegible] ಎಲ್ಲವಂತೆ [illegible] ಅವಿವೇಕ ಯುಕ್ತವಾದ [illegible] ಮಹಾರಾಜರುಗಳಿಗೆ ಸಹ ಈ ತಾತ್ಪರ್ಯವು ಇರವೇಯಿಲ್ಲವು. ಪರಂತು ಅನ್ಯರಂತೆ ಅವರೂ ತಮ್ಮ ಅಭಿಪ್ರಾಯವನ್ನು ಕೋರದಿಸಿ [illegible] ಯೂರೋಪ್ [illegible] ಪ್ರಯತ್ನವನ್ನು [illegible] ಗವರ್ನಮೆಂಟಿನವರು [illegible] ಕೊಳ್ಳುವುದು. ಹೀಗೆ ನಮ್ಮ ಸಂಸ್ಥಾನಾಧಿಪತಿಗಳೆಲ್ಲರೂ, ಅರ್ಥವ್ಯಯವನ್ನು ಶರೀರ ಶ್ರಮವನ್ನೂ, ಜಾತಿ ಮತ ನಿಯಮಗಳನ್ನೂ ಪರಿಭಾವಿಸದೆ ಅನ್ಯದೇಶಕ್ಕೆ ಹೋಗಿ ಅಲ್ಲಿ ಕೆಲವುಕಾಲ ವಾಸಮಾಡಿ ಬರುವದರಿಂದ ಉಂಟಾಗತಕ್ಕ ಪ್ರಯೋಜನವು ಫಲಾನ್ವಿತ ರೂಪವಾದದ್ದೆಂದು ಗೊತ್ತಾಗುವದಿಲ್ಲವು. ಆದರೆ ಈ ವಿಷಯದಲ್ಲಿ ಕನ್ನಡಸುವಾರ್ತೆ ಪತ್ರಿಕೆಯು ತಿಳಿಸುತ್ತ "ತಮ್ಮ ಸ್ಥಿತಿಯನ್ನೂ ಮರುಳುತನವನ್ನೂ ಅಲ್ಲಿನಜನಗಳಿಗೆ ತೋರಿಸಿ ಅವರಿಗೆ ತಮ್ಮಲ್ಲಿರುವ ಔತ್ಕೃಷ್ಟ್ಯ ಜ್ಞಾನವನ್ನು ತಗ್ಗಿಸಿಕೊಳ್ಳುವದೊಂದ ವಿನಾ ಬೇರೊಂದೂ" ಇರುತ್ತದೆ ನಾವೆಣಿಸಲಿಲ್ಲವು. ಪೂರ್ವದಲ್ಲಿ ನಮ್ಮ ಅರಸರು ಒಂದು ದೇಶದಿಂದ ಮತ್ತೊಂದು ದೇಶಕ್ಕಾಗಲಿ, ಒಂದು ಸ್ಥಳದಿಂದ ಬೇರೊಂದು ಸ್ಥಳಕ್ಕಾಗಲಿ ಹೋಗಬೇಕಾದರೆ, ಅವರ ಸಂಭ್ರಮವೆಷ್ಟು, ಅವರ ಪರಿವಾರಗಳೆಷ್ಟು, ಅವರ ಬಿರುದುಗಳೆಷ್ಟು, ಅವರ ನಜರ್ ಮುಜರೆಗಳೆಷ್ಟು, ಇಷ್ಟಾದಾಗ್ಯೂ ಅವರು ಹೊರಗೆ ಹೊರಡುವದು ಬಹಳ ದುರ್ಲಭವಾಗಿತ್ತಲ್ಲದೆ ಅವರು ನಿಷ್ಕಾರಣವಾಗಿ ಎಲ್ಲಿಗೂ ಹೋಗುತಲಿರಲಿಲ್ಲವು. ಪೂರ್ವದ ಅರಸರು ತಮ್ಮ ಪದವಿಯ ಸ್ವರೂಪವನ್ನೂ, ಅದನ್ನು ಕಾಪಾಡಿ ಕೊಳ್ಳಬೇಕಾದ ವಿಧವನ್ನೂ ತಮ್ಮ ಗೌರವ ಪ್ರಭಾವಗಳನ್ನು ಪೋಷಿಸಿಕೊಳ್ಳುವ ಬಗೆಯನ್ನೂ ಚನ್ನಾಗಿ ಅರಿತಿದ್ದರು. ಪಸರೀಪತ್ರಿಕೆ ಮತ್ತೂ ತಿಳಿಸುವಂತೆ, "ಈಗಿನ ಪರಾಧೀನರಾದ ಅರಸರು [illegible] ಎಸ್. [illegible] ಎಂದು ಎರಡು ಶಬ್ದಗಳನ್ನು ಉಚ್ಚರಿಸಲಿಕ್ಕೆ ಬಂದರೇನೆ ತಮಗೆ ಸಿ. ಐ. ಇ. ಕೆ. ಸಿ. ಎಸ್. ಐ. ಜಿ. ಸಿ. ಎಸ್. ಐ. ಆನರೇಬಲ್ ಮುಂತಾದ ಪ್ರಶಸ್ತಿಗಳು ಲಭಿಸುವವೆಂದೂ, ಅವಿಲ್ಲದಿದ್ದರೆ ತಮಗೆ [illegible]" ತಿಳಿದುಕೊಂಡಿದ್ದಾರೆ. ಸ್ವತಃ ಅರಸರೆನ್ನಿಸಿ ಕೊಂಡವರಿಗೆ ಈ ಬಿರುದುಗಳಿಂದ ಪ್ರಯೋಜನವೇನು? ರಾಜ ಶಬ್ದಕ್ಕೆ ಪ್ರಕಾಶಿಸುವನೆಂದು ಅರ್ಥವು. ಅಂತಾ ಪ್ರಕಾಶವು ಸ್ವಜಗಳಾದ ಸದ್ಗುಣಗಳಿಂದಲೂ, ಗೌರವ ಪ್ರಾಶಸ್ತ್ಯಗಳಿಂದಲೂ, ಆಭಿಜಾತ್ಯದಿಂದಲೂ ವುಂಟಾಗಬೇಕಾದದ್ದಾಗಿರುತಿದೆಯಲ್ಲದೆ ರಾಜತ್ವವು ಕೇವಲ ಮೇಲೆ ಕಂಡ ಪ್ರಾಶಸ್ತ್ಯಗಳಿಂದ ವುಂಟಾಗಲಾರದು. ಇವುಗಳೆಲ್ಲವೂ ಸಾಮಾನ್ಯರಲ್ಲೊಬ್ಬನಿಗೆ ವಿಶೇಷತ್ವವನ್ನುಂಟುಮಾಡತಕ್ಕವಾಗಿರುತಿವೆ. ಇಂತವುಗಳನ್ನು ನಮ್ಮ ಸಂಸ್ಥಾನಾಧಿಪತಿಗಳು ಆಶಿಸಿ ಅದಕ್ಕಾಗಿ ಪರಹೃದಯೋಲ್ಲಾಸಾರ್ಥ ಸ್ವನಿಷ್ಠೆಯನ್ನರಿಯದೆ ವರ್ತಿಸುವದು ಅವರ ಗೌರವಕ್ಕೆ ಕೊರತೆಯೆಂದು ಭಾವಿಸಲ್ಪಡದಿರಲಿಲ್ಲವು. ಸಾಮಾನ್ಯರಂತೆ ನಡಸಿದರೆ ತಮ್ಮ ಸೌಲಭ್ಯ ಸೂಚಕವಂತಲೂ, ಇದೇ ತಾವು ಕಲಿತ ನಾಗರಿಕತನಕ್ಕೆ ಲಕ್ಷಣವೆಂತಲೂ ನಮ್ಮ ಸಂಸ್ಥಾನಾಧಿಪತಿಗಳೆನ್ನವೂ ಅಭಿಪ್ರಾಯಪಟ್ಟಿರುತ್ತಾರೆ. ಇಂತಾ ಭಾವ ಅವರಿಗೆ ಉಂಟಾದದರಿಂದ ತಮ್ಮ ಪ್ರಾಜ್ಯತ್ವಕ್ಕೆ ಸ್ವತಃ ಹಾನಿಕಾರಕವಾಗಿಯೂ [illegible] ಮಾಡಿಕೊಂಡಂತೆ ಆಗುತಿದೆ. ಆಗಿಂದಾಗ್ಯೆ ಇಂಗ್ಲಾಂಡಿಗೆ ಹೋಗಿಬರುವದರ ಮೂಲಕ ತಾವು ನವನಾಗರಿಕರೆಂತಲೂ, ಬ್ರಿಟಿಷ್ ಆಳ್ವಿಕೆಯಲ್ಲಿ ಭಕ್ತಿಯುಳ್ಳವರೆಂತಲೂ, ಮಹಾರಾಜ್ಞೀಯವರಲ್ಲಿ ತಮಗಿರುವ ರಾಜಭಕ್ತಿ ವಿಶ್ವಾಸಸೂಚಕವೆಂತಲೂ ತಿಳಿದಿದ್ದಾರೆ. ಈ ಇಂಡಿಯಾದೇಶದಲ್ಲಿ ಆಸೇತು ಹಿಮಾಚಲದ ತನಕ ದರ್ಶನೀಯಗಳಾದ ಸ್ಥಾನಗಳು ಅನೇಕವಾಗಿರುತಿವೆ. ಇವುಗಳನ್ನು ಯಾವನಾದರೊಬ್ಬನು ನೋಡುವನಾದರೆ ಆತನಿಗೆ ಈ ಇಂಡ್ಯದೇಶದ ಪ್ರಾಚೀನ ವೈಭವವೂ, ಜನಗಳ [illegible], ಕುಂದಿರುವ ಅವರ ಪ್ರಾಭವವೂ, ಅವರ ಶಿಲ್ಪಕಲಾಕೌಶಲ್ಯಗಳೂ, ವ್ಯಕ್ತವಾಗದಿರಲಾರವು. ಇವುಗಳನ್ನು ನೋಡ

ಬೇಕೆಂಬ ಅಪೇಕ್ಷೆಯಾಗಲಿ ತಿಳಿಯಕೊಳ್ಳಬೇಕೆಂಬ ಅಕ್ಕರೆಯಾಗಲಿ ನಮ್ಮ ಸಂಸ್ಥಾನಾಧಿಪತಿಗಳೊಬ್ಬರಿಗೂ ಇಲ್ಲವೆಂತಲೂ, ನಮ್ಮ ದೇಶದಸ್ಥಿತಿಯನ್ನು ನೋಡುವಬಗ್ಯೆ ಐದಂಪರ್ವೇಣ ಅನ್ಯದೇಶಗಳಿಂದ ಇಲ್ಲಿಗೆಬರುವಾಗ್ಯೆ ಇಲ್ಲಿನವರು ಅನ್ಯರಾಜ್ಯಗಳಿಗೆ ಹೋಗುವವರು ನೋಡಿದರೆ ಎಲ್ಲರೂ ಗೋಕರ್ಣಕ್ಕೆ ಹೋದರೆ ಗೋಕರ್ಣದವರು ಗಾಳಕ್ಕೆ ಹೊರಡುವಂತಿದೆಯೆಂತಲೂ, ಇದನ್ನು ನಮ್ಮ ಸಂಸ್ಥಾನಾಧಿಪತಿಗಳೆಲ್ಲರೂ ನಿದಾನಿಸಿ ಪರ್ಯಾಲೋಚಿಸಬೇಕೆಂತಲೂ ಕನ್ನಡ ಸುವಾರ್ತಾಪತ್ರಿಕೆಯು ಪಟ್ಟ ಅಭಿಪ್ರಾಯ ಶ್ಲಾಘಿಸತಕ್ಕದ್ದಾಗಿರುತಿದೆ.

BANGALORE.

ಈದೇಶದಸ್ಥಿತಿಯು ಪೂರ್ವಕ್ಕಿಂತಲೂ ಈಗ ಅನೇಕ ಕಾರಣಗಳಿಂದ ಭಿನ್ನಿಸಿರುತಿದೆಂಬದಕ್ಕೆ ಅವರವರ ಅನುಭವವೇ ಸಾಕಾದ ದೃಷ್ಟಾಂತವಾಗಿರುತಿದೆ. ಇಂತಾ ಸ್ಥಿತಿವಿಪರ್ಯಯಕ್ಕೆ ಋತುಧರ್ಮಗಳು ವೈಪರೀತ್ಯವನ್ನು ಹೊಂದಿದ್ದೂ, ಭೂಗುಣವು ಭಿನ್ನಿಸಿದ್ದೂ, ಬೇಕಾದ ಫಲವು ಫಲಿಸದೆಹೋದದ್ದೂ, ದೇಶದ ಉತ್ಪತ್ತಿಗೆ ಅನುಗುಣವಾದ ಪ್ರಜೆಗಳಿಗಿಂತಅಧಿಕವಾಗಿನಾನಾದೇಶಗಳಿಂದ ಇಲ್ಲಿಗೆಬಂದು ಕಾಯಮವಾಗಿ ನೆಲೆಸಿದ್ದೂ, ಈ ಕಾರಣಗಳಿಂದು ತೋರುತಿದೆ ಭೂಮಿಯ ಗುಣವೂ ತನ್ಮೂಲಕ ಅವರ ಫಲವೂ ಯಾವಾಗ ಕಡಮೆಯಾದವೋ ಆಗ ಗಿರಾಕಿಯೆಂಬದು ಸ್ವಭಾವದ ಅಧಿಕವಾಗುತಬಂತು. ಜನಗಳಿಗೆ ತಾಪತ್ರಯಗಳೂ, ಪದಾರ್ಥ ದೌರ್ಲಭ್ಯವೂ, ಅರ್ಥಾತುರತ್ವವೂ ಅಧಿಕವಾಗುತ ಬಂದುದೆಲ್ಲ ಕೃತ್ರಿಮಗಳೂ ದುರಾಲೋಚನೆಗಳೂ ಅಧಿಕವಾಗುತಬರುತಲಿವೆ. ಇವುಗಳಿಂದ ಕದಾಚಿತ್ ಇತರರಿಗೆ ಒಂದುಹಾನಿಯುಂಟಾಗದಿರುವದುಂಟು. ಮತ್ತು ಏತನ್ಮೂಲಕ ಅವರು ಪ್ರಬಲಾನರ್ಥಗಳಿಗೆ ವಿಷಯರಾಗುವದೂವುಂಟು. ಆದರೆ ಸದರೀಜನಗಳ ಕೃತ್ರಿಮ ದುರಾಲೋಚನೆಗಳನ್ನು ಕಂಡುಹಿಡದು ತಕ್ಕಪ್ರತಿಕ್ರಿಯೆಯುಂ ಮಾಡದೆಹೋಗುವದರಿಂದ ಅವು ಜಾಸ್ತಿಯಾಗಿ ನಾನಾವಿಧ ಕೆಡಕುಗಳು ಪುಂಟಾಗಲಿಕ್ಕೆ ಕಾರಣವಾಗುವದರಿಂದ ಅವು ಸ್ವಲ್ಪ ಇದರಡಿ ತಿಳಿಸುವೆವು. ಈವೂರಲ್ಲಿ ಅಪ್ಪಟವಾದ ತುಪ್ಪವು ದುರ್ಲಭವಾಗಿರುವದರಿಂದ ಶೇಲಂ ವಗೈರೆ ಪ್ರಾಂತಗಳಿಂದ ಇಲ್ಲಿಗೆ ಬರುತಲಿದೆ. ಆದರೆ ಇದರಗುಣವನ್ನು ಅಜಮಾಯಿಷೀಮಾಡಿ ನೋಡಲಾಗಿ ಒಳ್ಳೇಯೆಣ್ಣೆಯನ್ನಾದರೂ ಹರಳೆಣ್ಣೆಯನ್ನಾದರೂ ನಾಲ್ಕರಲ್ಲೊಂದುಭಾಗಬೆರಸಿ ಬುದ್ಧಿಗಳನ್ನು ಭರ್ತೀಮಾಡಿ ಕಳುಹಿಸುವಂತೆ ಏರ್ಪಟ್ಟಿತು. ಧನಪಿಶಾಚಗಳಾದ ಇಲ್ಲಿನ ವರ್ತಕರ ಕುತ್ಸಿತೋಪಾಯವನ್ನರಿಯದೆಯೋ ಅರಿತು ಅದಂ ಕೇಳಲಾರದೆಯೋ, ಅವರ ದಾಕ್ಷಿಣ್ಯಕ್ಕೋಳಗಾಗಿ ಖಂಡಿಸಲಿಕ್ಕೆ ಇಷ್ಟವಿಲ್ಲದೆಯೂ, ಅದೂ ದೊರೆಯುವದಿಲ್ಲವಲ್ಲಾ ಎಂಬ ಜಿಗುಪ್ಸೆಯೊತನೆಯೋ, ಕ್ರಯವು ಸುಲಭವಾಗಿದೆಯಲ್ಲಾ ಎಂಬ ಆಶೆಯಿಂದಲೊ ಜನಗಳು ನಿರ್ವಿಚಾರವಾಗಿ ತೆಗದುಕೊಂಡು ಹೋಗುತ್ತಾರೆ. ಆದರೆ ಇಂತಾ ತಮ್ಮ ಅವಿವೇಕದಿಂ ಬಳಕ ಪುಂಟಾಗುವ ಅನರ್ಥಗಳನ್ನು ಸಹಿಸಿಕೊಂಡು ಸುಮ್ಮನಿರುತ್ತಾರೆಯೇ ಅಂದರೆ ಹಾಗಿಲ್ಲದೆ ತಾವು ರೋಗದ ಕುಪರೆಗಳಿಂದ ಸಂಕಟಪಡುವಂತೆ ಗೋಳಾಡುತ್ತಾರೆ. ಯದ್ಯಪಿ ಈಗ ಬಜಾರ್‌ನಲ್ಲಿ ದೊರೆಯುವ ತುಪ್ಪವು ಜನಗಳಿಗೆ ರೋಗನಿಮಿತ್ತಕವಾಗಿದೆ ಯೆಂಬದರೊಳಿಷ್ಟುಮಾತ್ರವೂ ಸಂಶಯವಿಲ್ಲವು. ಈಗ ಕಂಟೋನ್ಮೆಂಟ್ ಮತ್ತು ಈ ಪೇಟೆ ಮಾರ್ಕೆಟುಗಳಲ್ಲಿ ನೆಲಗೊಂಡಿರುವ ಪದ್ಧತಿಯಂತೆ, ಡಾಮೇಜ್ ಪದಾರ್ಥಗಳನ್ನು ಬಿಕರೀ ಮಾಡಕೊಡದೆಂಬ ನಿರ್ಬಂಧ ಪುಂಟುಮಾಡಿ, ಇವುಗಳ ವಿಚಾರಣೆಗಾಗಿ ಪ್ರಾಮಾಣಿಕನಾದ ಒಬ್ಬ ಸೂಪರ್‌ವೈಜರನ್ನು ಮ್ಯೂನಿಸಿಪಾಲಿಟಿಯವರು ಮೊಕರರ್ಮಾಡಬೇಕಲ್ಲದೆ ಆತನ ಮೂಲಕ ಈ ಪೇಟೆ ಮಂಡೀಪೇಟೆಯಲ್ಲಿರುವ ವಿಶಿಷ್ಟ ಪದಾರ್ಥಗಳನ್ನೂ ಅಜಮಾಯಿಷೀ ಮಾಡಿಸಿ ಡಾಮೇಜ್ ಎಂದು ಕಂಡುಬಂದವನ್ನೆಲ್ಲ ಕೂಡಲೇ ಆಚೇ ಸಾಗಿಸತಕ್ಕದ್ದೆಂಬ ನಿಬಂಧನೆಯನ್ನುಂಟು ಮಾಡಿದರೆ ಜನಗಳಿಗೆ ವಿಶೇಷ ಅನುಕೂಲ್ಯವನ್ನು ಕಲ್ಪಿಸಿದಂತೆ ಯಾಗುವದು. ಹಿಂದೆ ಒಂದು ಸಂದರ್ಭದಲ್ಲಿ ಇದೇರೀತಿ ವರ್ತಕರು ಡ್ಯಾಮೇಜ್ ತುಪ್ಪವನ್ನಿಟ್ಟುಕೊಂಡು ವಿಕ್ರಯಿಸುತಲಿದ್ದ ಅಂಶ ಮ್ಯಾಜಿಸ್ಟ್ರೇಟರಿಗೆ ತಿಳಿಯಬಂದದರ ಮೇಲೆ ಅವರು ಖುದ್ದು ನಿಂತುಕೊಂಡು ಅಂತಾ ಪದಾರ್ಥಗಳನ್ನು ಚರಂಡಿಗಳಲ್ಲಿ ಚೆಲ್ಲಿಸಿಬಿಟ್ಟರು. ಪ್ರಾಮುಕಾಲದಲ್ಲಿ ದುಡ್ಡಾಶೆಯೊಡನೆ ಈಪೇಟೆ ವರ್ತಕರಲ್ಲಿ ಕೆಲವರು, ಮುಗ್ಗಿಹೋಗಿದ್ದ ಅಕ್ಕಿಯನ್ನು ಮಾರುತಲಿದ್ದ ಅಂಶವು ಹೊರಗಾಗಿ ಅವರು ಕ್ರಿಮಿನಲ್ ತರಫೆ ದಂಡಿಸಲ್ಪಟ್ಟ ಅಂಶವು ಮಂಡೀಪೇಟೆಯವರ ಜ್ಞಾಪಕದೊಳಿರಬಹುದೆಂದು ನಂಬುತ್ತೇವೆ. ಹೀಗಿದ್ದಾಗ್ಯೂ ಈ ದುಷ್ಪದ್ಧತಿಯನ್ನು ಪೋಲೀಸಿನವರಾಗಲಿ, ಮ್ಯೂನಿಸಿಪಾಲಿಟಿಯವರಾಗಲಿ ನೋಟಿಸ್ಸಿಗೆ ತೆಗದುಕೊಳ್ಳದೆ ಉದಾಸೀನರಾಗಿರಲಿಕ್ಕೇನುಕಾರಣವೋ ತಿಳಿಯಲಿಲ್ಲವು. ಏತೇನನಾವುಮೇಲೆ ತಿಳಿಸಿದಂತೆ ಮಂಡೀದಾರರ ದಾಕ್ಷಿಣ್ಯಕ್ಕೆ ಒಳಪಡದಂತಾವರನ್ನು ಮೊಕರರ್ಮಾಡಿ ಅವರ ಮರ್ಯಾದೆಯನ್ನು ಕ್ರಮಪಡಿಸಿದರೆ ಎಲ್ಲರಿಗೂ, ಕ್ಷೇಮವುಂಟಾಗುವದು.

MEDICAL TREATMENT.

ವೈದ್ಯವಿಷಯದಲ್ಲಿನೇಟಿವ್‌ಗಳಿಗೂ ಯೂರೋಪಿಯನ್ನರಿಗೂ ಬಹಳವ್ಯತ್ಯಾಸವಿರುತಿದೆ. ಪ್ರಾ ಮತ್ತು ಗರ್ಭಿಣೀ ಚಿಕಿತ್ಸೆಗಳಿರತರದಲ್ಲಿ ಮಾತ್ರ ಯೂರೋಪಿಯನ್ನರ ಪಾಂಡಿತ್ಯವು ಪ್ರಶಂಸಿಸಲ್ಪಡತಕ್ಕದ್ದೇಹೊರ್ತು ಔಷಧ ಪ್ರಯೋಗವಿಷಯದಲ್ಲಿ ನೇಕತಾ ನಾಟಕ್ಕಿಂತ ಅಧಿಕವಾಗಿ ಅವರಪ್ರಯತ್ನವು ವಿಫಲಗಳಾಗುತಿವೆ. ತತ್ರಾಪಿಹಿಂದು, ಮಹೋದರ, ರಾಜಯಕ್ಷ್ಮ, ಬೃಹದ್ರೋಗಮುಂತಾದ ಕೆಲವುಪ್ರಬಲ ರೋಗಗಳಿಗೆ ಇಂಗ್ಲಿಷಿನವರಲ್ಲಿ ನಮಗೆ ತಿಳದಮಟ್ಟಿಗೆ ಯೋಗ್ಯಗಳಾದ ಔಷಧಗಳಿರುವಂತೆ ತೋರಲಿಲ್ಲವು. ಶಾಸ್ತ್ರಜನ್ಯಜ್ಞಾನದಿಂದ ಚಿಕಿತ್ಸೆಯಬಗ್ಯೆ ಕದಾಚಿತ್ ಅವರು ಪ್ರವರ್ತಿಸಿದಾಗ್ಯೂ ಅವರ ಪ್ರಯತ್ನವು ಪ್ರಾಯೇಣ ಸಫಲವಾಗುವದಿಲ್ಲವು. ಯೂರೋಪಿಯನ್ನರ ದೃಷ್ಟ್ಯಾ ಹಿಂದೂ ಚಿಕಿತ್ಸೆಯು ನಿಕೃಷ್ಟತ್ವೇನ ತೋರಬಂದಾಗ್ಯೂ ಅವರು ಅಸಾಧ್ಯವೆಂದು ಭಾವಿಸಿಬಿಟ್ಟಂತಾ ರೋಗಗಳನ್ನೆಲ್ಲ ನೇಟಿವ್‌ಗಳು ಅವಲೀಲೆಯಾಗಿ ವಾಸಿಮಾಡಿ ಕೀರ್ತಿಯಂ ಪಡೆದದಕ್ಕೆ ನಮ್ಮ ಅನುಭವವೇ ಸಾಕಾದದ್ದಾಗಿರುತಿದೆ. ರಸಗಂಧಕ ಪಾಷಾಣಗಳನ್ನು ಅಗ್ನಿಮುಖದಲ್ಲಿ ಮಿತ್ರವರ್ಗದಿಂ ಶುದ್ಧಿಮಾಡಿ ಪ್ರಯೋಗಿಸುವಷ್ಟು ಸಾಮರ್ಥ್ಯವು ಈಗಿನ ಡಾಂಭಿಕರಾದ ವೈದ್ಯರಿಗೆ ಪ್ರಾಯೇಣ ಇಲ್ಲದಿರುವದರಿಂದಲೂ, ಪದಾರ್ಥ ಸಂಯೋಜನ ಕ್ರಮವನ್ನರಿಯದೆ ಮನಸ್ಸಿ ಚಿಕಿತ್ಸೆ ಮಾಡುತಬರುವವರಿಂದಲೂ ನಮ್ಮ ವೈದ್ಯಕ್ಕೆ ಸ್ವಲ್ಪ ಅಪಪ್ರಥೆಯುಂಟಾಯಿತೇಹೊರ್ತು ಇಲ್ಲದಿದ್ದರೆ ಇದು ಯಾವ ಭಾಗದಲ್ಲಿಯೂ ಇತರ ಚಿಕಿತ್ಸೆಗಳಿಗೆ ನ್ಯೂನವಾಗಿರಲಾರದು. ಅಜ್ಞಾನಾದ ನೇಟಿವಿನ ಚಿಕಿತ್ಸೆಯಿಂದ ರೋಗಿಯು ಬಹುಕಾಲ ನರಳುತಿರ್ದರೆ ಸಮರ್ಥನಾದ ಇಂಗ್ಲಿಷಿನವನ ಚಿಕಿತ್ಸೆಯಲ್ಲಿ ರೋಗಿಯ ಶ್ರಮವು ಉತ್ತರಕ್ಷಣದಲ್ಲೇ ಆತ್ಯಂತಿಕವಾಗಿ ನಿವಾರಣವಾಗುವದು. ನೇಟಿವ್ ವೈದ್ಯನು ತನ್ನ ಯಾವ ಚಿಕಿತ್ಸೆಯನ್ನು ವಿನಿಯೋಗಿಸಿ ನೋಡಿ ಕಡೆಗೆ ಸಾಧ್ಯವಾಗದೆ ತನಗೆ ಅವಮಾನ ಪುಂಟಾಗುವ ಸಂದರ್ಭವಾಗಿದ್ದರೆ ಮರಳಿ ತನ್ನ ಮುಖತೋರಿಸದೆ ಕಣ್ಮರೆಯಾಗಿಬಿಡುವನು. ಯೂರೋಪಿಯನ್ ಡಾಕ್ಟರೊಬ್ಬನು ಅಂತಾ ಸಂದರ್ಭದಲ್ಲಿ ತನಗೆ ಪುಂಟಾಗತಕ್ಕ ಅಪಪ್ರಥೆಗಿಂತಲೂ ರೋಗಿಯ ಪ್ರಾಣವನ್ನು ತೃಣವಾಗಿ ಭಾವಿಸುವನು. ರೋಗ ನಿವಾರಣಾನಂತರ ರೋಗಿಯು ಮಾಡುವ ಯಥೋಚಿತ ಸನ್ಮಾನದಿಂ ನೇಟಿವ್‌ಚಿಕಿತ್ಸಕನುತೃಪ್ತನಾಗುವನು. ಯೂರೋಪಿಯನ್ ಡಾಕ್ಟರಾದರೋ ಬಹಿರಂಗವಾಗಿ ಯಾಚಿಸದೆಯೇ ರೋಗಿಯನ್ನ ಅನುಪವನ್ನಾಗಿಮಾಡಿ ನೋಡುವರು. ಇದಕ್ಕೆ ಆಧಾರವಾಗಿ ಜ್ಞಾನವಯೋವೃದ್ಧರಾದ ರಾಜಾ ಸರ್. ಟಿ. ಮಾಧವರಾಯರವರು ತಿಳಿಸಿದ ವಾಕ್ಯವನ್ನು ಇದರಡಿ ಅನುವಾದ ಮಾಡುತ್ತೇವೇನಂದರೆ-ಒಬ್ಬ ಯೂರೋಪಿಯನ್ ದೊಡ್ಡಮನುಷ್ಯನು ರಕ್ತಭೇದಿಯಿಂದ ಬಹುಕಾಲವಾಗಿ ಶ್ರಮಪಡುತ ಅನೇಕ ಡಾಕ್ಟರ್‌ಗಳಬಳಿ ಚಿಕಿತ್ಸೆ ಮಾಡಿಕೊಂಡಾಗ್ಯೂ ಅದು ಆತನಿಗೆ, ಗುಣವಾಗದೆ ಹೋಗಲು ಕೊನೆಗೆ ಒಬ್ಬ ನೇಟಿವ್‌ವೈದ್ಯನು ಬಿಲ್ವಫಲದಲ್ಲಿ ಮಾಡಿಕೊಟ್ಟ ಔಷಧದಿಂ ಸುಲಭವಾಗಿ ವಾಸಿಮಾಡಿದನು. ಒಬ್ಬಹುಡಿಗಿಗೆ ಎರಡುಕಿವಿಗಳ ಮೇಲೂ ದುರ್ಮಾಂಸಬೆಳೆಯುತಬರಲು ಸಮರ್ಥರೆನಿಸಿಕೊಂಡಿರುವ ಯೂರೋಪಿಯನ್‌ಡಾಕ್ಟರ್ ಅವಳಿಗೆ ಜ್ಞಾನವಂ ತಪ್ಪಿಸಿ, ಸದರೀ ಮಾಂಸಖಂಡವನ್ನು ಕತ್ತರಿಸಿಬಿಟ್ಟರು, ಪರಂತು ತಾವನ್ಮಾತ್ರಕ್ಕೆ ಅದು ವಾಸಿಯಾಗದೆ ಮೊದಲಿಗಿಂತ ಅಧಿಕವಾಗಿ ಬೆಳೆಯುತ ಬಂದದರಿಂದ ನೇಟಿವ್ ವೈದ್ಯನೊಬ್ಬನು ಯಾವದೋ ಒಂದುವಿಧ ಮೂಲಿಕೆಯ ರಸವಿಂದ ನಿಶ್ಶೇಷವಾಗಿ ಗುಣಮಾಡಿದನು. ಬಾಣಂತಿ ಯೊಬ್ಬಳ ಸ್ತನ್ಯವು ಕಟ್ಟಿಕೊಂಡು ಅದರಿಂದ ಅವಳು ಬಹುಶ್ರಮಪಡುತ ಲಿದ್ದಾಗ ಯೂರೋಪಿಯನ್ ಡಾಕ್ಟರೊಬ್ಬನು ಸ್ತನ್ಯದಮೇಲೆ ಶಸ್ತ್ರ ಮಾಡಬೇಕೆಂದು ಹೇಳದಮಾತನ್ನು ಸಮೀಪದೊಳಿದ್ದ ಒಬ್ಬ ನೇಟಿವ್ ಕೇಳನಕ್ಕನು. ಬಳಕ ಅವನು ಸದರೀ ಡಾಕ್ಟರ್‌ಮುಂದೆಯೇ ಮಲ್ಲಿಗೆಹೂವನ್ನು ತರಿಸಿ ಎದೆಯಮೇಲಿಟ್ಟುಕಟ್ಟಲು ಸ್ವಲ್ಪಹೊತ್ತಿನೊಳಗಾಗಿ ಕಟ್ಟಿದ್ದಸ್ತನ್ಯವು ಕರಗಿ ಅವಳ ಶ್ರಮನಿವಾರಣವಾಯಿತು, ಎಂಬದು. ಇಂತಾವೂ ಕದ್ದಮೆಗಳು ಯಷ್ಟೋಯಿರುತಿವೆ, ಆದರೆ ನಮ್ಮನವನಾಗರಿಕರು ನೇಟಿವ್ ವೈದ್ಯವನ್ನು ದೂಷಿಸದಿದ್ದರೆಅದನ್ನು ಅವರು ಪುರಸ್ಕರಿಸಿದಷ್ಟು ಪುಣ್ಯವುಂಟಾಗುವದು.

Occasional Notes
ನೈಮಿತ್ತಿಕವಿಷಯನ್ಯಾಸ

The Chief Secretary to Government ಮದರಾಸ್ ಗವರ್ನರಾದ ಮೆ॥ ಗ್ರ್ಯಾಂಟ್ ಡಫ್‌ಯವರು ಉದ್ಯೋಗದಲ್ಲಿರಬೇಕಾದಕಾಲತ್ತಕಾಲವು ಪೂರೈಸುವದಕ್ಕೆ ಸರಿಯಾಗಿ ಅಥವಾ ಅದರೊಳಗಾಗಿ ಗವರ್ನಮೆಂಟ್ ಚೀಫ್ ಸೆಕ್ರಿಟೆರಿಯಾದ ಆನರೆಬಿಲ್ ಇ.ಎಫ್. ವೆಬ್‌ಸ್ಟರ್‌ಯೆಂಬವರು ತಮ್ಮ ಕೆಲಸದಿಂದ ನಿವೃತ್ತರಾಗುವರೆಂತಲೂ, ಅವರಿಗೆ ಬದಲಾಗಿ ಆನರೆಬಿಲ್ ಜಸ್ಟಿಸ್‌ಹಚಿನ್ಸ್‌ಯೆಂಬವರು ಮೊಕರರಾಗುವರೆಂತಲೂ ತಿಳಿಯಬರುತಿದೆ.

The London exhibition.—ಈಚೆಗೆಲಂಡನ್ ಪಟ್ಟಣದೊಳು ನಡೆದವಿವಿಧವಸ್ತು ಪ್ರದರ್ಶಕಸಭೆಗೆ ಇಂಡಿಯಾದೇಶದ ಆಯಾಸಂಸ್ಥಾನಾಧಿಪತಿಗಳು ಕಳುಹಿಸಿದ ಶ್ಲಾಘ್ಯಗಳಾದ ಪದಾರ್ಥಗಳಿಗಾಗಿ ಅವರೆಲ್ಲರಿಗೂ ತಾವು ವಂದನೆ ಮಾಡುವಂತೆ ಸದರೀ ಸಭಾಧಿಪರಾದ ಪ್ರಿನ್ಸ್‌ಆಫ್‌ವೇಲ್ಸ್‌ರವರು ವೈಸ್‌ರಾಯಿಯವರ ಮೂಲಕ ತಿಳಿಯಪಡಿಸಿರುತ್ತಾರೆಂದು ಕೇಳುತ್ತೇವೆ. ಪಟ್ಟಶ್ರಮವೂ ಅನುಭವಿಸಿದ ನಷ್ಟವೂ ಶೀರ್ಷಕವಾದವು ಮುಖಸ್ತುತಿಗೆ ಮಗ್ನರಾಗತಕ್ಕ ನಮ್ಮ ಸಂಸ್ಥಾನಾಧಿಪತಿಗಳಿಗೆ ಇದಕ್ಕಿಂತಲೂಬೇಕಾದ್ದೇನಿರುವದು.

An advise.—ರಾಜಾ ಸರ್. ಟಿ ಮಾಧವರಾಯರವರು ಇಂಡ್ಯದೇಶೀಯರನ್ನು ಕುರಿತು ತಿಳಿಸುತ್ತಾರೇನಂದರೆ. ಆಂಗ್ಲೇಯರು, ಈಇಂಡ್ಯಸಂಬಂಧವನ್ನು ನಿವೃತ್ತಿಸಿಕೊಂಡು ಹೋಗುವರೆಂದು ಭಾವಿಸುವದು ಹುಚ್ಚುತನವಲ್ಲದೆ ಬೇರೇಯಲ್ಲವು. ಅವರ ಸಹಾಯವಿಲ್ಲದೆ ಈ ದೇಶವನ್ನುನಾವುಪಾಲಿಸುವೆ ವೆಂಬದು ಕೇವಲ ಭ್ರಾಂತಿರೂಪವಾಗಿರುತಿವೆ. ಇಂಗ್ಲಿಷಿನವರು ಇಲ್ಲಿಂದ ಫಲವನ್ನನುಭವಿಸದೆ ಈ ದೇಶವನ್ನು ಪಾಲಿಸಿ ಶ್ರಮಪಡಿಸಬೇಕೆಂಬದು ಮತ್ತೂ ಅಸಂಗತವಾಗಿರುತಿದೆ. ಬಲಹೀನರಾದ ನಾವು ಬಲಿಷ್ಠರಿಗೆ ವಿಧೇಯರಾಗಿರುತ ಪ್ರಯೋಜನವನ್ನು ಅನುಭವಿಸ ಬೇಕೇಹೊರ್ತು ಗವರ್ನ್ ಮೆಂಟಿನವರ ಮೇಲೆ ಪ್ರತಿಭಟಿಸಿ ಪ್ರಯೋಜನ ವಿಲ್ಲವೆಂಬದು.

Bachelors in London.—ತತ್ಕಾಲದಲ್ಲಿಲಂಡನ್ ಪಟ್ಟಣದೊಳು ೮,೦೦,೦೦೦ ಮಂದಿ ಅವಿವಾಹಿತರಾದವರು ಇದಾರೆಂತಲೂ, ಇವರನ್ನು ಸಾಕಿಗೊಳಿಸಿ ನಿಲಿಸಿದರೆ ೧೫೦ ಮೈಲಿಗಳ ಫಾಸಲೆ ಹಿಡಿಯುವದೆಂತಲೂ, ಮದರಾಸ್ ಪತ್ರಿಕೆಯೊಂದು ತಿಳಿಸುತಿದೆ. ಲಂಡನ್ ಪಟ್ಟಣದಲ್ಲಿ ಇದಕ್ಕೆ ಅನುಗುಣವಾಗಿ ಗುಡಿಶೆಟ್ಟಿಯರ ಸಂಖ್ಯೆಯೂ ಅಪರಿಮಿತವಾಗಿರುವಂತೆ ತಿಳಿಯಬರುವದರಿಂದ ಅವರೆಲ್ಲರನ್ನೂ ಸದರೀ ಬ್ರಹ್ಮಚಾರಿಗಳ ಯೆದುರುಪಾರ್ಶ್ವದೊಳು ಸಾಲಾಗಿ ನಿಲ್ಲಿಸಿದರೆ ಆಗ ಉಭಯ ಪಾರ್ಶ್ವದೊಳು ನಿಂತು ಬ್ರಿಟಿಷ್‌ಸುಶೀಲತೆಗೆ ಅಭಿವಾದನ ಮಾಡುವದಕ್ಕೆ ಅನುಕೂಲವಾಗಿರುವದು.

A native orderly.—ಬಂಗಾಳಿಯ ೧೧ನೇ ರೈಡಿ ಇರ್ರೆಗ್ಯುಲರ್‌ಯಲ್ಲಿ ಮೇಜರ್ (ರಿಸಾಲ್‌ದಾರ್) ಯಾಗಿದ್ದ ನಿಜಾಮುದ್ದೀನ್ ಖಾನ್‌ಎಂಬವರನ್ನು, ಶ್ರೀಮನ್ಮಹಾರಾಜ್ಞಿಯ ಪುತ್ರರಾದ ಪ್ರಿನ್ಸ್‌ಆಫ್‌ವೇಲ್ಸ್‌ರವರು ತಮ್ಮಬಳಿಇಂದು ಆರ್ಡರ್ಲೀ (ಜವಾನ) ಕೆಲಸದೊಳಿಟ್ಟುಕೊಂಡರೆಂದು ತಿಳಿಯಬರುತಿದೆ ನೇಟಿವ್‌ಗಳಲ್ಲಿ ಅಭಿಮಾನವಿದೆಯೆಂಬ ಅಂಶವನ್ನು ತೋರಿಸಿದಂತೆಯೂ ಇರಬೇಕು. ನೇಟಿವ್‌ಗಳು ಜವಾನಕೆಲಸಕ್ಕೆ ಲಾಯಖಾದವರೆಂಬ ಮನೋಭಾವವನ್ನು ವ್ಯಕ್ತಪಡಿಸಿದಂತೆಯೂ ಇರಬೇಕೆಂಬ ಆಲೋಚನೆಯೊಡನೆ ಮಾಡಲ್ಪಟ್ಟ ಏರ್ಪಾಡಾಗಿ ತೋರುತಿದೆ. ಆದರೆ ನೇಟಿವ್‌ಗಳ ಸಹಾಯವಿಲ್ಲದೆ ಒಂದುದಿನ ಸಹ ಜೀವಿಸಲೊಲ್ಲರೆಂಬ ವಿಷಯ ಇದರಿಂದ ಸಂಪೂರ್ಣವಾಗಿ ದೃಢಪಟ್ಟಿತೆಂದು ಯಾತಕ್ಕೆ ಹೇಳಬಾರದು.

Mr. Stevens.—ಮೆಸ್ಟರ್ ಸ್ಟೀವೆನ್ಸ್‌ಯೆಂಬೊಬ್ಬ ಇಂಗ್ಲಿಷ್ ದೊಡ್ಡಮನುಷ್ಯರು ಇಲ್ಲಿಯೆಲ್ಲರಿಂದಲೂ ಸಾಧಾರಣವಾಗಿ ಉಪಯೋಗಿಸಲ್ಪಡುತಲಿರುವ ಬೈಸಿಕಿಲ್ ಅಂದರೆ, ದ್ವಿನೇಮಿಮೇರ ಕ್ರಮವಾಗಿ ಭೂ ಪ್ರದಕ್ಷಿಣಮಾಡಿಕೊಂಡು ಆಫ್‌ಘಾನಿಸ್ತಾನಿಗೆ ಬಂದಾಗ್ಯೆ ಅಲ್ಲಿನವರು ಅವರನ್ನು ತಮ್ಮದೇಶದೊಳಗೆಬಿಡದೆ, ಹಾಗೆಯೇ ಓಡಿಸಿಬಿಟ್ಟರೆಂದು ತಿಳಿಯಬರುತಿದೆ. ಬೈಸಿಕಿಲ್ ಮೇಲೆಕುಳಿತು ಸಂಚರಿಸತಕ್ಕವನಿಗಾದರಾರ್ಥ್ಯದಂತೆಲ್ಲ ಅದು ವೇಗವುಳ್ಳದ್ದಾಗಿರುತಿದೆ. ಒಳ್ಳೆಯ ಅಭ್ಯಾಸವುಳ್ಳವನುಇದರಲ್ಲಿಕುಳಿತುರೈಲ್‌ಗಾಡಿಗೆಸಮಾನ ವೇಗದೊಡನೆ ಸಂಚರಿಸುತ್ತಾನೆಂಬದಕ್ಕೆ ಅನೇಕ ದೃಷ್ಟಾಂತಗಳಿರುತಿವೆ. ಪರಂತು ಮೆಸ್ಟರ್ ಸ್ಟೀವೆನ್ಸ್‌ಯೆಂಬವರು ಕೇವಲ ಬೈಸಿಕಿಲ್ ನಿಂದಲೇ ಭೂಪ್ರದಕ್ಷಿಣ ಮಾಡಿಕೊಂಡುಬಂದರೆಂದು ಹೇಳುವಾಗ್ಯೆ ಜಲಪ್ರದೇಶಗಳಲ್ಲಿ ಯೇನು ಮಾಡಿದರೂ ಅದು ಗೊತ್ತಾಗಲಿಲ್ಲವು.

Municipal officials.—ಮ್ಯೂನಿಸಿಪಾಲಿಟಿಗಳಿಗೆ ಸಂಬಂಧಪಟ್ಟ ನೌಕರರ ವಿಷಯದೊಳು ಮದರಾಸ್ ಗವರ್ನಮೆಂಟಿನವರು ಈಚೆಗೆ ಒಂದುಹುಕುಂ ಮಾಡಿರುತ್ತಾರೆಂದು ಮದರಾಸ್ ಪತ್ರಿಕೆಯೊಂದು ತಿಳಿಸುತ್ತೇನಂದರೆ,-ಮಾಹೇಯಾನಾ ೫೦ರೂಪಾಯಿಗಳ ಸಂಬಳವುಳ್ಳ ನೌಕರಿಗಳು ಭರ್ತೀಮಾಡಲ್ಪಡುವ ಸಂದರ್ಭಗಳಲ್ಲೆಲ್ಲ ಸದರೀವಿಷಯವನ್ನು ಬೋರ್ಡಿನವರು ಗವರ್ನಮೆಂಟಿನವರಿಗೆ ಮಂಜೂರಾತಿಯಬಗ್ಯೆ ತಿಳಿಸತಕ್ಕದ್ದೆಂತಲೂ, ಮ್ಯೂನಿಸಿಪಲ್ ಪ್ರಸಿಡೆಂಟರು ಬೋರ್ಡ್ ನೌಕರರನ್ನು ತಗ್ಗೆರ್‌ಮಾಡಲಿಕ್ಕೂ, ಅವರಿಗೆಜುಲ್ಮಾನೇಹಾಕಲಿಕ್ಕೂ,ಸ್ವಾತಂತ್ರ್ಯವುಳ್ಳವರಾಗಿರುತ್ತಾರೆಂತಲೂ, ಹಾಗೆ ಒಂದಾವರ್ತಿ ದಂಡಿಸಲ್ಪಟ್ಟವನು ಮ್ಯೂನಿಸಿಪಲ್ ಕೌನ್ಸಿಲಿಗೆ ಅಪೀಲ್‌ಮಾಡಿಕೊಳ್ಳಬಹುದೆಂತಲೂ, ಇಂಥಾ

ವಿಷಯಗಳಾಗಲಿ, ಅದಕ್ಕೆ ಮೇಲ್ಪಟ್ಟಾಗಲಿ ತಲಬುಳ್ಳ ನೌಕರರು, ಗವರ್ನಮೆಂಟಗೆ ಕೂಡಾ ಅಪೀಲ್ ಮಾಡಿಕೊಳ್ಳಬಹುದೆಂತಲೂ, ಅಂತಾ ಅಪೀಲುಗಳು ಪ್ರೆಸಿಡೆಂಟರವರು ಹುಕುಂ ಮಾಡಿದ ಮೂರು ತಿಂಗಳಿಗೆ ಒಳಪಟ್ಟವಾಗಿರತಕ್ಕದ್ದೆಂತಲೂ, ಈ ನಿಬಂಧನೆಗಳು ಮೆಡಿಕಲ್ ಇಲಾಖಾ ನೌಕರರಿಗೆ ಅನ್ವಯಿಸುವದಿಲ್ಲವೆಂತಲೂ ನಿಬಂಧನೆ ಮಾಡಿರುತ್ತಾರೆ. ಇಂತಾ ಅವಿವೇಕಗಳಿಗೆ ನಮ್ಮ ಮೈಸೂರು ಗವರ್ನಮೆಂಟನವರು ಸುತರಾಂ ಅವಕಾಶಕೊಡಲಾರರು.

Court Decrees.—ತಿರುವಾಂಕೂರು ಕೊಚ್ಚಿ ಸಂಸ್ಥಾನಗಳ ಕೋರ್ಟ್ ಡಿಕ್ರಿಗಳು ಬ್ರಿಟಿಷ್ ಗವರ್ನಮೆಂಟಿನಲ್ಲಿಯೂ, ಅಲ್ಲಿನ ಡಿಕ್ರಿಗಳು ಸದರೀ ಸಂಸ್ಥಾನಗಳಲ್ಲಿಯೂ ಜಾರೀ ಮಾಡಲ್ಪಡುವ ವಿಷಯದಲ್ಲಿ ಮದರಾಸ್ ಹೈಕೋರ್ಟಿನವರು ತಯಾರ್ಮಾಡಿದ ಕೆಲವು ನಿಬಂಧನೆಗಳನ್ನು ಮದರಾಸ್ ಗವರ್ನಮೆಂಟನವರು ಮಂಜೂರ್ಮಾಡಿರುವಂತೆ ತಿಳಿಯಬರುತ್ತದೆ. ಈ ಕ್ರಮವು ಈ ಸಂಸ್ಥಾನಕ್ಕೆ ಆವಶ್ಯಕವಾದ್ದೆಂದು ಜನಗಳು ಎಣಿಸಬೇಕಾಗಿದ್ದಿತು. ಯಾತಕ್ಕೆಂದರೆ, [illegible] ಜ್ಯವು ಶ್ರೀಮನ್ ಮಹಾರಾಜರವರಿಗೆ ಒಪ್ಪಿಸಲ್ಪಟ್ಟು ಐದು ವರುಷಗಳಾದಾಗ್ಯೂ ಇದವರಿಗೆ ಈ ಬಾಬಿನಲ್ಲಿ ಯಾವವಿಧ ವ್ಯತ್ಯಾಸವೂ ಇಲ್ಲದಂತೆ ಪೂರ್ವದ ಅವಳತವೇ ಉಳಿಸಲ್ಪಟ್ಟಿದೆ. ಪ್ರಜೆಗಳೆಲ್ಲ ನಿರ್ವಂಚನೆಯಾಗಿ ಇಲ್ಲಿನ ಕೋರ್ಟುಗಳನ್ನು ನಂಬುತ್ತಾರೆ. ಚೀಫ್ ಕೋರ್ಟಿನವರೂ ಅದಕ್ಕೆ ತಕ್ಕಂತೆಯೇ ಇದ್ದಾರೆ.

Fifty five years order.—ಪ್ರತಿ ಸಂವತ್ಸರದ ಫೆಬ್ರವರಿ ತಿಂಗಳ ಗುರ್ಶ್ರೀ ತಾರೀಖಿನಲ್ಲಿ, ಮುಂದಿನ ಸರ್ಕಾರೀ ಸಾಲಿಗೆ ೫೫ ವರುಷಗಳ ವಯಸ್ಸು ಪೂರೈಸುವ ದರೋಬಸ್ತು ಸರ್ಕಾರಿ ನೌಕರರ ಹೆಸರಿನ ಪಟ್ಟಿಯನ್ನು ಅಕೌಂಟಂಟ್ ಜನರಲ್ಲರವರಿಗೆ ತಪಾಸು ಇಲಾಖೆಯವರೂ ಕಳುಹಿಸಬೇಕೆಂದು ಮದರಾಸ್ ಗವರ್ನಮೆಂಟನವರು ಹುಕುಂ ಮಾಡಿರುತ್ತಾರೆಂದು ತಿಳಿಯಬರುತ್ತದೆ. ಮೈಸೂರು ಸರ್ಕಾರದಲ್ಲಿ ಹೀಗೆ ೫೫ ವರುಷಗಳ ವಯಸ್ಸಿಗೆ ಮೇಲ್ಪಟ್ಟಿರುವವರು ಸಾಹೆಬ್ [illegible] ನವರ ಕಾಲದಲ್ಲಿ ಬಹಳವಾಗಿ ಬಾಧಿಸಲ್ಪಡುತ್ತಲಿದ್ದರು. ಈಚೆಗೆ ನೇಟಿವ್ ಒಡೆತನದಲ್ಲಿ ಇಂತಾ ಬದಲಾವಣೆಗೆ ಸ್ವಲ್ಪವೂ ಅವಕಾಶವಿಲ್ಲವಾಯಿತು. ರಾಜಭಕ್ತಿಯೊಂದಿರುವ ಪಕ್ಷಕ್ಕೆ ಯಾವತೋಂದರೆಗಳೂ ಕಾಣಲಿಯವಲ್ಲವು.

Nepal.—ನೇಪಾಳ ದೇಶದ ರಾಜಧಾನಿಯಾದ ಕಾಟಮಾಂಡುವಿಗೆ ಹೋಗಿದ್ದವನೊಬ್ಬನು ಆ ದೇಶದ ಸ್ಥಿತಿಯನ್ನು ಕುರಿತು ಒಂದಾನೊಂದು ಪತ್ರಿಕೆಗೆ ಬರೆಯುತ್ತಾನೆನುದರೆ—ನಾನು ನೇಪಾಳದೇಶದಲ್ಲಿ ಒಂದು ತಿಂಗಳಿಗಿಂತ ಜಾಸ್ತಿಯಾಗಿದ್ದು ನೋಡಿದ್ದರಲ್ಲಿ ನನ್ನ ದೃಷ್ಟಿಗೆ ಗೋಚರವಾದದ್ದೇನೆಂದರೆ, ಯೂರೋಪಿಯನ್ ನಾಗರಿಕತೆಗೆ ಸಂಬಂಧಪಟ್ಟ ಮದ್ಯಪಾನವೂ, ಜವಾಬ್ದಾರೀತನವೂ ನೇಪಾಳ ರಾಜ್ಯದೊಳಗೆ ತನ್ನೆಲ್ಲಿ ಇದರೂ ಕಣ್ಣಿಗೆ ಕಾಣಿಸುವದಿಲ್ಲವು. ಅಲ್ಲಿನ ಜನಗಳು ಸನ್ಮಾರ್ಗ ಪ್ರವರ್ತಕರಾಗಿ ನಿತ್ಯಸುಖವನ್ನನುಭವಿಸುತ್ತಿದ್ದಾರೆ. ತಪ್ಪುಸಕ್ಕಾರಗಳೊಂದೂನಡೆಯುವದಿಲ್ಲವು. ಮನುಷ್ಯರಿಗೆ ಅಪಕಾರಿಯಾದ ಕಂದೆಗಳು ದಾರಾಳವಾದ ಸುರಾಪಾನಕ್ಕೆ ಅವಕಾಶಕೊಡುತ್ತಾರೆ. ವರ್ತಕರು ಬಹು ಸತ್ಯಪ್ರವರ್ತಕರಾಗಿರುವವರಿಂದ ದಿನ ದಿನಕ್ಕೂ ಹೊಸ ಹೊಸ ಪದಾರ್ಥಗಳನ್ನ ಬೆರಸಿ ವಿಕ್ರಯಿಸುವದಿಲ್ಲವು, ಎಂಬದು. ಅವರಿಯೊಳು ಇಂತಾ ಪದ್ಧತಿಯೇ ನವತ್ರನೆಲಗೊಂಡಿತ್ತು. ಈಚೆಗೆ, ಆಂಗ್ಲ ಪಾಶ್ಚಿಮಾತ್ಯರ ನಾಗರಿಕತೆಯಿಂದ ನಾವು ಆಕ್ರಾಂತರಾದಮೇಲೆ ನಮ್ಮ ಮತಾಚಾರಗಳೂ, ಧರ್ಮನೀತಿಗಳೂ ಕ್ಷೀಣಗತಿಯನ್ನೈದುತ ಬರುವದಕ್ಕೆ ಪ್ರಾರಂಭವಾಯಿತು.

Kabulees.—ಕಾಬೂಲ್‍ದೇಶಕ್ಕೆ ಸೇರಿದ ಪೆಷಾವರ್ ಪಟ್ಟಣದಲ್ಲಿರುವವರಿಗೆ ರತ್ನಕಂಬಳಿ ತಯಾರ್ಮಾಡುವದವೇ ಮುಖ್ಯಕಸಬಾಗಿ ಏರ್ಪಟ್ಟಿದೆಯೆಂತಲೂ, ಈ ಕಂಬಳಿಗಳನ್ನು ಪ್ರಾಯಶಃ ಅಲ್ಲಿನ ಸ್ತ್ರೀಯರೇ ತಯಾರ್ಮಾಡುತ್ತಾರೆಂತಲೂ ತಿಳಿಯಬರುತ್ತಿದೆ. ಅವಿವಾಹಿತರಾದ ಅಲ್ಲಿನ ಹುಡುಗಿಯರು, ವಿವಾಹಾನುತರ ತಮ್ಮ ಪತಿಯ ಉಪಭೋಗಾರ್ಥ ಮುಂದಾಗಿ ಒಂದು ರತ್ನಕಂಬಳಿಯನ್ನು ತಯಾರ್ಮಾಡಿಟ್ಟದ್ದು ಬಳಿಕ ಸಂಗಡ ತೆಗದುಕೊಂಡು ಹೋಗುವ ಪದ್ಧತಿಯೊಂದು ನೆಲಗೊಂಡಿದೆಯಲ್ಲದೆ ಇದು ಉಪೇಕ್ಷಿಸಿದರೆ ಪ್ರಬಲ ಅಮರ್ಯಾದೆಯೆಂದು ಭಾವಿಸಲ್ಪಡುತ್ತದಂತೆ. ಈ ದೇಶದಲ್ಲಾದರೋ ವಿವಾಹಾನುತರ ಪತಿಗೃಹದಲ್ಲಿ ಯೋಗ್ಯ ಸಾರ್ಥಕವೇಕಾದ ನೃತ್ಯಗೀತ ವಾದ್ಯಾದಿಗಳನ್ನು ಕನ್ಯಾದಶೆಯೊಳು ಕಲಿತು ಸಮರ್ಥರೆನಿಸಿಕೊಂಡು ಪತಿಗೃಹಕ್ಕೆ ಹೋಗುವವಾಡಿಕೆ ಈಚೆಗೆ ತಲೆದೋರಿದೆ. ಅವರೊಂದುವೇಳೆ ಗಾನವಿದ್ಯಾ ಪ್ರವೀಣರಾಗಿ ಬಾರದಿದ್ದೊಡೆ ನಾಗರಿಕತನಕ್ಕೆ ಬಹಳ ಕೊರತೆಯೊಂದು ಪತಿಯಿಂದ ಭಾವಿಸಲ್ಪಡುತಿದೆ. ಕದಾಚಿತ್ ಉತ್ತಾನಪತಿಯು ಇವರ ಸ್ತ್ರೀಯನ್ನು ಪರಿಭಾವಿಸಿ ಪುರಸ್ಕರಿಸಲು ಅನನುಕೂಲನೆಂದು ಕಂಡುಬಂದರೆ ಅನರುತೆಯೆಂದು ಇದ್ದಬಾವಕಡೆಗೆ ಹೋಗುವಣ ಸಹ ಸತ್ಪತಿ ಆಚರಣೆಯೊಳು ಬಾರದಿರಲಿಲ್ಲವು. ಗಾಂಧಾರದೇಶದ ಸ್ತ್ರೀಯರಿಗೂ ಕರ್ಣಾಟಕದೇಶದ ಸ್ತ್ರೀಯರಿಗೂ ಉಂಟಾಗಿರತಕ್ಕ ಭೇದಗಳಲ್ಲಿಕ ಇದೊಂದೇ ಕೇವಲ ಪ್ರಾಧಾನ್ಯವಾಗಿರುತ್ತದೆ.

LOCAL AND POLITICAL NEWS.
ಒಳದೇಶ ಮತ್ತು ರಾಜ್ಯಕಾರ್ಯಾತ್ಮ ವೃತ್ತಾಂತಗಳು.

Establishment of a Market.—ಕುಣಿಗಲ್ ತಾಲ್ಲೂಕು ಅಮೃತೂರಲ್ಲಿ ಪ್ರತಿಶನಿವಾರವೂ ನಡೆಯುವಂತೆ ಸಂತೆಯೊಂದು ಏರ್ಪಾಡಾದಂತೆ ಕೇಳುತ್ತೇವೆ.

Gift to Government.—ನಾಗಮಂಗಲ ತಾಲೂಕು ಅಮಲ್ದಾರರವರು ಹಿಂದುಸ್ಥಾನೀ ಸ್ಕೂಲಿನ ಉಪಯೋಗದ ಬಗ್ಯೆ ಒಂದು ಮನೆಯನ್ನು ಮೈಸೂರು ಸರ್ಕಾರಕ್ಕೆ ಇನಾಮಾಗಿ ಕೊಟ್ಟರೆಂತಲೂ ಗವರ್ನಮೆಂಟನವರು ಅದು ಅಂಗೀಕರಿಸಿದರೆಂತಲೂ ತಿಳಿಯಬರುತಿದೆ.

Re-opening of the Central College ಬೇಸಿಗೆಯ ಬಗ್ಯೆ ಇಲ್ಲಿನ ಸೆಂಟ್ರಲ್‍ಕಾಲೇಜ್ ಐದು ವಾರಗಳ ಮೊದಲು ಮುಚ್ಚಲ್ಪಟ್ಟಿದ್ದದ್ದು ಸರಿಯಷ್ಟೆ. ಸದರೀ ರಜಾ ನಿನ್ನೆಯ ದಿನ ಪೂರ್ತಿಯಾದದರಿಂದ ಈ ದಿನ ಮರಳಿ ತೆಗೆಯಲ್ಪಟ್ಟು ಪಾಠಪ್ರವಚನಗಳಿಗೆ ಪ್ರಾರಂಭವಾಗುವದು.

A new paper.—ಈವೂರು ಲಷ್ಕರ್‍ನಲ್ಲಿ "ಈವನಿಂಗ್ ಮೆಯಿಲ್" ಎಂಬ ಹೆಸರಿನಿಂದ ಹೊಸದಾಗಿ ಯೊಂದು ಇಂಗ್ಲೀಷ್ ವೃತ್ತಾಂತ ಪತ್ರಿಕೆಯು ಈ ತಿಂಗಳ ಮೊದಲು ವಾರಕ್ಕೆ ಮೂರಾವರ್ತಿ ಪ್ರಕಟಿಸಲ್ಪಡುವಂತೆ ಏರ್ಪಾಡಾಗಿರುವದಾಗಿ ಹಿಂದೆ ತಿಳಿಸಿಯಿದ್ದೆವಷ್ಟೆ. ಪರಂತು ಕೆಲವು ಅನಾನುಕೂಲಗಳಿಂದ ಹಾಗೆ ನಡೆಯದೆ ಈ ದಿನ ಮೊದಲು ಪ್ರಕಟವಾಗಬರುವದೆಂದು ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಯ ಮೂಲಕ ತಿಳಿಯಬರುತಿದೆ.

Mr. J. B. Lyall.—ಈ ಸಂಸ್ಥಾನದ ಕಾಮೀಷನರಾದ ಮಿ|| ಜೆ. ಬಿ. ಲೈಯಲ್‍ರವರು ತಮ್ಮ ರಜಾವನ್ನು ಪೂರ್ತಿಮಾಡಿಕೊಂಡು ಗತ ಬುಧವಾರದ ದಿನ ಪ್ರಾತಃಕಾಲ ಈ ಸ್ಥಳಕ್ಕೆ ಬಂದು ಅಷ್ಟರ ವರೆಗೆ ತಮ್ಮ ಕೆಲಸದ ಚಾರ್ಜನ್ನು ವಹಿಸಿಕೊಂಡರು. ಸದರೀಯವರ ಕೆಲಸವನ್ನು ನಡಸಿಕೊಂಡಿದ್ದ ಮಿ|| ಸಿ. ಇ. ಆರ್ ಗರ್ಡಿಸನ್ ರವರು ಈ ತಿಂಗಳ ೩೧ನೇ ತಾರೀಖ್ ಪ್ರವಾಸ ಹೊರಡುವರೆಂದು, ಅಲ್ಲಿ ಕೆಲವು ದಿನಗಳು ಇದ್ದು ಮರಳಿ ನೇಪಾಳಕ್ಕೆ ಹೋಗುವರು.

Amalgamation of Middle School classes.—ಇಲ್ಲಿನ ಸೆಂಟ್ರಲ್‍ಕಾಲೇಜಿನಲ್ಲಿ ಮಿಡಲ್ ಸ್ಕೂಲ್ ತರಗತಿಗಳು ಇದುವರೆಗೆ ಯೆರಡು ಇದ್ದವಷ್ಟೆ. ಹಿಂದೆ ನಾವು ತಿಳಿಸಿದ್ದ ಮೇರೆ ಅವುಗಳ ಮಾಸ್ಟರುಗಳಲ್ಲಿ ಒಬ್ಬರಿಗೆ ಜೇಲು ಇಲಾಖೆಗೆ ವರ್ಗವಾದದರಿಂದಲೂ, ಮಿಡ್ಲ್‍ಸ್ಕೂಲ್ ತರಗತಿಗಳನ್ನು ಮುಂದೆ ಪ್ರತ್ಯೇಕವಾಗಿ ತೆಗೆಯಬೇಕೆಂಬ ಯೋಚನೆ ಗವರ್ನಮೆಂಟನವರಿಗೆ ಉಂಟಾಗಿರುವದರಿಂದಲೂ, ಸದರೀ ಯೆರಡು ತರಗತಿಗಳೂ ಒಂದಾಗಿ ಸೇರಿಸಲ್ಪಟ್ಟು ಒಬ್ಬ ಮಾಸ್ಟರ ವಿಚಾರಣೆಯೊಳಗಿಡಲ್ಪಡುವದೆಂದು ಕೇಳುತ್ತೇವೆ.

A strange birth.—ಈಗ್ಯೆ ಒಂದೆರಡು ದಿನಗಳ ಹಿಂದೆ ಈವೂರು ಕೋಳೆಯಲ್ಲಿರುವ ಬಲಗೈ ಜಾತಿಯವಳೊಬ್ಬಳು ಗರ್ಭಿಣಿಯಾಗಿದ್ದು ಒಂದು ಗಂಡುಮಗುವನ್ನು ಹಡದಳೆಂದು ತಿಳಿಯಬರುತಿದೆ. ಈ ಮಗುವಿನೊಳಿದ್ದ ಆಶ್ಚರ್ಯಾಂಶವೇನೆಂದರೆ—ಮಗುವಿನ ಹಣೆಯಮೇಲೆ, ಮುಚ್ಚಲ್ಪಟ್ಟ ಕಣ್ಣಿನ ಆಕಾರದಂತೆ ಒಂದು ರಂಧ್ರವಿತ್ತು. ಅದರ ಕಾಲುಗಳೆರಡೂ ಹೊಸೆದುಕೊಂಡಿದ್ದವು. ಈ ಮಗುವನ್ನು ನೋಡುವ ಉದ್ದೇಶದಿಂದನೆ ನೂರಾರು ಮಂದಿ ಗುಂಪುಕೂಡಿ ಸದರೀ ಹೆಂಗಸಿನಮನೆಗೆ ಹೋಗಿಬಂದರು. ಈಶ್ವರನು ಫಾಲಲೋಚನನಾದದರಿಂದಲೂ, ಈ ಮಗುವಿನ ಹಣೆಯ ಮೇಲೆ ಒಂದು ಕಣ್ಣಿಯಿರುವದರಿಂದಲೂ ಇದು ಸಾಮಾನ್ಯ ಶಿಶುವಲ್ಲವೆಂದು ಜನಗಳು ಹೇಳಿಕೊಂಡರು. ಆದರೆ ಆ ಮಗುವೂ ತನ್ನ ತಾಯಿಯಿಂದನೆ ಕೆಲವು ಘಂಟೆಗಳೊಳಗಾಗಿಯೇ ಮೃತವಾದ್ದರಿಂದ ಅದರ ಫಾಲನೇತ್ರವು ಅದನ್ನೇ ನಾಶಪಡಿಸಿತು.

House breaking and theft.—ಈವೂರು ಕೋಟೆಯಲ್ಲಿ ಬ್ರಿಟಿಷ್ ಸೋಲ್ಜರ್‍ಗಳ ಪಡಲೀ ಇರುತಲಿದ್ದ ತನಕ ಪ್ರಾಯಶಃ ಕಳವು ಮುಂತಾದವುಗಳಿಗೆ ಅವಕಾಶ ಕಡಮೆಯಾಗಿತ್ತು. ಈಚಿಗೆ ಸದರೀ ಪಡಲೀ ತಪ್ಪಿ ಅವಕ್ಕೆಬದಲು ಪೋಲೀಸ್ ಪಹರೇ ಯೇರ್ಪಾಡಾದದರಿಂದ ಹಗಲುಹೊತ್ತಿನಲ್ಲೇ ನಿರ್ಭಯವಾಗಿ ಕಳುವು ನಡೆಯಲಿಕ್ಕೆ ಪ್ರಾರಂಭವಾಯಿತು, ಹ್ಯಾಗೆಂದರೆ, ಗತ ಗುರುವಾರದದಿನ ಹಗಲು ಮೂರುಘಂಟೆಗೆ ರಾಘವೇಂದ್ರ ರಾಯರೆಂಬವರ ಮನೆಯವರು ತಮ್ಮ ಮನೆಯ ಬೀದಿಬಾಗಲಿಗೆ ಬೀಗಹಾಕಿಕೊಂಡು ಹೊರಗೆ ಹೋಗಿದ್ದಾಗ ಯಾರೋ ಬೀಗಒಡೆದು ಒಳಗೆನುಗ್ಗಿ ಕೆಲವು ಒಡವೆಗಳು, ಬಟ್ಟೆಗಳು, ಪಾತ್ರೆವಗ್ಯೆರೆ ಸಾಮಾನುಗಳು ಸೇರಿ ಸುಮಾರು ೫೦ ರೂಪಾಯಿಗಳ ಮಾಲ್‍ಗಳನ್ನು ಚೋರೀಮಾಡಿಕೊಂಡು ಹೋದಂತೆ ಕೋಟೆ ಸ್ಟೇಷನ್ ಪೋಲೀಸಿನವರಿಗೆ ರಿಪೋರ್ಟ್ ಮಾಡಿದಂತೆಯೂ, ಇದುವರೆವಿಗೆ ಕಳವು ಪತ್ತೇಯಾಗಲಿಲ್ಲವೆಂತಲೂ ಒಳದೇಶದ ನಮ್ಮ ಬಾತಮಿದಾರನ ಮೂಲಕ ತಿಳಿಯಬರುತದೆ.

University Statistics.—ಕಳೆದ ಡಿಸೆಂಬರ್ ತಿಂಗಳಲ್ಲಿ ನಡೆದ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ದರಖಾಸ್ತು ಮಾಡಿದ್ದ ೫,೪೯೨ ಮಂದಿ ವಿದ್ಯಾರ್ಥಿಗಳಲ್ಲಿಕ ೫,೪೦೫ ಮಂದಿ ಪರೀಕ್ಷಿಸಲ್ಪಟ್ಟು ಅದರಲ್ಲಿಕ ೧೪೯೫ ಮಂದಿ ತೇರ್ಗಡೆಯಾಗಿರುತ್ತಾರೆ. ಇದರಡಿ ಕಾಣಿಸುವ ಪಟ್ಟಿಯ ಮೂಲಕ ಆಯಾಯ ಜಾತಿಯವರಿಗೆ ಉಂಟಾಗಿರುವ ಬುದ್ಧಿಕುಶಲತೆಯೂ ವಿದ್ಯಾಭ್ಯಾಸದ ವಿಷಯದಲ್ಲಿನ ಆಸಕ್ತಿಯೂ ವ್ಯಕ್ತವಾಗುತಿದೆ.

	ಪರೀಕ್ಷಿಸಲ್ಪಟ್ಟವರು	ತೇರ್ಗಡೆಯಾದವರು
ಬ್ರಾಹ್ಮಣರು	೩,೩೩೩	೧೧೯೮
ಇತರಜಾತಿಹಿಂದೂಗಳು	೧೩೩೪	೮೫೩
ಯೂರೋಪಿಯನ್ನರು	೬೦	೨೯
ಈಸ್ಟಿಂಡಿಯನ್ನರು	೧೧೨	೪೦
ನೇಟಿವ್‍ಕ್ರಿಶ್ಚಿಯನ್ನರು	೩೩೩	೧೫೩
ಮಹಮ್ಮದೀಯರು	೧೭೩	೩೧
ಪಾರ್ಸಿಗಳು	೯	೬

ಬೆಂಗಳೂರು ಕಿಲ್ಲೆಯಲ್ಲಿ ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿಯವರಿಗೆ ವ್ಯಯಸಂವತ್ಸರ ವೈಶಾಖಬಹುಳ ೩ ಬುಧವಾರ ರೋಹಿಣೀನಕ್ಷತ್ರ ದಕ್ಷಿಣಾಯನ ರಥವು, ಜ್ಯೇಷ್ಠಶುದ್ಧ ೧ ಗುರುವಾರ ಮೃಗಶಿರಾ ನಕ್ಷತ್ರದಲ್ಲಿ ಧ್ವಜಾರೋಹಣವು, ಈ ಶುದ್ಧ ೨ ಶುಕ್ರವಾರ ಹಂಸವಾಹನವು, ಶುದ್ಧ ೩ ಸ್ಥಿರವಾರ ಹನುಮಂತೋತ್ಸವವು, ಶುದ್ಧ ೪ ಭಾನುವಾರ ಶೇಷವಾಹನೋತ್ಸವವು, ಶುದ್ಧ ೫ ಸೋಮವಾರ ಆಶ್ಲೇಷಾನಕ್ಷತ್ರದಲ್ಲಿ ಕಲ್ಯಾಣೋತ್ಸವಾದ್ಯರ ಗರುಡೋತ್ಸವವು, ಶುದ್ಧ ೬ ಗಜೇಂದ್ರಮೋಕ್ಷವು, ಶುದ್ಧ ೮ ಬುಧವಾರ ಪುಬ್ಬಾನಕ್ಷತ್ರ ಕರ್ಕಾಟಕ ಲಗ್ನದಲ್ಲಿ ರಥೋತ್ಸವವು, ಶುದ್ಧ ೧೦ ಶುಕ್ರವಾರ ಹಸ್ತಾನಕ್ಷತ್ರದಲ್ಲಿ ತೀರ್ಥೋತ್ಸವವು, ಮಧ್ಯೆ ಆಗತಕ್ಕ ಉತ್ಸವಗಳ್ಯಾವತ್ತೂ ನಡಿಯುತ್ತವೆಯಾದ್ದರಿಂದ ತಮ್ಮ ತಮ್ಮ ಮಿತ್ರರೊಡನೆ ದೇವಸ್ಥಾನಕ್ಕೆ ದಯಮಾಡಬಂದು ದೇವರಸೇವೆಗಳನ್ನು ಮಾಡಿ ಮಾಡಿಸಿ ಪುಣ್ಯಕೀರ್ತಿಯನ್ನು ಪಡೆಯಬೇಕೆಂದು ಪ್ರಾರ್ಥಿಸುತ್ತೇವೆ. ಮೇಲೆ ಹೇಳಿದ ಉತ್ಸವಗಳಲ್ಲಿಕ ಹಂಸವಾಹನೋತ್ಸವವು, ಶೇಷವಾಹನೋತ್ಸವವು, ಹನುಮಂತವಾಹನೋತ್ಸವವು, ಈ ಮೂರನ್ನು ನಡೆಸುತಬಂದವರು ಯಾವದೋ ಒಂದು ಕಾರಣದ ಮೂಲಕ ಈಗ ಕೈಬಿಟ್ಟಿರುತ್ತಾರಾಗಿ ದೇವತಾಸೇವೆಯಲ್ಲಿ ಭಕ್ತಿವಿಶ್ವಾಸಗಳುಳ್ಳ ಉದಾರಸ್ವಭಾವದವರು ಮನಸ್ಕರಿಸಿ ಸದರೀ ಉತ್ಸವಗಳನ್ನು ನಡಸಿ ಕೀರ್ತಿಪ್ರತಿಷ್ಠೆಗಳು ಸಂಪಾದಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇವೆ.

TELEGRAPHIC SUMMARY
ತಂತಿವೃತ್ತಾಂತ ಸಂಗ್ರಹವು.

—:0:—

ಅಥೆನ್ಸ್, ೨೨ನೇ ಮೇ—ಗ್ರೀಕ್ ದೇಶದ ಸರಹದ್ದಿನಲ್ಲಿ ಸದರೀ ದೇಶದವರಿಗೂ ತುರ್ಕಿಯವರಿಗೂ ಯುದ್ಧವಾದದಕ್ಕೆ [illegible] ಕಾರಣವಾಗಿತ್ತು. ಅನಂತರ [illegible] ಪರಸ್ಪರ [illegible] ಮಾಡಿಕೊಂಡರು. ತುರ್ಕಿಯವರು [illegible] ಸ್ಥಾನದಲ್ಲಿ [illegible].

ಅಥೆನ್ಸ್, ೨೩ನೇ ಮೇ, ಪ್ರಾತಃಕಾಲ—ಗ್ರೀಕ್ ದೇಶದ ಸರಹದ್ದಿನಲ್ಲಿ [illegible] ನಿಲ್ಲಿಸಲ್ಪಟ್ಟಿದ್ದು [illegible] ಮರಳಿ ಪ್ರಾರಂಭವಾಗಿದೆ. [illegible] ಯುದ್ಧ ನಡೆಯುವ [illegible] ಗ್ರೀಕರಿಗೆ [illegible] ಪ್ರಬಲಕಷ್ಟ ಉಂಟಾಗಿದೆ.

ಅಥೆನ್ಸ್, ೨೩ನೇ ಮೇ ಸಾಯಂಕಾಲ—ಗ್ರೀಕ್ ಸರಹದ್ದಿನಲ್ಲಿ ಯುದ್ಧ ನಿಲ್ಲಿಸಲ್ಪಟ್ಟಿತು. ಈ ಯುದ್ಧಕ್ಕೆ ಕಾರಣ [illegible] ಅದ್ಯಾಪಿ ತಿಳಿಯಲ್ಪಡಲಿಲ್ಲವು. ಗ್ರೀಸ್ ದೇಶದ [illegible] ಕೊಡತಕ್ಕದೆಂದು ಹೇಳಿರುತ್ತಾರೆ.

ಅಥೆನ್ಸ್, ೨೪ನೇ ಮೇ—ಗ್ರೀಕ್ ಸರ್ಕಾರದವರು ೫೦,೦೦೦ ಸೇನೆಯನ್ನು ಒಡೆಯಬೇಕೆಂತಲೂ, ಗ್ರೀಕ್ ದೇಶದ ಸರಹದ್ದಿನಿಂದ ಸೈನ್ಯವನ್ನು [illegible] ಮರಳಿ ಕರೆಯಿಸಿಕೊಳ್ಳಬೇಕೆಂತಲೂ [illegible] ಪಾರ್ಲಿಮೆಂಟಿನಲ್ಲಿ [illegible].

ಲಂಡನ್, ೨೫ನೇ ಮೇ—[illegible] ಕಾರ್ಯದ ವಿಷಯದಲ್ಲಿ [illegible] ಎರಡನೇ [illegible] ಹೌಸ್ ಆಫ್ ಕಾಮನ್ಸ್ ಸಭೆಯವರು ೧೨೩ ಓಟ್‍ಗಳ ಅಭಿಪ್ರಾಯಕ್ಕೆ ವಿರುದ್ಧವಾಗಿ ೧೪೭ ಓಟ್‍ಗಳ ಅಧಿಕ್ಯದ ಮೂಲಕ [illegible].

ಲಂಡನ್, ೨೬ನೇ ಮೇ—ನಿನ್ನೆ ರಾತ್ರಿ ನಡೆದ [illegible] ಸಭೆಯಲ್ಲಿ [illegible] ನಿರಾಕರಿಸಲಾಯಿತು. ಮಿ|| ಗ್ಲಾಡ್‍ಸ್ಟನ್‍ರವರು ತಮ್ಮ ಅಭಿಪ್ರಾಯವನ್ನು ಒಪ್ಪುವರ [illegible] ಕ್ಕೆ ಅನುಕೂಲವಾಗಿ [illegible] ನಿರ್ಣಯಿಸಲ್ಪಟ್ಟಿತು.

ಇಂಗ್ಲಾಂಡಿನ ಅಂಡರ್ ಸೆಕ್ರೆಟರಿಯವರಾದ ಮಿ|| ಸ್ಟಾನ್‍ಹೋಪ್ [illegible] ರವರು, [illegible] ಜವಾಬ್‍ ಹೇಳುವಲ್ಲಿ [illegible] ಮಹಾರಾಜ [illegible] ದಲ್ಲಿ [illegible] ಮಾಡಲ್ಪಟ್ಟಿರೆಂದು [illegible].

ಅಥೆನ್ಸ್, ೨೫ನೇ ಮೇ—ಗ್ರೀಕ್ ಮತ್ತು ತುರ್ಕಿ ರಾಜ್ಯಗಳ [illegible], ಗ್ರೀಸ್ ಮತ್ತು ತುರ್ಕಿ ರಾಜ್ಯದ ಸರಹದ್ದಿನಿಂದ [illegible] ಕೊಟ್ಟಿರುತ್ತಾರೆ.

ಲಂಡನ್, ೨೬ನೇ ಮೇ—[illegible] ಒಂದು [illegible] ಇಂಡಿಯಾ ರಾಜ್ಯದಿಂದ [illegible] ಸಂತೆಗೆ [illegible] ಇಂಗ್ಲೆಂಡಿನ [illegible].

SUMMARY OF NEWS
ವೃತ್ತಾಂತ ಸಂಗ್ರಹವು

—:0:—

ಸುಮಿತ್ರಾ ದ್ವೀಪದಲ್ಲಿನ ಒಂದು ಬೆಟ್ಟಕ್ಕೆ ಬೆಂಕಿ ತಗಲಿ ಅದರಿಂದ ಕಫೀಲವೆಂಬ ಲೋಹದ ಬನಿಯೊಂದು ಆಬೆಟ್ಟದ ಮೇಲೆ ಇರುವಂತೆ ಗೊತ್ತಾಯಿತು. ಈಗ ಸರಕಾರದವರು ತಮ್ಮ ಇಂಜಿನಿಯರನನ್ನು ಅಲ್ಲಿಗೆ ಕಳುಹಿಸಿರುತ್ತಾರಂತೆ.

ಬೆಳಗಾಂ ನಲ್ಲಿರುವ ಮದರಾಸ್ ಪಟಾಲಮಿನ ಒಬ್ಬ ಶಿಪಾಯಿಯು ತನ್ನ ಹೆಂಡತಿಯನ್ನು

ಇನ್ನೊಬ್ಬ ಸ್ತ್ರೀಯನ್ನು ಸಹ ಕೊಂದು ಕಡೆಗೆ ತಾನೂ ಆತ್ಮಹತ್ಯೆ ಮಾಡಿಕೊಂಡನಂತೆ! ಸ್ತ್ರೀಯರ ಮೋಹನಾಶದ ಪರಿಣಾಮವು ಯಾವಾಗಲಾದರೂ ಕೆಡುಕಾಗದೆ ಇರದು.

ಕಲ್ಕತ್ತೆಯಲ್ಲಿ ಒಬ್ಬ ಹೆಂಗಸು ನಿತ್ಯದಂತೆ ಭಾವಿಯಿಂದ ನೀರು ಸೇದುವಾಗ ಕೊಡದೊಳಗಿನ ನೀರು ಬಿಸಿಯಾಗಿದ್ದು, ಅದರಿಂದ ಬರುವ ಬಿಸಿಯನ್ನು ಸಹಿಸಲಾರದೆ ಆಕೊಡವನ್ನು ಭಾವಿಯಲ್ಲಿ ಬಿಟ್ಟುಬಿಟ್ಟಳು. ಕೊಡವು ಹೋಗುತ್ತದೆಂದು ತಿಳಿದು ಅದನ್ನು ಮೇಲಕ್ಕೆ ಎತ್ತಲಿಕ್ಕಾಗಿ ಅವಳ ಗಂಡನು ಭಾವಿಯಲ್ಲಿ ಇಳಿಯಲು ಆ ಉಷ್ಣೋದಕದಿಂದ ಸುಟ್ಟು ಸತ್ತನು!!! ಅವನನ್ನು ತೆಗೆಯ ಬೇಕೆಂದು ಮತ್ತೊಬ್ಬನು ಇಳಿದನು; ಅವನಿಗೂ ಮೊದಲಿನವನ ಗತಿಯೇ ಆಯಿತು!!! ಇದ್ದಕ್ಕಿದ್ದಂತೆ ಭಾವಿಯೊಳಗಣ ನೀರು ಇಷ್ಟು ಬಿಸಿಯಾಗಲಿಕ್ಕೆ ಕಾರಣವೇನು? ಕಲಿಯುಗದ ಮಹಾತ್ಮ್ಯವೋ? ಕ. ಸು.

ಭರದ್ವಾನ್ ಜಿಲ್ಲೆಯ ಕಾಂಚನ ನಗರವೆಂಬ ಶಹರಿನಲ್ಲಿ ಪ್ರೇಮಚಂದ ಕರ್ಮಕರ್ ಎಂಬವನೊಬ್ಬನ ಪ್ರಸಿದ್ಧ ಕಾರ್ಖಾನೆಯುಂಟು. ಅಲ್ಲಿ ಅವನು ಚಾಕು, ಕತ್ತರಿ, ಚೂರಿ ಮೊದಲಾದ ಸಣ್ಣ ಹತ್ಯಾರುಗಳನ್ನು ಬಹಳ ಚೆನ್ನಾಗಿ ಮಾಡುತ್ತಾನೆ; ಅಲ್ಲಿನ ಸರಕಾರದಿಂದ ಅವನಿಗೆ ಸಹಾಯ ಸಹ ದೊರೆತಿರುತದೆ. ಇತ್ತಲಾಗಿ ಅವನಂತೆಯೇ ಗೌರೀ ಚರಣನೆಂಬ ಮತ್ತೊಬ್ಬನು ಇನ್ನೊಂದು ಕಾರ್ಖಾನೆಯನ್ನು ಇಟ್ಟು ವಿಲಾಯತಿ ನಮೂನೆಯಂತೆಯೇ ಚಾಕು ಮುಂತಾದವುಗಳನ್ನು ತಯಾರು ಮಾಡುತ್ತಾನೆ. ಇವನು ಮಾಡುವ ಚಾಕುಗಳು ಪ್ರತಿ ಒಂದು ವಿಷಯದಲ್ಲಿಯೂ ವಿಲಾಯತಿಯಲ್ಲಾಗುವ ರಾಜರ್ಸ್ ಚಾಕುಗಳಂತೆ ಇರುವದಲ್ಲದೆ ಇವುಗಳ ಕ್ರಯವು ಅವುಗಳಿಗಿಂದಲೂ ಬಹಳ ಕಡಮೆಯಾಗಿರುತಿದೆ. ಈ ಪ್ರಕಾರವಾಗಿ ಸ್ವದೇಶದಲ್ಲಿ ತಯಾರ್ಮಾಡಿದ ಸಾಮಾನುಗಳೇ ಬಹಳವಾಗಿ ವಿನಿಯೋಗಿಸಲ್ಪಟ್ಟರೆ ಸಿತದ್ದೇಶೀಯರಾದ ಕಸಬದಾರರಿಗೆಷ್ಟೋ ಉತ್ಸಾಹ ಉಂಟುಮಾಡಿದಂತೆ ಯಾಗುವದೆಂದು ಹೇಳುವ ಅಗತ್ಯವಿಲ್ಲವು.— ಕ. ಸು.

ಕೆಲವು ದಿವಸಗಳಿಂದೀಚೆಗೆ ಬಂಗಾಳೇ ಇಲಾಖೆಗೆ ಸೇರಿದ ಮೈಮನಸಿಂಗ್ ಎಂಬ ಜಿಲ್ಲೆಯೊಳಗಣ ಪಿಂಗಾಯೆಂಬ ಊರಲ್ಲಿ ಕೂಡಿದ ಸಭೆಯೊಳು ಈ ಕೆಳಗೆ ಕಂಡ ವಿಷಯಗಳಂ ಕುರಿತು ಸರಕಾರಕ್ಕೆ ಅರಿಕೆಮಾಡಿಕೊಳ್ಳಬೇಕೆಂದು ನಿರ್ಣಯಿಸಲ್ಪಟ್ಟಿರುತಿದೆ. (೧) ಸಿವಿಲ್‌ಸರ್ವಿಸ್ ಪರೀಕ್ಷೆಯ ಉಮೇದವಾರರ ವಯಸ್ಸು ೧೯ ಕ್ಕಿಂತಲೂ ಹೆಚ್ಚಿರಬಾರದೆಂಬ ನಿಯಮವನ್ನು ತಪ್ಪಿಸಿ ಅದಕ್ಕೆ ಬದಲು ಇಪ್ಪತ್ತೆರಡರ ಅವಧಿಯನ್ನು ಏರ್ಪಡಿಸಬೇಕು (೨) ನಮ್ಮದೇಶದ ಸೈನ್ಯವನ್ನು ವೃದ್ಧಿಪಡಿಸಲು ಆವಶ್ಯಕವಿಲ್ಲವು. (೩) ನಮ್ಮದೇಶಕ್ಕೆ ಕಾಡು ಮೃಗಗಳಬಾಧೆಯು ಹೆಚ್ಚಿರುವದರಿಂದ ಆಯುಧಗಳನ್ನು ಧರಿಸುವ ಸ್ವಾತಂತ್ರ್ಯವು ಅತ್ಯಾವಶ್ಯಕವಾಗಿರುವಕಾರಣ ತತ್ಸಂಬಂಧವಾದ ಆಕ್ಟನ್ನು ತೆಗೆದು ಹಾಕಬೇಕು. ಹಿಂದಾ ಸರಕಾರದಿಂದ ತೆಗೆದುಕೊಂಡ ಬರ್ಮಾದೇಶವನ್ನು ಹಿಂದುಸ್ಥಾನಕ್ಕೆ ಸೇರಿಸದೆ ಪ್ರತ್ಯೇಕ ಇಂದುಸ್ಥಾನ್ ಮಾಡಬೇಕು. ಹಿಂದುಸ್ಥಾನದ ಆಡಳಿತ ವಿಷಯದಲ್ಲಿ ವಿಚಾರ ಮಾಡಲಿಕ್ಕೆ ಯೋಗ್ಯವಾದ ಪಾರ್ಲಿಮೆಂಟ್ ಕಮಿಟಿಯನ್ನು ತ್ವರೆಯಾಗಿ ನೇಮಕ ಮಾಡಬೇಕು. ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಕೌನ್ಸಿಲ್ ಸಭೆಯನ್ನು ತೆಗೆದುಹಾಕಿ ಅದರಬದಲು ಪಾರ್ಲಿಮೆಂಟಿನ ಸಭೆಯ ಮೆಂಬರುಗಳ ಒಂದು ಸಭೆಯನ್ನೇರ್ಪಡಿಸಬೇಕು. ನ್ಯಾಯನಿರ್ಣಾಯಕ ಸಭೆಯ ಮೆಂಬರರಲ್ಲಿ ಕೆಲವರನ್ನು ಜನರು ಚುನಾಯಿಸುವ ಅಧಿಕಾರ ಉಂಟುಮಾಡಬೇಕು. ಪೊಲೀಸ್ ಇಲಾಖೆ ಮೇಲಧಿಕಾರಿಗಳ ಉದ್ಯೋಗಗಳನ್ನು ವಿದ್ಯಾವಂತರಿಗೆ ಕೊಟ್ಟು ಆ ಇಲಾಖೆಯನ್ನು ಕ್ರಮಪಡಿಸಬೇಕು. "ಮಹಾರಾಣಿಯವರಿಗೆ ಜಯ, ಜಯರಿಪನರೇಜಯ" ಎಂಬ ರಾಜಭಕ್ತಿಪ್ರದರ್ಶಕ ಘೋಷದೊಡನೆ ಸಭೆಯು ಬರಖಾಸ್ತಾಯಿತು. ಇಂತಾ ಸಭೆಗಳಿಗಾಗಿ ಸರಕಾರದವರು ವಿಶೇಷತಃ ಒಳ ಅಧಿಕಾರಸ್ಥರು ಬೀತಿಪಡುವದು ಆಶ್ಚರ್ಯವೇಸರಿ. ಇಂತಾ ಸಭೆಯಿಂದ ಸರಕಾರಕ್ಕೆ ಅಹಿತವುಂಟಾಗುವದಕ್ಕೆಬದಲು ಅವರ ಆಡಳಿತದಲ್ಲಿರುವ ಕೊರತೆಗಳನ್ನು ತಿಳಿದು ತಕ್ಕ ಏರ್ಪಾಡುಮಾಡಲಿಕ್ಕೆ ಸಾಧಕವಾಗುವದರಿಂದ ಈ ಸಭೆಗಳವಿಷಯವಾಗಿ ಸರಕಾರದವರು ಸಂತೋಷಪಡುವದು ಯೋಗ್ಯವು.

EXTRACTS

ವೈವಾಹಿಕ ಖರ್ಚುಗಳು.

ಬಿರಾರ್ ಪ್ರಾಂತದ ಕಾಯತ್ ಜಾತಿಯವರ ವಿದ್ಯಾವೃದ್ಧಿ ಸುಪತ್ರಗಳಲ್ಲಿ ಅನ್ಯರುಕೂ ಶ್ರೇಷ್ಠರೆನಿಸಿಕೊಳ್ಳದಿದ್ದಾಗ್ಯೂ ಅವರೀಗ ತಮ್ಮ ಜಾತಿ ಮತ ಸಂಪ್ರದಾಯಗಳಲ್ಲಿ ಏಕಮತ್ಯವೊಡನೆ ಕಲ್ಪಿಸಿಕೊಂಡಿರುವ ನಿಯಮಗಳು ಪ್ರಾಯಶಃ ಇತ್ಯವೆಯವರೆಲ್ಲರ ಅನುಷ್ಠಾನಕ್ಕೆ ಯೋಗ್ಯಗಳಾದವಾಗಿರುತಿವೆ. ಅವುಗಳ ಪೈಕಿ ವಿವಾಹ ಸಂಬಂಧವಾದ ವ್ಯಯ ಒಂದಾಗಿರುತಿದೆ. ವಿವಾಹಾರ್ಥ ಹೇರಳವಾಗಿ ಧನವ್ಯಯ ಮಾಡುವದನ್ನು ಪ್ರಮಾಣವನ್ನು ನಿಲ್ಲಿಸುವಬಗ್ಯೆ ಮೇಲೆಕಂಡವರು ಈಗ್ಯೆ ಕೆಲವುಕಾಲದ ಮೊದಲು ವಿಚಾರಮಾಡುತಲಿದ್ದು ಕಡೆಗೆ ಪ್ರತಿ ವಿವಾಹಕ್ಕೂ ೧೫ ರೂಪಾಯಿಗಳಿಗಿಂತ ಅಧಿಕವಾಗಿ ಧನವ್ಯಯ ಮಾಡಕೂಡದೆಂದು ನಿಶ್ಚಯ ಮಾಡಿದರೆಂದು ತಿಳಿಯಬರುತಿದೆ. ಈಗ್ಯೆ ಬಹುಕಾಲವಮೊದಲು ನಿರೂಢವಾಗಿರುವ ಈ ಸಂಪ್ರದಾಯವನ್ನು ಈಗ ನಿಲ್ಲಿಸಬೇಕಾದರೆ ಆಗಿನ ಜನಗಳ ಸ್ಥಿತಿ ಯನ್ನನುಸರಿಸಿ ಸರ್ಕಾರದವರ ಸಹಾಯ ಪಡೆದುವಿನಾ ಮತ್ಯಾವ ವಿಧದಿಂದಲೂ ಸಾಧ್ಯವಾಗಲಾರದೆಂದು ಅನೇಕರು ಅಭಿಪ್ರಾಯಪಡುತ್ತಾರೆ. ಆದರೆ ಇಂತಾ ದುಸ್ಸಂಪ್ರದಾಯವನ್ನು ಗವರ್ನಮೆಂಟಿನವರ ಸಹಾಯವನ್ನಪೇಕ್ಷಿಸದೆಯೇ ಆತ್ಯಂತಿಕವಾಗಿ ನಿಲ್ಲಿಸಬಹುದೆಂಬದಕ್ಕೆ ಬಿರಾರ್ ತುಕಡಿಯ ಕಾಯತ್ ಜಾತಿಯವರು ಮಾಡಿರುವ ಪ್ರಸಕ್ತ ನಿಬಂಧನೆಯೇ ಸಾಕಾದ ದೃಷ್ಟಾಂತವಾಗಿರುತಿದೆ. ಈ ಅತಿವ್ಯಯ ಪದ್ಧತಿಯು, ಕಾಯತ್ ಜನಗಳೊಬ್ಬರಲ್ಲಿಮಾತ್ರವೇ ನೆಲಗೊಂಡಿಲ್ಲವು. ಇಂಡ್ಯದೇಶದ ಸಕಲ ವರ್ಣದವರಲ್ಲಿಯೂ ವಿಪರೀತವಾದ ಪದ್ಧತಿಯಾಗಿ ಏರ್ಪಟ್ಟಿದೆ. ಇದರಿಂದ ಉಂಟಾಗತಕ್ಕ ಸಂಕಟಗಳನ್ನು ಜನಗಳು ಬಹುವಿಧದಿಂದ ಅನುಭವಿಸುತಲಿದ್ದಾಗ್ಯೂ ಅದರಿಂದ ವಿಮುಕ್ತರಾಗಬೇಕೆಂಬ ಆಲೋಚನೆಯು ಯಾರ ಮನದೊಳಗೂ ಅದ್ಯಾಪಿ ಹುಟ್ಟಿದಂತೆ ಕಾಣಿಸಲಿಲ್ಲವು. ಈ ದೇಶದ ಐಶ್ವರ್ಯವು ಈಗ ಪೂರ್ವಕ್ಕಿಂತಲೂ ಬಹಳಮಟ್ಟಿಗೆ ಕ್ಷೀಣದಶೆಯನ್ನೈದಿರುತಿದೆಂಬವನ್ನು ವಿವರಿಸಬೇಕಾದ ಆವಶ್ಯಕವಿಲ್ಲವು. ಆಯತಿಗೆ ತಕ್ಕಂತೆ ವ್ಯಯ ಮಾಡದೆ ಹೋದರೆ ಮುಂದಿನ ಸ್ಥಿತಿಯು ಶಂಕಿಸಬೇಕಾದ್ದಾಗಿರುವದು. ಜನರ ಆದಾಯಮಾರ್ಗಗಳು ಸಂಕುಚಿತಗಳಾಗಿ ವ್ಯಯ ಮಾರ್ಗಗಳು ವಿಶಾಲವಾಗಿರುತಿವೆ. ನಮ್ಮವರು ಅವಿಚಾರವಾಗಿ ಮಾಡತಕ್ಕ ಖರ್ಚುಗಳಪೈಕಿ ವಿವಾಹನಿಮಿತ್ತವಾದ ವ್ಯಯ ಮೊದಲಾಗಿರುತಿದೆ. ಈ ರೀತಿ ಖರ್ಚುಮಾಡುವದು ಆರೋಗ್ಯವೆಂಬ ಭಾವನೆಯೊಂದ ಕೆಲವು ಜನಗಳಿಗೆ ಇರುತಲಿದ್ದಾಗ್ಯೂ ದುರಭಿಮಾನದಿಂದಲೂ, ಅಜ್ಞಜನರ ಸ್ತೋತ್ರಕ್ಕೆ ಪಾತ್ರರಾಗಬೇಕೆಂಬ ಕೋರಿಕೆಯಿಂದಲೂ, ತಮ್ಮ ಮುಂದಿನ ಸ್ಥಿತಿಯನ್ನಾಲೋಚಿಸದೆ ತಮ್ಮ ಶಕ್ತಿಗೆ ಮೀರಿ ಮುಂದೆಮುಂದೆ ನೋಡದೆ ಅನಾವಶ್ಯಕವಾಗಿ ವ್ಯಯಮಾಡುವದು ಅನುತಾಪಕರವಾದ ವಿಷಯವಾಗಿರುತಿದೆಯಲ್ಲದೆ, ನಮ್ಮವರು ಅವಿಚಾರವರರೆಂಬದಕ್ಕೆ ಇದೊಂದು ದೃಷ್ಟಾಂತವಾಗಿ ಏರ್ಪಟ್ಟಿದೆ. ಒಂದು ವಿವಾಹಾರ್ಥ ಮಂಟಪ ನಿರ್ಮಾಣದ ಬಗ್ಯೆ ನೂರಾರು ರೂಪಾಯಿಗಳನ್ನು ವ್ಯರ್ಥವಾಗಿ ವ್ಯಯಮಾಡುವ ಸಂಪ್ರದಾಯವು ಪ್ರಾಯಶಃ ಎಲ್ಲರಲ್ಲಿಯೂ ನಿರೂಢವಾಗಿದೆ. ಈವಿಧಖರ್ಚು ಕೇವಲ ತಾತ್ಕಾಲಿಕವಾದ ಪ್ರತಿಷ್ಠಾರ್ಥವಲ್ಲದೆ ಬಳಿಕ ಇದರಿಂದ ಶಾಶ್ವತವಾದ ಪ್ರಯೋಜನ ಬೇರೆ ಉಂಟಾಗಲರಿಯದು. ಶಾಶ್ವತ ಫಲದಾಯಕಗಳಾದ ಮಾರ್ಗಗಳ್ಯಾವದಾದರೂ ಇದ್ದಲ್ಲಿ ಇದಕ್ಕಾಗಿ ಅವುಗಳನ್ನು ಹೋಗಲಾಡಿಸಿಕೊಳ್ಳುವದಕ್ಕೆ ಸಹ ಜನಗಳು ಹಿಂಜರಿಯುವದಿಲ್ಲವು. ಅನಾವಶ್ಯಕ ವ್ಯಯಗಳಪೈಕಿ ಇದೊಂದಾಯಿತಷ್ಟೆ. ಇನ್ನೂ ವಿಚಾರಮಾಡಿನೋಡಿದರೆ ಹೀಗೆಯೇ ಅನೇಕ ಗೋಚರವಾಗುತಿವೆ. ತಾವೇ ಮೇಳ ಮುಂತಾದವುಗಳಿಗಾಗಿ ಮನುಷ್ಯರ ವ್ಯಯ ಮಾಡುವದು ಎರಡನೆಯದಾಗಿರುತಿದೆ. ಈ ವಿಷಯದೊಳು ಜನಗಳಿಗಿರುವ ಉತ್ಸಾಹವು ಬಹಳ ಆಶ್ಚರ್ಯಪಡತಕ್ಕದ್ದಾಗಿರುತಿದೆ. ತಮ್ಮ ರೆಮ್ಮ ಸ್ಥಳಗಳಲ್ಲಿ ಸುಲಭವಾಗಿ ದೊರೆಯುವ ತಾಸೆನೋಟಗಳಿಂದ ತೃಪ್ತಿಹೊಂದದೆ ಅನ್ಯದೇಶದಿಂದ ಕರೆಸುವವರಿಗಾಗಿ ಎರಡು ಮೂರು ದಿನಗಳಿಗಾಗಿ ಒಂದು ಕುಟುಂಬಜೀವನಕ್ಕೆ ಸಾಕಾಗಬಹುದಾದಷ್ಟು ದ್ರವ್ಯವನ್ನು ವ್ಯಯಮಾಡುತ್ತಾರೆ. ವಿವಾಹಕಾಲಗಳಲ್ಲಿ ವಾಣಬಿರುಸುಗಳಿಗೋಸ್ಕರ ನೂರಾರು ರೂಪಾಯಿಗಳ ಆಯತಿ ಇಲ್ಲದಿರುವವರು ಸಹ ಬಹುವ್ಯಯ ವ್ಯರ್ಥ ಮಾಡುತ್ತಾರೆ. ವರದಕ್ಷಿಣೆ, ಕನ್ಯಾಶುಲ್ಕ ಮುಂತಾದವುಗಳ ವ್ಯಯವು ಎಲ್ಲರಿಗೂ ಬಹಳ ಕಷ್ಟಕರವಾದದ್ದಾಗಿರುತಿದೆ. ವರನಿಗೆ ಅನುರೂಪಳಾದ ಕನ್ಯೆಯುಂಟಾದಾಗ್ಯೂ ಕೆಂಬ ಕೋರಿಕೆಯೊಡನೆ ವಿವಾಹ ಪ್ರಯತ್ನಮಾಡತಕ್ಕವರ ಸಂಖ್ಯೆಯು ಕೇವಲ ಅಲ್ಪವಾಗಿರುತಿದೆ. ಇವರ ಉದ್ದೇಶವೆಲ್ಲವೂ, ವರದಕ್ಷಿಣೆ ಕನ್ಯಾಶುಲ್ಕವಗೈರೆ ಮೂಲಕ ದೊರೆಯಬಹುದಾದ ದ್ರವ್ಯದ ಪರಿಮಾಣದ ಮೇಲೆಯೇ ನಿಂತಿರುತಿದೆ. ಒಬ್ಬನಿಗೆ ಅಷ್ಟು ಕೊಟ್ಟರೆ ಮುಂದೆ ಸುಖವಾದರೂ ಸುಖಪಡದೇ ಹೋಗುತ್ತಿಲ್ಲವು. ಸರ್ವದಾ ಅನುಕೂಲವಾದ ಸ್ತ್ರೀಯರ ಪದಾರ್ಥಗಳಿಗಾಗಿ ದ್ರವ್ಯ ವ್ಯಯಮಾಡುವದರಿಂದ ಕಡೆಗೆ ಅವು ಗೆದ್ದಲು ಇಲಿ ಮುಂತಾದವುಗಳಪಾಲಾಗುತಿವೆ. ಹೀಗೆಯೇ ಹೇಳತಕ್ಕವಷ್ಟು ವ್ಯಯ ಮಾರ್ಗಗಳು ಏರ್ಪಟ್ಟಿವೆ. ಜನಗಳು ತಮ್ಮ ಸ್ಥಿತಿಯನ್ನು ವಿಪರೀತಗೊಳಿಸಕೂಡದಷ್ಟು ಮೀರಿ ವ್ಯಯಮಾಡುವವರಿಂದ ತಾವೂ ತಮ್ಮಸಂತತಿಯವರು ಸಹ ನಿರಂತರ ದುಃಖಭಾಜನರಾಗಬೇಕಾಗುತಿದೆಯಲ್ಲದೆ, ಕಡೆಗೆ ಅನನ್ಯಗತಿಕರಾಗಿ ಸ್ವಯಂ ಕಷ್ಟಾರ್ಜಿತ ಪರಾನ್ನಶಯತಿ ಎಂದು ಹೆಣ್ಣುಕೊಟ್ಟವರನ್ನು ಸಹ ಮರೆಯುತ್ತಿರುವದನ್ನು ಸ್ಫೋಟಿಸಿಕೊಳ್ಳಬೇಕಾಗುತಿದೆ. ಇವಕ್ಕೆ ದುರಭಿಮಾನವಿನಾ ಬೇರೊಂದೂ ಕಾರಣವಲ್ಲವು. ನಮ್ಮವರಲ್ಲಿ ಅನ್ಯರವ್ಯಯದಿಂದ ಉಂಟಾಗತಕ್ಕ ವೈವಾಹಿಕಾನಂದವನ್ನು ಅನುಭವಿಸಿ ಸುಖೋಪಿಸುವ ವಾಂಛೆಯು ಬಲವತ್ತರವಾಗಿರುವವರಿಂದ ತಮ್ಮ ಮತ್ತು ತಮ್ಮ ಕುಟುಂಬದ ಮುಂದಿನ ಸ್ಥಿತಿಯನ್ನು ವಿಚಾರಮಾಡದೆ ಮುಯ್ಯಿಗೆ ಮುಯ್ಯಿಯಾಗಿ ನಾಶವನ್ನೈದುತ್ತಾರೆ. ಈ ನಿಷ್ಫಲಕವಾದ ಸಂಪ್ರದಾಯವು ಇಂಡ್ಯದೇಶದಲ್ಲೆಲ್ಲಾ ಒಂದೇ ಸಮನಾಗಿ ವ್ಯಾಪಿಸಿಕೊಂಡಿರುತಿದೆ ಎಂದು ಮುಂಬಯಿ ಕನ್ನಡದ ವಾರ್ತಾ ಪತ್ರಿಕೆ ತಿಳಿಸುತಿದೆ.

ನವನಾಗರಿಕರ ಸಂಬಂಧಿಸಿದ ಬ್ರಾಹ್ಮಣರ ವಿಷಯ ವು ಕುರಿತು ಇಂಡಿಯನ್ ಸ್ಪೆಕ್ಟೇಟರ್ ಪತ್ರಿಕೆ ಹೇಳುವದೇನು ಎಂದರೆ,—ಹಿಂದೂ ಜನಗಳ ಆಚಾರವ್ಯವಹಾರಗಳಲ್ಲಿ ಬದಲಾವಣೆಯನ್ನುಂಟುಮಾಡುವದಕ್ಕೆ ವಿದ್ಯಾಭ್ಯಾಸವೇ ಮುಖ್ಯಕಾರಣವೆಂದು ವಾದಿಸುವವರಿಗೆ ಈ ವಿಚಾರಕ್ಕೆ ಒಂದು ಪ್ರಬಲ ವಿಷಯ ಪ್ರಾಪ್ತವಾಗಿರುತಿದೆ. ಗುಜರಾತ ದೇಶದ ನಾಗರಬ್ರಾಹ್ಮಣರು ಪ್ರಾಯಶಃ ಎಲ್ಲಾ ವಿಷಯದಲ್ಲೂ ಪ್ರಬಲರು. ಗುಜರಾತಿ ಯೆಂಬ ಪತ್ರಿಕೆಯಲ್ಲಿ ನಮೂದಿರುವ ಸೆನ್ಸಸ್ ರಿಪೋರ್ಟನ್ನನುಸರಿಸಿ, ಅವರಲ್ಲಿ ಗಂಡಸರು ಶೇಕಡ ೯೧ರ ಮೇರೆಯೂ, ಹೆಂಗಸರು ೫೫ರ ಮೇರೆಯೂ, ವಿದ್ಯಾವಂತರಾಗಿರುವರೆಂದು ಹೇಳಿಕೊಳ್ಳುತ್ತಾರೆ. ಇದು ಕೇವಲ ವಿದ್ಯಾವಿಷಯಗಳಲ್ಲಾದವರು ಸ್ವಪ್ನದಲ್ಲಿ ಸಹ ನಿರೀಕ್ಷಿಸದಷ್ಟು ಅಭಿವೃದ್ಧಿಯೆಂದು ಅರ್ಥವಾಗುತಿದೆ. ಹೀಗಿದ್ದಾಗ್ಯೂ ನಾಗರ ಬ್ರಾಹ್ಮಣರು ತಮ್ಮ ಜನಗಳಿಗೆ ಈಚೆಗೆ ಯಾವ ಪ್ರಯೋಜನವನ್ನುಂಟುಮಾಡಿದರು? ಮುಸಲಾ ವಿಧವಾ ವಿವಾಹವನ್ನು ಸ್ವತಃ ಮಾಡದೆ ಹೋದಾಗ್ಯೂ ಅದನ್ನು ಅನುಮೋದಿಸುತ್ತಾರೆಯೆ? ಯಾವದೂ ಇಲ್ಲವು. ಬಾಲಕರಾದವರು ವಿದ್ಯಾಭ್ಯಾಸದ ಬಗ್ಯೆ ಇಂಗ್ಲಾಂಡಿಗೆ ಹೋಗುವ ವಿಷಯದಲ್ಲಿ ಅವಕಾಶವನ್ನುಂಟುಮಾಡುವದಕ್ಕೆ ಅವರು ಇದುವರಿವಿಗೆ ಯಾತಕ್ಕೂ ಮನಸ್ಸುಕೊಡಲಿಲ್ಲವು. ಅದಂ ಕುರಿತು ಬಹುಕಾಲದ ಮೊದಲು ಆಲೋಚಿಸುತಲಿದಾರೆ. ಎರಡು ಸಂವತ್ಸರಗಳ ಹಿಂದೆ ಜುನಾಘಡ ನವಾಬರವರು ಅನ್ಯರಾಜ್ಯಗಳಿಗೆ ಹೋಗಿ ವಿದ್ಯಾಭ್ಯಾಸ ಮಾಡತಕ್ಕಂತಾ ನಾಗರ ಜನಗಳು ಕೆಲವರಿಗೆ ವಿದ್ಯಾರ್ಥಿವೇತನವಂ ಸಹ ಕಲ್ಪಿಸಿ ಇದ್ದಾಗ್ಯೂ ಅವನ್ನು ಇದುವರಿವಿಗೆ ಯಾರೂ ಉಪಯೋಗಿಸಿಕೊಳ್ಳದೆ ಇದಾರೆ. ಸದರೀ ಜನಗಳಲ್ಲಿ ವಯೋವೃದ್ಧರಾಗಿರತಕ್ಕವರು ಈ ವಿಷಯವಂ ಕುರಿತು ತಮ್ಮ ಗುರುಜನರೊಡನೆ ಆಲೋಚಿಸುವವರಾಗಿ ಪ್ರಸ್ತಾಪ ಮಾಡಿದ್ದರು. ಮೊದಲೂ ವ್ಯವಸ್ಥೆಯಾಯಿತು, ವಿದ್ಯಾರ್ಥಿಗಳು ಹೊರಡುವದಕ್ಕೆ ಸಿದ್ಧವಾಗಿರುತ್ತಾರೆ, ಜಹಜು ಸಿದ್ಧವಾಯಿತು, ಹಿಂದೂಜಾತಿ ಪರಿಚಾರಕರು ಮೊದಲಾದವರು ಸಹ ಗೊತ್ತುಮಾಡಲ್ಪಟ್ಟರು, ಎಂದು ವಗೈರೆ, ಬಾಲಕರಾದವರು, ಮನಸ್ಸೇ ಹೇಳುತಬಂದರು. ಇಂಡ್ಯದೇಶಕ್ಕೆ ಒಳ್ಳೆಯಕಾಲ ಪ್ರಾಪ್ತವಾಯಿತೆಂದು ಹಿಂದೂ ವೃತ್ತಾಂತಪತ್ರಿಕೆಗಳು ಸಹ ಹೇಳುತಬಂದವು. ಎರಡು ಸಂವತ್ಸರಗಳು ಕಳೆದು ಬಂದವು, ಪರಂತು ನವೀನ ನಾಗರಿಕಾಭಿಲಾಷಿಗಳೂ ಬಹುಜನಗಳೂ, ಪರಿಚಾರಕರೂ, ಗುರುವೇ ಲವರಾದರೂ, ವಯೋವೃದ್ಧರಾದವರೂ ಯಾವದು ಯತ್ನವನ್ನಾದರೂ ನಡೆದಂತೆ ಕಾಣಲಿಲ್ಲವು. ಅವರಲ್ಲಿ ಕರ್ತವ್ಯನಿಯಾಮಕರಾದ ಲವರುಂ ಮತ್ತು ಇದುವರಿವಿಗೆ ನೆಲಗೊಂಡಿರುತಿದೆ, ಏಕೆಂದರೆ ಅದರ ಆಲೋಚನೆಯ ಮಂದಿಯು ಕಡೆಗೆ ಹೊರಡದೆ ಇದೆ. ಸಂಸ್ಕಾರೇಚ್ಛೆ ಪ್ರಯತ್ನಗಳಾದ ಸದರೀ ಜನಗಳು ಇನ್ನೂ ಪ್ರಯತ್ನಮಾಡುತಲೂ ಆಲೋಚಿಸುತಲೂ ಇದಾರೆ. ಅಂತಾ ಪ್ರಯತ್ನವನ್ನು ಸ್ಪಷ್ಟವಾಗಿ ಯಾತಕ್ಕೆ ನಡೆಸಲಿಲ್ಲವೆಂದು ಯಾರಾದರು ಖಂಡಿತೋಕ್ತಿಗಳಿಂದ ಆಕ್ಷೇಪಿಸಿದರೆ, ಬ್ರಾಹ್ಮಣರುಗಳ ಪೂರ್ವಿಕರು ಮೈಯಲ್ಲಿ ಬಣ್ಣಬಳಿಯುತ್ತಿದ್ದು ಮೃಗಗಳೋಪಾದಿಯಲ್ಲಿ ಅರಣ್ಯವಾಸಿಗಳಾಗಿದ್ದ ಕಾಲದಲ್ಲಿ, ತಮ್ಮ ಪೂರ್ವಿಕರಾದ ಆರ್ಯಾವರ್ತದವರ ಸುಗುಣಗಳನ್ನು ಹೇಳಿಕೊಂಡು ತಮ್ಮಲ್ಲಿನ ತಮ್ಮ ದೋಷಗಳನ್ನು ಮರೆಮಾಡಿಕೊಳ್ಳುತ್ತಾರೆ. ಸಾಮಾನ್ಯವಾಗಿ ಗುಜರಾತ್‌ದೇಶದ ನಾಗರ ಜನಗಳು ಉತ್ತಮಕುಲದವರಲ್ಲದೆ ಶಕ್ತಿಯಲ್ಲೂ ಮನೋವೃತ್ತಿಯಲ್ಲೂ ಉದಾರಸ್ವಭಾವಪುತ್ರರು. ಶೀಘ್ರದಲ್ಲೇ ಅಗಲಿ, ಕಾಲವಿಳಂಬದಿಂದಾಗಲಿ, ಅವರು ಕೆಲವು ನಿರ್ಣಯಕ್ಕೆ ಬರುವ ಹೊತ್ತು ಸಮುದ್ರಯಾನ ಮಾಡಬಹುದಲ್ಲದೆ ಈ ತತಮಾನವೊಳಗಾಗಿ ಚೆಂದಾದುವದಕ್ಕೂ ಸಿಕ್ಕಿರ್ ಎಂಬ ಗಾಡಿಯಮೇಲೆ ತಿರುಗಾಡುವದಕ್ಕೂ ಕಲಿಯಬಹುದು. ಪರಂತು ಜನಗಳ ಆಚಾರವ್ಯವಹಾರಗಳ ಬದಲಾವಣೆ ಮತ್ತು ವಿಧವಾ ವಿವಾಹ ವಿಷಯದಲ್ಲಿ ಸದರೀ ಜನಗಳೊಡನೆ ಮಾತನಾಡಿ ಪ್ರಯೋಜನವಿಲ್ಲವು. ಒಬ್ಬಂಟಿಗನಾಗಿ ಪ್ರಯತ್ನಪಡಲು ಅವರಿಗೆ ಸುತರಾಂ ಸಾಧ್ಯವಲ್ಲವು. ಅಂತಾ ಪ್ರಯತ್ನಕ್ಕೆ ಅವರಿಗೆ ಪ್ರತಿಕೂಲ್ಯಗಳು ಬಲವಾಗಿರುತಿವೆ. ಅವರು ಮನಸು ಬಿಟ್ಟು ಮಾತನಾಡುವದಿಲ್ಲವು, ಯಾತಕ್ಕೆಂದರೆ, ತಮ್ಮನ್ನು ಅವಿವೇಕಿಗಳೆಂದು ಭಾವಿಸಬಹುದೆಂದು ಹೆದರುತ್ತಾರೆ. ವಂಶಪಾರಂಪರ್ಯವಾಗಿ ವಿದ್ಯಾವಂತರಾಗಿಯೂ, ರಾಜದರ್ಬಾರನ್ನಾಶ್ರಿತವರಾಗಿಯೂ ಇರತಕ್ಕವರು ವಿವಾಹ ಪದ್ಧತಿಗಳನ್ನು ಬದಲಾಯಿಸಬೇಕೆಂದು ಆವಶ್ಯಕವೆಂದು ಕಂಡು ಬಂದೂ ಹಾಗೆ ಮಾಡದೆ ಇರುತ್ತಾರೆ, ಅಮರ್ಯಾದೆಕ್ಕೆ ನಾವು ಹೇಳಲಾರೆವು. ಪರಂತು ಹಾಗೆ ಮಾಡದೆಯಿರುವದು ಯಥಾರ್ಥ.

BANGALORE.—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧವೃತ್ತ್ಯುಪಗಮಾರ್ಥ ಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ಧಿಕಾಸುಪರಿಪೋಷಿತಾದಿಶತಿಮಾನಸಂಸುಮುದಂ

Vol. XIII] BANGALORE—MONDAY, JUNE 7, 1886. [No. 23

ಸಂಪುಟ ೧೩.] ಬೆಂಗಳೂರು:—ಸನ್ ೧೮೮೬ನೇ ಇಸವಿ ಜೂನ್ ೭ನೇ ತಾರೀಖು ಸೋಮವಾರ. [ಸಂಚಿಕೆ ೨೩

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ಸೇರಿರುವ ಪತ್ರಿಕೆಗೆ ವರುಷ ೧ಕ್ಕೆ	೧೨—೦—೦
ಇಂಗ್ಲಿಷ್ ಮಾತ್ರ ಸೇರಿರುವ ಪತ್ರಿಕೆಗೆ ವರುಷ ೧ಕ್ಕೆ	೬—೦—೦
ಕನ್ನಡ ಮಾತ್ರ ಸೇರಿರುವ ಪತ್ರಿಕೆಗೆ ವರುಷ ೧ಕ್ಕೆ .	೬—೦—೦
ಬಿಡಿ ಕಾಪಿ ೧ಕ್ಕೆ	೦—೮—೦

ಸೂ.—[illegible]

ಪ್ರಕಟನೆಯ ರಿವಾಜು.

ಇಂಗ್ಲಿಷ್ ಸೇರಿದ ಪಂಕ್ತಿ	೧ಕ್ಕೆ	೦—೨—೦
ಕನ್ನಡ ಸೇರಿದ ಪಂಕ್ತಿ	೧ಕ್ಕೆ	೦—೧—೦

NOTICE TO SUBSCRIBERS

[illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA

Price including Postage, Rs. 5 0 0

ವೈದ್ಯಸಾರ ಸಂಗ್ರಹ.

[illegible]

[illegible]	ರೂ॥ ೫—೦—೦	
ಪಾಂಕಿಂಗ್ ಮತ್ತು ಅಂಚೇಖರ್ಚು	೦—೬—೦	

ಟಿ. ವಿ. ವೆಂಕಟಾಚಾರ್, ಅಸ್ಸಿಸ್ಟೆಂಟ್, ಬೆಂಗಳೂರು.

ನೋಟೀಸ್.

[illegible] ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ [illegible]:—

ಕನ್ನಡ ಟೀಕಾಸಹಿತವಾದ ಸಂಸ್ಕೃತ ಗ್ರಂಥಗಳು.

ಕಾಲಾಮೃತ. ...	೧—೪—೦
ಮುಹೂರ್ತದರ್ಪಣ. ...	೦—೧೨—೦
ಛಪ್ಪನ್ನ (ಪಟ್ಟಂಡಾಕ್ರ) ...	೦—೩—೦
[illegible]	೦—೫—೦
[illegible] ...	೦—೪—೧
[illegible]	೦—೧೪—೦
[illegible] ...	೦—೭—೦
[illegible]	೦—೨—೦
ವೈದ್ಯಸಾರಸಂಗ್ರಹ ...	೫—೦—೦

ಕನ್ನಡ ಗ್ರಂಥಗಳು

[illegible] ...	೦—೭—೬
[illegible] ...	೦—೪—೦
[illegible] ..	೦—೩—೬
[illegible]	೦—೨—೬
[illegible] ...	೦—೪—೦
[illegible] ...	೦—೨—೦
[illegible] ...	೦—೨—೬
[illegible] ...	೦—೭—೦
[illegible] ...	೦—೩—೦
[illegible]	೦—೨—೦
[illegible] ...	೦—೦—೩
[illegible]	೧—೨—೦
[illegible]	೨—೦—೦
[illegible] ...	೦—೧೨—೦
[illegible] ...	೩—೪—೬
[illegible] ...	೩—೪—೬
[illegible]	
೧ನೇ ಸಂಚಿಕೆ. ...	೦—೮—೦
[illegible] ೨ನೇ ಸಂಚಿಕೆ.	೦—೮—೦
[illegible] ...	೦—೮—೦

ಸಂಸ್ಕೃತ ಮೂಲಗ್ರಂಥಗಳು.

ವಿಷ್ಣುಸಹಸ್ರನಾಮ ..	೦—೫—೦
ಶಂಕರಸಹಸ್ರನಾಮ. ...	೦—೨—೬
[illegible] ...	೦—೩—೬
[illegible] ..	೦—೦—೬
[illegible] ...	೦—೧—೬
[illegible] ...	೦—೧—೦

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ಶೀಘ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿತೆಗೆದುಕೊಳ್ಳಲ್ಪಡುವದು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JUNE 7, 1886.

೧೮೮೬ನೇ ಜೂನ್ ೭ನೇ ತಾ॥ ಸೋಮವಾರ

INAM EXCESS.

ಇನಾಂದಾರರು ಸನ್ನದರೀತ್ಯಾ ಅನುಭವಿಸಬೇಕಾದ ಜಮೀನಿಗಿಂತಲೂ ಅಕ್ರಮವಾಗಿ ಜಾಸ್ತೀ ಅನುಭವಿಸುವದನ್ನು ಕಂಡು ಹಿಡಿಯುವದೇ ಇನಾಂ ಸೆಟಲ್‌ಮೆಂಟಿನ ಮುಖ್ಯೋದ್ದೇಶವಾಗಿರುತಿದೆ. ಈ ದೇಶದಲ್ಲಿ ಸರ್ವೇ ಆದ ತಾಲ್ಲೂಕಿನೊಳು ಇನಾಂ ಸೆಟಲ್‌ಮೆಂಟ್ ಮಾಡಬೇಕೆಂದು ಸಾಬಿಕ್ ಚೀಫ್ ಕಮಿಷನರ್ ಮೆ॥ ಬೌರಿಂಗ್ ಸಾಹೇಬರವರು ಪ್ರಯತ್ನಪಡಲು, ಆಗ ಮುಂಬೈ ಪ್ರೆಸಿಡೆನ್ಸಿಯ ಇನಾಂ ಸೆಟಲ್‌ಮೆಂಟಿನ ಕ್ರಮವನ್ನನುಸರಿಸದೆ ಮದರಾಸ್ ಸೆಟಲ್‌ಮೆಂಟ್ ಪದ್ಧತಿಯನ್ನು ಅನುಸರಿಸಬೇಕಾಗಿಬಂದದರಿಂದ, ಮೈಸೂರು ಇನಾಂರೂಲ್ಸ್ ಮದರಾಸ್ ಇನಾಂರೂಲ್ಸ್ ಅನುಸರಿಸಿ ಏರ್ಪಡಿಸಲ್ಪಟ್ಟದ್ದಲ್ಲದೆ ಸರ್ವೇ ಸೆಟಲ್‌ಮೆಂಟಿಗೆ ಮುಂಚಿತವಾಗಿಯೇ ಇನಾಂ ಸೆಟಲ್‌ಮೆಂಟ್ ಮಾಡಬೇಕಾಗಿ ಬಂತು. ಇದರ ವಿಚಾರಣಾಧಿಕಾರವು ಮುಂಬೈ ಪ್ರೆಸಿಡೆನ್ಸಿಯ ಅಭಿಸರಾದ ಕರ್ನಲ್ ಅಂಡರ್‌ಸನ್‌ಯವರಿಗೆ ಕೊಡಲ್ಪಟ್ಟದರಿಂದ ಅವರು ಸದರೀ ರೂಲ್ಸನ್ನು ಬಹಳವಾಗಿ ಆಕ್ಷೇಪಿಸಿದರು. ಈ ವಿಷಯದಲ್ಲಿ ಗವರ್ನಮೆಂಟಿನವರಿಗೂ ಇನಾಂ ಇಲಾಖೆಯವರಿಗೂ ಕಾಗದಪತ್ರಗಳು ಬಹಳವಾಗಿ ಜರಿಗಿದವು. ಸಾಬಿಕ್ ದಿವಾನ್ ಮೆ॥ ರಂಗಾಚಾರ್ಯರವರ ಕಾಲದಲ್ಲಿ ಅವರು ಈ ವಿಷಯದೊಳು ಒಂದು ಹುಕುಂ ಕೊಟ್ಟಿದ್ದರು, ಪರಂತು ಅವರ ಹುಕುಂ ಜಾರೀಯಲ್ಲಿ ಬರುವದರೊಳಗಾಗಿ ಅವರೇ ಗತಿಸಿದ್ದರಿಂದಲೂ, ಪ್ರಜೆಗಳಿಗೆ ಸದರೀ ಹುಕುಮು ಬಹಳ ಅನಾನುಕೂಲವಾದದ್ದೆಂದು ತೋರಬಂದದರಿಂದಲೂ ಅದು ಇದುವರಿವಿಗೂ ಜಾರೀಯಲ್ಲಿ ತರಲ್ಪಡದೆ ಒನಾನತ್ತಾಗಿ ಇದಲ್ಪಟ್ಟಿತ್ತು. ಈಗ ದಿವಾನರವರು ಸಾಬಿಕ್‌ಹುಕುಂಗಳನ್ನೆಲ್ಲ ಕಂತಹ ರದ್ದುಮಾಡಿ ಇದರಡಿ ಕಂಡಂತೆ ಕೆಲವು ನಿಬಂಧನೆಗಳನ್ನು ಮಾಡಿರುತ್ತಾರೆ. ಈ ನಿಬಂಧನೆಗಳಿಂದ ಸಾಲೀಯಾನಾ ಒಂದುಲಕ್ಷ ರೂಪಾಯಿಗಳು ಸರ್ಕಾರಕ್ಕೆ ಬರಬಹುದೆಂದು ತೋರುತಿದೆ. ಜನಗಳಿಗೆ ಅನಾನುಕೂಲವಿಲ್ಲದೆ ಗವರ್ನಮೆಂಟಿನ ಆಮದಿಯು ಈರೀತಿ ವೃದ್ಧಿಯಾಗುವದು ಯೆಲ್ಲರಿಗೂ ಸಂತೋಷಕರವು.

ನಂ. ೬೭—ಸೆಟಲ್‌ಮೆಂಟ್ ಆದ ಮೈದಾನ್ ತಾಲ್ಲೂಕುಗಳಲ್ಲಿ ಇನಾಂಗಳು ಜಮೀನ್‌ರೂಪವಾಗಿ ಅನುಭವಿಸಲ್ಪಡುತಿರುವ ಸಂದರ್ಭಗಳಲ್ಲಿ ಅಂಥಾ ಚಿಲ್ಲರೆ ಇನಾಂಗಳಲ್ಲಿ ಜಾಸ್ತೀಯಿರುವಬಗ್ಯೆ ನಡಿಸಲ್ಪಡಬೇಕಾದ ಇವರಡೀಕಂಡ ರೂಲ್ಸುಗಳು, ಅದೇ ವಿಷಯದಲ್ಲಿ ಇದುವರಿಗೆ ಮಾದರ್ಮಾಡಲ್ಪಟ್ಟಿರುವ ತಮಾಂ ರೂಲ್ಸ್ ವ ಆರ್ಡರ್‌ಗಳ ರದ್ದಿಯಾತಿಯಿಂದ, ಸರ್ವರ ತಿಳುವಳಿಕೆಬಗ್ಯೆ ಪ್ರಕಟಿಸಲ್ಪಡುತ್ತೆ.

೧. ಹಾಲಿ ಅನುಭವಿಸಲ್ಪಡುತಿರುವಂತೆಯಾವ ಇನಾಮಿನ ಸರ್ವೇ ಅಕಾರವು ೫ ರೂಪಾಯಿಗೆ ಮೇಲ್ಪಟ್ಟು ಇರುವದಿಲ್ಲವೋ ಅಂಥಾ ತಮಾಂ ಇನಾಂಗಳೂ ಪೂರ್ತಿಯಾಗಿ ಕಾಯಂ ಮಾಡಲ್ಪಡತಕ್ಕವು.

೨. ಹಾಲಿ ಅನುಭವಿಸಲ್ಪಡುತಿರುವಂತೆ ಯಾವ ಇನಾಮಿನ ಸರ್ವೇ ಜೇರೀಜು ೫ ರೂಪಾಯಿಗೆ ಮೇಲ್ಪಟ್ಟಿರುತ್ತೋ ಅಂಥಾ ಇನಾಮ್‌ಗಳ ವಿಷಯದಲ್ಲಿ ಇನಾಂ ಇಲಾಖೆಯಿಂದ ಮುಂದಾರ್ ಮಾಡಲ್ಪಟ್ಟ ವಿಸ್ತೀರ್ಣಕ್ಕೆ ಜಾಸ್ತೀಯಾಗಿರುವದರ ಪೈಕಿ ಅರ್ಧಭಾಗವು, (ಇದುವರಿವಿಗೂ ಜಾರೀಲಿ ಯಿರುವ ರೂಲ್ಸ್ ಅನುಸರಿಸಿ ಅಂಥಾ ಜಾಸ್ತೀ ಅಂಶದಮೇಲೆ ಶೇಕಡಾ ೧೦ರಂತೆ ಬಿಡುವದಕ್ಕೆಬದಲಾಗಿ) ಸದರೀ ಮುಂದಾರ್ಮಾಡಲ್ಪಟ್ಟ ವಿಸ್ತೀರ್ಣ ಜೊತೆಗೆ, ಇನಾಮಾಗಿ ಕಾಯಂಮಾಡಲ್ಪಡತಕ್ಕದ್ದು; ಉಳಿದ ಅರ್ಧಭಾಗವು ಪೂರ್ತಿಯಾದ ಸರ್ವೆ ಜೇರೀಜ್ ಕಟ್ಟಲ್ಪಡತಕ್ಕದ್ದು.

ಪರಂತು ಯಾವ ಸಂದರ್ಭದಲ್ಲಿಯೇ ಆಗಲಿ ಇನಾಂಇಲಾಖೆಯಿಂದ ಮುಂದಾರ್ಮಾಡಲ್ಪಟ್ಟ ಇನಾಮಿನ ವಿಸ್ತೀರ್ಣದ ಸರ್ವೇ ಜೇರೀಜಿನ ಮೂರರಷ್ಟಕ್ಕಿಂತಾ ಜಾಸ್ತೀಯಾದ ಸರ್ವೇ ಅಕಾರವುಳ್ಳ ಜಮೀನು, ಅಂಥಾ ಸರ್ವೆ ಅಂದಾಜಿನ ಮೂರರಷ್ಟು ಮೊಬಲಗು ೫೦ ರೂಪಾಯಿಗೆ ಕಮ್ಮಿಯಿದ್ದ ಸಂದರ್ಭದಲ್ಲಿವಿನಾ, ಅನ್ಯಥಾ ಯಾವಾಗಲೂ ಇನಾಮಾಗಿ ಜಾರೀಮಾಡಲ್ಪಡಕೂಡದು; ಹಾಗೆ ಕಮ್ಮಿಯಿರುವಸಂಗತಿಯಲ್ಲಿ ೫೦ ರೂಪಾಯಿ ವರಿಗಿನ ಪರಂತು ಅದಕ್ಕೆ ಜಾಸ್ತೀಯಾಗದ ಸರ್ವೇ ಅಕಾರವುಳ್ಳ ಜಮೀನು, ಇದುವರಿವಿಗೆ ಇನಾಮಾಗಿ ಅನುಭವಿಸಲ್ಪಟ್ಟ ವಿಸ್ತೀರ್ಣದಪೈಕಿ ಇನಾಮಾಗಿ ಕಾಯಂಮಾಡಲ್ಪಡತಕ್ಕದ್ದು.

೩. ಇದುವರಿವಿಗೆ ಇನಾಮಾಗಿ ಅನುಭವಿಸಲ್ಪಟ್ಟ ಯಾವದಾದರು ಒಂದು ಸರ್ವೆ ನಂಬರ್‌ಪೈಕಿ, ಮೇಲೆ ಕಂಡ ೨ನೇ ರೂಲ್ಸ್ ಅನುಸರಿಸಿ ಇನಾಂ ತರೀಖ್ ಕಾಯಂಮಾಡಲ್ಪಟ್ಟ ವಿಸ್ತೀರ್ಣಕ್ಕೆ ಜಾಸ್ತೀಯಾದ ಭಾಗಗಳೆಲ್ಲವೂ, ಸರ್ಕಾರ್ ಜಮೀನೆಂದು ಎಣಿಸಲ್ಪಟ್ಟು ಪೂರಾಜೇರೀಜು ಕಟ್ಟಲ್ಪಡತಕ್ಕವು. ಅಂಥಾ ಹೆಚ್ಚುವರಿಯು ಸರ್ವೆ ಜೇರೀಜ್ ಪ್ರಕಾರ ೧೦ ರೂಪಾಯಿಗೆ ಜಾಸ್ತೀಯಾಗದೆ ಇರುವ ಪಕ್ಷದಲ್ಲಿ ಅದು, ಇನಾಮಿನ ಒಂದು ಭಾಗವೆಂದು ಯೆಣಿಸಲ್ಪಟ್ಟು ಅದರ ಮೇಲಿನ ಜೇರೀಜು ಜೋಡೀತರೀಖ್ ಕಟ್ಟಲ್ಪಡತಕ್ಕದ್ದು. ಅಂಥಾ ಹೆಚ್ಚುವರಿಯು ಸರ್ವೆ ಜೇರೀಜಿನಂತೆ ೧೦ ರೂಪಾಯಿಗಳಿಗೆ ಜಾಸ್ತೀಯಾಗಿದ್ದರೆ ಅದು ಸರ್ಕಾರ್‌ಜಮೀನಿನ ಒಂದು ಯಾ ಹೆಚ್ಚು ಸರ್ವೇನಂಬರುಗಳುಳ್ಳ ಜೇರೆಜೇರೆ ತಾಕುಗಳಾಗಿ ಭಾವಿಸಲ್ಪಟ್ಟು ಅದಕ್ಕೆ ಅಥವಾ ಅವುಗಳಿಗೆ ಸರಿಯಾದ ಸರ್ಕಾರದ ಕಂದಾಯ ಅಲಾಹಿದಾ ಕಟ್ಟಲ್ಪಡತಕ್ಕದ್ದು.

A MYSORE JUDGE IN CEYLON.

ಈಗ ಸಿಹ್ಮಳವೆಂದು ವ್ಯವಹರಿಸಲ್ಪಡುತಲಿರುವ ಲಂಕಾದ್ವೀಪದವಿಷಯದಲ್ಲಿನಮ್ಮವರು ಶ್ರೀರಾಮಾಯಣದ ಆಧಾರದಮೇಲೆ ನಾನಾವಿಧವಾಗಿ ತಿಳಿಸುತ್ತಾರೆ. ವಿಚಾರಪರರಾದ ವರ್ತಮಾನಕಾಲದವರು ತಮ್ಮನ್ನು ಹಾಸ್ಯಮಾಡುವರೆಂಬ ಶಂಕೆಯನ್ನು ಸಹ ಸ್ವಲ್ಪವೂ ಇಟ್ಟುಕೊಳ್ಳದೆ ಕಪಿಮುಷ್ಟಿನ್ಯಾಯದಂತೆ ತಮ್ಮ ಮಾತುಗಳನ್ನೇ ಸಾಧಿಸಲೆತ್ನಿಸುತ ನಮ್ಮವರು ಸದರೀ ಲಂಕಾದ್ವೀಪವು ರಾಕ್ಷಸರಿಗೆ ಆವಾಸಸ್ಥಾನವೆಂತಲೂ, ರಾವಣಾಸುರನ ಸಹೋದರನಾದ ವಿಭೀಷಣನಿಂದ ಅದು ಅದ್ಯಾಪಿ ಪಾಲಿತವಾದ್ದಾಗಿದೆ ಯೆಂತಲೂ, ಶ್ರೀರಾಮರು ರಾವಣ ಸಂಹಾರಾನಂತರ ಲಂಕೆಯಿಂದ ವಾಪಸು ಬರುವಾಗ್ಯೆ ಚಕ್ರ ಪ್ರತಿಷ್ಠೆ ಮಾಡಿ

ಆ ಅಸುರಪ್ರದೇಶಕ್ಕೆ ಮನುಷ್ಯರ್ಯಾರೂ ಹೋಗಕೂಡದೆಂದು ಆಜ್ಞಾಪಿಸಿ ಬಂದರೆಂತಲೂ, ಆದ್ದರಿಂದ ಅಲ್ಲಿ ಈಗಲೂ ನರಸಂಚಾರವಿಲ್ಲವೆಂತಲೂ, ಹಾಗೆ ಯಾರಾದರೊಂದುವೇಳೆ ಹೋದರೆ ಚಕ್ರವು ಅವರನ್ನು ಸಂಹರಿಸಿಬಿಡುವದೆಂತಲೂ, ರಾಮೇಶ್ವರ ಮಾರ್ಗವಾಗಿಯೇ ಶ್ರೀರಾಮರು ಹೋಗಿಬಂದರೆಂತಲೂ, ಆಗ್ಯೆ ಅವರಿಂದ ಕಟ್ಟಲ್ಪಟ್ಟ ಸೇತುವೆಯು ಅವರು ವಾಪಸುಬರುವಾಗ್ಯೆ ಒಡೆದುಹಾಕಲ್ಪಟ್ಟದರಿಂದ ದುರ್ಗಮವೆಂತಲೂ ನಾನಾಪ್ರಕಾರದಿಂದ ಹೇಳುತಲಿದಾರೆ. ಈ ದೇಶದಲ್ಲಿ ಬೌದ್ಧರ ವ್ಯಾಪಕತೆಯಿಂದ ಕ್ರತುವಗೈರೆ ವೈದಿಕ ಕರ್ಮಗಳೆಲ್ಲದ್ರು ಹ್ರಾಸವನ್ನೈದಲು, ಶ್ರೀಮಚ್ಛಂಕರಾಚಾರ್ಯರು ಅವತರಿಸಿ, ಅವರನ್ನೆಲ್ಲ ವಾದದಿಂದಜೆಯಿಸಿ ಓಡಿಸಿಬಿಡಲು ಅವರೆಲ್ಲರೂ ಲಂಕಾದ್ವೀಪಕ್ಕೆ ಹೋಗಿ ನೆಲೆಸಿದ್ದರಿಂದ ಅಂತಾ ಪ್ರದೇಶವು ಆಸ್ತಿಕರ ಸಂಪರ್ಕನಾನರ್ಹವಾದದ್ದೆಂದು ಇನ್ನೂ ಕೆಲವರು ಸದರೀ ಪ್ರದೇಶಕ್ಕೆ ದೋಷವನ್ನು ಆರೋಪಿಸುತ್ತಾರೆ. ಆರ್ಹತರೆನ್ನಿಸಿಕೊಂಡ ಜೈನ್ಯರು, ಮಾಂಸಭುಕ್ಕುಗಳಾಗಿಯೂ, ಆತ್ಮನನ್ನಂಗೀಕರಿಸದವರಾಗಿಯೂ ಇರುವ ಬೌದ್ಧರೊಡನೆ ತಮ್ಮನ್ನು ಬ್ರಾಹ್ಮಣರು ಮೊದಲಾದವರುಸೇರಿಸಿ ವ್ಯವಹರಿಸಲಾರಂಭಿಸಿದ್ದರಿಂದ ಈ ಅಸಂಪ್ರಥೆಯನ್ನು ಹೋಗಲಾಡಿಸಿಕೊಳ್ಳುವ ಉದ್ದೇಶದೊಡನೆ ಹಿಮಶೀತಳ ಮಹಾರಾಜರ ಕಾಲದಲ್ಲಿ ಭಟ್ಟಾಕಳಂಕರೆಂಬ ಜೈನಮುನಿಯೊಬ್ಬರು ಬೌದ್ಧರನ್ನೆಲ್ಲ ಜೈಸಿ ಜೈನ್ಯಮತವನ್ನು ಪ್ರಚಾರದೊಳು ತಂದರೆಂತಲೂ, ಆಗ್ಯೆ ಆ ಕ್ಷಪಣಕರಿಂದ ಪರಾಜಿತರಾದ ಬೌದ್ಧರೆಲ್ಲರೂ ಲಂಕೆ ಮುಂತಾದ ಪ್ರಾಂತಗಳಿಗೆ ಹೋಗಿ ನೆಲೆಸಿದರೆಂತಲೂ ಹೇಳುತ್ತಾರೆ. ಸಿಂಹಳದ್ವೀಪವು ಮಾವಿನಹಣ್ಣಿನ ಆಕಾರವುಳ್ಳದ್ದಾಗಿಯೂ, ಅಯೋಧ್ಯೆಯಷ್ಟು, ಅಂದರೆ ೨೪,೬೦೦ ಸಲ ಮೈಲುಗಳ ವಿಸ್ತೀರ್ಣವುಳ್ಳದ್ದಾಗಿಯೂ, ಸಸ್ಯಫಲಸಮೃದ್ಧಿಯುಳ್ಳದ್ದಾಗಿಯೂ, ಪೂರ್ವವೃತ್ತಾಂತಗಳನ್ನು ಅನವರತ ಜ್ಞಾಪಕದೊಳು ತರತಕ್ಕ ಅನೇಕವಿಶೇಷಾಂಶಗಳುಳ್ಳದ್ದಾಗಿಯೂ, ನೋಡುವವರಿಗೆ ನೇತ್ರಾನಂದವನ್ನುಂಟುಮಾಡತಕ್ಕದ್ದಾಗಿಯೂ, ಮುಂಬೈ ಮದರಾಸು ವಗೈರೆ ಪ್ರದೇಶಗಳಂತೆ ಶ್ರೀಮನ್ಮಹಾರಾಜ್ಞೀಯವರ ಪ್ರತಿನಿಧಿಯಿಂದ ಪರಿಪಾಲಿತವಾದದ್ದಾಗಿಯೂ, ಇರುತಿದೆ. ಅಲ್ಲಿನ ಒಂದು ಪರ್ವತದಮೇಲೆ ಬುದ್ಧರ ಹೆಜ್ಜೆಯ ಗುರ್ತು ಸ್ಥೂಲಾಕಾರವಾಗಿದೆಯೆಂತಲೂ, ಅದನ್ನು ಅಲ್ಲಿನವರೆಲ್ಲರೂ ಭಕ್ತಿಯೊಡನೆ ಪೂಜಿಸುತ್ತಾರೆಂತಲೂ ತಿಳಿಯಬರುತಿದೆ. ಇದು ನದಿಮಾತೃಕದ್ವೀಪವಾಗಿಯೂ, ಉಷ್ಣಪ್ರಧಾನವಾದದ್ದಾಗಿಯೂ, ನವರತ್ನಗಳು ದೊರೆಯುವ ಪ್ರದೇಶವಾಗಿಯೂ ಇರುತಿದೆ. ಭೂಗುಣದಲ್ಲಿಯೂ, ಕಾಲಸ್ಥಿತಿಯಲ್ಲಿಯೂ, ಈ ದ್ವೀಪದ ಈಶಾನ್ಯಭಾಗವು ಕರ್ಣಾಟಕ ದೇಶದಂತೆಯೂ, ನಿಋತಿದಿಗ್ಭಾಗವು ಮಲಬಾರ್ ಪ್ರಾಂತಗಳಂತೆಯೂ ಯಿರುತ್ತದೆ. ಇದರೊಳು ಈಗ ಸ್ವಲ್ಪ ಹೆಚ್ಚುಕಡಮೆಯಾಗಿ ೨೫ಲಕ್ಷ ಪ್ರಜೆಗಳು ವಾಸವಾಗಿರುತ್ತಾರೆ. ಕಾಫಿ, ತೆಂಗು, ಗನ್ನ, ಸುಪಾರಿ, ಭತ್ತವಗೈರೆ ಪದಾರ್ಥಗಳು ವಿಸ್ತಾರವಾಗಿ ಬೆಳೆಯುವದಲ್ಲದೆ ಇವುಗಳ ವ್ಯಾಪಾರವು ಹೇರಳವಾಗಿ ಜರಗುತಿವೆ. ಸಿಂಹಳರು ದಕ್ಷಿಣ ಮತ್ತು ಮಧ್ಯಭಾಗದಲ್ಲಿ ವಾಸವಾಗಿದಾರೆ. ಈಶಾನ್ಯದಿಕ್ಕಿನಲ್ಲಿ ದ್ರಾವಿಡರು ನೆಲೆಸಿದಾರೆ. ಮೂರ್ಸ್ ಎಂಬ ಮಹಮ್ಮದೀಯ ಜನಗಳು ಸರ್ವತ್ರ ವ್ಯಾಪಿಸಿದ್ದಾರೆ. ಈ ದ್ವೀಪವು ಅನೇಕ ಶತಮಾನಗಳ ತನಕ ಸ್ವಂತರಾಜರಿಂದ ಪರಿಪಾಲಿತವಾಗಿತ್ತು. ೧೫೧೮ನೇ ಇಸವಿಯಲ್ಲಿ ಪೋರ್ಚುಗೀಸಿಯವರು ಇದರ ಸಮುದ್ರತೀರಪ್ರದೇಶಗಳನ್ನೆಲ್ಲ ಆಕ್ರಮಿಸಿಕೊಂಡು ಅಲ್ಲಿ ವ್ಯಾಪಾರ ನಡೆಸುತಲಿದ್ದರು. ೧೬೫೬ನೇ ಇಸವಿಯಲ್ಲಿ ಡಚ್ ಜನಗಳು ಪೋರ್ಚುಗೀಸಿನವರನ್ನು ಜೈಸಿ ಅದು ಸ್ವಾಧೀನ ಮಾಡಿಕೊಂಡರು. ೧೭೯೬ನೇ ಇಸವಿಯಲ್ಲಿ ಇಂಗ್ಲಿಷಿನವರು ಅವರನ್ನು ಅಟ್ಟಿಬಿಟ್ಟು ತಮ್ಮ ಸುಪರ್ದು ಮಾಡಿಕೊಂಡರು. ೧೮೧೫ನೇ ಇಸವಿಯತನಕ ಈ ದ್ವೀಪದಲ್ಲಿ ಅನ್ಯಸಂಸ್ಥಾನದವರ ಸಂಬಂಧವು ಸ್ವಲ್ಪಮಟ್ಟಿಗೆ ಇರುತಲಿತ್ತು. ಅದರ ತರುವಾಯ್ಯ ಬ್ರಿಟಿಷಿನವರು ಸಂಪೂರ್ಣಾಧಿಕಾರವುಳ್ಳವರಾದರು. ಸಿಂಹಳರೆಲ್ಲರೂ ಬೌದ್ಧಮತಾವಲಂಬಿಗಳಾದದರಿಂದ ಈಮತವೇ ವಿಶೇಷ ಪ್ರಾಬಲ್ಯದೊಳಿದೆ. ಈಚೆಗೆ ಇಂಗ್ಲಿಷಿನವರ ಸಂಬಂಧವು ವೃದ್ಧಿಯಾದಮೇಲೆ ಕ್ರಿಸ್ತುಮತದ ವ್ಯಾಪಕತೆಯು ಜಾಸ್ತಿಯಾಯಿತು. ಇದಲ್ಲದೆ ಹಿಂದೂಗಳು ಅನೇಕರುಧಾರಾಳವಾಗಿ ಹೋಗಿಬರಲಿಕ್ಕೆ ಕಾರಣವಾಯಿತು. ಈಬೇಸದಿಂದ ನಮ್ಮ ಅನೇಕರು ಸಿಂಹಳದ್ವೀಪಕ್ಕೆ ಹೋಗಿನೋಡಿ ಬಂದಿರುತ್ತಾರೆ. ಈಚೆಗೆ, ಅಂದರೆ ಕಳೆದತಿಂಗಳ ಆದಿಭಾಗದಲ್ಲಿ ಅಷ್ಟಗ್ರಾಮಡಿವಿಜನ್ ಡಿಸ್ಟ್ರಿಕ್ಟ್ ವ ಸೆಷನ್ಸ್‌ಜಡ್ಜಿಯರಾದ ಮೆಸ್ಟರ್ ವಿ. ಎನ್. ನರಸಿಂಹಯ್ಯಂಗಾರ್ರವರು ತಮ್ಮ ಬಂಧುಮಿತ್ರರೊಡನೆ ಸಿಲೋನಿಗೆ ಹೋಗಿದ್ದರಲ್ಲದೆ, ಅಲ್ಲಿನ ಥಿಯಸಾಫಿಕಲ್ ಸೊಸೈಟೀಸ್ ಸೌಧದಲ್ಲಿ ಐದುಮಂದಿ ಬೌದ್ಧಪಂಡಿತರಮಧ್ಯೆ ಬೌದ್ಧಮತಾಚಾರವನ್ನು ಕುರಿತು ಇಂಗ್ಲಿಷ್‌ಭಾಷೆಯಿಂದ ಉಪನ್ಯಾಸಮಾಡಿದರೆಂತಲೂ, ಮಧ್ಯೆ ಒಂದು ಸಂದರ್ಭದಲ್ಲಿ ಸಿಂಹಳರ ಆಚಾರವ್ಯವಹಾರಗಳಂ ಕುರಿತು ತಿಳಿಸುವಾಗ್ಯೆ ಪ್ರಾಯೇಣ ಸಿಂಹಳರೆಲ್ಲರೂ ಯೂರೋಪಿಯನ್ನರಂತೆ ವಸ್ತ್ರಗಳಂ ಧರಿಸಿಕೊಳ್ಳುತ್ತಾರೆಂತಲೂ, ಇತರರು ಕೆಲವರುಮಾತ್ರ ಅರ್ಧಯೂರೋಪಿಯನ್ ಅರ್ಧ ಹಿಂದೂಕ್ರಮವನ್ನು ಅಂಗೀಕರಿಸಿದ್ದಾರೆಂತಲೂ, ಈಕ್ರಮವು ತಮಗೆ ಬಹಳ ಚಿಂತನೀಯವಾಗಿದೆಯೆಂತಲೂ, ಕ್ರಮೇಣ ಇದರಿಂದ ಹಿಂದೂಸಂಪ್ರದಾಯವೇ ಅಳಿದುಹೋಗಲಿಕ್ಕೆ ಕಾರಣವೆಂತಲೂ, ಪರಮಧಾರ್ಮಿಕರಾದ ಬುದ್ಧರು ಹಿಂಸಾದಿ ಅಷ್ಟಾದಶದೋಷ ನಿವಾರಕಗಳಾದ ಧರ್ಮಗಳನ್ನು ಉಪದೇಶಿಸಿರುವಾಗ್ಯೆ ಬೌದ್ಧರಲ್ಲಿ ಮಾಂಸಾಶನವೆಂಬದು ಯಾವಕಾಲದೊಳ್ಯಾವಕಾರಣದಿಂದ ಆಚರಣೆಯೊಳು ಬಂತೋ ಅದು ಸ್ಪಷ್ಟವಾಗಲಿಲ್ಲವೆಂತಲೂ, ಒಂದು ಜನಾಂಗದವರ ನಾಶಕ್ಕೆ ಮದ್ಯಪಾನಕ್ಕಿಂತಲೂ ಬಲವತ್ತರವಾದದ್ದು ಬೇರೊಂದೂ ಇರಲಾರದೆಂತಲೂ ತಿಳಿಸಿ, ತಮ್ಮ ಪ್ರಸಂಗವಂ ಕೊನೆಮುಟ್ಟಿಸಿದರೆಂದು ಸಿ[illegible] ಪತ್ರಿಕೆಗೆ [illegible] ಒಬ್ಬ ಬಾತಮಿದಾರನು ಬರೆದಿರುತ್ತಾನೆ. ಮುಖ್ಯವಾಗಿ ನಮ್ಮ ಡಿಸ್ಟ್ರಿಕ್ಟ್ ಜಡ್ಜಿಯವರಿಗೆ ವಿದೇಶೀಯರಾಗಿಯೂ, ಅನ್ಯಮತಾವಲಂಬಿಗಳಾಗಿಯೂ, ಅಪರಿಚಿತರಾಗಿಯೂ, ಇರುವವರ ವಿಷಯದೊಳು ಪುಟ್ಟಿದ ನಿರ್ಹೇತುಕ ಕೃಪೆಯು ಸ್ವದೇಶೀಯರಾಗಿಯೂ, ಸ್ವಮತಾವಲಂಬಿಗಳಾಗಿಯೂ ಪರಿಚಿತರಾಗಿಯೂ ಇರತಕ್ಕ ಇಲ್ಲಿನವರ ವಿಷಯದೊಳು ತೋರಿಸಲ್ಪಟ್ಟದ್ದರೆ ಕೇವಲ ಉಪಯುಕ್ತವಾಗಿರುವದು

ಪ್ರಕಟನೆ

ಈ ಪತ್ರಿಕೆಯ ಚಂದಾದಾರರು ಅವರವರ ಬಾಕೀಗಳನ್ನು ಕಳುಹಿಸಿಕೊಡಬೇಕೆಂದು ನಾವು ಬಾರಬಾರ್ ಕೇಳಿಕೊಂಡಿದ್ದಾಗ್ಯೂ ಅಂತಾ ನಮ್ಮ ಪ್ರಾರ್ಥನೆಗೆ ಅದ್ಯಾಪಿ ಅನೇಕರು ನಿಗೇಕೊಡದಿರುತ್ತಾರೆಯಾಗಿ ಹಿಂದೆ ಸೂಚಿಸಿದ್ದಪ್ರಕಾರ ಅಂತವರವಿಷಯದೊಳು ನಾವು ಮಾಡಲುದ್ದೇಶಿಸಿರುವ ಕ್ರಮವನ್ನು ಮುಂದಿನವಾರದ ಪತ್ರಿಕೆಯ ಮೂಲಕ ಯೆಲ್ಲರೂ ತಿಳಿದುಕೊಳ್ಳಬಹುದು.

ಬೆಂಗಳೂರು ೭—೬—೮೬ } ಟಿ. ಸಿ. ಶ್ರೀನಿವಾಸಾಚಾರ್, ಪ್ರೊಪ್ರೈಟರ್.

Occasional Notes.
ನೈಮಿತ್ತಿಕವಿಷಯನ್ಯಾಸ.

The Viceroy's visit to Bhurtpore.—ಕಳೆದತಿಂಗಳ ೩೧ನೇ ತಾರೀಖಿನಲ್ಲಿ, ವೈಸ್‌ರಾಯಿಯವರು ಮರ್ಯಾದಾರ್ಥ ಭರತಪುರದ ಮಹಾರಾಜರವರನ್ನು ನೋಡಿಬಂದರು.

Obituary.—ಗಯಾಡಿಸ್ಟ್ರಿಕ್ಟಿಗೆಸೇರಿದ ತಿಕಾರಿಸಂಸ್ಥಾನದ ರಾಣಿಯವರು ಕಳೆದತಿಂಗಳ ೨೩ನೇ ತಾರೀಖಿನಲ್ಲಿ ಮೃತಪಟ್ಟದ್ದಾಗಿ ಒಂದಾನೊಂದು ಕಲ್ಕತ್ತಾಪತ್ರಿಕೆಯಮೂಲಕ ತಿಳಿಯಬರುತಿದೆ.

Lotteries in Hyderabad.—ಕೆಲವುತಿಂಗಳಹಿಂದೆ ಹೈದರಾಬಾದಿನಲ್ಲಿ ಒಂದುಲಾಟರಿ ಹಾಕಲ್ಪಟ್ಟಿತಷ್ಟೆ. ಅದರಿಂದೀಚೆಗೆ ನಿಜಾಮರವರು ಕೊಟ್ಟಹುಕುಂ ಅನುಸರಿಸಿ ಮರಳಿ ಅಂತಾಲಾಟರಿಗಳು ಹಾಕುವದಕ್ಕೆ ಅವಕಾಶವಿರುವದಿಲ್ಲವೆಂದು ತಿಳಿಯಬರುತಿದೆ.

A rumour.—ಕಾಬೂಲ್ ಅಮೀರರವರು ಮೃತಪಟ್ಟದ್ದಾಗಿ ಪೇಷಾವರ್ ಷಹರಿನಲ್ಲಿ ಒಂದು ಪ್ರವಾದ ಹುಟ್ಟಾಗಿರುತಿದೆ. ಸದರೀಯವರು ಮರಳಿ ಕಾಹಿಲೆಯಾಗಿರುತ್ತಾರೆ ಯಲ್ಲದೆ ಮೃತಪಟ್ಟರೆಂಬ ವಾರ್ತೆಯು ಸುಳ್ಳೆಂದು ಪಯೊನಿಯರ್‌ಪತ್ರಿಕೆ ಹೇಳುತಿದೆ.

Death.—ಕಳೆದತಿಂಗಳ ೨೧ನೇ ತಾರೀಖಿನಲ್ಲಿ ಮಣಿಪುರದ ಮಹಾರಾಜರವರು ಕಾಲಗತಿಯನ್ನೈದಿದ ಅವರ ಜ್ಯೇಷ್ಠಪುತ್ರರು ರಾಜ್ಯಧುರ ವಹಿಸಲು ಕನಿಷ್ಠನು ಕಲಹಿಸಿದನು. ಪರಂತು ಸರಹದ್ದುಪ್ರಾಂತದಲ್ಲಿ ಕಲಹಕ್ಕೆ ಅವಕಾಶವಿಲ್ಲದಂತೆ ತಕ್ಕಯೇರ್ಪಾಡುಗಳು ಮಾಡಲ್ಪಟ್ಟವೆಂದು ಅರಿತೆವು.

Capture of dacoits.—ಬಾಂಟಿಯಾಭೀಲ್ಸ್ ಎಂಬ ದರೋಡೆ ಕಳ್ಳರ ಗುಂಪಿಗೆ ಸೇರಿದವರು ನಾಲ್ವರು ಹೊಸಂಗಬಾದ್ ಡಿಸ್ಟ್ರಿಕ್ಟಿನಲ್ಲಿ ದಸ್ತಗಿರಿ ಮಾಡಲ್ಪಟ್ಟರು. ದಸರೀ ಗುಂಪಿಗೆ ಎಜಮಾನನಾದವನು ಬೆಟ್ಟ ಪ್ರಾಂತದಲ್ಲಿ ತಲೆ ತಪ್ಪಿಸಿಕೊಂಡಿರುತ್ತಾನೆ. ಅವನನ್ನು ಹಿಡಿಯಲು ಪ್ರಯತ್ನಪಟ್ಟವರ ಪೈಕಿ ಐವತ್ತುಮಂದಿ ಪ್ರಾಣಗಳಂ ಕಳೆಕೊಂಡರೆಂದು ಹೇಳಿಕೊಳ್ಳುತ್ತಾರೆ.

A succession disputed.—ಮಣಿಪುರದ ಮಹಾರಾಜರವರ ಮರಣಾನಂತರ ಅವರಜ್ಯೇಷ್ಠಪುತ್ರರು ರಾಜ್ಯಧುರವಂ ಕೈಗೊಳ್ಳುವಲ್ಲಿ ಯೆರಡನೇ ಮಗನು ಕಲಹಿಸಿನಡೆದ ಯುದ್ಧದಲ್ಲಿ ಅವನು ಪರಾಜಿತನಾಗಿ ಅಲ್ಲಿಂದ ಬ್ರಿಟಿಷ್‌ರಾಜ್ಯಕ್ಕೆ ಓಡಿಸಲ್ಪಟ್ಟನು. ಆತನ ದಸ್ತಗಿರಿಯಬಗ್ಗೆ ಅಸ್ಸಾಂ ಕಮಿಷನರವರಿಂದ ೨೦೦ ಮಂದಿ ಸವಾರರು ಕಳುಹಿಸಲ್ಪಟ್ಟಿರುತ್ತಾರೆ.

Religious despute.—ಕರಾಚಿಯಲ್ಲಿ ಚಂಡಾಲರು ವಿವಾಹಾನಂತರ ಮದವಣಿಗನನ್ನೂ ಮದವಣಿಗಿತ್ತಿಯನ್ನೂ ಕುದುರೇಮೇಲೆಕೂಳ್ಳಿರಿಸಿ ಬೀದಿಗಳಲ್ಲಿ ಮೆರವಣಿಗೆ ಮಾಡಿಕೊಂಡುಬರಲು ಉತ್ತಮಜಾತಿಯವರು ಇಂತಾ ಕೃತ್ಯವು ಕೇವಲ ಅಕ್ರಮವಾದದ್ದೆಂದು ಆಕ್ಷೇಪಿಸುವಲ್ಲಿ ಯೆರಡು ಗುಂಪಿನವರಿಗೂ ಕಲಹ ನಡೆದು ಅದರಲ್ಲಿ ಒಬ್ಬ ದೊಡ್ಡಮನುಷ್ಯನ ನೌಕರನೊಬ್ಬನು ಕೊಲ್ಲಲ್ಪಟ್ಟನೆಂದು ತಿಳಿಯಬರುತಿದೆ.

The Duke of Connaught.—ಪರಶಿವೆಯೆಂಬ ಪತ್ರಿಕೆತಿಳಿಸುವದೇನೆಂದರೆ—ಮಹಾರಾಜ್ಞೀಯವರ ಪುತ್ರರಾದ ಡ್ಯೂಕ್ ಕಾನಾಟ್ ಯವರು ಬರುವ ಜೂಲೈ ತಿಂಗಳ ಆದಿಭಾಗದಲ್ಲಿ ತಮ್ಮ ಡಿವಿಜನ್ ಅಧಿಕಾರವಂ ಕೈಗೊಂಡು ಒಂದು ಸಂವತ್ಸರ ಕಾಲದಪರಿಮಿತಿಗೆ ಅದರಲ್ಲಿದ್ದು ತರುವಾಯ ಲೆಫ್ಟಿನೆಂಟ್ ಜನರಲ್ ಹೋದೆಗೆ ಬಡ್ತೀಮಾಡಲ್ಪಡುವರು. ಈತಿಂಗಳ ಆಖೈರಿಗೆ ಆರುಸಂವತ್ಸರಗಳ ಮೇಜರ್ ಜನರಲ್ ಅಧಿಕಾರವನು ವಹಿಸಿದವರಾಗಿ ಇದೇ ೧೯ನೇ ತಾರೀಖಿಗೆ ೧೮ ವರುಷಗಳ ನೌಕರಿ ಮಾಡಿದಂತೆ ಯಾಗುವದು, ಎಂಬದು.

An invaluable gem.—ಕಾಬೂಲ್‌ಅಮೀರರವರ ದಾಯಾದಿಯಾದ ಅಮೀನುದ್ದೌಲಾಯೆಂಬ ಆಫ್ಘಾನ್‌ದೇಶದ ದೊಡ್ಡಮನುಷ್ಯನೊಬ್ಬತನು ಈಗ ಇಂದ್ಯರಾಜ್ಯದಲ್ಲಿರುತಲಿದಾನೆ. ಆತನವಶದಲ್ಲಿ ದರ್ಯಾಯಿನೂರ್, (ಕಾಂತಿಸಮುದ್ರ) ಯೆಂಬ ಒಂದು ಅನರ್ಘ್ಯವಾದ ರತ್ನವಿದೆ. ಇದರ ರಕ್ಷಣಾರ್ಥ ಆತನು ಅಬ್ದುಲ್‌ರಹಿಮಾನ್‌ಯವರು ರಾಜ್ಯಧುರವಂವಹಿಸಿದಕಾಲದಲ್ಲಿ ಆಫ್ಘಾನಿಸ್ತಾನ್ ದೇಶದಿಂದ ಓಡಿಹೋದನು. ಅದರಿಂದೀಚೆಗೆ ಆತನು ಲಂಡನ್ ಮತ್ತು ಪೇರಿಸ್‌ಪಟ್ಟಣಗಳಿಗೆ ಹೋಗಿ ಸದರೀ ರತ್ನವನ್ನು ಬಿಕರೀ ಮಾಡಲೆತ್ನಿಸಿದನು, ಪರಂತು ಅದನ್ನು ಖರೀದೀ ಮಾಡುವದಕ್ಕೆ ಲಾಯಖಾದವರ್ಯಾರೂ ಸಿಕ್ಕದೇಹೋದರು, ಯೆಂದು ವಗೈರೆ ಒಂದಾನೊಂದು ಉತ್ತರ ದೇಶದ ಪತ್ರಿಕೆ ಹೇಳುತಿದೆ.

A rumour.—ಹೋಳ್ಕರ್ ಮಹಾರಾಜರವರು ಬಹುಮೂತ್ರ ರೋಗಪೀಡಿತರಾಗಿರುವದರಿಂದ ರಾಜ್ಯಾಧಿಕಾರವಂ ತಮ್ಮಪುತ್ರನಿಗೆ ಒಪ್ಪಿಸಿಬಿಡಲು ಆಲೋಚಿಸುತಲಿರುವಂತೆ ಒಂದುಪ್ರವಾದ ಉಂಟಾಗಿದೆಯೆಂದು ಉತ್ತರದೇಶದ ಪತ್ರಿಕೆಯೊಂದು ತಿಳಿಸುತದೆ. ರಾಜ್ಯಾವಹಳಿತವೆಂಬದು ಸಾಮಾನ್ಯಕಾರ್ಯವಲ್ಲವು. ಅರಸರು ತಾವು ಜೀವಿಸಿರುವಲ್ಲಿ ತಮ್ಮ ಅಧಿಕಾರವಂ ಪುತ್ರನಿಗೆ ಒಪ್ಪಿಸಿಬಿಡುವದಕ್ಕಿಂತಲು ತಮ್ಮಹೆಸರಿನಲ್ಲಿ ತಮ್ಮಪುತ್ರರಾದ ಯುವರಾಜರಮೂಲಕ ನಡೆಸುತಬರುವದು ಉಚಿತವಾಗಿರುವದು, ಯಾತಕ್ಕೆಂದರೆ ದೈವಾತ್ ತಮಗೆ ರೋಗನಿವೃತ್ತಿಯಾಗುವ ಪಕ್ಷಕ್ಕೆ ರಾಜ್ಯಭಾರ ವಿಷಯದಲ್ಲಿ ಭಿನ್ನಾಭಿಪ್ರಾಯಗಳುಂಟಾಗಲು ಆಗ ವೈಮನಸ್ಯಕ್ಕೆ ಅವಕಾಶ ತಪ್ಪಲಾರದು.

A case under the Arms Act.—ಈಚೆಗೆ ಒಂದು ಮೊಕದ್ದಮೆಯಲ್ಲಿ ನಡಿಸಲ್ಪಟ್ಟ ಜುಲ್ಮೀಯನ್ನು ಕುರಿತು ಕಲ್ಕತ್ತೆ ಹಿಂದೂಪೇಟ್ರಿಯಾಟ್ ಪತ್ರಿಕೆ ತಿಳಿಸುತಿದೇನೆಂದರೆ,—ನಾರಾಯಣ ಗುಜೆ ಯೆಂಬ ಪ್ರದೇಶದ ಪ್ರಜೆಗಳೆಲ್ಲರಿಂದಲೂ ವಿಶೇಷತಃ ಗೌರವಿಸಲ್ಪಡುತಲಿದ್ದಂತಾ ಪವನು ಸಾತ್ವಿಕನಾಗಿಯೂ, ತಪೋನಿಷ್ಠನಾಗಿಯೂಯಿದ್ದ ವಿರಾಗಿಯೊಬ್ಬನು ಯೋಗಾಭ್ಯಾಸಕ್ಕಾಗಿ ಮುಕ್ಕು ಹಿಡಿದು ಕೆಲಸಕ್ಕೆಬಾರದ ಒಂದು ಸಣ್ಣ ಕತ್ತಿಯನ್ನು ಲೈಸೆನ್ಸು ಪಡೆಯದೆ ಇಟ್ಟುಕೊಂಡದ್ದರಕ್ಕಾಗಿ ಆತನಮೇಲೆ ಪೋಲೀಸಿನವರು ಛಾರ್ಜಿಮಾಡಿದರು. ಯೋಗಿಯು ಮೌನವ್ರತವನ್ನವಲಂಬಿಸಿದ್ದದರಿಂದ ಮ್ಯಾಜಿಸ್ಟ್ರೇಟರ ಮುಂದೆ ಪ್ರತ್ಯುತ್ತರ ಹೇಳದೆ ಸುಮ್ಮನಿರಲು, ಮ್ಯಾಜಿಸ್ಟ್ರೇಟರು ಆತನಿಗೆ [illegible] ದಿನಗಳ ಕಠಿಣಕೈದ್ ಸಜಾ ವಿಧಿಸಿದರೆಂದು ತಿಳಿಯಬರುತಿದೆ. ಇಂತಾ ಅಕ್ರಮವಾದ ಜುಲ್ಮಿಯು ನಡೆಸಲ್ಪಟ್ಟ ವಿಷಯದಲ್ಲಿ ದರ್ಯಾಪ್ತುಮಾಡಿ ಅದರ ಯಾಥಾರ್ಥ್ಯವನ್ನು ಜನಗಳಿಗೆ ತಿಳಿಸುವಷ್ಟು ಕೃಪೆಯು ಅಧಿಕಾರಿಗಳು ವಹಿಸಬಾರದೆ! ಯೆಂಬದು.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕುಜಾತವೃತ್ತಾಂತಗಳು.

Return of the Dewan.—ಈ ಸಂಸ್ಥಾನದ ದಿವಾನರಾದ ಮೆ॥ ಕೆ. ಶೇಷಾದ್ರಿ ಅಯ್ಯರ್, ಬಿ. ಎ. ಬಿ. ಎಲ್. ಯವರು ಕಳೆದ ಸೋಮವಾರದಿನ ಉದಕಮಂಡಲದಿಂದ ಈಪುರಿಗೆ ವಾಪಸುಬಂದರು.

Birthday of the Mysore Prince.—ಈತಿಂಗಳ ೧೨ನೇ ತಾರೀಖ್ ಶನಿವಾರದದಿನ ಈ ಸಂಸ್ಥಾನದ ಯುವರಾಜರಾದ ಕೃಷ್ಣರಾಜ ಒಡೆಯರವರ ಯೆರಡನೇ ವರ್ಷವರ್ಧಂತಿ ಮಹೋತ್ಸವವಾದದರಿಂದ ಇಲ್ಲಿನ ತನಾಂ ಆಫೀಸುಗಳಿಗೂ ಆದಿನ ರಜಾ ಕೊಡಲ್ಪಡುವದು.

The Dewan.—ಈ ಸಂಸ್ಥಾನದ ದಿವಾನರಾದ ಮೆ॥ ಕೆ. ಶೇಷಾದ್ರಿಅಯ್ಯರ್ ಬಿ. ಎ. ಬಿ. ಎಲ್ ಯವರು ಬರುವ ಬುಧವಾರದದಿನ ಪ್ರಾತಃಕಾಲ ಇಲ್ಲಿಂದ ಮೈಸೂರಿಗೆ ದಯಮಾಡುತ್ತಾರೆಂದು ಕೇಳುತ್ತೇವೆ.

A charitable lottery.—ಈಪುರದಲ್ಲಿ ನೂತನವಾಗಿ ಸ್ಥಾಪಿಸಲ್ಪಟ್ಟಿರುವ ಸೇಂಟ್‌ಮಾರ್ತಾಸ್‌ಯೆಂಬವರ ಆಸ್ಪತ್ರಿಗೆ ಅರ್ಥೋಪಪತ್ತಿಯಂ ಕಲ್ಪಿಸುವ ಉದ್ದೇಶದೊಡನೆ ರೋಮನ್ ಕ್ಯಾಥೋಲಿಕ್ ಮತಕ್ಕೆ ಸೇರಿದ ಕನ್ಯೆಯರು ಒಂದು 'ಲಾಟರಿಯನ್ನು ಯೇರ್ಪಾಡು ಮಾಡುವ ಪ್ರಯತ್ನದಲ್ಲಿರುತ್ತಾರೆಂದು ಒಳದೇಶದ ಸ್ಪೆಕ್ಟೇಟರ್‌ಪತ್ರಿಕೆ ಹೇಳುತಿದೆ.

Mr. P. Nunjunda Naidu.—ಶಿವಮೊಗ್ಗಾ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ ಪೋಲೀಸ್ ಇನ್

ಸ್ಪೆಕ್ಟರ್ ಮೆ|| ಪಿ ಸುಬ್ಬರಾಯಡರವರು ತೀರ್ಥಹಳ್ಳಿ ತಾಲ್ಲೂಕು ಅಮಲ್ದಾರ್ ಮೆ|| ತಿರುಮಲಾಚಾರ್ಯರ ಗೈರ್ ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವತನಕ ಸದರೀಯವರ ಕೆಲಸವನ್ನು ಆಕ್ಟಿಂಗಿತರೀಕ್ ನೋಡುವಂತೆ ನೌಕರರಾದರೆಂದು ತಿಳಿಯಲಾದೆವು.

Re-opening of the Civil Courts.—ಕಳೆದ ಆರುವಾರಗಳ ಮೊದಲು ಬೇಸಿಗೆಯುಬಗ್ಗೆ ಈಸಂಸ್ಥಾನದ ಸಿವಿಲ್ ಕೋರ್ಟುಗಳೆಲ್ಲವು ಮುಚ್ಚಲ್ಪಟ್ಟಿರುತವೆಯಷ್ಟೆ ಸದರೀ ಕೋರ್ಟುಗಳೆಲ್ಲವು ಬರುವಬುಧವಾರದದಿನ ಮರಳಿ ತೆಗೆಯಲ್ಪಟ್ಟು ಕೆಲಸಗಳಿಗೆಪ್ರಾರುಭವಾಗುವವು.

The late British Resident.—ಇಲ್ಲಿನಬ್ರಿಟಿಷ್ ರೆಸಿಡೆಂಟ್ ಕೆಲಸವನ್ನು ಬದಲೀನೋಡುತಲಿದ್ದ ಮೆ|| ಸಿ. ಇ ಆರ್ ಗರ್ಡಿನ್‌ಸ್ಟನ್ ಯವರು ತಮ್ಮಕೆಲಸವು ಕಾಯಂ ರೆಸಿಡೆಂಟರವರಿಗೆ ಒಪ್ಪಿಸಿದ ತಾರೀಖ್ ಮೊದಲು ಒಂದುತಿಂಗಳ ಪ್ರಿವಿಲೀಜ್‌ರಜಾ ಕೊಡಲ್ಪಟ್ಟು ಈಗ ಉದಕಮಂಡಲದಲ್ಲಿರುತಲಿದಾರೆ. ಸದರೀ ರಜಾ ಪೂರ್ತಿಯಾದ ಕೂಡಲೇ ನೇಪಾಲಕ್ಕೆಹೋಗಿ ಅಲ್ಲಿನ ರೆಸಿಡೆಂಟ್ ಕೆಲಸವನ್ನು ಮರಳಿ ನಡೆಸುವರು

The Deputy Registrarship, Chief Court.—ಇಲ್ಲಿನ ಚೀಫ್‌ಕೋರ್ಟಿನ ಡೆಪ್ಯುಟಿ ರಿಜಿಸ್ಟ್ರಾರಾಗಿದ್ದ ಮೆ| ರೊಜೋರಿಯೊ ಎಂಬವರು ಆದಿತ್ಯವಾರದಲ್ಲಿ ಮೃತಪಟ್ಟರಷ್ಟೆ. ಸದರೀಯವರ ಕೆಲಸದಲ್ಲಿ ಹಿಂದೆ ಈದೇಶದಲ್ಲಿ ಪ್ರೋಲೀಸ್ ಇನ್‌ಸ್ಪೆಕ್ಟರಾಗಿದ್ದ ಮೆ| ಒಕಾನರ್ ಯೆಂಬವರನ್ನು ನೌಕರರ್ ಮಾಡಬೇಕೆಂದು ದಿವಾನರವರು ಯೋಚಿಸಿಇರುವಂತೆ ಬೆಳದಿಂಗಳವಾರದ ಪ್ರೋಸ್ಟು ಪತ್ರಿಕೆ ಹೇಳುತಿದೆ.

The *Evening Mail*.—ಈಪ್ಪುರದಲ್ಲಿ ಈವನಿಂಗ್ ಮೆಯಿಲ್ ಯೆಂಬ ಹೆಸರಿನಿಂದ ಹೊಸವಾಗಿ ಒಂದು ಇಂಗ್ಲಿಷ್‌ಪತ್ರಿಕೆ ಘೋಷಿಷಮಾಡಲ್ಪಡುವದೆಂದು ಹಿಂದಿನ ವಾರದಲ್ಲಿ ತಿಳಿಸಿದ್ದೆವಷ್ಟೆ ಸದರೀ ಪತ್ರಿಕೆಯು ಕಳೆದ ಸೋಮವಾರ ದಿವಸ ಮೊದಲು ಘೋಷಿತವಾಗುತ ನಮಗೂ ಒಂದುಪ್ರತಿ ಕಳುಹಿಸಲ್ಪಟ್ಟದ್ದನ್ನು ನಾವು ಕೃತಜ್ಞತೆಯೊಡನೆ ಬರಮಾಡಿಕೊಂಡೆವು ಅದರ ಮುಂದ್ರಾಂಕರವೂ ವಿಷಯಸುವಿಭಾಗವೂ ಬಹಳ ಚೆನ್ನಾಗಿರುವೆ ಈಪತ್ರಿಕೆಯನ್ನು ನಡೆಸತಕ್ಕವರು ಬಿಂದಿ ಪತದ್ವಿಷಯವಾಗಿ ಪ್ರೋಸ್ಪೆಕ್ಟಸ್ ಯಲ್ಲಿ ನಮೂದಿಸಿದ ಪ್ರತಿಜ್ಞೆಯನ್ನು ಶಾಶ್ವತಃ ನೆರವೇರಿಸುವದಾದರೆ ಅವರ ಉದ್ದೇಶಪ್ರಯತ್ನಗಳು ಸಂಪೂರ್ಣ ಫಲಕಾರಿ ಯಾಗುವದರಲ್ಲಿ ಯಷ್ಟುಮಾತ್ರವೂ ಸಂದೇಹವಿರಲಾರದು.

The weather.—ಈಚೆಗೆ ಸುಮಾರುಹತ್ತು ದಿನಗಳಮೊದಲು ಪ್ರತಿದಿನವಲ್ಲೂ ವಾಯುಕಃ ಯೆಡಬಿಡದೆ ಮೋಡಕವಿಯುತ, ಕೆಲವುವೇಳೆ ಬಲವಾಗಿಯೂ ಕೆಲವುಹೊತ್ತು ತುಂತುರು ಮಳೆಯೂ ಆಗುತಲಿದೆ ಈ ಪಟ್ಟಣದ ಕೆರೆಕುಂಟೆ ಬಾವಿಗಳಿಗೆ ವಿಶೇಷವಾಗಿ ನೀರುಬಂದುದಾಗಿ ತೋರಲಿಲ್ಲವು. ಪರಂತು ಭೂಮಿಯಲ್ಲಿ ತನುಹುಟ್ಟಿ ಹುಲ್ಲುಬೆಳೆಯುವದಕ್ಕೂ ತನ್ಮೂಲಕ ಪಶುಗಳಿಗೆ ಮೇವು ಉಂಟಾಗಲಿಕ್ಕೂ ಕಾರಣವಾಯಿತು ಅಕ್ಕಿ ತುಪ್ಪ ಮೊದಲಾದ ಪದಾರ್ಥಗಳ ಧಾರಣೆಗಳು ಈಚೆಗೆ ಸ್ವಲ್ಪ ಹೆಚ್ಚಾದವಲ್ಲದೆ ಒಳ್ಳೆಯ ಅಕ್ಕಿಯೂ ತುಪ್ಪವೂ ಸಿಕ್ಕುವದಿಲ್ಲವು. ಇತರಪದಾರ್ಥಗಳ ಧಾರಣೆಗಳು ಸಹ ಜಾಸ್ತಿಯಾಗಿಯೇ ಇರುತಿವೆ.

Another restriction.—ಮಾರ್ಚಿ ೩೦ನೇ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ದಿವಾನರವರ ಇಷ್ತಿಹಾರ್‌ನಾಮೆ ಯೊಂದು ಘೋಷಿತವಾಗಿರುತಿದೆ.—ನಂ. ೪೯, ರವಿನ್ಯೂ ೧೮೮೬—೭ನೇ ಸೆಕ್ಷನ್ ೧ನೇ ಕ್ಲಾಜ್ ಅನುಸರಿಸಿ ಇದರಿಂದ ತಿಳಿಯಪಡಿಸುವದೇನಾದರೆ—ಇನಾಂ ಜಮೀನುಗಳರತಕ್ಕ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಿಂದಾಗಲಿ, ಅಥವಾ ಏತದರ್ಥ ಡೆಪ್ಯುಟಿ ಕಮಿಷನರಿಂದ ಅಧಿಕಾರವುಪಡೆದು ಏರ್ಪಡುವ ಇತರ ಆಫಿಸರಿಂದಾಗಲಿ, ಕ್ರಮವಾದ ಪ್ಯಾಸ್ ಪಡೆದಹೊರ್ತು ಅಂತಾ ಇನಾಂ ಜಮೀನುಗಳಿಂದ ಮರಗಳು, ಬೊಂಬುಗಳು, ದೂಲಗಳು, ಯಾ ತರಾಯಿಗಳು ಇವುಗಳೊಂದೂ ಸಾಗಿಸಲ್ಪಡಕೂಡದೆಂಬದು.

Mileage.—ನಂ. ೭೨.—ಸರ್ಕ್ಯುಲರ್ ನಾನುಗಳು, ಮೈಲೇಜು ಯಾನೆ ಮೈಲಿಭತ್ಯೆ ಮತ್ತು ಪ್ರಯಾಣದ ಬತ್ತೇ ಯಿವುಗಳಿಗೆ ಸಂಬಂಧಪಟ್ಟ ೧೮೮೫ನೇ ಇಸವಿ ನವಂಬರ್ ೨೬ನೇ ಮರ್‌ಸ್ಕ್ ೧೩೦ನೇ ನಂಬರ್‌ಪತ್ರ ಮೈಸೂರು ಡಿ.ಪಿ ಚೀಫ್‌ಕಮಿಷನರವರ ಜನರಲ್ ದಿವಾನ್‌ಮೆಂಟಿನ ಇಷ್ತಿಹಾರ್‌ನಾಮ ವಿಷಯದಲ್ಲಿ ಇದರ ಕೆಳಕಂಡ ಮಾರ್ಪಾಟ ಪ್ರಯಾಣ ಭತ್ಯೆದರಗಳು ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುತ್ತವೆ ಮತ್ತು ಈದರಗಳು ೧೮೮೬ನೇ ಇಸವಿ ಮೇಗುರ್ರೆ ತಾರೀಖು ಲಾಗಾಯಿತು ಜಾರೀಯಲ್ಲಿ ಬರತಕ್ಕದ್ದು. ತಮಗೆ ಅಸಿಸ್ಟೆಂಟ್ ಕಮಿಷನರ್‌ಗಳೂ, ಇದರಡಿ ಕಂಡ ಮಲೆನಾಡ ತಾಲ್ಲೂಕುಗಳಲ್ಲಿ ಸಂಚಾರ ಮಾಡುತ್ತಿರುವಾಗ ರೋಜೀನಾ ದರೂ ದಿನಗಳಪ್ರಕಾರ ಬತ್ತೆಗೂ ಮೈಲಿ ೧ಕ್ಕೆ ೪ ಪ್ರಕಾರ ಮೈಲಿಭತ್ತೆಗೂ—ಹಕ್ಕುದಾರರಾಗಿರತಕ್ಕದ್ದು. ತಾಲ್ಲೂಕುಗಳು.—ಕಡೂರು ಡಿಸ್ಟ್ರಿಕ್ಟಿನಲ್ಲಿ-ಚಿಕ್ಕಮಗಳೂರು, ಕೊಪ್ಪ ವ ಮೂಡುಗೆರೆ. ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ-ಸಾಗರ, ನಗರ, ಸೊರಬ, ತೀರ್ಥಹಳ್ಳಿ ತಾಲ್ಲೂಕುಗಳು. ಹಾಸನಡಿಸ್ಟ್ರಿಕ್ಟಿನಲ್ಲಿ-ಮಂಜರಾಬಾದು ವ ಬೇಲೂರು.

CORRESPONDENCE.

ಅಯ್ಯಾ—ನಮ್ಮಂತಾ ಅದೃಷ್ಟವಂತರೊಬ್ಬರನ್ನೂ ಕಾಣೆವು, ನಾವೇ ಧನ್ಯರೆಂದುದ್ಘೋಷಿಸಿ ಹೇಳುವೆವು, ನಮ್ಮ ಸಂತೋಷಕ್ಕೆ ಪಾರವಿಲ್ಲವು. ಇದನ್ನೇ ಮುಂದೆಯೂ ನಾವು ಅಪೇಕ್ಷಿಸುವೆವು ನಮ್ಮ ಸಂತೋಷವೆಂಬದು ಪ್ರಬಲವಾದ ಕಷ್ಟಕ್ಕೆ ಗುರಿಯಾಗದಿರುವಾಗಲೂ, ಅಂತಾದ್ದರಿಂದ ನಿವೃತ್ತರಾಗುವಾಗಲೂ ಉಂಟಾಗತಕ್ಕ ಮನೋಭಾವನೆಂದರಿಯುವದು. ಈದೇಶದಲ್ಲಿ ಪ್ರಜೆಗಳು ಸರ್ಕಾರ್ ನೌಕರರೆಂತಲೂ, ವರ್ತಕರೆಂತಲೂ, ಕೃಷಿಜೀವಿಗಳೆಂತಲೂ, ಮೂರುಬಗೆಯವರಾಗಿರುತ್ತಾರಷ್ಟೆ, ಈ ದೇಶದಲ್ಲಿರುವ ಸದರೀ ಮೂವರ ಸ್ಥಿತಿಯನ್ನೂ ಇದಕ್ಕೆ ಅದರಾಚೆನೊಳಿರುವ ಮದರ್ ಪ್ರೆಸಿಡೆನ್ಸಿ ಸೀಮೆಯಲ್ಲಿರತಕ್ಕವರ ಸ್ಥಿತಿಯನ್ನೂ ಪರ್ಯಾಲೋಚಿಸಿ ನೋಡಲಾಗಿ ಅವರಿಗಿಂತ ಇಲ್ಲಿನವರು ಪುಣ್ಯವಂತರೆಂದು ಹೇಳಬಹುದಾಗಿದೆ ಅನುತಾಪಿಸಪತ್ನ ಪೃಥ್ವಿ ಶ್ರೀಮನ್ಮಹಾರಾಜ್ಞೀಯವರ ಸಾಕ್ಷಾತ್ಪ್ರಜೆಗಳು ನೇಟಿವ್ ಅರಸರ ಪ್ರಜೆಗಳಿಗಿಂತಲೂ ನಿಶ್ಚಯ ಸಂತೋಷ ಪೂರ್ಣರಾಗಿರಬೇಕಾದ್ದೂ, ಅಂತಹ ಸ್ಥಿತಿಯನ್ನೇ ಇತರರು, ಸಹ ಕೋರಬೇಕಾದ್ದೂ ಸಹಜವಾಗಿರುತಿವೆ ಪರಂತು ತತ್ಕಾಲದಲ್ಲಿ ಸದರೀ ಪ್ರಜೆಗಳ ಸ್ಥಿತಿಯೂ ಅಭಿಪ್ರಾಯಗಳೂ ಸಾಕ್ಷಾತ್ ವ್ಯತ್ಯಸ್ತವಾಗಿವೆ, ಹ್ಯಾಗೆಂದರೆ—ಪ್ರಥಮತಃ ಉದ್ಯೋಗಸ್ಥರನ್ನೇ ತೆಗೆದುಕೊಂಡು ಸ್ವಲ್ಪ ವಿಚಾರಮಾಡುವಣ ಮದರಾಸ್ ಮುಂತಾದ ಪ್ರಾಂತಗಳಲ್ಲಿ ಲವಾಜಮಾ ಕಡಿಮೆ ಮಾಡಬೇಕೆಂಬ ಗದ್ದಲ ವೊಂದು ಏರ್ಪಟ್ಟಿರುವದರಿಂದ ಸರ್ಕಾರ್ ನೌಕರಿಗಳಲ್ಲಿರುವವರುಗಳು ಬಹಳ ಭಯದಲ್ಲಿ ಸಂದೇಹಿಸುತ ಅನವರತ ಭೀತರಾಗಿದಾರೆ. ಇದಲ್ಲದೆ ಯೆಲ್ಲರ ಸಂಬಳದಲ್ಲಿಯೂ ಸರಾಸರಿ ಸೇಕಡಾ ಇಷ್ಟು ರೂಪಾಯಿಗಳು ಕಡಮೆ ಮಾಡಬೇಕೆಂದು ವ್ಯವಸ್ಥೆಯಾಗಿರುವಂತ ತಿಳಿಯಬರುತಿದೆ. ಮತ್ತೂ ಐನೂರು ರೂಪಾಯಿಗಳಿಗೆ ಮೇಲ್ಪಟ್ಟ ಆಯತಿಯುಳ್ಳವರೆಲ್ಲರೂ, ಟ್ಯಾಕ್ಸ್ ಕೊಡಬೇಕೆಂಬ ನಿರ್ಬಂಧ ಸಹ ಉಂಟುಮಾಡಲ್ಪಟ್ಟದೆ. ಏತೇನ ಮದರಾಸ್ ಪ್ರೆಸಿಡೆನ್ಸಿಯ ಉದ್ಯೋಗಸ್ಥರ ಜೀವನವು ನಿಶ್ಶಂಕವಾದ್ದಾಗಿಯೂ, ಆನಂದವನ್ನುಂಟುಮಾಡತಕ್ಕದ್ದಾಗಿಯೂ ಇಲ್ಲವು. ಈ ದೇಶದೊಳಾದರೋ ಈ ಪ್ರಥೀವಪವರಿಗೆ ತಾದೃಶ ಅನುತ್ಸಾಹಾನುಪತ್ತಿಗಳೊಂದಕ್ಕೂ ಅವಕಾಶವಿಲ್ಲವು. ಲವಾಜಮೆ ಕಡಮೆ ಮಾಡಬೇಕೆಂಬ ಶಬ್ದವು ಇಲ್ಲಿನವರಿಗೆ ಕುದ್ಧಾಂಗ ಮರೆತುಹೋಯಿತು ಇದನ್ನೇ ಒಂದು ಅಂಕಿತವನ್ನಾಗಿ ಪಡೆದಿದ್ದಂತಾ ಸಾಬಿಕ್ ದಿವಾನರೊಡನೆ ಇದೂ ನಶಿಸಿಹೋದದರಿಂದಲೂ, ಅವರು ಗತಿಸಿ ಈಗ ೩ ವರುಷಗಳಿಗೆ ಮೇಲ್ಪಟ್ಟದರಿಂದಲೂ, ಅವರಿಗೆ ಪ್ರತಿಯಾಗಿ ಬಂದವರು ತದ್ವಿರುದ್ಧಸಂಕಲ್ಪವುಳ್ಳವರಾಗಿರುವದರಿಂದಲೂ, ಜನಗಳು "ಲವಾಜಮಾಕಮ್ಮಿ" ಎಂಬ ಶಬ್ದವನ್ನಾಗಲಿ ತತ್ಪ್ರಯುಕ್ತವಾದ ಚಿಂತೆಯನ್ನಾಗಲಿ, ತನ್ನಿಮಿತ್ತಕವಾದ ಸಂಕಟವನ್ನಾಗಲಿ ಸ್ಮರಿಸಲಿಕ್ಕೆ ಸಹ ಅವಕಾಶವಿಲ್ಲವಾಯಿತು. ಇಷ್ಟುಮಾತ್ರವಲ್ಲದೆ ಇಲ್ಲಿನವರು ಅಸಾಧಾರಣಭಾವ ಇಚ್ಛೆಗಳನ್ನು ಪಡೆಯುತ ಸಂತೃಪ್ತರಾಗಿದಾರೆ. ಮತ್ತು ಇವರ ಅನುಕೂಲ್ಯಗಳಲ್ಲಿ ಕೊರತೆ ಯುಂಟಾಗಕೂಡದೆಂಬ ಉದ್ದೇಶದೊಡನೆ ಪ್ರೂರಾತಲಬ್ ಅಲ್ಲದೆ ದಾರಾಳವಾಗಿ ಕೊಡಲ್ಪಡತಕ್ಕ ಬತ್ಯ ಮುಂತಾದವುಗಳಿಂದಲೂ ಇವರ ಆನಂದವು ಇಮ್ಮಡಿಸುತಲಿದೆ. ಅನಿರ್ವಚನೀಯವಾದ ಇಂತಾ ಆನಂದ ಪಾರವಶ್ಯತೆಯಿಂದ ಇದೇಶಾಶ್ವತಸ್ಥಿತಿಯೆಂಬ ಭಾವವು ಇವರ ಹೃದಯದೊಳು ದಾರ್ಢ್ಯವನ್ನೈದಿದೆ ಮತ್ತು ವಾಸ್ತವ್ಯವಾಗಿ ಸಕಲಾಂಶದಿಂದಲೂ ಇವರು ಇತರಾಪೇಕ್ಷೆಯಾ ಸಂತುಷ್ಟರಾಗಿದಾರೆ. ವರ್ತಕರ ಸ್ಥಿತಿಯನ್ನು ಆಲೋಚಿಸಲಾಗಿ ಮದರಾಸ್ ಪ್ರಾಂತದವರು ಅನೇಕವಿಧ ನಿರ್ಬಂಧಗಳಿಗೆ ಪಾತ್ರರಾಗಿದಾರೆ. ಸರ್ಕಾರ ಉದ್ಯೋಗಸ್ಥರಂತೆ ಇವರೂ ಇನ್‌ಕಂಟ್ಯಾಕ್ಸಿನ ಪೀಡೆಯಿಂದ ತಪ್ಪಿದವರಲ್ಲವು. ಹೀಗೆಯೇ ಅನೇಕವಿಧ ಕಂದಾಯಗಳಿಂದಲೂ, ಅಲ್ಲಿನ ವರ್ತಕರು ಬಹಳ ಸಂಕಟಪಡುತಲಿದಾರೆ. ಇಲ್ಲಿನವರಿಗೆ ಅಂತಾ ತೊಂದರೆಗಳೊಂದೂ ಇಲ್ಲವು. ಇವರು ನಿರ್ವಂಚನೆಯಾಗಿ ಸಂಪಾದಿಸುವ ಲಾಭವೆಲ್ಲವೂ ನಿರಾತಂಕವಾಗಿ ಧನಕೋಶಗಳಲ್ಲಿ ಸೇರುತಿದೆ. ಇದೇ ಇವರ ಇತರ ಸಂತೋಷಗಳಿಗೆ ಮುಖ್ಯಕಾರಣವಾಗಿರುತಿದೆ. ಮದರಾಸಿನಲ್ಲಿ ರೈತರು ಕೊಟ್ಟ ಕಂದಾಯಗಳನ್ನೇ ಮರಳಿ ಕೊಡುತಲೂ ಹಾಗೆ ಕೊಡದೆ ತಪ್ಪಿದರೆ ರವಿನ್ಯೂ ಉದ್ಯೋಗಸ್ಥರು ಮಾಡುವ ನಾನಾವಿಧ ಸಂಕಟಗಳಿಗೆ ಗುರಿಯಾಗುತಲೂ ಕದಾಚಿತ್ ತಮ್ಮ ಸರ್ವಸ್ವವನ್ನು ಕಳೆದುಕೊಳ್ಳುತಲೂ ಶ್ರಮಪಡುತಲಿದಾರೆ. ಈ ದೇಶದಲ್ಲಿ ಅಂತಾದ್ದೊಂದಕ್ಕೂ ಅವಕಾಶವಿಲ್ಲವು. ಇಲ್ಲಿ ತಹಸೀಲ್‌ದಾರರ ಅಭಿಮಾನ ವೊಂದು ಅದೃಷ್ಟವಶಾತ್ ಜಲವತ್ತರವಾಗಿದ್ದಲ್ಲಿ ಕಂದಾಯದ ತಗಾದೆ ಯೆಂಬದು ಇವರನ್ನು ಸ್ವಲ್ಪವೂ ಬಾಧಿಸಲೊಲ್ಲದು. ಇನ್ನೂ ಕೆಲವು ಕಾರಣಗಳಿಂದ ರೈತರು ಸಹ ಈ ದೇಶದಲ್ಲಿ ಸಂತುಷ್ಟರಾಗಿದಾರೆ. ಮುಖ್ಯವಾಗಿ ನಾವು ಅದೃಷ್ಟಶಾಲಿಗಳೆಂಬದನ್ನು ಇವರಿಂದಲೇ ನಿರ್ಧರಿಸಿ ಹೇಳಬಹುದಾಗಿದೇನೆಂದರೆ—ಮದರಾಸಿನವರಿಗೆ ಪ್ರಾಪ್ತವಾದ ಸಾಬಿಕ್ ಬೆಂಗಳೂರು ವೊಕದ್ದಮೆಯಂತಾದ್ದೊಂದೂ ನಮಗೆ ಉಂಟಾಗಲಿಲ್ಲವು ತಂಜಾವೂರು ಡಿಸ್ಟ್ರಿಕ್ಟಿನ ಉದ್ಯೋಗಸ್ಥರಿಗೆ ಉಂಟಾದ ಉದ್ಯೋಗನಾಶವಾಗಲಿ, ಕಂದಾಯ ರಿಮಿಷನ್ ಕೊಡಲ್ಪಡದ ಬಾರವಂಬ ನಿರ್ಬಂಧವಾಗಲಿ ನಮಗೆ ಇಲ್ಲವು ಕೇಳಲು ಕಲಹವೆಂತಾದ್ದೋ ನಾನರಿಯೆವು. ಗ್ಯಾಜಿನ್ಸನ್ ವರೋಪ ಯಂತಾದ್ದನ್ನು ಇದುವರೆವಿಗೆ ನಾವು ಕೇಳಲಿಲ್ಲವು. ಮುಖ್ಯವಾಗಿ ಗ್ರಾಂಡೆದಫ್ ಮುವರಂತಾ ಬ್ರಿಟಿಷ್‌ಆಪೀಸರರ ಪಾಲನೆಗೊಳಗಾಗಿರುವ ಪ್ರಜೆಗಳಿಗಿಂತಲೂ, ಒಬ್ಬ ನೇಟಿವ್ ಉದ್ಯೋಗಸ್ಥರ ಆಡಳಿತದಲ್ಲಿ ಜನಗಳು ಸುಖಸಮಾಧಾನವಿಂದಿದಾರೆಂಬ ನನ್ನ ಮಾತು ಬ್ರಿಟಿಷ್ ಪ್ರಾಕಸ್ತ್ಯಕ್ಕೆ ಮಾಲಿನ್ಯ ಉಂಟುಮಾಡುವದಾಗಿರುವ ಪಕ್ಷದಲ್ಲಿ ಕ್ಷಮಿಸ ಬೇಡುತ್ತೇನೆ.

ಮೈಸೂರು ದೇಶೀಯನು

SUMMARY OF NEWS.

ವೃತ್ತಾಂತ ಸಂಗ್ರಹವು

ಸಂಗೀತಕ್ಕೇಸ್ಕರ ನಾಟಕಕಂಪೆನಿಯವರಿಗೆ ಬೆಳಗಾಂನಲ್ಲಿ ಮೊದಲನೇ ಎರಡನೇ ಆಟಗಳಿಗೆ ೧೨೦೦ ರೂಪಾಯಿ ಉತ್ಪತ್ತಿಆಯಿತು.

ಹೋದ ಮಾರ್ಚಿತಿಂಗಳಲ್ಲಿ ಹಿಂದುಸ್ಥಾನ ಸರ್ಕಾರದವರು೧ಲಕ್ಷರೂಪಾಯಿಗಳಪುಸ್ತಕಗಳು ಕ್ರಯಕ್ಕೆ ತೆಗದುಕೊಂಡರು.

ಪೆನಿನಪಟ್ಟಣದಲ್ಲಿ ಕುಬಾಲ್ ಜಾಬಾದ್ ಉಪದ್ರವವು ವೃದ್ಧಿಯಾಗುತಬರುವಂತೆ, ಮಾಹೇಮಚಕೂರ್ ೮ನೇತಾರೀಖಿನ ತಂತಿವೃತ್ತಾಂತದಮೂಲಕ ತಿಳಿಯಬರುತಿದೆ.

ಕಳೆದ ಜನವರಿತಿಂಗಳ ಗುರ್ರೀತಾರೀಖ್ ಮೊದಲು, ಮಾಹೆಮಜಕೂರ್ ೬ನೇ ತಾರೀಖಿನತನಕ ಮದರಾಸಿನಲ್ಲಿ ಒಟ್ಟು ೪ಟ್ಲಪೆ ಅಂಗುಳ ಮಳೆ ಆಗಿರುತಿದೆ. ಈಕಾಲದೊಳು ಸರಾಸರಿ ೮೪ಅಂಗುಲವು ಮಳೆಆಗ ಬೇಕಾಗಿರುತಿದೆ. ಇದರಿಂದ ಈಸಲ ಮದರಾಸ್ ಪ್ರಾಂತದಲ್ಲಿ ಅತಿವೃಷ್ಟಿಯೆಂದೇರ್ಪಟ್ಟಿತು.

ಇರಿವೆಗಳದಾಳಿ.—ಬೆಳಗಾಂ ತಾಲ್ಲೂಕುಪೈಕಿ ಕಾಲಕುಂಡೀಗ್ರಾಮದಲ್ಲಿ ಒಬ್ಬ ಶೂದ್ರ ಹೆಂಗಸು ತನ್ನ ಸಣ್ಣಕೂಸನ್ನು ಹೊರಸಿನಮೇಲೆ ಮಲಗಿಸಿದ್ದಳು ಆಗ ಯಾವತ್ತುಯಿರಿವೆಗಳುಕೂಡಿ ಆ ಕೂಸಿನ ಎಳೇತಲೆಯನ್ನುತಿಂದುಬಿಟ್ಟವು. ಹೀಗಿರಲಾಗಿ ಆಕೂಸಿನತಾಯಿಯು ಅದನ್ನುನೋಡಿದಳು. ಮತ್ತು ಅದರಿಂದ ಇರಿವೆಗಳೆಲ್ಲಾ ಸಾಗದೇಹೋಯಿತು. ಆದರೂ ಈಗ ಅದರಿಂದ ಆ ಮಗುವಿಗೆ ಉಂಟಾದ ಘಾಯದಿಂದ ಅದು ವಾಸಾಗುವಂತೆ ತೋರುವದಿಲ್ಲವು. ಇರಿವೆಗಳು ಇಷ್ಟೆಲ್ಲ ಘಾಯ ಮಾಡುವತನಕ ಯಾರಿಗೂ ತಿಳಿಯಲಿಲ್ಲವಂತೆ. ಚಿಕ್ಕ ಕೂಸುಗಳ ತಾಯಿಗಳು ತಮ್ಮ ಕೂಸುಗಳ ಬಗ್ಗೆ ವಿಶೇಷ ಜಾಗ್ರತೆಯುಳ್ಳವರಾಗಿರಬೇಕು.

ಮರಣಾಂತದ ಶಿಕ್ಷೆಯನ್ನು ಹೊಂದಿದವನಿಗೆ ಬಹಳ ಯಾತನೆಯಾಗದೆ ಅನಾಯಾಸವಾಗಿ ಜೀವ ಹೋಗುವ ಒಂದು ಹೊಸ ಯುಕ್ತಿಯು ಅಮೆರಿಕಾ ಖಂಡದಲ್ಲಿ ಶೋಧಿಸಲ್ಪಟ್ಟಿರುತ್ತದೆ. ಅದೇನೆಂದರೆ—ಶಿಕ್ಷೆಯನ್ನು ವಿಧಿಸಲ್ಪಟ್ಟ ಮನುಷ್ಯನಿಗೆ ಒಂದು ಖುರ್ಚಿಯ ಮೇಲೆ ಕುಳ್ಳರಿಸಿಸಿ, ಅವನಕೈಕಾಲುಗಳನ್ನು ಒಂದು ತರದ ಧಾತುವಿನ ಹಲಿಗೆಯ ಮೇಲಿರಿಸುವರು. ಆ ಹಲಿಗೆಗೂ ವಿದ್ಯುಲ್ಲತೆಯ ಯಂತ್ರದೊಳಗಣ ಒಂದು ಸರಿಗೆಗೂ ಸಂಬಂಧವಿರುವದು. ಸೂಚನೆ ಕೊಟ್ಟ ಕೂಡಲೆ ಆ ವಿದ್ಯುಲ್ಲತೆಯ ಯಂತ್ರದ ಚಕ್ರವನ್ನು ತಿರಿಗಿಸುವರು. ಅದರಿಂದ ಆ ಕೂಡಲೇ ಆ ಮನುಷ್ಯನು ಮೃತಪಡುತ್ತಾನಂತೆ.

ಈ ವಾರದ "ಇಂಡಿಯನ್ ಇಕೊ" ಪತ್ರದಲ್ಲಿ ೧೮೪೯ನೇ ವರುಷ ಪಂಜಾಬನ್ನು ಬ್ರಿಟಿಷ್‌ರಾಜ್ಯಕ್ಕೆ ಕೂಡಿಸುವ ಸಮಯ ಇನ್ನೂ ಚಿಕ್ಕವನಾಗಿದ್ದ ದಿಲೀಪ್‌ಸಿಂಗನೊಡನೆ ಲಾಹೋರಲ್ಲಿ ನಮ್ಮ ಸರ್ಕಾರದವರು ಮಾಡಿದ ಒಡಂಬಡಿಕೆಯು ಕೊಡಲ್ಪಟ್ಟಿರುತಿದೆ. ಅದರ ಮುಖ್ಯ ಪರತ್ತುಗಳು ಯಾವವುದರೆ.—

ಮಹಾರಾಜಾ ದಿಲೀಪ್‌ಸಿಂಗ್‌ರವರು ತಾವೂ ತಮ್ಮ ಸಂತತಿಯವರಿಗೂ ತಮ್ಮ ತರುವಾಯ ಬರುವವರೂ ಪಂಜಾಬ್ ದೊರೆತನಕ್ಕೆ ಇರುವ ಯಾವದೊಂದುತರದಹಕ್ಕನ್ನೂ ಬಿಟ್ಟುಕೊಡಬೇಕು.

೨. ಬ್ರಿಟಿಷ್ ಸರ್ಕಾರದವರಿಗೆ ಯುದ್ಧ ಸಂಬಂಧವಾಗಿ ಹತ್ತಿದ ಖರ್ಚಿನ ಮತ್ತು ಈ ಲಾಹೋರ್ ಸಂಸ್ಥಾನದವರು ಕೊಡಬೇಕಾಗಿರುವ ಸಾಲವು ಹೋಗಲಾಗಿ ಉಳಿದ ಹಣವೆಲ್ಲ ಈಸ್ಟಿಂಡಿಯನ್ ಕಂಪೆನಿಯವರಿಂದ ಜಪ್ತೀ ಮಾಡಲ್ಪಡಬೇಕು.

೩. ಷಹಾ ಸುಜಾ ಉಲ್ಮುಲುಕನ ಕಡೆಯಿಂದ ರಣಜಿತ್‌ಸಿಂಗ್ ದಿಲೀಪ್‌ಸಿಂಗರ ತಂದೆಯು ತೆಗದು

ಕೊಂಡಿದ್ದ ಕೋಹಿನೂರು ರತ್ನವು ಮಹಾರಾಣಿಯವರಿಗೆ ಒಪ್ಪಿಸಲ್ಪಡಬೇಕು.

೪. ದಿಲೀಪಸಿಂಗರಿಗೆ ಅವರ ಸ್ವಂತ ಆಪ್ತರ ಮತ್ತು ಸೇವಕರೆಲ್ಲರ ಸಂರಕ್ಷಣೆಗಾಗಿ ಪ್ರತಿವರುಷವೂ ನಾಲ್ಕುಲಕ್ಷ ರೂಪಾಯಿಗಳಿಗೆ ಕಡಮೆ ಇಲ್ಲದೆಯೂ, ಐದುಲಕ್ಷರೂಪಾಯಿಗಳಿಗೆ ಹೆಚ್ಚು ಇಲ್ಲದೆಯೂ ವರ್ಷಾಸನ ಕೊಡಲಾಗುವದು.

ಮುಂಬೈ ಇಲಾಖೆಯೊಳಗೆ ಉದ್ಯೋಗ ಶಾಲೆಗಳ ಕೊರತೆಯುಂಟೆಂತ ಜನರಿಗೆ ತಿಳಿಯಲಾಗುವಷ್ಟರೊಳಗೆ ನಮ್ಮ ವಿದ್ಯಾಧಿಪಾನಿಗಳಾದ ಗವರ್ನರ ದೊರೆಗಳು ಹುಬ್ಬಳ್ಳಿಯಲ್ಲಿ ಹೈಸ್ಕೂಲ ಬದಲಾಗಿ ವ್ಯಾಪಾರಿ ಶಾಲೆ (ಕಮ್ಮರ್ಷಿಯಲ್ ಸ್ಕೂಲ್) ಸ್ಥಾಪಿಸಬೇಕಾಗಿ ಆಲೋಚಿಸಿದ್ದು ಉದ್ಯೋಗ ಶಾಲೆಗಳ ಸ್ಥಾಪನೆಗೆ ಮುಹೂರ್ತವೇ ಆಯಿತು. ಹುಬ್ಬಳ್ಳಿಯಲ್ಲಿ ಸ್ಥಾಪಿಸ ಬೇಕೆಂಬ ಶಾಲೆಯಲ್ಲಿ ಯಾವ ಯಾವ ವಿಷಯಗಳನ್ನು ಕಲಿಸಬೇಕೆಂಬದು ಗವರ್ನರ ದೊರೆಗಳು ಏನೂ ಸೂಚಿಸಲಿಲ್ಲ; ಅದು ಜನರ ಕಡೆಗೆ ಬಿಟ್ಟಿರುತ್ತಾರಾಗಿ ಕಾಣುತ್ತದೆ. ಆ ಪ್ರಕಾರ ಜನರ ತರ್ಫೆನಿಂದ ರಾ|| ಸಾ. ಎಜ್ಯುಕೇಶನಲ್ ಇನ್ಸ್‌ಪೆಕ್ಟರ ತಯಾರ ಮಾಡಿದ ಕಲಿಸತಕ್ಕ ವಿಷಯಗಳ ಟಿಪ್ಪಣಿಯು ನಾವು ಕಳೆದ ಹಿಂದಿನ ಪತ್ರದಲ್ಲಿ ಪತ್ರವ್ಯವಹಾರದ ಕೆಳಗೆ ಪ್ರಕಟಿಸಿರುತ್ತೇವೆ. ಈ ವಿಷಯಗಳನ್ನು ನೋಡಲು ಈ ಶಾಲೆಗೆ ಕೊಟ್ಟ ಹೆಸರು ಒಪ್ಪುವದಿಲ್ಲ. ಯಾತಕ್ಕಂದರೆ, ವ್ಯಾಪಾರಿ ಶಾಲೆಯಂದರೆ ಕೈಬರಹ ಜಮಾ ಖರ್ಚು ಇಡುವದು; ಪತ್ರವ್ಯವಹಾರ ಮತ್ತು ಹುಂಡಿ ಚಿಂಡಿಗಳ ಬರೆಯುವ ನಮೂನೆ ಮೊದಲಾದ ವ್ಯಾಪಾರ ಸಂಬಂಧದ ವಿಷಯಗಳ ಕಲಿಸಿದರೆ ಸಾಕು. ಚಿತ್ರಕಲೆ, ಬಡಿಗಾರಿಕೆ, ಕಮ್ಮಾರಿಕೆ ಮೊದಲಾದವುಗಳು ಉದ್ಯೋಗ ಶಾಲೆಗಳಿಗೆ ಸಂಬಂಧಿಸಿದಂತಾ ವಿಷಯಗಳಾಗಿರುತಿವೆ; ಮತ್ತು ಇಂಥ ವಿಷಯಗಳನ್ನು ಕಲಿಸ ಬೇಕೆಂತ ಮಾಡಿದ ಸೂಚನೆಯ ಮೇಲಿಂದ ಉದ್ಯೋಗ ಶಾಲೆ ಹಾಗೂ ವ್ಯಾಪಾರಿ ಮಾಹಿತಿ ಬೇರೆ ಬೇರೆ ಶಾಲೆಗಳು ಮಾಡುವದರ ಬದಲಾಗಿ ಒಂದೇ ಕಡೆ ಇರಬೇಕೆಂಬದೇ ಮುಖ್ಯ ಉದ್ದೇಶವಿರಬಹುದು. ಹೀಗಾದಪಕ್ಷಕ್ಕೆ ಉದ್ಯೋಗ ಸಂಬಂಧದ ಅನೇಕ ವಿಷಯಗಳು ಇನ್ನೂ ಈ ಟಿಪ್ಪಣೆಗೆ ಕೂಡಿಬೇಕಾದವು. ಮತ್ತು ಜನರಿಗೆ ಅದರಿಂದ ಬಹಳ ಉಪಯೋಗ ವಾದೀತು.

ಭವಿಷ್ಯ—ಒಬ್ಬ ಬಂಗಾಳೀ ಜ್ಯೋತಿಷಿಯು ನಡೆಯುವ ಇಂಗ್ಲಿಷ ವರುಷದಲ್ಲಿ ಸಂಭವಿಸುವ ಭವಿಷ್ಯವನ್ನು ಹೇಳುತ್ತಾನೇನಂದರೆ'—ಮುಂದಿನ ಪಾರ್ಲಿಮೆಂಟಿನ ಇಲೆಕ್ಷನದಲ್ಲಿ ಒಬ್ಬ ಬಂಗಾಳಿ ಬಾಬು ಆರಿಸಲ್ಪಡುವನು. ಎಲ್ಲಾ ಜನರ ದೃಷ್ಟಿಯೂ ಕಾಶ್ಮೀರದ ಕಡೆಗೆ ಹೋಗುವದು. ಬಂಗಾಳದ ದಕ್ಷಿಣ ಭಾಗದಲ್ಲಿ ಪ್ರಾಣ ಘಾತವು ಲೆಕ್ಕವಿಲ್ಲದೆ ಆಗುವದು. ಇದೀ ಪೃಥ್ವಿಯೊಳಗಿನ ವ್ಯಾಪಾರವೆಲ್ಲ ಕುಂದಿ ಹೋಗಿ ಹಿಂದುಸ್ಥಾನಕ್ಕೆ ಬಹಳ ನಷ್ಟ ಉಂಟಾಗುವದು; ಹಿಂದುಸ್ಥಾನ ಸರ್ಕಾರದವರು ಯುದ್ಧಕ್ಕೋಸ್ಕರ ತಯಾರಿಯನ್ನು ಮಾಡುವರು; ಮತ್ತು ಹಿಂದುಸ್ಥಾನದ ವಾಯವ್ಯ ಹಾಗೂ ಈಶಾನ್ಯ ಸರಹದ್ದಿನ ಮೇಲೆ ಆಗಿಂದಾಗ್ಯೆ ಸಣ್ಣಸಣ್ಣ ಯುದ್ಧಗಳೆಸಗುತ್ತಿರುವವು; ಲಾರ್ಡ ಡಫರಿನ ಪ್ರಭುಗಳ ಪ್ರಕೃತಿಯು ಕೆಟ್ಟು ಹೋಗುವದು; ಹಾಗೂ ಅವರು ಹಿಂದುಸ್ಥಾನದ ಹೊರಗೆ ಹೋಗುವದಕ್ಕೆ ಪ್ರಯತ್ನಿಸುವರು; ಮಿಸ್ಟರ್ ಗ್ಲ್ಯಾಡಸ್ಟನ ದೊರೆಗಳ ಅಂತ್ಯದ ಆನಂದಕಾರಕವಾದ ವರುಷವು ಹೋಗುವದು; ಅಕ್ಟೋಬರ ಹಾಗೂ ನವಂಬರ ತಿಂಗಳಲ್ಲಿ ರೋಗದ ನೋಂಕು ಹಬ್ಬುವದು; ಕಲಿಕತ್ತೆಯೊಳಗಿನ ಒಬ್ಬ ಪ್ರಸಿದ್ಧ ಪಂಡಿತನು ಸಾಯುವನು; ಒಂದು ಭರಣೀಕಷ್ಟವಾಗುವದು; ಕೆಲವು ತಿಂಗಳಲ್ಲಿ ಕಲಿಕತ್ತೆಯ ಹೈಕೋರ್ಟಿನೊಳಗೆ ಒಂದು ಕಟ್ಲೆಯು ಬಂದು ಅದರ ಕಡೆಗೆ ಎಲ್ಲರೂ ದೃಷ್ಟಿಯೂ ಹೋಗುವದು. ಸಿಕ್ಖದವರು ಅಸಂತುಷ್ಟರಾಗುವರು. ಟಿಬೆಟಿನಲ್ಲಿ ಗಡಿಬಿಡಿಯುಂಟಾಗುವದು, ವಾಯವ್ಯಪ್ರಾಂತದತ ಹೊಗೆಬಂಡಿಯಿಂದ ಅಪಘಾತವಾಗುವದು, ಎಂಬದು. ಇವುಗಳಲ್ಲಿ ಯಾವದು ಖರೆಯಾಗುತ್ತದೆ, ಹಾಗೂ ಯಾವದು ಸುಳ್ಳಾಗುತ್ತದೆಂಬದನ್ನು ನೋಡುವಾ.

ಕಳೆದತಿಂಗಳ ತಾ|| ೧೧ನೇ ದಿನ ಶಿರಶಿ ತಾಲ್ಲೂಕು ಮತ್ತಿಗಾರಯೆಂಬ ಗ್ರಾಮದಲ್ಲಿ ಬಹುದೊಡ್ಡ ಒಂದು ಸಭೆಯು ಕೂಡಿತ್ತೆಂತಲೂ, ಆ ಸಭೆಗೆ ಸುಮಾರು ೩–೪ ಸಾವಿರ ಜನರು ಬಂದದ್ದಲ್ಲದೆ ಅನೇಕ ಹೆಂಗಸರು ಸಹ ಬಂದಿದ್ದರೆಂದು ಕೇಳುತ್ತೇವೆ. ಶಿರಶಿ ಸಬಾರ್ಡಿನೇಟ ಜಡ್ಜೀಕೋರ್ಟಿನ ವಕೀಲರಾದ ರಾ|| ರಾ|| ಗೋಪೀ ಮಹಾಬಲೇಶ್ವರ ಭಟ್ಟರೆಂಬವರು ಹವ್ಯಕ ಜಾತಿಯಲ್ಲಿ ನೆಲೆಗೊಂಡಿರುವ ನಿಂದ್ಯ ಮತ್ತು ಶಾಸ್ತ್ರಕ್ಕೆ ವಿರೋಧವಾದ ಕನ್ಯಾವಿಕ್ರಯವನ್ನು ಮಾಡಬಾರದೆಂತಲೂ, ಹಾಗೆ ಮಾಡುವವರಿಗೆ ಧರ್ಮಾಧಿಕಾರಿಗಳಿಂದ ಯೋಗ್ಯ ಶಿಕ್ಷೆಯಾಗಬೇಕೆಂತಲೂ, ಈ ನಿಂದ್ಯ ಪ್ರಚಾರದಿಂದುಂಟಾಗುವ ಖೇದಗಳನ್ನು ಸಹ ತೋರಿಸಿ ಬಹು ಗಂಭೀರದಿಂದಲೂ, ಶಾಂತತೆಯಿಂದಲೂ ಸಭೆಯಲ್ಲಿನಿಂತು ಒಂದೇ ಸಮ ೯ ಘಂಟೆಗಳತನಕ ಸುರಸಭಾಷಣವನ್ನು ಮಾಡಿದರು. ಹಾಗೂ ಒಂದು ಚಿಕ್ಕ ಕಮಿಟಿಯನ್ನು ನಿರ್ಮಿಸಿ ಶಿರಸಿ, ಸಿದ್ದಾಪೂರ, ಯೆಲ್ಲಾಪುರ ತಾಲೂಕುಗಳಲ್ಲಿ ಇದೇ ಹವ್ಯಕ ಜನರಲ್ಲಿ ಆಗುವ ಲಗ್ನ ಸಮಾರಂಭದಕಾಲಕ್ಕೆ ಹೋಗಿ ಅಲ್ಲಲ್ಲಿ ವ್ಯಾಖ್ಯಾನವನ್ನು ಕೊಟ್ಟು ಈ ದುಷ್ಟ ಪ್ರಚಾರವನ್ನು ನಿಲ್ಲಿಸಿಬಿಡಬೇಕೆಂದು ನಿಶ್ಚಯವಾದದ್ದು ಕೇಳಿ ವಿದ್ಯೆಯಲ್ಲಿ ಹಿಂದಕ್ಕೆ ಬಿದ್ದಿರುವ ಈ ಜನರು ತಮ್ಮ ಸುಧಾರಣೆಯ ವಿಷಯದಲ್ಲಿ ಇಷ್ಟು ಸಾಹಸಪಡುವದನ್ನು ನೋಡಿ ನಾವು ತುಂಬಾ ಆನಂದಪಡದೇ ಇರಲಾರೆವು. ಇದೇ ವಿಷಯವಾಗಿ ಬರುವ ವೈಶಾಖ ಶುದ್ಧ ೧೫ ದಿನ ಸ್ವರ್ಣವಲ್ಲಿ ಮಠದಲ್ಲಿ ಇನ್ನೊಂದು ದೊಡ್ಡ ಸಭೆಯು ನೆರೆಯ ತಕ್ಕದ್ದದದೆಯಂತೆ. ಈ ಜನರು ಇನ್ನಾದರೂ ಚಂಚಲ ಮನಸ್ಸಿನವರಾಗದೆ ದೃಢ ನಿಶ್ಚಯದಿಂದ ತಮ್ಮ ಕೆಲಸ ನಡೆಸಬೇಕೆಂತಲೂ, ಅವರು ನಡೆಸುವ ಕೆಲಸದಲ್ಲಿ ಅವರಿಗೆ ಪೂರ್ಣ ಜಯವೂ, ಆಶ್ರಯವೂ, ಸಿಕ್ಕಲೆಂತಲೂ ನಾವೂ ಕೋರುತ್ತೇವೆ.

ಸರ್ಕಾರೀ ಉದ್ಯೋಗವನ್ನು ಅಂಗೀಕರಿಸಿದವರಲ್ಲಿ ತಲಾಟಿ ಅಥವಾ ಶ್ಯಾನಭೋಗರ ವರ್ಗವು ಅತಿಶಯ ಹತಭಾಗಿ ಎಂಬ ವಿಷಯದಲ್ಲಿ ಸಂಶಯವಿಲ್ಲ. ಕಿಂಚಿತ್ತಾದರೂ ವಿಶ್ರಾಂತಿ ಇಲ್ಲದೆ ಇವರು ನಿರಂತರವಾಗಿ ಮಾಡುವ ಶ್ರಮಕ್ಕೆ ಇವರಿಗೆ ಸಿಕ್ಕುವ ಸಂಬಳವು ತಕ್ಕದಾಗಿರುವದಿಲ್ಲ. ಶಾರಕೂನ ಮುಂತಾದವರಿಗೆ ಸಿಕ್ಕುವಂತೆ ಇವರಿಗೆ ಬಡ್ತಿ ಸಿಕ್ಕುವದಕೆಯೇ ಇಲ್ಲವು. ಇವರು ಮಾಡತಕ್ಕ ಕೆಲಸದಮೇಲೆ ಮೇಲ್ನೋಟ ಇಡತಕ್ಕ ಅಧಿಕಾರಿಯ ರಸಂಖ್ಯೆಗೆ ಮಿತಿಯೇ ಇಲ್ಲ ಇವರವೇಳೆಯ ಹೆಚ್ಚಿನ ಭಾಗವು „ತಪಾಸಣೆ,, ಗೆಂತ ಬಂದ ಅಧಿಕಾರಿಯರ „ತೆಬೈನಾತ,, ಕಾಪಾಡಿಕೊಳ್ಳುವಲ್ಲಿಯೆ ವ್ಯಯವಾಗುತ್ತದೆ. ಇವರ ಸ್ವಾಧೀನ ಉಳಿಯುವ ಕಾಲವು ಇವರಿಗೆ ಒಪ್ಪಿದ ಕೆಲಸವನ್ನು ಮುಗಿಸಲಿಕ್ಕೆ ಸಾಲದೆ ವಿಶ್ರಾಂತಿಯ ಬಗ್ಗೆ ಉಪಯೋಗಿಸತಕ್ಕ ರಾತ್ರಿಯ ಒಂದು ಅಂಶವನ್ನಾದರೂ ತಮ್ಮ ಕೆಲಸಕ್ಕೆ ಹಚ್ಚ ಬೇಕಾಗುತ್ತದೆ. ಈ ತರದ ತ್ರಾಸಿಗೆ ಗುರಿಯಾದ ತಲಾಟಿ ಅಥವಾ ಶ್ಯಾನಭೋಗರ ವಿಷಯದಲ್ಲಿ ಅವರವರ ಇಷ್ಟಾಧಿಕಾರಿಗಳು ಕನಿಕರ ಪಡುವದು ಸ್ವಾಭಾವಿಕವಿತ್ತು. ಆದರೆ ನಮಗೆ ಸಿಕ್ಕಿದ ವರ್ತಮಾನದಿಂದ ಇದರ ಚಿನ್ಹೆಗಳು ಕಾಣುವದಿಲ್ಲ. ನಮ್ಮ ದೇಶದಲ್ಲಿ ಸಂಚಿತಮಾಡಿದ ಹಣವನ್ನು ಬೇರೆಬೇರೆ ಬಗೆಗಳಂತೆ ಬ್ಯಾಂಕಿನಲ್ಲಿ ಇಡುವ ಪದ್ಧತಿ ಇಲ್ಲದೆ ಭೂಮಿಯನ್ನು ಕೊಂಡುಕೊಳ್ಳುವದೇ ಉತ್ತಮ ಸಂಚಯವೆಂತ ಎಣಿಸುತ್ತಾರೆ. ಬಡ ಶಾನುಭೋಗರು ಪ್ರಯಾಸದಿಂದ ಕಿಂಚಿತ್ ಹಣವನ್ನು ಸಂಚಯಮಾಡಿ ತಮ್ಮ ಕುಟುಂಬದ ಉಪಯೋಗದ ಭೋಗ್ಯಭೂಮಿಯನ್ನು ತೆಗೆದುಕೊಳ್ಳಬೇಕೆಂತ ಇಚ್ಛಿಸಿ ವರಿಷ್ಠಾಧಿಕಾರಿಗಳ ಸಮ್ಮತಿಯನ್ನು ಬೇಡಿದರೆ ಸಿಕ್ಕುವದಿಲ್ಲ. ಅವರು ಯಾವಊರಿನಲ್ಲಿ ಶಾನಭೋಗರಾಗಿರುತ್ತಾರೋ ಆ ಊರಲ್ಲಿ ಭೂಮಿಯಿರುವದು ಒಂದುವೇಳೆ ಆಕ್ಷೇಪಕರ ಯೆಂತ ಎಣಿಸಿದಾಗ್ಯೂ ಬೇರೆಕಡೆಯಲ್ಲಿ ಭೂಮಿಯನ್ನು ಕೊಂಡುಕೊಳ್ಳಲಿಕ್ಕೆ ಸಮ್ಮತಿಕೊಡದಿರುವದು ಆಶ್ಚರ್ಯವೇ ಸರಿ. ಇನ್ನುಮೇಲೆಯಾದರೂ ಈ ಬಡಜನರ ವರಿಷ್ಠಾಧಿಕಾರಿಗಳು ಇವರನ್ನು ಪ್ರತಿಬಂಧಿಸುಗತಿಯಲ್ಲಿ ವಕ್ರದೃಷ್ಟಿಯಿಂದನೋಡುವ ಪ್ರಚಾರವನ್ನು ಬಿಟ್ಟುಬಿಡುವರೆಂದು ಕೋರುತ್ತೇವೆ

ಮುಂಬೈ ಕನ್ನಡ ಸುವಾರ್ತ ಪತ್ರಿಕೆಗೆ ಮೇ ತಿಂಗಳ ೧೫ನೇ ತಾರೀಖಿನಲ್ಲಿ ಈ ಪ್ರಾಂತದ "ಸ್ವತಂತ್ರಪ್ರಿಯ" ನೆಂಬ ಒಬ್ಬ ಬಾತಮೀದಾರನು ಜನಗಳ ದಾರಿದ್ರ್ಯವನ್ನೂ ಅನುಪಪತ್ತಿಯನ್ನೂ ಸವಿವರ್ಣನದೊಡನೆ ನಿರೂಪಿಸಿ ಬರೆದ ಕಾಗದವು ಓದುವವರಿಗೆ ವಿನೋದಕರವಾಗಿರುವದೆಂದು ಭಾವಿಸಿ ಅದನ್ನಿದರಡಿ ಪ್ರಕಟಿಸಿರುತ್ತೇವೆಂತೆನೆ —

೧. ಮಗನಿಗೆ ೧೨ ವರುಷಗಳಾದವು; ಮುಂಜಿಮಾಡಲು ರಿಕಾಮೀ ಇಲ್ಲ; ಸಾಲ ಕೊಡುವವರಿಲ್ಲ; ಸಂಪಾದನೆ ಮೊದಲೇ ಇಲ್ಲ; ದರಿದ್ರ, ೨೦೦ ರೂಪಾಯಿಗಳಾಗಬೇಕು; ಹ್ಯಾಗಾದರೂ ಮಾಡಿ ಬಡವಾ ಅಂದರೆ ದೊಡ್ಡಮಗಳಿಗೆ ಮದುವೆ ಆದ ಹೊರತು ಮೂರನೇ ಮಗನಿಗೆ ಮುಂಜಿ ಆಗಕೂಡದಂತೆ! ಮಯತ್ರಯವಾಗುತ್ತಾತೆ; ಏನುಗತಿ? ಅವನ ಮದುವೆ ಆಗುವದು ಹ್ಯಾಗೋ? ಆವರಿವಿಗೂ ಇವನ ಮುಂಜಿ ಇಲ್ಲದೆ ಲಂಗೋಟಿ ಇವದೆ ಇರುವದು ಹ್ಯಾಗೋ? ಯಾವದೂ ದಿಕ್ಕುತೋಚದು. ಅಯ್ಯೋ ದೇವರೇ ಬಡವರಿಗೆ ಬಹಳವಾಗಿ ಮಕ್ಕಳನ್ನು ಯಾಕೆ ಕೊಡುತ್ತೀ? (ಅರ್ಥವಿಲ್ಲದವನ ಬಾಳು ವ್ಯರ್ಥ) ಛಿ. ಛಿ. ಛಿ. ಎನ್ನುತ ಅಂಗಲಾಚುತ್ತಿರುವ ಒಬ್ಬಾತನನ್ನು ನೋಡಿದೆನು

೨. ಮಗಳಿಗೆ ೧೨ ವರುಷಗಳಾದವು; ಇನ್ನೂ ಮದುವೇ ಇಲ್ಲ; ನಾನು ಒಪ್ಪಿದ ಕಡೆಗೆ ಹೆಂಗಸರು ಒಪ್ಪರು; ಬಹಳವಾಗಿ ಒಡವೆಗಳನ್ನು ಬಯಸುತ್ತಾರೆ; ೨ ೩ ನೂರರನ್ನು ಕಳಕೊಂಡವನಿಗೆ ಕೊಡುವದಿಲ್ಲವೆನ್ನುತ್ತಾರೆ; ಚಿಕ್ಕವಯಸ್ಸಿನ ದನಿಕ ವರನು ಹೆಣ್ಣು ಸೂಗಸಾಗಿಲ್ಲವೆನ್ನುತ್ತಾನೆ, ರೂಪಾಯಿಗಳಿಗೆ ಹೆಣ್ಣು ಮಾರುವದು ಅವಮಾನವು; ಅಂತೂ ಇಂತೂ ಮದುವೆ ಇಲ್ಲ; ದೊಡ್ಡಯಾಗಿದೆ; ಮದುವೆ ಆಗದ ಮುನ್ನು ಋತುವಾದರೆ ಕಣ್ಣುಕಟ್ಟಿ ಕಾಡಿನಲ್ಲಿ ಬಿಟ್ಟು ಬರಬೇಕಂತೆ! ಇದೊಂದು ದೊಡ್ಡ ಭಯವು; ಸಾವಕಾಶವಿಂದಾದರೂ ಋತುವಾಗಲೆಂತ ಹೆಂಗಸರು ಹುಡಿಗಿಗೆ ಹೊಟ್ಟೆತುಂಬಾ ಕೂಳು ಹಾಕದೆ ಇದ್ದಾರೆ; ಈ ಗಂಡಾಂತರಕ್ಕೆ ಏನು ಮಾಡಲಿ? ದೇವರೇ ಬಡತನ ಅರ್ಥ, ಬ್ರಹ್ಮಹತ್ಯ ಅರ್ಥ ಆಗಿದೆ ಮುಲ್ಲಾ ಏನು ಗತಿ? ದೇವರೇ ಒಯ್ಯೋ ಶಿವ ಶಿವ ಅನ್ನುತ ವ್ಯಸನಪಡುವ ಒಬ್ಬಾತನನ್ನು ಕಂಡೆನು.

೩. ನಿಷೇಕಪ್ರಸ್ತವಾಗಬೇಕು; ಸಾಗಿಗೆ ರಜಾ ಆಗದು; ಹಾಗೂ ರಜಾ ಪಡೆದು ಯಿರದು ಸಬ ಪ್ರಯತ್ನಮಾಡಿ ಯೇನೋ ಒಂದುವಿಧ ವಿಘ್ನದಿಂದ ನಿಂತಿತು, ಆಶೌಚಗಳು, ಮುಟ್ಟುಗಳು, ದುಡ್ಡಿಲ್ಲದ್ದು, ರಜಾ ದೊರೆಯದ್ದು, ಲಗ್ನ ದೊರೆಯದ್ದು ಇತ್ಯಾದಿ ವಿಘ್ನಗಳು ಎದ್ದೇ ಅವೆ. ಇವೆಲ್ಲವನ್ನು ಗೆದ್ದು ಪಾರಾಗುವದೆಂದೋ? ಮಾಡಿದ ಎರಡು ಖರ್ಚುಗಳು ತಪ್ಪ ಕೆಟ್ಟ ಹಾಳಾಗಿ ಹೋಗಿ ದುಡ್ಡು ವ್ಯರ್ಥವಾಯಿತು. ಈ ನಿಷೇಕ ಪ್ರಸ್ತವೂ ಈ ಹೊಂದತೆಯೂ ಬೇಡ; ಮಹಾಯಾತ್ರೆಗೆ ಹೊರಡಲೇ ಅನ್ನಿಸುತ್ತದೆ; ಇಷ್ಟು ಒಗೆ ನಿಬಂಧಗಳಾದರೆ ಏನುಗತಿ? ಥು ಥು. ಥು. ಅಂತ ಖಿನ್ನನಾಗಿರುವ ಒಬ್ಬಾತನನ್ನು ನೋಡಿದೆನು.

೪. ಎಜಮಾನನು ಕಾಲವಾದ ನಕ್ಷತ್ರ ಒಳ್ಳೇದಲ್ಲವಂತೆ; ಮನೆ ಬಿಡಬೇಕಾಯಿತು; ಅಕ್ಕಿ ಕಾಳಿಲ್ಲ; ದುಡ್ಡಿಲ್ಲ; ತಿರುಕನಾಗಿ ಹುಟ್ಟಿದ್ದು; ಸಾಲಕೊಡರು; ೧೦೦ ರೂಪಾಯಿ ಬೇಗಬೇಕಂತೆ. ದಿನಾ ಕರ್ಮಾಂತರ ನಡೆಯಬೇಕು; ಮುಂದೆ ಈ ವರುಷವೂ ತಿಂಗಳಿಗೆ ಎರಡು ಶ್ರಾದ್ಧಗಳು; ಅನಂತರ ವರುಷಶ್ರಾದ್ಧ; ಅದಕ್ಕೆ ೧೦೦ ರೂಪಾಯಿ ಬೇಕಂತೆ. ಮನೆಯಲ್ಲಿದ್ದದ್ದು ಮಾರಿಯಾದರೂ ಮಾಡಬೇಕೆಂತ ಶ್ರೀಕೃಷ್ಣರೂ ಹಿರಿಯರೂ ಅನ್ನುವರು. ಏನುಮಾಡಲಿ? ಏಕ್ಕು ತೋಚದು ಸ್ವಾಮಿ ಭಗವಂತ ಯೆನ್ನುತ ಗೋಳಾಡುವ ಒಬ್ಬಾತನನ್ನು ನೋಡಿದೆನು.

೫ ತಲೆಬೋಳದು ಗದ್ದೆಯಾಗಿ ತಲೆಯಮೇಲೆ ಸೆರಗು ನಿಲ್ಲದು; ಮುಂಡೆಯಮಗ ನಾಯಿಂದರವ ಬಾರನು; ಪೇಟೆಗಳಲ್ಲಿ ದುಡ್ಡು ಬಿಸಾಡಿದರೆ ತತ್ಕ್ಷಣ ಬರುತ್ತಾನೆ; ಹಳ್ಳಿಗಳಲ್ಲಿ ಆ ವಾಡಿಕೆ ಇಲ್ಲವು. ಕಣಗಳಲ್ಲಿ ಕಾಳೂ ಹುಲ್ಲೂ ಕೊಡುವದುಂಟು; ಏನು ಕೊಟ್ಟಾಗ್ಯೂ ಕೆಲಸ ಸರೀಸ ಮಾಡುವದಿಲ್ಲವು; ಮುಟ್ಟುಬಟ್ಟೆ ೩ ದಿನಗಳಿಂದ ಬಿಟ್ಟಲ್ಲಿಯೇ ಬಿದ್ದಿದೆ; ಅಗಸನವಮನೆಗೆ ತಿರಿಗಿತಿರಿಗಿ ಕಾಲುಬಿದ್ದವು; ಈಬಗ್ಗೆ ಅಗಸ ಹಜಾಮರನ್ನು ಸುಸರಿಸದಂತೆ ಯಾರಾದರೂ ಒಂದು ಏರ್ಪಾಡು ಮಾದಬಾರದೆ? ಮುಟ್ಟಾದದಿನ ತನ್ನಬಟ್ಟೆ ತಾನೇ ಒಗೆದುಕೊಂಡು ೨–೩ನೇ ದಿನ ತಾನೇ ಒಗೆದುಕೊಂಡು ನಾಲ್ಕನೇ ದಿನ ಮಾತ್ರ ಗಂಟುಕಟ್ಟ ಅಲ್ಲಿಬಡಿಯುವ ಪದ್ಧತಿ ಇದೇನೋ ಅಯ್ಯೋ ಅಯ್ಯೋ ಹಾಳುದೇವರು ಏನುಮಾಡಿದ್ದಾನೋ! ಕಷ್ಟಕಷ್ಟ. ಛಿ. ಛಿ ಛಿ. ಎನ್ನುತ ಓಡ್ಯಾಡುವ ಒಬ್ಬ ಬೋಡಮ್ಮನನ್ನ ಕಂಡೆನು.

೬. ನಮ್ಮ ಬಾವಿಗಳಲ್ಲಿ ನೀರು ಇಂಗಿತು; ಕೆರೆಕಾಲುವೆಗಳಲ್ಲೆಲ್ಲ ಇಂಗಿತು; ಊರಿನ ಜನರು ಸೇದುವ ಭಾವಿಯನ್ನೂ ನೀರನ್ನೂ ನಾವು ಮುಟ್ಟಬಾರದು. ದಿನವೆಲ್ಲ ಕಾದುಕಾದು ಯೇನಾದರೂ ಕೊಟ್ಟು ಬೇಡಿಕೊಂಡಾಗ್ಯೂ ಬೈಯುವವರೆ ವಿನಾ ಹರಿವಿಗೆ ನೀರು ಹಾಕುವವರಿಲ್ಲ. ಹಾಳುಮಳೆ ನಮ್ಮ ಕೆರೆಯಲ್ಲಿ ಹೊಯ್ಯಬಾರದೆ? ಎಂದು ಬರೀ ಗಡಿಗೆಗಳನ್ನು ತೆಗೆದುಕೊಂಡು ಮನೆಗೆ ಹೋಗುತಲಿರುವ ಅಂತ್ಯಜರ ಗುಂಪನ್ನು ಕಂಡೆನು ಅಂದರೆ ಚಂಡಾಲರು

೭. ದಾರಿಯಲ್ಲಿ ಚಂಡಾಲರಿಗೆ ನೀರು ಸೇದಿ ಹಾಕುತ್ತಾರೆ; ಅಲ್ಲಿ ಬಿದ್ದನೀರು ತುಳಿದುಕೊಂಡು ಓಡ್ಯಾಡಬೇಕು; ಸ್ನಾನ ಮಾಡಿ ಬರುವಾಗ ಅಲ್ಲಿ ಹಾಸಿದ್ದರಾದವರು ೩–೪ ಜನರಿರುತ್ತಾರೆ; ದರ್ಶನ ಮಾಡಿಕೊಳ್ಳಬೇಕು. ಬೀದಿಯಲ್ಲಿ ಎಂಜಲೆಲೆ ಪ್ರಸ್ಥಕ್ಕೆ ಬಿದ್ದಿವೆ ತುಳಿಯಬೇಕು. ಮಡಿನೀರು ಸೇದುವಾಗ ಶೂದ್ರರು ಭಾವಿ ಮುಟ್ಟಬೇಡಿಯಂದರೆ ಮುಟ್ಟಿಯೇ ಬಿಡುತ್ತಾರೆ. ಬೈದರೆ ಬೈಯುತ್ತಾರೆ; ಎತ್ತಿ ನಡೆದರೆ ಒದ್ದೊಬ್ಬರನ್ನು ಕೇಳಬಿಟ್ಟೇನು! ಇಲ್ಲ. ಆ ಪೌರೋಹಿತ್ಯವೂ ಹೋಯಿತು; ಬ್ರಾಹ್ಮಣಿಕೆಯೂ ಹಾಳಾಗುತಬಂತು. ಅಂತೂ ಎಗರಿ ಕಡಿದುಬಿದ್ದು ಅನಂತರ ಬಹಳಹೊತ್ತಿನಮೇಲೆ (ಪ್ರಿನೀಟ್ವಿಪಪ್ರಾಕೆಚಪಂಡಿತಾಸಮುದರ್ಶನಾ) ಯೆನ್ನುತ ಪಾರಾಯಣಮಾಡುತ್ತಿರುವ ಒಬ್ಬ ಆಚಾರ್ಯನನ್ನು ನೋಡಿದೆನು.

ಇನ್ನೂ ಹೀಗೆ ಗೋಳಾಡುವವರನೇಕರನ್ನು ಕಂಡೆನು, ಅದೆಲ್ಲಬರೆದರೆವಾಚಕರುನಗುವರಷ್ಟೆ ಈ ಲೋಕದಲ್ಲಿ ಯಾವ ಭೂಖಂಡಗಳಲ್ಲಿ ಯಾವ ಯಾವ ಬಗೆಯಲ್ಲಿ ಯೇನು ತಿಂಗೆ ನಿರ್ಬಂಧಗಳು ವಾಡಿಕೆಯಾಗಿ ಬಂದಿವೆಯೋ ಏನೋ! ಜಗದೀಶ್ವರ, ನಿನ್ನ ಮಹಾಮಹಿಮೆ ಯಾರು ಬಲ್ಲರು? ಮೆಲ್ಲಜಾತಿ ಜನರೂ ನಾನಾರೀತಿಯ ಬೇಡಿಯಲ್ಲಿ ಸಿಕ್ಕಿದ್ದಾರಲ್ಲ; ಮಾನವರನ್ನು ಮೀರಿನಡೆಯುವ ಧೈರ್ಯಶಾಲಿ ಯೆಂದಿಗೆ ಹುಟ್ಟುವನೋ! ತತ್ರಾಪಿ ಬ್ರಾಹ್ಮಣರಲ್ಲಿ ಪೂರ್ವಜರ ಕರ್ಮಗಳು ಅಶೌಚಗಳು, ಜ್ಯೋತಿಷವು ಈ ಮುಂತಾದ ನಿರ್ಬಂಧ, ಚಿತ್ರಹಿಂಸೆ, ಧನವ್ಯಯ, ದೇಹಶ್ರಮಗಳನ್ನು ತಾಳಕೂಡದ್ದಾಗಿದೆ. ಇಷ್ಟಾಗಿ ಶಾಸ್ತ್ರೋಕ್ತವೇ ಒಂದು, ರೂಢಿಯೇ ಒಂದು, ಅಯ್ಯೋ ಶಿವ ಶಿವ ಬೌದ್ಧದೇವರು ಹೇಳಿದ್ದೇ ಸತ್ಯವು ವೃಥಾ ಅನ್ಯಾಯವಾಗಿ ಜನರು ನಾನಾಬಗೆ ಕಷ್ಟ, ಕಾರ್ಪಣ್ಯ, ಶ್ರಮ, ಗೋಳುಗಳನ್ನನುಭವಿಸುತ್ತಾರಲ್ಲ!! ಇವನ್ನು ಏನೆನ್ನಬೇಕು? ಛಿ, ಛಿ. ಛಿ.

ಮುಖ್ಯವಾಗಿ ಸತ್ಯ, ನೀತಿ, ಶುಚಿ, 'ಶಾಂತಿ, ಅನಸೂಯ, ಪಾಪಕ್ಕೂ, ನರಕಕ್ಕೂ, ದೇವರಿಗೆ ಭಯಪಡುವಣ, ಪರಸ್ತ್ರೀ, ಪರಧನ, ಪರಸ್ವಗಳನ್ನು ಮುಟ್ಟಲು ಅಪಹರಿಸಲು ಅಸಹ್ಯಪಡುವಣ, ಅನ್ಯೋನ್ಯಪ್ರೀತಿ, ಸದಾ ಉದ್ಯೋಗ, ಮಿತವ್ಯಯ, ಪರೋಪಕಾರ, ಅಹಿಂಸಾ, ವೃದ್ಧಭಕ್ತಿ, ಮಾನಸಪೂಜ, ಇತ್ಯಾದಿ ಸತ್ಸದಾಚಾರಗಳನ್ನು ಅನುಸರಿಸಿ ಉಳಿದ ನೂರೆಂಟು ಬಗೆ ವ್ರತಗಳು, ಉಪವಾಸಗಳು, ಹಬ್ಬಗಳು, ಕರ್ಮಗಳು ಬಲಿಗಳು, ಆಹುತಿಗಳು, ಹರಿಕೆಗಳು ಈ ಮುಂತಾದ ಇನ್ನೂ ಅನೇಕ ದುರಾಚಾರಗಳನ್ನೆಲ್ಲ ಕಿತ್ತು ತಳ್ಳಿಹಾಕಿಬಿಟ್ಟು, ಇಹಲೋಕದಲ್ಲಿ ಬಾಳುವಷ್ಟು ದಿನ ಸಂತೋಷದಿಂದ ಹೆಂಡತಿ ಮಕ್ಕಳುಗಳೊಂದಿಗೆ ಇಹಲೋಕವೆ ಸ್ವರ್ಗಲೋಕದಂತೆ ಭಾವಿಸಿ ಬಾಳಿ ಹೋಗಬಹುದಲ್ಲ.

BANGALORE:—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಶಮವಿವಿವಪ್ರಸ್ತುತ್ಯವಗವಸಾರ್ದ್ವ ಕರ್ನ್ಹಾಟಕಪ್ರಕಾಶನವರಾಭಿದಾಪ್ರಥಿತಸಾಹಿತೀಕೊಭಿತಾ ‖ ಮೃಗಾಂಕಹಿತವಾಸರೆನಿಹಿತಮುದ್ರಣಾಸಜ್ಜ್ಞನೈರ್ದ್ದಿಕಾಸುವರಿಪೋಷಿಕಾದಿಶತಿಮಾನಸಂಮುದಂ ‖

Vol. XIII] BANGALORE—MONDAY, JUNE 14, 1886. [No. 24

ಸಂಪುಟ ೧೩] ಬೆಂಗಳೂರು—ಸನ್ ೧೮೮೬ನೇ ಇಸವಿ ಜೂನ್ ೧೪ನೇ ತಾರೀಖು ಸೋಮವಾರ. [ಸಂಚಿಕೆ ೨೪

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ತಿಳಿದುಕೊಳ್ಳತಕ್ಕವರಿಗೆ ವರುಷ ೧ಕ್ಕೆ ... ... ೧೦—೦—೦

ಇಂಗ್ಲಿಷುಮಾತ್ರ ತಿಳಿದುಕೊಳ್ಳತಕ್ಕವರಿಗೆ ವರುಷ ೧ಕ್ಕೆ ... ... ೬—೦—೦

ಕನ್ನಡಮಾತ್ರ ತಿಳಿದುಕೊಳ್ಳತಕ್ಕವರಿಗೆ ಮುಂಗಡಾಗಿ ವರುಷ ೧ಕ್ಕೆ ... ೬—೦—೦

ಬಿಂಗಡಿ ೧ಕ್ಕೆ ೦—೮—೦

[illegible]—ಚಂದಾದಾರರು ಇಂಗ್ಲಿಷ್ ಕಾಗದವನ್ನಾಗಲಿ, ಕನ್ನಡ ಕಾಗದವನ್ನಾಗಲಿ ಅಥವಾ, ಎರಡನ್ನಾಗಲಿ ತೆಗೆದುಕೊಳ್ಳುವುದು [illegible] ತಕ್ಕದ್ದು.

ಪ್ರಕಟನೆಯ ರಿವಾಜ್.

ಮೊದಲನೇ ದಫಾ ಪಙ್ಕ್ತಿ ೧ಕ್ಕೆ ೦—೨—೦

ಎರಡನೇ ದಫಾ ಪಙ್ಕ್ತಿ ೧ಕ್ಕೆ ೦—೧—೦

NOTICE TO SUBSCRIBERS

[illegible] ಕೆಳಕಂಡ [illegible] ಚಂದಾದಾರರು [illegible] ಕೊಡಬೇಕೆಂದು ಕೋರುತ್ತೇವೆ:—

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA

Price including Postage, Rs 5 0 0

ವೈದ್ಯಸಾರ ಸಂಗ್ರಹ.

[illegible]

[illegible] ... ರೂ|| ೫—೦—೦

[illegible] ... ೦—[illegible]—೦

ಆ. ಏ. ವೆಂಕಟಾಚಾರ್, ಅಸ್ಸಿಸ್ಟೆಂಟ್, ಬೆಂಗಳೂರು.

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮಿಷನ್ ಮರ್ಚಂಟ್ಸ್.

ಬೆಂಗಳೂರು ದಂಡಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪನಿಯವರು, ಅವರಿಗೆ ಕೊಡಲ್ಪಡುವ ತರಾವರಿ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇವಕ್ಕೆ ರೂಪಾಯಿ ೧ಕ್ಕೆ ೧ ದುಗ್ಗಾಣಿ ಮೇರೆ ದಳ್ಳಾಳಿತನ ತೆಗೆದುಕೊಳ್ಳಲ್ಪಡುವದು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JUNE 14, 1886

೧೮೮೬ನೇ ಜೂನ್ ೧೪ನೇ ತಾ|| ಸೋಮವಾರ

FLATTERY

ಲೋಕದಲ್ಲಿ ಮುಖಸ್ತುತಿ ಎಂಬುವದು ಮನುಷ್ಯರಿಗೆ ಹಾನಿಕರವಾದ್ದಾಗಿರುತ್ತದೆ; ಇದೇನೆಂದರೆ, [illegible] ಗುಣಗಳನ್ನು ಅವನ ಸಮ್ಮುಖದಲ್ಲಿ ಪ್ರಶಂಸುವದೊಂದು; ಮನುಷ್ಯನಲ್ಲಿ ಇಲ್ಲದವುಗಳಾಗಿಯೂ, ಅಥವಾ ಸರ್ವಥಾ ಅಸಂಭಾವಿತಗಳಾಗಿಯೂ ಇರುವ ಸುಗುಣಗಳನ್ನು ಅವನಲ್ಲಿ ಆರೋಪಿಸುವದೊಂದು, ಇವೆರಡೂ ಅಯೋಗ್ಯಗಳೆಂದೆನ್ನಿಸಿಕೊಳ್ಳುವವು.

ಪ್ರಪಂಚದಲ್ಲಿ ಪ್ರಭುತ್ವವು ವಹಿಸಿದವರಿಂದಲೂ, ಧನವಂತರ ಮೂಲಕವಾಗಿಯೂ, ಅಧಿಕಾರಿಗಳ ದೆಸೆಯಿಂದಲೂ, ತಮ್ಮ ತಮ್ಮ ಪ್ರಯೋಜನಗಳನ್ನು ನೆರವೇರಿಸಿಕೊಳ್ಳಬೇಕೆಂದು ಮೋಸಗಾರರಾದ ಜನಗಳು ಅಂಥಾ ಸಂಪನ್ನರಬಳಿ ಸೇರಿ ಕುರೂಪಿಗಳನ್ನು ಸುಂದರರನ್ನಾಗಿಯೂ, ಮೂರ್ಖರನ್ನು ಪಂಡಿತರನ್ನಾಗಿಯೂ, ಮಂದಬುದ್ಧಿಯುಳ್ಳವರನ್ನು ಸೂಕ್ಷ್ಮಬುದ್ಧಿಯುಳ್ಳವರನ್ನಾಗಿಯೂ, ವಿವೇಕಶೂನ್ಯರನ್ನು ಅಭಿಜ್ಞರನ್ನಾಗಿಯೂ, ಅಯೋಗ್ಯರನ್ನು ಸತ್ಪುರುಷರನ್ನಾಗಿಯೂ, ಮಹಾ ಪಾಪಿಷ್ಠರನ್ನು ಪುಣ್ಯವಂತರನ್ನಾಗಿಯೂ, ಲೋಕ ವಿರುದ್ಧಗಳಾಗಿಯೂ, ಶಾಸ್ತ್ರವಿರುದ್ಧಗಳಾಗಿಯೂ, ಇರುವ ಕೆಲಸವನ್ನು ಮಾಡುವವರನ್ನು, ಸರ್ವಜ್ಞರೆಂತಲೂ ಅಂಥಾವರ ಅನುಚಿತಗಳಾದ ಮಾತುಗಳನ್ನು ಚಮತ್ಕಾರ ಉಳ್ಳವುಗಳನ್ನಾಗಿಯೂ, ಶಾಸ್ತ್ರ[illegible]ಮತಗಳನ್ನಾಗಿಯೂ, ಎಷ್ಟೋ ಅನೇಕ ವಿಧಗಳಾಗಿ ಬಣ್ಣಿಸುತ್ತಾರೆ. ಈ ವಿಷಯದಲ್ಲಿ ನಮ್ಮ ಅನುಭವವು ವಿಪುಲವಾಗಿರುವದರಿಂದ, ಇದೇ ಅಂಶವನ್ನು ಇನ್ನೂ ಸ್ವಲ್ಪ ಪ್ರಸಂಗಿಸುವದಕ್ಕೆ ಅದು ನಮ್ಮನ್ನು ಪ್ರೇರಿಸುತ್ತದೆ, ಹ್ಯಾಗೆಂದರೆ— ಆ ಮೋಸಗಾರರು ಸಂಪನ್ನರ ಅಕೃತ್ಯಗಳಲ್ಲಿ, ಪರವಂಚನೆಯು, ಚಾಪಲ್ಯವೆಂದಲೂ, ಸುಳ್ಳಾಡುವದು ವಿನೋದವೆಂದಲೂ, ಅಧರ್ಮಗಳನ್ನಾಡುವದು ಶಾಸ್ತ್ರೋಲ್ಲಂಘನವು, ಜಾತಿ ಕುಲ ಧರ್ಮಗಳಂ ಬಿಡುವದು ಸಹ ಸ್ವಾತಂತ್ರ್ಯಲಕ್ಷಣವೆಂತಲೂ, ನೀಚರನ್ನು ಕೂಡುವದು ಸ್ವಸ್ವರೂಪ ಮೆಂದಲೂ, ಅಪಾತ್ರದಾನ ಔದಾರ್ಯವೆಂತಲೂ, ಸ್ವಸ್ತ್ರೀತ್ಯಾಗಾನ ವೇಶ್ಯಾಸಕ್ತಿಯು ರಸಿಕತ್ವವೆಂದಲೂ, ಪರಸ್ತ್ರೀಗಮನವು ಪ್ರೌಢತ್ವವೆಂತಲೂ, ಸತ್ಪುರುಷರನ್ನು ತಿರಸ್ಕರಿಸುವದು ಸರ್ವೋತ್ಕೃಷ್ಟತ್ವವೆಂತಲೂ, ಹಿತಚಿಂತಕರಾದ ಪಂಡಿತರ ಮಾತನ್ನು ಲಕ್ಷ್ಯ ಮಾಡದಿರುವದು ಸರ್ವಜ್ಞತ್ವವೆಂತಲೂ ಗತ್ಯಂತರವಿಲ್ಲದ ಆಶ್ರಿತರನ್ನು ಕೈಬಿಡುವದು ಪ್ರಭುತ್ವಧರ್ಮವೆಂದಲೂ, ರಾಜದ್ರೋಹ ಭಯಾರಪೋಷಣಗಳು, ಲೌಕಿಕ ಚಾತುರ್ಯವೆಂತಲೂ, ಬಸವಿ ವಿಷಯದಲ್ಲಿ ಅತಿಪ್ರಿಯವಾಗಿರುವುದು ಸ್ವಿಷಯದಲ್ಲಿ ಅಪ್ರಿಯವಾಗಿದ್ದಾಗ್ಯೂ ನೂತನದ್ದಾಗ್ಯೂ ನೀತಿಜ್ಞತೆಯೆಂದಲೂ ಈ ಮೇರೆ ಇನ್ನೂ ಅನೇಕ ದೋಷಗಳನ್ನೆಲ್ಲ ಗುಣಗಳನ್ನಾಗಿ ಪ್ರಶಂಸಿಸುತ್ತಾರೆ.

ಇಲ್ಲಿ ಮತ್ತೊಂದು ವಿಶೇಷವಿದೇನೆಂದರೆ, ಅಂಥಾ ಮೋಸಗಾರರು, ತಮ್ಮ ಕೈಗೆ ಸಿಕ್ಕಿದ ಮಂದಬುದ್ಧಿಗಳ ಮನೋರಂಜನಕ್ಕಾಗಿ, ದೇವರಿಂದ ತಮ್ಮ ಸ್ವಪ್ನ ಮೊದಲಾದ ಅವಸ್ಥೆಗಳಲ್ಲಿ ಕೆಲವು ನಿದರ್ಶನಗಳು ತೋರಿಸಲ್ಪಟ್ಟವೆಂಬದಾಗಿ ಬಗೆಬಗೆ ಸುಳ್ಳುಗಳನ್ನಾಡಿ, ಅಂಥಾ ಮಂದಮತಿಗಳ ದುಷ್ಕೃತ್ಯಗಳನ್ನು ಸಹ ಮಹಿಮೆಯೆಂದು ಅನ್ಯರಿಗೆ ಹೇಳುವದಲ್ಲದೆ ತಮ್ಮ ಮಾತುಗ[illegible]ಗಳು ಯಥಾರ್ಥಗಳೆಂದು ಮರುಳುಗೊಂಡು, ಮುಖಸ್ತುತಿ ಸರ್ವವಿಷಯಗಳಲ್ಲಿಯೂ ವರ್ತಿಸುವ ಆಭ್ಯಂತರವನ್ನು ನೋಡಿ ಮನಸ್ಸಿನೊಳಗೆ ಅಪಹಾಸ್ಯ ಮಾಡುತಲೂ, ಪ್ರತ್ಯಕ್ಷದಲ್ಲಿ ಬಹುಮುಖವಾಗಿ ಹೊಗಳುತಲೂಯಿರುತ್ತಾರೆ. ಇಂಥಾವರ ಮುಖಸ್ತುತಿಗಳಿಂದ ಸಂತುಷ್ಟರಾಗುವ ಶ್ರೀಮಂತರಸ್ಥಿತಿಯನ್ನು ವಿಚಾರಿಸುವಲ್ಲಿ, ಅವರು ತಮ್ಮ ದೋಷಗಳನ್ನು ಮರೆತೋ ಅಥವಾ ತಿಳಿಯದೆಯೋ ತಾವೇ ಸರ್ವೋತ್ತಮರೆಂದಲೂ, ಮತ್ತು ಲೋಕದಲ್ಲಿ ಉತ್ತಮಗಳಾದ ಗುಣಗಳೆಲ್ಲವೂ ತಮ್ಮಲ್ಲಿಯೇ ನೆಲೆಗೊಂಡಿರುತವೆಂತಲೂ ದೃಢವಾದ ನಂಬಿಕೆಯನ್ನಿಟ್ಟು, ತಮ್ಮನ್ನು ಪರಮೇಶ್ವರನ ಯೋಪಾದಿಯಲ್ಲಿ ಸಮ್ಮುಖದೊಳಗೆ ಸ್ತುತಿಸುತಲಿರುವ ಪ್ರತ್ಯಕ್ಷ ಚೋರರಾದ ಆ ವಂಚಕರ ಸಹವಾಸವನ್ನು ಯಾವಾಗಲು ಬಯಸುತಲೂ, ಅವರು ಹಾರೈಸಿದವುಗಳನ್ನವರಿಗೆ ಕೊಡುತಲೂ ಅವರನ್ನೇ ಸರ್ವಜ್ಞರನ್ನಾಗಿಯೂ, ತಮಗೆ ಆಪ್ತರನ್ನಾಗಿಯೂ ಭಾವಿಸುತ್ತಾರೆ. ಇದರಿಂದ ಸತ್ಯವಾದಿಗಳಾಗಿರುವ ಪಂಡಿತರನ್ನು ಮೂರ್ಖರನ್ನಾಗಿಯೂ, ತಿಳಿಯದವರನ್ನಾಗಿಯೂ ಗ್ರಹಿಸಿ ಅವರಲ್ಲಿ ಉಪೇಕ್ಷೆಯನ್ನೂ ಅಗೌರವವನ್ನೂ ತೋರಿಸುತ್ತಾರೆ. ಹಾ! ಸತ್ಪುರುಷರು ಆ ವಿವೇಕಿಗಳ ಸಂಕೋಚದೆಸೆಯಿಂದ ಸ್ವಲ್ಪಗಳಾದ ಈ ಲೋಕದ ಪ್ರಯೋಜನಗಳನ್ನು ಕೋರಿ ಅಸತ್ಯವೆಂಬ ದೊಡ್ಡ ಪಾಪವನ್ನು ಮಾಡಿ ದೇವರ ನಿಗ್ರಹಕ್ಕೂ, ಲೋಕ ನಿಂದೆಗೂ ಪಾತ್ರರಾದಾರೆ? ಅಯ್ಯೋ! ಹಾಗಾದರೆ ಪ್ರಾಯಿಕವಾಗಿ ಜನಗಳೆಲ್ಲ ಸ್ತೋತ್ರಪ್ರಿಯರಾಗಿರುವವರಿಂದ ಬದಸ್ತೊಲ್ಲದ ಸಜ್ಜನರಿಗೇನುಗತಿ? ಅವರೆ ಅವರಿಗೆ ಲೋಕ ಸುಖಕ್ಕಿಂತಲೂ ಸತ್ಯವರ್ತನದಲ್ಲಿರುವ ಸುಖವು ಉತ್ತಮವಾದದ್ದು.

ಪರತಂತ್ರರಾದ ಮನುಷ್ಯರನ್ನು ಕುರಿತು ಯೋಚಿಸುವಲ್ಲಿ ಅವರಿಗೂ ಈ ಲೋಕವು ಸುಖಕರವಾಗುವದಿಲ್ಲವು. ಹ್ಯಾಗೆಂದರೆ—ಪ್ರಪಂಚದೊಳಗೆ ಯುಕ್ತಾಯುಕ್ತಗಳನ್ನು ತಿಳಿದು, ಸತ್ಯವಾದಿಗಳಾಗಿ ದೇವರಿಗೆ ಹೆದರಿ ವರ್ತಿಸತಕ್ಕವರನ್ನೇ ಕರಿರುತ್ತಾರೆ. ಸ್ತೋತ್ರಪ್ರಿಯರು ಸಹ ಪುಣ್ಯವಿಶೇಷದಿಂದ ವಿವೇಕಿಗಳೂ ಆಗುವದುಂಟು. ಆಗ ಅವರು ತಮ್ಮ ಬಳಿಯಿಣ ವಂಚಕರನ್ನು ನಂಬಲಾರರು. ಮತ್ತು ಅವರನ್ನು ತಲೆ ಯೆತ್ತಗೊಡಿಸದೆ ಅದಗಿಸುವರು. ಇದಲ್ಲದೆ ಅವರ ಜೀವನವೇ ಮುಂದಿನವರಿಗೆ ಶುದ್ಧವಾಗಿ ಹೇಳನಾಸ್ಪದವಾಗುವದು. ಏಮಂಚ ಸ್ತೋತ್ರ ಮಾಡಲ್ಪಡುವವರ ವಿವೇಕಹೀನತೆಯೊಳು ಮಾಡುವವರಿಗೆ ಸುಖವಿಲ್ಲವು; ಇಲ್ಲಿ ನಮಗೆ ದುಃಖಕರವಾದ ಅಂಶ ವೇನೆಂದರೆ—ಲೋಕದೊಳಗೆ ಉಚಿತವಾದ ಕೆಲಸಗಳನ್ನು ಮಾಡುವದಕ್ಕೆ ಅರ್ಹ ಮುಂತಾದ ಸಾಧನ ಸಂಪತ್ತಿಯು ಭಗವಂತನದಯೆಯಿಂದ ಲಭಿಸಿದ್ದರೂ ಅವನ್ನು ಚನ್ನಾಗಿ ವಿನಿಯೋಗಿಸುವದಕ್ಕೆ ತಿಳಿಯದೆ ಹೀಯವಾದ ನಂಜಿನೋಪಾದಿಯಲ್ಲಿ ಇರುವ ವಂಚಕರ ಮಾತನ್ನು ಕೇಳಿ, ಇಲ್ಲದವುಗಳನ್ನು ತಮ್ಮೊಳಗೆ ಭಾವಿಸಿಕೊಂಡು ಅವುಗಳಿಗೆ ತಕ್ಕಹಾಗೆ ಕೆಲವು ಕೆಲಸಗಳನ್ನು ಮಾಡಲೆತ್ನಿಸಿ, ಅವಿವೇಕ ಮೂಲಕಗಳಾದ ಅಂಥಾ ಪ್ರಯತ್ನಗಳು ಭಂಗಗಳಾದರೆ ಆಗ ಅವರು ಬುದ್ಧಿವಂ[illegible], ಅದನ್ನು ಅರಿಯದ ಮೂಢರಾದರೆ ತಮ್ಮ ಪ್ರಯತ್ನಗಳು ನಿಷ್ಫಲಗಳಾಗುವದರಿಂದಲಾದರೂ, ಅನಿಷ್ಟಫಲ ಉಳ್ಳವುಗಳಾಗುವದರಿಂದಲಾದರೂ, ಉಂಟಾಗುವ ದನ ಹಾನಿಯನ್ನೂ, ಮನೋವ್ಯಥೆಯನ್ನೂ, ಕೆಲವುವೇಳೆ ಅಪಾಯವನ್ನು ಸಹ ಹೊಂದುವರು. ಯಾವರೀತಿಯಿಂದ ನೋಡಿದರೂ, ಮನುಷ್ಯರ ವಿಷಯದಲ್ಲಿ ಮುಖಸ್ತುತಿಯೆಂಬದು ಬಹಳ ಕೆಟ್ಟದ್ದಾಗಿರುತ್ತದೆ.

ಇಲ್ಲಿ ಇದಕ್ಕಿಂತಲೂ ಬೇರೊಂದು ವಿಷಯವಿದ್ಯೆ ಏನೆಂದರೆ—ಇಂಥಾ ಕೆಟ್ಟ ಕೆಲಸದಲ್ಲಿ ವಿದ್ಯಾವಂತರನೇಕರು ಪ್ರವೇಶಿಸುತ್ತಾರೆಯಾಗಿ, ಅದರಿಂದ ಅನ್ಯರು ಬಹಳ ಮಂದಿ ಕೆಟ್ಟು ಹೋಗುವಂತೆ ಸಂಭವಿಸುವದಕ್ಕಾಗಿ ನಾವು ವಿಷಾದಿಸಬೇಕಾಗುತದೆ. ಯಾತಕ್ಕೆಂದರೆ, ಪಂಡಿತರಾದ ವಂಚಕರು ಸಂಪನ್ನರನ್ನು ಮೋಸಗೊಳಿಸುವದಕ್ಕಾಗಿ ಅವರಲ್ಲಿ ನಾನಾ ವಿಧ ದಿವ್ಯಗುಣಗಳನ್ನಾರೋಪಿಸಿ ಅನೇಕ ಗ್ರಂಥಗಳನ್ನು ರಚಿಸುತ್ತಾರೆ. ಅವುಗಳು ಪ್ರಭುಗಳಿಂದ ಸನ್ಮಾನಿಸಲ್ಪಡುವದರಿಂದ ಬಹಳವಾಗಿ ವೃದ್ಧಿಯನ್ನೈದುತವೆ. ಸತ್ಪುರುಷರವುಗಳನ್ನು ನೋಡದಿದ್ದರೂ, ಪಾಮರರು ಯಥಾರ್ಥಗಳೆಂದೆಣಿಸುವದಲ್ಲದೆ ಅಲ್ಲಿ ತಿಳಿಸಲ್ಪಟ್ಟ ದುರ್ವಿಷಯಗಳ ದೆಸೆಯಿಂದ ಮನೋಲ್ಲಾಸವನ್ನು ಹೊಂದಿ ಅವುಗಳೇ ಮನುಷ್ಯರಿಗೆ ಆವಶ್ಯಕಗಳೆಂದೆಣಿಸಿ ನಾನಾವಿಧಗಳಾದ ಅಕಾರ್ಯಗಳಲ್ಲಿ ನಿರ್ಭೀತರಾಗಿ ಪ್ರವರ್ತಿಸುವರು. ಇದರಿಂದ ಜನಗಳ ಕೆಟ್ಟ ನಡತೆಗಳಿಗೂ, ಕವಿಗಳ ಅನೃತವಾದಕ್ಕೂ ರೂಢಮೂಲವಾಗಿ ಒಂದು ಕೆಟ್ಟ ಸಂಪ್ರದಾಯವು ದೇಶದಲ್ಲಿ ಪ್ರಚುರವಾಗಲಿಕ್ಕೆ ಕಾರಣವಾಗುತಿದೆ.

ಈ ದುಷ್ಪದ್ಧತಿಯನ್ನು ಜನಗಳು ತಮ್ಮ ವಾಙ್ಮಯ ಸಂಪಾದನಕ್ಕೊಂದು ಸಾಧನರೂಪವಾಗಿ ಇಟ್ಟುಕೊಂಡು ಅನೇಕರು ಈಗ ಅಭಿವೃದ್ಧಿಗೆ ಬರಬೇಕೆಂಬ ಕೋರಿಕೆಯುಳ್ಳವರಾಗಿದ್ದಾರೆ. ಇದರಿಂದ ಉತ್ತರೋತ್ತರ ಪ್ರಭಾಗತಕ್ಕೆ ಫಲವು ಮಹದಪಕಾರ ಸಂಪಾದಕವಾಗಿರುವದು.

Occasional Notes.
ನೈಮಿತ್ತಿಕವಿಷಯನ್ಯಾಸ

News from Cabul.—ಕಾಬೂಲಿನಿಂದ ಈಗ್ಯೆ ಹದಿನೈದುದಿನಗಳಿಗೆ ಹಿಂದೆ ಬಂದ ವೃತ್ತಾಂತದ ಮೂಲಕ ಅಮೀರರವರಿಗೆ ವಾತೋಪದ್ರವವು ಸ್ವಲ್ಪ ಇದ್ದಾಗ್ಯೂ ಅವರು ಸಾಧಾರಣವಾಗಿ ದೃಢಾಂಗರಾಗಿದ್ದಾರೆಂದು ತಿಳಿಯಬರುತಿದೆ.

Family pensions.—ಪ್ರಸಿದ್ಧರಾಗಿದ್ದ ನಾಬಕ್ ಬಾಬೂ ಕೇಸವ್ ಚಂದ್ರಸೇನರವರ ಕುಟುಂಬಕ್ಕೆ ಕೋಚ್‌ಬೆಹಾರ್ ಮಹಾರಾಜರವರು ಕೊಡುತಲಿದ್ದ ಪೆನ್ಶನನ್ನು ಈಚೆಗೆ ಅವರು ಮತ್ತಷ್ಟು ಜಾಸ್ತೀ ಮಾಡಿದರೆಂದು ಕೇಳುತ್ತೇವೆ.

Order for inquiry.—ಬರ್ಮಾರಾಜ್ಯಕ್ಕೆಉಸ್ತುವಾರೀಬಗ್ಯೆ ಕಳುಹಿಸಲ್ಪಟ್ಟಿರುವ ಪಂಜಾಬ ಪೊಲೀಸಿನವರ ದುರ್ನಡತೆಗಳಂ ಕುರಿತು ವಿಚಾರಿಸುವಂತೆ ಅಲ್ಲಿನ ಚೀಫ್‌ಕಮಿಶನರರಿಗೆ ಇಂಡಿಯಾ ಗವರ್ನಮೆಂಟಿನವರು ಹುಕುಂ ಮಾಡಿರುವಂತೆ ತಿಳಿಯಬರುತಿದೆ.

The Thakur Sahib of Gondal.—ಗೊಂಡಲ್ ಸಂಸ್ಥಾನದ ಥಾಕೂರ್ ಸಾಹೇಬರವರು ಇಂಗ್ಲಾಂಡಿಗೆ ಹೋಗಿರುವದು ಸರಿಯಷ್ಟೆ. ಇವರು ಈಚೆಗೆ ವಿಂಡ್‌ಸರ್ ಕ್ಯಾಸಿಲ್ ಯೆಂಬ ರಾಜಭವನಕ್ಕೆ ಕರೆಯಿಸಲ್ಪಟ್ಟಿದ್ದರೆಂತಲೂ, ಸ್ಟೇಟ್ ಸೆಕ್ರೆಟರಿಯವರಾದ ಲಾರ್ಡ್ ಕಿಂಬರ್ಲೀಯವರು, ಅವರಿಗೆ ಮಹಾರಾಣೀಯವರ ಭೇಟಿ ಮಾಡಿಸಿದರೆಂತಲೂ ತಿಳಿಯಬರುತಿದೆ.

Extent of the British Dominions.—ಈಗ್ಯೆ ಶ್ರೀಮನ್ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀಯವರ ಪಾಲನೆಗೊಳಪಟ್ಟಿರುವ ದೇಶಗಳ ಒಟ್ಟು ವಿಸ್ತೀರ್ಣವು ೯೧,೫೭,೯೯೯ ಚದರ ಮೈಲಿಗಳುಳ್ಳವೆಂತಲೂ ಇವುಗಳಲ್ಲಿ ೩೦೫೩೩೭೦೦೦ [illegible] ರುತಿವೆ. ಇಷ್ಟು ಇದ್ದಾಗ್ಯೂ ಮಹಾರಾಜ್ಞೀಯವರಿಗೆ ದೇಶ ಸಂಪಾದನದೊಳು ಅತ್ಯಾಶೆಯೆಂಬದು ತಪ್ಪಿದ್ದಲ್ಲವು.

Appointment to the Viceregal Legislative Council.—ಮಿಯರ್ ಸೈಯದ್ ಅಮೀರ್ ಹುಸೇನ್ ಯೆಂಬವರು ವೈಸರಾಯಿಯವರ ನ್ಯಾಯವಿಧಾಯಕ ಸಭೆಯ ಮೆಂಬರಾಗಿ ನೇಮಕರಾಗ್ಮಾಡಲ್ಪಟ್ಟರೆಂದು ಕೇಳಲಾದೆವು. ಅನ್ಯರ ಪ್ರಾಬಲ್ಯಕ್ಕಾಗಿ ಅಸಮಾಧಾನಪಡುತಲಿರುವ ಮಹಮ್ಮದಿಯರ್ಗಳು ತಮ್ಮ ನ್ಯೂನತೆಗಳನ್ನರಿತು ಮೇಲೆ ಕಂಡಂತೆ ನಿವಾರಿಸಿಕೊಂಡು ಅಭಿವೃದ್ಧಿಗೆ ಬಂದರೆ ಯಾರೂ ಅಡ್ಡಗಿರುವ ಸ್ಥಿತಿಯೊಳಿಲ್ಲವು.

The sale amount.—ಧಾರಾಳವಾದ ಸುಚಾರಕ್ಕೆ ಸಹ ಪ್ರಾಪ್ತಿಯಿಲ್ಲದೆ ಕೇವಲ ವಿಷಾದದೊಡನೆ ಪಿರ್ಡ ಪ್ರಾಂತದಿಂದ ಇಂಗ್ಲಾಂಡಿಗೆ ವಾಪಸುಹೋದ ದಿಲೀಪ್ ಸಿಂಗರವರ ಉಪಕರಣಗಳೆಲ್ಲವೂ ಎಲ್‌ವೆರ್ಡೆಹಾಲ್ ಯೆಂಬ ಅವರ ಮಂದಿರದಲ್ಲಿ ಹರಾಜ್ ಹಾಕಲ್ಪಟ್ಟವು. ಇದು ಪ್ರಾರ್ಥೈಸಲಿಕ್ಕೆ ಸರಿಯಾಗಿ ಒಂದುವಾರ ಹಿಡಿಯಿತು. ಹರಾಜಿನೊಳು ಅವುಗಳ ಬಾಗದಲ್ಲಿ ನಾಲ್ಕರೊಳೊಂದುಭಾಗ ಸಹ ಹುಟ್ಟುವಳಿಯಾಗದೆ ಹೋಯಿತು. ಆಹಾ! ಲೋಕದಲ್ಲಿ ದೌರ್ಭಾಗ್ಯಕ್ಕೆ ಇದಕ್ಕಿಂತಲೂ ಬೇರೆ ದೃಷ್ಟಾಂತ ಬೇಕೆ.

Queen's birthday.—ಶ್ರೀಮನ್ ಮಹಾರಾಜ್ಞೀಯವರ ವರ್ಷವರ್ಧಂತಿಯದಿನ ಮದರಾಸಿನಲ್ಲಿ ಇಬ್ಬರು ಈಸ್ಟಿಂಡಿಯರ್ಗಳು ಚೆನ್ನಾಗಿ ಮದ್ಯಪಾನಮಾಡಿ ಮೈಮರೆತು ಕುಣಿದಾಡುತಲಿದ್ದ ಸಮಯದಲ್ಲಿ ಅವರ ಸ್ನೇಹಿತನಾದ ಚಿಲ್ಲೊಬ್ಬ ಹುಡುಗುಮುಕನು ಅವರ ಬಳಿಗೆ ಹೋಗಿ ಚಕ್ರವರ್ತಿನೀಯವರ ಆರೋಗ್ಯಾಭಿವೃದ್ಧಿಯಬಗ್ಯೆ ತನಗೂ ಸ್ವಲ್ಪ ಮದ್ಯವು ಕೊಡಬೇಕೆಂದು ಕೇಳಲು ಅವರು ಧಾರಾಳವಾಗಿ ಕೊಟ್ಟದ್ದನ್ನೆಲ್ಲ ಸದರೀ ಮನುಷ್ಯನು ಕುಡಿದು ಪ್ರಜ್ಞೆಯಿಲ್ಲದೆ ಕೆಳಗೆ ಬಿದ್ದಕೂಡಲೇ ಅವನ ಸ್ನೇಹಿತರು ಒಬ್ಬ ಕ್ಷೌರಕನನ್ನು ಕರೆಯಿಸಿ ಅವನಮೂಲಕ ಗಡ್ಡ ಮೀಸೆ ಮುಂತಾದವನ್ನೆಲ್ಲ ಕ್ಷೌರ ಮಾಡಿಸಿಬಿಟ್ಟರು. ಬಳಿಕ ಸದರೀ ಮನುಷ್ಯನಿಗೆ ಪ್ರಜ್ಞೆಬಂದು ತನ್ನ ಸ್ಥಿತಿಯನ್ನು ಕನ್ನಡಿಯಲ್ಲಿ ನೋಡಿಕೊಂಡು ಲಜ್ಜೆಯೊಡನೆ ಹೊರಟುಹೋದನೆಂದು ಮದರಾಸ್ ಪತ್ರಿಕೆಯೊಂದು ತಿಳಿಸುತಿದೆ.

Sectarian belief.—ಕನ್ಯೆಯಾದ ಮತ್ಸ್ಯಗಂಧಿಯ ಗರ್ಭದಲ್ಲಿ ಶ್ರೀವಿಷ್ಣುವು ವ್ಯಾಸರೂಪವಾಗಿ ಅವತರಿಸಿದನೆಂದು ವೈಷ್ಣವರೂ, ವಿಧವೆಯಾದ ಬ್ರಾಹ್ಮಣ ಕನ್ಯೆಯಗರ್ಭದಲ್ಲಿ ಈಶ್ವರನು ಶಂಕರಾಚಾರ್ಯರಾಗಿ ಅವತರಿಸಿದನೆಂದು ಶೈವರೂ, ಮೇರಿಯೆಂಬ ಕನ್ಯೆಯ ಗರ್ಭದಲ್ಲಿ ದೇವರು ಕ್ರಿಸ್ತರೂಪವಾಗಿ ಜನಿಸಿದನೆಂದು ಕ್ರಿಶ್ಚಿಯರ್ಗಳೂ ಹೇಳುತಲಿದ್ದಾರೆ ಇವಕ್ಕೆತಕ್ಕಂತೆಯೇ ಅವರವರ ಗ್ರಂಥಗಳಲ್ಲಿ ಸಹಬರೆಯಲ್ಪಟ್ಟಿವೆ. ಈ ದೇಶದಿ ಈಕಾಲದೊಳು, ಈಶ್ವರನೇ ರಾಜಾ ರಾಮ್‌ಮೋಹನ ರಾಯಿಯವರಾಗಿಯೂ, ಕೇಶವನೇ ಬಾಬೂಕೇಸವ್ ಚಂದ್ರಸೇನರಾಗಿಯೂ, ಚತುರ್ಮುಖನೇ ಭಾರ್ಗವ ಬ್ರಹ್ಮನಾಗಿಯೂ, ಅವತರಿಸಿರುತ್ತಾರೆಂಬ ಭಾವನೆಯುಳ್ಳ ಅವರವರ ಬಂಧುಗಳಿಗೆಲ್ಲ ನ್ಯೂನವಾಗಿದೆ. ಮುಂದೆ ಇವರೆಲ್ಲರೂ ನಮಗೆ ಉಪಾಸ್ಯರಾಗುವರು.

Recall of the Viceroy.—ಗತವಾರದಲ್ಲಿ ಬಂದ ಇಂಗ್ಲಿಷ ಮೇಯಿಲ್‌ಮೂಲಕ ತಿಳಿಯಬರುವದೇನೆಂದರೆ —ಐರಿಷ್ ಹೋಂರೂಲ್‌ಬಿಲ್ (ಅಂದರೆ, ಐರಲ್ಯಾಂಡ್ ಬೇಸೀಯರಿಗೆ ಆವಳಿತ ವಿಷಯದಲ್ಲಿ ಸ್ವತಂತ್ರಾಧಿಕಾರವನ್ನು ಕಲ್ಪಿಸಬೇಕೆಂಬ ಸಂಕಲ್ಪದೊಡನೆ ಮಾಡಲ್ಪಟ್ಟಿರುವ ಮಸವಿದಾ ಆಕ್ಟು ಯೆಂಬರ್ಥವು.) ಒಂದುವೇಳೆ ಮಂಜೂರಾಗುವಪಕ್ಷಕ್ಕೆ ಐರಲ್ಯಾಂಡ್ ರಾಜ್ಯದ ಲಾರ್ಡ್ ಲೆಫ್ಟಿನೆಂಟ್ ಉದ್ಯೋಗವನ್ನು ವಹಿಸತಕ್ಕಬಗ್ಯೆ ಇಂಡ್ಯದೇಶದ ವೈಸರಾಯಿಯವರಾದ ಲಾರ್ಡ್ ಡಫ್ರಿನ್‌ಯವರು ವಾಪಸ್ ಕರೆಯಿಸಲ್ಪಡುವರೆಂಬ ನಂಬಿಕೆಗೆ [illegible] ತೋರಬರುತಿದೆ. ಲಾರ್ಡ್ ಡಫ್ರಿನ್‌ಯವರು ಇಂಡ್ಯದೇಶಕ್ಕೆ ಅಮೂಲ್ಯವಾದ ವೈಸರಾಯಿಯವರಾದದರಿಂದ ಅವರು ಕಲ್‌ಕತ್ತಾಯಿಂದ ಹೊರಡುವರೆಂಬ ಭಾವನೆ ಸಹ ಪ್ರಬಲ ಅತ್ಯಸ್ತಿಗೆ ಕಾರಣವಾಗುವದೆಂದು ಹೇಳುವದು ಕೂಡ ಕೆಡುಕಾಗಿರುತಿದೆ, ಎಂಬದು ಮಹಾರಾಜರವರು ಒಬ್ಬ ಹಿಂದೂ ಜಹಗೀರ್‌ದಾರರನ್ನೂ ಚುನಾಯಿಸಿ ಕಳುಹಿಸ ಬೇಕಾಗಿತ್ತೇ ಹೊರ್ತು ಯೂರೋಪಿಯರ್ ಕರ್ನಲ್ ಪ ಮೇಜರರನ್ನು ಇಂತಾ ಪ್ರಬಲ ಸಂದರ್ಭದಲ್ಲಿ ತಮ್ಮ ತರಪ್ ಹಾಜರಿರಲಿಕ್ಕೆ ಕಳುಹಿಸಿದ್ದು ಅನುಚಿತವು, ಎಂಬದು. ಮೈಸೂರು ಸಂಸ್ಥಾನದ ಪ್ರತಿನಿಧಿಯಾಗಿ ಹೋದ ಮೇಜರ್ ಲೀ ಮೊಹರಿಯರವರು ಈಸಿಕಕ್ಕೆ ಮಹದುಪಕಾರವನ್ನು ಮಾಡಿದವರೆಂಬ ಭಾವವು ಮಹಾರಾಜಾ ಸರ್ಕಾರದವರಿಗೆ ದೃಢವಾಗಿರುವಲ್ಲಿ ಅವರಿಗಿಂತ ಅರ್ಹರಾದವರು ಸರ್ಕಾರದವರ ದೃಷ್ಟ್ಯಾ ಇಲ್ಲಿ ಯಾರಿದ್ದಾರೆ?

The Statesman libel case.—ಕಲ್ಕತ್ತಾ ಸ್ಟೇಟ್ಸ್‌ಮ್ಯಾನ್ ಪತ್ರಿಕಾಧಿಪರಾದ ಮೆ|| ನೈಟಿಯವರಮೇಲೆ ಈಗ ತರಲ್ಪಟ್ಟಿರುವ ಮಾನನಷ್ಟ ಮೊಕದ್ದಮೆಯು ಗತ ಮಂಗಳವಾರದದಿನ ಕಲಕತ್ತಾ ಪ್ರೆಸಿಡೆನ್ಸೀ ಮ್ಯಾಜಿಸ್ಟ್ರೇಟಿಕೋರ್ಟಿನಲ್ಲಿ ವಿಚಾರಣೆಯಾಯಿತು. ಮೆ|| ನೈಟಿಯವರು ತಾವು ನಿರಪರಾಧಿಯೆಂದು ವಾದಿಸಿ, ತಮ್ಮ ಡಿಫೆನ್ಸನ್ನು ಹೈಕೋರ್ಟಿನಲ್ಲಿ ತಿಳಿಸುವಂತೆ ಹೇಳಿದರು. ತರುವಾಯ ಮೆ|| ನೈಟಿಯವರು ಚಾತರೀಬಗ್ಯೆ ಕೊಟ್ಟದ್ದು ೧೦,೦೦೦ ರೂಪಾಯಿಗಳ ಸ್ವಂತ ಜಾಮೀನ್‌ನಿಂದಲೂ, ೯೦೦೦ ರೂಪಾಯಿಗಳಿಗೆ ಅನ್ಯರಿಬ್ಬರು ಕೊಟ್ಟದ್ದ ಜಾಮೀನ್‌ಗಳಿಂದಲೂ ಅವರನ್ನು ಖುಲಾಸೆ ಮಾಡತಕ್ಕದ್ದೆಂದು ಮ್ಯಾಜಿಸ್ಟ್ರೇಟರವರು ಹುಕುಂಮಾಡಿದರು. ಬವಸ್ಟೋರ್ ಮೆ|| ಬಾರ್ಲೋ ಯೆಂಬವರು ಸಹ ಸ್ವಂತಬಾಬತು ೧,೦೦೦ ಅನ್ಯರುಕೊಟ್ಟದ್ದು ೫೦೦ರೂಪಾಯಿಗಳಬಾಬತು ಯಿರತು, ಈ ಜಾಮೀನ್‌ಗಳಿಂದ ವಿಮುಕ್ತರಾದರು. ಈ ಮೊಕದ್ದಮೆಯು ಕ್ರಮಪ್ರಕಾರ ಸೆಷನ್‌ವಿಚಾರಣೆಯ ಬಗ್ಯೆ ಕಮಿಟ್‌ಮಾಡಲ್ಪಟ್ಟಿತು.

European Representation.—ಲಂಡನ್ ಪಟ್ಟಣದೊಳು ಈಚೆಗೆ ನಡೆದ ಇಂಡೊ ಕಲೋನಿಯಲ್ ಯೆಗ್ಜಿಬಿಷನ್ (ವಿವಿಧವಸ್ತುಪ್ರದರ್ಶಕ ಸಭೆ) ಗೆ, ಹೈದರಾಬಾದ್ ನಿಜಾಮರವರೂ, ಮೈಸೂರು ಮಹಾರಾಜರವರೂ, ತಮ್ಮ ತರಪ್ ಯಿಬ್ಬರು ಯೂರೋಪಿಯರ್ ಆಫಿಸರ್‌ಗಳನ್ನು ಕಳುಹಿಸಿದ ವಿಷಯದಲ್ಲಿ ಕಲ್ಕತ್ತಾ ಇಂಡಿಯನ್ ಮಿರರ್ ಪತ್ರಿಕೆಯು ಆಕ್ಷೇಪಿಸುತಿರುವದೇನೆಂದರೆ "ಈರೀತಿ ಮಾಡಬಾರದಾಗಿತ್ತು. ನಿಜಾಮರವರು ಒಬ್ಬ ಮಹಮ್ಮದಿಯರ್ ನವಾಬರನ್ನೂ ಮೈಸೂರು

Cow-killing.—ಕಾಶ್ಮೀರದೇಶದ ಮಹಾರಾಜರವರು ತಮಗೆ ಪಟ್ಟಾಭಿಷೇಕ ಕಾಲದಲ್ಲಿ, ಷಾಮಿಯಾನದೊಳು ಪ್ರಭುತ್ವಾಜ್ಞೆಯಂ ತರುವಿ ಗೋವುಗಳನ್ನು ಕೊಂದವರ್ಗಾಗಿ ಯಾವಜ್ಜೀವ ಶಿಕ್ಷೆ ಸಿಸಜಾ ಅನುಭವಿಸುತಲಿದ್ದ ಅಪರಾಧಿಗಳನ್ನು ಖುಲಾಸೆ ಮಾಡಿದರೆಂತಲೂ, ಇದೇ ತರ್ಕದ ಸೀರಬಗ್ಯೆ ಅನೇಕರು ದಂಡಿಸಲ್ಪಟ್ಟದ್ದಾರೆಂತಲೂ ಉತ್ತರದೇಶದ ಪತ್ರಿಕೆಯೊಂದು ತಿಳಿಸುತಿದೆ ಇದರಿಂದ ನೇಟಿವ್‌ಸಂಸ್ಥಾನವಾದ ಕಾಶ್ಮೀರದೇಶದಲ್ಲಿ ಗೋಹತ್ತಿಯು ಪ್ರಬಲಪಾತಕವೆಂದ ಭಾವಿಸಲ್ಪಟ್ಟಿರುವಂತೆಯೂ, ಗೋವನ್ನು ಮಾಡುವವರು ಇತರ ತಕ್ಸೀರ್‌ದಾರರಂತೆ ದಂಡನಾರ್ಹರೆಂತಲೂ, ಏರ್ಪಟ್ಟಿತು. ಈ ವಿಷಯದಲ್ಲಿ ಕೆಲವು ಇತರ ನೇಟಿವ್ ಸಂಸ್ಥಾನದವರು ಸಹ ದಂಡಿತವಾದ ನಿರ್ಬಂಧವನ್ನುಂಟುಮಾಡಿರುತ್ತಾರೆಂದು ಕೇಳುತ್ತೇವೆ. ಈ ಮೈಸೂರು ರಾಜ್ಯವು ಆದಿ ಮೊದಲು ಹಿಂದೂ ರಾಜರಿಂದ ಪರಿಪಾಲಿತವಾಗಿದ್ದರೂ ಮಧ್ಯೆ ಇಲ್ಲಿ ಮುಸಲ್ಮಾನರ ಪ್ರಾಬಲ್ಯವು ನೆಲೆಗೊಂಡಿದ್ದದರಿಂದಲೂ, ಬಳಿಕ ಇಂಗ್ಲಿಷರವರ ಆಧಿಪತ್ಯವು ಅವಿಚ್ಛಿನ್ನವಾಗಿ ಅರ್ಧಶತಮಾನಕ್ಕಿಂತ ಮೇಲ್ಪಟ್ಟು ನೆಲೆಸಿದ್ದದರಿಂದಲೂ, ಗೋವಧೆಯೆಂಬದು ಈ ರಾಜ್ಯದಲ್ಲಿ ಸಾಧಾರಣವಾದ್ದಾಗಿ ಏರ್ಪಟ್ಟಿತು. ಕಡೆಗೆ ಇದು ನೇಟಿವ್ ಅರಸರ ಪಾಲನೆಗೊಳಗಾದಮೇಲೆ ಸಹ ಇಲ್ಲಿ ಪ್ರಸಕ್ತ ವಿಷಯದೊಳು ಯಾವವಿಧ ಯೋಚನೆಯೂ ಮಾಡಲ್ಪಟ್ಟಂತೆ ತೋರಲಿಲ್ಲವು. ಇದಲ್ಲದೆ ಪ್ರತಿನಿತ್ಯ ಈ ಗೋವಧೆ ಯೆಂಬದು ಅಸಂಖ್ಯಾತವಾಗಿ ನಡೆಯುತ್ತಲೂ ಇದೆ. ಇದು ಆದಿಯಿಂದ ಉತ್ತಮ ಕ್ಷತ್ರಿಯರಿಂ ಪರಿಪಾಲಿತವಾದ ದೇಶವಾಗಿಯೂ, ಶ್ರುತಿಸ್ಮೃತಿಗಳಲ್ಲಿ ನಿಷೇಧಗಳಿಗೊಳಪಟ್ಟ ಆಗರ್ಭ ಹಿಂದೂರಾಜರ ಅಧಿಕಾರಕ್ಕೆ ಒಳಪಟ್ಟದ್ದಾಗಿರುವದರಿಂದಲೂ, ಇವರ ವಿಚಾರಕಾಧಿಕಾರದಲ್ಲಿ ಗೋವಧೆ ಯೆಂಬದು ಮಹಾ ಪಾತಕವೆಂದು ಭಾವಿಸಬೇಕಾದ ಬ್ರಾಹ್ಮಣಪ್ರಜೆಯಿಂದ ಸಹ ನಿಷೇಧಿಸಲ್ಪಟ್ಟಿರುವದರಿಂದಲೂ, ಗೋವಧೆಯನ್ನು ತಪ್ಪಿಸಿದರೆ ಅದು ಯುಕ್ತವಾಗಿರುವುದು. ಗೋವಧೆಯಲ್ಲಿ ಇಲ್ಲಿನ ಜನಗಳಿಗೆ ನಿತ್ಯಂಕಪ್ರವೃತ್ತಿಯುಂಟಾಗಿರುವದರಿಂದ ಇದನ್ನು ನಿಲ್ಲಿಸುವದಾಗಲಿ, ನಿಲ್ಲಿಸಬೇಕೆಂದು ಹೇಳುವದಾಗಲಿ ಅನೇಕರಿಗೆ ಹಾಸ್ಯಾಸ್ಪದವಾಗಿರುವ ಹಾಗೆ ಇದು. ಪರಂತು ಅಂತವರು ಸಹ ಪ್ರಾಣಿ ಹಿಂಸೆ ಮಾಡಕೂಡದೆಂದು ಹೇಳದರಲಿಲ್ಲವು.

LOCAL AND PROVINCIAL NEWS.
ಒಳದೇಶದುತ್ತಾಲ್ಲೂಕಜಾತ್ಯವೃತ್ತಾಂತಗಳು.

Further importation.—ಇಲ್ಲಿನ ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಲರವರಿಗೆ ಸಹಾಯಕರಾಗಿ ಇನ್ನೂ ಇಬ್ಬರು ಬಿ. ಎ. ಗಳು ಮದರಾಸಿನಿಂದ ಕ್ಷಿಪ್ರದೊಳು ಕರೆಸಲ್ಪಡುವವರಾಗಿದಾರೆಂದು ತಿಳಿಯಬರುತಿದೆ. ಇಷ್ಟೇನೆ!

The Telegraph at Hunsur.—ಹುಣಸೂರಲ್ಲಿ ಒಂದು ಟೆಲಿಗ್ರಾಫ್ ಆಫೀಸನ್ನು ಸ್ಥಾಪಿಸಬೇಕೆಂಬ ಅಭಿಪ್ರಾಯವನ್ನು ಇಂಡ್ಯದೇಶದ ಟೆಲಿಗ್ರಾಫ್‌ಗಳ ಡೈರೆಕ್ಟರ್ ಜನರಲ್ಲವರು ಅನುಮೋದಿಸಿ ಆಬಗ್ಯೆ ಹುಕುಂ ಕೊಟ್ಟಿರುತ್ತಾರೆಂದು ತಿಳಿಯಬರುತಿದೆ.

The weather.—ಈಗ್ಯೆ ಯೆರಡು ಮೂರು ದಿನಗಳಮೊದಲು ಮಳೆಸ್ವಲ್ಪಹಿಡಿದ್ದಿದೆ. ಇದರಿಂದ ಜನಗಳಿಗೆ ಅನುಕೂಲವಾಗಿ ಕೆಬ್ಬಿಯುಂಟಾಗಲಿಕ್ಕೆ ಕಾರಣವಾಯಿತು. ಜ್ವರ ಕಣ್ಣೋವು ಮುಂತಾದ ವಗೈರೆ ರೋಗಗಳು ಅಲ್ಲಿ ಯಲ್ಲಿ ತಲೆದೋರಿವೆ. ಕೆರೆಬಾವಿಗಳಿಗೆ ಬೇಕಾದಷ್ಟು ನೀರು ಮಾತ್ರಬರಲಿಲ್ಲವು ಪಾರಣೆವಾಸಿಪಕರೂಪವಾಗಿದೆ

The Dewan.—ಗತ ಗುರುವಾರದ ದಿನ ಬೆಳಗ್ಯೆ ೭½ ಘಂಟೆಗೆ ಸರಿಯಾಗಿ ಪ್ರಯಾಣಸ್ವರಗಾಡಿಯಲ್ಲಿ, ಈ ಸಂಸ್ಥಾನದ ದಿವಾನರಾದ ಮೆಸ್ಟರ್ ಶೇಷಾದ್ರಿ ಅಯ್ಯರ್, ಬಿ. ಎ. ಬಿ. ಎಲ್. ಯವರು ಮೈಸೂರಿಗೆ ಪ್ರಯಾಣವಾದರು ಇವರ ಚೀಫ್ ಸೆಕ್ರೆಟರಿಯೂ ಎಸಿಸ್ಟಂಟ್ ನೌಕರರು ಕೆಲವರೂ ಸಂಗಡ ಹೋಗಿರುತ್ತಾರೆ.

Anniversary.—ಯುವರಾಜರ ವರ್ಷವರ್ಧಂತೀಪ್ರಯುಕ್ತವಾದ ಇದರಾನುದಗಳ್ಯಾನವೂ ಇಲ್ಲಿನವರಿಗೆ ಇಲ್ಲದೆಹೋದಾಗ್ಯೂ ಸರ್ಕಾರನೌಕರರೆಲ್ಲರೂ, ತಮ್ಮತಮ್ಮಮನೆಗಳಲ್ಲಿ ಗತ ಶನಿವಾರವೆಲ್ಲ ನಿದ್ರಾಸುಖವನ್ನನುಭವಿಸಿದರು. ಇಲ್ಲಿನವರಿಗೆ ಇಷ್ಟೆಂಪ್ರಾಪ್ತಿ.

Mysore Amildar's Test.—ಮೈಸೂರು ಶೇಕುಯ ಅಮಲ್ದಾರಗಳು, ಅಸಿಸ್ಟೆಂಟ್ ಕಮಿಶನರ್‌ಗಳು ಮುನಸರುಇವರುಗಳ ಪರೀಕ್ಷೆಯು ಈದಿನ ಪ್ರಾರಂಭವಾಗಿ ಓವಾರ್ ಆಫಿಸ್ ಮದ್ಯಸಿಡದಲ್ಲಿ ನಡೆಯುವದು. ಯೋಗ್ಯವರು ಮುಖ್ಯಂತೆ ಈದವರ ಪ್ರೈಕ್ಷ್ಯೆವೇನಾದರೂ ವೃಟೋದ ಇಲ್ಲಿಗ್ಯೂ ನೋಡಬೇಕು.

Mr. P. Singra Char.—ಮೆ|| ಶಿಂಗರಾಚಾರ್ಯರವರು ಗತ ಸೋಮವಾರದದಿನ ತಮ್ಮಕೆಲಸದ ಚಾರ್ಜನ್ನು ಪಮಿಯತವ್ಯಬಗ್ಯೆ ನಂಜನಗೂಡಿಗೆ ಎಲ್ಲಿ ದ ಪ್ರಯಾಣವಾದರು. ಇವರಿಗೆ ಈನೂತನವೃತ್ತಿಯಲ್ಲಿ ಸುಪ್ರತಿಷ್ಠೆ ಸುಖಸುಖೋದಗಳೂ ಉತ್ತರೋತ್ತರಾಭಿವೃದ್ಧಿಯೂ ವುಂಟಾಗಬೇಕೆಂದು ಕೋರುವೆವು.

The British Resident.—ಬ್ರಿಟಿಷ್ ರೆಸಿಡೆಂಟರಾದ ಮೆ. ಲೈಲ್‌ಯವರು ಅಸಿಸ್ಟೆಂಟ್ ರೆಸಿಡೆಂಟ್ ವಗೈರೆ ಪರಿವಾರದೊಡನೆ ಗತ ಬುಧವಾರದದಿನ ೧೧ ಘಂಟೆಗೆ ಸ್ಪೆಷಲ್ ಟ್ರೇಯಿನಿನಲ್ಲಿ ಮೈಸೂರಿಗೆ ದಯಮಾಡಿದರು. ಆ ಕಾಲದಲ್ಲಿ ಮಾಮೂಲ್‌ಪ್ರಕಾರ ಜರಗಬೇಕಾದ ಮರ್ಯಾದೆಗಳೆಲ್ಲ ಜರಗಿದವು. ಇವರು ಬಹುಶಃ ನಾಳೇದಿನ ಮೈಸೂರಿಂದ ವಾಪಸ್ ಬರುವರೆಂದು ತೋರುತಿದೆ.

Special leave.—ಹಿಂದೂಪುರದ ರೈಲ್‌ರಸ್ತೆಯ ಸರ್ವೇಕೆಲಸದಲ್ಲಿ ನೇಮಕರಾಗ್ಮಾಡಲ್ಪಟ್ಟಿರುವ ಅಸಿಸ್ಟೆಂಟ್ ಇಂಜನಿಯರಾದ ಮೆ|| ತಮ್ಮದತೀರ್ಥರಾಯರವರು ಪುನೇಗೆ ಹೋಗಿ ಅಲ್ಲಿನ ಶಾಸ್ತ್ರ ಪಾಠಶಾಲೆಯಲ್ಲಿ ಇಂಜನಿಯರಿಂಗ್ ಪರೀಕ್ಷೆಗೆ ಓದಿ ಹಾಯು ಮೊದಲಾತಿಗೆ ಲಾಯಕಾಗತಕ್ಕಬಗ್ಯೆ ಅವರಿಗೆ ಆರು ತಿಂಗಳ ಸ್ಪೆಷಲ್‌ಲೀವ್ ಕೊಡಲ್ಪಟ್ಟಂತೆ ಕೇಳಲಾದೆವು

Mr. Annaji Row.—ಬೆಂಗಳೂರು ಮುನಸಫರಾಗಿದ್ದ ಮೆ|| ಅಣ್ಣಾಜಿರಾಯರವರ ವಿಷಯದೊಳು ನಮಗೆ ವುಂಟಾಗಿದ್ದ ಸಂಶಯವೆಲ್ಲವೂ ಗತ ಶನಿವಾರದ ಗೆಜೆಟಿನ ಮೂಲಕ ಕ್ಷಿಪ್ರವಾಗಿ ಯೇನಿವಾರಣವಾದವು ಪ್ರಜೆಗಳ ಭಾವನೆಯೂ, ಚೀಫ್‌ಕೋರ್ಟಿನವರ ತಾತ್ಪರ್ಯವು ಈಗ ಸಾರ್ಥಕವಾದದು ಕಂಡು ನಾವು ಅಲ್ಪವಾಗಿ ಸಂತೋಷಿಸುವದಿಲ್ಲವು.

Deputy Registrarship, Chief Court.—ಮೆ|| ರಮೋರಿಯೋಯವರ ಮರಣಪ್ರಯುಕ್ತ ಖಾಲೀಯಾಗಿದ್ದ ಮೈಸೂರು ಚೀಫ್‌ಕೋರ್ಟ್ ಡೆಪ್ಯುಟೀ ರಿಜಿಸ್ಟ್ರಾರ್‌ಕೆಲಸವು ಅನೇಕ ಸಂದರ್ಭಗಳಲ್ಲಿ ಅದಾಕ್ಟಿಂಗ್‌ತರೀಖ್ ನೋಡುತಲಿದ್ದ ಹೆಡ್‌ಕ್ಲರ್ಕ್ ಮೆ|| ಕ್ಯಾಸ್ಪರ್ ಯೆಂಬವರಿಗೆ ಕೊಡಲ್ಪಡುವದೆಂದು ತಿಳಿಯಲಾದೆವು. ಈಸಂದರ್ಭದಲ್ಲಿ ಕ್ರಮವಾದವರ ಹಕ್ಕುದಾರಿಯು ಗೌರವಿಸಲ್ಪಟ್ಟದದಕ್ಕಾಗಿ ಸಂತೋಷಿಸುವೆವು.

Munsiff of Shimoga.—ಶಿವಮೊಗ್ಗಾ ಮುನ್ಸಫ್ ಕೆಲಸಕ್ಕೆ ನಿಯಮಿತರಾಗಿದ್ದವರಿಗೆ ಅನ್ಯಥಾ ವಿಲೆಯಾಗದದರಿಂದ ಶಿವಮೊಗ್ಗಾ ಮುನ್ಸಫ್ ಕೆಲಸವು ಸಾಬಕ್ ಕಡೂರು ಮುನ್ಸಫರಾಗಿದ್ದ ಮತ್ತು ಈಗ ಡಿಸ್ಟ್ರಿಕ್ಟ್ ಶಿರಸ್ತೇದಾರರಾಗಿರುವ ಮ॥ ವೆಂಕಟಾಚಾರ್ಯರವರಿಗೆ ಕೊಡಲ್ಪಡುವದೆಂದು ಪ್ರವಾದ ವುಂಟಾಗಿದೆ. ಇದು ನಿಜವಾಗಿರುವ ಪಕ್ಷಕ್ಕೆ ಮ॥ ವೆಂಕಟಾಚಾರ್ಯರವರು ಚೀಫ್ ಕೋರ್ಟಿನವರಲ್ಲಿ ಮಾಡಿದ ಉಪಸರ್ಪಣೆಗೆ ರಕ್ಷಪ್ರಯೋಜನವಾಯಿತೆಂದು ಹೇಳಬಹುದು

—

The Nandydroog Sessions.—ಈ ಡಿವಿಜನ್ ನಂದೀದುರ್ಗ ಡಿವಿಜನ್ ಸೆಷನ್ ವಿಚಾರಣೆಯು ಪ್ರಾರಂಭವಾಗುವದು ಈಗ್ಯೆ ಎರಡು ತಿಂಗಳ ಕಾಲವಾಗಿ ಕೋರ್ಟು ಮುಚ್ಚಲ್ಪಟ್ಟಿದ್ದದರಿಂದ ಈ ಸಲದ ಸೆಷನ್ ದರ್ಬಾರಿನ ಬಗ್ಯೆ ೧೪ ಮೊಕದ್ದಮೆಗಳು ಕಮಿಟ್ ಮಾಡಲ್ಪಟ್ಟಿರುತ್ತವೆ. ಮೊಕದ್ದಮೆಗಳು ಬಹಳವಾಗಿರುವದರಿಂದ ಚೀಫ್ ಜಡ್ಜಿಯರಾದ ಮ॥ ಬ್ರ್ಯಾಡ್ಲಿಯವರೂ, ಮೂರನೇ ಜಡ್ಜಿಯರಾದ ಮ॥ ರಾಮಚಂದ್ರಯ್ಯನವರೂ ಕುಳಿತುಕೊಂಡು ವಿಚಾರಣೆ ಮಾಡುವರು

—

Mr. L. Anunthasiony Row B. A. ಈಚೆಗೆ ನಡೆದ ಏಪ್ರಿಲ್‌ನಲ್ಲಿ ಅಸಿಸ್ಟೆಂಟ್ ಕಮಿಷನರಾಗಿ ನೇಮಿಸಲ್ಪಟ್ಟ ಸಾಬಕ್ ರೆವಿನ್ಯೂ ಶಿರಸ್ತೇದಾರ್ ಮ. ಅನಂತರಾಮಯ್ಯನವರು ದಿವಾನರವರ ಪರ್ಸನಲ್ ಅಸಿಸ್ಟೆಂಟರಾಗಿರುವರೆಂದು ತಿಳಿಯಬರುತ್ತದೆ. ಪರ್ಸನಲ್ ಅಸಿಸ್ಟೆಂಟರು ಪಡೆದು ದಿವಾನರು ಬಿಡ್ಡ ಮಾತಹೀಕಾದ ಕೆಲಸಗಳಿಗೆಲ್ಲ ಸಹಾಯ ಮಾಡತಕ್ಕ ಸೆಕ್ರೆಟರಿಯೋ ಅಥವಾ ದಮ್ಮೇಶ್ವರ ಅವರ ಹಾಜರ್ ಓಲೈಸಿಕೊಳ್ಳುವವರ ಅರ್ಥವೋ ತಿಳಿಯಲಿಲ್ಲವು.

—

A false rating.—ಇಲ್ಲಿನ ಚೀಫ್ ಕೋರ್ಟಿನಲ್ಲಿ ಜಡ್ಜಿಕೊಡುವ ಪದ್ಧತಿಯನ್ನು ನೆಲಗೊಳಿಸಿದ್ದರ ಮೂಲಕ ಸರ್ಕಾರಕ್ಕೆ ಸಾಯಿದೆಯನ್ನುಂಟುಮಾಡಿದ ಮ॥ ಹೇಮಾಜಿರಾಯರವರ ಶ್ಲಾಘ್ಯತರವಾದ ಮಹತ್ವವನ್ನು ಪರಿಭಾವಿಸಿ, ಅವರ ಕೆಲಸವನ್ನು ಖಾಯಂ ಮಾಡಬೇಕೆಂದು ಮೂವರು ಜಡ್ಜಿಗಳೂ ಐಕಮತ್ಯದೊಡನೆ ಸಿಫಾರಸ್ಸು ಮಾಡಿದ್ದಾರೆಂದು ಆಶ್ಚರ್ಯಪಡುವಂಥ ಸಮಾಚಾರವನ್ನು ಕೇಳಿ ಸಂತೋಷಿಸುವ ಈವ್ನಿಂಗ್ ಮೇಯಿಲ್ ಪತ್ರಿಕೆಯೊಡನೆ ನಾವು ಕೇವಲ ಸಹಾಯವನ್ನು ಅಪೇಕ್ಷಿಸುತ್ತಿರುವೆವು.

—

Mr. Meenakshi Iyer.—ಮೈಸೂರು ಗವರ್ನಮೆಂಟ್ ಅಡ್ವೊಕೇಟರಾದ ಬ್ಯಾರಿಸ್ಟರ್ ಮಿಸ್ಟರ್ ಮೀನಾಕ್ಷಿ ಅಯ್ಯರವರು ಮದರಾಸ್ ಗವರ್ನರವರ ಕೌನ್ಸಿಲ್ ಮೆಂಬರಾಗಿರುವ ಮಿಸ್ಟರ್ ಸಬಾಪತಿ ಮೊದಲಿಯಾರ್ರವರಿಗೆ ಬದಲು ನೂರು ರೂಪಾಯಿಗಳ ಸಂಬಳ ಕಡಿಮೆಯೊಡನೆ ಮೊಕದ್ದಮೆಗಳ ಮೂಲಕ ಪ್ರವಾದ ಹುಟ್ಟಿಗಿದೆ ಕೌನ್ಸಿಲಿನಲ್ಲಿ ಲೀಗಲ್ ಮೆಂಬರಾಗಿ ನೇಮಕರಾಗಬಲ್ಲರೆಂದು ಸಹ ತಿಳಿಯಬರುತ್ತದೆ. ಇದರಿಂದ ಮ॥ ಶ್ರೀನಿವಾಸಾಚಾರ್ಯರ ವಿಷಯವನ್ನು ಅವಮಾನತಾಗಿ ಬೇಕಾಯಿತು ಅಥವಾ ಮ॥ ಕೃಷ್ಣರಾಯರವರ ನಿವೃತ್ತಿಯನ್ನಾದರೂ ನಿರೀಕ್ಷಿಸಬೇಕಾಯಿತು.

—

Residency Sheristadary.—ಈಗ್ಯೆ ಕೆಲವು ಕಾಲವಾಗಿ ಖಾಲಿಯಾಗಿದ್ದ ರೆಸಿಡೆನ್ಸಿ ಶಿರಸ್ತೇದಾರಿ ಕೆಲಸವು ಮದರಾಸ್ ಹೈಕೋರ್ಟಿನಲ್ಲಿ ವಕಾಲತ್ ಮಾಡುತಲಿದ್ದ ಮಿಸ್ಟರ್ ಕೃಷ್ಣರಾವ್, ಬಿ ಎ ಬಿ. ಎಲ್ ಯವರಿಗೆ ಕೊಡಲ್ಪಟ್ಟಿತೆಂತಲೂ, ಇವರಿಗೆ ಮಾಹೆಯಾನಾ ೬೦೦ ರೂಪಾಯಿಗಳ ತಲಬ್ ಸಲ್ಲತಕ್ಕದೆಂದು ನಿಶ್ಚಯವಾಗಿದೆಯೆಂತಲೂ, ಇವರು ಇವರವಯಃ ಪರಿಮಾಣವು ೩೪ ವರುಷಗಳಿಗೆ ಮೀರಲ್ಪಟ್ಟದ್ದರಿಂದ, ಇವರ ನೇಮಕರಾತಿಯು ಇಂಡ್ಯಾಗವರ್ನಮೆಂಟಿನವರ ಹುಕುಮಿಗೆ ಪ್ರತ್ಯಕ್ಷ ವಿರುದ್ಧವಾಗಿದ್ದರೂ ರೆಸಿಡೆಂಟರವರು ಅವರ ಡಿಗ್ರೀ ಗೌರವಗಳನ್ನು ನೋಡಿ ಮೋಹಿಸಿ ಮೊಕದ್ದಮ್ಮೆಡಿದರೆಂತಲೂ, ತಿಳಿಯಬರುತ್ತದೆ. ಮನೆಮುಂದಿನ ಹಿಂಭಾಗದಲ್ಲಿರುವ ಕಲ್ಪವೃಕ್ಷವು ಎಕ್ಕೆಗಿಡವಂತಲ್ಲದೆ ಹ್ಯಾಗಿರುವದು.

—

An extra allowance.—ಬಳದೇಶದ ಈವ್ನಿಂಗ್ ಮೇಯಿಲ್ ಪತ್ರಿಕೆಗೆ ಒಬ್ಬ ಬಾತಮೀದಾರನು ಬರೆಯುತ್ತಾನೇನೆಂದರೆ–ಮೈಸೂರು ಅಮಲ್ದಾರ್ ಮುನ್ಸಫ್ ವಗೈರೇರ ಪರೀಕ್ಷೆಯಬಗ್ಯೆ ಏರ್ಪಟ್ಟಿರುವ ಸಮಾಜದ ಪ್ರೆಸಿಡೆಂಟರನ್ನು ಅದರ ಸೆಕ್ರೆಟರಿಯಾದ ಮ॥ ಹೇಮಾಜಿರಾಯವರು, ಪ್ರತಿಸಂವತ್ಸರದಲ್ಲಿಯೂ ಉಮೇದವಾರರಿಂದ ವಸೂಲಾಗತಕ್ಕ ಫೀಜ್‌ಮೊಬಲಗುಪೈಕಿ ಪಾಹೇಯಾನಾ ೩ ರೂ॥ ಗಳಿಗೆ ಕಡಮೆಯಿಲ್ಲದೆ ಆ ಕೆಲಸ ನೋಡುವಬಗ್ಯೆ ತಮಗೆ ಜಾಸ್ತೀ ರುಸುಂ ಕೊಡಬೇಕೆಂದು ಕೇಳಿರುತ್ತಾರೆಂದು ತಿಳಿಸಿ ಅದು ಅವರಿಗೆ ಸಲ್ಲದೆಂದು ವಗೈರೆ ಆಕ್ಷೇಪಿಸಿರುತ್ತಾನೆ. ಆ ಹೇತುಹಿತರಾಚಲದ ದರ್ಜೆ ಉಪಯುಕ್ತವಾಗಿರುವ ಮದರಾಸ್ ಯೂನಿವರ್ಸಿಟಿ ಬಿ ಎ ಬಿ. ಎಲ್ ಪರೀಕ್ಷೆಗಳಿಗೆ ಮೇಲ್ಪಟ್ಟ ಇಲ್ಲಿನ ಪರೀಕ್ಷೆಗೆ ಸೀಜ್ ವಸೂಲ್ ಕ್ರಮಪಡಿಸಿದ ಮಾಗ್ಯೆಯಾರು ಎಷ್ಟು ಪಡೆಯತಕ್ಕದು; ರುಸುಂ ವಿಷಯದೊಳು ಮ॥ ಹೇಮಾಜೀರಾಯರವರ ಅಂದಾಜ್ ಕಡಮೆಯಾದ್ದಕ್ಕಾಗಿ ಚಿಂತಿಸುತ್ತೇವೆ

—

Public Prosecutors.—ಸಿವಿಲ್ ಮಿಲಿಟರಿ ಸ್ಟೇಷನಿನ ಪಬ್ಲಿಕ್ ಪ್ರಾಸಿಕ್ಯೂಟರಾಗಿದ್ದ ಮ॥ ಲಿಂಗರಾಚಾರ್ಯರವರು, ಮುನ್ಸಫರಾಗಿ ಮೊಕರರ್ ಮಾಡಲ್ಪಟ್ಟು ನಂಜನಗೂಡಿಗೆ ವರ್ಗವಾದದರಿಂದ ಅವರ ಕೆಲಸವು ಅಡ್ವೊಕೇಟ್ ಮ॥ ಲಾರೆನ್ಸ್ ಬಿ ಎ. ಬಿ ಎಲ್ ಯವರಿಗೆ ಕೊಡಲ್ಪಟ್ಟಿತು. ಮ॥ ಲಿಂಗರಾಚಾರ್ಯರವರು ನೋಡುತಲಿದ್ದ ನಂದೀದುರ್ಗ ಡಿವಿಜನ್ ಪ್ರಾಸಿಕ್ಯೂಟರ್ ಕೆಲಸವು ಜೀರ್ಣೋಲೀ ತನವೊಡನೆ ಅತಿ ಪ್ರಯಾಸದಿಂದ ವಿನಿ ಇಲ್ಲದೆ ಅಡ್ವೊಕೇಟ್ ಮ॥ ಕೇಸರಿಗಿರಿರಾಯರವರಿಗೆ ಕೊಡಲ್ಪಟ್ಟಿತೆಂದು ಈ ಪತ್ರಿಕೆಯ ಮತ್ತೊಂದು ಭಾಗದಲ್ಲಿ ಪ್ರಕಟಿಸಲ್ಪಟ್ಟಿರುವ ಗೆಜೆಟಿನ ಮೂಲಕ ತಿಳಿಯಲಾದೆವು ಈ ವಿಷಯದೊಳು ತಿಳಿಸಬೇಕಾದಂಥ ಅನೇಕ ಇದ್ದಾಗ್ಯೂ ಕಪಿಗೆ ಈ ಕೆಲಸವು ಬರುತ್ತಿದೆಯೆಂದು ಪೇಕ್ಷೆಯಂತೆ ಸೃಷ್ಟಿಕರವಾಗಿಯೂ ನ್ಯಾಯವಾಗಿಯೂ ವಿಶೇಷವಾದದರಿಂದ ಈ ವಿಚಾರವನ್ನು ಇಲ್ಲಿಗೆ ಬಿಡುವೆವು ಗವರ್ನಮೆಂಟ್ ಪ್ರಾಸಿಕ್ಯೂಟರ್ ಬಹಳ ದಿಂದ ಸರ್ಕಾರ್ ಪಕ್ಷಪಾತಿಯೆಂದೆಲೂ, ದುರ್ಜನಗಳ ದುರ್ನಯದಲ್ಲಿಯೇ ದೃಷ್ಟಿಯುಳ್ಳವರೆಂತಲೂ ಸ್ಪಷ್ಟವಾಗುತಿದೆಯಾಗಿ ಮ॥ ಕೇಸರಿಗಿರಿರಾಯರವರು ಪ್ರತೋದ್ವೃಷ್ಟಿಯೊಡನೆ ವರ್ತಿಸುತ ಎಲ್ಲರಿಗೂ ಸಂತೋಷವನ್ನುಂಟುಮಾಡುವವರೆಂದು ಈ ನೂತನಾಧಿಕಾರವು ಅವರಿಗೆ ಸುಖದಾಯಕವಾಗಿರಬೇಕೆಂದು ಕೋರಿ ಅಭಿವಾದನ ಮಾಡುವೆವು

CORRESPONDENCE.

ದಕ್ಷಿಣಾಮೂರ್ತಿ ಶಾಸ್ತ್ರಿಗಳವರಿಗೆ ಗುರುಮೂರ್ತಿಭಟ್ಟ ಕೃತ ನಮಸ್ಕಾರ ಆದಾಗಿ ಸನ್ ೧೮೮೬ನೇ ಇಸವಿ ಜನವರಿ ತಿಂಗಳ ಶಾಸ್ತ್ರಸಂಜೀವಿನೀ ಸಂಚಿಕೆಯಲ್ಲಿ ಅಡಿಗೆ ಸಿದ್ಧಪಾಡಬಳಕ ಬರುವದಿಲ್ಲವೆಂದು ಶಿವಗಂಗೆ ಗುರುಗಳು ಹೇಳಿದಂತೆ ಪ್ರಥಮಶಾಖಾನ್ಯಾಯ ನಿರ್ಣಯವೆಂಬ ಪುಸ್ತಕದಲ್ಲಿ ಬಾಸಿದ್ಧಾಂತೆಯೂ ಶುಕ್ಲಯಜುಶ್ಶಾಖಿಗಳ ಮನೆಯಲ್ಲಿ ಪ್ರಥಮ ನಿಯಮಸ್ಥರು ಭೋಜನಮಾಡುವ ಪದ್ಧತಿಯು ಇಲ್ಲವೆಂತಲೂ ಶಾಸ್ತ್ರವಿರುದ್ಧವಾಗಿ ಪ್ರಕಟಿಸಲ್ಪಟ್ಟಿರುವದಕ್ಕೆ ಪ್ರತ್ಯುತ್ತರವಾಗಿ ನಾನು ತಮಗೆ ಬರೆದ ಕಾಗದಗಳಲ್ಲ ಸದರೀ ಪ್ರಕಟನೆಯು ಗೌತಮಾಪಸ್ತಂಬ ಸೂತ್ರಭಾಷ್ಯ, ಪರಾಶರ ಮಾಧವೀಯ, ಮನು, ಯಮ, ಶಾತಾತಪ, ಯಾಜ್ಞವಲ್ಕ್ಯ, ಬೋಧಾಯನ, ವಸಿಷ್ಠಾದಿ ಸ್ಮೃತಿಗಳಿಗೆ ವಿರುದ್ಧವೆಂತಲೂ, ತಾವು ಶಾಸ್ತ್ರಜ್ಞರೆಂದು ತಿಳಿದು (ವಚಾಂಸ್ಯೌರ್ಧ್ವಮುದಾಹರ್ಯಂ ಯಥೋಕ್ತಂ ಧರ್ಮತತ್ಪರೈಃ) ಎಂಬ ಶಾಸ್ತ್ರಾನುಸಾರವಾಗಿ ನಾನು ನಮೂದಿಸಿರುವ ಶಾಸ್ತ್ರಗಳಿಗೂ ನಿಮ್ಮ ಪ್ರಕಟನೆಗೂ ಶಾಸ್ತ್ರವಚನಗಳಿಂದ ಸಮಾಧಾನವನ್ನು ಹೇಳಬೇಕೆಂತಲೂ ತಿಳಿಸಿದ್ದೆನು. ಇದಕ್ಕೆ ಸಮಾಧಾನವೆಂತ ಮೇ ತಿಂಗಳ ಸಂಚಿಕೆಯಲ್ಲಿ ಪ್ರಕಟಿಸಿರುವದೇನೆಂದರೆ–

ಪ್ರಥಮಶಾಖಿಗಳನ್ನು ಈಗಲೂ ಶ್ರೀಮಠಗಳಲ್ಲಿ ನಡೆಯುವ ಗುರುಗಳ ಆರಾಧನೆಗಳಲ್ಲಿಯೂ ಶ್ರಾದ್ಧಾದಿಗಳಲ್ಲಿಯೂ ಅಗತ್ಯವಾಗಿ ನಿಮಂತ್ರಣಕ್ಕೆ ಹೇಳುವ ಪದ್ಧತಿಯು ಇದ್ದೇ ಇರಬಹುದು. ಮನ್ವಾದಿ ಸ್ಮೃತಿಗಳಲ್ಲಿರತಕ್ಕ ಕೆಲವು ಧರ್ಮಗಳು ನಡೆಯದೇ ಇರತಕ್ಕವುಗಳೂ ವುಂಟು. ನಡೆಯುತಿರುವ ಧರ್ಮಗಳೂ ವುಂಟು. ವಸಿಷ್ಠಾದಿ ಋಷಿಗಳಗೋತ್ರದಲ್ಲಿ ನಾವು ಹುಟ್ಟಿದಾಗ್ಯೂ ಅವರಂತೆ ನಾವು ನಡೆಯುವದಕ್ಕಾಗುವದಿಲ್ಲ. ಸುರೇಶ್ವರಾಚಾರ್ಯರಿಗೆ ಸಾಮ್ಯವಾಗಿ ವಿಷ್ಣುವಿನ ದಶಾವತಾರಗಳನ್ನು ಪರಿಶೀಲಿಸಿ ಬಾರತಾದಿ ಗ್ರಂಥಗಳನ್ನೇ ಚನ್ನಾಗಿ ನೋಡಿದರೆ ಸರಿಯಾಗಿ ಹೇಳುತ್ತೆ. ನಿಯಮಸ್ಥರಾದ ವೆಲನಾಡುಜನರೂ ಮುಲಕನಾಡುಜನರೂ ಪರಸ್ಪರ ಭೋಜನಮಾಡುವಪದ್ಧತಿ ಇಲ್ಲವು (ನಮಾಂಸಭಕ್ಷಣೇದೋಷಃ) ಎಂಬ ಮನುಧರ್ಮ ಶಾಸ್ತ್ರಕ್ಕೆ ವಿರುದ್ಧವಾದ ಈಗಿನ ಆಚಾರವು ತ್ಯಾಜ್ಯವಾದೀತೆ. ಈ ವಿಷಯಕ್ಕಾಗಿಯೇ ಒಂದುಪುಸ್ತಕವನ್ನು ಬರೆಯಬೇಕೆಂದು ನಮಗೆ ಮನಸ್ಸಿದ್ದಾಗ್ಯೂ ಈಗ್ಯೆ ವಿರಾಮವಿಲ್ಲವಾಗಿ ಪ್ರಯತ್ನಿಸಲಿಲ್ಲವು ಶುಕ್ಲಯಜುಸ್ಸಂಬಂಧವಾದ ಗೃಹ್ಯಸೂತ್ರಗಳನ್ನೂ ಶ್ರೌತಸೂತ್ರಗಳನ್ನೂ ತದ್ವ್ಯಾಖ್ಯ ಟೀಕಾದಿಗಳನ್ನೂ ಪರಿಶೋಧಿಸಿದರೆ ಇಂತಾ ವಿಶೇಷ ಬರವಣಿಗೆಗಳಿಗೆ ಅವಕಾಶವುಂಟಾಗಲಾರದೆಂದು ಪ್ರಕಟಿಸಲ್ಪಟ್ಟಿರುತ್ತೆ.

ಪರಾಶರಮಾಧವೀಯೆ, ಆಚಾರಕಾಂಡೆ, ತೃತೀಯಾಧ್ಯಾಯೆ, ಶ್ರಾದ್ಧಪ್ರಕರಣೆ, (ಋಚಾಹಿಸ್ಮೃತಿಃ ಪಿತಾ ಮಹಃ ಪ್ರಪಿತಾಮಹಃ । ಪಿತುಃ ಪಿತಾಮಹಶ್ಚೈವ ಮಾಂದೋಗಶ್ಚೈವಶಕ್ತಿತಃ ॥ ಮನುಸ್ಮೃತೌ, ತೃತೀಯಾಧ್ಯಾಯೆ, ಯತ್ನೇನ ಭೋಜಯೇಚ್ಛ್ರಾದ್ಧೇ ಬಹ್ವೃಚಂ ವೇದಪಾರಗಂ । ಶಾಖಾಂತಗಮಥಾಧ್ವರ್ಯುಂ ಛಂದೋಗಂ ತು ಸಮಾಪ್ತಿಕಂ ॥೧೪೫॥ ಏಷಾಮನ್ಯತಮೋಯಸ್ಯ ಭುಂಜೀತಶ್ರಾದ್ಧಮರ್ಚಿತಃ । ಪಿತೄಣಾಂತಸ್ಯತೃಪ್ತಿಸ್ಸ್ಯಾಚ್ಛಾಶ್ವತೀಸಾಪ್ತಪೌರುಷೀ ॥೧೪೬॥ ಇತ್ಯಾದಿ ಮನುಪರಾಶರಾಪಸ್ತಂಬಾದಿ ಶಾಸ್ತ್ರೋಕ್ತವಾದ ಈ ಧರ್ಮಗಳನ್ನೂ ತಮ್ಮ ತಿಳುವಳಿಕೆಗೆ ಕೊಟ್ಟಿರುವ ಶಾಸ್ತ್ರೋಕ್ತ ಧರ್ಮಗಳನ್ನೂ ಅನುಷ್ಠಾನ ಮಾಡದೆ ಬಿಟ್ಟರೆ ಬ್ರಾಹ್ಮಣ್ಯವು ಉಳಿಯುವದಿಲ್ಲವು ಮೇಲೆಕಂಡ ವಚನದಲ್ಲಿರುವ ಯಜುಶ್ಶಬ್ದವು ತೈತ್ತಿರೀಯವಾಜಸನೇಯೋಭಯಭಾಗಗಳನ್ನು ಹೇಳುತದಲ್ಲದೆ ಅನ್ಯತರ ಭಾಗವನ್ನು ಹೇಳುವದಿಲ್ಲವು. ಮೇಲೆಕಂಡ ೧೪೫ನೇ ಶ್ಲೋಕದ ವ್ಯಾಖ್ಯಾನದಲ್ಲಿಯೂ ಹೀಗೆಯೇ ಹೇಳಲ್ಪಟ್ಟಿದೆ

ವಸಿಷ್ಠಾದಿ ಋಷಿಗಳಗೋತ್ರದಲ್ಲಿ ನಾವು ಹುಟ್ಟಿದ್ದರಿಂದ ಸಾಧ್ಯವಾದಮಟ್ಟಿಗೂ ವಿಹಿತಾನುಷ್ಠಾನ ನಿಷಿದ್ಧ ವರ್ಜನಗಳನ್ನು ಅವರು ಹೇಳಿರುವಂತೆ ಮಾಡದೆ ಇರಲ್ಲವೆ ಬಿಡಲಾಗದು.

(ಯಜ್ಞಾಯಜಗ್ಧಿರ್ಮಾಂಸಸ್ಯೇತ್ಯೇಷದೈವೋವಿಧಿಸ್ಸ್ಮೃತಃ। ಅತೋಽನ್ಯಥಾ ಪ್ರವೃತ್ತಿಸ್ತು ರಾಕ್ಷಸೋ ವಿಧಿರುಚ್ಯತೆ) ಇತ್ಯಾದಿ ಮನುಸ್ಮೃತಿಯ ಬಹು ವಚನಗಳಿಂದ ಮಾಂಸಭಕ್ಷಣವು ನಿಷೇಧಿಸಲ್ಪಟ್ಟಿದೆ ಯಜ್ಞವನ್ನುಬಿಟ್ಟು ಮಾಂಸಭಕ್ಷಣದಲ್ಲಿ ಪ್ರವರ್ತಿಸಿದವನು ಇಕ್ವಲ ಪಾಪಿಗಳೆಂತೆಂಗುತ್ತಾನೆ. ಮನು ಧರ್ಮಶಾಸ್ತ್ರದಲ್ಲಿ ಮಾಂಸಭಕ್ಷಣವು ನಿಷೇಧಿಸಲ್ಪಟ್ಟಿರುವಲ್ಲ ನಮಾಂಸಭಕ್ಷಣೇದೋಷಃ) ಎಂಬ ಮನುಧರ್ಮ ಶಾಸ್ತ್ರವು ಬ್ರಾಹ್ಮಣರಿಗೆ ಮಾಂಸಭಕ್ಷಣದಲ್ಲಿ ದೋಷವಿಲ್ಲವೆಂದು ಹೇಳುವದಕ್ಕೋಸ್ಕರ ಪ್ರವರ್ತಿಸಲಿಲ್ಲವು ಅದರೆ ಯಾತಕ್ಕೆ ಪ್ರವರ್ತಿಸಿತೆಂದರೆ, ಬ್ರಾಹ್ಮಣಾದಿವರ್ಣದವರು ಮಾಂಸಭಕ್ಷಣಾದಿಗಳನ್ನು ಮಾಡಕೂಡದೆಂದು ಹೇಳುವದಕ್ಕೋಸ್ಕರ ಪ್ರವರ್ತಿಸಿರುತ್ತೆ.

ಮನು ಧರ್ಮಶಾಸ್ತ್ರದ ೫ನೇ ಅಧ್ಯಾಯದಲ್ಲಿಂದು ತಾವು ಪ್ರಕಟಿಸಿರುವ ೫೬ನೇ ಶ್ಲೋಕದಲ್ಲಿ (ನಮಾಂಸಭಕ್ಷಣೇದೋಷೋನಮದ್ಯೇನಚಮೈಥುನೇ। ಪ್ರವೃತ್ತಿರೇಷಾಭೂತಾನಾಂ ನಿವೃತ್ತಿಸ್ತು ಮಹಾಫಲಾ) ಇತ್ಯಾದಿಗಳಿಂದ ಶೂದ್ರರಿಗೆ ಸಹ ಮದ್ಯಮಾಂಸಾದಿ ಸೇವನೆಯೊಳು ಫಲವಿಲ್ಲವೆಂದು ಹೇಳಿರುವಲ್ಲಿ ಬ್ರಾಹ್ಮಣರು ಮಾಂಸಾದಿಗಳನ್ನು ಗ್ರಹಿಸಕೂಡದೆನ್ನುವ ವಿಷಯದಲ್ಲಿ ಹೇಳತಕ್ಕದ್ದೇನು.

ಮಾಂಸವನ್ನು ತಿನ್ನಕೂಡದೆಂದು ಮನುಧರ್ಮಶಾಸ್ತ್ರವು ಹೇಳಿರುವಲ್ಲಿ ನಮಾಂಸಭಕ್ಷಣೇದೋಷಃ ಎಂಬ ಮನುಧರ್ಮಶಾಸ್ತ್ರಕ್ಕೆ ವಿರುದ್ಧವಾದ ಈಗಿನ ಆಚಾರವು ತ್ಯಾಜ್ಯವಾದೀತೇ ಎಂದು ಪ್ರಕಟಿಸಿರುವದನ್ನು ನೋಡಿದರೆ ಶಾಸ್ತ್ರೋಕ್ತಪ್ರಕಾರ ನಡೆಯಕೂಡದೆಂದು ಪ್ರಕಟಿಸಿರುವಂತೆ ತೋರುತಿದೆ ಶಾಸ್ತ್ರವನ್ನುಬಿಟ್ಟು ತಾವು ನಡೆದಾಗ್ಯೂ ಶಾಸ್ತ್ರೈಕಶರಣ್ಯರಾದ ಬ್ರಾಹ್ಮಣರು ಶಾಸ್ತ್ರವಿರುದ್ಧಾನುಷ್ಠಾನ ಮಾಡುವದಿಲ್ಲವು

ಏನಂದರೆ ಮನ್ವಾದಿ ಶಾಸ್ತ್ರಗಳಲ್ಲಿ ಹೇಳಿರುವ ಅರ್ಥವನ್ನು ಪ್ರಕಟಿಸದೆ ಆ ವಚನದಲ್ಲಿಲ್ಲದ ಅರ್ಥವನ್ನು ಪ್ರಕಟಿಸಿದ್ದಕ್ಕೆ ಕಾರಣ ತಿಳಿಯಲಿಲ್ಲವು

ನಿಯಮಸ್ಥರಾದ ವೆಲನಾಡು ಜನರೂ, ಮೂಲಕನಾಡುಜನರೂ ಪರಸ್ಪರ ಭೋಜನ ಮಾಡಕೂಡದೆನ್ನುವ ಪ್ರಮಾಣವಚನಗಳನ್ನು ತೋರಿಸದೆ ಹೀಗೆ ಪ್ರಕಟಿಸತಕ್ಕದ್ದು ವಿದ್ವಾಂಸರ ಮರ್ಯಾದೆಯಲ್ಲವು.

ವೇದಾಃ ಪ್ರಮಾಣಂ ಸ್ಮೃತಯಃ ಪ್ರಮಾಣಂ ಧರ್ಮಾರ್ಥಯುಕ್ತಂ ವಚನಂ ಪ್ರಮಾಣಂ ॥ ಯಸ್ಯ ಪ್ರಮಾಣಂ ನಭವೇತ್ಪ್ರಮಾಣಂ ಕಸ್ತಸ್ಯ ಕುರ್ಯಾದ್ವಚನಂ ಪ್ರಮಾಣಮಿತಿ॥ ವೇದಗಳಿಗೂ ತನ್ಮೂಲಕಸ್ಮೃತಿಗಳಿಗೂ, ಸರ್ವಶಾಸ್ತ್ರಲೋಕ ಸಿದ್ಧವಾದ ಧರ್ಮಾರ್ಥಯುಕ್ತ ವಚನಗಳಿಗೂ ಪ್ರಾಮಾಣ್ಯನಿಶ್ಚಯವು ಅಬಾಧಿತವಾಗಲಾಗಿ, ಆ ಶ್ರದ್ಧನಾದ ಯಾವಪುರುಷನಿಗೆ, ಮೇಲೆ ಕಂಡ ಶ್ರುತಿಸ್ಮೃತ್ಯಾದಿಗಳು ಪ್ರಮಾಣಗಳಾಗುವದಿಲ್ಲವೋ ಅಂದರೆ, ಅವನಿಂದ ಪ್ರಮಾಣವೆಂದು ಸ್ವೀಕರಿಸಲ್ಪಡುವದಿಲ್ಲವೋ ಅಂತಾ ಪುರುಷನ ವಚನವಂದರೆ, ಇಂತಾ ಅಪ್ರಮಾಣ್ಯವಚನವನ್ನು ವಿವೇಕಿಯಾದ ಯಾವಪುರುಷನೂ ಪ್ರಮಾಣತ್ವೇನ ಸ್ವೀಕರಿಸಲಾರನೆಂದು ಭಾವವು.

ಅಸೂಯೆಇಂದಲೋ ಅನ್ಯರ ಬೋಧನೆಯಿಂದಲೋ ಶುಕ್ಲಯಜುಶ್ಶಾಖಿಗಳ ಮನೆಯಲ್ಲಿ ಪ್ರಾಯಶಃ ನಿಯಮಸ್ಥರು ಭೋಜನ ಮಾಡುವ ಪದ್ಧತಿಯು ಇಲ್ಲವೆಂದು ಶ್ರುತಿಸ್ಮೃತ್ಯಾದಿ ಸರ್ವಶಾಸ್ತ್ರವಿರುದ್ಧವಾಗಿ ಶಾಸ್ತ್ರಸಂಜೀವಿನೀ ಸಂಚಿಕೆಯಲ್ಲಿ ಪ್ರಕಟಿಸಿರುವ ಅಂಶವನ್ನು ವಿವೇಕಿಗಳು ನಿಶ್ಚಯವೆಂದು ಎಣಿಸುವದಿಲ್ಲವು.

ಮೇಲೆಕಂಡ ಪ್ರಕಟನೆಯ ವಿಷಯವಾಗಿ ಶಾಸ್ತ್ರಸಂಜೀವಿನಿಯವರಲ್ಲಿ ೩ ತಿಂಗಳಿಂದ ಚರ್ಚಿಸಿದ್ದಕ್ಕೆ ಆ ಪ್ರಕಟನೆಯ ವಿಷಯದಲ್ಲಿ ಒಂದು ಪ್ರಮಾಣ ವಚನವಾದರೂ ದೊರಕಲಿಲ್ಲವು. ನಾನು ಮಾಡಿದ ಶ್ರಮವು ವ್ಯರ್ಥವಾಯಿತು.

ಬರುವ ಸೋಮವಾರದೊಳಗಾಗಿ ಉತ್ತರವನ್ನು ಬರೆಯಬೇಕು. ತಮ್ಮ ಉತ್ತರವನ್ನೂ ಈ ಕಾಗದಾಭಿಪ್ರಾಯವನ್ನೂ ಕರ್ಣಾಟಕ ಪ್ರಕಾಶಿಕಾ ಎಂಬ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದರೆ ವಿದ್ವಾಂಸರು ಶಾಸ್ತ್ರನ್ಯಾಯಗಳನ್ನು ತಿಳಿಸುತ್ತಾರೆಂಬ ಅಪೇಕ್ಷೆಯಿಂದ ಮೇಲೆಕಂಡ ಪತ್ರಿಕೆಗೆ ಕಳುಹಿಸುತ್ತೇನೆ.

TELEGRAPHIC SUMMARY.

ರುತಿವೃತ್ತಾಂತ ಸಂಗ್ರಹವು.

— ೧ —

ಲಂಡನ್ ೮ನೇ ಜೂನ್—ಇಂಡ್ಯ ಕೌನ್ಸಿಲಿನಲ್ಲಿ ರಿಯಲ್ ... ಸೆಕ್ರೆಟರಿ ಕೌನ್ಸಿಲಿನ ಒಂದು ಕೋರ್ಟು ... ಸ್ಟೇಟ್ ಸೆಕ್ರೆಟರಿಯವರಿಗೆ ಅಧಿಕಾರ ಉಂಟುಮಾಡುವದನ್ನು ... ಹೌಸ್ ಆಫ್ ಕಾಮನ್ಸ್ ... ಅಂಗೀಕರಿಸಿದರು.

ಲಂಡನ್ ೯ನೇ ಜೂನ್ ... ಪಾರ್ಲಿಮೆಂಟ್ ಸಭೆಯನ್ನು ... ಪ್ರಕಟಿಸಲಾಯಿತು ... ಉಂಟಾಯಿತು

ಬರ್ಲಿನ್ ತಾ॥ ೧೦ನೇ ಜೂನ್ ... ಅರಸನಾದ ... ಚಿತ್ತವಿಭ್ರಮೆ ಯುಂಟಾದದರಿಂದ ಅವರು ... ದರು.

ರಂಗೂನ್ ೧೦ನೇ ಜೂನ್, ... ಹೈಕೋರ್ಟ್ ... ನಲ್ಲಿ ಪ್ರಸಿದ್ಧನಾದ ... ಹೈಕೋರ್ಟ್ ... ದ...

ಕೋಟೆಯವರನ್ನು ಓಡಿಸಿಬಿಟ್ಟು ದರೋಡೆಯವರ ಕೂಲ [illegible] ಕ್ಷೇತ್ರದ ಸಮೀಪಕ್ಕೆ ಹೋಗುವಾಗ್ಯೆ ದರೋಡೆಯವರ [illegible] ತಪ್ಪಿಸಿಕೊಂಡು ಹೋದ [illegible] ದರೋಡೆಯವರು ಹಾನಿಕೊಂಡು ಹೋದ [illegible] ಕುದುರೆಯನ್ನು ವಾಪಸ್ ಹಿಡಿಯುವುದು [illegible] ಅವರ ಕಡೆಯವರಿಬ್ಬರು ಧೈರ್ಯದೊಡನೆ [illegible] ಅವರಿಗೆ ಸಹ ಪೂರಾ ಜಖಮುಗಳು ಈ ದರೋಡೆ [illegible] ಸ್ವಲ್ಪ [illegible] ಸರ್ಕಾರದ ಕುಮ್ಮಕ್ಕಾಗಿರುತ್ತದೆ.

[illegible] ೧೦ನೇ ಜೂನ್.— ಮಿ. ಗ್ಲಾಡ್‌ಸ್ಟನ್ ಯವರ [illegible] ೬೮ ಸಭಾಸದರು [illegible] ಆದ ಯಾವ [illegible] ಆತ್ಯಾವಶ್ಯಕವಾಗಿಲ್ಲ.

THE MYSORE GAZETTE
ಮೈಸೂರು ಗೆಜೆಟು.

ಶ್ರೀಮನ್ಮಹಾರಾಜ ರವರ ಹುಜೂರ [illegible] ದಿವಾನರವರಿಂದ ಕೊಡಲ್ಪಟ್ಟ ಇಸ್ತಿಹಾರ [illegible]

ನಂ. ೯೧ ತಾ|| ೫ನೇ ಜೂನ್ [illegible] ತಾಲ್ಲೂಕು ಅಮಲ್ದಾರ್ ಅಬ್ದುಲ್ [illegible] ಅವರು ಉಪಯೋಗಿಸಿಕೊಳ್ಳುವ [illegible] ರಜಾ ಕೊಡಲ್ಪಟ್ಟಿರುತ್ತೆ.

ನಂ. ೯೨, ತಾ|| [illegible] ಜೂನ್ ೧೮೮೬.— [illegible] ಪೋಲೀಸ್ ಅಸಿಸ್ಟೆಂಟ್ ಕಮಿಷನರ್ ಮಿ. ಸಿ. [illegible] ಪೋಲೀಸ್ ಅಸಿಸ್ಟೆಂಟ್ ಕಮಿಷನರ್ [illegible] ಅಸಿಸ್ಟೆಂಟ್ ಕಮಿಷನರಾಗಿರತಕ್ಕ [illegible] ಅಸಿಸ್ಟೆಂಟ್ ಕಮಿಷನರ್ ಮಿ. [illegible] ಜಿಲ್ಲೆಗೆ ಕಳುಹಿಸಲ್ಪಟ್ಟಿದ್ದಾರೆ [illegible] ಬೆಂಗಳೂರು [illegible] ಅಸಿಸ್ಟೆಂಟ್ ಕಮಿಷನರಾಗಿ [illegible] ಜಿಲ್ಲೆಗೆ [illegible] ಬೆಂಗಳೂರು ಡಿಸ್ಟ್ರಿಕ್ಟಿಗೆ [illegible] ಕುಮಾರ ಡಿಸ್ಟ್ರಿಕ್ಟಿನಲ್ಲಿ [illegible] ಅಸಿಸ್ಟೆಂಟ್ ಕಮಿಷನರ್ ಮಿ. [illegible] ಬೆಂಗಳೂರು ಡಿಸ್ಟ್ರಿಕ್ಟಿಗೆ [illegible] ನೇಮಿಸಲ್ಪಟ್ಟಿರುತ್ತಾರೆ.

ನಂ. ೯೩.— [illegible] ನಂಬರ್ [illegible] ಕೋಲಾರ, ತುಮಕೂರು, ಹಾಸನ, [illegible] ಕಡೂರು [illegible] ಜಿಲ್ಲೆಗಳ [illegible] ಅಧಿಕಾರವು ಕೊಡಲ್ಪಟ್ಟಿರುತ್ತದೆ.

ನಂ. ೯೪. ತಾ|| ೭ನೇ ಜೂನ್ ೧೮೮೬.— [illegible] ಎಕ್ಸಿಕ್ಯೂಟಿವ್ ಇಂಜನಿಯರ್ [illegible] ಕೊಡಲ್ಪಟ್ಟಿರುತ್ತದೆ.

ಹಾಸನ ಡಿವಿಜನಿಗೆ [illegible] ಸಿ. ರಂಗಸ್ವಾಮಯ್ಯಂಗಾರ್ [illegible] ತಾತ್ಕಾಲಿಕವಾಗಿ [illegible] ರಜಾ ಕೊಡಲ್ಪಟ್ಟಿರುತ್ತದೆ.

SUMMARY OF NEWS
ವರ್ತಮಾನ ಸಂಗ್ರಹವು

ಸೋಲಾಪುರದ ಜನರೂ ಅಲ್ಲಿನ ಮ್ಯೂನಿಸಿಪಾಲಿಟಿಯವರೂ ಸೇರಿ ಡಿರ್ಫರಿನ್ ಯವರ ಫಂಡಿಗೆ ೧೫ ಸಾವಿರ ರೂಪಾಯಿಗಳನ್ನು ಕೊಟ್ಟಿರುತ್ತಾರಂತೆ.

ಮುಂದಿನ ತಿಂಗಳ ೧ನೇ ತಾರೀಖಿನಿಂದ ಪೋಸ್ಟ್ ಕಾರ್ಡ್ ಗಳಿಗೆ [illegible] ಮೈಸೂರು ಸರಕಾರೀ ಗೆಜೆಟಿನಲ್ಲಿ ಪ್ರಕಟವಾಗಿರುತ್ತದೆ.

ಹುಬ್ಬಳ್ಳಿಯ ವ್ಯಾಪಾರೋತ್ತೇಜಕ ಶಾಲೆಗೆ ಮ್ಯೂನಿಸಿಪಾಲಿಟಿಯವರು ೭ ಸಾವಿರ ರೂಪಾಯಿಗಳನ್ನು ಕೊಡುವರು; ಉಳಿದ ೬ ಸಾವಿರ ರೂಪಾಯಿಗಳನ್ನು ಸರ್ಕಾರದವರು ಕೊಟ್ಟರೆ ಶಾಲೆಯು ಪ್ರಾರಂಭವಾಗುವದೆಂದು ತಿಳಿಯಬರುತಿದೆ.

ಕೊಲ್ಹಾಪುರದ ಪೊಲಿಟಿಕಲ್ ಏಜೆಂಟರಾದ ಮೆಸ್ಟರ್ ಲೀ ವಾರ್ನರ್ ಸಾಹೇಬರು ಅಲ್ಲಿನ ರೀಜೆಂಟರಾಗಿ ನೇಮಿಸಲ್ಪಟ್ಟರು; ಆ ಕೆಲಸಕ್ಕೆ ಯೋಗ್ಯನಾದ ಯಾವನಾದರೊಬ್ಬ ನೇಟಿವನನ್ನು ನೇಮಿಸಬೇಕೆಂದು ವರ್ತಮಾನ ಪತ್ರಿಕರ್ತರು ತಮ್ಮ ಪತ್ರಗಳಲ್ಲಿ ಬರೆದು ತಮ್ಮ ಪತ್ರಿಕೆಯ ಕಾಲಂಗಳನ್ನು ಬರ್ತೀಮಾಡಿದ್ದೊಂದೇ ಲಾಭವಾಯಿತಲ್ಲದೆ ಅವರ ಮನೋಭೀಷ್ಟವು ಕೈಗೂಡಲಿಲ್ಲವು. ಕೊಲ್ಹಾಪುರದ ರೀಜೆಂಟರಾಗಿ ನೇಮಿಸಲ್ಪಡುವದಕ್ಕೆ ಯೋಗ್ಯತೆಯುಳ್ಳ ನೇಟಿವ್ ಗೃಹಸ್ಥನೊಬ್ಬನಾದರೂ ನಮ್ಮ ಗವರ್ನರಾದ ಲಾರ್ಡ್ ರೀಯವರ ದೃಷ್ಟಿಗೆ ಬೀಳದೇ ಹೋದದ್ದಕ್ಕಾಗಿ ಆಶ್ಚರ್ಯಪಡಬೇಕಾಗಿದೆ.

ನಾಸಿಕ ಹೈಸ್ಕೂಲಿನ ಪ್ರಥಮೋಪಾಧ್ಯಾಯರಾದ ಗೋಪಾಲರಾವ್ ಹಿಂದೋಳಕರರವರು, ಬ್ರಾಹ್ಮಣ ಜಾತಿಯವರು ಹೆಚ್ಚಾಗಿ ಇರುವಲ್ಲಿ ಮುಖ್ಯವಾಗಿ ಶಿಕ್ಷಕರಾಗಿದ್ದಾಗ, ಬ್ರಾಹ್ಮಣರ ಹುಡುಗರನ್ನು ಶಿಕ್ಷಿಸಿ ಹಾಜರುಳ್ಳವರನ್ನು ಅವರು ಸುಸಿದರೆ ಅವರೊಳಗಿನ ಒಬ್ಬ ಹುಡುಗನು ಅವರನ್ನು [illegible] ಹುಡುಗನ [illegible] ಹಿಡಿದ್ದರಿಂದ ಅವನಿಗೆಯು ಹುಡುಗರೂ ರಕ್ತ ಹರಿಯುವದನ್ನು ಕಂಡು ಉಳಿದವರು ಮುಖ್ಯೋಪಾಧ್ಯಾಯರಿಗೆ ತಿಳಿಸಿಕೊಳ್ಳಲಾಗಿ ಹೆಡ್ಮಾಸ್ಟರ್ ಸಾಹೇಬರನ್ನು ಬಹಳವಾಗಿ ಹುಸಿಸಿದರು. ಈಗ ಪೊಲೀಸಿನವರು ಆ ಜನರನ್ನು ಪತ್ತೇಮಾಡುತಲಿರುತ್ತಾರಂತೆ. ಇದು ನಿಜವಾಗಿದ್ದ ಪಕ್ಷದಲ್ಲಿ, ಹೆಡ್ಮಾಸ್ಟರ್ ಸಾಹೇಬರು ಮಾಡಿದ್ದಕ್ಕೆ ಅರ್ಹರಾಗಿರುತ್ತಾರೆಂದು ನಿಷ್ಪಕ್ಷಪಾತಿಗಳಾದವರ್ಯಾರೂ ಹೇಳದೇ ಇರರು. ಇದರ ವಿಷಯದಲ್ಲಿ, ತಾವೇ ಮೊದಲು ಅವಿಚಾರವಾದ ಕೃತ್ಯವನ್ನು ಮಾಡಿ ರಮಗೆ ತಾವೇ ಸಂಕಟದಲ್ಲಿ ಸಿಲುಕಿಕೊಳ್ಳುವದು ಬಹಳ ಅಜ್ಞತೆಯಿಂದಾದ ಸಂಗತಿಯಾಗಿರುತ್ತದೆಂದು ಯಾರೂ ಹೇಳದಿರರು. ಎಲ್ಲರಿಗಿಂತಲೂ ನಿರ್ಮಲಮನಸ್ಸಿನವರಾಗಿಯೂ, ಸುಸ್ವಭಾವವುಳ್ಳವರಾಗಿಯೂ, ಸದಾಚಾರಿಗಳಾಗಿಯೂ ವರ್ತಿಸುವದು ಶಿಕ್ಷಕರ ಮುಖ್ಯ ಧರ್ಮವಾಗಿರುತ್ತದೆ. ಅವರೇ ಇಂಥಾ ಅವಿಚಾರಕೆಲಸಗಳನ್ನು ಮಾಡಿದಲ್ಲಿ ಅವರ ಕೈಕೆಳಗೆ ಓದುವ ವಿದ್ಯಾರ್ಥಿಗಳು ತಮ್ಮ ಗುರುಗಳ ಆಜ್ಞೆಯನ್ನು ವಿಚಾರಿಸಲಿಯದೆ ರನ್ನೇನುಮಾಡುವರು. ಇದನ್ನು ಎಲ್ಲಾ ಮ್ಯಾಸ್ಟರ್ ಗಳೂ ಲಕ್ಷ್ಯವಿಟ್ಟು ತಿಳಿಯತಕ್ಕದ್ದು.

ಕಲಿಯುಗದಲ್ಲಿ ಉತ್ತರೋತ್ತರ ನಡೆಯುವ ಲೋಕಸ್ಥಿತಿಯು— ಸುದ ಹೀನರೊಳಗೆ ಪರಸ್ಪರವಾಗಿ ದರ್ಶನವೇಲಿ ದುರ್ಲಕ್ಷ್ಯ ಪ್ರಬಲವಾಗುವದು. ಮನಸ್ಸಿಗೆಬಂದ ಪುರುಷರೊಳಗೆ ದರ್ಶನ ಸಂಪತ್ತಿಗನುಸರಿಸಿ ಕುಲದ ಗೌರವವಿಲ್ಲದಿದ್ದರೂ ಕೂಡುಗಳೇ ಅದು ಮೊದಲು. [illegible] ಧರ್ಮ [illegible] ಕಲಿಯುಗದ [illegible] ಸಾಕ್ಷಿಯು ಸಸ್ಯವಾದ ಕೂಡಲೇ ಜೀವಿತವಿಯರು ಹೋಗುವರು, ಜನರು [illegible] ಸ್ತ್ರೀಯರು [illegible] ನಿರಂತರ ಸ್ವೇಚ್ಛಾಚಾರಿಗಳೂ, ಕುಟಿಲಗರೂ ಆಗುವರು. ಎಲ್ಲಾ ವರ್ಣದವರೂ ಬ್ರಾಹ್ಮಣರಿಗೆ ಸರಿಯಾಗಿ ತಮ್ಮ ಅದ್ಭುತವನ್ನು ತೋರಿಸ ತೊಡಗುವರು. ಕಲಿಯುಗದಲ್ಲಿ ದಶವಾಷ್ಟದ ವಿಪ್ಲವತೆಯ ಎಂದಿಗೂ ಇರಲಾರದು. ಜನರಿಗೆ ಸಂ [illegible] ಸಂತೋಷವಿರಾದ್ದರಿಂದ ಬಹು ಪ್ರಯಾಸವಾಗುವದು. ಜನರು ಸ್ನಾನ ಸಂಧ್ಯಾದಿ ನಿತ್ಯ ಕರ್ಮಾನುಷ್ಠಾನಗಳನ್ನು ಮಾಡದೆಯೂ, ಅಗ್ನಿ, ದೇವರು, ಅತಿಥಿ ಇವರ ಪೂಜೆಯನ್ನು ಮಾಡದೆಯೂ ಅನ್ನವನ್ನು ಸೇವಿಸುವರು. ಸ್ತ್ರೀಯರು ಪತಿಯ ಅಥವಾ ತಂದೆತಾಯಿಗಳ ಅಪ್ಪಣೆಯನ್ನು ಪಾಲಿಸರು. ತಂದೆತಾಯಿಗಳಿಗೆ ಬದಲಾಗಿ ಅತ್ತೆ ಮಾವಂದರು ಪೂಜ್ಯರಾಗುವರು. ಹೆಂಡತಿಯ ಸಹೋದರನಾಗಲಿ ಅಥವಾ ಯಾವನಿಗೆ ಸುಂದರಿಯಾದ ಅರ್ಧಾಂಗಿಯು ಇರುವಳೋ ಅವನೇ ಪರಮಮಿತ್ರನೆಂದು ತೋರಿ ಅವನಲ್ಲಿ ಸ್ನೇಹವು ಬೆಳೆಯುವದು. ಯಾರು ತಂದೆ, ಯಾರು ತಾಯಿ! ಪ್ರತಿ ಒಬ್ಬನೂ ತನ್ನ ಪೂರ್ವ ಕರ್ಮದ ಫಲದಂತೆ ಜನ್ಮ ಹೊಂದಿದ್ದಾನೆಂದು ಜನರು ಹೇಳುವರು. ಅರಸರು ಪ್ರಜಾ ಪರಿಪಾಲನ ಮಾಡುವದಕ್ಕೆಬದಲು ಸುಲಿಗೆಮಾಡುವರು. ಸುಂಕದ ನಿಮಿತ್ತ್ಯ ಜನರಿಗೆ ವ್ಯಾಪಾರದಲ್ಲಿ ಬರುವ ಉತ್ಪತ್ತಿಯನ್ನು ಅಕ್ರಮಿಸುವರು. ವೈಶ್ಯರು ಕೃಷಿ ವಾಣಿಜ್ಯಗಳನ್ನು ಬಿಟ್ಟು ಕ್ಷಿಲ್ಲಕೆಲಸಗಳನ್ನು ನೂರಿ ದಾಸ್ಯತ್ವದಿಂದ ಹೊಟ್ಟೆ ಹೊರಕೊಳ್ಳುವರು.

ಬೆಂಗಳೂರಿನಲ್ಲಿ ಮೂರು ನಿಂತುಕೊಳ್ಳುವ ಮಿಲಿಟರಿ ಗಳನ್ನು ನೇಮಿಸುವಂತೆ ಪೂರ್ವ [illegible] ಜನರೊಳಗೊಬ್ಬರು ಹಾಗೆ ಬೇಡಿಕೊಂಡಿರುತ್ತಾರೆಂದು [illegible] ಅಲ್ಲಿನ [illegible] ಬರುವ ವರ್ತಮಾನ ಪತ್ರಿಕೆಗಳಿಂದ ಈ ಮೂಲಕ ತಿಳಿಯಬರುತಿದೆ. ಇದನ್ನು [illegible] ಆಶ್ಚರ್ಯವಾಗುತದೆ. [illegible] ಹಿಂದುಸ್ಥಾನದ ಜನರು ವಿದ್ಯೆ ಬುದ್ಧಿಯೂ, ನಾಗರಿಕತನದಲ್ಲಿಯೂ, ಬ್ರಾಹ್ಮಣವ್ಯಾಪಾರಗಳಲ್ಲಿ [illegible] ಅವರಿಗೆ ಸ್ವರಾಜ್ಯಾಧಿಕಾರವನ್ನು [illegible] ಕೊಡತಕ್ಕದ್ದೆಂದು ಎಷ್ಟು ಎಳೆ ಜನರು [illegible] ಬಂದವರು [illegible] ಮಾಡಿದರೂ ಅವರ [illegible] ಸ್ಥಿತಿ [illegible] ಸಮಸ್ತ ಉತ್ತಮ ವೈದಿಕ ಬೋಧಿಸುವರು [illegible] ಸ್ವತಂತ್ರ್ಯವನ್ನು ನಮಗೆ ಕೊಡಬೇಕೆಂದು ಕೇಳುವರು. ಸಮಗ್ರ ಸ್ವಾತಂತ್ರ್ಯವನ್ನು ನಾವು ಕೇಳುವದಕ್ಕೆ ಬಿಟ್ಟು ಮಾಡುವಲ್ಲಿ ಅವರನ್ನು ನಮಗೆ ಬೇಕು ಎಂದು ಆಯುಧವನ್ನು ದಯಪಾಲಿಸಿದ ಆ ದೊಡ್ಡವರು ಪ್ರತಿಗಳಾಗಿ ತಮ್ಮನ್ನು ಮಿಲಿಟರಿಗಳಲ್ಲಿ ಸೇರಿಸಿಕೊಳ್ಳುವದು [illegible] ಬೆಂಗಳೂರಿನವರು ಇಷ್ಟೆಲ್ಲಾ ಸಹ ಬೇಡಿಕೊಂಡಿರುವರು. ನಮ್ಮ ದೇಶದವರು ಹೇಳುವದಕ್ಕೂ ನಾವು ಅಬಲರಾಗುವದಕ್ಕೂ ಕಾರಣವೆಂದು ಯಾರನ್ನು [illegible] ನಿನ್ನೆಯವರೆಗೂ ಸಾಗಿರಿಸಿದರೂ, ನಾಗರಿಕತನದಲ್ಲಿಯೂ ಪ್ರವೀಣರಲ್ಲವೆಂದು ನಮ್ಮ ಹಣವು ಬರುವ ಬರುವರು [illegible] ತಮ್ಮ ಸಮರ್ಥತೆಗಳು ನಮ್ಮ ಪರವಾಗಿ ಅವರು ನಡೆಸುತ್ತಬಂದರೂ ಆ ರಾಜ್ಯರಿಗೆ ಏತಕ್ಕೆಬೇಕಾಗಿದೆ? ಹಾಗೆ ಅದು ಏತಕ್ಕೆ ನಮ್ಮ ರನ್ನು ನಾವೇ ಅವರಿಗೆ ಹೊರಿಸಿ ಕೊಟ್ಟುಕೊಳ್ಳುವದಲ್ಲದೆ [illegible] ನಮಗೆ ನಮ್ಮ ಕಲ್ಯಾಣವನ್ನು ಬಯಸುವ ದಿವಸ ಪ್ರಜೆಗಳಂತೆ ನಮಗೆ ಹೊಸ್ತ ಮಿಲಿಟರಿ ತುಕಡಿಗಳನ್ನು ಕೊಡಿಸಿಕೊಳ್ಳುವ ಪ್ರಯತ್ನ ನಮದಾದರೂ ಸ್ಯಾಗೆ? ಅವರಿಗೆ ಅಂಥಾ ತಾತ್ಪರ್ಯವಾದರೂ ಸ್ಯಾಗೆ ಪ್ರಯೋಜನ? ಇನ್ನು ಮುಂದಾದರೂ ನಮ್ಮವರು ಇಂಥಾ ಸಂಗತಿಗಳಿಗೆ ಚೆನ್ನಾಗಿ ಲಕ್ಷ್ಯಕೊಟ್ಟು ಹಿರಿಯರೂ ಸೇರಿ ಮುಂದೆ [illegible] ಸರಕಾರದವರನ್ನು ಸಿದ್ಧಿ ಸಂಪಾದಿಸಲಿಕ್ಕೆ [illegible] ಆ ಕೃಪೆಯನ್ನು ಅವರಿಗೆ [illegible] ಎಂದು ತೀವ್ರವಾಗಿ ನಿರ್ಣಯಿಸಲಿಲ್ಲವು.

ಹಿಂದೂ ಜನರೆಲ್ಲಾ ತಿಳಿಯದ ಶಾಲಾಕಾರ್ಯವು ಮುಂತಾದ ದೇಶದ ಉನ್ನತಿಗೆ ಆಧಾರವಾದ ಶಾಲೆಗಳು ಮುಖ್ಯ ಗಳಿಗೆ [illegible] ವಾಗಿದ್ದರೂ ಈ ವ್ಯಾಪಾರ ವ್ಯವಹಾರ ವಿದ್ಯೆ ಅವಶ್ಯಕವಾಗಿರ [illegible] ಮುಂತಾದ್ದು ಅನೇಕರಲ್ಲಿ ಇರುವದಿಲ್ಲ. ನಾವು ಈಗ ಪಡೆಯುವ ವಿದ್ಯೆಯು ಸರಕಾರಿ ಉದ್ಯೋಗಕ್ಕೆ ಮಾತ್ರವಾಗಿದ್ದು, ಹೊರತು ಸ್ವಾತಂತ್ರ್ಯ ಉದ್ಯೋಗವನ್ನಾದರೂ ವರ್ತಿಸಲಿಕ್ಕೆ ಅವಶ್ಯಕವಾದ ಜ್ಞಾನವನ್ನುಂಟುಮಾಡಲಿಕ್ಕೆ ಯೋಗ್ಯವಾದ್ದಾಗಿರುವದಿಲ್ಲವು. ನಮ್ಮ ಜನರೆಲ್ಲರೂ ಸರಕಾರೀ ಉದ್ಯೋಗಗಳನ್ನೇ ಅಪೇಕ್ಷಿಸುತ್ತಿದ್ದರೆ ದೇಶವು ಅಭಿವೃದ್ಧಿಗೆ ಬರಲಾರದು. ಪ್ರತಿವರುಷವೂ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವ ಸಾವಿರಾರು ಜನರಿಗೆ ಸರಕಾರೀ ಉದ್ಯೋಗಗಳು ಹ್ಯಾಗೆ ದೊರೆಯುವದೆಂಬ ಮುಖ್ಯಪ್ರಶ್ನೆಗೆ ಉತ್ತರಕೊಡುವದು ಅಸಾಧ್ಯವೇಯಿರುವದು.

ಕೆಲವು ದಿವಸಗಳ ಹಿಂದೆ ರಾಜಾ ಸರ್.ಟಿ. ಮಾಧವರಾಯರವರು ಇದೇ ವಿಷಯವನ್ನು ಕುರಿತು ಒಂದು ಲೇಖನವನ್ನು ಬರೆದು ಪ್ರಸಿದ್ಧಪಡಿಸಿದರು. ಅದರಲ್ಲಿ ಹಿಂದೂಜನರೊಳಗಿರುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ೪ ವರ್ಣಗಳಲ್ಲಿ ಬ್ರಾಹ್ಮಣರು ವಿಶೇಷವಾಗಿ ಬಹುಕಾಲದಿಂದ ಸರಕಾರೀ ಉದ್ಯೋಗಗಳಲ್ಲಿಯೂ, ಬೇರೇ ವರ್ಣದವರು ವ್ಯಾಪಾರ, ಬೇಸಾಯ, ಬಡಿಗೆ ಕೆಲಸ, ಶಿಲ್ಪ ಮುಂತಾದ ಉದ್ಯೋಗಗಳಲ್ಲಿಯೂ ಅಮರಿಕೊಂಡಿದ್ದರು. ಎಂದರೆ ಇದುವರೆವಿಗೆ ಉಪಯುಕ್ತವಾದ ಬೇರೇ ಉದ್ಯೋಗವನ್ನು ಪಡೆಯುತಿದ್ದವರು ಸಹ ಇತ್ತಲಾಗಿ ಸರ್ಕಾರ್ ಉದ್ಯೋಗಗಳನ್ನೇ ಹೋಲಿಸುವದು ಕೇವಲ ಶೋಚನೀಯವಾಗಿದೆಯೆಂತ ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಈ ಅಭಿಪ್ರಾಯವನ್ನು ಅನೇಕರಿಗೆ ಸಮ್ಮತವಾಗಿಲ್ಲವು. ಇದಕ್ಕಾಗಿ ಸರ್ ಟಿ ಮಾಧವರಾಯರವರ ಮೇಲೆ ಪಕ್ಷಪಾತವೆಂಬ ದೋಷವನ್ನು ಸ್ಥಾಪಿಸಲಿಕ್ಕೆ ಸಹ ಕೆಲವರು ಹಿಂಜರಿಯಲಿಲ್ಲವು.

ಸರಕಾರೀ ಉದ್ಯೋಗಗಳು ನಮ್ಮ ದೇಶದ ಮತ್ತು ಜನರ ನಿವಾಸವನ್ನು ಉತ್ಕೃಷ್ಟಯೋಗ್ಯವಾದನೆಂದು ಏರ್ಪಟ್ಟಿಹೊರರು ಸರ್ ಟಿ ಮಾಧವರಾಯರವರ ಮೇಲೆ ಪ್ರಯೋಗ ದೋಷಾರೋಪಣೆಯನ್ನು ಮಾಡಲಿಕ್ಕೆ ಆಧಾರವಿಲ್ಲವು. ಪರಂತು ಸರಕಾರೀ ಉದ್ಯೋಗಗಳಿಂದ ದೇಶದ ಐಶ್ವರ್ಯವು ವೃದ್ಧಿಯಾಗಲಿಕ್ಕಿಲ್ಲವೆಂಬದು ನಿಶ್ಚಿತವಾದವಾಗಿದೆ. ಎಲ್ಲರಿಗೂ ಇದು ಸುವಾಸನವಾಗಿರುವದರಿಂದಲೇ ಹೊರವಕ್ಕಾಗುವದಲ್ಲ. ಆಲಸ್ಯ ಮತ್ತು ಉದಾಸೀನತೆಯನ್ನು ಉಂಟುಮಾಡುವ ಕೆಲಸಗಳು ನಮ್ಮ ಸರಕಾರೀ ಉದ್ಯೋಗಗಳಲ್ಲಿರುವದರಿಂದ ಇಂಥಾ ಉದ್ಯೋಗಗಳಲ್ಲಿ ಜೀವಿಸುವ ಕುಟುಂಬಗಳು ಕ್ಷೀಣದಶೆಯನ್ನು ಹೊಂದಿದ ದೃಷ್ಟಾಂತಗಳೇ ನಾವು ಕಾಣುವೆವು. ಹೀಗೆ ನೂರಾರು ದಂಡುದಾರಿಗಳ ಬೇರೇ ಉದ್ಯೋಗಗಳನ್ನು ಹುಡುಕುವದಕ್ಕೆ ಅವಶ್ಯಕವಾದ ಜ್ಞಾನ ಮತ್ತು ಶಕ್ತಿಯಿಲ್ಲದವರು ಈ ಉದ್ಯೋಗಗಳನ್ನು ಪಡೆಯಬೇಕೇ ಹೊರತು ಬೇರೇ ರೀತಿಯಿಂದ ಬೇರೇ ಉದ್ಯೋಗಗಳನ್ನು ಪಡೆಯಲಿಕ್ಕೆ ಶಕ್ತರಾದವರು ತಾರತಮ್ಯವಿಲ್ಲದೆ ಸರ್ಕಾರೀ ಉದ್ಯೋಗಗಳಿಗಾಗಿ ಹಂಬಲಿಸುವ ವ್ಯರ್ಥ ಪ್ರಯತ್ನವನ್ನು ಬಿಟ್ಟುಬಿಡುವದು ಯೋಗ್ಯವಲ್ಲವೇ ಎಂಬುವದೇ ಸರ್. ಟಿ. ಮಾಧವರಾಯರವರ ಅಭಿಪ್ರಾಯವೆಂತ ನಾವು ತಿಳಿಯುತ್ತೇವೆ ಮತ್ತು ಈ ಅಭಿಪ್ರಾಯವು ನಮಗೆ ಯೋಗ್ಯವಾಗಿ ಕಂಡುಬರುತಿದೆ.

ಇಂಗ್ಲೆಂಡ್ ದೇಶದ ಸ್ಥಿತಿಯನ್ನು ಆಲೋಚಿಸಿದರೆ ದೇಶೋನ್ನತಿಯ ಮುಖ್ಯಕಾರಣವು ಸಹಜವಾಗಿ ಕಂಡುಬರುತಿದೆ. ಈ ದೇಶಗಳ ಸಂಪತ್ತು ಅಲ್ಲಿನ ಜನರ ವ್ಯಾಪಾರದಿಂದಲೂ ಕಲಾ ಕೌಶಲ್ಯದಿಂದಲೂ ಉಂಟಾಗಿರುತದೆ. ಈ ದೇಶದ ಉದ್ಯೋಗಗಳ ಮಹಿಮೆಯೂ ಉದಾಹರಣೆಗಳೂ ನಮ್ಮದುರಿಗೆ ಬರುತ್ತಿರುವಾಗ್ಯೆ ಅಂಥಾ ಸ್ಥಿತಿಯನ್ನು ಪಡೆಯಲಿಕ್ಕೆ ಯತ್ನಿಸಲಿಕ್ಕೆ ನಮಗೆ ಇಂಥಾ ಉದ್ಯೋಗಗಳ ವಿಷಯದಲ್ಲಿ ತಾತ್ಸಾರವನ್ನು ತೋರುವದು ಕೇವಲ ಶೋಚನೀಯವಾಗಿದೆ. ಈ ಸ್ಥಿತಿಯು ಮುಂದೆ ನಮ್ಮ ದೇಶದ ಅವನತಿಯನ್ನು ಉಂಟುಮಾಡದೆ ಇರಲಾರದೆಂಬದನ್ನು ಮರೆಯಬಾರದು.

ನಮ್ಮ ದೇಶದ ವ್ಯಾಪಾರ ಸ್ಥಿತಿಯನ್ನು ಸುಧಾರಿಸಲಿಕ್ಕಾಗಿ ಮುಖ್ಯವಾದ ಉದ್ಯೋಗಗಳನ್ನು ನಡೆಸುವ ಜ್ಞಾನವು ನಮಗೆ ಉಂಟಾಗುವ ಹಾಗೆ ಸರಕಾರದವರು ತಿದ್ದುಪಡಿ ಮಾಡುವದು ಅವಶ್ಯಕವು. ಜನರಾದರೂ ಸರಕಾರೀ ಉದ್ಯೋಗವೇ ಮೇಲಾದದ್ದೆಂಬ ಭ್ರಾಂತಿಯನ್ನು ಬಿಟ್ಟು ತಮ್ಮ ತಮ್ಮ ಅಭಿವೃದ್ಧಿಗೆ ಸಹಾಯಕಗಳಾದ ಉದ್ಯೋಗಗಳನ್ನು ಪಡೆಯಲಿಕ್ಕೆ ಯತ್ನಿಸುವದು ಅತ್ಯಾವಶ್ಯಕವಾಗಿದೆ. ಸರಕಾರೀ ಉದ್ಯೋಗಗಳನ್ನು ಸಂಪೂರ್ಣವಾಗಿ ಧಿಕ್ಕರಿಸಬೇಕೆಂತ ನಮ್ಮ ಅಭಿಪ್ರಾಯವಲ್ಲವು, ಈ ಉದ್ಯೋಗವೇ ಸರ್ವೋತ್ಕೃಷ್ಟವೆಂದು ಏಕೆ [illegible] ಹೊಂದಿರುವ ಅಭಿಪ್ರಾಯವನ್ನು ಬಿಟ್ಟುಬಿಡಬೇಕೆಂಬದೇ ನಮ್ಮ ತಾತ್ಪರ್ಯವಾಗಿರುತದೆ.

BANGALORE.—Printed and published for the Proprietor, at the KARNATAKA PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧವೃತ್ತ್ಯುವಗಮಾರ್ಥ ಕರ್ಣಾಟಕಪ್ರಕಾಶನಪರಾಭಿದಾಪ್ರಥಿತಸಾಹಿತೀಶೋಭಿತಾ ‖ ಮೃಗಾಂಕಹಿತವಾಸರೆನಿಹಿತಮುದ್ರಣಾಸಜ್ಜನೈರ್ಹಿಕಾಸುವರಿಪೋಷಿತಾದಿಶತಿಮಾನಸಂಸುಮುದಂ

Vol. XIII] BANGALORE—MONDAY, JUNE 21, 1886. [No. 25.

ಸಂಪುಟ ೧೩.] ಬೆಂಗಳೂರು:—ಸನ್ ೧೮೮೬ನೇ ಇಸವಿ ಜೂನ್ ೨೧ನೇ ತಾರೀಖ್ ಸೋಮವಾರ. [ಸಂಖ್ಯೆ ೨೫

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

[illegible]

ಪ್ರಕಟನೆಯ ರಿವಾಜ್.

[illegible]

NOTICE TO SUBSCRIBERS.

[illegible]

NOTICE.

VAIDYASARA SANGRAHA.

Price including Postage, Rs 5 0-0

ವೈದ್ಯಸಾರ ಸಂಗ್ರಹ.

[illegible]

ನೋಟೀಸ್.

[illegible]

ಕಾಲಾಮೃತ. ...	೧—೪—೦
[illegible] ...	೦—೧೨—೦
ಭಪ್ಪನ್ನ (ವಟ್ಟಂಟಿತಕ್) ...	೦—೩—೦
[illegible] ...	೦—೫—೦
[illegible] ...	೦—೪—೧
[illegible] ...	೦—೧೪—೦
[illegible] ...	೦—೬—೦
[illegible] ...	೦—೨—೦
ವೈದ್ಯಸಾರಸಂಗ್ರಹ ...	೫—೦—೦

ಕನ್ನಡಗ್ರಂಥಗಳು.

[illegible] ...	೦—೬—೦
[illegible] ...	೦—೪—೦
[illegible] ..	೦—೬೩—೦
[illegible] ...	೦—೨—೬
[illegible] ...	೦—೪—೦
[illegible] ...	೦—೨—೦
[illegible] ...	೦—೨—೬
[illegible] ...	೦—೬—೦
[illegible] ...	೦—೩—೦
[illegible] ...	೦—೨—೦
[illegible] ...	೦—೦—೩
ಇಂಗ್ಲಿಷ್‌ಕನ್ನಡ [illegible]	೧—೦—[illegible]
[illegible] ...	೨—೦—೦
[illegible] ...	೦—೧೨—೦
[illegible] ...	೩—೪—೬
[illegible] ...	೩—೪—೬

೧ನೇ ಸಂಚಿಕೆ. ...	[illegible]
೨ನೇ ಸಂಚಿಕೆ.	೧—[illegible]—೦
[illegible] ...	೦—[illegible]—೦

ಸಂಸ್ಕೃತ ಮೂಲಗ್ರಂಥಗಳು.

ವಿಷ್ಣುಸಹಸ್ರನಾಮ. ...	೦—೫—೦
[illegible] ...	೦—೨—೩
[illegible] ...	೦—[illegible]—೩
[illegible] ...	೦—೦—೬
[illegible] ...	೦—[illegible]—೬
೧ ಕಾಂಡ ಅಮರ. ...	೦—೧—೦

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪನಿ.

ಜನರಲ್ ಕಮಿಷನ್‌ಮರ್ಚೆಂಟಿಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿತೆಗೆದುಕೊಳ್ಳಲ್ಪಡುವದು.

ನೋಟಿಸ.

ದಕ್ಷಿಣಕನಡಾಜಿಲ್ಲಾ ಮಂಗ್ಳೂರು ಪಟ್ಟಣದ ಪೈಕಿ ಕೊಡಿಯಾಲಬೈಲ್ ಶಾಮಿಲ ಆಪ್ರೈವ್ರೋನಾದ ನಾನು ಈ ಮೂಲವಾಗಿ ಸಮಸ್ತಜನರಿಗೆ ತಿಳಿಯಪಡಿಸುವದೇನಂದರೆ.—

ನಗರಡಿವಿಜನ್ ಕಡೂರು ಡಿಸ್ಟ್ರಿಕ್ಟ ಮೂದುಗೆರೆ ತಾಲ್ಲೂಕು ಮೇಲ್ಬಂಗಾಡಿ ಮಾಗಣಿ ದುರ್ಗದಹಳ್ಳಿ ಗ್ರಾಮದಲ್ಲಿರುವ ಹೊರಿವಾರ್ ಮೇಣಿನಗುಂಡಿ, ವೇಮಾರ್ಗತಕೊಂಡ, ಕೆಮ್ಮತ್ತುರು, ಈ ೪ ಕಾಫೀ ತೋಟಗಳು ವಿನೆಕ್ಕೆ ಮಂಗ್ಳೂರು ತಾಲ್ಲೂಕು ಪಂಡೇರಿವಳ್ಳಿಯಲ್ಲಿರುವ ಗಿರವಕ್ಷ್ಮೇಕೊಟ್ಟ ಬಾಗಯೆಂಬ ತೋಟ ಕೂಡ ಅಯಿದು ಕಾಫೀ ತೋಟಗಳ ವೃದ್ಧಿಯಬಗ್ಯೆ ವ ಕಂದಾಯ ಕೊಡುವಬಗ್ಯೆ ಸಹ ನನ್ನಿಂದ ಪಾದರಮೊಡ್ತಿನ ಕುವೇಲ ವಗ್ಯೆರೆ ಸಹೋದರರು ಹಣಗಳು ನನ್ನ ಜಾಮೀನ್‌ಮೇಲೆಕೂಡಪಡೆದು ೧೮೮೫ ವ ೧೮೮೬ನೇ ಇಸವಿಗಳ ಕಾಫೀ ಫಸಲ್, ಮುಂದಿನ ವರುಷಗಳ ಕಾಫೀ ಫಸಲ್ ವ ಆ ತೋಟಗಳು ಸಹ ಈಡು ಮಾಡಿಕೊಟ್ಟಿರುವ ಬಾಬತು ಅವ್ರುಗಳ ಮೂಲಸ್ಥರಾದ ಸದರೀ ಪಾದರಮೊಡ್ತಿನ ಕುವೇಲ, ಪಾವ್ರುಟಕುವೇಲ, ಮಗ್ನುಕುವೇಲ, ಪ್ರಾಂಸಿಸ್ಕುಕುವೇಲ, ಅನಕುವೇಲ, ಈ ೫ ಜನರಿಂದ ರಿಜಿಸ್ಟರ್ ದಸ್ತೈವಜುಗಳ ಪ್ರಕಾರ ಬರತಕ್ಕ ರೂಪಾಯಿ ಹದಿನೈದು ಸಾವಿರ ವರಿಗಿನ ಹಣ ವ ಮುಂದಿನ ಬಡ್ಡಿಯಬಗ್ಯೆ ಸಹ ಜವಾಬ್‌ದಾರೀ ಇರುತ್ತದೆ. ಈ ಹಣಗಳ ಪೈಕಿ ಕೆಲ ಐವಜಿಗೆ ನಾನು ಈ ಮೊದಲೇ ಶಿವಮೊಗ್ಗಾ ಡಿಸ್ಟ್ರಿಕ್ಟ ಕೋರ್ಟನಲ್ಲಿ ನಂಬರ್ ೫ನೇ (೧೮೮೬) ದಾವೇ ದಾಖಲ್ ಮಾಡಿದ್ದೇನೆ, ಬಾಕೀ ಅಯಿವಜಿಗೂ ಇನ್ನೊಂದು ದಾವೇ ದಾಖಲ್‌ಮಾಡುತ್ತದೆ. ಸದರೀ ಜನರು ೧೮೮೫-೧೮೮೬ನೇ ಇಸವಿಯಲ್ಲಿ ಸದರೀ ತೋಟಗಳಲ್ಲಿ ಬೆಳವಂತಾ ನನಗೆ ಅಡವು ಇರುವ ನೂರು ಖಂಡಿಗಳಗಿಂತ ಹೆಚ್ಚು ಕಾಫೀ ನನಿಗೆ ಬರೆದುಕೊಟ್ಟ ದಸ್ತೈವಜಿನ ಷರತ್ತಿಗಳಿಗೆ ವಿರೋಧವಾಗಿ ಸದರೀ ಜನರು ಬೇರೇ ಯವರಿಗೆ ವಿನಿಯೋಗ ಪಡಿಸಿದ್ದಾಗಿ ಕೇಳುತ್ತೇನೆ. ಆದದರಿಂದ ಸದರೀ ತೋಟಗಳಲ್ಲಾಗಲಿ, ಅವ್ರುಗಳ ಫಸಲ್‌ಗಳಲ್ಲಾಗಲಿ, ನನ್ನ ಹಣ ಫಡ್ಚಾ ಆದ ಹೊರ್ತು ಯಾರೊಬ್ಬರೂ ಅಡವು, ಕ್ರಯ, ದಾನ, ಗೇಣಿ, ಮುಂತಾದ ಯಾವವಿಧದಿಂದ ಪಡಕೊಳ್ಳಕೂಡದು, ಪಡೆದುಕೊಂಡರೆ ಅಂತಾದ್ದು ರದ್ದು, ವ ಅಸಿದ್ಧ ಆಗಿರುವದಲ್ಲದೆ ಆ ಸಂಬಂಧ ಆಗುವ ಯೆಲ್ಲಾ ವ್ಯವಹರಣೆಗಳಿಗೂ, ನನಿಗೆ ಆಗುವ ನಷ್ಟಕ್ಕೂ ಗುರಿಯಾಗಬೇಕಾದೀತು. ಮತ್ತು ಇನ್ನು ಮುಂದೆ ಸದರೀ ತೋಟಗಳ ವೃದ್ಧಿಗೆ ಎಂಬ ನೆವದಿಂದ ಯಾರಾದರೂ ಮುಂಗಡ ಹಣ ಕೊಡುವ ಪಕ್ಷದಲ್ಲಿ ನನ್ನ ಅನುಮತಿ ವ ತಿಳುವಳಿಕೆ ಶಿವಾಯಿ ಕೊಡಕೂಡದಾಗಿರುತದೆ. ಒಂದುವೇಳೆ ಕೊಡುವ ಪಕ್ಷದಲ್ಲಿ ಅಂತಾ ಐವಜು ನಾನು ಅದೇ ಸಂಬಂಧ ವ ಬೇರೀಜು ಕೊಡುವ ಸಂಬಂಧ ವಗ್ಯೆರೆ ಈ ಮೊದಲೇ ಕೊಟ್ಟ ಹಣ ಫಡ್ಚಾ ಆದನಂತರ ವಸೂಲ್ ಮಾಡಬೇಕಾದೀತು, ಯೆಂಬ ಸಂಗತಿ ಇದರಮೂಲವಾಗಿ ಯೆಲ್ಲಾ ಜನರಿಗೆ ತಿಳಿಸುತ್ತೇನೆ. ತಾ॥೧೪ನೇ ಮೆ, ೧೮೮೬.

C. S. M. Abreo.

ನೋಟಿಸ.

ಕೆಳಗೆ ದಸ್ತಖತ್ ಮಾಡಿದವನಾದ ನಾನು ಇದರಿಂದ ಸರ್ವಜನರಿಗೆ ತಿಳಿಯಪಡಿಸುವದೇನಂದರೆ— ಮಂಗ್ಳೂರು ಪಟ್ಟಣದಲ್ಲಿರುವ ಕಾಸ್ಮೀರದವನಾದಂತವರಿಗೆ ಪಾದರಮೊಡ್ತಿನ ಕುವೇಲ ಕೂಡ ೪ಜನ ಸಹೋದರ ವ ಸಹೋದರಿಯ ಕಾಫೀ ತೋಟಗಳ ವೃದ್ಧಿ ವ ಬೇರೀಜು ಕೊಡುವಬಗ್ಯೆ ವಗ್ಯೆರೆ ಕೊಡಿಸಿದ ಹಣವಿನಗೋಸ್ಕರ ನಮ್ಮ ಹೆಸರಿಗೆ ಫಸ್ಟ್ ಸದರೀ ಪಾದರಮೊಡ್ತಿನ ಕುವೇಲನ ಹೇಳಿಕೆ ಮೇರಿಗೆ ೧೮೮೫ನೇ ಇಸವಿ ಸೆಪ್ಟಂಬರ್ ತಿಂಗಳಲ್ಲಿ ಬರಕೊಟ್ಟ ಪ್ರಾಮಿಸರಿ ನೋಟುಗಳು ಆವರು ಬೇರೇಯವರಿಗೆ ಪರಭಾರೆ ಮಾಡುವ ಇರಾದೆಯಲ್ಲಿ ಇರುವದಾಗಿ ಕೇಳುತ್ತೇನೆ. ಈ ನೋಟುಗಳ ಹಣವಿನ ವಿಷಯ ನಮ್ಮೊಳಗೆ ಅನೇಕ ತರದ ಬಹಳ ತಕರಾರ್‌ಗಳು ಇರುವದರಿಂದ ಅವ್ರುಗಳನ್ನು ಯಾರು ಪರಭಾರೇ ಮಾಡಿಕೊಳ್ಳುವವರು ಯೆಲ್ಲ ಲುಕ್ಸಾನಿಗೆ ಗುರಿಯಾದಾರು ಯೆಂದ ಇದರಮೂಲವಾಗಿ ತಿಳಿಸುತ್ತೇನೆ.

C. S. M. Abreo.

ತಾ॥೧೪ನೇಮೆ, ೧೮೮೬ನೇ ಇಸವಿ.

ಕರ್ಣಾಟಕ ಪ್ರಕಾಶಿಕಾ

THE KARNATAKA PRAKASIKA.

MONDAY, JUNE 21, 1886.

೧೮೮೬ನೇ ಜೂನ್ ೨೧ನೇ ತಾ॥ ಸೋಮವಾರ

THE BRITISH GOVERNMENT AND NATIVE PRINCES.

ಇಂಡ್ಯದೇಶದ ನೇಟಿವ್ ಸಂಸ್ಥಾನಾಧಿಪತಿಗಳ ವಿಷಯದಲ್ಲಿ ಬ್ರಿಟಿಷ್ ಗವರ್ನ ಮೆಂಟನವರಿಗೆ ಅಂತರವಾಗಿ ಪ್ರಂಟಾಗಿರತಕ್ಕ ಭಾವವನ್ನು ಶುದ್ಧಾಂಗವಾಗಿ ತಿಳಿದುಕೊಳ್ಳಲಾರದೆ ಅವರ ಮೋಹಜಾಲಗಳಿಗೆ ಭ್ರಮಿಸಿ, ಮೆರೆಯುವಂತಾ ಸಂಸ್ಥಾನಾಧಿಪತಿಗಳ ಭವಿಷ್ಯಸ್ಥಿತಿಯು ಯಾವಾಗಲಾದರೂ ದುಃಖಿಸಬೇಕಾದ್ದಾಗಿರುವದೆಂಬದಕ್ಕೆ ಮಹಾರಾಜಾ ದುಲೀಪ್‌ಸಿಂಗರವರ ತಾತ್ಕಾಲಿಕ ಸ್ಥಿತಿಯೇ ಸಾಕಾದ ದೃಷ್ಟಾಂತವಾಗಿರುತಿದೆ. ಮಹಾರಾಜಾ ದುಲೀಪ್‌ಸಿಂಗರವರ ವಿಷಯದಲ್ಲಿ ಆದಿ ಮೊದಲು ಬ್ರಿಟಿಷ್ ಗವರ್ನಮೆಂಟನವರು ನಡೆಸಿದ ನಡವಳಿತವ್ರು ಕೇವಲ ಅನುಚಿತವಾದ್ದಾಗಿರುತಿದೆ. ಕ್ರಮವಾದ ವಾರಸುದಾರರಿದ್ದಾಗ್ಯೂ ಅವರು ಗೌರವಿಸದೆ ಪಂಜಾಬ್‌ರಾಜ್ಯವು ಅಕ್ರಮವಾಗಿ ಅಪಹರಿಸಲ್ಪಟ್ಟಿತು. ಆಕಾಲದಲ್ಲಿ ಗವರ್ನಮೆಂಟನವರು ಅವ್ಯವಹಾರ ದೆಸೆಯೊಳಿದ್ದ ಮಹಾರಾಜರಿಗೆ ಪಾಲಕರಾಗಿರುತ ಅವರ ಪ್ರತಿನಿಧಿಯಾಗಿ ರಾಜ್ಯವಂ ಪರಿಪಾಲಿಸುತಿರುವಂತೆ ಹೇಳಿ ಭರವಸೆಯನ್ನುಂಟುಮಾಡಿ ಕಡೆಗೆ ಸಾಕ್ಷಾದ್ವಿರುದ್ಧವಾಗಿ ವರ್ತಿಸಿದರು. ಮಹಾರಾಜ ಪುತ್ರರನ್ನು ಇಂಡ್ಯದೇಶದೊಳಿಟ್ಟರೆ ಹಸ್ತಗತವಾದ ರಾಜ್ಯಕ್ಕೆಲ್ಲಿ ಉಪಹತಿಯುಂಟಾಗುವದೋ ಎಂಬ ಅನುಮಾನದೊಡನೆ ಬಾಲ್ಯದೆಶೆಯಲ್ಲಿಯೇ ಅವರನ್ನು ದ್ವೀಪಾಂತರಕ್ಕೆ ಸಾಗಿಸಿದರು. ಹಿಂದೂವಾಗಿದ್ದರೆ ಮುಂದೆ ರಾಜ್ಯಕ್ಕೆ ಹಕ್ಕುದಾರರಾಗಿ ಯೇರ್ಪಟ್ಟು ರಾಜ್ಯವನ್ನಾಳಿಸುವರೆಂದೆಣಿಸಿ, ಅವರನ್ನು ಜಾತಿಭ್ರಷ್ಟರನ್ನಾಗಿ ಮಾಡಿದರು ಮಹಾರಾಜ್ಞೀ ಪದವಿಯೊಳಿದ್ದ ಅವರ ತಾಯಿಯನ್ನು ಸಹ ಅನ್ಯದೇಶಕ್ಕೆ ಸಾಗಿಸಿ ಅಲ್ಲಿ ಆಕೆಯು ಅನನ್ಯಗತಿಕಳಾಗಿ

ಕಂಡವರ ಮನೆಯ ಬೀದಿಬಾಗಲಲ್ಲಿ ಅನಾಥಳಾಗಿ ಪ್ರಾಣಬಿಟ್ಟದು ಕಂಡು ಅನುಭವಿಸಿದರು. ವ್ಯರ್ಥವ್ಯಯನಿಮಿತ್ತಕಗಳಾಗಿಯೂ, ಗುಣವಿಪರ್ಯಾಸವನ್ನುಂಟುಮಾಡತಕ್ಕವಾಗಿಯೂ, ಕಡೆಗೆ ಮಹಾ ದುರ್ದಶೆಗೊಳಪಡಿಸತಕ್ಕವಾಗಿಯೂ, ಇರುವ ಇಂಗ್ಲಿಷ್ ನಾಗರಿಕತೆಗಳೆಂಬ ಇಲ್ಲದ ಚೇಷ್ಟೆಗಳನ್ನೆಲ್ಲ ಕಲಿಸಿ, ಆಯತಿಗಿಂತಲೂ ಅತಿವ್ಯಯ ಮಾಡುವಂತೆ ಪರಿಣಮಿಸಿ ಕಡೆಗೆ ಸಾಲಗಾರರಾಗಿ ಅನ್ಯದೇಶದಲ್ಲಿ ಜೀವಿಸುವದೇ ಪ್ರಯಾಸವಾದ ಸ್ಥಿತಿಗೆ ಬಂದದು ನೋಡಿ ಸಂತೋಷಿಸಿದರು. ದುಬಾರಾ ಖರ್ಚು ಮಾಡಲಾರಂಭಿಸಿದ್ದರಿಂದ ಉಂಟಾದ ಕೇವಲ ವಿಷಾದಕರವಾದ ಸ್ಥಿತಿಯಲ್ಲಿ ಅವರಿಗೆ ಸ್ವಲ್ಪವಾದರೂ ಸಹಾಯಮಾಡದೆ ಹೋದರು. ದಾರಿದ್ರ್ಯದೋಷದಿಂದ ಮನನೊಂದು ಸ್ವದೇಶ ದರ್ಶನೋತ್ಸಾಹದಿಂ ಹೊರಟುಬರುವಲ್ಲಿ ಮಧ್ಯಮಾರ್ಗದಲ್ಲಿ ಮುಂದಕ್ಕೆ ಹೋಗಕೂಡದೆಂದು ನಿರ್ಬಂಧಿಸಿ ತನ್ಮೂಲಕವಾಗಿಯೂ ತೃಪ್ತರಾದರು. ಇವರವಿಷಯದೊಳು ಬ್ರಿಟಿಷ್ ಸರ್ಕಾರದವರು ಇನ್ನೇನು ಮಾಡಬೇಕೆಂದಿದಾರೆಯೋ ನಾವರಿಯೆವು. ಮಹಾರಾಜ ವಂಶದಲ್ಲಿ ಜನಿಸಿ ಸ್ವತಃ ಮಹಾರಾಜರೆನಿಸಿಕೊಂಡವರು ತಮ್ಮ ದೇಶ ಕೋಶಗಳನ್ನೆಲ್ಲ ತೊರೆದು ಗತಿಯಿಲ್ಲವೆಂದು ಹೇಳಿ ತಮಗೆ ಸಲ್ಲಬೇಕಾದ್ದನ್ನು ಕೊಡಬೇಕೆಂದು ಮೊರೆಯಿಟ್ಟರೆ ಅದನ್ನುಪೇಕ್ಷಿಸಿದ್ದು ಗವರ್ನಮೆಂಟಿನವರ ಔದಾರ್ಯವನ್ನೂ, ಕನಿಕರವನ್ನೂ ವ್ಯಕ್ತಪಡಿಸುತಿದೆ. ಇಂಗ್ಲಿಷ್‌ನವರು ಇಂತಾಸಂದರ್ಭವನ್ನೇ ಇತರರವಿಷಯದಲ್ಲಿ ಸಹ ನಿರೀಕ್ಷಿಸುತಲಿದಾರೆ. ಬ್ರಿಟಿಷ್ ಗವರ್ನಮೆಂಟಿನವರ ಮನೋಗತವಾದ ಭಾವವನ್ನು ಹೊರಪಡಿಸಲಿಕ್ಕೆ ಮೇಲೆ ಕಂಡವುಗಳೊಂದೊಂದೇ ಸಾಕಾದ್ದಾಗಿರುತಿದೆ. ಪರಂತು ಲಾರ್ಡ್ ರಿಪ್ಪನ್ ಮೊದಲಾದಂತಾವರು ನೂರಕ್ಕೆ ಒಬ್ಬರಿಬ್ಬರು ಮೇಲೆ ಕಂಡದಕ್ಕೆ ಭಿನ್ನಾಭಿಪ್ರಾಯವುಳ್ಳವರಾಗಿರಬಹುದು. ನೇಟಿವ್ ಅರಸರ ರಾಜ್ಯವು [illegible] ತಿಗೆ ಬರುವತನಕ ತಟಸ್ಥರಾಗಿ ನೋಡುತಲಿದ್ದು ಬಳಿಕ ಸ್ವಾಧೀನ ಪಡಿಸಿಕೊಳ್ಳುವ ತಾತ್ಪರ್ಯವು ಇಂಗ್ಲಿಷ್‌ನವರಿಗೆ ಇಲ್ಲದಿರಲಿಲ್ಲವೆಂಬದಕ್ಕೆ ಸ್ವಾತಂತ್ರ್ಯಯುಕ್ತವಾದ ಪ್ರಭುತ್ವದೊಳು ಬಹುಕಾಲದಿಂ ನೆಲಗೊಂಡಿದ್ದ ಬರ್ಮ್ಮ ರಾಜ್ಯದ ಪರಿಣಾಮ ದಶೆಯೇ ಸಾಕಾದ ದೃಷ್ಟಾಂತವಾಗಿರುವಲ್ಲಿ ಕೇವಲ ಪರಾಧೀನರಾಗಿರುವ ನಮ್ಮ ಅರಸರುಗಳನ್ನೂ ಅವರ ದೇಶಕೋಶಗಳ ಸ್ಥಿತಿಯನ್ನೂ ಕುರಿತು ತಿಳಿಸಬೇಕಾದ್ದೇನಿದೆ. ಮೇಲೆ ಕಂಡ ಗೂಢಾಭಿಪ್ರಾಯವು ಅರಿಯದೆಯೋ ಅಥವಾ ಅರಿತು ಅದಕ್ಕೆ ತಕ್ಕಂತೆ ವರ್ತಿಸಲಾರದೆಯೋ ನೇಟಿವ್ ಅರಸರು ವಿಶೇಷ ಜವಾಬ್ದಾರಿಯನ್ನು ತಾವು ವಹಿಸಲಿಕ್ಕೆ ಧೈರ್ಯಸಾಲದೆ ತಮ್ಮ ಸರ್ವಾಧಿಕಾರವನ್ನು ದಿವಾನರಿಗೊಪ್ಪಿಸಿ ಸೂತ್ರ ಬೊಂಬೆಗಳಂತೆ ಆಡುತಲಿರುತ್ತಾರೆ. ಅರಸರ ಅಸಮರ್ಥತೆಯನ್ನು ತಿಳಿದುಕೊಂಡು ತಮ್ಮ ಇಷ್ಟಾನುಸಾರ ಆಡಿಸುವಂತಾ ದಿವಾನರೆಂಬ ಸೂತ್ರಧಾರರ ಕುಶಲತೆಯು ಕೊಂಡಾಡತಕ್ಕದ್ದಾಗಿರುತಿದೆ. ಬ್ರಿಟಿಷ್ ರೆಸಿಡೆಂಟರುಗಳು ಒಂದುವೇಳೆ ತಮ್ಮ ಉದ್ದೇಶಪ್ರಯತ್ನಗಳಿಗೆ ಅನುಕೂಲರಾಗದಿದ್ದರೆ ಸರ್ವಪ್ರಕಾರದಿಂದಲೂ ಅವರಂ ಸ್ವಾಧೀನಪಡಿಸಿಕೊಂಡು ಅನುಕೂಲಕವಾಗಿಯು ಸಹ ತಮ್ಮೊಡೆಯನನ್ನು ಬೆದರಿಸಲೆತ್ನಿಸುತ್ತಾರೆ. ಅಸಮರ್ಥರಾದ ಮತ್ತು ಸ್ವಪ್ರಯೋಜನಪರರಾದ ದಿವಾನರೂ, ನಿಸ್ಪೃಹರಾದ ಅಥವಾ ದಾಕ್ಷಿಣ್ಯಪರರಾದ ಪೊಲಿಟಿಕಲ್ ಏಜಂಟುಗಳೂ, ತಮ್ಮತಮ್ಮ ಉದ್ದೇಶದೊಡನೆ ನಡೆಸತಕ್ಕ ವರ್ತನಗಳು ಜನಗಳಿಗೆ ದುಸ್ಸಹವಾಗಿ ನೇಟಿವ್ ಆಳ್ವಿಕೆಯ ಪರಿಣಾಮವನ್ನೇ ಅವರು ಅನವರತ ಪ್ರಾರ್ಥಿಸುವಂತೆ ಮಾಡುತಿವೆ. ಮುಖ್ಯವಾಗಿ ಈಗಿನ ನೇಟಿವ್ ಅರಸರು ದೈವಕೃತಕವಾದ ಅಸ್ವಾತಂತ್ರ್ಯಸ್ಥಿತಿಯಲ್ಲದೆ, ಸ್ವತಃ ಸಹ ಉಂಟುಮಾಡಿಕೊಂಡು ಜನಗಳಿಗೆ ಶಿರೋಭಾರವಾಗಿರುವದಕ್ಕಿಂತಲೂ ಅನ್ಯತರದಿಂ ಜೀವಿಸುವದು ಯೋಗ್ಯವಾಗಿರುವದು.

THE MAHARAJA'S COUNCIL.

ಈ ಸಂಸ್ಥಾನದ ಉತ್ಪತ್ತಿಗೆ ವ್ಯರ್ಥವ್ಯಯನಿಮಿತ್ತಕವಾಗಿರುವ ಮಹಾರಾಜರ ಕೌನ್ಸಿಲಿನ ವಿಷಯದಲ್ಲಿ ನಾವು ಈಪತ್ರಿಕಾಮೂಲಕ ವಿತತಿ ವಿಶೇಷವಾಗಿ ವಿಚಾರಮಾಡಿ ಪ್ರಕೃತಸ್ಥಿತಿಯಲ್ಲಿ ಅದು ನಿರರ್ಥಕವಾದದ್ದೆಂದು ನಿರ್ಧರಿಸಿರುತ್ತೇವೆಯಷ್ಟೆ. ಇದೇವಿಷಯದೊಳು ನಮ್ಮತಾತ್ಪರ್ಯವನ್ನು ಪ್ರಾಯಶಃ ಇಂಗ್ಲಿಷಪತ್ರಿಕೆಗಳು ಸಹ ಘೋಷಿಸಿ ಇರುತವೆ. ಇದರ ವಿಷಯದಲ್ಲಿ ಇದುವರಿವಿಗೂ ಯಾವಪರ್ಯಾಯೂ ಮಾಡಲ್ಪಡದೆಯಿರುವದನ್ನು ನೋಡಿದರೆ ತಾದೃಶ ಪರ್ಯಾಲೋಚಕಸಭೆಯೇ ಈರಾಜ್ಯಕ್ಕೆ ಅರ್ಹವಾದ್ದೆಂದು ಭಾವಿಸಲ್ಪಟ್ಟಿರುವಂತೆ ತೋರುತಿದೆ.

ಈಗ್ಯೆ ಒಂದೆರಡುವಾರಗಳಮೊದಲು ಮಹಾರಾಜರವರ ಕೌನ್ಸಿಲ್ ಮೆಂಬರಾದ ಮೆ॥ ಸಭಾಪತಿಮೊದಲಿಯಾರ್ರವರು, ನಿರುಪಕಾರವಾಗಿದ್ದ ತಮ್ಮಕೆಲಸದಿಂದ ನಿವೃತ್ತರಾಗುವದಾಗಿಯಾದೆಂದು ಪ್ರವಾದವುಂಟಾಗಿರುವಂತೆ ಒಳದೇಶದ ಇಂಗ್ಲಿಷ್ ಪತ್ರಿಕೆಗಳೆಲ್ಲ ಉದ್ಘೋಷಿಸುತಿವೆಯಲ್ಲದೆ ಅವರಕೆಲಸಕ್ಕೆ ಬ್ಯಾರಿಸ್ಟರ್ ಮೆ॥ ಮೀನಾಕ್ಷಿಅಯ್ಯರವರನ್ನು ಸಹ ಮೊಕರರ್ಮಾಡಿಬಿಟ್ಟವು. ಮತ್ತೊಂದುಪತ್ರಿಕೆಯು ಮೆ॥ ಮೀನಾಕ್ಷಿಅಯ್ಯರವರಿಗೆ ಆದರ ಪೂರ್ವಕ, ನೂರುರೂಪಾಯಿಗಳ ಇಜಾಫೆಕೊಟ್ಟು ಐನೂರರಿಂದ ಆರುನೂರಕ್ಕೆ ಬಡ್ತೀಮಾಡಿ ಸಂತೋಷಪಟ್ಟಿತು ಈವಿಷಯದಲ್ಲಿ ಈಚೆಗೆ ಬೆಂಗಳೂರುಕಂಟನ್ಮೆಂಟ ಮಿಲಿಟರಿಸ್ಟೇಶನ್ನಗಳಲ್ಲಿ ನಾನಾವಿಧಪ್ರವಾದಗಳುಂಟಾಗಿವೆ. ಪರಂತು ಈ ಗವರ್ನಮೆಂಟಿನ ಆಡಳಿತವೆಲ್ಲವೂ ಕೃತಸಂಕೇತ ವುಳ್ಳದ್ದಾಗಿಯೂ, ಸ್ವದೋಷಗಳನ್ನೆಲ್ಲ ಗುಣಶ್ರೇಣಿ ಹೊರಗೆ ವ್ಯಕ್ತಪಡಿಸುವಂತಾ ಸ್ವಭಾವವುಳ್ಳದ್ದಾಗಿಯೂ ಇರುವದರಿಂದ ಯಾವ ಪ್ರವಾದವನ್ನೂ ಸುಲಭವಾಗಿ ನಂಬಲಿಕ್ಕಿಲ್ಲವು ಮತ್ತು ಮೆಸ್ಟರ್ ಸಭಾಪತಿಮೊದಲಿಯಾರ್ರವರು ನಿವೃತ್ತರಾಗುವ ವಿಷಯವನ್ನು ಸಹ ನಾವು ನಿರ್ಧರಿಸಿ ತಿಳಿಸಲಾರದವನಾಗಿದ್ದೇವೆ ಒಬ್ಬ ಇಂಗ್ಲಿಷ್ ಕವಿಯು ತಿಳಿಸುವಂತೆ ಆಲೋಚನೆಗೆ ಅಪೇಕ್ಷೆಯೇ ಜನಕರೂಪವಾದದರಿಂದಲೂ, ವಿಚಾರ್ಯಮಾಣೇನ ಹಾಗೆಯೇ ಇರುವದರಿಂದಲೂ, ಮೆಸ್ಟರ್‌ಸಭಾಪತಿ ಮೊದಲಿಯಾರ್ರವರು ಕೌನ್ಸಿಲ್‌ನಿಂದ ನಿವೃತ್ತರಾಗುವರೆಂಬ ಪ್ರವಾದವು ಬಹುಶಃ ನಿಜವಾಗಿರಬಹುದೆಂದು ನಂಬುತ್ತೇವಲ್ಲದೆ ಯಥಾರ್ಥವಾಗಿ ಪರಿಣಮಿಸಬೇಕೆಂದು ಸಹ ಕೋರುವೆವು. ಗಳತಾಂಗರಾದ ಮತ್ತೊಬ್ಬ ಕೌನ್ಸಿಲರ್ ಮೆಸ್ಟರ್ ಪೂರ್ಣಂ ಕೃಷ್ಣರಾಯರವರಿಗೆ ವಯಸ್ಸು ಪೂರ್ಣವಾದ್ದರಿಂದ ಅವರು ಕೂಡ ಮೊದಲನೆಯವರ ದೃಷ್ಟಾಂತವನ್ನು ಅನುಕರಿಸಿದರೆ ಉಚಿತವಾಗಿರುವದು. ವಯೋವೃದ್ಧರಾದ ಸದರೀ ಇಬ್ಬರಿಗೂ ಜ್ಞಾನಕರಣಕಳೇಬರ ಪಾಟವವು ತಪ್ಪಿಹೋದದ್ದೇನೂ ಆಶ್ಚರ್ಯವಲ್ಲವು. ಅವರಿಬ್ಬರೂ ಇದುವರಿವಿಗೆ ಏನೋ ಫಲಾಪೇಕ್ಷೆಯೊಡನೆ ಇರುತಲಿದ್ದದ್ದೂ ಆಶ್ಚರ್ಯವಲ್ಲವು. ಆದಕಾರಣ ಇಷ್ಟಕ್ಕೆ ತೃಪ್ತರಾಗಿ ಇವರು ನಿವೃತ್ತರಾಗುವವರ ಮೂಲಕ ತಮ್ಮ ಕೆಲಸವಂ ಖಾಲೀ ಮಾಡಿದರೆ ಬೇರೆ ಇಬ್ಬರಿಗೆ ಉಪಾರ ವುಂಟುಮಾಡಲಿಕ್ಕೆ ಅವಕಾಶ ಕೊಟ್ಟಂತೆ ಯಾಗುತಿದೆ. ಪರಂತು ಪ್ರಸಕ್ತ ಪ್ರವಾದವು ಒಬ್ಬರ ವಿಷಯವಾಗಿಯೇ ಹುಟ್ಟಿರುವದರಿಂದ ಆ ಕೆಲಸವು ಬಹುಶಃ ಮೆಸ್ಟರ್‌ಮೀನಾಕ್ಷಿ ಅಯ್ಯರವರಿಗೇ ಕೊಡಲ್ಪಡಬಹುದೆಂದು ತೋರುತಿದೆ. ಆದರೆ ಮೆ॥ಮೀನಾಕ್ಷಿ ಅಯ್ಯರ ವಿಷಯವಾಗಿಯೂ, ಸಾಧಾರಣವಾಗಿ ಈಗ ಒಂದು ಆಡಂಬರರೂಪವಾಗಿ ನೆಲಗೊಂಡಿರತಕ್ಕ ಕೌನ್ಸಿಲ್ ಏರ್ಪಾಡನ್ನು ಕುರಿತೂ ಈ ಸಂದರ್ಭದಲ್ಲಿ ಸ್ವಲ್ಪ ವಿಚಾರ ಮಾಡಬೇಕಾಗಿರುವದರಿಂದ ಈ ಪತ್ರಿಕೆಯನ್ನೋದತಕ್ಕವರು ಬೇಸರ ಪಡಲಾರರೆಂದು ನಂಬುತ್ತೇವೆ. ಮೆ॥ಮೀನಾಕ್ಷಿ ಅಯ್ಯರವರೇ ಈಗಿನ ಪ್ರವಾದದ ಪ್ರಕಾರ ಮೊಕರರಾಗುವ ಪಕ್ಷಕ್ಕೆ ದೇಶಕ್ಷೇಮಾಭಿವೃದ್ಧಿಯನ್ನು ಆಲೋಚಿಸಿದರೆ ಇದಕ್ಕಿಂತ ಅನುಚಿತವಾದಕಾರ್ಯ ಬೇರೊಂದೂ ಇರಲಾರದು. ಮೆ॥ ಮೀನಾಕ್ಷಿ ಅಯ್ಯರವರ ಯೋಗ್ಯತಾ ವಿಷಯದಲ್ಲಾಗಲಿ, ಅವರಸಾಮರ್ಥ್ಯ ವಿಷಯದೊಳಾಗಲಿ, ಒಬ್ಬರೂ ಆಕ್ಷೇಪಿಸುವಂತಿಲ್ಲವು. ಮತ್ತು ಇವರು ತಮ್ಮಕರ್ತವ್ಯವನ್ನು ಚೆನ್ನಾಗಿಯೇ ಜರಿಗಿಸಲೂ ಬಹುದು. ಪರಂತು ಬೇರೊಂದು ವಿಧದಲ್ಲಿ ಇವರು ಕೌನ್ಸಿಲ್‌ಕೆಲಸಕ್ಕೆ ಅನರ್ಹರಾಗ ಬೇಕಾಯಿತು. ಅದೇನೆಂದರೆ ಮೆ॥ ಮೀನಾಕ್ಷಿ ಅಯ್ಯರವರು ಮೆ॥ ಶೇಷಾದ್ರಿಅಯ್ಯರವರಿಗೆ ಈಗ್ಯೆ ಬಹುಕಾಲದಿಂದ ಅತ್ಯಂತಮಿತ್ರರಾಗಿರುತ್ತಾರೆ. ಇವರಿಗಿರುವ ಪರಸ್ಪರ ಸ್ನೇಹವು ವೃದ್ಧಿಯನ್ನೈದಿ ಕಡೆಗೆ ನಿರೂಢವಾಗಿರುವದಂಶವು ಜಗತ್ಪ್ರಸಿದ್ಧವಾಗಿದೆ. ಇದುವರಿವಿಗೆ ಇರತಕ್ಕ ಮೆಂಬರ್‌ಗಳಪೈಕಿ ಮೊದಲಿಯಾರ್ರವರಿಗೂ, ರಾಯರವರಿಗೂ ಸ್ವಾಭಿಪ್ರಾಯವಿಲ್ಲವೆಂಬದನ್ನೂ ಕೌನ್ಸಿಲ್ ಪ್ರೆಸಿಡೆಂಟರಾದ ದಿವಾನರ ಅಭಿಪ್ರಾಯಗಳಿಗೆ ಸರ್ವಾತ್ಮನಾ ಇವರು ಭಿನ್ನಾಭಿಪ್ರಾಯ ಪಡಲಾರರೆಂಬದನ್ನೂ, ಈ ಮೈಸೂರು ದೇಶದೊಳ್ ಅರಿಯದೆ ಇರುವವರಿಲ್ಲವು. ಮೆ॥ ಮೀನಾಕ್ಷಿ ಅಯ್ಯರೊಬ್ಬರು ಅನು ಮೋದಕ ಮೆಂಬರು ಈ ಕೌನ್ಸಿಲ್‌ಗೆ ಕೊರತೆಯಾಗಿತ್ತು. ಅವರು ಕೂಡ ಮೊಕರರಾದರೆ ಆಗ ದಿವಾನರವರ ಮಂತ್ರಿಮಂಡಲವು ಸಂಪೂರ್ಣವಾಗುವದು. ಚಿರಕಾಲದಿಂ ಸ್ನೇಹಭಾವದೊಳಿರುವ ಮೆ॥ ಮೀನಾಕ್ಷಿ ಅಯ್ಯರವರು ತಮ್ಮ ಮಿತ್ರರಭಿಪ್ರಾಯವನ್ನು ಘೋಷಿಸಿ ಪುರಸ್ಕರಿಸುವದೇ ತಮ್ಮಕರ್ತವ್ಯವೆಂದೆಣಿಸಿನಡೆದರೆ ಅದಕ್ಕಾಗಿ ಅವರುನಿಂದಿಸಲಾಗದು. ಕೇವಲ ಜನಾಪವಾದಕ್ಕಾಗಿ ಚಿರಕಾಲಿಕವಾದ ಮೈತ್ರಿಯನ್ನೂ ಪ್ರಯೋಜನವನ್ನೂ ತ್ಯಾಗ ಕಳೆದುಕೊಳ್ಳುವದಕ್ಕಾಗುವದು ? ಇದರಿಂದ ಮಹಾರಾಜರ ಕೌನ್ಸಿಲ್ ಏರ್ಪಾಡನ್ನು ಕುರಿತು ಸ್ವಲ್ಪ ಆಲೋಚಿಸಬೇಕಾಗಿದೆ ಮಹಾರಾಜರವರು ೧೮೮೧ನೇ ಇಸವಿಯಲ್ಲಿ ಕೊಟ್ಟ ಇಸ್ತಿಹಾರನ್ನು ಅನುಸರಿಸಿ ಈ ಕೌನ್ಸಿಲಿಗೆ, ದಿವಾನರವರು, ಮೆ॥ ತುಂಬುಶೆಟ್ಟರವರು, ಮೆ॥ಸಭಾಪತಿ ಮೊದಲಿಯಾರ್ರವರು, ಮೆಸ್ಟರ್ ಕೃಷ್ಣರಾಯರವರು, ಇವರುಗಳು ಮೆಂಬರ್‌ಗಳಾಗಿರುತ್ತಾರೆ. ಮತ್ತು ಸದರೀ ಇಸ್ತಿಹಾರ್‌ನಿಂ ಯು ಈ ಕೌನ್ಸಿಲರ್‌ಗಳು ಮಾಡಬೇಕಾದ ಕರ್ತವ್ಯವನ್ನು ತಿಳಿಸುತಿದೆಂತೆಂದರೆ–"ನ್ಯಾಯ ನಿಬಂಧನೆಗಳಲ್ಲಿಯೂ, ಕಂದಾಯಮುಂತಾದ್ದರಲ್ಲಿಯೂ. ನಮ್ಮದೇಶದ ಉತ್ತಮವಾದ ಪ್ರಭುತ್ವಕ್ಕೂ, ನಮ್ಮ ಪ್ರಜೆಗಳ ಸಂತೋಷಕ್ಕೂ ಕಾರಣವಾದ ಇತರ ಮುಖ್ಯವಿಷಯಗಳಲ್ಲಿಯೂ ಕೌನ್ಸಿಲ್ ಮೆಂಬರ್‌ಗಳು ತಮ್ಮತಾತ್ಪರ್ಯವನ್ನು ನಮ್ಮ ಪರ್ಯಾಲೋಚನೆಯಬಗ್ಯೆ ತಿಳಿಸತಕ್ಕದ್ದು" ಎಂಬದು ಗತ ಐದು ವರುಷಗಳ ಕಾಲದಿಂದ ನಾವು ಸಹಚರನೊಡನೆ ನಿರೀಕ್ಷಿಸಿನೋಡಿದ್ದರಲ್ಲಿ ದೇಶಕ್ಷೇಮಾಪೇಕ್ಷಕವಾದ ಒಂದು ವಿಷಯವನ್ನಾಗಲಿ ಮಹಾರಾಜರವರ ಕೌನ್ಸಿಲರ್‌ಗಳು ವಿಚಾರಮಾಡಿ ನಿರ್ಣಯಿಸಿ ಅದರಮೇಲೆ ಮಹಾರಾಜರವರು ತಮ್ಮ ಅಭಿಪ್ರಾಯವನ್ನು ಕೊಟ್ಟಂತೆ ಇದುವರಿವಿಗೆ ಒಬ್ಬರಿಗೂ ತಿಳಿಯದು ಸರ್ಕಾರದ ಪ್ರಕಟವಾಗುವ ಸರ್ಕಾರೀ ಕಾಗದಪತ್ರಗಳಲ್ಲಿಯೂ, ಕಾನೂನ್ ಮೊದಲಾದ್ದರಲ್ಲಿಯೂ "ಮಹಾರಾಜರವರ ಮಂಜೂರಾತಿನಿಶಿ" ಎಂದು ಘೋಷಿಸ್ ಮಾಡಲ್ಪಡುತಿದೆಯೇಹೊರ್ತು ಒಂದು ಕೌನ್ಸಿಲ್‌ನಲ್ಲಿವಿಚಾರನಡೆದು ನಿರ್ಣಯವಾದಂತೆಯಾವದೃಷ್ಟಾಂತವೂ ಇಲ್ಲವು. ಎಕ್ಸ ಅಫಿಶಿಯೋ ಮೆಂಬರ್‌ಗಳಾದ ದಿವಾನರು ಮತ್ತು ಮೆ॥ ತುಂಬುಶೆಟ್ಟರವಿಷಯಗಳು ಹಾಗಿರಲಿ, ಇತರಮೆಂಬರ್‌ಗಳು ದೇಶಾಭಿವೃದ್ಧಿಯಬಗ್ಯೆ ತಮ್ಮ ಕರ್ತವ್ಯವನ್ನು ಇದುವರಿವಿಗೆ ಎಷ್ಟುಮಟ್ಟಿಗೆ ವಿಚಾರಪೂರ್ವಕ ನೆರವೇರಿಸಿರುತ್ತಾರೆಂಬದೇ ಮುಖ್ಯವಿಷಯವಾಗಿರುತಿದೆ. ಇವರಿಗೆ ಕೌನ್ಸಿಲ್‌ನಲ್ಲಿ ಮಾಡಬೇಕಾದ ಕೆಲಸಒಂದೂ ಇರುವದಿಲ್ಲವು. ಪ್ರಾಯೇಣ ಅನೇಕವಿಷಯಗಳು ಇವರ ಅವಧಾನಕ್ಕೆ ತರಲ್ಪಡುವದಿಲ್ಲವು. ಕದಾಚಿತ್ ತರಲ್ಪಟ್ಟ ವಿಷಯಗಳಲ್ಲಿ ದಿವಾನರ ಅಭಿಪ್ರಾಯವನ್ನು ಆದರಪೂರ್ವಕ ಅನುಮೋದಿಸಿ ರುಜು ಹಾಕತಕ್ಕವರಾಗಿರುತ್ತಾರೆ. ಯಾವಾಗಲಾದರು ಭಿನ್ನಾಭಿಪ್ರಾಯಗಳುಂಟಾದ ಸಂದರ್ಭದಲ್ಲಿ ಅವುಗಳ ದಾಖಲೆಯೇ ಇರುವದಿಲ್ಲವು ಎಂದು ವುಂಟಾಗಿರುವ ಸಾರ್ವಜನೀನವಾದಮಾತನ್ನು ಖುದಿಸೋಣವೆಂದರೆನ ಮಗೆ ಆಧಾರ ಸಾಲದೆ ಇದೆ. ಕೌನ್ಸಿಲಿನ ಪ್ರೊಸೀಡಿಂಗ್ಸ ಘೋಯಿಷ್ ಮಾಡಲ್ಪಡುವದಿಲ್ಲವೆಂಬವರೊಳೆಷ್ಟುಮಾತ್ರವೂ ಸಂಶಯವಿಲ್ಲವು ಕದಾಚಿತ್ ಇವರು ನಾಲ್ಕು ಗೋಡೆಗಳಮಧ್ಯೆ ಕವಾಟಬಂಧನ ಮಾಡಿಕೊಂಡು ಕೃತಸಂಕೇತರಾಗಿ ನಡೆಸತಕ್ಕ ಆಡಳಿತವು ಈ ರೂಪವಾದ್ದೆಂದು ಅರಿತವನನ್ನು ನಾವು ಇದುವರಿವಿಗೂ ನೋಡಲಿಲ್ಲವು. ಯಾರ ಉಪಕಾರವಶಾತ್ ಈ ರಾಜ್ಯಕ್ಕೆ ನೇಟಿವ್ ಪ್ರಭುತ್ವವೂ ಅದರ ಸಹಾಯಾರ್ಥ ಒಂದು ಮಂತ್ರಾಲೋಚಕ ಸಭೆಯೂ ಏರ್ಪಟ್ಟಿತೊ, ಅಂತಾವರ (ಬ್ರಿಟಿಷ್ ಇಂಡ್ಯ) ದೇಶದಲ್ಲಿ ಸಹ ಆಡಳಿತ ಸಂಬಂಧವಾದ ಮತ್ತು ನ್ಯಾಯವಿಧಾಯಕ ಸಂಬಂಧವಾದ ಕೌನ್ಸಿಲರ್‌ಗಳ ಅಭಿಪ್ರಾಯಗಳೂ, ತೀರ್ಮಾನಗಳೂ, ಆಗಿಂದಾಗ್ಯೆ ಬಹಿರಂಗವಾಗಿ ಘೋಯಿಷ್ಮಾಡಲ್ಪಡುತಲೂಪ್ರಾಣಿ ನಿಯತಗಳಾದಬುದ್ಧಿಪ್ರಮಾದಾದಿ ದೋಷಗಳಿಂದೇನಾದರೂ ಅನ್ಯಥಾ ನಿರ್ಣಯವಾಗಿದ್ದು ಅದು ಜನಗಳಿಂದ ತೋರಿಸಲ್ಪಟ್ಟರೆ, ಅವರ ಅಭಿಪ್ರಾಯವನ್ನು ಉತ್ಸಾಹದೊಡನೆ ಅಂಗೀಕರಿಸಿ ಅದರಂತೆ ನಡೆಸುತಲೂ ಇರುವಪದ್ಧತಿಯು ನೆಲಗೊಂಡಿರುತಿದೆ. ಆದರೆ ಮಹಾರಾಜರವರ ಕೌನ್ಸಿಲರ್‌ಗಳು ಪ್ರಾಯಶಃ ಅಂತಾ ಕೃತ್ಯಗಳಿಗೆ ಹೋಗತಕ್ಕವರಲ್ಲವು ಇವರಿಗೆ ಇಲ್ಲಿ ಲಭಿಸಿರುವ ಸ್ವಾತಂತ್ರ್ಯವಾದರೋ ಸಂದೇಹಾಸ್ಪದವಾದದ್ದಾಗಿರುತಿದೆ. ಈ ಕಾರಣಗಳಿಂದ ಇಲ್ಲಿನ ಕೌನ್ಸಿಲಿನ ವಿಷಯದಲ್ಲಿ ಜನಗಳಿಗೆ ಯಿಷ್ಟು ಗೌರವವೂ ನಂಬಿಕೆಯೂ ಇರಬೇಕೋ ಅಷ್ಟಕ್ಕೆ ಅವಕಾಶವಿಲ್ಲದೆ ಹೋಯಿತು. ಹೀಗಿರುವಲ್ಲಿ ಮೆಸ್ಟರ್ ಸಭಾಪತಿ ಮೊದಲಿಯಾರ್ರವರ ಸ್ಥಾನದಲ್ಲಾಗಲಿ ಪ್ರತ್ಯೇಕವಾಗಿಯಾಗಲಿ ಈಗಿನ ಪ್ರವಾದದ ಪ್ರಕಾರ ಮೆಸ್ಟರ್ ಮೀನಾಕ್ಷಿ ಅಯ್ಯರವರು ಮೊಕರರ್ಮಾಡಲ್ಪಡುವಪಕ್ಷಕ್ಕೆ ದಿವಾನರ ಮಂತ್ರಿಮಂಡಲವು ಮಿತ್ರಮಂಡಲವಾಗಿ ಜನಗಳಿಗೆ ಸಕಲ ಪ್ರತ್ಯಾಶೆಯೂ ನಿವಾರಣವಾಗುವದು. ಈಕೌನ್ಸಿಲನ್ನು ಬ್ರಿಟಿಷ್ ಗವರ್ನಮೆಂಟಿನವರು ಯಾವ ಉದ್ದೇಶದೊಡನೆ ಯಾವ ರೀತಿಯಾಗಿರಬೇಕೆಂದು ಸಂಕಲ್ಪಿಸಿ ಮೊದಲು ಏರ್ಪಡಿಸಿದರೋ ಅದರಂತೆ ಮಾಡಬೇಕಾದರೆ, ಅದನ್ನು ಆತ್ಯಂತಿಕವಾಗಿ ಬದಲಾಯಿಸಿ ಬೇರೇಕ್ರಮಗಳನ್ನೇರ್ಪಡಿಸತಕ್ಕದ್ದು ಆವಶ್ಯಕವಾಗಿರುತಿದೆ. ಮೊದಲು ಈಗಿನಮೆಂಬರ್‌ಗಳನ್ನೆಲ್ಲ ನಿವೃತ್ತಿ ಮಾಡಬೇಕು. ದಿವಾನರು ಅದರಲ್ಲಿ ಸಾಮಾನ್ಯಾಧಿಕಾರವುಳ್ಳವರಾಗಿರತಕ್ಕದ್ದು. ಸ್ವತಂತ್ರರಾದ ಸರ್ಕಾರ್ ನೌಕರರಲ್ಲದ ಮೆಂಬರ್‌ಗಳ ಸಂಖ್ಯೆಯನ್ನು ಜಾಸ್ತೀ ಮಾಡತಕ್ಕದ್ದು. ದಾಕ್ಷಿಣ್ಯ ನಿಮಿತ್ತಕವಾದ ತಲಬ್‌ಕೊಡುವ ಪದ್ಧತಿಯನ್ನು ಆತ್ಯಂತಿಕವಾಗಿ ಮೌಕೂಫ್‌ಮಾಡತಕ್ಕದ್ದು. ಇಂತಾ ಕೌನ್ಸಿಲಿಗೆ ಬ್ರಿಟಿಷ್ ಗವರ್ನಮೆಂಟಿನವರ ನಿರ್ಣಯಪ್ರಕಾರ ಮಹಾರಾಜರವರೇ ಪ್ರೆಸಿಡೆಂಟರಾಗಿರತಕ್ಕದ್ದು. ಅವ್ಯವಸ್ಥಿತ ಕಾಲಕ್ಕೆ ಬದಲು ಕಾಲಕ್ಲುಪ್ತಿಮಾಡಿ ಆಗ್ಯೆ ತಪ್ಪದೆ ಕೌನ್ಸಿಲರ್‌ಗಳು ಸೇರುಮತೆಮಾಡತಕ್ಕದ್ದಲ್ಲದೆ. ಕೌನ್ಸಿಲಿನ ಡೆಯಿರಿಯೊಂದಿಟ್ಟು ಅದನ್ನು ದಿವಾನರವರ ಸ್ವಂತ ಪ್ರೊಸೀಡಿಂಗ್ಸ್‌ನಂತೆ ತಿಂಗಳಿಗೊಂದಾವರ್ತಿ ಯಾ ಮೂರುತಿಂಗಳಿಗೊಂದಾವರ್ತಿ ಪ್ರಿಂಟ್ ಹಾಕಿ ಪ್ರಚುರ ಪಡಿಸತಕ್ಕದ್ದು. ಅಂತಾ ಡೆಯಿರಿಯಮೇಲೆ ಬರತಕ್ಕ ಪ್ರಜಾಭಿಪ್ರಾಯಗಳನ್ನೆಲ್ಲ ರಿಜಿಸ್ಟರ್ ಮಾಡಿಟ್ಟು ಮುಂದಿನ ಮೀಟಿಂಗ್ ಕಾಲದಲ್ಲಿ ಅವಂ ಮೆಂಬರ್‌ಗಳಿಗೊಪ್ಪಿಸಿ ಅದರಮೇಲೆ ಬಹುಜನಾಭಿಪ್ರಾಯದಂತೆ ಮಹಾರಾಜರವರು ತೀರ್ಮಾನಮಾಡಿ ಅದಂ ಸರ್ಕಾರ್ ಗೆಜೆಟಿನ ಮೂಲಕ ಘೋಯಿಷ್ ಮಾಡತಕ್ಕದ್ದು. ಈ ರೀತಿ ಮಾಡಿದಹೊರ್ತು ಕೌನ್ಸಿಲ್ ಯೆಂದಿಗೂ ಕ್ರಮಪಡಲಾರದು. ಮತ್ತು ಈರೀತಿ ಇಟ್ಟುಕೊಂಡಿರುವದರಿಂದ ಬ್ರಿಟಿಷ್ ಗವರ್ನಮೆಂಟಿನವರ ಉದ್ದೇಶವನ್ನು ವಿಫಲಗೊಳಿಸಬೇಕೆಂಬ ಸಂಕಲ್ಪವಿರುವಂತೆ ಅನ್ಯರಿಗೆ ತೋರದಿರಲಾರದು.

Occasional Notes.

ನೈಮಿತ್ತಿಕವಿಷಯನ್ಯಾಸ

The Maharaja of Gwalior.–ಗ್ವಾಲಿಯರ್ ಮಹಾರಾಜರವರು ಈಗ ಕೇವಲ ಅಪಾಯಸ್ಥಿತಿಯೊಳಿರುವಂತೆ ತಿಳಿಯಬರುತಿದೆ. ಇದಲ್ಲದೆ ಅಲ್ಲಿ ಬಿಸಿಲಿನಝಳವು ದುಸ್ಸಹವಾಗಿರುವದರಿಂದ ಕಾಲಸ್ಥಿತಿಯು ಜನಗಳಿಗೆ ರೋಗನಿಮಿತ್ತಕವಾಗಿದೆಯೆಂದು ಕೇಳುತ್ತೇವೆ.

Illness of the Ameer of Cabul.—ಕಾಬೂಲ್ ಅಮೀರರಾದ ಅಬ್ದುರ್‌ರಹಿಮಾನರವರು ಕೇವಲ ಅನಾರೋಗ್ಯ ಸ್ಥಿತಿಯಲ್ಲಿದಾರೆಂತಲೂ, ಒಂದುವೇಳೆ ಭಗವದನುಗ್ರಹವು ಪ್ರತಿಕೂಲವಾಗಿದ್ದು ಅಪಾಯವೇನಾದರೂ ಪ್ರಾಪ್ತವಾದಗೆ ಆಗ ಅಫಘಾನಿಸ್ಥಾನದಲ್ಲಿ ಸ್ವಯುದ್ಧ ಕಲಹ ಒಂದು ಪ್ರಾಪ್ತವಾಗಬಹುದಾಗಿದೆಯೆಂತಲೂ, ತಿಳಿಯಬರುತ್ತಿದೆ. ಇಂಗ್ಲಿಷಿನವರ ಮಾಧ್ಯಸ್ಥ್ಯಪೂರ್ವಕವಾದ ಪ್ರವೇಶಕ್ಕೆ ಇದೊಂದು ಒಳ್ಳೆಯ ಸಂದರ್ಭವು.

Mr Anandibai Joshi.—ಮಹಾರಾಷ್ಟ್ರ ಸ್ತ್ರೀಯಾದ ಆನಂದಬಾಯಿ ಜೋಷೀಯೆಂಬಾಕೆಯು ಅಮೆರಿಕಾ ದೇಶಕ್ಕೆ ಹೋಗಿ ಬಾಸ್ಟನ್ ಎಂಬ ಪ್ರದೇಶದಲ್ಲಿ ವೈದ್ಯಶಾಸ್ತ್ರಾಭ್ಯಾಸ ಮಾಡಿ ಪ್ರವೀಣಳಾಗಿದಾಳೆಂದು ವೃತ್ತಾಂತ ಪತ್ರಿಕೆಗಳು ಆಗಿಂದಾಗ್ಯೆ ಪ್ರಶಂಸಿಸುತಲಿರುತವೆಯಷ್ಟೆ. ಈ ಪಂಡಿತಾಂಗನೆಯು ಇನ್ನೂ ನಾಲ್ಕು ತಿಂಗಳ ಕಾಲ ಅಲ್ಲಿಯೇ ಇದ್ದು ಬಳಿಕ ಇಂಗ್ಲಾಂಡಿಗೆ ಹೋಗುವಳೆಂತಲೂ, ಅಲ್ಲಿಂದ ಬರುವ ಫೆಬ್ರವರಿ ತಿಂಗಳಲ್ಲಿ ಪ್ರಯಾಣವಾಗಿ ಇಂಡ್ಯಾ ದೇಶಕ್ಕೆ ಬರುವಳೆಂತಲೂ, ಮುಂಬೈಯಲ್ಲೇ ಕೆಲವು ಕಾಲದತನಕ ಇದ್ದು ತರುವಾಯ ತನ್ನ ಜನ್ಮಭೂಮಿಯಾದ ಕೊಲ್ಹಾಪುರಕ್ಕೆ ಹೋಗಿ ಅಲ್ಲಿ ಈಗ ನೂತನವಾಗಿ ಏರ್ಪಡಿಸಲ್ಪಟ್ಟಿರುವ ಸ್ತ್ರೀಗಳ ಆಸ್ಪತ್ರೆಯಲ್ಲಿ ಗೊತ್ತಾಗಿರುವ ತನ್ನ ಕೆಲಸದ ಚಾರ್ಜನ್ನು ವಹಿಸುವಳೆಂತಲೂ, ಮುಂಬೈ ಪತ್ರಿಕೆಯೊಂದು ತಿಳಿಸುತಿದೆ. ಸ್ತ್ರೀವಿದ್ಯಾಭ್ಯಾಸವು ಇಂತವರಿಗೆ ಪ್ರಯೋಜನಕರವಾಗುವಂತೆ ಸಾಮಾನ್ಯವಾಗಿ ಯೆಲ್ಲರಿಗೂ ಅದು ಉದ್ದಿಷ್ಟ ಫಲವನ್ನು ಕೊಡುವದಿಲ್ಲವು.

Dewan Bahadur R Raghunatha Row.—ಈಗ ಮದರಾಸಿನಲ್ಲಿ ಡೆಪ್ಯುಟಿಕಲೆಕ್ಟರಾಗಿಯೂ, ಇನ್ಕಂಟ್ಯಾಕ್ಸ್ ಕಲೆಕ್ಟರಾಗಿಯೂ ಇರುವ ದಿವಾನ್‌ಬಹದೂರ್ ಮೆ|| ರಘುನಾಥರಾಯರವರಿಗೆ ಗತ ಫೆಬ್ರವರಿ ತಿಂಗಳ ೪ನೇ ತಾರೀಖಿನೊಡನೆ ೫೫ ವರುಷಗಳ ವಯಸ್ಸು ಪ್ರಾಪ್ತಿಸಿದ್ದರಿಂದ ಮದರಾಸ್ ಗವರ್ನ್‌ಮೆಂಟಿನವರು ಅವರನ್ನು ಇನ್ನೂ ಐದು ವರುಷಗಳ ಕಾಲ ನೌಕರಿಯಲ್ಲಿರುವಂತೆ ಅಪೇಕ್ಷಿಸಿದರೆಂತಲೂ, ಮುಂದಿನ ನೌಕರಿಗೆ ಆವಶ್ಯಕವಾದ ಶರೀರ ಮನೋದಾರ್ಢ್ಯ ಪ್ರಯುಕ್ತವಾದ ಅರ್ಹತೆಯಂಕುರಿತು ಪದ್ಧತಿಪ್ರಕಾರ ಪ್ರತಿಸುವತ್ಸರದಲ್ಲಿಯೂ ತಿಳಿಸುತಲಿರಬೇಕೆಂದು ಅವರಿಗೆ ಬರೆದಿರುತ್ತಾರೆಂತಲೂ ಕೇಳಲಿಕ್ಕೆ ಬಹಳ ಸಂತೋಷಿಸುತ್ತೇವೆ. ಈ ದೊಡ್ಡ ಮನುಷ್ಯರು ಪ್ರಾಯಶಃ ಬ್ರಿಟಿಷ್ ಸರ್ವಿಸಿನಲ್ಲಿರುತಲಿರುವದರಿಂದ ಇದುವರಿವಿಗೆ ಇವರು ಉಪಹತಿಯಿಲ್ಲದೆ ಅನುಭವಿಸುತಲಿರುವ ಉದ್ಯೋಗಪ್ರಯುಕ್ತವಾದ ಸುಖಸಂತೋಷಗಳನ್ನು ಇನ್ನೂ ಕೆಲವು ಕಾಲ ಅನ್ಯರಿಗೆ ನಿದರ್ಶನಪ್ರಾಯದಿಯಲ್ಲಿ ಅನುಭವಿಸುತಲಿರಬೇಕೆಂದು ಕೋರುವೆವು.

The late Maharaja of Indore.—ಹೋಲ್ಕರ್ ಮಹಾರಾಜರವರ ಆರೋಗ್ಯ ವಿಷಯದೊಳು ಆಗಿಂದಾಗ್ಯೆ ನಮಗೆ ಬರುತಲಿದ್ದ ವೃತ್ತಾಂತವು ಅತೃಪ್ತಿಕರವಾದದ್ದಾಗಿಯೂ, ಅನಿಶ್ಚಿತವಾದದ್ದಾಗಿಯೂ ಇತ್ತು. ಈ ಮಹಾರಾಜರವರ ಆರೋಗ್ಯಭಾಗ್ಯವು ಬಯಸಿ ಮಾಡಲ್ಪಟ್ಟ ಚಿಕಿತ್ಸೆಗಳೆಲ್ಲವೂ ಪ್ರಯೋಜನಕರವಾಗದೆ ವ್ಯಾಧಿಯು ದಿನೆದಿನೇ ಪ್ರಬಲಿಸುತ ಬಂದು ಮಾಹೆ ಮಜಕೂರ್ ೧೭ನೇ ತಾರೀಖ್ ಗುರುವಾರದ ದಿನ ಬೆಳಗ್ಯೆ ತಮ್ಮ ಪ್ರಾಕೃತಶರೀರವು ತ್ಯಜಿಸಿ ನಿತ್ಯಸುಖವನ್ನೈದಿದರೆಂಬ ವೃತ್ತಾಂತವು ನಮಗೆ ಅಮಿತವಾದ ವಿಷಾದವನ್ನುಂಟು ಮಾಡಿತು. ಮಹಾರಾಜರವರ ಮರಣಕ್ಕೆ ಅವರಿಗೆ ಪ್ರಾಪ್ತವಾಗಿದ್ದ ಬಹು ಮೂತ್ರಜಾಡ್ಯವೇ ಕಡೆಗೆ ಪ್ರಬಲಕಾರಣವಾಯಿತೆಂದು ತಿಳಿಯಬರುತಿದೆ ಹೋಲ್ಕರ್ ಮಹಾರಾಜರವರು ಬ್ರಿಟಿಷ್ ಗವರ್ನ್‌ಮೆಂಟಿನವರ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದರಲ್ಲದೆ, ಇತರಾಪೇಕ್ಷಯಾ ಪ್ರಬಲರಾಗಿದ್ದರು. ಇವರ ಜ್ಯೇಷ್ಠಪುತ್ರರಾದ ಬಾಲಾ ಸಾಹೇಬರಿಗೆ ಮುಂದೆ ಪಟ್ಟಾಭಿಷೇಕವು ನಡೆಯುವದು.

The Maharaja Dhulipsing.—ಮಹಾರಾಜಾ ದಿಲೀಪಸಿಂಗರವರಿಗೆ ಈಗ ಕೊಡಲ್ಪಡುತಲಿರುವದಲ್ಲದೆ ಇನ್ನೂ ಮೂರುಲಕ್ಷರೂಪಾಯಿಗಳು ಇಂಡ್ಯಾದೇಶದ ಹುಟ್ಟುವಳಿಯಿಂದ ಕೊಡಲ್ಪಡುವದೆಂದು ಇಂಡ್ಯನ್ ಡೆಯಿಲೀ ನ್ಯೂಸ್‌ಯೆಂಬ ಪತ್ರಿಕೆಯು ತಿಳಿಸಿದ್ದಗೆ ಮೇಲೆ ಅಮೃತಬಜಾರ್ ಪತ್ರಿಕೆಯು ಅಭಿಪ್ರಾಯ ಪಡುತಿದೇನಂದರೆ— ಈಗ ಮಾಡಲ್ಪಟ್ಟ ಏರ್ಪಾಡು ಸಾಮಾನ್ಯವಾಗಿ ಯೆಲ್ಲರಿಗೂ ಸಂತೋಷವನ್ನುಂಟುಮಾಡತಕ್ಕದ್ದೆಂದು ಹೇಳಲಾಗದು. ಇದರಿಂದ ಬ್ರಿಟಿಷ್ ರಾಜ್ಯತಂತ್ರಜ್ಞರ ವರ್ತನದಿಂದುಂಟಾಗತಕ್ಕ ಫಲವನ್ನು ಇಂಡ್ಯಾದೇಶೀಯರು ಅನುಭವಿಸಬೇಕಾದ್ದೆಂದು ಏರ್ಪಟ್ಟಿತು. ಬರ್ಮಾದೇಶದ ಯುದ್ಧಖರ್ಚನ್ನು ಇಂಡ್ಯಾದೇಶದ ಹುಟ್ಟುವಳಿಯಿಂದಲೇ ಕೊಡತಕ್ಕದ್ದೆಂದು ಮಾಡಲ್ಪಟ್ಟ ತೀರ್ಮಾನವೆಷ್ಟು ನ್ಯಾಯವಾದದ್ದಾಗಿಯೂ ಗೌರವವಾದದ್ದಾಗಿಯೂ ಇದೆಯೋ ಪ್ರಸಕ್ತ ಏರ್ಪಾಡು ಸಹ ಅಷ್ಟರ ನ್ಯಾಯ ಗೌರವಗಳುಳ್ಳದ್ದಾಗಿರುತಿದೆ. ಅಪಹರಿಸಲ್ಪಟ್ಟ ಮಹಾರಾಜರವರ ಸ್ವಂತ ಆಸ್ತಿಯೆಲ್ಲವೂ ಯೇನಾದವೋ ಅದಂ ಯಾರಾದರೂ ಹೇಳುವಿರಾ ? ಬ್ರಿಟಿಷ್ ಸಾಂಬ್ರಾಜ್ಯಾಧಿದೇವತೆಯು ಇದಕ್ಕೆ ಉತ್ತರಕೊಡುವಾಗ್ಯೆ ಶಿರವಂಬಾಗಿ ಸದಿರಲಾರಳೆಂದು ನಂಬುತ್ತೇವೆ, ಎಂಬದು.

Decline of the Mogul Army.—ಈಚಿಗೆ ಒಂದುಸಂದರ್ಭದಲ್ಲಿ ದೆಹಲೀಪಟ್ಟಣದೊಳು ತಾಕ್ಟರ್‌ಹಂಟರವರು ಮಾಡಿದ ಶ್ಲಾಘ್ಯತಮವಾದ ಪ್ರಸಂಗಾಂತದೊಳು, ಮೊಗಲಾಯಿ ಅರಸರೊಳೊಬ್ಬರಾದ ಔರಂಗಜೇಬನ ಮಹತ್ಸೈನ್ಯವು ಅಳಿದುಹೋದದಕ್ಕೆ ಕಾರಣವನ್ನು ತಿಳಿಸಿದರೇನಂದರೆ,—ಹಿಂದೂಜಾತಿ ಮತಗಳ ಪ್ರಭೇದಗಳಿಂದಲೇ ಮೊಗಲ್‌ರಾಜ್ಯವು ನಾಶವಾಯಿತು. ಇಂತಾ ನಾನಾಪ್ರಭೇದದವರನ್ನೆಲ್ಲ ರಾಜಭಕ್ತಿಯುಳ್ಳ ಒಂದೇಸಮುದಾಯದವರಂತೆ ಸೇರಿಸಿದ ಕಾರಣ ದೈವಾನುಗ್ರಹದಿಂದ ಬ್ರಿಟಿಷ್ ಆಧಿಪತ್ಯವು ದೃಢವಾಗಿನೆಲಗೊಂಡಿರಲಿಕ್ಕೆ ಕಾರಣವಾಯಿತು ಎಂಬದು. ಇದು ಕೇವಲ ಸತ್ಯವಾದಮಾತು. ದೃಢತರವಾದ ಆಧಾರದಮೇಲೆ ಅಕಬರ್ ಈ ರಾಜ್ಯವಂ ನೆಲಗೊಳಿಸಿದನು ಆತನ ಪೌತ್ರನಾದ ಔರಂಗಜೇಬ್ ಆ ಆಸ್ತಿಭಾರವನ್ನು ಕದಲಿಸಿದ್ದರಿಂದ ರಾಜ್ಯವೇ ಕವಚಿಕೊಂಡಿತು. ಆದಾಗ್ಯೂ ಔರಂಗಜೇಬನ ರಾಜ್ಯತಂತ್ರವು ನಿಷ್ಫಲ್ಯಕರವಾದದ್ದಾಗಿತ್ತೆಂಬದನ್ನು ಒಬ್ಬರೂ ನಿರಾಕರಿಸಲಾರರು. ಆತನು ತನ್ನ ಪಭುತ್ವದಲ್ಲಿ ಪ್ರಜೆಗಳನ್ನು ಆಯುಧವಿಹೀನರನ್ನಾಗಿ ಮಾಡಲಿಲ್ಲವು. ಆತನು ಸ್ವಮತಾಭಿಮಾನವುಳ್ಳವನಾಗಿ ಒಂದುವೇಳೆ ಇದ್ದಿರಬಹುದು. ಆದಾಗ್ಯೂ ಸೇನಾಧಿಪತ್ಯವನ್ನೂ ಸ್ವರಾಜ್ಯಪರಿಪಾಲನಾಧಿಕಾರವನ್ನೂ ಹಿಂದೂಗಳಿಗೇ ಕೊಟ್ಟದ್ದನೆಂದು ಹಿಂದಿನ ಪಡಸ್ತ್ರ [illegible] ಸುತಿವೆ.

Destruction in hunting excursion.—ಮೃಗಯಾವಿನೋದವೇ ಕರ್ತವ್ಯವೆಂದೆಣಿಸಿ ಅದರಲ್ಲಿ ಮಗ್ನರಾಗಿರತಕ್ಕವರು ಯಾವಾಗಲಾದರೂ ಆತ್ಮನಾಶಕ್ಕೆ ಗುರಿಯಾಗದಿರಲಾರರೆಂಬದಕ್ಕೆ ಇದರಡಿಕಂಡ ವಿಷಯವೇ ಸಾಂದ ದೃಷ್ಟಾಂತವಾಗಿರುತಿದೆ. ಕೃಷ್ಣಾಡಿಸ್ಟ್ರಿಕ್ಟು ಹೆಡ್ ಅಸಿಸ್ಟೆಂಟ್ ಕಲೆಕ್ಟರಾದ ಮೆ|| ರಾಬರ್ಟಸನ್ ಯೆಂಬವರು ಕಳೆದತಿಂಗಳ ೨೭ನೇ ತಾರೀಖಿನ ದಿನಬೆಳಗ್ಯೆ ೪ ಘಂಟೆಗೆ ಡೆಪ್ಯುಟಿಕಲೆಕ್ಟರೊಡನೆ ರೇಮಡಿ ಚೆರ್ಲ ಎಂಬಗ್ರಾಮಕ್ಕೆ ಷಿಕಾರಿಬಗ್ಯೆ ಹೋದರು. ಆಗ್ರಾಮದ ಬಳಿಯೊಂದು ಹುಲಿ ಇದ್ದಂತೆಯೂ, ಅದು ಅಲ್ಲಿನವರನ್ನು ಆಗಿಂದಾಗ್ಯೆ ಹಿಂಸಿಸುತಿದ್ದಂತೆಯೂ ತಿಳಿಯಬರಲು, ಆದಿನಮಧ್ಯಾಹ್ನ ಕಲೆಕ್ಟರವರು, ಡೆಪ್ಯುಟಿ ಕಲೆಕ್ಟರೊಡನೆ ಕೆಲವು ಮುಂಷಿಷಿಕಾರಿಯವರನ್ನು ಸಂಗತ ಕರೆದುಕೊಂಡು ಅಲ್ಲಿಗೆ ಸಮೀಪದೊಳಿದ್ದ ಒಂದು ಅಡಿವಿಗೆ ಹೋದರು. ಅಲ್ಲಿ ಹುಲಿ ಹೋಗಿದ್ದ ಹೆಜ್ಜೆಯ ಗುರ್ತಿನ ಆಧಾರದಮೇಲೆ ಹುಡುಕುತ ಹೋಗಲಾಗಿ ಅಲ್ಲಿನ ಒಂದು ಪೊದೆಯಲ್ಲಿ ಹುಲಿಯು ಸೇರಿಕೊಂಡು ಘರ್ಜಿಸುತಲಿದ್ದದು ಕೇಳಬರಲು ಆಗ ಜನಗಳ ಗಲಾಟೆಯನ್ನು ಕೇಳಿ ಅದು ಹೊರಗೆಬಂತು. ಬಳಿಕ ಬೇಟೆಗಾರರು ಅದನ್ನು ಅಟ್ಟಿಕೊಂಡು ಹೋಗಲು ಅದು ೫೦ ಗಜಗಳ ಫಾಸಲೆಯೊಳಿದ್ದ ಮತ್ತೊಂದು ಪೊದೆಯಲ್ಲಿ ನುಗ್ಗಿತು. ಅದನ್ನು ತಿಳಿದು ಷಿಕಾರಿಯವರು ಅದನ್ನು ಹೊಡೆಯಲಿಕ್ಕೆ ಹುಕುಂ ಆಗಬೇಕೆಂದು ಕಲೆಕ್ಟರನ್ನು ಕೇಳಿದರು. ಆಗ ಅಸಹಾಯಶೂರರಾದ ಕಲೆಕ್ಟರವರು ತಾವೇ ಕೊಲ್ಲುವಂತೆ ಹೇಳಿ ನಿಂತಿರುವಾಗ್ಯೆ ಹುಲಿಯು ಘರ್ಜಿಸುತ ಹೊರಗೆಬಂತು. ಆಗ್ಯೆ ಬೇಟೆಗಾರರು ಅದನ್ನು ಓಡಿಸುತ ಸಂಗಡ ಓಡುತಲಿರುವಾಗ್ಯೆ ಕಲೆಕ್ಟರವರು ಅದನ್ನು ಗೋಲಿಯಿಂದ ಹೊಡೆದರು. ಗುರಿತಪ್ಪಿಹೋದದರಿಂದ ಹತ್ತುಬಾರಿನ ದೂರದೊಳಿದ್ದ ಹುಲಿಯು ಕಲೆಕ್ಟರಮೇಲೆ ಹಾದು ಎರಡುಕಾಲ್ಗಳಿಂದ ನಿಂತುಕೊಂಡು ಯೆಡದ ಪಂಜಾನಿಂದ ಕಲೆಕ್ಟರ ಯೆಡದ ಭುಜದಮೇಲೆ ಘಾಯಮಾಡಿ ಅವರತಲೆಯನ್ನು ಹಿಡಿದು ಕಚ್ಚುವಾಗ್ಯೆ ೩೧ ಅಂಗುಲವುಳ್ಳ ಅದರ ಹಲ್ಲು ಒಂದು ತಲೆಯೊಳಗೆ ಮುರಿದು ಹೋಯಿತು. ಇಷ್ಟರಲ್ಲಿ ಡೆಪ್ಯುಟೀ ಕಲೆಕ್ಟರು ಓಡಿಬಂದು ಐದಾರು ಅಡಿಗಳ ದೂರದೊಳು ನಿಂತುಕೊಂಡು ಹುಲಿಯ ಹಣೆಯಮೇಲೆ ಹೊಡೆಯಲು ಅದು ಬಾಯಿಯಲ್ಲಿ ಕಚ್ಚಿಕೊಂಡಿದ್ದ ಕಲೆಕ್ಟರೊಡನೆ ನೆಲದಮೇಲೆ ಬಿದ್ದಕೂಡಲೆ ಬೇಟೆಗಾರರು ಸಹ ತಮ್ಮ ಸರ್ದಿಯನ್ನು ತೀರಿಸಿಕೊಂಡರು. ಬಳಿಕ ಸಾಹೆಬರನ್ನು ಹುಲಿಯ ಬಾಯಿಂದ ಬಿಡಿಸಿದ ಉತ್ತರಕ್ಷಣದಲ್ಲಿಯೇ ಅವರು ಪ್ರಾಣವು ಬಿಟ್ಟರು. ಈಪ್ರಕಾರ ಯೆರಡು ನಿಮಿಷಗಳ ಕಾಲದಲ್ಲಿ ಇಷ್ಟರ ಅಪಾಯವು ಪ್ರಾಪ್ತವಾಯಿತು. ಬಳಿಕ ಆ ಅಡಿವಿಯಿಂದ ಕಲೆಕ್ಟರ ಮುರ್ದೆಯನ್ನು ಡೋಲಿಯಲ್ಲಿ ರೇಮಿ ಚೆರ್ಲ ಎಂಬಗ್ರಾಮಕ್ಕೆ ಸಾಗಿಸಿಕೊಂಡು ಹೋಗಿ ಅಲ್ಲಿಂದ ಮಾರನೆಯ ದಿನ ೧೨ ಘಂಟೆಗೆ ವೆನುಕೊಂಡ ಎಂಬಗ್ರಾಮಕ್ಕೆ ಕಳುಹಿಸಿ ಅಲ್ಲಿನ ರೈಯಿಲ್ವೇ ಇಲಾಖಾ ಅಧಿಕಾರಗಳ ಮುಂದೆ ವಿಚಾರಣೆ ನಡೆದಮೇಲೆ ಮುರ್ದೆಯು ಧಫನ್ ಮಾಡಲ್ಪಟ್ಟಿತು. ಇದರಿಂದ ಅನುಚಿತವಾದ ಮೃಗಯಾ ವಿನೋದದಲ್ಲಿ ಅತ್ಯಾಸಕ್ತಿಯುಳ್ಳವರ ಗತಿಯು ಈರೀತಿ ಪರಿಣಮಿಸುವದಲ್ಲದೆ ಅಂತವರ ಮರಣವು ಯಾವಾಗಲು ಸನ್ನಿಹಿತವಾಗಿರುವದೆಂದು ತಿಳಿಯುವದು.

NOTICE

ಸನ್ ೧೮೮೫ನೇ ಇಸವಿಯ ಆಖೈರ್‌ತನಕ ಈ ಪತ್ರಿಕೆಗೆ ಬಾಕೀದಾರರಾಗಿರತಕ್ಕವರೆಲ್ಲರ ಹೆಸರುಗಳು ಅವರವರ ಹೋದೆ, ಬಾಕೀತಪಸೀಲ್ ಗಳೊಡನೆ ಹಿಂದೆ ನಾವು ಸೂಚಿಸಿದ್ದ ಪ್ರಕಾರ ಮುಂದಿನವಾರದ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವದೆಂಬ ಅಂಶವನ್ನು ನಮ್ಮ ಬಾಕೀದಾರರೆಲ್ಲರಿಗೂ ಇದರಿಂದ ಆಖೈರಾಗಿ ತಿಳಿಸಿರುತ್ತೇವೆ ಇದೊಂದು ಬಾಧಕತ್ವೇನ ತೋರದಪಕ್ಷಕ್ಕೆ ಅಂತವರ ಬಾಕಿಯು ಕೋರ್ಟಮುಖಾಂತ್ರ ವಸೂಲ್ಮಾಡಲ್ಪಡುವದು.

LOCAL AND PROVINCIAL NEWS.

ಒಳದೇಶಮತ್ತು ತಾಲ್ಲೂಕ್‌ಜಾತ್‌ವೃತ್ತಾಂತಗಳು.

The Queen's accession.—ನಿನ್ನೆಯದಿನ ಶ್ರೀಮನ್ಮಹಾರಾಜ್ಞೀಯವರು ಸಿಂಹಾಸನಾರೋಹಣಂ ಗೈದದಿನವಾದದರಿಂದ ಗೌರವಾರ್ಥ ಈದಿನಬೆಳಗ್ಯೆ ೩೧ ತೋಫುಗಳು ಹಾಕಲ್ಪಟ್ಟವು.

Mr. Ramachandriyer.—ಚೀಫ್‌ಕೋರ್ಟ್ ಮೂರನೆಯ ಜಡ್ಜಿಯಾದ ರಾಮಚಂದ್ರಯ್ಯರವರಿಗೆ ತಂಜಾವೂರಿಗೆ ಯೇನೋ ಜರೂರಿಯಾಗಿ ಹೋಗಬೇಕಾದ ಕೆಲಸ ಪ್ರಾಪ್ತವಾದದರಿಂದ ಅವರು ಮಾಡುತಲಿದ್ದ ಸೆಶನ್ ವಿಚಾರಣೆಯನ್ನು ಪೂರೈಸದೆ ಮಧ್ಯೆ ಹೊರಟುಹೋದರೆಂತಲೂ, ಬಾಕೀ ಮೊಕದ್ದಮೆಗಳನ್ನೆಲ್ಲ ಯೆರಡನೆಯ ಜಡ್ಜಿಯರಾದ ಮೆ|| ತುಂಬುಶೆಟ್ಟರವರೇ ಪೂರೈಸಿದರೆಂತಲೂ ಕೇಳುತ್ತೇವೆ

Postal Notice.—ಬೆಂಗಳೂರು ಜನರಲ್ ಪೋಸ್ಟಾಫೀಸಿನಲ್ಲಿಯೂ ಅದಕ್ಕೆ ಸೇರಿದ ಸಬ್‌ಆಫೀಸ್‌ಗಳಲ್ಲಿಯೂ ಮನಿಆರ್ಡರ್ ಮ ಸೇವಿಂಗ್ಸ್‌ಬ್ಯಾಂಕ್ ಇಲಾಖೆಗಳ ಕೆಲಸಗಳು, ಬರುವ ತಿಂಗಳ ಗುರ್ರೇತಾರೀಖು ಮೊದಲು ಭಾನುವಾರಗಳು ಮತ್ತು ಪೋಸ್ಟಾಫೀಸ್ ರಜಾದಿನಗಳು ವಿನಾ ಪ್ರತಿನಿತ್ಯಬೆಳಗ್ಯೆ ೧೦ ಘಂಟೆಯ ಮೊದಲು ಸಾಯಂಕಾಲ ೪ ಘಂಟೆಯತನಕ ನಡೆಸಲ್ಪಡುವದೆಂದು ಬೆಂಗಳೂರು ಪೋಸ್ಟುಮ್ಯಾಸ್ಟರವರು ತಿಳಿಯಪಡಿಸಿರುತ್ತಾರೆ. ಈಏರ್ಪಾಡು ಜನಗಳಿಗೆ ಬಹಳ ಅನುಕೂಲವಾದದ್ದಾಗಿರುತಿದೆ.

The Mysore Prince.—ಈ ಸಂಸ್ಥಾನದ ಯುವರಾಜರಾದ ಕೃಷ್ಣರಾಜ ಒಡೆಯರವರಿಗೆ ಜಪರ ವರ್ಷವರ್ಧಂತಿಯ ದಿನ ಸ್ವಲ್ಪ ಶರೀರಾಲಸ್ಯ ಪ್ರಾಪ್ತವಾಗಿದ್ದಂತೆಯೂ, ಅದರಿಂದ ಮಾಮೂಲಿ ಪ್ರಕಾರ ಜರಗಬೇಕಾಗಿದ್ದ ಉತ್ಸವ ಔತನಾದಿಗಳೆಲ್ಲವೂ ತೃಪ್ತಿಕರವಾಗಿ ನಡೆಯಲಿಕ್ಕಿಲ್ಲದೆ ಹೋದಬಗ್ಯೆ ಮಹಾರಾಜರವರು ಅಸಮಾಧಾನಗೊಂಡಿದಾರೆಂತಲೂ, ಈಗ ಮಹಾರಾಜಪುತ್ರರು ಕ್ಷೇಮವಾಗಿದಾರೆಂತಲೂ ಮೈಸೂರು ಬಾತಮಿದಾರನ ಕಾಗದದಮೂಲಕ ತಿಳಿಯಬಾದೆವು.

Precept is better than teaching.—ಮೆ|| ತುಂಬುಶೆಟ್ಟರವರ ಜ್ಯೇಷ್ಠಪುತ್ರರು ದಿವಾನರ ಅನುಮತಿಯಮೇಲೆ ಕಂಟ್ರೋಲರ್ ಮೆ|| ರಂಗಸ್ವಾಮಿಯ್ಯಂಗಾರ್ರ ತಾಬೇಯಲ್ಲಿ ಪ್ರೊಬೇಷನರಾಗಿ ಮೊಕರರ್ಮಾಡಲ್ಪಟ್ಟು ಪ್ರತಿನಿತ್ಯ ಕಚೇರಿಗೆ ಹೋಗಿ ಬರುತಲಿದಾರೆಂದು ತಿಳಿಯಬರುತಿದೆ. ಶೆಟ್ಟರವರು ಹಿಂದೆ ಒಂದುಸಂದರ್ಭದಲ್ಲಿ, ಸರ್ಕಾರ್ ನೌಕರಿಯನ್ನೇ ನಮ್ಮ ವಿದ್ಯಾರ್ಥಿಗಳು ಅಪೇಕ್ಷಿಸುತ ದೇಶಾಭಿವೃದ್ಧಿಗೆ ಕಾರಣಗಳಾದ ಮಾರ್ಗಗಳನ್ನುಪೇಕ್ಷಿಸುವದು ಅನುಚಿತವೆಂದು ಮಾಡಿದ ಹಿತಬೋಧೆಯು ಇಷ್ಟು ತ್ವರೆಯೊಳು ಅವರಸ್ಮೃತಿ ಪಥದಿಂದ ತೊಲಗಿ ಹೋದದಕ್ಕಾಗಿ ಆಶ್ಚರ್ಯಪಡುವೆವು ಆದರೆ ಇದೆಲ್ಲ ಪರಾರ್ಥವೇ ಹೊರ್ತು ಸ್ವಾರ್ಥವಲ್ಲವೆಂಬದು ಜಗತ್ಪ್ರಸಿದ್ಧವಾದ ವಿಷಯವಾಗಿಯೇ ಇರುತಿದೆ. ಮೆ|| ರಾಯಲುಶೆಟ್ಟರಿಗೆ ಕಲ್ಪಿಸಲ್ಪಟ್ಟಿರುವ ಪ್ರಕೃತ ತಾಬೇದಾರೀಸ್ಥಿತಿಯು ಅವರ ಹುದ್ದೆಗಳ ಅಧಿಕಾರ ಗೌರವ ಪ್ರಾಶಸ್ತ್ಯಗಳಿಗೆ ಸರ್ವಾತ್ಮನಾ ಅನುಗುಣವಲ್ಲದೇಹೋದದಕ್ಕಾಗಿ ವಿಷಾದಿಸುವೆವು.

House breaking and theft.—ಕಳೆದತಿಂಗಳ ೨೭ನೇ ತಾ|| ಮಧ್ಯಾಹ್ನ ಸುಮಾರು ೩½ ಘಂಟೆ ಸಮಯದಲ್ಲಿ ಕೋಟೆಯಲ್ಲಿಯಿರುವ ರಾಘವೇಂದ್ರರಾವು ಯೆಂಬವರ ಮನೆಯ ಬಾಗಿಲ ಬೀಗಾಒಡೆದು ಸದರೀಯವರ ಮನೆಯಲ್ಲಿ ಸುಮಾರು ೬೦ ರೂಪಾಯಿಗಳವರಿಗೂ ಚೋರೀ ಆದ ಸಂಗತಿಯನ್ನು ಈತಿಂಗಳ ೫ನೇ ತಾರೀಖಿನ ಪತ್ರಿಕೆಯಲ್ಲಿ ತಿಳಿಸಿಯಿರುತ್ತೇವೆಯಷ್ಟೆ. ಶಿವಾಯಿ ಮಾಹೇ ಮಜಕೂರು ೧೭ನೇ ತಾರೀಖು ಮಧ್ಯಾಹ್ನ ೩ ಘಂಟೆಯಲ್ಲಿ ಡಿಟೋ ಕೋಟೆಯಲ್ಲಿಯಿರುವ ಪೆನ್ಷನ್ ದಲಾಯತು ನುಜಪ್ಪ ನೆಂಬವನ ಮನೆಯ ಬೀಗಾವಡದು ಸುಮಾರು ೩೦ ರೂಪಾಯಿನ ಒಡವೆಗಳು ವಗೈರೆ ಚೋರೀಆಗಿಯಿರುತ್ತೆ.

ಈ ಕೋಟೆಯಲ್ಲಿ ಪೋಲೀಸ್ ಆಫಸರಾಗಿರುವ ಸಾರ್ಜಂಟಿಯೆಂಬಾತನು ಹೊಸಬನು, ಬಾಕಿಜವಾನರುಗಳು ಆತನಿಗೆ ಯಾವದೊಂದು ಅಲ್ಲಿನ ವಿದ್ಯಮಾನಗಳ ಮಾಹಿತ್ತನ್ನು ಕೊಡದೆ ಪಡೇಪಡೆ ಈಮೇರಿಗೆ ಹಗಲುಹೊತ್ತು ಕಳವುಗಳು ನಡಿಯಲು ಸಾರ್ಜಂಟನ ಸ್ವಂತ ತಪ್ಪಿತದಿಂದ ಆಸ್ಪದವುಂಟಾದಹಾಗೆಯಿದೆ. ಮತ್ತು ಮೇಲ್ಕಂಡ ರಾಘವೇಂದ್ರರಾಯರೆಂಬವರು ತಮ್ಮ ಮನೆಯಲ್ಲಿ ಕಳವುನಡೆದದಿವಸವೂ ಮತ್ತು ಆ ಮಾರನೇದಿವಸವೂ ಪೋಲೀಸಿಗೆ ಅರ್ಜಿಕೊಟ್ಟದ್ದಕ್ಕೆ ಆ ಜವಾಬ್‌ಮಾಡತಕ್ಕದ್ದಕ್ಕೆ ಯಿಷ್ಟೋ ಅಷ್ಟು ಪ್ರಯತ್ನಪಟ್ಟು ತಾನು ಬೀ ರಿಪೋರ್ಟು ಕೊಡತಕ್ಕಮಟ್ಟಿಗೆ ತನ್ನ ಡೈರಿಯಲ್ಲಿ ತನಗೆ ತೋರಿದಂತೆ ಚಿತ್ತುಚಿತ್ತಾಗಿ ಬರದುಕೊಂಡು ಯಿರುತ್ತಾನೆ. ಇದೇಮೇರಿಗೆ ತಿಂಗಳಿಗೆ ೨—೩ ಮೊಕದ್ದಮೆಗಳು ನಡಿಯುತ್ತಲೇಯಿದ್ದರೆ ಬಡವರಾದವರು ಸರಕಾರದ ಬಂದೋಬಸ್ತಿಯನ್ನು ಇನ್ನೆಷ್ಟುವಿಧವಾಗಿ ಕೊಂಡಾಡಿದರೂ ಸಾಲದ್ದಾಗಿರುತ್ತೆ. ಎಂದು ಒಳದೇಶದ ಬಾತಮಿದಾರನು ತಿಳಿಸುತ್ತಾನೆ.

SUMMARY OF NEWS.
ವೃತ್ತಾಂತ ಸಂಗ್ರಹವು.

—— o ——

ಈಗಿನಕಾಲದ ನಮ್ಮಸ್ಥಿತಿಯೂ ಐರ್ಲ್ಯಾಂಡಿನಸ್ಥಿತಿಯೂ ಒಂದೇರೂಪವಾಗಿರುತಿದೆ. ಆದರೆ ಐರ್ಲ್ಯಾಂಡಿನವರು ದುಃಖಗಳನ್ನು ಸಹಿಸಿಸಹಿಸಿ ಬೇಸತ್ತು ಆಗ್ರಹಗೊಂಡಿರುತ್ತಾರೆ ನಾವು ದೀನರಾಗಿರುತ್ತೇವೆ. ಐರ್ಲ್ಯಾಂಡಿನವರಬೆಟ್ಟನ್ನು ತಾಳಲಾರದೆ ಅವರನ್ನು ಶಾಂತಪಡಿಸುವದಕ್ಕೋಸ್ಕರ "ಸ್ವರಾಜ್ಯಾಡಳತದ" ಕಾಯಿದೆಯನ್ನು ಕೊಡಲಿಕ್ಕೆತ್ನಿಸಿದಂತಾ ನಮ್ಮ ಗ್ಲ್ಯಾಡ್‌ಸ್ಟನ್ ಧೊರೆಗಳ "ಲಿಬರಲ್ ಸರಕಾರವು" ದೀನರಾದ ಹಿಂದುಸ್ಥಾನದವರಿಗೆ ಪಾರ್ಲಿಮೆಂಟಿನಲ್ಲಿ ಸ್ಥಳ ಕೊಡದೆ ಯಿರುವದೇ? ಕೊಟ್ಟೇಕೊಡುವದು. ಮತ್ತು ನಾವು ನಮ್ಮ ಹಿಂದುಸ್ಥಾನದಿಂದ ಇದರಸಲವಾಗಿ ವಿಲಾಯತಿಗೆಹೋಗಿ ಪ್ರಯತ್ನಪಡುವವರ ಹೆಸರುಗಳನ್ನು ಮುಂದೆ ಕೂಡುವ ಪಾರ್ಲಿಮೆಂಟಿನವರ ಪಟ್ಟಿಯೊಳಗೆ ಬೇಗನೆ ನೋಡುವೆವು.

—

ಸರ್ ಎಡ್ವಿನ್ ಆರ್ನಾಲ್ಡ್ ಎಂಬವರು ಹಿಂದೂಸ್ತ್ರೀಯರ ಸ್ವಭಾವವನ್ನೂ ಆಚರಣೆಯನ್ನೂ ಕುರಿತು ಈಚೆಗೆ ಬರದಂತೆ ತಮ್ಮ ಅಭಿಪ್ರಾಯವನ್ನು ಪ್ರಸಿದ್ಧಪಡಿಸಿರುತ್ತಾರೆ. ಹಿಂದೂಸ್ತ್ರೀಯರಲ್ಲಿ ಲಕ್ಷಾವಧಿ ಸ್ತ್ರೀಯರು ಸಾದು ಸ್ವಭಾವದವರೂ, ಉದ್ಯೋಗಿಗಳೂ, ವಿಶ್ವಾಸ ಉಳ್ಳವರೂ, ಪವಿತ್ರರೂ, ಸಂತೋಷಿಗಳೂ, ಪ್ರೀತಿವಿಶ್ವಾಸವುಳ್ಳವರೂ ಆಗಿರುತ್ತಾರೆ. ಕೆಲವು ದಿವಸಗಳಲ್ಲಿಯೇ ಅವರಿಗೆ ವಿದ್ಯೆಯು ಪ್ರಾಪ್ತವಾಗಿ ಮಕ್ಕಳ ಸಂರಕ್ಷಣೆಯನ್ನು ಹ್ಯಾಗೆಮಾಡಬೇಕೆಂಬದನ್ನೂ ಮಾನವದೇಹಕ್ಕೆ ಅವಶ್ಯಕವಾಗಿರುವ ಸುಖವನ್ನು ಹ್ಯಾಗೆ ಪಡೆಯಬೇಕೆಂಬದನ್ನೂ ಸಂಪೂರ್ಣವಾಗಿ ತಿಳಿದುಕೊಳ್ಳುವರು, ಹಾಗೆಯೇ ಸ್ತ್ರೀಯರಿಗೆ ಬಾಲ್ಯದಲ್ಲಿ ಅವರ ಇಚ್ಛೆಯವಿರುದ್ಧವಾಗಿ ಲಗ್ನವನ್ನು ಮಾಡಕೂಡದೆಂಬ ಮುಂತಾದ ಹಿಂದೂಧರ್ಮದಲ್ಲಿ ಹೇಳಿದ ನಿಜವಾದ ತತ್ವಗಳನ್ನು ಗೌರವಿಸಿ ಸ್ತ್ರೀಪುರುಷರು ತಮ್ಮತಮ್ಮ ಇಚ್ಛಾನುಸಾರವಾಗಿಯೇ ಲಗ್ನಮಾಡಿಕೊಳ್ಳುವ ಪ್ರಚಾರವನ್ನು ರೂಢಿಯಲ್ಲಿತರುವದರಿಂದ ಹಿಂದೂಜನರಲ್ಲಿ ರಾಜ್ಯಾಡಳತದ ಸೂತ್ರಗಳನ್ನು ತಿಳಿದುಕೊಳ್ಳಲಿಕ್ಕೆ ಸಮರ್ಥರಾದವರು, ಕವಿಗಳು, ಸತ್ಪುರುಷರು, ಕಾರಭಾರಿಗಳು, ಮೊದಲಾದ ಉತ್ತಮೋತ್ತಮರು ಜನಿಸುವರು; ಹಾಗೆಯೇ ಅವರಕೌಶಲ್ಯವನ್ನು ನೋಡಿ ಜಗತ್ತಿನೊಳಗಿನ ಎಲ್ಲಾ ಜನರು ಆಶ್ಚರ್ಯದಿಂದ ಚಕಿತರಾಗಿಹೋಗುವರು ಯೆಂದು ನನಗೆ ತೋರುತಿದೆ.

—

ಮದರಾಸಿನವನಾದ ಒಬ್ಬ ಬ್ರಾಹ್ಮಣನು ಕ್ರಿಸ್ತಧರ್ಮವನ್ನು ಸ್ವೀಕರಿಸಿ ಆರ್ಥರ್ ಕ್ರಿಸ್ಟಿಯೆಂಬ ಹೆಸರನ್ನಿಟ್ಟುಕೊಂಡದ್ದರಿಂದ ಅವನಹೆಂಡತಿಯೂ ತಂದೆತಾಯಿಗಳೂ, ಸಹೋದರರೂ, ಕೂಡಿ ಅವನಿಗೆ ಒಂದುಪೈ ಸಹಾ ಕೊಡದೆ ಘಟಸ್ಫೋಟ ಮಾಡಿ ಹೊರಗೆಹಾಕಿಬಿಟ್ಟರು. ಅನಂತರ ಕಲಕತ್ತೆಯೊಳಗಿರುವ ಕ್ರೈಸ್ತಶಾಲೆಯೊಳಗಿನ ಒಬ್ಬ ಚಿಕ್ಕಹುಡಿಗಿಯು ಅವನ ದಾರಿದ್ರ್ಯವಿಭಾಗಿಯಾಗಲಿಕ್ಕೆ ಒಡಂಬಟ್ಟು ಮದರಾಸಿನಲ್ಲಿ ಅದೇಧರ್ಮಸೂತ್ರಕ್ಕನುಸಾರವಾಗಿ ಅವನಸಂಗಡ ಪಾಣಿಗ್ರಹಣಮಾಡಿಕೊಂಡಳು. ಸುದೈವಯೋಗದಿಂದ ಅವನಕ್ರಮವು ಸಾಫಲ್ಯವಾಗಿ ಮರಣಾಂತ್ಯಕಾಲದಲ್ಲಿ ಅವನಹತ್ತಿರ ೪೦,೦೦೦ ರೂಪಾಯಿ ನಗದುಯಿರುವದನ್ನು ನೋಡಿ, ಅವನು ಜೀವಿಸಿರುವಾಗ ಅವನಕಲ್ಯಾಣದವಿಷಯವಾಗಿ ಒಂದುಶಬ್ದವನ್ನು ಸಹ ಉಚ್ಚರಿಸದೇಯಿದ್ದ ಅವನಮೊದಲನೇಹೆಂಡತಿಯು ತಾನೇ ಆತನ ನಿಜವಾದ ಹೆಂಡತಿಯಾಗಿರುವದರಿಂದ ಅವನ ಆಸ್ತಿಗೆಲ್ಲ ತಾನೇಬಾಧ್ಯಸ್ತಳಾಗಿರುವದಲ್ಲದೆ, ಎರಡನೇಲಗ್ನವು ಕಾಯಿದೆಗೆ ವಿರುದ್ಧವಾಗಿರುತ್ತದಾದ್ದರಿಂದ ತನ್ನ ಗಂಡನಹತ್ತರಯಿರುವ ಎಲ್ಲಾ ಹಣವು ತನಗೇ ಸೇರತಕ್ಕದಾಗಿರುತ್ತದೆಂದು ಈಗ ಕೋರ್ಟಿನಲ್ಲಿ ದಾವೆ ಮಾಡಿರುತ್ತಾಳಂತೆ. ಹಣ ಕಂಡರೆ ಹೆಣವಾದರೂ ಬಾಯಿತೆರೆಯುವದೇಎಂಬಗಾದೆಯು ಸುಳ್ಳಲ್ಲವು

ದೇಶೋಪಕಾರಿಯಾದನಾಯಿಯ ಮೃತ್ಯು— ಶಿರಶೀ ತಾಲೂಕು ಬನವಾಶಿಯಲ್ಲಿ ಬಹು ಜನೋಪಕಾರಿಯಾದ ಒಂದುನಾಯಿಇತ್ತು. ಅದರ ಗುಣವು ಬಹಳ ಶ್ಲಾಘ್ಯವಾದದ್ದಾದಕಾರಣ ನಿತ್ಯದಲ್ಲೂ ಅದಕ್ಕೆ ಶ್ರೀಮಧುಕೇಶ್ವರದೇವಾಲಯದಿಂದ ಅನ್ನಸಿಕ್ಕುತ್ತಿತ್ತು. ಬನವಾಶಿಯಲ್ಲಿ ಸಣ್ಣಸಣ್ಣ ಹುಡುಗರು ಊಟಕ್ಕೆಕೂತರೆ ಯಾರಾದರೂ ಮನೆಯ ಪ್ರಬುದ್ಧಜನರು ಮಂಗಗಳ ಬಾಧೆಯ ಸಂಬಂಧ ಕಾಯಬೇಕಾಗಿತ್ತು. ಈನಾಯಿಯು ಆ ಊರಿನಲ್ಲಿ ಶೇರಿದ್ದುಮೊದಲು ಈಗ ೩ ವರುಷಗಳಲ್ಲಿ ಎಲ್ಲಾ ಮಂಗಗಳನ್ನು ನಾಶಪಡಿಸಿದ್ದಲ್ಲದೆ ಅಲ್ಲಿನ ಜನರಿಗೆ ಪ್ರತಿ ವರುಷಕ್ಕೆ ಈ ಮಂಗಗಳ ಬಾಧೆಯಿಂದ ನಷ್ಟವಾಗುವ ೧—೧½ ಸಾವಿರ ರೂಪಾಯಿಯ ಸಾಮಾನುಗಳು ಉಳಿಯುತ್ತಿದ್ದವು. ಈನಾಯಿಯು ಮಂಗಗಳಂತೆ ೧೦–೧೨ ಮಾರುಗಳ ದೂರದ ವರಿಗೆ ಜಿಗಿದು ಹಾರುತ್ತಿತ್ತು. ಇಂತಾ ಉಪಕಾರಿಯಾದ ಶೂರನಾಯಿಯನ್ನು ನಿಷ್ಕರುಣಿಯಾದ ಒಬ್ಬ ಪೋಲಿಸ ಸಿಪಾಯಿಯು ಮೇ ೧೬ನೇ ತಾ|| ದಿವಸ ಗುಂಡು ಹಾಕಿ ಹೊಡದನಂತೆ. ಆಗ ಈ ನಾಯಿಯನ್ನು ಹೊಡದ ವರ್ತಮಾನಕೇಳಿ ಊರೊಳಗಿನ ಸುಮಾರು ೩೦೦–೪೦೦ ಜನರು ಕನಿಕರಪಟ್ಟು ಶವವನ್ನು ನೋಡಲಿಕ್ಕೆ ಹೋಗಿದ್ದರು. ಮತ್ತು ಅದರ ಮರಣಕ್ಕಾಗಿ ಅಲ್ಲಿನ ಆಬಾಲ ವೃದ್ಧರು ಸಹಿತವಾಗಿ ವ್ಯಸನ ಪಡುವದಲ್ಲದೆ ಆ ಸಿಪಾಯಿಯಮೇಲೆ ಭಯಂಕರ ಸಪ ಮಾಡುವ ಸುಚನ ಉಂಟೆಂಬ ತೋರುತಿದೆ. ವಾಚಕರೇ! ಪರೋಪಕಾರಿಯಾದ ಮತ್ತು ನಿರಪರಾಧಿಯಾದ ಪ್ರಾಣಿಯ ನಾಶಕ್ಕೆ ಯಾರು ಸಂತೋಷ ಪಟ್ಟಾರು?

—

ಸ್ವಲ್ಪದಿನಗಳ ಹಿಂದೆ ಒಬ್ಬ ಹೆಂಗಸು ತನ್ನ ಚಿಕ್ಕ ಕೂಸನ್ನು ಸಂಗಡಕರೆದುಕೊಂಡು ಲುತಾ ಎಂಬ ಸ್ಥಳದಿಂದ ತಂದೆಯಮನೆಗೆ ಹೋಗುವಾಗ ಅದೇಮಾರ್ಗವಿಡಿದು ಹೋಗುವ ಒಬ್ಬ ಗಾಡಿಯವನು ಸ್ವಲ್ಪ ಬಾಡಿಗೆ ತೆಗದುಕೊಂಡು ಇವರನ್ನು ಆ ಹಳ್ಳಿಗೆ ಮುಟ್ಟಿಸುವದಕ್ಕೆ ಒಡಂಬಟ್ಟದ್ದರಿಂದ ಅವನ ಗಾಡಿಯಮೇಲೆ ಕೂತುಕೊಳ್ಳಲು, ಕೆಲವುಹೊತ್ತಿನಮೇಲೆ ತಾಯಿಯೂ ಮಗುವೂ ನಿದ್ದೆಹೋದದ್ದನ್ನು ನೋಡಿ ಅವಳಮೈಮೇಲಿರುವ ಒಡವೆಗಳನ್ನು ಸುಲಿದುಕೊಳ್ಳಬೇಕೆಂಬ ಇಚ್ಛೆಯಿಂದ ಆ ಗಾಡಿಯವನು ತನ್ನ ಗಾಡಿಯನ್ನು ಒಂದುಗುಡ್ಡಕ್ಕೆ ಹೊಡೆದುಕೊಂಡು ಹೋಗಿ ಅವಳನ್ನೆಬ್ಬಿಸಿ ನಿನ್ನ ಬಂಗಾರವನ್ನು ಕೊಡದಿದ್ದರೆ ನಿನ್ನಂ ಕೊಂದುಹಾಕುವೆನೆಂದು ಹೇಳಲು ಅವಳ್ಳೊಡಂಬಟ್ಟಾಗ್ಯೂ ಗಾಡಿಯವನಿಗೆ ತೃಪ್ತಿಯಾಗದ್ದರಿಂದ ನಿನ್ನಂ ಕೊಲ್ಲುವೆನೆಂಬ ಅಂಜಿಕೆಯನ್ನು ತೋರಿಸಲೋಸುಗ ತನ್ನಕೊಡಲಿಯಂ ಮೇಲಕ್ಕೆತ್ತಲು ಕೆಳಗೆಬಿದ್ದುಹೋಯಿತು. ಅದನ್ನು ತೆಗೆದುಕೊಂಡು ಮತ್ತೊಂದುಸಲ ಮೇಲಕ್ಕೆತ್ತಲು ಆಗಲೂ ಸಮೀಪದಲ್ಲಿರುವ ನೀರಿನಹಳ್ಳದಲ್ಲಿ ಬಿದ್ದುಹೋಯಿತು. ಅದನ್ನು ಸಂಪಾದಿಸುವದಕ್ಕೋಸ್ಕರ ಅವನು ನೀರಿನಲ್ಲಿ ಕೈಹಾಕಲು ಒಂದು ನಾಗರಹಾವು ಅವನ ಕೈಬೆರಳನ್ನು ಕಡಿದದ್ದರಿಂದ ಆಕ್ರೂರ ಘಾತಕಿಯು ತತ್ಕಾಲವೇ ಕಾಲನಪುರಿಗೆ ತೆರಳಿದನು. ತಾಯಿಯೂ ಮಗುವೂ ಬದುಕಿದೆವೆಂದು ತಂದೆಯಮನೆಯನ್ನು ಶೇರಿಕೊಂಡರು. ಪರರ ಕೇಡನ್ನು ಬಯಸುವವರು ಇಂದುದಿನವಲ್ಲದಿದ್ದರೆ ಒಂದುದಿನವಾದರೂ ಮಹಾನರ್ಥಕ್ಕೆ ಗುರಿಯಾಗದೇ ಇರಲಾರರು.

—

ಮುಖ್ಯ ಪ್ರಧಾನಿಗಳಾದ ಗ್ಲಾಡಸ್ಟನ್ ದೊರೆಗಳು ಅನೇಕವರುಷಗಳಮೊದಲು ಪರಾಧೀನದಲ್ಲಿ ಬಂದಬಳಲುವ ಐರ್ಲೆಂಡ್‌ದೇಶದವರಿಗೆ ಸ್ವತಂತ್ರ ಪಾರ್ಲಿಮೆಂಟಕೊಡುವಬಗ್ಯಾಗಿ ಮಾಡಿದ ಕಾಯಿದೆಯ ಮಸೂದೆಯವಿಷಯದಲ್ಲಿ ಚರ್ಚೆನಡೆದು ಕಟ್ಟಕಡೆಗೆ ಆ ಮಸೂದೆಯು ಬಹುಮತವಿಲ್ಲದೆ ಕಳೆದ ಸೋಮವಾರದದಿವಸ ತಳ್ಳಿಹಾಕಲ್ಪಟ್ಟತು. ಗ್ಲ್ಯಾಡಸ್ಟನ್‌ದೊರೆಗಳ ಮತವನ್ನು ಅನುಸರಿಸಿದವರ ಸಂಖ್ಯೆಯು ೩೧೧ ವಿರೋಧಮತದವರ ಸಂಖ್ಯೆಯು ೪೪೧ ಈರೀತಿ ಇರುತಿತ್ತು. ವಿರೋಧಮತದವರಲ್ಲಿ ಗ್ಲ್ಯಾಡಸ್ಟನ್‌ಧೊರೆಗಳ ಲಿಬರಲ್ ಪಕ್ಷದವರೇ ೯೪ಜನರು ಇರುತಿದ್ದರು. ಲಿಬರಲ್ ಎಂಬ ಹೆಸರಿನಿಂದ ಔದಾರ್ಯದ ಭಾವನೆ ಹುಟ್ಟುವದರಿಂದ ಈ ಭಾವನೆಗೆ ವಿರೋಧವಾದ ಮತವನ್ನು ಈಪಕ್ಷದವರು ಅಂಗೀಕರಿಸಿದ್ದು ಆಶ್ಚರ್ಯವೇ. ಬಾಯಿಯಿಂದ ಔದಾರ್ಯ ತೋರಿಸುವಷ್ಟು ಕಾರ್ಯದಿಂದ ತೋರಿಸುವದು ಸುಲಭವಲ್ಲವೆಂಬದಕ್ಕೆ ಇದೇ ದೃಷ್ಟಾಂತವಾಗಿರುತಿದೆ. ಇಂಗ್ಲಿಷ್ ಜನರ ಧರ್ಮವನ್ನು ಅನುಸರಿಸುವ ಮತ್ತು ಇವರ ನೆರೆಹೊರೆಯವರಾಗಿರುವ ಐರ್ಲೆಂಡ್ ಜನರ ಸ್ಥಿತಿಯು ಹೀಗಾದಮೇಲೆ ಭಿನ್ನಮತದವರಾಗಿಯೂ ಭಿನ್ನ ದೇಶೀಯರಾಗಿಯೂ ಇರುವ ನಮಗೆ ವಿಶೇಷ ಸ್ವಾತಂತ್ರ್ಯವನ್ನು ಕೊಡುವ ಆಲೋಚನೆಯು ಹ್ಯಾಗೆ ಹುಟ್ಟೀತು? ಇರಲಿ; ನಾವು ಮೇಲೆಹೇಳಿದ ಕಾಯಿದೆಯ ಮಸೂದೆಯು ತಳ್ಳಿಹಾಕಲ್ಪಟ್ಟಕಾರಣ ಪಾರ್ಲಿಮೆಂಟನ್ನು ವಿಸರ್ಜಿಸಿ ಮೆಂಬರನ್ನು ಹೊಸದಾಗಿಆರಿಸಬೇಕೆಂತನಿಶ್ಚಯವಾಗಿದೆ. ಈಗಲಾದರೂ ನಮ್ಮದೇಶ ಬಾಂಧವರಾದ ಮಿಸ್ಟರ್ ಲಾಲ್‌ಮೋಹನಘೋಸ್ ಎಂಬವರು ಮೆಂಬರಾಗಿ ಆರಿಸಲ್ಪಟ್ಟರೆ ಹಿಂದುಸ್ಥಾನಕ್ಕೆ ಸಂಬಂಧವಾದ ವಿಷಯಗಳು ಈಗಿನಷ್ಟು ಉಪೇಕ್ಷಿಸಲ್ಪಡದೆ ನಾವುಪಡುವ ಹಲವುತರದ ಸಂಕಟಗಳು ಪರಿಹಾರವಾಗಲಿಕ್ಕೆ ಸಾಧನವಾದೀತೆಂದು ನಂಬುತ್ತೇವೆ.

—

ನಾಯಿಯಸ್ವಾಮಿಭಕ್ತಿ—ಲೋಕದೊಳಗಿರುವ ಸರ್ವಪ್ರಾಣಿಗಳಲ್ಲಿ ನಾಯಿಯಂತಾ ವಿಶ್ವಾಸವುಳ್ಳ ಪ್ರಾಣಿಯು ಇನ್ಯಾವದೂ ಇರಲಿಕ್ಕಿಲ್ಲ, ಅದು ತನ್ನಕರ್ತವ್ಯವನ್ನು ಕೇವಲ ಸ್ವಾಮಿಭಕ್ತಿಯಿಂದ ನೆರವೇರಿಸುತ್ತದೆಂದು ನಾವು ಅನೇಕ ಉದಾಹರಣೆಗಳನ್ನು ಕಂಡು ಕೇಳಿರುತ್ತೇವೆ. ಮತ್ತು ಈಗ ಈಚೆಗಿನ ಸಂಗತಿಯು ಸಹ ಅದಕ್ಕನುಸಾರವಾದ್ದಾಗಿರುತಿದೆ ಅದೇನಂದರೆ,—ಯೂರೋಪಖಂಡದಲ್ಲಿ ಒಬ್ಬ ಕೂಲಿಹೆಂಗಸು ಒಂದುಹೆಣ್ಣುನಾಯಿಯನ್ನು ಸಾಕುತಿದ್ದಳು. ಅವಳಿಗೆ ಒಂದುವರ್ಷದ ಗಂಡುಕೂಸುಯಿತ್ತು. ಅವಳು ತನ್ನಕೂಸನ್ನು ಮಲಗಿಸಿ ಸಮಾಧಾನಪಡಿಸಿ ಹಾಸಿ ಹೊದ್ದಿಸಿ ಮಲಗಿಸಿ ನಾಯಿಯನ್ನು ಮನೆಕಾವಲಿಗಿಟ್ಟು ಕೂಲಿಕೆಲಸಕ್ಕೆಹೋಗುತ್ತಿದ್ದಳು. ಆಕೆಯು ಬರುವವರಿಗೂ ಆ ಕೂಸು ಅಳುತ್ತಿದ್ದಿಲ್ಲವೆಂಬದೊಂದು ಕೇವಲ ಆಶ್ಚರ್ಯಪಡತಕ್ಕದ್ದಾಗಿದೆ ಅಂದರೆ ಮಧ್ಯೆ ಒಂದುದಿವಸ ಏನೋನಿಮಿತ್ತದಿಂದ ಅಳಲಾರಂಬಿಸಿತು. ಆಗ ಸಮೀಪದೊಳಿದ್ದ ಆನಾಯಿಯು ಅಳುತಿದ್ದ ಸದರೀ ಮಗುವಿಗೆ ತನ್ನ ಮೊಲೆಯನ್ನುಣ್ಣಿಸಿತು. ಇದೇಪ್ರಕಾರ ಎಷ್ಟೋದಿವಸಗಳ ತನಕ ನಡೆಯುತಲಿತ್ತು. ಒಂದುದಿವಸ ಇದನ್ನು ನೆರೆಮನೆಯ ಒಬ್ಬಗೃಹಸ್ಥನುಕಂಡು ತನ್ನ ಸ್ನೇಹಿತರಿಗೂ ನೆರೆಹೊರೆಯವರಿಗೂ ತಿಳಿಸಿದನು ಆಗ ಅವರೆಲ್ಲರೂ ಸೌಖ್ಯದಿಂದ ಮರುದಿವಸ ಬಂದುನೋಡಲು ಈ ಚಮತ್ಕಾರವಾದಸಂಗತಿಯು ಅನುಭವಕ್ಕೆಬಂತು. ನಾಯಿಯ ಸ್ವಾಮಿಭಕ್ತಿಯೂ ಆಕೂಸಿನಮೇಲಿನ ಪ್ರೀತಿಯೂ ನಿಜವಾಗಿ ಕೊಂಡಾಡತಕ್ಕದ್ದಾಗಿದೆ

THE MYSORE GAZETTE
ಮೈಸೂರು ಗೆಜೆಟ.

ಶ್ರೀಮನ್ಮಹಾರಾಜ ರಾಜಾಶ್ರೀಸಾಹೇಬ್ ಬಹದೂರವರ ದಿವಾನರವರಿಂದ ಕೊಡಲ್ಪಟ್ಟಾದ ಇಸ್ತಿಹಾರ್ನಾಮೆಗಳು

ನಂ, ೯೦. ತಾರೀಖ್ ೫ನೇ ಜೂನ್ ೧೮೮೬ ೧೮೮೧ನೇ ಇಸವಿಯ ಆಗಸ್ಟ್ ೨೯ನೇ ಮುಕ್ಕಾಂ ೪೪೬೧—೧೨೩ ನೇ ನಂಬರುಳ್ಳ ಮತ್ತು ೧೮೮೧ ನೇ ಇಸವಿಯ ಡಿಸೆಂಬರ್ ೭ನೇ ತಾರೀಖುಳ್ಳ ೩೧೬೨-೯—೨೧೯ ನೇ ನಂಬರುಳ್ಳ ದಿವಾನರವರ ಪ್ರೊಸೀಡಿಂಗಸಿನ ೬ನೇ ಕಲಂಗಳಲ್ಲಿ ಅಡಗಿರತಕ್ಕ ತರೀ ಜಮೀನುಗಳ ಕಂದಾಯದಪೈಕಿ ಕೆಲವುಭಾಗ ರಿಮಿಷನ್ ಮಾಡುವದನ್ನು ಕುರಿತ ಹುಕುಂಗಳು ರದ್ದುಮಾಡಲ್ಪಟ್ಟು ಅವುಗಳಿಗೆ ಬದಲಾಗಿ, ೮೬ ೮೭ನೇ ಬಾಲ್ತಿಸಾಲಿನಲ್ಲಿ ಅನುಸರಿಸತಕ್ಕಬಗ್ಯೆ ಇದರಡಿಕಂಡ ನಿಬಂಧನೆಗಳು ಮಂಜೂರ್ಮಾಡಲ್ಪಟ್ಟಿರುತಿವೆ. ೮೫—೮೬ನೇ ಸಾಲಿನ ಲೆಕ್ಕಕ್ಕಾದರೂ, ಅಥವಾ ೮೬—೮೭ನೇ ಸಾಲಿನ ಲೆಕ್ಕಕ್ಕಾದರೂ, ಅದರಕಂದಾಯವು ದಾಖಲಾದಾಗ್ಯೂ, ತತ್ಕಾಲದಲ್ಲಿ ವ್ಯವಸಾಯಫಸಲ್ ಸಾಗುವಳಿಯಾಗಿರತಕ್ಕ ತಮಾಂ ತರೀಜಮೀನುಗಳಿಗೆ ಸಹ ಮೇಲಿನ ನಿಬಂಧನೆಗಳು ಅನ್ವಯಿಸುತಿವೆ.

೧. ೧೮೮೧ನೇ ಇಸವಿಯ ಆಗಸ್ಟ್ ೩೦ನೇ ಮುಕ್ಕಾಂ ೧೪೧ನೇ ನಂಬರುಳ್ಳ ದಿವಾನರವರ ಇಸ್ತಿಹಾರನಾಮೆಯು ೮೬ನೇ ಏಪ್ರಿಲ್ ಗುರ್ರೇ ಲಾಗಾಯತು ಇದರಿಂದ ರದ್ದುಮಾಡಲ್ಪಟ್ಟರುತಿದೆ.

೨. ಕೆರೆ ಯಾ ಇತರ ಜಲಾಧಾರಗಳು ಒಡೆದುಹೋಗಿಯಾಗಲಿ, ಅಥವಾ ಇತರವಿಧ ಅಪಾಯದಿಂದಲಾಗಲಿ, ನೀರಾವರಿಗೆ ಅನುಪಯುಕ್ತವಾದಾಗ ಅಂತಾಕೆರೆಯ ಅಥವಾ ಇತರವಿಧ ಜಲಾಧಾರಗಳ ಆಸರೆಯೊಳರತಕ್ಕ ಜಮೀನುಗಳಿಗೆ ತರೀ ಕಂದಾಯವು, ಒಡೆದುಹೋದ ಯಾ ಇತರ ಅಪಾಯ ಸಂಭವಿಸಿದ ಸರ್ಕಾರಿಸಾಲಿಗೆ ಸಾಮಾನ್ಯವಾಗಿ ರಿಮಿಷನ್ ಕೊಡಲ್ಪಡತಕೂಡದು. ಅಂತಾ ಸಂವತ್ಸರದಲ್ಲಿ ಕಂದಾಯದಪೈಕಿ ಕೆಲವುಭಾಗ ರಿಮಿಷನ್ ಕೊಡಬೇಕಾದ್ದು ಅವಶ್ಯಕವೆಂದು ಡೆಪ್ಯುಟೀ ಕಮ್ಮಿಷನರಿಗೆ ತೋರುವಂತಾ ವಿಶೇಷ ಸಂದರ್ಭಗಳಲ್ಲಿ ದಿವಾನರವರ ಹುಕುಂಬಗ್ಯೆ ಕಳುಹಿಸತಕ್ಕದ್ದು.

೩. ಪರಂತು ಯಿರತನೆಯ ಮುಂದಿನಸಾಲಿಗಳಲ್ಲಿ ಸದರೀಕೆರೆ ಯಾ ಇತರ ಜಲಾಧಾರಗಳು ದುರಸ್ತಾಗದೆಯೂ, ಅನುಪಯುಕ್ತವಾಗಿಯೂ ಇದ್ದರೆ, ತರೀ ಪೂರಾ ಕಂದಾಯದ ಪೈಕಿ ಅರ್ಧಭಾಗ ಕಮ್ಮಿಕಂದಾಯವನ್ನು ಮಾತ್ರವೇ ಹುಗಾಮಿಯಾಗಿ ಬಂಜರ್ ಕಂದಾಯ ತರೀಕ್ ವಸೂಲ್ಮಾಡಲ್ಪಟ್ಟು, ಯಾವದಾದರು ಖುಷ್ಕೀ ಫಸಲ್ ಇಡಲ್ಪಟ್ಟದ್ದಾಗ್ಯೂ ಅದಕ್ಕೆ ಸಂಬಂಧಿಸದಂತೆ ಮಿಕ್ಕ ಅರ್ಧಭಾಗವನ್ನು ರಿಮಿಷನ್ ಕೊಟ್ಟಂತೆ ಲೆಕ್ಕದಲ್ಲಿ ತೋರಿಸತಕ್ಕದ್ದು.

೪. ಕೆರೆ ವಗೈರೆ ಒಡೆದುಹೋಗಿದ್ದಾಗ್ಯೂ, ಅಥವಾ ಇತರವಿಧ ಅಪಾಯ ಪ್ರಾಪ್ತವಾಗಿದ್ದಾಗ್ಯೂ ಜಮೀನುಗಳ ಸ್ಥಿತಿಯನ್ನನುಸರಿಸಿ, ಅವು ತರೀ ಸಾಗುವಳೀಗೆ ಲಾಯಖಾದವಾಗಿದ್ದರೆ ಹಿಂದಿನ ರೂಲ್ಸಿನಲ್ಲಿ ನಮೂದಾಗಿರುವ ಕಂದಾಯದ ರಿಯಾಯತಿಗೆ ಅವು ಅರ್ಹವಾಗಲಾರವು.

೫ ಒಡೆದುಹೋದ ಅಥವಾ ಇತರ ಅಪಾಯ ಪ್ರಾಪ್ತವಾದ ಮಾರನೆಯವರುಷದಲ್ಲಿ ಡೆಪ್ಯುಟೀಕಮ್ಮಿಷನರಾಗಲಿ, ಅವರ ಅಸಿಸ್ಟೆಂಟರುಗಳಪೈಕಿಯೊಬ್ಬರಾಗಲಿ, ಸಾಗುವಳೀಕಾಲದಲ್ಲಿ ಖುದ್ದು ಅಜಮಾಯಿಷೀಮಾಡಿದಬಳಿಕ ಮೂರನೇ ರೂಲನ್ನನುಸರಿಸಿ ಹುಗಾಮಿಯಾಗಿ ಕಂದಾಯವನ್ನು ಕಡಮೆಮಾಡಲಿಕ್ಕೆ ಯಾವಜಮೀನುಗಳು ಲಾಯಖಾಗಿವೆಯೋ ಅದನ್ನೊಂದೇಬಾರ್ ಆಖೈರಾಗಿ ನಿರ್ಧರಿಸಬಹುದು.

೬. ಹುಗಾಮಿಯಾಗಿ ಕಡಮೆ ಮಾಡಲ್ಪಟ್ಟ ಈಕಂದಾಯವು, ಜಲಾಧಾರಗಳು ಗವರ್ನಮೆಂಟಿನವರಿಂದ ಮರಳಿ ದುರಸ್ತುಮಾಡಲ್ಪಡುವವರೆಗೆ ಪ್ರತಿ ಜಮಾಬಂದಿ ಪೈಸಲಾತಿಯೊಳು ಅಂಗೀಕರಿಸಲ್ಪಟ್ಟು, ಜಮಾಬಂದಿ ಫೈಸಲ್ ಆದಕೂಡಲೇ ಸಾಧ್ಯವಾದಷ್ಟು ತ್ವರೆಯೊಳು ಇದಕ್ಕೆ ಲಗ್ಗತ್ತಾಗಿರುವ ನಮೂನೆಯಂತೆ ಅದರ ಬಾಬತು ಒಂದು ತಖ್ತೆಯನ್ನು ತಯಾರ್ಮಾಡಿ ದಿವಾನರ ಚೀಫ್ ಸೆಕ್ರೆಟರಿಯವರಿಗೆ ಕಳುಹಿಸತಕ್ಕದ್ದು.

೭. ಮೇಲೆಕಂಡ ನಿಬಂಧನೆಗಳಿಗೆ ಒಳಪಡದ ಸಂದರ್ಭಗಳಲ್ಲಿ ಮುಂದಾಗಿ ಗವರ್ನಮೆಂಟಿನವರ ಅನುಮತಿಯಂ ಪಡೆದಹೊರ್ತು ರಿಮಿಷನ್ ಕೊಡಲ್ಪಡಕೂಡದು.

೮. ಜಲಾಧಾರಗಳ ಉಪಯುಕ್ತತೆಯನ್ನು ಆಲೋಚಿಸಿಯೂ ಬೆಳೆಯಾದ ಅಥವಾ ಆಗದಸಾಲಗಳ ಸರಾಸರಿಯ ಆಧಾರದಮೇಲೂ ಈಗಿರತಕ್ಕ ತರೀ ಕಂದಾಯದ ದರವು ರಾವ್ ಮಾಡಲ್ಪಟ್ಟರುತಿದೆ. ಜಮೀನುಗಳು ಬಂಜರಾಗಿರುತವೆಂಬ ಕಾರಣದಮೇಲೆ ಈದರಗಳು ಕಮ್ಮಿಮಾಡಲ್ಪಡಕೂಡದು.

೯. ಯಾವಾಗಲಾದರೂ ಅಲ್ಪವೃಷ್ಟಿಯಿಂದ ನಷ್ಟಪಟ್ಟ ಗೊತ್ತಾದ ಜಮೀನುಗಳ ಕಂದಾಯದಲ್ಲಿ ವಿಶೇಷತಃ ರಿಮಿಷನ್ ಕೊಡುವಂತೆ ಹುಕುಂಮಾಡುವ ಅಧಿಕಾರವು ಗವರ್ನಮೆಂಟಿನವರದಾಗಿರುತಿದೆ.

BANGALORE—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಣಾಮವಿನಿವೃತ್ತ್ಯಭ್ಯುದಯನಗವಾರ್ತ್ವ ಕರ್ನ್ಯಾಟಕಪ್ರಕಾಶನವರಾಭಿದಾಪ್ರಥಿತಸಾಹಿತೀಶೋಭಿತಾ ॥ ಪ್ಯಗಾಂಕಹಿತವಾಸರೆನಿಹಿತಮುದ್ರಣಾಸಜ್ಜನೈರ್ದ್ದಿಕಾಸುಪರಿಪೋಷಿತಾದಿಶಿಶಿಮಾನಸುಸುಮದಂ

Vol XIII] BANGALORE—MONDAY, JUNE 28, 1886. [No. 26.

ಸಂಪುಟ ೧೩.] ಬೆಂಗಳೂರು—ಸನ್ ೧೮೮೬ನೇ ಇಸವಿ ಜೂನ್ ೨೮ನೇ ತಾರೀಖ್ ಸೋಮವಾರ. [ಸಂಚಿಕೆ ೨೬.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲೀಷ್ ಮತ್ತು ಕನ್ನಡ ತಿಳಿದುಕೊಳ್ಳತಕ್ಕವರಿಗೆ, ವರುಷ ೧ಕ್ಕೆ ... ... ೧೨—೦—೦

ಇಂಗ್ಲೀಷು ಮಾತ್ರ ತಿಳಿದುಕೊಳ್ಳತಕ್ಕವರಿಗೆ ವರುಷ ೧ಕ್ಕೆ ... ... ೬—೦—೦

ಕನ್ನಡ ಮಾತ್ರ ತಿಳಿದುಕೊಳ್ಳತಕ್ಕವರಿಗೆ ಪಾ[illegible] ಮೇರೆ ವರುಷಕ್ಕೆ, ... ೬—೦—೦

ಬಿಂಗಿ ... ೧ಕ್ಕೆ ೦—೮—೦

ಕುರು.—ಚಂದಾದಾರರು ಇಂಗ್ಲೀಷ್ ಕಾಗದವನ್ನಾಗಲಿ, ಕನ್ನಡ ಕಾಗದವನ್ನಾಗಲಿ ಅಥವಾ, ಎರಡನ್ನಾಗಲಿ ತಿಳಿದುಕೊಳ್ಳಬಹುದು [illegible] ಸ್ಪಷ್ಟ ಬರೆಯಬೇಕು

ಪ್ರಕಟನೆಯ ರಿವಾಜ್.

ಇಂಗ್ಲೀಷಿನ ಕಾಲಮ್ಮಿಗೆ ... ೧ಕ್ಕೆ ೦—೨—೦

ಕನ್ನಡದ ಕಾಲಮ್ಮಿಗೆ ... ೧ಕ್ಕೆ ೦—೧—೨

NOTICE TO SUBSCRIBERS

ಇದರಲ್ಲಿ ತಿಳಿಸಲ್ಪಡುವ ಅಂಶಗಳಿಗೆ ನಮ್ಮ ಚಂದಾದಾರರು ದಯವಿಟ್ಟು ಗಮನಕೊಡಬೇಕೆಂದು ಕೋರುತ್ತೇವೆ. ಏನೆಂದರೆ —

೧. ಕರ್ಣಾಟಕ ಪ್ರಕಾಶಿಕೆಯ ಚಂದಾಹಣವನ್ನಾಗಲಿ [illegible] ಕಳುಹಿಸತಕ್ಕವರು [illegible] ಕಛೇರಿಗೆ ಕಳುಹಿಸಬೇಕು. [illegible] ಕಳುಹಿಸಲ್ಪಡುತ್ತದೆ.

೨. ನೋಟುಗಳನ್ನು ಕಳುಹಿಸತಕ್ಕವರು ಅರ್ಧ ನೋಟನ್ನು ಕಳುಹಿಸಿದ್ದು ಉಳಿದ ಅರ್ಧನೋಟು [illegible] ಕಳುಹಿಸತಕ್ಕದ್ದು.

೩. [illegible] ರೂ॥ ೧ಕ್ಕೆ [illegible] ಕಳುಹಿಸತಕ್ಕದ್ದು.

೪. [illegible] ಡಿಸೆಂಬರ್ [illegible] ಡಿಸೆಂಬರ್ [illegible]

NOTICE.

VAIDYASARA SANGRAHA.

Price including Postage, Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥವು [illegible] ಬರೆದು [illegible] ಪುಸ್ತಕ [illegible]

ಗ್ರಂಥ [illegible] ... ... ರೂ॥ ೫—೦—೦

ಅಂಚೆ ಮತ್ತು ಅಂಚೇಖರ್ಚು ... ೦—[illegible]—೦

ಎ. ಡಿ. ವೆಂಕಟಾದ್ರಿ, ಅಸಿಸ್ಟೆಂಟ್ ಸರ್ಜನ್, ಬೆಂಗಳೂರು

ನೋಟೀಸ್.

ಇದರಲ್ಲಿ ವಿವರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ಕ್ರಯಕ್ಕೆ ಸಿಕ್ಕುವುವು,—

ಕನ್ನಡ ಟೀಕಾಸಹಿತವಾದ ಸಂಸ್ಕೃತ ಗ್ರಂಥಗಳು.

ಕಾಲಾಮೃತ. ...	೧—೮—೦
ಮುಹೂರ್ತದರ್ಪಣ ...	೦—೧೨—೦
ಭಗವದ್ಗೀತಾ (ಷಟ್ಸಂಪುಟ) ...	೦—೩—೦
[illegible] ...	೦—೫—೦
ಬಾಲರಾಮಾಯಣ ...	೦—೪—೦
[illegible]	೦—೧೮—೦
[illegible] ...	೦—೬—೦
ಬಾಲಗ್ರಹ	೦—೭—೦
ವೈದ್ಯಸಾರಸಂಗ್ರಹ ...	೫—೦—೦

ಕನ್ನಡ ಗ್ರಂಥಗಳು.

[illegible] ...	೦—೬—೦
[illegible] ...	೦—೪—೦
[illegible] ..	೦—೯—೦
[illegible]	೦—೨—೬
[illegible] ...	೦—೪—೨
[illegible] . .	೦—೩—೨
[illegible] ...	೦—೨—೬
[illegible] ...	೦—೬—೦
[illegible] ...	೦—೩—೦
[illegible]	೦—೨—೦
[illegible] ...	೦—೦—೩
ಇಂಗ್ಲೀಷ್ ಕನ್ನಡ [illegible]	೧—೨—೦
[illegible]	೨—೦—೦
[illegible] ...	೦—೧೨—೦
[illegible] ...	೩—೪—೬
[illegible] ...	೩—೪—೬
[illegible] ೧ನೇ ಸಂಚಿಕೆ. ...	೦—೮—೦
[illegible] ೨ನೇ ಸಂಚಿಕೆ.	೦—೮—೦
[illegible] ...	೦—೮—೦

ಸಂಸ್ಕೃತ ಮೂಲಗ್ರಂಥಗಳು

ವಿಷ್ಣುಸಹಸ್ರನಾಮ . .	೦—೫—೦
[illegible] ...	೦—೨—೩
ಕೃಷ್ಣಕರ್ಣಾಮೃತ. ...	೦—೬—೩
ಬಾಲರಾಮಾಯಣ ...	೦—೦—೬
ಶ್ರೀಕಾಂಡ [illegible] ...	೦—೩—೬
೧ ಕಾಂಡ [illegible] ...	೦—೧—೦

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ಅತೀವ ವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

ಪ್ರಕಟನೆ

ಬೆಂಗಳೂರು ಶಹರ್ ಮ್ಯೂನಿಸಿಪಾಲಿಟಿ.

ಸನ್ ೧೮೮೬ನೇ ಇಸವಿ ಜೂನ್ ೨೯ನೇ ತಾರೀಖ್ ಮಂಗಳವಾರದದಿನ ಪ್ರಾತಃಕಾಲ ೭½ ಘಂಟೆಗೆ, ಸಿಟಿ ಮ್ಯೂನಿಸಿಪಲ್ ಕಮಿಷನರ್‌ಗಳು, ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡದಲ್ಲಿನ ತಮ್ಮ ಆಫೀಸಿನಲ್ಲಿ ಆರ್ಡಿನರೀ ಮೀಟಿಂಗ್ ಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳ ಪಟ್ಟಿ.

೧. ಸನ್ ೧೮೮೬ನೇ ಮೇ ತಿಂಗಳ ಬಾಬತು ಚಾಲ್ತೀ ನಗದು ಜಮಾಖರ್ಚು ಲೆಕ್ಕಗಳು, ಈಗ ನಡೆಯುತಲಿರುವ ಕಾಮಗಾರೀಗಳನ್ನು ಕುರಿತ ರಿಪೋರ್ಟ್, ಮತ್ತು ಮರಣ ಲೆಕ್ಕಗಳು.

೨. ಸಿಟಿ ಮ್ಯೂನಿಸಿಪಾಲಿಟಿಯ ಸನ್ ೧೮೮೫-೮೬ನೇ ಸರ್ಕಾರಿ ಸಾಲಿನ ಬಾಬತು ಸಾಲ್‌ಝಾಡೇ ಜಮಾಖರ್ಚು ಲೆಕ್ಕಗಳು.

೩. ಮ್ಯೂನಿಸಿಪಲ್ ತೋಟದಲ್ಲಿ ಸಣ್ಣದಾಗಿ ಒಂದು ಬ್ಯಾಂಡ್ ಸ್ಟ್ಯಾಂಡ್ ಕಟ್ಟಿಸಬೇಕೆಂದು ಸೂಚಿಸಿ, ೧ನೇ ಡಿವಿಜನ್ ಮ್ಯೂನಿಸಿಪಲ್ ಕಮಿಷನರಾದ ಮೆ॥ ಏ. ಎಸ್. ರಾಘವಾಚಾರ್ಯರವರು ೧೮೮೬ನೇ ಇಸವಿ ಜೂನ್ ೧೧ನೇ ತಾರೀಖಿನಲ್ಲಿ ಬರೆದ ಲೆಟರ್

೪. ಸಿವಿಲ್ ನ ಮಿಲಿಟರಿ ಸ್ಟೇಷನ್ ಸರಹದ್ದಿನೊಳಗೆ ಅಕ್ಟ್ರಾಯಿ ತೆರಿಗೆಯನ್ನು ವಜಾ ಮಾಡಬೇಕಾದ ವಿಷಯದಲ್ಲಿ ಸದರೀ ಮ್ಯೂನಿಸಿಪಾಲಿಟಿಯವರು ಈಚೆಗೆ ಮಾಡಿದ ನಿರ್ಣಯವನ್ನು ನಮೂದಿಸಿ ಅಲ್ಲಿನ ಮ್ಯೂನಿಸಿಪಲ್ ಪ್ರೆಸಿಡೆಂಟರವರು ಬರೆದ ೨೩೨ನೇ ನುಬರ್ ಲೆಟರ್.

೫ ಸಾಬಕ್ ಕೃಷ್ಣಮನಾಯುಡರವರ ಬಂಗ್ಲೆ ಕಂಪೌಂಡಿನಿಂದ ಉತ್ತರಕ್ಕಾಗಿ, ತೋಟಗಳ ಮೇಲೂ ಖುಷ್ಕೀ ಜಮೀನುಗಳ ಮೇಲೂ ಹೊರಟು ಸುಬೇದಾರ್ ಸತ್ರದ ರಸ್ತೆಗೆ ಸಮನಾಗಿ, ಹಳೇ ಬಬಿಸ್ ಪಕ್ಕದಲ್ಲಿ ಹೊಸದಾಗಿ ಹಾಕಲ್ಪಡುತಲಿರುವ ರಸ್ತೆಯೊಡನೆ ಸೇರುವಂತೆ, ಹೊಸದಾಗಿ ಒಂದು ರಸ್ತೆಯನ್ನು ಹಾಕುವಣ; ಮ್ಯೂನಿಸಿಪಲ್ ರೆಗ್ಯುಲೇಷನಿನ ೯೭ನೇ ಸೆಕ್ಷನ್ ನಿಯಮನ್ನನುಸರಿಸಿ, ಸದರೀ ಕೆಲಸಕ್ಕೆ ಬೇಕಾದ ಜಮೀನುಗಳನ್ನು ಖರೀದಿಗೆ ತೆಗದುಕೊಳ್ಳುವದಕ್ಕೆ ಸಾಧ್ಯವಾಗದ ಪಕ್ಷಕ್ಕೆ, ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ ನಿಬಂಧನೆಯನ್ನನುಸರಿಸಿ ಅದನ್ನು ಪಡೆಯುವಣ; ಮತ್ತು ಸದರೀ ಆಕ್ಟು ಯಾ ರೆಗ್ಯುಲೇಷನ್ ಪ್ರಕಾರ, ಈಗ ಯೋಚಿಸಲ್ಪಟ್ಟಿರುವ ರಸ್ತೆಯ ಪಕ್ಕದಲ್ಲಿರುವ ಖುಷ್ಕೀ ಜಮೀನುಗಳ ಪೈಕಿ ಒಂದುಭಾಗದಲ್ಲಿ ಈಗ ಕೊರಚರು ಗುಡುಸಲುಗಳು ಹಾಕಿಕೊಂಡಿರುವದು ನೋಡುವದಕ್ಕೆ ಬಹಳ ಅಸಹ್ಯವಾಗಿರುವದರಿಂದ ಜನಾರೋಗ್ಯವನ್ನು ಯೋಚಿಸಿ ಸದರೀ ಜಮೀನುಗಳನ್ನು ಪಡಕೊಳ್ಳುವಣ, ಇವುಗಳನ್ನು ಕುರಿತ ಅಂಶಗಳು.

ಬೆಂಗಳೂರು, ೨೬ನೇ ಜೂನ್ ೧೮೮೬.

A. Srinivasa Charlu,
Vice-President.
City Municipal Commission

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JUNE 28, 1886.
೧೮೮೬ನೇ ಜೂನ್ ೨೮ನೇ ತಾ॥ ಸೋಮವಾರ.

THE MAHARAJA OF GWALIOR

ಘನವನ್ನು ಹೊಂದಿದ ಮುಖ್ತ್ಯಾರ್ ಉಲ್ ಮುಲಿಕ್, ಅಜೀಮುಲ್, ಯಖ್ತ್ಯಾರ್, ರಾಫಿಯುಸ್ ಷಾನ್‌ವಾಲಾ, ಹಿಶೋ ಮೊಹತಾಷಾಮ್ಮೆ, ದೌರಾಂ, ಉಮದತುಲ್ ಉಂರಾ ಮಹಾರಾಜಾಧಿರಾಜ ಅಲಿಜಾ, ಹಿಸಾಮುಸ್ ಸಲ್ ತನತ್, ಶ್ರೀನಾಥ ಮನ್ಸೂರ್, ಜಾಮದ್ ಫಿದವಿ ಇಹಜರತ್‌ಮಲಿಕಾ ಮೌಜಾಮಾ ರಫಿಯಾದ್ ದರ್ಜಾ ಇಂಗ್ಲಿಸ್ತಾನ್, ಜಯಾಜೀರಾವ್ ಸಿಂಧಿಯಾ ಮಹಾರಾಜರವರು ಸಹ ಹೋಳ್ಕರ್ ಮಹಾರಾಜರವರಂತೆ ಈಗ್ಯೆ ಕೆಲವುಕಾಲದಿಂದ ಬಹಳ ಸೌಖ್ಯಸ್ಥಿತಿಯೊಳಿರುತಲಿದ್ದರಷ್ಟೆ. ಇವರು ಮಾಹೇ ಮಜಕೂರ್ ೨೨ನೇ ತಾರೀಖ್ ಭಾನುವಾರದದಿನ ಕಾಲಗತಿಯುಕ್ತರಾದರೆಂದ ವೃತ್ತಾಂತವು ಕೇಳಿ ಬಹಳ ವಿಷಾದಿಸುತ್ತೇವೆ. ಒಂದುವಾರದೊಳಗಾಗಿ ಪ್ರಬಲರಾದ ಇಬ್ಬರು ಮಹಾರಾಷ್ಟ್ರ ಸಂಸ್ಥಾನಾಧಿಪತಿಗಳು ಹೀಗೆ ಗತಿಸಿದ್ದು ಈ ಇಂಡ್ಯಾದೇಶಕ್ಕೆ ಪ್ರಬಲ ನಷ್ಟರೂಪವಾದದ್ದಾಗಿರುತಿದೆ. ಈ ಮಹಾರಾಜರುಗಳ ಪೂರ್ವ ವೃತ್ತಾಂತವನ್ನು ಈ ಸಂದರ್ಭದಲ್ಲಿ ಬಹುಜನಗಳು ತಿಳಯಲಪೇಕ್ಷಿಸುವದಾಗಿ ಅದನ್ನಿದರಡಿ ಸಂಗ್ರಹವಾಗಿ ತಿಳಸುವೆವೆಂತೆನೆ.

೧೮೪೩ನೇ ಇಸವಿಯಲ್ಲಿ ಜನಕೋಜೀ ರಾಯರವರು ಮೃತಪಟ್ಟ ತರುವಾಯ, ಅವರ ಧರ್ಮಪತ್ನಿಯಾದ ತಾರಾಬಾಯಿ ಯೆಂಬಾಕೆಯು ಸಂಸ್ಥಾನದೊಳಗಣ ಬಹುಮಂದಿ ದೊಡ್ಡಮನುಷ್ಯರ ಅನುಮತಿಯಮೇಲೆ ತನ್ನ ಪತಿಯ ಸನ್ನಿಹಿತಬಂಧುವಾದ ಹನುಮಂತರಾಯರ ಪುತ್ರರಾದ ಭಗೀರಥರಾಯರನ್ನು ಸ್ವೀಕಾರ ಮಾಡಿಕೊಳ್ಳಲು ಅದನ್ನು ಬ್ರಿಟಿಷ್ ಗವರ್ನಮೆಂಟನವರು ಮಂಜೂರ್ಮಾಡಿ ಮಹಾರಾಜಾ ಅಲಿಜಾಜಯಾಜೀರಾವ್ ಸಿಂಧಿಯಾ ಎಂಬ ಪ್ರಶಸ್ತಿಯೊಡನೆ ಸ್ವೀಕೃತಪುತ್ರರಿಗೆ ರಾಜ್ಯವನ್ನೊಪ್ಪಿಸಿದರಲ್ಲದೆ ಬಾಲ್ಯದಶೆಯಲ್ಲಿ ಮಹಾರಾಜರಿಗೆ ಮಾಮಾ ಸಾಹೆಬರನ್ನು ರೀಜೆಂಟರಾಗಿ ಮೊಕರರ್‌ಮಾಡಿದರು. ತರುವಾಯ ತಾರಾಬಾಯಿಯವರು ಸಂಸ್ಥಾನದೊಳು ಪ್ರಮುಖನಾಗಿದ್ದ ದಾದಾ ಖಾಸ್‌ಜೀವಾಲಾಯೆಂಬಾತನೊಡನೆ ಸೇರಿಕೊಂಡು ರೀಜೆಂಟರಮೇಲೆ ಫಿತೂರೀಮಾಡಲಿಕ್ಕೆ ಪ್ರಾರಂಭಿಸಲು, ಗವರ್ನಮೆಂಟನವರು, ಮಾಮಾಸಾಹೆಬನ್ನು ಕೆಲಸದಿಂದನಿವೃತ್ತಿಮಾಡಿ ದಾದಾಖಾಸ ಜೀವಾಲಾಯೆಂಬಾತನನ್ನು ರೀಜೆಂಟಾಗಿ ಮೊಕರರ್‌ಮಾಡಿದರು. ಈತನು ಯಾವಾಗಲೂ ಕಲಹಪ್ರಿಯನಾಗಿದ್ದದರಿಂದ ಇವನ ಧಾಂಧಲೆಯದೆಸೆಯಿಂದ ಬ್ರಿಟಿಷ್ ಗವರ್ನಮೆಂಟನವರು ದಂಡೋಪಾಯದಿಂ ಪ್ರವೇಶಿಸಿ ಕ್ರಮಪಡಿಸಬೇಕಾಗಿಬಂತು. ೧೮೪೪ನೇ ಇಸವಿಯ ಜನವರಿ ೧೩ನೇ ತಾರೀಖಿನಲ್ಲಿ, ಆಗ್ಯೆ ವೈಸ್‌ರಾಯಿಯವರಾಗಿದ್ದ ಲಾರ್ಡ್ ಯೆಲಂಬರೋ ಯವರು ಬಾಲಕರಾಗಿದ್ದ ಮಹಾರಾಜರೊಡನೆ ಒಡಂಬಡಿಕೆ ಮಾಡಿಕೊಂಡರು. ಸದರೀ ತಹನಾಮೆಯ ಪ್ರಕಾರ, ಗ್ವಾಲಿಯರ್‌ರಾಜ್ಯದ ಆಧಿಪತ್ಯವು ಸಿಂಧಿಯಾಯವರಿಗೆ ಮತ್ತೆ ಒಪ್ಪಿಸಲ್ಪಟ್ಟು ಅವರ

ಪ್ರಾಪ್ತವಯಸ್ಕರಾಗುವತನಕ ಸಂಸ್ಥಾನದ ಆಡಳಿತವೆಲ್ಲವೂ ಬ್ರಿಟಿಷ್ ಗವರ್ನಮೆಂಟಿನವರಿಂದ ನೇಮಕರಾದ ರೀಜೆಂಟರ ಸಲಹೆಯಂತೆ ನಡೆಸಲ್ಪಡುತಲಿದ್ದವು. ಗ್ವಾಲಿಯರ್‌ರಾಜ್ಯದ ಪಕ್ಕದಾರಿಯನ್ನು ಕಾಪಾಡುವಂತೆ ಬ್ರಿಟಿಷ್ ಸರ್ಕಾರದವರು ಪ್ರತಿಜ್ಞೆಮಾಡಿದರಾಗಿ ಆಬಗ್ಯೆ ಕಂಟಿಂಜೆಂಟ್ ಸೈನ್ಯದ ಸಂರಕ್ಷಣೆಗಾಗಿ, ಸಾಲೀಯಾನಾ ೧೮ ಲಕ್ಷರೂಪಾಯಿಗಳತನಕ ಹುಟ್ಟುವಳಿಯಾಗತಕ್ಕ ಪ್ರದೇಶವು ಗವರ್ನಮೆಂಟಿನವರಿಗೆ ಬಿಟ್ಟುಕೊಡಲ್ಪಟ್ಟಿತಲ್ಲದೆ ಕೊಡಬೇಕಾಗಿದ್ದ ಸಾಲಕ್ಕಾಗಿಯೂ, ಯುದ್ಧಖರ್ಚಿಗಾಗಿಯೂ, ಬೇರೆಪರ್ಗಣಗಳು ಸಹ ಕೊಡಲ್ಪಟ್ಟವು. ಸಂಸ್ಥಾನದ ಸೈನ್ಯವು ಆರುಸಾವಿರಕ್ಕೆ ತಗ್ಗಿಸಲ್ಪಟ್ಟಿತು. ಈವಿಧವಾದ ಒಡಂಬಡಿಕೆಯು ದೇಶದೊಳು ಸರ್ವತ್ರ ಸುಖ ಸಮಾಧಾನಗಳನ್ನೂ ಅಭಿವೃದ್ಧವಾದ ರಾಜ್ಯತಂತ್ರಕ್ರಮವನ್ನೂ ನೆಲಗೊಳಿಸಿತು. ೧೮೪೪ನೇ ಇಸವಿಯ ಮೊದಲು ೫೨ನೇ ಇಸವಿಯ ತನಕ ಯಾವವಿಧ ಗದ್ದಲಕ್ಕೂ ಅವಕಾಶವಿಲ್ಲದೆಯಿತ್ತು. ಬಾಲ್ಯಾರಭ್ಯ ಮಹಾರಾಜರವರು ಯುದ್ಧಸಂಬಂಧವಾದ ವಿಷಯಗಳಲ್ಲಿ ಉತ್ಸಾಹವೂ, ಅಭಿರುಚಿಯೂ ತಿಳುವಳಿಕೆಯೂ ಉಳ್ಳವರಾಗಿದ್ದರು. ಮಹಾರಾಜರವರು ವರ್ತಿಸುತಲಿದ್ದ ಕ್ರಮವು ಲಕ್ಷಣಯವಾದದ್ದಾಗಿಯೂ ವಿಶೇಷ ಹಾನಿಕರವಾದದ್ದಾಗಿಯೂ ಇದ್ದರೂ ಅವರಿಗೆ ಪ್ರಾಪ್ತವಾಗಿದ್ದ ಶ್ಲಾಘ್ಯವಾದ ಸಹವಾಸ ಗುಣದಿಂದ ಒಂದೂ ಮುಂದಿಗೆ ಬಾರದೆಹೋಯಿತು. ಸರ್ ದಿನಕರರಾಯರವರು ಮಂತ್ರಿಯಾಗಿದ್ದದರಿಂದ ಅವರು ದೇಶಕ್ಷೇಮಾಭಿವೃದ್ಧಿಯಲ್ಲಿ ನಿರೂಢವಾದ ಒಳ್ಳೇಯತಾತ್ಪರ್ಯವುಳ್ಳವರನ್ನೆಲ್ಲ ಮಹಾರಾಜಾಸ್ಥಾನದೊಳು ಸೇರಿಸಿದರಲ್ಲದೆ ಅವರ ವರ್ತನವನ್ನು ಸಹ ಬಹಳಮಟ್ಟಿಗೆ ಅಭಿವೃದ್ಧಿಪಡಿಸಿದರು. ಮಹಾರಾಜರವರ ಸುಗುಣದಿಂದಲೂ, ಅವರ ದಿವಾನರ ಸಾಮರ್ಥ್ಯದಿಂದಲೂ, ಪೊಲಿಟಿಕಲ್ ಏಜಂಟರ ಸುಶೀಲತೆಯಿಂದಲೂ, ಸಹ ಈ ಸಂಸ್ಥಾನದಲ್ಲಿ ಸಂಪೂರ್ಣವಾದ ಪರಸ್ಪರ ಮೈತ್ರಿಯು ನೆಲಗೊಂಡಿತ್ತು. ಈ ಮಹಾರಾಜರವರು ಬ್ರಿಟಿಷ್ ಗವರ್ನಮೆಂಟಿನವರ ಪ್ರೀತಿ ಗೌರವಗಳಿಗೆ ಪಾತ್ರರಾಗಿಯೂ, ಧನ್ಯವಾದ ರಾಜಭಕ್ತಿಯುಳ್ಳವರಾಗಿಯೂ, ತಮ್ಮ ಪದವಿಯ ಸ್ವರೂಪವನ್ನು ಅರಿತು ವರ್ತಿಸತಕ್ಕವರಾಗಿಯೂ, ಧೀರರಾಗಿಯೂ ಇದ್ದದರಿಂದ ಇವರ ಹೆಸರು ಅನ್ಯರಿಗೆ ಸ್ವಲ್ಪಅಂಜಿಕೆಯನ್ನು ಹುಟ್ಟಿಸತಕ್ಕದ್ದಾಗಿತ್ತು. ವಯೋವೃದ್ಧರಾದ ಇವರು ಗತಿಸಿದ್ದರಿಂದ ಇನ್ನು ಆರಾಜ್ಯದಲ್ಲಿ ನಾನಾವಿಧ ಬದಲಾವಣೆಗಳು ಯೇರ್ಪಡಲಿಕ್ಕೂ, ಬಹುವಿಧ ನಿರ್ಬಂಧಗಳು ತಲೆದೋರಲಿಕ್ಕೂ, ಕಂಡವರೆಲ್ಲ ಪ್ರವೇಶಿಸಿ ಮನಸ್ವೀದಾಂಧಲೆಗಳನ್ನು ಮಾಡಲಿಕ್ಕೂ ಅವಕಾಶವಾಯಿತು. ಈಗ ಗತಿಸಿದ ಮಹಾರಾಜರವರಿಗೆ ಔರಸ ಪುತ್ರರಿರುತ್ತಾರೆ. ಇವರಿಗೆ ಶೀಘ್ರದಲ್ಲಿ ಪಟ್ಟಾಭಿಷೇಕವು ಜರುಗಬಹುದೆಂದೆಣಿಸುತ್ತೇವೆ. ೧೮೪೪ನೇ ಇಸವಿಯಲ್ಲಿ ಜಸವಂತರಾಯರವರು ಮೃತಪಡಲು, ಗತಿಸಿದ ಮಹಾರಾಜರಾದ ತುಕೋಜಿರಾವ್ ಹೋಳಕರರವರು ಪಟ್ಟಾಭಿಷಿಕ್ತರಾದರು. ಇವರ ಸಿಂಹಾಸನಾರೋಹಣಕ್ಕೆ ಪೂರ್ವದಲ್ಲಿ ಇಂದೂರ್‌ರಾಜ್ಯವು ಕಲಹಗಳಿಗೆ ಆವಾಸಸ್ಥಾನವಾಗಿಯೂ, ಪಿಂಡಾರಿಯವರ ಲೂಟಿಗೆ ಜನ್ಮಭೂಮಿಯಾಗಿಯೂ, ಜಾತಿ ಮತಪ್ರಯುಕ್ತಗಳಾದ ರಾಗದ್ವೇಷಗಳಿಗೆ ಉತ್ಪತ್ತಿಸ್ಥಾನವಾಗಿಯೂ, ಪಿತೂರಿಗಳಿಗೆ ನಿಯತಪ್ರದೇಶವಾಗಿಯೂ ಇತ್ತು. ಜಸವಂತರಾಯರ ತರುವಾಯ ಅವರ ಭಾರ್ಯೆಯು ಹಂಗಾಮಿಯಾಗಿ ರೀಜಂಟ್ ತರಹ ಕೆಲವುಕಾಲ ಪ್ರಭುತ್ವಮಾಡುತಲಿದ್ದಾಗ್ಯೆ ಆಕೆಯ ಮನಸ್ಥಿತಿಯು ದುರ್ಬಲವಾಗುತ ಬಂದಮೇಲೆ ಬ್ರಿಟಿಷ್ ಗವರ್ನಮೆಂಟಿನವರು ಪ್ರವೇಶಿಸಿ ಮಹಾರಾಣೀಯವರ ಕೋರಿಕೆಯ ಪ್ರಕಾರ ಅಲ್ಲಿನ ಆಡಳಿತಗಳನ್ನೆಲ್ಲ ತಹಬಂದಿಗೆ ತಂದರು. ಪೂರ್ವದ ಮಹಾರಾಜರೆಲ್ಲರೂ, ಸಂತತಿ ಹೀನರಾಗಿ ಮೃತರಾದ ದರಿಂದ ೧೮೪೪ನೇ ಇಸವಿಯೊಳು ಸಂಸ್ಥಾನಕ್ಕೊಬ್ಬ ವಾರಸುದಾರನನ್ನು ಏರ್ಪಡಿಸಿ ನೇಮಕರಮಾಡುವಭಾರವು ಇಂಗ್ಲಿಷರವರಿಗೆ ಸೇರಿದ್ದಾಗಿತ್ತು. ಆಗ್ಯೆ ಹನ್ನೊಂದುವರುಷಗಳವಯಸ್ಸುಳ್ಳ ಮತ್ತು ಭಾವ್‌ಯೆಂಬವರ ದ್ವಿತೀಯ ಪುತ್ರರಾದ ಪ್ರಸಕ್ತ ಮಹಾರಾಜರನ್ನು ಚುನಾಯಿಸಿ ನೇಮಕರಮಾಡಿದರು. ಇವರ ಬಾಲ್ಯದ ಕಾಲದಲ್ಲಿ ಪ್ರಭುತ್ವವು ಒಬ್ಬ ರೀಜಂಟರಿಂದ ನಡೆಸಲ್ಪಡುತಲಿತ್ತು. ೧೮೫೨ನೇ ಇಸವಿಯಲ್ಲಿ ಮಹಾರಾಜರವರು ಪ್ರಾಪ್ತವಯಸ್ಕರಾಗಲು, ಸಂಸ್ಥಾನದ ಆಧಿಪತ್ಯವು ಅವರಿಗೆ ಕ್ರಮವಾಗಿ ಒಪ್ಪಿಸಲ್ಪಟ್ಟಿತು. ಅದುಮೊದಲು ಇದುವರಿವಿಗೂ ಬ್ರಿಟಿಷ್ ಗವರ್ನಮೆಂಟಿನವರ ಸಂಬಂಧ ವಿಷಯದಲ್ಲಿ ಯಾವ ವ್ಯತ್ಯಾಸವೂ ಹುಟ್ಟಾಗಲಿಲ್ಲವು. ೧೮೫೭ನೇ ಇಸವಿಯಲ್ಲಿ ನಡೆದ ಕಲಹಕಾಲದೊಳು ಸಂಸ್ಥಾನಕ್ಕೆ ಸೇರಿದ ಬಹುಮಂದಿ ಸೈನಿಕರು ಬ್ರಿಟಿಷ್ ಗವರ್ನಮೆಂಟಿನವರಮೇಲೆ ತಿರುಗಿಬಿದ್ದರು. ಅಂತಾ ಸಂದರ್ಭದೊಳು ಸಹ ಹೋಳ್ಕರ್ ಮಹಾರಾಜರವರು ಅರಮನೆಯಲ್ಲಿ ಬೈದಿನೊಳಗಲ್ಪಟ್ಟು ಅವರ ಪ್ರಾಣದವಿಷಯದಲ್ಲಿ ಆಗಿಂದಾಗ್ಯೆ ಬೆದರಿಸಲ್ಪಡುತಲಿದ್ದಾಗ್ಯೂ ರಾಜಭಕ್ತಿಯೊಡನೆ ಚಲಿಸದೆಯಿದ್ದರು. ಬಳಿಕ ಕೆಲವು ವಾರಗಳೊಳಗಾಗಿ ಸೈನಿಕರು ತಮ್ಮಲ್ಲಿ ಯುದ್ಧಗಳಿಂ ಸೋತು ಶರಣಾಗತರಾದದರಿಂದ ಕೂಡಲೇ ರಾಜ್ಯವು ಪೂರ್ವದಂತೆ ಕ್ರಮಪಟ್ಟಿತು. ಇಂದೂರ್‌ರಾಜ್ಯವು ಯೆಂಟುಸಾವಿರ ಸಲ ಮೈಲುಗಳ ವಿಸ್ತೀರ್ಣವುಳ್ಳದ್ದಾಗಿಯೂ, ೬,೫೦,೦೦೦ ಪ್ರಜಾ ಸಂಖ್ಯೆಯುಳ್ಳದ್ದಾಗಿಯೂ ಇರುತ್ತದೆ. ಈರಾಜ್ಯದ ಕೆಲವುಭಾಗಗಳು ವಿಂಧ್ಯಪರ್ವತ ಪಂಕ್ತಿಗೆ ಸೇರಿರುವದರಿಂದ ಅಲ್ಲಿ ಭೀಲ್ಸ್ ಯೆಂಬ ಆರಣ್ಯಕರು ಕಾಯಮಾಗಿ ವಾಸಿಸುತಲಿದ್ದಾರೆ. ಗತಿಸಿದ ಮಹಾರಾಜರವರ ಪ್ರಭುತ್ವದ ಆದಿಭಾಗದಲ್ಲಿ ಇವರ ವರ್ತನವು ದುಸ್ಸಹವಾದದ್ದಾಗಿದ್ದು ಕ್ರಮೇಣ ಬಂದೋಬಸ್ತಿಯೂ ಸಮಾಧಾನವೂ ಅಭಿವೃದ್ಧಿಯಾಗಿ ಸರ್ವತ್ರ ನೆಲಗೊಳ್ಳುತಬಂದದರಿಂದ ಭೀಲ್ಸ್ ಜನಗಳು ಸಹ ತಮ್ಮ ಸ್ವಾಭಾವಿಕ ವೃತ್ತಿಯನ್ನಗಲಿ ಉಪಶಾಂತರಾದರು. ಹೋಳ್ಕರರವರ ರಾಜ್ಯವು ಸ್ವಭಾವತಃ ಫಲವತ್ತಾದ ದೇಶವಾಗಿರುತ್ತದೆ. ಗತಿಸಿದ ಮಹಾರಾಜರವರ ವಿವೇಕಪೂರ್ವಕವಾದ ಪ್ರಭುತ್ವದಲ್ಲಿ ವ್ಯವಸಾಯವು ಬಹಳಮಟ್ಟಿಗೆ ಅಭಿವೃದ್ಧಿಯನ್ನೈದಿತು. ಇದಲ್ಲದೆ ಅರಳೇ ಕಾರ್ಖಾನೆಯೇರ್ಪಟ್ಟು ಅದರಮೂಲಕ ವಿಶೇಷವ್ಯಾಪಾರನಡೆಯುತಬರುತ್ತಿದೆ. ರಾಜಧಾನಿಯಲ್ಲಿ ಪ್ರಬಲವಾದ ಒಂದು ವೈದ್ಯಶಾಲೆಯೂ ಒಂದು ಕುಷ್ಠರೋಗ ಚಿಕಿತ್ಸಾಶಾಲೆಯೂ ಏರ್ಪಟ್ಟು ಅದ್ಯಾಪಿ ಸರ್ಕಾರದವರಪೋಷಣೆಯೊಳಿರುತಲಿವೆ. ಸಂಸ್ಥಾನದಿಂದ ಅನೇಕಪಾಠಶಾಲೆಗಳು ಸಹಾಯದ್ರವ್ಯಗಳಂಪಡೆದು ಉತ್ತಮಸ್ಥಿತಿಯೊಳಿವೆಯಲ್ಲದೆ ರಾಜಪುತ್ರರು ವಗೈರೇರಿಗಾಗಿ ಉದ್ದಿಷ್ಟವಾದ ರಾಜಕುಮಾರ್ ಕಾಲೇಜ್ ಸಹ ಅಲ್ಲೇ ನೆಲಗೊಂಡಿರುತ್ತದೆ. ಈ ಕಾಲೇಜನ್ನು ಹೋಳ್ಕರ್ ಸರ್ಕಾರದವರು ಇತರಾಪೇಕ್ಷೆಯಾ ವಿಶೇಷತಃ ಸಂರಕ್ಷಿಸುತಲಿದ್ದಾರೆ. ಸಾಬಕ ಮಹಾರಾಜರವರು ಸ್ವತಂತ್ರವಾದ ಮಿಲಿಟರಿ ಸೈನ್ಯವನ್ನಿಟ್ಟುಕೊಂಡಿದ್ದರಲ್ಲದೆ ಇವರಿಗೆ ಸದಾಕಾಲದೊಳಗೆಲ್ಲ ಗೌರವಾರ್ಥ ಸ್ವರಾಜ್ಯದಲ್ಲಿ ೨೧ ತೋಫೆಗಳೂ ಬ್ರಿಟಿಷ್‌ರಾಜ್ಯದಲ್ಲಿ ೧೯ ತೋಫೆಗಳೂ ಹಾಕಲ್ಪಡುತಲಿದ್ದವು. ಈ ಮಹಾರಾಜರವರು ಬ್ರಿಟಿಷ್ ಗವರ್ನಮೆಂಟಿನವರಲ್ಲಿ ಅಂತರವಾದ ಭಕ್ತಿ ಗೌರವಗಳುಳ್ಳವರಾಗಿದ್ದರು. ಇವಲ್ಲದೆ ಪೂರ್ವಸಂಪ್ರದಾಯಗಳಲ್ಲಿ ಅಭಿಮಾನವುಳ್ಳವರಾಗಿಯೂ, ದೈವಭಕ್ತಿಯುಳ್ಳವರಾಗಿಯೂ ಯಿದ್ದರು. ಮುಖ್ಯವಾಗಿ ಬ್ರಿಟಿಷ್ ಗವರ್ನಮೆಂಟಿನ ಪೋಷಣೆಗೊಳಪಟ್ಟ ನೇಟಿವ್ ಸಂಸ್ಥಾನಗಳ ಪೈಕಿ ಇಂದೂರ್ ಗ್ವಾಲಿಯರ್, ಈ ಯೆರಡೂ ಪ್ರಬಲವಾದದ್ದಾಗಿಯೂ, ಬೇಕಾದಾಗ ಗವರ್ನಮೆಂಟಿನವರಿಗೆ ಅರ್ಥ ಮತ್ತು ಸೈನ್ಯಮೂಲಕವಾಗಿ ಸಹಾಯಮಾಡುವದಕ್ಕೆ ಶಕ್ತವಾದದ್ದಾಗಿಯೂ ಇರುತ್ತವೆ. ಈ ಯೆರಡು ಸಂಸ್ಥಾನಾಧಿಪತಿಗಳು ಪುತ್ರವಂತರಾಗಿ ಗತಿಸಿದ್ದರಿಂದ ನೇಟಿವ್ ಪ್ರಭುತ್ವವು ನೆಲಗೊಂಡಿರುವದೆಂದು ಎಣಿಸಲಿಕ್ಕೆ ಕಾರಣವಾಯಿತು. ಮುಖ್ಯವಾಗಿ ಪ್ರಬಲಗಾದ ಸವರೀ ಇಬ್ಬರನಷ್ಟವು ಚಿರಸ್ಮರಣೀಯವಾದದ್ದಾಗಿರುತ್ತದೆ.

THE ASHTAGRAM DIVISION SESSIONS JUDGESHIP

ಅಷ್ಟಗ್ರಾಮ ಡಿವಿಜನ್ ಸೆಷನ್ಸ್ ಜಡ್ಜೀಕೆಲಸಕ್ಕೆ ಮದರಾಸ್ ಪ್ರೆಸಿಡೆನ್ಸಿಗೆ ಸೇರಿದವರೊಬ್ಬರು ಬರುವರೆಂದು ಕೇಳುತ್ತೇವೆ. ಇವರು, ಹಿಂದೆಯೇ ಒಂದುಸಂದರ್ಭದಲ್ಲಿ ಈ ದೇಶಕ್ಕೆ ಬರುವ ಸಂಭವವಿದ್ದದರಿಂದ ಇದನ್ನು ನಿರಾಧಾರವೆಂದು ಎಣಿಸಕೂಡದ್ದಾಗಿದೆ. ತಿರುವಾಂಕೂರು ಹೈಕೋರ್ಟ್ ಎರಡನೆಯ ಜಡ್ಜಿಯರಾದ ಮೆ|| ಆರ್ಮ್ಸ್‌ಬೀಯವರು ಸೆಷನ್ ಜಡ್ಜೀಕೆಲಸಕ್ಕೆ ಅರ್ಹರೆಂಬದಾಗಿ ಅವರ ಶೀಲಸ್ವಭಾವಗಳನ್ನರಿತಿರುವ ಒಬ್ಬ ದೊಡ್ಡಮನುಷ್ಯರು ದಿವಾನರವರಿಗೆ ಸಿಫಾರಸ್ಸು ಮಾಡಿದಮೇಲೆ ಮೆಸ್ಟರ್ ಆರ್ಮ್ಸ್‌ಬೀಯವರ ಅಭಿಪ್ರಾಯವು ಕೇಳಲ್ಪಟ್ಟದೆಯಂತೆ. ಮೆ|| ಆರ್ಮ್ಸ್‌ಬೀಯವರಿಗೆ ಈಗ ಮಾಹೆಯಾನಾ, ೯೦೦ ರೂಪಾಯಿಗಳು ಸಲ್ಲುತ್ತಿದೆ. ಇಲ್ಲಿಗೆ ನೂರು ರೂಪಾಯಿಗಳ ಜಾಸ್ತಿಗೆ ಬರುವರೇನು ಎಂದು ಆಲೋಚಿಸಿದರೆ, ಮೆ|| ಪ್ರಸ್ತುತವಿರುವ ಉದ್ಯೋಗಕಾಲವು ಪೆನ್ಷನ್ನಿಗೆ ಇನ್ನು ಎರಡುವರುಷಗಳಿರುವದರಿಂದ, ಅವರು ನಿವೃತ್ತರಾದಕೂಡಲೇ ಪೆನ್ಶನು ಮೆ|| ಆರ್ಮ್ಸ್‌ಬೀಯವರಿಗೆ ಕೊಡಲ್ಪಡುವದೆಂಬ ಭರವಸೆಯಮೇಲೆ ಬಂದುವೇಳೆ ಈಕೆಲಸವನ್ನು ಅವರು ಅಂಗೀಕರಿಸಿ ಇಲ್ಲಿಗೆಬಂದಾಗ್ಯೂ ಬರಬಹುದೆಂದು ತೋರುತ್ತದೆ. ಮೇಲೆಕಂಡ ಅಂಶವು ಪ್ರಾಯಶಃ ನಿಜವಾಗಿಯೇ ಯಿರಬಹುದೆಂದೆಣಿಸುತ್ತೇವೆ. ಒಬ್ಬ ಯೂರೋಪಿಯನ್‌ರನ್ನು ಕರೆಸುವಪಕ್ಷದಲ್ಲಿ ಇಲ್ಲಿನಕೆಲಸಗಳಿಗೆ ಹೊಸದಾಗಿ ಕರೆಸುತ್ತಾರೆಂಬ ಅಪವಾದವು ಗವರ್ನಮೆಂಟಿನವರಿಗೆ ತಪ್ಪಲಾರದು. ಈರಾಜ್ಯವು ನೇಟಿವ್‌ಪರರದಾದ್ದರಿಂದ ಇಲ್ಲಿನ ಅಧಿಕಾರಗಳು ನೇಟಿವ್‌ಗಳಿಗೆ ಕೊಡಬೇಕೆಂಬ ತಾತ್ಪರ್ಯದೊಡನೆ ಪೂರ್ವದೊಳಿದ್ದ ಅನುಭವಶಾಲಿಗಳಾದ ಯೂರೋಪಿಯನ್ ಆಫೀಸರಗಳೆಲ್ಲರು ಬಲಾತ್ಕಾರಪೂರ್ವಕ ನಿವೃತ್ತಿಸಲ್ಪಟ್ಟು ಅವರ ಸ್ಥಾನದಲ್ಲಿ ನೇಟಿವ್‌ಗಳು ನೇಮಕರಾದರು. ಯೂರೋಪಿಯನ್‌ಗಳಸಂಬಂಧವನ್ನೇಮರಳಿ ಅಪೇಕ್ಷಿಸುವಪಕ್ಷಕ್ಕೆ ನೇಟಿವ್ ಪ್ರಭುತ್ವ ಶಬ್ದಕ್ಕೆ ವೈಯರ್ಥ್ಯ ಪ್ರಾಪ್ತವಾಗುತ್ತದೆ. ಮತ್ತು ಯೂರೋಪಿಯನ್ ಆಫಿಸರ್‌ಗಳು ನೇಟಿವ್ ಸಂಸ್ಥಾನಗಳಲ್ಲಿ ನೌಕರಿಮಾಡಲಿಕ್ಕೆ ಪ್ರಾಯಶಃ ಒಡಂಬಡಲಾರರು. ಅದರಿಂದ ಯೂರೋಪಿಯನ್ ಜಡ್ಜಿಯವರನ್ನು ಕರೆಸುವ ಆಲೋಚನೆಯು ಗವರ್ನಮೆಂಟಿನವರಿಗೆ ಇದ್ದರೆ ಅದಕ್ಕಿಂತಲೂ, ಅನುಚಿತವಾದದ್ದು ಮತ್ತೊಂದಿರಲಾರದು. ನೇಟಿವನ್ನು ಕರೆಯಿಸುವದೆಂತವು ನಿಜವಾಗಿದ್ದರೆ ಈಗ ಒಬ್ಬರನ್ನು ಹಂಗಾಮಿಯಾಗಿ ನೇಮಕರಮಾಡಿ ಕೂಡಲೇ ಅವರಿಗೆ ಬದಲು ಮತ್ತೊಬ್ಬ ವಿದೇಶಿಯರನ್ನು ಕರೆಯಿಸಬೇಕಾದ ಆವಶ್ಯಕತೆ ಯೇನು ಎಂಬುದು ಹೋ ತಿಳಿಯಲಿಲ್ಲವು. ಈಗ ಇಲ್ಲಿ ನೌಕರಿಯೊಳಿರತಕ್ಕವರ ಲಾಯಖಿಗಾಗಲಿ ಪ್ರಾಮಾಣಿಕತೆಗಾಗಲಿ, ನ್ಯೂನತೆಯು ನಿರೂಪಿಸಿದ ಹೊರತು ಸೆಷನ್‌ಜಡ್ಜೀಕೆಲಸಕ್ಕೆ ಅನ್ಯರನ್ನು ಕರೆಯಿಸುವದು ಉಚಿತವಲ್ಲವು. ಇಲ್ಲಿ ನೌಕರಿಯಲ್ಲಿ ನಮಗೆ ತಿಳಿದಮಟ್ಟಿಗೆ ಬಹುಮಂದಿ ಆಫೀಸರುಗಳು ನ್ಯಾಯವಾದ ಹಕ್ಕುದಾರಿ ಯುಳ್ಳವರಾಗಿಯೂ, ಅನೇಕಸಂವತ್ಸರಗಳಿಂದ ಇಲ್ಲಿ ನೌಕರಿಮಾಡಿದವರಾಗಿಯೂ, ಈದೇಶದ ಆಚಾರ ವ್ಯವಹಾರಗಳನ್ನೂ ಜನಗಳಶೀಲಸ್ವಭಾವಗಳನ್ನೂ ಚೆನ್ನಾಗಿಅರಿತಿರತಕ್ಕವರಾಗಿಯೂ, ಉನ್ನತಪರೀಕ್ಷೆಗಳಂ ಕೊಟ್ಟಿರುವವರೂ, ಡಿಗ್ರಿಗಳಂಪಡೆದವರಾಗಿಯೂ, ಬಹುಕಾಲದಿಂದ ಜ್ಯುಡಿಷಿಯಲ್ ಆಫೀಸರ್‌ಗಳಾಗಿರುತ ಅನುಭವವುಳ್ಳವರಾಗಿಯೂ ಇರುತ್ತಾರೆ. ಅಂತವರ ಹೆಸರುಗಳನ್ನು ಕ್ರಮವಾಗಿ ನಾವು ಈಕೆಳಗೆ ತಿಳಿಸುವವಾಗಿ ಅವರ ಅರ್ಹತಾನುಸಾರತೆಯನ್ನು ಸಮುದರ್ಶಿಗಳು ಆಲೋಚಿಸಿ ನಿರ್ಧರಿಸಬಹುದು.

ಡೆಪ್ಯುಟೀ ಕಮ್ಮಿಷನರ್‌ಗಳು—ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿಕಮ್ಮಿಷನರ್ ಮೆಸ್ಟರ್ ಪಿ. ಎನ್. ಕೃಷ್ಣಮೂರ್ತಿ, ಬಿ. ಎಲ್. ಯವರು, ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಮೆ|| ವಿ. ಪಿ. ಮಾಧವರಾವ್ ಬಿ. ಎ. ಯವರು.

ಸೆಕ್ರೆಟೇರಿಗಳು—ದಿವಾನರವರ ಚೀಫ್ ಸೆಕ್ರೆಟರಿಯವರಾದ ಮೆ|| ಆರ್. ವಿಜಯೇಂದ್ರರಾಯರವರು, ರಿಜಿಸ್ಲೇಟಿವ್ ಸೆಕ್ರೆಟರಿಯವರಾದ ಮೆ|| ಎಂ. ಕಾಂತರಸ್ಸಿಯ್ಯಂಗಾರ್ ಬಿ. ಎ. ಎಂ. ಎಲ್. ಯವರು ಕಂಟ್ರೋಲರ್ ಮೆ|| ರಂಗಸ್ವಾಮಿಅಯ್ಯಂಗಾರ್ ಬಿ. ಎ. ಬಿ. ಎಲ್ ಯವರು. ಗವರ್ನಮೆಂಟ್ ಅಡ್ವೊಕೇಟರಾದ ಮೆಸ್ಟರ್ ಮೀನಾಕ್ಷಿ ಅಯ್ಯರ್ ಬ್ಯಾರಿಸ್ಟರ್ ಅಟ್‌ಲಾ. ಚೀಫ್‌ಕೋರ್ಟ್ ರಿಜಿಸ್ಟ್ರಾರ್ ಮತ್ತು ಆಕ್ಟಿಂಗ್ ಸೆಷನ್ಸ್ ಜಡ್ಜಿಯವರಾಗಿರುವ ಮೆ|| ಹೇಮಾದ್ರಿರಾಯರವರು, ಸಬಾರ್ಡಿನೇಟ್ ಜಡ್ಜಿಯವರಾದ ಮೆ|| ಕೃಷ್ಣಯ್ಯನವರು.

ಇಷ್ಟುಮಂದಿ ಆಫೀಸರ್‌ಗಳು ಏಳುನೂರು ಎಂಟುನೂರು ಮತ್ತು ಸಾವಿರರೂಪಾಯಿಗಳ ತಲಬ್ ಪಡೆಯುತ ಜವಾಬ್ದಾರಿಯುಳ್ಳ ಉದ್ಯೋಗಗಳಲ್ಲಿ ಸಮರ್ಥರೆನಿಸಿಕೊಂಡಿರುತ್ತಾರಲ್ಲದೆ ಇವರೊಬ್ಬೊಬ್ಬರು ಜ್ಯುಡಿಷಿಯಲ್‌ನಲ್ಲಿ ಬಹುಕಾಲದಿಂದ ಪ್ರವೀಣರೆನಿಸಿಕೊಂಡಿರುತ್ತಾರೆ. ಇಂತವರೆಲ್ಲರೂ ಅನರ್ಹರೆಂದು ಹ್ಯಾಗೆ ತೋರಿತೋ ನಾವರಿಯೆವು. ಇಷ್ಟುಮಂದಿಯ ಹಕ್ಕುದಾರಿಗಳನ್ನು ಉಪೇಕ್ಷಿಸಿ ಮತ್ತೊಬ್ಬರನ್ನು ಕರೆಸುವದರಮೂಲಕ ವ್ಯರ್ಥವಾದ ಮನಸ್ತಾಪವನ್ನುಂಟುಮಾಡಿ ಅದರ ಪ್ರಥೆಗೆ ಗವರ್ನಮೆಂಟಿನವರು ಒಳಗಾಗುವದು ಯೋಗ್ಯವಾಗಿಲ್ಲವು. ಬೇರೆಯೊಬ್ಬ ಹೊಸಬರನ್ನು ತಂದು ನೇಮಿಸಬೇಕೆಂಬ ಅಂತರವಾದ ಉದ್ದೇಶವಿಲ್ಲದಪಕ್ಷಕ್ಕೆ ಮೇಲಿನವರಪೈಕಿ ಯೊಬ್ಬರನ್ನು ಖಾಯಂಕ್ಕೆ ನೇಮಕರಮಾಡಬಾರದು. ಇದುವರಿಗೆ ಪ್ರಕಟವಾದ ಅಪವಾದಗೆ ಮುಂದೆ ಅವಕಾಶಕೊಡದೆ ಸಮದೃಷ್ಟಿಯಿಂದ ವರ್ತಿಸುವದೆ ಗವರ್ನಮೆಂಟಿನವರಿಗೆ ಭೂಷಣವೂ, ತತ್ಪ್ರತಿನಿಧಿಯಾದ ದಿವಾನರಿಗೆ ಪ್ರತಿಷ್ಠೆಯೂ, ಅವರ ಆಜ್ಞಾನುವರ್ತಿಗಳಾದ ಅಧಿಕಾರಿಗಳಿಗೆ ಉತ್ಸಾಹವೂ, ಅವರ ಅಧಿಕಾರಕ್ಕೊಳಪಟ್ಟ ಪ್ರಜೆಗಳಿಗೆ ಸುಖವೂ ಪ್ರಾಪ್ತವಾಗುವದು. ಆದಕಾರಣ ಇಂತಾ ವಿಷಯಗಳಲ್ಲಿ ಅನುಸರಿಸಲ್ಪಡುವ ಕ್ರಮಗಳು ಸಾಪ್ರಾತ್ತಾಗಿಯೂ ಪರಂಪರೆಯಾಗಿಯೂ ಪ್ರಜೆಗಳ ಸುಖನಿಮಿತ್ತಕವೆಂದು ಮಹಾರಾಜಾ ಸರ್ಕಾರದವರ ಅವಧಾನಕ್ಕೆ ಬರಬೇಕೆಂದುಕೋರುವೆವು.

THE REVENUE BOURD.

ಮದರಾಸ್ ರಾಜಧಾನಿಯ ರೆವಿನ್ಯೂ ಬೋರ್ಡ್ ತೌಕೂಫಾಗಿ ಈಗಿನ ಬೋರ್ಡ್‌ಮೆಂಬರ್‌ಗಳಲ್ಲಿ ಇಬ್ಬರು, ಸಾಲ್ಟ್ ವ ಅಬಕಾರೀ ಕಮ್ಮಿಷನರೊಬ್ಬರು, ರೆವಿನ್ಯೂ ಸೆಟಲ್‌ಮೆಂಟ್ ಡೈರೆಕ್ಟರೊಬ್ಬರು, ಹೀಗೆನಾಲ್ಕು ಜನ ಕಮ್ಮಿಷನರ್‌ಗಳು ನೇಮಕರಾಗುವರು. ಇವರಲ್ಲಿ ರೆವಿನ್ಯೂ ಕಮ್ಮಿಷನರ್‌ಗಳು ಇಬ್ಬರು, ಸಪರೇಟ್ ಕಮ್ಮಿಷನರೆಂದು ಒಬ್ಬರು, ಮತ್ತೊಬ್ಬರು ಅಗ್ರಿಕಲ್ಚರಲ್ ಅಂಡ್ ಕಸ್ಟಂಸ್ ಕಮಿಷನರೆಂದು ಕರೆಯಲ್ಪಡುವರು. ರೆವಿನ್ಯೂ ಕಮ್ಮಿಷನರ್‌ಗಳು ಡಿಸ್ಟ್ರಿಕ್ಟ್‌ಗಳಲ್ಲಿ ಸರ್ಕ್ಯೂಟ್ ಮಾಡಿ ಅಲ್ಲಿ ಬರುವ ರೆವಿನ್ಯೂ ಪಿರ್ಯಾದ್‌ಗಳಂ ವಿಚಾರಣೆಮಾಡಿ ಫೈಸಲ್ ಮಾಡುವರೆಂದು ವಗೈರೆ ಆಂಧ್ರಪ್ರಕಾಶಿಕಾ ಪತ್ರಿಕೆ ತಿಳಿಸುತ್ತಿದೆ. ಈ ಬೋರ್ಡ್ ಸ್ಥಾಪಿಸಲ್ಪಟ್ಟು ಈಗ್ಯೆ ೧೦೦ ವರುಷಗಳಾದವು. ರೆವಿನ್ಯೂ ಪದ್ಧತಿಯು ಗ್ರಾಮಕ್ಕೊಂದು ವಿಧವಾಗಿದ್ದು ಬಹಳಗಲಾಟೆಯೊಳಿದ್ದದರಿಂದ ಇದು ಯೂರೋಪಿಯನ್ ಅಧಿಕಾರಗಳಿಗೆ ಎಷ್ಟು ಮಾತ್ರವೂ ಬೋಧೆಯಾಗದೆ ಹೋಯಿತು. ಇದಕ್ಕೋಸ್ಕರ ನೇಟಿವ್ ಅಧಿಕಾರಿಗಳನ್ನು ನಂಬಬೇಕಾಗಿ ಬಂದದ್ದರಿಂದ ಅದರ ವಿಚಾರಣೆಯಬಗ್ಯೆ ರೆವಿನ್ಯೂಬೋರ್ಡ್ ಎಂಬ ಒಂದು ದೊಡ್ಡ ಇಲಾಖೆಯನ್ನು ಸ್ಥಾಪಿಸಬೇಕಾಯಿತು. ಸುಮಾರು ೩೦ ವರುಷಗಳ ತನಕ ಇವರ ಆಡಳಿತವು ದೇಶಭಾಷೆಯಲ್ಲಿ ಅಥವಾ ಮಹಾರಾಷ್ಟ್ರ ಭಾಷೆಯಲ್ಲಿಯೇ ನಡೆಸಲ್ಪಟ್ಟಿತು. ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ಹೆಡ್ ಶಿರಸ್ತೇದಾರರೆಂಬ ನೇಟಿವ್ ಉದ್ಯೋಗಸ್ಥರು ಹ್ಯಾಗೆ ಪ್ರಬಲಿಸಿ ವಿಶಿಷ್ಟಕಾರಭಾರನ್ನೂ ತಮ್ಮ ಜವಾಬ್ದಾರೀಮೇಲೆ ನಡೆಸುತಿದ್ದರೋ ಅದೇ ಪ್ರಕಾರ ರಾಜಧಾನಿಯ ಹೆಡ್ ಶಿರಸ್ತೇದಾರರು ಮೊಕರರಾಗಿ ಕೆಲಸ ನಡೆಸುತಿದ್ದರು. ಈರೆವಿನ್ಯೂ ಬೋ

ದುರ್ಗವನ್ನು ಸರ್ ಥಾಮಸ್ ಮನ್ರೋಸಾಹೆಬರವರು ತಾವುಮದರಾಸುಗವರ್ನರಾದ ಕಾಲದಲ್ಲಿ ಸ್ಥಾಪಿಸಿ ತಮಗೆ ಸುಬೆಸ್ತರಾದರಾ ಮಚಂದ್ರರಾಯರೆಂಬವರನ್ನು ಕಿಲ್ಲೆದಾರರಾಗಿ ನೇಮಿಸಿದರು. ಆಲಾಗಾಯತುಮಡೆ ಕಿಲ್ಲೆ ಕೆಲಸ ತಪ್ಪದೆ ನಡೆದು ಬರುತದೆ. ಮದರಾಸ್ಸದಲ್ಲಿ ನಡೆಯುತಿದ್ದ ಕರಾರಿನಾಮೆಗಳು ಮತ್ತು ಲೆಕ್ಕಪತ್ರಗಳು ೧೮೪೫ನೇ ಇಸವಿಯಲ್ಲಿ ಮರಾಠಿ ಯಲ್ಲಿಯೇ ನಡೆಯುತ್ತಿದ್ದುವು. ಯಾವಾಗ ಇಂಗ್ಲಿಷ್ ಪ್ರಭುತ್ವಕ್ಕೆ ಬಂತೋ, ಆ ವಾಸಿ ಸರ್ಕಾರಿ ಕಚೇರಿಗಳು ಪ್ರತ್ಯೇಕವಾಗಿ ಏರ್ಪಟ್ಟವೋ, ನಗರದ ಆಡಳಿತಕ್ಕೆ ಅಸ್ಥಿಪಂಜರವೆಂಬ ಕಚೇರಿ ವಿರ್ಣವಾಯಿತು. ಆಲಾಗಾಯತು ಈ ತಾಲ್ಲೂಕು ದುರ್ಗವೆಂಬುದು. ಮತ್ತು ಇದಕ್ಕೆ ಪದ್ಧತಿಯಂತೆ ಒಡೆತನವು ಪ್ರಾಪ್ತವಾಯಿತು. ಈ ಜೋಡು ರ್ಬ ಆಳಿಕೆಯಿಂದ ಗವರ್ನಮೆಂಟಿಗೆ ಬರುವಿದವಾಗಿ ವಸೂಲೀ ಹೆಚ್ಚಾಯಿತು. ರೈತರಿಗೆ ಜಮೀನ್ ಪಕ್ಕಾದಾರಿಯು ಸ್ಥಿರಪಟ್ಟವು ಮೈಸೂರು ರಾಜ್ಯವು ಬ್ರಿಟಿಷ್ ಗವರ್ನಮೆಂಟಿನವರ ವಿಚಾರಣೆಗೆ ಬಂದ ಕಾಲದಲ್ಲಿ ರೆವಿನ್ಯೂ ಜೋರ್ದಾರ್ ವಸೂಲಿ ದಪ್ತರು ಇಲಾಖೆಯು ಯೋಜನೆಸಿ ಅಲ್ಲಿನ ಪದ್ಧತಿಯನ್ನೇ ಈ ಮೇಲಣ ಲ್ಲಿಯೂ ನಡೆಸುತ್ತಿದ್ದರು. ಇಲ್ಲಿಯೂ ಅದೇ ಪ್ರಕಾರ ವಸೂಲಿ ಹೆಚ್ಚಾದಕ್ಕಾ ಜಮೀನ್ದಾರ ಗುಡಳೀ ಆಗುವುದಕ್ಕಾ ಮರುವಾಯಿತು ಮಹಾರಾಜರವರಿಗೆ ರಾಜ್ಯ ಒಪ್ಪಿಸಲ್ಪಡುವಿಕೆಗೆ ಕೆಲವು ತಿಂಗಳುಗಳ ಮುಂಚಿತವಾಗಿ ಪರ್ನ್ ೧೫ ಇಲಾಖೆ ಬದಲು ರೆವಿನ್ಯೂ ಸೆಕ್ರೆಟರಿ ಇಲಾಖೆಯೊದು ಏರ್ಪಟ್ಟಿತು. ಯಾವಾಗಲಾದರೂ, ಮೊದಲು ಇಲಾಖೆಗಳನ್ನು ಗರಿ ಪಡೆಯದೆ ಬದಲಾಯಿಸ ಮಾಡುವುದು ರೆವೆನ್ಯೂವಿಚಾರಣೆಯ ಕ್ರಮವನ್ನು ಬದಲಾಯಿಸುವದರಿಂದ ಒಹಳ ಕಡುಕಾಗುವದೆಂದು ತೋರುತಿದೆ.

Occasional Notes.
ನೈಮಿತ್ತಿಕವಿಮರ್ಶನ್ಯಾಸ

A liberal subscription.—ಪಂಜಾಬ್ ದೇಶದ ಅರಸುಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸ್ಥಾಪಿಸಲ್ಪಟ್ಟಿರುವ ಪಾಠಶಾಲೆಗೆ ನಾಭಾ ಸಂಸ್ಥಾನದ ಅರಸರವರು ೧೦,೦೦೦ ರೂಪಾಯಿಗಳು ಚಂದಾ ಮಾಡಿರುತ್ತಾರೆ.

Discovery of an oil well.—ಉತ್ತರ ಅಮೆರಿಕಾ ಖಂಡಕ್ಕೆ ಸೇರಿದ ಯುನೈಟೆಡ್ ಸ್ಟೇಟ್ಸ್ ದೇಶದಲ್ಲಿನ ಪೆನಸಿಲ್ವೇನಿಯಾ ಎಂಬ ಪಟ್ಟಣದಲ್ಲಿ ಹೊಸದಾಗಿ ಒಂದು ಎಣ್ಣೆಯ ಭಾವಿ ಸಿಕ್ಕಿ ಅದರಲ್ಲಿ ದಿನ ಒಂದಕ್ಕೆ ೪೦೦೦ ಪೀಪಾಯಿ ಎಣ್ಣೆ ದೊರಕುತಿದೆಯೆಂಬ ವರ್ತಮಾನ ವ್ಯಾಪಿಸಿದೆ ಯೆಂದು ಒಂದಾನೊಂದು ಪತ್ರಿಕೆ ಹೇಳುತಿದೆ.

Statistics of Indian railways.—ಸನ್ ೧೮೮೬ನೇ ಇಸವಿ ಮಾರ್ಚಿ ೩೧ನೇ ತಾರೀಖಿನವರೆಗೆ ಇಂಡ್ಯಾದೇಶದಲ್ಲಿ ೧೨,೩೭೬ ಮೈಲಿನಗಳ ರೈಲು ರಸ್ತೆಗಳು ತಯಾರಾಗಿ ಗಾಡಿಗಳು ನಡೆಯುತಿವೆ. ಮತ್ತು ೩,೭೫೭ ಮೈಲಿನಗಳ ರಸ್ತೆ ಹಾಕಲ್ಪಡುತಲಿವೆ. ೧೮೮೫ನೇ ಇಸವಿ ಡಿಸೆಂಬರ್ ೩೧ನೇ ತಾರೀಖಿನವರೆಗೆ ಇಬ್ಬಗ್ಗೆ ಸಾಂಕೇತಿಕವಾದ ದುಂಡಾವಳಿಪರಪ್ರಕಾರ ೧೫,೪೮,೧೨,೪೪೫ ರೂಪಾಯಿಗಳು ಖರ್ಚು ಬಂದುವಾಗಿ ತಿಳಿದಿದೆ.

A type-setting contest.—ಸ್ವಲ್ಪದಿನಗಳ ಹಿಂದೆ ಉತ್ತರ ಅಮೆರಿಕಾ ಖಂಡದ ಯುನೈಟೆಡ್ ಸ್ಟೇಟಿನಲ್ಲಿನ ಬಾಸ್ಟನ್ ಯೆಂಬ ಪಟ್ಟಣದೊಳು ಅಕ್ಷರಗಳು ಜೋಡಿಸುವ ಪಟುತ್ವದಲ್ಲಿ ನಾಲ್ವರು ಹುಡುಗರಿಗೂ ನಾಲ್ವರು ಗಂಡಸರಿಗೂ ೩೦ ದಿನಗಳ ವರೆಗೆ ಸ್ಪರ್ಧೆ ನಡೆಯಿತಾಗಿ ಕಡೆಗೆ ಗಂಡಸರು ಪರಾಜಿತರಾದರೆಂದು ಒಂದಾನೊಂದು ಪತ್ರಿಕೆ ಹೇಳುತಿದೆ.

The funeral procession of Maharaja Holkar.—ಈ ತಿಂಗಳ ೧೭ನೇ ತಾರೀಖಿನಲ್ಲಿ ಮೃತಪಟ್ಟ ಹೋಳ್ಕರ್ ಮಹಾರಾಜರವರಕಳೇಬರವನ್ನು ವಿಶಿಷ್ಟ ಮರ್ಯಾದೆಗಳೊಡನೆ ದಹನದ ಬಗ್ಗೆ ರುದ್ರಭೂಮಿಗೆ ಕೊಂಡುಕೊಂಡು ಹೋಗುವಲ್ಲಿ ಅವರ ಇಬ್ಬರು ಪುತ್ರರೂ ಅಲ್ಲಿನ ಸರ್ದಾರ್‌ಗಳೊಡನೆ ಇದ್ದರಲ್ಲದೆ, ಅಲ್ಲಿನ ಪೊಲಿಟಿಕಲ್ ಏಜೆಂಟರಾದ ಸರ್ ಲೆಪಲ್ ಗ್ರಿಫಿನ್‌ಯವರು, ತಮ್ಮ ಅಸಿಸ್ಟೆಂಟರುಗಳೊಡನೆ ಸ್ಮಶಾನಕ್ಕೆ ಸಮೀಪದವರೆಗೆ ಸಂಗಡ ಹೋಗಿ ಬಂದರೆಂದು ತಿಳಿಯ ಬರುತಿದೆ.

The Ameer of Cabul.—ಕಾಬೂಲ್‌ದೇಶದ ಅಮೀರರವರ ದೇಹಸ್ಥಿತಿಯು ದಿನೇದಿನೆ ಅವಾಯಕರಕ್ಕೆ ಅವಕಾಶವನ್ನುಂಟುಮಾಡುತಲಿರುವದರಿಂದ ಅವರು ಆಗಿಂದಾಗ್ಯೆ ದರ್ಬಾರ್ ಮಾಡುವದನ್ನು ಬಿಟ್ಟುಬಿಟ್ಟು, ತಮ್ಮಸೇನೆಯ ಕಮಾಂಡರ್ ಇನ್‌ಚೀಫ್‌ರವರಾದ ಗುಲಾಂ ಹೈದರ್‌ಖಾನರನ್ನು ಕರೆದು ತಾವು ಮರಣವು ಹೊಂದುವರಾದರೆ ದಮ್ಮ ಪಾಣೆಜಾಸೇ ಆದ ಸದಾರ್ನಾನು ಸಿಂಹಾಸನವು ಕೈಗೊಳ್ಳಬೇಕೆಂದು ಹೇಳಿದಂತೆ ಒಂದಾನೊಂದು ಪತ್ರಿಕೆ ತಿಳಿಸುತದೆ.

A royal tour.—ಜೈಪೂ ರಾಜ್ಯದ ಖಾನರವರು ಶೀಘ್ರದಲ್ಲಿ ಯೂರೋಪ್ ಖಂಡವನ್ನು ನೋಡಬೇಕೆಂದು ಯೋಚಿಸುತಿದ್ದಾರೆ. ಈ ಸಂದರ್ಭದಲ್ಲಿ ಸದರೀಯವರು ಪ್ಯಾರಿಸ್, ವ್ಹೈಯನ್ನಾ, ಬರ್ಲಿನ್ ಮೊದಲಾಗಿ ಅಲ್ಲಿನ ದೊಡ್ಡ ಪಟ್ಟಣಗಳಪ್ರತಿ ಪ್ರಾಯಕಃ ಯೆಲ್ಲವನ್ನು ನೋಡಿಕೊಂಡು ಬರುವರು. ವರುತು ಇದುವರೆಗೆ ತಿಳಿಯಬಂದ ಮಟ್ಟಿಗೆ, ಅವರು ನೋಡಬೇಕೆಂದು ನಿರ್ಣಯಿಸಿರುವ ಪ್ರದೇಶಗಳ ಪಟ್ಟಿಯಲ್ಲಿ ಇಂಗ್ಲಾಂಡ್ ದೇಶವು ಅದಗಿರುವದಿಲ್ಲವೆಂದು ಒಂದಾನೊಂದು ಪತ್ರಿಕೆ ಹೇಳುತಿದೆ. ನಾಗರಿಕತೆಗೆ ಮುಖ್ಯಸ್ಥಾನವಾದ ಇಂಗ್ಲಾಂಡ್ ದೇಶವನ್ನು ನೋಡದೆ ಬರುವರಾದರೆ ಅವರ ದೇಶಪಾನವಲ್ಲಿ ಅವಕಾಶವಿಲ್ಲ ರೋಪ ಪೀಡೊಂದೂ ಇರಲಾರದೆಂದು ಹೇಳುವೆವು.

Appointment of a new commission.—ಸನ್ ೧೮೮೫ನೇ ಇಸವಿ ಮೊದಲು ಅಥವಾ ಅದಕ್ಕೆ ಹಿಂದಿನಿಂದ ಹೈದರಾಬಾದ್ ರಾಜ್ಯಾಡಳಿತದವರು ಸಾಯಕಾರರು ಮೊದಲಾದವರಿಂದ ಮೆಚ್ಚರವುಟ್ಟಿಗೆ ಸಾಲಮಾಡಿರುತ್ತಾರೆಯೇ ವಿಚಾರಿಸಿನೋಡಿ ಸರ್ಕಾರದವರಿಗೆ ಒಂದು ಕಮಿಟಿ ಏರ್ಪಡಿಸಲ್ಪಟ್ಟಿತು. ಅದು ಈವರೆಗೆ ವಶಾವಾಪ್ಪವಿಟ್ಟ ಅದಕ್ಕೆ ಬದಲಾಗಿ ಮೇಲೆನೊಂದು ಮೊದಲಾಗಿ ಅದರಲ್ಲಿ ಕರ್ನಲ್ ಕ್ಯಾಂಬೆಲ್, ಮೇಜರ್ ಅಫಸರ್ ನ ನೇ ಮತ್ತು ನೇವಿಯೆನ್ಸೇರ ಅಸಿಸ್ಟೆಂಟ್ ಯವರು ಮೆಂಬರುಗಳಾಗಿ ನಿಯಮಿಸಲ್ಪಟ್ಟು ಈಗ ಒನರೀಕ್ಷಣನಾ ಪ್ರತಿದಿನವಲ್ಲೂ ಸಭೆಕೂಡಿ ಪರೀಕ್ಷಿಸುತಲಿರುತ್ತಾರೆ ಅಲ್ಲಿನ ಪತ್ರಿಕೆಯೊಂದರಿಂದ ತಿಳಿಯಲಾದೆವು.

A ryots meeting.—ಈ ತಿಂಗಳ ೬ನೇ ತಾರೀಖಿನಲ್ಲಿ ಬಂಗಾಳದೇಶಕ್ಕೆಸೇರಿದ ಸಿಂಗೂರ್ ಯೆಂಬ ಪಟ್ಟಣದಲ್ಲಿ ಅಲ್ಲಿನ ರೈತರು ಒಂದುಸಭೆಕೂಡಿ ಒಂದು ನಿರ್ಣಯಮಾಡಿದರೇನಂದರೆ,—ಬಂಗಾಳದೇಶದೊಳು ಹಿಂದೂಗಳ ಮತಸ್ಥಾಪನೆಗಳಿಗೆ ಕೊಡಲ್ಪಟ್ಟಿರುವ ಐಶ್ವರ್ಯ ಕೆಲವುಸಂದರ್ಭಗಳಲ್ಲಿ ಅನುಚಿತವಾದ ರೀತಿಯಲ್ಲಿ ಪ್ರಯೋಗಿಸಲ್ಪಡುವದರಿಂದ ಅದುತಪ್ಪಿಸಿ, ವಿದ್ಯಾಭ್ಯಾಸವೊದಲಾದ ಉಪಯುಕ್ತವಾದಕಾರ್ಯಗಳಿಗೆ ವಿನಿಯೋಗಿಸಲ್ಪಡಬೇಕು ಎಂಬದು ಬಂಗಾಳದೇಶದೊಳು ಮತಸಂಬಂಧವಾದ ಕಾರ್ಯಗಳಿಗಾಗಿ ಕೊಡಲ್ಪಟ್ಟಿರುವ ಜಮೀನುಗಳಮೂಲಕ ಸಾಲೀಯಾನಾ ಎರಡುಕೋಟಿರೂಪಾಯಿಗಳು ಹುಟ್ಟುವಳಿಯಾಗುತಿದೆ.

A precautionary measure.—ಈ ತಿಂಗಳ ೬ನೇ ತಾರೀಖಿನಲ್ಲಿ, ಸಿಂಧಿಯಾಮಹಾರಾಜರವರು ಜೀವಿಸಲಾರರೆಂದು ಯೋಚಿಸಿ ಅಲ್ಲಿನ ರೆಸಿಡೆಂಟರು ಮತ್ತು ಸರ್ ಗಣಪತಿರಾವ್ ಮೊದಲಾದ ದೊಡ್ಡ ಮನುಷ್ಯರೆಲ್ಲರು ಅರಸರ ಪಕ್ಕದಲ್ಲೇ ಹಾದರಿದ್ದರಲ್ಲದೆ, ಸರ್. ಗಣಪತಿರಾಯರವರು, ಅಲ್ಲಿ ಗದ್ದಲಯಾವದೂನಡೆಯದಿರಬಹುದೆಂದೂ ಸರ್ಕಾರ್‌ಖಜಾನೆಬಂದೋಬಸ್ತಿಯವಿಷಯದಲ್ಲೂ ತಕ್ಕ ಏರ್ಪಾಡುಗಳು ಮಾಡಿದರೆಂತಲೂ, ಬಡಜನರಿಗೆ ದಾನದಪ್ಪ ಪಾತಕಕ್ಕೆ ಬಗ್ಗೆ ಒಂದುಲಕ್ಷ ರೂಪಾಯಿಗಳು ಜೀರೆ ತೆಗೆದು ಇಡಲ್ಪಟ್ಟಿತೆಂತಲೂ ಗ್ವಾಲಿಯರ್‌ನಿಂದ ಒಂದಾನೊಂದು ಪತ್ರಿಕೆಗೆ ಬಂದ ತಂತಿಸಮಾಚಾರದ ಮೂಲಕ ತಿಳಿಯ ಬರುತಿದೆ.

A statement contradicted.—ಕಾಶ್ಮೀರದೇಶದ ಮಹಾರಾಜರವರಿಗೂ ಅವರತಮ್ಮಂದಿರಬ್ಬರಿಗೂ ಮನಸ್ತಾಪ ವುಂಟಾಗಿದೆಯೆಂದು ಪಯೋನಿಯರ್ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟದ್ದು ವಿಷಯದಲ್ಲಿ ಸದರೀ ಮಹಾರಾಜರವರ ಸೆಕ್ರೆಟರಿಯವರು ಕಲ್ಕತ್ತೆಯ ಇಂಗ್ಲಿಷ್‌ಮನ್ ಪತ್ರಿಕೆಗೆ ಕುತಿಮೂಲಕ ತಿಳಿಸುವದೇನಂದರೆ, ಮಹಾರಾಜರವರ ಸಹೋದರರಿಬ್ಬರೂ ಅರಸರಿಗೆ ಕೇವಲ ಅನುಕೂಲರಾಗಿರುತಾರಜ್ಯದಳತವಲ್ಲಿ ಅವರವರಿಗೆ ನಿಯತವಾಗಿರುವ ಕೆಲಸಗಳು ಯಾ ಥಾಪ್ರಕಾರ ನೋಡುತಲಿದಾರೆ. ಜಮ್ಮುವಿನಲ್ಲಿ ಅಲ್ಲಿನ ಅಕ್ರಮಗಳನ್ನೆಲ್ಲ ಬಾಹ್ಯವಾಗಿ ತಿಳಿಸಿ ಹೊರಟು ಹೋದರೆಂಬದು ಸುಳ್ಳು. ಅಂಜಾರಿಯ ಮೇಲೆ ಮಹಾರಾಜರಸಂಗಡ ಒಬ್ಬಬಂಗಾಳೀಬಾಬು ಕುಳಿತುಕೊಂಡು ಹೋದನೆಂಬದೂ ಜನಗಳು ಕೇವಲ ಅಸಂತುಷ್ಟರಾಗಿದಾರೆಂಬದೂ ಕಲಹವುಂಟಾಗಿದೆಯೆಂಬದೂ ಕಲ್ಪಿತವೇ ಹೊರತು ಅನ್ಯಥಾಅಲ್ಲವು ಹೊಸಿಯೆಂದರ್ಥಾತುಗಳ ದೆಸೆಯಿಂದ ವಿರೋಧಗಳಿಲ್ಲ. ಇಂತಾ ವರ್ತಮಾನಗಳನ್ನು ಪ್ರಜೆಗಳು ಯಥೇಚ್ಛವಾಗಿ ಹೇಳದೆ ಕೇಳಬೇಕು ಎಂಬದು.

LOCAL AND PROVINCIAL NEWS
ಸ್ಥಳದೇಶವರ್ತಮಾನ ಪ್ರಾಂತೀಯವೃತ್ತಾಂತಗಳು.

Sir T Madhava Row, K C S I.—ರಾಜಾ ಸರ್ ಟಿ. ಮಾಧವರಾಯರವರು, ಮೊನ್ನೆ ಬುಧವಾರ ಶ್ರೀಮಾನ್ ಕ್ರಮ ಲೀಪಿ ಚೆಟ್ಟಿಕಮಿಷನರ್ ಮಾ|| ಬಿ. ಕೃಷ್ಣಯ್ಯಂಗಾರ್ರವರ ಗೃಹದಲ್ಲಿ ಇಳಿದಿದಾರೆಂತಲೂ, ಅವರು ಕೆಲವುಕಾಲ ಈ ಪಟ್ಟಣದಲ್ಲೇ ಇರುವರೆಂತಲೂ ತಿಳಿಯಲಾದೆವು.

Local Examination.—ಮದರಾಸ್ ಮಿಡಲ್ ಸ್ಕೂಲ್ ಪರೀಕ್ಷೆಗೆ ಅನುಗುಣವಾದ ಒಂದು ಕನ್ನಡ ಪರೀಕ್ಷೆಯನ್ನು ಮೈಸೂರು ಸರ್ಕಾರದವರು ಯೇರ್ಪಡಿಸುವ ಆಲೋಚನೆಯೊಳಿದಾರೆಂತಲೂ, ಈ ಪರೀಕ್ಷೆಯು ಹೊಬಳೀ ಸ್ಕೂಲ್ ಟೀಚರ್‌ಗಳಿಗೂ, ಕನ್ನಡ ವಿದ್ಯಾರ್ಥಿಗಳಿಗೂ, ಉದ್ದಿಷ್ಟವಾಗಿಯೆಂತಲೂ, ಇದಕ್ಕೆ ಗೊತ್ತಾಗಿರುವ ಪಠನೆಯ ಅಲ್ಪವೆಂತಲೂ ಕೇಳುತ್ತೇವೆ. ಈ ವಿಷಯಕವಾದ ನಿಬಂಧನೆಗಳು ವಗೈರೆ ಶೀಘ್ರದಲ್ಲಿ ಮೈಸೂರು ಗೆಜೆಟಿನಮೂಲಕ ಪ್ರಕಟವಾಗಬಹುದೆಂದು ತೋರುತಿದೆ.

The Dewanship.—ಮಾಹೇ ಮದಕೂರ್ ೨೫ನೇ ತಾರೀಖಿನ ಸ್ಥಳದೇಶ ಈವನಿಂಗ್‌ಮೈಲ್ ಯೆಂಬ ಇಂಗ್ಲಿಷ್ ಪತ್ರಿಕೆಯು ತಿಳಿಸುವದೇನಂದರೆ—"ಈಗ ಗೊತ್ತಾಗಿರುವ ಐದು ಸುವರ್ಣ್ಣರಗಳೆ ಮೇಲ್ಪಟ್ಟು ಮಾ|| ಶೇಷಾದ್ರಿ ಅಯ್ಯರ್ ರವರನ್ನು ಈ ಸಂಸ್ಥಾನ ದಿವಾನರೊಳು ದಿವಾನರಾಗಿ ಇಟ್ಟುಕೊಂಡಿರತಕ್ಕ ವಿಷಯದಲ್ಲಿ ಮಾ|| ಗರ್ಡ್ಲ್ ಸ್ಟೋನ್‌ಯವರು ಮಾಡಿದ ಶಿಪಾರಸ್ಸನ್ನು ಇಂಡಿಯಾ ಗವರ್ನಮೆಂಟಿನವರು ಹುದ್ದಾಂಗವಾಗಿ ಅಂಗೀಕರಿಸಲಿಲ್ಲವೆಂದು ಈಗ್ಗೆ ಕೆಲವು ದಿವಸಗಳಿಂದ ಬೆಂಗಳೂರಲ್ಲಿ ಪ್ರವಾದ ವುಂಟಾಗಿದೆ, ಎಂಬದು ಯಾವ ಹೊಣೆಗಾರಿಕೆಯ ಕಾರಣದಿಂದ ಕೇಳದೆ ಹೋಗುವದು ಸರ್ವಜ್ಞ" ಎಂಬುತ ಈ ವಿಷಯು ಅನ್ವರ ಸುಳ್ಳಾಗುವ ಕಾಲದೊಳು ಇಂತವುಗಳೆಲ್ಲ ಒಂದೊಂದಾಗಿ ತಲೆದೋರುತಲಿರುವದೇನೂ ಆಶ್ಚರ್ಯವಲ್ಲವು

The Mysore State Railway.—ಮೈಸೂರು ಸ್ಟೇಟ್ ರೈಲ್ವೇ ಇಲಾಖೆಯಲ್ಲಿ ಗುಮಾಸ್ತೆ ಕಾಗಿದ್ದ ಕುಪ್ಪುಸ್ವಾಮಿ ಯೆಂಬವನು ರೈಲ್ವೇ ಇಲಾಖೆಯ ಬಾಬತು ೬,೩೦೦ ರೂಪಾಯಿಗಳನ್ನು ಮಾಹೇ ಮದಕೂರ್ ೨೦ನೇ ತಾರೀಖಿನ ದಿನ ಪರಾರಿಯಾದನೆಂತಲೂ, ಪೋಲೀಸಿನವರು ಪತ್ತೆ ಮಾಡುವ ಪ್ರಯತ್ನದೊಳಿದಾರೆಂತಲೂ ತಿಳಿಯ ಬರುತಿದೆ.

Arrangement.—ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರಾದ ಮಾ|| ಮೆಯಿಕಲ್ ಜಾನ್ ಯವರು ಎರಡುವರುಷಗಳ ಫರ್ಲೋರಜಾದ ಮೇರೆ ಇಂಗ್ಲಾಂಡಿಗೆ ಹೋಗುವದರಿಂದ ಅವರ ಬದಲಾಗಿ ಇಲ್ಲಿನ ಟರ್ನ್ ಮ್ಯಾಜಿಸ್ಟ್ರೇಟರಾದ ಮಾ|| ಚೆಣ್ಣುಗವೇಲುಪಿಳ್ಳೆಯವರು ನೇಮಕರಾಗಿ ಹೋಗುವರೆಂತಲೂ, ಜನರಲ್ ಅಸಿಸ್ಟೆಂಟ್ ಕಮಿಷನರಾದ ಮೆಸ್ಸರ್ ಕುಪ್ಪುಸ್ವಾಮಿಮೊದಲಿಯಾರ್‌ರವರು ಟರ್ನ್ ಮಾಜಿಸ್ಟ್ರೇಟರಾಗಿ ನೇಮಕರಾಗುವರೆಂತಲೂ ತಿಳಿಯಬರುತಿದೆ.

Mr. Hemaji Row.—ಇಲ್ಲಿನ ಚೀಫ್ ಕೋರ್ಟ್ ರಿಜಿಸ್ಟ್ರಾರಾದ ಮಾ|| ಹೇಮಾಜೀರಾಯರವರಿಗೆ ಅಷ್ಟಗ್ರಾಮ ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜ್ ಕೆಲಸವು ಕೊಡಲ್ಪಟ್ಟು ಅವರು ತಮ್ಮಕೆಲಸದ ಚಾರ್ಜನ್ನು ವಹಿಸತಕ್ಕಬಗ್ಗೆ ಗತವಾರದೊಳು ಇಲ್ಲಿಂದ ಮೈಸೂರಿಗೆ ಹೊರಟು ಹೋದರು. ಇವರು ತತ್ಕಾಲದೊಳು ಹಂಗಾಮಿಯಾಗಿ ನೇಮಕರಾಗಿರುತ್ತಾರೆಂತಲೂ, ಇವರಿಗೆ ಸದ್ಯಕ್ಕೆ ೮೦೦ ರೂಪಾಯಿಗಳಿತಲಬ ಸಲ್ಲುವದೆಂ ತಲೂಕೇಳುತ್ತೇವೆ. ಮಾ|| ಹೇಮಾಜೀರಾಯರವರು ರಿಜಿಸ್ಟ್ರಾರ್‌ಕೆಲಸದ ಚಾರ್ಜನ್ನು ಅಲ್ಲಿನಹೆಡ್ ರೈಟರ್ ಮಾ|| ಕೃಷ್ಣೋಜಿಯವರಿಗೆ ಒಪ್ಪಿಸಿಹೋದರೆಂತಲೂ,ಸದರೀಕೆಲಸಕ್ಕೆ ಇನ್ನೂ ಯಾರೂಬರಲಿಲ್ಲವೆಂತಲೂ,ತಿಳಿಯಬರುತಿದೆ. ಇಲ್ಲಿನ ಸಬಾರ್ಡಿನೇಟ್ ಜಡ್ಜಿಯರಾದ ಮಾ|| ಕ್ರೆಸಿಯವರು ತಮಗೆ ಸವರಿ ಕೆಲಸವು ಅವಶ್ಯಕವಿಲ್ಲವೆಂದು ನಿರಾಕರಿಸಿ ಬಿಟ್ಟರೆಂತಲೂ, ಅದು ಅ|| ಲ|| ಮಾ|| ಅನಂತ ಸ್ವಾಮಿರಾಯರಿಗಾಗಲಿ,ಮೆಸ್ಸರ್ ಕೃಷ್ಣಸ್ವಾಮಿಅಯ್ಯಂಗಾರ್ರವರಿಗಾಗಲಿ ಕೊಡಲ್ಪಡುವದೆಂತಲೂ ಅಸ್ತಿಯಲ್ಲಿ ಪ್ರವಾದವುಂಟಾಗಿದೆ.

EXTRACTS

ಕರಾಚಿಯೊಳಗಿನ ಸದರ್ ಬಾಜಾರದಲ್ಲಿ ಒಂದು ಎತ್ತರವಾದ ಮನೆಯಮೇಲೆ ಒಂದು ಹದ್ದು ತನ್ನ ಗೂಡು ಕಟ್ಟಿಕೊಂಡಿರುವದು, ಸಣ್ಣಸಣ್ಣ ಹುಡುಗರು ಅಲ್ಲಿ ಹೋಗಿ ಆ ಹದ್ದಿಗೆ ತೊಂದರೆ ಕೊಡುತ್ತಿದ್ದರು, ಆ ಹದ್ದು ಆಹುಡುಗರಕೊಂ ಡಲೆಯಿಂದ ಬೇಸರವಾಗುವದಕ್ಕೆ ಒಂದು ಉಪಾಯವನ್ನುಯೋಚಿಸಿತು ಅದೇನಂದರೆ—ಒಬ್ಬನೇ ಹುಡುಗನು ಆ ಮನೆಯಮೇಲಿಂದ ಹಾದುಹೋಗುವ ಸಂಧಿಯನ್ನು ಸಾಧಿಸಿ ಆ ಹದ್ದು ಅವನತಲೆಯಮೇಲಿನ ಟೋಪಿಯನ್ನು ಕಚ್ಚಿಕೊಂಡು ಹೋಗುವದು ಈ ಪ್ರಕಾರ ಅದು ೧೦-೧೨ ಟೋಪಿಗಳನ್ನು ಕಚ್ಚಿಕೊಂಡುಹೋಯಿತು. ಈ ತನು ಕ್ಕಾರತನ್ನನೋಡುವವಕ್ಕೋಸ್ಕರ ಟೋದ ಒಬ್ಬ ಒಡ ಬಾಲ್ಯಕೆ ಟೊಪ್ಪಿಗೆಯೂ ಸಹ ಹೋದ್ದರಿಂದ ಅವನು ಬೊಬ್ಬಿಡುತಲಿಂದ ಮನೆಗೆ ಹೋಗಬೇಕಾಯಿತಂತೆ.

ಮಂಗನ ಜಾಣತನ.—ಕರನಾಳ ತಾಲ್ಲೂಕಿನಲ್ಲಿ ಸೋಕಾರಿ ಎಂಬದೊಂದು ಹಳ್ಳಿಯುಂಟು, ಅಲ್ಲಿ ಪ್ರತಿವರುಷವೂ ಚೈತ್ರಮಾಸದಲ್ಲಿ ಶ್ರೀ ಭೈರವನಾಥ ದೇವರ ಜಾತ್ರೆಯಾಗುತದೆ. ಅಲ್ಲಿ ಅನೇಕ ಮಂಗಗಳಿರುತವೆ. ಅವುಗಳೊಳಗೆ ಎರಡು ಪಕ್ಷಗಳುಂಟು, ಒಂದುಪಕ್ಷದ ಮಂಗಗಳು ಭೈರವನಾಥ ದೇವಾಲಯದ ಸಮೀಪವಿರುವ ಗಿಡದಗುಂಪಿನೊಳಗಿರುತ್ತವೆ. ಇನ್ನೊಂದು ಪಕ್ಷದ ಮಂಗಗಳು ಸುಮಾರು ೫೦ ಕೈಂತಲೂ ಹೆಚ್ಚಿಗೆ ಇದ್ದು ಅವು ದೇವಾಲಯದಿಂದ ಒಂದುಮೈಲುದೂರದಲ್ಲಿರುವ ನಾಹುಬಾವಿಯ ಭಾವಿಯಸಮೀಪದ ಅಡವಿಯಲ್ಲಿರುತ್ತವೆ. ಒಂದುಪಕ್ಷಕ್ಕೆ ಸೇರಿದ ಮಂಗನು ಇನ್ನೊಂದುಪಕ್ಷಕ್ಕೆ ಹೋಗುವದಿಲ್ಲ. ಉಭಯ ಪಕ್ಷಗಳಿಗೂ ಯುದ್ಧವಾದರೆ ಎಷ್ಟೋ ಮಂಗಗಳು ಘಾಯಹೊಂದುತ್ತವೆ. ಕಳೆದ ಜಾತ್ರೆಯಲ್ಲಿ ಹಿಂದುಸ್ಥಳದಲ್ಲಿ ಯಾತ್ರಿಕಾರರು ಒಂದು ಸರ್ಪವನ್ನು ನೋಡಿದರು; ಆದರೆ ಅದು ನಾಗರ ಹಾವಿರಬಹುದೆಂದು ಅವರು ಅದನ್ನು ಕೊಲ್ಲಲಿಲ್ಲ. ಆ ಸರ್ಪವು ಒಂದು ಕೊತವೊಳಗೆ ಹೊಕ್ಕಿತು; ಆಗ ಆಕೊತವಬಾವಿಯನ್ನು ಕಟ್ಟಿಬಿಟ್ಟರು. ಎರಡನೇ ದಿನ ಮೊದಲನೇ ಪಕ್ಷದ ಒಂದು ಮಂಗನು ಬಂದು ಅದರೊಳಗೇನೋ ತಿನ್ನುವದಕ್ಕೆ ದೊರೆಯಬೇಕೆಂದು ತಿಳಿದು ಕೊತದಬಾಯಿಯನ್ನು ಬಿಚ್ಚಿ ಒಳಗೆ ಹಣಿಕಿನೋಡಲಾಗಿ, ಸರ್ಪವು ಕೊತದ ಕುತ್ತಿಗೆಯ ತನಕ ಬಂತು;

ಅದನ್ನು ನೋಡಿ ಆಮುಂಗವು ಗಾಬರಿಯಾಗಿ ಚೀರಾಡಿ ಕಚ್ಚಲಿಕ್ಕಾಸ್ಪದಕೊಡದೆ ಆ ಸರ್ಪನಹೆಡೆಯನ್ನು ತನ್ನೆರಡು ಕೈಗಳಿಂದ ಘಟ್ಟಿಯಾಗಿ ಹಿಡಿಯಲು, ಆಸರ್ಪವು ಮುಂಗನ ಕೈಗಳಿಗೆ ಸುತ್ತಿಕೊಂಡಿತ್ತು ಈಸ್ಥಿತಿಯಲ್ಲಿರುವಾಗ ಆಮುಂಗವು ಒದರುತ್ತ ಚೀರುತ ಇತ್ತಲಿಂದತ್ತ ಅತ್ತಲಿಂದಿತ್ತ ಮಧ್ಯಾಹ್ನದ ತನಕ ತಿರುಗಾಡ ಹತ್ತಿತು. ಅದರ ಸುತ್ತಲೂ ಅದರವಕ್ಷದ ಎಲ್ಲಮುಂಗಗಳೂ ಕೂಡಿದ್ದವು ಅವುಗಳಲ್ಲೊಂದು ಆಮುಂಗನ ಕೈ ಹಿಡಿದು ಸರ್ಪನ ವೋರೆಯು ಇಲ್ಲದಹಾಗಾಗುವ ತನಕ ಅದನ್ನು ಕಲ್ಲಿನಮೇಲೆ ಜೋರಿನಿಂದ ತಿಕ್ಕಿತು ಆ ಮೇಲೆಸುತ್ತಿಕೊಂಡ ಸುತ್ತುಬಿಚ್ಚಿ ಹೋಯಿತು. ಆಗಎಲ್ಲಾಮುಂಗಗಳೂಆನಂದದಿಂದ ಒದರುತ್ತ ಹೋದವೆಂದು ಈಸಂಗತಿಯನ್ನು ನೋಡಿದ ಒಬ್ಬಗೃಹಸ್ಥನು ಒಂದಾನೊಂದು ಪತ್ರಿಕೆಗೆ ಬರೆಯುತ್ತಾನೆ.—ಕನ್ನಡಸುವಾರ್ತೆ.

ಜಮ್ಮು, ೧ನೇ ಜೂನ್.—ಕಾಶ್ಮೀರದೇಶದ ಸಾಬಕ್ ಮಹಾರಾಜರವರು ಮೃತಪಟ್ಟದ್ದು ಮೊದಲು ಅಲ್ಲಿನವರು ನಿರೀಕ್ಷಿಸುತಲಿದ್ದ ಸಂಘರ್ಷವು ಕಡೆಗೆ ಪ್ರಾಪ್ತವಾಗಿ ರಾಜ್ಯಭಾರವಂ ಸ್ವಯಂ ಕೈಗೊಳ್ಳುವಂತೆ ಇಾಡ್ಯ ಗವರ್ನಮೆಂಟನವರನ್ನು ಕೇಳಿಕೊಳ್ಳಬೇಕೆಂಬ ಅಪೇಕ್ಷೆ ಯುಂಟಾಗಿದೆ. ರಾಜ ಕುಮಾರರಾದ ರಾಂಸಿಂಗ್ ಮತ್ತು ಉಮರ್ ಸಿಂಗ್ ಯೆಂಬವರಿಬ್ಬರೂ ರಾಜ್ಯಾಡಳಿತದಲ್ಲಿ ಕ್ರಮವಾಗಿ ಮಿಲಿಟರಿ ಮತ್ತು ಸಿವಿಲ್ ಇಲಾಖೆಗಳ ಅಧಿಕಾರವು ವಹಿಸಿದರೆಂದು ಈಚೆಗೆ ತಿಳಿಸಿ ಇರುತ್ತೇನೆಯಷ್ಟೆ. ಸದರೀಯವರಿಬ್ಬರೂ, ತಮ್ಮ ಸಹೋದರರಾದ ಮಹಾರಾಜರವರಿಗೆ ರಾಜ್ಯಾಡಳಿತ ವಿಷಯದಲ್ಲಿ ಮಾಡುತಬಂದ ಯೆಲ್ಲವಿಧವಾದ ಸಹಾಯವಂ ನಿಲ್ಲಿಸಿ ಬಿಡಬೇಕೆಂದು ತಾವು ಮಾಡಿಕೊಂಡಿರುವ ನಿರ್ಣಯವಂ ಸೂಚಿಸಿ ಕೂಡಲೇ ದೇಶದಿಂದ ಹೊರಗೆ ಹೊರಟು ಹೋಗಬೇಕೆಂದು ಯೋಚಿಸಿರುವದಾಗಿ ದರ್ಬಾರ್‌ನಲ್ಲಿ ಬಹಿರಂಗವಾಗಿ ಹೇಳಿದರು ಈ ಮಾತನ್ನು ಕೇಳಿ ದರ್ಬಾರ್‌ನಲ್ಲಿದ್ದವರೆಲ್ಲರೂ ಕೇವಲ ಬೀತರಾದರು. ಅದರಮೇಲೆ ರಾಜಕುಮಾರರಿಬ್ಬರೂ ತಾವು ಹಾಗೆ ಮಾಡುವದಕ್ಕೆ ವುಂಟಾದ ಕಾರಣವನ್ನು ವಿವರವಾಗಿ ತಿಳಿಸಿ ದರ್ಬಾರ್ ಹಾಲ್‌ನಿಂದ ಹೊರಟು ಹೋದರು ಸಾಬಕ್ ಮಹಾರಾಜರವರು ಮೃತಿಪಡುವದಕ್ಕೆ ಕೆಲವುನಿಮಿಷಗಳ ಹಿಂದೆ ಈಗಿನ ಮಹಾರಾಜರಾದ ತಮ್ಮ ಜ್ಯೇಷ್ಠಪುತ್ರರನ್ನು ಕರೆದು, ಹಳಬರಾಗಿಯೂ ಪ್ರಾಮಾಣಿಕರಾಗಿಯೂ ಇರುವ ನೌಕರರನ್ನೆಲ್ಲ ಯಾವಾಗಲೂ ನೌಕರಿಯಿಂದ ತೆಗೆದುಹಾಕುವದಿಲ್ಲವೆಂದು ತಮಗೆ ವಾಗ್ದಾನಮಾಡಬೇಕೆಂದು ಕೇಳಿಕೊಳ್ಳಲು ಹಾಗೇ ಆಗಲಿಯೆಂದು ಪುತ್ರರೂ ಕೂಡಲೇ ಒಪ್ಪಿಕೊಂಡರು. ಪರಂತು ತಂದೆಯು ಮುರ್ದೆ ದಹನವಾದಕೂಡಲೆ, ಸಾಬಕ್ ಮಹಾರಾಜರ ಕಾಲದಲ್ಲಿ ಪ್ರಾಮಾಣಿಕರಾದವರ ಸಲಿಗೆಯಮೇಲೆ ಮೂಲೆಗೆ ಅಣಗಿಸಲ್ಪಟ್ಟಿದ್ದ ಒಬ್ಬ ಬಂಗಾಳೀ ಬಾಬುವಿನ ಸಹಾಯದಿಂದ ಬಹುಕಾಲದ ಮೊದಲು ಸಂಸ್ಥಾನದ ನೌಕರಿಯಲ್ಲಿದ್ದವರನೇಕರು ನಿಷ್ಕಾರಣವಾಗಿ ನೌಕರಿಯಿಂದ ತಪ್ಪಿಸಿಬಿಟ್ಟು ಖಾಲೀಯಾದ ಕೆಲಸಗಳ ಪೈಕಿ ಕೆಲವನ್ನು ಅಲ್ಪ ಜನಗಳಿಗೆಕೊಟ್ಟು, ಮಿಕ್ಕವನ್ನು ಬಂಗಾಳೀಯಿಂದ ಕರೆಯಿಸಲ್ಪಟ್ಟವರಿಗೆ ವಿಲೇಮಾಡಿಬಿಟ್ಟರು. ಸದರೀ ಬಂಗಾಳೀಜನಗಳ ಯೋಗ್ಯತೆಗಳು ಕೇವಲ ಮಿತವಾಗಿದ್ದಾಗ್ಯೂ ಅವರಪೈಕಿ ಯಾರಿಗೂ ಮಾಹೇಯಾನಾ ೫೦೦ ರೂಪಾಯಿಗಳಿಗೆ ಕಮ್ಮಿಯಾದ ತಲಬ್ ಇಲ್ಲವು. ಇದರದೆಸೆಯಿಂದ ಈ ಬಂಗಾಳೀಜನಗಳಿಗೂ ಅವರ ಮುಖ್ಯಸ್ಥನಿಗೂ ದುರಾಗ್ರಹ ಹೆಚ್ಚಿ ಪ್ರಜೆಗಳ ಹೃದಯದಲ್ಲಿ ಸಂಪೂರ್ಣ ವಿದ್ವೇಷ ವುಂಟಾಗಿರುವದರಿಂದ ಅದು ಕೂಡಲೇ ಕಲಹದಲ್ಲಿ ಪರ್ಯವಸಾನವಾಗಬಹುದಾಗಿದೆ. ಈಚೆಗೆ ಮಹಾರಾಜರವರು ಒಂದುದಿನ ಆನೆಯಮೇಲೆ ಕುಳಿತು ಮೆರವಣಿಗೆ ಹೋಗುವಲ್ಲಿ ಅವರ ದಿವಾನರಿಗೆ ಬದಲಾಗಿ ಬಂಗಾಳಿಯೊಬ್ಬನು ಅಂಬಾರಿಯಲ್ಲಿ ಮಹಾರಾಜರ ಸಂಗಡ ಕುಳಿತು ಬರುವದಂ ಕಂಡು ಪಟ್ಟಣದಲ್ಲೆಲ್ಲ ಗದ್ದಲ ವುಂಟಾಗಿ, ಜನಗಳು ಮಹಾರಾಜರ ಬಳಿ ಹೋಗಿ ಇಂತಾ ಕೆಲಸ ಮರಳಿ ಯಾವಾಗಲೂ ಮಾಡಕೂಡದೆಂದು ಯೆಚ್ಚರಿಸಿದರು. ನಿನ್ನೆಯ ವಿಶೇಷವೇನಂದರೆ—ಸಿವಿಲ್ ಇಲಾಖಾ ಮುಖ್ಯಾಧಿಕಾರಿಯಾದ ಪ್ರಿನ್ಸ್ ಉಮರ್‌ಸಿಂಗ್ ಯೆಂಬವರು, ಮಹಾರಾಜರವರಿಗೆ ಮುಖ್ಯ ಸಲಹೇದಾರರಾಗಿ ಯೇರ್ಪಟ್ಟಿರುವ ಬಾಬೂ ನಿಲಂಬರ್ ಯೆಂಬವರ ಸಹೋದರರಾದ ರಸೀಬಾಬ್ ಎಂಬಒಬ್ಬ ಬಂಗಾಳಿಗೆ ನಿನ್ನೆಯದಿನ ಲಿಖಿತಮೂಲಕವಾದ ಒಂದು ಹುಕುಂ ಕಳುಹಿಸಬೇಕಾದ ಸಂದರ್ಭ ವುಂಟಾಯಿತು ಸದರೀ ರಸೀಬಾಬ್ ಯೆಂಬಾತನು ಈಚೆಗೆ ಜಡ್ಜಿಯಾಗಿ ನೊಕರರ್ಮಾಡಲ್ಪಟ್ಟಿರುತ್ತಾನೆ. ಬಂಗಾಳೀ ಹೈಕೋರ್ಟ್‌ಜಡ್ಜಿಗಳು ಈಚೆಗೆ ವ್ಯಕ್ತಪಡಿಸಿದ ಸ್ವಾತಂತ್ರ್ಯವನ್ನು ತನಗೆ ಒಂದು ನಿದರ್ಶನವೋಪಾದಿತಿಳಿದು ಅವರಂತೆ ತಾನೂ ವರ್ತಿಸಬೇಕೆಂದು ಯೋಚಿಸಿ ತಾನು ಅಲ್ಲಿನ ಹೈಕೋರ್ಟ್ ಚೀಫ್ ಜಡ್ಜಿಯಾದದರಿಂದ ತಾನು ಯಾರಹುಕುಮಿಗೂ ಪ್ರೊಳಪಟ್ಟು ನಡೆದುಕೊಳ್ಳಬೇಕಾದ್ದಿಲ್ಲವೆಂದು ಹೇಳಿ ಸದರೀ ಹುಕುಮನ್ನು ವಾಪಸುಮಾಡಿದನು ಈಸಂಗತಿ ಮಹಾರಾಜರವರಿಗೆ ತಿಳಿಸಲ್ಪಟ್ಟಿತು. ಅದನ್ನು ಮಹಾರಾಜರವರು ಕೇಳಿ, ಬಂಗಾಳೀ ದೇಶದವರ ಸ್ವತಂತ್ರವೃತ್ತಿಯ ಬಗ್ಯೆ ತಮಗೆವುಂಟಾದ ಸಂತೋಷವನ್ನು ವ್ಯಕ್ತಪಡಿಸುವಂಥದಿ ನಕ್ಕರು. ಮತ್ತೊಂದು ಸಂದರ್ಭದಲ್ಲಿ ಸಾಬಕ್ ಮಹಾರಾಜರವರನ್ನು ಖೂನ್ ಮಾಡಬೇಕೆಂದು ನಡೆಸಲ್ಪಟ್ಟ ಒಂದು ಪ್ರಯತ್ನಕ್ಕೆ ಸೇರಿದವನೆಂಬ ಕಾರಣದಮೇಲೆ ಅವರಿಂದ ಓಡಿಸಲ್ಪಟ್ಟಿದ್ದ ದಾವಿಡತ್ತ ಯೆಂಬಾತನು ಕುದುರೆ ಮತ್ತು ಆನೆಲಾಯಗಳ ಸೂಪರಿಂಟೆಂಡೆಂಟನಾಗಿ ನೊಕರರ್ಮಾಡಲ್ಪಟ್ಟನು. ಉಮರ್‌ಸಿಂಗ್ ರವರಿಂದ ಆತನಿಗೆ ಕಳುಹಿಸಲ್ಪಟ್ಟ ಒಂದು ಹುಕುಮಿಗೆ ಆತನುಕೊಟ್ಟ ಅಹಂಕಾರ ಸೂಚಕವಾದ ಜವಾಬನ್ನು ಯೋಚಿಸಲಾಗಿ ಸಾಬಕ್ ಮಹಾರಾಜರವರು ಜೀವಿಸಿ ಇರುವರಾದರೇ ಅವನಪ್ರಾಣಕ್ಕೆ ಹಾನಿಯುಂಟಾಗಿರುವದು. ಉಮರ್‌ಸಿಂಗರವರು ಈಸಂಗತಿಯನ್ನು ಮಹಾರಾಜರವರಿಗೆ ರಿಪೋರ್ಟ್‌ಮಾಡಿದರು, ಪರಂತು ಮಹಾರಾಜರವರು ಆತನಿಗೆ ಜಂಗ್ಲೀಕರ್ಣ ಸರ್ವೇಯರ್ ಮತ್ತು ಮರಮೊಟ್ಟುಗಳ ಮೊಖ್ತೇಸರ್‌ಕೆಲಸವನ್ನು ಕೊಟ್ಟು ತನ್ಮೂಲಕ ಆತನ ನಡತೆ ಸರಿಯಾದ್ದೆಂದು ಒಪ್ಪಿದರು. ರಾಜಕುಮಾರರಾದ ಉಮರ್‌ಸಿಂಗ್ ಮತ್ತು ರಾಂಸಿಂಗರವರು ತಮಗೆ ವುಂಟಾದ ಅಗೌರವಗಳನ್ನೆಲ್ಲ ಮಹಾರಾಜರವರಿಗೆ ಮರಳಿತಿಳಿಸಿ, ತಾವಿಬ್ಬರೂ ನಿಷ್ಕಳಂಕವಾದ ಭಾವದೊಡನೆ ರಾಜ್ಯಾಡಳಿತದಲ್ಲಿ ಸಹಾಯಕರಾಗಿರಬೇಕೆಂತಲೂ, ದೇಶಕ್ಕೆಹಾನಿಯುಂಟಾಗದಂತೆಕಾಪಾಡುವದಕ್ಕಾಗಿಯೂ, ಬ್ರಿಟಿಷ್‌ಗವರ್ನಮೆಂಟನವರು ರಾಜ್ಯಾಡಳಿತವಂ ತಾವು ಕೈಗೊಂಡು ರೆಸಿಡೆಂಟರಿಗೆ ಸರ್ವಾಧಿಕಾರವು ಕೊಟ್ಟು ಮಹಾರಾಜರ ಅಧಿಕಾರವನ್ನೆಲ್ಲ ತಪ್ಪಿಸಿಬಿಟ್ಟರೆಂಬ ಅಪಪ್ರಥೆಗೆ ಅವಕಾಶವಂತಪ್ಪಿಸುವದಕ್ಕಾಗಿಯೂ ತಾವು ಪ್ರವರ್ತಿಸಿದವರೆಂತಲೂ ಮಹಾರಾಜರವರಿಗೆ ಅರಿಕೆ ಮಾಡಿಕೊಂಡರು. ಈರೀತಿ ತಾವುಮಾಡಬೇಕಾದ್ದನ್ನೆಲ್ಲಮಾಡಿದರು, ಪರಂತು ಅಲ್ಪಜನಗಳಿಂದ ತಮಗೆ ಅಗೌರವವುಂಟಾದದುಕಂಡು ತಮ್ಮ ಸಂಬಂಧವಂ ನಿವೃತ್ತಿಮಾಡಿಕೊಂಡರು. ಇದರಿಂದ ಸಾಬಕ್‌ಮಹಾರಾಜರವರ ಮರಣಕ್ಕಿಂತಲೂ ಅಧಿಕಗದ್ದಲ ವುಂಟಾಗಿ, ಈ ವಿಷಯದಲ್ಲಿ ಪ್ರವರ್ತಿಸಿ ಸ್ವತಂತ್ರಿಸಿ ನಡೆಸುವಂತೆ ಬ್ರಿಟಿಷ್ ಗವರ್ನಮೆಂಟನವರು ರೆಸಿಡೆಂಟರಿಗೆ ಅಧಿಕಾರ ಕೊಟ್ಟಾರೇ ಯೆಂದು ಜನಗಳು ನಿರೀಕ್ಷಿಸುತಲಿದ್ದಾರೆ. ಪ್ರೈವೇಟ್ ಮಿನಿಸ್ಟರೆಂಬ ಸರ್ಕಾರೀ ಹೆಸರನ್ನು ಸ್ವತಃ ಆರೋಪಿಸಿಕೊಂಡಿರುವ ಬಾಬೂ ನೀಲಾಂಬರ್ ಯೆಂಬವರು ಸಂಸ್ಥಾನದ ಲವಾಜಮಾ ಕಮ್ಮಿಮಾಡುವ ವ್ಯಾಜದಿಂದ ಇಷ್ಟು ಜನಗಳಿಗೆ ಕೆಲಸಗಳಂ ತಪ್ಪಿಸಿ, ತನ್ನ ತಲಬನ್ನು ಮಾಹೇಯಾನಾ ೩ ೫೦೦ ರೂಪಾಯಿಗಳಿಗೆ ಬಡ್ತೀಮಾಡಿಸಿಕೊಂಡದ್ದಲ್ಲದೆ ತನ್ನ ಜೀವಮಾನದ ವರಿವಿಗೆ ಮಾಹೇಯಾನಾ ೧,೦೦೦ ರೂಪಾಯಿಗಳ ಪೆನ್ಶನ್ ಸಹ ಯೇರ್ಪಾಡು ಮಾಡಿಕೊಂಡರು. ಸಂಸ್ಥಾನದ ನೌಕರರ ತಲಬ್‌ಗಳು ಕೆಲವರಿಗೆ ಅನೇಕತಿಂಗಳಿಂದಲೂ ಕೆಲವರಿಗೆ ಅನೇಕ ಸಂವತ್ಸರಗಳಿಂದಲೂ ಬಾಕೀಯಲ್ಲಿ ಬಂದು ಅದರಿಂದ ಜನಗಳ ಬಹಳ ಕಷ್ಟಕ್ಕೆ ಗುರಿಯಾಗಿದಾರೆ. ಅಸರ್ಕಾರ ಸ್ತೋತ್ರರೂಪವಾಗಿ ವೃತ್ತಾಂತ ಪತ್ರಿಕೆಗಳಲ್ಲಿ ಘಾಯಿಷ್ ಮಾಡಲ್ಪಟ್ಟರೆ ಅಂತಾ ಭಾಗವನ್ನು ಮಾತ್ರ ಅವರಿಗೆ ಓದಿ ಅರಿಕೆ ಮಾಡುತಾರೆಯೇ ಹೊರತು ಅಲ್ಲಿ ನಡೆಯುವ ಅಕ್ರಮಗಳನ್ನು ಹೊರಪಡಿಸುವ ಪತ್ರಿಕೆಗಳನ್ನು ಅವರು ನೋಡುವದಕ್ಕೆ ಅವಕಾಶವಿಲ್ಲದಂತೆ ಮಾಡಿರುತ್ತಾರೆ ಇದು ಶಿವಾಯಿ ಅರಸರ ನಡತೆಯ ವಿಷಯದಲ್ಲಿ ಇಂಡ್ಯದೇಶದ ಇಂಗ್ಲಿಷ್ ಪತ್ರಿಕೆಗಳು ಆಗಿಂದಾಗ್ಯೆ ಮಾಡುವ ವಿಚಾರವು ಅವರಿಗೆ ಸುತರಾಂ ತಿಳಿಯದೆ ಇರುವಂತೆ ಬಹಳ ಬಂದೋಬಸ್ತು ಮಾಡಿರುತ್ತಾರೆ—ಪಯೋನಿಯರ್.

THE MYSORE GAZETTE

ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜರ ಜುಡಿಷಿಯಲ್ ಬಹದೂರರವರ ದಿವಾನರವರಿಂದ ಕೊಡಲ್ಪಟ್ಟಾದ ಇಸ್ತಿಹಾರಾತಿಕೆಗಳು

ತಾ ೧೬ನೇ ಜೂನ್ ೧೮೮೬ ನಂಬರ್ ೨೮—ಮಿ ಪಿ ಎನ್ ಪೂರ್ಣಯ್ಯ ಬಿ ಎ ಯವರು, ೧೮೮೬ನೇ ಜೂನ್ ೧೮ನೇತಾರೀಖಿನ ಪೂರ್ವಾಹ್ನದಲ್ಲಿ ಮೈಸೂರು ದಿವಾನರ ಅಂಡರ್ ಸೆಕ್ರೆಟರಿ ಕೆಲಸವನ್ನು ವಹಿಸಿದರು

ತಾ ೧೮ನೇ ಜೂನ್ ೧೮೮೬ ನಂಬ್ರ ೩೭—ಮೈಸೂರು ರೆವಿನ್ಯೂ ಸರ್ವೆ ಅಸಿಸ್ಟೆಂಟ್ ಸೆಟಲ್‌ಮೆಂಟ್ ಆಫೀಸರಾದ ಮಿ ಎ ವೆಂಕಟರಾಯರವರು, ೧೮೮೬ನೇ ಜೂಲೈ ೬ನೇ ತಾರೀಖು ಆರಭ್ಯ ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿದಾರೆ

ನಂಬ್ರ ೩೮ ಅಸಿಸ್ಟೆಂಟ್ ಕಮ್ಮಿಷನರ್ ಮಿ ಎಸ್ ಎನ್ ನಾರ್ಣಯವರು ನಾಳೇ ಮಜಕೂರ ೩೦ನೆ ತಾರೀಖ್ ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ಮೂರುತಿಂಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿರುತ್ತಾರೆ

ತಾ ೨೧ನೇ ಜೂನ್, ೧೮೮೬—ನಂ ೧೦೫—೧೮೮೬ನೇ ಜೂನ್ ೧೦ನೇ ತಾರೀಖ್ ಪೂರ್ವಾಹ್ನದಲ್ಲಿ, ಕೋಲಾರ ಡಿಸ್ಟ್ರಿಕ್ಟ್ ಪೋಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಆಫೀಸ್ ಛಾರ್ಜನ್ನು ಮಿ ಎನ್ ಬಿ ವೆಂಕಟಾಚಾರ್ರವರು ಕೊಡಲು ಮಿ ಎ ಕೃಷ್ಣಸ್ವಾಮಿ ಅಯ್ಯಂಗಾರ್ರವರು ವಹಿಸಿರುತ್ತಾರೆ.

ನಂ ೧೦೬ ಸನ್ ೧೮೮೬ನೇ ಇಸವಿ ಏಪ್ರಿಲ್ ೮ ಮತ್ತು ಮೇ ೫ನೆ ತಾರೀಖುಗಳಲ್ಲಿ ಎಸ್ ನಂಬ್ರು ೫೮ನೇ ನಂಬರ್ ಇಸ್ತಿಹಾರುಗಳ ಮೂಲಕ ೪೬ನೇ ಮಾರ್ಚಿ ೧೯ನೇ ತಾರೀಖು ಲಾಗಾಯತು, ಕಾಯಿಲೆ ಸಬಬ್ ಮೂರು ತಿಂಗಳ ರಜಾ ಪಡೆದಿದ್ದ ಮಿ ಡಿ ದೇವರಾಜ ಅರಸ್‌ರವರು, ೪೬ನೇ ಜೂನ್ ೧೧ನೇ ತಾರೀಖಿನ ಪೂರ್ವಾಹ್ನದಲ್ಲಿ ವಾಪಸ್ ಬಂದು ಡಿಸ್ಟ್ರಿಕ್ಟ್ ಟ್ರೆಜರೀ ಛಾರ್ಜನ್ನು ವಹಿಸಿದರಿಂದ ಅವರು ಪಡೆದ ರಜಾಪೈಕಿ ಉಪಯೋಗಿಸಿಕೊಳ್ಳದ ಭಾಗವು, ಅಂದರೆ, ೮ ದಿನಗಳು ರದ್ದುಮಾಡಲ್ಪಟ್ಟಿರುತ್ತಿವೆ

ನಂ ೧೦೭—ಮಾಹೇ ಮಜಕೂರು ೧೧ನೇ ತಾರೀಖಿನ ಪೂರ್ವಾಹ್ನದಲ್ಲಿ, ಮೈಸೂರು ಡಿಸ್ಟ್ರಿಕ್ಟ್ ಪೋಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಆಫೀಸ್ ಛಾರ್ಜನ್ನು, ಮಿ ಸಿ ಮಾದಯ್ಯನವರು ಕೊಟ್ಟು ಮಿ ಡಿ ನಾಮತುರಾಯರವರು ವಹಿಸಿರುತ್ತಾರೆ

ತಾ ೨೨ನೇ ಜೂನ್, ೧೮೮೬ ನಂಬ್ರ ೩೩೦ ಮೈಸೂರು ಡಿಸ್ಟ್ರಿಕ್ಟಿನ ಸರ್ಕ್ಯುಟ್ ಜಡ್ಜಿಯಾದ ಮಿ ವಿ ಎನ್ ನರಸಿಂಹಯ್ಯಂಗಾರ್ರವರು, ೪೬ನೇ ಜೂನ್ ೨೦ನೇ ತಾರೀಖ್ ಲಾಗಾಯತು ಸರ್ಕಾರ್ ನೌಕರಿಯಿಂದ ನಿವೃತ್ತರಾಗುವದಕ್ಕೆ ಅಪ್ಪಣೆ ಪಡೆದಿರುತ್ತಾರೆ

ತಾ ೨೪ನೇ ಜೂನ್, ೧೮೮೬—ನಂ ೧೧೦—ಮಾಹೇ ಮಜಕೂರ್ ೧೪ನೇ ತಾರೀಖ್ ಪೂರ್ವಾಹ್ನದಲ್ಲಿ ಬೆಂಗಳೂರ ಟೌನ್ ಮ್ಯಾಜಿಸ್ಟ್ರೇಟರ ಕೋರ್ಟು ಮತ್ತು ಮ್ಯುನಿಸಿಪಲ್ ಛಾರ್ಜನ್ನು ಮಿ ಕುಪ್ಪುಸ್ವಾಮಿ ಮೊದಲಿಯಾರ್ರವರು ಕೊಟ್ಟು, ಮಿ ಮಾದಯ್ಯನವರು ವಹಿಸಿರುತ್ತಾರೆ

ನಂ ೧೧೧—ಮಾಹೇ ಮಜಕೂರು ೧೪ನೇ ತಾರೀಖಿನ ಪೂರ್ವಾಹ್ನದಲ್ಲಿ ಮಿ ಆಳ್ವಾಜೀರಾಯರವರು ಮಿ ಬಿ ಜಿ ಕೃಷ್ಣಯ್ಯಂಗಾರ್ರವರಿಂದ ತುಮಕೂರು ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಆಫೀಸ್ ಛಾರ್ಜನ್ನು ವಹಿಸಿರುತ್ತಾರೆ.

೨ ಮಿ ಬಿ ಜಿ ಕೃಷ್ಣಯ್ಯಂಗಾರ್ರವರು ೩೪ನೇ ನಂಬರ್ ಇಸ್ತಿಹಾರ್ ಮೂಲಕ ಅವರಿಗೆ ಕೊಡಲ್ಪಟ್ಟ ರಜಾವನ್ನು ಮಾಹೇ ಮಜಕೂರ್ ೧೪ನೇ ತಾರೀಖ್ ಮೊದಲು ಉಪಯೋಗಿಸಿಕೊಂಡಿರುತ್ತಾರೆ

೧೧೨ ಅಸಿಸ್ಟೆಂಟ್ ಕಮ್ಮಿಷನರ್ ಮಿ. ಕುಪ್ಪುಸ್ವಾಮಿ ಮೊದಲಿಯಾರ್ರವರು, ಮಾಹೇ ಮಜಕೂರ್ ೨೪ನೇ ತಾರೀಖ್ ಪೂರ್ವಾಹ್ನದಲ್ಲಿ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ನೌಕರಿಯಾಗ್ಯೆ ಹಾಜರಾದಂತೆ ರಿಪೋರ್ಟುಮಾಡಿದರು

ತಾ ೨೩ನೇ ಜೂನ್, ೪೬. ನಂ೧ ೪ -ತುರುವೇಕೆರೆ ಡೆಪ್ಯುಟಿ ಅಮಲ್‌ದಾರ್ ಮಹಮ್ಮದ್ ಅಲ್ಲೀಖಾನರು, ೪೬ನೆ ಜೂನ್ ೧೮ನೇ ಮೆರ್ಕುಂ ೧೦೮೧ನೆ ನಂಬರ್ ಇಸ್ತಿಹಾರ ಮೂಲಕ ಕೊಡಲ್ಪಟ್ಟ ರಜಾಕ್ಕೆ ಬಾಕ್ಸ್ತೀಯಾಗಿ ಕಾಯಿಲೆ ಸಬಬ್ ಮೂರುತಿಂಗಳ ರಜಾ ಕೊಡಲ್ಪಟ್ಟಿರುತ್ತಾರೆ.

ತುಮಕೂರು ಡೆಪ್ಯುಟಿ ಕಮ್ಮಿಷನರ್ ಆಫೀಸ್ ರೆವಿನ್ಯೂ ಹೆಡ್‌ಮುನಿಷಿ ಶೀತಾರಾಮಯ್ಯನವರು ಮಹಮ್ಮದಲ್ಲೀಖಾನರ ಗೈರ್ಹಾಜರೀಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವತನಕ ತುರುವೇಕೆರೆ ಡೆಪ್ಯುಟಿ ಅಮಲ್‌ದಾರ್ ಪ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸ ನೋಡುವಂತೆ ನೊಕರರ್ಮಾಡಲ್ಪಟ್ಟಿರುತ್ತಾರೆ

ತಾ. ೨೫ನೇ ಜೂನ್, ೧೮೮೬—ನಂ ೧೧೪ -ಇದರಡಿ ಬರುವ ಮುನಸಫ್‌ಗಳ ಬಡ್ತಿ, ವರ್ಗಾವರ್ಗಿ ಮತ್ತು ನೊಕರರ್ಗಳು ಹುಕುಂಮಾಡಲ್ಪಟ್ಟಿರುತವೆ

ಶಿವಬಸ್ಸಾನು ಪಿಳ್ಳೆಯವರು ೩ನೇ ಗ್ರೇಡಿನಿಂದ ೧ನೇ ಗ್ರೇಡಿಗೆ ಬಡ್ತೀ ಮಾಡಲ್ಪಟ್ಟು ಶಿವಮೊಗ್ಗೆಗೆ ನಿಯಮಿಸಲ್ಪಟ್ಟಿರುತ್ತಾರೆ ಕೂಡಲೇ ಕೆಲಸದಮೇಲೆ ಹಾಜರಾಗತಕ್ಕದ್ದು.

ತುಮಕೂರು ಮುನಸಫ್ ಎಸ್ ವರದರಾಜಯ್ಯಂಗಾರವರು ೩ನೇ ಗ್ರೇಡಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ

ಮುನಸಫ್ ಶ್ರೀನಿವಾಸರಾಯರು ಚಿತ್ರದುರ್ಗದಿಂದ ಕೋಲಾರಕ್ಕೆ ವರ್ಗಮಾಡಲ್ಪಟ್ಟಿರುತ್ತಾರೆ. ಕೂಡಲೇ ಕೆಲಸದಮೇಲೆ ಹಾಜರಾಗತಕ್ಕದ್ದು

ನಗರ ಡಿಸ್ಟ್ರಿಕ್ಟ್‌ಕೋರ್ಟು ಶಿರಸ್ತೇದಾರ್ ಪಿ. ವೆಂಕಟ್ರಾಯರು ೩ನೇ ಗ್ರೇಡ್ ಮುನಸಫರಾಗಿ ನೊಕರರ್ಮಾಡಲ್ಪಟ್ಟು ಚಿತ್ರದುರ್ಗಕ್ಕೆ ನಿಯಮಿಸಲ್ಪಟ್ಟಿರುತ್ತಾರೆ. ಕೂಡಲೇ ಕೆಲಸದಮೇಲೆ ಹಾಜರಾಗತಕ್ಕದ್ದು

ನಂ ೧೧೫ ಮೈಸೂರು ಚೀಫ್‌ಕೋರ್ಟ್ ರಿಜಿಸ್ಟ್ರಾರಾದ ಮಿ ದೇವಾಜಿ ರಾಯರವರು ಮೈಸೂರು ಡಿಸ್ಟ್ರಿಕ್ಟ್‌ನ ಸರ್ಕ್ಯುಟ್ ಜಡ್ಜಿ ಕೆಲಸವನ್ನು ಬದಲೀ ನೋಡುವಂತೆ ನೊಕರರ್ಮಾಡಲ್ಪಟ್ಟಿರುತ್ತಾರೆ

TO OUR SUBSCRIBERS.

ಗತವಾರದಲ್ಲಿ ನಾವು ತಿಳಿಸಿದ್ದ ಪ್ರಕಾರ ಈ ಪತ್ರಿಕೆಗೆ ಬಾಕೀದಾರರಾಗಿಯೂ ಆಗಿಂದಾಗ್ಯೆ ನಾವು ಬಾಕೀಮೊಬಲಗನ್ನು ಕಳುಹಿಸುವಂತೆ ಬರೆಯತಕ್ಕ ಕಾಗದಗಳಿಗೆ ಯೆಷ್ಟುದಿವಸಗಳಾದರೂ ಪ್ರತ್ಯುತ್ತರ ಕೊಡದವರಾಗಿಯೂ ಇರತಕ್ಕ ಕೆಲವರಹೆಸರುಗಳನ್ನು ಇದರಡಿ ಪ್ರಕಟಿಸುವದಾಗಿ ಇದರಿಂದ ವೃತ್ತಾಂತ ಪತ್ರಿಕೆಯಲ್ಲಿ ಈ ದೇಶೀಯರಿಗಿರತಕ್ಕ ಅಭಿರುಚಿಯೂ, ದೇಶಾಭಿವೃದ್ಧಿಯೊಳಿರುವ ಆಸಕ್ತಿಯೂ, ಪತ್ರಿಕಾಲೇಖಕರ ಪ್ರಯತ್ನಕ್ಕೆ ಪ್ರೋತ್ಸಾಹವನ್ನುಂಟುಮಾಡಬೇಕೆಂಬ ಅಕ್ಕರೆಯೂ ಇಷ್ಟರದೆಂದು ವ್ಯಕ್ತವಾಗುತಿದೆ ಮುಂದಿನ ವಾರದಲ್ಲಿ ಬಾಕೀದಾರರಾದ ಇನ್ನೂ ಅನೇಕರಹೆಸರುಗಳನ್ನು ಘಾಯಿಷ್ ಮಾಡುವೆವು.

ಹೊಸಕೋಟೆ ಕ್ರಿ ಕೆ ಗೌಡ ಮುನಿಗೌಡರು	೬—೧—೦
ಲಾಲ್ ಸ॥ ಶಿ॥ ತಿಪ್ಪಯ್ಯನವರು	೭—೮—೦
ಕುಣಿಗಲು ವೆಂಕಟಾಚಲಯ್ಯನವರು	೪—೦—೦
ತಿಂಮರಸರಂಡ್ಯೂಲ್ ಸ್ಕರ್ ಗಾಡಿ ಕೃಷ್ಣಯ್ಯ	೭—೦—೦
ಕಿರ್ ... ಅರ್ಮಿ ದಾ ಲಕ್ಷ್ಮೀನರಸಿಂಹಾಚಾರ್ಯರು	೧೬—೦ ೦
ಕಾಲ್ಲೂರ್ ಪಿ ಕೃಷ್ಣ ರಂಗರಾವ್	೬—೦—೦
ಹುಣಸೂರ್ ॥ ಪ್ಯಾಲೆ ಸಾ ಸುಬ್ಬರಾವ್	೫—೦—೦
ಹೊಸ್ಕೋಟೆ ಶ್ರೀ ನಾರಣಪ್ಪನವರು	೬—೦—೦
ಕಡೂರ ಹೊಸದಾನಿ ಗರುಡಾಚಾರ್ಯರು	೫—೮—೦
ಕ್ರಿಮಿನಲ್ ಶ್ಯಾ ರಘುರಾವ್	೬—೦ ೦
ಚಿಕ್ಕಮಗಳೂರು ಕಿ ... ವೆಂಕೋಬರಾವ್	೬—೦—೦
ಹೊಳಲ್ಕೆರೆ ದೇವೇಂದ್ರಗೌಡರುಮುಷ್ಟಿ	೬—೦—೦
ಹೊಳಲ್ಕೆರೆ ನಿ ರಾಮಸ್ವಾಮಯ್ಯನವರು	೧೦—೦—೦
ಹೊನ್ನಾವರ ನರಸಿಂಹಯ್ಯನವರು	೬—೦—೦
ಬಂದರ ಪುರದ ನಾರಣಯ್ಯಂಗಾರು	೭—೦—೦
ಹರಿಹರ ಶಾ ಕುಮಾರಯ್ಯ	೬—೦—೦
ನಂಜನಗೂಡು ಮುಸಫ್ ಕೋರ್ಟು ಮುನಿಷಿ	
ನಂಜಪ್ಪನವರು	೬—೦—೦
ಕಣಗಾಲ್ ಲಕ್ಷ್ಮೀರಮಣಯ್ಯನವರು	೬—೦—೦
ಕ್ರಿಮಿನಲ್ ಸ್ವಿಸ್ಟರಿ ಅಪೀಲ್ ಕ	೬—೦—೨
ಅಸಿಸ್ಟೆಂಟ್ ಇಂಜಿನಿಯರ್ ಆಫೀಸ್ ಕ್ಲಾರ್ಕ್	
ಕೃಷ್ಣರಾವ್	೬—೦—೦
ಕಡಬಹಳ್ಳಿ ಮುನಿಗೌಡರು	೬—೦—೦
ಹಾಸನ ಶ್ರೀ ಮುನಸಫ್ ಶಿಕ್ಷಯ್ಯನವರು	೬—೦—೦
ಬೇಲೂರು—ಕಿರಿಗೋ ದುಬಸಪ್ಪನವರು	೬—೦—೦
ದಾವಣಗೆರೆ ಕಾಲ ... ಸಿದ್ದಪ್ಪನವರು	೧೨—೦—೦
,, ಮರಿಚೆನ್ನಾರು ಶೇ ಶಾಂತಪ್ಪ	೧೨—೦—೦
ತೀರ್ಥಹಳ್ಳಿ ರಾಮರಾವ್	೬—೦—೦

BANGALORE.—Printed and published for the Proprietor, at the KARNATIC PRESS —1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯುಪಗನಾರ್ಥ್ಯ ಕರ್ಣ್ಣಾಟಕಪ್ರಕಾತನಪರಾಭಿದಾಪ್ರಥಿತಸಾಹಿತೀಕೊಭಿತಾ ॥ ಮೃಗಾಂಕಹಿತವಾಸರೆನಿಹಿತಮುದ್ರಣಾಸಜ್ಜನೈರ್ದ್ಧಿಕಾಸುಪರಿಪೊಷಿತಾಪಿಶತಿಮಾನಸಸುಮದಂ

VOL XIII.]	BANGALORE—MONDAY, JULY 5, 1886.	[No. 27.
ಸಂಪುಟ ೧೩.]	ಬೆಂಗಳೂರು:—ಸನ್ ೧೮೮೬ನೇ ಇಸವಿ ಜೂಲೈ ೫ನೇ ತಾರೀಖ್ ಸೋಮವಾರ.	[ಸಂಚಿಕೆ ೨೭.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ಓದುಕೊಳ್ಳತಕ್ಕವರಿಗೆ, ವರುಷ ೧ಕ್ಕೆ	೧೨—೮—೦
ಇಂಗ್ಲಿಷ್ ಮಾತ್ರ ಓದುಕೊಳ್ಳತಕ್ಕವರಿಗೆ ವರುಷ ೧ಕ್ಕೆ	೬—೦—೦
ಕನ್ನಡ ಮಾತ್ರ ಓದುಕೊಳ್ಳತಕ್ಕವರಿಗೆ ಮುಂಗಡ ಕೊಟ್ಟರೆ ವರುಷಕ್ಕೆ.	೬—೦—೦
ಬಿಡಿ ೧ಕ್ಕೆ	೦—೪—೦

ಸೂ.—ಚಂದಾದಾರರು ಇಂಗ್ಲಿಷ್ ಕಾಗದವನ್ನಾಗಲಿ, ಕನ್ನಡ ಕಾಗದವನ್ನಾಗಲಿ ಅಥವಾ, ಮುಗಡವನ್ನಾಗಲಿ ಕಳುಹಿಸಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸತಕ್ಕದ್ದು.

ಪ್ರಕಟನೆಯ ರಿವಾಜ್.

ಒಂದಂಗುಲದ ಪಂಕ್ತಿಗೆ	೧ಕ್ಕೆ	೦—೨—೦
ಹೆಚ್ಚಾದರೆ ಪಂಕ್ತಿಗೆ	೧ಕ್ಕೆ	೦—೧—೦

NOTICE TO SUBSCRIBERS

ಇದರಡಿ ಬರೆಯಲ್ಪಡುವ ಅಂಶಗಳಿಗೆ ನಮ್ಮ ಚಂದಾದಾರರು ಮುಖ್ಯವಾಗಿ ನೋಡಬೇಕೆಂದು ಕೋರುತ್ತೇವೆ ಹೇಗೆಂದರೆ:—

೧. ಕರ್ಣಾಟಕ ಪ್ರಕಾಶಿಕೆಯ ಚಂದಾಹಣವನ್ನಾಗಲಿ ಬೇರೆ [illegible] ಕಳುಹಿಸತಕ್ಕವರು [illegible] ಕಳುಹಿಸುವಲ್ಲಿ [illegible] ಹೆಸರನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. [illegible] ಶಿವಸ್ಯಾರಿಸಲ್ಪಡುತ್ತದೆ.

೨. ನೋಟುಗಳ ರವಾನಿಸತಕ್ಕವರು ಅರ್ಧ ನೋಟನ್ನು ರವಾನಿಸಿಬಿಟ್ಟು ಉಳಿದ ಅರ್ಧ ನೋಟಿನ ವಿಷಯದಲ್ಲಿ [illegible] ಅರ್ಧ ನೋಟು [illegible] ಅರ್ಧ ನೋಟನ್ನು ರವಾನಿಸತಕ್ಕದ್ದು.

೩. [illegible] ಸ್ಟಾಂಪ್ [illegible] ಕಳುಹಿಸತಕ್ಕದ್ದು. [illegible] ಕಳುಹಿಸಕೂಡದು.

೪. [illegible] ಜನವರಿ ತಿಂಗಳಲ್ಲಿ ಪ್ರಾರಂಭವಾಗಿ ಡಿಸಂಬರ್ ಆಖೈರಿಗೆ ಪೂರೈಸಿ ಬರುವದರಿಂದ [illegible] ಡಿಸಂಬರ್ ಆಖೈರವರೆಗೆ [illegible] ಚಂದಾಹಣ [illegible] ಕಳುಹಿಸುವವರು [illegible]

NOTICE.

VAIDYASARA SANGRAHA.

☞ *Price including Postage, Rs 5 0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು [illegible] ಹೆಸರಿಗೆ ಬರೆದು [illegible] ಕಳುಹಿಸಲ್ಪಡುವದು. [illegible]

ಗ್ರಂಥ [illegible]	ರೂ॥	೫—೦—೦
ಪಾಕಿಂಗ್ ಮತ್ತು ಅಂಚೇಹಾಸಲ್		೦—೬—೦

ಟಿ.ಬಿ. ವೆಂಕಟಾಚಾರ್, ಆಸ್ಪತ್ರೆರೋಡ್, ಬೆಂಗಳೂರು.

ನೋಟೀಸ್.

ಇದರಡಿ ಬರೆಯಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸ್‍ನಲ್ಲಿ ವಿಕ್ರಯಿಸಲ್ಪಡುತ್ತವೆ.—

ಕನ್ನಡ ಟೀಕಾಸಹಿತವಾದ ಸಂಸ್ಕೃತ ಗ್ರಂಥಗಳು.

ಕಾಲಾಮೃತ. ...	೧—೪—೦
[illegible] ...	೦—೧೨—೦
ಛಪ್ಪನ್ (ಪಟ್ಟಂಚಾಕ್) ...	೦—೩—೦
[illegible] ...	೦—೫—೦
[illegible] ...	೦—೪—೦
[illegible]	೦—೧೪—೦
[illegible] ...	೦—೭—೦
[illegible]	೦—೨—೦
ವೈದ್ಯಸಾರಸಂಗ್ರಹ ...	೫—೦—೦

ಕನ್ನಡ ಗ್ರಂಥಗಳು.

[illegible] ...	೦—೭—೦
[illegible] ...	೦—೪—೦
[illegible] ...	೦—೬೩—೦
[illegible]	೦—೨—೬
[illegible] ...	೦—೪—೦
[illegible] ...	೦—೨—೦
[illegible] ...	೦—೨—೬
[illegible] ...	೦—೭—೦
[illegible] ...	೦—೩—೦
[illegible]	೦—೨—೦
[illegible] ...	೦—೦—೩
ಇಂಗ್ಲಿಷ್ ಕನ್ನಡ [illegible]	೧—೦—೦
ಜ್ಞಾನಸಿಂಧು, ...	೨—೦—೦
[illegible] ...	೦—೧೨—೦
[illegible] ...	೩—೪—೬
[illegible] ...	೩—೪—೬
[illegible] ೧ನೇ ಸಂಚಿಕೆ. ...	೦—೮—೦
[illegible] ೨ನೇ ಸಂಚಿಕೆ.	೧—೮—೦
[illegible] ...	೦—೮—೦

ಸಂಸ್ಕೃತ ಮೂಲಗ್ರಂಥಗಳು.

ವಿಷ್ಣುಸಹಸ್ರನಾಮ, ...	೦—೫—೦
[illegible] ...	೦—೨—೦
[illegible] ...	೦—೨—೩
[illegible] ...	೦—೦—೬
[illegible] ...	೦—೩—೬
[illegible] ...	೦—೧—೦

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮಿಷನ್ ಮರ್ಚಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಲ್ಲಾಳಿ ತೆಗೆದುಕೊಳ್ಳಲ್ಪಡುವದು.

ಮೈಸೂರು ಸ್ಟೇಟ್ ರೈಲ್ವೆ

ಪ್ರಕಟನೆ.

ಮೈಸೂರು ಸ್ಟೇಟ್ ರೈಲ್‍ವೇ ವಿಚಾರಣಾಧಿಕಾರವು ದಕ್ಷಿಣ ಮಹಾರಾಷ್ಟ್ರ ರೈಲ್‍ವೇ ಕಂಪೆನಿಗೆ ವರ್ಗ ಮಾಡಲ್ಪಟ್ಟಿರುವದರಿಂದ ಸದರೀ ಕಂಪೆನಿಯ ಏಜಂಟರು, ಆಡಿಟರು, ಮತ್ತು ಟ್ರಾಫಿಕ್ ಮ್ಯಾನೇಜರು ಇವರಿಗೆ ಬರೆಯಬೇಕಾದ ಕಾಗದಗಳನ್ನು ಇದುಮೊದಲು ಧಾರ್ವಾಡಕ್ಕೆ ಬರೆಯತಕ್ಕದ್ದು.

ಬೆಂಗಳೂರು ಸಿಟೀ ಸ್ಟೇಷನ್ ಕ್ಯಾಷಿಯರಾದ ಮೆಸ್ಟರ್ ಧೋಂಡೇಪಂತ್ ರಾಮಚಂದ್ರಯವರು, ರೈಲ್‍ವೇಗೆ ಬರತಕ್ಕ ಹಣಗಳನ್ನು ಬರಮಾಡಿಕೊಂಡು ಆ ಬಗ್ಯೆ ರಸೀದಿಗಳು ಕೊಡುವದಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ಸ್ಥಳ ವ್ಯಾಪಾರ ವಿಷಯವನ್ನು ಕುರಿತು ಬರೆಯತಕ್ಕ ಕಾಗದಗಳನ್ನು ಬೆಂಗಳೂರು ಸಿಟೀ ಸ್ಟೇಷನ್ನಲ್ಲಿರುವ ಟ್ರಾಫಿಕ್ ಸೂಪರಿಂಟೆಂಡೆಂಟರವರ ಹೆಸರಿಗೆ ಬರೆಯತಕ್ಕದ್ದು.

ಬೆಂಗಳೂರು, ೧ನೇ ಜೂಲೈ ೧೮೮೬	G. M. STEWART, *Agent, Southern Mahratta Railway*

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JULY 5, 1886.

೧೮೮೬ನೇ ಜೂಲೈ ೫ನೇ ತಾ॥ ಸೋಮವಾರ

THE MYSORE LAND REVENUE

ಈ ದೇಶದ ಲ್ಯಾಂಡ್ ರೆವಿನ್ಯೂ ಆಡಳಿತದಲ್ಲಿ ದೇಶಪದ್ಧತಿಯನ್ನನುಸರಿಸಿ ಹುಂಟಾಗಿರುವ ನಾನಾ ಪ್ರಭೇದಗಳನ್ನು ಅರಿಯದೆ ಒಂದಕ್ಕೊಂದು ಅರ್ಥ ಮಾಡಿಕೊಂಡು ಕಳವಳಪಡುತಲಿರುವ ಒಬ್ಬ ರೆವಿನ್ಯೂ ಅಧಿಕಾರಿಯು ಸದರೀ ಪ್ರಭೇದಗಳನ್ನು ತನಗೆ ತಿಳಿಸಬೇಕೆಂದು ಅಪೇಕ್ಷಿಸಿ ಗತವಾರದಲ್ಲಿ ನಮಗೊಂದು ಕಾಗದ ಬರೆದಿರುತ್ತಾನೆ. ಆದರೆ ಈಗಿನ ಕಾಲದಲ್ಲಿ ಸರ್ವಸಾಧಾರಣ್ಯೇನ ರೈತರು ಸಹ ಅರಿತಿರತಕ್ಕ ಸಾಧಾರಣ ವಿಷಯಗಳನ್ನು ಕೂಡ ರೆವಿನ್ಯೂ ಆಡಳಿತದಬಗ್ಯೆ ಏರ್ಪಟ್ಟ ಒಬ್ಬ ಅಧಿಕಾರಿಯು ಅರಿಯದೆ ಹೋದದಕ್ಕಾಗಿ ಆಶ್ಚರ್ಯಪಡಬೇಕಾಗಿದೆ. ಪರಂತು ಇದು ಆತನದೋಷವೆಂದು ಹೇಳಲಾಗದು. ಕೇವಲ ಗ್ರಾಂಥಿಕಜ್ಞಾನಸಂತೃಪ್ತರಾದ ಗವರ್ನಮೆಂಟಿನವರ ಉಚಿತಜ್ಞತೆಯೇ ಇಂತವುಗಳಿಗೆಲ್ಲ ಕಾರಣಗಳಾಗಿರುತಿವೆ. ಎದ್ಯಪಿ ಸದರೀ ಅಧಿಕಾರಿಯು ಕೇಳಿದ ವಿಷಯಗಳು ಯೆಲ್ಲರಿಗೂ ಉಪಯುಕ್ತವಾದದರಿಂದ ಅವುಗಳಿಗೆ ತಕ್ಕ ಉತ್ತರವನ್ನು ನಮಗೆ ತಿಳಿದಮಟ್ಟಿಗೆ ಇದರಡಿ ತಿಳಿಸುವೆವು.

ಭೂಮಿಯ ವಿಷಯದಲ್ಲಿ ಭೂಪತಿಯಾದ ಅರಸನಿಗೂ, ಕೃಷಿ ಮಾಡತಕ್ಕ ರೈತನಿಗೂ ತಾರತಮ್ಯವುಳ್ಳ ಬಾದುಬಗೆ ಸ್ವಾತಂತ್ರ್ಯನೆಲಗೊಂಡಿರುತಿದೆ. ಈ ಜಮೀನು ಹಕ್ಕುದಾರೀ ವಿಷಯವು ಒಂದೊಂದು ದೇಶದಲ್ಲಿ ಒಂದೊಂದು ರೂಪವಾಗಿರುವದರಿಂದ ಅದಂಕುರಿತು ಮತ್ತೊಂದುಸಂದರ್ಭದಲ್ಲಿ ವಿಚಾರಮಾಡುವೆವು. ಗವರ್ನಮೆಂಟಿನವರಿಗೆ ಜಮೀನುಮೂಲಕ ಬರತಕ್ಕ ಆಯತಿ ಭೇದವೇ ಈಗವಿಚಾರಣೀಯಾಂಶವಾಗಿರುವದಾಗಿ ಅವನ್ನೀಕೆಳಗೆ ವಿವರಿಸುವೆವು, ಹ್ಯಾಗಂದರೆ:— ಅರಸರು ಪ್ರಜೆಗಳನ್ನು ತಕ್ಕ ಸಾಧನ ಸಂಪತ್ತಿಯೊಡನೆ ಪಾಲಿಸುವದಕ್ಕಾಗಿ ಅವರಿಂದ ಆಗಿಂದಾಗ್ಯೆ ತಮ್ಮ ಭೂಮಿಗಳಿಗಾಗಿಯೂ ಇತರಖರ್ಚುಗಳಬಗ್ಯೆ ಹಣ ತೆಗದುಕೊಳ್ಳುವ ಸುಪ್ರವಾಯವು ಸರ್ವದೇಶಕಾಲ ಸಿದ್ಧವಾದದ್ದಾಗಿರುತಿದೆಯಷ್ಟೆ. ಇದು ಈ ಮೈಸೂರು ದೇಶದಲ್ಲಿ ಅನೇಕ ವಿಧಗಳುಳ್ಳದ್ದಾಗಿರುತಿದೆ. ಅವುಯಾವವಂದರೆ, ಕಂದಾಯ, ಜೋಡಿ, ಪಗದಿ, ಕಾಣಿಕೆ, ವಾರ, ಮುಕ್ಕುಪ್ಪೆ, ಧಾನ್ಯಗುತ್ತಿಗೆ, ಜಾತಿ ಶರಿಗೆ, ಕಸಪ ಶರಿಗೆ ವಗೈರೆ ಬಗೆಬಗೆಯಾದ ಹೆಸರುಗಳುಳ್ಳದ್ದಾಗಿರುತಿದೆ. ಸದರೀ ಕಂದಾಯವು ಕೆಲವು ಸ್ಥಳಗಳಲ್ಲಿ ಸಿದ್ದಾಯವೆಂತಲೂ, ಕೆಲವು ಕಡೆಯಲ್ಲಿ ಶಿಸ್ತಂಬದಾಗಿಯೂ, ಅನ್ಯತ್ರ ತೀರ್ವೆಯೆಂತಲೂ ದೇಶಭೇದದಿಂದ ಭಿನ್ನಭಿನ್ನವಾಗಿ ವ್ಯವಹರಿಸಲ್ಪಡುತಿದೆ. ಜೋಡಿ ಮತ್ತು ಪಗದಿ ಎಂಬುವದು ಪ್ರಾಯಶಃ ಏಕರೂಪವಾದದ್ದಾದರೂ,ಕೆಲವುಕಡೆ ಸ್ಥಿರವಾದದ್ದಾಗಿಯೂ,ಒಂದೇವಿಧವಾದದ್ದಾಗಿಯೂ ಇರುತಿದೆ. ಪ್ರಜೆಗಳು ಅರಸರಿಗೆ ಕೊಡುವ ಹಣವನ್ನೂ, ಒಂದುಭೂಮಿಯಲ್ಲಿ ಕೆಲವು ಭಾಗವನ್ನು ಇನಾಮಾಗಿ ಬಿಟ್ಟು ಮಿಕ್ಕ ಭಾಗಕ್ಕಾಗಿ ಪ್ರಜೆಗಳಿಂದ ತೆಗದುಕೊಳ್ಳುವ ದ್ರವ್ಯವನ್ನೂ, ಒಂದು ಭೂಮಿಯು ಪೂರ್ವದಲ್ಲೊಬ್ಬನಿಗೆ ಇನಾಮಾಗಿದ್ದು, ಯಾವದೋ ಒಂದು ಕಾರಣದಿಂದ ಅವನ ಇನಾಂ ತಪ್ಪಿಸಲ್ಪಟ್ಟಾಗ್ಯೂ ಆ ಭೂಮಿಗೆ ಅವನೇ ಹಕ್ಕುದಾರನಾಗಿ ಮಾಡಲ್ಪಟ್ಟು ಅವನ ದೆಸೆಯಿಂದ ಆ ಭೂಮಿಗೆ ರಿಯಾಯತ್ತಾಗಿಯೂ ಸ್ಥಿರವಾಗಿಯೂ ತೆಗದುಕೊಳ್ಳುವ ಮೊಬಲಗನ್ನೂ, ಕೆಲವುಕಡೆ ಜೋಡಿ ಯೆಂತಲೂ, ಕೆಲವುಕಡೆ ಪಗದಿಯೆಂತಲೂ ವ್ಯವಹರಿಸುತ್ತಾರೆ. ಕಾಣಿಕೆ ಯೆಂಬುವದಾದರೋ, ಒಂದು ಭೂಮಿಯೊಬ್ಬನಿಗೆ ಇನಾಮಾಗಿ ಕೊಡಲ್ಪಟ್ಟರೂ ಅದಕ್ಕಾಗಿ ಅವನಿಂದ ತೆಗದುಕೊಳ್ಳಲ್ಪಡುವ ಬಹಳ ಸ್ವಲ್ಪವಾದ ದ್ರವ್ಯವಾಗಿರುತ್ತಿದೆ. ಕಾಯಂ ಗುತ್ತಾ ಅಂದರೆ, ಒಂದು ಗ್ರಾಮಕ್ಕೆ ಇಷ್ಟೆಂದು ಜೇರೀಜನ್ನು ನಿಷ್ಕರ್ಷೆಮಾಡಿ ಪ್ರತಿವರ್ಷವೂ ಅದೇಪ್ರಕಾರ ಸರ್ಕಾರದವರಿಂದತೆಗದುಕೊಳ್ಳಲ್ಪಡುವ ದ್ರವ್ಯವೆಂದರಿವುದು. ಭೂಮಿಯಲ್ಲಿ ಉತ್ಪನ್ನವಾದ ದವಸದಲ್ಲಿಯೂ, ಇತರ ಜಿನಿಸಿಗಳಲ್ಲಿಯೂ, ಸರ್ಕಾರದವರಿಂದ ತೆಗದುಕೊಳ್ಳಲ್ಪಡುವ ಅರ್ಧಭಾಗಕ್ಕೆ ವಾರವೆಂದು ಹೆಸರು. ಮುಕ್ಕುಪ್ಪೆಯೆಂಬುವದು ಭೂಮಿಯೊಳಗಾದ ಫಲದಲ್ಲಿ ಮೂರರಲ್ಲೊಂದು ಹಿಸ್ಸೆಯುಮೇರೆ ಸರ್ಕಾರಕ್ಕೆ ಸಲ್ಲತಕ್ಕದ್ದು. ಇವೆರಡೂ ರಾಜಭಾಗದವಸವೆಂದು ವ್ಯವಹರಿಸಲ್ಪಡುತಿವೆ. ಈಪ್ರಕಾರ ಅರಸರಿಂದ ತೆಗದುಕೊಳ್ಳಲ್ಪಡುವ ಧನಭಾಗಕ್ಕೂ ಧಾನ್ಯಭಾಗಕ್ಕೂ ಸೌಲಭ್ಯಾರ್ಥ ಕಲ್ಪಿಸಲ್ಪಟ್ಟಿರುವ ರಿವಾಜನ್ನು ಕುರಿತು ವಿಚಾರಿಸಿದರೆ ಒಂದುಕೊಳಗದ ಬೀಜವರಿಯುಳ್ಳ ಭೂಮಿಗೆ ಇಷ್ಟೆಂತಲೂ, ಒಂದುಖಂಡಿ ಬೀಜಕ್ಕಿಷ್ಟೆಂತಲೂ, ದಾಯಕ್ಕೆ ಇಷ್ಟೆಂತಲೂ

ಈರೀತಿ ಬಗೆಬಗೆಯಾದ ನಿಬಂಧನೆಗಳಮೇಲೆ ಒಂದೊಂದು ಸ್ಥಳದೊಳಗೊಂದೊಂದು ರೀತಿ ಯಾಗಿವಾಜೆಗಳು ವ್ಯವಸ್ಥಿತಗಳಾಗಿವೆ

ಈಪ್ರಕಾರ ಹಣವಸೂಲ್ಮಾಡಲ್ಪಡತಕ್ಕ ಭೂಮಿಯು ಖುಷ್ಕೀಯೆಂತಲೂ, ತರೀಯೆಂತಲೂ, ಬಾಗಾಯತೆಂತಲೂ ಮೂರುಬಗೆಯಾಗಿ ವಿಭಾಗಿಸಲ್ಪಟ್ಟು ಅವುಗಳಲ್ಲಿಡಲ್ಪಡುವ ಪೈರುಗಳ ಸ್ವರೂಪಾನುಗುಣವಾಗಿ ನಿಬಂಧನೆಯಮೇರೆ ಕಂದಾಯವು ವಸೂಲ್ಮಾಡಲ್ಪಡುತಿವೆ. ಆದರೆ ಈಮೇರೆ ಜೋಡೀಕಾಯಂಗುತ್ತಾಗ್ರಾಮಗಳಿಗೆ ತರೀವ ಗೈರೆ ಭೂಮಿಯು ವ್ಯವಸ್ಥೆಯಿಲ್ಲದೆ ಮೊಗಮಾಗಿ ಜೋಡೀದಾರ್ ವ ಕಾಯಂಗುತ್ತಾದಾರರಿಂದ ಹಣವಸೂಲ್ಮಾಡಲ್ಪಡುವದು. ಇದಲ್ಲದೆ ಈ ಭೂಮಿಗಳಮೇಲೆ ಬೇಡಿಗೆ, ಪಟ್ಟೀ ಮುಂತಾದ ಬಹುರೂಪದಿಂ ಪ್ರಜೆಗಳು ಅರಸರಿಗೆ ಕೊಡುತಿದ್ದ ಹಣವನ್ನೂ ದವಸನನ್ನೂ ಸಹ ಮೇಲೆ ನಿರ್ದೇಶಿಸಲ್ಪಟ್ಟ ವ್ಯವಸ್ಥೆಗಳಮೇಲೆ ವರಹಾಂಕ್ಕೆ ಇಷ್ಟೆಂತಲೂ, ಕುಳಂಕ್ಕೆ ಇಷ್ಟೆಂತಲೂ, ಸೇರಿಸಿ ವಸೂಲ್ಮಾಡಲ್ಪಡುತಲಿತ್ತು.

ಕಂದಾಯ ಹಣವನ್ನಾಗಲಿ, ಧಾನ್ಯ ಗುತ್ತಿಗೆಯನ್ನಾಗಲಿ, ತೆಗದುಕೊಳ್ಳುವಬಗ್ಯೆ ಮಾಡಲ್ಪಡುವ ನಿಬಂಧನೆಗಳಿಗಾಗಿ ಖುಷ್ಕೀ ಭೂಮಿಯಾಗಲಿ ತರೀ ಜಮೀನಾಗಲಿ, ಸಾಧಾರಣವಾದ ಫಲವಂ ಕೊಡತಕ್ಕದ್ದಾದರೆ ಯಾವಭೂಮಿಯನ್ನು ಕಂದಾಯಕ್ಕೆ ಕೊಡುತ್ತಾರೋ ಆ ಭೂಮಿಯಲ್ಲಿ ಆಗುವ ಧುಬ್ಬುವಳೀ ಬೆನಿಸಿಗೆ ಸಮನಾದ ನಿರಖನ್ನು ಕಟ್ಟಿ ಆ ಪೈಕಿ ರೈತನ ಮೆಹನ್ನತಿಗೋಸರ ಯೆರಡು ಭಾಗವೂ, ಲಾಗವತು ಮುತ್ತು ನಿರಖ್ ಕಮ್ಮಿ ವಗ್ಯೆರೆ ನುಕ್ಸಾನಿಗೋಸ್ಕರ ಒಂದು ಭಾಗವೂ ಹೋಗಲಾಗಿ ನಿಂತ ಒಂದುಭಾಗವು ಸರ್ಕಾರಕ್ಕೆಕೊಡಲ್ಪಡುವದುಂಟು. ಅದಕ್ಕಿಂತಲೂ ಒಳ್ಳೆಯ ಭೂಮಿಯಾದರೆಧುಬ್ಬುವಳೀಯಲ್ಲಿ ೩ ರರಲ್ಲೊಂದುಭಾಗವು ಅದೇ ಬಾಗಾಯತ್ತಾದರೆ ಎರಡರಲ್ಲೊಂದುಭಾಗವೂ, ಅದಕ್ಕೆ ವಿಶೇಷ ಲಾಗವತು ತಗಲುವ ಸಂದರ್ಭದಲ್ಲಿ ಎಂಟರಲ್ಲೊಂದು ಪಾಲೂ, ರಾಜರಿಗೆ ಕೊಡುವದು ಪೂರ್ವದಿಂದ ನಡೆದುಬಂದ ಸಂಪ್ರದಾಯವಾಗಿರುತಿದೆ. ಮತ್ತು ಹುಸಾಯ ಕಂದಾಯದಮೇಗೆಯೆಂತಲೂ, ಗ್ರಾಮ ರಿವಾಜಿನಮೇರೆಯೆಂತಲೂ ಕಂದಾಯವು ನಿಷ್ಕರ್ಷೆ ಮಾಡಲ್ಪಡುವದಲ್ಲದೆ ಕೆಲವುಕಡೆ ಪೋಟಾಪೋಟಿಯಿಂದ ಜನಗಳು ಸಮ್ಮತಿಸಿದ ಮೊಬಲಗಿಗೆ ನಿಷ್ಕರ್ಷೆಮಾಡಿಜಮೀನ್ಕೊಡಲ್ಪಡುತಿದೆ. ಇನ್ನು ಜೋಡೀಗ್ರಾಮಗಳು, ಅಗ್ರಹಾರಗಳು, ಇವುಗಳನ್ನು ಕುರಿತು ವಿಚಾರಿಸಿದರೆ, ಒಂದು ಗ್ರಾಮದಜೇರೀಜಿನಪೈಕಿ ಕೆಲವುಭಾಗವನ್ನು ಅವರ ಜೀವನಕ್ಕಾಗಿಬಿಟ್ಟು ಸರಕಾರಕ್ಕೆ ಬರತಕ್ಕದ್ದು ಇಷ್ಟೆಂದು ಗೊತ್ತುಮಾಡಿ ಅದನ್ನಾವಾಗಲೂ ಒಂದೇರೀತಿಯಾಗಿ ಅವರಿಂದ ತೆಗೆದುಕೊಳ್ಳಬೇಕೆಂತಲೂ, ಪೂರ್ವದಲ್ಲಿ ಸರ್ವಮಾನ್ಯಗಳಾಗಿದ್ದ ಗ್ರಾಮಗಳು ಕೆಲವು ಕಾರಣಗಳಿಂದ ಜಪ್ತಾದಬಳಿಕ ಮೊದಲಿನ ಜೇರೀಜೇ ಜೋಡೀ ತರೀಕ್ ತೆಗದುಕೊಳ್ಳಲ್ಪಡತಕ್ಕದ್ದೆಂಬೂ ಲಾಗಾಯತಿನಿಂದ ಸರ್ಕಾರಕ್ಕೆ ಫಲವನ್ನು ಕೊಡದೇ ಇದ್ದ ಅನಾದಿ ಬಂಜರು ಕಾಡು ವಗ್ಯೆರೆ ಜಮೀನ್ಗಳನ್ನು ತಾವೇ ಲಾಗವತು ಮುಟ್ಟಸಿ ಕ್ರಯಮಾಡಿಕೊಂಡು ಜೋಡೀಗಾಗಿ ಯಾರಾದರೂ ಸವಾಲ್ಮಾಡಿದರೆ ಅದೇಪ್ರಕಾರ ಪ್ರತಿವರ್ಷವೂ ಕ್ಲುಪ್ತವಾಗಿ ನಿಷ್ಕರ್ಷೆಮಾಡಲ್ಪಟ್ಟ ಮೊಬಲಗನ್ನು ಅವರ ಮೂಲಕ ತೆಗದುಕೊಳ್ಳಬೇಕೆಂತಲೂ, ನಿಂತೆವರಲ್ಲಿ ಅವರು ಜೀವನ ಮಾಡಬೇಕೆಂತಲೂ, ಗೊತ್ತುಮಾಡಿ ಸರ್ಕಾರದಿಂದ ಬ್ರಾಹ್ಮಣರಿಗೆ ಕೊಡಲ್ಪಟ್ಟವುಗಳೇ ಶ್ರೋತ್ರಿಯ ಗ್ರಾಮಗಳು ಹೀಗೆಯೇ ಒಂದು ಗ್ರಾಮವು ಅನೇಕರಿಗೆ ಕೊಡಲ್ಪಟ್ಟರೆ ಅಂತವುಗಳು ಅಗ್ರಹಾರಗಳು. ಇವುಗಳನ್ನು ಕೊಡುವಾಗ ಇವುಗಳ ಜೋಡೀದಾರರಿಗೆ ವಿಶೇಷವಾದ ಸ್ವತ್ವವನ್ನು ಸಹ ಅರಸರೇ ಕೊಡುವರೆಂದು ತಿಳಿಯಬರುತಿದೆ. ಇದು ಬಹುಕಾಲದಿಂನಡೆದುಬರುತಿರುವ ಪದ್ಧತಿಯೆಂದು ಸಾಧಾರಣವಾದ ಹಿಂದಿನನಮ್ಮಅನುಭವದಿಂತಿಳಿಸುತಿದೆ. ಈಜೋಡಿಯಂತೆಯೇ ಜಂಗಮರಿಗೆ ಕೊಡಲ್ಪಡುವ ಭೂಮಿಯನ್ನು ಭುರವರ್ಗವೆಂದು ವ್ಯವಹರಿಸುತ್ತಾರೆ. ಕಾಯಂಗುತ್ತೇಗ್ರಾಮಗಳೆಂದರೆ, ಕ್ರಯವಾಗಿದ್ದಗ್ರಾಮಗಳನ್ನಾಗಲಿ, ಪಳ್ಳದಿಣ್ಣೆಗಳನ್ನಾಗಲಿ ಒಂದೇರೀತಿಯಾದ ಜೇರೀಜ್‌ಮೊತ್ತರಮ್ಮಾಡಿ ಕೊಟ್ಟರೇ ಸರ್ಕಾರಕ್ಕೆ ಕಿಫಾಯತ್ತೂ ಜಮೀನ್ಮಾಡಿಕೊಂಡು ಲಾಗವತು ಮುಟ್ಟಿಸತಕ್ಕವರಿಗೆ ವಿಶೇಷಲಾಭವೂ ಉಂಟಾಗುವದೆಂದು ಭಾವಿಸಿ ಸರ್ಕಾರದವರು ಪ್ರಜೆಗಳಿಗೆ ಕೊಡುವಭೂಮಿಗಳಿಂದರಿಯುವದು ಹೊಸದಾಗಿ ಸಾಗುವಳೀ ಮಾಡಲ್ಪಟ್ಟ ಭೂಮಿಗಳು ಅನಾದಿಬಂಜರೆಂತಲೂ ಕೆಲವು ವರ್ಷಗಳಿಂದ ಸಾಗುವಳೀ ಯಿಲ್ಲದ ಬಂಜರೆಂತಲೂ ಎರಡು ವಿಧವಾಗಿರ್ಪುವು ಇವುಗಳಲ್ಲಿ ಉತ್ತಮಭೂಮಿಯಾಗಿ ಸಾಗುವಳಿಮಾಡಿದ ಮೊದಲನೆಯ ವರ್ಷದಲ್ಲಿಯೇ ಸರಿಯಾದ ಫಲವು ಕೊಡತಕ್ಕ ಕ್ಷೇತ್ರವಾದರೆ ಅದೇ ವರ್ಷದ ಮೊದಲು ನಿಷ್ಕಲ್ಪಿಟ್ಟವಾದ ಪೂರಾ ಕಂದಾಯವನ್ನು ತೆಗದುಕೊಳ್ಳುವದೂ, ಅಥವಾ ಮೆಹನತ್ ಅಧಿಕವಾಗಿದ್ದರೆ ಆ ಕಂದಾಯವನ್ನು ಕ್ರಮವಾಗಿಬರ್ತೀವಾಮವದೂಉಂಟು ಮಧ್ಯಮಾಧಮ ಭೂಮಿಗಳಾದರೆ ಮೂರುವರ್ಷಗಳಮೇಲೆ ೫ ಅಥವಾ ೭ ವರ್ಷಗಳವರಿವಿಗೂ ಕ್ರಯಕಂದಾಯವೆಂದು ನಿಷ್ಕರ್ಷೆಮಾಡಿ ಕ್ಲುಪ್ತ ಕಾಲಾನಂತರ ಪೂರ್ಣವಾದ ಮೊಬಲಗನ್ನು ತೆಗದುಕೊಳ್ಳುವ ವಾಡಿಕೆಯುಂಟು ಪ್ರಾಯಶಃ ಖುಷ್ಕೀ ಭೂಮಿಗಳ ವಿಷಯದಲ್ಲಿಯೇ ಹೀಗೆನಡೆಸಲ್ಪಡುವದು. ದ್ರಾವಪೈರು (ಬಾಗಾಯತ್) ಮಾಡುವರಾದರೆ ಅವಬಗೆಯಾದ ಭೂಮಿಯನ್ನಾದರೂ, ವ್ಯವಸಾಯಮಾಡುವಲ್ಲಿ ಮೊದಲನೆಯ ವರ್ಷದಿಂದ ಸಂಪೂರ್ಣವಾಗಿ ಫಲಕ್ಕೆ ಬರುವವರಿವಿಗೂ, ಅವರಮೂಲಕ ಸ್ವಲ್ಪಕಂದಾಯ ತೆಗದುಕೊಂಡು ಬಳಿಕ ಆ ಫಲದ ರಿವಾಜಿನಂತೆ ತೆಗದೇಕೊಳ್ಳುವ ವಾಡಿಕೆ ಕೆಲವುಕಡೆಗಳಲ್ಲಿಯೂ, ೯ ಅಥವಾ ೧೦ ವರುಷಗಳವರೆನಕ ರೈತರಿಂದೇನೂ ತೆಗದುಕೊಳ್ಳದೇ ಮುಂಡವಾನ್ನವೆಂದು ಸುಮ್ಮನೆಬಿಟ್ಟು ಆ ಮೇಲೆ ಬೆಳೆಗೆತಕ್ಕ ಕಂದಾಯವನ್ನು ೩ ವರುಷಗಳವರಿವಿಗೂ ಹಂಚಿಕೆಯಾಗಿ ಅಳವೆಯೆಂಬ ಕ್ರಯದಮೇರೆ ತೆಗದುಕೊಳ್ಳುವ ನಿಬಂಧನೆ ಕೆಲವು ಕಡೆಗಳಲ್ಲಿಯೂ, ಫಸಲ್ ಕೈಗೆ ಬಂದಬಳಿಕಕ್ಲುಪ್ತಕಂದಾಯವನ್ನು ವಸೂಲ್ಮಾಡುವ ಪದ್ಧತಿಯೇರೆ ಸ್ಥಳಗಳಲ್ಲಿಯೂ ಉಂಟು.

ಇಂತಾಭೂಮಿಗಳನ್ನೇ ಬಹುದಿಗೆ ಸಾಗುವಳಿಮಾಡುವದಾದರೆ ಉತ್ತಮಭೂಮಿಯಾಗಿಯೂ ವಿಶೇಷಲಾಗವತಿಗೆ ಅವಕಾಶ ವಿಲ್ಲದ್ದಾಗಿಯೂ, ಇರತಕ್ಕವುಗಳಿಗೆ ಮಾತ್ರ ಸರ್ಕಾರಕ್ಕೆ ಸರಿಯಾಗಿ ವಾರಕೊಡುವದೂ, ಮಧ್ಯಮ ನಿಕೃಷ್ಟಭೂಮಿಗಳಿಗೆ ತೀರಮ್ಮಪನ್ನರಿತು ಪ್ರಥಮವರುಷದಲ್ಲಿ ಏನೂತೆಗದುಕೊಳ್ಳದೆಯೂ, ಮಾರನೆಯವರ್ಷದಲ್ಲಿ ಮೂರರಲ್ಲೊಂದುಭಾಗವನ್ನೂ ಮೂರನೇವರ್ಷದಮೊದಲು ಸಮಭಾಗವನ್ನೂ ತೆಗದುಕೊಳ್ಳುವದುಂಟು. ಇದುಪ್ರಾಯಶಃ ಖುಷ್ಕೀಭೂಮಿಗಳ ವಿಷಯವಾಗಿರುತಿದೆ ಧ್ರುವ ಪೈರು ಮಾಡುವವರು ಎಂತಾಭೂಮಿಯಲ್ಲಾದರೂ ಧ್ರುವ ಪೈರಿಟ್ಟ ಮೊದಲನೆಯ ವರ್ಷದಿಂದ ಫಲಕ್ಕೆ ಬರುವತನಕ ಆ ಭೂಮಿಯಲ್ಲಿ ಚಿಲ್ಲರೇ ಬೆಳೆಯಿಟ್ಟುಕೊಳ್ಳುವದಕ್ಕಾಗಿ ಸುಲಭವಾದ ಭೂಮಿಕಂದಾಯವೆಂದು ಸರ್ಕಾರಕ್ಕೆ ಸ್ವಲ್ಪದ್ರವ್ಯಕೊಡುತಲಿದ್ದು ಬಳಿಕ ದ್ರುವಪೈರಿನಲ್ಲಿ ವಾರವನ್ನು ಮಾತ್ರಕೊಟ್ಟು ಭೂಮಿಕಂದಾಯವನ್ನು ಮಾಫ್‌ಮಾಡಿಸಿಕೊಂಡುಚಿಲ್ಲರೆಬೆಳೆಯನ್ನಿಟ್ಟುಕೊಂಡಾಗ್ಯೂ ಅವುಗಳಿಗೆ ಕಂದಾಯವಾರ ವಗ್ಯೆರೆಗಳಿಲ್ಲದೆ ಅನುಭವಿಸುತ ಬರುವದು ಈದೇಶದ ಅನಾದಿಸಿದ್ಧವಾದ ಪದ್ಧತಿಯಾಗಿರುತಿದೆ. ಪರಂತು ಕೆಲವು ಸಂದರ್ಭಗಳಲ್ಲಿ ಧ್ರುವಪೈರಿನೊಳು ವಾರವೂ ಕಂದಾಯವು ಸಹ ತೆಗದುಕೊಳ್ಳಲ್ಪಡುವದುಂಟು

ರೈತರ ದನಗಳ ಉಪಯೋಗಾರ್ಥವಾಗಿ ಹುಲ್ಲುಗಾವಲೆಂದು ಕೆಲವುಪ್ರದೇಶವನ್ನು ನಿಷ್ಕರ್ಷೆಮಾಡಿಕೊಟ್ಟು ಅದಕ್ಕೆ ಸುಲಭವಾದ ಸರ್ಕಾರ್ ತೆರಿಗೆ ಏರ್ಪಡಿಸಿ ವಸೂಲ್ಮಾಡಲ್ಪಡುವದು. ಆಯಾ ಗ್ರಾಮಗಳಿಗೆ ಸೇರಿದ ಭೂಮಿಗಳಪೈಕಿ ಕೆಲವು ಪ್ರದೇಶವನ್ನು ಗೋಭೂಮಿಯೆಂದು ಮಿಂಗಡಿಸಿ ಅವನ್ನು ಯಾವಾಗಲೂ ಸಾಗುವಳೀಮಾಡದೆ ಆ ಗ್ರಾಮದ ರೈತರ ವಿಶಿಷ್ಟ ದನಗಳೂ ಅಲ್ಲಿ ಮೇಯಬಹುದೆಂಬ ನಿಯಮ ವುಂಟಾಗಿದೆ. ಮಲನಾಡು ಪ್ರಾಂತದಲ್ಲಿಯೂ, ಕಾಡುಸೀಮೆಗಳಲ್ಲಿಯೂ ದನಗಳನ್ನು ಮೇಯಿಸುವದಕ್ಕೋಸ್ಕರ ಕೆಲವು ಭೂಮಿಯು ಕರಿಗೆಸಿಲ್ಲದೆ ಹುಲ್ಲುಗಾವಲೆಂದು ಬಿಡಲ್ಪಟ್ಟಿರುತ್ತೆ. ಇದರಿಂದ ರೈತರ ದನಗಳ ಸಂರಕ್ಷಣೆಗವಕಾಶವೂ ಅದರಿಂದ ಅವರಿಗೆ ಗೊಬ್ಬರ ಮುಂತಾದವುಗಳಿಗೆ ಅನುಕೂಲ್ಯವೂ ಪ್ರಾಪ್ತವಾಗಿದೆ ಆದರೆ ಕುಪ್ಪ ಮಲನಾಡಿನಲ್ಲಿ ಮಾತ್ರ ದನಗಳ ವೃದ್ಧಿ ಅಲ್ಪವಾದ ಕಾರಣ ಅಲ್ಲಿನ ರೈತರ ವ್ಯವಸಾಯ ಜಮೀನುಗಳಿಗೆ ಉಪಯೋಗಿಸುವಂತೆ ಗೊಬ್ಬರಕ್ಕೆ ಬದಲಾಗಿ ತರಗು ಸೊಪ್ಪು ಮೊದಲಾದ ವುಗಳಿಗೂ ಸ್ವರ ಕಾನೆಂಬ ಕಾಡುಭೂಮಿಯು ಅವರವರಿಗೆ ೦ದೊಂದು ಬಗೆಯಾದ ಹಕ್ಕುದಾರಿಯಮೇಲೆ ಕೊಡಲ್ಪಡುತಲಿತ್ತು.

ಇಜಾರೆಯೆಂದರೆ—ಒಂದು ಗ್ರಾಮದಲ್ಲಿ ಪೂರ್ವದಿಂದ ರೈತ್‌ವಾರ್ ಕಂದಾಯವು ಇಷ್ಟೆ ದು ವ್ಯವಸ್ಥಿತವಾಗಿದ್ದರೆ, ಅಂತ ಮೊಬಲಗನ್ನು ವಸೂಲ್ಮಾಡಲಿಕ್ಕೂ, ಬಾಕಿ ಬಂಜರು ಜಮೀನ್ಗಳಲ್ಲಿ ಸಾಗುವಳೀ ಮಾಡಿ ಅದರ ಫಲವು ಹೊಂದುವದಕ್ಕೂ, ಒಂದು ಗ್ರಾಮಕ್ಕೊಂದು ವರ್ಷಕ್ಕೆ ಇಷ್ಟೆಂದು ಗೊತ್ತುಮಾಡಿ ಒಬ್ಬನನ್ನು ಜವಾಬ್ದಾರನನ್ನಾಗಿ [illegible] ಗುಣವಾಗಿ ಅದರಲ್ಲಿ ಸಂಬಂಧಿಸುವ ಲಾಭ ನಷ್ಟಗಳಿಗೆ ಅವನನ್ನೇ ಗುರಿಮಾಡಿ ಕೊಡುವದೇ ಇಜಾರೆಎನ್ನಿಸಿಕೊಳ್ಳುವದು ಅಮಾನಿಯದರೆ— ಒಂದುಗ್ರಾಮದಲ್ಲಿರುವರೈತರು ಕೊಡುವ ಭೂಮಿಗಳ ಕಂದಾಯವನ್ನು ರೈತ್‌ವಾರ್ ವಸೂಲ್ಮಾಡಿಕೊಳ್ಳುವದೂ, ಬಾಬಿಭೂಮಿಗಳಲ್ಲಿ ಹುಟ್ಟತಕ್ಕ ದವಸದೊಳಗೆ ಸರ್ಕಾರದ ಹಿಸ್ಸೆಗೆಬಂದವನ್ನು ಖರೀದಿಮಾಡಿ ಆಮೊಬಲಗನ್ನು ತೆಗದುಕೊಳ್ಳುವದು, ಆಗ್ರಾಮದಸಾಗುವಳೀ ವಿಚಾರ ಈ ವಸೂಲಾತಿ ವಗ್ಯೆರೆ ಕೆಲಸಗಳನ್ನು ಸರ್ಕಾರದವರೇ ನಡೆಸುವದೂ ಅವಾಸಿಗ್ರಾಮಗಳಲ್ಲಿ ನೆಲಗೊಂಡಿರುವ ಪದ್ಧತಿಯಾಗಿರುತಿದೆ.

ಈಪ್ರಕಾರ ಕೃಷೀವಲಿಗಳಾದ ರೈತರು ತಮ್ಮದೇಹ ಶ್ರಮದಿಂದ ತಮ್ಮ ಪ್ರಯೋಜನಕ್ಕೂ ಸರ್ಕಾರದವರ ಪ್ರಯೋಜನಕ್ಕೂ ಸಾಧಾರಕ್ಯೇನ ಕಾರಣಭೂತರಾಗಿರುತ್ತಾರೆಯಾಗಿ ಅಂತವರವ್ಯವಸಾಯವು ಎಲ್ಲಕಡೆಗಳಲ್ಲಿಯೂ ಏಕರೂಪವಾಗಿಯೂ ಸುಲಭವಾಗಿಯೂ ನಡೆದದೆಯಲ್ಲವೆ ಅವರಿಗೆ ಸುಖಕರವಾಗಿರುವದು ದೇಶಾನುಗುಣವಾಗಿ ಕೆಲವುಕಡೆ ವ್ಯವಸಾಯವು ಬಹಳ ಪ್ರಯಾಸ ಸಾಧ್ಯವಾಗಿರುತಿದೆ. ಹ್ಯಾಗಂದರೆ, ಮಲನಾಡಿನ ಒಬ್ಬನು ನಗರದ ಪ್ರಾಂತದಲ್ಲಿ ಭೂಮಿಸಪಡೆಯ ಬೇಕೆಂದಿದ್ದರೆ ಅಲ್ಲಿ ಅವನಿಗೆ ಸಮಭೂಮಿ ದುರ್ಲಭವಾದದರಿಂದ ಗುಡ್ಡ ಕಾಡು ಹಳ್ಳ ದಿಣ್ಣೆಗಳನ್ನು ದರಸಾಸ್ತಿಮಾಡಿ ಅವುಗಳನ್ನು ಗದ್ದೆಗಳನ್ನಾಗಿ ವಿಂಗಡಿಸುವದಕಾಗಿ ದಿಣ್ಣೆಗಳನ್ನು ಕಡಿದು, ಹಳ್ಳಗಳಂ ಭರ್ತಿಮಾಡಿ,ಕಾಡುಗಳಂ ಕಡಿದು ಬೇರುಗಳಂ ವಿಂಗಡಿಸಿ ಸಮ ಮಾಡಬೇಕಾದರೆ ಬಹುದ್ರವ್ಯವು ವ್ಯಯವಾಗಬೇಕಾಗುತಿದೆ. ಕೆಲವುಕಡೆ ಜಲ ದಾರವಿಲ್ಲದೆ ಕೆರೆ ಏರಿಗಳು ನಗ್ಯೆರೆಗಳಿಂದ ಫಲವಿಸಲ್ಲಿಯೋಗಿಸುವುದು ಕೈಕೆಲಸಗಳು ಯಾಸಕರವಾಗಿರುತಿದೆ ಕೃಷೀವಲಿಗಳಿಗೆಜಮೀನು ಇಟ್ಟುಕೊಂಡಿರುವದು ಬರುತಬರುತ ಶ್ರಮವೆಂದು ತೋರಿದಾಗ್ಯೂ, ತಾವುಮೊದಲು ಅಜ್ಞಾನವಶಾತ್ ಖರ್ಚುಮಾಡದ ದ್ರವ್ಯಪರಿಮಾಣವನ್ನಾಲೋಚಿಸಿ ಅದುಬಿಡಲಾರದ ಸಂಕಟಪಡುತಲಿರುತ್ತಾರೆ. ಈವಿಷಯವು ಪೃಥಗ್ವಿಚಾರಣೆಗೆ ಅರ್ಹವಾಗಿರುವದರಿಂದ ಅದು ಮತ್ತೊಂದು ಸಮಯಕೆ ನಿಲ್ಲಿಸಿದುವೆವು. ರೈತರ ವಿತ್ತಾಪಹಾರಕಗಳಾದ ಸರ್ವೇ ಮತ್ತು ಇನಾಂ ಸೆಟಲ್‌ಮೆಂಟ್ ಈರಾಷ್ಟ್ರಕ್ಕೆ ಪ್ರವೇಶವಾದ ತರುವಾಯ ಹಿಂದಿನ ಪದ್ಧತಿಯೆಲ್ಲವೂ ನಾಶವಾಗಿ ಸರ್ವೇಕ್ರಮವೊಂದೇನೆಲಗೊಂಡಿತು. ಇದರಿಂದ ಕಂದಾಯವು ಭೂಮಿಯ ತರಗತಿಗಳನ್ನನುಸರಿಸಿದ್ದಾಗಿಯೂ ಅಂತಾ ತರು ಫೈಸಲಾತಿಯು ದ್ರವ್ಯಾನುಗುಣವಾದದ್ದಾಗಿಯೂ ಏರ್ಪಡುತಬಂದದರಿಂದ ಕಂದಾಯವು ಮೂರುನಾಲ್ಕರಷ್ಟು ಜಾಸ್ತೀ ವ ದುರ್ಭರವಾಗಿ ಪರಿಣಮಿಸಿ ಹಿಂದಿನ ರಿಯಾಯತಿಗಳೆಲ್ಲವೂ ನಿರ್ಮೂಲಗಳಾದವು. ಇದಕ್ಕೆ ತಕ್ಕಂತೆ ಕಾಲವ್ಯತ್ಯಾಸವೂ ಸಹಕಾರಿಯಾಗಿರುವದರಿಂದ ಮೇಲೆಕಂಡ ಲ್ಯಾಂಡ್ ರಿವಿನ್ಯೂ ಪದ್ಧತಿಯು ಈಗ ಸುದ್ದಾಂಗವಾಗಿ ರೂಪಾಂತರವನ್ನೈದಲಿಕೆ ಕಾರಣವಾಯಿತು.

Occasional Notes.
ನೈಮಿತ್ತಿಕವಿಷಯನ್ಯಾಸ

Extention of Income Tax in the C and M Station—ಇನ್‌ಕಂಟ್ಯಾಕ್ಸ್ ಯೆಂಬ ಆಮದಾನೀ ತೆರಿಗೆಯನ್ನು ಇಲ್ಲಿನ ಸಿವಿಲ್ ವ ಮಿಲಿಟರಿ ಸ್ಟೇಷನ್ನಲ್ಲಿ ಜಾರೀಗೆ ತಂದಿರುವದಾಗಿ ನಮೂದಿಸಿ, ಆಟೇವಾರದ ಇಂಡ್ಯ ಗೆಜೆಟಿನಲ್ಲಿ ಇಸ್ತಿಹಾರ್ ಪ್ರಯಿಷ ಮಾಡಲ್ಪಟ್ಟಿರುತಿದೆ.

Reduction in the rate of press telegrams—ಈ ತಿಂಗಳ ಗುರ್ರೇತಾರೀಖ್ ಮೊದಲು, ಇಂಗ್ಲಾಂಡಿನಿಂದ ಇಂಡ್ಯದೇಶಕ್ಕೂ ಇಂಡ್ಯದೇಶದಿಂದ ಇಂಗ್ಲಾಂಡಿಗೂ ಕಳುಹಿಸಲ್ಪಡುವ ತಂತಿ ವೃತ್ತಾಂತಗಳ ದರವು, ಮಾತು ಒಂದಕ್ಕೆ ಒಂದು ಷಿಲ್ಲಿಂಗ್ ನಾಲ್ಕು ಪೆನ್ಸಿಗೆ ಕಮ್ಮಿ ಮಾಡಲ್ಪಡುವದು.

Maharajah of Cashmere.—ಕಾಶ್ಮೀರ ದ ಮಹಾರಾಜರವರು ಬಹುದಿನಗಳಿಂದಲು ರೋಗಪೀಡಿತರಾಗಿದ್ದಾರೆ ಪರಂತು ಅವರ ದೇಹಸ್ಥಿತಿಯು ಈಚೆಗೆ ಕೆಲವುದಿನಗಳ ಹಿಂದಿನವರಿವಿಗೆ ಅಪಾಯ ಚಿಂತೆಯನ್ನುಂಟುಮಾಡತಕ್ಕದ್ದಾಗಿರಲಿಲ್ಲವೆಂದು ಒಂದಾನೊಂದು ಪತ್ರಿಕೆ ಹೇಳುತಿದೆ.

The *Statesman* libel case.—ಕಲ್ಕತ್ತೆ ಸ್ಟೇಟ್ಸ್‌ಮನ್ ಪತ್ರಿಕೆಯ ಎಡಿಟರಾದ ಮಿ. ರಾಬರ್ಟ್ ನೈಟಿಯವರಮೇಲೆ ಮೃತಪಟ್ಟ ಮಿ. ಮಿಲ್ಲರೆಂಬವರು ಮಾಡಿದ್ದ ಮಾನನಷ್ಟ ಮೊಕದ್ದಮೆಯನ್ನು ಗವರ್ನಮೆಂಟ್ ಸಾಲಿಸಿಟರವರು ನಡೆಸುವದಾಗಿ ನಿರ್ಣಯಿಸಿರುವಂತೆಯೂ, ಸದರೀ ಮೊಕದ್ದಮೆಯು ಮುಂದಿನ ಸೆಷನ್ಸಲ್ಲಿ ದರ್ಯಾಪ್ತಿಗೆ ಬರುವದೆಂತಲೂ ಇಂಗ್ಲಿಷ್‌ಮನ್ ಪತ್ರಿಕೆ ಹೇಳುತಿದೆ.

A statement confirmed—ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಗೆ ನೇಟಿವ್‌ಗಳನ್ನು ಸೇರಿಸಿಕೊಳ್ಳುವ ವಿಷಯವನ್ನು ಕುರಿತು ತನಿಖೀ ಮಾಡತಕ್ಕಬಗ್ಯೆ ವೈಸ್‌ರಾಯಿಯವರು ಒಂದು ಕಮಿಟಿಯನ್ನು ಯೇರ್ಪಡಿಸಬಹುದೆಂದು ಈಚೆಗೆ ಇಂಗ್ಲಾಂಡಿನಿಂದ ಬಂದ ತಂತಿ ವೃತ್ತಾಂತವು ಯಥಾರ್ಥವಾದದ್ದೆಂತಲೂ, ಸದರೀವಿಷಯವು ಈಗ ಆಲೋಚನೆಯಲ್ಲಿದೆ, ಕಡೆಗೆ ಒಂದು ಕಮಿಟಿ ಯೇರ್ಪಡಬಹುದೆಂತಲೂ ಸಿಮ್ಲಾನಿಂದ ಇಂಡ್ಯನ್ ಪತ್ರಿಕೆಗೆ ತಂತಿವೃತ್ತಾಂತ ಬಂದಿರುತಿದೆ.

Mr Dadabhai Naoroji's Candidature ಮಿ. ದಾದಾಭಾಯಿ ನೌರೋಜಿಯವರು ಇಂಗ್ಲಿಷ ಪಾರ್ಲಿಮೆಂಟ್ ಸಮಾಜದಲ್ಲಿ ಹಾಲ್‌ಬರ್ನ್‌ಯೆಂಬ ಪ್ರದೇಶದ ಪ್ರಜೆಗಳ ತರಫ ಒಬ್ಬ ಮೆಂಬರಾಗಿ ಸೇರಬೇಕೆಂದು ಈಗ ಮಾಡುತಲಿರುವ ಪ್ರಯತ್ನದ ವಿಷಯದಲ್ಲಿ ಲಂಡನ್ ಪಟ್ಟಣದಿಂದ ಹಿಬ್ಬಾತನು ಇಂಡಿಯನ್ ಸ್ಪೆಕ್ಟೇಟರ್ ಪತ್ರಿಕೆಗೆ ತಂತಿ ವೃತ್ತಾಂತದಮೂಲಕ ತಿಳಿಸುವದೇನೆಂದರೆ ಟೌನ್ ಹಾಲ್‌ನಲ್ಲಿ ಪ್ರಬಲ ಸಮಾಜ ಸೇರಿತು, ಸಭಿಕರು ಐಕಮತ್ಯವಾಗಿ ಮಿ. ದಾದಾಭಾಯಿ ನೌರೋಜಿಯವರನ್ನು ತಮ್ಮ ತರಫ ಪ್ರತಿನಿಧಿಯಾಗಿ ಅಂಗೀಕರಿಸಬೇಕೆಂದು ನಿರ್ಣಯಿಸಿದರು, ಎಂಬದು.

Another notorious dacoit killed—ಗ್ವಾಲಿಯರ್ ಪಟ್ಟಣದ ದಕ್ಷಿಣಭಾಗದಲ್ಲೂ ಲಾಲಿಪುರ, ಮತ್ತು ಝಾನ್ಸೀ ಡಿಸ್ಟ್ರಿಕ್ಟು ಸರಹದ್ದುಪ್ರಾಂತದಲ್ಲೂ ಸೇರಿಕೊಂಡು ಪ್ರಬಲ ದರೋಡೆಗಳು ನಡೆಸಿರುವ ಝೂಜರಸಿಂಗ್ ಯೆಂಬವನು ಯೆದುರುಬಿದ್ದು ಗ್ವಾಲಿಯರ್ ಸರ್ಕಾರ್‌ಸೇನೆಗೂ ಅವನಿಗೂ ಸ್ವಲ್ಪಹೊತ್ತು ಕೈಕಲಿತಮೇಲೆ ಸದರೀ ಸೇನೆಯಿಂದ ಕೊಲ್ಲಲ್ಪಟ್ಟನು. ಕಳೆದತಿಂಗಳ ೧೯ನೇ ತಾರೀಖ್‌ನಲ್ಲಿ ಸಿಂಧಿಯಾಯವರ ಸೇನೆಯಿಂದಲೂ ಭೂಪಾಲ್ ಪಟಾಲದಿಂದಲೂ ದಸ್ತಗಿರಿ ಮಾಡಲ್ಪಟ್ಟ ಮರ್ದಾಂಸಿಂಗ್ ಯೆಂಬವ

ನ ಸಂಗಡ ಇದ್ದ ಇಬ್ಬರು ಪ್ರಸಿದ್ಧ ಕಳ್ಳರು ಗೋಲಿಯಿಂದ ಹೊಡೆಯಲ್ಪಟ್ಟರು ಸದರೀಯವರ ದಸ್ತಗಿರಿಯಬಗ್ಗೆ ಕ್ರಮವಾಗಿ ೧,೦೦೦ ಮತ್ತು ೫೦೦ ರೂಪಾಯಿಗಳ ಇನಾಂಗಳು ಕೊಡಲ್ಪಡುವವೆಂದು ಪ್ರಕಟಿಸಲ್ಪಟ್ಟಿತ್ತು.

A public meeting.—ಮುಂದಿನ ಪಾರ್ಲಿಮೆಂಟ ಮೆಂಬರಗಳ ಚುನಾವಣೆಯಲ್ಲಿ, ಮೆ. ದಾದಾಭಾಯ್ ನೌರೋಜಿ ಮತ್ತು ಮೆ|| ಲಾಲಮೋಹನಘೋಷಯವರು, ಕ್ರಮವಾಗಿ ಹಾಲಬರ್ನ ಮತ್ತು ಡೆಪ್ಟಿ ಫೋರ್ಡ ಯೆಂಬ ತುಕಡಿಗಳಿಗೆ, ಪ್ರಜೆಗಳ ತರಫ ಪ್ರತಿನಿಧಿಯಾಗುವ ವಿಷಯದಲ್ಲಿ ನಡೆಯುತಲಿರುವ ಪ್ರಯತ್ನವನ್ನು ಕುರಿತು ತಮಗೆ ಪ್ರಬಲವಾದ ಸಂತುಷ್ಟಿಯನ್ನು ವ್ಯಕ್ತಪಡಿಸುವದಕ್ಕಾಗಿಯೂ, ಪಾರ್ಲಿಮೆಂಟ ಮೆಂಬರೆಂಬ ಪ್ರಶಸ್ತಿಯಂ ಪಡೆಯುವದಕ್ಕಾಗಿ ಪ್ರಯತ್ನಪಡುತಲಿರುವ ಇಂಡ್ಯದೇಶದ ಸದರೀ ಇಬ್ಬರು ಉಮೇದವಾರರಿಗೂ ಸಹಾಯಕರಾಗಿರುವಂತೆ ಬರವೇ ಕೊಟ್ಟಿರುವ ಸದರೀ ಯೆರಡು ತುಕಡಿಗಳ ಜನಗಳಿಗೆ ತಮ್ಮ ಮನ್ನಣೆಯನ್ನರ್ಪಿಸುವದಕ್ಕಾಗಿಯೂ, ಮುಂಬೈ ಪ್ರೆಸಿಡೆನ್ಸಿ ಅಸೋಸಿಯೇಷನ ಯೆಂಬ ಸಭೆಯವರು ಪ್ರಜೆಗಳ ಸಮಾಜ ಸೇರಬೇಕೆಂದು ನಿರ್ಣಯಿಸಿರುತ್ತಾರೆ.

A motion.—ಆರುತಿಂಗಳ ಹಿಂದೆ, ತಿಕಾರಿ ಸಂಸ್ಥಾನದ ಮಹಾರಾಣಿಯವರು, ತಾವು ಗಂಡನು ಬಿಟ್ಟು ಕೆಲವು ಸಂವತ್ಸರಗಳ ಮೊದಲು ಪ್ರತ್ಯೇಕವಾಗಿ ಇದ್ದದರಿಂದ ರಾಜ್ಯಾಡಳಿತವಂ ಅವರ ಕೈತಪ್ಪಿಸಿ ಕೋರ್ಟಆಫ ವಾರ್ಡ್ಸ ಯೆಂಬ ಪಂಚಾಯತರ ವಶಕ್ಕೆ ಕೊಡಬೇಕೆಂದು ಕೇಳಿಕೊಂಡಮೇರೆ ಬಂಗಾಳೀ ಗವರ್ನಮೆಂಟನವರು ಕೊಟ್ಟುಬಿಟ್ಟರು. ಸದರೀ ಮಹಾರಾಣೀಯವರು ಈಚೆಗೆ ಕೆಲವು ವಾರಗಳ ಹಿಂದೆ ಮೃತಪಟ್ಟರಾಗಿ, ರಾಜ್ಯಾಡಳಿತದಲ್ಲಿ ಸದರೀ ಪಂಚಾಯತರು ಪ್ರವೇಶಿಸಕೂಡದೆಂದು ಇಂಜಂಕ್ಷನ ಕೊಡಬೇಕೆಂತಲೂ, ಮೃತಪಟ್ಟ ಮಹಾರಾಣಿಯವರ ಮೈನರ್ ಮಕ್ಕಳು ಮೂವರ ತರಫ ಜೆಂಟಿಗಳಿಗೆ ತಮ್ಮನ್ನು ನ್ಯಾಯವಾದ ಮ್ಯಾನೇಜರಾಗಿ ಮಾಡಬೇಕೆಂತಲೂ ಆಕೆಯವರ ಪತಿಯು ಕಲ್ಕತ್ತಾ ಹೈಕೋರ್ಟನವರನ್ನು ಕೇಳಿಕೊಳ್ಳಬೇಕೆಂದು ಯೋಚಿಸುತಲಿದ್ದಾರೆಂದು ಅಲ್ಲಿನ ಪತ್ರಿಕೆಯೊಂದು ತಿಳಿಸುತ್ತಿದೆ.

The Govt of India share of the loot of Theebaw's palace.—ಬರ್ಮ್ಮಾದೇಶದ ಅರಸರಾದ ಥೀಬಾಯವರ ಅರಮನೆಯನ್ನು ಲೂಟೀ ಮಾಡಿದ್ದರಲ್ಲಿ ಇಂಡ್ಯ ಗವರ್ನಮೆಂಟನವರ ಭಾಗಕ್ಕೆ ಬಂದ ಜವಾಹಿರ ಮೊದಲಾದವನ್ನು ಹರಾಜಿನಬಗ್ಗೆ, ಕಲ್ಕತ್ತೆಗೆ ತಂದು, ಗವರ್ನಮೆಂಟ ತೋಷಖಾನಾ ಹರಾಜದಾರರಾದ ಮೆಸ್ಸರ್ಸ ಹಾಮಿಲ್ಟನ ಕಂಪನಿಯವರಿಗೆ ಒಪ್ಪಿಸಲು ಅವರು ಸದರೀ ಜವಾಹಿರ ಮೊದಲಾದವು ಇಡಲ್ಪಟ್ಟಿದ್ದ ಪೆಟ್ಟಿಗೆಗಳನ್ನೆಲ್ಲ ತೆರದು ನೋಡಲಾಗಿ ಅವುಗಳೊಳಗೆ ದೊಡ್ಡ ದೊಡ್ಡ ಚಿನ್ನದ ಹೂಜಿಗಳು, ಚಿನ್ನದ ಬಿಂದಿಗೆಗಳು ಮೊದಲಾದ ಸ್ನಾನದ ಮನೆ ಪಾತ್ರೆಗಳು, ಮತ್ತು ಅನರ್ಘ್ಯಗಳಾದ ಕೆಂಪು ಪಚ್ಚೆಗಳು ಕೆತ್ತಲ್ಪಟ್ಟಿರುವ ಚಿನ್ನದ ಒಂದು ಸಿಂಹಾಸನಗಳಿದ್ದವೆಂದು ಒಂದಾನೊಂದು ಕಲ್ಕತ್ತಾ ಪತ್ರಿಕೆ ತಿಳಿಸುತದೆ. ಇಂತಾ ಪದಾರ್ಥಗಳೇ ನಿಷ್ಕಾರಣವಾಗಿ ಇಂಗ್ಲಿಷನವರು ಅಲ್ಲಿಪ್ರವೇಶಿಸುವದಕ್ಕೆ ಮುಖ್ಯ ಪ್ರೇರಕವಾದವೆಂಬ ಅಂಶ ಪ್ರಸಿದ್ಧವಾಗಿರುತಿದೆಯಷ್ಟೆ.

LOCAL AND PROVINCIAL NEWS
ಒಳದೇಶದಮತ್ತು ತಾಲ್ಲೂಕುವಾರ್ತಾವೃತ್ತಾಂತಗಳು.

The Ramzan.—ಮುಸಲ್ಮಾನಜನರಿಗೆ ಕೇವಲ ಮುಖ್ಯವಾದ ರಂಜಾನ ಹಬ್ಬ ಪ್ರಕಳದ ಶನಿವಾರದಿನ ಕ್ರಮಪ್ರಕಾರ, ತದನಂತರವಾದ ಬುಡ್ಡಾಹಬ್ಬ ನಿನ್ನೆಯದಿನ ಆಚರಿಸಲ್ಪಟ್ಟಿತು.

The Central College.—ಈಗ ಸೆಂಟ್ರಲ್ ಕಾಲೇಜಿನವರ ಪಾಠಶಾಲೆಯಲ್ಲಿರುವ ಮೆ|| ಎಚ್. ಜೆ. ಡಿ ವಿಲ್ಕಿನ್ಸನ್ಯೆಂಬವರನ್ನು ಇಲ್ಲಿನ ಸೆಂಟ್ರಲ್‌ಕಾಲೀಜ್ ಸ್ಪೆಯರ್ಸ್ ಅಸಿಸ್ಟೆಂಟರಾಗಿ ನೌಕರರನ್ನಾಗಿಡಬೇಕೆಂದು ಅಧಿಕಾರಿಗಳು ಯೋಚಿಸುತಲಿರುವಂತೆ ಒಳದೇಶದ ಪತ್ರಿಕೆಯಮೂಲಕ ತಿಳಿಯಬರುತಿದೆ.

Execution.—ಹುಳಿಯಾರತಾಲ್ಲೂಕು ಗಿರಿಜನಾಳ್ವೆಂಬ ಗ್ರಾಮದಲ್ಲಿ ತಿಮ್ಮನೆಂಬವನು ಖೂನಿಪಡಿಸಿದ ತಕಸೀರಬಗ್ಗೆ ಚೀಫಕೋರ್ಟನವರಿಂದ ವಿಧಿಸಲ್ಪಟ್ಟ ದಂಡನೆಯನ್ನನುಸರಿಸಿ, ಕಳೆದ ಶನಿವಾರ ಪ್ರಾತಃಕಾಲ ಇಲ್ಲಿನ ಸೆಂಟ್ರಲ್ ಜೆಯಿಲಿನಲ್ಲಿ ಗಲ್ಲಿಗೆ ಹಾಕಲ್ಪಟ್ಟನು.

Increase of pay.—ಇಲ್ಲಿನ ಸೆಂಟ್ರಲ್ ಕಾಲೀಜ್ ಅಸಿಸ್ಟೆಂಟ ಮ್ಯಾಸ್ಟರಗಳಾದ ಮೆ|| ವೆಂಕಟಸ್ವಾಮಿನಾಯುಡು ಯವರಿಗೂ ಮೆ|| ಪರಮಶಿವಯ್ಯರಿಗೂ ಈಚೆಗೆ ಐವತ್ತು ರೂಪಾಯಿಗಳ ಇಜಾಫೆಕೊಡಲ್ಪಟ್ಟಂತೆ ಒಳದೇಶದ ಸ್ಪೆಕ್ಟೇಟರ ಪತ್ರಿಕೆಯ ಮೂಲಕ ತಿಳಿಯಲಾದೆವು.

A transfer.—ಮೈಸೂರುಸ್ಟೇಟರೆಯಿಲ್ವೆ ಸಾಬಕ ಮ್ಯಾನೇಜರಾದ ಮೆ|| ಎ. ಆರ್. ಬೀಚರ ಯವರು, ಸದರೀ ರೆಯಿಲ್ವೆಇಲಾಖೆಯು ದಕ್ಷಿಣಮಹಾರಾಷ್ಟ್ರ ರೆಯಿಲ್ವೆ ಕಂಪೆನಿಯವರಿಗೆ ವರ್ಗಮಾಡಲ್ಪಟ್ಟಮೇರೆ ತಮ್ಮಕೆಲಸವಂ ಬಿಡಬೇಕಾಯಿತಷ್ಟೆ, ಸದರೀಯವರುಈಗ ಬಂಗಾಳೆ ಮರಮ್ಮತಿ ಇಲಾಖೆ ರೆಸ್ತೆಗಳ ರವಿಯೀ ಕೆಲಸದಲ್ಲಿ ನಿಯಮಿಸಲ್ಪಟ್ಟರೆಂದು ಕೇಳುತ್ತೇವೆ

Deaths by accident.—ಸುಮಾರುನಾಲ್ಕು ಜನಗಳಿದ್ದವೆ, ಈ ಊರುಕಲಾಶಿಪಾಳ್ಯದ ಆಚೆ ಒಂದು ಸತ್ರದಲ್ಲಿ ಡಂಕಣ ಕೋಟೆಯಿಂದ, ರಂಜಾನಹಬ್ಬದಲ್ಲಿ ತಿರುಪದಬಗ್ಗೆ, ಇಬ್ಬರುಗಂಡಸರು, ಹನ್ನೆರಡುವಯಸ್ಸಿನ ಒಬ್ಬಹುಡುಗಿ, ಈ ಮೇರೆ ಮೂವರುಮುಸಲ್ಮಾನರು ಬಂದುಇಳಿದಿದ್ದರು. ಅವರುಕುಳಿತಿದ್ದ ಕಟ್ಟಡದ ಮೇಲಿನ ದೂಲ ದೈವಾತ್ ಮುರಿದುಬಿದ್ದು ಮೂವರೂ ಏಕ ಕಾಲದಲ್ಲಿ ಮೃತಪಟ್ಟರೆಂದು ಕೇಳಿ ವಿಷಾದಿಸುತ್ತೇವೆ.

A new advocate.—ಮದರಾಸಹೈಕೋರ್ಟ ನೇಟಿವ್ ಅಡ್ವೊಕೇಟಗಳಲ್ಲೊಬ್ಬರು ಪ್ರಸಿದ್ಧರಾದ ಮೆ|| ಬಾಷ್ಯಮಯ್ಯಂಗಾರ್ರವರು ಇಲ್ಲಿನ ಚೀಫಕೋರ್ಟನಲ್ಲಿ ೨,೦೦೦ ರೂಪಾಯಿಗಳ ಒಂದುಮೊಕದ್ದಮೆಯನ್ನು ನಡೆಸುವದಕ್ಕಾಗಿ ಇಲ್ಲಿನ ರೂಲ್ಸನ್ನನುಸರಿಸಿ ರುಸುಂಕೊಟ್ಟು ದಾಖಲಾಗಿ ಕಳೆದ ಬೃಹಸ್ಪತಿವಾರದದಿನ ತಮ್ಮ ಮೊಕದ್ದಮೆಯನ್ನು ನಡೆಸಿದರು. ಸದರೀಮೊಕದ್ದಮೆಯಲ್ಲಿ ಕೋರ್ಟನವರು ಇನ್ನು ಫೈಸಲ್ ಮಾಡಲಿಲ್ಲವು

Mysore State Railway.—ಮೈಸೂರು ಸ್ಟೇಟರೆಯಿಲ್ವೇ ಕಂಪನಿಯನ್ನು ದಕ್ಷಿಣ ಮಹಾರಾಷ್ಟ್ರ ರೆಯಿಲ್ವೇ ಕಂಪೆನಿಗೆ ವರ್ಗವಾದುದರ ವಿಷಯವನ್ನು ಕುರಿತು, ಕಳೆದ ತಿಂಗಳ ೨೮ನೇ ತಾರೀಖಿನ ದಿನ, ಇಲ್ಲಿನ ಬ್ರಿಟಿಷ ರೆಸಿಡೆಂಟರಾದ ಮೆ|| ಜೆ ಬಿ. ಲ್ಯಾಯಲಿಯವರ ಬಂಗ್ಲೆಯಲ್ಲಿ ರೆಸಿಡೆಂಟರು, ದಿವಾನರು ಮತ್ತು ದಕ್ಷಿಣ ಮಹಾರಾಷ್ಟ್ರ ರೆಯಿಲ್ವೇ ಕಂಪೆನಿಯ ಪ್ರತಿನಿಧಿಯವರು, ಇವರೆಲ್ಲರು ಸೇರಿದ್ದರು. ಆ ಕಾಲದಲ್ಲಿ ಈ ಬಗ್ಗೆ ಹುಟ್ಟಿದ ದಸ್ತೈವಜಿನ ಷರತ್ತುಗಳಿಗೆ ಈ ಸಂಸ್ಥಾನದವರೂ ಸದರೀ ಕಂಪೆನಿಯವರೂ ಒಪ್ಪಿದಮೇಲೆ ಈ ತಿಂಗಳ ಗುರ್ರೆ ತಾರೀಖಿನಲ್ಲಿ ಸ್ಟೇಟ ರೆಯಿಲರಸ್ತೆಯು ಅವರಿಗೆ ಒಪ್ಪಿಸಲ್ಪಟ್ಟಿತು. ಈ ಕಂಪನಿಯ ಆಫಿಸರಗಳೆಲ್ಲರೂ ತಮ್ಮತಮ್ಮಕೆಲಸಗಳ ಚಾರ್ಜ ವಹಿಸಿದರು. ಸದರಿರೈಲ್ವೆ ತರಕ್ಷ್ಯಯ ಟ್ರಾಫಿಕ ಸೂಪರಿಂಟೆಂಡೆಂಟರಾದ ಮೆ|| ಪ್ರಿಟ್ಚಾರ್ಡ್, ಲೋಕಮೋಟಿವ್ ಸೂಪರಿಂಟೆಂಡೆಂಟರಾದ ಮೆ|| ಮಾಲಿಯವರು, ಅಸಿಸ್ಟೆಂಟ ಸೂಪರಿಂಟೆಂಡೆಂಟರಾದ ಮೆ||ಮಹದೇವಶಾಸ್ತ್ರಿ, ಮೆ|| ಕ್ರೋಜರ್, ಮೆ|| ವೀರ್, ಇವರೆಲ್ಲರು ದಕ್ಷಿಣಮಹಾರಾಷ್ಟ್ರ ರೆಯಿಲ್ವೇ ಕಂಪೆನಿಯ ಏಜೆಂಟ್ರು ಮತ್ತು ಮ್ಯಾನೇಜರ ಅಧಿಕಾರಕ್ಕೆ ಒಳಪಟ್ಟಿರುವಂತೆ ತಿಳಿಸಲ್ಪಟ್ಟರು. ಆ ಡಿಪಾರ್ಟ್ ಇಲಾಖೆ ಜನಗಳೆಲ್ಲರೂ ಈ ತಿಂಗಳ ೩ನೇ ತಾರೀಖಿನಲ್ಲಿ ದಾರ್ವಾಡಕ್ಕೆ ಹೊರಡು ಹೋಗಬೇಕೆಂದು ಹುಕುಂ ಆಗಿ ಅವರೆಲ್ಲರೂ ನಿನ್ನೆಯದಿನ ಪ್ರಯಾಣವಾದರಲ್ಲದೆ, ಪೆನ್ಷನಿಗೆ ಅರ್ಹರಲ್ಲದವರಿಗೆಲ್ಲ ಅಯಿದುರೂಪಾಯಿಗಳ ಇಜಾಫೆ ಕೊಡಲ್ಪಡುವದೆಂದು ತಿಳಿಸಲ್ಪಟ್ಟರು

Murder in the Fort.—ಕಳೆದ ಬೃಹಸ್ಪತಿವಾರದದಿನ ಬೆಳಗ್ಗೆ ಈವೂರು ಕೋಟೆಯೊಳಗಿರುವ ಒಂದು ದೊಡ್ಡ ಭಾವಿಯಲ್ಲಿ ಒಂದು ಮುರ್ದೆ ತೇಲುತಲಿದ್ದದ್ದು ಕಂಡುಬಂದು ಕೂಡಲೇ ಪೋಲೀಸನವರಿಗೆ ರಿಪೋರ್ಟಾಗಿ, ಅವರು ಬಂದು ಮುರ್ದೆಯನ್ನು ತೆಗೆಸಿ ನೋಡುವಷ್ಟರಲ್ಲಿ ಹಗ್ಗದಿಂದ ಕೈಕಾಲ್ಗಳೆಲ್ಲವು ಚನ್ನಾಗಿ ಬಿಗಿಯಲ್ಪಟ್ಟಿತ್ತು. ಖೂನಿ ಮಾಡಲ್ಪಟ್ಟವನು ಫಲಾನೆಯವನೆಂದು ಗುರ್ತು ಸಿಕ್ಕಿತು. ಮೊದಲು ಖೂನಿ ಮಾಡಿ ತರುವಾಯ ಮುರ್ದೆಯನ್ನು ಭಾವಿಯಲ್ಲಿ ಹಾಕಿದಂತೆ ಕಂಡುಬಂತು. ಬೃಹಸ್ಪತಿವಾರದದಿನ ಮಧ್ಯಾಹ್ನ ಮತ್ತು ಸಾಯಂಕಾಲ ಮಿಲಿಟರಿ ಸ್ಟೇಷನ ಎರಡನೇ ಮ್ಯಾಜಿಸ್ಟ್ರೇಟರವರು ಲಜಮಾಯಿಷೀ ಮಾಡಿದ್ದರಲ್ಲಿ ಖೂನಿಮಾಡಲ್ಪಟ್ಟ ಮುನಿಸಾಮಿ ಎಂಬವನು ತಾನು ನೌಕರೀ ಮಾಡಿದಬಗ್ಗೆ ತನಗೆಬರಬೇಕಾದ ತಲಬುಬಾಕೀಗಾಗಿ, ಬೆಂಗಳೂರು ಡಿಸ್ಟ್ರಿಕ್ಟ ಡೆಪ್ಯುಟಿಕಮಿಷನರ ಆಫೀಸ ಕ್ಲರ್ಕ ಗೋವಿಂದರಾಜುಮೊದಲಿ ಎಂಬಾತನ ಮೇಲೆ ಮಿಲಿಟರಿ ಸ್ಟೇಷನ ಸಿವಿಲಕೋರ್ಟನಲ್ಲಿ ದಾವೇ ತರಲು ಸದರೀ ಮುನಿಸಾಮಿಯ ಮೇಲೆ ಪ್ರತಿವಾದಿಗೂ ಆತನ ಸಾಕ್ಷಿಗಳಿಗೂ ಬಹಳ ಜಿದ್ದುಂಟಾಗಿ ಮೊಕದ್ದಮೆ ಡಿಸ್ಮಿಸ್ಆದಕೂಡಲೆ, ಸಾಕ್ಷಿಗಳು ಕೋರ್ಟನಿಂದ ಹೊರಗೆ ಬರುವಲ್ಲಿ, ಪ್ರತಿವಾದಿಯ ತರಫ ಮೂವರು ಸಾಕ್ಷಿಗಳು ವಾದಿಯಮೇಲೆ ಜುಲುಂ ನಡೆಸಲು ವಾದಿಯು ಕೂಡಲೇ ಜಡ್ಜಿಯವರಲ್ಲಿ ಹೇಳಿಕೊಂಡನು. ಅವರು ಪೋಲೀಸ ಕೋರ್ಟಿನಲ್ಲಿ ಅಪರಾಧಿಗಳಮೇಲೆ ಫಿರ್ಯಾದಿ ಮಾಡುವಂತೆ ಅಪ್ಪಣೆ ಕೊಟ್ಟರು. ಅದೇಪ್ರಕಾರ ಮೃತಪಟ್ಟ ಮುನಿಸಾಮಿ ಯೆಂಬವನು ಮರುದಿನ ಫಿರ್ಯಾದುಮಾಡಲು ಯೋಚಿಸುತಿರುವಲ್ಲಿ ಮುಂಚಿನರಾತ್ರಿ ಖೂನಿ ಮಾಡಲ್ಪಟ್ಟನು. ಪ್ರತಿವಾದಿ ಗೋವಿಂದರಾಜು ಮುದಲಿ, ಆತನ ತರಫ ಸಾಕ್ಷಿಗಳಾದ ವೆಂಕಟಸಾಮಿ, ಮತ್ತು ಸುಬ್ರಾಯ ಮುದಲಿ, ಈಮೂವರೂ ಅನುಮಾನದಮೇಲೆ ದಸ್ತಗಿರಿ ಮಾಡಲ್ಪಟ್ಟು ಜಾಮೀನ ಮೇಲೆ ಖುಲಾಸೇ ಯಾಗಿರುತ್ತಾರೆ. ಮೊಕದ್ದಮೆಯು ಕ್ಷಿಪ್ರದಲ್ಲಿ ಪತ್ತೆಯಾಗಬೇಕೆಂದು ಕೋರುವೆವು.

Mysore Local Examination.—ಮದರಾಸಮಿಡಲಸ್ಕೂಲ್ ಪರೀಕ್ಷೆಗೆ ಸಮಾನವಾದ ದೇಶಭಾಷೆಗಳ ಪರೀಕ್ಷೆಯೊಂದು ಮೈಸೂರು ಲೋಕಲ್ ಎಗ್ಜಾಮಿನೇಷನ್ಯೆಂಬಹೆಸರಿನಿಂದ ಏರ್ಪಡಿಸಲ್ಪಟ್ಟ ಅದು ಪ್ರತಿಸಂವತ್ಸರದ ಫೆಬ್ರವರಿ ತಿಂಗಳಲ್ಲಿ ಡಿಸ್ಟ್ರಿಕ್ಟ ಕಸಬೆಗಳಲ್ಲಿ ಅಥವಾ ಆಯಾ ಸಂವತ್ಸರದಲ್ಲಿ ನಿರ್ಧರಿಸಲ್ಪಡತಕ್ಕ ಸ್ಥಳಗಳಲ್ಲಿ ಜರುಗುವದಲ್ಲದೆ ಇವರಲ್ಲಿ ಮೈಸೂರು ದೇಶದೊಳಿರುವ ಸರ್ಕಾರ ವ ಸಂರಕ್ಷಿತ ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳು ಅಥವಾ ವಿದ್ಯಾರ್ಥಿನೀಗಳು ಪರೀಕ್ಷಿಸಲ್ಪಡುವರು. ಈಪರೀಕ್ಷೆಗೆ ಹೋಗತಕ್ಕವರು ಯಾವದಾದರೊಂದು ಸ್ಕೂಲ್‌ನಲ್ಲಿ ೪ತಿಂಗಳಿಗೆ ಕಡಮೆಯಿಲ್ಲದಂತೆ ಓದುತಲಿದ್ದರೆಂಬದಾಗಿ ಸರ್ಟಿಫಿಕೇಟ ಪಡೆಯತಕ್ಕದ್ದು. ಮದರಾಸ ಮಿಡಲಸ್ಕೂಲ್ ಪರೀಕ್ಷೆಯನ್ನಾಗಲಿ ಅಥವಾ ಇತರ ಉನ್ನತ ಪರೀಕ್ಷೆಯನ್ನಾಗಲಿ ಕೊಟ್ಟದ್ದಹೊರ್ತು ಮೈಸೂರು ಸರ್ಕಾರದಲ್ಲಿ ವರ್ನ್ಯಾಕ್ಯುಲರ ನೌಕರಿಗಳನ್ನಪೇಕ್ಷಿಸುವವರಿಗೆಲ್ಲ ಸದರೀಪರೀಕ್ಷೆಯುಆವಶ್ಯಕವಾದದ್ದಾಗಿರುತಿದೆ. ಗವರ್ನಮೆಂಟ ವರ್ನ್ಯಾಕ್ಯುಲರ ಸ್ಕೂಲುಗಳಲ್ಲಿಯ ಟೀಚರಕೆಲಸಗಳನ್ನಪೇಕ್ಷಿಸುವ ಉಮೇದವಾರರು ಸಹ ಈ ಪರೀಕ್ಷೆ ಕೊಡಬೇಕಾಗಿರುತಿದೆ. ಮತ್ತು ಈಗ ಗವರ್ನಮೆಂಟ ನೌಕರಿಯೊಳಿರುವ ಪ್ರ್ಯಾಯಿಮರಿ ಟೀಚರಗಳು ಸಹ ಮುಂದೆ ಬಡ್ತೀಗೆ ಲಾಯಖಾಗ ಬೇಕಾದರೆ ಈ ಪರೀಕ್ಷೆಯನ್ನು ಆವಶ್ಯಕವಾಗಿ ಕೊಡತಕ್ಕದ್ದು. ಆವಶ್ಯಕಗಳಾದ ಭಾಷೆಗಳು—ಕನ್ನಡ, ತೆಲುಗು, ಅರವ, ಅಥವಾ ಹಿಂದುಸ್ಥಾನಿ. ಇವುಗಳಲ್ಲಿ ಪರೀಕ್ಷಾ ಗ್ರಂಥಗಳು ಕ್ರಮವಾಗಿ ತಿಳಿಸಲ್ಪಡುವದಲ್ಲದೆ, ಅವುಗಳಲ್ಲಿ ಪಠನೀಯಗಳಾದಭಾಗಗಳು ಸಹ ಮುಂದೆ ಗೊತ್ತುಮಾಡಲ್ಪಡುವವು. ಈ ಪರೀಕ್ಷೆಗೆ ಹೋಗತಕ್ಕ ವಿದ್ಯಾರ್ಥಿಗಳು ೧ ರೂಪಾಯಿಯಂತೆಯೂ, ಇತರರು ಮೂರು ರೂಪಾಯಿಗಳಂತೆಯೂ, ಫೀ ಕೊಡಬೇಕಾಗಿರುವದು. ಇದರ ಪ್ರಯೋಜನವನ್ನು ಜನಗಳೇ ನಿರ್ಧರಿಸಿ ತಿಳಿಯಬಹುದು.

CORRESPONDENCE.
ಕರ್ಣಾಟಕಪ್ರಕಾಶಿಕಾಎಡಿಟರವರಸಮಕ್ಷಮಕ್ಕೆ

ಲೋಕದಲ್ಲಿಉದ್ಯೋಗಸ್ಥರೊಳು ಕೆಲವರುಧನಾಪೇಕ್ಷಿಗಳಾಗಿಯೂ, ಕೆಲವರು ಕಾಮಾಪೇಕ್ಷಿಗಳಾಗಿಯೂ ಇರುತ್ತಾರೆ. ಧನಾಪೇಕ್ಷಿಗಳು ಧನಾರ್ಜನೆಯಲ್ಲಿಯೇ ಅತ್ಯಾಸಕ್ತಿಯುಳ್ಳವರಾಗಿರುತ್ತಾರೆ. ಕಾಮಾಪೇಕ್ಷಿಗಳಾದರೊ, ಜುಲ್ಮೀ ಮುಂತಾದ ನಾನಾವಿಧ ದುಷ್ಕೃತ್ಯಗಳಿಂದ ಪರಸ್ತ್ರೀಯರನ್ನುಸ್ವಾಧೀನ ಪಡಿಸಿಕೊಳ್ಳುತ್ತಾರೆ ಹೀಗೆ ಎರಡುಬಗೆಯಾಗಿರುವ ಉದ್ಯೋಗಸ್ಥರಿಂದ ಅನೇಕರಿಗೆ ಧನಮಾನಹಾನಿಗಳುಂಟಾಗುತವೆ. ಅತಿ ನೀಚಗಳಾದ ಈ ಎರಡು ವಿಷಯಗಳನ್ನಪೇಕ್ಷಿಸುವವರು ಉಪಧಾತ್ರಯದಿಂದ ಅನ್ಯರಿಗೆ ವಿಧೇಯರಾಗುವರು. ಇದರಿಂದ ಉತ್ತಮರ್ಣರು ಅಂದರೆ ಸಾಲವನ್ನು ಕೊಟ್ಟವರು ಹಣವನ್ನು ಕಳೆದುಕೊಳ್ಳುವದಕ್ಕೂ, ನಿರಪರಾಧಿಗಳು ದಂಡಿಸಲ್ಪಡಲಿಕ್ಕೂ, ಅಪರಾಧಿಗಳು ಮನ್ನಿಸಲ್ಪಡಲಿಕ್ಕೂ, ಇನ್ನೂ ನಾನಾವಿಧ ಅಕ್ರಮಗಳು ಸುಲಭವಾಗಿ ನಡೆಯಲಿಕ್ಕೂ ಅವಕಾಶ ಪ್ರಾಪ್ತವಾಗುತಿದೆ. ಇಂತಾ ಉದ್ಯೋಗಸ್ಥರು ಬಗೆಬಗೆ ಸುಳ್ಳಾಡಿ ಅವಂ ದಕ್ಕಿಸಿಕೊಳ್ಳುವವನನ್ನೂ, ಮಾನಹಾನಿ, ವಧಾ, ಬಂಧ, ಮುಂತಾದ ಕ್ರೂರಕೃತ್ಯಗಳಿಂದ ಬಡವರಾದ ಅನೇಕ ಜನರನ್ನು ಪೀಡಿಸುವವಿಷಯದಲ್ಲಿ ಮುಖ್ಯವಾಗಿ ತಮ್ಮ ಅಧಿಕಾರ ಬಲವನ್ನು ಉಪಯೋಗಪಡಿಸುವದನ್ನೂ ಅನೇಕ ಸಂದರ್ಭಗಳಲ್ಲಿ ನಾವು ಕೇಳಿರುತ್ತೇವೆ. ಪ್ರಾಯೇಣ ಇಂತಾ ಕೆಲಸಗಳು ದೊಡ್ಡಉದ್ಯೋಗಸ್ಥರು ಕೆಲವರಲ್ಲಿ ನಡೆಯುತಿವೆ. ಮಸಲಾ ಒಂದು ಇಲಾಖೆಯ ಉದ್ಯೋಗಸ್ಥನಿಂದ ನಡಿಸಲ್ಪಡುವ ಅಕ್ರಮಗಳನ್ನು ಕುರಿತು ಅದರಿಂದ ನಷ್ಟಪಟ್ಟವನು ಮೇಲ್ಪಟ್ಟ ಅಧಿಕಾರಿಯಲ್ಲಿ ಹೇಳಿಕೊಂಡು ಅನೇಕ ನಿದರ್ಶನಗಳೊಡನೆ ಅವುನಿರೂಪಿಸಿದಾಗ್ಯೂ ಅದನ್ನು ಆತನು ಚನ್ನಾಗಿವಿಚಾರಿಸದೆಯೂ, ದಾಕ್ಷಿಣ್ಯಪೀಡಿತವಾದ ತನ್ನಮನಸ್ಸಿನಿಂದ ನ್ಯಾಯಾನ್ಯಾಯಗಳನ್ನೂಉಚಿತಾನುಚಿತಗಳನ್ನೂ ವಿಮರ್ಶಿಸಲಾರದೆಯೂ ಇರುತ್ತಾನಲ್ಲದೆಅಸಂಗತಗಳಾದ ಉತ್ತರಗಳಿಂದಫಿರ್ಯಾದಿಯನ್ನೇ ಬಾಯಿಬಡಿದುಕಳುಹಿಸಿಬಿಡುತ್ತಾನೆ. ಯಾವ ಅಧಿಕಾರಿಯಮೇಲೆ ಫಿರ್ಯಾದ ಮಾಡಲ್ಪಡುತಿದೆಯೋ ಸದರೀ ಫಿರ್ಯಾದ ವಿಮರ್ಶೆಯಬಗ್ಗೆ ಆತನಬಳಿಗೆ ಕಳುಹಿಸುವದೂ, ಅಥವಾ ಅವನಲ್ಲಿಯೇಹೇಳಿಕೊಳ್ಳುವಂತೆಫಿರ್ಯಾದಿಗೆಆಜ್ಞಾಪಿಸುವದೂ ಈಗ ಸಹಜವಾಗಿ ಏರ್ಪಟ್ಟಿದೆ. ಮುಖ್ಯವಾಗಿ ಯಾವ ಇಲಾಖೆಯ ಅಧಿಕಾರಿಗಳು ಪ್ರಜೆಗಳ ಪಾಲನೆಗಾಗಿ ತಮಗೆ ಕೊಡಲ್ಪಟ್ಟಿರುವ ಅಧಿಕಾರ ಗೌರವವನ್ನು ಅಂತಾ ಉತ್ತಮ ಕೆಲಸದಲ್ಲಿ ವಿನಿಯೋಗಿಸದೆ ಪ್ರಜೆಗಳದುಃಖದಿಂದಲೇ ತಾವು ಸಂತೋಷಿಸುವರೋ ಅಂತವರ ಪ್ರಾಬಲ್ಯದೊಳು ಸತ್ಯಬದ್ಧಗಳಲ್ಲದ ಸಾಕ್ಷ್ಯಗಳು ಹುಟ್ಟಲಿಕ್ಕೂ, ಸತ್ಯವಾದವು ವಿಚಾರಪೂರ್ವಕ ನಿರಾಕರಿಸಲ್ಪಡಲಿಕ್ಕೂ ಅವಕಾಶಉಂಟಾಗುತಿದೆ. ಹೀಗೆ ಅನ್ಯಾಯದಿಂದ ನಷ್ಟಪಡುವವರು ಕ್ರಮ

ವಾಗಿ ಹೇಳಲ್ಪಟ್ಟ ಅಧಿಕಾರಿಗಳಲ್ಲಿ ತಮ್ಮ ಅಹವಾಲಿಗಳನ್ನು ತಿಳಿಸಲೆತ್ನಿಸಿದರೆ, ಅವರು ಅವರ ವ್ಯವಹಾರಗಳನ್ನು ವಿಮರ್ಶಿಸದೆ ಉದಾಸೀನಗಳಾದ ವಾಕ್ಯಗಳಿಂದಲೂ, ಅಧಿಕಾರ ಪ್ರೇರಿತವಾದ ನೀಚವಾಕ್ಯಗಳಿಂದಲೂ, ಅವರ ಕೋರಿಕೆಗಳನ್ನು ಭಂಗಗೊಳಿಸಿದರೆ ಅವರೆಲ್ಲರೂ ಅಂತವರ ವಿಷಯದಲ್ಲಿ ದುಷ್ಟಶಿಕ್ಷಕನಾದ ದೇವರು ಕುರಿತು ಮೊರೆಯಿಡಬೇಕಲ್ಲದೆ ಬೇರೆ ಮಾರ್ಗ ವಿರುವದಿಲ್ಲವು. ಕುರಿಗಳ ಸಂರಕ್ಷಣೆಯಬಗ್ಯೆ ತೋಳಗಳನ್ನಿಟ್ಟಂತೆ, ಸಾಧು ಸಜ್ಜನರಾದವರ ಸಂರಕ್ಷಣೆಯಬಗ್ಯೆ ಇಂತಾ ಜನರನ್ನು ಅಧಿಕಾರಿಗಳನ್ನಾಗಿ ನಿಯಮಿಸಿದರೆ ಅದಕ್ಕಾಗಿ ಪ್ರಾಜ್ಞರು ವಿಷಾದಿಸದಿರಲಾರರು. ಈ ಅನರ್ಥಗಳಿಗೆ ಕಾರಣಗಳನ್ನು ವಿಚಾರಿಸುವಲ್ಲಿ,—ವ್ಯವಹಾರಗಳನ್ನು ವಿಮರ್ಶಿಸಿ ಸೂಕ್ಷ್ಮಾಂಶವನ್ನು ತಿಳಿದುಕೊಳ್ಳುವಷ್ಟು ಬುದ್ಧಿಯು ಅಧಿಕಾರಿಗಳಿಗೆ ಇಲ್ಲದೆಹೋಗುವದರಿಂದಲಾಗಲಿ, ಮೈಗಳ್ಳತನದಿಂದ ಅಷ್ಟರ ಬುದ್ಧಿ ವ್ಯಾಸಂಗವನ್ನು ಮಾಡದೆ ಹೋಗುವದರಿಂದಲಾಗಲಿ, ತಮ್ಮ ತಾಬೇದಾರರಾದ ಉದ್ಯೋಗಸ್ಥರ ಮೇಲಣ ನಂಬಿಕೆಯಿಂದಲಾಗಲಿ ಇವು ಉಂಟಾಗುತ್ತಿವೆಯೆಂದು ನಿಶ್ಚೈಸಿ ಹೇಳಲಾಗದು. ಆದರೆ "ಉದ್ಯೋಗಗಳು ಶಾಶ್ವತಗಳಲ್ಲವಾಗಿ ಕೈನಷ್ಟವಾಗಲೇ ಹಣ ಸಂಪಾದಿಸಬೇಕಲ್ಲದೆ ಬಳಿಕ ಏನು ಮಾಡಬಹುದೆಂಬ" ಭಾವವು ಅನೇಕರಿಗೆ ನಿರೂಢವಾಗಿರುವದರಿಂದ ಅಂತಾ ಪ್ರಯೋಜನಾಪೇಕ್ಷೆಯು ಅಧಿಕಾರಿಗಳ ಹೃದಯಗಳನ್ನು ಅಕಾರ್ಯಗಳಲ್ಲಿ ಪ್ರವರ್ತಿಸಗೊಳಿಸುವದೆಂಬದರೊಳಗೆಷ್ಟುಮಾತ್ರವೂ ಸಂದೇಹಿಸಬೇಕಾದುದಿಲ್ಲವು. ಇಂತವರಲ್ಲಿ ಕೆಲವರಿಗೆ ಮತ್ತೊಂದು ಗುಣ ಸಹವುಂಟು ಯೇನಂದರೆ—ತಾವು ಮೊದಲು ಮಾಡುವ ಹುಕುಮನ್ನಾಗಲಿ, ನುಡಿಯುವ ಮಾತುಗಳನ್ನಾಗಲಿ, ನಡೆಸುವ ಕಾರ್ಯವನ್ನಾಗಲಿ, ತರುವಾಯ ಅವುಗಳಿಗೆ ವಿರುದ್ಧಗಳಾದವೆಂದು ಎಂತಾ ನ್ಯಾಯದಿಂದ ನಿರೂಪಿಸಲೆತ್ನಿಸಿದಾಗ್ಯೂ ಅದಂ ಸಡ್ಡೆಗೈಯದೆ, ಅದಂ ಬದಲಾಯಿಸುವದು ತಮ್ಮ ಸಾಮರ್ಥ್ಯಕ್ಕೂ, ಗೌರವಕ್ಕೂ, ಹಾನಿಕರವೆಂದೆಣಿಸಿ ಒಂದೇ ಪಟ್ಟಾಗಿ ತಾವು ಮೊದಲು ಮಾಡಿದ್ದನ್ನೇ ಸ್ಥಾಪಿಸಬೇಕೆಂಬ ಪ್ರಯತ್ನವೂ, ಒಂದುಸುಳ್ಳನ್ನು ಅನೇಕಾನೃತಗಳಿಂದಲೂ, ಒಂದು ದುಷ್ಕಾರ್ಯವನ್ನು ಅನೇಕ ಅಕಾರ್ಯಗಳಿಂದಲೂ ಸಾಧಿಸಿಕೊಳ್ಳಬೇಕೆಂಬ ಕೋರಿಕೆಯೂ, ಅದಕ್ಕೆ ತಕ್ಕ ಪ್ರಯತ್ನವು ಸಹ ವುಂಟಾಗುತ್ತಿದೆ. ಇದರಿಂದ ಎತ್ತಿನಸೋವು ಕಾಗಿಗೆತಿಳಿಯುವದೇ ಎಂಬುವಂತೆ ಭೂತದಯಾ ಶೂನ್ಯರಾದವರಿಗೊಂದೂ ಬಾಧಕವಿಲ್ಲದೆಹೋದಾಗ್ಯೂ ದೀನರು ಬಹಳ ಪರಿತಪಿಸುವರಲ್ಲದೆ ಅವರ ಸ್ಥಿತಿಯು ನಷ್ಟವನ್ನೈದುವದು. ಇದನ್ನು ಕುರಿತು ನಾವು ಯೋಚಿಸಿ ನೋಡಲಾಗಿ ಮನುಷ್ಯರ ಮನಸ್ಸು ಕಾಲಕರ್ಮಾನುಗುಣವಾಗಿ ಪ್ರಕಾಶಾ ಪ್ರಕಾಶಗಳನ್ನೂ, ಕೋಪಪ್ರಸಾದಗಳನ್ನೂ, ಇನ್ನೂ ಅನೇಕಗುಣದೋಷಗಳನ್ನೂ ಪಡೆಯುವದಾಗಿತಪ್ಪಿಂದ ಒಂದುಕಾಲದಲ್ಲಿ ಮಾಡಲ್ಪಟ್ಟ ಒಂದುಕಾರ್ಯವು ಯಾವಾಗಲೂ ಯೋಗ್ಯವಾಗಿಯೇ ಇರುವನೆಂದು ಭಾವಿಸುವದು ಅನುಚಿತವು. ಆದದರಿಂದ ಬುದ್ಧಿಬಲದಿಂದಲೂ, ಪರಲೋಕ ಭೀತಿಯಿಂದಲೂ ತಮ್ಮ ತಮ್ಮ ಅಧಿಕಾರಗಳನ್ನು ಕ್ರಮವಾಗಿ ನಡೆಸುವ ಉದ್ಯೋಗಸ್ಥರೇ ಪ್ರಜೆಗಳಿಗೆ ರಕ್ಷಕರಾಗುತ್ತಾರೆಯಾಗಿ ಆಗುಣಗಳಿಲ್ಲದವರು ಹಿಂಸಕರೆಂಬುವದರಲ್ಲಿ ಸಂದೇಹವಿಲ್ಲವು. ಹೀಗಿರುವದರಿಂದ ಅಧಿಕಾರಿಗಳು ಅರ್ಥಕಾಮಾಪೇಕ್ಷಿಗಳಾಗಿ ಬಹುಮಂದಿಗೆ ಹಿಂಸಕರಾಗಿಯೂ, ಅತೃಪ್ತಿಯನ್ನುಂಟುಮಾಡುವವರಾಗಿಯೂ ಆಗುವದಕ್ಕಿಂತಲೂ, ಮೇಲೆ ಹೇಳಲ್ಪಟ್ಟ ಅಧಿಕಾರ ದೋಷಗಳನ್ನೆಲ್ಲ ತೊರೆದು ಸುಗುಣಗಳಂ ಪಡೆದು ಸರ್ವಜನಗಳಿಗೂ ಸುಖೋಪಕರರಾಗಿರಬೇಕೆಂಬದು ಸಜ್ಜನರಿಗೆ ಅಪೇಕ್ಷಿತಾಂಶವಾಗಿರುತ್ತಿದೆ. ಒಂದುವೇಳೆ ಆಳುವವರ ಹೃದಯವು ಇಂತಾವಿಷಯಗಳಲ್ಲೇ ಆಸಕ್ತವಾಗಿರ್ಪುದೋ ಎಂದು ಶಂಕಿಸಿದರೆ ಹ್ಯಾಗೆ ಎಣಿಸುವದುಯುಕ್ತವಲ್ಲವು. ಯಾತಕ್ಕಂದರೆ, ಲೋಕನ್ಯಾಯಕ್ಕೂ ಜನಕ್ಷೇಮಕ್ಕೂ ವಿರೋಧಿಗಳಾಗಿಯೂ ಭಂಗಕಾರಿಗಳಾಗಿಯೂ ಇರುವ ಎಂತಾ ವಿಷಯಗಳನ್ನಾದರೂ ಪರಿಹರಿಸಿ ಸರ್ವವಿಧದಿಂದಲೂ ಪ್ರಜೆಗಳಂ ಪಾಲಿಸಲು ಬದ್ಧಕಂಕಣರಾಗಿ, ಅದಕ್ಕೆ ತಕ್ಕನ್ಯಾಯಗಳನ್ನೇ ದೇಶದಲ್ಲಿ ಪ್ರಚುರಗೊಳಿಸಿ, ಅದಂ ಉಲ್ಲಂಘಿಸಿದವರನ್ನು ಅವರು ದಂಡಿಸುವಣವು ಪ್ರಸಿದ್ಧವಿಷಯವಾಗಿಯೇ ಇದೆ. ಇದರಿಂದ (ಅಂತಃಪ್ರಚ್ಛನ್ನಪಾಪಾನಾಂ ಶಾಸ್ತಾವೈವಸ್ವತೋಯಮಃ) ಎಂಬುವಂತೆ ಪಾಲಕರಿಗೆ ತಿಳಿಯದೆ ಮಾಡುವ ಕೆಲವರು ಅಧಿಕಾರಿಗಳ ಪ್ರಜಾಹಿಂಸಕಗಳಾದ ಕೃತ್ಯಗಳಿಗೆ ತಕ್ಕ ಫಲವೃಷ್ಟಿಯಲ್ಲಿಯೇ ಅವರಿಗೆ ಲಭಿಸದೆ ಹೋಗಲಾರದು.

ತಮ್ಮ ವಿಧೇಯನಾದ,
ಹಿತಚಿಂತಕನು.

ಕಳೆದ ಸೋಮವಾರದ ತಮ್ಮ ಪ್ರಕಾಶಿಕೆಯಲ್ಲಿ ಕನ್ನಡ ಮಿಡಿಲ್‌ಸ್ಕೂಲ್ ಪರೀಕ್ಷಾ ವಿಷಯಕವಾದ ವೃತ್ತಾಂತವನ್ನು ಕಂಡದ್ದೇ ಈ ವಿಜ್ಞಾಪನೆಯನ್ನು ತಮಗೆ ಮಾಡಬೇಕೆಂಬ ಕುತೂಹಲವುಂಟಾಗಲಿಕ್ಕೆ ಕಾರಣವಾಯಿತು.

ಈ ಮೈಸೂರು ದೇಶದಲ್ಲಿ ಕನ್ನಡ ಭಾಷೆಯೊಳು ಕೊಡಬಹುದಾದ ಪರೀಕ್ಷೆ ಯಾವದೂ ಇದುವರಿವಿಗೂ ಇರಲಿಲ್ಲವು. ಕಳೆದ ಸಂವತ್ಸರದಲ್ಲಿ ಸರ್ಕಾರದವರು ಸರ್ಕಾರಿಉದ್ಯೋಗದಲ್ಲಿರುವವರಿಗೋಸ್ಕರ 'ಲೋಕಲ್ ಎಗ್ಸಾಮಿನೇಷನ್' ಎಂಬದಾಗಿ ಒಂದು ಹೊಸ ಪರೀಕ್ಷೆಯನ್ನು ಏರ್ಪಡಿಸಿದನ್ನು ನೋಡಿದರೂ, ಈಗ ಮಿಡಿಲ್‌ಸ್ಕೂಲ್ ಪರೀಕ್ಷೆಗೆ ಸಮಾನವಾದ ಒಂದು ನೂತನ ಪರೀಕ್ಷೆಯ ನಿಯಮಗಳನ್ನು ನೋಡಿದರೂ, ದೇಶಭಾಷಾ ಸಂಬಂಧವಾದ ಅಭಿಮಾನವು ಇತರ ರಾಷ್ಟ್ರಗಳ ರಾಜರಂತೆಯೇ ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರ ಹೃದಯದಲ್ಲಿಯೂ ದೃಢವಾಗಿರುತದೆಂಬುವದು ಸ್ಪಷ್ಟವಾಗಿ ತಿಳಿಯಬರುತಿದೆ. ಹೀಗಿರುವಲ್ಲಿ, ಎಡಿಟರವರೇ! ಸ್ವಭಾಷಾಭಿಮಾನವಂದರೆ ಎಂತಾದ್ದೊ? ಅದನ್ನು ಯಾವ ಪದಾರ್ಥದೊಡನೆ ಉಪಯೋಗಿಸಬೇಕೊ? ಎಂಬುವದು ಇಲ್ಲಿನ ಪ್ರಜೆಗಳ ಮನಸ್ಸಿನಲ್ಲಿ ಪ್ರವೇಶಿಸದೆ ಇರುವದಕ್ಕಾಗಿ ತುಂಬಾವ್ಯಸನಪಡಬೇಕಾಗಿದೆ. ಈ ವಿಷಯವಾಗಿ ಇಲ್ಲಿನ ಪ್ರಜೆಗಳನ್ನು ಎಚ್ಚರಿಸುವದಕ್ಕೆ ಸಾಕಾದಷ್ಟು ದೇಶಭಾಷಾ ಪತ್ರಿಕೆಗಳಿಲ್ಲದ ಇರುವದು ಇನ್ನೂ ಹೆಚ್ಚು ವಿಷಾದವನ್ನುಂಟುಮಾಡುತಿದೆ. ಉತ್ತರದೇಶದೊಳ್ ಮಲಿನವಾಗಿ ಹೋಗಿದ್ದ ಮಹಾರಾಷ್ಟ್ರ ಬಾಷೆಯನ್ನು ಪ್ರಚುರಗೊಳಿಸಬೇಕೆಂಬ ಉದ್ದೇಶವನ್ನು ಬಹಳಮಟ್ಟಿಗೆ ನೆರವೇರಿಸಿ ಈ ಲೋಕದ ದೆಸೆಯಿಂದ ನಿವೃತ್ತರಾದ ವಿಷ್ಣುಶಾಸ್ತ್ರಿ ಚಿಪಳೂಣಕರವರು ಅಥವಾ ತತ್ಸದೃಶರಾದ ಇನ್ಯಾರಾದರೂ ಈ ದೇಶದೊಳು ಅವತರಿಸಿದರೆ ಒಂದುವೇಳೆ ನಾವು ಸಹ ಕತ್ತಲೆಯ ದೆಸೆಯಿಂದ ಬೆಳಕಿಗೆ ತರಲ್ಪಡಬಹುದೇನೋ ಎಂಬದಾಗಿ ಶಂಕಿಸಬೇಕಾಗಿದೆ.

ಮೈಸೂರು ದೇಶೀಯರಿಗೆ ಸ್ವಭಾಷೆಯಲ್ಲಿ ಜ್ಞಾನವೇ ಇಲ್ಲವೆಂದುನನ್ನಅಭಿಪ್ರಾಯವಲ್ಲವು. ಅನೇಕರು ತಮ್ಮ ತಮ್ಮ ಭಾಷೆಗಳಲ್ಲಿ ಒಳ್ಳೆಯ ಪಾಂಡಿತ್ಯ ಉಳ್ಳವರಾಗಿದಾರೆ. ಆದರೂ ಇಂಗ್ಲಿಷ್ ಭಾಷಾಬಿವೃದ್ಧಿಯು ದೇಶ ಭಾಷಾಜ್ಞಾನವನ್ನು ನಾಶಪಡಿಸುತಲಿರುವ ಸಂಗತಿಯನ್ನು ವಿಚಾರಮಾಡತಕ್ಕವರೇ ಇಲ್ಲವಲ್ಲಾ! ಇದಕ್ಕಾಗಿ ನನಗುಂಟಾಗಿರುವ ದುಃಖವನ್ನು ತಿಳಿಸಲಶಕ್ತನಾಗಿದೇನೆ. ಈ ಶಹರ್‌ನಲ್ಲಿ ಸನ್ವೀಇಲಾಖಾ ನೇಟಿವ್ ಅಸಿಸ್ಟೆಂಟರುಗಳೇ ಮೊದಲಾದವರ ಔದಾರ್ಯದ ದೆಸೆಯಿಂದಲೂ, ದೇಶಬಾಷಾಭಿಮಾನಿಗಳ ಸಹಾಯದಿಂದಲೂ, ಕಳೆದ ಆಗಸ್ಟು ತಿಂಗಳಲ್ಲಿ ಒಂದು ವರ್ನಾಕ್ಯುಲರ್ ಲೈಬ್ರರಿ ಸ್ಥಾಪಿಸಲ್ಪಟ್ಟ ಸ್ವಲ್ಪಕಾಲಾನಂತರ ಮೇಲೆ ಕಂಡ ನನ್ನ ವ್ಯಸನವನ್ನು ತಮಗೆ ಒಂದಾವರ್ತಿ ಅರಿಕೆ ಮಾಡಿಕೊಂಡಿದ್ದೆ. ಆಗ್ಯೆ ಈಅಂಶ ತಮಗೂ ಅಲಕ್ಷ್ಯವಾದ್ದಾಗಿಯೇ ಇತ್ತು. ಈಸಲ ಹಾಗೆ ಉಪೇಕ್ಷಿಸಲಾರಿರೆಂದು ನಂಬಿ ಇದೇನಲ್ಲದೆ ಇಂತಾ ಕಾರ್ಯದಲ್ಲಿ ತಾವು ಮನಃಪ್ರೂರ್ತಿಯಾಗಿ ಪ್ರವೇಶಿಸಿ ದೇಶಕ್ಕೆ ಕ್ಷೇಮವನ್ನು ಮಾಡತಕ್ಕವರೆಂಬ ಬಿರುದಂ ಕಾಪಾಡಿಕೊಳ್ಳಬೇಕೆಂದು ಕೋರುತ್ತೇನೆ.

ಎಡಿಟರೇ, ಈಗ ಇನ್ನೊಂದು ವಿಜ್ಞಾಪನೆ ಮಾಡುವದೇನಂದರೆ—ದೇಶ ಬಾಷಾ ಲೈಬ್ರೇರಿಯೆಂದು ಮೇರೆ ಹೇಳಿದ್ದೇನಷ್ಟೇ ಆ ಲೈಬ್ರೇರಿಯ ಸ್ಥಿತಿಗತಿಯನ್ನು ಚೆನ್ನಾಗಿ ಅನುಭವಕ್ಕೆ ತಂದುಕೊಳ್ಳದೆ ಅದರ ಹೆಸರನ್ನು ಪ್ರಸಿದ್ಧಪಡಿಸುವದಕ್ಕೆ ಇದುವರಿವಿಗೂ ಅದರ ವ್ಯವಸ್ಥಾಪಕರು ಹಿಂದರಿಯುತಲಿದ್ದರು ಇನ್ನುಮುಂದೆ ಕೆಲವುಕಾಲ ಅದು ಸ್ಥಿರವಾಗಿ ನಿಲ್ಲಬಹುದೆಂಬ ಸೂಚನೆಗಳು ಕಂಡುಬಂದದರಿಂದ ಅದರ ಪ್ರೋತ್ಸಾಹಾರ್ಥ ತಮ್ಮಿಂದಾಗತಕ್ಕ ಸಹಾಯವನ್ನು ಕೇಳಿಕೊಳ್ಳಲು ಸದರೀ ಲೈಬ್ರೇರಿಯ ವಿಚಾರಣೆಕರ್ತರು ನನಗೆ ಆಜ್ಞಾಪಿಸುತ್ತಾರೆಂದು ಪ್ರತೀವಡಿಸುವ,

ಬೆಂಗಳೂರು,
೨—೭—೮೬ } ದೇಶಾಭಿಮಾನಿ.

EXTRACTS

ಸಚೀನ ಸಂಸ್ಥಾನದ ನವಾಬಸಾಹೆಬರು ತಮ್ಮರಾಜ್ಯಕಾರಭಾರ್ ನಡಿಸಲಿಕ್ಕೆ ಅಯೋಗ್ಯರಿರುತ್ತಾರೆಂದು ಸುರತದ ಪೊಲಿಟಿಕಲ್ ಏಜಂಟರು ಸರ್ಕಾರಕ್ಕೆ ರಿಪೋರ್ಟುಮಾಡಿ ಆಸಂಸ್ಥಾನಕ್ಕಾಗಿ ಸರಕಾರಿ ತರ್ಫನಿಂದ ಒಬ್ಬ ಕಾರಬಾರಿಯನ್ನು ನೇಮಿಸತಕ್ಕದ್ದೆಂದು ಸಹ ಸೂಚಿಸಿ, ತಿಂಗಳು ಒಂದಕ್ಕೆ ೧೫೦ ರೂಪಾಯಿ ಸಂಬಳಕೊಟ್ಟು ಸುರತದ ಮ್ಯುನಿಸಿಪಾಲಟಿಯ ಸೆಕ್ರಟರಿಯಾದ ಮ|| ನಾನೂಮಿಯಾ ಬಕ್ಷಿಮಿಯಾ ಇವರನ್ನು ನೇಮಿಸಬೇಕೆಂತ ಕೂಡಾ ಸ್ಥಾನಿಕ ಸರಕಾರಕ್ಕೆ ಶಿಫಾರಸುಮಾಡಿರುತ್ತಿದ್ದರು. ಮುಂಬೈ ಸರ್ಕಾರದವರು ಈ ಶಿಫಾರಸು ಮಾನ್ಯಮಾಡಿ ಇದೀಪ್ರಕರ್ಣವನ್ನು ಮಂಜೂರೀಬಗ್ಯಾಗಿ ಹಿಂದುಸ್ಥಾನ ಸರಕಾರದವರಕಡೆಗೆ ಕಳುಹಿಸಿದ್ದರು. ಅದಕ್ಕೆ ಪ್ರಕೃತ ನಾಲ್ಕುತಿಂಗಳತನಕ ಈಗಿದ್ದ ವ್ಯವಸ್ಥೆಯಲ್ಲಿ ಹೆಚ್ಚುಕಡಿಮೆ ಮಾಡಕೂಡದೆಂತಲೂ ನವಾಬರವರು ನಾಲ್ಕುತಿಂಗಳು ಹಿಂದುಸ್ಥಾನದೊಳಗೆಲ್ಲ ಸಂಚಾರಮಾಡಿ ಬರಬೇಕೆಂತಲೂ ಠರಾವ್ ಮಾಡಿದಂತೆ ತಿಳಿಯುತ್ತದೆ. ನವಾಬರು ರಾಜ್ಯಪರಿಪಾಲನೆ ಮಾಡುವದಕ್ಕೆ ಅಯೋಗ್ಯರಾದದ್ದರಿಂದ ಅವರನ್ನು ಪದಚ್ಯುತ ಮಾಡಿಬಿಡದೆ ನಾಲ್ಕುತಿಂಗಳತನಕ ಅವದಿಯನ್ನು ಕೊಟ್ಟದ್ದಕ್ಕಾಗಿ ನಾವು ಹಿಂದುಸ್ಥಾನ ಸರಕಾರದವರ ಉಪಕಾರವೆಣಿಸತಕ್ಕದ್ದು. ಆದರೆ ಈ ಅವದಿಯಲ್ಲಿ ನವಾಬರು ಇಡೀ ಹಿಂದುಸ್ಥಾನದಲ್ಲಿ ಸಂಚರಿಸಿ ಬರಬೇಕೆಂದು ಆಜ್ಞಾಪಿಸಿರುವ ಕಾರಣವಾದರೂ ಏನಿರಬಹುದು? ಎಂಬ ಪ್ರಶ್ನೆಯು ಹುಟ್ಟುವದಾದ್ದರಿಂದ ಈ ವಿಷಯವಾಗಿ ನಮಗೆ ಸ್ವಲ್ಪ ಅನುಮಾನ ಉಂಟಾಗುತ್ತದೆ. ಸಾಂಪ್ರತಕಾಲದಲ್ಲಿ ನಮ್ಮ ಇಂಗ್ಲಿಷ್ ಸರಕಾರದವರು ಚಕ್ರವರ್ತಿಗಳಾಗಿರುವದರಿಂದ ಸಂಸ್ಥಾನೀಕರ ತಪ್ಪು ಇರಲಿ, ಅಥವಾ ಇಲ್ಲದಿರಲಿ, ಅವರು ಏನುಹೇಳಿದರೂ ಅದರಂತೆಯೇ ನಮ್ಮ ಸಂಸ್ಥಾನಿಕರು ನಡೆಯತಕ್ಕದ್ದು! ಹಿರೇಮನುಷ್ಯನು ಒಬ್ಬ ಸಣ್ಣ ಹುಡುಗನಿಗೆ ತಮ್ಮಾ, ಈ ಮಂಚದಮೇಲಿಂದ ಕೆಳಗೆ ಹಾರಿ ಆ ಗೋಡೆಮುಟ್ಟಿ ಬಾ ನೋಡುವಾ, ಅಂದರೆ ನಿನಗೆ ತಿನ್ನಲಿಕ್ಕೆ ಕೊಡುವೆನು, ಎಂಬುತೆಯೇ ನವಾಬ್ ಸಾಹೆಬರು ನಾಲ್ಕುತಿಂಗಳು ಹಿಂದುಸ್ಥಾನದಲ್ಲಿ ಸಂಚಾರಮಾಡಿ ಬಂದರೆ ಅವರು ರಾಜ್ಯ ಕಾರ್ಯ ದುರಂಧರರಾಗುವರೆಂದು ನಮ್ಮ ಸರ್ಕಾರದವರು ತಿಳಿಯುವರೋ? ಇದು ನಮಗಂತೂ ಬಹಳ ಅಸಂಭವನೀಯವಾಗಿ ಕಾಣುತದೆ. ಯಾಕೆಂದರೆ ನವಾಬರವರ ಪ್ರವಾಸವು ಎಷ್ಟೆಂದರೂ ನವಾಬಗಿರಿಯ ಸಂಭ್ರಮಕ್ಕೆ ಸರಿಯಾಗಿಯೇ ಇರದೆ ಹೋಗದು. ಆದ್ದರಿಂದ ಅವರು ಅರಮನೆಯಲ್ಲಿ ಕುಳಿತರೇನು? ಅಥವಾ ಪರ್ಯಟಣಮಾಡಿದ್ದರಿಂದಾಗುವದೇನು? ಎರಡೂ ಒಂದೇಸರಿ. ಬಹು ವಿಸ್ತೀರ್ಣವಾದ ಈ ಹಿಂದುಸ್ಥಾನದೊಳಗಿನ ಯಾವ ಸುತೆಯೊಳಗಾದರೂ ರಾಜ್ಯ ಕಾರಭಾರ ನಡಿಸತಕ್ಕ ಸೂತ್ರವೆಂಬ ಬುದ್ಧಿಯ ಬೀಜವು ಮಾರಾಟಕ್ಕೆ ಶಿಕ್ಕುವದು ದುರ್ಲಭವೇ ಕಾಣುತ್ತದೆ. ಇರಲಿ ನವಾಬರವರ ಸಂಚಾರದ ನಂತರವಾದರೂ ಅವರಿಗೆ ತಮ್ಮ ರಾಜ್ಯಕಾರಭಾರವಮಾಡುವಷ್ಟು ಸಾಮರ್ಥ್ಯ ಉಂಟಾಗಲೆಂದು ಆಶಿಸುತ್ತೇವೆ.

ಗ್ವಾಲಿಯರ್, ೨೦ನೇ ಜೂನ್.—ಮೃತಪಟ್ಟ ಮಹಾರಾಜಾ ಜಯಾಜಿರಾವ್ ಸಿಂಧಿಯಾಯವರ ಕಳೇಬರವು ವಿಶೇಷ ವಿಭವದೊಡನೆ ದಹನದಬಗೆ ಸ್ಮಶಾನಕ್ಕೆ ಸಾಗಿಸಲ್ಪಟ್ಟಿತು, ಅಂದರೆ, ದಸರಾ ಉತ್ಸವದಂತೆ, ಸಂಸ್ಥಾನದ ವಿಶಿಷ್ಟ ಸವಾರ್ ಬಾರ ಸೈನ್ಯಗಳು, ಸರ್ದಾರ್‌ಗಳು, ದಾರಕದಾರ್‌ಗಳು, ಮತ್ತು ವಿಶಿಷ್ಟ ಹೋದೇ ಸರ್ಕಾರ್ ನೌಕರರು ಮುರ್ದೆಯೊಡನೆ ಸ್ಮಶಾನಕ್ಕೆ ಹೋಗಿಬಂದರು. ಯುವರಾಜರ ಮತ್ತು ದಿವಾನರಾದ ಸರ್ ಗಣಪತಿರಾಯರ ಸಂಗಡ ಇಲ್ಲಿನ ರೆಸಿಡೆಂಟರಾದ ಕರ್ನಲ್ ಬ್ಯಾನರ್‌ಮ್ಯಾನ್ ಯವರು ಸ್ಮಶಾನಕ್ಕೆ ಬಂದಿದ್ದರು. ಸ್ವರ್ಣಮಯವಾದ ಪಾಲಖಿಯಲ್ಲಿ ಮಹಾರಾಜರವರ ಕಳೇಬರವನ್ನು ಇಟ್ಟುಕೊಂಡು ಅರಮನೆಯಿಂದ ಹೊರಡುವಲ್ಲಿ ಮಹಾರಾಜರವರ ಆರ್ಟಿಲರಿಯಿಂದ ೨೧ ತೋಪುಗಳು ಹಾಕಲ್ಪಟ್ಟವು. ಕಳೇಬರವು ರುದ್ರಭೂಮಿ ಸೇರಿದ ಕೂಡಲೇ ವೈದಿಕ ಕರ್ಮಾಚರಣೆಯೊಡನೆ ದಹನ ಮಾಡಲ್ಪಟ್ಟಿತು.

ಗವರ್ನರ್ ಜನರಲ್‌ಯವರ ಏಜಂಟರಾದ ಸರ್ ಲೆಪಲ್ ಗ್ರಿಫಿನ್‌ಯವರು, ಕೇವಲ ಶೋಚನೀಯವಾದ ಈ ವೃತ್ತಾಂತವಂ ಕೇಳಿದ ಕೂಡಲೇ ಇಂದೂರಿಂದ ಸ್ಪೆಷಲ್ ಟ್ರೇಯಿನ್ನಲ್ಲಿ ಹೊರಟು ೨೪ ಘಂಟೆಯ ಕಾಲದೊಳಗಾಗಿ ಗ್ವಾಲಿಯರಿಗೆ ಬಂದು ಸೇರಿದರು. ಅವರನ್ನು ಬರಮಾಡಿಕೊಳ್ಳುವದಕ್ಕಾಗಿ ರೆಯಿಲ್ ಸ್ಟೇಷನ್ನಲ್ಲಿ ವಿಶೇಷ ಜನಗಳು ಯಾರೂ ಇಲ್ಲವು. ಸರ್ ಗಣಪತಿರಾಯರವರುಮಾತ್ರ ಇದ್ದು ಸದರೀಯವರನ್ನು ಬರಮಾಡಿಕೊಂಡು ಮೋತೀಮಹಾಲ್ ಅರಮನೆಗೆ ಕರೆದುಕೊಂಡು ಹೋದರು. ಸರ್ ಲೆಪಲ್ ಗ್ರಿಫಿನ್‌ಯವರ ಸಂಗಡ ಅವರ ಅಸಿಸ್ಟೆಂಟುಗಳಲ್ಲೊಬ್ಬರೂ ಕೆಲವರು ಆಫೀಸ್‌ಜನಗಳೂ ಬಂದಿದ್ದರು ಅವರು ಬಂದಕೂಡಲೆ, ಸರ್ ಗಣಪತಿರಾಯರನ್ನು ಕರೆದುಕೊಂಡು ಹೋಗಿ ಯುವರಾಜರಾದ ಮಾಧವ ಮಹಾರಾಜಾ, ಮತ್ತು ಮಹಾರಾಣಿಗಳನ್ನು ನೋಡಿ ಅವರಿಗೆ ಉಪಚಾರ ಹೇಳುವಲ್ಲಿ ಮಹಾರಾಜರವರ ಮರಣದಿಂದ ತಮಗೆ ವುಂಟಾದ ಅನುತಾಪವನ್ನು ಅವರಿಗೆ ತಿಳಿಸಿದಮೇಲೆ, ಮುಂದಿನ ರಾಜ್ಯಾಡಳಿತವಿಷಯದಲ್ಲಿ ವಿಶಿಷ್ಟ ಸಹಾಯವೂ ಮಾಡಲ್ಪಡುವದೆಂದು ಇಂಡ್ಯ ಗವರ್ನಮೆಂಟ್ ತರಫಿನಲ್ಲಿ ಅವರಿಗೆ ಭರವಸೆಕೊಟ್ಟರು. ಘನವನ್ನುಹೊಂದಿದ ಮಹಾರಾಣಿಗಳವರು, ತಮ್ಮ ಪ್ರಧಾನ ಮಂತ್ರಿಯವರಮೂಲಕ, ಇಂತಾ ಸಂಕಟಕಾಲದಲ್ಲಿ ತಮ್ಮ ಮನೋವ್ಯಥೆಯನ್ನು ಪರಿಹಾರಮಾಡಿದಬಗ್ಯೆ ಮನಃಪೂರ್ವಕವಾದ ತಮ್ಮಕೃತಜ್ಞತೆಯನ್ನುಮಹನೀಯರಾದ ವೈಸ್‌ರಾಯಿ ಸಾಹೆಬರವರಿಗೆ ತಿಳಿಸಬೇಕೆಂದು ಕೇಳಿಕೊಂಡರು. ಯುವರಾಜರವರ ಬಾಲ್ಯದಶೆಯಲ್ಲಿ ಸರ್. ದಿನಕರರಾಯರವರು ರೀಜಂಟರಾಗಿಯೂ ರಾಜ್ಯಾಡಳಿತವಂ ನಡಿಸತಕ್ಕ ಅಧಿಕಾರಿಯಾಗಿಯೂ ನಿಯಮಿಸಲ್ಪಡುವರೆಂದು ಪ್ರಬಲಾಧಾರ ಪೂರ್ವಕ ಹೇಳಿಕೊಳ್ಳುತ್ತಾರೆ. ಸದರೀ ದೊಡ್ಡಮನುಷ್ಯರನ್ನು ನಿಯಮಿಸುವದು ಸರ್ವಜನ ಸಮ್ಮತವಾಗಿದೆ. ಯಾತಕ್ಕಂದರೆ, ಅವರ ಅಧಿಕಾರವು ಗ್ವಾಲಿಯರ್‌ಪಟ್ಟಣದೊಳು ಪ್ರಬಲತರವಾದದ್ದು, ಮತ್ತು ಅವರು ಬ್ರಿಟಿಷರವರ ಪ್ರಯೋಜನವನ್ನು ಕಾಪಾಡತಕ್ಕವರು. ಸರ್. ಲೆಪಲ್ ಗ್ರಿಫಿನ್‌ಯವರು ಒಂದುವಾರದೊಳಗಾಗಿ ಯುವರಾಜರನ್ನು ಸಿಂಹಾಸನದಮೇಲೆ ಕುಳ್ಳಿರಿಸುವರು.

ಬ್ರಿಟಿಷರಾಜ್ಯಗಳಲ್ಲಿ ಕೇವಲ ಕ್ರೂರಕೃತ್ಯಗಳು ನಡೆಸುತಲಿದ್ದ ಝೂಜಾರ್‌ಸಿಂಗ್‌ಯೆಂಬ ಬೇರೆಯೊಬ್ಬ ಪ್ರಸಿದ್ಧದರೋಡೆ ಕಳ್ಳನು ಕಡೆಗೆ ಚಾಂಡೇರೀಯೆಂಬ ಪ್ರದೇಶದಲ್ಲಿ ದರ್ಬಾರ್‌ಸೇನೆಯಿಂದ ಕೊಲ್ಲಲ್ಪಟ್ಟನು. ಇದರಿಂದ ದರೋಡೆಕಳ್ಳರನ್ನು ಪುಂಡುಅಣಗಿಸುವವಿಷಯದಲ್ಲಿ ಸರ್ ದಿನಕರರಾಯರವರಿಗೆ ಉಂಟಾಗಿರುವ ಅಕ್ಕರೆ ವ್ಯಕ್ತವಾಗುತಿದೆ. ಸರ್. ಲೆಪಲ್ ಗ್ರಿಫಿನ್‌ಯವರು ಈವೃತ್ತಾಂತವಂ ಕೇಳಿ ಸರ್. ಗಣಪತಿರಾಯರವರ ಯೋಗ್ಯತೆಯನ್ನು ಇಂಡ್ಯಗವರ್ನಮೆಂಟನವರ ಅವಧಾನಕ್ಕೆ ತರುವದಾಗಿ ವಾಗ್ದಾನಕೊಟ್ಟರು.—ಇಂಡ್ಯ ಟೈಂಸ್.

BANGALORE:—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧವೃತ್ತ್ಯಾಸಗನಾರ್ಥ ಕರ್ಣಾಟಕಪ್ರಕಾಶಿಕಾಪರಾಭಿದಾಪ್ರಥಿತಸಾಹಿತೀಶೋಭಿತಾ ‖ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ದಿಶಾಸುಪರಿಪೋಷಿತಾದಿಶತಿಮಾನಸಂಸುಮುದಂ

Vol. XIII] BANGALORE—MONDAY, JULY 12, 1886. [No. 28.

ಸಂಪುಟ ೧೩.] ಬೆಂಗಳೂರು:—ಸನ್ ೧೮೮೬ನೇ ಇಸವಿ ಜುಲೈ ೧೨ನೇ ತಾರೀಖ ಸೋಮವಾರ. [ಸಂಚಿಕೆ ೨೮.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ತಿಳಿದುಕೊಳ್ಳತಕ್ಕವರಿಗೆ, ವರುಷ ೧ಕ್ಕೆ		೧೨—೦—೦
ಇಂಗ್ಲಿಷ್ ಮಾತ್ರ ತಿಳಿದುಕೊಳ್ಳತಕ್ಕವರಿಗೆ ವರುಷ ೧ಕ್ಕೆ		೬—೦—೦
ಕನ್ನಡ ಮಾತ್ರ ತಿಳಿದುಕೊಳ್ಳತಕ್ಕವರಿಗೆ ಪೋಸ್ಟೇಜ್ ಸೇರಿ ವರುಷಕ್ಕೆ.		೬—೦—೦
ಬಿಂಗಡ	೧ಕ್ಕೆ	೦—೮—೦

ಷರಾ.—ಚಂದಾದಾರರು ಇಂಗ್ಲಿಷ್ ಕಾಗದನ್ನಾಗಲಿ, ಕನ್ನಡ ಕಾಗದನ್ನಾಗಲಿ ಅಥವಾ, ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸತಕ್ಕದ್ದು.

ಪ್ರಕಟನೆಯ ರಿವಾಜ್.

ಮೊದಲನೇದಸಾರ್ತಿ	೧ಕ್ಕೆ	೦—೨—೦
ಎರಡನೇದಸಾರ್ತಿ	೧ಕ್ಕೆ	೦—೧—೦

NOTICE TO SUBSCRIBERS

ಇದರಡಿ ತಿಳಿಸಲ್ಪಡುವ ಅಂಶಗಳಿಗೆ ನಮ್ಮ ಚಂದಾದಾರರೆಲ್ಲರು ಮುಖ್ಯ ನಿಗಾ ಕೊಡಬೇಕೆಂದು ಕೋರುತ್ತೇವೆ ಹೇಗಂದರೆ:—

೧. ಕರ್ಣಾಟಕಪ್ರಕಾಶಿಕೆಯ ಚಂದಾಬಗ್ಗೆಯಾಗಲಿ ಇತರ ಕೆಲಸದಬಗ್ಗೆಯಾಗಲಿ ಹಣಬಳಗು ರವಾನಿಸತಕ್ಕವರು ಮನಿಆರ್ಡರ್ ಮೂಲಕ ಕಳುಹಿಸಿದಲ್ಲಿ, ಅಂಥಾ ಮನಿಆರ್ಡರ್ ಫಾರ ಹೆಸರಿಗೆ ಹುಟ್ಟಿ ಹಣಬಳಗು ಯಾವದೇ ಬಾಬತು ಅದರಲ್ಲಿ ನಮೂದಾಗುವದೋ ಅದನ್ನು ಕೂಪನ್ ಕಾಗದದಲ್ಲಿ ನಮಗೆ ಸ್ಪಷ್ಟವಾಗಿ ತಿಳಿಸತಕ್ಕದ್ದು. ಹಾಗೆ ಮಾಡದಿ ಹೋಗುವದರಿಂದ ಹೆಸರುಗಳ ಲಿಖಿತ್ ಆಗಿ ಮನಿಆರ್ಡರ್ ಯಾರಿಂದ ಬಂದುವದರಿಂದ ತಿಳಿಯಲು ಕಷ್ಟವಾಗುತ್ತದೆ.

೨. ನೋಟುಗಳು ರವಾನಿಸತಕ್ಕವರು ಅರ್ಧನೋಟನ್ನು ರವಾನಿಸಿಬಿಟ್ಟು ಉಳಿದ ಅರ್ಧನೋಟಿನ ವಿಷಯದಲ್ಲಿ ತಿಂಗಳುಗಳ್ಳೇ ಉದಾಸೀನರಾಗಿರುತ್ತಾರೆ. ಹಾಗೆ ಮಾಡದೆ ಹೊದಲು ಕಳುಹುವ ಅರ್ಧನೋಟು ಸೇರಿದಬಗ್ಗೆ ನಮ್ಮ ಕಾಗದವನ್ನು ನೋಡಿದಕೂಡಲೆ ಬಾಕೀ ಅರ್ಧನೋಟನ್ನು ರವಾನಿಸತಕ್ಕದ್ದು.

೩. ಸ್ಟ್ಯಾಂಪ್‌ಗಳ ಕಳುಹಿಸತಕ್ಕವರು, ರೂ|| ೧ಕ್ಕೆ ೧ಆಣೆಮೇರೆ ಡಿಸ್‌ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಧಆಣೆಗಿಂತ ಜಾಸ್ತೀಕ್ರಯವುಳ್ಳ ಸ್ಟ್ಯಾಂಪ್‌ಗಳನ್ನು ಕಳುಹಿಸಕೂಡದು.

೪. ಪತ್ರಿಕೆಯು ಸಾಲ್ ಜನವರಿ ತಿಂಗಳಲ್ಲಿ ಪ್ರಾರಂಭವಾಗಿ ಡಿಸೆಂಬರ್ ಆಖೈರಿಗೆ ಪೂರೈಸಿ ಬರುವದರಿಂದ ಈ ಮಧ್ಯೆ ಯಾವತಿಂಗಳಲ್ಲಿ ಪತ್ರಿಕೆಗೆ ಚಂದಾದಾರರಾದಾಗ್ಯೂ ಆ ತಿಂಗಳಿಂದ ಡಿಸೆಂಬರ್ ಆಖೈರವರೆಗೆ ಆಗುವ ಕಾಲಕ್ಕೆ ತಿಂಗಳೊಂದಕ್ಕೆ ೧ಆಣೆಮೇರೆ ಚಂದಾದಾರರು ಹಣ ಕಳುಹಿಸಿದರೆ ಕೂಡ ಅವರಿಗೆ ಹಿಂದಿನ ಸಂಚಿಕೆಗಳು ಕಳುಹಿಸಲು ಅವಕಾಶವಿಲ್ಲ.

NOTICE.

VAIDYASARA SANGRAHA.

☞ *Price including Postage, Rs 5-0-0*

ವೈದ್ಯಸಾರ ಸಂಗ್ರಹ.

ಈ ಗ್ರಂಥಕ್ಕೆ ಬೇಕಾದವರು ಹಣಬಳಗಿನೊಡನೆ ಈ ಕೆಳಗೆ ಕಾಣಿಸಿದವರ ಹೆಸರಿಗೆ ಬರೆದು ಕೋರಿದರೆ ತತ್ಕಾಲ ರವಾನಿಸಲ್ಪಡುವದು. ಹಣಬಳಗಿಲ್ಲದ ಪತ್ರಗಳಿಗೆ ಉತ್ತರ ಕೊಡಲ್ಪಡಲಾರದು.

ಕ್ರಯ ಹೊತಾದ ಪೋಸ್ಟೇಜ್ ಸಹ್ತ ಈ ಕೆಳಗೆ ತಿಳಿಸುವೆವು

ಇದರ ಕ್ರಯ	ರೂ||	೫—೦—೦
ಪ್ಯಾಕಿಂಗ್ ಮತ್ತು ಅಂಚೇಪೋಸ್ಟ್		೦—೬—೦

ಜಿ. ಬಿ. ವೆಂಕಟರಾವ್, ಆಸ್ಪತ್ರಿರೋಡ್, ಬೆಂಗಳೂರು.

ನೋಟೀಸ್.

ಇದರಡಿ ವಿವರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ವಿಕ್ರಯಿಸಲ್ಪಡುತ್ತವೆ,—

ಕನ್ನಡ ಟೀಕಾಸಹಿತವಾದ ಸಂಸ್ಕೃತಗ್ರಂಥಗಳು.

ಶಾಕುಂತಲ. ...	೧—೪—೦
ಮುಕುಂದಮಾಲಾ. ...	೦—೧೨—೦
ಭಗವದ್ಗೀತಾ (ಷಟ್ಪಂಚಾಶಿಕೆ) ...	೦—೩—೦
ಆದಿತ್ಯಹೃದಯ ಮತ್ತು ಸುಕೀರ್ತಿ.	೦—೫—೦
ಬಾಲರಾಮಾಯಣ ...	೦—೪—೦
ಶಿವಗೀತೆ	೦—೧೪—೦
ಶಿವಾನಂದಲಹರಿ. ...	೦—೭—೦
ಬಾಲಗ್ರಹ.	೦—೨—೦
ವೈದ್ಯಸಾರಸಂಗ್ರಹ ...	೫—೦—೦

ಕನ್ನಡಗ್ರಂಥಗಳು.

ಜನಮುದ್ವಿಲಾಸ. ...	೦—೭—೦
ಅತಿರೋಚಾವತರಣಿಯ. ...	೦—೪—೦
ಸುಶೀಲಾಕಲ್ಯಾಣ ...	೦—೬೩—೦
ಸುಭಾಷಿತರತ್ನ.	೦—೨—೬
ಬಭ್ರುವಾಹನನಾಟಕ ...	೦—೪—೦
ಅಭಿಮನ್ಯುನಾಟಕ. ...	೦—೩—೦
ಶ್ರೀಕೃಷ್ಣಪಂಚವಿಂಶತಿ. ...	೦—೨—೬
ಪಂಚತಂತ್ರಬಾಲಬೋಧಿನಿ. ...	೦—೭—೦
ಕಾಲಿ ... ಸುದರ್ಶನ. ...	೦—೩—೦
ವಿಶಾಖ.	೦—೨—೦
ಹಾಸ್ಯ ಕ್ರಿಸಾರ. ...	೦—೦—೩
ಇಂಗ್ಲಿಷ್‌ಕನ್ನಡ ಸೇರಿದ ಮುಹಮ್ಮದರ್ಶಾ	೧—೦—೦
ಜ್ಞಾನಸಿಂಧು, ...	೨—೦—೦
ಶ್ರೀರಾಮಿಲಾಸ. ...	೦—೧೨—೦
ಹುಸಸ್ತ್ರ ...	೩—೪—೬.
ವೃಷಭೇಂದ್ರವಿಜಯ. ...	೩—೪—೬.
ಅಲೀಬಿಯರ್ ಸ್ಕೈಟ್ ಎಂಬರ ಥಿ	
೧ನೇ ಸಂಚಿಕೆ. ...	೦—೮—೦
ದಿಟೋ ೨ನೇ ಸಂಚಿಕೆ.	೦—೮—೦
ಶಬರಶಂಕರವಿಲಾಸ. ...	೦—೮—೦

ಸಂಸ್ಕೃತ ಮೂಲಗ್ರಂಥಗಳು.

ವಿಷ್ಣುಸಹಸ್ರನಾಮ. ...	೦—೫—೦
ಸೂರ್ಯಸಹಸ್ರನಾಮ. ...	೦—೨—೩
ಕೃಷ್ಣಕರ್ಣಾಮೃತ. ...	೦—೨—೩
ಬಾಲರಾಮಾಯಣ ...	೦—೦—೬
೩ಕಾಂಡಅಮರ. ...	೦—೩—೬
೧ ಕಾಂಡ ಅಮರ. ...	೦—೧—೦

ಮೇಲಿನ ಕ್ರಯಿದಿಯಲ್ಲಿ ಅಂಚೇ ಹಾಸಲ್ ಸೇರಿರುವದಿಲ್ಲವು ತ ಗಾ—ಮೇಲೆ ಸಮೂದು ಮಾಡಲ್ಪಟ್ಟಿರುವ ಪುಸ್ತಕದಕ್ಕೆ ಬೇಕಾದವರು ಬೇಕಾಗಿದ್ದು ಆಬಗ್ಗೆ ಹಣಬಳಗು ಕಳುಹಿಸತಕ್ಕವರು ಅಂಗಿ ಹಾಸಲ್ ಸಹ ಸೇರಿಸಿ ಕಳುಹಿಸಬೇಕು. ಇಲ್ಲವಾದರೆ ನಾವು ಕಳುಹಿಸುವ ಖರ್ಚು ಹಾಸಲ್ ಬಸ್ತಿಗೆ ಬಾಂಗೀ ದಾಖಲ್ ಕೊಡಬೇಕಾಗುವದು

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪನಿ.

ಜನರಲ್ ಕಮಿಷ್ಷನ್ ಮರ್ಚೆಂಟ್‌ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತರಹಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿತೆಗೆದುಕೊಳ್ಳಲ್ಪಡುವದು.

ಮೈಸೂರು ಸ್ಟೇಟ್ ರೈಲ್ವೆ

ಪ್ರಕಟನೆ.

ಮೈಸೂರು ಸ್ಟೇಟ್ ರೆಯಿಲ್‌ವೇ ವಿಚಾರಣಾಧಿಕಾರವು ದಕ್ಷಿಣ ಮಹಾರಾಷ್ಟ್ರ ರೆಯಿಲ್‌ವೇ ಕಂಪೆನಿಗೆ ವರ್ಗ ಮಾಡಲ್ಪಟ್ಟಿರುವದರಿಂದ ಸದರೀ ಕಂಪೆನಿಯ ಏಜಂಟರು, ಆಡಿಟರು, ಮತ್ತು ಟ್ರಾಫಿಕ್ ಮ್ಯಾನೇಜರು ಇವರಿಗೆ ಬರೆಯಬೇಕಾದ ಕಾಗದಗಳನ್ನು ಇದುಮೊದಲು ಧಾರ್‍ವಾಡಕ್ಕೆ ಬರೆಯತಕ್ಕದ್ದು.

ಬೆಂಗಳೂರು ಸಿಟೀ ಸ್ಟೇಷನ್‌ಮ್ಯಾಸ್ಟರಾದ ಮೆಸ್ಟರ್ ಘೋಂಡೇಪಂತ ರಾಮಚಂದ್ರಯವರು, ರೆಯಿಲ್‌ವೇಗೆ ಬರತಕ್ಕ ಹಣಗಳನ್ನು ಬರಮಾಡಿಕೊಂಡು ಆ ಬಗ್ಗೆ ರಸೀದಿಗಳು ಕೊಡುವದಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ಸ್ಥಳ ವ್ಯಾಪಾರ ವಿಷಯವನ್ನು ಕುರಿತು ಬರೆಯತಕ್ಕ ಕಾಗದಗಳನ್ನು ಬೆಂಗಳೂರು ಸಿಟೀ ಸ್ಟೇಷನ್ನಲ್ಲಿರುವ ಟ್ರಾಫಿಕ್ ಸೂಪರಿಂಟೆಂಡೆಂಟರವರ ಹೆಸರಿಗೆ ಬರೆಯತಕ್ಕದ್ದು.

ಬೆಂಗಳೂರು, ೧ನೇ ಜುಲೈ೧೮೮೬. } G M STEWART, *Agent, Southern Mahratta Railway*

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JULY 12, 1886.

೧೮೮೬ನೇ ಜುಲೈ ೧೨ನೇ ತಾ|| ಸೋಮವಾರ.

THE INSTALLATION OF H. H THE MAHARAJA SIVAJI ROW HOLKAR OF INDOOR.

ಇಂದೂರ್ ಸಂಸ್ಥಾನದ ಯುವರಾಜರವರಿಗೆ ಮಾಹೇ ಮಜಕೂರ್ ೩ನೇ ತಾರೀಖ್ ಶನಿವಾರದ ದಿನ ಪಟ್ಟಾಭಿಷೇಕಮಹೋತ್ಸವವು ಅಸದೃಶವಿಭವಗಳೊಡನೆ ಜೆಳೆದವಿಶೇಷಗಳನ್ನು ಸ್ವಯಂ ನೋಡಿ ಅನುಭವಿಸಿದ ಬಾತಮೀದಾರನೊಬ್ಬನು ಮುಂಬೈ ಟೈಂಸ್ ಆಫ್ ಇಂಡ್ಯಾ ಪತ್ರಿಕೆಗೆ ಬರೆದ ಕಾಗದವನ್ನು ಈಪತ್ರಿಕೆಯನ್ನೋದತಕ್ಕವರತಿಳುವಳಿಕೆಗೋಸ್ಕರವೂ ಸಂತೋಷಕ್ಕಾಗಿಯೂ ಇದರತಿ ಪ್ರಕಟಿಸುತ್ತೇವೆ.

ಮಹಾರಾಜಪುತ್ರರ ಪಟ್ಟಾಭಿಷೇಕೋತ್ಸವಕ್ಕೆ ಪೂರ್ವಾಂಗಗಳಾಗಿ ಮಾಡಲ್ಪಟ್ಟ ರಾಜಭವನ ರಾಜಮಾರ್ಗ ಜನಾವಾಸಾದಿಗಳ ಅಲಂಕಾರಗಳು ಅದೃಷ್ಟಪೂರ್ವಗಳೆಂಬ ಜನಶ್ರುತಿ ನನಗೆ ಸಂತೋಷವನ್ನೂ ವಿಸ್ಮಯವನ್ನೂ ಉಂಟುಮಾಡಿತಲ್ಲದೆ ನನಗೆ ಸಹ ತಾದೃಶಭಾವವೇ ಉಂಟಾಯಿತು ಮುಖ್ಯವಾಗಿ ವಿನೂತ್ನಶೋಭಾವಿಭಾವಿತವಾದ ನಗರವು ಮಂಗಳದೇವತಾನಿಲಯದಂತೆ ಕಣ್ಗೊಳಿಸುತಲಿತ್ತು. ಮುಖ್ಯಮುಖ್ಯಗಳಾದ ಪ್ರದೇಶಗಳಲ್ಲಿಯೂ ಬೀದಿಗಳಲ್ಲಿಯು ನಾನಾ ವಿಚಿತ್ರಗಳಾಗಿಯೂ, ಅವರವರ ವಿಭವಾನುಗುಣಗಳಾಗಿಯೂ, ಅಭಿರುಚಿಗೆ ತಕ್ಕಂತೆಯೂ ಅಲಂಕರಿಸಲ್ಪಟ್ಟದ್ದಂ ನೋಡಲಾಗಿ ಜನಗಳಿಗೆ ಈವಿಷಯದೊಳುಂಟಾಗಿರುವ ಅಪ್ರೀತಿತವಾದ ಸಂತೋಷಾಧಿಕ್ಯವು ಇಷ್ಟರದೆಂದು ವ್ಯಕ್ತವಾಗದಿರಲಿಲ್ಲವು. ಶ್ರೀಮನ್ಮಹಾರಾಜರ ವಿಭವೋಚಿತಗಳಾಗಿಯೂ, ಅಧಿಕಾರಿಗಳ ಅಭಿರುಚಿ ವೈಲಕ್ಷಣ್ಯಾಧೀನಗಳಾಗಿಯೂ, ಪ್ರಕೃತ ಮಹತ್ಸಂದರ್ಭಾನುಗುಣಗಳಾಗಿಯೂ ಯಿರುವ ಸಕಲ ಸಂವಿಧಾನಗಗಳೂ ನಡೆದಮೇಲೆ ೩ನೇ ತಾರೀಖ್ ಶನಿವಾರದದಿನ ಮಹಾ ರಾಜಪುತ್ರರು ಮಹಾರ್ಘರತ್ನಾಭರಣ ಭೂಷಿತರಾಗಿ ದಿವ್ಯವಸನಗಳಂ ಧರಿಸಿ ಅಂತಃಪುರದಿಂದ ಹೊರಪಟ್ಟು ೧ಘಂಟೆಗೆ ಸರಿಯಾಗಿ ವಿವಿಧಾಲಂಕಾರಗಳಂ ಶೋಭಾಯಮಾನವಾಗಿದ್ದ ದರ್ಬಾರ್‌ಸೌಧಕ್ಕೆ ದಯಮಾಡಿದರು. ಆಕಾಲದಲ್ಲಿ ಮಹಾರಾಜಾಗಮನ ಸೂಚನಾರ್ಥ ೧೯ ತೋಫೆಗಳು ಹಾಕಲ್ಪಟ್ಟವು. ಬಳಿಕ ಅರ್ಧಘಂಟೆಯ ಕಾಲ ಅಲ್ಲಿ ನಡೆಯಬೇಕಾಗಿದ್ದ ಕೆಲವು ವೈದಿಕ ಕ್ರಿಯಾಕಲಾಪಗಳೆಲ್ಲವೂ ಯಥಾವಿಧಿ ಜರಿಗಿದ ಮೇಲೆ ೧.೨ ಘಂಟೆಗೆ ಮಹಾರಾಜರವರು ತಮ್ಮ ದಿವಾನರೊಡನೆ ಸಿಂಹಾಸನಕ್ಕೆ ಪ್ರದಕ್ಷಿಣ ಪೂಜಾದಿಗಳಂ ನೆರವೇರಿಸಿದಮೇಲೆ ಸಿಂಹಾಸನ ರೋಹಣಂಗೈಯಲು ಆಗ ಅಲ್ಲಿದ್ದ ಸಭಿಕರೆಲ್ಲರೂ ಸಂತೋಷ ಪಾರವಶ್ಯತೆಯೊಡನೆ ಕರತಾಸ್ಫಾಲನಾದಿ ಜಯಶಬ್ದ ಕೋಲಾಹಲಧ್ವನಿಗೈದರು. ಅನಂತರ ಮಹಾರಾಜಾ ಶಿವಾಜಿರಾವ್ ಹೋಲ್ಕರವರು ತಮ್ಮ ಸಿಂಹಾಸನದಿಂದೆದ್ದು ಸಭಿಕರನ್ನುದ್ದೇಶಿಸಿ ತಿಳಿಸಿದರೇನಂದರೆ,—

ಸರ್ವಶಕ್ತನಾದ ಭಗವಂತನ ಅನುಗ್ರಹದಿಂದಲೇ ನನಗೆ ಈದಿನ ಇಂದೂರ್ ಸಿಂಹಾಸನಾರೋಹಣ ಪ್ರಾಪ್ತಿಯುಂಟಾಯಿತು. ನನ್ನಲ್ಲಿಡಲ್ಪಟ್ಟ ನಂಬಿಕೆಗೆ ಪಾತ್ರನೆನಿಸಲಿಕ್ಕೂ, ಈಗ ಲಭಿಸಿರತಕ್ಕ ಘನತರವಾದ ಕರ್ತವ್ಯವನ್ನು ಪ್ರಾಮಾಣಿಕತೆಯೊಡನೆ ನಿರ್ವಹಿಸಲಿಕ್ಕೂ ನಾನು ದೃಢತರವಾದ ಪ್ರಯತ್ನವುಳ್ಳವನಾಗಿರುತ್ತೇನೆ. ಈ ರಾಜ್ಯಕಾರ್ಯ ನಿರ್ವಹಣೆಯೊಳು ನನ್ನತಂದೆಯಿಂದ ಪರಿಪೋಷಿತರಾಗಿರುವ ಪೂರ್ವದ ನೌಕರರೆಲ್ಲರೂ ನನಗೆ ಸಹಾಯಕರಾಗಿರುವರೆಂದು ನಂಬುತ್ತೇನೆ. ನನ್ನ ಪ್ರಜೆಗಳ ಯೋಗಕ್ಷೇಮಾಭಿವೃದ್ಧಿಯವಿಷಯದಲ್ಲಿ ನಾನು ಮುಖ್ಯಾಭಿಪ್ರಾಯ ವುಳ್ಳವನಾಗಿರುವೆನು. ನನ್ನಪಾರ್ಶ್ವವರ್ತಿಯಾಗಿರ್ಪ ನನ್ನ ಸೋದರರು ಮತ್ತನವಾಗಿ ನನ್ನ ಪ್ರಜೆಗಳಿಂದ ಅಭಿಮಾನಪೂರ್ವಕ ಗೌರವಿಸಲ್ಪಡುವದಂ ನೋಡುವ ಕುತೂಹಲವುಳ್ಳವನಾಗಿದೇನೆ. ಅನನ್ಯ ಗತಿಕರಾದವರ ಸಂರಕ್ಷಣಾರ್ಥ ಈರಾಜದಾನಿಯಲ್ಲಿ ಪ್ರಬಲವಾದ ಒಂದು ಅನಾಥರಕ್ಷಕ ಶಾಲೆಯಂ ಸ್ಥಾಪಿಸುವದೇ ನನ್ನ ಪ್ರಥಮದರ್ಮ ಕಾರ್ಯವಾಗಿರ್ಪುದು. ಈ ದಿವಾರಚ್ಯ ಬ್ಯಾಜ್ ಮನೋತಿ (ಅಂದರೆ ಸರ್ಕಾರ ನೌಕರರಿಗೆ ವಿಧಿಸಲ್ಪಟ್ಟಿರುವಒಂದುಬಗೆತೆರಿಗೆ) ಯನ್ನು ಮೌಕೂಫ್‌ಮಾಡುವಣವೇ ನನ್ನ ಎರಡನೆಯ ಕರ್ತವ್ಯವಾಗಿರುವದು ಸದರೀ ತೆರಿಗೆಯು ಸಾಬಕ್‌ಮಹಾರಾಜರವರಿಂದ ಏರ್ಪಡಿಸಲ್ಪಟ್ಟತಾಗಿ, ಅದು ಸಂಸ್ಥಾನದ ನೌಕರರೆಲ್ಲರಿಗೂ ಬಾಧಕಸಾಮಗ್ರಿಯಾಗಿರುತಿದೆಯಾಗಿ ಅದುಈಗ ಮೌಕೂಫ್ ಮಾಡಲ್ಪಡುವದೆಂಬ ವೃತ್ತಾಂತವು ಎಲ್ಲರಿಗೂಸಂತೋಷಕರವಾದ್ದಾಗಿರುವದೆಂದೆಣಿಸುತ್ತೇನೆ. ಎಂಬದು. ತರುವಾಯ ನಾಯಬದಿವಾನರಾದ ರಾವ್‌ಬಹದೂರ್ ಶಾಮರಾವ್ ನಾರಾಯಣರವರಿಗೂ,ಪೂರ್ವದಲ್ಲಿ ರಾಜಪುತ್ರರಿಗೆಪ್ರೈವೆಟ

ಸೆಕ್ರೆಟರಿಯಾಗಿದ್ದ ರಾವ್‌ಬಹದೂರ್ ಕೇಶವರಾವ್ ಘರ್ಲೀಯೆಂಬವರಿಗೂ, ಸಂಸ್ಥಾನದಲ್ಲಿ ಪ್ರಮುಖರಾದವರನೇಕರಿಗೂ ಹೊಸದಾಗಿ ಜಹಗೀರ್‌ಗಳು ಕೊಡಲ್ಪಟ್ಟವಲ್ಲದೆ ಅಮೌಲ್ಯವಾದ ಪ್ರತಿಷ್ಠಾವಸ್ತ್ರಗಳು ಸಹ ಧಾರಾಳವಾಗಿ ಕೊಡಲ್ಪಟ್ಟವು. ಮಹಾರಾಜರವರಿಗೆ ಅವರ ಪ್ರಜೆಗಳೆಲ್ಲರೂ ಭಕ್ತಿ ಗೌರವಪುರಸ್ಸರವಾಗಿ ನಜರ್‌ಮುಜರೆಗಳನ್ನೊಪ್ಪಿಸಿದಮೇಲೆ, ೫|| ಘಂಟೆಗೆಸರಿಯಾಗಿದರ್ಬಾರ್‌ಬರಖಾಸ್ತಾಯಿತು. ಅಲ್ಲಿಂದಮಹಾರಾಜರವರು ದರ್ಬಾರ್ ಪ್ರೋಗ್ರೆಸ್‌ನೊಡನೆ ಮಾತುಶ್ರೀಯವರ ಸಂದರ್ಶನಾರ್ಥ ಅಂತಃಪುರಕ್ಕೆ ಬಿಜಮಾಡಿದರು. ಅಧಿರಾಜಪದವಿಯೊಳು ಸುಪ್ರತಿಷ್ಠರಾಗಿ ಕಾರಾಧಿಪನಂತೆ ಕಣ್ಗೊಳಸುತಿರುವ ಪುತ್ರಾಗಮನದಿಂ ಸಂತೃಪ್ತರಾದಮಹಾರಾಣಿಯವರುಅವರಂ ಬರಮಾಡಿಕೊಂಡು ಅವರಿಗೆ ಪ್ರೀತಿ ಗೌರವ ಸ್ವಾತಂತ್ರ್ಯಯುಕ್ತವಾದ ಕೆಲವುಹಿತೋಕ್ತಿಗಳನ್ನರುಹಿ ಉತ್ತಮ ನರಪಾಲಕರೆಂಬ ಪೂರ್ವಿಕರ ಖ್ಯಾತಿಸ್ಥೈರ್ಯವನ್ನು ಸ್ವಗುಣದಿಂ ಪರಿಪೋಷಿಸುತ ಬರಬೇಕೆಂದು ಕೋರುವಂತೆ ತಿಳಿಸಿದರು. ಆದಿನ ಸಾಯಂಕಾಲ ರಾಜಾರ್ಹಗಳಾದ ವಿಶಿಷ್ಟ ಪರಿಧಾನಗಳೊಡನೆ ಮಹಾರಾಜರವರು ಮುಖ್ಯಗಳಾದದೇವಸ್ಥಾನಗಳಿಗೆ ದಯಮಾಡಿದ ಬಳಿಕ ಗತಿಸಿದ ಮಹಾರಾಜರವರ ಸಮಾಧಿ ದರ್ಶನ ಮಾಡಿಕೊಂಡು ಯಥಾಪ್ರಕಾರ ಅರಮನೆಗೆ ದಯಮಾಡಿದರು. ಜಯಪುರ, ಜೋದಪುರ, ಕಾಶ್ಮೀರ, ಬಡೋದೆ, ದರ್‌ಬಂಗಾ, ಕಾಶೀ, ಪಾಲಿಟಾನಾ ಮೊದಲಾದ ಸಂಸ್ಥಾನಾಧಿಪತಿಗಳು ತಮ್ಮ ಶುಭವಾದನದ್ಯೋತಕವಾದ ತಂತಿ ವೃತ್ತಾಂತಗಳನ್ನು ಮಹಾರಾಜರವರಿಗೆ ಕಳುಹಿಸಿದರು. ಇಂದೂರ್ ಸಂಸ್ಥಾನಾಧಿಪತಿತ್ವಕ್ಕೆ ಬಾಲಾ ಸಾಹೆಬರವರ ಹಕ್ಕುದಾರಿಯನ್ನು ಇಂಡ್ಯ ಗವರ್ನಮೆಂಟಿನವರು ಅಂಗೀಕರಿಸಿದ್ದರಿಂದ ಆದಿನ ಕ್ರಮಪ್ರಕಾರ ಪೊಲಿಟಿಕಲ್ ಏಜಂಟರಾದ ಸರ್. ಲೆಪೆಲ್ ಗ್ರಿಫಿನ್ಯವರು, ಇಂಡ್ಯ ಗವರ್ನಮೆಂಟಿನವರ ಪ್ರತಿನಿಧಿಯಾಗಿ ಬಾಲಾ ಸಾಹೆಬರಿಗೆ ಆಧಿಪತ್ಯವನ್ನೊಪ್ಪಿಸುವರು.

ಗ್ವಾಲಿಯರ್ ಸಂಸ್ಥಾನದ ಯುವರಾಜರಿಗೆ ಸಹ ಅದೇದಿನ ಪಟ್ಟಾಭಿಷೇಕೋತ್ಸವವು ನಡೆದಂತೆ ತಿಳಿಯಬರುತಿದೆ. ಪರಂತು ಇಂಡ್ಯಗವರ್ನಮೆಂಟಿನಿಂದ ಅದ್ಯಾಪಿ ಟೆಲಿಗ್ರಾಮಾಗಲಿ, ಕರೀತಾವಾಗಲಿ ಬರಲಿಲ್ಲವು. ಮಾಹೇ ಮಜಕೂರ್ ೮ನೇ ತಾರೀಖಿನ ಬೆಳಗ್ಗೆ ಸರ್ ಲೆಪೆಲ್ ಗ್ರಿಫಿನ್ಯವರು ಅಲಹಾಬಾದ್ ಮಾರ್ಗವಾಗಿ ಭೋಪಾಲ್ ಸಂಸ್ಥಾನಕ್ಕೆ ಹೊರಟುಹೋದರು. ಪಟ್ಟಾಭಿಷೇಕೋತ್ಸವದ ಗೌರವಾರ್ಥವಾಗಿಯೂ,ಸರ್. ಲೆಪೆಲ್ ಗ್ರಿಫಿನ್ಯವರ ಪ್ರಯಾಣಸೂಚನಾರ್ಥವಾಗಿಯೂ ಕ್ರಮಪ್ರಕಾರ ೧೯ ಮತ್ತು ೧೩ ತೋಫುಗಳು ಹಾಕಲ್ಪಟ್ಟವು, ಎಂಬದು.

ಇಂದೂರ್ ಮತ್ತು ಗ್ವಾಲಿಯರ್‌ಸಂಸ್ಥಾನಾಧಿಪತಿಗಳು ಪ್ರಾಪಂಚಿಕಾನುಭವಾಪೇಕ್ಷಿಗಳಾಗಿರುವದರಿಂದ ತಮಗೆ ಈಗ ಲಭಿಸಿರುವಂತಾ ಮಹತ್ಪದವಿಯ ಸ್ವರೂಪವನ್ನೂ, ತಮ್ಮಪಾಲನೆಗೊಳಗಾದ ಪ್ರಜೆಗಳ ಯೋಗಕ್ಷೇಮಾಭಿವೃದ್ಧಿಯಲ್ಲಿ ಅಂತರವಾದಆಸಕ್ತಿಯನ್ನೂ,ತಮಗೂ ತಮ್ಮ ಪಾಲಕರಾದ ಮಹಾರಾಜ್ಞೀ ಸರ್ಕಾರದವರಿಗೂ ಇರತಕ್ಕ ಸ್ನೇಹ ಸಂಬಂಧವನ್ನೂ ಪರ್ಯಾಲೋಚಿಸಿ ತಮ್ಮಕರ್ತವ್ಯವನ್ನು ಶ್ಲಾಘ್ಯವಾದ ರೀತಿಯಿಂ ನೆರವೇರಿಸುತ, ಸಕಲ ಸೌಭಾಗ್ಯಗಳೊಡನೆ ನಿರವಧಿಕ ಸುಖ ಸಂತೋಷಯುಕ್ತರಾಗಿ ತಮ್ಮ ವಂಶ ಪರಂಪರಾಗತಗಳಾದ ಕೀರ್ತಿ ಪ್ರತಿಷ್ಠೆಗಳಂ ದೃಢಪಡಿಸಿ ಚಿರಕಾಲ ತಮ್ಮ ಪ್ರಜೆಗಳಂ ಪಾಲಿಸುತಲಿರಬೇಕೆಂದು ಪ್ರಾರ್ಥಿಸುತ್ತೇವೆ.

FEMALE REGENERATION

ಸ್ತ್ರೀ ವಿದ್ಯಾಭ್ಯಾಸಕ್ಕೆ ಮಾತೃಸ್ಥಾನವಾಗಿರುವ ಈ ದೇಶದಲ್ಲಿ ಅದರಿಂದುಂಟಾಗುವ ಫಲವಂ ಕುರಿತು ಇವರಡಿ ಕಂಡಂತೆ ಒಬ್ಬ ಬಾತಮಿದಾರನು ಬರೆಯುತ್ತಾನೇನುದರೆ.—

ಅಯ್ಯಾ—ಈದೇಶದಲ್ಲಿ ಜನಗಳಿಗೆ ವಿದ್ಯಾಭ್ಯಾಸವೂ, ನಾಗರಿಕತೆಯೂ, ನೂತನಾಭಿಪ್ರಾಯಗಳೂ, ನೂತನ ವಿಷಯಾಸಕ್ತಿಯೂ, ಪೂರ್ವಕ್ಕಿಂತಲೂ ಈಗ ಬಹಳ ಹೆಚ್ಚುರುತಿದೆ ಯೆಂಬವಕ್ಕೆ ಅನೇಕ ದೃಷ್ಟಾಂತಗಳು ಕಂಡುಬರುತಲಿವೆ. ಇಂತಾ ವ್ಯತ್ಯಾಸವು ಸ್ತ್ರೀಪುರುಷ ಸಾಮಾನ್ಯವಾದದ್ದಾಗಿರುತಿದೆ. ಕೆಲವು ಅಂಶಗಳಲ್ಲಿ ಪುರುಷರಿಗಿಂತಲೂ ಸ್ತ್ರೀಯರ ವೈಲಕ್ಷಣ್ಯವೇ ಅತಿಶಯವಾಗಿರುವದು. ಹೀಗೆ ಸಕಲಾಂಶದಿಂದಲೂ ಸ್ತ್ರೀಯರು ಪುರುಷರಿಗೆ ಸಮಾನವಾದ ಅಥವಾ ಅಧಿಕವಾದ ದರ್ಜೆಗೆ ಬರುತಲಿರುವ ವಿಷಯವು ಸಾಧಾರಣವಲ್ಲವಾಗಿ ಅನ್ಯತ್ರ ಇಷ್ಟು ಸುಲಭವಾಗಿ ಲಭಿಸದಂತಾ ಅಭಿವೃದ್ಧಿಗೋಸ್ಕರ ಸಂತೋಷಿಸದೆ ಇರುವವರಿಲ್ಲವು. ಇತರ ವಿಷಯಗಳಿಗಿಂತ ಸ್ತ್ರೀ ವಿದ್ಯಾಭ್ಯಾಸವು ಅತ್ಯಲ್ಪ ಕಾಲದಲ್ಲಿಯೇ ಶಾಖೋಪಶಾಖೆಗಳುಳ್ಳದುಹವೃಕ್ಷವಾಗಿ ಬೆಳೆದು ಪುಷ್ಪ ಫಲ ಪರ್ಣಸಮೃದ್ಧಿಯುಳ್ಳದಾದದ್ದೂ, ಅದರ ಸಂರಕ್ಷಣೆಯಬಗ್ಗೆ ಇತರಾಪೇಕ್ಷೆಯಾ ಸಕಲವಿಧ ಅನುಕೂಲ್ಯಗಳುಂಟಾಗಿರುವದೂ, ಈ ದೇಶದ ಕೀರ್ತಿ ಪ್ರತಿಷ್ಠೆಗಳಿಗೆ ಮುಖ್ಯ ಕಾರಣಗಳಾಗಿರುತಿವೆ. ನಮ್ಮ ಪೂರ್ವಿಕರು ಸ್ತ್ರೀ ವಿದ್ಯಾಭ್ಯಾಸವನ್ನೂ, ಬಾಲ್ಯ ವಿವಾಹವನ್ನೂ ಪುನರುದ್ವಾಹವನ್ನೂ ನಿಷೇಧಿಸಿ (ನಸ್ತ್ರೀಸ್ವಾತಂತ್ರ್ಯಮರ್ಹತಿ) ಎಂಬದಾಗಿ ಸ್ತ್ರೀಯರಿಗೆ ಸ್ವಾತಂತ್ರ್ಯವು ಕೂಡದೆಂತಲೂ, ಅವರು ಯಾವಾಗಲೂ ಪಾರತಂತ್ರ್ಯದೊಳಿರಬೇಕಾದವರೆಂತಲೂ ನಿಶ್ಚೈಸಿ, ಅದರಂತೆ ಆಚಾರದೊಳು ತಂದದಂ ನೋಡಿದರೆ ಇದು ಕೇವಲ ಅಜ್ಞಾನಕೃತ ದೋಷವೆಂದೆಣಿಸಬೇಕಾಗಿದೆ. ಪ್ರಕೃತದಲ್ಲಿ ನಮ್ಮ ಅಭಿರುಚಿಗಳನ್ನೂ, ಪ್ರಯತ್ನಗಳನ್ನೂ, ಸ್ಥಿತಿಭೇದವನ್ನೂ, ಕಾಲಗತಿಯನ್ನೂ ಪರ್ಯಾಲೋಚಿಸಿ ನೋಡಲಾಗಿ ನಾವು ಅಂತವರ ಪುಕಜರೆ ನು ಹೇಳಿಕೊಳ್ಳುವದಕ್ಕೆ ಸಹ ಲಜ್ಜೆಯಾಗಿದೆ. ನಮ್ಮ ಪೂರ್ವಿಕರ ಅಜ್ಞಾನಕೃತವಾದ ಪತನದಿಂದುಂಟಾಗಿರುವನ್ಯೂನತೆಯನ್ನು ಅವರ ವಂಶಜರಾದ ನಾವು ಈಗ ಅತೃಪ್ತಿಯೊಡನೆ ಹ್ಯಾಗೆ ಅನುಭವಿಸುತಲಿದ್ದೇವೆಯೋ ಅದೇ ಪ್ರಕಾರ ನಾವು ಈಗ ವಿವೇಕಪೂರ್ವಕ ಮಾಡತಕ್ಕ ಪ್ರಯತ್ನಗಳ ಫಲವನ್ನು ನಮ್ಮ ಉತ್ತರ ಕಾಲೀನರು ಬಹಳ ಉತ್ಸಾಹದೊಡನೆ ಅನುಭವಿಸುವರೆಂಬದಕ್ಕೆ ಈಗಲೇ ಸಾಕಾದಷ್ಟು ನಿದರ್ಶನಗಳು ತೋರಬರುವದರಿಂದ ಪೂರ್ವಿಕರಿಗಿಂತಲೂ ನಾವು ಮುಂದಿನವರಿಗೆ ಮಹದುಪಕಾರವನ್ನು ಮಾಡಿದವರಾಗುವೆವೆಂಬ ಪ್ರತಿಷ್ಠೆಯು ಸುಲಭವಾಗಿ ಲಭಿಸುವಂತಿರುವದಕ್ಕಾಗಿ ನಾವು ಯೆಷ್ಟು ಸಂತೋಷಿಸಿದಾಗ್ಯೂ ಅಲ್ಪವಾಗಿರುತಿವೆ. ಇದುವರಿವಿಗೂ ತಾವು ಅನೇಕ ಸಂದರ್ಭಗಳಲ್ಲಿ ತಮ್ಮ ಪತ್ರಿಕಾಮೂಲಕ ಪುರುಷರ ವೈಲಕ್ಷಣ್ಯವನ್ನು ನಾನಾಪ್ರಕಾರದಿಂ ಪ್ರಶಂಸಿಸುತ ತದಭಿವೃದ್ಧಿಯನ್ನೇ ಅನವರತ ಅಪೇಕ್ಷಿಸುತಲಿರುತ್ತೀರೇ ಹೊರ್ತು ಅದಕ್ಕೆ ಭಾಗಿಗಳಾಗಿರುವ ಸ್ತ್ರೀಯರ ವಿಷಯವಾಗಿ ತಾವು ಇದುವರಿವಿಗೆ ಯಾವದನ್ನೂ ತಿಳಿಸದೆ ಯಿರುವದಂ ನೋಡಿದರೆ ಅವರ ಮೇಲಿನ ವಿದ್ವೇಷದಿಂದಲೋ ಅಥವಾ ಅವರ ಅಭಿವೃದ್ಧಿಯಂನೋಡಿ ಸಹಿಸಲಾರದೆಯೋ ಅಲ್ಲದೆ ನಿಜವಾದಅವರತಾತ್ಕಾಲಿಕಸ್ಥಿತಿಯನ್ನರಿಯದೆಯೋ ಈರೀತಿ ಮೌನದಿಂದಿರುವಂತೆ ಎಣಿಸಬೇಕಾಗಿದೆ. ಆದಾಗ್ಯೂ ಸ್ತ್ರೀವಿದ್ಯಾಭಿಮಾನಿಗಳಾದ ತಮಗೆ ಅದರಫಲವನ್ನು ನಾನಾಪ್ರಕಾರೇಣ ಅನುಭವಿಸುವವರ ವೃತ್ತಾಂತವು ಶ್ರಾವ್ಯವಾಗಿರಬಹುದಾಗಿ ತತ್ಸಂಬಂಧವಾದ ಒಂದು ವಿಷಯವನ್ನು ಸದ್ಯಃತಿಳಿಸಿ ತಮ್ಮನ್ನು ತೃಪ್ತಿಗೊಳಿಸುವೆನು. ಮಾಹೇಮಜಕೂರ್ ೫ನೇ ತಾರೀಖಿನ ಒಳದೇಶದ ಈವನಿಂಗ್ ಮೆಯಿಲ್‌ಪತ್ರಿಕೆಯಲ್ಲಿ ಒಳದೇಶ ವೃತ್ತಾಂತದೊಳು ಒಂದಂಶವಂ ಕಂಡೆನು. ಅದೇನಂದರೆ,—ಈಚೆಗೆ ಮೈಸೂರಲ್ಲಿಬ್ರಾಹ್ಮಣಸ್ತ್ರೀಯೊಬ್ಬಳುಒಬ್ಬ ಚಟ್ಟೀಗಾರನೊಡನೆ ಓಡಿಹೋದಳು ಎಂಬದು. ಇದನ್ನು ಓದಿ ಅನೇಕರು ಆಶ್ಚರ್ಯಪಟ್ಟಿರಬಹುದು. ಪರಂತು ನನಗೇನೂ ಆಶ್ಚರ್ಯ ವುಂಟಾಗಲಿಲ್ಲವು ಇದರಮೇಲೆ ಈ ವೈಲಕ್ಷಣ್ಯಾಭಿಲಾಷಿಯಾರೆಂದು ವಿಚಾರಿಸಲಾಗಿ, ತೃಪ್ತಿಕರವಾದ ವೃತ್ತಾಂತಗಳೇ ತಿಳಿಯಬಂತು. ಈಕೆಯ ವಿಷಯವಾಗಿ ನನ್ನ ಸ್ನೇಹಿತರವ್ಯಕ್ತಿ ಒಬ್ಬರಿಗೆ ಬುವಕಾಗದದ ಸಾರಾಂಶವನ್ನು ಇದರಡಿತಿಳಿಸುವೆನು. ಈಗ ಪರಾರೀಯಾಗಿ ಬಂದ ಹೆಂಗಸು ಬಾಲೆಯಾಗಿಯೂಉತ್ತಮಜಾತಿಯವಳಾಗಿಯೂ ಇರುತ್ತಾಳೆ. ಈಕೆಯು ಪ್ರಖ್ಯಾತವಾದ ಇಲ್ಲಿನ ಒಂದುಬಾಲಿಕಾಪಾಠಶಾಲೆಯಲ್ಲಿ ಬಹುಕಾಲ ವಿದ್ಯಾಭ್ಯಾಸಮಾಡಿ ತತ್ಪ್ರಯುಕ್ತವಾದ ಆನಂದವನ್ನೆಲ್ಲ ಸ್ವತಃ ಅನುಭವಿಸಿದವಳಾಗಿಯೂ, ಅದಂ ವಿದ್ಯಾರ್ಥಿನಿಗಳಿಗೆ ಸನಿದರ್ಶನದಿಂಬೋಧಿಸುವಷ್ಟು ಮೇಧಾಶಕ್ತಿಯುಳ್ಳವಳಾಗಿಯೂ ಇರುತ್ತಾಳೆ. ಈಕೆಯು ಸಂಗೀತದಲ್ಲಿ ಪ್ರವೀಣಳು. ಫಿಡೆಲ್‌ವಂ ತಾದವಾದ್ಯಗಳ ಮೂಲಕ ಅನ್ಯರ ಹೃದಯವಂ ರಂಜಿಸುವಷ್ಟು ಕೌಶಲ್ಯವುಳ್ಳವಳು. ಮತ್ತು ತುಚ್ಛಗಳಾದ ಜಾತಿ ಮತನಿಯಮಗಳಿಗೆ ಜನ್ಮವಿರೋಧಿ. ಪಾರತಂತ್ರ್ಯವೆಂಬದು ಈಕೆಗೆ ಪ್ರತ್ಯಕ್ಷಶತ್ರು ಪಿತನ್ಮಾಂತ್ರಿಂದಲೇ ಈಕೆ ಫಲಾನೆಯವಳೆಂದು ತಿಳಿದುಕೊಳ್ಳುವಷ್ಟು ಪ್ರಸಿದ್ಧಳಾಗಿರುವಾಗ್ಯೆ ಈಕೆಯ ನಾಮಕುಲಗೋತ್ರಗಳುಅನಾವಶ್ಯಕಗಳಾಗಿರುತಿವೆ, ಎಂಬದು. ಇದು ಅಸಹಜವಲ್ಲವು. ವಿದ್ಯೆಯಿಂದ ಜ್ಞಾನವೂ, ಅನುಭವದಿಂದ ವಿಕಾಸವೂ, ಸಹವಾಸದಿಂದ ನಾಗರಿಕತೆಯೂ, ಅದರಿಂದ ಸದ್ಯಃ ಸುಖವೂ ವುಂಟಾಗುತಿದೆ.

ವಿದ್ಯಾಪ್ರವೀಣಳಾದ ಮತ್ತೊಬ್ಬ ತರುಣಿಯು ಶಿವಮೊಗ್ಗಾ ಪ್ರಾಂತದಿಂದ ಪರಾರೀಯಾಗಿ ಬಂದು ಈಪುರದಲ್ಲಿ ಇನ್ನೊಬ್ಬ ಈಸ್ಟಿಂಡಿಯನ್ ಸಂಗಡ ದಾರಾಳವಾಗಿ ವಸಿಸುತಲಿದಾಳೆ. ಇಂತಾ ಒಂದು ಲಿಕಾಪಾಠಶಾಲೆಯ ಶಿಕ್ಷಾಫಲವನ್ನು ವಿಶೇಷತಃ ಅನುಭವಿಸಿದ ಮತ್ತೊಬ್ಬ ತರುಣಿಯು ಪತಿಗೃಹಕ್ಕೆ ಹೋಗಬೇಕಾದ ನಿರ್ಬಂಧ ವುಂಟಾದಾಗ ರಿಕ್ತನಾದ ಪತಿಯಸ್ಥಿತಿಯು ತನ್ನನಾಗರಿಕತೆಗೆ ಅನನುಗುಣವಾದದ್ದೆಂದು ಭಾವಿಸಿ ಅವನಂತೊರೆದು ಮೈಸೂರಲ್ಲಿ ಈಗಅನ್ಯರ ಆಶ್ರಯದಲ್ಲಿಸುರಕ್ಷಿತಳಾಗಿ ಸಂತೋಷದೊಡನೆ ಇದ್ದಾಳೆ. ಹೀಗೆ ಅನೇಕ ನಿದರ್ಶನಗಳನ್ನು ನಮೂದಿಸುವೆನು. ಪರಂತು ಲೇಖನ ಬಾಹುಳ್ಯಕ್ಕಾಗಿ ಸ್ವಲ್ಪ ಅಂಜಬೇಕಾಗಿದೆ ಮುಖ್ಯವಾಗಿ ನಮ್ಮಬಾಲೆಯರೆಲ್ಲರೂ ವಿದ್ಯಾವತಿಯರಾಗುತಲಿದಾರೆ. ಮುಂದೆ ಅವರಿಗೆ ತಾವು ಫಲಾನೆಯವರಮಕ್ಕಳೆಂದು ಹೇಳಿಕೊಳ್ಳುವದುಸಹ ಅಪಮಾನವಾಗಿತೋರುವದು. ಅಮೋಘವಾದ ವಿದ್ಯಾಭ್ಯಾಸಕ್ರಮದಿಂದ ಮುಂದೆ ಇನ್ನೆಷ್ಟರಫಲಗಳುಂಟಾಗುವದೋ ಅದಂ ನೋಡುವಷ್ಟು ಆಯುಃಪರಿಮಾಣವು ನನಗೆ ಇರುವದೋ ಇಲ್ಲವೋ ಅರಿಯೆನು ಈಗಿನ ವಿದ್ಯಾಭ್ಯಾಸಕ್ರಮದಿಂದ ನಮ್ಮತರುಣಿಯರಿಗೆ ಶ್ರದ್ಧಾಜಾಡ್ಯವೆಂಬದು ನಿವೃತ್ತವಾಯಿತು. ವೃದ್ಧಾಚಾರಗಳಲ್ಲಿ ಭಕ್ತಿಯು ತೊಲಗಿತು. ಸ್ವದೇಶ ಸ್ವಜನ ಸ್ವಮತ ಸ್ವಸಂಪ್ರದಾಯ ಸ್ವವೇಷ ಭಾಷಾಚಾರಗಳಲ್ಲಿ ವಿದ್ವೇಷವು ತಲೆದೋರಿರುತಿದೆ. ಪೂಜ್ಯರು ತ್ಯಾಜ್ಯರಾಗುತಲಿದಾರೆ. ವಂದ್ಯರು ನಿಂದ್ಯರಾಗುತಲಿದಾರೆ, ಅಭಿಮಾನಕ್ಕೆ ಬದಲು ನಿರಭಿಮಾನತೆಯು ವೃದ್ಧಿಯನ್ನೈದುತಲಿದೆ. ಅಸ್ವಾತಂತ್ರ್ಯವೃತ್ತಿ ಹೋಗಿ ಸ್ವಾತಂತ್ರ್ಯವೆಂಬದು ದಾರ್ಢ್ಯವನ್ನೈದುತಲಿದೆ, ಇದಕ್ಕಿಂತಲೂ ಇನ್ನೇನು ಪ್ರಯೋಜನ ಬೇಕಾಗಿದೆ. ನಮ್ಮ ಹೆಣ್ಣುಮಕ್ಕಳಿಗೆ ಸಾಂಸಾರಿಕವೃತ್ತಿಯು ನಿರ್ಬಂಧರೂಪವಾದದ್ದೆಂಬ ಜ್ಞಾನವನ್ನುಂಟುಮಾಡಿದೆವು. ಜಾತಿ ಮತಾಚಾರಗಳು ವ್ಯರ್ಥಗಳು, ಮತ್ತು ಸುಖಭಂಜಕಗಳೆಂಬ ಭಾವವಂ ಅವರ ಹೃದಯದಲ್ಲಿ ನೆಲಗೊಳಿಸಿದೆವು. ನಮ್ಮ ಉದ್ದೇಶಕ್ಕೆ ಅವರು ಅನುಕೂಲರಾಗದಿದ್ದರೆ ವೇತನಾದಿಗಳ ಮೂಲಕ ಅವರಂ ಸ್ವಾಧೀನಪಡಿಸಿಕೊಳ್ಳುತ್ತೇವೆ. ಮತ್ತು ನೃತ್ಯಗೀತ ವಾದ್ಯಗಳು ನಾಗರಿಕಾಂಗವೆಂಬ ತಾತ್ಪರ್ಯವನ್ನು ಊರ್ಜಿತಪಡಿಸಿದೆವು. ದಾರಾಳವಾದ ಸಂಚಾರವಿಹಾರ ಸಲ್ಲಾಪಾದಿಗಳು ಜ್ಞಾನವರ್ಧಕವೆಂಬ ನಂಬಿಕೆಯನ್ನು ಹುಟ್ಟಿಸಿದೆವು ಇಷ್ಟು ಉಪಕಾರವನ್ನು ಮಾಡಿದ್ದರಿಂದಲೇ ನಮ್ಮ ಕುವರಿಗಳು ನಾವುಮಾಡುವ ವಿವಾಹವನ್ನು ನಿಂದಿಸಿ ತೊರೆದು ಸ್ವಯಂವರ ಪದ್ಧತಿಗೆ ಮೊದಲಿಟ್ಟದಾರೆ. ಈಕ್ರಮದಿಂದ ಅಭೀಷ್ಟವಾದಪತಿಯು ಸ್ವಯೂಧದಲ್ಲಿ ಮೃಗ್ಯವಾದಕಾರಣ ಜಾತಿಪ್ರಯುಕ್ತವಾದ ತಾರತಮ್ಯವು ಪರಿಗಣನೀಯವಾಗದೆ ರಸಾಸ್ವಾದನಾಭಿಲಾಷೆಯು ಸಾರ್ವತ್ರಿಕವಾಗಿ ಏರ್ಪಟ್ಟಿತು. ಇನ್ನು ನಾವು ಧನ್ಯರಾದೆವು ನಮ್ಮ ಆರ್ಯವಂಶವು ಸಫಲವನ್ನೈದಿತು. ನಮ್ಮ ವೇದಶಾಸ್ತ್ರಗಳು ಸಾರ್ಥಕಗಳಾದವು. ನಾಗರಿಕತೆಗೆ ನಾವೇ ಪ್ರಾಥಮಿಕರಾದೆವು. ಏತೇನ ಇಷ್ಟರಪ್ರಯೋಜನ ಕರಗಳಾದ ಸ್ತ್ರೀವಿದ್ಯಾಭ್ಯಾಸವೂ ಅವರ ಪಾಠಶಾಲೆಗಳೂ ಈದೇಶದಲ್ಲಿ ವ್ಯಾಪಕಸ್ಥಿತಿಗೆ ಬಂದದ್ದು ಪ್ರಜೆಗಳ ಭಾಗ್ಯವೆಂದೆಣಿಸುವೆನು.

ಬೆಂಗಳೂರು
೧೦-೭-೮೬. }
ತಮ್ಮ ವಿಧೇಯ,
ಸ್ತ್ರೀಪ್ರಬಾಭಿಲಾಷಿ.

ಮಾನುಷ ಜನ್ಮಕ್ಕೆ ಅಲಂಕಾರರೂಪವಾದ ವಿದ್ಯೆಯು ದೌರ್ಭಾಗ್ಯವಶಾತ್ ಇಲ್ಲಿನವರಿಗೆ ವಿರುದ್ಧಫಲದಾಯಕವಾದದಕ್ಕಾಗಿ ಚಿಂತಿಸುವೆವು.

ಎ. ಕ. ಪ್ರ.

Occasional Notes
ನೈಮಿತ್ತಿಕವಿಷಯನ್ಯಾಸ

Formation of a society.—ಬೌದ್ಧಮತವನ್ನು ಜೀರ್ಣೋದ್ಧಾರಮಾಡುವದಕ್ಕಾಗಿ ಕಲ್ಕತ್ತೆಯೊಳು ಮೆ|| ಫಾಕ್ಸ್ ಅಥವಾ ಮೆ|| ಯಂಗ್ ಆನಾರ್ಲೆಸ್‌ಯೆಂಬವರ ಅಧ್ಯಕ್ಷತೆಯಲ್ಲಿ ಒಂದು ಸಮಾಜ ಏರ್ಪಡುವದಾಗಿರುತಿದೆ.

A defeat.—ಮುಂಬೈವಾಸಸ್ಥರಾದ ಆನರೆಬಲ್ ದಾದಾಭಾಯ್ ನೌರೋಜಿಯೆಂಬ ದೊಡ್ಡಮನುಷ್ಯರು ಇಂಗ್ಲಿಷ್ ಪಾರ್ಲಿಮೆಂಟ್ ಸಮಾಜದಲ್ಲಿ ಒಬ್ಬಮೆಂಬರಾಗಿ ಸೇರಬೇಕೆಂಬ ಉದ್ದೇಶದೊಡನೆ ಇಂಗ್ಲಾಂಡಿಗೆ ಹೋಗಿ ಅಬಗ್ಗೆ ಪ್ರಯತ್ನಪಡುತಲಿದ್ದರಷ್ಟೆ, ಅಂತಾ ಅವರಪ್ರಯತ್ನವು ಫಲಕಾರಿಯಾಗದೆ ಹೋಯಿತೆಂದು ತಿಳಿಸುವದಕ್ಕೆ ವಿಷಾದಿಸುತ್ತೇವೆ.

Heavy rain in Bombay.—ಕಳೆದತಿಂಗಳಲ್ಲಿ ಮುಂಬೈಪ್ರೆಸಿಡೆನ್ಸಿಯೊಳುನಾಲ್ವತ್ತೈದು ಅಂಗುಳಮಳೆ ಆಯಿತು ೧೮೩೭ನೇ ಇಸವಿಯ ಜೂನ್‌ತಿಂಗಳಲ್ಲಿ ಮಾತ್ರ ಒಂದುದಫಾ ನಾಲವತ್ತೊಂಬತ್ತು ಅಂಗುಳ ಮಳೆ ಆಯಿತೆಂದು ಅಲ್ಲಿನ ಪತ್ರಿಕೆಯೊಂದುತಿಳಿಸುತದೆ.

Mr. Girdlestone.—ಕೆಲವುದಿನಗಳಹಿಂದೆ ಈಸಂಸ್ಥಾನದಲ್ಲಿ ಆಕ್ಟಿಂಗ್ ಬ್ರಿಟಿಷ್ ರೆಸಿಡೆಂಟರಾಗಿದ್ದ ಮೆ|| ಗರ್ಡಲ್‌ಸ್ಟೋನ್‌ಯವರು ಈತಿಂಗಳ ೫ನೇ ತಾರೀಖ್ ಸೋಮವಾರದದಿನ ಮದರಾಸಿನಿಂದ ಕಲ್ಕತ್ತೆಗಾಗಿ ಹೊರಟರು. ಇನ್ನು ಒಂದುವಾರದೊಳಗಾಗಿ ನೇಪಾಳದೇಶದ ಬ್ರಿಟಿಷ್ ರೆಸಿಡೆಂಟ್ ಕೆಲಸವನ್ನು ಮರಳವಹಿಸುವರು.

King Theebaw's restoration.—ಪದಭ್ರಷ್ಟರಾದ ಬರ್ಮ್ಮದೇಶದ ಅರಸರಾದ ಥೀಬಾಯವರಿಗೆ ಅವರರಾಜ್ಯವಂ ವಾಪಸ್‌ಕೊಡಬೇಕೆಂದು ವಾದಿಸುವದಕ್ಕಾಗಿ ಇಂಗ್ಲಿಷ್ ಬ್ಯಾರಿಸ್ಟರೊಬ್ಬರು ಇಂಗ್ಲಾಂಡಿಗೆ ಹೋಗುವವರಾಗಿರುವಂತೆ ರಂಗೂನ್‌ನಲ್ಲಿ ಪ್ರಸ್ತಾಪವುಂಟಾಗಿರುವದಾಗಿ ಒಂದಾನೊಂದುಪತ್ರಿಕೆ ಹೇಳುತಿದೆ. ಇಂತಾ ಪ್ರಯತ್ನದ ದೆಸೆಯಿಂದ ಥೀಬಾಯವರಿಗೆ ಆಗುವ ಪ್ರಯೋಜನ ಪ್ರಸಿದ್ಧವಾಗಿಯೇ ಇದೆ. ಪರಂತುಬ್ಯಾರಿಸ್ಟರವರ ಅಂತರವಾದಉದ್ದೇಶ ಸದ್ಯಃ ಕೈಗೂಡುವದು.

The Indian Civil Service.—ನೇಟಿವ್‌ಗಳನ್ನು ಇಂಡಿಯನ್ ಸಿವಿಲ್ ಸರ್ವಿಸ್ ನೌಕರಿಗೆ ಸೇರಿಸುವವಿಷಯವನ್ನು ಕುರಿತು ಇಂಡ್ಯಗವರ್ನಮೆಂಟಿನವರು ಸ್ಟೇಟ್ ಸೆಕ್ರೆಟರಿಯವರಿಗೆ ಬರೆದಕಾಗದಕ್ಕೆ ಅವರಿಂದ ಇದುವರಿವಿಗೆ ಉತ್ತರ ಬರಲಿಲ್ಲವೆಂತಲೂ, ಪರಂತು ಲಾರ್ಡ್ ಕಿಂಬರ್ಲೆಯವರು ಈಚೆಗೆ ಪಾರ್ಲಿಮೆಂಟ್ ಸಮಾಜದಲ್ಲಿ

ಹೇಳಿದ ಮಾತಿನದೆಸೆಯಿಂದ ಸದರೀ ಅಂಶವನ್ನು ಕುರಿತು ವಿಚಾರಿಸತಕ್ಕಬಗ್ಯೆ ಒಂದು ಕಮಿಟಿ ಯೇರ್ಪಾಡುಮಾಡಬೇಕೆಂಬ ಅಭಿಪ್ರಾಯಪೂರ್ವಕ ಅವರುಬರೆದಕಾಗದ ಈಗ ಮಧ್ಯಮಾರ್ಗದಲ್ಲಿದೆಯೆಂತಲೂ ಪಯೋನಿಯರ್‌ಪತ್ರಿಕೆ ತಿಳಿಸುತಿದೆ.

The hill question —ಇಂಡ್ಯಗವರ್ನಮೆಂಟಿನವರು ಶೀತವಾತಾಪೇಕ್ಷೆಮೊದಲಾದ ಕಾರಣಗಳಮೇಲೆ ಹಿಮಾಚಲದಲ್ಲಿ ವಾಸಮಾಡುವದಕ್ಕೆ ಅವಕಾಶವಿಲ್ಲದಂತೆ ಕಾಯಮಾಗಿ ಗವರ್ನಮೆಂಟ್ ಹೆಡ್‌ಕ್ವಾರ್ಟರ್‌ಮಾಡುವದಕ್ಕೆ ಸ್ಥಳ ಮತ್ತು ಹವಾಮೊದಲಾದ ಅನುಕೂಲ್ಯಗಳುಳ್ಳಂತಾ ಬೇರೆಯೊಂದು ಸ್ಥಳವನ್ನು ಹುಡುಕಬೇಕೆಂಬದೇ ಲಾರ್ಡ್ ರಾಂಡಾಲ್ಫ್ ಚರ್ಚಿಲ್‌ಯವರ ಅಭಿಪ್ರಾಯವೆಂತಲೂ, ಸದರೀಯವರ ನಿಗೇಯಲ್ಲಿ ಅದಕ್ಕೆ ಅನುಕೂಲವಾದಸ್ಥಳ ಪೂನೇಯೆಂತಲೂ ಅಲಹಾಬಾದ್‌ಪತ್ರಿಕೆ ಹೇಳುತಿದೆ.

A suit for damages —ಮಧ್ಯ ಇಂಡಿಯಾದೇಶದಲ್ಲಿ ಗವರ್ನರ್ ಜನರಲ್ ಯವರಕಡೆ ಏಜಂಟರಾದ ಸರ್. ಲೆಪಲ್ ಗ್ರಿಫಿನ್‌ಯವರು ಮೆ॥ ಮನಮೋಹನ ಘೋಸ್‌ಯೆಂಬವರ ವಿಷಯವು ಕುರಿತು ಏಷ್ಯಾಟಿಕ್ ಕ್ವಾರ್ಟರ್ಲಿ ರಿವ್ಯು ಯೆಂಬಪತ್ರಿಕೆಯಲ್ಲಿ ಮಾನನಷ್ಟಕರವಾದ ಬರವಣಿಗೆಯನ್ನು ಪಾಯಿಷ್ ಮಾಡಿದಬಗ್ಯೆ ಅವರಮೇಲೆ ೫೦,೦೦೦ ರೂಪಾಯಿಗಳಿಗೆ ದಾವೇಮಾಡುವವರಾಗಿದಾರೆಂದು ಒಂದಾನೊಂದು ಪತ್ರಿಕೆಹೇಳುತಿದೆ ಮೊಕದ್ದಮೆಯ ನ್ಯಾಯಾನ್ಯಾಯಗಳು ಹ್ಯಾಗಾದರೂ ಇರಲಿ. ಸರ್ ಲೆಪಲ್ ಗ್ರಿಫಿನ್‌ಯವರಂತಾ ಪ್ರಬಲರಾದ ಯೂರೋಪಿಯನ್ ದೊಡ್ಡಮನುಷ್ಯರಮೇಲೆ ನೇಟಿವ್‌ಗಳು ತರುವವ್ಯವಹಾರದಲ್ಲಿ ನೇಟಿವ್‌ಗಳಿಗೆ ನ್ಯಾಯದೊರಕುವ ವಿಷಯಮಾತ್ರ ಸುಕಯ ಗ್ರಸ್ತವಾದದ್ದು.

The late Maharaja Holkar —ಮೃತಪಟ್ಟ ಹೋಲ್ಕರ್ ಮಹಾರಾಜರವರ ಜೀವಮಾನದಲ್ಲಿ ಅವರುಮಾಡಿದ ಉತ್ತಮಕಾರ್ಯಗಳಪೈಕಿ ಒಂದೆರಡು ಪ್ರಸ್ತಾಪಕ್ಕೆ ಬಾರದೆಹೋದವು. ಅವ್ಯಾವವಂದರೆ—ಮಹಾರಾಜರವರು ವಿದ್ಯಾಭಿವೃದ್ಧಿ ವಿಷಯದಲ್ಲಿ ಕೇವಲ ಅಕ್ಕರೆವಹಿಸಿದ್ದು ಮಾತ್ರವಲ್ಲದೆ ತಮ್ಮ ಸಾಹುಕಾರಸಂರಕ್ಷೇಮದಲ್ಲಿ ಅತ್ಯಧಿಕಾಪೇಕ್ಷೆಯುಳ್ಳವರಾಗಿದ್ದರು. ದಾರ್ ಮತ್ತು ಮೈಸೂರುರಾಜ್ಯಗಳನ್ನು ಸ್ವದಾಜರಿಗೆ ಒಪ್ಪಿಸುವವಿಷಯದಲ್ಲಿ ಅರ್ಥ ವ್ಯಯಮೂಲಕ ಶ್ರಮಿಸಿ ಆಬಗ್ಯೆ ಫಾರಿನ್‌ಆಪೀಸ್‌ಯವರ ಅಸಂತುಷ್ಟಿಗೆ ಸ್ವಲ್ಪವಾಗಿ ವಿಷಯರಾಗಲಿಲ್ಲವು. ವಿದ್ಯಾಭಿವೃದ್ಧಿ ವಿಷಯದಲ್ಲಿ ಅಕ್ಕರೆ, ಸಾನೀ ಅರಸರ ಕ್ಷೇಮಾಭಿವೃದ್ಧಿಯಲ್ಲಿ ಅಭಿಲಾಷೆ, ಈಯೆರಡು ಉತ್ತಮಗುಣಗಳು ಇಂಡ್ಯದೇಶದೊಳು ಸರ್ವತ್ರವ್ಯಾಪಿಸಿರುವ ನೇಟಿವ್ ಅರಸರುಗಳಲ್ಲಿ ಸಾಮಾನ್ಯವಾಗಿ ಇರತಕ್ಕವಲ್ಲವು. ಸದರೀ ಎರಡುಗುಣಗಳವಿಷಯದಲ್ಲಿ ಇಂಡ್ಯದೇಶದ ಅರಸರುಗಳು ತುಕ್ಕಾಜಿರಾವ್ ಹೋಲ್ಕರ್‌ಯವರನ್ನು ಒಂದುನಮೂನೆಯಂತೆ ಭಾವಿಸತಕ್ಕದ್ದು, ಎಂದುವಗ್ಯೆರೆ ಇಂಡಿಯನ್ ಮಿರರ್‌ಪತ್ರಿಕೆ ಹೇಳುತಿದೆ.

ನೋಟೀಸ್.

ನಮ್ಮ ಚಂದಾದಾರರಿಗೆ ಇದರಿಂದ ನಾವು ಶ್ರುತಪಡಿಸುವದೇನಂದರೆ,—

ಇದುವರಿವಿಗೆ ಅನೇಕಾವರ್ತಿ ನಾನಾವಿಧದಿಂದ ಚಂದಾ ಬಾಕೀಗಳನ್ನು ಕಳುಹಿಸಿ ಕೊಡಬೇಕೆಂದು ನಮ್ಮ ಚಂದಾದಾರರನ್ನು ನಾವು ಕೇಳಿಕೊಂಡದ್ದು ಪ್ರಸಿದ್ಧವಾಗಿದೆಯಷ್ಟೆ ಅಂತಾ ನಮ್ಮಪ್ರಾರ್ಥನೆಯನ್ನು ಲಾಲಿಸತಕ್ಕವರ ಸಂಖ್ಯೆ ಅತ್ಯಲ್ಪವಾಗಿ ಹೋದದರಿಂದ ಇತರ ಬಾಕೀದಾರರ ವಿಷಯದಲ್ಲಿ ಈಗ ನಾವು ಅವಲಂಬಿಸಿರುವ ಮಾರ್ಗ ಯಾವದೆಂದರೆ—

೧ನೇ—ಸನ್ ೧೮೮೪ನೇ ಇಸವಿ ಬಾಕೀದಾರರ ಮೇಲೆ ದಾವೆ.

೨ನೇ—ಸನ್ ೧೮೮೫ನೇ ಇಸವಿ ಬಾಕೀದಾರರಿಗೆ ಮೊದಲು ಲಾಯರ್‌ನೋಟಿಸ್.

೩ನೇ—ಸನ್ ೧೮೮೬ನೇ ಇಸವಿಗೆ ಇದುವರಿವಿಗೆ ಚಂದಾ ಕಳುಹಿಸದೆ ಇರತಕ್ಕವರಿಗೆ ಜ್ಞಾಪಕಾರ್ಥ ನೋಟಿಸ್.

ಇಂತಾ ಕ್ರಮನಡಿಸಬೇಕಾಗಿ ಬಂದದಕ್ಕಾಗಿ ಬಹಳ ವಿಷಾಸುತ್ತೇವೆ.

೧೨—೭—೮೬ } ಟಿ. ಸಿ. ಶ್ರೀನಿವಾಸಾಚಾರ್, ಪ್ರೊ. ಕ. ಪ್ರ.

LOCAL AND PROVINCIAL NEWS.

ಒಳದೇಶಮತ್ತುತಾಲ್ಲೂಕಜಾತಿವೃತ್ತಾಂತಗಳು.

——— 0. ———

Criminal sessions.—ಇಲ್ಲಿನ ಸಿವಿಲ್ ವ ಮಿಲಿಟರಿ ಸ್ಟೇಷನ್ ಕ್ರಿಮಿನಲ್ ಸೆಷನ್‌ದರ್ಯಾಪ್ತಿಯು ಈ ತಿಂಗಳ ೧೫ನೇ ತಾರೀಖ್ ಬೃಹಸ್ಪತಿವಾರದ ದಿನ ಪ್ರಾರಂಭವಾಗುವದು.

Mr Anandatirtha Row.—ಅಸಿಸ್ಟೆಂಟ್ ಇಂಜನಿಯರ್‌ಮೆ॥ ಆನಂದತೀರ್ಥರಾಯರಿಗೆ ಮಾಹೇಮಡಕೂರ್ ಗುರ್ರೇತಾರೀಖ್‌ಲಾಗಾಯತು ಅರ್ಧತಲಬಿನಮೇಲೆ ಆರುತಿಂಗಳರಜಾ ಕೊಡಲ್ಪಟ್ಟರುತಿದೆ.

Mr, J· P Barker.—ಮೈಸೂರು ರಿವಿನ್ಯು ಸರ್ವೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆಸ್ಟರ್ ಬಾರ್ಕರ್‌ಯೆಂಬವರಿಗೆ ೧೮೮೬ನೇ ಇಸವಿ ಜೂಲೈ ೭ನೇ ಮಕ್ಕಾಂ ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖ್‌ಮೊದಲು ಮೂರುತಿಂಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟರುತಿದೆ.

Assumption of charge.—ಮೆಸ್ಟರ್ ನಂಜುಂಡಯ್ಯ ಎಂ. ಎ. ಬಿ. ಎಲ್. ಯವರು ಕಳೆದ ತಿಂಗಳ ೨೮ನೇ ತಾರೀಖಿನ ಮಧ್ಯಾಹ್ನಾತ್ಪರ ಹಾಸನಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್‌ಕಮಿಷನರ್ ಆಫೀಸಿಚಾರ್ಜನ್ನು ವಹಿಸಿದರು ಮೆ॥ ಪೊನ್ನುರಂಗಮೊದಲಿಯಾರ್ರವರು ಸಹ ಅದೇದಿನ ಪೋಲೀಸ ಅಸಿಸ್ಟೆಂಟ್ ಕಮಿಷನರ ಆಫೀಸ್‌ಚಾರ್ಜನ್ನು ವಹಿಸಿದರೆಂದು ತಿಳಿಯಬರುತಿದೆ.

Mr J Cameron —ಸರ್ಕಾರ್ ತೋಟಗಳ ವ ಮ್ಯೂಜಿಯಂ ಸೂಪರಿಂಟೆಂಡೆಂಟರಾದ ಮೆ. ಕ್ಯಾಮಿರಾನ್‌ಯವರಿಗೆ ೧೮೮೬ನೇಇಸವಿ ಜೂಲೈ ೩ನೇ ತಾರೀಖ್ ಲಾಗಾಯತು ಅಥವಾ ಅವರು ಪ್ರಯಾಣಮಾಡುವ ತಾರೀಖ್‌ಮೊದಲು ಆರುತಿಂಗಳ ರಜಾ ಕೊಡಲ್ಪಟ್ಟರುತಿದೆ. ಮೆ ಕ್ಯಾಮಿರಾನ್ ಯವರುತಾವು ನೋಡುತಲಿದ್ದ ಕೆಲಸಗಳಚಾರ್ಜನ್ನುಮಾಹೇಮಡಕೂರ್ ೩ನೇ ತಾರೀಖಿನ ಬೆಳಗ್ಯೆ ಮೆ॥ಎಲ್. ಬ್ರೆನ್‌ಯವರಿಗೆ ಒಪ್ಪಿಸಿದರೆಂದು ತಿಳಿಯಲಾದೆವು

Interpreter, Civil and Sessions Court, C. and M Station.—ಇಲ್ಲಿನ ಸಿವಿಲ್ ವ ಮಿಲಿಟರಿಸ್ಟೇಷನ್ ಸೆಷನ್‌ಕೋರ್ಟ್ ಇಂಟರ್‌ಪ್ರಿಟರ್‌ಕೆಲಸಕ್ಕೆ ನೊಕರರಾದ, ಮದರಾಸ್ ಹೈಕೋರ್ಟ್ ವಕೀಲ್ ಮೆ॥ಕೃಷ್ಣರಾವ್, ಬಿ. ಎ. ಬಿ. ಎಲ್. ಯವರು ಕಳೆದ ಬೃಹಸ್ಪತಿವಾರದದಿನ ಇಲ್ಲಿಗೆಬಂದು ತಮ್ಮಕೆಲಸದ ಚಾರ್ಜು ವಹಿಸಿದರು. ಈ ದೊಡ್ಡಮನುಷ್ಯರು ಪ್ರಬಲವಾದ ಯೆರಡುಪರೀಕ್ಷೆಗಳಂಕೊಟ್ಟು ಪ್ರಶಸ್ತಿಗಳಂ ಪಡೆದು ಮದರಾಸ ಹೈಕೋರ್ಟ್ ವಕೀಲರಾಗಿರುತಲಿದ್ದು ಮಾಹೇಯಾನಾ ೫೦ ರೂಪಾಯಿಗಳ ತಲಬುಳ್ಳ ಒಂದು ನೌಕರಿಗಾಗಿ ಇಲ್ಲಿಗೆ ಬಂದದಕ್ಕೆ ಏನು ಕಾರಣ ವಿರಬಹುದೋ ನಾವರಿಯೆವು.

Rain.—ಕಳೆದ ವಾರದೊಳು ಈ ಪೂರಲ್ಲೂ ಇದರ ಆಸಪಾಸ ಪ್ರದೇಶಗಳಲ್ಲೂ ಒಳ್ಳೆಯಮಳೆ ಆಯಿತು. ಕಳೆದ ಬುಧವಾರದದಿನ ರಾತ್ರಿ ೮ಘಂಟೆಗೆ ಪ್ರಾರಂಭವಾದ ವರ್ಷ ಬೆಳಗ್ಯೆ ೫ ಘಂಟೆಯತನಕ ಬೀಳುತಲೇ ಇತ್ತು. ಇದೇವರ್ಷದ ದೆಸೆಯಿಂದ ಬೆಂಗಳೂರಿಗೂ ತುಮಕೂರಿಗೂ ಮಧ್ಯೆ ರೈಲ್‌ರಸ್ತೆ ಕೆಲವುಕಡೆ ಕೊಚ್ಚಲ್ಪಟ್ಟು ಹೋಗಿ ರೈಲ್‌ಗಾಡಿ ಕೆಲವು ಘಂಟೆಯಕಾಲ ಅಡ್ಡಿಪಟ್ಟಂತೆ ಸಹ ತಿಳಿಯಬರುತಿದೆ. ಪದಾರ್ಥಗಳ ಧಾರಣೆಗಳು ಏಕರೂಪವಾಗಿದೆ. ಒಳ್ಳೆಯಅಕ್ಕಿ ಮತ್ತು ತುಪ್ಪ ದುರ್ಲಭವಾಗಿವೆ. ಜಲಕ್ಷಾಮ ಮಾತ್ರ ಸದ್ಯಃ ತಪ್ಪಿತೆಂದು ಹೇಳಬಹುದಾಗಿದೆ.

The Fort murder.—ಈಪೂರು ಕೋಟೆಯಲ್ಲಿ ನಡೆದ ಒಂದು ಖೂನೀಮೊಕದ್ದಮೆಯನ್ನು ವಿವರವಾಗಿ ಹಿಂದಿನವಾರದ ಪತ್ರಿಕೆಯ ಮೂಲಕ ತಿಳಿಸಿಯಿರುತ್ತೇವೆಯಷ್ಟೆ. ಈ ಮೊಕದ್ದಮೆಯು ಇದುವರಿವಿಗೆ ಪೋಲೀಸಿನವರ ತನಿಖೆಯಲ್ಲೇಯಿದೆ. ಅಪರಾಧಿಗಳು ಪತ್ತೇಲಾಗಲಿಲ್ಲವು ಪೋಲೀಸಿನವರು ಸರ್ವಪ್ರಯತ್ನವೂ ಮಾಡುತಲಿದಾರೆ. ಅವರವಿಷಯದಲ್ಲಿ ಈಗ ಯಾವ ಅಭಿಪ್ರಾಯವನ್ನಾಗಲಿ ಕೊಡುವದಕ್ಕೆ ಕಾಲವಲ್ಲವು.

Arrival of H. H the Maharajah.—ಗತವಾರದಲ್ಲಿ ಸೂಚಿಸಿ ಇದ್ದಂತೆ ಕಳೆದ ಶನಿವಾರದದಿನ ಸಾಯಂಕಾಲ ೫ ಘಂಟೆ ೨೦ ನಿಮಿಷಕ್ಕೆ ಶ್ರೀಮನ್ಮಹಾರಾಜರವರು ತಮ್ಮ ದಿವಾನರು ಮತ್ತು ರಾಜಬಂಧುಗಳೊಡನೆ ಸ್ಪೆಷಲ್ ಟ್ರೇನಿನ್ನಲ್ಲಿ ಈಪೂರಿಗೆ ದಯಮಾಡಿದರು. ಅವರ ಆಗಮನನಿರೀಕ್ಷಣೆಯಿಂದ ಇಲ್ಲಿನ ಬ್ರಿಟಿಷ್ ರೆಸಿಡೆಂಟರಾದ ಮೆ॥ಜೆ. ಬಿ. ಲೈಲ್, ಚೀಫ್‌ಜಡ್ಜಿ ಮೆ॥ ಶ್ರ್ಯೂಮರ್ ಮೊದಲಾದ ಯೂರೋಪಿಯನ್ ದೊಡ್ಡಮನುಷ್ಯರೂ, ರಾಜಾ ಸರ್. ಟಿ. ಮಾಧವರಾಯರು, ಚೀಫ್ ಕೋರ್ಟ್ ೨ನೇ ಜಡ್ಜಿಯರಾದ ಮೆ॥ ಮುಬುಕಟ್ಟನು, ೩ನೇ ಜಡ್ಜಿಯರಾದ ಮೆ॥ರಾಮಚಂದ್ರಯ್ಯನವರು ಮೊದಲಾದ ನೇಟಿವ್‌ದೊಡ್ಡಮನುಷ್ಯರೂ ರೈಲ್ವೇ ಪ್ಲಾಟ್‌ಫಾರಂನಲ್ಲಿ ಹಾಜರಿದ್ದು ಮಹಾರಾಜರವರನ್ನು ಉಚಿತ ಮರ್ಯಾದೆಗಳೊಡನೆ ಬರಮಾಡಿಕೊಂಡರು. ಮಾಮೂಲಿಮೇರೆ ಇತರ ಮರ್ಯಾದೆಗಳೆಲ್ಲವೂ ನಡೆದವು.

Native midwifes.—ಒಳ್ಳೆಯಜಾತಿಗೆ ಸೇರಿದವರಾಗಿಯೂ ಯಥೋಚಿತ ವಿದ್ಯಾಬುದ್ಧಿಯುಳ್ಳವರಾಗಿಯೂ ಇರುವ ನೇಟಿವ್ ಹೆಂಗಸರು ಯಾರಾದರುಸೂಲಗಿತ್ತಿಕಸಬನ್ನು ಕಲಿಯಲುಅಪೇಕ್ಷಿಸಿಬಂದರೆ ಅಂತವರು ಕೆಲವರನ್ನುಬರಮಾಡಿಕೊಂಡು ಬೆಂಗಳೂರು ಪ್ರಸವಾಶಿಪತ್ರಿಯಲ್ಲಿ ಅವರಿಗೆ ಸದರೀ ವಿದ್ಯೆಯನ್ನು ಕಲಿಸುವವಕ್ಕೆ ಇಷ್ಟ ಪಟ್ಟವರಾಗಿರುವಂತೆಯೂ, ಡಿಸ್ಟ್ರಿಕ್ಟ್‌ನವರೇ ಆಗಲಿ ಮ್ಯೂನಿಸಿಪಾಲಿಟಿಯವರೇ ಆಗಲಿ ಅಂತಾ ಜನಗಳು ಯಾರನ್ನಾದರೂ ಕಳುಹಿಸಿದರೆ, ಅವರು ಸದರೀಕಸಬನ್ನು ಕಲಿಯುವದಕ್ಕಾಗಿ ಆಸ್ಪತ್ರಿಯಲ್ಲಿರುವವರಿಗೆ ಅವರಿಗೆ ಜೀವನ ನಡೆಸಬೇಕೆಂತಲೂ ಮೈಸೂರುಗವರ್ನಮೆಂಟ್ ಸೀನಿಯರ್ ಸರ್ಜನ್‌ರಾದ ಡಾಕ್ಟರ್ ಮೆಗ್ಯಾನ್‌ಯವರು ಘೋಷಿಸಿಮಾಡಿರುತ್ತಾರೆ.

Transfer of the Mysore State Railway to S. M. Railway Company -ನಂ.೧೦೪ ಮೈಸೂರು ಸ್ಟೇಟ್‌ರೈಲ್ವೇ ಇಲಾಖೆಯ ಆಡಳಿತವು, ದಕ್ಷಿಣ ಮರಾಟಾ ಕಂಪೆನಿ (ಲಿಮಿಟೆಡ್)ಯವರಿಗೆ ಈಡಿವಸ ವರ್ಗ ಮಾಡಲ್ಪಟ್ಟಿರುತ್ತೆ.

೨. ರೈಲ್ವೇ ಇಲಾಖೆಯಲ್ಲಿ ಕೆಲಸ ನಡಿಸತಕ್ಕಬಗ್ಯೆ ಸರ್ಕಾರದಿಂದ ಇದುವರಿವಿಗೆ ನೊಕರರ್ಮಾಡಲ್ಪಟ್ಟ ಶಿಬ್ಬಂದಿಯು ಸುದಾ ಕಂಪೆನಿಗೆ ವರ್ಗಮಾಡಲ್ಪಟ್ಟರುತ್ತೆ. ಪರಂತು ಕೆಲವು ಆಫೀಸರುಗಳು ಮಾತ್ರ ವಿನಾಯಿಸಲ್ಪಟ್ಟು ಅವರುಗಳ ನೌಕರಿಯು ಏಯಿಂದ ಅವಶ್ಯಕವಿಲ್ಲವೆಂದು ನೋಟಿಸ್ ಕೊಡಲ್ಪಟ್ಟರುತ್ತಾರೆ. ಕಂಪೆನಿಗೆ ವರ್ಗ ಮಾಡಲ್ಪಟ್ಟ ತನಖಾಂದರ್ಜೆಯ ಆಫಿಸರ್‌ವ ನೌಕರ್‌ಮಾನೇರೂ, ಏಜಂಟರವರ ಹುಕ್ಕುಂ ತಾಬೆಯಲ್ಲಿ ಇರತಕ್ಕದ್ದೆಂದು ಇದರ ದೆಸೆಯಿಂದ ನಿಯಮಿಸಲ್ಪಟ್ಟರುತ್ತಾರೆ. ಇವರಪೈಕಿ ಸರ್ಕಾರದಿಂದ ಪೆನ್ಷನ್ ಪಡೆಯಲಿಕ್ಕೆ ಅರ್ಹರಾಗಿರುವಂತಾವರು, ಹೀಗೆ ವರ್ಗಮಾಡಲ್ಪಟ್ಟಾಗ್ಯೂ ಸರ್ಕಾರದ ನೌಕರೀಗೆ ಸೇರಿದವರಂತೆ ಭಾವಿಸಲ್ಪಡುವರು. ಆದರೆ ಅವರುಗಳು ಸರ್ಕಾರದಿಂದ ಪೆನ್ಷನ್ ಪಡೆಯುವಬಗ್ಯೆ ಆ ವಿಷಯದಲ್ಲಿ ಸಿವಿಲ್ ಪೆನ್ಷನ್ ಕೋಡಿನಿಂದ ವಿಧಿಸಲ್ಪಟ್ಟ ಕಂಟ್ರಿಬ್ಯೂಷನ್ ಯಾನೆ ಚಂದಾ ಮೊಬಲಗು ಪಾವತೀ ಮಾಡುವದರ ದೆಸೆಯಿಂದ ತಮ್ಮ ಹಕ್ಕುದಾರಿಯನ್ನು ಊರ್ಜಿತಪಡಿಸತಕ್ಕದ್ದು.

೩. ತತ್ಕಾಲದಲ್ಲಿ ಜಾರೀಯಲ್ಲಿರತಕ್ಕ ಕಾನೂನು ಅನುಸರಿಸಿ ಮೈಸೂರು ಸರ್ಕಾರದ ಕ್ರಮವಾದ ಆಫಿಸರರುಗಳಿಂದ ಸ್ಟೇಟ್ ರೈಲ್ವೇ ರಸ್ತೆಯಮೇಲೆ ಇದುವರಿವಿಗೆ ಚಲಾಯಿಸಲ್ಪಟ್ಟ ಸಿವಿಲ್, ಕ್ರಿಮಿನಲ್ ವ ಪೋಲೀಸ್ ಅಧಿಕಾರಿಗಳಲ್ಲಿ ಈವರ್ಗದ ದೆಸೆಯಿಂದ ಯಾವಬದಲಾವಣೆಯೂ ಮಾಡಲ್ಪಟ್ಟರುವದಿಲ್ಲವೆಂದು ತಿಳಿಯತಕ್ಕದ್ದು.

೪. ಮೆಡಿಕಲ್ ಇಲಾಖಾ ಶಿಬ್ಬಂದಿ ವ ಏರ್ಪಾಟುಗಳು ಮತ್ತೊಂದು ಹುಕುಂ ಕೊಡುವ ಪರಿಯಂತ, ಇದುವರಿಗಿನಂತೆಯೇ ಮೈಸೂರು ಗವರ್ನಮೆಂಟಿನ ಸೀನಿಯರ್ ಸರ್ಜನ್‌ರವರ ತಾಬೆಯಲ್ಲಿ ಇರತಕ್ಕದ್ದು.

೫. ಕಂಟ್ರಾಕ್ಟುದಾರರು ತಪ್ಪಿಹೋಗುವದರಿಂದ ಅಲ್ಲದೆ ಅನ್ಯಥಾ ಪಾಯಿದೇ ಮಾರದ, ಮೈಸೂರು ಗವರ್ನಮೆಂಟಿನೊಡನೆ ಮಾಡಲ್ಪಟ್ಟ ತನಖಾಂ ಕಂಟ್ರಾಕ್ಟು ಯಾನೆ ಒಡಂಬಡಿಕೆಗಳೂ, ಅವು ಪೂರೈಸುವದಕ್ಕೋಸ್ಕರ ಗೊತ್ತಾದ ಕಾಲದ ಪರಿಯಂತ ಅಥವಾ ಒಡಂಬಡಿಕೆಯ ಯಾವ ಷರತ್ತಾಗಲಿ ತಪ್ಪಿಹೋಗುವವರಿವಿಗೂ ಜಾರೀಯಲ್ಲಿರತಕ್ಕವು.

೬. ಗವರ್ನಮೆಂಟಿನ ಫಾರೆಸ್ಟ್ ಯಾ ರೆವಿನ್ಯೂ ಆಫಿಸರರುಗಳಿಂದ ಸಾದೇ ಸರಬರಾಯಿಬಗ್ಯೆ ಹಾಲೀ ಜಾರೀಲಿರತಕ್ಕ ಏರ್ಪಾಡುಗಳು, ಮುಂದೆ ಸರಬರಾಯಿಬಗ್ಯೆ ಕಂಪೆನಿಯವರಿಂದ ಯೇರ್ಪಾಡು ಮಾಡಲ್ಪಡುವ ನಿರೀಕ್ಷಣೇಮೇಲೆ ಬದಸ್ತೂರು ಇರತಕ್ಕದ್ದು.

CORRESPONDENCE.

———:o:———

ಕರ್ನಾಟಕಪ್ರಕಾಶಿಕಾಎಡಿಟರವರಸಮಕ್ಷಮಕ್ಕೆ

ಅಯ್ಯಾ,—ಈಕೆಳಗಿನ ಅಂಶವನ್ನು ಅಮೂಲ್ಯವಾದ ತಮ್ಮ ಪತ್ರಿಕೆಯಲ್ಲಿ ಪ್ರಕಟಪಡಿಸಬೇಕಾಗಿ ಕೋರುತ್ತೇನೆ.

ನಮ್ಮಮನೆಯ ದಕ್ಷಿಣಭಾಗದಲ್ಲಿ ಒಂದು ಹಿತ್ತಲು ಪುಂಟು. ಅಲ್ಲಿ ಒಂದು ಶೀಕುಂಬಳದಗಿಡವು ಹುಟ್ಟಿತು. ಆಗಿಡಕ್ಕೆ ಯೆರಡುಕಾಂಡಗಳಾಗಿ ಉಭಯಕೊನೆಗಳೂ ನಮ್ಮ ಮನೆಯಕಡೆ ಹೊರಟು ಒಂದು ಪಶ್ಚಿಮದಿಕ್ಕಿಗೂ ಮತ್ತೊಂದು ಉತ್ತರದಿಕ್ಕಿಗೂ ಹರಿದುಬಂದಿವೆ. ಅವುಗಳಪೈಕಿ ಮೊದಲು ಹೇಳಿದ ಕೊನೆಯಬಳ್ಳಿಯಲ್ಲಿ ಸಾಧಾರಣವಾದ ಕಾಯಿಗಳು ಆಗಿವೆ. ಮತ್ತೊಂದು ಕೊನೆಯು ಮನೆಯ ಹಂಚಿನಮೇಲೆ ಹತ್ತಿ ಅಲ್ಲಿಂದ ಕೊಂಚಕೊಂಚವಾಗಿ ಸರ್ಪಾಕೃತಿಯನ್ನು ಹೊಂದಿ ಈಗ ಏಳುಹೆಡೆಯ ಸರ್ಪನ ಆಕಾರವಂ ವಹಿಸಿ ಬಹಳ ಅದ್ಭುತವಾಗಿ ಬೆಳದಿದೆ. ಈ ಬಳ್ಳಿಯಲ್ಲಿ ಸಹ ಸಣ್ಣ ನಿಂಬೇಕಾಯಿಯ ಪ್ರಮಾಣದ ಕಾಯಿಗಳು ಬಹಳವಾಗಿ ಬಿಟ್ಟವೆ. ಫಣೆಯು ಒಂದುಮೊಳ ಅಗಲಕ್ಕಿಂತಲೂ ಜಾಸ್ತೀಯಾಗಿದೆ. ದೇಹವಾದರೋ ಒಂದೂವರೆ ಗೇಣು ಅಗಲವುಳ್ಳದ್ದಾಗಿದೆ. ಈ ವಿಚಿತ್ರವನ್ನು ನೋಡಲೋಸುಗ ಪ್ರತಿನಿತ್ಯವೂ ಈಪೂರು ಮತ್ತು ಆಸಪಾಸ್ ಪೂರುಗಳಿಂದ ಸಹ ಸಾವಿರಾರುಮಂದಿ ಆ ಬಾಲವೃದ್ಧರು ಬರುತಲಿದಾರೆ. ಇದನ್ನ ಬಂದವರುನೋಡಿ ಆಶ್ಚರ್ಯಪಟ್ಟು ಕೆಲವರು ಕೈಮುಗಿಯುತ್ತಲೂ ಕೆಲವರು ಧೂಪಹಾಕುತ್ತಲೂ ಮತ್ತೆ ಕೆಲವರು ತೆಂಗಿನಕಾಯಿಒಡೆಯುತ್ತಲೂ ಇನ್ನು ಕೆಲವರು ಹಣ್ಣು ನಿವೇದನ ಮಾಡಿ ಹುವ್ವು ಹಾರಹಾಕುತ್ತಲೂ ಈರೀತಿ ಬಗೆಬಗೆಯಾಗಿ ಮಾಡುತಲಿದಾರೆ. ಈ ಗಿಡದ ಮತ್ತೊಂದು ಶಾಖೆಯಕಾಯಿಗಳನ್ನು ಒಬ್ಬ ರೂ ಮುಟ್ಟರು. ನಮ್ಮನ್ನುಕೂಡಾ ತಿನ್ನಬಾರದೆಂದು ಹೆದರಿಸುತಲಿದಾರೆ. ಇಂತಾ ಶೇಷಾಕೃತಿಯುಳ್ಳ ಈಗಿಡವನ್ನು ಎಷ್ಟುದಫಾನೋಡಿದರೂ ತೃಪ್ತಿಯೇಆಗದೆ ಪುನಃಪುನಃ ನೋಡಬೇಕೆಂಬ ಅಪೇಕ್ಷೆಯೇ ಹುಟ್ಟುತಲಿದೆ. ಈಗಿಡವು ಈರೀತಿ ಇರುವದಕ್ಕೆ ಕಾರಣವನ್ನು ಯಾರನ್ನಕೇಳಿದರೂ ಹೇಳದೆಯಿದಾರೆ ಮೆ॥ ಎಡಿಟರವರೇ, ಹೀಗಾಗಲು ಕಾರಣವನ್ನು ನೀವಾಗಲಿ ಅಥವಾ ನಿಮ್ಮಪತ್ರಿಕೆಯನ್ನು ಓದತಕ್ಕವರೇಆಗಲಿ ದಯವಿಟ್ಟು ತಿಳಿಸುವಿರಿ ಯೆಂದು ಕೋರುವ.

ತಾ॥ ೩ನೇ ಜೂಲೈ } ತಮ್ಮ ವಿಧೇಯ.
೧೮೮೬ನೇ ಇಸವಿ. } ಬಿ. ಗರುಡಾಚಾರ್,
ಹೊಳೆನರಸೀಪುರ. } ಪ್ಲೀಡರ್.

ಶ್ರೀ ಶಿವಗಂಗಾ ಶ್ರೀ ಗಂಗಾಧರ ಭಾರತೀಸ್ವಾಮಿಗಳವರು ದೇಶ ಸಂಚಾರಾರ್ಥ ಈ ವ್ಯಯ ಸಂವತ್ಸರ ಜ್ಯೇಷ್ಠಬಹುಳ ೫ ಸೋಮವಾರದ ದಿನ ನೆಲಮಂಗಲಕ್ಕೆ ಸವಾರಿ ಬಿಜ್ಜಯಮಾಡಿದರು. ಆ ಕಾಲದಲ್ಲಿ ಸ್ವಾಮಿಗಳವರ ಆಗಮನವನ್ನು ನಿರೀಕ್ಷಿಸಿಕೊಂಡಿದ್ದ ಸಭೆಯವರು ಮೊದಲಾದ ಅನೇಕರಿಂದ ಮಾಮೂಲ್ ಮರ್ಯಾದೆ ಪ್ರಕಾರ ಅವರು ಬರಮಾಡಿಕೊಳ್ಳಲ್ಪಟ್ಟರಲ್ಲದೆ ಈ ನೆಲಮಂಗಲದಲ್ಲಿ ೧–೨ ದಿವಸಗಳು ಭಿಕ್ಷೆ ಪಾದಪೂಜೆಗಳು ನಡೆದವು. ಸ್ವಾಮಿಗಳವರಿಗೆ ದೇಹದಾರ್ಢ್ಯ ತಪ್ಪಿ ಅನಾರೋಗ್ಯವು ದಿನೇ ದಿನೇ ವೃದ್ಧಿಯನ್ನೈದುತಬಂದದರಿಂದ ಸ್ವಾಮಿಗಳವರು ತಮ್ಮ ಪ್ರಾಕೃತ ಶರೀರ ಅಶಾಶ್ವತವೆಂತಲೂ, ಈ ಧರ್ಮ ಸಂಸ್ಥಾನಕ್ಕೆ ತಮ್ಮ ಸ್ಥಾನದಲ್ಲಿ ಒಬ್ಬರು ಯೋಗ್ಯರಾದವರನ್ನು ನೆಲಗೊಳಿಸುವದಕ್ಕಾಗಿ ಆಶ್ರಮ ಕೊಡಬೇಕೆಂತಲೂ ತಮಗೆ ಇದ್ದ ಅಭಿಪ್ರಾಯವನ್ನು ಈ ನೆಲಮಂಗಲದ ಸಭೆಯವರಿಗೂ ಆಪ್ತರಾದ ದೊಡ್ಡಮನುಷ್ಯರಿಗೂ ತಿಳಿಸಿದ್ದರಮೇಲೆ ಮೈಸೂರು ವೆಂಕಟ ಸುಬ್ಬಾಶಾಸ್ತ್ರಿಗಳೆಂಬವರು ಬಾಲ್ಯವಯಸ್ಕರಾಗಿಯೂ, ಬ್ರಹ್ಮಚರ್ಯಾಶ್ರಮವುಳ್ಳವರಾಗಿಯೂ, ಈ ಪೀಠಕ್ಕೆ ರಕ್ಷ ಸುಗುಣಗಳುಳ್ಳವರಾಗಿಯೂ ಇರುವವನ್ನು ಸ್ವಾಮಿಗಳವರಿಗೆ ಶ್ರುತಪಡಿಸಲಾಗಿ ಅವರು ಅಂಗೀಕರಿಸಿ ಬ್ರಹ್ಮಶ್ರೀ ವೆಂಕಟಸುಬ್ಬಾಶಾಸ್ತ್ರಿಗಳವರನ್ನು ಅವರ ಮಾತಾಪಿತೃಗಳ ಆಜ್ಞಾಪ್ರಕಾರ ಆಶ್ರಮಸ್ವೀಕಾರಕ್ಕೆ ಅನುವುಗೊಳಿಸಿದ್ದರಿಂದ ನಿನ್ನೆ ಎಂಬ ವ್ಯಯಸಂವತ್ಸರ ಆಷಾಢಶುದ್ಧ ೨ ಸ್ಥಿರವಾರ ದಿವಿ ೧೫ ಘಳಿಗ್ಯೆ ಸರಿಯಾಗಿ ಕನ್ಯಾಲಗ್ನ ಅಭಿಜಿನ್ಮುಹೂರ್ತದಲ್ಲಿ ನೆಲಮಂಗಲದ ಅಶೇಷಸಭೆಯವರು ಶೆಟ್ಟಿವರ್ತಕರು ಗ್ರಾಮಾಂತರಗಳಿಂದ ಬಂದಿದ್ದ ಅನೇಕ ವಿದ್ವಾಂಸರು ಇವರುಗಳ ಸಮ್ಮತಿಪ್ರಕಾರ ಶಾಸ್ತ್ರೀಯವಾಗಿ ಈ ವೆಂಕಟಸುಬ್ಬಾಶಾಸ್ತ್ರಿಗಳವರಿಗೆ ಆಶ್ರಮಸ್ವೀಕಾರವನ್ನು ಮಾಡಿಸಿ ಶ್ರೀ ಗಂಗಾಧರಭಾರತೀ ಸ್ವಾಮಿಗಳವರು ಅತಿ ಹರುಷದಿಂದ ಪೂರ್ವದಿವಸಗಳಲ್ಲಿದ್ದ ದೇಹದಾರ್ಢ್ಯಕ್ಕಿಂತಲೂ ಯೋಗನಾರಣೆಯಿಂದ ಅತ್ಯಂತ ದಾರ್ಢ್ಯ ಶಕ್ತಿಯನ್ನು ಪಡೆದು, ಮಹಾವಾಕ್ಯಗಳು ಮೊದಲಾದ ಸನ್ಯಾಸಕ್ರಮವನ್ನು ಉಪದೇಶಿಸಿ ಪೂರ್ವಪದ್ಧತಿಪ್ರಕಾರ ಪಟ್ಟಾಭಿಷೇಕ ಮಾಡಿಸಿದ್ದದಲ್ಲದೆ ಸುಬ್ರಹ್ಮಣ್ಯಾನಂದ ಸಚ್ಚಿದಾನಂದ ಭಾರತೀಸ್ವಾಮಿಗಳೆಂಬ ಯೋಗಪಟ್ಟವನ್ನು ಕೊಟ್ಟು ಅಲ್ಲಿಗೆ ಬಂದಿದ್ದ ಸಭೆಯವರಿಗೆ ತಾಂಬೂಲ ಭೂರಿದಕ್ಷಿಣೆಯನ್ನು ಕೊಟ್ಟರು. ಆ ಶುಭಸಮಯದಲ್ಲಿ ಅಲ್ಲಿ ಸೇರಿದ್ದ ಸಭೆಯವರು ಶೆಟ್ಟಿವರ್ತಕರು ಮುಂತಾದವರೆಲ್ಲ ಸ್ವಾಮಿಗಳವರು ಕಾಲಸ್ಥಿತಿಯನ್ನು ಯೋಚಿಸಿ ಈ ಕಾರ್ಯ ನೆರವೇರಿಸಿದ್ದಕ್ಕಾಗಿ ಅತ್ಯಂತ ಸಂತುಷ್ಟರಾಗಿ ಒಂದು ವಿಜ್ಞಾಪನೆ ಪತ್ರಿಕೆಯನ್ನೊಪ್ಪಿಸಿದರು. ಅನಂತರ ಸಭೆಯವರಿಗೆಲ್ಲ ತೀರ್ಥಪ್ರಸಾದವೂ ಸಂತರ್ಪಣೆಯೂ ಕ್ರಮವಾಗಿ ನಡೆದು ಫಲಮಂತ್ರಾಕ್ಷತೆಯೊಡನೆ ಅಪ್ಪಣೆಯು ಕೊಡಿಸಿದ್ದಲ್ಲದೆ ಆ ರಾತ್ರಿ ಉತ್ಸವ ನಡೆಯಬೇಕೆಂದ ಶೆಟ್ಟಿವರ್ತಕರು ಕೇಳಿಕೊಂಡಪ್ರಕಾರ ಸ್ವಾಮಿಗಳವರು ಅಂಗೀಕರಿಸಿದ್ದರಿಂದ ಸಕಲ ಮರ್ಯಾದೆಗಳು ಸಹಿತ ಅತಿ ವಿಜೃಂಭಣೆಯೊಡನೆ ಗ್ರಾಮದಲ್ಲಿ ಉತ್ಸವವು ನಡೆಯಿತು. ಶ್ರೀ ಗಂಗಾಧರ ಭಾರತೀಸ್ವಾಮಿಗಳವರಿಗೆ ದೇಹಸ್ಥಿತಿಯು ಯಥಾಪ್ರಕಾರವೇ ಇದೆ. ಸ್ವಾಮಿಗಳವರ ದೇಹದಾರ್ಢ್ಯವನ್ನು ನೋಡಿ ಮಠದ ಪದ್ಧತಿಪ್ರಕಾರ ವಿದ್ವಾಂಸರಿಗೆ ಯಥೋಚಿತ ಮರ್ಯಾದೆಯೂ ಸ್ಥಳ ಪರಸ್ಥಳದವರಿಗೆ ಸಂತರ್ಪಣೆಯೂ ಭೂರಿಯೂ ನಡೆಸಲ್ಪಡಬೇಕೆಂದು ಯೋಚಿಸಿರುತ್ತಾರೆಂತ ಕೇಳುತ್ತೇನೆ. ಈಚೆಗೆ ಶ್ರೀಯವರಿಗೆ ದೇಹಸ್ಥಿತಿ ಆರೋಗ್ಯಕ್ಕೆ ಬಂದಕಾರಣ ಮಾಹೆ ಮಜಕೂರು ೭ನೇ ತಾರೀಖ್ ಬುಧವಾರ ಇಲ್ಲಿಂದ ಶಿವಗಂಗೆಗೆ ಸಕಲ ಪರಿವಾರದೊಡನೆ ದಯಮಾಡಿ ಅಲ್ಲಿಷ್ಟೇ ಮಡಿಂದಿರುವಂತೆ ತಿಳಿಯಬರುತಿದೆ

ತಾ॥ ೯ನೇ ಜೂಲೈ ೧೮೮೬ನೇ ಇಸವಿ.

ತಮ್ಮವಿಧೇಯ,
ಜಿ ಸುಬ್ಬರಾವ್,
ಫಸ್ಟ್‌ಗ್ರೇಡ್‌ಪ್ಲೀಡರ್, ನೆಲಮಂಗಲ.

FXTRACTS

ಆಚೇವಾರದಲ್ಲಿ ಮದರಾಸ್ ಹಿಂದೂ ಯೆಂಬ ಪತ್ರಿಕೆ ತಿಳಿಸುವದೇನಂದರೆ ಈಚೆಗೆ ಕೆಲವುದಿನಗಳ ಮೊದಲು ಮೈಸೂರುದೇಶದ ದಿವಾನರಾದ ಮೆ॥ ಶೇಷಾದ್ರಿಅಯ್ಯರವರ ಸಂಬಳ ಮಾಹೆಯಾನಾ ೩೦೦೦ರೂ॥ಗಳಿಂದ ೫೦೦೦ರೂಪಾಯಿಗಳಿಗೆ ಬಡ್ತೀ ಮಾಡಲ್ಪಡುವದೆಂಬ ಪ್ರಸ್ತಾವವುಂಟಾಗಿದೆ ಈ ಬಡ್ತಿಯ ದೆಸೆಯಿಂದ ದಿವಾನರವರ ನೌಕರಿಯನ್ನು ಮಹಾರಾಜರವರೂ ಇಂಡ್ಯಗವರ್ನಮೆಂಟಿನವರೂ ಶ್ಲಾಘ್ಯವಾದದ್ದೆಂದು ಭಾವಿಸಿದಂತೆ ವ್ಯಕ್ತವಾಗುತದೆಯಾಗಿ ಅಂತಾ ಪ್ರಸ್ತಾವವನ್ನು ಪ್ರಜೆಗಳು ಸಂತೋಷದೊಡನೆ ಕೇಳುವರು. ಯಾತಕ್ಕೆಂದರೆ, ಮೆ॥ಶೇಷಾದ್ರಿಅಯ್ಯರವರು ದೊಡ್ಡದಾದ ಮತ್ತು ಕೇವಲಜವಾಬದಾರಿಯುಳ್ಳ ತಮ್ಮ ಕೆಲಸದಲ್ಲಿ, ಮೈಸೂರು ಅಥವಾ ಇನ್ನು ಯಾವ ನೇಟಿವ್‌ಸಂಸ್ಥಾನವೇ ಆಗಲಿ ಅಲ್ಲಿನ ಆಡಳಿತೆಗಳ ನಿರ್ವಹಣೆಯಬಗ್ಗೆ ಸಂಪಾದಿಸಬಹುದಾದ ರಾಜ್ಯತಂತ್ರಜ್ಞರಲ್ಲಿ ಶ್ರಮಿಸತಕ್ಕವರಾಗಿಯೂ ವಿಷಯಗ್ರಾಹಕತಾಶಕ್ತಿಯುಳ್ಳವರಾಗಿಯೂ, ದೇಶಾಭಿಮಾನವುಳ್ಳವರಾಗಿಯೂ ಇರುತ್ತಾರೆಂಬದರಲ್ಲಿ ಸಂಶಯವಿಲ್ಲವು. ಆದರೆ ಮೈಸೂರು ಸಂಸ್ಥಾನದ ಪ್ರಕೃತ ದ್ರವ್ಯಾನುಪಪತ್ತಿಯನ್ನು ಯೋಚಿಸುವಲ್ಲಿ ಮೆ॥ ಶೇಷಾದ್ರಿಅಯ್ಯರವರು ಹಾಗೆ ೨೦೦೦ರೂಪಾಯಿಗಳ ಸಂಬಳ ಬಡ್ತೀಯನ್ನು ಅಂಗೀಕರಿಸುವರಾದರೆ ಸಂಸ್ಥಾನದ ಕ್ಷೇಮಕ್ಕಿಂತಲೂ ತಮ್ಮ ಸ್ವಪ್ರಯೋಜನವನ್ನೇ ಮುಖ್ಯವಾಗಿ ಯೆಣಿಸಿದಂತೆಯಾಗುತಿದೆ ತಮ್ಮ ಮಂತ್ರಿಯವರು ಮಾಡಿದ ನೌಕರಿಯ ವಿಷಯದಲ್ಲಿ ತಮಗೆ ಪ್ರಸಾದಭಾವವನ್ನು ಮುಖ್ಯವಾಗಿ ಅವರ ಸಂಬಳ ಬಡ್ತೀಮಾಡುವವರ ಮೂಲಕ ವ್ಯಕ್ತಪಡಿಸಬೇಕೆಂದು ಮಹಾರಾಜರವರು ಆತುರಪಟ್ಟಿರುವರೆಂದು ನಾವು ನಂಬುವದಿಲ್ಲವು ವಿಶೇಷ ಜವಾಬದಾರಿಯೂ ಉಪಯುಕ್ತತೆಯೂ ಉಳ್ಳ ಒಂದು ದೊಡ್ಡ ಸಂಸ್ಥಾನದಪ್ರಧಾನಿಯ ಯೋಗ್ಯತೆಯನ್ನು ಅವರ ಸಂಬಳಮೂಲಕ ಗೌರವಿಸುವದು ಅನುಚಿತವು ಸಂಬಳದಮೇಲೆಯೇ ಪ್ರಧಾನಿಗಳ ಯೋಗ್ಯತೆಯನ್ನು ಪರಿಗಣಿಸಬೇಕಾಗುವ ಪಕ್ಷದಲ್ಲಿ ಇಂಗ್ಲಾಂಡದೇಶದ ಪ್ರಧಾನಿಯಾದ ಮೆ॥ ಗ್ಲಾಡ್‌ಸ್ಟೋನ್‌ಯವರಿಗೂ ಜರ್ಮನೀದೇಶದ ಪ್ರಧಾನಿಯಾದ ಪ್ರಿನ್ಸ್ ಬಿಸ್ಮಾರ್ಕ್‌ಯವರಿಗೂ ಎಷ್ಟು ಸಂಬಳ ಕೊಟ್ಟರೆ ಅವರಿಬ್ಬರೂ ಮಾನುಷಕೋಟಿಗೆ ಮಾಡಿದ ಉಪಕೃತಿಯನ್ನು ಪರಿಗಣಿಸಿದಂತೆ ಯಾಗುವದು? ಪ್ರಧಾನಿಯ ಆಡಳಿತವನ್ನು ಪ್ರಜೆಗಳು ಮೆಚ್ಚಿ ತೃಪ್ತರಾಗಿರುವದೇ ಮುಖ್ಯವಾದ ಗೌರವವೇ ಹೊರತು ಭಾರೀ ಸಂಬಳದಿಂದಲೇ ಗೌರವ ಪ್ರಾಪ್ತವಾಗಲಾರದು ಯಾತಕ್ಕೆಂದರೆ, ಇಂಗ್ಲಾಂಡರಾಜ್ಯದ ಪ್ರಧಾನಿಯವರು ಸಾಲೀನಾನ ೫,೦೦೦ ಪೌಂಡ್, ಅಂದರೆ, ೫೦,೦೦೦ ರೂಪಾಯಿಗಳ ಸಂಬಳದ ಸಂತುಷ್ಟರಾಗಿರುವಲ್ಲಿ ಮೈಸೂರು ದಿವಾನರವರು ಸಾಲೀಯಾನಾ ೩೦೦೦ ರೂಪಾಯಿಗಳಿಂದ ತೃಪ್ತರಾಗಿರಬೇಕಾದ್ದು ಮೈಸೂರುದೇಶದ ದೊಡ್ಡಅಧಿಕಾರಿಗಳಿಗೆ ಕೊಡಲ್ಪಡುವ ಸಂಬಳಗಳು ಇದುವರಿವಿಗೇನೇ ಬಹಳ ಜಾಸ್ತೀಯಾಗಿರುತವೆ, ಮತ್ತು ಯೆಷ್ಟುವಿಧದಿಂದ ಆಲೋಚಿಸಿದಾಗ್ಯೂ ದಿವಾನರವರಿಗೆ ಈಗ ಕೊಡಲ್ಪಡುವ ಸಂಬಳ ಕಮ್ಮಿಯಾದದ್ದು ಬೇರೆಯಲ್ಲವು. ಈ ಕಾರಣಗಳ ದೆಸೆಯಿಂದ ಈ ವಿಷಯದಲ್ಲಿ ಹುಟ್ಟಿರುವ ಪ್ರವಾದವು ನಿರಾಧಾರವಾದದ್ದಾಗಿ ಆಗುವದೆಂದು ಕೋರುವೆವುಮಾತ್ರವಲ್ಲದೆ ಮೆಸ್ಟರ್ ಶೇಷಾದ್ರಿ ಅಯ್ಯರವರು ಸ್ವಪ್ರಯೋಜನ ದೃಷ್ಟಿಯಿಲ್ಲದ ದೇಶಾಭಿಮಾನದೊಡನೆ ತಮಗೆ ಕೊಡಲ್ಪಡಬಹುದಾದ ಜಾಸ್ತೀಸಂಬಳವನ್ನು ನಿರಾಕರಿಸುವದು ಅವರಿಗೆ ಗೌರವಾಸ್ಪದವಾಗಿರುವದೆಂತಲು ಸಹ ಕೋರುವೆವು.

———

ಇಂಡಿಯನ್ ಮಿರರ್‌ಯೆಂಬ ಪತ್ರಿಕೆ ಹೇಳುವದೇನಂದರೆ—ಇಂಡ್ಯರಾಜ್ಯಾಡಳಿತದಲ್ಲಿ ಖರ್ಚುಗಳನ್ನು ಕಮ್ಮಿಮಾಡಬೇಕೆಂಬ ಉದ್ದೇಶದೊಡನೆ ಏರ್ಪಡಿಸಲ್ಪಟ್ಟಿರುವ ಕಮಿಟಿಯವರು, ಸಿಮ್ಲಾನಿಂದ ಇಂಡ್ಯದೇಶದ ಸಮಾಂತರಬಗಳಿಗೂ ಆಪಿಸರ್‌ಗಳಿಗೂ ಬರೆದು ಅವರವರ ಇಲಾಖೆಗಳಲ್ಲಿ ರೈಟರ್‌ಗಳಸಂಖ್ಯೆಯನ್ನೂ ಸಂಬಳಗಳನ್ನೂ ಕಮ್ಮಿಮಾಡುವದಕ್ಕೆ ಸಾಧ್ಯವಾದೀತೇಯೆಂದು ಕೇಳಿರುತ್ತಾರೆ. ಗವರ್ನಮೆಂಟಿನವರು ಪ್ರಕೃತ ಪ್ರಯತ್ನ ಮಾಡುವದಕ್ಕೆ, ಕೇವಲ ಆಕ್ಷೇಪಣೆಯ್ಯವಾದ ಇನ್‌ಕಂಟ್ಯಾಕ್ಸ್‌ಯೆಂಬ ಆಮದಾನೀ ಮೇಲಿನ ತೆರಿಗೆಯ ದೆಸೆಯಿಂದ ಜನಗಳನಿಗೇಯನ್ನು ತಪ್ಪಿಸಬೇಕೆಂಬಉದ್ದೇಶವೇ ಹೊರತು ಲವಾಜಮಾಕಮ್ಮಿಮಾಡುವದರಲ್ಲಿ ತಾತ್ವಿಕವಾದ ಅಕ್ಕರೆ ಇಲ್ಲವೆಂದು ಇದುವರಿವಿಗೆ ನಾವು ತಿಳಿಬರುತ್ತೇವೆ. ಅನಾವಶ್ಯಕಗಳಾದ ಖರ್ಚುಗಳನ್ನು ಕಮ್ಮಿಮಾಡುವದರಲ್ಲಿ ಕಮಿಟಿಯವರಿಗೆ ಅಕ್ಕರೆಯಿರುವದಾದರೆ ಅವರು ಪ್ರತಿಯೊಂದು ಆಫೀಸಿಗೂ ಹೋಗಿ ಪ್ರತಿಯೊಂದು ನೌಕರನೂ ಮಾಡುವ ಕೆಲಸ, ಅವನ ಸಂಬಳ, ಅವನು ಯೆಷ್ಟುಕಾಲವಮೊದಲು ನೌಕರಿಯಲ್ಲಿರುತ್ತಾನೆ, ಎಂಬ ಅಂಶಗಳನ್ನು ತನಿಖೆ ಮಾಡತಕ್ಕದ್ದು ಕೇವಲ ಸುಲಭವಾದ ಈ ಕ್ರಮವನ್ನನುಸರಿಸುವವರಮೂಲಕ ಕಮಿಟಿಯವರಿಗೆ ಬಹ್ವಂಶಗಳು ತಿಳಿಯಬಂದು ಸಾಧ್ಯವಾದ ಸ್ಥಳಗಳಲ್ಲಿ ಲವಾಜಮಾ ಕಮ್ಮಿಮಾಡಬಹುದು. ಲವಾಜಮಾ ಕಮ್ಮಿಮಾಡುವ ಉದ್ದೇಶದೊಡನೆ ಈಗ ಅವಲಂಬಿಸಲ್ಪಟ್ಟಿರುವ ತನಿಖೆ ಕ್ರಮವು ಯೆಷ್ಟುಮಾತ್ರವೂ ಉಚಿತವಾದದ್ದಲ್ಲವೆಂದು ನಾವು ದೃಢವಾಗಿ ನಂಬಿರುತ್ತೇವೆ. ಗವರ್ನಮೆಂಟಿಗೆ ಸೇರಿದ ಅನೇಕ ಇಲಾಖೆಗಳೊಳು ಕೆಲಸವಿಲ್ಲದೆ ಸಂಬಳಮಾತ್ರ ಪಡೆಯುತಲಿರತಕ್ಕ ಜನರು ಕಲಿದ್ದರು, ಮತ್ತು ಆ ಜನರಿರುವು ತನಿಖೆಗೆ ಬರುವಸಂಭವವಿರಲಿಲ್ಲವು. ಲವಾಜಮಾ ಕಮ್ಮಿಮಾಡುವವ್ಯಾಜದಿಂದ ಕಂಡಬ ಪಡೆಯುತ್ತ ದರುಡು ಕಷ್ಟಪಟ್ಟು ಕೆಲಸಮಾಡತಕ್ಕ ರೈಟರ್‌ಗಳು ಮತ್ತು ಜಸ್ತುಪಿಕ್ಕೆಗಳು ನೌಕರಿಯಿಂದ ತಪ್ಪಿಸಲ್ಪಡುವರು. ಈ ಸಂದರ್ಭದಲ್ಲಿ ವೈಸ್‌ರಾಯಿಯವರ ಲವಾಜಮೆಯನ್ನು ಕುರಿತುಮಾತ್ರ ನಾವು ವಿಚಾರಮಾಡುವೆವು ವೈಸ್‌ರಾಯಿಯವರ ಮನೇಖರ್ಚಿನಬಗ್ಗೂ ಅವರ ಪ್ರೈವೇಟ್ ಸೆಕ್ರೆಟರಿಯ ಲವಾಜಮಾ ಸಂಬಳಬಗ್ಗೂ ಮಾಹೆಯಾನಾ ಹತ್ತುಸಾವಿರರೂಪಾಯಿಗಳು ಅವರವರ ಕೊಡಲ್ಪಡುತಿವೆ ಇವಕ್ಕೆ ದಬರ್ಸುಮೆಂಟ್ ಜಿಸರು. ಫಿನಾನ್ಸ್‌ಯಲ್ ಇಲಾಖೆಯವರು ಇದರಮೇಲೆ ಅಧಿಕಾರ ಚಲಾಯಿಸುವದಕ್ಕೆ ಸ್ವಲ್ಪವೂ ಆಗುವದಿಲ್ಲವು. ಆದದರಿಂದ ಮಾರಿನವೂ ಬಲಗು ಮನಸ್ಸಿ. ವ್ಯಯಮಾಡಲ್ಪಡುತಿದೆ. ಪ್ರೈವೇಟ್‌ಸೆಕ್ರೆಟರಿಯ ಆಫೀಸಿನಲ್ಲಿ ಎಂಟುಹತ್ತುಮಂದಿ ಕ್ಲರ್ಕ್‌ಗಳೂ, ಮಾಹೆಯಾನಾ ೫೦೦ ರೂ॥ಗಳ ಸಂಬಳವನ್ನಲ್ಲಿಒಬ್ಬ ರಿಜಿಸ್ಟ್ರಾರ್, ೪೦೦ರೂ॥ಗಳ ಸಂಬಳದಲ್ಲಿಒಬ್ಬ ಅಸಿಸ್ಟೆಂಟ್ ಸೆಕ್ರೆಟರಿ, ೨,೦೦೦ರೂಪಾಯಿಗಳ ಸಂಬಳದಲ್ಲಿ ಒಬ್ಬ ಪ್ರೈವೇಟ್‌ಸೆಕ್ರೆಟರಿ, ಇಷ್ಟುಮಂದಿ ಇರುತ್ತಾರೆ ಈ ಪ್ರಸಂಗದಲ್ಲಿನ ನಾಗರಿಕತೆಯುಳ್ಳ ಯಾವ ಗವರ್ನಮೆಂಟಿನಲ್ಲಾಗಲಿ ಇಂತಾದ್ದನ್ನು ನೋಡುವದಕ್ಕೆ ಆಗುವದೆ? ಇದುವಾಯಿ, ಈ ಇಲಾಖೆಯವರು ಕಚ್ಚೇರಿಮಾಡುವದಕ್ಕೆ ಯೆರಡುಮೂರು ಕೊಠಡಿಗಳು ಸಾಕಾಗಿದ್ದಾಗ್ಯೂ ಬಂಗ್ಲೆ ಬಾಡಿಗೆಯಬಗ್ಗೆ ಮಾಹೆಯಾನಾ ೫೦೦ ರೂಪಾಯಿಗಳು ಕೊಡಲ್ಪಡುತಿವೆ ಬ್ರಿಟಿಷರವರ ಆಡಳಿತವು ಇಂಡ್ಯದೇಶದಲ್ಲಿ ನೆಲಸಿದ್ದು ಮೊದಲು ಮಿಲಿಟರಿಸೆಕ್ರೆಟರಿ ಇಲಾಖೆಯು ಗವರ್ನಮೆಂಟ್ ಹೌಸ್‌ನಲ್ಲೇ ಇರುತಲಿದ್ದು ಈಚೆಗೆ ಕೆಲವು ಕಾಲದಿಂದೆಯೇ ಅದಕ್ಕಾಗಿ ಬಾಡಿಗೆಗೆ ಒಂದು ಬಂಗ್ಲೆ ತೆಗೆಯಬೇಕಾದ್ದು ಆವಶ್ಯಕವಾಗಿ ತೋರಿಬಂತು. ಮತ್ತು ಇದರಂತೆಯೇ ಮುಖ್ಯವಾದದ್ದು ಮಿಲಿಟರಿ ಸೆಕ್ರೆಟರಿಯ ಇಲಾಖೆಯಾಗಿರುತಿದೆ, ಪರಂತು ಅದರ ಲವಾಜಮೆಗೆ ಫಿನಾನ್ಸ್‌ಯಲ್ ಇಲಾಖೆಯಿಂದ ಸಂಬಳ ಸಲ್ಲುತಲಿರುವದರಿಂದ, ಅದರ ಪಿವೆಕ್ಕ್ಯಾರ್ ಇತರ ಇಲಾಖೆಯಂತೆಯೇ ಪ್ರಬಲವಾದ ಕೆಲಸಗಳನ್ನು ಮಾಡುತ ಮಾಹೆಯಾನಾ ೭೦೦ರೂಪಾಯಿಗಳ ಸಂಬಳ ಪಡೆಯುತಲಿದ್ದಾನೆ, ಎಂಬದು

———

ದುರ್ಮರಣದ ತನಿಖೀದಾರನು ಕಮಿಟಿಂಗ್‌ಮ್ಯಾಜಿಸ್ಟ್ರೇಟಾಗುತ್ತಾನೆಯೇ ಎಂಬ ವಿಷಯವನ್ನು ಕುರಿತು ಇಂಡ್ಯಾ ಟೈಂಸ್ ಪತ್ರಿಕೆ ಹೇಳುವದೇನಂದರೆ—ಕರೋನರೆಂಬ ದುರ್ಮರಣದ ತನಿಖೀದಾರನು ಕಮಿಟಿಂಗ್‌ಮ್ಯಾಜಿಸ್ಟ್ರೇಟಿಲವಾನೆ, ಆತನಮುಂದೆ ಕೊಡಲ್ಪಟ್ಟಸಾಕ್ಷ್ಯವು ಸೆಷನ್‌ವಿಚಾರಣೆಯಲ್ಲಿ ಅಪರಾಧಿಯಮೇಲೆ ಉಪಯೋಗಿಸಲ್ಪಡಬಹುದೇ ಎಂಬವಿಷಯು ಈಚೆಗೆ ಮುಂಬೈಹೈಕೋರ್ಟ್ ಸೆಷನ್‌ವಿಚಾರಣೆಯಲ್ಲಿ ಮೆ॥ ಜಸ್ಟಿಸ್ ಫಾರ್ರಾನ್‌ಯವರ ಮುಂದೆ ಚರ್ಚಿಸಲ್ಪಟ್ಟಿತು. ಬಾಬಾಜಿ ರಘುನಾಥ ಯೆಂಬ ಹೆಸರುಳ್ಳ ಬಾಲಕನಾದ ಭಂಡಾರಿಜಾತಿಯಿಂದ ಒಬ್ಬನು ತನ್ನ ಹೆಂಡತಿ ಮೃತಪಟ್ಟದ್ದಕ್ಕೆ ಆವಶ್ಯಕಗಳಾದ ಯೇರ್ಪಾಡುಗಳನ್ನೆಲ್ಲ ಮಾಡಿ ಇಟ್ಟನೆಂಬ ತಕ್ಸೀರ್ ಆಪಾದಿಸಲ್ಪಟ್ಟನು. ಈ ಮೊಕದ್ದಮೆಯಲ್ಲಿ ಮುಖ್ಯವಾದ ಸಾಕ್ಷಿಗಳಪೈಕಿ ಯೊಬ್ಬಾಕೆಯು ಕರೋನರ್ ಮುಂದೆ ಕೊಟ್ಟ ಕೈಫೀಯತ್ತನ್ನು ಸೆಷನ್‌ವಿಚಾರಣೆಯಲ್ಲಿ ತಿರಿಗಿಸಿಕೊಂಡದರಿಂದ ಪಿರ್ಯಾದಿಯ ತರಫ್ ಲಾಯರು ಆಕೆಯ ಕೈಫೀಯತ್ತನ್ನು ದಾಖಲ್ಮಾಡುವದಕ್ಕೆ ಅಪ್ಪಣೆ ಕೊಡಬೇಕೆಂದು ಕೇಳಿಕೊಂಡದ್ದಲ್ಲದೇ ಕರೋನರಿಗೆ ತನ್ನ ವಿಚಾರಣೆಗೆ ಬಂದ ಮೊಕದ್ದಮೆಯನ್ನು ಸೆಷನ್ ಕಮ್ಮಿಟ್ ಮಾಡುವ ಅಧಿಕಾರವುಂಟೆಂದು ಹೇಳಿದನು. ಅಪರಾಧಿಯತರಫ್ ವಕೀಲರಾದ ಮೆ॥ ರಾಬರ್ಟ್‌ಸನ್‌ಯವರು, ಕರೋನರ್‌ಮಾಡಿದ ದರ್ಯಾಫ್ತಿಯು ಕ್ರಮವಾದದ್ದಲ್ಲವು, ಪರಂತು ಮರಣದ ಕಾರಣವನ್ನು ಕಂಡುಹಿಡಿಯುವದಕ್ಕಾಗಿ ಪೋಲೀಸಿನವರಿಂದ ಮಾಡಲ್ಪಟ್ಟ ದರ್ಯಾಫ್ತಿಯೆಂತಲೂ, ಪ್ರಕೃತ ಮೊಕದ್ದಮೆಯು ಕರೋನರಿಂದ ಕಮಿಟ್ ಮಾಡಲ್ಪಟ್ಟದ್ದಲ್ಲವು, ಪರಂತು ಒಬ್ಬ ಪ್ರೆಸಿಡೆನ್ಸೀ ಮ್ಯಾಜಿಸ್ಟ್ರೇಟರಿಂದ ಕಮಿಟ್ ಮಾಡಲ್ಪಟ್ಟದ್ದೆಂತಲೂ ತಿಳಿಸಿದರು ಅದರಮೇಲೆ ಜಡ್ಜಿಯವರು, ಒಬ್ಬ ಅಪರಾಧಿಯನ್ನು ಖುದ್ದು ಸೆಷನ್ ಕಮಿಟ್‌ಮಾಡುವ ಅಧಿಕಾರವು ಆಕ್ಟಿನ ದೆಸೆಯಿಂದ ಕಂಡತಃ ಕರೋನರಿಗೆ ಉಂಟುಮಾಡಲ್ಪಟ್ಟಿರಲಿಲ್ಲವು. ಪರಂತು ಹಾಗೆ ತಿಳಕೊಳ್ಳುವದಕ್ಕೆ ಸದರೀಸೆಕ್ಷನ್ ಅವಕಾಶಕೊಡುವಂತೆ ಕಾಣುತಿದೆ ೧ನೆ— ಪ್ರಸಕ್ತ ಮೊಕದ್ದಮೆಯಲ್ಲಿ ಕರೋನರು ಕಮಿಟಿಂಗ ಮ್ಯಾಜಿಸ್ಟ್ರೇಟರಲ್ಲವು. ೨ನೇ—ಕರೋನರ ಮುಂದೆ ನಡೆದ ನಡವಳಿತಗಳು, ಆಕ್ಟಿನಲ್ಲಿ ಹೇಳಿರುವಂತೆ, ಕಮಿಟಿಂಗ್ ಮ್ಯಾಜಿಸ್ಟ್ರೇಟರಮುಂದೆ ನಡೆದ ನಡವಳಿತೆಗಳಂತಾವಲ್ಲವು. ಸನ್ ೧೮೭೨ನೇ ಇಸವಿಯಲ್ಲಿ ಕರೋನರ ವಿಷಯಕವಾಗಿ ಹುಟ್ಟಿದ ಆಕ್ಟಿನಲ್ಲಿ ಸಾಕ್ಷಿಗಳನ್ನು ಪಾಟೀಸವಾಲ್ ಮಾಡುವ ಬಾಧ್ಯತೆಯು ಅಪರಾಧಿಗೆ ಉಂಟುಮಾಡಲ್ಪಟ್ಟಿರುವದಿಲ್ಲವು ಪರಂತು ಅಪರಾಧಿಯತರಫ್ ಸಾಕ್ಷ್ಯವನ್ನು ಅವಶ್ಯ ಕೇಳಬೇಕೆಂಬದಕ್ಕೆ ವಿಧಿಸಿರುತಿದೆ. ಕರೋನರಮುಂದೆ ಹೇಳಲ್ಪಟ್ಟ ಕೈಫೀಯತ್ತು ಕ್ರಿಮಿನಲ್ ಪ್ರೊಸಿಜರ್‌ಕೋಡ್ ೨೮೮ನೇಸೆಕ್ಷನ್‌ನಲ್ಲಿ ಹೇಳಿರುವ ತಾ ಸ್ವಭಾವವುಳ್ಳದ್ದೆಂದು ಹೇಳುವದು ಕಾನೂನಿಗೆ ವ್ಯಾಖ್ಯನಮಾಡಿದಂತೆ ಯಾಗುವದು ಅಪರಾಧಿಯು ಪಾಟೀಸವಾಲ್ ಮಾಡುವ ಬಾಧ್ಯತೆಯುಳ್ಳವನಾಗಿರಬೇಕಾದ್ದಲ್ಲದೆ ಅವನಿಗೆ ಹಾಗೆ ಮಾಡುವದಕ್ಕೆ ಅವಕಾಶ ಸಹವುಂಟಾಗಿರಬೇಕು ಅಪರಾಧಿಯು ಕರೋನರ ಮುಂದೆ ದರ್ಯಾಫ್ತೀ ಮಾಡಲ್ಪಡುವಕಾಲದಲ್ಲೂ ಪೋಲೀಸಿನವರವಶದಲ್ಲಿರುವಾಗಲೂ ಅವನಿಗೆ ಅಂತಾ ಸಂದರ್ಭ ವುಂಟಾಗಿರುವದೆಂದು ತೋರುವದಿಲ್ಲವು. ಪ್ರಸಕ್ತ ಸಾಕ್ಷ್ಯವು. ೧೫೫ನೇ ಸೆಕ್ಷನನ್ನು ೧೫೭ನೇ ಸೆಕ್ಷನಿನೊಡನೆ ಸೇರಿಸಿ ಓದುವಲ್ಲಿ ಅಂಗೀಕರಿಸಲ್ಪಡಬಹುದಾಗಿವೆ, ಆದರೆ ಅಪರಾಧಿಯಮೇಲೆ ಪ್ರತ್ಯಕ್ಷಸಾಕ್ಷ್ಯವಾಗಿ ಅಲ್ಲವು, ಪರಂತು ಸಾಕ್ಷಿ ಹೇಳಿದ್ದು ಸುಳ್ಳೆಂದು ನಿರೂಪಿಸುವದಕ್ಕೆ ಉಪಯೋಗಿಸಿಕೊಳ್ಳಬಹುದು. ಸದರೀ ಸಾಕ್ಷ್ಯವು ಸ್ವತಂತ್ರವಾದ್ದಲ್ಲವಾಗಿಯೂ, ಅದರದೆಸೆಯಿಂದ ಜೂರಿಗಳ ಮನಸ್ಸಿನಲ್ಲಿ ಅನ್ಯಥಾ ಜ್ಞಾನವುಂಟಾಗಬಹುದಾದರಿಂದಲೂ ಅದನ್ನು ಸಾಕ್ಷ್ಯವಾಗಿ ಅಂಗೀಕರಿಸುವದಿಲ್ಲವೆಂದು ಜಡ್ಜಿಯವರು ನಿರಾಕರಿಸಿದರು, ಎಂಬದು.

BANGALORE.—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧವೃತ್ತ್ಯಾನಗಮಾರ್ಗ್ಗ ಕರ್ಣಾಟಕಪ್ರಕಾಶನಪರಾಭಿದಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ಪ್ರಕಾಸುಪರಿಪೂಜಿತಾದಿಶತಿಮಾನಸಂಸುಮುದಂ

Vol. XIII] BANGALORE—MONDAY, JULY 19, 1886. [No. 29

ಸಂಪುಟ ೧೩. | ಬೆಂಗಳೂರು.—ಸನ್ ೧೮೮೬ನೇ ಇಸವಿ ಜೂಲೈ ೧೯ನೇ ತಾರೀಖು ಸೋಮವಾರ. | ಸಂಚಿಕೆ ೨೯.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

[illegible] ಕೊಡತಕ್ಕವರಿಗೆ, ವರುಷ ೧ಕ್ಕೆ	...	೧೨—೦—೦
[illegible] ಕೊಡತಕ್ಕವರಿಗೆ ವರುಷ ೧ಕ್ಕೆ	...	೬—೦—೦
[illegible] ವರುಷ ೧ಕ್ಕೆ	...	೬—೦—೦
[illegible] ೧ಕ್ಕೆ		೦—೮—೦

[illegible]

ಪ್ರಕಟನೆಯ ರಿವಾಜು.

[illegible]	೧ಕ್ಕೆ	೦—೩—೦
[illegible]	೧ಕ್ಕೆ	೦—೧—೧

NOTICE TO SUBSCRIBERS.

[illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA.

Price including Postage, Rs 5 0 0

ವೈದ್ಯಸಾರ ಸಂಗ್ರಹ.

[illegible]

[illegible]	... ... ರೂ॥	೫—೦—೦
[illegible] ಮತ್ತು ಅಂಚೇಖರ್ಚು		೦—೬—೦

[illegible], ಬೆಂಗಳೂರು.

ನೋಟೀಸ್.

[illegible] ಕನ್ನಡ ಗ್ರಂಥಗಳು [illegible] ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ವಿಕ್ರಯಿಸಲ್ಪಡುವವು.—

ಕನ್ನಡ ಟೀಕೆ [illegible] ಸಂಸ್ಕೃತ ಗ್ರಂಥಗಳು.

[illegible]	..	೧—೪—೦
[illegible]	...	೦—೧೨—೦
[illegible] (ಪಟ್ಟಾಂಬಾರ್)	...	೦—೩—೦
[illegible]		೦—೫—೦
[illegible]	...	೦—೪—೦
[illegible]	... ...	೦—೧೪—೦
[illegible]	...	೦—೭—೦
[illegible]	... ...	೦—೨—೦
ವೈದ್ಯಸಾರಸಂಗ್ರಹ	..	೫—೦—೦

ಕನ್ನಡ ಗ್ರಂಥಗಳು.

[illegible]	...	೦—೭—೬
[illegible]	...	೦—೪—೦
[illegible]	...	೦—೬—೩—೦
[illegible]	... ...	೦—೨—೬
[illegible]	...	೦—೪—೦
[illegible]	...	೦—೨—೦
[illegible]	...	೦—೨—೬
[illegible]	...	೦—೭—೦
[illegible]	... ...	೦—೩—೦
[illegible]	... ...	೦—೦—೬
[illegible]	... ...	೦—೦—೩
[illegible]		೦—೦—೬
[illegible]	...	೨—೦—೦
[illegible]	...	೦—೧೨—೦
[illegible]	...	೩—೪—೬
[illegible]	...	೩—೪—೬
[illegible]		
[illegible]	...	೦—೮—೬
[illegible]	...	೦—೮—೦
[illegible]	...	೦—೪—೦

ಸಂಸ್ಕೃತ ಮೂಲಗ್ರಂಥಗಳು.

[illegible]	..	೦—೫—೦
[illegible]	...	೦—೨—೬
[illegible]	...	೦—೨—೬
[illegible]	...	೦—೦—೬
[illegible]	...	೦—೨—೬
[illegible]	...	೦—೧—೦

[illegible]

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮ್ಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತರಾವರಿ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿತೆಗೆದುಕೊಳ್ಳಲ್ಪಡುವದು.

ಮೈಸೂರು ಸ್ಟೇಟ್ ರೈಲ್ವೆ

ಪ್ರಕಟನೆ

ಮೈಸೂರು ಸ್ಟೇಟ ರೈಲ್ವೇ ವಿಚಾರಣಾಧಿಕಾರವು ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪೆನಿಗೆ ವರ್ಗ ಮಾಡಲ್ಪಟ್ಟಿರುವದರಿಂದ ಸದರೀ ಕಂಪೆನಿಯ ಏಜಂಟರು, ಆಡಿಟರು, ಮತ್ತು ಟ್ರಾಫಿಕ್ ಮ್ಯಾನೇಜರು ಇವರಿಗೆ ಬರೆಯಬೇಕಾದ ಕಾಗದಗಳನ್ನು ಇದುಮೊದಲು ಧಾರ್ವಾಡಕ್ಕೆ ಬರೆಯತಕ್ಕದ್ದು.

ಬೆಂಗಳೂರು ಸಿಟೀ ಸ್ಟೇಷನ್ ಕ್ಯಾಷಿಯರಾದ ಮಿಸ್ಟರ್ ಘೋಂಡೇಪಂತ ರಾಮಚಂದ್ರಯವರು, ರೈಲ್ವೇಗೆ ಬರತಕ್ಕ ಹಣಗಳನ್ನು ಜಮಾಮಾಡಿಕೊಂಡು ಆ ಬಗ್ಗೆ ರಸೀದಿಗಳು ಕೊಡುವದಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ಸ್ಥಳ ವ್ಯಾಪಾರ ವಿಷಯವನ್ನು ಕುರಿತು ಬರೆಯತಕ್ಕ ಕಾಗದಗಳನ್ನು ಬೆಂಗಳೂರು ಸಿಟೀ ಸ್ಟೇಷನ್ನಲ್ಲಿರುವ ಟ್ರಾಫಿಕ್ ಸೂಪರಿಂಟೆಂಡೆಂಟರವರ ಹೆಸರಿಗೆ ಬರೆಯತಕ್ಕದ್ದು.

ಬೆಂಗಳೂರು, ೧೫ ಜೂಲೈ ೧೮೮೬. } G M STEWART, Agent, Southern Mahratta Railway

ನೋಟೀಸ್.

ಮೈಸೂರು ಮಹಾರಾಜರವರ ಸ್ಪಿನ್ನಿಂಗ್ ವ ಮ್ಯಾನ್ಯುಫ್ಯಾಕ್ಚರಿಂಗ್ ಕಂಪೆನಿ (ಲಿಮಿಟೆಡ್.)

ಇವರಿಂದ ಸಾದೀ ದರಖಾಸ್ತುದಾರರಿಗೆ ತಿಳಿಸುವದೇನೆಂದರೆ.—

[illegible]

[illegible]

[illegible]

[illegible]

[illegible]

[illegible]

[illegible]

ಕಂ ದರಖಾಸ್ತನ್ನು ಅಥವಾ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ವಿಚಾರಕರ್ತರು ಬದ್ಧರಾಗಿರುವದಿಲ್ಲವು.

SCOTT & Co.,
Agents.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JULY 19, 1886.

೧೮೮೬ನೇ ಜೂಲೈ ೧೯ನೇ ತಾ॥ ಸೋಮವಾರ.

THE INSTALLATION OF H. H. THE MAHARAJA SIVAJI ROW HOLKAR OF INDOOR.

ಇಂದೂರ್ ಸಿಂಹಾಸನದಲ್ಲೀಗ ಪ್ರತಿಷ್ಠಿತರಾದ ಮಹಾರಾಜಾ ಶಿವಾಜೀರಾವ್ ಹೋಳ್ಕರವರ ಪಟ್ಟಾಭಿಷೇಕೋತ್ಸವ ವಿಶೇಷವನ್ನು ಸಮಗ್ರವಾಗಿ ತಿಳಿಸಿ, ಮಾಹೇ ಜುಲೈ ೩ನೇ ತಾರೀಖಿನಲ್ಲಿ ಇಂಡ್ಯ ಗವರ್ನಮೆಂಟನವರ ತರಫ್ ಸರ್ ಲೆಪೆಲ್ ಗ್ರಿಫಿನ್‌ಯವರಿಂದ ಕ್ರಮವಾಗಿ ದೌಲತ್ ಒಪ್ಪಿಸಲ್ಪಡುವದೆಂದು ವರ್ತ್ಯರೆ ಗತವಾರದ ಪತ್ರಿಕಾಮೂಲಕ ತಿಳಿಸಿದ್ದೆವಷ್ಟೆ. ಅದೇಪ್ರಕಾರ ಗತ ಸೋಮವಾರದದಿನ ಅರಮನೆಯಲ್ಲಿ ವಿಶೇಷ ವಿಭವದೊಡನೆ ಪಟ್ಟಾಭಿಷೇಕ ದರ್ಬಾರು [illegible]ತು. ಸರ್ ಲೆಪೆಲ್ ಗ್ರಿಫಿನ್‌ಯವರನ್ನೂ ಜನರಲ್ ಜಲಿಸನ್ನಿಯವರನ್ನೂ ಮಹಾರಾಜರವರು ದರ್ಬಾರ್ ಸೌಧ ಪ್ರವೇಶದ್ವಾರದ ಹನಕ ದಯಮಾಡಿಬಂದು ಬರಮಾಡಿಕೊಂಡರು. ಆ ಕಾಲದಲ್ಲಿ ಗೌರವಾರ್ಥ ೧೯ ತೋಫೆಗಳು ಹಾಕಲ್ಪಟ್ಟವಲ್ಲದೆ ಏರವರ್ಷ ಕರೆಯಿಸಲ್ಪಟ್ಟಿದ್ದ ಮಿಲಿಟರಿ ಸೈನ್ಯವೆಲ್ಲನೂ ಫಯರ್ ಮಾಡಿದವು. ತರುವಾಯ ಸರ್ ಲೆಪೆಲ್‌ಯವರ ಮೊದಲನೆಯ ಅಸಿಸ್ಟೆಂಟರಾದ ಮೇ॥ ಪೀಟರ್ ಯೆಂಬವರು ಇಂಡ್ಯ ಗವರ್ನ ಮೆಂಟನವರಿಂದ ಕಳುಹಿಸಲ್ಪಟ್ಟ ಖರೀತಾವನ್ನು ಓದಿದರು. ಅದರಲ್ಲಿ ತಿಳಿಸಲ್ಪಟ್ಟಿದ್ದ ಅಂಶವೇನೆಂದರೆ—

"ನಿಮ್ಮ ತಂದೆಗಳಾದ ಮಹಾರಾಜಾ ತುಕೋಜಿರಾವ್ ಹೋಳ್ಕರವರ ನಿಯೋಗ ವೃತ್ತಾಂತವಂ ಅತ್ಯಂತ ವಿಷಾದದೊಡನೆ ಕೇಳಲಾದೆನು. ಈಗ ಶ್ರೀಮನ್ಮಹಾರಾಜ್ಞೀ ಇಂಡ್ಯಚಕ್ರವರ್ತಿನೀಯವರ ತರಫ ನಾನು, ಈಗ ಇಂದೂರ್ ಸಂಸ್ಥಾನಾಧಿಪತ್ಯದ ವಿಷಯದೊಳು ತಮಗಿರತಕ್ಕ ಹಕ್ಕುದಾರಿಯನ್ನೂ ತಮ್ಮ ಅನುವರ್ತನವನ್ನೂ ಪರಿಭಾವಿಸಿ ತಮ್ಮನ್ನು ವ್ಯವಸ್ಥಾಪಿಸಿದ್ದಂಶಮ ತಿಳಿಸುತ್ತೇನೆ. ಈಗ ತಾವು ಪಾಲಕರಾಗಿ ಅಂಗೀಕರಿಸಲ್ಪಟ್ಟ ರಾಜ್ಯದ ವಿಶೇಷಳ್ಳೂರ್ಣವಾದ ಉತ್ತಮ ಪ್ರಭುತ್ವದ ಮೂಲಕ ತಮ್ಮ ಪ್ರಜೆಗಳ ಸುಖ ಸಂತೋಷಗಳಂ ಕಾಪಾಡುತ ಬ್ರಿಟಿಷ್ ಗವರ್ನಮೆಂಟನವರ ಸದ್ಭಾವಕ್ಕೆ ಪಾತ್ರರಾಗಿರಬೇಕೆಂಬ ಬಂತರವಾದ ಕೋರಿಕೆಯುಳ್ಳವನಾಗಿದ್ದೇನೆ" ಎಂಬುದು.

ಮೇಲೆ ಕಂಡ ಅರ್ಥದ್ಯೋತಕವಾದ ಖರೀತಾ ಓದಲ್ಪಟ್ಟಬಳಿಕ ಗೌರವಾರ್ಥ ೧೯ ತೋಫೆಗಳು ಹಾಕಲ್ಪಟ್ಟವು. ಬಳಿಕ ಸರ್ ಲೆಪೆಲ್ ಗ್ರಿಫಿನ್‌ಯವರು ತಮ್ಮ ಆಸನದಿಂದೆದ್ದು ನಿಂತುಕೊಂಡು ತಿಳಿಸಿದರೇನೆಂದರೆ —

ಘನವನ್ನೈದಿದ ಮಹಾರಾಜರವರೇ—ಕಾಲವಶರಾದ ತಮ್ಮ ತಂದೆಗಳ ಸ್ಥಾನಾಪನ್ನರಾದ ತಮಗೆ ಈ ಇಂದೂರು ಸಿಂಹಾಸನ ವಿಷಯದಲ್ಲಿ

ವೃಂಟಾಗಿರುವ ಹಕ್ಕುದಾರಿಯನ್ನು ವೈಸರಾಯಿಯವರು, ಶ್ರೀಮನ್ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀಯವರ ಪ್ರತಿನಿಧಿತ್ವೀನ ಈದಿನ ಬಹಿರಂಗವಾಗಿ ಅಂಗೀಕರಿಸಿ, ಚಕ್ರವರ್ತಿನೀಯವರಲ್ಲಿ ರಾಜಭಕ್ತಿ ವಿಶ್ವಾಸಗಳೂ, ಪ್ರಜೆಗಳ ಯೋಗಕ್ಷೇಮದಲ್ಲಿ ದೃಷ್ಟಿಯೂ ಯಿರುವತನಕ ಇಂದೂರ್ ಸಂಸ್ಥಾನದ ಪಾಲಕರಾದವರಿಗೆ ಅನುಗುಣಗಳಾದ ಅಧಿಕಾರ ಸ್ವಾತಂತ್ರ್ಯಗಳನ್ನು ಅನುಭವಿಸುತಲಿರುವಂತೆ ಕಲ್ಪಿಸಿರುತ್ತಾರೆ. ಪ್ರತಿಷ್ಠಾಪಹವಾದ ಈ ಮಹಾರಾಜಪದವಿಯು ತಮಗೆ ಈಗ ಪ್ರಾಪ್ತವಾದದಕ್ಕಾಗಿ ವೈಸರಾಯಿಯವರ ತರಫೆ ನಾನು ಶುಭವಾದನ ಮಾಡುವೆನು. ತಮ್ಮ ಪಾಲನೆಯು ಉತ್ತರೋತ್ತರಾಭಿವೃದ್ಧಿಯುಳ್ಳದ್ದಾಗಿಯೂ ಸುಖಪ್ರಚುರವಾದದ್ದಾಗಿಯೂ, ಯಿರುವದೆಂದು ನಾನು ದೃಢವಾಗಿ ನಂಬುತ್ತೇನೆ. ಈದಿನದೊಳೀ ಸಮಯವು ಕೇವಲ ಶುಭಕರವಾದದ್ದೆಂದು ಹೇಳ ಬ್ರಾಹ್ಮಣರೆಲ್ಲರೂ ಗೊತ್ತುಮಾಡಿದರು. ನಾನು ಕೌಬಜ್ಞನಲ್ಲವು. ಪರಂತು ಅದು ನಿಜವಾಗಿರಬಹುದೆಂದೆಣಿಸುತ್ತೇನೆ. ಆದರೆ ಒಂದಂಶವನ್ನು ಮಹಾರಾಜರವರು ಪರಿಭಾವಿಸಬೇಕೆಂದು ಕೋರುವದೇನೆಂದರೆ, ಅಸಮ ದೃಷ್ಟಿಯೊಡನೆ ಜನಗಳಂ ಪಾಲಿಸುವನೆಂಬ ಸಂಕಲ್ಪದೊಡನೆ ಅರಸು ಸಿಂಹಾಸನಾರೋಹಣಂಗೈದರೆ ಲಗ ನಕ್ಷತ್ರಗಳು ಪ್ರತಿಕೂಲಗಳಾಗಿದ್ದರೂ, ಪ್ರಭುತ್ವವು ಶುಭಕರವಾದದ್ದಾಗಿರುವದು. ಅದಿಲ್ಲದೆ ಕೇವಲ ಪ್ರಭುತ್ವಮಾತ್ರಕ್ಕೆ ಸಂತೃಪ್ತನಾಗಿ, ಸ್ವಸುಖೈಕಪರನಾಗಿ, ಕಂಟಕನಾಗಿದ್ದರೆ ನಕ್ಷತ್ರಾನುಕೂಲ್ಯವಿದ್ದಾಗ್ಯೂ ಆತನ ಪ್ರಭುತ್ವವು ನಿರ್ದುಷ್ಟವಾಗಿರಲಾರದು. ಮಹಾರಾಜರಾದ ತಮ್ಮ ಮೂಲಕ ಯಾವಾಗಲು ನಾನು ಒಳ್ಳೆಯದನ್ನೇ ನಿರೀಕ್ಷಿಸುವೆನಲ್ಲದೆ ವಿವೇಕ ಮತ್ತು ಔದಾರ್ಯ ಪ್ರೇರಕವಾಗಿರುವ ರಮ್ಯಕಾರ್ಯವನ್ನು, ಅಂದರೆ,—ಇಂದೂರ್ ಸಂಸ್ಥಾನದ ನೌಕರರ ತಲಬಿನಲ್ಲಿ ಸೇಕಡಾ ೧ರಪ್ರಕಾರ ವಸೂಲ್ಮಾಡಲ್ಪಡುತ್ತ, ನಿರ್ಬಂಧ ರೂಪವಾಗಿದ್ದ ತೆರಿಗೆಯನ್ನು ಮೌಕೂಫ್‌ಮಾಡಿದ್ದು ಕೇವಲ ಅನುಕೂಲವಾದ ಶುಭ ಸೂಚನೆಯೆಂದು ನಾನು ಎಣಿಸುತ್ತೇನೆ. ಸಕಲವಿಧ ಅನುಕೂಲ್ಯಗಳೊಡನೆ ತಾವು ಪ್ರಭುತ್ವಮಾಡಲಿಕ್ಕೆ ಉಪಕ್ರಮಿಸಿದ್ದೀರಿ. ತಾವು ಉತ್ತಮವಾದ ಇಂಗ್ಲಿಷ್ ವಿದ್ಯಾಭ್ಯಾಸವು ಪಡೆದು ಇಂಗ್ಲೀಷರ ಭಾಷೆಯಲ್ಲಿ ಸ್ವಾಧ್ಯವಾಗಿ ವ್ಯವಹರಿಸುವದಕ್ಕೆ ಸೌಲಭ್ಯವು ಪಡೆದಿರುವವರಾಗಿಯೂ, ಸಮರ್ಥರಾಗಿಯೂ, ರಾಜ್ಯಾಂಶಗಳನ್ನರಿತವರಾಗಿಯೂ, ಇರುತ್ತೀರಿ. ಯಾವ ಕಾಲದಲ್ಲಿ ಮನುಷ್ಯನ ಗುಣವು ವ್ಯವಸ್ಥಿತವಾಗಿ ಅದರಮೂಲಕ ಆತನ ಗುಣಗಳನ್ನು ಪ್ರಜೆಗಳು ನಿರೀಕ್ಷಿಸಬಹುದೋ ಅಂತಾ ಪರಿಪಕ್ವವಾದಕಾಲವು, (೨೩ ಸಂವತ್ಸರಗಳ ವಯಸ್ಸು) ಪ್ರಾಪ್ತವಾಗಿರುತಿದೆ. ಶುಭಾಶುಭಗಳು ತಮ್ಮನ್ನನುವರ್ತಿಸಿದವುಗಳಾಗಿರುವದರಿಂದ ನನ್ನಮಾತುಗಳು ಶ್ರೇಷ್ಠವಾದ ತಮ್ಮ ಗುಣವನ್ನು ಪ್ರೇರಿಸಲು ಶಕ್ತವಲ್ಲವು. ವಿವೇಕಪ್ರವರ್ತಕವಾದ ಪರಿಪಾಲನೆಯಿಂದ ಪ್ರಜೆಗಳ ಸುಖವೃದ್ಧಿಯನ್ನೈದಿ ತನ್ಮೂಲಕ ಸುಖಾನುಭವಕ್ಕೆ ಕಾರಣವಾಗುವದಲ್ಲದೆ ಅರಸರಿಗೆ ಶಾಶ್ವತವಾದ ಜ್ಞಾಪಕ ರೂಪಕವಾಗಿರುವ ಕೀರ್ತಿಯೆಂಬದು ತಮ್ಮ ಕಾಲಾನಂತರ ನೆಲಗೊಂಡಿರುವದೆಂಬದು.

ತರುವಾಯ ಇದಕ್ಕೆ ಉತ್ತರ ರೂಪವಾಗಿ ಮಹಾರಾಜಾ ಶಿವಾಜಿರಾಯರವರು ಹಿಂದೆ ತಮ್ಮ ಪ್ರಜೆಗಳಿಗೆ ತಿಳಿಸಿದ ಅಂಶವನ್ನೇ ಶಬ್ದಾಂತರದಿಂದ ಹೇಳಿ ತಮಗೆ ಪ್ರಾಪ್ತವಾಗಿರುವ ಪದವಿಯ ಸ್ವರೂಪವನ್ನು ತಾವು ಚನ್ನಾಗಿ ಅರಿತಿರುವಂತೆಯೂ ದೈವಾನುಗ್ರಹದಿಂದ ತಮ್ಮ ಕರ್ತವ್ಯವನ್ನು ತೃಪ್ತಿಕರವಾಗಿ ನಿರ್ವಹಿಸಲಿಕ್ಕೆ ಶಕ್ತರಾಗಬೇಕೆಂದು ಕೋರುವಂತೆಯೂ ತಿಳಿಸಿದರು. ಕಡೆಗೆ ಮಹಾರಾಜರವರು ಮಾಡಿದ ಹಿಂದಿನ ಕಾರ್ಯಗಳನ್ನು ಸರ್ ಲಿಪಲ್ ಗ್ರಿಫಿನ್‌ಯವರು ಮತ್ತು ಪ್ರಶಂಸಿಸಿ ಅವು ಅನ್ಯರಿಗೆ ಉಪಮಾನ ರೂಪವಾಗಿರುತವೆಂದು ನುಡಿದರು. ಯೆಲ್ಲರಿಗೂ ಪುಷ್ಪ ತಾಂಬೂಲಾದಿಗಳು ಕೊಡಲ್ಪಟ್ಟ ಮೇಲೆ ದರ್ಬಾರ್ ಬರಖಾಸ್ತಾಯಿತು. ಮಹಾರಾಜರವರಿಗೆ ಇಂಡ್ಯಗವರ್ನಮೆಂಟನವರು ೨೫೦೦೦ ರೂಪಾಯಿಗಳ ಕ್ರಯಬಾಳುವ ಒಂದು ಖಿಲ್ಲತ್ತನ್ನು ಕಳುಹಿಸಿದರೆಂದು ತಿಳಿಯಲಾದೆವು.

Occasional Notes
ನೈಮಿತ್ತಿಕವಿಷಯನ್ಯಾಸ.

Arrest of a pleader.—ಕಲ್ಕತ್ತೆಯಲ್ಲಿ ಪ್ಲೀಡರೊಬ್ಬನು ಒಬ್ಬ ಹಿಂದೂಹೆಂಗಸು ತನ್ನ ಹೆಸರಿನಲ್ಲಿ ಕೊಟ್ಟ ವಕಾಲತ್‌ನಾಮೆಯಲ್ಲಿ ಆಕೆಗೆ ತಿಳಿಯದೆ ಹೊಸಅಂಶಗಳನ್ನು ಸೇರಿಸಿದನೆಂಬ ತಕಸೀರ್‌ಮೇಲೆ ಆತನದಸ್ತಗಿರಿಯಬಗ್ಗೆ ವಾರಂಟ ಹುಟ್ಟಿರುತ್ತಿದೆಯೆಂದು ಅಲ್ಲಿನ ಪತ್ರಿಕೆಯೊಂದರಿಂದ ತಿಳಿಯಬರುತಿದೆ.

Annual exodus to the hills.—ಬೇಸಿಗೆಯಬಗ್ಗೆ ಗವರ್ನಮೆಂಟನವರು ಬೆಟ್ಟಪ್ರಾಂತಗಳಿಗೆ ಹೋಗುವದರಮೂಲಕ ಉಂಟಾಗುವ ಖರ್ಚುಗಳನ್ನು ಕಮ್ಮಿಮಾಡಬೇಕೆಂದು ವಿಲಾಯತಿ ಸರ್ಕಾರದಿಂದ ಇಂಡ್ಯಗವರ್ನಮೆಂಟಿಗೆ ಹುಕುಂಬಂದಿರುವದಾಗಿ ಸಂಪೂರ್ಣನಂಬಿಕೆಯುಳ್ಳ ಒಂದು ಮುಖಾಂತರದಿಂದ ತಿಳಿಯಬರುವಂತೆ ಒಂದಾನೊಂದು ಉತ್ತರದೇಶದ ಪತ್ರಿಕೆ ಹೇಳುತಿದೆ.

The Finance Committee.—ಕಲ್ಕತ್ತಾ ಹೈಕೋರ್ಟಿನ ಖರ್ಚುಗಳನ್ನು ಕಮ್ಮಿಮಾಡುವದಕ್ಕೆ ಸಾಧ್ಯವೇ ಎಂಬ ಅಂಶವನ್ನು ಕುರಿತು ಫೈನಾನ್ಸ್ ಕಮಿಟಿಯವರು ಮಾಡಿದ ವಿಚಾರಣೆಯ ವಿಷಯದಲ್ಲಿ ಇಂಡ್ಯ ಟೈಂಸ್‌ಪತ್ರಿಕೆಯು ಸಿಂಲಾಬಾತನಿದಾರರು ತಿಳಿಸುವದೇನಂದರೆ,—ಕಮಿಟಿಯವರು ಮಾಡುವದಕ್ಕೆ ಪ್ರಯತ್ನಪಟ್ಟಿರುವ ವಿಚಾರಣೆಯುಕ್ರಮಕ್ಕೆ ಇಂಡ್ಯಗವರ್ನಮೆಂಟನವರು ಜವಾಬ್‌ದಾರರಲ್ಲವು, ಮತ್ತು ಸದರೀ ಕಮಿಟಿಯವರು ಮಾಡುವ ಶಿಫಾರಸ್ಸಿನಂತೆ ನಡೆಸಲು ಇಂಡ್ಯಗವರ್ನಮೆಂಟನವರು ಬದ್ಧರಾಗಿರುವದಿಲ್ಲವು, ಎಂಬದು

The Oriental Congress.—ಆಸ್ಟ್ರಿಯಾ ದೇಶದ ರಾಜಧಾನಿಯಾದ ವೈಯನಾಯೆಂಬ ಪಟ್ಟಣದೊಳು ಕ್ಷಿಪ್ರದಲ್ಲಿ ಸೇರುವದಾಗಿರುವ ಪೂರ್ವದೇಶ ಸಂಬಂಧವಾದ ಸಮಾಜಕ್ಕೆ ಖುದ್ದಾಗಿ ಬರಬೇಕೆಂದು ದಖ್ಖಣಕಾಲೇಜ್ ಸಂಸ್ಕೃತ ಪಂಡಿತರಾದ ಭಂಡಾರ್ಕರ್ ಯವರಿಗೆ ಪತ್ರಿಕೆ ಬಂದಿರುವಂತೆಯೂ, ಅವರು ಪ್ರಾಯಶಃ ಹೋಗಬಹುದೆಂತಲೂ, ಪೂರ್ವದೇಶದ ವಿದ್ಯಾವಿಷಯದಲ್ಲಿ ಸದರೀ ಪಂಡಿತರಿಗಿಂತಲೂ ಸಮರ್ಥರಾದವರೊಬ್ಬರನ್ನು ಮುಂಬೈಯಿಂದ ಕಳುಹಿಸುವದಕ್ಕೆ ಸಾಧ್ಯವಲ್ಲವೆಂತಲೂ ಒಂದಾನೊಂದು ಮುಂಬೈಪತ್ರಿಕೆ ಹೇಳುತಿದೆ.

Diamond mines in South Africa.—ಆಫ್ರಿಕಾ ದೇಶದ ದಕ್ಷಿಣಭಾಗದಲ್ಲಿ ಇದುವರಿವಿಗೆ ನಾಲ್ಕುಕೋಟಿ ಪೌಂ, ಅಂದರೆ ನಾಲ್ವತ್ತು ಕೋಟಿ ರೂಪಾಯಿಗಳ ಕ್ರಯಬಾಳುವಷ್ಟು ಆನೂವತಿ ಟನ್ನುಗಳ ತೂಕವುಳ್ಳ ವಜ್ರದವಳಗಳು ಗಣಿಗಳಿಂದ ತೆಗೆಯಲ್ಪಟ್ಟವು. ಆಸ್ಟ್ರಿಚ್‌ಎಂಬ ಪಕ್ಷಿಗಳರೆಕ್ಕೆಗಳ ಮೂಲಕ ಸಾಲಿಯಾನಾ ಎಪ್ಪತ್ತೈದು ಲಕ್ಷರೂಪಾಯಿಗಳು ಹುಟ್ಟುವಳಿಯಾಗುವಂತ ಅಂದಾಜಾಗಿರುತಿದೆ ಈಮೂಲಕವಾದ ಹುಟ್ಟುವಳಿಯು ದಿನೇದಿನೇಅಭಿವೃದ್ಧಿಯಾಗುತಲಿದೆ. ಪರಂತು ದಾರಣೆಮಾತ್ರ ಇಳಿದುಹೋಗಿ ಹಿಂದೆ ೩೫೦ ರೂಪಾಯಿಗಳ ಕ್ರಯಕ್ಕೆ ದೊರೆಯುತಲಿದ್ದವಷ್ಟು ಈಗ ೩೦ರೂಪಾಯಿಗಳಿಗೆ ಸಿಕ್ಕುತದೆ.

Reforms in the Bombay High Court—ಮುಂಬೈ ಹೈಕೋರ್ಟಿನ, ಮುಖ್ಯವಾಗಿ ಒರಿಜನಲ್ ಕೋರ್ಟಿನ ಹೊಸ ಏರ್ಪಾಡಿನವಿಷಯದಲ್ಲಿ ಮುಂಬೈ ಚೇಂಬರಾಫ್ ಕಾಮರ್ಸ್‌ಯೆಂಬ ವ್ಯಾಪಾರಸಂಘದವರು ಸದರೀ ಗವರ್ನಮೆಂಟಿಗೆ ಒಂದುಅರ್ಜಿಬರೆದು, ಮೊಕದ್ದಮೆಗಳು ವ್ಯವಸ್ಥೆಯಾಗುವದಕ್ಕೆ ಬಹುಕಾಲ ಹಿಡಿಯುತದೆಂತಲೂ, ವಕೀಲರು ದುಬಾರೀರುಸುಂ ಕೇಳುತ್ತಾರೆಂತಲೂ, ಕೋರ್ಟು ದೀರ್ಘಕಾಲ ಮುಚ್ಚಲ್ಪಡುತಿದೆಯೆಂತಲೂ ಸದರೀ ಅರ್ಜಿಯಲ್ಲಿ ನಮೂದುಮಾಡಿರುತ್ತಾರೆ. ಹೈಕೋರ್ಟಿನ ಒರಿಜನಲ್ ತರಫಿನಲ್ಲಿ ಸೈಸಲ್ ಬಾಕೀಯಲ್ಲಿರುವ ಮೊಕದ್ದಮೆಗಳ ವ್ಯವಸ್ಥೆಯಬಗ್ಗೆ ಒಂದುವರ್ಷದ ಕಾಲದವರಿವಿಗೆ ಒಬ್ಬ ಜಡ್ಜಿಯನ್ನು ನೇಮಕಮಾಡಬೇಕೆಂದು ಗವರ್ನಮೆಂಟನವರು ನಿರ್ಣಯಿಸಿರುವಂತೆ ಕಾಣುತಿದೆ.

An objection.—ಟಾಲ್ ಬಾಯಿಸ್ ವೀಲರ್ ಎಂಬವರು, ಇಂಡ್ಯದೇಶದ ಚರಿತ್ರವನ್ನು ಆದಿಕಾಲದಮೊದಲು ಹಿಂದೆ ಒಂದು ವರ್ಷ ಬರೆದಿರುತ್ತಾರೆಯಷ್ಟೆ. ಸದರೀಯವರು ಈಗ ಅದನ್ನು ಪೂರ್ತಿಮಾಡುವ ವಿಷಯದಲ್ಲಿ ಬಂಗಾಳೀ ಪತ್ರಿಕೆಯೊಂದು ಆಕ್ಷೇಪಿಸಿ ತಿಳಿಸುವದೇನಂದರೆ—ಇಂಡ್ಯದೇಶದಲ್ಲಿ ಬ್ರಿಟಿಷರವರ ಆಳ್ವಿಕೆಯನ್ನು ಕುರಿತು ಇಂಗ್ಲೀಷಿನವನೊಬ್ಬಾತನು ಬರೆಯುವ ಚರಿತ್ರವು ಸಂಪೂರ್ಣವಾದ ನಿಷ್ಪಕ್ಷಪಾತತೆಯೊಡನೆ ಬರೆಯಲ್ಪಡಲಾರದು. ಇಂಡ್ಯದೇಶವು ಬ್ರಿಟಿಷರವರ ಆಳ್ವಿಕೆಗೆ ಒಳಪಟ್ಟಮೇಲೆ ಯಥಾರ್ಥವಾದ ಅದರಚರಿತ್ರೆಯೊಂದು ಆವಶ್ಯಕವಾಗಿರುತಿದೆ. ವಿದ್ಯಾವೈಲಕ್ಷಣ್ಯವುಳ್ಳವನಾಗಿಯೂ, ಸಾಧ್ಯವಾದ ಸಹಾಯ ಸಾಮಗ್ರಿಗಳುಳ್ಳವನಾಗಿಯೂ, ಸಂಪೂರ್ಣ ಪ್ರಾಮಾಣಿಕನಾಗಿಯೂ ಯಿರುವ ಇಂಡ್ಯದೇಶೀಯನೊಬ್ಬಾತನು ಸದರೀಚರಿತ್ರವನ್ನು ಬರೆದರೆ ವಿಷಯ ಗೌರವವುಂಟಾಗುವದು, ಎಂಬದು.

Construction of an idol.—ಅಹಮದಾಬಾದಿನಲ್ಲಿರುವ ವೈಷ್ಣವರೆಲ್ಲರುಸೇರಿ ಡಾಕೂರ್ ಯೆಂಬ ಸ್ಥಳದಲ್ಲಿರುವ ದೇವಸ್ಥಾನದಲ್ಲಿ ಪ್ರತಿಷ್ಠೆಮಾಡುವದಕ್ಕೆಬಗ್ಗೆ ಮೂವತ್ತುಸಾವಿರ ರೂಪಾಯಿಗಳ ಬೆಲೆಯುಳ್ಳ ಒಂದು ರಾಮವಿಗ್ರಹವನ್ನು ತಯಾರುಮಾಡಿಸಿದರು. ಕಳೆದತಿಂಗಳ ೩೦ನೇ ತಾರೀಖಿನಲ್ಲಿ ಸದರೀ ಪ್ರತಿಮೆಯು ರೈಲುಮಾರ್ಗವಾಗಿ ಡಾಕೂರಿಗೆ ರವಾನಿಸಲ್ಪಡುವಲ್ಲಿ ವೈಷ್ಣವರೆಲ್ಲರು ರೈಲುಸ್ಟೇಷನ್‌ಬಳಿ ಹಾಜರಿದ್ದು ಅದನ್ನು ರೈಲುಗಾಡಿಯಿಂದ ಇಳಿಸಿ ಬೇರೆ ಗಾಡಿಯ ಮೇಲೆ ಹತ್ತಿಸಿದಮೇಲೆ ಭಕ್ತರೆಲ್ಲರು ಅದರಮೇಲೆ ವಿಶೇಷವಾಗಿ ನಾಣ್ಯಗಳನ್ನು ಚಲ್ಲಿದರೆಂದು ಅಲ್ಲಿನ ಪತ್ರಿಕೆಯೊಂದು ಹೇಳುತಿದೆ.

Economy in expenditure.—ಗುಜರಾತಿ ಯೆಂಬ ಪತ್ರಿಕೆ ತಿಳಿಸುವದೇನಂದರೆ—ಮುಂಬೈ ಹೈಕೋರ್ಟ ಜಡ್ಜಿಯರಾದ ಮೆ|| ವೆಸ್ಟ್, ಮೆ|| ಬರ್ಡ್‌ವುಡ್, ಮೆ|| ನಾನಾಭಾಯಿ ಹರಿದಾಸ್, ಇವರೆಲ್ಲರು, ಖರ್ಚುಗಳನ್ನು ಕಮಮಿ ಮಾಡುವ ವಿಷಯದಲ್ಲಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಫೈನಾನ್ಸ್ ಕಮ್ಮಿಟಿಯವರಿಗೆ ತಿಳಿಸಿಇರುತ್ತಾರೆ. ಮೊತ್ತ ಕೆಲಸಗಳಿಗೆ ಕಮ ತಲಬಿನಲ್ಲಿ ನೇಟಿವ್‌ಗಳು ಬಹುತುಂಬ ಸಿಕ್ಕುವರಾಗಿ ಅಂತವರನ್ನು ಅಧಿಕವಾಗಿ ನೌಕರಿಯಲ್ಲಿ ಇಡುವದರಮೂಲಕ ಖರ್ಚು ಕಮ್ಮಿ ಆಗಬಹುದು, ಪರಂತು ಯೂರೋಪಿಯರಿಗೂ ನೇಟಿವ್‌ಗಳಿಗೂ ತಲಬಿನಲ್ಲಿ ತಾರತಮ್ಯವಿರಕೂಡದೆಂದು ಮೆ|| ನಾನಾಭಾಯಿ ಹರಿದಾಸಯವರು ತಿಳಿಸಿದರು. ಯೂರೋಪಿಯನೇ ಆಗಲಿ ನೇಟಿವನೇ ಆಗಲಿ ಮಾಹೆಯಾನಾ ೧,೫೦೦ ರೂಪಾಯಿಗಳ ತಲಬುಳ್ಳ ವಿಶಿಷ್ಟ ಕೆಲಸಗಳಿಗೂ ಯೂರೋಪಿಯನಾಗಿದ್ದರೆ ೧೦೦೦ ರೂಪಾಯಿಯೂ ನೇಟಿವ್ ಆಗಿದ್ದರೆ ೭೦೦ರೂಪಾಯಿಯೂ ಕೊಡಬಹುದೆಂತಲೂ, ಅದಕ್ಕೆ ಮೇಲ್ಪಟ್ಟರೆ ಯೂರೋಪಿಯರಿಗೂನೇಟಿವ್‌ಗಳಿಗೂ ಸಮಾನವಾದ ತಲಬ್ ಸಲ್ಲಬೇಕೆಂತಲೂ ಮೆ|| ಬರ್ಡ್‌ವುಡ್‌ಯೆಂಬವರು ತಿಳಿಸಿದರು. ಸಮಾನವಾದ ಕೆಲಸಗಳವಿಷಯದಲ್ಲಿ ಯೂರೋಪಿಯರಿಗೆ ಕೊಡುವ ತಲಬಿನಲ್ಲಿ ಮೂರರಲ್ಲಿ ಯೆರಡು ಭಾಗ ನೇಟಿವ್‌ಗಳಿಗೆ ಕೊಡಬಹುದೆಂದು ಮೆ|| ವೆಸ್ಟ್‌ಯವರು ತಿಳಿಸಿದರು, ಎಂಬದು.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕಿನ ವೃತ್ತಾಂತಗಳು.

A bad practice.—ಮನೇಕಂದಾಯಗಳ ಪಾವತೀಬಗ್ಗೆ ಕರ್ದಸನೋಟೀಸುಗಳನ್ನು ಯಾರಾದರು ಕೊಟ್ಟರೆ ಮ್ಯೂನಿಸಿಪಲ್ ಕಂದಾಯ ವಸೂಲ್ಮಾಡತಕ್ಕವರು ತಗದುಕೊಳ್ಳದೆ ವ್ಯರ್ಥ ತಕರಾರ್ಮಾಡುತ್ತಾರೆಂದು ಒಬ್ಬಬಾತನಿದಾರನೊಂದು ಇಂಗ್ಲೀಷಪತ್ರಿಕೆಗೆ ಬರೆಯುತ್ತಾನೆ. ಇದು ನಿಜವಾಗಿರುವಪಕ್ಷಕ್ಕೆ ಬಹಳ ಅಕ್ರಮವಾದದ್ದು.

Supply of guns.—ಮಹಾರಾಜಾ ಸರ್ಕಾರದವರ ಅಪೇಕ್ಷಾನುಸಾರ ವಿಶೇಷ ಸಂದರ್ಭಗಳಲ್ಲಿ ಉಪಯೋಗಿಸತಕ್ಕಬಗ್ಗೆ ಇಂಡ್ಯ ಗವರ್ನಮೆಂಟನವರು, ಆರು ತೋಪುಗಳನ್ನು ಕೊಟ್ಟರೆಂತಲೂ, ಅವು ಇಲ್ಲಿನ ಆಯುಧಶಾಲೆಯಿಂದ ಮಹಾರಾಜರವರ ಇಲ್ಲಿನ ಅರಮನೆಯಬಗ್ಗೆ ಈ ಕಳುಹಿಸಲ್ಪಟ್ಟವೆಂತಲೂ ತಿಳಿಯಲಾದೆವು.

H. H.'s Council.—ಶ್ರೀಮನ್ಮಹಾರಾಜರವರ ಮಂತ್ರಾಲೋಚಕ ಸಭೆಯವರು ಈ ದಿನಮೊದಲು ಪಬ್ಲಿಕ್ ಆಫೀಸಿನಲ್ಲಿ ಸಭೆಸೇರುವರೆಂತಲೂ ಆಕಾಲದಲ್ಲಿ ಇದುವರಿವಿಗೂ ಫೈಸಲಾಗದೆಯಿರುವ ಅನೇಕರಾಜಕೀಯವಿಷಯಗಳು ವಿಮರ್ಶಿಸಲ್ಪಡುವವೆಂತಲೂ ಒಳದೇಶದ ಸ್ಪೆಕ್ಟೇಟರ್‌ಪತ್ರಿಕೆಯು ತಿಳಿಸುತಿದೆ.

Remission scale of the Dewan's Office.—ದಿವಾನರಆಫೀಸಿನಲ್ಲಿ ಬರುವತಿಂಗಳ ಆದಿಭಾಗದೊಳು ಲವಾಜಮಾ ಕಮಮಿ ಮಾಡಲ್ಪಡುವದಾಗಿದೆಯೆಂದು ಒಳದೇಶದ ಪತ್ರಿಕೆಯೊಂದು ತಿಳಿಸುತಿದೆ. ಇದುಎಷ್ಟರಮಟ್ಟಿಗೆ ನಿಜವೋ ನಾವರಿಯೆವು. ಆದರೆ ದಿವಾನರ ಆಫೀಸಿನಲ್ಲಿ ಅಸಿಸ್ಟೆಂಟಿಗಳ ಇನ್ನೂ ಇನ್ನೂ ಸಾಲದೆಂದು ಭಾವಿಸಿ ಅದರ ಏರ್ಪಾಡಿನಬಗ್ಗೆ ಈರೀತಿ ಒಂದುವೇಳೆ ಆಲೋಚಿಸಿದ್ದಾಗ್ಯೂ ಯಿರಬಹುದು.

Arrival of H. H. the Maharanee.—ಗತಶನಿವಾರದದಿನ ಸಾಯಂಕಾಲ ಸ್ಪೆಷಲ್ ಟ್ರೈನಿನಲ್ಲಿ ಶ್ರೀಮನ್ಮಹಾರಾಣಿಯವರು, ಪುತ್ರೀಪುತ್ರರೊಡನೆ ಈ ಪಟ್ಟಣಕ್ಕೆ ದಯಮಾಡಿದರು. ಗೌರವಾರ್ಥ ಮಾಮೂಲಿಪ್ರಕಾರ ತೋಫುಗಳು ಹಾಕಲ್ಪಟ್ಟವು. ಮಹಾರಾಣಿಯವರ ಮತ್ತು ಯುವರಾಜರವರ ಆಗಮನವು ವಿಶೇಷ ವಿಜೃಂಭಣೆ ಯುಕ್ತವಾಗಿರಲಿಲ್ಲವು. ಮಹಾರಾಜರವರು ಪತ್ನೀಪುತ್ರರೊಡನೆ, ಕೆಲವುಕಾಲ ಈಪಟ್ಟಣದಲ್ಲಿಯೇ ದಯಮಾಡಿರುವರೆಂದು ತಿಳಿಯಬರುವದರಿಂದ ಇಲ್ಲಿನ ವಾತೋದಕಾದಿಗಳು ರಾಜಪುತ್ರರಿಗೆ ವಿಶೇಷತಃ ಆರೋಗ್ಯ ವರ್ಧಕವಾಗಿರಬಹುದೆಂದು ನಂಬುತ್ತೇವೆ.

Extension of leave.—ಕಾಯಂತಸಿಸ್ಟೆಂಟ ಬ್ರಿಟಿಷರೆಸಿಡೆಂಟರಾಗಿಯೂ ಕೊಡಗು ಚೀಫ್ ಕಮಿಷನರರವರ ಸೆಕ್ರೆಟರಿಯಾಗಿಯೂ ಯಿರುವ ಮೆ|| ಎ. ಹೆಚ್. ಟಿ. ಮಾರ್ಟಿಂಡೇಲ್‌ಯವರು ರಜಾದಿಂದ ಕ್ಷಿಪ್ರದೊಳು ವಾಪಸುಬರುವರೆಂದು ಈಚೆಗೆ ತಿಳಿಯಬಂದಿತ್ತಷ್ಟೆ.—ಈಗಅವರು ಇನ್ನೂ ನಾಲ್ಕುತಿಂಗಳವರಿಗೆ ಜಾಸ್ತೀರಜಾ ವಾಯಿದೆಮಾಡಿದಾರೆಂತಲೂ, ಅವರು ಬರುವತನಕ ಮೇಜರ್ ಫ್ರೇಜರ್‌ಯವರೇ ಕೆಲಸನೋಡುತಲಿರುವರೆಂತಲೂ ತಿಳಿಯಬರುತಿದೆ ಮೇಜರ್ ಫ್ರೇಜರ್ ಯವರ ಕಾರ್ಯನಿರ್ವಾಹಕತಾಶಕ್ತಿಯೂ, ತಾಬೇದಾರರಲ್ಲಿ ಬರವಾಸ್ತು ಜನಗಳಲ್ಲಿ ಅಭಿಮಾನವೂ ಸಹನೆಯೂಬಹಳ ಶ್ಲಾಘ್ಯವಾದವೆಂದು ಅವರ ತಾಬೇದಾರರಮೂಲಕ ಕೇಳಲಿಕ್ಕೆ ಸಂತೋಷಿಸುವೆವು.

The Coorg Judgeship.—ಕೊಡಗು ಡಿಸ್ಟ್ರಿಕ್ಟ ಜಡ್ಜೀಕೆಲಸವನ್ನು ಅಂಗೀಕರಿಸುವದಾಗಿಯೂ ಬೆಂಗಳೂರು ಸಬ್ ಜಡ್ಜಿ ಮೆ|| ಕೃಷ್ಣಯ್ಯನವರನ್ನೂ ಅಡ್ವೋಕೇಟ್ ಮೆ|| ಲಾರೆನ್ಸ್‌ಯವರನ್ನೂ ಕೇಳಲು ಅವರಿಬ್ಬರೂ ಸದರೀಕೆಲಸ ತಮಗೆ ಆವಶ್ಯಕವಿಲ್ಲವೆಂದು ನಿರಾಕರಿಸಿದ್ದಾಗಿನಂಬತಕ್ಕಮೂಲಕ ತಿಳಿಯಬರುವಂತೆ ಒಳದೇಶದ ಇಂಗ್ಲೀಷಪತ್ರಿಕೆಯೊಂದು ತಿಳಿಸುತಿದೆ. ಹಾಗೆ ಕೇಳಿದ್ದು ನಿಜವಾಗಿದ್ದಪಕ್ಷಕ್ಕೆ ಅವರಿಬ್ಬರಷ್ಟೆ ಕಿ ಯಾರಾದರೊಬ್ಬರು ಅಂಗೀಕರಿಸದೆ ಇಲ್ಲಾರು. ಅಗಿಂದಾಗ್ಯೆ ಇಂತಾ ಮಾನಸಿಕಪರಿಣಾಮಗಳುಮಾಡಿ ನಿವೃತ್ತಿಮಾಡುವಣವು ಇಲ್ಲಿನಪತ್ರಿಕೆಗಳಿಗೆ ಸ್ವಾಭಾವಿಕವಾದದ್ದಾಗಿರುತಿದೆ.

The Anche Department.—ಅಂಚೇಬಕ್ಷಿ ಪಾ|| ಮರಿಗುಂಗಯ್ಯನವರು ಈದೇಶದೊಳು ಸರ್ವತ್ರ ಕಾಲಾಣೆ ಕಾರ್ಡನ್ನು ಚಾಲಾಣೆಯಲ್ಲಿ ತಂದರೆ ಜನಗಳಿಗೆ ಅನುಕೂಲವಾಗಿರುವದೆಂದು ಗವರ್ನಮೆಂಟಿಗೆ ಬರೆದಿದಾರೆಂದು ಕೇಳುತ್ತೇವೆ. ಬದಸ್ತೂರ್ ಪೋಸ್ಟಲ್‌ಮನಿಆರ್ಡರ್ ಮತ್ತು ಪೋಸ್ಟಲ್‌ನೋಟಿ ಪದ್ಧತಿಯನ್ನು ಚಾರೀಯಲ್ಲಿ ತಂದರೆ ಅನುಕೂಲವಾಗಿರುವದು. ಅಂಚೇಸರಹ ಇಂಪೀರಿಯಲ್ ಗವರ್ನಮೆಂಟಿಗೆ ಕೊಡಲ್ಪಡುವದೆಂಬ ಪ್ರವಾದವೊಂದುಮಧ್ಯೆ ವುಂಟಾಗಿತ್ತು. ರೆಯಿಲ್ವೇಮತ್ತು ಅಂಚೇವಿಷಯಕಗಳಾದ ಪ್ರವಾದಗಳಪೈಕಿ ಮೊದಲನೆಯದು ಸಿದ್ಧಿಸಿತು ಎರಡನೆಯದರವಿಷಯ

ನಿರೀಕ್ಷಣೆಯೊಳಿರುವಂತೆ ಕಾಣುತಿದೆ. ಅದನ್ನು ಜಾಗ್ರತೆಯಾಗಿಯೇ ನಡಿಸಿದರೆ ಜನಗಳಾದರೂ ಸುಖ ಪಡಲಿಕ್ಕೆ ಕಾರಣವಾಗುವದು.

—

The weekly Dubu.—ಗತ ಶುಕ್ರವಾರದ ದಿನ ಸಾಯಂಕಾಲ ಮಾಮೂಲ್‌ಮೇರೆ ದಿವಾನರಾದ ಮೆ|| ಶೇಷಾದ್ರಿಅಯ್ಯರವರು, ಸರ್ಕಾರ್ ಕಟ್ಟಡದಲ್ಲಿ ತಮ್ಮ ಸಕ್ರೆಟರಿ ಸಮೂಹದೊಡನೆ ದರ್ಬಾರ್ ಮಾಡಿದರು. ದಿವಾನರ ಆಗಮನವನ್ನು ಅತಿಸಹನೆಯೊಡನೆ ನಿರೀಕ್ಷಿಸುತ ಕಾದಿದ್ದ ಫಿರ್ಯಾದುದಾರರನ್ನು ಒಬ್ಬೊಬ್ಬರನ್ನಾಗಿ ಕರೆಸಿ (ನಿಮ್ಮ ವಿಷಯವು ಮುಂದೆ ವಿಚಾರಿಸಲ್ಪಡುವದು) (ನೀವು ತಿಳಿಸುವ ವಿಷಯ ಸರ್ವಥಾ ಸಾಧ್ಯವಾಗತಕ್ಕದ್ದಲ್ಲವು) (ಇದರಲ್ಲಿ ನಾವು ಪ್ರವೇಶಿಸುವದಿಲ್ಲವು) (ಇದು ನಾವು ಅಂಗೀಕರಿಸಲಾರೆವು) ಎನು ರೀತ್ಯಾ ಫಿರ್ಯಾದುಗಳ ಸ್ವರೂಪಾನುಗುಣವಾಗಿ ಸಹನೆಯೊಡನೆ ಜವಾಬ ಅಪ್ಪಣೆ ಕೊಟ್ಟರು. ಫಿರ್ಯಾದುದಾರರೆಲ್ಲರೂ ವಾಪಸ್ ಹೋದರು ನ್ಯಾಯಸಮ್ಮತವಾದವಿಷಯವು ಮಾತ್ರ ಗೊತ್ತಾಗಲಿಲ್ಲವು.

WHO IS A BRAHMIN

ಈ ಹಿಂದೂ ದೇಶೀಯರ ಶ್ರೇಯೋಭಿವೃದ್ಧಿಗೆ ಜಾತಿ ಮತಾಚಾರಗಳು ಕೇವಲ ಬಾಧಕ ಸಾಮಗ್ರಿಗಳಾಗಿ ಪರಿಣಮಿಸಿವೆಯೆಂತಲೂ, ತತ್ರಾಪಿ ಸ್ವೇಚ್ಛಾಪ್ರವೃತ್ತಿ ನಿರೋಧಕವಾದ ಬ್ರಾಹ್ಮಣ್ಯವೆಂಬುದು ಬಹಳ ನಿರ್ಬಂಧರೂಪವಾಗಿದೆಯೆಂತಲೂ ಬಗೆದು ಅದರಿಂ ವಿಮುಕ್ತರಾಗಬೇಕೆಂಬ ಕೋರಿಕೆಯೂ, ತದನುಗುಣವಾದ ಪ್ರವೃತ್ತಿಯೂ ಎಂದು ದಿನದಿನಕ್ಕೆ ಹೆಚ್ಚಾಗುತಲಿರುವಲ್ಲಿ, ಜಾತಿಮತಾಚಾರಗಳು ಅನಾವಶ್ಯಕಗಳೆಂತಲೂ, ತತ್ರಾಪಿ ಬ್ರಾಹ್ಮಣ್ಯವು ಪುಣ್ಯಪರಿಪಾಕದಿಂ ಲಭಿಸತಕ್ಕದ್ದೆಂತಲೂ, ಅಂತಾ ಬ್ರಾಹ್ಮಣ್ಯ ಸಂಪಾದನವು ಸ್ವಪ್ರತಿಷ್ಠೆಗೆ ಕಾರಣವೆಂತಲೂ ಎಣಿಸಿ ಅದಕ್ಕಾಗಿ ಅನೇಕರು ಹೋರಾಡುತಲಿರುತ್ತಾರೆ. ಮುಖ್ಯವಾಗಿ ಬ್ರಾಹ್ಮಣ್ಯವು ಈಗ ಲುಪ್ತವಾಗುತಬರುವದೆಲ್ಲ ಅದನ್ನು ಕಾಪಾಡಬೇಕೆಂಬ ಅಭಿಲಾಷೆಯೊಡನೆ ಕೆಲವುಜನರು ಪ್ರಯತ್ನಪಡುತಲಿದ್ದಾರೆ. ಈ ವಿವಾದವು ಸರ್ವಸ್ವೀಕೃತವಾಗುವ ವಿಷಯವಲ್ಲವಾಗಿ ಇದಂಕುರಿತು ಹಿಂದೆ ಮಾಡಿದ್ದ ವಿಚಾರವೇ ಸಾಕಾದಷ್ಟಾಗಿರುತಿದೆ. ಪರಂತು ಮೆಲ್ಲಗೆ ಅಪೇಕ್ಷಿಸತಕ್ಕ ಬ್ರಾಹ್ಮಣ್ಯ ಸ್ವರೂಪವಂ ಕುರಿತು ಮೆ|| ವಳ್ಳಿ ಚೂಡಲಯ್ಯರವರು, ಸ್ವಲ್ಪಮಟ್ಟಿಗೆ ವಿಚಾರಮಾಡಿರುತ್ತಾರೆಂತೂ ಅದೆ.

ಪಂಚಮವೇದವೆನಿಸುವ ಮಹಾಭಾರತದೊಳು ಪ್ರಕೃತವಿಷಯದಲ್ಲಿ ಧರ್ಮಪುತ್ರನನ್ನು ಪರೀಕ್ಷಿಸುವದಕ್ಕಾಗಿ ಸರ್ಪರೂಪದಿಂ ತಾಳ್ದಂಥ ಯಕ್ಷನು ಕೇಳಿದ ಅನೇಕ ಪ್ರಶ್ನೆಗಳಲ್ಲಿ ಇದ ರದಿಕವುದು ಸಹ ಒಂದಾಗಿರುತಿದೆ. ಅದು ಯಾವದಂದರೆ—

> ಯಕ್ಷಃ—ರಾಜನ್ ಕುಲೇನ ವೃತ್ತೇನ ಸ್ವಾಧ್ಯಾಯೇನ ಶ್ರುತೇನವಾ। ಬ್ರಾಹ್ಮಣ್ಯಂ ಕೇನಭವತಿ ಪ್ರಬ್ರೂಹ್ಯೇತತ್ಸುನಿಶ್ಚಿತಂ॥

ಶ್ರೀಮಹಾಭಾರತ, ಅರಣ್ಯಪರ್ವ, ಅ||೩೧೩, ಶ್ಲೋ|| ೧೦೮

ಧರ್ಮರಾಜನಂ ಕುರಿತು ಯಕ್ಷಪ್ರಶ್ನೆ—ಅರಸನೇ, ಬ್ರಾಹ್ಮಣ್ಯವೆಂಬುದು ಕುಲದಿಂದ ಪ್ರಾಪ್ತವಾಗುತಿದೆಯೋ, ಒಳ್ಳೇನಡತೆಯಿಂದ ಸಿದ್ಧಿಸುತಿದೆಯೋ, ಅಧ್ಯಯನದಿಂ ಲಭಿಸುತಿದೆಯೋ, ಧರ್ಮವಿಷಯಾನುಸಂಧಾನದಿಂ ಪ್ರಾಪ್ತವಾಗುತಿದೆಯೋ, ಅದು ನಿಶ್ಚಯವಾಗಿ ನನಗೆ ಅರುಹೆಂದನು. ಅದಕ್ಕೆ,

> ಯುಧಿಷ್ಠಿರಃ—ಶೃಣುಯಕ್ಷಕುಲಂತಾತನ ಸ್ವಾಧ್ಯಾಯೋನಚಶ್ರುತಂ॥ ಕಾರಣಂಹಿ ದ್ವಿಜತ್ವೇಚವೃತ್ತಮೇವನಸಂಶಯಃ॥

ಮಹಾಭಾರತ ಅರಣ್ಯಪರ್ವ, ಅ|| ೩೧೩, ಶ್ಲೋ|| ೧೦೯

ಯಕ್ಷನಂ ಕುರಿತು ಧರ್ಮಪುತ್ರನವಚನವು— ಯಕ್ಷನೇ, ಬ್ರಾಹ್ಮಣ್ಯಕ್ಕೆ ಅಭಿಜಾತ್ಯವು ಕಾರಣವಲ್ಲವು. ಅಧ್ಯಯನವು ನಿಮಿತ್ತವಲ್ಲವು. ದರ್ಮಾನುಸಂಧಾನವು ಹೇತುವಾಗಲಾರದು. ಪರಂತು ಅದಕ್ಕೆ ಒಳ್ಳೇನಡತೆ ಆವಶ್ಯಕವೆಂಬವರೊಳು ಸಂದೇಹನಿಲ್ಲವು.

> ಸರ್ಪಃ—ಬ್ರಾಹ್ಮಣಃಕೋಭವೇದ್ರಾಜನ್ ವೇದ್ಯಂಕಿಂಚಯುಧಿಷ್ಠಿರ॥

ಅರಣ್ಯಪರ್ವ, ೧೮೦ನೇ ಅಧ್ಯಾಯ ೨೦ನೇ ಶ್ಲೋ||

ನಹುಷನಪ್ರಶ್ನೆಯು—ಎಲೈಯುಧಿಷ್ಠಿರನೇ ಯಾವನು ಬ್ರಾಹ್ಮಣ ನೆನಿಸಿಕೊಳ್ಳುವನೋ ಅದಂನನಗೆ ತಿಳಿಸು.

> ಯುಧಿಷ್ಠಿರಃ-ಸತ್ಯಂದಾನಂಕ್ಷಮಾಶೀಲ ಮಾನೃಶಂಸ್ಯಂತಪೋಘೃಣಾ॥ ದೃಶ್ಯಂತೆಯತ್ರನಾಗೇಂದ್ರಸಬ್ರಾಹ್ಮಣಇತಿಸ್ಮೃತಿಃ॥

ಅರಣ್ಯಪರ್ವ, ೧೮೦ನೇಅ|| ೨೧—೨೨ನೇ ಶ್ಲೋ||

ಕೌಂತೇಯನ ಉತ್ತರ—ನಾಗೇಂದ್ರನೇ; ಸತ್ಯವು, ದಾನವು, ಕ್ಷಮೆ, ಸುಶೀಲತ್ವ, ಅಹಿಂಸೆ, ತಪಸ್ಸು, ದಯೆ, ಇವು ಯಾರಲ್ಲಿರುತಿವೆಯೋ ಆತನೇ ಬ್ರಾಹ್ಮಣನೆನಿಸಿಕೊಳ್ಳುವನು. ಮತ್ತು.

> ಶೂದ್ರೇತುಯದ್ಭವೇಲ್ಲಕ್ಷ್ಮ ದ್ವಿಜೇತಚ್ಚನವಿದ್ಯತೇ॥ನವೈಶೂದ್ರೋಭವೇಚ್ಛೂದ್ರೋಬ್ರಾಹ್ಮಣೋನಚಬ್ರಾಹ್ಮಣಃ॥

ಅರಣ್ಯಪರ್ವ, ೧೮೦ನೇ ಅಧ್ಯಾಯ,೨೫ನೇಶ್ಲೋ||

ಪೂರ್ವೋಕ್ತಗುಣಗಳು ಶೂದ್ರನಲ್ಲಿದ್ದರೆ ಅವನು ಶೂದ್ರನಾಗಲಾರನು. ಮತ್ತು ಅವು ಬ್ರಾಹ್ಮಣನೊಳು ಇಲ್ಲದಿದ್ದರೆ ಅವನು ಬ್ರಾಹ್ಮಣನೆನಿಸಿಕೊಳ್ಳಲಾರನು. ಇನ್ನು,

> ಯತ್ರೈತಲ್ಲಕ್ಷ್ಯತೇಸರ್ಪ ವೃತ್ತಂಸಬ್ರಾಹ್ಮಣಸ್ಸ್ಮೃತಃ॥ಯತ್ರೈತನ್ನಭವೇತ್ಸರ್ಪ ತಂಶೂದ್ರಮಿತಿನಿರ್ದಿಶೇತ್

ಅರಣ್ಯಪರ್ವ, ೧೮೦ನೇ ಅ|| ೨೬ನೇ ಶ್ಲೋ||

ಅಂದರೆ—ಪೂರ್ವೋಕ್ತಗುಣಗಳು ಯಾರಲ್ಲಿರುವವೋ ಅಂತವನಂ ಬ್ರಾಹ್ಮಣನನ್ನಾಗಿಯೂ ಯಾರಲ್ಲಿ ಅವು ಇಲ್ಲವೋ ಅವನು ಶೂದ್ರನನ್ನಾಗಿಯೂ ಭಾವಿಸತಕ್ಕದ್ದು.

ಇದಕ್ಕನುಸಾರವಾಗಿಯೇ ವಿಭಾಗಕರದಲ್ಲಿ ಬ್ರಾಹ್ಮಣೇತರರಾದವರನೇಕರು ಬ್ರಾಹ್ಮಣರಾಗಿ ಬ್ರಹ್ಮಜ್ಞಾನವಂ ಪಡೆದು ಮುಕ್ತರಾದಂತೆ ಇದರಡಿಕಂಡ ಅಧ್ಯಾಯಗಳಲ್ಲಿ ತಿಳಿಸಲ್ಪಟ್ಟಿರುತಿವೆ

ಶ್ರೀಭಾಗವತ ೯ನೇ ಸ್ಕಂಧ, ೩ನೇ ಅ ೧೧—೧೭ನೇ ಶ್ಲೋ.
„ ೯ನೇ ಸ್ಕಂಧ,೨ನೇ ಅ ೧೭ ೨೧ ೨೩ನೇಶ್ಲೋ.
„ „ ೧೭ನೇ ಅ ೧೧ನೆ ಶ್ಲೋ.
„ „ ೨೦ನೆ ಅ ೧ ನೇ ಶ್ಲೋ.
„ „ ೨೧ನೇ ಅ ೨—೨೦—೨೨ ಶ್ಲೋ.

ಇವುಗಳಿಗಿಂತಲೂ ಪ್ರಬಲಪ್ರಮಾಣವಾದ ಶ್ರುತ್ಯಂತರವಂ ನೋಡಲಾಗಿ ಅದೂ ಮೇಲ್ಕಂಡ ಪ್ರಮಾಣಗಳಿಗೆ ಪೋಷಕವಾದದ್ದಾಗಿರುವದರಿಂದ ಅಜ್ಞಾನ ನಿರೋಧಕವಾಗಿಯೂ ಜ್ಞಾನಿಗಳಿಗೆ ಭೂಷಣರೂಪವಾಗಿಯೂ ಇರುವ ವಜ್ರಸೂಚಿಯೆಂಬ ಉಪನಿಷದ್ವಾಕ್ಯವನ್ನು ಇದರಡಿ ತಿಳಿಸುವೆವು.

ವಜ್ರಸೂಚಿಕೋಪನಿಷತ್

ಓಮ್|| ವಜ್ರಸೂಚೀಂಪ್ರವಕ್ಷ್ಯಾಮಿಶಸ್ತ್ರಮಜ್ಞಾನಭೇದನಂ।ದೂಷಣಂಜ್ಞಾನಹೀನಾನಾಂಭೂಷಣಂಜ್ಞಾನಚಕ್ಷುಷಾಂ। ಬ್ರಾಹ್ಮಣಕ್ಷತ್ರಿಯವೈಶ್ಯಶೂದ್ರಾ ಇತಿ ಚತ್ವಾರೋವರ್ಣಾಸ್ತೇಷಾಂವರ್ಣಾನಾಂಬ್ರಾಹ್ಮಣಏವ ಪ್ರಧಾನ ಇತಿವೇದವಚನಾನುರೂಪಂಸ್ಮೃತಿಭಿರಪ್ಯುಕ್ತಂ।ತತ್ರಚೋದ್ಯಮಸ್ತಿ। ಕೋವಾಬ್ರಾಹ್ಮಣೋನಾಮ।ಕಿಂಜೀವಃ, ಕಿಂದೇಹಃ। ಕಿಂಜಾತಿಃ। ಕಿಂಜ್ಞಾನಂ।ಕಿಂಕರ್ಮ।ಕಿಂಧಾರ್ಮಿಕ ಇತಿ। ತತ್ರಪ್ರಥಮೋಜೀವೋ ಬ್ರಾಹ್ಮಣ ಇತಿಚೇನ್ನ। ಅತೀತಾನಾಗತಾನೇಕದೇಹಾನಾಂಜೀವಸ್ಯೈಕರೂಪತ್ವಾತ್। ಏಕಸ್ಯಾಪಿಕರ್ಮವಶಾದನೇಕದೇಹಸಂಭವಾತ್ಸರ್ವಶರೀರಾಣಾಂ ಜೀವಸ್ಯೈಕರೂಪತ್ವಾಚ್ಚ।ತಸ್ಮಾನ್ನಜೀವೋಬ್ರಾಹ್ಮಣಇತಿ।ತರ್ಹಿದೇಹೋಬ್ರಾಹ್ಮಣಇತಿಚೇತ್ತನ್ನ।ಆಚಂಡಾಲಾದಿ ಪರ್ಯಂತಾನಾಂ ಮನುಷ್ಯಾಣಾಂ ಪಾಂಚಭೌತಿಕತ್ವೇನ ದೇಹಸ್ಯೈಕ ರೂಪತ್ವಾಜ್ಜರಾಮರಣ ಧರ್ಮಾಧರ್ಮಾದಿಸಾಮ್ಯದರ್ಶನಾತ್।ಬ್ರಾಹ್ಮಣಶ್ಶ್ವೇತವರ್ಣಃ। ಕ್ಷತ್ರಿಯೋರಕ್ತವರ್ಣಃ।ವೈಶ್ಯಃಪೀತವರ್ಣಃ।ಶೂದ್ರಃಕೃಷ್ಣವರ್ಣ ಇತಿ ನಿಯಮಾಭಾವಾತ್। ಪಿತ್ರಾದಿಶರೀರದಹನೇಪುತ್ರಾದೀನಾಂ ಬ್ರಹ್ಮಹತ್ಯಾದಿದೋಷಸಂಭವಾಚ್ಚ। ತಸ್ಮಾನ್ನದೇಹೋ ಬ್ರಾಹ್ಮಣಇತಿ।ತರ್ಹಿಜಾತಿರ್ಬ್ರಾಹ್ಮಣಇತಿಚೇತ್ತನ್ನ।ತತ್ರಜಾತ್ಯಂತರೇಷ್ವನೇಕಜಾತಿಸಂಭವಾತ್ ಮಹರ್ಷಯೋಬಹವಸ್ಸಂತಿ। ಋಷ್ಯಶೃಂಗೋಮೃಗ್ಯಾಃ। ಕೌಶಿಕಃಕುಶಾತ್। ಜಾಂಬೂಕೋಜಂಬೂಕಾತ್। ವಾಲ್ಮೀಕಿರ್ವಲ್ಮೀಕಾತ್। ವ್ಯಾಸಃಕೈವರ್ತಕನ್ಯಾಯಾಂ। ಶಶಪೃಷ್ಠಾದ್ಗೌತಮಃ।ವಸಿಷ್ಠಃಊರ್ವಶ್ಯಾಂ।ಅಗಸ್ತ್ಯಃಕಲಶೇಜಾತ ಇತಿಶ್ರುತತ್ವಾತ್। ಏತೇಷಾಂಜಾತ್ಯಾವಿನಾಪ್ಯಗ್ರೇಜ್ಞಾನಪ್ರತಿಪಾದಿತಾಋಷಯೋಬಹವಸ್ಸಂತಿ। ತಸ್ಮಾನ್ನಜಾತಿರ್ಬ್ರಾಹ್ಮಣಇತಿ। ತರ್ಹಿಜ್ಞಾನಂಬ್ರಾಹ್ಮಣಇತಿಚೇತ್ತನ್ನ।ಕ್ಷತ್ರಿಯಾದಯೋಪಿಪರಮಾರ್ಥದರ್ಶಿನೋಭಿಜ್ಞಾಬಹವಸ್ಸಂತಿ। ತಸ್ಮಾನ್ನಜ್ಞಾನಂಬ್ರಾಹ್ಮಣಇತಿ। ತರ್ಹಿಕರ್ಮಬ್ರಾಹ್ಮಣ ಇತಿಚೇತ್ತನ್ನ। ಸರ್ವೇಷಾಂಪ್ರಾಣಿನಾಂಪ್ರಾರಬ್ಧಸಂಚಿತಾಗಾಮಿಕರ್ಮಸಾಧರ್ಮ್ಯದರ್ಶನಾತ್ ।ಕರ್ಮಾಭಿಪ್ರೇರಿತಾಸ್ಸಂತಃಜನಾಃಕ್ರಿಯಾಃಕುರ್ವಂತೀತಿ। ತಸ್ಮಾನ್ನಕರ್ಮಬ್ರಾಹ್ಮಣಇತಿ। ತರ್ಹಿಧಾರ್ಮಿಕೋಬ್ರಾಹ್ಮಣಇತಿಚೇತ್ತನ್ನ।ಕ್ಷತ್ರಿಯಾದಯೋಹಿರಣ್ಯದಾತಾರೋಬಹವಸ್ಸಂತಿ। ತಸ್ಮಾನ್ನಧಾರ್ಮಿಕೋಬ್ರಾಹ್ಮಣಇತಿ। ತರ್ಹಿಕೋವಾಬ್ರಾಹ್ಮಣೋನಾಮ ।ಯಃಕಶ್ಚಿದಾತ್ಮಾನಮದ್ವಿತೀಯಂಜಾತಿಗುಣಕ್ರಿಯಾಹೀನಂ ಷಡೂರ್ಮಿಷಡ್ಭಾವೇತ್ಯಾದಿ ಸರ್ವದೋಷರಹಿತಂ ಸತ್ಯಜ್ಞಾನಾನಂದಾನಂತ ಸ್ವರೂಪಂಸ್ವಯಂನಿರ್ವಿಕಲ್ಪಮಶೇಷ ಕಲ್ಪಾಧಾರಮಶೇಷ ಭೂತಾಂತರ್ಯಾಮಿತ್ವೇನವರ್ತಮಾನ ಮಂತರ್ಬಹಿಶ್ಚಾಕಾಶವದನುಸ್ಯೂತಮಖಂಡಾನಂದ ಸ್ವಭಾವ ಮಪ್ರಮೇಯ ಮನುಭವೈಕ ವೇದ್ಯ ಮಪರೋಕ್ಷತಯಾಭಾಸಮಾನಂ ಕರತಲಾಮಲಕ ವತ್ಸಾಕ್ಷಾ ದಪರೋಕ್ಷೀಕೃತ್ಯಕೃತಾರ್ಥತಯಾ ಕಾಮರಾಗಾದಿ ದೋಷರಹಿತಶ್ಶಮ ದಮಾದಿ ಸಂಪನ್ನೋಭಾವ ಮಾತ್ಸರ್ಯತೃಷ್ಣಾಶಾ ಮೋಹಾದಿ ರಹಿತೋ ದಂಭಾಹಂಕಾರಾದಿಭಿರ ಸಂಸ್ಪೃಷ್ಟಚೇತಾವರ್ತತೇ। ಏವಮುಕ್ತಲಕ್ಷಣೋಯಸ್ಸ ಏವಬ್ರಾಹ್ಮಣ ಇತಿ ಶ್ರುತಿಸ್ಮೃತಿಪುರಾಣೇತಿ ಹಾಸಾನಾಮಭಿಪ್ರಾಯಃ। ಅನ್ಯಥಾ ಬ್ರಾಹ್ಮಣತ್ವ ಸಿದ್ಧಿರ್ನಾಸ್ತ್ಯೇವ॥ ಸಚ್ಚಿದಾನಂದಮಾತ್ಮಾನ ಮದ್ವಿತೀಯಂ ಬ್ರಹ್ಮಭಾವಯೇದಾತ್ಮಾನಂ ಸಚ್ಚಿದಾನಂದಂ ಬ್ರಹ್ಮಭಾವಯೇ ದಿತ್ಯುಪನಿಷತ್.

ಮೇಲ್ಕಂಡ ಸ್ಮೃತ್ಯರ್ಥವೇನಂದರೆ,—ಬ್ರಾಹ್ಮಣ ಕ್ಷತ್ರಿಯ, ವೈಶ್ಯ, ಶೂದ್ರರೆಂಬ, ಚತುರ್ವರ್ಣದವರಲ್ಲಿಯೂ ಬ್ರಾಹ್ಮಣನೊಬ್ಬನೇ ಮುಖ್ಯನೆಂದು ಶ್ರುತಿಗಳೆಲ್ಲವೂ ಉದ್ಘೋಷಿಸುತಿವೆ. ಇದಕ್ಕೆ ತಕ್ಕಂತೆ ಸ್ಮೃತಿಗಳು ಸಹ ಬ್ರಾಹ್ಮಣಶ್ರೇಷ್ಠ್ಯವನ್ನು ವಿಶೇಷವಾಗಿ ಅಲ್ಲಿಯಲ್ಲಿ ತಿಳಿಸುತಿವೆ. ಇದರ ಈವಿಷಯದಲ್ಲಿ ವಿಚಾರಮಾಡಬೇಕಾಗಿರುವದೇನಂದರೆ—ಬ್ರಾಹ್ಮಣ ವಾಚ್ಯವಾದದ್ದಾವದು? ಅದು ಜೀವನೇ, ದೇಹವೇ, ವರ್ಣವೇ, ಜ್ಞಾನವೇ, ಕರ್ಮವೇ, ಅಥವಾ ಧರ್ಮವೇ? ಎಂದು ವಿಚಾರಿಸಲಾಗಿ ತೋರುವದೇನಂದರೆ,— ಮೇಲೆ ತಿಳಿಸಲ್ಪಟ್ಟವುಗಳಲ್ಲೊಂದೂ ಮೊದಲನೆಯದಾದ ಜೀವನನ್ನು ಬ್ರಾಹ್ಮಣನೆಂದು ನುಡಿಯಲಾಗದು. ಯಾತಕ್ಕಂದರೆ, ೧—ಅತೀತಾನಾಗತಾನೇಕ ದೇಹಗಳ ಜೀವನಿಗೆ ಒಂದೇವಿಧರೂಪವಿರುವದರಿಂದಲೂ,೨—ಅವನೊಬ್ಬನಾಗಿದ್ದಾಗ್ಯೂ ಕರ್ಮವಶದಿಂ ಅನೇಕ ದೇಹಸಂಬಂಧ ಪ್ರಾಪ್ತವಾಗುವದರಿಂದಲೂ, ಅವನಿಗೆ ಬ್ರಾಹ್ಮಣ್ಯವು ಸಿದ್ಧಿಸಲಾರದು. ಆವರೇ ದೇಹಕ್ಕೆ ಬ್ರಾಹ್ಮಣ್ಯವು ಆಗಬಹುದಲ್ಲವೇಯೆಂದು ಕೇಳುವಪಕ್ಷಕ್ಕೆ ದೇಹವು ಪಾಂಚಭೌತಿಕವಾದದರಿಂದಲೂ ಚಂಡಾಲಾದಿ ಸಮಸ್ತ ಮನುಷ್ಯರ ಶರೀರವು ಏಕರೂಪವಾದದ್ದಾಗಿರುವದರಿಂದಲೂ,ಜರಾಮರಣ ಧರ್ಮಾಧರ್ಮಾದಿಗಳಿಗೆ ಸಾಮಾನ್ಯೇನ ಅದು ಒಳಪಡುವದರಿಂದಲೂ, ಬ್ರಾಹ್ಮಣನು ಶ್ವೇತವರ್ಣವುಳ್ಳವನೆಂದಾಗಲಿ, ಕ್ಷತ್ರಿಯನು ರಕ್ತವರ್ಣವುಳ್ಳವನೆಂತಲಾಗಲಿ, ವೈಶ್ಯನು ಪೀತವರ್ಣವುಳ್ಳವನೆಂತಲಾಗಲಿ, ಶೂದ್ರನು ಕೃಷ್ಣವರ್ಣವುಳ್ಳವನೆಂತಲಾಗಲಿ ಯಾವವಿಧ ನಿಯಮವಿಲ್ಲದ್ದರಿಂದಲೂ, ಪಿತ್ರಾದಿ ಶರೀರದಹನ ಪ್ರಯುಕ್ತವಾದ ಬ್ರಹ್ಮಹತ್ಯಾದಿ ದೋಷವು ಪುತ್ರನಿಗೆ ಸಂಭವಿಸುವದರಿಂದಲೂ, ಬ್ರಾಹ್ಮಣ್ಯವು ದೇಹಪ್ರಯುಕ್ತವಾದದೆಂದು ನುಡಿಯಲಾಗದು.

ಬ್ರಾಹ್ಮಣ್ಯ ವರ್ಣ ಮೂಲಕವಾದದೆಂದು ಹೇಳೋಣವೆಂದರೆ—ಅದು ನಾನಾ ಪ್ರಭೇದಗಳುಳ್ಳದ್ದಾದಕಾರಣ, ವರ್ಣವು ಬ್ರಾಹ್ಮಣ್ಯಕ್ಕೆ ಮುಖ್ಯಕಾರಣವಲ್ಲವು. ಇದಕ್ಕೆ ದೃಷ್ಟಾಂತವಾಗಿ ನಮಗೆ ಪೂಜ್ಯರಾಗಿಯೂ, ನಮ್ಮಗೋತ್ರ ಸೂತ್ರಕಾರರಾಗಿಯೂ ಇರುವ ಮಹರ್ಷಿಗಳ ಹೆಸರುಗಳನ್ನೂ ಅವರ ಜನನಕ್ರಮವನ್ನೂ ಇದರಡಿ ತಿಳಿಸುವೆವು. ಋಷ್ಯಶೃಂಗರು ಜಿಂಕೆಯ ಗರ್ಭದಲ್ಲಿ ಜನಿಸಿದವರು. ಕೌಶಿಕರು ಧರ್ಭೆಯಲ್ಲಿ ಹುಟ್ಟಿದವರು. ಜಾಂಬೂಕರು ನರಿಯಗರ್ಭದಲ್ಲಿ ಹುಟ್ಟಿದವರು, ವಾಲ್ಮೀಕರು ಹುತ್ತದಿಂದುದ್ಭವವಾದವರು. ವ್ಯಾಸರು ಕೈವರ್ತಕನ್ಯೆಯ ಮೂಲಕ ಅವತರಿಸಿದವರು. ಗೌತಮರು ಶಶಪೃಷ್ಠದಲ್ಲಿಹುಟ್ಟಿದವರು. ವಸಿಷ್ಠರು ಊರ್ವಶೀಪುತ್ರರು, ಅಗಸ್ತ್ಯರು ಕಲಶಸಂಭೂತರು. ಈಪ್ರಕಾರವಾಗಿ ಇವರೆಲ್ಲರೂ ಜನಿಸಿ ಮಹನೀಯರಾಗಿದ್ದು ಗತಿಸಿದಂತೆ ತಿಳಿಯಬರುತಿದೆ. ಇವರು ಜಾತ್ಯಾಬ್ರಾಹ್ಮಣರಲ್ಲದೆಹೋದಾಗ್ಯೂ ಪೂರ್ವಕಾಲದಲ್ಲಿ ಜ್ಞಾನಪ್ರತಿಪಾದಕರಾಗಿದ್ದರೆಂಬದಕ್ಕೆ ಅನೇಕ ದೃಷ್ಟಾಂತಗಳಿವೆ. ಇಂತವರು ಇನ್ನೂ ಅನೇಕರಿದ್ದರು. ಅತಏವಮೇಲೆತಿಳಿಸಿದಂತೆ ಬ್ರಾಹ್ಮಣ್ಯಕ್ಕೆ ಜಾತಿಯು ಕಾರಣವಲ್ಲದೆ ಹೋಯಿತು. ಅದಕ್ಕೆ ಜ್ಞಾನವೇ ಪ್ರಧಾನವೆಂದು ಹೇಳುವದುಕೂಡ ಯುಕ್ತವಲ್ಲವು, ಯಾತಕ್ಕಂದರೆ— ಕ್ಷತ್ರಿಯಾದಿಗಳಲ್ಲಿ ಸಹ ಪರಮಾರ್ಥದರ್ಶಿಗಳಾಗಿಯೂ, ಅಭಿಜ್ಞರಾಗಿಯೂ ಇರುವವರನೇಕರಿದ್ದರು. ಅತಏವ ಅದೂ ಪ್ರಯೋಜನಕರವಲ್ಲವು. ಬ್ರಾಹ್ಮಣ್ಯವು ಕರ್ಮನಿಮಿತ್ತಕವಾದದ್ದೆಂದು ಭಾವಿಸುವಣವೆಂದರೆ—ಸಮಸ್ತಪ್ರಾಣಿಗಳ ಪ್ರಾರಬ್ಧಸಂಚಿತಾಗಾಮಿ ಕರ್ಮಸಾಮ್ಯವು ನೋಡುವದಾಗಿ (ಅಂದರೆ ಸದರೀ ಕರ್ಮಗಳು ಸಕಲ ಪ್ರಾಣಿನಿಯತಗಳೆಂದು ಭಾವವು) ಕರ್ಮಪ್ರೇರಿತರಾದ ಜನಗಳು ತದನುಸಾರವಾದ ಕೃತ್ಯಗಳನ್ನು ಮಾಡದೆಯಿರುವದಿಲ್ಲವು. ಆದದರಿಂದ ಬ್ರಾಹ್ಮಣ್ಯಕ್ಕೆ ಕರ್ಮವು ಸಹಕಾರಿಯಾಗಲಾರದು. ಧಾರ್ಮಿಕನು ಬ್ರಾಹ್ಮಣನಾಗುವನೇ ಅಂದರೆ—ಕ್ಷತ್ರಿಯಾದಿ ಬಹುಮಂದಿ ನಾನಾರೂಪಗಳಾದ ದಾನಗಳಂಮಾಡುವದರಿಂದ ಅಂತವರನ್ನೆಲ್ಲ ಬ್ರಾಹ್ಮಣರೆಂದು ಹ್ಯಾಗೆಹೇಳಬಹುದು? ಆದರೆ ಬ್ರಾಹ್ಮಣನ್ಯಾರು? ಅದ್ವಿತೀಯನಾಗಿಯೂ, ಜಾತಿಗುಣಕ್ರಿಯಾ ಹೀನನಾಗಿಯೂ, ಜರಾ ಮರಣ ಶೋಕಮೋಹ ಕ್ಷುತ್ಪಿಪಾಸಗಳೆಂಬ ಷಡೂರ್ಮಿಗಳೂ, ಜನಿಸುವದು, ಇರುವದು, ವೃದ್ಧಿಹೊಂದುವದು, ರೂಪಾಂತರವನ್ನೈದುವದು,ಕ್ಷೈಯಿಸುವದು, ನಶಿಸುವದು, ಎಂಬಷಡ್ಭಾವಗಳೂ ಇಲ್ಲದವನಾಗಿಯೂ, ಸತ್ಯಜ್ಞಾನಾನಂದ ಸ್ವರೂಪನಾಗಿಯೂ, ನಿರ್ವಿಕಲ್ಪನಾಗಿಯೂ, ಸಕಲಕಲ್ಪಗಳಿಗೂ ಆಧಾರಭೂತನಾಗಿಯೂ ಸಮಸ್ತಭೂತಾಂತರ್ಯಾಮಿಯಾಗಿಯೂ, ಅಂತರ್ಬಾಹ್ಯಾಕಾಶವತ್ ಅನುಸ್ಯೂತನಾಗಿಯೂ, ಅಖಂಡಾನಂದ ಸ್ವರೂಪನಾಗಿಯೂ, ಅಪ್ರಮೇಯನಾಗಿಯೂ, ಅನುಭವೈಕವೇದ್ಯನಾಗಿಯೂ, ಪ್ರತ್ಯಕ್ಷಪರೋಕ್ಷಗಳಲ್ಲಿ ಪ್ರಕಾಶಿಸುವಂಥಾವನಾಗಿಯೂ, ಇರುವ ಭಗವಂತನನ್ನು ಕರತಲಾಮಲಕದಂತೆ ಪ್ರತ್ಯಕ್ಷಮಾಡಿಕೊಂಡು ಕೃತಾರ್ಥನಾಗತಕ್ಕವನಾಗಿಯೂ, ಕಾಮರಾಗಾದಿ ದೋಷ ರಹಿತನಾಗಿಯೂ, ಶಮಾದಿಗುಣಸಂಪನ್ನನಾಗಿಯೂ, ಮದಮಾತ್ಸರ್ಯತೃಷ್ಣಾಶಾ ಮೋಹಾದಿರಹಿತನಾಗಿಯೂ, ದಂಭಅಹಂಕಾರಾದಿಗಳಿಂದ ಅಸಂಸ್ಪೃಷ್ಟ ಚೇತನನಾಗಿಯೂ, ಯಾವನು ಇರುತ್ತಾನೆಯೋ ಅಂತಾಪುರುಷನೊಬ್ಬನೇ ಬ್ರಾಹ್ಮಣ ವ್ಯವಹಾರ ಯೋಗ್ಯನಾಗುವನೆಂದು ಶ್ರುತಿಸ್ಮೃತಿ ಪುರಾಣೇತಿ ಹಾಸಾದಿಗಳಲ್ಲಿ ಸ್ಪಷ್ಟವಾಗಿ ತಿಳಿಸುತಿವೆ. ಮೇಲ್ಕಂಡದಕ್ಕಿಂತಲೂ ಅನ್ಯಥಾ ಬ್ರಾಹ್ಮಣ್ಯಸಿದ್ಧಿಯು ಪುರುಷನಿಗೆ ಪ್ರಾಪ್ತವಾಗಲಾರದು. ಸಕಲಭೂತಾಂತರ್ವರ್ತಿಯಾದ ಆತ್ಮನನ್ನು ಸಚ್ಚಿದಾನಂದ ಸ್ವರೂಪನಾಗಿಯೂ, ಅದ್ವಿತೀಯನಾಗಿಯೂ ಪರಬ್ರಹ್ಮನನ್ನಾಗಿಯೂ ಭಾವಿಸತಕ್ಕದ್ದು. ಪೂರ್ವೋಕ್ತಉಪನಿಷದ್ವಾಕ್ಯಾರ್ಥವಂ ಪರ್ಯಾಲೋಚಿಸಿ ನೋಡಲಾಗಿ ಜನ್ಮ

ಹಾಗಲಿ, ದೇಹವಾಗಲಿ, ಜಾತಿಯಾಗಲಿ, ಕರ್ಮವಾಗಲಿ, ಧರ್ಮವಾಗಲಿ, ಬ್ರಾಹ್ಮಣ್ಯಕ್ಕೆ ಕಾರಣವಲ್ಲವೆಂತಲೂ, ಅದು ಕೇವಲ ಗುಣೈಕಪ್ರಧಾನವಾದದ್ದೆಂತಲೂ, ಸ್ಪಷ್ಟವಾಗುತಿದೆ. ಶ್ರುತಿಸ್ಮೃತ್ಯಾಧಾರಗಳು ಈರೀತಿಯಿರುವದರಿಂದ ಬ್ರಾಹ್ಮಣನ ಗರ್ಭದಲ್ಲಿ ಜನಿಸಿದವನೇ ಬ್ರಾಹ್ಮಣ ನೆನಿಸಿಕೊಳ್ಳುವನೇ ಹೊರ್ತು ಇತರನಿಗೆ ಸದರೀ ವ್ಯವಹಾರವು ಪ್ರಾಪ್ತವಾಗಲಾರದೆಂದು ಹೇಳುವ ಲೋಕವಾರ್ತೆಯು ಶಾಸ್ತ್ರೀಯವಾದದ್ದೇ ಯೆಂಬ ಅನುಮಾನವು ಈಚೆಗೆ ನಮಗೆ ಪ್ರಬಲವಾಗಲು ತತ್ಪರಿಹಾರಾರ್ಥ ಪ್ರಮಾಣವಚನಗಳಂ ನೋಡಲಾಗಿ ನಮಗೆ ಮೇಲೆ ಕಂಡ ವಜ್ರಸೂಚಿಕೋಪನಿಷದ್ವಾಕ್ಯಗಳು ದೃಷ್ಟಿಗೆಬಿದ್ದವು. ಇದಕ್ಕೆ ವಿರುದ್ಧಗಳಾದ ವಾಕ್ಯಗಳ್ಯಾವದಾದರೂ ಯಿದ್ದೊಡೆ ಅವಂ ಪಂಡಿತರು ಮೇಲೆಕಂಡ ವಾಕ್ಯಗಳೊಡನೆ ಸಮನ್ವಯಮಾಡಿ ತಿಳಸಬೇಕೆಂದು ಕೋರುವೆವು.

SUMMARY OF NEWS.

ವೃತ್ತಾಂತ ಸಂಗ್ರಹವು.

—:o:—

ಸಿಂಧ್ಯಾ ಮಹಾರಾಜರು ಮರಣ ಪಟ್ಟ ನಂತರ ಬಡ ಬಗ್ಗರಿಗೆ ದಾನ ಧರ್ಮ ಮಾಡುವದಕ್ಕಾಗಿ ಒಂದುಲಕ್ಷ ರೂಪಾಯಿಗಳನ್ನು ಪ್ರತ್ಯೇಕ ತೆಗದಿಟ್ಟಿರುತ್ತಾರಂತೆ.

——

ಪುಣೆಯ ಲಶ್ಕರದೊಳಗಿರುವ ಬಾಲವ್ವಾ ಶಂಭೂ ಎಂಬ ಕೋಮಟಿಗರ ಹೆಂಗಸು ೪ಕಾಲು, ೪ಕೈ, ೧ಕಣ್ಣು, ೧ಕಿವಿ ಇರುವ ಒಂದು ಕೂಸನ್ನು ಹಡದಳಂತೆ !! ಶಿಶುವುಹುಟ್ಟಿದ೧೪ ಘಳಗೆಯಲ್ಲಿ ಸತ್ತುಹೋಯಿತಂತೆ!!!

——

ಶ್ರೀ ಕಾಶೀ ಕ್ಷೇತ್ರದಲ್ಲಿ ಒಬ್ಬ ಮುಸಲ್ಮಾನ ಹುಡುಗನು ತನಗೆ ಸಂಸ್ಕೃತ ಶ್ಲೋಕ ಹೇಳಲಿಕ್ಕೆ ಚನ್ನಾಗಿ ಬರುವದಿಲ್ಲೆಂದು ಬಹಳ ವ್ಯಸನಗೊಂಡು ದುರ್ಗಾದೇವಿಯ ದೇವಾಲಯಕ್ಕೆ ಹೋಗಿ ತನ್ನ ನಾಲಿಗೆಯ ತುದಿಯನ್ನು ಕತ್ತರಿಸಿ ಆ ತುಂಡನ್ನು ಆ ದೇವಿಗೆ ಅರ್ಪಿಸಿದನೆಂತಲೂ ಈಗ ಅವನನ್ನು ಸರಕಾರದವರು ಹಿಡಿದಿರುತ್ತಾರೆಂತಲೂ ತಿಳಿಯುತ್ತದೆ !

——

ಪಾರಿಸ್ ಪಟ್ಟಣದಲ್ಲಿ ಒಂದು ಗಿಣಿಯು ೧೦೩ ವರುಷ ಪ್ರಾಯದ್ದಾಗಿ ಸತ್ತುಹೋಯಿತಂತೆ!!

——

ಕೊಲ್ಹಾಪುರದ ಶ್ರೀಅಹಲ್ಯಾಬಾಯಿ ರಾಣಿಸಾಹೇಬರವರ ಸ್ವಾರಿಯು ೧ನೇ ನಂಬರ್ ಬಂಗ್ಲೆಯಲ್ಲಿ ಈಗ ಇರುತ್ತದೆ. ಇತ್ತಲಾಗಿ ರಾಣಿ ಸಾಹೇಬರು ಒಂದುಕಟ್ಟಿಗೆಯ ಮಣೆಯ ಮೇಲೆ ಕೂತುಕೊಂಡಕಾಲದಲ್ಲಿ ಆ ಮಣೆಯಮೇಲೆ ಅವರ ಎಡಗಾಲ ಪಾದವು ಮೂಡಿರುತ್ತದಂತೆ!! ಇದನ್ನು ಕೇಳಿ ಬಹಳ ಆಶ್ಚರ್ಯ ಉಂಟಾಗುತ್ತದೆ. ಆ ಮಣೆಗೆ ಏನಾದರೂ, ದೂಳು ತಾಗಿದ್ದರಿಂದ ಅವರ ಮೇಲೆ ಹಾಗೆ ಪಾದವು ಮೂಡಿರಬಹುದೆಂದು ಕಲ್ಪನೆಯಿಂದ, ಮಣೆಯನ್ನು ಚನ್ನಾಗಿ ತೊಳೆದು ನೋಡಿದಾಗ್ಯೂ, ಮೂಡಿದ ಪಾದವು ಮೂಡಿದಂತೆಯೇ ಇತ್ತೆಂದು ತಿಳಿಯಬರುತ್ತದೆ!!!— ಜ್ಞಾ. ಸಾ.

——

ಪಾರಿಸಪಟ್ಟಣದಲ್ಲಿ ಇಲಿಗಳು ಬಹಳ ಹೆಚ್ಚಾಗಿ ಪೀಡಿಸಲಾರಂಭಿಸಿದ್ದರಿಂದ ಯಾರು ಒಂದು ಸಾವಿರ ಇಲಿಗಳ ಚರ್ಮವನ್ನು ತಂದು ತೋರಿಸುವರೋ ಅವರಿಗೆ ಆರು ರೂಪಾಯಿಗಳು ಬಕ್ಷೀಸು ಸಿಕ್ಕುವದೆಂದು ಅಲ್ಲಿಯ ಮುನಸಿಪಾಲಿಟಿಯವರು ಠರಾವು ಮಾಡಿದ್ದರಿಂದ ಈಗ ಅಲ್ಲಿ ಔಷಧಕ್ಕೆ ಸಹ ಒಂದು ಇಲಿಬೇಕಾದರೂ ಸಿಕ್ಕುವದು ದುರ್ಲಭವಾಗಿರುತ್ತದೆಂತಲೂ ಕೊಂದ ಇಲಿಗಳ ತೊಗಲಿನಿಂದ ಅಲ್ಲಿಯಜನರು ಕೈ ಚೀಲಗಳನ್ನು ಮಾಡುತ್ತಾರೆಂತಲೂ ತಿಳಿಯುತ್ತದೆ.

——

ಟೀ ಎಲೆಯ ಬದಲಿಗೆ ತುಳಸೀ ಪತ್ರ— ಒಬ್ಬ ಮನುಷ್ಯನು ವನೌಷಧಿಯ ಸಂಬಂಧವಾಗಿ ಗುಣವಿಶೇಷವನ್ನು ಬರಿಯುವಾಗ ತುಳಸೀದಳದ ವಿಷಯವಾಗಿ ಈಪ್ರಕಾರ ಬರಿಯುತ್ತಾನೆ:— "ತುಳಸಿ ಎಲೆಯ ಕಷಾಯವನ್ನು ತೆಗದು ಕೊಡದ್ದರಿಂದ ಹಸಿವೆಯು ಚೆನ್ನಾಗಿ ಆಗುತ್ತದೆ; ಮತ್ತು ಜ್ವರದ ಮೇಲಂತೂ ಇದರಷ್ಟು ಉತ್ಕೃಷ್ಟವಾದ ಔಷಧವು ಬೇರೆ ಯಾವದೂ ಇಲ್ಲ. ಜ್ವರದ ಮೇಲೆ ಉತ್ತಮ ಔಷಧಿಯು (ಕ್ವಿನನ್)ಎಂತ ದಕ್ಷಿಣ ಅಮೇರಿಕೆಯವರು ಶೋಧಿಸಿದಂತೆಯೂ ತಲೆ ಶೂಲಿಗೆ ಟೀ ಎಲೆಯೇ ಉತ್ತಮ ಔಷಧ ಎಂತ ಚೀನಾದೇಶದವರು ಹುಡಿಕಿ ತೆಗದಂತೆಯೂ ತುಳಸೀ ಪತ್ರದ ಗುಣವಾದರೋ ಅದರಂತೆಯೇ ಇರುತ್ತದೆ. ಒಂದು ದಿವಸ ನಾನು ಟೀ ಎಲೆಯ ಬದಲಾಗಿ ತುಳಸೀ ಪತ್ರವನ್ನು ಉಪಯೋಗಿಸಿ ಹಾಲು ಸಕ್ಕರೆ ಹಾಕಿ ಕುಡಿದೆನು; ನನಗೆ ಪ್ರತಿದಿನವೂ (ಚಾ) ನೀರು ಕುಡಿಯುವ ಅಭ್ಯಾಸವಿದ್ದಾಗ್ಯೂ ಅದು ನನಗೆ (ಚಾ) ನೀರಿನಂತೆಯೇ ರುಚಿಯಾಯಿತು.—ಕ. ಸು.

THE MYSORE GAZETTE.

ಮೈಸೂರು ಗೆಜೆಟು.

—:o:—

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಹೊರಟಿರುವ ಇಸ್ತಿಹಾರ್ನಾಮೆಗಳು

ವಿದ್ಯಾಭ್ಯಾಸದ ಇಲಾಖೆ.

ಇಸ್ತಿಹಾರ್ ನಾಮೆ.

ತಾರೀಖು ೧ನೇ ಜೂನ್ ೧೮೮೬ನೇ ಇಸವಿ.

ಮೈಸೂರು ದೇಶೀಯ ಪರೀಕ್ಷೆ.

1. ಪಾಠಶಾಲೆಗಳ ಯೋಗ್ಯತೆಯನ್ನು ನಿಶ್ಚಯಿಸುವದಕ್ಕಾಗಿ ಮಿಡಲ್ ಸ್ಕೂಲ್ ಪರೀಕ್ಷೆಗೆ ಸಮಾನವಾದ ಮತ್ತು ದೇಶಭಾಷೆಗಳಲ್ಲಿ ಮಾತ್ರವೇ ನಡಿಸಲ್ಪಡತಕ್ಕ ಮೈಸೂರು ದೇಶೀಯ ಪರೀಕ್ಷೆ ಯೆಂಬ ಒಂದು ಪರೀಕ್ಷೆಯನ್ನು ಏರ್ಪಡಿಸುವಂತೆ ಉದ್ದೇಶಿಸಲ್ಪಟ್ಟಿರುತ್ತದೆ.
2. ಸದರೀ ಪರೀಕ್ಷೆಯು ಪ್ರತಿ ವರ್ಷವೂ (ಅನ್ಯಥಾ ಪ್ರಸಿದ್ಧಪಡಿಸಲ್ಪಟ್ಟರೆ ವಿನಾ) ಫೆಬ್ರವರಿ ತಿಂಗಳಲ್ಲಿ ಪ್ರತಿ ಡಿಸ್ಟ್ರಿಕ್ಟಿನ ಹೆಡ್ ಕ್ವಾರ್ಟರ್ಸ ಅಂದರೆ ಪ್ರಧಾನಸ್ಥಳದಲ್ಲಿಯೂ ಮತ್ತು ಪರ್ಯಾಯವಾಗಿ ನಿರ್ಣಯಿಸಲ್ಪಡಬಹುದಾದ ಇತರ ಸ್ಥಳಗಳಲ್ಲಿ ಸಹ ನಡಿಸಲ್ಪಡುವದು. ಈ ಪರೀಕ್ಷೆಗೆ ದರಖಾಸ್ತು ಕೊಡುವ ಕಾಲಕ್ಕೆ ಹುಡುಗರು ಆ ಸಮ್ಮರಿ ಹಾಗೆ ೫ ತಿಂಗಳು ಓದುತ್ತಿದ್ದರೆ [illegible] ನಿಶ್ಚಯಿಸಲ್ಪಡುವ ಮೈಸೂರುದೇಶೀಯ ಸರ್ಕಾರಿ ಮತ್ತು ಪ್ರತ್ಯೇಕ ಸಹಾಯವನ್ನು ಪಡೆಯತಕ್ಕ ಪಾಠಶಾಲೆಗಳ ವಾಸ್ತವ್ಯವಾದ ವಿದ್ಯಾರ್ಥಿಗಳಾಗಿ ದಾಖಲಾದವರಾಗಿರಬೇಕು.
3. ಮದರಾಸ್ ಮಿಡಲ್ ಸ್ಕೂಲ್ ಅಥವಾ ಅದಕ್ಕೆ ಅಧಿಕವಾದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದರೆ ವಿನಾ ಮೈಸೂರು ಸರ್ಕಾರದಲ್ಲಿ ದೇಶಭಾಷೆಗೆ ಸಂಬಂಧಪಟ್ಟ ಉದ್ಯೋಗಗಳನ್ನು ಪಡೆಯಲು ಅರ್ಹತೆ ಇರುವದು (ಕನ್ನಡವನ್ನು ಬಿಟ್ಟು ಭಾಷೆಯಾಗಿ ತೆಗದುಕೊಂಡು) ಈ ಪರೀಕ್ಷೆಯಲ್ಲಿ ತೇರ್ಗಡೆಯಾಗತಕ್ಕದ್ದು ಅವಶ್ಯಕವಾಗಿರುತ್ತದೆ.
4. ಸರ್ಕಾರದ ದೇಶಭಾಷಾ ಪಾಠಶಾಲೆಯಲ್ಲಿ ಹೆಡ್ಮಾಸ್ತರ ಅಂದರೆ ಪ್ರಾಥಮಿಕ ಟೀಚರ್ ಕೆಲಸವನ್ನು ಅಪೇಕ್ಷಿಸುವವರು ಸಹ ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. ಮತ್ತು ತಾಲೂಕಿನಲ್ಲಿ ಸರ್ಕಾರ ನಾರ್ಮಲ ಶಾಲೆಯ ಪ್ರಾಥಮಿಕ ಟೀಚರ್‌ಗಳು ಸಹ ತಮ್ಮ ಉದ್ಯೋಗದಲ್ಲಿ ಅಭಿವೃದ್ಧಿಗೆ ಬರಬೇಕಾದರೆ ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕು.
5. ಸದರೀ ಪರೀಕ್ಷೆಯ ಸಂಗತಿಗಳು ಯಾವವಂದರೆ—

ಅವಶ್ಯಕ ಸಂಗತಿಗಳು.

I. [illegible] ಗಳು, ಅರಬಿ ಅಥವಾ ಹಿಂದುಸ್ತಾನಿ.

i—ಬರವಣಿಗೆ ಮತ್ತು ಅಕ್ಷರ ಸಂಯೋಜನೆ—ಪರೀಕ್ಷೆಗೆ ಯೋಗ್ಯವಾದ ಒಂದು ಪುಸ್ತಕದಿಂದ ಓದಲ್ಪಡುವ ಒಂದು ಸಂಗತಿಯನ್ನು ಸ್ಪಷ್ಟವಾಗಿಯೂ ಚನ್ನಾಗಿಯೂ ತಪ್ಪಿಲ್ಲದೆಯೂ ಪದಗಳನ್ನೂ ವಾಕ್ಯಗಳನ್ನೂ ಪ್ರತ್ಯೇಕಿಸಿ ಬರಿಯಬೇಕು.

ii—ವ್ಯಾಕರಣ—ಅಕ್ಷರಲಕ್ಷಣ, ಶಬ್ದಲಕ್ಷಣ, ವಾಕ್ಯಲಕ್ಷಣ

iii—ಪರೀಕ್ಷಾ—(ಪ್ರಕಟಿಸಲ್ಪಡುವ ಗ್ರಂಥ.) ಅರ್ಥವಿವರಣೆ, ಅರಿತು ತೆಗದುಕೊಳ್ಳಲ್ಪಡತಕ್ಕ ಭಾಗಗಳಲ್ಲಿ ಸದರೀ ಭಾಗಗಳು ಪ್ರಕಟಿಸಲ್ಪಡುವವೆ ಜ್ಞಾಪಕಶಕ್ತಿಯಿಂದ ಬರೆದ ಸಂಗತಿಗಳನ್ನು ಬರಿಯುವದು, ಶಬ್ದೋತ್ಪತ್ತಿ ಪೂರ್ವಾಪರ ಪ್ರಯೋಗಗಳ ಶಕ್ತಿ ಸಾಧನೆಗಳು ಮತ್ತು ಸಾಧಾರಣ ವಾಕ್ಯಗಳ ವಿಭಜನೆ.

II. ಗಣಿತ—ಸಾಧಾರಣ ಮತ್ತು ವಿವಿಧ ಸಂಕಲನ, ವ್ಯವಕಲನ, ಗುಣಕಾರ, ಭಾಗಾಕಾರ, ವಿಲೋಮರಾಶಿ ಭಿನ್ನರಾಶಿ ಮತ್ತು ದಶಮಾಂಶ ಭಿನ್ನರಾಶಿಗಳು, ಅನುಪಾತ, ಸರಳಬಡ್ಡಿ. (ಇಂಗ್ಲಿಷ ಅಂಕೆಗಳನ್ನು ಉಪಯೋಗಿಸತಕ್ಕದ್ದು.)

III. ಭೂಗೋಳ—ಭೂಪಟ, ಇಂಡಿಯಾ ವಿವರವಾಗಿ ಮುಖ್ಯವಾದ ಸ್ಥಳಗಳನ್ನು, ನದಿ ಪರ್ವತಾದಿಗಳನ್ನು ಅಲ್ಲದೆ ಆಯಾಸ್ಥಳಗಳನ್ನು ಮತ್ತು ವಿಭಾಗಗಳನ್ನು ತೋರಿಸಿ ನಕ್ಷೆಯನ್ನು ಬರೆಯುವದು.

ಮತ್ತು ಚರಿತ್ರೆ—ಇಂಡಿಯಾದೇಶದ ಚರಿತ್ರೆಯ ಮುಖ್ಯ ಸಂಗತಿಗಳು

ಐಚ್ಛಿಕ ಅಂಶಗಳು.

I. ಭಾಷೆ—ಸಂಸ್ಕೃತ* ಅಥವಾ ಫಾರಸಿ ಅಥವಾ ಮೇಲೆ ಹೇಳಿದ ಅವಶ್ಯಕವಾದ ಭಾಷೆಗಳಲ್ಲಿ ತೆಗದುಕೊಳ್ಳದಿರುವ ಭಾಷೆ ಯಾವುದಾದರೂ ಒಂದು.

i—ಓದಲ್ಪಡುವ ಸುಲಭವಾದ ಒಂದು ಸಂಗತಿಯ ಬರವಣಿಗೆ ಮತ್ತು ಅಕ್ಷರ ಸಂಯೋಜನ.

ii—ವ್ಯಾಕರಣ—ಅಕ್ಷರ ರೂಪಭೇದಗಳು, ವಿಭಕ್ತಿರೂಪಗಳು, ಸಾಧಾರಣ ಕ್ರಿಯಾಪದಗಳ ರೂಪಭೇದಗಳು.

iii—ಪರೀಕ್ಷಾಗ್ರಂಥ—(ಪ್ರಕಟ ಮಾಡಲ್ಪಡಬಹುದಾದದ್ದು) ಅವಶ್ಯಕವಾದ I, iii ರಲ್ಲಿ ಹೇಳಿದ ಪ್ರಕಾರ.

iv—ಭಾಷಾಂತರ (a) ವಿದ್ಯಾರ್ಥಿಯು ಪರೀಕ್ಷೆಗೆ ತೆಗದುಕೊಳ್ಳುವ ಮೊದಲನೇ ಭಾಷೆಗೆ ಪಚನರೂಪದ ಸಾಧಾರಣ ಸಂಗತಿಯನ್ನು ಭಾಷಾಂತರ ಮಾಡುವದು. (b) ಸುಲಭವಾದ ವಾಕ್ಯಗಳನ್ನು ವಿದ್ಯಾರ್ಥಿಯು ಪರೀಕ್ಷೆಗೆ ತೆಗದುಕೊಳ್ಳುವ ಮೊದಲನೇ ಭಾಷೆಯಿಂದ ಭಾಷಾಂತರ ಮಾಡುವದು.

II. ಆರೋಗ್ಯಶಾಸ್ತ್ರ—ಡಾಕ್ಟರ್ ಕನ್ನಿಂಗ್ ಹಾಂ ಸಾಹೇಬರಿಂದ ರಚಿಸಲ್ಪಟ್ಟ ಆರೋಗ್ಯಬೋಧಿನಿಯಲ್ಲಿರುವ ಮೇರೆಗೆ.

III. ಪ್ರಕೃತಿಶಾಸ್ತ್ರ—ಹಾರ್ ಕರ್ ಸಾಹೇಬರ ಪ್ರಥಮ ಪಾಠಗಳು ಮೊದಲಾದವುಗಳಲ್ಲಿ ಹೇಳಿರುವ ಮೇರೆಗೆ ಅಥವಾ ಕ್ಷೇತ್ರಗಣಿತ—ಡಾಕ್ಟರ್ ಹಂಟರ್ ಸಾಹೇಬರ ಕ್ಷೇತ್ರಗಣಿತ ಪ್ರಥಮ ಭಾಗದಲ್ಲಿ ಬರೆದಿರುವ ಮೇರೆಗೆ

IV (ಹುಡುಗಿಯರಿಗೆ ಮಾತ್ರವೇ)

ಹೊಲಿಗೆ—ಅಂಚು ಅಥವಾ ಗೋಟುಕಟ್ಟುವದು, ಸಾಧಾರಣ ಹೊಲಿಗೆ, ರಫೂ ಮಾಡುವದು, ಅಥವಾ ಕಸೂತಿ ಹಾಕುವದು. (ಪರೀಕ್ಷೆಗೆ ಬರುವವರು ತಮ್ಮ ಸ್ವಂತ ಪದಾರ್ಥಗಳನ್ನು ತರಬೇಕು)

ಪಾಕಶಾಸ್ತ್ರ—ಅಡಿಗೆ ಪಾತ್ರೆ ಗಳ ಉಪಯೋಗಗಳು, ಅವುಗಳನ್ನು ಶುದ್ಧ ಮಾಡುವ ವಿಧ, ಮತ್ತು ಸಾಮಾನ್ಯ ಜನರಲ್ಲಿ ಮಾಡತಕ್ಕ ಸಾಧಾರಣವಾದ ಅಡಿಗೆಯ ಸಾಮಗ್ರಿಗಳ ಪರೀಕ್ಷೆ.

6. ಪರೀಕ್ಷೆಗೆ ಬರತಕ್ಕ ಪ್ರತಿ ವಿದ್ಯಾರ್ಥಿಯು ಐಚ್ಛಿಕವಾದ ಸಂಗತಿಗಳಲ್ಲಿ ಒಂದನ್ನು ತೆಗದುಕೊಳ್ಳಬೇಕು. ಹುಡುಗಿಯರಾಗಿರುವ ಪಕ್ಷದಲ್ಲಿ ಹೊಲಿಗೆ ಮತ್ತು ಪಾಕಶಾಸ್ತ್ರವನ್ನು ಎರಡು ಸಂಗತಿಗಳಾಗಿ ತೆಗದುಕೊಳ್ಳುವದು ಅವಶ್ಯಕವಾಗಿರುತ್ತದೆ.
7. ಪರೀಕ್ಷೆಯಫಲಿತಾಂಶವು ಸಂಖ್ಯೆಗಳಿಂದ ಪರಿಗಣಿಸಲ್ಪಡುವದು. ಆಗ ಕೊಡಲ್ಪಟ್ಟ ಸಂಖ್ಯೆಯಲ್ಲಿ ಪ್ರತಿ ಒಂದು ಮುಖ್ಯಾಂಶದಲ್ಲಿಯೂ ಅರ್ಧ ಸಂಖ್ಯೆಗೆ ಕಡಮೆ ಇಲ್ಲದೆ ತೆಗದು ಒಟ್ಟು ಸಂಖ್ಯೆ ನೂರರಲ್ಲಿ ಮೂವತ್ತು ಪಾಲು ಪಡೆದವರಿಗೆ ಅಂಥವರನ್ನು ಮೊದಲನೇ ತರಗತಿಯಲ್ಲಿ ತೇರ್ಗಡೆ ಹೊಂದಿದಂತೆ ಎಣಿಸಲಾಗುವದು. ಮತ್ತು ಕೊಡಲ್ಪಟ್ಟ ಸಂಖ್ಯೆಯಲ್ಲಿ ಪ್ರತಿ ಒಂದು ಮುಖ್ಯವಾದ ಅಂಶದಲ್ಲಿಯೂ ಮೂರರಲ್ಲಿ ಒಂದುಪಾಲಿಗೆ ಕಡಮೆ ಇಲ್ಲದೆ ತೆಗದು ಒಟ್ಟು ಎಂಟರಲ್ಲಿ ಮೂರುಪಾಲು ಸಂಖ್ಯೆಯನ್ನು ಪಡೆದವರು ಎರಡನೇ ತರಗತಿಯಲ್ಲಿ ತೇರ್ಗಡೆ ಹೊಂದಿದಂತೆ ಎಣಿಸಲ್ಪಡುವರು. ಹುಡುಗಿಯರ ವಿಷಯದಲ್ಲಿ ಮೇಲೆ ನಮೂದಿಸಿದ ಭಾಗಗಳ ಪ್ರತಿ ನಾಲ್ಕರಲ್ಲಿ ಒಂದುಪಾಲು ಕಡಮೆ ಮಾಡಲ್ಪಡುತ್ತದೆ.
8. ಪರೀಕ್ಷೆಗೆ ಬರುವ ಪ್ರತಿ ವಿದ್ಯಾರ್ಥಿಯೂ (ಅಂದರೆ ಎರಡನೇತರಗತಿಯಲ್ಲಿ ಹೋಗಿರುವಂಥವರು) ಒಂದುರೂಪಾಯಿ ರುಸುಂ ಕೊಡಬೇಕಾಗಿರುತ್ತದೆ
9. ಸದರೀಪರೀಕ್ಷೆಗಾಗಿ ದರಖಾಸ್ತುಗಳನ್ನು ಆಯಾ ಪಾಠಶಾಲೆಯ ಮುಖ್ಯೋಪಾಧ್ಯಾಯರ ಮೂಲಕ ಅಚ್ಚಿನ ನಮೂನೆಯಲ್ಲಿ ಕಳುಹಿಸಿಕೊಡಬೇಕಾಗಿರುತ್ತದೆ. ಅಂಥಾ ನಮೂನೆಗಳು ಉಪಾಧ್ಯಾಯರಿಂದ ಕೊಡಲ್ಪಡುವವು. ದರಖಾಸ್ತುಗಳು ಅಕ್ಟೋಬರ್ ೩೧ನೇ ತಾರೀಖಿಗೆ ಆ ಕ್ರಮಿಸದಂತೆ ಬೆಂಗಳೂರಲ್ಲಿರುವ ಮೈಸೂರು ದೇಶೀಯ ಪರೀಕ್ಷಾ ಮಾನೇಜರವರಲ್ಲಿ ಸೇರುವಂತೆ ಕಳುಹಿಸಬೇಕಾಗಿರುತ್ತದೆ.
10. ಮೈಸೂರುದೇಶೀಯ ಪರೀಕ್ಷೆಯೊಂದಿಗೆ ಉಪಾಧ್ಯಾಯರ ಪರೀಕ್ಷೆಯೆಂಬ ಒಂದು ಪರೀಕ್ಷೆ ಇಡಲ್ಪಡುವದು, ಸದರೀ ಪರೀಕ್ಷೆಯಲ್ಲಿ ಸರಕಾರೀ ಪಾಠಶಾಲೆಯ ಪ್ರಾಯಮರಿ ಟೀಚರ್ ಗಳಿಗೆ ಅಧಿಕವಾದ ದೇಶಭಾಷೆಯ ಉಪಾಧ್ಯಾಯರುಗಳೆಲ್ಲರೂ (ಬಂದನೇ ದರ್ಜೆಯ ೮೦|| ಮಾಸ್ತರುಗಳು ಹೊರ್ತು) ಕಾಲಪ್ರಮಾಣಕ್ಕೆ ಅನುಗಾಗಬೇಕಾದ್ದರಲ್ಲಿ ತೇರ್ಗಡೆಯಾಗಬೇಕಾದ್ದು ಅವಶ್ಯಕವಾಗಿರುವದು. ನಿರ್ಣಯಿಸಲ್ಪಟ್ಟ ಮುಸುಂಕೊಟ್ಟಲ್ಲಿ ಇತರರು ಸಹ ಪರೀಕ್ಷೆಗೆ ಸೇರಿಸಲ್ಪಡುವರು.

* ದೇವನಾಗರೀ ಅಕ್ಷರಗಳಲ್ಲಿ ಬರೆಯಬೇಕು.

11. ಉಪಾಧ್ಯಾಯರ ಪರೀಕ್ಷೆಗೆ ನೇಮಿಸಲ್ಪಟ್ಟಿರುವ ಸಂಗತಿಗಳು ಯಾವವಂದರೆ—

I. ಭಾಷೆ—ಕನ್ನಡ, ತೆಲುಗು, ಅರಬಿ ಅಥವಾ ಹಿಂದುಸ್ತಾನಿ. (ಮುಖ್ಯವಾಗಿ ಉಪಾಧ್ಯಾಯರು ಬೋಧಿಸಬೇಕಾಗುವ ಭಾಷೆ)

i ಪದ್ಯಕಾವ್ಯ—ಕಠಿಣವಾದ ಪದ್ಯಕಾವ್ಯ, ವ್ಯಾಕರಣಪ್ರಶ್ನೆಗಳು ಮತ್ತು ವಾಕ್ಯವಿಭಜನೆಯ ಪ್ರಶ್ನೆಗಳು.

ii ವ್ಯಾಕರಣ—ಪೂರ್ತಿಯಾಗಿ, ಛಂದೋಲಕ್ಷಣ ಸಹಿತ.

iii ವಾಕ್ಯರಚನೆ—ಕೊಡಲ್ಪಟ್ಟ ವಿಷಯವನ್ನು ಕುರಿತು ಸರಿಯಾದ ಮತ್ತು ಒಕ್ಕೊತ್ತಾದ ಪ್ರಕರಣವಂ ದ ಬರಿಯುವಿಕೆ.

ಸರ್ಕಾರೀ ಬರವಣಿಗೆಗಳ ಕ್ರಮ.

II. ಗಣಿತಶಾಸ್ತ್ರಗಳು.

i ಗಣಿತ-ಪೂರ್ತಿಯಾಗಿ
ii ಬೀಜಗಣಿತ-ಸಾಧಾರಣ ಸಮೀಕರಣಗಳವರಿಗೆ.
} ಇಂಗ್ಲಿಷಅಂಕೆಗಳನ್ನು ಉಪಯೋಗಿಸಬೇಕು.

iii ರೇಖಾಗಣಿತ—ಯೂಕ್ಲಿಡ್ ೧ನೇ ಪುಸ್ತಕ ಮತ್ತು ಅದರ ಮೇಲಿನ ಪ್ರಶ್ನೆಗಳೊಡನೆ.

III. ಭೂಗೋಳ { ಭೂಗೋಳದ ಪೂರ್ಣ ಪರಿಚಯ ವಿವರಗಳು.
ಮತ್ತು ಚರಿತ್ರೆ { ಇಂಡ್ಯಾದೇಶದ ಚರಿತ್ರೆ)

IV. ಶಾಸ್ತ್ರ—ಸಾಧಾರಣವಸ್ತುಗಳ ಸ್ವಭಾವ ಗುಣಗಳ ಸಂಯೋಜನ ಮತ್ತು ಉಪಯೋಗಗಳು. ಅಂದರೆ ಜನರು ಸಸ್ಯಲೋಕಾದಿಗಳನ್ನು ಕುರಿತು ಚಿತ್ರಗಳನ್ನಾಗಲಿ ಪದಾರ್ಥಗಳನ್ನಾಗಲಿ ಮುಂದಿಟ್ಟು ಬೋಧಿಸಬೇಕಾದ್ದರ ರೀತಿಯು.

V. ಪಾಠಶಾಲೆಯನ್ನು ನಡಿಸುವ ಕ್ರಮ—ಸಾಧಾರಣವಾದ ಪಾಠಗಳ ಬೋಧನಾಕ್ರಮ, ತರಗತಿಗಳನ್ನು ಏರ್ಪಡಿಸುವಿಕೆ, ಆಡಳಿತೆಯ ಕ್ರಮ, ರಿಜಿಸ್ಟರುಗಳನ್ನು ಇಡುವರೀತಿ ಮತ್ತು ಸರ್ಕಾರಿ ರಿಪೋರ್ಟುಗಳಿಂದ ಶಾಲಾಕಾರ್ಯಕ್ಕೆ ಬೇಕಾಗುವ ವಿಷಯಗಳನ್ನು ತಿಳಿಯುವದು.

12. ಪರೀಕ್ಷೆಗೆ ಬರುವವರು ಮುಖ್ಯವಾದ ಪ್ರತಿಯೊಂದು ವಿಷಯದಲ್ಲಿಯೂ ಅರ್ಧಕ್ಕೆ ಕಡಮೆಯಿಲ್ಲದಂತೆಯೂ ಒಟ್ಟು ಸಂಖ್ಯೆಗಳ ಪ್ರತಿ ನೂರರಲ್ಲಿ ಎರಡುಭಾಗಗಳಿಗೆ ಕಮ್ಮಿಯಿಲ್ಲದಂತೆಯೂ ಸಂಖ್ಯೆಗಳನ್ನು ಪಡೆಯಬೇಕು
13. ಸರ್ಕಾರ್ ಪಾಠಶಾಲೆಗಳಲ್ಲಿಯೂ ಮತ್ತು ಸಹಾಯ ಪಡೆಯುವ ಪಾಠಶಾಲೆಗಳಲ್ಲಿಯೂ ಇರುವ ಉಪಾಧ್ಯಾಯರು ಈಪರೀಕ್ಷೆಗೆ ಪ್ರಥಮತಃ ಉಚಿತವಾಗಿ ಬರಬಹುದು. ಪರಂತು ತೇರ್ಗಡೆಯಾಗದವರು ಅನಂತರ ಪರೀಕ್ಷೆಗೆ ಬರಲು ಒಂದು ರೂಪಾಯಿ ಯಂತೆ ರುಸುಂ ತೆರಬೇಕು. ಇತರರು ಒಂದು ರೂಪಾಯಿ ರುಸುಂ ಕೊಡತಕ್ಕದ್ದು.
14. ಉಪಾಧ್ಯಾಯರ ಪರೀಕ್ಷೆಯದಕ್ಕೆ ದರಖಾಸ್ತುಗಳು ಅಕ್ಟೋಬರ್ ತಿಂಗಳ ೩೧ನೇ ತಾರೀಖಿಗೆ ಮೊದಲು ಅಚ್ಚು ಹಾಕಲ್ಪಟ್ಟಿರುವ ನಮೂನೆಯಲ್ಲಿ ಮೈಸೂರು ದೇಶೀಯ ಪರೀಕ್ಷೆಯ ಮಾನೇಜರವರಿಗೆ ಕಳುಹಿಸಲ್ಪಡತಕ್ಕದ್ದು. ಸದರೀ ನಮೂನೆಗಳು ಡೈರೆಕ್ಟರ ಆಫೀಸ್ನಿಂದ ಕೊಡಲ್ಪಡುವವು.

ನೋಟೀಸ್.

ನಮ್ಮ ಚಂದಾದಾರರಿಗೆ ಇದರಿಂದ ನಾವು ಕ್ಷಮಿಸಬೇಕಾದ್ದೇನೆಂದರೆ,—

ಇದುವರಿವಿಗೆ ಅನೇಕಾವರ್ತಿ, ನಾನಾವಿಧದಿಂದ ಚಂದಾ ಬಾಕಿಗಳನ್ನು ಕಳುಹಿಸಿ ಕೊಡಬೇಕೆಂದು ನಮ್ಮ ಚಂದಾದಾರರನ್ನ ನಾವು ಕೇಳಿಕೊಂಡದ್ದು ಪ್ರಸಿದ್ಧವಾಗಿದೆಯಷ್ಟೆ, ಅಂತಾ ನಮ್ಮ ಪ್ರಾರ್ಥನೆಯನ್ನು ಪಾಲಿಸತಕ್ಕವರ ಸಂಖ್ಯೆ ಅತ್ಯಲ್ಪವಾಗಿ ಹೋದದರಿಂದ ಇತರ ಬಾಕೀದಾರರ ವಿಷಯದಲ್ಲಿ ಈಗ ನಾವು ಅವಲಂಬಿಸಿರುವ ಮಾರ್ಗ ಯಾವದಂದರೆ—

೧ನೇ—ಸನ್ ೧೮೮೩ ಮುತ್ತು ೮೪ನೇ ಇಸವಿ ಬಾಕೀದಾರರಮೇಲೆ ದಾವೆ.

೨ನೇ—ಸನ್ ೧೮೮೫ನೇ ಇಸವಿ ಬಾಕೀದಾರರಿಗೆ ಮೊದಲು ಲಾಯರನೋಟಿಸ.

೩ನೇ—ಸನ್ ೧೮೮೬ನೇ ಇಸವಿಗೆ ಇದುವರಿವಿಗೆ ಚಂದಾ ಕಳುಹಿಸದೆ ಇರತಕ್ಕವರಿಗೆ ಜ್ಞಾಪಕಾರ್ಥ ನೋಟಿಸು.

ಇಂತಾ ಕ್ರಮನಡಿಸಬೇಕಾಗಿ ಬಂದದಕ್ಕಾಗಿ ಬಹಳ ವಿಷಾದಿಸುತ್ತೇವೆ.

೧೭—೭—೮೬ } ಟಿ. ಸಿ. ಶ್ರೀನಿವಾಸಾಚಾರ್,

BANGALORE:—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಶಾಮವಿವಿಧವಸ್ತುವ್ಯಕ್ತಿವಗಮಾರ್ಗ್ಗ ಕರ್ಣ್ಣಾಟಕಪ್ರಕಾಶನಪರಾಭಿದಾಪ್ರಥಿತಸಾಮಿತೀಕೊಭಿತಾ ‖ ಮೃಗಾಂಕಹಿತವಾಸರೆನಿಹಿತಮುದ್ರಣಾಸಜ್ಜನೈರ್ದ್ದಿಶಾಸುಪರಿದೃಶ್ಯತಾದಿಶತಿಮಾನಸಂಸುಮುದಂ

Vol. XIII.] BANGALORE—MONDAY, JULY 26, 1886. [No. 30.

ಸಂಪುಟ ೧೩.] ಬೆಂಗಳೂರು:—ಸನ್ ೧೮೮೬ನೇ ಇಸವಿ ಜೂಲೈ ೨೬ನೇ ತಾರೀಖ್ ಸೋಮವಾರ. [ಸಂಚಿಕೆ ೩೦.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ತೆಗೆದುಕೊಳ್ಳತಕ್ಕವರಿಗೆ, ವರುಷ ೧ಕ್ಕೆ	೧೦—೦—೦
ಇಂಗ್ಲಿಷನ್ನು ಮಾತ್ರ ತೆಗೆದುಕೊಳ್ಳತಕ್ಕವರಿಗೆ ವರುಷ ೧ಕ್ಕೆ	೬—೦—೦
ಕನ್ನಡವನ್ನು ಮಾತ್ರ ತೆಗೆದುಕೊಳ್ಳ ತಕ್ಕವರಿಗೆ ಮಾಮೂಲ್ ಮೇರೆ ವರುಷಕ್ಕೆ.	೬—೦—೦
ಬಿಡಿ ೧ಕ್ಕೆ	೦—೮—೦

ಷರಾ.—ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ, ಕನ್ನಡ ಭಾಗವನ್ನಾಗಲಿ ಅಥವಾ, ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾಹಣವನ್ನು ಮುಂಗಡವಾಗಿಯೇ ಸಲ್ಲಿಸಬೇಕು.

ಪ್ರಕಟನೆಯ ರಿವಾಜಿ.

ಮೊದಲನೇದಫಾ ಪಂಕ್ತಿ	೧ಕ್ಕೆ	೦—೨—೦
ಎರಡನೇದಫಾ ಪಂಕ್ತಿ	೧ಕ್ಕೆ	೦—೧—೦

NOTICE TO SUBSCRIBERS.

ಇದರ ಕೆಳಗೆ ಬರೆದಿರುವ ಅಂಶಗಳಿಗೆ ನಮ್ಮ ಚಂದಾದಾರರೆಲ್ಲರು ಮುಖ್ಯವಾಗಿ ಗಮನಕೊಡಬೇಕೆಂದು ಕೋರುತ್ತೇವೆ ಹೇಗೆಂದರೆ:—

೧. ಕರ್ಣಾಟಕ ಪ್ರಕಾಶಿಕೆಯ ಚಂದಾಹಣಗಳನ್ನಾಗಲಿ ಇತರ ಕೆಲಸದ ಹಣಗಳನ್ನಾಗಲಿ ನಮಗೆ ಕಳುಹಿಸತಕ್ಕವರು ಮನಿಆರ್ಡರ್ ಮೂಲಕ ಕಳುಹಿಸಿದಲ್ಲಿ ಅಂಥಾ ಮನಿಆರ್ಡರ್ ಫಾರಮ್ ಹಿಂಭಾಗದ ಕೂಪನ್ನಿನಲ್ಲಿ ತಮ್ಮ ಹೆಸರುಗಳನ್ನೂ ಯಾವ ಬಾಬಿಗೆ ಆ ಹಣವನ್ನು ಕಳುಹಿಸಿರುವರೆಂಬದನ್ನೂ ಸ್ಪಷ್ಟವಾಗಿ ತಿಳಿಸತಕ್ಕದ್ದು. ಹಾಗೆ ಮಾಡದೆ ಹೋಗುವದರಿಂದ ಹೆಸರುಗಳು ಗೊತ್ತಾಗದೆ ಮನಿಆರ್ಡರ್ ಗಳು ವಾಪಸು ಹೋಗುವ ಸಂಭವವುಂಟು.

೨. ನೋಟುಗಳನ್ನು ಕಳುಹಿಸತಕ್ಕವರು ಅರ್ಧನೋಟನ್ನು ಕಳುಹಿಸಿದ್ದು ಉಳಿದ ಅರ್ಧನೋಟಿನ ವಿಷಯದಲ್ಲಿ ಸಂಶಯವಿರುತ್ತದೆ. ಹಾಗೆ ಮಾಡದೆ ಹೊರತು ಕಳುಹಿಸುವ ಅರ್ಧನೋಟು ಕೈಸೇರಿದ ಬಗ್ಗೆ ನಮ್ಮ ಕಾಗದವನ್ನು ನೋಡದ ಹೊರತು ಬಾಕೀ ಅರ್ಧನೋಟನ್ನು ಕಳುಹಿಸತಕ್ಕದ್ದು.

೩. ಸ್ಟಾಂಪುಗಳನ್ನು ಕಳುಹಿಸತಕ್ಕವರು, ರೂ|| ೧ಕ್ಕೆ ೧ಅಣೆಯ ಮೇರೆ ಡಿಸ್ಕೌಂಟ್ ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಧಅಣೆಯಿಂತ ಜಾಸ್ತಿ ಕ್ರಯವುಳ್ಳ ಸ್ಟಾಂಪುಗಳನ್ನು ಕಳುಹಿಸಕೂಡದು.

೪. ಈ ಪತ್ರಿಕೆಯ ಸಾಲ್ ಜನವರಿ ತಿಂಗಳಲ್ಲಿ ಪ್ರಾರಂಭವಾಗಿ ಡಿಸೆಂಬರ್ ಆಖೈರಿಗೆ ಪೂರೈಸಿ ಬರುವದರಿಂದ ಈ ಮಧ್ಯೆ ಯಾವ ತಿಂಗಳಲ್ಲಿ ಪತ್ರಿಕೆಗೆ ಚಂದಾದಾರರಾದಾಗ್ಯೂ ಅವರು ಆ ತಿಂಗಳು ಮೊದಲು ಡಿಸೆಂಬರ್ ಆಖೈರವರಿಗೆ ಆಗುವ ಕಾಲಕ್ಕೆ ತಿಂಗಳೊಂದಕ್ಕೆ ಬೀಳುವ ಮೇರೆ ಚಂದಾಹಣ ಕಳುಹಿಸಿದರೆ, ಹಿಂದಿನ ಸಂಚಿಕೆಗಳ ಬಾಕೀ ಹಣ ಕಳುಹಿಸಲು ಅವಶ್ಯಕವಿಲ್ಲವು.

NOTICE.

VAIDYASARA SANGRAHA

☞ *Price including Postage, Rs. 5-0-0*

ವೈದ್ಯಸಾರ ಸಂಗ್ರಹ.

ಈ ಗ್ರಂಥಕ್ಕೇ ಇನ್ನುಳ್ಳವರು ಕೊಂಬಂಗಿನೊಡನೆ ಈ ಕೆಳಗೆ ಕಾಣಿಸಿರತಕ್ಕ ವಿಳಾಸಕ್ಕೆ ಬರೆದು ಕೊಳ್ಳಬಹುದು. ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಕೊಂಬಂಗುಳ್ಳ ಪತ್ರಗಳಿಗೆ ಉತ್ತರ ನೀಡಲ್ಪಡಲಾರದು.

ಗ್ರಂಥದ ಮೊಬಲಗು ಈ ಕೆಳಗೆ ತೋರಿಸುತ್ತೇವೆ.

ಇದರ ಕ್ರಯ	ರೂ||	೫—೦—೦
ಪಾಂಕಿಂಗ್ ಮತ್ತು ಅಂಚೆಖರ್ಚು		೦—೬—೦

ಟಿ. ಬಿ. ವೆಂಕಟಾಚಾರ್, ಅಸ್ಪತ್ರೆಹೋಸ್, ಬೆಂಗಳೂರು.

ನೋಟೀಸ್.

ಇದರ ಕೆಳಗೆ ವಿವರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ಕ್ರಯಕ್ಕೆ ಸಿಕ್ಕುವವು,—

ಕನ್ನಡ ಟೀಕಾಸಹಿತವಾದ ಸಂಸ್ಕೃತ ಗ್ರಂಥಗಳು.

ಕಾಲಾಮೃತ. ...	೧—೮—೦
ಮುಹೂರ್ತದರ್ಪಣ. ...	೦—೧೨—೦
ಛಪ್ಪನ್ನ (ಷಟ್ಪಂಚಾಶಿಕ್) ...	೦—೩—೦
ಜಾತಕಪ್ರಕೀರ್ಣ ಮುಹೂರ್ತ. ...	೦—೫—೦
ಬಾಲರಾಮಾಯಣ ...	೦—೪—೦
ಶತಶ್ಲೋಕೀ	೦—೧೮—೦
ಶಿವಾನಂದಲಹರಿ. ...	೦—೭—೦
ಬಾಲಗ್ರಹ.	೦—೨—೦
ವೈದ್ಯಸಾರಸಂಗ್ರಹ ...	೫—೦—೦

ಕನ್ನಡ ಗ್ರಂಥಗಳು.

ಹರಹರವಿಲಾಸ. ...	೦—೭—೦
ಶಕುಂತಲಾಪರಿಣಯ. ...	೦—೮—೦
ಮಿತ್ರದಾಯಕಲ್ಯಾಣ ...	೦—೬—೩—೦
ಸುಧಾಮುಚರಿತ್ರೆ.	೦—೨—೬
ಬಬ್ರುವಾಹನನಾಟಕ. ...	೦—೮—೦
ಅಭಿಮನ್ಯುನಾಟಕ. ...	೦—೨—೦
ಶ್ರೀಕಾಳಿದಾಸಚರಿತ್ರೆ. ...	೦—೨—೬
ಪಂಚತಂತ್ರದ ಕಥಾವಳಿ. ...	೦—೪—೦
ಕಾಳೀಯ ಮರ್ದನ. ...	೦—೩—೦
ಏಕಾದಶಿ.	೦—೨—೦
ಹರಿಶ್ಚಂದ್ರ ಕಥಾಸಾರ. ...	೦—೦—೩
ಇಂಗ್ಲಿಷ್ ಕನ್ನಡ ಸೇರಿದ ಮಹಮ್ಮದ್ ಗ್ರಾಮರ್	೧—೦—೬
ಜ್ಞಾನಸಿಂಧು, ...	೨—೦—೦
ಗ್ರಾಂಥಿಕವಿಲಾಸ. ...	೦—೧೨—೦
ಶುಕಸಪ್ತತಿ ...	೩—೮—೬
ಕೃಷ್ಣದೇವೇಂದ್ರವಿಜಯ. ...	೩—೮—೬
ಅರೇಬಿಯನ್ ನೈಟ್ಸ್ ಎಂಬ ಕಥೆ ೧ನೇ ಸಂಚಿಕೆ. ...	೦—೮—೦
ಡಿಟೋ ೨ನೇ ಸಂಚಿಕೆ.	೦—೮—೦
ಶಬರಶಂಕರವಿಲಾಸ. ...	೦—೮—೦

ಸಂಸ್ಕೃತ ಮೂಲಗ್ರಂಥಗಳು.

ವಿಷ್ಣುಸಹಸ್ರನಾಮ. . .	೦—೫—೦
ಲಲಿತಾಸಹಸ್ರನಾಮ. ...	೦—೨—೯
ಕೃಷ್ಣಕರ್ಣಾಮೃತ. ...	೦—೨—೯
ಬಾಲರಾಮಾಯಣ ...	೦—೦—೬
ಶ್ರೀರಾಮಕರ್ಣಾಮೃತ. ...	೦—೩—೬
೧ ಕಾಂಡ ಅಮರ. ...	೦—೧—೦

ಮೇಲೆ ಸೂಚಿಸಿದ ಬೆಲೆಗಳಲ್ಲಿ ಅಂಚೆಖರ್ಚು ಸೇರಿರುವದಿಲ್ಲವು ಷರಾ.—ಕ್ರಯಕ್ಕೆ ಬೇಕಾದವರು ಬರೆದುಕೊಳ್ಳಬಹುದು. ಪುಸ್ತಕದ ಕ್ರಯದ ಹಣವಲ್ಲದೆ ಬೇಕಾದಷ್ಟು ಅಂಚೆ ಮೊಬಲಗು ಕಳುಹಿಸತಕ್ಕವರು ಬಾಂಗಿ ಪಾರ್ಸಲ್ ಸಹ ಸೇರಿಸಿ ಕಳುಹಿಸಬೇಕು. ಇಲ್ಲವಾದರೆ ವಾಲ್ಯು ಪೇಯಬಲ್ ಪಾರ್ಸಲ್ ಬತ್ತಿಗೆ ಬಾಂಗೀದಾರ್‌ ಕೊಡಬೇಕಾಗುವದು.

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇದಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿತೆಗೆದುಕೊಳ್ಳಲ್ಪಡುವದು.

ಪ್ರಕಟನೆ.

ಬೆಂಗಳೂರು ಷಹರ್ ಮ್ಯೂನಿಸಿಪಾಲಿಟಿ.

ಸನ್ ೧೮೮೬ನೇ ಇಸವಿ ಜೂಲೈ ೩೦ನೇ ತಾರೀಖು ಶುಕ್ರವಾರದ ದಿನ ಪ್ರಾತಃಕಾಲ ೭½ ಘಂಟೆಗೆ, ಸಿಟಿ ಮ್ಯೂನಿಸಿಪಲ್ ಕಮಿಷನರ್‌ಗಳು, ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡದಲ್ಲಿನ ತಮ್ಮ ಆಫೀಸಿನಲ್ಲಿ ಆರ್ಡಿನೆರಿ ಮೀಟಿಂಗ್ ಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳ ಪಟ್ಟಿ.

೧. ಸನ್ ೧೮೮೬ನೇ ಇಸವಿ ಜೂನ್ ತಿಂಗಳ ಬಾಬತು ಚಾಲ್ತೀ ನಗದು ಜಮಾಖರ್ಚು ಲೆಕ್ಕಗಳು, ಸನ್ ೧೮೮೬ನೇ ಜೂನ್ ತಿಂಗಳಲ್ಲಿ ಕಾಮಗಾರೀಗಳು ಎಷ್ಟರಮಟ್ಟಿಗೆ ನಡೆಯಿತೆಂಬದನ್ನು ಕುರಿತ ರಿಪ್ರೋರ್ಟ್, ಮತ್ತು ಮರಣ ಲೆಕ್ಕಗಳು.

೨. ಮ್ಯೂನಿಸಿಪಲ್ ತೋಟದಲ್ಲಿ ಕಟ್ಟಬೇಕೆಂದು ಯೋಚಿಸಲ್ಪಟ್ಟಿರುವ ಬ್ಯಾಂಡ್ ಸ್ಟ್ಯಾಂಡಿನ ಆಗುವ ಅಂದಾಜು ಮತ್ತು ಅದರ ಪ್ಲ್ಯಾನ್.

೩. ಓಬಯ್ಯನವರ ಗಲ್ಲಿಯ ವಾಸಸ್ಥರು ಸದರೀ ಗಲ್ಲಿಯನ್ನು ಬದಲಾಯಿಸಬೇಕೆಂದು ಕೊಟ್ಟ ಪಿಟೀಷನ್ ಮೇಲೆ, ೨ನೇ ಡಿವಿಜನ್ ಮ್ಯೂನಿಸಿಪಲ್ ಕಮಿಷನರಾದ ಮೆ|| ಹಾಜಿ ಅಬಿದ್ ಷರೀಫ್ ಸಾಹೇಬರು ಮಾಡಿದ ರಿಪ್ರೋರ್ಟ್.

೪. ಅವಿನ್ಯೂರೋಡ್ ಎಂಬ ರಸ್ತೆಯಿಂದ ಗಾಣಿಗರಪೇಟೆಗೆ ಹೊಸದಾಗಿ ಒಂದು ರಸ್ತೆಯನ್ನು ಹಾಕತಕ್ಕ ಬಗ್ಗೆ ಪಡೆಯಬೇಕಾಗಿರುವ ಕಟ್ಟಡಗಳು ಮತ್ತು ಜಮೀನುಗಳಿಗೆ ಕೊಡಬೇಕಾದ ಈಡು ಮೊಬಲಗನ್ನು ತೋರಿಸುವ ಪಟ್ಟಿ.

೫. ಕೋಟೆಯ ಆಚೆಯಿರುವ ಕೊರಚರಪಾಳ್ಯವೆಂಬ ಗ್ರಾಮದಲ್ಲಿ ಗೋಮಾಂಸ ಅಂಗಡಿ ಇಡುವದಕ್ಕಾಗಿ ಅಬ್ದುಲ್ಲಾ ಸಾಹೇಬ್ ಎಂಬವರು ಬರೆದುಕೊಂಡ ಅರ್ಜಿ.

ಬೆಂಗಳೂರು, ೨೧ನೇ ಜೂನ್ ೧೮೮೬.

A. SRINIVASA CHARLU,
Vice-President.
City Municipal Commission.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JULY 26, 1886.

೧೮೮೬ನೇ ಜೂಲೈ ೨೬ನೇ ತಾ|| ಸೋಮವಾರ.

THE DEWANSHIP OF MYSORE

ಮೊನ್ನೆ ಮಾಡಕೂರ್ ೨೧ನೇ ತಾರೀಖ್ ಬುಧವಾರದ ಒಳದೇಶದ "ಈವಿನಿಂಗ್ ಮೇಯಿಲ್"ಎಂಬ ಇಂಗ್ಲಿಷ್ ಪತ್ರಿಕೆಯು ಈಗಲಿಂದ ಮುಂಜಾಗ್ರತೆ ಪಡುತ ಮೈಸೂರು ಸಂಸ್ಥಾನದ ಪ್ರಕೃತ ದಿವಾನರಾದ ಮ|| ಶೇಷಾದ್ರಿ ಅಯ್ಯರವರ ವರ್ತನವನ್ನೂ ಅವರ ರಾಜ್ಯತಂತ್ರಕ್ರಮವನ್ನೂ ಕುರಿತು ಕೆಲವು ಅಂಶಗಳನ್ನರುಹಿ, ಅದರಮೇಲೆ ಈಗಿನ ದಿವಾನರವರ ಉದ್ಯೋಗ ಕಾಲಾನಂತರ ಅವರು ಹಿಂಬಾಲಿಸಲಿಕ್ಕೆ ಯಾರು ಅರ್ಹರೆಂಬ ವಿಷಯವಾಗಿಯೂ ಈ ಸಂಸ್ಥಾನದ ದಿವಾನಗಿರಿಯು ಖಂಡಿತವಾಗಿ ಐದು ವರುಷಗಳಿಗೊಂದಾವರ್ತಿ ಬದಲಾಯಿಸಲ್ಪಡತಕ್ಕದ್ದೆಂಬ ಷರತ್ತನ್ನು ಅನುಸರಿಸಿ ಏರ್ಪಟ್ಟ ಕಾಲ ಪರಿಮಾಣವು ಪೂರೈಸಲಿಕ್ಕೆ ಇನ್ನು ೧೯ ತಿಂಗಳೇ ಬಾಕಿ ನಿಂತಿರುವದರಿಂದ ಇಷ್ಟರಲ್ಲಿಯೇ ಸದರೀ ನಿಶಯವು ವ್ಯವಸ್ಥೆಯಾಗತಕ್ಕದ್ದಾಗಿದೆಯೆಂಬದಾಗಿಯೂ ತಿಳಿಸಿರುತಿದೆ. ಪ್ರಕೃತ ದಿವಾನರಾದ ಮೆ|| ಶೇಷಾದ್ರಿ ಅಯ್ಯರವರು, ೧೮೮೩ನೇ ಇಸವಿ ಫೆಬ್ರವರಿ ೧೨ನೇ ತಾರೀಖಿನಲ್ಲಿ ಸಾಬಕ್ ದಿವಾನರಾದ ಮೆ|| ರಂಗಾಚಾರ್ಯರವರ ಸ್ಥಾನದಲ್ಲಿ ನೌಕರರನ್ನಾಗಿ ನೇಮಿಸಲ್ಪಟ್ಟದ್ದರಿಂದ ೧೮೮೮ನೇ ಇಸವಿ ಫೆಬ್ರವರಿ ಆಖೈರೊಳಗಾಗಿ ಬೇರೇ ದಿವಾನರ ನೌಕರರಾತಿ ವಿಷಯವು ಸಂಪೂರ್ಣವಾಗಿ ವ್ಯವಸ್ಥೆಯಾಗಬೇಕಾಗಿರುತಿದೆ. ಮುಂದಿನ ದಿವಾನರವರ ನೌಕರರಾತಿಗೆ ಇನ್ನೂ ೧೯ ತಿಂಗಳ ಕಾಲ ಕಳೆಯಬೇಕಾಗಿರುವದರಿಂದ ಈಗ ಅದರವಿಚಾರವು ಅಕಾಲಿಕವಾದದ್ದೆಂದು ಯಾರಾದರೂ ಭಾವಿಸಬಹುದು. ಪರಂತು, ವಿಷಯ ಗೌರವವನ್ನಾಲೋಚಿಸಲಾಗಿ ಅದರವಿಚಾರಕ್ಕೆ ಇದು ಸಕಾಲವೆಂತಲೇ ಎಣಿಸುವೆವು. ಹಾಗೆ ಭಾವಿಸಲಿಕ್ಕೆ ನಮಗೆ ಪ್ರಂಟಾಗಿರುವ ಕಾರಣಗಳು, ಈ ಸಂಸ್ಥಾನದ ಮತ್ತು ಪ್ರಜೆಗಳ ಪ್ರಯೋಜನವನ್ನಾಲೋಚಿಸಿ ಮೇಲೆ ತಿಳಿಸಲ್ಪಟ್ಟ ಐವರುಷಗಳ ಕಾಲ ನಿಯಮವು ಪ್ರಾಯಶಃ ತಪ್ಪಿಸಲ್ಪಟ್ಟು ಪ್ರಕೃತ ದಿವಾನರೇ ಇನ್ನು ಕೆಲವು ಕಾಲ ನೌಕರಿಯೊಳಿರುವಂತೆ ಆಗಬಹುದೆಂದು ಎಣಿಸತಕ್ಕಂಥಾವರನೇ ... ಗೂ ಸ್ಪಷ್ಟವಾಗಿ ತಿಳಿಯಬರಬಹುದು. ಸಾಬಕ್ ಮೆ|| ರಂಗಾಚಾರ್ಯರ ಆಪ್ತರಾಗಿಯೂ ಪೋಷಕರಾಗಿಯೂ ಇದ್ದ ಸರ್. ಜೇಂಸ್ ಗಾರ್ಡನ್ನವರು ಮೈಸೂರು ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾಗಿದ್ದವರಿಂದಲೂ, ಅಂತಾ ಸ್ನೇಹಾಭಿಮಾನಗಳೇ ಮೆ|| ರಂಗಾಚಾರ್ಯರವರು ಈ ಸಂಸ್ಥಾನದ ಪ್ರಥಮ ದಿವಾನರಾಗಿ ನೌಕರರಾಗಲಿಕ್ಕೆ ಕಾರಣಗಳಾದವಲ್ಲದೆ ಸದರೀ ಸ್ನೇಹಾಭಿಮಾನಗಳು, ಮೆ|| ರಂಗಾಚಾರ್ಯರವರ ಕಾಲಾನಂತರ, ಸರ್ ಜೇಂಸ್ ಗಾರ್ಡನ್ನವರ ಇಷ್ಟಾನುವರ್ತಿಯಾಗಿಯೂ ಕೇವಲ ಅಂತರಂಗರಾಗಿಯೂ ಇದ್ದ ಮೆ|| ಶೇಷಾದ್ರಿ ಅಯ್ಯರವರಲ್ಲಿ ವ್ಯಾಪಿಸಿತು. ೧೮೮೩ನೇ ಇಸವಿ ಜನವರಿ ೨೦ನೇ ತಾರೀಖಿನೊಳು ಮದರಾಸಿನಲ್ಲಿ ಮಿಸ್ಟರ್ ರಂಗಾಚಾರ್ಯರವರು ಕಾಲಗತಿಯನ್ನೈದಲು, ಅದು ಮೊದಲು ಮೂರುವಾರಗಳೊಳಗಾಗಿ, ಅಂದರೆ, ಅದೇ ಇಸವಿ ಫೆಬ್ರವರಿ ೧೨ನೇ ತಾರೀಖಿನಲ್ಲಿ ಮೆ|| ಶೇಷಾದ್ರಿಅಯ್ಯರವರು ದಿವಾನರಾಗಿ ನೌಕರರನ್ನಾಗಿ ನೇಮಿಸಲ್ಪಟ್ಟರು. ಈ ಕಾರ್ಯವು ಬೆಂಗಳೂರಲ್ಲಿ ಮಹಾರಾಜರವರ ಅರಮನೆಯಲ್ಲಿ ಪರಿಕ್ಲುಪ್ತರಾದ ಕೆಲವು ಮಂದಿ ನೇಟಿವ್ ಮತ್ತು ಯೂರೋಪಿಯನ್ ಆಫಿಸರರ ಮುಂದೆ ಅತಿಗೋಪ್ಯವಾಗಿ ನಡೆದುಹೋದದರಿಂದ ಇದಂ ಕೇಳಿದಕೂಡಲೇ ಎಲ್ಲರೂ ಅತ್ಯಾಶ್ಚರ್ಯಪಟ್ಟರು. ಇಂತಾ ಪ್ರಬಲ ಸಂದರ್ಭಗಳಲ್ಲಿ ಬಹಿರಂಗವಾಗಿ ನಡೆಯಬೇಕಾದ ಕ್ರಮಗಳೊಂದೂ ನಡೆಯಲಿಲ್ಲವು. ಏತನ್ಮಧ್ಯೆ ರಂಗಾಚಾರ್ಯರ ತರುವಾಯ ದಿವಾನಗಿರಿಗೆ ಬರತಕ್ಕವರ್ಯಾರೆಂಬ ವಿಷಯವಂ ಕುರಿತು ಇಲ್ಲಿನ ಮತ್ತು ಮದರಾಸ್ ವೃತ್ತಾಂತಪತ್ರಿಕೆಗಳೊಳು ವಿಚಾರ ನಡೆಯುತಲೂ, ದಿವಾನಗಿರಿಗೆ ಮೈಸೂರ್ ದೇಶೀಯರ ಹಕ್ಕುದಾರಿಗಳನ್ನು ಕುರಿತು ಇಂಡ್ಯಾಗವರ್ನಮೆಂಟಿನವರಿಗೆ ಟೆಲಿಗ್ರಾಂಗಳು ಕಳುಹಿಸಲ್ಪಡುತಲೂ ಇದ್ದವು. ಇಂಡ್ಯಾಗವರ್ನಮೆಂಟಿನವರು ಮೆ|| ಶೇಷಾದ್ರಿಅಯ್ಯರವರನ್ನು ದಿವಾನರಾಗಿ ನೌಕರನ್ನಾಗಿ ನೇಮಿಸಬೇಕೆಂಬದು ಮಹಾರಾಜರವರ ಅ

ಪ್ರೇರಿತವಾದ ತಾತ್ಪರ್ಯವೇಯೆಂದು ತಂತಿಮೂಲಕ ಬ್ರಿಟಿಷ್‌ರೆಸಿಡೆಂಟರು ಕೇಳಲಾಗಿ ಅದಕ್ಕೆ ಮಹಾರಾಜರು ಹಾಗೆಯೇ ಅಭಿಪ್ರಾಯಪಟ್ಟರೆಂಬದಾಗಿ ಜವಾಬುಕೊಟ್ಟಂತೆ ಕೆಲವುಕಾಲದ ಮೇಲೆ ಹೊರಗಾಯಿತು. ಪರಂತು ಇಂಡ್ಯಗವರ್ನ್‌ಮೆಂಟಿನವರು ಹೊಸದಿವಾನರವರ ನೇಮಕರಾತಿಯನ್ನು ಅಂಗೀಕರಿಸಿ ತರುವಾಯ ಬ್ರಿಟಿಷ್‌ರೆಸಿಡೆಂಟರಿಗೆ ಬರೆದ ಒಂದು ಡಿಸ್‌ಪ್ಯಾಚ್‌ನಲ್ಲಿ, ಮುಂದೆ ಇಂತಾಸಂದರ್ಭವುಂಟಾಗುವಲ್ಲಿ ವಿದ್ಯಾವಂತರಾದ ಏರ್ ಮೈಸೂರು ದೇಶೀಯರ ಹಕ್ಕುದಾರಿಗಳು ಮಹಾರಾಜರವರ ಪರ್ಯಾಲೋಚನೆಗೆ ವಿಷಯವಾಗತಕ್ಕದ್ದೆಂದು ಎಚ್ಚರಿಸಿದರು. ಇಷ್ಟರ ವಿಚಾರಗಳು ನಡೆದಮೇಲೆಯೇ ಪ್ರಕೃತದಿವಾನರು ನೇಮಕರಾದದರಿಂದ ಅಂತಾವಿಚಾರಗಳನ್ನು ಮೈಸೂರು ದೇಶೀಯರು ಇಷ್ಟುತ್ವರೆಯಲ್ಲಿಯೇ ಮರೆತಿರಲಾರರು. ದಿವಾನಗಿರಿಗೆ ಮೇಲೆ ತಿಳಿಸಿದ ಐದುಸಂವತ್ಸರಗಳಕಾಲ ನಿಯಮವಿದ್ದಾಗ್ಯೂ ಉನ್ನತಾಧಿಕಾರವನ್ನು ಒಂದುದಫಾ ಕೈಗೊಂಡದರಿಂದ ಪ್ರಾಯಶಃ ಮುಂದೆಯೂ ಹಾಗೆಯೇನಡೆದುಬರಬಹುದೆಂಬ ಭಾವವು ಪ್ರಕೃತದಿವಾನರವರಿಗೂ ಅವರಮಿತ್ರರಿಗೂ ಆಪ್ತರಿಗೂ ಉಂಟಾಗಿರಬಹುದು. ಯಾವಕಾಲದಲ್ಲಿ ಯಾವ ಕಾರ್ಯ ಕಾರಣಗಳದೆಸೆಯಿಂದ ಮೆ|| ಶೇಷಾದ್ರಿ ಅಯ್ಯರವರಿಗೆ ಪ್ರಕೃತಉನ್ನತಪದವಿಯು ಪ್ರಾಪ್ತವಾಯಿತೋ ಅಂತಾಕಾರ್ಯಕಾರಣಗಳು ಈಗಲೂ ಇರುವಂತೆ ಹೇಳಲಾಗದು. ಸರ್. ಜೇಂಸ್ ಗಾರ್ಡನ್‌ಯವರೇ ಆತನಕ ಬ್ರಿಟಿಷ್ ರೆಸಿಡೆಂಟರಾಗಿದ್ದ ಪಕ್ಷಕ್ಕೆ ಹಿಂದಿನ ಅನುಕೂಲ್ಯಗಳು ಬದಲಾಯಿಸಲ್ಪಡದೆ ಇರುವಂತೆ ಎಣಿಸಬಹುದು. ಪ್ರಕೃತಬ್ರಿಟಿಷ್‌ರೆಸಿಡೆಂಟರಾದ ಸರ್.ಜಿ ಬಿ.ಲೈಲ್‌ಯವರು ಸರ್‌ಜೇಂಸ್ ಗಾರ್ಡನ್‌ಯವರಂತಾವರಲ್ಲವು. ಇವರಿಗೆ ಇಲ್ಲಿಪ್ರೇಮಪಾತ್ರರ್‍ಯಾರೂ ಇರುವಂತೆ ಕಾಣಿಸಲಿಲ್ಲವು. ಆದದರಿಂದ ಮೆ|| ಲೈಲ್‌ಯವರು, ದಿವಾನಗಿರಿಗೆ ಕ್ಲುಪ್ತವಾಗಿರುವ ಕಾಲವನ್ನು ವೃದ್ಧಿಪಡಿಸಿಕೊಳ್ಳಬೇಕೆಂಬ ಕೋರಿಕೆಯೊಡನೆ ಮಾಡಲ್ಪಡಬಹುದಾದ ಪ್ರಯತ್ನಗಳಿಗೆ ಸಹಾಯಕರಾಗಿರುವರೆಂದು ಯೋಚಿಸಲಿಕ್ಕಾಗುವದಿಲ್ಲವು. ಒಂದುವೇಳೆ ಅಂತಾಸಂದರ್ಭ [illegible] ರು ಇಲ್ಲಿ ಇಲ್ಲದೆಹೋಗಿ, ಮೆ|| ಗರ್ಡನ್‌ಸ್ಟನ್‌ಯವರೇ ಕಾಯಂರೆಸಿಡೆಂಟರಾಗಿಬಂದು, ಈಚೆಗೆವುಂಟಾಗಿರುವ ನಿರ್ದೇಶಕವಾದ ಪ್ರವಾದವನ್ನನುಸರಿಸಿ ಅವರು ಪ್ರಕೃತದಿವಾನರಿಗೆ ಸಹಾಯಕರಾಗಿ ಸಿಫಾರಸುಮಾಡಿದಾಗ್ಯೂ ಇಂಡ್ಯಗವರ್ನ್‌ಮೆಂಟಿನವರು ಅದಂ ಅಂಗೀಕರಿಸುವ ಸಂಭವತೋರಲಿಲ್ಲವು. ಆದದರಿಂದ ಮುಂದಿನಸಂದರ್ಭದಲ್ಲಾದರೂ, ಈಸಂಸ್ಥಾನದ ದಿವಾನಗಿರಿಗೆ ವಿದ್ಯಾವಂತರಾಗಿಯೂ ಲಾಯಖಾಗಿಯೂ ಯಿರುವ ಮೈಸೂರುದೇಶೀಯರ ಹಕ್ಕುದಾರಿಗಳು ಪುರಸ್ಕರಿಸಲ್ಪಡುವವೆಂದು ನಂಬುತ್ತೇವೆ. ಮೆ|| ಶೇಷಾದ್ರಿ ಅಯ್ಯರವರು ಅಧಿಕಾರಪದದಲ್ಲಿಇನ್ನೂ ೧೯ ತಿಂಗಳಕಾಲ ಇರಬೇಕಾಗಿರುವದರಿಂದ ಏತನ್ಮಧ್ಯೇ ಆವರ ಪ್ರಭುತ್ವಕ್ರಮವಂ ಕುರಿತು ವಿಚಾರಮಾಡುವದು ಅನಾವಶ್ಯಕವೆಂದೆಣಿಸಿ ಇಲ್ಲಿಗೆ ವಿರಮಿಸುವೆವು.

SOARCITY OF FIREWOOD

ಈಗ್ಯೆ ಕೆಲವುದಿವಸಗಳಿಂದ ಈನೂರಲ್ಲಿ ಸೌದೇ ದುರ್ಲಭವಾಗಿ ಜನಗಳು ಅನ್ನಕ್ಕಿಂತಲೂ ಅಧಿಕವಾಗಿ ಕಷ್ಟಪಡುತಲಿದಾರೆ. ತಥಾಪಿ ಈಚೆಗೆ ಅದರ ದೌರ್ಲಭ್ಯವು ವೃದ್ಧಿಯನ್ನೈದುತಲಿದೆ. ಒಂದೆರಡು, ಕದಾಚಿತ್ ಮೂರು ರೂಪಾಯಿಗಳೊಳಗೆಮಾರಲ್ಪಡುತಿದ್ದ ಸೌದೇಗಾಡಿಗಳು ಈಗ ಆರೇಳು ರೂಪಾಯಿಗಳು ಕೊಟ್ಟಾಗ್ಯೂ ದೊರೆಯುವದಿಲ್ಲವು ಇದರಿಂದ ಸಾಧಾರಣಸ್ಥಿತಿಯಲ್ಲಿರತಕ್ಕವರು ಸೌದೇಗಾಡಿಯ ಖರೀದಿಯನ್ನೇ ಆತ್ಯಂತಿಕವಾಗಿಬಿಟ್ಟು ಸೌದೇ ಕೋರೇಗಳಿಂದ ಮಣಗಟ್ಲೆ ತೆಗೆದುಕೊಂಡು ಕಾಲಹರಣ ಮಾಡುತಲಿದಾರೆ. ತರಿಹೊರೆಗಳಾದರೋ ಸ್ವಲ್ಪ ಹೆಚ್ಚುಕಡಮೆಯಾಗಿ ಪೂರ್ವದ ಧಂಡೀಬರೀದಿಗೆ ಬಂದಿರುತಿದೆ. ಸಕಲಜನಗಳಿಂದಲೂ ವಿಶೇಷವಾಗಿ ಬಳಸಲ್ಪಡುವ ಈ ಪದಾರ್ಥಕ್ಕೆ ಬರಬಂದರೆ ಬಹಳ ಕಷ್ಟವಾದದರಿಂದ ಇದಕ್ಕೆ ಪ್ರತಿಕ್ರಿಯೆಮಾಡುವದಕ್ಕೋಸ್ಕರ ಯೆಲ್ಲರೂ ಪ್ರಯತ್ನಪಡಬೇಕು. ಗವರ್ನ್‌ಮೆಂಟಿನವರು ಈವಿಷಯದಲ್ಲಿ ಪ್ರಜೆಗಳಿಗೆ ಸುಖವುಂಟಾಗುವಂತೆ ಯೇನಾದರೂ ಸಹಾಯಮಾಡಬಹುದಾದರೆ ಅವರಿಗೆ ಇಂತಾವಿಷಯದಲ್ಲಿ ಸುತರಾಂ ಪ್ರಶಸ್ತಿಹುಟ್ಟಲಾರದು. ಗುಂಬಳಕಾಯಿಹೋಗುವದನ್ನರಿಯದೆ ಸಾಸುವೆಕಾಳಿಗಾಗಿ ಪಬ್ಬುಹಿಡಿದು ಪೇಚಾಡುವಂತೆ, ಈಸರ್ಕಾರದವರು ನಿರುಪಯುಕ್ತಗಳಾದ ಜಾಸ್ತೀತಲಬ್‌ಗಳಿಂದಲೂ, ಅನಾವಶ್ಯಕಗಳಾದ ಇಲಾಖೆಗಳ ಬಾಹುಳ್ಯದಿಂದಲೂ, ನೂತನಗಳಾದ ಆಫೀಸರುಗಳ ನೇಮಕರಾತಿಗಳಿಂದಲೂ, ಈದೇಶದ ಉತ್ಪತ್ತಿಯೆಲ್ಲವೂ ವ್ಯರ್ಥವಾಗುತಲಿರುವದು ಕಣ್ಣಿಲ್ಲಿ ಬೀಳದಿದ್ದಾಗ್ಯೂ ಸೌದೇಗಾಡೀಬಗ್ಯೆ ವಸೂಲ್ಮಾಡಲ್ಪಡುವ ಜುಜುವೀತೆರಿಗೆಯು ಈಗ ಗವರ್ನ್‌ಮೆಂಟಿನವರಿಗೆ ಪ್ರಬಲ ಆಯತಿಮಾರ್ಗವಾಗಿಯೂ, ತನ್ನಿಷ್ಟವು ದುಸ್ಸಹವಾದದ್ದಾಗಿಯೂ ಏರ್ಪಟ್ಟಿದೆ. ಇದರದೆಸೆಯಿಂದ ಮೇಲ್ಪಟ್ಟ ಉದ್ಯೋಗಸ್ಥರಿಗೆ ವಿಶೇಷ ಬಾಧಕವಿಲ್ಲದೇಹೋದರೂ ಚಿಲ್ಲರೆಜನಗಳು ಬಹಳ ಕಷ್ಟಪಡುವದಕ್ಕೆ ಕಾರಣವಾಗಿದೆ. ಈಗ ವುಂಟಾಗಿರುವ ಸುಂಕ ಪ್ರಯುಕ್ತವಾದ ನಿರ್ಬಂಧವನ್ನು ತಪ್ಪಿಸಿದರೆ ಅನೇಕರು ಸುಖಪಡಲಿಕ್ಕೆ ನಿಮಿತ್ತವಾಗುವದಲ್ಲದೆ ಕಾಷ್ಠದೌರ್ಲಭ್ಯವು ನಿವಾರಣವಾಗಬಹುದೆಂದೆಣಿಸುತ್ತೇವೆ. ಬಹುಮುಂದಿಗೆ ಸಂಕಟಕರವಾದ ಅಲ್ಪ ಆಯತಿಗಿಂತಲೂ ಅವರಿಗೆ ಆನುಕೂಲ್ಯವಂ ಕಲ್ಪಿಸುವದರೊಳು ವುಂಟಾಗಬಹುದಾದ ನಷ್ಟವನ್ನು ವಿಶೇಷವನ್ನಾಗಿ ಪರಿಭಾವಿಸುವದು ಉತ್ತಮಪ್ರಭುಲಿಂಗವಲ್ಲವು. ಪ್ರಸಕ್ತವಿಷಯವು ಪ್ರತೀಕಾರಾಪೇಕ್ಷಿತವಾದದ್ದಾಗಿರುವದರಿಂದ ಗವರ್ನ್‌ಮೆಂಟಿನವರು ಇದಕ್ಕೆ ತಕ್ಕಏರ್ಪಾಡು ಮಾಡುವರೆಂದು ನಂಬುತ್ತೇವೆ.

COLONEL OLCOTT.

ಥಿಯಸಾಫಿಕಲ್ ಸೊಸೈಟಿಯ ಮುಖ್ಯಪ್ರವರ್ತಕರಾಗಿಯೂ, ಅದರ ಪ್ರೆಸಿಡೆಂಟರಾಗಿಯೂ, ಜಗತ್ಪ್ರಸಿದ್ಧರಾಗಿಯೂ, ಆರ್ಯಮತಾಭಿಮಾನಿಯಾಗಿಯೂ ಹಿಂದೂಜನಕ್ಷೇಮಚಿಂತಕರಾಗಿಯೂ, ಇರುವ ಕರ್ನಲ್ ಆಲ್ಕಾಟಿಯವರು ಇಲ್ಲಿನ [illegible] ಣವಾಗಿ ಈಗ ಈನೂರಿಗೆಬಂದಿರುತ್ತಾರೆ. ಗತ ಮಂಗಳವಾರದದಿನ ಸಾಯಂಕಾಲ ಸೆಂಟ್ರಲ್ ಕಾಲೀಜಿನಲ್ಲಿ ಇವರ ಪ್ರಥಮೋಪನ್ಯಾಸವು ಜರಗಿತು. ಇದು ಥಿಯಾಸಫಿಯೆಂಬ ಶಬ್ದಾರ್ಥನಿರೂಪಣವಾದದ್ದಾಗಿಯೂ, ತಮ್ಮ ಪೂರ್ವವೃತ್ತಾಂತವಿಚಾರವುಳ್ಳದ್ದಾಗಿಯೂ, ಆರ್ಯಮತೌತ್ಕೃಷ್ಟ್ಯವನ್ನು ಬೋಧಿಸಿ ಅದನ್ನೇ ಯೆಲ್ಲರೂಅವಲಂಬಿಸತಕ್ಕದ್ದೆಂದು ಪ್ರೇರಿಸತಕ್ಕದ್ದಾಗಿಯೂ ಯಿತ್ತಲ್ಲದೆ ಮುಖ್ಯವಾಗಿ ಭೌತಿಕಶಾಸ್ತ್ರಜ್ಞರ ಸಿದ್ಧಾಂತವನ್ನು ಕಡೆಗೂ ಖಂಡಿಸತಕ್ಕದ್ದಾಗಿತ್ತು. ಇವರ ಉಪನ್ಯಾಸವನ್ನು ಕೇಳುವಕುತೂಹಲದೊಡನೆ ಯೆರಡುಮೂರುಸಾವಿರ ಜನಗಳತನಕ ಬಂದಿದ್ದರು. ಕಾಲೀಜಿನಲ್ಲಿ ಸ್ಥಳವಿಲ್ಲದೆಬಹುಮಂದಿ ಅನುತ್ಸಾಹದೊಡನೆ ಹಿಂದಿರಿಗಿಹೋದರು. ಸ್ವತಃ ಥಿಯಾಸಫಿಸ್ಟಾಗಿಯೂ ಕರ್ನಲ್ ಆಲ್ಕಾಟಿಯವರಿಗೆ ಅಂತರಂಗರಾಗಿಯೂ ಯಿರುವ ಚೀಫ್ ಸೆಕ್ರಿಟರಿ ಮೆ|| ವಿಜಯೇಂದ್ರರಾಯರವರೇ ಖುದ್ದಾನಿಂತುಕೊಂಡು ಜನಗಳಪ್ರವೇಶವನ್ನು ಸಾಧ್ಯವಾದಮಟ್ಟಿಗೆ ಪೊಲೀಸಿನವರ ಸಹಾಯದೊಡನೆ ನಿರೋಧಿಸುತಲಿದ್ದಾಗ್ಯೂ ಸೆಕ್ರಿಟೆರಿಯವರೇ ಸಾಕ್ಷಾತ್ಕರಿಸಿದ್ದದರಿಂದ ಅಲ್ಲಿಗೆ ಹೋಗುವದಕ್ಕೆ ಹಿಂಜರಿದು ಬಹುಮಂದಿ ಹೊರಟುಹೋದಾಗ್ಯೂ ಪೂರ್ವಭಾವಿಯಾಗಿ ನಡೆಯಬೇಕಾಗಿದ್ದ ಏರ್ಪಾಡುಗಳನ್ಯೂನತೆಯಿಂದ ಜನಗಳ ಸಮ್ಮರ್ದಕ್ಕೂ ತತ್ಪ್ರಯುಕ್ತವಾದ ಗಲಭೆಗೂ ತತ್ಸೂಚಕವಾದ ತಾಡನಾದಿಗಳಿಗೂ ಉಪಕ್ರಮವಾಗಿ ಉಪಶಾಂತವಾಗಲಿಕ್ಕೆ ಕೆಲವು ನಿಮಿಷಕಾಲಹಿಡಿಯಿತು ಇದಲ್ಲದೆ ಒಳಗೆಸಹಮುಂಚಿತವಾಗಿಹೋಗಿದ್ದ ಕಾಲೀಜ್ ವಿದ್ಯಾರ್ಥಿಗಳಿಗೂ ಅಲ್ಲಿದ್ದ ಒಬ್ಬರಿಬ್ಬರು ಅಧಿಕಾರಿಗಳಿಗೂ ಸ್ಥಳಪ್ರಯುಕ್ತ ಅಗೌರವವಾದ ಸಂಭಾಷಣೆಗಳು ಸಹನವಾಗುವಂತೆ ಕೇಳಲಾದವು. ಇವೆಲ್ಲವೂ ವಿಚಾರಣಾಧಿಕಾರಿಗಳ ಅಶ್ರದ್ಧೆಯನ್ನು ಸಂಪೂರ್ಣವಾಗಿ ಹೊರಪಡಿಸಲಿಕ್ಕೆ ಕಾರಣವಾಯಿತು

ದಿವಾನರವರು ಸಾಧಪ್ರವೇಶದ್ವಾರದತನಕ ತಮ್ಮಸೆಕ್ರಿಟರಿಯೊಡನೆ ಬಂದುಕರ್ನಲ್‌ಆಲ್ಕಾಟಿಯವರನ್ನು ಗೌರವದೊಡನೆ ಬರಮಾಡಿಕೊಂಡು ಅವರೊಡನೆ ಕ್ಲುಪ್ತವಾಗಿದ್ದ ಸ್ಥಾನಕ್ಕೆ ಹೋಗಿ ಕುಳಿತುಕೊಂಡರು. ಅದುವರಿವಿಗೆ ಮಿಕ್ಕವರೆಲ್ಲರು ಎದ್ದುನಿಂತುಕೊಂಡಿದ್ದು ಬಳಿಕ ತಮ್ಮತಮ್ಮ ಆಸನಗಳಲ್ಲಿ ಕುಳಿತುಕೊಂಡರು. ಉನ್ನತಾಸನದಲ್ಲಿ ಅರ್ಧಚಂದ್ರಾಕಾರವಾಗಿ ಕೌನ್ಸಿಲರ್‌ಗಳಿಂದಲೂ, ಸೆಕ್ರಿಟರಿಗಳಿಂದಲೂ, ಅಸಿಸ್ಟೆಂಟುಗಳಿಂದಲೂ, ಪರಿವೇಷ್ಟಿತರಾಗಿದ್ದ ದಿವಾನರವರು ಎದ್ದುನಿಂತುಕೊಂಡು ಥಿಯಸಾಫಿಕಲ್ ಸೊಸೈಟಿಯ ಮುಖ್ಯಪ್ರವರ್ತಕರಾದ ಕರ್ನಲ್ಆಲ್ಕಾಟಿಯವರು ಈದಿನಮಾಡುವ ಉಪನ್ಯಾಸವು ಥಿಯಾಸಫಿಯನ್ನು ಕುರಿತದ್ದಾಗಿಯೂ, ಆರ್ಯಮತಪೋಷಕವಾದದ್ದಾಗಿಯೂ ಇರುವದರಿಂದ ಅದರಲ್ಲಿನಂಬಿಕೆಯುಳ್ಳವರೆಲ್ಲರೂ ನಿಗೆಯೊಡನೆಕೇಳುತೋಷಿಸುವರೆಂದು ನಂಬುತ್ತೇನೆ ಎಂಬದಾಗಿ ತಿಳಿಸಿದರು. ಬಳಿಕ ಕರ್ನಲ್ ಆಲ್ಕಾಟಿಯವರು ೧ ಘಂಟೆಯಕಾಲ ಏಕೋಚ್ಛ್ವಾಸದಿಂದುಪನ್ಯಾಸ ಮಾಡಿದರು. ಆಯಾಸಂದರ್ಭಗಳಲ್ಲಿ ಪ್ರಾಸಂಗಿಕರು ತಿಳಿಸಿದ ಅಭಿಪ್ರಾಯಗಳು ಶ್ಲಾಘ್ಯವಾದವಾಗಿಯೂ, ವಸ್ತುಸ್ಥಿತಿಯನ್ನು ಬೋಧಿಸತಕ್ಕದ್ದಾಗಿಯೂ, ಇದ್ದದರಿಂದ ಉತ್ಸಾಹಸೂಚಕವಾದ ಕರತಾಡನದೊಡನೆ ಅವುಗಳನ್ನು ಕೇಳಿ ಅನುಮೋದಿಸಿದರು, ಅದರಮೇಲೆ ದಿವಾನರವರ ಅಭಿಪ್ರಾಯವನ್ನು ಅರಿಯಬೇಕೆಂಬ ಕೋರಿಕೆಯೊಡನೆ ಅನೇಕರು ನಿರೀಕ್ಷಿಸುತಲಿದ್ದರು. ಪರಂತು ಅದಕ್ಕೆ ಅವಕಾಶಕೊಡದೆ ದಿವಾನರವರು ತಮ್ಮ ಕೌನ್ಸಿಲರಾದ ಮೆ|| ಕೃಷ್ಣರಾಯರವರನ್ನು ನಿಯಮಿಸಲು ಅವರು, ಪ್ರಜೆಗಳತರಫ ಪ್ರಾಸಂಗಿಕರಿಗೆ ತಾವು ವಂದನಮಾಡುವಂತೆ ತಿಳಿಸಿ ಮುಗಿಸಿದಕೂಡಲೇ ದಿವಾನರವರು ಪ್ರಯಾಣೋನ್ಮುಖರಾಗಲು ಸಭೆ ಬರಖಾಸ್ತಾಯಿತು. ಗತ ಶುಕ್ರವಾರದದಿನ ಕಂಟೋನ್ಮೆಂಟಿನಲ್ಲಿ ಹಾಕಲ್ಪಟ್ಟಿರುವ ನಾಟಕ ಚಪ್ಪರದಲ್ಲಿ ಕರ್ನಲ್ ಆಲ್ಕಾಟಿಯವರು ಬ್ರಹ್ಮವಿದ್ಯೆಯನ್ನುಕುರಿತು ಉಪನ್ಯಾಸಮಾಡಿದರೆಂತಲೂ, ಅದಕ್ಕೆ ಮೆ|| ಕೃಷ್ಣರಾಯರವರು ಅಧ್ಯಕ್ಷರಾಗಿದ್ದರೆಂತಲೂ ಜನಗಳ ಗಲಾಟೆಯನ್ನು [illegible] ಟ್ಟದ್ದಾಗ್ಯೂ ಬಹುಮಂದಿಬಂದಿದ್ದರೆಂತಲೂ, ತಿಳಿಯಬರುತಿದೆ. ಕರ್ನಲ್ ಆಲ್ಕಾಟಿಯವರು ಜಾಗ್ರತೆಯಲ್ಲೇ ಮರಳಿ ಮದರಾಸಿಗೆ ವಾಪಸುಹೋಗುವರು. ಈಸಂದರ್ಭದಲ್ಲಿ ಈನೂರೊಳು ಒಂದು ಬ್ರಾಂಚ್ ಅಸೋಸಿಯೇಷನ್ ಏರ್ಪಾಡುಮಾಡಿದ್ದರೆ ಬಹಳ ಚನ್ನಾಗಿರುವದು. ಇಲ್ಲಿನಜನಗಳಿಗೆ ದ್ರವ್ಯಾರ್ಜನೆಯೊಂದುವಿನಾ ಮಿಕ್ಕಯಾವದರಲ್ಲಿಯೂ ನೈಜವಾದ ಪ್ರವೃತ್ತಿಯೂ ಉತ್ಸಾಹವೂಯಿಲ್ಲವೆಂದು ಹೇಳುವ ಅನ್ಯರ ಆಕ್ಷೇಪಣೆಗೆ ನಮ್ಮವರು ಮೇಲೆ ಮೇಲೆ ಅವಕಾಶಕೊಡುತಬರುವದಕ್ಕಾಗಿ ವಿಷಾದಿಸಬೇಕಾಗಿದೆ.

Occasional Notes.
ನೈಮಿತ್ತಿಕವಿಷಯನ್ಯಾಸ.

The official exodus.—ಹಿಂದೆ ಗವರ್ನರ್ ಜನರಲಾಗಿದ್ದ ಲಾರ್ಡ್ ನಾರ್ಥ್ ಬ್ರೂಕ್ ಸಾಹೇಬರವರು ಇಂಡ್ಯದೇಶಬಿಂದಹೊರಡುವದಕ್ಕೆ ಕೆಲವು ದಿನಗಳಹಿಂದೆ, ಬೇಸಿಗೆಯಲ್ಲಿ ಇಂಡ್ಯ ಗವರ್ನ್‌ಮೆಂಟಿನವರಿಗೆ ಸಿಂಲಾ ವಾಸವು ಆವಶ್ಯಕವಾದದ್ದೆಂದು ಬಲವಾದ ಒಂದು ಮೆಮೋರಾಂಡುಂ ಬರೆದು ಇಟ್ಟುಹೋದಂತೆಯೂ ಆ ಕಾಲದಲ್ಲಿ ಸ್ಟೇಟ್ ಸೆಕ್ರಿಟರಿಯಾಗಿದ್ದ ಲಾರ್ಡ್ ಸಾಲಿಸ್‌ಬರಿಯವರು ಲಾರ್ಡ್ ನಾರ್ಥ್ ಬ್ರೂಕ್ ಸಾಹೇಬರ ಅಭಿಪ್ರಾಯವನ್ನು ಒಪ್ಪಿದಂತೆಯೂ ತಿಳಿಯಬಂದಂತೆ ಸಿಂಲಾ ಖಾತೆಮಿದಾರನೊಬ್ಬನು ಒಂದಾನೊಂದು ಪತ್ರಿಕೆಗೆ ಬರೆಯುತ್ತಾನೆ.

Changes in the administration of Baroda.—ಬರೋಡೇಸಂಸ್ಥಾನದ ದಿವಾನರಾದ ರಾವ್‌ಬಹದೂರ್ ಬಾಜೀವಹಬುರ್ದಿಯವರು ಈತಿಂಗಳ ಆಖೈರ್‌ಭಾಗದಲ್ಲಿ ತಮ್ಮ ಕೆಲಸಕ್ಕೆ ರಾಜೀನಾಮೆಕೊಡುವವರಾಗಿದಾರೆಂತಲೂ, ಅವರಕೆಲಸಕ್ಕೆ ಸರ್‌ಸುಬಾ ರಾವ್‌ಬಹದೂರ್ ಲಕ್ಷ್ಮಣ ಜಗನ್ನಾಥಯೆಂಬವರು ನಿಯಮಿಸಲ್ಪಡುವರೆಂತಲೂ, ಅಲ್ಲಿನ ನಾಯಬ್‌ದಿವಾನರಾದ ವಿನಾಯಕ ಕರ್ಶೇರಿಯವರುಸಹ ತಮ್ಮ ಕೆಲಸವಂಬಿಡುವವರಾಗಿದಾರೆಂತಲೂ, ಅವರಕೆಲಸಕ್ಕೆ ರಾವ್‌ಬಹದೂರ್ ಮಣಿಭಾಯಿಜಸ್‌ಭಾಯಿ ಎಂಬವರು ನಿಯಮಿಸಲ್ಪಡುವರೆಂತಲೂ ಇಂಡ್ಯಟೈಂಸ್‌ಪತ್ರಿಕೆಯ ಬರೋಡಾಖಾತೆಮಿದಾರನು ಬರೆಯುತ್ತಾನೆ.

Encouragement of private enterprise. ಇಂಡ್ಯದೇಶದಲ್ಲಿನ ನೂಲುವ ಮತ್ತು ನೇಯ್ಯುವ ಯಂತ್ರಗಳ ಕಾರ್ಖಾನೇ ದಾರರಿಗೆ ಪ್ರೋತ್ಸಾಹವನ್ನುಂಟುಮಾಡುವದಕ್ಕಾಗಿ, ಕಾನ್ಪೂರ್ ಮತ್ತು ಎಲ್ಗಿನ್ ಮಿಲ್ಸ್ ಯೆಂಬ ಕಾರ್ಖಾನೆಗಳಿಂದ ಬಟ್ಟೆಗಳು ಖರೀದೀ ಮಾಡುವದಲ್ಲದೆ, ಮುಂದೆ ಕಲಾಸಿಗಳು, ಪೊಲೀಸ್ ಜವಾನರು ಮೊದಲಾದವರುಗಳಿಗೆ ಬೇಕಾದ ಬಟ್ಟೆಗಳನ್ನು ಇಂಗ್ಲಾಂಡಿನಿಂದ ತರಿಸುವದಕ್ಕೆ ಬದಲಾಗಿ ಇಂಡ್ಯದೇಶದಿಂದಲೇ ಕೊಂಡುಕೊಳ್ಳುವ ವಿಷಯದಲ್ಲಿ ರಿಪೋರ್ಟ್ ಮಾಡತಕ್ಕದ್ದೆಂದು ಮದರಾಸ್ ಗವರ್ನ್‌ಮೆಂಟಿನವರು ಜಿನಸುಗಳತಯಾರೀಇಲಾಖಾಸೂಪರಿಂಟೆಂಡೆಂಟರಿಗೆ ಅಪ್ಪಣೆ ಕೊಟ್ಟಿರುತ್ತಾರೆ.

The coming Dewan of Travancore ತಿರುವಾಂಕೂರು ಸಂಸ್ಥಾನದ ಪ್ರಕೃತ ದಿವಾನರಾದ ಮೆ|| ರಾಮಯ್ಯಂಗಾರ್ರವರು ಕ್ಷಿಪ್ರದಲ್ಲೇ ತಮ್ಮಕೆಲಸದಿಂದ ನಿವೃತ್ತಿಸುಖವಂ ಪಡೆಯುವವರಾಗಿರುವಂತೆ ಈಚೆಗೆ ಒಂದುಪ್ರವಾದ ಪ್ರಚುರಗೊಂಡಿದೆಯಷ್ಟೆ. ಅಂತಾ ಸಂದರ್ಭವುಂಟಾಗುವಲ್ಲಿ ಅದಂ ತಾವು ಪಡೆಯಬೇಕೆಂಬ ಉದ್ದೇಶದೊಡನೆಯೇ ಮದರಾಸ್ ಗವರ್ನ್‌ಮೆಂಟಿನ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರಾದ ಆನರೆಬಲ್ ಟಿ. ರಾಮರಾಯರವರು ಈಚೆಗೆ ತಿರುವನಂತಪುರಕ್ಕೆ ಹೋಗಿದ್ದರೆಂತಲೂ, ಮೆ|| ರಾಮರಾಯರವರು ವಿದ್ಯಾಬುದ್ಧಿವಿವೇಕಗಳಿಂದ ಸದರೀಕೆಲಸಕ್ಕೆ ಸಂಪೂರ್ಣಅರ್ಹರೆಂತಲೂ ಒಂದಾನೊಂದು ಮದರಾಸ್‌ಪತ್ರಿಕೆಹೇಳುವದಲ್ಲದೆ ಈಗ ಸ್ಟಾಂಪುಸೂಪರಿಂಟೆಂಡೆಂಟರಾಗಿರುವ ಮೆ|| ಚೆಂಚಲರಾಯರು ತಿರುವಾಂಕೂರು ದಿವಾನಕೆಲಸಕ್ಕೆ ಲಾಯಖಾದವರೆಂದುಭಾವಿಸುತಿದೆ|| ಸದರೀ ಪತ್ರಿಕಾಲೇಖಕರ ಅಭಿಪ್ರಾಯವನ್ನು ನಾವು ಸಂಪೂರ್ಣವಾಗಿಒಪ್ಪುತ್ತೇವೆ. ಪರಂತು ಇನ್ನುಬಹುಸಂಗತಗಳಲ್ಲಿ ಅಧಿಕರೆನ್ನಿಸಿಕೊಂಡಿರುವ ದಿವಾನ್‌ಬಹದೂರ್ ರಘುನಾಥರಾಯರವರ ಯೋಗ್ಯತೆಯು ಸದರೀ ಪತ್ರಿಕಾಲೇಖಕರ ಆಲೋಚನೆಗೆ ವಿಷಯವಾಗದೆ ಹೋದದಕ್ಕೆ ಯೇನುಕಾರಣವಿರಬಹುದು? ಒಂದುವೇಳೆ ಸದರೀ ರಾಯರವರ ವಿಷಯದಲ್ಲಿ ವಯಃಪ್ರಯುಕ್ತವಾದ ಅಸಾಮರ್ಥ್ಯತೆಯನ್ನು ಆರೋಪಿಸಿದಾಗ್ಯೂ ಅವರರಾಜಕಾರ್ಯನಿರ್ವಹಣಶಕ್ತಿಗೆ ವಾರ್ಧಕ್ಯ ವುಂಟಾಗಿರುವದಿಲ್ಲವೆಂಬ ಅಂಶ ಸಾಮಾನ್ಯವಾಗಿ ಯೆಲ್ಲರಿಗೂ ತಿಳಿದೇಇದೆ,

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕುಜಾತಿವೃತ್ತಾಂತಗಳು.

Middle school examination.—ಮಿಡಿಲ್‌ಸ್ಕೂಲ್‌ಪರೀಕ್ಷೆಯು ಬರುವ ಡಿಸೆಂಬರ್ ೧ನೇ ತಾರೀಖಿನಲ್ಲಿ ಪ್ರಾರಂಭವಾಗುವದು.

Maharaja's ball.—ಶ್ರೀಮನ್ಮಹಾರಾಜರವರಿಗೆ ತಮ್ಮ ಸ್ನೇಹಿತರಾದ ಇಂಗ್ಲಿಷ್ ಸರ್ವಾಂಟ್‌ಗಳಿಗೆ ಅವರ ಪದ್ಧತಿಯನ್ನನುಸರಿಸಿ ಔತಣಮಾಡಿಸುವ ಅಭಿಪ್ರಾಯವು ಸದ್ಯಃ ಇಲ್ಲವೆಂತಲೂ ಪರಂತು ವಾಮಾಮೂಲಿಮೇರೆ ತಮ್ಮಅರಮನೆಗೆ ಸೇರಿದತೋಟದಲ್ಲಿ ಫಲಾಹಾರಮಾಡಿಸುವರೆಂತಲೂ ಕೇಳುತ್ತೇವೆ.

H. H the Maharanies arrival.—ಶ್ರೀಮನ್ಮಹಾರಾಣಿಯವರು ಕಳೆದ ಸೋಮವಾರದದಿನ ಸಾಯಂಕಾಲ ಸ್ಪೆಷಲ್‌ಟ್ರೇನಿನಲ್ಲಿ ಇಲ್ಲಿಗೆ ದಯಮಾಡಿದರು. ರೈಲ್ವೇ ಪ್ಲಾಟ್‌ಫಾರಂನಲ್ಲಿ ದಿವಾನರು ಮೊದಲಾದ ಕೆಲವರು ಅಧಿಕಾರಿಗಳು ಹಾಜರಿದ್ದು ಉಚಿತಮರ್ಯಾದೆಗಳೊಡನೆ ಅವರನ್ನು ಬರಮಾಡಿಕೊಂಡರು. ಈ ವಿಶೇಷಸಂದರ್ಭಸೂಚಕವಾಗಿ ಅರಮನೆಯ ಬಳಿಯಿಂದ ಎಂಟುತೋಪುಗಳು ಹಾಕಲ್ಪಟ್ಟವು.

The Fort Murder.—ಈವೂರು ಕೋಟೆಯಲ್ಲಿ ನಡೆದ ಒಂದು ಖೂನೀಮೊಕದ್ದಮೆಯನ್ನು ಹಿಂದಿನವಾರದ ಪತ್ರಿಕೆಯಮೂಲಕ ತಿಳಿಸಿಯಿರುತ್ತೇವೆಯಷ್ಟೆ ಸದರೀಮೊಕದ್ದಮೆಯು ಮಿಲಿಟರಿಸ್ಟ್ರೇಶನ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಕೋರ್ಟಿನಲ್ಲಿ ಕಳೆದ ಬುಧ ಬೃಹಸ್ಪತಿವಾರಗಳಲ್ಲಿ ಪ್ರಥಮವಿಚಾರಣೆನಡೆದು ಅಪರಾಧಿಗಳು ಸೆಷನ್ಸ್‌ಕಮಿಟಿ ಮಾಡಲ್ಪಟ್ಟರು. ಈ ಮೊಕದ್ದಮೆಯಲ್ಲಿ ಮುನಿಗಾಮ ಯೆಂಬವನು ಸಹ ಆರೋಪಿಸಲ್ಪಟ್ಟು, ಅವನು ಖೂನಿನಡೆದ ಸಂಗತಿಯನ್ನು ಯಥಾರ್ಥವಾಗಿಯೂ ಸಂಪೂರ್ಣವಾಗಿಯು ಹೇಳುವ ಷರತ್ತಿನಮೇಲೆ, ಕ್ರಿಮಿನಲ್ ಪ್ರೊಸಿಡ್ಯೂರ್‌ಕೋಡ್ ೩೩೭ನೇ ಸೆಕ್ಷನ್ ನಿಯಮವನ್ನನುಸರಿಸಿ ಮಹಾರಾಜ್ಞೀಯವರಪರವಾದ ಸಾಕ್ಷಿಯಾದನು

Southern Mahratta Railway.—ಜನಗಳ ಅನುಕೂಲ್ಯವು ಪರಿಭಾವಿಸಿ ದಕ್ಷಿಣಮಹಾರಾಷ್ಟ್ರ ರೈಲ್ವೇಕಂಪೆನಿಯವರು ಈಚೆಗೆ ಒಂದುಹುಕುಂ ಮಾಡಿದಾರೆಂದು ಕೇಳಲಿಕ್ಕೆ ನಾವು ಬಹಳ ಸಂತೋಷಿಸ ಬೇಕು ಅದೇನೆಂದರೆ ಟಿಕ್ಕಟ್ಟುಮಿತ್ರರನ್ನು ಸಾಗಕಳುಹಿಸಿ ಅವರ ಪ್ಲಾಟ್‌ಫಾರಂ ಮೇಲೆ ಬೀಳ್ಕೊಂಬುವುದ್ದೇಶದಿಂದ ಸ್ಟೇಷನಿಗೆ ಹೋಗುವವರನ್ನು ಪ್ಲಾಟ್‌ಫಾರಮಿಗೆ ಬಿಡತಕ್ಕದ್ದು. ಮತ್ತು ರಾತ್ರಿಕಾಲದಲ್ಲಿ ಟ್ರೈನಿನಲ್ಲಿ ಬರತಕ್ಕವರು ವೇಟಿಂಗ್ ರೂಂ ಎಂಬ ವಿಶ್ರಾಂತಿ ಸ್ಥಳದಲ್ಲಿ ಮಲಗಲಿಕ್ಕೆ ಅವಕಾಶ ಕೊಡತಕ್ಕದ್ದಲ್ಲದೆ ಮಾರನೆಯದಿನದ ಪ್ರಾತಃಕಾಲದ ತನಕ ಯಾವ ಸಬಬಿನಮೇಲಾಗಲಿ ಅವರನ್ನು ಆ ಪ್ರದೇಶದಿಂದ ಹೊರಗೆ ಹೋಗುವಂತೆ ಒತ್ತಾಯಿಸಲಾಗದೆಂದು ಮೇಲ್ಕಂಡ ನಿರ್ಣಯವು ಬಹಳ ಶ್ಲಾಘ್ಯವಾಗಿರುತ್ತದೆ, ಮದರಾಸುರೈಲ್ವೇ ಇಲಾಖೆಯವರು ಸಹ ಮೇಲ್ಕಂಡ ಹುಕುಮನ್ನು ಅನುಸರಿಸಿದರೆ ಚೆನ್ನಾಗಿರುವದು ಸಾಧಾರಣವಾಗಿ ಸ್ಟೇಷನಿನಲ್ಲಿರತಕ್ಕ ಪೋಲೀಸಿನವರು ಜನಗಳ ತಾರತಮ್ಯ ವನ್ನರಿಯದೆ ಅಗೌರವವಾಗಿ ಮಾತನಾಡುತಲೂ ಕದಾಚಿತ್ತು ಬೆಂಬಿಡದೆ ಹಿಡಿದು ತಳ್ಳುತಲೂ ಅಸಮಾಧಾನಕರವಾದ ರೀತಿಯಿಂದ ನಡೆಸುತ್ತಾರೆ ಇದರಿಂದ ಗೌರವ್ಯರಾದವರು ಮನನೊಂದುಕೊಂಡು ಹಿಂದಿರಿಗಿ ಹೋಗುವರುತ್ತಾರೆ ಇವುಗಳಿಗೆ ಅವಕಾಶವಿಲ್ಲದಂತೆ ಮೇಲೆ ಕಂಡ ಹುಕುಂ ಕೊಟ್ಟದ್ದು ಕಂಪೆನಿಯವರ ಪ್ರಜಾಭಿಮಾನವನ್ನು ಸೂಚಿಸದಿರುವದಿಲ್ಲವು

State of Dharwar.—ದಕ್ಷಿಣ ಮಹಾರಾಷ್ಟ್ರ ರೈಲ್ವೇಕಂಪೆನಿಗೆ ಸೇರಿದ ನೌಕರರು ಕೆಲವರು ವರ್ಗವಾಗಿ ಇವೆಗೆ ಇಲ್ಲಿಂದ ಧಾರ್ವಾಡಕ್ಕೆ ಹೋದರಷ್ಟೆ ಆ ದೇಶದ ತಾತ್ಕಾಲಿಕ ಸ್ಥಿತಿಯ ಕುರಿತು ಅಲ್ಲಿಂದ ಒಬ್ಬ ವರದಿಗಾರರು ಬರೆಯುತ್ತಾನೆ ಏನೆಂದರೆ — ಈ ಊರಿನ ಸ್ಥಿತಿಯಂಕುರಿತು ಆ ಕೇರಿಯವರು ಅರಿಯಬೇಕೆಂದು ಕೋರುವರಾಗಿ ಅವರ ತೃಪ್ತಿಗೋಸ್ಕರ ಕೆಲವು ಅಂಶಗಳನ್ನು ಪ್ರಕಟಿಸುವೆನು ಈಗ ಇಲ್ಲಿ ಮಳೆಯು ಹೆಚ್ಚಾದದರಿಂದ ವಿಶೇಷ ಶೀತ ಮಳೆ ಸುರಿಯುತಿದೆ ಬೀದಿಗಳೆಲ್ಲಾ ಕೆಸರುಮಯವಾಗಿ ಕಾಲಿಡಲು ಅಸಾಧ್ಯವಾಗಿವೆ ಒಂದುವೇಳೆ ಒಂದೆರಡು ದಿನ ಮಳೆ ಬಿಟ್ಟರೂ ಬಿಸಿಲು ಅತ್ಯಧಿಕವಾಗಿರುವದೆ ಬೆಂಗಳೂರಿಗಿಂತ ಎಲ್ಲಾ ಪದಾರ್ಥಗಳ ಧಾರಣೆಯು ಬಹಳ ಚವಕವಾಗಿ ಇವೆ ಒಂದರೆ ಗೇರೆಯಿ ಬೇಕ್ಕೆ ಮಾತ್ರ ಬೆಂಗಳೂರಿಗಿಂತಲೂ ಅಗ್ಗವೆಂದು ಹೇಳಬಹುದು ಜನಗಳಿಗೆ ಕಾಲ್ ಗುಣಯು ಅನುಕೂಲವಾಗಿಯೂ, ಆರೋಗ್ಯಕರವಾಗಿಯೂ ಇದೆ ಈಚೆಗೆ ಒಂದು ವರ್ಷದ ಮೇಲಿಂದ ಇಲ್ಲಿ ಹುಟ್ಟಾಗಿದ್ದ ಜಲದೌರ್ಲಭ್ಯವು ಗ್ರೀಷ್ಮ ನಿವೃತ್ತಿಯಾದುದು, ಎಂದು ಅನುಕೂಲವಿಂದ ಮನೆಯೂ, ಆರೋಗ್ಯಕರವಾದ ದೇಶವೂ ವಿಚಾರವಿಲ್ಲದ ತ ಸುಭಿಕ್ಷತೆಯೂ ಹುಟ್ಟಾಗಿದ್ದರೆ ಎಷ್ಟು ದೂರದೇಶವಾದರೂ ಬೇಗ ಜೀವಿಸಬಹುದು ಮೇಲೆ ಕಂಡವುಗಳಲ್ಲಿ ಯಾವದೊಂದು ಕೊರತೆಯು ಹೊಂದಿದರೂ ಅಲ್ಲಿರುವವರು ದುಃಖವು ಅಷ್ಟೇ ತಪ್ಪದು ರೈಲ್ವೇ ಇಲಾಖೆ ನೌಕರರಿಗೆ ನಿರಂತರವೃತ್ತಿಯೂ, ಸ್ಥಳಾನಾತ ಕೆಲಸವೂ, ಅಲ್ಪಾಯುತಿಯು ನಿಯಮವಾಗಿರುವದರಿಂದ ಅವರು ಆ ಪ್ರದೇಶ ಕಾಲವ ಕಳೆಯಬಹುದೆಂದು ಬಂದಿರುವೆವಲ್ಲದೆ ಅವರ ಸ್ಥಿತಿಯು ರೈಲ್ವೇ ಇಲಾಖಾಧಿಕಾರಿಗಳ ಅವಗಾಹನಕ್ಕೆ ಬಾರದೇ ಹೋಗಲಾರದೆಂದು ನಂಬುತ್ತೇನೆ.

Female education.—ಮಾಸೆಸ್ಮಿನ್ನೈಕವಿಂಶತಿತಮೆದಿನೆ, ವಿಲಿಖ್ಯಮಾಂ ಸಂಸ್ಕೃತಭಾಷಾನಿಬದ್ಧಾಂ ಪತ್ರಿಕಾಂ, ಶ್ರೀಮನ್ಮಹೀಸುರಪುರವಾಸಿನೀ ಪುಟ್ಟಸುಬ್ಬಮ್ಮಣ್ಣೀನಾಮ್ನೀ ವಿದ್ಯಾರ್ಥಿನೀ ಪ್ಯಸ್ಯಭ್ಯಂ ಪ್ರಕಟತಾಚೆಯಮಸ್ಮಾವಿರಸ್ಮದೀಯಾಯಾಂ ವೃತ್ತಾಂತಪತ್ರಿಕಾಯಾಂ. ಯದಿವಸ್ತುತಸ್ತಯ್ಯೈವೆಯಂಪ್ರಣೀತಾ ಸ್ಯಾತ್ತರ್ಹ್ಯಧಿಕತರಂ ಪರಿತುಷ್ಯಾಮೋವಯಂ ತದೀಯಸಂಸ್ಕೃತಭಾಷಾಪ್ರವೀಣತಾವಿಷಯೆ. ಏವಮೆವಾನ್ಯಾಅಪ್ಯೆತದ್ದೇಶೀಯಾವನಿತಾಃ, ಅದೀತ್ಯವಿದ್ಯಾಂ ಅದತ್ವಾಬಾಪಕಾಶಮನರ್ಥಾವಹಃ ಸ್ತ್ರೀವಿದ್ಯಾಭ್ಯಾಸ ಇತ್ಯಪಪ್ರಥಾಯಾಃ, ಲಘಿರಸ್ಯ ಇ ವಿದ್ಯಾಧ್ಯಯನ ಪ್ರಯುಕ್ತಮನುತ್ತಮಂ ಫಲಂ ಬವೆಯುರ್ನಿಖಿಲ ವಿದ್ವಜ್ಜನ ಶ್ಲಾಘನೀಯಾ ಇತ್ಯತ್ರನಸಂದೆಹೋಽಸ್ಮಾಕಂ

ಜೊಘೊ ಪತ್ರಕರ್ತಾರಃ, ಬಹುಭಿರ್ವಿರಚಿತಾಯಾಂ ಪ್ರಸಿದ್ಧಪತ್ರಿಕಾಸ್ವರಣೌ ಮದೀಯ ವಾಗ್ವಿಲಸಿತಸ್ಯ ಕಿಂಚಿದವಕಾಶಃ ದೀಯತೆ ಇತಿ ಪ್ರತಿಪಾಲಯಾಮಿ.

ಪುರಾಖಲು ಅಸ್ಮದೀಯಾಸ್ತಿಕಜನೆಷು ಸ್ತ್ರಿಯಃ ಪುರುಷಾಶ್ಚ ಸಮತಯಾ ವಿದ್ಯಾಭ್ಯಾಸಮಕುರ್ವನ್ನಿತ್ಯೆತದರ್ಥಬೋಧಕಪುರಾಣೆತಿಹಾಸಾನವಲೋಕ್ಯದಾನೀನ್ತನಾಸ್ಮದೀಯಾಸ್ತಿಕಜನಾಃ, ಸ್ತ್ರೀಣಾಂ ವಿದ್ಯಾಭ್ಯಾಸಕರಣಮನರ್ಹಮಿತಿ ನಿಂದ್ಯಸ್ಯಸ್ವಸ್ತ್ರೀಯಃ ವಿವೆಕವತೀರಕಾರಯಿತ್ವಾ ಪಶುಸದೃಶೀಶ್ಚಕ್ರುರಿತಿಯತ್ ಅಸ್ಮಿನ್ವಿಷಯೆಚಾರವಿಷಾದಸ್ಯ ಪರಿಮಿತಿರೆವನಾಸ್ತಿಖಲು॥ ಪುತ್ರಾಣಾಮಿವ ಬಾಲಿಕಾನಾಮಪಿ ವಿದ್ಯಾಭ್ಯಾಸಃಕಾರಯಿತವ್ಯಃ, ಕಥಮಿತಿಚೆತ್, ಕನ್ಯಾಪ್ಯೆವಂಪಾಲನೀಯಾಶಿಕ್ಷಣೀಯಾತಿಯತ್ನತಃ ಇತಿವಚನಾತ್॥ ಗಾರ್ಗೀಪ್ರಭೃತಯಃ ಪುರಾತನಸ್ತ್ರಿಯೊಽವೆದಾಭ್ಯಾಸಂ ಕೃತವತ್ಯ ಇತಿ ಶ್ರೂಯತೆ॥ ಯಾಜ್ಞವಲ್ಕ್ಯನಾಮರ್ಷಿಃ, ಗಾರ್ಗೀನಾಮ್ನೈಕ್ಯೈ ಕಸ್ಯೈಕ್ತಿತಿಪವೆತಾವತ್ ಜ್ಞಾನಕಾಂಡಮುಪದಿದೆಶೆತಿ ಪ್ರತೀತಿರಸ್ತಿ॥ ಭವಭೂತಿರಚಿತೆನಾಟಕೆ ತಾಪತ್, ಶ್ರೀವಾಲ್ಮೀಕ್ಯಾಶ್ರಮಾತ್ ಕಾಚನ ತಾಪಸೀ ಅನ್ಯಮಾಶ್ರಮಂಪ್ರತಿ ಜ್ಞಾನಕಾಂಡಾಧ್ಯಯನಾರ್ಥಂ ಗತಽತೀತಿ. ಅನ್ಯಚ್ಚ ತೆನೈವ ಮಹಾಕವಿನಾರಚಿತೆಽನ್ಯಸ್ಮಿನ್ ನಾಟಕೆ ಕಾಮಂದಕೀ ಬಹುವಿಷಯವಿದ್ಯಾವತೀತಿ ಪ್ರತೀತಾಭ್ಯಾಂ ಮಂತ್ರಿಭ್ಯಾಂಸಮಂ ವಿದ್ಯಾಭ್ಯಾಸಂಕೃತವತೀತಿಚ॥ಮಾಳವಿಕಾಗ್ನಿಮಿತ್ರೀಯನಾಮ್ನಿನಾಟಕೆ ಕೌಶಿಕೀತಿ ಪ್ರಸಿದ್ಧಾವನಿತಾ ಪಂಡಿತೆತಿ ಖ್ಯಾತಿಮಲಭತ ಅಪಿಚ ಪಾರ್ವತ್ಯಪಿ ಬಾಲ್ಯೆ ವಯಸ್ಯೈವ ಸರ್ವವಿದ್ಯಾಕುಮಾರ್ಯಾಸೀತ್

ವಿದ್ಯಾದೇವೀ, ಗಂಗಾನ ವಿಭ್ರಾಕಾಚನ ವಾಕ್ಯಾವಳೀನಾಮ್ನಾ, ಸ್ಮೃತಿಸಂಗ್ರಹಂ ರಚಿತವತೀ. ಲಕ್ಷ್ಮೀದೇವಿನಾಮ್ನ್ಯಾ ಯೋಷಿತಾ ವಿರಚಿತಾ ಮಿತಾಕ್ಷರೀನಾಮವ್ಯಾಖ್ಯಾ ಅದ್ಯಾಪಿ ಪ್ರಚುರತಯಾ ಅಸ್ತಿಖಲು॥ ಉದಯನಾಚಾರ್ಯದುಹಿತಾ ಲೀಲಾವತೀನಾಮ್ನಿ ವಿದ್ಯಾವತೀತಿ ಖ್ಯಾತಿಮಲಭತ॥ ಶ್ರೀಶಂಕರವಿಜಯನಾಮಕ ಗ್ರಂಥಾಂತ್ಯೆಭಾಗೆ ಮಂಡನಮಿಶ್ರಣ ಸಾಕಂ ಶ್ರೀ ಶಂಕರಾಚಾರ್ಯಾಣಾಂ ವಿದ್ಯಾ ವಿವಾದಸಮಯೆ ಮಂಡನಮಿಶ್ರಭಾರ್ಯಾ ಸರಸವಾಣೀ, ಮಧ್ಯಸ್ಥತಾಮಂಗೀಚಕಾರ ಕಿಂಚ ಕರ್ಣಾಟಕದೆಶೀಯ ಪಟ್ಟಮಹಿಷೀ ಕಾಮಿನ್ನಾ ಕವಿತ್ವಕರಣವಿಷಯೆ ಕಾಳಿದಾಸಸ್ಯ ಪ್ರತಿಭಟತಾಮಾತ್ರಿತವತೀತಿಚ ಬಲ್ಲಾಳಸೆನನಾಮ್ನಃ ಭೂಪತೆಃ ಸ್ನುಷಾಪಿ ಕವಿತಾವಿಚಾರೆ ಪ್ರಖ್ಯಾತಿಮೊಕ್ತಾಂಚ ॥ ಸದುಕ್ತಿ ಕರ್ಣಾಮೃತಗ್ರಂಥೆ ಬಾವದೆವಿ, ಶೀಲಾ, ಭಟ್ಟಾರಿಕಾ, ವಿದ್ಯಾವಿಜಯಾ, ವಿಕಟನಿತಂಬಾ ವ್ಯಾಸಪಾದಾ, ಪ್ರಭೃತಯಸ್ತ್ರಿಯಃ ಕವೀನಾಂಮಂಡಲೆಪ್ರಸಿದ್ಧಾ ಇತಿಖ್ಯಾತಿಮಲಭಂತ॥

ಅತ್ರಿಪತ್ನೀ ಅನಸೂಯಾಪಿ ಶ್ರೀರಾಮಪತ್ನ್ಯೈ ಸೀತಾದೆವ್ಯೈ ಲೋಕತಾವತ್ ಸ್ತ್ರಿಯಃ ಸರ್ವದಾ ನ್ಮನ್ವಿದಿತ್ವಾ ಶ್ವಶುರ ಶ್ವಶುರ, ಪತಿಪ್ರಭೃತಿಷು ವಿನೀತಾಭವತ್ವಾ ಪಾತಿವ್ರತ್ಯಂ ಪಾಲಯೆಯಿತ್ಯಾದಿ ಧರ್ಮಮುಪದಿಷ್ಟವತಿತಿ ಶ್ರೀವಾಲ್ಮೀಕಿ ಮಹರ್ಷಿ ಪ್ರಣೀತ ಶ್ರೀಮದ್ರಾಮಾಯಣೆ ಪ್ರಮಾಣಮಸ್ತಿ॥ ಸಾವಿತ್ರೀನಾಮ್ನಿ ಬಾಲ್ಯೆ ವಯಸಿ ವಿದ್ಯಾವತೀ ಭೂತ್ವಾ ಪ್ರತ್ಯಗ್ರ ಪ್ರಾಪ್ತಮೃತಕಾಲಮೃತ್ಯುಂ ಸ್ವಕೀಯ ಪಾತಿವ್ರತ್ಯಪ್ರಭಾವೆನೈವಜಿತ್ವಾ, ದ್ಯುಮತ್ಸೇನರಾಜಸ್ಯ ವರಪ್ರಭಾವಾತ್ಸಕಲೈಶ್ವರ್ಯ ಸಮೃದ್ಧಾಸೀದಿತಿ, ವೆದವ್ಯಾಸ ಮಹರ್ಷಿಪ್ರಣೀತಮಹಾಭಾರತೆ ಉದಾಹೃತಂ ಅಪಿಚ ಅಹಲ್ಯಾ, ತಾರಾ, ಮಂಡೋದರೀ, ದ್ರೌಪದೀ, ಶಕುಂತಳಾ, ದಮಯಂತೀ, ಶ್ರೀವತ್ಸರಾಜಮಹಿಷೀ, ಚಿಂತಾದೆವೀ, ಗಾಂಧಾರೀ, ಮಾಳವಿಕಾ,ಮಾಲತೀ,ಶ್ರೀಹರಿಶ್ಚಂದ್ರಪಟ್ಟಮಹಿಷೀ ಶೈಬ್ಯಾ, ಲೋಪಾಮುದ್ರಾ, ಪ್ರಭೃತಯಃ ಅನೆಕಾಃ ಭಾರತಮಹಿಳಾಜನಾಃ ವಿದ್ಯಾವತ್ಯಸ್ಸತ್ಯಃ ಪತಿವ್ರತಾಶಿರೆ ಭೂಷಣಯಸ್ಸಂಜಾತಾ ಇತಿ ಪುರಾಣೆತಿಹಾಸೆಷು ಪ್ರಸಿದ್ಧತಯಾ ಶ್ರೂಯಂತೆ

ಅಧುನಿಕಚರಿತಾನ್ಯವಲೋಕಿತಾನಿಚೆತ್ ಕರ್ಣಾಟ ರಾಜಮಹಿಷೀ, ವಿಶ್ವದೆವೀ, ಲಕ್ಷ್ಮೀದೆವೀ, ಖನ್ಯಾ,ಲೀಲಾವತಿ, ಪ್ರಭೃತಯಸ್ತ್ರಿಯಃ ಕವಿತ್ವನಿಪುಣಾಃ,ದುರ್ಗಾವತೀ,ಲಕ್ಷ್ಮೀಬಾಯಿನಾಮ್ನಿ, ಯಶವಂತರಾಜಮಹಿಷೀ, ಏತಾಸ್ತ್ರಿಯಃ ಯುದ್ಧಿಸಮರ್ಥಾಃ॥ ತಾರಾಬಾಯಿನಾಮ್ನಿ ಅಹಲ್ಯಾಬಾಯಿಖ್ಯಾತಾ ಸಾವಿತ್ರೀ ತುಳಸೀಬಾಯಿತಿ ಪ್ರಸಿದ್ಧೆ ರಾಜ್ಯಪರಿಪಾಲನವಿಷಯೆ ಪ್ರಖ್ಯಾತಿ ಇತಿ ಪ್ರತೀತಿರಸ್ತಿ॥ ಏತತ್ಸರ್ವಂದೃಷ್ಟ್ವಾ ಆಲೋಚಿತಂಚೆತ್ ಪೂರ್ವಸ್ಮಿನ್‌ಕಾಲೆ ಅಸ್ಮಿನ್ಸಮಯೆಪಿ ಸ್ತ್ರಿಯಃ ವಿದ್ಯಾಭ್ಯಾಸಂಕೃತವತ್ಯ ಇತಿ ವ್ಯಕ್ತಂ ಭವತಿಖಲು । ಏತದನಾಲೋಚ್ಯ ಸ್ತ್ರೀಣಾಂ ವಿದ್ಯಾಭ್ಯಾಸೋನರ್ಹ ಇತ್ಯಸ್ಮದ್ದೆಶೀಯಾಃ ನಿಷೆಧ್ಯಂ ಕಿಂದೃಶೋನ್ಯಾಯ ಇತಿ ನಜಾನೆ॥

ಅಸ್ಮದ್ದೆಶೀಯಾನಾಂ ಮೌಢ್ಯನಿವಾರಣಾರ್ಥಂ ಸರ್ವೈರಾತ್ಮಸದೃಶೈರ್ಭಾವ್ಯಮಿತಿತಾತ್ಪರ್ಯೆಣೈವ ದಯಾಶಾಲಿನಃ ಹೂಣಪ್ರಭವೋಪಿ ಅನೆಕ ಹಿಮಾಚಲಮಧ್ಯೆ ಸರ್ವದೆಶೆಷ್ವಪಿ ಬಾಲಿಕಾಜನ ಪಾಠಶಾಲಾಃಸ್ಥಾಪಯಿತ್ವಾ ವಿದ್ಯಾಭಿವೃದ್ಧಿಂ ಯಥಾಕೃತವಂತಃ ತಸ್ಯೈವ ಅಸ್ಮದ್ದೆಶೆಪಿ ಮಹೀಸುರಪುರೀ ಮಹಾರಾಜರಾಜಶ್ರೀ ಶ್ರೀಮಚ್ಚಾಮರಾಜಮಹೀಮಹೇಂದ್ರಮಿಶ್ರೊಪಿ ಸ್ವಕೀಯರಾಜಧಾನ್ಯಾಂ ಅಸ್ಯಾಂಖಲು ನಗರ್ಯಾಂ ಅನೆಕಸಹಸ್ರರೌಪ್ಯವ್ಯಯಂಕಾರಯಿತ್ವಾ «ಮಹಾರಾಜ್ಞೀ ಬಾಲಿಕಾಪಾಠಶಾಲಾ" ಇತಿ ನಾಮ್ನಾ ಪಾಠಶಾಲಾಂ ಸ್ಥಾಪಯಿತ್ವಾ ತದರ್ಥಂ ಅಮೂಲ್ಯಂ ನೂತನ ಚಿತ್ರಮಂದಿರಂಕಾರಯಿತ್ವಾ ಪ್ರತಿಮಾಸಂ ತ್ರಿಚತುರಸಹಸ್ರ ರೌಪ್ಯವ್ಯಯೆನ ಬಾಲಿಕಾಜನಾನಾಂ ನೀತಿಮಾರ್ಗೋಪದೆಶಕಾನಿ ಪುಸ್ತಕಾನಿ ಮುದ್ರಾಪಯಿತ್ವಾ ಸರ್ವಾಸಾಂ ಪಾರಿತೋಷಿಕತಯಾ ದಾಪಯಿತ್ವಾ «ಹೂಣಭಾಷಾ ಕರ್ಣಾಟಕಭಾಷಾ ಸಂಸ್ಕೃತ ವಿದ್ಯಾ ದೆವನಾಗರಲಿಪಿ ಕೌಶಲಂ, ಸಂಗೀತ ವಿದ್ಯಾಪಾಂಡಿತ್ಯಂ, ಸೂಚೀಕಲಾಪರಿಜ್ಞಾನಂ, ಪಾಕಶಾಸ್ತ್ರಜ್ಞಾನಂ ಚೆತಿ ಸ್ತ್ರೀಣಾಂ ಅತ್ಯಂತಾನುಕೂಲಾಃ ಸ್ವಾವಿದ್ಯಾಃ ಪಾಠಯಿತ್ವಾ ಪಂಚಪ್ರಭೃತಿ ಪಂಚಾಶದ್ರೌಪ್ಯಪರ್ಯಂತಂ ವಿದ್ಯಾರ್ಥಿನೀವೆತನಂ ಕಾರಯಿತ್ವಾ ಬಹ್ವೀನಾಂ ಸ್ತ್ರೀಣಾಂ ತಾಸಾಂ ವಿದ್ಯಾಸುರಭವತನು ಮಾಸಿ ಮಾಸಿ ದಾಪಯಿತ್ವಾಽ ಸಾಂವತ್ಸರಿಕ ಪರೀಕ್ಷಾಸಮಯೆ ಅನೆಕಸಹಸ್ರ ರೌಪ್ಯಾಣಿ ಅನರ್ಘಾಣಿ ವಸ್ತೂನ್ಯಪಿ ಪಾರಿತೋಷಿಕತಯಾದತ್ವಾಪಿ ಅಪ್ರವಿಷ್ಟಪಾಠಶಾಲಾನಾಂ ಬಹ್ವೀನಾಂ ಯೋಷಿತಾಂ ವಿದ್ಯಾಭಿವೃದ್ಧ್ಯನುಕೂಲ್ಯಾರ್ಥಂ ತಾಸಾಂ ಗೃಹೆಷ್ವೆವ ಪಾಠಯಿತುಂಬಹೂಪಾಧ್ಯಾಯಾನಾಜ್ಞಾಪಯಿತ್ವಾ ಸರ್ವಜನ ವಿದ್ಯಾವಿಲಾಸಂ ವಿರಚಯತಿಖಲು ॥ ಅಹೀಕಾರಣಾತ್ ॥ ವಿದ್ಯಾಭಿಮಾನೀತಿ ಜಗತ್ಪ್ರಸಿದ್ಧಾಂ ಪ್ರಖ್ಯಾತಿಂಪ್ರಾಪ್ತಃ ಸಾಮಂತಜನ ಸೀಮಂತಿನೀ ಸೀಮಂತ ಸಿಂದೂರಾರುಣ ಚರಣನಳಿನ ಯುಗಳಃ ವಿತರಣಗುಣಗಣ ನಿರಾಕೃತ ಕಾಮದೆನು ಕಲ್ಪವೃಕ್ಷ ಚಿಂತಾಮಣಿಪ್ರಭೃತಿಃ ಸಾಮ್ರಾಜ್ಯ ರತ್ನಸಿಂಹಾಸನಾಧಿಷ್ಠಿತಃ ಶ್ವೆತಚ್ಛತ್ರಾದ್ಯನೆಕರಾಜಬಿರುದಾಂಕಿತಃ ಶ್ರೀಮಚ್ಚಾಮರಾಜ ಮಹೀಮಹೆಂದ್ರಮಿಶ್ರಃ ಸಯುವರಾಜಃ ರತ್ನಸಿಂಹಾಸನೆ ಆಚಂದ್ರತಾರಂ ಜೀಯತಾಮಿತಿ ಸಕಲಜಗನ್ನಾಯಕಂ ಪರಮೆಶ್ವರಂಪ್ರಾರ್ಥಯಸ್ವಾಂಸರ್ವಾ ಅಪಿಸ್ತ್ರಿಯ ಇತಿ,ಧನ್ಯವಾದಪೂರ್ವಕಂ ವಿನಯಪೂರ್ವಕಂ ಸಾದರಂ ಸಾಂಜಲಿಬಂಧಂಚ ವಿಜ್ಞಾಪಯಾಮಿ."

ಅನೆತುಶೀತಾಚಲಮಧ್ಯಸ್ಥಾಸು ಬಾಲಿಕಾಪಾಠಶಾಲಾಸು ಅಸ್ಮನ್ಮಹೀಸೂರಪುರೀ «ಮಹಾರಾಜ್ಞೀ ಬಾಲಿಕಾಜನ ಪಾಠಶಾಲೈವ" ಸರ್ವೋತ್ಕೃಷ್ಟಮಿತಿಕೆಷ್ಯದಂ ನಿಸ್ಸಂಶಯಂಸಪ್ರಮಾಣಂ ವ್ಯಜಿಜ್ಞಾಪಂ॥ ಲೆಖನೆಸ್ಮಿನ್ನಸ್ಮದೀಯೆ ಯದಿ ಸ್ಯಾದ್ದೋಷಃ ಸರನ್ತಾಂಸನ್ತ ಇತಿ ಸಹಸ್ರಕೃತ್ವೋ ವಿನಯಂ ವಿಜ್ಞಾಪಯಾಮಿ.

ಅಕೃತಾಸ್ಮಿನ್ನಾಮಾಂಕಿತೆ ಗತ ಮಾರ್ಚಿಮಾಸಂ ಜ್ಞಾಂಕಮಾಸಿ ನಿರ್ಮಿತೆ ಹಿತಬೋಧಿನೀತಿ ಪ್ರಸಿದ್ಧಪತ್ರಿಕಾಯಾಂ ಅಸ್ಮದ್ವಾಗ್ವೈಖರೀನಿರ್ಮಿತಾಂ ಉಪನ್ಯಾಸಸರಣಿಂ ಸ್ವಕೀಯತ್ವಪದ್ಯತಮತೀ ಆ ದಿವೆಪುರನಿವಾಸಿನೀ ಕಾಚನಸಾರಸ್ವತಬ್ರಾಹ್ಮಣೀತಿ ಶ್ರುತಂ ದೃಷ್ಟಂಚ ಅತಏವ ಅಸ್ಮನ್ನಾಮಾಂಕಿತಮಿತಿ ಸುದಿಯೊ ವಿದಾಂ ಕುರ್ವಂತು॥

ಮಹೀಸೂರಪುರನಿವಾಸಿನೀ ವಿದ್ಯಾಭಿವೃದ್ಧಿಮಭಿಲಷಮಾಣಾ ವಿದ್ಯಾರ್ಥಿನೀ
ಪುಟ್ಟಸುಬ್ಬಮ್ಮಣ್ಣಿ ನಾಮ್ನೀ.

Krishna kathasara sangraha.—ಶ್ರೀಮನ್ಮಹಾರಾಜರವರ ಆಜ್ಞಾನುಸಾರ ಅರಮನೆ ಧರ್ಮಾಧಿಕಾರಿಗಳಾದ ಚಕ್ರವರ್ತಿಅಯ್ಯಂಗಾರ್ರ್‍ಬವರಿಂದ ಮೈಸೂರು, ವಿದ್ಯಾಶರಂಗಿಣೀ ಮುದ್ರಾಕ್ಷರಶಾಲೆಯಲ್ಲಿ ಪ್ರಥಮಾವರ್ತಿ ಮುದ್ರಿಸಲ್ಪಟ್ಟಿರುವ ಶ್ರೀಕೃಷ್ಣಕಥಾಸಾರ ಸಂಗ್ರಹವೆಂಬ ಗ್ರಂಥದ ಪ್ರತಿಯೊಂದು ನಮಗೆ ಈಚೆಗೆ ಕಳುಹಿಸಲ್ಪಟ್ಟಿತು. ಈಗ್ರಂಥವು ಸಾಬಕ್‌ಮಹಾರಾಜರವರಿಂದ ವಚನರೂಪವಾಗಿ ಕರ್ಣಾಟಭಾಷೆಯಲ್ಲಿ ರಚಿಸಲ್ಪಟ್ಟದ್ದಾಗಿರುತಿದೆ ಉತ್ಪತ್ತಿಕಾಂಡವಾದ ಈ ಪ್ರಥಮಸಂಚಿಕೆಯು, ಮೂವತ್ತಾರು ಅಧ್ಯಾಯಗಳುಳ್ಳದ್ದಾಗಿಯೂ, ಸೃಷ್ಟಿಕ್ರಮಾದಿ ಬಹುವಿಷಯಗಳನ್ನರುಹತಕ್ಕದ್ದಾಗಿಯೂ, ಮನು ಮೊದಲಾದ ಚಕ್ರವರ್ತಿಗಳ ಪೂರ್ವ ವೃತ್ತಾಂತಗಳನ್ನು ಬೋಧಿಸತಕ್ಕದ್ದಾಗಿಯೂ ಅನೇಕ ಪುರಾಣಾರ್ಥ ಪ್ರತಿಪಾದಕವಾದದ್ದಾಗಿಯೂ, ಜ್ಞಾನಭಕ್ತಿ ವರ್ಧಕವಾದದ್ದಾಗಿಯೂ, ಕರ್ಣಾಟಭಾಷಾಜ್ಞಾನ ಸಂಪಾದನಾಭಿಲಾಷಿಗಳಿಗೆ ಅತ್ಯಂತೋಪಯುಕ್ತವಾದದ್ದಾಗಿಯೂ, ಸಾಧ್ಯವಾದಷ್ಟುಗೆ ಸುಲಭಶೈಲಿಯಲ್ಲಿ ಬರೆಯಲ್ಪಟ್ಟದ್ದಾಗಿಯೂ ಯಿರುತಿದೆ.

« ವೇದವ್ಯಾಸಾದಿ ಮಹಾತ್ಮರು ಲೋಕಹಿತಾರ್ಥವಾಗಿ ಸಂಸ್ಕೃತ ಬಾಷೆಯಿಂ ವಿರಚಿಸಿದ ಹರಿವಂಶ,ವಿಷ್ಣುಪುರಾಣ, ಕೂರ್ಮಪುರಾಣ, ವರಾಹಪುರಾಣ, ನಾರಸಿಂಹಪುರಾಣ, ಸ್ಕಾಂದಪುರಾಣ, ಪಾದ್ಮಪುರಾಣ, ಗರುಡಪುರಾಣ, ಲೈಂಗ್ಯಪುರಾಣ, ಮಾರ್ಕಂಡೇಯಪುರಾಣ, ಬ್ರಹ್ಮೋತ್ತರ, ಬವಿಷ್ಯೋತ್ತರ, ಶಿವಧರ್ಮೋತ್ತರ, ಬೃಹನ್ನಾರದೀಯ, ಶ್ರೀಬಾಗವತ, ದೇವೀಭಾಗವತ, ಶ್ರೀಮದ್ರಾಮಾಯಣ, ವಾಸಿಷ್ಠಪುರಾಣ, ಅಧ್ಯಾತ್ಮರಾಮಾಯಣ,ಮಹಾಬಾರತ, ಜೈಮಿನಿ ಬಾರತ ಮೊದಲಾದ ಸಕಲಪುರಾಣೇತಿಹಾಸಂಗಳೊಳು ಸಾರತರಗಳಾದ ಸತ್ಕಥೆಗಳಂ ಸಂಗ್ರಹಿಸಿ, ಸಮಸ್ತವಿದ್ವಜ್ಜನಾನುಮತಿಯಿಂ «ಕೃಷ್ಣಕಥಾಸಾರಸಂಗ್ರಹ" ವೆಂಬ ಉತ್ತಮಗ್ರಂಥವು ಕರ್ಣಾಟಕ ಭಾಷೆಯೊಳು ವಿರಚಿಸಲ್ಪಟ್ಟಿತು. ಪ್ರಸಕ್ತ ಈಗ್ರಂಥದೊಳು ಬಗವದವತಾರ ವಂಶವಿಸ್ತಾರಂಗಳುಂ, ಭಗವದುತ್ಪತ್ತಿ ಚರಿತ್ರಂಗಳುಂ, ಜಗದ್ರಕ್ಷಣಾರ್ಥವಾದ ಬಗವದವತಾರಭೇದಂಗಳುಂ, ಸೂರ್ಯ ಚಂದ್ರ ವಂಶೋತ್ಪನ್ನರಾದ ಪೂರ್ವ್ಯರಾಜರ ಪುಣ್ಯ ಚರಿತ್ರಂಗಳುಂ, ರಾಜನೀತಿಗಳುಂ, ಧರ್ಮಸಾರಂಗಳುಂ, ತತ್ವ ವಿಚಾರಂಗಳುಂ, ಪಮಗ್ರಗಳಾಗಿಯೂ ವಿಶದಗಳಾಗಿಯೂ ತಿಳಿಸಲ್ಪಟ್ಟಿರುತಿವೆ ಮತ್ತು ಈ ಗ್ರಂಥವು ಸರಸಾಲಂಕಾರ ಚಿತ್ರಚಮತ್ಕಾರಯುಕ್ತವಾಗಿಯುಂ, ಸುಲಲಿತಪದಪುಂಜರಂಜಿತಮಾಗಿಯುಂ, ಸದ್ವಿಷಯಕಮಾಗಿಯುಂ, ಇರುವದರಿಂದ ನಿಖಿಲ ಪಂಡಿತಮಂಡಲೀಸಂಮತದಿಂ ರಾಜಕೀಯವಿದ್ಯಾ ಪರೀಕ್ಷಾಸಹಾಯಕ್ಕುಂ, ಭಾಷಾವ್ಯುತ್ಪತ್ತಿಗುಂ, ಅತ್ಯಂತೋಪಯುಕ್ತಮೆನಿಸಿಕೊಂಡಿರು

ಷದು. ಪರಂತು ಇದು ಭಗವದ್ವಿಷಯಕವಾದ ಸತ್ಕಥಾಸಾರಸಂಗ್ರಹಮಾಗಿರುದದರಿಂದ ಶ್ರವಣಪಠಣಾದಿಗಳಗತ್ಯಂತಯೋಗ್ಯವಾದುದೆಂದೆನಿಸಿ, ಸಹೃದಯಹೃದಯಾನುದಜನಕವಾಗಿರುವುದು. ಇದರೊಳು ಸೃಷ್ಟ್ಯಾದಿಕ್ರಮವನ್ನು ವಿವರಿಸುವ [ಉತ್ಪತ್ತಿಕಾಂಡ] ಭಗವಲ್ಲೀಲೆಗಳಂ ಬೋಧಿಸುವ [ವಿಲಾಸಕಾಂಡ] ಭಗವತ್ಕಲ್ಯಾಣಾದಿಗಳಂ ವಿವರಿಸುವ [ಕಲ್ಯಾಣಕಾಂಡ] ಭಗವತ್ಸಂತಾನಾದಿಗಳಂ ವ್ಯಕ್ತಗೊಳಿಸುವ [ಸಂತಾನಕಾಂಡ] ಭಗವದವತಾರಾದಿಳಂ ಪ್ರಕಟಗೊಳಿಸುವ [ಅವತಾರಕಾಂಡ] ಎಂಬ ಐದುಕಾಂಡಗಳಿರುವವು. ಲೋಕೋಪಕಾರಾರ್ಥವಾದ ಈ ಗ್ರಂಥವು ಇದುವರಿವಿಗೂ ಮುದ್ರಾಂಕಿತವಾಗದೆ ಶ್ರೀ|| ಅರ್ಯಮನೇ ಸರಸ್ವತೀ ಭಂಡಾರದೊಳು ಪ್ರಾಜ್ಞಾಯೋಗ್ಯವಾಗಿತ್ತಲ್ಲದೆ, ಸರ್ವತ್ರಪ್ರಕಟವಾಗಲಿಕ್ಕೆ ಅವಕಾಶವಿಲ್ಲವಾಗಿತ್ತು. ಪ್ರಕೃತದೊಳು (ಪಿತಾಪುತ್ರೇಣ ಪಿತ್ರ್ಯವರ್ಗ) ಎಂಬರೀತ್ಯಾ, ವಿದ್ಯಾಭಿಮಾನಿಗಳುಂ ಪ್ರಜಾಭಿರಂಜನರುಂ ಯಶೋಧನಾಭಿವೃದ್ಧಿ ವಿನೋದಚಿತ್ತರುಂ ಎನಿಸಿ ಮೆರೆವ ನಮ್ಮ ಕರ್ನಾಟಕ ಸಾರ್ವಭೌಮರಾದ || ಶ್ರೀಮದ್ರಾಜಾಧಿರಾಜಮಹಾರಾಜ ||ಶ್ರೀ|| ಚಾಮರಾಜೇಂದ್ರಒಡೆಯರ್ ಬಹದೂರವರ ಸನ್ನಿಧಿಯಲ್ಲಿ ಆಜ್ಞೆಯಂ ಪಡೆದು ಈ ಉತ್ತಮಗ್ರಂಥಮಂ ಛಾಪಿಸಲಾಯಿತು.

ಇದರಲ್ಲಿ ಕೇವಲ ಕೃಷ್ಣನವೃತ್ತಾಂತವೇಪ್ರಾಧಾನ್ಯವಾಗಿರುವದರಿಂದ ಕೃಷ್ಣಾವತಾರ ಘಟ್ಟವೇ ಮೊದಲು ಉಪಕ್ರಮವಾಗಿ ಅದಕ್ಕೆ ಮೂಲಕಾರಣವು ಇದರಡಿ ಕಂಡಂತೆ ತಿಳಿಸಲ್ಪಟ್ಟಿರುತಿದೆಯೆಂತೆಂದರೆ—

ವಾಸುದೇವನು ವಸುದೇವನನ್ನು ನೋಡಿ -ಎಲೈವಸುದೇವನೇ—ನೀನು ಸ್ವಾಯಂಭುವ ಮನ್ವಂತರದಲ್ಲಿ ಸುತಪಸ್ಸೆಂದು ಪ್ರಸಿದ್ಧನಾದಬ್ರಹ್ಮನು, ಈದೇವಕೀದೇವಿಯು ನಿನಗೆಪತ್ನಿಯಾದ ಪೃಶ್ನಿದೇವಿ. ನೀವೀರ್ವರು ನನ್ನನ್ನುಕುರಿತು ಹನ್ನೆರಡು ದಿವ್ಯಸಹಸ್ರ ವರುಷಗಳವರಿವಿಗೆ ಸಮಸ್ತಗಳಾದ ಇಂದ್ರಿಯಗಳನ್ನೂ ನಿರೋಧಿಸಿ ಅತ್ಯಂತ ಶ್ರದ್ಧಾಭಕ್ತಿಗಳಿಂದ ಯುಕ್ತರಾಗಿವಂಚಾಗ್ನಿಮಧ್ಯದಲ್ಲಿ ದುಷ್ಕರವಾದತಪಸ್ಸನ್ನುಮಾಡಲು, ನಾನು ನಿಮ್ಮತಪಸ್ಸನ್ನುನೋಡಿ ಮೆಚ್ಚಿ ನಿಮಗೆ ಪ್ರತ್ಯಕ್ಷನಾಗಿಬಂದು ದರ್ಶನವನ್ನುಕೊಟ್ಟು, ನಿಮಗೆ ಬೇಕಾದವರವನ್ನು ಬೇಡಿಕೊಳ್ಳಿರೆಂದು ಆಜ್ಞಾಪಿಸಿದೆನು. ಆಗ ನೀವು ನನ್ನ ಮಾಯೆಯಿಂದ ಮೋಹಿತರಾಗಿ ಮೋಕ್ಷವನ್ನು ಬೇಡದೆ ನೀನೇಸರ್ವಥಾ ನಮಿಗೆಪುತ್ರಭಾವವನ್ನು ವಹಿಸಬೇಕೆಂದು ಕೇಳಲು ನಾನು ಪ್ರಸನ್ನನಾಗಿ ಹಾಗೆಯೇ ಆಗಲೆಂದು ನುಡಿದು, ಆಕಲ್ಪದಲ್ಲಿ ನಿಮಿಗೆ ಪುತ್ರನಾಗಿ ಪೃಶ್ನಿಗರ್ಭನೆಂಬ ಹೆಸರನ್ನು ಪಡೆದಿದ್ದೆನು. ಪುನಃ ನೀನೇ ಕಶ್ಯಪನಾಗಿಯೂ, ಈ ದೇವಕೀದೇವಿಯೇ ಅದಿತಿಯಾಗಿಯೂ ಹುಟ್ಟಿದ್ದಾಗ ನಾನು ಇಂದ್ರನಿಗೆ ತಮ್ಮನಾಗಿಹುಟ್ಟಿ ಉಪೇಂದ್ರನೆಂತಲೂ, ವಾಮನನೆಂತಲೂ ಪ್ರಸಿದ್ಧನಾಗಿದ್ದೆನು. ನೀನು ಕಶ್ಯಪನಾಗಿದ್ದಾಗ ಪ್ರಾಪ್ತವಾದ ಬ್ರಹ್ಮಶಾಪವೆಂಬನೆವದಿಂದ ಈಗ ಭೂಮಿಯಲ್ಲಿ ಕ್ಷತ್ರಿಯನಾಗಿಹುಟ್ಟಿ ಗೋಪತಿಯಾಗಿ ವಸುದೇವನೆಂದು ಪ್ರಸಿದ್ಧನಾಗಿರುವಿ. ನಿನ್ನ ಪತ್ನಿಯಾಗಿದ್ದ ಅದಿತಿದೇವಿಯೇ ದೇವಕಿಯೆಂಬ ನಾಮಧೇಯದಿಂದ ಪ್ರಸಿದ್ಧಳಾಗಿರುವಳು. ಆದದರಿಂದ ನಾನು ನಿಮಿಗೆ ಪೂರ್ವಜನ್ಮಸ್ಮರಣೆಯನ್ನುಂಟುಮಾಡಿಸಕರೇಷ್ಟಾರ್ಥಗಳನ್ನುಕೊಟ್ಟು ನಿಮ್ಮ ತಪಃಫಲವನ್ನು ನೆರವೇರಿಸಲೋಸುಗ ಈಗ ನಿಮ್ಮಗರ್ಭದಲ್ಲಿನೆಲೆಸಿ, ದಿವ್ಯಲಕ್ಷಣಗಳಿಂಯುಕ್ತನಾಗಿ ನಿಮಿಗೆ ದರ್ಶನವನ್ನುಕೊಟ್ಟೆನು. ಎಂಬದು.

ಹೀಗೆ ಅನೇಕ ಉಪಯುಕ್ತಾಂಶಗಳಿಂದೊಡಗೂಡಿರುವ ಈಗ್ರಂಥವು ಯೆಲ್ಲರ ಪರಿಗ್ರಹಕ್ಕೂ, ಯೋಗ್ಯವಾಗಿದೆಯಲ್ಲದೆ, ಇದುಬಾಲಿಕಾಪಾಠಶಾಲೆಗಳಲ್ಲಿ ಪಾಠ್ಯಗ್ರಂಥವಾಗಿಡಲಿಕ್ಕೆ ಅರ್ಹವಾದದ್ದೆಂದೆಣಿಸುವೆವು. ಹೀಗೆಯೇ ಉಳಿದ ನಾಲ್ಕುಕಾಂಡಗಳೂ ಪೂರೈಸಿದರೆ, ಅನೇಕ ಪುರಾಣಗಳ ಅರ್ಥವನ್ನು ಏಕತ್ರ ತಿಳಿಸುವಸಮಗ್ರವಾದ ಒಂದುಗ್ರಂಥವಾಗಿ ಏರ್ಪಟ್ಟು ಜನಗಳಿಗೆ ಬಹಳ ಉಪಯುಕ್ತವಾದದ್ದಾಗಿರುವದು.

CORRESPONDENCE.

ಅಯ್ಯಾ,—ಈಪ್ರಾರಲ್ಲಿ ಶ್ರೀ ರಾಘವೇಂದ್ರಸ್ವಾಮಿಗಳಮಠವೆಂತಲೂ, ಸರ್ವಜ್ಞರಮಠವೆಂತಲೂ ಯೆರಡುಮಠಗಳಿವೆ. ಕೇನಾಪಿಕಾರಣದಿಂದ ತತ್ತದಭಿಮಾನಿಗಳಲ್ಲಿ ವೈಷಮ್ಯವುಂಟಾಗಿ ಪರಸ್ಪರ ಭೋಜನ ಪ್ರತಿಭೋಜನಗಳಿಲ್ಲದೆ ಯಿರುತ್ತಾರೆ. ಉಭಯಕಕ್ಷಿಯಲ್ಲಿಯೂ ಕೇವಲ ಸಮೀಪಬಾಧುತ್ವ ಯಿರುವದುನೋಡಿ ಅಸ್ಮದಾದಿಗಳು ಇದುಸಮವಲ್ಲವೆಂತಲೂ ವ್ಯಾಜ್ಯವನ್ನು ಒಂದುಬಗೆಯಾಗಿ ತೀರಿಸಿ ಅನುರಾಗಿಗಳಾಗಿರಬೆಂಕೆಂನು ಹೇಳದ್ದರಮೇಲೆ ಮೊನ್ನೆಭಾನುವಾರದದಿನ ಇವರ ವ್ಯವಸ್ಥೆಯಬಗ್ಯೆ ಇಲ್ಲಿನ ಒಬ್ಬದೊಡ್ಡಅಧಿಕಾರಿಯ (ಲೌಕಿಕ) ಮನೆಯಲ್ಲಿ ಕೆಲವುಜನರು ಸೇರಿದರು. ಸರ್ವಜ್ಞರಮಠದಕಡೆಯಿಂದ ಈ ಪ್ರಾಂತಕ್ಕೆಲ್ಲ ಸರ್ವಾಧಿಕಾರಿಗಳಾಗಿ ನಿಯಮಿಸಲ್ಪಟ್ಟು ಸ್ವತಃ ಸ್ಥಳದಲ್ಲಿ ಪ್ರಾಕಸ್ಥ್ಯವುಳ್ಳ ಒಬ್ಬ ದೊಡ್ಡಮನುಷ್ಯರು ಆಮಂತ್ರಣ ಮೂಲಕ ಅಲ್ಲಿಗೆ ಹೋದರು. ಉದ್ದೇಶಿಸಿದ್ದ ಕಾರ್ಯವು ಯಥೋಚಿತ ವ್ಯವಸ್ಥೆಯನ್ನು ಹೊಂದಿ ಬಳಿಕ ಯಾವದೋಒಂದು ಮಾತಿಗಾಗಿ ಲೌಕಿಕಾಧಿಕಾರಿಗಳಿಗೂ, ವೈದಿಕಾಧಿಕಾರಿಗೂ ವಾಕ್ಕಲಹ ಪ್ರಂಟಾಗಿ ಅನುತರ ಅದು ಪ್ರಾಬಲ್ಯವನ್ನೈದಲು, ಈ ಪ್ರಾಂತಕ್ಕೆ ಲೌಕಿಕಾಧಿಕಾರಿಗಳು ತಮ್ಮ ಅಧಿಕಾರದ ಪ್ರಾಭವ ಬಲದಿಂದ ವಾಚಾಮ ಗೋಚರಗಳಾದ ದುರ್ಭಾಷೆಗಳಿಂದ ವೈದಿಕಾಧಿಕಾರಿಗೆ ಸನ್ಮಾನ ಮಾಡಿದರಲ್ಲದೆ ತಮ್ಮ ದ್ವಾರ್ಥರಲ್ಲೊಬ್ಬನಾದ ಮ್ಲೇಚ್ಛನನ್ನು ಕರೆದು ವೈದಿಕಾಧಿಕಾರಿಗಳನ್ನು ಅರ್ಧಚಂದ್ರ ಪ್ರಯೋಗದೊಡನೆ ತಮ್ಮ ಮನೆಯಿಂದ ತೆರಳಿಸೆಂದಾಜ್ಞಾಪಿಸಿದರು. ಕಿಂಬಹುನಾ, ಅಲ್ಲಿದ್ದ ಇನ್ನೂ ಕೆಲವರ ಉಚಿತಜ್ಞತೆಯಿಂದ ಉಭಯಾಧಿಕಾರಿಗಳೂ ಗದಾಧರಿ ಪಾಠವನ್ನುಪಕ್ರಮಿಸದೇಇರಲು ಅವಕಾಶವಾಯಿತು. ಈಸಂಗತಿ ಸ್ಮರಿಸಲು ಸಹ ಯೋಗ್ಯವಲ್ಲದೆ ಯಿದ್ದರೂ ಈ ರೀತಿ ತಮ್ಮ ಮಠದ ಅಧಿಕಾರಿಗಳನ್ನು ತಾವೇ ಮನೆಗೆಕರೆಸಿಕೊಂಡು ಮಧ್ವಮತ ಪ್ರವಿಷ್ಟರಾದ ಸದ್ಬ್ರಾಹ್ಮಣರೆನಿಸಿಕೊಂಡಿರುವ ಈ ಲೌಕಿಕಾಧಿಕಾರಿಗಳು ವೈದಿಕ ಸಾರ್ವಭೌಮರಿಗೆ ಮಾಡಿದ ತೇಜೋಹಾನಿಯು, ಬ್ರಾಹ್ಮಣನೆಂದೆನಿಸಿಕೊಳ್ಳಲು ಹೇಳಿರುವ ಅನೇಕೋಪಾಯಗಳಲ್ಲಿಒಂದು ಸದುಪಾಯವಾಗಿಯೂ ಇದು ಯಾರಲ್ಲಿದೆಯೋ ಅವರೇ ಬ್ರಾಹ್ಮಣರಲ್ಲವೇ ಯೆಂದು ನಿಶ್ಚಯಿಸಬೇಕಾಗಿರುವದರಿಂದ, ಮಹಾರಾಜಶ್ರೀ ಚಂಚಲರಾಯರವರ ಪ್ರಶ್ನೆಗೆ ಇದೇ ತಕ್ಕ ಉತ್ತರವಾಗಬಹುದೆಂದು ಅರಿಕೇ ಮಾಡಿಕೊಂಡಿದೇನೆ. ಕಲಿಯಲ್ಲಿ ಈ ಮಟ್ಟಿಗೆ ಇರುವವರೇ ಬ್ರಾಹ್ಮಣರೆಂತ ನನಿಗೆ ತೋರುತಿದೆ. ಪ್ರಸ್ತಾಪಿತರಾದ ವೈದಿಕಾಧಿಕಾರಿಗಳು ಆಯಾಸಗೊಳ್ಳಲು ಕಾರಣವಿಲ್ಲವು. ಯಾಕೆಂದರೆ, ಲೌಕಿಕಾಧಿಕಾರಿಗಳು ತಮ್ಮ ಮತಕ್ಕೆ ಅಭಿಮಾನವಸ್ತುವಾದ ಉಪಾನದಿಂದ ಇವರನ್ನು ಹೊಡೆಯಲು ತದರ್ಥ ಹುಡಿಕಿ ಸಿಕ್ಕದೆ ಸುಮ್ಮನೆ ಆಚಾರ್ಯರನ್ನು ಬಿಟ್ಟದ್ದು ಇವರ ಸತ್ಕರ್ಮಫಲವೆಂದೆಣಿಸಬೇಕು.

ಹೊನ್ನಾಳಿ, ೨೧—೭—೮೬.	ತಮ್ಮ ವಿಧೇಯನಾದ, ಪಾಮರನು.

SUMMARY OF NEWS.
ವೃತ್ತಾಂತ ಸಂಗ್ರಹವು.

—:o:—

The "Statesman" Libel Case —ಕಲ್ಕತ್ತಾ ಸ್ಟೇಟ್ಸಮನ್ ಪತ್ರಿಕೆಯಮೇಲೆ ತರಲ್ಪಟ್ಟಿರುವ ಮಾನನಷ್ಟದೊಕದ್ದಮೆಯು ಈಗ ಕಲ್ಕತ್ತಾ ಹೈಕೋರ್ಟಿನಲ್ಲಿ ವಿಚಾರಣೆಯಾಗುತದೆಯಾಗಿ ಫಿರ್ಯಾದಿಯಕಡೆ ಎರಡುಗಾಡಿಗಳಲ್ಲಿ ಕಾಗದಪತ್ರಗಳು ಕೋರ್ಟಿಗೆತರಲ್ಪಟ್ಟವು. ಇವೆಲ್ಲವು ಸಾಕ್ಷ್ಯವಾಗಿ ಉಪಯೋಗಿಸಲ್ಪಡುವದಕ್ಕೆ ಈಮೊಕದ್ದಮೆಯವಿಚಾರಣೆಯುಯೆಂಟು ದಿನಗಳಕಾಲ ಹಿಡಿಯಬಹುದು.

A School Bank in Bombay.—ರಾಸ್ಟ್‌ಗಾಫ್ತ‌ರ್‌ಯೆಂಬಪತ್ರಿಕೆ ಹೇಳುವದೇನುದರೆ:—ಇಂಡ್ಯಾ ಟ್ಯೈಂಸ್ ಪತ್ರಿಕೆಯ ಒಬ್ಬ ಬಾತಮಿದಾರನು ಕೊಟ್ಟ ಸಲಹೆಯನ್ನನುಸರಿಸಿ, ಫಾರಸೀಜನಗಳ ವಿದ್ಯಾಭ್ಯಾಸಕ್ಕಾಗಿ ಮುಂಬೈಯಲ್ಲಿ ಸರ. ಜಂಸದ್‌ಜೀ ಜೇಜೀಭಾಇಯವರಿಂದಸ್ಥಾಪಿಸಲ್ಪಟ್ಟಿರುವಪಾಠಶಾಲೆಯ ಪ್ರಥಮೋಪಾಧ್ಯಾಯರವರುವಿದ್ಯಾರ್ಥಿಗಳೊಬ್ಬೊಬ್ಬರಿಂದಒಂದುಕಾಸುಮೊದಲು ಹದಿನಾಲ್ಕುಕಾಸುಗಳವರಿವಿಗೆ ಬಚಮಾಡಿಕ್ಕೊಂಡು ಒಬ್ಬೊಬ್ಬವಿದ್ಯಾರ್ಥಿಯದು ನಾಲ್ಕಾಣೆವಕೂಡಿದರೆ ಅದನ್ನು ಆ ವಿದ್ಯಾರ್ಥಿಯ ಹೆಸರಿನಲ್ಲಿ ಸೇವಿಂಗ್ಸ್‌ಬ್ಯಾಂಕಿನಲ್ಲಿ ಡಿಪಾಜಿಟಿಇಡಬೇಕೆಂಮಹುಕುಂಮಾಡಿರುತ್ತಾರೆ.—ಇಂಡ್ಯಟ್ಯೈಂಸ್.

Re-entertainment of public servants. ರಾಜೀನಾಮೆ ಕೊಡುವದರಮೂಲಕವಾಗಲಿ, ಕೆಲಸದಿಂದ ವಜಾ ಮಾಡಲ್ಪಡುವದರಮೂಲಕವಾಗಲಿ ನೌಕರಿಯಂ ಹೋಗಲಾಡಿಸಿಕೊಳ್ಳುವಂತಾವರಿಗೆ ಮರಳಿ ಕೆಲಸ ಕೊಡಲ್ಪಟ್ಟರೆ, ಹಿಂದಿನ ಅವರ ನೌಕರಿ ತಪ್ಪಿಹೋಗಿ, ಯೊಸದಾಗಿ ನೌಕರಿಯಲ್ಲಿಡಲ್ಪಟ್ಟಂತೆ ಯೆಣಿಸಲ್ಪಡುವರೆಂತಲೂ, ಹಾಗೆ ನೌಕರಿಯೊಳಿಡಲ್ಪಟ್ಟವನ ವಯಸ್ಸು ಇಪ್ಪತ್ತೈದುವರುಷಗಳಿಗೆ ಮೀರಿದ್ದಾಗಿರುವ ಪಕ್ಷಕ್ಕೆ ಅತವನನ್ನು ಗವರ್ನಮೆಂಟಿನ ಅಥವಾ ಇಲಾಖಾ ಮೊಖ್ತೇಸರನ ಮಂಜೂರಾತಿಯಮೇಲೆ ಇಡಬೇಕೆಂತಲೂ ಗವರ್ನಮೆಂಟಿನವರುನಿರ್ಣೈಸಿರುತ್ತಾರೆ.

Encouragement of education.—ಹೈದರಾಬಾದ್‌ನಲ್ಲಿ ಫುರಾಣೀದಾರರಾಗಿಯೂ ಪ್ರಮುಖರಾಗಿಯೂ ಇರತಕ್ಕವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸ್ಥಾಪಿಸಲ್ಪಟ್ಟಿರುವಪಾಠಶಾಲೆಯ ಪ್ರಥಮೋಪಾಧ್ಯಾಯರಾದ ಮೆ||ಹಡೆಸರ್ಸಯವರಿಗೆಈಗಕೊಡಲ್ಪಡುತಬರುವ ಸಂಬಳಕ್ಕೆ ೩೦೦ ರೂಪಾಯಿಗಳು ಜಾಸ್ತೀಕೊಡುವಂತೆ ನಿಜಾಂ ಸರ್ಕಾರದವರು ಹುಕುಂಕೊಟ್ಟಿರುವಂತೆ ಕೇಳುವದಕ್ಕೆ ಸಂತೋಷಿಸುತ್ತೇವೆ. ಮೆ|| ಹಡೆಸರ್ಸಯವರು ಸದರೀ ಪಾಠಶಾಲೆಗೆ ಬಂದಮೇಲೆ ವಿದ್ಯಾರ್ಥಿಗಳ ಸಂಖ್ಯೆಯು ಕೆಲವುಸಂವತ್ಸರಗಳಹಿಂದೆ ಇದ್ದದಕ್ಕಿಂತಲೂ ಯೆರಡರಷ್ಟು ಹೆಚ್ಚಾಗಿರುತದೆ. ಸರ್ಕಾರಕೆಲಸಗಳಿಗೆ ತಯಾರ್ಮಾಡತಕ್ಕಬಗ್ಯೆ ಸದರೀಪಾಠಶಾಲೆಯಲ್ಲಿ ಒಂದುತರಗತಿ ಏರ್ಪಾಡುಮಾಡಲ್ಪಟ್ಟಿರುತಿದೆ. ಅದರಲ್ಲಿ ಫುರಾಣಿಗೆಸೇರಿದ ಇಪ್ಪತ್ತು ಮೂವತ್ತು ಬಾಲಕರು ಓದುತಲಿದಾರೆ. ಅವರೆಲ್ಲರು ತಮ್ಮತಮ್ಮ ವಿದ್ಯಾಭ್ಯಾಸವ ಪೂರ್ತಿಮಾಡಿಕೊಂಡಕೂಡಲೇ ಅವರೆಲ್ಲರಿಗೂ ಸರ್ಕಾರ್ ನೌಕರಿಗಳು ನಿರೀಕ್ಷಿಸಲ್ಪಡುವವು. ಮೆ|| ಹಡೆಸರ್ಸಯ ಕರಿಂದಲೇ ಈ ತರಗತಿ ಏರ್ಪಾಟಾಯಿತು. ಈ ಪಾಠಶಾಲೆಯವಿಷಯದಲ್ಲಿ ಮೆ|| ಹಡೆಸರ್ಸಯವರು ಬಹಳ ಮೆಹನತ್ತು ಮಾಡುತ್ತಾರೆಯಾಗಿ ತಿಳಿದು ಬಡ್ತಿಗೆ ಕೇವಲ ಅರ್ಹರಾಗಿರುತ್ತಾರೆ.—ದರ್ಬಾರ್ ಟೈಂಸ್.

The Bombay Charitable Eye and Ear Infirmary.—ಮುಂಬೈಯಲ್ಲಿ ನೇತ್ರ ಮತ್ತು ಕರ್ಣರೋಗಗಳ ಚಿಕಿತ್ಸೆಯಬಗ್ಯೆ ಸ್ಥಾಪಿಸಲ್ಪಟ್ಟಿರುವ ವೈದ್ಯಶಾಲೆಯ ಕಮಿಟಿಯವರು ಮೆ. ದಿನ್‌ಷಾಮೆನಾಕ್‌ಜಿ ಪೇಟಿಟಿಯವರ ಗೃಹದೊಳು ಆಚೇಬೃಹಸ್ಪತಿವಾರದದಿನ ಸಭೆಸೇರಿದ್ದರು. ಮೆ. ದಿನ್‌ಷಾಮೆನಾಕ್‌ಜಿ ಯವರು ಅಗ್ರಾಸನವುವಹಿಸಿದರು. ಸದರೀಯವರು ಸದರೀ ವೈದ್ಯಶಾಲೆಯ ಆನರೆರಿ ಸೆಕ್ರೆಟೆರಿಯವರಹೆಸರಿಗೆ ಬರೆವಕಾಗದವು ಓದಲ್ಪಟ್ಟಿತು ಸದರೀ ಶಾಲೆಯು ಅಜಮಾಯಿಷೀತರೀಖ್‌ಮೊದಲು ಯೇರ್ಪಡಿಸಲ್ಪಟ್ಟು ಮಾಸಾಶನದಿಂದಲೂ ಒಟ್ಟಾಗಿಕೊಡಲ್ಪಟ್ಟಸಹಾಯ ದ್ರವ್ಯದಮೂಲಕವಾಗಿಯೂ, ಮೆ. ಗಾಮಾಯೆಂಬವರು ತಮ್ಮ ಅಸಿಸ್ಟೆಂಟರುಗಳೊಡನೆ ಧರ್ಮಾರ್ಥಮಾಡಿದ ಸಹಾಯದಿಂದಲೂ ಪೋಷಿಸಲ್ಪಡುತಬಂತು. ಕಳೆದಸಂವತ್ಸರದಲ್ಲಿ ನೇತ್ರ ಮತ್ತು ಕರ್ಣರೋಗ ಪೀಡಿತರಾದವರು ೩,೫೦೦ಮಂದಿಗಿಂತಲೂ ಅಧಿಕವಾಗಿಯೇ ಅವರಲ್ಲಿ ಚಿಕಿತ್ಸೆಮಾಡಿಕ್ಕೊಂಡರು. ಈಗ ರೋಗಿಗಳ ಸಂಖ್ಯೆ ದಿನೇದಿನೆ ವೃದ್ಧಿಯಾಗುತಬರುತಿದೆ. ಈ ವೈದ್ಯಶಾಲೆಯನ್ನು ಸ್ಥಿರವಾಗಿ ಮಾಡುವಉದ್ದೇಶದಿಂದ ಅದಕ್ಕೆತಕ್ಕಂತೆ ಒಂದು ಕಟ್ಟಡವನ್ನು ಕಟ್ಟಿಸುವದಕ್ಕಾಗಿ ಮೆ. ದಿನ್‌ಷಾಯವರು ಕಮಿಟಿಯವರವಶದಲ್ಲಿ ೩೦,೦೦೦ ರೂಪಾಯಿಗಳು ಕೊಡುವದಾಗಿಯೂ, ಪರಂತು ಗವರ್ನಮೆಂಟಿನವರೂ ಮುಂಬೈ ಮ್ಯುನಿಸಿಪಾಲಿಟಿಯವರೂ ಸಹಾಯಕರಾಗಿರುವ ಷರತ್ತಿನಮೇಲೆ ತಾವು ಹಾಗೆಮಾಡುವದಾಗಿಯೂಹೇಳಿ, ತಮ್ಮ ಕಾಗದವನ್ನು ಗವರ್ನಮೆಂಟಗೆಕಳುಹಿಸಿಕೊಡಬೇಕೆಂದು ಕೇಳಿಕೊಂಡರು. ಕಮಿಟಯವರು ಮೆ|| ದಿನ್‌ಷಾಯವರು ಕೇವಲ ಔದಾರ್ಯಪೂರ್ವಕವಾಗಿ ತಿಳಿಸಿದ ಅಂಶವನ್ನು ಅಂಗೀಕರಿಸಿ, ಅದನ್ನು ಗವರ್ನಮೆಂಟಿನವರ ಪರ್ಯಾಲೋಚನೆಯಬಗ್ಯೆ ಕಳುಹಿಸಿಕೊಡಬೇಕೆಂದು ನಿರ್ಣಯಿಸಿದರು.—ಮುಂಬೈಗೆಜೆಟ್.

THE MYSORE GAZETTE.
ಮೈಸೂರು ಗೆಜೆಟ್.

—:o:—

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರನಾಮೆಗಳು.

ಅಮೂರಿಯಾಟ್ ಕೆರೆ ರಿಪೇರಿ ಕೆಲಸಗಳಬಗ್ಯೆ ಮಲ್ ದಾರರುಗಳಿಂದ ತೆಗೆದುಕೊಳ್ಳಬಹುದ ಅಡ್ವಾನ್ಸ್ ಮೊಬಲಗು ಪಬ್ಲಿಕ್ ವರ್ಕ್ಸ್ ರಿಯಿಟೀ ಸ್ಥಾನ ಒರಹು ಕೆ ಇಲಾ [illegible] ಆಗಾಗಿ ಹಾಕಿಸಲ್ಪಡತಕ್ಕದ್ದು.

ಟ್ರೆಜರೀ ಇಲಾಖಾ ಡೆಪ್ಯುಟಿ ಕಮ್ಮಿಷನರುಗಳಿಗೆ, ಸರ್ಕ್ಯುಲರ್ ನಂ ೧೬೩೫, ಮರ್ಕ್ಯುಂ ೧೬ನೇ ಜೂಲೈ ೧೮೮೬ [illegible] ಯವರು ತಿಳಿಸುವದೇನಂದರೆ, ಅಮಲ್‌ದಾರರುಗಳಿಂದ ಮೈಸೂರುಶಿಕಾರ ಪಬ್ಲಿಕ್ ವರ್ಕ್ಸ್ ಇಲಾಖಾ [illegible] ಪಾಸ್ಮಾಡಲ್ಪಟ್ಟ ೧೮೮೬ನೇ ಇಸವಿ ಜೂನ್ ೬ನೇ ಮರ್ಕ್ಯುಂ ೫೮೬ನೇ ನಂಬರ್ ಸರ್ಕ್ಯುಲರ್ನ ೩ನೇ ಪ್ಯಾರಾ ಅನುಸಾರ ಜರೂರಿಯಾದ ಕೆರೆ ರಿಪೇರಿ [illegible] ತೆಗೆದುಕೊಳ್ಳಲ್ಪಟ್ಟ ಅಡ್ವಾನ್ಸ್ ಮೊಬಲಗು [illegible] ಇಲಾಖೆಯಿಂದ ಮರಹುಮ್ಮಾಗಿ [illegible] ಬಿಲ್ಲುಗಳು ಹೋಲಿಸಲ್ಪಡಬೇಕೇ [illegible] ಅಡ್ವಾನ್ಸ್ [illegible] ಹೀಗೆ [illegible] ಈ ಆಫೀಸಿಗೆ ಸೇರಿಸಬೇಕು.

ಮೈಸೂರುಶಿಕಾರದಲ್ಲಿನ ರಿಜಿಸ್ಟ್ರೇಷನ್ ಕಂಪನಿಯಾದ ಸಂಘದ ಏಜಂಟ್ ವ ಮ್ಯಾನೇಜರು [illegible] ೧೮೮೬ನೇ ಇಸವಿ ಸರ್ಕ್ಯುಲರ್ [illegible] ನಂ. ೧, ಮರ್ಕ್ಯುಂ ೧೭ನೇ ಜೂಲೈ ೧೮೮೬ನೇ ಇಸವಿ.

ಬ್ಯಾಲೆನ್ಸ್ ಷೀಟ್‌ಯಾನೆ [illegible] ಹಾಜರ್ ಪಟ್ಟಿ ಇಲ್ಲಾಗನ್ನು ೧೮೮೬ನೇ ಇಸವಿ X ನೇ ನಂಬರ್ [illegible] ಆಕ್ಟಿನ [illegible] ನೇ ಸೆಕ್ಷನ್ ಅನುಸಾರ ರಿಜಿಸ್ಟ್ರಾರ್ ಆಫೀಸಿನಲ್ಲಿ [illegible] ಮಾಡುವದಕ್ಕೋಸ್ಕರ [illegible] ಅನಾವಶ್ಯಕವಾಗಿರುವದರಿಂದ ಏಜಂಟ್ ವ ಮ್ಯಾನೇಜರುಗಳಿಗೆ ತಿಳಿಸುವದೇನಂದರೆ, [illegible] ಆಫೀಸಿಗೆ [illegible] ಕಾಗದಗಳು ಕಳುಹಿಸಲ್ಪಡುತ್ತಾ [illegible] ಫೀಜ್‌ಬಗ್ಯೆ [illegible] ಅವಶ್ಯಕವಿಲ್ಲವು

ನಂ. ೧೩೦, ತಾ|| ೧೭ನೇ ಜೂಲೈ ೧೮೮೬—[illegible] ಪೊಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಪಿ. ವಿ. ಕೃಷ್ಣಯ್ಯಂಗಾರ್ರವರಿಗೆ ಅವರು ಉಪಯೋಗಿಸಿಕೊಳ್ಳುವ ಕಾರ್ಯ [illegible] ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

ನಂ. ೧೩೫, ತಾ|| ೧೬ನೇ ಜೂಲೈ ೧೮೮೬—[illegible] ಸರ್ವೇ [illegible] ಡಿ. ರಾಮರಾಂಡರವರು ೧೮೮೬ನೇ ಇಸವಿ ಜೂನ್ ೧೬ನೇ ಮರ್ಕ್ಯುಂ [illegible] (ಸ್ಥಳವಲ್ಲಿ) [illegible] ಸರ್ವೇ ಅಸಿಸ್ಟೆಂಟ್ ಸೂಪರಿಂಟೆಂಡೆಂಟ [illegible]

ನಂ. ೧೩೧, ತಾ|| ೧೯ನೇ ಜೂಲೈ ೧೮೮೬—[illegible] ಅಮಲ್‌ದಾರ್ ಲಕ್ಷ್ಮಣರಾಯರವರಿಗೆ [illegible] ಹೂಕ್ ೮ನೇ ಕಾರ್ಯ [illegible] ಅಥವಾ ಅವರು ಉಪಯೋಗಿಸಿಕೊಳ್ಳುವ ಕಾರ್ಯ [illegible] ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

ನಂ. ೧೩೨, ತಾ|| ೨೦ನೇ ಜೂಲೈ ೧೮೮೬—[illegible] ತಾ|| ಇಲಾಖಾನಲ್ಲಿರುವ ಶಿರಸ್ತೇದಾರ್ [illegible] ಯ್ಯಂಗಾರ್ರವರಿಗೆ ಸದರೀ ಕೆಲಸದ [illegible] ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತಿವೆ ಮತ್ತು ಅವರು ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡ್ [illegible] ಅನುಸಾರ [illegible] ಸಾಕ್ಷ್ಯವನ್ನು [illegible] ಅಧಿಕಾರ ಕೊಡಲ್ಪಟ್ಟಿರುತ್ತದೆ.

BANGALORE:—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿದವೃತ್ತ್ಯುವಗವಾರ್ತ್ಹ ಕರ್ಣಾಟಕಪ್ರಕಾಶನಪರಾಭಿದಾಪ್ರಥಿತಸಾಹಿತೀಶೋಭಿತಾ । ಮೃಗಾಂಕಹಿತವಾಸರನಿಹಿತಮುದ್ರಣಾ ... ಪ್ರಸ್ಪರ್ದ್ಧಿ ... ಸುಮದಂ॥

Vol XIII.] BANGALORE—MONDAY, AUGUST 2, 1886. [No. 31.

ಸಂಪುಟ ೧೩.] ಬೆಂಗಳೂರು:—ಸನ್ ೧೮೮೬ನೇ ಇಸವಿ ಆಗಸ್ಟು ೨ನೇ ತಾರೀಖ್ ಸೋಮವಾರ. [ಸಂಚಿಕೆ ೩೧.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ಸೇರಿಕೊಂಡ್ರೆ ಪತ್ರಿಕೆ ವರುಷ ೧ಕ್ಕೆ		೧೨—೦—೦
ಇಂಗ್ಲಿಷ್ [illegible] ವರುಷ ೧ಕ್ಕೆ		೬—೦—೦
ಕನ್ನಡದಲ್ಲಿ ಸೇರಿಕೊಂಡ ಪತ್ರಿಕೆ [illegible] ವರುಷಕ್ಕೆ.		೬—೦—೦
ಬಿಡಿ	೧ಕ್ಕೆ	೦—೮—೦

ಸೂ.—ಚಂದಾದಾರರು ಇಂಗ್ಲಿಷ್ ಕಾಗದಗಳನ್ನಾಗಲಿ, ಕನ್ನಡ ಕಾಗದಗಳನ್ನಾಗಲಿ ಅಥವಾ, ಎರಡನ್ನಾಗಲಿ ತೆಗೆದುಕೊಳ್ಳಬಹುದು. ಚಂದಾ ಹಣವನ್ನು ಮುಂಗಡವಾಗಿಯೇ ಕಳುಹಿಸಬೇಕು.

ಪ್ರಕಟನೆಯ ರಿವಾಜ್.

ಮೊದಲನೇ ದಫಾ ಪಂಕ್ತಿ	೧ಕ್ಕೆ	೦—೨—೦
ಎರಡನೇ ದಫಾ ಪಂಕ್ತಿ	೧ಕ್ಕೆ	೦—೧—೦

NOTICE TO SUBSCRIBERS

ಇದರಡಿ ಬರೆಯಲ್ಪಡುವ ಅಂಶಗಳಿಗೆ ನಮ್ಮ ಚಂದಾದಾರರ ಲಕ್ಷ್ಯವು ಮುಖ್ಯವಾಗಿ ಹೋಗಬೇಕೆಂದು ಕೋರುತ್ತೇವೆ ಏನೆಂದರೆ:—

೧. ಕರ್ಣಾಟಕ ಪ್ರಕಾಶಿಕೆಯ ಚಂದಾಹಣವನ್ನಾಗಲಿ ಯಾವ ಕೆಲಸದ ಹಣವನ್ನಾಗಲಿ ಮೊಬಲಗು ರವಾನಿಸತಕ್ಕವರು ಮನಿಆರ್ಡರ್ ಮೂಲಕ [illegible] [illegible] ರವಾನಿಸುವದಾದರೆ ... ಅವನ್ನು ... ಸ್ಪಷ್ಟವಾಗಿ ಬರೆಯತಕ್ಕದ್ದು. ಹಾಗೆ ಮಾಡದೆ ಹೋಗುವದರಿಂದ ಹೆಸರುಗಳು ... ಮನಿಆರ್ಡರ್ ... ತಿರಸ್ಕರಿಸಲ್ಪಡುತ್ತವೆ.

೨. ನೋಟುಗಳ ರವಾನಿಸತಕ್ಕವರು ಅರ್ಧ ನೋಟುಗಳನ್ನು ರವಾನಿಸಿಬಿಟ್ಟು ಉಳಿದ ಅರ್ಧ ನೋಟಿನ ವಿಷಯದಲ್ಲಿ ... ಉದಾಸೀನರಾಗಿರುತ್ತಾರೆ. ಹಾಗೆ ಮಾಡದೆ ಮೊದಲು ಕಳುಹಿಸುವ ಅರ್ಧ ನೋಟು ... ನಮ್ಮ ಕಾಗದವನ್ನು ನೋಡಿದ ಕೂಡಲೆ ಬಾಕೀ ಅರ್ಧ ನೋಟನ್ನು ರವಾನಿಸತಕ್ಕದ್ದು.

೩. ಸ್ಟಾಂಪುಗಳ ... ಕಳುಹಿಸತಕ್ಕವರು, ರೂ॥ ೧ಕ್ಕೆ ... ... ಸಹ ಸೇರಿಸಿ ಕಳುಹಿಸತಕ್ಕದ್ದು. ಅರ್ಧಾಣೆ ... ... ಸ್ಟಾಂಪುಗಳನ್ನು ಕಳುಹಿಸಕೂಡದು.

೪. ... ... ಡಿಸಂಬರ್ ... ... ಪತ್ರಿಕೆಗೆ ಚಂದಾ ... ... ಡಿಸಂಬರ್ ... ... ಚಂದಾದಾರರು ... ... ಕಳುಹಿಸಲು ಆವಶ್ಯಕವಿಲ್ಲ.

NOTICE.

VAIDYASARA SANGRAHA.

☞ *Price including Postage, Rs.5 0 0*

ವೈದ್ಯಸಾರ ಸಂಗ್ರಹ.

ಈ ಗ್ರಂಥವು ಬೇಕಾದವರು ... ... ಈ ... ...

ಗ್ರಂಥ	ರೂ॥	೫—೦—೦
ಅಂಚೆ ಮತ್ತು ಅಂಬೇಡಾಸಲ್		೦—೬—೦

M. D. ವೆಂಕಟಾಚಾರ್, ಅಸ್ಪತ್ರಿರೋಡ್, ಬೆಂಗಳೂರು

ನೋಟೀಸ್.

ಇದರಡಿ ಬರೆಯಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸ್ ನಲ್ಲಿ ವಿಕ್ರಯಿಸಲ್ಪಡುತ್ತವೆ,—

ಕನ್ನಡ ಟೀಕಾಸಹಿತವಾದ ಸಂಸ್ಕೃತಗ್ರಂಥಗಳು.

ಕಾಲಾಮೃತ. ...	೧—೪—೦
ಮುಹೂರ್ತದರ್ಪಣ. ...	೦—೧೨—೦
ಛಪ್ಪನ್ನ (ಷಟ್ಪಂಚಾಶಿಕ್) ...	೦—೩—೦
ಜಾತಕ	೦—೫—೦
ಬಾಲರಾಮಾಯಣ ..	೦—೪—೦
... .	೦—೧೨—೦
... ...	೦—೬—೦
... ...	೦—೨—೦
ವೈದ್ಯಸಾರಸಂಗ್ರಹ ...	೫—೦—೦

ಕನ್ನಡಗ್ರಂಥಗಳು.

... ...	೦—೬—೦
... ...	೦—೪—೦
... ...	೦—೬೩—೦
ಸುಧಾಮಂಜರಿ.	೦—೨—೬
... ...	೦—೪—೦
... ...	೦—೨—೦
... ...	೦—೨—೬
... ...	೦—೬—೦
... ...	೦—೩—೦
... ...	೦—೨—೦
... .	೦—೦—೩
ಇಂಗ್ಲಿಷ್ ಕನ್ನಡ	೧—೦—೦
... ...	೨—೦—೦
... ...	೦—೧೨—೦
... ...	೩—೪—೬
... ...	೩—೪—೬
ಆಕ್ಟೋಬರ್ ... ... ೧ನೇ ಸಂಚಿಕೆ. ...	೦—೮—೦
... ೨ನೇ ಸಂಚಿಕೆ.	೦—೮—೦
... ...	೦—೮—೦

ಸಂಸ್ಕೃತ ಮೂಲಗ್ರಂಥಗಳು

ವಿಷ್ಣುಸಹಸ್ರನಾಮ ...	೦—೫—೦
ಸೂರ್ಯಸಹಸ್ರನಾಮ. ...	೦—೨—೩
... ...	೦—೨—೩
ಬಾಲರಾಮಾಯಣ ...	೦—೦—೬
... ...	೦—೩—೬
... ...	೦—೧—೦

... ...

NOTICE.

ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿ.

ಜನರಲ್ ಕಮಿಷನ್ ಮರ್ಚೆಂಟ್ಸ್.

ಬೆಂಗಳೂರು ತರಗಿನಪೇಟೆಯಲ್ಲಿರುವ ಎಸ್. ರಾಮಸ್ವಾಮಯ್ಯಂಗಾರ್ ಕಂಪೆನಿಯವರು, ಅವರಿಗೆ ಕೊಡಲ್ಪಡುವ ತಮಾಂ ಕೆಲಸಗಳನ್ನು ಜಾಗರೂಕತೆಯಿಂದಲೂ ತೀವ್ರವಾಗಿಯೂ ನೆರವೇರಿಸುವರು. ಇವಕ್ಕೆ ರೂಪಾಯಿ ೧ಕ್ಕೆ ೧ ದುಡ್ಡಿನ ಮೇರೆ ದಳ್ಳಾಳಿ ತೆಗೆದುಕೊಳ್ಳಲ್ಪಡುವದು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, AUGUST 2, 1886

೧೮೮೬ನೇ ಆಗಸ್ಟು ೨ನೇ ತಾ॥ ಸೋಮವಾರ

COLONEL OLCOTT'S LAST LECTURE

ಗತಗುರುವಾರದ ದಿನ ಸಾಯಂಕಾಲ ಈವೂರು ತುಳಸೀ ತೋಟದಬಳಿ ನೂತನವಾಗಿ ಕಟ್ಟಲ್ಪಟ್ಟಿರುವ ನಾಟಕ ಶಾಲೆಯಲ್ಲಿ ಕರ್ನಲ್ ಆಲ್‌ಕಾಟಿಯವರು "ಕರ್ಮ" ವಿಷಯವಾಗಿ ಉಪನ್ಯಾಸ ಮಾಡಿದರು. ಏತದರ್ಥ ಸದರೀ ನಾಟಕಶಾಲೆಯು ನಾಟ್ಯರಂಗದಂತೆ ಬಹಳ ಮನೋಹರವಾಗಿ ಅಲಂಕರಿಸಲ್ಪಟ್ಟಿತು. ಇದೇ ಆಖೈರ್ ಪ್ರಸಂಗವಾದದರಿಂದ ಇದುಕೇಳುವ ಕುತೂಹಲದೊಡನೆ ಅನೇಕಮಂದಿ ನೇಟಿವ್ ದೊಡ್ಡಮನುಷ್ಯರು ಬಂದಿದ್ದರು. ಇಷ್ಟುಜನ ಅಧಿಕಾರಿಗಳನ್ನು ಏಕಕಾಲದಲ್ಲಿ ಸದರೀ ನಾಟಕಶಾಲೆಯಲ್ಲಿ ಹಿಂದೆ ನಾವು ಯೆಂದಿಗೂ ಕಂಡವರಲ್ಲವು. ಆ ಕಾಲದಲ್ಲಿ ಸಭಾಧ್ಯಕ್ಷರಾಗಿದ್ದ ದಿವಾನರವರ ಚೀಫ್‌ಸೆಕ್ರೆಟರಿಯವರು, ಕರ್ನಲ್ ಆಲ್‌ಕಾಟಿಯವರು ಪ್ರಸಂಗಿಸಲುದ್ದೇಶಿಸಿದ್ದ ವಿಷಯವನ್ನು ಸಭಿಕರಿಗೆ ತಿಳಿಸಿ ಇದು ಕೇವಲ ಗಹನವಾದದರಿಂದ ಇದು ಯೆಲ್ಲರೂ ಅವಧಾನದೊಡನೆ ಕೇಳಬೇಕೆಂದು ಕೋರುವಂತೆ ತಿಳಿಸಿದರು. ತರುವಾಯ ಕರ್ನಲ್ ಆಲ್‌ಕಾಟಿಯವರು ಕರ್ಮ ಸ್ವರೂಪವನ್ನೂ ತತ್ಪ್ರಭೇದಗಳನ್ನೂ ವಿಸ್ತಾರವಾಗಿ ಅನೇಕ ದೃಷ್ಟಾಂತಗಳೊಡನೆ ವಿವರಿಸಿ ಅದಕ್ಕೆ ಆಧಾರವಾಗಿ ಶ್ರೀ ಭಗವದ್ಗೀತಾ ವಾಕ್ಯಗಳು ಕೆಲವು ಉದಹರಿಸಿದರಲ್ಲದೆ ಅದರಮೇಲೆ ಇತರ ಮತದವರ ಅಭಿಪ್ರಾಯಗಳನ್ನೂ ಅವುಗಳ ಸಾಧಕ ಬಾಧಕಗಳನ್ನೂ ತಿಳಿಸಿ, ಪುರುಷನು ಯಾವಾಗಲೂ ಸಂಚಿತ, ಪ್ರಾರಬ್ಧ, ಆಗಾಮಿಗಳೆಂಬ ಮೂರುವಿಧಕರ್ಮ ಬದ್ಧನಾಗಿರುವನೆಂತಲೂ, ಇವುಗಳ ಫಲಾಫಲಗಳು ಅವನ ಜನ್ಮಾಂತರಗಳಲ್ಲಿ ಅನುಸರಿಸಿ ಬರುವವೆಂತಲೂ, ಕರ್ಮವು ಮನೋವಾಕ್ಕಾಯಗಳ ಅಪಾರ ಮೂಲಕವಾದವೆಂತಲೂ, ತನ್ನಿವೃತ್ತ್ಯೋಪಾಯವನ್ನು ಸಾಧ್ಯವಾದಮಟ್ಟಿಗೆ ಹುಡುಕಬೇಕೆಂತಲೂ ವಗೈರೆ ತಿಳಿಸಿದರು. ಅದರಮೇಲೆ ಅಗ್ರಾಸನಾಧಿಪತಿಯು, ಪ್ರಾಸಂಗಿಕರುಪಯೋಗಿಸಿದವಿಷಯವನ್ನು ಕೇವಲಉಪನ್ಯಾಸದಮೂಲಕವೇ ತಿಳಿದುಕೊಳ್ಳಬೇಕೆಂದರೆ ಎಂತವರಿಗೂ ಸಾಧ್ಯವಾಗಲಾರದೆಂತಲೂ,ಇದು ಗಹನವಾದ ವಿಷಯವಾಗಿದ್ದರೂ ಈ ವಿಷಯಕವಾದ ಕರ್ನಲ್ ಆಲ್‌ಕಾಟಿಯವರ ಪ್ರಸಂಗವು ಯಥೋಚಿತ ತಿಳುವಳಿಕೆಯನ್ನುಂಟುಮಾಡಿತೆಂತಲೂ, ಈ ಮರ್ಮವಿಮೋಚನಕ್ಕೆ ಪಾತಂಜಲಾದಿ ಮಹರ್ಷಿಗಳುಏರ್ಪಡಿಸಿರುವ ಯೋಗಮಾರ್ಗವುಎಲ್ಲರಿಗೂ ಉಪಾದೇಯವಾಗಿದ್ದಾಗ್ಯೂ ಸರ್ವಸಾಧಾರಣ್ಯೇನ ಅಸಾಧ್ಯವಾಗಿದೆಯೆಂತಲೂ ತಿಳಿಸಿ, ಪ್ರಾಸಂಗಿಕರು ಇಷ್ಟುದೂರ ನಮಗಾಗಿಬಂದು ವಹಿಸಿದ ಶಾರೀರ ಮಾನಸಿಕ ಶ್ರಮಗಳಿಗಾಗಿ ಯೆಲ್ಲರೂ ಅವರ ವಿಷಯದಲ್ಲಿ ಬಹಳಕೃತಜ್ಞರಾಗಿರಬೇಕೆಂತಲೂ, ಅವರಿಗೆ ಆಯುರಾರೋಗ್ಯಾದಿಗಳನ್ನುಭಗವಂತನು ಅನುಗ್ರಹಿಸಬೇಕೆಂತಲೂತಿಳಿಸಿದರು. ಕರ್ನಲ್ ಆಲ್‌ಕಾಟಿಯವರು ಗತಶನಿವಾರದದಿನ ಸಾಯಂಕಾಲ ಮದರಾಸಿಗೆ ಹೊರಟುಹೋದರು.

ಕರ್ನಲ್ ಆಲ್‌ಕಾಟಿಯವರು ಈವೂರಲ್ಲಿ ಮಾಡಿದ ನಾಲ್ಕು ಪ್ರಸಂಗಗಳ ದೆಸೆಯಿಂದ ಈವೂರಿನವರ ಹೃದಯಗಳು ಬಹಳವಾಗಿ ಆಕರ್ಷಿಸಲ್ಪಟ್ಟು ಥಿಯಾಸಫಿಸ್ಟ್ ಆಗಬೇಕೆಂಬಕೋರಿಕೆಯು ಈಗ ಸಾರ್ವಜನೀನವಾದದ್ದಾಗಿ ಏರ್ಪಟ್ಟಿರುವಂತೆ ತೋರುತಿದೆ. ಮುಖ್ಯವಾಗಿ ಈಗ ಕರ್ನಲ್ ಆಲ್‌ಕಾಟಿಯವರು ನಮ್ಮ ಮತಸಿದ್ಧಾಂತಗಳನ್ನು ಚನ್ನಾಗಿ ತಿಳಿದುಕೊಂಡು ಸ್ವಮತಾಪೇಕ್ಷೆಯಾ ಅವುಗಳಲ್ಲಿ ವಿಶೇಷ ಭಕ್ತಿಗೌರವಗಳೊಡನೆ ಅವುಗಳನ್ನು ... ತಮ್ಮಕಲಕ್ ತರಳತೆವಾಗಿರುವ ನಮ್ಮ ಚಿತ್ತವೃತ್ತಿಯನ್ನು ಸ್ಥಿಮಿತಕ್ಕೆ ತರಲೆತ್ನಿಸಿರುವದಕ್ಕಾಗಿ ನಾವು ಬಹಳ ಕೃತಜ್ಞರಾಗಿರಬೇಕು. ಪರಂತು ಅನಾದಿಯಾದ ನಮ್ಮ ಮತವಿಷಯವಾಗಿಯೂ, ಆಚಾರವ್ಯವಹಾರಗಳನ್ನು ಕುರಿತೂ ಕರ್ನಲ್ ಆಲ್‌ಕಾಟಿಯವರು ಇದುವರೆವಿಗೆತಿಳಿಸಿದ ಅಂಶಗಳಂ ಅವರಮುಖದಿಂದ ಕೇಳಿ ತಿಳಿದುಕೊಳ್ಳುವತನಕ ಅವುಗಳಲ್ಲಿ ನಮ್ಮವರಿಗೆ ಪ್ರಾಮಾಣ್ಯಜ್ಞಾನವೂ ಭಕ್ತಿಗೌರವಗಳೂ ಇಲ್ಲದ ಈಗ ಒಬ್ಬ ಅನ್ಯದೇಶೀಯರ ವಾಕ್ಯದಿಂ ಕಣ್ದೆರೆಯುವಷ್ಟು ಸ್ಥಿತಿಗೆ ಬಂದದಕ್ಕಾಗಿ ಎಷ್ಟು ಚಿಂತಿಸಿದಾಗ್ಯೂ ಸಾಲದೆಯಿರುತಿದೆ.

THE LATE MR. ALUM VENCATA-RAMANA PANTULU, M. A. B. L.

ಬಳ್ಳಾರಿ ಡಿಸ್ಟ್ರಿಕ್ಟು ತಾಟಪತ್ರಿ ಸಬಾರ್ಡಿನೇಟ್ ಜಡ್ಜಿಯವರಾದ ಮ॥ ರಾ॥ ಆಲಂ ವೆಂಕಟರಮಣ ಪಂತಲವರು ಮಾಹೇ ಮಜಕೂರ್ ೨೭ನೇ ತಾರೀಖ್ ಮಂಗಳವಾರದದಿನ ಮಧ್ಯಾಹ್ನ ೩ಘಂಟೆಗೆ ಈ ಪ್ರಕೃತಿ ಸಂಬಂಧವನ್ನು ನಿವೃತ್ತಿಸಿಕೊಂಡು ಕಾಲವಶರಾದರೆಂಬ ವೃತ್ತಾಂತವು ಕೇಳಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಪ್ರಸಿದ್ಧರಾಗಿಯೂ, ವಿದ್ಯಾವಂತರಾಗಿಯೂ, ಬಹುಜನ ಪರಿಚಿತರಾಗಿಯೂ ಇದ್ದ ಸದರೀ ದೊಡ್ಡ ಮನುಷ್ಯರನ್ನು ಪ್ರಾಯೇಣ ಮದರಾಸ್ ವಗೈರೆ ಪ್ರಾಂತದವರೆಲ್ಲರೂ, ತಥಾಪಿ ಅವರು ಈ ವೂರಿಗೆ ಬರುವದಕ್ಕೆ ಪ್ರಾರಂಭಿಸಿದ ತರುವಾಯ ಇಲ್ಲಿನವರೂ ಚನ್ನಾಗಿ ಅರಿತಿರುತ್ತಾರೆ. ೧೮೪೮ನೇ ಇಸವಿಯೊಳು ಇವರು ಗೌರವ್ಯವಾದ ಒಂದು ಕುಟುಂಬದಲ್ಲಿ ಜನಿಸಿ ಬಾಲ್ಯದಲ್ಲಿಯೇ ಇಂಗ್ಲಿಷ್ ವಿದ್ಯಾಭ್ಯಾಸಗೈದು ತಮ್ಮ ಮೇಧಾ ವಿಶೇಷದಿಂದ ತ್ವರೆಯಲ್ಲಿಯೇ ಪ್ರಸಿದ್ಧಿಗೆ ಬಂದರು. ಇವರ ತಂದೆಗಳಾದ ರಾಮಕೃಷ್ಣ ಪಂತರವರು ದೇಶಸೇವೆ ಮಾಡಿ ಪ್ರಸಿದ್ಧರಾಗಿದ್ದದರಿಂದ ತಮ್ಮ ಪುತ್ರರ ವಿದ್ಯಾಭಿವೃದ್ಧಿಯಬಗ್ಯೆ ಅವರು ಮಾಡಿದ ಪ್ರಯತ್ನಗಳೆಲ್ಲವೂ ಸಫಲಗಳಾಗಿ ಬಾಲ್ಯದಲ್ಲಿಯೇ ಪಂತರವರು ಎಂ. ಎ. ಬಿ. ಎಲ್. ಡಿಗ್ರೀಗಳನ್ನು ಪಡೆದು ವಿದ್ವತ್ಸಮೂಹದೊಳು ಗೌರವ್ಯರಾಗಿದ್ದರು. ಇವರು ನೇಟಿವ್ ಒಪೀನಿಯನ್ ಎಂಬ ಒಂದು ಇಂಗ್ಲಿಷ್ ಪತ್ರಿಕೆಯನ್ನು ಪ್ರಾರಂಭಿಸಿ ಅದಂ ಬಹಳ ಶ್ಲಾಘ್ಯವಾದ ರೀತಿಯಿಂದ ನಡಸುತಬಂದವರಿಂದ ತನ್ಮೂಲಕ ಇವರ ವಿದ್ಯಾ ನಿಪುಣತೆಯು ಪ್ರಸಿದ್ಧಿಗೆ ಬರಲಿಕ್ಕೂ ಸದರೀ ಪತ್ರಿಕೆಯು ಪ್ರಚಾರವನ್ನೈದ

ಲಿಕ್ಕೆ ಕಾರಣವಾಯಿತು. ಇವರು ೧೮೭೦ನೇ ಇಸವಿಯಲ್ಲಿ ಎಂ. ಎ. ಡಿಗ್ರಿಯಂ ಪಡೆದಮೇಲೆ ಹೈಸ್ಕೂಲ ಅಸಿಸ್ಟೆಂಟ ಮ್ಯಾಸ್ಟರ್ ಕೆಲಸದಿಂದ ಮದರಾಸ್ ಸ್ಮಾಲಕಾಜ್ ಕೋರ್ಟು ಚೀಫ್ ಇಂಟರ್‌ಪ್ರಿಟರಾಗಿ ನೋಕರರಾದರು. ಸದರೀ ನೌಕರಿಯಲ್ಲಿ ಒಂದು ಸಂವತ್ಸರದ ತನಕ ಇದ್ದು ಅಲ್ಲಿಂದ ಹೈಕೋರ್ಟಿನ ಟ್ರಾನ್ಸ್ಲೇಟರಾಗಿಯೂ, ಬಳಿಕ ನೇಟಿವ್ ರಿಜಿಸ್ಟ್ರಾರಾಗಿಯೂ ಯೇರ್ಪಟ್ಟರು. ೧೮೭೫ನೇ ಇಸವಿಯಲ್ಲಿ ಪಂತರವರು ಬಿ. ಯಲ್. ಪರೀಕ್ಷೆಯಲ್ಲಿ ತೇರ್ಗಡೆಯಾದರು. ೭೯ನೆ ಇಸವಿಯಲ್ಲಿ ಮದರಾಸ ಗವರ್ನಮೆಂಟ ಲೆಜಿಸ್ಲೇಟಿವ್ ಡಿಪಾರ್ಟಮೆಂಟಿನ ಅಸಿಸ್ಟೆಂಟ ಸೆಕ್ರಿಟರಿಯಾಗಿ ಆರು ತಿಂಗಳಕಾಲ ಆಕ್ಟಿಂಗ್ ತರೀಕ್ ಕೆಲಸನೋಡುತಲಿದ್ದರು. ಬಳಿಕ ೧೮೮೧ನೇ ಇಸವಿಯಲ್ಲಿ ಮಧುರೆ ಡಿಸ್ಟ್ರಿಕ್ಟ ಸಬಾರ್ಡಿನೇಟ ಜಡ್ಜಿಯಾಗಿದ್ದು ಇವರು ಮಾಡಿದಂತಾ ಶ್ಲಾಘ್ಯವಾದ ನೌಕರಿಯ ಜ್ಞಾಪಕವು ಅದ್ಯಾಪಿ ಅಲ್ಲಿನ ಜನಗಳ ಹೃದಯದಲ್ಲಿ ದೃಢವಾಗಿರುತಿದೆ. ನಂತರವರು ಕ್ರಮೇಣ ನಿಶಾಪಟ್ಣ, ಬಳ್ಳಾರಿ, ವಗೈರೇ ಪ್ರಾಂತಗಳ ಸಬಾರ್ಡಿನೇಟ ಜಡ್ಜಿಯರಾಗಿದ್ದರು. ಅನೇಕ ಸಂದರ್ಭಗಳಲ್ಲಿ ಇವರು ಸ್ಪೆಷಲ್ ಡ್ಯೂಟಿಯಮೇಲೆ ಗವರ್ನರವರ ಸವಾರಿಯೊಡನೆ ನೀಲಗಿರಿಪ್ರಾಂತಕ್ಕೆ ಹೋಗಿ ಲೋಕಲ್ ಫಂಡ್ ಬಿಲ್, ರೆಂಟರಿಕವರೀ ಆಕ್ಟ ವಗೈರೆ ಕಾನೂನುಗಳ ಏರ್ಪಾಡಿಗೆ ಬಹಳ ಸಹಾಯಕರಾಗಿದ್ದರು. ರಾಜಕೀಯ ವಿಷಯಗಳಲ್ಲಿ ಇರುವ ಅಗಾಧವಾಗ್ಯೆ ಹೊರಪಡಿಸುತಲಿದ್ದ ಅಭಿಪ್ರಾಯಗಳು ಕೇವಲ ಸ್ವದೇಶಾಭಿಮಾನಪ್ರಯುಕ್ತವಾಗಿಯೂ, ಅಪಕ್ಷಪಾತೀಯವಾದವಾಗಿಯೂ ದೂರದೃಷ್ಟಿಯುಳ್ಳವಾಗಿಯೂ ಯಿದ್ದವು. ಇವರು ಗೌರವ್ಯವಾದ ಅಧಿಕಾರಪದದೊಳಿದ್ದಾಗ್ಯೂ ಇತರ ಆಯತ್ರಿಯು ತಮ್ಮ ಸಂತತಿಯವರನ್ನು ಉಪಪನ್ನರಾಗಿಡಲಿಕ್ಕೆ ಸಮರ್ಥವಾದದ್ದಾಗಿದ್ದಾಗ್ಯೂ ಕಾಲಗತಿಯಿಂದ ಸದರೀ ಅನುಕೂಲ್ಯಗಳ್ಯಾವದೂ ಪ್ರಯೋಜನಕರಗಳಾಗದೆ ತಮ್ಮ ಮಕ್ಕಳನ್ನು ಅನನ್ಯಗತಿಕರನ್ನಾಗಿಬಿಟ್ಟು ಅವರು ತಮ್ಮ ಬಹಿಸ್ಕೃತ ಸ್ಥಿತಿಯಂ ಕುರಿತು ಚಿಂತಿಸುವಂತೆ ಮಾಡಿ ಹೋದದಕ್ಕಾಗಿ ಯೆಷ್ಟುಚಿಂತಿಸಿದಾಗ್ಯೂ ಸಾಲದ್ದಾಗಿರುತಿದೆ. ವಿದ್ಯಾಬುದ್ಧಿ ವಿವೇಕಾದಿಗಳಿಂದ ಶ್ಲಾಘ್ಯರಾದ ಇವರನ್ನು ೩೮ ವರುಷಗಳ ವಯಸ್ಸಿನೊಳಗಾಗಿ ಅವರ ಕರ್ಮಕೃತ ದೋಷದಿಂದ ಅಕಾಲಮೃತ್ಯುವು ತನ್ನ ವಶೀಕರಣಶಕ್ತಿಯಿಂದ ಸ್ವಾಧೀನ ಪಡಿಸಿಕೊಂಡದ್ದು ಯೆಲ್ಲರಿಗೂ ಶೋಚನೀಯವಾದದ್ದಾಗಿರುತಿದೆ

REMUNIRATION TO PUBLIC OFFICERS

ಕಳೆದ ಯೆಪ್ರಿಲ ತಿಂಗಳ ೧೩ನೇ ತಾರೀಖಿನಲ್ಲಿ ನೀಲಗಿರಿ ಡಿಸ್ಟ್ರಿಕ್ಟ ಡೆಪ್ಯುಟಿ ಕಲೆಕ್ಟರ್ ಮ|| ವೆಂಕಟಯವರು ಬರೆದ ಒಂದು ಅರ್ಜಿಯನ್ನು ಮದರಾಸ್ ರೆವಿನ್ಯೂಬೋರ್ಡಿನವರು ಪರ್ಯಾಲೋಚನೆಯಬಗ್ಯೆ ಗವರ್ನಮೆಂಟಗೆ ಕಳುಹಿಸಿದ್ದರು. ಮ|| ವೆಂಕಟಯವರು ತಮ್ಮ ಅರ್ಜಿಯ ಮೂಲಕ, ಉದಕಮಂಡಲದಲ್ಲಿರುವ ಲಾರೆನ್ಸ ಅಸೈಲಂ ಪ್ರೆಸ್ ಆಫಿಸಿನ ಸೆಕ್ರಿಟರಿ ಕೆಲಸವನ್ನು ತಾವು ಅಂಗೀಕರಿಸಲಿಕ್ಕೆ ಸಮ್ಮತಿಸಬೇಕೆಂದು ಕೇಳಿಕೊಂಡಿದ್ದರು. ಗವರ್ನಮೆಂಟನವರು ಸದರೀ ಕೆಲಸವನ್ನು ಅಂಗೀಕರಿಸಲಿಕ್ಕೆ ಮ|| ವೆಂಕಟಯವರಿಗೆ ಹುಕುಂಕೊಟ್ಟು ಅದರಮೇಲೆ ಸಾಮಾನ್ಯವಾದ ಒಂದು ನಿಬಂಧನೆಯನ್ನು ಇದರಡಿ ಕಂಡಂತೆ ಮಾಡಿದರೇನೆಂದರೆ—"ಸರ್ಕಾರ್ ನೌಕರರು ಗವರ್ನಮೆಂಟನವರ ಹುಕುಮನ್ನು ಮುಂಚಿತವಾಗಿ ಪಡೆದ ಹೊರ್ತು ಸ್ವಂತ ಕೆಲಸಗಳಿಗಾಗಿ ಅವರು ರುಸುಂ ಪಡೆಯಕೂಡದೆಂದು ನಿಷೇಧಿಸಲ್ಪಟ್ಟಿತು. ೧೮೮೦ನೇ ಇಸವಿ ಯೆಪ್ರಿಲ ತಿಂಗಳಲ್ಲಿ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರವರು ತಮ್ಮ ಇಲಾಖಾ ನೌಕರರ ವಿಷಯದಲ್ಲಿ ಒಂದು ಬಗೆ ನಿಬಂಧನೆಯನ್ನು ಮಾಡಿ ಅದು ಜಾರಿಯಲ್ಲಿ ತರಬೇಕಾದದ್ದು ಆವಶ್ಯಕವೆಂಬದಾಗಿ ಗವರ್ನಮೆಂಟನವರಿಗೆ ತಿಳಿಯಪಡಿಸಿದರು, ಅದೇನೆಂದರೆ—ವಿದ್ಯಾಭ್ಯಾಸದ ಇಲಾಖೆಗೆ ಸಂಬಂಧಿಸಿದ ಆಫಿಸರಾಗಲಿ, ತಾಬೇದಾರೀ ಉದ್ಯೋಗಸ್ಥರಾಗಲಿ ಅವರವರ ಮನೆಗಳಿಗೆ ಹೋಗಿ ಪಾಠ ಹೇಳಬೇಕಾಗಿರುವ ಸಂದರ್ಭಗಳಲ್ಲಿ ಅವರು ಬೋಧಿಸತಕ್ಕ ಪಾಠದ ಸ್ವರೂಪವನ್ನೂ ಪ್ರತಿವರ್ಷ ಅವರಿಗೆ ಅಲ್ಲಿ ಹಿಡಿಯತಕ್ಕ ಕಾಲ ಪರಿಮಾಣವನ್ನೂ ನಮೂದಿಸಿ ತಮ್ಮ ಮೇಲ್ಪಟ್ಟ ಅಧಿಕಾರಿಯ ಅನುಮತಿಯಂ ಪಡೆಯತಕ್ಕದ್ದು. ಇಂತಾ ಖಾಸ್ಗೀ ಕೆಲಸವು ಅವರು ನ್ಯಾಯವಾಗಿ ನೆರವೇರಿಸಬೇಕಾದ ಕಾರ್ಯಕ್ಕೆ ಬಾಧಕವಿಲ್ಲವೆಂದು ತೃಪ್ತಿಕರವಾಗಿ ಕಂಡುಬಂದರೆ ಆಗ ಡೈರೆಕ್ಟರವರ ಮಂಜೂರಾತಿಗೆ ಒಳಪಟ್ಟು ಆ ಅಗ್ಯೆ ಹುಕುಂ ಕೊಡಲ್ಪಡತಕ್ಕದ್ದು. ಈ ವಿಷಯದಲ್ಲಿ ಸಾಮಾನ್ಯೇನ ಪ್ರತ್ಯೇಕ ನಿಬಂಧನೆಯನ್ನೇರ್ಪಡಿಸಲಿಕ್ಕೆ ಗವರ್ನಮೆಂಟನವರಿಗೆ ಇಷ್ಟವಿಲ್ಲದೆ ಸರ್ಕಾರ್ ನೌಕರಿಗೆ ಬಾಧಕವುಂಟಾಗದಂತೆ ತಕ್ಕ ಜಾಗರೂಕತೆಯಿಂದ ಈ ವಿಷಯಕವಾದ ಅರ್ಜಿಗಳನ್ನೆಲ್ಲ ಸ್ವತಃ ವಿಲೇ ಮಾಡಿಬಿಡುವ ಸ್ವಾತಂತ್ರ್ಯವನ್ನು ಡೈರೆಕ್ಟರವರಿಗೆ ಕೊಟ್ಟರು. ಆದಾಗ್ಯೂ ಇಂಡಿಯಾಗವರ್ನಮೆಂಟನವರು ಇದನ್ನನುಸರಿಸಿ ಮುಂಬೈಗವರ್ನಮೆಂಟನವರಿಗೆ ಕೆಲವು ಕಾಗದಪತ್ರಗಳನ್ನು ಕಳುಹಿಸಿ ತನ್ಮೂಲಕ ಮಂತ್ರಾಲೋಚಕ ಸಮಾಜದೊಳಗಣ ವೈಸ್‌ರಾಯಿಯವರು ಇದರಡಿ ಕಂಡಂತೆ ತೀರ್ಮಾನಿಸಿರುತ್ತಾರೇನೆಂದರೆ—೧೮೭೭ನೇ ಇಸವಿಯಲ್ಲಿ ಶ್ರೀಮನ್ಮಹಾರಾಣೀಯವರ ಸ್ಟೇಟ ಸೆಕ್ರಿಟರಿಯವರು, ಸರ್ಕಾರ್ ನೌಕರಿಯೊಳಿರುವ ಯಾವ ಆಫಿಸರಾಗಲಿ, ಮುಂದಾಗಿ ಗವರ್ನಮೆಂಟನವರ ಮಂಜೂರಾತಿಯಂ ಪಡೆದಹೊರ್ತು ಯಾವ ಸುವರ್ಣವೆ ಇಂಗೆಯಾವನಿದ ರುಸುಂ ಪಡೆಯಕೂಡದೆಂದು ಮಾಡಿರುವ ನಿಬಂಧನೆಯು ಗವರ್ನಮೆಂಟ ಪ್ರೊಫೆಸರ್‌ಗಳ ವ ಸ್ಕೂಲಮ್ಯಾಸ್ಟರ್‌ಗಳ ವಿಷಯದೊಳು ಸಹ ಅನ್ವಯಿಸತಕ್ಕದ್ದೆಂತಲೂ ಅಂತಾ ಆಫಿಸರ್‌ಗಳು ಗವರ್ನಮೆಂಟನವರ ಪೂರ್ವಭಾವಿಯಾದ ಹುಕುಂ ವಿನಾ ಅಲಾಹಿದಾ ಮನೆಗಳಲ್ಲಿ ಪಾಠ ಹೇಳಿ ಅಲ್ಲಿ ರುಸುಂ ಪಡೆಯಕೂಡದೆಂಬದು. ತರುವಾಯ, ಪ್ರೈವೇಟ ಮ್ಯಾಸ್ಟರ್‌ಗಳು ದೊರೆಯದಿರುವ ದರ್ಜೆಗಳಲ್ಲಿಯೂ, ಸರ್ಕಾರ್ ಉದ್ಯೋಗಸ್ಥರಿಗೆ ದೇಶಭಾಷೆಗಳನ್ನು ಕಲಿಸಬೇಕಾದ ಸಂದರ್ಭಗಳಲ್ಲಿಯೂ, ಮಾಹೆ ೧೦೦ ರೂಪಾಯಿಗಳಿಗೆ ಮೇಲ್ಪಡದ ಪಬ್ಲಿಕ್ ಸ್ಕೂಲ್ ಮ್ಯಾಸ್ಟರ್‌ಗಳ ವಿಷಯದಲ್ಲಿಯೂ ಉಪಯೋಗಿಸುವಂತೆ ಮೇಲ್ಕಂಡ ನಿಬಂಧನೆಗೆ ಸೇರಿಸುವಂತೆ ಒಂದು ವಿನಾಯತಿ ನಿಬಂಧನೆಯನ್ನು ಮಾಡಿ ಅಂತಾ ನೌಕರಿಯನ್ನು ಸ್ಕೂಲ ಇನ್ಸ್‌ಪೆಕ್ಟರು ಪರ್ಯಾಲೋಚಿಸಿ ಹುಕುಂಕೊಡುವ ಷರತ್ತಿನಮೇಲೂ ಸ್ಕೂಲ್ ಮ್ಯಾಸ್ಟರು ತನ್ನತರಗತಿಯಲ್ಲಿ ಓದುವ ಯಾವ ವಿದ್ಯಾರ್ಥಿಗಾಗಲಿ ಅವನ ಮನೆಗೆಹೋಗಿ ಪಾಠ ಹೇಳಕೂಡದೆಂಬ ಷರತ್ತಿನಮೇಲೂ ಒಂದು ಜಾರಿಯಲ್ಲಿ ತಂದರು. ಇದರಂತೆ ಸಿರ್ಕಾಸಿಯಲ್ ಇಲಾಖೆಗೆ ಸೇರಿದ ಆಫಿಸರ್‌ಗಳು ಸಹ ಸಿವಿಲ್ ಅಕೌಂಟ ಕೋಡಿನ ೭೮ನೇ ಪ್ರಕರಣದ ೫ನೇ ನಿಬಂಧನೆಯನ್ನನುಸರಿಸಿ ಮಂತ್ರಾಲೋಚಕ ಸಮಾಜದೊಳಗಣ ಗವರ್ನರ್ ಜನರಲ್ಲವರ ಮಂಜೂರಾತಿಯಂ ಪಡೆದಹೊರ್ತು ಲೆಕ್ಕಗಳ ಆಡಿಟಿಂಗ್ ಬಗ್ಯಾದರೂ ಇತರ ಯಾವಕೆಲಸಕ್ಕಾದರೂ ರುಸುಂ ಪಡೆಯಕೂಡದೆಂದು ಕಂಡಿತಃ ನಿಷೇಧಿಸಲ್ಪಟ್ಟಿರುತ್ತಾರೆ. ಕಡೆಗೆ ಸದರೀ ಕೋಡಿನ ೩ನೇ ಪ್ರಕರಣದ ೫ನೇ ರೂಲಿನ ೧ನೇ ಕ್ಲಾಜಿನಮೂಲಕ ಸರ್ಕಾರ್ ಉದ್ಯೋಗಸ್ಥರಿಗೆ ಸರ್ಕಾರ್ ನೌಕರಿಯಕಾಲವಿನಾ ಮಿಕ್ಕಕಾಲಕ್ಕೆ ಸಹ ಸರ್ಕಾರದಿಂದಲೇ ರುಸುಂಸಲ್ಲತಕ್ಕದ್ದೆಂದು ವಿಧಿಸಲ್ಪಟ್ಟಿರುತಿದೆ. ಈ ವಿಷಯದಲ್ಲಿ ಕೆಲವು ಇಲಾಖೆಗಳೊಳು ನಿಯಮಗಳೂ ಕೆಲವು ನಿಬಂಧನೆಗಳೂ ಮಾಡಲ್ಪಟ್ಟು ಜಾರೀಯಲ್ಲಿರುತಿವೆ. ಮಸಲಾ ಮೆಡಿಕಲ್ ಇಲಾಖಾ ಆಫಿಸರ್‌ಗಳು ಕೆಲವು ಸರ್ಕಾರ್ ನೌಕರಿಗಳನ್ನು ಅಂಗೀಕರಿಸಬೇಕಾದ ಸಂದರ್ಭದಲ್ಲಿ ವಿನಾ ಮಿಕ್ಕಕಾಲದಲ್ಲಿ ಬೇಕಾದವರಿಗೆ ಚಿಕಿತ್ಸೆ ಮಾಡಲಿಕ್ಕೆ ಅವಕಾಶ ಕೊಡಲ್ಪಟ್ಟಿರುತ್ತಾರೆ. ಇವುಗಳನ್ನೆಲ್ಲ ನೋಡಲು ಸಾಧಾರಣವಾಗಿ ಸರ್ಕಾರ್ ನೌಕರಿಯ ವಿಷಯದಲ್ಲಿ ೧೮೬೮ನೇ ಯಿಸವಿಯೊಳು ಸ್ಟೇಟ ಸೆಕ್ರಿಟರಿಯವರು ಮಾಡಿದ ನಿಬಂಧನೆಯಾಗಲಿ ಸಿವಿಲ್ ಅಕೌಂಟಕೋಡಿನಲ್ಲಿ ಕಂಡ ನಿಯಮವಾಗಲಿ ಖಂಡಿತವಾಗಿ ಜಾರೀಗೆ ತರಲ್ಪಟ್ಟಂತೆ ಕಾಣಲಿಲ್ಲವಾಗಿ ಇದರಿಂದ ಅನರ್ಥಗಳಿಗೂ ಅಪಾಯಗಳಿಗೂ ಕಾರಣವಾಗುತಿದೆಂದು ಭಾವಿಸಿ ಮಂತ್ರಾಲೋಚಕ ಸಮಾಜದೊಳಗಣ ಗವರ್ನರ್ ಜನರಲ್ಲವರು ಒಂದು ಯಿಷ್ಟು ಹುಕುಂ ಮಾಡಿದಾರೇನೆಂದರೆ, ಹಾಲಿ ಜಾರಿಯಲ್ಲಿರುವ ಯಾವದಾದರೊಂದು ನಿಬಂಧನೆಯಿಂದಲಾದರೆ, ಅಥವಾ ಗವರ್ನಮೆಂಟನವರ ಕಂಠೋಕ್ತವಾದ ಹುಕುಂಮೂಲಕವಾಗಿಯಾದರೂ, ಆರೀತಿ ನಡೆಸುವಂತೆ ನಿಯಮಿಸಲ್ಪಟ್ಟಹೊರ್ತು ಸರ್ಕಾರ್ ನೌಕರಿಯೊಳಿರತಕ್ಕ ಯಾವ ಆಫೀಸರನೇಯಾಗಲಿ, ಇತರ ಸರ್ಕಾರದವರಿಂದ ಅಥವಾ ಸಂಸ್ಥಾನದವರಿಂದ ಅಲ್ಲದೆ ಒಬ್ಬ ಮನುಷ್ಯನಿಂದ ಯಾತವಿಧ ರುಸುಮನ್ನೂ ಪಡೆಯಕೂಡದೆಂಬ ಈ ನಿಯಮವು ಇದುಮೊದಲು ಖಂಡಿತವಾಗಿ ಸರ್ವತ್ರ ಜಾರೀಗೆ ತರತಕ್ಕದ್ದೆಂದು ಹುಕುಂ ಮಾಡಿರುತ್ತಾರೆ

ಶುಷ್ಕವೇದಾಂತಿಗಳು

ಈಚೆಗೆ ಕರ್ನಲ್ ಆಲ್ಕಾಟಿಯವರು ಈ ಪ್ರತಿಗೆಂದು ಹೋದತೆರದಾಯ ಪ್ರತಿಮನುಷ್ಯನೂ ವೇದಾಂತಿಯಾಗುತಲೂ, ಅನವರತ ವೇದಾಂತವಾಕ್ಯಗಳನ್ನೇ ನುಡಿಯುತಲೂ, ವಿರಕ್ತಿಮಾರ್ಗವನ್ನವಲಂಬಿಸುತಲೂ, ಸಾಯುಜ್ಯಪ್ರಾಪ್ತಿಗೆ ಸನ್ನದ್ಧನಾಗಿರುವಂತೆ ತೋರ್ಪಡಿಸುತಲೂ ಯಿದ್ದಾನೆ. ಇಂತವರ ಸ್ಥಿತಿಯು ನಮಗೆ ವಿಷಾದಕರವಾಗಿರುವದರಿಂದ ಅವರು ಕುರಿತು ಇದರಡಿಕಂಡ ಕೆಲವಂಶಗಳನ್ನು ತಿಳಿಸಬಿಟ್ಟಗೊಂಡಿದೇವೆ. ಅದೇನೆಂದರೆ—ಸ್ಥಿರವಾದ ವಿರಕ್ತಿಯುದಯಿಸುವ ದುರ್ಲಭವಾದ ಅಳೆಯುತೋರಿದ ಹೃದಯ ಶುದ್ಧಿಯನ್ನೈದತಕ್ಕವನು ಲಕ್ಷದೊಳೊಬ್ಬನು ದೊರಕುವದು ಸಹ ಬಹಳ ಪ್ರಯಾಸವಾಗಿರುತಿದೆ. ಅಂತವನು ತನ್ನ ಸುಖವನ್ನೂ ಮನೆತಾಭಾವವನ್ನೂ ಹೋಗಲಾಡಿಸುವದರಿಂದ ತನ್ನ ಉಪ್ಪರಿಕ್ಕೆಲ್ಲಿ ಜಗವ್ವು ಆಗುವದೆಂಬ ಚಿಂತೆಕೊಡದೆ ಮಾತ್ರ ಬಿಂಬಿಸುತ ತನ್ನ ಪ್ರತಿಜ್ಞೆಯನ್ನು ಕಾಪಾಡಿಕೊಂಡು ಲೌಕಿಕಸುಖಾದಿಗಳನ್ನು ನಿವೃತ್ತಿಸಿಕೊಳ್ಳುವನು. ಅಂತಾ ಮಹಾನುಭಾವರ್ನದೆರವು ದೊರೆಯುವದು ಸಹ ಅತಿಪ್ರಯಾಸವು ನಿಕ್ಕವಲ್ಲದೆ, ಸಂಸಾರವು ತುಚ್ಛವಾದದೆಂತಲೂ ಅದುಬಿಡುವದೇ ಸುಖಕರವೆಂತಲೂ ಅದಕ್ಕೆ ಯೋಗನಿಷ್ಠಾಭ್ಯಾಸವೇ ಉಚಿತೋಪಾಯವೆಂತಲೂ, ಸಮಾಧಿನಿಷ್ಠನಾಗಿ ದೇವರಂ ಭಜಿಸಬೇಕೆಂತಲೂ, ಬಗೆಬಗೆಯಾದ ಶುಷ್ಕವೇದಾಂತಗಳಂ ನುಡಿಯುತ ಪರಪ್ರತಾರಣಾರ್ಥ ನಾನಾವಿಧದಿಂ ನಟಿಸುತಲಿರುತ್ತಾರೆ. ಇಂತವರ ವಿಷಯವನ್ನು ಕುರಿತು ಆಲೋಚಿಸಲಾಗಿ ನಮಗೆ ತೋರಬರುವದೇನೆಂದರೆ ಲೋಕದಲ್ಲಿ ಮನುಷ್ಯನಿಗೆ ಇಹಪರಗಳೆಂಬ ಯೆರಡು ಪ್ರಯೋಜನಗಳು ಪ್ರಧಾನಗಳಾಗಿರುತಿವೆ. ಇವುಗಳಲ್ಲಿ ಅವರವರ ಅಧ್ಯವಸಾಯಾನುಗುಣವಾಗಿ ಕೆಲವರಿಗೆ ಪರಸುಖವೇ ಉತ್ತಮವೆಂದು ತೋರಿ ಅದಂ ಪಡೆಯುವದಕ್ಕೋಸ್ಕರ ತಕ್ಕ ಪ್ರಯತ್ನಗಳಂ ಮಾಡುವರು, ಅವರ ಪ್ರಯತ್ನವು ಪಯೋವಸ್ಥಾನುಗುಣವಾದದ್ದಾಗಿರುವದು. ಕೆಲವರಿಗೆ ಇಹಸುಖದೊಳು ಆಸಕ್ತಿರದೆ ಅದನ್ನೇ ಮುಖ್ಯವೆಂದು ಭಾವಿಸಿ ಅದಂ ಹೊಂದುವದಕ್ಕಾಗಿ ನಾನಾವಿಧ ಕ್ಲೇಶಗಳಂ ಪಡುತ್ತಾರೆ. ಏತೀನ ಮೇಲ್ಕಂಡ ಯೆರಡುಬಗೆಯವರ ಪ್ರಯತ್ನಗಳಿಗೈಕ ಮೂಲವೆನಿಸುವದು ವೈರಾಗ್ಯವೆಂಬ ಮನೋವೃತ್ತಿಯನ್ನು ಸ್ಥಿರವನ್ನಾಗಿಮಾಡಿಕೊಂಡು ದೇವರು ಭಜಿಸುವಿಕೆಯಾಗಿರುತಿದೆ. ಎರಡನೆಯವರದು ಲೋಕಕಾರ್ಯಗಳಲ್ಲಿ ಪ್ರವರ್ತಿಸಿ ತಮ್ಮ ತಮ್ಮ ಯೋಗ್ಯತಾನುಗುಣಗಳಾದ ಲೌಕಿಕಸುಖವಂ ಪಡೆಯುವದಾಗಿರುತಿದೆ. ಪರಲೋಕಸುಖವಂ ಹೊಂದತಕ್ಕವರು ಶಾಸ್ತ್ರಜ್ಞಾನದಿಂದಲೂ ಲೌಕಿಕ ವಿಷಯಕವಾದ ಚಿರಾನುಭವದಿಂದಲೂ, ಜಗತ್ತೆಲ್ಲವು ಹೇಯವಾದದ್ದೆಂದು ಭಾವಿಸಿ ಅದರಲ್ಲಿ ಅವರಿಗೆ ವಿರಕ್ತಿ ಹುಟ್ಟಿ ಅದು ಸತ್ಪುರುಷರ ಸಂಗದಿಂ ವೃದ್ಧಿಗೊಳಿಸಲ್ಪಟ್ಟು ಕಡೆಗೆ ನಿರೂಢವಾದರೆ ಅದರಿಂದೊಂದು ಫಲವು ಸಿದ್ಧಿಸಬಹುದು. ಹಾಗಿಲ್ಲದೆ ಅಭಾವೇ ವಿರಕ್ತಿಃ ಯೆಂಬ ನ್ಯಾಯವಾಗಿ ದಾರಿದ್ರ್ಯ ಮುಂತಾದವುಗಳಿಂದಲೂ, ಪ್ರಿಯಜನಗಳಲ್ಲುಂಟಾಗುವ ವೈಮನಸ್ಯಾದಿಗಳಿಂದಲೂ, ಇಷ್ಟಮಿತ್ರ ವಿಯೋಗಾದಿಗಳಿಂದಲೂ ಇತರಾಪೇಕ್ಷೆ ಯಾ ಮಹಿಮಾಸ್ಪದ ನಾಗಬೇಕೆಂಬ ಕೋರಿಕೆಯಿಂದಲೂ, ಇನ್ನೂ ಈಮೇರೆ ಅನಿಷ್ಟಪ್ರಾಪ್ತಿಯಿಂದಲೂ, ಇಷ್ಟಗಳಾದ ವಿಷಯಗಳ ಅಪ್ರಾಪ್ತಿಯಿಂದಲೂ ಒಂದೊಂದುಕಾಲದಲ್ಲಿ ಒಂದೊಂದರಿಂದ ಒಬ್ಬೊಬ್ಬನಮನಸ್ಸು ಒಂದೊಂದುಬಗೆಯಾದ ವಿಕಾರವಂ ಹೊಂದಿ ತತ್ಕಾಲದಲ್ಲಿಯೆಲ್ಲವರಲ್ಲಿಯೂ ಮನಸ್ಸು ನಿರ್ವೇದಗೊಳ್ಳುವದು ಸ್ವಾಭಾವಿಕವಾಗಿರುತಿದೆ. ಇದಾದರೂ ಸ್ಥಿರವಾಗಿದ್ದರೆ ಒಂದು ವಿಷಯದಲ್ಲಿ ವಿರಕ್ತಿ ಹುಟ್ಟಿದಂತೆ ಯೆಣಿಸಬಹುದು. ಅದರಿಂದ ಯಪೇಕ್ಷಿತ ಪ್ರಯೋಜನವಂ ವುಂಟು. ಹಾಗಿಲ್ಲದೆ ದುಃಖಕರವಾದ ಅನಿಷ್ಟವು ತೊಲಗಿದರೂ ಅಲಬ್ಧವಾದದ್ದು ಲಭಿಸಿದರೆ, ಕ್ಷಣಿಕವಾಗಿಯೂ, ಮೂಲಶುದ್ಧಿ ಇಲ್ಲದ್ದಾಗಿಯೂ ಇರುವ ಅಂತಾ ನಿರ್ವೇದವು ಹೋಗಿ ಮೊದಲಿಗಿಂತ ವಿಶೇಷವಾದ ವಿಷಯಾಶೆಯುಂಟಾಗಿ ಕೆಟ್ಟುಹೋಗುವದಕ್ಕೆ ಕಾರಣವಾಗುತಿದೆ. ಚಿತ್ತಸ್ವಾಸ್ಥ್ಯವಿಲ್ಲದ ಇಂತಾವರ ಶುಷ್ಕವೇದಾಂತದಿಂ ಏನು ಪ್ರಯೋಜನವೋ ನಾವರಿಯೆವು. ಕಡೆಗೆ ಇವರಿಗೆ ಮೊದಲು ಪ್ರಾಪ್ತಿಯಾಗಿರುವ ಗೌರವ ಸಹ ಹೋಗಿ ಡಾಂಭಿಕರೆಂಬ ಹೆಸರು ಬಾರದೆ ತಪ್ಪಲಾರದು.

THE HILL LXODUS

ಗ್ರೀಷ್ಮಕಾಲದಲ್ಲಿ ಯೂರೋಪಿಯನ್ ಆಫಿಸರರು ಪರ್ವತಪ್ರಾಂತಕ್ಕೆ ಹೊರಟುಹೋಗುವದರ ಮೂಲಕ ಗವರ್ನಮೆಂಟಿಗೆ ಬಹುಲಕ್ಷರೂಪಾಯಿಗಳ ದುಬಾರಾ ಖರ್ಚಾಗುವದರಿಂದ ಅದನ್ನು ತಪ್ಪಿಸಬೇಕೆಂದು ಈಗ ನಡೆಯುತಲಿರುವ ಪ್ರಯತ್ನದಿಂದ ನೇಟಿವ್‌ಗಳಿಗೆ ಯಾವ ಪ್ರಯೋಜನವೂ ಇಲ್ಲವೆಂದು ಮದ್ರಾಸ ಅಮೃತ ಬಜಾರ್ ಪತ್ರಿಕೆ ತಿಳಿಸುವ ಅಭಿಪ್ರಾಯವನ್ನು ಈ ಪತ್ರಿಕೆಯ ಮತ್ತೊಂದುಕಡೆ ಪ್ರಕಟಿಸಿಯಿರುತ್ತೇವೆ. ಈ ಕಾಲದಲ್ಲಿ ಸಾಮಾನ್ಯವಾಗಿ ನೇಟಿವ್‌ಜನಗಳು ಯೂರೋಪಿಯನ್ನರಿಗೆ ಪ್ರತಿಬಿಂಬದೋಪಾದಿಯಲ್ಲಿರುತ್ತಾರೆ. ನೇಟಿವ್ ಅರಸರೂ ಪ್ರಮುಖರೂ ತಾದಾತ್ಮ್ಯವನ್ನು ವಹಿಸಿರುತ್ತಾರೆ. ಆದದರಿಂದ ಮೈಸೂರು ಹೈದರಾಬಾದ್ ಮೊದಲಾದ ಸಂಸ್ಥಾನಾಧಿಪತಿಗಳು ಬೇಸಿಗೆಯಲ್ಲಿ ತಮ್ಮ ದೇಶದೊಳಗಣ ಪರ್ವತಪ್ರಾಂತಕ್ಕೆ ಹೋಗುವದು ಸಹ ತಮಗೆ ಗೌರವಾವಹವಲ್ಲವೆಂಬ ಜ್ಞಾನದೊದನೆ ಯೂರೋಪಿಯನ್ನರು ಇಂಗ್ಲಾಂಡಿನಂತೆ ಭಾವಿಸಿಯಿರುವ ನೀಲಗಿರಿ, ಮಹಾಬಲೇಶ್ವರ, ಸಿಂಲಾ ಮೊದಲಾದ ಸ್ಥಳಗಳಿಗೆ ಹೋಗುವ ವಾಡಿಕೆಯನ್ನಿಟ್ಟುಕೊಂಡಿರುತ್ತಾರೆ. ಯೂರೋಪಿಯನ್ ಆಫಿಸರ್‌ಗಳು ಯೆಂತಾ ಸುಖವನ್ನಪೇಕ್ಷಿಸಿಯಲ್ಲಿಗೆ ಹೋದಾಗ್ಯೂ ಅವರು ಪ್ರಾಯಶಃ ತಮ್ಮ ಅಧಿಕಾರ ಸರಹದ್ದನ್ನು ದಾಟಿ ಹೋಗುವದಿಲ್ಲವು. ಪೂರ್ವದ ನೇಟಿವ್ ಅರಸರುಗಳು ತಮ್ಮ ರಾಜಧಾನಿಯಿಂದ ಹೊರಗೆ ಹೋಗುವದು ಸಹ ತಮಗೆ ಗೌರವಾವಹವಲ್ಲವೆಂದು ಭಾವಿಸುತಲಿದ್ದರು. ಈಗಿನವರಾದರೋ, ಹೊರಗೆ ಹೋಗುವದೇ ತಮಗೆ ಗೌರವವೆಂದು ಯೆಣಿಸುವ ಸ್ಥಿತಿಯಲ್ಲಿದ್ದಾರೆ. ಅಂತಾ ದುಬಾರಾ ಖರ್ಚುಗಳು ಬ್ರಿಟಿಷ್‌ರಾಜ್ಯದ

ಲ್ಲಿ ಯಾವಾಗ ನಿಂತುಹೋಗುತಿವೆಯೋ, ಯೂರೋಪಿಯರ್ ರುಜೆನಟಸಬೇಕೆಂಬ ಭ್ರಾಂತಿಹಿಡಿದರಾದ ನೇಟವ್ ಅರಸರುಗಳು ಸಹ ಅಂತಾವ್ಯರ್ಥವಾದ ಖರ್ಚುಗಳನ್ನು ತಪ್ಪಿಸುವದರಲ್ಲಿ ಸಂದೇಹವಿಲ್ಲವು. ಬ್ರಿಟಿಷರಾಜ್ಯದಲ್ಲಿ ಮೇಲೆ ಹೇಳಿದ ದುಬಾರಾ ಖರ್ಚುಗಳು ತಪ್ಪಿ ಅದರಿಂದ ಮಿಗಲುವ ಹಣವನ್ನು ಉಪಯುಕ್ತಕಾರ್ಯಗಳಿಗೆ ವಿನಿಯೋಗಿಸಿದರೆ ಅಲ್ಲಿನ ಪ್ರಜೆಗಳಿಗೆ ಹ್ಯಾಗೆ ಸುಖವುಂಟೋ ತದ್ವತ್ ನೇಟವ್ ಸಂಸ್ಥಾನಗಳಲ್ಲೂ ಅಂತಾ ದುಬಾರಾ ಖರ್ಚುಗಳು ತಪ್ಪಿ ಅದರಿಂದ ಮಿಗಲುವ ಹಣವು ಪ್ರಜೆಗಳ ವಿಷಯದಲ್ಲಿ ವಿನಿಯೋಗಿಸಲ್ಪಟ್ಟರೆ ಅವರಿಗೂ ಪ್ರಯೋಜನವುಂಟು. ಆದದರಿಂದ ಮೇಲೆ ಹೇಳಿದಂತಾ ದುಬಾರಾ ಖರ್ಚುಗಳು ತಪ್ಪುವದರಮೂಲಕ ಪ್ರಜೆಗಳಿಗೆ ಪ್ರಯೋಜನವಿಲ್ಲವೆಂದು ಹೇಳುವದಕ್ಕಾಗುವದಿಲ್ಲವು.

Occasional Notes.

ಪ್ರಮಿತ ವಿಷಯನ್ಯಾಸ

A prohibition.—ಬರೋಡೇ ಸಂಸ್ಥಾನದ ದಿವಾನರವರು ಸದರೀ ಸಂಸ್ಥಾನದ ಗ್ರಂಥಾಲಯಕ್ಕೆ ಯಾರೇತರ ಜನಗಳಿಂದ ಪ್ರಕಟವಾದ ಪತ್ರಿಕೆಯ ಅಂಗೀಕರಿಸಲಾಗದೆಂದು ಒಂದು ಹುಕುಂ ಹೊರಡಿಸಿರುತ್ತಾರೆ.

A report denied.—ಮದರಾಸ್ ಪ್ರೆಸಿಡೆನ್ಸಿಯ ಪ್ರಸ್ತುತ ಗವರ್ನರಾದ ಸರ್ ಎಂ. ಇ. ಗ್ರಾಂಟಡಫ್‌ರವರು ಕೆಲಸವು ಬಿಟ್ಟು ಹೋದಮೇಲೆ ಅವರ ಪದವಿಗೆ ಸರ್ ಜಾರ್ಜ್ ವೈಟ್ ಯು ಬರುವರೆಂದು ಹುಟ್ಟಿದ ಪ್ರವಾದವು ನಿರಾಧಾರವಾದದ್ದೆಂದು ಒಂದು ಪಟ್ಟಣದಿಂದ ಕಲ್ಕತ್ತಾ ಇಂಗ್ಲಿಷಮನ್ ಪತ್ರಿಕೆಗೆ ತಂತಿ ವೃತ್ತಾಂತ ಬಂದಿರುತ್ತದೆ.

Native liberality.—ಕಳೆದ ತಿಂಗಳ ೨೬ನೇ ತಾರೀಖ್ ಸೋಮವಾರದದಿನ ತಿರುನಲ್ವೇಲಿಯೊಳು ನಡೆದ ಅಗ್ನಿಪ್ರಳಯದ ವೃತ್ತಾಂತವನ್ನು ಕೇಳಿದಕೂಡಲೆ, ಮದರಾಸಿನಲ್ಲಿ ಪ್ರಸಿದ್ಧರಾಗಿರುವ ಮ|| ರಾಮಸ್ವಾಮಿ ಮೊದಲಿಯಾರ್ ಸಿ. ಐ. ಇ. ಎಂಬವರು, ಸದರೀ ಅಪಾಯದಿಂದ ಕಷ್ಟಕ್ಕೆ ಗುರಿಯಾದಜನಗಳ ಸಹಾಯಾರ್ಥ ೧,೦೦೦ ರೂಪಾಯಿಗಳು ಕಳುಹಿಸಿಕೊಟ್ಟರೆಂದು ಕೇಳುವದಕ್ಕೆ ಬಹಳಸಂತೋಷಿಸುತ್ತೇವೆ. ಹೀಗೆ ಅಪತ್ಕಾಲದಲ್ಲಿ ಅಪ್ರಾರ್ಥಿತವಾಗಿ ಮಾಡುವ ಸಹಾಯವೇ ಬಹುಕಾಲ ಸ್ಮರಣೀಯವಾಗಿರುವದು.

The Viceroy's cold weather tour.—ಹೇಮಂತ ಋತುವಿನಲ್ಲಿ ವೈಸರಾಯಿಯವರು ದೇಶಸಂಚಾರಾರ್ಥ ಹೊರಡುವಾಗ, ಪ್ರಾಯಶಃ ಡಿಸೆಂಬರ್‌ನಲ್ಲಿ ಅಂಬಾಲಾ ಎಂಬ ಸ್ಥಳದಿಂದ ಕರಾಚಿಗೆ ಹೋಗಿ, ಮಾರ್ಗವಶಾತ್ ಮುಖ್ಯವಾದ ಸ್ಥಳಗಳಲ್ಲಿ ಮೊಕ್ಕಾಂ ಮಾಡುವರು. ಕರಾಚಿಯಿಂದ ಹೊರಟು ಸ್ಟೀಮರಿನಲ್ಲಿ ಬೊಂಬಾಯಿಗೆ ಬರುವರು. ಅಲ್ಲಿಂದ ರೈಲ್ ಮಾರ್ಗವಾಗಿ ಬರೋಡೆಗೂ, ತರುವಾಯ ಮೈಸೂರಿಗೂ, ಮುಂದೆ ಹೈದರಾಬಾದಿಗೂ ಹೋಗುವರೆಂದು ಪಯೋನಿಯರ್ ಪತ್ರಿಕೆ ಹೇಳುತ್ತದೆ.

The Emperor of China's new throne.—ಚೀನಾ ದೇಶದೊಳಗಣ ಸಾಕಲ್ಯವೆಂಬ ಸ್ಥಳದಲ್ಲಿ ಚಕ್ರವರ್ತಿಯವರಿಗಾಗಿ ನೂತನವಾಗಿ ಕಲ್ಪಿಸಲ್ಪಡುವ ಸಿಂಹಾಸನದ ಅಸ್ತಿಭಾರವನ್ನೂ ಪೀಠವನ್ನೂ ಚಿನ್ನದ ಇಟಿಕೆಗಳಿಂದ ಕಟ್ಟಿಸಬೇಕೆಂದು ಆಲೋಚಿಸಲ್ಪಟ್ಟು ಸೂಚೌ ಎಂಬ ಪಟ್ಟಣದ ಮುನಿಸಿಪಾಲಿಟಿಯವರು ಬಂಕೆಮಣ್ಣಿನಿಂದ ಮಾಡಲ್ಪಡುವ ಇಟಿಕೆಗಳನ್ನು ಸಾಧಾರಣವಾದ ಅಳತೆಯುಳ್ಳ ೩೦೦೦ ಚಿನ್ನದ ಇಟಿಕೆಗಳನ್ನು ಪರೀಕ್ಷಾರ್ಥ ಕಳುಹಿಸಿಕೊಟ್ಟರೆಂಬದಾಗಿ ಒಂದಾನೊಂದು ಪತ್ರಿಕೆ ಹೇಳುತ್ತದೆ.

An enquiry.—ಪುನೆ, ಸುರಾತ್, ಮತ್ತು ಅಹಮದಾಬಾದಿನಲ್ಲಿರುವ ಸ್ಮಾಲ್ ಕಾಸ್ ಕೋರ್ಟುಗಳನ್ನು ತೆಗದುಹಾಕಿ ಅವುಗಳ ಸ್ಥಾನದಲ್ಲಿ ಸಬಾರ್ಡಿನೇಟ್ ಕೋರ್ಟುಗಳನ್ನು ಸ್ಥಾಪಿಸಿ ಅನ್ಯತ್ರ ಇರುವಂತೆ ಅವುಗಳಿಗೆ ಸ್ಮಾಲ್ ಕಾಸ್ ಜಡ್ಜಿಗಳ ಅಧಿಕಾರವನ್ನುಂಟುಮಾಡಿದರೆ ಕೆಲಸಗಳು ಸರೀಗೆ ನಡೆಯಲಾರವೆಂದು ಮುಂಬೈ ಗವರ್ನಮೆಂಟಿನವರು ಅಲ್ಲಿನ ಹೈಕೋರ್ಟ್ ಜಡ್ಜಿಗಳನ್ನು ಕೇಳಿರುತ್ತಾರೆ. ಸದರೀ ಮೂರು ಸ್ಮಾಲ್ ಕಾಸ್ ಕೋರ್ಟುಗಳಿಗೂ ಸೇರಿ ಮಾಹೆಯಾನಾ ಸುಮಾರು ೫೦೦೦ ರೂಪಾಯಿಗಳು ಖರ್ಚಾಗುವಂತೆ ತಿಳಿಯಬರುತ್ತದೆ.

Sale of adulterated ghee.—ಕಲ್ಕತ್ತೆಯ ಬಾಜಾರಿನಲ್ಲಿ ಬೆಣ್ಣೆಕ್ಕೆ ಹಂದಿಯ ಕೊಬ್ಬನ್ನು ಬೆರಸಿ ಮಾರುತ್ತಾರೆಂದು ಹಿಂದೂ ಮತ್ತು ಮಹಮ್ಮದಿಯರ್ ಜನಗಳಿಗೆ ಸಂಶಯವುಂಟಾಗಿ ತನ್ಮೂಲಕ ಬಹಳ ಗದ್ದಲವುಂಟಾಗಿರುತ್ತದೆ. ಗವರ್ನಮೆಂಟಿನವರು ಕೂಡಲೇ ಈ ವಿಷಯವನ್ನು ಕುರಿತು ತನಿಖೆ ಮಾಡುವವರ ಮೂಲಕ ಜನಗಳಿಗೆ ನಂಬಿಕೆ ಯನ್ನುಂಟುಮಾಡಬೇಕೆಂದು ಕಲ್ಕತ್ತೆಯ ನೇಟವ್ ಪತ್ರಿಕೆ ಯೊಂದು ಉದ್ದೇಶಿಸಿ ಹೇಳುವದಲ್ಲದೆ, ಸದರೀ ನಗರದಲ್ಲಿರುವ ಮಾರ್ವಾಡೀ ಜನಗಳು ಈ ವಿಷಯವನ್ನು ಕುರಿತು ಗವರ್ನಮೆಂಟಿಗೆ ಒಂದು ಪಿಟೀಷನ್ ತಯಾರ್ಮಾಡುತಲಿದ್ದಾರೆಂದು ಅಲ್ಲಿನ ಪತ್ರಿಕೆಯೊಂದರ ಮೂಲಕ ತಿಳಿಯಬರುತ್ತದೆ. ತುಪ್ಪದ ವಿಷಯದಲ್ಲಿ ವರ್ತಕರು ಮಾಡುವ ಮೋಸದ ದುಷ್ಕೃತ್ಯವು ಯಾವ ದೇಶದಲ್ಲೂ ತಪ್ಪಿದ್ದಲ್ಲವು.

A terrible catastrophe at Tinnevelly town.—ಪಾಳಯಂಕೋಟೆ, ೨೮ನೇ ಜುಲೈ—ಕಳೆದತಿಂಗಳ ೨೬ನೇ ತಾರೀಖ್ ಸೋಮವಾರ ರಾತ್ರಿ ೧೧ ಘಂಟೆಗೆ, ತಿರುನಲ್ವೇಲಿ ಪಟ್ಟಣದಲ್ಲಿ ಕಟ್ಟಲ್ಪಟ್ಟಿರುವ ನಾಟಕ ಚಪ್ಪರದಲ್ಲಿ ನಾಟಕವಾಡಲ್ಪಡುತ ಅದನ್ನು ನೋಡುವದಕ್ಕಾಗಿ ನಾನೂರು ಐನೂರು ಜನಗಳು ಬಂದು ಕುಳಿತುಕೊಂಡಿರುವ ಸಂದರ್ಭದಲ್ಲಿ ಏಕಾಏಕಿ ಚಪ್ಪರಕ್ಕೆ ಬೆಂಕಿ ಹತ್ತಿಕೊಳ್ಳಲು ಒಳಗೆ ಇದ್ದ ಜನಗಳು ಪ್ರಾಣದ ಮೇಲಿನ ಆಸೆಯಿಂದ ಒಬ್ಬರಮೇಲೊಬ್ಬರು ಬಿದ್ದುಕೊಂಡು ಹೊರಗೆ ಹೋಗಲೆತ್ನಿಸುತಲ್ಲಿ ಒಬ್ಬರೂ ಹೊರಗೆ ಹೋಗುವದಕ್ಕೆ ಸಾಧ್ಯವಿಲ್ಲದೆ ಹೋಯಿತು. ಅನೇಕರು ಚಪ್ಪರದಸುತ್ತಲೂ ಇರುವ ಗೋಡೆಗಳಮೇಲೂ ಮನೆಗಳಮೇಲೂ ಹತ್ತಿ ತಪ್ಪಿಸಿಕೊಂಡರು. ಕಡೆಗೆ ಬಾಗಿಲಿಗೆ ಕಿತ್ತುಹಾಕಲ್ಪಟ್ಟಿತು ಗಾಳಿ ಬಲವಾಗಿ ಬೀಸುತಲಿದ್ದದರಿಂದ ಬೆಂಕಿ ತ್ವರೆಯಲ್ಲೇ ಪ್ರಜ್ವಲಿಸುವದಕ್ಕೆ ಅವಕಾಶವಾಯಿತು. ಎಪ್ಪತ್ತು ಮಂದಿ ಪ್ರಾಣಗಳು ಕಳಕೊಂಡರು. ಅದಕ್ಕೆ ತಕ್ಕಷ್ಟು ಗಾಯವಾದವು. ಅದರ ಪ್ರತಿ ಸಾಯದೆ ಉಳಿದವರಿಗೆ ಪ್ರಾಣಾಪಾಯ ಕರವಾದ ಗಾಯಗಳು ತಗಲಿದವು, ಈ ವರ್ತಮಾನ ತಿಳಿದಕೂಡಲೇ ಕ್ರಿಶ್ಚಿಯನರೂ ಆಸ್ಪತ್ರೆಯಿಂದ ಚಿಕಿತ್ಸಕರೂ ಬಂದರು. ಯಾರೋ ತುಂಟರು ಬೇಕೆಂದು ಚಪ್ಪರಕ್ಕೆ ಬೆಂಕಿ ಹಚ್ಚಿದರೆಂಬ ಪ್ರವಾದವುಂಟಾಗಿ ಪೊಲೀಸಿನವರು ದರ್ಯಾಪ್ತು ಮಾಡುತಿದ್ದಾರೆ, ಎಂದು ಮದರಾಸ್ ಮೇಲ್ ಪತ್ರಿಕೆಯ ಪಾಳಯಂಕೋಟೆ ಬಾತಮಿದಾರನು ತಿಳಿಸಿರುತ್ತಾನೆ. ಯಾವ ಪಟ್ಟಣಗಳಲ್ಲಿ, ಪ್ರಜೆಗಳ ವಾಸಗೃಹಗಳ ಮಧ್ಯೆ, ನಾಟಕ ಚಪ್ಪರಗಳೆಂಬ ಹೆಸರಿನಿಂದ ಗುಡುಸಲುಗಳು ಹಾಕಿಕೊಂಡಿರುವದೂ, ಬೀದಿಬೀದಿಗೆ ಗುಡಿಸಲುಗಳಲ್ಲೂ, ಬೈಗಿನಲ್ಲೂ ಸಾವೇ ಕೊಟ್ಟಿಗಳು ಇಟ್ಟುಕೊಂಡಿರುವದು ಯೆಂದಿಗಾದರೂ ಪ್ರಜೆಗಳ ಪ್ರಾಣ ಮಾನ ಧನಗಳಿಗೆ ಅಪಾಯವನ್ನುಂಟುಮಾಡದೆ ಹೋಗಲಾರದಾಗಿ ಮೇಲಿನ ಚಪ್ಪರಗಳನ್ನೂ ಸಾವೇ ಕೊಟ್ಟಿಗಳನ್ನೂ ತೆಗದುಹಾಕಿಸುವ ವಿಷಯದಲ್ಲಿ ಆಯಾಯನಗರ ವಿಚಾರಕಾಧಿಕಾರಿಗಳೆಂಬ ಬಿರುದಾಂಕಿತರಾದ ಮ್ಯೂನಿಸಿಪಾಲಿಟಿಯವರು ನಿಗಾ ಕೊಡಬೇಕಾದದ್ದು ಆವಶ್ಯಕವಾಗಿರುತ್ತದೆ.

LOCAL AND PROVINCIAL NEWS.

ಒಳದೇಶಮತ್ತುತಾಲ್ಲೂಕಜಾತ್ ವೃತ್ತಾಂತಗಳು.

Nundidroog Sessions.—ಈದಿನ ಇಲ್ಲಿನ ಚೀಫ್‌ಕೋರ್ಟ್ ಸೆಷನ್ ವಿಚಾರಣೆ ಪ್ರಾರಂಭವಾಗಿ ಚೀಫ್‌ಜಡ್ಜಿಯವರಿಂದನಡೆಸಲ್ಪಡುವದು. ಈ ಬಗ್ಗೆ ಮೂರು ಮೊಕದ್ದಮೆಗಳು ಕಮಿಟಿಮಾಡಲ್ಪಟ್ಟಿರುತ್ತವೆ. ಅವುಗಳಪೈಕಿ ಯೊಂದುಖೂನಿಮೊಕದ್ದಮೆ.

Japanese officers.—ಜಪಾನ್ ರಾಜ್ಯದ ಕೆಲವರು ಆಫಿಸರುಗಳು ಅನ್ಯರಾಜ್ಯಗಳಲ್ಲಿನ ವಿಶೇಷ ವಿಷಯಗಳನ್ನು ತಿಳಿದುಕೊಂಡು ಹೋಗಿ ಅವನ್ನೆಲ್ಲ ಸ್ವದೇಶದಲ್ಲಿ ಪ್ರಚಾರಗೊಳಿಸುವ ಉದ್ದೇಶದೊಡನೆ ಈಗ ಇಂಡ್ಯದೇಶದಲ್ಲಿ ದೊಡ್ಡ ದೊಡ್ಡ ಶಹರುಗಳಿಗೆ ಹೋಗಿ ನೋಡುತಲಿರುತ್ತಾರಾಗಿ ಸದರೀ ಆಫಿಸರುಗಳು ಈ ತಿಂಗಳ ೯ನೇ ತಾರೀಖಿನಲ್ಲಿ ಈವೂರಿಗೆಬಂದು ಇಲ್ಲಿಂದ ಮೈಸೂರಿಗೆ ಹೋಗುವರೆಂದು ತಿಳಿಯಬರುತ್ತದೆ.

Refused.—ಲಕ್ಷ್ಮಣಗ್ರಾಮದ ಸಿವಿಲ್ ಸರ್ವಿಸ್ ಪರೀಕ್ಷೆಕೆಲಸಕ್ಕೆ ತಿರುವಾಂಕೂರು ಚೀಫ್‌ಕೋರ್ಟ್ ಜಡ್ಜಿಗಳಪೈಕಿ ಯೊಬ್ಬರಾದ ಮ|| ಆರಂಗಬ ಯೆಂಬವರನ್ನು ಕರೆಸಬೇಕೆಂದು ಈ ಸಂಸ್ಥಾನದ ಅಧಿಕಾರಿಗಳು ಆಲೋಚಿಸಿ ಆಬಗ್ಗೆ ಸದರೀಯವರಿಗೆ ಬರೆದಿರುವಂತೆ ಹಿಂದೆ ಒಂದು ಪ್ರವಾದ ವುಂಟಾಗಿತ್ತಷ್ಟೆ. ಮ|| ಆರಂಗಬ ಯವರು ತಮಗೆ ಇಷ್ಟವಿಲ್ಲವೆಂದು ತಿಳಿಸಿದ್ದಾಗಿ ಒಳದೇಶದ ಈವನಿಂಗ್‌ಮೇಲ್ ಯೆಂಬಪತ್ರಿಕೆ ಹೇಳುತ್ತದೆ.

New Public Offices.—ಈಗ ಮೈಸೂರಲ್ಲಿ ದಿವಾನರ ಕಚೇರಿಯಬಗ್ಗೆ ಹೊಸದಾಗಿಯೊಂದು ಕಟ್ಟಡ ಕಟ್ಟಿಸಬೇಕೆಂಬ ಆಲೋಚನೆಯುಂಟಾಗಿರುವದು ಸರಿಯಷ್ಟೆ. ಸದರೀ ಕಟ್ಟಡಕ್ಕೆ ಮೈಸೂರು ಶಹರಿಗೆ ಮೂರು ಮೈಲಿಗಳ ದೂರದಲ್ಲಿರುವ ಕೂಕರಹಳ್ಳಿ ಕೆರೆಯಬಳಿ ಸ್ಥಳ ನೋಡಿರುವಂತೆ ತಿಳಿಯಲಾದೆವು. ಈ ಆಲೋಚನೆಯು ದಿವಾನ್ ಕಚೇರಿ ಚಿಲ್ಲರೆ ನೌಕರರ ಭಾಗ್ಯವಿಶೇಷದಿಂದ ವುಂಟಾದದ್ದೆಂದು ಭಾವಿಸಬೇಕಾಗಿರುತ್ತದೆ.

The weather.—ಈಗ್ಯೆ ಸುಮಾರು ಹದಿನೈದು ದಿನಗಳಮೊದಲು ಸೂರ್ಯರಶ್ಮಿಯಿಲ್ಲದೆ ಹಗಲೂ ರಾತ್ರಿ ಮೋಡವಾಗುತ ಕೆಲವುವೇಳೆಯಲ್ಲಿ ಮಂತುರುವುಳಿಯೂ ಕೆಲವುಹೊತ್ತು ಬಲವಾದ ಮಳೆಯೂ ಬೀಳುತಲಿದೆ. ಇದರಿಂದ ಕೆರೆಕುಂಟೆಗಳಿಗೆ ವಿಶೇಷ ನೀರು ಬರುವದಕ್ಕೆ ಅವಕಾಶ ಕಡಿಮೆಯಾದಾಗ್ಯೂ ಬಹಳವರ ಹಳೇ ಮನೆಗಳ ವಿಷಯದಲ್ಲಿ ಅವರಿಗೆ ಚಿಂತೆಗೆ ಸಂಪೂರ್ಣವಕಾಶವುಂಟು. ಪದಾರ್ಥಗಳ ಧಾರಣೆಗಳು ಏಕರೂಪವಾಗಿದೆ. ವಿಶೇಷತಃ ರೋಗಾದ್ಯುಪದ್ರವಗಳು ಯಾವವೂ ಕಾಣಿಸಲಿಲ್ಲವು.

Court Fee stamps.—ಸಿವಿಲ್ ವ ಮಿಲಿಟರಿ ಸ್ಟೇಷನ್ನಲ್ಲಿ ಮಾರಲ್ಪಡುವ ಕೋರ್ಟ್ ಫೀ ಸ್ಟಾಂಪುಗಳು ಸದರೀ ಸ್ಟೇಷನ್ ಕೋರ್ಟುಗಳಲ್ಲಿಮಾತ್ರ ಉಪಯೋಗಿಸಲ್ಪಡತಕ್ಕದ್ದೆಂತಲೂ ಪೇಟೆಯಲ್ಲಿ ಮಾರಲ್ಪಡುವ ಸ್ಟಾಂಪುಗಳು ಸದರೀ ಕೋರ್ಟುಗಳಲ್ಲಿ ಅಂಗೀಕರಿಸಲ್ಪಡಲಾರವೆಂತಲೂ ಬ್ರಿಟಿಷರೆಸಿಡೆಂಟರವರು ಇಸ್ತಿಹಾರ್‌ಮೂಲಕ ಪ್ರಕಟಿಸಿರುತ್ತಾರೆ. ಪೇಟೆಯಲ್ಲಿ ಮಾರಲ್ಪಡುವ ಸ್ಟಾಂಪುಗಳಿಗೂ ಕಂಟೋನ್ಮೆಂಟಿನಲ್ಲಿ ಮಾರಲ್ಪಡುವ ಸ್ಟಾಂಪುಗಳಿಗೂ ಗುರುತುಕಂಡುಹಿಡಿಯುವದು ಕಷ್ಟಸಾಧ್ಯವಾದದರಿಂದ ಯೆಲ್ಲ ಕಡೆಯಲ್ಲೂ ಬ್ರಿಟಿಷ್ ಸ್ಟಾಂಪುಗಳನ್ನು ಉಪಯೋಗಿಸುವದುಚಿತವೆಂದು ಒಳದೇಶದ ಪತ್ರಿಕೆಯೊಂದುಹೇಳುತಿದೆ. ಅದೇಕಾರಣದಮೇಲೆ ಮೈಸೂರುಸ್ಟಾಂಪುಗಳನ್ನುಎರಡುಸ್ಥಳಗಳಲ್ಲಿಯೂ ಉಪಯೋಗಿಸುವದರಲ್ಲಿ ಬಾಧಕತೋರಲಿಲ್ಲವು.

The Mysore local examination.—ಮೈಸೂರು ದೇಶೀಯ ಪರೀಕ್ಷೆಯು, ೧೮೮೭ನೇ ಇಸವಿ ಫೆಬ್ರವರಿ ೨೧ರ ಲಾಗಾಯಿತು ಎಂಟು ಡಿಸ್ಟ್ರಿಕ್ಟುಗಳ ಪ್ರತಿ ಹೆಡ್ ಕ್ವಾರ್ಟರ್ ಅಂದರೆ ಪ್ರಮುಖ ಸ್ಥಳಗಳಲ್ಲಿ ಪ್ರಾರಂಭಿಸಲ್ಪಡುವದು.

೫ನೇ ಪ್ರಕರಣಕ್ಕನುಗುಣವಾಗಿ (I. iii) ಭಾಷೆಯ ಪಾಠಗಳಗೋಸ್ಕರ ಈ ಕೆಳಗೆ ನಮೂದಿಸಿರುವ ಪುಸ್ತಕಗಳು ನಿರ್ಣಯಿಸಲ್ಪಟ್ಟವೆ.

ಮೊದಲನೆ ಅಂದರೆ ಆವಶ್ಯಕಭಾಷೆ.

೧. ಕನ್ನಡ ಪದ್ಯಸಾರ (೬ನೇ ಭಾಗ) ಪದ್ಯಗಳು ೧ರಿಂದ ೨೪೯ ವರಿಗೆ.
೨. ತೆಲುಗು ನಳಚರಿತ್ರಂ
೩. ಅರವ ೨ನೇ ನಂಬರ ನೀತಿಮಂಜರಿ.
೪. ಹಿಂದುಸ್ತಾನಿ ಜಾಮಿಯುಲ್ ಅಷ್ಅರ್.

ಕಂಠಪಾಠಕ್ಕಾಗಿ.

೧, ಪದ್ಯಗಳು, ೮೫ರಿಂದ ೧೫೦ ರವರಿವಿಗೆ; ಮತ್ತು ೩, ಪದ್ಯಗಳ ೧೨೩ರಿಂದ ೨೨೦ರವರಿಗೆ.
೨, ಮತ್ತು ೪, ಕ್ರಮವಾಗಿ ೧ ರಿಂದ ೨೧ನೇ ಪುಟದ ವರಿವಿಗೆ.

ಎರಡನೇ ಅಂದರೆ ಐಚ್ಛಿಕಭಾಷೆ.

ಸಂಸ್ಕೃತ. ಚತುರ್ಲಹರಿ, ನೀತಿ ಶತಕಂ;
ಫಾರಸಿ, ಗುಲಿಸ್ತಾನ್. ಬಾಬ್. ೩ ಮತ್ತು ೫.
ಕನ್ನಡ, ತೆಲುಗು, ಅರವ, ಹಿಂದುಸ್ತಾನಿ—ಮೊದಲನೆ ಅಂದರೆ ಆವಶ್ಯಕ ಭಾಷೆಗೆ ನಿಷ್ಕರ್ಷೆ ಮಾಡಲ್ಪಟ್ಟಹಾಗೆ.

The Municipal Garden.—ಈವೂರು ಕಾರಂಜೀ ಕೆರೇಕೆಳಗಿರುವ ಮ್ಯೂನಿಸಿಪಲ್ ತೋಟವು ಮಧ್ಯ ಸರೋವರದ ತನಕ ಬತಾಯಿಸಲ್ಪಟ್ಟು ಈಗ ಬಹಳ ಅಭಿವೃದ್ಧಿಗೆ ತರಲ್ಪಟ್ಟಿರುತಿವೆ. ಈ ತೋಟದಲ್ಲಿ ಕ್ರಮಕ್ರಮವಾಗಿ ಕಲ್ಪಿಸಲ್ಪಡುವ ವೈಲಕ್ಷಣ್ಯಗಳು ಜನಗಳ ಹೃದಯಾಕರ್ಷಕಗಳಾಗಿವೆ. ಈ ತೋಟದ ಮಧ್ಯಭಾಗದಲ್ಲಿ ೬೦೦ ರೂಪಾಯಿಗಳ ಲಾಗವತ್‌ನಿಂದ ಒಂದು ಬ್ಯಾಂಡ್ ಸ್ಟ್ಯಾಂಡನ್ನು ಲಾಲ್‌ಬಾಗ್ ತೋಟದಲ್ಲಿರುವ ನಮೂನೆಯಂತೆ ಕಟ್ಟಬೇಕೆಂದುದ್ದೇಶಿಸಿ ಆ ಬಗ್ಗೆ ಮ್ಯೂನಿಸಿಪಾಲಿಟಿಯಿಂದ ಮೇಲೆ ಕಂಡ ಮೊಬಲಗುಕೊಡುವಂತೆ ತೀರ್ಮಾನವಾಗಿರುತ್ತದೆ. ಮಧ್ಯ ಸರೋವರದಲ್ಲಿ ಜಲಯಂತ್ರ ಒಂದು ಇಡುವ ಪ್ರಯತ್ನ ನಡೆಯುತಲಿದೆ. ಪ್ರತಿ ಭಾನುವಾರ ಸಾಯಂಕಾಲ ಕೆಲವು ಘಂಟೆಯಕಾಲ ಓಲಗ ಬಾರಿಸಲ್ಪಡುತಿದೆ. ಇವುಗಳ ದೆಸೆಯಿಂದ ಕೆರೇ ಕೆಳಗಣ ಭಾಗವು ಈಗ ಈ ವೂರಿನವರಿಗೆ ನಂದನ ವನದಂತೆ ತೋರಿದೆಯಲ್ಲದೆ ಇದರ ಸ್ಥಿತಿಯು ಮಹಾರಾಜರವರ ಅವಮಾನಕ್ಕೆ ಸಹ ಬಂದದರಿಂದ ಅವರು ನಿನ್ನೆಯದಿನ ಸಾಯಂಕಾಲ ವಿನೋದಾರ್ಥ ತಮ್ಮ ಪ್ರೈವೇಟ್ ಸೆಕ್ರೆಟರಿ ವಗೈರೆಯೊಡನೆ ಸವಾರಿ ಚಿತ್ತೈಸಿದ್ದರು. ಇದು ಮಹಾರಾಜರವರ ವೀಕ್ಷಣಕ್ಕೆ ಯಾವಾಗವಿಷಯವಾಯಿತೋ ಮುಂದೆ ಇನ್ನೂ ಅಭಿವೃದ್ಧಿಗೆ ಬರಲಿಕ್ಕೆ ಸಂದೇಹವಿಲ್ಲವು

CORRESPONDENCE.

ಅಯ್ಯಾ—ಗತವಾರದ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟದ್ದೊಂದು ಸಂಸ್ಕೃತಲೇಖನವು ಕಂಡೆನು. ಸ್ತ್ರೀಯರಿಗೆ ವಿದ್ಯಾಭ್ಯಾಸವು ಶಾಸ್ತ್ರೋಕ್ತವಾದದ್ದೇ ಯೆಂದಾಗಲಿ, ಶಿಷ್ಟಜನಾನುಷ್ಠಿತವಾದದ್ದೇಯೆಂದಾಗಲಿ, ವಿಚಾರಮಾಡುವದಿಲ್ಲವು. ಪಕ್ಷಿಜಾತಿಗಳಾದ ಶುಕಪಿಕಾದಿಗಳಿಗೆ ಮಾತುಗಳಂಕಲಿಸಿ ತನ್ಮೂಲಕ ಆನಂದಿಸುವದು ನಮ್ಮವರಲ್ಲಿ ವುಂಟಾಗಿರುವ ಅನಾದಿಯಾದಸಂಪ್ರದಾಯವಾಗಿರುತ್ತದೆ. ಹೀಗಿರುವಲ್ಲಿ ಮಾನುಷಜಾತಿಗೆ ಸೇರಿದ ಸ್ತ್ರೀಗೆವಿದ್ಯಾಭ್ಯಾಸವು ಹ್ಯಾಗೆ ಉಚಿತವಲ್ಲದೆಯೂ, ಸಂತೋಷ ಕಾರಿಯಾಗದೆಯೂ ಹೋಗುವದು ? ಸ್ತ್ರೀ ವಿದ್ಯಾಭ್ಯಾಸಕ್ಕೆ ಹಿಂದೆ ವುಂಟಾಗಿದ್ದ ಪ್ರಾಚುರ್ಯವನ್ನು ನೋಡಲಾಗಿ ಅದು ಬಹಳವಾಗಿ ರಾಜಸ್ತ್ರೀಯರಲ್ಲಿಯೂ, ಕೆಲವರುಪವನ್ನರಲ್ಲಿಯೂ, ನೆಲಗೊಂಡಿದ್ದಂತೆಯೂ, ಅದು ಕೇವಲ ವಿನೋದಸಾಮಗ್ರಿ

ಯಾಗಿ ಪರಿಗ್ರಹಿಸಲ್ಪಟ್ಟದ್ದಂತೆಯೂ ತಿಳಿಯ ಬರುತಿದೆಯೇಹೊರ್ತು ಸಾಮಾನ್ಯವಾಗಿ ಯೆಲ್ಲರೂ ವಿದ್ಯಾವಂತೆ ರಾಗಿದ್ದರೆಂಬದಕ್ಕೆ ಯಾವನಿದರ್ಶನವೂ ಕಂಡುಬರಲಿಲ್ಲವು. ಸ್ತ್ರೀಯರಿಗೆ ಐಹಿಕಾಮುಷ್ಮಿಕಾದಿಸುಖದುಃಖಗಳು ಕೇವಲ ಪುರುಷರ ಅಧೀನಗಳಾಗಿರುತಿವೆ. ಆದದರಿಂದ ಸ್ತ್ರೀಯರ ಜ್ಞಾನವೆಲ್ಲವೂ ಪುರುಷನಿಗೆ ಸಹಾಯಕಗಳಾಗುತಿವೆ. ಯಾವದಾದರೊಂದುದ್ದೇಶವನ್ನಿಟ್ಟು ಮಾಡುವಕಾರ್ಯವು ಉದ್ದಿಷ್ಟಫಲಕ್ಕೆ ಅನಿಷ್ಟವಾದರೆ ಅದು ಕಡೆಗೇ ದುಷ್ಫಲವನ್ನು ಕೊಡುವದೆಂಬದಕ್ಕೆ ಸಂದೇಹವಿಲ್ಲವು. ಕರ್ಮವು ಪಟ್ಟಮೇಲೆ ಅದು ಕಡೆಗೆ ಯಾವದಾದರೊಂದು ವಿಧಫಲವನ್ನುಂಟುಮಾಡದೆ ಹೋಗುವದಿಲ್ಲವು. ಇದರಿಂದ ವಿದ್ಯಾವಂತರಾದ ಸ್ತ್ರೀಯರ ಮೂಲಕ ಆನಂದಿಸುವಷ್ಟು ಶಕ್ತರಾದ ಪುರುಷರು ಈಗ ಇದಾರೆಯೇ ಹಾಗೆ ಒಂದುವೇಳೆಇದ್ದರೆ ಬಹುಸಂಖ್ಯೆಯುಳ್ಳ ವಿದ್ಯಾವತಿಯರನ್ನು ಸ್ವಾಧೀನದೊಳಿಟ್ಟುಕೊಂಡು ಕಾಪಾಡುವಷ್ಟು ಶಕ್ತರಾದ ಪುರುಷರು ಇದಾರೆಯೇ ಯೆಂಬ ಒಂದು ಅನುಮಾನಾಸ್ಪದವಾಗಿದೆ. ಈಗ ಕೆಲವು ವರುಷಗಳ ಮೊದಲು ಈದೇಶದಲ್ಲಿ ಪ್ರಬಲಗೊಳ್ಳುತಲಿರುವ ಸ್ತ್ರೀವಿದ್ಯಾಭಿವೃದ್ಧಿಯನ್ನುನೋಡಲಾಗಿ ಬಹುಮಂದಿ ವಿದ್ಯಾವತಿಯರನ್ನು ಬರಿಸುವಷ್ಟು, ಜಾತಿ ಮತ್ತು ಸಂಪ್ರದಾಯಗಳಿಂದ ಬದ್ಧರಾಗಿರುವ ಪುರುಷರು ಯಿರುವಂತೆ ಕಾಣಿಸಲಿಲ್ಲವು. ಆದಕಾರಣವಿದ್ಯಾವತಿಯರ ಸಂಖ್ಯೆಯು ಅಧಿಕವಾಗುತ ಬರುವುತೆಲ್ಲ ವಿರುದ್ಧಫಲಗಳು ಸಹ ಜಾಸ್ತೀಯಾಗುತಬರುತಿವೆ. ಸ್ತ್ರೀಯರು ಪುರುಷರ ಅಧೀನರಾಗಿರಲಿಕ್ಕೆ ಬದಲು ಅವರೇ ಸ್ತ್ರೀಯರಿಗೆ ನಿಘೇಯರಾಗಿ ಯಾತಕ್ಕೆ ಯಿರಲಾಗದೆಂದು ಯಾರಾದರು ಕೇಳಬಹುದು. ಆದರೆ ಅದನ್ನು ನಾವು ಅಂಗೀಕರಿಸಬೇಕಾದರೆ ಮೊದಲು ನಮ್ಮ ನಿಯಮಗಳನ್ನೆಲ್ಲ ಅತ್ಯಂತಿಕವಾಗಿರದ್ದುಮಾಡಿ ಹೊಸದಾಗಿ ಈಗಿನ ಸ್ಥಿತಿಗೆ ತಕ್ಕಂತೆ ಏರ್ಪಡಿಸಬೇಕಾಗಿರುತಿದೆ. ವಿವಾಹಗಳು ಸ್ತ್ರೀಯರ ಇಷ್ಟಾನುಗುಣವಾದವಾಗಿರಬೇಕು. ಅಥವಾ ವಿವಾಹನಿರ್ಬಂಧಕ್ಕೆ ಸ್ತ್ರೀಪುರುಷರು ಒಳಪಡದೆ ಸ್ವತಂತ್ರರಾಗಿರಬೇಕು. ಈಅಂಶವನ್ನು ತಾವು ಆಲೋಚಿಸಿ ಜವಾಬುಕೊಡಬೇಕೆಂದುಕೋರುವೆನು.

ಸ್ತ್ರೀಹಿತಚಿಂತಕನು.

THE MYSORE GAZETTE
ಮೈಸೂರು ಗೆಜೆಟು.

ಶ್ರೀಮನ್ಮಹಾರಾಜ ರಾಜಸಾಹೇಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು

ನಂ ೧೩೩, ತಾ|| ೨೮ನೇ ಜುಲೈ—ಬೆಂಗಳೂರು ಸೆಂಟ್ರಲ್‌ಜೆಯಿಲ್ ಸೂಪರಿಂಟೆಂಡೆಂಟರಾದ ಮೆ|| ಸ್ಪಾರ್ಕ್‌ಸ್‌ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖುಲಾಗಾಯತು ಮೆಡಿಕಲ್ ಸರ್ಟಿಫಿಕೇಟುಮೇಲೆ ಆರುತಿಂಗಳರಜಾ ಕೊಡಲ್ಪಟ್ಟಿರುತದೆ.

ನಂ. ೧೩೪, ೨೬ನೇ ಜೂನ್—ಚಿತ್ರದುರ್ಗದ ಮುನಸಫರು ಪಿ. ವೆಂಕಟಾರ್ಯರವರು, ಕ್ರಿಮಿನಲ್ ಪ್ರೊಸಿಡ್ಯೂರ್‌ಕೋಡ್ ೩೬ ಮತ್ತು ೩೭ ನೇ ಸೆಕ್ಷನ್‌ಗಳ ನಿಯಮವನ್ನನುಸರಿಸಿ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ನಂ. ೧೩೬—ಅಸಿಸ್ಟೆಂಟ್ ಕಮಿಷನರ್ ಮೆ|| ಎಫ್. ಬಿ. ಕ್ಲಾರ್ಕ್‌ಯವರು, ತಮ್ಮ ಇತರ ಕೆಲಸಗಳೊಂದಿಗೆ, ಮೆ||ಸ್ಪಾರ್ಕ್‌ಸ್‌ಯವರ ಗೈರ್ಹಾಜರೀಕಾಲದಲ್ಲಿ ಅಥವಾ ಮತ್ತೊಂದುಹುಕುಂ ಕೊಡಲ್ಪಡುವತನಕ ಬೆಂಗಳೂರು ಸೆಂಟ್ರಲ್‌ಜೆಯಿಲ್ ಸೂಪರಿಂಟೆಂಡೆಂಟ್ ಕೆಲಸವನ್ನು ಬದಲೀ ನೋಡತಕ್ಕದ್ದು.

ನಂ. ೧೩೭, ೨೯ನೇ ಜುಲೈ—ಸನ್ ೧೮೮೨ನೇ ಇಸವಿ ೧೦ನೇ ನಂಬರ್ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೩೭ನೇ ಸೆಕ್ಷನ್ ಅನುಸರಿಸಿ ಇದರಡಿ ಬರುವ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರುಗಳು ಕೊರಡೇಟಿಟ್ಟು ಹೊಡಿಸುವ ಜಾಸ್ತೀಅಧಿಕಾರ ಕೊಡಲ್ಪಟ್ಟಿರುತ್ತಾರೆ.

ಬೆಂಗಳೂರು ಡಿಸ್ಟ್ರಿಕ್ಟು ಟ್ರಿಜರೀ ಅಸಿಸ್ಟೆಂಟಕಮಿಷನರ್ ಮತ್ತು ೨ನೇಕ್ಲಾಸಮ್ಯಾಜಿಸ್ಟ್ರೇಟ್ ಮಿ. ಎಫ್ ಬಿ ಕ್ಲಾರ್ಕ್ ಯವರು ನೆಲಮಂಗಲದ ಮುನಸಿಫ್ ಮತ್ತು ೨ನೇಕ್ಲಾಸ್‌ಮ್ಯಾಜಿಸ್ಟ್ರೇಟ್ ಎನ್ ವೆಂಕಟವರದಯ್ಯಂಗಾರ‍್ಯವರು. ಬೆಂಗಳೂರು ಅಮಲ್ದಾರ್ ಮತ್ತು ೨ನೇಕ್ಲಾಸ್ ಮ್ಯಾಜಿಸ್ಟ್ರೇಟ್‌ಶೀತಾರಾಮಯ್ಯನವರು.

ನಂ. ೧೩೮, ೩೦ನೇ ಜುಲೈ—ಮುಳಬಾಗಲ್ ಅಮಲ್ದಾರ್ ಕುಮಾರಸ್ವಾಮಿಮೊದಲಿಯಾರ‍್ಯವರಿಗೆ ಮೆಡಿಕಲ್ ಸರ್ಟಿಫಿಕೇಟಿನಮೇಲೆ ಮೂರುತಿಂಗಳರಜಾ ಕೊಡಲ್ಪಟ್ಟಿರುತದೆ.

ನಂ. ೧೪೦—ಮೆ|| ದೇವಾಜಿರಾಯರವರು ಮೈಸೂರು ಡಿಸ್ಟ್ರಿಕ್ಟು ನ ಸೆಷನ್‌ಜಡ್ಜೀಕೆಲಸವನ್ನು ಬದಲೀನೋಡುತ್ತಿರುವಕಾಲದಲ್ಲ, ಮಿಸ್ಟರ್ ಸಿ. ಕ್ರೆಸ್‌ಯವರು ೧ನೇಕ್ಲಾಸ್ ಸಬಾರ್ಡಿನೇಟ್ ಜಡ್ಜಿಯಾಗಿಯೂ ಮೆ|| ಸಿ. ಶ್ರೀನಿವಾಸಯ್ಯಂಗಾರ‍್ಯವರು ೨ನೇ ಕ್ಲಾಸ್ ಸಬಾರ್ಡಿನೇಟ್ ಜಡ್ಜಿಯಾಗಿಯೂ ಬದಲೀನೋಡತಕ್ಕದ್ದು.

೨ ಮೈಸೂರು ಚೀಫ್‌ಕೋರ್ಟನಿಂದ ಮಾಡಲ್ಪಟ್ಟ ಇದರಡಿಬರುವ ಹುಗಾಯಿಷಾ ಮೊಕರರಿಗಳು ೮೬ನೇ ಇಸವಿ ಆಗಸ್ಟು ೧ನೇ ತಾರೀಖ್ ಮೊದಲು ಜಾರೀಯೊಳು ಬರುವುತೆಮಂಜೂರ‍್ಮಾಡಲ್ಪಟ್ಟಿರುತಿವೆ

ಮೆಸ್ಟರ್ ಎಲ್ ಅನಂತಸ್ವಾಮಿ ರಾಯರವರು ೩ನೇ ಕ್ಲಾಸ್ ಸಬಾರ್ಡಿನೇಟ್‌ಜಡ್ಜಿ ಜೊತೆ ಮತ್ತು ತಲಮೊದಲ ಚೀಫ್ ಕೋರ್ಟ್ ರಿಜಿಸ್ಟ್ರಾರ್ ಕೆಲಸವನ್ನು ಬದಲೀನೋಡತಕ್ಕದ್ದು.

ಡೆಪ್ಯುಟಿರಿಜಿಸ್ಟ್ರಾರ್ ಮೆ|| ಕ್ಯಾಷುಯಾವರು, ಹುಗಾಯಿಷಾವರೀಕ್, ಚೀಫ್‌ಕೆಲಸನೋಡುತಲಿರುವ ಮೆ|| ಅನಂತಸ್ವಾಮಿ ರಾಯರಿಗೆ ಬದಲಾಗಿ ಚೀಫ್ ಕೋರ್ಟ್ ರಿಜಿಸ್ಟ್ರಾರ್ ಕೆಲಸವನ್ನುಬದಲೀನೋಡತಕ್ಕದ್ದು

ಚೀಫ್‌ಕೋರ್ಟ್ ಟ್ರಾನ್ಸ್‌ಲೇಟರ್ ಮೆ|| ನರಸಿಹ್ಮಯ್ಯಂಗಾರ‍್ಯವರು, ಮೆ|| ಕ್ಯಾಷುಯವರು ರಿಜಿಸ್ಟ್ರಾರ್‌ಕೆಲಸವನ್ನು ಬದಲೀನೋಡುತ್ತಿರುವ ಕಾಲದಲ್ಲಿ ಚೀಫ್‌ಕೋರ್ಟ್ ಡೆಪ್ಯುಟಿ ರಿಜಿಸ್ಟ್ರಾರ್ ಕೆಲಸವನ್ನು ಬದಲೀನೋಡತಕ್ಕದ್ದು

ನಂ ೧೪೧—ದೊಡ್ಡಬಳ್ಳಾಪುರದ ಅಮಲ್ದಾರರು ಕುಪ್ಪುಸ್ವಾಮಿನಾಯುಡುಯವರು ಈತಿಂಗಳ ೩ನೇ ತಾರೀಖ್‌ಮೊದಲು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖುಲಾಗಾಯತು ಒಂದುತಿಂಗಳ ಪ್ರಿವಿಲೀಜ್‌ರಜಾ ಕೊಡಲ್ಪಟ್ಟದಾರೆ.

ಸದರೀತಾಲ್ಲೂಕು ಶಿರಸ್ತೇದಾರ್ ಕೇಶವಯ್ಯಂಗಾರ‍್ಯವರು ಅಮಲ್ದಾರರು ರಜಾಮೇಲೆಗೈರ್ಹಾಜರಿರುವಕಾಲದಲ್ಲಿ ತಾಲ್ಲೂಕು ಇನ್‌ಚಾರ್ಜನಲ್ಲಿರತಕ್ಕದ್ದು.

EXTRACTS

The Hill exodus.—ಅಮೃತಬಜಾರ್ ಪತ್ರಿಕೆ ಹೇಳುವದೇನಂದರೆ--ಬೇಸಿಗೆಯಲ್ಲಿ ಆಯಾಯಗವರ್ನಮೆಂಟಿನವರು ಪರ್ವತಪ್ರಾಂತಕ್ಕೆ ಹೊರಟು ಹೋಗುವದು ಅಕ್ರಮವೆಂದು ಆಕ್ಷೇಪಿಸುವದಕ್ಕಾಗಿ ಸೇರಿದ ಸಮಾಜವು ಚನ್ನಾಗಿನಡೆಯಿತು. ಪರಂತು ಈ ಪ್ರಯತ್ನದಲ್ಲಿ ನೇಟಿವ್‌ಜನಗಳಿಗೆ ಏನುಪ್ರಯೋಜನವೋ ಅದನ್ನು ನಾವು ತಿಳಿಯಲಾರವೆಯಿದೇವೆ. ಯೂರೋಪಿಯನ್ ಜನಗಳಿಗಾದರೊ, ಇನ್‌ಕಂಟ್ಯಾಕ್ಸ್‌ಯೆಂಬ ಆಮದಾನೀಮೇಲಿನ ತೆರಿಗೆಯನ್ನು ವಜಾಮಾಡುವದಕ್ಕೆ ಪ್ರಬಲವಾದ ಕಾರಣವನ್ನು ಅವರು ತೋರಿಸಬೇಕಾಗಿದೆ. ಗವರ್ನಮೆಂಟಿನವರು ಮೇಲಿನಂತೆಪರ್ವತಪ್ರಾಂತಕ್ಕೆ ಹೋಗುವದರಿಂದ ಯೂರೋಪಿಯನ್ ವರ್ತಕರು ಭಾರೀ ಗಿರಾಕಿದಾರರನ್ನು ಹೋಗಲಾಡಿಸಿಕೊಳ್ಳುವದಲ್ಲದೆ, ತಮ್ಮ ಸ್ಥಳದಿಂದ ದೂರಪ್ರದೇಶಕ್ಕೆ ಗವರ್ನಮೆಂಟ್ ಹೊರಟು ಹೋಗುವದರಮೂಲಕ ಅದರಲ್ಲಿ ತಮಗಿರುವ ಪ್ರಾಭವನನ್ನು ವಿನಿಯೋಗಿಸುವದಕ್ಕೆ ಅವಕಾಶ ವಿಲ್ಲವಾಗುತಿದೆ. ಗವರ್ನಮೆಂಟಿನವರು ಹಾಗೆ ಹೊರಟುಹೋಗುವ ವಾಡಿಕೆ ರದ್ದುಪಡಿಸುವದರಿಂದ ನೇಟಿವ್‌ಗಳು ಯಾವ ಪ್ರಯೋಜನವನ್ನು ಹೊಂದುವರೋ ಅದು ತಿಳಿಸಲ್ಪಡಲಿಲ್ಲವು. ಅದು ತಪ್ಪುವದರಮೂಲಕ ಖರ್ಚು ತಪ್ಪುವದೆಂದು ಹೇಳುವದು ಅವಿವೇಕವಾಗಿರುವದು ಕೂಡುದಲ್ಲದೆ ಯಿಂದರೆ ಉಪಯುಕ್ತವಾದ ಕೆಲಸಗಳಿಗೆ ಇಷ್ಟು ಹಣ ಮಿಕ್ಕೀತೆಂದು ಅರ್ಥವು. ಮೇಲಿನ ಪದ್ಧತಿ ತಪ್ಪುವದರಮೂಲಕ ಮಿಗಿಲುವ ಮೂವತ್ತು ಲಕ್ಷ ರೂಪಾಯಿಗಳಷ್ಟೆಕಿ ಒಂದು ಕಾಸಾದರೂ ನೇಟಿವ್‌ಗಳಿಗೆ ದೊರೆಯಲಾರದೆಂದು ಯೆಲ್ಲರಿಗೂ ತಿಳಿದೇಯಿದೆ. ಹಾಗೆ ಮಿಗಿಲುವ ಹಣವು ಬೇರೆಯೊಂದು ವಿಧದಲ್ಲಿ ದುಬಾರಾಖರ್ಚು ಮಾಡಲ್ಪಡುವದು. ಅಂದರೆ ಕೆಲಸ ಮಾಡಲಾರದ ಯೂರೋಪಿಯನ್ ಜನಗಳಿಗೆ ಸಂಬಳ ಮಾಡಿಕೊಡುವದಲ್ಲಾಗಲಿ, ದೇಶ ಸಂರಕ್ಷಣದಲ್ಲಾಗಲಿ ಮಿಲಿಟರಿ ಖರ್ಚುಗಳನ್ನು ಬಡಾಯಿಸುವದರಲ್ಲಾಗಲಿ, ಇಂಗ್ಲಿಷ್ ವರ್ತಕರ ಪ್ರಯೋಜನಾರ್ಥ ಅನ್ಯದೇಶಗಳಿಗೆ ಜನಗಳನ್ನು ಕಳುಹಿಸುವದರಲ್ಲಾಗಲಿ ವಿನಿಯೋಗಿಸಲ್ಪಡುವದು. ಹಿಂದೂಜನಗಳು ಇನ್ನೂ ಬಾಲ್ಯಾವಸ್ಥೆಯೊಳಿರತ್ತಾರೆ, ಇವರು ಇಲ್ಲಿನ ಯೂರೋಪಿಯನ್ ಜನಗಳೊಡನೆ ಒಗ್ಗಟ್ಟಾಗಿರಬೇಕೆಂಬ ಭಾವದಿಂದಲೇ ಸಂತುಷ್ಟ ಮನಸ್ಕರಾಗಿ, ಅಂತಾ ಒಗ್ಗಟ್ಟು ಯಾವ ಮೂಲಕ ಉಂಟಾಯಿತೆಂಬದರಲ್ಲಿ ಲಕ್ಷ್ಯವೆ ಇಲ್ಲದವರಾಗಿರುತ್ತಾರೆ. ಖರ್ಚು ಕಡಿಮ್ಮೆ ಮಾಡುವದರಮೂಲಕ ಮಿಗಲುವ ಹಣ ಹಿಂದೂಗಳ ಪ್ರಯೋಜನಕ್ಕಾಗಿ ವಿನಿಯೋಗಿಸಲ್ಪಡದ ಪಕ್ಷಕ್ಕೆ ಅದರಿಂದ ಸದರೀ ಜನಗಳಿಗೆ ಯಾವ ಪ್ರಯೋಜನವೂ ಇಲ್ಲವೆಂಬ ಅಂಶವನ್ನು ಮರೆಯಲಾಗದು. ಮಸಲಾ, ರಾಷ್ಟ್ರಾಂತರದಲ್ಲಿನ ಸಿವಿಲ್ ಬಾಬ್‌ಗಳ ಖರ್ಚುಗಳನ್ನು ಕಡಿಮ್ಮೆ ಮಾಡಿ ಅದರಿಂದ ಉಳಿಯುವ ಹಣವನ್ನು ಇಂಗ್ಲಾಂಡಿನಲ್ಲಿ ಜಾಸ್ತೀಯಾಗಿ ಒಂದು ಗ್ಯಾರಿಸನ್ ಯೇರ್ಪಡಿಸುವದು ಮಾಡಿದರೆ ಅದರಿಂದ ಹಿಂದೂಗಳಿಗೆ ಯಾವ ಪ್ರಯೋಜನವೂ ಉಂಟಾಗಲಾರದು. ಅದೂ ರಿಂದ ಯಾವ ವರಿವಿಗೆ ದೇಶದ ಆಯತಿಯಮೇಲೆ ಹಿಂದೂಗಳಿಗೆ ಅಧಿಕಾರವಿಲ್ಲದೆ ಇರುತಿದೆಯೋ ಅವರಿವಿಗೆ ಖರ್ಚು ಕಡಿಮ್ಮೆ ಮಾಡುವದರಮೂಲಕ ಅವರಿಗೆ ಯಾವ ಪ್ರಯೋಜನವೂ ಇಲ್ಲವು ಖರ್ಚು ಕಡಿಮ್ಮೆ ಆಗಬೇಕೆಂದು ಕೂಗಾಡುವಂತಾ ವರು ಮೇಲಿನ ಅಂಶವನ್ನು ಯಾವಾಗಲೂ ಮನಸ್ಸಿನಲ್ಲಿಡತಕ್ಕದ್ದು, ಎಂಬದು.

The debt and assets of India.—ಒಂದುದೇಶದ ಆದಾಯವನ್ನುಕುರಿತು ವಿಚಾರಮಾಡುವದರಲ್ಲಿ ಅದಕ್ಕೆ ಇರುವ ಸಾಲದಮೊತ್ತವನ್ನು ತಿಳಿಸಿದ ಹೊರತು ಅಂತಾ ವಿಚಾರವು ಪೂರ್ತಿಯಾಗಲಾರದೆಂಬದು. ಈ ೧೮೮೫ನೇ ಇಸವಿ ಮಾರ್ಚ್ ೩೧ನೇ ತಾರೀಖ್‌ನಲ್ಲಿ ಇಂಡ್ಯ ಗವರ್ನಮೆಂಟಿನವರಿಗೆ ಉಂಟಾಗಿದ್ದ ಸಾಲಗಳ ತಪಸೀಲ್ ಹ್ಯಾಗಂದರೆ—ಇಂಡ್ಯದೇಶದಲ್ಲಿ ೯೩,೧೨,೪೦,೦೦೦ ರೂಪಾಯಿಗಳು, ಇಂಗ್ಲಾಂಡದೇಶದಲ್ಲಿ ೭೩,೮೦,೭೦,೦೦೦ ರೂಪಾಯಿಗಳು, ಗವರ್ನಮೆಂಟಿನವರ ಜವಾಬ್ದಾರೀಗೆ ಒಳಪಟ್ಟಿರುವ ಕಂಪನಿಗಳು ಛೇಂದಾಮೂಲಕ ಕೊಟ್ಟಿರುವ ಹಣದ ೭೭,೮೩,೪೦,೦೦೦ ರೂಪಾಯಿಗಳು, ಇತರ ಜವಾಬ್ದಾರೀಗಳು ೧೫,೨೫,೧೦,೦೦೦ ರೂಪಾಯಿಗಳು, ಒಟ್ಟು ಜವಾಬ್ದು ೨೫೪,೯೬,೬೦,೦೦೦ ರೂಪಾಯಿಗಳು. ಇದು ಹೀಗಿರ ವಲ್ಲಿ ಗವರ್ನಮೆಂಟಿಗೆ ಇರುವ ಆಸ್ತಿಗಳು ಯಾವವೆಂದರೆ, ಅರಿಂಪಿಗೆ ತೆಗೆದುಕೊಂಡ ರಸ್ತೆಗಳು ಸ್ಟೇಟ್‌ರೇಲ್ವೆಗಳ ರೂಪವಾಗಿ ೧೫೯,೬೫,೬೦,೦೦೦ರೂ|| ಕೆರೆಗಳು ನಾಲಾಗಳುಮೊದಲಾದ ಜಲಾಧಾರಗಳಮೇಲೆ ಹಾಕಿರುವ ಮೂಲದನ ೨೩,೯೯,೮೦,೦೦೦ ಮುನ್ಸಿಪಾಲಿಟಿಗಳಿಗೆ ಕೊಟ್ಟಿರುವ ಸಾಲಗಳು ೭,೪೬,೯೦,೦೦೦, ನಗದು ಸಿಲ್ಕು ಹಾಜರ್ ೧೭,೧೨, ೬೦,೦೦೦ ರೂಪಾಯಿಗಳು. ಇವೆಲ್ಲವುಸೇರಿ ಒಟ್ಟುಆಸ್ತಿ ೨೦೮,೧೭,೯೦,೦೦೦ ರೂಪಾಯಿಗಳು. ಆದದರಿಂದ ಗವರ್ನಮೆಂಟಿಗೆ ಇರುವ ಖರ್ ಸಾಲ ೪೬,೩೭,೭೦,೦೦೦ ರೂಪಾಯಿಗಳೇ ಆಗಿರುತಿವೆ. ನಾಲೀಯಾನಾ ಎಪ್ಪತ್ತುಕೋಟಿ ರೂಪಾಯಿಗಳಿಗೆ ಮೇಲ್ಪಟ್ಟ ಆಯತಿಯುಳ್ಳ ಒಂದು ದೊಡ್ಡ ರಾಜ್ಯಕ್ಕೆ ಇದು ಅಷ್ಟೇನೂ ಪ್ರಬಲವಾದಸಾಲವಲ್ಲವು. ಪರಂತು ಈ ಆಸ್ತಿಗಳು ಏನುಪ್ರಯೋಜನವಾದವು? ಮಸಲಾ ರೆಯಿಲ್‌ರಸ್ತೆಗಳಿಂದಲೂ ಜಲಾಧಾರಗಳಿಂದಲೂ ಸರ್ಕಾರಕ್ಕೆ ಏನಾದರು ಆಯತಿವುಂಟೆ? ಎಂದು ಯಾರಾದರು ಆಕ್ಷೇಪಿಸಿ ಕೇಳಬಹುದು ಕಳೆದಸಂವತ್ಸರದಲ್ಲಿ ಸ್ಟೇಟ್ ರೆಯಿಲ್ವೆಗಳಮೂಲಕ ೯,೮೦,೫೦,೦೦೦ ರೂಪಾಯಿಗಳ ಒಟ್ಟು ಹುಟ್ಟುವಳಿಯೂ ೭೪,೦೦,೦೦೦ ರೂಪಾಯಿಗಳ ಒಟ್ಟು ಖರ್ಚು ಆಗಿ, ಖರ್ ಹುಟ್ಟುವಳಿ ಆದದ್ದು ೫,೦೬,೫೦,೦೦೦, ರೂಪಾಯಿಗಳೆಂದು ಮೆ|| ಹೊವಾರ್ಡ್‌ಯವರು ಪಾರ್ಲಿಮೆಂಟ್ ಸಮಾಜಕ್ಕೆ ತಿಳಿಸಿದರು. ಗವರ್ನಮೆಂಟಿನವರ ಜವಾಬದಾರಿಗೆ ಒಳಪಟ್ಟ ರೆಯಿಲ್‌ರಸ್ತೆಗಳಮೂಲಕ ಒಟ್ಟು ಹುಟ್ಟುವಳಿಯಾದದ್ದು ೩,೬೪,೪೦,೦೦೦ ರೂಪಾಯಿಗಳು. ಆದದರಿಂದ ರೆಯಿಲ್‌ರಸ್ತೆಗಳಮೂಲಕ ಖರ್ ಹುಟ್ಟುವಳಿಯಾದದ್ದು ೮,೭೦,೯೦,೦೦೦ ರೂಪಾಯಿಗಳು. ಇದರಿಂದ ಸನ್ ೧೮೮೫ನೇ ಮಾರ್ಚ್ ತಿಂಗಳವರಿವಿಗೆ ರೆಯಿಲ್‌ರಸ್ತೆಗಳ ನಿರ್ಮಾಣದಬಗ್ಗೆ ಖರ್ಚಾದ ಮೂಲಧನಕ್ಕೆ ಸೇಕಡ ೫|| ರೂಪಾಯಿಗೆ ಸ್ವಲ್ಪ ಅಧಿಕವಾಗಿಯೇ ಬಡ್ಡಿಬರುತ್ತೆ. ಇದಕ್ಕೆ ಬೇಕಾದ ಮೂಲಧನವನ್ನೆಲ್ಲ ಇಂಗ್ಲಾಂಡದೇಶದಲ್ಲೇ ಸಾಲಮಾಡಿದ್ದಾಗಿ ಭಾವಿಸಿ, ಹುಂಡಾವಣಿಯ ದರ ಜಾಸ್ತೀಯಾಗಿರುವದರಿಂದ ಬಡ್ಡೀ ಹುಟ್ಟುವಳಿಯನ್ನು ಕಡಿಮ್ಮೆಲೆಕ್ಕಮಾಡಬೇಕೆಂದು ಯೋಚಿಸುವಪಕ್ಷದಲ್ಲಿಸಹ ಸೇಕಡಾ ೪ ೫-೪ ರೂಪಾಯಿಗಳಬಡ್ಡಿ ಹುಟ್ಟುವಳಿಯಾಗುವದು ಇದರಿಂದ ರೆಯಿಲ್‌ರಸ್ತೆಗಳಿಗಾಗಿ ಹಾಕಿರುವ ಬಂಡವಾಳ ಲಾಭಕರವಾದದ್ದೆಂದು ಸ್ಪಷ್ಟವಾಗಿ ನಿದರ್ಶನಕ್ಕೆ ಬಂದಿರುತಿದೆ ಮತ್ತು ದೇಶದಲ್ಲಿ ಮಾರ್ಗಗಳು ಯೇರ್ಪಟ್ಟು ಸ್ಥಳ ಸ್ಥಳಗಳ ವ್ಯಾಪಾರಗಳು ವೃದ್ಧಿಯಾದಹಾಗೆಲ್ಲ ರೆಯಿಲ್ ರಸ್ತೆಗಳ ಮೂಲಕವಾದ ಪ್ರಯೋಜನವೂ ವೃದ್ಧಿಯಾಗಬಹುದು. ಸನ್ ೧೮೮೫ನೇ ಇಸವಿ ಮಾರ್ಚ್‌ತಿಂಗಳ ಆಖ್ಯೆರ್‌ವರಿವಿಗೆ ಜಲಾಧಾರಗಳ ನಿರ್ಮಾಣದಬಗ್ಗೆ ಖರ್ಚಾದ ಬಂಡವಾಳ ೨೩ ೧೨,೨೦,೦೦೦ರೂಪಾಯಿಗಳು. ಸದರೀ ಜಲಾಧಾರಗಳ ಮೂಲಕ ಒಟ್ಟು ಹುಟ್ಟುವಳಿಯಾದದ್ದು ೭,೯೧,೬೦೦೦ ರೂಪಾಯಿಗಳು. ಇದರಿಂದ ಬಂಡವಾಳಕ್ಕೆ ಸೇಕಡಾ ೩ ರೂಪಾಯಿ ಬಡ್ಡಿ ಹುಟ್ಟುವಳಿಯಾದಂತೆ ಆಗುತದೆ. ರೆಯಿಲ್ ರಸ್ತೆಗಳಮೂಲಕ ಉಂಟಾಗುವಷ್ಟು ಲಾಭ ಜಲಾಧಾರಗಳಮೂಲಕ ಆಗುವದಿಲ್ಲವು. ಪರಂತು ಜಲಾಧಾರಗಳ ವಿಷಯದಲ್ಲಿ ಅವುಗಳ ಪ್ರಯೋಜನದಮೇಲೆ ದೃಷ್ಟಿ ಇಡಬೇಕೇಹೊರ್ತು ಲಾಭದಮೇಲೆದೃಷ್ಟಿ ಇಡಲಾಗದು. ಸದರೀ ಜಲಾಧಾರಗಳನ್ನು ಕಲ್ಪಿಸಿದ ಕಾಲದಲ್ಲಿ ದುರ್ಭಿಕ್ಷದ ದೆಸೆಯಿಂದ ಪ್ರಾಣಕೋಟಿಯನ್ನು ಕಾಪಾಡುವದೇ ಉದ್ದೇಶವು ಅವುಗಳನ್ನು ಕಲ್ಪಿಸಿ, ದೇಶಕ್ಕೆ ಜಲ ಕ್ಷಾಮವನ್ನು ತಪ್ಪಿಸಿ, ದೇಶದ ಐಶ್ವರ್ಯವನ್ನು ಕಾಪಾಡಿದ್ದರಿಂದ ಅವುಗಳಿಂದ ಉಂಟಾಗುವ ಅರ್ಥಲಾಭಕ್ಕಿಂತಲೂ ಅವರ ಉಪಯುಕ್ತತೆಯು ಕೇವಲ ವಿಶೇಷವಾದದ್ದು ಜಾಮೀನ್ ಮೂಲಕವಾದ ಮತ್ತು ಇತರ ಸಾಲಗಳನ್ನು ಲೆಕ್ಕಕ್ಕೆ ಸೇರಿಸದೆ ನೋಡುವಲ್ಲಿ, ಕಳೆದ ಮಾರ್ಚ್ ಆಖ್ಯೆರ್‌ವರಿಗೆ ಇಂಡ್ಯರಾಜ್ಯಕ್ಕೆ ೧೩೫ಕೋಟಿ ೫೦ಲಕ್ಷ ರೂಪಾಯಿಗಳ ಖರ್ ಸಾಲವಿರುತಿದೆ ಮರಮ್ಮತ್ ಕೆಲಸಗಳಿಗಾಗಿ ಇಟ್ಟಿರುವ ಬಂಡವಾಳ ೯ಕೋಟಿ ರೂಪಾಯಿಗಳು. ಇತರ ಕೆಲಸಗಳ ಬಂಡವಾಳ ೮೫|| ಕೋಟಿ ರೂಪಾಯಿಗಳು. ಯಾವವಿಧದಿಂದ ಆಲೋಚಿಸಿ ನೋಡಿದಾಗ್ಯೂ ಅರ್ಥೋಪಪತ್ತಿ ವಿಷಯದಲ್ಲಿ ಇಂಡ್ಯರಾಜ್ಯವು ರಷಿಯಾ ರಾಜ್ಯಕ್ಕಿಂತಲೂ ಬಲವತ್ತರವಾದದ್ದು. ಇಂಡ್ಯರಾಜ್ಯಕ್ಕೆ ಇತರಾಪೇಕ್ಷೆಯಾ ಸಾಲ ಅಲ್ಪವಾಗಿರುತದೆ. ಅದರ ಹುಟ್ಟುವಳಿ ಸಂವಸರಿ ಪ್ರಾಯಶಃ ಖರ್ಚಿಗೆ ಸರಿಹೋಗುತಿದೆ ರಷಿಯಾ ಸಂಸ್ಥಾನದ ಸಾಲವಾದರೊ ಅಪರಿಮಿತವಾದ್ದಾಗಿರುವದಲ್ಲದೆ ಇನ್ನು ದಿನೇದಿನೆ ವೃದ್ಧಿಯಾಗುತ ಬರುತಿದೆ ದೇಶದ ಉತ್ಪತ್ತಿಯಾದರೊ ಏಕರೂಪವಾಗಿದೆ. ಖರ್ಚುಗಳಾದರೊ ಪ್ರತಿ ಸಂವತ್ಸರದಲ್ಲೂ ಅಧಿಕವಾಗುತ ಒಂದು ವರ್ಷಕ್ಕಿಂತಲೂ ಮತ್ತೊಂದು ವರ್ಷದಲ್ಲಿ ಖರ್ಚಿಗೆ ಸಾಲದೆ ಹೋಗುತಿದೆ.—ಸಾಬರ್ಡಿನೇಟರಿವ್ಯೂ

BANGALORE.—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿದಪ್ರನೃತ್ಯುವಗನಾರ್ಹ ಕರ್ನಾಟಕಪ್ರಕಾಶನಪರಾಭಿದಾ ಪ್ರಥಿತಶಾಹಿತೀಶೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ನಿಕಾಸುಕರಿಪೂಜಿತಾದಿಶತಿಮಾನಸಸುಮುದಂ

Vol XIII] BANGALORE—MONDAY, AUGUST 9, 1886. [No. 32.

ಸಂಪುಟ ೧೩. | ಬೆಂಗಳೂರು.—ಸನ್ ೧೮೮೬ನೇ ಇಸವಿ ಆಗಸ್ಟು ೯ನೇ ತಾರೀಖು ಸೋಮವಾರ. | ಸಂಚಿಕೆ ೩೨.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷು ಮತ್ತು ಕನ್ನಡ ತೆಗೆದುಕೊಳ್ಳತಕ್ಕವರಿಗೆ, ವರುಷ ೧ಕ್ಕೆ . . ೧೨—೦—೦

ಇಂಗ್ಲಿಷ್ ಮಾತ್ರ ತೆಗೆದುಕೊಳ್ಳತಕ್ಕವರಿಗೆ ವರುಷ ೧ಕ್ಕೆ . . ೬—೦—೦

ಕನ್ನಡ ಮಾತ್ರ ತೆಗೆದುಕೊಳ್ಳತಕ್ಕವರಿಗೆ [illegible] . ೬—೦—೦

ಬಿಡಿ [illegible] ೧ಕ್ಕೆ ೦—೮—೦

[illegible]

ಪ್ರಕಟನೆಯ ವಿವರ.

[illegible] ೧ಕ್ಕೆ ೦—೨—೦

[illegible] ೧ಕ್ಕೆ ೦—೧—೦

NOTICE TO SUBSCRIBERS

[illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA.

☞ Price including Postage, Rs 5 0 0

ವೈದ್ಯಸಾರ ಸಂಗ್ರಹ.

[illegible]

[illegible] ರೂ॥ ೫—೦—೦

[illegible] ಅಂಚೇ ಹಾಸಲ್ ೦—೬—೦

[illegible], ಬೆಂಗಳೂರು.

ನೋಟೀಸ್.

ಇದರಕೆಳಗೆ ವಿವರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ನಾಟಕ ಪ್ರಕಾಶಿಕಾ ಆಫೀಸ್‌ನಲ್ಲಿ ವಿಕ್ರಯಿಸಲ್ಪಡುತ್ತವೆ—

ಕನ್ನಡ ಟೀಕಾಸಹಿತವಾದ ಸಂಸ್ಕೃತಗ್ರಂಥಗಳು.

[illegible]	...	೧—೪—೦
[illegible]	...	೦—೧೨—೦
[illegible]	...	೦—೩—೦
[illegible]	...	೦—೫—೦
[illegible]	...	೦—೪—೦
[illegible]	...	೦—೧೪—೦
[illegible]	...	೦—೭—೦
[illegible]	...	೦—೨—೦
ವೈದ್ಯಸಾರಸಂಗ್ರಹ	...	೫—೦—೦

ಕನ್ನಡ ಗ್ರಂಥಗಳು.

[illegible]	...	೦—೬—೦
[illegible]	...	೦—೪—೦
[illegible]	...	೦—೬೩—೦
[illegible]	...	೦—೨—೬
[illegible]	...	೦—೪—೦
[illegible]	...	೦—೨—೦
[illegible]	...	೦—೨—೬
[illegible]	...	೦—೬—೦
[illegible]	...	೦—೩—೦
[illegible]	...	೦—೨—೦
[illegible]	...	೦—೦—೩
ಇಂಗ್ಲಿಷು ಕನ್ನಡ [illegible]	...	೧—೨—
[illegible]	...	೨—೦—೦
[illegible]	...	೦—೧೨—೦
[illegible]	...	೩—೪—೬
[illegible]	...	೩—೪—೬
[illegible] ೧ನೇ ಸಂಚಿಕೆ.	...	೦—೮—೦
[illegible] ೨ನೇ ಸಂಚಿಕೆ.	...	೧—೮—೦
[illegible]	...	೦—೮—೦

ಸಂಸ್ಕೃತ ಮೂಲಗ್ರಂಥಗಳು.

ವಿಷ್ಣುಸಹಸ್ರನಾಮ	...	೦—೫—೦
[illegible]	...	೦—೨—೦
[illegible]	...	೦—೨—೦
[illegible]	...	೦—೦—೬
[illegible]	...	೦—೧—೬
[illegible]	...	೦—೧—೦

[illegible]

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, AUGUST 9, 1886.

೧೮೮೬ನೇ ಆಗಸ್ಟು ೯ನೇ ತಾ॥ ಸೋಮವಾರ

A MILITARY TRAGEDY.

ಮಹೇಮಜಕೂರು ೬ನೇ ತಾರೀಖು ಶುಕ್ರವಾರದ ದಿನ ಈ ಊರು ಕಂಟೋನ್ಮೆಂಟಿನಲ್ಲಿ ಘೋರವಾದ ಖೂನಿಗಳು ನಡೆದಂತೆ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಯ ಮೂಲಕ ತಿಳಿಯಲಾದೆವು. ಇದರ ತಪಸೀಲ್ ಹ್ಯಾಗಂದರೆ.— ಪ್ರಸಕ್ತ ಕ್ರೂರ ಕೃತ್ಯವು ಮಧ್ಯಾಹ್ನ ಕಾಲದಲ್ಲಿ, ಜನಗಳಿಂದ ನಿಬಿಡತವಾದ ಪ್ರದೇಶದಲ್ಲಿ ನಡೆಯಿತು. ಕುದುರೇ ಜವಾನನಾದ ತಾಂಡವರಾಯನೆಂಬ ಹೊಲೆಯನೊಬ್ಬನು, ೨೨ ವರುಷ ವಯಸ್ಸುಳ್ಳವನಾಗಿಯೂ, ಶರೀರ ದಾರ್ಢ್ಯವುಳ್ಳವನಾಗಿಯೂ, ಇವನು ಬಹುಕಾಲದಿಂದ ರಿಜಿಮೆಂಟಿನಲ್ಲಿ ನೌಕರೀಯೊಳಿರುತಲಿದ್ದನೆಂತಲೂ, ಮೃತನಪ್ಪ ಇವನ ತಾಯಿ ತಂದೆಗಳು ಸಹ ಅದೇ ರಿಜಿಮೆಂಟಿನಲ್ಲಿ ನೌಕರೀಯೊಳಿದ್ದರೆಂತಲೂ, ಅವನ ತಾಯಿಯು ಮೃತಪಡಲಿಕ್ಕೆ ಮುಂಚೆ ಸುಮಾರ್ ೨೦ ರೂಪಾಯಿಗಳ ತನಕ ತನ್ನ ಮಗಳಿಗೆ ಕೊಡತಕ್ಕಬಗ್ಗೆ ರಿಜಿಮೆಂಟು ಫಂಡಿನಲ್ಲಿ ಠೇವಣಿ ಇಟ್ಟಿದ್ದಳೆಂತಲೂ, ಈ ಮೊಬಲಗಿಗೆ ತಾಂಡರಾಯನು ತಾನೇ ಬಾಧ್ಯಸ್ಥನೆಂದು ತಿಳಿದು ಗತ ಶುಕ್ರವಾರದ ದಿನ ಸದರೀ ಮೊಬಲಗನ್ನು ತನಗೆ ವಾಪಸ್ ಕೊಡಬೇಕೆಂದು ಕೇಳಲು, ಅಲ್ಲಿನ ನೇಟಿವ್ ಅಡ್ಜುಟಂಟ ಸದರೀ ರೂಪಾಯಿಗಳು ತಾಂಡವರಾಯನ ಯಖ್ತ್ಯಾರಿಗೆ ಒಳಪಟ್ಟಿರುವದಿಲ್ಲವು ಪರಂತು ಆತನ ತಂಗಿಯ ಹೆಸರಿನೊಳಿರುವದರಿಂದ ಅದನ್ನು ಕೊಡುವದಕ್ಕಾಗುವದಿಲ್ಲವೆಂದು ನಿರಾಕರಿಸಲ್ಪಡಲು, ಇಂತಾ ಕ್ರೂರಕೃತ್ಯವನ್ನು ಮಾಡಿದನೆಂತಲೂ ತಿಳಿಯಬರುತದೆ. ಅಪರಾಧಿಯು ರಿಜಿಮೆಂಟಿಗೆ ಸೇರಿದವನಾಗಿದ್ದರೂ, ಸೈನ್ಯಕ್ಕೆ ಸೇರಿದವನಲ್ಲವಾದದರಿಂದ ಇವನು ಮಿಲಿಟರಿ ಲಾ ಪ್ರಕಾರ ವಿಚಾರಿಸಲ್ಪಡಲಿಕ್ಕೆ ಅರ್ಹನಲ್ಲವಾದಕಾರಣ ಇತರರಂತೆಯೇ ಸಿವಿಲ್ ಲಾವಿಗೆ ಒಳಪಟ್ಟವನಾಗಿರುತ್ತಾನೆ. ತಾಂಡವರಾಯನಿಗೆ ಹಣ ಕೊಡುವದಿಲ್ಲವೆಂದು ನಿರಾಕರಿಸಿದ್ದರ ಮೇಲೆ ಏಕಾಏಕಿ ಅತ್ಯಾಗ್ರಹವುಂಟಾಗಿ ತನ್ನ ಹಕ್ಕುದಾರಿಯನ್ನು ನೇಟಿವ್ ಅಡ್ಜುಟೆಂಟನು ಹೋಗಲಾಡಿಸುತ್ತಾನೆಂದು ತಿಳಿದು ಒಳಸ್ಥಿತಿಯನ್ನರಿಯದೆ ಕೂಡಲೇ ಶರಾಪ್ ಅಂಗಡಿಗೆ ಹೋಗಿ ಮಧ್ಯಾಹ್ನ ೩ ಘಂಟೆಯ ವರಿಯಂತ ಅಲ್ಲಿಯೇ ಇದ್ದು ತನಗೆ ಬೇಕಾದಹಾಗೆ ನಿಷಾ ಮಾಡಿ ಪ್ರಜ್ಞಾಶೂನ್ಯನಾಗಿ ಬಂದು ರಿಜಿಮೆಂಟ ಕಟ್ಟಡದ ಹಜಾರದಲ್ಲಿ ಕುಳಿತಿದ್ದನು. ಸುಮಾರ್ ೪ ಘಂಟೆಯ ವೇಳೆಯಲ್ಲಿ ನೇಟಿವ್ ಅಡ್ಜುಟಂಟ, ಅಂದರೆ ಜಮೇದಾರ್ ಹುಸೇನಖಾನನೂ, ಹವಾಲ್ದಾರ್ ಷೇಕ್ ಅಹಮದ್ ಯೆಂಬಾತನೂ, ಮೇಜರ್ ಇಂಗ್ಲಿಷ್ ಯೆಂಬವರೊಡನೆ ಮಾತನಾಡುತ ಒಳಗಿನಿಂದ ಹಜಾರಕ್ಕೆ ಬಂದ ವೇಳೆಯಲ್ಲಿ ಅಪರಾಧಿಯು ತನ್ನ ದ್ರೋಹಚಿಂತನೆಯನ್ನು ನೆರವೇರಿಸುವ ಬಗ್ಗೆ ಕಾದಿದ್ದನು. ಅಲ್ಲಿ ರಿಜಿಮೆಂಟ ಪಹರೆಯವರು ಸಹ ಅವರ ಸಮೀಪದಲ್ಲಿಯೇ ಘಲಾಯಿಸುತಲಿದ್ದರು. ಹೀಗಿರುವಲ್ಲಿ ಅಪರಾಧಿಯು ಆಯುಧಗಳಿಟ್ಟಿದ್ದ ಸ್ಟೋರಿಗೆ ಹೋಗಿ ಹದನಾದ ಒಂದು ಕತ್ತಿಯನ್ನು ಜಮೇದಾರ್ ಹುಸೇನಖಾನನು ಕೇಳಿ ತರುವಂತೆ ತನಗೆ ತಿಳಿಸಿದನೆಂದು ಅಲ್ಲಿದ್ದವರ ಸಂಗಡ ಹೇಳಲು, ಅವರು ಇದು ನಿಜವೆಂದು ನಂಬಿ ಒಂದು ಕತ್ತಿಯನ್ನು ಕೂಡಲೇ ಅವನ ವಶಕ್ಕೆ ಕೊಟ್ಟರು. ಸದರೀ ದ್ರೋಹಿಯ ಉದ್ದೇಶವು ಒಬ್ಬರಿಗೂ ತಿಳಿಯದಾಗಿ ಯಾರೂ ಅನುಮಾನಿಸದೆ ಸಾಧಾರಣ ಯಾವದೋ ಕೆಲಸಕ್ಕೆ ಬೇಕಾಗಿರಬಹುದೆಂದು ತಿಳಿದು ಕೊಟ್ಟಿರಬಹುದೆಂದೆಣಿಸುತ್ತೇವೆ. ಬಳಿಕ ತಾಂಡವರಾಯನು ಕತ್ತಿಯನ್ನು ಹಿಡಿದುಕೊಂಡು ಹಜಾರಕ್ಕೆ ಬಂದು ಅಲ್ಲಿ ಮಾತನಾಡುತ ಕುಳಿತಿದ್ದ ಜಮೇದಾರ್ ಹುಸೇನಖಾನನನ್ನು ಅದರಿಂದ ಕುತ್ತಿಗೆಗೂ ಭುಜಕ್ಕೂ ಮಧ್ಯೆ ಹೊಡೆದನು. ಆಗ ಜಮೇದಾರನು ದುಮುಕಿ ಸುಮಾರ್ ೨೦ ಗಜಗಳ ದೂರಹೋಗಿ ಅಲ್ಲೇ ಬಿದ್ದು ಮೃತಪಟ್ಟನು. ತಾಂಡವರಾಯನು ಇಷ್ಟಕ್ಕೆ ನಿಲ್ಲಿಸದೆ ಹವಾಲ್ದಾರ್ ಷೇಕ್ ಅಹಮದ್ ಯೆಂಬವನ ಮೇಲೆಯಿದ್ದ ಮಾತ್ಸರ್ಯವನ್ನು ತೀರಿಸಲಾರಂಭಿಸಿ ಅವನ ಎಡಭುಜವನ್ನು ಕತ್ತರಿಸಿದನು. ಅಲ್ಲಿಂದ ಕುದುರೆಯ ಮೇಲೆ ಕುಳಿತಿದ್ದ ಸುಬೇದಾರ್ ಸೈಡ್ ಅಮೀರ್ ಎಂಬಾತನನ್ನು ಹೊಡೆಯಲಿಕ್ಕೆ ಯತ್ನಿಸಲು ಆತನು ಕುದುರೆಯ ಸಹಾಯದಿಂದ ಕ್ಷಣದೊಳು ತನ್ನ ಗಂಡಾಂತರದಿಂ ತಪ್ಪಿಸಿಕೊಂಡನು. ಇಷ್ಟರಲ್ಲಿಯೇ ಆಯುಧಪಾಣಿಗಳಾದ ಕುದುರೆಯವರು ಕೆಲವರು ಅವನನ್ನು ಘೇರಾಯಿಸಿ ಹಿಡಿದುಕೊಂಡರು. ಆ ಕಾಲದಲ್ಲಿ ಸಹ ಅಪರಾಧಿಯು ಅನೇಕರನ್ನು ಕತ್ತಿಯಿಂದ ಹೊಡೆಯಲು ಪ್ರಯತ್ನಿಸಿದನು. ಪರಂತು ಅವನನ್ನು ಈಟಿಗಳಿಂದ ತಿವಿದು ಘಾಯಪಡಿಸಲು ಸ್ವಾಧೀನನಾದನು. ಅದೇ ದಿನ ಸಾಯಂಕಾಲ ಕಂಟೋನ್ಮೆಂಟ ಸಕೆಂಡ್ ಮ್ಯಾಜಿಸ್ಟ್ರೇಟರವರು ವಿಚಾರಣೆ ಮಾಡಿ ಮುರ್ದೆಯನ್ನು ದಫನ್‌ಬಗ್ಗೆ ವಾರಸದಾರರ ಸುಫರ್ದು ಮಾಡುವಾಗ್ಯೆ ರಾತ್ರಿ ೯ ಘಂಟೇಕಾಲ ಆಯಿತು. ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಕೋರ್ಟನಲ್ಲಿ ಅಪರಾಧಿಯ ಪ್ರಥಮ ವಿಚಾರಣೆ ನಡೆಯುವದು. ಶನಿವಾರದದಿನ ಬೆಳಗ್ಗೆ ಮಿಲಿಟರಿ ವಿಚಾರಣೆ ನಡೆದಮೇಲೆ ಮುರ್ದೆಯು ಹೊಸೂರು ರೋಡಿನೊಳಿರುವ ಕಬರಿಸ್ತಾನನಲ್ಲಿ ದಫನ್ ಮಾಡಲ್ಪಟ್ಟಿತು. ಹುಸೇನಖಾನನು ಸ್ವಭಾವತಃ ದೊಡ್ಡಮನುಷ್ಯನಾಗಿಯೂ, ಅನೇಕರಿಗೆ ಬೇಕಾದವನಾಗಿಯೂ, ಬಹುಮಂದಿ ಯೂರೋಪಿಯನ್ ಆಫಿಸರ್‌ಗಳ ಅಭಿಮಾನಕ್ಕೆ ಪಾತ್ರನಾಗಿಯೂ ಇದ್ದದರಿಂದ ಅನಿರೀಕ್ಷಿತವಾಗಿ ಪ್ರಾಪ್ತವಾದ ಅವನ ಅಕಾಲ ಮರಣಕ್ಕಾಗಿ ರಿಜಿಮೆಂಟಿನವರೆಲ್ಲರೂ ವಿಷಾದಿಸುತ ಆತನಿಗೆ ಸಲ್ಲಬೇಕಾದ ಮಿಲಿಟರಿ ಮರ್ಯಾದೆಗಳೊಡನೆ ಖನನ ಭೂಮಿಯ ತನಕ ಯೆಲ್ಲರೂ ಹೋಗಿದ್ದರೆಂದು ತಿಳಿಯಬರುತಿದೆ. ಈ ಜಮೇದಾರನು ೨೨ ವರುಷಗಳಕಾಲ ಅವಿಚ್ಛಿನ್ನವಾಗಿಯೂ ನಿರಾಕ್ಷೇಪಣೀಯವಾಗಿಯೂ ನೌಕರಿ ಮಾಡಿ ಗತಿಸಿದನು. ಮುಖ್ಯವಾಗಿ ಮನುಷ್ಯನಿಗೆ ಯಾವ ವೇಳೆಯಲ್ಲಿ ಎಂತಾ ಅಪಾಯ ಪ್ರಾಪ್ತವಾಗುವದೋ ಅದು ಸುತರಾಂ ತಿಳಿಯುವದಿಲ್ಲವು. ಆಯುಃಪರಿಮಾಣವು ಪರಿಸಮಾಪ್ತವಾದರೆ ಅವರವರ ಮಿತ್ರರೇ ಅವರ ಪ್ರಾಣಹಾನಿಗೆ ಕಾರಣರಾಗುತ್ತಾರೆ. ಅನುಕೂಲಗಳಾದ ವಸ್ತುಗಳೇ ಪ್ರತಿಕೂಲಗಳಾಗುತಿವೆ. ಫಿರ್ಯಾದಿಸತಕ್ಕ ಬಂದೋಬಸ್ತಿಲ್ಲವೂ ಬೇಬುದಾಗಿ ಹೋಗುತಿದೆ. ಹಗಲು ಹೊತ್ತಿನಲ್ಲಿ ಜನಗಳ ಸಮ್ಮರ್ದವುಳ್ಳ ಪ್ರದೇಶದಲ್ಲಿ ಆಯುಧಪಾಣಿಗಳಾದ ಪಹರೆಯವರ ಮಧ್ಯೆ ಇಂತಾ ಘೋರ ಕೃತ್ಯವನ್ನು ಮಾಡಿದ ಸದರೀ ಅಪರಾಧಿಯ ಸಾಹಸಕ್ಕಾಗಿ ಆಶ್ಚರ್ಯಪಡಬೇಕಾಗಿದೆ. ಆಗಿಂದಾಗ್ಯೆ ಕಂಟೋನ್ಮೆಂಟಿನಲ್ಲಿ ಇಂತಾ ಆಶ್ಚರ್ಯಕರವಾದ ಮೊಕದ್ದಮೆಗಳು ನಡೆಯುತಲಿರುತಿವೆ.

ASSAULT AND SLIPPERING.

ಕಳೆದ ತಿಂಗಳ ೨೯ನೇ ತಾರೀಖಿನ ದಿನ ಈ ಊರು ಡಿಸ್ಟ್ರಿಕ್ಟ ಆಫೀಸ್ ಕಟ್ಟಡದಲ್ಲಿ ಪೋಲೀಸ್ ಟ್ರೇನಿಂಗ್ ಸ್ಕೂಲ್ ಚಾರ್ಜನಲ್ಲಿರುವ ಇನ್ಸ್ಪೆ

ಕ್ಟರ್ ಮ॥ ನಾಗಯ್ಯನಾಯುಡು ಔದ್ಧತ್ಯದೊಡನೆ ನಡೆಸಿದ ಒಂದು ಅಕ್ರಮವಾದ ಕಾರ್ಯವು ವಿಶೇಷತಃ ಅವರಿಗೂ, ಸಾಮಾನ್ಯವಾಗಿ ಮೈಸೂರು ಶೀಮೆಯ ಪೊಲೀಸ್ ಇಲಾಖೆಗೂ ಮಾನಚ್ಯುತಿ ಕರವಾದದ್ದಾಗಿರುತದೆ, ಅದೇನೆಂದರೆ— ಆ ಮೇದಿನ ಇನ್ಸ್‌ಪೆಕ್ಟರು ರೋಲ್‌ಕಾಲ್ (ಅಂದರೆ ಹಾಜರ್ ಗೈರ್‌ಹಾಜರೀ) ಕರೆಯುತಲಿರುವಾಗ್ಯೆ ಯೆಲ್ಲರೂ ಹಾಜರ್‌ಯೆಂದು ಹೇಳಿದರೂ, ಶ್ರೀರಂಗಪಟ್ಟಣ ತಾಲ್ಲೂಕಿನಿಂದ ಬಂದಿರುವ ಕಾನ್‌ಸ್ಟೆಬಲ್ ಶೇಷಗಿರಿರಾವ್‌ಯೆಂಬಾತನು ಪ್ರೆಜೆಂಟ್‌ಯೆಂದು ಹೇಳಿದ್ದನ್ನು ಕೇಳಿ ಈ ಜವಾಬ್ ತಮ್ಮ ಗೌರವಕ್ಕೆ ಅನುಗುಣವಾದದ್ದಲ್ಲವೆಂದು ಇನ್ಸ್‌ಪೆಕ್ಟರು ಭಾವಿಸಿ ಆತನನ್ನು ತಮ್ಮ ಬಳಿಗೆ ಬರುವಂತೆ ಕರೆಯಲು, ಆತನು ಬೆಲ್ಟ್ ಹಾಕಿಕೊಂಡು ಹೋಗುವದಕ್ಕೆ ಎರಡು ನಿಮಿಷಗಳು ಅವಕಾಶವಾಯಿತು. ಆಗ ಅವನನ್ನು ನೋಡಿ ನಿದ್ರೆ ಹೋಗುತಿದ್ದಿಯಾಯೆಂದು ಇನ್ಸ್‌ಪೆಕ್ಟರ್ ಕೇಳಲು ತಾನು ನಿದ್ರೆಹೋಗಲಿಲ್ಲವು, ಪರಂತು ಬೆಲ್ಟ್ ಹಾಕಿಕೊಳ್ಳುತಲಿದ್ದೆನಾಗಿ ಬೆಲ್ಟ್ ಹಾಕಿಕೊಂಡು ಬರಲಿಕ್ಕೆ ಸ್ವಲ್ಪ ಅವಕಾಶವಾಯಿತೆಂದು ಕಾನ್‌ಸ್ಟೆಬಲ್ ಜವಾಬ್ ಹೇಳಿದನು. ಅಷ್ಟಕ್ಕೆ ಸಹಿಸದೆ ಇನ್ಸ್‌ಪೆಕ್ಟರು ತಮ್ಮ ಬೂಟ್ಸಿನಿಂದ ಒದೆಯುವೆನೆಂದು ಹೇಳಲು, ಕಾನ್‌ಸ್ಟೆಬಲ್, ಜುರ‍್ಮಾನೆಯಾದರು ಹಾಕಬಹುದು ಅಥವಾ ಮತ್ಯಾವವಿಧದಿಂದಾದರೂ ಶಿಕ್ಷಿಸಬಹುದೇ ಹೊರ್ತು ಈ ರೀತಿ ಮಾನಹಾನಿಕರವಾದ ಮಾತನ್ನು ಪ್ರಯೋಗಿಸ ಬೇಡಿರೆಂದು ಹೇಳಿದನು. ಇನ್ಸ್‌ಪೆಕ್ಟರು ತಮ್ಮ ಔದ್ಧತ್ಯವನ್ನು ಬಾಯಿಂದ ತೋರಿಸಿದ್ದು ಸಾಲದೆಂದೆಣಿಸಿ ಅದನ್ನು ಕಾರ್ಯತಃ ಸಹ ಮಾಡಲಾರಂಭಿಸಿ ಸದರೀ ಶೇಷಗಿರಿರಾಯನನ್ನು ಇತರ ಕಾನ್‌ಸ್ಟೆಬಲ್‌ಗಳು ವಗೈರೇರ ಮುಂದೆ ತಮ್ಮ ಕಾಲಿನಿಂದ ಒದ್ದರು. ದುರಹಂಕಾರ ಪ್ರೇರಿತವಾದ ಈ ಔದ್ಧತ್ಯವನ್ನು ತಡೆಯಲಾರದೆ ಕಾನ್‌ಸ್ಟೆಬಲ್ ತನ್ನ ದುರವಸ್ಥೆಯನ್ನು ಡೆಪ್ಯುಟಿ ಕಮಿಷನರಿಗಾಗಲಿ ಸೂಪರಿಂಟೆಂಡೆಂಟರಿಗಾಗಲಿ ತಿಳಿಸಬೇಕೆಂದು ಮಹಡಿಯ ಮೇಲೆ ಹೋಗಲು ಅಲ್ಲಿ ಅವರಿಬ್ಬರೂ ಇರಲಿಲ್ಲವು. ಬಳಿಕ ತನ್ನ ದುರವಸ್ಥೆಯನ್ನು ಕೇಳುವವರ‍್ಯಾರೂ ಇಲ್ಲವಲ್ಲಾ, ಎಂದು ಮೊರೆಯಿಡುತ ವಾಪಸು ಬರುವಾಗ್ಯೆ ಇನ್ಸ್‌ಪೆಕ್ಟರು ಕಾನ್‌ಸ್ಟೆಬಲಿನ ದುಸ್ತನ್ನು ಕಿತ್ತುಕೊಳ್ಳುವಂತೆ ಇತರ ಜವಾನರಿಗೆ ಆಜ್ಞಾಪಿಸಿದರು. ಆಗ ಒಬ್ಬನು ರುಮಾಲನ್ನೂ, ಮತ್ತೊಬ್ಬನು ಕೋಟನ್ನೂ, ಇನ್ನೊಬ್ಬನು ಬೆಲ್ಟನ್ನೂ, ಬೇರೊಬ್ಬನು ಪರಾಯಿಯನ್ನೂ, ಅನ್ಯನೊಬ್ಬನು ಚಡಾವನ್ನೂ ಕಿತ್ತುಕೊಳ್ಳಲಿಕ್ಕೆ ಗೃಧ್ರಗಳಂತೆ ಬಂದು ಮೇಲೆ ಬೀಳಲು, ಸದರೀ ಶೇಷಗಿರಿರಾಯನು ಒಳಪಡದೆ ತಪ್ಪಿಸಿಕೊಂಡನು. ಈಗ ಆತನು ಟೌನ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದ್ ದಾಖಲ್ಮಾಡಿರುತ್ತಾನೆ. ಇದು ಬರುವ ಗುರುವಾರದ ದಿನ ವಿಚಾರಣೆಯಾಗುವದು. ಏತನ್ಮಧ್ಯೆ ಮ. ನಾಗಯ್ಯನಾಯುಡು ತಮ್ಮ ಔದ್ಧತ್ಯ ಸ್ವರೂಪವನ್ನು ತಿಳಿದುಕೊಂಡು ವಿದ್ಯಾಗುರುವಾದ ತಾವು ಹೊಡದ ಮಾತ್ರದಿಂದಲೇ ಈ ರೀತಿ ಕೋಪಿಸಿಕೊಂಡು ಗುರುಕಟಾಕ್ಷಕ್ಕೆ ಅಪಾತ್ರನಾಗಬಹುದೇ? ಕಾಲಿನಲ್ಲಿದ್ದ ಬೂಟ್ಸಿನ ಚರ್ಮಕ್ಕೂ ದೇಹದ ಚರ್ಮಕ್ಕೂ ತಾರತಮ್ಯವೇನು? ಎಂಬದು ಮುಂತಾದ ನಾನಾ ದೋಷಾಯುಗಳಿಂದ ಕಾನ್‌ಸ್ಟೆಬಲನ್ನು ಸ್ವಾಧೀನಪಡಿಸಲೆತ್ನಿಸಿದಾಗ್ಯೂ ಆತನು ವಶ್ಯನಾಗದೆ ಫಿರ್ಯಾದ್ ಮಾಡಿರುತ್ತಾನೆ. ಇದರ ಫಲಿತಾಂಶವನ್ನು ಮುಂದಿನ ವಾರದಲ್ಲಿ ನಾವು ತಿಳಿಸುವೆವು. ಇನ್ಸ್‌ಪೆಕ್ಟರ್ ನಾಗಯ್ಯನಾಯುಡು ಮಾಡಿದ್ದು ಅಕೃತ್ಯವೆಂದು ಯೆಲ್ಲರಿಗೂ ತೋರಬಹುದಾದಾಗ್ಯೂ ಸಮರ್ಥರಾದ ಅವರು ಮ್ಯಾಜಿಸ್ಟ್ರೇಟರ ಮುಂದೆ ಹ್ಯಾಗೆ ಬಚಾಯಿಸಿಕೊಳ್ಳುವರೋ ಅದನ್ನು ತಿಳಿದುಕೊಳ್ಳುವದಕ್ಕೆ ಆತುರರಾಗಿರುತ್ತೇವೆ.

Occasional Notes.

ನೈಮಿತ್ತಿಕವಿಷಯನ್ಯಾಸ

A railway to Mandalay —ಬರ್ಮಾದೇಶದ ರಾಜಧಾನಿಯಾದ ಮಂಡಲಪುರಕ್ಕೆ ರೈಲ್‌ರಸ್ತೆ ಹಾಕಬೇಕೆಂದು ನಿಶ್ಚಯಿಸಿ ಅದರ ಲಾಗುವದು ಬಗ್ಯೆ ಯೆರಡು ಕೋಟಿ ರೂಪಾಯಿಗಳು ಅಂದಾಜಾಗಿರುತದೆ.

A proposal approved —ಕಲ್ಕತ್ತೆಯಲ್ಲಿ, ದಸ್ತಾವೇಜುಗಳ ರಿಜಿಸ್ಟ್ರರವರಿಗೆ ಈಗ ಸಲ್ಲುತಬರುವ ಮಾಹೇಯಾನಾ ೬೦೦ ರೂಪಾಯಿಗಳ ಸಂಬಳವನ್ನು ೪೦೦ ರೂಪಾಯಿಗಳಿಗೆ ಕಮ್ಮಿ ಮಾಡಬೇಕೆಂದು ಫೈನಾನ್ಸ್ ಕಮಿಟಿಯವರು ಕೊಟ್ಟ ಸಲಹೆಯನ್ನು ಬಂಗಾಳೇ ಗವರ್ನ್ಮೆಂಟಿನವರು ಮಂಜೂರ್ಮಾಡಿರುವಂತೆ ತಿಳಿಯಬರುತದೆ.

The libel case against the *Statesman* ಕಲ್ಕತ್ತಾ ಸ್ಟೇಟ್ಸ್‌ಮನ್ ಪತ್ರಿಕೆಯ ಮೇಲೆ ತರಲ್ಪಟ್ಟಿರುವ ಮಾನನಷ್ಟ ಮೊಕದ್ದಮೆಯ ಸರ್ವವ್ಯಾಪ್ತಿಯು ಬರುವ ಸೆಪ್ಟಂಬರ್ ತಿಂಗಳ ಆಖೈರಿನಲ್ಲಿ ನಡೆಯುವದಾದದರಿಂದ ಆ ಕಾಲಕ್ಕೆ ಈಗಿನ ಜಡ್ಜಿಯವರು ರಜಾಮೇಲೆ ಹೊರಟು ಹೋಗಿ ಬೇರೆ ಜಡ್ಜಿಯವರು ಬಂದು ಅವರ ಮುಂದೆ ನಡೆಯುವದೆಂದು ಅಲ್ಲಿನ ಪತ್ರಿಕೆಯೊಂದು ತಿಳಿಸುತದೆ.

Abolition of transit duties in Indore ಇಂದೂರು ಸಂಸ್ಥಾನದ ಪ್ರಕೃತ ಮಹಾರಾಜರವರು ತಾವು ರಾಜ್ಯಾಧಿಕಾರವನ್ನು ಕೈಗೊಂಡ ಕೂಡಲೇ ತಮ್ಮ ದೇಶದಲ್ಲಿ ಜಮುದ್‌ರಫ್ತು ಮೇಲಿನ ತೆರಿಗೆಗಳನ್ನು ಮಾಫ್ ಮಾಡಿದ ವೃತ್ತಾಂತವು ಕೇಳಿ ಮಂತ್ರಾಲೋಚಕ ಸಮಾಜದೊಳಗಣ ಗವರ್ನರ್ ಜನರಲವರು ಬಹಳ ಸಂತೋಷ ಪಡುವದಾಗಿ ತಿಳಿಸಿ ಇರುತ್ತಾರೆ.

Decline in the importation of paper ಐದು ಸಂವತ್ಸರಗಳ ಹಿಂದೆ ಇಪ್ಪತ್ತು ನೂರು ಲಕ್ಷ ರೂಪಾಯಿಗಳ ಕ್ರಯ ಬಾಳುವಷ್ಟು ಬರೆಯುವ ಕಾಗದ ಇಂಡ್ಯಾರಾಜ್ಯಕ್ಕೆ ಆಮದ್ ಆಗುತಲಿತ್ತು. ಸನ್ ೧೮೮೫ನೇ ಇಸವಿಯಲ್ಲಿ ಸುಮಾರು ಹದಿಮೂರು ಲಕ್ಷ ರೂಪಾಯಿಗಳ ಕ್ರಯಬಾಳುವಷ್ಟು ಕಾಗದವೇ ಆಮದ್ ಆಗಿರುತದೆ. ಇದರಿಂದ ಇಂಡ್ಯಾದೇಶದಲ್ಲಿನ ಕಾಗದ ಕಾರ್ಖಾನೆಗಳಲ್ಲಿ ತಯಾರಾಗುವ ಕಾಗದಗಳನ್ನೇ ಸಾಮಾನ್ಯವಾಗಿ ಯೆಲ್ಲರೂ ಕೊಂಡುಕೊಳ್ಳುವಂತೆ ಕಾಣುತದೆ.

The Madras Board of Revenue — ಮುಂದೆ ನಡೆಯುವದಾಗಿರುವ ಬದಲಾವಣೆಗಳಲ್ಲಿ ಮದರಾಸ್ ರೆವಿನ್ಯೂ ಬೋರ್ಡ್ ತೆಗೆದುಹಾಕಲ್ಪಟ್ಟು ರೆವಿನ್ಯೂ ಕೆಲಸಗಳ ನಿರ್ವಾಹಕೆಯ ಬಗ್ಯೆ ಸದರೀ ಪ್ರೆಸಿಡೆನ್ಸಿಯು ಡಿಸ್ಟ್ರಿಕ್ಟುಗಳಾಗಿ ಭಾಗಿಸಲ್ಪಟ್ಟು, ಒಂದೊಂದು ಡಿಸ್ಟ್ರಿಕ್ಟಿಗೆ ಒಬ್ಬೊಬ್ಬ ಅಧಿಕಾರಿ ಏರ್ಪಾಟಾಗಿ ಆತನು ಯೆಲ್ಲವಿಷಯವನ್ನೂ ಕುರಿತು ಗವರ್ನ್ಮೆಂಟಿಗೆ ಖುದ್ದು ರಿಪೋರ್ಟ್ ಮಾಡುವಂತೆ ಏರ್ಪಾಟಾಗುವದೆಂದು ಪ್ರವಾದವುಂಟಾಗಿರುವಂತೆ ಒಂದಾನೊಂದು ಪತ್ರಿಕೆ ಹೇಳುತದೆ.

Female hospital at Durbungah — ದರ್ಭಂಗಾ ಸಂಸ್ಥಾನದ ರಾಜಧಾನಿಯಲ್ಲಿ, ಇಂಡ್ಯಾರಾಜ್ಯದ ಪ್ರಕೃತ ವೈಸ್‌ರಾಯಿಯವರಾದ ಲಾರ್ಡ್ ಡಫರಿನ್‌ಯವರ ಭಾರ್ಯೆಯವರಿಂದ ಅಸ್ತಿಭಾರ ಹಾಕಲ್ಪಟ್ಟು ಕಟ್ಟಡದ ಕೆಲಸ ನಡೆಯುತಲಿರುವ ಆಸ್ಪತ್ರೆಗೆ ವೈದ್ಯಶಾಸ್ತ್ರ ಪ್ರವೀಣಳಾದ ಒಬ್ಬ ಹೆಂಗಸು ಬೇಕೆಂದು ಸದರೀ ಸಂಸ್ಥಾನದ ಮಹಾರಾಜರವರು ಅಪೇಕ್ಷಿಸಿರುತ್ತಾರೆ. ಸದರೀ ಕಟ್ಟಡದ ಕೆಲಸವು ಪೂರ್ತಿಯಾಗುವದಕ್ಕೆ ಇನ್ನು ಸ್ವಲ್ಪಕಾಲ ಹಿಡಿಯುವದು, ಪರಂತು ನೇಟಿವ್ ಹೆಂಗಸರಿಗೆ ಹೆಂಗಸರ ಮೂಲಕ ಚಿಕಿತ್ಸೆ ಮಾಡಿಸುವ ಕಾರ್ಯವನ್ನು ಪ್ರಾರಂಭಿಸುವದಕ್ಕೆ ಬೇರೆ ಏರ್ಪಾಡುಗಳು ಮಾಡಲ್ಪಟ್ಟಿರುವಂತೆ ತಿಳಿಯಬರುತದೆ.

Technical Education —ಕಸಬುದಾರೀ ವಿದ್ಯೆಗಳನ್ನು ಕಲಿಸುವ ವಿಷಯದಲ್ಲಿ ಇಂಡ್ಯಾ ಗವರ್ನ್ಮೆಂಟಿನವರು ಆಯಾಯಸ್ಥಳಿಕ ಗವರ್ನ್ಮೆಂಟುಗಳಿಗೆ ಬರೆದು, ಸದರೀ ಆಲೋಚನೆಯು ಉಚಿತವಾದದ್ದೇ ಯೆಂಬ ವಿಷಯದಲ್ಲೂ ಅದು ಮುಂದಾಗ್ಮಾಡಲ್ಪಟ್ಟರೆ ಅದನ್ನು ಯುಕ್ತವಾದ ರೀತಿಯಲ್ಲಿ ಅಮಲಿನೊಳು ತರುವ ಮಾರ್ಗವನ್ನೂ ಕುರಿತೂ ಅವರವರ ಅಭಿಪ್ರಾಯವನ್ನು ತಿಳಿಸಬೇಕೆಂದು ಅಪೇಕ್ಷಿಸಿರುತ್ತಾರೆ.

Establishment of machinery at Manipur —ಮಣಿಪುರದ ಮಹಾರಾಜರವರು, ದೂಲಗಳನ್ನು ಕುಯಿದು ಕಟ್ಟಡ ಸಾಮಾನುಗಳನ್ನೂ, ಖುರ್ಚಿ ವಗೈರೆ ಸಾಮಾನುಗಳನ್ನೂ ತಯಾರ್ಮಾಡುವದಕ್ಕಾಗಿ ಇಂಗ್ಲಂಡ್ ದೇಶದಿಂದ ೫೦,೦೦೦ ರೂಪಾಯಿಗಳ ಲಾಗವಡಿನಲ್ಲಿ ಯಂತ್ರೋಪಕರಣಗಳನ್ನು ತರಿಸಿ ಲಕ್ಕಿಪುರದಲ್ಲಿ ಕೆಲಸಗಳು ನಡೆಸುತಲಿದಾರಲ್ಲದೆ ಭತ್ತ ಕುಟ್ಟುವದು ಮೊದಲಾದದಕ್ಕೆ ಉಪಯುಕ್ತವಾದ ಯಂತ್ರಗಳಂ ಸಹ ತರಿಸಿ ಇಟ್ಟಿರುತ್ತಾರೆ.

The Ripon Memorial Fund —ಇಂಡ್ಯಾರಾಜ್ಯದ ಸಾಬಕ್ ವೈಸ್‌ರಾಯ್‌ಯವರಾದ ಲಾರ್ಡ್ ರಿಪನ್‌ಯವರ ಜ್ಞಾಪಕವನ್ನು ಈ ದೇಶದಲ್ಲಿ ಊರ್ಜಿತಪಡಿಸುವದಕ್ಕಾಗಿ ಯೇರ್ಪಡಿಸಿದ ಫಂಡಿನ ಕಮಿಟಿಯವರು ಆಚೆ ಶನಿವಾರದ ದಿನ ಮುಂಬೈಯಲ್ಲಿ ಸಭೆ ಸೇರಿದರು. ಆ ಕಾಲದಲ್ಲಿ ಮಿ. ಪಿರೋಜ್‌ಷಾ ಮೆಹತಾ ಯೆಂಬವರು ಸದರೀ ಫಂಡಿಗಾಗಿ ೧,೫೨,೦೦೦ ರೂಪಾಯಿಗಳು ಚಂದಾ ಮಾಡಲ್ಪಟ್ಟಿರುವಂತೆ ಕಮಿಟಿಯವರಿಗೆ ತಿಳಿಸಿದರು. ಸ್ವಲ್ಪಹೊತ್ತು ಚರ್ಚೆ ನಡೆದ ಮೇಲೆ, ಸದರೀ ಫಂಡಿನ ಸೆಕ್ರೆಟರಿಗಳು, ಪ್ರಕೃತದ ಪ್ರಯತ್ನಕ್ಕೆ ಗವರ್ನ್ಮೆಂಟಿನವರು ಯಾವ ರೀತಿಯಲ್ಲಿ ಸಹಾಯಕರಾಗುವಂತೆ ಯೋಚಿಸುತಲಿದಾರೆಯೋ, ಅದಂ ಕುರಿತು ಅವರಿಗೆ ಬರೆದು ತಿಳಿದುಕೊಳ್ಳತಕ್ಕದ್ದೆಂದು ನಿರ್ಣಯಿಸಲ್ಪಟ್ಟಿತು. ಮುಂಬೈಯಲ್ಲಿ ಲಾರ್ಡ್ ರಿಪನ್ ಸಾಹೇಬರವರ ಹೆಸರಿನ್ನ ಕಸುಬುದಾರೀ ವಿದ್ಯೆಯಂ ಕಲಿಸುವ ಪಾಠಶಾಲೆಯನ್ನು ಯೇರ್ಪಡಿಸಬೇಕೆಂದು ಕಮಿಟಿಯವರು ಅಭಿಪ್ರಾಯಪಡುತ್ತಾರೆ

LOCAL AND PROVINCIAL NEWS

ಒಳದೇಶಮತ್ತು ತಾಲ್ಲೂಕ್‌ಜಾಗ್ಗೆ ವೃತ್ತಾಂತಗಳು

Pilgrimage —ದಿವಾನರವರ ಚೀಫ್ ಸೆಕ್ರೆಟರಿಯಾದ ಮ॥ ವಿಜಯೇಂದ್ರರಾಯರವರು ಒಂದು ವಾರ ಕಾಜ್ಯುಯಲ್‌ಲೀವ್ ಪಡೆದು ಕೃಷ್ಣಾನದಿಗೆ ತೀರ್ಥಯಾತ್ರೆಯಬಗ್ಯೆ ಹೋಗುವರೆಂತಲೂ, ಅವರ ಗೈರ್‌ಹಾಜರಿಯಲ್ಲಿ ಅಂಡರ್ ಸೆಕ್ರೆಟರಿ ಮ॥ ಕೃಷ್ಣಯ್ಯನವರು ಅವರ ಕೆಲಸವನ್ನು ಆಕ್ಟಿಂಗ್ ತರೀಕ್ ನೋಡುವರೆಂತಲೂ ಒಳದೇಶದ ಪತ್ರಿಕೆಯೊಂದು ತಿಳಿಸುತದೆ.

The weather —ಗತವಾರದ ಕಾಲಸ್ಥಿತಿಯು ಅದರ ಹಿಂದಿನ ವಾರದೊಳಗಿರುವಂತೆಯೇ ಇದೆ. ದಿವಾರಾತ್ರಿ ಯೆಡಬಿಡದೆ ಮಳೇ ಬೀಳುತ, ಬೀದಿಯಲ್ಲಿ ಸಂಚಾರಕ್ಕೆ ಅವಕಾಶವಿಲ್ಲದೆ ಇದೆ. ಇದರಿಂದ ಎಳೇ ಪೈರುಗಳು ಕೆಡಲಿಕ್ಕೂ, ಬಡವರಾದವರ ಮನೆಗಳು ನೆಲಸಮನಾಗಲಿಕ್ಕೂ, ಈಗಲೇ ಅಲಭ್ಯವಾಗಿರುವ ಸೌದೆಯ ಗಿರಾಕಿಯು ಮತ್ತಷ್ಟು ಜಾಸ್ತೀಯಾಗಲಿಕ್ಕೂ, ಶೀತಾಧಿಕ್ಯದಿಂದ ಅಲ್ಲಿಯಲ್ಲಿ ಜನಗಳಿಗೆ ನೆಗಡಿ, ಕೆಮ್ಮು, ಜ್ವರ ವಗೈರೆ ಉಪದ್ರವಗಳು ಕಾಣಿಸಲಿಕ್ಕೂ ಕಾರಣವಾಗಿರುತದೆ. ಧಾರಣೆವಾಸಿ ಗತವಾರದೊಳಿದ್ದಂತೆಯೇ ಇದೆ.

Enlarging the boundaries —ಈ ಪಟ್ಟಣಕ್ಕೆ ಸಮೀಪದೊಳಿರುವ ಗವೀಪುರ ಗ್ರಾಮವನ್ನು ಇಲ್ಲಿನ ಶಹರ್ ಮ್ಯುನಿಸಿಪಲ್ ಸರಹದ್ದಿಗೆ ಸೇರಿಸಬೇಕೆಂಬ ತಾತ್ಪರ್ಯವು ಮೈಸೂರು ಸರ್ಕಾರದವರಿಗೆ ಈಗ ಉಂಟಾಗಿದೆಯೆಂತಲೂ, ಮ್ಯುನಿಸಿಪಲ್ ಹುಟ್ಟುವಳಿಯನ್ನು ವೃದ್ಧಿಪಡಿಸತಕ್ಕ ಬಗ್ಯೆ ಸದರೀ ಗ್ರಾಮದ ಆಬಾದಿನಲ್ಲಿರತಕ್ಕ ಖಾಲೀಜಮೀನುಗಳಲ್ಲಿ ಮನೆಕಟ್ಟಿಕೊಳ್ಳತಕ್ಕವರಿಗೆ ಸುಲಭಕ್ರಯಕ್ಕೆ ಕೊಡಲ್ಪಡುವದೆಂತಲೂ, ಈ ಉದ್ದೇಶದೊಡನೆ ಗತಗುರುವಾರದದಿನ ದಿವಾನರವರು ಮ್ಯುನಿಸಿಪಲ್ ಕಮ್ಮಿಷನರ್‌ಗಳೊಡನೆ ಅಜಮಾಯಿಷೀಬಗ್ಯೆ ಗವೀಪುರಕ್ಕೆ ಹೋಗಿದ್ದರೆಂತಲೂ ತಿಳಿಯಲಾದೆವು.

Dist Rev Sheristedarship — ಬೆಂಗಳೂರು ಡಿಸ್ಟ್ರಿಕ್ಟ್ ರೆವಿನ್ಯೂ ಶಿರಸ್ತೇದಾರರಾದ ಮ॥ ಎ ಎನ್ ರಾಘವಾಚಾರ್ಯರವರು ೩ ತಿಂಗಳ ಪ್ರಿವಿಲೇಜ್ ರಜಾ ಪಡೆದದರಿಂದ ಅವರ ಗೈರ್‌ಹಾಜರೀ ಕಾಲದಲ್ಲಿ ಡಿಸ್ಟ್ರಿಕ್ಟ್ ಹೆಡ್ ಅಕೌಂಟೆಂಟ್ ಮ॥ ನಾಗಭೂಷಣ ನಾಯುಡು ನೋಡುವರೆಂತಲೂ, ಹೆಡ್ ಅಕೌಂಟೆಂಟ್ ಕೆಲಸಕ್ಕೆ ರೈಲ್ವೇ ಇಲಾಖಾ ಸೂಪರ್‌ನ್ಯೂಮರರಿಯಾದ ಮ॥ ಎಸ್ ಶ್ರೀನಿವಾಸರಾವ್ ಯೆಂಬವರು ಮುಕರರಾದರೆಂತಲೂ ತಿಳಿಯಬರುತದೆ. ಇದಲ್ಲದೆ ಇದಕ್ಕೆ ಸೇರಿದಂತೆ ಇನ್ನೂ ಕೆಲವು ಯೇರ್ಪಾಡುಗಳು ನಡೆದಿರುತವೆಂದು ಕೇಳುತ್ತೇವೆ.

The horticultural show —ಈ ಊರಿನ ಲಾಲ್‌ಬಾಗ್ ತೋಟದಲ್ಲಿ ಆರುತಿಂಗಳಿಗೊಂದಾವರ್ತಿ ಪುಷ್ಪ ಫಲ ಪ್ರದರ್ಶಕ ಸಭೆ ನಡೆಯುವದೆಂಬ ಪ್ರಸಿದ್ಧವೇಯಷ್ಟೆ ಅದೇರೀತಿ ಸದರೀ ಸಭೆಯು ಗತ ಬೃಹಸ್ಪತಿವಾರದದಿನ ಮಧ್ಯಾಹ್ನ ನಡೆಯಿತು. ಹಿಂದಿನ ಸಂದರ್ಭದಲ್ಲಿ ಫಲ ಕುಸುಮಗಳು ವಿಶೇಷ ಆಕರ್ಷಕಗಳಾಗಿದ್ದಂತೆ ಈ ಸಲ ಇರಲಿಲ್ಲವೆಂತಲೂ, ಆಪ್ಪಲ್‌ರಾಶಿಮಾತ್ರ ಚನ್ನಾಗಿತ್ತೆಂತಲೂ ಪರಂತು ಅದರ ಕ್ರಯವು ಉಪಪನ್ನನಿಗೆ ಸಹ ದುಬಾರಿಯಾಗಿತ್ತೆಂತಲೂ, ಅಲ್ಲಿಗೆ ಹೋಗಿದ್ದವನೊಬ್ಬನು ತಿಳಿಸುತ್ತಾನೆ. ಶ್ರೀಮನ್ಮಹಾರಾಜರವರ ಸವಾರಿ ಚಿತ್ತೈಸಿತ್ತು. ಈ ಬಂದು ಹೋದ ಕೆಲವು ಘಂಟೆಗಳ ಕಾಲದ ಉಪಯೋಗಕ್ಕಾಗಿಯೇ ಸುಮಾರ್ ೩೫೦೦ ರೂಪಾಯಿಗಳ ತನಕ ಗವರ್ನ್ಮೆಂಟಿನವರು ಕಲ್ಲು ಮಣ್ಣು ಪಾಲು ಮಾಡಬೇಕೆಂದುದ್ದೇಶಿಸಿರುವರು

The Fort Murder Case. —ಈಚೆಗೆ ಕೆಲವು ದಿವಸಗಳ ಹಿಂದೆ ಈ ಪಟ್ಟಣದ ಕೋಟೆಯಲ್ಲಿ ನಡೆದ ಸಂಮಖೂನಿ ಮೊಕದ್ದಮೆಯು ಕಂಟೋನ್ಮೆಂಟ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಪ್ರಥಮ ವಿಚಾರಣಾನಂತರ ಸೆಷನ್ ಕಮ್ಮಿಟ್ ಮಾಡಲ್ಪಟ್ಟಂತೆ ಹಿಂದೆಯೇ ತಿಳಿಸಿದ್ದೆವಷ್ಟೆ. ಸದರೀ ಮೊಕದ್ದಮೆಯು ಬರುವ ಸೋಮವಾರದದಿನ ಸೆಷನ್ ವಿಚಾರಣೆಗೆ ಉಪಕ್ರಮವಾಗುವದು. ಪಬ್ಲಿಕ್ ಪ್ರಾಸಿಕ್ಯೂಟರ್ ಮ॥ ಲಾರೆನ್ಸ್‌ಯವರು ಗವರ್ನ್ಮೆಂಟ್ ತರಫ್ ವಾದವನ್ನು ನಡೆಸುವರು. ಅಪರಾಧಿಗಳ ಕಡೆ ಬ್ಯಾರಿಸ್ಟರ್ ಹೇಜ್‌ಯವರು ಹಾಜರಾಗಿ ವಾದಿಸುವರು. ಅಪರಾಧಿಗಳು, ತಮ್ಮ ತರಫ್ ೪೦—೫೦ ಜನಗಳಿಗೆ ಸಮನ್ಸ್ ಮಾಡಿರುತ್ತಾರೆ ಅದರಲ್ಲಿ ಕಂಟೋನ್ಮೆಂಟ್ ಮ್ಯಾಜಿಸ್ಟ್ರೇಟರವರೂ, ಸೆಕೆಂಡ್ ಮ್ಯಾಜಿಸ್ಟ್ರೇಟರೂ, ಪೊಲೀಸ್ ಸೂಪರಿಂಟೆಂಡೆಂಟರೂ ಸೆಂಟ್ರಲ್ ಸ್ಟೇಷನ್ ಚೀಫ್ ಜೈಲರ್‌ನೂ ಸೇರಿರುತ್ತಾರೆ, ಬಹುಶಃ ಈ ಮೊಕದ್ದಮೆಯು ಪೂರೈಸಲಿಕ್ಕೆ ಎರಡುಮೂರು ದಿನಗಳು ಹಿಡಿಯಬಹುದೆಂದು ನಂಬುತ್ತೇವೆ.

CORRESPONDENCE.

ಮಹಾಶಯರೇ —

ಗತವಾರದ ತಮ್ಮ ಪತ್ರಿಕಾವಲೋಕನದಿಂ ಮುದವನ್ನೈದಿದೆನು. ಇಲ್ಲಿ ಈಚೆಗೆ ನಡೆದ ವೃತ್ತಾಂತವು ಸಂಗ್ರಹೇಣ ತಮ್ಮ ಅವಧಾನಕ್ಕೆ ಈ ಮೂಲಕ ತರುತ್ತೇನೆ

ರಾಯರವರು ಆಚಾರ್ಯರಿಗೆ ಮಾಡಿದ ಬಹುಮಾನ ಯಥಾಯೋಗ್ಯವಲ್ಲವೆಂದರಿತು ಅವರನ್ನ ಬ್ರಾಹ್ಮಣ ಸಮುದಾಯದಿಂದ ಹೊರಪಡಿಸಲುದ್ದೇಶಿಸಿ ಅದಕ್ಕೆ ತಕ್ಕ ವ್ಯವಸಾಯವನ್ನ ತಮ್ಮ ವಶ್ಯರೊಡನೆ ನಡೆಸಿ ತದರ್ಥ ಒಂದು ಪತ್ರಿಕೆಯನ್ನುಂಟುಮಾಡಿ ಬಹೂಪಾಯಗಳಿಂದ ಕೆಲವು ಜನಗಳ ಹಸ್ತಾಕ್ಷರಗಳಂ ಪಡೆದರು. ಈ ಸಂಗತಿ ಆಚಾರ್ಯರವರಿಗೆ ತಿಳಿದು ರಾಯರ ನಿಶ್ಚಿತ ಪ್ರಜ್ಞೆಗೆ ನಿರೋಧಕವಾದ ಉಪಾಯಾಂತ

ಕವೇನೂ ತೋರದೆ ಸ್ವತಃ ಅನುದ್ಯೋಗಿಗಳಾದರೆ ಪರಿಣಾಮವಿಲ್ಲವೆಂತಲೂ ಭಾವಿಸಿ ತಮಗೆ ಸಮಾನವಾದ ಅಧಿಕಾರವುಳ್ಳವರಲ್ಲಿ ಮೊರೆಯಿಡಲು ಅವರು ಬ್ರಹ್ಮವರ್ಚಸ್ಸಿಗುಂಟಾದ ಅವಮಾನವು ಬಹುತ್ವೇನ ಪರಿಗಣಿಸಿ "ಬ್ರಹ್ಮತೇಜೋಬಲಂಬಲಂ" ಎಂಬಂತೆ ಸರ್ವಸಾಧಕಯಂತ್ರವಾದ ಅಸ್ಮದೀಯರಲ್ಲಿ ಸುದರ್ಶನ ಚಕ್ರವೆಂದು ರೂಢಿಯಾಗಿ ಹೆಸರುಗೊಂಡ ಬಹಿಷ್ಕಾರ ಪತ್ರಿಕೆಯಂ ರಾಯರಬಗ್ಗೆ ಕಳೆದ ಭಾನುವಾರದದಿನ ಓದಿಸಿದರು. ಅಹಹ! ಇದರ ವೀರ್ಯವಿಷ್ಟೆಂದು ವರ್ಣಿಸಲಸಾಧ್ಯವು. ಸಂಕ್ಷೇಪತಃ ಅಭಿಲಷಿತವಾದ ವಸ್ತುವು ಪ್ರಾಪ್ತವಾಯಿತು. ಅಂದರೆ ರಾಯರು ದಿನದಿನವೂ ಒಂದು ಯತ್ನಿಸುತ್ತಿದ್ದರೂ ಬೆನ್ನುಹತ್ತಿಬರುವ ಚಕ್ರತಾಪವು ಸಹಿಸಲಾರದೆ ಪೂರ್ವದಲ್ಲಿ ಶ್ರೀರಾಮರ ಬ್ರಹ್ಮಾಸ್ತ್ರದಿಂ ಪೀಡಿತನಾದ ಕಾಕಾಸುರನವೋಲ್ ಅನ್ಯಶರಣ್ಯರು ಕಾಣದೆ ಆಚಾರ್ಯರ ಪಾದಕ್ಕೆರಗಲು ದೀರ್ಘದ್ವೇಷ ನಕರ್ತವ್ಯವೆಂದು ಆಲೋಚಿಸಿ ನಮಿತರಾದ ಆರಾಯರ ಆರ್ತಿಯಂ ಈದಿನದಿಳಗ್ಗೆ ಪರಿಹರಿಸಿದರು. ಅಂದರೆ ಶುದ್ಧಪತ್ರಿಕೆಯನ್ನು ಓದಿಸಿದರು. ಇದರಿಂದ [illegible] ಕಳವಳಗೊಂಡಿದ್ದ ಅನೇಕರಮನವು ಆನಂದವನ್ನೊಂದಿ ನಮ್ಮವರಲ್ಲೊಬ್ಬರ ಮನೆಯಲ್ಲಿ ಈ ದಿವಸ ನಡೆದ ಮಹೋತ್ಸವಕ್ಕೆ ಆಹ್ವಾನಪೂರ್ವಕ ಹೋಗಿ ಅಲ್ಲಿ ಸಿದ್ಧವಾಗಿದ್ದ ವಿವಿಧ ಪದಾರ್ಥಗಳಂ ಸುಖದಿಂ ಮೆದ್ದು ಸುಕೋಲಚಿತ್ತರಾದರು.

ಬಹಿಷ್ಕಾರ ಶುದ್ಧಪತ್ರಿಕೆಗಳು ನಮ್ಮಲ್ಲಿ ಯೆಷ್ಟು ಸುಲಭವೆಂದು ಪರಕೀಯರೆಣಿಸಬಹುದು. ಪ್ರಬಲರು ಪರ್ಜನ್ಯವೇರಿ ಈ ತೆರದೊಳಾಚರಿಸೆ, ಕೃತೇಜಪ್ರತಿಕರ್ತವ್ಯ ವಿಂತಿರೆ ಅವನ್ನು ನಿವಾರಕವಾದ ಉಪಾಯ ಮತ್ತೊಂದೇನಿರುವದು, ಇದು ಸಗರ್ವಿತವಾದ ವಿಚಿತ್ರಕಥೆಗಳನೇಕವಿದೆ ಅವರೆ ಇಲ್ಲಿಗೆ ನಿಲ್ಲಿಸುವೆ.

ತಾ|| ೨೯-೭-೧೮೮೬ } ತಮ್ಮ ಪತ್ರಿಪದನಾದ,
ಹೊನ್ನಾಳಿ } ಮಾಧುರನು

—

ಅಯ್ಯಾ—ಹಿಂದೂ ಸ್ತ್ರೀವಿದ್ಯಾಭ್ಯಾಸಪ್ರಯೋಜನವನ್ನೂ, ಅದು ನಮ್ಮ ದೇಶದಲ್ಲಿ ವಿಶುದ್ಧ ಫಲದಾಯಕವಾಗಲಿಕ್ಕೆ ಪ್ರತಿಬಂಧಕವಾದ ಕಾರಣವನ್ನೂ, ವಿದ್ಯಾವತಿಯರು ಈಗ ನಿರಂಕುಶಪ್ರವೃತ್ತಿಯುಳ್ಳವರಾಗಿರುವದನ್ನೂ, ವಿದ್ಯೆಯು ಮಾನುಷಜನ್ಮಕ್ಕೆ ಉಪಕಾರತರವಾಗಿದ್ದರೂ, ಅದು ಅವರವರ ಪ್ರಕೃತ್ಯನುಗುಣವಾದ ಫಲವನ್ನೇ ಕೊಡುವದೆಂಬದನ್ನೂ ವಗೈರೆ, ಆಗಿಂದಾಗ್ಯೆ ತಿಳಿಸುತ್ತೀರಷ್ಟೆ. ಆದರೆ ತಮ್ಮ ಅಭಿಪ್ರಾಯವು ಕೇವಲ ಸ್ತ್ರೀವ್ಯಕ್ತಿಯನ್ನು ಕುರಿತದ್ದಾಗಿಯೂ, ಸ್ತ್ರೀಸ್ವಭಾವಾಸಹಿಷ್ಣುತಾಸೂಚಕವಾದದ್ದಾಗಿಯೂ, ಇರುವುದು ವ್ಯಕ್ತವಾಗುತಿದೆ. ಕೇವಲ ಸ್ತ್ರೀಯರಿಗೆಮಾತ್ರವೇ ವಿದ್ಯೆಯು ಅನರ್ಥಕಾರಿ ಯೆಂತಲಾಗಲಿ, ಅವರ ದುಷ್ಕೃತ್ಯಗಳೇ ಪ್ರಬಲ ಪಾತಕಾವಹವೆಂತಲಾಗಲಿ, ಅವರ ವಿಷಯದಲ್ಲಿಯೇ ಪ್ರಥಮತಃ ಪ್ರತಿಕ್ರಿಯೆ ಮಾಡಬೇಕೆಂತಲಾಗಲಿ ತಾವು ತಿಳಿಸಕೂಡದು. ಶ್ರುತಿಸ್ಮೃತಿಗಳು ಸಾಮಾನ್ಯೇನ ಸ್ತ್ರೀ ಪುರುಷರಿಬ್ಬರಿಗೂ ಉದ್ದಿಷ್ಟವಾದವೇಹೊರ್ತು ಏಕದೇಶಿಕವಾದವಲ್ಲವು. ಪುರುಷನು ಹ್ಯಾಗೆ ಸರ್ವವಿಷಯದಲ್ಲಿಯೂ ಸ್ವತಂತ್ರನಾಗಿಯೂ, ಲೌಕಿಕ ವೈದಿಕ ಕರ್ಮಾರ್ಹನಾಗಿಯೂ ಇರುತ್ತಾನೆಯೋ ತದ್ವತ್ ಅವನಿಂದ ಮಾಡಲ್ಪಡುವ ಪಾಪಕೃತ್ಯಗಳು ಸಹ ಸ್ತ್ರೀಗಿಂತಲೂ ವಿಶೇಷ ದಂಡನಾರ್ಹಗಳಾಗಿರುತಿವೆ. ಪರಂತು ಸಾಮಾನ್ಯವಾಗಿ ಈಗ ಪುರುಷರಲ್ಲಿ, ತತ್ರಾಪಿ ವಿದ್ಯಾವಂತರಾದವರಲ್ಲಿ, ನಡೆಯುವ ದುಷ್ಕಾರ್ಯಗಳನ್ನು ಲಕ್ಷಿಸಿ ನೋಡಲಾಗಿ, ಒಬ್ಬ ಸ್ತ್ರೀಯು ಒಬ್ಬ ಈಸ್ಟಿಂಡಿಯರ ಸಂಗಡ ಓಡಿಹೋದದಕ್ಕಾಗಿ ಸ್ವಲ್ಪವೂ ಆಶ್ಚರ್ಯಪಡಬೇಕಾದುದಿಲ್ಲವು. ಈಗ ಪುರುಷರಸ್ಥಿತಿಯನ್ನು ನೋಡಿದರೆ ಏಕಕಾಲದಲ್ಲಿ ಸ್ತ್ರೀಯರೆಲ್ಲರೂ ಜಾತಿಭ್ರಷ್ಟರಾಗಿ ಹೋದಾಗ್ಯೂ ಪುರುಷರು ಮೌನದೊಡನೆ ಸುಮ್ಮನಿರಬೇಕೇಹೊರ್ತು ಅದಕ್ಕಾಗಿ ಸ್ವಲ್ಪವೂ ಚಿಂತಿಸಬೇಕಾದುದಿಲ್ಲವು. ಈಗ ವ್ಯಭಿಚಾರವೆಂಬದು ಸಾಮಾನ್ಯವಾಗಿ ನಿರ್ದುಷ್ಟವಾದದ್ದಾಗಿ ಏರ್ಪಟ್ಟಿದೆ. ಜಾರಿಣೀಗಮನವು ಪಾತಕತ್ವೇನ ಪರಿಗಣಿಸಲ್ಪಟ್ಟು

ಅರ್ಧಮೇವ ಸಕಾಮಾಯಾಂ ತಪ್ತಕೃಚ್ಛ್ರಂ
ಸಕೃದ್ಗತೌ॥

ಎಂಬದಾಗಿ ಪ್ರಾಯಶ್ಚಿತ್ತಕಾಂಡದಲ್ಲಿ ವಿಧಿಸಿದ್ದಾಗ್ಯೂ ಅದು ಗಣನೆಗೆಬಾರದೆ, ಅದೇ ತಮ್ಮ ರಸಿಕತ್ವಕ್ಕೆ ಅಂಗವೆಂಬದಾಗಿ ಭಾವಿಸಲ್ಪಟ್ಟಿದೆ. ವೇಶ್ಯಾಗಮನವು ದೋಷವೆಂದೇ ವರ್ಣಿಸಲ್ಪಟ್ಟಬಗ್ಗೆ

ಪ್ರಸೂತೆಯತ್ರ ವೇಶ್ಯಾಯಾಂ ಭೈಕ್ಷಭುಕ್ಷ್ನಿ
ಯತೇಂದ್ರಿಯಃ॥ ಶತಸಾಹಸ್ರಮಭ್ಯಸ್ಯ ಸಾ
ವಿತ್ರೀಮೇವ ಶುಧ್ಯತಿ॥

ಎಂದು ಪ್ರಾಯಶ್ಚಿತ್ತವಿಧಾನವು ಪ್ರವರ್ತಿಸಿದ್ದಾಗ್ಯೂ ಅಂತಾ ವೇಶ್ಯೆಯರೇ ಕುಲಾಂಗನೆಯರೆಂಬಭಾವ ತಲೆದೋರಿರುತಿದೆ. ಅನ್ಯಜಾತಿಸ್ತ್ರೀಯರಲ್ಲಿ ಗರ್ಭಾದಾನಮಾಡಿ ಆಸಂತತಿಯು ವೃದ್ಧಿಯಾಗುವಂತೆಲ್ಲ ಅವನ ಪಿತೃಗಳು ನರಕಭಾಜನರಾಗುವರೆಂದು ತಿಳಿಸಲ್ಪಟ್ಟದೆಯಲ್ಲದೆ ಅಂತಾಗರ್ಭೋತ್ಪತ್ತಿ ಮಾಡಿದರೆ,

ಶೂದ್ರೀಗರ್ಭೋತ್ಪಾದಕುರ್ಯಾತ್ತದ್ದ್ವಿಚಾಂ
ದ್ರಾಯಣಂವ್ರತಂ॥ ಚಂಡಾಲ್ಯಾಂಗರ್ಭಮಾ
ರೋಪ್ಯಗುರುತಲ್ಪವ್ರತಂಚರೇತ್ ॥ ವಿಧವಾ
ಗಮನೇ ಕೃಚ್ಛ್ರಮಹೋರಾತ್ರಸಮನ್ವಿತಂ॥

ಎಂದು ಪ್ರಾಯಶ್ಚಿತ್ತವು ತಿಳಿಸಲ್ಪಟ್ಟದ್ದರೂ ಅದು ಕೇವಲ ಪುಸ್ತಕಾರ್ಹವೆಂದು ಪರಿಗಣಿಸಲ್ಪಟ್ಟದೆ ಮದ್ಯವೆಂಬದು,

ಪಾನಸಂದ್ರಾಕ್ಷಮಾಧೂಕಂಖಾರ್ಜೂರಂ
ತಾಳಮೈಕ್ಷವಂ ॥ ಮಧೂತ್ಥಂಸೈರಮಾರಿ
ಷ್ಟಮೈರೇಯಂನಾರಿಕೇಳಜಂ। ಸಮಾನಾನಿವಿ
ಜಾನೀಯಾನ್ಮದ್ಯಾನ್ಯೇಕಾದಶೈವತು॥

ಎಂಬದಾಗಿ ೧೧ ವಿಧವಾದದ್ದಾಗಿರುತಿದೆಯಲ್ಲದೆ ಇವುಗಳಪೈಕಿ ಯಾವದನ್ನು ಬಳಸಿದಾಗ್ಯೂ,

ತಸ್ಯಕೃಚ್ಛ್ರಾತ್ರಯಂಕುರ್ಯಾತ್॥

ಎಂಬ ವಿಧಿವಾಕ್ಯದಂತೆ ಮಾಡಿಕೊಳ್ಳಬೇಕಾದ ಪ್ರಾಯಶ್ಚಿತ್ತವು ಅನಾದರಣೀಯವಾಗಿ ಮದ್ಯಪಾನವೇ ದೊಡ್ಡಮನುಷ್ಯತನಕ್ಕೆ ಲಕ್ಷಣವೆಂದು ಎಣಿಸಲ್ಪಟ್ಟಿದೆ. ಅಜ್ಞಾನವಶಾತ್ಸಕೃತ್ ಚಂಡಾಲಾನ್ನವನ್ನು ಭುಜಿಸಿದರೆ,

ಚಂಡಾಲಾನ್ನಂಪ್ರಮಾದೇನಯದಿಭುಂಜೀತ
ಯೋನರಃ। ತತಶ್ಚಾಂದ್ರಾಯಣಂಕುರ್ಯಾ
ನ್ಮಾಸಮೇಕಂವ್ರತಂಚರೇತ್॥

ಎಂದು ಕಠಿನತರ ತಿಳಿಸಲ್ಪಟ್ಟದ್ದಾಗ್ಯೂ ಅಂತವರೇ ಸಭಾಪಂಕ್ತಿಗೆ ಅರ್ಹರೆಂಬ ಭಾವನೆಯೂ ಅವರಿಂದ ಪರಿಪಕ್ವವಾದ ಪದಾರ್ಥಗಳೇ ಶ್ಲಾಘ್ಯವಾದವೆಂಬ ನಂಬಿಕೆಯೂ ಉಂಟಾಗುತಲಿದೆ. ಚಂಡಾಲವಾಟಿಕೆಯಲ್ಲಿ ಅಜ್ಞಾನವಶಾತ್ ವಾಸವೂ ಚಂಡಾಲನೊಡನೆ ಸವ್ಯವಹಾರವೂ ಉಂಟಾದವನು ಸದಾ ಮೇಲೆ ಕಂಡ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವಂತೆ ವಿಧಾಯಕಶಾಸ್ತ್ರವು ತಿಳಿಸಿದ್ದಾಗ್ಯೂ ಚಂಡಾಲ ಗೃಹವೇ ದೇವಲೋಕವಾಗಿ ಯೆಣಿಸಲ್ಪಟ್ಟಿದೆ. ಶಾಸ್ತ್ರವು ಈ ರೀತಿ ತಿಳಿಸಿರುವ ಅಂಶವನ್ನು ಸಾಮಾನ್ಯರು ತಿಳಿಯದಿದ್ದಾಗ್ಯೂ ವಿದ್ಯಾವಂತರಾದವರು ಚನ್ನಾಗಿ ಬಲ್ಲರಾಗಿ ಅಂತವರ ಪೈಕಿ ಒಬ್ಬರು, ವೇಶ್ಯಾಸಂತತಿಯೇ ಪುನ್ನಾಮ ನರಕನಿರೋಧಕವೆಂತಲೂ, ಅಂತವರ ಪಾಲನೆಯೇ ತಮ್ಮ ಜನ್ಮ ಸಾಫಲ್ಯವನ್ನೈದಲಿಕ್ಕೆ ಕಾರಣವೆಂತಲೂ ಯೆಣಿಸಿ, ತಮ್ಮ ವೇಶ್ಯಾಪುತ್ರರಿಗೆಲ್ಲ ಬ್ರಾಹ್ಮಣ್ಯ ಕಲ್ಪನದೊಳು ಆಸಕ್ತಿಗೊಂಡು ತತ್ಪ್ರಯತ್ನ ಪರಿಪಾಕ ಕಾಲವನ್ನು ನಿರೀಕ್ಷಿಸುತಲಿದಾರೆ. ಮತ್ತೊಬ್ಬರು ತನ್ನಿಂದ ಪರಿಗ್ರಹೀತಳಾದ ವೇಶ್ಯೆಯನ್ನು ತಮ್ಮ ಮನೆಯಲ್ಲೇ ಇಟ್ಟುಕೊಂಡು ಅವಳಿಗೆ ವಿವಾಹಿತೆಯಾದ ತಮ್ಮ ಭಾರ್ಯೆಯಿಂದ ಷೋಡಶೋಪಚಾರಗಳನ್ನು ಮಾಡಿಸುತ ಆನಂದದಿಂದಿರುವಾಗ್ಯೆ ನಿರ್ಭಾಗ್ಯಳಾದ ಆ ಭಾರ್ಯೆಯು ನಿಟ್ಟುಸುರು ಬಿಡುತ ಅನವರತ ಕಂಬನಿಸುರಿಸುತಲಿರುತ್ತಾಳೆ.

ಕುಲಕಾಂತೆಕಣ್ಣಿರೊಳಕಗಸಿರಿಯಿಂಟನುಂ
ದನೊಲ್ಲಮುಸುಮತೀ ॥

ಎಂದು ಅಂತವರ ಸಕಲ ಐಶ್ವರ್ಯವೂ ಆರೋಗ್ಯವೂ ಆಕೆಯ ಸಂತಾಪಾಗ್ನಿಯಿಂದ ದಗ್ಧವಾಗಿ ನಿರ್ನಾಮರಾಗಿ ಹೋಗುವದು ನಾವೇ ನೋಡುವೆವು. ಇನ್ನೊಬ್ಬರು ಹೊರಗೆ ಪರಮ ವೈದಿಕರಂತೆ ನಟಿಸುತ ವೇದಾಂತಿಗಳೆನ್ನಿಸಿಕೊಂಡಿದ್ದರೂ, ಅವರಿಗೆ ಅಪೇಯವಾದ ಮದ್ಯವೇ ಪಾನೀಯವು. ಅಭಕ್ಷ್ಯವಾದ ಮಾಂಸಾದಿಗಳೇ ಭೋಜ್ಯ ಪದಾರ್ಥಗಳು. ಅಗಮ್ಯರಾದ ಹೀನ ಕಾಂತಾಮಣಿಗಳೇ ಸುಲಭ ಗಮ್ಯರು. ಸವ್ಯವಹಾರಾನರ್ಹರಾದ ಅಂತ್ಯಜರೇ ಪಾತ್ರೀಯರು. ಬೇರೊಬ್ಬರು ಸ್ವೇಚ್ಛಾನುಸಾರ ವರ್ತಿಸಲಿಕ್ಕೆ ನಿರೋಧಕವಾಗಿರುವ ಈ ಬ್ರಾಹ್ಮಣ ಜನ್ಮದಲ್ಲಿ ಹುಟ್ಟುವಂತೆ ಮಾಡಿದ ತಮ್ಮ ದುರ್ವಿಧಿಯನ್ನು ಹಲವು ವಿಧದಿಂ ನಿಂದಿಸುತ ಮುಂದಿನ ಜನ್ಮದಲ್ಲಾದರೂ ಯೂರೋಪಿಯರ್ ಗರ್ಭದಲ್ಲಿ ಹುಟ್ಟಬೇಕೆಂಬ ಸಂಕಲ್ಪದೊಡನೆ ಆ ಬಗ್ಗೆ ಆವಶ್ಯಕಗಳಾದ ಕಾರ್ಯಗಳನ್ನು ಈಗಲಿಂದಲೇ ಮಾಡುತಲಿದಾರೆ. ಅನ್ಯರೊಬ್ಬರು ಪ್ರಾಣವಿತ್ತಾಪಹಾರಿಯಾದ ತಮ್ಮ ವಾರಾಂಗನೆಯೇ ಪರದೇವತೆಯೆಂದೆಣಿಸಿ ಕಡೆಗೆ ಆಕೆಗೇ ತಮ್ಮ ಪ್ರಾಣವನ್ನರ್ಪಿಸಿದರು. ಇತರರೊಬ್ಬರು ಅನೃತವೇ ರಾಜ್ಯತಂತ್ರಜ್ಞತೆಯೆಂದು ತಿಳಿದು ಒಂದು ದಿನಕ್ಕೆ ಸಾಧ್ಯವಾದಷ್ಟು ಮಟ್ಟಿಗೆ ನಿರ್ವಂಚನೆಯಾಗಿ ಪಾಪಶಂಕೆಯಿಲ್ಲದೆ ಸುಳ್ಳಾಡುತಲಿರುತ್ತಾರೆ. ಈಗ ಪುರುಷರಸಮೂಹವು ಹೀಗೆ ಐದಾರು ಪ್ರಭೇದಗಳಾಗಿರುವದರಿಂದ ಅಂತಾ ಪ್ರತಿಯೊಂದು ಪ್ರಭೇದದವರಿಗೂ ಈಗ ಪ್ರಸಿದ್ಧರಾಗಿರುವ ಒಬ್ಬೊಬ್ಬರನ್ನು ನಿದರ್ಶನತ್ವೇನ ತಿಳಿಸಿರುತ್ತೇನೆ. ಇವುಗಳ್ಯಾವದೂ ನಮ್ಮವರಿಗೆ ದೋಷತ್ವೇನ ತೋರದೆ ಅಭಿಮತಗಳಾಗಿವೆ. ಅಂತವರೇ ನಮ್ಮವರಿಗೆ ಪಂಕ್ತಿಪಾವನರಾಗಿರುತ್ತಾರೆ ಅವರೇ ನಮಗೆ ಪಾರಲೌಕಿಕ ಸುಖಪ್ರದಾತರಾಗಿದಾರೆ ಅಂತವರನ್ನೇ ನಮ್ಮ ಮಠಾಧಿಪತಿಗಳು ಸಹ ಬಹಳವಾಗಿ ಗೌರವಿಸುತಲಿದಾರೆ. ಯಾವ ಸಭೆಗೆ ಹೋದಾಗ್ಯೂ ಅವರಿಗೇ ಅಗ್ರತಾಂಬೂಲಾದಿ ಮರ್ಯಾದೆಗಳೆಲ್ಲ ನಡೆಯುತಿವೆ. ಇದು ಯಾರ ದೋಷವೆಂದು ಹೇಳಬಹುದು? ಶಾಸ್ತ್ರಪಂಕ್ತಿಯನ್ನು ಬುಡಿತವಾಗಿ ವ್ಯವಹಾರದೊಳು ತರಲಾರದಿರುವ ಪುರುಷರ ದೋಷವೇ ಸ್ಮೃತಿಕರ್ತರ ದೋಷವೇ? ತನ್ನ ಮನೆಯು ಸೋರುತಲಿರುವಾಗ್ಯೆ ನೆರಮನೆಗೆ ಮಣ್ಣು ಹಾಕುವದಕ್ಕೆ ಹೋಗುವ ಜಡಮತಿಯಂತೆ, ತಮ್ಮ ವರ್ತನೆಯನ್ನು ಕ್ರಮಪಡಿಸಿಕೊಳ್ಳಲಾರದೆ ನಮ್ಮನ್ನು ಕ್ರಮಕ್ಕೆ ತರಬೇಕೆಂದೆತ್ನಿಸಿದರೆ ಅದು ಹ್ಯಾಗೆ ಸಾಧ್ಯವಾಗುವದು? ವಿದ್ಯಾವಂತರಾದ ಪುರುಷರು ಇಂತಾ ಅಕ್ರಮಗಳನ್ನು ಮಾಡಲೆತ್ನಿಸುವದು, "ನಮ್ಮಂತೆ ನೀವೂ ನಡೆಯಿರಿ ಯೆಂದು" ನಮಗೆ ಅವರೇ ಕಲಿಸಿಕೊಟ್ಟಂತೆಯಾಗುತಿದೆ. ಹೀಗಿರುವದರಿಂದ ಸ್ತ್ರೀಯರ ಹ್ರಾಸವೃದ್ಧಿಗಳು ಪುರುಷರ ಅಧೀನಗಳೆಂದು ಹೇಳಬಹುದಾಗಿದೆ. ವಿದ್ಯೆಯು ಅಭ್ಯಾಸಾನುಗುಣವಾಗಿಯೂ, ಸಹವಾಸಾನುಗುಣವಾಗಿಯೂ, ಪ್ರಕೃತ್ಯನುಗುಣವಾಗಿಯೂ ಇರುವ ಫಲವನ್ನು ಕೊಡುತದೆಂಬದಕ್ಕೆ ಅನೇಕ ದೃಷ್ಟಾಂತಗಳಿರುತಿವೆ. ಅಂತಾ ವಿದ್ಯೆಯು ಪುರುಷರನ್ನೇ ಸನ್ಮಾರ್ಗಪ್ರವರ್ತಕರನ್ನಾಗಿ ಮಾಡಲಾರದೆ, ಅವರ ಮನಸ್ಸನ್ನು ದುರ್ವಿಷಯಗಳಲ್ಲಿ ಪ್ರವರ್ತಿಸುವಂತೆ ಮಾಡುತಲಿರಲಾಗಿ, ಸ್ವಭಾವತಃ ಚಪಲೆಯರಾಗಿಯೂ, ಧನರೂಪಗಳಿಗೆ ವಶ್ಯರಾಗಿಯೂ ಇರುವ ನಮ್ಮಂತಾ ಅಬಲೆಯರಿಗೆ ವಿದ್ಯೆಯು ಕದಾಚಿತ್ ಅನರ್ಥಕಾರಿಯಾದಾಗ್ಯೂ ಆಗಬಹುದು. ಮುಖ್ಯವಾಗಿ ಸ್ತ್ರೀಯು ಅಸ್ವತಂತ್ರೆಯಿಪ್ಪದರಿಂದ ಅವಳಿಗೆ ಸುಖ ಸಂತೋಷಗಳನ್ನುಂಟುಮಾಡುವದಾಗಲಿ, ಅವಳ ಮೂಲಕ ಅವುಗಳನ್ನು ತಾನು ಅನುಭವಿಸುವದಾಗಲಿ ಪುರುಷಾಧೀನವಾಗಿರುತಿದೆ. ಬಿತ್ತತಕ್ಕ ಬೀಜಾನುಗುಣವಾದ ಫಲವೇ ಕಡೆಗೆ ನಮಗೆ ಲಭಿಸುವದು. ಅಕಾಲದಲ್ಲಿ ಮತ್ತು ತಕ್ಕವ್ಯವಸಾಯ ಮಾಡದೆ ಅಜ್ಞಾನದಿಂದ ಊಷರಕ್ಷೇತ್ರದಲ್ಲಿ ನಿಸ್ಸಾರವಾದ ಬೀಜವನ್ನು ಹಾಕಿದರೆ ಜಳ್ಳೇ ಕೈಗೆ ಬರುವದು ವಾಡಿಕೆಯಾದದರಿಂದ ಆದಿ ಮೊದಲು ಸ್ತ್ರೀಯರನ್ನು ಯಾವರೀತಿಯೊಳಿಟ್ಟುಕೊಂಡು ಅವರಿಗೆ ಯದ್ವಿಧವಾದ ಜ್ಞಾನವಂ ಯದ್ರೂಪವಾಗಿ ಪುರುಷರು ಕಲಿಸಿದರೆ ತದನುಗುಣವಾಗಿಯೇ ಅವರು ವರ್ತಿಸುತಲಿರುವರು.

ಆದದರಿಂದ ಈಗಿನ ಸ್ತ್ರೀ ವಿದ್ಯಾಭ್ಯಾಸಕ್ರಮವು ಬಹಳ ದೂಷ್ಯವಾಗಿ ಇದರಿಂದ ಅನರ್ಥ ವುಂಟಾಗಬಹುದೇ ಹೊರ್ತು ಸ್ತ್ರೀಯರಿಗೆ ವಿದ್ಯೆಯೇ ಅನರ್ಥವೆಂಬದು ಉಚಿತವಲ್ಲವು.

ವರ್ತಮಾನ ಕಾಲದವರನೇಕರು ಸ್ತ್ರೀಪ್ರಭವಾಭಿಲಾಷಿಗಳಾಗಿ ನಮಗೆ ಪುನರ್ವಿವಾಹ ಮಾಡಿಸುವದರ ಮೂಲಕ ನಮ್ಮ ವೈಧವ್ಯಪ್ರಯುಕ್ತವಾದ ದುಃಖವನ್ನು ನಿವಾರಿಸಬೇಕೆಂತಲೂ, ನಮಗೆ ಬಾಲ್ಯವಿವಾಹವನ್ನು ತಪ್ಪಿಸುವದರಮೂಲಕ ಇಷ್ಟನಾದ ಪತಿಯನ್ನು ವರಿಸುವಂತಾ ಸ್ವಾತಂತ್ರ್ಯವನ್ನು ಕಲ್ಪಿಸಬೇಕೆಂತಲೂ ಅಭಿಪ್ರಾಯಪಟ್ಟು ತತ್ಪ್ರಯತ್ನದೊಳಿರುತಲಿರುವಾಗ್ಯೆ ನಮಗೆ ವಿದ್ಯಾಭ್ಯಾಸ ಮಾಡಿಸತಕ್ಕ ಒಂದು ವಿಷಯದಲ್ಲಿ ಮಾತ್ರ ಪುರುಷರು ವಿರೋಧಿಸಿ, ಸ್ತ್ರೀಯರಿಗೆ ವಿದ್ಯಾಭ್ಯಾಸಮಾಡಿಸುವದರಿಂದ ಅವರು ಸ್ವೈರಿಣಿಯರಾಗುತ್ತಾರೆಂದು ಹೇಳಲಿಕ್ಕೆ ಏನು ಕಾರಣವೋ ನಾನರಿಯೆನು. ವಿದ್ಯೆಗೆ ಅಂತಾ ಶಕ್ತಿ ಇರುವಂತೆ ತೋರಲಿಲ್ಲವು. ಸ್ತ್ರೀಯರಿಗೆ ವಿದ್ಯೆಯಿಂದಲೇ ದುರ್ಗುಣಗಳು ವುಂಟಾಗುವಪಕ್ಷಕ್ಕೆ ವಿದ್ಯಾವಂತರಾದಮೇಲೆ ತಿಳಿಸಿದ ಪುರುಷರು ದುರ್ವಿಷಯಪ್ರವೃತ್ತಿಯುಳ್ಳವರಾಗಲಿಕ್ಕೇನು ಕಾರಣವೋ ಅದಂ ತಿಳಿಸಬೇಕೆಂದು ಕೋರುವ,

೭—೮—೮೬ } ತಮ್ಮ ವಿಧೇಯಳಾದ,
ಮೈಸೂರು. } ಗೀರ್ವಾಣಿ.

THE MYSORE GAZETTE
ಮೈಸೂರು ಗಜೆಟ.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

—

ನಂ. ೧೪೭೩, ೩ನೇ ಆಗಸ್ಟು—ಗೋರೀಬಿದನೂರು ತಾಲ್ಲೂಕು ಅಮಲ್ದಾರ್ ರಾಮಯ್ಯಂಗಾರ್ರವರು, ಸನ್ ೧೮೮೬ನೇ ಇಸವಿ ಮಾರ್ಚಿ ೩೧ನೇ ಮರ್ಖಂ ೨೭೧ನೇ ನಂಬರ್ ಇಸ್ತಿಹಾರ್‌ಮೂಲಕ ಕೊಡಲ್ಪಟ್ಟ ೬ ದಿನಗಳ ಕ್ಯಾಜುಯಲ್ ರಜಾವನ್ನು ಕಳೆದ ತಿಂಗಳ ೨೯ನೇ ತಾರೀಖ್ ಮೊದಲು ಉಪಯೋಗಿಸಿಕೊಂಡಿರುತ್ತಾರಾಗಿ ಸದರೀ ೬ ದಿನಗಳಿಗೆ ಸೇರಿದಂತೆ ೮ ದಿನಗಳು ಕ್ಯಾಜ್ಯುಯಲ್ ರಜಾ ಕೊಡಲ್ಪಟ್ಟಿರುತ್ತಾರೆ

—

ನಂ. ೧೪೭೪—ತುಮಕೂರು ಮುನಸಫ್ ಮ್ಯಾಜಿಸ್ಟ್ರೇಟ್ ವರದರಾಜಯ್ಯಂಗಾರ್ರವರು, ೧೮೮೬ನೇ ಇಸವಿ ೧ನೇ ನಂಬರ್ ಆಕ್ಟು ೩೦ನೇ ಸೆಕ್ಷನ್ ಅನುಸರಿಸಿ ಕೊರಡೇಪಟ್ಟು ಹೊಡಿಸುವ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

—

ನಂ. ೧೪೭೫—ತುಮಕೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮಿಷನರ್ ಮತ್ತು ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಮ. ಅಣ್ಣಾಜಿ ರಾಯರವರು, ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡ್ ೩೫೭ನೇ ಸೆಕ್ಷನ್ ಅನುಸರಿಸಿ, ಸಾಕ್ಷಿಗಳ ಸಾಕ್ಷ್ಯವನ್ನು ಸ್ವದಸ್ತೂರ್ ಇಂಗ್ಲಿಷ್‌ಭಾಷೆಯಲ್ಲಿ ತೆಗದುಕೊಳ್ಳುವದಕ್ಕೆ ಇದರಿಂದ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

—

ನಂ. ೧೪೭೬, ೫ನೇ ಆಗಸ್ಟು—ತುಮಕೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮಿಷನರ್ ಮ. ಬ. ಜಿ. ಕೃಷ್ಣಯ್ಯಂಗಾರ್ರವರಿಗೆ, ಸನ್ ೧೮೮೬ನೇ ಇಸವಿ ಮೇ ೧೮ನೇ ಮರ್ಖಂ ೬೪ನೇ ನಂಬರ್ ಇಸ್ತಿಹಾರ್‌ಮೂಲಕ ಕೊಡಲ್ಪಟ್ಟ ಪ್ರಿವಿಲೇಜ್‌ರಜಾ ಒಂದುತಿಂಗಳು ಜಾಸ್ತೀ ಮಾಡಲ್ಪಟ್ಟಿರುತಿದೆ

—

ನಂ. ೧೪೭೭—ಮೈಸೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮಿಷನರ್ ಮ. ದಳವಾಯಿ ದೇವರಾಜ ಅರಸಿನವರು, ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರವೂ ಇದರ ಬರ್ವ ಜಾಸ್ತೀ ಅಧಿಕಾರವೂ ಕೊಡಲ್ಪಟ್ಟಿರುತ್ತಾರೆ.

1. ಕ್ರಿಮಿನಲ್ ಪ್ರೊಸೀಜ್ಯೂರ್ ಕೋಡ್ ೩೧ನೇ ಸೆಕ್ಷನ್ ಅನುಸರಿಸಿ, ಕೊರಡೇಪಟ್ಟು ಹೊಡಿಸುವ ಅಧಿಕಾರ.
2. ಕ್ರಿಮಿನಲ್ ಪ್ರೊಸೀಜ್ಯೂರ್ ೨೦೬ನೇ ಸೆಕ್ಷನ್‌ಮೇರೆ, ದವ್ರಾಸ್ತೀಬಗ್ಗೆ ಕಮ್ಮಿಟ್‌ಮಾಡುವ ಅಧಿಕಾರ.
3. ಸಾಕ್ಷಿಗಳ ಸಾಕ್ಷ್ಯವನ್ನು ಸ್ವದಸ್ತೂರು ಇಂಗ್ಲಿಷ್ ಭಾಷೆಯಲ್ಲಿ ತೆಗದುಕೊಳ್ಳುವ ಅಧಿಕಾರ.

—

ನಂ. ೧೪೭೯, ೬ನೇ ಆಗಸ್ಟು—ಮ. ಮಹಮ್ಮದಲ್ಲಿ ಖಾನ್ ಬಹದೂರವರು, ೧೮೮೬ನೇ ಇಸವಿ ಆಗಸ್ಟು ೨ನೇ ತಾರೀಖ್ ಪೂರ್ವಾಹ್ನದಲ್ಲಿ, ಮ. ಪಿ ರಘುನಾಥರಾಯರವರಿಂದ ಚಿತ್ರದುರ್ಗ ಡಿಸ್ಟ್ರಿಕ್ಟಿನ ಚಾರ್ಜನ್ನು [illegible] ವಹಿಸಿದರು.

SUMMARY OF NEWS.

ವೃತ್ತಾಂತ ಸಂಗ್ರಹವು.

ಮೆಟ್ರಿಕ್ಯುಲೇಶನ್ ಪರೀಕ್ಷೆಯ ವಿಷಯಗಳಿಗೆ ಸ್ವಲ್ಪವಾದರೂ ಗಾಯನ ಕಲೆಯನ್ನೂ, ಬಾರಿಸುವದನ್ನೂ ಸೇರಿಸ ಬೇಕೆಂದು ಆಸ್ಟ್ರೇಲಿಯಾ ದೇಶದೊಳಗಿನ ಒಂದು ಗಾಯನ ಸಮಾಜದವರು ಅಲ್ಲಿಯ ಯೂನಿವರ್ಸಿಟಿಗೆ ಅರ್ಜಿ ಕೊಟ್ಟಿರುತ್ತಾರಂತೆ.

ಪುಣೆಯ ಮಿಸೆಸ್ ಸೋರಾಬಜಿ ಎಂಬವಳು ಇಲ್ಲಿಯ ಸ್ತ್ರೀಯರಶಿಕ್ಷಣಕ್ಕಾಗಿ ದ್ರವ್ಯಸಹಾಯವು ಶಿಕ್ಕಬೇಕೆಂಬ ಉದ್ದೇಶದಿಂದ ವಿಲಾಯತಿಗೆ ಹೋಗಿರುತ್ತಾಳೆ. ಅಲ್ಲಿಯಸ್ತ್ರೀಯರು ಅವಳಿಗೆ ಬಹುಮಾನ ಕೊಟ್ಟು ದ್ರವ್ಯ ಸಹಾಯವನ್ನೂ ಸಹ ಮಾಡುತ್ತಾರೆಂದು ಕೇಳುತ್ತೇವೆ.

ಬ್ರಹ್ಮ ದೇಶದ ಯುದ್ಧಕ್ಕೆ ಮುಖ್ಯ ಕಾರಣವು ಮುಂಬೈ ಬರಮಾ ಟ್ರೇಡಿಂಗ್ ಕಂಪೆನಿ ಬ್ರಹ್ಮದೇಶದ ವ್ಯಾಪಾರ ಮಂಡಳಿಯೇ) ಈ ಕಂಪೆನಿಯ ೫೦—೬೦ಜನರು ಅಲ್ಲಿ ಇರುತ್ತಾರೆ. ಅವರೊಳಗೆ ಬ್ರೂಸ್‌ಎಂಬವನೊಬ್ಬ ಸದ್ಗೃಹಸ್ಥನಿದ್ದನು; ಅಲ್ಲಿಯ ದಂಗೆಗಾರರು ಅವನನ್ನುಕೊಂದು ಅವನ ಶಿರವನ್ನು ಉದ್ದವಾದ ಒಂದು ಕಟ್ಟಿಗೆಗೆ ಕಟ್ಟಿ ಅದನ್ನು ಒಂದು ಹಳ್ಳಿಯಲ್ಲಿ ತೂಗಹಾಕಿದ್ದರಂತೆ!

ಕಡೆಗಾಂವ್‌ಎಂಬಲ್ಲಿ ಒಬ್ಬ ಎಂಟುವರುಷ ಪ್ರಾಯದ ಹುಡಿಗಿಯು ಗರ್ಭಿಣಿ ಇರುತ್ತಾಳೆಂತಲೂ ಎಂಟ ಈಗ ಅವಳಿಗೆ ಏಳು ತಿಂಗಳು ಮುಗಿದು ಎಂಟನೇ ತಿಂಗಳು ಪ್ರಾರಂಭವಾಗಿರುವದೆಂತಲೂ ಕೇಳುತ್ತೇವೆ!! ಈ ಸಂಗತಿಯು ನಿಜವಿದ್ದ ಪಕ್ಷಕ್ಕೆ ಬಹು ಚೋದ್ಯವೇ ಸರಿ.

ಕೋಚೀನ್ ಎಂಬಲ್ಲಿ ಕಾಶಿಯಿಂದ ಒಬ್ಬ ಬ್ರಾಹ್ಮಣನು ಬಂದಿರುತ್ತಾನೆಂತಲೂ, ಅವನು ಒಂದು ಊಟಕ್ಕೆ ೧೨ ಫೌಂಡು ತೂಕ ಅನ್ನವನ್ನು ಉಣ್ಣುತ್ತಾನೆಂತಲೂ, ಇಷ್ಟು ಅನ್ನ ಉಂಡಾದಮೇಲೆ ಸಹ ಬಹಳ ಫಲಗಳನ್ನೂ ತಿನ್ನುತ್ತಾನೆಂತಲೂ ಅಲ್ಲಿಯ ಒಬ್ಬ ಬಾತಮೀದಾರನು ಗುಜರಾತ್ ಮಿತ್ರ ಎಂಬಪತ್ರಿಕೆಗೆ ಬರೆಯುತ್ತಾನೆ! ಅಬ್ಬಾ ಹಾಗಾದರೆ ಇವನು ನರರೂಪಿ ಪ್ರತಿಭೀಮನೋ ಅಥವಾ ಭಸ್ಮಕರೋಗಿಯೋ?

ಇದೇ ತಿಂಗಳ ತಾರೀಖ್ ೧೫ನೇ ಗುರುವಾರದ ದಿನ ಸೋಲಾಪುರದಿಂದ ೫—೬ ಹರದಾರಿ ದೂರದಲ್ಲಿರುವ ಒಂದು ಊರಲ್ಲಿ ಒಂದು ತಮಾಷೆಯಾಯಿತು! ಒಬ್ಬ ಡಾಕ್ಟರನು ಆ ಊರಿನ ಒಬ್ಬ ಸಭ್ಯಗೃಹಸ್ಥನ ಸ್ತ್ರೀಯರೂಪಲಾವಣ್ಯಕ್ಕೆ ಮೋಹಿಸಿ ಕಾಮಾತುರನಾಗಿ ಅವಳನ್ನು ಕೇಳಲು ಅವಳು ಈ ಸಂಗತಿಯನ್ನು ತನ್ನ ಗಂಡನಿಗರುಹಿದಳು. ತಾನು ಈ ದಿನ ಪರ ಊರಿಗೆ ಹೋಗುವೆನಾದ್ದರಿಂದ ಆ ನರಾಧಮನನ್ನು ಈ ದಿನ ರಾತ್ರಿ ಬರ ಹೇಳ ಬೇಕೆಂತಲೂ ಅವನು ಬಂದನಂತರ ನಗ್ನನಾಗಿ ವಿಲಾಸ ಮಾಡುವ ಸಂಕೇತ ಮಾಡಬೇಕೆಂತಲೂ, ಅವನು ನಗ್ನನಾದ ಕೂಡಲೆ ಘಟ್ಟಿಯಾಗಿ ಕೂಗ ಬೇಕೆಂತಲೂ ತನ್ನ ಹೆಂಡತಿಗೆ ಹೇಳಿ ಕೊಟ್ಟು ಅವನು ಪರ ಊರಿಗೆ ಹೋಗುವ ನೆವದಿಂದ ಹೊಗೇಬಂಡಿಯ ಸ್ಟೇಷನಿಗೆ ಹೋದವನು ಯಾರಿಗೂ ತಿಳಿಯದಂತೆ ಮನೆಗೆ ಬಂದು ಕೆಲವು ಸ್ನೇಹಿತರೊಂದಿಗೆ ಅಡಗಿಕೊಂಡು ಕೂತನು. ಪೂರ್ವ ಸಂಕೇತದಂತೆ ಆ ಕೀಚಕೋಪಮ ಕಾಮಾತುರ ಡಾಕ್ಟರ್ ಅವಳ ಮನೆಗೆಬಂದು ದಿಗಂಬರನಾದನು! ಅವನ ವಸ್ತ್ರಗಳು ಅವನಿಗೆಶಿಕ್ಕಬಾರದೆಂದು ಕಾಲಿನಿಂದ ದೂರ ಬಿಸಾಡಿಬಿಟ್ಟು ಆದ್ರೌಪದೀತುಲ್ಯಸ್ತ್ರೀಯು ಘಟ್ಟಿಯಾಗಿ ಒದರಿದಳು. ಅಷ್ಟರೊಳಗೆ ಅಡಗಿಕೊಂಡಿದ್ದ ಜನರು ಅಲ್ಲಿಗೆಬಡಿದರು. ಮತ್ತು ಅಭಿಮಾನರೂಪ ಪತಿಯು ಆ ಡಾಕ್ಟರ್ ನ್ನ ನುಗ್ಗುಮಾಡಿ ದಿಗಂಬರನ ಸ್ವರೂಪದಲ್ಲಿರುವಾಗಲೆ ಅವನನ್ನು ಬೀದಿಯ ಮೇಲೆ ಎಳತಂದು ಪೋಲೀಸಿನವರ ಸ್ವಾಧೀನ ಮಾಡಿದನು! ಅಲ್ಲಿ ಅವನು ಬಹಳಹೊತ್ತು ಇದ್ದನು. ಮಾರ್ಗದಮೇಲೆ ತಿರುಗಾಡುವ ಜನರು ಆಡಾಕ್ಟರ್ ಬಾಯೊಳಗೆ ಮಣ್ಣು ಹಾಕಿದರು! ಈಲಜ್ಜೆಯಿಂದ ಸತ್ತಂತಾದ ಡಾಕ್ಟರ್ ಆ ಸ್ತ್ರೀಯಹಾಗೂ ಅವಳ ಪತಿಯ ಮುಂದೆ ತನ್ನಮೂಗು ನೆಲಕ್ಕೆತಿಕ್ಕಿ ಅವರ ಹತ್ತರ ಕ್ಷಮೆ ಬೇಡಿಕೊಂಡದ್ದರಿಂದ ಅವನನ್ನು ಬಿಟ್ಟುಬಿಟ್ಟರಂತೆ. ಸಾರಾಂಶ

ತಸ್ಮೈ ನಮೋ ಭಗವತೇ ಕುಸುಮಾಯುಧಾಯ

ಅಯ್ಯಾ,—ನಮ್ಮ ಮೈಸೂರು ಸೀಮೆಯಲ್ಲಿ ಅನೇಕ ದೊಡ್ಡದೊಡ್ಡ ಪೂರುಗಳಲ್ಲಿ ಮುಂಜಿ, ಮದುವೆ, ಪಿಷೇಕಪ್ರಸ್ಥ, ನಾಮಕರಣ, ಅಂತ್ಯೇಕರ್ಮ ಇತ್ಯಾದಿಗಳೆಲ್ಲಕ್ಕೂ, ಧನಸಹಾಯವನ್ನು ದಯಪಾಲಿಸುವ ಕಂಪೆನಿ,ಸುಫು,ಬ್ಯಾಂಕುಮುಂತಾದವುಗಳನೇಕ ಉಂಟಾಗಿರುವದರಿಂದ ಈಕಾರ್ಯ ಬಹಳ ಸುಲಭ್ಯವೇಸರಿ. ಮತ್ತು ಜನರಿಂದಲೇ ಹಣ ಜಮಾಯಿಸಿ ಜನರಿಗೆ ಸಹಾಯಮಾಡುವದೂ ಕಂಪೆನಿಯವರು ಸಹ ಲಾಭಹೊಂದುವದೂ ಆಶ್ಚರ್ಯವಾದ ಒಳ್ಳೇ ಕೆಲಸವು ಹೌದು. ಆದರೆ ನಮ್ಮ ಜನಗಳು ಎಷ್ಟು ಓದಿದವರಾದಾಗ್ಯೂ, ಪ್ಯಾಸ್ ಮಾಡಿದವರಾದಾಗ್ಯೂ, ಮಹಾವೈದಿಕ ಶ್ರೇಷ್ಠರಾದಾಗ್ಯೂ, ಸತ್ಯಕ್ಕೂ ನ್ಯಾಯಪ್ರಮಾಣಕ್ಕೂ ಅವಿಧೇಯರಾಗುವವರೂ ಆದರು. ಮತ್ತು ರಾತ್ರಿವೇಳೆ ಹೆತ್ತತಾಯಿಯ ತದಕುತ್ತ ಹೋಗುವವನನ್ನೂ ಬೆಳಗ್ಗೆ ಅಮ್ಮಾ, ತಿನ್ನುವದಕ್ಕೆ ಕೊಡೇಕೋ ಯೆಂತ ಅನ್ನುವ ನಾಚಿಕೆಯಿಲ್ಲದ ಪರಮಮೋಸಗಾರರು ಅನೇಕರುಂಟು. ಹೀಗಿರುವಲ್ಲಿ ಯಾವ ಕಂಪನಿ ನಂಬಿಕೆಯೋ, ಯಾವ ಮ್ಯಾನೇಜರರು ಪ್ರಮಾಣಜ್ಞರೋ, ಪರಸ್ಥಳ ದೂರದೇಶದವರಿಗೆ ಹ್ಯಾಗೆ ತಿಳಿದೀತು? ದಿವಾಳೀಆದಮನುಷ್ಯರುಗಳೂ ಯಾವಸ್ಥೀದವರುಗಳೂ, ಯಾವಬಗೆ ಭೂಸ್ಥಿತಿಯೂ ಇಲ್ಲದವರೂ ಸಹ ಕಂಪನಿಗೆ ಸೆಕ್ರೆಟರಿಗಳು ಮ್ಯಾನೇಜರರು ಏಜಂಟುಗಳು ಆಗಿದ್ದಾರೆ. ಜನಗಳನ್ನು ಮೋಸಗೊಳಿಸಿ ಹತ್ತುಹದಿನೈದುಸಾವಿರ ರೂಪಾಯಿಗಳು ಜಮಾಯಿಸುತ್ತಲೇ ಎಲ್ಲಾ ಹಣವನ್ನು ಬಚ್ಚಿಟ್ಟು ಏನಾದರೂ ಒಂದು ಅಪವಾದವೊರಿಸಿ ದಿವಾಳೀ ಆಯಿತು ಅನ್ನಿಸಿ ಎಲ್ಲಾ ಜನರಿಗೂ ದೊಡ್ಡನಾಮ ಬಳಿಯುವರು ಎಂತ ಅನೇಕರನ್ನುತ್ತಾರೆ. ಹಳ್ಳಿಯಜನರು ಯಾವದುನಿಜ, ಯಾವದುಸುಳ್ಳು ಎಂಬದೇ ತಿಳಿಯದೆ ವಮ್ಮಾಡಿ ಸಾಯುತ್ತಾರೆ ಮುಖ್ಯವಾಗಿ ದೇಶಾಭಿವೃದ್ಧಿ ದ್ರವ್ಯಾಭಿವೃದ್ಧಿ ಕ್ಷೇಮಾಭಿವೃದ್ಧಿ ಇತ್ಯಾದಿ ಲೋಕೋಪಕಾರ ಕಾರ್ಯಗಳನ್ನು ನಡಿಸುವ ಜನರಿಗೆ ದೇವರಭಯವೂ, ಪಾಪದಭಯವೂ, ನರಕದಭಯವೂ ಸಂಪೂರ್ಣವಾಗಿರಬೇಕು. ಸತ್ಯ, ನೀತಿ, ಶಾಂತಿ, ಪದವಾಕ್ಯಪ್ರಮಾಣಜ್ಞತೆ ಇತ್ಯಾದಿ ಸದ್ಗುಣಗಳಿರಬೇಕು. ಈ ಗುಣಗಳಿಲ್ಲದೆ ೧೦ ಲಿಪಿ ಬರೆಯುವದು, ೪ ಭಾಷೆ ಓದುವದು, ವೈದಿಕ ಲೌಕಿಕ ಎಲ್ಲಾಬಗೆ ಮತ ರಹಸ್ಯಗಳು ಅರಿತಿರುವದು, ೧೦ವರುಷ ಕಣ್ಣುಕಟ್ಟಿ ಓದಿರುವದು, ಇತ್ಯಾದಿ ಮಹಾ ಸಾಮರ್ಥ್ಯಗಳು ಇದ್ದಾಗ್ಯೂ ಕಡೆಗೆ ಅಪವಾದವನ್ನೇ ಹೊಂದಬೇಕಾಗುತ್ತದೆ, ಇದು ನಿಜ, ಆದರೆ ನಮ್ಮ ಸರಕಾರದವರು ಪ್ರಜೆಗಳ ಕ್ಷೇಮಾಭಿವೃದ್ಧಿಗಾಗಿ ಸದರೀ ಎಲ್ಲಾ ವಿಧದ ಕಂಪೆನಿಗಳಮೇಲೂ ವರುಷಕ್ಕೆ ಎರಡಾವಿಚಾರಣೆ ತೆಗೆದುಕೊಳ್ಳುತ್ತಾ ಮೋಸವೂ, ಅನ್ಯಾಯವೂ ನಡಿಯದಂತೆ ಅರ್ಧ ಜವಾಬದಾರೀ ಉಳ್ಳವರಾಗಿರಬೇಕು. ಈರೀತಿ ಸರಕಾರದವರ ನಂಬಿಕೆಯೂ, ಧೈರ್ಯವೂ ಪ್ರಜೆಗಳಿಗೆ ಸರ್ವದಾ ಲಭಿಸತಕ್ಕದ್ದಾಗಿರುತ್ತೆಂದುಬೇಡುತ್ತೇನೆ. ಇತ್ಯಾದಿ ವಿವರಗಳು ಶ್ರುತಪಡಿಸಬೇಕು.

ಅಯ್ಯಾ ಈಕೆಳಗಿನ ಮಜಕೂರು ತಮಗೂ ಜನರಿಗೂ ಸಹ ಅಸಹ್ಯವಿದ್ದೀತು; ಆದಾಗ್ಯೂ ಪರೋಪಕಾರಃಪುಣ್ಯಾಯ || ಎಂತ ನೀತಿ ಉಂಟು ಆದ್ದರಿಂದ ಚಿತ್ತಕ್ಕೆ ತಂದು ಸ್ವಲ್ಪ ಆಲೈಸಿರಿ ಸ್ವಾಮಿ. ಈ ಜೂನ್ ೬ ತಿಂಗಳಲ್ಲಿ ಮೂರು ಜನ ಯೌವನ ವಿಧವಾ ಸ್ತ್ರೀಯರು ಬಲಾತ್ಕಾರದಿಂದ ಪ್ರಾಣ ತ್ಯಾಗ ಮಾಡಿಕೊಂಡರು! ಇದಕ್ಕಿಂತಲೂ ಅನ್ಯಾಯ ಉಂಟೋ ಶಿವಶಿವ!!

೧. ಒಬ್ಬ ಬ್ರಾಹ್ಮಣ ವಿಧವಾಸ್ತ್ರೀ ಪತಿಯೋಗವಾಗಿ ೧೨—೧೫ ವರುಷವಾಗಲು ಬ್ರಹ್ಮಚರ್ಯ ವ್ರತನಿಷ್ಠಳಾಗಿಯೇಯಿದ್ದು ಸಹವಾಸ ದೋಷದಿಂದ ಸ್ವಲ್ಪ ಜಾರತ್ವನಡಿಸಿ ಗರ್ಭವಾಗಿ ನಿವಾರಣೆಬಗ್ಗೆ ಮಾಡಿಕೊಂಡ ಎಲ್ಲ ಪ್ರಯಾಯಗಳೂ ವ್ಯರ್ಥವಾಗಿಕಡೆಗೆ ಗಂಗೆಯಲ್ಲಿಐಕ್ಯವಾದಳು.

೨. ಒಬ್ಬ ವೈಶ್ಯ ವಿಧವೆಯಾದ ಯೌವನ ಸ್ತ್ರೀಯು ಒಬ್ಬ ವೈಶ್ಯನ ಯೌವನ ಉಪಪತ್ತಿಯನ್ನು ಸಂಪಾದಿಸಿಕೊಂಡು೧-೨ವರುಷ ಸೌಖ್ಯವಾಗಿ ಇರುವಷ್ಟರಲ್ಲೇ ಬಸುರುಬಂದು ಇದಕ್ಕಾಗಿ ವೈದ್ಯರಂಡೆಯನ್ನು ಕರೆಸಿ ಅವಳಿಗೆ ಕೊಡತಕ್ಕ ತಾಂಬೂಲ ದಕ್ಷಿಣೆಮುಂತಾದ ಮರ್ಯಾದೆ ಎಲ್ಲ ಸಲ್ಲಿಸಿ ಅವಳು ಕೆಳಗೂಮೇಲೂ ಮಾಡಿದ ಚಿಕಿತ್ಸೆಯನ್ನು ಅನುಭವಿಸಿ ಅದು ವಿಕಟಿಸಿ ೪ ದಿನ ಅತಿಕ್ರಮವಿಟ್ಟು ಕಡೆಗೂ ತಾನೇಹೋದಳು.

೩. ಒಬ್ಬ ಶೂದ್ರರಂಡೆ ಧಾರಾಳವಾಗಿ ಹಾದರಮಾಡುತ್ತ ಗರ್ಭಚಿಹ್ನೆ ಕಂಡಕೂಡಲೆ ತಕ್ಕಉಪಾಯಗಳಿಂದ ನಿವಾರಣೆ ಮಾಡಿಕೊಳ್ಳತಕ್ಕದ್ದು ಈಗ ತಾನೇ ಗ್ರಹಚಾರದಿಂದ ಗರ್ಭಸ್ರಾವದ ಔಷದತಿಂದು ಅದು ವಿಪರೀತವಾಗಿ ೧೫ದಿನ ನರಳಿ ಹೊರಳಿ ಕಿರಚಿ ಬದಕೊಂಡು ನಾನಾ ಕ್ರಮದಷ್ಟು ದೈವಯೋಗದಿಂದ ಪ್ರಾಣಉಳದು ಯಥಾಪ್ರಕಾರ ಮನುಷ್ಯಳಾಗಬೇಕಾದರೆ ೧—೨ ತಿಂಗಳಾಗಬೇಕಾಯಿತು. ಈಬಗೆ ರೋಗದಲ್ಲಿ ಈ ಹಿಂದುಸ್ಥಾನದ ಎಲ್ಲಭೂಮಿಯಲ್ಲೂ ೧ತಿಂಗಳಲ್ಲಿ ಎಷ್ಟುಜನರು ಅಪಮೃತ್ಯುವಿನ ಬಾಯಿಗೆ ಬಿದ್ದಾರೋ ಪುಣ್ಯಾತ್ಮರು ಆಲೋಚಿಸಬೇಕು. ಇದಕ್ಕೆಲ್ಲ ಮುಖ್ಯಕಾರಣ ಜಾತಿಕಟ್ಟೆ. ಈಜಾತಿ ಕಟ್ಟಳೆಯನ್ನು ಯಾವ ಪುಣ್ಯಾತ್ಮನು ಸ್ಥಾಪಿಸಿದನೋ ಅವನಮನೆ ಹಾಳಾಗಲಿ, ಈಕಟ್ಟಳೆಯೇ ಮಹಾಶ್ರೇಷ್ಟವೆಂದು ಅದಕ್ಕೆ ಸ್ವಲ್ಪವೂವಿರೋ ನಡಿಯದೇ ತಕ್ಕ ಉಪಾಯಗಳನ್ನು ಏರ್ಪಡಿಸದೇ ಅನುಸರಿಸಿ ನಡಿಯುತ್ತಬರುವ ನಮ್ಮಜನಗಳೆಂತಹ ನಿರ್ದಯರಾಗಲಿ, ಈ ರೋಗಕ್ಕೆತಕ್ಕ ಒಳ್ಳೇ ಔಷದವನ್ನು ಪ್ರಸಿದ್ಧಪಡಿಸದೆ ತಮಾಷೆ ನೋಡುತ್ತಿರುವ ಪಂಡಿತರೂ ಡಾಕ್ಟರುಗಳೂ ಹಿಡಿಮಾರೀಜಾಡ್ಯವಲ್ಲಿಬಿದ್ದುಹೋಗಲಿ, ಅಯ್ಯೋ ದೇವರೇ! ಸರಕಾರದವರಾದರೂ ಚಿತ್ತಕ್ಕೆತಂದು ಬಂಜೆ ಔಷದವನ್ನು ಪ್ರಸಿದ್ಧಪಡಿಸಿ ಸುಲಭಕ್ರಯಕ್ಕೆ ಸಿಕ್ಕುವಂತೆ ಮಾಡಿಸಬೇಕು. ಇದರಿಂದ ಲಾಭವೂ ಅಥವಾ ಪುಣ್ಯವೂ ಬಂದೀತು ಎಂದ ನೀತಿ ಪರೋಪಕಾರವು. ವಿಧವಾಸ್ತ್ರೀಯರಲ್ಲಿ ಹಾದರಗಿತ್ತಿಯರುಮಾತ್ರವೇ ಈಔಷದವನ್ನು ಉಪಯೋಗಿಸಿಕೊಂಡು ಉಳಿದ ಸ್ತ್ರೀಯರು ಇದನ್ನುಮುಟ್ಟದೆಯಿರುವರು. ಮತ್ತು ಅನ್ಯಾಯವಾಗಿ ಬಲಾತ್ಕಾರವಾಗಿ ಅಕಾಲದಲ್ಲಿ ಸಾಯುವ ಸಾವಿರಾರು ಪ್ರಾಣಗಳು ಉಳಿದಾವು ಇದರಿಂದ ಪುಣ್ಯವೂ ಮೊತ್ತದ ಪಾಪ ಎಷ್ಟುವರ್ಷಗೂ ಬರಲಾರದು. ಈಗ ನಮ್ಮಸೀಮೆಯ ಜನರಿಗೆ ಈ ಔಷದವೂ ಗರ್ಭಸ್ರಾವದ ಔಷದವೂ ಕೊಡತಕ್ಕವರಬೇಕರು [illegible] ಬೀರುವೇರಡ್ಡೈದ್ಯ, ಎಷ್ಟಾದ್ರೂ, ದೇವರು ಕಣ್ಣುತೆರದು ನೋಡಬೇಕು, ಅಥವಾ ಸರಕಾರದವರು ಕರುಣಿಸಬೇಕು; ಅನ್ಯಾಯದ ವಿಪತ್ತುಗಳಾರದು. ಮೊದಲು ಜಾತಿಕಟ್ಟಳೆಯನ್ನು ಸುಟ್ಟು ಬಿಡಿಮಾಡಬೇಕು. ಆವರೆಯುಂಟರನ್ನೂ ಯಾವ ಕೆಲಸವೂ ನಡಿಯಲಾರದು. ಸ್ವಾಮಿಗಾ ಭಗವಂತ, ಚಿತ್ತಕಡೆನೋಡು, ನೋಡು, ನೋಡು, ಈ ಪ್ರಕಾರ ಪ್ರಾರ್ಥಿಸುವಳು.

ಮುಂಬೈ ಕನ್ನಡಸುವಾರ್ತೆ

EXTRACTS

LORD HARRIS.

ವಜೋನಿಯನ್‌ಯೆಂಬ ಪತ್ರಿಕೆ ತಿಳಿಸುವದೇನಂದರೆ.—ಶೀಘ್ರದಲ್ಲಿ ಖಾಲೀಯಾಗುವದಾಗಿರುವ ಮದರಾಸ್ ಪ್ರಸಿಡೆನ್ಸೀ ಗವರ್ನರ್ ಕೆಲಸಕ್ಕೆ ಲಾರ್ಡ್ ಹಾರಿಸ್ ಸಾಹೇಬರವರು ಚುನಾಯಿಸಲ್ಪಟ್ಟರೆಂಬ ವೃತ್ತಾಂತವು ಮದರಾಸ್ ಪ್ರಜೆಗಳ ಹೃದಯದಲ್ಲಿ ಬಹಳ ನೆಮ್ಮದಿಯನ್ನುಂಟುಮಾಡಬೇಕಾದ್ದಾಗಿರುತ್ತದೆ. ಸದರೀ ಕೆಲಸಕ್ಕೆ ಸರ್ ಜೆ ಗಾರ್ಸ್ಟಿ ಯೆಂಬವರು ನಿಯಮಿಸಲ್ಪಟ್ಟದ್ದರೆ ಯೆಷ್ಟು ಸಂಕಟಕ್ಕೆ ಕಾರಣವಾಗಿರುವದೋ ಲಾರ್ಡ್ ಹಾರಿಸ್‌ಯವರ ಚುನಾವಣೆಯು ಅಷ್ಟು ಸುಖಕರವಾಗಿರುವದು. ಲಾರ್ಡ್ ಹಾರಿಸ್ ಯವರು ಯೆಲ್ಲಾಗಲಿ ಜನಗಳ ಪ್ರೀತಿ ಗೌರವಗಳಿಗೆ ವಿಷಯರಾಗಿರತಕ್ಕವರು. ಪರಂತು ಇವರು ಕೆಲವು ಸಂವತ್ಸರಗಳ ಹಿಂದೆ ತಮ್ಮ ತಂದೆಯವರು ಗವರ್ನರಾಗಿದ್ದ ಮತ್ತು ತಮ್ಮ ತಾತಂದವರಾದ ಜನರಲ್ ಹಾರಿಸ್‌ಯವರು ಅತಿ ದ್ರೋಹಿಯಾಗಿದ್ದ ಟೀಪೂಸುಲ್ತಾನನನ್ನು ಯುದ್ಧದಲ್ಲಿ ಪರಾಜಿತನನ್ನಾಗಿಮಾಡಲು ಶಾಶ್ವತವಾದ ನೆಮ್ಮದಿಯನ್ನನುಭವಿಸುತಲಿರುವ ಮದರಾಸಿಗೆ ಬರುತ್ತಾರಾಗಿ ಇಂತವರ ವಿಷಯದಲ್ಲಿ ಜನಗಳ ಪ್ರೀತಿ ಗೌರವಗಳು ಸ್ವತಸ್ಸಿದ್ಧವಾಗಿಯೇ ಇರುವವು. ಆ ಪಕ್ಷದಲ್ಲಿ ಗವರ್ನರವರು, ಇಂಡ್ಯ ರಾಜ್ಯದ ಅಧಿಕಾರಿಯ ಕರ್ತವ್ಯದ ಪೈಕಿ ಮುಖ್ಯವಾದ ಭಾಗವನ್ನು ನೆರವೇರಿಸಿದವರಾಗುತ್ತಾರೆ. ಇತರ ವಿಷಯದಲ್ಲಾದರೊ, ಲಾರ್ಡ್ ಹಾರಿಸ್‌ಯವರು ಸೌಜನ್ಯಯುಕ್ತರಾಗಿಯೂ ಉಲ್ಲಾಸಿಯಾಗಿಯೂ ಬುದ್ಧಿಕೌಶಲ್ಯವುಳ್ಳವರಾಗಿಯೂ ಇರುತ್ತಾರೆ. ಸರ್ಕಾರೀಕೆಲಸಗಳ ಮತ್ತು ಇಂಡ್ಯ ದೇಶದ ಅನುಭವ ವಿಷಯದಲ್ಲಾದರೋ, ಇವರು ಕೆಲವು ಕಾಲದ ಹಿಂದೆ ಆರು ತಿಂಗಳಕಾಲ ಇಂಡ್ಯ ರಾಜ್ಯದ ಅಂಡರ್ ಸೆಕ್ರೆಟರಿ ಕೆಲಸದಲ್ಲಿ ಇರುತಲಿದ್ದು ಇಲ್ಲಿನ ಆಡಳಿತದ ಅನುಭವವುಳ್ಳವರಾಗಿರುತ್ತಾರೆ, ಎಂಬದು.

THE PUDUKOTA ADMINISTRATION.

ಪುದುಕೋಟೆ ಸಂಸ್ಥಾನದ ಆಡಳಿತ ವಿಷಯದಲ್ಲಿ ಮದರಾಸ್ ಸ್ಟಾಂಡಾರ್ಡ್‌ಪತ್ರಿಕೆ ಇದರಡಿ ಬರುವಂತೆ ತಿಳಿಸುತದೆ ಹ್ಯಾಗಂದರೆ,—ಮದರಾಸ್ ಗವರ್ನಮೆಂಟಿನವರು ಪೊಲಿಟಿಕಲ್ ಏಜಂಟರಮೂಲಕ ತೊಂಡಮಾನ್‌ಸಂಸ್ಥಾನದ ರಾಜಕುಟುಂಬದ ಪಕ್ಷೈಕ ಅನೇಕರಿಗೆ ತಿಳಿಸಿಯಿರುವದೇನಂದರೆ ರಾಜರವರು ಬಾಲ್ಯಾವಸ್ಥೆಯೊಳಿರುವಕಾಲದಲ್ಲಿ ರಾಜ್ಯಕಾರ್ಯ ನಿರ್ವಹಣೆಯಬಗ್ಗೆ ಆನರೆಬಲ್ ಶೇಷಯ್ಯಶಾಸ್ತ್ರಿಗಳವರು ದಿವಾನರಾಗಿಯೂ ರಾಜಪ್ರತಿನಿಧಿಯಾಗಿಯೂ ನಿಯಮಿಸಲ್ಪಟ್ಟಿರುತ್ತಾರೆ. ರಾಜಕುಟುಂಬಕ್ಕೆ ಸಂಬಂಧದ ಸುಖಕ್ಕೂ ಗೌರವಕ್ಕೂ ಮತ್ತು ಸಂಸ್ಥಾನದಲ್ಲಿನ ಧರ್ಮಸ್ಥಾಪನೆಗಳ ಪ್ರೋತ್ಸಾಹಕ್ಕೂ [illegible] ಗಳಿಕೊಡಲ್ಪಡುವದು. ಅದನ್ನು ನ್ಯಾಯವಾಗಿ ಬರತಕ್ಕ ಪದಾರ್ಥಗಳು ಕೇವಲಜಾಗರೂಕ [illegible] ಸರಬರಾಯಿಮಾಡಲ್ಪಡುವವು, ಅದರ [illegible] ಹಕ್ಕು ಬಾಧ್ಯತೆಗಳು ಯಾವಾಗಲೂ ಗೌರವಿಸಲ್ಪಡುವವು. ಸಂಸ್ಥಾನದ ಕಾರ್ಯಗಳಮೇಲೆ ಸಾಮಾನ್ಯವಾಗಿ ತನಿಖೆ ಅಧಿಕಾರವನ್ನೂ, ತಮ್ಮ ಪ್ರವೃತ್ತಿಯು ಅವಶ್ಯಕವೆಂದು ತೋರುವ ಕಾರ್ಯಗಳಲ್ಲಿ ಪ್ರವೇಶಿಸುವ ಅಧಿಕಾರವನ್ನೂ ಗವರ್ನಮೆಂಟಿನವರು ಉಳಿಸಿಕೊಂಡಿರುತ್ತಾರೆ, ಬಾಲಕರಾದ ರಾಜರವರಿಗೆ ವಿದ್ಯಾಗುರುವಾಗಿಯೂ ಗಾರ್ಡಿಯನ್ ಆಗಿಯೂ ಇರುವಂತೆ ಒಬ್ಬ ಯೂರೋಪಿಯನನ್ನು ಗೊತ್ತುಮಾಡಬೇಕೆಂಬ ಮೃತರಾದ ಮಹಾರಾಜರವರ ಕೋರಿಕೆಯು ನೆರವೇರಿಸಲ್ಪಡುವದು, ಎಂಬದು.

THE SIMLA EXODUS MEETING

ಭರತವಾಸಿ ಯೆಂಬ ಪತ್ರಿಕೆ ಹೇಳುವದೇನಂದರೆ.—ಟೌನ್ ಹಾಲಿನಲ್ಲಿ ಸೇರಿದ ಸಮಾಜವು ಕಲ್ಕತ್ತೆಯಜನಗಳದು ಮಾತ್ರವಲ್ಲವು. ಆಸೇತು ಹಿಮಾಚಲ ಪರ್ಯಂತ ಇಂಡ್ಯದೇಶದ ನೇಟಿವ್ ಜನಗಳು ಪ್ರಕೃತ ಪ್ರಯತ್ನದ ವಿಷಯದಲ್ಲಿ ತಮಗಿರುವ ಅನುತಾಪವನ್ನು ತೋರಿಸಿದರು. ಈ ಪ್ರಯತ್ನವು ಇಲ್ಲಿಗೇನೇ ಪರಿಸಮಾಪ್ತಿಯನ್ನೈದಲಾರದೆಂದು ತೋರುವದು. ಇಂಡ್ಯ ಗವರ್ನಮೆಂಟನವರು ನಮ್ಮ ಪ್ರಾರ್ಥನೆಗೆ ಕಿವಿಕೊಡದೆ ಹೋಗುವರಾದರೆ ಇಂಗ್ಲಂಡಿಗೆ ಹೋಗಬೇಕಾದ ಆವಶ್ಯಕತೆಯುಂಟಾಗುವದು, ಎಂಬದು.

ಇದೇ ವಿಷಯದಲ್ಲಿ ಸಂಜೀವಿನಿಯೆಂಬ ಪತ್ರಿಕೆ ಹೇಳುವದೇನಂದರೆ —ಗವರ್ನಮೆಂಟಿನವರು ಪರ್ವತ ಪ್ರಾಂತಕ್ಕೆ ಹೊರಟು ಹೋಗುವದನುಚಿತವೆಂದು ಇಂಡ್ಯದೇಶದ ಜನಗಳು ಬಹುಕಾಲದ ಮೊದಲು ಆಕ್ಷೇಪಿಸುತ ಬಂದರು. ಪರಂತು ಗವರ್ನಮೆಂಟಿನವರು ಅದಕ್ಕೆ ಕಿವಿಗೊಡದೆ ಹೋದರು. ಈ ಸಂದರ್ಭದಲ್ಲಿ ಯೂರೋಪಿಯನ್ನರೂ ನೇಟಿವ್‌ಗಳೂ ಒಗ್ಗಟ್ಟಾಗಿರುತ್ತಾರೆ. ಇನ್ನೂ ಗವರ್ನಮೆಂಟಿನವರು ತಮ್ಮ ಇಷ್ಟಾನುಸಾರ ನಡೆಯುವದಕ್ಕಾಗುವದಿಲ್ಲವು. ಈ ಸಮಾಜದ ದೆಸೆಯಿಂದ ಲಾರ್ಡ್ ಡಫರಿನ್ ಸಾಹೇಬರವರು ಉಭಯ ಕಕ್ಷಿಯವರನ್ನೂ ಹೋಗಲಾಡಿಸಿಕೊಂಡಿರುತ್ತಾರೆ, ಎಂಬದು.

BANGALORE.—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧವೃತ್ತ್ಯುಪಗಮಾರ್ಥ ಕರ್ಣಾಟಕಪ್ರಕಾಶನವರಾಭಿದಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ವಿಜಾನುಪರಿಪೂಜಿತಾದಿಶತಿಮಾನಸಂಸುಮುದಂ॥

Vol. XIII] BANGALORE —MONDAY AUGUST 16 1886. [No. 33.

ಸಂಪುಟ ೧೩.] ಬೆಂಗಳೂರು.—ಸನ್ ೧೮೮೬ನೇ ಇಸವಿ ಆಗಸ್ಟು ೧೬ನೇ ತಾರೀಖ್ ಸೋಮವಾರ. [ಸಂಚಿಕೆ ೩೩.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ಕೆಲಸದವರಿಗೆ [illegible] ೧ ವರ್ಷ ...	...	೧೨—೦—೦
ಇಂಗ್ಲಿಷ್ ಬಲ್ಲ [illegible] ವರ್ಷ ೧ಕ್ಕೆ ...	...	೬—೦—೦
ಕನ್ನಡ [illegible] ಪಡುವವರಿಗೆ.		೬—೦—೦
[illegible]	೧ಕ್ಕೆ	೦—೮—೦

ಸೂ.—[illegible]

ಪ್ರಕಟನೆಯ ದರಾಜು.

[illegible]	೧ಕ್ಕೆ	೦—೨—೦
[illegible]	೧ಕ್ಕೆ	೦—೧—೦

NOTICE TO SUBSCRIBERS

[illegible]:—

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA.

Price including Postage, Rs 5 0 0

ವೈದ್ಯಸಾರ ಸಂಗ್ರಹ.

[illegible]

[illegible]	...	೩—೦—೦
[illegible]		೦—೬—೦

[illegible]

ನೋಟೀಸ್.

[illegible]:—

ಕನ್ನಡ [illegible]		
[illegible]	...	೧—೪—೦
[illegible]	...	೦—೧೨—೦
[illegible]	...	೦—೩—೦
[illegible]		೦—೫—೦
[illegible]	...	೦—೪
[illegible]	...	೦—೧೪—೦
[illegible]	...	೦—೭—೦
[illegible]	...	೦—೨—
[illegible]	...	೫—೦—೦
ಕನ್ನಡ ಗ್ರಂಥಗಳು.		
[illegible]	...	೦—೭—
[illegible]	...	೦—೪—೦
[illegible]	...	೦—೩—೬
[illegible]	...	೦—೨—೬
[illegible]	...	೦—೭—
[illegible]	...	೦—೬—
[illegible]	...	೦—೨—೬
[illegible]	...	೦—೭—೦
[illegible]	...	೦—೩—೦
[illegible]	...	೦—೨—
[illegible]	...	೦—೦—೩
[illegible]		೧— —
[illegible]	...	೬—೦—೦
[illegible]	...	೦—೭—
[illegible]	...	೩—೪—೬
[illegible]	...	೩—೪—೬
[illegible]		
[illegible]	...	೦—೮—೦
[illegible]		೧—೮—೦
[illegible]	...	೦—೮—೦
ಸಂಸ್ಕೃತ ಮೂಲಗ್ರಂಥಗಳು.		
[illegible]	.	೦—೫—೦
[illegible]	..	೦—೨—
[illegible]	..	೦— —
[illegible]	...	೦—೦—೬
[illegible]	...	೦—೩—೬
[illegible]	...	೦—೧—೦

[illegible]

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, AUGUST 16, 1886

[illegible]

AN ERRATIC PROCEEDINGS

ಅಸ್ಟಗ್ರ್ಯಾಮ ಡಿವಿಜನ್ ಆಕ್ಟಿಂಗ್ ಸೆಷನ್ಸ್ ಜಡ್ಜಿಯವರು ತಮ್ಮ ಕೋರ್ಟಿನ ಆವರಣದ ವಿಷಯದಲ್ಲಿನೂತನಗಳಾದ ನಾನಾವಿಧ ನಿಬಂಧನೆಗಳನ್ನುಮಾಡಿ ಜಾರಿಯಲ್ಲಿ ತರುತಲಿರುವುದೆಂದೂ, ಅವರ ಅಧಿಕಾರಗ್ರಾಬಲ್ಯವೆಂಬುದು ಕಟಗೆ ಅವರಿಗೆ ಸಂಬಂಧಿಸದ ವಿಷಯಗಳಲ್ಲೆಲ್ಲ ವ್ಯಾಪಿಸುತ ವ್ಯರ್ಥನಿರ್ಬಂಧರೂಪವಾಗಿ ಪರಿಣಮಿಸುತಿದೆಯೆಂತ ಪ್ರತಿಳಿಯಬರುತಿದೆ. ಸರ್ಕಾರಿ ಜಡ್ಜಿಯವರ ನಿರ್ಬಂಧವು ಕೋರ್ಟಿನ ನೌಕರರ ವಿಷಯದಲ್ಲಿ ಮಾತ್ರವಲ್ಲದೆ ಅವರ ಕೋರ್ಟಿಗೆ ಹೋಗತಕ್ಕ ಲಾಯರುಗಳು ಮತ್ತು ಅಡ್ವೋಕೇಟುಗಳ ಸ್ವವಿಷಯಗಳಲ್ಲಿ ಸಹ ವ್ಯಾಪಿಸಿರುವದರಿಂದ ಇವರೆಲ್ಲರೂ ಈಗ ಬಹಳ ಅತೃಪ್ತರಾಗಿರುವಂತೆ ಕೇಳುತ್ತೇವೆ. ಈಗ ಅವರ ಬಸವನಾಸಾನಕ್ಕೆ ಕಾರಣವೇನೆಂದರೆ—ಅನೇಕಮಂದಿ ಲಾಯರುಗಳು ಕಂಪನಿಗಳಲ್ಲಿ ಸಂಬಂಧವುಳ್ಳವರಾಗಿರುವದರಿಂದಲೂ ಇತರರು ಲೇವಾದೇವಿ ನಡಸುವದರಿಂದಲೂ ಅವರೆಲ್ಲರೂ ಅವುಗಳ ಸಂಬಂಧವನ್ನು ಕೂಡಲೇ ನಿವೃತ್ತಿಮಾಡಿಕೊಳ್ಳತಕ್ಕದ್ದೆಂದು ಜಡ್ಜಿಯವರು ಹುಕುಂ ಮಾಡಿದರಂತೆ, ಸದರೀ ವಕೀಲರಿಗೂ ವ್ಯಾಪಾರ ಸಂಘಗಳಿಗೂ ಇರುವ ಸಂಬಂಧವನ್ನು ಡಿಸ್ಟ್ರಿಕ್ಟು ಕೋರ್ಟಿನಲ್ಲಿ ತಿಳಿಸತಕ್ಕ ಬಗ್ಗೆ ಬರುವಾಗುವಾಗ, ಅಂದರೆ, ಮಾರ್ಚಿ ಮಹಿನೆ ೧ನೇ ತಾರೀಖಿನಲ್ಲಿ ಕಾಲಕ್ಕೂಹಿತವಾದ ಪ್ರಕಟನೆ ತಿಳಿಯಬರುತಿದೆ. ಈರೀತಿ ಯಾವದ ಹುಕುಂ ಕೊಡಲಿಕ್ಕೆ ಜಡ್ಜಿಯವರಿಗಿರುವ ಅಧಿಕಾರವನ್ನೆಷ್ಟುವಿಧದಿಂ ನೋಡಿದಾಗ್ಯೂ ವ್ಯಕ್ತವಾಗದೆ ಇದೆ. ಅಥವಾ ಇಂತಾ ಹುಕುಂ ಮಾಡಲಿಕ್ಕೆ ಯಾವದಾದರೊಂದು ಪ್ರಬಲ ಉದ್ದೇಶವಿರಬಹುದೆಂದು ಯೋಚನೆ ಮಾಡಿದಾಗ್ಯೂ ಅದು ಬಹಿರ್ಗತವಾಗದೆ ಇದೆ. ಲಾಯರುಗಳಿಗಾಗಿಯೇ ಪ್ರವರ್ತಿಸಿರುವ ರೀಗಲ್ ಪ್ರಾಕ್ಟಿಷನರುಗಳ ಆಕ್ಟಿನಲ್ಲಿಯೂ ಪ್ರತ್ಯೇಕವಾದ ನಿಯಮಗಳ್ಯಾವವೂ ದೃಷ್ಟಿಗೆ ಬೀಳಲಿಲ್ಲವು. ರೀಗಲ್ ಪ್ರಾಕ್ಟಿಷನರುಗಳ ಸ್ವಂತ ಅವರ ವಿಷಯದಲ್ಲಿ ಪ್ರವರ್ತಿಸಲಿಕ್ಕೆ ಜಡ್ಜಿಗೆ ಏನನ್ನಾದರೂ ಸಹ ಅಧಿಕಾರವಿರುವದಿಲ್ಲವೆಂಬದನ್ನು ಬಯಲುಮಾಡುವ ಸದರೀ ಕೋರ್ಟಿನ ರಿಜಿಸ್ಟ್ರಾರ್ ಕೆಲಸದೊಳಿದ್ದು ಪ್ರಸಕ್ತ ಜಡ್ಜಿಯವರು ಅರಿತಿದ್ದಾಗ್ಯೂ ಈಗ ಅವರ ಹಿಂದಿನ ಅನುಭವಜನ್ಯಜ್ಞಾನವು, ಸ್ವತಂತ್ರಾಧಿಕಾರವೊ ಆರುಮಾಸ್ಯ ಕಾರ್ಯಕಾರಿಯಾಗದೆ ಮೇರೆ ಮೀರಿ ಹುಕುಂ ಕೊಡುವಂತೆ ಅವರು ಪ್ರೇರಿಸಿದ್ದಕ್ಕಾಗಿ ನಾವು ಬಹಳ ಆಶ್ಚರ್ಯಪಡಬೇಕಾಗಿದೆ. ರೀಗಲ್ ಪ್ರಾಕ್ಟಿಷನರ್ಸ್ ಆಕ್ಟಿನ ೧೩ನೇ ಸೆಕ್ಷನಿನ ನಿಯಮಕ್ಕೆ ಸಿವಿಲ್ ಪ್ರೊಸೀಜರ್ [illegible] ಯಾವನಾದರೊಬ್ಬ ವಕೀಲನು ಬಾಧಿಸಲ್ಪಟ್ಟರೆ ಆಗ ಅಂತವನನ್ನು ಚೀಫ್ ಕೋರ್ಟಿನವರು ತಕ್ಕ ಕಾರಣವನ್ನು ನಮೂದಿಸಿ ಬಾಧಿಸಿಂದ ದಸ್ತುರಿ ಪಡಾವಲಿಕ್ಕೆ ಅಧಿಕಾರ ವುಳ್ಳವರಾಗಿರುತ್ತಾರೆ.

ಸದರೀ ಆಕ್ಟಿನ ೧೩ನೇ ಸೆಕ್ಷನಿನಲ್ಲಿ, ಯಾವದಾದರೊಂದು ಕೃತ್ಯಕ್ಕಾಗಿ ದುಡಿಸಲ್ಪಟ್ಟ ಪತ್ನಲ್ಲಿ ರೀಗಲ್ ಪ್ರಾಕ್ಟಿಷನರಾಗಿರಲಿಕ್ಕೆ ಅನರ್ಹನಾದವನನ್ನು, ವಕೀಲಿ ಕೆಲಸವನ್ನು ನಡಸುವಾಗ್ಯೆ ನ್ಯಾಯಕ್ರಮವಾದ ದುರ್ನಡತೆಗಾಗಿ ಅಪರಾಧಿಯಾದವನನ್ನು ಸಸ್ಪೆಂಡ್ ಅಥವಾ ಡಿಸ್‌ಮಿಸ್ ಮಾಡಲಿಕ್ಕೆ ಚೀಫ್ ಕೋರ್ಟಿನವರು ಅಧಿಕಾರವುಳ್ಳವರಾಗಿರುತ್ತಾರೆಂದು ತಿಳಿಸಲ್ಪಟ್ಟಿರುತದೆ. ಸದರೀ ಆಕ್ಟಿನಲ್ಲಾಗಲಿ ಅಥವಾ ಇತರ ಆಕ್ಟುಗಳಲ್ಲಾಗಲಿ, ಸಿವಿಲ್ ಪ್ರೊಸೀಜರ್ ಕೋಡಿನಲ್ಲಾಗಲಿ, ಒಬ್ಬ ವಕೀಲನು ತನ್ನ ಅಥವಾ ತನ್ನ ಕುಟುಂಬದ ಪ್ರಯೋಜನೋದ್ದೇಶದೊಡನೆ ಯಾವದಾದರು ವ್ಯಾಪಾರದಲ್ಲಿ ಅಥವಾ ನ್ಯಾಯವಾದ ಇತರ ವೃತ್ತಿಯಲ್ಲಿ ನಿಷ್ಕಲ್ಮಷವಾದ ಹೃದಯದೊಡನೆ ಪ್ರವರ್ತಿಸಕೂಡದೆಂಬದಾಗಿ ತಿಳಿಸಲ್ಪಡಲಿಲ್ಲವು. ಪ್ರಸಿದ್ಧರಾದ ಯಾವಜಡ್ಜಿಯೂ ವಕೀಲನ ಅನರ್ಹತೆಗೆ ಮೇಲೆಹೇಳಿದ ಸ್ವವಿಷಯಿಕ ಪ್ರವೃತ್ತಿಯೊಂದು ಕಾರಣವೆಂಬ ಅಭಿಪ್ರಾಯ ಪಟ್ಟಿರುವಂತೆ ಕಾಣಿಸಲಿಲ್ಲವು. ನಿಜವಾಗಿ ಸದರೀ ನಿಯಮವು ಇರುವಪಕ್ಷಕ್ಕೆ ಲಾಯರುಗಳುಇತರ ಕಸಬುಗಳನ್ನು ಹಿಡಿಯಲಿಕ್ಕೂ ಸಿಲದಾರದು. ಅಂತಾ ಕಸಬುಗಳನ್ನುಕೊಳ್ಳಬೇಕಾದ ನಿರ್ಬಂಧವುಂಟಾದಲ್ಲಿ ಕೇವಲ ವಕೀಲರಾಗಿದ್ದು ಈದೇಶದಲ್ಲಿ ಜೀವನಮಾಡುವದು ಅಸಾಧ್ಯವಾದದರಿಂದ ವಕೀಲರೆಲ್ಲರೂ ಏಕಕಾಲದಲ್ಲಿ ರಾಜೀನಾಮೆಕೊಡಬೇಕಾಗಿರುವದು ಸಿವಿಲ್ ವ ಮಿಲಿಟರಿ ಸ್ಟೇಷನಿನ ಪಬ್ಲಿಕ್ ಪ್ರಾಸಿಕ್ಯೂಟರಾಗಿ ಮೊಕದ್ದಮೆ. ಲಾರ್ಡ್ಸ್ ರವರು ಇಲ್ಲಿನ ಅಡ್ವೋಕೇಟುಗಳಲ್ಲಿ ಪ್ರಾಯಶಃ ಪ್ರಸಿದ್ಧರಾಗಿಯೇ ಇರುತ್ತಾರೆ. ಇವರು ಇಲ್ಲಿನ [illegible] ಕಂಪನಿಯಲ್ಲಿ ಭಾಗೀ ಷೇರ್‌ದಾರರಾಗಿರುತ್ತಾರಲ್ಲದೆ ಪುಸ್ತಕಗಳು ಪತ್ರಿಕೆ ಅಚ್ಚು ಹಾಕಿ ತನ್ನಮೂಲಕವಾಗಿ ವ್ಯಾಪಾರವನ್ನು ಸಹ ಮಾಡುತಲಿರುತ್ತಾರೆ. ಅಡ್ವೋಕೇಟ್ ಮಿ॥ ಹೇಜ್ ರವರು ಫಲಾನೆಯವರೆಂಬದನ್ನು ಈ ಮೈಸೂರು ದೇಶದಲ್ಲಿ ಅರಿಯದೆ ಇರುವವರಿಲ್ಲವು. ಇವರು ಪತ್ರಿಕಾಧಿಪರಾಗಿದ್ದುಕೊಂಡು ಒಂದು ಇಂಗ್ಲಿಷ್‌ಮತ್ತು ಕನ್ನಡಪತ್ರಿಕೆಯನ್ನು ನಡೆಸುತಲಿರುವ ಅಂಶವು ಅದು ತೆಗೆದುಕೊಳ್ಳುತಲಿರುವವರೆಲ್ಲರು ಅರಿತವರಾಗಿಯೇ ಇರುತಿದೆ. ಈಗ ಸೆಷನ್ಸ್ ಜಡ್ಜಿಯವರ ಅಭಿಪ್ರಾಯವನ್ನು ನೋಡಲಾಗಿ, ಸದರೀ ಇಬ್ಬರು ದೊಡ್ಡಮನುಷ್ಯರೂ ತಮ್ಮ ತಮ್ಮ ಲಾಯರ್‌ಕೆಲಸಕ್ಕೆ ರಾಜೀನಾಮೆಯನ್ನಾದರೂ ಕೊಡಬೇಕು, ಅಥವಾ ಅವರು ಇತರ ಪ್ರಯತ್ನಗಳನ್ನಾದರೂ ಮಾಡದೆ ನಿಲ್ಲಿಸಬೇಕೆಂದು ಸ್ಪಷ್ಟವಾಗಿ ಏರ್ಪಡುತಿದೆ. ಇದೇನಿಯಮವನ್ನನುಸರಿಸಿ ಸರ್ಕಾರ್ ಉದ್ಯೋಗಸ್ಥರು ಷೇರ್‌ದಾರರಾಗಿಯೂ ಏಜಂಟರುಗಳಾಗಿಯೂ ಇರಕೂಡದಷ್ಟು, ಅಂತಾ ಸಂಬಂಧ ಊರ್ಜಿತ ವಿರುವಪಕ್ಷಕ್ಕೆ ಅವರು ಸಹ ಕೆಲಸಗಳಿಂದ ನಿವೃತ್ತರಾಗಬೇಕಷ್ಟೆ. ಇಲ್ಲಿನ ಉದ್ಯೋಗಸ್ಥರನೇಕರು ಮದರಾಸ್ ಬ್ಯಾಂಕಿನಲ್ಲಿಯೂ, ಇತರ ಬ್ಯಾಂಕುಗಳಲ್ಲಿಯೂ ಷೇರ್‌ದಾರರಾಗಿರುತ್ತಾರೆ. ಇವಲ್ಲದೆ ಇಲ್ಲಿನ ಜಾಯಿಂಟ್‌ಸ್ಟಾಕ್ ಕಂಪನಿಗಳ ಡಿರೆಕ್ಟರರಾಗಿದ್ದು ಈಚೆಗೆ ಕೆಲಸದಿಂದ ನಿವೃತ್ತರಾದ ಮಿ॥ ಹವೆಸರ್‌ಯವರನ್ನು ಒಬ್ಬ ಸರ್ಕಾರ್ ನೌಕರನು ತಾನೊಂದು ಬ್ಯಾಂಕಿಗೆ ಏಜಂಟನಾಗಿರಬಹುದೇ ಯೆಂದು ಕೇಳಿದ್ದಕ್ಕೆ ಅವರು ಏಜಂಟ ವಗೈರೆ ಕಾರ್ಬಾರೀ ಉದ್ಯೋಗಗಳು ಕೆಲವು ವಿನಾ ಮಿಕ್ಕ ಉದ್ಯೋಗಗಳನ್ನು ಪಡೆಸುವವರೊಳಗಾಗಲಿ, ಷೇರ್‌ದಾರರಾಗಿರುವವರೊಳಗಾಗಲಿ, ಗವರ್ನ್‌ಮೆಂಟಿನವರ ಆಕ್ಷೇಪಣೆ ಯೇನೂ ಇರುವದಿಲ್ಲವೆಂದು ತಿಳಿಸಿದಂತೆ ನಮ್ಮ ಜ್ಞಾಪಕದೊಳಿದೆ. ಒಂದುವೇಳೆ ಅದು ಹಾಗಿದ್ದಪಕ್ಷಕ್ಕೆ ಪ್ರಸಕ್ತ ನೂತನ ನಿಬಂಧನೆಯೆಂದ ಅದು ಅವಿವೇಕವಾದ ಹುಕುಂ ಯೆಂದು ಏರ್ಪಡುತಿದೆ. ಹೀಗೆಯೇ ಸರ್ಕಾರಿ ನೌಕರರು ಈ ದೇಶದೊಳಿಲ್ಲಿಯೂ ಜಮೀನ್ದಾರಿ ಮಾಡಿಕೊಳ್ಳಕೂಡದೆಂಬ ನಿರ್ಬಂಧ

ಕ್ಕೆ ಅವಕಾಶ ಉಂಟು ಮಾಡಬೇಕಾಗುತಿದೆ. ಅಂತಾ ಸಂದರ್ಭದಲ್ಲಿ ಅದಕ್ಕಾಗಿ ಅನುಸರಿಸುವವರೊಳು ಸೆರ್‌ಜೆಷ್ಟಿಯವರೇ ಅಗ್ರಿಮರಾಗಿರುವರು. ಮುಖ್ಯವಾಗಿ ಈಗ ಲಾಯರ್‌ಗಳ ವಿಷಯದಲ್ಲಿ ಪ್ರಯುಕ್ತವಾಗಲ್ಪಟ್ಟ ನಿರ್ಬಂಧವು ನಿರಾಧಾರವಾದದ್ದಾಗಿಯೂ ಒಬ್ಬ ಸರ್‌ಜಷ್ಟಿಯ ಅಧಿಕಾರಕ್ಕೆ ಮೀಲ್ಪಟ್ಟದ್ದಾಗಿಯೂ ಇರುತಿದೆ. ಇದು ಚೀಫ್‌ಕೋರ್ಟಿನವರು ಪರ್ಯಾಲೋಚಿಸಿ ವ್ಯರ್ಥವಾದ ನಿರ್ಬಂಧವನ್ನು ನಿವಾರಿಸುವದರ ಮೂಲಕ ಮೈಸೂರೊಳಗಿರತಕ್ಕ ಲಾಯರ್‌ಗಳ ಅತೃಪ್ತಿಯನ್ನು ಹೋಗಲಾಡಿಸಬೇಕೆಂದು ಕೋರುವೆವು.

INTEMPERANCE.

ಈಗ ಇಂಡ್ಯಾದೇಶದ ಹುಟ್ಟುವಳಿಯು ಪೈಕಿ ಅಬಕಾರೀ ಮೂಲಕವಾದ ಆಯಿತಿಯು ಪ್ರತಿಸಂವತ್ಸರದಲ್ಲಿಯೂ ಲಕ್ಷಾಂತರ ರೂಪಾಯಿಗಳಿಂದ ಜಾಸ್ತಿಯಾಗುತ ಬರುತಲಿದೆ. ಇದಕ್ಕೆ ಕಾರಣವನ್ನು ಪರಿಭಾವಿಸಿ ನೋಡಲಾಗಿ, ಕೇವಲ ಸುರಾಪಗಳ ಉಪಯೋಗವನ್ನು ಸಾಧಾರಣವಾಗಿ ಪ್ರಜೆಗಳು ತಿಳದುಕೊಂಡು, ಅದರಿಂದ ಒದಗತಕ್ಕ ಹಾನಿಯನ್ನು ಗಣಿಸದೆ ನಾನಾವಾಗಿ ಉಪಯೋಗಿಸುವದು ವಿನಾ ಮತ್ತಾವದೂ ನಮ್ಮ ಬುದ್ಧಿಸ್ಫುರಣೆಗಿಲ್ಲವು. ಹೀಗೆ ಮದ್ಯಪಾನವು ಸರ್ವಸಾಧಾರಣವಾಗಿ ಬಳಕೆಯೊಳು ಬರಲಿಕ್ಕೆ ಗವರ್ನಮೆಂಟಿನವರು ಸಹ ಪರೋಕ್ಷವಾದ ಸಹಾಯಕರಾಗಿರುತ್ತಾರೆ. ಉತ್ತಮ ಮದ್ಯ ಮಾಧವರೆಂಬ ಮಾರಾಟಗಾರರಾದ ಪ್ರಜೆಗಳು ತಮ್ಮ ತಮ್ಮ ದರ್ಜೆಗೆ ತಕ್ಕಂತೆ ಮದ್ಯವಂ ಸೇವಿಸಲಿಕ್ಕೆ ಬೇಕಾದ ಅನುಕೂಲವನ್ನು ಅವರಿಗೆ (ಫ್ರೀಟ್ರೇಡ್ ಪ್ರಿನ್ಸಿಪಲ್) ಎಂಬ ಪಬ್ಲಿಕ್ ವ್ಯಾಪಾರ ಕ್ರಮವು ಉಂಟುಮಾಡಿರುತಿದೆ. ಇದರಿಂದ ಇಂಡ್ಯಾದೇಶಕ್ಕೆ ಆಮದು ಆಗುವ ಪದಾರ್ಥಗಳ ಪೈಕಿ ಸ್ಪೀರಿಟು ಮುಂತಾದವುಗಳ ಮದ್ಯ ಪ್ರಭೇದಗಳೇ ಅಧಿಕವಾಗಿರುತಿವೆ. ಅನೇಕಕೋಟಿ ರೂಪಾಯಿಗಳು ಪ್ರತಿವರ್ಷ ಈ ದೇಶದಿಂದ ಅನ್ಯದೇಶಗಳಿಗೆ ಸಾಗಿಹೋಗುತಿವೆ. ಇದಲ್ಲದೆ ಕಂಟ್ರಾಕ್ಟ ಪದ್ಧತಿ ನಡೆಸಿಕೊಂಡದ್ದರಿಂದಲೂ, ಮೂರು ಮೂಲೆಯಲ್ಲಿಯೂ ಸಾರಾಯಿ ಅಂಗಡಿಗಳು ಏರ್ಪಡುತ ಬಂದದರಿಂದಲೂ, ಸರ್ವತ್ರ ಆಯಿತಿಯು ಅಧಿಕವಾಗಲಿಕ್ಕೆ ಕಾರಣವಾಯಿತು. ಈ ದುರಭ್ಯಾಸದಿಂದ ನಿರ್ನಾಮರಾಗಿ ಹೋಗತಕ್ಕವರ ಸ್ಥಿತಿಯನ್ನು ನೋಡಿದರೆ ಬಹಳ ಅನುತಾಪಕರವಾಗಿರುತಿದೆ. ಜನಗಳಿಗೆ ಈ ವಿಷಯದಲ್ಲಿ ಪೂರ್ವಕ್ಕಿಂತಲೂ ಅನುಕೂಲ್ಯಗಳು ಅಧಿಕವಾಗುತ ಬಂದದರಿಂದಲೂ, ಅವರಿಗೆ ಇದರೊಳು ಶಂಕೆಯು ತಪ್ಪಿಹೋಗಿದ್ದದರಿಂದಲೂ, ಈ ದುಷ್ಪದ್ಧತಿಯು ವೃದ್ಧಿಯಾಗಲಿಕ್ಕೆ ಕಾರಣವಾಗಿದೆ. ಲೋಕದಲ್ಲಿ ಮನುಷ್ಯನು ಸನ್ಮಾರ್ಗಪ್ರವೃತ್ತಿಗೆ ಯಮದಂಡನೆ, ರಾಜದಂಡನೆ, ಪ್ರಜಾದಂಡನೆಗಳೆಂಬ ಮೂರು ವಿಷಯಗಳು ಮುಖ್ಯಗಳಾಗಿರುತಿವೆ. ಈಗ ಸದರೀ ಮೂರುವಿಧ ಭಯವೂ ಜನಗಳಿಗೆ ಕುದ್ಧಾಂಗವಾಗಿ ತಪ್ಪಿಹೋಯಿತು. ಜನಗಳು ವಿದ್ಯಾವಂತರಾಗಿ ವಿಚಾರಪರರಾಗುತ ಬರುವದರಿಂದ, ಅವರ ವಿಚಾರವು ಈ ಪ್ರಪಂಚಕ್ಕೆ ಕಾರಣಭೂತವಾದ ಮೂಲವಸ್ತುವಿನ ತನಕ ವ್ಯಾಪಿಸಿ ಸಂಸ್ಕೃತವಾದ ಅವರ ಬುದ್ಧಿಯಲ್ಲಿ ಸದರೀ ವಿಷಯವು ನಿರ್ಣಯವಾಗದೆ ಅನುಮಾನಾಸ್ಪದವಾದದ್ದಾಗಿ ಏರ್ಪಟ್ಟದರಿಂದಲೂ, ಐಹಿಕ ಸುಖದುಃಖಗಳೇ ಪುಣ್ಯಪಾಪಗಳೆಂಬ ಭಾವನೆ ತಲೆದೋರಿ ವಿಷಯಾನಂದದಲ್ಲಿ ಅಭಿರುಚಿಯು ಅಧಿಕವಾಗುವದರಿಂದಲೂ, ಪರಲೋಕ ಭೀತಿಗೆ ಸ್ವಲ್ಪವೂ ಅವಕಾಶವಿಲ್ಲದೆ ಹೋಯಿತು. ವೇದಶಾಸ್ತ್ರಗಳ ವಿಧಿ ನಿಷೇಧಗಳಲ್ಲಿ ಪ್ರಾಮಾಣ್ಯ ಜ್ಞಾನವೂ, ಅವುಗಳಿಗೆ ಬದ್ಧರಾಗಿರಬೇಕೆಂಬ ನಿಯಮವೂ ಉಚ್ಚ ಉತ್ತಮ ಕ್ಷತ್ರಿಯರು ಈಗ ವರ್ಜ್ಯರಾದದರಿಂದಲೂ, ಜಾತಿ ಮತಾಚಾರಗಳಿಗೆ ವಿರುದ್ಧವಾಗಿ ನಡೆದರೆ ಅರಸರು ದಂಡಿಸುವರೆಂಬ ಭಯವು ಇಲ್ಲವಾದ್ದರಿಂದಲೂ, ಆ ಮೂಲಕವಾದ ಶಂಕೆಗೂ ಕಾರಣವಿಲ್ಲವಾಯಿತು. ಮೇಲೆ ಕಂಡ ಯಮದಂಡನೆಗೆ ಭೀತಿಯೂ ಇಲ್ಲದೆ ಹೋಗುವದರಿಂದಲೂ, ಜನಗಳಿಗೆ ಸ್ವಾತಂತ್ರ್ಯವೆಂಬದು ನಿರಂಕುಶವಾದದರಿಂದಲೂ, ವ್ಯಾಪ್ಯವ್ಯಾಪಕ ಭಾವವು ತೊಲಗಿ ಹೋದದರಿಂದಲೂ, ಪರಸ್ಪರ ಹೆದರಿಕೆಯು ತಪ್ಪಿಹೋಯಿತು. ಜಾತಿಮತಾಚಾರಗಳಲ್ಲಿ ಜನಗಳಿಗೆ ಅಭಿಮಾನವು ಕಡಿಮೆಯಾಗುತ ಬಂದದರಿಂದಲೂ, ರತ್ನೋಪಾಸಕರಾದ ಮಠಾಧಿಪತಿಗಳು ಅರ್ಥೈಕಪರರಾಗಿ ಸಮಯಾನುಸಾರ ವರ್ತಿಸುವದರಿಂದಲೂ, ಅವರ ವಿಧಿನಿಷೇಧಗಳು ಅರ್ಥಮೂಲಕವಾದವಾಗಿ ಏರ್ಪಟ್ಟು ಜನಗಳು ಅದು ಗೌರವಿಸುವದಿಲ್ಲವು. ಅಂತಾ ನಿರ್ಬಂಧಗಳನ್ನೆಲ್ಲ ನಿವೃತ್ತಿಸಿಕೊಂಡು ಇಷ್ಟಾನುಸಾರ ವರ್ತಿಸದವನ್ನ ದುರ್ವೃತ್ತರು ತಾವಾದರೂ ಒಂದು ವಿಶೇಷ ಪ್ರಯೋಜನವನ್ನು ಪಡೆಯುತ್ತಾರೆಯೋ ಅಂದರೆ ಅದೂ ಇಲ್ಲವು. ಮದ್ಯಪಾನದಿಂದ ಮನುಷ್ಯನಿಗೆ ಒಂದು ವಿಧವಾದ ಮನೋವಿಕಾರ ಪ್ರಯುಕ್ತವಾಗಿ ಮದವೆಂಬದೊಂದು ಗುಣ ತಲೆದೋರುತಿದೆ. ಇಂತಾ ಮದಕ್ಕೆ ಅನುಭಾವಗಳ್ಯಾವವೆಂದರೆ,-ಶರೀರ ನೇತ್ರಾದಿಗಳ ಭ್ರಮಣವು, ಗತಿಸ್ಖಲನವು, ಅಸಂಗತ ಪ್ರಲಾಪವು, ರೋದನ, ನಿಂದಾ, ಪ್ರಹಾರಾದಿಗಳು. ಇದಕ್ಕೆ ಸಂಚಾರಿಗಳ್ಯಾವವೆಂದರೆ ಕಾಮ ಕ್ರೋಧ, ಲೋಭ, ಮೋಹ, ಮದ ಮಾತ್ಸರ್ಯ, ಈರ್ಷೆ, ಸ್ಪರ್ಧೆ, ದ್ವೇಷ, ಸಾಹಸಕರವಾದ ಘಾತ, ಅನಿರ್ವಾಚ್ಯಕರವಾದ ವೈಚಿತ್ರ್ಯ ಮದ, ಚಾಪಲ್ಯ ಮುಂತಾದವು. ಇವು ಪ್ರಬಲಾವಿಷ್ಟ ಕಾರಣವಾಗಿ ಅತ್ಯಧಿಕ ರಮ್ಯವಾಗಿರುವದರಿಂದ ಇವುಗಳನ್ನು ಮನೋಪದ ಮುಂತಾದ ಪದಾರ್ಥಗಳು ನಿಷೇಧಿಸಲ್ಪಟ್ಟಿರುತಿವೆ. ಪ್ರಪಂಚದಲ್ಲಿನ ಮನುಷ್ಯರು ತಮಗೆ ಐಶ್ವರ್ಯಗಳಾಗಿಯೂ, ಆಪತ್ತುಗಳಾಗಿಯೂ, ಯೋಗ್ಯಗಳಾಗಿಯೂ, ಇರುವವರು ತಿಳದು ಪರಿಗ್ರಹಿಸಿಕೊಳ್ಳಲು, ಅನಿಷ್ಟಗಳಾಗಿಯೂ ಆಯೋಗ್ಯಗಳಾಗಿಯೂ ಇರುವವನ್ನರಿತು ತೊಲಗಿಸಲಿಕ್ಕೂ ಅವರ ಮನಸ್ಸೇ ಮುಖ್ಯ ಕಾರಣವಾಗಿರುತಿದೆ. ಅಂತಾ ಮನಸ್ಸು ರೋಗಾದಿಗಳಿಂದಲೂ, ಅಭಿಘಾತದಿಂದಲೂ, ಮದ್ಯಪಾನ ಮುಂತಾದವುಗಳಿಂದಲೂ, ವಿಕಾರವನ್ನೈದಿದರೆ ಅದರಿಂದುಂಟಾಗುವ ಸರ್ವ ಪ್ರಯೋಜನಗಳೂ ಕೆಟ್ಟುಹೋಗುವದಾಗಿ, ರೋಗಗಳಿಗೆ ಹಲವು ಅಸಾಧ್ಯಗಳನ್ನು ಪಡೆಯುವದು ಮದಕ್ಕೆ ಕಾರಣಗಳಾದ ಸರ್ವ ಪದಾರ್ಥಗಳನ್ನು ತ್ಯಜಿಸತಕ್ಕದ್ದು ಅಭಿಜ್ಞರ ಮತವಾಗಿರುತಿದೆ. ಶರೀರಾರೋಗ್ಯಕ್ಕಾಗಿಯೂ, ಹೃದಯೋಲ್ಲಾಸಕ್ಕಾಗಿಯೂ ವೈದ್ಯೋತ್ಸಾಹಗಳಿಗಾಗಿಯೂ, ದೇಹದಾರ್ಢ್ಯಕ್ಕಾಗಿಯೂ, ಉತ್ತಮಗಳಾದ ಬ್ರಾಂದಿ, ವೈನ್, ಷಾಂಪೇನ್ ವಗೈರೆ ಮದ್ಯಗಳನ್ನು ಮಿತವಾಗಿ ಸೇವಿಸುವದರಿಂದ ಈಗ ಅನೇಕರು ಸಂತೋಷಿಸುತಲಿರುವದು ನಾವು ಪ್ರತಿದಿನವೂ ನೋಡುತಲಿದ್ದೇವೆ. ಅವರು ಅವುಗಳನ್ನು ಬಹಳ ಪ್ರಯೋಜನಕರವಾದವೆಂದು ನುಡಿಯುತ ಅವುಗಳಿಗೆ ಮಹತ್ವವನ್ನು ಆರೋಪಿಸುವದಂ ಕಂಡು ವಿವೇಕಿಗಳು ಅಪಹಾಸ್ಯ ಮಾಡದಿರುವದಿಲ್ಲವು. ಯಾವ ವಸ್ತುವು ಮನುಷ್ಯನ ಮನಸ್ಸಿಗೆ ವಿಕಾರವನ್ನುಂಟುಮಾಡಿ ಕ್ರಮ ಕ್ರಮೇಣ ನಾನಾವಿಧ ಅನಿಷ್ಟಗಳಿಗೆ ಗುರಿಮಾಡುತಿದೆಯೋ ಅಂತಾ ವಸ್ತುವನ್ನು ಸಾಮಾನ್ಯತಃ ಬಿಡುವದುತ್ತಮವಾಗಿರುವಲ್ಲಿ ಅದನ್ನು ಸ್ವಲ್ಪವಾಗಿಯಾದರೂ ಗ್ರಹಿಸಲ್ಯಾತಕ್ಕೋ ತಿಳಿಯಲಿಲ್ಲವು. ಶರೀರಾರೋಗ್ಯಕ್ಕೆ ಕಾರಣಗಳಾಗಿರುವ ಔಷಧವನ್ನೇ ಸ್ವಲ್ಪ ಅಧಿಕವಾಗಿ ಸ್ವೀಕರಿಸುವದರಿಂದ ಪ್ರಾಣಹಾನಿಯುಂಟಾಗುವುದು ಮದ್ಯಮುಂತಾದವನ್ನು ಅಧಿಕವಾಗಿ ಕುಡಿದರೆ ಶರೀರೋಪದ್ರವ ಪ್ರಯುಕ್ತವಾಗುವದೋ ಹೊರ್ತು ಅದು ನಾವರೇ ಯಾತಕ್ಕೆ ಬಿಡಬೇಕೆಂದು ಯಾರಾದರೂ ಕೇಳಬಹುದು. ಯಾವ ಕಾಲದಲ್ಲಿ ಯಾವ ಪದಾರ್ಥವು ಮನುಷ್ಯನಿಂದ ಸೇವಿಸಲ್ಪಡದಿದ್ದರೆ ಶರೀರಕ್ಕೆ ಅಪಾಯ ಸಂಜನಿಸುವದೋ ಅಂತಾ ಔಷಧಾದಿಗಳ ವಿಷಯದಲ್ಲಿ ಆ ರೀತಿ ಬೇಕಾದಾದೀತು ಹೊರ್ತು ಬುದ್ಧಿ ವಿಕಾರವನ್ನುಂಟುಮಾಡಿ ಬಹ್ವನರ್ಥಗಳಿಗೊಳಪಡಿಸುವ ಮದ್ಯ ಮುಂತಾದವುಗಳ ವಿಷಯದಲ್ಲಿ ಮೇಲ್ಕಂಡ ನ್ಯಾಯವನ್ನು ಅನ್ವಯಿಸುವದು ಯೋಗ್ಯವಲ್ಲವು. ಯಾವ ರೀತಿಯಿಂದ ಪರ್ಯಾಲೋಚಿಸಿದಾಗ್ಯೂ ಮದ್ಯಪಾನವು ಅನಿಷ್ಟಫಲಗಳನ್ನೀಯುವದರಿಂದ ಸಾಮಾನ್ಯತಃ ಅದು ನಿಷೇಧಿಸಲ್ಪಟ್ಟದೆ. ಹೀಗಿದ್ದಾಗ್ಯೂ ಈಗ ಅನೇಕರು ಮಿತಿಮೀರಿ ಕುಡಿಯಲಿಕ್ಕೆ ಪ್ರಾರಂಭಿಸಿರುವದರಿಂದ ಅಂತವರನ್ನು ಮನೆಯಲ್ಲಿ ಸಾಧಾರಣವಾಗಿ ನೋಡುವದಕ್ಕಾಗುವದಿಲ್ಲವು. ಸ್ವಂತ ಮನೆಯಲ್ಲಿ ಕುಡಿಯಲಿಕ್ಕೆ ಯಾವದಾದರೊಂದು ಪ್ರತಿಬಂಧಕ ಪ್ರಯುಕ್ತವಾದರೆ ಅದಕ್ಕಾಗಿ ಪ್ರತ್ಯೇಕ ಒಂದು ಸ್ಥಾನವು ಕಲ್ಪಿಸಿಕೊಂಡು ಆ ಸಂಕೇತಸ್ಥಾನಕ್ಕೆ ತಮ್ಮ ಮಿತ್ರರೊಡನೆ ಹೋಗುವಾಗ್ಯೆ ಯೇನಾದರೂ ಆತಂಕ ಪ್ರಯುಕ್ತವಾದರೆ ಆಗ ಅವರ ದುಃಖವನ್ನೂ ಆಗ್ರಹವನ್ನೂ ನೋಡುವದಕ್ಕಾಗುವದಿಲ್ಲವು. ಇಂತವರ ಸ್ಥಿತಿಯು ಹ್ಯಾಗೆ ಪರಿಣಮಿಸುತಿದೆಯೆಂದರೆ.—ಮದ್ಯಪಾನದಿಂದ ಕೆಲವರು ವಂಶ ಗೌರವವನ್ನೂ ದ್ರವ್ಯಮಾನವನ್ನೂ ಕಳೆದುಕೊಂಡು ಅನ್ಯರ ನಿಂದೆಗೆ ಗುರಿಯಾಗುವರು. ಇತರರು ಕೆಲವರು ಸ್ವತಃ ಮದ್ಯಪಾನಮಾಡಿ ಭ್ರಷ್ಟರಾಗಿ ಹೋಗುವದು ಮಾತ್ರವಲ್ಲದೆ ಮಂದಕರುಮಕರ ಸಹವಾಸವನ್ನು ಹೊಂದಿ ಸರ್ವವಿಧ ನಾಶಕ್ಕೆ ಗುರಿಯಾಗುವರು. ಅನ್ಯರು ಕೆಲವರು, ಇಂತಾ ನೀಚಕೃತ್ಯವು ನಮ್ಮ ಮತದಿಂದ ಪ್ರಾಪ್ತವಾದದ್ದಲ್ಲವೆಂದು [illegible] ಸ್ವಪ್ನದಲ್ಲಿ [illegible] ನಿಂದಿಸುತ [illegible] ವರು. ಬೇರೆ ಕೆಲವರು ವಿವೇಕಶೂನ್ಯರಾಗಿ, ತಾವು ಸಂಪಾದಿಸಿದ್ದೆಲ್ಲವ ವ್ಯಸನಪಾತ್ರಗಳಲ್ಲಿ ವಿನಿಯೋಗಿಸುತಲೂ, ಕಂಡವರ ಮನೆಗಳಲ್ಲೆಲ್ಲ ತಿನ್ನುತಲೂ, ಪ್ರಯುಕ್ತಗಳಾಗಿ ಇಲ್ಲದ ರೋಗಗಳಿಂ ಸಂಪಾದಿಸಿಕೊಂಡು [illegible] ವ್ಯರ್ಥವಾಗುವರು. ಮತ್ತು ಕೆಲವರು [illegible] ಗಾಗಿ [illegible] ವಿಗಳೆಲ್ಲ ಸುಲಭವಾಗಿ ಏರ್ಪಟ್ಟು ಮದ್ಯಪಾನಕ್ಕೆ ಉಪಕ್ರಮಿಸಿ ಸಂಚಿತವಾದ ಧನವನ್ನೆಲ್ಲ [illegible] ಸಲ್ಪಟ್ಟು ಕಡೆಗೆ ನಾನಾ ದರಿದ್ರರಾಗಿ ಅನ್ನವಸ್ತ್ರಕ್ಕೆ ಸಹ ಇಲ್ಲದೆ ಯಾರಾದರೂ ತಮ್ಮನ್ನು ಕಾಪಾಡಬಹುದೆಂಬ ನಂಬಿಕೆಯಿಂದ ಜೀವಿಸ್ಸು [illegible] ಪ್ರತಿಭೆಯೊಳು ಯಾರೂ ತಲೆಯೆತ್ತಿಸದ ನೋಡಲೊಲ್ಲರು. ಕಡೆಗೆ ತಮ್ಮ ಮರಣವನ್ನು ತಾವೇ ಅತ್ಯಾತುರದೊಡನೆ ನಿರೀಕ್ಷಿಸುವಂತೆ ಆಗುತ್ತಾರೆ. ಪ್ರಾಚೀನ ಇಂತಾ ದುರ್ವ್ಯಸನಗಳ ವ್ಯಕ್ತಿ ಕೆಲವರು ಕದಾಚಿತ್ ಸ್ವಲ್ಪ ವಿವೇಕ ಪ್ರಾಪ್ತವಾಗುವ ಸಮಯದಲ್ಲಿ ತಾವು ನಡೆಸಿದ ದುಷ್ಕೃತ್ಯಗಳನ್ನೂ, ಅದರ ದೆಸೆಯಿಂದ ತಮಗೆ ಲಭಿಸಿದ ದೋಷಗಳನ್ನೂ ಅದರಿಂದುಂಟಾಗುವ ಹಾನಿಗಳನ್ನೂ ಚನ್ನಾಗಿ ಯೋಚಿಸಿ ಬೆದರಿದವರೂ ಪಶ್ಚಾತ್ತಾಪಗೊಂಡವರೂ, ಅಂತಾ ಕೆಲಸವನ್ನು ಮುಂದೆ ಯಾವಾಗಲೂ ಮಾಡುವದಿಲ್ಲವೆಂದು ತಮ್ಮ ಅಪ್ತರೆದುರಿಗೆ ಪ್ರತಿಜ್ಞೆಯ ಮಾಡಿಕೊಂಡರೂ, ಹಿಂದಿನ ಕೃತ್ಯಗಳಿಗಾಗಿ [illegible] ಮೊದಲಾದ [illegible] ಪದಾರ್ಥಾದಿಗಳ ಮೂಲಕವಾಗಿಯೂ, ಅಗ್ನಿ ಸತ್ಕಾರಾದಿಗಳ ಮೂಲಕವಾಗಿಯೂ, ತಪಸ್ಸು ವ್ರತಗಳಾದವುಗಳ ಮೂಲಕವಾಗಿಯೂ, ಶರೀರ ದಂಡನೆ ಮಾಡುವಂತೆ ಹೊರಗೆ ವ್ಯಕ್ತಪಡಿಸಿದರೂ, ಮೇಘ ಪಟಲದಿಂದ ರೋಹಿತವಾದ ಸೂರ್ಯಬಿಂಬದಂತೆ ಅವರ ಜ್ಞಾನ ಪ್ರತಿಜ್ಞಾ ಪ್ರವರ್ತನಗಳೆಲ್ಲವೂ ತಮಸ್ಸಿನೊಳು ಮಗ್ನವಾಗಿಹೋಗಿ ಮರಳಿ ಅಂತಾ ಕೃತ್ಯಗಳನ್ನೇ ಮಾಡಲೆತ್ನಿಸುವರು. ಮೇಲೆ ತಿಳಿಸಲ್ಪಟ್ಟ ಕಾರಣಗಳಿಂದ ಪ್ರಪಂಚದಲ್ಲಿ ಮನುಷ್ಯನಿಗೆ ಸರ್ವ ದೋಷಗಳಿಗೂ, ಸಕಲಾನರ್ಥಗಳಿಗೂ, ಮದ್ಯವೇ ಮುಖ್ಯಕಾರಣವಾಗಿದೆಯಾಗಿ ಅದನ್ನು ಕುಡಿಯುವವರು ಕಾರ್ಯಾಕಾರ್ಯಗಳು, ವಾಚ್ಯಾವಾಚ್ಯಗಳು, ಭಕ್ಷ್ಯಾಭಕ್ಷ್ಯಗಳು, ಗಮ್ಯಾಗಮ್ಯಗಳೆಂಬ ಭೇದಗಳಿಲ್ಲದೆ ವರ್ತಿಸುವದರಿಂದ ಅವರು ಅತಿನೀಚಗಳಾದ ಕೃತ್ಯಗಳಿಗೋಸ್ಕರ ದಂಡಿಸಲ್ಪಟ್ಟು ಪರಲೋಕದೊಳು ಸಹ ನಾನಾವಿಧ ಶಿಕ್ಷೆಗಳಿಗೂ, ಶಾಶ್ವತವಾದ ನರಕಯಾತನೆಗೂ, ಪಾತ್ರರಾಗಬೇಕಾಗುವದು. ಮದ್ಯಪಾಯಿಗಳಿಗೆ ಬರುವ ಸಂಭವಿಸುವ ಅವಸ್ಥೆಗಳನ್ನು ಕುರಿತು ಒಬ್ಬ ಕವಿಯು, ಚಮತ್ಕಾರವಾದ ಒಂದು ಶ್ಲೋಕವನ್ನು ರಚಿಸಿರುತ್ತಾನೆ. ಯೇನೆಂದರೆ–

॥ಶ್ಲೋ॥ ಶುಕಪಿಕೋಬಕಶ್ಚೈವವಾನರೋರಾವಣಸ್ತಥಾ। ಕರ್ಣಶ್ಚಕುಂಭಕರ್ಣಶ್ಚ ತ್ರಿಸೂಲೀ ಸಪ್ತಲಕ್ಷಣಾ॥

ಅಂದರೆ ಮದ್ಯವೊದಲಾದ ಮಾದಕ ಪದಾರ್ಥಗಳಂ ಸೇವಿಸುವದರಿಂದ ಒಬ್ಬನು ಗಿಣಿಯಂತೆ ಸುಮ್ಮನೆ ಮಾತನಾಡುತಲಿರುವನು; ಮತ್ತೊಬ್ಬನು ಕೋಗಿಲೆಯಂತೆ ಹಾಡುತಲಿರುವನು, ಪರರೊಬ್ಬನು ಕೊಕ್ಕರೆಯಂತೆ ನಿಶ್ಚಲನಾಗಿ ಕುಳಿತಿರುವನು; ಅನ್ಯನೊಬ್ಬನು, ಕೋತಿಯಂತೆ ಹಾರಾಡುತಿರುವನು; ಇತರನೊಬ್ಬನು, ರಾವಣನಂತೆ ಕಾಮಾತುರನಾಗಿ ಜಾರತ್ವವಂ ಕೆದುವನು; ಬೇರೊಬ್ಬನು ಕರ್ಣನಂತೆ ಇದ್ದದ್ದನ್ನೆಲ್ಲ ಅನ್ಯರಿಗೆ ಕೊಟ್ಟು ನಿರ್ಗತಿಕನಾಗುವನು; ಇನ್ನೊಬ್ಬನು ಕುಂಭಕರ್ಣನಂತೆ ಯಾವಾಗಲೂ ನಿದ್ರೆಗೈಯುತ ಮಂಪರದೊಳಿರುವನೆಂದು ಭಾವವು. ಮೇಲೆ ಉದಹರಿಸಲ್ಪಟ್ಟ ಮದ್ಯಪಾನವು ಮಹದನರ್ಥಕಾರಿ ಯೆಂಬದಕ್ಕೆ ದೃಷ್ಟಾಂತವಾಗಿ ಒಂದು ಗ್ರಂಥದಲ್ಲಿ ಬರೆಯಲ್ಪಟ್ಟಿರುವ ಪೂರ್ವ ಕಥೆಯನ್ನು ಸಂಗ್ರಹವಾಗಿ ಇದಡಿ ತಿಳಿಸುವೆವು. ಏನೆಂದರೆ:—ಪೂರ್ವಕಾಲದಲ್ಲಿ ಒಬ್ಬ ಬಾದಷಾನ ಪ್ರಭುತ್ವದೊಳು ಪ್ರಸಿದ್ಧನಾದ ಒಬ್ಬ ನ್ಯಾಯಾಧಿಪತಿಯು ಬಹಳ ವಿದ್ಯಾವಂತನಾಗಿಯೂ, ಸ್ವಮತಾಚಾರಗಳಲ್ಲಿ ಆಸಕ್ತಿಯುಳ್ಳವನಾಗಿಯೂ, ದೈವಭಕ್ತಿಯುಳ್ಳವನಾಗಿಯೂ ಇದ್ದನು. ಅತನ ಕುಮಾರನು ಸಹ ಅವನಿಗಿಂತ ಪಂಡಿತನಾಗಿಯೂ ಗೌರವ್ಯನಾಗಿಯೂ ಇರುತಿದ್ದನು. ಹೀಗಿರುವಲ್ಲಿ ಒಂದಾನೊಂದು ರಾತ್ರಿಯೊಂದು ಪಿಶಾಚವು ಬ್ರಹ್ಮಧಾರಿಯಾಗಿ ನ್ಯಾಯಾಧಿಪತಿಯ ಮಗನ ಬಳಿಗೆ ಬಂದು, [illegible] ಅವನು [illegible] ತನ್ನ ಕತ್ತಿಯಿಂದ ಕಡಿಯಲಾರಂಭಿಸಲು, ಅವನು ಬಹಳ ಬೇಡಿಕೊಂಡು ಪಿಶಾಚವು ಹೇಳುವಂತೆ ನಡೆಯುವದಾಗಿ ಒಡಂಬಟ್ಟು ಅದಕ್ಕೆ ವಿಧೇಯನಾದನು. ಆಗ ಪಿಶಾಚವು ತನ್ನ ಸಂಗಡ ಅವನ ಕರೆದುಕೊಂಡು ನಿದ್ರಿಸುತಿದ್ದ ಅವನ ತಂಗಿಯ ಮತ್ತು ತಾಯಿಯ ಬಳಿಗೆ ಹೋಗಿ ತಂಗಿಯನ್ನ ರಮಿಸುವಂತೆ ಆಜ್ಞಾಪಿಸಿತು. ಆ ನ್ಯಾಯಾಧಿಪತಿಯ ಮಗನು ಅಸಹ್ಯಪಟ್ಟು [illegible] ಅಕೃತ್ಯವನ್ನು ತಾನು ಮಾಡಲಾರನೆಂತಲೂ [illegible] ಪಿಶಾಚವು ಹೇಳಿದರೆ ಆ ನೀಚ ನಡತೆಯನ್ನು ಹೇಳಿದನು. ಆಗ ಪಿಶಾಚವು ಅದಕ್ಕೆ ಒಪ್ಪದೆ ಅವನನ್ನು ಅವನ ತಾಯಿಯ ಬಳಿಗೆ ಕರೆದುಕೊಂಡು ಹೋಗಿ ತನ್ನ ಕತ್ತಿಯನ್ನು ಅವನ ಕೈಗೆ ಕೊಟ್ಟು ಮುದುಕಿಯಾದ ನಿನ್ನ ತಾಯಿಯನ್ನು ಕಡಿಯೆಂದು ಹೇಳಿತು. ಅದಕ್ಕೂ ಸಹ ಅವನು ಸಮ್ಮತಿಸದೆ ನಿಷಿದ್ಧ ಪಾಪಗಳನ್ನು ಬಿಟ್ಟು ಬೇರೊಂದನ್ನು ತಿಳಿಸೆಂದು ಬೇಡಿಕೊಂಡದರಿಂದ ನಿತ್ಯವೂ ಸ್ವಲ್ಪ ಸಾರಾಯಿಯನ್ನು ಕುಡಿಯುತಲಿರಬೇಕೆಂತಲೂ, ಯಾವ ದಿನ ಕುಡಿಯುವದಿಲ್ಲವೋ ಆ ದಿನ ನಿನ್ನಂ ಕಡಿದುಬಿಡುವೆನೆಂತಲೂ ಹೇಳಿತು. ಅದಕ್ಕೆ ಖಾಜಿಯ ಮಗನು ಸಮ್ಮತಿಸಿದ್ದರಿಂದ ಪಿಶಾಚವು ಅವನನ್ನು ಬಿಟ್ಟು ಹೋಯಿತು. ತರುವಾಯ ಖಾಜಿಯ ಮಗನು ರಹಸ್ಯವಾಗಿ ಪ್ರತಿದಿನವೂ ಸ್ವಲ್ಪ ಸ್ವಲ್ಪವಾಗಿ ಮದ್ಯಪಾನವಂ ಮಾಡುತಲಿರುವಲ್ಲಿ ಈ ವಿಷಯವು ಪಟ್ಟಣದೊಳೆಲ್ಲ ಪ್ರಚುರವಾಗಲು, ಖಾಜಿಯು ಇಂತಾ ಅಕೃತ್ಯವನ್ನು ಮಾಡುವ ಮಗನು ತನ್ನ ಮನೆಯಿಂದ ಹೊರಡಿಸಿಬಿಟ್ಟನು. ತರುವಾಯ ಖಾಜಿಯ ಮಗನು ನಿಃಶಂಕನಾಗಿ ಕುಡಿಯುತ, ಸಾರಾಯಿ ಅಂಗಡಿಗಳಲ್ಲಿಯೂ ಬೀದಿಗಳಲ್ಲಿಯೂ ಬಿದ್ದು ಹೊರಳಾಡುತಲಿದ್ದನು. ಹೀಗಿರುವಲ್ಲಿ ಒಂದಾನೊಂದು ರಾತ್ರಿವೇಳೆಯಲ್ಲಿ ಅಮಿತವಾಗಿ ಕುಡಿದು ಪ್ರಜ್ಞೆಯಿಲ್ಲದೆ ತಂದೆಯ ಮನೆಗೆ ಬಂದು ಆಗ ನಿದ್ರಿಸುತಿದ್ದ ತಂಗಿಯನ್ನು ಬಲಾತ್ಕರಿಸಲೆತ್ನಿಸಲು, ಆಗ ಅವಳು ಕೂಗಿದಳು. ಅದನ್ನು ಕೇಳಿ ತಾಯಿ ಓಡಿಬರಲು, ಆಕೆಯನ್ನು ಬಲಾತ್ಕರಿಸಿದನು. ಆಗ ಅವರಿಬ್ಬರೂ ಕೂಗಿದರಾಗಿ, ಆ ಶಬ್ದವನ್ನು ಕೇಳಿ ತಂದೆಯು ಬಂದನು. ಆ ಸಮಯದಲ್ಲಿ ಮಗನು ಅಲ್ಲಿದ್ದ ಒಂದು ಕತ್ತಿಯಿಂದ ತಂದೆಯನ್ನು ಕಡಿಯುವದಕ್ಕೆ ಹೋದನು. ಆಗ ಪಿಶಾಚವು ಬಂದು ಖಾಜಿಯ ಮಗನನ್ನು ಹಿಡಿದುಕೊಂಡು, ಎಲೈ ಭ್ರಾಂತನೇ! ಈಗ ನೀನು ಯಾವ ಕೆಲಸಗಳನ್ನು ಮಾಡಲಾರೆಂದಿದೆ

ಯೇ ಲ್ಪುಗಳನ್ನು ... ನೋಡಲೇ ಹಾಡ ಹೇಳದ್ದೆನಲ್ಲವೇ? ಆದರೆ ಆಗ ನೀನು ಅಂಜಿಬಿ, ಆಗಲಾವರೋ ನೀನೇ ನಿಶ್ಶಂಕೆಯಾಗಿ ಮಾಡಿ ಬಿ, ನಿನ್ನ ಬುದ್ಧಿಯೂ ವಿವೇಕವೂ ಯೇನಾಯಿತು? ಸ್ವಲ್ಪ ಸಾರಾಯಿಯಿಂದಲ್ಲವೆ ನಾನು ಹೇಳದ ಕೆಲಸಗಳನ್ನೆಲ್ಲ ನೀನಾಗಿಯೇ ಮಾಡುತ್ತ ನನಗೆ ವಿಧೇಯನಾದಿ, ಎಂದು ಹೇಳಿ ಅಸನು ಬಿಟ್ಟು ಹೋಯಿತು.

ಆದದರಿಂದ ಇಂತಾ ಅನಿಷ್ಟಗಳಿಗೆಲ್ಲ ಕಾರಣವಾಗಿರುವ ಮದ್ಯವು ಸರ್ವಜನಗಳಿಂದಲೂ ಈಗ ಪರಿಗ್ರಹೀತವಾಗಿ ದಾರಾಳವಾಗಿ ಉಪಯೋಗಿಸಲ್ಪಡುತಲಿರುವದರಿಂದ ದುಷ್ಟವಾದ ಈ ಅಬಿರುಚಿಯನ್ನು ಪ್ರಯತ್ನ ಪೂರ್ವಕವಾಗಿ ಬಿಟ್ಟು ಸುಖಿಸುವಂತೆ ಗವರ್ನಮೆಂಟನವರಾದರೂ ಜನಗಳಂ ಬಲಾತ್ಕರಿಸಬೇಕೆಂದು ಕೋರುವೆವು,

Occasional Notes.

ಸ್ವಮಿತ್ರವಿನ್ಯಾಸ

Discovery of gold and rubies.—ಪವಿತ್ರ ಸ್ಟರಾದ ಬರ್ಮಾದೇಶದ ಅರಸರಾದ ತೀಬೂರವರಿಂದ ಉತ್ತರ ಬರ್ಮಾದೇಶದಲ್ಲಿ ಗುತ್ತಿಗೆಗೆ ಕೊಡಲ್ಪಟ್ಟ ಜಂಗ್ಲಿಗಳಲ್ಲೊಂದರಲ್ಲಿ ಕೆಂಪುಗಳೂ ಚಿನ್ನವೂ ದೊರತಂತೆ ಒಂದಾನೊಂದು ಪತ್ರಿಕೆ ಹೇಳುತದೆ. ... ಲಕ್ಷ್ಮೀ ... ಕಾಲದಲ್ಲಿ ... ಯುವಲ್ಲವು.

Loot at Mandalay.—ಬರ್ಮಾದೇಶದ ರಾಜಧಾನಿಯಾದ ಮಾಂಡಲೇ ಪಟ್ಟಣಕ್ಕೆ ಒಂದು ... ಸರಕಾರಿಗಿರು ... ಮುಂದೆ ... ಪ್ರಾಣಗಳನ್ನುಳಿಸಿ ... ಬಿಟ್ಟು ಹೊರಗೆ ... ದೇಶದ ಪತ್ರಿಕೆಯೊಂದು ಹೇಳುತಿದೆ.

Salute of guard of honour to the Chief ... ಲೋಪ ಲಭವಾ ... ವಾ ಯೆರವು ... ವಪ್ಪುವುದಕ್ಕೆ ... ವರ್ಜನವನ್ನು ... ಪೀಠವೀಯೆಂದು ... ವಾ ... ರುಪದುಗ ಪ್ರಕಟಿಸಲ್ಪಟ್ಟಿರುತದೆ.

A liberal donation.—ಬಾಬು ... ಚಂದ್ರರಾಯ್ ಯೆಂಬುವರು ಮುಖ್ಯ ... ಇಂಗ್ಲಿಷ್ ... ಟ್ಟು ಈಗ ... ಕಾರ್ಯವು ನಡೆಯುತಿರುವದು ... ಸ್ಟೆ ... ಪ್ರಯತ್ನಕ್ಕೆ ಸಹಾಯಕವಾಗಿ ... ಮಹಾರಾಜರವರು ... ರೂಪಾಯಿಗಳು ಕೊಟ್ಟರೆಂದು ಕೇಳುವದಕ್ಕೆ ಬಹಳ ಸಂತೋಷಿಸುತ್ತೇವೆ.

The Madras Government and the Finance Committee.—ಇಂದ್ರ ರಾಜ್ಯದ ಖಚ್ಚು ವೆಚ್ಚಗಳನ್ನು ತನಿಖೀಮಾಡಿ ವ್ಯವಸ್ಥೆ ಪಡಿಸುವದಕ್ಕಾಗಿ ಏರ್ಪಾಡಾಗಿರುವ ಕಮಿಟಿಯವರು ಬರುವತಿಂಗಳ ... ನೇ ತಾರೀಖಿನಲ್ಲಿ ಮದರಾಸಿಗೆ ಬರುವರಾಗಿ ನಿರೀಕ್ಷಿಸಲ್ಪಟ್ಟಿರುವದರಿಂದ ಆಕಾಲದಲ್ಲಿ ಹಾಜರಿದ್ದು ಅವರನ್ನು ಬರಮಾಡಿಕೊಳ್ಳುವದಕ್ಕಾಗಿ ಮದರಾಸುಗವರ್ನರವರು ತಮ್ಮ ಮಂತ್ರಾಲೋಚಕ ಸಭೆಯವರೊಡನೆ ಬರುವತಿಂಗಳ ... ನೇ ತಾರೀಖಿನಲ್ಲಿ ನೀಲಗಿರಿಯಿಂದ ಮದರಾಸಿಗೆ ವಾಪಸ್ಸುಬಂದು ಸೇರುವರೆಂದು ನಿರೀಕ್ಷಿಸಲ್ಪಟ್ಟಿರುತ್ತಾರೆ.

A move in the right direction.—ಮೈಸೂರು ಸಂಸ್ಥಾನದ ಪ್ರಸ್ತುತ ದಿವಾನರವರು ತಮ್ಮ ಕಾದೆಗಳಾದ ಸರ್ ಸಾಲಾರ್ ಜಂಗರವರ ಕಾಲದಲ್ಲಿ ಅವರು ನಡೆಸುತಬಂದಂತೆ, ವಾರಕ್ಕೆ ಒಂದಾವರ್ತಿ ಒಹಿರಂಗವಾಗಿ ದರ್ಬಾರ್ ಮಾಡಬೇಕೆಂದು ಯೋಚಿಸುತಲಿರುವರೆ ಅಲ್ಲಿನ ಪತ್ರಿಕೆಯೊಂದು ತಿಳಿಸುತಿದೆ. ಅಂತಾ ದರ್ಬಾರುಗಳಲ್ಲಿ ದಿವಾನರಾದವರು ಸಂಸ್ಥಾನದ ಪ್ರಜೆಗಳ ... ಹವಾಲುಗಳನ್ನು ಕೇಳಿ ಅದಕ್ಕೆ ತಕ್ಕ ಪರಿಹಾರವು ಕಲ್ಪಿಸಿದಹೊರತು ವಾರಕ್ಕೊಮ್ಮೆ ದರ್ಬಾರ್ ನಡಸಿದರೂ ಪ್ರಯೋಜನ ಪ್ರಟಾಗಲಾರದು.

A grand Durbar.—ಈ ತಿಂಗಳ ೩ನೇ ತಾರೀಖಿನಲ್ಲಿ ಬರೋಡೆ ಗಾಯಕವಾಡರವರು ಒಂದು ಪ್ರಬಲ ದರ್ಬಾರ್ ಮಾಡಿ ತಮ್ಮ ಸಂಸ್ಥಾನಕ್ಕೆ ಸೇರಿದ ಪ್ರಮುಖರು ಮತ್ತು ಕೌನ್ಸಿಲರ್‌ಗಳ ಸಮಕ್ಷಮದಲ್ಲಿ ತಮ್ಮ ಹೊಸ ದಿವಾನರಾದ ರಾವ್ ಬಹದೂರ್ ಲಕ್ಷ್ಮಣ ಜಗನ್ನಾಥ್ ಯೆಂಬವರಿಗೆ ಗೌರವಾರ್ಥವಾಗಿ ಸುಮಾರು ೬,೦೦೦ ರೂಪಾಯಿಗಳ ಕ್ರಯ ಬಾಳುವವಸ್ತ್ರಾಭರಣಗಳು ... ಕೊಟ್ಟದ್ದಲ್ಲದೆ ... ನಾಲ್ಕು ದಿವಾನಗಿಗೆ ಸಹ ಗೌರವಾರ್ಥವಾದ ... ನಾಂ ಕೊಟ್ಟರೆಂದು ತಿಳಿಯಲಾದೆವು. ಪ್ರಜೆಗಳ ... ವಾರಕ್ಕೊಂದು ... ತಾ ಮರ್ಯಾದೆಗಳು ನಡೆಯುವದು ಸಹಜವಾಗಿರುವದು.

A Council of Regency.—ಗ್ವಾಲಿಯರ್ ಸಂಸ್ಥಾನದ ಮಹಾರಾಜರವರು ಬಾಲಕರಾಗಿರುವದರಿಂದ ... ರಾಜ್ಯಭಾರಕ್ಕಾಗಿ ... ಕೌನ್ಸಿಲ್ ... ಈ ಸಭೆಯ ಮೆಂಬರ್ಗಳ ... ಇವರ ಸರ್ಕಾರದ ಕೌನ್ಸಿಲ್ ... ರಾಜ್ಯಭಾರವನ್ನು ... ಯಾವ ... ?

The rebels in Upper Burmah.—ಕಡೆಗೆ ಬರ್ಮಾದೇಶದ ... ಲಕ್ಷಣ ... ರಾಜ್ಯ ಸಿದ್ಧವಾಗಿರುತಿದೆ. ಈ ನಿಯಮಗಳನ್ನೆಲ್ಲ ... ದರ್ಬಾರ್ ... "ಇರುವ ಈ ದೇಶದ ದೌರ್ಬಲ್ಯ ... ಸಬ್ಬಕ್ಕೆ ... ಎಂದು ಇಂಡಿಯನ್ ... ಪತ್ರಿಕೆ ಹೇಳುತಿದೆ.

A very proper reply.—ಇಂಡಿಯಾ ರಾಜ್ಯದೊಳು ರಷಿಯಾದೇಶೀಯರ ಪ್ರವೇಶವನ್ನು ನಿರೋಧಿಸುವ ಉದ್ದೇಶದಿಂದ ಕಾಶ್ಮೀರದೇಶದಲ್ಲಿ ಬ್ರಿಟಿಷ್ ಸೇನೆಯನ್ನಿಡುವದಕ್ಕೆ ... ಡಲ್‌ಹೌಸಿ ... ಸರದಾರರನ್ನು ಕೇಳಲಾಗಿ, ಕಾಬೂಲ್ ಅಮೀರರವರಿಗೆ ಕೊಡುವಂತೆ ... ಕೆಳಗೆ ... ಬ್ರಿಟಿಷರವರ ರೆಸಿಡೆಂಟ್ ತಾವು ... ಅವರು ಜವಾಬ್ ಕೊಟ್ಟರು ... ಲಾರ್ಡ್ ಡಫರಿನ್‌ ಸಾಹೇಬರವರಿಗೆ ಬಹಳ ಆಗ್ರಹ ಪುಟ್ಟಿ, ಅವರಿಗೆ ಜವಾಬ್ ಕೊಡುವಲ್ಲಿ, ಮಹಾರಾಜರವರು ಯಾರ ದುರ್ಬೋಧನೆಗೋ ಕಿವಿಕೊಟ್ಟು ಮೇಲಿನಂತೆ ಜವಾಬ್ ಕೊಟ್ಟಿರುತ್ತಾರೆ, ಅವರು ಕಪ್ಪಬಡಿ ಸಂಸ್ಥಾನಾಧಿಪತಿಯಾಗಿರುತ್ತಾರೆ, ಕಾಬೂಲ್ ಅಮೀರರಾದರೋ ಸ್ವತಂತ್ರಾಧಿಕಾರವುಳ್ಳ ಅರಸರು, ಬ್ರಿಟಿಷ್ ರಾಜ್ಯಕ್ಕೂ ಕಾಶ್ಮೀರಕ್ಕೂ ಕ್ಷೇಮಕ್ಕಾಗಿ ... ಬ್ರಿಟಿಷರವರ ಉದ್ದೇಶ ನೆರವೇರುವದಕ್ಕೆ ಅನುಕೂಲವಾಗಿರುವದು, ಇಂತ್ತರಾಜ್ಯದ ನಿರುಪಾಧಿಕಸ್ಥಿತಿಗೆ ಅವಶ್ಯಕವೆಂದು ಕಂಡುಬರುವಲ್ಲಿ, ಕಾಶ್ಮೀರ ಗವರ್ನಮೆಂಟನವರು ಮಹಾರಾಜರವರಿಗೆ ವಿಧೇಯರಾಗಿ, ತಮ್ಮ ದೇಶದಲ್ಲಿ ಬ್ರಿಟಿಷ್ ಸೇನೆಯನ್ನಿಡುವದಕ್ಕೆ ಅವಕಾಶಕೊಡಲು ಬದ್ಧರಾಗಿರುತ್ತಾರೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದೆಂದು ತಿಳಿಸಿದರು.

LOCAL AND PROVINCIAL NEWS

ಒಳದೇಶಮತ್ತು ತಾಲ್ಲೂಕುಸಮಾಚಾರಗಳು.

A public holiday.—ನೆನ್ನೆ ಶನಿವಾರದಿನ ... ಅವಸ್ಥೆಯು ... ಯಿಂದ ... ಈ ಸಂಸ್ಥಾನದ ... ಗಳಿಗೂ ರಜಾ ಕೊಡಲ್ಪಟ್ಟಿತು.

The weather.—ಪೂರ್ವಸ್ಥಿತಿಯು ಹಿಂದಿನ ವಾರದಲ್ಲಿ ತಿಳಿಸಿದಂತೆಯೇ ಯಿರುವದು. ಸದಾ ಮಳೆ ಬೀಳುತಲಿ ... ಸಂಚಾರಕ್ಕೆ ... ಕಾಟ ಕೇವಲ ಅಲ್ಪವಾಗಿದೆ. ... ಗಳು ಏಕರೂಪವಾಗಿವೆ. ... ವಿಷಯದಲ್ಲಿ ಜನಗಳ ಕಷ್ಟವನ್ನು ಹೇಳಲಶಕ್ಯವು.

The annual Races.—ಈ ಪ್ರಾಂತ್ಯದಲ್ಲಿ ... ಪಂದ್ಯದ ... ತೆ ಈ ಸ ವತ್ಸರದಲ್ಲಿ ... ಏನ ... ಈ ... ವತ್ತು ... ಉದ್ದೇಶದಿಂದ ... ಅರಸರೂ ... ಪುರದ ಅರಸರು ಸಹ ದಯಮಾಡಿರುವಂತೆ ... ಮರಳಿ ನಾಳೇ ಸೋಮವಾರ, ಬೃಹಸ್ಪತಿವಾರ, ಶನಿವಾರಗಳಲ್ಲಿ ... ನಡೆಯುವದು. ಇದನ್ನು ... ಗ್ರಾಮಗಳ ... ನಡೆಯುತ್ತಾರೆ.

Assault.—ಸ್ಟೂರ್ ಇನ್‌ಸ್ಪೆಕ್ಟರ್ ನಾಗಯ್ಯ ನಾಯುಡು ಒಬ್ಬ ಪೊಲೀಸ್ ಕಾನ್‌ಸ್ಟೇಬಲನ್ನು ... ಕೋರ್ಟಿನಲ್ಲಿ ... ಸ್ಪೆಕ್ಟರ್ ... ವಿಚಾರಣೆಗಾಗಿ ... ಕ್ಯಾಪ್ ... ಗವರ್ನಮೆಂಟಿನವರ ಹುಕುಂ ... ಈ ಮೊಕದ್ದಮೆಯಲ್ಲಿ ಡಿಸ್ಟ್ರಿಕ್ಟ್ ಕೋರ್ಟಿನವರ ಅಭಿಪ್ರಾಯವನ್ನು ಕೇಳಿರುವದರಿಂದ ಮುಂದಿನ ವಿಚಾರಣೆಯು ಸದ್ಯಕ್ಕೆ ನಿಂತಿರುತಿದೆ.

CORRESPONDENCE.

ಅಯ್ಯಾ—ಈಗ ನನಗೆ ಪ್ರಬಲ ಸಂಶಯವೊಂದು ಪುಟ್ಟಿರುವದು ಏನೆಂದರೆ—ನಾನು ಸ್ಕೂಲಿನಲ್ಲಿ ಕ್ರಮವಾಗಿ ಓದಿಕೊಳ್ಳುತಿದ್ದೆನಲ್ಲ, ಆದರೆ ... ಅಕ್ಷರಗಳನ್ನು ಕಾಗದದ ಮೇಲೆ ಬರೆಯುತಿದ್ದ ಸಾಧಾರಣ ಪದಗಳನ್ನು ... ವಾಕ್ಯವಾಗಿ ಬರೆಯುತಿದ್ದ ... ಕಲಿತುಕೊಂಡಿರುತ್ತೇನೆ. ... ಜ್ಞಾನದೊಡನೆ ನಾನು ಈ ಸಕಲ ... ಕಲಿಯಬೇಕೆಂದು ... ಈಗ ಜನಗಳು ವಿದ್ಯಾಭ್ಯಾಸ ... ಸನ್ಮಾರ್ಗಗಳೂ ಉಂಟಾಗುವವೆಂದೂ, ಅದಿಲ್ಲದವನು ವಾನರನೆಂದೂ, ಅನೇಕರು ಹೇಳುತ್ತಾರೆ. ವಿದ್ಯೆಯೆಂದರೆ ಯೇನು? ಅದನ್ನು ಕಲಿತವನು ಹ್ಯಾಗೆ ವರ್ತಿಸುವನೆಂದು ಕೇಳಿದರೆ ಅವರಲ್ಲಿ ಕೆಲವರು ಜವಾಬೇ ಕೊಡುವದಿಲ್ಲವು. ಇನ್ನು ಕೆಲವರು, ನೀವು ಹೇಳಿದರು, ನಿಮಗೆ ನಾವು ಹೇಳಿದರೆ ಅದು ನೀವು ಗ್ರಹಿಸಲಾರಿರಿ, ಆದದರಿಂದ ಜವಾಬ್ ಕೊಟ್ಟು ಪ್ರಯೋಜನವಿಲ್ಲವು ಎನ್ನುತ್ತಾರೆ. ಹೀಗೆ ಜವಾಬ್ ಕೊಡದೆ ಇರುವವನನ್ನು ಕಂಡು ನಾವಾಗಿ ಎಫ್. ಎ., ಬಿ. ಎ., ಎಂ. ಎ., ಎಂಬ ಅಕ್ಷರಗಳನ್ನು ಅಂಕಿತವಾಗಿ ಪೃಷ್ಠದ ಹೆಸರುಗಳನ್ನು ನಮೂದಿಸಿ ಇವರು ವಿದ್ಯಾವಂತರೇ ಎಂದು ಕೇಳಿದರೆ ಹಾಗೇ ತಿಳಿದುಕೊಳ್ಳಿರಿ ಎಂದು ಹೇಳುತ್ತಾರೆ. ಹಾಗಾದರೆ ಮದರಾಸ್ ಹೈಸ್ಕೂಲಿನಲ್ಲಿ ಹುಡುಗರು ಓದುತಿರುವುದೆಲ್ಲಾ ಇದನ್ನೇನೋ ವಿದ್ಯಾಭ್ಯಾಸವೆಂತ ಕರೆಯುವದೆಂದು. ಕೇಳಿದರೆ ಅದಕ್ಕಿಂತ ಪ್ರತ್ಯೇಕವಾದದ್ದು ಬೇರೊಂದುಂಟೆಂದು ಅನುಮೇಯಿಸಲಿಕ್ಕೆ ವಿಷಯವೇ ಇಲ್ಲವೆನ್ನುತ್ತಾರೆ. ಮೇಲ್ಕಂಡಂತ ವ್ಯಾಖ್ಯ ಮಾಡಿದವರಲ್ಲಿಯೂ ಓದಿಕೊಂಡವರಲ್ಲಿಯೂ ಸಹ ನಮ್ಮಂತೆ ಸುಗುಣ ದುರ್ಗುಣಗಳು ಕಾಣುತಿವೆ. ಸುಳ್ಳು, ಮೋಸ, ಪಿವಾರ್ಟೋರಿತನ, ವ್ಯಭಿಚಾರ ಮುಂತಾದವು ವ್ಯಾಖ್ಯ ಮಾಡಿದವರಲ್ಲಿಕೂಡ ಇರುವದರಿಂದ ಇದು ಯಂತಾ ಯೋಗ್ಯತೆಯಾಗಿರಬಹುದೆಂದು ಕೇಳಿದರೆ ಅಂತವರ ಯೋಗ್ಯತೆಯನ್ನು ಕಂಡು ಹಿಡಿಯಲಿಕ್ಕೆ ನಿಮಗೆ ಶಕ್ತಿ ಸಾಲದ್ದರಿಂದ ನಿಮಗೆ ಅರೀತಿ ತೋರುತಿದೆ. ಹೋದರೆ ಅವರಲ್ಲಿ ದುರ್ಗುಣಗಳಿಲ್ಲವೆಂದು ಹೇಳಬೇಡ್ತು ಹೋಗುತ್ತಾರೆ. ಅಯ್ಯಾ ಎಡಿಟರೆ! ಇಂತಾ ವಿದ್ವಾಂಸರನ್ನು ಸಹ, ಅವರ ಮೇಲೆ ಫಿರ್ಯಾದು ಬಂದಕಾಲದಲ್ಲಿ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್ ಸಾಹೇಬರವರು ಸರಕಾರದವರು ನಮ್ಮಂತೆಯೇ ಅವರನ್ನೂ ದಂಡನೆಗೊಳಪಡಿಸುತ್ತಾರೆ. ಸರಾಸರಿಯಾಗಿ ನೋಡುವದು ಗ್ರಾಮಾಂತರಗಳಿಗಿಂತ ಕಸಬಾ ಜಾಗಗಳಲ್ಲಿ ಅಧಿಕವಾಗಿರುತಿದೆ. ಶಹರಗಳಲ್ಲಿ ... ಲಂಡನ್ ರಾಜಧಾನಿಯಲ್ಲಿಯಂತೂ ಮಿತಿಯೇ ಇಲ್ಲವಂತೆ. ಅತ್ಯಾಕೆ ಯೆಂಬುದು ಕೈದಿಗಳು ... ಇವರಲ್ಲಿ ಅಧಿಕ ವಿದ್ವಾಂಸರಾದ ಲಾಯರು, ಬ್ಯಾರಿಸ್ಟರ್‌ಗಳಲ್ಲಿ ಮಿತಿಯೇ ಇಲ್ಲವು. ಹೀಗಿರುವದರಿಂದ ನನ್ನ ಮಕ್ಕಳನ್ನು ಯಾರಲ್ಲಿ ತರಬೇತಿ ಮಾಡಿಸಬೇಕು, ಯಾವದನ್ನು ಕಲಿಸಿದರೆ ವಿದ್ಯಾಭ್ಯಾಸ ಮಾಡಿದಂತೆ ಅವರು ಹೆಸರಿಡಾಗುವದೋ ದಯಮಾಡಿ ನಮ್ಮಂತಾ ಪಾಮರರಿಗೆ ತಿಳಿಯುವಂತೆ ಜವಾಬ್ ಕೊಡಬೇಕೆಂದು ಕೋರುವೆನು.

ಜಿಂಗಳೂರು. ಪಾಮರನು

What is Education.—ಹಿಂದೂ ಸ್ತ್ರೀಯರಿಗೆ ವಿದ್ಯಾಭ್ಯಾಸ ಮಾಡಿಸುವ ವಿಷಯದಲ್ಲಿ ಭಿನ್ನಾಭಿಪ್ರಾಯಗಳುಂಟಾಗಿ ಕೆಲವರು ಸ್ತ್ರೀಯರುಕೂಡ ಸಾಮಾನ್ಯೇನ ವಿದ್ಯಾಭ್ಯಾಸವು ಅವಶ್ಯಕರ್ತವ್ಯವೆಂತಲೂ, ಇನ್ನು ಕೆಲವರು, ಸ್ತ್ರೀಯರಿಗೆ ಅದು ಕೇವಲ ದುರ್ವಿನಯ ವ್ಯಾಮೋಹವನ್ನುಂಟುಮಾಡುವದರಿಂದ ಅವರಿಗೆ ಮಾತ್ರ ಅದು ಅನುಚಿತವಾದ್ದೆಂತಲೂ, ಜೀರೆ ಕೆಲವರು ವಿದ್ಯೆಗೆ ಸ್ವಾಭಾವಿಕವಾಗಿ ಪ್ರಕೃತ್ಯನುಗುಣವಾದ ಫಲಗಳನ್ನು ಅದು ಕೊಡುವದೆಂತಲೂ ಅಭಿಪ್ರಾಯಪಡುತ್ತಾರೆ. ವಿದ್ಯೆಯ ಸ್ವರೂಪವು ಯೋಚನೆಗಳನ್ನೂ ಅದರ ಪಡೆಯುತಕ್ಕ ಒಳ್ಳೆಯ ಮಾರ್ಗವನ್ನೂ ಸರ್ವಸಾಧಾರಣವಾಗಿ ನಮ್ಮವರು ಅರಿಯದೆ ಅಪಾರ್ಥಗಳನ್ನು ಮಾಡಿ ಅನ್ಯಥಾ ಪ್ರವರ್ತಿಸುವದರಿಂದ ಉಂಟಾಗಬಹುದಾದ ಅನೇಕ ಹಾನಿಯಂ ಕಂಡು ಒಬ್ಬೊಬ್ಬರೊಂದೊಂದು ಬಗೆಯಾಗಿ ಮೇಲೆ ಕಂಡಂತೆ ತಾತ್ಪರ್ಯಪಡಲಿಕ್ಕೆ ಕಾರಣವಾಗುತಿದೆ. ಈಗ ವಿದ್ಯಾರ್ಥವಾದ ಪದವೀ ವಿದ್ಯೆಯನ್ನು ಕುರಿತು ನಮಗೆ ತಿಳಿದಮಟ್ಟಿಗೆ ಈ ಸಂದರ್ಭದಲ್ಲಿ ವಿಚಾರ ಮಾಡುವೆವು. "ಅಜರಾಮರವತ್ಪ್ರಾಜ್ಞೋವಿದ್ಯಾರ್ಥಂಚಚಿಂತಯೇತ್" ಎಂಬದಾಗಿ ವಿದ್ಯೆಯು ಮನುಷ್ಯನಿಗೆ ಯಾವಾಗ್ಗೂ ಸಂಪಾದಿಸಬೇಕಾದ ದಸರೂಪವಾದದ್ದಾಗಿರುತಿದೆ. ಇದು ಐಹಿಕಾಮುಷ್ಮಿಕಗಳೆರಡರಲ್ಲಿ ಪ್ರಯೋಜನಗಳನ್ನೂ ಉಂಟುಮಾಡುವದೆಂದು ನೀತಿಜ್ಞರೆಲ್ಲರೂ ಹೇಳುತ್ತಾರೆ. "ಸ್ವರ್ಗಲೋಕೇಕಾಮಧುಗ್ಭವತಿ" ಎಂಬುವ ನ್ಯಾಯದಂತೆ ಇದು ಯುಕ್ತ

ವಾಗಿ ವಿನಿಯೋಗಿಸಿದರೆ ಕಾಮಧೇನೋಪಾದಿಯಲ್ಲಿ ಸಕಲ ಪ್ರಯೋಜನಗಳನ್ನೂ ಅದು ಕೊಡದೆ ಇರಲಾರದು. ಲೋಕದಲ್ಲಿ ಮನುಷ್ಯನಿಗೆ «ವೇದಯತೀತಿವಿದ್ಯಾ" ಎಂಬರೀತ್ಯಾ ಕರ್ತವ್ಯಾಕರ್ತವ್ಯ ಜ್ಞಾನವನ್ನುಂಟುಮಾಡುವದೇ ವಿದ್ಯೆಯೆನ್ನಿಸಿಕೊಳ್ಳುತ್ತದೆ. ಇಂತಾ ಜ್ಞಾನವು ಐಹಿಕಸುಖ ಸಂಪಾದಕವಾದದ್ದೊಂದು, ಆಮುಷ್ಮಿಕ ಪ್ರಯೋಜನಕಾರಿಯಾದದ್ದೊಂದು, ಈ ಪ್ರಕಾರ ಯೆರಡು ವಿಧವಾದದ್ದಾಗಿರುತ್ತದೆ. ಇವುಗಳಲ್ಲಿ ಮೊದಲನೆಯದು—ಕೃಷಿ ಶಿಲ್ಪವಾಣಿಜ್ಯ ರಾಜಸೇವಾದಿಗಳ ಮೂಲಕ ಪುರುಷನಿಗೆ ಸುಖ ಸಂಪತ್ತನ್ನುಂಟುಮಾಡುವದು. ಎರಡನೆಯದು—ವೇದ ಶಾಸ್ತ್ರಗಳನ್ನೂ ಮತ್ತು ಅವುಗಳಿಂದ ತಿಳಿಸಲ್ಪಟ್ಟ ವರ್ಣಾಶ್ರಮ ಧರ್ಮಾಚಾರಗಳನ್ನೂ ಬೋಧಿಸಿ ತನ್ಮೂಲಕ ಮೋಕ್ಷಸಾಧನೋಪಾಯವನ್ನು ಹುಡುಕಲಿಕ್ಕೆ ಪ್ರವೃತ್ತಿಯನ್ನುಂಟು ಮಾಡುವದು. ಏನಾಚೆ ವಿದ್ಯೆಯು ಸರ್ವಸುಖಸಾಧನವಾದದ್ದಾಗಿದ್ದರೂ ಅದು ಅಕ್ರಮವಾಗಿ ವಿನಿಯೋಗಿಸುವವರಿಂದ ತದನುಗುಣವಾದ ಫಲವನ್ನೇ ಕೊಡುವದು. ಹ್ಯಾಗಂದರೆ,—ಮನುಷ್ಯನ ಬುದ್ಧಿ ಪ್ರಮಾದದಿಂದ ಯುಕ್ತವಾದದ್ದು ಅಯುಕ್ತವಾಗಿಯೂ ಅಯುಕ್ತವಾದದ್ದು ಯುಕ್ತವಾಗಿಯೂ ತೋರಿದರೆ ಅಂತಾ ಭಾವನೆಯನ್ನು ಸಾಧಿಸುವಲ್ಲಿ ವಿದ್ಯೆಯು ಸಹಕಾರಿಯಾಗುತ್ತಿದೆಯೇ ಹೊರ್ತು ಬೇರಲ್ಲವು.

ಇಂತಾ ಶ್ಲಾಘ್ಯವಾದ ವಿದ್ಯೆಯು ಸಾಮಾನ್ಯವಾಗಿ ಈಗ ದುರ್ವಿಷಯಾಭಿನಿವೇಶಕ್ಕೆ ಸಹಾಯಕವಾಗಿರಲಿಕ್ಕೆ ಕಾರಣವನ್ನು ಆಲೋಚಿಸಿನೋಡಲಾಗಿ ಅಂತಾ ದುರ್ವಿಷಯಾಸಕ್ತಿಯೆಂಬವು ಕರ್ಮವಶಾತ್ ಮನದೊಳು ಅಂಕುರಿಸಿ ಬಾಹ್ಯೋಪಾಧಿಯಿಂದ ವೃದ್ಧಿಯನ್ನೈದುತಿದೆಯೆಂದು ತೋರುತಿದೆ. ಅದು ಹ್ಯಾಗಂದರೆ—ಸ್ಫಟಿಕವು ನಿರ್ಮಲವಾದದ್ದಾದರೂ ಅದನ್ನೊಂದು ನೀಲಮಣಿಯ ಸಮೀಪದಲ್ಲಿಟ್ಟರೆ ಅದಕ್ಕೆ ನೀಲತ್ವವು ಹ್ಯಾಗೆ ಉಂಟಾಗಿ ನೈಜತ್ವದ ತೋರುವದೋ ಅದೇ ಪ್ರಕಾರ ದೋಷಯುಕ್ತವಾದ ಮನಸ್ಸಿನಲ್ಲಿ ಪ್ರತಿಫಲಿತಗಳಾದ ವಿಷಯಗಳೆಲ್ಲವೂ ದುಷ್ಟಗಳಾಗಿಯೇ ಯಿರುವವು. ಮತ್ತು ಅವು ಬಾಹ್ಯವಿಷಯಗಳಿಂದ ಅಭಿವೃದ್ಧಿಯನ್ನೈದಿ ಸಂಕೋಚವಿಕಾಸಗಳನ್ನೈದುವವು. ಹ್ಯಾಗಂದರೆ—«ನಾಪಭ್ರಂಶಿತವೈನಮ್ಲೇಚ್ಛಿತವೈ" ಎಂಬದಾಗಿ, ಮ್ಲೇಚ್ಛಾದಿ ಅಪಭ್ರಂಶ ಭಾಷಾಭ್ಯಾಸ ಮಾತ್ರದಿಂದಲೇ ಕೃತಾರ್ಥರಾಗಿ, ಶಾಸ್ತ್ರಗಳಲ್ಲಿ ತಿಳಿಸಲ್ಪಟ್ಟಿರುವ ವಿಧಿನಿಷೇಧಗಳನ್ನು ತಿಳಿಯದೆಯೂ, ತಿಳಿದುಕೊಳ್ಳಲಿಕ್ಕೆ ಪ್ರಯತ್ನಪಡದೆಯೂ ಇರುವಣ; ಅನ್ಯದೇಶೀಯರಾಗಿಯೂ ವಿಜಾತೀಯರಾಗಿಯೂ ಇರುವವರಂತೆ ತಾವೂ ನಡೆಯಬೇಕೆಂಬ ಕೋರಿಕೆಯೂ, ಅವರ ವೇಷಭಾಷಾಚಾರಗಳಲ್ಲಿ ಅಭಿರುಚಿಯೂ ಪಡೆಯುವಣ, ಮ್ಲೇಚ್ಛ ಕಿರಾತ ಚಂಡಾಲಾದಿಗಳಲ್ಲಿ ಸಾಮ್ಯಬುದ್ಧಿಯು ಪಡೆಯುವಣ; ವರ್ಣಾಶ್ರಮ ಮತ ಧರ್ಮಾಚಾರಗಳಲ್ಲಿ ಅಶ್ರದ್ಧೆ; ಅಥವಾ ತ್ಯಾಜ್ಯವೆಂಬ ಭಾವನೆಯುಳ್ಳವರಾಗಿರುವಣ ಇಂತಾ ವಿಷಯಗಳನ್ನು ಸುಲಭವಾಗಿ ಗ್ರಹಿಸಿ ಪಠಿಸುವಂತಾ ಒಂದುಬಗೆ ಪಾಟವವು ಬುದ್ಧಿಗೆ ವಿದ್ಯಾ ಸಂಸ್ಕಾರದಿಂದ ಉಂಟಾಗುತ್ತಿದೆ. ಲೋಕದಲ್ಲಿ ವಿಷಯಗಳ ಸ್ವರೂಪಾನುಗುಣವಾದ ಉಪಯೋಗವೂ ತದನುಗುಣವಾದ ಫಲವೂ ಉಂಟಾಗುವದು ಪ್ರಸಿದ್ಧವಾದದರಿಂದ ವಿದ್ಯಾವಂತರಲ್ಲಿ ಯೇನಾದರು ದೋಷವಿದ್ದರೆ ಅದು ಅವರ ಬುದ್ಧಿ ದೋಷದಿಂದುಂಟಾಗಿ ಅದು ಅವರ ವಿದ್ಯಾಭ್ಯಾಸಕ್ರಮದಿಂ ವೃದ್ಧಿಯನ್ನೈದಿದ್ದಾಗಿರುವದು.

EXTRACTS

ಸರ್ಪದಂಶಕ್ಕೆ ಹೊಸ ಉಪಾಯ—ಸಿಂಹಳ (ಲಂಕಾ) ದ್ವೀಪದಲ್ಲಿರುವ ಒಬ್ಬ ಸರದಾರನ ಚಾಕರನಿಗೆ ಹಾವು ಕಡಿಯಲು ಆಗ ಆ ಸರದಾರನು ಅವನಿಗೆ ೪ ಗ್ಲಾಸ್ ನಿಂಬೇಹಣ್ಣಿನ ರಸವನ್ನು ಕುಡಿಯಲಿಕ್ಕೆ ಕೊಟ್ಟು ಹಾವು ಕಡಿದ ಭಾಗವನ್ನು ಬಿಟ್ಟು ಉಳಿದ ಯೆಲ್ಲಾ ಮೈ ಭಾಗಕಷ್ಟು ಅದೇ ರಸವನ್ನು ಚೆನ್ನಾಗಿ ತಿಕ್ಕಿ ಕಡಿದ ಸ್ಥಳಕ್ಕೆ ೩೦ ಜಿಗಳೆಗಳನ್ನು ಹಚ್ಚಿ ೫—೬ ನಿಮಿಷಗಳನಂತರ ಮತ್ತು ಅರ್ಧಗ್ಲಾಸ ರಸವನ್ನು ಕೊಟ್ಟು ಜಿಗಳೆಗಳು ಬಿದ್ದುಹೋದಮೇಲೆ ಆ ಜಾಗವನ್ನು ನೀರಿನಿಂದ ಚೆನ್ನಾಗಿ ತೊಳೆದು ಅನಂತರ ಪ್ರೋಟ್ಲೀಸ್ ಕಟ್ಟಿ ಮರೆಯೂ ಅರ್ಧಗ್ಲಾಸ ನಿಂಬೇಹಣ್ಣಿನ ರಸವನ್ನು ಕುಡಿಯಲು ಆ ಚಾಕರನು ಶುದ್ಧಿಗೆ ಬಂದನು ಆಗ ಅವನಿಗೆ ಸ್ವಸ್ಥವಾಗಿ ಮಲಗಿಕೊಳ್ಳುವದಕ್ಕಾಜ್ಞಾಪಿಸಿ ಅವನ ಸಮೀಪದಲ್ಲಿ ಇಬ್ಬರು ಪರಿಚಾರಕರನ್ನಿಟ್ಟು ಮೂರು ನಾಲ್ಕು ತಾಸಿಗೊಂದುಸಾರಿ ಹೊಸ ಪ್ರೋಟ್ಲೀಸ್ ಹಚ್ಚುವಂತೆ ಹೇಳಿದನು. ಈ ಪ್ರಕಾರ ಮಾಡಲು ಸರ್ಪನ ವಿಷವು ಅವನಿಗೆ ಸ್ವಲ್ಪವಾದರೂ ಬಾಧಿಸಲಿಲ್ಲವಂತೆ.

THE COST OF GOVERNORS

ಇಂಡ್ಯಾ ದೇಶದ ವಿವೇಕಪೂರ್ವಕವಾದ ಮತ್ತು ಮಿತವ್ಯಯಾಭಿವೃದ್ಧಿಯನ್ನು ಕುರಿತ ಪಸ್ತ್ಸಲಾ ರಿಪೋರ್ಟಿನಲ್ಲಿ ಮದರಾಸ ಗವರ್ನರವರ ತಲೆ ಸಾಲೀಯಾನಾ ೧೨,೭೮೦ ಪೌಂಡುಗಳಿಂತಲೂ, ಮುಂಬೈ ಗವರ್ನರವರ ತಲೆ ೧೨,೦೦೦ ಪೌಂಡುಗಳಿಂತಲೂ ನಮೂದಾಗಿದೆ. ಮದರಾಸ ಗವರ್ನರ ಕೈಕೆಳಗಿನ ಅಧಿಕಾರಿಗಳ ಮತ್ತು ಸ್ವಹಸ್ತೆ ಖರ್ಚುಗಳು ಸಾಲೀಯಾನಾ ೧೩,೦೮೮ ಪೌಂಡುಗಳಿಂತಲೂ, ಮುಂಬೈಗವರ್ನರಿಗೆ ಸದರೀ ಬಗೆ ೧೭,೬೭೭ ಪೌಂಡುಗಳಿಂತಲೂ, ಬಂಗಾಳೆ ಲೆಪ್ಟಿನೆಂಟ ಗವರ್ನರ ತಲೆ ೯,೬೦೦ ಪೌಂಡುಗಳಿಂತಲೂ, ಮತೆ ಖರ್ಚಿನಗ್ಗೆ ೬,೪೨೩ ಪೌಂಡುಗಳಿಂತಲೂ ನಮೂದಾಗಿದೆ. ಹೀಗೆಯೇ ರಾಜ್ಯಾದಳಿತದಲ್ಲಿ ದುಬಾರಿ ಖರ್ಚುಗಳು ಮಾಡಲ್ಪಡುತ್ತ ಬಂದಂತೆ ಕಾಣಬರುತದೆ. ಯಾದಕ್ಕಂದರೆ, ಮುಂಬೈಯಲ್ಲಿ ೧ಕೋಟಿ ೬೫ಲಕ್ಷ ಪ್ರಜೆಗಳನ್ನು ಆಳುವದಕ್ಕೆ [illegible] ೧೦ ಲಕ್ಷ ರೂಪಾಯಿಗಳು ಖರ್ಚಾಗುತವೆ. ಮದರಾಸಿನಲ್ಲಿ ೩ ಕೋಟಿ ೧೦ ಲಕ್ಷ ಪ್ರಜೆಗಳನ್ನು ಆಳುವದಕ್ಕೆ ಸದರಿ ಇಸಂ ೬ ಕಾಸಿಗೆ ಸ್ವಲ್ಪ ಜಾಸ್ತಿಯಾಗಿ ೧೦ ಲಕ್ಷ ೩೦ ಸಾವಿರ ರೂಪಾಯಿಗಳು ಖರ್ಚಾಗುತವೆ. ಬಂಗಾಳೆಯಲ್ಲಿ ೬ ಕೋಟಿ ೭೦ ಲಕ್ಷ ಪ್ರಜೆಗಳನ್ನು ಆಳುವದಕ್ಕೆ ೩ ಇಸಂ ೪ ಕಾಸಿಗೆ ಸ್ವಲ್ಪ ಅಧಿಕವಾಗಿ ೧೪ ಲಕ್ಷ ರೂಪಾಯಿಗಳು ಖರ್ಚಾಗುತವೆ. ಇಂತಾ ಖರ್ಚುಗಳಾಗುವದು ಸ್ಥಳಿಕ ಲೆಜಿಸ್ಲೇಟಿವ್ ಕೌನ್ಸಿಲುಗಳನ್ನು ವಜಾ ಮಾಡುವದಕ್ಕೆ ಅನುಕೂಲ ಕೊಡುವದು. ಸದರೀ ಕೌನ್ಸಿಲುಗಳ ಬಗ್ಗೆ ಮದರಾಸಿನಲ್ಲಿ ೧,೫೪,೬೭೦ ರೂಪಾಯಿಗಳೂ, ಮುಂಬೈಯಲ್ಲಿ ೧,೫೬,೯೧೦ ರೂಪಾಯಿಗಳೂ ವ್ಯಯವಾಗುತಿವೆ ಮತ್ತು ಲೆಫ್ಟಿನೆಂಟ ಗವರ್ನರುಗಳು ಕಾನೂನ ಅನುಸರಿಸಿ, ಕೆಲಸದಲ್ಲಿರುವ ಸಿವಿಲ್ ಸರ್ವಿಸ್ ಮೆಂಬರುಗಳಾಗಿರಬೇಕಾಗಿರುವದು ಪ್ರೆಸಿಡೆನ್ಸಿಯೊಳು ಉನ್ನತಾಧಿಕಾರವು ಸಾಧಾರಣವಾಗಿಯೂ ವಿಶೇಷತಃ ಅನುಭವವುಳ್ಳವರಾಗಿಯೂ ಇರದಕ್ಕನದೇ ಅದಕ್ಕೆ ನಿಯಾಮಕರಾಗುವರು. ಅಂತಾ ಬದಲಾವಣೆಗಳೂ, ಇಂಡ್ಯಾದಲ್ಲಿ ಸರ್ವತ್ರ, ತಾಬೇದಾರಿ ಗವರ್ನಮೆಂಟುಗಳ ಆದಳಿತಗಳು ನಿಷ್ಕಲ್ಮಷವಾಗಿರುವಂತೆ ಮಾಡುವದಕ್ಕೆ ಕಾರಣವಾಗುವದು. ಈಗ ಮದರಾಸ ಮತ್ತು ಮುಂಬೈ ಗವರ್ನರುಗಳು ಇಂಗ್ಲಾಂಡಿನಲ್ಲಿರುವ ಇಂಡ್ಯಾ ಸ್ಟೇಟ ಸೆಕ್ರೆಟರಿಯವರೊಡನೆ ಖುದ್ದು ಕಾಗದಪತ್ರಗಳು ನಡೆಸುತ್ತಾರೆ. ಸ್ವಲ್ಪಮಟ್ಟಿಗೆ ಆದಿಯೊಳು ಪಡೆಸಿದ್ದ ಸ್ವಾತಂತ್ರ್ಯದಿಂದಲೂ, ಸ್ವಲ್ಪಮಟ್ಟಿಗೆ ಪ್ರತ್ಯೇಕವಾದ ನ್ಯಾಯವಿಧಾಯಕ ಸಮಾಜ ಉಂಟಾಗಿರುವದರಿಂದಲೂ ಸದರೀ ಯೆರಡು ಗವರ್ನಮೆಂಟಿನಿಂದಲೂ ಇಂಡ್ಯಾದೇಶದಲ್ಲಿ ಅನ್ಯತ್ರ ನೆಲಗೊಂಡಿರುವ ಪದ್ಧತಿಗಿಂತಲೂ ವಿಲಕ್ಷಣವಾದ ಒಂದು ಪದ್ಧತಿಯೇ ಅಭಿವೃದ್ಧಿಗೆ ಬಂದಿರುತದೆ. ತಾಬೇದಾರಿ ಗವರ್ನಮೆಂಟುಗಳು ಸುಪ್ರೀಂ ಗವರ್ನಮೆಂಟುಗಳ ಹಿಂದೆ ಆಗಿಂದಾಗ್ಯೆ ಉಂಟಾಗುತಬಂದ ಭಿನ್ನತಾತ್ಪರ್ಯವು ಜನಗಳ ಪ್ರಯೋಜನಕ್ಕೆ ಭಂಗಕಾರಿಯಾಗಿದ್ದವು ಅದು ಏತದಪೇಕ್ಷೆಯಾ ವಿಲಕ್ಷಣವಾದ ಕ್ರಮದಲ್ಲಿ ನಿವಾರಿಸಲ್ಪಡಬಹುದಾಗಿತ್ತು. ಗವರ್ನರುಗಳನ್ನು ಮೊಕರರ್ ಮಾಡುವ ಈಗಿನ ಪದ್ಧತಿಯು ಅಧಿಕಾರಿಯ ಇಷ್ಟಾನುಸಾರ ನಿರ್ಧರಿಸುವದಕ್ಕೆ ಅನುಕೂಲವಾಗಿರುವಂತೆ ಯೇರ್ಪಾಟಾಗಿರುತದೆ, ಪರಂತು ಇಂಡ್ಯಾ ಗವರ್ನಮೆಂಟಿಗೆ ಸಂಬಂಧಪಟ್ಟ ಕಾನೂನ ಯಾವರೀತಿಯಲ್ಲಿ ಆಚರಣೆಯೊಳು ತರಲ್ಪಟ್ಟಿದೆಯೆಂದು ಪಾರ್ಲಿಮೆಂಟ ಸೆಸ್ಸನ್ ನಡೆಯುವ ಕಾಲದಲ್ಲಿ ಮೇಲೆ ಹೇಳಿದ ಗವರ್ನರುಗಳ ನಿಯಾಮಕ ಪದ್ಧತಿಯು ಉಳಿಯುವಂತೆ ತೋರಲಿಲ್ಲವು. ಸರ್ ೧೮೭೫ನೇ ಇಸವಿಯಲ್ಲಿ ಆನರ್ಬಲ್ ಕಮ್ಮಿಟಿಯವರು ಮಾಡಿದ ಶಿಫಾರಸ್ಸು, ದೊಡ್ಡದೊಡ್ಡ ಸಿವಿಲಿಯನ್ ನೌಕರಿಗಳನ್ನು ಇಷ್ಟಾನುಸಾರ ಬೇಕಾದವರಿಗೆ ಕೊಡುವದರೊಳು ಬಾಧಕವಾಗುವದೆಂಬ ಆಲೋಚನೆಯ ಮೇಲೆ ಮೂಲೆಗೆ ಹಾಕಲ್ಪಟ್ಟಿದೆ. ಅಧಿಕಾರಗಳ ಪಿರೇವಾರಿ ವಿಷಯದಲ್ಲಿ ಇಂತಾ ದುಷ್ಪದ್ಧತಿಯನ್ನು ತಪ್ಪಿಸಬೇಕೆಂದು ಇಂಡ್ಯಾ ದೇಶದವರೆಲ್ಲರೂ ಐಕಮತ್ಯದೊಡನೆ ಆಕ್ಷೇಪಣೆ ಕೇಳಬೇಕು.—ಇಂಗ್ಲಿಷಮ್ಯಾನ್.

NATIVE VIEWS, PUBLIC AFFAIRS

ಮುಂಬೈಯಲ್ಲಿ ಪ್ರಸಿದ್ಧವಾದ ವಾಯಿಸ್ ಆಫ್ ಇಂಡಿಯಾ ಯೆಂಬ ಪತ್ರಿಕೆಯು, ಪ್ರಜೆಗಳ ಪ್ರಯೋಜನವನ್ನು ಕುರಿತು ನೇಟಿವ್ ವೃತ್ತಾಂತ ಪತ್ರಿಕೆಗಳು ತಿಳಿಸುವ ಅಭಿಪ್ರಾಯವನ್ನು ಸಂಗ್ರಹವಾಗಿ ಹೇಳತಕ್ಕ ಒಂದು ಸಂದರ್ಭದಲ್ಲಿ [illegible] ಹೇಳುತ್ತದೆ [illegible] —

ಸರ್ಕಾರ [illegible] ಆಲೋಚನೆಯು ಹಿಂದಕ್ಕಿಂತಲೂ ಈ ಕಾಲದಲ್ಲಿ ವಿಶೇಷ [illegible] ಚರ್ಚಿಸಲ್ಪಟ್ಟಿದೆ. ನೇಟಿವ್‌ಗಳಿಂದ ನಡೆಸಲ್ಪಡುವ ಇಂಗ್ಲಿಷ ಮತ್ತು ದೇಶಭಾಷಾ ವೃತ್ತಾಂತ ಪತ್ರಿಕೆಗಳ ಪೈಕಿ ಮುಖ್ಯವಾದವುಗಳಾದ [illegible] ಅನೇಕ ಸಂಗತಿಗಳು [illegible] ಪ್ರಜೆಗಳ ಅಭಿಪ್ರಾಯ ಸೂಚಕಗಳಾಗಿರುತವೆ. ಪರಂತು ಇಂಡ್ಯಾದೇಶದ ನೇಟಿವ್ ವೃತ್ತಾಂತ ಪತ್ರಿಕೆಗಳು [illegible] ಅವರ ಮೂಲಕ [illegible] ತಿಳಿಸುವ ಅಭಿಪ್ರಾಯದ [illegible] ಬರುತಿದೆ [illegible] ಭಾರೀ ರೆವಿನ್ಯೂಗಳು ನಡೆಯುವ [illegible] ಬದಲಾಗಿ [illegible] ಕ್ರಮೇಣ [illegible] ಈ ಪ್ರಸಂಗದಲ್ಲಿ [illegible] ಇಂಡ್ಯಾದೇಶದ ಆಡಳಿತವನ್ನು [illegible] ಅತಿ ನ್ಯಾಯವಾದ [illegible] ನಿವೃತ್ತಿಮಾಡಿ, [illegible] ಸಂಬಂಧಪಟ್ಟ [illegible] ನೇಟಿವ್ ವೃತ್ತಾಂತಪತ್ರಿಕೆಗಳು ನೈರಾಶ್ಯವಂ ಹೊಂದಿರುತವೆ [illegible] ಮೂಲಕ ಇಂಡ್ಯಾದೇಶದ ಪ್ರತಿ ಸಂವತ್ಸರದ [illegible] ಯೆಂದ ನೇಟಿವ್‌ವೃತ್ತಾಂತಪತ್ರಿಕೆಗಳ [illegible] ಬಲವತ್ತರವಾಗುತವೆ. ಯೂರೋಪಿಯನ್ನರಿಗೆ [illegible] ಸಲ್ಲದೆಂಬ ನಿಬಂಧನೆಯು, ತಾಬೇದಾರ ನೌಕರಿಗಳಿಗೆ ಅನ್ಯದೇಶೀಯರನ್ನು ಕರೆತರುವ ವಾಡಿಕೆಯನ್ನು ತಪ್ಪಿಸತಕ್ಕದ್ದಾಗಿರುವದಕ್ಕೆ [illegible] ಆಕ್ಷೇಪಿಸಲ್ಪಡಲಿಲ್ಲವು. ಹೈಕೋರ್ಟುಗಳ ಒರಿಜನಲ್ ಸೈಡನ್ನು ವಜಾ ಮಾಡುವಣ ಅಥವಾ ಬದಲಾಯಿಸುವಣವು ಉಚಿತವೇ ಎಂಬವಿಚಾರದಲ್ಲಿ ಅಭಿಪ್ರಾಯಗಳು ಸ್ವಲ್ಪಭಿನ್ನಗಳಾಗಿರುತವೆ ಪರಂತು ವಿನಾರ್ಜಾಯಿ ವಿಷಯದಲ್ಲಿ ಅಭಿಪ್ರಾಯಗಳು ಅಧಿಕವಾಗಿರುತಿವೆ. ಈಗ ವಿಚಾರಕ್ಕೆ ವಿಷಯವಾಗಿರುವ ಈ ಅಂಶದಲ್ಲಿ ನೇಟಿವ್ ವೃತ್ತಾಂತಪತ್ರಿಕೆಗಳ ಉದ್ದೇಶಗಳು ಅತ್ಯಂತ ಪ್ರಯೋಜನಕರಗಳಾಗಿವೆ.

ಒಬ್ಬ ಯೂರೋಪಿಯನ್ ಸಿವಿಲಿಯನ್ ಅಧಿಕಾರಿಯು ತನ್ನ ಕರ್ತವ್ಯವನ್ನು ನಿಷ್ಪಕ್ಷಪಾತತೆಯಿಂದ ನಡೆಸಿದಬಗ್ಯೆ ದಂಡಿಸಲ್ಪಟ್ಟು, ಅಧಿಕಾರಿಗಳಿಂದ ನಡೆಸಲ್ಪಟ್ಟ ಪೋಲಿಸಕೃತ್ಯಗಳು ಒಗ್ಗಟ್ಟಿನಿಂದ ಉಪೇಕ್ಷಿಸಲ್ಪಟ್ಟ ಒಂದು ಮೊಕದ್ದಮೆಯಲ್ಲಿ ನೇಟಿವ್ ವೃತ್ತಾಂತ ಪತ್ರಿಕೆಗಳಿಗೆ ಉಂಟಾದಷ್ಟು ಆಗ್ರಹವು ಪ್ರಜಾ ಸಂಬಂಧವಾದ ಇನ್ಯಾವವಿಷಯದಲ್ಲೂ ಉಂಟಾಗಲಿಲ್ಲವು.

ಸಾಲಗಾರರನ್ನು ಜೈಲಿನಲ್ಲಿಡಿಸುವ ವಾಡಿಕೆಯನ್ನು ತಪ್ಪಿಸುವದಕ್ಕಾಗಿ ಹುಟ್ಟಿದ ಮಸೂದಾ ಆಕ್ಟು ನೇಟಿವ್ ವೃತ್ತಾಂತ ಪತ್ರಿಕಾಕಾರರ ಪೈಕಿ ಅನೇಕರಿಂದ ಆಕ್ಷೇಪಿಸಲ್ಪಡುವದಲ್ಲದೆ, ಹಾಗೆ ತಪ್ಪಿಸುವಣವು ಇಂಡ್ಯಾದೇಶದ ವರ್ತಕರಲ್ಲಿ ದುರ್ಬುದ್ಧಿಯನ್ನುಂಟುಮಾಡುವದು, ಮತ್ತು ಸಾಲಗಾರರು ತಮ್ಮ ಆಸ್ತಿಗಳನ್ನೆಲ್ಲ ಮರೆಮಾಚುವ ವಾಡಿಕೆಯು ಇದುವರಿವಿಗೇನ ಬಹಳವಾಗಿದೆಯೆಂದು ಸದರೀ ಪತ್ರಿಕಾಕಾರರು ಚಿಂತಿಸುತ್ತಾರೆ. ಇದ ಹೀಗಿರುವಲ್ಲಿ, ಇಂಡ್ಯಾದೇಶದೊಳು [illegible] ಸಾಲಗಾರರಿಗೆ [illegible] ಹ್ಯಾಗಂದರೂ [illegible] ಜನಗಳನ್ನು ಸತ್ಕರಿಸದವರು ಕಾಪಾಡದೇಕೆಂತಲೂ ಅನ್ಯರು ಹೇಳುತ್ತಾರೆ. ಅದಾಗ್ಯೂ, ಮುಖ್ಯವಾಗಿ ಸದರೀ ಮಸೂದಾ ಆಕ್ಟು ಅನುಚಿತವೆಂದು ಜನಗಳ ಅಭಿಪ್ರಾಯವಾಗಿರುತಿದೆ.

ಇಂಡ್ಯಾದೇಶದ ಸ್ಥಿತಿಯಂ ಕುರಿತು [illegible] ಉಪನ್ಯಾಸವನ್ನು ನೇಟಿವ್ ವೃತ್ತಾಂತಪತ್ರಿಕೆಗಳು ಬಹಳ [illegible] ಇಂಡ್ಯಾದೇಶವು [illegible] ಸ್ಥಿತಿಯಲ್ಲಿರುವದರಿಂದ ಸರ್ಕಾರನೌಕರಿಯಲ್ಲಿ ನೇಟಿವ್‌ಗಳನ್ನು ಅಧಿಕವಾಗಿ ಇಡಬೇಕಾದ್ದು ಅವಶ್ಯವಾಗಿರುವದಲ್ಲದೆ ಇನ್‌ಕಂ ತೆರಿಗೆಯನ್ನು [illegible] ಮಾಡಬೇಕೆಂಬ ಅವರ ವಾದವನ್ನು ಅವರು ಪ್ರತಿಪಾದಿಸಿಕೊಂಡಿರುವಂತೆ ಯೆಲ್ಲರೂ ಒಪ್ಪುತ್ತಾರೆ.

ಇಂಡ್ಯಾ ಗವರ್ನಮೆಂಟಿನವರೂ ಆಯಾಯ ಸ್ಥಳಿಕ ಗವರ್ನಮೆಂಟಿನವರೂ ಪ್ರತಿ ಸಂವತ್ಸರದಲ್ಲೂ ಪರ್ವತಪ್ರಾಂತಕ್ಕೆ ಹೋಗುವದನುಚಿತವೆಂಬ ವಾದವು ಈಗ ಬಹಳಮಟ್ಟಿಗೆ ಬಲಿಷ್ಟವಾಗಿರುತಿದೆ. ಈ ವಾಡಿಕೆಯು ಅನೇಕ ಕಾರಣಗಳಿಂದ ಖಂಡಿಸಲ್ಪಡುವದಲ್ಲದೆ, ವೃತ್ತಾಂತ ಪತ್ರಿಕೆಗಳ ಪೈಕಿ [illegible] ವಿನಾ ಮಿಕ್ಕವೆಲ್ಲ [illegible] ಆಕ್ಷೇಪಿಸುತವೆ.

ಮಿ. ದಯಾರಾಂಜಿತ್ಮಲ್ ಯೆಂಬವರು ಮುಂಬೈ ಗವರ್ನಮೆಂಟ ನ್ಯಾಯವಿಧಾಯಕ ಸಭೆಯಲ್ಲಿ [illegible] ಇಸಂ ತರುವಾಯ ಒಬ್ಬ ಮೆಂಬರಾಗಿ ನಿಯಮಿಸಲ್ಪಟ್ಟ ಅಂಶದಲ್ಲಿ ಯೆಲ್ಲರೂ ತೃಪ್ತರಾಗಿರುವರು [illegible] ಮಿ॥ ದಯಾರಾಂಯವರು ಕರಾಚಿಯಲ್ಲಿ [illegible] ಪ್ರತಿಸಿದ್ಧರಾಗಿಯೂ, [illegible] ರಾಗಿಯೂ ಇರುತ್ತಾರೆ, ಅಂತವರ ಮಾತುಕತೆಯು ಬಹಳ ಪ್ರಯೋಜನಕಾರಿಯಾಗಿರುವದು, ಯೆಂಬ ಕಾರಣದಮೇಲೆ ನೇಟಿವ್ ವೃತ್ತಾಂತ ಪತ್ರಿಕೆಗಳೆಲ್ಲವು ಲಾರ್ಡ ರೀಯವರ ರಾಜ್ಯಭಾರಕ್ರಮವನ್ನು ಬಹಳವಾಗಿ ಕೊಂಡಾಡುತಿವೆ.

ಪಾರ್ಲಿಮೆಂಟ ಸಮಾಜದಲ್ಲಿ ಮೆಂಬರಾಗಿ ಸೇರತಕ್ಕಂಥ ಉದ್ದೇಶದೊಡನೆ ಇಂಗ್ಲಾಂಡಿಗೆ ಹೋದ [illegible] ಮನುಷ್ಯನ ಪ್ರಯತ್ನಗಳು ಕೈಗೂಡದೆ ಹೋದದ್ದಕ್ಕೆ [illegible] ವೃತ್ತಾಂತ ಪತ್ರಿಕಾಕಾರರು ಭಗ್ನಮನಸ್ಕರಾಗಿರುತ್ತಾರೆ. ಅವರ ಪೈಕಿ ಕೆಲವರು ಸದರೀಯವರ ಪ್ರಯತ್ನವು ಫಲಕಾರಿಯಾಗದೆ ಹೋದದಕ್ಕೆ ಕಾರಣ ತಿಳಿಯದೆ ಕಳವಳಗೊಂಡಿರುತ್ತಾರೆ. ಪರಂತು ಪ್ರತ್ಯಾಶೆಯೆಂಬದು ಅವರನ್ನಗಲಿದ್ದಲ್ಲವು. ಇಬ್ಬರು ಮೂವರು ವಿನಾ ಮಿಕ್ಕವರೆಲ್ಲರು ಸಾಮಾನ್ಯವಾಗಿ, ಸದರೀ ಪ್ರಯತ್ನವನ್ನು ಮಾಡುತಲೇ ಇರಬೇಕೆಂದು ಹೇಳುತ್ತಾರೆ, ಎಂಬದು.

Bangalore.—Printed and published for the Proprietor, at the Karnatic Press.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧನೃವೃತ್ತ್ಯುಪಗಮಾರ್ಥ್ಯ ಕರ್ಣಾಟಕಪ್ರಕಾಶನವರಾಧಿಧಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜ್ಯಸ್ಫೂರ್ತಿದ್ಧಿಕಾಸುಪರಿಪೋಷಿತಾದಿಶತಿಮಾನಸುಂಸುಮುದಂ ॥

Vol. XIII] BANGALORE—MONDAY, AUGUST 23, 1886. [No. 34.

ಸಂಪುಟ ೧೩.] ಬೆಂಗಳೂರು:—ಸರ್ ೧೮೮೬ನೇ ಇಸವಿ ಆಗಸ್ಟು ೨೩ನೇ ತಾರೀಖ್ ಸೋಮವಾರ. [ಸಂಚಿಕೆ ೩೪.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷು ಮತ್ತು ಕನ್ನಡ ತೆಗೆದುಕೊಳ್ಳತಕ್ಕವರಿಗೆ ವರುಷ ೧ಕ್ಕೆ ... ... ೧೨—೦—೦

ಇಂಗ್ಲಿಷು ಮಾತ್ರ ತೆಗೆದುಕೊಳ್ಳತಕ್ಕವರಿಗೆ ವರುಷ ೧ಕ್ಕೆ ... ... ೬—೦—೦

ಕನ್ನಡ ಮಾತ್ರ ತೆಗೆದುಕೊಳ್ಳತಕ್ಕ [illegible] ವರುಷ ೧ಕ್ಕೆ. ೬—೦—೦

ತಿಂಗಳ ೧ಕ್ಕೆ ೦—೮—೦

[illegible]

ಪ್ರಕಟನೆಯ ರಿವಾಜ್.

[illegible] ೧ಕ್ಕೆ ೦—೨—೦

[illegible] ೧ಕ್ಕೆ ೦—೧—೭

NOTICE TO SUBSCRIBERS

[illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA.

Price including Postage, Rs. 5-0-0

ವೈದ್ಯಸಾರ ಸಂಗ್ರಹ.

ಈ ಗ್ರಂಥ [illegible]

[illegible] ... ... ರೂ॥ ೫—೦—೦

[illegible] ೦—೬—೦

ಆ ಬಿ ವೆಂಕಟಾಚಾರ್, ಅಸ್ಸಿಸ್ಟೆಂಟ್, ಬೆಂಗಳೂರು.

ನೋಟೀಸ್.

ಇದರಡಿ ವಿವರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು [illegible] ಕರ್ನಾಟಕ ಪ್ರಕಾಶಿಕಾ ಆಫೀಸಿನಲ್ಲಿ [illegible] ಸಲ್ಪಡುವವು,—

ಕನ್ನಡ ಟೀಕಾ ಸಹಿತವಾದ ಸಂಸ್ಕೃತ ಗ್ರಂಥಗಳು.

[illegible]	೧—೪—೦
[illegible]	೦—೧೨—೦
[illegible] (ಪಟ್ಟಂಗಾಸಲ್)	೦—೩—೦
[illegible]	೦—೫—೦
[illegible]	೦—೪—೭
[illegible]	೦—೧೪—೦
[illegible]	೦—೭—೦
[illegible]	೦—೨—೦
[illegible]	೫—೦—೦

ಕನ್ನಡ ಗ್ರಂಥಗಳು.

[illegible]	೦—೭—೦
[illegible]	೦—೪—೦
[illegible]	೦—೩—೬
[illegible]	೦—೨—೬
[illegible]	೦—೪—೦
[illegible]	೦—೨—೦
[illegible]	೦—೨—೬
[illegible]	೦—೭—೦
[illegible]	೦—೩—೦
[illegible]	೦—೨—೦
[illegible]	೦—೦—೩
ಇಂಗ್ಲಿಷ್ ಕನ್ನಡ [illegible]	೧—೦—೦
[illegible]	೨—೦—೦
[illegible]	೦—೧೨—೦
[illegible]	೩—೪—೬
[illegible]	೩—೪—೬

[illegible] ಸ್ಕೇಟ್ [illegible]

೧ನೇ ಸಂಚಿಕೆ.	೦—೮—೦
[illegible] ೨ನೇ ಸಂಚಿಕೆ.	೦—೮—೦
[illegible]	೦—೮—೦

ಸಂಸ್ಕೃತ ಮೂಲಗ್ರಂಥಗಳು.

[illegible]	೦—೫—೦
[illegible]	೦—೨—೭
[illegible]	೦—೨—೭
[illegible]	೦—೦—೬
[illegible]	೦—೩—೬
೧ ಕಾಂಡ [illegible]	೦—೧—೦

[illegible]

ಪ್ರಕಟನೆ.

ಬೆಂಗಳೂರು ಶಹರ್ ಮ್ಯುನಿಸಿಪಾಲಿಟಿ.

ಸರ್ ೧೮೮೬ನೇ ಇಸವಿ ಆಗಸ್ಟು ೨೭ನೇ ತಾರೀಖ್ ಶುಕ್ರವಾರ ಪ್ರಾತಃಕಾಲ ೭॥ ಘಂಟೆಗೆ, ಸಿಟಿ ಮ್ಯುನಿಸಿಪಲ್ ಕಮಿಶನರ್‌ಗಳು, ಬೆಂಗಳೂರು ಡಿಸ್ಟ್ರಿಕ್ಟು ಆಫೀಸ್ ಕಟ್ಟಡದಲ್ಲಿನ ತಮ್ಮ ಆಫೀಸಿನಲ್ಲಿ ಆರ್ಡಿನರಿ ಮೀಟಿಂಗ್ ಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳು.

೧. ಸರ್ ೧೮೮೬ನೇ ಇಸವಿ ಜುಲೈತಿಂಗಳ ಬಾಬತು ಚಾಲ್ತೀ ನಗದು ಜಮಾಖರ್ಚು ಲೆಕ್ಕಗಳು, ಸರ್ ೧೮೮೬ನೇ ಇಸವಿ ಜುಲೈತಿಂಗಳಲ್ಲಿ ನಡೆದ ಕಾಮಗಾರಿಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟು ಮತ್ತು ಮರಣ ಲೆಕ್ಕಗಳು.

೨. ಬೆಂಗಳೂರಲ್ಲಿರುವ ಗವರ್ನಮೆಂಟ್ ಬಾಲಿಕಾ ಪಾಠಶಾಲೆಯನ್ನು ಮ್ಯುನಿಸಿಪಾಲಿಟಿಯವರ ವಿಚಾರಣೆಗೆ ವರ್ಗಮಾಡಿ, ೮೬ನೇ ಇಸವಿ ಆಗಸ್ಟು ೪ನೇ ಮರ್ಕಂ ೧೪೭೮—೯ನೇ ನಂಬರ್ ಬಾಬತು, ಮೈಸೂರು ಸಂಸ್ಥಾನದ ದಿವಾನರವರು ನಡೆಸಿದ ಎಡ್ಯುಕೇಷನಲ್ ಇಲಾಖಾ ಪ್ರೊಸೀಡಿಂಗ್ಸ್.

೩. ಸರ್ ೧೮೮೬—೮೭ನೇ ಇಸವಿ ಬಾಬತು, ಬೆಂಗಳೂರು ಮ್ಯುನಿಸಿಪಾಲಿಟಿಯ ಬಡ್ಜೆಟ್ ಅಂದಾಜಿನಮೇಲೆ ತಮ್ಮ ಹುಕುಂ ನಾಪರ್ಮಾಯಿಸಿ, ಮೈಸೂರು ಸಂಸ್ಥಾನದ ದಿವಾನರವರು ನಡೆಸಿದ ಸರ್ ೧೮೮೬ನೇ ಇಸವಿ ಜೂನ್ ೧೬ನೇ ಮರ್ಕಂ ೨೬೮—೭೮ನೇ ನಂಬರ್ ಪ್ರೊಸೀಡಿಂಗ್ಸ್.

ಜಾಸ್ತೀ ಅಂಶಗಳು,

ವೆಂಕಟಸ್ವಾಮಿ ಬೀದಿಯನ್ನು, ಮ್ಯುನಿಸಿಪಲ್ ಗಾಡಿಗಳು ತಂಗುವ ಸ್ಥಳದ ಮಾರ್ಗವಾಗಿ, ದಕ್ಷಿಣ ಭಾಗದಲ್ಲಿ ಮೈಸೂರು ರಸ್ತೆಯವರಿಗೆ ಬಡಾಯಿಸಿ, ಮೇಲೆ ಹೇಳಿದ ಮ್ಯುನಿಸಿಪಲ್ ಗಾಡಿಗಳು ನಿಲ್ಲುವ ಜಮೀನನ್ನು ಮನೆಗಳು ಕಟ್ಟಿಕೊಳ್ಳುವದಕ್ಕೆ ಅನುಕೂಲವಾಗುವಂತೆ ವಿಂಗಡಿಸಿ ಹರಾಜುಮೂಲಕ ವಿಕ್ರಯಿಸಬೇಕೆಂಬ ಅಂಶ.

ಸಿಟಿ ಮ್ಯುನಿಸಿಪಲ್ ಆಫೀಸ್, ಬೆಂಗಳೂರು, ೨೧ನೇ ಆಗಸ್ಟು ೧೮೮೬.

A. SRINIVASA CHARLU,
Vice-President,
City Municipal Commission.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, AUGUST 23, 1886.

೧೮೮೬ನೇ ಆಗಸ್ಟು ೨೩ನೇ ತಾ॥ ಸೋಮವಾರ

MYSORE BUDGET ESTIMATES.

ಚಾಲ್ತೀ ಸಾಲಿನ ಸರ್ಕಾರ್ ಬಡ್ಜೆಟಿನಿಂದ ೧೮೮೪—೮೫ನೇ ಇಸವಿಯಲ್ಲಿ ಈ ಸಂಸ್ಥಾನಕ್ಕೆ ಒಟ್ಟು ೧೦೬,೬೫,೬೩೬ ರೂಪಾಯಿಗಳು ಕರಾರ್ ವಾಕಾ ಹುಟ್ಟುವಳಿಯಾದಂತೆಯೂ, ೮೫—೮೬ನೇ ಇಸವಿಯಲ್ಲಿ ಸ್ವಲ್ಪ ಹೆಚ್ಚುಕಡಮೆಯಾಗಿ ೧,೦೨,೯೪,೭೦೦ ರೂಪಾಯಿಗಳು ಉತ್ಪತ್ತಿಯಾದಂತೆಯೂ, ೮೬—೮೭ನೇ ಚಾಲ್ತೀ ಸಾಲಿನಲ್ಲಿ ೧,೦೫,೬೪,೩೦೦ ರೂಪಾಯಿಗಳ ವಸೂಲಾಗಬಹುದೆಂದು ಅಂದಾಜ್ ಮಾಡಲ್ಪಟ್ಟಿರುವಂತೆಯೂ ತಿಳಿಯಬರುತ್ತದೆ. ೮೫—೮೬ನೇ ಸಾಲಿನಲ್ಲಿ ಜಮೀನ್ದಾರಾಬಾಬಿನಲ್ಲಿ ೬೦ ಲಕ್ಷದಿಂದ ೭೦ ಲಕ್ಷ ರೂಪಾಯಿಗಳತನಕ ಹುಟ್ಟುವಳಿ ಜಾಸ್ತೀಯಾದಂತೆಯೂ, ಈಗ ೬೮ ಲಕ್ಷ ರೂಪಾಯಿಗಳಿಗೆ ಅಂದಾಜಾಗಿರುವಂತೆಯೂ, ವ್ಯಕ್ತವಾಗುತ್ತದೆ. ೮೫—೮೬ನೇ ಸಾಲಿನಲ್ಲಿ ಜಾಸ್ತೀ ಕಂಡದ್ದು ಕೇವಲ ಸಾಗುವಳೀ ಜಾಸ್ತಿಯಿಂದ ಹುಟ್ಟುವಳಿಯಾದಂತೆ ಹೇಳಲಾಗದು ಅದಕ್ಕೆ ಹಿಂದಿನ ಸಂವತ್ಸರದ ಬಾಕೀ ವಸೂಲೀ ಮೂಲಕ ಮೇಲೆಕಂಡ ಮೊಬಲಗು ಹುಟ್ಟುವಳಿಯಾಗಿರಬಹುದೆಂದೆಣಿಸುತ್ತೇವೆ. ಇನ್ನು ಖರ್ಚ್ ಬಾಬನ್ನು ನೋಡಲಾಗಿ ೮೪—೮೫ನೇ ಇಸವಿಯಲ್ಲಿ ಕರಾರ್ ವಾಕಾ ೧,೦೨,೧೧,೫೪೦ ರೂಪಾಯಿಗಳು ವ್ಯಯವಾದಂತೆಯೂ, ೮೫—೮೬ನೇ ಇಸವಿಯಲ್ಲಿ ೧,೧೨,೩೧,೬೪೦ ರೂಪಾಯಿಗಳು ಖರ್ಚಾದಂತೆಯೂ, ೮೬—೮೭ನೇ ಸಾಲಿನಲ್ಲಿ ೧,೧೬,೮೩,೧೮೯ ರೂಪಾಯಿಗಳ ಖರ್ಚು ಅಂದಾಜಾಗಿರುವಂತೆಯೂ ತಿಳಿಯಬರುತ್ತದೆ. ಜಾಸ್ತೀ ಖರ್ಚಿನ ತಪಸೀಲನ್ನು ನೋಡಲಾಗಿ ಲ್ಯಾಂಡ್ ರೆವಿನ್ಯೂವಿನಲ್ಲಿ ಅಂದರೆ, ಡಿಸ್ಟ್ರಿಕ್ಟು ವ ತಾಲ್ಲೂಕು ಏರ್ಪಾಡುಗಳಿಂದ ೨ ಲಕ್ಷ ರೂಪಾಯಿಗಳೂ, ಫಾರೆಸ್ಟಿನಲ್ಲಿ ಬೇರೆ ಆಫೀಸರ್ ಶಿಬ್ಬಂದಿ ಬೆನವನೆ ಏರ್ಪಾಡಾದದರಿಂದ ಲಕ್ಷ ರೂಪಾಯಿಗಳೂ, ಅರಮನೆ ಖರ್ಚಿನಲ್ಲಿ ಹೋದ ಸಂವತ್ಸರಕ್ಕಿಂತ ಈ ಸಾರಿನಲ್ಲಿ ೩ ಲಕ್ಷ ರೂಪಾಯಿಗಳೂ, ವ್ಯಯವಾಗುವಂತೆ ಸ್ಪಷ್ಟವಾಗುತ್ತದೆ. ಸಾಲ್ ಬಸಾರ್ ನಾಮಮಾತ್ರಕ್ಕಾದರೂ ಸೇವಿಂಗ್ಸ್ ತೋರಿಸಬೇಕಾದ್ದಕ್ಕೆ ಬದಲಾಗಿ, ಈಸಲ ಉತ್ಪತ್ತಿಗಿಂತ ೧೧,೨೨,೬೦೯ ರೂಪಾಯಿಗಳ ಜಾಸ್ತೀ ಖರ್ಚನ್ನು ಸಮೂದಿಗೆ ತರಬೇಕಾಯಿತು. ಹೊಸ ವೊಕರರಾತಿಗಳಿಂದಲೂ, ಬಡ್ತೀಗಳಿಂದಲೂ, ಇಷ್ಟು ಖರ್ಚ್ ಜಾಸ್ತೀಯಾಗಲಿಕ್ಕೆ ಕಾರಣವಾಯಿತು. ದಿವಾನರವರು ಬಾ ಪ್ರೊಸಿಜರ್ ಸ್ಟೇಟಮೆಂಟನ್ನು ತಯಾರ್ಮಾಡಿಸಿ ಮುಂದೆ ಇಟ್ಟುಕೊಂಡು ಬಡ್ತೀಗಳನ್ನು ಬೇಕಾದಂತೆ ಕೊಟ್ಟಿರುವರಾದರೆ ಚೆನ್ನಾಗಿರುತ್ತಲಿತ್ತು. ಏಮಂತ ಲವಾಜಮೆ ಕಡಮೆಮಾಡಲಿಕ್ಕೆ ದಿವಾನರವರಿಗೆ ಇನ್ನೂ ಅವಕಾಶವಿಲ್ಲದೆ ಇರುವದರಿಂದ ಜಮಾಬಾಬನ್ನು ಹೆಚ್ಚಿಸಬೇಕಾದದ್ದು ಅವರಿಗೆ ಕೇವಲ ಆವಶ್ಯಕವಾಗೆ ಯೋಚ್ಛಸಟ್ಟದೆ. ಇನಾಂ ಎಕ್ಸೆಸ್‌ಮೂಲಕ ಉದ್ದಿಷ್ಟವಾದಷ್ಟು ಮೊಬಲಗು ಜಾಸ್ತೀಯಾಗದ ಪಕ್ಷಕ್ಕೆ ಬೇರೆ ಕಂದಾಯವನ್ನು ವಸೂಲ್ಮಾಡಬೇಕಾಗುವದು. ಇಂತಾ ಸಂದರ್ಭವನ್ನರಿಯದೆ ಇಲ್ಲಿನ ಶಹರ್ ನಿವಾಸಿಗಳು ಕಟ್ಟಿಗೆ ಛುಂಗಿಗೆ ತೆರಿಗೆಯನ್ನು ಮಾಫ್‌ಮಾಡಬೇಕೆಂದು ಬರೆದುಕೊಂಡು ಅದರಮೇಲೆ ಮಾಫೆ ಆಗಲಾರದೆಂದು ಜವಾಬ್ ಪಡೆದದ್ದು ಕೇವಲ ಅವರ ಅವಿವೇಕವೆಂತಲೇ ಹೇಳುವೆವು.

DASSARA DARBAR.

ಈ ಸಲದ ನವರಾತ್ರಿಹಬ್ಬವು ಸಮೀಪಿಸುತ್ತಬರುವದರಿಂದ ಪ್ರಜೆಗಳದು ಕೊಂಡಾಡುವಬಗ್ಗೆ ಈಗಲಿಂದಲೂ ಬಗೆಬಗೆ ಪ್ರಯತ್ನಗಳಂ ಮಾಡುತಲಿದಾರೆ, ಹ್ಯಾಗೆಂದರೆ,—ಹಿಂದೂಬಾಲಕರುಮ ಪರ್ವವಮೀ ಪದ್ಯಗಳನ್ನೂ, ಕೋಲಾಟದ ಪದಗಳನ್ನೂ, ಪಾರಿಜಾತನಾಟಕಾದುಗಳನ್ನೂ ಕಲಿತುಕೊಳ್ಳುವದರೊಳು ಅತ್ಯುತ್ಸಾಹದೊಡನೆ ನಿರತರಾಗಿದಾರೆ. ವೈದಿಕರುತತ್ಪೂರ್ವಭಾವಿಯಾಗಿ ಬರುವ ಮಹಾಲಯ ಪಕ್ಷದಲ್ಲಿ ನಿಮಂತ್ರಣ ದಕ್ಷಿಣೆಗಳ ಸಂಪಾದನೆಯ ತರದೂದ್‌ನೊಳಿರುವದಲ್ಲದೆ ನವರಾತ್ರಿಯಲ್ಲಿ ಲೌಕಿಕರ ಗೃಹಗಳಲ್ಲಿ ಸೂರ್ಯನಮಸ್ಕಾರ, ನವಗ್ರಹಜಪ, ರುದ್ರಾಭಿಷೇಕ, ವೇದಪಾರಾಯಣ, ರಾಮಾಯಣ ಪಾರಾಯಣ, ಮುಂತಾದವುಗಳಬಗ್ಗೆ ಉಪಸರ್ಗಣೆ ಮಾಡುತಲಿದಾರೆ. ತಾಲ್ಲೂಕುಜಾತನಲ್ಲಿರತಕ್ಕ ಖುಷಿಬಾಷ್ ಜನಗಳೂ, ಹಳೇ ವಕೀಲರು, ಡಾಂಭಿಕರೂ, ಮೈಸೂರಲ್ಲಿ ನಡೆಯುವ ದಸರಾ ದರ್ಬಾರಿಗೆ ಹೋಗತಕ್ಕಬಗ್ಗೆ ತಮ್ಮನ್ನು ಪಟ್ಟಿಯಲ್ಲಿ ದಾಖಲ್ಮಾಡಿಕೊಳ್ಳಬೇಕೆಂದು ಅಮಲ್ದಾರರಲ್ಲಿ ಉಮೇದ್ವಾರಿಮಾಡುತಲಿದಾರೆ. ವಿನೋದಾಪೇಕ್ಷೆಯುಳ್ಳವರು ನೂತನ ವಸ್ತ್ರಾಭರಣಗಳನ್ನೊದಗಿಸಿಕೊಳ್ಳುವದರಲ್ಲಿಯೂ ಮೈಸೂರಿಗೆ ಹೋಗಿಬರುವಬಗ್ಗೆ ವೈರಭಾರ್ಟನ್ನು ಹವಣಿಸಿಕೊಳ್ಳುವವರ

ಲ್ಲಿಯೂ ಕಂಕಣಬದ್ಧರಾಗಿದಾರೆ. ಕಾವೇರಿ ಸ್ನಾನಾಪೇಕ್ಷೆಯುಳ್ಳವರೂ, ಮೇಲುಕೋಟೆ, ನಂಜನಗೂಡು ವಗ್ಯೆರೆ ಸ್ಥಳಗಳಿಗೆ ಯಾತ್ರೆ ಹೋಗುವ ಕೋರಿಕೆಯುಳ್ಳವರೂ, ದಸರಾದರ್ಬಾರ್ ಸ್ರಯುಕ್ತವಾದ ರಿಯಾಯಿತಿ ಟಿಕೆಟಿನ ಸಾಕರ್ಯವನ್ನು ಹೋಗಲಾಡಿಸಿಕೊಳ್ಳಲಿಕ್ಕೆ ಇಷ್ಟವಿಲ್ಲದೆ ಆಬಗ್ಯೆ ಬೇಕಾದ ದ್ರವ್ಯಾರ್ಜನೆಯೊಳು ನಿರತರಾಗಿದಾರೆ. ಪುರುಷರ ಸ್ಥಿತಿ ಈರೀತಿಯಾಯಿತಷ್ಟೆ. ನವರಾಗರಿಕರಾಗಿಯೂ, ವಿದ್ಯಾ ವೈಲಕ್ಷಣ್ಯಾದಿಗಳಿಂದ ಹಿಂದಿನವರ ಶಿರಮಾಂಡಾಗಿಸುತಲಿರತಕ್ಕವರಾಗಿಯೂ ಇರುವ ಸ್ತ್ರೀಯರು ಮೈಸೂರಲ್ಲಿ ಪಟ್ಟದ ಆನೆ ಕುದುರೆಗಳನ್ನೂ ಸಿಹ್ಮಾಸನವನ್ನೂ ನಾಟಕಗಳನ್ನೂ ನೋಡಬೇಕೆಂಬ ಕುತೂಹಲದೊಡನೆ ಮೈಸೂರು ಪ್ರಯಾಣದಬಗ್ಯೆ ತಮ್ಮ ತಮ್ಮ ಪುರುಷರಂ ಪ್ರೇರಿಸುತಲಿರುವರು. ಕೆಲವರು ತಾವು ಹೋಗುವಬಗ್ಯೆ ಅವರ ಅಪ್ಪಣೆಯಂ ಮಾತ್ರ ಪಡೆಯುವವರು, ಮತ್ತು ಕೆಲವರು ತಾವು ಯಾರೊಡನೆ ಹೋದರೆ ಚೆನ್ನಾಗಿರುವದೆಂದು ಆಲೋಚಿಸುತ ಅನುಗುಣವಾದ ಸಹಾಯವನ್ನು ಹುಡುಕುತಲಿರುವವರು ಇನ್ನು ಕೆಲವರು. ಈ ರೀತಿಯಾದ ವಿವಿಧ ಪ್ರಯತ್ನಗಳುಳ್ಳವರಾಗಿದಾರೆ. ಮೈಸೂರಿನಲ್ಲಿ ನಿಯತವಾಗಿರತಕ್ಕವರಿಗೆ ಸ್ಥಳವಸತಿ ಇಲ್ಲದೆ ಕಷ್ಟಲಾಭಿಗಳಿಂದ ಸಂಕಟಪಡುತಲಿರುವಾಗ್ಯೆ ವ್ಯರ್ಥ ಭ್ರಾಂತಿಯೊಡನೆ ಅಲ್ಲಿ ವರ್ಷ ಮುಂತಾದವರ ದೆಸೆಯಿಂದ ಪ್ರಾಪ್ತವಾಗತಕ್ಕ ತೊಂದರೆಗಳನ್ನು ಸಹ ಚಿಂತಿಸದೆ ಪರಸ್ಥಳಗಳಿಂದ ಹೋಗತಕ್ಕವರ ಮೌಢ್ಯಕ್ಕಾಗಿ ಯೆಷ್ಟು ನಕ್ಕರೂ ಸಾಲದು.

Occasional Notes.
ನೈಮಿತ್ತಿಕವಿಷಯನ್ಯಾಸ.

Extension of office.—ಬೊಂಬಾಯಿ ಗವರ್ನರಾದ ಸರ್ ಆಲ್‌ಫ್ರೆಡ್ ಲ್ಯೆಯಲ್ ಯವರ ನೌಕರಿಯ ಮಾಯಿದೆಯನ್ನು ಬರುವ ಏಪ್ರಿಲ್ ಲಾಗಾಯತು ಮರಳಿ ಒಂದು ವರುಷದಕಾಲ ಜಾಸ್ತಿ ಮಾಡಬೇಕೆಂದು ಇಂಡಿಯಾ ಆಫೀಸಿನಲ್ಲಿ ಆಲೋಚನೆಯೊಳಿರುವಂತೆ ಲಂಡನ್ ಪಟ್ಟಣದಿಂದ ಪಯೋನಿಯರ್ ಪತ್ರಿಕೆಗೆ ತಂತಿವೃತ್ತಾಂತ ಬಂದಿರುತಿದೆ.

The Viceroy's visit to Hyderabad.—ಇಂಡ್ಯರಾಜ್ಯದ ವೈಸ್‌ರಾಯ್‌ಯವರಾದ ಲಾರ್ಡ್ ಡಫರಿನ್‌ಯವರು ಬರುವ ನವಂಬರ್ ತಿಂಗಳ ೨೫ನೇ ತಾರೀಖಿನಲ್ಲಿ ಹ್ಯೆದರಾಬಾದಿಗೆ ಬರುವಂತೆ ನಿಷ್ಕರ್ಷೆಯಾಗಿರುವದಾಗಿ ತಿಳಿಯಬರುತಿದೆ. ಈ ಸಂದರ್ಭದಲ್ಲಿ ಸದರೀ ಸಾಹೇಬರವರು ಮೈಸೂರಿಗೆ ಸಹ ದಯಮಾಡುವರೆಂದು ಒಂದು ಪ್ರವಾದವುಂಟಾಗಿದೆ.

A royal visit to England.—ಬರೋಡೆ ಗಾಯಕವಾಡ ಮಹಾರಾಜರವರ ಜ್ಞಾತಿಯಾದ ಶ್ರೀಮಂತ ಗಣಪತಿರಾವ್ ಗಾಯಕವಾಡಯವರು ಬ್ಯಾರಿಸ್ಟರ್ ಪರೀಕ್ಷೆಗೆ ಓದುವದಕ್ಕಾಗಿ ಆ ಬೇವಾರದಲ್ಲಿ ಇಂಗ್ಲಾಂಡಿಗೆ ಪ್ರಯಾಣವಾದರೆಂದು ತಿಳಿಯಲಾದೆವು. ಇವರು ಹಿಂದೆ ಒಂದುದಫಾ ಇಂಗ್ಲಾಂಡಿಗೆಹೋಗಿ ಬಂದರಾಗಿ ಇದು ಎರಡನೇ ಆವರ್ತಿಯಾಗಿರುತ್ತಿದೆ.

The Governor of Madras.—ಘನವಂತಿಕೆ ಪಡೆದ ಮದರಾಸ್ ಗವರ್ನರಾದ ಸರ್. ಗ್ರ್ಯಾಂಟ್ ಡಫ್‌ಯವರು ಬರುವತಿಂಗಳ ೨ನೇ ತಾರೀಖಿನದು ಮಾರಿಗೆ ತಮ್ಮಕುಟುಂಬದೊಡನೆ ಸ್ವದೇಶಕ್ಕೆ ವಾಪಸು ಹೋಗುವ ಉದ್ದೇಶದಿಂದ ಪೆಕ್ಕರ್ಯಿಂಬ ಹೊಗೇಜಹಜನ್ನು ಗೊತ್ತುಮಾಡಿರುವದಾಗಿ ತಿಳಿಯಬರುತದೆ. ಸದರೀ ಸಾಹೇಬರವರು ಐದು ವರುಷಗಳಕಾಲ ಒಂದು ಪ್ರೆಸಿಡೆನ್ಸಿಯ ಗವರ್ನರಾಗಿದ್ದು ಅಲ್ಲಿ ನಡಿಸಿದ ಆದಳಿತಗಳಲ್ಯೆಕಿ ಒಂದರಿಂದಲಾದರು ಅಲ್ಲಿನ ಪ್ರಜೆಗಳ ಪ್ರೀತಿಗೌರವಗಳಿಗೆ ವಿಷಯರಾಗದೆಹೋದದ್ದು ಕೇವಲ ಚಿಂತನೀಯವಾಗಿರುತಿದೆ.

Income Tax.—ಒಂದು ಹಿಂದೂ ಅವಿಭಕ್ತಕುಟುಂಬಕ್ಕೆಸೇರಿದವರ ತಲಬ್‌ಗಳನ್ನು ಪ್ರತ್ಯೇಕವಾಗಿ ಲೆಕ್ಕಮಾಡಿ ನೋಡುವಲ್ಲಿ ಇನ್‌ಕಂಟ್ಯಾಕ್ಸ್ ಯೆಂಬ ಆದಾಯತೆರಿಗೆಗೆ ಒಳಪಡದೆಯೂ, ಯೆಲ್ಲರ ತಲಬನ್ನು ಒಟ್ಟಾಗಿ ಸೇರಿಸಿದರೆ ಸಾಲಿಯಾನಾ ೫೦೦ ರೂಪಾಯಿಗಳಿಗೆ ಮೇಲ್ಪಡುತಿದೆಯಾಗಿ ಅಂತಾ ಕುಟುಂಬದಿಂದ ತೆರಿಗೆ ವಸೂಲ್ಮಾಡಬಹುದೇ ಯೆಂಬ ಜಿಜ್ಞಾಸೆ ಯುಂಟಾಗಲು, ಪ್ರತಿಒಬ್ಬನಿಗೂ ತೆರಿಗೆಗೆ ಗುರಿಯಾಗತಕ್ಕಷ್ಟು ವರಮಾನ ಸಂಭಾವನೆ ಇಲ್ಲವಾಗಿ ಪ್ರತಿಒಬ್ಬನೂ ಸದರೀ ತೆರಿಗೆಯಿಂದ ಮಿನಾಯಿಸಲ್ಪಟ್ಟಿರುತ್ತಾನೆಂದು ಬೋರ್ಡಿನವರು ನಿರ್ಣಯಿಸಿದರು.

A general order.—ಬರ್ಮ್ಮಾದೇಶದಲ್ಲಿ ಮರಣದಂಡನೆಗಳು ವಿಧಿಸಲ್ಪಟ್ಟ ಅಪರಾಧಿಗಳು ಗಲ್ಲಿಗೆ ಹಾಕಲ್ಪಡುವ ಸಂದರ್ಭದಲ್ಲಿ ಅವರನ್ನು ಫೊಟೋಗ್ರಫ್ ತೆಗೆದ ಮತ್ತು ಮರಣದಂಡನೆ ವಿಧಿಸುವದಾಗಿ ಬೆದರಿಸಿ ಅಪರಾಧಿಗಳಿಂದ ತಪ್ಪೊಪ್ಪಿಗೆ ಅಂಗೀಕಾರವನ್ನು ಪಡೆಯ ಲೆತ್ನಿಸಿದ ತಪ್ಪುಗಳು ಕರ್ನಲ್ ಹೂಪರವರ ಮೇಲೆ ಆರೋಪಿತವಾಗಿದ್ದವಿಷಯದಲ್ಲಿ ವೈಸ್‌ರಾಯ್ ಯವರು ತೃಪ್ತರಾಗಿರುತ್ತಾರೆ. ಮತ್ತು ಕರ್ನಲ್ ಹೂಪರವರ ನಡತೆಯು ಸೈನ್ಯಕ್ಕೆ ಅಪಖ್ಯಾತಿಯನ್ನುಂಟುಮಾಡತಕ್ಕದ್ದಾಗಿರುತದೆ. ಕರ್ನಲ್ ಹೂಪರನ್ನು ನೌಕರಿಯಿಂದ ನಿವೃತ್ತಿಮಾಡುವಂತೆ ಶಿಫಾರಸ್ಸುಮಾಡುವಣವು ವೈಸ್‌ರಾಯ್‌ಯವರಿಗೆ ನ್ಯಾಯವಾಗಿರುವದು, ಪರಂತು ಸದರೀ ಮೊಕದ್ದಮೆಗೆ ಸಂಬಂಧಪಟ್ಟ ಅಂಶಗಳನ್ನೆಲ್ಲ ಪರ್ಯಾಲೋಚಿಸುವದರಲ್ಲಿ ಅವರ ಮೇಲೆ ದೋಷೋದ್ಘಾಟನಪೂರ್ವಕ ವಾಗ್ದಂಡನೆಮಾಡುವದು ಸಾಕಾಗಿರುತಿದೆಯೆಂದು ವೈಸ್‌ರಾಯ್‌ಯವರು ಅಭಿಪ್ರಾಯಪಡುವಂತೆ ಹುಕುಂಹೊರಡಿಸಲ್ಪಟ್ಟಿರುತಿದೆ.

A resolution.—ಆಸ್ಟ್ರಿಯಾದೇಶದ ರಾಜಧಾನಿಯಾದ ವ್ಹಿಯನಾಪಟ್ಟಣದೊಳು ಸೇರುವದಾಗಿರುವ ವಿದ್ವತ್ಸಮಾಜಕ್ಕೆ ಡಾಕ್ಟರ್ ಭಂಡಾರ್‌ಕರ್‌ಯವರು, ಮುಂಬೈ ಪ್ರೆಸಿಡೆನ್ಸಿಯ ಪಂಡಿತರ ಪ್ರತಿನಿಧಿತ್ವೇನ ಅಲ್ಲಿಗೆ ಹೋಗುವಣವನ್ನು ಗವರ್ನಮೆಂಟಿನವರು ಮಂಜೂರ್ಮಾಡುವಪಕ್ಷಕ್ಕೆ ಅವರ ಪ್ರಯಾಣದ ಖರ್ಚುಗಳನ್ನು ತಾವು ವಹಿಸುವದಾಗಿ ಕಾಟೇವಾಡಿ ಅರಸರುಗಳು ತಿಳಿಸಿದ್ದರಿಂದ ಅದು ಗವರ್ನಮೆಂಟಿನವರು ಅಂಗೀಕರಿಸಿರುತ್ತಾರೆ. ಡಾಕ್ಟರ್ ಭಂಡಾರ್ಕರವರಂತಾ ಪ್ರಸಿದ್ಧಪಂಡಿತರನ್ನು ಸದರೀ ಸಮಾಜಕ್ಕೆ ಕಳುಹಿಸುವ ವಿಷಯದಲ್ಲಿ ಮಂತ್ರಾಲೋಚಕ ಸಮಾಜದೊಳಗಣ ಗವರ್ನರವರು ಬಹಳಸಂತೋಷವುಳ್ಳವರಾಗಿರುತ್ತಾರೆ. ಡಾಕ್ಟರ್ ಭಂಡಾರ್ಕರ್ ಯವರು ತಮ್ಮ ಅನಾನುಕೂಲ್ಯಗಳನ್ನು ಸಹ ಪರಿಗಣಿಸದೆ ದ್ಯೆರ್ಯೋತ್ಸಾಹಗಳೊಡನೆ ಪ್ರಯಾಣವಾಗುವವಿಷಯದಲ್ಲೂ ಶಾಸ್ತ್ರ ವಿಚಾರವಿಷಯಕವಾದ ಇಂತಾ ಪ್ರಬಲಕಾರ್ಯಕ್ಕೆ ಕಾಟೇವಾಡಿ ಪ್ರಭುಗಳು ಅರ್ಥಸಹಾಯ ಮಾಡುವ ವಿಷಯದಲ್ಲೂ ತಮಗುಂಟಾದ ಭಾವನನ್ನು ಲಿಖಿತಮೂಲಕ ತಿಳಿಸುವದಕ್ಕೆ ಮಂತ್ರಾಲೋಚಕ ಸಮಾಜದೊಳಗಣ ಘನವಂತಿಕೆ ಪಡೆದ ಗವರ್ನರವರು ಇಷ್ಟವುಳ್ಳವರಾಗಿರುತ್ತಾರೆ, ಎಂದು ವಗ್ಯೆರೆ ಮುಂಬೈ ಗವರ್ನಮೆಂಟಿನವರು ನಿರ್ಣಯಮಾಡಿರುತ್ತಾರೆ.

The Koravers of N. Arcot.—ಉತ್ತರ ಆರ್ಕಾಟ್ ಡಿಸ್ಟ್ರಿಕ್ಟಿನಲ್ಲಿ ಮನೆಬಾಗಿಲಿಲ್ಲದೆ ತಿರುಗಾಡುತಲಿರುವ ಕೊರಚ ಜಾತಿಯವರು ಒಂದುಕಡೆ ಕಾಯಂಯಿರುವಬಗ್ಯೆ ಅವರಿಗೆ ವಸತಿಯಂ ಕಲ್ಪಿಸಿಕೊಡುವದುಚಿತವೆಂದು ಸದರೀ ಡಿಸ್ಟ್ರಿಕ್ಟು ಕಲೆಕ್ಟರಾಗಿದ್ದ ಮೆ॥ ಸ್ಟೂವರ್ಟ್‌ಯವರು ಗವರ್ನಮೆಂಟಿಗೆ ಶಿಫಾರಸ್ಸುಮಾಡಲು ಅವರದನ್ನಂಗೀಕರಿಸಿ, ಕಳೆದ ಸಂವತ್ಸರ ಜೂನ್ ತಿಂಗಳಲ್ಲಿ ಕೊಟ್ಟಹುಕುಂ ಅನುಸರಿಸಿ ಗುಡಿಯಾತಂತಾಲ್ಲೂಕು ತೊಟ್ಟಪಡೆಯೆಂಬ ಗ್ರಾಮದಲ್ಲಿ ಅವರಿಗೆ ಹತ್ತುವರುಷಗಳವರಿವಿಗೆ ಕಂದಾಯವಿಲ್ಲದೆ ಜಮೀನುಗಳು ಸಾಗುವಳಿಗೆ ಕೊಡಲ್ಪಟ್ಟದ್ದಲ್ಲದೆ, ಅರ್ಧತೆರಿಗೆಯಮೇಲೆ ಕಾಡುಗಳಲ್ಲಿ ಸಾದೇಕಡದು ಮಾರಿ ಜೀವನ ಮಾಡಿಕೊಳ್ಳುವಂತೆ ಸಹ ಹುಕುಂ ಕೊಡಲ್ಪಟ್ಟಿತು. ಸದರೀ ಗ್ರಾಮದಲ್ಲಿ ಈಗ ಮೂವತ್ತಾರುಮಂದಿ ಗಂಡುಸು, ಮೂವತ್ತೊಂದುಮಂದಿ ಹೆಂಗಸರು, ಅರವತ್ತೆರಡುಮಂದಿ ಮಕ್ಕಳು ಸೇರಿರುತ್ತಾರೆ ಈ ಏರ್ಪಾಡನ್ನು ಕೇಳಿ ಇನ್ನು ಬಹುಮಂದಿಕೊರಚರು ಗವರ್ನಮೆಂಟಿಗೆ ದರಖಾಸ್ತು ಕೊಡುತಲಿದಾರೆ. ಈಏರ್ಪಾಡಿನದೆಸೆಯಿಂದಯಾವಾಗಲೂ ಚೋರಿಮೊದಲಾದ ದುರ್ವೃತ್ತಿಗಳಮೂಲಕ ಜೀವಿಸುತಲಿದ್ದ ಜನಗಳಿಗೆ ಗೌರವವಾದ ಒಂದುಕಸಬಿನಮೂಲಕಜೀವನಾಧಾರವು ಕಲ್ಪಿಸಿದ್ದಲ್ಲದೆ ಚೋರಿಗಳು ತಗ್ಗಿಹೋಗುವದಕ್ಕೆ ಕಾರಣವಾಯಿತೆಂದು ಅಥೀನಿಯಂ ಪತ್ರಿಕೆ ಅಭಿಪ್ರಾಯಪಡುತಿದೆ. ಇಂತಾ ಏರ್ಪಾಡು ಮೈಸೂರು ಸರ್ಕಾರಕ್ಕೆ ತಿಳಿಯದವಿಷಯವಲ್ಲವು. ಯಾತಕ್ಕಂದರೆ, ಸಾಬಕ್ ಚೀಫ್‌ಕಮಿಷನರಾಗಿದ್ದ ಸರ್. ರಿಚರ್ಡ್ ಮೀಡ್‌ಸಾಹೇಬರವರು, ಲಮಾಣರೂ ಕಮ್ಮಾರ ಮೊದಲಾದವರಮೂಲಕ ಸರ್ವಸಾಧಾರಣನಲ್ಲಿ ನೌಕರಿ ತಪ್ಪಿಹೋದ ಜನಗಳಿಗೆಲ್ಲ ಮೇಲಿನಂತೆ ಜಮೀನುಗಳು ಕೊಡುವದಾಗಿಯೂ, ಸಾಬಕ್ ದಿವಾನರು ಮೆ॥ ರಂಗಾಚಾರ್ಲುರವರು ಮುಜ್ರಾಯಿ ಲಮಾಣರೂ ಕಮ್ಮಾರರಲ್ಲಿ ನೌಕರಿಯಂ ಹೋಗಲಾಡಿಸಿಕೊಂಡ ಜನಗಳಿಗೆ ಅದೇಮೇಲೆ ಜಮೀನುಗಳು ಕೊಡುವದಾಗಿಯೂ ಹುಕುಂಮಾಡಿದರು. ಪರಂತು ಮೇಲಿನ ಹೆರಡರಪೈಕಿ ಒಂದಾದರೂ ಜಾರಿಗೆ ಬರಲಿಲ್ಲವು.

A good day for passed candidates.—ಸನ್ ೧೮೭೭ನೇ ಇಸವಿ ಜುಲೈ ೧ನೇತಾರೀಖ್ ಲಾಗಾಯತು ಯಾವ ಸರ್ಕಾರ್ ಇಲಾಖೆಯಲ್ಲಾಗಲಿ ಮಾಹೆಯಾನಾ ೧೫ರೂಪಾಯಿಗಳಿಗೆ ಮೇಲ್ಪಟ್ಟತಲಬುಳ್ಳ ವಿಶಿಷ್ಟ ನೌಕರಿಗಳು ಪರೀಕ್ಷೆಕೊಟ್ಟವರಿಗೇನೇ ಕೊಡಲ್ಪಡಬೇಕೆಂದು ಕಳೆದ ಜೂನ್ ೨೮ನೇ ತಾರೀಖಿನಲ್ಲಿ ಮದರಾಸ್ ಗವರ್ನಮೆಂಟಿನವರ ಹುಕುಂ ಹೊರಟಿರುವದಾಗಿ ತಿಳಿಯಬರುತಿದೆ. ಇತರ ಗವರ್ನಮೆಂಟುಗಳಲ್ಲಿ ಯಾವಯಾವ ಕಾಲಗಳೊಳು ಯಾವಯಾವ ಹುಕುಂ ಹುಟ್ಟಿದ್ದಾಗ್ಯೂ ಅದು ತಿಳಿಯಬಾರದಕೂಡದೇ ಮೈಸೂರು ಗವರ್ನಮೆಂಟಿನವರು ಇವರಂತೆ ಹುಕುಂ ಕೊಡುವ ಸ್ವಭಾವವುಳ್ಳವರಾಗಿರುತ್ತಾರೆ. ಈ ದೇಶದೊಳು ಪ್ರಾಚೀನದಲ್ಲಿ ದೊಡ್ಡ ನೌಕರಿಗಳಿಗೆ ಮಾತ್ರ ವಾರಸುದಾರಿ ಅಂಗೀಕರಿಸಲ್ಪಡುತಲಿತ್ತು, ಅಂದರೆ, ಬಕ್ಷಿ, ಮುನೀಮ್, ಕೆಲಸಗಳಿಗೆ ವಾರಸುದಾರಿಯನ್ನು ಅಂಗೀಕರಿಸುವಣವೂ, ಗುಮಾಸ್ತ ಮುನಿಷಿ ಕೆಲಸಗಳಿಗೆ ವಾರಸುದಾರಿಯನ್ನು ಮಂಜೂರ್ಮಾಡದೆ ಲಾಯಖೀಮೇಲೆ ಮಾಕರರ್ಮಾಡುವಣವೂ, ವಾಡಿಕೆಯಾಗಿತ್ತು. ದೇಶವು ಬ್ರಿಟಿಷ್ ಆಳಿತಕ್ಕೆ ಒಳಪಟ್ಟದ್ದ ಕಾಲದಲ್ಲಿ ಸಣ್ಣ ನೌಕರಿಗಳಿಗೆ ವಾರಸುದಾರಿಯೂ, ದೊಡ್ಡ ನೌಕರಿಗಳಿಗೆ ಲಾಯಖಿಯೂ ಅಂಗೀಕರಿಸಲ್ಪಡುತಬಂತು. ಈ ಸಿದ್ಧಾಂತದಮೇಲೆ ೧೮೬೮ನೇ ಇಸವಿಯವರಿವಿಗೂ, ತಾಲ್ಲೂಕುನೌಕರರಪೈಕಿ, ಅಮಲ್‌ದಾರರು ವಿನಾ ಮಿಕ್ಕವರೆಲ್ಲರಿಗೂ ಪೆನ್ಷನ್ ಇಲ್ಲದೆ ವಾರಸುದಾರೀ ಅಂಗೀಕರಿಸಲ್ಪಡುತಬಂತು. ಬಳಿಕ ಸಣ್ಣ ನೌಕರರಿಗೆ ಪೆನ್ಷನಾಗಲಿ ವಾರಸುದಾರರಿಗೆ ನೌಕರಿಯಾಗಲಿ ಕೊಡಲ್ಪಡುತಬಂತು. ಬ್ರಿಟಿಷ್ ಆಳ್ವಿಕೆಯ ಆಖೈರ್‌ಭಾಗದಲ್ಲಿ ಪೆನ್ಷನಲ್ಲದೆ ವಾರಸುದಾರರಿಗೆ ನೌಕರಿ ಸಹ ಕೊಡಲ್ಪಡುತಬಂತು. ಮಹಾರಾಜರವರಿಗೆ ದೌಲತ್ ಆದಮೇಲೆ ವಾರಸುದಾರಿಯನ್ನು ಅಂಗೀಕರಿಸಿ ಒಬ್ಬರಿಗಾದರೂ ನೌಕರಿ ಕೊಡಲ್ಪಟ್ಟಂತೆ ಇದುವರಿವಿಗೆ ನಮ್ಮ ಕೇಳ್ವಿಕೆಗೆ ಬರಲಿಲ್ಲವು. ಪೆನ್ಷನ್ ವಿಷಯದಲ್ಲಿ ಮಾತ್ರ ಕೆಲವರಿಗೆ ಕೇವಲ ಧಾರಾಳವಾಗಿ ಕೊಡಲ್ಪಟ್ಟಿರುತಿದೆ. ಮುಖ್ಯವಾಗಿ ಮೇಲಿನ ಏರ್ಪಾಡು ಈ ದೇಶದೊಳಗೂ ಜಾರಿಯೊಳು ತರಲ್ಪಡುವಪಕ್ಷಕ್ಕೆ ಹತ್ತು ಬೇಡಿಕ್ಕಾಗುವದು, ಯಾತಕ್ಕಂದರೆ, ಆಖೈರ್ ದರ್ಜೆ ನೌಕರಿಗಳಾದ ತಾಲ್ಲೂಕು ಗುಮಾಸ್ತೆ ಕೆಲಸಗಳೂ, ಹುಜೂರ್ ದಫ್ತರ್‌ಬಂದಿ ಕೆಲಸಗಳೂ, ಮಾಹೆಯಾನಾ ೧೫ ರೂಪಾಯಿಗಳ ತಲಬುಳ್ಳವಾಗಿರುತಿವೆ. ಈ ನೌಕರಿಗಳೆಲ್ಲ ಪ್ಯಾಸಾದವರಿಗೇನೇ ಕೊಡಲ್ಪಡುವದಾಗಿ ನಿರ್ಣಯವಾಗುವ ಪಕ್ಷಕ್ಕೆ ಹಕ್ಕುದಾರೀಮೇಲೆ ಕೊಡಲ್ಪಡುವ ನೌಕರಿ ಇನ್ನೇನಿದೆ? ಯಾವದೂ ಕಾಣಲಿಲ್ಲವು. ಒಳ್ಳೆಯದು, ಹಕ್ಕುದಾರಿಯೂ ಇದ್ದು ಪರೀಕ್ಷೆಯೂ ಕೊಟ್ಟದ್ದರೆ ಅಂತವರಿಗೆ ಯಾತಕ್ಕೆ ಕೊಡಲ್ಪಡಲಾರದೆಂದು ಯೋಚಿಸಿದರೆ ಹಕ್ಕುದಾರನಾಗಿಯೂ ಪರೀಕ್ಷೆ ಕೊಟ್ಟವನಾಗಿಯೂ ಇರತಕ್ಕವನು ಅವ್ವಲ್ ಉಮೇದವಾರನಾಗಿರುವದಿಲ್ಲ, ಖಡೀಂ ಉಮೇದವಾರನ ಹಕ್ಕನ್ನು ತಪ್ಪಿಸಿ ವಾರಸುದಾರೀ ಹಕ್ಕಿನಮೇಲೆ ನೌಕರಿ ನಿಗದಿ ಮಾಡುವ ಪಕ್ಷಕ್ಕೆ ಪರೀಕ್ಷೆಕೊಟ್ಟ ಖಡೀಂ ಉಮೇದವಾರನ ಹಕ್ಕನ್ನು ತಪ್ಪಿಸಿದಂತೆ ಆಗುತದೆ. ಆದದರಿಂದ ಆಗಿಂದಾಗ್ಯೆ ಇಂತಾ ಹೊಸ ಹುಕುಂಹುಟ್ಟುವಣವು ಅಧಿಕಾರಿಗಳ ಮನಸ್ವೀ ನಡತೆಗೆ ಅವಕಾಶವನ್ನುಂಟುಮಾಡಿದಂತೆ ಆಗುವದೊಂದೇ ಫಲವಾಗಿರುತಿದೆ.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕಿನಾತವೃತ್ತಾಂತಗಳು.

Return from leave.—ಮೈಸೂರು ಸಂಸ್ಥಾನದ ಚೀಫ್‌ಸೆಕ್ರೆಟರಿಯವರಾದ ಮಾ॥ ವಿಜಯರಂಗ ಮೊದಲಿಯಾರವರು ಕುಟುಂಬದೊಡನೆ ತೀರ್ಥಯಾತ್ರೆ ಹೋಗಿದಾರೆಂದು ಹಿಂದಿನವಾರದಲ್ಲಿಯೇ ತಿಳಿಸಿರುತ್ತೇವಷ್ಟೆ. ಇವರು ನಿನ್ನೆಯದಿನ ಪ್ರಾತಃಕಾಲ ಬೆಂಗಳೂರಿನಲ್ಲಿ ವಾಪಸುಬಂದರೆಂದು ತಿಳಿಯಲಾದೆವು.

H. H. the Maharaja's departure.—ಮಾಹೇ ಮಜಕೂರ್ ೨೮ನೇ ತಾರೀಖ್ ಶನಿವಾರ ದಿವಸ ಶ್ರೀಮನ್ಮಹಾರಾಜರವರು, ತಮ್ಮ ಭಾಗ್ಯಪುತ್ರರೊಡನೆ ರಾಜಧಾನಿಗೆ ದಯಮಾಡುವದಿಂತಲೂ, ಜಾಸ್ತಿಪರಿವಾರದೊಡನೆ ಮಹಮೂಲ್ ಪ್ರಕಾರ ಅವರದಿವಾನರು ತಮ್ಮ ಸೆಕ್ರೆಟರಿಯೊಡನೆ ಹೊರಡುವರೆಂತಲೂ, ಕೇಳುತ್ತೇವೆ.

Want of more dispensaries.—ತಾಳೇಸ ಕಂಟೋನ್ಮೆಂಟಿನಲ್ಲಿರುವ ಪ್ರಜೆಗಳೆಲ್ಲರೂ, ಮಧ್ಯರಂಗವಾದ ಪ್ರದೇಶದಲ್ಲಿ, ಅಲಸೂರಿನೊಳರುವ ಆಸ್ಪತ್ರೆಯಂತೆ, ಹೊಸದಾಗಿ ಒಂದು ಆಸ್ಪತ್ರೆಯನ್ನು ಸ್ಥಾಪಿಸಬೇಕೆಂತಲೂ ಅಲ್ಪವಿಷಯಗಳಿಗೆಲ್ಲ ಬೌರಿಂಗ್ ಆಸ್ಪತ್ರೆಗೆ ಹೋಗುವದೆಂದರೆ ಬಾಲರು, ವೃದ್ಧರು, ರೋಗಿಷ್ಠರು ವಗ್ಯೆರೇರಿಗೆ ಬಹಳ ತೊಂದರೆಯಾಗುವದೆಂತಲೂ, ತಿಳಿಸಿ ಬ್ರಿಟಿಷ್ ರೆಸಿಡೆಂಟರಿಗೂ ಮ್ಯುನಿಸಿಪಲ್ ಪ್ರೆಸಿಡೆಂಟರಿಗೂ ಅರ್ಜಿ ಬರೆದುಕೊಳ್ಳುವ ಪ್ರಯತ್ನದೊಳಿದಾರೆಂದು ಕೇಳುತ್ತೇವೆ.

The roads round the Public Offices.—ಅಠಾರಾಕಚ್ಚೇರಿ ಯೆನಿಸಿಕೊಂಡಿರುವ ಸರ್ಕಾರ್ ಕಟ್ಟಡದ ಸುತ್ತಲೂ, ರಸ್ತೆಯು ಬಹಳ ಆಭಾಸವಾಗಿ ಸಂಚಾರಕ್ಕೆ ಅಸಹ್ಯಕರವಾಗಿದೆಯೆಂಬ ಅಂಶವನ್ನು ಸೂಪರಿಂಟೆಂಡಿಂಗ್ ಇಂಜನಿಯರಾದ ಮೇಜರ್ ಬೌವರ್‌ಯವರ ಅವಧಾನಕ್ಕೆ ತರುವದೆಂಬದಾಗಿ ತಿಳಸುವ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಯ ವಾಕ್ಯವನ್ನು ನಾವು ಸಹ ಅನುವಾದಪೂರ್ವಕ ಪೋಷಿಸುವೆವು. ಸದರೀ ಕಟ್ಟಡದ ಕಾಂಪೌಂಡಿನಲ್ಲಿರುವ ಗಿಡಗಳನ್ನು ಕಡಿದು ಹೊಜಹಾಕಿ ಮದ್ದು ಕೇಳುರಿಸಿಕೊಳ್ಳುವವರಲ್ಲಿರುವ ಅಕ್ಕರೆಯು ಆವಶ್ಯಕವಿಷಯಗಳಲ್ಲಿ ಉಂಟಾಗುವದಿಲ್ಲವು.

A daring theft.—ಮಾಹೇ ಮಜಕೂರ್ ೯ನೇ ತಾರೀಖ್ ಸೋಮವಾರದದಿನ, ಕ್ಲೋಸ್‌ಪೇಟೆಗೂ ಚೆನ್ನಪಟ್ಟಣಕ್ಕೂ ಮಧ್ಯೆ ಕೆಂಗಲ್ ಹನುಮಂತರಾಯನದೇವಸ್ಥಾನದಬಳಿ ಬಲವಾದಕಳವು ಒಂದು ನಡೆದಂತೆ ಕೇಳಲಾದೆವು. ಇವರ ತೌರುಸೀರ್ ಹ್ಯಾಗೆಂದರೆ—ಆದಿನ ಕ್ಲೋಸ್‌ಪೇಟೆಯಲ್ಲಿ ನಡೆದ ಸಂತೆಗೆ ಕೆಲವು ಗಂಡಸರೂ ಹೆಂಗಸರು ಸಹ ಬಂದು ವಾಪಸ್ ಹೋಗುವಾಗ್ಯೆ ಈ ಸಂದರ್ಭವನ್ನರಿತು ದೇವಸ್ಥಾನದಲ್ಲಿ ಅವಿತುಕೊಂಡಿದ್ದ ಕೆಲವರು ಕಳ್ಳರು ಅವರನ್ನು ದಾರಿಕಟ್ಟಿಹೊಡೆದು ಅವರಲ್ಲಿದ್ದವನ್ನೆಲ್ಲ ಅಪಹರಿಸಿಕೊಂಡುಹೋದರಂತೆ. ಅದ್ಯಾಪಿ ಕಳ್ಳರು ಪತ್ತೆಯಾಗಲಿಲ್ಲವು. ಪೋಲೀಸ್ ಆಫೀಸರ್ ಟ್ರಾವಿಲಿಂಗ್‌ಅಲೋವೆನ್ಸ್ ಜಾಸ್ತಿಯಾಗುವದಕ್ಕೆಲ್ಲ ಇಂತಾ ಕಳವುಗಳುಅಧಿಕವಾದರೇನೇ ಅದುಸಾರ್ಥಕವಾಗುವದು.

An addition to the College staff.—ಈಪೂರು ಸುಪ್ರಿಂಕಾಲೇಜಿನಲ್ಲಿ ಈಗ ಇರತಕ್ಕ ಪಂಡಿತರಸಂಖ್ಯೆಯು ಸಾಲದ್ದರಿಂದಲೂ ಇದ್ದವರಪೈಕಿ ಇಬ್ಬರಿಬ್ಬರು ಕೆಲಸವಂಬಿಟ್ಟು ಹೋದದರಿಂದಲೂ, ಬೇರೆಯಿಬ್ಬರನ್ನು ಇಂಗ್ಲಾಂಡಿನಿಂದ ಕರೆಯಿಸಬೇಕೆಂಬ ಆಲೋಚನೆ ಯುಂಟಾಗಿರುವಂತೆಯೂ, ಅದೇಪ್ರಕಾರ ಕ್ಲಿಪ್ರದೊಳು ಇಬ್ಬರು ಬರುವವರಾಗಿದಾರೆಂತಲೂ ವಗೈರೆಯಿಂದೆಯೇ ತಿಳಿಸಿದ್ದೆವಷ್ಟೆ. ಈಗ್ಯೆ ಸುಮಾರ್ ೨೦ ದಿನಗಳಿಂದೆ ಮಾ|| ನಿರ್ಕರ್ಸ್ಕರೆಯೆಂಬವರು ಬಂದಿರ್ಲ್ಲದೆ ಗತ ಶುಕ್ರವಾರದದಿನ ಮೆ|| ಜಿಗವಿಯೆಂಬ ಬೇರೊಬ್ಬರು ಸಹ ಬಂದರು. ಇವರಿಗೆ ಮಾಹೇಯಾನಾ ೬೦ ರೂಪಾಯಿಗಳ ತಲಬ್ ಸಲ್ಲುವದೆಂದು ತಿಳಿಯಬರುತಿದೆ.

Closing of Races.—ಈ ಸಂವತ್ಸರದ ಕುದುರೇಪಂದ್ಯಗಳು ಗತ ಗುರುವಾರವೊಡನೆ ಪೂರೈಸಿದವು. ಜಯಾಪಜಯಗಳೂ ಸಂತತವಾದ ವರ್ಷಾಪದವೂ, ಗತ ಸಂವತ್ಸರದಂತಿದ್ದಾಗ್ಯೂ ಯೆರಡುಮೂರುದಿವಸಗಳಿಂದ ಈಸಲದ ಪಂದ್ಯಗಳು ಪರಿಗಣನೀಯ್ಯವಾಯಿತು, ಅದೇನೆಂದರೆ—ಹಿಂದೆ ನಾವು ಯಾವಾಗಲೂ ಕಂಡು ಕೇಳದೆಯಿದ್ದವರಿಗೆ ಒಂದುದಿನ ವಸೂಲ್ಕ್ಯಾಪಲ್ಟ ಪ್ಪದ್ದೊಂದು ಎಲ್ಲದಕ್ಕಿಂತಲೂ ನಿಶ್ಚಯವಾಯಿತಷ್ಟೆ, ಇಬ್ಬರು ಸಣ್ಣ ಸಂಸ್ಥಾನಾಧಿಪತಿಗಳು ಪ್ರತಿವರ್ಷ ಈ ಪೂರಿಗೆ ಬಂದಿಪ್ಪದ್ದು ಏರಡನೆಯದಾಗಿರುತಿದೆ. ಪ್ರತಿ ಸಂವತ್ಸರಕ್ಕಿಂತಲೂ ಈಸಲದ ಪಂದ್ಯದ ಕುದುರೆಗಳು ಬಾಳೇ ಪೆರಿಯ್ಯಪ್ಪುಗಳಾಗಿಯೂ, ಸೇ. ಟಿಕ್ಕೆ ಒಪಳ ಸಂದರಲಾಗಿಯೂ, ಸಂಪೂರ್ಣವಾದವಾಗಿಯೂ ಯಿದ್ದಪ್ಪು ಮಾರಕವೆಯಾಗಿರುತಿದೆ. ಮುಖ್ಯವಾಗಿ ದಕ್ಷಿಣ ಇಂಡಿಯಾದಲ್ಲಿ ನಡೆಯುವ ಪಂದ್ಯಗಳೆಲ್ಲಕ್ಕಿಂತಲೂ, ಇಲ್ಲಿನದು ಒರುಪ ಬರುವ ಪ್ರಸಿದ್ಧಿಗೆ ಬರುತಲಿರುವದು ಮಾತ್ರವಲ್ಲದೆ ದೂರದೇಶಗಳೊಳಗಿರುವವರನ್ನು ಸಹ ಆಕರ್ಷಿಸತಕ್ಕದ್ದಾಗುತಲಿದೆ.

A case for maintenance.—ಗತ ಶುಕ್ರವಾರದ ದಿನ, ಸೀತಾರಾಮಶಾಸ್ತ್ರಿಯ ಕುಮಾರಿಯು ತನ್ನ ಗಂಡನಾದ ರಾಮಸ್ವಾಮಿಶಾಸ್ತ್ರಿಯಿಂದ ತನಗೆ ಮಾಹೇಯಾನಾ ೭ ರೂಪಾಯಿಗಳ ಪ್ರಕಾರ ಜೀವನಾಂಶ ಕೊಡಿಸಬೇಕೆಂತಲೂ, ತನ್ನ ಅತ್ತೆಯ ಪ್ರೇರಣೆಯ ಮೇರೆ ತನ್ನಂ ಕಾಪಾಡದೆ ಉದಾಸೀನಮಾಡಿದನೆಂತಲೂ, ಆದಕಾರಣ ಜೀವನಕ್ಕಿಲ್ಲದೆ ತಾನು ಬಹಳ ಕಸ್ಟಪಡುವಂತೆಯೂ ನಮೂದಿಸಿ ಇಲ್ಲಿನ ಜಾಯಿಂಟ್ ಮ್ಯಾಜಿಸ್ಟ್ರೇಟರ ಕೋರ್ಟಿಗೆ ಕೊಟ್ಟ ಅರ್ಜಿಯು ವಿಚಾರಿಸಲ್ಪಟ್ಟಿತು. ಫಿರ್ಯಾದಿಯು ತನಗೆ ಸಾಧಕವಾಗಿ ಇದುಮಂದಿ ಗೌರವ್ಯರಾದ ನೆರೆಹೊರೆಯವರನ್ನು ಸಾಕ್ಷ್ಯರನ್ನಾಗಿ ತೋರಿರುತ್ತಾಳೆ. ಅಪರಾಧಿಯು ಜೀವನಾಂಶ ಕೊಡದೆ ಉಪಾಯದಿಂದ ಬಿಡುವಬಗ್ಯೆ ತನ್ನ ಹೆಂಡತಿಯು ನಡತೆಯಲ್ಲಿ ದೋಷವನ್ನಾರೋಪಿಸಿ ಅದು ನಿರೂಪಿಸತಕ್ಕ ಬಗ್ಯೆ ಬೇಕಾದ ಪ್ರಯತ್ನಗಳಂ ಮಾಡಲು ಫಿರ್ಯಾದಿಯು, ದನ್ನ ನಿರ್ದೋಷತ್ವವನ್ನು ತನ್ನ ಸಾಕ್ಷಿಗಳ ಮೂಲಕ ತೃಪ್ತಿಕರವಾಗಿ ನಿರೂಪಿಸಿದಳು. ಈ ಮೊಕದ್ದಮೆಯು ದಿಕ್ರೀ ಬಗ್ಯೆ ಅರ್ಜಿ ಮಾಡಲ್ಪಟ್ಟದೆ. ಇನ್ನಿಗ ವಿಚಾರಣೆಯೊಳಿರುವದರಿಂದ ಯಾವ ಅಭಿಪ್ರಾಯವೂ ಕೊಡುವದಕ್ಕಾಗುವದಿಲ್ಲವು. ಪರಂತು ಕೊಂಡ ಹೆಂಡತಿಯು ಮಾತಿನ ಪ್ರಕಾರ ಚಿತ್ತ ತಾಯಿ ದಂಡೆಗಳನ್ನು ತೊರೆದುಬಿಡತಕ್ಕವರು ಕೇಳಿದ... ಮಾತ್ರಪಾಕ್ಯ ಪರಿಪಾಲಕರೆಂಬ ಪ್ರಾಶಸ್ತ್ಯವಂ ಪಡೆಯಬೇಕೆಂದುಕೊಂಡು ಕಠಿಣಹೃದಯರಾದ ಅವರ ಮಾತಿನ ಮೇಲೆ ಅನ್ಯರ ಮನೆ ಹುಡುಗಿಯರನ್ನು ನಾನಾ ರೀತಿಯಿಂದ ಹಿಂಸಿಸುತ ಕಡೆಗೆ ಅವರಲ್ಲಿಯೂ ಜೀವಿಸದಂತೆ ಅವರ ಮೇಲೆ ಇಲ್ಲದ ದೋಷವನ್ನಾರೋಪಿಸಿ ಪರಿತ್ಯಾಗಮಾಡತಕ್ಕವರುಮೇಲೆಕಂಡ ರಾಮಸ್ವಾಮಿ ಶಾಸ್ತ್ರಿಯಂತೆ ಕೆಲವರುಂಟು. ಆದ್ದರಿಂದ ವ್ಯಾಜ್ಯದ ಫಲಿತಾಂಶ ಬೇರೆ ಆಗುವ ಪ್ರತ್ಯೇಕ ಫಲಿತಾಂಶಗಳುಇಬ್ಬರಿಗೂ ಸಮಾನವಾಗಿಯೇ ಇರುವವು.

Departure of Native Rajas and chiefs.—ಮೊಕಬಗಿರಿ ಮತ್ತು ಪಿಟ್ಟಾಪುರದ ಅರಸರುಗಳೂ, ಬೊಬ್ಬಿಲಿ ಜಮೀಂದಾರರವರೂ ಇಲ್ಲಿಗೆ ದೇಶಸಂದರ್ಶನಾರ್ಥ ಬಂದಿರುತ್ತಾರೆಂದು ಹಿಂದಿನ ಪತ್ರಿಕೆಯಲ್ಲಿಯೇ ತಿಳಿಸಿದ್ದೆವಷ್ಟೆ. ಗತಶುಕ್ರವಾರದಹಿನರಾತ್ರಿ ಅವರೆಲ್ಲರೂ ತಮ್ಮ ಸ್ಥಾನಗಳಿಗೆ ತೆರಳಿಹೋದರು. ಸದರೀ ಸಂಸ್ಥಾನಾಧಿಪತಿಗಳು ಸುಮಾರು ಒಂದುವಾರದವರೆಗೆ ಈ ಪೂರಲ್ಲಿದ್ದು ಇಲ್ಲಿ ದರ್ಶನೀಯಗಳಾದವನ್ನೆಲ್ಲ ವೀಕ್ಷಿಸುತಲೂ, ಅನುಭವಾರ್ಹಗಳನ್ನೆಲ್ಲ ಅನುಭವಿಸುತಲೂ, ಸುಂದರವಾದ ಪ್ರದೇಶಗಳಲ್ಲೆಲ್ಲ ಸಂಚರಿಸುತಲೂ, ವಿನೋದದಿಂ ಕಾಲಹರಣಮಾಡುತಲಿದ್ದು ಸ್ವದೇಶಕ್ಕೆ ಹೊರಟುಹೋದರು. ಇವರ ವಿಷಯವಾಗಿ ಸಂಶಯಾತ್ಮನೆಂಬವನೊಬ್ಬನು ಯಾಥಾರ್ಥ್ಯವನ್ನು ತಿಳಿದುಕೊಳ್ಳಬೇಕೆಂಬ ಕುತೂಹಲದೊಡನೆ ಕೇಳಿದ ಇದರಡಿ ಕಂಡ ಪ್ರಶ್ನೆಗೆ ರಕ್ತ ಉತ್ತರಹೇಳುವದಕ್ಕೆ ಆಧಾರ ನಮಗೆ ಇಲ್ಲವಾಗಿ ಅನ್ಯರ್ಯಾರಾದರೂ ಆತನ ಪ್ರಶ್ನೆಗೆ ಜವಾಬ್ ಹೇಳಬಹುದೆಂಬ ನಂಬಿಕೆಯೊಡನೆ ಅದನ್ನಿದರಡಿ ಪ್ರಕಟಿಸುವೆವು, ಅದೇನೆಂದರೆ, ಅಯ್ಯಾ, ಅಪೂರ್ವವಾಗಿ ಇಬ್ಬರು ಗೌರವ್ಯರಾದ ಸಂಸ್ಥಾನಾಧಿಪತಿಗಳು ಈ ದೇಶಕ್ಕೆ ಈಗ ಬಂದಿರುತ್ತಾರೆಯಷ್ಟೆ, ಅದೃಷ್ಟವಶಾತ್ ಇವರುಬಂದಕಾಲವೂ ನಮ್ಮ ಮಹಾರಾಜರವರು ಇಲ್ಲಿರುವ ಕಾಲವೂ ಒಂದಾಗಿ ಕೂಡಿದ್ದಕ್ಕಾಗಿ ಸಂತೋಷಿಸುವೆನು. ಆದರೆ ಇದಕ್ಕೆ ತಕ್ಕಂತೆ ಮತ್ತೊಂದು ಅಂಶ ನಡೆದಿದ್ದಪಕ್ಷಕ್ಕೆ ನನ್ನ ಸಂತೋಷಕ್ಕೆ ಪಾರವಿಲ್ಲದೆಯಿರುವದು. ಪರಂತು ನನಗೆ ತಿಳಿದ ಮಟ್ಟಿಗೆ ಆರೀತಿ ನಡೆದಂತೆ ಕಾಣಿಸಲಿಲ್ಲವಾಗಿ ಒಂದುವೇಳೆ ನನಗೆ ತಿಳಿಯದೆ ಜರಿಗಿದ್ದು ತಮ್ಮ ತಿಳುವಳಿಕೆಗಾಗಲಿ ಅನ್ಯರ ತಿಳುವಳಿಕೆಗಾಗಲಿ ಬಂದಿದ್ದರೆ ಅದು ನನ್ನ ತೃಪ್ತ್ಯರ್ಥ ಅರುಹಬೇಕೆಂದು ಪ್ರಾರ್ಥಿಸುವೆನು. ನಮ್ಮ ಮಹಾರಾಜರವರ ಸಂದರ್ಶನಾರ್ಥ ಮೇಲೆಕಂಡ ಅರಸರಪೈಕಿ ಯಾರಾದರೂ ಹೋಗಿಬಂದದ್ದಾಗಲಿ ಅವರ ಪ್ರತಿ ಸಂದರ್ಶನಾರ್ಥ ನಮ್ಮ ಮಹಾರಾಜರವರು ಹೋಗಿ ಬಂದದ್ದಾಗಲಿ, ಬಹಿರಂಗವಾಗಿ ಪ್ರಕಟವಾಗಲಿಲ್ಲವು. ದೂರದೇಶದಿಂದ ಬಂದವರಿಗೆ ಇಲ್ಲಿ ಆತಿಥ್ಯ ಸಹ ನಡೆದಂತೆ ಕಾಣಲಿಲ್ಲವೋ ತಿಳಿಯಲಿಲ್ಲವು. ಇದೇನಾದರೂ ನಡೆದಿದ್ದರೆ ಅದು ಯಾವಾಗ ಯಾವರೀತಿಯಿಂದವರಿಗೆ ತಿಳಿಸಬೇಕೆಂದು ಕೋರುವ ಸಂಶಯಾತ್ಮ.

ಇದು ಕೇವಲ ಅವಿತರ್ಕವಾದ ಪ್ರಶ್ನೆಯೆಂದು ನಮಗೆ ತೋರುತಿದೆ.

The Pettah Dispensary.—ನಾವು ಯಾವ ಉದ್ದೇಶದೊಡನೆ ಪೇಟೆ ಆಸ್ಪತ್ರೆಯನ್ನು ಸಿಟಿ ಮಾರ್ಕೆಟು ಬಳಿಗೆ ಆಸ್ಪತ್ರೆಯೊಡನೆ ಸೇರಿಸುವದರ ವಿಷಯದಲ್ಲಿ ಕಂಡಿತ ಪ್ರತಿಭಟಿಸಿದ್ದೆವೋ ಅಂತಾ ನಮ್ಮ ಉದ್ದೇಶವನ್ನು ಪೇಟೆ ಆಸ್ಪತ್ರೆಯವರು ಬಂಗಗೊಳಿಸಲಾರಂಭಿಸಿದಂತೆ ನಮ್ಮ ಕೇವಲ ವಿಷಾದಕರವಾಗಿರುತಿದೆ. ರೋಗಿಗಳ ಚಿಕಿತ್ಸೆವಿಷಯದಲ್ಲಿ ಅತ್ಯವಶ್ಯಕವಾದ ಮಾರ್ಗೋಪಾಯಗಳಿಗಿಂತಲೂ, ಸ್ವಾಭಿಮಾನದ ಸೇವೆಗಳಿಗೆ ಅಕ್ಕರೆಯೂ ಜನಾನುರಾಗಕ್ಕೂ ಅಧಿಕವಾಗಿರುವದೆಂದು ಹೇಳಿ ತಿಳಿಸಿದ್ದೆವು. ಈಗ ಜನಗಳಿಗೆ ಪೇಟೆ ಆಸ್ಪತ್ರೆಗಿಂತಲೂ ಮಾರ್ಕೆಟು ಆಸ್ಪತ್ರೆಯಲ್ಲಿ ಪ್ರೀತಿಗೌರವಗಳು ಹೆಚ್ಚುತ ಬರಲಿಕ್ಕೆ ಅಲ್ಲಿನವರ ಚಿಕಿತ್ಸಾಕ್ರಮವೂ, ರೋಗಿಗಳಲ್ಲಿ ಅವರು ವಹಿಸುವ ಅಕ್ಕರೆಯೂ ಅಭಿಮಾನಪೂರ್ವಕ ಅವರು ಮಾಡತಕ್ಕ ಉಪಚಾರವೂ ಕಾರಣಗಳಾಗಿವೆಯೆಂದು ಅರಿಯಲಿಕ್ಕೆ ನಾವು ಸಂತೋಷಿಸುತ್ತೇವೆ. ಪೇಟೆಯ ಆಸ್ಪತ್ರೆಯಲ್ಲಿ ರೋಗಿಗಳನ್ನು ಕೇಳತಕ್ಕವರೇ ಗತಿಯಿಲ್ಲವೆಂತಲೂ, ಬೆಳಿಗ್ಯೆ ೭ ಘಂಟೆಯುಮೊದಲು ೧೦ ಘಂಟೆಯವರೆಗೆ ಕಾದು ಬಿದ್ದಿದ್ದರೂ ಔಷಧ ದೊರೆಯುವದು ಅದೃಷ್ಟಾಯತ್ತವೆಂತಲೂ, ಹಾಗೆ ಔಷಧ ದೊರೆತಾಗ್ಯೂ ಕೇವಲ ಕಾಟಕ್ಕಾಗಿ ಕೊಡಲ್ಪಡುವದರಿಂದ ತಿಂಗಳು ಕಳೆದರೂ ಆಗ್ಯೂ ಅದರಿಂದ ಮಾನವಿದನ್ನು ಯೋಚನವೂ ನಂಬಿಗಾಗುವದಿಲ್ಲವೆಂತಲೂ, ಇದು ಕುರಿತು ಯಾರಾದರು ಆಕ್ಷೇಪಿಸಿ ಕೇಳಿದರೆ ಅವರಿಗೆ ಮಾರನೆಯದಿನದಿಂದ ಅಲ್ಲಿನ ಪ್ರವೇಶವೇ ದುರ್ಲಭವಾಗುತಿದೆಯೆಂತಲೂ ರೋಗಿ ಯೊಬ್ಬನು ನಮಗೆ ತಿಳಿಸಿರುತ್ತಾನಲ್ಲದೆ ಇದಕ್ಕೆ ಆಧಾರವಾಗಿ ಈಚೆಗೆ ನಡೆದ ಒಂದು ಮೊಕದ್ದಮೆಯನ್ನು ಸಹ ನಮೂದಿಸುತ್ತಾನೇನೆಂದರೆ—“ಈಚೆಗೆ ಅಂದರೆ ಗತ ಸೋಮವಾರದದಿನ ಒಬ್ಬ ಮುದುಕನು ಕೆಳಗೆ ಬಿದ್ದು ಮೊಣಕಾಲಿನಕೆಳಗೆ ಬಲವಾಗಿ ಜಖಮವಾಗಿ ಚಿಕಿತ್ಸೆಯಬಗ್ಯೆ ಡಿಸ್ಪೆನ್ಸರಿಗೆ ಹೋದನು. ಅಲ್ಲಿನವರು ಅವನನ್ನು ಮಾರನೆಯ ದಿನ ಬರುವಂತೆ ಹೇಳಿದರು. ಸದರೀ ಮುದುಕನು ಅದೇಪ್ರಕಾರ ಮರಳಿ ಹೋದನು. ಸಾಯಂಕಾಲ ಬರುವಂತೆ ಮರಳಿ ತಿಳಿಸಿದರು ಮರಳಿ ಅವನು ಅದೇರೀತಿ ಸಾಯಂಕಾಲ ಹೋದನು. ಯಥಾಪ್ರಕಾರ ಮಾರನೆಯದಿನ ಬರುವಂತೆ ತಿಳಿಸಿದರು. ಈಪ್ರಕಾರ ಐದಾರು ದಿನಗಳು ಕಳೆದುಹೋದಾಗ್ಯೂ ಕಡೆಗೆಅಲ್ಲಿ ಚಿಕಿತ್ಸೆಯು ಲಭಿಸದ್ದರಿಂದ ಅನ್ಯತ್ರ ಚಿಕಿತ್ಸೆಮಾಡಿ ಕೊಳ್ಳಬೇಕಾಯಿತು. ಪ್ರಜಾನುರಾಗಕ್ಕೆ ಇದೊಂದೇ ಸಾಕಾದ ದೃಷ್ಟಾಂತವಾಗಿರುತಿದೆಯಷ್ಟೆ” ಎಂಬದು. ನಿಜವಾಗಿ ಹಾಗೆಯೇ ನಡೆದಿದ್ದಪಕ್ಷಕ್ಕೆ ಈ ದೇಶದ ಮೆಡಿಕಲ್ ಇಲಾಖೆಗೆ ಇದಕ್ಕಿಂತ ಮಾನಚ್ಯುತಿಕರವಾದದ್ದು ಬೇರೊಂದೂ ಬೇಕಾಗಿದ್ದಿಲ್ಲವು.

The Bangalore Sub Judge's Court.—ಬೆಂಗಳೂರು ಸಬ್‌ಜಡ್ಜಿಯವರ ಕೋರ್ಟು ಆವಳಿತವು ಕೇವಲ ಅವ್ಯವಸ್ಥಿತಸ್ಥಿತಿಗೆ ತರಲ್ಪಟ್ಟಿತೆಂಬ ವಿಷಯವು ಕೇಳಲಿಕ್ಕೆ ನಾವು ಬಹಳವಿಷಾದಿಸುವೆವು. ಇಲ್ಲಿನ ಸಬ್‌ಜಡ್ಜಿಯವರಾದ ಮೆ|| ಕೃಷ್ಣಯ್ಯನವರ ಸ್ವಾಭಾವಿಕವಾದ ಸೌಜನ್ಯ ದಾಕ್ಷಿಣ್ಯಾದಿ ಸದ್ಗುಣಗಳನ್ನು ಅವರ ಕೋರ್ಟಿನ ಕಾರ್ಭಾರೀ ಪ್ರದಸ್ಯರಿಗಸ್ಥರು ಕೆಲವರು ದುರ್ವಿನಿಯೋಗಪಡಿಸಲ್ಲಿಸಿದಾರೆಂಬ ವಿಷಯವು ಮತ್ತಷ್ಟು ಶೋಚನೀಯವಾಗಿದೆ. ಈಗ್ಯೆ ಕೆಲವು ದಿವಸಗಳಿಂದೆಯೇ ಸದರೀ ಕೋರ್ಟಿನ ಕಾಗದ ಪತ್ರಗಳಪೈಕಿ ಕೇವಲ ಮುಖ್ಯವಾದ ಒಂದು ದಸ್ತಾವೇಜು ಗಲಾಟೆಗೆ ಬಂದು ಕಾಣದೆ ಹೋಯಿತೆಂದು ಒಳದೇಶದ ಇಂಗ್ಲಿಷ್ ಪತ್ರಿಕೆಯೊಂದು ತಿಳಿಸಿತ್ತು. ಪರಂತು ಆಗ್ಯೆ ನಾವು ಅದಂ ನಂಬಲಿಲ್ಲವು. ಈಚೆಗೆ ಅಜಮಾಯಿಷಿಯಲ್ಲಿ ಇನ್ನೂ ಕೆಲವು ದಸ್ತಾವೇಜುಗಳ ಸಹ ಹೀನವಾಗಿರುವದಾಗಿ ಕಂಡುಬಂದಂತೆ ಕೇಳುತ್ತೇವಲ್ಲದೆ, ಈ ಅಂಶ ಜಡ್ಜಿಯವರಿಗೆ ತಿಳಿದು ಅದರಮೇಲೆ ಅವರು ಮೊಕದ್ದಮೆ ವಿಚಾರಣೆ ಕಾಲದೊಳಗಾಗಿ ಸದರೀ ಕಾಗದ ಪತ್ರಗಳು ಹಾಜರಾಗದಲ್ಪದದ ಪಕ್ಷಕ್ಕೆ ಕೋರ್ಟಿನ ನೌಕರರನ್ನೆಲ್ಲ ಕೂಡಲೇ ಡಿಸ್‌ಮಿಸ್ ಮಾಡಬೇಕೆಂದು ಮೇಲಕ್ಕೆ ಸಿಫಾರಸ್ಸು ಮಾಡುವಂತೆ ತಾವು ನಿಶ್ಚಯಿಸಿರುವದಾಗಿ ತಿಳಿಸಿದರಂತೆ. (ಏಕೋವಾ ಪಾಪಾನಿ ಕುರ್ವಂತೆ ಫಲಂ ಭುಂಕ್ತೆ ಮಹಾಜನಾಃ) ಎಂಬದಾಗಿ ಒಬ್ಬನ ದುಷ್ಕೃತ್ಯದಿಂದುಂಟಾಗುವ ಫಲವನ್ನು ಯೆಲ್ಲರೂ ಈಗ ಹಂಚಿಕೊಳ್ಳಬೇಕಾಗಿ ಬರುವಂತಿದೆ. ಸದರೀ ದಸ್ತಾವೇಜುಗಳು ಯಾರ ಸುಪರ್ದಿನೊಳಿದ್ದು ಅವುಗಳಿಗೆ ಯಾರು ಜವಾಬ್ದಾರರೆನಿಸಿರ್ದರೋ ಅಂತವರನ್ನು ಕೂಡಲೇ ಸಸ್ಪೆಂಡ್ ಮಾಡಿ ದರ್ಯಾಪ್ತೇ ಮಾಡುವದುಚಿತವೇ ಹೊರ್ತು ಶಿಂಬಳಕ್ಕಾಗಿ ದುಡಿಯುವ ಬಡ ನೌಕರರನ್ನು ಕುಯಿದು ಬರುವಂತೆ ದುಸ್ಥಿತಿ ಕಂಡು ಹಿಡಿಯಲಾರದೆ ನಾಸನಕ್ಕೆತ್ತಿಸುವದು ಯುಕ್ತವಲ್ಲವು. ಸದರೀ ಕೋರ್ಟು ನೌಕರರೊಳು ಪರಸ್ಪರ ಅನುಕೂಲ್ಯವಿಲ್ಲವೆಂತಲೂ, ಒಬ್ಬರ ಮೇಲೊಬ್ಬರು ನಮೂದಿಗೆ ಬಾರದಂತೆಯೇ ಸಂಧಾನಗಳು ಮಾಡುತಲಿರುತ್ತಾರೆಂತಲೂ ಕೇಳಿದ್ದೆವು. ಅಂತಾ ವೈಮನಸ್ಯವೇ ಪ್ರಕೃತ ದುಷ್ಕಾರ್ಯಕ್ಕೆ ನಿಮಿತ್ತವಾಗಿ ಅದರ ಮೇಲೆ ಯಾರು ಯಾರನ್ನು ಮುಳಗಿಸುವದಕ್ಕೋಸ್ಕರ ಈ ಪ್ರಕಾರ ಮಾಡಿದ್ದಾರೋ ಅದನ್ನು ಚೆನ್ನಾಗಿ ವಿಚಾರಿಸಿ ಅಂತವರಿಗೆ ತಕ್ಕ ಶಿಕ್ಷೆಯನ್ನು ಮೆ|| ಕೃಷ್ಣಯ್ಯನವರು ಮಾಡುವರೆಂದು ನಂಬುತ್ತೇವೆ. ಈಗಲೇ ಇದನ್ನು ಪರಿಹರಿಸಿಕೊಳ್ಳದೆ ಮುಂದೆ ವೃದ್ಧಿಯಾಗಲಿಕ್ಕೆ ಅವಕಾಶಕೊಟ್ಟರೆ ಬಳಿಕ ಲಭಿಸಬಹುದಾದ ದುಷ್ಫಲಕ್ಕಾಗಿ ಯಾವಜ್ಜೀವ ಅನುತಪಿಸುತಲಿರಬೇಕಾಗುವದಲ್ಲದೆ ಅಡಿಕಗೆ ಹೋದಮಾನವು ಆನೆಕೊಟ್ಟರೂ ಬಾರದೆಂಬಂತೆ ಅಲ್ಪಕಾರ್ಯಪ್ರಯುಕ್ತವಾದ ಅವಿವೇಕಕ್ಕಾಗಿ ಅನವರತ ದುಃಖಿಸಬೇಕಾಗುವದೆಂಬ ಅಂಶವನ್ನು ಸದರೀ ಕೋರ್ಟಿನ ನೌಕರರೆಲ್ಲರೂ ಸ್ಮರಿಸಿಕೊಳ್ಳುವರೆಂದು ನಂಬುತ್ತೇವೆ.

A contemplated appointment.—ಹಿಂದೆ ಚಿತ್ರದುರ್ಗತಾಲ್ಲೂಕು ಅಮಲ್‌ದಾರರಾಗಿದ್ದು ಈಗ ದಿವಾನರ ಆಫೀಸಿನಲ್ಲಿ ಸ್ಪೆಷಲ್‌ಡ್ಯೂಟಿಮೇಲಿರುವ ಮೆ|| ವೆಂಕಟರಂಗಯ್ಯಂಗಾರ್ಯರವರನ್ನು, ಮಾಹೇಯಾನಾ ೧೫೦ ರೂಪಾಯಿಗಳ ಸಂಬಳದಲ್ಲಿದ್ದು ಪೆನ್ಷನ್‌ಮೇಲೆ ನಿವೃತ್ತರಾಗುವವರಾಗಿರುವ ಗವರ್ನಮೆಂಟ್ ಪ್ರಿಂಟಿಂಗ್ ಆಫೀಸ್ ಮ್ಯಾನೇಜರ್ ಮೆ|| ಮುತುಸ್ವಾಮಿ ಅಯ್ಯರವರಿಗೆ ಬದಲು ನೇಮಕಮಾಡಬೇಕೆಂದು ದಿವಾನರವರು ಆಲೋಚಿಸುತಲಿದಾರೆಂದು ಗತ ಶುಕ್ರವಾರದ ಈವನಿಂಗ್ ಮೇಲ್ ಪತ್ರಿಕೆಯು ತಿಳಿಸುತಿದೆ. ಇದು ಯೆಷ್ಟರಮಟ್ಟಿಗೆ ನಿಜವೋ ನಾವರಿಯೆವು, ಮತ್ತು ಇದು ನಮ್ಮ ನಂಬಿಕೆಗೆ ಸಾಕಾದಷ್ಟು ವಿಷಯವಲ್ಲವೆಂದೆ. ಪರಂತು ಈವನಿಂಗ್ ಮೇಯಿಲ್‌ಪತ್ರಿಕೆಯನಂಬಿಕೆಯೇ ವಾಸ್ತವ್ಯವಾಗಿ ಪರಿಣಮಿಸುವಪಕ್ಷಕ್ಕೆ ಒಂದಂಶವನ್ನಿದರಡಿ ತಿಳಿಸುವೆವು, ಅದೇನೆಂದರೆ, ಈ ಗವರ್ನಮೆಂಟಿನಲ್ಲಿ ಪೂರ್ವದಿಂದಲೂ ರೆವಿನ್ಯೂ ಬಾಬಿನಲ್ಲಿ ಸಮರ್ಥನೆನಿಸಿಕೊಂಡವನನ್ನು ಮೆಡಿಕಲ್ ಆಫೀಸರನ್ನಾಗಿಯೂ, ಇಂಜಿನಿಯರಿಂಗ್ ವಿಷಯದಲ್ಲಿ ಪಾಂಡಿತ್ಯ ಪಡೆದವನನ್ನು ಜ್ಯುಡಿಷಲ್ ಆಫೀಸರನ್ನಾಗಿಯೂ, ಜ್ಯುಡಿಷಲ್ ಬಾಬಿನಲ್ಲಿ ಸಮರ್ಥನಾದವನನ್ನು ಸರ್ವೆ ಆಫೀಸರನ್ನಾಗಿಯೂ, ಫೈನಾನ್ಷಿಯಲ್‌ವಿಷಯದಲ್ಲಿ ಪರಿಚಿತನಾದವನನ್ನು ಇಂಜನಿಯರನ್ನಾಗಿಯೂ, ನೇಮಕಮಾಡುವ ಪದ್ಧತಿಯು ನೆಲಗೊಂಡಿರುತಿದೆ. ಪ್ರಕೃತ ಏರ್ಪಾಡುಸಹ ನಿಜವಾಗಿ ಪರಿಣಮಿಸುವಪಕ್ಷಕ್ಕೆ ಮೇಲೆಕಂಡವುಗಳಿಗೆ ಅನುಗುಣವಾದದ್ದಾಗಿಯೇ ಇರುವದು. ಮೆ|| ವೆಂಕಟರಂಗಯ್ಯಂಗಾರ್ಯರವರು ರೆವಿನ್ಯೂ ಕೆಲಸದಲ್ಲಿ ಸಮರ್ಥರೆಂಬ ಅಂಶವನ್ನೂ, ಅಮಲ್‌ದಾರೀ ಕೆಲಸಕ್ಕೆ ಸರ್ವಪ್ರಕಾರದಿಂದಲೂ ಅರ್ಹರೆಂಬ ವಿಷಯವನ್ನೂ ದಿವಾನರವರು, ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರಾಗಿದ್ದಾಗಲೂ ಅಲ್ಲಿಂದದಿವಾನರಾಗಿ ನೇಮಕವಾದತರುವಾಯಲೂ, ತಿಳಿದುಕೊಳ್ಳಲಿಕ್ಕೆ ಅನೇಕ ಸಂದರ್ಭಗಳುಂಟಾಗಿದ್ದವು. ಆದದರಿಂದ ಅವರು ಪಕ್ಕಾ ರೆವಿನ್ಯೂ ಆಫೀಸರರೆಂಬದನ್ನು ದಿವಾನರು ಚೆನ್ನಾಗಿ ಅರಿತೇಯಿರುತ್ತಾರೆ. ಹೀಗಿದ್ದಾಗ್ಯೂ ಮಿಸ್ಟರ್ ವೆಂಕಟರಂಗಯ್ಯಂಗಾರ್ಯರವರಿಗೆ ಶುದ್ಧಾಂಗ ನೂತನವಾದಂತಾ ಪ್ರಿಂಟಿಂಗ್ ಆಫೀಸಿಗೆ ಮ್ಯಾನೇಜರಾಗಿ ನೇಮಕರ್ ಮಾಡುವ ಅಭಿಪ್ರಾಯವು ಕೇವಲ ಆಶ್ಚರ್ಯಪಡತಕ್ಕದ್ದೇಹೊರ್ತು ಬೇರಲ್ಲವು. ಪ್ರಿಂಟಿಂಗ್ ಆಫೀಸಿನ ಆಡಳಿತವು ಕೇವಲ ಕಚ್ಚಾಕೆಲಸವಾಗಿರುತಿದೆ. ಮತ್ತು ಅದರಲ್ಲಿ ಏನ್ಸ್ಟುಪರಿಚಯವುಳ್ಳವನಾಗಿದ್ದಾಗ್ಯೂ ಅಂತವನನ್ನು ಸಹ ಕದಾಚಿತ್ ಮೋಸಗೊಳಿಸತಕ್ಕ ವಿಷಯಗಳು ಅನೇಕವಾಗಿರುತಿವೆ. ಈಗ ಸವರಿಪ್ರೆಸ್ ಸ್ಯೂಪರಿಂಟೆಂಡೆಂಟರವರು ಪ್ರಿಂಟಿಂಗ್ ವಿಷಯದಲ್ಲಿ ಚಿರಾನುಭವವುಳ್ಳವರಾಗಿದ್ದಾಗ್ಯೂ ಕೆಲವುವಿಷಯಗಳಲ್ಲಿ ಸಹ ಅವರ ಅನನುಭವವು ಹೊರಗಾಗುತಿದೆ. ಹೀಗಿರುವಾಗ್ಯೆ ಮೊದಲು ಪೋಲೀಸ್ ಇಲಾಖೆಯಲ್ಲಿದ್ದು ಅಲ್ಲಿಂದ ತಾಲ್ಲೂಕ್ ರೆವಿನ್ಯೂವ ಜ್ಯುಡಿಷಲ್ ಅಧಿಕಾರಿಯಾಗಿದ್ದು ದೌರ್ಭಾಗ್ಯವಶಾತ್ ಸ್ಪೆಷಲ್ ಡ್ಯೂಟಿಮೇಲಿರತಕ್ಕವರಾದವರನ್ನು ಪೈಕಾ, ಸ್ಮಾಲ್‌ಪೈಕಾ, ಮಿನಿಯನ್, ಬ್ರೇವಿಯರ್, ಬರ್ಜಾಯಿಸ್, ವಗೈರೆ ಪ್ರಿಂಟಿಂಗಿಗೆ ಸಂಬಂಧಿಸಿದ ಸಾಂಕೇತಿಕ ಪರ್ಯಾಯ ಶಬ್ದಗಳ ಅಭ್ಯಾಸಕ್ಕೆ ಗುರಿಮಾಡುವದೂ, ಅಂತವರುಮೊಕದ್ದಮ್ಮೆ ಮಾಡುವವರಮೂಲಕ ಕೆಲವು ಅನ್ಯವಸ್ತುತವಾಗಿ ತನ್ಮೂಲಕ ಅಪಪ್ರಥೆಯುಂಟಾಗಲಿಕ್ಕೆ ಅವಕಾಶವುಂಟುಮಾಡುವದೂ ಎಷ್ಟರ ಉಚಿತವಾಗಿರುತ್ತೆಯೋ ನಾವರಿಯೆವು.

CORRESPONDENCE.

ಅಯ್ಯಾ,—ನನ್ನ ವಿಜ್ಞಾಪನೆಯನ್ನು ತಾವು ದಯವಿಟ್ಟು ಲಾಲಿಸಿ ಕೇಳಿ ಅದರ ಗುಣದೋಷಗಳಂ ಪರ್ಯಾಲೋಚಿಸಿ ತದ್ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸುವಿರೆಂಬ ನಂಬಿಕೆಯೊಡನೆ ನನ್ನ ಬುದ್ಧಿಗೆ ತೋರಿದ ಕೆಲವು ಅಂಶಗಳನ್ನು ಬರೆಯುವೆನು. ಏನೆಂದರೆ—ಗತ ಐವತ್ತು ಸಂವತ್ಸರಗಳಿಗೆ ಮೇಲ್ಪಟ್ಟು ಈ ದೇಶದಲ್ಲಿ ನೆಲಗೊಂಡಿದ್ದ ಬ್ರಿಟಿಷ್ ಆಳ್ವಿಕೆಯ ದೆಸೆಯಿಂದ ಈ ದೇಶೀಯರು ಪಡೆದ ವಿಲಕ್ಷಣವಾದ ಸ್ಥಿತಿ ಗುಣ

ಭೇದಗಳನ್ನು ನೋಡಲಾಗಿ ಯೆಂತವರಿಗೂ ಆಶ್ಚರ್ಯ ವುಂಟಾಗದೆ ಹೋಗಲಾರದು. ಈ ದೇಶದ ಪ್ರಜೆಗಳು ತಮ್ಮ ಸ್ವಾತಂತ್ರ್ಯವೆಂಬದನ್ನೇ ಕುರ್ದ್ದಾಂಗ ಅರಿಯದೆ ಅನೇಕ ವಿಷಯಗಳಲ್ಲಿ ಪರತಂತ್ರರಾಗಿ, ಸಂಕಟಗಳನ್ನು ಅನುಭವಿಸುತ್ತಿರುವದನ್ನು ಕಂಡು ದಯಾಶಾಲಿಗಳಾದ ಬ್ರಿಟಿಷ ಗವರ್ನಮೆಂಟಿನವರು ಈ ದೇಶದಲ್ಲಿ ಸರ್ವಜನಗಳೂ, ವೈಲಕ್ಷಣ್ಯವನ್ನೂ, ಸಂಪೂರ್ಣವಾದ ಸ್ವಾತಂತ್ರ್ಯವನ್ನೂ ಪಡೆದು ಸುಖವನ್ನನುಭವಿಸುವಂತೆ ಮಾಡಬೇಕೆಂಬ ಉಪಕಾರ ಬುದ್ಧಿಯೊಡನೆ ಬಹಳ ಪ್ರಯತ್ನಗಳನ್ನು ಮಾಡಿದರು. ಅವುಗಳಿಂದ ಪ್ರಜೆಗಳಿಗೆ ಪ್ರಾಪ್ತವಾದ ಪ್ರಯೋಜನವೇನೆಂದರೆ,—ಸರ್ಕಾರದವರು ಬಲಾತ್ಕಾರ ಪೂರ್ವಕ ಮಾಡಿಸುತಲಿದ್ದ ಬಿಟ್ಟಿ ಕಾಮುಗಾರಿಗಳೆಂಬವುಗಳ ಹೆಸರೇ ಇಲ್ಲವಾಯಿತು. ವಿಠಾವ್ಯ, ಗುಮೇಸ್ತಗಾರಿ, ಇವುಗಳ ಹೆಸರೇ ಮರೆತು ಹೋದವು ಜುಲ್ಮೀ ಯೆಂಬದರ ಮಾತೇ ಇಲ್ಲವು. ಅಕ್ರಮಗಳಾದ ಬಾಬುಗಳೆಲ್ಲವೂ ನಿಂತು ಹೋದವು ಇಂತಾ ಸುಖವ್ಯಾಪ್ತವಾದವು ಮಾತ್ರವಲ್ಲದೆ ದುರ್ಬಲರು ಸಹ ತಮ್ಮ ತಮ್ಮ ಪ್ರಾಣ ಮಾನ ಧನಗಳನ್ನು ಸುರಕ್ಷಿತವಾಗಿ ಕಾಪಾಡಿಕೊಂಡು ಅನುಭವಿಸುವಂತೆಯಾಯಿತು. ಬಹಿರಂಗವಾಗಿ ನೂರಾರುಮಂದಿ ಗುಂಪುಸೇರಿಕೊಂಡು ಗ್ರಾಮಗಳ ಮೇಲೂ ಊರುಗಳ ಮೇಲೂ ಬಿದ್ದು ಕೊಳೆ ಮುಂತಾದವುಗಳಿಂದ ಜನಗಳನ್ನು ಹಿಂಸಿಸುವ ದುಷ್ಕಾಲವು ತಳೆದುಹೋಯಿತು. ಭಾಗ್ಯವಂತನ ಭಾಗ್ಯವನ್ನು ನೋಡಿ ಸಹಿಸಲಾರದ ದುಷ್ಟರಾದ ಜನಗಳೂ ಪ್ರಾಚೀನದ ಪಾಳೇಗಾರರೂ ನೆಲಕ್ಕುರುಳಿಸಲ್ಪಟ್ಟರು. ಸ್ವತಂತ್ರವಾದ ವರ್ತಕತನ ನೆಲಗೊಳಿಸಲ್ಪಟ್ಟಿತು. ಜನಗಳು ಪರಸ್ಪರ ಅನ್ಯಾಯಅಕ್ರಮಗಳನ್ನು ಮಾಡಿದರೆ ಅವು ವಿಚಾರಿಸಿ ಯುಕ್ತವಾದ ಅಂಶವನ್ನು ನಡೆಸಲಿಕ್ಕೆ ನ್ಯಾಯ ಸ್ಥಾನಗಳುಂಟಾದವು. ಇಂತಾ ನಾನಾವಿಧ ವಿಷಯ ಪ್ರಯೋಜನಗಳನ್ನು ಜನಗಳು ತಿಳಿಯದೆ ಹೋದಾರೆಂಬದಾಗಿ ವಿದ್ಯೆಯು ಅಭಿವೃದ್ಧಿಯಾಗಲಿಕ್ಕೆ ಬೇಕಾದ ಸಹಾಯಗಳೆಲ್ಲವೂ ಮಾಡಲ್ಪಟ್ಟವು. ಈ ಮೇರೆ ಅನೇಕ ವಿಷಯಗಳ ಪ್ರಯೋಜನಗಳೆಲ್ಲವನ್ನೂ ವಿಚಾರಿಸುವಲ್ಲಿ ಅವು ಅಪರಿಮಿತಗಳಾಗಿಯೂ ಅತಿಸೂಕ್ಷ್ಮಗಳಾಗಿಯೂ ಇರುತವೆ. ಇವಾವೆಲ್ಲವೂ ಪ್ರಜೆಗಳಿಗೆ ಯೋಗ್ಯವಾದ ನಡತೆಯುಂಟಾಗುವದಕ್ಕೋಸ್ಕರವೇ ಮಾಡಲ್ಪಟ್ಟವೆಂದು ಹೇಳುವದಕ್ಕೆ ಸಂದೇಹಿಸಲಾರೆನು. ಹೀಗಿರುವಲ್ಲಿ ಜನಗಳು ಮಾತ್ರ ಸಾಕ್ಷಾದ್ವಿರುದ್ಧ ಗುಣವುಳ್ಳವರಾಗಿ ತದನುಸಾರ ವರ್ತಿಸಲಿಕ್ಕೇನು ಕಾರಣವೋ ತಿಳಿಯಲಿಲ್ಲವು. ಪರಂತು ಮೇಲೆ ತಿಳಿಸಿದ ಗುಣಾಂತರಗಳನ್ನು ಅವರೊಳಗಣ ಅಂತರಾಳಿಕಗಳಾದ ಲೋಪಗಳೇ ಇಂತಾ ವಿಪರ್ಯಯಕ್ಕೆ ಕಾರಣವೆಂದೆಣಿಸುತ್ತೇನೆ. ವರ್ತಕರು ತಾವು ಕೊಂಡಿಟ್ಟುಕೊಂಡಿರುವ ಪದಾರ್ಥಗಳನ್ನು ಯಾರದೆ ಅಟಕವೂ ಇಲ್ಲದೆ ಸ್ವತಂತ್ರವಾಗಿ ತಮ್ಮ ಮನಸ್ಸುಬಂದಂತೆ ಮಾರಿಕೊಳ್ಳುವ ವಿಷಯದಲ್ಲಿ ಸರಕಾರದವರು ಸುತರಾಂ ಪ್ರವೇಶಿಸುವದಿಲ್ಲವೆಂಬದನ್ನು ನಿಶ್ಚಯಿಸಿಕೊಂಡು, ತಮ್ಮ ಅತ್ಯಾಶೆಯಿಂದ ಪಾಪಕ್ಕೆ ಹೇಸದೆ ನಿಷ್ಕರುಣರಾಗಿ ಅನಾಜುಗಳ ಧಾರಣೆಯನ್ನು ಮನಸ್ವೀ ಚಡಾಯಿಸಿ, ಮಳೆ ಬೆಳೆಯಾಗಿ ಸುಭಿಕ್ಷವಾಗಿದ್ದಾಗ್ಯೂ ಅತ್ಯಾಶೆಯಿಂದ ದುರ್ಭಿಕ್ಷದೊಳಿದ್ದ ಧಾರಣೆಯನ್ನು ತಗ್ಗಿಸಲಿಕ್ಕೆ ಮನವೊಪ್ಪದೆ ಒಂದೇ ವಿಧದಿಂದ ಮಾರುತಲಿದಾರೆ. ಈ ಮೇರೆ ನಡೆಸಿದರೆ ಅಂತಾವರನ್ನು ಪೂರ್ವರಾಜರು ದಂಡಿಸುತಲಿದ್ದರು. ಈಗ ಅಂತಾ ನಿರ್ಬಂಧವಿಲ್ಲದುವಾದದೆ ಪರಸ್ಪರ ಹಿತಚಿಂತನೆಯೊಡನೆ ಪ್ರಜೆಗಳು ಸುಖವು ಪಡೆಯಲೆಂದು ಸ್ವಲ್ಪ ಉಪೇಕ್ಷೆಯಾಗಿರುವ ಮಾತ್ರದಿಂದಲೇ ವರ್ತಕರು ನಿರ್ಭೀತರಾಗಿ ಪಾಪದೋಷಕ್ಕೆ ಅಂಜದೆ ವರ್ತಕತನವು ಮಾಡುತಲಿದಾರೆ. ಕೃಷಿಜೀವಿಗಳು ಪ್ರಾಯಶಃ ಮೈಗಳ್ಳರಾಗಿ ಹೋದರು. ಇವರಿಗೆ ಜಮೀನ್ದಾರರಿಗೂ, ಕಾಯಂಚೇತ್ ಗವರ್ನಮೆಂಟಿನವರಿಗೂ, ಮೋಸಮಾಡುವವರಲ್ಲಿ ಕೊರತೆಯೇ ಇಲ್ಲದೆ ಹೋಗಿದೆ. ಸಾಧಾರಣವಾಗಿ ಸೇವ್ಯಸೇವಕ ಭಾವವೇ ಶೂನ್ಯವಾಯಿತು. ಈ ಕಾರಣಗಳಿಂದ ವ್ಯವಸಾಯವು ಅಭಿವೃದ್ಧಿಯಾಗದೆ ತಗ್ಗುತಿದೆ. ವ್ಯವಸಾಯವು ಕಡಮೆಯಾದದರಿಂದ ಧಾನ್ಯವು ಬೇಕಾದಷ್ಟು ಉತ್ಪತ್ತಿಯಾಗುವದಿಲ್ಲವು. ಒಂದು ವೇಳೆ ಉತ್ಪತ್ತಿಯಾದರೂ, ಅನ್ಯದೇಶಗಳಿಗೆ ಸಾಗಿಹೋಗುವದರಿಂದ ಸರ್ವತ್ರ ಧಾರಣೆಯು ಏಕರೂಪವಾಗಿ ಪದಾರ್ಥಗಳು ಪ್ರಿಯವಾಗಿ ಇರುತಿವೆ. ಜೋಡಿ, ಕಾಯಂಗುತ್ತಾ, ಅಗ್ರಹಾರ, ಬಿನಮಾನ್ಯ ದೇವಾದಾಯ ಮೊದಲಾದವುಗಳೆಲ್ಲವೂ ಸ್ವಾಯತ ಪಾಳುಬೀಳುತಲೂ, ಲುಕ್ಸಾನಾಗುತಲೂ, ಕಡೆಗೆ ಹರಾಜ್ ಆಗುತಲೂ ಇವೆ. ಇದಕ್ಕೆ ಕಾಲವೈಷಿಟ್ಯವೂ, ಶಾನಭೋಗರೂ, ಸರ್ಕಾರದವರು ಸಹ ಸಹಾಯಕರಾಗಿರುತ್ತಾರೆ. ಹಿಂದಿನ ಶಿಲ್ಪಾದಿ ಕುಶಲ ವಿದ್ಯೆಗಳನ್ನು ಗೌರವಿಸಿ ಪ್ರೋತ್ಸಾಹಪಡಿಸುವದಿಲ್ಲದೆ ಹೋದದರಿಂದ ಅವರು ತಮ್ಮ ಕಸಬ್‌ಗಳನ್ನು ಅತ್ಯಂತಿಕವಾಗಿ ಮರೆತು ಬಿಟ್ಟು ಸರ್ಕಾರ್ ನೌಕರಿಯನ್ನು ನಿರೀಕ್ಷಿಸುತಲಿದಾರೆ. ಇದರಿಂದ ಶಿಲ್ಪಿಗಳ ಹೆಸರೇ ಈ ದೇಶದಲ್ಲಿ ಇಲ್ಲದೆ ಹೋಯಿತು. ಸಾಮಾನ್ಯವಾಗಿ ಇತರ ಪ್ರಜೆಗಳಲ್ಲಿ ಈಗ ಪರೋಪಕಾರ ಬುದ್ಧಿಯೂ, ದಮನವೂ, ಕಡಮೆಯಾಗುತ ಬಂದವು. ನ್ಯಾಯಗಳು ಸರ್ವತ್ರ ನೆಲಗೊಳಿಸಲ್ಪಡಬೇಕೆಂದು ಕೋರ್ಟುಗಳು ಸ್ಥಾಪಿಸಲ್ಪಟ್ಟದ್ದಕ್ಕೆ ದುರ್ವ್ಯವಹಾರಗಳು ಪ್ರಬಲವಾಗಿ ಅದಕ್ಕೆ ರಕ್ಷಕರಾಗಿ ವಾದಿಸುವಿಕ್ಕೆ ವಕೀಲರೂ ವಿಷಯ ಸ್ವರೂಪವನ್ನು ತಿಳಿಯದೇ ಸೈಸಲ್ಪಾದದಕ್ಕೆ ನ್ಯಾಯ ನಿರ್ಣಯಕರೂ ಏರ್ಪಟ್ಟದರಿಂದ ಪ್ರಜೆಗಳು ಅನ್ಯಾಯ ಪ್ರವರ್ತಕರಾಗಲಿಕ್ಕೆ ಮತ್ತಷ್ಟು ಅನುಕೂಲವಾಯಿತು. ಮತಾಚಾರ ವಿಷಯಗಳಲ್ಲಿ ಸರ್ಕಾರದವರು ಸಂಬಂಧಪಡದೆ ಪ್ರಜೆಗಳೇ ನಿರಂಕುಶರಾಗಿ, ಅಭೀಷ್ಟದಿಂದ ವರ್ತಿಸಿ ಸುಖವು ಪಡೆಯಲೆಂಬ ಭಾವದೊಡನೆ ಸದರೀ ವಿಷಯವನ್ನು ಅವರು ಉಪೇಕ್ಷಿಸಿರುವದರಿಂದ, [illegible]ಗಳೂ, ಮರ್ಯಾದೆಗಳೂ, ಸಂಪ್ರದಾಯಗಳೂ ಕುಲಧರ್ಮಗಳೂ, ಪ್ರಜೆಗಳ ಅನಾದರಕ್ಕೆ ವಿಷಯಗಳಾದವು. ರಾಜ್ಯಾಡಳಿತ ಕ್ರಮವನ್ನು ತಿಳಿದು ಮುನ್ಸಿಪಾಲಿಟಿ ನಗ್ಗೈತೆ ಚಿಲ್ಲರೆ ಆಡಳಿತಗಳನ್ನು ಪ್ರಜೆಗಳು ಸ್ವತಃ ನಿರ್ವಹಿಸಿಕೊಳ್ಳಲೆಂಬ ಭಾವದೊಡನೆ ಅವರಿಗೆ ಸ್ವದೇಶ ಪರಿಪಾಲನಾಧಿಕಾರವನ್ನು ಪ್ರದಾನ ಮಾಡಬೇಕೆಂಬ ಅಭಿಪ್ರಾಯವು ಗವರ್ನಮೆಂಟಿನವರಿಗೆ ಪುಟ್ಟುಗುವದಕ್ಕೆ ಮುಂಚಾಗಿಯೇ ಪರಸ್ಪರ ಈರ್ಷ್ಯಾಸೂಯೆಗಳೂ, ಸ್ವಪ್ರಯೋಜನಸೃಷ್ಟಿಯೂ, ದುರ್ತರಲಕ್ಷಣವೂ, ನಿರಂಕುಶಪ್ರವೃತ್ತಿಯೂ ತಲೆದೋರಿವೆ. ನೇಟಿವ್ ಅರಸರು ತಮ್ಮ ರಾಜ್ಯ ಕೋಶಗಳನ್ನು ಕಾಪಾಡಿಕೊಂಡು ಸಂತೋಷದಿಂದಿರುತ ತಮಗೆ ಸಹಾಯಕರಾಗಿರಲೆಂಬ ಕೋರಿಕೆಯೊಡನೆ ಗವರ್ನಮೆಂಟಿನವರು ರಾಜ್ಯಗಳನ್ನೊಪ್ಪಿಸಿದ್ದಕ್ಕೆ ಸದರೀ ಅರಸರುಗಳು ತಮ್ಮ ಕ್ರೀಡಾ ವಿನೋದಾದಿಗಳಿಗೆ ಅಂತಾ ದೇಶಕೋಶಾದಿಗಳು ಬಾಧಕ ಸಾಮಗ್ರಿಯೆಂದು ಭಾವಿಸಿ ಸ್ವಲ್ಪವೂ ಚಿಂತೆಯಿಲ್ಲದೆ ಉದಾಸೀನರಾಗಿರುತ್ತಾರೆ. ನೇಟಿವ್‌ಗಳೇ ಉನ್ನತಾಧಿಕಾರಗಳನ್ನು ಪಡೆದು ಸುಖಿಸಿದರೆಂಬ ತಾತ್ಪರ್ಯದೊಡನೆ ಉನ್ನತಾಧಿಕಾರವನ್ನೆಲ್ಲ ಬಿಟ್ಟು ಖಾಲಿಮಾಡಿ ಗವರ್ನಮೆಂಟಿನವರು ಕೊಟ್ಟದಕ್ಕೆ ನೇಟಿವ್‌ಗಳು ಅದು ನಾನಾರೂಪವಾಗಿ ದುರ್ವಿನಿಯೋಗಪಡಿಸುತ ವಿರುದ್ಧ ವರ್ತನವುಳ್ಳವರಾಗಿದಾರೆ. ಇವರಿಗೆ ಸುಳ್ಳೆಂಬುವದು ತವರುಮನೆ, ಮಾತು ಮೃದು, ಹೃದಯ ಕಠಿಣ, ಪರೋಪಕಾರ ದೃಷ್ಟಿಶೂನ್ಯ, ದಯಾನುರಾಗಗಳು ಮೃಗ್ಯ, ಪರಲೋಕಚಿಂತೆ ಶೂನ್ಯ. ಈಗ ನನ್ನ ಅನುಭವದಿಂದ ತಿಳಿಯಬರುವದೇನೆಂದರೆ, ಸರ್ಕಾರ್ ಉದ್ಯೋಗಸ್ಥರಲ್ಲಿ ಸಾಧಾರಣವಾಗಿ ದರಿದ್ರರಿಗೆ ನ್ಯಾಯವು ದೊರೆಯುವದು ಕಷ್ಟ. ಸದ್ವೈದ್ಯರುವಿನಾ ಕೆಟ್ಟುಬರುಕಿದವರೆಲ್ಲರೂ ವ್ಯಾಪಾರಕ್ಕೆ ಉಪಕ್ರಮಿಸಿ ಸರಕಾರೀವೃತ್ತಿಗೆ ಅಪಪ್ರಯೆಂತಂದರು. ಈ ದೇಶದ ವಿಷಯದೊಳು ಅಭಿಮಾನಶೂನ್ಯರಾದವರು ಪ್ರಬಲಿಸಿ ಪ್ರಜೆಗಳ ಸುಖವಸತಿಗೆ ಕೊರತೆಯನ್ನುಂಟುಮಾಡಿದರು. (ಹೊಟ್ಟೆಗಿಲ್ಲದೆ ವಿದ್ಯೆ ಬಾರದು ವಿದ್ಯೆಯಿಲ್ಲದೆ ಹೊಟ್ಟೆಗೆ ಸಾಲದು) ಎಂಬಂತೆ ಅನರ್ಥಗಳೇ ಹೆಚ್ಚುತಲಿದೆ. ಉತ್ತಮರೆಲ್ಲರೂ ಕ್ಷೀಣವಾಗುತಲೂ, ಅಧಮರೆಲ್ಲರೂ ವೃದ್ಧಿಗೆ ಬರುತಲೂ, ಸಾಂಕರ್ಯವೆಂಬದು ಜಾಸ್ತಿಯಾಗುತಲೂ ಇವೆ.

ತಮ್ಮ ವಿಧೇಯನಾದ,
ಗುಣವಿವೇಚಕ.

EXTRACT
THE CONSTITUTION OF THE INDORE DARBAR

ಇಂದೂರ್, ೭ನೇ ಆಗಸ್ಟು.—ಮಹಾರಾಜಾ ಶಿವಾಜಿರಾವ್ ಹೋಳ್ಕರರವರು ಪಟ್ಟಾಭಿಷಿಕ್ತರಾದದ್ದು ಮೊದಲು ರಾಜ್ಯಾಡಳಿತ ಕ್ರಮವನ್ನು ಸಂಪೂರ್ಣವಾಗಿ ತಿಳಿದುಕೊಳ್ಳಬೇಕೆಂಬ ಪ್ರಥಮತರವಾದ ತಮ್ಮ ಅಭಿಪ್ರಾಯವನ್ನು ಪ್ರತಿದಿನದಲ್ಲೂ ವ್ಯಕ್ತಪಡಿಸುತಲಿದಾರೆ. ಕಳೆದ ಜುಲೈ ತಿಂಗಳ ೩ ಮಹಾರಾಜರವರು ತಮ್ಮ ತಂದೆಯ ಸ್ಥಾನವನ್ನು ಕೈಗೊಂಡ ಸಂದರ್ಭದೊಳು, ಸರ್ ಲೆಪಲ್ ಗ್ರಿಫಿನ್‌ರವರು ಮಾಡಿದ ಉಪನ್ಯಾಸದ ಮೂಲಕ, ಮಹಾರಾಜರವರಲ್ಲಿ ಅವರು ನಿರೀಕ್ಷಿಸುವದಾಗಿ ತಿಳಿಸಿದ ಉತ್ತಮಗುಣಗಳೆಲ್ಲವು ಈಗ ಅನುಭವಕ್ಕೆ ಬರುತಲಿವೆ. ರಾಜ್ಯಾಡಳಿತ ಕ್ರಮವನ್ನು ವಿವರವಾಗಿ ತಿಳಿದುಕೊಂಡು ತಮಗೆ ಲಭ್ಯವಾಗಿರುವ [illegible] ಮಾಡುವ ವಿಷಯದಲ್ಲಿ ತಾವು ಕ್ರಮೇಣ [illegible] ಯೆಂಬ ಪ್ರಥಮವಾದ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸುವದು ಬಹಳ ಶ್ಲಾಘ್ಯಕರವಾಗಿರುತಿದೆ. [illegible] ಒಂದು ಕ್ರಮವನ್ನು [illegible] ನಡೆಸಲ್ಪಡುವ ಸೂಚನೆಗಳು ಕಾಣಬರುತವೆ. [illegible] ಜನರಲ್ ಮೊದಲಾದ ಇಲಾಖೆಗಳು ವಿಸರ್ಜಿಸಲ್ಪಟ್ಟವು. ಸರ್ಕಾರೀ ಕೆಲಸಗಳ ಕ್ರಮವಾಗಿ [illegible] ಒಂದು ಕೌನ್ಸಿಲ್ ರಚಿಸಲ್ಪಡುತಿದೆ. [illegible] ಮಹಾರಾಜರವರ ಮತ್ತು ತಮ್ಮ [illegible] ವಿಷಯಗಳಲ್ಲಿ ಕಾಯಂ ಮಾಡಲ್ಪಟ್ಟಿದ್ದಾರೆ [illegible] ಸೆಕ್ರೆಟರಿಗಳಾಗಿ ನೇಮಿಸಲ್ಪಟ್ಟರು—ರೆವಿನ್ಯೂ ಇಲಾಖೆಗೆ ರಾವ್ ಬಹದೂರ್ [illegible], ರಾವ್ ಬಹದೂರ್ ಕೃಷ್ಣರಾವ್ [illegible] ರವರು ರೆಸಿಡೆಂಟ್ [illegible] ಮತ್ತು [illegible] ಇಲಾಖೆಗೆ, ಜಾಗೀರ್ ಇಲಾಖೆಗೆ ರಾಯನಾಯಕ್ ಜೀವ [illegible]ಯವರು, ಜನರಲ್ ಇಲಾಖೆಗೆ ಗೋವಿಂದರಾವ್ ವಿನಾಯಕರಾವ್‌ರವರು, ಮಿಲಿಟರಿ ಇಲಾಖೆಗೆ ಜನರಲ್ ಕುಮಾರ್‌ಸಿಂಗ್ ಬಕ್ಷಿಯವರು, ಈ ಮೇರೆ ನಿಯಮಿಸಲ್ಪಟ್ಟರು. ಸಾಬಕ್ ಮಹಾರಾಜರವರ ಕಾಲದಲ್ಲಿ ಹುಜೂರ್ ಮತ್ತು ದರ್ಬಾರ್ ಯೆಂಬ ಯೆರಡು ಇಲಾಖೆಗಳಿರುತ ಒಂದಕ್ಕೊಂದು ಸಂಬಂಧವಿಲ್ಲದೆ ಕೆಲಸಗಳು ನಡೆಯುತಲಿದ್ದವು. ಈಗ ಸದರೀ ಯೆರಡು ಇಲಾಖೆಗಳೂ ಒಂದಾಗಿ ಸೇರಿಸಲ್ಪಟ್ಟವು. ಹಿಂದಿನ ಕಾಲದಲ್ಲಿ ಹುಜೂರ್ ಇಲಾಖೆಯಲ್ಲಿ ಕಂ ತಲಪ್ ಮೇಲೆ ಅರ್ದ ಡಜನ್ ಕ್ಲೈರ್ಕ್‌ಗಳಿರುತ ಅವರಿಗೆಲ್ಲ ಮಹಾರಾಜರವರ ಪ್ರೈವೇಟ್ ಸೆಕ್ರಿಟರಿಗಳೆಂಬ ಹೆಸರುಂಟಾಗಿತ್ತು. ಅವರ ಕೆಲಸಗಳು, ದರ್ಬಾರ್ ಇಲಾಖೆಯಿಂದ ಬರುವ ಕಾಗದಗಳನ್ನು ಬರಮಾಡಿಕೊಂಡು ಆಖೈರ್ ಹುಕುಂಬಗ್ಗೆ ಅನುಕೂಲವಾಹಾಗ ಮಹಾರಾಜರವರಿಗೆ ಕಳುಹಿಸಿ ಅವರ ಹುಕುಂ ಆದಮೇಲೆ ಅವನ್ನು ಮರಳಿ ದರ್ಬಾರ್ ಇಲಾಖೆಗೆ ವ್ಯವಸ್ಥೆಯು ಮತ್ತು ಜಾರಿಯಬಗ್ಗೆ ವಾಪಸು ಕಳುಹಿಸತಕ್ಕವಾಗಿತ್ತು. ರಾಜ್ಯಕಾರ್ಯವನ್ನು ಆ ರೀತಿ ನಡೆಸುವ ಪದ್ಧತಿಯಲ್ಲಿ ಭಾರೀ ತಲಬ್ ಪಡೆಯುವ ದರ್ಬಾರ್ ಇಲಾಖಾ ಅಧಿಕಾರಿಗಳಿಗೆ ಸರಿಯಾದ ಜವಾಬ್ದಾರೀ ಇಲ್ಲದೆಯಿತ್ತು. ಬಹುತರದಲ್ಲಿ ಅವರು, ಪೋಸ್ಟಾಫೀಸ್ ಕ್ಲರ್ಕ್‌ಗಳಂತೆ, ದರ್ಬಾರಿಗೆ ಬರುವ ಕಾಗದಗಳನ್ನು ನಿಲೇವಾರಿ ಹುಜೂರ್ ಆಫೀಸ್ ಕ್ಲರ್ಕ್‌ಗಳಿಗೆ ಕಳುಹಿಸಿಕೊಡುವದಾಗಿತ್ತು. ಸದರೀ ಯೇರ್ಪಾಡಿನ ದೆಸೆಯಿಂದ, ಹುಜೂರ್ ಇಲಾಖೆಯಲ್ಲಿ ಕಂತಲಪ್ ಪಡೆಯುತಲಿದ್ದ ಕ್ಲರ್ಕ್‌ಗಳಿಗೆ ಕೆಲಸಗಳೂ ಜವಾಬ್ದಾರಿಯೂ ಹೆಚ್ಚಾದವಲ್ಲದೆ ನೋಡತಕ್ಕವರಿಗೆ ಅವರಲ್ಲಿ ಒಂದು ಗೌರವ ತೋರುತ ಲಂಚಗಳಿಗೂ ಇತರ ದುರ್ನಡತೆಗೂ ಅವಕಾಶವನ್ನುಂಟುಮಾಡುತಲಿತ್ತು. ಸಾಬಕ್ ಮಹಾರಾಜರವರು ತಮ್ಮ ಕೆಲಸದಲ್ಲಿ ಎಷ್ಟು ಬುದ್ಧಿಮಂತರಾಗಿಯೂ ಜಾಗರೂಕರಾಗಿಯೂ ಇದ್ದಾಗ್ಯೂ, ಅವರ ಮಂತ್ರಿಯವರು ಶಕ್ತರಾಗಿಯೂ, ಯುಕ್ತಿ ಚಮತ್ಕಾರಗಳುಳ್ಳವರಾಗಿದ್ದಾಗ್ಯೂ ಕೆಲಸಗಳು ನಡೆಸುವ ಸದರೀ ಕ್ರಮವು ಗಲಾಟೆಗೆ ಅವಕಾಶವುಂಟುಮಾಡತಕ್ಕದ್ದಾಗಿದ್ದದರಿಂದ ತಿಳಿದುಕೊಳ್ಳುವದಕ್ಕೂ ಕೆಲಸಗಳನ್ನು ಪೂರ್ತಿಮಾಡುವದಕ್ಕೂ ಕಾಲವಿಳಂಬವಾಗುತಲಿತ್ತು. ಹಾಗಾಗುವದಕ್ಕೆ ಸದರೀ ಪದ್ಧತಿ ಕಾರಣವೇ ಹೊರತು ದೊಡ್ಡ ಅಧಿಕಾರಿಗಳಲ್ಲವು. ಮಹಾರಾಜರವರು ರಾಜ್ಯಾಡಳಿತಕ್ಕೆ ಸೇರಿದ ವಿಶಿಷ್ಟ ಕೆಲಸಗಳನ್ನೂ ತಮ್ಮ ಅಧೀನದಲ್ಲಿಟ್ಟುಕೊಳ್ಳಬೇಕೆಂಬ ಇಷ್ಟವುಳ್ಳವರಾಗಿದ್ದಂತೆ ಸದರೀ ಅಧಿಕಾರಿಗಳೆಲ್ಲರೂ ಸ್ವಲ್ಪಮಟ್ಟಿಗೆ ಜವಾಬ್ದಾರಿಯನ್ನು ವಹಿಸಲು ಇಷ್ಟಪಡುವವರಾಗಿದ್ದರು. ಪರಂತು ಹುಜೂರ್ ಇಲಾಖಾ ಲವಾಜಮೆಯನ್ನು ಕಡಿಮೆಮಾಡಿ ದರ್ಬಾರ್ ಇಲಾಖಾ [illegible] ಜವಾಬ್ದಾರಿಯನ್ನು ವಹಿಸುವವರ ಮೂಲಕ ಹೊಸ ಕ್ರಮವೊಂದು ಯೇರ್ಪಾಡಾಯಿತು. ಅದು ಕ್ರಮವಾಗಿ ನಡೆದು ಬಂದರೆ ಕೆಲಸಗಳು ಜಾಗ್ರತೆಯಿಂದ ನಡೆದು ಅದರಿಂದ ತೃಪ್ತಿಕರವಾದ ಪ್ರಯೋಜನಗಳೂ ಉಂಟಾಗದೆ ಹೋಗಲಾರವು. ಪ್ರಕೃತ ಯೇರ್ಪಾಡಿನಲ್ಲಿ ದರ್ಬಾರ್ ಅಧಿಕಾರಿಗಳು ಅವರವರ ಇಲಾಖೆಗಳ ಕೆಲಸಗಳಿಗೆ ಅವರವರೇ ಜವಾಬ್ದಾರರಾಗಿ, ತಮ್ಮ ತಮ್ಮ ಇಲಾಖೆಗಳ ಕಾಗದಪತ್ರಗಳನ್ನು ಆಖೈರ್ ಹುಕುಂಬಗ್ಗೆ ಮಹಾರಾಜರವರಲ್ಲಿ ಹಾಜರ್ಪಡಿಸಬೇಕು. ಮಹಾರಾಜರವರು ತಮ್ಮ ದಿವಾನರ ಮತ್ತು ನಾಯಬ್ ದಿವಾನರ ಸಂಗಡ ಆಲೋಚಿಸಿ, ಹುಕುಂ ಮಾಡುವರು. ಸದರೀ ಇಬ್ಬರು ದಿವಾನರೂ ಕೆಲಸಗಳ ವ್ಯವಸ್ಥೆಯಬಗ್ಗೆ ಪ್ರತಿದಿನದಲ್ಲೂ ಹುಜೂರ್ ಕಛೇರಿಯಲ್ಲಿ ಮಹಾರಾಜರವರ ಸಂಗಡ ಕುಳಿತುಕೊಳ್ಳುವರು. ಈ ರೀತಿ, ಪ್ರತಿಯೊಬ್ಬ ಅಧಿಕಾರಿಯೂ ಪ್ರಾಯಶಃ ಪ್ರತಿದಿನದಲ್ಲೂ, ಮಹಾರಾಜರವರ ಸಮಕ್ಷಮಕ್ಕೆ ಹೋಗಬೇಕಾಗುವದು. ಅವರು ತರುವ ಪ್ರತಿಯೊಂದು ಅಂಶವೂ ಅದರ ಬಲಾಬಲಗಳ ಮೇಲೆ ವ್ಯವಸ್ಥೆ ಮಾಡಲ್ಪಡುವದು.

ಸಾಬಕ್ ಮಹಾರಾಜರವರ ಕಾಲದಲ್ಲಿ ಅಸಂಖ್ಯಾತವಾಗಿ ಅಪೀಲ್‌ಗಳಿಗೆ ಅವಕಾಶ ಕೊಡಲ್ಪಡುತಲಿದ್ದದರಿಂದ ನ್ಯಾಯನಿರ್ಣಯವು ಅಡ್ಡಿಪಡುತಬಂತು. ಸಬಾರ್ಡಿನೇಟ್ ಕೋರ್ಟುಗಳಿಗೆ ಶಕ್ತರಾದ ಜಡ್ಜಿಗಳು ಯೇರ್ಪಟ್ಟಿದ್ದಾಗ್ಯೂ, ದಿವಾನರವರ ಇಲಾಖೆಯು ಆಖೈರ್ ನ್ಯಾಯಸ್ಥಾನವಾಗಿದ್ದಾಗ್ಯೂ, ಅಂತೇರಿನಲ್ಲಿ ಮಹಾರಾಜರವರ ತನಕ ತರಲ್ಪಡದ ಮೊಕದ್ದಮೆಯೇ ಇಲ್ಲವು. ತಥಾಪಿ ದಿವಾನರ ಫೈಸಲಿನ ಮೇಲೆ ಮಹಾರಾಜರವರು ತಾವು ಪ್ರವೃತ್ತಿಸುವದಿಲ್ಲವೆಂದು ಹೇಳದ ಮೊಕದ್ದಮೆಯೇ ಯಿಲ್ಲವು. ಅವರ ಫೈಸಲು ಸಹ ಆಖೈರಾಗಿಯೂ ಊರ್ಜಿತವಾದದ್ದಾಗಿಯೂ ಆಗುವದಿಲ್ಲವು. ಆದರೆ ಇವೆಲ್ಲವು ಈಗ ತಪ್ಪಿಹೋದವು. ಮುಂಬೈ ಯೂನಿವರ್ಸಿಟಿಯಲ್ಲಿ ಎಂ. ಎ. ಎಲ್. ಎಲ್. ಬಿ. ಪ್ರಶಸ್ತಿಯಂ ಪಡೆದವರೊಬ್ಬರು ಇಂದೂರ್ ಚೀಫ್‌ಜಡ್ಜಿಯವರಾಗಿರುವದರಿಂದ ದಾವಾ ಮೊದಲಾದ ವಿಷಯದಲ್ಲೂ ಕಾನೂನುವಿಷಯದಲ್ಲೂ ಒಂದು ಪರಿಮಿತಿಗೆ ಒಳಪಟ್ಟು ಅವರಿಗೆ ಜಾಸ್ತೀ ಅಧಿಕಾರ ಕೊಡಲ್ಪಡುವದು. ಅವರ ಫೈಸಲಿನ ಮೇಲೆ ದರ್ಬಾರಿಗೆ ಅಪೀಲಾಗಿ ಅವರ ನಿರ್ಣಯವು ಆಖೈರಾಗಿರುವದು.

BANGALORE.—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿದನ್ಯವೃತ್ತ್ಯವಗನಾರ್ತ್ವಕರ್ಣ್ಯಾ ಸಕಪ್ರಕಾಶನಪರಾಭಿಧಾಪ್ರಥಿತಸಾಹಿತೀಶೋಭಿತಾ । ಮೃಗಾಂಕಹಿಂತವಾಸರೇನಿಹಿತಮುದ್ರಣಾಸಜ್ಜನೈರ್ವಿಕಾಸುಪರಿಶೋಧಿತಾದಿಕತಿವಾನಸಂಸಂಮುದಂ

Vol. XIII] BANGALORE—MONDAY, AUGUST 30 1886. [No. 35.

ಸಂಪುಟ ೧೩.] ಬೆಂಗಳೂರು:—ಸನ್ ೧೮೮೬ನೇ ಇಸವಿ ಆಗಸ್ಟ್ ೩೦ನೇ ತಾರೀಖ್ ಸೋಮವಾರ. [ಸಂಚಿಕೆ ೩೫.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ [illegible] ವರುಷ ೧ಕ್ಕೆ	.. ..	೧೨—೦—೦
ಇಂಗ್ಲಿಷ್ [illegible] ವರುಷ ೧ಕ್ಕೆ	... ..	೬—೦—೦
ಕನ್ನಡ [illegible] ವರುಷ ೧ಕ್ಕೆ	.	೬—೦—೦
[illegible]	೧ಕ್ಕೆ	೧—೮—೦

[illegible]

ಪ್ರಕಟನೆಯ ರಿವಾಜ್.

[illegible]	೧ಕ್ಕೆ	೦—೨—೦
[illegible]	೧ಕ್ಕೆ	೦—೧—೦

NOTICE TO SUBSCRIBERS

[illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA.

Price including Postage, Rs. 5 0 0

ವೈದ್ಯಸಾರ ಸಂಗ್ರಹ.

[illegible]

[illegible]	.. ... ರೂ॥	೫—೦—೦
[illegible] ಮತ್ತು ಅಂಚೆಕೂಲಿ		೦—೬—೦

[illegible], ಬೆಂಗಳೂರು.

ನೋಟೀಸ್.

ಇದರಡಿ ವಿವರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ವಿಕ್ರಯಿಸಲ್ಪಡುವವು.—

ಕನ್ನಡ ಟೀಕಾಸಹಿತವಾದ ಸಂಸ್ಕೃತಗ್ರಂಥಗಳು.

ಕಾಲಾಮೃತ.	...	೧—೪—೦
ಮುಹೂರ್ತದರ್ಪಣ.	...	೦—೧೨—೦
[illegible] ([illegible])	...	೦—೩—೦
[illegible]		೦—೫—೦
[illegible]	...	೦—೪—೧
[illegible]	... ...	೦—೧೪—೦
[illegible]	...	೦—೭—೦
[illegible]	... ...	೦—೨—೦
ವೈದ್ಯಸಾರಸಂಗ್ರಹ	...	೫—೦—೦

ಕನ್ನಡಗ್ರಂಥಗಳು

[illegible]	...	೦—೭—೧
[illegible]	...	೦—೪—೦
[illegible]	...	೦—೩—೬
[illegible]	... ...	೦—೨—೬
[illegible]	...	೦—೪—೦
[illegible]	...	೦—೫—೦
[illegible]	...	೦—೨—೬
[illegible]	...	೦—೬—೦
[illegible]	...	೦—೩—೦
[illegible]	. . ...	೦—೨—೦
[illegible]	...	೦—೦—೯
[illegible]		೧—೦—೧
[illegible]	... ...	೨—೦—೦
[illegible]	...	೦—೧೨—೦
[illegible]	...	೩—೪—೬
[illegible]	...	೩—೪—೬
[illegible]		
೧ನೇ ಸಂಚಿಕೆ.	...	೦—೮—೦
೨ನೇ ಸಂಚಿಕೆ		೦—೮—೦
[illegible]	...	೦—೮—೦

ಸಂಸ್ಕೃತ ಮೂಲಗ್ರಂಥಗಳು

[illegible]	. .	೦—೫—೦
[illegible]	...	೦—೨—೬
[illegible]	...	೦—೨—೬
[illegible]	...	೦—೦—೬
[illegible]	...	೦—೧—೬
[illegible]	...	೦—೧—೦

[illegible]

ನೋಟೀಸ್.

ಇದರಿಂದ ನಮ್ಮ ಚಂದಾದಾರರಿಗೆ ಕೃತಪಡಿಸುವದೇನಂದರೆ—ಈ ಪತ್ರಿಕೆಗೆ ಬಾಕೀದಾರರಾಗಿರತಕ್ಕವರೆಲ್ಲರು ಅವರವರ ಬಾಕೀಗಳನ್ನು ಕೈಸಲ್ಲಿಸಬೇಕೆಂದು ಬಹುಮುಖವಾಗಿ ನಾವುಮಾಡಿದ ಪ್ರಾರ್ಥನೆಯನ್ನು ಲಾಲಿಸದೆಹೋದ ಅನೇಕರ ಹೆಸರುಗಳನ್ನು ಈಪತ್ರಿಕೆಯಲ್ಲಿ ಪ್ರಕಟಿಸಿದಾಗ್ಯೂ ಬಾಕೀದಾರರಿಗೆ ಲಕ್ಷ್ಯವಿಲ್ಲವಾಯಿತು. ಲಾಯರ್ ನೋಟೀಸ್ ಕೊಡಿಸಿದ್ದರಲ್ಲಿ, ಇಂಗಿತಜ್ಞರಾದ ಕೆಲವರು ವಿನಾ ಮಿಕ್ಕವರು ಮೌನವಾಗಿರುವಂತೆ ಕಾಣುತಿದೆ. ಅಂತವರ ವಿಷಯದಲ್ಲಿ ಕೋರ್ಟಿನವಿನಾ ಬೇರೆ ಯಾವ ಉಪಾಯವೂ ಕಾರ್ಯಕಾರಿಯಾಗಲಾರದೆಂದು ಕಾಣುತಿದೆ. ಹಾಗೆ ನಾವು ಮಾಡುವದರಲ್ಲಿ ಬಾಕೀದಾರರು ಈಗ ಕೊಡಬೇಕಾದದಕ್ಕಿಂತಲೂ ಮೂರರಷ್ಟು ಕೊಡಬೇಕಾಗುವದೆಂಬ ಅಂಶವನ್ನು ಮರಳಿಯೊಂದು ದಫಾ ಅವರ ಯೋಚನೆಗೆ ತರುವದುಚಿತವೆಂದು ಯೋಚಿಸಿ ತಿಳಿಸಿ ಇರುತ್ತೇವೆ. ಕೋರ್ಟಿಗೆ ಹೋಗುವದರಮೂಲಕ ಉಂಟಾಗುವ ಅರ್ಥವ್ಯಯ ಮತ್ತು ಶರೀರಶ್ರಮ, ಇವು ಉಭಯರಿಗೂ ತಪ್ಪಲಾರವಾಗಿ, ಅದು ಚೆನ್ನಾಗಿ ಯೋಚಿಸಿ ಅಂತಾ ಕ್ರಮದಿಂದ ನಮ್ಮನ್ನೂ ತಪ್ಪಿಸಿ ತಾವೂ ಅವಕ್ಕೆ ಗುರಿಯಾಗದಿರುವರೆಂದು ಕೋರುವೆವು.

ಬೆಂಗಳೂರು, ಟಿ. ಸಿ. ಶ್ರೀನಿವಾಸಾಚಾರ್,
೩೦—೮—೮೬. ಪ್ರೊಪ್ರೈಟರ್.

ರೆಸಿಡೆಂಟರ ಆಫೀಸ್,—
ಬೆಂಗಳೂರು, ೨೮ನೇ ಆಗಸ್ಟ್ ೧೮೮೬.

ಪ್ರಕಟನೆ.

ರೆಸಿಡೆನ್ಸೀ ಆಫೀಸ್ ಇರುವ ಪೆವಿಲಿಯನ್ ಎಂಬ ಬಂಗ್ಲೆ ಆವರಣದಲ್ಲಿರುವ ಹುಲ್ಲನ್ನು ಕೊಂಡುಕೊಳ್ಳುವದಕ್ಕೆ ದರಖಾಸ್ತುಗಳು ಕೊಡಬಹುದು. ಯಾರದರಖಾಸ್ತು ಅಂಗೀಕರಿಸಲ್ಪಡುತದೆಯೋ ಅಂತವರು ಸನ್ ೧೮೮೬ನೇ ಅಕ್ಟೋಬರ್ ೩೧ನೇ ತಾರೀಖಿನೊಳಗಾಗಿ ಹುಲ್ಲನ್ನು ಕೊಯಿದು ಆಚೆ ಸಾಗಿಸುವದಕ್ಕೆ ತನ್ನ ಏರ್ಪಾಟನ್ನು ಮಾಡಿಕೊಳ್ಳಬೇಕು.

ದರಖಾಸ್ತುಗಳನ್ನು ಲಿಫಾಪೆಯಲ್ಲಿ ಹಾಕಿ ಸೀಲ್ ಮಾಡಿ ರೆಸಿಡೆನ್ಸಿ ಆಫೀಸ್ ರಿಜಿಸ್ಟ್ರಾರವರ ಹೆಸರಿಗೆ ವಿಳಾಸಬರೆದು ಬರುವತಿಂಗಳ ೧೦ನೇ ತಾರೀಖಿನೊಳಗಾಗಿ ಅವರಿಗೆ ತಲಪುವಂತೆ ಕಳುಹಿಸತಕ್ಕದ್ದು, ಪರಂತು ಮುಂಚಾಗಿ ಗಡವಿನಪಕ್ಷಕ್ಕೆ ಚೆಹೆದರಖಾಸ್ತನ್ನಾಗಲಿ ಅಥವಾ ಯಾವ ದರಖಾಸ್ತನ್ನಾಗಲಿ ಅಂಗೀಕರಿಸುವದಕ್ಕೆ ರಿಜಿಸ್ಟ್ರಾರವರು ಬದ್ಧರಾಗಿರುವದಿಲ್ಲವು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, AUGUST 30, 1886.

೧೮೮೬ನೇ ಆಗಸ್ಟು ೩೦ನೇ ತಾ॥ ಸೋಮವಾರ

AN ILLUSTRATION OF FEMALE LIBERTY

ಪ್ರಾಯೇಣ ವರ್ತಮಾನಕಾಲದವರಿಗೆ, ತಮ್ಮ ಸ್ತ್ರೀಯರ ಸ್ಥಿತಿಯಂ ಅಭಿವೃದ್ಧಿಗೊಳಿಸಿ ಅಪೂರ್ವವಾದ ಸ್ವಾತಂತ್ರ್ಯವನ್ನು ಅವರಿಗೆ ಪ್ರಾಪ್ತಮಾಡಿ ತಮಗೆ ಸಮಾನರಾಗಿ ವರ್ತಿಸುವದಂ ನೋಡಿ ಆನಂದಿಸಬೇಕೆಂಬ ಅಭಿರುಚಿಯು ದಿನೇ ದಿನೇ ಅಧಿಕವಾಗುತ ಬರುವದರಿಂದ ತದನುಗುಣವಾದ ಸೌಕರ್ಯಗಳು ಹೇರಳವಾಗಿ ಅವರಿಗೆ ಪ್ರಾಪ್ತಮಾಡಲ್ಪಡುತ ಬರುತಿವೆ. ಇವುಗಳೆಲ್ಲವೂ, ಈಗ ಜನಗಳು ಪಡೆದಿರುವ ಜ್ಞಾನವೈಶಿಷ್ಟ್ಯದ ಫಲವಾಗಿಯೂ, ನಾಗರಿಕತೆಯ ಪ್ರಯೋಜನವಾಗಿಯೂ, ವೈಲಕ್ಷಣ್ಯದ ಸೊಬಗಾಗಿಯೂ, ರಸಜ್ಞತೆಯ ಲಕ್ಷಣವಾಗಿಯೂ, ಉಚಿತಜ್ಞತೆಯ ಪರಿಣಾಮವಾಗಿಯೂ, ಇರುತಿವೆ. ಪರಂತು ಇವುಗಳ ಪರ್ಯವಸಾನವು ದುಃಖರೂಪವಾದದ್ದಾಗಿಯೇ ಇರುವದೆಂಬದಕ್ಕೆ ನಿದರ್ಶನರೂಪವಾಗಿ ಗತವಾರದ ಚಂದ್ರೋದಯ ಎಂಬ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದ್ದ ಒಂದಂಶವನ್ನು ಇದರಡಿ ನಮೂದಿಸುವೆವೆಂತೆನೆ:—

"ನಾಟಕನೋಡಲಿಕ್ಕೆ ಹೋದ ಪಾರಸೀ (ಪಾರ್ಸಿ) ಹೆಂಗಸರು!—ಮುಂಬೈಯಲ್ಲಿ, ಕಳೆದ ೧೩ನೇ ತಾರೀಖ್ ಶುಕ್ರವಾರರಾತ್ರಿ ನಾಲ್ಕುಜನ ಪ್ರಭೂಜಾತಿಯ ಹೆಂಗಸರು ತಮ್ಮನ್ನು ನಾಟಕಶಾಲೆಗೆ ಒಯ್ದುಬಿಡಲಿಕ್ಕೆ ಒಂದು ಗಾಡಿಯನ್ನು ಬಾಡಿಗೆ ಗೊತ್ತುಮಾಡಿದರು. ಅದರಂತೆ ಆ ಗಾಡಿಯವನು ಅವರನ್ನು ನಾಟಕಶಾಲೆಗೆ ಒಯ್ಯದೆ ಒಬ್ಬ ಪಾರಸೀ ಗೃಹಸ್ಥನ ಬಂಗಲೆಗೆ ತೆಗದುಕೊಂಡು ಹೋಗಿ "ಇದೇ ನಾಟಕಶಾಲೆಯು, ಒಳಗೆ ಹೋಗಿರಿ" ಎಂದು ಹೇಳಿ ತನ್ನ ಬಾಡಿಗೆ ತೆಗದುಕೊಂಡು ಹೋದನು. ಅದರಂತೆ ಅವರು ಗಾಡಿಯಿಂದ ಕೆಳಗೆ ಇಳಿದು ಬಂಗ್ಲೆಯ ಒಳಗೆ ಹೋಗಲು ಅಲ್ಲಿ ನಾಲ್ಕುಜನ ಪಾರಸೀ ಗೃಹಸ್ಥರು ಇದ್ದರು. ಅವರು ಈ ಸುಂದರಿಯರ ಮುಖವನ್ನು ಕಾಣುತಲೇ ಕಾಮಬಾಧೆಯಿಂದ ಪೀಡಿತರಾಗಿ ಬಲಾತ್ಕಾರದಿಂದ ಅವರನ್ನು ಮಂಚಕ್ಕೆ ಎಳೆದು, ಕುಚಗ್ರಹಣಮಾಡಿ, ಅಪ್ಪಿ ಮುದ್ದಾಡಿ, ಕಡೆಗೆ ಅವರ ಮನಸ್ಸಿಗೆ ವಿರೋಧವಾಗಿ ಮದನೋತ್ಸವವನ್ನು ಯಥಾಸಾಂಗ ಮಾಡಿದರು. ಕಡೆಗೆ ಎಷ್ಟೋ ಹೊತ್ತಿನಮೇಲೆ ನಿರುಪಾಯವಾದ ಈ ಹೆಂಗಸರು ಮನೆಗೆ ತಿರುಗಿ ಬಂದರು. ಮತ್ತು ಮಾರನೇದಿವಸ ಮ್ಯಾಜಿಸ್ಟ್ರೇಟರಮುಂದೆ ಫಿರ್ಯಾದ್ ಮಾಡಿದರು. ಪೊಲೀಸಿನವರು ಗಾಡಿಯವನನ್ನೂ ಆ ಪಾರಸೀ ಗೃಹಸ್ಥರನ್ನೂ ಪತ್ತೇ ಮಾಡುತಿದ್ದಾರೆ. ಈಮೇಲಿನ ಸಂಗತಿಯನ್ನು ಬರೆಯುವಾಗ ಕಾರವಾರ ಚಂದ್ರಿಕೆಯು ಬರೆಯುತಿದ್ದೇನೆಂದರೆ.—ಪ್ರಭೂ ಜಾತಿ ಹೆಂಗಸರು ಸಾಧಾರಣವಾಗಿ ಸುಂದರಿಯರಾಗಿರುತ್ತಾರೆ. ಅದರಲ್ಲಿ ನಾಟಕ ನೋಡಲಿಕ್ಕೆ ಹೋಗುವ ದಿವಸ ಹೆಂಗಸರು ಜರತಾರಿ ಶೀರೆ ಕುಪ್ಪಸಗಳನ್ನು ಉಟ್ಟು ತೊಟ್ಟು ಹೂವಿನ ಝಲ್ಲಿಗಳನ್ನು ಧರಿಸಿ ಅಲಂಕಾರಯುಕ್ತವಾಗಿ ನಾಟಕಶಾಲೆಯಕ್ಕೆ ಹೋಗುವ ವಿಲಾಸಿನೀ ಹೆಂಗಸರಂಕುರಿತು ಕೇಳಬೇಕಾದ್ದೇನಿದೆ? ನಮ್ಮ ಹೆಂಗಸರು ತಾವು ವಿದ್ಯೆ ಕಲಿತಿದ್ದೇವೆ, ತಮಗೆ ಪೂರ್ಣವಾದ ಸ್ವತಂತ್ರತೆಯು ಬೇಕೆಂದು ಅನ್ನುವವರಿಗೆ ಒಳ್ಳೇ ಪ್ರಾಯಶ್ಚಿತ್ತವಾಯಿತು. ಇದ್ದರಿಂದ ಯೋಗ್ಯವಾದದಕ್ಕಿಂತಲೂ ಹೆಚ್ಚು ಸ್ವತಂತ್ರತೆಯನ್ನು ನಮ್ಮ ಹೆಂಗಸರು ಅಪೇಕ್ಷಿಸಬಾರದು."

ಇದೇವಿಷಯದಲ್ಲಿ ಮುಂಬೈ ಇಂದುಪ್ರಕಾಶ ಪತ್ರಿಕೆ ತಿಳಿಸುವದೇನೆಂದರೆ, ಈಚೆಗೆ ಒಂದುದಿನ ರಾತ್ರಿ ಹಿಂದೂತರುಣಿಯರು ಕೆಲವರು ಗುಡನಂಬಟ್ಟ ಮನೋವಿನೋದಾರ್ಥ ಹೊರಗೆ ಹೋದರು. ಇವರಿಗೆ ಅನುಕೂಲನಾದ ಆತ್ಮರಂಜನ ಮಾಡತಕ್ಕ ಗಾಡಿಯವನೊಬ್ಬನು ದೊರಕನು. ಸದರೀ ಸ್ತ್ರೀಯರು ಇಲ್ಲಿನ ಒಂದು ನಾಟಕಶಾಲೆಗೆ ಹೋಗುವಬಗ್ಗೆ ಬಾಡಿಗೆಯಂಗೊತ್ತುಮಾಡಿ ಅವನ ಗಾಡಿಯಲ್ಲಿ ಕುಳಿತುಕೊಂಡರು. ಗಾಡಿಯವನೇನು ಅಭಿಪ್ರಾಯಪಟ್ಟನೋ ತಿಳಿಯದು. ಪರಂತು ಅವ

ನು ಬೇರೊಂದುಕಡೆಗೆ ಅವರು ಕರೆದುಕೊಂಡು ಹೋಗಿಬಿಟ್ಟನು. ಆ ಹೆಂಗಸರನ್ನು ಸ್ವಜಾತೀಯರಾದ ನಾಲ್ಕುನರಪಶುಗಳು ಸತ್ಕರಿಸಿದವು. ಬಳಿಕ ಅಲ್ಲಿ ನಡೆದವಿಷಯವು ನಮ್ಮ ಲೇಖನಕ್ಕೆ ಅಯೋಗ್ಯವಾಗಿದ್ದರೂ ಅವರ ಪರಿಣಾಮವನ್ನು ವಿಚಾರಿಸಲಾಗಿ ಅವರೆಲ್ಲರೂ ಈಗ ಕಾಹಿಲೆಯಾಗಿ ಅವರ್ಕಿ ಒಬ್ಬಳು ಮೃತಪಟ್ಟಂತೆ ಕೇಳುತ್ತೇವೆ. ಅವರು ಮರಳಿ ಮನೆಗೆ ಹೋಗಲಿಲ್ಲವು. ತಮ್ಮ ಪತಿಯಿಂದ ಕೊಡಲ್ಪಟ್ಟ ಸ್ವಾತಂತ್ರ್ಯವನ್ನು ದುರ್ವಿನಿಯೋಗಪಡಿಸಿಕೊಂಡು ಈರೀತಿ ದೌರ್ಭಾಗ್ಯಸ್ಥಿತಿಗೆ ತಾವಾಗಿಯೇ ಗುರಿಯಾದದಕ್ಕೋಸ್ಕರ ನಾವು ಬಹಳ ವಿಷಾದಿಸುವೆವು, ಎಂಬುದು.

ಸ್ತ್ರೀ ಸ್ವಾತಂತ್ರ್ಯಕ್ಕೆ ಮೇಲೆ ಕಂಡದಕ್ಕಿಂತ ಪ್ರತ್ಯೇಕ ದೃಷ್ಟಾಂತ ಬೇಕಿಲ್ಲವು. ಸ್ತ್ರೀಸಂಭವಾಭಿಲಾಷಿಗಳಾದ ಪುರುಷರು ತಮ್ಮದುರ್ಬಲತೆಗಳನ್ನು ನಿವೃತ್ತಿಸಿಕೊಳ್ಳಲಾರದೆ ಸ್ತ್ರೀಪ್ರಯುಕ್ತವಾಗಿ ಅವರು ನುಡಿಯುವ ಮಾತುಗಳನ್ನೂ, ಪಡೆಯುವಅಭಿಪ್ರಾಯಗಳನ್ನೂ, ಮಾಡುವ ಕೆಲಸಗಳನ್ನೂ ನೋಡಲಾಗಿ ಎಲ್ಲವೂ ಕೃತ್ರಿಮವೆಂದು ಭಾವಿಸಬೇಕಾಗುತ್ತಿದೆ. ಮೇಲೆ ಕಂಡಪ್ರಭುಜಾತಿಸ್ತ್ರೀಗಳು ನಾಲ್ವರು ಸಹಾಯಶೂನ್ಯರಾಗಿ ಅವೇಳೆಯಲ್ಲಿ ಗೃಹವಂಬಿಟ್ಟು ಹೋದದ್ದು ಪ್ರಬಲ ದೋಷವಾದಾಗ್ಯೂ ಒಂದು ಪುರಭಿಪ್ರಾಯದೊಡನೆ ಅವರು ಹೊರಗೆ ಹೊರಟವರಲ್ಲವೆಂದು ವ್ಯಕ್ತವಾಗುತ್ತಿದೆಯಾಗಿ ಕ್ರೂರಸಂಕೇತರಾದ ಸದರೀ ಫಾರ್ಸೀ ಜನಗಳು ಮಾಡಿದ ದುಷ್ಕೃತ್ಯವು ಸುದ್ಧಾಂಗ ಉಪೇಕ್ಷಿಸತಕ್ಕದ್ದಲ್ಲವು. ಸ್ತ್ರೀಯರಿಗೆ ಸ್ವಾತಂತ್ರ್ಯಕಲ್ಪನ ಮೂಲಕ ಅವರನ್ನೆಷ್ಟು ಮುಂದಕ್ಕೆ ತರಬೇಕೆಂದು ಅಪೇಕ್ಷಿಸಿದರೆ ಅಷ್ಟನ್ನೂ ಪುರುಷರು ತಮ್ಮ ಸ್ವಾತಂತ್ರ್ಯವನ್ನು ಕಡಮೆ ಮಾಡಿಕೊಳ್ಳಬೇಕಾದದ್ದು ಅವಶ್ಯಕವಾಗಿರುತ್ತದೆ. ಪುರುಷರ ಹೃದಯವು ಕುಟಿಲವಾದದ್ದಾಗಿದ್ದರೆ ಅವರು ತಮ್ಮ ಕೌಟಿಲ್ಯವನ್ನು ಯಾವರೀತಿಯಿಂದಲಾದರೂ ಕಾರ್ಯತಃ ತೋರಿಸದೆ ಇರಲಾರರಾಗಿ ಅವರಉದ್ದೇಶ ಪ್ರಯತ್ನಗಳೆಲ್ಲವೂ ಕಡೆಗೆ ನಿಷ್ಫಲಗಳಾಗುವವು.

ಸ್ತ್ರೀ ಸ್ವಾತಂತ್ರ್ಯವನ್ನು ಪ್ರಕಾರಾಂತರೇಣ ನಿರೂಪಿಸಿ, ಅವರ ಐಚ್ಛಿಕಪ್ರವೃತ್ತಿಗೆ ಈಗಿನ ಸ್ಥಿತಿಯಲ್ಲಿ ಸಹಕಾರಿಗಳೆಂದು ಹೇಳಬಹುದಾಗಿರುವ ನಾಟಕಶಾಲೆಗಳ ಮತ್ತು ಸ್ಕೂಲ್‌ಗಳ ಮೂಲಕ ಅವರು ಪಡೆಯುವ ಜ್ಞಾನಾಭಿವೃದ್ಧಿಗೆ ಪುರುಷರು ಸಹಾಯಕರಾಗುವ ಬಗೆಯಂಕುರಿತು ಈಚೆಗೆ ನಮಗೆ ಒಬ್ಬರು ಬರೆದ ಲೇಖನಕ್ಕೆ ಇದರಡಿ ಅವಕಾಶ ಕೊಡುವದಲ್ಲದೆ ಅವರು ತಿಳಿಸಿರುವ ವಿಷಯಗಳು ಸಹ ಮುಂಬೈಯಲ್ಲಿ ನಡೆದದಕ್ಕೆ ಸ್ವಲ್ಪಹೆಚ್ಚುಕಡಮೆಯಾಗಿ ಸಮಾನಫಲದಾಯಕಗಳೆಂದು ಹೇಳಬಹುದಾಗಿದೆ.

“ಶೃಂಗಾರಕವಿಪ್ರಣೀತಗಳಾದಹಿಂದೂನಾಟಕಗಳು ಪ್ರಾಯೇಣ ನೀತಿಬೋಧಕಗಳಾದವಾದರೂ, ಅಂತಾ ನೀತಿಧರ್ಮಗಳು ಸಾಧಾರಣವಾಗಿ ನಾಟಕಶಾಲೆಗಳಲ್ಲಿ ನಡೆಯತಕ್ಕ ದುಸ್ಸಹವಾದ ದುಷ್ಕಾರ್ಯಗಳಿಗೆ ಯೆಷ್ಟುಮಾತ್ರವೂ ನಿರೋಧಕಗಳಾಗದೆ ಇವೆ. ಆಯಾ ನಾಟಕಗಳ ಕಥಾ ಸಾರಾಂಶವೂ, ಅದರಲ್ಲಿ ಪ್ರತಿಪಾದ್ಯಗಳಾದ ಪಾತ್ರಗಳ ವೇಷಭಾಷಾದಿಗಳೂ, ತತ್ತತ್ಸಂದರ್ಭೋಚಿತಗಳಾದ ಅಲಂಕಾರಾದಿಗಳೂ, ರಸೋದ್ದೀಪನ ಸಾಮಗ್ರಿಗಳಾಗಿ ಪರ್ಯಾಪ್ತ ಹೃದಯಾಕರ್ಷಕಗಳಾಗಿ ಪರಿಣಮಿಸಿದ್ದರಿಂದ ನಮ್ಮ ಯುವತಿಯರು ಅವು ನೋಡುವದರೊಳು ಕುತುಕರಾಗಿ ಸ್ವಚ್ಛಂದತೆಯಂ ಸತ್ವರ ಕೈಗೊಳ್ಳುತ್ತಾರೆ. ಸ್ತ್ರೀಹೃದಯಾನುರಂಜನವೇ ಪರಮಧರ್ಮವೆಂದು ಭಾವಿಸಿರ್ಪ ಪುರುಷರು ಅವರು ತಡೆಯಲಾರದೆ, ಅವರಿಗೆ ಅನುಕೂಲರಾಗಿ, ರಾತ್ರಿ ವೇಳೆಯಲ್ಲಿ ತಕ್ಕ ಸಹಾಯವಿಲ್ಲದೆ ಹೊರಗೆ ಕಳುಹಿಸುವದನ್ನೂ, ತಮ್ಮ ಇಷ್ಟಾರ್ಥಸಿದ್ಧಿಗೆ ಅನುಕೂಲವಾದ ಅಂತಾ ಸಮಯವನ್ನು ನಿರೀಕ್ಷಿಸುತಲಿದ್ದು ಸ್ತ್ರೀಯರು ನಡೆಸುವ ಅಕೃತ್ಯಗಳನ್ನೂ ನಾವು ಕೇಳದಿರಲಿಲ್ಲವು. ಪ್ರಾಯೇಣ ದುರ್ವೃತ್ತಿಗುತ್ಪತ್ತಿಸ್ಥಾನವಾದ ನಾಟಕ ಶಾಲೆಯಲ್ಲಿ ನಡೆಯುವ ದುಷ್ಕಾರ್ಯಗಳಿಂದ ಲಭಿಸುವ ಹಾನಿಯನ್ನು ಯಾರಾದರು ಪರ್ಯಾಲೋಚಿಸುವರಾದರೆ ಅದರ ಪ್ರೋತ್ಸಾಹದವಿಷಯದಲ್ಲಿ ಒಬ್ಬರೂ ಪ್ರವೇಶಿಸಲೊಲ್ಲರು. ಈ ದೇಶದಲ್ಲಿ ನಾಟಕವಿಷಯದೊಳು ‘ನಮಗುಂಟಾದ ಯೆರಡು ನೂರು ಸಂವತ್ಸರಗಳ ಅನುಭವವು ನಮ್ಮ ಅಭಿಪ್ರಾಯವನ್ನು ನಿರ್ಭಯವಾಗಿ ವ್ಯಕ್ತಪಡಿಸಲಿಕ್ಕೆ ಪ್ರೋದ್ಬಲಪಡಿಸುತ್ತಿದೆ. ನಾಟಕಶಾಲೆಯು ಪಾರವಶ್ಯಕ್ಕೆ ಜನ್ಮಭೂಮಿ, ಮದ್ಯಪಾನಕ್ಕೆ ಮೂಲಸ್ಥಾನ, ಅನ್ಯತಕ್ಕೂ ಅನಾಚಾರಗಳಿಗೂ ಆಶ್ರಯಸ್ಥಾನವು. ಇಂತಾದ್ದರಲ್ಲಿ ಸತ್ಸಂಬಂಧದಿಂದ ಪುರುಷರೇ ದುರ್ವೃತ್ತರಾಗಿ ಹೋಗುವದು ಪ್ರತ್ಯಕ್ಷವಾಗಿ ನೋಡುತಲಿರುವಾಗ್ಯೂ ಅಂತರ್ಗೃಹವರ್ತಿಗಳಾದ ಸ್ತ್ರೀಯರಿಗೆ ಅಲ್ಲಿನಪ್ರವೇಶವು ಎನ್ನೆಷ್ಟರ ಮಹದನರ್ಥಕಾರಿಯಾಗಿರುವದೋ ಅದು ಎಲ್ಲರೂ ಆಲೋಚಿಸಬಹುದು. ಗೃಹಪಾಲಕರಾಗಿದ್ದುಕೊಂಡು ಸ್ತ್ರೀಯರನ್ನು ನಾಟಕಾವಲೋಕನಕ್ಕೆ ಕಳುಹಿಸಿ ಅವರು ತಮ್ಮನ್ನಗಲಿದ್ದ ಮೊದಲು, ಮರಳಿ ಮನೆಗೆ ಬರುವ ತನಕ ಅವರ ನಿರಪಾಯತೆಗಾಗಿ ಚಿಂತಿಸುತ ತಲೆಬಾಗಿಲೊಳು ಕುಳಿತು ನಿರೀಕ್ಷಿಸತಕ್ಕ ಪುರುಷರು ಯಾವಾಗಲಾದರೂ ಬಹಳ ದುಃಖಿಸಬೇಕಾಗುವದು. ಅವಿವೇಚಿತ ಹೇಯಾಹೇಯ ವಿಷಯ ತಾರತಮ್ಯರಾದ ನಮ್ಮತರುಣಿಯರ ಹೃದಯದೊಳು ಪ್ರಥಮಾಸ್ವಾದವಾದ ವಿಷಯವೇ ಅತಿ ಮಧುರವಾಗಿ ತೋರಿ ಅವರು ಅದು ದೃಢವಾಗಿ ಪರಿಗ್ರಹಿಸುವರೆಂಬ ನಂಬಿಕೆಯು ನಮಗ ಊರ್ಜಿತವಾಗಿರುವದರಿಂದ ಅವರಿಗೆ ಪ್ರಂಟುಸಾಮವ ಅಭಿಪ್ರಾಯಗಳೂ, ನಾವು ಬಾಲ್ಯದಲ್ಲಿ ಕಲಿಸತಕ್ಕ ವರ್ತನಗಳೂ, ಉಪದೇಶಿಸತಕ್ಕ ನೀತಿಮಾರ್ಗಗಳೂ, ತೋರಿಸತಕ್ಕ ವಿಷಯಗಳೂ, ಬೋಧಿಸತಕ್ಕ ಗ್ರಂಥಗಳೂ, ಕಲ್ಪಿಸತಕ್ಕ ಅನುಕೂಲ್ಯಗಳೂ, ಸರ್ವ ನಮಗೆ ಹೃದಯಾಪ್ಯಾಯಕರಗಳಾಗಿದ್ದಾಗ್ಯೂ ಕಾಲಾಂತರದಲ್ಲಿ ಅವರ ಆತ್ಯಂತಿಕ ನಾಶಕ್ಕೆ ಸಾಕಾದ ಸಹಕಾರಿಗಳಾಗದೆ ಹೋಗಲಾರವು. ಮತ್ತೊಂದು ಅಂಶವನ್ನು ತಿಳಿಸಲಿಕ್ಕೆ ಇದು ಒಳ್ಳೆಯ ಸಂದರ್ಭವಾದದರಿಂದ ಅದನ್ನು ಸಹ ಇದರಡಿ ಸ್ವಲ್ಪ ಪ್ರಸ್ತಾಪಿಸುವೆವು, ಅದೇನೆಂದರೆ—ಈ ದೇಶದಲ್ಲಿ ಸ್ತ್ರೀವಿದ್ಯಾಭ್ಯಾಸವೂ ತತ್ಸಾಧಕಗಳಾದ ಅನುಕೂಲ್ಯಗಳೂ, ಅಧಿಕವಾಗುತಬರುವಂತೆಲ್ಲ ವಿದ್ಯಾರ್ಥಿನೀಯರಿಗೆ ಸ್ವಗೃಹವಾಸವೂ, ಸ್ವಗೃಹಕೃತ್ಯವೂ, ಸ್ವಜನೋಪಚಾರವೂ, ದುಸ್ಸಹವೆಂಬ ಭಾವ ತಲೆದೋರಿ ಅಂತಾ ನಿರ್ಬಂಧದಿಂ ವಿಮುಕ್ತರಾಗುವ ಉಪಾಯವನ್ನೇ ಅನವರತ ಆಲೋಚಿಸುತಲಿರುತ್ತಾರೆ. ವಿದ್ಯಾರ್ಥಿನೀಯರಿಗೆ ತಮ್ಮ ಮನೆಯಲ್ಲಿ ನಡೆಯುವ ಉಪಚಾರಗಳಿಗಿಂತಲೂ, ಪಾಠಶಾಲೆಗಳಲ್ಲಿ ಅಧಿಕವಾಗಿ ಜರಗುವದರಿಂದ, ರಾತ್ರಿ ಹಗಲು ಅಲ್ಲಿನ ವಾಸವನ್ನೇ ಅಪೇಕ್ಷಿಸುತ, ಚಿಂತನಾವ್ಯಾಜದಿಂದಲ್ಲೇ ಇರುತ್ತಾರೆ. ವಿದ್ಯಾರ್ಥಿನೀಯರು ಯಾವ ಭಾಗದೊಳಾಗಲಿ ಅಕ್ರಮಪ್ರವಿಷ್ಟರಾದರೆ ಅದು ಉತ್ಸಾಹದಿಂ ಪ್ರೋತ್ಸಾಹಗೊಳಿಸದೆ ಬಿಡಿಸುವದರ ಮೂಲಕ ಸ್ವೀಯರು ಕಮಭಾಷಿಗಳಾಗಿ ತೋರುತ್ತಾರಾಗಿ ಅವರಿಗಿಂತಲೂ ತಮ್ಮಂತೆ ಮನಸ್ವೀ ಕಾಣಿಯರಕ್ಕೆ ಸ್ಕೂಲ್‌ಮಾಸ್ಟರ್‌ಗಳಲ್ಲಿ ವಿಶೇಷ ಅಭಿಮಾನ ಗೌರವಗಳುಳ್ಳವರಾಗಿದ್ದಾರೆ. ಮಾರ್ಜನಪೇಷಣಾದಿ ಗೃಹಕೃತ್ಯಗಳಿಗಿಂತಲೂ, ನೃತ್ಯಗೀತ ವಾದ್ಯಗಳೂ, ಬುದ್ಧಿಕೌಶಲ್ಯ ಪ್ರದರ್ಶಕವಾದ ಕಸೂತೀಕೆಲಸಗಳೂ ಯೋಗ್ಯತ್ವೇನ ತೋರಿ ಮೊದಲನೆಯದು ಅತಿಜಿಗುಪ್ಸೆಯೊದವೆ ತೊಡೆಯುತೆತ್ತಿಸಿವಾರೆ. ಏತೇನ ನಮ್ಮ ಹುಡುಗಿಯರಿಗೆ “ಮನೆಗಿಂತ ಗುಡಿ ಭದ್ರವೆಂಬಂತೆ” ಸ್ಕೂಲ್‌ಗಳ ಮತ್ತು ಸ್ಕೂಲ್‌ಟೀಚರ್‌ಗಳ ಆಶ್ರಯವೇ ಪರಮಸುಖವೆಂಬದೃಢತರವಾದ ತಾತ್ಪರ್ಯವು ನೆಲಗೊಂಡಿರುವದರಿಂದ ಅವರು ಕುಟುಂಬಿನೀಯರಾಗಿರುವರೆಂಬ ನಂಬಿಕೆಯೇ ನಮಗೆ ಶುದ್ಧಾಂಗ ಇಲ್ಲದೆ ಹೋಗಿದೆ. ಇವರ ಚಿತ್ತಸ್ಥೈರ್ಯವನ್ನೂ, ವಯಃಪರಿಮಾಣವನ್ನೂ, ಅವರಿಗೆ ಲಭಿಸುವ ಸಹವಾಸ ಸ್ವರೂಪವನ್ನೂ, ಈಗಲೇ ಅವರ ಹೃದಯದಲ್ಲಿ ಅಂಕುರಿಸಿರುವ ರಸಭಾವಗಳನ್ನೂ ಆಲೋಚಿಸಿ ನೋಡಿದರೆ ಅವರ ಪ್ರತ್ಯಾಶೆಯನ್ನಿಡುವದು ಅವಿವೇಕವೆಂದು ತೋರುತ್ತದೆ. ಸ್ತ್ರೀವಿದ್ಯಾಭ್ಯಾಸಕ್ಕೆ ಪೋಷಕರಾದವರು ಗಾರ್ಗೀ, ಮೈತ್ರೇಯೀ, ಅನಸೂಯೆ, ಸಾವಿತ್ರೀ, ಅಹಲ್ಯೆ, ಶಕುಂತಳಾ, ಮೊದಲಾದ ಋಷಿಪತ್ನಿಯರನ್ನೂ ಋಷಿಕನ್ಯೆಯರನ್ನೂ ಉದಾಹರಣತ್ವೇನ ವಿಕಸಿತ ಹೃದಯರಾದ ನಮ್ಮ ಬಾಲೆಯರಿಗೆ ಸತತವಾಗಿ ಹೇಳುವದನುಚಿತವು, ಯಾತಕ್ಕೆಂದರೆ, ತಾಪಸವೃತ್ತಿಯೊಳಿರುವ ಅವರಿಗೆ ತೃಣಕಾಷ್ಠಗಳಿಂದ ನಿರ್ಮಿತವಾದ ಕುಟೀರಗಳಲ್ಲದೆ ವಿಪ್ರಸೌಧಗಳಲ್ಲೀದು? ಮತಶೀಕ್ಷಗಳಾದ ಚರು ಪ್ರಲೋಪಿತಾನಗಳು ವಿನಾ, ವೀಶಾದಾಗ ಇಂಗ್ಲಿಷ್ ತಯಾರೀವಸ್ತುಗಳು ನಗ್ನರೆ ಜಪ್ಯತೋಜಪ್ಯಗಳು ಕ್ಯಾಗೆ ದೊರೆಯುವವು? ವಿಶ್ರಾಂತಿಯನ್ನೈದಬೇಕಾದಾಗ ಕುದ್ಯೋದಕವಿನಾ, ಕಾಫಿ ಟೀ ವಗೈರೆ ಪಾನೀಯಗಳು ಹ್ಯಾಗೆ ಲಭಿಸುವವು? ಮಕರಂದಾದಿ ಪಕ್ಷಿಜಾತಿಗಳ ಧ್ವನಿ ವಿನಾ ಹೃದಯಾಪ್ಯಾಯಕರಗಳಾದ ವೀಣಾ ವೇಣು ಮೃದಂಗಾದಿ ವಾದ್ಯ ವಿಶೇಷಗಳ ಪಡಮುಗಳನ್ನಾದರೂ ಅವರು ಕೇಳಿರುವರೆ? ಹರಿಣ ವಗೈರೆ ಸಾತ್ವಿಕ ಜಂತುಗಳೊಡನೆ ಅಮಿತ ಕಾಲವು ಕಳೆಯುತಲಿದ್ದವರ ಹೊರತು ಅವರಿಗೆ ಲಾವಣ್ಯ ವಗೈರೆ ರಂಜನೋಪಕರಣಗಳೇನಾದರೂ ಲಭಿಸಿದ್ದವೆ? ವಲ್ಕಲ ಅಜಿನಗಳು ವಿನಾ ನಾಜೂಕುಗಳಾದ ಟ್ವೀಡ್, ಸರ್ಜ್, ಫ್ಲ್ಯಾನಲ್ ಇವುಗಳನ್ನು ಅವರು ಕನಸ್ಸಿನಲ್ಲಾದರೂ ನೋಡಿರುವರೆ? ಅವರಿಗೆ ದರ್ಭಾಸನಗಳು ವಿನಾ ಸೋಫಾ ಲೀವಿಂಗ್‌ಚೇರ್, ಈಜೀಚೇರ್ ವಗೈರೆ ಪದಾರ್ಥಗಳ ಭಾವವಾದರೂ ಅವರ ಮನದೊಳು ಎಂದಿರುವದ? ಅರಣ್ಯಕ ಜನಗಳ ಸಹವಾಸ ವಿನಾ ನಾಗರಿಕರಾದವರ ಮುಖಾವಲೋಕನಕ್ಕೆ ಅವರಿಗೆ ಅವಕಾಶ ಯಲ್ಲಿತ್ತು? ತಮ್ಮಂತಾ ವೃತ್ತಿಯುಳ್ಳವರ ಸಂಸರ್ಗ ಸಲ್ಲಾಪಗಳು ಅವರಿಗೆ ಲಭಿಸಿದ್ದವೇ ಹೊರತು ದೇಶ ಜನ ಜಾತಿ ಮತ ತಾರತಮ್ಯವಿಲ್ಲದಂತೆ ಸರ್ವಸಮಾನವಾಗಿ ಮಾಡಲ್ಪಡುವ ಹಸ್ತಚಾಲನಾದಿಗಳನ್ನು ಅಪೇಕ್ಷಿಸುತಲಿದ್ದರೆ? ಹೀಗೆ ಸಕಲವಿಧದಲ್ಲಿಯೂ ಕೇವಲ ವ್ಯಾಸ್ತ್ಯರಾಗಿಯೂ, ನಾಗರಿಕವಿಹೀನರಾಗಿಯೂ, ಪರಪ್ರಾಯರಾಗಿಯೂ, ಪ್ರವ್ಯಾಜವರಾಗಿಯೂ, ಸಹಾಯಶೂನ್ಯರಾಗಿಯೂ ಇದ್ದ ತಾಪಸಸ್ತ್ರೀಯರನ್ನು ಸರ್ವೀಸ ನಾಗರಿಕಸಂಪನ್ನರಾದ ಈಗಿನ ಸ್ತ್ರೀಯರೊಡನೆ ಸರಿಹೋಲಿಸಿ ನಾವು ಪ್ರಾಯಶ್ಚಿತ್ತರಾದ ಅವರನ್ನು ಪದೇ ಪದೆ ಬೋಧಿಸಿಗೆ ಹೇಳುವದರಿಂದೇನೂ ಪ್ರಯೋಜನವಿಲ್ಲವು. ಮುಖ್ಯವಾಗಿ ಶ್ರಾವಣಮಾಸ್ಯರಾದ ಹುಡಿಗಿಯರನ್ನು ಕಾಲಾಕಾಲ ವಿವೇಚನೆ ಇಲ್ಲದೆ ಸ್ಕೂಲ್ ವಗೈರೆ ಸ್ಥಳಗಳಿಗೆ ಕಳುಹಿಸುವದೂ, ಬೀಗದಾಗಲ್ಲ ಗಾಡಿಗಳನ್ನು ಕಳುಹಿಸಿ ಅವರಂಕರಸಿಸುವದೂ, ಬಿಸಕಲ್ಲುಯಾದರೂ ಸ್ವಾತ ಓದಬೇಕು” ಎಂಬದನ್ನು ವ್ಯಾಜವನ್ನಾಗಿಟ್ಟುಕೊಂಡು ಅವರು ಮನೆಗೆ ಹೋಗದಿರುವದೂ, ಪ್ರಬಲದಾಕ್ಷಿಣ್ಯ, ಮತ್ತು ಭೀತಿಯಿಂದಲೂ, ತಮ್ಮ ಜೀವನಹಾನಿ ಶಂಕೆಯಿಂದಲೂ ಉಪೇಕ್ಷಿಸಲಾರದ ಸರ್ವಂ ಸಂಭಾವ್ಯವೆಂದು ಅವರತಾಯಿತಂದೆಗಳು ಸುಮ್ಮನಿರುವದೂ, ಈ ದೇಶದಲ್ಲಿ ಈಗ ನಿರೂಢವಾದ ಸಂಪ್ರದಾಯವಾಗಿ ಪರ್ಯವಸಿಸದ ಭವಿಷ್ಯತ್ಫಲವನ್ನಾಲೋಚಿಸಿ ಸ್ತ್ರೀಯರ ಸ್ವಾತಂತ್ರ್ಯ ಪರಿಣಾಮ ಫಲವನ್ನು ಈ ದೇಶೀಯರ ಅವಧಾನಕ್ಕೆ ಪ್ರಾಧಾನ್ಯೇನ ತರಬೇಕಾಯಿತು.”

ಮುಖ್ಯವಾಗಿ ಹೆಣ್ಣುಮಕ್ಕಳುಳ್ಳವರು ತಮ್ಮ ಮಕ್ಕಳು ಉಭಯಕುಲಕ್ಕೂ ಕೀರ್ತಿಗೌರವಗಳನ್ನುಂಟುಮಾಡರಕ್ಕವರಾಗುವಂದದ ಪಟ್ಟರದಿಂ ಅವರ ನಡತೆಯಂ ರಕ್ಷಿಸಬೇಕಾದದ್ದು ಪ್ರಥಮಧರ್ಮತ್ವೇ ಭಾವಿಸಿ ನಡಸಬೇಕಾದದ್ದು ಯೋಗ್ಯವಾಗಿದ್ದರೂ, ಹಾಗಿಲ್ಲದೆ ಬಾಲ್ಯವಯಸ್ಸಿನಲ್ಲಿ ಮನಸ್ವೀ ವರ್ತನಕ್ಕೆ ಅವಕಾಶಕೊಡುವದು ತಾಯಿತಂದೆಗಳಾದವರಿಗೆ ನೋಡಲಿಕ್ಕೂ, ಕೇಳಲಿಕ್ಕೂ ಸಂತೋಷಕರವಾಗಿದ್ದಾಗ್ಯೂ, ಇವುಗಳನ್ನು ಕೆಲವು ವಿವೇಕಿಗಳು ಹೇಳನಮಾಡುವದಲ್ಲದೆ ಲಾಲನಮಾಡಲಾರರು. ನಿಂದಿಸುವರೇ ಹೊರತು ವಂದಿಸಲಾರರು. ತಿರಸ್ಕರಿಸುವರೇ ಹೊರತು ಪುರಸ್ಕರಿಸಲಾರರು. ಕಡೆಗೆ ಅಂತವರನ್ನವರು ತ್ಯಜಿಸುವರಲ್ಲದೆ ಪರಿಗ್ರಹಿಸಲಾರರು.

Occasional Notes.
ನೈಮಿತ್ತಿಕವಿಷಯನ್ಯಾಸ.

Publication of a paper.—ಬರ್ಮಾದೇಶದ ರಾಜಧಾನಿಯಾದ ಮಂಡಲಪುರದಲ್ಲಿ ಮಾಂಡಲೇ ಪಯೋನಿಯರ್ ಎಂಬ ಅಭಿಧಾನದೊಡನೆ ಹೊಸದಾಗಿಯೊಂದು ವೃತ್ತಾಂತಪತ್ರಿಕೆ ಪ್ರಕಟಿಸಲ್ಪಡುವದಾಗಿದೆ ಎಂದು ಅರಿತೆವು.

Deprivation of title.—ವಾಯುವ್ಯದೇಶದೊಳಗಣ ಬಾಸ್ತಿ ಯೆಂಬ ಡಿಸ್ಟ್ರಿಕ್ಟಿಗೆ ಸೇರಿದ ಬಾಸಿ ಯೆಂಬ ಸ್ಥಳದ ಪ್ರಮುಖರಾದ ರಾಂಸಿಂಗ್ ಯೆಂಬವರು ತಮ್ಮ ದುರ್ನಡತೆಯ ದೆಸೆಯಿಂದ ರಾಜಾ ಯೆಂಬ ಪ್ರಶಸ್ತಿಯಂ ಹೋಗಲಾಡಿಸಿಕೊಂಡರೆಂದು ತಿಳಿಯಲಾದೆವು.

Completion of Russian Railway to Merv.—ರಷಿಯಾಗವರ್ನಮೆಂಟಿನವರು ತಮ್ಮ ದೇಶದಿಂದ ಮೆರ್ವ್ ಎಂಬ ಸರಹದ್ದಿನವರೆಗೆ ಹಾಕುತಲಿದ್ದ ರೈಲ್ವೇರಸ್ತೆಯ ಕಾಮಗಾರಿಯು ಕಳೆದ ತಿಂಗಳ ೧೩ನೇ ತಾರೀಖಿನಲ್ಲಿ ಪೂರ್ತಿಯಾದಂತೆ ಬಿಮ್ಸ್ಗವರ್ತಮಾನ ಸಂಬಂಧಿಸಿರುತ್ತದೆ.

A proposal sanctioned.—ನಿಜಾಂ ಸರ್ಕಾರದಲ್ಲಿ ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಬರೆಯಲ್ಪಡುವ ಕಾಗದಗಳೆಲ್ಲವು ಇದುವರೆಗೆ ಫಾರ್ಸೀ ಭಾಷೆಯಲ್ಲಿ ಮಾಡಲ್ಪಡುತಲಿದ್ದದನ್ನು ತಪ್ಪಿಸಿ ಹಿಂದುಸ್ಥಾನೀ ಭಾಷೆಯಲ್ಲಿ ನಡೆಸಬೇಕೆಂದು ಕೊಡಲ್ಪಟ್ಟ ಸೂಚನೆಯನ್ನು ನಿಜಾಮರವರು ಮಂಜೂರ್ಮಾಡುತ್ತಾರೆ.

The Viceroy's Visit to Hyderabad.—ಇಂಡ್ಯರಾಜ್ಯದ ವೈಸ್‌ರಾಯ್‌ರವರು ಬರುವ ನವಂಬರ್‌ತಿಂಗಳ ೨೫ನೇ ತಾರೀಖು ಸುಮಾರಿಗೆ ಹೈದರಾಬಾದಿಗೆ ಬರುವರೆಂದು ನಿರೀಕ್ಷಿಸಲ್ಪಟ್ಟಿದೆ. ಸದರೀ ಸಾಹೇಬರವರು ಕಳೆದ ಫೆಬ್ರವರಿ ತಿಂಗಳಲ್ಲಿ ಬರುವದಾಗಿ ನಿರೀಕ್ಷಿಸಲ್ಪಟ್ಟ ಕಾಲದಲ್ಲಿ ಅವರನ್ನು ಉಚಿತಮರ್ಯಾದೆಗಳೊಡನೆ ಬರಮಾಡಿಕೊಳ್ಳುವದಕ್ಕೆ ಬೇಕಾದ ಖರ್ಚುಗಳಿಗೆ ನಿಷ್ಕರ್ಷೆಯಾಗಿದ್ದ ಒಂದು ಲಕ್ಷ ರೂಪಾಯಿಗಳು ಪ್ರಕೃತ ಸಂದರ್ಭದಲ್ಲಿ ವಿನಿಯೋಗಿಸಲ್ಪಡುವವು.

Establishment of a brass foundry.—ಒಂದೇ ಪಟ್ಟಣದೊಳಗಣ ಕಬ್ಬಿಣ ತಯಾರೀ ಕೋಠಿಯ ಮುಂಬಾದ ಮೆ|| ಪಾಲ್ ಚಾಂದ್ರಂಬವರು, ಸದ್ದಿಯಾ ಡಿಸ್ಟ್ರಿಕ್ಟಿನಲ್ಲಿ ಹೊಸದಾಗಿ ಯೊಂದು ಹಿತ್ತಾಳೆ ತಯಾರೀ ಕಾರ್ಖಾನೆಯನ್ನು ಸ್ಥಾಪಿಸಿ ಇರುತ್ತಾರೆ. ವಿದ್ಯಾವಂತನಾದ ಒಬ್ಬ ನೇಟಿವ್ ದೊಡ್ಡಮನುಷ್ಯನಿಂದ ಇಂಗ್ಲಿಷ್ ಮತ್ತು ಶಾಸ್ತ್ರಕ್ರಮನ್ನನುಸರಿಸಿ ಇಂಡ್ಯಾದೇಶದಲ್ಲಿ ಇಂತಾ ಕಾರ್ಖಾನೆ ಯೇರ್ಪಾಡಾದದಕ್ಕೆ ಇದೇ ಪ್ರಾರಂಭವಾಗಿರುತ್ತದೆ.

An honorarium sanctioned.—ಸುಮಾರು ಯೆರಡು ವರುಷಗಳಹಿಂದೆ, ಹೈದರಾಬಾದ್ ಕಾಲೇಜಿನ ಸ್ಥಿತಿಯನ್ನು ವಿಚಾರಿಸುವದಕ್ಕಾಗಿ ಯೇರ್ಪಾಡಾದ ಸಂಘದ ಪ್ರೆಸಿಡೆಂಟರಾಗಿದ್ದ ಕರ್ನಲ್‌ವಾಬಶೆಯವರು ಸದರೀ ಸರ್ಕಾರಕ್ಕೆ ಮಾಡಿದ ಶ್ಲಾಘ್ಯವಾದ ಸಹಾಯಕ್ಕಾಗಿ ನಿಜಾಮರವರು ಸದರೀಯವರಿಗೆ ೩,೦೦೦ ರೂಪಾಯಿಗಳು ಇನಾಂಕೊಡುವಂತೆ ಹುಕುಂಮಾಡಿರುವದಾಗಿ ತಿಳಿಯಬರುತ್ತದೆ. ಈ ಇನಾಮನ್ನು ಇಂಡ್ಯಗವರ್ನಮೆಂಟಿನವರ ಅಂಗೀಕಾರವನ್ನೇರೆಯೇ ಅವರು ಪಡೆಯಬೇಕಾಗಿರುತ್ತದೆ.

The Viceregal Legislative Council.—ಫಿನಾನ್ಸ್ ಕಮಿಟಿಯ ಪ್ರೆಸಿಡೆಂಟರಾದ ಆನರೆಬಲ್ ಸಿ. ಎ. ಯಲಿಯಾಟ್ ಸಾಹೇಬರವರು ವೈಸರಾಯಿಯವರ ಮಂತ್ರಾಲೋಚಕ ಸಮಾಜದೊಳು ಸರ್ ಸ್ಟ್ಯುವರ್ಟ್ ಬೇಲಿಯವರ ಸ್ಥಾನದಲ್ಲಿ ನಿಯಮಿಸಲ್ಪಡುವರೆಂದು ಸಿಂಲಾವಿನಲ್ಲಿ ಪ್ರಸ್ತಾಪ

ವ್ಪಂಟಾಗಿರುವಂತೆ ಒಂದಾನೊಂದು ಪತ್ರಿಕೆ ಹೇಳುತಿದೆ.

Successor of Sir Alfred Lyall.—ವಾಯವ್ಯದೇಶದ ಲೆಫ್ಟಿನೆಂಟ ಗವರ್ನರಾದ ಸರ್ ಆಲ್‌ಫ್ರೆಡ ಲೈಯಲ್‌ಯವರ ಸ್ಥಾನಕ್ಕೆ ಬಿನಾರ್ಸ್ ಮಿನಿಸ್ಟರಾದ ಸರ್ ಆಕ್‌ಲೆಂಡ ಕಾಲ್‌ವಿನ್‌ಯವರೂ, ಅವರಸ್ಥಾನಕ್ಕೆ ಮಿ|| ಸಿ. ಎ. ಯೆಲಿಯಟ್‌ಯವರೂ ನಿಯಮಿಸಲ್ಪಡುವರೆಂದು ತಿಳಿಯಬರುವದಾಗಿ ಇಂಗ್ಲಿಷ ಮರ್ಾ ಪತ್ರಿಕೆ ಹೇಳುತಿದೆ.

High floods in the Godavari.—ಈಚೆಗೆ ಆದ ಅತಿವೃಷ್ಟಿಯ ದೆಸೆಯಿಂದ ಗೋದಾವರೀ ನದಿಯಲ್ಲಿ ಪ್ರಬಲ ಪ್ರವಾಹ ಬಂದು ಧವಳೇಶ್ವರ ಬಳಿಯಲ್ಲಿರುವ ಮುಖದ್ವಾರ ಒಡೆದು ಹೋಗಿ, ಅಣೆಕಟ್ಟಿನ ಕೆಳಭಾಗದಲ್ಲಿ ನದಿಯ ಕಟ್ಟೆಯು ಐದು ಮೈಲಿಗಳದೂರ ಕಿತ್ತುಹೋದಂತೆ ವರ್ತಮಾನ ಬಂದಿರುವದಾಗಿ ಮದರಾಸ್ ಸ್ಟ್ಯಾಂಡರ್ಡ್ ಪತ್ರಿಕೆಯಮೂಲಕ ತಿಳಿಯಬರುತಿದೆ.

The Viceroy's tour.—ಇಂಡ್ಯರಾಜ್ಯದ ವೈಸ್‌ರಾಯ್‌ಯವರಾದ ಲಾರ್ಡ ಡಫರಿನ್‌ಯವರು ಬರುವ ಅಕ್ಟೋಬರ ತಿಂಗಳ ಕಡೇಭಾಗದಲ್ಲಿ ಸಿಮ್ಲಾದಿಂದ ಹೊರಟು ದಕ್ಷಿಣದೇಶ ಸಂಚಾರ ಮಾಡುವಲ್ಲಿ ಬರೋಡೆ ಹೈದರಾಬಾದ, ಬೆಂಗಳೂರು, ಮೈಸೂರು, ಉದಕಮಂಡಲ, ನಾಗಪಟ್ಟಣವಗೈರೆ ದೊಡ್ಡಪಟ್ಟಣಗಳನ್ನು ನೋಡಿಕೊಂಡು ಹೋಗುವರೆಂದು ಒಂದಾನೊಂದು ಪತ್ರಿಕೆ ಹೇಳುತಿದೆ.

Floods in Sylhet.—ಬಂಗಾಳೀ ದೇಶಕ್ಕೆ ಸೇರಿದ ಸಿಲ್‌ಹತ ಪ್ರಾಂತದಲ್ಲಿ ಅತಿವೃಷ್ಟಿಯ ದೆಸೆಯಿಂದ, ೪೩ನೇ ಜೂನಿನಲ್ಲಿ ಪ್ರಾಪ್ತವಾದ ಪ್ರಬಲ ಪ್ರವಾಹಕ್ಕಿಂತಲೂ ಅಧಿಕವಾಗಿ ನೀರು ಹರಿದು ಅನೇಕ ಗ್ರಾಮಗಳು ಮುಳುಗಿಹೋಗಲು ಅಲ್ಲಿನ ಜನಗಳೆಲ್ಲರೂ ಪರಸ್ಥಳಗಳಿಗೆ ಹೊರಟುಹೋದರು. ಒಕ್ಕಿಯ ದಾರಣೆ ದಿನೇ ದಿನೆ ಹೆಚ್ಚುತ ಸ್ಥಳದಲ್ಲಿ ಕೂಲಿಯವರಿಗೆ ಅಕ್ಕಿ ಸಿಕ್ಕುವದೇ ಕಷ್ಟಸಾಧ್ಯವಾಗಿದೆ ಯೆಂದು ಇಂಗ್ಲಿಷ ಮರ್ಾ ಪತ್ರಿಕೆ ಹೇಳುತಿದೆ.

A rumour.—ಒಂದಾನೊಂದು ಇಂಗ್ಲಿಷ ಪತ್ರಿಕೆಗೆ ಒಬ್ಬ ಬಾತಮಿದಾರನು ಬರೆದುದೇನೆಂದರೆ—ತುರ್ಕೀ ಸುಲ್ತಾನರವರು ರಷ್ಯಾ ಚಕ್ರವರ್ತಿಯವರಿಗೆ ಕೊಡಬೇಕಾಗಿರುವ ಯುದ್ಧಖರ್ಚಿನ ಬಾಬತು ಮೊಬಲಗಿಗೆ ಈಡಾಗಿ ರುಕ್‌ರೀಯವರ ಸುಫರ್ದಿನಾಳಿಕದಕ್ಕೆ ಎರ್ಜರೂಂ ಎಂಬ ಮುಕದಿಯನ್ನು ದವರಿಗೆ ಬಿಟ್ಟುಬಿಡುವ ತಜವೀಜಿಯವರು ಸುಲ್ತಾನರನ್ನು ಪ್ರಾರ್ಥಿಸಿದ್ದಾಗ್ಯೂ ಅವರಿಗೆ ಅದು ಒಪ್ಪಿಕೊಳ್ಳಲಿಕ್ಕೆ ಇಷ್ಟವಿಲ್ಲವಂತಲೂ, ಸ್ವಾತಂತ್ರ್ಯಾಪೇಕ್ಷೆಯುಳ್ಳ ರಷ್ಯಾದವರು ಅದನ್ನು ಒಪ್ಪಿಸುತ್ತಾರೆಂತಲೂ ಈಚಿಗೊಂದು ಪ್ರವಾದ ವುಂಟಾಗಿದೆ, ಎಂಬದು.

Serpent-worship at Delhi.—ದೆಹಲೀಯಲ್ಲಿ ಜನಗಳು ಸರ್ಪ ಪೂಜೆ ಮಾಡುವ ಸಂದರ್ಭವನ್ನು ತಿಳಿದು ಅಲ್ಲಿನ ಜನರು ಕೆಲವರು ಹಾವುಗಳನ್ನು ಹಿಡಕೊಂಡು ಶ್ರದ್ಧಾಳುವರಾದ ಜನಗಳಿರುವ ಬೀದಿಗಳಿಗೆ ಹೋಗಿ, ಸರ್ಪಗಳನ್ನು ಕೊಂದು ತಂದವರಿಗೆ ಸರ್ಪ ಒಂದಕ್ಕೆ ಒಂದಾಣೆ ಮೇರೆ ಸರ್ಕಾರದವರು ಕೊಡುತ್ತಾರಾಗಿ ನಾವು ಉದರಪೋಷಣೆಗೋಸ್ಕರ ಇಂತಾ ಪಾಪಕೃತ್ಯ ಮಾಡಬೇಕಾಗಿದೆ, ಪರಂತು ಸರ್ಕಾರದವರು ಕೊಡುವದಕ್ಕಿಂತಲೂ ಒಂದೆರಡುಕಾಸು ಜಾಸ್ತೀ ಕೊಟ್ಟು ಅವುಗಳನ್ನು ಬಿಡಿಸುವ ಪುಣ್ಯಪುರುಷರು ಯಾರಾದರಿದ್ದರೆ ನಾವು ಬಿಟ್ಟುಬಿಡುತ್ತೇವೆ, ಇಲ್ಲವಾದರೆ ಕೊಂದುಹಾಕಿ ಸರ್ಕಾರದಿಂದ ಇನಾಂ ತೆಗೆದುಕೊಳ್ಳುತ್ತೇವೆ ಯೆಂದು ಹೇಳಲು ಅದೇಮೇರೆ ದುಡ್ಡುಕೊಟ್ಟು ಬಿಡಿಸುತ್ತಾರಂತೆ.

A line of railway washed away.—ಈ ತಿಂಗಳ ೧೬ನೇತಾರೀಖಿನಲ್ಲಿ ಹೈದರಾಬಾದಪ್ರಾಂತದೊಳು ಆದ ಪ್ರಬಲವರ್ಷದದೆಸೆಯಿಂದ ನಿಜಾಂ ಸರ್ಕಾರ ರೈಲ್ವೆರಸ್ತೆಯಪೈಕಿ ಜಾಂಗೋಕ್‌ಯೆಂಬ ಸ್ಥಳಕ್ಕೂ ಆಲೇರ ಯೆಂಬ ಪ್ರದೇಶಕ್ಕೂ ಮಧ್ಯೆ ಸುಮಾರು ೫೦ ಗಜಗಳ ಫಾಸಲೆಯವರಿವಿಗೆ ರಸ್ತೆ ಕೊಚ್ಚಲ್ಪಟ್ಟು, ಅಪಾಯಸ್ಥಿತಿಗೆ ಬಂದ ಅಂಶ ಸದರೀ ಇಲಾಖೆಯವರಿಗೆ ತಿಳಿಯಬರಲು ಅದರಮೇಲೆ ಗಾಡಿಗಳು ನಡೆಸುವದನ್ನು ಮನ್ನಾಮಾಡಿ, ಪ್ರಯಾಣಸ್ಥರನ್ನು ಒಂದುಗಾಡಿಯಿಂದ ಮತ್ತೊಂದು ಗಾಡಿಗೆ ಸಾಗಿಸಿ, ರಸ್ತೆಯನ್ನು ದುರಸ್ತು ಮಾಡಿ ಇನ್ನು ಅಪಾಯಕಂಟಕ ಇಲ್ಲವೆಂದು ತೋರಿದಮೇಲೆ ಗಾಡಿಗಳು ಯಥಾರೀತಿ ನಡೆಸಲ್ಪಡುತಿವೆಯೆಂದು ಅಲ್ಲಿನ ಪತ್ರಿಕೆ ಯೊಂದರ ಮೂಲಕ ತಿಳಿಯಲಾದೆವು.

A good job.—ಬ್ರಿಟಿಷ ಗವರ್ನಮೆಂಟಿನವರು ಇತರ ಮರದವರನ್ನು ನಾನಾವಿಧದಿಂ ಪುರಸ್ಕರಿಸಿಪ್ರೋತ್ಸಾಹಗೊಳಿಸುವಂದದಿ ತಮ್ಮನ್ನು ಆದರಿಸುವದಿಲ್ಲವೆಂದು ಮಹಮದಿಯರ್ ಜನಗಳು ಆಗಿಂದಾಗ್ಯೆ ಅವರು ಅಳ್ಳಗಳೆಯುತಲಿರುತ್ತಾರೆಯಷ್ಟೆ, ಇವರ ಗೋಳಾಟವನ್ನು ಚಿಂತಿಸಿ ಬೆಂಗಾಲ ಗವರ್ನಮೆಂಟಿನವರು ಸದರೀ ಜಾತಿಯ ವಿದ್ಯಾರ್ಥಿಗಳ ಪ್ರೋತ್ಸಾಹಾರ್ಥ ನುವತ್ತು ದುಂಬಗ ನಿದ್ದಾರ್ಥ ವೇತನಗಳು ಕಲ್ಪಿಸಿರುತ್ತಾರೆ. ಈ ವೇತನಗಳು ಯೆರಡುಸಂವತ್ಸರಗಳತನಕ ಕೊಡಲ್ಪಡುವದಲ್ಲದೆ ಬರುವ ವರುಷದಮೊದಲು ಜಾರಿಗೆತರಲ್ಪಡುವದು. ಸದರೀ ನಲವತ್ತರ ಪೈಕಿ ೨೦ ಮೆಟ್ರಿಕ್ಯುಲೇಷನಿಗೆ ಹೋಗತಕ್ಕವರಿಗೂ ಬಾಕಿ ೨೦ ಎಫ್ ಏ. ಪರೀಕ್ಷೆಗೆ ಹೋಗತಕ್ಕವರಿಗೂ ಉದ್ದಿಷ್ಟವಾಗಿರುತಿದೆ. ಗವರ್ನಮೆಂಟಿನವರು ತಮ್ಮಿಂದ ತಕ್ಕ ಸಾಧ್ಯವಾದಷ್ಟು ಸಹಾಯವನ್ನು ಮಾಡಿರುತ್ತಾರೆ. ಪರ ಮದರಾಜ್ಯವಿಯುಳ್ಳ ವಿದ್ಯಾರ್ಥಿಗಳು ಇದನ್ನು ತಮ್ಮ ಅಭಿವೃದ್ಧಿಗೆ ಉಪಯೋಗಿಸಿಕೊಂಡು ಅಭಿವೃದ್ಧಿಯನ್ನು ಹೊಂದುವರೋ ಅದು ತಮಸ್ಥರಾಗಿ ನಿರಾಕ್ಷಣೋಡುತಲಿರುವೆವು.

The Rajkumar College.—ರಾಜಪುತ್ರರ ವಿದ್ಯಾಭ್ಯಾಸಕ್ಕಾಗಿ ಸ್ಥಾಪಿಸಲ್ಪಟ್ಟಿರುವ ರಾಜಕುಮಾರ್ ಕಾಲೇಜ ಯೆಂಬ ಪಾಠಶಾಲೆಯಲ್ಲಿ ಕುಮಾರ್ ಇವತ್ತುಮಂದಿ ರಾಜಪುತ್ರರು ಓದುತ ಪಾಠಶಾಲೆ ಭರ್ತಿಯಾಗಿರುವದರಿಂದ ಇನ್ನು ಕೆಲವರು ವಿದ್ಯಾರ್ಥಿಗಳು ಸೇರುವದಕ್ಕೆ ಅನುಕೂಲವಾಗಿರುವಂತೆ ಸದರೀ ಪಾಠಶಾಲೆಯ ಕಟ್ಟಡವನ್ನು ಬಡಾಯಿಸಬೇಕೆಂಬ ಯೋಚನೆಯುಂಟಾಗಿರುವದೆಯಂತೆ. ಮಾರ್ವೀ ಸಂಸ್ಥಾನದ ಥಾಕೂರ್ ಸಾಹೇಬರವರ ಸಹೋದರರಾದ ಕುಮಾರ್ ಹರ್ಭಾಂಜಿಯವರು ರಾಜಕುಮಾರ್ ಕಾಲೇಜಿನಲ್ಲಿ ತಮ್ಮ ವಿದ್ಯಾಭ್ಯಾಸವು ಪೂರ್ತಿಮಾಡಿಕೊಂಡು ಇಂಗ್ಲಾಂಡಿಗೆ ಹೋಗಿ ಕಳೆದ ಸಂವತ್ಸರದಲ್ಲಿ ಬ್ಯಾರಿಸ್ಟರ ಪರೀಕ್ಷೆಯಂ ಕೊಟ್ಟುಬರಲು ನಿಜಾಂ ಸರ್ಕಾರದಲ್ಲಿ, ಅಲ್ಲಿನ ಬ್ರಿಟಿಷ ರೆಸಿಡೆಂಟರ ಶಿಫಾರಸ್ಸಿನಮೇಲೆ ಅವರಿಗೆ ಒಂದು ದೊಡ್ಡ ಕೆಲಸ ಸಹ ಕೊಡುವದಾಗಿ ತಿಳಿಸಿದರಂತೆ.

The Baroda College.—ಈಚೆಗೆ ಬರೋಡೇ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಕೊಡುವ ಸಂದರ್ಭದಲ್ಲಿ, ಬಿ. ಎ ಪರೀಕ್ಷೆಗೆ ಅವಶ್ಯಕಗಳಾದ ಶಾಸ್ತ್ರ ಭಾಗಗಳನ್ನು ಹೇಳುವದಕ್ಕಾಗಿ ಒಂದು ತರಗತಿಯನ್ನೇರ್ಪಡಿಸಬೇಕೆಂಬ ಅಂಶ ಆಲೋಚನೆಯಲ್ಲಿರುವಂತೆ ಗಾಯಕವಾಡ ಮಹಾರಾಜರವರು ತಿಳಿಸಿದರಂತೆ. ಮೇಲಿನ ಏರ್ಪಾಡು ಕೇವಲ ಅವಶ್ಯಕವಾದದ್ದೇ, ಪರಂತು ಬಹ್ವರ್ಥ ವ್ಯಯದಮೂಲಕ ಉಜ್ಜೀವಿಸಬೇಕಾದ ಈ ಶಾಸ್ತ್ರ ಪಾಠಶಾಲೆಯಲ್ಲಿ ಬಹುಕಾಲ ವಿದ್ಯಾಭ್ಯಾಸ ಮಾಡಿ ದೊಡ್ಡ ಪರೀಕ್ಷೆಗಳಂ ಕೊಟ್ಟು ಪ್ರಶಸ್ತಿಯಂ ಪಡೆಯತಕ್ಕವರಿಗೆ ಸಂಸ್ಥಾನದಲ್ಲೇ ಅವರವರ ಯೋಗ್ಯತಾನುಗುಣವಾಗಿ ನೌಕರಿಗಳಂ ಕೊಟ್ಟು, ಅವರ ಪರಿಶ್ರಮವು ಗೌರವಿಸಿದರೇನೇ ಸಂಸ್ಥಾನದಿಂದ ಆಗುವ ಅರ್ಥವ್ಯಯಕ್ಕೆ ಸಾರ್ಥಕ್ಯ ವುಂಟಾಗುವದೇಹೊರ್ತು, ತಮ್ಮ ಸಂಸ್ಥಾನದ ಕಾಲೇಜಗಳಲ್ಲಿ ಓದಿ ಪ್ರಶಸ್ತಿಯಂ ಪಡೆದವರನ್ನು ಅನ್ಯದೇಶಗಳಿಗೆ ಹೋಗಿ ಜೀವನೋಪಾಯವು ಕಲ್ಪಿಸಿಕೊಳ್ಳಬಹುದೆಂದು ಹೇಳುವ ಕೆಲವು ಸಂಸ್ಥಾನಾಧಿಕಾರಿಗಳಂತೆ ಮಾಡಿದರೆ ಸಾರ್ಥಕ್ಯ ವುಂಟಾಗಲಾರದು.

The Hydarabad State Council.—ಮೆಣಸು ಹುಳಿತರೂ ಚೇಳಿಕ್ಕೆ ಕಡಮೆಯಾಗಲಾರದೆಂಬ ಸಾಮತಿಯಂತೆ, ಯೆಷ್ಟು ಕಾರತುತ್ತ್ಯದೊಳಿದ್ದಾಗ್ಯೂ ಮುಸಲ್ಮಾನ ರಕ್ತವು ತನ್ನ ವ್ಯಾಪಕತೆಯನ್ನು ಸ್ವಲ್ಪನಾದರೂ ತೋರಿಸದೆ ಇರಲಾರದು. ಅದುಹ್ಯಾಗೆಂದರೆ, ಹೈದರಾಬಾದ ಸ್ಟೇಟಿ ಕೌಂಸಿಲರಗಳು ಈಚೆಗೆ ಒಂದು ವಿನಿಮಯಾದಿ ಘಾಯಿಷ ಮಾಡಿದರೆಂದು ಕೇಳುತ್ತೇವೆ. ಸಂದರೆ ಆ ಕೌಂಸಿಲರಗಳು ಅಪೇಕ್ಷಿಸಿದ ರೆಸಿಡೆನ್ಸೀಗೆ ಸಂಬಂಧಿಸಿದ ಕಾಗದಪತ್ರಗಳನ್ನು ರೆಸಿಡೆನ್ಸಿ ಸೆಕ್ರೆಟರಿಯವರು ಅದ್ಯಾಪಿ ಕಳುಹಿಸಲಿಲ್ಲವು ಅದಂ ಕಳುಹಿಸಲಿಕ್ಕೆ ಇನ್ನೊಂದುವಾರ ಅವಧಿ ಕೊಡಲ್ಪಟ್ಟಿರುವದು. ಅದರೊಳಗಾಗಿ ಸದರೀ ಕಾಗದಪತ್ರಗಳು ಕೌಂಸಿಲರಗಳ ಟೇಬಿಲಮೇಲೆ ಹಾಜರಾಗದೆ ಹೋದಪಕ್ಷಕ್ಕೆ ಬಳಿಕ ಅವಶ್ಯಕವಾದ ಮಾರ್ಗವನ್ನವಲಂಬಿಸಬೇಕಾಗುವದೆಂದು ಮೆಮೊ ಬರೆದು ನವಾಬ ವಿಕಾರುಲ್ ಉಂರಾ ಯೆಂಬವರು ಹಾಜರಿದ್ದವು ಮಿಕ್ಕವರೆಲ್ಲರೂ ಅದಂ ಅಂಗೀಕರಿಸಿ ಅದಕ್ಕೆ ದಸ್ಕತ ಮಾಡಿದರೆಂತಲೂ, ರೆಸಿಡೆನ್ಸೀ ಕಾಗದ ಪತ್ರಗಳು ತ್ವರೆಯೊಳು ಕಳುಹಿಸಲ್ಪಡುವದಾಗಿದೆಯೆಂತಲೂ, ಡೆಕ್ಕನ್‌ಟೈಂಸ್ ಯೆಂಬ ಪತ್ರಿಕೆ ತಿಳಿಸುತಿದೆ. ಇದನ್ನು ಯೋಗ್ಯವಾದ ತೀರ್ಮಾನವೆಂದು ಹೇಳುವೆವು ಇಲ್ಲಿನ ಕೌಂಸಿಲರಗಳು ಮೇಲೆಕುವವರಿಗೆ ಯಾವಭಾಗದಲ್ಲಿಯೂ, ಕಡಮೆಯಾದವರಾಗಿಲ್ಲವು.

Resignation.—ಮಾರೀ ಮಜಕೂರು ೧೭ನೇ ತಾರೀಖಿನ ಮದರಾಸ ಪತ್ರಿಕೆಯೊಂದು, ಹೈದರಾಬಾದ ಸಂಸ್ಥಾನದ ಅಕ್ಕೌಂಟೆಂಟ ಜನರಲಾದ ಹಾರ್ಸ ಬಿನ್ ಅಬ್ದುಲ್ಲಾ ಇಮಾದ ನವಾಜ ಜಂಗ ಬಹದೂರ ಯವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟರೆಂತಲೂ, ಇನ್ನೂ ಕೆಲವರು ಅವರ ಮಾರ್ಗವನ್ನು ಅನುಸರಿಸುವವರಾಗಿದಾರೆಂತಲೂ ತಿಳಿಯಬರುತಿದೆ. ಹೀಗೆ ರಾಜೀನಾಮೆ ಕೊಡುವಷ್ಟು ಪ್ರಬಲ ವಿಷಯ ಒಂದೂ ನಡೆಯಲಿಲ್ಲವು. ಪರಂತು ಮಂತ್ರಿಯವರಿಗೂ ಅಕೌಂಟೆಂಟ ಜನರಲರವರಿಗೂ ಇದ್ದ ಸ್ನಿಗ್ಧತೆಯು ಸ್ವಲ್ಪ ತಪ್ಪಿದ್ದರಿಂದ ಅವರು ಕೂಡಲೇ ರಾಜೀನಾಮೆ ಕೊಟ್ಟರು. ಅಂತವರೇ ಕೆಲಸ ಬಿಟ್ಟುಹೋದಮೇಲೆ ನಾವು ಯಾತಕ್ಕೆ ಇರಬೇಕೆಂದೆಣಿಸಿ ಇನ್ನು ಕೆಲವರು ಬಿಡುವ ಆಲೋಚನೆಯುಳ್ಳವರಾಗಿದಾರೆಂದು ತಿಳಿಸುತಿದೆ. ಹೈದರಾಬಾದ ಸಂಸ್ಥಾನದಲ್ಲಿ ಉದ್ಯೋಗಸ್ಥರು ಆ ಏಕಾತ ಗೌರವಕ್ಕಾಗಿ ನೌಕರಿ ಮಾಡದಕ್ಕವರಾದದರಿಂದ ತಮ್ಮಗೆ ರವಕ್ಕೆ ಲೋಪಕರವಾದ ಯತ್ಕಿಂಚಿದ್ವಿಷಯ ಪ್ರಾಪ್ತವಾದರೆ ಅದನ್ನೇ ಪ್ರಬಲವನ್ನಾಗಿ ಭಾವಿಸಿ, ಸ್ವಪ್ರಯೋಜನವನ್ನು ಸಹ ಗಣಿಸದೆ ಉದ್ಯೋಗಗಳನ್ನು ಬಿಟ್ಟುಬಿಡುತ್ತಾರೆ. ಈ ಸಂಸ್ಥಾನದ ಉದ್ಯೋಗಸ್ಥರು ದ್ರವ್ಯಸಂಪಾದನಕ್ಕಾಗಿ ನೌಕರೀ ಮಾಡತಕ್ಕವರಾದದರಿಂದ, ಅದಕ್ಕೆ ಲೋಪ ಬರುವವರೆಗೆ ಅತ್ಯಂತ ಕಠಿನವಾದ ಯಜಮಾನರ ನಿರ್ಬಂಧವನ್ನು ಬಾಧಾಗ್ಯೂ ಸಹಿಸಿಕೊಂಡು ಕಾಲವಂ ಕಳೆಯುತಲಿರುತ್ತಾರೆ.

Royal annuitants.—ಯೂರೋಪ ದೇಶದ ಸಂಸ್ಥಾನಾಧಿಪತಿಗಳು ರಾಜವಂಶ್ಯರಿಗೆ ಕೊಡತಕ್ಕ ವರ್ಷಾಶನವು ಕುರಿತು ನೀಲಗಿರಿ ಎಕ್ಸ್‌ಪ್ರೆಸ್ಸೆಯೆಂಬ ಪತ್ರಿಕೆ ವಿಚಾರಮಾಡುತ ರಷ್ಯಾ ಮತ್ತು ಇಂಗ್ಲಾಂಡ ಈಯೆರಡು ಸಂಸ್ಥಾನಗಳನ್ನು ಮೊಕಾಬಿಲೆಮಾಡಿ ತಿಳಿಸುತಿದೆಯೆಂತೆಂದರೆ,ರಷ್ಯಾ ಸಂಸ್ಥಾನದ ಯುವರಾಜರಿಗೆ ಸಾಲೀಯಾನಾ ನೂರುಲಕ್ಷರೂಪಾಯಿಗಳು ಕೊಡಲ್ಪಡುತಿವೆ. ಮಹಾರಾಜ್ಞೀಪುತ್ರರಾದ ಪ್ರಿನ್ಸಪ್ ವೇಲ್ಸರವರಿಗೆ ನಾಲ್ಕುಲಕ್ಷರೂಪಾಯಿಗಳು ಸಲ್ಲುತಿವೆ ರಷ್ಯಾರಾಜ್ಯದ ಯುವರಾಜ್ಞೀಗೆ ೫೦,೦೦೦ರೂಪಾಯಿಗಳು ಕೊಡಲ್ಪಡುತಿವೆ. ಇಂಗ್ಲಿಷ ಯುವರಾಜರ ಭಾರ್ಯೆಗೆ ಲಕ್ಷರೂಪಾಯಿಗಳು ಕೊಡಲ್ಪಡುತಿವೆ ರಷ್ಯಾ ಚಕ್ರವರ್ತಿಯವರ ಇತರ ಪುತ್ರರುಸಾಲೀಯಾನಾ ಲಕ್ಷರೂಪಾಯಿಗಳ ಆಯತಿಯುಳ್ಳವರಾದರೆ, ಮಹಾರಾಜ್ಞೀಪುತ್ರರು ಯೆರಡೂವರೆ ಲಕ್ಷರೂಪಾಯಿಗಳ ಆದಾಯವುಳ್ಳವರಾಗಿರುತ್ತಾರೆ. ಹ್ಯಾಗೆನೋಡಿದಾಗ್ಯೂ ರಷ್ಯಾ ರಾಜವಂಶಜರಿಗೆ ಇಂಗ್ಲಿಷ ರಾಜವಂಶದವರಿಗಿಂತಲೂ ವರ್ಷಾಶನವು ಬಹಳ ಕಡಮೆಯಾಗಿಸಲ್ಲುತಲಿದೆ ಇನ್ನೂ ವಿಚಾರಿಸಿದರೆ ರಷ್ಯಾಚಕ್ರವರ್ತಿಯವರು ತಮ್ಮ ಭಾರ್ಯೆಯ ಖರ್ಚನ್ನು ಮೂರುಲಕ್ಷದಿಂದ ಒಂದುಲಕ್ಷಕ್ಕೂ ಪುತ್ರರ ಬಾಬತು ಲಕ್ಷದಿಂದ ಮುವತ್ತು ಮೂರುಸಾವಿರ ರೂಪಾಯಿಗಳಿಗೂ ತಗ್ಗಿಸಿರುವಂತೆ ತಿಳಿಯಬರುತಿದೆ. ಈ ವಿಷಯದಲ್ಲಿ ಸಸಮಾರಗೆಜೆಟೆಯೆಂಬ ಒಂದು ಇಂಗ್ಲಿಷಪತ್ರಿಕೆ ತಿಳಿಸುವಂತೆ ಇಂಗ್ಲಿಷರಾಜಬಂಧುಗಳಿಗಾಯತಿಯನ್ನು ರಷ್ಯಾಚಕ್ರವರ್ತಿಯವರು ಏರ್ಪಡಿಸಿ ಕೊಡುತಲಿರುವ ಪ್ರಮಾಣಕ್ಕೆ ಇಳಿಸಿದರೆ ಎಷ್ಟರಗದ್ದಲಕ್ಕೆ ಅವಕಾಶವುಂಟಾಗುವದು! ರಷ್ಯಾದವರ ವರ್ಷಾಶನ ಪಟ್ಟಿಯನ್ನು ಆಧಾರವಾಗಿಟ್ಟುಕೊಂಡು ಅದರಂತೆ ಜಾರಿಯಲ್ಲಿ ತರುವಪಕ್ಷಕ್ಕೆ ಪ್ರಜಾ ಪರಿಪಾಲನಾಧಿಪತ್ಯವನ್ನು ಸಹ ಏಕಕಾಲದಲ್ಲಿ ಏರ್ಪಡಿಸಬಹುದಷ್ಟೆ.

Spain.—ಸ್ಪೇನ್‌ದೇಶರಾಜ್ಯದನಗದಾಡಳಿತವು ನಿಜವಾಗಿ ಅಪಾಯಕರವಾದಸ್ಥಿತಿಯೊಳಿರುವಂತೆ ಕೇಳುತ್ತೇವೆ. ಹ್ಯಾಗೆಂದರೆ-ಈಸಂಸ್ಥಾನಾಮುಳೆ ಬಟ್ಟು೩೬,೦೦೦,೦೦೦ಫ್ರಾಂಕಗಳು (ಫ್ರಾಂಕ ಒಂದಕ್ಕೆ ಅರಾಣೆನಾಲ್ಕುಪೈ)ದು ಮ್ಯವಳಿಯಾಗಿರುತಿವೆ.ಸಂಸ್ಥಾನದಸಾಲದಬಡ್ಡಿಯಬಗ್ಯೆ೧೩೦೦೦,೦೦೦ ಫ್ರಾಂಕಗಳು ಕೊಡಲ್ಪಡುತಿವೆ. ಸೈನಿಕ ಖರ್ಚಿನಬಗ್ಯೆ೧೮,೦೦೦,೦೦೦ಫ್ರಾಂಕಗಳ ವ್ಯಯವಾಗುತಿವೆ. ಸಿಂತ ೫೦,೦೦೦,೦೦೦ ಫ್ರಾಂಕಗಳಲ್ಲಿ ರಾಜ್ಯದ ಮಾಪ್ಕೀ ಆದಳಿತವು ನಡೆಯಬೇಕಾಗಿರುತಿದೆ. ಈ ಸ್ಥಿತಿಯಲ್ಲಿ ಈಸಂವತ್ಸರದೊಳು ೧೬,೦೦೦,೦೦೦ ಫ್ರಾಂಕಗಳು ಕಮ್ಮಿ ಬಿಟ್ಟುವಳಿಯಾಗಿರುತಿದೆ. ಯುದ್ಧ ಖರ್ಚಿನಬಗ್ಯೆ ೧,೦೦೦,೦೦೦ ಫ್ರಾಂಕಗಳು ಖರ್ಚಾದವು, ಪರಂತು ಆ ಭಾಗವದು ಇನ್ನೂ ಚರ್ಚೀಪರಿಗಲಿಲ್ಲವು. ಮಿ|| ಮಿಜರೋನಿಕ್ಸ ಯೆಂಬವರು ೧೫೫,೦೦೦,೦೦೦ ಫ್ರಾಂಕಗಳನ್ನು ಹೊಸದಾಗಿ ಸಾಲ ತೆಗೆಯುವಬಗ್ಯೆ ತರದೂದು ಮಾಡುತಲಿದಾರೆಂತಲೂ, ಸಾಲ ಕೊಡುವಂತೆ ಕೆಲವರು ವಾಗ್ದಾನ ಮಾಡಿರುತ್ತಾರೆಂತಲೂ ತಿಳಿಯಬರುತಿದೆ. ಇವರ ಅರ್ಥಪ್ರಯುಕ್ತವಾದ ಸಲಹೆಗಳೆಲ್ಲವೂ ಹೊಸತೆರಿಗೆಗೆ ಒಳಪಟ್ಟದ್ದಾಗಿ ಕಾಣುವದರಿಂದ ಇದಂ ಅಲ್ಲಿನ ಜನರು ಮಂಜೂರ್ಮಾಡುವರಂತ ಸಂದಿಗ್ಧವಾಗಿದೆ. ಪ್ರಯೋಜನ ಸಂಸ್ಥಾನಕ್ಕೆ ಸಾಲವಿಲ್ಲವಿದ್ದರೆ ಅಗೌರವವೆಂಬ ಭಾವನೆಯು ಇಂಗ್ಲಿಷ ಸಂಸ್ಥಾನಾಧಿಪತಿಗಳಿಗೆಲ್ಲ ನಿರೂಢವಾಗಿರುವದರಿಂದಲೇ ಅವರನ್ನನುಕರಿಸುತಲಿರುವ ಇಲ್ಲಿನ ನೇಟಿವ್ ಸಂಸ್ಥಾನಾಧಿಪತಿಗಳು ಸಹ ತಮ್ಮ ಸಂಸ್ಥಾನದ ನಿಜವಾದ ಮೌಲ್ಯಕ್ಕಿಂತಲೂ ಅಧಿಕವಾದ ಸಾಲವನ್ನಿಟ್ಟುಕೊಂಡು, ಅದಂ ತೀರಿಸಲಿಕ್ಕೆ ಉಪಾಯಗಳಿದ್ದರೂ ಅವನ್ನು ಉಪೇಕ್ಷಿಸಿ ಸಾಲದ ತಗಾದೆಯಿಂದ ತಪ್ಪಿರುವಬಗ್ಯೆ ಆಯತಿಗಿಂತಲೂ ಖರ್ಚುಬಾಬಗಳನ್ನು ಜಾಸ್ತೀಯಾಗಿ ತೋರಿಸುತ ನಿರ್ಭೀತರಾಗಿದಾರೆ. ಆದರೆ ಒಂದು ವಿಷಯದೊಳುಮಾತ್ರ ಇಂಗ್ಲಿಷ ಮತ್ತು ನೇಟಿವ್ ಸಂಸ್ಥಾನಾಧಿಪತಿಗಳಲ್ಲಿ ಭೇದವುಂಟು, ಅದೇನೆಂದರೆ—ಇಂಗ್ಲಿಷ ಸಂಸ್ಥಾನಾಧಿಪತಿಗಳಿಗೆ ತಮ್ಮ ಪ್ರಜೆಗಳಿಗೆ ಹೊಸ ತೆರಿಗೆಯನ್ನು ವಿಧಿಸುವ ಸ್ವಾತಂತ್ರ್ಯವುಂಟು. ಅವರ ಪ್ರಜೆಗಳು ಅದಂ ಅಂಗೀಕರಿಸಲಿಕ್ಕೂ ನಿರಾಕರಿಸಲಿಕ್ಕೂ, ಸಮಾನ ಧೈರ್ಯ ಸ್ವಾತಂತ್ರ್ಯಗಳುಳ್ಳವರಾಗಿರುತ್ತಾರೆ. ಇದರಿಂದ ಅಲ್ಲಿನ ಅರಸರು ಒಂದು ತೆರಿಗೆಯನ್ನು ಹಾಕಬೇಕಾದರೆ ಜನಗಳ ಅನುಮತಿಯನ್ನು ಪ್ರಥಮತಃ ಆಲೋಚಿಸಬೇಕಾಗಿರುತಿವೆ. ನೇಟಿವ್ ಅರಸರಿಗೆ ತೆರಿಗೆಯನ್ನು ಮಾಫ ಮಾಡಲಿಕ್ಕೆ ಅಧಿಕಾರವಿದೆಯೇಹೊರ್ತು ಹೊಸದಾಗಿ ವಿಧಿಸಲಿಕ್ಕೆ ಸ್ವಲ್ಪವೂ ಸ್ವಾತಂತ್ರ್ಯವಿರುವದಿಲ್ಲವು. ಅವರ ಪ್ರಜೆಗಳಾದರೋ ನಿರವಕಾಶಗಳಾದವರಿಂದ ಅವರಿಗೆ ಮಾನುಷತ್ವವೆಂಬದು ದುರ್ಲಭವು. ಆದಕಾರಣ ಅವರ ಮೊರೆಬೇಡಗಳನ್ನು ಅರಸರು ಕೇಳದೆ ಯಥೋಕ್ತಕಾರಿಗಳಾಗಿರುವದೇ ಅವರಿಗೆ ಮುಖ್ಯ ಲಕ್ಷಣವು. ದೇಶವು ಉಳಿಯದೆ ಹೋಗಲಿಕ್ಕೆ ಬೇಕಾದಷ್ಟು ವ್ಯಯಮಾಡುವ ವಿಷಯದಲ್ಲಿ ಇವರಿಗೆ ಯಾರ ಆತಂಕವೂ ಇರುವದಿಲ್ಲವು.

LOCAL AND PROVINCIAL NEWS
ಒಳದೇಶಮತ್ತು ತಾಲ್ಲೂಕಜಾತಿವೃತ್ತಾಂತಗಳು.

Triplets.—ಈವೂರು ಅಕ್ಕೀ ಪೇಟೆಯಲ್ಲಿರುವ ಅಂಗನಾಮಲೆ ಮುನಿಯಪ್ಪನೆಂಬಾತನ ಹೆಂಡತಿಯು ಗತ ಶನಿವಾರದಿನ ರಾತ್ರಿ ಪ್ರಸವಿಸಿ ಯೆರಡು ಹೆಣ್ಣು ಒಂದು ಗಂಡು ಮಕ್ಕಳನ್ನು ಹೆತದಳೆಂತಲೂ, ಆ ಪೈಕಿ ಯೆರಡು ಮೃತಪಟ್ಟಂತೆಯೂ, ಒಂದು ಮಗುಮಾತ್ರ ಅದ್ಯಾಪಿ ಜೀವಿಸಿರುವಂತೆಯೂ ತಿಳಿಯಬರುತಿದೆ

The Fort Murder case—ಈವೂರು ಕೋಟೆಯಲ್ಲಿ ನಡೆದ ಖೂನೀಮೊಕದ್ದಮೆಯನ್ನು ತಪ್ಪೀಲಾಗಿ ಹಿಂದಿನ ಯೆರಡುವಾರಗಳಲ್ಲಿ ತಿಳಿಸಿಯಿರುತ್ತೇವೆಯಷ್ಟೆ, ಸದರೀ ಮೊಕದ್ದಮೆಯ ವಿಚಾರಣೆಯು ಪ್ರಾಯಃ ಕಳೆದವಾರವೆಲ್ಲ ನಡೆದು ಅಪರಾಧಿಯತರಫ ಡಿರ್ಫೆನ್ಸ ಪೂರೈಸಿತು ಬರುವ ಬೃಹಸ್ಪತಿವಾರದದಿನ ಉಭಯವಾದಿಗಳ ತರಫ ಲಾಯರ್‌ಗಳ ವಾದ ಸಮಾಪ್ತಿ ಬರುತಃ ಶನಿವಾರದದಿನ ಸೆರ್ಷನ್ಸ ಜಡ್ಜಿಯವರು ತಮ್ಮ ತೀರ್ಪುಸಲನ್ನು ಹೇಳುವರೆಂದು ಕಾಣುತಿದೆ.

An execution.—ಆಚೇವಾರದೊಳು ಇಲ್ಲಿನ ಸಿವಿಲ ವ ಮಿಲಟರಿ ಸ್ಟೇಷನ್ನಲ್ಲಿರುವ ಮದರಾಸ ೧ನೇ ಲ್ಯಾನ್ಸರ್‌ರೇನೆಯ ಕುದುರೇ ಆಳು ತಾಂಡ್ರಾಯನೆಂಬ ಹೊಲೆಯನು ಸದರೀ ರಿಜಿಮೆಂಟ ಜಮಾದಾರ್ ಷೇಕಹುಸೇನ್ ಯೆಂಬಾತನನ್ನು ಖೂನ್ ಮಾಡಿದ ಸಂಗತಿಯನ್ನು ಹಿಂದಿನ ವಾರದ ಪತ್ರಿಕೆಯಮೂಲಕ ತಪ್ಪೀಲಾಗಿ ತಿಳಿಸಿಯಿರುತ್ತೇವೆಯಷ್ಟೆ, ಸದರೀ ಘಾತುಕನು ಸಿವಿಲ ವ ಮಿಲಿಟರಿ ಸ್ಟೇಷನ್ ಸೆಷನ್ಸ ಜಡ್ಜಿಯವರಿಂದ ವಿಧಿಸಲ್ಪಟ್ಟ ಮರಣದಂಡನೆಯನ್ನನುಸರಿಸಿ ಬರುವ ಬೃಹಸ್ಪತಿವಾರದ ದಿನ ಇಲ್ಲಿನ ಸೆಂಟ್ರಲ ಜೆಯಿಲನಲ್ಲಿ ಗಲ್ಲಿಗೆ ಹಾಕಲ್ಪಡುವನು.

Prince Dose Urs—ಮೈಸೂರು ರಾಜವಂಶಕ್ಕೆ ಸೇರಿದ ಪ್ರಿನ್ಸದೋಶೆ ಅರಸಿನವರು ೩ನೇ ಮದರಾಸ ಲಾನ್ಸರ್ ಸೇನೆಯಲ್ಲಿ ಒಬ್ಬ ಆಫಿಸರಾಗಿ ನಿಯಮಿಸಲ್ಪಟ್ಟಿರುತಾರೆಯಷ್ಟೆ, ಸದರೀಯವರು, ಉತ್ತರ ಬರ್ಮಾದೇಶದಲ್ಲಿ ಯುದ್ಧನೌಕರಿಯಬಗ್ಗೆ ಹೋಗಬೇಕೆಂಬ ತಮ್ಮ ಅಪೇಕ್ಷೆಯನ್ನು ತಿಳಿಸಿ ಕಮಾರ್ಂಡರ್ ಇನ್‌ಚೀಫರವರು ಅದಕ್ಕೆ ಒಪ್ಪಿದ್ದರಿಂದ ಸದರೀ ಅರಸರವರು, ಈಗ ಬೆಂಗಳೂರಲ್ಲಿರುವ ೧ನೇ ಲಾನ್ಸರ್ ಸೇನೆಯು ಬರ್ಮಾದೇಶಕ್ಕೆ ಪ್ರಯಾಣವಾಗುವದಕ್ಕೆ ಮುಂಚಿತವಾಗಿಯೇ ಅದರಲ್ಲಿ ಸೇರುವರೆಂದು ಒಳದೇಶದ ಸ್ಪೆಕ್ಟೇಟರ್‌ಪತ್ರಿಕೆ ಹೇಳುತಿದೆ.

The Maharaja of Mysore Spinning Mills vs the *Bangalore Spectator*—ಈವೂರಲ್ಲಿ ಸ್ಥಾಪಿಸಲ್ಪಟ್ಟಿರುವ ಮೈಸೂರು ಮಹಾರಾಜರವರ ಸ್ಪಿಂನ್ನಿಂಗ್ ಮಿಲ್ ಯೆಂಬ ಅರಳೇ ಯಂತ್ರದ ಕಾರ್ಖಾನೇದಾರರಿಗೂ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಗೂ ನಡೆದ ವ್ಯಾಜ್ಯದಲ್ಲಿ ಮಿಲಿಟರಿ ಸ್ಟೇಷನ್ ಸಿವಿಲ್ ಜಡ್ಜಿಯವರು ಕೊಟ್ಟ ತೀರ್ಪಿನ ಮೇಲೆ ಸದರೀ ಕಾರ್ಖಾನೇದಾರರು ಬ್ರಿಟಿಷ ರೆಸಿಡೆಂಟ ಕೋರ್ಟಿನಲ್ಲಿ ಮಾಡಿದ ಅಪೀಲ ಅಂಗೀಕರಿಸಲ್ಪಟ್ಟು ಅದರ ವಿಚಾರಣೆಯು ಬರುವ ಸೆಪ್ಟಂಬರ್ ೧೧ನೇ ತಾರೀಖಿಗೆ ಗೊತ್ತುಮಾಡಲ್ಪಟ್ಟಿರುತಿದೆ

Maharaja's return to the Capital.—ಶ್ರೀಮನ್ಮಹಾರಾಜರವರು ಕಳೆದ ಶನಿವಾರದದಿನ ಮಧ್ಯಾನ್ಹ ೧೨ ಘಂಟೆ ೧೦ ನಿಮಿಷಕ್ಕೆ ತಮ್ಮ ಪತ್ನೀ ಪುತ್ರರೊಡನೆಯೂ, ರಾಜ ಬಂಧುಗಳೊಡನೆಯೂ ದಿವಾನರು ಮೊದಲಾದ ಪರಿಜನರೊಡನೆಯೂ ಸ್ಪೆಷಲ ಟ್ರೆಯಿನ್ನಲ್ಲಿ ರಾಜಧಾನಿಗೆ, ಅಂದರೆ ಮೈಸೂರಿಗೆ ದಯಮಾಡಿದರು ಈ ಬಗ್ಗೆ ಶೂರ್ವಭಾವಿಯಾಗಿ ನಡೆಯಬೇಕಾದ ಯೇರ್ಪಾಟುಗಳೆಲ್ಲ ನಡೆಸಲ್ಪಟ್ಟಿದ್ದವು. ಸ್ಟೇಷನ್ ಪ್ಲಾಟಫಾರಮಿನಲ್ಲಿ ರೆಸಿಡೆಂಟರು ಮೊದಲಾದ ಯುರೋಪಿಯನ್ ಆಫಿಸರ್‌ಗಳು ಕೆಲವರೂ ನೇಟಿವ್ ಅಧಿಕಾರಿಗಳನೇಕರೂ ಬಂದಿದ್ದು ಮಹಾರಾಜರವರನ್ನು ಉಚಿತ ಮರ್‍ಯಾದೆಯೊಡನೆ ಸಾಗುಕಳುಹಿಸಿದರು. ಮಾಮೂಲಿ ಮರ್‍ಯಾದೆಗಳೆಲ್ಲವೂ ಸಾಂಗವಾಗಿ ನೆರವೇರಿದವು.

SUMMARY OF NEWS
ವೃತ್ತಾಂತ ಸಂಗ್ರಹವು.

ವಿದ್ಯುಲ್ಲತೆಯು ಜೀವದ ಸಮೀಪಕ್ಕೆ ಯಾವದೊಂದು ಪಕ್ಷಿಯು ಹೋದರೆ ಅದು ಕೂಡಲೇ ಸಾಯುತದೆಂತಲೂ ಆ ದೀವದ ಪ್ರಕಾಶಕ್ಕೆ ಪಕ್ಷಿಗಳು ಹೋಗುತ್ತಿರುತವೆಂತ್ತಲೂ ಅನುಭವಕ್ಕೆ ಬಂದಿರುತ್ತದೆ.

ಅಹಮದನಗರದಲ್ಲಿ ಒಬ್ಬ ಯುರೋಪಿಯನ್ ೬ ವರುಷದ ಹುಡಿಗಿಯಕೂಡ ಬಲಾತ್ಕಾರದಿಂದ ಸಂಭೋಗ ಮಾಡಿದ ಹೊಲೆಯಜಾತಿಯ ಒಬ್ಬ ಬಬ್ಲರನಿಗೆ ೪ ವರ್ಷಗಳ ಕೈದಿನ ಶಿಕ್ಷೆಯು ಕೊಡಲ್ಪಟ್ಟಿತು.

ಸುಮಾರು ೧೩ ರಿಂದ ೨೫ ವರುಷ ಪ್ರಾಯದ ೫೬ ಕರಾಡಿ ಮತ್ತು ಕೊಂಕಣಸ್ಥ ಬ್ರಾಹ್ಮಣ ವಿಧವೆಯರು ಪುನರ್ವಿವಾಹವನ್ನು ಮಾಡಿಕೊಳ್ಳುವದಕ್ಕೆ ತಯಾರಾಗಿರುತ್ತಾರೆಂತಲೂ, ಅವರೊಡನೆ ವಿವಾಹವನ್ನು ಮಾಡಿಕೊಳ್ಳಲಿಚ್ಛೈಸುವವರು ತಮ್ಮ ಅಭಿಪ್ರಾಯವನ್ನು ತಮಗೆ ತಿಳಿಸ ಬೇಕೆಂದಲೂ ಇಲ್ಲಿನ ಸುಬೋಧ ಪತ್ರಕರ್ತರು ಬರಿಯುತ್ತಾರೆ.

ಮರ್ಕಟನನ್ನು ಹಡೆದಳು—ಬೀಚ ಕ್ರೀಕ ಳಯಲ್ಲಿರುವ ಒಬ್ಬ ಹೆಂಗಸಿನ ಹೊಟ್ಟೆಯಲ್ಲಿ ಒಂದು ಮಂಗನು ಬೆಳೆದು ಅವಳು ಹಡೆಯುವಾಗ ಅದು ಅಡ್ಡ ಬಂದದ್ದರಿಂದ ಸೂಲಗಿತ್ತಿಯು ಕೈ ಹಾಕಿ ಹೊರಗೆ ತೆಗಿಯುತ್ತಿರುವಷ್ಟರಲ್ಲಿ ಆ ಮರ್ಕಟನು ಅವಳ ಕೈಯನ್ನೇ ಕಡಿದುಬಿಟ್ಟಿತು!! ಆದ್ದರಿಂದ ಉರುಲು ಹಾಕಿ ಹೊರಗೆ ತೆಗಿಯ ಬೇಕಾಯಿತು. ಆ ಮಂಗನ ಮೈಬ್ಬಿನ ಕೂದಲುಗಳು ಬಹಳ ಉದ್ದ ಬೆಳದಿದ್ದವೆಂದಲೂ ಅದು ಬೇಗನೇ ಸತ್ತು ಹೋಯಿತೆಂತಲೂ ತಿಳಿಯುತ್ತದೆ!!!

ರಾಜಶ್ರಿ ಬಿ. ಗೋಪಾಳರಾವ್ ಭಾನಪ ಪಸ್ಟ್ ಕ್ಲಾಸ್ ಸಬ್‌ಜಡ್ಜಿಯವರ ಮನೆಯವರು ಕಳೆದ ಶುಕ್ರವಾರದ ದಿನ ಪುಣೆಗೆ ಹೋಗುವಾಗ್ಯೆ ಸಂಗಡ ತೆಗದುಕೊಂಡುಹೋಗಿದ್ದ ಸುಮಾರು ಎಂಬುಹತ್ತು ಸಾವಿರ ರೂಪಾಯಿಗಳ ಮಾಲ್ ಕೂಡಲ್ಲಿಯೇ ಪ್ರಿವ್ಹೇ ಗಾಡಿಯೊಳಗೆ ಕಾರ್ಪೆಟ ಬ್ಯಾಗ್ ಕತ್ತರಿಸಿ ಕಳ್ಳರು ದಾಗೀನೆಗಳ ಡಬ್ಬಿಯನ್ನೊಯ್ದು ಬಡಿವಿರುತ್ತಾರೆ. ಇದು ತಂತಿಯಮೂಲಕ ತಿಳಿದದ್ದರಿಂದ ರಾವ್‌ಬಹಾದೂರವರು ಕ್ಯಾಡಿಯನ್ ರಜಾದಮೇಲೆ ಪುಣೇಗೆ ಹೊರಟು ಹೋಗಿರುತ್ತಾರೆ.

ಕಳೆದ ವಾರದಲ್ಲಿ ಯಾರೋ ಒಬ್ಬ ದುಷ್ಟನು ತನ್ನ ದುಷ್ಟ ಹೇತುವನ್ನು ಸಿದ್ಧಿಗೊಯ್ಯುವದಕ್ಕೋಸ್ಕರ ಸುರತದ ಹೈ ಸ್ಕೂಲಿನ ೧೦ ೧೨ ವಿದ್ಯಾರ್ಥಿಯರಿಗೂ ಒಬ್ಬ ಮಾಸ್ತರನಿಗೂ ಕುಡಿಯುವ ನೀರಿನಲ್ಲಿ ವಿಷ ಹಾಕಿ ಕೊಟ್ಟದ್ದರಿಂದ ಅವರು ಈಗ ಬಹಳ ಅಸ್ವಸ್ಥತೆಯಲ್ಲಿರುವಂತೆ ತಿಳಿಯುತ್ತದೆ. ಆ ದುಷ್ಟನು ಇದುವರಿವಿಗೂ ಸಿಕ್ಕಲಿಲ್ಲ, ಅವನನ್ನು ಹಿಡಿದು ಕೊಟ್ಟವರಿಗೆ ೫೦೦ ರೂಪಾಯಿ ಇನಾಮು ಸಿಕ್ಕುವದೆಂದು ಆ ಶಾಲೆಯ ಮುಖ್ಯ ಗುರುಗಳು ಗೊತ್ತು ಮಾಡಿರುತ್ತಾರಂತೆ

ಈಗ ಕೆಲವು ವರುಷಗಳ ಮುಂಚೆ ವಿಲಾಯಿತಿಯಿಂದ ಹಿಂದುಸ್ಥಾನಕ್ಕೆ ಬರೆಯುವ ಮತ್ತು ಛಾಪಿಸುವ ಕಾಗದಗಳು ಅತಿಶಯವಾಗಿ ಬರುತ್ತಿದ್ದವು. ಹಾಗೂ ಅದಕ್ಕಾಗಿ ವರುಷಕ್ಕೆ ೨೩ಲಕ್ಷ ರೂಪಾಯಿಗಳು ಹಿಂದುಸ್ಥಾನದ ಕೈ ಬಿಟ್ಟು ಹೋಗುತ್ತಿದ್ದವು ಆದರೆ ನಮ್ಮ ಹಿಂದುಸ್ಥಾನದಲ್ಲಿಯೇ ಕಾಗದಗಳನ್ನು ತೆಯಾರು ಮಾಡುವ ಯಂತ್ರಗಳು ಆರಂಭವಾದಂದಿನಿಂದ ಕಾಗದದ ಸಮ್ಮಂಧದಲ್ಲಿ ವಿಲಾಯತಿಗೆ ಹೋಗ ತಕ್ಕ ಹಣವು ಎಷ್ಟೋ ಪಾಲಿಗೆ ಕಡಿಮೆಯಾಗಿರುತ್ತದೆ. ಈಗ ೧೩ಲಕ್ಷ ರೂಪಾಯಿಗಳಿಗೆ ಮಿಕ್ಕುವದಿಲ್ಲ. ಇದು ಸಹ ಇನ್ನು ಕೆಲವು ವರುಷಗಳಲ್ಲಿ ನಿಂತು ಹೋಗ ಬಹುದೆಂದು ತಿಳಿಯ ಬೇಕಾಗಿದೆ.

ನರಪಶು—ಮಿರಜೆಯ ಪೈಕಿ ಅಸಂಗೀ ಎಂಬ ಊರಿನಲ್ಲಿ ಒಬ್ಬ ಮರಾಟಿಯ ಮನೆಯ ಆಕಳು ಕರು ಈಯಲು, ಕರು ಸತ್ತೇ ಹುಟ್ಟಿರುತ್ತದಂತೆ. ಆ ಕರುವಿನ ಕುತ್ತಿಗೆಯಿಂದ ಕೆಳ ಬಾಗವೆಲ್ಲ ಪಶುಗಳಂತೆ ಇದ್ದರೂ ಮುಖ, ಕಿವಿ, ಮೂಗು, 'ಬಾಯಿ ವಗೈರೆ ಕುತ್ತಿಗೆಯ ಮೇಲಿನ ಅವಯವಗಳೆಲ್ಲ ಮನುಷ್ಯಾಕೃತಿಯಲ್ಲಿರುತ್ತವಂತೆ ಇದೆಂಥಾ ವಿಪರೀತ ನೋಡಿರಿ!!! ಹಿಂದೆ ತ್ರೇತಾಯುಗದಲ್ಲಿ ಹಿರಣ್ಯಕಶಿಪುವಿನ ವಧೆಯ ಕಾಲದಲ್ಲಿ ಶ್ರೀಮನ್ನಾರಾಯಣನು ನರಸಿಂಹಾವತಾರವನ್ನು ತಾಳಿದ್ದನೆಂದು ಪುರಾಣೇತಿಹಾಸಗಳಲ್ಲಿ ಹೇಳಿರುವದನ್ನು ಮಾತ್ರ ಕೇಳಿದ್ದೆವು. ಈಗ ನರಪಶುವಿನ ಅವತಾರವಾಯಿತು ಇದು ಜೀವಂತ ಇದ್ದರೆ ಯಾವ ದುಷ್ಟರ ವಧೆ ಮಾಡ ತಕ್ಕ ಕರ್ತವ್ಯವಿತ್ತೋ ಶಿವ ಬಲ್ಲ.—ವಾ. ಚ.

EXTRACT

ಈಚೆಗೆ ಕಲ್ಕತ್ತೆಯೊಳು ನಡೆದ ಒಂದು ಮೊಕದ್ದಮೆಯ ವಿಷಯವನ್ನು ಕುರಿತು ಜನಗಳಲ್ಲಿ ನಾನಾವಿಧ ಅಭಿಪ್ರಾಯಗಳುಂಟಾಗಿವೆ, ಪ್ರಾಗಂಪರೆ,-ಅಸ್ಸಾಂ ದೇಶದಲ್ಲಿ ಸಾಗುವಳೀದಾರನಾದ ಗ್ರಿಪರ್ಸ ಯೆಂಬ ಒಬ್ಬ ಯುರೋಪಿಯನ್ನಿದ್ದಾನೆ. ಒಬ್ಬ ಬಡವನು ನೌಕರೀ ಮಾಡುವ ಉದ್ದೇಶದಿಂದ ಆತನಿಗೆ ದಸ್ತೈವಜು ಬರೆದು ಕೊಟ್ಟಂತೆ ಒಂದು ಖೋಟಾ ದಸ್ತೈವಜು ಸದರೀ ಗ್ರೀಪರ್ಸ ಯೆಂಬಾತನು ಸೃಷ್ಟಿಸಿದನೆಂದು ಬರ್ನಾರ್ಡ ಬಂದು ಸರ್ಕಾರ ವಿಚಾರಣೆಯಾಗಿ, ಅದಕ್ಕೆ ಯುರೋಪಿಯನ್‌ರೂ ನೇಟಿವ್‌ಗಳೂ ಜೂರಿಗಳಾಗಿ ಯೇರ್ಪಟ್ಟಿದ್ದರು ಜೂರಿಗಳು ಆತನ ಮೇಲೆ ತಪ್ಸೀರ್ ಇಲ್ಲವೆಂದು ಅಭಿಪ್ರಾಯ ಕೊಟ್ಟಾಗ್ಯೂ ಸೆಷನ್ಸ ಜಡ್ಜಿಯವರು ಭಿನ್ನಾಭಿಪ್ರಾಯದಿಂದ ಸದರೀ ಮೊಕದ್ದಮೆಯನ್ನು ಹೈಕೋರ್ಟಿನ ವ್ಯವಸ್ಥೆಯಬಗ್ಗೆ ಅಲ್ಲಿಗೆ ಕಳುಹಿಸಲು ಅವರು ಸೆಷನ್ಸ ಜಡ್ಜಿಯ ಅಭಿಪ್ರಾಯದಲ್ಲಿ ಕಲೆತು, ಅಪರಾಧಿಗೆ ಎರಡು ವರುಷಗಳ ಕಠಿಣ ಸಜಾ ಮತ್ತು ೨೦೦೦ರೂಪಾಯಿಗಳ ಜುಲ್ಮಾನೆ ಸಹ ವಿಧಿಸಿದರು. ಅದರಮೇಲೆ ಯುರೋಪಿಯನ್ ಜನರು ಅನ್ಯಾಯ ಮಾಡಿದರೆಂತಲೂ, ನೇಟಿವ್ ಜನರು ನ್ಯಾಯಮಾಡಿದರೆಂತಲೂ ಹೇಳಿಕೊಳ್ಳುವದಕ್ಕೆ ಪ್ರಾರಂಭಿಸಿದರು

ಈ ತಿಂಗಳ ೨೩ನೇ ತಾರೀಖಿನ ಮುಂಬೈ ಹಿಂದುಪ್ರಕಾಶ ಪತ್ರಿಕೆ ಹೇಳುವದೇನಂದರೆ — ಈ ದೇಶದ ಜನರಿಗೆ ವಿದ್ಯಾ ವೈಲಕ್ಷಣ್ಯಗಳು ಹೆಚ್ಚಿದಹಾಗೆಲ್ಲ ನಮ್ಮ ಸಾಮಾಜಕ ಸ್ಥಿತಿ ಅಭಿವೃದ್ಧಿಯಾಗುವದೆಂಬ ನಂಬಿಕೆಯು ನಮ್ಮವರ ಪೈಕಿ ಅನೇಕರಿಗೆ ಉಂಟಾಗಿದ್ದು ಕಾಲಕ್ರಮೇಣ ಅದಕ್ಕೆ ಬದಲಾಗಿ ಕ್ರಮ ನಿರಾಶೆಯಾಗಿ ಬಹಳ ಹೀನದಶೆಗೆ ಬರುತಲಿದೆ. ನಮ್ಮ ಬಾಲಕರ ನಡತೆಯಾದರೋ, ದಿನೇದಿನೆ ಕೆಡುತಬರುತಲಿರುವದಕ್ಕೆ ಆಗಿಂದಾಗ್ಯೆ ಬೇಕಾದ ನಿದರ್ಶನಗಳು ಅನುಭವಕ್ಕೆ ಬಾರದೆ ಹೋಗಲಿಲ್ಲವು ನೇಟಿವ್ ವೃತ್ತಾಂತ ಪತ್ರಿಕಾ ಲೇಖಕರು ಹೀಗಾದ ಅಂಶವನ್ನು ಕುರಿತು ಆಗಿಂದಾಗ್ಯೆ ಸಂಕ್ಷೇಪವಾಗಿ ಯೆಚ್ಚರಿಸುತ ಬರುತ್ತಾರೆ. ಕಳೆದ ಜೂನ್ ತಿಂಗಳ ನಿಬಂಧ ಚಂದ್ರಿಕೆಯೆಂಬ ಮಾಸಪತ್ರಿಕೆಯಲ್ಲೂ, ಮರಾಟಿಬಾಷೆಯ ದ್ಯೆನಾಯೆಂಬ ಪತ್ರಿಕೆಯಲ್ಲೂ ಈ ವಿಷಯವನ್ನು ಕುರಿತು ವಿಸ್ತಾರವಾಗಿ ಪ್ರಸ್ತಾಪಿಸಲ್ಪಟ್ಟಿದೇನೆಂದರೆ, ನಮ್ಮವರು ಉದರಪೂರಣಕ್ಕೆ ಸ್ವಲ್ಪಮಟ್ಟಿಗೆ ಆಧಾರವೊಂದು ಸಿಕ್ಕಿದರೆ ಮತ್ಯಾವ ಯೋಚನೆಯನ್ನೂ ಅಂಟಿಸಿಕೊಳ್ಳದೆ ಸ್ವಸ್ಥಚಿತ್ತರಾಗಿರುತ್ತ, ಅಭಕ್ಷ್ಯಾ ಭಕ್ಷಣಗಳಿಂದಲೂ ಬ್ರಾಂದಿ ಕುಡಿಯುವದರಿಂದಲೂ, ನಿರ್ವ್ಯಾಪಾರರಾಗಿರುವದರಿಂದಲೂ ಮಹೋದರ, ಕ್ಷಯ, ಮಧುಮೇಹ ವೆಂಬಲಾದರೋಗಗಳಿಗೆ ಗುರಿಯಾಗಿ ಕಡೆಗೆ ಪ್ರಾಣಗಳಂ ಬಿಡುತ್ತಾರೆ. ಕಳೆದ ನಾಲ್ಕು ವರುಷಗಳಲ್ಲಿ ಪ್ರಬಲರಾದವರನೇಕರು ಕಾಲಗತಿಯನ್ನೈದಿದರು, ಎಂಬದು. ಸದರೀ ಪತ್ರಿಕೆಗಳು ಹಾಗೆ ಮೃತಪಟ್ಟ ದೊಡ್ಡಮನುಷ್ಯರು ಫಲಾನೆಯವರೆಂದು ಸ್ಪಷ್ಟವಾಗಿ ಹೇಳಬೇಕಾಗಿತ್ತು. ನಿರ್ವ್ಯಾಪಾರರಾದವರಿಗೆ ರೋಗಗಳು ತಗಲಿ ಮೃತಪಡುವದು ಯೆಲ್ಲರಿಗೂ ತಿಳದ ಅಂಶವಾಗಿದೆ. ಏತೇನ ನಾವು ಹೇಳುವದೇನಂದರೆ, ನಮ್ಮವರು ಮದ್ಯಪಾನವನ್ನು ತ್ಯಾಗಮಾಡಿ, ಸತ್ಯದಲ್ಲಿ ಮನವಿಟ್ಟು, ಸ್ವಪ್ರಯೋಜನಕ್ಕಿಂತಲೂ ಸಾಮಾನ್ಯವಾಗಿ ಪ್ರಜೆಗಳ ಪ್ರಯೋಜನದಮೇಲೆ ದೃಷ್ಟಿಯಿಟ್ಟು, ಜಾತಿಮತ್ಸರ, ಕುಟುಂಬಕಲಹ, ಇವುಗಳಂಬಿಟ್ಟು, ನಮ್ಮಲ್ಲಿ ಇಲ್ಲದ ಪರುತು ಅನ್ಯರಲ್ಲಿ ಕಂಡುಬರುವ ಇದರಡಿ ವಿವರಿಸುವ ಸುಗುಣಗಳನ್ನು ಗ್ರಹಿಸಿದಹೊರತು ನಮ್ಮವರ ಸ್ಥಿತಿಯು ನೆಟ್ಟಗೆ ಆಗಲಾರದು, ಅವು ಯಾವವಂದರೆ, ತರೀಫಸಲನ್ನು ವೃದ್ಧಿಮಾಡುವಣ, ಬಾಲ್ಯವಿವಾಹವನ್ನು ತಪ್ಪಿಸುವಣ, ವಿದವಾ ವಿವಾಹಮಾಡಿಸುವಣ, ಇದು ಮೊದಲಾದ ಕಾರ್ಯಗಳಿಗೆ ಪ್ರೋತ್ಸಾಹ ಕೊಟ್ಟರೇನೇ ದೇಶಕ್ಕೆ ಕ್ಷೇಮ ವುಂಟಾಗುವದೇ ಹೊರ್ತು ಅನ್ಯಥಾ ಆಗಲಾರದು, ಎಂಬದು.

ಇಂದುಪ್ರಕಾಶ ಪತ್ರಿಕೆ ಹೇಳುವದೇನಂದರೆ, ಚೀನಾ ಗವರ್ನಮೆಂಟನವರು ಪರರಾಜರಿಗೆ ವಿಧೇಯರಾಗದೆಯೂ, ಅವರನ್ನು ತಮಗೆ ವಿಧೇಯರನ್ನಾಗಿ ಮಾಡಿಕೊಳ್ಳದೆಯೂ, ಬಹುಕಾಲದ ಮೊದಲು ಗೌರವದೊಡನೆ ಕಾಲ ಕಳೆಯುತಬಂದರು. ಫ್ರೆಂಚ್ ಸರ್ಕಾರಕ್ಕೂ ಜರ್ಮನೀ ಸರ್ಕಾರಕ್ಕೂ ಕಲಹ ಪ್ರಾಪ್ತವಾದದ್ದು ಮೊದಲು ಅರಸರುಗಳಲ್ಲಿ ಅನ್ಯರಾಜ್ಯವನ್ನು ಸಾಧ್ಯವಾದ ಮಟ್ಟಿಗೆ ಸ್ವಾದೀನ ಮಾಡಿಕೊಳ್ಳಬೇಕೆಂಬ ಅಭಿಲಾಷ ಹುಟ್ಟಿಯಿತು. ಈ ಸಿದ್ಧಾಂತದ ಮೇಲೆ ರಷಿಯಾ ಗವರ್ನಮೆಂಟನವರು ಕಾಬೂಲ ರಾಜ್ಯವನ್ನು ಆಕ್ರಮಿಸಲೆತ್ನಿಸುವದಕ್ಕೂ ಅವರ ಸರಹದ್ದು ವ್ಯವಸ್ಥೆಯಬಗ್ಯೆ ಇಂಗ್ಲಿಷ ಗವರ್ನಮೆಂಟನವರು ಕಮಿಷನ್ ಯೇರ್ಪಾಟು ಮಾಡುವಣವೂ ಆವಶ್ಯಕವಾಯಿತು. ಬದಲು ಇಂಗ್ಲಿಷ ಗವರ್ನಮೆಂಟನವರು ಬರ್ಮಾರಾಜ್ಯವನ್ನಾಕ್ರಮಿಸಿದ್ದರಿಂದ ಚೀನಾ ಗವರ್ನಮೆಂಟಗೂ ಮೇಲಿನವರಿಗೂ ಸರಹದ್ದು ವ್ಯವಸ್ಥೆಯಾಗಬೇಕಾಯಿತು. ಬರ್ಮಾಅರಸರು ಚೀನಾ ಚಕ್ರವರ್ತಿಗೆ ಒಂದು ವಿಧ ಕಪ್ಪಕೊಡತಕ್ಕವರಾಗಿದ್ದದರಿಂದ ಬರ್ಮಾಅರಸರ ಸ್ಥಾನಕ್ಕೆ ಬಂದ ಇಂಗ್ಲಿಷನವರು ಅಂತಾ ಕಪ್ಪವನ್ನು ಚೀನಾ ಚಕ್ರವರ್ತಿಗೆ ಕೊಡುವದಕ್ಕೆ ಇಂಗ್ಲಿಷ ಗವರ್ನಮೆಂಟನವರ ಗೌರವಕ್ಕೆ ಕೊರತೆಯುಂಟಾಗುವದು. ಚೀನಾ ಗವರ್ನಮೆಂಟನವರು ಅಂತಾ ಕಪ್ಪವನ್ನು ಬಿಟ್ಟು ಸಾಧಾರಣವಾಗಿ ತಹನಾಮು ಮಾಡಿಕೊಳ್ಳುವದಕ್ಕೆ ತಹನಾಮೆಯ ಮೂಲಿಕ ಕರಾರ್‌ಮಾಡಿಕೊಂಡಿರುವ ನೇಟಿವ್ ಅರಸರ ಸ್ಥಿತಿಯೇ ಅವರಿಗೂ ಪ್ರಾಪ್ತವಾಗುವದು. ಆದದರಿಂದ ಸೈನ್ಯದಲ್ಲಿಯೂ ಬುದ್ಧಿಯಲ್ಲೂ ಪ್ರಬಲರಾದ ಜರ್ಮನೀ ಸರ್ಕಾರದವರ ಸಂಗಡ ಚೀನಾ ಚಕ್ರವರ್ತಿಯವರು ಸ್ನೇಹಮಾಡಬೇಕಾಯಿತು. ಇಂತಾ ಸ್ನೇಹ ಸಂಬಂಧದಿಂದ ಜರ್ಮನೀ ಸರ್ಕಾರದವರು ಚೀನಾ ಮತ್ತು ಇಂಗ್ಲಿಷ ಸರ್ಕಾರಕ್ಕೆ ಮಾಧ್ಯಸ್ಥರಾಗಿ ಬರುವದಕ್ಕೆ ಯೇನೂ ಸಂದೇಹವಿಲ್ಲವು. ಈ ರೀತಿಯಾಗಿ ಏಷ್ಯಾಖಂಡಕ್ಕೆ ವಾಯುವ್ಯದಿಕ್ಕಿನಲ್ಲಿ ರಷಿಯಾ ಸರ್ಕಾರದ ವೇಢೆಯೂ ಆಗ್ನೇಯದಲ್ಲಿ ಜರ್ಮನೀ ಸರ್ಕಾರದ ವೇಢೆಯೂ, ತಗಲಿಯಿವೆ. ಇಂಗ್ಲಿಷ ಗವರ್ನಮೆಂಟನರು ತಮಗೆ ಉಂಟಾಗಿರುವ ರಾಜ್ಯದಿಂದಲೇ ತೃಪ್ತರಾಗಿದ್ದರೆ ಇಷ್ಟರ ತಂಟೆಗೆ ಕಾರಣವಿರುತಲಿರಲಿಲ್ಲವು. ಇನ್ನಾದರೂ ಆ ಮೇರೆ ತೃಪ್ತರಾಗಿರಬೇಕಾದ್ದಲ್ಲದೆ, ತಮ್ಮವಶದಲ್ಲಿರುವ ಇಂಡ್ಯದೇಶದ ಪ್ರಜೆಗಳಿಗೂ ಯುರೋಪದೇಶದ ಪ್ರಜೆಗಳಿಗೂ ತಾರತಮ್ಯವು ಕಲ್ಪಿಸದೆ ಯೇಕರೀತಿಯಾಗಿ ಸ್ವಾತಂತ್ರ್ಯವು ಕೊಟ್ಟು ಪರಿಪಾಲಿಸಬೇಕು. ಹಾಗೇಮಾಡಿದರೇನೇ ಇಂಗ್ಲಿಷ ಸರ್ಕಾರಕ್ಕೂ ಏಷ್ಯಾಖಂಡಕ್ಕೂ ಕ್ಷೇಮಕರವಾಗಿರುವದು, ಎಂಬದು.

BANGALORE.—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

[illegible]

Vol. XIII.] BANGALORE—MONDAY, SEPTEMBER 6, 1886. [No. 36.

ಸಂಪುಟ ೧೩.] ಬೆಂಗಳೂರು:—ಸನ್ ೧೮೮೬ನೇ ಇಸವಿ ಸೆಪ್ಟಂಬರ್ ೬ನೇ ತಾರೀಖ್ ಸೋಮವಾರ. [ಸಂಖ್ಯೆ ೩೬.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ [illegible] ವರುಷ ೧ಕ್ಕೆ		೧೦—೦—೦
ಇಂಗ್ಲಿಷ್ [illegible] ವರುಷ ೧ಕ್ಕೆ		೬—೦—೦
ಕನ್ನಡ [illegible]		೬—೦—೦
[illegible]	೧ಕ್ಕೆ	೦—೮—೦

[illegible]

ಪ್ರಕಟನೆಯ ರಿವಾಜ್.

[illegible]	೧ಕ್ಕೆ	೦—೨—೦
[illegible]	೧ಕ್ಕೆ	೦—೧—೦

NOTICE TO SUBSCRIBERS.

[illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA

Price including Postage, Rs ೨-0-0

ವೈದ್ಯಸಾರ ಸಂಗ್ರಹ.

[illegible]

[illegible] ... ... ರೂ|| ೫—೦—೮

[illegible] ೦—೬—೦

[illegible]

ನೋಟೀಸ್.

[illegible]

ಕನ್ನಡ [illegible] ಸಂಸ್ಕೃತ ಗ್ರಂಥಗಳು.

[illegible] ...	೧—೪—೦
[illegible] ...	೦—೧೨—೦
ಧರ್ಮಶಾಸ್ತ್ರ ([illegible]) ...	೦—೩—೦
[illegible]	೦—೫—೦
[illegible] ...	೦—೪—೦
[illegible]	೦—೧೪—೦
[illegible] ...	೦—೭—೦
[illegible]	೦—೨—೦
[illegible] ...	೫—೦—೦

ಕನ್ನಡ ಗ್ರಂಥಗಳು.

[illegible] ...	೦—೭—೦
[illegible] ...	೦—೪—೦
[illegible] ...	೦—೩—೬
[illegible]	೦—೨—೬
[illegible] ...	೦—೪—೦
[illegible] ...	೦—೬—೦
[illegible] ...	೦—೨—೬
[illegible] ...	೦—೭—೦
[illegible] ...	೦—೩—೦
[illegible]	೦—೨—೦
[illegible] ...	೦—೦—೯
ಇಂಗ್ಲಿಷ್ ಕನ್ನಡ [illegible]	೧—೦—೦
[illegible]	೨—೦—೦
[illegible] ...	೦—೧೨—೦
[illegible] ...	೩—೪—೬
[illegible] ...	೩—೪—೬
[illegible] ೧ನೇ ಸಂಪುಟ. ...	೦—೮—೦
[illegible] ಸಂಪುಟ.	೦—೮—೦
[illegible] ...	೦—೮—೦

ಸಂಸ್ಕೃತ [illegible] ಗ್ರಂಥಗಳು.

[illegible] ...	೦—೫—೦
[illegible] ...	೦—೨—೬
[illegible] ...	೦—೨—೬
[illegible] ...	೦—೦—೬
[illegible] ...	೦—೧—೬
[illegible] ...	೦—೧—೦

[illegible]

ಪ್ರಕಟನೆ.

ಇದರಿಂದ ತಿಳಿಸುವದೇನಂದರೆ—ಅಗರದ ದಿನ್ನೆಯಬಳಿ, ಸರ್ಜಾಪುರದ ರಸ್ತೆ ಬಳಿ ಬಕರೀಗೆ, ಒಂದು ತೋಟದಲ್ಲಿ ೨,೦೦೦ ಕ್ಯಾಲಿಕೆ ಗಿಡಗಳಿರುತಿವೆ. ಆ ಬಗ್ಗೆ ಬೇಕಾದವರು ದರಖಾಸ್ತುಗಳು ಕೊಡಬಹುದು, ಸರುತು ಅವು ಮುಂದಿನ ರಾತಿಗೆ ಗುರಿಯಾಗಿರತಕ್ಕವು.

ಕಂಟೋನ್ಮೆಂಟ್ ರೆಸಿಡೆನ್ಸಿ ರಸ್ತೆ ೨ನೇ ನಂಬರ್ ಮನೆಯಲ್ಲಿರುವ ಮಾಲೀಕರಿಗೆ ಬರೆದುಕೊಳ್ಳತಕ್ಕದ್ದು.

ಪ್ರಕಟನೆ.

ಇಂಡಿಯನ್ ಕಂಪನೀಸ್ ೧೮೬೬ನೇ ಇಸವಿ ೧೦ನೇ ನಂಬರ್ ಆಕ್ಟುಮೇರೆ.
ಮೈಸೂರು ಬೃಹಸ್ಪತೀ ಸಹಾಯನಿಧಿ ಬ್ಯಾಂಕ್ ವಿಷಯದಲ್ಲಿ.

ಇದರಿಂದ ತಿಳಿಯಪಡಿಸುವದೇನಂದರೆ—ಸನ್ ೧೮೮೬ನೇ ಇಸವಿ ಆಗಸ್ಟು ತಾರೀಖ್ ೨೦ರಲ್ಲು ಪುಷ್ಪವತೀ ಬ್ಯಾಂಕಿಗೆ ಹಣ ಹಾಕಿರತಕ್ಕ ಷೇರ್‌ದಾರರುಗಳಾದ ನಾರಣಪ್ಪ ಹಗ್ಗೆ [illegible] ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿಗೆ ಸದರೀ ಬ್ಯಾಂಕ್ ನಿಲ್ಲಿಸಿಬಿಡಬೇಕೆಂದು ಅರ್ಜಿ ಕೊಟ್ಟಿರುತ್ತಾರೆ. ಮೇಲ್ಕಂಡ ಅರ್ಜಿ ವಿಷಯದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರು ಬರುವ ಇಸವಿ ಸೆಪ್ಟಂಬರ್ ೩ನೇ ತಾರೀಖಿನಲ್ಲಿ ವಿಚಾರಣೆ ಮಾಡುತ್ತೇವೆಂತ ಹುಕುಂ ಮಾಡಿರುತ್ತಾರೆ. ಆದದರಿಂದ ಮೇಲೆ ಕಂಡಮೇರೆ ಸದರೀ ಬ್ಯಾಂಕಿಗೆ ಹಣ ಹಾಕಿರತಕ್ಕವರ ಪೈಕಿ ಯಾರಾದರೂ ಮೇಲೆ ಕಂಡ ಆಕ್ಟು ಅನುಸರಿಸಿ ಸದರೀ ಬ್ಯಾಂಕ್ ನಿಲ್ಲಿಸಬೇಕೆಂಬದಾಗಿ ಆ ದರ್ಖಾಸ್ತು ಆಗತಕ್ಕ ವಿಷಯದಲ್ಲಿ ತಕರಾರ್ ಯೇನಾದರೂ ಮಾಡಬೇಕಾಗಿದ್ದಲ್ಲಿ, ತಾವೇ ಖುದ್ದಾಗಿ ಯಾಗಲಿ ಅಥವಾ ಇದಕ್ಕಾಗಿ ತಮ್ಮ ಕಡೆ ಲಾಯರ್ ಮೂಲಕವೇ ಆಗಲಿ ಹಾಜರಾಗತಕ್ಕದ್ದು. ಸದರೀ ಬ್ಯಾಂಕಿನ ಷೇರ್‌ದಾರರು ಯಾರೇ ಆಗಲಿ ಮೇಲೆ ಕಂಡ ಅರ್ಜೀ ನಕಲನ್ನು ತೆಗೆದುಕೊಳ್ಳಬೇಕೆಂದಿದ್ದವರು ಈ ಕೆಳಗೆ ರುಜು ಮಾಡಿರುವವರಿಗೆ ತಕ್ಕ ಚಾರ್ಜನ್ನು ಕೊಟ್ಟು, ಸದರೀ ಯವರಿಂದ ತೆಗೆದುಕೊಳ್ಳಬಹುದಾಗಿದೆ.

ಮೈಸೂರು, ೧ನೇ ಸೆಪ್ಟಂಬರ್ ೧೮೮೬	ಬಿ. ಮತ್ತು ಆನಂದರಾವ್, ಅರ್ಜಿದಾರರ ಲಾಯರ್

ನೋಟಿಸ್.

ಮೈಸೂರು ಬ್ಯಾಂಕ್ ಕಾರ್ಪೊರೇಷನ್ (ಲಿಮಿಟೆಡ್)
ಆಫೀಸಿನ ಹಿಸ್ಸೇದಾರರಿಗೆ.
ಪ್ರಕಟಪಡಿಸುವದೇನಂದರೆ.

ಸನ್ ೧೮೮೩ನೇ ಇಸವಿ ಫೆಬ್ರವರಿ ತಿಂಗಳ ಪ್ರೊಸೀಡಿಂಗ್ಸ್ ಪ್ರಕಾರ ಈ ತಿಂಗಳ ೧೩ನೇ ತಾರೀಖ್ ಲಗಾಯತು ಹಿಸ್ಸೇದಾರರಿಗೆ ಅಸಲಿ ಪೈಕಿ ಸೇಕಡಾ (೧೦) ರೂಪಾಯಿ ಮೇರಿಗೆ ನಾಲ್ಕನೇ ಬಟವಾಡೆಗೆ ಶುರು ಮಾಡಲ್ಪಡುತಿದೆ.

ತಾ. ೩ನೇ ಸೆಪ್ಟಂಬರ್, ೧೮೮೬.	ಪ. ನಸೋತ್ತಮಯ್ಯ, ಸೆಕ್ರೆಟರಿ

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, SEPTEMBER 6, 1886.

೧೮೮೬ನೇ ಸೆಪ್ಟಂಬರ್ ೬ನೇ ತಾ|| ಸೋಮವಾರ

SURVEY SETTLEMENT OF ALIENATED VILLAGES

ರೆವಿನ್ಯೂ ಸರ್ವೇ ಸೆಟಲ್‌ಮೆಂಟೆಂಬದು ಭೂಮಿಯ ಸರಿಯಾದ ವಿಸ್ತೀರ್ಣವನ್ನು ಗೊತ್ತುಮಾಡಿ ಅವರಲ್ಲಿ ಬೆಳೆಯತಕ್ಕ ಫಸಲಿಗಳ ಅಂದಾಜಿನ ಮೇರೆ ಈಗಿನ ಕಾಲಸ್ಥಿತಿಯನ್ನನುಸರಿಸಿ ಆಗುವ ಉತ್ಪತ್ತಿಯನ್ನು ನಿರ್ಧರಿಸಿ ಕಂದಾಯ ಕರಾರ್‌ಮಾಡುವ ಕೆಲಸವಾಗಿರುತಿದೆ. ಸರ್ಕಾರೀ ಗ್ರಾಮಗಳಲ್ಲಿ ತಮ್ಮ ರೈತರ ಸಂಜಾಯಿಷೀ ಮತ್ತು ಫಾಯಿದೆಗೋಸ್ಕರ ತಪ್ಪದೆ ಸರ್ವೇಸೆಟಲ್‌ಮೆಂಟ್ ಜಾರೀಯಲ್ಲಿ ತರಲ್ಪಟ್ಟಿರುತಿದೆ. ಇನಾಂ ಮತ್ತು ಕಾಯಂಗುತ್ತಾ ಗ್ರಾಮಗಳಲ್ಲಿ ಸರ್ವೇ ಸೆಟಲ್‌ಮೆಂಟಿನಿಂದಾಗುವ ಫಾಯಿದೆಯನ್ನು ಅನುಭವಿಸತಕ್ಕವರು ಇನಾಂದಾರರಾದದರಿಂದ ಅವರು ಸರ್ವೇ ಸೆಟಲ್‌ಮೆಂಟನ್ನು ಸಹ ಅಂಗೀಕರಿಸುವ ಪಕ್ಷಕ್ಕೆ ಅವಕ್ಕೆ ಸದರೀ ಇಲಾಖೆಯವರು, ಯಾವ ಛಾರ್ಜನ್ನೂ ಹಾಕದೆ ಧರ್ಮಾರ್ಥ ಮಾಡುವದಾಗಿ ಇಷ್ಟರಲ್ಲಿ ಹೇಳಿಕೊಟ್ಟಿರುತ್ತಾರೆ. ಅನೇಕಜನ ಜಹಗೀರ್‌ದಾರರು ತಮ್ಮ ಗ್ರಾಮಗಳ ರೈತರಿಗೆ ಸರ್ವೇ ಗ್ಯಾರಂಟೀ ಪ್ರಕಾರ ನಡಿಸಬೇಕೆಂದು ಇಷ್ಟಪಟ್ಟು ಸರ್ಕಾರ್ ಗ್ರಾಮಗಳಂತೆ ಸರ್ವೇ ಮತ್ತು ಸೆಟಲ್‌ಮೆಂಟ್ ಮಾಡಿಸಿದರು. ಕೆಲವುಜನ ಇನಾಂ ಮತ್ತು ಕಾಯಂಗುತ್ತೇದಾರರು ತಮಗೆ ಈಗ ಬರತಕ್ಕ ಆದಾಯಕ್ಕೆ ಭಂಗ ವುಂಟಾಗುವದೆಂದು ಆಲೋಚಿಸಿ ಸೆಟಲ್‌ಮೆಂಟಿಗೆ ಹಿಂದೆಗೆದು ಹೋದರು. ಸರ್ಕಾರದವರು ಸರ್ಕಾರ್ ಜಮೀನುಗಳಂತೆ ಇನಾಂ ಜಮೀನುಗಳಮೇಲೆ ಲೋಕಲ್ ಕರಿಗೆಗಳನ್ನು ವಸೂಲ್ಮಾಡಬೇಕೆಂದು ಏರ್ಪಡಿಸಿದ್ದರಿಂದ ಅಪ್ಪರಮಟ್ಟಿಗೆ ಅಂದರೆ, ಒಟ್ಟು ಗ್ರಾಮವನ್ನು ಗೋಲಮೋಜಣಿ, ಮಾಡಿಸಿ ಆಸು ಪಾಸ್ ಗ್ರಾಮಗಳ ರಿವಾಜಿನಂತೆ ಮೊಬಲಗು ಕರಾಯಿಸಿ ಅದರಮೇಲೆ ಲೋಕಲ್ ಕರಿಗೆಗಳನ್ನು ವಸೂಲ್ಮಾಡುತ್ತಾರೆ. ಈಗ ಇನಾಂದಾರರು ತಮ್ಮ ಗ್ರಾಮಗಳ ರೈತರ ತಕರಾರುಗಳನ್ನು ಸಹಿಸಲಾರದೆ ಸರ್ವೇ ಸೆಟಲ್‌ಮೆಂಟ್ ಮಾಡಿಸಿಕೊಡಬೇಕೆಂದು ಗವರ್ನ್‌ಮೆಂಟಿನವರನ್ನು ಅಪೇಕ್ಷಿಸಿದರೆ ಸಿಬ್ಬಂದಿ ವಗೈರೆ ಖರ್ಚನ್ನು ಇನಾಂದಾರರು ಕೊಡತಕ್ಕದ್ದೆಂದು ಅವರು ಹುಕುಂ ಮಾಡುವಂತೆ ಕೇಳುತ್ತೇವೆ. ಆಪ್ರಕಾರ ಹುಕುಂಮಾಡುವದು ಕೇವಲ ಅನುಚಿತವೆಂದು ನಾವು ಹೇಳಲಾರೆವು, ಯಾಕೆಂದರೆ, ಯಾವತಾಲ್ಲೂಕಿನಲ್ಲಿ ಯಾವ ಕಾಲದೊಳು ಸೆಟಲ್‌ಮೆಂಟಿಗೆ ಉಪಕ್ರಮವಾಯಿತೋ ಆ ತಾಲ್ಲೂಕಿನೊಳು ಆ ಕಾಲದಲ್ಲಿ ಇನಾಂ ಗ್ರಾಮಗಳ ಧ್ವಸಲಾತಿಯು ಬಹಳ ಸುಲಭವಾಗಿದ್ದು. ಈಗ ದೂರಪ್ರದೇಶದಲ್ಲಿರತಕ್ಕ ಡಾಕೆಯನ್ನು ಸ್ವಲ್ಪ ಕೆಲಸಕ್ಕಾಗಿ ಮರಳಿ ಕಳುಹಿಸುವದರಿಂದ ದುಬಾರೀ ಖರ್ಚಿಗೆ ಕಾರಣವಾಗುತಿದೆ. ಈಗ ಸರ್ವೇ ಆಗದಿರುವ ಇನಾಂ ಗ್ರಾಮಗಳಲ್ಲಿ ವುಂಟಾಗುವ ತಕರಾರಿಗಳ ಸ್ವರೂಪವೇನೆಂದರೆ—ಒಂದನೇದು, ರೈತರ ಜಮೀನಿಗೆ ಹದ್ದುಇಲ್ಲದ್ದರಿಂದ ಮತ್ತೊಬ್ಬ ರೈತನಾಗಲಿ, ಗ್ರಾಮಸ್ಥನಾಗಲಿ, ಆಕ್ರಮಿಸುವದು. ಎರಡನೇದು.. ತಮ್ಮಗ್ರಾಮದಲ್ಲಿ ಕರಾರ್ವಾಕಾ ಲೆಕ್ಕವಿಲ್ಲದಿದ್ದಾಗ್ಯೂ ಯಾವದೋ ಒಂದು ತಪ್ಪುಲೆಕ್ಕವನ್ನು ಏರ್ಪಡಿಸಿ ಅದರಲ್ಲಿ ಕಂಡ ಜಮೀನು ಬೀಜವರಿಯನ್ನು ಕೃಷ್ಣರಾಜ ಕೊಳಗದಿಂದುಹೇಳಿ ಅದಕ್ಕೆ ಜಾಸ್ತಿಯಾಗಿ ಜಮೀನು ಅನುಭವಿಸುವದರಿಂದ ಪುನಃ ಪೈಮಾಯಿಷೀಮಾಡಿ ಕಂದಾಯ ಕರಾಯಿಸಬೇಕೆಂಬದು. ಮೂರನೇದು—ಕೆಲವು ಕಾರಣಗಳಮೇಲೆ ಕೆಲವು ಜಮೀನುಗಳಿಗೆ ಕಂದಾಯ ವೇರ್ಪಡದೆಯೇ ಅನುಭವಿಸಲ್ಪಡುವದರಿಂದ ಅಂತಾ ಜಮೀನುಗಳು ಇನಾಂಗೆ ಸೇರಲಿಲ್ಲವಾಗಿ ಅವುಗಳಿಗೆ ಕಂದಾಯ ಕೊಡಬೇಕೆಂಬದು. ನಾಲ್ಕನೇದು—ತಮಗೆಕೊಟ್ಟ ಪಟ್ಟೆ ಸನದಿಗೆ ಸೇರಿಸದೆ ಅನಾಮತಾ ಸರ್ಕಾರದಿಂದ ಮುಂಜೂರಾಗಿರುವ ಜಾರೀಇನಾಮತಿ ಜಮೀನನ್ನು ತಾವು ಆಕ್ರಮಿಸಿ ರಾಗಾಯತಿನಿಂದ ಬರತಕ್ಕ ಜಮೀನು ಇಷ್ಟೇಯೆಂದು ವಾದಿಸುವದು. ಈ ಪ್ರಕಾರ ವ್ಯಾಜ್ಯಗಳಿಗೆ ಕಾರಣವಾಗಿರುವದರಿಂದ ಸರ್ಕಾರದವರು ಕ್ರಮವಾದ ಸರ್ವೇಮತ್ತು ಸೆಟಲ್‌ಮೆಂಟ್ ಮಾಡಿಸಬೇಕಾದ್ದು ಅವಶ್ಯಕವಾಗಿರುತಿದೆ.

ಈ ಬಗ್ಯೆ ತಗಲಬಹುದಾದ ವಿಶಿಷ್ಟಖರ್ಚನ್ನೂ ಬಲವಡಿಸಿ ಇನಾಂದಾರನಮೇಲೆ ಹೊರಿಸುವಪಕ್ಷಕ್ಕೆ ಅದಂ ಅವನು ಕಡೆಯಲಾರನಾಗಿ ಜನಗಳಿಗೆ ನ್ಯಾಯವೆ ಬಹು ಸುತರಾಂದೊರೆಯಲಾರದು. ವಿವಾದಿಸನಕ್ಕೆ ರೈತರದು ಭರಿಸಬೇಕೆಂದರೆ ಅದು ಸುತರಾಂ ಜರತಕ್ಕದ್ದಲ್ಲವು. ಸರ್ಕಾರದವರಿಗೆ ಮೇಜರ್ ಕರ್ನಲ್ ಆಂಡರ್ಸನ್ ಸಾಹೇಬರವರು, ಸರಾಸರಿ ಎಕ್ರೆಒಂದಕ್ಕೆ ಯೆಂಟಾಣೆಯಿನ ಪ್ರಕಾರ ಖರ್ಚಾಗುತದೆಯೆಂದು ಅಂದಾಜಾಗಿರುವುತ್ತೆ ತಿಳಿಸಿರುತ್ತಾರೆ. ಈಗ ಸದರೀ ವೊಬಲಗನ್ನು, ಇನಾಂಗ್ರಾಮದವ್ಯೆಕಿ ಬಂಜರ್ ಜಮೀನಾದರೆ ಇನಾಂದಾರನೂ, ಸಾಗುವಳೀ ಜಮೀನಾದರೆ ಇನಾಂದಾರನೂ, ಸಾಗುವಳೀದಾರನೂ ಸಹ ಕೇರಿಸಮನಾಗಿ ತೆರತಕ್ಕದ್ದೆಂತಲೂ, ಜಾರೀ ಇನಾಮು ಜಮೀನುಗಳವ್ಯೆಕಿ ಜೋಡಿಯನ್ನು ಗವರ್ನಮೆಂಟನವರು ಅನುಭವಿಸುವದರಿಂದ ಅಂತಾದ್ದರ ಸೈಮಾಯಿಷೀ ಖರ್ಚಿನವ್ಯೆಕಿ ಅರ್ಧಭಾಗವ … ನರ್ಮೆಂಟನವರು ವಹಿಸತಕ್ಕದ್ದೆಂತಲೂ, ಸರ್ವಮಾನ್ಯ ಜಮೀನಾಗಿದ್ದರೆ ಬಂಜರ್ ಜಮೀನಾನಿನ ಪೂರಾವೊಬಲಗಿಗೆ ಗ್ರಾಮಸ್ಥನು ಹ್ಯಾಗೆ ಬಾಧ್ಯನಾಗುವನೋ ಅದರಂತೆ ಅದಕ್ಕೆ ಸರ್ವಮಾನ್ಯದಾರನು ಗುರಿಯಾಗತಕ್ಕದ್ದೆಂತಲೂ ತೀರ್ಮಾನಮಾಡಿದರೆ ಚನ್ನಾಗಿರುವದು. ಇದರಿಂದ ಇನಾಂದಾರರೂ ಅವರರೈತರೂ, ಜಾರೀ ಇನಾಮುತೀಯನ್ನನುಭವಿಸುವದು ಸಹ ನ್ಯಾಯವನ್ನು ಪಡೆಯಬಹುದು. ಇದರಿಂದ ಗವರ್ನಮೆಂಟನವರಿಗೆ ಯಾವವಿಧ ನಷ್ಟವೂ ಉಂಟಾಗಲಾರದು. ಸರ್ವೇ ಸೂಪರಿಂಟೆಂಡೆಂಟ್ ಸಾಹೇಬರವರೂ, ದಿವಾನರವರೂ ಸಹ ಈ ವಿಷಯವನ್ನು ಚನ್ನಾಗಿ ಪರ್ಯಾಲೋಚಿಸಿ,ವ್ಯವಸ್ಥೆ ಮಾಡಬೇಕೆಂದು ಕೋರುವೆವು. ಈ ಸಲದ ದಸರಾ ದರ್ಬಾರಿನಲ್ಲಿ ಈ ವಿಷಯವನ್ನು ಕುರಿತು ಪ್ರತಿನಿಧಿಗಳು ಪ್ರಸ್ತಾಪಿಸಿ ಅವಕ್ಕೆ ತಕ್ಕ ಪ್ರತ್ಯುತ್ತರವಂ ಪಡೆಯುವಷ್ಟು ಶಕ್ತರಾಗಿದ್ದಾರೆಯೋ ಇಲ್ಲವೋ ಯೆಂಬ ಸಂಶಯ ನಮಗೆ ಬಲವತ್ತರವಾಗಿರುವದರಿಂದ ಈ ಮೂಲಕ ಸರ್ಕಾರದವರ ಅವಧಾನಕ್ಕೆ ತರಬೇಕಾಯಿತು.

TO OUR SUBSCSIBERS

ಚಿರಕಾಲದಿಂದ ನಾವು ಈ ದೇಶದಲ್ಲಿ ವಾಸಮಾಡುತಲಿರುವ ಒಂದು ಸಂಬಂಧ ವಿಶೇಷದಿಂದ ಈ ದೇಶೀಯರಿಗೆ ಪ್ರಯೋಜಕರಾಗಬೇಕೆಂಬ ಚಿಂತೆಯೂ, ತದರ್ಥವಾಡುವ ನಮ್ಮ ಪ್ರಯತ್ನಗಳನ್ನು ಇಲ್ಲಿನ ಜನಗಳು ಲೋಭದಿಂದಲೋ ಜ್ಞಾನವಿಹೀನತೆಯಿಂದಲೋ, ಉಪಲಾಳನ ಮಾಡಿ ಸಹಕರಿಸದೆ ಹೋಗುವದರಿಂದ ದಿನೇದಿನೆ ಅಭಿವೃದ್ಧಿಯಾಗುತ ಬರಬೇಕಾದ ಉತ್ಸಾಹಕ್ಕೆ ಭಂಗವೂ, ಒಂದುಬೇಸರಿಕೆಯು ನಮ್ಮನ್ನು ಬಾಧಿಸುತಲಿದ್ದಾಗ್ಯೂ ಕಾಲವು ಕ್ಷಣಿಕವಾದದ್ದಾಗಿಯೂ, ಸ್ವಲಕ್ಷಣವುಳ್ಳದ್ದಾಗಿಯೂ ಇರುವದರಿಂದ "ವಿಚಿತ್ರವಿತವಾನಂದಃ" ಎಂಬಂತೆ ಯೆಂದಿಗಾದರೂ ಮೇಲುಂಟಾಗಬಹುದೆಂಬ ನಂಬಿಕೆಯೊಡನೆ, "ಪ್ರಾರಬ್ಧಮುತ್ತಮಗುಣಾನಪರಿತ್ಯಜಂತಿ" ಎಂಬ ನೀತಿಯಿಂದ ಬದ್ಧರಾಗಿ ಶತವಿದ ಅನುಪಪತ್ತಿಯಂ ಗಣಿಸದೆ ಕಾಲವಂ ಒಂದು ವಿಧವಾಗಿ ಇದುವರಿವಿಗೂ ಕಳೆಯುತಬಂದೆವು ಆದವೊದ … ತಂತ್ರವಾದ ವೃತ್ತಾಂತ ಪತ್ರಿಕೆಗಳ ಸ್ವರೂಪ ಪ್ರಯೋಜನವನ್ನು ಬಲ್ಲಂತಾ ಅತ್ಯಲ್ಪ ಸಂಖ್ಯೆಯುಳ್ಳವರ ಚಂದಾಮೂಲಕವಾದ ಅತ್ಯಲ್ಪ ಸಹಾಯವಿನಾ ಇತರವಿಧ ಅನುಕೂಲ್ಯಗಳೊಂದೂ ಈ ಪತ್ರಿಕೆಗೆವುಂಟಾಗದೆ ಹೋದದ್ದಲ್ಲದೆ ಅಂತವರ ಸಹಾಯಸಹ ಕ್ರಮಕ್ರಮವಾಗಿ ಕಡಮೆಯಾಗುತ ಬಂದದರಿಂದ ನಾವು ಅನುಪಪತ್ತಿ ಪೀಡಿತರಾಗಿ ಮುಂದಿನ ಕರ್ತವ್ಯವನ್ನು ಪೂರ್ವಭಾವಿಯಾಗಿ ಅತಿವಿಷಾದದೊಡನೆ ತಿಳಿಯಪಡಿಸಬೇಕಾಯಿತು. ನಾಲೀಯಾನಾಹಿರೂಪಾಯಿಗಳ ಅತ್ಯಲ್ಪಮೌಲ್ಯಕ್ಕೆ ದೊರೆಯುವ ಮತ್ತು ಹಿಂದೂ ಜನಾಭಿಪ್ರಾಯದ್ಯೋತಕವಾದ ಈ ಒಂದು ಪತ್ರಿಕೆಯು, ಮುನ್ನೂರ್ ನಾಲ್ವತ್ತುಲಕ್ಷ ಪ್ರಜೆಗಳುಳ್ಳ ಈ ಮೈಸೂರುದೇಶದಲ್ಲಿ ನಿರ್ವಿಘ್ನವಾಗಿ ನಡೆಯಲಾರದೆಯೂ, ಅದರ ನಿರ್ವಹಣಾರ್ಥ ಪಡೆಯಬೇಕಾದ ಚಂದಾದಾರರ ಸಹಾಯವನ್ನಷ್ಟು ವಿದದಿಂ ಬಯಸಿದಾಗ್ಯೂ ಅದು ಲಭಿಸದೆಯೂ ಹೋದದರಿಂದ, ಈ ಪತ್ರಿಕೆಯಿಂದುಂಟಾಗುವ ಪ್ರಯೋಜನದ ಸ್ವರೂಪವನ್ನು ಎಲ್ಲರೂ ಅರಿತಿದಾಗ್ಯೂ ಅಂತಾ ಪ್ರಯೋಜನವು ಅಪ್ರಯತ್ನವಾಗಿಯೂ, ಸ್ವಲ್ಪವೂ ಪ್ರಯಾಸವಿಲ್ಲದೆಯೂ ಲಭಿಸಿದರೆ ಸಂತೋಷಿಸುವಂತಾ ಸ್ವಭಾವವುಳ್ಳವರೆಂದು ಎಣಿಸಬೇಕಾಗಿದೆ. ಈ ಪತ್ರಿಕಾ ನಿರ್ವಹಣಕಾರ್ಯವು ಕೇವಲ ಅರ್ಥೈಕ ಸಾಧ್ಯವಾಗಿರುವದರಿಂದ ಅನ್ಯರ ಅಪೇಕ್ಷೆ ಇಲ್ಲದೆಯೇ ಒಬ್ಬರಿಗೊಂದು ಹಿತವು ಮಾಡುವದು ಅಸಾಧ್ಯವಾಗಿರುವದು ಹೀಗೆ ಚಂದಾದಾರರು ಬಾಕೀಗಳನ್ನು ಕಳುಹಿಸದೆಯೂ, ಆಬಗ್ಗೆ ನಾವು ಆಗಿಂದಾಗ್ಯೆ ಮಾಡುವ ಪ್ರಾರ್ಥನೆಗಳಿಗೆ ಕಿವಿ ಕೊಡದೆಯೂ ಹೋಗುವದರಿಂದ ನಿಷ್ಠುರವಾದ ಮಾರ್ಗವನ್ನವಲಂಬಿಸಿ ಅವರ ಅಪ್ರೀತಿಗೂ ಅಸಮಾಧಾನಕ್ಕೂ, ಪಾತ್ರರಾಗುವದಕ್ಕಿಂತಲೂ, ಈ ಪತ್ರಿಕೆಯನ್ನು ಈ ಸಾರಿ ಆಖೈರೊಡನೆ ನಿಲ್ಲಿಸಿಬಿಡುವದರಮೂಲಕ ಮನೋ ನೈಶ್ಚಿಂತ್ಯವನ್ನುಂಟುಮಾಡಿಕೊಳ್ಳಬೇಕೆಂಬ ಸಂಕಲ್ಪವುಳ್ಳವರಾಗಿದೇವೆ. ನಮ್ಮ ಕರ್ತವ್ಯದೊಳು ಸ್ವಲ್ಪವೂ ಲೋಪವಾಡದ ಅಂಶವನ್ನು ಈ ಪತ್ರಿಕೆಯೇ ನಿರೂಪಿಸಲಿಕ್ಕೆ ಸಿದ್ಧವಾಗಿರುವದರಿಂದ ತದ್ವಿಷಯಕವಾದ ವಿಚಾರವು ಇಲ್ಲಿ ಅನಾವಶ್ಯಕವಾಗಿರುತಿದೆ. ಮುಖ್ಯವಾಗಿ ಈ ಕರ್ಣಾಟದೇಶೀಯರಮೇಲನ್ನೇ ಬಯಸಿ ಮಾಡಲ್ಪಡುವ ಈ ಪತ್ರಿಕಾಮೂಲಕವಾದ ಪ್ರಯತ್ನವನ್ನು ಜನಗಳು ಉಚಿತರೀತಿಯಿಂದ ಕಾಪಾಡಿಕೊಳ್ಳದಪಕ್ಷಕ್ಕೆ ಸ್ವದೇಶಾಭಿಮಾನವುಳ್ಳ ಪತ್ರಿಕೆಯೊಂದು ಇಲ್ಲದೆ ಹೋಗುವಹಾನಿಗೆ ಅವರೇ ಪಾತ್ರರಾಗಿ ಇದರಆವಶ್ಯಕತೆಯು ಬಲವತ್ತರವಾದಾಗ ಇದಂ ಉಳಿಸಿಕೊಳ್ಳದೆ ಹೋದ ಬುದ್ಧಿದೋಷಕ್ಕಾಗಿ ಬಳಿಕ ಅನುತಪಿಸಬೇಕಾಗಿರುವದು ಪ್ರಕೃತಸ್ಥಿತಿಯಲ್ಲಿ ಚಂದಾದಾರರಿಂದವುಂಟಾಗುವ ಪ್ರೋತ್ಸಾಹವನ್ನೂ, ಪ್ರತ್ಯಾಶೆಯಿಲ್ಲದೆ ಹೊರಗೆ ನಿಂದು ಹೋಗಿರುವ ಬಾಕೀ ವೊಬಲಗನ್ನೂ, ಋಣಪ್ರಯುಕ್ತವಾದ ತಗಾದೆಗಳನ್ನೂ ಬೇಕಾದ ಕಿಬ್ಬಂದಿಗಳಮ್ಮಕೊಳ್ಳಲಿಕ್ಕೆ ಉಪಪತ್ತಿಸಾಲದ ಇದಕ್ಕಾಗಿ ಶ್ರಮಿಸುವದರಿಂದ ಉಂಟಾಗುವ ಶಾರೀರ ಮಾನಸಿಕ ಕ್ಲೇಶಗಳನ್ನೂ ಆಲೋಚಿಸಲಾಗಿ ಈ ಪತ್ರಿಕೆಯನ್ನು ಈ ಸಾರಿ ಆಖೈರಲ್ಲಿ ನಿಲ್ಲಿಸಿ ಅದರ ಸಂಬಂಧದಿಂ ನಿವೃತ್ತಿಸಿಕೊಳ್ಳುವದೇ ಸಮುಚಿತವಾಗಿ ತೋರಿದ್ದರಿಂದ ಅಂತಾ ತೀರ್ಮಾನವನ್ನು ನಮ್ಮ ಚಂದಾದಾರರ ತಿಳುವಳಿಕೆಯಬಗ್ಯೆ ಈಗ ತರಬೇಕಾದದಕ್ಕಾಗಿ ಬಹಳ ವಿಷಾದಿಸುವೆವು

COLLAISE OF A BANK

ಈ ಮೈಸೂರು ದೇಶದಲ್ಲಿ ನಾನಾ ಹೆಸರುಗಳೊಡನೆ ಸ್ಥಾಪಿಸಲ್ಪಟ್ಟಿರುವ ಜಾಯಿಂಟ್ ಸ್ಟಾಕ್ ಕಂಪೆನಿಗಳ ಸ್ಥಿತಿಯ ವಿಷಯವಾಗಿಯೂ ಅವುಗಳಲ್ಲಿ ನಡೆಸಲ್ಪಡತಕ್ಕ ಅಪಹರಣದವಿಷಯವಾಗಿಯೂ, ಅವುಗಳಲ್ಲಿ ವಿಚಾರಣಾಧಿಕಾರಿಗಳಾಗಿ ಏರ್ಪಡತಕ್ಕವರ ಯೋಗ್ಯತಾ ವಿಷಯವಾಗಿಯೂ. ಇವುಗಳ ಭರವಸೆಯಮೇಲೆ ಅನನ್ಯಗತಿಕರಾಗಿ ಹೋದವರ ದುರ್ದಶೆಯನ್ನು ಕುರಿತೂ ಇದುವರಿವಿಗೆ ಅನೇಕ ಸಂದರ್ಭಗಳಲ್ಲಿ ಈ ಪತ್ರಿಕಾಮೂಲಕ ವಿಚಾರಮಾಡಿರುತ್ತೇವೆಯಷ್ಟೆ. ಈ ಬ್ಯಾಂಕುಗಳು, ಗೌರವವಾದ ಜೀವನೋಪಾಯವಿಲ್ಲದವರು ಪರವಂಚನೋದ್ದೇಶದೊಡನೆ ಮಾಡುವ ಕೃತ್ರಿಮ ಪ್ರಯತ್ನಗಳುಳ್ಳದ್ದೆಂಬ ನಮ್ಮ ಅಭಿಪ್ರಾಯವನ್ನು ಇದುವರಿವಿಗೆ ಅನೇಕ ಬ್ಯಾಂಕುಗಳು ದೃಢಪಡಿಸಿದವು. ಈ ವಾರದಲ್ಲಿ ನಮ್ಮ ಮೈಸೂರ್ ಬಾತಮಿದಾರನು ಅಲ್ಲಿನಒಂದುಬ್ಯಾಂಕ್ ವಿಷಯವಾಗಿ ಬರೆದ ಕಾಗದವು ನಮ್ಮ ಅಭಿಪ್ರಾಯವನ್ನು ಮತ್ತಷ್ಟು ಪೋಷಿಸಿ ವೃದ್ಧಿಗೊಳಿಸತಕ್ಕದ್ದಾಗಿರುತಿದೆ. ಅವನು ಬರೆದಿರುವ ಮುಖ್ಯಾಂಶವೇನೆಂದರೆ—ಈಗ್ಯೆ ಒಂದು ಸಂವತ್ಸರದಹಿಂದೆ, "ಪುಷ್ಪವತೀ ಸಹಾಯ ಸಂಘ" ವೆಂಬ ಹೆಸರಿನಲ್ಲಿ ಮೈನೆರದ ಹುಡಿಗಿಯರಿಗೆ ಸಹಾಯಮಾಡುವಬಗ್ಯೆ ಇಲ್ಲಿನವರು ಕೆಲವರು ಪ್ರವರ್ತಿಸಿ ಒಂದು ಬ್ಯಾಂಕನ್ನು ಸ್ಥಾಪಿಸಿದರು. ಇದರ ವ್ಯವಸ್ಥಾಪಕರ ಉದ್ದೇಶ ಪ್ರಯತ್ನಗಳೆಷ್ಟರ ಯೋಗ್ಯವಾದವೆಂಬದನ್ನು ಅವರು ಇಟ್ಟಿರುವ ಬ್ಯಾಂಕಿನ ಹೆಸರೇ ಬೋಧಿಸುವದರಿಂದ ಅದರ ಮ್ಯಾನೇಜಿಂಗ್ ಡೈರೆಕ್ಟರ್‌ಗಳಮೇಲೆ, ಸಿವಿಲ್ ಮತ್ತು ಕ್ರಿಮಿನಲ್ ತರಫ್ ಫಿರ್ಯಾದ್ ಮಾಡಲ್ಪಟ್ಟರುತಿದೆ ಸದರೀ ಸಂಘವು ಮೈಸೂರು ಶಹರ್ ನಿವಾಸಿಯಾದ ಒಬ್ಬ ಶಿವಾಚಾರ ಹೆಂಗಸಿನ ಘೋಷಣೆಯಮೇಲೆ ಸ್ಥಾಪಿಸಲ್ಪಟ್ಟಿತು ಅವಕ್ಕೆ ಚಂದಾಮಾಡಿರತಕ್ಕವರು ತಮ್ಮ ಕುಮಾರ್ತೆಯು ಮೈನೆರದ ಅಂಶವನ್ನೂ, ನಿಷೇಕದಬಗ್ಯೆ ಏರ್ಪಡಿಸಿರುವ ಕಾಲ ಕ್ಲುಪ್ತಿಯನ್ನೂ ನಮೂದಿಸಿ ಲಗ್ನ ಪತ್ರಿಕೆಯನ್ನು ಸದರೀ ಸಂಘದ ಮ್ಯಾನೇಜರಿಗೆ ಕಳುಹಿಸಿದರೆ ಆಗ ಅವರು ಪುಷ್ಪವತಿಯ ಸಹಾಯದ ಬಗ್ಯೆ ಪ್ರವರ್ತಿಸಿ ಇತರ ಚಂದಾದಾರರಿಂದ ಇಸಂವಾರ್ ೪ ಆಣೆ ಪ್ರಕಾರ ವಸೂಲ್ಮಾಡಿಕೊಂಡು ಆಕೆಯು ಪ್ರಬುದ್ಧಳಾದ ಅಂಶವನ್ನು ಅವಮಾಯಿಷಿ ಮಾಡುವ ಬಗ್ಯೆ ಸ್ವತಃ ಹೋಗಿ ಅವಳ ವಿಷಯ ತಮಗೆ ನಿಜವೆಂದು ಕಂಡರೆ ಆಗ ಆಕೆಯ ಸಹಾಯಾರ್ಥ ೫೦ ರೂಪಾಯಿಗಳನ್ನು ಕೊಡುವದರ ಮೂಲಕ ಸಹಾಯ ಮಾಡುವದು. ಪುಷ್ಪವತೀ ಸಹಾಯವೆಂಬದು ಇಷ್ಟೇಹೊರ್ತು ಬೇರಲ್ಲವು. ಇಂತಾ ಉದ್ದೇಶದೊಡನೆ ಪ್ರವರ್ತಿಸಿರುವ ಸಂಘದ ಡೈರೆಕ್ಟರ್‌ಗಳು ತಾವು ಕೊಟ್ಟ ರಸೀದಿಗಳಿಗೆ ನ್ಯಾಯವಾಗಿ ಹಚ್ಚಬೇಕಾದ ರಸೀದಿ ಸ್ಟ್ಯಾಂಪುಗಳನ್ನು ಹಚ್ಚದೆ ಗವರ್ನಮೆಂಟಿಗೆ ದಗಾಮಾಡಿದ ತಪ್ಪಿನಬಗ್ಯೆ ಕ್ರಿಮಿನಲ್ ತರಫ್ ಚಾರ್ಜ್ ಮಾಡಲ್ಪಟ್ಟಿರುತ್ತಾರೆ ಸಂಘದ ಹಣವು ಪತ್ತೆಯಿಲ್ಲವ್ವೆ ಹೋದದರಿಂದ ಅದನ್ನು ವಸೂಲ್ಮಾಡುವ ಬಗ್ಯೆ ಸಿವಿಲ್ ದಾವೆ ಹರಲ್ಪಟ್ಟಿರುತಿದೆ. ಕ್ರಿಮಿನಲ್ ಕೇಸ್ ೧೫ ರೂಪಾಯಿಗಳ ಜುಲ್ಮಾನೆಯೊಡನೆ ಪರ್ಯವಸಾನವನ್ನೈದಿತು. ಸಿವಿಲ್ ವ್ಯಾಜ್ಯವು ಅದ್ಯಾಪಿ ವಿಮರ್ಶೆಯೊಳದೆ. ಇದು ಫೈಸಲಾದರೆ ಬ್ಯಾಂಕಿನಲ್ಲಿ ನಡೆದಿರುವ ಕೃತ್ರಿಮಗಳು ಹೊರಗಾಗಬಹುದು. ಇದುವರಿವಿಗೆ ಕುಮಾರ್ ೪೦,೦೦೦ ರೂಪಾಯಿಗಳ ತನಕ ಷೇರ್‌ದಾರರಿಂದ ವಸೂಲಾಗಿರುತ್ತಿದೆ. ಇಷ್ಟರ ವೊಬಲಗು ಒಂದು ಸಂವತ್ಸರದೊಳಗೆ ಹ್ಯಾಗೆ ಮಾಯವಾಯಿತೋ ತಿಳಿಯಲಿಲ್ಲವು. ಈಗ್ಯೆ ಕುಮಾರ್ ಹತ್ತು ಹನ್ನೆರಡು ದಿನಗಳ ಹಿಂದೆ ಬ್ಯಾಂಕ್ ಡೈರೆಕ್ಟರ್‌ಗಳು ಕೆಲವರೂ ಷೇರ್‌ದಾರರೂ ಮೀಟಿಂಗ್ ಸೇರಿ ಹೊಸದಾಗಿ ಕೆಲವು ನಿಬಂಧನಗಳನ್ನು ಮಾಡಿ, ಅವಕ್ಕೆ ಷೇರ್‌ದಾರರನ್ನು ರುಜು ಮಾಡುವಂತೆ ಡೈರೆಕ್ಟರ್‌ಗಳು ಅಪೇಕ್ಷಿಸಲು, ಅವಕ್ಕೆ ಅವರು ನಿರಾಕರಿಸಿದರು. ಬಳಿಕ ಷೇರ್‌ದಾರರು ತಮ್ಮ ತರಫ್ ವಕೀಲರ ಮೂಲಕ ಬ್ಯಾಂಕ್ ವೈಂಡಪ್ ಬಗ್ಯೆ ಕೋರ್ಟಿಗೆ ಅರ್ಜೀ ಕೊಟ್ಟರು ಸದರೀ ಅರ್ಜಿಯನ್ನು ದಾಖಲ್ಮಾಡಿಕೊಂಡು ಡಿಸ್ಟ್ರಿಕ್ಟ ಜಡ್ಜಿಯವರು ಪಬ್ಲಿಕ್ ಪ್ರಾಸಿಕ್ಯೂಟರನ್ನು ಕಂಪೆನೀಸ್ ಆಕ್ಟು ಪ್ರಕಾರ ಬ್ಯಾಂಕ್ ಲಿಕ್ವಿಡೇಟರನ್ನಾಗಿ ಮೊಕರರ್ಮಾಡಿ ಬ್ಯಾಂಕನ್ನು ವೈಂಡಪ್ ಮಾಡಲಿಕ್ಕೆ ಹುಕ್ಕುಂ ಕೊಟ್ಟರು ಅದೇದಿನ ಲಿಕ್ವಿಡೇಟರ್ ಬ್ಯಾಂಕಿಗೆ ಹೋಗಿ ಠಸ್ತೀ ಮಾಡಿ ನೋಡುವಲ್ಲಿ ಡೈರೆಕ್ಟರ್‌ಗಳೂ ಆಡಿಟರ್‌ಸಹ ಕೇರಿ ರುಜು ಹಾಕಿ ಮಂಜೂರ್ಮಾಡಿದ್ದ ಬ್ಯಾಲೆನ್ಸ್ ಷೀಟಿನ ಪ್ರಕಾರ ನಗದು ಹಾಜರ್ ೧೫೩,೦೦೦ ರೂಪಾಯಿಗಳು ಇರಬೇಕಾಗಿದ್ದದಕ್ಕೆ ಬದಲು, ಎರಡುಸಾವಿರ ಚಿಲ್ಲರೆ ರೂಪಾಯಿಗಳುಮಾತ್ರವೇ ಖಜಾನೆ ಪೆಟ್ಟಿಗೆಯಲ್ಲಿ ದೊರೆಯಿತು ಆಗ ಸದರೀ ವೊಬಲಗನ್ನು ಲಿಕ್ವಿಡೇಟರು ತಮ್ಮ ಸ್ವಾಧೀನಕ್ಕೆ ತೆಗದುಕೊಂಡು ಮಾರನೆಯದಿನ ನಂಬಿಕೆ ದ್ರೋಹದಬಗ್ಯೆ ಮ್ಯಾನೇಜಿಂಗ್ ಡೈರೆಕ್ಟರ್‌ಮೇಲೆ ಫಿರ್ಯಾದ್‌ಮಾಡಿ ವಿಶಿಷ್ಟಸ್ವತ್ತನ್ನೂ ಜಪ್ತಿಮಾಡಿ ಅವರನ್ನು ವಾರಂಟಿಮೂಲಕ ದಸ್ತಗಿರ್ ಮಾಡಿಸಿ ಲಾಕಪ್‌ನೊಳಿಡಿಸಿರುತ್ತಾರೆ ಈ ವಿಷಯವು ವಿಚಾರಣೆಯೊಳಿರುವದರಿಂದ ಇದರವಿಷಯವಾಗಿ ನಾವು ಸದ್ಯಃ ಯೇನೂ ಬರೆಯಲಾರೆವು. ಪರಂತು ಪುಷ್ಪವತಿಯರ ದೌರ್ಭಾಗ್ಯದಿಂದ ಅವರಸಹಾಯಾರ್ಥ ಉದ್ದಿಷ್ಟವಾದ ಸಂಘವು ಕ್ಷಿಪ್ರದಲ್ಲಿಯೇ ತಲೆಕೆಳಗಾಗಿ ಹೋಯಿತು, ಎಂಬದು.

Occasiona Notes.
ನೈಮಿತ್ತಿಕವಿಷಯನ್ಯಾಸ

Cash balances in the treasuries and the Presidency Banks of India —ಕಳೆದ ಜಾಲೈ ೩೧ನೇ ತಾರೀಖಿನಲ್ಲಿ ಇಂಡ್ಯ ಗವರ್ನಮೆಂಟ್ ಖಜಾನೆಗಳಲ್ಲೂ ಪ್ರೆಸಿಡೆನ್ಸೀ ಬ್ಯಾಂಕುಗಳಲ್ಲೂ ೧೮ ಕೋಟಿ ೩೭ಲಕ್ಷ ರೂಪಾಯಿಗಳು ಹಾಜರಿದ್ದವು. ಕಳೆದ ಸಾಲ ಸದರೀ ತಾರೀಖಿನಲ್ಲಿ ೧೭ಕೋಟಿ ೩೬ಲಕ್ಷ ರೂಪಾಯಿಗಳು ಹಾಜರಿದ್ದವು.

Charity —ಪಾಲಿಟಾನಾ ಸಂಸ್ಥಾನದ ಠಾಕೂರವರು ಈಚೆಗೆ ಪುನೇಗೆ ಬಂದು ಆರುಸಾವಿರ ಮಂದಿ ಬ್ರಾಹ್ಮಣರಿಗೆ ಸಂತರ್ಪಣೆಮಾಡಿ ಪ್ರತಿ ಇಸಂ ಒಂದು ರೂಪಾಯಿ ದಕ್ಷಿಣೆ ಕೊಟ್ಟರೆಂದು ಮುಂಬೈ ಇಂದುಪ್ರಕಾಶ ಪತ್ರಿಕೆ ಹೇಳುತಿದೆ. ಇಂತ್ಯದೇಶದಲ್ಲಿ ಪಾಶ್ಚಿಮಾತ್ಯರ ವಿದ್ಯಾಬುದ್ಧಿ ವೈಲಕ್ಷಣ್ಯಗಳು ಇಷ್ಟು ಅಭಿವೃದ್ಧಿಗೆ ಬಂದಿದ್ದಾಗ್ಯೂ ಹಿಂದೂ ಧರ್ಮಗಳೆಂಬದು ಇನ್ನು ಸ್ವಲ್ಪ ಮಟ್ಟಿಗಾದರೂ ನೆಲೆಗೊಂಡಿರುವಬಗ್ಯೆ ಸಂತೋಷಿಸುತ್ತೇವೆ.

News from China —ಚೀನಾ ದೇಶದ ಚಕ್ರವರ್ತಿಯವರಿಗೆ ಬುದ್ಧಿಸ್ವಾಸ್ಥ್ಯವಿಲ್ಲದೆ ಹೋಗಲು ಚಕ್ರವರ್ತಿನೀಯವರು ಈಗ ರಾಜ್ಯಭಾರವು ಸ್ವಯಂ ವಹಿಸಿ, ಸರ್ವಜನ ಸಂಮತವಾಗಿಯೂ ಧೈರ್ಯೋತ್ಸಾಹಗಳೊಡನೆಯೂ ನಡೆಸುತಲಿದ್ದಾರೆ. ಬರುವ ಫಿಬ್ರವರಿ ತಿಂಗಳಲ್ಲಿ ಬಾಲಕರಾದ ಯುವರಾಜರವರಿಗೆ ಪಟ್ಟಾಭಿಷೇಕ ಮಾಡಬೇಕೆಂದುದ್ದೇಶಿಸಿ ಅದಕ್ಕೆ ಆವಶ್ಯಕಗಳಾದ ಯೇರ್ಪಾಡುಗಳೆಲ್ಲವೂ ನಡೆಸಲ್ಪಡುತಲಿವೆ ಯೆಂದು ಒಂದಾನೊಂದು ಪತ್ರಿಕೆ ಹೇಳುತದೆ.

The young Maharaja of Gwalior —ಬಾಲಕರಾದ ಸಿಂಧಿಯಾ ಮಹಾರಾಜರವರು ಪಟ್ಟಾಭಿಷಿಕ್ತರಾಗಿ ಹುಮಾರು ಒಂದೂವರೆ ತಿಂಗಳ ಕಾಲವಾಯಿತು. ಅವರ ವಿದ್ಯಾಭ್ಯಾಸದ ವಿಷಯದಲ್ಲಿ ಇದುವರಿವಿಗೆ ಯಾವ ಯೇರ್ಪಾಡೂ ಮಾಡಲ್ಪಟ್ಟಂತೆ ಕಾಣಲಿಲ್ಲವು. ಇವರ ಮೇಲ್ವಿಚಾರಣೆಯು ಇವರ ತಾತಂದಿರಾದ ಶ್ರೀಮಂತ ಬಾಪೂಸಾಹೆಬ್ ಜಾದವ ಯವರಿಗೆ ಒಪ್ಪಿಸಲ್ಪಟ್ಟಿದೆ ರಾಜ್ಯಭಾರದ ಕಾರ್ಯವು ರಾಪ್‌ರಾಜೆ ಸರ್ ಗಣಪತಿರಾವ್ ದಾದಾಸಾಹೆಬ್ ಖಡ್ಕೆಯವರಿಗೆ ಒಪ್ಪಿಸಲ್ಪಟ್ಟು ಕ್ರಮವಾಗಿ ನಡೆಯುತಲಿದೆ

Abolition of Small Cause Courts. —ಇಂದ್ಯರಾಜ್ಯದ ಖರ್ಚುಗಳನ್ನು ಕಮ್ಮಿಮಾಡುವದಕ್ಕಾಗಿ ಯೇರ್ಪಟ್ಟಿರುವ ಫಿನಾನ್ಸ್ ಕಮಿಟಿಯವರ ಅಭಿಪ್ರಾಯವನ್ನನುಸರಿಸಿ, ಸೂರತ್, ಪುನೆ, ಮತ್ತು ಅಹಮದಾಬಾದಿನಲ್ಲಿರುವ ಸ್ಮಾಲ್ ಕಾಜ್ ಕೋರ್ಟುಗಳನ್ನು ತೆಗದುಹಾಕಬಹುದೇಯೆಂದು ಮುಂಬೈ ಗವರ್ನಮೆಂಟನವರು ಅಲ್ಲಿನ ಹೈಕೋರ್ಟ್ ಜಡ್ಜಿಗಳನ್ನು ಕೇಳಿದುವದಾಗಿ ಹಿಂದಿನ ಪತ್ರಿಕೆಯಮೂಲಕ ತಿಳಿಸಿರುತ್ತೇವೆಯಷ್ಟೆ. ಸದರೀ ಕೋರ್ಟುಗಳನ್ನು ತೆಗದುಹಾಕುವದಕ್ಕಾಗುವದಿಲ್ಲವೆಂದು ಹೈಕೋರ್ಟ್ ಜಡ್ಜಿಗಳು ಸ್ಥಳಿಕ ಗವರ್ನಮೆಂಟನವರಿಗೆ ಬರೆದಿರುತ್ತಾರೆಂದು ಅಲ್ಲಿನ ಪತ್ರಿಕೆಯೊಂದು ಹೇಳುತಿದೆ.

Ine ox King Theebaw—ಪದಭ್ರಷ್ಟರಾದ ಬರ್ಮಾದೇಶದ ಅರಸರಾದ ಥೀಬಾಯವರು ಈಗ ಮುಂಬೈ ಪ್ರಸಿಡೆನ್ಸಿಗೆ ಸೇರಿದ ರತ್ನಗಿರಿಯೆಂಬಸ್ಥಳದಲ್ಲಿಡಲ್ಪಟ್ಟಿರುತ್ತಾರೆಯಷ್ಟೆ,ಸದರೀ ಸ್ಥಳವು ಭಯಂಕರವಾಗಿಯೂ ಹಾವು ಚೇಳು ಮೊದಲಾದ ವಿಷಜಂತುಗಳಿಂದ ನಿಬಿಡಿತವಾಗಿಯೂ ಇರುವದರಿಂದ ತಮಗೆ ಅಲ್ಲಿನ ವಾಸವು ಇಷ್ಟವಿಲ್ಲವೆಂತಲೂ, ತಮ್ಮನ್ನು ಬೇರೇಸ್ಥಳಕ್ಕೆ ಕಳುಹಿಸಬೇಕೆಂತಲೂ, ತಮ್ಮನ್ನು ಮಾಂಡಲೇ ಪಟ್ಟಣದಿಂದ ಕರೆದುಕೊಂಡು ಬಂದ ಕಾಲದಲ್ಲಿ ವೈಸರಾಯ್‌ರವರನ್ನು ನೋಡಿಕೊಂಡು ಮೂರು ತಿಂಗಳ ಕಾಲದೊಳಗಾಗಿ ತಮ್ಮ ರಾಜ್ಯಕ್ಕೆ ವಾಪಸ್

ಕಳುಹಿಸುವ ಬರವಸೆಯ ಮೇಲೆ ಕರೆದುಕೊಂಡು ಬಂದದರಿಂದ ತಮ್ಮ ರಾಜ್ಯವನ್ನು ತಮಗೆ ಕೊಡಬೇಕೆಂತಲೂ ನಮೂದಿಸಿ ಇಂಡ್ಯ ಗವರ್ನ್ಮೆಂಟಿಗೆ ಅರ್ಜಿ ಕೊಟ್ಟಿರುತ್ತಾರಂತೆ. ಇದರ ಪ್ರಯೋಜನವು ಪ್ರಸಿದ್ಧವಾಗಿ ಯೆಲ್ಲರಿಗೂ ತಿಳಿದೇಯಿದೆ.

The *Statesman* libel case—ಕಲ್ಕತ್ತೆ ಸ್ಟೇಟಿಸಮನ್ ಪತ್ರಿಕೆಯ ಎಡಿಟರ್ ವ ಪ್ರೊಪ್ರೈಟರಾದ ಮಿ. ರಾಬರ್ಟ ನೈಟಿಯವರಮೇಲೆ ತರಲ್ಪಟ್ಟ ಮಾನನಷ್ಟ ಮೊಕದ್ದಮೆ ಕಲ್ಕತ್ತಾ ಹೈಕೋರ್ಟ ಸೆಷನ್ ದರ್ಯಾಪ್ತಿಯಬಗ್ಗೆ ಕಮಿಟಿ ಆಗಿರುತಿದೆಯಷ್ಟೆ, ಸದರೀ ಮೊಕದ್ದಮೆಯು ಮುಂದಿನ ಸೆಷನ್ ವರಿವಿಗೆ ಅದರ ವಿಚಾರಣೆಯುಬಗ್ಗೆ ನಿಲ್ಲಿಸಲ್ಪಟ್ಟಿರುವದಲ್ಲದೆ, ಭರದ್ವಾಜ್ ಸಂಸ್ಥಾನದ ಕೆಲವು ಲೆಕ್ಕ ಬುಕ್ಕುಗಳನ್ನೂ ಕಾಗದ ಪತ್ರಗಳನ್ನೂ ತಾವು ನೋಡುವದಕ್ಕೆ ಅವಕಾಶ ಕೊಡಿಸಬೇಕೆಂದು ಮಿ. ನೈಟಿಯವರ ಲಾಯರ್ ಕೇಳಿಕೊಳ್ಳಲು ಅಂಥಾ ಲೆಕ್ಕ ಬುಕ್ಕುಗಳ ಮತ್ತು ಕಾಗದಪತ್ರಗಳ ಪಟ್ಟಿ ಹಾಜರ್ ಮಾಡಬೇಕೆಂದು ಕೋರ್ಟಿನವರು ಹುಕುಂ ಮಾಡಿದರಂತೆ.

Prohibition of animal food.—ಇಂಗ್ಲಾಂಡ ದೇಶದೊಳು ಮಾಂಸಾಹಾರ ನಿಷೇಧ ಕೋರುಯವರ ಸಂಖ್ಯೆಯು ದಿನೇದಿನೆ ವೃದ್ಧಿಯಾಗುತ ಪ್ರತಿಸಂವತ್ಸರವೂ ಸಾವಿರಾರು ಕುಟುಂಬಗಳು ಅಂಥಾ ನಿಷೇಧಕೋರಿಗೆ ಸೇರುತಲಿರುತಲಿದೆ. ಸಾತ್ವಿಕಾಹಾರದಮೂಲಕ ಜನರು ದಾರ್ಢ್ಯಕರಾಗಿಯೂ ಶ್ರದ್ಧಾಳುಗಳಾಗಿಯೂ ಆಗುತ್ತಾರೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಇತರ ಜಾತಿಯವರು ಆವಿಷಯದಲ್ಲಿ ಸಂಶಯಗ್ರಸ್ತರಾಗಿ ಪೇಚಾಡುತಲಿವಾರೆ. ಹಿಂದೂಗಳಪೈಕಿ ಯಾರಿಗಾದರೆ ಮಾಂಸಾಹಾರ ಪಾಪಕರವೆಂಬ ನಿಷೇಧ ಪ್ರಾಬಾಗಿದೆಯೊ ಅಂತವರಿಗೆ ಈಗ ಅನಿವಾರ್ಯವಾಗಿ ಅದರಲ್ಲಿ ವಿಶೇಷ ಅಭಿರುಚಿ ಪ್ರಾಬಾಗುತಲಿದೆ. ಇದು ಕಾಲ ಮಾಹಾತ್ಮ್ಯವೆಂದು ಇಂದು ಪ್ರಕಾಶ ಪತ್ರಿಕೆಹೇಳುತಿವೆ.

LOCAL AND PROVINCIAL NEWS.

ಒಳದೇಶಮತ್ತು ತಾಲ್ಲೂಕಿನಾತಿವೃತ್ತಾಂತಗಳು.

The sessions.—ಈ ಸಲದ ಸುಪೀರಿಯರ ಸೆಷನ್‍ವಿಚಾರಣೆಗೆ ಈದಿನ ಪ್ರಾರಂಭವಾಗಿ ಜಸ್ಟಿಸ್ ಮಿ|| ತುಬಾಕೆಪ್ಟರವರಿಂದ ನಡೆಸ್ಪಡುವದು.

The Fort Murder.—ಈತ್ರಾನು ಕೋಟೆಯಲ್ಲಿ ನಡೆದ ಮೊಕದ್ದಮೆಯ ದರ್ಯಾಪ್ತಿ ತೀರ್ಪಿಯಾಗಿ ಅವರವರ ಲಾಯರ್‌ಗಳಕಡೆ ವಾದಗಳು ನಡೆದವು. ಈದಿನ ಸೆಷನ್ ಜಡ್ಜಿಯವರು ತಮ್ಮ ಅಭಿಪ್ರಾಯವನ್ನು ಹೇಳುವರು.

The weather.—ಈಚೆಗೆ ಯೆರಡುಮೂರು ದಿನಗಳಿಂದ ಸದಾ ಮೋಡವಾಡುತಲೂ ಆಗಿಂದಾಗ್ಯೆ ತುಂತುರುಮಳೆ ಬೀಳುತಲೂ ಇದೆ ಕಳೆದ ಶನಿವಾರದದಿನ ಬೆಳಗ್ಯೆ ಜುಮಾರ್ ಹದಮಳೆ ಆಯಿತು. ರಾಗೀ ಫಸಲಿಗೆ ಇದು ಕೇವಲ ಅನುಕೂಲವಾದದ್ದೆಂದು ಕಾಣುತಿದೆ. ಪದಾರ್ಥಗಳ ಧಾರಣೆಗಳು ಏಕರೂಪವಾಗಿವೆ.

Central college.—ಇಲ್ಲಿನ ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಇನಾಂಗಳು ಕೊಡುವ ಕೈಬಗ್ಯೆ ಕಳೆದ ಮಂಗಳವಾರ ದಿನ ಸದರೀ ಕಾಲೇಜಿನಲ್ಲಿ ಸಭೆಸೇರಿತು. ಇಲ್ಲಿನ ಬ್ರಿಟಿಷರೆಸಿಡೆಂಟರಾದ ಮಿ|| ಜೆ. ಬಿ. ಲೈಲಿಯವರು ಅಗ್ರಾಸನವ ವಹಿಸಿ ವಿದ್ಯಾರ್ಥಿಗಳಿಗೆ ಇನಾಂಗಳು ಕೊಟ್ಟು ಅವರ ಪುರೋಭಿವೃದ್ಧಿಗೆ ಆವಶ್ಯಕಗಳಾದ ಬುದ್ಧಿವಾದಗಳನು ಹೇಳಿದರು.

The Mysore State Railway.—ಈಚೆಗೆ ಮೈಸೂರು ಸ್ಟೇಟ್‍ರೈಲ್ವೆಯಲ್ಲಿ ಅವ್ವಲ್ ದುಯಂ ತರಗತಿ ಗಾಡಿಗಳ ರುಸುಮನ್ನು ಹೆಚ್ಚಿಸಿದ್ದರಿಂದ ಯೆರಡನೇತರಗತಿಗಾಡಿಗಳಲ್ಲಿ ಸಂಚಾರಮಾಡುತಲಿದ್ದವರನೇಕರು ಈಗ ಮೂರನೇತರಗತಿ ಗಾಡಿಯಲ್ಲಿ ಹೋಗಿ ಬರುತ ಪರುಶು ಹಾಗೆ ಮಾಡುವದು ತಮ್ಮ ಗೌರವಕ್ಕೆ ಕೊರತೆಯೆಂಬ ಭಾವದೊಡನೆ ತಾವು ಉದ್ದೇಶಿಸಿ ಹೋಗುವಸ್ಥಳಕ್ಕೆ ಸಮೀಪದಲ್ಲಿರುವ ಸ್ಟೇಷನ್ ಬಳಿ ಮೇಲ್ಪಟ್ಟತರಗತಿಗೆ ಬದಲಾಯಿಸಿ ಕೊಳ್ಳುತ್ತಾರೆಂದು ಒಬ್ಬ ಬಾತಮೀದಾರನು ಬರೆಯುತ್ತಾನೆ.

ನಮ್ಮ ಯೆಲಹಳ್ಳಿ ಬಾತಮೀದಾರನು ತಿಳಿಸುವದೇನೆಂದರೆ:—ಯೆಲಹಳ್ಳಿ ಟೌನ್ ಶ್ರೀರಾಮಪೇಟೆಯಲ್ಲಿರುವ ಹಲಿಕೂರು ಬಸಪ್ಪನ ಮನೆಯಲ್ಲಿ ಒಂದುಆಕಳು ಕರುಹಾಕಿದು ಅದನ್ನು ನೋಡುವಲ್ಲಿಹೋರಿ ಕರು,ಮೂತ್ರದ್ವಾರವರಿಯಾಗಿತ್ತು, ಸಗಣಿ ಹಾಕುವ ದ್ವಾರ ಮಾತ್ರ ಇರಲಿಲ್ಲ, ಅದನ್ನು ಆಸ್ಪತ್ರಿಗೆ ತೆಗದುಕೊಂಡು ಬಂದು ಆಸ್ಪತ್ರ್ರೆ ಡಾಕ್ಟರ್ ಶಸ್ತ್ರಹಾಕಿದ ಕೂಡಲೇ ಒಂದು ಡೊಡ್ಡದ್ವಾರವಾಗಿ ಸಗಣಿ ವಿಸರ್ಜನೆ ಆಯಿತು. ಕರುಬೂಬವರ್ಣ, ಚೆನ್ನಾಗಿದೆ, ಎಂಬದು

Who is Brahman?

A reply to Mr. P. Chentsal Rao.

(Communicated)

ಸಾಮಾನ್ಯವಾಗಿ ಬ್ರಾಹ್ಮಣ್ಯಕ್ಕೆ ಗುಣವೇ ಕಾರಣವಲ್ಲದೆ ಜನ್ಮವು ಕಾರಣವಲ್ಲವೆಂಬ ಭಾವ ದ್ಯೋತಕವಾದ ವಜ್ರಸೂಚಿಕೋಪನಿಷದ್ವಾಕ್ಯಕ್ಕೆ ಖಂಡನರೂಪವಾದ ವಾಕ್ಯಗಳ್ಯಾವದಾದರೂ ಇದ್ದೊಡೆ ಅವು ಪಂಡಿತರು ಪ್ರಕಟಿಸಬೇಕೆಂದು ಪ್ರಾರ್ಥಿಸಿ ಬರೆದ ಮಿ|| ಪಳ್ಳಿ ಚೆಂಚಲರಾಯರವರ ಲೇಖನವನ್ನು ಗತ ಜುಲೈ ತಿಂಗಳ ೧೯ನೇ ತಾರೀಖಿನ ಕರ್ನಾಟಕಪ್ರಕಾಶಿಕಾ ಪತ್ರಿಕೆಯಲ್ಲಿ ಪ್ರಕಟಿಸಿದ್ದೆವಷ್ಟೆ. ಇದಕ್ಕೆ ಯಾರಾದರೂ ಪ್ರತ್ಯುತ್ತರ ಕೊಡಬಹುದೆಂದು ಇದುವರಿವಿಗೂ ಅತ್ಯಾಸಕ್ತಿಯೊಡನೆ ನಿರೀಕ್ಷಿಸಿದ್ದೆವು. ಪರಂತು ಸದರೀ ವಿಷಯವನ್ನು ಕುರಿತು ನಮ್ಮ ಪಂಡಿತರೊಬ್ಬರೂ ಇದುವರಿವಿಗೆ ಆಲೋಚಿಸಿದಂತೆ ಕಾಣಿಸಲಿಲ್ಲವು. ಆದರೆ ಸದರೀ ಉಪನಿಷದ್ವಾಕ್ಯಗಳು ಕೆಲವರು ವಿಪ್ರನಿಂದಕರಿಗೆ ಬಹಳ ಸಹಾಯಕಗಳಾಗಿ, ಅವರು ಮತ್ತಷ್ಟು ವಿಜೃಂಭಿಸಲಿಕ್ಕೆ ಕಾರಣವಾಯಿತೆಂಬದು ಕೇಳಿ ಬಹಳವಿಷಾದಪಡುತೇವೆ: ತತ್ಕಾಲದಲ್ಲಿ ಬ್ರಾಹ್ಮಣರು ಸಾಮಾನ್ಯವಾಗಿ ವೇದಾಧ್ಯಯನ ಮಾಡದ ಇರುವದಕ್ಕಾಗಲಿ, ಕೆಲವರಿಗಳು ಅತ್ಯೋತ್ಕರ್ಷಜ್ಞಾನವಿಮ್ಮೆನುರೆತು, ಬ್ರಾಹ್ಮಣರನ್ನು ಹಾಸ್ಯಮಾಡುವುದನಿ, ವೇದಾಧ್ಯಯನಾದಿಗಳನ್ನು ಮಾಡುವದಕ್ಕಾಗಲಿ, ಇವರಿಗೆ ಪರಲೋಕ ಶಿಕ್ಷೆಯು ತಪ್ಪಿದ್ದಲ್ಲವು. ಕೆಲವರು ವೇದಾಧ್ಯಯನ ಮಾಡಬಹುದೆಂದು ಒಂದುವೇಳೆ ಯಾರಾದರು ಹೇಳಿದಾಗ್ಯೂ, ಅವಕ್ಕೆ ಯೆಷ್ಟುಮಂದಿ ಸನ್ನದ್ಧರಾಗಿ ಅರ್ಹರಾಗಿದಾರೆಯೋ ನಾವರಿಯೆವು. ಇಂತಾ ಹುಚ್ಚುತನದಿಂದ ಬ್ರಾಹ್ಮಣರೊಳು ವೈಷಮ್ಯವೂ, ಬ್ರಹ್ಮನಿಂದೆಯೂ ಪ್ರಾಬಾಗಲಿಕ್ಕೆ ಕಾರಣವಾಗುತಿದೆಯಲ್ಲದೆ ಬೇರೊಂದೂ ಪ್ರಯೋಜನವಿಲ್ಲವು. ಸ್ವಾಪ್ರತಿಷ್ಠೆಯಬಗ್ಯೆ ಇಂತಾ ದುರ್ವಾದಗಳು ಮಾಡಲ್ಪಡುತಿವೆಯೇ ಹೊರತು ಬಹಳ ನಿರ್ಬಂಧರೂಪವಾದ ಮತ್ತು ಸ್ವೇಚ್ಛಾವ್ಯಾಪಾರ ನಿರೋಧಕವಾದ ಆಣ ಬ್ರಾಹ್ಮಣ್ಯಕ್ಕಾಗಿ ತತ್ಕಾಲದೊಳು ಆಂತರವಾಗಿ ಪೇಚಾಡತಕ್ಕವರೊಬ್ಬರೂ ಇಲ್ಲವು. ಜನಗಳಿಗೆ ಕರ್ತವ್ಯ ವಿಷಯದೊಳು ಅಕ್ಕರೆಯು ತಪ್ಪಲಿಕ್ಕೂ, ಅಜ್ಞಾನ, ಅನ್ಯಥಾ ಜ್ಞಾನ ವಿಪರೀತಜ್ಞಾನ ತಲೆದೋರಲಿಕ್ಕೂ, ಕಾಲಗತಿಯನ್ನೂ, "ರಾಜಾ ಕಾಲಸ್ಯಕಾರಣಂ" ಎಂದು ಅಂತಾ ಕಾಲಗತಿಗೆ ಕಾರಣಭೂತರಾದ ಅರಸರನ್ನೂ ಕಾರಣತ್ವೇನ ಹೇಳಬೇಕಾಗಿರುತಿದೆ. ಹಿಂದೆ ಪ್ರಕಟಿಸಿದ್ದ ವಜ್ರಸೂಚಿಕೋಪನಿಷದ್ವಾಕ್ಯಾರ್ಥಕ್ಕೆ ಖಂಡನರೂಪವಾಗಿ ಒಬ್ಬರು ಬರೆದ ಉತ್ತರವನ್ನು ಇವರತಿ ಪ್ರಕಟಿಸುವೆವು.

"ವಜ್ರಸೂಚಿಕೋಪನಿಷತ್ತನ್ನು ಪ್ರತಿಪದಾರ್ಥ ಭಾವಾರ್ಥದೊಡನೆ ಬರೆದು ಪ್ರಕಟಿಸಿದವರಿಗೆ, ವರ್ಣಭೇದವನ್ನು ತೊಲಗಿಸಿ, ಯೆಲ್ಲರನ್ನೂ ಒಂದೇಸ್ಥಿತಿಯಲ್ಲಿಟ್ಟುನೋಡಬೇಕೆಂಬತಾತ್ಪರ್ಯವಿರಬಹುದೆಂದು ತೋರುತಿದೆ. ವರ್ಣಾಶ್ರಮ ಭೇದಜ್ಞಾನವುಂಟಾಗಿಕೆಡುವವರುಹಾಗೆ ಕೆಡದಿರಲಿಕ್ಕೆ ಅವರ ದಿವ್ಯಸೂಕ್ತಿಯು ಸಾಧಕವಾಗಿರುವದೆಂದೆಣಿಸಿರುವಂತೆ ಕಾಣುತಿದೆ. ಸರ್ವತ್ರಏಕವರ್ಣವಾಗಿರುವಪಕ್ಷಕ್ಕೆ ಆಚಾರ್ಯಾಚಾರ ಬಾಧೆಗಳೊಂದೂ ಇಲ್ಲದೆಯೂ, ಭೋಜನಭಾಜನ ನಿಯಮಗಳಿಲ್ಲದೆಯೂ, ಒಂದೇ ಮನುಷ್ಯಜಾತಿಯಾಗಿರುತ ಐಕಮತ್ಯದೊಡನೆ ಇಂಡ್ಯದೇಶೀಯರೆಲ್ಲರೂ ಏಕರೂಪವಾಗಿಪ್ರೀತಿಗೌರವದೊಡನೆ ಸ್ನಿಗ್ಧರಾಗಿರುವರೆಂದು ಆಲೋಚಿಸಿದಂತೆ ವ್ಯಕ್ತವಾಗುತಿದೆ. ಜಾತಿ ಪ್ರಯುಕ್ತವಾದ ತಾರತಮ್ಯವು ತಪ್ಪುವದರಿಂದ ಕದಾಚಿತ್ ಅನ್ಯೋನ್ಯೈಕಮತ್ಯಗಳು ಪ್ರಾಬಾಗುವದೆಂದು ಹೇಳಿದಾಗ್ಯೂ, ಪ್ರಪಂಚಸ್ಥಿತಿಯಲ್ಲಿ ಅವರವರ ಪುಣ್ಯಪಾಪಾನುಗುಣವಾಗಿ ಪ್ರಾಬಾಗತಕ್ಕ ವ್ಯಾಸ್ಯವ್ಯಾಪಕಸ್ಥಿತಿಗಾಗಿ ಪರಸ್ಪರ ಅಸೂಯೆಗೊಳ್ಳದೆ ಇರುವದಿಲ್ಲವು. ಏವಂಚ ಜನಗಳಲ್ಲಿ ಅಸೂಯೆಯೆಂಬದು ಜಾತಿಮತ ಪ್ರಯುಕ್ತವಾಗಿ ಇಲ್ಲದೆ ಹೋದರೂ, ಮತ್ತೊಂದುನಿಮಿತ್ತವಾಗಿಯಾದರೂ ಯಿರುವದಾದ್ದರಿಂದ, ಇದರೊಳು ಐಕಮತ್ಯವೆಂಬದುಮಾತ್ರ ಸುಲಭವಾಗಿ ಪ್ರಾಬಾಗತಕ್ಕದ್ದಲ್ಲವು. ಅಂತರಾಳಕಗಳಾದ ಪ್ರಭೇದಗಳನ್ನೆಲ್ಲ ತೊಲಗಿಸಿ ಸ್ತ್ರೀ ಪುರುಷಭೇದವನ್ನುಮಾತ್ರ ಉಳಿಸಿಕೊಳ್ಳಬೇಕೆಂದು ಹೇಳಬಹುದು. ಪಾಂಚಭೌತಿಕವಾದ ಸ್ಥೂಲಶರೀರಕ್ಕೂ, ಲಿಂಗದೇಹವಾದ ಸೂಕ್ಷ್ಮಶರೀರಕ್ಕೂ, ಜೀವನೊಬ್ಬನೇಯಾಗಿರುವದಲ್ಲದೆ ಇವುಗಳದೇಹಧರ್ಮಗಳೂ ಸುಖದುಃಖಾನುಭವವೂ, ಸಮಾನವಾಗಿರುವವು, ಆದರೆ ಸ್ತ್ರೀ ಪುರುಷಸಂಜ್ಞೆಗೆ ಕೆಲವು ಸುಜ್ಞೆಗಳುಮಾತ್ರ ಪ್ರತ್ಯೇಕವಾಗಿ ವ್ಯಕ್ತವಾಗುವವು. ಆದರೆ "ನಸ್ತ್ರೀ ನಪುಮಾನ್ನಪಂಡಃ" ಇತ್ಯಾದಿವಚನಗಳರೀತ್ಯಾ ಆತ್ಮವಿಚಾರದೊಳು ಅಂತಾಭೇದಗಳೊಂದೂ ಇರುವದಿಲ್ಲವು. ("ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇಗವಿಹಸ್ತಿನೀ। ಶುನಿಚೈವಶ್ವಪಾಕೇಚ ಪಂಡಿತಾಸ್ಸಮದರ್ಶಿನಃ") ಎಂಬ ಭಾರತವಾಕ್ಯವಲ್ಲದೆ "ಚಂಡಾಲೋಸ್ತುಸತುದ್ವಿಜೋಸ್ತು ಗುರುರಿತ್ಯೇಷಾಮನೀಷಾಮಮ" ಎಂಬದಾಗಿ ಶ್ರೀಶಂಕರಭಗವತ್ಪಾದಾಚಾರ್ಯ ಸ್ವಾಮಿಗಳವರು ಹೇಳಿರುತ್ತಾರಾಗಿ ಬ್ರಹ್ಮವಿದ್ಯೆಯನ್ನರಿತಿರುವ ಬ್ರಾಹ್ಮಣರಿಗೂ ಗೋ ಗಜ ಶುನಕ ಚಂಡಾಲಾದಿಗಳಿಗೂ, ಯಾವಭೇದವೂ ತೋರುವದಿಲ್ಲವು. ಈ ಪ್ರಪಂಚಜ್ಞಾನವಿಲ್ಲದೆ ಬ್ರಹ್ಮಜ್ಞಾನವುಳ್ಳವನಿಗೆ ಮೇಲೆಕಂಡ ಅಭೇದಾಧ್ಯವಸಾನವು ನಿಜವಾದದ್ದಾದರೂ, ವ್ಯಾವಹಾರಿಕ ಪ್ರಪಂಚಜ್ಞಾನವುಳ್ಳವರ ವಿಷಯವು ಪ್ರತ್ಯೇಕವಾಗಿರುತಿದೆ.

> ಯಾನಿಶಾಸರ್ವಭೂತಾನಾಂತಸ್ಯಾಂಜಾಗರ್ತಿ
> ಸಂಯಮೀ॥ ಯಸ್ಯಾಂಜಾಗ್ರತಿಭೂತಾನಿ
> ಸಾನಿಶಾಪಶ್ಯತೋಮುನೇಃ॥

ಭಗವದ್ಗೀತಾಧ್ಯಾಯ ೨, ಶ್ಲೋಕ ೬೯.

ಸರ್ವಭೂತಾನಾಂ—ಅಜ್ಞಾನಾಂಧಕಾರದಿಂದಾ ವಿಪ್ಲವಾದಚಿತ್ತಗಳುಳ್ಳ ಪ್ರಾಣಿಗಳಿಗೆ, ಅಂದರೆ ಆತ್ಮದರ್ಶನವಿಲ್ಲದವರಿಗೆ, ಯಾನಿಶಾ-ರಾತ್ರಿಯಂತಾ ಆತ್ಮನಿಷ್ಟೆಯುಳ್ಳದ್ದೋ, ತಸ್ಯಾಂ—ಅದರಲ್ಲಿ, ಸಂಯಮೀ- ಇಂದ್ರಿಯನಿಗ್ರಹವುಳ್ಳವನು, ಜಾಗರ್ತಿ- ಪ್ರಬೋಧೆಯುಳ್ಳವನಾಗಿರುವನು. ಯಸ್ಯಾಂ-ಯಾವವಿಷಯನಿಷ್ಠೆಯಲ್ಲಿ, ಭೂತಾನಿ- ಅಜ್ಞಾನಿಗಳಾದ ವಿಷಯಾಸಕ್ತರು, ಜಾಗ್ರತಿ- ವಿಷಯಗಳಲ್ಲಿ ತಮ್ಮ ಇಂದ್ರಿಯಗಳನ್ನು ವ್ಯಾಪಕಗೊಳಿಸುವರೋ, ಸಾ- ಅದು, ಪಶ್ಯತೋಮುನೇಃ-ಆತ್ಮತತ್ವವನ್ನರಿತ ಮನನಶೀಲರಿಗೆ, ನಿಶಾ- (ಆತ್ಮಸಾಕ್ಷಾತ್ಕಾರವು ಇಂದ್ರಿಯಜಯವಿಲ್ಲದವರಿಗೆ ಪ್ರಾಬಾಗಲಾರದಾದ್ದರಿಂದ ಅಂತವನದೆಶೆಯು) ರಾತ್ರಿಯಂತಾದ್ದೆಂದರ್ಥವು.

> ಪ್ರಕೃತೇರ್ಗುಣಸಮ್ಮೂಢಾಸ್ಸಜ್ಜಂತೇಗು
> ಣಕರ್ಮಸು। ತಾನಕೃತ್ಸ್ನವಿದೋಮಂದಾ
> ನ್ಕೃತ್ಸ್ನವಿನ್ನವಿಚಾಲಯೇತ್ ॥ ಭಗವ

ದ್ಗೀತಾಧ್ಯಾಯ ೩, ಶ್ಲೋ|| ೨೯.

ಪ್ರಕೃತೇಃ-ಪ್ರಕೃತಿಯ, ಗುಣ-ಸತ್ವಾದಿ ಗುಣಗಳಿಂದ, ಸಮ್ಮೂಢಾಸ್ಸಂತಃ-ವಿಶೇಷ ಮೂಢರಾಗುತ, ಗುಣಕರ್ಮಸು-ಇಂದ್ರಿಯಗಳನ್ನು ತತ್ತತ್ಕರ್ಮಗಳಲ್ಲಿ, ಸಜ್ಜಂತೇ-ಪ್ರಸಕ್ತಿಗೊಳಿಸುತ್ತಾರೆ, ತಾನಕೃತ್ಸ್ನವಿದೋಮಂದಾನ್-ಅಂತಾ ಸಕಲವನ್ನರಿಯದ ಅಲ್ಪಮತಿಗಳೂ, ಕೃತ್ಸ್ನವಿತ್-ಸರ್ವವನ್ನು ಅರಿತ ಆತ್ಮವೇತ್ತರೂ, ನವಿಚಾಲಯೇತ್-ವರ್ಣಾಶ್ರಮ ಧರ್ಮಗಳನ್ನು ಚಲಿಸುವಂತೆ ಮಾಡಲಾರರು. ತತ್ವವೇತ್ತರಿಗೆ ವರ್ಣಾಶ್ರಮ ಧರ್ಮಗಳಿಂದೇನೂ ಪ್ರಯೋಜನವಿಲ್ಲವು. ಎಲೈ ಕೌಂತೇಯನೇ, ನೀನೀಗಲೂ ತತ್ವವೇತ್ತನಲ್ಲವು. ಆದದರಿಂದ ನೈಜಗಳಾದ ಕ್ಷತ್ರಿಯ ವರ್ಣವಿಹಿತ ಯುದ್ಧಾದಿ ಕರ್ಮಗಳನ್ನು ನೀನು ಬಿಡುವದುಚಿತವಲ್ಲವೆಂದು ಶ್ರೀಕೃಷ್ಣದೇವರು ಅರ್ಜುನನಿಗೆ ಉಪದೇಶಿಸಿದರು.

> "ಶ್ರೇಯಾನ್ಸ್ವಧರ್ಮೋವಿಗುಣಃಪರಧರ್ಮಾ
> ತ್ಸ್ವನುಷ್ಠಿತಾತ್। ಸ್ವಧರ್ಮೇನಿಧನಂಶ್ರೇ
> ಯಃಪರಧರ್ಮೋಭಯಾವಹಃ॥"

ಭಗವದ್ಗೀತಾಧ್ಯಾಯ ೩, ಶ್ಲೋ|| ೩೫.

ಸ್ವನುಷ್ಠಿತಾತ್-ಚೆನ್ನಾಗಿ ಆಚರಿಸುವ, ಪರಧರ್ಮಾತ್—ಅನ್ಯಧರ್ಮಕ್ಕಿಂತಲೂ, ವಿಗುಣಃ-ಗುಣಹೀನವಾದಂತಾ, ಸ್ವಧರ್ಮಃ-ತನ್ನ ಜಾತಿಧರ್ಮವು, ಶ್ರೇಯಾನ್-ಶ್ರೇಷ್ಠವಾದದ್ದು. ಸ್ವಧರ್ಮೇ-ನಿನಗೆ ಇರುವ ಕ್ಷತ್ರಿಯ ಧರ್ಮದಲ್ಲಿ, ನಿಧನಂ-ಮರಣವು, ಶ್ರೇಯಃ—ಶ್ರೇಷ್ಠವಾದದ್ದು, ಪರಧರ್ಮಃ—ಕ್ಷಾತ್ರೇತರಧರ್ಮವು, ಅಂದರೆ, ಅಹಿಂಸಾದಿ ಬ್ರಾಹ್ಮಣ ಧರ್ಮವು, ಕ್ಷತ್ರಿಯ ಜಾತಿಯವನಾದ ನಿನಗೆ, ಭಯಾವಹಃ—ನರಕಭಯವನ್ನುಂಟುಮಾಡುವದು.

> ಬ್ರಾಹ್ಮಣಕ್ಷತ್ರಿಯವಿಶಾಂಶೂದ್ರಾಣಾಂಚ
> ಪರಂತಪ। ಕರ್ಮಾಣಿಪ್ರವಿಭಕ್ತಾನಿಸ್ವಭಾ
> ವಪ್ರಭವೈರ್ಗುಣೈಃ॥

ಭಗವದ್ಗೀತಾಧ್ಯಾಯ ೧೮, ಶ್ಲೋ|| ೪೧.

ಹೇಪರಂತಪ-ಎಲೈ ಶತ್ರುಗಳನ್ನು ತಪಿಸುವಂತೆ ಮಾಡತಕ್ಕವನೇ, ಬ್ರಾಹ್ಮಣಕ್ಷತ್ರಿಯವಿಶಾಂ-ಬ್ರಹ್ಮ ಕ್ಷತ್ರಿಯ ವೈಶ್ಯ ವರ್ಣಗಳಿಗೂ,ಶೂದ್ರಾಣಾಂ—ಶೂದ್ರವರ್ಣಕ್ಕೂ. ಕರ್ಮಾಣಿ—ಆಯಾ ವರ್ಣವಿಹಿತ ಕರ್ಮಗಳು, ಸ್ವಭಾವಪ್ರಭವೈಃ- ಸಾತ್ವಿಕ ರಾಜಸ ತಾಮಸ ಸ್ವಭಾವದಿಂದ ಪ್ರಾಬಾಗುವ, ಗುಣೈಃ-ಅವರವರ ಜಾತಿ ಗುಣಗಳ ಪ್ರಕಾರ, ಪ್ರವಿಭಕ್ತಾನಿ—ಪ್ರತ್ಯೇಕವಾಗಿ, ವಿಶೇಷತಃ—ನಿಶ್ಚೈಸಲ್ಪಟ್ಟಿರುತಿವೆ. ೪೨ನೇ ಶ್ಲೋಕದ ಮೊದಲು ೪೪ನೇ ಶ್ಲೋಕದ ತನಕ ವರ್ಣಪ್ರಭೇದಗಳೂ ಅವರವರ ಧರ್ಮಗಳೂ ವಿಸ್ತಾರವಾಗಿ ತಿಳಿಸಲ್ಪಟ್ಟಿರುತಿವೆ.

ಈ ವಿಷಯದೊಳನ್ನೂ ಬರೆಯಬೇಕಾದ ಅಂಶಗಳು ಬಹಳವಾಗಿರುವದರಿಂದ ಅವಂ ಮುಂದಿನ ವಾರದತನಕ ನಿಲ್ಲಿಸಿಡುವೆವು.

ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೆ ಬ್ರತಿಪಡಿಸುವದೇನಂದರೆ—ಈ ಪತ್ರಿಕೆಗೆ ಬಾಕೀದಾರರಾಗಿರತಕ್ಕವರೆಲ್ಲರು ಅವರವರ ಬಾಕೀಗಳನ್ನು ಸಲ್ಲಿಸಬೇಕೆಂದು ಬಹುಮುಖವಾಗಿ ನಾವುಮಾಡಿದ ಪ್ರಾರ್ಥನೆಯನ್ನು ಲಾಲಿಸದೆಹೋದ ಅನೇಕರ ಹೆಸರುಗಳನ್ನು ಈಪತ್ರಿಕೆಯಲ್ಲಿ ಪ್ರಕಟಿಸಿದಾಗ್ಯೂ ಬಾಕೀದಾರರಿಗೆ ಲಕ್ಷ್ಯವಿಲ್ಲವಾಯಿತು. ಲಾಯರ್ ನೋಟಿಸ್ ಕೊಡಿಸಿದ್ದರಲ್ಲಿ, ಇಂಗಿತಜ್ಞರಾದ ಕೆಲವರು ವಿನಾ ಮಿಕ್ಕವರು ಮೌನವಾಗಿರುವಂತೆ ಕಾಣುತಿದೆ. ಅಂತವರ ವಿಷಯದಲ್ಲಿ ಕೋರ್ಟ್‌ವಿನಾ ಬೇರೆ ಯಾವ ಉಪಾಯವೂ ಕಾರ್ಯಕಾರಿಯಾಗಲಾರದೆಂದು ಕಾಣುತಿದೆ. ಹಾಗೆ ನಾವು ಮಾಡುವದರಲ್ಲಿ ಬಾಕೀದಾರರು ಈಗ ಕೊಡಬೇಕಾದದಕ್ಕಿಂತಲೂ ಮೂರರಷ್ಟು ಕೊಡಬೇಕಾಗುವದೆಂಬ ಅಂಶವನ್ನು ಮರಳಿಒಂದು ದಫಾ ಅವರ ಯೋಚನೆಗೆ ತರುವದುಚಿತವೆಂದು ಯೋಚಿಸಿ ತಿಳಿಸಿ ಇರುತ್ತೇವೆ. ಕೋರ್ಟಿಗೆ ಹೋಗುವದರಮೂಲಕ ಉಂಟಾಗುವ ಅರ್ಥವ್ಯಯ ಮತ್ತು ಶರೀರಶ್ರಮ, ಇವು ಉಭಯರಿಗೂ ತಪ್ಪಲಾರದಾಗಿ, ಅದು ಚೆನ್ನಾಗಿ ಯೋಚಿಸಿ ಅಂತಾ ಶ್ರಮದಿಂದ ನಮ್ಮನ್ನೂ ತಪ್ಪಿಸಿ ತಾವೂ ಅದಕ್ಕೆ ಗುರಿಯಾಗದಿರುವರೆಂದು ಕೋರುವೆವು.

೩೦-೮-೮೬. ಪ್ರೊಪ್ರೈಟರ್.

ಈ ಬಗ್ಯೆ ತಗಲಬಹುದಾದ ವಿಶಿಷ್ಟ ಖರ್ಚನ್ನು ಬಲವಡಿಸಿ ಇನಾಂದಾರನಮೇಲೆ ಹೊರಿಸುವಪಕ್ಷಕ್ಕೆ ಅದಂ ಆತನು ಕಡೆಯಲಾರನಾಗಿ ಜನಗಳಿಗೆ ನ್ಯಾಯವೆಂಬುದು ಸುತರಾಂ ದೊರೆಯಲಾರದು. ವಿವಾದಿಸತಕ್ಕ ರೈತರದಂ ಭರಿಸಬೇಕೆಂದರೆ ಅದು ಸುತರಾಂ ಜರಗತಕ್ಕದ್ದಲ್ಲವು. ಸರ್ಕಾರದವರಿಗೆ ಕಲೆಕ್ಟರ್ ಕರ್ನಲ್ ಆಂಡರ್ಸನ್ ಸಾಹೆಬರವರು, ಸರಾಸರಿ ಎಕ್ರೆಯೊಂದಕ್ಕೆ ಯೆಂಟು ಕಾಸಿನ ಪ್ರಕಾರ ಖರ್ಚಾಗುತದೆಯೆಂದು ಅಂದಾಜಾಗಿರುವುದಾಗಿ ತಿಳಿಸಿರುತ್ತಾರೆ. ಈಗ ಸದರೀ ಮೊಬಲಗನ್ನು, ಇನಾಂಗ್ರಾಮದವೈಕಿ ಬಂಜರ್ ಜಮೀನಾದರೆ ಇನಾಂದಾರನೂ, ಸಾಗುವಳೀ ಜಮೀನಾದರೆ ಇನಾಂದಾರನೂ, ಸಾಗುವಳೀದಾರನೂ ಸಹ ಕೇರಿ ಸಮನಾಗಿ ತೆರತಕ್ಕದ್ದೆಂತಲೂ, ಜಾರೀ ಇನಾಮು ಜಮೀನುಗಳವೈಕಿ ಜೋಡಿಯನ್ನು ಗವರ್ನಮೆಂಟಿನವರು ಅನುಭವಿಸುವವರಿಂದ ಉತ್ತಾರದ ರವೈಮಾಯಿಷೀ ಖರ್ಚಿನವೈಕಿ ಅರ್ಧಭಾಗವ ಗವರ್ನಮೆಂಟಿನವರು ವಹಿಸತಕ್ಕದ್ದೆಂತಲೂ, ಸರ್ವಮಾನ್ಯ ಜಮೀನಾಗಿದ್ದರೆ ಬಾಬರ್ ಜಮೀನಿನ ಪೂರಾ ಮೊಬಲಗಿಗೆ ಗ್ರಾಮಸ್ಥರು ಹ್ಯಾಗೆ ಬಾಧ್ಯರಾಗುವರೋ ಅದರಂತೆ ಅದಕ್ಕೆ ಸರ್ವಮಾನ್ಯದಾರನು ಗುರಿಯಾಗತಕ್ಕದ್ದೆಂತಲೂ ತೀರ್ಮಾನಮಾಡಿದರೆ ಚೆನ್ನಾಗಿರುವದು. ಇದರಿಂದ ಇನಾಂದಾರರೂ ಅವರ ರೈತರೂ, ಜಾರೀ ಇನಾಮತೀಯನ್ನನುಭವಿಸುವವರು ಸಹ ನ್ಯಾಯವನ್ನು ಪಡೆಯಬಹುದು. ಇದರಿಂದ ಗವರ್ನಮೆಂಟಿನವರಿಗೆ ಯಾವವಿಧ ನಷ್ಟವೂ ಉಂಟಾಗಲಾರದು. ಸರ್ವೇ ಸೂಪರಿಂಟೆಂಡೆಂಟ್ ಸಾಹೆಬರವರೂ, ದಿವಾನರವರೂ ಸಹ ಈ ವಿಷಯವನ್ನು ಚೆನ್ನಾಗಿ ಪರ್ಯಾಲೋಚಿಸಿ ವ್ಯವಸ್ಥೆ ಮಾಡಬೇಕೆಂದು ಕೋರುವೆವು. ಈ ಸಲದ ದಸರಾ ದರ್ಬಾರಿನಲ್ಲಿ ಈ ವಿಷಯವನ್ನು ಕುರಿತು ಪ್ರತಿನಿಧಿಗಳು ಪ್ರಸ್ತಾಪಿಸಿ ಅದಕ್ಕೆ ತಕ್ಕ ಪ್ರತ್ಯುತ್ತರವು ಪಡೆಯುವಷ್ಟು ಶಕ್ತರಾಗಿದ್ದಾರೆಯೋ ಇಲ್ಲವೋ ಯೆಂಬ ಸಂಶಯ ನಮಗೆ ಬಂದಿರುವದರಿಂದ ಈ ಮೂಲಕ ಸರ್ಕಾರದವರ ಅವಧಾನಕ್ಕೆ ತರಬೇಕಾಯಿತು.

TO OUR SUBSCSIBERS

ಚಿರಕಾಲದಿಂದ ನಾವು ಈ ದೇಶದಲ್ಲಿ ವಾಸಮಾಡುತಲಿರುವ ಒಂದು ಸಂಬಂಧ ವಿಶೇಷದಿಂದ ಈ ದೇಶೀಯರಿಗೆ ಪ್ರಯೋಜಕರಾಗಬೇಕೆಂಬ ಚಿಂತೆಯೂ, ತದರ್ಥವಾದ ನಮ್ಮ ಪ್ರಯತ್ನಗಳನ್ನು ಇಲ್ಲಿನ ಜನಗಳು ಲೋಭದಿಂದಲೋ ಜ್ಞಾನವಿಹೀನತೆಯಿಂದಲೋ, ಉಪಲಾಳನ ಮಾಡಿ ಸಹಕರಿಸದೆ ಹೋಗುವದರಿಂದ ದಿನೇದಿನೇ ಅಭಿವೃದ್ಧಿಯಾಗುತ ಬರಬೇಕಾದ ಉತ್ಸಾಹಕ್ಕೆ ಭಂಗವೂ, ಒಂದುದೆಸೆಯೊಳು ನಮ್ಮನ್ನು ಬಾಧಿಸುತಲಿದ್ದಾಗ್ಯೂ ಕಾಲವು ಕ್ಷಣಿಕವಾದದ್ದಾಗಿಯೂ, ಸ್ವಲಕ್ಷಣವುಳ್ಳದ್ದಾಗಿಯೂ ಇರುವದರಿಂದ "ಪಿತಿಜೇವಿತಮಾನಂದಃ" ಎಂಬಂತೆ ಯೆಂದಿಗಾದರೂ ಮೇಲುಂಟಾಗಬಹುದೆಂಬ ನಂಬಿಕೆಯೊಡನೆ, "ಪ್ರಾರಬ್ಧಮುತ್ತಮಗುಣಾನಪರಿತ್ಯಜಂತಿ" ಎಂಬ ನೀತಿಯಿಂದ ಬದ್ಧರಾಗಿ ಶತವಿಧ ಅನುಪಪತ್ತಿಯಂ ಗಣಿಸದೆ ಕಾಲವಂ ಒಂದು ವಿಧವಾಗಿ ಇದುವರಿವಿಗೂ ಕಳೆಯುತಬಂದೆವು. ಆದಮೊದಲು ಸ್ವತಂತ್ರವಾದ ವೃತ್ತಾಂತ ಪತ್ರಿಕೆಗಳ ಸ್ವರೂಪ ಪ್ರಯೋಜನವನ್ನು ಬಲ್ಲಂತಾ ಅತ್ಯಲ್ಪ ಸಂಖ್ಯೆಯುಳ್ಳವರ ಚಂದಾಮೂಲಕವಾದ ಅತ್ಯಲ್ಪ ಸಹಾಯವಿನಾ ಇತರವಿಧ ಅನುಕೂಲ್ಯಗಳೊಂದೂ ಈ ಪತ್ರಿಕೆಗೆ ಉಂಟಾಗದೆ ಹೋದದ್ದಲ್ಲದೆ ಅಂತವರ ಸಹಾಯವೂ ಕ್ರಮಕ್ರಮವಾಗಿ ಕಡಮೆಯಾಗುತ ಬಂದದರಿಂದ ನಾವು ಅನುಪಪತ್ತಿ ಪೀಡಿತರಾಗಿ ಮುಂದಿನ ಕರ್ತವ್ಯವನ್ನು ಪೂರ್ವಭಾವಿಯಾಗಿ ಅತಿವಿಷಾದದೊಡನೆ ತಿಳಿಯಪಡಿಸಬೇಕಾಯಿತು. ಸಾಲೀಯಾನಾಶಿರೂಪಾಯಿಗಳ ಅತ್ಯಲ್ಪಮೌಲ್ಯಕ್ಕೆ ದೊರೆಯುವ ಮತ್ತು ಹಿಂದೂ ಜನಾಭಿಪ್ರಾಯದ್ಯೋತಕವಾದ ಈ ಒಂದು ಪತ್ರಿಕೆಯು, ಮುಮ್ಮರ್ ನಾಲ್ವತ್ತುಲಕ್ಷ ಪ್ರಜೆಗಳುಳ್ಳ ಈ ಮೈಸೂರುದೇಶದಲ್ಲಿ ನಿರ್ವಿಘ್ನವಾಗಿ ನಡೆಯಲಾರದೆಯೂ, ಅದರ ನಿರ್ವಹಣಾರ್ಥ ಪಡೆಯಬೇಕಾದ ಚಂದಾದಾರರ ಸಹಾಯವನ್ನೆಷ್ಟು ವಿಧದಿಂ ಬಯಸಿದಾಗ್ಯೂ ಅದು ಲಭಿಸದೆಯೂ ಹೋದದರಿಂದ, ಈ ಪತ್ರಿಕೆಯಿಂದುಂಟಾಗುವ ಪ್ರಯೋಜನದ ಸ್ವರೂಪವನ್ನು ಎಲ್ಲರೂ ಅರಿತಿದ್ದಾಗ್ಯೂ ಅಂತಾ ಪ್ರಯೋಜನವು ಅಪ್ರಯತ್ನವಾಗಿಯೂ, ಸ್ವಲ್ಪವೂ ಶ್ರಮವಿಲ್ಲದಂತೆಯೂ ಲಭಿಸಿದರೆ ಸಂತೋಷಿಸುವಂತಾ ಸ್ವಭಾವವುಳ್ಳವರೆಂದು ಎಣಿಸಬೇಕಾಗಿದೆ. ಈ ಪತ್ರಿಕಾ ನಿರ್ವಹಣಕಾರ್ಯವು ಕೇವಲ ಅರ್ಥೈಕ ಸಾಧ್ಯವಾಗಿರುವದರಿಂದ ಅನ್ಯರ ಅಪೇಕ್ಷೆ ಇಲ್ಲದೆಯೇ ಒಬ್ಬರಿಗೊಂದು ಹಿತವು ಮಾಡುವದು ಅಸಾಧ್ಯವಾಗಿರುವದು. ಹೀಗೆ ಚಂದಾದಾರರು ಬಾಕೀಗಳನ್ನು ಕಳುಹಿಸದೆಯೂ, ಆಬಗ್ಯೆ ನಾವು ಆಗಿಂದಾಗ್ಯೆ ಮಾಡುವ ಪ್ರಾರ್ಥನೆಗಳಿಗೆ ಕಿವಿ ಕೊಡದೆಯೂ ಹೋಗುವದರಿಂದ ನಿಷ್ಠುರವಾದ ಮಾರ್ಗವನ್ನವಲಂಬಿಸಿ ಅವರ ಅಪ್ರೀತಿಗೂ ಅಸಮಾಧಾನಕ್ಕೂ, ಪಾತ್ರರಾಗುವದಕ್ಕಿಂತಲೂ, ಈ ಪತ್ರಿಕೆಯನ್ನು ಈ ಸಾಲ್ ಅಕ್ಟೋಬರೊಳಗೆ ನಿಲ್ಲಿಸಿಬಿಡುವದರಮೂಲಕ ಮನೋ ನೈಶ್ಚಿಂತ್ಯವನ್ನುಂಟುಮಾಡಿಕೊಳ್ಳಬೇಕೆಂಬ ಸಂಕಲ್ಪವುಳ್ಳವರಾಗಿದೇವೆ. ನಮ್ಮ ಕರ್ತವ್ಯದೊಳು ಸ್ವಲ್ಪವೂ ಲೋಪವಾದದ ಅಂಶವನ್ನು ಈ ಪತ್ರಿಕೆಯೇ ನಿರೂಪಿಸಲಿಕ್ಕೆ ಸಿದ್ಧವಾಗಿರುವದರಿಂದ ತದ್ವಿಷಯಕವಾದ ವಿಚಾರವು ಇಲ್ಲಿ ಅನಾವಶ್ಯಕವಾಗಿರುತಿದೆ. ಮುಖ್ಯವಾಗಿ ಈ ಕರ್ಣಾಟದೇಶೀಯರಮೇಲಿನ್ನೇ ಬಯಸಿ ಮಾಡಲ್ಪಡುವ ಈ ಪತ್ರಿಕಾಮೂಲಕವಾದ ಪ್ರಯತ್ನವನ್ನು ಜನಗಳು ಉಚಿತರೀತಿಯಿಂದ ಕಾಪಾಡಿಕೊಳ್ಳದಪಕ್ಷಕ್ಕೆ ಸ್ವದೇಶಾಭಿಮಾನವುಳ್ಳ ಪತ್ರಿಕೆಯೊಂದು ಇಲ್ಲದೆ ಹೋಗುವದಾನಿಗೆ ಅವರೇ ಪಾತ್ರರಾಗಿಬಿಡದರ ಅವಶ್ಯಕತೆಯು ಬಲವತ್ತರವಾದಾಗ ಇದಂ ಉಳಿಸಿಕೊಳ್ಳದೆಹೋದ ಬುದ್ಧಿದೋಷಕ್ಕಾಗಿ ಬಳಿಕ ಅನುತಾಪಿಸಬೇಕಾಗಿರುವದು ಪ್ರಸ್ತುತಸ್ಥಿತಿಯಲ್ಲಿ ಚಂದಾದಾರರಿಂದವುಂಟಾಗುವ ಪ್ರೋತ್ಸಾಹವನ್ನೂ, ಪ್ರತ್ಯಾಶೆಯಿಲ್ಲದೆ ಹೊರಗೆ ನಿಂತುಹೋಗಿರುವ ಬಾಕೀ ಮೊಬಲಗನ್ನೂ, ಋಣಪ್ರಯುಕ್ತವಾದ ತಗಾದೆಗಳನ್ನೂ ಬೇಕಾದ ಡಿಬ್ಬಂದಿಗಳನ್ನು ಕೊಳ್ಳಲಿಕ್ಕೆ ಉಪಪತ್ತಿಸಾಲದ ಇದಕ್ಕಾಗಿ ಶ್ರಮಿಸುವದರಿಂದ ಉಂಟಾಗುವ ಶಾರೀರ ಮಾನಸಿಕ ಕ್ಲೇಶಗಳನ್ನೂ ಆಲೋಚಿಸಲಾಗಿ ಈ ಪತ್ರಿಕೆಯನ್ನು ಈಸಾಲ್ ಅಕ್ಟೋಬರಲ್ಲಿ ನಿಲ್ಲಿಸಿ ಅದರ ಸಂಬಂಧದಿಂ ನಿವೃತ್ತಿಸಿಕೊಳ್ಳುವದೇ ಸಮಾಸಾಯವಾಗಿ ತೋರಿದ್ದರಿಂದ ಅಂತಾ ತೀರ್ಮಾನವನ್ನು ನಮ್ಮ ಚಂದಾದಾರರ ತಿಳುವಳಿಕೆಯಬಗ್ಯೆ ಈಗ ತಿಳಿಸಬೇಕಾದದಕ್ಕಾಗಿ ಬಹಳ ವಿಷಾದಿಸುವೆವು

COLLAPSE OF A BANK

ಈ ಮೈಸೂರು ದೇಶದಲ್ಲಿ ನಾನಾ ಹೆಸರುಗಳೊಡನೆ ಸ್ಥಾಪಿಸಲ್ಪಟ್ಟಿರುವ ಜಾಯಿಂಟ್ ಸ್ಟಾಕ್ ಕಂಪೆನಿಗಳ ಸ್ಥಿತಿಯ ವಿಷಯವಾಗಿಯೂ ಅವುಗಳಲ್ಲಿ ನಡೆಸಲ್ಪಡತಕ್ಕ ಅವಳತದವಿಷಯವಾಗಿಯೂ, ಅವುಗಳಲ್ಲಿ ವಿಚಾರಣಾಧಿಕಾರಿಗಳಾಗಿ ಏರ್ಪಡತಕ್ಕವರ ಯೋಗ್ಯತಾ ವಿಷಯವಾಗಿಯೂ, ಇವುಗಳ ಭರವಸೆಯಮೇಲೆ ಅನನ್ಯಗತಿಕರಾಗಿ ಹೋದವರ ದುರ್ದಶೆಯನ್ನು ಕುರಿತೂ ಇದುವರಿವಿಗೆ ಅನೇಕ ಸಂದರ್ಭಗಳಲ್ಲಿ ಈ ಪತ್ರಿಕಾಮೂಲಕ ವಿಚಾರಮಾಡಿರುತ್ತೇವೆಯಷ್ಟೆ. ಈ ಬ್ಯಾಂಕುಗಳು, ಗೌರವ್ಯವಾದ ಜೀವನೋಪಾಯವಿಲ್ಲದವರು ಪರವಂಚನೋದ್ದೇಶದೊಡನೆ ಮಾಡುವ ಕೃತ್ರಿಮ ಪ್ರಯತ್ನಗಳುಳ್ಳದ್ದೆಂಬ ನಮ್ಮ ಅಭಿಪ್ರಾಯವನ್ನು ಇದುವರಿವಿಗೆ ಅನೇಕ ಬ್ಯಾಂಕುಗಳು ದೃಢಪಡಿಸಿದವು. ಈ ವಾರದಲ್ಲಿ ನಮ್ಮ ಮೈಸೂರ್ ಬಾತಮೀದಾರನು ಅಲ್ಲಿನ ಒಂದು ಬ್ಯಾಂಕ ವಿಷಯವಾಗಿ ಬರೆದ ಕಾಗದವು ನಮ್ಮ ಅಭಿಪ್ರಾಯವನ್ನು ಮತ್ತಷ್ಟು ಪೋಷಿಸಿ ದೃಢಗೊಳಿಸತಕ್ಕದ್ದಾಗಿರುತಿದೆ. ಆತನು ಬರೆದಿರುವ ಮುಖ್ಯಾಂಶವೇನಂದರೆ—ಈಗ್ಯೆ ಒಂದು ಸಂವತ್ಸರದ ಹಿಂದೆ, "ಪುಷ್ಪವತೀ ಸಹಾಯ ಸಂಘ" ವೆಂಬ ಹೆಸರಿನಲ್ಲಿ ಮೈನೆರದ ಹುಡಿಗಿಯರಿಗೆ ಸಹಾಯಮಾಡುವಬಗ್ಯೆ ಇಲ್ಲಿನವರು ಕೆಲವರು ಪ್ರವರ್ತಿಸಿ ಒಂದು ಬ್ಯಾಂಕನ್ನು ಸ್ಥಾಪಿಸಿದರು. ಇದರ ವ್ಯವಸ್ಥಾಪಕರ ಉದ್ದೇಶ ಪ್ರಯತ್ನಗಳೆಷ್ಟರ ಯೋಗ್ಯವಾದವೆಂಬದನ್ನು ಅವರು ಇಟ್ಟಿರುವ ಬ್ಯಾಂಕಿನ ಹೆಸರೇ ಬೋಧಿಸುವದರಿಂದ ಅದರ ಮ್ಯಾನೇಜಿಂಗ್ ಡೈರೆಕ್ಟರುಗಳಮೇಲೆ, ಸಿವಿಲ್ ಮತ್ತು ಕ್ರಿಮಿನಲ್ ತರಫೆ ಫಿರ್ಯಾದ ಮಾಡಲ್ಪಟ್ಟಿರುತಿದೆ. ಸದರೀ ಸಂಘವು ಮೈಸೂರು ಪಡಪ್ ನಿವಾಸಿಯಾದ ಒಬ್ಬ ಶಿವಾಚಾರ ಹೆಂಗಸಿನ ಪೋಷಣೆಯಮೇಲೆ ಸ್ಥಾಪಿಸಲ್ಪಟ್ಟಿತು. ಅದಕ್ಕೆ ಚಂದಾಮಾಡಿರತಕ್ಕವರು ತಮ್ಮ ಕುಮಾರ್ತೆಯು ಮೈನೆರದ ಅಂಶವನ್ನೂ, ನಿಷೇಕದಬಗ್ಯೆ ಏರ್ಪಡಿಸಿರುವ ಕಾಲ ಕ್ಲುಪ್ತಿಯನ್ನೂ ನಮೂದಿಸಿ ಲಗ್ನಪತ್ರಿಕೆಯನ್ನು ಸದರೀ ಸಂಘದ ಮ್ಯಾನೇಜರಿಗೆ ಕಳುಹಿಸಿದರೆ ಆಗ ಅವರು ಪುಷ್ಪವತಿಯ ಸಹಾಯದ ಬಗ್ಯೆ ಪ್ರವರ್ತಿಸಿ ಇತರ ಚಂದಾದಾರರಿಂದ ಇಸಂವಾರ್ ೪ ಆಣೆ ಪ್ರಕಾರ ವಸೂಲ್ಮಾಡಿಕೊಂಡು ಆಕೆಯು ಪ್ರಬುದ್ಧಳಾದ ಅಂಶವನ್ನು ಅಜಮಾಯಿಷಿ ಮಾಡುವ ಬಗ್ಯೆ ಸ್ವತಃ ಹೋಗಿ ಅವಳ ವಿಷಯ ತಮಗೆ ನಿಜವೆಂದು ತೋರಿದರೆ ಆಗ ಆಕೆಯ ಸಹಾಯಾರ್ಥ ೫೦ ರೂಪಾಯಿಗಳನ್ನು ಕೊಡುವದರ ಮೂಲಕ ಸಹಾಯ ಮಾಡುವದು. ಪುಷ್ಪವತೀ ಸಹಾಯವೆಂಬುದು ಇಷ್ಟೇಹೊರ್ತು ಬೇರಲ್ಲವು. ಇಂತಾ ಉದ್ದೇಶದೊಡನೆ ಪ್ರವರ್ತಿಸಿರುವ ಸಂಘದ ಡೈರೆಕ್ಟರುಗಳು ತಾವು ಕೊಟ್ಟ ರಸೀದಿಗಳಿಗೆ ನ್ಯಾಯವಾಗಿ ಹಚ್ಚಬೇಕಾದ ರಸೀದಿ ಸ್ಟಾಂಪುಗಳನ್ನು ಹಚ್ಚದೆ ಗವರ್ನಮೆಂಟಿಗೆ ದಗಾಮಾಡಿದ ತಪ್ಪಿನಬಗ್ಯೆ ಕ್ರಿಮಿನಲ್ ತರಫ ಚಾರ್ಜಿಮಾಡಲ್ಪಟ್ಟಿರುತ್ತಾರೆ. ಸಂಘದ ಹಣವು ಪತ್ತೆಯಿಲ್ಲದೆ ಹೋದದರಿಂದ ಅದನ್ನು ವಸೂಲ್ಮಾಡುವ ಬಗ್ಯೆ ಸಿವಿಲ್ ದಾವೆ ತರಲ್ಪಟ್ಟಿರುತಿದೆ. ಕ್ರಿಮಿನಲ್ ಕೇಸ್ ೧೫ ರೂಪಾಯಿಗಳ ಜುರ್ಮಾನೆಯೊಡನೆ ಪರ್ಯವಸಾನವನ್ನೈದಿತು. ಸಿವಿಲ್ ವ್ಯಾಜ್ಯವು ಅದ್ಯಾಪಿ ನಿರ್ಣಯವಾಗಲಿದೆ. ಇದು ಸ್ಮೈಕಲಾದ ಬ್ಯಾಂಕಿನಲ್ಲಿ ನಡೆದಿರುವ ಕೃತ್ರಿಮಗಳು ಹೊರಗಾಗಬಹುದು. ಇದುವರಿವಿಗೆ ಸುಮಾರ್ ೪೦,೦೦೦ ರೂಪಾಯಿಗಳ ತನಕ ಷೇರ್‌ದಾರರಿಂದ ವಸೂಲಾಗಿರುತಿದೆ. ಇಷ್ಟರ ಮೊಬಲಗು ಒಂದು ಸಂವತ್ಸರದೊಳಗೆ ಹ್ಯಾಗೆ ಮಾಯವಾಯಿತೋ ತಿಳಿಯಲಿಲ್ಲವು. ಈಗ್ಯೆ ಸುಮಾರ್ ಹತ್ತು ಹನ್ನೆರಡು ದಿನಗಳ ಹಿಂದೆ ಬ್ಯಾಂಕ್ ಡೈರೆಕ್ಟರುಗಳು ಕೆಲವರೂ ಷೇರ್‌ದಾರರೂ ಮೀಟಿಂಗ್ ಸೇರಿ ಹೊಸದಾಗಿ ಕೆಲವು ನಿಬಂಧನೆಗಳನ್ನು ಮಾಡಿ, ಅದಕ್ಕೆ ಷೇರ್‌ದಾರರನ್ನು ರುಜು ಮಾಡುವಂತೆ ಡೈರೆಕ್ಟರುಗಳು ಅಪೇಕ್ಷಿಸಲು, ಅದಕ್ಕೆ ಅವರು ನಿರಾಕರಿಸಿದರು. ಬಳಿಕ ಷೇರ್‌ದಾರರು ತಮ್ಮ ತರಫ ವಕೀಲರ ಮೂಲಕ ಬ್ಯಾಂಕ್ ವೈಂಡಪ್ಪಬಗ್ಯೆ ಕೋರ್ಟಿಗೆ ಅರ್ಜೀ ಕೊಟ್ಟರು. ಸದರೀ ಅರ್ಜಿಯನ್ನು ದಾಖಲ್ಮಾಡಿಕೊಂಡು ಡಿಸ್ಟ್ರಿಕ್ಟ್ ಜಡ್ಜಿಯವರು ಪಬ್ಲಿಕ್ ಪ್ರಾಸಿಕ್ಯೂಟರನ್ನು ಕಂಪೆನೀಸ್ ಆಕ್ಟು ಪ್ರಕಾರ ಬ್ಯಾಂಕ್ ಲಿಕ್ವಿಡೇಟರನ್ನಾಗಿ ಮೊಕರರ್ಮಾಡಿ ಬ್ಯಾಂಕನ್ನು ವೈಂಡಪ್ ಮಾಡಲಿಕ್ಕೆ ಹುಕುಂ ಕೊಟ್ಟರು ಅದೇದಿನ ಲಿಕ್ವಿಡೇಟರ್ ಬ್ಯಾಂಕಿಗೆ ಹೋಗಿ ಝಡ್ತಿ ಮಾಡಿ ನೋಡುವಲ್ಲಿ ಡೈರೆಕ್ಟರುಗಳೂ ಆಡಿಟರ್‌ಸಹ ಕೇರಿ ರುಜು ಹಾಕಿ ಮಂಜೂರ್ಮಾಡಿದ್ದ ಬ್ಯಾಲೆನ್ಸ್ ಷೀಟಿನ ಪ್ರಕಾರ ನಗದು ಹಾಜರ್ ೧೫,೦೦೦ ರೂಪಾಯಿಗಳು ಇರಬೇಕಾಗಿದ್ದದಕ್ಕೆ ಬದಲು, ಎರಡುಸಾವಿರ ಚಿಲ್ಲರೆ ರೂಪಾಯಿಗಳುಮಾತ್ರವೇ ಖಜಾನೆ ಪೆಟ್ಟಿಗೆಯಲ್ಲಿ ದೊರೆಯಿತು ಆಗ ಸದರೀ ಮೊಬಲಗನ್ನು ಲಿಕ್ವಿಡೇಟರು ತಮ್ಮ ಸ್ವಾಧೀನಕ್ಕೆ ತೆಗದುಕೊಂಡು ಮಾರನೆಯದಿನ ನಂಬಿಕೆ ದ್ರೋಹದಬಗ್ಯೆ ಮ್ಯಾನೇಜಿಂಗ್ ಡೈರೆಕ್ಟರ್‌ಮೇಲೆ ಫಿರ್ಯಾದ್‌ಮಾಡಿ ವಿಶಿಷ್ಟಸ್ವತ್ತನ್ನೂ ಜಪ್ತುಮಾಡಿ ಅವರನ್ನು ವಾರಂಟಿಮೂಲಕ ದಸ್ತಗಿರ್ ಮಾಡಿಸಿ ಲಾಕಪ್ಪಿನೊಳಿಡಿಸಿರುತ್ತಾರೆ. ಈ ವಿಷಯವು ವಿಚಾರಣೆಯೊಳಿರುವದರಿಂದ ಇದರವಿಷಯವಾಗಿ ನಾವು ಸದ್ಯಃ ಯೇನೂ ಬರೆಯಲಾರೆವು. ಪರಂತು ಪುಷ್ಪವತಿಯರ ದೌರ್ಭಾಗ್ಯದಿಂದ ಅವರಸಹಾಯಾರ್ಥ ಉದ್ದಿಷ್ಟವಾದ ಸಂಘವು ಶೈಶವದಲ್ಲಿಯೇ ತಲೆಕೆಳಗಾಗಿ ಹೋಯಿತು, ಎಂಬದು.

Occasional Notes.
ನೈಮಿತ್ತಿಕವಿಷಯನ್ಯಾಸ.

Cash balances in the treasuries and the Presidency Banks of India —ಕಳೆದ ಜುಲೈ ೩೧ನೇ ತಾರೀಖಿನಲ್ಲಿ ಇಂಡ್ಯ ಗವರ್ನಮೆಂಟ್ ಖಜಾನೆಗಳಲ್ಲೂ ಪ್ರೆಸಿಡೆನ್ಸೀ ಬ್ಯಾಂಕುಗಳಲ್ಲೂ ೧೮ ಕೋಟಿ ೩೨ಲಕ್ಷ ರೂಪಾಯಿಗಳು ಹಾಜರಿದ್ದವು. ಕಳೆದ ಸಾಲ ಸದರೀ ತಾರೀಖಿನಲ್ಲಿ ೧೬ಕೋಟಿ ೩೬ಲಕ್ಷ ರೂಪಾಯಿಗಳು ಹಾಜರಿದ್ದವು.

Charity —ಪಾಲಿಟಾನಾ ಸಂಸ್ಥಾನದ ರಾಕೂರವರು ಈಚೆಗೆ ಪುಣೇಗೆ ಬಂದು ಆರುಸಾವಿರ ಮಂದಿ ಬ್ರಾಹ್ಮಣರಿಗೆ ಸಂತರ್ಪಣೆಮಾಡಿ ಫೀ ಇಸಂ ಒಂದು ರೂಪಾಯಿ ದಕ್ಷಿಣೆ ಕೊಟ್ಟರೆಂದು ಮುಂಬೈ ಇಂದುಪ್ರಕಾಶ ಪತ್ರಿಕೆ ಹೇಳುತಿದೆ. ಇಂಡ್ಯದೇಶದಲ್ಲಿ ಪಾಶ್ಚಿಮಾತ್ಯರ ವಿದ್ಯಾಬುದ್ಧಿ ವೈಲಕ್ಷಣ್ಯಗಳು ಇಷ್ಟು ಅಭಿವೃದ್ಧಿಗೆ ಬಂದಿದ್ದಾಗ್ಯೂ ಹಿಂದೂ ಧರ್ಮಗಳೆಂಬುದು ಇನ್ನು ಸ್ವಲ್ಪಮಟ್ಟಿಗಾದರೂ ನೆಲೆಗೊಂಡಿರುವಬಗ್ಯೆ ಸಂತೋಷಿಸುತ್ತೇವೆ.

News from China —ಚೀನಾ ದೇಶದ ಚಕ್ರವರ್ತಿಯವರಿಗೆ ಬುದ್ಧಿಸ್ವಾಸ್ಥ್ಯವಿಲ್ಲದೆ ಹೋಗಲು ಚಕ್ರವರ್ತಿನೀಯವರು ಈಗ ರಾಜ್ಯಭಾರವ ಸ್ವಯಂ ವಹಿಸಿ, ಸರ್ವದಾ ಸಂತತವಾಗಿಯೂ ಧೈರ್ಯೋತ್ಸಾಹಗಳೊಡನೆಯೂ ನಡೆಸುತಲಿದ್ದಾರೆ. ಬರುವ ಫೆಬ್ರವರಿ ತಿಂಗಳಲ್ಲಿ ಬಾಲಕರಾದ ಯುವರಾಜರವರಿಗೆ ಪಟ್ಟಾಭಿಷೇಕ ಮಾಡಬೇಕೆಂದುದ್ದೇಶಿಸಿ ಅದಕ್ಕೆ ಆವಶ್ಯಕಗಳಾದ ಯೇರ್ಪಾಡುಗಳೆಲ್ಲವೂ ನಡೆಸಲ್ಪಡುತಲಿವೆ ಯೆಂದು ಒಂದಾನೊಂದು ಪತ್ರಿಕೆ ಹೇಳುತಿದೆ.

The young Maharaja of Gwalior —ಬಾಲಕರಾದ ಸಿಂಧಿಯಾ ಮಹಾರಾಜರವರು ಪಟ್ಟಾಭಿಷಿಕ್ತರಾಗಿ ಸುಮಾರು ಒಂದೂವರೆ ತಿಂಗಳ ಕಾಲವಾಯಿತು. ಅವರ ವಿದ್ಯಾಭ್ಯಾಸದ ವಿಷಯದಲ್ಲಿ ಇದುವರಿವಿಗೆ ಯಾವ ಯೇರ್ಪಾಡೂ ಮಾಡಲ್ಪಟ್ಟಂತೆ ಕಾಣಲಿಲ್ಲವು. ಇವರ ಮೇಲ್ವಿಚಾರಣೆಯು ಇವರ ತಾತನವರಾದ ಶ್ರೀಮಂತ ಬಾಪೂಸಾಹೆಬ್ ಜಾಧವ ಯವರಿಗೆ ಒಪ್ಪಿಸಲ್ಪಟ್ಟಿದೆ. ರಾಜ್ಯಭಾರದ ಕಾರ್ಯವು ರಾವ್‌ರಾವ್ ಸರ್ ಗಣಪತಿರಾವ್ ದಾದಾಸಾಹೆಬ ಖಿನ್ನೆಯವರಿಗೆ ಒಪ್ಪಿಸಲ್ಪಟ್ಟು ಕ್ರಮವಾಗಿ ನಡೆಯುತಲಿದೆ

Abolition of Small Cause Courts —ಇಂಡ್ಯರಾಜ್ಯದ ಖರ್ಚುಗಳನ್ನು ಕಮ್ಮಿಮಾಡುವದಕ್ಕಾಗಿ ಯೇರ್ಪಟ್ಟಿರುವ ಫಿನಾನ್ಸ್ ಕಮಿಟಿಯವರ ಅಭಿಪ್ರಾಯವನ್ನನುಸರಿಸಿ, ಸೂರತ್, ಪುನೆ, ಮತ್ತು ಅಹಮದಾಬಾದಿನಲ್ಲಿರುವ ಸ್ಮಾಲ್ ಕಾಜ್ ಕೋರ್ಟುಗಳನ್ನು ತೆಗದುಹಾಕಬಹುದೇಯೆಂದು ಮುಂಬೈ ಗವರ್ನಮೆಂಟಿನವರು ಅಲ್ಲಿನ ಹೈಕೋರ್ಟ್ ಜಡ್ಜಿಗಳನ್ನು ಕೇಳಿರುವದಾಗಿ ಹಿಂದಿನ ಪತ್ರಿಕೆಯಮೂಲಕ ತಿಳಿಸಿರುತ್ತೇವೆಯಷ್ಟೆ. ಸದರೀ ಕೋರ್ಟುಗಳನ್ನು ತೆಗದುಹಾಕುವದಕ್ಕಾಗುವದಿಲ್ಲವೆಂದು ಹೈಕೋರ್ಟ್ ಜಡ್ಜಿಗಳು ಸ್ಥಳಿಕ ಗವರ್ನಮೆಂಟಿನವರಿಗೆ ಬರೆದಿರುತ್ತಾರೆಂದು ಅಲ್ಲಿನ ಪತ್ರಿಕೆಯೊಂದು ಹೇಳುತಿದೆ.

The ex-King Theeba—ಪದಭ್ರಷ್ಟರಾದ ಬರ್ಮಾದೇಶದ ಅರಸರಾದ ತೀಬಾಯವರು ಈಗ ಮುಂಬೈ ಪ್ರಸಿಡೆನ್ಸಿಗೆ ಸೇರಿದ ರತ್ನಗಿರಿಯೆಂಬ ಸ್ಥಳದಲ್ಲಿದಲ್ಪಟ್ಟಿರುತ್ತಾರೆಯಷ್ಟೆ. ಸದರೀ ಸ್ಥಳವು ಭಯಂಕರವಾಗಿಯೂ ಹಾವು ಚೇಳು ಮೊದಲಾದ ವಿಷಜಂತುಗಳಿಂದ ನಿಬಿಡಿತವಾಗಿಯೂ ಇರುವದರಿಂದ ತಮಗೆ ಅಲ್ಲಿನ ವಾಸವು ಇಷ್ಟವಿಲ್ಲವೆಂತಲೂ, ತಮ್ಮನ್ನು ಬೇರೇಸ್ಥಳಕ್ಕೆ ಕಳುಹಿಸಬೇಕೆಂತಲೂ, ತಮ್ಮನ್ನು ಮಾಂಡಲೇ ಪಟ್ಟಣದಿಂದ ಕರೆದುಕೊಂಡು ಬಂದ ಕಾಲದಲ್ಲಿ ವೈಸರಾಯವರನ್ನು ನೋಡಿಕೊಂಡು ಮೂರು ತಿಂಗಳ ಕಾಲದೊಳಗಾಗಿ ತಮ್ಮ ರಾಜ್ಯಕ್ಕೆ ವಾಪಸ್

ಕಳುಹಿಸುವ ಬರವಸೆಯ ಮೇಲೆ ಇದ್ದುಕೊಂಡು ಬಂದದರಿಂದ ತಮ್ಮ ರಾಜ್ಯವನ್ನು ತಮಗೆ ಕೊಡಬೇಕೆಂತಲೂ ಸಮೂದಿಸಿ ಇಂಡ್ಯ ಗವರ್ನಮೆಂಟಗೆ ಅರ್ಜಿ ಕೊಟ್ಟಿರುತ್ತಾರಂತೆ. ಇದರ ಪ್ರಯೋಜನವು ಪ್ರಸಿದ್ಧವಾಗಿ ಯೆಲ್ಲರಿಗೂ ತಿಳಿದೇಯಿದೆ.

The *Statesman* libel case—ಕಲ್ಕತ್ತೆ ಸ್ಟೇಟ್ಸಮನ್ ಪತ್ರಿಕೆಯ ಎಡಿಟರ್ ವ ಪ್ರೊಪ್ರೈಟರಾದ ಮಿ. ರಾಬರ್ಟ್ ನೈಟಿಯವರಮೇಲೆ ತರಲ್ಪಟ್ಟಿದ್ದ ರಾಜದ್ರೋಹ ಮೊಕದ್ದಮೆ ಕಲ್ಕತ್ತಾ ಹೈಕೋರ್ಟಿನ ಸೆಷನ್ ದರ್ಯಾಪ್ತಿಯಬಗ್ಗೆ ಕಮಿಟಿ ಆಗಿರುತಿದೆಯಷ್ಟೆ. ಸದರೀ ಮೊಕದ್ದಮೆಯು ಮುಂದಿನ ಸೆಷನ್ ನಡಿವಿಗೆ ಅದರ ವಿಚಾರಣೆಯಬಗ್ಯೆ ನಿಲ್ಲಿಸಲ್ಪಟ್ಟಿರುವದಲ್ಲದೆ, ಭರದ್ವಾಜ್ ಸಂಸ್ಥಾನದ ಕೆಲವು ಲೆಕ್ಕ ಬುಕ್ಕುಗಳನ್ನೂ ಕಾಗದ ಪತ್ರಗಳನ್ನೂ ತಾವು ನೋಡುವದಕ್ಕೆ ಅವಕಾಶ ಕೊಡಿಸಬೇಕೆಂದು ಮಿ. ನೈಟಿಯವರ ಕಡೆ ಲಾಯರ್ ಕೇಳಿಕೊಳ್ಳಲು ಅಂತಾ ಲೆಕ್ಕ ಬುಕ್ಕುಗಳ ಮತ್ತು ಕಾಗದಪತ್ರಗಳ ಪಟ್ಟಿ ಹಾಜರ್ಮಾಡಬೇಕೆಂದು ಕೋರ್ಟಿನವರು ಹುಕುಂ ಮಾಡಿದರುತೆ.

Prohibition of animal food.—ಇಂಗ್ಲೆಂಡ್ ದೇಶದೊಳು ಮಾಂಸಾಹಾರ ನಿಷೇಧ ಜನರ ಯವರ ಸಂಖ್ಯೆಯು ದಿನೇದಿನೆ ವೃದ್ಧಿಯಾಗುತ್ತ ಬರುತಿರುವದ್ದರಿಂದ ಸ್ವಲ್ಪ ಕಾಲದಲ್ಲಿ ಕೆಲವುಜನಗಳು ಅಂತಾ ನಿಷೇಧಕರಾಗಿ ತೀರುವವರುತಲಿದೆ. ಸಾತ್ವಿಕಾಹಾರವನುಳಿದು ಜನಗಳು ಧಾರ್ಮಿಕರಾಗಿಯೂ ತ್ಯಾಗಿಗಳಾಗಿಯೂ ಆಗುತ್ತಾರೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಇತರ ಜಾತಿಯವರು ಆಸಿದುದವಲ್ಲಿ ಸಂಶಯಗ್ರಸ್ಥರಾಗಿ ಬೇಚಾರುತಿದ್ದಾರೆ. ಹಿಂದೂಗಳಪೈಕಿ ಯಾರಿಗಾದರೆ ಮಾಂಸಾಹಾರ ಪಾತಕವೆಂಬ ನಿಷೇಧ ಪ್ರಾಬಾಗದೆಹೊ ಅಂತವರಿಗೆ ಈಗ ಅನಿವಾರ್ಯವಾಗಿ ಅದರಲ್ಲಿ ನಿಜವಾದ ಅಭಿರುಚಿ ಪ್ರಾಬಾಗುತಲಿದೆ. ಇದು ಕಾಲ ಮಾಹಾತ್ಮ್ಯವೆಂದು ಇಂದು ಪ್ರಕಾಶ ಪತ್ರಿಕೆ ಹೇಳುತಿವೆ.

LOCAL AND PROVINCIAL NEWS.

ಸ್ಥಳದೇಶಮತ್ತು ತಾಲ್ಲೂಕುಮಾತ್ರ ವೃತ್ತಾಂತಗಳು.

The sessions—ಈ ಸಲದ ಸಂಖೇದುರ್ಗ ಸೆಷನ್ ವಿಚಾರಣೆಗೆ ಈದಿನ ಪ್ರಾರಂಭವಾಗಿ ಜಸ್ಟಿಸ್ ಮಿ|| ತುಂಬುಶೆಟ್ಟಿರವರಿಂದ ನಡೆಸಲ್ಪಡುವದು.

The Fort Murder.—ಈವ್ರೂರು ಕೋಟೆಯಲ್ಲಿ ನಡೆದ ಮೊಕದ್ದಮೆಯ ದರ್ಯಾಪ್ತಿ ಪ್ರಾಪ್ತಿಯಾಗಿ ಅವರವರ ಲಾಯರುಗಳಕಡೆ ವಾದಗಳು ನಡೆ ನಡೆಯಿತು. ಈದಿನ ಸೆಷನ್ ಜಡ್ಜಿಯವರು ತಮ್ಮ ಅಭಿಪ್ರಾಯವನ್ನು ಹೇಳುವರು.

The weather.—ಈಚೆಗೆ ಯೆರಡುಮೂರು ದಿನಗಳಿಂದ ಸದಾ ಮೋಡವಾಗುತಲೂ ಆಗಿಂದಾಗ್ಯೆ ತುಂತುರುಮಳೆ ಬೀಳುತಲೂ ಇದೆ. ಕಳೆದ ಶನಿವಾರದದಿನ ಬೆಳಗ್ಯೆ ಮುಮಾಪ್ ಹದಮಳೆ ಆಯಿತು. ರಾಗೀ ಫಸಲಿಗೆ ಇದು ಕೇವಲ ಅನುಕೂಲವಾದದ್ದೆಂದು ಕಾಣುತಿದೆ. ಪದಾರ್ಥಗಳ ಧಾರಣೆಗಳು ಏಕರೂಪವಾಗಿವೆ.

Central college.—ಇಲ್ಲಿನ ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಬಹುಮಾನಗಳು ಕೊಡುವದಕ್ಕೆಬಗ್ಯೆ ಕಳೆದಮಂಗಳವಾರ ದಿ ೩ ನೆಯಲ್ಲಿ ೯ ಕಾಲೇಜಿನಲ್ಲಿ ಸಭೆಸೇರಿತು. ಇಲ್ಲಿನ ಬ್ರಿಟಿಷರೆಸಿಡೆಂಟರಾದ ಮಿ|| ಜೆ. ಬಿ. ಲೈಲ್ ಯವರು ಅಗ್ರಾಸನವ ವಹಿಸಿ ವಿದ್ಯಾರ್ಥಿಗಳಿಗೆ ಇನಾಂಗಳು ಕೊಟ್ಟು ಅವರ ಪುರೋಭಿವೃದ್ಧಿಗೆ ಅವಶ್ಯಕಗಳಾದ ಬುದ್ಧಿವಾದಗಳು ಹೇಳಿದರು.

The Mysore State Railway.—ಈಚೆಗೆ ಮೈಸೂರು ಸ್ಟೇಟ್ರೈಲ್ವೆಯಲ್ಲಿ ಅವ್ವಲ್ ದುಯಂ ತರಗತಿ ಗಾಡಿಗಳ ರುಸುಮನ್ನು ಹೆಚ್ಚಿಸಿದ್ದರಿಂದ ಯೆರಡನೇತರಗತಿಗಾಡಿಗಳಲ್ಲಿ ಸಂಚಾರನಾಡುತ ಲಿಂಗ್ಯವರನೇಕರು ಈಗ ಮೂರನೇತರಗತಿ ಗಾಡಿಯಲ್ಲಿ ಹೋಗಿ ಬರುತ ಪರುತು ಹಾಗೆ ಮಾಡುವದು ತಮ್ಮ ಗೌರವಕ್ಕೆ ಕೊರತೆಯೆಂಬ ಭಾವದೊಡನೆ ತಾವು ಉದ್ದೇಶಿಸಿ ಹೋಗುವಸ್ಥಳಕ್ಕೆ ಸಮೀಪದಲ್ಲಿರುವ ಸ್ಟೇಷನ್ ಬಳಿ ಮೇಲ್ಪಟ್ಟತರಗತಿಗೆ ಬದಲಾಯಿಸಿ ಕೊಳ್ಳುತ್ತಾರೆಂದು ಒಬ್ಬ ಬಾತಮೀದಾರನು ಬರೆಯುತ್ತಾನೆ.

ನಮ್ಮ ಯೆಡಹಳ್ಳಿ ಬಾತಮೀದಾರನು ತಿಳಿಸುವದೇನೆಂದರೆ :—ಯೆಡಹಳ್ಳಿ ಟೌನ್ ಶ್ರೀರಾಮದೇವರಗುಡಿಯಲ್ಲಿರುವ ಹಲಿಕಾರು ಬಚ್ಚಪ್ಪನ ಮನೆಯಲ್ಲಿ ಒಂದುಆಕಳು ಕರುಹಾಕಿತು ಅದನ್ನು ನೋಡುವಲ್ಲಿಹೋರಿ ಕರು,ಮೂತ್ರ ದ್ವಾರಸರಿಯಾಗಿತ್ತು, ಸಗಣಿ ಹಾಕುವ ದ್ವಾರ ಮಾತ್ರ ಇರಲಿಲ್ಲ, ಅದನ್ನು ಆಸ್ಪತ್ರಿಗೆ ತೆಗದುಕೊಂಡು ಬಂದು ಆಸ್ಪತ್ರಿ ಎಸಿಸ್ಟಂಟ್ ಶಸ್ತ್ರ ಹಾಕಿದ್ದ ಕೂಡ್ಲೇ ಒಂದು ದೊಡ್ಡ ದ್ವಾರವಾಗಿ ಸಗಣಿ ವಿಸರ್ಜನೆ ಆಯಿತು. ಕರಬೂಬವರ್ಣ, ಚೆನ್ನಾಗಿದೆ, ಎಂಬದು.

Who is Brahaman?

A reply to Mr. P Chentsal Rao.

(Communicated)

ಸಾಧಾರಣವಾಗಿ ಬ್ರಾಹ್ಮಣ್ಯಕ್ಕೆ ಗುಣವೇ ಪ್ರಧಾನ್ಯವಲ್ಲದೆ ಜನ್ಮವು ಕಾರಣವಲ್ಲವೆಂಬ ಭಾವದ್ಯೋತಕವಾದ ವಜ್ರಸೂಚಿಕೋಪನಿಷದ್ವಾಕ್ಯಕ್ಕೆ ಋಜುತರರೂಪವಾದ ವಾಕ್ಯಗಳ್ಯಾವದಾದರೂ ಇದ್ದೊಡೆ ಅದು ಪಂಡಿತರು ಪ್ರಕಟಿಸಬೇಕೆಂದು ಪ್ರಾರ್ಥಿಸಿ ಬರೆದ ಮಿ|| ಪಿ. ಚೆಂಚಲರಾಯರವರ ಲೇಖನವನ್ನು ಗತ ಜುಲೈ ತಿಂಗಳ ೧೯ನೇ ತಾರೀಖಿನ ಕರ್ಣಾಟಕಪ್ರಕಾಶಿಕಾ ಪತ್ರಿಕೆಯಲ್ಲಿ ಪ್ರಕಟಿಸಿದ್ದೆವಷ್ಟೆ. ಇದಕ್ಕೆ ಯಾರಾದರೂ ಪ್ರತ್ಯುತ್ತರ ಕೊಡಬಹುದೆಂದು ಇದುವರಿವಿಗೂ ಅತ್ಯಾಶ್ಚರ್ಯದೊಡನೆ ನಿರೀಕ್ಷಿಸಿದ್ದೆವು. ಪರಮ ಸದರೀ ವಿಷಯವನ್ನು ಕುರಿತು ನಮ್ಮ ಪಂಡಿತರೊಬ್ಬರೂ ಇದುವರಿವಿಗೆ ಆಲೋಚಿಸಿದಂತೆ ಕಾಣಲಿಲ್ಲವು. ಆದರೆ ಸದರೀ ಉಪನಿಷದ್ವಾಕ್ಯಗಳು ಕೆಲವರು ವಿಪ್ರನಿಂದಕರಿಗೆ ಬಹಳ ಸಹಾಯಕಗಳಾಗಿ, ಅವರು ಮತ್ತಷ್ಟು ವಿಜೃಂಭಿಸಲಿಕ್ಕೆ ಕಾರಣವಾಯಿತೆಂಬದು ಕೇಳಿ ಬಹಳವಿಷಾದಿಸುವೆವು: ತತ್ಕಾಲದಲ್ಲಿ ಬ್ರಾಹ್ಮಣರು ಸಾಮಾನ್ಯವಾಗಿ ವೇದಾಧ್ಯಯನ ಮಾಡದ ಇರುವದಕ್ಕಾಗಲಿ, ಶೂದ್ರಾದಿಗಳು ಆತ್ಮೋತ್ಕರ್ಷಜ್ಞಾನವಿ ಮ್ಯೆಸುರೆತು, ಬ್ರಾಹ್ಮಣರನ್ನು ಹಾಸ್ಯಮಾಡುವದು, ವೇದಾಧ್ಯಯನಾದಿಗಳನ್ನು ಮಾಡುವದಕ್ಕಾಗಲಿ, ಇವರಿಗ ಪರಲೋಕ ಶಿಕ್ಷೆಯು ತಪ್ಪಿದ್ದಲ್ಲವು. ಶೂದ್ರರು ವೇದಾಧ್ಯಯನ ಮಾಡಬಾರದೆಂದು ಹಿಂದುವೇಳೆ ಯಾರಾದರು ಹೇಳಿದಾಗ್ಯೂ, ಅದಕ್ಕೆ ಯೆದುರುಬಿದ್ದು ಸನ್ನದ್ಧರಾಗಿ ತರ್ಕಮಾಡಿವಾರೆಯೋ ನಾವರಿಯೆವು. ಇಂತಾ ದುಡುಕುತನದಿಂದ ಬ್ರಾಹ್ಮಣರೊಳು ವೈಷಮ್ಯವು, ಬ್ರಹ್ಮನಿಂದೆಯೂ ಪ್ರಾಪ್ತವಾಗಲಿಕ್ಕೆ ಕಾರಣವಾಗುತಿದೆಯಲ್ಲದೆ ಬೇರೊಂದೂ ಪ್ರಯೋಜನವಿಲ್ಲವು. ಸ್ವಶಿಷ್ಯರ ಬಗ್ಯೆ ಇಂತಾ ದುರ್ವಾದಗಳು ವಾಸಿಪ್ಪದುತಿದೆಯೋ ಹೊರತು ಬಹಳ ನಿರ್ಬಂಧರೂಪವಾದ ಮತ್ತು ಸ್ವೇಚ್ಛಾವ್ಯಾಪಾರ ನಿರೋಧಕವಾದ ಒಣ ಬ್ರಾಹ್ಮಣ್ಯಕ್ಕಾಗಿ ತತ್ಕಾಲದೊಳು ಆತುರವಾಗಿ ಪೇಚಾಡತಕ್ಕವರೊಬ್ಬರೂ ಇಲ್ಲವು. ಜನಗಳಿಗೆ ಕರ್ತವ್ಯ ವಿಷಯದೊಳು ಅಶ್ರದ್ಧೆಯು ತಪ್ಪಲಿಕ್ಕೂ, ಅಜ್ಞಾನ, ಅನ್ಯಥಾ ಜ್ಞಾನ ವಿಪರೀತಜ್ಞಾನ ತರದೋರಲಿಕ್ಕೂ, ಕಾಲಗತಿಯನ್ನೂ, "ರಾಜಾ ಕಾಲಸ್ಯಕಾರಣಂ" ಎಂದು ಅಂತಾ ಕಾಲಗತಿಗೆ ಕಾರಣಭೂತರಾದ ಅರಸರನ್ನೂ ಕಾರಣಾನ್ವೇನ ಹೇಳಬೇಕಾಗಿರುತಿದೆ. ಹಿಂದೆ ಪ್ರಕಟಿಸಿದ್ದ ವಜ್ರಸೂಚಿಕೋಪನಿಷದ್ವಾಕ್ಯಾರ್ಥಕ್ಕೆ ಋಜುರೂಪವಾಗಿ ಒಬ್ಬರು ಬರೆದ ಉತ್ತರವನ್ನು ಇದರತಿ ಪ್ರಕಟಿಸುವೆವು.

"ವಜ್ರಸೂಚಿಕೋಪನಿಷತ್ತನ್ನು ಪ್ರತಿಪದಾರ್ಥ ಭಾವಾರ್ಥದೊಡನೆ ಬರೆದು ಪ್ರಕಟಿಸಿದವರಿಗೆ, ವರ್ಣಭೇದವನ್ನು ತೊಲಗಿಸಿ, ಯೆಲ್ಲರನ್ನೂ ಒಂದೇಸ್ಥಿತಿಯಲ್ಲಿಟ್ಟುನೋಡಬೇಕೆಂಬತಾತ್ಪರ್ಯವಿರಬಹುದೆಂದು ತೋರುತಿದೆ. ವರ್ಣಾಶ್ರಮ ಭೇದಜ್ಞಾನವುಂಟಾಗಿಕೆಡುವವರುಹಾಗೆ ಕೆಡಬಿರಲಿಕ್ಕೆ ಅವರ ದಿವ್ಯಸೂಕ್ತಿಯು ಸಾಧಕವಾಗಿರುವದೆಂದೆಣಿಸಿರುವಂತೆ ಕಾಣುತಿದೆ. ಸರ್ವತ್ರಏಕವರ್ಣವಾಗಿರುವಪಕ್ಷಕ್ಕೆ ಆಚಾರ್ಯಾಚಾರ ಬಾಧೆಗಳೊಂದೂ ಇಲ್ಲದೆಯೂ, ಭೋಜನಭಾವದ ನಿಯಮಗಳಿಲ್ಲದೆಯೂ, ಒಂದೇ ಮನುಷ್ಯಜಾತಿಯಾಗಿರುತ ಐಕಮತ್ಯದೊಡನೆ ಇಂಡ್ಯದೇಶೀಯರೆಲ್ಲರೂ ಏಕರೂಪವಾಗಿಪ್ರೀತಿಗೌರವದೊಡನೆ ಸ್ನಿಗ್ಧರಾಗಿರುವರೆಂದು ಆಲೋಚಿಸಿದಂತೆ ವ್ಯಕ್ತವಾಗುತಿದೆ. ಜಾತಿ ಪ್ರಯುಕ್ತವಾದ ತಾರತಮ್ಯವು ತಪ್ಪುವದರಿಂದ ಕದಾಚಿತ್ ಅನ್ಯೋನ್ಯೈಕಮತ್ಯಗಳು ಪ್ರಾಪ್ತವಾಗುವದೆಂದು ಹೇಳಿದಾಗ್ಯೂ, ಪ್ರಾಯಶಃ ಸ್ಥಿತಿಯಲ್ಲಿ ಅವರವರ ಪುಣ್ಯಪಾಪಾನುಗುಣವಾಗಿ ಪ್ರಾಪ್ತವಾಗತಕ್ಕ ವ್ಯಾಪ್ಯವ್ಯಾಪಕಸ್ಥಿತಿಗಾಗಿ ಪರಸ್ಪರ ಅಸೂಯೆಗೊಳ್ಳದೆ ಇರುವದಿಲ್ಲವು. ಏಕೆಂದರೆ ಜನಗಳಲ್ಲಿ ಅಸೂಯೆಯೆಂಬದು ಜಾತಿಮತ ಪ್ರಯುಕ್ತವಾಗಿ ಇಲ್ಲದೆ ಹೋದರೂ, ಮತ್ತೊಂದುನಿಮಿತ್ತವಾಗಿಯಾದರೂ ಯಿರುವದಾದ ಕಾರಣ, ಇವರೊಳು ಐಕಮತ್ಯವೆಂಬದುಮಾತ್ರ ಸುಲಭವಾಗಿ ಪ್ರಾಪ್ತವಾಗತಕ್ಕದ್ದಲ್ಲವು. ಅಂತರಾಳಿಕಗಳಾದ ಪ್ರಭೇದಗಳನ್ನೆಲ್ಲ ಹೋಗಲಾಡಿಸಿ ಸ್ತ್ರೀ ಪುರುಷಭೇದವನ್ನುಮಾತ್ರ ಉಳಿಸಿಕೊಳ್ಳಬೇಕೆಂದು ಹೇಳಬಹುದು. ಪಾಂಚಭೌತಿಕವಾದ ಸ್ಥೂಲಶರೀರಕ್ಕೂ, ಲಿಂಗದೇಹವಾದ ಸೂಕ್ಷ್ಮಶರೀರಕ್ಕೂ, ಜೀವನೊಬ್ಬನೇಯಾಗಿರುವನಲ್ಲದೆ ಇವುಗಳಿಗೆ ಪಂಚಪರ್ವಗಳೂ ಸುಖದುಃಖಾನುಭವವೂ, ಸಮಾನವಾಗಿರುವವು, ಆದರೆ ಸ್ತ್ರೀ ಪುರುಷರುಗಳಿಗೆ ಕೆಲವು ಚಿಹ್ನೆಗಳುಮಾತ್ರ ಪ್ರತ್ಯೇಕವಾಗಿ ವ್ಯಕ್ತವಾಗುವವು. ಆದರೆ "ನಸ್ತ್ರೀ ನಪುಮಾನ್ನಪುಂಸಕಃ" ಇತ್ಯಾದಿವಚನಗಳರೀತ್ಯಾ ಆತ್ಮನಿಚಾರದೊಳು ಅಂತಾಭೇದಗಳೊಂದೂ ಇರುವದಿಲ್ಲವು. ("ವಿದ್ಯಾವಿನಯಸಂಪನ್ನೆ ಬ್ರಾಹ್ಮಣೇಗವಿಹಸ್ತಿನಿ। ಶುನಿಚೈವಶ್ವಪಾಕೇಚ ಪಂಡಿತಾಸ್ಸಮದರ್ಶಿನಃ") ಎಂಬ ಭಾರತವಾಕ್ಯವಲ್ಲದೆ "ಚಂಡಾಲೋಸ್ತುಸತುದ್ವಿಜೋಸ್ತು ಗುರುರಿತ್ಯೇಷಾಮನೀಷಾಮಮ" ಎಂಬದಾಗಿ ಶ್ರೀಶಂಕರಭಗವತ್ಪಾದಾಚಾರ್ಯ ಸ್ವಾಮಿಗಳವರು ಹೇಳುತ್ತಾರಾಗಿ ಬ್ರಹ್ಮವಿದ್ಯೆಯನ್ನರಿತಿರುವ ಬ್ರಾಹ್ಮಣರಿಗೂ ಗೋಗಡ ಜನಕ ಚಂಡಾಲಾದಿಗಳಿಗೂ, ಯಾವಭೇದವೂ ಇರುವದಿಲ್ಲವು. ಈ ಪ್ರಪಂಚಜ್ಞಾನವಿಲ್ಲದೆ ಬ್ರಹ್ಮಜ್ಞಾನವುಳ್ಳವನಿಗೆ ಮೇಲೆಕಂಡ ಅಭೇದಾಧ್ಯವಸಾನವು ನಿಜವಾದದ್ದಾದರೂ, ವ್ಯಾವಹಾರಿಕ ಪ್ರಪಂಚಜ್ಞಾನವುಳ್ಳವರ ವಿಷಯವು ಪ್ರತ್ಯೇಕವಾಗಿರುತಿದೆ.

> ಯಾನಿಶಾಸರ್ವಭೂತಾನಾಂತಸ್ಯಾಂಜಾಗರ್ತಿ
> ಸಂಯಮೀ॥ ಯಸ್ಯಾಂಜಾಗ್ರತಿಭೂತಾನಿ
> ಸಾನಿಶಾಪಶ್ಯತೋಮುನೇಃ॥
>
> ಭಗವದ್ಗೀತಾಧ್ಯಾಯ ೨, ಶ್ಲೋಕ ೬೯.

ಸರ್ವಭೂತಾನಾಂ—ಅಜ್ಞಾನಾಂಧಕಾರದಿಂದಾ ನಿಷ್ಟಪಾದಚಿತ್ತಗಳುಳ್ಳ ಪ್ರಾಣಿಗಳಿಗೆ, ಅಂದರೆ ಆತ್ಮದರ್ಶನವಿಲ್ಲದವರಿಗೆ, ಯಾನಿಶಾ-ರಾತ್ರಿಯಂತಾ ಆತ್ಮನಿಷ್ಠೆಯುಳ್ಳದ್ದೋ, ತಸ್ಯಾಂ-ಅದರಲ್ಲಿ, ಸಂಯಮೀ- ಇಂದ್ರಿಯನಿಗ್ರಹವುಳ್ಳವನು, ಜಾಗರ್ತಿ- ಪ್ರಬೋಧೆಯುಳ್ಳವನಾಗಿರುವನು. ಯಸ್ಯಾಂ-ಯಾವವಿಷಯನಿಷ್ಠೆಯಲ್ಲಿ, ಭೂತಾನಿ-ಅಜ್ಞಾನಿಗಳಾದ ವಿಷಯಾಸಕ್ತರು, ಜಾಗ್ರತಿ-ವಿಷಯಗಳಲ್ಲಿ ತಮ್ಮ ಇಂದ್ರಿಯಗಳನ್ನು ವ್ಯಾಪಕಗೊಳಿಸುವರೋ, ಸಾ- ಅದು, ಪಶ್ಯತೋ ಮುನೇಃ-ಆತ್ಮತತ್ವವನ್ನರಿತ ಮನನಶೀಲರಿಗೆ, ನಿಶಾ- (ಆತ್ಮಸಾಕ್ಷಾತ್ಕಾರವು ಇಂದ್ರಿಯಜಯವಿಲ್ಲದವರಿಗೆ ಪ್ರಾಪ್ತವಾಗಲಾರದಾದ್ದರಿಂದ ಅಂತವನದೆಶೆಯು) ರಾತ್ರಿಯಂತಾದ್ದೆಂದರ್ಥವು.

> ಪ್ರಕೃತೇರ್ಗುಣಸಮ್ಮೂಢಾಸ್ಸಜ್ಜಂತೆಗುಣಕರ್ಮಸು। ತಾನಕೃತ್ಸ್ನವಿದೋಮಂದಾನ್ಕೃತ್ಸ್ನವಿನ್ನವಿಚಾಲಯೇತ್ ॥ ಭಗವದ್ಗೀತಾಧ್ಯಾಯ ೩, ಶ್ಲೋ || ೨೯.

ಪ್ರಕೃತೇಃ-ಪ್ರಕೃತಿಯ, ಗುಣ-ಸತ್ವಾದಿ ಗುಣಗಳಿಂದ, ಸಮ್ಮೂಢಾಸ್ಸಂತಃ-ವಿಶೇಷ ಮೂಢರಾಗುತ್ತ, ಗುಣಕರ್ಮಸು-ಇಂದ್ರಿಯಗಳನ್ನು ತತ್ತತ್ಕರ್ಮಗಳಲ್ಲಿ, ಸಜ್ಜಂತೆ-ಪ್ರವರ್ತಿಗೊಳಿಸುತ್ತಾರೆ, ತಾನಕೃತ್ಸ್ನವಿದೋಮಂದಾನ್-ಅಂತಾ ಸಕಲವನ್ನರಿಯದ ಅಲ್ಪಮತಿಗಳೂ, ಕೃತ್ಸ್ನವಿತ್-ಸರ್ವವನ್ನೂ ಅರಿತ ಆತ್ಮವೇತ್ತರೂ, ನವಿಚಾಲಯೇತ್-ವರ್ಣಾಶ್ರಮ ಧರ್ಮಗಳನ್ನು ಚಲಿಸುವಂತೆ ಮಾಡಲಾರರು. ತತ್ವವೇತ್ತರಿಗೆ ವರ್ಣಾಶ್ರಮ ಧರ್ಮಗಳಿಂದೇನೂ ಪ್ರಯೋಜನವಿಲ್ಲವು. ಎಲೈ ಕೌಂತೇಯನೇ, ನೀನೀಗಲೂ ತತ್ವವೇತ್ತನಲ್ಲವು. ಆದದರಿಂದ ನೈಜಗಳಾದ ಕ್ಷತ್ರಿಯ ವರ್ಣವಿಹಿತ ಯುದ್ಧಾದಿ ಕರ್ಮಗಳನ್ನು ನೀನು ಬಿಡುವದುಚಿತವಲ್ಲವೆಂದು ಶ್ರೀಕೃಷ್ಣದೇವರು ಅರ್ಜುನನಿಗೆ ಉಪದೇಶಿಸಿದರು:

> "ಶ್ರೇಯಾನ್ಸ್ವಧರ್ಮೋವಿಗುಣಃಪರಧರ್ಮಾತ್ಸ್ವನುಷ್ಠಿತಾತ್ । ಸ್ವಧರ್ಮೆನಿಧನಂಶ್ರೇಯಃ ಪರಧರ್ಮೋಭಯಾವಹಃ ॥"
>
> ಭಗವದ್ಗೀತಾಧ್ಯಾಯ ೩, ಶ್ಲೋ|| ೩೫.

ಸ್ವನುಷ್ಠಿತಾತ್-ಚೆನ್ನಾಗಿ ಆಚರಿಸುವ, ಪರಧರ್ಮಾತ್-ಅನ್ಯಧರ್ಮಕ್ಕಿಂತಲೂ, ವಿಗುಣಃ-ಗುಣಹೀನವಾದಂತಾ, ಸ್ವಧರ್ಮಃ-ತನ್ನ ಜಾತಿಧರ್ಮವು, ಶ್ರೇಯಾನ್-ಶ್ರೇಷ್ಠವಾದದ್ದು, ಸ್ವಧರ್ಮೆ-ನಿನಗೆ ಇರುವ ಕ್ಷತ್ರಿಯ ಧರ್ಮದಲ್ಲಿ, ನಿಧನಂ-ಮರಣವು, ಶ್ರೇಯಃ—ಶ್ರೇಷ್ಠವಾದದ್ದು, ಪರಧರ್ಮಃ—ಕ್ಷಾತ್ರೇತರಧರ್ಮವು, ಅಂದರೆ, ಅಹಿಂಸಾದಿ ಬ್ರಾಹ್ಮಣ ಧರ್ಮವು, ಕ್ಷತ್ರಿಯ ಜಾತಿಯವನಾದ ನಿನಗೆ, ಭಯಾವಹಃ—ನರಕಭಯವನ್ನುಂಟುಮಾಡುವದು.

> ಬ್ರಾಹ್ಮಣಕ್ಷತ್ರಿಯವಿಶಾಂಶೂದ್ರಾಣಾಂಚ ಪರಂತಪ । ಕರ್ಮಾಣಿಪ್ರವಿಭಕ್ತಾನಿಸ್ವಭಾವಪ್ರಭವೈರ್ಗುಣೈಃ ॥
>
> ಭಗವದ್ಗೀತಾಧ್ಯಾಯ ೧೮, ಶ್ಲೋ|| ೪೧.

ಹೇಪರಂತಪ-ಎಲೈ ಶತ್ರುಗಳನ್ನು ತಪಿಸುವಂತೆ ಮಾಡತಕ್ಕವನೇ, ಬ್ರಾಹ್ಮಣಕ್ಷತ್ರಿಯವಿಶಾಂ-ಬ್ರಹ್ಮ ಕ್ಷತ್ರಿಯ ವೈಶ್ಯ ವರ್ಣಗಳಿಗೂ,ಶೂದ್ರಾಣಾಂ-ಶೂದ್ರವರ್ಣಕ್ಕೂ, ಕರ್ಮಾಣಿ—ಆಯಾ ವರ್ಣವಿಹಿತ ಕರ್ಮಗಳು, ಸ್ವಭಾವಪ್ರಭವೈಃ-ಸಾತ್ವಿಕ ರಾಜಸ ತಾಮಸ ಸ್ವಭಾವದಿಂದ ಪ್ರಾಪ್ತವಾಗುವ, ಗುಣೈಃ-ಅವರವರ ಜಾತಿ ಗುಣಗಳ ಪ್ರಕಾರ, ಪ್ರವಿಭಕ್ತಾನಿ—ಪ್ರತ್ಯೇಕವಾಗಿ, ವಿಶೇಷತಃ—ನಿಶ್ಚೈಸಲ್ಪಟ್ಟಿರುತಿವೆ. ೪೧ನೇ ಶ್ಲೋಕದ ಮೊದಲು ೪೪ನೇ ಶ್ಲೋಕದ ತನಕ ವರ್ಣಭೇದಗಳೂ ಅವರವರ ಧರ್ಮಗಳೂ ವಿಸ್ತಾರವಾಗಿ ತಿಳಿಸಲ್ಪಟ್ಟಿರುತಿವೆ.

ಈ ವಿಷಯದೊಳಿನ್ನೂ ಬರೆಯಬೇಕಾದ ಅಂಶಗಳು ಬಹಳವಾಗಿರುವದರಿಂದ ಅದು ಮುಂದಿನ ವಾರದತನಕ ನಿಲ್ಲಿಸಿರುವೆವು.

ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೆ ಶೃತಪಡಿಸುವದೇನೆಂದರೆ—ಈ ಪತ್ರಿಕೆಗೆ ಬಾಕೀದಾರರಾಗಿರತಕ್ಕವರೆಲ್ಲರು ಅವರವರ ಬಾಕೀಗಳನ್ನು ಶೀಘ್ರ ಸಲ್ಲಿಸಬೇಕೆಂದು ಬಹುಮುಖವಾಗಿ ನಾವುಮಾಡಿದ ಪ್ರಾರ್ಥನೆಯನ್ನು ಲಾಲಿಸದೆಹೋದ ಅನೇಕರ ಹೆಸರುಗಳನ್ನು ಈಪತ್ರಿಕೆಯಲ್ಲಿ ಪ್ರಕಟಿಸಿದಾಗ್ಯೂ ಬಾಕೀದಾರರಿಗೆ ಲಕ್ಷ್ಯವಿಲ್ಲವಾಯಿತು, ಲಾಯರ ನೋಟಿಸ್ ಕೊಡಿಸಿದ್ದರಲ್ಲಿ, ಇಂಗಿತಜ್ಞರಾದ ಕೆಲವರು ವಿನಾ ಮಿಕ್ಕವರು ಮೌನವಾಗಿರುವಂತೆ ಕಾಣುತಿದೆ. ಅಂತವರ ವಿಷಯದಲ್ಲಿ ಕೋರ್ಟವಿನಾ ಬೇರೆ ಯಾವ ಉಪಾಯವೂ ಕಾರ್ಯಕಾರಿಯಾಗಲಾರದೆಂದು ಕಾಣುತಿದೆ. ಹಾಗೆ ನ್ಯಾಯ್ಯ ಮಾಡುವವರಲ್ಲಿ ಬಾಕೀದಾರರು ಈಗ ಕೊಡಬೇಕಾದದಕ್ಕಿಂತಲೂ ಮೂರರಷ್ಟು ಕೊಡಬೇಕಾಗುವದೆಂಬ ಅಂಶವನ್ನು ಮರಳಿಯೊಂದು ದಫಾ ಅವರ ಯೋಚನೆಗೆ ತರುವದುಚಿತವೆಂದು ಯೋಚಿಸಿ ತಿಳಿಸಿ ಇರುತ್ತೇವೆ. ಕೋರ್ಟಗೆ ಹೋಗುವದರಮೂಲಕ ಉಂಟಾಗುವ ಅರ್ಥವ್ಯಯ ಮತ್ತು ಶರೀರಶ್ರಮ, ಇವು ಉಭಯರಿಗೂ ತಪ್ಪಲಾರದಾಗಿ, ಅದು ಚೆನ್ನಾಗಿ ಯೋಚಿಸಿ ಅಂತಾ ಶ್ರಮದಿಂದ ನಮ್ಮನ್ನೂ ತಪ್ಪಿಸಿ ತಾವೂ ಅದಕ್ಕೆ ಗುರಿಯಾಗದಿರುವರೆಂದು ಕೋರುವೆವು.

೩೦-೮-೮೬. ಪ್ರೊಪ್ರೈಟರ್.

DRAFT OF A REGULATION TO AMEND THE LAW RELATING TO THE COLLECTION OF THE PUBLIC REVENUE IN THE PROVINCE OF COORG

ಕೊಡಗುದೇಶದಲ್ಲಿ ಸರ್ಕಾರಿ ಕಂದಾಯವು ಸರಿಯಾಗಿ ವಸೂಲಾಗದೆ ಬಾಕೀ ನಿಲ್ಲತಕ್ಕ ಸಂದರ್ಭಗಳಲ್ಲಿ ಅದನ್ನು ವಸೂಲ್ಮಾಡತಕ್ಕಬಗ್ಗೆ ಒಂದು ನಿಬಂಧನೆಯನ್ನು ಮಾಡಬೇಕಾದದ್ದು ಕೇವಲ ಆವಶ್ಯಕವೆಂದು ಕೊಡಗು ಚೀಫ್ ಕಮಿಷನರ್ ಸಾಹೆಬರವರಿಗೆ ಈಚೆಗೆ ಕಂಡುಬಂದದರಮೇಲೆ, ಅವರು ಸದರೀ ವಿಷಯದಲ್ಲಿ ಒಂದು ಮುಸವಿದಾ ತಯಾರ್ಮಾಡಿ ಅದನ್ನು ತಾವು ಜಾರೀಯಲ್ಲಿ ತರುವದಕ್ಕೆ ಮುಂಚಿತವಾಗಿ ಪ್ರಜಾಭಿಪ್ರಾಯವನ್ನು ಶೇಖರಿಸಿ ಅರಿಯಬೇಕೆಂಬ ತಾತ್ಪರ್ಯದೊಡನೆ ಜನಗಳ ತಿಳುವಳಿಕೆಗಾಗಿ ಛಾಯಿಪ್ಮಾಡಿರುತ್ತಾರಲ್ಲದೆ ಅದರಒಂದು ಕಾಪಿಯನ್ನು ಅವರು ಕೃಪಾಪೂರ್ವಕ ನಮಗೆ ಕಳುಹಿಸಿರುತ್ತಾರಾಗಿ ಅವರ ಪ್ರಕೃತದಕ್ಷತೆಯೊಡನೆ ಅಂಗೀಕರಿಸಿ ಅದರಪ್ರಕೆಯೊಂದು ಭಾಗವನ್ನು ಈಕೆಳಗೆ ಪ್ರಕಟಿಸಿರುತ್ತೇವೆ. ಈ ನಿಬಂಧನೆಯನ್ನು ಜನಗಳು ಪರ್ಯಾಲೋಚಿಸಿ ತಮ್ಮ ತಾತ್ಪರ್ಯವು ನಮಗೆ ಅರುಹಬೇಕೆಂದು ಕೋರುವದಲ್ಲದೆ ಹಾಗೆ ಪರ್ಯಾಲೋಚಿಸುವದರಲ್ಲಿ ಗವರ್ನಮೆಂಟಿನವರ ಪ್ರಯೋಜನವನ್ನೂ ರೈತರ ಸುಖದುಃಖಗಳನ್ನೂ ಏಕಕಾಲದೊಳು ಮನಸ್ಸಿನೊಳಿಟ್ಟಿರಬೇಕಾದದ್ದು ಅವಶ್ಯಕವಾಗಿರುತಿವೆ. ಈ ಪತ್ರಿಕೆಯ ಸ್ಥಳ ಸಂಕೋಚದಿಂದ ಮೂರು ಭಾಗಮಾಡಿ ಮೂರುವಾರಗಳಲ್ಲಿ ಕ್ರಮವಾಗಿ ಪ್ರಕಟಿಸಬೇಕಾಗಿ ಬಂದದರಿಂದ ಜನಗಳು ಅದರ ಪೂರ್ವೋತ್ತರ ಸಂದರ್ಭವನ್ನು ತಿಳಿದು ಓದಿಕೊಳ್ಳಬೇಕೆಂದು ಕೋರುವೆವು. ಪ್ರಸಕ್ತ ಮುಸವಿದಾ ರೆಗ್ಯುಲೇಷನಿನಮೇಲೆ ನಮ್ಮ ಅಭಿಪ್ರಾಯವನ್ನು ಮುಂದೆ ಕ್ರಮವಾಗಿ ತಿಳಿಸುವೆವು.

ಕೊಡಗು ದೇಶದ ಚೀಫ್ ಕಮಿಷನರವರಿಂದ ಕೊಟ್ಟೋದಾದ ಇಸ್ತಿಹಾರ್‌ನಾಮೆ. ನಂಬರ್ ೧೫.

ತಾರೀಖು ೧೭ನೇ ಏಪ್ರಿಲ್ ೧೮೮೬ನೇ ಇಸವಿ.

ಈ ಕೆಳಗಿನ ಮುಸವಿದಾ ರೆಗ್ಯುಲೇಷನನ್ನು ಕೊಡಗುದೇಶದಲ್ಲಿ ಜಾರಿಗೆ ತರಬೇಕಾಗಿ ಆಲೋಚಿಸಿ, ಸಮಸ್ತ ಜನರ ಆಲೋಚನೆಯಬಗ್ಗೆಯೂ ಮತ್ತು ಈ ಸಂಗತಿಯಲ್ಲಿ ಆಸಕ್ತಿಯುಳ್ಳವರ್ಯಾರಾದರೂ ಕಮಿಷ್ನರವರ ಮೂಲಕ ಚೀಫ್ ಕಮಿಷ್ನರವರಿಗೆ ಏನಾದರು ಜಾಹಿರ್ಮಾಡಿಕೊಳ್ಳುವದಿದ್ದಲ್ಲಿ ಆಬಗ್ಗೆಯೂ ಇದರಿಂದ ಪ್ರಸಿದ್ಧಪಡಿಸಿದೆ.

ಕೊಡಗುದೇಶದಲ್ಲಿ ಸರ್ಕಾರದ ಕಂದಾಯವನ್ನು ವಸೂಲ್ಮಾಡುವದಕ್ಕೆ ಸಂಬಂಧಪಟ್ಟ ಕಾನೂನನ್ನು ಪ್ರಸಿದ್ಧಪಡಿಸಲಿಕ್ಕೂ ತಿದ್ದುಪಡಿ ಮಾಡಲಿಕ್ಕೂ ಪ್ರಂಟಾದ ಹುಕ್ಮುಂನಾಮೆಯ ಮುಸವಿದಾ.

ಪೀಠಿಕೆ.—

ಕೊಡಗುದೇಶದಲ್ಲಿ ಸರ್ಕಾರದ ಕಂದಾಯವನ್ನು ವಸೂಲ್ಮಾಡುವದಕ್ಕೆ ಸಂಬಂಧಪಟ್ಟ ಕಾನೂನನ್ನು ಪ್ರಸಿದ್ಧಪಡಿಸಿ ತಿದ್ದುಪಡಿ ಮಾಡುವದು ಯುಕ್ತವಾಗಿ ತೋರುವದರಿಂದ ಈ ಕೆಳಗಿನಮೇರೆ ನಿರ್ಣಯಿಸಿದೆ—

೧. ಸನ್ ೧೮೮೧ನೇ ಇಸವಿಯ ನಂಬರು III ನೇ ರೆಗ್ಯುಲೇಷನ್ (ಕೊಡಗುದೇಶದಲ್ಲಿ ಸರ್ಕಾರದ ಕಂದಾಯವನ್ನು ವಸೂಲ್ಮಾಡುವದಕ್ಕೆ ಸಂಬಂಧಪಟ್ಟ ಕಾನೂನನ್ನು ಪ್ರಸಿದ್ಧಪಡಿಸಲಿಕ್ಕೂ ತಿದ್ದುಪಡಿಮಾಡಲಿಕ್ಕೂ ಪ್ರಂಟಾದ ಹುಕ್ಮುಂನಾಮೆಯು) ಇದರಿಂದ ರದ್ದು ಮಾಡಲ್ಪಟ್ಟಿದೆ.

ಅರ್ಥವಿವರಣೆಯು

೨. ಈ ಹುಕ್ಮುಂನಾಮೆಯಲ್ಲಿ ಉಪಯೋಗಿಸಲ್ಪಟ್ಟಪ್ರಕಾರ ಕಾನೂನಿಂದಾಗಲಿ ಕಂಟ್ರಾಕ್ಟಿನಿಂದಾಗಲಿ "ಕಲಂಜಮೀನುದಾರ" ಗಳಿ ಅಥವಾ ಸ್ಥಳಿಕ ಪದ್ಧತಿಯಿಂದಾಗಲಿ ಸರ್ಕಾರಕ್ಕೆ ಕೊಡಬೇಕಾದ ಕಂದಾಯವನ್ನು ತೆರುವದಕ್ಕೆ ಬದ್ಧರಾದ ತಮಾಂ ಜಮೀನ್ ಹಿಡುವಳಿದಾರರು "ಜಮೀನುದಾರ" ಎಂಬ ಮಾತಿನಲ್ಲಿ ಅಡಗಿರತಕ್ಕದ್ದು.

"ಸರ್ಕಾರದ ಕಂದಾಯ" ಎಂಬ ಮಾತಿನಲ್ಲಿ ಈ ಹುಕುಂನಾಮೆಯ ಕಾ

ಸರ್ಕಾರದ ಕಂದಾಯ

ರ್ಯಗಳಗೋಸ್ಕರ ಕಾನೂನ್ ಕಂಟ್ರಾಕ್ಟ್ ಅಥವಾ ಸ್ಥಳಿಕ ಪದ್ಧತಿಮೇರೆ ಸರ್ಕಾರಕ್ಕೆ ತೆರಬೇಕಾದ ಭೂಮಿ ಕಂದಾಯ ನಿಗೆ ಮೊಹತರ್ಫಾ ಮತ್ತು ಇತರ ಮೇಲ್ತರದ ಬಾಕಿಗಳು ಅಡಗಿರತಕ್ಕದ್ದು.

ಚೀಫ್ ಕಮಿಷನರವರು ಮತ್ತು ಕಮಿಷನರವರು

"ಚೀಫ್ ಕಮಿಷನರವರು" ಮತ್ತು "ಕಮಿಷನರವರು" ಎಂಬ ಮಾತುಗಳಿಗೆ ಈ ಹುಕ್ಮುಂನಾಮೆಯಲ್ಲಿ ಪ್ರಯೋಗಿಸಲ್ಪಟ್ಟಪ್ರಕಾರ ಕೊಡಗುದೇಶದ ಚೀಫ್ ಕಮಿಷನರವರು, ಮತ್ತು ಕೊಡಗುದೇಶದ ಕಮಿಷನರವರು ಎಂದು ಅರ್ಥವಾಗತಕ್ಕದ್ದು.

ಕಂದಾಯಕ್ಕೆ ಜಮೀನ್ ಆಧಾರವಾಗಿರುವದು

೩. ಜಮೀನ್, ಅವರಲ್ಲಿರುವ ಕಟ್ಟಡಗಳು, ಅದರ ಉತ್ಪತ್ತಿಗಳು ಇವು ಸರ್ಕಾರದ ಕಂದಾಯಕ್ಕೆ ಆಧಾರಗಳಾಗಿ ಎಣಿಸಲ್ಪಡತಕ್ಕದ್ದು.

ಜಮೀನ್‌ದಾರನು ತನ್ನ ಕಿಸ್ತನ್ನು ಯಾವಾಗ ಮತ್ತು ಯಾರಿಗೆ ಕೊಡತಕ್ಕದ್ದು

೪. ಪ್ರತಿ ಜಮೀನ್‌ದಾರನು, ತನ್ನ ಜಮೀನಿಗೆ ಕಿಸ್ತುಬಂದೀ ಪ್ರಕಾರವಾಗಲಿ, ಇತರ ಕರಾರಿನ ಮೇರೆಯಾಗಲಿ ಯಾವ ದಿನದಲ್ಲಿ ಕಂದಾಯ ಸಲ್ಲಬೇಕಾಗುತ್ತದೋ ಅಂತಾ ದಿನದಲ್ಲಿ ಅಥವಾ ಅದಕ್ಕೆ ಮುಂದಾಗಿ ಕಮಿಷನರವರಿಗಾಗಲಿ, ಅದನ್ನು ತೆಗದುಕೊಳ್ಳಲಿಕ್ಕೆ ಅವರಿಂದ ಅಧಿಕಾರ ಕೊಡಲ್ಪಟ್ಟ ಇತರ ಆಫೀಸರಿಗಾಗಲಿ, ಪಾವತೀ ಮಾಡತಕ್ಕದ್ದು, ಮತ್ತು ಯಾವ ಜಿನಸೂ ಗೊತ್ತುಮಾಡಲ್ಪಡದೆ ಇದ್ದರೆ, ಆಗ ಸ್ಥಳದ ವಾಡಿಕೆಮೇರೆ ಯಾವಾಗ ಸಲ್ಲಬೇಕಾಗುತ್ತದೋ ಆ ಕಾಲದೊಳಗೆ ಪಾವತೀ ಮಾಡತಕ್ಕದ್ದು; ಪರಂತು ಸರ್ಕಾರೀ ಗಜೆಟಿನಲ್ಲಿ ಪ್ರಕಟಿಸಲ್ಪಡುವ ಇಸ್ತಿಹಾರ್ ಮೂಲಕ ಕಂದಾಯ ಕಿಸ್ತು ಯಾ ವಾಯಿದೆ ಮೊಬಲಗುಗಳನ್ನು, ಯಾವ ಯಾವ ತಾರೀಖುಗಳಲ್ಲಿ ಅವುಗಳು ಸಲ್ಲತಕ್ಕವೋ ಆ ದಿನಗಳನ್ನು ಬದಲಾಯಿಸುವದು, ಮೊಕರರ್ಮಾಡುವದು, ಚೀಫ್ ಕಮಿಷನರವರಿಗೆ ನ್ಯಾಯವಾಗಿರತಕ್ಕದ್ದು.

ಸಂದಾಯ ವಾಗದೆ ಉಳಿದಿರುವ ಒಂದು ಕಿಸ್ತಿನ ವಿಶಿಷ್ಟವಾಗಲಿ ಒಂದು ಭಾಗವಾಗಲಿ ಕಂದಾಯದ ಬಾಕಿಯೆಂದು ಎಣಿಸಲ್ಪಡತಕ್ಕದ್ದು

೫. ಒಂದು ಕಿಸ್ತಿನ ವಿಶಿಷ್ಟಾಂಶವಾಗಲಿ, ಒಂದು ಭಾಗವಾಗಲಿ ಸದರೀ ಮೇರೆ ಪಾವತಿ ಮಾಡಲ್ಪಡದೆಯಿದ್ದರೆ ಸದರೀ ಕಿಸ್ತು ಮೊಬಲಗಾಗಲಿ ಸಲ್ಲದೆ ಇರುವ ಭಾಗವಾಗಲಿ ಕಂದಾಯದ ಬಾಕಿಯಂತೆ ಎಣಿಸಲ್ಪಡತಕ್ಕದ್ದು, ಮತ್ತು ಅದಕ್ಕೆ ಜವಾಬ್‌ದಾರರಾದವರನ್ನು ಬಾಕಿದಾರರಾಗಿ ಎಣಿಸತಕ್ಕದ್ದು.

ಬಾಕಿನಿಂತ ಕಂದಾಯಕ್ಕೆ ಬಡ್ಡಿ ಇರತಕ್ಕದ್ದು

೬. ಕಂದಾಯದ ಬಾಕಿಗೆ ಸೇಕಡಾ ಸಾಲೀಯಾನಾ ಆರು ರೂಪಾಯಿ ಪ್ರಕಾರ ಬಡ್ಡಿ ಇರತಕ್ಕದ್ದು. ಕಂತಿನ ಹಣವು ಯಾವ ತಿಂಗಳಿನಲ್ಲಿ ಕೊಡಬೇಕೋ ಆ ಮಾರನೇ ತಿಂಗಳಿನ ಮೊದಲನೇ ದಿವಸದಿಂದ ಬಡ್ಡಿಗೆ ಶುರುವಾಗತಕ್ಕದ್ದು. ಆದರೆ ಕಮಿಷನರವರು ತಕ್ಕ ಸಬಬು ತೋರಿಸಲ್ಪಟ್ಟದ್ದರ ಮೇಲೆ ಸದರೀ ಬಾಕಿಗೆ ಅಥವಾ ಆ ಪೈಕಿ ಯಾವದಾದರು ಭಾಗಕ್ಕೆ ಸಲ್ಲತಕ್ಕ ಬಡ್ಡಿಯನ್ನು ಮಾಫ್ ಮಾಡಬಹುದು. ಸೆಕ್ಷನ್ ೭ ಮತ್ತು ೮ರ ಮೇರೆ ಯಾವದಾದರೂ ಬಲಾತ್ಕಾರವಾದ ರೀತಿಯನ್ನು ಅನುಸರಿಸಬೇಕಾದರೆ ಆ ಪ್ರೋಸೆಸ್ಸಿಗೆ ಫೀಜನ್ನು ಕಮಿಷನರವರು ತಮ್ಮ ಇಷ್ಟಾನುಸಾರ ಗೊತ್ತುಮಾಡಬಹುದು. ಆದರೆ ಅದು ಒಂದು ಕಂತಿಗೆ ಕೊಡಬೇಕಾದ ಮೊಬಲಗಿನ ನಾಲ್ಕರಲ್ಲಿ ಒಂದುಭಾಗವನ್ನು ಯಾವ ಸಂಗತಿಯಲ್ಲಿಯೂ ಅತಿಕ್ರಮಿಸಕೂಡದು. ಮೇಲ್ಕಂಡ ಫೀಜು, ಬಾಕಿ ಮೊಬಲಗು ಬಲಾತ್ಕಾರದಿಂದಲಾಗಲಿ ಅಥವಾ ಇತರ ವಿಧದಿಂದಲಾಗಲಿ ವಸೂಲ್ಮಾಡಲ್ಪಟ್ಟಾಗ್ಯೂ ಹಾಕಲ್ಪಡಬೇಕು. ಆದರೆ ಕಮಿಷನರವರು ತಮ್ಮ ಇಷ್ಟಾನುಸಾರ ಮಾಫ್ ಮಾಡಬಹುದು. ಈ ಸೆಕ್ಷನ್ ಮೇರೆ ಹಾಕಿದಂತಾ ಫೀಜು ೯ನೇ ಸೆಕ್ಷನ್ನಿಗೆ ಅನುಗುಣವಾಗಿ ಹಾಕುವ ಫೀಜಿನೊಳಗೆ ಸೇರಿರತಕ್ಕದ್ದು.

ಕಂದಾಯದ ಬಾಕಿ ಹ್ಯಾಗೆ ವಸೂಲ್ಮಾಡತಕ್ಕದ್ದು

೭. ಕಂದಾಯವು ಬಾಕಿ ಬಿದ್ದಾಗ ಕಮಿಷನರವರಾಗಲಿ ಅಥವಾ ಅದಕ್ಕೋಸ್ಕರ ಕಮಿಷನರವರಿಂದ ಅಧಿಕಾರ ಕೊಡಲ್ಪಟ್ಟ ಇತರ ಉದ್ಯೋಗಸ್ಥನಾಗಲಿ ಬಡ್ಡಿ ಮತ್ತು ಪ್ರೋಸೆಸ್ ಚಾರ್ಜ್ ಸಹಿತವಾಗಿ ಸದರೀ ಬಾಕಿಯನ್ನು ಈ ಕೆಳಗೆ ಹೇಳುವ ಯಾವದಾದರು ಒಂದು ರೀತಿಯಲ್ಲಿ ವಸೂಲ್ಮಾಡಬಹುದು.

(ಎ) ಬಾಕೀದಾರನಮೇಲೆ ಬರಹಮೂಲಕವಾದ ತಗಾದೆ ನೋಟಿಸ್ ಜಾರೀ ಮಾಡುವದರಿಂದ;

(ಬಿ) ಕಂದಾಯ ಕೊಡದೆ ತಪ್ಪಿದಲ್ಲಿ ಸಮ್ಮನಿನಲ್ಲಿ ಹೇಳುವಮೇರೆ ಕಮಿಷನರವರ ರೂಬುರೂಬ್ ಆಗಲಿ ಅಥವಾ ತಾಲ್ಲೂಕು ಸುಬೇದಾರ್ ರೂಬರೂಬ್ ಆಗಲಿ ಅಥವಾ ಕಮಿಷನರವರಿಂದ ಅಧಿಕಾರ ಕೊಡಲ್ಪಟ್ಟ ಇತರ ಉದ್ಯೋಗಸ್ಥನ ರೂಬರೂಬ್ ಆಗಲಿ ಹಾಜರಾಗಿ ಸಾವಕಾಶಕ್ಕೆ ಯೆಕ್ಸ್‌ಪ್ಲನೇಷನ್ ಕೊಡಬೇಕೆಂತ ಬಾಕಿದಾರನಿಗೆ ಸಮ್ಮನ್ ಕಳುಹಿಸುವದರಿಂದ,

(ಸಿ) ಬಾಕೀದಾರನ ಚರಜೀಂದಿಗಿಯನ್ನು ಜಪ್ತೀಮೂಲಕ ಹರಾಜು ಮಾಡಿಸುವದರಿಂದ;

(ಡಿ) ಬಾಕೀದಾರನ ಭೂಮಿಅಥವಾ ಇತರ ಸ್ಥಿರಸೊತ್ತನ್ನು ಜಪ್ತುಮಾಡಿಸಿ ಮಾರಿಸುವದರಿಂದ.

ಬರವಣಿಗೆಮೂಲಕ ತಗಾದೆ

೮. ಬಾಕೀ ಯಾವಾಗ ಬೀಳುತ್ತದೋ ಆ ದಿವಸ ಅಥವಾ ಅನಂತರ ಒಂದು ಬರಹಮೂಲಕವಾದ ತಗಾದೆಯನ್ನು ಕೊಡಬಹುದು, ಕಮಿಷನರವರ ಬರಹಮೂಲಕವಾದ ಸ್ಪೆಷಿಯಲ್ ಹುಕ್ಮುಂ ಇಲ್ಲವೆ ಕಂದಾಯ ಕೊಡದೆ ತಪ್ಪಿದವನಿಗೆ, ಬಾಕಿಯಾದ ಕಂದಾಯಕ್ಕ ಅಥವಾ ಅದರ ಭಾಗಕ್ಕೆ ತಗಾದೆ ನೋಟಿಸ್ ಕೊಟ್ಟಲ್ಲದೆ ಅಥವಾ ಅವನು ಗೈರ್‌ಹಾಜರ್ ಆಗಿದ್ದ ಪಕ್ಷದಲ್ಲಿ ಕಮಿಷ್ಟ ಪಕ್ಷ ೭ ದಿವಸಕ್ಕೆ ಮುಂಚೆ ಅವನ ವಾಸಸ್ಥಾನದಲ್ಲಿಟ್ಟಿದೆ ೭ನೇ ಸೆಕ್ಷನಿನ(ಬಿ)ಕಲಂಮೇರೆ ಸಮ್ಮನ್ ... ಅಥವಾ ಜಪ್ತೀಯ ಪ್ರೋಸೆಸ್ ಆಗಲಿ ಕೊಡಬಹುದು.

ಇತರ ಪ್ರೋಸೆಸ್‌ಗಳನ್ನು ಯಾವಾಗ ಕೊಡುವದು

ಪ್ರೋಸೆಸ್ ಫೀಜು

೯. ಕಂದಾಯ ಕೊಡದೆ ತಪ್ಪಿದವನಿಗೆ ಈ ರೆಗ್ಯುಲೇಷನ್‌ಮೇರೆ ಜಾರಿಮಾಡಲ್ಪಡುವ ತಗಾದೆ ನೋಟೀಸ್, ಸಮನ್ ಜಪ್ತಾಗಿ ದೆ ಯಾ ಅಡಳಿತ ವಹಿಸಿಕೊಂಡಿದೆ ಯಂತ ಕೊಡಲ್ಪಡುವ ನೋಟಿಸ್, ಯಾವ ಹರಾಜಿನ ಇಸ್ತಿಹಾರ್‌ಗಳ ಜಾರೀಬಗ್ಗೆ ವಸೂಲಾಗಬೇಕಾದ ಫೀಜು ಅಥವಾ ಚಾರ್ಜನ್ನು ಚೀಫ್ ಕಮಿಷನರವರು ಆಗಿಂದಾಗ್ಯೆ ಮೊಕರರ್ಮಾಡಿ ಸರ್ಕಾರ ಗೆಜಟಿನಲ್ಲಿ ಪ್ರಸಿದ್ಧಪಡಿಸುವರು.

ಕಮಿಷನರವರು ಚೀಫ್ ಕಮಿಷನರವರ ಅಧಿಕಾರಕ್ಕೆ ಒಳಗಾಗಿ ಉದ್ಯೋಗಸ್ಥರನ್ನು ಪ್ರೋಸೆಸ್ ಕೊಡುವ ದಕ್ಕೋಸ್ಕರ ಜಾರಿ ಮಾಡುವದಕ್ಕೂ ನೇಮಿಸಬಹುದು

೧೦. ಚೀಫ್ ಕಮಿಷನರವರ ಅಧಿಕಾರಕ್ಕೆ ಒಳಗಾಗಿ ಕಮಿಷನರವರು ಅಂತಾನೋಟೀಸುಗಳನ್ನೂ, ಸಮನ್‌ಗಳನ್ನೂ, ಅಥವಾ ಪ್ರಸಿದ್ಧ ಪತ್ರಿಕೆಗಳನ್ನೂ ಯಾರು ಕೊಡಬಹುದೋ ಮತ್ತು ಅವುಗಳು ಯಾರಿಂದ ಜಾರಿ ಅಥವಾ ಪ್ರಸಿದ್ಧಪಡಿಸಬಹುದೋ ಅಂತಾ ಉದ್ಯೋಗಸ್ಥರನ್ನು ಅಥವ ಜನಗಳನ್ನು ನೇಮಿಸಬಹುದು.

ಚೀಫ್ ಕಮಿಷನರವರು ಸ್ವತ್ತನ್ನು ಜಪ್ತೀ ಮಾಡುವದಕ್ಕೂ ಮಾರಾಟ ಮಾಡುವದಕ್ಕೂ ಉದ್ಯೋಗಸ್ಥರನ್ನು ನೇಮಿಸುವ ಅಧಿಕಾರ ಹೊಂದಲ್ಪಟ್ಟದ್ದು

೧೧. ಚೀಫ್ ಕಮಿಷನರವರು ಆಗಾಗ್ಯೆ ಯಾವ ಉದ್ಯೋಗಸ್ಥನಿಂದ ಅಥವಾ ಯಾವ ಉದ್ಯೋಗಸ್ಥರ ತರಗತಿಯಿಂದ ಈ ರೆಗ್ಯುಲೇಷನ್‌ಮೇರೆ ಬಾಕಿಯಾದ ಕಂದಾಯಕ್ಕಾಗಿ ಸೊತ್ತನ್ನು ಜಪ್ತೀಮಾಡಿ ಹರಾಜು ಮಾಡಲ್ಪಡಬೇಕೆಂಬದನ್ನು ನಿರ್ಣಯಿಸುವರು, ಮತ್ತು ಅವಶ್ಯವಾದಲ್ಲಿ ಆ ಕೆಲಸಕ್ಕೋಸ್ಕರ ಉದ್ಯೋಗಸ್ಥರನ್ನು ನೇಮಿಸುವರು. ಅಂತಾ ಉದ್ಯೋಗಸ್ಥರೆಲ್ಲರು ಕಮಿಷನರವರ ಅಧಿಕಾರಕ್ಕೆ ಒಳಗಾಗಿರತಕ್ಕದ್ದು.

ಚರಜೀಂದಿಗಿಯನ್ನು ಹಿಡಿಯುವಬಗ್ಗೆ ಹರಾಜು ಮಾಡುವಬಗ್ಗೆ ರೂಲ್ಸ್

೧೨. ಕಂದಾಯದ ಬಾಕಿಗೋಸ್ಕರ ಚರಜೀಂದಗಿಯನ್ನು ಹಿಡಿದುಕೊಳ್ಳುವಲ್ಲಿ ವ ವಿಕ್ರಯಿಸುವಲ್ಲಿ ಈ ಕೆಳಗೆ ಬರುವ ರೂಲ್ಸನ್ನು ಅನುಸರಿಸತಕ್ಕದ್ದು —

ಬರವಣಿಗೆಮೂಲಕ ತಗಾದೆ.

ಮೊದಲನೇದು;—ಕಮಿಷನರವರಾಗಲಿ, ಆ ಬಗ್ಗೆ ಕಮಿಷನರವರಿಂದ ಅಧಿಕಾರ ಹೊಂದಿದ ಇತರ ಆಫೀಸರಾಗಲಿ ಒಂದು ತಗಾದೆಯನ್ನು ಬರೆದು ಅದರಲ್ಲಿ ಕಂದಾಯ ಕೊಡಲಿಕ್ಕೆ ತಪ್ಪಿದವನ ಹೆಸರು ಯಾವ ಬಾಕಿಗೋಸ್ಕರ ಜಪ್ತೀಮಾಡಬೇಕಾಗಿರುತ್ತೋ ಆ ಬಾಬತು ಕಂದಾಯದ ಬಾಕಿ ಮೊಬಲಗು ಮತ್ತು ಸದರೀ ಬಾಕಿಕೊಡಬೇಕಾಗಿದ್ದ ತಾರೀಖು ಇವುಗಳನ್ನು ನಮೂದಿಸಿ ತಮ್ಮ ರುಜು ನಿಶಾನಿ ...

ಕಂದಾಯ ಕೊಡಲಿಕ್ಕೆ ತಪ್ಪಿದವನಿಗೆ ಒಂದು ನಕಲನ್ನು ಕೊಡತಕ್ಕದ್ದು

ಕಂದಾಯ ಕೊಡಲಿಕ್ಕೆ ತಪ್ಪಿದ ಮನುಷ್ಯನ ಜಂಗಿ ಜಪ್ತಿ ಮಾಡುವದಕ್ಕೆ ನೇಮಿಸಲ್ಪಟ್ಟ ಮನುಷ್ಯನಿಗೆ ಕೊಡತಕ್ಕದ್ದು. ಜಪ್ತೀಮಾಡುವದಕ್ಕೆ ನೇಮಿಸಲ್ಪಟ್ಟ ಮನುಷ್ಯನು ಸದರೀ ಬರವಣಿಗೆಯನ್ನು ಹಾಜರ್ಮಾಡತಕ್ಕದ್ದು. ಆ ಬರವಣಿಗೆಯಿಂದ ೯ನೇ ಸೆಕ್ಷನ್ ಅನುಸರಿಸಿ ತನಗೆ ಸಲ್ಲಬೇಕಾದ ಬಾಕಿಯು ಪ್ರೋಸೆಸ್ ಖರ್ಚು ದೇಖಿಲ್ ಕೂಡಲೇ ಪಾವತಿ ಮಾಡಲ್ಪಡದೆ ಇದ್ದರೆ ಜಪ್ತಿಮಾಡುವದಕ್ಕೆ ಆತನಿಗೆ ಅಧಿಕಾರ ಪ್ರಾಪ್ತವಾಗತಕ್ಕದ್ದು. ಮತ್ತು ಯಾವದಿನದಲ್ಲಿ ಸೊತ್ತು ಜಪ್ತೀಮಾಡಲ್ಪಡುವುದೋ ಆ ದಿನದೊಳಗೆ ಅಂಥಾ ಬರವಣಿಗೆಯಮೇಲೆ ಜಪ್ತೀಮಾಡಿದ ಮಾಲಿನ ಪಟ್ಟಿಯನ್ನು ಯಾವಸ್ಥಳದೊಳಗೆ ಆ ಸೊತ್ತು ಇಡಲ್ಪಡುವದೋ ಆ ಸ್ಥಳದ ಹೆಸರನ್ನು ಸಹ ಇಂಡಾರ್ಸ್ ಮಾಡಿ ಅದರ ಒಂದು ನಕಲನ್ನು ಕಂದಾಯ ಕೊಡಲಿಕ್ಕೆ ತಪ್ಪಿದವನಿಗೆ ಕೊಡತಕ್ಕದ್ದು.

ಜಪ್ತಿ ಮಾಡುವಾಗಲಾಗಲೀ ... ಸಲ್ಲತಕ್ಕ ... ತಕ್ಕದ್ದು

ಎರಡನೇದು,—ಸದರೀ ಬರವಣಿಗೆಯಲ್ಲಿ ಬರೆಯಲ್ಪಟ್ಟ ಉಯಾದ ಸ್ವತ್ತು ದೇಖೀಲ್ ಮೊಬಲಗು ಪ್ರೋಸೆಸ್ ಚಾರ್ಜ್ ಮತ್ತು ಜಪ್ತೀಮಾಡಿದ್ದರ ತಮಾಂ ಖರ್ಚುಗಳು ಸಹ ಮುಂದಾಗಿ ಪಡಿಚಾ ತಂದಿದ್ದರೆ, ಕೂಡಲೇ ಬಹಿರಂಗವಾದ ಹರಾಜಿಗೆ ಇಡಲ್ಪಡತಕ್ಕದ್ದೆಂತಲೂ, ನಮೂದಿಸತಕ್ಕದ್ದು.

ಕಂದಾಯದ ಹಣ ಕೊಡಲಿಕ್ಕೆ ತಪ್ಪಿದವನು ಗೈರ್‌ಹಾಜರ್ ಇದ್ದಲ್ಲಿ ಸದರೀ ನಕಲ್ ಸಾದರ್ ಮಾಡಲ್ಪಡಬೇಕಾದ ವಿವ

ಮೂರನೇದು,—ಕಂದಾಯಕೊಡಲಿಕ್ಕೆ ತಪ್ಪಿದವನು ಗೈರ್‌ಹಾಜರ್ ಇದ್ದಲ್ಲಿ, ಸದರೀ ಬರವಣಿಗೆಯ ಒಂದು ನಕಲನ್ನು ಇಂಡಾರ್ಸ್‌ಮೆಂಟ್ ದೇಖೀಲ್, ವಾಡಿಕೆಯಾದ ಅವನ ವಾಸಸ್ಥಾನದಲ್ಲಾಗಲಿ, ಸೊತ್ತು ಜಪ್ತಿಯಾಗಿರಬಹುದಾದವನ ಮುಂತಾದ್ದರಲ್ಲಾಗಲಿ, ಜಪ್ತೀಯಾದ ತಾರೀಖ್ ಮೊದಲು ಲೆಕ್ಕಮಾಡಿ ಮೂರನೇದಿನ ಕಳೆಯಲಿಕ್ಕೆ ಮುಂದಾಗಿ ಅಂಟಿಸತಕ್ಕದ್ದು ಯಾ ಇಡಲ್ಪಡತಕ್ಕದ್ದು.

ಕಂದಾಯ ಕೊಡಲಿಕ್ಕೆ ತಪ್ಪಿದವನು ನೋಟಿಸ್ ಕೊಡಲ್ಪಟ್ಟಮೇಲೆ ಮೊಬಲಗು ಕೊಡಲಿಕ್ಕೆ ಉಪೇಕ್ಷಿಸುವದರ ಫಲ

೧೩. ಸಲ್ಲಬೇಕಾದ ಮೊಬಲಗು ತಗಾದೆ ಪತ್ರಗಳು ಅನುಸರಿಸಿ, ಪಾವತೀ ಮಾಡಲ್ಪಡದೆ ಇದ್ದರೆ, ಮತ್ತು ಅದನ್ನು ವಸೂಲ್ಮಾಡಲಿಕ್ಕೆ ಕಮಿಷನರವರಿಗಾಗಲಿ ಆ ಬಗ್ಗೆ ಕಮಿಷನರವರಿಂದ ಅಧಿಕಾರ ಕೊಡಲ್ಪಟ್ಟ ಇತರ ಆಫೀಸರಿಗಾಗಲಿ ತೃಪ್ತಿಕರವಾಗಿ ಯೇರ್ಪಾಡೇನೂ ಮಾಡಿಕೊಳ್ಳಲ್ಪಡದಿದ್ದರೆ, ಜಪ್ತೀದಾರನು ಜಪ್ತೀ ಮಾಡಲ್ಪಟ್ಟ ಸೊತ್ತಿನ ಒಂದು ಪಟ್ಟಿಯನ್ನು ಜಪ್ತೀ ಮಾಲಿನ ಬಹಿರಂಗವಾದ ಹರಾಜ್‌ಬಗ್ಗೆ ೧೧ನೇ ಸೆಕ್ಷನ್ ಅನುಸರಿಸಿ ಚೀಫ್ ಕಮಿಷನರವರಿಂದ ಅಧಿಕಾರ ಕೊಡಲ್ಪಟ್ಟ ಸಮೀಪದಲ್ಲಿರುವ ಸರ್ಕಾರದ ಉದ್ಯೋಗಸ್ಥರಿಗೆ ಬಡ್ತೀ ಫೀಜ್ ವ ಜಪ್ತೀಯಾಗದ ದೇಖೀಲ್ ಸಲ್ಲಬೇಕಾದ ಬಾಕೀಯನ್ನು ಫೈಸಲ್ಮಾಡುವಬಗ್ಗೆ ಕಳುಹಿಸತಕ್ಕದ್ದು.

BANGALORE.—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಾಮುವಿವಿಧಪ್ರವೃತ್ತ್ಯವೆಗನಾರ್ಥ್ಯ ಕರ್ಣಾಟಕಪ್ರಕಾಶನವರಾಬಿದಾಪ್ರಥಿತಸಾಹಿತೀಶೋಭಿತಾ ॥ ಮ್ರಿಗಾಂಕಹಿತವಾಸರೆನಿಹಿತಮುದ್ರಣಾಸಜ್ಜನೈರ್ದ್ರಿಶಾನುಪರಿಪೋಷಿತಾದಿಶತಿಮಾನಸಂಸುಮದಂ ॥

Vol. XIII.] BANGALORE—MONDAY, SEPTEMBER 13, 1886. [No. 37.

ಸಂಪುಟ ೧೩.] ಬೆಂಗಳೂರು:—ಸನ್ ೧೮೮೬ನೇ ಇಸವಿ ಸೆಪ್ಟಂಬರ್ ೧೩ನೇ ತಾರೀಖ್ ಸೋಮವಾರ. [ಸಂಚಿಕೆ ೩೭.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ತೆಗದುಕೊಳ್ಳತಕ್ಕವರಿಗೆ, ವರುಷ ೧ಕ್ಕೆ	೧೨—೦—೦
ಇಂಗ್ಲಿಷ್ ಮಾತ್ರ ತೆಗದುಕೊಳ್ಳತಕ್ಕವರಿಗೆ ವರುಷ ೧ಕ್ಕೆ	೬—೦—೦
ಕನ್ನಡ ಮಾತ್ರ ತೆಗದುಕೊಳ್ಳತಕ್ಕವರಿಗೆ ಪೋಸ್ಟ್ ಮೇಲೆ ವರುಷಕ್ಕೆ.	೬—೦—೦
ಬಿಡಿ ೧ಕ್ಕೆ	೦—೮—೦

ಷರಾ,—ಚಂದಾದಾರರು ಇಂಗ್ಲಿಷ್ [illegible] ಅಥವಾ, ಮೊರದಾರ್ಥ್ಯ ತೆಗದುಕೊಳ್ಳಬಹುದು. ಚಂದಾ ಹಣವನ್ನು ಮುಂದಾಗಿಯೇ ಸಲ್ಲಿಸತಕ್ಕದ್ದು.

ಪ್ರಕಟನೆಯ ರಿವಾಜ್.

ಮೊದಲನೇದಫಾ ಪಂಕ್ತಿ	೧ಕ್ಕೆ	೦—೨—೦
ಮರದನೇದಫಾ ಪಂಕ್ತಿ	೧ಕ್ಕೆ	೦—೧—೦

NOTICE TO SUBSCRIBERS

ಇದರಿಂದ ತಿಳಿಸ್ಪಡುವ ಅಂಶಗಳಿಗೆ ನಮ್ಮ ಚಂದಾದಾರರೆಲ್ಲರೂ ಮತ್ತು ನಿಗೆ ಕೊಡಬೇಕೆಂದು ಕೋರುತ್ತೇವೆ ಯೇನಂದರೆ:—

೧. ಕರ್ಣಾಟಕ ಪ್ರಕಾಶಿಕೆಯ ಚಂದಾದಾರರಿಗೆ [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA.

☞ Price including Postage, Rs. 5-0-0

ವೈದ್ಯಸಾರ ಸಂಗ್ರಹ.

ಈ ಗ್ರಂಥವು [illegible]

ಪುಸ್ತಕವೊಂದಕ್ಕೆ	ರೂ॥ ೫—೦—೦
ಅಂಚೆ ಮತ್ತು ಅಂಚೇ ಖರ್ಚು	೦—೬—೦

ಟಿ. ಬಿ. ವೆಂಕಟರಾವ್, ಅಸ್ಸಿಸ್ಟೆಂಟ್ ಸರ್ಜನ್, ಬೆಂಗಳೂರು.

ನೋಟೀಸ್.

ಇದರಿಂದ ತಿಳಿಸಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸ್‌ನಲ್ಲಿ ಕ್ರಯ ಕ್ಕೆ ದೊರೆಯುತ್ತವೆ,—

ಕನ್ನಡ ಟೀಕೆ ಸಹಿತವಾದ ಸಂಸ್ಕೃತ ಗ್ರಂಥಗಳು.

ಶಾಲಾಪ್ರಮೃತ. ...	೧—೪—೦
ಮುಕುಂದಮಾಲಾ. ...	೦—೧೨—೦
ಭಗವದ್ಗೀತಾ (ಪಟ್ಟಾಂಕಾಣಕ) ...	೦—೩—೦
ರಾಮಾಯಣದೀಪಿಕಾ ಮಹಾಭಾರತ. ...	೦—೫—೦
ಬಾಲರಾಮಾಯಣ ...	೦—೪—೦
ಅಮರ	೦—೧೪—೦
[illegible] ...	೦—೮—೦
ಬಾಲಗ್ರಹ.	೦—೨—೦
ವೈದ್ಯಸಾರಸಂಗ್ರಹ ...	೫—೦—೦

ಕನ್ನಡ ಗ್ರಂಥಗಳು.

ಶುಕಮುದ್ರಾಲಾಪ. ...	೦—೮—೦
ಶಾಕುಂತಲಾಪರಿಣಯ. ...	೦—೪—೦
ಪುಣ್ಯ[illegible] ...	೦—೩—೬
ಸುಭಾಷಿತರತ್ನ.	೦—೨—೬
ಬಾಬು[illegible] ...	೦—೪—೦
ಆಶೌಚಪ್ರಕಾಶ. ...	೦—೨—೦
[illegible] ...	೦—೨—೬
ಪಂಚ[illegible] ...	೦—೮—೦
[illegible] ...	೦—೩—೦
[illegible]	೦—೨—೦
[illegible] ...	೦—೦—೯
ಇಂಗ್ಲಿಷ್ ಕನ್ನಡ ಸೇರಿದ ಮುದ್ರಾ[illegible]	೧—೦—೦
[illegible]	೨—೦—೦
[illegible] ...	೦—೧೨—೦
[illegible] ...	೩—೪—೬
ಪ್ರಬೋಧ[illegible]ವಿಜಯ. ...	೩—೪—೬
ಅರೇಬಿಯನ್ ನೈಟ್ ಎಂಬರಥ	
೧ನೇ ಸಂಚಿಕೆ. ...	೦—೮—೦
೨ನೇ ಸಂಚಿಕೆ	೧—೮—೦
[illegible] ...	೦—೮—೦

ಸಂಸ್ಕೃತ ಮೂಲಗ್ರಂಥಗಳು.

ವಿಷ್ಣುಸಹಸ್ರನಾಮ. ...	೦—೫—೦
ಸೂರ್ಯಸಹಸ್ರನಾಮ. ...	೦—೨—೬
ಕೃಷ್ಣಕರ್ಣಾಮೃತ. ...	೦—೨—೬
[illegible] ...	೦—೦—೬
[illegible] ...	೦—೩—೬
೧ ಕಾಂಡ ಅಮರ. ...	೦—೧—೦

ಮೇಲಿನ [illegible]

ಪ್ರಕಟನೆ.

ಇದರಿಂದ ತಿಳಿಸುವದೇನಂದರೆ—ಅಗರದ ದಿನ್ನೆಯಬಳಿ, ಸರ್ಜಾಪುರ ರಸ್ತೆಯೊಳು ಬಿಕರೀಗೆ, ಒಂದು ತೋಟದಲ್ಲಿ ೨,೦೦೦ ಕ್ಯಾಸರಿಕೆ ಗಿಡಗಳಿರುತಿವೆ. ಆ ಬಗ್ಗೆ ಬೇಕಾದವರು ದರಖಾಸ್ತುಗಳು ಕೊಡಬಹುದು, ಪರಂತು ಅವು ಮುಂಜಾಗರೂಕತೆಗೆ ಗುರಿಯಾಗಿರತಕ್ಕವು.

ಕಂಟೋನ್ಮೆಂಟ್ ರೆಸಿಡೆನ್ಸಿ ರಸ್ತೆ ೨೫ನೇ ನಂಬರ್ ಮನೆಯಲ್ಲಿರುವ ಮಾಲೀಕರಿಗೆ ಬರೆದುಕೊಳ್ಳತಕ್ಕದ್ದು.

ಪ್ರಕಟನೆ.

ಇಂಡಿಯನ್ ಕಂಪನೀಸ್ ೧೮೬೬ನೇ ಇಸವಿ ೧೦ನೇ ನಂಬರ್ ಆಕ್ಟ್ ಮೇರೆ.
ಮೈಸೂರು ಪ್ರಸ್ಥನತೀ ಸಹಾಯನಿಧಿ ಬ್ಯಾಂಕ್ ವಿಷಯದಲ್ಲಿ.

ಇದರಿಂದ ತಿಳಿಯಪಡಿಸುವದೇನಂದರೆ —ಸನ್ ೧೮೮೬ನೇ ಇಸವಿ ಆಗಸ್ಟ್ ತಾರೀಖ್ ೨೫ರಲ್ಲು ಪ್ರಸ್ಥನತೀ ಬ್ಯಾಂಕಿಗೆ ಹಣ ಹಾಕಿರತಕ್ಕ ಷೇರ್‌ದಾರ್ರುಗಳಾದ ನಾರಣಪ್ಪ ವಗೈರೆಯರು ಮೈಸೂರು ಡಿಸ್ಟ್ರಿಕ್ಟ್ ಜಡ್ಜಿರವರ ಕೋರ್ಟಿಗೆ ಸದರೀ ಬ್ಯಾಂಕ್ ನಿಲ್ಲಿಸಿಬಿಡಬೇಕೆಂದು ಅರ್ಜಿ ಕೊಟ್ಟಿರುತ್ತಾರೆ. ಮೇಲ್ಕಂಡ ಅರ್ಜಿ ವಿಷಯದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಜಡ್ಜಿರವರು ಬಾಕ್ಸೀ ಇಸವಿ ಸೆಪ್ಟಂಬರ್ ೩೦ನೇ ತಾರೀಖಿನಲ್ಲಿ ಪ್ರವರ್ತ್ತಿ ಮಾಡುತ್ತೇನೆಂತ ಹುಕುಂ ಮಾಡಿರುತ್ತಾರೆ. ಆದದರಿಂದ ಮೇಲೆ ಕಂಡವರೇರೆ ಸದರೀ ಬ್ಯಾಂಕಿಗೆ ಹಣ ಹಾಕಿರತಕ್ಕವರ ಪೈಕಿ ಯಾರಾದರೂ ಮೇಲೆ ಕಂಡ ಆಕ್ಟು ಅನುಸರಿಸಿ ಸದರೀ ಬ್ಯಾಂಕ್ ನಿಲ್ಲಿಸಬೇಕೆಂಬದಾಗಿ ಆರ್ಡರ್ ಆಗತಕ್ಕ ವಿಷಯದಲ್ಲಿ ತಕರಾರ್ ಯೇನಾದರೂ ಮಾಡಬೇಕಾಗಿದ್ದಲ್ಲಿ, ತಾವೇ ಖುದ್ದಾಗಿ ಯಾಗಲಿ ಅಥವಾ ವಕೀಲರ ಮೂಲಕವಾಗಲಿ ತಮ್ಮ ಕಡೆ ಹಾಜರಾಗತಕ್ಕದ್ದು. ಸದರೀ ಬ್ಯಾಂಕಿನ ಷೇರ್‌ದಾರು ಯಾರೇ ಆಗಲಿ ಮೇಲೆ ಕಂಡ ಅರ್ಜೀ ನಕಲನ್ನು ಪಡೆಯಬೇಕೆಂದು ಇಷ್ಟಪಡುವವರಿಗೆ ತಕ್ಕ ಚಾರ್ಜನ್ನು ಕೊಟ್ಟು, ಸದರೀ ಯವರಿಂದ ಪಡೆಯಬಹುದಾಗಿದೆ.

ಮೈಸೂರು, ೧೦ನೇ ಸೆಪ್ಟಂಬರ್, ೧೮೮೬. } ಡಿ. ಮತ್ತು ಅನಂತರಾವ್, ಅರ್ಜಿದಾರರ ಅಡ್ವೊಕೇಟ್‌ಗಳು

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, SEPTEMBER 13, 1886.

೧೮೮೬ನೇ ಸೆಪ್ಟಂಬರ್ ೧೩ನೇ ತಾ॥ ಸೋಮವಾರ

THE PRESENT REVENUE ADMINISTRATION IN MYSORE.

ಸರ್ವ ವಿಷಯದಲ್ಲೂ ತಮ್ಮ ಪ್ರಜೆಗಳನ್ನು ನ್ಯಾಯಸಮ್ಮತವಾಗಿಪಾಲಿಸಬೇಕಾದದ್ದು ಆಯಾಯ ದೇಶಗಳನ್ನಾಳತಕ್ಕವರಿಗೆ ಮುಖ್ಯ ಕರ್ತವ್ಯವಾಗಿರುತಿದೆ. ಅಂತಾ ಆಳ್ವಿಕೆಯು ಸಿವಿಲ್, ಕ್ರಿಮಿನಲ್, ರೆವಿನ್ಯೂ ಯೆಂದು ಮೂರುವಿಧವುಳ್ಳದ್ದಾಗಿದೆ. ಇವುಗಳಪೈಕಿ ಮೊದಲನೆಯದಾದ ಸಿವಿಲ್ ವ್ಯವಹಾರವು ಆಯಾಯ ಜಾತಿಯವರ ಧರ್ಮಶಾಸ್ತ್ರ, ದೇಶವಾಡಿಕೆ, ತದನುಗುಣಗಳಾದನ್ಯಾಯನಿಬಂಧನೆಗಳನ್ನನುಸರಿಸಿದ್ದಾಗಿದೆ. ಈ ವಿಷಯದಲ್ಲಿ ಈದೇಶದೊಳು ಆಚರಿಸಲ್ಪಡುವ ಕ್ರಮವು ಇಂಡ್ಯದೇಶದಲ್ಲಿ ಸರ್ವತ್ರ ಆಚರಿಸಲ್ಪಡುವ ಕ್ರಮಕ್ಕಿಂತಲೂ ಶ್ರೇಷ್ಠವಾದದ್ದೆಂದು ಯೇರ್ಪಟ್ಟಿದೆ. ಕ್ರಿಮಿನಲ್ ವಿಷಯದಲ್ಲಿ ಸರ್ವತ್ರ ಏಕರೀತಿಯಾಗಿ ನಡೆಯುವದಕ್ಕೆ ಬ್ರಿಟಿಷಿನವರು ತಕ್ಕ ಯೇರ್ಪಾಟುಗಳು ಮಾಡಿರುತ್ತಾರೆ. ಮೇಲಿನ ಯೆರಡು ಬಾಬುಗಳೂ ಹೋಗುತ ಉಳದದ್ದು ರೆವಿನ್ಯೂ ಬಾಬಷ್ಟೆ. ಇದರ ಆಳತಕ್ರಮವು ಯಾವ ದೇಶದಲ್ಲಾಗಲಿ ಆಳತಕ್ಕ ಅರಸರ ಇಷ್ಟಾನುವರ್ತಿಯಾಗಿರುತಿದೆ. ಈ ಮೈಸೂರುದೇಶದೊಳು ಬ್ರಿಟಿಷ್ ಆಳ್ವಿಕೆ ಸಲಗೊಂಡಿದ್ದ ಕಾಲದಲ್ಲಿ ಕಂದಾಯ, ಕಟ್ಟಾಯ, ಮಿರಾಶಿ, ವಾರಸ್, ಇವು ಮೊದಲಾದ ವ್ಯಾಜ್ಯಗಳು ಸಿವಿಲ್ ಕೋರ್ಟುಗಳಲ್ಲಿ ನಡೆಯತಕ್ಕವಲ್ಲವೆಂತಲೂ, ಪರಂತು ರೆವಿನ್ಯೂ ಇಲಾಖೆಯಲ್ಲಿಯೇ ಸಿವಿಲ್ ಕ್ರಮವನ್ನನುಸರಿಸಿ ವ್ಯವಸ್ಥೆಯಾಗತಕ್ಕವೆಂತಲೂ ನಿಬಂಧನೆಯುಂಟಾಗಿ, ಅದನ್ನನುಸರಿಸಿ, ತಾಲ್ಲೂಕು, ಸಬ್‌ಡಿವಿಜನ್, ಡಿಸ್ಟ್ರಿಕ್ಟ್, ಡಿವಿಜನ್, ಚೀಫ್ ಕಮ್ಮಿಷನರ್, ಇನ್ನು ಇಲಾಖೆಗಳಲ್ಲಿ, ಮೊಕದ್ದಮೆಯ ಸ್ವರೂಪಾನುಗುಣವಾಗಿ ಪರಿಶೀಲನೆ ಮತ್ತು ಅಪೀಲುಗಳು ಫೈಸಲಾಗುತಬುದವು. ಇದಕ್ಕೆ ದೇಶವಾಡಿಕೆಯನ್ನೂ, ರೈಯತ್ ಪರವರ್ಷೀಯನ್ನೂ ಅನುಸರಿಸಿ ಆಗಿಂದಾಗ್ಯೆ ಕೊಡಲ್ಪಡುತಬಂದ ಸರ್ಕ್ಯುಲರ್‌ಗಳೂ ಇಷ್ತಿಹಾರ್‌ಗಳೂ ನ್ಯಾಯನಿಬಂಧನೆಯಾಗಿದ್ದವು.

ಈ ರಾಜ್ಯವು ಶ್ರೀಮನ್ಮಹಾರಾಜವರಿಗೆ ಒಪ್ಪಿಸಲ್ಪಟ್ಟಮೇಲೆ ರೆವಿನ್ಯೂ ವ್ಯವಹಾರಗಳುಂ ಸಿವಿಲ್ ಕೋರ್ಟುಗಳಲ್ಲಿ ನಡೆಯಕೂಡದೆಂಬ ಹಿಂದಿನ ಒಂದು ಕ್ರಮಮಾತ್ರ ಊರ್ಜಿತವಾಗಿದ್ದಾಗ್ಯೂ ಮಿಕ್ಕವು ಅತ್ಯಂತಿಕವಾಗಿ ರದ್ದಾಗದೆ ನಾಮಮಾತ್ರಾವಶಿಷ್ಟವಾಗಿದೆ. ಹಿಂದೆ ಇದ್ದ ಐದು ಇಲಾಖೆಗಳಿಗೆ ಬದಲಾಗಿ ಈಗ ತಾಲ್ಲೂಕು, ಡಿಸ್ಟ್ರಿಕ್ಟ್, ಹಿಜೂರ್ ಕಚ್ಚೇರಿ ಯೆಂಬ ಮೂರು ಇಲಾಖೆಗಳು ಏರ್ಪಾಡಾದವು. ಇಂಡ್ಯ ಗವರ್ನ್‌ಮೆಂಟಿನವರಿಗೆ ಪೂರ್ವ ಇದ್ದ ಅಧಿಕಾರವು ಈಗ ಸುತರಾಂ ತಪ್ಪಿ ಅದು ಮಹಾರಾಜರವರಿಗೆ ಸೇರಿರುವದೆ. ಡೆಪ್ಯುಟಿ ಕಮ್ಮಿಷನರ್‌ಗಳು ಸರ್ವೇ ಸೂಪರಿಂಟೆಂಡೆಂಟರು, ಫಾರೆಸ್ಟ್ ಆಫೀಸರರು, ಇಂಜಿನಿಯರ್ ಇಲಾಖೆಯವರು, ಇವರುಗಳ ಫೈಸಲ್ ಮೇಲೆ ತರಲ್ಪಡುವ ವಿಶಿಷ್ಟ ಅಪೀಲ್‌ಗಳೂ ದಿವಾನರವರಿಂದಲೇ ಫೈಸಲಾಗಬೇಕಾಗಿದೆ. ಆದದರಿಂದ ಅನೇಕಮಂದಿ ಸೆಕ್ರಿಟರಿಗಳೂ ಪರ್ಸನಲ್ ಅಸಿಸ್ಟೆಂಟರುಗಳೂ, ಕೌನ್ಸಿಲರ್‌ಗಳೂ ಯೇರ್ಪಟ್ಟಿರುತ್ತಾರೆ. ಒಂದು ಮೊಕದ್ದಮೆಯು ಯಾವಕ್ರಮವನ್ನನುಸರಿಸಿ ಯಾರಮೂಲಕ ವ್ಯವಸ್ಥೆಯಾಗುತ ಬರುತಿದೆಯೋ ಅದು ತಿಳಿಯುವದಿಲ್ಲವು, ಪರಂತು ಕಾಲವಿಳಂಬವಾಗುವದುಮಾತ್ರ ಪ್ರಸಿದ್ಧವಾಗಿ ಯೆಲ್ಲರಿಗೂ ತಿಳದ ಅಂಶವಾಗಿದೆ. ವಾರಕ್ಕೊಂದಾವರ್ತಿ ದಿವಾನರವರು ದರ್ಬಾರ್‌ಮಾಡಿ ಫಿರ್ಯಾದ್‌ಗಳನ್ನು ಕೇಳುತ್ತಾರೆಂದು ಪ್ರಸಿದ್ಧವಾಗಿವೆ, ಪರಂತು ಈ ಪದ್ಧತಿಯು ಐಚ್ಛಿಕವೆಂತಲೇ ಕಾಣುತಿದೆ. ಬ್ರಿಟಿಷ್ ಆಳ್ವಿಕೆಯಲ್ಲಿ ಇಂಡ್ಯ ಗವರ್ನರ್ ಜನರಲ್ ಸಾಹೇಬರವರಲ್ಲಿ ಚೀಫ್‌ಕಮ್ಮಿಷನರವರ ಫೈಸಲಿನಮೇಲೆ ತರಲ್ಪಡುವ ಅಪೀಲ್‌ಗಳನ್ನು ಅವರ ಮಾರ್ಫತ್ತು ಕಳುಹಿಸಬೇಕೆಂದು ಒಂದು ನಿರ್ಬಂಧ ಯೇರ್ಪಟ್ಟ ಅದರಿಂದ ಚೀಫ್‌ಕಮ್ಮಿಷನರ ಫೈಸಲಿನಲ್ಲಿ ಅತೃಪ್ತಿಯೂ, ಮರಳಿ ಅವರಮೂಲಕವಾಗಿಯೇ ಅಪೀಲ್‌ಮಾಡಿಕೊಳ್ಳಬೇಕಾದ ತೊಂದರೆಯೂ ಪ್ರಜೆಗಳಿಗೆ ಉಂಟಾಗಿದ್ದದನ್ನರಿತು ಶ್ರೀಮನ್ಮಹಾರಾಜರವರು ತಮ್ಮ ದಿವಾನರವರ ಫೈಸಲಿನ ಮೇಲೆ ಅಪೀಲ್ ಇಲ್ಲವಂದು ವ್ಯವಸ್ಥೆ ಮಾಡಿದಂತೆ ಊಹಿಸಬೇಕಾಗಿದೆ. ಹಾಗಿರುವಪಕ್ಷಕ್ಕೆ ಅದನ್ನು ಸಬ್ದತಃ ಅಪ್ಪಣೆಕೊಟ್ಟಿದ್ದರೆ ಅದೊಂದು ಬಗೆಹರಾಗಿರುವದು. ಹಾಗಿಲ್ಲದೆಹೋದದರಿಂದ ಜನಗಳಿಗೆ ಜಿಗುಪ್ಸೆಗೆ ಕಾರಣವುಂಟಾಗಿದೆ. ಹಿಂದಿನ ಚೀಫ್ ಕಮ್ಮಿಷನರವರಮೇಲೆ ಗವರ್ನರ್ ಜನರಲ್ ಸಾಹೇಬರವರಿಗೆ ಉಂಟಾಗಿದ್ದ ನಂಬಿಕೆಗಿಂತಲೂ ದಿವಾನರವರಮೇಲೆ ಶ್ರೀಮನ್ಮಹಾರಾಜರವರಿಗೆ ಉಂಟಾಗಿರುವ ನಂಬಿಕೆಯು ಬಲವತ್ತರವಾದದೆಂಬದಕ್ಕೆ ಸಂಶಯವಿಲ್ಲವು. ಅಂತಾ ನಂಬಿಕೆಗೆ ವಿಷಯರಾಗಿರುವ ದಿವಾನರವರು ತಮ್ಮ ಸೆಕ್ರಿಟರಿಗಳಲ್ಲಿ ಬದಸ್ತೂರ್ ನಂಬಿಕೆ ಇಟ್ಟದಾ

-ಕೆಂಬವಕ್ಕೆ ಸಂಶಯ ತೋರಲಿಲ್ಲವು. ಆದದರಿಂದ ರೆವಿನ್ಯೂ ವ್ಯವಹಾರಗಳಲ್ಲಿ ಪ್ರಜೆಗಳು ತಮ್ಮ ಅದೃಷ್ಟದಮೇಲೆ ನಂಬಿಕೆಯಿಟ್ಟು ತೃಪ್ತರಾಗಿರಬೇಕೆಂದು ಹೇಳುವೆವು.

BRAHMINS AND HUSBANDRY

ಶೃಂಗೇರಿ ಜಗದ್ಗುರು ಶಿವಾಭಿನವ ನರಸಿಂಹ ಭಾರತಿಗಳವರು, ದೇಶ ಸಂಚಾರಾರ್ಥ ಮಲನಾಡು ಪ್ರಾಂತಕ್ಕೆ ಸವಾರಿ ಚಿತ್ತೈಸಿರುವ ಅಂಶವನ್ನು ಹಿಂದಿನ ಪತ್ರಿಕೆಯ ಮೂಲಕ ತಿಳಿಸಿಯಿರುತ್ತೇವೆಯಷ್ಟೆ. ಸದರೀ ಸ್ವಾಮಿಗಳವರು ತಮ್ಮ ಕರ್ತವ್ಯವನ್ನು ಸಾಂಗವಾಗಿ ನೆರವೇರಿಸುವ ಅಂಶದಲ್ಲಿ ಒಬ್ಬಾನೊಬ್ಬ ಸೊರಬದ ಬಾತಮಿದಾರನು ಬರೆದಿರುವ ಸಂಗತಿಯನ್ನು ಇದರದಿ ಪ್ರಕಟಿಸಿರುತ್ತೇವೆ ಯೇನಂದರೆ.—

ಈಚೆಗೆ ಸ್ವಲ್ಪ ದಿವಸದ ಕೆಳಗೆ ಕುಣಿಗಲ್ ತಾಲ್ಲೂಕು ನಾಗಸಂದ್ರದ ಹೋಬಳಿ ಹೆಡಿಗೆರೆ ಎಂಬ ಗ್ರಾಮದಲ್ಲಿ ಸೂರಪ್ಪನೆಂಬವರ ಮನೆಯಲ್ಲಿರುವ ನಂಜುಂಡಯ್ಯ, ವೆಂಕಟರಮಣಯ್ಯ ಯೆಂಬ ಇಬ್ಬರು ಮಧ್ವ ಮತಸ್ಥರು ಪ್ರಾಯಶ್ಚಿತ್ತವಿಲ್ಲದೆ ಸ್ಮಾರ್ತಮತವನ್ನವಲಂಬಿಸಿರುವದಾಗಿಯೂ, ಮತ್ತು ಇವರಿಬ್ಬರೂ ಸ್ವತಃ ಕೃಷಿ ವ್ಯವಸಾಯವನ್ನು ಮಾಡುವದಕ್ಕೆ ಉಪಕ್ರಮಿಸಿರುತ್ತಾರೆಂತಲೂ ಶ್ರೀಜಗದ್ಗುರು ಶೃಂಗೇರಿ ಶ್ರೀಗಳವರ ಸನ್ನಿಧಿಗೆ ಅಲ್ಲಿನ ಮಠಮುದ್ರೆಯವರು ಶ್ರುತಪಡಿಸಿದ್ದರಮೇಲೆ ಹೇಮಾದ್ರಿಯಲ್ಲಿ ವಿಧಾಯಕವಾಗಿರುವಂತೆ ಸ್ಥಳದ ಮಹಾಜನಗಳಮುಂದೆ ಸದರೀ ನಂಜುಂಡಯ್ಯ, ವೆಂಕಟರಮಣಯ್ಯ ಸಹ ಪ್ರಾಯಶ್ಚಿತ್ತ ಮಾಡಿಕೊಳ್ಳುವದಕ್ಕೆ ಇಷ್ಟಪಟ್ಟಲ್ಲಿ ಆರೀತಿ ಪ್ರಾಯಶ್ಚಿತ್ತಪೂರ್ವಕ ಸೇರಿಸಿಕೊಳ್ಳಬಹುದೆಂತಲೂ ಸ್ವತಃ ಕೃಷಿ ಮಾಡುತ್ತಾರೆಂಬ ಸಂಗತಿಯಲ್ಲಿ ಆಪತ್ಕಾಲದಲ್ಲಿ ಬ್ರಾಹ್ಮಣನು ಸ್ವಯಂ ಕೃಷಿ ವ್ಯವಸಾಯ ಮಾಡಬಹುದೆಂದು ಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟದೆ, ಪರಂತು ಇದಕ್ಕಾಗಿ ಪರಾಶರ ಮಾಧವೀಯದಲ್ಲಿ ಉಕ್ತವಾಗಿರುವ ನಿಯಮವನ್ನು ಆಚರಿಸಬೇಕು, ಹ್ಯಾಗಂದರೆ —

ನೇಗಲಿಗೆ ದುರ್ಬಲವಾದ ವೃಷಭವನ್ನು ಕಟ್ಟದೆ ಒಂದು ಹುಳಕ್ಕೆ ನಾಲ್ಕು ವೃಷಭಗಳನ್ನು ಕಟ್ಟಿಕೊಂಡು ಕ್ಷುದ್ರಾದಿಗಳ ಸಂಪರ್ಕವಿಲ್ಲದೆ ಮಧ್ಯಾಹ್ನ ಪರ್ಯಂತ ಉತ್ತು ಅನಂತರ ವೃಷಭಗಳನ್ನು ತೊಳೆದು ಆಹಾರಾದಿಗಳನ್ನು ಕೊಟ್ಟ ತರುವಾಯ ಸ್ನಾನ ನಿತ್ಯಕರ್ಮಾದಿಗಳನ್ನು ಮಾಡಿಕೊಂಡು ಅತಿಥಿ ಸತ್ಕಾರವನ್ನು ಮಾಡಬೇಕು. ಇದಕ್ಕೆ ವಿರೋಧವಾಗಿ ನಡದಲ್ಲಿ ದೋಷಕ್ಕೆ ಪಾತ್ರರಾಗುತ್ತಾರಲ್ಲದೆ ಸದ್ವ್ಯವಹಾರಾದಿಗಳಿಗೆ ಅನರ್ಹರಾಗುತ್ತಾರೆ. ಆದಕಾರಣ ಈರೀತಿಯಲ್ಲಿ ಅವರು ನಡೆಯುವದಕ್ಕೆ ಸಮ್ಮತಿಸಿದರೆ ಸ್ವತಃ ಕೃಷಿವ್ಯವಸಾಯ ನಡೆಸಬಹುದೆಂದು ಶ್ರೀಮಠದಿಂದ ಈ ಮಾಹೆ ೨೫ನೇ ತಾರೀಖಿನಲ್ಲಿ ಆ ಸ್ಥಳದ ಮಠಾಧಿಕಾರಿಗಳಿಗೂ, ಸದರೀ ನಂಜುಂಡಯ್ಯ, ವೆಂಕಟರಮಣಯ್ಯ ಇವರಿಬ್ಬರಿಗೂ ಪ್ರತ್ಯೇಕ ನಿರೂಪ ಕೊಟ್ಟಿರುತ್ತಾರೆ. ಇದರಿಂದ ಭೂಮಿಯ ವ್ಯವಸಾಯ ಸ್ವಂತವಾಗಿ ಮಾಡುವದು ಬ್ರಾಹ್ಮಣನಿಗೆ ಜಾತಿಭ್ರಂಶಕರವೆಂಬ ನೆಪದಿಂದ ಮೈಗಳ್ಳತನ ಮಾಡಿಕೊಂಡು ಕುತ್ಸಿತಮಾರ್ಗದಲ್ಲಿ ಜೀವಿಸತಕ್ಕವರಿಗೆ ಮುಂದೆ ಈ ನೆಪವು ಉಪಯೋಗಿಸಲಾರದೆಂಬುವದಕ್ಕೂ ಇದರಿಂದ ಬುದ್ಧಿಶಾಲಿಗಳಾದ ಇತರರು ಈ ಮಾರ್ಗವನ್ನು ಧಾರಾಳವಾಗಿ ಅವಲಂಬಿಸಿ ಅಪರಪ್ರೇಷ್ಯರಾಗಿ ಸ್ವತಂತ್ರರಾಗಿ ಜೀವನಮಾಡುವದಕ್ಕೂ ಅವಕಾಶ ವುಂಟಾಗುವದಕ್ಕಾಗಿ ಸಕಲರೂ ಸಂತೋಷಿಸತಕ್ಕದ್ದಾಗಿರುತದೆ. ಇದರಂತೆ ಇನ್ನೂ ಕೆಲವು ಸಂದರ್ಭಗಳಲ್ಲಿ ಧರ್ಮಶಾಸ್ತ್ರಕ್ಕೆ ವಿರೋಧವಿಲ್ಲದೆ ಸುಲಭೋಪಾಯಗಳನ್ನು ಜನಗಳ ಸಂರಕ್ಷಣಾರ್ಥವಾಗಿ ಕಲ್ಪಿಸುತಬರುವದನ್ನು ನೋಡಿ ಬಹಳ ಸಂತೋಷವಾಯಿತು. ಈಗ್ಯೆ ಸುಮಾರು ೮—೯ ತಿಂಗಳಿಗೆ ಮುಂಚೆ ಶ್ರೀಗಳವರ ಸ್ವಾರಿ ಶಿವಮೊಗ್ಗೆಗೆ ದಯಮಾಡಿದ್ದಾಗ್ಯೆ ಅಲ್ಲಿ ತ್ರಿಮತಸ್ಥರೂ ಕೇರಿ ಶ್ರೀಗಳವರ ಸನ್ನಿಧಿಯಲ್ಲಿ ಸಭೆಮಾಡಿ ಶಾಸ್ತ್ರಪ್ರಸಂಗ ನಡಸಿದನಂತರ ಶ್ರೀಗಳವರು ದೇಶಭಾಷೆಯಲ್ಲಿ ಆಸ್ತಿಕಮತದ ಶಾಖೆಗಳಾಗಿರುವ ಅನೇಕ ಮತಗಳ ಪ್ರಭೇದ ಮತ್ತು ಅವುಗಳ ಸಿದ್ಧಾಂತವನ್ನೂ ಅನಂತರ ಅದ್ವೈತದ ಸಿದ್ಧಾಂತವನ್ನು ಸಹ ಅಸಂಸ್ಕಾರಿಗಳಿಗೂ ಬೋಧೆ ಯಾಗುವಂತೆ ಉಪನ್ಯಾಸಮಾಡಿ ಸರ್ವರ ಮನಸ್ಸನ್ನು ಸಂತೋಷಪಡಿಸಿದರೆಂಬ ಸಂಗತಿ ನಾನು ಮಾರ್ಗಸ್ಥನಾಗಿ ಶಿವಮೊಗ್ಗೆಗೆ ಬಂದಾಗ್ಯೆ ಅಲ್ಲಿ ನನ್ನ ಪರಿಚರ್ಯಸ್ಥರು ಹೇಳಿದ್ದನ್ನು ಕೇಳಿ ಬಹಳ ಸಂತೋಷಪಟ್ಟೆನು. ಇದೇರೀತಿ ಶ್ರೀಗಳವರು ಸಂಚರಿಸತಕ್ಕ ಸ್ಥಳಗಳಲ್ಲಿ ಯೆಲ್ಲಾ ಶಿಷ್ಯಜನಗಳಿಗೆ ಬೋಧಿಸಿ ಸನ್ಮಾರ್ಗಪ್ರವಿಷ್ಟರಾಗಿ ಮಾಡಬೇಕೆಂದು ಕೋರುವದು ಮಾತ್ರವಲ್ಲದೆ ದೇಶ ಕಾಲ ವೈಪರೀತ್ಯದಿಂದ ಅನುಷ್ಠಾನಕ್ಕೆ ಅಸಾಧ್ಯವಾದ ವಿಷಯಗಳನ್ನೆಲ್ಲ ಚನ್ನಾಗಿ ಯೋಚಿಸಿ ಪರಿಶೀಲನೆಯಿಂದ ಕಾಲಾನುಸಾರವಾಗಿ ಸುಲಭವಾಗಿ ಮಾಡಿಕೊಡುತ್ತಾ ಶಾಸ್ತ್ರದಲ್ಲಿ ಇಲ್ಲದ ಅನೇಕ ವಿಷಯಗಳು ಮೂಲವಿಲ್ಲದೆ ಆಚಾರವೆಂಬ ಹೆಸರು ಇಟ್ಟುಕೊಂಡು ಜನರ ಅನುಕೂಲತೆಗೆ ನಿರ್ಬಂಧರೂಪಕವಾಗಿರತಕ್ಕಂತಾ ಸಂಗತಿಗಳನ್ನು ನಿವರ್ತಿಮಾಡಿಕೊಟ್ಟು ಕೀರ್ತಿಯನ್ನು ಸಂಪಾದಿಸುವರೆಂಬ ನಂಬಿಕೆ ತೋರಿಬರುತದೆಯಾಗಿ ಈ ಅಂಶ ಇತರ ಸ್ಥಳದಲ್ಲಿರತಕ್ಕ ಶಿಷ್ಯರಿಗೆಲ್ಲ ತಿಳಿಯತಕ್ಕದ್ದಕ್ಕೋಸ್ಕರ ಮಾಡಿಕೊಂಡ ವಿಜ್ಞಾಪನೆಯನ್ನು ದಯವಿಟ್ಟು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಬೇಡುವ,

ತಮ್ಮ ವಿಧೇಯ ಸನ್ಮತಾಭಿಮಾನಿ.

ಕಾಲದೇಶಾನು ಗುಣವಾಗಿ ಆಚಾರಗಳನ್ನು ವಿಧಿಸತಕ್ಕದ್ದು ವಿಸ್ತಾರವಾದ ಶಿಷ್ಯಮಂಡಲಿಯುಳ್ಳ ಮಠಾಧಿಪತಿಗಳಿಗೆ ಕರ್ತವ್ಯವಾಗಿದ್ದಾಗ್ಯೂ ಅವರು ತೋರಿಸತಕ್ಕ ಔದಾಸೀನ್ಯತೆಯಿಂದಲೇ ಪ್ರಜೆಗಳಿಗೆ ಮತಾಚಾರಗಳ ವಿಷಯದಲ್ಲಿ ಮನಸ್ವೀ ವರ್ತನಕ್ಕೆ ಅವಕಾಶ ವುಂಟಾಗಿದೆ. ಶ್ರೀ ಶೃಂಗೇರಿ ಸ್ವಾಮಿಗಳವರು ಈ ಅಂಶವನ್ನು ಚನ್ನಾಗಿ ಪರಿಭಾವಿಸಿ ಪ್ರಜೆಗಳ ಕ್ಷೇಮದಮೇಲಿನ ದೃಷ್ಟಿಯಿಂದ ಶಾಸ್ತ್ರಾರ್ಥವನ್ನು ಹೊರಪಡಿಸಿದ ಬಗ್ಯೆ ನಾವು ಬಹಳ ಸಂತೋಷಿಸುವೆವು.

Occasional Notes.
ನೈಮಿತ್ತಿಕವಿಷಯನ್ಯಾಸ.

The Viceroy's tour — ವೈಸರಾಯಿಯವರ ದಕ್ಷಿಣದೇಶಪ್ರಯಾಣವು ಈಚೆಗೆ ಸ್ವಲ್ಪ ಬದಲಾಯಿಸಲ್ಪಟ್ಟಿತು. ಹಿಂದೆ ಯೇರ್ಪಾಟಾಗಿದ್ದಂತೆ ಸದರೀ ಸಾಹೇಬರವರು ಕರಾಚಿಗೆ ಹೋಗುವದಿಲ್ಲವು.

The Northbrook Club and the Hon Dadabhai Naoroji —ಲಂಡನ್ ಪಟ್ಟಣದೊಳು, ಇಂದ್ಯರಾಜ್ಯದ ಮಾಜೀ ವೈಸರಾಯಿಯವರಾದ ಲಾರ್ಡ್ ನಾರ್ಥ್‌ಬ್ರೂಕಿಯವರು ತಮ್ಮ ಹೆಸರಿನಲ್ಲಿ ಸ್ಥಾಪಿಸಿರುವ ಕ್ಲಬ್‌ನವರು ಆನರೆಬಲ್ ದಾದಾಭಾಯ್ ನೌರೋಜಿಯವರಿಗೆ ಒಂದುದಿನ ಔತನ ಮಾಡಿಸಬೇಕೆಂದು ಯೋಚಿಸಿರುವದಾಗಿ ಒಂದಾನೊಂದು ಪತ್ರಿಕೆ ಹೇಳುತಿದೆ.

Health of the Amir of Cabul.— ಕಾಬೂಲ್ ಅಮೀರರವರಿಗೆ ಆರೋಗ್ಯ ಕಡಮೆಯಾಗುತಬರುವಂತೆ ಪಂಜಾಬದೇಶದಲ್ಲಿ ನಿರಾಧಾರವಾದ ಪ್ರವಾದ ವುಂಟಾಗಿದೆ. ಸದರೀಯವರಿಗೆ ವಾತೋಪದ್ರವ ಸಂಪೂರ್ಣವಾಗಿ ನಿವೃತ್ತಿಯಾಗದೆ ಹೋದಾಗ್ಯೂ ಸಾಮಾನ್ಯವಾಗಿ ಆರೋಗ್ಯಸ್ಥಿತಿಯಲ್ಲಿರುವಂತೆ ಪ್ರಾಮಾಣಿಕರಾದ ಜನಗಳ ಮೂಲಕ ತಿಳಿಯಬರುವದಾಗಿ ಪಯೋನಿಯರ್ ಪತ್ರಿಕೆ ಹೇಳುತಿದೆ.

A report contradicted.—ಕಾಬೂಲ್ ಅಮೀರರವರು ಕಂಧಾರಿಗೆ ರೈಲಿರಸ್ತೆ ಹಾಕುವದು ತೆಡುಕುಂಕೊಟ್ಟಿರುವದಾಗಿ ಉಂಟಾದ ಪ್ರವಾದ ಸುಳ್ಳೆಂತಲೂ, ಹಾಗೆ ರೈಲಿರಸ್ತೆ ಹಾಕುವದು ಪ್ರಯೋಜನಕರವಾದದ್ದೆಂದು ಅವರಿಗೆ ತಿಳಿಸಲ್ಪಟ್ಟಾಗ್ಯೂ ಅಂತಾ ಪ್ರಯತ್ನ ಅವರು ಮಾಡುವರೆಂದು ಯೆಣಿಸುವದಕ್ಕೆ ಸುತರಾಂ ಅವಕಾಶವಿಲ್ಲವೆಂತಲೂ, ಆಮೇರೆ ಅವರಿಗೆ ತಿಳಿಸಲ್ಪಡಲೂ ಇಲ್ಲವೆಂತಲೂ ಒಂದಾನೊಂದು ಪತ್ರಿಕೆ ಹೇಳುತಿದೆ.

An appointment sanctioned.—ಪಂಜಾಬದೇಶದ ಚೇಫ್ ಕೋರ್ಟಿಗೆ ಕಾಯಮಾಗಿ ನಾಲ್ಕನೇ ಜಡ್ಜಿಯೊಬ್ಬರನ್ನು ನಿಯಮಿಸಬೇಕೆಂದು ಇಂಡ್ಯ ಗವರ್ನಮೆಂಟನವರು ಮಾಡಿದ ಶಿಫಾರಸ್ಸನ್ನು ಮಂಜೂರ್ಮಾಡಿ ಬರೆದ ಕಾಗದದಲ್ಲಿ, ಸದರೀ ನಾಲ್ಕನೇ ಜಡ್ಜಿಯು ನೇಟವಾಗಿರುವಪಕ್ಷಕ್ಕೆ ಮೊದಲಿನ ತಲಬಪೈಕಿ ಮೂರರಲ್ಲಿ ಯೆರಡುಭಾಗವೇ ಸಲ್ಲತಕ್ಕದ್ದೆಂಬ ಷರತ್ತು ನಮೂದಾಗಿರುತಿದೆ.

A noisy and irregular meeting — ಹಿಂದೂಗಳಲ್ಲಿ ಬಾಲ್ಯ ವಿವಾಹವು ಬಹುವಿಧ ಕೆಡುಕುಗಳಿಗೆ ಕಾರಣವಾಗಿರುವದರಿಂದ ಅದನ್ನು ತಪ್ಪಿಸಬೇಕಾದ ವಿಷಯವನ್ನು ಕುರಿತು ಆಲೋಚಿಸುವದಕ್ಕಾಗಿ ಈಚೆಗೆ ಮುಂಬೈ ಮಾಧವಬಾಗಿನಲ್ಲಿ ಒಂದು ಸಮಾಜ ಸೇರಿತು. ಅದಕ್ಕೆ ಯೆರಡುಸಾವಿರ ಜನಗಳು ಬಂದಿದ್ದರು. ವಿದ್ಯಾಹೀನರಾದ ಪಾಮರ ಜನರು ಅನೇಕರು ಬಂದು ಗದ್ದಲಮಾಡಿ ವಿಷಯ ವಿಚಾರಕ್ಕೆ ಅವಕಾಶ ಕೊಡದೆ ಮನಸ್ವೀ ವರ್ತಿಸಿದ್ದರಿಂದ ಯಾವದೂ ಕ್ರಮವಾಗಿ ನಡೆಯುವದಕ್ಕೆ ಅವಕಾಶವಿಲ್ಲದೆ ಹೋಯಿತೆಂದು ಮದರಾಸ್ ಸ್ಟ್ಯಾಂಡಾರ್ಡ್ ಪತ್ರಿಕೆಯ ಮುಂಬೈ ಬಾತಮಿದಾರನು ತಿಳಿಸುತ್ತಾನೆ.

ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೆ ಶ್ರುತಪಡಿಸುವದೇನಂದರೆ—ಈ ಪತ್ರಿಕೆಗೆ ಬಾಕೀದಾರರಾಗಿರತಕ್ಕವರೆಲ್ಲರು ಅವರವರ ಬಾಕೀಗಳನ್ನು ಫೈಸಲ್ಮಾಡಬೇಕೆಂದು ಬಹುಮುಖವಾಗಿ ನಾವು ಹಿಂದಿನ ಪ್ರಾರ್ಥನೆಯನ್ನು ಲಾಲಿಸದೆಹೋದ ಅನೇಕರ ಹೆಸರುಗಳನ್ನು ಈಪತ್ರಿಕೆಯಲ್ಲಿ ಪ್ರಕಟಿಸಿದಾಗ್ಯೂ ಬಾಕೀದಾರರಿಗೆ ಲಕ್ಷ್ಯವಿಲ್ಲವಾಯಿತು. ಲಾಯರ್ ನೋಟಿಸ್ ಕೊಡಿಸಿದ್ದರಲ್ಲಿ, ಇಂಗಿತಜ್ಞರಾದ ಕೆಲವರು ವಿನಾ ಮಿಕ್ಕವರು ಮೌನವಾಗಿರುವಂತೆ ಕಾಣುತಿದೆ ಅಂತವರ ವಿಷಯದಲ್ಲಿ ಕೋರ್ಟಿನವಿನಾ ಬೇರೆ ಯಾವ ಉಪಾಯವೂ ಕಾರ್ಯಕಾರಿಯಾಗಲಾರದೆಂದು ಕಾಣುತಿದೆ. ಹಾಗೆ ನಾವು ಮಾಡುವದರಲ್ಲಿ ಬಾಕೀದಾರರು ಈಗ ಕೊಡತಕ್ಕದಕ್ಕಿಂತಲೂ ಮೂರರಷ್ಟು ಕೊಡಬೇಕಾಗುವದೆಂಬ ಅಂಶವನ್ನು ಮರೆಯದಿರುವ ದಶಾ ಅವರ ಯೋಚನೆಗೆ ತರುವದುಚಿತವೆಂದು ಯೋಚಿಸಿ ತಿಳಿಸಿ ಇರುತ್ತೇವೆ. ಕೋರ್ಟಿಗೆ ಹೋಗುವದರಮೂಲಕ ಉಂಟಾಗುವ ಅರ್ಥವ್ಯಯ ಮತ್ತು ಶರೀರಶ್ರಮ, ಇವು ಉಭಯರಿಗೂ ತಪ್ಪಲಾರದಾಗಿ, ಅದು ಚನ್ನಾಗಿ ಯೋಚಿಸಿ ಅಂತಾ ಶ್ರಮದಿಂದ ನಮ್ಮನ್ನೂ ತಪ್ಪಿಸಿ ತಾವೂ ಅದಕ್ಕೆ ಗುರಿಯಾಗದಿರುವರೆಂದು ಕೋರುವೆವು.

೩೦-೮-೮೩. ಪ್ರೊಪ್ರೈಟರ್

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕುಜಾತಿನ್ಯಪ್ರಾಂತಗಳು.

Privilege leave.—ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಅಪ್ರೆಟಿಸ್ ಮ|| ಶ್ರೀನಿವಾಸರಾಯರವರಿಗೆ ಕಳೆದ ಜುಲೈ ೧೬ನೇ ತಾರೀಖು ಲಾಗಾಯತು ೩ತಿಂಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತಿದೆ.

Mr. Natesha Sastry.—ಶಾಸನಗಳ ಪರಿಶೋಧನೆಯಬಗ್ಯೆ ಮೆ|| ರೈಸ್‌ಯವರಿಗೆ ಕುಮ್ಮಕ್ಕಾಗಿ ನೂರುರೂಪಾಯಿಗಳ ತಲಬಿನೊಳು ಮಿಸ್ಟರ್ ನಟೇಶಶಾಸ್ತ್ರಿಯೆಂಬವರು ನೇಮಕರಾದರೆಂತಲೂ, ಇವರು ಸರ್ಕಾರ್‌ನೌಕರಿಯ ನಿರೀಕ್ಷಣೆಯೊಡನೆ ಬಹುಕಾಲ ಕಳೆದರೆಂತಲೂ, ಇವರಿಗೆ ಅರವ ಚನ್ನಾಗಿಬರುವದಲ್ಲದೆ ಇಂಗ್ಲಿಷಿನಲ್ಲಿ ಸಾಧಾರಣ ಜ್ಞಾನವಿದೆಯೆಂತಲೂ, ಕೇಳಲಾದೆವು.

Hoggs vs. the *Daily Post* —ಮೈಸೂರು ಮಹಾರಾಜರವರ ಅರಳೀಯಂತ್ರದ ಕಾರ್ಖಾನೆಯ ಮಾಜಿ ಮ್ಯಾನೇಜರಾದ ಮಿಸ್ಟರ್ ಹಾಗ್‌ಯೆಂಬವರು, ಡೇಲಿಪೋಸ್ಟು ಪತ್ರಿಕಾಧಿಪರು ಮತ್ತು ಮ್ಯಾನೇಜರ್‌ಗಳಮೇಲೂ, ಮಿಸ್ಟರ್ ಸಾಕ್ಸ್ಯೆಂಬವರಮೇಲೂ ಮಾನನಷ್ಟದ ಬಗ್ಯೆ ಸಿವಿಲ್ ವ ಮಿಲಿಟರಿ ಸ್ಟೇಷನಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ಫಿರ್ಯಾದ್ ದಾಖಲ್ಮಾಡಿ ಪ್ರತಿವಾದಿಗಳಿಗೆ ಸಮ್ಮನ್ ಕೊಡಬೇಕೆಂದು ಅಪೇಕ್ಷಿಸಲು ಅದಕ್ಕೆ ಮ್ಯಾಜಿಸ್ಟ್ರೇಟರು ಕೊಡಲಾರದೆಂದು ನಿರಾಕರಿಸಿದರೆಂದು ತಿಳಿಯಲಾದೆವು.

The Capital sentences.—ಗತವಾರದಲ್ಲಿ ಯೆರಡು ಖೂನಿ ಮೊಕದ್ದಮೆಗಳು ಫೈಸಲಾಗಿ ಯೆರಡರಲ್ಲಿಯೂ ಅಪರಾಧಿಗಳಿಗೆ ಮರಣದಂಡನೆ ವಿಧಿಸಲ್ಪಟ್ಟು ಮೇಲ್‌ಕೋರ್ಟಿನವರ ಮಂಜೂರಾತಿಯಬಗ್ಯೆ ಕಳುಹಿಸಲ್ಪಟ್ಟಿರುವದರಿಂದ ಅಲ್ಲಿನ ತೀರ್ಮಾನವನ್ನು ಖೈದಿಗಳು ಈಗ ನಿರೀಕ್ಷಿಸುತಲಿದಾರೆ. ಮೇಲೆಕಂಡ ಯೆರಡು ಮೊಕದ್ದಮೆಗಳಪೈಕಿ ಕೋಟೇ ಖೂನೀ ಮೊಕದ್ದಮೆಯೊಂದಾಗಿರುತಿದೆ. ಈ ಮೊಕದ್ದಮೆಯಲ್ಲಿ ಪಂಚಾಯತರು ಕೊಲೆಪಾತಕವೆಂದು ಅಭಿಪ್ರಾಯಪಟ್ಟರೂ, ಜಡ್ಜಿಯವರು ಖೂನಿಯೆಂದು ತೀರ್ಮಾನಮಾಡಿ ಇಬ್ಬರಿಗೆ ಫಾಸೀ ಸಜಾ ವಿಧಿಸಿದರು. ಎರಡನೆಯದರಲ್ಲಿ ಅಪರಾಧಿಯು ತನ್ನ ಹೆಂಡತಿ ಮಾಡಿದ ದುಷ್ಕೃತ್ಯವನ್ನು ನೋಡಿ ಸಹಿಸಲಾರದೆ ಅವಳ ಅಂತ್ಯಜಿಸಲಿಕ್ಕೆ ಯತ್ನಪಡಲು, ಅವಳು ಆಕ್ರೋಶ ಪ್ರಾರಂಭಿಸುತಮಾಡಿದ್ದರಿಂದ ಅವನು ಹೊಡೆದ ಪೆಟ್ಟನ್ನು ತಪೆಯದೆ ಮೃತಪಟ್ಟಳು. ಇದನ್ನು ಮ. ತುಂಬುಶೆಟ್ಟರವರು ಖೂನಿಯೆಂದು ನಿರ್ಣೈಸಿ ಮರಣದಂಡನೆ ವಿಧಿಸಿದರು. ಈಗ ಏಕಕಾಲದಲ್ಲಿ ಮೂವರ ಪ್ರಾಣಗಳು ಹೈಕೋರ್ಟಿನವರ ಲೇಖನಿಯ ಅಗ್ರಭಾಗದಲ್ಲಿ ಜೋಲಾಡುತಲಿವೆ.

A public meeting.—ಸಂಸ್ಕೃತ ಭಾಷೆಯಲ್ಲಿ ನೆಲಗೊಂಡಿರುವ ಹಿಂದೂ ಶಾಸ್ತ್ರಗಳನ್ನು ಅಭಿವೃದ್ಧಿಗೊಳಿಸಿ ಪ್ರಚಾರದೊಳು ತರಲಿಕ್ಕೆ ಆವಶ್ಯಕಗಳಾದ ಏರ್ಪಾಡುಗಳನ್ನಾಲೋಚಿಸಿ ನಿರ್ಧರಿಸತಕ್ಕಬಗ್ಯೆ ಮಾಹೇ ಮಜಕೂರ್ ೧೦ನೇತಾರೀಖು ಭಾನುವಾರ ಮಧ್ಯಾಹ್ನ ೩ಘಂಟೆಗೆ ಸರಿಯಾಗಿ, ಈ ಪೂರುತಾಲ್ಲೂಕು ಕಚ್ಚೇರಿಬಳಿ ಇರುವ ಗವರ್ನಮೆಂಟ್ ಬಾಲಿಕಾ ಪಾಠಶಾಲೆಯ ಸೌಧದಲ್ಲಿ ಸಭೆಸೇರಿ ಅದಕ್ಕೆ ಕಂಟ್ರೋಲರ್ ಮತ್ತು ಅಂಡರ್ ಸೆಕ್ರಟರಿ ವಗೈರೆ ದೊಡ್ಡಮನುಷ್ಯರು ಬಂದಿದ್ದರು. ಈ ಸಂದರ್ಭದಲ್ಲಿ ವೈಸ್ ಪ್ರೆಸಿಡೆಂಟ್ ಮಿಸ್ಟರ್ ಶ್ರೀನಿವಾಸಾಚಾರ್ಯರವರು ಅಗ್ರಾಸನವ ವಹಿಸಿದ್ದರು. ಈಗ ನಮ್ಮ ಶಾಸ್ತ್ರಗಳಿಗೆ ವುಂಟಾಗಿರುವ ಹ್ರಾಸವನ್ನೂ ಅವುಗಳನ್ನು ಅಭಿವೃದ್ಧಿಗೊಳಿಸದೆ ಇರುವದರಿಂದ ವುಂಟಾಗುವ ನ್ಯೂನತೆಯನ್ನೂ ತಿಳಿಸಿ ಶಾಸ್ತ್ರ ಪಾಠ ಪ್ರವಚನದಬಗ್ಯೆ ಒಂದು ಪಾಠಶಾಲೆಯನ್ನು ಕೂಡಲೇ ಸ್ಥಾಪಿಸಬೇಕಾದ ಆವಶ್ಯಕತೆಯುಂಟಾಗಿದೆಯೆಂದು ಹೇಳಿದರು. ಅನಂತರ ಮೇಲೆ ಅದರ ಉತ್ಪತ್ತಿಯ ವಿಷಯದಲ್ಲಿ ವಿಚಾರ ನಡೆದು, ಮ. ರಂಗಸ್ವಾಮಯ್ಯಂಗಾರು ಸೂಚಿಸಿದಂತೆ, ಗವರ್ನಮೆಂಟನವರ ಸಹಾಯವನ್ನಪೇಕ್ಷಿಸತಕ್ಕದ್ದೆಂತಲೂ, ಪ್ರಸಿದ್ಧರಾದ ಮಠಾಧಿಪತಿಗಳ ಪ್ರೋತ್ಸಾಹನೆಯನ್ನು ಕೇಳತಕ್ಕದ್ದೆಂತಲೂ, ಪ್ರಜೆಗಳು ಸಹ ಚಂದಾಮೂಲಕ ಸಹಾಯ ಮಾಡತಕ್ಕದ್ದೆಂತಲೂ ತೀರ್ಮಾನಿಸಿದರು. ಇದರ ಆಳತೆದಬಗ್ಯೆ ಮಾಮೂಲ್ ಪ್ರಕಾರ ಒಂದು ಕಮಿಟಿ ಏರ್ಪಾಡಾಯಿತಲ್ಲದೆ ಅದಕ್ಕೆ ಇಬ್ಬರು ಸೆಕ್ರೆಟರಿಗಳು ನೇಮಕರಾದರು. ಕಮ್ಮಿಟಿಯು ಮೆಂಬರ್‌ಗಳಲ್ಲಿ ವೈದಿಕ ಲೌಕಿಕರು ಸಹ ಸೇರಿಸಲ್ಪಟ್ಟದಾರೆ. ಬಳಿಕ ಅಗ್ರಾಸನಾಧಿಪತಿಗೆ ವಂದನಪೂರ್ವಕ ಸಭೆ ಬರಖಾಸ್ತಾಯಿತು. ಎಗ್ಜಿಕ್ಯೂಟಿವ್ ಕಮ್ಮಿಟಿಯವರು ಕಾರ್ಯ ನಿರ್ವಹಣೆಯಬಗ್ಯೆ ಮರಳಿ ಸಭೆಸೇರುವರೆಂದು ಕೇಳುತ್ತೇವೆ ಈ ಉದ್ದೇಶ ಪ್ರಯತ್ನಗಳು ಶ್ಲಾಘ್ಯವಾಗಿಯೂ, ಬಹುಮಂದಿ ಅಧಿಕಾರಿಗಳಿಂದುದ್ದಿಷ್ಟವಾದದ್ದಾಗಿಯೂ ಇರುವದರಿಂದ ಇದು ಊರ್ಜಿತವಾದರೆ ಬಹಳ ಪ್ರಯೋಜನಕರವಾಗಿರುವದಲ್ಲದೆ ನಮ್ಮ ಶಾಸ್ತ್ರಗಳು ಪ್ರಚಾರದೊಳು ಬರಲಿಕ್ಕೆ ಕಾರಣವಾಗುವದು.

SUMMARY OF NEWS.

ವೃತ್ತಾಂತ ಸಂಗ್ರಹವು.

ಬ್ರಹ್ಮ ದೇಶದ ಪದಭ್ರಷ್ಟರಾದ ಥೀಬಾ ಅರಸರು ಸ್ನಾನ ಮಾಡುವ ಚಿನ್ನದ ಗಂಗಾಳವು ೨೨,೬೦೦ ರೂಪಾಯಿಗಳಿಗೆ ಅಂದರೆ ತೂಕಕ್ಕೆ ೧೯೦ ರೂಪಾಯಿಗಳ ಮೇಲೆ ಮಾರಾಟವಾಯಿತಂತೆ!!

ಡಾಕಾಸ್ಟೇಟ ರೈಲ್ವೆಯ ಬಹು ದೊಡ್ಡಭಾಗವೂ, ಗೋದಾವರಿಯ ಸ್ಟೇಶನೂ ಅತಿ ವರ್ಷ್ಯ ವೃಷ್ಟಿಯಿಂದ ಕೊಚ್ಚಿಹೋಯಿತಂತೆ.

ಐರಿಷ ಜನರು ಪ್ರತಿ ವರುಷವೂ ೧,೦೩,೦೦,೦೩,೦೦ ರೂಪಾಯಿಗಳನ್ನು ಮದ್ಯಪಾನಕ್ಕಾಗಿ ಖರ್ಚು ಮಾಡುತ್ತಾರೆ; ಇಷ್ಟೇ ಹಣವನ್ನು ೨೦ ವರುಷಗಳ ತನಕ ಕಾದಿಟ್ಟರೆ ಇಡೀ ಐರ್ಲಂಡ ದೇಶವನ್ನೇ ಕ್ರಯಕ್ಕೆ ತೆಗದು ಕೊಳ್ಳುವದಕ್ಕೆ ಸಾಕಾದಷ್ಟು ಹಣವಾಗುವದಂತೆ.

ಎರಡು ವರುಷಗಳ ಹಿಂದೆ ಒಬ್ಬ ಫ್ರೆಂಚ ಮನುಷ್ಯನು ಪಾಕ್ಷಿಗಳ ಭಾಷೆಯನ್ನು ಶಬ್ದಶಃ ಬರಕೊಳ್ಳುವ ಒಂದು ಯಂತ್ರವನ್ನು ಮಾಡಿರುತ್ತಾನೆಂತಲೂ, ಅದನ್ನು ಸಂಪಾದಿಸ್ಕೆ ಆರಿಯುವದಕ್ಕೆ ೪ ತಿಂಗಳು ಹಿಡಿಯುವದೆಂತಲೂ, ಆ ಯಂತ್ರದ ಸಹಾಯದಿಂದ ಒಂದು ನಿಮಿಷದಲ್ಲಿ ೨೦೦ ಶಬ್ದಗಳನ್ನು ಬರಿಯುವದಕ್ಕೆ ಬರುತ್ತದೆಂತಲೂ ಹೇಳುತ್ತಾನೆ.

ಮಳೇ ಬೀಳುವಂತೆ ಮಾಡುವ ಒಂದು ಹೊಸ ಯುಕ್ತಿಯು ಹುಡಕಿ ತೆಗಿಯಲ್ಪಟ್ಟಿರುತ್ತದೆ. ಹ್ಯಾಗಂದರೆ, ಯಾವಸ್ಥಳದಲ್ಲಿ ಮಳೆ ಬೀಳುವದಿಲ್ಲವೋ ಅಲ್ಲಿ ಒಂದು ಬಲೂನ್ ವಿಮಾನವನ್ನು ಹಾರಿಸಬಹುದು. ಈ ವಿಮಾನದೊಳಗೆ ಮದ್ದು ಮತ್ತು ಡೈನಾಮಾಯಿಟ ಎಂಬವುಗಳಂತೆ ಬೇಗನೆ ಬೆಂಕಿ ಹಿಡಿದು ಹೊತ್ತುವ ಪದಾರ್ಥಗಳನ್ನು ತುಂಬಬೇಕು. ವಿಮಾನವು ಬಹಳ ಮೇಲಕ್ಕೆ ಹೋದ ಬಳಿಕ ವಿದ್ಯುಲ್ಲತೆಯ ಸಹಾಯದಿಂದ ಅದರೊಳಗೆ ತುಂಬಿದ ಪದಾರ್ಥಗಳಿಗೆ ಬೆಂಕಿ ಹಚ್ಚಿದ ಕೂಡಲೆ ಮಳೆಯು ಬೀಳುತ್ತದಂತ!!!

ಹಿಂದುಸ್ಥಾನ ಸರ್ಕಾರದವರು ದಿವಾಳೀ ತೆಗೆಯುವ ಪ್ರಸಂಗ ಬಂದೊದಗಿದಂತೆಯೇ ಪರ್ಷ್ಯಾ ಸರ್ಕಾರದವರದ್ದೂ ಅದೇ ಸ್ಥಿತಿಯಾಗಿರತ್ತದೆಂದು ಕಾಣುತ್ತದೆ. ಆದರೆ ಉತ್ಪನ್ನದ ಮಾನದಿಂದ ಖರ್ಚ ಕಡಿಮೆ ಮಾಡುವ ಮಾರ್ಗ ಮಾತ್ರ ಭಿನ್ನವಾಗಿದ್ದಂತೆ ತೋರುತ್ತದೆ. ಹಿಂದುಸ್ಥಾನ ಸರ್ಕಾರದವರು ಶಿಪಾಯಿ, ಪೊಲೀಸ, ಅಥವಾ ಶಾರಕೂನರ ಸಂಖ್ಯೆಯನ್ನು ಕಡಿಮೆ ಮಾಡಿ ಆದ್ಯತ್ತಿಗಿಂತಲೂ ಖರ್ಚ ಹೆಚ್ಚಾಗ ಬಾರದೆಂದು ಪ್ರಯತ್ನಪಡಿಸುತ್ತಾರೆ. ಪರ್ಷ್ಯ ಸರ್ಕಾರದವರು ಬಡವರ್ಗದ ಹೊಟ್ಟೆಯ ಮೇಲೆ ಕಾಲು ಕೊಡದೆ ಸ್ವತಃ ರಷ್ಯ ರಾಜನು ತನ್ನ ಸ್ವಂತ ವೇತನವನ್ನೂ ತನ್ನ ಮಕ್ಕಳ ವೇತನವನ್ನೂ ಕಡಿಮೆ ಮಾಡಿರುತ್ತಾನೆ. ಈ ತರದ ಉದಾಹರಣೆಯು ಇಂಗ್ಲಿಷರಾಜ್ಯದೊಳಗಲ್ಲಾದರೂ ಕೇಳುವಿಕೆಯಲ್ಲಿ ಬರತ್ತದೋ? — ಸೇ. ಪ.

ಗೌರಕಾಯ ಸನ್ಯಾಸಿ.—ಶ್ರೀಕಾಶೀ ಕ್ಷೇತ್ರದಲ್ಲಿರುವ ಕೆಪ್ಟನ್ ರೇಮಿಂಗ್ಟನ್ ಎಂಬವನೊಬ್ಬ ಗೌರಕಾಯಸ್ಥನು ತನ್ನ ಸ್ವಧರ್ಮವಾದ ಕ್ರಿಸ್ತ ಮತವನ್ನು ಬಿಟ್ಟು ಹಿಂದೂ ಧರ್ಮವನ್ನು ಸ್ವೀಕರಿಸಿ ನಮ್ಮ ಧರ್ಮಕ್ಕನುಸಾರವಾಗಿ ಸನ್ಯಾಸಾಶ್ರಮವನ್ನು ತೆಗದು ಕೊಂಡಿರುತ್ತಾನೆ, ಇಷ್ಟೇ ಅಲ್ಲ. ಅದರೆ (ಕಾಶೀಕ್ಷೇತ್ರೇ ಮರಣಾತ್ ಮುಕ್ತಿ: ಜನ್ಮನೀತಿತಪೇ) ಎಂಬ ಈ ಧರ್ಮವಾಕ್ಯಕ್ಕನುಸಾರವಾಗಿ ತನ್ನ ಉಳಿದ ಆಯುಸ್ಸನ್ನೆಲ್ಲವನ್ನೂ ಅದೇ ಕ್ಷೇತ್ರದಲ್ಲಿಯೇ ಕಳೆದು ಮುಕ್ತಿ ಹೊಂದ ಬೇಕೆಂಬದೇ ಅವನ ಕಾಂಕ್ಷೆಯಾಗಿರುತ್ತದಂತೆ!!! ನಮ್ಮ ಹಿಂದೂ ಧರ್ಮವು ಸುಳ್ಳೆಂದು ಹುಚ್ಚಿಸಿ, ತಮ್ಮ ಕ್ರಿಸ್ತಧರ್ಮವೇ ಶ್ರೇಷ್ಠವೆಂದು ಪರಿಶುದ್ಧನಾದ ತಮ್ಮ ಯೇಸುವಿನನ್ನೇ ಸ್ತುತಿಸುತ್ತ ಕಂಡ ಕಂಡವರನ್ನು ಮರುಳುಮಾಡುವವರಿಗೆ ಹಿಂದೂ ಧರ್ಮದಲ್ಲಿ ಸೇರಬೇಕೆಂಬ ಇಚ್ಛೆಹುಟ್ಟುವದು ಬಹು ಸೋಜಿಗವಲ್ಲವೋ? (ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ) ಎಂಬದಾಗಿ ಹಿಂದೂ ಧರ್ಮವನ್ನು ಸ್ವೀಕರಿಸುವದು ಅಸಾಧ್ಯವಾಗಿರುವದರಿಂದ ಬಹು ಜನರು ಉಪಾಯವಿಲ್ಲದವರಾಗಿರುತ್ತಾರೆ. ಇಲ್ಲದಿದ್ದರೆ ಹಿಂದೂ ಧರ್ಮದ ನಿಜವಾದ ತತ್ವವನ್ನು ತಿಳಕೊಂಡವರೆಷ್ಟು ಜನರು ತಮ್ಮ ಸ್ವಧರ್ಮವನ್ನು ತ್ಯಜಿಸಿ ಹಿಂದೂ ಧರ್ಮವನ್ನು ಸಂತೋಷದಿಂದ ಸ್ವೀಕರಿಸುತ್ತಿದ್ದರೋ ದೇವರಿಗೇ ಗೊತ್ತು!! ಕ. ಸು.

ಕೊಡಗು ದೇಶದ ಚೀಫ್ ಕಮಿಶನರವರಿಂದ ಕೊಡೋಣಾದ ಇಷ್ತಿಹಾರ್‌ನಾಮೆ.

ನಂಬರ್ ೧೪.

ತಾರೀಖ್ ೩೦ನೇ ಏಪ್ರಿಲ್ ೧೮೮೬ನೇ ಇಸವಿ.

ಬೆಂಗಳೂರು,

ಕೊಡಗು ದೇಶದಲ್ಲಿ ಜಾರೀಗೆ ತರಬೇಕಾಗಿ ಆಲೋಚಿಸಲ್ಪಟ್ಟಿರುವ ಸನ್ ೧೮೮೪ನೇ ಇಸವಿ ವ್ಯವಸಾಯಗಾರರಿಗೆ ಮುಬಾದಲೆಗಳನ್ನು ಕೊಡುವದಕ್ಕಾಗಿ ಪ್ರಂಟಾದ ಆಕ್ಟಿನ ೪ನೇ ಪ್ರಕರಣದ ಮೇಲೆ ಏರ್ಪಡಿಸಿರುವ ಈ ಕೆಳಗಿನ ಮಸೂದಾ ರೂಲ್ಸ್‌ಯಾನೆ ಕ್ರಮಗಳನ್ನು ಸರ್ವೇ ಜನರ ಆಲೋಚನೆಯ ಬಗ್ಗೆ ಕಾವಿಸುವಕ್ಕೆ ಸಂಬಂಧಪಟ್ಟವರಾದವರೂ ಕಮಿಶನರವರ ಮೂಲಕ ಚೀಫ್ ಕಮಿಶನರವರಿಗೆ ಯೇನಾದರೂ ಜಾಹಿರ್ಮಾಡಿಕೊಳ್ಳುವದಿದ್ದಲ್ಲಿ ಆಬಗ್ಯೆ ಇದರಿಂದ ಪ್ರಕಟಿಸಲ್ಪಟ್ಟಿದೆ.

ವ್ಯವಸಾಯಗಾರರಿಗೆ ಮುಬಾದಲೆಗಳನ್ನು ಕೊಡುವದಕ್ಕಾಗಿ ಪ್ರಂಟಾದ ಸನ್ ೧೮೮೪ನೇ ಇಸವಿ ಆಕ್ಟಿನ ೪ನೇ ಪ್ರಕರಣದಮೇಲೆ ಏರ್ಪಡಿಸಲ್ಪಟ್ಟ ಮಸೂದಾ ರೂಲ್ಸ್‌ಯಾನೆ ಕ್ರಮಗಳು.

೧ ಸಾಗುವಳೀ ಭೂಮಿಯ ಸ್ವಂತಗಾರನಾಗಿಯಾಗಲಿ, ಅಥವಾ ಅವರಸ್ವಾಧೀನಗಾರನಾಗಿಯಾಗಲಿ, ಇರುವ ಯಾವ ಮನುಷ್ಯನಾಗಲಿ, ಇದರ ಕೆಳಗೆ ಹೇಳುವ ಯಾವ ಕಾರ್ಯಕ್ಕೋಸ್ಕರವಾಗಲಿ, ೧೮೮೪ನೇ ಇಸವಿ ವ್ಯವಸಾಯಗಾರರ ಮುಬಾದಲೆಗಳ ೨ನೇ ಆಕ್ಟಿನ ನಿಬಂಧನೆಗಳ ಮೇಲೆ ಮುಬಾದಲೆಗೋಸ್ಕರ ದರಖಾಸ್ತು ಮಾಡಬಹುದು, ಅವು ಯಾವವೆಂದರೆ —

(೧) ಬೀಜ ಅಥವಾ ದನಗಳು ಕೊಂಡುಕೊಳ್ಳುವದಕ್ಕೆ.

(೨) ಬೆಂಕಿಯಿಂದ ಅಥವಾ ಪ್ರವಾಹದಿಂದ ನಾಶವಾದ ವಾಸವಾಗಿದ್ದ ಮನೆಗಳು ಅವುಗಳಿಗೆ ಸೇರಿದ ಹೊರಗಣ ಮನೆಗಳು ದನದ ಕೊಟ್ಟಗೆಗಳು ಇವುಗಳನ್ನು ದುರಸ್ತು ಪಡಿಸಿಕೊಳ್ಳುವದಕ್ಕೆ.

(೩) ವಿಶೇಷವಾದ ಕಾರಣಗಳಿಂದ ವ್ಯವಸಾಯದಲ್ಲಿ ಪ್ರಂಟಾದ ನಷ್ಟಗಳಿಂದ ಬಂದ ಕಷ್ಟಗಳನ್ನು ಪರಿಹರಿಸಿಕೊಳ್ಳುವದಕ್ಕೆ.

೨. ಸದರೀ ದರಖಾಸ್ತು (ಎ) ನಮೂನೆಯಲ್ಲಿ ಬರೆದಂತೆ ಕಮಿಶನರವರಿಗೆ ಬರೆದು ಕೊಡತಕ್ಕದ್ದು. ಅವರು ತಮಗೆ ಅವಶ್ಯವಾಗಿ ತೋರುವ ವಿಚಾರಣೆಮಾಡಿ ಸದರೀ ದರಖಾಸ್ತನ್ನು ಸಹ ಏನೂ ತೀರ್ಪುಬಹುದು.

೩. ಕಮಿಶನರವರು ಪ್ರತಿ ಒಂದು ಸಂಗತಿಯಲ್ಲೂ ೫೦೦ ರೂಪಾಯಿಗೆ ಹೆಚ್ಚಾದೆ ಮುಬಾದಲೆ ಕೊಡುವದಕ್ಕೆ ಮಂಜೂರ್ಮಾಡಬಹುದು. ಮತ್ತು ಹಾಗೆ ಕೊಡುವಂತಾದ್ದು ಈ ಆಕ್ಟಿನ ವ್ಯಾಖ್ಯವಾಗಿ ತಮ್ಮ ಸ್ವಾಧೀನದಲ್ಲಿಟ್ಟಿರುವ ಒಟ್ಟು ಮೊಬಲಗಿನ ಒಳಗಾಗಿರತಕ್ಕದ್ದು. ಕೇಳುವ ಮೊಬಲಗು ೫೦೦ ರೂಪಾಯಿಗೆ ಹೆಚ್ಚಾದ ಪಕ್ಷದಲ್ಲಿ ಅಂತಾ ದರಖಾಸ್ತನ್ನು ಮಂಜೂರ್ಮಾಡಬಹುದೆಂತ ಕಮಿಶನರವರು ಅಭಿಪ್ರಾಯಪಟ್ಟರೆ ಚೀಫ್ ಕಮಿಶನರವರ ಮಂಜೂರಾತಿ ಪಡೆಯತಕ್ಕದ್ದು.

೪. ಸರಿಯಾದ ಜಾಮೀನು ವಿನಃ ಮುಬಾದಲೆ ಕೊಡಕೂಡದು. ದರಖಾಸ್ತುದಾರನು (ಬಿ) ನಮೂನೆಯಲ್ಲಿ ಒಂದು ಸರ್ಟಿಫಿಕೇಟಿಗೆ ರುಜು ಮಾಡುವದಲ್ಲದೆ ತನ್ನ ಕಡೆ ಜಾಮೀನುದಾರರ ಜೊತೆಯಲ್ಲಿ ಕೆಳಗೆ ಕೊಟ್ಟಿರುವ ಒಂದು ಅಥವಾ ಹೆಚ್ಚು ನಮೂನೆಯಲ್ಲಿ ಒಂದು ಜಾಮೀನು ಖತಿಸದ ಬರೆದುಕೊಡಬೇಕಾಗುವದು. ಯಾವ ಸಂಗತಿಯಲ್ಲಾದರೂ ಮುಬಾದಲೇ ಕೊಟ್ಟ ಹಣವನ್ನೇ ಆಗಲಿ, ಅದರ ಯಾವಭಾಗವನ್ನೇ ಆಗಲಿ, ಯಾವ ಕೆಲಸಕ್ಕೋಸ್ಕರ ಕೊಡಲ್ಪಟ್ಟಿತೋ ಅಂತಾ ಕೆಲಸಕ್ಕೆ ಪ್ರಯೋಗಪಡಿಸಲಿಲ್ಲವಾಗಿ ಕಮಿಶನರವರಿಗೆ ಕಂಡುಬಂದಲ್ಲಿ ಅಂತಾ ಜಾಮೀನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

ಒಂದು ಗ್ರಾಮದ ಸಭೆಯವರಿಗೆ ಆಗಲಿ, ಅಥವಾ ಇತರ ಜನರಿಗೆ ಆಗಲಿ, ಬ್ರಿಟಿಷ ಗವರ್ನಮೆಂಟಿಗೆ ಅವ್ರು ಯೆಲ್ಲರೂ ಜಂಟಿಯಾಗಿಯೂ, ಬೇರೆ ಬೇರೆಯಾಗಿಯೂ, ಪೂರ್ತಿ ಮೊಬಲಗನ್ನು ಬಾವತೀ ಮಾಡುವದಕ್ಕೆ ಬದ್ಧರಾಗಿರುತ್ತೇವೆಂಬದಾಗಿ ಒಪ್ಪಿ ಆ ಷರತ್ತಿನಮೇಲೆ ಮುಬಾದಲೇ ಕೊಡಲ್ಪಟ್ಟ ಯಾವ ಸಂಗತಿಯಲ್ಲಿ ಆಗಲಿ, ಮುಬಾದಲೇ ಮೊಬಲಗು ಬಾವತೀ ಮಾಡುವಲ್ಲಿ ಸರ್ಟಿಫಿಕೇಟ ಪಡೆದವರು ಪೂರ್ತಿ ಮೊಬಲಗನ್ನು ಬಾವತೀ ಮಾಡುವದಕ್ಕೆ ಒಟ್ಟಾಗಿಯೂ, ಮತ್ತು ಬೇರೆ ಬೇರೆಯಾಗಿಯೂ, ಬ್ರಿಟಿಷ ಗವರ್ನಮೆಂಟಿಗೆ ಜವಾಬ್ದಾರರಾಗಿರುತ್ತೇವೆಂಬದಾಗಿ ಒಂದು ನೋಂದಣಿ ಪತ್ರವನ್ನು ಬರೆದು ನೇಮಿಸಿರುವ (ಬಿ) ನಮೂನೆ ಸರ್ಟಿಫಿಕೇಟಿಗೆ ಅದನ್ನು ಜೋಡಿಸತಕ್ಕದ್ದಲ್ಲದೆ ಅವುಗಳ ಜೊತೆಯಲ್ಲಿ ಅವರುಗಳ ಪೈಕಿ ಪ್ರತಿ ಒಬ್ಬನು ಇಷ್ಟೇ ಮೊಬಲಗು ಕೊಡುವದಕ್ಕೆ ಬದ್ಧನಾಗಿರುತ್ತಾನೆಂಬದಾಗಿ ಒಂದು ಪಟ್ಟಿಯನ್ನು ಸಹ ಜೋಡಿಸತಕ್ಕದ್ದು. ಅಂತಾ ಒಪ್ಪಿಗೆ ಪತ್ರದಲ್ಲೂ ಪಟ್ಟಿಯಲ್ಲು ಸಹ ಸರ್ಟಿಫಿಕೇಟ ಪಡೆದ ಪ್ರತಿ ಒಬ್ಬ ಮನುಷ್ಯ ಅಥವಾ ಅವನ ಕಡೆ ಕ್ರಮವಾದ ಅಧಿಕಾರ ಹೊಂದಿದ ಏಜಂಟ ಮತ್ತು ಮುಬಾದಲೇ ಕೊಡುವದಕ್ಕೆ ಹುಕುಂ ಮಾಡುವ ಉದ್ಯೋಗಸ್ಥನು ಸಹ ರುಜು ಮಾಡಿ ಅವರವರ ಗುರ್ತು ಅಥವಾ ಮೊಹರನ್ನು ಹಾಕತಕ್ಕದ್ದು.

೫. ಮುಬಾದಲೆ ಮೊಬಲಗನ್ನು ಪೂರ್ತಿಯಾಗಿ ಆಗಲಿ, ಅಥವಾ ೨ ಯಾ ಹೆಚ್ಚು ಕಂತುಗಳಾಗಿ ಆಗಲಿ, ಕೊಡಬಹುದೆಂಬದಾಗಿ ತೀರ್ಮಾನಿಸುವದು ಕಮಿಶನರವರ ಸ್ವತಂತ್ರದಲ್ಲಿ ರತಕ್ಕದ್ದು, ಅಂತಾ ಬಿಸ್ತುಬಂದಿಗಳನ್ನು (ಬಿ) ನಮೂನೆ ಸರ್ಟಿಫಿಕೇಟಿನಲ್ಲಿ ನಮೂದಿಸಿರತಕ್ಕದ್ದು. ಮುಬಾದಲೆ ಹಣವು ಸಾಧಾರಣವಾಗಿ ಮುಬಾದಲೆ ತೆಗದುಕೊಳ್ಳುವವನು ವಾಸ ಇರುವ ಸ್ಥಳದ ತಾಲ್ಲೂಕು ಖಜಾನೆಯಿಂದ ಬಟವಾಡೆಮಾಡಲ್ಪಡುವದು.

೬. ಮುಬಾದಲೆಯನ್ನು ಕಮಿಶನರವರು ಹುಕುಂ ಮಾಡುವಂತೆ ಬಿಸ್ತುಬಂದಿಗಳಮೇಲೆ ಸಲಿಕೆ ಮಾಡತಕ್ಕದ್ದು. ಮುಬಾದಲೆಯ ಮೊದಲನೆ ಬಿಸ್ತು ಸಲಿಕೆ ಮಾಡತಕ್ಕ ತಾರೀಖು ಮುಬಾದಲೆ ತೆಗದುಕೊಂಡವನು ಯಾವ ವಿಧದಿಂದ ಅದನ್ನು ತೀರಿಸುವದಕ್ಕೆ ಶಕ್ತನಾಗುವನೋ ಅದನ್ನು ಆಲೋಚಿಸಿ ಗೊತ್ತು ಮಾಡತಕ್ಕದ್ದು. ಆದರೆ ಸಾಧಾರಣವಾಗಿ ಮೊದಲನೇ ಬಿಸ್ತು ಮುಬಾದಲೆ ಕೊಟ್ಟ ತಾರೀಖು ಲಾಗಾಯತು ಒಂದು ವರುಷದ ಒಳಗಾಗಿ ಬಾವತೀಯಾಗತಕ್ಕದ್ದು.

ಜೀವನಕ್ಕೋಸ್ಕರವಾಗಿಯೂ ಮತ್ತು ಬೀಜ ಕೊಂಡುಕೊಳ್ಳುವದಕ್ಕೋಸ್ಕರವೂ ಮುಬಾದಲೆ ಕೊಡಲ್ಪಟ್ಟ ಸಂಗತಿಯಲ್ಲಿ ಹಣ ಸಲಿಕೆ ಮಾಡುವ ವಾಯಿದೆಯು ಮೂರು ವರುಷಕ್ಕಿಂತಾ ಹೆಚ್ಚಾಗಿರಕೂಡದು ಮತ್ತು ದನಗಳು ಕೊಂಡುಕೊಳ್ಳುವದಕ್ಕೂ ಮನೆ ವಗೈರೆ ಕಟ್ಟುವದಕ್ಕೂ ಎತ್ತ್ಯಾಕಸಿಕೊಡುವ ಸಂಗತಿಯಲ್ಲಿ ೫ ವರುಷಕ್ಕಿಂತ ಹೆಚ್ಚು ವಾಯಿದೆ ಇರಕೂಡದು.

ವಿಶೇಷ ಸಂಗತಿಗಳಲ್ಲಿ ಅಡ್ವಾನ್ಸ ಮೊಬಲಗು ೫೦೦ ರೂಪಾಯಿಗೆ ಮೀರದೆ ಇದ್ದಲ್ಲಿ ಕಮಿಶನರವರು ಹೆಚ್ಚು ವಾಯಿದೆ ಕೊಡಬಹುದು. ಹಾಗಲ್ಲದ ಪಕ್ಷದಲ್ಲಿ ಚೀಫ್‌ಕಮಿಶನರವರಿಂದ ಹೆಚ್ಚು ವಾಯಿದೆ ಕೊಡಲ್ಪಡುವದು.

೭. ೪ ಮತ್ತು ೫ನೇ ಕ್ರಮಗಳಲ್ಲಿ ನಮೂದಿಸಿದ ಸರ್ಟಿಫಿಕೇಟಿನ ಒಂದು ನಕಲನ್ನು ದರಖಾಸ್ತುದಾರನಿಗೆ ಕೊಡತಕ್ಕದ್ದು. ಅದನ್ನು ತಾಲ್ಲೂಕು ಖಜಾನೆಯಲ್ಲಿ ಹಾಜರಾತಿದಲ್ಲಿ ಅಡ್ವಾನ್ಸ ಸಿಕ್ಕುವದು.

೮. (ಎ.) ಬಡ್ಡಿಯೂ ಅಸಲ್ ಮೊಬಲಗಿನ ಬಿಸ್ತಿನೊಡನೆ ಬಾವತೀ ಆಗತಕ್ಕದ್ದು.

(ಬಿ) ಅಸಲಿನ ಮೊದಲಿನ ಮೊದಲನೇ ಬಿಸ್ತು ಸಲಿಕೆಬಗ್ಗೆ ಮಂಜೂರಾದ ತಾರೀಖಿಗೆ ೬ ತಿಂಗಳ ಹಿಂದಣ ತಾರೀಖ್ ಲಾಗಾಯತು ಅಡ್ವಾನ್ಸಿನಮೇಲೆ ಬಡ್ಡಿ ಎಣಿಸಲ್ಪಡುವದು.

(ಸಿ) ಬಾಕೀನಿಲ್ಲುವ ಮುಬಾದಲೆ ಹಣದ ಪ್ರತಿ ಒಂದು ರೂಪಾಯಿಗೂ ಒಂದಾಣೆಮೇಲೆ ಅಥವಾ ನೇಕಡಾ ಸಾಲೀಯಾನಾ ೬|೦ ರೂಪಾಯಿಮೇಲೆ ಬಡ್ಡಿ ಇರತಕ್ಕದ್ದು. ಆದರೆ ಚೀಫ್ ಕಮಿಶನರವರು ತಮ್ಮ ಇಷ್ಟಾನುಸಾರವಾಗಿಯಾಗಲಿ, ತಕ್ಕ ಕಾರಣಗಳಿಂದಾಗಲಿ, ಈ ಬಡ್ಡಿಯ ದರವನ್ನು ಕಮ್ಮಿಮಾಡಲೂ, ಯೆಲ್ಲವನ್ನು ಬಿಟ್ಟುಬಿಡಲೂ, ಅಥವಾ ವಸೂಲಾಗದೇ ಹೋದ ಬಡ್ಡಿಯ ಯಾವ ಅಂಶವನ್ನಾದರೂ; ಮುಜರೆ ಕೊಡಲೂ ಬಹುದು.

(ಡಿ) ವಾಯಿದೆಗೆ ಸರಿಯಾದ ಅಸಲ್ ಬಡ್ಡಿ ದೇಖಿಲ್ ಒಂದು ಬಿಸ್ತು ಕೊಡದೆ ತಪ್ಪಿದಲ್ಲಿ ಕಮಿಶನರವರು ನ್ಯಾಯವೆಂದು ನೆನಸಿದರೆ ಆ ಮೊಬಲಗಿನಮೇಲೆ ತಪ್ಪಿದ ವಾಯಿದೆ ಲಾಗಾಯತು ಹಣ ಬಾವತೀ ತಾರೀಖಿನ ವರೆಗೆ ಸಾಲೀಯಾನಾ ಶೇಕಡಾ ೬|೦ ರೂಪಾಯಿಗೆ ಹೆಚ್ಚಾದಂತೆ ಯಾವದರದಮೇಲೆ ಯಾದರೂ ಬಡ್ಡೀ ಹಾಕಬಹುದು.

೯. ಮುಬಾದಲೆ ಹಣವು ಸಾಲ್ವಾರ್ ಬಿಸ್ತುಬಂದಿ ಮೇಲೆ ಸಲಿಕೆ ಯಾಗುವದಿದ್ದಲ್ಲಿ ಅಂತಾ ಬಿಸ್ತುಗಳು ಸಾಧಾರಣವಾಗಿ ಪ್ರತಿ ವರುಷದ ಮಾರ್ಚಿ ತಿಂಗಳ ೨ನೇ ತಾರೀಖಿನಲ್ಲಿ ಭೂಮಿಯ ಕಂದಾಯದ ಬಿಸ್ತಿನ ಜೊತೆಯಲ್ಲಿ ಬಾವತೀಯಾಗತಕ್ಕದ್ದು. ಅಡ್ವಾನ್ಸನ್ನು ಮುಬಾದಲೆ ತೆಗದುಕೊಂಡವನಿಂದಾಗಲಿ, ಅವನ ಜಾಮೀನುದಾರನಿಂದಾಗಲಿ, ಕಮಿಶನರವರು ಆಕ್ಟಿನ ೫ನೇ ಪ್ರಕರಣದಮೇಲೆ ಭೂಮಿಯ ಕಂದಾಯದಂತೆಯೇ ವಸೂಲ್ಮಾಡಬಹುದು. ಹಣಗಳ ಸಲಿಕೆಯು ಮುಬಾದಲೆ ತೆಗದುಕೊಂಡವನು ವಾಸ ಇರುವ ತಾಲ್ಲೂಕು ಖಜಾನೆಯಲ್ಲಿ ಮಾಡಲ್ಪಡತಕ್ಕದ್ದು.

೧೦. ಬೆಳೆ ಆಗದೆ ಹೋದ್ದು ಅಥವಾ ಇತರ ಅಪೂರ್ವವಾದ ತೊಂದರೆಯಿಂದ ಅನಾನುಕೂಲ ಸಂಭವಿಸಿದ್ದು ರುಜುವಾದಲ್ಲಿ ಬಿಸ್ತುಗಳನ್ನು ಕಮಿಶನರವರು ತಮ ಇಚ್ಛಾನುಸಾರವಾಗಿ ಹುಕ್ಕುಂ ಮೂಲಕ ನಿಲ್ಲಿಸಬಹುದು. ಹಾಗೆ ನಿಲ್ಲಿಸಿದ ಸಂಗತಿಯನ್ನು ಅವರು ಚೀಫ್ ಕಮಿಶನರವರಿಗೆ ರಿಪೋರ್ಟ ಮಾಡತಕ್ಕದ್ದು. ಅವರು ಸದರೀ ಸಂಗತಿಯಲ್ಲಿ ತಮಗೆ ನ್ಯಾಯವಾಗಿ ತೋರುವ ಹುಕ್ಕುಂಗಳನ್ನು ಕೊಡಿಸುವರು.

೧೧ ಈ ಕ್ರಮಗಳಮೇಲೆ ಕೊಟ್ಟ ಅಡ್ವಾನ್ಸಿನ ಯಾವ ಭಾಗವನ್ನಾದರೂ ವಸೂಲ್ಮಾಡುವದಕ್ಕೆ ರಹಾರಿಲ್ಲವೆಂದು ಕಂಡುಬಂದಲ್ಲಿ ಚೀಫ್ ಕಮಿಶನರವರಿಗೆ ಸ್ಪೆಷಿಯಲ್ ರಿಪೋರ್ಟು ಮಾಡತಕ್ಕದ್ದು.

೧೨. ನೇಮಕವಾಗುವ ಫಾರಂಯಾನೆ ನಮೂನೆಯಲ್ಲಿ ಮುಬಾದಲೆ ಪಡಕೊಂಡವರ ಹೆಸರು ಅವರ ಸ್ಥಿತಿ ತೆಗದುಕೊಂಡಿರುವ ಜಾಮೀನಿನ ಸ್ವಭಾವ ಎಷ್ಟರಮಟ್ಟಿಗೆ ಸಹಾಯ ಕೊಡಲ್ಪಟ್ಟಿದೆ. ಅಸಲ ಬಡ್ಡಿಗೋಸ್ಕರ ಸಲಿಕೆಯಾಗಿರುವ ಮೊಬಲಗು ಹಾಲೀ ತಾರೀಖಿನವರೆಗೆ ನಿಂತಿರುವ ಜಾತಾಬಾಕಿ ಈ ದಾಖಲೆಗಳನ್ನ ನಮೂದಿಸಿ ಕಮಿಶನರವರು ಚೀಫ್ ಕಮಿಶನರವರಿಗೆ ೬ ತಿಂಗಳಿಗೊಂದಾವರ್ತಿ ಒಂದು (Half-yearly) ಸ್ಟೇಟಿಮೆಂಟ ಯಾನೆ ಪಟ್ಟಿಯನ್ನು ತಯಾರ್ಮಾಡಿ ಕಳುಹಿಸಿಕೊಡತಕ್ಕದ್ದು.

DRAFT OF A REGULATION TO AMEND THE LAW RELATING TO THE COLLECTION OF THE PUBLIC REVENUE IN THE PROVINCE OF COORG.

ಕಳೆದ ವಾರದ ಶೇಷ.

೧೪. ಕಂದಾಯ ಕೊಡಲಿಕ್ಕೆ ತಪ್ಪಿದವನು ತನ್ನ ಸೊತ್ತು ಜಪ್ತೀಮಾಡಲ್ಪಟ್ಟಮೇಲೆ ಮತ್ತು ಹರಾಜಿಗೆ ಗೊತ್ತಾದ ದಿನಕ್ಕೆ ಮುಂದಾಗಿ ತಗಾದೆ ಮಾಡಲ್ಪಟ್ಟ ಬಾಕಿ ಮೊಬಲಗನ್ನು ಬಡ್ಡಿ ಫೀಜು ಜಪ್ತೀಮಾಡಿದಬಗ್ಯೆ ಜರೂರಾದ ತಮಾಂ ಖರ್ಚುಗಳು ದೇಖಿಲ್ ಹಾಜರ್ಮಾಡಿದರೆ ಜಪ್ತೀ

(ಮೈಲ್ ಟಿಪ್ಪಣಿ: ಹರಾಜ್ ತಾರೀಖಿಗೆ ಮುಂದಾಗಿ ಬಾಕಿಯನ್ನು ಖರ್ಚುಗಳನ್ನೂ ಹಾಜರ್ಮಾಡಿದರೆ ಜಪ್ತೀ ಖಲಾಸಾನತಕ್ಕದ್ದು.)

ದಾರನು ಅದು ಹಾಜರ್ಮಾಡಲ್ಪಟ್ಟಮೇಲೆ ಸದರೀ ಮೊಬಲಗನ್ನು ತೆಗದುಕೊಂಡು ಸೊತ್ತನ್ನು ಕೂಡಲೇ ಖುಲಾಸೆಮಾಡತಕ್ಕದ್ದು.

ಜಪ್ತಿಯಾದ ಫಸಲ್ ವಿಷಯದಲ್ಲಿ ನಡೆಯ ಬೇಕಾದ ವಿಧ.

೧೫. ಕಂದಾಯ ಕೊಡಲಿಕ್ಕೆ ತಪ್ಪಿದವನ ಬಾಬತು ಜಮೀನಿನ ಫಸಲ್‌ಗಳನ್ನಾಗಲಿ ರೇಖೆಯಾಗದ ಉತ್ಪತ್ತಿಯನ್ನಾಗಲಿ ಜಪ್ತಿಮಾಡುವ ಮುತ್ಸದ್ದಿಯು ಅವುಗಳನ್ನು ಕಟಾವಿಗಾಗಲಿ, ರೇಖೆಗಾಗಲಿ, ಅರ್ಹವಾದಾಗ ಹರಾಜ್ ಹಾಕಿಸಬಹುದು. ಅಥವಾ ತನ್ನ ಯಖ್ತ್ಯಾರೀಮೇಲೆ ಅವುಗಳನ್ನು ತಕ್ಕ ಕಾಲದಲ್ಲಿ ಕಟಾವ್ ಮಾಡಿಸಿ ಹರಾಜ್‌ಮಾಡಿಸುವ ಪರಿಯಂತ ಯುಕ್ತಗಳಾದ ಸ್ಥಳಗಳಲ್ಲಿ ಇಡಿಸಬಹುದು; ಹಾಗೆ ಕಟಾವ್ ವಗೈರೆ ಮಾಡಿಸುವ ಪಕ್ಷಕ್ಕೆ ಸ್ವಂತಗಾರನು ಸೊತ್ತನ್ನು ಬಿಡಿಸಿಕೊಳ್ಳುವಲ್ಲಿ ಅಂತಾ ಫಸಲ್‌ಗಳನ್ನು ಯಾ ಉತ್ಪತ್ತಿಗಳನ್ನು ಕಟಾವ್ ಮಾಡುವವರ ಯಾ ರೇಖೆ ಮಾಡುವವರ ಯಾ ಜಮಾಯಿಸಿಡುವವರ ಖರ್ಚನ್ನು ಕೊಡತಕ್ಕದ್ದು. ಅಥವಾ ಸದರೀಸೊತ್ತು ವಿಕ್ರಯಿಸಲ್ಪಟ್ಟದ್ದ ಪಕ್ಷಕ್ಕೆ ವಿಕ್ರಯದ ಮೊಬಲಗಿನ ವಸೆಯಿಂದ ಖರ್ಚು ಸಲ್ಲತಕ್ಕದು.

ಕಂದಾಯ ಬಾಕಿಯನ್ನು ಒಕ್ಕಿದಾರ್ ಕೊಟ್ಟು ಜಪ್ತಿಯನ್ನು ಖುಲಾಸೆ ಮಾಡಿಸಬಹುದು.

೧೬. ಒಬ್ಬ ಒಕ್ಕಿದಾರನಿಗೆ ಸಂಬಂಧಿಸಿದ ಫಸಲ್‌ಗಳಾಗಲಿ, ಉತ್ಪತ್ತಿಯಾಗಲಿ ಹರಾಜ್‌ಹಾಕಲ್ಪಟ್ಟರೆ ಅಂತಾ ಒಕ್ಕಿದಾರನು ಕಂದಾಯ ಕೊಡಲಿಕ್ಕೆ ತಪ್ಪಿದವನಿಗೆ ಯಾವ ಜಮೀನಿನಲ್ಲಿ ಅಂತಾ ಫಸಲ್‌ಗಳಾಗಲಿ ಉತ್ಪತ್ತಿಗಳಾಗಲಿ ಬೆಳದವೋ ಆ ಜಮೀನ್‌ಗಳ ವಿಷಯದೊಳಗೆ ಆಗಲಿ ತರುವಾಯಲಾಗಲಿ ತನ್ನಿಂದ ಸಲ್ಲಬೇಕಾದ ಯಾವ ಕಂದಾಯವಿದ್ದಾದರೂ ಹಾಗೆ ವಿಕ್ರಯಿಸಲ್ಪಟ್ಟ ಫಸಲ್‌ಗಳ ಯಾ ಉತ್ಪತ್ತಿಗಳ ಕಿಮ್ಮತ್ತನ್ನು ವಜಾ ಮಾಡುವದು ಅವನಿಗೆ ನ್ಯಾಯವಾಗಿರತಕ್ಕದ್ದು. ಮತ್ತು ಕಂದಾಯದ ಬಾಕೀಗೋಸ್ಕರ ಯಾವನ ಫಸಲ್‌ಗಳು ಜಪ್ತೀಮಾಡಲ್ಪಟ್ಟವೋ ಅಂತಾ ಒಕ್ಕಿದಾರನು ಬಾಕಿಯನ್ನು ಪಾವತೀಮಾಡಿ ಆಗಲೇ ಆಗಲಿ, ತರುವಾಯಲಾಗಲಿ, ತನ್ನಿಂದ ಸಲ್ಲಬೇಕಾದ ಯಾವ ಕಂದಾಯದ ದೆಸೆಯಿಂದಲಾಗಲಿ, ಮೇಲೆ ಕಂಡ ರೀತಿಯಾಗಿ ವಜಾ ಮಾಡುವದು ಅವನಿಗೆ ನ್ಯಾಯವಾಗಿರತಕ್ಕದ್ದು.

ಜಪ್ತಿಮಾಡಲ್ಪಟ್ಟ ದನಗಳಾಗಲಿ, ಸಾಮಾನುಗಳಾಗಲಿ, ಉಪಯೋಗಿಸಲ್ಪಡಕೂಡದು.

೧೭. ಜಪ್ತೀದಾರ, ಜಪ್ತೀಮಾಡಲ್ಪಟ್ಟ ಎತ್ತುಗಳನ್ನಾಗಲಿ, ಜಾನವಾರಗಳನ್ನಾಗಲಿ, ಕೆಲಸಮಾಡಿಸಕೂಡದು, ಅಥವಾ ಸರಕುಗಳನ್ನು ಯಾ ಸೊತ್ತುಗಳನ್ನು, ಉಪಯೋಗಿಸಕೂಡದು. ದನಗಳಿಗಾಗಲಿ, ಜಾನುವಾರಗಳಿಗಾಗಲಿ, ಜರೂರಾದ ಮೇವು ಹಾಕಿಸಿ, ಅದರ ಬಾಬತು ಖರ್ಚನ್ನು ಸ್ವಂತಗಾರನು ಸೊತ್ತನ್ನು ಬಿಡಿಸಿಕೊಳ್ಳುವಲ್ಲಿ ಅಥವಾ ಆ ಸೊತ್ತು ಹರಾಜ್ ಹಾಕಲ್ಪಟ್ಟರೆ ಅದರಲ್ಲಿ ಹುಟ್ಟುವಳಿ ಆದ ಮೊಬಲಗಿನಿಂದ ತೆಗದುಕೊಳ್ಳತಕ್ಕದ್ದು.

ಜಪ್ತಿಯಾದ ಸೊತ್ತಿನ ವಿಷಯದಲ್ಲಿ ಅಜಾಗ್ರತೆಮಾಡಿದ ಆಫೀಸರನ ಜವಾಬ್‌ದಾರಿ.

೧೮. ಜಪ್ತೀಮಾಡಲ್ಪಟ್ಟ ಸೊತ್ತನ್ನು ಕ್ರಮವಾಗಿ ಕಾಪಾಡುವಬಗ್ಗೆ ಜರೂರಾದ ಎಚ್ಚರಿಕೆಯನ್ನು ವಹಿಸದೆ ಹೋಗುವದರಿಂದ ಕಳವು ಮಾಡಲ್ಪಟ್ಟರೆ, ಯಾ ಹೋಗಲಾಡಿಸಲ್ಪಟ್ಟರೆ, ಅಥವಾ ಅದು ಕ್ರಮವಾಗಿ ಕೆಲಸಮಾಡಿಸಲ್ಪಡುವದರಿಂದ ಉಕ್ಸಾನಾದರೆ, ಅಂತಾ ನಷ್ಟ ಯಾ ಉಕ್ಸಾನಿನ ಮೊಬಲಗನ್ನು ಸದರೀ ನಷ್ಟ ಯಾ ಉಕ್ಸಾನ್ ಯಾರ ಅಸಡ್ಡೆಯಿಂದ ಯಾ ಕೃತ್ಯದಿಂದ ಉಂಟಾಯಿತೋ ಅಂತಾ ಆಫೀಸರರ ದೆಸೆಯಿಂದ ಕಮ್ಮಿಷನರವರು ಪೂರಾ ಪ್ರೊಸೆಸ್‌ಮೂಲಕ ವಸೂಲ್ಮಾಡತಕ್ಕದ್ದು. ಮೊಬಲಗು ವಸೂಲ್ಮಾಡಲ್ಪಟ್ಟಾಗ ಅದು ಉಕ್ಸಾನ್‌ಪಟ್ಟ ಮನುಷ್ಯನಿಗೆ ಕೊಡಲ್ಪಡತಕ್ಕದ್ದು.

ಜಪ್ತಿಯು, ಬಾಕಿಯ ದಾವಾದಾಮಿಗೆ ತಕ್ಕಷ್ಟಿರತಕ್ಕದ್ದು.

೧೯. ಮಾಡಲ್ಪಡುವ ಜಪ್ತಿಯು ಬಹಳ ಜಾಸ್ತಿ ಇರಕೂಡದು ಅಂದರೆ, ಜಪ್ತಿ ಮಾಡಲ್ಪಟ್ಟ ಸೊತ್ತು ಬಾಕಿ ಮೊಬಲಗಿನ ದಾಮಾಷಾಯಿಗೆ ಸಾಧ್ಯವಾದಮಟ್ಟಿಗೆ ಅನುಗುಣವಾದ್ದಾಗಿರತಕ್ಕದ್ದು. ಕಂದಾಯ ಕೊಡಲಿಕ್ಕೆ ತಪ್ಪಿದವನಿಗೆ ವ್ಯವಸಾಯದ ಕೆಲಸಕ್ಕೋಸ್ಕರ ಬೇಕಾಗುವಂತಾ ದನಗಳು, ವ್ಯವಸಾಯದ ಕೊರಮುಟ್ಟುಗಳು ಜಪ್ತಿಗೆ ಒಳಪಡತಕ್ಕದ್ದಲ್ಲವು.

ಜಪ್ತೀಕಾಲ.

೨೦. ಜಪ್ತಿಯು ಸೂರ್ಯೋದಯದ ಯಾ ನಂತರ ಸೂರ್ಯಾಸ್ತಮಯಕ್ಕೆ ಮುಂದಾಗಿ ಮಾಡಲ್ಪಡತಕ್ಕದ್ದೇಹೊರ್ತು ಅನ್ಯಥಾ ಕೂಡದು.

ಜಪ್ತಿಯನ್ನು ತಪ್ಪಿಸಲಿಕ್ಕೋಸ್ಕರ ಸೊತ್ತನ್ನು ಮೋಸದಿಂದ ಒಯ್ಯುವಬಗ್ಗೆ ದಂಡನೆ.

೨೧. ಸರ್ಕಾರದ ಬಾಕೀಗೋಸ್ಕರ ಮಾಡಲ್ಪಡುವ ಜಪ್ತಿಯನ್ನು ನಿರೋಧಿಸುವಬಗ್ಗೆ ಕಂದಾಯ ಕೊಡಲಿಕ್ಕೆ ತಪ್ಪಿದವನು ಸೊತ್ತನ್ನು ಮೋಸದಿಂದ ಒಯಿದರೆ ತಕ್ಕ ಅಧಿಕಾರವುಳ್ಳ ಯಾವ ಸಿವಿಲ್‌ಕೋರ್ಟಾಗಲಿ ಹಾಗೆ ಒಯಿದದ್ದು ರುಜುವಾದಮೇಲೆ ಸದರೀ ಸೊತ್ತನ್ನು ಜಪ್ತೀದಾರನ ವಶಕ್ಕೆ ಫೌರಾಗಿ ಕೊಡಿಸಿಬಿಡತಕ್ಕದ್ದು. ಮತ್ತು ಕಂದಾಯ ಕೊಡಲಿಕ್ಕೆ ತಪ್ಪಿದವನು ಇಂಡಿಯನ್ ಪಿನಲ್‌ಕೋಡಿನ ೪೨೪ನೇಸೆಕ್ಷನ್ನಿಂದ ವಿಧಿಸಲ್ಪಟ್ಟ ದಂಡನೆಗಳಿಗೆ ಸಹ ಗುರಿಯಾಗತಕ್ಕದ್ದು.

ಜಪ್ತಿಮಾಡಲ್ಪಟ್ಟ ವ ಹರಾಜು ಹಾಕಲ್ಪಟ್ಟ ಸೊತ್ತಿಗೆ ಬಾಧ್ಯತೆಗಳು.

೨೨. ಕಂದಾಯ ಕೊಡಲಿಕ್ಕೆ ತಪ್ಪಿದವನಲ್ಲದ ಅಥವ ಅವನಿಗೆ ಜವಾಬ್‌ದಾರನಲ್ಲದ ಯಾವ ಮನುಷ್ಯನಾಗಲಿ ಜಪ್ತೀ ಮಾಡಲ್ಪಟ್ಟ ಸೊತ್ತಿಗೆ ತನಗೆ ಬಾಧ್ಯತೆ ವುಂಟೆಂದು ಹೇಳುವ ಪಕ್ಷಕ್ಕೆ ಮತ್ತು ಜಪ್ತೀದಾರನು ಹಾಗಾದರೂ ಸದರೀ ಸೊತ್ತನ್ನು ಹರಾಜ್ ಮಾಡಿಸುವ ಪಕ್ಷಕ್ಕೆ ಅಂತಾ ಹಕ್ಕುದಾರನು ಅಂತಾ ಹಕ್ಕು ತಕ್ಕ ಅಧಿಕಾರವುಳ್ಳ ಯಾವ ಕೋರ್ಟನಲ್ಲಾಗಲಿ ರುಜುವಾದಮೇಲೆ ಮತ್ತು ಜಪ್ತಿದಾರನು ಯಾವಬಗ್ಗೆ ಸೊತ್ತು ಹರಾಜ್ ಹಾಕಿಸಲ್ಪಟ್ಟಿರಬಹುದೋ ಅಂತಾ ಕಂದಾಯದ ಬಾಕೀ ವಿಷಯದಲ್ಲಿ ಜವಾಬ್‌ದಾರಿಯನ್ನು ರುಜುಮಾಡಲಿಕ್ಕೆ ಅಶಕ್ತನಾಗಿರುವ ಸಂದರ್ಭದಲ್ಲಿ ಜಪ್ತೀದಾರನಿಂದ ಅಂತಾ ಸೊತ್ತಿನ ಪೂರಾ ಮೊಬಲಗನ್ನು ಬಡ್ಡಿ, ಖರ್ಚುಗಳು ಉಕ್ಸಾನುಗಳು ಇವುಗಳು ದೇವೀಲ್ ಮೊಕದ್ದಮೆಯ ಸಂದರ್ಭಾನುಸಾರ ವಸೂಲ್ಮಾಡತಕ್ಕದ್ದು. ಆದರೆ ಕಂದಾಯ ಕೊಡಲಿಕ್ಕೆ ತಪ್ಪಿದವನ ವಶದಲ್ಲಿ ಜಪ್ತೀಮಾಡಲ್ಪಟ್ಟ ಜಮೀನ್ ಹಿಂದಿನ ಕ್ರಯದಿಂದ ಯಾ ಭೋಗ್ಯದಿಂದ ಏರ್ಪಟ್ಟದ್ದರೂ ಸರಿ, ಅನ್ಯಥಾ ಏರ್ಪಟ್ಟದ್ದರೂ ಸರಿ, ಅಂತಾ ಜಮೀನಿನಲ್ಲಿರುವ ಫಸಲ್‌ಗಳಿಗಾಗಲಿ, ರೇಖೆಯಾದ ಉತ್ಪತ್ತಿಗಾಗಲಿ, ಮಾರಿ ಬಂದ ಹುಟ್ಟುವಳಿಗಾಗಲಿ, ಇರುವ ಬಾಧ್ಯತೆಯೂ ಯಾವ ಜಮೀನಿನಲ್ಲಿ ಅಂತಾ ಫಸಲ್ ಉತ್ಪತ್ತಿಯಾಗಿರಬಹುದೋ ಅಂತಾ ಜಮೀನಿನ ದೆಸೆಯಿಂದ ಸಲ್ಲಬೇಕಾದ ಕಂದಾಯದ ಬಾಬತು ಪೂರ್ವದ ಬಾಧ್ಯತೆಯನ್ನು ನಿರೋಧಿಸತಕ್ಕದ್ದಲ್ಲವು.

ಜಪ್ತಿಮಾಲನ್ನು ಬಲಾತ್ಕಾರದಿಂದ ಯಾ ರಹಸ್ಯವಾಗಿ ತೆಗದುಕೊಂಡು ಹೋಗುವದಕ್ಕೆ ದಂಡನೆ.

೨೩. ಒಂದಾವರ್ತಿ ಜಪ್ತೀಯಾದ ಮಾಲನ್ನು ಯಾವ ಮನುಷ್ಯನಾಗಲಿ ಬಲಾತ್ಕಾರದಲ್ಲಾಗಲಿ, ರಹಸ್ಯವಾಗಿಯಾಗಲಿ, ತೆಗದುಕೊಂಡು ಹೋಗದಂತೆ ತಕ್ಕ ಅಧಿಕಾರವುಳ್ಳ ಸಿವಿಲ್ ಕೋರ್ಟನವರಿಗೆ ತೃಪ್ತಿಕರವಾಗಿ ರುಜುವಾದರೆ, ಆ ಕೋರ್ಟನವರು ಅಂತಾ ಸೊತ್ತನ್ನು ಜಪ್ತೀದಾರನಿಗೆ ಫೌರಾಗಿ ಕೊಡಿಸಿಬಿಡಬಹುದು. ತಕ್ಸೀರ್‌ದಾರನು ಇಂಡಿಯನ್ ಪಿನಲ್‌ಕೋಡಿನಿಂದ ವಿಧಿಸಲ್ಪಟ್ಟ ದಂಡನೆಗಳಿಗೆಸಹ ಗುರಿಯಾಗತಕ್ಕದ್ದು.

ಜಪ್ತೀದಾರನು ಬಲಾತ್ ಖುಲ್ಲಾಮಾಡಬಹುದಾದ ಸ್ಥಳಗಳು.

೨೪. ಕಂದಾಯ ಕೊಡಲಿಕ್ಕೆ ತಪ್ಪಿದವನ ಬಾಬತು ಮತ್ತು ಈ ಕೆಳಗೆ ಕಂಡ ಕಟ್ಟಡಗಳಲ್ಲಿ ಇಡಲ್ಪಟ್ಟ ಬಾಬತು ಸೊತ್ತನ್ನು ಜಪ್ತೀಮಾಡುವಬಗ್ಗೆ ಯಾವ ಲಾಯವನ್ನಾಗಲಿ, ಕೊಟ್ಟಗೆಯನ್ನಾಗಲಿ, ಕಣಜವನ್ನಾಗಲಿ, ಗಡಂಗಗಳನ್ನಾಗಲಿ, ಔಟ್ ಹೌಸನ್ನಾಗಲಿ, ಇತರ ಕಟ್ಟಡವನ್ನಾಗಲಿ, ಬಲಾತ್ ಖುಲ್ಲಾಮಾಡುವದು ಜಪ್ತೀದಾರಗೆ ನ್ಯಾಯವಾಗಿರತಕ್ಕದ್ದು. ಮತ್ತು ಆತನು ಯಾವ ತಲೆಬಾಗಿಲು ತೆರೆಯಲ್ಪಟ್ಟಿರುತ್ತೋ ಅಂತಾ ಯಾವ ವಾಸಗೃಹವನ್ನಾಗಲಿ ಪ್ರವೇಶಿಸಬಹುದು, ಮತ್ತು ಅಂತಾ ವಾಸಗೃಹದಲ್ಲಿ ಯಾವ ಕೊಟ್ಟಡಿಯ ಬಾಗಿಲುಗಳನ್ನಾಗಲಿ, ಒಡೆದು ತೆಗೆಯಬಹುದು; ಪರಂತು ಯಾವಾಗ್ಯೂ ಅಂತಾ ವಾಸಗೃಹದಲ್ಲಿ ಜನಾನಿಗೋಸ್ಕರ, ಯಾ ಹೆಂಗಸರ ವಾಸಕ್ಕೋಸ್ಕರ ವಿನಿಯೋಗಿಸಲ್ಪಟ್ಟ ಯಾವ ಅಂತಃಪುರವನ್ನಾಗಲಿ ಒಡೆದು ತೆಗೆಯುವಣ ಅಥವಾ ಪ್ರವೇಶಿಸುವಣ ಅಂತಾ ಜಪ್ತೀದಾರನಿಗೆ ನ್ಯಾಯವಾಗಿರತಕ್ಕದ್ದಲ್ಲವು.

ಒಬ್ಬ ಪೋಲೀಸ್ ಉದ್ಯೋಗಸ್ಥನ ರೂಬರೂಪ್ ಬಾಗಿಲುಗಳನ್ನು ಬಲಾತ್ ತೆಗಿಯಲಿಕ್ಕೆ ಜಪ್ತಿದಾರಗೆ ಅಧಿಕಾರ.

೨೫. ಕಂದಾಯ ಕೊಡಲಿಕ್ಕೆ ತಪ್ಪಿದವನಬಾಬತು ಸೊತ್ತು ಯಾವನು ನೆಯತಲೆಬಾಗಿಲು ಮುಚ್ಚಲ್ಪಟ್ಟಿರುತ್ತೋ ಅಂತಾ ವಾಸಗೃಹದಲ್ಲೀಆಗಲಿ ದೇಶಮರ್ಯಾದಾನುಗುಣವಾಗಿ ಯಾವ ಅಂತಃಪುರಗಳು ರಹಸ್ಯಸ್ಥಾನಗಳೆಂದು ಎಣಿಸಲ್ಪಡುತ್ತವೋ ಅಂತಾ ಸ್ತ್ರೀಯರುಗಳಗೋಸ್ಕರ ವಿನಿಯೋಗಿಸಲ್ಪಟ್ಟ ಯಾವ ಅಂತಃಪುರಗಳಲ್ಲಾಗಲಿ ಇಡಲ್ಪಟ್ಟಿರುತ್ತೆಂದು ಊಹಿಸಲಿಕ್ಕೆ ಜಪ್ತೀದಾರನಿಗೆ ಕಾರಣತೋರಿಬಂದರೆ, ಆಸಂಗತಿಯನ್ನು ಅಂತಾ ಜಪ್ತೀದಾರನು ಅಲ್ಲಿಗೆ ಅತ್ಯಂತಸಮೀಪವಾದ ಪೋಲೀಸ್‌ಸ್ಟೇಷನ್ ಇನ್‌ಚಾರ್ಜ್ ಆಫೀಸರಿಗೆ ಜಾಹಿರ್ಮಾಡತಕ್ಕದ್ದು. ಹಾಗೆ ತಿಳಿಸಿದ್ದರಮೇಲೆ ಸದರೀಸ್ಟೇಷನ್ ಇನ್‌ಚಾರ್ಜ್ ಆಫೀಸರು ಸದರೀ ಸ್ಥಳಕ್ಕೆ ಒಬ್ಬ ಪೋಲೀಸ್‌ಆಫೀಸರನ್ನು ಕಳುಹಿಸತಕ್ಕದ್ದು, ಜಪ್ತಿದಾರನು ಮನೆಯೊಳಗೆ ಜನಾನಿ ಶಿವಾಯಿ ಯಾವ ಕೊಟಡಿಗಳನ್ನಾಗಲಿ ಹ್ಯಾಗೆ ಒಡೆದು ತೆಗಿಯಬಹುದೋ ಅದೇವಿಧದಲ್ಲಿ ಅಂತ ವಾಸಗೃಹದ ತಲೆಬಾಗಿಲನ್ನು ಅಂತವನ ರೂಬರೂಬ್ ಬಲಾತ್ಕಾರದಿಂದ ತೆಗೆಯಬಹುದು, ಮತ್ತು ಜನಾನಿಯಲ್ಲಿರುವ ಹೆಂಗಸರನ್ನು ಆಚೆಗೆ ಕಳುಹಿಸುವಬಗ್ಯೆ ಕ್ರಮಪ್ರಕಾರ ನೋಟೀಸ್ ಕೊಟ್ಟಮೇಲೆ ಮತ್ತು (ಸದರೀ ಹೆಂಗಸರು ಗೌರವ್ಯವಾದ ವರ್ಣೆಯಲ್ಲಿರತಕ್ಕವರಾಗಿ ದೇಶಮರ್ಯಾದಾನುಗುಣವಾಗಿ ಹೊರಗೆ ಬರತಕ್ಕವರಲ್ಲದೆ ಇದ್ದ ಪಕ್ಷಕ್ಕೆ) ಅವರುಗಳನ್ನು ಆಚೆಗೆ ಕಳುಹಿಸುವಬಗ್ಯೆ ತಕ್ಕ ಕ್ರಮವನ್ನು ಕಲ್ಪಿಸಿದಮೇಲೆ ಅಂತಾ ಜನಾನಿ ಭಾಗಗಳಲ್ಲಿ ಇಡಲ್ಪಟ್ಟಿರುವ ಕಂದಾಯ ಕೊಡಲಿಕ್ಕೆ ತಪ್ಪಿದವನ ಬಾಬತು ಸೊತ್ತನ್ನು ಜಪ್ತೀಮಾಡುವಬಗ್ಯೆ ಜಪ್ತೀದಾರನು ಪೋಲೀಸ್ ಆಫೀಸರನ ರೂಬರೂಪ್ ಪ್ರವೇಶಿಸಬಹುದು; ಆದರೆ ಅಂತಾ ಸೊತ್ತು ಕಾಣಲ್ಪಟ್ಟರೆ ಅಂತಾ ಭಾಗಗಳದೆಸೆಯಿಂದ ಕೂಡಲೇ ಅವುಗಳು ಸಾಗಿಸಲ್ಪಡತಕ್ಕದ್ದು. ಆ ತರುವಾಯ ಸದರೀ ಭಾಗಗಳು ಪೂರ್ವದ ವಾಸಸ್ಥರಿಗೇನೇ ಖುಲಾಸೆಯಾಗಿ ಬಿಡತಕ್ಕವು.

ಅಕ್ರಮ ಪ್ರವೇಶಕ್ಕೆ ದಂಡನೆ.

೨೬. ಈ ಕಾನೂನಿನ ನಿಬಂಧನೆಗಳಿಗೆ ವಿರುದ್ಧವಾಗಿ ಹೆಂಗಸರು ಇರುವ ಭಾಗಗಳನ್ನು ಪ್ರವೇಶಿಸುವ ಅಥವಾ ವಾಸಗೃಹಗಳ ತಲೆಬಾಗಿಲನ್ನು ಬಲಾತ್ಕಾರದಿಂದ ತೆಗೆಯುವಜನಗಳು ಒಬ್ಬ ಮೇಜಸ್ಟ್ರೇಟರಮುಂದೆ ತಕ್ಸೀರ್ ಸ್ಥಾಪಿಸಲ್ಪಟ್ಟ ಐನೂರು ರೂಪಾಯಿಗೆ ಮೀರದ ಒಂದು ಜುರ್ಮಾನೆಗಾಗಲಿ ಆರುತಿಂಗಳಪರ್ಯಂತರ ವ್ಯಾಪಿಸುವ ಒಂದುಮಾಯಿದೆ ಪರ್ಯಂತ ಯಾವದಾದರು ಒಂದುಬಗೆ ಖೈದಿಗಾಗಲೀ ಗುರಿಯಾಗತಕ್ಕದ್ದು.

ಹರಾಜಾಗತಕ್ಕ ಮಾಲನ್ನು ಹರಾಜ್‌ಮಾಡಲ್ಪಡತಕ್ಕ ಸೊತ್ತನ್ನು ಕುರಿತು ಕೊಡಲ್ಪಡತಕ್ಕ ಇಸ್ತಿಹಾರ್.

೨೭. ಜಪ್ತೀಮಾಲನ್ನು ಹರಾಜ್ ಮಾಡಲಿಕ್ಕೆ ಹನ್ನೊಂದನೆಸೆಕ್ಷನ್ನನುಸರಿಸಿ ಚೀಫ್‌ಕಮ್ಮಿಷನರವರಿಂದ ಅಧಿಕಾರ ಕೊಡಲ್ಪಟ್ಟ ಸರ್ಕಾರದ ಉದ್ಯೋಗಸ್ಥನು ಯಾವ ಸ್ಥಳದಲ್ಲಿ ಯಾವದಿನ ವ ಯಾವ ಹೊತ್ತಿನಲ್ಲಿ ಜಪ್ತೀ ಮಾಲ್ ಹರಾಜ್ ಹಾಕಲ್ಪಡುವದೋ ಆ ಸ್ಥಳ, ದಿನ ವ ಹೊತ್ತುಗಳನ್ನು ನಮೂದಿಸಿ ಒಂದು ನೋಟಿಸ್ ದೇಖೀಲೆ ಹರಾಜ್ ಆಗತಕ್ಕ ಸೊತ್ತಿನ ಒಂದು ಪಟ್ಟಿಯನ್ನು ಕಂದಾಯ ಕೊಡಲಿಕ್ಕೆ ತಪ್ಪಿದವನ ಮನೆಯ ತಲೆಬಾಗಿಲಿಗಾಗಲಿ ಸೊತ್ತು ಯೆಲ್ಲಿ ಜಪ್ತೀಮಾಡಲ್ಪಟ್ಟಿರಬಹುದೋ ಅಂತಾ ಮನೆ ಮುಂತಾದ್ದರಮೇಲಾಗಲಿ ಚಿಕಟಾಯಿಸತಕ್ಕದ್ದು. ಮತ್ತು ಉದ್ದೇಶಿಸಲ್ಪಟ್ಟ ಹರಾಜನ್ನು ಕುರಿತು ನೋಟಿಸಿನ ನಕಲನ್ನು ಗ್ರಾಮದ ಅಂಬಲಗಳಲ್ಲಿ ಅಂದರೆ ಗ್ರಾಮಸ್ಥರು ಸೇರುವ ಸ್ಥಳಗಳಲ್ಲಿ ಚಿಕಟಾಯಿಸುವದರಮೂಲಕ, ದಂಡೋರೆಯೊಡಿಸುವದರಮೂಲಕ, ಅಥವಾ ಕಂದಾಯ ಬಾಕಿಯಾದ ಜಮೀನುಗಳು ಯಾವ ಗ್ರಾಮಕ್ಕೆ ಸೇರುತ್ತವೋ ಆ ಗ್ರಾಮದಲ್ಲಿ ಮಾಮೂಲಾದ ಇತರ ರೀತಿಯಿಂದ ಮತ್ತು ಹರಾಜನ್ನು ತಕ್ಕಂತೆ ಪ್ರಸಿದ್ಧಪಡಿಸುವಬಗ್ಯೆ ಕಮ್ಮಿಷನರವರಾಗಲಿ ಅದಕ್ಕೋಸ್ಕರ ಕಮ್ಮಿಷನರವರಿಂದ ಅಧಿಕಾರ ಕೊಡಲ್ಪಟ್ಟ ಇತರ ಆಫೀಸರಾಗಲಿ ಜರೂರೆಂದು ಭಾವಿಸುವಂತಾ ಸ್ಥಳದೊಳಗೆ ಯಾ ಸ್ಥಳಗಳೊಳಗೆ ಪ್ರಸಿದ್ಧಪಡಿಸತಕ್ಕದ್ದು.

ಮೇಲೆಕಂಡ ಪ್ರಕಾರ ನೋಟೀಸ್ ಘೋಯಿಷಮಾಡಲ್ಪಡುವ ತಾರೀಖ್ ಲಾಗಾಯತ್ ಹದಿನೈದು ದಿನಗಳಕಾಲ ಕಳೆಯುವತನಕ ಹರಾಜ್ ಯಾವದೂ ನಡೆಸಕೂಡದು.

ಹರಾಜ್ ಹ್ಯಾಗೆ ನಡೆಸಲ್ಪಡತಕ್ಕದ್ದು.

೨೮. ಗೊತ್ತಾದ ಕಾಲದೊಳಗೆ ಸೊತ್ತು ಸದರೀ ಆಫೀಸರರು ಯುಕ್ತವೆಂದೆಣಿಸಬಹುದಾದಷ್ಟು ಯಾ ಹೆಚ್ಚು ಲಾಟುಗಳಾಗಿ ಹರಾಜ್‌ಹಾಕಲ್ಪಟ್ಟು ಚಡೆದರಖಾಸ್ತುದಾರ್ರಿಗೆ ವಿಕ್ರಯಿಸಲ್ಪಡತಕ್ಕದ್ದು. ಕಂದಾಯ ಬಾಕಿಗಿಂತ ಹೆಚ್ಚು ಮೊಬಲಗಿಗೆ ವಿಕ್ರಯಿಸಲ್ಪಟ್ಟರೆ ಹಾಗೆ ಜಾಸ್ತಿಹುಟ್ಟುವಳಿಯಾದ ಮೊಬಲಗಿನಲ್ಲಿ ಪ್ರೊಸೆಸ್ ವ ಬಡ್ಡಿ ಖರ್ಚುಗಳನ್ನು ವಜಾಮಾಡಿ ವುಳಿದ ಬಾಕೀಯನ್ನು ಕಂದಾಯ ಕೊಡಲಿಕ್ಕೆ ತಪ್ಪಿದವನಿಗೆ ಪಾವತೀಮಾಡತಕ್ಕದ್ದು.

ಜಪ್ತೀಮಾಲನ್ನು ಕೊಂಡುಕೊಂಡವನಿಕ್ಕೆ ಮೊಬಲಗು ಸಂದಾಯ ಮಾಡುವ ವಿಧ.

೨೯. ಹರಾಜ್ ಕಾಲದಲ್ಲಿ ಸೊತ್ತಿಗೆ ನಗದು ಮೊಬಲಗು ಸಂದಾಯ ಮಾಡತಕ್ಕದ್ದು, ಅಥವಾ ಹರಾಜ್ ನಡೆಸುವ ಆಫೀಸರರು ಮೊಕರರ್ ಮಾಡತಕ್ಕ ಕಾಲದತರುವಾಯ ಕೂಡಲೇ ಪಾವತೀ ಮಾಡತಕ್ಕದ್ದು. ಮತ್ತು ಕ್ರಯದಾರನು ಸೊತ್ತಿನಪೈಕಿ ಯಾವ ಭಾಗವನ್ನು ಅದಕ್ಕಾಗಿ ಪೂರಾ ಮೊಬಲಗು ಸಂದಾಯಮಾಡುವತನಕ ತೆಗದುಕೊಂಡುಹೋಗುವದಕ್ಕೆ ಅವಕಾಶ ಕೊಡಲ್ಪಡಕೂಡದು. ಕ್ರಯದಾರನು ಕ್ರಯದ ಮೊಬಲಗನ್ನು ಕೊಡಲಿಕ್ಕೆ ತಪ್ಪಿದರೆ ಸೊತ್ತು ಮರಳಿ ಹರಾಜ್ ಹಾಕಲ್ಪಡತಕ್ಕದ್ದು. ಮತ್ತು ಮರಳಿ ಹರಾಜ್ ಹಾಕುವಲ್ಲಿ ವುಂಟಾಗುವ ನಷ್ಟಕೂ ಹಿಡಿಯುವ ಖರ್ಚಿಗೂ ಅವನು ಗುರಿಯಾಗತಕ್ಕದ್ದು.

ಕ್ರಯದಾರನು ಮೊಬಲಗು ಕೊಡಲಿಕ್ಕೆ ತಪ್ಪಿದರೆ ಮರಳಿ ಹರಾಜ್ ಹಾಕೋಣ.

ಸೊತ್ತು ಎರಡನೇ ಆವರ್ತಿ ಹರಾಜ್ ಹಾಕುವಲ್ಲಿ ಮೊದಲನೇಸಲದ ಹರಾಜಿಗಿಂತಲೂ ಜಾಸ್ತೀ ಕ್ರಯಕ್ಕೆ ಹೋದರೆ ಆ ಬಾಬತು ವ್ಯತ್ಯಾಸ ಯಾ ಹೆಚ್ಚಿಗೆ ಮೊಬಲಗು ಯಾವನಿಗೋಸ್ಕರ ಸದರೀ ಮೊದಲನೆ ಹರಾಜ್ ಮಾಡಲ್ಪಟ್ಟಿತೋ ಅಂತವನ ಸೊತ್ತಾಗಿರತಕ್ಕದ್ದು.

BANGALORE:—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಶ್ರೀಮದಿವಿದಪ್ರವೃತ್ತ್ಯುಪಗನಾರ್ಹ್ಯ ಕರ್ಣಾಟಕಪ್ರಕಾಶನವರಾಭಿದಾಪ್ರಥಿತಸಾಹಿತೀಶೋಭಿತಾ ॥ ವ್ಯಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ನಿಕಾಸುವರಿಪೋಷಿತಾದಿಶತಿವಾಸನಂಸಂಮುದಂ॥

Vol. XIII] BANGALORE—MONDAY SEPTEMBER 20, 1886. [No. 38.

ಸಂಪುಟ ೧೩. | ಬೆಂಗಳೂರು—ಸನ್ ೧೮೮೬ನೇ ಇಸವಿ ಸೆಪ್ಟೆಂಬರ್ ೨೦ನೇ ತಾರೀಖ್ ಸೋಮವಾರ. [ಸಂಚಿಕೆ ೩೮

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷು ಮತ್ತು ಕನ್ನಡ ತೆಗೆದುಕೊಳ್ಳತಕ್ಕವರಿಗೆ, ವರುಷ ೧ಕ್ಕೆ . . . ೧೦—೮—೦

ಇಂಗ್ಲಿಷುಮಾತ್ರ ತೆಗೆದುಕೊಳ್ಳತಕ್ಕವರಿಗೆ ವರುಷ ೧ಕ್ಕೆ ೬—೦—೦

ಕನ್ನಡಮಾತ್ರ ತೆಗೆದುಕೊಳ್ಳತಕ್ಕವರಿಗೆ ಮಾ [illegible] ವರುಷಕ್ಕೆ . ೬—೦—೦

ತಿಂಗಳು ೧ಕ್ಕೆ ೮—೮—೦

[illegible]

ಪ್ರಕಟನೆಯ ರಿವಾಜ್.

ಹೊಸ ನೋಟೀಸುಗಳಿಗೆ	೧ಕ್ಕೆ	೦—೨—೦
ಹಳೆದ ನೋಟೀಸುಗಳಿಗೆ	೧ಕ್ಕೆ	೦—೧—೦

NOTICE TO SUBSCRIBERS

[illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA

Price including Postage, Rs 5-0-0

ವೈದ್ಯಸಾರ ಸಂಗ್ರಹ

[illegible]

ಕ್ರಯ [illegible] ರೂ॥ ೫—೦—೦

ಅಂಚೆ ಮತ್ತು ಅಂಚೇಹಾಸಲ್ ೦—೬—೦

[illegible], ಬೆಂಗಳೂರು.

ನೋಟೀಸ್.

ಇದರಕೆಳಗೆ ವಿವರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ಕ್ರಯಿಸಲ್ಪಡುತ್ತವೆ.—

ಕನ್ನಡ ಟೀಕಾಸಹಿತವಾದ ಸಂಸ್ಕೃತಗ್ರಂಥಗಳು.

ಕಾಲಾಮೃತ. ...	೧—೪—೦
ಮುಹೂರ್ತದರ್ಪಣ ...	೦—೧೨—೦
ಭಗವತ್ (ಪಟ್ಟಂಟೀಕೆ) ...	೦—೩—೦
[illegible] ...	೦—೫—೦
ಬಾಲರಾಮಾಯಣ ...	೦—೪—೦
ಶಿವಗೀತೆ ...	೦—೧೪—೦
ಶಿವಾನಂದಲಹರಿ. ...	೦—೭—೦
ಶಾಲಿಗ್ರಾಮ. ..	೦—೨—೦
ವೈದ್ಯಸಾರಸಂಗ್ರಹ .	೫—೦—೦

ಕನ್ನಡ ಗ್ರಂಥಗಳು

[illegible] ...	೦—೭—೦
[illegible] ...	೦—೪—೦
[illegible] ..	೦—೩—೬
[illegible] ..	೦—೨—೬
[illegible] .	೦—೪—೦
[illegible] .	೦—೨—೦
[illegible] ...	೦—೨—೬
[illegible] ...	೦—೭—೦
[illegible] ..	೦—೩—೦
[illegible]	೦—೨—೦
[illegible] ...	೦—೦—೯
ಇಂಗ್ಲಿಷುಕನ್ನಡ [illegible]	೧—೦—೦
[illegible]	೨—೦—೦
[illegible] ...	೦—೧೨—೦
[illegible] ..	೩—೪—೬
[illegible] ..	೩—೪—೬
[illegible] ೧ನೇ ಸಂಚಿಕೆ. ...	೦—೯—೦
[illegible] ೨ನೇ ಸಂಚಿಕೆ.	೦—೯—೦
[illegible] ...	೦—೯—೦

ಸಂಸ್ಕೃತ ಮೂಲಗ್ರಂಥಗಳು.

ವಿಷ್ಣುಸಹಸ್ರನಾಮ .	೦—೫—೦
[illegible] ...	೦—೨—೬
ಕೃಷ್ಣಕರ್ಣಾಮೃತ. ...	೦—೨—೬
[illegible] .	೦—೦—೬
[illegible] ..	೦—೩—೬
೧ ಕಾಂಡ ಅಮರ. ...	೦—೧—೦

[illegible]

ಪ್ರಕಟನೆ.

ಇದರಿಂದ ತಿಳಿಸುವದೇನೆಂದರೆ—ಲಗರದ ದಿನ್ನೆಯಬಳಿ, ಸರ್ಜಾಪುರ ರಸ್ತೆಯೊಳು ಬಿಕರೀಗೆ, ಒಂದು ತೋಟದಲ್ಲಿ ೨,೦೦೦ ಕ್ಯಾಸರಿಕೆ ಗಿಡಗಳಿರುತಿವೆ. ಆ ಬಗ್ಯೆ ಬೇಕಾದವರು ದರಖಾಸ್ತುಗಳು ಕೊಡಬಹುದು, ಪರಂತು ಅವು ಮುಂಚಾರಾತಿಗೆ ಗುರಿಯಾಗಿರತಕ್ಕವು.

ಕೆಂಟೋನ್ಮೆಂಟಿ ರೆಸಿಡೆನ್ಸಿ ರಸ್ತೆ ೨೫ನೇ ನುಬರ್ ಮನೆಯಲ್ಲಿರುವ ಮಾಲೀಕರಿಗೆ ಬರೆದುಕೊಳ್ಳತಕ್ಕದ್ದು.

ಪ್ರಕಟನೆ.

ಇಂಡಿಯನ್ ಕಂಪನೀಸ್ ೧೮೬೬ನೇ ಇಸವಿ ೧೦ನೇ ನಂಬರ್ ಆಕ್ಟ್ಯ ಮೇರೆ.

ಮೈಸೂರು ಪುಷ್ಪವತೀ ಸಹಾಯನಿಧಿ ಬ್ಯಾಂಕ್ ವಿಷಯದಲ್ಲಿ.

ಇದರಿಂದ ತಿಳಿಯಪಡಿಸುವದೇನೆಂದರೆ—ಸನ್ ೧೮೮೬ನೇ ಇಸವಿ ಆಗಸ್ಟು ತಾರೀಖ್ ೨೭ರಲ್ಲು ಪುಷ್ಪವತೀ ಬ್ಯಾಂಕಿಗೆ ಹಣ ಹಾಕಿದವರ ಪೈಕಿ ಶೇರ್‌ದಾರರಾದ ನಾರಣಪ್ಪ ವಗೈರೆಯವರು ಮೈಸೂರು ಡಿಸ್ಟ್ರಿಕ್ಟು ಜಡ್ಜಿರವರ ಕೋರ್ಟಿಗೆ ಸದರೀ ಬ್ಯಾಂಕ್ ನಿಲ್ಲಿಸಿಬಿಡಬೇಕೆಂದು ಅರ್ಜಿ ಕೊಟ್ಟಿರುತ್ತಾರೆ ಮೇಲ್ಕಂಡ ಅರ್ಜಿ ವಿಷಯದಲ್ಲಿ ಮೈಸೂರು ಡಿಸ್ಟ್ರಿಕ್ಟು ಜಡ್ಜಿರವರು ಚಾಲ್ತೀ ಇಸವಿ ಸೆಪ್ಟೆಂಬರ್ ೨೦ನೇ ತಾರೀಖಿನಲ್ಲಿ ವ್ಯವಸ್ಥೆ ನಡೆಯುತ್ತದೆಂತ ಹುಕುಂ ಮಾಡಿರುತ್ತಾರೆ ಆದದರಿಂದ ಮೇಲೆ ಕಂಡಮೇರೆ ಸದರೀ ಬ್ಯಾಂಕಿಗೆ ಹಣ ಹಾಕಿರತಕ್ಕವರ ಪೈಕಿ [illegible] ಮೇಲೆ ಕಂಡ ಅರ್ಜಿ ಅನುಸರಿಸಿ ಸದರೀ ಬ್ಯಾಂಕ್ ನಿಲ್ಲಿಸಬೇಕೆಂಬ [illegible] ಆರ್ಡರ್ ಆಗತಕ್ಕ ವಿಷಯದಲ್ಲಿ ತಕರಾರ್ ಹೇಳುವದಾಗಿ ಮಾಡಬೇಕಾಗಿದ್ದಲ್ಲಿ, ತಾವೇ ಖುದ್ದಾಗಿ ಯಾಗಲಿ ಅಥವಾ ಇದಕ್ಕಾಗಿ ತಮ್ಮ ಕಡೆ ಲಾಯರ್ ಮುಖಾಂತರ ಆಗಲಿ [illegible] ರಾಗತಕ್ಕದ್ದು. ಸದರೀ ಬ್ಯಾಂಕಿನ ಶೇರ್‌ದಾರರು ಯಾರೇ ಆಗಲಿ ಮೇಲೆ ಕಂಡ ಅರ್ಜೀ ನಕಲನ್ನು [illegible] ಸ್ಯವರು ಈ ಕೆಳಗೆ ರುಜು ಮಾಡಿರುವವರಿಗೆ ದಸ್ತ ಚಾರ್ಜನ್ನು ಕೊಟ್ಟು, ಸದರೀ ಯವರಿಂದ ಪಡೆಯಬಹುದು.

ಮೈಸೂರು, ೧೫ನೇ ಸೆಪ್ಟೆಂಬರ್, ೧೮೮೬ } ಬಿ ಮತ್ತು ಅನಂದರಾವ್, ಅರ್ಜಿದಾರರ ಅಡ್ವೊಕೇಟ್‌ಗಳು

ನೋಟೀಸ್.

ಬೆಂಗಳೂರು ಶಹರ್ ಮ್ಯೂನಿಸಿಪಾಲಿಟಿ

ಸನ್ ೧೮೮೬ನೇ ಸೆಪ್ಟೆಂಬರ್ ೨೪ನೇ ತಾರೀಖ್ ಶುಕ್ರವಾರದದಿನ ಪ್ರಾತಃಕಾಲ ೭½ ಘಂಟೆಗೆ, ಶಹರ್ ಮ್ಯೂನಿಸಿಪಲ್ ಕಮಿಷನರ್‌ಗಳು, ಬೆಂಗಳೂರು ಡಿಸ್ಟ್ರಿಕ್ಟು ಆಫೀಸ್ ಕಟ್ಟಡದಲ್ಲಿರುವ ತಮ್ಮ ಆಫೀಸಿನೊಳು ಮೀಟಿಂಗ್ ಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳು.

೧. ಸನ್ ೧೮೮೬ನೇ ಇಸವಿ ಆಗಸ್ಟು ಮಾಹೇಬಾಬತು ಚಾಲತಿ ನಗದು ಜಮಾಖರ್ಚು ಲೆಕ್ಕಗಳು [illegible] ಗಳನ್ನು ಕುರಿತ ರಿಪೋರ್ಟ್, ಮತ್ತು ಮರಣಲೆಕ್ಕ.

೨. ಬೃಹದ್ರೋಗಪೀಡಿತರಾದ ಅನಾಥರ ವಸತಿಗಾಗಿ ಸ್ಥಾಪಿಸಲ್ಪಟ್ಟಿರುವ ಗರ್ಡಿಲ್‌ಸ್ಟೋನ್ ವಾರ್ಡ್ ಯೆಂಬ ಶಾಲೆಯ ಬಾಬತು, ಸನ್ ೧೮೮೬ನೇ ಏಪ್ರಿಲ್ ಲಾಗಾಯತು ಆಗಸ್ಟು ೩೧ನೇ ತಾರೀಖ್‌ವರಿಗಿನ ಜಮಾಖರ್ಚು ತಖ್ತೆಯ ಮುಲಕ್ರೂಫೆನಿಕ್ ಫ್ರೆಂಡ್ ಇನ್‌ನೀಡ್ ಸೊಸೈಟಿಯ ಆನರರಿ ಸೆಕ್ರಟೆರಿಯವರು ಬರೆದ ಸನ್ ೧೮೮೬ನೇ ಇಸವಿ ಸೆಪ್ಟೆಂಬರ್ ೧೪ನೇ ಮಕರ್ಮ ೨೫ನೇ ನುಬರ್ ಲೆಟರ್.

೩. ಗವರ್ನಮೆಂಟ್ ಬಾಲಿಕಾ ಪಾಠಶಾಲೆಯ ಕಮಿಟಿಯ ಮೆಂಬರ್‌ಗಳು ಮೀಟಿಂಗ್‌ಸೇರಿ ನಡೆಸಿದ ಪ್ರೊಸೀಡಿಂಗ್ಸಿನ ನಕಲ್, ಮತ್ತು ಗವರ್ನಮೆಂಟ್ ವಿದ್ಯಾಭ್ಯಾಸದ ಇಲಾಖೆಗೆ ವೈಸ್ ಪ್ರೆಸಿಡೆಂಟರು ಬರೆದ ೮೬ನೇ ಇಸವಿ ಸೆಪ್ಟೆಂಬರ್ ೧೩ನೇ ಮರ್ಕುಂ ೩೨೦ನೇ ನಂಬರ್ ಲೆಟರ್.

೪. ಇಂಡ್ಯರಾಜ್ಯದ ಘನವನ್ನು ಹೊಂದಿದ ವೈಸ್‌ರಾಯ್ ಮತ್ತು ಗವರ್ನರ್ ಜನರಲ್ ಯವರನ್ನು ಒರವಾಡಿಕೊಳ್ಳುವದಕ್ಕಾಗಿ ಯೋಚಿಸಲ್ಪಟ್ಟಿರುವ ಯೇರ್ಪಾಡುಗಳು.

೫. ಇನ್ನು ಕೆಲವು ದೀಪಸ್ತಂಭಗಳನ್ನು ಖರೀದೀ ಮಾಡಬೇಕಾದ ವಿಷಯ.

೬. ಬಾರ್ ಲೈನ್ ಬಳಿಯಿರುವ ಹುಲ್ಲುಗಾವಲಿಗೆ ಉತ್ತರ ದಿಕ್ಕಿನಲ್ಲಿ ಮನೆ ಕಟ್ಟಿಕೊಳ್ಳುವದಕ್ಕಾಗಿ ಒಂದು ನಿವೇಶನ ಕೊಡಿಸಿಕೊಡಬೇಕೆಂದು ಮ॥ ಸೈಯದ್ ಸಾಲಾರ್ ಸಾಹೆಬರವರು ಬರೆದುಕೊಂಡ ಅರ್ಜಿ.

ತಾರೀಖ್ ೧೩ನೇ ಸೆಪ್ಟೆಂಬರ್—೧೮೮೬.

A. SRINIVASA CHARLU,
Vice-President,
City Municipal Commission.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, SEPTEMBER 20, 1886

೧೮೮೬ನೇ ಸೆಪ್ಟೆಂಬರ್ ೨೦ನೇ ತಾ॥ ಸೋಮವಾರ

ESOTERIC MEANING OF SOME IMPORTANT ARYAN SACRED SYMBOLS

ಲೋಕಹಿತಾರ್ಥ ಅಪೂರ್ವವಾದ ಯಾವದಾದರೊಂದು ವಿಷಯ ಪ್ರಾಪ್ತವಾದರೆ ಅದರ ಸ್ಮರಣೆಯು ತತ್ಕಾಲಾನಂತರ ಜನಗಳ ಹೃದಯದಲ್ಲಿ ನೆಲಗೊಂಡಿರತಕ್ಕಬಗ್ಯೆ ಅದು ಗ್ರಂಥರೂಪವಾಗಿಯೂ, ತದರ್ಥದ್ಯೋತಕವಾದ ಪ್ರತಿಮಾರೂಪವಾಗಿಯೂ, ನಿರ್ಮಿಸುವ ಸಂಪ್ರದಾಯವು ಪೂರ್ವಕಾಲದಲ್ಲಿ ನಮ್ಮವರೊಳು ನೆಲಗೊಂಡಿತ್ತು. ಈ ಕ್ರಮವನ್ನನುಸರಿಸಿಯೇ ಭಾರತ ರಾಮಾಯಣಾದಿ ಗ್ರಂಥಗಳೂ, ರಾಮಕೃಷ್ಣಾದಿ ವಿಗ್ರಹಗಳು ಸಹ ಏರ್ಪಟ್ಟಿರುತಿವೆ. ಅಂತಾ ಗ್ರಂಥಗಳನ್ನಾಗಲಿ, ಮೂರ್ತಿಗಳನ್ನಾಗಲಿ ನೋಡುವವರಿಂದ ಏಕಕಾಲದಲ್ಲಿ ಯಾವತ್ಪೂರ್ವಕಥಾ ಸಾರಾಂಶವು ನೋಡುವವರ ಹೃದಯಗಳಲ್ಲಿ ಸ್ಫುರಿಸುತಲಿದೆ. ಕಾಲಕ್ರಮೇಣ ಗ್ರಂಥಗಳು ಪ್ರಕ್ಷಿಪ್ತಗಳಾಗಿ ಹೋದದರಿಂದಲೂ, ಸಂಜ್ಞಾರೂಪವಾಗಿ ಮಾತ್ರಲ್ಪಟ್ಟಿರುವ ವಿಗ್ರಹಗಳ ಉದ್ದೇಶ ಮತ್ತು ತಾತ್ವಿಕಾರ್ಥಗಳು ಪ್ರಚಾರದೊಳು ಬಾರದೆ ಗೂಢವಾಗಿ ಹೋದದರಿಂದಲೂ, ತತ್ಸ್ವರೂಪಾನಭಿಜ್ಞರಾದ ವರ್ತಮಾನಕಾಲಿಕರೊಳು ನವನಾಗರಿಕರಾದವರಿಗೆ,ಅವುಗಳಲ್ಲಿ ಅಪ್ರಾಮಾಣ್ಯಜ್ಞಾನವೂ ನಿರರ್ಥಕಭಾವವೂ, ಹೇಳನರೂಪವಾದ ಪರಿಭಾವನೆಯೂ ವುಂಟಾಗಿವೆ. ಸ್ವಲ್ಪ ಶ್ರದ್ಧಾಜಡರಾಗಿರುವವರು ಅವುಗಳ ನೈಜಾರ್ಥವನ್ನು ಅರಿತು ಭಕ್ತಿಗೌರವದೊಡನೆ ಪುರಸ್ಕರಿಸದೆ ಹೋದರೂ ಒಂದುಬಗೆ ಮೂಢಭಕ್ತಿಯೊಡನೆ ಕೊಂಡಾಡುತ್ತಾರೆ. ಏಕೇನ ಇವುಗಳ ನಿಜವಾದ ಉದ್ದೇಶಾರ್ಥಗಳನ್ನು ಮೇಲೆ ಕಂಡ ಯೆರಡು ಬಗೆಯವರೂ ಅರಿಯದೆ ಹೋದರು. ಇದರಿಂದ ಸ್ವರೂಪಾನಭಿಜ್ಞರಾದ ಅನ್ಯಮತದವರು ವಿಗ್ರಹಾರಾಧನಾಪರಗಳನ್ನು ದೂಷಿಸುವಾಗ್ಯೆ ಅದಕ್ಕೆ ತಕ್ಕ ಮೂಲಾರ್ಥವನ್ನು ಅರುಹಿ ಅವರು ಒಡಂಬಡಿಸುವಷ್ಟು ಶಕ್ತಿಯು ವ್ಯರ್ಥವಾಯಿತು. ಮುಖ್ಯವಾಗಿ ಹಿಂದೂ ಮತ ಸಂಬಂಧಗಳಾದ ನೆಕೆಲವಿಷಯಗಳೂ ಒಂದೊಂದು ಕಾರಣವಮೇಲೆ ಒಂದೊಂದುಅರ್ಥವನ್ನು ಬೋಧಿಸತಕ್ಕಬಗ್ಯೆ ಏರ್ಪಟ್ಟವುಗಳೆಂದು ನಮ್ಮವರು ದೃಢವಾಗಿ ನಂಬಬಹುದು. ಇದಕ್ಕೆ ದೃಷ್ಟಾಂತವಾಗಿ ಒಂದುವಿಷಯವನ್ನುಇದರಡಿಬರೆಯುವೆವು,ಅದೇನೆಂದರೆ—

ಗಣಾಧಿಪನಾದ ವಿಘ್ನೇಶ್ವರನನ್ನು ಪ್ರಾಯೇಣ

ಹಿಂದೂಗಳೆಲ್ಲರೂ ಭಕ್ತಿಯೊಡನೆ ಭಜಿಸುತ್ತಾರೆ. ಅನ್ಯದೇಶೀಯರು ಸಹ ಅದರ ಆಕಾರವನ್ನು ನೋಡಿ ವಿನೋದಾರ್ಥ ಖೇಲನಸಾಮಗ್ರಿಯಾಗಿ ಅಂಗೀಕರಿಸಿ ತಮ್ಮ ಮೇಜಿನಮೇಲೆ ಇಟ್ಟಿರುತ್ತಾರೆ. ಪರಂತು ಇಂತಾ ವಿಕಾರಾಕೃತಿಯುಳ್ಳ ಲಂಬೋದರನನ್ನು ಭಾದ್ರಪದಶುದ್ಧ ಚೌತಿಯ ದಿನ ಕಲ್ಪಪ್ರಕಾರ ಪೂಜಿಸುವರೂ, ಆತನ ಚರಿತ್ರೆಯನ್ನು ಅರಿತಿದ್ದರೂ, ತಾತ್ವಿಕಾರ್ಥವನ್ನು ಮಾತ್ರ ಪ್ರಾಯೇಣ ಅರಿತವರಿಲ್ಲವು. ಆದದರಿಂದ ಆತನ ಧ್ಯಾನ ಶ್ಲೋಕವನ್ನೂ ಅದರ ನೈಜಾರ್ಥವನ್ನೂ ಇದರಡಿ ತಿಳಿಸುವೆವು.

ವಿನಾಯಕಪ್ರಾರ್ಥನಾ.

ಶುಕ್ಲಾಂಬರಧರಂವಿಷ್ಣುಂಶಶಿವರ್ಣಂಚತುರ್ಭುಜಂ।
ಪ್ರಸನ್ನವದನಂಧ್ಯಾಯೇತ್ಸರ್ವವಿಘ್ನೋಪಶಾಂತಯೇ॥
ಗಜವಕ್ತ್ರಮಹಂವಂದೇಗಜಮುಖಂಕೃಪಾಕರಂ
ಸುರಾಸುರವಮಸ್ಕೃತಂಸುರವರಂಕುಮಾರಾಗ್ರಜಂ
ಮದಿಕಸ್ಯಶಿವೋದರಸ್ಫುರಿತದಂತಪರಿಷ್ಕೃತಂ
ಶಿವೋದ್ಭವಮಹೀಸ್ಫುರ.ಸ್ತ್ರಿತನೆಲುಸಿದ್ಧಿಪ್ರದಂ

ಈ ಶ್ಲೋಕಗಳ ಶಬ್ದಾರ್ಥವೇನೋ ಯೆಲ್ಲರಿಗೂ ಸ್ಪಷ್ಟವಾಗಿಯೇ ಇದೆ. ಪರಂತು ಇದರ ಉದ್ದಿಷ್ಟಾರ್ಥವೇನಂದರೆ—ಸಕಲ ಶುಭಕಾರ್ಯಗಳನ್ನು ಉಪಕ್ರಮಿಸಲಿಕ್ಕೆ ಪೂರ್ವಭಾವಿಯಾಗಿ ವಿಘ್ನನಿವಾರಕನಾದ ಗಣಪತಿಯನ್ನು ಪರಬ್ರಹ್ಮರೂಪೇಣ ಧ್ಯಾನಿಸಿ ಆರಾಧಿಸುತ್ತೇವೆ. ವಿನಾಯಕನಿಗೆ ಗಜಾನನನಿರುವದರಿಂದ ಆತನ ಸೊಂಡ್ಲವು ಓಂ ಎಂಬ ಪ್ರಣವಾಕೃತಿಯುಳ್ಳದ್ದಾಗಿಯೂ, ಅದು ಸುಖತತ್ವಬೋಧಕವಾಗಿಯೂ, ಐಹಿಕಾಮುಷ್ಮಿಕಾನಂದವನ್ನುಂಟುಮಾಡತಕ್ಕದ್ದಾಗಿಯೂ ಇರುತಿದೆ. ಆತನ ಚತುರ್ಭುಜಗಳು ಕ್ರಮವಾಗಿ ಧರ್ಮಾರ್ಥ ಕಾಮ ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಸೂಚಿಸುತಿವೆಯಲ್ಲದೆ ಓಂಕಾರದೊಳಿರುವ ಅಕಾರ ಉಕಾರ ಮಕಾರ ಅರ್ಧಾನುಸ್ವಾರಗಳೆಂಬ ನಾಲ್ಕು ಮಾತ್ರಾಭೇದಗಳನ್ನು ತಿಳಿಸುತಿವೆ. ಪಾಶವನ್ನೊಂದು ಕೈಯಲ್ಲಿ ಧರಿಸಿರುವದು ಆಶಾ ನಿರೋಧತ್ವವನ್ನು ಬೋಧಿಸುತಿದೆ. ಮತ್ತೊಂದು ಕೈಯಲ್ಲಿರುವ ಅಂಕುಶವು ಕ್ರೋಧವಿಹೀನತೆಯನ್ನು ವ್ಯಕ್ತಪಡಿಸುತಿದೆ. ವಿನಾಯಕನ ಮೂರನೇ ಭುಜದೊಳಿರುವ ದಂತವು ಶುದ್ಧ ತತ್ವ ಒಂದು ಸರ್ವವ್ಯಾಪಕವಾಗಿದೆಯೆಂಬ ಅರ್ಥವನ್ನು ದ್ಯೋತಕಪಡಿಸುತಿದೆ. ನಾಲ್ಕನೇ ಕೈಯಲ್ಲಿರುವ ಮೋದಕವೂ (ಕಡುಬು) ಅದರ ಮೇಲಣ ಸೊಂಡ್ಲವೂ ವಿವೇಕಿಯಾದ ಪುರುಷನು ಈ ಪ್ರಪಂಚದಲ್ಲಿರುವ ಉತ್ತಮ ಪದಾರ್ಥಗಳನ್ನು ನ್ಯಾಯವಾದ ಮಾರ್ಗದಿಂ ಪಡೆಯಬೇಕೆಂಬದನ್ನು ಅರುಹುತಿವೆ. ಆತನ ಬೃಹತ್ಕುಕ್ಷಿಯು,ಸ್ಥಾವರ ಜಂಗಮಾತ್ಮಕವಾದ ಈ ಪ್ರಪಂಚವು ಪರಬ್ರಹ್ಮರೂಪನಾದ ಆತನ ಉದರದಲ್ಲಿ ಅಡಗಿರುತಿದೆಂಬದನ್ನೂ ಆತನವ್ಯಾಳ ಯಜ್ಞೋಪವೀತವು ಜನನಮರಣ ರಹಿತವಾದ ಮುಕ್ತಿಯನ್ನೈದಲಿಕ್ಕೆ ಶ್ವಾಸಧಾರಣ ಪೂರ್ವಕವಾದ ಯೋಗಾಭ್ಯಾಸವು ಆವಶ್ಯಕವೆಂಬದನ್ನೂ, ಆತನ ಆಸನಪದ್ಮವು ಪರಮಾನಂದಕ್ಕೆ ಮನೋದಾರ್ಢ್ಯ ಮತ್ತು ವಿವೇಕವು ಆವಶ್ಯಕವೆಂಬದನ್ನೂ,ಸಿದ್ಧಿ ಮತ್ತು ಬುದ್ಧಿಯೆಂಬ ಆತನ ಇಬ್ಬರು ಮಹಿಷಿಯರು, ತತ್ವಾನ್ವೇಷಿಯಾದ ಪುರುಷನನ್ನು ಕಾರ್ಯಸಿದ್ಧಿಯೂ ಜ್ಞಾನವೂ, ಯಾವಾಗಲು ಅನುಸರಿಸಿರಬೇಕೆಂಬದನ್ನೂ, ಆತನ ಮೂಷಕವಾಹನವು ಶ್ರಮಸಾಧ್ಯವಾದ ಕೆಲಸವನ್ನು ಸಹ ದೃಢವಾಗಿ ಎಡಬಿಡದೆ ಮಾಡುವದರಮೂಲಕ ಸಾಧಿಸಬಹುದೆಂಬದನ್ನೂ ಬೋಧಿಸುತಿವೆ.

ವಿನಾಯಕ ಮೂರ್ತಿಯ ಅರ್ಥವು ಮೇಲೆಕಂಡಂತೆ ಪರಬ್ರಹ್ಮ ಪರವಾಗಿದ್ದಾಗ್ಯೂ ಅದರ ಧ್ಯಾನ ಶ್ಲೋಕವನ್ನು ಮಾತ್ರ ಪುನಶ್ಚರಣ ಮಾಡುತ ಆರಾಧಿಸುವ ವಾಡಿಕೆ ಈಗ ಸಾರ್ವಜನೀನವಾಗಿದೆ. ಉದ್ದೇಶವನ್ನರಿಯದೆ ಮಾಡುವ ಕೆಲಸದಿಂ ಪ್ರಯೋಜನವಿಲ್ಲವಾಗಿ ತಾತ್ವಿಕಾರ್ಥವನ್ನು ತಿಳಿದುಕೊಳ್ಳಬೇಕಾದದ್ದು ಆವಶ್ಯಕವಾಗಿರುತಿದೆ.

THE LATE PANDIT SRIMAN D KRISHNAMACHAR.

ಬೆಂಗಳೂರು ಡಿಸ್ಟ್ರಿಕ್ಟ್ ದೇವಂದಹಳ್ಳಿ ತಾಲ್ಲೂಕು ಕಸಬಾ ನಿವಾಸಸ್ಥರಾಗಿ ಪ್ರಸಿದ್ಧಿಪಡೆದು ಡಿತರೆನಿಸಿಕೊಂಡಿದ್ದ ಶ್ರೀಮಾನ್ ಕೃಷ್ಣಮಾಚಾರ್ಯರವರು ಈಚೆಗೆ ಕೆಲವು ದಿವಸಗಳಹಿಂದೆ ಯಾತ್ರಾರ್ಥವಾಗಿ ತಿರುಪತಿಗೆ ಹೋಗಿದ್ದು ಬಂದದರಿಂದ ಅವರ ಪ್ರಕೃತಿಗೆ ಅಲ್ಲಿನ ವಾತೋದಕಗಳು ಒಂದದೆಹೋಗಿ ವಿಷಮ ಶೀತಜ್ವರಕ್ಕೆ ಉಪಕ್ರಮಿಸಲು ತತ್ಪ್ರಯುಕ್ತಮಾಡಲ್ಪಟ್ಟ ಚಿಕಿತ್ಸೆಗಳೆಲ್ಲವು ನಿಷ್ಫಲಗಳಾಗಿ ಅವರು ಮಾಹೇ ಮಜಕೂರ್ ೧೨ನೇ ತಾರೀಖ್ ಶುಕ್ರವಾರದದಿನ ರಾತ್ರಿ ಜರ್ಜರಿತವಾದ ತಮ್ಮ ಪ್ರಾಕೃತ ಶರೀರವನ್ನು ತ್ಯಜಿಸಿ ಭಗವತ್ಪದವನ್ನೈದಿದರೆಂಬ ವೃತ್ತಾಂತವನ್ನು ತಿಳಿಸಲಿಕ್ಕೆ ನಾವು ಬಹಳ ವಿಷಾದಿಸುವೆವು. ಸಾಮಾನ್ಯೇನ ಈ ಪಂಡಿತರ ಆಸ್ತಿಕತ್ವವೂ, ಭಗವದ್ಭಕ್ತಿಯೂ, ವೇದಶಾಸ್ತ್ರಗಳಲ್ಲಿ ನಿರೂಪವಾದ ಪ್ರಮಾಣ್ಯಜ್ಞಾನವೂ, ವರ್ಣಾಶ್ರಮೋಚಿತ ಕರ್ಮಾನುಷ್ಠಾನವೂ, ಶ್ರುತಿಸ್ಮೃತಿ ವಿಹಿತ ಕರ್ಮರೂಪವಾದ ಭಗವದಾರಾಧನ ಮುಖ್ಯ ಧರ್ಮತ್ವಜ್ಞಾನ ಪುರಸ್ಕೃತವಾದ ಕರ್ಮಶ್ರದ್ಧೆಯೂ, ದೃಢತರ ಸಾಹಿತ್ಯವೂ, ನಿಷ್ಕಲ್ಮಷವಾದ ಶಾಸ್ತ್ರಜ್ಞಾನವೂ ಬಹಳ ಪ್ರಶಂಸಾರ್ಹವಾಗಿದ್ದವು. ಲೋಕದಲ್ಲಿ ಉತ್ತಮಗುಣಗಳು ಸಮರಸವಾಗಿ ಏಕತ್ರ ಸೇರಿರುವದು ದುರ್ಲಭವಾದದರಿಂದ ಅಂತಾ ಸಕಲ ಸುಗುಣಾನ್ವಿತರಾದವರು ಗತಿಸಿದರೆ ಅಂತವರ ಮರಣವು ಮೃಲೆಕಂಡಂತೆ ಬಹಳ ದುಃಖಿಸತಕ್ಕದ್ದಾಗಿರುವದು. ಇವರು ವೇದಾಂತ ಮತ್ತು ವ್ಯಾಕರಣ, ಈ ಯೆರಡು ಶಾಸ್ತ್ರಗಳಲ್ಲಿ ಸಂಪೂರ್ಣ ಪಾಂಡಿತ್ಯವನ್ನು ಪಡೆದಿದ್ದರು. ಈಗ ಇವರಿಗೆ, ೬೪ ವರುಷಗಳ ವಯಸ್ಸಾಗಿದ್ದಾಗ್ಯೂ ಇಂದ್ರಿಯ ಪಾಟವವೂ, ಶರೀರ ದಾರ್ಢ್ಯವೂ ಚಿತ್ತಸ್ಥೈರ್ಯವೂ ಚನ್ನಾಗಿದ್ದವು. ಈಚಗ ಶ್ರೀ ಪರಕಾಲಮಠದ ಎಂಬ್ರು ಯಾತೀಯಾಗಿದ್ದ ಕಾಲದಲ್ಲಿ ಅದಕ್ಕೆ ಅರ್ಹರಾಗಿದ್ದವರೊಳು ಶ್ರೀಮಾನ್ ಕೃಷ್ಣಮಾಚಾರ್ಯರವರು ಸಹ ಒಬ್ಬರಾಗಿದ್ದರು. ಪರಂತು ಇವರ ಅರ್ಹತೆಯನ್ನು ಪರಿಭಾವಿಸಿ ಪುರಸ್ಕರಿಸುವಷ್ಟು ಉಚಿತಜ್ಞತೆಯು ದುರ್ಲಭವಾದದರಿಂದ ಆಪದವಿ ಇವರಿಗೆ ಅಪ್ರಾಪ್ತವಾಯಿತು. ಇವರ ಅಪರಕ್ರಿಯೆಗಳು ಅನ್ಯೂನಾತಿರಿಕ್ತವಾಗಿ ಈಪೂರಲ್ಲಿಯೇ ಜರಿಗಿಸಲ್ಪಡುತಿವೆ. ಮುಖ್ಯವಾಗಿ ಕಾಲಧರ್ಮವು ಸಕಲಪ್ರಾಣಿ ನಿಯತವಾದದರಿಂದ ಇವರಿಗಾಗಿ ವಿಷಾದಿಸ ಫಲವಿಲ್ಲವಾದಾಗ್ಯೂ ಇಂತಾ ಗುಣವಂತರಾದ ಪುರುಷರನ್ನು ಸಾಧಾರಣವಾಗಿ ನೋಡಲಾರವೆಂಬ ವೈಮನಸ್ಯವೊಂದುದಶೆಯಲ್ಲಿಯೂ, ವಯೋವೃದ್ಧರಾದ ಇವರ ಕುಟುಂಬಕ್ಕೆ ವೈಕಲ್ಯಪ್ರಯುಕ್ತವಾದ ಕ್ಲೇಶವು ತಪ್ಪದೆ ಹೋಯಿತಲ್ಲಾ ಎಂಬ ಚಿಂತೆ ಯಾವುದಶೆಯಲ್ಲಿಯೂ ಯೆಲ್ಲರಿಗೂ ಬಾಧಿಸದೆ ಇರಲಿಲ್ಲವು.

Occasional Notes.
ನೈಮಿತ್ತಿಕವಿಷಯನ್ಯಾಸ

Seditious notices.—ಪಂಜಾಬದೇಶದ ಪ್ರಜೆಗಳೆಲ್ಲರು ರಷಿಯಾದೇಶೀಯರಿಗೂ ಧುಲೀಪಸಿಂಗರಿಗೂ ಸಹಾಯಕರಾಗಿ ಸೇರಬೇಕೆಂದು ನಮೂದಿಸಿ ನೋಟೀಸುಗಳು ಬರೆದು ಮುಲ್ತಾನ್ ಶಹರ್‌ಪೈಕಿ ಹುಸೇನ್ ಗಾಹಿಯೆಂಬ ಪ್ರದೇಶದೊಳು ಚಿಕಟಾಯಿಸಲ್ಪಟ್ಟವು.

The Resident of Hyderabad.—ಹೈದರಾಬಾದ್ ರೆಸಿಡೆಂಟರಾದ ಮ|| ಕಾರ್ಡಿರೆಯವರು ಆರುತಿಂಗಳ ರಜಾಮೇಲೆ ಸ್ವದೇಶಕ್ಕೆಹೋಗಿರುತ್ತಾರೆಯಷ್ಟೆ. ಸದರೀಯವರು ಬರುವ ಅಕ್ಟೋಬರ್‌ತಿಂಗಳಲ್ಲಿ ವಾಪಸ್‌ಬಂದು ತಮ್ಮಕೆಲಸವ ಕೈಗೊಳ್ಳುವರೆಂದು ನಿರೀಕ್ಷಿಸಲ್ಪಟ್ಟಿರುತದೆ.

A hospital for sick animals.—ರೋಗಪೀಡಿತಗಳಾದ ಜಾನ್ವರಗಳ ಚಿಕಿತ್ಸೆಯಬಗ್ಗೆ ಕಲ್ಕತ್ತೆಯೊಳಗಣ ಜೈನ್ಯಜಾತಿ ವರ್ತಕರು ಮತ್ತು ಶ್ರೋತ್ರೀದಾರರು ಸೇರಿ ಒಂದು ಆಸ್ಪತ್ರೆಯನ್ನು ಸ್ಥಾಪಿಸಿ ಅದಕ್ಕೆ ಆರುಲಕ್ಷ ರೂಪಾಯಿಗಳ ಮೂಲಧನ ಶೇಖರ ಮಾಡಿರುತ್ತಾರೆಂದು ಅಲ್ಲಿನ ನೇಟಿವ್ ವೃತ್ತಾಂತಪತ್ರಿಕೆಯೊಂದು ತಿಳಿಸುತಿದೆ.

The Supreme Legislative Council of India.—ಇಂಡ್ಯರಾಜ್ಯದ ನ್ಯಾಯವಿಧಾಯಕ ಸಭೆಯ ಮೆಂಬರಾದ ಆನರೆಬಲ್ ಪ್ಯಾರಿ ಮೋಹನ್ ಮುಕರ್ಜಿಯವರ ನೌಕರಿಯ ಮಿಯಾದಿಯು ಈ ತಿಂಗಳ ೧೫ನೇ ತಾರೀಖಿಗೆ ಕಳೆದುಹೋಗುತದೆಯಾಗಿ ಸದರೀ ದೊಡ್ಡಮನುಷ್ಯರನ್ನು ತಮ್ಮ ಕಡೆ ಪ್ರತಿನಿಧಿಯಾಗಿ ಮರಳಿ ಚುನಾಯಿಸುವಂತೆ ವೈಸರಾಯಿಯವರು ಬ್ರಿಟಿಷ್ ಇಂಡಿಯನ್ ಅಸೋಸಿಯೇಷನ್‌ಯೆಂಬ ಸಂಘದವರಿಗೆ ತಿಳಿಸಿ ಇರುತ್ತಾರೆ.

A tender accepted.—ಬರೋಡೆ ಗಾಯಕವಾಡಿಯವರ ಮೃತಪಟ್ಟ ಭಾರ್ಯೆಯವರ ಜ್ಞಾಪಕಾರ್ಥ ಅಲ್ಲಿ ಈಗ ಕಟ್ಟಲ್ಪಡುತಲಿರುವ ಗೋಪುರದಲ್ಲಿಡತಕ್ಕಬಗ್ಗೆ ಒಂದು ದೊಡ್ಡ ಗಡಿಯಾರ ಮತ್ತು ಆಯಿದು ಘಂಟೆಗಳನ್ನು ತಯಾರ್ಮಾಡಿ ಒಪ್ಪಿಸುವದಾಗಿ ಬಾಧ ಪರನಾಸ್ತನ್ನು ಗಾಯಕವಾಡಿ ಮಹಾರಾಜರವರು ಅಂಗೀಕರಿಸಿ ಆಬಗ್ಗೆ ಹುಕುಂ ಕೊಟ್ಟಿರುವದಾಗಿಯೂ, ಬರುವ ನವಂಬರ್ ತಿಂಗಳಲ್ಲಿ ವೈಸರಾಯಿಯವರು ಅಲ್ಲಿಗೆ ದಯಮಾಡುವ ಕಾಲದಲ್ಲಿ ಅದಕ್ಕೆ ಸಂಬಂಧಪಟ್ಟ ಉತ್ಸವಾದಿಗಳು ನಡೆಸಲ್ಪಡುವವೆಂತಲೂ ಒಂದಾನೊಂದು ಪತ್ರಿಕೆ ಹೇಳುತಿದೆ.

Addresses of welcome.—ಮಹಾರಾಜ್ಞೀ ಇಂಡ್ಯಚಕ್ರವರ್ತಿನೀಯವರ ಪುತ್ರರಾದ ಡ್ಯೂಕ್ ಆವ್ ಕನಾಟಿಯವರು ತಮ್ಮ ಭಾರ್ಯಾಸಮೇತರಾಗಿಯೂ, ಇಂಡ್ಯರಾಜ್ಯದ ವೈಸರಾಯಿಯವರಾದ ಲಾರ್ಡ್ ಡಫರಿನ್‌ಸಾಹೇಬರೂ ಮುಂಬೈಗೆ ಬರುವ ಕಾಲದಲ್ಲಿ ಅವರನ್ನು ಉಚಿತ ಮರ್ಯಾದೆಯೊಡನೆ ಬರಮಾಡಿಕೊಳ್ಳಬೇಕೆಂದು ಅಲ್ಲಿನ ದೊಡ್ಡಮನುಷ್ಯರು ಆಲೋಚಿಸುತಲಿದ್ದಾರೆಂದು ತಿಳಿಯಬರುತಿದೆ. ಡ್ಯೂಕ್ ಆವ್ ಕನಾಟಿಯವರು ತಮ್ಮ ಭಾರ್ಯೆಯವರೊಡನೆ ಬರುವತಿಂಗಳ ೫ನೇ ತಾರೀಖ್ ಸಾಯಂಕಾಲ ಹಡಗು ಯಿಳಿಯುತ್ತಾರಾಗಿ ಅವರನ್ನು ವಿಶೇಷ ವಿಭವದೊಡನೆ ಬರಮಾಡಿಕೊಳ್ಳುವದಕ್ಕಾಗಿ ಬರಬೇಕೆಂದು ಮುಂಬೈ ಗವರ್ನರವರು ಅಲ್ಲಿನ ದೊಡ್ಡಮನುಷ್ಯರೆಲ್ಲರಿಗೂ ಆಹ್ವಾನಪತ್ರಿಕೆಗಳು ಕಳುಹಿಸಿರುತ್ತಾರೆ.

The Viceroy's Tour.—ಬರುವ ಅಕ್ಟೋಬರ್ ತಿಂಗಳ ೨೪ನೇ ತಾರೀಖಿನಲ್ಲಿ ವೈಸರಾಯಿಯವರು ಸಿಮ್ಲಾದಿಂದ ಹೊರಟು ನೆಟ್ಟಗೆ ಅಂಬಾಲಾನಿಗೆ ಹೋಗಿ ಅದೇದಿನ ರಾತ್ರಿ ಅಲ್ಲಿಂದ ಸ್ಪೆಷಲ್ ಟ್ರೇಯಿನ್ನಲ್ಲಿ ಭಾವಲ್‌ಪುರಕ್ಕೆ ಹೋಗಿ ಅಲ್ಲಿ ಯೆರಡುದಿನಗಳ ಕಾಲವಿದ್ದು, ನವಂಬರ್ ಗುರ್ತೀ ತಾರೀಖಿನಲ್ಲಿ ಲಾಹೋರಿಗೆ ಹೋಗಿ ಅಲ್ಲಿ ಮೂರು ದಿನಗಳ ಕಾಲವಿದ್ದು ಅಲ್ಲಿಂದ ಹೊರಟು ಅಹಮದಾಬಾದ್ ಮಾರ್ಗವಾಗಿ ಬರೋಡೆಗೆಹೋಗಿ ಅಲ್ಲಿ ಯೆರಡು ಮೂರುದಿನಗಳಕಾಲ ಮೊಕಾಂ ಮಾಡುವರು. ಮುಂದಿನ ಯೋಜನೆಗಳು ಇದುವರಿವಿಗೆ ಖಂಡಿತವಾಗಿ ವ್ಯವಸ್ಥೆಯಾಗಲಿಲ್ಲವೆಂದು ಒಂದಾನೊಂದು ಪತ್ರಿಕೆ ಹೇಳುತಿದೆ. ಇದೇ ವಿಷಯದಲ್ಲಿ ಮತ್ತೊಂದು ಪತ್ರಿಕೆ ಹೇಳುವದೇನಂದರೆ, ಲಾರ್ಡ್ ಡಫರಿನ್ ಸಾಹೆಬರವರು ಈಗಿನ ಅವರ ದಕ್ಷಿಣದೇಶ ಸಂಚಾರದಲ್ಲಿ ಮದರಾಸಿಗೆ ಹೋಗುವ ಯೋಚನೆ ಇಲ್ಲವು. ಹೈದರಾಬಾದಿನಿಂದ ಹೊರಟು ಬೆಂಗಳೂರು ನೋಡಿಕೊಂಡು ಮೈಸೂರಿಗೆ ಹೋಗಿ ಅಲ್ಲಿಂದ ಸೀಗೂರು ಘಾಟೀ ಮಾರ್ಗವಾಗಿ ಉದಕಮಂಡಲಕ್ಕೆ ಹೋಗಿ ಅಲ್ಲಿ ಒಂದೆರಡುದಿನಗಳ ಕಾಲವಿದ್ದು, ಅಲ್ಲಿಂದ ಕುನೂರು ಕೋಯಂಬತ್ತೂರು, ತಿರುಚನಾಪಲ್ಲಿ, ಮಧುರೆ, ತಂಜಾವೂರು, ಈ ಶಹರ್‌ಗಳನ್ನು ನೋಡಿಕೊಂಡು ನಾಗಪಟ್ಟಣಕ್ಕೆ ಹೋಗಿ ಅಲ್ಲಿ ಹಡಗು ಹತ್ತಿ ಕಲ್ಕತ್ತೆಗೆ ಪ್ರಯಾಣಮಾಡುವರೆಂಬದು.

The Nizam and his minister.—ಡೆಕ್ಕನ್ ಟೈಮ್ಸ್ ಪತ್ರಿಕೆ ತಿಳಿಸುವದೇನಂದರೆ—ನಿಜಾಮರವರು ಪ್ರಕೃತ ತಮ್ಮ ದಿವಾನರನ್ನು ಕೆಲಸದಿಂದ ನಿವೃತ್ತಿಮಾಡಿ ಬೇರೆಯೊಬ್ಬರನ್ನಿಟ್ಟುಕೊಳ್ಳಬೇಕೆಂದು ಮುಸ್ತೈದರಾಗಿದ್ದಾರೆ. ಇಂಡ್ಯಾಗವರ್ನಮೆಂಟನವರಾದರೂ, ಸಾಲಾರ್‌ಜಂಗರವರನ್ನು ದಿವಾನ್‌ಕೆಲಸದಲ್ಲಿಟ್ಟಿರಬೇಕೆಂಬ ಇಚ್ಛೆವುಳ್ಳವರಾಗಿದ್ದಾರೆ. ಹೈದರಾಬಾದ್ ಪ್ರಮುಖಮಂತ್ರಿಯವೈಕಿ ಸಾಲಾರ್‌ಜಂಗರವರು ವಿದ್ಯಾಬುದ್ಧಿ ವಿವೇಕಾದಿಗಳಿಂದ ದಿವಾನಗಿರಿಗೆ ಲಾಯಖಾದವರೆಂದು ಇಂಡ್ಯ ಗವರ್ನಮೆಂಟನವರು ಅಭಿಪ್ರಾಯ ಪಟ್ಟಿರುತ್ತಾರೆ, ಅಂದರೆ ದೇಶದ ಮತ್ತು ಅರಸರ ಕ್ಷೇಮದಲ್ಲಿ ನಿಗೆಯಿಟ್ಟು ಯೋಚಿಸುವಲ್ಲಿ ದಿವಾನಗಿರಿಯ ಬದಲಾವಣೆಯಲ್ಲಿ ಅವರಿಗೆ ಇಷ್ಟವಿಲ್ಲವು. ಇದು ಹೀಗಿರುವಲ್ಲಿ ನಿಜಾಮರವರಿಗೆ ತಮ್ಮ ದಿವಾನರ ಬದಲ್ ಬರತರಫ್ ವಿಷಯದಲ್ಲಿ ಸನ್ ೧೮೮೦ನೇ ಇಸವಿಯಲ್ಲಿ ಹುಟ್ಟಿದ ತನಾಮೆಯನ್ನನುಸರಿಸಿ ಅಧಿಕಾರ ಪ್ರಾಪ್ತಿ, ಎಂಬದು.

Infant marriage and enforced widowhood.—ಬಾಲ್ಯವಿವಾಹ ಮತ್ತು ವಿಧವಾವಿವಾಹವಿಷಯದಲ್ಲಿ ಲಾರ್ಡ್ ಡಿಫರ್‌ಸಾಹೆಬರವರು ಮ|| ಮಲಬಾರಿಯೆಂಬವರಿಗೆ ಕಳೆದತಿಂಗಳ ೨೩ನೇ ತಾರೀಖಿನಲ್ಲಿ ಇಂಗ್ಲಾಂಡಿನಿಂದ ಬರೆದಕಾಗದದಲ್ಲಿ ಅವರು ತಿಳಿಸುವದೇನಂದರೆ,—ಕಳೆದ ಆಗಸ್ಟ್ ಗುರ್ತೀತಾರೀಖಿನ ಇಂಡಿಯನ್ ಸ್ಪೆಕ್ಟೇಟರ್‌ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದ್ದ ಮ|| ಜಸ್ಟಿಸ್ ಸ್ಕಾಟಿಯವರ ಲೇಖನವನ್ನು ನಾನು ಓದಿದೆನು, ಅದರಲ್ಲಿ ತಿಳಿಸಲ್ಪಡುವ ಅಭಿಪ್ರಾಯವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಮ|| ಸ್ಕಾಟಿಯವರು ತಿಳಿಸುವ ಬುದ್ಧಿವಾದವು ಬಹಳಯೋಗ್ಯವಾದದ್ದೆಂದು ನನಗೆ ತೋರುತಿದೆ. ಮತ್ತು ಪ್ರಕೃತ ಅವರು ತಿಳಿಸುವ ಮಾರ್ಗವು ಕೇವಲ ವಿವೇಕಪೂರ್ವಕವಾದದ್ದೆಂದು ನಾನು ಯೋಚಿಸುತ್ತೇನೆ. ಹೆಂಗಸರನ್ನು ಭರ್ತೃಹೀನರಾಗಿಟ್ಟಿರುವದರಿಂದ ಉಂಟಾಗುವ ದುಷ್ಫಲವನ್ನು ನಾನು ಅರಿಯದೆ ಈರೀತಿ ಹೇಳುವದಾಗಿ ತಿಳಿಯಲಾಗದು ಅದು ಪ್ರಬಲತರವಾದದ್ದು, ಆದರೆ ನೀವು ಈಗ ಪಡಿಯರುವ ಯಿರದುಕಾರ್ಯಗಳನ್ನು ಏಕಕಾಲದಲ್ಲಿ ಬಲಾತ್ಕಾರಪೂರ್ವಕ ನೆರವೇರಿಸಬೇಕೆಂದು ಪ್ರಯತ್ನಪಡುವದಕ್ಕಿಂತಲೂ ಒಂದೊಂದಾಗಿ ಮಾಡಿದರೆ ಶೀಘ್ರದಲ್ಲಿ ಫಲಕಾರಿಯಾಗುವದೆಂದು ನಾನು ನಂಬುತ್ತೇನೆಂಬದು

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕ್‌ಜಾತಿವೃತ್ತಾಂತಗಳು

Mysore State Railway.—ಮೈಸೂರು ಸ್ಟೇಟ್‌ರೈಲ್‌ವೆಯು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯವರಿಗೆ ವರ್ಗಮಾಡಲ್ಪಟ್ಟ ಮೇಲೆ ರೈಲ್ವೆ ಮೊಕದ್ದಮೆಗಳಿಗೆ ಕೋರ್ಟ್‌ಫಿ ಸ್ಟಾಂಪುಗಳು ಚಿಕಟಾಯಿಸದಹೊರತು ಅವನ್ನು ಮ್ಯಾಜಿಸ್ಟ್ರೇಟುಗಳು ಹಿಡಿಯುವದಿಲ್ಲವು.

Privilege leave.—ಬೆಂಗಳೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಾದ ಮೆ|| ಸಿ. ರಾಘವಾಚಾರ್ರಿಗೆ ಮಾಹೇಮಜಕೂರ್ ೩ನೆ ತಾರೀಖ್‌ಲಾಗಾಯತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖುಲಾಗಾಯತು ಒಂದುತಿಂಗಳಇಪ್ಪತ್ತೆರಡುದಿನಗಳ ಪ್ರಿವಿಲೀಜ್‌ರಜಾ ಕೊಡಲ್ಪಟ್ಟಿದೆ.

Dasara.—ದಸರಾಉತ್ಸವವನ್ನು ನೋಡಲಪೇಕ್ಷೆಯೊಡನೆ ಮೈಸೂರಿಗೆ ಹೋಗಿಬರತಕ್ಕವರ ಅನುಕೂಲ್ಯಕ್ಕಾಗಿ ಈತಿಂಗಳ ೨೫ನೇತಾರೀಖ್‌ಲಾಗಾಯತು ಬರುವ ಅಕ್ಟೋಬರ್ ೭ನೇ ತಾರೀಖ್‌ವರಿವಿಗೆ, ಮೈಸೂರು ಸ್ಟೇಟ್‌ರೈಲ್ವೆ ಪ್ರತಿಸ್ಟೇಷನ್ನಿಂದಲೂ ಮೈಸೂರಿಗೆಹೋಗಿ ಬರುವದಕ್ಕೆ ಮೂರನೇತರಗತಿ ಟಿಕೆಟುಗಳು ಕೊಡಲ್ಪಡುವವು. ಈಟಿಕೆಟುಗಳು ಅಕ್ಟೋಬರ್ ೨೫ ತಾರೀಖ್‌ವರಿವಿಗೆ ಉಪಯೋಗಿಸಲ್ಪಡಬಹುದು.

The Kolar Murder.—ಹನುಮಂತ ದಾಸಾಯೆಂಬವನು ತನ್ನಹೆಂಡತಿಯನ್ನು ಖೂನ್‌ಮಾಡಿದ ತಕ್ಸೀರ್‌ಬಗ್ಗೆ ಈಚೆಗೆನಡೆದ ಹೈಕೋರ್ಟಿನ ಸೆಷನ್ನಲ್ಲಿ ಜಸ್ಟಿಸ್ ತಿಂಬುಕಸ್ವಾಮಿರಿಂದ ಮರಣದಂಡನೆ ವಿಧಿಸಲ್ಪಟ್ಟನಷ್ಟೆ. ಸದರೀಯವನು ಅಪೀ

ಶಮಾಡಿಕೊಂಡಿರುವದರಿಂದ ಅಲ್ಲಿ ವ್ಯವಸ್ಥೆಯಾಗುವತನಕ ಅವನಿಗೆ ವಿಧಿಸಲ್ಪಟ್ಟಿರುವ ದಂಡನೆಯ ಅಮಲ್ ಜಾರಿ ನಿಲ್ಲಿಸಲ್ಪಟ್ಟಿರುತ್ತದೆ.

The Fort Murder Case.—ಈ ಪೂರು ಕೋಟೆಯಲ್ಲಿ ನಡೆದ ಖೂನಿ ಮೊಕದ್ದಮೆಯಲ್ಲಿ ಮಿಲಿಟರಿ ಸ್ಪೇಷಲ್ ಸೆರ್ಷನ್ ಜಡ್ಜಿಯವರಿಂದ ಮರಣದಂಡನ ವಿಧಿಸಲ್ಪಟ್ಟ ಗೋವಿಂದರಾಜುಲು ಮುದಲಿ ಮತ್ತು ವೆಂಕಟಸಾಮಿ ಯೆಂಬವನು ಸಹ ಮಾಡಿಕೊಂಡ ಅಪೀಲ್ ಮೊಕದ್ದಮೆಯು ತಾತಿಂಗಳ ೨೩ನೇ ತಾರೀಖ್ ಬೃಹಸ್ಪತಿವಾರದ ಬಳ ದರ್ಬಾಸ್ತಿಗೆ ಬರುವದು. ೧೦ನೇ ಅಸಾಮಿಯರ ಪರ ಬ್ಯಾರಿಸ್ಟರ್ ಮಿ. ನಾರ್ಟನ್‌ರವರೂ ಬ್ಯಾರಿಸ್ಟರ್ ಸೇಜಿಯವರೂ ಮೊಕದ್ದಮೆಯನ್ನು ನಡೆಸುವರು.

The M. M. Mills vs the Bangalore Spectator.—ಮೈಸೂರು ಮಹಾರಾಜರವರ ಹೆಸರಿನಲ್ಲಿ ಈ ಪ್ರಾಂತ್ಯದಲ್ಲಿ ಸ್ಥಾಪಿಸಲ್ಪಟ್ಟಿರುವ ಅರಳೀ ಯಂತ್ರದ ಕಾರಖಾನೇದಾರರು, ಇಲ್ಲಿನ ಸ್ಪೆಕ್ಟೇಟರ್ ಪತ್ರಿಕೆಯ ಪ್ರೊಪ್ರೈಟರ್ ಮತ್ತು ಎಡಿಟರ ಮೇಲೆ ಇಲ್ಲಿನ ಮಿಲಿಟರಿ ಸ್ಟೇಷನ್-ಸಿವಿಲ್ ಕೋರ್ಟಿನಲ್ಲಿ ಮಾನಹಾನಿ ಫಿರ್ಯಾದು ಮಾಡಿದ್ದ ಮೊಕದ್ದಮೆಯು ಬಿದ್ದು ಹೋದ ಪ್ರಯುಕ್ತ ಅದರ ಮೇಲೆ ಸದರೀ ಕಾರಖಾನೇದಾರರು ಬ್ರಿಟಿಷ್ ರೆಸಿಡೆಂಟ್ ಕೋರ್ಟಿನಲ್ಲಿ ಮಾಡಿದ ಅಪೀಲ್‌ನಲ್ಲಿಯು ಅಲ್ಲಿ ವಿಚಾರಣೆಯಾಗಿ ಕಳೆದ ಶನಿವಾರದಲ್ಲಿ ಫೈಸಲ್ ಹೇಳಲ್ಪಟ್ಟು, ಕೆಳಕೋರ್ಟಿನ ಫೈಸಲನ್ನು ರದ್ದುಮಾಡಿ ಆ ಕೇಸು ಇವರಿಗೆ ಮಾನವನ್ನು ಬಗ್ಗೆ ೫೦೦ ರೂಪಾಯಿಗಳೂ ಎರಡುಕೋರ್ಟುಗಳ ಖರ್ಚೂ ಕೊಡುವಂತೆ ತೀರ್ಮಾನಿಸಿದರು.

Investiture of powers.—ಸನ್ ೧೮೮೧ನೇ ಇಸವಿಯ ಮೈಸೂರ ಆಕ್ಟಿನ ೩ನೇ ಸೆಕ್ಷನ್ ಪ್ರಕಾರ ಅನುಸರಿಸಿ, ಕೋಲಾರ ಡಿಸ್ಟ್ರಿಕ್ಟಿಗೆ ಸೇರಿದ ಇವರಡಿ ಕಂಡ ತಾಲ್ಲೂಕುಗಳ ಅಮಲ್ದಾರರಿಗೆ ಅವರ ಸ್ಥಳಾಧಿಕಾರಕ್ಕೆ ಒಳಪಟ್ಟ ಸದರೀ ಆಕ್ಟನ್ನನುಸರಿಸಿ ದಾಖಲ್ಪಡಬಹುದಾದ ಕೇಸುಗಳ ವಿಚಾರಣೆಯನ್ನು ಹಿಡಿಯುವಿಕ್ಕೆ ಅಧಿಕಾರ ಕೊಡಲ್ಪಟ್ಟಿದೆ. ಕೋಲಾರ, ಬಂಗಾರಪೇಟೆ, ಮಾಲೂರು, ಚಿಂತಾಮಣಿ, ಮುಳಬಾಗಲ್, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಗೌರಿಬಿದನೂರು, ಬಾಗೇಪಲ್ಲಿ, ಶ್ರೀನಿವಾಸಪುರ ಮತ್ತು ಗುಡಿಬಂಡೆ

EXTRACTS.

LEGISLATION TO PREVENT INFANT MARRIAGE

ಜಾಮಿಜಂಷೆನ್ ಯೆಂಬ ಪತ್ರಿಕೆ ಹೇಳುವದೇನೆಂದರೆ—ಬಾಲ್ಯ ವಿವಾಹವನ್ನು ನಿರೋಧಿಸುವದಕ್ಕಾಗಿ ಗವರ್ನಮೆಂಟಿನವರು ಪ್ರವರ್ತಿಸಿ ಕಾನೂನ್ ಮಾಡಕೂಡದೆಂಬ ಭಾಗದಲ್ಲಿ ಹಿಂದೂಗಳ ಅಭಿಪ್ರಾಯವು ಬಲವತ್ತರವಾಗಿ ತೋರಗಾಗಿದೆ. ಈ ವಿಷಯದಲ್ಲಿ ನ್ಯಾಯವಿಧಾಯಕ ಸಾಮಾಜಿಕರು ಪ್ರವರ್ತಿಸುವದನುಚಿತವೆಂದು ತಿಳಿಸುವದಕ್ಕಾಗಿ ಒಂದು ಸಮಾಜ ಸೇರುವದಾಗಿದೆ. ಬಾಲ್ಯವಿವಾಹದಿಂದುಂಟಾಗುವ ದುಷ್ಫಲಗಳನ್ನು ಯೆಲ್ಲರೂ ಒಪ್ಪುತ್ತಾರೆ. ಅದರ ಪರಿಹಾರದ ಬಗ್ಗೆ ಅನ್ಯರಸಹಾಯವಿಲ್ಲದೆ ಹಿಂದೂಗಳೇ ಯಾವ ಪ್ರಯತ್ನವನ್ನು ಮಾಡಿದಾಗ್ಯೂ ಅದನ್ನು ನಾವು ಘೋಷಿಸುವದಕ್ಕೆ ಸಿದ್ಧನಾಗಿರುತ್ತೇವೆ. ಬಹುಕಾಲದ ಮೊದಲು ನಡೆದುಬರುವ ಒಂದು ಪದ್ಧತಿಯನ್ನು ತಪ್ಪಿಸುವದಕ್ಕಾಗಿ ಒಂದು ಕಾನೂನನ್ನು ರಚಿಸುವಂತೆ ಗವರ್ನಮೆಂಟಿನವರನ್ನು ಕೋರುವಣವು ನಮ್ಮಲ್ಲಿನ ಅಶಕ್ತತೆಯನ್ನು ವ್ಯಕ್ತಪಡಿಸುವದಲ್ಲದೆ ಆಕ್ಷೇಪಣೀಯವಾದದ್ದು. ಈ ವಿಷಯದಲ್ಲಿ ಗವರ್ನಮೆಂಟನವರು ಪ್ರವೇಶಿಸಕೂಡದೆಂದು ಹಿಂದೂಗಳು ಹೇಳುವದು ನ್ಯಾಯ್ಯವಾಗಿರುತ್ತದೆ. ತಮ್ಮ ಪಕ್ಷವನ್ನು ಸ್ಥಾಪಿಸಿಕೊಳ್ಳಬೇಕಾದ ವಿಷಯದಲ್ಲಿ ಅವರು ಈ ರೀತಿ ಮುಂದು ಬಂದದ್ದೇ ಒಂದು ಶುಭ ಸೂಚನೆಯಾಗಿದೆ. ಈ ವಿಷಯವನ್ನು ಕುರಿತ ಪ್ರಕೃತ ಗದ್ದಲವು ಯಾವಾಗಲೂ ಅವರಿಗೆ ಹೊಸದಾಗಿರುತ್ತದೆ. ಮತ್ತು ಈಗಿನ ಕಟ್ಟುಪಾಡು ಒಂದು ದಿನಾ ಮುರಿದುಹೋದಮೇಲೆ ಮತಾಚಾರಗಳಲ್ಲಿ ಬದಲಾವಣೆಗಳನ್ನು ಮಾಡುವದು ಸ್ವಲ್ಪಮಟ್ಟಿಗೆ ಸುಲಭವಾಗಿರುವದು, ಎಂಬದು.

IMPORT DUTIES

ಜಾಮಿಜಾಂಷೆಡ್‌ಯೆಂಬ ಪತ್ರಿಕೆ ತಿಳಿಸುವದೇನೆಂದರೆ—ಆಮದ್ ಸುಂಕವನ್ನು ಮರಳಿ ರಿವಾಜ್ ಮಾಡಬೇಕೆಂದು ಮದರಾಸ್ ವ್ಯಾಪಾರ ಸಂಘದವರು ಕೊಡುವ ಸಲಹೆಯನ್ನು ನಾವು ಮನಃಪೂರ್ವಕವಾಗಿ ಆದರಿಸುತ್ತೇವೆ. ಮುಂಬೈ ಮತ್ತು ಕಲ್ಕತ್ತಾ ವ್ಯಾಪಾರ ಸಂಘದವರು ಸಹ ಈ ಪ್ರಯತ್ನಕ್ಕೆ ಸೇರಬೇಕು. ಇನ್‌ಕಂ ಟ್ಯಾಕ್ಸ್ ಯೆಂಬ ಆದಾಯದ ತೆರಿಗೆ ರಿವಾಜ್ ಮಾಡಿದ್ದರ ಮೂಲಕ ಉಂಟಾದ ಸಂಕಟವು ಜನಗಳ ಅನುಭವಕ್ಕೆ ಬರುತಲಿವೆ. ಈಗಿನ ಹುಂಡಾವಣೆಯ ದರವು ಹೀಗೆಯೇ ಇರುವಪಕ್ಷಕ್ಕೆ ಮುಂದಿನವರುಷದಲ್ಲಿ ಅದು ಇನ್ನೂ ಜಾಸ್ತಿಯಾಗುವದೆಂಬದಕ್ಕೆ ಸೂಚನೆಗಳು ಬಹಳವಾಗಿವೆ. ಕಳೆದ ಏಳು ತಿಂಗಳ ಕಾಲದಲ್ಲಿ ಹೆಚ್ಚಿನಾಣ್ಯದ ಕ್ರಯವು ರೂಪಾಯಿ ೧ಕ್ಕೆ ಸುಮಾರು ಐದಾಣೆ ತಗ್ಗಿಹೋಗಿದೆ. ಮುಂದಿನ ವರುಷ ಮಾರ್ಚಿ ತಿಂಗಳಲ್ಲಿ ಇನ್ನೂ ಕಮ್ಮಿಯಾಗಿ ಹೋಗುವದಕ್ಕೆ ಸೂಚನೆಗಳಿಲ್ಲದೆ ಹೋಗಲಿಲ್ಲವು. ಆ ಪಕ್ಷದಲ್ಲಿ ಬರೋಣವಷ್ಟಿಯನ್ನು ಬೇರೇ ಹಿಡಿಯಿಂದ ಕಲ್ಪಿಸಿಕೊಳ್ಳಬೇಕಾಗುವದು. ಇದರಿಂದ ಕೇವಲ ಮಧ್ಯಮ ಅಮದಾನೀ ತೆರಿಗೆಯನ್ನು ಜಾಸ್ತಿಮಾಡುವವರಮೂಲಕ ಉಂಟಾಗುವ ಅಪಾಯಕ್ಕೆ ಗುರಿಯಾಗುವದಕ್ಕಿಂತಲೂ ನ್ಯಾಯವಾದ ಆಮದ್ ತೆರಿಗೆಯನ್ನು ರಿವಾಜ್ ಮಾಡಬೇಕೆಂದು ಕೇಳಿಕೊಳ್ಳಬೇಕಾದ್ದು ಆವಶ್ಯಕವಾಗಿರುತ್ತದೆ. ಈ ವಿಷಯದಲ್ಲಿ ವಿಸ್ತಾರವಾದ ಪ್ರಯತ್ನ ನಡೆಸಬೇಕು, ಎಂಬದು.

ನಾಗಪುರದಲ್ಲಿ ಒಬ್ಬ ದೀಕ್ಷಿತನ ಹುಡುಗಿಯು ಗುಂಡನಾದತಾತಾಶಾಸ್ತ್ರಿ ಎಂಬವನು ಯೆಲ್ಲಿಯೋ ಪರದೇಶಕ್ಕೆ ಹೋಗಿ ೬ವರುಷದ ವರಿಗೂ ಬಾರದಿರಲು, ತಾತಾಶಾಸ್ತ್ರಿಯಂತೆ ರೂಪ ಮತ್ತು ವಯಸ್ಸುಳ್ಳ ಇನ್ನೊಬ್ಬನು ನಾಗಪುರಕ್ಕೆ ಬಂದು ದೀಕ್ಷಿತನ ಮನೆಗೆ ಹೋದನು. ಅಲ್ಲಿ ವಿಚಾರಿಸುವಾಗ್ಯೆ ತಾನೇ ತಾತಾಶಾಸ್ತ್ರಿ ಎಂದು ಹೇಳಿದನು. ದೀಕ್ಷಿತನ ಕನ್ಯೆಗೂ ಇವನ ರೂಪು ವಗೈರೆ ನೋಡಲಾಗಿ ತನ್ನ ಪತಿಯಂತೆ ತೋರಿದ್ದರಿಂದ ಗಂಡ ಹೊಡರೋದಿಯಿಂದ ಅವನೊಡನೆ ವಿಷಯಸುಖವನ್ನನುಭವಿಸುತಿದ್ದಳು. ಇವಳಿಗೆ ಪ್ರಾಪ್ತ ಸರೀ ತಾತಾಶಾಸ್ತ್ರಿಯಿಂದ ಹುಟ್ಟಿದ ಒಬ್ಬ ಹುಡುಗನಿದ್ದನು. ಮತ್ತು ಆ ಖರೇ ತಾತಾಶಾಸ್ತ್ರಿಗೆ ಸರ್ಕಾರದಿಂದ ಪೆನ್ಷನ್ ದೊರೆಯುತಲಿತ್ತು. ಆ ಪೆನ್ಷನ್ ಹಣ ಸಹ ಈಗಿನ ತಾತಾಶಾಸ್ತ್ರಿ ವಸೂಲುಮಾಡುತಿದ್ದನು. ಹೀಗೆ ಕೆಲವುದಿವಸ ನಡೆಯಲಾಗಿ ಅಲ್ಲಿನ ಕೆಲವು ವಿದ್ವಾಂಸರು ಇವನ ಮಾತಿಯಮೇಲೆ ಈತನು ತಾತಾಶಾಸ್ತ್ರಿ ಸುಳ್ಳೆಂದ ಅನುಮಾನಪಟ್ಟರು, ಯಾತಕ್ಕೆಂದರೆ—ಈ ತಾತಾಶಾಸ್ತ್ರಿಯು ಸಂಧ್ಯಾವಂದನ ಮಾಡಬೇಕಾದರೆ ಕೇಶವಾಯನಮಃ ನಾರಾಯಣಾಯ ನಮಃ ಯೆನ್ನುವದಕ್ಕೆ ಬದಲಾಗಿ ಕೇಸವ್ ನಾರಾಯೇನ್ ಇದೇರೀತಿ ಮರಾಟೀರ ಹಾಗೆ ಅಬದ್ಧ ಉಚ್ಚರಿಸುತಲಿದ್ದನು. ಅನಂತರ ಜನರೊಳಗೆ ಅಧಿಕ ಸಂಶಯ ಬಂದು ಇವನ ಮೇಲೆ ಮೇಜಿಸ್ಟ್ರೇಟರಲ್ಲಿ ವಿಚಾರಣೆಯಾಗಿ ಇವನು ತಾತಾಶಾಸ್ತ್ರಿಯಲ್ಲವೆಂದು ರುಜುವಾದ್ದಲ್ಲದೆ ೩ ವರುಷ ಕಠಿಣಕೈದಿನ ಶಿಕ್ಷೆ ಅನುಭವಿಸಬೇಕೆಂತಲೂ, ೧೦೦ ರೂಪಾಯಿ ದಂಡ ಕೊಡಬೇಕೆಂದು ನಿರ್ಣಯವಾಯಿತು. ಸ್ವಪತಿಗೆ ದೇಶಾಟನವನ್ನೂ ಆರೋಪಿತ ಪತಿಗೆ ಕಾರಾಗೃಹವಾಸವನ್ನೂ ಪ್ರಾಪ್ತಮಾಡಿದ ಸುಬಗೆಯ ಸ್ಥಿತಿ ಈಗ ಯೇನಾಗಿದೆಯೋ ತಿಳಿಯಲಿಲ್ಲವು

ಕೊಡಗುದೇಶದ ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಷ್ತಿಹಾರ್‌ನಾಮೆ.

ತಾರೀಖ್ ೩೦ನೇ ಏಪ್ರಿಲ್ ೧೮೮೬ನೇ ಇಸವಿ

ಬೆಂಗಳೂರು,

ನಂಬರ್ ೨೦.

ಕೊಡಗುದೇಶದಲ್ಲಿ ಜಾರೀಗೆ ತರವೇಕಾಗಿ ಆಲೋಚಿಸಲ್ಪಟ್ಟಿರುವ ಸನ್ ೧೮೮೩ನೇ ಇಸವಿ ೧೯ನೇ ನೆಲ ರೂಪಿತಪಡಿಸುವಬಗ್ಗೆ ಮುಬಾದಲೆಗಳನ್ನು ಕೊಡುವದಕ್ಕಾಗಿ ಪ್ರಂಜಾದ ಆಕ್ಟಿನಮೇಲೆ ಯೋಜಿಸಿರುವ ಈ ಕೆಳಗಿನ ಮಸೂದ ರೂಲ್ಸ್‌ಯಾನೆ ಕ್ರಮಗಳನ್ನು ಸರ್ವಜನರ ಆಲೋಚನೆ ಬಗ್ಯ ಈ ವಿಷಯಕ್ಕೆ ಸಂಬಂಧಪಟ್ಟ ಯಾರಾದರೂ ಕಮ್ಮಿಷನರವರಮೂಲಕ ಚೀಫ್ ಕಮ್ಮಿಷನರವರಿಗೆ ಏನಾದರೂ ಜಾಹಿರ್ಮಾಡಿಕೊಳ್ಳುವದಿದ್ದಲ್ಲಿ ಆಬಗ್ಯೆ ಇದರಿಂದ ಪ್ರಕಟಿಸಲ್ಪಟ್ಟಿದೆ.

(ಸನ್ ೧೮೮೩ನೇ ಇಸವಿ ನಂಬರ್ ೧೯ನೇ) ನೆಲರೂಪಿತ ಪಡಿಸುವಬಗ್ಯೆ ಮುಬಾದಲೆಗಳ ಕೊಡುವದನ್ನು ಕುರಿತು ಉಂಟಾದ ಆಕ್ಟಿನಮೇರೆ ಏರ್ಪಡಿಸಲ್ಪಟ್ಟ ಮಸೂದಾ ರೂಲ್ಸ್‌ಯಾನೆ ಕ್ರಮಗಳು.

೧. ೧೮೮೩ನೇ ಇಸವಿ ೧೯ನೇ ಆಕ್ಟಿನಮೇರೆ ಮುಬಾದಲೆ ಕೊಡುವದಕ್ಕೆ ಪ್ರತಿಪಾದಿಷ ಇಷ್ಟೇ ಮೊಬಲಗು ಹಾಜರಿದೆ ಎಂಬದಾಗಿ ನಿಶ್ಚೈಸಲ್ಪಟ್ಟಬಳಿಕ ಸದರೀ ಸಂಗತಿಯನ್ನು ಕಮ್ಮಿಷನರವರು ಚೀಫ್ ಕಮ್ಮಿಷನರವರಿಗೆ ತಿಳಿಸುವರು, ಮತ್ತು ಅಂತಾಹಣವನ್ನು ಕಮ್ಮಿಷನರವರು ತಮಗೆ ಮುಖ್ತವಾಗಿ ಕಾಣುವಂತಾ ದಾಮಾಷಯಿಪ್ರಕಾರ ಯೆಲ್ಲಾ ತಾಲ್ಲೂಕುಗಳಿಗೆ ವರ್ಗಮಾಡುವರು. ಈ ಮೇರೆ ಕಳುಹಿಸಲ್ಪಟ್ಟ ಮೊಬಲಗನ್ನು ಪೂರ್ತಿಯಾಗಲಿ, ಅಥವಾ ಅದರ ಯಾವ ಭಾಗವನ್ನೇ ಆಗಲಿ, ಒಂದು ತಾಲ್ಲೂಕಿನಿಂದ ಮತ್ತೊಂದು ತಾಲ್ಲೂಕಿಗೆ ವರ್ಗಮಾಡುವ ಅಧಿಕಾರವು ಕಮ್ಮಿಷನರವರಿಗೂ ಸೇರಿರುತ್ತೆ.

೨ ಈ ರೂಲ್ಸ್‌ಗಳ ಷರತ್ತುಗಳಿಗೆ ಒಳಪಟ್ಟ ಕಮ್ಮಿಷನರವರು ಆಕ್ಟಿನಲ್ಲಿ ನಮೂದಿಸಿರುವ ಕಾರ್ಯಗಳಿಗೋಸ್ಕರವಾಗಿ, ೨,೦೦೦ ರೂಪಾಯಿಗೆ ಮೀರದಷ್ಟು ಅಡ್ವಾನ್ಸ್ ಮಂಜೂರ್ಮಾಡಬಹುದು. ೧,೦೦೦ ರೂಪಾಯಿಗೆ ಹೆಚ್ಚಾಗಿ ಅಡ್ವಾನ್ಸಿಗೋಸ್ಕರ ದರಖಾಸ್ತು ಬಂದ ಪಕ್ಷದಲ್ಲಿ ಕಮ್ಮಿಷನರವರು ತಮ್ಮ ಮಂಜೂರಾತಿಯಿಂದ ಅಗತ್ಯವಾದ ಪ್ಲಾನ್ ಮತ್ತು ಅಂದಾಜ್ ಪಟ್ಟಿಗಳ ಸಮೇತ ಅಂತಾ ದರಖಾಸ್ತನ್ನು ಚೀಫ್ ಕಮ್ಮಿಷನರವರ ಹುಕುಮಿಗೋಸ್ಕರ ಕಳುಹಿಸತಕ್ಕದ್ದು.

೩ ಅಡ್ವಾನ್ಸಿಗೋಸ್ಕರ ಮಾಡತಕ್ಕ ದರಖಾಸ್ತುಗಳನ್ನು ಸೀದಾ ಕಮ್ಮಿಷನರವರಿಗಾಗಲಿ, ಅಥವಾ ತಾಲ್ಲೂಕ್ ಸುಬೇದಾರ್ರ ಮೂಲಕವಾಗಲಿ ಕೊಡಬಹುದು.

೪. ದರಖಾಸ್ತು ಸಾಧ್ಯವಾದ ಮಟ್ಟಿಗೆ (ಎ) ಫಾರಂ ಯಾನೆ ನಮೂನೆಗೆ ಸರಿಯಾಗಿ ನಡತಕ್ಕದ್ದು. ಮೂಜಬಾನಿಯಾಗಿ ದರಖಾಸ್ತು ಮಾಡಿಕೊಂಡರೆ ಸಂದರ್ಭಾನುಸಾರ ಕಮ್ಮಿಷನರವರಾಗಲಿ, ತಾಲ್ಲೂಕು ಸುಬೇದಾರರಾಗಲಿ ಅದನ್ನು ಯೇರ್ಪಡಿಸಿರುವ ಫಾರಂನಲ್ಲಿ ದಾಖಲ್ಮಾಡಿಸಿ ಅದಕ್ಕೆ ದರಖಾಸ್ತುದಾರನ ರುಜು ತೆಗದುಕೊಳ್ಳತಕ್ಕದ್ದು.

ದರಖಾಸ್ತನ್ನು ಅಂಗೀಕರಿಸುವ ಉದ್ಯೋಗಸ್ಥರಿಗೆ ಆಕ್ಟಿನ ೫ನೇ ಸೆಕ್ಷನಿನಲ್ಲಿ ನಮೂದಿಸಿರುವಮೇರೆ ನೋಟಿಸ್ ಪ್ರಕಟಿಸುವದು ಅವಶ್ಯವೆಂತ ಕಂಡುಬಂದಲ್ಲಿ ಅಂತಾ ನೋಟಿಸ್ ಮುಬಾದಲೆಯಿಂದ ಯಾವ ನೆಲ ರೂಪಿತ ಮಾಡುವದಕ್ಕೆ ಅಪೇಕ್ಷಿಸಲ್ಪಟ್ಟಿರುತ್ತೋ ಆಭೂಮಿಯಮೇಲೆ ಪರಿಷ್ಕಾರವಾಗಿ ಕಾಣುವಹಾಗೆ ಚಿಕಟಾಯಿಸಿ ಸದರೀ ಭೂಮಿ ಇರುವ ಗ್ರಾಮದಲ್ಲಿ ದಂಡೋರೆಯಿಂದ ಪ್ರಸಿದ್ಧಪಡಿಸತಕ್ಕದ್ದು. ಮತ್ತು ನೋಟಿಸಿನ ಒಂದು ನಕಲ ಸದರೀ ಭೂಮಿ ಯಾವ ತಾಲ್ಲೂಕಿನಲ್ಲಿ ಇದೆಯೋ ಆತಾಲ್ಲೂಕು ಸುಬೇದಾರರ ಕಚ್ಚೇರಿಯಲ್ಲಿ ಸಹ ಚಿಕಟಾಯಿಸಲ್ಪಡುವದು.

೫ ದರಖಾಸ್ತನ್ನು ಅಂಗೀಕರಿಸುವ ಉದ್ಯೋಗಸ್ಥರು (ಎ) ಫಾರಮಿನ ಹಿಂದೆ ನಮೂದಿಸಿರುವ ತಪಸೀಲ್‌ಗಳನ್ನು ತಿಳಿದುಕೊಳ್ಳುವಬಗ್ಯೆ ತಾವೇ ಆಗಲಿ, ಅಥವಾ ನಾಡು ಬಾರುಪತ್ತೇಗಾರ (ರೆವಿನ್ಯೂ ಇನ್‌ಸ್ಪೆಕ್ಟರ್) ದರ್ಜೆಗೆ ಕೀಳ್ಪಡದ ಒಬ್ಬ ರೆವಿನ್ಯೂ ಆಫೀಸರಿಂದಾಗಲಿ, ವಿಚಾರ ಮಾಡಿಸಬಹುದು. ಆದರೆ ಮುಬಾದಲೆ ಕೇಳುವ ಮೊಬಲಗು ೫೦೦ ರೂಪಾಯಿಗಳಿಗೆ ಮೇಲ್ಪಟ್ಟರೆ ಸ್ಥಳಿಕ ವಿಚಾರವು ಕಮ್ಮಿಷನರವರ ಬರಹ ಮೂಲಕವಾದ ಸ್ಪೆಷಿಯಲ್ ಅಪ್ಪಣೆ ಶಿವಾಯಿ ಒಬ್ಬ ಸುಬೇದಾರನ ದರ್ಜೆಗೆ ಕೀಳ್ಪಟ್ಟ ಉದ್ಯೋಗಸ್ಥನಿಂದ ಮಾಡಿಸ ಕೂಡದು.

೬ ಮುಬಾದಲೆ ಪಡಕೊಳ್ಳುವನ ಭೂಮಿಯ ಆದಾಯವು ಅಡ್ವಾನ್ಸನ್ನು ಬರ್ತಿಮಾಡುವಷ್ಟು ದಾಗಾಳವಾಗಿ ಸಾಕಾಗದ್ದಲ್ಲಿಯೂ ಮತ್ತು ಸದರೀ ಭೂಮಿಯೂ ಅದರ ಬೆಲೆಯನ್ನು ಕಾಪಾಡಿಕೊಳ್ಳುವಂತೆ ತರಹದ್ದಾಗಿದ್ದ ಸಂಗತಿಗಳಲ್ಲಿಯೂ ವಿನಃ ಕೂಡಲೇ ತಕ್ಕ ಜಾಮೀನ್ ಕೊಟ್ಟ ದೊರಕು ಅಡ್ವಾನ್ಸ್ ಕೊಡಕೂಡದು. ಜಾಮೀನ್‌ದಾರರು ಗ್ರಾಮದ ವಾಸಸ್ಥರಾಗಿಯೂ ಆಕ್ಟಿನ ೯ನೇ ಸೆಕ್ಷನ್ನಲ್ಲಿ ನಮೂದಿಸಿರುವ ಪ್ರಕಾರ ಹಾವುಗಳು ಜಂಟಿಯಾಗಿಯೂ, ಬೇರೆ ಬೇರೆ ಯಾಗಿಯೂ, ಜವಾಬ್‌ದಾರರಾಪಲ್ಲಿ ಖಾಸಗಿ ಜಾಮೀನನ್ನು ಜಂಟಿ ಜಾಮೀನಾಗಿ ಅಂಗೀಕರಿಸಬಹುದು

ಗವರ್ನಮೆಂಟ್ ಪಾಮಿಸರೀನೋಟ್ಸ್ (ಪ್ರಾಮಿಸರಿ ಪತ್ರ) ಶಿವಾಯಿ ಚರಸೊತ್ತನ್ನು ಬಹಳವಿಶೇಷವಾದ ಸಂಗಳಗಳಲ್ಲಿ ಮಾತ್ರ ಚೀಫ್ ಕಮ್ಮಿಷನರವರ ಮಂಜೂರಾತಿಯಿಂದ ಜಾಮೀನಾಗಿ ತೆಗದುಕೊಳ್ಳಬಹುದು. ಯಾವ ಸಂಗತಿಯಲ್ಲಾಗಲಿ ಗ್ರಾಮದ ಸಭೆಯ ಮೆಂಬರ್‌ಗಳಾಗಲಿ, ಇತರ ಯಾವ ಜನರಿಗಾಗಲಿ, ಮುಬಾದಲೆ ಕೊಟ್ಟರೆ ಅಂತಾ ಯೆಲ್ಲಾ ಮೊಬಲಗನ್ನು ಬ್ರಿಟಿಷ್ ಗವರ್ನಮೆಂಟಿಗೆ ಯೆಲ್ಲರೂ ಒಟ್ಟಿಗೆಯಾಗಿ ಆಗಲಿ, ಬೇರೆ ಬೇರೆಯಾಗಿ ಆಗಲಿ, ವಾಪಸ್ಸು ಮಾಡುವಂತೆ ಷರತ್ತಿಗೆ ಒಡ್ಡಿರಾದರೆ ಸರ್ಟಿಫಿಕೇಟ್ ಪಡಕೊಂಡವರು ಒಟ್ಟಿಗೆಯಾಗಿ ಆಗಲಿ, ಬೇರೆ ಬೇರೆಯಾಗಿ ಆಗಲಿ, ಮುಬಾದಲೇ ತೆಗದುಕೊಂಡ ಪೂರ್ತಿ ಮೊಬಲಗಿಗೆ ಬ್ರಿಟಿಷ್ ಗವರ್ನಮೆಂಟಿಗೆ ಜವಾಬ್‌ದಾರರಾಗಿರುತ್ತೇವೆಂಬದಾಗಿ (ಬಿ) ಫಾರಂನಲ್ಲಿ ನಮೂದಿಸಿರುವ ಸರ್ಟಿಫಿಕೇಟಿಗೆ ಒಂದು ಮುಚ್ಚಳಿಕೆ ಜೋಡಿಸತಕ್ಕದ್ದು. ಮತ್ತು ಅವರೊಳಗೆ ಅಂತಾ ಮೊಬಲಗಿನಪೈಕಿ ಪ್ರತಿ ಒಬ್ಬನೂ ಕೊಡತಕ್ಕ ಭಾಗಕ್ಕೆ ಜವಾಬ್ದಾರನಾಗಿರುವದನ್ನು ತೋರಿಸುವ ಒಂದು ಪಟ್ಟಿಯನ್ನು ಸಹ ದಾಖಲ್ಮಾಡತಕ್ಕದ್ದು. ಅಂತಾ ಮುಚ್ಚಳಿಕೆ ಮತ್ತು ಪಟ್ಟಿಗು ಸಹ ಸರ್ಟಿಫಿಕೇಟ್ ಪಡಕೊಂಡ ಪ್ರತಿ ಒಬ್ಬನೂ ರುಜು ಮಾಡತಕ್ಕದ್ದಲ್ಲದೆ ಮುಬಾದಲೆ ಕೊಡುವದಕ್ಕೆ ಮಂಜೂರ್ಮಾಡುವ ಉದ್ಯೋಗಸ್ಥನು ಸಹ ರುಜು ಮಾಡತಕ್ಕದ್ದು.

೭ ಈ ಆಕ್ಟಿನ ಕಾರ್ಯಾರ್ಥವಾಗಿ ಜಮ್ಮ ಉಂಬಳಿ ಮತ್ತು ಜಹಗೀರ್ (ಕಂದಾಯ ಮಾಫ್ ಭೂಮಿ) ಭೂಮಿಗಳನ್ನು ಗಿರವೀ ಮಾಡಕೂಡದೆಂತ ಈಗ ಇರುವ ನಿಷೇಧವನ್ನು ಮತ್ತು ಅವುಗಳಿಗೆ ಸಂಬಂಧಪಟ್ಟ ಕರಾರ್‌ಗಳ ರಿಜಿಸ್ಟರ್ ಮಾಡುವಿಕೆಯನ್ನು ಸನ್ ೧೮೮೩ನೇ ಇಸವಿ ೧೯ನೇ ಆಕ್ಟಿನಪ್ರಕಾರ ಕೊಡುವ ಮುಬಾದಲೆಗೆ ಅಂತಾ ಭೂಮಿಗಳು ಜಾಮೀನಾಗಿ ಈಡಾಗುವಷ್ಟುಮಟ್ಟಿಗೆ ಸುಲಭ ಮಾಡಲ್ಪಡುವದು. ಕುಟುಂಬದ ಆಸ್ತಿಗೆ ಸೇರಿದ ಭೂಮಿಗಳನ್ನು ರೂಪಿತ ಪಡಿಸುವದಕ್ಕೋಸ್ಕರವಾಗಿ ಮುಬಾದಲೆ ಕೊಡಬೇಕೆಂತ ಕೇಳುವ ದರಖಾಸ್ತುಗಳನ್ನು ಕೊಡಗರ ಮನೆಯ ಯಜಮಾನನಿಂದ (ಮುಖ್ಯಸ್ಥನಿಂದ) ತೆಗದುಕೊಳ್ಳಬಹುದು. ಆದರೆ ಕುಟುಂಬದ ಪ್ರಾಯಕ್ಕೆ ಬಂದ ಯೆಲ್ಲಾ ಗಂಡುಜನರ ಇರಾದೆಯನ್ನು ಬರಹಮೂಲಕ ಪಡೆಯಬೇಕು. ಮತ್ತು ಮುಬಾದಲೆಯನ್ನು ಕ್ರಮವಾಗಿ ವಾಪತಿ ಮಾಡುವದಕ್ಕೆ ಬೇರೆ ಬೇರೆಯಾಗಿ ಯಾಗಲಿ, ಒಬ್ಬೊಬ್ಬನಾಗಿಯಾಗಲಿ, ಜವಾಬ್ದಾರನಾಗಿರತಕ್ಕದ್ದು. ಒಟ್ಟು ಕುಟುಂಬದ ಸೊತ್ತು ಮುಬಾದಲೆ ಸಂದಾಯತಕ್ಕೆ ಗುರಿಯಾಗಲ್ಪಡುವದು. ಮತ್ತು ಸಾಲ ಸಂದಾಯ ಮಾಡುವದಕ್ಕೆ ತಪ್ಪಿದಲ್ಲಿ ಸದರೀ ಬಾಕಿಯ ಸಮಾಧಾನಕ್ಕೋಸ್ಕರ ಜಪ್ತೀಮಾಡಿ ಹರಾಜ್ ಮಾಡಲ್ಪಡಬಹುದು

DRAFT OF A REGULATION TO AMEND THE LAW RELATING TO THE COLLECTION OF THE PUBLIC REVENUE IN THE PROVINCE OF COORG

ಕಳೆದವಾರದ ಶೇಷ.

ಜಮೀನ್ ಜಪ್ತಿ ಅಗಲಿಕ್ಕೆ ಮುಂದಾಗಿ ತಗಾದೆಕೊಡುವದು.

೯. ಕಮಿಶನರಿಗಾಗಲಿ, ಕಮಿಶನರವರಿಂದ ಈ ಬಗ್ಯೆ ಅಧಿಕಾರ ಕೊಡಲ್ಪಡುವ ಇತರ ಆಫಿಸರರಾಗಲಿ ಸರ್ಕಾರದ ಕಂದಾಯ ಕೊಡಲಿಕ್ಕೆ ತಪ್ಪಿದವನ ಜಮೀನನ್ನಾದರೂ ಅದರಲ್ಲಿರುವ ಕಟ್ಟಡಗಳನ್ನಾದರೂ, ಜಪ್ತಿ ಮಾಡುವಬಗ್ಯೆ ಪ್ರವೇಶಿಸುವದಕ್ಕೆ ಮುಂದಾಗಿ ಬಡ್ತಿ ದೇಖೀಲ್ ಪ್ರೋಸೆಸ್ ಚಾರ್ಜ ಸಮೇತ ಸಲ್ಲತಕ್ಕ ಕಂದಾಯದ ಮೊಬಲಗು ಯಾವ ವಿಷಯದಲ್ಲಿ ಸದರೀ ಬಾಕಿ ಕೇಳಲ್ಪಡುತ್ತೋ ಅಂತಾ ಯಾ ಸ್ಟೇಟ ಯಾ ಜಮೀನ್ ಬಾಕೀ ಕೊಡಬೇಕಾದವನ ಹೆಸರು, ಮೊಬಲಗು ಸಂದಾಯ ಮಾಡಲಿಕ್ಕೆ ಕೊಟ್ಟ ಮಾಯಿದೆ, ಇವುಗಳನ್ನು ನಮೂದಿಸಿ ಬರವಣಿಗೆ ಮೂಲಕವಾದ ತಗಾದೆ ನೋಟೀಸನ್ನು ಸದರೀ ಕಂದಾಯ ಕೊಡಲಿಕ್ಕೆ ತಪ್ಪಿದವನಿಗೆ ಸಾದರ್ಮಾಡತಕ್ಕದ್ದು. ಹಣ ಪಾವತೀ ಮಾಡೋಣಾಯಿತು ಯಾವಬಗ್ಯೆ ಬಾಕೀ ಸಲ್ಲಬೇಕಾಗಿರುತ್ತದೋ ಅಂತಾ 'ಜಾಮೀನಿಗಾ', ಹಣ ಪಾವತೀಯಾಗಬೇಕಾದ ಸ್ಥಳವೂ, ಇರುವ ಫಾಸಲೆಗೆ ತಕ್ಕಂತೆ ನಿರ್ನ್ಯೇಸ ನಮೂದಿಸಲ್ಪಡತಕ್ಕದ್ದು. ಆ ನೋಟಿಸಿನಂತೆ ಹಣ ಸಂದಾಯ ಮಾಡುವದಕ್ಕೆ ತಪ್ಪಿದ ಪಕ್ಷದಲ್ಲಿ ಅವನ ಜಮೀನನ್ನು ಜಪ್ತಿ ಮಾಡಲಾಗುತ್ತೆಂತ ಯೆಚ್ಚರಕೊಡತಕ್ಕದ್ದು.

ಸಾದರಾತಿ ವಿಧ.

ಅಂತಾ ತಗಾದೆ ನೋಟಿಸ ಅದರ ಒಂದು ನಕಲನ್ನು ಕಂದಾಯ ಕೊಡಲಿಕ್ಕೆ ತಪ್ಪಿದವನಿಗಾಗಲಿ ವಾಡಿಕೆಯಾದ ಅವನ ವಾಸಸ್ಥಾನದೊಳಗೆ ಅವನ ಕುಟುಂಬಕ್ಕೆ ಸೇರಿದ ವಯಸ್ಸಿನವನಾದ ಯಾವನಾದರೂ ಗಂಡಸಿಗಾಗಲಿ, ಅಧಿಕಾರ ಹೊಂದಿದ ಅವನ ಮುತಾಲೀಕನಿಗಾಗಲಿ, ಸಾದರ್ಮಾಡುವದರಿಂದ ಅಥವಾ ಆಫೀಸಿಗೆ ತಿಳಿಯಬಂದ ಅವನ ವಾಸಸ್ಥಾನದ ಯಾವದಾದರೂ ಪ್ರಸಿದ್ಧವಾದ ಭಾಗದಲ್ಲಿ ಯಾ ಜಪ್ತಿಯಾಗತಕ್ಕದ್ದಾಗಿರುವ ಜಮೀನಿನ ಯಾವದಾದರೂ ಪ್ರಸಿದ್ಧವಾದ ಭಾಗದಲ್ಲಿ ಸದರೀ ನೋಟೀಸಿನ ಒಂದು ನಕಲನ್ನು ಚಿಕಟಾಯಿಸುವದರಿಂದಲಾಗಲಿ ಸಾದರ್ಮಾಡಲ್ಪಡತಕ್ಕದ್ದು.

ಕಂದಾಯ ಕೊಡಲಿಕ್ಕೆ ತಪ್ಪಿದವನು ಮೊಬಲಗು ಕೊಡಲಿಕ್ಕೆ ಉಪೇಕ್ಷಿಸುವದರ ಫಲ.

೧೦. ತಗಾದೆ ನೋಟಿಸ ಷರತ್ತುಗಳನ್ನನುಸರಿಸಿ ಸಲ್ಲಬೇಕಾದ ಮೊಬಲಗು ಸಂದಾಯ ಮಾಡಲ್ಪಡದೆಯಿದ್ದರೆ ಮತ್ತು ಸದರೀ ಬಾಕಿ ಸಂದಾಯದಬಗ್ಯೆ ಕಮಿಶನರವರಿಗಾಗಲಿ ಕಮಿಶನರವರಿಂದ ಅದಕ್ಕೋಸ್ಕರ ಅಧಿಕಾರ ಕೊಡಲ್ಪಟ್ಟ ಇತರ ಆಫಿಸರರಿಗಾಗಲಿ, ತೃಪ್ತಿಕರವಾಗಿ ಏರ್ಪಾಡು ಯಾವದು ಮಾಡಿಕೊಳ್ಳದೆಯಿದ್ದರೆ ಕಂದಾಯ ಕೊಡಲಿಕ್ಕೆ ತಪ್ಪಿದವನ ಬಾಬತು ಜಮೀನನ್ನು ಈ ಕೆಳಗಿನ ರೀತಿಯಿಂದ ಜಪ್ತೀ ವ ಹರಾಜ್‌ಮೂಲಕ ಬಾಕೀಯನ್ನು ವಸೂಲ್ಮಾಡಲಿಕ್ಕೆ ಅವರು ಪ್ರವರ್ತಿಸತಕ್ಕದ್ದು.

ಜಪ್ತೀಮಾಡುವವಿಧ.

೧೧. ಜಮೀನಿನ ಯಾವದಾದರೂ ಪ್ರಸಿದ್ಧವಾದ ಭಾಗದಲ್ಲಿ ಒಂದು ಜಪ್ತೀನೋಟಿಸು ಚಿಕಟಾಯಿಸುವದರಮೂಲಕ ಜಪ್ತೀ ಮಾಡಲ್ಪಡತಕ್ಕದ್ದು, ಆ ನೋಟೀಸಿನಲ್ಲಿ ಕಂಡ ತಾರೀಖಿನ ಒಳಗಾಗಿ ಸರ್ಕಾರದ ಬಾಕೀಯನ್ನು ಬಡ್ತಿ ವ ಖರ್ಚುಗಳು ದೇಖೀಲ್ ಪಾವತೀಮಾಡದೆಯಿದ್ದರೆ ಜಮೀನ್ ಕಾನೂನುಪ್ರಕಾರ ಹರಾಜಿಗೆ ತರಲ್ಪಟ್ಟೀತೆಂತ ಅದರಲ್ಲಿ ನಮೂದಿಸತಕ್ಕದ್ದು. ಸದರೀ ಜಪ್ತೀಸಂಗತಿಯೂ ಜಮೀನಿನಲ್ಲಿ ಬಹಿರಂಗವಾದ ಇಸ್ತಿಹಾರ್‌ಮೂಲಕವಾಗಿಯೂ, ದಂಡೋರೆಮೂಲಕವಾಗಿಯೂ, ನಾಡು ಕಚ್ಚೇರಿಯ ಗೋಡೆಯಮೇಲೆ ಒಂದು ನಕಲ್ ಹಚ್ಚುವದಲ್ಲದೆ ಸರ್ಕಾರ್ ಗೆಜೆಟಿನಲ್ಲಿ ನೋಟಿಸ ಘೋಷಿಷ್ ಮಾಡುವದರಮೂಲಕವಾಗಿಯೂ ಪ್ರಸಿದ್ಧಪಡಿಸತಕ್ಕದ್ದು.

ಮುತಾಲೀಕರ ಮೊಕದ್ದಮೆ.

೧೨. ಕಂದಾಯ ಕೊಡಲಿಕ್ಕೆ ತಪ್ಪಿದವನಬಾಬತು ಜಮೀನನ್ನು ಜಪ್ತೀ ಮಾಡುವಲ್ಲಿ ಅಥವಾ ಅಂತಾ ಜಪ್ತಿಯ ಕಾಲದಲ್ಲಿ ಯಾವಾಗಲಾಗಲಿ ಜಪ್ತೀ ಮಾಡಲ್ಪಟ್ಟ ಸೊತ್ತಿನ ವಿಚಾರಣೆಯನ್ನು ವಹಿಸುವದು ಕಮಿಶನರವರಿಗೆ ನ್ಯಾಯವಾಗಿರತಕ್ಕದ್ದು. ಅಂತಾ ಸಂಗತಿಯಲ್ಲಿ ಅವರು ಸೊತ್ತಿನ್ನ ವಿಚಾರಣೆ ಮಾಡಲಿಕ್ಕೆ ತಕ್ಕ ಲವಾಜಮೆ ದೇಖೀಲ್ ಒಬ್ಬ ಮುತಾಲೀಕನನ್ನು ಮೊಕರರ್‌ಮಾಡತಕ್ಕದ್ದು. ಮತ್ತು ತಮ್ಮ ಸ್ಟೈಕ ವೋವರ್ ನಿಂದ ಬರವಣಿಗೆಯಲ್ಲಿರತಕ್ಕ ಹುಕುಂನಿಶಿ ಏಜಂಟರಿಗೆ ಒಂದು ಬದಲೀ ಸರ್ಟಫಿಕೇಟ ಕೊಡತಕ್ಕದ್ದು. ಮತ್ತು ವಿಚಾರಣೆಯ ಖರ್ಚು ಸೊತ್ತಿನಿಂದ ಬರತಕ್ಕ ಹುಟ್ಟುವಳಿಯ ದೆಶೆಯಿಂದ ಕೊಡತಕ್ಕದ್ದು. ಪರಂತು

ಕೆಲವು ಸಂಗತಿಗಳಲ್ಲಿ ರಿಸೀವರ ಆಫೀಸರರು ಸೆಕ್ಯುರಿಟಿ ಜಾಮೀನು ತೆಗೆದುಕೊಳ್ಳತಕ್ಕದ್ದು.

ಸೊತ್ತು ಮುತಾಲೀಕನ ತಲಬ್ ಖರ್ಚು ಕಟ್ಟಲಿಕ್ಕೆ ಆಗವಷ್ಟು ಬದಳ ಸ್ವಲ್ಪವಾಗಿದ್ದ ಪಕ್ಷಕ್ಕೆ ಯಾವಾಗ್ಯೂ ಕಮಿಶನರವರು ಚುನಾಯಿಸುವಂತೆ ರೆವಿನ್ಯೂ ಆಪಿಸರರ ವಹಿಮಾಡತಕ್ಕದ್ದು. ಸದರೀ ರೆವಿನ್ಯೂ ಆಪಿಸರು ಏಜಂಟರಿಗೆ ಸಬಂಧಿಸಿದ ವಿಷಯದೊಳಗೆ ಇದರಲ್ಲಿ ಮುಂದೆ ಅಡಗಿರುವ ತಮಾಂ ನಿಬಂಧನೆಗಳಿಗೂ ಒಳಪಡತಕ್ಕದ್ದು.

ವಿಚಾರಣೆ ಕೆಲಸವನ್ನು ವಹಿಸತಕ್ಕ ನೋಟೀಸ್.

೧೩. ಸೊತ್ತಿನ ವಿಚಾರಣೆಯನ್ನು ಸ್ವಾಧೀನಪಡಿಸಿಕೊಂಡದ್ದರ ಬಾಬತು ನೋಟಿಸ ಕಂದಾಯ ಕೊಡಲಿಕ್ಕೆ ತಪ್ಪಿದವನಿಗೆ ೯ನೇ ಸೆಕ್ಷನ್ನಲ್ಲಿ ವಿವರಿಸಲ್ಪಟ್ಟ ರೀತಿಯಾಗಿ ಸಾದರ್ಮಾಡಲ್ಪಟ್ಟು ಸದರೀ ಜಮೀನಿನಲ್ಲಿ ಬಹಿರಂಗವಾದ ಇಸ್ತಿಹಾರ್‌ಮೂಲಕವಾಗಿಯೂ ನಾಡು ಕಚ್ಚೇರಿಯ ಗೋಡೆಮೇಲೆ ಒಂದು ನಕಲ್ ಚಿಕಟಾಯಿಸುವದರಿಂದಲೂ, ಸರ್ಕಾರೀ ಗೆಜೆಟಿನಲ್ಲಿ ಘೋಷಿಷ್‌ಮಾಡುವದರಮೂಲಕವಾಗಿಯೂ, ಪ್ರಕಟಿಸಲ್ಪಡತಕ್ಕದ್ದು.

ಮುತಾಲೀಕನ ಸಕಲ್.

೧೪. ಮೂವತ್ತೆರಡನೇಸೆಕ್ಷನ್ ಅನುಸರಿಸಿ ವಿಚಾರಣೆ ನಡೆಯುವ ಕಾಲದಲ್ಲಿ ಕಂದಾಯಕೊಡಲಿಕ್ಕೆ ತಪ್ಪಿದವನಿಗೂ ಅವನ ಕೈಕೆಳಗಣ ಹಿಡುವಳೀದಾರರಿಗೂ ಇರತಕ್ಕ ಒಡಂಬಡಿಕೆಗಳಿಗೆ ಅನುಗುಣವಾಗಿಯಾಗಲಿ, ಗೊತ್ತಾದ ಒಡಂಬಡಿಕೆಗಳು ಇಲ್ಲದೆಯಿದ್ದಪಕ್ಷಕ್ಕೆ ವ್ಯವಸ್ಥಿತವಾದ ವಾಡಿಕೆಮೇರೆಯಾಗಲಿ, ಎಸ್ಟೇಟಿನಮೇಲೆ ಸಲ್ಲತಕ್ಕ ಅಥವಾ ಆಗತಕ್ಕ ಬಾಕೀಕಂದಾಯಗಳನ್ನೂ ಆದಾಯಗಳನ್ನೂ ವಸೂಲ್ಮಾಡುವ ಮುತಾಲೀಕನ ಕಾರ್ಯವಾಗಿರತಕ್ಕದ್ದು.

ಮುತಾಲೀಕನು, ತನ್ನ ತಮಾಮ್ ಜಮಾಖರ್ಚುಗಳ ಬಾಬತು ಲೆಕ್ಕಗಳನ್ನು ಯಿಟ್ಟು ಕಮಿಶನರವರಿಗಾಗಲಿ, ಅಥವಾ ಕಮಿಶನರವರಿಂದ ಆಬಗ್ಯೆ ಅಧಿಕಾರ ಕೊಡಲ್ಪಡುವ ಇತರ ಆಫಿಸರರಿಗಾಗಲಿ ಅವುಗಳನ್ನು ಮಾಹೇಯಾನಾ ಆಗಲಿ ನಿಯಮಿಸಲ್ಪಟ್ಟಾಗಲಾಗಲಿ, ಕಳುಹಿಸಿ ಸಿಲ್ಕು ಪಾವತೀಮಾಡತಕ್ಕದ್ದು. ಕಂದಾಯಕೊಡಲಿಕ್ಕೆ ತಪ್ಪಿದವನು ಯುಕ್ತಗಳಾದ ಎಲ್ಲಾಕಾಲಗಳಲ್ಲಿಯೂ, ಸದರೀಲೆಕ್ಕಗಳನ್ನು ನೋಡಲಿಕ್ಕೂ, ಬಗರ್ ರುಸುಂ ತನ್ನ ಸ್ವಂತಖರ್ಚಿನಿಂದ ಅವುಗಳ ನಕಲುಗಳನ್ನು ತೆಗೆದುಕೊಳ್ಳಲಿಕ್ಕೂ ಸ್ವಾತಂತ್ರನಾಗಿರತಕ್ಕದ್ದು.

ದಾವೆಗಾಗಲಿ ಫಿರ್ಯಾದಿಗಾಗಲಿ ಮುತಾಲೀಕನು ಗುರಿಯಾಗಿರುವಿಕೆ.

೧೫. ಕಂದಾಯಕೊಡಲಿಕ್ಕೆ ತಪ್ಪಿದವನಿಗಾಗಲಿ, ಅವನ ಎಸ್ಟೇಟಿಗಾಗಲಿ, ಹಾನಿಪಡಿಸುವಬಗ್ಯೆ ಮುತಾಲೀಕನಿಂದ ಮಾಡಲ್ಪಡುವ ಯಾವದಾದರೂ ತಕ್ಸೀರಕರವಾದ ಯಾ ನ್ಯಾಯವಿರುದ್ಧವಾದ ಕೃತ್ಯದ ವಿಷಯದಲ್ಲಿ ಅವನ ಮೇಲೆ ಫಿರ್ಯಾದ್ ಮಾಡುವದು ಯಾ ದಾವಾಹಾಕುವದು, ಕಂದಾಯಕೊಡಲಿಕ್ಕೆ ತಪ್ಪಿದವನಿಗೆ ನ್ಯಾಯವಾಗಿರತಕ್ಕದ್ದು. ಮತ್ತು ಒಕ್ಕಲುದಾರರಾಗಲಿ, ಒಳ ಒಕ್ಕಲಿಯಿಂದ ಹಿಡುವಳಿಯುಳ್ಳ ಇತರ ಜನಗಳಾಗಲಿ, ಸದರಿಕೃತ್ಯ ಕಂದಾಯಕೊಡಲಿಕ್ಕೆ ತಪ್ಪಿದವನಿಂದ ನಡೆಸಲ್ಪಟ್ಟದ್ದರೆ ಅವನಮೇಲೆ ಹ್ಯಾಗೆ ಪರಿಹಾರವನ್ನುಹೊಂದುವರೋ, ಹಾಗೆಯೇ ಮುತಾಲೀಕನಮೇಲೆ ಅದೇವಿಧವಾಗಿ ಪರಿಹಾರಪಡೆಯತಕ್ಕದ್ದು.

ಜಮೀನ್‌ದಾರನಿಗೂ, ಒಕ್ಕಲುದಾರರಿಗೂ, ಇರುವ ಒಡಂಬಡಿಕೆಗಳ ಫಲ.

೧೬. ಇದರಲ್ಲಿ ಮುಂದೆ ನಮೂದಿಸುವಂತಾದ್ದು ವಿನಾ, ಜಮೀನ್‌ದಾರನಿಗೂ, ಅವನ ಒಕ್ಕಲುದಾರರಿಗೂ, ನಡೆಯುವ ತಮಾಂ ಒಡಂಬಡಿಕೆಗಳಿಗೂ ಜಪ್ತಿ ಕಾಲದಲ್ಲಿ ಕಮಿಶನರವರು ಬದ್ಧರಾಗತಕ್ಕದ್ದು. ಎವರೆ ಜಪ್ತಿಯ ಪ್ರಯೋಜನವನ್ನು ಭಂಗಪಡಿಸುವ ಯಾ ವಿಳಂಬಪಡಿಸುವ ಉದ್ದೇಶದಿಂದ ಮೋಸಕರವಾಗಿ ಮಾಡಲ್ಪಡುವಂತಾ ತಮಾಂ ಒಡಂಬಡಿಕೆಗಳೂ ಮಾಮೂಲಿಕಂದಾಯದ ದರಗಳಿಗಿಂತಲೂ ಕಮ್ಮಿದರಕ್ಕೆ ಕೊಡಲ್ಪಟ್ಟಂತಾ ಮತ್ತು ಪ್ರಮಾಣೀಕವಾಗಿ ಕೋರಿಗಳ ಯಾ ಕಟ್ಟುವಗಳನ್ನು ಕಟ್ಟುವಬಗ್ಯೆಯಾಗಲಿ ಬಂಜರ್ ಜಮೀನ್ ಸಾಗುವಳೀಕೆಳಗೆ ತರುವಬಗ್ಯೆಯಾಗಲಿ ಮಾಡಲ್ಪಡುವಂತಾ ತಮಾಂ ಗುತ್ತಿಗೆಗಳುಜಪ್ತಿ ಆದತರುವಾಯ ಮಾಡಲ್ಪಡುವ ತಮಾಂ ಒಡಂಬಡಿಕೆಗಳು ರದ್ದಾಗತಕ್ಕದ್ದೆಂದು ಕಮಿಶನರವರು ತಿಳಿಸುವಪಕ್ಷಕ್ಕೆ ಆಮೇರೆ ಅವರಮೇರ ರದ್ದಾಗತಕ್ಕವು. ಪರಂತು ಕಮಿಶನರಮೇಲೆ ದಾವೆಯನ್ನು ಸ್ಥಾಪಿಸಲಿಕ್ಕೆ ಸಾಧಾರಣನ್ಯಾಯಸ್ಥಾನಗಳಲ್ಲಿ ವ್ಯಾಜ್ಯತರುವ ವಿಷಯದಲ್ಲಿ ಅಂತಾ ಒಡಂಬಡಿಕೆಗೆ ಸಂಬಂಧಿಸಿದ ಜನಗಳ ಬಾಧ್ಯತೆಗೆ ಒಳಪಟ್ಟಿರತಕ್ಕದ್ದು, ಮತ್ತು ಅಂತಾ ಜಮೀನಿನಮೇಲೆ ಇರತಕ್ಕ ತಮಾಂ ಖರ್ಚುಗಳಾಗಲಿ, ದೇಣಗಳಾಗಲಿ, ಸರ್ಕಾರದ ಹಣ ಪಾವತೀಪಡಿವಿಗೆ ಸಿಲ್ಲಿಸಿ ಇಡಲ್ಪಡತಕ್ಕದ್ದು.

ಒಕ್ಕಲುದಾರರುಮೊಬಲಗು ಪಾವತಿ ಮಾಡೋಣ.

೧೭. ಯಾವ ಜಮೀನ್‌ದಾರನಿಗೆ ಆಗಲಿ, ಜಮೀನ್‌ದಾರನ ತರಫೆನಲ್ಲಾಗಲಿ, ಅವನಕೆಳಗೆ ಜಮೀನ್ ಅನುಭವಿಸುವ ಯಾವ ಮನುಷ್ಯನಿಂದಾದರೂ ವಿಚಾರಣೆಯನ್ನು ವಹಿಸಿದಬಾಬತು ಬಹಿರಂಗವಾದ ನೋಟಿಸ ಕೊಡುವದಕ್ಕೆ ಮುಂದಾಗಿ ಕಂದಾಯ ಯಾ ಆದಾಯದ ಬಾಬತು ವಸ್ತುತಃ ಸಲ್ಲತಕ್ಕ ಮೊಬಲಗುಗಳಿಗಾಗಿ ಮಾಡಲ್ಪಟ್ಟ ರಸಾಂಸಲಿಕೆಗಳು ಕಮಿಶನರವರಮೇಲೆ ಊರ್ಜಿತವಾದವುಗಳಾಗಿರತಕ್ಕವು, ಮತ್ತು ಹಾಗೆ ವಿಚಾರಣೆ ವಹಿಸಲ್ಪಟ್ಟಿರಬಾಬತು ಬಹಿರಂಗವಾದ ನೋಟಿಸ ಕೊಡಲ್ಪಟ್ಟ ತರುವಾಯ ಮಾಡಲ್ಪಟ್ಟ ಅಥವಾ ಸದರೀಮೊಬಲಗುಗಳು ವಸ್ತುತಃ ಬಾಕೀಆಗುವದಕ್ಕೆಮುಂದಾಗಿಮಾಡಲ್ಪಟ್ಟ ಅಂತಾ ರಸಾಂಸಲಿಕೆಗಳು ಕಮಿಶನರವರಮೇಲೆ ರದ್ದಾಗತಕ್ಕವು. ಸದರೀ ಕಮಿಶನರವರು ಪೂರಾ ಮೊಬಲಗನ್ನು ಅದು ಯಾರಿಂದ ಪಾವತೀ ಆಯಿತೋ ಆ ಜನಗಳ ಕಂದಾಯ ಬಾಕೀ ತರೀಕ್ ವಸೂಲ್ಮಾಡಿಕೊಳ್ಳುವದಕ್ಕೆ ಅರ್ಹರಾಗಿರತಕ್ಕದ್ದು. ಹಾಗೆ ವಸೂಲ್ಮಾಡಿಕೊಳ್ಳಲು ಸದರೀ ಜನಗಳು ಕಂದಾಯ ಕೊಡಲಿಕ್ಕೆ ತಪ್ಪಿದವನಮೇಲೆ ಸಾಧಾರಣ ಕೋರ್ಟುಗಳಲ್ಲಿ ದಾವಾ ಮಾಡತಕ್ಕದ್ದು.

ಜಪ್ತಿಯನ್ನು ಬಿಡುಗಡೆಮಾಡುವಲ್ಲಿ ವ್ಯವಸ್ಥೆಮಾಡುವ ವಿಧ.

೧೮. ಜಪ್ತಿಯಾದ ಸೊತ್ತಿನ ದೆಸೆಯಿಂದ ಬಂದ ತಮಾಂ ಮೊಬಲಗುಗಳಲ್ಲಿಯೂ ಜಪ್ತಿಯ ಖರ್ಚುಗಳನ್ನೂ ವಿಚಾರಣೆಯ ಖರ್ಚುಗಳನ್ನು ವಜಾಮಾಡಿ ಮಿಕ್ಕಭಾಗವನ್ನು ಸಲ್ಲಬೇಕಾದ ಬಾಕಿ ಮತ್ತು ಸಾಲೀಯಾನಾ ಸದರೀ ಬಾಕೀ ಮೇಲೆ ಶೇಕಡಾ ೬ ರೂಪಾಯಿಮೇರೆ ಆಗುವ ಬಡ್ತಿ, ಇವುಗಳ ಫೈಸಲಿಗಾಗಿ ಕಂದಾಯ ಕೊಡಲಿಕ್ಕೆ ತಪ್ಪಿದವನ ಲೆಕ್ಕಕ್ಕೆ ಜಮೆ ಕಟ್ಟತಕ್ಕದ್ದು. ಮತ್ತು ತಮಾಂ ಬಾಕೀಗಳೂ, ಜಪ್ತಿಯ ಖರ್ಚುಗಳು, ವಿಚಾರಣೆ ಮಾಡುವದರ ಖರ್ಚುಗಳು ಪಾವತೀ ಮಾಡಲ್ಪಟ್ಟ ಕೂಡಲೆ ಜಪ್ತೀ ಖುಲಾಸೇ ಆಗಿದ್ದ ಕಾಲದಲ್ಲಿ ನಡೆದ ತಮಾಂ ಜಮಾಖರ್ಚುಗಳಲೆಕ್ಕವನ್ನುತಯಾರ್ಮಾಡಿಕೊಡತಕ್ಕದ್ದು.

ಜಮೀನಿನಲ್ಲಿ ಸಂಬಂಧವುಳ್ಳವರು ಜಪ್ತಿಯಿಂದ ಅದನ್ನು ಬಿಡಿಸಬಹುದು.

೧೯. ಜಪ್ತೀ ಮಾಡಲ್ಪಟ್ಟಿರುವ ಯಾ ಜಪ್ತಿ ಮಾಡತಕ್ಕದ್ದಾಗಿರುವ ಜಮೀನಿನಲ್ಲಿ ಸಂಬಂಧವುಂಟೆಂಬ ಯಾವ ಮನುಷ್ಯನಾದರೂ ಸರ್ಕಾರದ ಬಾಕಿಯನ್ನೂ, ಬಡ್ತಿಯನ್ನೂ ಹಿಡಿದಖರ್ಚುಗಳನ್ನೂ,ಪಾವತೀಮಾಡಿ ಅದನ್ನು ಬಿಡಿಸಿಕೊಳ್ಳಬಹುದು. ಮತ್ತು ಅಂತಾ ತಮಾಂಮೊಬಲಗುಗಳೂ ಒಬ್ಬ ಒಕ್ಕಲುದಾರನಿಂದ ಪಾವತೀ ಮಾಡಲ್ಪಟ್ಟರೆ ಅವನು ಕಂದಾಯಕೊಡಲಿಕ್ಕೆ ತಪ್ಪಿದವನಿಗೆಆಕಾಲದಲ್ಲಾಗಲಿ, ತರುವಾಯವಾಗಲಿಬಾಕಿಯಾಗತಕ್ಕ ಯಾವಕಂದಾಯದಲ್ಲಿಯಾದರೂ ವಜಾ ಮಾಡಬಹುದು. ಮತ್ತು ಪ್ರಾಮಾಣಿಕವಾದ ಒಬ್ಬ ಅಡಮಾನಗಾರನಿಂದ ಯಾ ಸೊತ್ತಿನಮೇಲೆ ಇತರ ಲೇಣೆಯುಳ್ಳವನಿಂದ ಅಂತಾ ಮೊಬಲಗು ಪಾವತೀ ಮಾಡಲ್ಪಟ್ಟರೆ ಆ ಮೊಬಲಗು ಕಂದಾಯ ಕೊಡಲಿಕ್ಕೆ ತಪ್ಪಿದವನಿಂದ ಅವನಿಗೆ ಸಲ್ಲಬೇಕಾದ ಸಾಲವಾಗಿಯೂ ಸದರೀ ಜಮೀನಿನ ಮೇಲಣ ದೇಣೆಯಾಗಿಯೂ ಏರ್ಪಾಡಾಗತಕ್ಕದ್ದು. ಆದರೆ ಯಾವ ತಾರೀಖಿನಲ್ಲಿ ಸದರೀ ಮೊಬಲಗು ಪಾವತೀ ಆಯಿತೋ ಆ ತಾರೀಖ್ ಪ್ರಕಾರ ಇತರ ಸಾಲಗಳಿಗೆ ಪೂರ್ವದ್ದಾಗಿ ಮಾತ್ರ ಇರತಕ್ಕದ್ದು.

ಸ್ಥಿರಸೊತ್ತನ್ನು ವಿಕ್ರಯಿಸುವಲ್ಲಿ ಆಚರಿಸಬೇಕಾದನಿಬಂಧನೆಗಳು.

೨೦. ಈ ರೆಗ್ಯುಲೇಶನ್ ಅನುಸರಿಸಿ ಸ್ಥಿರಸೊತ್ತನ್ನುವಿಕ್ರಯಿಸುವಲ್ಲಿ ಈ ಕೆಳಗೆ ಬರುವ ರೂಲ್ಸನ್ನು ಆಚರಿಸತಕ್ಕದ್ದು.

ಬಹಿರಂಗವಾದ ಹರಾಜ್.

ಮೊದಲನೇದು —ವಿಕ್ರಯವು ಜಮೀನ್‌ದಾರನಿಗೆ ಬಹಿರಂಗವಾದ ಹರಾಜ್ ಮೂಲಕ ನಡೆಯತಕ್ಕದ್ದು. ಹರಾಜಿನ ಕಾಲವೂ, ಸ್ಥಳವೂ, ಕಮಿಶನರವರಿಂದಾಗಲಿ ಆಬಗ್ಯೆ ಕಮಿಶನರವರಿಂದ ಅಧಿಕಾರ ಕೊಡಲ್ಪಡುವ ಇತರ ಆಫಿಸರರಿಂದಾಗಲಿ ಗೊತ್ತುಮಾಡಲ್ಪಡತಕ್ಕದ್ದು. ಅಂತಾ ಕಾಲವು ಸರ್ಕಾರೀ ಸಾಲ್ ಕಳೆಯಲಿಕ್ಕೆ ಮುಂದಾಗಿ ಯಾಗಲಿ, ತರುವಾಯವಾಗಲಿ, ಇರಬಹುದು.

ಹರಾಜಿಗೆ ಒಂದು ತಿಂಗಳ ಮುಂದಾಗಿ ಇಸ್ತಿಹಾರ್ ಕೊಡತಕ್ಕದ್ದು.

ಎರಡನೇದು —ಕಂದಾಯ ಕೊಡಲಿಕ್ಕೆ ತಪ್ಪಿದವನ ಹೆಸರು, ಜಮೀನ್ ಇರುವ ಸ್ಥಳ, ವಿಸ್ತೀರ್ಣ, ಅದರಲ್ಲಿರುವ ಕಟ್ಟಡಗಳು, ಜಮೀನಿಗಾಗಲಿ, ಅದರ ಆ ಯಾ ಭಾಗಗಳಿಗಾಗಲಿ,ಹಾಕಲ್ಪಟ್ಟ ಕಂದಾಯದ ಮೊಬಲಗು ಚಾಲ್ತೀ ಸರ್ಕಾರ್ ಸಾಲಿನ ಪೈಕಿ ಉಳದ ಭಾಗಕ್ಕೆ ಸಲ್ಲತಕ್ಕ ಸರ್ಕಾರದ ಕಂದಾಯದ ದಾಮಾಷ್ಠಾಯದ ಮೊಬಲಗು, ಹರಾಜಿನಕಾಲ, ಸ್ಥಳ ವ ಷರತ್ತುಗಳು ಇವುಗಳನ್ನು ನಮೂದಿಸಿ ಇಂಗ್ಲಿಷಿನೊಳಗೂ, ಕನ್ನಡದೊಳಗೂ, ಒಂದು ನೋಟಿಸನ್ನು ಹರಾಜಿಗೆ ಮುಂದಾಗಿ ಕಮಿಶನರಿಂದ ಆಬಗ್ಯೆ ಅಧಿಕಾರ ಕೊಡಲ್ಪಟ್ಟ ಇತರ ಆಫಿಸರರಾಗಲಿ ಕೊಡತಕ್ಕದ್ದು. ಈ ನೋಟಿಸ ಹರಾಜಿಗೆ ಅದಮುಪಕ್ಷ ಒಂದು ತಿಂಗಳ ಮುಂಚಿತವಾಗಿ ಕಮಿಶನರ್ ಕಚೇರಿಯಲ್ಲಿಯೂ, ತಾಲ್ಲೂಕು ಕಚ್ಚೇರಿಯಲ್ಲಿಯೂ, ನಾಡು ಕಚೇರಿಯಲ್ಲಿಯೂ, ಜಮೀನಿನ ಯಾವದಾದರೂ ಪ್ರಸಿದ್ಧವಾದ ಭಾಗದಲ್ಲಿಯೂ ಕಟ್ಟತಕ್ಕದ್ದು— 50 ಏಕರಿಗೆ ಮೇಲ್ಪಟ್ಟ ಯಲ್ಲಾ ಕಾಫೀ ತೋಟಗಳ ವಿಷಯದಲ್ಲಿಯೂ ಮತ್ತು ಕಮಿಶನರವರಿಗೆ ಅವಶ್ಯವಾಗಿ ಕಾಣಲ್ಪಡುವ ಇತರ ಜಮೀನ್‌ಗಳ ವಿಷಯದಲ್ಲಿಯೂ ಹರಾಜು ಇಸ್ತಿಹಾರನ್ನು ಕಮಿಶನರ್ ಹರಾಜಿಗೆ ಒಂದು ತಿಂಗಳಿಗೆ ಮುಂಚಿತವಾಗಿ ಕೊಡಗು ದೇಶದಲ್ಲಿ ಪ್ರಚಾರಗೊಂಡಿರುವ ಒಂದು ಅಥವಾ ಹೆಚ್ಚು ವರ್ತಮಾನ ಪತ್ರಿಕೆಗಳಲ್ಲಿ ಪ್ರಸಿದ್ಧಪಡಿಸಬಹುದು.

BANGALORE —Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧವೃತ್ತ್ಯವಗಮಾರ್ಥ ಕರ್ಣಾಟಕಪ್ರಕಾಶಿಕಾಭಿದಾಪ್ರಥಿತಸಾಹಿತೀಶೋಭಿತಾ ॥ ವ್ಯಗಾತ್ಕಹಿತಮಾಸರಿನಿಹಿತಮುದ್ರಣಾಸಜ್ಜನೈರ್ನಿಕಾಸುಪರಿಪೋಷಿತಾದಿಶತಿಮಾನಸಂಸುಮುದಂ ॥

Vol. XIII.] BANGALORE.—MONDAY, SEPTEMBER 27, 1886. [No. 39.

ಸಂಪುಟ ೧೩.] ಬೆಂಗಳೂರು:—ಸನ್ ೧೮೮೬ನೇ ಇಸವಿ ಸೆಪ್ಟಂಬರ್ ೨೭ನೇ ತಾರೀಖ್ ಸೋಮವಾರ. [ಸಂಚಿಕೆ ೩೯.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ಶಿರೋಲೇಖಗಳಿಗೆ [illegible] ವರುಷ ೧ಕ್ಕೆ		೧೦—೦—೦
ಇಂಗ್ಲಿಷ್ [illegible] ವರುಷ ೧ಕ್ಕೆ		೬—೦—೦
ಕನ್ನಡ [illegible] ಶಿರೋಲೇಖ [illegible] ಪಡುವವರಿಗೆ.		೬—೦—೦
ಬಿಡಿ	೧ಕ್ಕೆ	೦—೪—೦

[illegible] ಇಂಗ್ಲಿಷ್ [illegible] ಅಥವಾ, [illegible] ಶಿರೋ[illegible]. [illegible] ಸಲ್ಲಿಸ[illegible]

ಪ್ರಕಟನೆಯ ರಿವಾಜ್.

[illegible] ಸಾಲಿಗೆ	೧ಕ್ಕೆ	೦—೨—೦
[illegible] ಸಾಲಿಗೆ	೧ಕ್ಕೆ	೦—೧—೦

NOTICE TO SUBSCRIBERS

ಇದರಡಿ [illegible] ಅಂಶಗಳಿಗೆ ನಮ್ಮ ಚಂದಾದಾರರು [illegible] ಕೋರುತ್ತೇವೆ [illegible]:—

೧. ಕರ್ಣಾಟಕ ಪ್ರಕಾಶಿಕಾ ಚಂದಾದಾರರು [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA.

☞ *Price including Postage, Rs 5-0-0*

ವೈದ್ಯಸಾರ ಸಂಗ್ರಹ.

ಈ ಗ್ರಂಥ [illegible] ಬರೆದು [illegible] ಕಳುಹಿಸಲ್ಪಡುವದು. [illegible]

[illegible] ಕ್ರಯ	ರೂ॥	೫—೦—೦
[illegible] ಮತ್ತು ಅಂಚೇಹಾಸಲ್		೦—೬—೦

[illegible] ಬೆಂಗಳೂರು.

ನೋಟೀಸ್.

ಇದರಡಿ ವಿವರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸಿನಲ್ಲಿ ವಿಕ್ರಯಿಸಲ್ಪಡುತ್ತವೆ,—

ಕನ್ನಡ ಟೀಕಾಸಹಿತವಾದ ಸಂಸ್ಕೃತಗ್ರಂಥಗಳು.

ಕಾವ್ಯಾಮೃತ.	...	೧—೪—೦
[illegible]	...	೦—೧೨—೦
ಛಪ್ಪನ್ನ (ಷಟ್ಪಂಚಾಶಿಕ)	...	೦—೩—೦
[illegible] ಸುಭಾಷಿತ.		೦—೫—೦
ಬಾಲರಾಮಾಯಣ	...	೦—೪—೧
[illegible]	..	೦—೧೪—೦
ಶಿವಾನಂದಲಹರಿ.	...	೦—೬—೦
ಬಾಲಗ್ರಹ.	... ...	೦—೨—೦
ವೈದ್ಯಸಾರಸಂಗ್ರಹ	...	೫—೦—೦

ಕನ್ನಡ ಗ್ರಂಥಗಳು.

[illegible] ವಿಲಾಸ.	...	೦—೬—೦
ಶಕುಂತಲಾಪರಿಣಯ.	...	೦—೪—೦
[illegible]	..	೦—೩—೬
[illegible]	... ...	೦—೨—೬
[illegible]	...	೦—೪—೦
[illegible]	...	೦—೨—೦
[illegible]	...	೦—೨—೬
[illegible]	...	೦—೬—೦
[illegible] ಮರ್ದನ.	...	೦—೩—೦
[illegible]	.. ..	೦—೨—೦
[illegible]	...	೦—೦—೭
ಇಂಗ್ಲಿಷ್ ಕನ್ನಡ ಸೀರೀಡರ್ [illegible]		೧—೦—೦
[illegible]	... ...	೨—೦—೦
[illegible]	...	೦—೧೨—೦
[illegible]	...	೩—೪—೬
[illegible]	...	೩—೪—೬
[illegible] ೧ನೇ ಸಂಚಿಕೆ.	...	೦—೮—೦
[illegible] ೨ನೇ ಸಂಚಿಕೆ		೧—೮—೦
[illegible]	...	೦—೮—೦

ಸಂಸ್ಕೃತ ಮೂಲಗ್ರಂಥಗಳು.

ವಿಷ್ಣುಸಹಸ್ರನಾಮ.	...	೦—೫—೦
ಸೂರ್ಯಸಹಸ್ರನಾಮ.	...	೦—೨—೬
ಕೃಷ್ಣಕರ್ಣಾಮೃತ.	...	೦—೨—೬
ಬಾಲರಾಮಾಯಣ	...	೦—೦—೬
ತ್ರಿಕಾಂಡ ಅಮರ.	...	೦—೩—೬
೧ ಕಾಂಡ ಅಮರ.	...	೦—೧—೦

[illegible] ಅಂಚೇಹಾಸಲ್ ಸೇರಿರುವದಿಲ್ಲವು [illegible] ಪುಸ್ತಕದ ಕ್ರಯ [illegible] ಕಳುಹಿಸತಕ್ಕವರು [illegible] ಹಾಸಲ್ ಸಹ ಸೇರಿಸಿ ಕಳುಹಿಸಬೇಕು. ಇಲ್ಲವಾದರೆ [illegible] ಕೊಡಬೇಕಾಗುವದು.

ಪ್ರಕಟನೆ.

ಇಂಡಿಯನ್ ಕಂಪನೀಸ್ ೧೮೬೬ನೇ ಇಸವಿ ೧೦ನೇ ನಂಬರ್ ಆಕ್ಟುಮೇರೆ. ಮೈಸೂರು ಪುಷ್ಪವತೀ ಸಹಾಯನಿಧಿ ಬ್ಯಾಂಕ್ ವಿಷಯದಲ್ಲಿ.

ಇದರಿಂದ ತಿಳಿಯಪಡಿಸುವದೇನಂದರೆ:—ಸನ್ ೧೮೮೬ನೇ ಇಸವಿ ಆಗಸ್ಟು ತಾರೀಖ್ ೨೦ರಲ್ಲು ಪುಷ್ಪವತೀ ಬ್ಯಾಂಕಿಗೆ ಹಣ ಹಾಕಿರತಕ್ಕ ಷೇರ್‌ದಾರ್ರುಗಳಾದ ನಾರಣಪ್ಪ ವಗೈರೇಗಳು ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿಗೆ ಸದರೀ ಬ್ಯಾಂಕ್ ನಿಲ್ಲಿಸಿಬಿಡಬೇಕೆಂದು ಅರ್ಜಿ ಕೊಟ್ಟಿರುತ್ತಾರೆ. ಮೇಲ್ಕಂಡ ಅರ್ಜಿ ವಿಷಯದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರು ಬಾಕಿ ಇಸವಿ ಸೆಪ್ಟಂಬರ್ ೩೦ನೇ ತಾರೀಖಿನಲ್ಲಿ ವ್ಯವಸ್ಥೆ ಮಾಡುತ್ತೇವೆಂತ ಹುಕುಂ ಮಾಡಿರುತ್ತಾರೆ. ಆದದರಿಂದ ಮೇಲೆ ಕಂಡಮೇರೆ ಸದರೀ ಬ್ಯಾಂಕಿಗೆ ಹಣ ಹಾಕಿರತಕ್ಕವರ ಪೈಕಿ ಯಾರಾದರೂ ಮೇಲೆ ಕಂಡ ಆಕ್ಟು ಅನುಸರಿಸಿ ಸದರೀ ಬ್ಯಾಂಕ್ ನಿಲ್ಲಿಸಬೇಕೆಂಬದಾಗಿ ಆರ್ಡರ್ ಆಗತಕ್ಕ ವಿಷಯದಲ್ಲಿ ತಕರಾರ್ ಏನಾದರೂ ಮಾಡಬೇಕಾಗಿದ್ದಲ್ಲಿ, ತಾವೇ ಖುದ್ದಾಗಿ ಯಾಗಲಿ ಅಥವಾ ಇದಕ್ಕಾಗಿ ತಮ್ಮ ಕಡೆ ಲಾಯರ್ ಮೂಲಕವೇ ಆಗಲಿ ಹಾಜರಾಗತಕ್ಕದ್ದು. ಸದರೀ ಬ್ಯಾಂಕಿನ ಷೇರ್‌ದಾರ್ರು ಯಾರೇ ಆಗಲಿ ಮೇಲೆ ಕಂಡ ಅರ್ಜೀ ನಕಲನ್ನು ಪಡೆಯಲಪೇಕ್ಷಿಸುವವರು ಈ ಕೆಳಗೆ ರುಜು ಮಾಡಿರುವವರಿಗೆ ತಕ್ಕ ಚಾರ್ಜನ್ನು ಕೊಟ್ಟು, ಸದರೀ ಯವರಿಂದ ಪಡೆಯಬಹುದಾಗಿದೆ.

ಮೈಸೂರು, ೧೩ನೇ ಸೆಪ್ಟಂಬರ್, ೧೮೮೬. } ಡಿ. ಮತ್ತು ಅನಂತರಾವ್, ಅರ್ಜಿದಾರರ ಅಡ್ವೋಕೇಟ್‌ಗಳು

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, SEPTEMBER 27, 1886

೧೮೮೬ನೇ ಸೆಪ್ಟಂಬರ್ ೨೭ನೇ ತಾ॥ ಸೋಮವಾರ

WHO IS TO BEAR THE VICEROY'S RECEPTION COST?

ಶ್ರೀಮನ್ಮಹಾರಾಜ್ಞೀ ಇಂಡ್ಯಾ ಚಕ್ರವರ್ತಿನೀಯವರ ಪ್ರತಿನಿಧಿಯಾದ ವೈಸ್‌ರಾಯಿ ಏ ಗವರ್ನರ್ ಜನರಲಾದ ಲಾರ್ಡ್ ಡಫ್ರಿನ್ಯವರು ಬರುವ ನವಂಬರ್ ತಿಂಗಳಲ್ಲಿ ದಕ್ಷಿಣ ಇಂಡ್ಯಾದೇಶಕ್ಕೆ ದಯಮಾಡುವಾಗ್ಯೆ ಮಾರ್ಗವಶಾತ್ ಈ ಸಂಸ್ಥಾನಕ್ಕೆ ಬರುವರೆಂಬದಾಗಿಯೂ, ಆ ಕಾಲದಲ್ಲಿ ಅವರನ್ನು ಈ ಸಂಸ್ಥಾನದ ಗೌರವಾನುಗುಣವಾಗಿ ಉಚಿತ ರೀತಿಯಿಂದ ವಿಭವದೊಡನೆ ಬರಮಾಡಿಕೊಳ್ಳತಕ್ಕ ಬಗ್ಯೆ ಬೇಕಾದ ಏರ್ಪಾಡುಗಳು ಇಲ್ಲಿ ನಡೆಯುತಲಿರುವದಾಗಿಯೂ, ಹಿಂದೆಯೇ ಈ ಪತ್ರಿಕಾಮೂಲಕ ತಿಳಿಸಿರುತ್ತೇವೆಯಷ್ಟೆ. ಈಗ ವೈಸ್‌ರಾಯ್‌ಯವರು ಇಲ್ಲಿಗೆ ಯಾವ ರಾಜಕೀಯೋದ್ದೇಶದೊಡನೆ ಬರುತ್ತಾರೆಯೋ ಅದನ್ನು ಸದ್ಯಃ ನಾವು ತಿಳಿಸುವದಕ್ಕಾಗುವದಿಲ್ಲವು. ಪರಂತು ಅವರು ಶ್ರೀಮನ್ಮಹಾರಾಜರವರ ಅಪೇಕ್ಷಾನುಸಾರ ಬರುತ್ತಾರೆಯೆ, ಅಥವಾ ಪ್ರಜೆಗಳ ಪ್ರಾರ್ಥನೆಯನ್ನು ಈಡೇರಿಸಬೇಕೆಂಬ ತಾತ್ಪರ್ಯದೊಡನೆ ಬರುತ್ತಾರೆಯೆ, ಅಲ್ಲದೆ ರಾಜಕೀಯೋದ್ದೇಶದೊಡನೆ ಮದರಾಸ್ ಪ್ರೆಸಿಡೆನ್ಸಿಗೆ ಬರಬೇಕಾಗಿದ್ದು ಮಾರ್ಗವಶಾತ್ ಈ ಸಂಸ್ಥಾನವನ್ನೂ ಹೊಕ್ಕುನೋಡಿ ಹೋಗುವಣವೆಂಬ ಭಾವದೊಡನೆ ಬರುತ್ತಾರೆಯೆ ಯೆಂದು ಆಲೋಚಿಸಿದರೆ ಕಡೇದೊಂದು ವಿನಾ ಮಿಕ್ಕ ಯೆರಡಕ್ಕೂ ತಕ್ಕ ಕಾರಣವು ನಮಗೆ ಅಗೋಚರವಾಗಿದೆ. ಯಾತಕ್ಕೆಂದರೆ ಮಹಾರಾಜರವರು ವೈಸ್‌ರಾಯಿಯವರನ್ನು ಪ್ರಾರ್ಥನಾಪೂರ್ವಕ ತಮ್ಮ ಸಂಸ್ಥಾನಕ್ಕೆ ಬರಮಾಡಿಕೊಳ್ಳಬೇಕಾದಷ್ಟು ಆವಶ್ಯಕತೆಯುಂಟಾಗಿರುವಂತೆ ನಮಗೆ ತೋರಲಿಲ್ಲವು. ಮಹಾರಾಜರವರಿಗೆ ಬ್ರಿಟಿಷ್ ಗವರ್ನಮೆಂಟಿನವರಿಂದ ಆಗಬೇಕಾಗಿದ್ದ ಸಹಾಯಗಳಪೈಕಿ ಪ್ರಾಯೇಣ ಎಲ್ಲವೂ ಇದುವರಿವಿಗೇನೆ ಮಾಡಲ್ಪಟ್ಟಿರುವದರಿಂದ ಈಗ ಅವರು ಕೇಳಿಕೊಳ್ಳಬೇಕಾದದ್ದಾಗಲಿ ವೈಸ್‌ರಾಯಿಯವರು ನೆರೇರಿಸಬೇಕಾದದ್ದಾಗಲಿ ಒಂದೂ ಇರುವದಿಲ್ಲವು. ಆದರೆ ಬ್ರಿಟಿಷ ಗವರ್ನಮೆಂಟಿನವರು ಮಹಾರಾಜರವಿಷಯದಲ್ಲಿ ಆಗಿಂದಾಗ್ಯೆ ಮಾಡುವ ಉಪಕಾರವನ್ನು ಚಿಂತಿಸಿ ನೋಡಿದೊಡೆ, ಮಹಾರಾಜರವರು ತಮ್ಮ ರಾಜಭಕ್ತಿಯನ್ನು ಇತರಾಪೇಕ್ಷೆಯಾ ವಿಶೇಷತಃ ತೋರಿಸಬೇಕಾದ್ದು ನ್ಯಾಯ್ಯವಾಗಿರುತಿದೆ. ಪ್ರಜೆಗಳು ವೈಸ್‌ರಾಯಿಯವರನ್ನು ಇಲ್ಲಿಗೆ ದಯಮಾಡಬೇಕೆಂದು ಪ್ರಾರ್ಥಿಸಿದಂತೆ ತೋರಲಿಲ್ಲವು. ಯಾತಕ್ಕೆಂದರೆ, ವೈಸ್‌ರಾಯಿಯವರನ್ನು ಇದಂಪರ್ಯೇ ಇಲ್ಲಿಗೆ ಕರೆಯಿಸಿ ಅವರವಿಷಯದೊಳು ತಮಗಿರುವ ರಾಜಭಕ್ತಿ ಕೃತಜ್ಞತಾದಿ ಭಾವಗಳನ್ನು ವ್ಯಕ್ತಪಡಿಸಬೇಕಾದಷ್ಟು ಆವಶ್ಯಕತೆ ಈಗ ಕಾಣಿಸಲಿಲ್ಲವು. ಈ ಮೈಸೂರುದೇಶದ ಪ್ರಜೆಗಳು ಗತ ಐವತ್ತು ಸಂವತ್ಸರಗಳ ಕಾಲಕ್ಕಿಂತ ಮೇಲ್ಪಟ್ಟು ಬ್ರಿಟಿಷನವರ ಪಾಲನೆಗೊಳಗಾಗಿದ್ದು ಅವರಿಂದ ತಾವು ಪಡೆಯಬೇಕಾದ ಸುಖ ಸಂತೋಷಗಳನ್ನೆಲ್ಲ ಅನುಭವಿಸಿ ಅವರವಿಷಯದೊಳು ಬಹಳ ಪ್ರೀತಿಗೌರವಗಳುಳ್ಳವರಾಗಿದಾರೆಂಬ ಅಂಶ ಪ್ರಸಿದ್ಧವಾಗಿಯೇ ಇರುತಿದೆ.

ಇದರಿಂದ ವೈಸ್‌ರಾಯಿಯವರ ಆಗಮನವು ಕೇವಲ ಬ್ರಿಟಿಷ್‌ಸರ್ಕಾರದವರ ಪ್ರಯೋಜನೋದ್ದೇಶಗಳನ್ನು ಕುರಿತದ್ದೆಂದು ಏರ್ಪಡುತದೆ. ಈ ಸಮಯದಲ್ಲಿ ಅವರನ್ನು ಮಹಾರಾಜ್ಞೀ ಇಂಡ್ಯಾ ಚಕ್ರವರ್ತಿನೀಯವರ ಪ್ರತಿನಿಧಿಯಾಗಿ ಭಾವಿಸಿ ತಮ್ಮ ಶಕ್ತ್ಯನುಗುಣವಾಗಿ ರಾಜಭಕ್ತಿ ಕೃತಜ್ಞತಾದಿ ಭಾವಗಳನ್ನು ತೋರಿಸಬೇಕಾದ ಭಾರವು ಪ್ರಜೆಗಳಿಗಿಂತಲೂ ಮಹಾರಾಜರವರಿಗೆ ಅಧಿಕವಾಗಿರುತಿದೆ. ಇದಕ್ಕಾಗಿ ಅಸಂಬುಧಿಗಳಾದ ಪ್ರಜೆಗಳನ್ನು ಸೇರಿಸಿ ಅವರಿಂದ ಚಂದಾ ವಸೂಲ್ಮಾಡಿತನ್ಮೂಲಕ ತಾವು ಕೀರ್ತಿಪ್ರಶಸ್ತ್ಯಗಳಂ ಪಡೆಯಲಪೇಕ್ಷೆಗೊಳ್ಳುವದು ಅಧಿಕಾರಿಗಳಿಗೆ ಕೀರ್ತಿಕರವಲ್ಲವು ಇದನ್ನು ಆಲೋಚಿಸಿಯೇ ಬರೋಡೆ ಹೈದರಾಬಾದ್ ಸಂಸ್ಥಾನಾಧಿಪತಿಗಳು ಪ್ರಸಕ್ತ ವಿಷಯಕ್ಕೆ ತಗಲಬಹುದಾದ ಖರ್ಚನ್ನೆಲ್ಲ ಸ್ವತಃ ವಹಿಸಿ ಪ್ರಬಲ ಸನ್ನಾಹಗಳಂ ಮಾಡಿಸುತಲಿರುವಂತೆ ತಿಳಿಯಬರುತಿದೆ ಹಾಗೆ ವಿಶಿಷ್ಟ ಖರ್ಚನ್ನೂ ಭರಿಸಲಿಕ್ಕೆ ಈ ಸಂಸ್ಥಾನವು ತಕ್ಕ ಸ್ಥಿತಿಯಲ್ಲಿಲ್ಲವೆಂಬ ಅಂಶ ಪ್ರಸಿದ್ಧವಾಗಿದ್ದರೂ ಖರ್ಚುಬಾಪಗಳು ಮಾತ್ರ ತಗ್ಗದೆ ಇಷ್ಟಾನುಸಾರ ವಿಷಯಾಂತರಗಳಲ್ಲಿ ಅಧಿಕವಾಗುತ ಬರುವದರಿಂದ ಇಂತಾ ಆವಶ್ಯಕ ವಿಷಯಕ್ಕೆ ಈಗ ಉಪಪತ್ತಿ ಸಾಲದೆಂದು ಹೇಳುವದು ಗೌರವ್ಯವಾಗಿರಲಾರದು. ಮುಖ್ಯವಾಗಿ ಪ್ರಜೆಗಳಿಗೆ ಪ್ರಸಕ್ತವಿಷಯವು ಸಂಬಂಧಿಸಿದ್ದಲ್ಲವಾದದರಿಂದ ಅವರನ್ನ ಚಂದಾ ಮೂಲಕ ಸಹಾಯ ಮಾಡುವಂತೆ ಕೇಳುವವಾಗಲಿ, ದಾಕ್ಷಿಣ್ಯಪೀಡಿತರಾದ ಅವರು ಇದೂ ತಮಗೊಂದುಬಗೆ ನಷ್ಟವೆಂದೆಣಿಸಿ ಅಂತಃ ಜಿಗುಪ್ಸೆಯೊಡನೆ ಸಹಾಯಮಾಡುವದಾಗಲಿ, ಉಚಿತವೆಂದು ಹೇಳಲಿಕ್ಕೆ ಯಾರ ಮನವೂ ಒಡಂಬಡುವದಿಲ್ಲವು.

HIGHWAY ROBBERIES.

“ರಾಯರಿಗೆ ರಾಜ್ಯವಾದರೂ ರಾಗೀಬೀಸೋದು ತಪ್ಪ” ದೆಂಬಂತೆ ಸರ್ಕಾರಕ್ಕೆ ದುಡ್ಡು ಖರ್ಚಾದರೂ ಪ್ರಜೆಗಳಿಗೆ ಪ್ರಯೋಜನವೇನೂ ವುಂಟಾಗಲಿಲ್ಲವು. ಬೆಂಗಳೂರಿಂದ ಬಳ್ಳಾರಿಪ್ರಾಂತಕ್ಕೆ ಹೋಗುವ ಮಾರ್ಗದಲ್ಲಿರುವ ತುಮಕೂರ್ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಿಗೆ ಸೇರಿದ ಕೆಲವು ತಾಲ್ಲೂಕುಗಳು, ಖುದ್ದ ಬಯಲಿಪ್ರ

ದೇಶಗಳಾಗಿಯೂ, ಆರಣ್ಯಕಜನಗಳಿಗೆ ನಿವಾಸಸ್ಥಾನವಾಗಿಯೂ, ನಿರ್ಜಲಪ್ರದೇಶವಾಗಿಯೂ ಕ್ಷಾಮಕ್ಕೆ ಆಶ್ರಯಸ್ಥಾನವಾಗಿಯೂ, ಹನ್ ಮ್ಯಾ ಡಿಸ್ಟ್ರಿಕ್ಟಿನ ಸೀಮೆಯು ಸರಹದ್ದಾಗಿಯೂ, ಇರುವದರಿಂದ ಅಲ್ಲಿ ಚೋರೀ ಧಪ್ಪೆಗಳು ವಿಸ್ತಾರವಾಗಿ ನಡೆಯುತಿವೆ. ಮತ್ತು ಮಷಾರ್ ಚೋರಿಗಳೂ ರಹಜನಿಗಳೂ ತಪ್ಪಿದ್ದಲ್ಲವು. ಇದಕ್ಕೋಸ್ಕರ ಚಿತ್ರದುರ್ಗದಲ್ಲಿ ಪ್ರತ್ಯೇಕ ಡಿಸ್ಟ್ರಿಕ್ಟ್ ಕಚ್ಚೇರಿ ಇರಬೇಕೆಂತಲೂ, ಈಸರಹದ್ದು ಪ್ರಾಂತಗಳ ವಿಚಾರಣೆಗಾಗಿ ಪ್ರತ್ಯೇಕ ಸ್ಪೆಷಲ್ ಪೊಲೀಸ್ ಅಸಿಸ್ಟಂಟಿಕಮ್ಮಿಷನರೊಬ್ಬರಿರಬೇಕೆಂತಲೂ, ಪೊಲೀಸವಿಚಾರಣೆಯು ಇತರಾಪೇಕ್ಷೆಯಾ ಜವಾಬ್ದಾರೀಯುಳ್ಳದಾದದರಿಂದ ಅದನ್ನು ಇತರರಿಗೆ ಒಪ್ಪಿಸಿದರೆ ಕ್ರಮವಾಗಿ ನಡೆಯಲಾರದೆಂಬ ತಾತ್ಪರ್ಯದೊಡನೆ ಆಬಗ್ಯೆ ಇನ್ಸ್‌ಪೆಕ್ಟರ್ ಜನರಲ್ಲೆಂಬ ಹೆಸರಿನೊಡನೆ ಒಬ್ಬ ಯೂರೋಪಿಯನ್ ಆಫಿಸರರೇ ಬೇಕೆಂತಲೂ, ಅಂತಾ ಡಿಸ್ಟ್ರಿಕ್ಟ್ ಆಡಳಿತಕ್ಕೆ ಮಹಮ್ಮದೀಯನೇ ಡೆಪ್ಯುಟಿ ಕಮ್ಮಿಷನರಾಗಿರಬೇಕೆಂತಲೂ, ದಿವಾನರವರು ತಾತ್ಪರ್ಯಗೊಂಡು ಆ ರೀತಿ ಏರ್ಪಾಡು ಮಾಡಿದ್ದಕ್ಕೆ ಪ್ರಯೋಜನಮಾತ್ರ ಕಾಣಿಸಲಿಲ್ಲವು. ಮುಂಬೈ ಕನ್ನಡಸುವಾರ್ತಾ ಪತ್ರಿಕೆಗೆ ಈ ಪ್ರಾಂತದ ಒಬ್ಬ ಬಾತಮಿದಾರರು ಬರೆದ ಕಾಗದವನ್ನು ಇದರಡಿ ಪ್ರಕಟಿಸಿರುತ್ತೇವೆ. ಅದರಲ್ಲಿ ಕಂಡಿರುವ "ಧಣಿ" ಯೆಂಬವನು ಯಾರಾಗಿರಬಹುದು? ನೌಕರರು ಯಾವಜಾತಿಯವರು? ಲುಟಾಯಿಸಿದ ಪದಾರ್ಥಗಳು ಯೆಲ್ಲಿಗೆ ಹೋಗುತಿವೆ? ಅವು ಯಾರು ಹಂಚಿಕೊಳ್ಳುವರು? ಲೂಟೀಮಾಡಲ್ಪಡುವವರು ಬೇರೆ ಜನಗಳಾದಾಗ್ಯೂ ಲುಟಾಯಿಸುವವರೂ ಲುಟಾವಣೀ ಕ್ರಮವೂ ಮೊದಲಿನಿಂದಲೂ ಏಕರೂಪವಾಗಿರುವದರಿಂದನ್ಯೆಸೂರು ಸರ್ಕಾರದವರು ಇದಕ್ಕೆತಕ್ಕ ಬಂದೋಬಸ್ತಿಯನ್ನು ಮಾಡದೆಹೋದಮೇಲೆ ನೇಟಿವ್ ಆಳ್ವಿಕೆಗೆ ಇದಕ್ಕಿಂತಲೂ ಪ್ರತ್ಯೇಕ ಅನಪ್ರಷೆ ಬೇಕಾದದ್ದಿಲ್ಲವು. ಮೈಸೂರು ಸವಾರರು ಓಹಾರ ಹೊತ್ತುಕೊಂಡು ತಿರುಗುವದಕ್ಕಿಂತಲೂ, ಸರಹದ್ದು ಪ್ರಾಂತಗಳಲ್ಲಿ ಉಸ್ತುವಾರೀಮಾಡುವದು ಯೋಗ್ಯವಲ್ಲವೆ? ಬಾರ್ ಧೂಜ್ ದೊಡ್ಡ ಮನುಷ್ಯರ ಮನೇ ಬಾಗಿಲುಗಳಲ್ಲಿ ಪಹರೆಯಬಗ್ಯೆ ಉಪಯೋಗಿಸಲ್ಪಡುವದಕ್ಕಿಂತಲೂ ಉಕ್ತದ ಠಾಣೆಗಳಲ್ಲಿ ಕಾಯುವದುಚಿತವಲ್ಲವೆ? ಈ ವಿಷಯವನ್ನು ಮೆ॥ ರಿಕ್ಕೆಟ್ಸ್ ರವರು ಪರ್ಯಾಲೋಚಿಸದಿರಲಾರರೆಂದು ನಂಬುತ್ತೇವೆ.

"ಸನ್ ೧೮೮೬ನೇ ಆಗಸ್ಟ್ ೧೮ನೇ ಬುಧವಾರ ಮಧ್ಯಗಿರಿ ಸಂತೇದಿನ ಹಗಲು ೪ತಾಸಿನಿಂದ ೧೦ ತಾಸುಗಳವರಿಗೆ ಈ ಸಮೀಪದ ಚನ್ನರಾಯದುರ್ಗದ ಕಣಿವೆ ಹಳೇರಸ್ತೆಯ ತಗ್ಗಿನಲ್ಲಿ ನಡೆದ ಆಶ್ಚರ್ಯಕರವಾದ (ರಹಜನಿ) ವರ್ಣನವೇನೆಂದರೆ,—

"ಇಬ್ಬರು ಗಂಡಸರು, ಒಬ್ಬಾಕೆ ಹೆಂಗಸು, ಒಂದುಕುದುರೆ ಸಹ ತುಮಕೂರಿನ ಕಡೆ ಪ್ರಯಾಣವಾಗಿ ಬಂದು ಸದರೀಜಾಗ ಮುಟ್ಟುತಲೆ! ಇಬ್ಬರು ಕಳ್ಳರುಬಂದು ಗಂಡಸರಿಬ್ಬರಿಗೂ ಎರಡೆರಡು ದೊಣ್ಣೆ ಪ್ರಹರಮಾಡಿ ನೆಲಕ್ಕೆ ದಬ್ಬಿ ಹೆಣ್ಣುಮಗಳನ್ನ ಬೆದರಿಸಿ ತಕ್ಷಣ ಅವರಲ್ಲಿ ಇದ್ದ ಚಿನ್ನ, ಬೆಳ್ಳಿ, ನಗದು, ಪಾತ್ರೆ, ಒಳ್ಳೇ ಬಟ್ಟೆಗಳು ಸಹ ಸುಲಕೊಂಡು ಇವರನ್ನ ನೂಕಿಕೊಂಡು ಕರೆತಂದು ಒಂದು ಫರ್ಲಾಂಗದೂರ ಒಂದು ವೃಕ್ಷದಲ್ಲಿ ಆಲದ ಮರದಕೆಳಗೆ ಕುಳ್ಳಿರಿಸಿದರು. ಗಂಡಸರನ್ನು ಮುಷ್ಕೀ ಕಟ್ಟಿದರು. ಕತ್ತಿ, ದೊಣ್ಣೆ ಹಿಡಿದು ಇಬ್ಬರು ಕಳ್ಳರು ಕಾವಲು ನಿಂತರು ಈ ಬ್ರಾಹ್ಮಣರು ಅಪ್ಪಾ ನಮ್ಮಲ್ಲಿದ್ದದ್ದೆಲ್ಲಾ ತಕ್ಕೊಂಡಿರಿ, ಇನ್ನೂ ನಮ್ಮನ್ನು ಬಿಟ್ಟು ಬಿಡಿ ಎಂದುಪ್ರಾರ್ಥಿಸಿದರು. ಅದಕ್ಕೆ ನಮ್ಮ ಧಣಿಯ ಅಪ್ಪಣೆ ಆಗುವವರಿವಿಗೂ ಬಿಡುವದಿಲ್ಲವೆಂದನು. ಅನಂತರ ಅಲ್ಲಿ ಮಾರ್ಗದಲ್ಲಿ ಮತ್ತೊಬ್ಬನು, ಆನಂತರ ಇಬ್ಬರು ಹೆಂಗಸು, ಈ ರೀತಿ ಬರುವವರನ್ನೂ ಹೋಗುವವರನ್ನೂ ಸಹ ಕೆಡಿದು ಮಟ್ಟಮೊದಲು ದೊಣ್ಣೆಯಿಂದ ೨ ಏಟು ಪ್ರಹರಮಾಡಿ ನೆಲಕ್ಕೆ ದಬ್ಬಿಕೊಂಡು ಆ ಕ್ಷಣ ಅವರನ್ನ ನೂಕಿಕೊಂಡು ಬಂದು ವೃಕ್ಷದಲ್ಲಿ ಜಯಿಲ್‌ಖಾನೆಗೆ ದಾಖಲ್‌ಮಾಡುತ್ತಾ ಈ ರೀತಿ ಅನುಕ್ರಮವಾಗಿ ೪—೧೦ ದಫಾ ಶಿಕ್ಕೆ ಶಿಕ್ಕಿದವರನ್ನು ಸುಲುಕೊಂಡು ೨ತಾಸುವೇಳೆಯಲ್ಲಿ ೮೦೦—೯೦೦ ರೂಪಾಯಿಗಳ ಮಾಲು ಕೊಳ್ಳೆಬಿದದು ಆಮೇಲೆ ತಕ್ಷಣ ಖಜಾನೇ ದಾಖಲುಬಗ್ಯೆ ರವಾನೇಮಾಡುತ್ತಾ ೭—೪ ಜನ ಕಳ್ಳರೇ ಈ ನಾಟಕವನ್ನು ಆಡಿದರು.

ಕಳ್ಳರಕೈಲಿ ದೆಬ್ಬೆಗಳು ತಿನ್ನುತ್ತಾ ತಾನೂ ಸಹ ಕಳ್ಳನನ್ನು ಹೊಡೆದು ಓಡಿಹೋದ ಒಬ್ಬ ಶೆಟ್ಟಿ ಈತನು ಅಲ್ಲಲ್ಲಿ ಹುಯಿಲುಮಾಡಿದ್ದರಿಂದ ಜನರು ಬಂದಾರು, ಸಿಕ್ಕಿ ಬಿದ್ದೇವೆಂತ ಕಳ್ಳರು ಭಯಬಿದ್ದು ತಮ್ಮ ನಾಟಕವನ್ನು ಜಾಗ್ರತೆಯಿಂದ ಸಮಾಪ್ತಿ ಮಾಡಿದರು. ಆತಳಾರಿಯು ಪೈಲಿದಾಖಲಾಗಿದ್ದರೆ ತೀರಿತು. ಈ ದಿನ ಅಸ್ತಮಾನದವರಿಗೂ ನಾಟಕವುನಡೆಯುತ್ತಾಯಿತ್ತು, ದೇವರು ಕಾಪಾಡಿದನು.

ಯಾರು ಅವಿಧೇಯರಾಗಿದಾರೋ ಅವರಿಗೆ ದೆಬ್ಬೆಗಳು ಭಾರಿ, ಯಾರು ವಿಧೇಯರಾಗಿದಾರೋ ಅವರಿಗೆ ಧೂಳದರ್ಶನ ೨ ದೆಬ್ಬೆಗಳೇ. ಬ್ರಾಹ್ಮಣರು ಪ್ರತ್ಯೇಕವಾಗದೆ ಸರ್ವಸ್ವವು ಅರ್ಪಿಸಿ ಧೋತ್ರವನ್ನು ನೆಲದಲ್ಲಿ ಹಾಸಿ ಅಡ್ಡಬಿದ್ದು ಬೇಡಿಕೊಂಡದ್ದರಿಂದ ಅವರನ್ನೇ ಸ್ವಲ್ಪ ಮರ್ಯಾದೆಯಿಂದ ಕಂಡನು. ೨—೩ ಜನರು ಸ್ವಲ್ಪ ಹಾಂ, ಹೂಂ, ಅಂದ ದೆಸೆನ್ನಿಂದ ದೆಬ್ಬೆಗಳು, ಕತ್ತಿಯ ಘಾಯಗಳು ಪಡೆದು ರಕ್ತ ಸೋರಿ ಘಜೀತಿ ಪಟ್ಟರು. ಈ ಆಟದಲ್ಲಿ ಕೈ ಸನ್ನೆ, ತಪ್ಪುಸನ್ನೆಯುದ್ದಕ್ಕೂ ಸಿಳ್ಳುಹಾಕುತ್ತಿದ್ದರು ಅವ್ವಣೆ ಇಲ್ಲದಾಗಿ ಆಟ ನಾಸ ಹೋಲಗಳಲ್ಲಿ ಇರುವ ಜನರಿಗೆ ಈ ಸುದ್ದಿಯೇ ತಿಳಿಯದಂತೆ ಗಂಡು ೫೩, ಹೆಣ್ಣು ೮, ಕುದುರೆ ೨, ಯೆತ್ತುಗಳು ೪, ಇಷ್ಟು ಪ್ರಾಣಿಗಳನ್ನು ಈ ವೃಕ್ಷದಲ್ಲಿ ಬ್ಯದಿಗಳಾಗಿಸಿ ಯಾರಾದರೂ ಸ್ವಲ್ಪ ತಪ್ಪು ಕೆಮ್ಮು, ಸೀನು, ಮಾಡಿದ್ದಾದರೆ ತಕ್ಷಣ ಅವರ ಕೊರಳ ಮೇಲೆ ಕತ್ತಿ ಬಂದು ಕೂಡುವದೇ. ಈ ರೀತಿ ಈ (ನಿಶ್ಶಬ್ದ ನಳಚರಿತ್ರೆ) ಆಟವನ್ನು ಆಡಿದರು. ಕಳ್ಳರು ಕುಣಿದಾಡುತ್ತಾ ಓಡ್ಯಾಡುತ್ತಾ, ಒಬ್ಬರನ್ನೊಬ್ಬರು ಬೈಯುತ್ತಾ ಸುಲುಕೊಂಡ ಒಡವೆಗಳು ತಾವು ಧರಿಸಿಕೊಂಡು ಇವು ಸನಗೆ ಇವುನಿನಗೆಂತ ವಿನೋದ ಮಾಡುತ್ತಾ ಬ್ರಾಹ್ಮಣರು ತಂದಿದ್ದ ಕಾಳು, ಚಕ್ಕುಲಿ ಮುಂತಾದ ತಿಂಡಿ ಪದಾರ್ಥಗಳನ್ನು ತಿನ್ನುತ್ತಾ ನಿರ್ಭಯವಾಗಿ ನಟಿಸಿದರು. ೧೦ಘಂಟೆಯ ಕಾಲಕ್ಕೆ ಆ ತಳಾರಿಯ ದಯದಿಂದ ಪುಕಾರು ಬಿದ್ದು ಜನಗಳ ಕುದ್ರೆಕಿಬರಲಾಗುತ್ತಲೇ ಕಳ್ಳರೆಲ್ಲರೂ ಕೂಡಿ ಆ ವೃಕ್ಷಗಳಲ್ಲಿ ಗುಂಪಿನ ಜನರನ್ನು ಆಲದ ಮರದ ಪೊದೆಗಳು, ಬೇರುಗಳು, ಇವಕ್ಕೆ ಅವರವರ ಬಟ್ಟೆಗಳಿಂದ ಹಿಂಗಟ್ಟು ಮುಷಿಕೆ ಕಟ್ಟಿ ಬಿಗಿಸಿ ದಕ್ಷಿಣದ ದಿಕ್ಕಿಗೆ ಬೆಟ್ಟದಲ್ಲಿ ಓಟ ಓಡಿದರು. ಆಬಳಿಕ ಊರ್ವೆಗಳು ಹೊಗಳಿಂದ ಕಟ್ಟುಗಳು ಬಿಚ್ಚಿಸಿಕೊಂಡು, "ಬದಿಕಿದೆಯಾ ನನ್ನ ಬಡ ಜೀವವೇ" ಎಂತ ಅಳುತ್ತಾ ಹರಿ ತಲೆ ಕುಟ್ಟಿ ಕೊಳ್ಳುತ್ತಾ ದೇವರನ್ನು ಬೈಯುತ್ತಾ ನಾನಾ ಬಗೆ ಆಲಾಪಗಳಿಂದ, ಕೆಲವರಿಗೆ ಬಾಯಿ ಮಾತೇ ಬಾರದ್ದು, ಕೆಲವರಿಗೆ ಕೈ ಕಾಲು ಬಾರದ್ದು, ಕೆಲವರು ನಡುಗುತ್ತಿರುವರು. ಈ ರೀತಿ ಈಪರದೇಶಿ ಪಟಾಲವು ಮೆಲ್ಲ ಮೆಲ್ಲಗೆ ದಾರಿ ಹಿಡಿಯಿತು. ನಂತರ ಪೊಲೀಸ್ ಜನರು, ಊರ ಜನರು, ದೊಡ್ಡದೊಡ್ಡ ಉದ್ಯೋಗಸ್ಥರಸವಾರಿ ದಯ ಮಾಡಿಸಿ ಈ ಜಾಗಾ ಆಜಾಗ ರಕ್ತಗಳು, ಗಾಯಗಳು ಎಲ್ಲವನ್ನು ಪರಾಂಬರಿಸಿ ಮಾಗತಕ್ಕ ತರವೂದು ಮಾಡಿ ಆಖ್ಯರಿಗೆ ಸಮೀಪದ ೧ ಊರಿನಲ್ಲಿ ಮೊಕ್ಕಾಂ ಮಾಡಿ ಆ ಕಾನುಭಾಗನಿಂದ ಬಹು ಉಪಚಾರ ತಿಂಡಿ ಕಾಫಿ ಮುಂತಾದ್ದೆಲ್ಲ ಪರಿಷ್ಕಾರವಾಗಿಸಲ್ಲಿಸಿಕೊಂಡು ಆಜಾಬಾಜಾ ಶಿಕ್ಕಿದ ಬದಮಾಷಿಗಳಾದ ಕೆಲವರನ್ನು ಹಿಡಿದು ಎಳಕೊಂಡು ತುರುಕೂರಿಗೆ ಕಳುಹಿಸಿದರುತೆ. ಕಳ್ಳರು ಎಲ್ಲೋ ಮಾಲು ಎಲ್ಲೋ ದೇವರೇ ಬಲ್ಲ! ದೊಡ್ಡ ದೊಡ್ಡ ಭಾರಿ ಅಧಿಕಾರಿಗಳು ಉಂಡು ತಿಂದು ಕುಡಿದು ಬೊಜ್ಜುಗಳು ಬೆಳೆಸಿಕೊಂಡು ಮೇಲಕ್ಕೆ ಏಳೋಣ ಕೂಡೋಣ ದುಸ್ತರ; ಇಂತವರು ಬೆಟ್ಟಗಳು, ಗುಡ್ಡಗಳು, ಹಳ್ಳಕೊಳ್ಳ, ಅಡವಿಗಳು ತಿರಿಗಿ ಕಳ್ಳರ ಬೆನ್ನಟ್ಟಿ ಪತ್ತೇಮಾಡೋಣ ಸಾಧ್ಯವಾದೀತೆ? ಅಯ್ಯೋ ಭ್ರಾಂತಿ! ಆಗಲಿಲ್ಲ ಹೋಗಲಿಲ್ಲ, ಬರೇ ಓಡ್ಯಾಡಿದಂತೆ ಜನರು ಅಂದುಕೊಳ್ಳುತ್ತಾ ಇದ್ದರು.

ಸರ್ಕಾರದವರು ೮—೫ ಲಕ್ಷ ರೂಪಾಯಿ ಖರ್ಚಿನ ಪೊಲೀಸ್ ಇಟ್ಟಿದಾರೆ, ಇನ್ನೇನು ಎಂತ ಕೆಲವರು; ಪೋಲೀಸಿನವರು ಅಶ್ರದ್ಧೆ ಮಾಡುತ್ತಾರೆ ಯೆಂತ ಕೆಲವರು; ಅವರೇನು ಮಾಡ್ಯಾರು, ನಮ್ಮ ಪ್ರಾರಬ್ಧ ವಿದ್ದದ್ದು ಎಂತ ಕೆಲವರು; ಪೊಲೀಸ ಜನರು ಹಿಡಿದ ಜನರನ್ನು ಮ್ಯಾಜಿಸ್ಟ್ರೇಟರು ಅವರು ಕಳ್ಳರಲ್ಲ ಎಂದು ಬಿಟ್ಟುಬಿಡುತ್ತಾರೆ. ಹ್ಯಾಗೆ ಬಂದೋಬಸ್ತು ಬೇರೆಯ್ಯಾಯೆಂತ ಕೆಲವರು; ಈ ಬಿಟ್ಟದ ಫಾರೆಸ್ಟಿನಲ್ಲಿ ಬಿದರು ಕೆಲಸ ಮಾಡುತ್ತಾ ೮—೬ ಮನೆಯ ಕೊರಮರು ಇರುತ್ತಾರಂತೆ; ಅವರು ಶಿವಾಯಿ ಮತ್ಯಾರೂ ಅಲ್ಲ, ಇವರೂ ಇವರಕಡೆ ಜನರು ಸಹ ಸೇರಿ ಈ ರೀತಿ ನಡೆಸುತ್ತಾರೆಂತ ಕೆಲವರು; ಈ ತಾಲ್ಲೂಕಿನಲ್ಲಿ ಇಂತಾ ಚೋರಿಗಳು ೬—೭ ನಡೆದವು; ಮಾಡಿದ್ದೆಲ್ಲ ಪಕ್ಷಿಬಂತು ಇನ್ನೇನು ಯೆಂತ ಕೆಲವರು; ಕಳ್ಳರಿಗೆ ಶಿಕ್ಷೆ ಸಾಲದು, ಜೈಲ್‌ಖಾನೆ ವಾಸ ಬಹಳ ಸುಖ, ಮನೆಯ ತಿಂಡಿ ಊಟ ಕೆಲಸಗಳಿಗಿಂತ ಜೈಲಿನಲ್ಲಿ ಬಹಳ ಸೌಖ್ಯ, ನೀಚ ಜಾತಿಯ ದುಷ್ಟಜನರು ನಿರ್ಭಯವಾಗಿ ಕಳ್ಳತನ ಮಾಡುತ್ತಾರೆ ಯೆಂತ ಕೆಲವರು, ಕಳ್ಳರು ಪತ್ತೆ ದಿದ್ದಾಗ್ಯೂ ಸಿಕ್ಕಿದಾಗ್ಯೂ ಏನು? ಮಾಲು ಇಲ್ಲ. ಮಾಲು ಕಂಪನಿ ಕಿಂದಿಗೂ ಎಲ್ಲಿಗೋ ಹೋಗಿ ದಾಖಲಾಗಿರುತದೆ. ಪತ್ತೇಮಾಡುವ ಬಗೆ ಹ್ಯಾಗೆ ಯೆಂತ ಕೆಲವರು; ಕಾರ್ತೀಕ ಹೋಗುವ ಬ್ರಾಹ್ಮಣರು ಇದರ ಮುರ್ಪನ್ನು ಹೇಳ್ಯಾರು, ಸರ್ಕಾರದವರು ಈ ಪ್ರಾಂತ್ಯ ಯೆಲ್ಲ ಪಹರಾಮಾಡಿ ಅವರಿಗೆ ಛಾರೀಸುಬಳಕೊಟ್ಟು ಇರಿಸಿಕೊಂಡರೆ ಮೇಲಾದೀತು ಯೆಂತ ಕೆಲವರು, ಪತ್ತೇ ಮಾಡಲಿಕ್ಕೆ ಬಂದ ಬಂದ ಭಾರೀ ಭಾರೀ ಅಧಿಕಾರಿಗಳಿಗೆ ಸರಬರಾಯಿ ಮಾಡಿ ಓಡ್ಯಾಡಿ ನಮ್ಮ ಪ್ರಾಣ ಹೋಗುತ್ತದೆ, ಕಳಕೊಂಡವರ್ಯಾರೋ ಕಡ್ಡಿಪ್ಯಾರೋ ನಮಗೇನಯ್ಯಾ ಪೀಡೆ ಯೆಂತ ಕೆಲವರು, ಪರಂಗಿಯವರ ಪ್ರಾಂತದಲ್ಲಿ ಜನಕ್ಕೆ ಬಹುಬಿತ್ತು, ಈಗ ಎಲ್ಲ ಪಾರುಪತ್ಯಗಳ ಕಾರುಭಾರು ಆಗಿ ಭಯ ತಪ್ಪಿತು ಯೆಂತ ಕೆಲವರು, ಈ ರೀತಿ ಜನರು ಅಂದುಕೊಳ್ಳುತ್ತಿದ್ದಾರೆ ಎಂಬದಾಗಿ ಕಳಕೊಂಡವರು ೨—೩ ಜನರನ್ನು ಕೇಳಿ ಬನ್ನಾಗಿ ನಿಜವಾಗಿ ತಿಳಕೊಂಡು ಬರೆದಿದ್ದೇನೆ ನಾನು ಒಬ್ಬ ಪ್ರಯಾಣಿಕನು. ಪತ್ರಿಕಾ ಕ್ಷೇಮ ಕಸಮ ಪಾಸಗನು. ಈ ಚರಿತ್ರೆ ಆಶ್ಚರ್ಯವಾಗಿದ್ದದರಿಂದ ೬ ತಾಸು ನಾನು ಕಷ್ಟಪಟ್ಟು ಬರೆದು ಕಳುಹಿಸಿದ್ದೇನೆ, ಒಪ್ಪಿಕೊಳ್ಳಿರಯ್ಯಾ!—

Occasional Notes.
ನೈಮಿತ್ತಿಕವಿಷಯನ್ಯಾಸ

The Viceregal Council.—ಆನರೆಬಲ್ ಪಿಯಾರಿಮೋಹನ್ ಮುಕರ್ಜಿಯವರು ವೈಸರಾಯರವರ ಮಂತ್ರಾಲೋಚಕ ಸಮಾಜದಲ್ಲಿ ಒಬ್ಬಮೆಂಬರಾಗಿ ಮರಳಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

Appointment.—ಮದರಾಸ್ ಪ್ರೆಸಿಡೆನ್ಸಿ ಗವರ್ನರಾಗಿ ಮೊಕರರ್ಮಾಡಲ್ಪಟ್ಟಿರುವ ಮೆ॥ ಆರ್. ಬರ್ಕ್‌ಯವರು, ೧೬ನೇ ಲ್ಯಾನ್ಸರ್ ನೇಮಿಯ ಲೆಪ್ಟಿನೆಂಟ್ ಕ್ವಿನ್‌ಯೆಂಬವರನ್ನು ತಮ್ಮ ಏಡಿಕಾಂಗರಾಗಿ ಮೊಕರರ್ಮಾಡಿರುತ್ತಾರೆ.

Want of European officers.—ಇಂಡ್ಯದೇಶದಲ್ಲಿ ನೇಟಿವ್‌ಸೈನ್ಯಕ್ಕೆ ಯೂರೋಪಿಯನ್ ಆಫಿಸರ್‌ಗಳಿಲ್ಲದೆ ಬಹಳ ಬಾಧಕವಾಗಿರುವದರಿಂದ ಶಾಸ್ತ್ರೀಯಮಂ ತರಿಬೀತ್ ಬರುವಂಥಯೂರೋಪಿಯನ್ ಆಫಿಸರ್‌ಗಳು ತುರ್ತು ಬೇಕೆಂದು ಇಂಡ್ಯ ಕಮಾಂಡರ್ ಇನ್‌ಚೀಫರವರು ಅಪೇಕ್ಷಿಸಿರುವಂತೆ ಅಯೋನಿಯರ್ ಪತ್ರಿಕೆ ಹೇಳುತಿದೆ.

Income Tax.—ನೇಟಿವ್ ಸಂಸ್ಥಾನಗಳಲ್ಲಿ ನೌಕರಿಯಬಗ್ಯೆ ಬ್ರಿಟಿಷ್ ಗವರ್ನ್‌ಮೆಂಟಿನವರಿಂದ ಕೊಡಲ್ಪಟ್ಟ ಸದರೀ ಸಂಸ್ಥಾನಗಳಿಂದ ಬೇರೆ ರೆಲವ ಪಡೆಯುವ ಆಫಿಸರ್‌ಗಳು ಇನ್‌ಕಂ ಟ್ಯಾಕ್ಸ್‌ಯೆಂಬ ಆದಾಯಿನೀ ತೆರಿಗೆಗೆ ಗುರಿಯಾಗುವದಿಲ್ಲವೆಂದು ಇಂಡ್ಯ ಗವರ್ನ್‌ಮೆಂಟಿನವರು ನಿರ್ಣಯಿಸಿರುತ್ತಾರೆ.

A resolution.—ಆಚೆ ಶುಕ್ರವಾರದದಿನ ಮುಂಬೈ ಯೂನಿವರ್ಸಿಟಿ ಸೆನೆಟ್ ಸಭೆಯವರು ಮೀಟಿಂಗ್ ಸೇರಿ, ಸಿಂಡಿಕೇಟ್ ಸಭೆಯವರ ಶಿಫಾರಸ್ಸನ್ನನುಸರಿಸಿ, ತಾವು ಮೀಟಿಂಗ್ ಸೇರುವ ಸಂದರ್ಭಗಳಲ್ಲಿ, ಮದರಾಸ್ ಪದ್ಧತಿಯಮೇರೆಗೆ ವೃತ್ತಾಂತ ಪತ್ರಿಕೆಗಳ ತರಫ್ ರಿಪೋರ್ಟರ್, ಅಂದರೆ ಬಾತಮೀದಾರರಿಗೆ ಅವಕಾಶ ಕೊಡಬೇಕೆಂದು ನಿರ್ಣಯಿಸಿರುತ್ತಾರೆ.

The Viceroy's visit to Hyderabad.—ವೈಸರಾಯ್‌ಯವರು ಹೈದರಾಬಾದಿಗೆ ದಯಮಾಡುವ ಸಂದರ್ಭದಲ್ಲಿ ಅವರ ಗೌರವಾರ್ಥ ಅಲ್ಲಿ ಪ್ರಬಲ ಉತ್ಸವಗಳು ನಡೆಸಲ್ಪಡುವವು. ಪಟ್ಟಣದ ಅಲಂಕಾರವೂ ದೀಪೋತ್ಸವ ಮೊದಲಾದವೂ ಹಿಂದೆ ಯಾವ ಸಂದರ್ಭದಲ್ಲೂ ಇಲ್ಲದಷ್ಟು ವಿಜೃಂಭಣೆಯೊಡನೆ ನಡೆಯಬೇಕೆಂಬ ಉದ್ದೇಶದೊಡನೆ ಅವಕ್ಕೆ ತಕ್ಕ ಯೇರ್ಪಾಡುಗಳು ಮಾಡಲ್ಪಡುತಲಿವೆ ಯೆಂದು ತಿಳಿಯಬಾದೆವು.

Administration of Cashmere.—ಕಾಶ್ಮೀರ ಮಹಾರಾಜರವರು ನಿಲಂಬರ್ ಮುಕರ್ಜಿಯೆಂಬವರ ಮತ್ತು ಆಲ್ಲಿನ ದಿವಾನರಾದ ಗೋವಿಂದ ಸಹಾಯ್ ಯೆಂಬವರ ನೌಕರಿಯು ತೃಪ್ತಿಕರವಾಗಿಲ್ಲವೆಂದು ತಿಳಿದು ಅವರ ಸಹಾಯವಿಲ್ಲದೇನೇ ತಾವು ರಾಜ್ಯಾಡಳಿತವು ನಡೆಸಬೇಕೆಂದು ಯೋಚಿಸುತಲಿರುವದಲ್ಲದೆ, ಅವರಿಬ್ಬರೂ ಮಾಮೂಲಾಗಿ ಒಪ್ಪಿಕೊಂಡಿದ್ದ ಕೆಲವು ಹೊಸ ಯೇರ್ಪಾಡುಗಳನ್ನು ಮಾಡದಿಲ್ಲವೆಂದು ತಿಳಿದು ಮೆ. ನಿಲಂಬರ್ ಯೆಂಬವರಿಂದ ಅವರ ಕೆಲಸಕ್ಕೆ ರಾಜೀನಾಮೆ ತೆಗದುಕೊಂಡರು. ಪರಂತು ಮೆ. ನಿಲಂಬರ್‌ಯವರು ತಮಗೆ ಪೆನ್ಶನ್ ಕೊಟ್ಟಹೊರ್ತು ರಾಜೀನಾಮೆಯ ಕೊಡತಕ್ಕದಿಲ್ಲವೆಂತಲೂ ಮಹಾರಾಜರವರು ಅವರು ಪೆನ್ಶನಿಗೆ ಲಾಯಖಿಲ್ಲವೆಂತಲೂ ತಕರಾರು ಬಿದ್ದಿರುವಂತೆ ತಿಳಿಯಬರುತಿದೆ.

The Bombay High court.—ಮುಂಬೈ ಹೈಕೋರ್ಟಿನಲ್ಲಿ ಅನೇಕ ಮೊಕದ್ದಮೆಗಳು ಪೈಸಲ್ ಆಗದೆ ನಿಂತಿರುವದರಿಂದ ಅವುಗಳ ವ್ಯವಸ್ಥೆಯಬಗ್ಯೆ ಜಸ್ಟಿಸ್ ಇನ್ನೂ ಒಬ್ಬ ಜಡ್ಜಿಯನ್ನು ಮಾಡಬೇಕೆಂದು ಸದರೀ ಕೋರ್ಟಿನ ಜಡ್ಜಿಗಳ ಅಭಿಪ್ರಾಯವನ್ನು ಲೋಕಲ್ ಗವರ್ನ್‌ಮೆಂಟಿನವರು ಸ್ವೀಕರಿಸಿ ಬರೆದಿದ್ದಾಗ್ಯೂ ಸ್ಟೇಟ್ ಸೆಕ್ರಿಟರಿ ಅಧಿಕಾರವನ್ನು ಬದಾಯಿಸಬಹುದೆ ಯೆಂಬ ಅಂಶ ಆಲೋಚನೆಯಲ್ಲಿರುವಾಗ್ಯೆ ಅದನ್ನು ಮಂಜೂರ್ಮಾಡುವದುಚಿತವಲ್ಲವೆಂದು ಸ್ಟೇಟ್ ಸೆಕ್ರಿಟರಿಯವರು ನಿರಾಕರಿಸಿಬಿಟ್ಟರು.

A rumour.—ವೈಸರಾಯ್‌ಯವರ ಮಂತ್ರಾಲೋಚಕ ಸಮಾಜದ ಸಾಮಾನ್ಯ ಮೆಂಬರಾಗಿಯೂ, ಮದರಾಸ್, ಮುಂಬೈ, ವಾಯುವ್ಯದೇಶ ಇವುಗಳ ಹೈಕೋರ್ಟ್ ಚೀಫ್ ಜಡ್ಜಿಯರಾಗಿಯೂ ಇಂಗ್ಲಾಂಡಿನಲ್ಲಿ ಮೊಕರರ್‌ಮಾಡಲ್ಪಟ್ಟು ಇಂಡ್ಯದೇಶಕ್ಕೆ ಬರತಕ್ಕವರಿಗೆ ಸಿವಿಲ್ ಟ್ರಾವಲಿಂಗ್ ಅಲೋವಾನ್ಸ್ ಕೋಡ್ ಅನುಸರಿಸಿ ಕೊಡಲ್ಪಡುವ ೪,೦೦೦ ಪೌ, ಅಂದರೆ ೪೦,೦೦೦ ರೂಪಾಯಿಗಳ ಪ್ರಯಾಣದ ಖರ್ಚನ್ನು ವಜಾ ಮಾಡಬೇಕೆಂದು ಫಿನಾನ್ಸ್‌ಕಮಿಟಿಯವರು ಯೋಚಿಸುತಲಿರುವದಾಗಿ ಒಂದುವಿಧವಾದ ಪ್ರವಾದವು ಹುಟ್ಟಿರುವಂತೆ ಒಂದಾನೊಂದುಪತ್ರಿಕೆ ಹೇಳುತಿದೆ.

LOCAL AND PROVINCIAL NEWS.
ಪಟ್ಟಣಮತ್ತುತಾಲ್ಲೂಕಿನಪ್ರವೃತ್ತಾಂತಗಳು.

Dasara holidays.—ಈಸೀಮೆಯತನಾಂ ಪಬ್ಲಿಕ್ ಆಫೀಸುಗಳೂ, ನವರಾತ್ರಿಹಬ್ಬಕ್ಕೋಸ್ಕರ ಸದರೀಹಬ್ಬದ ಆರನೇದಿವಸದಾರಭ್ಯ ಹತ್ತುದಿವಸಗಳಪರಿಯಂತ ಬರಖಾಸ್ತು ಮಾಡಲ್ಪಡತಕ್ಕದ್ದು. ದಸರಾಹಬ್ಬದ ಆರಂಭದಿವಸಕ್ಕೆ ಮಂಜೂರ್ಮಾಡಲ್ಪಟ್ಟ ರಜಾ, ಇದರಿಂದ ರದ್ದುಮಾಡಲ್ಪಡುವದಿಲ್ಲ. ೨. ಆಫೀಸುಗಳ ಮೊಖ್ತೇಸರರಿಂದ ಜರೂರಿಯಾದ ಕೆಲಸಗಳ ಜಾರೀಬಗ್ಯೆ

ರ್ಗಳುಗಳುಸಹವಾಡಲ್ಪಡತಕ್ಕದ್ದು. ೩. ಈ ವರುಷದಲ್ಲಿ ದಸರಾಹಬ್ಬಕ್ಕಾಗಿ ಮುಂದಿನ ಅಕ್ಟೋಬರ್ ೩ನೇ ವರೆಗೂ ಲಾಗಾಯತು೧೦ರವರೆಗೆ ರಜಾ ಮಂಜೂರ್ಮಾಡಲ್ಪಟ್ಟಿರುತ್ತೆ.

Holidays.—ಮೊನ್ನೆ ದಿನ ತಿಂಗಳ ಕಡೇ ಶನಿವಾರವಾದದರಿಂದ ಅದಕ್ಕಾಗಿಯೂ, ಈ ದಿನ ಮಹಾಲಯ ಅಮಾವಾಸ್ಯೆ ಪ್ರಯುಕ್ತವಾಗಿಯೂ, ನಾಳೇದಿನ ನವರಾತ್ರಿ ಪ್ರಾರಂಭದಿನವಾದದರಿಂದ ಅದಕ್ಕಾಗಿಯೂ, ಸರ್ಕಾರ್ ಆಫೀಸುಗಳಿಗೆಲ್ಲಾ ಮೂರುದಿನಗಳು ಕ್ರಮವಾಗಿ ರಜಾ ಕೊಡಲ್ಪಟ್ಟಿರುವುವು. ಇದಲ್ಲದೆ ಮುಂದಿನವಾರದಲ್ಲಿ ಏಳೆಂಟುದಿನಗಳ ರಜಾ ಕಾದಿವೆ. ನೌಕರರಿಗೆ ಇಷ್ಟರ ಪ್ರೋತ್ಸಾಹನವಾದರೂ ಬೇಡವೆ!

The British Resident.—ಈ ತಿಂಗಳು ೨೪ ತಾರೀಖಿನ ಸಾಯಂಕಾಲ ೭ ಘಂಟೆಗೆ ಆರ್ಡಿನರಿ ಪ್ಯಾಸೆಂಜರ್ ಟ್ರೈನಿನಲ್ಲಿ ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಮಿ. ಲ್ಯಾಲಿಯವರು ನವರಾತ್ರಿ ಉತ್ಸವಕ್ಕಾಗಿ ಮೈಸೂರಿಗೆ ವಿಜಯಮಾಡುತ್ತಾರೆ. ಏತದರ್ಥ ಸಂಯಬೇಕಾದ ಏರ್ಪಾಡುಗಳೆಲ್ಲವೂ ಪ್ರಾಚೀನ ಪದ್ಧತಿಯಾಗಿಯೇ ಮಾಡಲ್ಪಟ್ಟವೆಯಲ್ಲದೆ ಸರ್ಕಾರಿ ಉದ್ಯೋಗಸ್ಥರು ಎಲ್ಲಾ ದೊಡ್ಡಮನುಷ್ಯರೂ ಸ್ಟೇಷನಿಗೆ ಬರಬೇಕೆಂದು ಅಪೇಕ್ಷಿಸಲ್ಪಟ್ಟದಾರೆ.

Preparations in Mysore.—ಮೈಸೂರು ಯಜಮಾನರ ಆಗಮನಾರ್ಥ ಮೈಸೂರಿನಲ್ಲಿ ಮಾಡಲ್ಪಡುತ್ತಲಿರುವ ಪ್ರಬಲತರ ಸನ್ನಾಹಗಳೆಲ್ಲವೂ ಜನರ ಮನಸ್ಸುಗಳನ್ನು ನೆಲೆಗೊಳಿಸಿ ಮನೋರಂಜನೆಯನ್ನು ಉಂಟುಮಾಡುವುವಾಗಿರುತ್ತವೆ. ಇದುವರಿವಿಗೂ ನೂರಾರು ಮನೆಗಳು ಹಾಳಾದವು. ಇನ್ನೆಷ್ಟು ಮನೆಗಳನ್ನು ಕೆಡಿಸಿದರೆ ಅಲಂಕಾರ ಪೂರ್ತಿಯಾಗಿ ವೈಸ್ರಾಯ್ ಮಹರ ಮನಸ್ಸಂತೋಷವಾಗುವದೋ ತಿಳಿಯಲಿಲ್ಲವು ಯೆಂದು ಒಬ್ಬ ಖಾತವಿಾದಾರನು ಬರೆಯುತ್ತಾನೆ.

A new challan.—ಪ್ಯಾಲೆಸ್ ಅಸಿಸ್ಟೆಂಟ್ ಕಮ್ಮೀಷನರ್ ಮಿ. ಚಿದಂಬರಂ ಅಯ್ಯರವರ ಪಾರ್ಶ್ವಮಾರ್ಫತ್ ಬುದ್ಧಿಯು ಸತ್ರರೂಪವಾಗಿ ಪರಿಣಮಿಸಿದ್ದರಿಂದ ಅವರು ೧೦,೦೦೦ ರೂಪಾಯಿಗಳವರೆಗ ವ್ಯಯಮಾಡಿ ನೂತನವಾಗಿ ಸತ್ರ ದೇವಾಲಯವನ್ನು ನಿರ್ಮಿಸಿ ಆಚೇಪಾರವಲ್ಲಿ ಸುಪ್ರತಿಷ್ಠೆ ಮಾಡಿಸಿದರು. ಆದಿನ ಪಂಚಭಕ್ಷ್ಯ ಪರಮಾನ್ನದೊಡನೆ ಬ್ರಾಹ್ಮಣ ಸಂತರ್ಪಣೆ ಸಹ ಆಯಿತು. ಮಹಾರಾಜರವರು ಸಹ ತಮ್ಮ ರಾಜಪುತ್ರಿಕೆಯರೊಡನೆಯೂ ದಿವಾನರೊಡನೆಯೂ, ಮಿ. ಚಿದಂಬರಯ್ಯರವರ ಆತಿಥ್ಯವನ್ನು ಸ್ವೀಕರಿಸಲು ಸತ್ರಕ್ಕೆ ಬಂದಿದ್ದರು. ಭೋಜನಾನಂತರ ತಾಂಬೂಲವಗೈರೆ ವಿನೋದಗಳು ಜರುಗಿದವು. ಮುಖ್ಯವಾಗಿ ಮನುಷ್ಯನ ಧನಾರ್ಜನ ಕ್ರಮವು ಉಪಯೋಗವಾದದ್ದಾಗಿದ್ದರೂ ಚಿಂತೆಯಿಲ್ಲವು, ಧನದ ವಿನಿಯೋಗ ವಿಷಯದೊಳು ಮಾತ್ರ ಉಚಿತಜ್ಞತೆಯು ಕೇವಲ ಆವಶ್ಯಕವು. ರೀತಿ ಇದರಿಂದ ಮೈಸೂರಲ್ಲಿ ನೌಕರಿಮಾಡಿದ ಒಬ್ಬರು ಅಧಿಕಾರಿಗಳು ತಮ್ಮ ಹೆಸರನ್ನೂರ್ಜಿತ ಪಡಿಸಿಕೊಂಡಂತೆ ಯಾಯಿತು.

The slippering case.—ಇಲ್ಲಿನ ಹೆಡ್‍ಕ್ವಾರ್ಟರ್ ಪೊಲೀಸ್ ಸ್ಟೇಷನ್ ಇನ್‍ಚಾರ್ಜಿನೊಳಿರುವ ಇನ್ಸ್‍ಪೆಕ್ಟರ್ ನಾಗಯ್ಯನಾಯುಡು ಎಂಬಾತನು ಫ್ರೆಂಚ್‍ರಾಕ್ಸ್ ಸಪಪಿರ್ಜ ಪೊಲೀಸ್ ಶಿಬ್ಬಂದಿಗೇರಿದ ಒಬ್ಬ ಪೊಲೀಸ್ ಕಾನ್ಸ್‍ಟೇಬಲನ್ನು ತನ್ನ ಕಾಲಿನಿಂದ ಒದ್ದಂತೆಯೂ, ಅವನಮೇಲೆ ಆತನು ಕ್ರಿಮಿನಲ್‍ತರಫ್ ಛಾರ್ಜ್ ಮಾಡಿರುವಂತೆಯೂ ಹಿಂದೆಯೇ ತಿಳಿಸಿದ್ದೆವಷ್ಟೆ. ಈ ಮೊಕದ್ದಮೆಯು ಇಲ್ಲಿನ ಟೌನ್ ಮ್ಯಾಜಿಸ್ಟ್ರೇಟರಕೋರ್ಟಿನಲ್ಲಿ ವಿಚಾರಣೆಯಾಗಿ ಕಡೆಗೆ ಅದು ಜನಗಳು ನಿರೀಕ್ಷಿಸಿದ್ದದಕ್ಕೆ ವಿರುದ್ಧವಾಗಿ ಪರಿಣಮಿಸಿ, ಅಪರಾಧಿಯು ನಿರ್ದೋಷಿಯೆನ ಪರಿಗಣಿಸಲ್ಪಟ್ಟು ಖುಲಾಸೆಯನ್ನೈದಿದನೆಂಬವಿಷಯವು ನಮಗೆ ಆಶ್ಚರ್ಯವನ್ನುಂಟುಮಾಡಿತು. ಪೊಲೀಸ್ ಇನ್ಸ್‍ಪೆಕ್ಟರ್ ಮಾಡಿದ ದುಷ್ಕೃತ್ಯವು ಸಾಕ್ಷಿಗಳಿಂದ ರುಜುವಾಗದೆ ಇರಲಿಲ್ಲವು. ಅಪರಾಧಿ ಸಹ ಈ ಪ್ರಕೃತಿ ಕೆಲಸವನ್ನು ಅಂಗೀಕರಿಸಿ ತಾನು ಒದೆಯಲಿಲ್ಲವೆಂದು ಮಾತ್ರ ವಾದಿಸಿದಂತೆ ಕೇಳುತ್ತೇವೆ. ಪರಂತು ಆತನ ಸಾಕ್ಷಿಗಳ ಕೈಫಿಯತ್ತುಗಳು ಆತನ ನಿರ್ದೋಷತ್ವವನ್ನು ಸ್ಥಾಪಿಸಿದಂತೆ ತೋರಲಿಲ್ಲವು. ಹೀಗಿದ್ದಾಗ್ಯೂ ಮ್ಯಾಜಿಸ್ಟ್ರೇಟರಿಗೆ ಆತನ ಮೇಲೆ ಅತನಂ ಖುಲಾಸೆಮಾಡಬೇಕೆನಿಸಿದ ಕಾರಣ ಕಂಡುಬರಲಿಲ್ಲ ನಾವರಿಯೆವು. ಹೀಗೆಯೇ ಹಿಂದೆ ಒಂದು ಸಂದರ್ಭದಲ್ಲಿ ಸಹ ಇದೇ ನಾಗಯ್ಯನಾಯುಡರಮೇಲೆ ತರಲ್ಪಟ್ಟದ್ದ ಚೀಟಿಂಗ್ ಮೊಕದ್ದಮೆಯಲ್ಲಿ ಅದು ಸಾಕಾದಮಟ್ಟಿಗೆ ರುಜುವಾತಾಗಿದ್ದರೂ ಮ್ಯಾಜಿಸ್ಟ್ರೇಟರು ಈಗಿನಂತೆ ಅಪರಾಧಿಯನ್ನು ಖುಲಾಸೆಮಾಡಿಬಿಟ್ಟರು. ಮುಖ್ಯವಾಗಿ ಈದೇಶದಲ್ಲಿ ಮೊಕದ್ದಮೆಗೆ ಸಂಬಂಧಪಟ್ಟವರ ಸ್ವರೂಪಾದಿಗುಣವಾಗಿ ನ್ಯಾಯಲಭಿಸುವದಾಗದೆ ಯೋಗ್ಯತೆಯಿಂದ ಮೊಕದ್ದಮೆಗೆ ತಕ್ಕಂತೆ ನ್ಯಾಯದೊರೆಯುವುದಣವು ಅಸಾಧ್ಯವು.

The Port murder case.—ಸರ್ವವಿಷಯದಲ್ಲಿಯೂ ಈದೇಶದ ಆಡಳಿತಕ್ರಮವು ದ್ಯಾಗ ಪಿರಿಯಾಗಿನವೋ ಬಡನೂರ್ ಇಲ್ಲಿನ ನ್ಯಾಯವಿಚಾರಕರು ಸಹ ಬಹಳ ವಿಲಕ್ಷಣವಾದ ದ್ದಾಗಿರುತಿದೆ. ಕೋಟೆಯಲ್ಲಿ ಗೋವಿಂದರಾಜಲು ನಾಯಿ ವಗೈರೆಯರು ಸೇರಿ ನಡೆಸಿದ ಖೂನೀ ಮೊಕದ್ದಮೆಯಲ್ಲಿ ಇಬ್ಬರು ಅಪರಾಧಿಗಳಿಗೆ ಸೆಷನ್ ಜಡ್ಜಿಯವರು ವಿಧಿಸಿದ ಮರಣದಂಡನೆಯ ಮೇಲೆ ಅವರು ರೆಸಿಡೆಂಟರಲ್ಲಿ ಅಪೀಲ್ ಮಾಡಿದ್ದರು. ಈ ಮೊಕದ್ದಮೆಯು ವಿಚಾರಣೆಗಾಗಿ ಕಡೆಗೆ ಕೆಳಕೋರ್ಟಿಗೆ ಪ್ಯಸರ್ ಕಳುಹಲ್ಪಟ್ಟಿತು. ಈ ಮೊಕದ್ದಮೆಯ ಸ್ವರೂಪವನ್ನು ವಿಮರ್ಶಿಸಿ ನೋಡಿದರೆ ಬಸ್ತಂಕಗಳಲ್ಲಿ ಸಾಕ್ಷಿಗಳ ಕೈಫಿಯತ್ತುಗಳು ಸಂಶಯಾಸ್ಪದವಾಗಿವೆ. ಮತ್ತು ಅಪ್ರೂವರೊಬ್ಬನ ಹೇಳಿಕೆ ವಿನಾ ದಂಡನೆಗೆ ಮತ್ತಾವ ರುಜುವಾತೂ ಕಂಡುಬರಲಿಲ್ಲವು. ಖೂನಿ ಸಹವನ್ನು ನಿಜವಾದಾಗ್ಯೂ ಇದಕ್ಕೆ ಸಂಬಂಧಪಟ್ಟ ಇತರ ಕಾರಣಗಳಮೇಲೆ ಜೆಪ್ಪಿ ಊಹಿಸಿ ಅಪರಾಧಿಗಳನ್ನು ಈರೀತಿ ಶಿಕ್ಷಿಸಿದಂತೆ ತೋರುತಿದೆ. ಇದಕ್ಕೆ ತಕ್ಕಂತೆಯೇ ಅಪೀಲ್ ಕೋರ್ಟಿನವರು ಕೂಡ ಕಣ್ಣು ಮುಚ್ಚಿಕೊಂಡು ಕೆಳಕೋರ್ಟಿನ ತೀರ್ಪನ್ನು ಕಾಯಂಮಾಡಿಬಿಟ್ಟರು. ಅಪರಾಧಿಯು ಉಪಸನ್ನನಾದರೆ ಹಿಂದ 'ಯಾವತ್ತಿಂಗಮುಪ್ರಾಣಂ' ಎಂದು ಪ್ರಾಕ್ಟೀಸು ಮಣಕಾಲದ ತನಕ ಅದಂಬ ಚಾಲಿಸಿತ್ತಲ್ಲವೇ ಕೆಂಬ ಕೋರಿಕೆಯನ್ನಾಗಿ ಇನ್ಯೆಗವರ್ನ್‌ಮೆಂಟಿಗೆ ಪುನರ್ವಿಚಾರಣೆಯಬಗ್ಗೆ ಮರಂ ಕೊಡಬೇಕೆಂದು ತಂತಿಮೂಲಕ ಕೇಳಿಕೊಂಡು ಸರಿದೇ ಸೂಚನನ್ನು ನಿಷ್ಠಿಸಿದಂತಿದೆ ಮಕುಂಬರಿಸುವದಾಗಿ ಬೇಳಿಕೊಳ್ಳುತ್ತಾರೆ.

SUMMARY OF NEWS.
ವೃತ್ತಾಂತ ಸಂಗ್ರಹವು.

ಸಿಂಪ್ ಟೈವರಾಬಾದಿನೊಳಗಿನ ಒಬ್ಬ ಬಲೂಚಿ ತಿಪಾಯಿಯು ಒಬ್ಬ ಹುಡಿಗಿಯನ್ನು ಪ್ರೀತಿಮಾಡುತಿದ್ದು ಅವಳನ್ನು ಎರಡನೆಯವನಿಗೆ ಲಗ್ನ ಮಾಡಿಕೊಟ್ಟದ್ದರಿಂದ ಇವನು ನಿರಾಶೆಯೊಂದ ಅವಳನ್ನು ಗುಂಡುಹಾಕಿ ಕೊಂದು ತಾನು ಸಹ ಗುಂಡುಹೊಡೆದುಕೊಂಡು ಸತ್ತುಹೋದನಂತೆ

ದಕ್ಷಿಣ ಅಮೆರಿಕಾಖಂಡದಲ್ಲಿ ಒಂದುಬಗೆಗಿಡವಿದೆ, ವರ್ಷಕ್ಕೆ ೧ಸಾರಿ ಈಗಿಡದ ಎಲೆಗಳೆಲ್ಲಾ ಉದುರಿಹೋದಾಗ, ಜನಗಳು ಕೊಡ ಪಿಪಾಯಿ ಮುಂತಾದವುಗಳನ್ನು ತೆಗೆದುಕೊಂಡು ಹೋಗಿ ಆ ಮರಗಳಲ್ಲಿ ಒಂದುಭಾಗವನ್ನು ಕೆರೆಯುತ್ತಾರೆ ಆಭಾಗದಿಂದ ಬಹಳ ಮಧುರವಾಗಿಯೂ ಘಟ್ಟಿಯಾಗಿಯೂ ಇರುವ ಹಾಲು ಸುರಿಯುತ್ತದೆ ಈ ಹಾಲು ಶರೀರಕ್ಕೆ ಆರೋಗ್ಯಕರವಾದದ್ದೆಂತಲೂ ಬಲ ಕೊಡುವಂಥಾದ್ದೆಂತಲೂ ಹೇಳುತ್ತಾರೆ.

ನಾರ್ವೆ ಮತ್ತು ಸ್ವೀಡನ್ನಲ್ಲಿಯೂ ಯೂರೋಪ್ ಖಂಡದ ಇತರಭಾಗಗಳಲ್ಲಿಯೂ ಫರ್ ಎಂಬ ಮರವು ಕಾಡಿನಲ್ಲೆಲ್ಲಾ ಬೆಳೆಯುತ್ತದೆ. ಇದರ ತೊಗಟೆಯನ್ನು ತಂದು ಒಣಗಿಸಿ ನುಣ್ಣಗೆ ಪುಡಿಮಾಡಿ ಅದರಿಂದ ರೊಟ್ಟಿಮಾಡಿ ಭಕ್ಷಿಸುತ್ತಾರೆ. ಸಾಧಾರಣವಾಗಿ ಜನರು ಯೂರೋಪ್‍ಖಂಡದಲ್ಲಿ ಮತ್ಸ್ಯಗಳನ್ನೂ ತಿಂದು ಜೀವಿಸುತ್ತಾರೆ. ಕಾಡಿನಲ್ಲಿ ಬೆಳೆಯುವ ಮರದ ಸಹಾಯದಿಂದ, ಕ್ಷಾಮಬಂದಾಗ್ಯೂ ಅವರು ಸ್ವಲ್ಪಮಟ್ಟಿಗೆ ತಡೆದುಕೊಳ್ಳುವದಕ್ಕೆ ಆಸ್ಪದವಾಯಿತು. ಕ. ಸು.

ಕೆರೋಸಿಯನ್ ಎಣ್ಣೆಯ ಉಪಯೋಗವನ್ನು ಕುರಿತು "ಜಗನ್ಮಿತ್ರ" ಎಂಬ ಮಹಾರಾಷ್ಟ್ರಪತ್ರಿಕೆಯಲ್ಲಿ ಪ್ರಕಟಿಸಿರುವದನ್ನು ನಮ್ಮ ವಾಚಕರ ಅವಲೋಕನಕ್ಕಾಗಿ ನಾವು ಇಲ್ಲಿ ಮರಳಿ ಪ್ರಕಟಿಸಿಯಿದ್ದೇವೆ ೧ ಕಿವಿಯು ಕೇಳಿಸಲಾರದಾದರೆ ಅಲ್ಲದೆ ಕಿವಿಯಲ್ಲಿ ಯಾವದೊಂದು ತರದವನೋವು ಆದರೆ ಬೋಜನೋತ್ತರದಲ್ಲಿ ಮಲಗಿಕೊಂಡು ಆ ಪಾಕಿವಿತುಂಬುವಷ್ಟು ಕೆರೋಸಿಯನ್ ಎಣ್ಣೆ ಅಂದರೆ ೩ ಸ್ನಿಂ ಎಣ್ಣೆಯನ್ನು ಹಾಕಿಕೊಂಡು ೧೫ ನಿಮಿಷಗಳವರೆಗೆ ಮಲಗಿಕೊಳ್ಳಬೇಕು. ಈ ಪ್ರಕಾರ ೧-೧೦ ದಿವಸ ಮಾಡಿದರೆ ರೋಗ್ನಿ ಗುಣವಾಗುವದು. ಮೊದಲು ಒಂದೆರಡು ದಿವಸ ಅಧಿಕವಿಕಾರವಾದಂತೆ ತೋರುವದು ಎರಡುಮೂರು ದಿವ್ವವಿ ಗುಣವಾಗುವದು ೨ ಮೈಮೇಲೆ ಸರ್ಪವಿದರೆ ಈ ಎಣ್ಣೆಯನ್ನು ಮೈಗೆ ಸವರಿಕೊಳ್ಳಬೇಕು ೩ ಎರಡು ಎಲ ಕೆರೋಸಿಯನ್ ಎಣ್ಣೆಯನ್ನು ಎರಡುತೊಲ ತಣ್ಣೀರನ್ನು ಮಿಶ್ರಮಾಡಿ ತಗದು ಕೊಂಡರೆ ಎಂತಾ ಜ್ವರವಿದ್ದರೂ ಕಡಿಮೆಯಾಗುತ್ತದೆ. ೪ ಆಗುವದ ಖಾಯಿಯಲ್ಲಿ ಒಂದು ಪಾತ್ರೆಯಲ್ಲಿ ಈ ಎಣ್ಣೆಯನ್ನು ಹಿಡಿದು ರಾತ್ರಿಯಾಯಿತೆಂದು ಇಡುವದಾದರೆ ಮರುದಿವಸ ಬದಗಾಣದ ಯೆಣ್ಣೆಯಂತೆ ಕೆಮ್ಮೆಯಲ್ಲಿ ದೀಪದ ಬೆಳಕಿಕ್ಕೆ ಉಪಯೋಗಿಸುವದು. ಮತ್ತು ಅದರಿಂದ ಪ್ರಕಾಶವು ಉಂಟಾಗುವದು. ದೀಪಸ್ತಂಭದಮೇಲೆ ಈ ಎಣ್ಣೆಯನ್ನುಹಾಕಿ ಮುಚ್ಚಳಕೆಯನ್ನು ಮುಚ್ಚಿದರೆ ಬಹಳ ಒಳ್ಳೇದು. ಬತ್ತಿಯನ್ನು ಅರಿವೆಯಿಂದ ಮಾಡಿದರೆ ಅರಳೆಯಿಂದ ಆಗಲಿ ದಾರದಿಂದಲಾಗಲಿ ಮಾಡಿಹಾಕಬೇಕು ಇನೇ ದನ್ನು ಸ್ವತಃ ತಾವು ಅನುಭವಿಸಿದ್ದೇವೆಂತಲೂ, ೩ನೇದು ತಮ್ಮ ಮಿತ್ರರೊಬ್ಬರ ಅನುಭವಕ್ಕೆ ಬಂದಿರುವದೆಂತಲೂ ಆಪತ್ರಿಕರ್ತರು ಬರೆಯುತ್ತಾರೆ

ಬಾಲವಿವಾಹ ಮತ್ತು ಅಸ್ವಾಮಿತ ವೈಧವ್ಯ ಯೆಂಬ ಈ ಕ್ರೂರಕ್ರಮಗಳನ್ನು ನಿಲ್ಲಿಸತಕ್ಕ ಕಾಯ್ದೆಯನ್ನು ಬಯಸುವವರು ಅನೇಕರಿರುತ್ತಾರೆ. ಕಾಯ್ದೆಯನ್ನು ಬೇಡವೆಂದು ಹೇಳುವವರು ಸಹ ಅನೇಕರುಂಟು. ಮತ್ತು ಈ ಸಂಬಂಧವಾಗಿ ಉಭಯಪಕ್ಷದವರೂ ತಮ್ಮ ಮನೋರಥವನ್ನು ಸಿದ್ಧಿಗೆ ತಯ್ಯಾರದಕ್ಕಾಗಿ ಸಂಪೂರ್ಣ ಪ್ರಯತ್ನವಡಿಸುತಲಿದ್ದಾರೆ ಆದರೆ ಈ ಯೆರಡು ಪಕ್ಷದವರ ಅಭಿಪ್ರಾಯಗಳಿಗೂ ಸರಕಾರದವರು ಕಿವಿಕೊಡಲಿಕ್ಕಿಲ್ಲವೆಂದು ಸ್ಪಷ್ಟವಾಗಿ ತಿಳಿಯಬಂದಿರುತದೆ. ಧರ್ಮ ಸಂಬಂಧವಾದ ಯಾವದೊಂದು ಕೃತ್ಯಗಳಲ್ಲಿ ಕೈಹಾಕಲಿಕ್ಕಿಲ್ಲವೆಂದು ೧೮೫೮ನೇ ಇಸವಿಯಲ್ಲಿ ಕೊಟ್ಟವಚನವನ್ನೇ ಕಾಯುವರೆಂಬದಾಗಿ ಕಳೆದಗುರುವಾರ ಪುಣೆಯ ಸ್ತ್ರೀಯರ ಪಾಠಶಾಲೆಯಲ್ಲಿ ಬಕ್ಷಿಸ್ ಹಂಚುವ ಸಮಾರಂಭದಕಾಲದಲ್ಲಿ ನಾಮದಾರ್ ಗವರ್ನರ್ ಲಾರ್ಡ್ ರೇ ದೊರೆಗಳುಮಾಡಿದ ಭಾಷಣದಿಂದ ತಿಳಿದುಕೊಳ್ಳಬೇಕಾಗಿರುತ್ತದೆ. ಆ ಭಾಷಣದ ಸಾರಾಂಶವನ್ನು ಅಲ್ಲಿನ ಜ್ಞಾನಪ್ರಕಾಶಿಕೆಯಿಂದ ತೆಗದು ನಾವು ಈಕೆಳಗೆ ಕೊಡುತ್ತೇವೆ:—

"ನಾನು ಮದರಾಸಿಗೆ ಹೋದಸಮಯದಲ್ಲಿ ಲಾರ್ಡ್ ಹರ್ವರ್ಥ್‍ದೊರೆಗಳೊಡನೆ ನನ್ನ ಸಂಭಾಷಣೆಯಾಯಿತು. ಅದರಲ್ಲಿ ಈ ಸಾಮಾಜಿಕಸುಧಾರಣೆಯವಿಷಯವಾಗಿ ಕಾಯ್ದೆಯನ್ನುಮಾಡುವದು ಹಿಂದುಸ್ಥಾನ್ ಸರ್ಕಾರದವರ ಅಥವಾ ಇಂಗ್ಲಾಂಡ್ ಸರ್ಕಾರದವರ ಮನಸ್ಸಿನಲ್ಲಿ ಎಳ್ಳಿನಿತಾದರೂಯಿಲ್ಲ. ಇಂತಾವಿಷಯದಲ್ಲಿ ಕಾಯ್ದೆಯನ್ನುಮಾಡುವದರಿಂದ ನಿಜವಾದ ಸುಧಾರಣೆಯು ಆಗ ಅರಿಯದು. ಆದರೆ ಜನರು ಅವುಗಳ ಕೇಡು ಪರಿಣಾಮಗಳನ್ನು ತಾವಾಗಿಯೇತಿಳಿದುಕೊಂಡು ಸುಧಾರಣೆಯನ್ನು ಮಾಡಿದರೆ ಒಳ್ಳೇದಾಗುವದು. ಮತ್ತು ಆ ಸುಧಾರಣೆಯು ಸ್ಥಿರವಾಗಿಯೂ ಸುಖದಾಯಕವಾಗಿಯೂ ಇರುವದು. ಇಂತಾ ಸುಧಾರಣೆಗಳು ಆಗಾಗ್ಯೆ ಆಗಲಿಕ್ಕೆ ಸ್ತ್ರೀಶಿಕ್ಷಣವು ಅಗತ್ಯವಾಗಿದೆ ಇತ್ಯಾದಿ.

ಚಂದ್ರೋದಯ.

ಕೂರ್ಗದೇಶದ ಚೀಫ್ ಕಮ್ಮೀಷನರವರಿಂದ ಹೊರಟಿರುವ ಇಷ್ತಿಹಾರ್‍ನಾಮೆ.

ತಾರೀಖ್ ೩೦ನೇ ಏಪ್ರಿಲ್ ೧೮೮೬ನೇ ಇಸವಿ.

ಬೆಂಗಳೂರು,

ನಂಬರ್ ೨೦.

v. ಸ್ಥಳೀಕ ವಿಚಾರವು ಮತ್ತು ಜಾವಿರ್ಗಾ ಮಂಜೂರಾತಿಯೂ ಸ್ಥಾಪೈಸಿದ ಕೊಡಗೇ ಕಮ್ಮಿಷನರವರು ತಮಗೆ ಮಂಜೂರ್ಮಾಡುವದಕ್ಕೆ ಅಧಿಕಾರವಿರುವ ಸಂಗತಿಗಳಲ್ಲಿ ತಾವೇ ಮಂಜೂರ್ಮಾಡಬಹುದು. ಹಾಗಿಲ್ಲದಿದ್ದರೆ ದರಖಾಸ್ತನ್ನು ಅವರು ತಮ್ಮ ರಿಪೋರ್ಟಿನೊಡನೆ ಚೀಫ್ ಕಮ್ಮಿಷನರವರ ಹುಕುಮಿಗೋಸ್ಕರ ಕಳುಹಿಸುವರು.

೯ ಮುಚಾವಲೆಗಳು ಸಾಧಾರಣವಾಗಿ ದರಖಾಸ್ತಿನ ಆದ್ಯತೆಪ್ರಕಾರ ಕೊಡಲ್ಪಡುವವು. ಆದರೆ ಕ್ಷಿಪ್ರಯೋಗಕ್ಕೆ ಅಥವಾ ತಮ್ಮ ಜಾಹಿರಾತಿಗೆ ಬಂದ ಹಾಳೀ ಕೆಲಸದ ಪ್ರಯೋಜನದ ಸಂಬಂಧ ಮತ್ತು ಜೇಲೆ ತರಗತಿಯ ಪ್ರತಿ ವ್ಯವಸಾಯಗಾರರ ಆವಶ್ಯಕತೆ ಪ್ರಕಾರ ಕಮ್ಮಿಷನರವರು ಮುಚಾವಲೆ ಕೊಡುವಲ್ಲಿ ತಮ್ಮ ಯಿಖ್ತ್ಯಾರಿ ಜರಿಗಿಸಬಹುದು. ವ್ಯವಸಾಯಗಾರರ ಕೊಡದ ಯಾದ ಮುಖ್ಯವಾದ ತರಗತಿಗಳಿಗೆ ಕೊಡತಕ್ಕ ಮುಚಾವಲೆ ಹಣವನ್ನು ಚೀಫ್ ಕಮ್ಮಿಷನರವರು ಯಾವ ಕಾಲದಲ್ಲಾದರೂ ಪರಿಮಿತ ಮಾಡಬಹುದು.

೧೦. ಮುಚಾವಲೆ ಕೊಡುವದಕ್ಕೆ ಮಂಜೂರಾದಕೂಡಲೇ ದರಖಾಸ್ತುದಾರನು (ಬ ಫಾರಂ) ಸರ್ಟಿಫಿಕೇಟಿಗೆ ರುಜು ಮಾಡುವದಕ್ಕೂ ಜಾವಿರ್ಗಾದಾರರಿದ್ದರೆ ಅವರಜೊತೆಯಲ್ಲಿ, ನೇಮಿಸಿರುವ ಫಾರಂಪ್ರಕಾರ ಒಂದು ಕರಾರ್ ಸಹ ಬರಕೊಡಬೇಕಾಗುವದು.

೧೧ ಸರ್ಟಿಫಿಕೇಟಿನ ಒಂದು ನಕಲ್ ದರಖಾಸ್ತುದಾರನಿಗೆ ಕೊಡಲ್ಪಡುವದು. ಸದರೀ ಸರ್ಟಿಫಿಕೇಟನ್ನು ಅದರಲ್ಲಿ ನಮೂದಿಸಿರುವ ಖಜಾನೇರಿ ಹಾಜರ್‍ಪಡಿಸಿದಲ್ಲಿ ಅಡ್ವಾನ್ಸ್ ಕೊಡಲ್ಪಡುವದು.

೧೨. ಮುಚಾವಲೆಯ ಮೊದಲನೇ ಕಿಸ್ತು ಪಾವತೀ ಮಾಡತಕ್ಕ ತಾರೀಖ್ ಸಾಧಾರಣವಾಗಿ ರೂಪಿತ ಪಡಿಸುವಿಕೆಯಿಂದ ಯಾವಾಗ ಆದಾಯ ಬರುವದಕ್ಕೆ ಮೊದಲಾಗುತ್ತೋ ಆ ಕಾಲವನ್ನು ಅನುಸರಿಸಿ ನೇಮಕ ಮಾಡಲ್ಪಡತಕ್ಕದ್ದು. ಅಂದರೆ ತಾರೀಖ್ ಗದ್ದೆಗೆ ನೀರಿ ಹಾಕುವದಕ್ಕೂ ಹೆಮ್ಮೆ ಭೂಮಿಯ ನೀರು ಬತ್ತಿಸುವದಕ್ಕೂ, ಮತ್ತು ಬೋಳೆ ಪಟ್ಟಿಗಳನ್ನು ಎತ್ತರಿಸುವದಕ್ಕೂ ಭೂಮಿ ಜವುಗಿದ್ದ ಮಣ್ಣು ತೆಗೆಯುವದಕ್ಕೂ, ಮರಳು ಹೊಡ್ಡು ಕಾಡು ವ ಎನೇ ದಫಾ ಡುಷ್ಟ್ಯವಂಥ ಕಟರಾವನ್ನು, ಮತ್ತು ಉಣ್ಣೆ ಮುಳ್ಳು ಗಿಡಗಳನ್ನು ಸಾಫ್‍ಮಾಡುವದಕ್ಕೂ, ಮತ್ತು ತೋಟಗಳನ್ನ ಸುತ್ತಲೂ ಬಂದೋಬಸ್ತು ಮಾಡಿಕೊಳ್ಳುವದಕ್ಕೂ ಸಹ ಮೂರು ವರುಷಕ್ಕೆ ಮಿಾರಿ ಇರಕೂಡದು. ಭಾವಿಗಳನ್ನು, ಕೆರೆಗಳನ್ನು, ಕಾಲುವೆಗಳನ್ನು, ಅಣೆಕಟ್ಟಿನ ಕಟ್ಟೆಗಳನ್ನು ಕಟ್ಟುವದಕ್ಕೂ ಕಾಫಿ ಯಾಲಕ್ಕಿ ಟೀ ಅಥವಾ ಇತರ ವಿಶೇಷವಾದ ಫಲಗಳನ್ನು ಬೆಳೆಸುವಂತಾ ಭೂಮಿಗಳಿಗೂ, ಅಂತಾ ತಾರೀಖ್ ೫ವರುಷಕ್ಕೆ ಮಿಾರಕೂಡದು. ಕೋಯಿನ್ನ ಬಬ್ಬರ್ ಮತ್ತು ಕಿತ್ತಳೆ, ತೆಂಗು, ವೀಳ್ಯದೆಲೆ, ಮತ್ತು ಅಡಿಕೆ, ಬೆಳೆಸುವದಕ್ಕೆ ಇರುವ ಭೂಮಿಗಳ ಸಂಗತಿಯಲ್ಲಿ ಯೆಂಟುವರುಷಕ್ಕೆ ಮಿಾರಕೂಡದು.

೧೩. ಸಾಧಾರಣವಾದ ಸಂಗತಿಗಳಲ್ಲಿ ಮುಚಾವಲೆಗಳನ್ನು ಸಲ್ಕೆಯಿಂದ ತೀರಿಸುವದು ಯೆಡೆಬಿಡದೆ ಐದುವರುಷಗಳ ಕಿಸ್ತುಬಂದಿಗಳಾಗಿರತಕ್ಕದ್ದು. ಆದರೆ ವಿಶೇಷವಾದ ಸಂಗತಿಗಳಲ್ಲಿ ಮತ್ತು ಚೀಫ್ ಕಮ್ಮಿಷನರವರ ಮಂಜೂರಾತಿ

ಮುಂದಾಗಿ ಪಡಕೊಂಡು ಹದಿನೈದು ವರುಷಗಳ ಒಳಗೂ, ದೊಡ್ಡ ನಾಲ ಕೆಲಸದ ಸಂಗತಿಯಲ್ಲಿ ೩೦ ವರುಷಗಳ ಒಳಗೂ ಗೊತ್ತುಮಾಡಲ್ಪಟ್ಟ ಸಾಲ್ವಾರ್ ಕಿಸ್ತುಗಳಿಂದ ಮೊಬಲಗನ್ನು ವಸೂಲ್ಮಾಡುವದಕ್ಕೆ ಕಾಲವನ್ನು ಹೆಚ್ಚಿಸಬಹುದು.

೧೪. ಮುಬಾದಲೆ ಕೊಡುವದಕ್ಕೆ ಮಂಜೂರ್ಮಾಡುವ ಉದ್ಯೋಗಸ್ಥನು ಮುಬಾದಲೆ ಹಣವನ್ನು ಒಂದೇ ಗಂಟನಲ್ಲಾಗಲಿ, ಅಥವಾ ಸಾಲ್ವಾರ್ ಇತರ ಕಿಸ್ತುಬಂದಿಗಳಿಂದಾಗಲಿ, ಅಡ್ವಾನ್ಸು ಕೊಡುವಬಗ್ಗೆ ಹುಕುಂ ಮಾಡಬಹುದು. ಆದರೆ ಅಂತಾ ಕೊಡುವಿಕೆಯು ಕಾಮಗಾರಿಗಳಿಗೆ ಮುಟ್ಟಿಸಿರುವ ಖರ್ಚು ಮತ್ತು ನಡೆಸಿರುವ ಕಾಮಗಾರಿಯ ಅಂದಾಜ್ ಸಹ ಅನುಸರಿಸಿ ಇರತಕ್ಕದ್ದು. ಸಾಧಾರಣವಾದ ಸಂಗತಿಗಳಲ್ಲಿ ಯಾವ ಕೆಲಸಕ್ಕೋಸ್ಕರವಾಗಿ ಮುಬಾದಲೆ ಕೊಡಲ್ಪಟ್ಟಿರುತ್ತೋ ಆ ಕೆಲಸವನ್ನು ಮುಬಾದಲೆ ಕೊಟ್ಟ ತಾರೀಖ್ ಲಾಗಾಯತು ಅಥವಾ ಸದರೀ ಮುಬಾದಲೆಯ ಒಂದು ಭಾಗವನ್ನು ಕೊಡಲ್ಪಟ್ಟ ಲಾಗಾಯತು ಎರಡು ವರುಷಗಳ ಒಳಗಾಗಿ ಪೂರ್ತಿಯಾಗಿ ನೆರವೇರಿಸತಕ್ಕದ್ದೆಂತಲೂ ಮತ್ತು ಮುಬಾದಲೆ ಅಥವಾ ಅದರ ಒಂದು ಭಾಗವನ್ನು ಪಡಕೊಂಡಲಾಗಾಯತು ಮೂರುತಿಂಗಳೊಳಗಾಗಿ ಅಂತಾ ಕೆಲಸವನ್ನು ಶುರು ಮಾಡುವದೆಂತ ಸಹ ಒಡಂಬಡಿಕೆಯಲ್ಲಿ, ನಮೂದಿಸಿರತಕ್ಕದ್ದು. ಮುಬಾದಲೆ ಯಾವನಿಗೆ ಕೊಡಲ್ಪಟ್ಟಿತ್ತೋ ಅಂತಾ ಮನುಷ್ಯ ವ ಮನುಷ್ಯರಾಗಲಿ ಈ ಷರತ್ತುಗಳಿಗೆ ತಪ್ಪಿದ ಪಕ್ಷದಲ್ಲಿ ಮುಬಾದಲೆ ಮೊಬಲಗು ಅದಕ್ಕೆ ಮೊಕರರ್ ಮಾಡಲ್ಪಟ್ಟ ಬಡ್ಡಿ ಸಮೇತ ತತ್ಕ್ಷಣವೇ ವಸೂಲ್ಮಾಡಲ್ಪಡಬಹುದು.

೧೫. (ಎ) ಬಡ್ಡಿಯು ಅಸಲ್ ಮೊಬಲಗಿನ ಕಿಸ್ತಿನೊಡನೆ ಪಾವತೀ ಮಾಡಲ್ಪಡತಕ್ಕದ್ದು.

(ಬಿ) ಅಸಲಿನ ಮೊದಲನೇ ಕಿಸ್ತಿನ ಸರಿಕೆಬಗ್ಗೆ ಮೊಕರರ್ ಆದ ತಾರೀಖಿಗೆ ೬ ತಿಂಗಳ ಹಿಂದಣ ತಾರೀಖ್ ಲಾಗಾಯತು ಅಡ್ವಾನ್ಸಿನಮೇಲೆ ಬಡ್ಡಿ ಎಣಿಸಲ್ಪಡುವದು.

(ಸಿ) ಬಾಕಿ ನಿಲ್ಲುವ ಮುಬಾದಲೆ ಹಣದ ಪ್ರತಿ ಒಂದು ರೂಪಾಯಿಗೂ ಒಂದಾಣೆ ಮೇರೆ ಅಥವಾ ಸಾಲೀಯಾನಾ ಸೇಕಡಾ ೬|೦ ರೂಪಾಯಿ ದರದಮೇರೆ ಬಡ್ಡಿ ಇರತಕ್ಕದ್ದು. ಆದರೆ ಚೀಫ್ ಕಮ್ಮಿಷನರವರು ತಮ್ಮ ಇಷ್ಟಾನುಸಾರವಾಗಿ ಯಾಗಲಿ, ಮತ್ತು ತಕ್ಕ ಕಾರಣಗಳಿಂದಾಗಲಿ, ಈ ಬಡ್ಡಿ ದರವನ್ನು ಕಮ್ಮಿಮಾಡಲೂ, ಯೆಲ್ಲವನ್ನು ಬಿಟ್ಟುಬಿಡಲೂ, ಅಥವಾ ವಸೂಲಾಗಬೇಕಾದ ಬಡ್ಡಿಯ ಯಾವ ಅಂಶವನ್ನಾದರೂ ಮುಜರೆ ಕೊಡಲೂ ಬಹುದು.

(ಡಿ) ಅಸಲ್ ಬಡ್ಡಿ ದೇಖಿಲ್ ಒಂದು ಕಿಸ್ತು ಬಾಕಿಯಾದಾಗ ಸರಿಕೆಯಾಗದಿದ್ದರೆ ಕಮ್ಮಿಷನರವರು ತಮಗೆ ಯುಕ್ತವಾಗಿ ಕಂಡರೆ ಸದರೀ ಮೊಬಲಗಿನಮೇಲೆ ಬಾಕೀಯಾದ ತಾರೀಖ್ ಲಾಗಾಯತು ಪಾವತೀ ತಾರೀಖಿನವರಿಗೆ ಸಾಲೀಯಾನಾ ಸೇಕಡಾ ೬|೦ ರೂಪಾಯಿಗೆ ಮೀರದ ರೀತಿ ಯಾವ ದರದಮೇರೆ ಯಾದರೂ ಬಡ್ಡಿ ಹಾಕಬಹುದು.

೧೬. ಮುಬಾದಲೆ ಹಣವು ಸಾಲೀಯಾನಾ ಕಿಸ್ತುಬಂದಿಮೇರೆ ಸರಿಕೆಯಾಗುವ ಪಕ್ಷದಲ್ಲಿ ಅಂತಾ ಕಿಸ್ತುಗಳು ಸಾಧಾರಣವಾಗಿ ಪ್ರತಿ ವರುಷದ ಮಾರ್ಚಿತಿಂಗಳ ೩೧ನೇ ತಾರೀಖಿನ ದಿನ ರೆವಿನ್ಯೂಯಾನೆ ಭೂಮಿ ಕಂದಾಯದ ಕಿಸ್ತಿನ ಜೊತೆಯಲ್ಲಿ ಪಾವತೀಆಗತಕ್ಕದ್ದು.

೧೭. ಬೆಳೆ ಆಗದೆ ಹೋದ್ದು ಅಥವಾ ವಿಶೇಷವಾದ ಇತರ ಆಪತ್ತು ಸಂಭವಿಸಿದ್ದು ರುಜುವಾದಲ್ಲಿ ಕಂತುಗಳನ್ನು ತಮ್ಮ ಇಚ್ಛಾನುಸಾರ ಕಮ್ಮಿಷನರವರು ಹುಕ್ಕುಂಮೂಲಕ ನಿಲ್ಲಿಸಬಹುದು. ಹಾಗೆ ನಿಲ್ಲಿಸಿದ್ದನ್ನು ಕುರಿತು ಕಮ್ಮಿಷನರವರು ಚೀಫ್ ಕಮ್ಮಿಷನರವರಿಗೆ ಇತ್ತಿಲ್ಲಮಾಡುವರು, ಅವರು ಸದರೀ ಸಂಗತಿಯಲ್ಲಿ ತಮಗೆ ಯುಕ್ತವಾಗಿ ತೋರುವ ಹುಕ್ಕುಂಗಳನ್ನು ಕೊಡುವರು.

೧೮ ಯಾವ ಕಿಸ್ತಿನ ಸರಿಕೆಯಾಗಲಿ ತಪ್ಪಿದಪಕ್ಷದಲ್ಲಿ ಕಮ್ಮಿಷನರವರು ಮುಬಾದಲೆ ಮೊಬಲಗನ್ನ ಅಥವಾ ಅದರ ಯಾವ ಭಾಗವನ್ನಾದರೂ ಅದರಮೇಲಣ ಬಡ್ಡಿಯೊಡನೆ ಸನ್ ೧೮೭೩ನೇ ಇಸವಿ ೧೯ನೇ ಆಕ್ಟಿನ ೭ನೇ ಪ್ರಕರಣದಮೇರೆ ವಸೂಲ್ಮಾಡಬಹುದು. ಮುಬಾದಲೆ ಅಥವಾ ಅದರ ಯಾವ ಭಾಗಾಂಶವಾದರೂ ವಸೂಲಾಗುವದಕ್ಕೆ ರಹಾವಿಲ್ಲವೆಂತ ಕಂಡುಬಂದಲ್ಲಿ ಆಸಂಗತಿಯನ್ನ ಕುರಿತು ಚೀಫ್ ಕಮ್ಮಿಷನರವರ ಹುಕುಮಿಗೋಸ್ಕರ ಕಮ್ಮಿಷನರವರು ಒಂದು ಸ್ಪೆಷಿಯಲ್ ರಿಪೋರ್ಟ್ ಮಾಡತಕ್ಕದ್ದು.

೧೯ ಮುಬಾದಲೆ ಪಡಕೊಂಡಂತಾವರೆಲ್ಲರೂ ಯಾವ ಕೆಲಸಕ್ಕೋಸ್ಕರ ಮುಬಾದಲೆ ಪಡಕೊಂಡಿರುತ್ತಾರೋ ಆ ಕೆಲಸದ ಸ್ಥಿತಿಯನ್ನು ತೋರಿಸುವಬಗ್ಗೆ ಯಾವ ತಾಲ್ಲೂಕಿನಲ್ಲಿ ಸದರೀಕೆಲಸ ನಡೆಸುತ್ತೋ ಆ ತಾಲ್ಲೂಕ್ ಸುಬೇದಾರರಮೂಲಕ ಕಮ್ಮಿಷನರವರಿಗೆ (*Quarterly*) ಅಂದರೆ ಮೂರುತಿಂಗಳಿಗೆ ಒಂದಾವರ್ತಿ ರಿಪೋರ್ಟ್‌ಗಳು ಕಳುಹಿಸುತ್ತಾ ಬರತಕ್ಕದ್ದು. ಅಂತಾ ರಿಪೋರ್ಟ್‌ಗಳಲ್ಲಿ ಕೆಲಸಮಾಡುವ ಜನರ ಸಂಖ್ಯೆ, ಖರ್ಚಾದ ಮೊಬಗು, ಕೆಲಸ ಪೂರೈಸಲಿಕ್ಕೆ ಬೇಕಾದ ಅಂದಾಜ್ ತಾರೀಖನ್ನು ಸಹ ತೋರಿಸತಕ್ಕದ್ದು. ಸುಬೇದಾರು ಕೆಲಸವನ್ನು ರೂಬರೂ ಅಜಮಾಯಿಸಿ ಅನಂತರ ಈರಿಪೋರ್ಟ್‌ಗಳನ್ನು ತಮಗೆ ಯುಕ್ತವಾಗಿ ತೋರುವ ಷರಾದೊಡನೆ ಕಮ್ಮಿಷನರವರಿಗೆ ಕಳುಹಿಸುವರು.

೨೦. ಚೀಫ್ ಕಮ್ಮಿಷನರವರು ನೇಮಿಸುವ ಫಾರಂ ಯಾನೆ ನಮೂನೆಯಲ್ಲಿ ಮುಬಾದಲೆ ಪಡಕೊಂಡವರ ಹೆಸರು ಅವರ ಸ್ಥಿತಿ ಮುಬಾದಲೆ ಕೊಟ್ಟ ಹಣ ತೆಗದುಕೊಂಡಿರುವ ಜಾಮೀನಿನ ಸ್ವಭಾವ ಹಿಡಿದಿರುವ ಕೆಲಸದ ಸ್ಥಿತಿ ಅಸಲ್ ಬಡ್ಡಿಗೋಸ್ಕರ ಸರಿಕೆ ಮಾಡಿರುವ ಹಣ ಹಾಲೀ ತಾರೀಖಿನವರಿಗೆ ನಿಂತಿರುವ ಜಾತಾ ಬಾಕಿ ಈ ದಾಖಲೆಗಳ ನಮೂದಿಸಿ ಕಮ್ಮಿಷನರವರು (*Half-yearly*) ಅಂದರೆ ೬ ತಿಂಗಳಿಗೆ ಒಂದಾವರ್ತಿ ತಖ್ತೆಯನ್ನು ತಯಾರ್ಮಾಡಿ ಕಳುಹಿಸಿ ಕೊಡತಕ್ಕದ್ದು.

೨೧ ಈ ಆಕ್ಟ ಪ್ರಕಾರ ಕೊಡುವಂತಾ ಅಡ್ವಾನ್ಸಿಗೆ ಸಂಬಂಧವಾದ ಯೆಲ್ಲಾ ರಿಟರ್ನ ತಖ್ತೆಗಳ ರಿಜಿಸ್ಟರ್‌ಗಳ ಮತ್ತು ಲೆಕ್ಕಗಳ ನಮೂನೆಗಳನ್ನು ಕಮ್ಮಿಷನರವರು ಚೀಫ್ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟು ಕ್ರಮಪಡಿಸಬಹುದು.

೨೨ ನೆಲ ರೂಪಿತ ಪಡಿಸುವದಕ್ಕಾಗಿ ಮುಬಾದಲೆಗಳ ಕೊಡುವಬಗ್ಗೆ ಪ್ರಾಂತ್ಯದ ಆಕ್ಟಿನ ಮೇರೆ ಕೊಡಲ್ಪಟ್ಟ ಮುಬಾದಲೆಯಿಂದ ೧,೦೦೦ ರೂಪಾಯಿಗೆ ಮೀರದ ಒಟ್ಟು ಖರ್ಚಿನಿಂದ ಕಟ್ಟಲ್ಪಟ್ಟ ನಾಲಾಕೆಲಸ ವ ಕೆಲಸಗಳಿಂದಲಾಗಲಿ ಅಥವಾ ಒಂದು ಯಾ ಹೆಚ್ಚು ಭಾವಿಗಳ ಮೂಲಕವಾಗಿಯಾಗಲಿ ನೀರು ಹಾಯಿಸಿಕೊಂಡಿರುವ ನಾಲಾ ಕೆಳಗಣ ಭೂಮಿ ಕಂದಾಯದ ದರವಲ್ಲದ ಭೂಮಿ ವಿಷಯದಲ್ಲಿ ಆ ಭೂಮಿ ಕಂದಾಯವನ್ನು ಬದಲಾವಣೆ ಮಾಡುವಾಗ ನಾಲಾ ಕೆಳಗಣ ಭೂಮಿ ಕಂದಾಯದ ದರದಲ್ಲಿ ಕಂದಾಯ ಹಾಕುವದಕ್ಕೋಸ್ಕರ ಆ ಕೆಲಸ ತೀರಿದ ತಾರೀಖ್ ಲಾಗಾಯತು ೨೦ ವರುಷಗಳಮೇಲೆ ಅಂತಾ ಭೂಮಿಯ ಬೆಳೆಯು ಆಲೋಚನೆಗೆ ತರಲ್ಪಡುವದು.

DRAFT OF A REGULATION TO AMEND THE LAW RELATING TO THE COLLECTION OF THE PUBLIC REVENUE IN THE PROVINCE OF COORG.

ಕಳೆದ ಭಾಗದ ಶೇಷ.

ಮೂರನೇದು:—ಜಮೀನುಗಳಖರೀದೀಪೈಕಿ ಸೇಕಡಾ ಹದಿನೈದಕ್ಕೆಸಮನಾದ ಮೊಬಲಗು ಕಮ್ಮಿಷನರವರ ವಶದಲ್ಲಾಗಲಿ, ಆಬಗ್ಗೆ ಕಮ್ಮಿಷನರವರಿಂದ ಅಧಿಕಾರ ಕೊಡಲ್ಪಟ್ಟ ಇತರ ಆಫಸರಲ್ಲಾಗಲಿ, ಕ್ರಯ ಮಾಡುವಕಾಲದಲ್ಲಿ ಕ್ರಯದಾರನು ಡಿಪಾಜಿಟ್ ಇಡತಕ್ಕದ್ದು. ಕ್ರಯದ ಮೊಬಲಗುಪೈಕಿ ಉಳಿದ ಮೊಬಲಗು ಮೂವತ್ತುದಿನಗಳೊಳಗಾಗಿ ಪಾವತೀಮಾಡಲ್ಪಡದೇಹೋದರೆ ಹಾಗೆಯೇ ಡಿಪಾಜಿಟ್ ಇಟ್ಟಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

ಡಿಪಾಜಿಟ್ ಪೂರ್ತಿ ಮೊಬಲಗು ಪಾವತೀ ಮಾಡುವಣ.

ನಾಲ್ಕನೇದು:—ಕ್ರಯದಾರನು ಸದರೀಮೊಬಲಗನ್ನು ಡಿಪಾಜಿಟ್ ಇಡಲಿಕ್ಕೆ ನಿರಾಕರಿಸಿದರೆ ಯಾ ತಪ್ಪಿದರೆ ಅಥವಾ ಕ್ರಯದ ಮೊಬಲಗು ಪೈಕಿ ಉಳಿದದ್ದನ್ನುಪಾವತಿಮಾಡಲಿಕ್ಕೆ ನಿರಾಕರಿಸಿದರೆ ಯಾ ತಪ್ಪಿದರೆ ಸದರೀಸೊತ್ತು ಮರಳಿ ಹರಾಜ್ ಹಾಕಲ್ಪಟ್ಟು ಅದರ ಖರ್ಚಿಗೂ ನಷ್ಟಕ್ಕೂ ಕ್ರಯದಾರನನ್ನು ಒಳಪಡಿಸತಕ್ಕದ್ದು. ಅಂತಾ ನಿರಾಕರಣೆ ಯಾ ತಪ್ಪಿಹೋಗುವಿಕೆ ಇಂತಾದ್ದರ ದೆಸೆಯಿಂದ ಪ್ರಾಪ್ತವಾಗತಕ್ಕ ನಷ್ಟವಾಗಲಿ, ಖರ್ಚಾಗಲಿ, ಅಂತಾ ಕ್ರಯದಾರನಿಂದ ಸರ್ಕಾರದ ಕಂದಾಯದ ಬಾಕೀ ಹ್ಯಾಗೋ ಹಾಗೆ ವಸೂಲ್ಮಾಡತಕ್ಕದ್ದು. ಸದರೀ ಜಮೀನುಗಳು ಎರಡನೆ ಹರಾಜಿನಲ್ಲಿ ಮೊದಲನೇ ಹರಾಜಿಗಿಂತ ಹೆಚ್ಚು ಖರೀದಿಗೆಹೋದರೆ ಅದರನ್ವಯ್ಯಾಸದಬಾಬತು ಅಥವಾ ಜಾಸ್ತೀಯಾದಬಾಬತು ಮೊಬಲಗು ಯಾರಿಗೋಸ್ಕರ ಸದರೀ ಮೊದಲನೇಹರಾಜ್ ನಡಿಸಲ್ಪಟ್ಟಿತೋ ಅವನಿಗೆಸಲ್ಲತಕ್ಕದ್ದಾಗಿರುತ್ತೆ.

ಮೊಬಲಗು ಕೊಡರಿಕ್ಕೆ ತಪ್ಪಿದರೆ ಮರಳಿ ಹರಾಜ್‌ಮಾಡೋಣ.

ಐದನೇದು:—ಒಂದುಹರಾಜಿನಲ್ಲಿ ದರಖಾಸ್ತುಮಾಡುವ ತಮಾಂ ಜನಗಳು ತಮ್ಮ ಸ್ವಂತಕ್ಕೆ ದರಖಾಸ್ತುಮಾಡುತ್ತಾರೆಯೋ ಅಥವಾ ಮುತಾಲೀಕರ ತರೀಕ್ ದರಖಾಸ್ತುಮಾಡುತ್ತಾರೆಯೋ ಅದನ್ನು ತಿಳಿಸುವಂತೆ ಕೋರಲ್ಪಡಬಹುದು. ಮುತಾಲೀಕರ ತರೀಕ್ ದರಖಾಸ್ತು ಮಾಡುವಪಕ್ಷಕ್ಕೆ ಅವರ ಮುಖ್ಯಸ್ಥರಿಂದ ದಸ್ತಖತ್ ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಈನಿಯಮಕಪ್ರಕಾರ ನಡಿಯದಪಕ್ಷಕ್ಕೆ ಅವರ ದರಖಾಸ್ತುಗಳು ತಿರಸ್ಕರಿಸಲ್ಪಡಬಹುದು

ಮುತಾಲೀಕರು ತಮ್ಮ ಮುಖ್ಯಸ್ಥರ ಹೆಸರನ್ನುತಿಳಿಸತಕ್ಕದ್ದು.

೪೧ ಕಂದಾಯಕೊಡಲಿಕ್ಕೆ ತಪ್ಪಿದವನಾಗಲಿ ಆವನ ತರಫಿನಲ್ಲಿ ಕೆಲಸನಡಿಸುವ ಯಾವ ಮನುಷ್ಯನಾಗಲಿ, ಜಮೀನಿನಲ್ಲಿ ತನಗೊಂದು ಸಂಬಂಧ ಪ್ರಾಪ್ತಿಯುವನಾಗಲಿ, ಹರಾಜ್ ನಡಿಸಲಿಕ್ಕೆ ಮೊಕರರ್ ಮಾಡಲ್ಪಟ್ಟ ಆಫಸರಿಗೆ ಕಂದಾಯದ ಬಾಕಿಯ ಪೂರಾಮೊಬಲಗನ್ನು ಅದರ ಬಡ್ಡಿ ಬಾಕಿ ತಗಾದೆ ಮಾಡುವವರಲ್ಲಿಯಾಗಲಿ ಎಸ್ಟೇಟನ್ನು ಜಪ್ತೀಮಾಡುವದು ಯಾ ವಿಚಾರಣೆ ಮಾಡುವದು ಮುಂತಾದ್ದರಲ್ಲಿಯಾಗಲಿ, ಹರಾಜ್ ಬಗ್ಗೆ ಆವಶ್ಯಕವಾದ ಕ್ರಮಗಳನ್ನು ನಡಿಸುವದರಲ್ಲಿಯಾಗಲಿ ಹಿಡಿದ ತಮಾಂ ಖರ್ಚುಗಳು ದೇಖಿಲ್ ಹಾಜರ್ಮಾಡಬಹುದು. ಅದರಮೇಲೆ ಹರಾಜ್ ಮನ್ನಾಮಾಡಲ್ಪಡಬಹುದು. ಪರಂತು ಅಂತಾ ಹಣವನ್ನು ಹರಾಜ್‌ಬಗ್ಗೆ ಗೊತ್ತುಮಾಡಲ್ಪಟ್ಟ ದಿನಕ್ಕೆ ಹಿಂದಿನದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಹಾಜರ್ಮಾಡತಕ್ಕದ್ದು. ಯಾವ ಷಿಕ್ಮೀದಾರನಿಂದಾಗಲಿ ನಿಜವಾದ ಅಡಮಾನಗಾರನಿಂದಾಗಲಿ, ಇತರಲೇಣೇದಾರನಿಂದಾಗಲಿ, ಹಾಗೆ ಪಾವತೀಮಾಡಲ್ಪಟ್ಟ ತಮಾಂಮೊಬಲಗುಗಳು ಮೂವತ್ತೊಂಬತ್ತನೆ ಸೆಕ್ಷನ್ ಅನುಸರಿಸಿ ಮಾಡಲ್ಪಟ್ಟ ಸರಿಕೆಗಳೆಂದು ಭಾವಿಸತಕ್ಕವು.

ಹರಾಜ್‌ತಾರೀಖಿಗೆ ಹಿಂದಿನದಿನದ ಸೂರ್ಯಾಸ್ತಮಯದವರಿಗೆ ಕಂದಾಯದಬಾಕಿಯನ್ನು ಹಾಜರ್ಮಾಡುವಣ.

೪೨. ಒಂದು ಹರಾಜಿನಲ್ಲಿ ಕೊಂಡುಕೊಳ್ಳಲ್ಪಟ್ಟಜಮೀನುಗಳು ಖರೇ ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಡತಕ್ಕವು. ಸದರೀ ಕ್ರಯದಾರನು ಕಮ್ಮಿಷನರವರ ಸೈನ್ ಮೊಹರಾದ ಹರಾಜ್ ಸರ್ಟಿಫಿಕೇಟ್ ತೆಗದುಕೊಳ್ಳತಕ್ಕದ್ದು. ಸದರೀ ಸರ್ಟಿಫಿಕೇಟ್ ಕ್ರಯಕ್ಕೆ ಪಡಕೊಂಡಸಂಗತಿಗೆ ಆಖೈರ್ ಸಾಕ್ಷ್ಯವಾಗಿರತಕ್ಕದ್ದು ಯಾವಅಧಿಕಾರಿಮುಂದೆ ಸದರೀ ಸರ್ಟಿಫಿಕೇಟ್ ಹಾಜರ್ಮಾಡಲ್ಪಡುತ್ತೋ ಆ ಅಧಿಕಾರಿಗೆ, ಅದರ ಯಥಾರ್ಥವನ್ನುಕುರಿತು ಸಂದೇಹಿಸಲಿಕ್ಕೆ ಸಬಬ್ ಇದ್ದಹೊರ್ತು ಕಮ್ಮಿಷನರವರ ಸೈನ್ ಮೊಹರಿಗೆ ರುಜುವಾತೇನೂ ಆವಶ್ಯಕವಾಗಿರತಕ್ಕದ್ದಲ್ಲವು.

ಕ್ರಯದಾರನು ರಿಜಿಸ್ಟರ್‌ಮಾಡಲ್ಪಡತಕ್ಕದ್ದು.

ಸರ್ಟಿಫಿಕೇಟಿನ ಫಲ.

೪೩ ಬಹಿರಂಗವಾದ ಹರಾಜಿನಲ್ಲಿ ಜಮೀನುಗಳು ಕೊಂಡುಕೊಳ್ಳಲ್ಪಟ್ಟಲ್ಲಿ ಕಮ್ಮಿಷನರವರಾಗಲಿ, ಕಮ್ಮಿಷನರವರಿಂದ ಆಬಗ್ಗೆ ಅಧಿಕಾರ ಕೊಡಲ್ಪಡುವ ಇತರ ಆಫಸರಾಗಲಿ, ವಿಕ್ರಯಿಸಲ್ಪಟ್ಟ ಜಮೀನು ಯಾವ ಗ್ರಾಮದೊಳಗೆ ಇರುತ್ತೋ ಆ ಗ್ರಾಮದಲ್ಲಿ ಇಸ್ತಿಹಾರ್‌ಮೂಲಕವು ಮತ್ತು ನಾಡು, ತಾಲ್ಲೂಕು, ಡಿಸ್ಟ್ರಿಕ್ಟು, ಕಚ್ಚೇರಿಗಳಲ್ಲಿ ಬಹಿರಂಗವಾದ ಸ್ಥಳದಲ್ಲಿ ನೋಟೀಸ ಹಚ್ಚುವದರಿಂದಲೂ, ಅನುಕೂಲವಾದಲ್ಲಿ ಸ್ಥಳೀಕ ಸರ್ಕಾರದ ಗೆಜೆಟಿನಲ್ಲಿ ಪಬ್ಲಿಕ್ ಮಾಡುವಣದರಿಂದಲೂ, ಕೊಂಡುಕೊಂಡವನ ಹೆಸರು, ಕೊಂಡುಕೊಂಡತಾರೀಖು ಮತ್ತು ಸದರೀ ಜಮೀನುಗಳಮೇಲೆ ಇದ್ದ ಪೂರ್ವದ ಜಮೀನ್ದಾರನ ತಮಾಂ ಹಕ್ಕುಗಳನ್ನು, ಸ್ವತ್ತನ್ನು ಅಂತಾ ಹರಾಜಿನಲ್ಲಿ ಪಡಕೊಂಡವನಿಗೆ ನ್ಯಾಯತಃ ವರ್ಗಮಾಡಲ್ಪಟ್ಟದ್ದರ ಇಸ್ತಿಹಾರ್‌ಸಮೇತ ಪ್ರಕಟಪಡಿಸತಕ್ಕದ್ದು.

ಹರಾಜ್ ಇಸ್ತಿಹಾರ್.

೪೪. ಹಾಗೆ ಪ್ರಕಟಪಡಿಸಲ್ಪಟ್ಟಾಗ್ಯೂ ನ್ಯಾಯವಾದ ಯಾವ ಕ್ರಯದಾರನಾಗಲಿ ತಾ. ಕ್ರಯಮಾಡಿದ ಜಮೀನಿನ ಸ್ವಾಧೀನತೆಯನ್ನು ಪಡೆಯುವದಕ್ಕೆ ನಿರೋಧಿಸಲ್ಪಟ್ಟರೆ ವ ಅಡ್ಡಿಗೊಳ್ಳಿಸಿದರೆ ಯುಕ್ತವಾದ ಅಧಿಕಾರವುಳ್ಳ ಯಾವ ಕೋರ್ಟಾಗಲಿ ಅರ್ಜಿ ಕೊಡಲ್ಪಟ್ಟದ್ದರಮೇಲೆ ಮತ್ತು ೪೨ನೇ ಸೆಕ್ಷನಿಂದ ವಿಧಿಸಲ್ಪಟ್ಟ ಹರಾಜ್ ಸರ್ಟಿಫಿಕೇಟ್ ಹಾಜರ್ಮಾಡಲ್ಪಟ್ಟಮೇಲೆ ಕೊಂಡುಕೊಳ್ಳಲ್ಪಟ್ಟ ಜಮೀನುಗಳು ಕೋರ್ಟು ಸೈಸಲ್‌ಮೂಲಕ ಕ್ರಯದಾರನಿಗೆ ತೀರ್ಪು ಮಾಡಲ್ಪಟ್ಟದ್ದರೆ ಹ್ಯಾಗೋ ಅದೇರೀತಿಯಲ್ಲಿ ಕ್ರಯದಾರನ ವಶಪಡಿಸುವಬಗ್ಗೆ ಕ್ರಮವಾದ ಪ್ರೊಸೆಸ ಹುಟ್ಟಿಸತಕ್ಕದ್ದು.

ಸೊತ್ತನ್ನು ಸ್ವಾಧೀನಪಡಿಸುವಿಕೆ

೪೫ ಕಂದಾಯಕೊಡಲಿಕ್ಕೆ ತಪ್ಪಿದವನು ತನ್ನಷಿಕ್ಮೀದಾರರ ಸಂಗಡ ಮಾಡಿಕೊಳ್ಳುವ ತಮಾಂ ಒಡಂಬಡಿಕೆಗಳು ಅವನಿಗೆ ಅವರುಗಳು ಮಾಡುವ ಹಣ ಪಾವತೀಗಳು ಈ ರೆಗ್ಯುಲೇಷನ್ ಯಾನೆ ಹುಕುಂನಾಮೆಯ ಮೂವತ್ತಾರು ಯಾ ಮೂವತ್ತೇಳನೆ ಸೆಕ್ಷನ್‌ಗಳಲ್ಲಿ ವಿಧಿಸಲ್ಪಟ್ಟಷ್ಟುಮಟ್ಟಿಗೆ ಮತ್ತು ಅದೇಷರತ್ತುಗಳನ್ನನುಸರಿಸಿ ಕ್ರಯದಾರನು ಬದ್ಧನಾಗಿರತಕ್ಕದ್ದು.

ಕಂದಾಯಕೊಡಲಿಕ್ಕೆ ತಪ್ಪಿದವನಸಂಗಡ ಮಾಡಿಕೊಳ್ಳಲ್ಪಟ್ಟ ಒಡಂಬಡಿಕೆಗಳಿಗೂ ಅವನಿಗೆ ಆದ ಸರಿಕೆಗಳಿಗೂ ಎಷ್ಟರಮಟ್ಟಿಗೆ ಕ್ರಯದಾರನು ಬದ್ಧನಾಗಿರತಕ್ಕದ್ದು.

೪೬ ಕಂದಾಯ ಬಾಕಿಗೋಸ್ಕರ ಹರಾಜಿಗೆ ತರಲ್ಪಡುವ ತಮಾಂ ಜಮೀನುಗಳು ತಮಾಂ ದೇಣೆಗಳು ಇಲ್ಲದೆ ವಿಕ್ರಯಿಸಲ್ಪಟ್ಟು ಬಾಕಿಗಳನ್ನು ಬಡ್ಡಿ ಜಪ್ತಿ ವ ಹರಾಜ್ ಮತ್ತು ಅಂತಾ ಬಾಕೀವಿಷಯದಲ್ಲಿ ಹಿಡಿಯತಕ್ಕ ಇತರ ಖರ್ಚುಗಳು ಇವುಗಳನ್ನು ತೀರಿಸಿದಬಳಿಕ ಸಿಲ್ಕುಮೊಬಲಗೇನಾದರು ಉಳಿದರೆ ಹಾಗೆ ಪಾವತಿಮಾಡುವಣಕ್ಕೆ ತಕ್ಕ ಅಧಿಕಾರವುಳ್ಳ ಕೋರ್ಟಿನ ಹುಕುಮಿನಿಂದ ನಿಷೇಧಿಸಲ್ಪಡದೆ ಇದ್ದರೆ ಕಂದಾಯಕೊಡಲಿಕ್ಕೆ ತಪ್ಪಿದವನಿಗೆ ಪಾವತಿಮಾಡಲ್ಪಡತಕ್ಕದ್ದು.

ಹರಾಜ್ ತಮಾಂ ದೇಣೆದೆಸೆಯಿಂದ ಖುಲಾಸೆಯಾಗಿರತಕ್ಕದ್ದು.

ಖರ್ಚು ಜಾತಾ ಆದ ಮೊಬಲಗಿನ ವಿನಿಯೋಗ.

BANGALORE:—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧ [illegible] ಕರ್ಣಾಟಕಪ್ರಕಾಶಿಕಾ [illegible] ॥ [illegible]

Vol. XIII.] BANGALORE.—MONDAY, OCTOBER 4, 1886. [No. 40.

ಸಂಪುಟ ೧೩.] ಬೆಂಗಳೂರು.—ಸನ್ ೧೮೮೬ನೇ ಇಸವಿ ಅಕ್ಟೋಬರ ೪ನೇ ತಾರೀಖ್ ಸೋಮವಾರ. [ಸಂಚಿಕೆ ೪೦.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲೀಷ ಮತ್ತು ಕನ್ನಡ ತೆಗೆದುಕೊಳ್ಳತಕ್ಕವರಿಗೆ, ವರುಷ ೧ಕ್ಕೆ ...		೧೨—೦—೦
ಇಂಗ್ಲೀಷು ಮಾತ್ರ ತೆಗೆದುಕೊಳ್ಳತಕ್ಕವರಿಗೆ ವರುಷ ೧ಕ್ಕೆ ...		೬—೦—೦
ಕನ್ನಡಮಾತ್ರ ತೆಗೆದುಕೊಳ್ಳತಕ್ಕವರಿಗೆ [illegible] ವರುಷಕ್ಕೆ .		೬—೦—೦
ತಿಂಗಳು	೧ಕ್ಕೆ	೦—೮—೦

ಸೂ.—ಚಂದಾದಾರರು ಇಂಗ್ಲೀಷು [illegible] ಅಥವಾ, [illegible] ತೆಗೆದುಕೊ [illegible] ಚಂದಾ [illegible] ಸ್ಪಷ್ಟ [illegible]

ಪ್ರಕಟನೆಯ ರಿವಾಜ್.

[illegible]	೧ಕ್ಕೆ	೦—೨—೦
[illegible]	೧ಕ್ಕೆ	೦—೧—೦

NOTICE TO SUBSCRIBERS

[illegible] ಅಂಶಗಳಿಗೆ ನಮ್ಮ ಚಂದಾದಾರರು [illegible] ಕೋರುತ್ತೇವೆ [illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA.

Price including Postage, Rs.5-0-0

ವೈದ್ಯಸಾರ ಸಂಗ್ರಹ.

ಈ ಗ್ರಂಥ [illegible] ತೆಗೆದುಕೊಳ್ಳ [illegible]

[illegible]	ರೂ॥ ೫—೦—೦
[illegible] ಮತ್ತು ಅಂಚೆ ಹಾಸಲ್	೦—[illegible]—೦

[illegible], ಬೆಂಗಳೂರು.

ನೋಟೀಸ್.

ಇದರಡಿ ವಿವರಿಸಲ್ಪಡುವ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳು ಬೆಂಗಳೂರು ಕರ್ಣಾಟಕ ಪ್ರಕಾಶಿಕಾ ಆಫೀಸ್ ನಲ್ಲಿ ಕ್ರಯಕ್ಕೆ ದೊರಕುತ್ತವೆ.—

ಕನ್ನಡ ಟೀಕಾ ಸಹಿತವಾದ ಸಂಸ್ಕೃತ ಗ್ರಂಥಗಳು.

ಶಿವಲೀಲಾಮೃತ. ...	೧—೪—೦
ಮುಹೂರ್ತದರ್ಪಣ. ...	೦—೧೨—೦
ಛಂದಸ್ಸು (ವೃತ್ತರತ್ನಾಕರ) ...	೦—೩—೦
[illegible]	೦—೫—೦
ಬಾಲರಾಮಾಯಣ ...	೦—೪—೦
[illegible]	೦—೧೪—೦
[illegible] ...	೦—೬—೦
ಬಾಲಗ್ರಹ.	೦—೨—೦
ವೈದ್ಯಸಾರಸಂಗ್ರಹ ...	೫—೦—೦

ಕನ್ನಡ ಗ್ರಂಥಗಳು.

[illegible] ...	೦—೬—೦
[illegible] ...	೦—೪—೦
[illegible] ...	೦—೩—೬
[illegible]	೦—೨—೬
[illegible] ...	೦—೪—೦
[illegible] ...	೦—೨—೦
[illegible] ...	೦—೨—೬
[illegible] ...	೦—೬—೦
[illegible] ...	೦—೩—೦
[illegible] ...	೦—೨—೦
[illegible] ...	೦—೦—೯
ಇಂಗ್ಲೀಷು ಕನ್ನಡ [illegible]	೧—೧—[illegible]
[illegible]	೨—೦—೦
[illegible] ...	೦—೧೨—೦
[illegible] ...	೩—೪—೬
[illegible] ...	೩—೪—೬
[illegible] ಸ್ಕೂಲ್ ಎಂಟ್ರೆನ್ಸ್	
೧ನೇ [illegible] ...	೦—೮—೦
[illegible] ೨ನೇ [illegible] ...	೧—೮—೦
[illegible] ...	೦—೮—೦

ಸಂಸ್ಕೃತ ಮೂಲಗ್ರಂಥಗಳು.

ವಿಷ್ಣುಸಹಸ್ರನಾಮ. .	೦—೫—೦
[illegible] ...	೦—೨—೬
[illegible] ...	೦—೨—೬
[illegible] ...	೦—೦—೬
[illegible] ...	೦—೩—೬
[illegible] ...	೦—೧—೦

[illegible] ಹಾಸಲ್ [illegible] ಬಟ್ಟಿರುವ ಪುಸ್ತಕ [illegible] ಹಾಸಲ್ [illegible]

ನೋಟಿಸು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ.—

ಬೆಂಗಳೂರು ಅರಳೇಪೇಟೆಯಲ್ಲಿ ನಮ್ಮ ಮಾವಂದಿರು ಸರಾಫ್ ರಂಗಪ್ಪನವರ ಬಾಬತು ಮ್ಯುನಿಸಿಪೆಲ್ ೧೩—೧೪ ನಂ. ಮನೆಗಳೆರಡು ಇರುತ್ತೆ. ನಮ್ಮ ಮಾವನವರಿಗೆ ಮೂರುಜನ ಗಂಡು ಮಕ್ಕಳಲ್ಲಿ ಗತಿಸಿದ ನನ್ನ ಗಂಡನಬಗೆ ಮನೆ ನನ್ನ ಜೀವನಕ್ಕೆ ಸಲ್ಲಬೇಕಾಗಿದೆ. ಆ ಮನೆಗಳೆರದನ್ನೂ ನನ್ನ ಭಾವಂದಿರು ಗತಿಸಿದ ವೆಂಕಟರಾಮಯ್ಯನವರ ಎರಡನೇ ಹೆಂಡತಿ ವೆಂಕಟಲಕ್ಷ್ಮಮ್ಮನು ಜನಗಳ ದುರ್ಬೋಧನೆಗೆ ಒಳಪಟ್ಟು ವಿಕ್ರಯಿಸಬೇಕೆಂದಿರುವದಾಗಿ ಪೌರುಮನೆಯಲ್ಲಿರುವ ನನಿಗೆ ವರ್ತಮಾನ ತಿಳಿದದ್ದರಿಂದ ನನ್ನ ಬಾಬತು ಮನೆಯನ್ನು ಯಾರೂ ತೆಗದುಕೊಳ್ಳಕೂಡದು. ತೆಗದುಕೊಂಡವರು ಆ ನಷ್ಟಕ್ಕೆ ಬದ್ಧರಾಗುತ್ತಾರೆ. ಖುಶಿತವಾಗಿ ತಿಳಸಿದೆ.

ಗೌರೀಬಿದನೂರು ತಾ॥ ಹಲಿಕೂರು, ೨೭—೯—೮೬. } ೦ ಸರಾಫ್ ರಂಗಪ್ಪನವರ ಎರಡನೇ ಮಕ್ಕಳು ಪೆಂಕಟರಾಮಯ್ಯನವರ ಹೆಂಡತಿ ವೆಂಕಮ್ಮನ ಗುರ್ತಿನ ರುಜು.

ನೋಟಿಸ್.

ಇದರಿಂದ ಸಮಸ್ತಜನಗಳಿಗೂ ಈ ಕೆಳಗೆ ರುಜು ಮಾದಿರುವವರಿಂದ ತಿಳಿಯಪಡಿಸುವದೇನಂದರೆ:—

ನಮ್ಮ ತಂದೆಗಳಾದ ಸರಾಫ್ ರಂಗಪ್ಪನವರಿಗೆ ವೆಂಕಟರಾಮಯ್ಯ, ವೆಂಕಟರಾಮಯ್ಯ, ನಾನು, ಈ ೩ ಜನಮಕ್ಕಳು. ಇವರಲ್ಲಿ ೧—೨ನೇ ಮಕ್ಕಳಾದ ನಮ್ಮಣ್ಣಂದಿರು ದೈವಾಧೀನರಾಗಿ ಅಪ್ರುತ್ರವತಿಯರಾದ ವಿತಂತುಗಳು ಇಬ್ಬರ ಹೆಂಡತಿಯರೂ ಇದಾರೆ. ೧ನೇ ವೆಂಕಟರಾಮಯ್ಯನವರ ಎರಡನೇ ಹೆಂಡತಿ ವೆಂಕಟಲಕ್ಷ್ಮಮ್ಮ ಯೆಂಬಾಕೆ ನಮ್ಮ ಪಿತ್ರಾರ್ಜಿತವಾಗಿ ಬೆಂಗಳೂರು ಅರಳೇ ಪೇಟೆಯಲ್ಲಿರುವ ಮ್ಯೂನಿಸಿಪೆಲ್ ೧೩—೧೪ನೇ ನಂಬರ್ ಮನೆಗಳೆರಡನ್ನೂ ವಿಕ್ರಯಿಸಬೇಕೆಂದಿರುವಂತೆ ವರ್ತಮಾನಕೇಳಿದೆ. ನಾನು ಪರಸ್ಥಳದಲ್ಲಿ ಸರ್ಕಾರದ ನೌಕರಿಯಲ್ಲಿರುವದರಿಂದ ನನ್ನ ಅನುಮತಿವಿನಾ ಮೇಲ್ಕಂಡ ವೆಂಕಟಲಕ್ಷ್ಮಮ್ಮನವರಿಂದ ಯಾರಾದರೂ ಕ್ರಯ ಭೋಗ್ಯ ಆಧಾರಗಳಿಗೆ ಮನೆಗಳೆರಡನ್ನೂ ತೆಗದುಕೊಂಡರೆ ಆ ಹಣಕ್ಕೆ ನಾವು ಜವಾಬ್ದಾರರಾಗುವದಿಲ್ಲ. ಮನೆಗಳನ್ನು ಬಿಟ್ಟುಕೊಡಬೇಕಾದ ಕೋರ್ಟುಖರ್ಚು ಲುಕ್ಸಾನಿಗೆ ಕ್ರಯದಾರರು ಬದ್ಧರಾಗಬೇಕಾಗುತ್ತೆ. ನಮ್ಮ ಇಬ್ಬರ ಅಣ್ಣಂದಿರ ಹೆಂಡತಿಯರೂ ನನ್ನಿಂದ ಜೀವನಾಂತ ತೆಗದುಕೊಳ್ಳಲು ಗ್ರಾಸಸ್ವರ ಮೊಬ್ಲಾ ಒಪ್ಪಿರುವದಕ್ಕೆ ರುಜು ಮಾಡಿರುವದರು ಬದ್ಧರಾಗಿರುವವರಿಂದಲೂ ರುಜುಮಾದಿರುವವರು ವಿನಾ ಇನ್ಯಾರೂ ಬಾಧ್ಯರಿಲ್ಲದೆ ಮುಂದೆ ಇವರ ಪ್ರಿಯಾಪಿಗಳನ್ನು ಮಾಡಬೇಕಾದ ವಾರಸುದಾರರಾಗಿರುವದರಿಂದಲೂ ಪಿತ್ರಾರ್ಜಿತವಾದ ಮನೆಗಳನ್ನು ಮೇಲೆಕಂಡಾಕೆ ವಿಕ್ರಯಿಸಲು "ಲಾ" ಪ್ರಕಾರ ಹಕ್ಕಿಲ್ಲ, ಜೀವನಾಂತಕ್ಕೆ ಮಾತ್ರ ಬಾಧ್ಯರು. ಖುಶಿದಾಗಿ ಯಾರೂ ತೆಗದುಕೊಳ್ಳಕೂಡದು.

ಬಿ. ರಾಘವೇಂದ್ರರಾವ್.

ನಾಗಮಂಗಲ ೨೨—೯—೮೬ } ಹೆಡ್ ಮಾಸ್ಟರ್, ಗ. ಕನ್ನಡ ಸ್ಕೂಲ್, ನಾಗಮಂಗಲ, ಡಿ. ಮೈಸೂರು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, OCTOBER 4, 1886.

೧೮೮೬ನೇ ಅಕ್ಟೋಬರ್ ೪ನೇ ತಾ॥ ಸೋಮವಾರ.

THE LATE MR. VENCATACHALA MUDALIAR

ಲೇಟಿ ಹೆಡ್ ಶಿರಸ್ತೇದಾರ್ ಮೆ॥ ಅಪ್ಪಾವು ಮುದಲಿಯಾರ್ರವರ ಜ್ಯೇಷ್ಠಪುತ್ರರಾಗಿಯೂ ಹುಜೂರು ಖಜಾನೆ ಬಕ್ಷಿಯವರಾಗಿಯೂ ಇದ್ದ ಮೆ॥ವೆಂಕಟಾಚಲ ಮುದಲಿಯಾರ್ರವರು ಮಾಹೇ ಮಜಕೂರ್ ೨ನೇ ತಾರೀಖಿನದಿನ ರಾತ್ರಿ ಈವೂರು ಕೋಟೆಯಲ್ಲಿರುವ ಸ್ವಗೃಹದೊಳು ಅನಿರೀಕ್ಷಿತವಾಗಿ ಕಾಲಗತಿಯನ್ನೈದಿದರೆಂಬ ವೃತ್ತಾಂತವು ತಿಳಸಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಇವರು ಅರೋಗ ದೃಢಗಾತ್ರರಾಗಿದ್ದದರಿಂದ ಇವರಿಗೆ ಪ್ರಂಟಾದ ಆಕಸ್ಮಿಕ ಮರಣವು ಯೆಲ್ಲರನ್ನೂ ಆಶ್ಚರ್ಯಗೊಳಿಸಲು ಶಕ್ತವಾದದ್ದಾಗಿರುತಿದೆ. ಬಾಹ್ಯವಾದ ಯಾವದೋ ಒಂದುವಿಧ ಉಪಾಧಿ ನಿವೃತ್ಯರ್ಥ ಮಾಡಿಕೊಂಡ ಯೂರೋಪಿಯರ್ ಚಿಕಿತ್ಸೆಯ ವೇಗವನ್ನು ತಡೆಯಲಾರದೆ ಹೋಗಲು ಅದೇ ಅವರನ್ನು ಮೃತ್ಯುಮುಖಕ್ಕೊಳಪಡಿಸಿತೆಂದು ತಿಳಿಯಲಾದೆವು. ಇತರಲ್ಲಿ ತಮ್ಮ ಪಂಶಾನುಗುಣವಾದ ಸದ್ಗುಣಗಳೇ ಬಹಳವಾಗಿ ನೆಲಗೊಂಡಿದ್ದವಲ್ಲದೆ ಇವರ ನಿಸ್ಪೃಹತೆಯೂ ಪ್ರಾಮಾಣಿಕತೆಯೂ ಸೌಲಭ್ಯವೂ ಕೊಂಡಾಡತಕ್ಕವಾಗಿದ್ದವು. ಸ್ವಾಭಾವಿಕಗಳಾದ ಇವರ ಸೌಜನ್ಯ ಸುಶೀಲ್ಯಾದಿಗುಣಗಳೂ, ಪರಿಗಣನೀಯವಾದ ಬಂಧುಬಂಧುತ್ವವೂ, ಜವಾಬ್ದಾರೀ ಯುಕ್ತ ಸ್ವತಂತ್ರಾಧಿಕಾರ ನಿರ್ವಹಣ ಪಾಟವವೂ ಮಾಮಲೇಯತ್ ಕೆಲಸದಿಂದ ಪ್ರಕೃತ ಅವರು ಪಡೆದಿದ್ದ ಉತ್ತಮಾಧಿಕಾರಕ್ಕೆ ವಿಶೇಷತಃ ಇವರಂತೆಂದವೆಂದು ದೃಢವಾಗಿ ಹೇಳಬಲ್ಲೆವು. ಈ ಖಜಾನೇ ಬಕ್ಷಿ ಕೆಲಸವು ಅನಿರೀಕ್ಷಿತವಾಗಿ ಖಾಲೀಯಾದ ಕಾಲದೊಳು ಈ ದೇಶದಲ್ಲಿ ಬ್ರಿಟಿಷ ಸಂಬಂಧಕ್ಕೆ ಅವಸಾನಕಾಲವಾಗಿದ್ದರೂ ಅದು ಯಥೋಚಿತ ಅಂಟಿಕೊಂಡಿದ್ದದರಿಂದ ಆಗಿದ್ದ ಚೀಫ್ ಕಮಿಷನರವರು ಮೆ. ವೆಂಕಟಾಚಲ ಮೊದಲಿಯಾರ್ರವರ ಅರ್ಹತೆಯನ್ನು ಪುರಸ್ಕರಿಸಿ ಸದರೀ ಉದ್ಯೋಗವನ್ನು ಅವರಿಗೆ ಕೊಟ್ಟರು. ಇದಲ್ಲದೆ ಖಜಾನೇ ಬಕ್ಷಿಗೆ ಇರುವ ಜವಾಬ್ದಾರಿಯನ್ನು ಪರ್ಯಾಲೋಚಿಸಿ ಜಾಮೀನ್ ಮೊಬಲಗನ್ನು ಜಾಸ್ತೀಪಡಿಸಿದ್ದರಿಂದ ಏಕಕಾಲದಲ್ಲಿ ನಲವತ್ತುಸಾವಿರರೂಪಾಯಿಗಳನ್ನು ಠೇವಣೀ ಇಡುವ ಶಕ್ತಿಯೂ, ವಿದ್ಯಾಬುದ್ಧಿ ಪ್ರಯುಕ್ತವಾದ ಅರ್ಹತೆಯೂ ವುಳ್ಳವರನ್ನು ಹುಡುಕಲಾಗಿ ಇವರೇ ಸುಲಭವಾಗಿ ದೊರೆತರು. ಇವರು ಚಿತ್ರದುರ್ಗ ವಗೈರೆ ಅನೇಕ ತಾಲ್ಲೂಕುಗಳಲ್ಲಿ ಮಾಮಲೇ ಕೆಲಸ ಮಾಡಿ ಸಮರ್ಥರೆನಿಸಿ ತಮ್ಮ ಮೇಲ್ಪಟ್ಟ ಅಧಿಕಾರಿಗಳ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿ ಅಲ್ಲಿಂದ ಖಜಾನೆ ಬಕ್ಷೀಕೆಲಸಕ್ಕೆ ಬಂದದ್ದು ಮೊದಲು ಸದರೀ ಕೆಲಸವನ್ನು ಬಹಳ ಅಕ್ಕರೆಯೊಡನೆಯೂ, ಜಾಗರೂಕತೆಯೊಡನೆಯೂ ಪ್ರಾಮಾಣಿಕತೆಯೊಡನೆಯೂ ನಿರ್ವಹಿಸುತಬಂದರು. ಅಧಿಕಾರನಿರ್ವಹಣೆಯೊಳು ಖಂಡಿತರಾಗಿದ್ದಾಗ್ಯೂ ತಮ್ಮ ತಾಬೇದಾರರನ್ನು ಪ್ರೀತಿ ಗೌರವದೊಡನೆ ನೋಡುತಲಿದ್ದರು. ಅಪ್ರತೀಕಾರವಾದ ಕಾಲ ಧರ್ಮವು ಅನುಲ್ಲಂಘನೀಯವಾದದ್ದಾದರೂ ಸದರೀ ದೊಡ್ಡಮನುಷ್ಯರ ವಿಯೋಗವು ಅನೇಕ ಕಾರಣಗಳಿಂದ ಶೋಚನೀಯವಾದದ್ದಾಗಿರುತಿದೆ.

ಲೋಕದಲ್ಲಿ ಐಹಿಕ ಸುಖಾನುಭವ ಪ್ರಾಪ್ತಿ ವಿಹೀನನಾದ ನಿರ್ಭಾಗ್ಯನು ಗತಿಸಿದಾಗ್ಯೂ ಮಿಕ್ಕವರಿಗೆ ಸ್ವಸುಖಾಭಿಲಾಷೆಯೂ ಸ್ವಪ್ರಯೋಜನ ದೃಷ್ಟಿಯೂ ತಪ್ಪುವದಿಲ್ಲವಾಗಿ ಮೆ॥ ವೆಂಕಟಾಚಲ ಮುದಲಿಯಾರ್ರವರ ಮರಣದ ಮೂ

ಲಕ ಈಗ ಖಾಲಿಯಾಗಿರುವ ಖಜಾನೇಬಕ್ಷಿ ಕೆಲಸಕ್ಕೆ ಅರ್ಹರಾದವರ್ಯಾರೆಂಬ ವಿಚಾರವೂ, ಅದಕ್ಕೆ ಯಾರನ್ನು ನೇಮಕರಮ್ಮಾಡಿದರೆ ನಿರ್ವಿವಾದವಾದದ್ದಾಗಿರುವದೆಂಬ ಆಲೋಚನೆಯೂ, ಮತ್ತೊಂದುಕಡೆ ನಮ್ಮನ್ನು ಬಾಧಿಸದಿರಲಿಲ್ಲವು. ಪ್ರಸಕ್ತ ಕೆಲಸಕ್ಕೆ ಬರತಕ್ಕವರು ಸಹ ಗತಿಸಿದ ಮೆ॥ ವೆಂಕಟಾಚಲ ಮುದಲಿಯಾರ್ರವರಂತೆ ಸಮಾನಗುಣಯೋಗ್ಯತೆಯುಳ್ಳವರಾಗಿಯೂ, ಉಭಯನ್ನರಾಗಿಯೂ, ತಟಸ್ಥರಾಗಿಯೂ, ಇರಬೇಕಾದ್ದು ಆವಶ್ಯಕವೆಂಬದನ್ನೊಬ್ಬರೂ ಆಕ್ಷೇಪಿಸಲಾರರಷ್ಟೆ. ತತ್ಪ್ರಸಿ ಅಂತವರು ಒಬ್ಬರಿಬ್ಬರು ಸಿಕ್ಕಿ ಅವರ ಪೈಕಿ ಯಾರಿಗೆ ಈಗ ಖಾಲೀಯಾಗಿರುವ ಕೆಲಸವನ್ನು ಕೊಟ್ಟರೆ ನ್ಯಾಯ್ಯವಾಗಿಯೂ ಯೋಗ್ಯವಾಗಿಯೂ ಇರುವದೆಂಬದನ್ನು ಮಹಾರಾಜಾ ಸರ್ಕಾರದವರು ಆಲೋಚಿಸಬೇಕಾಗಿರುತಿದೆ. ಖಜಾನೇ ಬಕ್ಷಿ ಕೆಲಸಕ್ಕೆ ಬೇಕಾದಷ್ಟು ನಗದು ಜಾಮೀನನ್ನು ಕೊಡಲಿಕ್ಕೆ ಶಕ್ತರಾದ ಧನವಂತರನೇಕರು ಮೇಲ್ಬಿದ್ದು ಬರಬಹುದು. ಅಥವಾ ವಿದ್ಯಾವೈಲಕ್ಷಣ್ಯಾದಿಗಳಿಂದಲೂ, ಮಹೋನ್ನತಬಿರುದುಗಳಾದ ಯೂನಿವರ್ಸಿಟಿ ಪ್ರಶಸ್ತಿಗಳಿಂದಲೂ, ಅರ್ಹರೆನಿಸಿಕೊಂಡವರನೇಕರು ಬರಬಹುದು. ಪರಂತು ಔಚಿತ್ಯವೆಂಬದೊಂದು ಪ್ರತ್ಯೇಕವಾದದರಿಂದ ಅದರ ಮೇಲೆ ಸ್ವಲ್ಪ ದೃಷ್ಟಿಯಿಡಬೇಕಾಗಿರುತಿದೆ. ಮೆ. ವೆಂಕಟಾಚಲ ಮುದಲಿಯಾರ್ರವರ ಸುಗುಣ ಸಂಬಂಧಾದಿಗಳು ಪ್ರಾಯಿಗೆ ಪೂರ್ವಿನಿಂದ ಉಪಲಬ್ಧಗಳಾದವೋ ಅದರಂತೆ ಅವರ ಸೋದರರಾದ, ಮೈಸೂರು ತಾಲ್ಲೂಕಿ ಅಮಲ್ದಾರ್ ಮೆ. ವೀರಾಸ್ವಾಮಿ ಮುದಲಿಯಾರ್ರವರ ಪಕ್ಕ್ವಾರಿಯನ್ನೂ, ಅರ್ಹತೆಯನ್ನೂ, ಯೋಗ್ಯತೆಯನ್ನೂ, ಉಪಪತ್ತಿಯನ್ನು ಸಹ ಪರ್ಯಾಲೋಚಿಸಬೇಕಾಗಿರುತಿದೆ. ಅಮಲ್ದಾರೀ ಕೆಲಸದಲ್ಲಿರುವವರಿಗೆ ಹುಜೂರ್ ಖಜಾನೇ ಬಕ್ಷಿ ಕೆಲಸ ಕೊಡುವದು ಹ್ಯಾಗೆಂದು ಕೇಳುವರೆ, ಅಮಲ್ದಾರಿಯಿಂದ ಬಕ್ಷೀಗಿರಿಗೆ ಬಂದ ಇತರ ಅಣ್ಣಂದರ ದಾಖಲೆಯನ್ನು ಚಿಂತಿಸಿ ನೋಡಬಹುದು. ಇನ್ನೂರು ರೂಪಾಯಿಗಳ ಸಂಬಳದವರಿಗೆ ಒಂದೇ ದಫಾ ನಾನೂರು ರೂಪಾಯಿಗಳು ಕೊಡುವದು ಹ್ಯಾಗೆ ಉಚಿತವೆಂದರೆ, ಅದಕ್ಕೆ ಸಹ ಗತಿಸಿದ ಮೆ. ವೆಂಕಟಾಚಲ ಮುದಲಿಯಾರ್ರವರನ್ನೇ ಉದಾಹರಣತ್ವೇನ ಅಂಗೀಕರಿಸಬಹುದು. ಮುಖ್ಯವಾಗಿ ಪ್ರಸಕ್ತ ಕೆಲಸಕ್ಕೆ ಇತರಾಪೇಕ್ಷಯಾ ಮೆ. ವೀರಾಸ್ವಾಮಿ ಮುದಲಿಯಾರ್ರವರೇ ಸಕಲ ವಿಧದಿಂದಲೂ ಅರ್ಹರೆಂದು ಉದ್ದೇಶಿಸಿ ಹೇಳುವೆವು. ನಿಷ್ಪಕ್ಷಪಾತವಾದ ವಿಚಾರದಿಗೆ ಇವರಂತೆ ವಿಷಯರಾಗತಕ್ಕವರು ಅನ್ಯರೊಬ್ಬರೂ ಇರಲಾರರೆಂದೆಣಿಸುತ್ತೇವೆ. ಲೇಟಿ ಚೀಫ್ ಕಮಿಷನರವರ ಸ್ಥಾನಾಪನ್ನರಾದ ಪ್ರಕೃತ ದಿವಾನರವರು ಈ ವಿಷಯದಲ್ಲಿ ಪೂರ್ವಿಕರನ್ನು ಅನುವರ್ತಿಸಿ ನಡೆಸಿದರೆ ನೌಕರಾಳೆಂದಾರರ ಚಿರಕಾಲಿಕವಾದ ಸಂಬಂಧವನ್ನು ಪೋಷಿಸುವಂತೆ ಯಾಗುವದು.

REMUNERATION TO PATELS AND SHANBOGUES

ಈ ದೇಶದಲ್ಲಿ ಪ್ರಬಲಗಳಾದ ಮೂರು ಉದ್ದೇಶಗಳ ಮೇಲೆ ಮೊದಲು ಸರ್ವೇ ಸೆಟಲ್ಮೆಂಟ್ ಪದ್ಧತಿ ನೆಲಗೊಳಿಸಲ್ಪಟ್ಟಿತು. ಅವುಗಳ್ಯಾವವೆಂದರೆ:—ಬಡವರಾದ ರೈತರನ್ನು ಈತಿಬಾಧೆಗಳಿಂದ ತಪ್ಪಿಸಿ ಅವರಿಗೆ ಶಾಶ್ವತವಾದ ಸುಖವನ್ನುಂಟುಮಾಡಬೇಕೆಂಬದೊಂದು ; ಗ್ರಾಮ ನೌಕರರಾದ ಪಟೇಲ್ ಶಾನುಭೋಗರಿಗೆ ತಕ್ಕ ಆಯತಿಯನ್ನು ಕಲ್ಪಿಸಿ ಅವರ ಮೂಲಕ ರೈತರಿಗೆ ಯಾವವಿಧ ನಿರ್ಬಂಧವೂ ಪ್ರಾಪ್ತವಾಗದಂತೆ ಮಾಡಬೇಕೆಂಬದು ಯೆರಡನೆಯದು ; ಸರ್ಕಾರಕ್ಕೆ ನ್ಯಾಯ್ಯವಾಗಿ ಸಲ್ಲಬೇಕಾದ ರಾಜಭಾಗವನ್ನು ಕ್ರಮವಾಗಿ ಒಬ್ಬರಿಗೂ ತೊಂದರೆಯಿಲ್ಲದಂತೆ ಬರಮಾಡಿಕೊಳ್ಳಬೇಕೆಂಬದು ಮೂರನೆಯದು ; ಪ್ರಥಮ ಈ ಈ ಅಭಿಪ್ರಾಯ ಪ್ರಾಪ್ತವಾದ ಕಾಲದಲ್ಲಿ ಈ ರಾಜ್ಯವು ಮರಳ ಒಬ್ಬ ನೇಟಿವ್ ಅರಸರ ಪಾಲನೆಗೊಳಪಡಿಸಲ್ಪಡುವದೆಂಬ ಸ್ಮರಣೆಗೆ ಸಹ ಅವಕಾಶವಿರಲಿಲ್ಲವು. ತರುವಾಯ ಕಾಲಗತಿಯು ರೂಪಾಂತರವನ್ನೈದಿದರಿಂದ ಅನೇಕ ನಿಯಮಗಳಗೊಳಪಟ್ಟು ಕಡೆಗೆ ಈ ರಾಜ್ಯವು ನೇಟಿವ್ ಅರಸರ ಹಸ್ತಗತವಾಯಿತು. ಪರಂತು ಬ್ರಿಟಿಷಿನವರು ಇಲ್ಲಿ ನೆಲಗೊಳಿಸಿದ ರಾಜ್ಯತಂತ್ರಕ್ರಮವನ್ನು ಊರ್ಜಿತ ಪಡಿಸಬೇಕೆಂಬ ನಿರ್ಬಂಧವೂ ತದನುಸಾರ ವರ್ತಿಸಬೇಕೆಂಬ ಕೋರಿಕೆಯೂ ತಪ್ಪದೆ ಹೋಯಿತು. ಇದರಿಂದ ಯೂರೋಪಿಯರ್ನಗಳ ಪ್ರತ್ಯಾಮ್ನಾಯರಾಗಿ ನೇಟಿವ್ಗಳನ್ನು ನೇಮಕರಮ್ಮಾಡಿ ಅವರಿಗೆ ಮೊದಲನೆಯವರಿಗೆ ಸಮಾನವಾಗಿ ಸಂಬಳ ಕೊಡುವ ನಿಯಮವೂ, ಸಿಲ್ಕು ಮಿಗಿಲಿಸದೆ ಆಯತಿಗೆ ತಕ್ಕ ವ್ಯಯವನ್ನು ತೋರಿಸಬೇಕೆಂಬ ನಿಷ್ಕರ್ಷೆಯೂ, ಪ್ರಜಾಭಿಪ್ರಾಯದಂತೆ ರಾಜ್ಯಭಾರವು ನಡೆಸಲ್ಪಡುವದೆಂಬ ಭಾವದ್ಯೋತಕವಾದ ಬಾಹ್ಯಾಡಂಬರವೂ ನೆಲಗೊಳ್ಳಲಿಕ್ಕೆ ಕಾರಣವಾಯಿತೇ ಹೊರ್ತು ಮತ್ತ್ಯಾವ ಪ್ರಯೋಜನವೂ ಉಂಟಾಗದೆ ಹೋಯಿತು.

ಈ ಸಂಸ್ಥಾನಕ್ಕೆ ಈಗ ಜಾಸ್ತೀಮಾಡಲ್ಪಟ್ಟ ಸಬ್ಸಿಡಿಯು ಕೇವಲ ಹುಟ್ಟುವಳಿ ಕಮ್ಮಿಜಾಸ್ತೀಯನ್ನನುಸರಿಸಿ ಏರ್ಪಡಿಸಿದ್ದಲ್ಲವಾದರೂ ಮರ್ಮಿಗಳಾದ ರೆವಿನ್ಯೂ ಅಧಿಕಾರಿಗಳು ರೈತರಿಗೆ ಮೇಲೆಕಂಡದಕ್ಕೆ ಸಾಕ್ಷಾದ್ವಿರುದ್ಧಾಭಿಪ್ರಾಯವನ್ನುಂಟುಮಾಡಿರುವದರಿಂದ ಅವರು ಧೈರ್ಯದೊಡನೆ ಮುಂದಾಳಾಗಿ ನಿಂತು ರೆಸಿಡೆಂಟರವರಿಗಾಗಲಿ, ಇಂಡ್ಯ ಗವರರ್ನ್ಮೆಂಟಿನವರಿಗಾಗಲಿ, ತಮ್ಮ ಸುಖದುಃಖಗಳನ್ನೂ ಲಾಭನಷ್ಟಗಳನ್ನೂ ಅರುಹಿ ಅಪೇಕ್ಷಿತಾಂಶಗಳನ್ನು ಪಡೆಯಲಿಕ್ಕೆ ಅಸಮರ್ಥರಾಗಿವಾರೆ. ಸರ್ವೇ ಪದ್ಧತಿ ಏರ್ಪಟ್ಟಮೇಲೆ ಶಾನುಭೋಗರಿಗೆ ರೈತರಮೂಲಕ ಸಲ್ಲುತಲಿದ್ದ ರುಸುಂ ಮೌಷ್ಟಾಣಾದಿ ಪಾವತಿಯಿತು. ಈಬಗೆ ಇವರಿಗಾಗಿ ಏರ್ಪಟ್ಟರಿಮ್ಯೂನರೇಷನನ್ನು ಕೊಡುವದಕ್ಕೆ ತಕ್ಕ ಮುಚ್ಚಳಿಕೆ ಇಲ್ಲವೆಂಬ ನೆವ ಪ್ರಾಪ್ತವಾಯಿತು. ದೇಶಭ್ರಷ್ಟರಾಗಿ ಹೋಗಿ ಪ್ರಾಣವು ಕಾಪಾಡಿಕೊಳ್ಳಲಿಕ್ಕೆ ಶಾನುಭೋಗರ ನೌಕರಿಗಳು ಮಕ್ಕಳು ಪರಂಪರಾಗತವಾದ ಹಕ್ಕುದಾರಿಯುಳ್ಳವಾದಕಾರಣ, ಅಂತಸ್ಥಗಳಲ್ಲಿ ಸಹ ಸರ್ಕಾರದವರು ಪ್ರವೇಶಿಸಿ ಅನ್ಯರನ್ನು ನೇಮಕರಮ್ಮಾಡುತಲಿರುವ ಸಮಯದಲ್ಲಿ ಅವು ಬಿಟ್ಟು ಹೋಗಲಾರದೆ ಪೇಚಾಡಬೇಕಾಗಿದೆ.

ದಿವಾನ್ ಸಾಹೆಬರಾದರೇನೋ, ಸಂಬಳ ಕೊಡುವದಿಲ್ಲವೆಂದು ಹೇಳುವದಕ್ಕೆ ಬದಲಾಗಿ ಫೂಟಾಗಿ ಥರ್ಯಾಬ್ ಬರೆದುಕೊಂಡರೆ ಜವಾಬ್ ಕೊಡುವದಿಲ್ಲ. ತಾಲ್ಲೂಕ್ ಡಿಸ್ಟ್ರಿಕ್ಟ್ ಪಾರೀಪತ್ತಿ ಸನಾಲ ಬಂದರೆ ನಗದಿಗೆ ಬದಲಾಗಿ ಭೂರೂಪವಾಗಿ ಕೊಡುವದಕ್ಕೆ ನಿಶ್ಚಯಿಸಿ ಇದ್ದೇವೆಯೆನ್ನುತ್ತಾರೆ. ಅದಕ್ಕೆ ಯಾರಾದರೂ ಒಪ್ಪಿಕೊಂಡರೆ, ಸಾಗುವಳಿ ಭೂಮಿಗೆ ಕಂಪೆನ್ಸೇಷನ್ ಮೊಬಲಗು ಕೊಟ್ಟು ಶಹರ್ ಜಾಗಾಗಳಲ್ಲಿ ಮ್ಯೂನಿಸಿಪಲ್ಗೆ ಜಮೀನ್ ತೆಗದುಕೊಳ್ಳುವಂತೆ, ಹಳ್ಳಿಗಳಲ್ಲಿ ತೆಗದುಕೊಳ್ಳುವವರ್ಯಾರು? ಬಂಜರ್ ಜಮೀನ್ ಆದರೆ ಆಬಾದ್ ಮಾಡುವದಕ್ಕೆ ತಗಲುವ ಆಗವನು ಕೊಡುವವರ್ಯಾರು? ಸಾಗುವಳೀ ಜಮೀನಿನ ಫಲವನ್ನ ನೌಕರೀ ಮಾಡುವರು ಮಾತ್ರ ಅನುಭವಿಸಬೇಕೇ ಹೊರ್ತು ಪೂರ್ವ ಪದ್ಧತಿಯಂತೆ ದಾಯಾದಿಗಳೆಲ್ಲರೂ ಅನುಭವಿಸಿಕೊಂಡು ನಿಮಿತ್ಯಮಾತ್ರಕ್ಕೆ ಒಬ್ಬನು ಸರದೀ ಪ್ರಕಾರ ಚಾಕರಿಗೆ ಬರುವಪಕ್ಷಕ್ಕೆ ಹ್ಯಾಗೆ ಆದೀತು? ಬಡವರಾದ ಗ್ರಾಮ ನೌಕರರನೇಕರು ತಮ್ಮ ಜೀವನಾರ್ಥ ಬರೆದಾಕೊಂಡ ಅರ್ಜಿಗಳನೇಕ ಅದ್ಯಾಪಿ ಜವಾಬ್ ಇಲ್ಲದೆ ನಿರ್ನಾಮವಾಗಿಹೋದವು. ಈ ಪತ್ರಿಕೆಯ ಮೂರನೇ ಪುಟದಲ್ಲಿ ಪ್ರಕಟಿಸಿರುವ ಕೆಲವರು ಗ್ರಾಮನೌಕರರ ಅರ್ಜಿಯನ್ನು ಮೇಲೆ ಕಂಡವುಗಳಪೈಕಿ ಒಂದಾಗಿ ಎಣಿಸಬಹುದಾಗಿದೆ. ಯಾತಕ್ಕಂದರೆ:—ಅರ್ಜಿಗಳಿಗೆ ಜವಾಬ್ ಕೊಡುವ ಪದ್ಧತಿಯು ಶುದ್ಧ ತಪ್ಪೆಂಬಭಾವ ನಿರೂಢವಾಗಿ ಏರ್ಪಟ್ಟಿರುವದರಿಂದ ಇಲ್ಲಿ ಒಂದಕ್ಕೂ ಪ್ರತ್ಯಾಕೆ ಇಲ್ಲವು. ಈ ವಿಷಯವನ್ನು ಕುರಿತು ಬ್ರಿಟಿಷ್ ರೆಸಿಡೆಂಟರವರು ದಯವಿಟ್ಟು ವಿಚಾರಿಸಿ ಕ್ರಮಪಡಿಸಬೇಕೆಂದು ಅರ್ಜೀದಾರರು ಅಪೇಕ್ಷಿಸುತ್ತಾರೆ. ವೈಸ್‌ರಾಯಿಯವರು ಬರುವಂತಾ ಸಂದರ್ಭದಲ್ಲಾದರೂ, ಜನಗಳು ತಮ್ಮ ಅಪೇಕ್ಷಿತಾಂಶವನ್ನು ತಿಳಿಸಿ ತಾವು ಈಗ ಅನುಭವಿಸುತಲಿರುವ ಸಂಕಟವನ್ನು ವ್ಯಕ್ತಪಡಿಸದೇ ಹೋದರೆ ಬಳಿಕ ಇದಕ್ಕೆ ಪ್ರತಿಕ್ರಿಯೆಯೇ ಇಲ್ಲವು.

Occasional Notes.
ನೈಮಿತ್ತಿಕವಿಷಯನ್ಯಾಸ.

The Governor of Bombay's tour.—ಮುಂಬೈ ಗವರ್ನರವರು ಬರುವ ಡಿಸೆಂಬರ್ ತಿಂಗಳಲ್ಲಿ ದೇಶ ಸಂಚಾರ ಹೊರಟು ಗುಜರಾತ್ತಿ ಮಾರ್ಗವಾಗಿ ಕಾಟೀವಾಡಿಗೆ ಹೋಗಿ, ರಾಜಕೋಟ್‌ನಲ್ಲಿ ಒಂದು ದೊಡ್ಡ ದರ್ಬಾರ್‌ಮಾಡಿ, ಆ ಸಂದರ್ಭದಲ್ಲಿ ಭಾವನಗರದ ಮಹಾರಾಜರವರಿಗೆ ಜಿ. ಸಿ. ಎಸ್. ಐ. ಎಂಬ ಪ್ರಶಸ್ತಿಯಂ ಒಪ್ಪಿಸುವರು.

The successor of Sir Charles Aitchison.—ಪಂಜಾಬ್‌ದೇಶದ ಲೆಪ್ಟಿನೆಂಟ್ ಗವರ್ನರಾದ ಸರ್ ಚಾರ್ಲ್ಸ್ ಯೆಚ್ಚಿಸನಯವರು ತಮ್ಮ ಕೆಲಸವು ಬಿಟ್ಟು ನಿವೃತ್ತಿ ಸುಖವು ಪಡೆಯುವಲ್ಲಿ ಅವರ ಕೆಲಸಕ್ಕೆ ಸರ್ ಲೆಪೆಲ್‌ಗ್ರಿಫಿನ್‌ಯವರೂ, ವೈಸ್‌ರಾಯ್ ಯವರ ಮಂತ್ರಾಲೋಚಕ ಸಮಾಜದ ಲ್ಲಿ ಸರ್ ಲೆಪೆಲ್ ಗ್ರಿಫಿನ್‌ಯವರ ಕೆಲಸಕ್ಕೆ ಸರ್‌ಸ್ಟೂವರ್ಟ್ ಬೇಲಿಯವರೂ ನಿಯಮಿಸಲ್ಪಡುವರು.

The Maharaja Dhuleep Singh.—ಮಹಾರಾಜಾ ಧುಲೀಪ್ ಸಿಂಗರವರು ಪೇರಿಸ್ ಪಟ್ಟಣದೊಳು ವಾಸವಾಗಿರುತ್ತೆ, ಇಂಗ್ಲಿಷ್ ಜನಗಳ ಮತ್ತು ಇಂಗ್ಲಿಷ್ ಕೋರ್ಟುದಾರರ ಸಹವಾಸ ಸಲ್ಲಾಪಾದಿಗಳನ್ನು ಆತ್ಯಂತಿಕವಾಗಿ ತ್ಯಜಿಸಿ, ತಮ್ಮ ಮತ್ತು ತಮ್ಮ ಕುಟುಂಬದ ಚರಿತ್ರವು ಬರೆಯುವದರಲ್ಲಿ ತಮ್ಮ ಕಾಲವು ಅಕ್ರಮಿಸಲ್ಪಟ್ಟಿರುವಂತೆ ಕೇಳಿದವರಿಗೆ ಉತ್ತರ ಹೇಳುತಲಿದ್ದಾರೆ.

The Indian Civil Service.—ಇಂಡ್ಯದೇಶದ ಸಿವಿಲ್ ಸರ್ವಿಸ್ ನೌಕರಿಯಲ್ಲಿ ನೇಟಿವ್ ಉಮೇದ್ವಾರರನ್ನು ವಿಶೇಷವಾಗಿ ಸೇರಿಸಿಕೊಳ್ಳುವ ವಿಷಯದಲ್ಲಿ ದುಜಾವಾಪ್ ಪಡೆದು ರಿಪೋರ್ಟ್‌ಮಾಡುವದಕ್ಕಾಗಿ ಶೀಘ್ರದಲ್ಲಿ ಒಂದು ಕಮಿಟಿ ಶೂರರಾಗಿ ಅದಕ್ಕೆ ಹೋಂ ಡಿಪಾರ್ಟ್ಮೆಂಟ್ ಅಂಡರ್ ಸೆಕ್ರೆಟರಿಯಾದ ಮಿ. ಚಾಕ್ ಯೆಂಬವರು ಸೆಕ್ರೆಟರಿಯಾಗಿ ನಿಯಮಿಸಲ್ಪಡುವರು.

Recognition of services.—ಕಾಶ್ಮೀರದೇಶದ ಮಹಾರಾಜರವರು, ತಮ್ಮ ತಮ್ಮಂದರಾದ ಅಮರ್‌ಸಿಂಗರವರು ಸಂಸ್ಥಾನದ ಅಭಿವೃದ್ಧಿ ವಿಷಯದಲ್ಲಿ ಮಾಡಿದ ಶ್ಲಾಘ್ಯತರವಾದ ಯೋಗ್ಯತೆಗಳಂ ಪರಿಗಣಿಸಿ, ಚೋಟಾ ಕಾಶ್ಮೀರವೆಂಬ ದೇಶವನ್ನು ಅವರಿಗೆ ಸೇರಿಸಿ ಕೊಟ್ಟು ಅವರ ಆಯತಿಯನ್ನು ದ್ವಿಗುಣವನ್ನಾಗಿ ಮಾಡಲು, ಮಹಾರಾಜರವರ ಔದಾರ್ಯಕ್ಕಾಗಿ ಅಲ್ಲಿನ ಪ್ರಜೆಗಳೆಲ್ಲರೂ ಕೇವಲ ಸಂತುಷ್ಟಮನಸ್ಕರಾದರುತೆ.

Railway extension in the United States.—ಉತ್ತರ ಅಮೆರಿಕಾ ದೇಶದ ಯುನೈಟೆಡ್ ಸ್ಟೇಟ್ಸ್ ಯೆಂಬ ರಾಜ್ಯದಲ್ಲಿ ಸನ್ ೧೮೮೬ನೇ ಇಸವಿ ಆಕ್ಟೋಬರ್‌ವರಿಗೆ, ೧,೭೪೯ ಮೈಲುಗಳ ಫಾಸಲೆಯವರಿಗೆ ರೈಲ್ ರಸ್ತೆಗಳು ತಯಾರಾಗಿ, ಅದರಮೂಲಕ ಸದರೀ ಇಸವಿಯಲ್ಲಿ ಆದ ಒಟ್ಟು ಹುಟ್ಟುವಳಿಯು ಸದರೀ ರಸ್ತೆಯ ತಯಾರಿಗ್ಯೆ ಖರ್ಚಾದ ಬಂಡವಾಳಕ್ಕೆ ಸುಮಾರ್ ಸೇಕಡಾ ೧೦ರ ಮೇರೆಯೂ, ಅದರ ಖರ್ಚು ಜಾತಾ ನಿವಳನಫೆಯು ಸುಮಾರು ಸೇಕಡಾ ಮೂರುವರೆ ಪ್ರಕಾರವೂ ಲೆಕ್ಕವಾಯಿತು.

Death of the First Prince of Cochin.—ಕೊಚ್ಚಿ ಸಂಸ್ಥಾನದ ಯುವರಾಜರವರು ಈಚೆಗೆ ಕೆಲವು ದಿನಗಳ ಹಿಂದೆ ಕಾಶಿಯಾತ್ರೆ ಹೋಗಿದ್ದರಷ್ಟೆ. ಸದರೀಯವರಿಗೆ ಗಯೆಯಲ್ಲಿ ವಾಂತಿಭೇದಿ ರೋಗ ತಗಲಿ ಕಳೆದತಿಂಗಳ ೨೨ನೇ ತಾರೀಖ್ ಹಗಲು ೧೧ಘಂಟೆಗೆ ಮೃತಪಟ್ಟರೆಂದು ಕೇಳುವದಕ್ಕೆ ಬಹಳ ವಿಷಾದಿಸುತ್ತೇವೆ. ಈ ವೃತ್ತಾಂತವು ತಂತಿಮೂಲಕ ಕೊಚ್ಚಿಗೆ ತಿಳಿದ ಕೂಡಲೆ ಮೃತಪಟ್ಟವರ ಗೌರವಾರ್ಥ ೨೭ನೇ ತಾರೀಖಿನದಿನ ಸದರೀ ಸಂಸ್ಥಾನದ ತಮಾಂ ಇಲಾಖೆಗಳೂ ಬಂದ್ ಮಾಡಲ್ಪಟ್ಟವು. ಸನ್ ೧೮೭೩ನೇ ಇಸವಿಯಲ್ಲಿ ವೀರಕೇರಳ ಮಹಾರಾಜರವರು ಕಾಶಿ ಯಾತ್ರೆ ಹೋಗಿ ಅಲ್ಲೇ ಮೃತಪಟ್ಟರು. ಗಂಗಾಕ್ಷೇತ್ರದಲ್ಲಿ ಮರಣವುಂಟಾಗುವದು ಪೂರ್ವದನ್ಮ ಸುಕೃತ ಪರಿಪಾಕದಿಂ ಲಭಿಸತಕ್ಕದ್ದೇ ಹೊರ್ತು ಅನ್ಯಥಾ ಆಗಲಾರದು.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕುಜಾತಿವೃತ್ತಾಂತಗಳು.

A public meeting.—ಇಂಡ್ಯರಾಜ್ಯದವೈಸರಾಯ್‌ಯವರಾದ ಲಾರ್ಡ್ ಡಫರಿನ್ ಸಾಹೇಬರವರು ಈವೂರಿಗೆ ಬರುವ ಪಕ್ಷದಲ್ಲಿ ಅವರನ್ನು ಉಚಿತರೀತಿಯಿಂದ ಬರಮಾಡಿಕೊಳ್ಳುವದಕ್ಕೆ ತಕ್ಕ ಯೇರ್ಪಾಡುಗಳಂ ಕುರಿತು ಆಲೋಚಿಸುವದಕ್ಕಾಗಿ, ಕಳೆದ ಮಂಗಳವಾರದದಿನ ಪ್ರಾತಃಕಾಲ ೮½ ಘಂಟೆಗೆ, ಸಿವಿಲ್ ವ ಮಿಲಿಟೆರಿ ಸ್ಟೇಷನ್ ಪ್ರಜೆಗಳು ಸಭೆಸೇರಿದ್ದರು.

The Central College.—ದಸರಾಹಬ್ಬದಬಗ್ಯೆ, ಇಲ್ಲಿನ ಸೆಂಟ್ರಲ್ ಕಾಲೇಜ್ ಪಾಠಶಾಲೆಯು ಈ ತಿಂಗಳ ೨ನೇ ತಾರೀಖ್ ಶನಿವಾರದ ಮೊದಲು ೧೨ನೇ ತಾರೀಖ್ ಮಂಗಳವಾರದವರೆಗ ಕ ಮುಚ್ಚಲ್ಪಟ್ಟಿರುವದು. ಈ ಕಾಲೇಜ್‌ನಿಂದ ಈಸಲದ ಎಫ್. ಎ. ಪರೀಕ್ಷೆಗೆ ೪೬ ಮಂದಿಯೂ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ೫೦ ಮಂದಿಯೂ ಉಮೇದ್‌ವಾರರು ದಾಖಲಾಗಿರುತ್ತಾರೆ.

Dacoities.—ಕಳೆದತಿಂಗಳ೩೦ನೇ ತಾರೀಖ್ ರಾತ್ರಿ, ಬೆಂಗಳೂರಿನ ಮಾಗಡಿಗೆ ಹೋಗತಕ್ಕ ಅಂಚೇ ಟಪಾಲ್‌ರನ್ನ ತಾವರೇಕೆರೆ ಸಮೀಪದಲ್ಲಿ, ಯೇಳೆಂಟುಮಂದಿ ಕಳ್ಳರು ಬಂದು ಅವರ ಕಣ್ಣುಗಳಂ ಕಟ್ಟಿಬಿಟ್ಟು ಹೊಡದು ಅವರಲ್ಲಿದ್ದ ಅವರ ಸ್ವಂತ ಬಟ್ಟೆ ನಗ್ಗೆರೆ ಮುಂತಾದವುಗಳನ್ನೂ ಸರ್ಕಾರದ ಬಸ್ತಾನ ಚೀಲವನ್ನೂ ಕಿತ್ತುಕೊಂಡು ಹೋಗಿ ಸ್ವಲ್ಪದೂರದಲ್ಲಿ ಕಾಗದಪತ್ರಗಳನ್ನೂ ಚೀಲವನ್ನು ಸಹ ರಸ್ತೆಯಲ್ಲಿ ಬಿಸಾಡಿ ಓಡಿಹೋದರು. ಕಳ್ಳರು ಪತ್ತೇಯಾಗಲಿಲ್ಲವು.

ಈ ತಿಂಗಳ ಗುರುವಾರ ತಾರೀಖ್ ರಾತ್ರಿ ಬೆಂಗಳೂರಿನ ದೊಡ್ಡಬಳ್ಳಾಪುರಕ್ಕೆಹೋಗುತಲಿದ್ದ ಕುದುರೆ ಜಟಕಾ ಗಾಡಿಗಳನ್ನು ಸುಮಾರು ಇಪ್ಪತ್ತುಮಂದಿ ಕಳ್ಳರು ಬಂದು ಅಡ್ಡಹಾಕಿ ಗಾಡಿಗಳನ್ನು ಚರಂಡಿಗಳಲ್ಲಿ ನೆಳೆದು ಬಿಟ್ಟು ಗಾಡಿಯವರನ್ನು ಪೂರಾ ಹೊಡೆದು ಅವರಲ್ಲಿ ಮತ್ತು ಗಾಡಿಗಳಲ್ಲಿದ್ದ ಜನಸಿ ಮತ್ತು ಬಟ್ಟೆ ವಗೈರೆಗಳನ್ನು ಸಾಗಿಸಿಕೊಂಡು ಪರಾರೀಯಾದರು. ಕಳ್ಳರು ಪತ್ತೇಯಿಲ್ಲವು.

The Fort Murder Case.—ಈವೂರು ಕೋಟೆಯೊಳು ನಡೆದ ಖೂನೀ ಮೊಕದ್ದಮೆಯಲ್ಲಿ ಮರಣದಂಡನೆ ವಿಧಿಸಲ್ಪಟ್ಟ ಅಪರಾಧಿಗಳು ಗೋವಿಂದರಾಜುಮೊದಲಿ ಮತ್ತು ವೆಂಕಟಸ್ವಾಮಿ ಯೆಂಬ ಇಬ್ಬರನ್ನು, ಇಂಡ್ಯ ಚಕ್ರವರ್ತಿನೀಯವರ ಪ್ರತಿನಿಧಿಯಾಗಿ ತಮಗೆ ಪ್ರಾಪ್ತವಾಗಿಲ್ಪಟ್ಟಿರುವ ಸ್ವತಂತ್ರಾಧಿಕಾರವು ವಿನಿಯೋಗಿಸುವದರಮೂಲಕ ಕೇವಲ ದಯಾರ್ದ್ರವಾಗಿ ಖುಲಾಸೇ ಮಾಡಬೇಕೆಂದು ಪ್ರಾರ್ಥಿಸಿ ವೈಸ್‌ರಾಯ್ ಯವರಿಗೆ ಕಳುಹಿಸುವದಕ್ಕಾಗಿ ಈ ಪೇಟೆ ಮತ್ತು ಮಿಲಿಟರಿ ಸ್ಟೇಷನ್ ಜನಗಳು ಒಂದು ಅರ್ಜಿ ತಯಾರ್ಮಾಡಿ ಕೈಬರಹ ತೆಗೆಯುತಲಿದ್ದಾರೆ. ಅಪರಾಧಿಗಳ ತರಫ್ ಲಾಯರ್‌ಗಳು ವೈಸ್‌ರಾಯ್ ಯವರಿಗೆ ತಂತಿಮೂಲಕ ಬರೆದುಕೊಂಡ ಅರ್ಜಿಯಮೇಲೆ ಅಲ್ಲಿಂದ ತಂತಿಮೂಲಕ ಇಲ್ಲಿನ ರೆಸಿಡೆಂಟರಿಗೆ ಬಂದ ಜವಾಬನ್ನನುಸರಿಸಿ ಸದರೀ ಅಪರಾಧಿಗಳಿಗೆ ವಿಧಿಸಲ್ಪಟ್ಟಿರುವ ಮರಣದಂಡನೆಗಳು ವೈಸ್‌ರಾಯ್‌ಯವರ ಮೂಲಕ ವ್ಯವಸ್ಥೆಯಾಗುವತನಕ ನಿಲ್ಲಿಸಲ್ಪಟ್ಟಿರುತದೆ.

ಶುಭಾ ಶುಭ ಕಾರ್ಯಗಳ ಪ್ರಾರಂಭದೊಳು ಸಾಧಾರಣವಾಗಿ ನಾವು ಆರಾಧಿಸುವ ವಿಘ್ನೇಶ್ವರನ ಧ್ಯಾನ ಶ್ಲೋಕವನ್ನೂ, ಅದರ ತಾತ್ಪರ್ಯಾರ್ಥಗಳನ್ನೂ ಗತವಾರದಲ್ಲಿ ತಿಳಿಸಿದ್ದೆವಷ್ಟೆ ಅದೇಪ್ರಕಾರ ನಮಗೆ ಉಪಾಸ್ಯಗಳಾದ ಇನ್ನೂ ಕೆಲವು ಮೂರ್ತಿಗಳ ಅರ್ಥವನ್ನು ಇದರಲ್ಲಿ ತಿಳಿಸುವೆವು.

ಸರಸ್ವತೀ ಪ್ರಾರ್ಥನಾ.

ಯಾಕುಂದೇಂದು ತುಷಾರಹಾರ ಧವಳಾ ಯಾಶುಭ್ರವಸ್ತ್ರಾನ್ವಿತಾ । ಯಾವೀಣಾ ವರದಂಡಮಂಡಿತಕರಾ ಯಾಶ್ವೇತಪದ್ಮಾಸನಾ ॥ ಯಾಬ್ರಹ್ಮಾಚ್ಯುತ ಶಂಕರಪ್ರಭೃತಿಭಿ ರ್ದೇವೈಸ್ಸದಾಪೂಜಿತಾ ॥ ಸಾಮಾಂ ಪಾತು ಸರಸ್ವತೀ ಭಗವತೀ ನಿಶ್ಶೇಷಜಾಡ್ಯಾಪಹಾ ॥ ಸರಸ್ವತೀಂ ಸಮಾಶ್ರಯೇ ಸರೋಜಪೀಠವಾಸಿನೀಂ । ಸದಾ ಸದಾದರಾಂ ಮುದಾಸರೋಜಪೀಠಗೇಹಿನೀ । ಸು

ಸುವೀಣಯಾಪುಸ್ತಕಮಾಲಯಾ ಸುಸ್ಫುರತ್ತ್ರಿಕೋ
ನಕೋಪಿನೀಂ| ಸುರೇಂದ್ರಬೃಂದವಂದಿತಾಂ
ಸುಧಾಕರಾವತಂಸಿನೀಂ ||

ಈ ಶ್ಲೋಕಾರ್ಥ.

ಬ್ರಹ್ಮಜ್ಞಾನವನ್ನು ಆತನ ಸೃಷ್ಟಿಶಕ್ತಿಯನ್ನು ಸ್ತ್ರೀ ಸ್ವರೂಪವಾದ ಸರಸ್ವತಿಯು ವ್ಯಕ್ತಪಡಿಸುತ್ತದೆ. ಇದು ಸ್ತ್ರೀಪ್ರತಿಮೆಯಾಗಿರುವದರಿಂದ ಪುರುಷಾಧೀನವಾಗಿರುವದೆಂದರ್ಥವು. ಸರಸ್ವತಿಯ ಹಸ್ತದ್ವಯದೊಳಿರುವ ವೀಣೆಯು ಸ್ವಾಭಾವಿಕ ಧರ್ಮಕ್ಕೆ ಪ್ರಾಧ್ಯಕೆಯೂ ಸದಭಾವವೂ ಮುಖ್ಯ ಲಕ್ಷಣಗಳೆಂಬ ಅರ್ಥವನ್ನು ವ್ಯಕ್ತಪಡಿಸುತ್ತಿದೆ. ಆಕೆಯ ಮೂರನೇ ಹಸ್ತದೊಳಿರುವ ಪುಸ್ತಕಮಾಲೆಯು, ಒಂದು ಬಾರಿಯ ವರ್ಣನಾಪ್ರೌಢಿಮೆ ಆ ಭಾಷಾಜ್ಞಾನಕ್ಕೆ ಸಹಾಯಕವಾಗುವದೆಂಬದನ್ನು ಅರುಹುತಿದೆ. ನಾಲ್ಕನೇ ಹಸ್ತದೊಳಿರುವ ಪುಸ್ತಕವು ಜ್ಞಾನ ಸಂಪಾದನಕ್ಕೆ, ಪ್ರಾಚೀನರು ಅಪೇಕ್ಷಿಸಿದ್ದನ್ನೂ ಆ ಅರ್ಥವನ್ನು ಬೋಧಿಸುತ್ತದೆ. ಆಕೆಯ ಪದ್ಮಾಸನವು ಬುದ್ಧಿಯೇ ಪರಮಾತ್ಮಜ್ಞಾನಕ್ಕೆ ಮೂಲಭೂತವೆಂಬದನ್ನು ಸೂಚಿಸುತ್ತದೆ. ಆಕೆಯ ಹಂಸವಾಹನವು, ಹಂಸ ಹ್ಯಾಗೆ ಕ್ಷೀರದೊಳಗಿನ ಜಲಾಂಶವನ್ನು ತ್ಯಜಿಸಿ ಹಾಲನ್ನು ಮಾತ್ರ ಪರಿಗ್ರಹಿಸುತ್ತದೋ ಅದೇಪ್ರಕಾರ ಮುಕ್ತಾಮುಕ್ತ ವಿವೇಕ ನಿರ್ಧಾರಕ ನಿಂಧ್ಯವಾದದ್ದರೊಳು ಯೋಗ್ಯವಾದದ್ದನ್ನು ಮಾತ್ರ ಪುರುಷನು ಸ್ವೀಕರಿಸಲಿಕ್ಕೆ ವಿವೇಕವು ಆವಶ್ಯಕವೆಂಬದನ್ನು ಸೂಚಿಸುತ್ತದೆ. ಸರಸ್ವತಿಯ ಉಪಾಸನೆಯಿಂದ ತಾತ್ಪರ್ಯಗುಣಗಳು ನಮಗೆ ಸಹ ಪ್ರಾಪ್ತವಾಗುವವು.

ಮೈಸೂರು ಮಹಾರಾಜರ ಬಾಕಿ ರೈತರ ಬವಣೆಯ ವಿಷಯ ಮೂಲಕ ಸ್ವಾಮಿಗೆ

ಸನ್ ೧೮೮೬ನೇ ಇಸವಿ ಜನವರಿ ತಾರೀಖ್ ೩ರಲ್ಲು ಹೊಳಲಕೆರೆ ತಾಲ್ಲೂಕಿನ ಈ ಕೆಳಗೆ ರುಜು ಹಾಕಿರುವ ಹಾಲ ಜಾಗದಾರುಗಳು ಮಾಡಿಕೊಳ್ಳುವ ಸಹ ಬರೆದುಕೊಂಡ ಅರ್ಜಿ.

೧ ಹಾಲಿ ಚನ್ನಿವಾಸದಿಂದ ಸರಿದಾರಾದ ಪ್ರೊಸೀಡಿಂಗ್ಸಿನಲ್ಲಿ ಹಚ್ಚಿದ ಹಾಲು ಹೋಗಲುಗಳಾದ ನಮ್ಮಗಳಿಗೆ ಗ್ರಾಮದ ವಸೂಲೀಮೇಲೆ ಪೋಟ್ಟಿ ಮೊಕರರ್ರಾಡಿಸಿರುವದಾಗಿಯೂ, ಅದು ಪಿರ್ಕಿಫ ವ್ಯಯ ಈಸನುವತ್ಸರಗಳಲ್ಲಿ ನಗದಾಗಿಸಲ್ಲಬೇಕೆಂತಲೂ, ಸರ್ವಜಿತು ಸಂವತ್ಸರ ಲಾಗಾಯತು ಪೋಟ್ಟಿಗೆ ಬದಲಾಗಿ ಜವಿರ್ನಾ ಕೊಡುವದೆಂದು ತಲು ಸಹ ಅಪ್ಪಣೆಯಾಗಿರುತ್ತೆ. ಇದು ನಮ್ಮಗಳಿಗೆ ಸುಮ್ಮಾನವಾಗಿ ಇದ್ದುದಿರುವದಿಲ್ಲ, ಬಹಳ ಅನ್ಯಾಯವಾಗಿರುತ್ತೆ. ಅದರಿಂದ ಬಡ ನೌಕರರುಗಳಾದ ನಾವ್ಗಳು ಈಕೆಳಗೆ ಅರಿಕೆ ಮಾಡಿಕೊಳ್ಳುವ ಸಂಗತಿಗಳನ್ನು ಕೃಪೆವಾಗಿ ಪರಾಂಬರಿಸಿ ಪೂರ್ವದ ಪೋಟ್ಟಿಯನ್ನೇ ಕಾಯಂ ಇಡಿಸುವದರ ಮೂಲಕ ನಗದಾಗಿ ಸಲ್ಲತಕ್ಕಬಗ್ಗೆ ಹುಕುಂ ದಯಪಾಲಿಸಬೇಕು, ಸ್ವಾಮಿ.

೨ ಹಾಲುಹೋಗಲುಗಳು ಪಟೇಲರುಗಳೆಂಬ ಗ್ರಾಮ ನೌಕರರುಗಳು ಮಹಮಾರುವರ್ಷವಾಗಿ ಬಂದ ಹಕ್ಕುದಾರರೆಂದುನ್ನೂ, ಅವರಿಗೆ ಇನಾಂ ದಾರರುಗಳೆ ಗವರ್ನಮೆಂಟಿನಿಂದ ಗೌರವವೂ ಹುವಾಲ್ಪಾಟ್ಟಿದೆಯೆಂದುನ್ನೂ, ಮಹಾ ಸನ್ನಿಧಾನದ ಪ್ರೊಸೀಡಿಂಗ್ಸಿನಲ್ಲಿ ಅಪ್ಪಣೆಯಾಗಿರುತ್ತೆ. ಈ ಮರ್ಯಾದೆ ಪುರಾತನದಿಂದಲೂ ಸರ್ಕಾರದಿಂದ ದೊರೆತುಗಿದ್ದಮ್ಮ ಬಾಪುದರವರ ಕಾಲದಲ್ಲಿ ಕ್ಷೀಣಗತಿ ಹೊಂದಿದಂತೆ ಅನುಗ್ರಹಪೂರ್ವಕವಾಗಿ ದೃಢಪಡಿಸಿರಲು ನಮ್ಮಗಳಿಗೆ ತುಂಬಾ ಸಂತೋಷಕರವಾಗಿರುತ್ತೆ. ಆದರೆ ಪೂರ್ವದಂತೆ ಸೈಕಲಿಂದ ಆಯಾ ಸನ್ನತಕ್ಕದ್ದಕ್ಕೆ ದೂರ್ತ್ರ ಅಪ್ಪ ಕೆಗಡೆಹೋದದ್ದು ನಮ್ಮಗಳ ಜೀವನೋಪಾಯಕ್ಕೆ ತುಂಬಾ ಲಸಾರುಕೋಪಾಯಿತು, ಪರಕು ಗ್ರಾಮಗಳ ಬಿಟ್ಟು ಬೀರೀದೇನಮೇಲೆ ಪೋಟ್ಟಿ ಮೊಕರರಾಗಿ ಇದುವರೆವಿಗೆ ಸಲ್ಲುತ ಇದ್ದದ್ದು ಅಲ್ಪಸ್ವಲ್ಪ ನಮ್ಮಗಳ ಜೀವನಕ್ಕೆ ಮಾರ್ಗವಾಗಿತ್ತು. ಅದರಿಂದ ನಮ್ಮಗಳ ಗುಜರಾನ್ ನಡೆಸಿಕ್ಕೊಂಡು ಗ್ರಾಮದಲ್ಲಿ ನಡೆಯತಕ್ಕ ಪರವೇಕ ಸರ್ಕಾರೀ ಕೆಲಸಗಳು ಪೂರಾ ಮಹನತ್ತಿನಿಂದ ಮಾಡುತಲಿದ್ದೆವು.

೩. ಈಗ ಸಿರ್ ೧೮೬೬ ರಿಂದ ಲಾಗಾಯತು ೪ ರೂಪಾಯಿಗಳ ವರೆಗಿನ ಪೋಟ್ಟಿ ಕಮ್ಮಿ ಆದದ್ದು ಕೇಳಿ ನಮ್ಮಗಳಿಗೆ ಬಹಳ ಸಂಕಟವಾಯಿತು. ಇದರಿಂದ ತಕ್ಕ ಕಾಲದಲ್ಲಿಯೇ ಯಿಂತಾ ತೊಂದರೆ ಪ್ರಾಪ್ತವಾಯಿತೆಂದರೆ, ಅರಿಕೆ ಮಾಡಲ್ಪಟ್ಟಿದೆ ದೇವರು. ಪ್ರವಿಲಾಸ ಏಪ್ರಿಲ್ ತಿಂಗಳಿನ ಲಾಗಾಯತು ಮುಂದೆ ಏನಿತ್ತ ಪೋಟ್ಟಿಯನ್ನೇ ಬಲಗಿನ ಆಧಾರವಾಗಿ ಸಾಹುಕಾರರಲ್ಲಿ ಬಡ್ಡಿಗೆ ಸಾಲಾ ತೆಗೆದು ನಾವ್ಗಳು ಜೀವನವಾಡುತ ಪೋಟ್ಟಿ ಬದಲಾದೆ ಆದಕಾರಣ ಸಾಹುಕಾರರಿಗೆ ಮೊಬಲಗು ವಾಪಸ್ಸು ಮಾಡುವ ಪದ್ಧತಿ ಇಟ್ಟುಕೊಂಡು ಈಗ ೭-೮ ವರ್ಷ ಜೀವನ ಮಾಡುತಲಿದ್ದೆವು. ಪ್ರಸ್ತುತ ಪೋಟ್ಟಿ ಕಮ್ಮಿಯಾದ್ದು ಸಾಲ ಕೊಟ್ಟಿರುವ ಸಾಹುಕಾರರ್ರಿಗೆ ಈಗಲೇ ತಮ್ಮ ದುಡ್ಡಿಗೋಸ್ಕರ ಕೋರ್ಟ್ ಮೂಲಕ ತಗಾದೆ ಮಾಡುವರಾಗಿದಾರೆ. ಆತಗಾದೆ ದಸ್ತಾವೀಜುಗಳುವದಕ್ಕೆ ಅನುಕೂಲವಿಲ್ಲದೆ ನಮ್ಮಗಳ ಹಕ್ಕುದಾರಿಯನ್ನೇ ಅವರಿಗೆ ಬಿಟ್ಟುಕೊಡುವವರಾಗಿ ಬಾಯಿದೆ.

೪. ಗ್ರಾಮದ ವಸೂಲೀಮೇಲೆ ಪೋಟ್ಟಿ ಮೊಕರರ್ ಮಾಡಿಸುವದು ನಮ್ಮಗಳ ಯಾವ ಅಪರಾಧಕ್ಕೋಸ್ಕರವೋ ಗೊತ್ತಾಗುವದಿಲ್ಲ. ದಾತು ಈಶ್ವರ ಸಾಲಿನಲ್ಲಿ ಮೂರುವರ್ಷ ಮಳೆ ಇಲ್ಲದೆ ಹೋದದರೂಳಕ ಕ್ಷಾಮಸಂಭವಿಸಿ ಗ್ರಾಮಗಳೆಲ್ಲ ಅನ್ಯಾಯವಾಗಿ ಹಾಳಾದದ್ದು ಆದಾಗ್ಯೂ ನಾವ್ಗಳು ಮುಖವತಕ್ಕ ಸರ್ಕಾರೀಕೆಲಸಗಳು ಈಗಿರುವದಕ್ಕಿಂತಲೂ ಹಾಸ್ಯಯಾಗಿಯೇ ಇದ್ದರೂ ತೊಂದರೆ ಕಮ್ಮಿಯಾಗಿರಲಿಲ್ಲ ಕೆಲಸದಲ್ಲಿ ಅಷ್ಟವಾದಿದ ನೌಕರರಿಗೆ ತಿದ್ದಿಯಾಯಿದು ನಾವು ರೇಲಿ ಊಟಿಗೆ ಅನೇಕ ಗ್ರಾಮಗಳೂ ಒಕ್ಕಲು ಈಗಳೂ ಸಾಗುವಳಿಗೆ ಬಂದು ವಸೂಲೀ ಜಾಸ್ತಿಯಾಗಿರುತ್ತೆ. ಹಿಂದೊಂದು ಗ್ರಾಮ ಅನ್ಯಾಯ ವಿವರಗಳಾಗಿರುವದೆ ಏನು ಕೆ ಗ್ರಾಮಗಳ ದುಷ್ಟವಾದ ಕಮ್ಮಿಯಾಜನ್ನೇ, ತಗತಕ್ಕ ಭಾಗ ಕಾಲಾನುಸಾರವಾಗಿರುತ್ತಲೋರ್ ಯಾವಾಗಲೂ ನಾವ್ಗಳು ಮಾಡತಕ್ಕ ಸರ್ಕಾರೀ ಕೆಲಸಗಳ ಮಿಹನತ್ ಕಮ್ಮಿಯಾಗುವದಿಲ್ಲ. ಈ ವಿಷಯ ಸಾಹುದರವರ ಧ್ಯಾನವಾತರೋಚರ್ ಇರೋಣವಾಗಬೇಕು.

೫ ಹಡಿಮೇಹ್ಸ್ಸಿಲ್ ಕೇಮೆಯಲ್ಲಿ ಗ್ರಾಮಗಳ ಆಕಾರದ ಮೇಲೆ ಮೊದಲನೇ ಸಾವಿರಕ್ಕೆ ಶೇಕಡ ಐದು ರೂಪಾಯಿ, ಎರಡನೇ ಸಾವಿರಕ್ಕೆ ಶೇಕಡ ನಾಲ್ಕು ರೂಪಾಯಿ, ಈ ಪ್ರಕಾರ ಶಾನುಭೋಗರುಗಳಿಗೂ, ಪಟೇಲರುಗಳಿಗೆ ಮೊದಲನೇ ಸಾವಿರಕ್ಕೆ ನಾಲ್ಕು ರೂಪಾಯಿ, ಎರಡನೇ ಸಾವಿರಕ್ಕೆ ಮೂರು ರೂಪಾಯಿ, ಈ ಪ್ರಕಾರವೂ ಪೋಟ್ಟಿ ಮೊಕರರ್ರಾಗಿರುವದಾಗಿ ವರ್ತಮಾನ ಕೇಳುತ್ತೇವೆ. ಹಾಗೆ ಜಾಸ್ತೀ ಪೋಟ್ಟಿ ಮೊಕರರ್ರಾಗಿಕೊಟ್ಟು ಈಗ ಇರುವದಕ್ಕಿಂತಲೂ ಇನ್ನೂ ಹೆಚ್ಚಾಗಿ ಲೆಕ್ಕಪತ್ರಗಳು ಮೊದಲಾದ ಕೆಲಸಗಳು ಮಹನತಿನಿಂದ ಮಾಡಬೇಕೆಂದರೆ ಸಿದ್ಧವಾಗಿದೇವೆ. ಬಡವರನ್ನ ಸಂರಕ್ಷಣೆ ಮಾಡತಕ್ಕ ಬಾಗ ಗವರ್ನಮೆಂಟಿನವರನ್ನೇ ಹೊಂದಿರುವಲ್ಲಿ ನಾವ್ಗಳು ಈ ವಿಷಯದಲ್ಲಿ ಹೇರಳವಾಗಿ ಅರಿಕೆ ಮಾಡಲು ಶಕ್ತರಲ್ಲ.

೬. ಜುಜಬೀ ನೌಕರರಾದ ಪಟವಾರೀ ಇನ್ನು ಮಿಗೆ ಸದ ೭ ಅಥವಾ ೬ ರೂಪಾಯಿಗೆ ಕಮಿಯಾಗಿ ಮಾಹೀಯಾನಾ ರೇಟ್ ಸಲ್ಲುವದಿಲ್ಲ ೧೨ ತಿಂಗಳು ಕ್ರಮಪಟ್ಟು ಕೆಲಸ ಮಾಡುವ ನಮ್ಮಗಳಿಗೆ ವರುಷ ಒಕ್ಕೆ ಹಿಂದಾವರ್ತಿ ಸಲ್ಲುವ ಪೋಟ್ಟಿ ದಾಮಾಷಾಪಣೋದಿದರೆ ಮಾಹೀಯಾನಕ್ಕೆ ೩-೪ ಅಣೆ ಲಾಗಾಯತು ೫ ರೂಪಾಯಿಗಿಂತಲೂ ಜಾಸ್ತೀಯಾಗುವದಿಲ್ಲ. ಇವನ್ನೆಲ್ಲಾ ನೋಡುವಾಗ್ಯ ಲೋಕದಲ್ಲಿ ಮೈಸೂರುಸೀಮೆಯವರೆಲ್ಲ ಶಾನುಭೋಗರೇ ಯೆಲ್ಲಾ ನೌಕರರಿಗಿಂತಲೂ ನಿರ್ಭಾಗ್ಯರೆಂದು ಜನರು ಅಂದುಕೊಳ್ಳುವದಕ್ಕೆ ಮಾರ್ಗವಾಯಿತೇ ವಿನಾ ಮತ್ತೇನೂ ಫಲಿತಾರ್ಥ ಕಾಣಲಿಲ್ಲ. ಇವರಲ್ಲಿ ನೂರಕ್ಕೆ ಒಬ್ಬರಿಗೆ ಮಾತ್ರ ಪೂರ್ವದ ಪೋಟ್ಟಿಯೆಂತಲೇ ಸ್ವಲ್ಪ ಹೆಚ್ಚು ಕಮ್ಮಿಯಾಗಿ ಮೊಕರರಾಗಿರುತ್ತೆ. ಇದರಿಂದ ನಮ್ಮಗಳಿಗೇನೂ ಸಂತೋಷವಿಲ್ಲ. ನೂರುಜನ ಉಪವಾಸವಿದ್ದು ಒಬ್ಬರು ಊಟಮಾಡಿದರೆ ಏನು ಪ್ರಯೋಜನ? ಇದಕ್ಕಿಂತಲೂ ಕುದ್ದಾಂಗವಾಗಿ ಪೋಟ್ಟಿ ಕೊಡಿಸದೆ ಮೌಕೂಫ್ ಮಾಡಿಸುವ ಪಕ್ಷಕ್ಕೆ ಸರ್ಕಾರಕ್ಕೆ ನ್ಯಾಯದಿಯೂ ಗಿ ನಮ್ಮ ಮಹಾರಾಜ ರಾಜಾಸಾಹೇಬ ಬಹದೂರವರ ಗವರ್ನಮೆಂಟಿಗೆ ಅಗಿರತಕ್ಕ ಸಾಲವಾದರೂ ತೀರೀತೆಂಬ ಸಂತೋಷದಿಂದ ಕೆಲಸ ಮಾಡುತ್ತೇವೆ. ಹಾಗಿಲ್ಲದೆ ಬಡವರಾದ ಗ್ರಾಮ ನೌಕರರುಗಳಿಗೆ ಕೊಡದರೆ ಕೆ. ಡಿಪಾರದೆಂದು ಸನ್ನಿಧಾನಕ್ಕೆ ಅಂತಃಕರಣ ಹುಟ್ಟಿದರೆ ಪೂರ್ವದ ಪೋಟ್ಟಿಯನ್ನೇ ಕಾಯಂ ಇದಿಸಿಕೊಡಬೇಕು.

೭ ಸರ್ವಜಿತು ಸಂವತ್ಸರದ ಲಾಗಾಯತು ವಸೂಲೀ ಮೇಲೆ ಮೊಕರರಾಗಿರುವ ಹಾಲಿ ಪೋಟ್ಟಿಗೆ ಬದಲಾಗಿ ಜವಿರ್ನಾ ಕೊಡಲ್ಪಡುತ್ತೆಂಬುವ ಅಂಶವನ್ನು ನಮ್ಮಗಳಿಗೆ ಸಂರಕ್ಷಣೆ ಮಾತ್ರತಕ್ಕ ಸರ್ಕಾರಕ್ಕೆ ವಿಷಯಮೋಗ ಮಾಡದಂತೆ ಆಗುತ್ತೆ. ಈ ವಿಷಯದಲ್ಲಿ ನಮ್ಮಗಳಿಗೆ ಉಂಟಾಗುವ ತೊಂದರೆಯು ಮಹಾಸನ್ನಿಧಾನಕ್ಕೆ ವೇದ್ಯವಾಗಿರುವ ಪಕ್ಷದಲ್ಲಿ ಇಂತಾ ಆರ್ಡರ್ ಆಗುತ್ತಾ ಇರಲಿಲ್ಲ. ಆದಕಾರಣ ಬ ಅನಿವಾರ್ಯಗಳನ್ನ ಈ ಕೆಳಗೆ ವಿಜ್ಞಾಪಿಸುತ್ತೇವೆ —

೪. ಪ್ರಾಮದಿಂದ ಈಗಿನ ಸರ್ಕಾರೀ ಬಂಜರಿನಲ್ಲಿ ಇರುತಕ್ಕ ಉತ್ಕೃಷ್ಟವಾಗಿರತಕ್ಕ ಎಲ್ಲಾ ತರೀ ಬಾಗಾಯತುಗಳೂ ಖುಷ್ಕೀ ಜಮೀನುಗಳು ಸಹ ರೈತರು ಪಡೆಕೊಂಡುಬಿಟ್ಟದು. ಇನ್ನೂ ಸ್ವಲ್ಪ ಹುರಳ ಮುಂತಾದ ಚಿಲ್ಲರೆ ಫಸಲ್ ಆಗತಕ್ಕ ಖುಷ್ಕೀ ಜಮೀನುಗಳು ಬಂಜರಿನಲ್ಲಿ ಇದ್ದಾಗ್ಯೂ ಈ ವರುಷ ಮುಂದಿನ ವರುಷಕ್ಕೆ ಪಡಕೊಂಡುಬಿಡುತ್ತಾರೆ. ಸಾಗುವಳಿಗೆ ಸಾಲಾಯಕಾದ [illegible] ಜವಿರ್ನಾ ಮತ್ತು ಗ್ರಾಮಕ್ಕೆ ಮುಫತ್ ಬಿಟ್ಟಿರತಕ್ಕ ಗೋಮಾಳ ಮಾತ್ರ ಉಳಿಯುತ್ತೆ. ಇಂತಾದ್ದುಗಳನ್ನ ಬಹುಮಾನವಾಗಿ ನಮ್ಮಗಳಿಗೆ ಕೊಟ್ಟರೆ ಹ್ಯಾಗೆ ಜೀವನ ಮಾಡಬೇಕು? ಈ ಮೈಸೂರು ಸೀಮೆಯಲ್ಲಿ ಮುಕ್ಕಾಲುಪಾಲು ಶಾನುಭೋಗರುಗಳು ಬ್ರಾಹ್ಮಣರೇ ಇರುತ್ತಾರೆ. ಇವರು ಸ್ವಂತ ಸಾಗುವಳಿ ಮಾಡತಕ್ಕವರಲ್ಲ. ರೈತರು ತಮ್ಮಗಳಿಗೆ ಒಳ್ಳೇಜಮೀನು ಇರುತಕ್ಕಾಗ ಬಂಜರುಜಮೀನು ಸಾಗುವಳಿ ಮಾಡುವದಿಲ್ಲ. ಮತ್ತು ರೈತರು ನಮ್ಮ ಪಾಲಿ ಜವಿರ್ನಾ ಸಾಗುವಳಿ ಮಾಡಿ ಪಾಲಾ ಹಾಕುವದಕ್ಕೆ ಕೂಡ ಒಪ್ಪಿಟ್ಟವಿಲ್ಲದೆ ಇರುತ್ತಾರೆ. ಇಷ್ಟಕ್ಕೂ ರೈತರಿಗೆ ಮತ್ತು ಶಾನುಭೋಗರುಗಳ ಮಾನ್ಯದ ಜವಿರ್ನಾ ಸಾಗುವಳಿ ಮಾಡಬೇಕೆಂತಲೆಂಬ ಸರ್ಕಾರ ನಿರ್ಬಂಧ ಮೊದಲೇಯಿಲ್ಲ. ಹಿಂದುವರೆಗೆ ಸಾಗುವಳಿ ಪ್ರಯತ್ನ ಇಟ್ಟುಕೊಂಡು ಅದರತ್ಲೋ ಕಾಲಕಳದರೆ ಸರ್ಕಾರೀ ಕೆಲಸಗಳು ನಡೆಯುವದಿಲ್ಲ.

೯. ಈಗ ಇರತಕ್ಕ ನಮ್ಮ ನಮ್ಮ ಪಾತಿ ಜವಿರ್ನಾಗಳನ್ನ ಮಾನ್ಯ ಹಾಕಿಸಿಕೊಳ್ಳಬೇಕೆಂದು ಮೈಸೂರು ಸೀಮೆಯಲ್ಲಿ ಮುಕ್ಕಾಲುಪಾಲು ಪಟೇಲ್ ಶಾನುಭೋಗರುಗಳಿಗೆ ಸ್ವಂತ ಕಂದಾಯದ ಜವಿರ್ನಾಗಳೇಯಿಲ್ಲ. ಫಸ್ಟ್ ಪೋಟ್ಟಿ ಯಿಂದಲೇ ಜೀವನ ಮಾಡುವರಾಗಿದ್ದಾರೆ. ಜವಿರ್ನಾಗಳು ಇದ್ದವರಿಗೆ ಅಣ್ಣತಮ್ಮಂದಿರ ಹಿಸ್ಸೆ ಜವಿರ್ನಾಗಳು ಬಹಳವಾಗಿ ಇರುತ್ತವೆ. ನೌಕರಿ ಮಾನ್ಯವೆಂಬುವದು ಕೆಲಸ ನೋಡತಕ್ಕವನಿಗೆ ಮಾತ್ರವೇ ಉಪಯೋಗಿಸತಕ್ಕದ್ದಾದ್ದರಿಂದ ಹಿಸ್ಸೇದಾರ್ರಿಗೆ ತೊಂದರೆ ಆಗುತ್ತೆ. ಮತ್ತು ದೈವವಶಾತ್ ಕೆಲಸ ನೋಡತಕ್ಕವನಿಗೆ ಬರ್ತರ್ಫ್ ಆದರೆ ಅವನು ಅಪಾವರಿಗೆ ಜವಿರ್ನಾ ಅಪ್ಪನ್ನಿಗೋಸ್ಕರ ಹಾಕಿದ ಕಟ್ಟ ಸಲಿಸಿದ ಬಾವಿ ವಗ್ಯರೆ ಆಸ್ತಿಯು ಕೆಲಸ ನೋಡತಕ್ಕವನಿಗೆ ವರ್ಗವಾಗಿ ಹೋಗುತ್ತೆ. ಈ ಕಾರಣದಿಂದ ಸ್ವಂತ ಜವಿರ್ನಾಗಳು ಮಾನ್ಯದ ಜವಿರ್ನಾಗಳಾಗಿ ಹಾಕಿಸಿಕೊಳ್ಳಲು ಆಗುವದಿಲ್ಲ.

೧೦. ಈ ನೌಕರಿ ಮೂಲಕವೇ ನಮ್ಮಗಳಿಗೆ ಜೀವನ ಆಗುವದಿಲ್ಲವೆಂತ ವ್ಯಾಪಾರ ಮುಂತಾದ್ದಕ್ಕೋಸ್ಕರ ಗ್ರಾಮಾಂತರಗಳಿಗಾಗಲೀ ಮತ್ತಾವ ಪಟ್ಟಣಗಳಿಗಾಗಲೀ ಹೋಗುವದಕ್ಕೆ ಸರ್ಕಾರ ಕೆಲಸ ಸಲೀಸ್ ನಡೆಯುವದಿಲ್ಲ. ಈ ಮೂಲಕವು ಗೈರುಹಾಜರಾದರೆಂದುನ್ನೂ ಸಹ ನಮ್ಮಗಳಿಗೆ ಶಿಕ್ಷೆಯಾಗುತ್ತೆ. ಇಂತಾ ಅನಿವಾರ್ಯಗಳು ಅನೇಕವಾಗಿ ಇರುವಕಾರಣ ನಮ್ಮಗಳ ಜೀವನಸ್ಥಿತಿಗೆ ಕುಂದಕಬಾರದಂತೆ ಈ ಭೇದ್ಯಗಳ ಮೇಲೆ ಸಂಪೂರ್ಣ ದಯಾರಸಚಿತ್ತರಾಗಿ ಬಿನ್ನಹ ನೆರವೇರಿಸಬೇಕೆಂಬುವದೇ ಮುಖ್ಯ ಮನವೆ ಆಗಿರುತ್ತೆ ಸ್ವಾಮಿ.

ಅಸಲ್ ಮುತಾಬಿಕ್ ನಕಲ್.

ಈ ಅರ್ಜಿಗೆ ಮುವಾರ್ ೬೦-೭೦ ಜನ ಪಟೇಲ್ ಶಾನುಭೋಗರ ರುಜು ಆಗಿರುತ್ತೆ.

ಸನ್ ೧೮೮೬ನೇ ಇಸವಿ ಫಿಬ್ರುವರಿ ತಾರೀಖ್ ೩ರಲ್ಲು ಹೊಳಲಕೆರೆ ಟಪ್ಪಾಲ್‌ದ್ವಾರಾ ರಿಜಿಸ್ಟರ್ ಆಗಿ ರವಾನೆ ಆಗಿದೆ.

SUMMARY OF NEWS.
ವೃತ್ತಾಂತ ಸಂಗ್ರಹವು.

ಧುಲೀಫಸಿಂಗ್ ಮಹಾರಾಜರವರು ರಶ್ಯ ಸರ್ಕಾರದವರ ಸೇನಾ ನಾಯಕರಾಗಿ ಪಂಜಾಬನೊಳಗೆ ಬರುತ್ತಾರೆಂದು ಒಂದು ಸುಳ್ಳು ಜಾಹಿರನಾಮೆಯನ್ನು ಮುಲ್ತಾನ್ ಪಟ್ಟಣದ ಮಧ್ಯ ಭಾಗದಲ್ಲಿ ಹಚ್ಚಿರುತ್ತಾರೆಂದು ತಿಳಿಯುತ್ತದೆ. ಮೊದಲು ಸಹ ಒಂದೆರಡುಸಾರಿ ಇದೇತೆರದ ಜಾಹಿರನಾಮೆಗಳು ಪ್ರಸಿದ್ಧಮಾಡಲ್ಪಟ್ಟಿದ್ದವು. ಈ ಕೆಲಸವು ಧುಲೀಫಸಿಂಗ್ ಮಹಾರಾಜರವರ ಪಕ್ಷದವರೊಳಗೇ ಯಾರಾದರು ಇರಲಿಕ್ಕೆ ಸಾಕೆಂದು ಕೆಲ ಇಂಗ್ಲೋ ಇಂಡಿಯನ್ ಪತ್ರಕಾರರು ಅಭಿಪ್ರಾಯ ಪಟ್ಟಿದ್ದರು; ಆದರೆ ಕಡೆಗೆ ಅವೆಲ್ಲ ಸುಳ್ಳಾಗಿ ಯಾವನೋ ಒಬ್ಬ ಯೂರೋಪಿಯನನೇ ಹೀಗೆ ಮಾಡಿದನೆಂದು ತಿಳಿದುಬಂತು. ಈಗ ಯಾರೂ ಅವನೇ ಅಥವಾ ಅವನಂತವರೇ ಮತ್ತ್ಯಾರಾದರೂ ಈ ಕೃತ್ಯವನ್ನು ಮಾಡಿರಬಹುದೆಂದು ಊಹಿಸಬೇಕಾಗಿದೆ.

ಒಬ್ಬ ವಿದ್ವಾಂಸನು ಚನ್ನಾಗಿ ಬದುಕಬೇಕೆಂಬವರಿಗೆ ಕೆಲವು ಬುದ್ಧಿವಾದಗಳನ್ನು ಹೇಳಿದ್ದಾನೆ. ಏನಂದರೆ —ಯೋಚನೆಮಾಡಿ, ನಿನ್ನ ಶಕ್ತ್ಯನುಸಾರವಾಗಿ ಯಾವದಾದರೂ ಒಂದು ಕಸಬನ್ನು ಅವಲಂಬಿಸು. ಉದ್ಯುಕ್ತನಾದಮೇಲೆ ಅದನ್ನು ಬಿಡಬೇಡ. ಚಂಚಲಚಿತ್ತನಾಗಿ ಇರಬೇಡ. ಘಾಬರಿ ಬೀಳದೆ ಎಲ್ಲಾ ಕೆಲಸಗಳನ್ನು ಬೇಗ ಮಾಡುತ್ತಿರು. ಕೆಲಸ ಮಾಡುವದರಲ್ಲಿ ಒಂದು ಕ್ರಮವನ್ನು ಅನುಸರಿಸಿ ನಡಿ. ಪ್ರಯತ್ನ ಮಾಡಿದ ಕೆಲಸ ಮನಸ್ಸಿನಲ್ಲಿಟ್ಟು ಮಾಡು. ಈಗ ಮಾಡತಕ್ಕ ಕೆಲಸವನ್ನು ನಾಳೆ ಮಾಡುತ್ತೇನೆಂದು ಉದಾಸೀನನಾಗಿ ಇರಬೇಡ. ಪರಾಪೇಕ್ಷೆ ಇಲ್ಲದೆ ಆತ್ಮಾವಲಂಬಿಯಾಗಿರು. ಮಾಡತಕ್ಕ ಕೆಲಸಗಳಲ್ಲಿ ವಿಶೇಷವಾಗಿ ಎಲ್ಲರ ಅಭಿಪ್ರಾಯವನ್ನು ಕೇಳಬೇಡ. ಹಿತಚಿಂತಕರಾದವರೊಡನೆ ಯೋಚಿಸಿ ನಿನ್ನಬುದ್ಧಿಗೆ ತೋರಿದಂತೆ ನಡೆಸು. ಆಡಿದ ವಚನವನ್ನು ಕಾಲಕ್ಕೆ ಸರಿಯಾಗಿ ನೆರವೇರಿಸು. ನಿದ್ರೆಮಾಡುವಾಗ ವಿನಾ ಮಿಕ್ಕ ಕಾಲದಲ್ಲಿ ಮನಸ್ಸಿನಲ್ಲಿ ನಿನ್ನ ಉದ್ಯೋಗವಮಾಡುತ್ತಿರು. ಒಂದು ನಿಮಿಷವೂ ಸೋಮಾರಿಯಾಗಿರಬೇಡ. ತ್ರಿಕರಣ ಶುದ್ಧಿಯುಳ್ಳವನಾಗಿರು. ಕೈಲಾದಮಟ್ಟಿಗೂ ಅನಾಥರಿಗೆ ಸಹಾಯಮಾಡು. ಅಹಿತವಾದ ಮಾತುಗಳನ್ನು ಯಾವಾಗಲೂ ಆಡಬೇಡ. ಬಹು ವೇಗವಾಗಿ ದ್ರವ್ಯವನ್ನು ಸಂಪಾದಿಸಬೇಕೆಂದು ಆತುರಪಡಬೇಡ. ವಿದ್ಯೆಯೂ ಧನವೂ ಸ್ವಲ್ಪ ಸ್ವಲ್ಪವಾಗಿ ಬಂದರೆ ಬಹುಕಾಲದವರೆಗೂ ಇರುವವು; ಇದಲ್ಲದೆ ಮನಸ್ಸಿಗೆ ನೆಮ್ಮದಿಯನ್ನುಂಟುಮಾಡುವವು. ಏಣಿ ಹಾಕಿಕೊಂಡು ವೃಕ್ಷತಕ್ಕವನು ಒಂದೊಂದು ಮೆಟ್ಟಿಲಾಗಿ ಹತ್ತಬೇಕು; ಹಾಗಿಲ್ಲದೆ ಆತುರಪಟ್ಟರೆ ಹತ್ತುವದೇ ಅಸಾಧ್ಯವಾಗುವದು. ಲೋಕದಲ್ಲಿ ಕೀರ್ತಿಯನ್ನೂ ದ್ರವ್ಯವನ್ನೂ ಪಡೆದಿರತಕ್ಕವರಲ್ಲಿ ಯಾರೂ ಹೀಗೇ ದಿನದಲ್ಲಿ ಅವುಗಳನ್ನು ಪಡೆಯಲಿಲ್ಲ.—ಹಿ. ಜೋ.

ಚೀನಾದೇಶದಲ್ಲಿ ಹಿಂದುಬಗೆ ಗಿಡವು ಬೆಳೆಯುತದೆ. ಇವರ ಎಲೆಯು ಆಲದ ಎಲೆಯ ಹಾಗೆ ಇರುತ್ತದೆ. ಹಿಂದುಸ್ಥಾನದಲ್ಲಿ ಸಣಬಿನಿಂದ ಹ್ಯಾಗೆ ನಾರುತೆಗೆಯುತ್ತಾರೋ ಹಾಗೆಯೇ ಚೀನಾ ದೇಶಸ್ಥರು ಈ ಗಿಡದಿಂದ ನಾರು ತೆಗೆಯುತ್ತಾರೆ. ಆ ನಾರನ್ನು ಹದವಮಾಡಿ ಕೊಂಡು ಅದರಿಂದ ಬಟ್ಟೆಮಾಡುತ್ತಾರೆ. ಇವು ರೇಶ್ಮೆಯ ಬಟ್ಟೆಗಳಂತೆಯೇ ಕಾಣುತ್ತವೆ. ಹಿಂದುಸ್ಥಾನ ಸರಕಾರದವರು ಚೀನಾ ಜನರಿಂದ ಈ ನಾರನ್ನು ರೇಶ್ಮೆಯ ಹಾಗೆ ಮಾಡತಕ್ಕ ಹದವನ್ನು ತಿಳಿದು ಕೊ

ಕ್ಕೊವದಕ್ಕೆ ಬಹಳ ಪ್ರಯತ್ನ ಮಾಡಿದರು ಆದರೂ ಗೊತ್ತಾಗಲಿಲ್ಲ. ಇದನ್ನು ಗೊತ್ತು ಮಾಡಿದವರಿಗೆ ಬಹುಮಾನ ಕೊಡುತ್ತೇವೆಂದು ಪ್ರಕಟಿಸಿದರು ಅದಕ್ಕಾಗಿ ಕೆಲವು ಫ್ರೆಂಚರು ಒಂದು ಯಂತ್ರವನ್ನು ಮಾಡಿರುತ್ತಾರೆ ಈ ಯಂತ್ರದಲ್ಲಿ ನೀರಿನ ಹಬೇ ಬಲದಿಂದ ಈ ಗಿಡದ ನಾರುಗಳನ್ನೆಲ್ಲಾ ಬೇರೆ ಬೇರೆ ಮಾಡಿ, ಅದಕ್ಕೆ ಹತ್ತಿಕೊಂಡಿರುವ ಅಂಟನ್ನು ಚೆನ್ನಾಗಿ ತೊಳೆಯುತ್ತಾರೆ ಈ ನಾರು ರೇಶ್ಮೆಯಂತೆ ಆಗುತ್ತದೆ ಇನ್ನು ಮೇಲೆ ಈ ನಾರಿನ ಬಟ್ಟೆಗಳು ಹಿಂದು ದೇಶದಲ್ಲಿ ವಿಶೇಷವಾಗಿ ಶಿಕ್ಕ ಬಹುದು ಇದರಲ್ಲಿ ಆದ ಬಟ್ಟೆಗಳು ಬಾಳಿಕೆ ಬರುವದು ಮಾತ್ರವೇ ಅಲ್ಲದೆ ಥಳ ಥಳ ಸುತ್ತಾ ಇರುತ್ತವೆ, ಘಟ್ಟಿಯಾದ ಚರ್ಮಕ್ಕಿಂತಲೂ ಬಹಳ ಬಲವಾಗಿ ಇರುತ್ತವೆ, ಬೆಂಕಿಯಲ್ಲಿ ಹಾಕಿದರೂ ಬೇಗ ಸುಡುವದಿಲ್ಲ. ಧನಸಂಪನ್ನರು ಯಂತ್ರಗಳನ್ನು ಇಟ್ಟುಕೊಂಡು, ಹತ್ತೀ ಬಟ್ಟೆಗಳಂತೆ ಇವುಗಳನ್ನೂ ಮಾಡುವದಕ್ಕೆ ಉಪಕ್ರಮಿಸಿದರೆ, ಬಹಳ ದ್ರವ್ಯಾರ್ಜನೆ ಆಗುವದಲ್ಲದೆ, ಅನೇಕರಿಗೆ ಜೀವನೋಪಾಯವೂ ಉಂಟಾಗುವದು. ಈ ಬಟ್ಟೆಗಳಿಗೆ ಗಿರಾಕಿ ಹೆಚ್ಚಾದ ಹಾಗೆಲ್ಲಾ ಈ ಗಿಡದ ವ್ಯವಸಾಯ ಹೆಚ್ಚುವದಲ್ಲದೆ ಈ ಮೂಲಕವಾಗಿಯೂ ಅನೇಕರಿಗೆ ಜೀವನವಾಗುವದು.

ಅಸ್ಸಾಂ ಪ್ರಾಂತದೊಳಗೆ ಪಿಂಚಿನ್ ಎಂಬವನೊಬ್ಬ ತೋಟಗಾರನು ಒಬ್ಬ ಕೂಲಿ ಹೆಂಗಸಿನ ಮೇಲೆ ಲಜ್ಜಾಸ್ಪದವಾದ ಜುಲುಂ ನಡೆಸಿದ್ದನೆಂಬದು ನಮ್ಮ ವಾಚಕರಿಗೆ ಗೊತ್ತಿರುವದಷ್ಟೆ ಈಗ ಹೊಗೇಬಂಡಿಯೊಳಗಿನ ಒಬ್ಬ ಯುರೋಪಿಯನ್ ಗಾರ್ಡನು ಗಾಡಿಯೊಳಗಿಂದ ಪ್ರಯಾಣಮಾಡಿದ ಒಬ್ಬೊಬ್ಬರು ಸಭ್ಯಸ್ತ್ರೀಯರ ಮೇಲೆ ಬಲಾತ್ಕಾರ ನಡಿಸಿದರೂ, ತಮ್ಮ ಪಾತಿವ್ರತ್ಯವು ಭಂಗವಾಗುವಂತಾ ಈ ವಿಧ ಮಾನಹಾನಿಯ ಬಲಾತ್ಕಾರವನ್ನು ತಪ್ಪಿಸಿಕೊಳ್ಳುವದಕ್ಕೋಸ್ಕರ ಆ ಹೆಂಗಸರು ಪ್ರಯತ್ನಿಸಲು ಅವರು ಮರಣಕ್ಕೆ ಗುರಿಯಾಗುವ ಸಂಭವ ಬಂದೊದಗಿದ್ದೂ ಹೊರಗಾಗಿರುತದೆ. ಪರ್ಲೋಥಾಯೆಂಬ ಪ್ರೂಶಿನ್ ಬಳಿಯ ೨೩ ವರುಷ ಪ್ರಾಯದ ಒಬ್ಬ ಸಭ್ಯ ಹಿಂದು ಸ್ತ್ರೀಯು ಹೊಗೇಗಾಡಿಯೊಳಗೆ ಕುಳಿತಿರಲು ಆಗಾಡಿಯ ಚಾರ್ಜಿನೊಳಿದ್ದ ಸ್ಕ್ರೀವೆನ್ ಯೆಂಬ ಗಾರ್ಡನು ಆ ಹೆಂಗಸಿದ್ದ ಗಾಡಿಯ ಸನಿಹಕ್ಕೆ ಹೋಗಿ ಆಕೆಯನ್ನು ಇನ್ನೊಂದು ಗಾಡಿಯಲ್ಲಿ ಕೂರಿಕೊಳ್ಳಲು ಜ್ಞಾಪಿಸಿದ್ದರಿಂದ ಆ ಬಡಸ್ತ್ರೀಯು ಸಾಹೇಬರ ಅಪ್ಪಣೆಯಂತೆ ಮೊದಲು ಕೂತಿದ್ದ ಸ್ಥಳವನ್ನು ಬಿಟ್ಟು ಅಲ್ಲಿ ಹೋಗಿ ಕೂತುಕೊಂಡಳು. ಗಾಡಿಯು ನಡಿಯಲಿಕ್ಕಾರಂಭವಾದ ಕೂಡಲೇ ಈ ಸಾಹೇಬರು ಕ್ಷಣ ಕ್ಷಣಕ್ಕೆ ಅವಳಿದ್ದಲ್ಲಿಗೆ ಬಂದು ಕಿಟಕಿಯೊಳಗೆ ಕೈಹಾಕಿ ನಾನಾತರದ ಚೇಷ್ಟೆಗಳನ್ನು ಮಾಡತೊಡಗಿದನು, ಅದನ್ನು ನೋಡಿ ಅವಳು ಹೆದರಿಕೆಯಿಂದಲೂ ನಾಚಿಕೆಯಿಂದಲೂ, ಸ್ವಲ್ಪ ಹಿಂದಕ್ಕೆ ಸರಿದಳು. ಆಗ ಈ ಬಿಳೀ ಕೋಣನು ಮದವೇರಿ ಗುಟ್ಟರಿಸುತ್ತ ಒಮ್ಮಿಂದೊಮ್ಮೆ ಅವಳಿದ್ದ ಗಾಡಿಯನ್ನು ಹೊಕ್ಕು ತನ್ನ ದುಷ್ಟವಾಸನೆಯನ್ನು ಪೂರೈಸಿಕೊಳ್ಳಲು ಪ್ರಯತ್ನಿಸಲು (ಇದನ್ನು ನಾವು ಇಲ್ಲಿ ವರ್ಣಿಸುವದಕಿಂತಲೂ, ನಮ್ಮ ವಾಚಕರು ಊಹಿಸಿದರೆ ಉತ್ತಮ) ಆ ಬಡಪಾಪಿಯು ತನ್ನ ಜೀವದಾಶೆಯನ್ನು ಸಹ ತೊರೆದು ಗಾಡಿಯೊಳಗಿಂದ ಕೆಳಗೆ ಹಾರಿ ಸ್ಮೃತಿತಪ್ಪಿಬಿದ್ದಳು !! ಎಚ್ಚರಬಂದ ಕೂಡಲೆ "ಬ್ರಿಟಿಷ ರಾಜ್ಯಭಾರದಲ್ಲಿ ಇಂತಾ ಜುಲುಮೆಯೆ ?" ಎಂದು ಮೊರೆಯಿಟ್ಟು ಗುಟ್ಟರಿಸಿದಳಂತೆ. ಹರಹರ !!! ನಿಜವಾಗಿ ಇಂತಾ ಕ್ಷುಲ್ಲಕಜನರೇ ಬಹು ಘನವಾದ ನಮ್ಮ ಬ್ರಿಟಿಷ ರಾಜ್ಯಭಾರಕ್ಕೆ ಕುಂದು ತರುವವರು, ಇಂತಾ ನೀಚರನ್ನು ದಂಡಿಸಿ ಅನ್ಯರು ಹೀಗೆ ಮಾಡುವದಕ್ಕೆ ಹೇಸುವಂತೆ ಜಾಗ್ರತೆಯಿಂದ ಉಪಾಯವನ್ನು ಯೋಚಿಸದೆ ಇದ್ದರೆ ಇಂತಾ ಬಲಾತ್ಕಾರಗಳು ಹೆಚ್ಚುತ್ತಾ ಹೋಗುವವು ವಿಲಾಯತಿಯಲ್ಲಿಯೂ ಕರ್ನಲ್ ಬೇಕರನೆಂಬವನು ಇದೇ ರೀತಿ ಮಾಡಿದ್ದನು ; ಅವನು ದೊಡ್ಡ ಉದ್ಯೋಗಸ್ಥನೂ ಲೋಕಪ್ರಿಯನೂ ಆಗಿದ್ದರೂ ತನ್ನ ದುಷ್ಕರ್ಮಕ್ಕಾಗಿ ಎಡೆಬಿಡದ ವರುಷಗಳ ಶಿಕ್ಷೆಗೊಳಗಾಗಬೇಕಾಯಿತು. ಅವನಿಂದ ಬಲಾತ್ಕರಿಸಲ್ಪಟ್ಟ ಸ್ತ್ರೀಯು ಈ ಹಿಂದುಸ್ತ್ರೀಯಳಂತೆ ತನ್ನ ಮಾನರಕ್ಷಣೆಗಾಗಿ ಗಾಡಿಯೊಳಗಿಂದ ಕೆಳಗೆ ಹಾರಿ ಪ್ರಾಣಹಾನಿಗೊಳಗಾಗಲಿಲ್ಲ ಈ ವಿಷಯವಾಗಿ ರೈಲ್ವೆ ಮುಖ್ಯಾಧಿಕಾರಿಗಳು ತಕ್ಕ ಬಂದೋಬಸ್ತು ಮಾಡುವದೂ, ಅವರು ಹಾಗೆ ಮಾಡಲಿಕ್ಕೆ ಸರಕಾರದವರು ಅವರನ್ನು ಪ್ರೇರೇಪಿಸುವದೂ ಅತ್ಯಾವಶ್ಯಕವಾಗಿರುತ್ತದೆ , ಇಲ್ಲದಿದ್ದರೆ ಇನ್ನು ಮೇಲೆ ಹೊಗೇಬಂಡಿಯೊಳಗಿಂದ ಪ್ರತಿದಿನವೂ ಬಹುದೂರದವರ್ಯಂತ ಪ್ರಯಾಣಮಾಡುವ ಸಾವಿರಾರು ಹೆಂಗಸರಲ್ಲಿ ಎಷ್ಟು ಜನರು ಈತೆರದ ದುಃಖಗಳನ್ನನುಭವಿಸಬೇಕಾಗುವದೋ ತಿಳಿಯದು ! ಈ ನೀಚಸ್ಕ್ರೀವನನು ಈಗ ಕೆರೆಯಲ್ಲಿದ್ದಾನೆಂದು ತಿಳಿಯಬರುತದೆ —ಕ. ಸು.

DRAFT OF A REGULATION TO AMEND THE LAW RELATING TO THE COLLECTION OF THE PUBLIC REVENUE IN THE PROVINCE OF COORG

ಕಳೆದವಾರದ ಶೇಷ

ಕಂದಾಯ ಕೊಡಲಿಕ್ಕೆ ತಪ್ಪಿದವನಿಗೆ ಹಳೆ ಖಿಸ್ತೀದಾರನಿಂದ ಹರಾಜ್ ದಿನ ಸಲ್ಲತಕ್ಕ ಬಾಕೀದಾರುಗಳು ಹ್ಯಾಗೆ ವಸೂಲ್ಮಾಡತಕ್ಕದ್ದು.

೪೭. ಕಂದಾಯ ಕೊಡಲಿಕ್ಕೆ ತಪ್ಪಿದವನಿಗೆ ತನ್ನ ಹಳೇ ಖಿಸ್ತೀದಾರನಿಂದ ಹರಾಜಿನ ದಿನ ಸಲ್ಲಬೇಕಾಗುವ ಕಂದಾಯದ ಬಾಕಿಗಳು ಹರಾಜ್ ಆಗುವಲ್ಲಿ ಹರಾಜ್ ನಡೆಯಲಿಕ್ಕೆ ಮುಂದೆ ಬಾಕಿ ವಸೂಲಿಗೋಸ್ಕರ ಅವನಿಂದ ಉಪಯೋಗಿಸಲ್ಪಟ್ಟಿರಬಹುದಾದ ಜಫ್ತೀ ವಿನಾ ಯಾವದಾದರೂ ಪ್ರೊಸೆಸ್ ಮೂಲಕ ಹರಾಜ್ ಆದನಂತರ ಅವನಿಂದ ವಸೂಲ್ಮಾಡತಕ್ಕದ್ದು.

ಜಮೀನ್ ಹರಾಜ್

೪೮ ಕಮ್ಮಿಷನರವರಾಗಲಿ, ಆ ಬಗ್ಗೆ ಕಮ್ಮಿಷನರವರಿಂದ ಅಧಿಕಾರ ಕೊಡಲ್ಪಡುವ ಇತರ ಆಫಿಸರಾಗಲಿ, ಕಂದಾಯದ ಬಾಕೀ ಸಮಾದಾನಕ್ಕೋಸ್ಕರ ಕಂದಾಯ ಕೊಡಲಿಕ್ಕೆ ತಪ್ಪಿದವನ ಜಮೀನಿನ ಪಿತೃತ್ವವನ್ನಾಗಲಿ, ಯಾವ ಭಾಗವನ್ನಾಗಲಿ ವಿಕ್ರಯಿಸಬಹುದು. ಪರಂತು ಸರ್ಕಾರದ ಹಣ ಬಾಕಿಯಾದ ಜಮೀನ್ ಪ್ರತಿ ಒಂದೊಂದು ತಾಕಾಗಿ ಅಥವಾ ಅನೇಕ ತಾಕುಗಳಾಗಿ ಸುಲಭವಾಗಿ ವಿಂಗಡಿಸಲ್ಪಡಬಹುದಾದ ಒಂದು ವರ್ಗನ್ನುಳ್ಳ ಅಥವಾ ಗುತ್ತಿಗೆ ಭೂಮಿವುಳ್ಳದ್ದಾಗಿದ್ದರೆ ಕಂದಾಯದ ಬಾಕಿಯನ್ನು ಒದ್ದಿ, ಜಪ್ತಿ ಹರಾಜ್ ದ ವಿಚಾರಕೆ ಖರ್ಚುಗಳು, ಇನ್ನು ದೇಖಿಲ್ ಸೈಸಲ್ಮಾಡಲಿಕ್ಕೆ ಬೇಕಾದಷ್ಟಕ್ಕಿಂತ ಹೆಚ್ಚು ಜಮೀನನ್ನು ವಿಕ್ರಯಿಸಕೂಡದು.

ಜಾಮೀನ್ ಹಾಜರ್ಮಾಡಿದಾಗ ಹರಾಜ್ ನಿಲ್ಲಿಸುವಿಕೆ

೪೯ ಕಂದಾಯ ಕೊಡಲಿಕ್ಕೆ ತಪ್ಪಿದವನು ಜಾಮೀನ್ ಹಾಜರ್ಮಾಡಿದರೆ ಕಮ್ಮಿಷನರವರಾಗಲಿ, ಕಮ್ಮಿಷನರವರಿಂದ ಆ ಬಗ್ಗೆ ಅಧಿಕಾರ ಕೊಡಲ್ಪಟ್ಟ ಇತರ ಆಫಿಸರರಾಗಲಿ, ಆ ಜಾಮೀನನ್ನು ಅಂಗೀಕರಿಸಿ ಕಂದಾಯ ಕೊಡಲಿಕ್ಕೆ ತಪ್ಪಿದವನ ಸೊತ್ತಿನ ಹರಾಜನ್ನು ಜಾಮೀನುದಾರನು ಮಾಡುವ ಷರತ್ತುಗಳ ಮೇಲೆ ಮತ್ತು ಅಂತಾ ಕಾಲದ ಪರ್ಯಂತ ನಿಲ್ಲಿಸಿದಬಹುದು. ಅಂತಾ ಷರತ್ತುಗಳನ್ನು ನೆರವೇರಿಸುವದಕ್ಕೆ ತಪ್ಪುವ ಪಕ್ಷದಲ್ಲಿ ಕಮ್ಮಿಷನರವರಾಗಲಿ ಅಂತಾ ಆಫಿಸರರಾಗಲಿ ಸೊತ್ತನ್ನು ಹರಾಜ್ ಮಾಡಬಹುದು. ಮತ್ತು ಕಂದಾಯ ಕೊಡಲಿಕ್ಕೆ ತಪ್ಪಿದವನ ಮೇಲೆ ಆಗಲಿ ಅವನ ಜಮೀನ್ದಾರನ ಮೇಲಾಗಲಿ ಅವರಿಬ್ಬರ ಮೇಲಾಗಲಿ ಪ್ರವರ್ತಿಸಬಹುದು

ಜಾಮೀನ್ದಾರರಿಂದ ವಸೂಲ್ಮಾಡುವ ವಿಧ

೫೦. ಸರ್ಕಾರ ಕಂದಾಯ ಕೊಡಲಿಕ್ಕೆ ತಪ್ಪಿದವನ ವಿಷಯದೊಳಗೆ ಈ ರೆಗ್ಯುಲೇಷನ್ನಿಂದ ವಿಧಿಸಲ್ಪಟ್ಟ ತೆರನಾದ ಪರಿಹಾರಗಳು ಅವರುಗಳ ಜಾಮೀನ್ದಾರರ ವಿಷಯದಲ್ಲಿಯೂ ಉಪಯೋಗಿಸಲ್ಪಡಬಹುದು. ಮತ್ತು ಕಮ್ಮಿಷನರವರಾಗಲಿ ಕಮ್ಮಿಷನರವರಿಂದ ಆ ಬಗ್ಗೆ ಅಧಿಕಾರ ಕೊಡಲ್ಪಡುವ ಇತರ ಆಫಿಸರರಾಗಲಿ, ಸದರೀ ಪರಿಹಾರಗಳನ್ನು ಮುಖ್ಯಸ್ಥನ ಮೇಲೆ ಜಾರೀಮಾಡುವ ಸಮಯದಲ್ಲಾಗಲಿ, ಅದಕ್ಕೆ ಮುಂಚಿತವಾಗಿಯೇ ಆಗಲಿ, ತರುವಾಯವಾಗಲಿ, ಜಾರಿಯೊಳಗೆ ತರಬಹುದು. ಆದ್ದರಿಂದ ಹಾಗೆ ಜಾರೀಮಾಡಬಹುದಾಗ್ಯೂ ಸದರೀ ಉಭಯತ್ರಿಂದಲೂ, ಬಾಕೀ ಲಾಗವನ್ನು ಖರ್ಚುಗಳು ವಸೂಲ್ ದೇಖಿಲ್ ಆಗುವ ಬರೆ ಬಾಕೀ ಒಬ್ಬನಿಗಿಂತ ಜಾಸ್ತಿಯಾಗಿ ವಸೂಲ್ಮಾಡಕೂಡದು

ಇತರ ವಿಷಯವುಳ್ಳ ಸರ್ಕಾರದ ಹಣದ ವಿಷಯದಲ್ಲಿಯೂ, ಅಡ್ವಾನ್ಸುಗಳು ರುಸುಂಗಳು ವ ತೀರ್ವಗಳು ಇವುಗಳ ವಿಷಯದೊಳಗೂ [illegible]

೫೧. ಸರ್ಕಾರಕ್ಕೆ ಸಲ್ಲಬೇಕಾದ ಜಮೀನ್ ಕಂದಾಯ ವಿನಾ ಮಿಕ್ಕತರದ ಬಾಕೀಗಳು ದುರ್ಭಿಕ್ಷ ನಿವಾರಣಕ್ಕೋಸ್ಕರವಾಗಲಿ, ವ್ಯವಸಾಯ ವಿಷಯಕ್ಕೆ ಸಂಬಂಧಿಸಿದ ಪರಂತು ಸನ್ ೧೮೭೯ನೇ ಇಸವಿಯ ಲ್ಯಾಂಡ್ ಇಂಪ್ರೂವ್ಮೆಂಟ್ ಆಕ್ಟಿನಲ್ಲಿ ವಿವರಿಸಲ್ಪಡದೆ ಇರುವ ಯಾವ ವಿಷಯಕ್ಕೋಸ್ಕರವಾಗಲಿ ಜಮೀನಿನ ಸ್ವಂತಗಾರನಿಗೂ ಹಿಡುವಳಿದಾರರಿಗೂ ಗವರ್ನಮೆಂಟಿನಿಂದ ಕೊಡಲ್ಪಡುವ ತಕಾವಿ ಅಡ್ವಾನ್ಸ ಮೊಬಲಗುಗಳು ಮುಲ್ಕೀ ವಿಷಯದಲ್ಲಾಗಲಿ, ಪೊಲೀಸ್ ಕೆಲಸಗಳಲ್ಲಾಗಲಿ, ನೇಮಿಸಲ್ಪಟ್ಟಿರುವ ಗ್ರಾಮ ನೌಕರರಿಗೆ ಯಾ ಅವರಿಗೋಸ್ಕರ ಯಾವ ಮನುಷ್ಯನಿಂದಾಗಲಿ ಸಲ್ಲತಕ್ಕ ನಗದು ರುಸುಂಗಳು ಇತರ ಬಾಕೀಗಳು ನ್ಯಾಯತಃ ಜಮೀನ್ ಮೇಲೆ ವಿಧಿಸಲ್ಪಡುವ ರೇಟುಗಳು, ತೀರ್ವಗಳು, ಇವುಗಳ ವಸೂಲಿಯೂ ಅನ್ಯಥಾ ವಿಶೇಷವಾಗಿ ವಿಧಿಸಲ್ಪಟ್ಟಿರದೆ ಇದ್ದರೆ ಅಥವಾ ಇಮಿಂದ ವಿಧಿಸಲ್ಪಡದ ಇದ್ದರೆ, ಈ ರೆಗ್ಯುಲೇಷನ್ನಿನ ನಿಬಂಧನೆಗಳನುಸರಿಸಿ ಜಮೀನ್ ಕಂದಾಯದ ಬಾಕೀ ಹ್ಯಾಗೋ ಅದೇ ಮೇರೆ ವಸೂಲ್ಮಾಡಬಹುದು.

ಬಡ್ಡಿ ವಸೂಲ್ಮಾಡುವ ವಿಧ

೫೨ ಈ ರೆಗ್ಯುಲೇಷನ್ ಅನುಸರಿಸಿ ಸಂಭವಿಸುವ ಕಂದಾಯದ ಬಾಕೀ ಮೇಲೆ ಆಗುವ ಯೆಲ್ಲಾ ಬಡ್ಡಿ ಪ್ರೊಸೆಸ್ ಚಾರ್ಜ ಮತ್ತು ಇತರ ಖರ್ಚುಗಳು ಕಂದಾಯ ಕೊಡುವದಕ್ಕೆ ತಪ್ಪಿದವನಿಂದಲಾಗಲಿ, ಅಥವಾ ಅವನ ಜಾಮೀನ್ದಾರರಿಂದಲಾಗಲಿ, ಕಂದಾಯದ ಬಾಕಿಯಂತೆಯೇ ವಸೂಲಾಗತಕ್ಕವದು.

ರದ್ದು ಮಾಡಲ್ಪಟ್ಟ ಹರಾಜಿನ ಖರ್ಚನ್ನು ಕಂದಾಯ ಕೊಡಲಿಕ್ಕೆ ತಪ್ಪಿದವನು ಕೊಡತಕ್ಕದ್ದು

೫೩. ಸೊತ್ತು ಜಫ್ತೀ ಮಾಡಲ್ಪಟ್ಟು ಯಾ ಬಿಡಲ್ಪಟ್ಟು ಹರಾಜ ಹಾಕುವಂತೆ ಹುಕುಂ ಮಾಡಲ್ಪಟ್ಟ ಸದರೀ ಹರಾಜ್ ರದ್ದು ಮಾಡಲ್ಪಟ್ಟರೆ ಜಮೀನ್ ಸ್ವಂತಗಾರನು ಸದರೀ ಹರಾಜ್ ನಿಲ್ಲಿಸದ್ದರೆ ಹ್ಯಾಗೋ ಅದೇ ಮೇರೆ ಜಫ್ತೀ ಯಾ ಹಿಡಿದುಕೊಳ್ಳುವದರಿಂದ ಪ್ರಾಪ್ತವಾದ ಖರ್ಚುಗಳಿಗೆ ಜವಾಬ್ದಾರನಾಗಿರತಕ್ಕದ್ದು. ಅಂತಾ ಸ್ವಂತಗಾರನು ಸದರೀ ಮೊಬಲಗನ್ನು ಸ್ವೀಕರಿಸುತ್ತದೆ ಬಿಟ್ಟರೆ ಯಾವ ಪ್ರೊಸೆಸ್ ಅನುಸರಿಸಿ ಮೊದಲಿನ ಬಾಕಿ ವಸೂಲ್ಮಾಡಲ್ಪಟ್ಟಿರುವದೋ ಆ ಪ್ರೊಸೆಸ್ ಮೂಲಕ ವಸೂಲ್ಮಾಡಲ್ಪಡತಕ್ಕದ್ದು.

ಬಾಕೀ ತರೀಖ್ ನ ವಸೂಲ್ಮಾಡತಕ್ಕದ್ದು

ಕಂದಾಯದ ಸಲಿಕೆಯ ಬಗ್ಗೆ ರಶೀತಿಗಳು

೫೪ ಕಂದಾಯ ಸುದಾಯಮಾಡುವ ಪ್ರತಿ ಮನುಷ್ಯನು ಸದರೀ ಸಾಲಿಗಾಗಿ ಕಮ್ಮಿಷನರವರಿಂದಾಗಲಿ ಕಮ್ಮಿಷನರವರು ಆ ಬಗ್ಗೆ ಅಧಿಕಾರ ಕೊಡುವ ಆಫಿಸರರಿಂದಾಗಲಿ ದಸ್ತಖತ್ ಮಾಡಲ್ಪಡುವ ಒಂದು ರಶೀದಿಗೆ ಅರ್ಹನಾಗಿರತಕ್ಕದ್ದು. ಅಂತಾ ರಶೀದಿಯಲ್ಲಿ ಮೊಬಲಗು ಸುದಾಯ ಮಾಡುವ ಮನುಷ್ಯನ ಹೆಸರು, ಯಾವದಕ್ಕೋಸ್ಕರ ಮೊಬಲಗು ಕೊಡಲ್ಪಡುತ್ತೋ ಆ ವಿಷಯ ಇವುಗಳನ್ನು ನಮೂದಿಸತಕ್ಕದ್ದು. ಮತ್ತು ಜಮೀನ್ ಕಂದಾಯವಾದ ಪಕ್ಷಕ್ಕೆ ಯಾವ ಜಮೀನಿಗಾಗಲಿ ಕಂದಾಯ ಬಾಕಿ ಆಗುತ್ತದೋ ಅಂತಾ ಜಮೀನನ್ನು ಸೆಟಲ್ಮೆಂಟ್ ಲೆಕ್ಕದಲ್ಲಿ ಆ ಜಮೀನಿನ ವಿಷಯದೊಳಗೆ ದಾಖಲಿರುವ ಮನುಷ್ಯನ ಹೆಸರುಗಳನ್ನು ವಿವರಿಸತಕ್ಕದ್ದು.

ಸಿವಿಲ್ ಕೋರ್ಟ ನವರು ಕಂದಾಯದ ರಿವಾಜನ್ನು ಕುರಿತು ವಿಚಾರಿಸತಕ್ಕದ್ದಲ್ಲವು

೫೫ ಸಿವಿಲ್ ಅಧಿಕಾರವುಳ್ಳ ಯಾವ ಕೋರ್ಟ ನವರು ಸರ್ಕಾರಕ್ಕೆ ಸಲ್ಲಬೇಕಾದ ಜಮೀನ್ ಕಂದಾಯದ ದರದ ವಿಷಯವನ್ನಾಗಲಿ ಗವರ್ನಮೆಂಟಿನಿಂದ ದರಾಪ್ ಮಾಡಲ್ಪಟ್ಟ ಯಾ ಇದರಿಂದ ದರಾಪ್ ಮಾಡಲ್ಪಡುವ ಕಂದಾಯದ ಮೊಬಲಗು ವಿಷಯವನ್ನಾಗಲಿ ಕುರಿತು ಯಾವ ಅಂಶವನ್ನು ಆಲೋಚಿಸತಕ್ಕದ್ದಲ್ಲವು. ಅಥವಾ ತೀರ್ಮಾನ ಮಾಡತಕ್ಕದ್ದಲ್ಲವು.

ಈ ರೆಗ್ಯುಲೇಷನ್ ಅನುಸರಿಸಿ ನಡೆಸಲ್ಪಡುವ ನಡವಳಿಕೆಗಳಿಂದ ಆದ ಅನ್ಯಾಯದ ಬಗ್ಗೆ ಜನಗಳಿಂದ ತರಲ್ಪಡುವ ದಾವೆಗಳು

೫೬. ಈ ರೆಗ್ಯುಲೇಷನ್ ಅನುಸರಿಸಿ ನಡೆಸುವ ಯಾವ ನಡವಳಿಕೆಗಳಿಂದಾಗಲಿ ತಾವು ಅನ್ಯಾಯ ಮಾಡಲ್ಪಟ್ಟಂತೆ ಯೋಚಿಸುವ ಜನಗಳು ಇದರಲ್ಲಿ ಹಿಂದೆ ವಿಧಿಸಲ್ಪಟ್ಟ ರೀತಿಯಾಗಿ ವಿನಾ ಅನ್ಯಥಾ ಅದರ ಪರಿಹಾರದ ಬಗ್ಗೆ ಸಿವಿಲ್ ಕೋರ್ಟಗಳಲ್ಲಿ ತಿಳಿದುಕೊಳ್ಳುವದರ ದೆಸೆಯಿಂದ ಅರ್ಜಿ ಹಾಕತಕ್ಕದ್ದಾಗಿ ಈ ರೆಗ್ಯುಲೇಷನ್ನಲ್ಲಿ ಅಡಗಿರುವ ಯಾವ ಅಂಶವನ್ನೂ ಎಣಿಸಕೂಡದು. ಪರಂತು ಅಂತಾ ಯಾವ ವ್ಯವಹಾರದಿಂದಾಗಲಿ ಅಂತಾ ಜನಗಳಿಂದ ಪರಿಹಾರ ದ್ರವ್ಯಕ್ಕೋಸ್ಕರ ತರಲ್ಪಡುವ ದಾವೆ ಶಿವಾಯಿ ಬೇರೆ ಯಾವ ದಾವೆಯನ್ನು ಸಿವಿಲ್ ಕೋರ್ಟನವರು ಹಿಡಿಯಕೂಡದು. ಆದರೆ ವ್ಯಾಜ್ಯಕಾರಣ ಯಾವ ಕಾಲದಲ್ಲಿ ಹುಟ್ಟಿತೋ ಆ ಕಾಲದ ಮೊದಲು ಆರು ತಿಂಗಳೊಳಗಾಗಿ ಅಂತಾ ದಾವೆ ತರಲ್ಪಡದೆ ಇದ್ದರೆ ಹಾಗೆ ತಿಳಿಸಿಕೊಳ್ಳಕೂಡದು.

ದಾವೆಗಳ ಕಾಲಾವಧಿ

ಕಮ್ಮಿಷನರವರ ಮೇಲೆ ಮಾಡಲ್ಪಟ್ಟ ದಾವೆಗಳು ಅವರಿಗೆ ಬದಲೀ ಬರುವವರ ಮೇಲೂ ನಡೆಯತಕ್ಕದ್ದು

೫೭. ಹೊರತು ಕಮ್ಮಿಷನರ್ ಉದ್ಯೋಗವನ್ನು ಯಾವಾಗಲಾಗಲಿ ವಹಿಸುವ ಆಫಿಸರರ ಮೇಲೆ ಈ ರೆಗ್ಯುಲೇಷನ್ ಅನುಸರಿಸಿ ಮಾಡಲ್ಪಟ್ಟ ಅಥವಾ ಮಾಡಲ್ಪಡದದ್ದೆಂಬ ಯಾವ ಅಂಶದಿಂದಾಗಲಿ ತಾನು ಅನ್ಯಾಯ ಮಾಡಲ್ಪಟ್ಟಂತೆ ಎಣಿಸುವ ಯಾವ ಮನುಷ್ಯನಿಂದಾಗಲಿ ತರಲ್ಪಡುವ ಯಾವ ದಾವೆಯು ಯಾವ ಆಫಿಸರರ ಮೇಲೆ ಅಂತಾ ದಾವೆ ತರಲ್ಪಟ್ಟಿರಬಹುದೋ ಆ ಆಫಿಸರರು ತಮ್ಮ ಡಿಸ್ಟ್ರಿಕ್ಟಿನ ದೆಸೆಯಿಂದ ಹೊರಟುಹೋದ ಸಬಬಿನ ಮೇಲೆ ಕಮ್ಮಿಯಾಗತಕ್ಕದ್ದಲ್ಲವು. ಆದರೆ ಸದರೀ ದಾವೆಯು ಅಂತಾ ಕಮ್ಮಿಷನರಿಗೆ ಬದಲು ಬರುವ ಆಫಿಸರರ ಮೇಲೆ ಸರ್ವಾಂಶಗಳಲ್ಲೂ ತಮ್ಮ ಮೇಲೆಯೇ ದಾಖಲ್ಮಾಡಲ್ಪಟ್ಟರೆ ಹ್ಯಾಗೋ ಹಾಗೆ ನಡೆಯತಕ್ಕದ್ದು. ಯಾವ ಕಮ್ಮಿಷನರ ಮೇಲಾಗಲಿ ಈ ರೆಗ್ಯುಲೇಷನ್ ಅನುಸರಿಸಿ ಹಿಂದಿನವರಿಂದ ಮಾಡಲ್ಪಟ್ಟ ಯಾ ಮಾಡಲ್ಪಟ್ಟಿರುತ್ತೆಂಬ ಯಾವ ಅಂಶಕ್ಕೋಸ್ಕರವಾಗಲಿ ಅವರ ಅಧಿಕಾರ ಧರ್ಮದಲ್ಲಿ ಇದರ ಹಿಂದಿನ ಸೆಕ್ಷನ್ನಲ್ಲಿ ವಿಧಿಸಲ್ಪಟ್ಟ ಕಾಲಾವಧಿಗೆ ಒಳಪಟ್ಟು ದಾವೇ ತರಲ್ಪಡಬಹುದು. ಪರಂತು ಯಾವ ಕಮ್ಮಿಷನರು ತಮ್ಮ ಪೂರ್ವದ ಅಧಿಕಾರಿಯ ಸರ್ಕಾರಿಯಾದ ಯಾವ ಕೆಲಸಕ್ಕೋಸ್ಕರವು ಸ್ವಯಂ ಜವಾಬದಾರರಾಗತಕ್ಕದ್ದಲ್ಲವು.

ಅಥವಾ ಅವರ ಮೇಲೆ ಆದ ವ್ಯಾಜ್ಯವಾಗಿಯೇ ನಿರ್ಧರಿಸಲ್ಪಡತಕ್ಕದ್ದು.

ಹಿಂದಿನ ಅಧಿಕಾರಿಯ ಕೆಲಸಗಳಿಗೆ ತಾವು ಸ್ವಯಂ ಜವಾಬ್ದಾರರಾಗಬೇಕಾದ್ದಿಲ್ಲವು.

೫೮. ಈ ರೆಗ್ಯುಲೇಷನ್ ಸರ್ಕಾರಿ ಗೆಜೆಟಿನಲ್ಲಿ ಪಬ್ಲಿಷ್ ಮಾಡಲ್ಪಡುವ ತಾರೀಖ್ ಲಾಗಾಯತು ಜಾರೀಯಲ್ಲಿ ಬರತಕ್ಕದ್ದು.

BANGALORE —Printed and published for the Proprietor, at the KARNATIC PRESS —1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯುಪಗಮಾರ್ಹ ಕರ್ಣಾಟಕಪ್ರಕಾಶಕನವರಾಭಿಧಾಪ್ರಥಿತಸಾಹಿತೀಶೋಭಿತಾ । ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈಃ ಕ್ರಿಯಾಸುಪರಿಶೋಭಿತಾದಿಶತಿಮಾನಸಂಸಂಮುದಂ ॥

Vol XIII] BANGALORE—MONDAY. OCTOBER 11 1886. [No. 41.

ಸಂಪುಟ ೧೩.] ಬೆಂಗಳೂರು.—ಸರ್ ೧೮೮೬ನೇ ಇಸವಿ ಅಕ್ಟೋಬರ್ ೧೧ನೇ ತಾರೀಖು ಸೋಮವಾರ. [ಸಂಚಿಕೆ ೪೧.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲೀಷು ಮತ್ತು ಕನ್ನಡ [illegible] ಒಂದು ವರುಷಕ್ಕೆ		೧೨—೮—೦
ಇಂಗ್ಲೀಷು [illegible] ಒಂದು ವರುಷಕ್ಕೆ		೬—೦—೦
ಕನ್ನಡ [illegible] ಒಂದು ವರುಷಕ್ಕೆ.		೬—೦—೦
[illegible]	೧ಕ್ಕೆ	೦—೪—೦

[illegible]—ಚಂದಾದಾರರು ಇಂಗ್ಲೀಷು [illegible] [illegible]

ಪ್ರಕಟನೆಯ ರಿವಾಜ್.

[illegible]	೧ಕ್ಕೆ	೦—೩—೦
[illegible]	೧ಕ್ಕೆ	೦—೧—೬

NOTICE TO SUBSCRIBERS

[illegible] ಚಂದಾದಾರರು [illegible]

೧. [illegible]

೨. [illegible]

೩ [illegible]

೪ [illegible]

NOTICE.

VAIDYASARA SANGRAHA.

Price including Postage, Rs.5-0 0

ವೈದ್ಯಸಾರ ಸಂಗ್ರಹ.

ಈ ಗ್ರಂಥ [illegible]

[illegible]	... ... ರೂ॥	೫—೦—೦
[illegible]		[illegible]

[illegible], ಬೆಂಗಳೂರು

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, OCTOBER 11, 1886

೧೮೮೬ನೇ ಅಕ್ಟೋಬರ್ ೧೧ನೇ ತಾ॥ಸೋಮವಾರ.

REMUNERATION TO PATELS AND SHANBOGUES.

ಈ ದೇಶದಲ್ಲಿ ಈಗ ಅನುಸರಿಸಲ್ಪಡುತಲಿರುವ ರಾಜ್ಯತಂತ್ರ ಕ್ರಮದಿಂದ ವಿಶೇಷ ಸಂಕಟಕ್ಕೊಳಗಾಗಿ ಪ್ರಕಾಶೇ ಮಾಡತಕ್ಕ ಸರ್ಕಾರ್ ಉದ್ಯೋಗಸ್ಥರ ಪೈಕಿ ಪ್ರಾಯೇಣ ಗ್ರಾಮ ನೌಕರರೇ ಅಧಿಕವಾಗಿರುತ್ತಾರೆ. ಇವರು ಆಗಿಂದಾಗ್ಯೆ ಮಾಡುತಲಿರುವ ಪ್ರಕಾರೆಯ ಸ್ವರೂಪವನ್ನು ವಿಚಾರಿಸಿ ನೋಡಿದರೆ, ಈ ದೇಶದಲ್ಲಿ ಇವರ ಶರೀರ ಶ್ರಮಕ್ಕೆ ತಕ್ಕ ಪ್ರಯೋಜನವಿಲ್ಲದೆಯೂ, ಕವಾಚಿತ್ ಲಭಿಸುವ ಪ್ರಯೋಜನವು ಅನಿಯತವಾದದ್ದಾಗಿಯೂ, ಮಾಡಬೇಕಾದ ನೌಕರಿ ಮಾತ್ರ ಖಂಡಿತವಾದದ್ದಾಗಿಯೂ ಏರ್ಪಟ್ಟಿರುವದರಿಂದ ಅವರ ಜೀವನವು ದುರ್ಭರವಾದದ್ದಾಗಿರುವಂತೆ ವ್ಯಕ್ತವಾಗುತಿದೆ. ಗತವಾರದಲ್ಲಿ ಪ್ರಕಟಸಲ್ಪಟ್ಟ, ಹೊಳಲುಕೆರೆ ಪ್ರಾಂತವ ನಿವಾಸಿಗಳಾದ ಕೆಲವು ಜನ ಪಟೇಲ್ ಶಾನಭೋಗರು ದಿವಾನರವರಿಗೆ ಬರೆದುಕೊಂಡ ಅರ್ಜಿಯಲ್ಲಿ ಅವರು ನಮೂದಿಸಿರುವ ಯಾವದಂಶವೂ ನಿಜವಾದ ಅವರ ಸಂಕಟವನ್ನು ಸೂಚಿಸತಕ್ಕದ್ದಾಗಿರುತಿದೆ. ಈಗ ಗವರ್ನಮೆಂಟನವರಿಗೆ ಪ್ರಾಪ್ತವಾಗಿರುವ ಅನಿವಾರ್ಯಗಳಾದ ಒಂದೆರಡು ನಿರ್ಬಂಧಗಳೇ ಮೇಲೆಕಂಡ ಅರ್ಜಿಗಳಿಗೆ ಜವಾಬ್ ಕೊಡದಿರುವಂತೆ ವಾಗ್ಬಂಧನ ಮಾಡಿಸಿದವೆಂದು ಯೋಚಿಸಬಹುದಾಗಿದೆ. ಮೊದಲು ಗ್ರಾಮ ನೌಕರರಿಗೆ ಜಮೀನು ಮೂಲಕ ಸಲ್ಲುತಲಿದ್ದ ರುಸುಮನ್ನು ತಪ್ಪಿಸಿ ನಗದ್ ತಲಬ್ ಕೊಡುವಂತೆ ಏರ್ಪಾಡು ಮಾಡಿ, ಅವರ ಅನುಭವದೊಳಿದ್ದ ನೌಕರೀ ಇನಾಂ ಜಮೀನನ್ನೆಲ್ಲ ಕಂದಾಯಕ್ಕೆ ದಾಖಲ್ಮಾಡಲಾಯಿತು. ಬಳಿಕ ಇವರಿಗೆ ಕೊಡಬೇಕಾದ ತಲಬ್ ಮೊಬಲಗಿನ ಸಂಖ್ಯೆಯು ಸೊಲಿಬಳಿಲ್ ಅಧಿಕವಾಗಿ ಅದನ್ನು ಕೊಡಲಿಕ್ಕೆ ಸರ್ಕಾರಕ್ಕೆ ಉಪಪತ್ತಿ ಇಲ್ಲದೆ ಹೋದದರಿಂದ ಮರಳಿ ಜಮೀನು ಕೊಡುವಂತೆ ವಾಗ್ದಾನ ಮಾಡಿದರು. ಪೂರ್ವದಲ್ಲಿ ಕೊಡಲ್ಪಟ್ಟ ನೌಕರೀ ಇನಾಂ ಜಮೀನು ಸಾಗುವಳಿ ಇಲ್ಲದೆ ಬಂಜರ್ ಬಿದ್ದಿರುವಾಗ್ಯೆ ಈಗ ಹೇಳುವ ಪ್ರಕಾರ ಪೋಡ್ ಜಮೀನನ್ನು ತೆಗೆದುಕೊಂಡು ಆಬಾದ್ ಮಾಡಲಿಕ್ಕೆ ಸಾಧ್ಯವಲ್ಲವಾಗಿ ಅದು ತಮಗೆ ಆವಶ್ಯಕವಿಲ್ಲವೆಂದು ಶಾನಭೋಗರು ನಿರಾಕರಿಸುತ್ತಾರೆ. ಏತೇನ ಇದರಿಂದ ಯೇನು ಏರ್ಪಟ್ಟಿತೆಂದರೆ—ನಗದು ರೂಪವಾಗಿ ಕೊಡಲಿಕ್ಕೆ ಸರ್ಕಾರಕ್ಕೆ ಉಪಪತ್ತಿ ಸಾಲದು, ಸರ್ಕಾರದವರು ಕೊಡುವೆವೆಂದು ಹೇಳುವ ಬಂಜರ್ ಜಮೀನುಗಳನ್ನು ಆಬಾದಿಗೆ ತರಲಿಕ್ಕೆ ಬೇಕಾದಷ್ಟು ಉಪಪತ್ತಿಯು ಇಲ್ಲದ್ದರಿಂದ ಅವು ಶಾನಭೋಗರಿಗೆ ಬೇಡವಾಯಿತು. ಶಾನುಭೋಗರು ಅಪೇಕ್ಷಿಸುವ ಜಮೀನನ್ನು ಬಿಡಿಸಿಕೊಡಲಿಕ್ಕೆ ಕಂದಾಯದಾರರು ಒಡಂಬಡುವದಿಲ್ಲವು. ಇಂತಾ ಸ್ಥಿತಿಯಲ್ಲಿ ಶಾನಭೋಗರ ನೌಕರಿ ಯೇನಾದರೂ ಕಡಮೆಯಾಗಿದೆಯೋ ಅಂದರೆ ಅದು ತಾಲ್ಲೂಕು ಅಧಿಕಾರಿಗಳ ಅಧಿಕಾರ ಬಲವನ್ನನುಸರಿಸಿ ಜಾಸ್ತಿಯಾಗುತಲಿರುತಿದೆ. ಗ್ರಾಮದ ಹುಟ್ಟುವಳಿಯ ಮೇಲೆ ಶೇಕಟ್ಟ ಮೊಕರರ್ಮಾಡಿ ಕೊಡುವ ಪಕ್ಷಕ್ಕೆ ಇವನ ಆಯತಿಯು ಮಾಹೆಯಾನಾ ನಾಲ್ಕೈದು ರೂಪಾಯಿಗಳಿಗಿಂತ ಅಧಿಕವಾಗಲಾರದು. ಇವನ ಕುಮ್ಮಕ್ ಬಗ್ಯೆ ಪ್ರತ್ಯೇಕ ಪಟೇಲನೊಬ್ಬನಿದ್ದಾಗ್ಯೂ ಇವನ ಶ್ರಮಮಾತ್ರ ಸ್ವಲ್ಪವೂ ಕಡಮೆಯಾಗಿರಲಾರದು. ಬಾಬಾವಮೂಜೆ ಲೆಕ್ಕಗಳಲ್ಲಿ ಯೇನಾದರೂ ಹೆಚ್ಚು ಕಡಮೆಯಾದರೆ ಆಗ ಅದು ಶಾನಭೋಗನ ಪ್ರಾಣಕ್ಕೆ ಉರಿಯಾಗುತಿದೆಯೋ ಹೊರ್ತು ಪಟೇಲನನ್ನೊಬ್ಬರೂ ಕೇಳುವವರಿಲ್ಲವು. ಲೆಕ್ಕ ಸುಜಾಯಿಷಿಯು ಶಾನಭೋಗನದಾಗಿರುತಿದೆಯೋ ಹೊರ್ತು ಅನ್ಯರಿಗೆ ಸಂಬಂಧಪಟ್ಟದ್ದಲ್ಲವು. ಈ ಶೀಮೆಯ ಪಟೇಲರೆಲ್ಲರೂ ಪ್ರಾಯೇಣ ಸರಸ್ವತಿಗೆ ಜನ್ಮವಿರೋಧಿಗಳಾಗಿರುವದರಿಂದ ವಸೂಲೀ ಸಹ ಶಾನಭೋಗನಿಲ್ಲದೆ ಹ್ಯಾಗೆ ಸಾಧ್ಯವಾಗುವದು? ಇದಲ್ಲದೆ ಈ ನಿರ್ಭಾಗ್ಯನು ತಾಲ್ಲೂಕ್ ಜವಾನರು ಮೊದಲುಗೊಂಡು ಜವಾಬುದಿ ಆಫಿಸರ ಪರಿಚಾರಕನ ತನಕ ಆಜ್ಞಾಪಾರಿ ಮಾಡಿ ಅವರ ಮೆಹರ್ಬಾನನ್ನು ಸಂಪಾದಿಸಿದರೇನೇ ಆ ದಿನವನ್ನು ಅವನು ನಿರುಪದ್ರವವಾಗಿ ಕಳೆಯಬಹುದಾಗಿದೆ. ಇವರಿಗೆ ಬರುತಲಿದ್ದ ಆಯತಿ ಮಾರ್ಗಗಳೆಲ್ಲವೂ ರೆವಿನ್ಯೂ ಸರ್ವೆಯಿಂದ ತಪ್ಪಿಹೋದಾಗ್ಯೂ, ಖರ್ಚು ಬಾಬುಗಳು ಮಾತ್ರ ಹೊರತೆ ನಮೂದಿಗೆ ಬಾರದೆ ಹೋದರೂ ಅಂತೇ ಏಕರೂಪವಾಗಿರುತಿವೆ. ಶಾನಭೋಗರಿಗೆ ಸಹಾಯಕರೆಂದು ಹೆಸರಿಟ್ಟುಕೊಂಡು ಅವರ ಆಯತಿಗೆ ಭಾಗ ಬಾಕಿಗಳಾಗಿ ಕುದರಿರುವ ಪಟೇಲರು ಈ ಶೀಮೆಯಲ್ಲಿ ಎಷ್ಟರಮಟ್ಟಿಗೆ ಪ್ರಯೋಜಕರಾಗಿದಾರೆಂದರೆ—ಫಕ್ತು ವಸೂಲೀ ಕೆಲಸ ಒಂದುವಿನಾ ಮತ್ತೊಂದಕ್ಕೂ ಅವರು ಪ್ರವೇಶಿಸುವದಿಲ್ಲವು. ಸರ್ವೇ ಸೆಟಲ್ಮೆಂಟ್ ಪದ್ಧತಿಯನ್ನು ಈ ದೇಶದಲ್ಲಿ ಜಾರಿಗೆ ತಂದಮೇಲೆ ಬ್ರಿಟಿಷ್ ಶೀಮೆಯ ಪದ್ಧತಿಯಂತೆ ಇಲ್ಲಿ ಸಹ ಪಟೇಲರು ಮೊಕರರಾದರು. ಪರಂತು ಹರ್‌ಮೋಜಸ್ಟೀಸ್ ಶೀಮೆಯಲ್ಲಿ ಪಟೇಲರಿಗೆ ಯೆಷ್ಟರ ಅಧಿಕಾರ ಕೊಡಲ್ಪಟ್ಟು ಅವರು ಯಾವ ಉದ್ದೇಶದೊಡನೆ ಮೊಕರರಾಗಿರುತ್ತಾರೆಯೋ ಆ ಅಧಿಕಾರ ಉದ್ದೇಶಗಳು ಮಾತ್ರ ಇಲ್ಲಿ ಏರ್ಪಡದೆ ಹೋದವು. ಇತರ ಪ್ರೆಸಿಡೆನ್ಸಿಗಳಲ್ಲಿ ಪಟೇಲರು ಚಲಾಯಿಸುವ ಅಧಿಕಾರಗಳಿಗೂ ಅಲ್ಲಿ ಅವರಿಗಿರತಕ್ಕ ಗೌರವ ಪ್ರಾಬಲ್ಯಕ್ಕೂ ತಕ್ಕಂತೆಯೇ ರುಸುಂ ಸಹ ಅವರಿಗೆ ದಾರಾಳವಾಗಿ ಕೊಡಲ್ಪಡುತಿದೆ. ಸರ್ವೇ ರೂಲ್ಸನ್ನನುಸರಿಸಿ ಪಟೇಲ್ ಮೊಕರರಾತೀ ಪದ್ಧತಿಮಾತ್ರ ಇಲ್ಲಿ ಸುಲಭವಾಗಿ ಜಾರಿಗೆ ಬಂತೇಹೊರ್ತು ಅವರಲ್ಲಿ ತಿಳಿಸಲ್ಪಟ್ಟಿರುವಂತೆ ತಕ್ಕ ರುಸುಂ ನಗದ್‌ರೂಪವಾಗಿ ಕೊಡಲಿಕ್ಕೆ ಇಲ್ಲಿ ಅನುಕೂಲವಿಲ್ಲದೆ ಇದೆ. ಈ ದೇಶದಲ್ಲಿ ಪಟೇಲರಿಗೆ ತಕ್ಕ ಅಧಿಕಾರವಿಲ್ಲದೆ ಹೋದಾಗ್ಯೂ ಅವರು ಗ್ರಾಮಗಳಲ್ಲಿ ಸುಮ್ಮನಿರುವದಿಲ್ಲವು. ಯಾವ ಗ್ರಾಮದಲ್ಲಿಯೋಗಿ ನೋಡಿದಾಗ್ಯೂ ಅಲ್ಲಿನ ಪಟೇಲ್ ಶಾನುಭೋಗರಿಗೆ ಪರಸ್ಪರ ಅನುಕೂಲ್ಯವಿರುವಂತೆ ಸುತರಾಂ ಕಾಣಿಸಲಿಲ್ಲವು. ಇದರ ಕಾರಣವನ್ನು ವಿಚಾರಿಸಿದರೆ ಪರಸ್ಪರ ಪ್ರಯೋಜನಭಂಗವೇ ನಿಮಿತ್ತವೆಂದು ತಿಳಿಯಬರುತದೆ. ಈ ಸಮಯವನ್ನು ಬಳಸಿಕೊಂಡು ದಗಾಖೋರರಾದ ರೈತರು ತಾವು ಸರ್ಕಾರಕ್ಕೆ ಕೊಡಬೇಕಾದ ಕಂದಾಯವನ್ನು ಕೊಡದೆ ಉಡಾಫೇ ಮಾಡಿ, ಶಾನುಭೋಗನು ಕೇಳಿದರೆ ಪಟೇಲನಬಳಿ ಕೊಟ್ಟೆವೆಂದು ಹೇಳಲಿಕ್ಕೂ, ಪಟೇಲನು ತಗಾದೆ ಮಾಡಿದರೆ ಶಾನುಭೋಗನು ಪಸೂಲ್ಮಾಡಿಕೊಂಡನೆಂದು ಹೇಳಲಿಕ್ಕೂ ಅವಕಾಶವುಂಟಾಗಿ ಮಧ್ಯೆ ತಾವು ನುಂಗಲಿಕ್ಕೆ ಕಾರಣವಾಗಿದೆ. ಇದಲ್ಲದೆ ಪಟೇಲ್ ಶಾನುಭೋಗರ ದ್ವೈವಿಧ್ಯದಿಂದ ವಸೂಲ್ ಸಲೀಸಾಗದೆ ಒಬ್ಬನ ಮೇಲೆ ಮತ್ತೊಬ್ಬನು ತಳ್ಳಿ ಸ್ವಸ್ಥಚಿತ್ತರನಾಗಿರಲಿಕ್ಕೆ ಈಗ ಅವಕಾಶ ಬಹಳವಾಗಿದೆ. ಇದರಿಂದ ಗ್ರಾಮದಲ್ಲಿ ಯೆರಡು ಶಕ್ತಿಗಳೇರ್ಪಟ್ಟು ಒಬ್ಬರ ಹಾನಿಯನ್ನು ಮತ್ತೊಬ್ಬರು ಕೋರುವ ಸ್ಥಿತಿಯೊಳಿರುತ್ತಾರೆ. ಈ ದೇಶದಲ್ಲಿ ಶಾನುಭೋಗರೆನಿಸಿಕೊಂಡಿರುವವರಪೈಕಿ ನೇಕಡಾ ೯೦ ಮಂದಿ ಬ್ರಾಹ್ಮಣರಾಗಿರುತ್ತಾರೆ. ಸಾಮಾನ್ಯೇನ ಶಾನುಭೋಗರು ದಗಾಖೋರರೆಂಬ ಭಾವವು ಸಾರ್ವತ್ರಿಕವಾದದ್ದಾಗಿರುವದರಿಂದ ದೌರ್ಭಾಗ್ಯವಶಾತ್ ಯೇನಾದರೂ ತಪ್ಪಿತ ಅವರಲ್ಲಿ ಕಂಡುಬಂದರೆ ಅವರನ್ನು ಬುಡನಾಶಮಾಡಿ ಬಿಡಬೇಕೆಂಬ ಸಂಕಲ್ಪ ಬ್ರಾಹ್ಮಣೇತರರಾದ ಅಧಿಕಾರಿಗಳಿಗೂ, ಬ್ರಾಹ್ಮಣರಿಗೆ ಇತರಾಪೇಕ್ಷೆಯಾ ಜಾಸ್ತೀ ನಿಜಾ ಕೊಟ್ಟರೆ ತಮ್ಮ ತಾಟಸ್ಥ್ಯವನ್ನು ವ್ಯಕ್ತಪಡಿಸಿದಂತೆ ಯಾಗುವದೆಂಬ ತಾತ್ಪರ್ಯವುಳ್ಳ ಬ್ರಾಹ್ಮಣಾಧಿಕಾರಿಗಳಿಗೂ ಪ್ರಾಪ್ತವಾಗಿ ಅವರು ಸಮಯವನ್ನು ಆತುರದೊಡನೆ ನಿರೀಕ್ಷಿಸುತಲಿರುತ್ತಾರೆ. ಪ್ರಮಾದಾದಿ ದೋಷಗಳೆಂತವರನ್ನೂ ಬಿಟ್ಟದ್ದಲ್ಲವಾದದರಿಂದ ನಿರ್ಗತಿಕರಾದ ಶಾನುಭೋಗರು ಸ್ವಲ್ಪ ತಪ್ಪಿತಕ್ಕೆಲ್ಲ ಪ್ರಬಲದಂಡನೆಗೆ ಗುರಿಯಾಗುತ್ತಾರೆ. ಹೊತ್ತಿಗೆ ಅನ್ನನೀರಿಲ್ಲದೆ ತಾಲ್ಲೂಕ್ ಕಚ್ಚೇರಿಯ ಬಾಗಲಲ್ಲಿ ಆಯುಸ್ಸನ್ನು ಕಳೆಯತಕ್ಕ ಶಾನುಭೋಗರಪೈಕಿ ಯಾರಿಗಾದರು ಅವರ ಆಯುಷ್ಕಾಲದಲ್ಲಾದಾಗಲೀ ಗೆಲಿ ಕಾರಾಗೃಹ ಪ್ರವೇಶ ಪ್ರಾಪ್ತವಾದರೆ ಆಗ ಗವರ್ನಮೆಂಟನವರು ಅವರಿಗೆಲ್ಲಿ ಕೊಡುವ ಅನ್ನವಸ್ತ್ರಗಳೇ ಅವರು ಹಿಂದೆ ಮಾಡಿದ ಮೆಹನ್ನತಿಗೆ ಪ್ರತ್ಯುಪಕಾರವೇ ಹೊರ್ತು ಬೇರಿಲ್ಲವು. ಶಾನುಭೋಗರಿಗೆ ಸಲ್ಲಬೇಕಾದ ರುಸುಮನ್ನು ಕೊಡಲಿಕ್ಕೆ ಈಗ ಗವರ್ನಮೆಂಟಗೆ ಶಕ್ತಿಸಾಲದೆಂದು ಹೇಳುವಾಗ್ಯೆಅವರಿಗೆ ದಾಯಾದಿಗಳಾಗಿ ಏರ್ಪಟ್ಟಿರುವ ಪಟೇಲರ ಆವಶ್ಯಕತೆಯನ್ನು ಕುರಿತು ಬಹಳಮಟ್ಟಿಗೆ ಆಲೋಚನೆಬೇಕಾಗಿದೆ. ಪಟೇಲರು ಏರ್ಪಡಲಿಕ್ಕೆ ಹಿಂದೆ ಈ ದೇಶದಲ್ಲಿ ಈಗಿನಂತೆಯೇ ಸರ್ಕಾರ್ ಹಣ ವಸೂಲಾಗುತಿತ್ತೇ ಹೊರ್ತು ಬಾಕೀ ನಿಂತಿರಲಿಲ್ಲವು. ಮುಖ್ಯವಾಗಿ ಪ್ರಕೃತಸ್ಥಿತಿಯಲ್ಲಿ ಶಾನುಭೋಗರ ಜೀವನವು "ನಿನಗೆ ಕಷ್ಟ ನನಗೆ ದುರ್ಭೋಜನ" ವೆಂಬಂತ ದುಸ್ಸಹವಾದದ್ದಾಗಿರುವದರಿಂದಲೂ, ಒಬ್ಬನು ಕೆಟ್ಟಾಗ್ಯೂ ಮತ್ತೊಬ್ಬನಾದರೂ ಸುಖಪಡಬೇಕೆಂಬ ನಿಯಮವಿರುವದರಿಂದಲೂ, ಒಂದು ಗ್ರಾಮವು ಇಬ್ಬರು ಅಧಿಕಾರಿಗಳನ್ನು ಏಕಕಾಲದಲ್ಲಿ ಭರಿಸುವಸ್ಥಿತಿಯೊಳಿಲ್ಲವಾದದರಿಂದಲೂ, ಪಟೇಲ್ ಇಸಮನ್ನು ಮೌಕೂಫ್ ಮಾಡುವದು ಯುಕ್ತವೆಂದು ತೋರುತಿದೆ. ಒಂದುವೇಳೆ ಪಟೇಲನನ್ನು ತೆಗೆದುಹಾಕುವದು ಅನುಚಿತವೆಂದು ತೋರುವ ಪಕ್ಷಕ್ಕೆ ಶಾನುಭೋಗನ ಸಂಬಂಧವನ್ನಾದರೂ ತಪ್ಪಿಸಬಿಡಬೇಕು. ಸರ್ವೆ ರೂಲ್ಸನು ಸರಿಸಿಇವರಿಬ್ಬರೂ ಇರಬೇಕಾದ್ದು ಆವಶ್ಯಕವಾಗಿಯೂ, ಗ್ರಾಮಕ್ಕೆ ಅಂಗವಾಗಿಯೂ ಇರುತಿದೆಯೆಂದು ಎಣಿಸುವಪಕ್ಷಕ್ಕೆ ದೊಡ್ಡ ಉದ್ಯೋಗಸ್ಥರ ತಲಬ್‌ಗಳಂತೆ ಇದೂ ಅನಿವಾರ್ಯವಾದದ್ದೆಂದು

ಭಾವಿಸಿ ಯಾವ ವಿಧದಿಂದಲಾದರೂ ಅವರ ರುಸುಮನ್ನು ಕೊಟ್ಟುಬಿಡುವದು ಯುಕ್ತವೇ ಹೊರ್ತು ಅವರ ಅರ್ಜಿಗಳಿಗೆ ಜವಾಬ್ ಕೊಡದೆ ಅವರು ರೂಬರೂ ಬಂದು ಕೇಳಿಕೊಂಡರೆ ಆಗ "ರೆಯಿಲ್‌ಗಾಡಿ ಹತ್ತಿ ನೋಡೋಣವೆಂದು ಬಂದಿರೋ" ಎಂತಾಗಲಿ, "ಇಲ್ಲಿ ನಡೆಯುವ ಜಟ್ಟೀ ಕಾಳಗ ಟಗರ್ ಕಾಳಗ ನೋಡಿ ಹೋಗೋಣವೆಂದು ಬಂದರೋ" ಎಂತಲಾಗಲಿ, "ಇಲ್ಲಿ ಬಿಳ್ಳೇ ವ್ಯಾಪ್ಯಾನ್ನ ದೊರೆಯುವದರಿಂದ ಮದ್ದು ಹೋಗೋಣವೆಂದು ಬಂದರೋ" ಎಂತಲಾಗಲಿ, ಹೇಳಿ ಅವರ ಮನ ನೋಯಿಸಿ ಹಿಂಸಿಸುವದು ಎಳ್ಳುಮಾತ್ರವೂ ನ್ಯಾಯವಲ್ಲವು.

DEWAN BAHADUR R. RAGHUNATHA ROW'S RECENT VISIT TO KOLAR

ಲೋಕದಲ್ಲಿ ಮನುಷ್ಯನ ಪ್ರವೃತ್ತಿ ನಿವೃತ್ತಿಗಳು ತತ್ತದ್ವಿಷಯಗಳ ಆವಶ್ಯಕತಾನಾವಶ್ಯಕತೆಗಳನ್ನನುಸರಿಸಿದವಾಗಿರುವದರಿಂದ ಕದಾಚಿತ್ ಒಂದು ವಿಷಯದಲ್ಲೊಬ್ಬನಿಗೆ ಆವಶ್ಯಕತೆಯೆಂಬದು ಬಲವತ್ತರವಾದರೆ ಆಗ ಅದು ಅವನನ್ನು ಸುಮ್ಮನಿರಗೊಳಿಸದೆಂಬದು ಪ್ರಸಿದ್ಧವಿಷಯವೇಯಷ್ಟೆ. ಈ ಸಾಮಾನ್ಯೋಕ್ತಿಗೆ ಈಚೆಗೆ ಕೋಲಾರ್ ನಿವಾಸಿಗಳು ಸಹ ಪಾತ್ರರಾದಂತೆ ತಿಳಿಯಬರುತಿದೆ. ಈಗ ಸಾರ್ವದೇಶಿಕ ಸಾರ್ವಕಾಲಿಕ ಸಾರ್ವಜನೀನವಾದ ವಿಚಾರಕ್ಕೆ ವಿಷಯವಾಗಿರುವ ಹಿಂದೂಸ್ತ್ರೀ ಪುನರ್ವಿವಾಹ ವಿಷಯದಲ್ಲಿ ನಡೆಯುತಲಿರುವ ಪೂರ್ವಪಕ್ಷ ಸಿದ್ಧಾಂತಗಳನ್ನು ಪತ್ರಿಕಾ ಮೂಲಕ ಆಗಿಂದಾಗ್ಯೆ ಓದಿ ತಿಳಿದುಕೊಳ್ಳುತಲಿದ್ದಾಗ್ಯೂ ಏತದ್ವಿಷಯಾನುಮೋದಕರಾದವರ ಮೂಲಕ ಅವರು ಹೇಳುವ ಸಾಧಕ ಬಾಧಕಗಳನ್ನು ಕೇಳಿ ಅರಿಯಬೇಕೆಂಬ ಕೋರಿಕೆಯು, ಕೋಲಾರ್ ಪ್ರಜೆಗಳ ಪೈಕಿ ಅನೇಕರಿಗೆ ಅಧಿಕವಾಗಿ ಉಂಟಾದದರಿಂದ ಅವರು ಅಲ್ಲಿನ ಪ್ರಬಲರಾದ ಅಧಿಕಾರಿಗಳನ್ನು ಪ್ರೇರಿಸಿ ಅವರ ಮೂಲಕ ಒಂದು ವಿಜ್ಞಾಪನ ಪತ್ರಿಕೆಯಂ ಬರಸಿ ಅದಕ್ಕೆ ಸುಮಾರ್ ೩೦ ಮಂದಿಯ ತನಕ ದಸ್ತುಖತ್ ಮಾಡಿ, ದಿವಾನ್‌ಬಹದೂರ್ ರಘುನಾಥರಾಯರವರಿಗೆ ಕಳುಹಿಸಿದ್ದರ ಮೇಲೆ ಸದರೀ ಪತ್ರಿಕೆಯು, ಸ್ವಾಭಾವಿಕಗಳಾದ ರಾಯರವರ ಸೌಲಭ್ಯ ಸೌಶೀಲ್ಯ ಸೌಜನ್ಯಾದಿ ಗುಣಗಳಿಗೆ ಮತ್ತಷ್ಟು ವಿಕಾಸವನ್ನುಂಟುಮಾಡಿತು. ಪ್ರಜಾಸಂತೃಪ್ತಿಯೇ ಮುಖ್ಯವೆಂದೆಣಿಸತಕ್ಕ ದಿವಾನ್ ಬಹದೂರರವರು ಜನಗಳ ಪ್ರಾರ್ಥನೆಯಂ ಪುರಸ್ಕರಿಸಿ ಕಳೆದ ತಿಂಗಳ ೨೪ನೇ ತಾರೀಖ್ ಶುಕ್ರವಾರದ ದಿನ ಸಾಯಂಕಾಲ ಮದರಾಸಿನಿಂದ ಹೊರಟು ಶನಿವಾರ ಪ್ರಾತಃಕಾಲ ೮ ಘಂಟೆ ಸುಮಾರಿಗೆ ಬೌರಿಂಗ್ ಪೇಟೆ ಸ್ಟೇಷನಿಗೆ ಬಂದು ತಲಪಿದರು. ಇದಕ್ಕೆ ಪೂರ್ವಭಾವಿಯಾಗಿಯೇ ರಾಯರವರ ಆಗಮನವನ್ನು ಅತ್ಯುತ್ಸಾಹದೊಡನೆ ನಿರೀಕ್ಷಿಸುತ ಅನೇಕಜನ ನೇಟಿವ್ ದೊಡ್ಡಮನುಷ್ಯರು ಸ್ಟೇಷನಿಗೆ ಬಂದು ಕಾದುಕೊಂಡಿದ್ದು ರಾಯರವರನ್ನು ಪ್ರೀತಿ ಗೌರವದೊಡನೆ ಬರಮಾಡಿಕೊಂಡು ಕೋಲಾರಕ್ಕೆ ಕರೆದುಕೊಂಡು ಹೋದರು. ಮ|| ರಾ|| ಶ್ರೀ ರಘುನಾಥರಾಯರವರ ಆಗಮನ ವಿಷಯದಲ್ಲಿ ಕೋಲಾರ್ ಪ್ರಜೆಗಳಿಗೆ ಉಂಟಾಗಿದ್ದ ಸಂತೋಷಾತಿಶಯವನ್ನು ಅದಕ್ಕಾಗಿ ಅವರು ತೋರಣ ಕದಳೀಸ್ತಂಭಾದಿಗಳಿಂದ ಮಾಡಿದ್ದ ಪುರಾಲಂಕಾರವು ಪ್ರತಿ ಕ್ಷಣದಲ್ಲಿಯೂ ಸೂಚಿಸದಿರಲಿಲ್ಲವು. ರಾಯರವರು ಕೋಲಾರಕ್ಕೆ ಬರುವರೆಂಬ ವೃತ್ತಾಂತವನ್ನರಿತು ಅವರ ಸಂದರ್ಶನಾರ್ಥ ಈ ಪುರಿನಿಂದ ಸಹ ಕೆಲವರು ದೊಡ್ಡಮನುಷ್ಯರು ಹೋಗಿದ್ದರೆಂದು ತಿಳಿಯಲಾದವು. ಅದೇದಿನ ಮಧ್ಯಾಹ್ನ ಕೋಲಾರ್ ಸ್ಕೂಲ್ ಹಾಲಿನಲ್ಲಿ ವೈವಾಹಿಕ ಧರ್ಮಶಾಸ್ತ್ರವು ಕುರಿತು ದಿವಾನ್‌ಬಹದೂರರವರು ಕನ್ನಡ ಭಾಷೆಯಲ್ಲಿ ಬಹುಜನ ಸಂಶಯ ನಿವಾರಣವಾಗುವಂತೆ ಸ್ಪಷ್ಟವಾಗಿಯೂ ಮನೋಹರವಾಗಿಯೂ ಉಪನ್ಯಾಸ ಮಾಡಿದರು. ಈ ಸಭೆಯಲ್ಲಿ ಡೆಪ್ಯುಟಿ ಕಮಿಷನರ್ ಮ. ಕಾಳವಟ್ಟ ಸುಬ್ಬರಾಯರವರು ಸಭಾಧ್ಯಕ್ಷರಾಗಿದ್ದು ಪ್ರಾಸಂಗಿಕದ ಮೇಧಾಶಕ್ತಿ ಪ್ರಾಕಸ್ತ್ಯಗಳನ್ನೂ ಈಗ ಜನಗಳು ಅವರ ಮೂಲಕ ತಿಳಿದುಕೊಳ್ಳಬೇಕಾಗಿರುವ ವಿಷಯ ಗೌರವವನ್ನೂ ಈಗ ಪ್ರಾಪ್ತವಾದ ಸುದರ್ಶ ವಿಶೇಷವನ್ನೂ ಸಂಗ್ರಹವಾಗಿ ಜನಗಳಿಗೆ ತಿಳಿಸಿದ ಮೇಲೆ ರಾಯರವರು ಅವಿಚ್ಛಿನ್ನವಾಗಿ ೩ ಘಂಟೆಯ ಕಾಲ ಉಪನ್ಯಾಸ ಮಾಡಿದರು. ಇದಂ ಕೇಳುವ ಕುತೂಹಲದೊಡನೆ ಸ್ಥಳದವರು ಬಹುಮಂದಿ ಬಂದಿದ್ದದಲ್ಲದೆ ಆಸಪಾಸ್ ಗ್ರಾಮಗಳಿಂದ ಅನೇಕರು ಬಂದಿದ್ದರು. ಸ್ಕೂಲ್ ಕಟ್ಟಡದಲ್ಲಿ ಸ್ಥಳ ಸಾಲದೆ ಹೋದದರಿಂದ ಅದರ ಕಂಪೌಂಡಿನಲ್ಲಿ ಏತದರ್ಥ ನಾನೂರು ಐನೂರು ಜನ ಜಮಾಯಿಸಿದ್ದರು. ಪ್ರಸಂಗವು ಪೂರೈಸಿದಮೇಲೆ ರಾಯರವರು ಅಲ್ಲಿಗೆ ಹೋಗಿದ್ದ ಕೆಲವರು ಪಂಡಿತರನ್ನು ನೋಡಿ ಇದರಮೇಲೆ ನಿಮಗೇನಾದರೂ ಆಕ್ಷೇಪಣೆ ತೋರಿ ಹೇಳಿದರೆ ಅದಕ್ಕೆ ತಮಗೆ ತಿಳಿದಮಟ್ಟಿಗೆ ಸಮಾಧಾನ ಹೇಳುವದಾಗಿ ನುಡಿದರು. ತರುವಾಯ ಕೆಲವರು ಪಂಡಿತರು ಪದ್ಧತಿಪ್ರಕಾರ ಸುಮ್ಮನಿರದೆ ಎದ್ದು ನಿಂತುಕೊಂಡು ತಮಗೆ ಕೆಲವು ಆಕ್ಷೇಪಣೆಗಳುಂಟೆಂತಲೂ, ಅವುಗಳಿಗೆ ರಾಯರವರು ಸಮಾಧಾನ ಹೇಳಬೇಕೆಂದಲೂ ತಿಳಿಸಿ ಕುಳಿತುಕೊಂಡರು. ತರುವಾಯ ಮುನಸಫ್ ಮ. ಶ್ರೀನಿವಾಸರಾಯರವರು ತಮಗೆ ಪುನರ್ವಿವಾಹ ವಿಷಯದಲ್ಲಿ ಉಂಟಾಗಿದ್ದ ಅನುಮಾನಗಳನ್ನೆಲ್ಲ ರಾಯರಿಗೆ ತಿಳಿಸಿ ಅವರ ಮೂಲಕ ಅವು ನಿವೃತ್ತಿ ಮಾಡಿಕೊಂಡರು. ಇಷ್ಟರಲ್ಲಿ ಸೂರ್ಯನಸ್ತಂಗತನಾದದರಿಂದ ಪ್ರಾಸಂಗಿಕರಿಗೂ ಅಗ್ರಾಸನಾಧಿಪತಿಗೂ ವಂದನ ಪೂರ್ವಕ ಸಭೆ ಬರಖಾಸ್ತಾಯಿತು. ಆ ಮಾರನೆಯ ದಿನವಾದ ಭಾನುವಾರದ ದಿನ ಬೆಳಿಗ್ಯೆ ಅನೇಕರ ಅಪೇಕ್ಷೆಯಂತೆ ಹಿಂದೂ ಮತವನ್ನು ಕುರಿತು ಉಪನ್ಯಾಸ ಮಾಡಿದರು. ಆ ಕಾಲದಲ್ಲಿಯೂ ಅದು ಕೇಳಲಿಕ್ಕೆ ಬಹುಜನ ಬಂದಿದ್ದರಲ್ಲದೆ ಡೆಪ್ಯುಟಿ ಕಮಿಷನರವರೇ ಅಧ್ಯಕ್ಷರಾಗಿದ್ದರು. ಆ ದಿನ ಮಧ್ಯಾಹ್ನ ಪಂಡಿತರ ಕೋರಿಕೆಯ ಪ್ರಕಾರ ಅವರಿಗಾಗಿಯೇ ಶ್ರೀ ಸೋಮೇಶ್ವರ ದೇವಸ್ಥಾನದಲ್ಲಿ ಮತ್ತೊಂದು ಸಭೆ ಜರಿಗಿದು ಆ ಪಕ್ಷದ ಪೂರ್ವಪಕ್ಷಿಗಳು ರಾಯರ ವಾಗ್ಬಂಧನಮಾಡಿಸಿ ಅವರನ್ನು ಹಾಗೆಯೇ ಸ್ಟೇಷನಿಗೆ ಕಳುಹಿಸಬೇಕೆಂಬ ಸಂಕಲ್ಪದೊಡನೆ ಕೆಲವುಜನ ಪಂಡಿತರೂ, ಅವರ ದಿಗ್ವಿಜಯವನ್ನು ನೋಡಬೇಕೆಂಬ ತಾತ್ಪರ್ಯದೊಡನೆ ಇತರರನೇಕರೂ ಬಂದು ಜಮಾಯಿಸಿದರು. ಬಳಿಕ ಅಲ್ಲಿ ನಡೆದ ವಿಚಾರವನ್ನು ಕುರಿತು ನಾವು ತಿಳಿಸಬೇಕಾದುದಿಲ್ಲವು. ಯಾತಕ್ಕೆಂದರೆ, ಅದು ಕೇವಲ ವೈದಿಕಸಭೆಯಾದದರಿಂದ ಅದು ಯದೃಚ್ಛವಾಗಿ ಮುಕ್ತಾಯವಾಗಿರುವದೋ ಅದು ಅನುಭವಶಾಲಿಗಳಾದವರೇ ಊಹಿಸಿ ತಿಳಿದುಕೊಳ್ಳಬಹುದು. ಈ ಪುರದಲ್ಲಿ ನಡೆದ ಸಭೆಯೊಳು ಕೇವಲ ಅನುವಾದಕ್ಕಾಗಿ ಒಬ್ಬರು ಹ್ಯಾಗೆ ಕುದರಿದರೋ ಅವರಂತೆ ಅಲ್ಲಿಯೂ ಒಬ್ಬರೇರ್ಪಟ್ಟರು. ಹಿಂದಿನ ದಿನದಲ್ಲಿ ರಾಯರವರು ಪುನರ್ವಿವಾಹ ವಿಷಯದಲ್ಲಿ ಮಾಡಿದ ಉಪನ್ಯಾಸವನ್ನೆಲ್ಲ ಅಲ್ಲಿನ ಪಂಡಿತರೊಬ್ಬರು ಅನುವಾದ ಮಾಡಿ ಕಡೆಗೆ ಈ ವಿಷಯದಲ್ಲಿ ತಾವು ಗ್ರಂಥಗಳನ್ನು ನೋಡಲಿಲ್ಲವೆಂತಲೂ ಅದಕ್ಕೆ ಸ್ವಲ್ಪದಿವಸ ಅವಕಾಶ ಕೊಡಬೇಕೆಂತಲೂ, ಹಾಗೆ ಕೊಡಲ್ಪಟ್ಟಲ್ಲಿ ತಾವು ನಿಸ್ಸಂದೇಹವಾಗಿ ಎಂದಿನಂತೆಯೂ ಹೇಳಿ ಸೌಮ್ಯವಾಗಿಯೇ ಕುಳಿತುಕೊಂಡರು. ತರುವಾಯ ಅರಣಿ ವಂಶಸ್ಥರಾದ ಮಹಾರಾಜಶ್ರೀ ಕೋನೇರಿರಾವ್ ಸಾಹೇಬರವರು, ಕೇವಲ ವೈದಿಕಪ್ರಾಯರಾದ ನಮ್ಮ ಪಂಡಿತರ ಮೂಲಕ ಪರಿಶೀಲಿಸಲ್ಪಟ್ಟಿರುವ ವಿಷಯವು ಕಡೆಗೆ ಮೇಲೆ ಕಂಡಂತೆ ಪರ್ಯವಸಾನವನ್ನೈದಿದರಿಂದ ನಮ್ಮ ಅನುಮಾನ ನಿವೃತ್ತ್ಯರ್ಥ ತಾವು ಉಭಯ ಪಕ್ಷದವರ ಅನುಕೂಲ ಪ್ರತಿಕೂಲ ವಚನಗಳನ್ನು ತಿಳಿಸಬೇಕೆಂದು ರಾಯರವರನ್ನು ಕೇಳಲು, ಅವರದೇ ಪ್ರಕಾರ ಮೊದಲು ಪರಪಕ್ಷದವರು ತಿಳಿಸುವ ವಚನಗಳನ್ನೆಲ್ಲ ಅನುವಾದ ಮಾಡಿ ಅವುಗಳ ಮೇಲೆ ತಮ್ಮ ಸಿದ್ಧಾಂತ ವಚನಗಳನ್ನರುಹಿ, ಈ ಮಧ್ಯೆ ಮುನಸಫರು ಮರಳಿ ಕೇಳಿದ ಕೆಲವು ಪ್ರಶ್ನೆಗಳಿಗೆ ತೃಪ್ತಿಕರವಾಗಿ ಜವಾಬ್ ಹೇಳಿ ಪ್ರಸಂಗವ ಪೂರೈಸಿದರು. ರಾಯರವರು ತಮ್ಮ ಸಂಗಡ ಅನೇಕ ಧರ್ಮಶಾಸ್ತ್ರ ಗ್ರಂಥಗಳನ್ನು ತಂದಿದ್ದದರಿಂದ ಅವುಗಳಿಗೆ ಪೂಜೆಯಂ ಮಾಡಿ ಆ ಪುಸ್ತಕಗಳನ್ನು ಎಲ್ಲರೂ ಭಕ್ತಿಯೊಡನೆ ಪರಿಗ್ರಹಿಸಿದರು. ಇವೆಲ್ಲವು ತೀರಿಸಿಕೊಂಡು ರಾಯರವರು ತಾವು ಇಳಿದಿದ್ದ ಸ್ಥಳಕ್ಕೆ ಬಹುಮಂದಿ ದೊಡ್ಡ ಮನುಷ್ಯರೊಡನೆ ವಾಪಸ್ ದಯಮಾಡುವಾಗ್ಯೆ ಮಾರ್ಗದಲ್ಲಿ ಪರಸ್ಥಳದ ಶ್ರೀವೈಷ್ಣವರೊಬ್ಬರು ಅತಿವೇಗದಿಂ ಬಂದು ತಮ್ಮ ಕೈಗಳಲ್ಲಿದ್ದ ಒಂದು ಕಡತವನ್ನು ಬಿಚ್ಚಿ ಇದಕ್ಕೆ ಸಮಾಧಾನ ಇಲ್ಲೇ ಹೇಳಬೇಕೆಂದು ರಾಯರನ್ನು ಕೇಳಲು, ಅದಕ್ಕೆ ಅವರು ತಾವು ಇಲ್ಲಿ ಇರುವ ಕಾಲವು ಅಲ್ಪವಾಗಿರುವದರಿಂದ ಅವಕಾಶವಿಲ್ಲವೆಂತಲೂ ಸ್ವಲ್ಪ ಮುಂಚಿತವಾಗಿ ಬಂದಿದ್ದರೆ ತಕ್ಕ ಸಮಾಧಾನ ಹೇಳಬಹುದಾಗಿತ್ತೆಂತಲೂ, ಹೇಳಬೇಕಾದ ಆಕ್ಷೇಪಣೆಗಳನ್ನೆಲ್ಲ ಪತ್ರಿಕಾ ಮೂಲಕ ಬರೆದು ಕಳುಹಿಸಿದರೆ ಕೂಡಲೇ ಅದಕ್ಕೆ ಮದರಾಸಿನಿಂದ ಜವಾಬ್ ಕೊಡುವುದಾಗಿಯೂ ಹೇಳಿದ್ದರ ಮೇಲೆ ಸದರೀ ಆಚಾರ್ಯರು ಪ್ರತ್ಯುತ್ತರ ಹೇಳದೆ ಹೊರಟುಹೋದರು. ರಾಯರವರು ಮಾರನೆಯ ದಿನ ಬೆಳಿಗ್ಯೆ ಎಲ್ಲರಿಂದಲೂ ಅನುಜ್ಞೆಯಂ ಪಡೆದು ಮದರಾಸಿಗೆ ಹೊರಟು ಹೋದರೆಂತಲೂ ಅವರಲ್ಲಿದ್ದ ಎರಡು ದಿನಗಳಲ್ಲಿಯೂ, ಎಗ್ಸಿಕ್ಯುಟಿವ್ ಇಂಜನಿಯರ್ ಮ|| ಶ್ರೀನಿವಾಸರಾಯರವರು ತಮ್ಮ ಮನೆಯಲ್ಲಿಟ್ಟುಕೊಂಡು ಗೌರವಾನುಗುಣವಾಗಿ ಸತ್ಕರಿಸಿದರೆಂತಲೂ ಅಲ್ಲಿನ ಬಾತಮಿದಾರರ ಕಾಗದದ ಮೂಲಕ ತಿಳಿದು ಸಂತೋಷಿಸುವೆವು. ಮುಖ್ಯವಾಗಿ ಮ. ರಘುನಾಥರಾಯರವರ ಯೋಗ್ಯತೆಯೂ ಅವರ ಶೀಲಸ್ವಭಾವಗಳೂ ಪ್ರಸಂಶಾರ್ಹಗಳಾದದರಿಂದ ಎಲ್ಲಿ ಹೋದಾಗ್ಯೂ ಅಲ್ಲಿ ಅವರಿಗೆ ತಕ್ಕ ಗೌರವ ಸತ್ಕಾರಗಳು ನಡೆಯತಕ್ಕ ವಿಷಯದಲ್ಲಿ ಸ್ವಲ್ಪವೂ ಸಂದೇಹಿಸಬೇಕಾದದ್ದಿಲ್ಲವು.

Occasional Notes.
ನೈಮಿತ್ತಿಕವಿಷಯನ್ಯಾಸ

Revival of trade.—ಉತ್ತರ ಬರ್ಮಾದೇಶದಿಂದ ಬಂದ ಗವರ್ನಮೆಂಟ್ ತಂತಿವೃತ್ತಾಂತದ ಮೂಲಕ ಚೀನಾದೇಶದೊಡನೆ ಮರಳಿ ವ್ಯಾಪಾರ ಪ್ರಾರಂಭವಾಗುವದಾಗಿದೆಯೆಂದು ತಿಳಿಯಬರುತಿದೆ.

Affairs in Cashmere.—ಕಾಶ್ಮೀರದ ಮಹಾರಾಜರವರು ರಾಜ್ಯಕಾರ್ಯ ದುರವು ತಮ್ಮ ಸಹೋದರರಾದ ರಾಜಾ ರಾಂಸಿಂಗ್‌ಯವರಿಗೆ ಒಪ್ಪಿಸಿಬಿಟ್ಟದ್ದರಿಂದ ಮಹಾರಾಜರವರಿಗೂ ಅವರ ತಮ್ಮಂದಿರಿಗೂ ಉಂಟಾಗಿದ್ದ ಗೃಹಕೃತ್ಯಸಂಬಂಧವಾದ ಕಲಹಗಳಿಗೂ ಫಿರ್ಯಾದಿಗಳಿಗೂ ಅವಕಾಶತಪ್ಪುತಬರುತಲಿದೆ.

An invitation.—ಪಂಜಾಬ್ ಪ್ರದೇಶದ ಪ್ರಮುಖರ ವಿದ್ಯಾಭ್ಯಾಸಕ್ಕಾಗಿ ನಿರ್ಮಿಸಲುದ್ದೇಶಿಸಲ್ಪಟ್ಟಿರುವ ಕಾಲೇಜ್ ಪಾಠಶಾಲೆಯ ಕಟ್ಟಡದ ಅಸ್ತಿಭಾರವು ಹಾಕುವ ಉತ್ಸವ ಮುಂದಿನ ತಿಂಗಳಲ್ಲಿ ನಡೆಯತಕ್ಕದ್ದಾಗಿ ಅದಕ್ಕೆ ದಯಮಾಡಬೇಕೆಂದು ಮಹಾರಾಜ್ಞೀ ಇಂಡ್ಯಾಚಕ್ರವರ್ತಿನೀಯವರ ಪುತ್ರರಾದ ಡ್ಯೂಕ್ ಆಫ್ ಕನಾಟಿಯವರು ಪ್ರಾರ್ಥಿಸಲ್ಪಟ್ಟಿರುತ್ತಾರೆ.

The Lieut Governorship of the Punjab ಪಂಜಾಬ್‌ದೇಶದ ಲೆಫ್ಟಿನೆಂಟ್ ಗವರ್ನರ್ ಕೆಲಸಕ್ಕೆ ಸರ್ ಲೆಪಲ್ ಗ್ರಿಫಿನ್‌ಯವರು ಮೊಕರರ್ ಮಾಡಲ್ಪಟ್ಟರೆಂಬದಾಗಿ ಉಂಟಾದ ಪ್ರವಾದವನ್ನು ಪ್ರಾರ್ಜಿತಪಡಿಸತಕ್ಕಬಗ್ಯೆ ಈ ತಿಂಗಳ ೮ನೇ ತಾರೀಖ್‌ವರಿವಿಗೆ ಇಂಡ್ಯ ಗವರ್ನಮೆಂಟಿನ ಸರ್ಕಾರೀಯಾಗಿ ವರ್ತಮಾನ ಯಾವದೂ ಬರಲಿಲ್ಲವು; ಅದೇವಿಷಯವನ್ನು ಕುರಿತು ಲಂಡನ್ ಪಟ್ಟಣಕ್ಕೆ ಕಾಗದ ಬರೆಯಲ್ಪಟ್ಟಿದೆಯೆಂದು ಒಂದಾನೊಂದು ಪತ್ರಿಕೆ ಹೇಳುತದೆ.

The Bombay Legislative Council ಬರೋಡೇ ಸಂಸ್ಥಾನದ ಸಾಬಿಕ್ ದಿವಾನರಾದ ಕಾಜೀಸಹಾಬುದ್ದೀನ್‌ಯವರೂ, ಕೊಲ್ಹಾಪುರ ಸಂಸ್ಥಾನದ ಸಾಬಿಕ್ ದಿವಾನರಾದ ರಾವ್ ಬಹದೂರ್ ಮಹದೇವ ವಾಸುದೇವ ಬಾರ್ವೆಯವರೂ, ಆನರೇಬಲ್ ಬದ್ರುದ್ದೀನ್ ತಿಯಾಬ್ಜಿಯವರಿಗೂ ರಾವ್ ಬಹದೂರ್ ರಾನಡೇಯವರಿಗೂ ಬದಲಾಗಿ, ಮುಂಬೈ ಗವರ್ನಮೆಂಟ್ ನ್ಯಾಯವಿಧಾಯಕ ಸಭೆಯಲ್ಲಿ ಜಾಸ್ತೀಯಿಸುಂ ಶರೀಕ್ ಮೆಂಬರ್‌ಗಳಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

Distinguished visitors to India.—ಪ್ರೂತ್ ಯೆಂಬ ಪತ್ರಿಕೆ ತಿಳಿಸುವದೇನಂದರೆ—ಮುಂದೆ ಪಾರ್ಲಿಮೆಂಟ್ ಸಮಾಜ ಬರಖಾಸ್ತಾಗುವ ಕಾಲದಲ್ಲಿ ಸಾಬಿಕ್ ಗವರ್ನಮೆಂಟಿನ ಮೆಂಬರ್‌ಗಳಾದ ಲಾರ್ಡ್ ಹಾರ್ಟಿಂಗ್‌ಟನ್, ಲಾರ್ಡ್ ರೋಸ್‌ಬರಿ, ಇವರಿಬ್ಬರೂ ಇಂಡ್ಯರಾಜ್ಯಕ್ಕೆ ಹೋಗಿ ಬರಬೇಕೆಂದು ನಿರ್ಣಯಿಸಿರುತ್ತಾರೆ. ಆಬಗ್ಯೆ ಖರುಜು ಸಹ ನಿಷ್ಕರ್ಷೆ ಆಗಿರುತದೆ. ಮ. ಹರ್ಬರ್ಟ್ ಗ್ಲಾಡಸ್ಟನ್‌ಯವರು ಇಂಡ್ಯ ದೇಶಕ್ಕೆ ಹೋಗಿ ಬರಲು ಯೋಚಿಸುತಲಿದಾರೆ. ಇವರು ಕಲ್ಕತ್ತೆಯೊಳು ಪ್ರಸಿದ್ಧವಾದ ಒಂದು ವ್ಯಾಪಾರ ಕೋಠಿಯಲ್ಲಿ ಭಾಗಸ್ಥರಾಗಿರುವ ತಮ್ಮ ಸಹೋದರರಾದ ಮ. ಹೆನ್ರಿ ಗ್ಲಾಡಸ್ಟನ್‌ಯವರ ಮನೆಯೊಳಿಳಿಯುವರು, ಎಂಬದು.

A reply.—ಮ್ಯಾಜಿಸ್ಟ್ರೇಟಿ ಮತ್ತು ರೆವಿನ್ಯೂ ಕೆಲಸಗಳೆರಡನ್ನೂ ಒಬ್ಬ ಅಧಿಕಾರಿಗೆ ಕೊಡಕೂಡದು, ಪರಂತು ಅವು ಪ್ರತ್ಯೇಕಿಸಬೇಕೆಂದು ನಮೂದಿಸಿ ಮಹಾಜನ ಸಭೆಯವರು ಮದರಾಸ್ ಗವರ್ನಮೆಂಟಿಗೆ ಬರೆದ ಅರ್ಜಿಗೆ ಸದರೀ ಗವರ್ನಮೆಂಟಿನವರು ಇದರಡಿ ಬರುವಂತೆ ಜವಾಬ್ ಕೊಟ್ಟಿರುತ್ತಾರೆ.—ಅರ್ಜಿಯಲ್ಲಿ ನಮೂದು ಮಾಡಲ್ಪಟ್ಟಿರುವ ವಿಷಯ ಗೌರವವನ್ನು ಗವರ್ನಮೆಂಟಿನವರು ಅರಿತಿರುತ್ತಾರೆ. ಮತ್ತು ಉಚಿತ ಸಂದರ್ಭದಲ್ಲಿ ಸಭೆಯವರು ತಿಳಿಸುವ ಸಲಹೆಗಳನ್ನು ಕುರಿತು ಆಲೋಚಿಸುವರು, ಪರಂತು ರಾಜ್ಯಾಡಳಿತ ವಿಷಯದಲ್ಲಿ ಜಾಸ್ತೀ ಖರ್ಚಿಗೆ ಅವಕಾಶವುಳ್ಳ ಯಾವ ಬದಲಾವಣೆಯನ್ನು ಕುರಿತಾಗಲೀ ಇಂಡ್ಯ ಗವರ್ನಮೆಂಟಿಗೆ ಶಿಫಾರಸ್ಸು ಮಾಡುವದಕ್ಕೆ ಅನುಕೂಲವಿಲ್ಲವು, ಎಂಬದು.

The Viceroy's visit.—ವೈಸರಾಯಿಯವರು ಬರುವ ಡಿಸೆಂಬರ್ ೫ನೇ ತಾರೀಖಿನಲ್ಲಿ ತಿರುಚನಾಪಳ್ಳಿಗೆ ಬಂದು, ೬ನೇ ತಾರೀಖ್ ಬೆಳಿಗ್ಯೆ ಅಲ್ಲಿಂದ ಮದುರೆಗೆ ಹೋಗಿ ಆದಿನವೆಲ್ಲ ಅಲ್ಲಿದ್ದು ಅಲ್ಲಿನ ವಿಶೇಷಗಳನ್ನೆಲ್ಲ ನೋಡಿಕೊಂಡು ೭ನೇ ತಾರೀಖ್ ಬೆಳಿಗ್ಯೆ ಅಲ್ಲಿಂದ ಹೊರಟು ಮಧ್ಯಾಹ್ನಕ್ಕೆ ತಂಜಾವೂರಿಗೆ ಹೋಗಿ ಸೇರುವರು. ಮರುದಿನವೆಲ್ಲ ಅಲ್ಲೇ ಇದ್ದು ಮಧ್ಯಾಹ್ನದ ಮೇಲೆ ಹೊರಟು ೯ನೇ ತಾರೀಖ್ ಬೆಳಿಗ್ಯೆ ಪುದುಚ್ಚೇರಿಗೆ ಹೋಗಿ ಅಲ್ಲಿಂದ ಕಲ್ಕತ್ತೆಗೆ ಪ್ರಯಾಣವಾಗುವರು.

The Viceroy's Council.—ಒಂದಾನೊಂದು ಪತ್ರಿಕೆ ಹೇಳುವದೇನಂದರೆ,—ಸರ್ ಚಾರ್ಲ್ಸ್ ಎಚ್ಚಿಸನ್‌ಯವರು ವೈಸರಾಯಿಯವರ ಮಂತ್ರಾಲೋಚಕ ಸಮಾಜದ ಮೆಂಬರಾಗಿ ಮೊಕರರ್ ಮಾಡಲ್ಪಡುವದು ನೇಟಿವ್ ಸಮೂಹಕ್ಕೆ ಅತ್ಯಂತ ಸಂತೋಷ ಜನಕವಾಗಿರುವದು. ಸದರೀ ದೊಡ್ಡಮನುಷ್ಯರು, ಸ್ವದೇಶೀಯರ ಪ್ರೀತಿ ಗೌರವಗಳಿಗೆ ಭಾಜಕವಾಗಿದ್ದಾಗ್ಯೂ ಸದಾ ನೇಟಿವ್‌ಜನಗಳ ಕ್ಷೇಮಚಿಂತನೆಯನ್ನೇ ಮಾಡುತಲಿದಾರೆ. ಮುಖ್ಯವಾಗಿ ಪಂಜಾಬ್‌ದೇಶದ ನೇಟಿವ್‌ಜನಗಳು, ಗವರ್ನಮೆಂಟಿಗೆ ಉಚಿತಾಂಶಗಳನ್ನು ಕುರಿತು ಅರುಹತಕ್ಕಬಗ್ಯೆ ಅವರಪಕ್ಷದಲ್ಲೇನಿಜವಾದ ಒಬ್ಬ ಸ್ನೇಹಿತರಿದಾರೆಂದು ಭಾವಿಸುವರು. ಸರ್ ಚಾರ್ಲ್ಸ್ ಎಚ್ಚಿಸನ್‌ಯವರು ಪ್ರಾಯಶಃ ಇಂಡ್ಯಗವರ್ನಮೆಂಟ್ ನೌಕರಿಯಲ್ಲಿ ಸೇರಿದ್ದುಮೊದಲು ಪಂಜಾಬ್‌ದೇಶಕ್ಕೆನೇ ಸೇರಿದವರಾಗಿರುತ್ತಾರೆ, ಎಂಬದು.

A decision of the Governor General ಮರಮತ್ ಇಲಾಖೆಯಲ್ಲಿ ಕಾಯಮಾಗಿ ಇಂಜನಿಯರ್ ಹೋದೆಯಂ ಪಡೆದಿರುವ ತಮಾಂ ನೇಟಿವ್ ದೊಡ್ಡಮನುಷ್ಯರಿಗೂ ಇದುಮೊದಲು ಮುಂದೆ, ರಾಯಿಬಹದೂರ್, ರಾವ್‌ಬಹದೂರ್, ಖಾನ್‌ಬಹದೂರ್, ಎಂಬ ಪ್ರಶಸ್ತಿಗಳನ್ನುಂಟುಮಾಡತಕ್ಕದ್ದು, ಮತ್ತು, ಆನರರಿ ಅಸಿಸ್ಟೆಂಟ್ ಇಂಜನಿಯರ್ ಹೋದೆಯಂಪಡೆಯುವ ತಮಾಂ ಅಸಿಸ್ಟೆಂಟ್ ಇಂಜನಿಯರ್‌ಗಳೂ, ಅಪ್ಪರ್ ಸಬಾರ್ಡಿ

ನೇಟಿವ್, ಅಂದರೆ ಮೇಲ್ಪಟ್ಟತರಗತಿಗೆಸೇರಿದಿತಾ ಜೇದಾರಿ ನೌಕರರಿಗೆ ರಾಯ್‌ಸಾಹೇಬ್, ರಾವ್‌ಸಾಹೇಬ್, ಖಾನ್‌ಸಾಹೇಬ್, ಎಂಬ ಪ್ರಶಸ್ತಿಗಳಂಕೊಡತಕ್ಕದ್ದಲ್ಲದೆ ಲೋಕಲ್ ಗವರ್ನಮೆಂಟಿನವರ ಸಿಫಾರಸ್ಸಿನಮೇಲೆ ರಾಯ್‌ಬಹದೂರ್, ರಾವ್‌ಬಹದೂರ್, ಖಾನ್‌ಬಹದೂರೆಂಬ ಮೇಲ್ಪಟ್ಟ ಪ್ರಶಸ್ತಿಗೆ ಅರ್ಹರಾಗಿರತಕ್ಕದ್ದೆಂದು ಗವರ್ನರ್ ಜನರಲ್ ಸಾಹೇಬರವರು ನಿರ್ಣಯಿಸಿರುತ್ತಾರೆ.

Bazaar strike at Trichinopoly.—ಈಚೆಗೆ ಇಂಡ್ಯದೇಶದಲ್ಲಿ ಇನ್‌ಕಂಟ್ಯಾಕ್ಸ್‌ಯೆಂಬ ತೆರಿಗೆಯೊಂದು ಏರ್ಪಾಟಾಗಿ ವಸೂಲಾಗುತ ಬರುತಲಿದೆಯಷ್ಟೆ, ತಿರುಚನಾಪಳ್ಳಿವರ್ತಕರು ತಮ್ಮ ಅಂಗಡಿಗಳನ್ನಾದರೂ ಮುಚ್ಚಿಬಿಡುವೆವು ಅಥವಾತಮ್ಮ ಕಸಬನ್ನಾದರೂ ಬಿಟ್ಟುಬಿಡುವೆವೇಹೊರತು ಸದರೀ ತೆರಿಗೆ ತಾವು ಕೊಡುವದಿಲ್ಲವೆಂದು ಒಗ್ಗಟ್ಟುಮಾಡಿಕೊಂಡು ಈತಿಂಗಳ ೩—೪ನೆ ತಾರೀಖುಗಳಲ್ಲಿ ಅಂಗಡಿಗಳನ್ನೆಲ್ಲ ಬಾಗುಮಾಡೀಬಿಡಲು ಅವರನ್ನುನೋಡಿ ಅನೇಕಗ್ರಾಮಗಳ ವರ್ತಕರು ಸಹ ಅವರನ್ನನುಸರಿಸಿದರು. ಇದರಿಂದ ಪ್ರಜೆಗಳಿಗೆ ಆಹಾರಪದಾರ್ಥಗಳು ದುರ್ಲಭವಾಗಿ ಬಹಳಕಷ್ಟಕ್ಕೆಗುರಿಯಾದರು ಕೆಲ್ಲಜಾತಿವರ್ತಕರು ಕೆಲವರು ಸದರೀ ತೆರಿಗೆಕೊಡುವದಕ್ಕಿಂತಲೂ ಎರಡುಮೂರುದಿನಗಳಕಾಲ ತಮ್ಮ ವ್ಯಾಪಾರಕೊಟಿಗಳನ್ನು ಮುಚ್ಚಿಡುವದಾಗಿ ತಿಳಿಸಿದರು. ಮುಖ್ಯವಾಗಿ ಮಹಮ್ಮದೀಯರ್ಜನಗಳು ಬಹಳತೇಗಿಕೊಂಡರು ಇದು ಮೊಹರಂಹಬ್ಬದ ಕಾಲವಾದದರಿಂದ ಅವರಿಗೆಸ್ಸಂಬಾದ ಕೋಪೋದ್ರೇಕವು ಮತ್ತಷ್ಟು ವೃದ್ಧಿಯಾಯಿತು ಇಂತಾ ಗಲಾಟೆಯುಂನೋಡಿ ಮಿಲಿಟರಿಸೇನೆ ಸಿದ್ಧವಾದಲ್ಪಟ್ಟಿತು ಈತಿಂಗಳ ೪ನೇ ತಾರೀಖಿನದಿನ ವರ್ತಕರು ಸ್ವಲ್ಪಹೊತ್ತು ತಮ್ಮ ಅಂಗಡಿಗಳಂ ತೆರೆದರು ಇದಕ್ಕೆ ಮುಖ್ಯಪ್ರವರ್ತಕರಾದವರು ಬಲಾತ್ಕಾರ ಪೂರ್ವಕ ಮರಳಿ ಮುಚ್ಚಿಸಿಬಿಟ್ಟರು. ಷಾಪುಗಳಪ್ರವರ್ತಕರು ಲೈಸೆನ್ಸ್ ಟ್ಯಾಕ್ಸ್‌ಮೊದಲಾದ ತೆರಿಗೆಗಳಂತದ್ದುಮಾಡಬೇಕೆಂದು ಕೇಳುತ್ತಾರೆ, ಮ್ಯುನಿಸಿಪಾಲಿಟಿಯವರು ಅವರ ಇಷ್ಟಾನುಸಾರ ನಡೆಸುವದಕ್ಕೆ ಇಷ್ಟವುಳ್ಳವರಾಗಿ ಗವರ್ನಮೆಂಟಿನವರ ಮಂಜೂರಾತಿಯಂ ನಿರೀಕ್ಷಿಸುತಲಿದಾರೆ. ಮಧುರೆ, ರಂಜ್ಞಾವೂರು. ಕೋಯಿಂಬತೂರ್, ನಾಗಪಟ್ಣ, ಮತ್ತು ತತ್ತುಕ್ಕುಡಿ ಮೊದಲಾದ ಪಟ್ಟಣಗಳಿಂದ ಪ್ರೊಲೀಸ್‌ಸೇನೆಯು ಕರೆಯಿಸಲ್ಪಟ್ಟಿರುತಿದೆ ಬಡಜನರು ಬಹಳಕಷ್ಟಕ್ಕೆ ಗುರಿಯಾಗಿದಾರೆ. ಯೂರೋಪಿಯನ್‌ಜನರು ಇತರಸ್ಥಳಗಳಿಂದ ತಮಗೆ ಬೇಕಾದ ಪದಾರ್ಥಗಳನ್ನು ತರಿಸಿಕೊಂಡರು ಕಲಹವೂ ಲೂಟಿಯೂ ಪ್ರಾಪ್ತವಾಗಬಹುದೆಂಬ ಭೀತಿಯುಂಟಾಗಿದೆ, ಎಂಬದಾಗಿ ೫ನೇತಾರೀಖಿನವರಿವಿಗೆ ಅಲ್ಲಿನ ವರ್ತಮಾನವು ತಿಳಿಯಬಂದಿದೆ. ಅದರತರುವಾಯ ವರ್ತಕರು ತಮ್ಮತಮ್ಮ ಅಂಗಡಿಗಳನ್ನಿಟ್ಟು ವ್ಯಾಪಾರಕ್ಕೆ ಶುರುಮಾಡಲು ಪಟ್ಟಣದಲ್ಲಿ ಗದ್ದಲ ಯಾವದೂಯಿಲ್ಲವೆ ಯೆಲ್ಲವೂ ತಹಬಂದಸ್ತಿಗೆಬಂದು ಧಾನ್ಯ ಅಡಿಗಬ್ಬ ಮೊದಲಾದ ಪದಾರ್ಥಗಳು ಅಂಗಡಿಬೀದಿಗೆ ಬರುತಲಿವೆಯೆಂದು ತಿಳಿಯಬರುತಿದೆ.

LOCAL AND PROVINCIAL NEWS.

ಖಳದೇಶತುತ್ತಾಲ್ಲೂಕ್‌ಜಾತವೃತ್ತಾಂತಗಳು.

Night trains.—ದಸರಾಉತ್ಸವವನ್ನುನೋಡುವ ಉದ್ದೇಶದೊಡನೆ ಮೈಸೂರಿಗೆ ಹೋಗಿಬರುವ ಜನಗಳ ಅನುಕೂಲ್ಯಕ್ಕಾಗಿ ಇಲ್ಲಿಂದ ಮೈ ಅಲ್ಲಿಂದ ಇಲ್ಲಿಗೂ ರಾತ್ರಿಕಾಲದಲ್ಲಿ ರೈ ನಡೆಸಲ್ಪಡುತಿವೆ. ತಾತ್ಕಾಲಿಕವಾಗಿ ಏರ್ಪಾಟು ಕಾಯಂ ಮಾಡಲ್ಪಡುವದಾದರೆ ಅದರಿಂದ ಪ್ರಯಾಣಸ್ಥರಿಗೆ ಸುಖವಿಲ್ಲದೆ ಹೋಗಲಾರದು.

Dussara holidays.—ದಸರಾ ಹಬ್ಬದ ಬಗ್ಯೆ ಈ ತಿಂಗಳ ೩ನೇ ತಾರೀಖ್ ಲಾಗಾಯತು ೧೬ನೇ ತಾರೀಖ್‌ವರಿವಿಗೆ ಈ ಸಂಸ್ಥಾನದ ನಿತ್ಯ ಇಲಾಖೆಗಳಿಗೂ ಪೂರಾ ೧೦ ದಿನಗಳ ರಜಾ ಕೊಡಲ್ಪಟ್ಟಿತಷ್ಟೆ. ಸದರೀ ರಜಾ ನಾಳೆಯ ದಿನ ಪೂರ್ತಿಯಾಗಿ ಕಚ್ಚೇರಿಗಳೆಲ್ಲವೂ ಮರಳಿ ತೆರೆಯಲ್ಪಟ್ಟು ಕೆಲಸಗಳಿಗೆ ಪ್ರಾರಂಭವಾಗುವದು.

The Dussara.—ಈಸಲ ದಸರಾ ಹಬ್ಬವು ಸರ್ವತ್ರ ಯೇಕರೂಪವಾಗಿ ಆಚರಿಸಲ್ಪಟ್ಟಿತು. ಈಸಂಸ್ಥಾನದ ರಾಜಧಾನಿಯಾದ ಮೈಸೂರಲ್ಲಿ ನಡೆಯತಕ್ಕ ಉತ್ಸವಾದಿಗಳು ಪ್ರಸಿದ್ಧವಾಗಿಯೇ ಇವೆ. ಕಳೆದ ಗುರುವಾರದದಿನ ಸಾಯಂಕಾಲ ಜಂಬುಸವಾರೀಬಗ್ಯೆ ಈ ಪೇಟೆಯಲ್ಲಿನ ದೇವರುಗಳಿಗೆ, ವರ್ಷ ಮೊದಲಾದ ಬಾಧೆಗಳ್ಯಾವದೂ ಇಲ್ಲದೆ ಮಾಮೂಲ್ ಉತ್ಸವಗಳು ನಡೆದವು.

The Moharum.—ಈಸಲ ದಸರಾ ಹಬ್ಬವೂ ಮೊಹರಂಹಬ್ಬವೂ ಯೇಕಕಾಲದಲ್ಲಿ ಪ್ರಾಪ್ತವಾದದರಿಂದ ಯೇನಾದರು ಗದ್ದಲ ವುಂಟಾಗಬಹುದೆಂಬ ಶಂಕೆಗೆ ಅವಕಾಶ ವುಂಟಾಗಿತ್ತು. ದೈವಾತ್ ಅಂತಾದ್ದು ಯಾವದೂ ಇಲ್ಲದೆ ಕಳೆದ ಶನಿವಾರದೊಡನೆ ಯೆಲ್ಲವೂ ಪೂರ್ತಿಯನ್ನೈದಿದವು.

The weather.—ಮೊನ್ನೆಯ ದಿನ ಸಾಯಂಕಾಲ ೭ ಘಂಟೆಸುಮಾರಿಗೆ ಈ ಪ್ರೂರಲ್ಲಿ ಮಳೆಗೆ ಪ್ರಾರಂಭವಾಗಿ ಕೆಲವು ನಿಮಿಷಗಳ ಕಾಲ ಬಲವಾಗಿಯೂ ಕೆಲವು ಘಂಟೆಯ ಕಾಲ ತುಂತುರಿಮಳೆಯೂಬಿತ್ತು. ಈವರ್ಷ ಅಲ್ಪವಾದದ್ದೆಂದು ಹೇಳಬಹುದಾಗಿದ್ದಾಗ್ಯೂ ಸ್ವಕೃತ ಇದರ ಆವಶ್ಯಕತೆಯನ್ನು ಯೋಚಿಸಲಾಗಿ ಕೇವಲ ಪ್ರಯೋಜನಕರವಾದ್ದೆಂದು ಯೆಣಿಸಬೇಕು.

A new Traffic Inspector.—ಮದರಾಸ್ ರೈಲ್ವೆ ಆಕ್ಟಿಂಗ್ ಚೀಫ್ ಇಂಜನಿಯರವರ ಸೋದರರಾದ ಮಿ. ಕಾರ್ವರ್ ಯೆಂಬವರು ಮೈಸೂರು ರೈಲ್ವೆಗೆ ಕಾಯಂ ಟ್ರಾಫಿಕ್ ಸೂಪರಿಂಟೆಂಡೆಂಟರಾಗಿ ನೇಮಕರಮಾಡಲ್ಪಟ್ಟು ಅವರು ತಮ್ಮ ಕೆಲಸದ ಚಾರ್ಜಂ ವಹಿಸುವದಕ್ಕಾಗಿ ಇಲ್ಲಿಗೆ ಬಂದಿರುವದರಿಂದ ಇದುವರಿವಿಗೆ ಸದರೀ ಕೆಲಸದಲ್ಲಿದ್ದ ಮಿ. ಕೃಷ್ಣಣ್ಣಶೆಟ್ಟರು ಮೈಸೂರು ಗವರ್ನಮೆಂಟ್ ನೌಕರಿಗೆ ವರ್ಗಮಾಡಲ್ಪಡುವರೆಂದು ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ಹೇಳುತಿದೆ.

The Fort murder case.—ಈ ಪೇಟೆ ಕೋಟೆಯಲ್ಲಿ ನಡೆದ ಖೂನೀಮೊಕದ್ದಮೆಯ ವಿಷಯವನ್ನುಕುರಿತು ಕಳೆದ ನಾಲ್ಕೈದುವಾರಗಳಲ್ಲಿ ವಿಸ್ತಾರವಾಗಿ ತಿಳಿಸಿರುತ್ತೇವೆಯಷ್ಟೆ. ಸದರೀ ಮೊಕದ್ದಮೆಯಲ್ಲಿ ಮರಣದಂಡನೆ ವಿಧಿಸಲ್ಪಟ್ಟ ಗೋವಿಂದರಾಜನೆಂಬುದಲಿ ಮತ್ತು ವೆಂಕಟಸ್ವಾಮಿ ಯೆಂಬವನಕಡೆಯ ಇಂದ್ಯರಾಜ್ಯದ ಪ್ರೈವಿ ಕೌನ್ಸಿಲಿನವರಿಗೆ ಮಾಡಲ್ಪಟ್ಟ ಅಪೀಲ್ ತಿರಸ್ಕರಿಸಲ್ಪಟ್ಟು ಕೆಳಕೋರ್ಟುಗಳ ದಂಡನೆಯನ್ನೇ ಕಾಯಂಮಾಡಿರುವದಾಗಿ ರೆಸಿಡೆಂಟರಿಗೆ ಕಳೆದ ಬುಧವಾರದದಿನ ತಂತಿವೃತ್ತಾಂತ ಬಂದದರಿಂದ ಸದರೀ ಅಪರಾಧಿಗಳಿಬ್ಬರೂ ಬರುವ ಶುಕ್ರವಾರದದಿನ ಪ್ರಾತಃಕಾಲ ಆರುಘಂಟೆಯೊಳಗಾಗಿ ಇಲ್ಲಿನ ಸೆಂಟ್ರಲ್‌ಜೈಲಿನಲ್ಲಿ ಗಲ್ಲಿಗೆ ಹಾಕಲ್ಪಡುವರು.

A Mahajana Sabha.—ಈದೇಶದ ನ್ಯಾಯ ವಿಮರ್ಶೆಯನ್ನು ನಿಗೇಯಿಂದ ನೋಡುವದಕ್ಕಾಗಿ, ಮದರಾಸನಲ್ಲಿ ಯೇರ್ಪಾಟಾಗಿರುವಂತೆ ಈ ಪ್ರೂರಲ್ಲೂ ಒಂದು ಮಹಾಜನ ಸಭೆ ಯೇರ್ಪಾಟು ಮಾಡುವದಕ್ಕೆ *ಯಾವವಿಧ ಪ್ರಯತ್ನ* ಮಾಡಬೇಕೆಂಬ ಅಂಶವನ್ನು ಕುರಿತು ಆಲೋಚಿಸುವದಕ್ಕಾಗಿ, ಕ್ಷಿಪ್ರದಲ್ಲಿ ಈ ಪೇಟೆಯೊಳು ಒಂದುಸಭೆ ಸೇರುವದಾಗಿದೆಯೆಂದು ತಿಳಿಯಬರಲು ಅದನ್ನು ಕುರಿತು ನಾವು ವಿಚಾರಿಸುವಲ್ಲಿ ಇದು ನಿಂ ಟಿಟಿ ಸ್ಟೀರ್ಪ ಜನಗಳ ಪ್ರಯತ್ನವೆಂದು ತಿಳಿದಮೇಲೆ ಈ ವಿಷಯದಲ್ಲಿ ನಮಗೆ ವುಂಟಾಗಿದ್ದ ಸಂಶಯ ನಿವೃತ್ತಿಯಾಯಿತು. ಪೇಟೆಯ ಜನಗಳ ಧೈರ್ಯೋತ್ಸಾಹಗಳು ಲೋಕಪ್ರಸಿದ್ಧವಾಗಿರುವಲ್ಲಿ ಅಂತವರು ಮೇಲಿನಂತೆ ಪ್ರಯತ್ನಪಡುತಲಿದಾರೆಂದು ಹೇಳುವದು ಕೇವಲ ಹಾಸ್ಯಾಸ್ಪದವಾಗಿರುವದೆಂದು ಯೋಚಿಸಿ ಅದನ್ನು ಕುರಿತು ಸುಪ್ರೂರ್ಣ ವಿಚಾರ ಮಾಡಬೇಕಾಯಿತು.

Abolition of the Topographical Survey Department.—ಈಗ್ಯೆ ಕೆಲವು ಸಂವತ್ಸರಗಳ ಮೊದಲು ಈ ದೇಶದಲ್ಲಿ ನಡೆಸಲ್ಪಡುತಲಿದ್ದ ಟೊಪೋಗ್ರಾಫಿಕಲ್ ಸರ್ವೆ ಅಂದರೆ ಬೆಟ್ಟಗುಬ್ಬ ವಗೈರೆಗಳ ಪೈಮಾಯಿಷೀ ಕೆಲಸವು ಪೂರೈಸಿದ್ದರಿಂದ ಸದರೀ ಇಲಾಖೆಯು ಮಾಫೀಮಾಡಕೂಡದೆ ಗುರ್ರೀ ತಾರೀಖ್ ಮೊದಲು, ಮೌಕೂಫ್ ಮಾಡಲ್ಪಟ್ಟು ಅದರ ನೌಕರರೂ ಆಫಿಸರ್‌ಗಳು ಸಹ ಮಧುರೆ ಡಿಸ್ಟ್ರಿಕ್ಟಿಗೆ ಸರ್ವೆ ಕೆಲಸದಬಗ್ಯೆ ಹೋಗುವರೆಂದು ತಿಳಿಯಬರುತಿದೆ. ಈ ಇಲಾಖೆಯನ್ನು ವಜಾಮಾಡಿದ್ದರಿಂದ ಈಗ ಮಹಾರಾಜಾ ಸರ್ಕಾರಕ್ಕೆ ಸಾಲೀಯಾನಾ ಐವತ್ತು ಅರವತ್ತು ಸಾವಿರ ರೂಪಾಯಿಗಳ ತನಕ ಕೂಡುವಲೆಯಾಗಬಹುದೆಂದು ನಂಬುತ್ತೇವೆ. ಈ ಸರ್ವೇ ಸೆಟಲ್‌ಮೆಂಟ್ ಬ್ರಿಟಿಷ್ ಕಮೀಷನ್ ಕಾಲದಲ್ಲಿ ಏರ್ಪಟ್ಟದ್ದರಿಂದ ಅದನ್ನು ನಿಷೇಧಿಸದೆ ಪೂರೈಸುವತನಕ ಇಟ್ಟುಕೊಂಡು ಕಾಪಾಡಬೇಕಾದ ಭಾರವು ಅನಿವಾರ್ಯವಾಗಿ ಇಲ್ಲಿನವರಿಗೆ ಪ್ರಾಪ್ತವಾಗಿತ್ತು.

TELEGRAPHIC SUMMARY.

ತಂತಿವೃತ್ತಾಂತ ಸಂಗ್ರಹವು.

ಲಂಡನ್, ೭ನೇ ಅಕ್ಟೋಬರ್—ಲಾರ್ಡ್ ರೋಸ್‌ಬರಿಯವರು ತಮ್ಮ ಭಾರ್ಯೆಯವರೊಡನೆ, ಈ ತಿಂಗಳ ೨೦ನೇ ತಾರೀಖಿನಲ್ಲಿ, ಲಂಡನ್ ಪಟ್ಟಣದಿಂದ, ಕೇಸರೀ ಹಿಂದ್ ಎಂಬ ಹೊಗೇ ಜಹಜಿನಲ್ಲಿ ಕುಳಿತವರಾಗಿ ಮುಂಬೈಗೆ ಪ್ರಯಾಣ ಮಾಡುವರು

ವೈಯನ್ನಾ, ೮ನೇ ಅಕ್ಟೋಬರ್—ಬಲ್ಗೇರಿಯಾ ದೇಶದಲ್ಲುಂಟಾಗಿರುವ ಕಲಹದ ವ್ಯವಸ್ಥೆಯಬಗ್ಗೆ, ಒಂದು ಸಮಾಜ ಸೇರಬೇಕೆಂದು ಆಸ್ಟ್ರಿಯಾ ಸರ್ಕಾರದವರು ಸೂಚಿಸಿ ಇರುತ್ತಾರೆ, ಪರಂತು ರಷಿಯಾ ಮತ್ತು ಜರ್ಮನೀ ಗವರ್ನಮೆಂಟಿನವರು ಅಂತಾ ಸಮಾಜಕ್ಕೆ ತಾವು ಸೇರುವದಿಲ್ಲವೆಂದು ತಿಳಿಸಿಬಿಟ್ಟರು

ಸೋಫಿಯಾ, ೮ನೇ ಅಕ್ಟೋಬರ್—ಬಲ್ಗೇರಿಯಾದೇಶಕ್ಕೆ ಆರಸರ ಚುನಾವಣೆ, ಮತ್ತು ಕೆಲಸಗಳನ್ನು ಫೈಸಲಾತಿ ಮಾಡುವದು, ಈ ವಿಷಯದಲ್ಲಿ ರಷಿಯಾ ಸರ್ಕಾರದವರು ಅಪೇಕ್ಷಿಸುವರು ಕೇವಲ ಅನುಚಿತವಾದ್ದೆಂದು ಆಕ್ಷೇಪಿಸಿ ಬಿಡಿಸುವದಕ್ಕಾಗಿ ಈದಿನ ಇಲ್ಲಿ ಪ್ರಬಲ ಸಮಾಜ ಸೇರಿದೆ. ಆ ಕಾಲದಲ್ಲಿ ಹಾಜರಿದ್ದ ರಷಿಯಾದೇಶದ ಜನರಲ್ ಕಾಲ್‌ಬಾರ್ಸ್ ಯೆಂಬವರು ಸದರೀ ಸಮಾಜ ಆಕ್ರಮವಾದ್ದೆಂದು ತಿಳಿಸಿದರು, ಪರಂತು ಪ್ರಬಲ ಗದ್ದಲದೊಡನೆ ಅಲ್ಲೇ ಹೊರಟು ಹೋಗಬೇಕಾಯಿತು ಆದಾಗ್ಯೂ ತಾವು ಹೊರಟುಹೋಗುವದಕ್ಕೆ ಮುಂಚೆ, ರಷಿಯಾ ಸರ್ಕಾರದವರು ತಿಳಿಸಿದ ಬುದ್ಧಿವಾದವನ್ನು ಅಲಕ್ಷ್ಯಮಾಡಿದಬಗ್ಗೆ ಮುಚ್ಚರಿಸಿ ಹೊರಟುಹೋದರು

ಲಂಡನ್, ೯ನೇ ಅಕ್ಟೋಬರ್—ಮಿ ಗ್ಲಾಡ್‌ಸ್ಟನ್ ರವರು ಕಾರ್ಕ್ ಮೊದಲಾದ ಪಟ್ಟಣಗಳಿಂದ ಬಂದ ಠರಾವುಪತ್ರವನ್ನು ಬರಮಾಡಿಕೊಂಡು ಐರ್ಲೆಂಡ್ ದೇಶಕ್ಕೆ ಸಂಬಂಧಪಟ್ಟ ವಿಷಯಗಳ ವ್ಯವಸ್ಥೆಯಬಗ್ಯೆ ತಾವು ಇರುವರಿವಿಗೆ ರಾಜಕಾರ್ಯದಲ್ಲಿರುವಂತೆಯೂ ಐರ್ಲೆಂಡ್ ಸ್ವದೇಶೀಯರ ಉಪದೇಶಪ್ರಯತ್ನಗಳು ಕೈಗೂಡುವವರೆಂತಲೂ ತಿಳಿಸಿದರು

ಲಂಡನ್, ೮ನೇ ಅಕ್ಟೋಬರ್—ಬಲ್ಗೇರಿಯಾ ದೇಶದಲ್ಲಿನ ತಕರಾರುಗಳ ವ್ಯವಸ್ಥೆಬಗ್ಗೆ ಒಂದು ಸಮಾಜ ಸೇರಬೇಕೆಂದು ಆಸ್ಟ್ರಿಯಾ ಸರ್ಕಾರದವರು ತಿಳಿಸಿದ ಅಭಿಪ್ರಾಯವನ್ನು ಇಂಗ್ಲೆಂಡ್ ಸರ್ಕಾರದವರು ಅನುಮೋದಿಸುತ್ತಾರೆ

ಪಂಬಾ, ೩ನೇ ಅಕ್ಟೋಬರ್—ರಷಿಯಾ ಸರ್ಕಾರದವರ ತಗಾದೆಗಳಿಗೆ ತಾತ್ಕಾಲಿಕವಾದ ಬಲ್ಗೇರಿಯಾ ಸರ್ಕಾರದವರು ಸಮ್ಮತಿಸಲಿಲ್ಲವಾಗಿ ರಷಿಯಾ ಸರ್ಕಾರದವರೊಳೆ ಯುದ್ಧಮಾಡಲು ಯೋಚಿಸಿ ಇವರೇನು ಜೆ ರು ಇಲ್ಲಿನ ಗ್ಯಾರಿಸನ್ ಸೇನೆಯು ಸಜ್ಜಿಯ ಸರ್ಕಾರದವರನ್ನು ಕೇಳಲಾಗಿ, ಅವರು ಅಂತಾ ಯೋಚನೆ ಇಲ್ಲವೆಂದು ತಿಳಿಸಿ, ಪರಂತು ಅಂತಾ ಪ್ರಶ್ನೆ ಮಾಡಿದಬಗ್ಯೆ ಸದರೀ ಸೇನೆಯ ನಡತೆಯನ್ನು ಕುರಿತು ಪೂರಾ ಆಕ್ಷೇಪಿಸಿದರು

ರಸ್ಟಕ್, ೩ನೇ ಅಕ್ಟೋಬರ್—ಹಿಂದೆ ನಡೆದ ಕಲಹಕ್ಕೆ ಸೇರಿ ಈಗ ಕೈದಿನಲ್ಲಿರತಕ್ಕವರನ್ನು ಬಿಡುಗಡೆ ಮಾಡುವಂತೆಯೂ, ಅವರಿಗೆ ದಂಡನೆ ಕೊಡುವದಾಗದೆಯೂ ಇಲ್ಲಿನ ಕಮಾಂಡಿಂಗ್ ಆಫೀಸರ್ ಜನರಲ್ ಕೌಲ್‌ಬಾರ್ಸ್‌ಯವರು ಹುಕುಂಮಾಡಲು, ಸದರೀ ಕಮಾಂಡಿಂಗ್‌ನವರು ಗ್ಯಾರಿಸನ್ ಸೇನೆಯ ಸಂಗಡ ಆಲೋಚಿಸಿ ಅದರಂತೆ ನಡೆಸುವದಕ್ಕಾಗುವದಿಲ್ಲವೆಂದು ನಿರಾಕರಿಸಿಬಿಟ್ಟರು

ಸೋಫಿಯಾ, ೩ನೇ ಅಕ್ಟೋಬರ್—ಜನರಲ್ ಕೌಲ್‌ಬಾರ್ಸ್ ರವರು ಬಲ್ಗೇರಿಯಾದೇಶ ಸಂಚಾರಾರ್ಥ ಹೋದ ಸ್ಥಳಗಳಲ್ಲೆಲ್ಲ ಜನಗಳು ಅವರನ್ನು ಗೌರವಿಸಲಿಲ್ಲವು

೩ನೇ ಅಕ್ಟೋಬರ್—ಬಲ್ಗೇರಿಯಾ ಸರ್ಕಾರದವರು, ಸದರೀ ದೇಶದಲ್ಲಿ ಜನರಲ್ ಕೌಲ್‌ಬಾರ್ಸ್ ನಡೆಸುವ ನಡವಳಿಕೆಯನ್ನು ಕುರಿತು ಆಕ್ಷೇಪಿಸಿ ದೊಡ್ಡ ಸಂಸ್ಥಾನಾಧಿಪತಿಗಳಿಗೆ ಕಾಗದ ಬರೆದಿರುತ್ತಾರೆ

ಪ್ರಾಚೀನವಾದ ನಮ್ಮ ಆರ್ಯಮತಪ್ರಕಾರ ಪರಬ್ರಹ್ಮರೂಪನಾದ ಈಶ್ವರನು ಅದ್ವಿತೀಯನೆಂತಲೂ, ಆತನು ಬ್ರಹ್ಮ ವಿಷ್ಣುಮಹೇಶ್ವರಾತ್ಮಕನಾಗಿದ್ದರೂ, ಇವರೊಳು ಭೇದವ್ಯಾವದೂ ಇರುವದಿಲ್ಲವೆಂತಲೂ, ಸೃಷ್ಟಿಸ್ಥಿತಿಲಯಗಳೆಂಬ ಮೂರು ಅಧಿಕಾರಗಳಂ ಪಡೆದದರಿಂದತ್ರಿಮೂರ್ತಿಗಳಾದನೇಕಾಯಿತೆಂತಲೂ ಓಂಕಾರವು ತದೈಕ್ಯಸೂಚಕವಾದ್ದೆಂತಲೂ ತಿಳಿಸುವ ಮಾತನ್ನು ಪ್ರಾಜ್ಞರು ಅಂಗೀಕರಿಸಿದಾಗ್ಯೂ ಸಾಮಾನ್ಯೇನ ಆಯಾಮತಸ್ಥರು ಇದನ್ನು *ಅನುಮೋದಿಸುವ*ದಿಲ್ಲವಾಗಿ ಅವರತಿಳುವಳಿಕೆಯಬಗ್ಯೆ ಅದ್ವಿತೀಯನಾದ ಪರಬ್ರಹ್ಮನೊಬ್ಬನೇ ಎಂಬ ಅರ್ಥವನ್ನು ಬೋಧಿಸುವ ಪ್ರಮಾಣವಾಕ್ಯಗಳನ್ನು ಮದರಾಸ್ ಹಿಂದೂ ಎಕ್ಸ್‌ಲಸಿಯರ್ ಯೆಂಬ ಪತ್ರಿಕೆಯಿಂದ ಸಂಗ್ರಹಿಸಿ ಇದರಡಿ ಪ್ರಕಟಿಸಿರುತ್ತೇವೆ. ಇದರಿಂದ ವಿಷ್ಣು ಸರ್ವೋತ್ಕೃಷ್ಟತ್ವಕ್ಕಾಗಲಿ, ಶಿವಸರ್ವೋತ್ಕೃಷ್ಟತ್ವಕ್ಕಾಗಲಿ ಹೋರಾಡುತ ಪರಸ್ಪರ ದೂಷಿಸುತ ವ್ಯರ್ಥವಾದ ವಿಪ್ರತಿಪತ್ತಿಗೆ ಪಾತ್ರರಾಗತಕ್ಕ ಅಜ್ಞರ ಮೌಢ್ಯವು ನಿವಾರಣವಾಗಬಹುದೆಂದೆಣಿಸುತ್ತೇವೆ.

೧. ಅದೃಷ್ಟಮವ್ಯವಹಾರ್ಯಮಗ್ರಾಹ್ಯಮಲಕ್ಷಣಮಚಿಂತ್ಯಮವ್ಯಪದೇಶ್ಯಮೈಕಾತ್ಮ್ಯಪ್ರತ್ಯಯಸಾರಂಪ್ರಪಂಚೋಪಶಮಂಶಾಂತಂಶಿವಮದ್ವೈತಂಚತುರ್ಥಂಮನ್ಯಂತೇಸಆತ್ಮಾಸವಿಜ್ಞೇಯಃ॥—ಮಾಂಡೂಕ್ಯೋಪನಿಷತ್॥

೨. ಅಗ್ನಿರ್ಯಥೈಕೋಭುವನಂ ಪ್ರವಿಷ್ಟೋರೂಪಂರೂಪಂಪ್ರತಿರೂಪೋಬಭೂವ। ಏಕಸ್ತಥಾಸರ್ವಭೂತಾಂತರಾತ್ಮಾ ರೂಪಂರೂಪಂ ಪ್ರತಿರೂಪೋಬಹಿಶ್ಚ—ಕಠೋಪನಿಷತ್॥

೩. ವಾಯುರ್ಯಥೈಕೋ ಭುವನಂಪ್ರವಿಷ್ಟೋರೂಪಂರೂಪಂಪ್ರತಿರೂಪೋಬಭೂವ। ಏಕಸ್ತಥಾಸರ್ವಭೂತಾಂತರಾತ್ಮಾ ರೂಪಂರೂಪಂ ಪ್ರತಿರೂಪೋಬಹಿಶ್ಚ—ಕಠೋಪನಿಷತ್॥

೪. ಸೂರ್ಯೋಯಥಾ ಸರ್ವಲೋಕಸ್ಯಚಕ್ಷುರ್ನಲಿಪ್ಯತೆ ಚಾಕ್ಷುಷೈರ್ಬಾಹ್ಯದೋಷೈಃ। ಏಕಸ್ತಥಾಸರ್ವಭೂತಾಂತರಾತ್ಮಾನಲಿಪ್ಯತೆ ಲೋಕದುಃಖೇನಬಾಹ್ಯಃ—ಕಠೋಪನಿಷತ್॥

೫. ಏಕೋವಶೀಸರ್ವಭೂತಾಂತರಾತ್ಮಾ ಏಕಂರೂಪಂಬಹುಧಾಯಃಕರೋತಿ। ತಮಾತ್ಮಸ್ಥಂಯೇನುಪಶ್ಯಂತಿಧೀರಾಸ್ತೇಷಾಂ ಸುಖಂಶಾಶ್ವತಂನೇತರೇಷಾಂ॥—ಕಠೋಪನಿಷತ್॥

೬. ನಿತ್ಯೋನಿತ್ಯಾನಾಂಚೇತನಶ್ಚೇತನಾನಾಂ ಏಕೋಬಹೂನಾಂಯೋ ವಿದಧಾತಿಕಾಮಾನ್। ತಮಾತ್ಮಸ್ಥಂಯೇನುಪಶ್ಯಂತಿಧೀರಾಸ್ತೇಷಾಂ ಶಾಂತಿಶ್ಶಾಶ್ವತೀನೇತರೇಷಾಮ್—ಕಠೋಪನಿಷತ್॥

೭. ಏಕೋವಿಷ್ಣುರನೇಕೇಷು ಜಂಗಮಸ್ಥಾವರೇಷುಚ। ಅನಸ್ಯೂತೋವಸತ್ಯಾತ್ಮಾಭೂತಿಷ್ವಹಮವಸ್ಥಿತಃ—ವಾಸುದೇವೋಪನಿಷತ್॥

೮. ಏಕೋದೇವಸ್ಸರ್ವಭೂತೇಷು ಗೂಢಸ್ಸರ್ವವ್ಯಾಪೀಸರ್ವಭೂತಾಂತರಾತ್ಮಾ। ಕರ್ಮಾಧ್ಯಕ್ಷಸ್ಸರ್ವಭೂತಾಧಿವಾಸಸ್ಸಾಕ್ಷೀಚೇತಾ ಕೇವಲೋನಿರ್ಗುಣಸ್ಯ—ಗೋಪಾಲತಾಪಿನ್ಯುಪನಿಷತ್॥

೯. ನಿತ್ಯಾನಂದಂ ಪರಮಸುಖದಂ ಕೇವಲಂಜ್ಞಾನಮೂರ್ತಿಂ। ವಿಶ್ವಾತೀತಂ ಗಗನಸದೃಶಂ ತತ್ತ್ವಮಸ್ಯಾದಿಲಕ್ಷ್ಯಂ। ಏಕಂನಿತ್ಯಂವಿಮಲಮಚಲಂಸರ್ವಧೀಸಾಕ್ಷಿಭೂತಂ। ಭಾವಾತೀತಂತ್ರಿಗುಣರಹಿತಂ ಸದ್ಗುರುಂತಂನಮಾಮಿ—ಶುಕರಹಸ್ಯೋಪನಿಷತ್॥

೧೦. ಏಕಮೇವಾದ್ವಯಂಬ್ರಹ್ಮ—ಅಧ್ಯಾತ್ಮೋಪನಿಷತ್॥

೧೧. ಏಕೋದೇವೋಬಹುಧಾನಿವಿಷ್ಟಃ—ಮುದ್ಗಲೋಪನಿಷತ್॥

೧೨. ಏಕಏವಹಿಭೂತಾತ್ಮಾ ಭೂತೇಭೂತೇವ್ಯವಸ್ಥಿತಃ—ತ್ರಿಪುರಾತಾಪಿನ್ಯುಪನಿಷತ್॥

೧೩. ಏಕಮೇವತತ್ಪರಂಬ್ರಹ್ಮವಿಭಾತಿನಿರ್ಣಾಂ—ಬ್ರಹ್ಮೋಪನಿಷತ್॥

ಸರಸ್ವತೀ ಧ್ಯಾನಶ್ಲೋಕವನ್ನೂ ಅದರ ಸ್ವಾರಸ್ಯಾರ್ಥವನ್ನೂ ಗತವಾರದಲ್ಲಿ ತಿಳಿಸಿದೆವಷ್ಟೆ, ಈಗ ಚತುರ್ಮುಖ ಬ್ರಹ್ಮನು ಕುರಿತು ಸ್ವಲ್ಪಮಟ್ಟಿಗೆ ಇದರಡಿ ತಿಳಿಸುವೆವೇಳಿನ.

೩ ಬ್ರಹ್ಮಸ್ತುತಿಃ.

ಭಗವಾನ್ಸರ್ವಭೂತಾನಾಮಾದಿಕರ್ತಾಸ್ವ
ಯಂಪ್ರಭುಃ । ಸೃಷ್ಟ್ಯರ್ತ್ಥಂಹವ್ಯಕವ್ಯಾ
ನಾಮವ್ಯಕ್ತಪ್ರಕೃತಿರ್ಬುಧಃ ॥

ಸಾರಸಾಸನುಸ್ತವೀಮಿಸರ್ವಲೋಕನಾ
ಯಕಂ ।ಸಾರಸಾಸನುಸಮಸ್ತಸಾರಹಾರ
ನಾಯಕಂ ॥ ಪಾರಿಜಾತಪಾತ್ರಿಕೇಷ್ಟ್ರಪಾ
ಪಕೇವಿಧಾಯಕಂ । ಪಾರಿಜಾಸನಾಸ್ಯಮಾ
ದಿವ್ಯದಿಕಂಶುಭಾಯಕಂ॥

ಪರಬ್ರಹ್ಮನಿಗೆ ನಿರ್ಮಾಣಾಧಿಕಾರ ಪ್ರಾಪ್ತ ವಾಗ ಆತನು ವಿಧಾತನೆನ್ನಿಸಿಕೊಳ್ಳುತ್ತಾನೆ. ಋಗ್ಯಜುಸ್ಸಾಮಾಥರ್ವಣಗಳೆಂಬ ನಾಲ್ಕುವೇದಗಳು ಆತನಿಗೆ ನಾಲ್ಕುಶಿರಸ್ಸುಗಳೆನ್ನಿಸಿಕೊಂಡಿವೆ. ಇವುಗಳ ಸೂಕ್ಷ್ಮಜ್ಞಾನವು ಆತ್ಮಜ್ಞಾನಕ್ಕೆ ಸಹಕಾರಿಯಾಗಿರುವದು. ಬ್ರಹ್ಮನ ಹಸ್ತದ್ವಯಗಳಲ್ಲಿರುವ ಪುಸ್ತಕಾಕ್ಷಮಾಲೆಗಳು ಸರಸ್ವತೀ ವಿಗ್ರಹದ ವಿಷಯದಲ್ಲಿ ತಿಳಸಲ್ಪಟ್ಟ ಸಮಾನಾರ್ಥದ್ಯೋತಕ ವಾದವಾಗಿರುತಿವೆ. ಮತ್ತೊಂದು ಹಸ್ತದೊಳಗಣ ಕಮಂಡಲವು ಜೀವನ ಸಂಜ್ಞಾರೂಪವಾಗಿರುವ ಉದಕವು ತನ್ನ ನಿಯಮನಕ್ಕೊಳಪಟ್ಟದ್ದೆಂತಲೂ, ಕುಲಾಲನು ಘಟವ ನಿರ್ಮಿಸುವಂತೆ ಸಕಲ ಪದಾರ್ಥಗಳೂ ತನ್ನಿಂದಲೇ ಸೃಜಿಸಲ್ಪಡುವವೆಂತಲೂ ಬೋಧಿಸುತಿದೆ. ಬೇರೊಂದು ಹಸ್ತದೊಳಗಣ ಚಮ್ಮದ್ರಿಯು ಜೀವಾತ್ಮ ಪರಮಾತ್ಮನ ಅಭೇದಾರ್ಥವನ್ನರುಹಿ ಕಡೆಗೆ ಜೀವನು ಪರಮಾತ್ಮನಲ್ಲೇ ಸೇರಿಬಿಡುವನೆಂಬ ಅರ್ಥವನ್ನು ತಿಳಸುತಿದೆ ಸರಸ್ವತಿಯ ವಿಷಯದಲ್ಲಿ ಹಂಸವಾಹನವು ಯಾವ ಅರ್ಥ ವುಳ್ಳದ್ದೋ ಇಲ್ಲಿಯೂ ಅದೇ ಅರ್ಥವುಳ್ಳದ್ದಾಗಿರುತಿದೆ.

ಲಕ್ಷ್ಮೀಸ್ತುತಿಃ.

ಯಾಸಾಪದ್ಮಾಸನಸ್ಥಾ ವಿಪುಲಕಟಿತಟೀಪ
ದ್ಮಪತ್ರಾಯತಾಕ್ಷೀಗಂಭೀರಾವರ್ತನಾಭಿ
ಸ್ತನಭರನಮಿತಾಶುಭ್ರವಸ್ತ್ರೋತ್ತರೀಯಾ
ಲಕ್ಷ್ಮೀರ್ದಿವ್ಯೈರ್ಗಜೇಂದ್ರೈರ್ಮಣಿಗಣ
ಖಚಿತೈಸ್ನಾಪಿತಾಹೇಮಕುಂಭೈರ್ನಿತ್ಯಂಸಾ
ಪದ್ಮಹಸ್ತಾಮಮವಸತುಗೃಹೇಸರ್ವಮಾಂ
ಗಲ್ಯಯುಕ್ತಾ ॥

ಕರಿವರಕೃತಮಂಗಳಾಭಿಷೇಕಾಂ। ಕಮಲ
ಕಯಾಂಕಮಲಾಲಯಾಂಕಲಾಢ್ಯಾಂ । ಕರ
ಧೃತವರದಾಭಯೈಕಮುದ್ರಾಂಕಮಲದ್ವ
ಗಂಚಿತಕಾಮಿನೀಮುಪಾಸೆ॥

ಪರಬ್ರಹ್ಮನ ಪಾಲನಾಶಕ್ತಿಯು ಲಕ್ಷ್ಮೀರೂಪವಾಗಿ ವ್ಯಕ್ತಗೊಳಿಸಲ್ಪಟ್ಟದೆ. ದೇವಿಯ ಉಭಯಪಾರ್ಶ್ವಗಳಲ್ಲಿರುವ ಗಜಗಳೆರಡೂ ಮಮಕಾರ ಅಹಂಕಾರಗಳೆಂಬ ಯೆರಡು ಪ್ರಧಾನ ಗುಣಗಳನ್ನು ಸೂಚಿಸುತಿವೆ. ಪ್ರಾಯೇಣ ಈ ಯೆರಡು ಗುಣಗಳೂ ಸಂಪತ್ತನ್ನು ಅನುವರ್ತಿಸಿದವಾಗಿರುತಿವೆ. ಇವುಗಳು ಧರಿಸಿರುವ ಯೆರಡು ಸ್ವರ್ಣಕಲಶಗಳು ಮೇಲ್ಕಂಡ ಯೆರಡುಗುಣಗಳಿಂದ ಪ್ರಾಪ್ತವಾಗುವ ಆಶಾ ಮತ್ತು ಸಂತೋಷಗಳೆಂಬ ಬೇರೆ ಯೆರಡು ಗುಣಗಳನ್ನು ಬೋಧಿಸುತಿವೆ. ಕಲಶ ನಿಕ್ಷ್ಮವಾದ ಉದಕವು ಸುಖಾನುಭವಕ್ಕೆ ಮುಖ್ಯಾಪೇಕ್ಷಿತವಾದ ಸಂತೃಪ್ತಿಯನ್ನು ಸೂಚಿಸುತಿವೆ. ಲಕ್ಷ್ಮಿಯ ವಾಮದಕ್ಷಿಣ ಹಸ್ತಗಳಲ್ಲಿರುವ ಪಂಕಜಗಳೆರಡೂ ಐಹಿಕ ಮತ್ತು ಆಮುಷ್ಮಿಕಾನಂದವನ್ನು ತಿಳಿಸಿ ಬಾಹ್ಯೋಪಾಧಿವಶಾತ್ ಜೀವನು ರೂಪಗುಣ ಆಕಾರ ಮುಂತಾದವುಗಳಿಂದ ಪರಬ್ರಹ್ಮನಿಗಿಂತ ಭಿನ್ನನಾಗಿ ವ್ಯಾವಹಾರಿಕ ದೆಸೆಯೊಳು ತೋರಿದಾಗ್ಯೂ ಜೀವಾತ್ಮ ಪರಮಾತ್ಮರಿಬ್ಬರೂ, ಅಭಿನ್ನರೆಂಬ ತತ್ವಾರ್ಥವನ್ನು ದೃಢಪಡಿಸುತಿದೆ. ವರದಾಭಯ ಮುದ್ರೆಗಳೆರಡೂ ದಯೆ ಮತ್ತು ದಾತೃತ್ವವನ್ನು ಸೂಚಿಸುತಿವೆ. ಏಪಂಚ ಲಕ್ಷ್ಮೀ ಕೃಪೆಯಿಂದ ಧನವಂತನಾದವನು ನಿಷ್ಪಕ್ಷಪಾತಿಯಾಗಿಯೂ, ದಯಾಶಾಲಿಯಾಗಿಯೂ, ಉದಾರಿಯಾಗಿಯೂ, ಇರಬೇಕೆಂಬ ನೀತಿಯನ್ನು ಬೋಧಿಸುತಿದೆಯಲ್ಲದೆ ಅಹಂಕಾರ ಮಮಕಾರಗಳುಂಟಾದಾಗ್ಯೂ ತೃಪ್ತಿಯೇ ಸುಖದಾಯಕವೆಂಬವನ್ನು ವ್ಯಕ್ತಪಡಿಸುತಿದೆ.

EXTRACTS.

ತುರ್ಕೀಜನರು ರಷ್ಯಾ ಸರ್ಕಾರದವರ ಸರಹದ್ದಿನೊಳಗೆ ಹೊಕ್ಕು ೫೦೦೦ ಕುರುಗಳನ್ನು ಹಿಡಿದುಕೊಂಡು ಹೋದರೆಂತ ಕೇಳುತ್ತೇವೆ.

ಬರುವ ತಿಂಗಳಲ್ಲಿ ಪುನೇಯಿಂದ ಸಾತಾರೆಯ ತನಕ ಹೊಗೇಬಂಡಿಯು ಬಿಡಲಿಕ್ಕೆ ಪ್ರಾರಂಭವಾಗುವದು. ಆಗ ಗವರ್ನರ್ ಸಾಹೇಬರವರು ಸತಾರೇಯಲ್ಲಿ ಒಂದು ದರಬಾರನ್ನು ಮಾಡುವವರಾಗಿದ್ದಾರಂತೆ.

ಅಸ್ಸಾಂನಲ್ಲಿ ಯೂರೋಪಿಯನ್ನರು ನೇಟಿವ್ ಸ್ತ್ರೀಯರಮೇಲೆ ಯಾವಾಗಲು ಜುಲ್ಮೀ ನಡಿಸುತಾರೆಂತಲೂ, ಇದಲ್ಲದೆ ಈ ತರದ ಒಂದು ಉದಾಹರಣೆಯು ಈಚೆಗೆ ಸಂಭವಿಸಿತೆಂತಲೂ ನೋಡಿ ಎಲ್ಲರೂ "ಬ್ರಿಟಿಷ್ ರಾಜ್ಯದ ಸಿರಿಯಿದ್ದರೇನು? ಹೋದರೇನು?" ಎಂಬ ವಿಚಾರಕ್ಕೆ ಒಳಪಟ್ಟಿರುತ್ತಾರೆ.

ನೇಟಿವರೊಡನೆ ಯೂರೋಪಿಯನ್ನರ ಲಗ್ನ—ರೂಪದಲ್ಲಿ ಬಹು ಸುಂದರಳಾಗಿರುವ ೧೫ ವರುಷದ ಈಸ್ಟಿಂಡಿಯನ್ ಹುಡಿಗಿ ಒಬ್ಬಳು ಒಬ್ಬ ಬ್ರಾಹ್ಮಣನನ್ನು ಮೋಹಿಸಿ ಅವನನ್ನು ಲಗ್ನವಾಗುವಂತೆ ನಿಶ್ಚಯಿಸಿದಾಳೆ; ಮತ್ತು ಇದಕ್ಕಾಗಿ ಆ ಬ್ರಾಹ್ಮಣನು ಕ್ರಿಸ್ತಿಯನ್ನು ಹೊಂದುವನು, ಎಂಬದಾಗಿ ದಕ್ಷಿಣ ಹಿಂದುಸ್ತಾನದ ಒಂದಾನೊಂದು ಪತ್ರಿಕೆಯಿಂದ ತಿಳಿಯಬರುತಿದೆ.

ಒಬ್ಬ ಅಗಸಾಲಿಗರ ಹುಡಿಗಿಯನ್ನು ಒಬ್ಬ ಬ್ರಾಹ್ಮಣ ಕುಮಾರನಿಗೆ ಒಬ್ಬ ಮಧ್ಯಸ್ಥಗಾರನಾದ ರಾಮಚಂದ್ರ ರಘುನಾಥ ಎಂಬವನು ಲಗ್ನವಾದ ಹುಡುಗನ ಹತ್ತಿರ ಏನೋ ಹಣ ತೆಗದುಕೊಂಡು ಲಗ್ನಮಾಡಿಸಿಬಿಟ್ಟನು. ಲಗ್ನಮಾಡುವವನೆಂತ ಒಬ್ಬನನ್ನು ನಿರ್ಮಾಣ ಮಾಡಿಕೊಂಡು ಅವನಿಗೂ ಕೆಲವು ಹಣ ಕೊಟ್ಟು ತನ್ನ ಕಾರ್ಯವನ್ನು ಸಾಂಗಪಡಿಸಿದರು. ಅನಂತರ ಈ ಮೋಸವು ಹೊರಗೆಬಿದ್ದು ಸರ್ಕಾರದಲ್ಲಿ ರಾಮಚಂದ್ರ ರಘುನಾಥನಿಗೆ ೩ತಿಂಗಳು ಇನ್ನೊಬ್ಬನಿಗೆ ೧ತಿಂಗಳು ಶಿಕ್ಷೆಯಾಯಿತೆಂತ ತಿಳಿಯಬರುತಿದೆ.

ನವರಾತ್ರಿಯಲ್ಲಿ ಮೈಸೂರೊಳು ಪ್ರತಿಸಂವತ್ಸರದಲ್ಲಿಯೂ ಪದ್ಧತಿಪ್ರಕಾರ ನಡೆಯುವ ವಿಶೇಷಗಳನ್ನು ಕುರಿತು ಮುಂಬೈ ಕನ್ನಡಸುವಾರ್ತೆ ಪತ್ರಿಕೆಗೆ ತುಮುಕೂರಿಂದ ಒಬ್ಬ ಬಾತಮಿದಾರನು ಇದರಡಿ ಕಂಡಂತೆ ಬರೆದಿರುತ್ತಾನೇನಂದರೆ,—ಕರ್ನಾಟಕ ದೇಶಕ್ಕೆ ರಾಜಧಾನಿಯಾದ ಮೈಸೂರು ಪೂರ್ವದಲ್ಲಿ ಮಹಿಷಾಸುರನ ಪಟ್ಟಣವಾಗಿ ಅವನ ಸಂಹಾರಾರ್ಥ ಆದಿಶಕ್ತಿಯಾದ ಚಾಮುಂಡಿ ಅವತಾರವನ್ನು ಮಾಡಿ ದೈತ್ಯನನ್ನು ವಧಿಸಿದಳಾದ್ದರಿಂದ ಮೈಸೂರೆಂದು ಅನ್ವರ್ಥನಾಮದಿಂದ ವರ್ತಿಸುತಿದೆ. ಇಲ್ಲಿ ಮಹಾರಾಜ ರಾಜಾಸಾಹೇಬ ಬಹದೂರವರಾದ ಚಾಮರಾಜೇಂದ್ರ ಒಡೆಯರವರು ಈಗ ಒದಗಿರುವ ನವರಾತ್ರಿಯಲ್ಲಿ ವಂಶ ಪಾರಂಪರ್ಯದಿಂದ ಬಂದಯಿರುವ ನವರತ್ನಖಚಿತವಾದ ಸಿಂಹಾಸನಾರೂಢರಾಗಿ ಈ ದೇಶದ ರೆಸಿಡೆಂಟ ಸಾಹೇಬ ಬಹದೂರವರು, ಹೈಕೋರ್ಟ ಜಡ್ಜಿರು, ಸೆಷನ್ ಜಡ್ಜೀರು, ಡೆಪ್ಯುಟೀ ಕಮಿಶನರಗಳು ಮಿಲಿಟೇರಿ ಆಫೀಸರಗಳು, ಮೊದಲಾಗಿ ಎಲ್ಲಯಿಲಾಖೇಸಾಹೇಬ ಜನಗಳು, ಅವರವರ ಆಫೀಸ ಉದ್ಯೋಗಸ್ಥರು ಯುಕ್ತವಾಗಿ ಏಕಕಾಲದಲ್ಲಿ ಮೈಸೂರಿಗೆ ಬಂದು ಸೇರಿರುತ್ತಾರೆ. ಈಗ ಮೈಸೂರು ಶೃಂಗಾರವನ್ನು ವರ್ಣಿಸಲಾರೆ; ಗೋಪುರದ್ವಾರ ಶಿಖರಾದಿಗಳಿಂದ ಅಲಂಕಾರಕ್ಕೆ ಅಲಂಕಾರ ಕೂಡಿದ್ದಾಗಿ ಸೊಬಗಿಗೆಸೊಬಗು ಚೆಲ್ವಿಗೆ ಚೆಲ್ವಾಂದರೆ (ಮೊದಲೇ ಪಾಲ್ಗಡಲದ ಕೋಮಲಯಾಸಿಲಂತೀಡೆ ಬೆಳ್ದಿಂಗಳಂಪೂಡೆಲಿತಸುಮನೋವಾಸಿತುಕೂಡೆ ಮೇಲಮೇಲಿನದಾಗಿತೋರುವಂತೆ) ಎನ್ನುವಹಾಗೆ ಪ್ರಥಮದಿನ ಮೊದಲ್ಗೊಂಡು ಪ್ರತಿದಿನವೂ ಅರಮನೆಯಮುಂದೆ ಅಶ್ವಗಜ ಪತಾಕಿ ಸೈನ್ಯ ಚಾಪಯುಕ್ತ ಹಿಂದಬೌಪದ್ಯ ವಿದ್ಯಸಾಧ್ಯ ವಿನಯುವೂ ಮಲ್ಲಯುದ್ಧ ಪುಹಿಷಾಶಾಳಗ ಮುಂತಾದ ಅನೇಕವಿಧವಾದ ದರ್ಶನಾನಂದ ಕಲಾಪಗಳು, ಯಂತ್ರದಿಂದ ಹಚ್ಚಲ್ಪಟ್ಟ ಮಹಾಜೋತಿ, ಸ್ಫಟಿಕಜೋತಿ, ನೀಲಜೋತಿ, ಹೇಮಜೋತಿ, ಜಗಜ್ಯೋತಿ, ಧವಳಜೋತಿ ಮೊದಲಾದ ದೀಪಮಾಲೆಗಳ ಪಙ್ಕ್ತಿಗಳಿಂದಲೂ ಥಳಥಳಾಯಮಾನವಾದ ಛಬಾವಳ ವೀರರ ಪ್ರತಾಪ ಧ್ವನಿಗಳಿಂದಲೂ ಕೂಡಿದ್ದಾಗಿ ಜೋತಿಮಂಗಳೇ, ನಕ್ಷತ್ರಮಾಲೆ, ಚಂದ್ರಮಂಡಲ, ಸೂರ್ಯಮಂಡಲ, ಅಗ್ನಿಮಂಡಲ, ತಾರಾಮಂಡಲ, ಕರಪಂಜರ, ಅವಿರಳ ಅನಯಾಸ್ತ್ರಪಿಂ ಕತಾಘ್ನಿಬಿಟ, ತಮಾರಗುಂಡೆಂಬ ನಾನಾವಿದವಾದ ಬಾಣಬಿರಿಸು, ಮಹತ್ತಾಯುಧಗಳ ತಮಾಷೆಯು ಘನಘೋಷವಾದ ದ್ವಾತ್ರಿಂಶತ್ ವಾದ್ಯ ರಭಸಗಳು, ಇವುಭೋರ್ಗರೆಯುತ್ತಲೂ, ಮಹಾಜನಗಳ ಮಂಡಿತದಿಂ ಭೂನವೇಂದ್ರ ಶ್ರೀ ಚಾಮರೇಂದ್ರ ಮಹಾಪ್ರಭು ಜಯಘೋಷದಿಂ ಕೇಸರಿ ಪೀಠವಂ ಅಡರಿ ರಾಜತೇಜ ಮಂಡಿತ ಸರ್ವಾಂಗಯುಕ್ತ ಸಭಾಕಮಲ ಪ್ರಭಾಕರರಾಗಿ ಯಿರುವ ವೈಭವ ವಿಲಾಸ ವಿಭ್ರಮನೇತ್ರ ಶ್ರೋತ್ರಾನಂದವಂ ನೋಡಲು ಪರಸ್ಥಳಕರು ಲಕ್ಷಪ್ರಜೆಗೆ ಅಧಿಕ ಪರಿವಾರಸೇರುತ್ತೆ ಏಕಕಾಲದಲ್ಲಿ ಮೊಹರಂ ನವರಾತ್ರಿಸಹ ಕರ್ನಾರ್ಜನರು ಕೂಡಿದಂತೆಕೂಡಿಯಿವೆ. ಆದರೆ ತಿಮಿರದ್ಯುಮಣಿಯಂತೆ ಶ್ರೀಮಾಲಂಕಾರನಲ್ಲವೇ ! ಮಹಾತೇಜವಾಗಿ ಸ್ವಾಮಿನಿಯಂತ ತಾಡಿಸುವ ತೀಕ್ಷ್ಣಾಸ್ಮೃತಿ ಇಂದಿಯನ್ ಪೆನಲಕೋಡೆಂಬ ಚಂದ್ರಾಯುಧದ ಬಾಯಿವಾರೆ ಮಹಾಕ್ರೈರವಿ ಉಜ್ವಳಾಸ್ತ್ರವಾಗಿಗ್ರಾ ಸವಪೇಕ್ಷಸುತ ಇರುವದರಿಂದ ಕರ್ನಾಟೋಪವಾದ ಕ್ರಿಮಜರ ಹನಾಹುತಕ್ಕೆ ಅವಕಾಶವಿಲ್ಲದೆ ಜಯಶಾಲಿಯಾದಅರ್ಜುನನೇ ಜಂಬುಸ್ವಾರಿಯಂ ಕ್ರೋತ್ಸಾಹದಿಂ ವೃದ್ಧಿಗೊಳಸುವನು.

ಇತ್ತಲಾಗಿ ಆದ ಬರ್ಮ್ಮದೇಶದ ಪ್ರಕರಣವು ಯೆಲ್ಲಜನರ ನೆನಪಿನಲ್ಲಿರಬಹುದಾದ್ದರಿಂದ ಆದೇಶದ ಸ್ವಲ್ಪವರ್ಣನೆಯು ಅವರಮನರಂಜಿಸುವದೆಂಬ ಕೋರಿಕೆಯಿಂದ ಇಲ್ಲಿಕೊಟ್ಟಿರುತ್ತೇವೆ. ಈ ಬರ್ಮ್ಮದೇಶವು ಮೊದಲು ಬಹು ವಿಸ್ತೀರ್ಣವುಳ್ಳದ್ದಾಗಿತ್ತು. ಆದರೆ ಈ ಶತಮಾನದಲ್ಲಿ ಬರ್ಮ್ಮದೇಶದವರಿಗೂ ನಮ್ಮ ಇಂಗ್ಲಿಷನವರಿಗೂ ಒಂದರದುಸರ್ತಿ ಯುದ್ಧಗಳಾಗಿ ಅವರ ದೇಶವನ್ನು ಸ್ವಲ್ಪ ಸ್ವಲ್ಪ ಜೈಸಿದ್ದರಿಂದ ಈಗ ಸಾಧಾರಣವನ್ನು ಬಂಗಾಳೆ ಇಲಾಖೆಯಷ್ಟು ದೊಡ್ಡ ದೇಶಮಾತ್ರವಿತ್ತು. ಅವನ್ನು ಸಹ ನಮ್ಮ ಇಂಗ್ಲಿಷ ಜನರು ಇದೇ ಕಳೆದುಹೋದ ಜನವರಿ ತಿಂಗಳಲ್ಲ ಗೆದ್ದು ಅಲ್ಲಿನ ಅರಸನನ್ನು ಸೆರೆಯವನಾಗಿ ತಂದು ರತ್ನಗಿರಿಯಲ್ಲಿ ಇಟ್ಟಿರುತ್ತಾರಷ್ಟೆ.

ಮೊದಲು ಈ ರಾಜ್ಯಕ್ಕೆ ಪಶ್ಚಿಮದಿಕ್ಕಿನಲ್ಲಿ ಹಿಂದುಸ್ತಾನವು ಪೂರ್ವ ಮತ್ತು ಉತ್ತರದಲ್ಲಿ ಚೀನಾದೇಶವು ದಕ್ಷಿಣದಲ್ಲಿ ಪೇಗು ಸಂಸ್ಥಾನವು ಇವೇ ಮೊದಲಾದ ಮೇರೆಗಳಿದ್ದವು. ಇದರ ವಿಸ್ತೀರ್ಣವು ಈಗ ಸುಮಾರು ೩೦೦,೦೦೦ ಚಚ್ಚೌಕ ಮೈಲಿಗಳಾಗಿರುತದ; ಮತ್ತು ಜನಸಂಖ್ಯೆಯು ಸುಮಾರು ೪೦,೦೦,೦೦೦.

ಈ ದೇಶದಲ್ಲಿ ದಕ್ಷಿಣ ದಿಕ್ಕಿಗೆ ಹರಿದುಬಂದು ಬಂಗಾಳೆ ಉಪಸಾಗರಕ್ಕೆ ಕೂಡುವಂತೆ ಇರಾವತಿ ಮತ್ತು ಸಾಲ್ವಿನ ಎಂಬವುಗಳೇ ಮುಖ್ಯನದಿಗಳು. ಇರಾವತಿ ನದಿಯೊಳಗೆ ಅದರ ಮುಖದಿಂದ ಸುಮಾರ ೮೦೦ ಮೈಲಿನವರಿಗೆ ಹಡಗುಗಳು ನಡೆಯುತ್ತವೆ. ಆದರೆ ಸಾಲ್ವಿನ ನದಿಯಲ್ಲಿ ಅಲ್ಲಲ್ಲಿ ಕಲ್ಲುಬಂಡೆಗಳಿದ್ದದರಿಂದ ಅಲ್ಲಿ ಹಡಗು ನಡೆಯತಕ್ಕಂತಾದ್ದಲ್ಲ. ಪರ್ವತಗಳ ಆವಳಿಯು ಈದೇಶದ ಪಶ್ಚಿಮದಿಕ್ಕಿಗೆ ಹಬ್ಬಿರುತದೆ; ಉತ್ತರ ಮತ್ತು ಪೂರ್ವಕ್ಕೆ ಸಹ ದೊಡ್ಡ ದೊಡ್ಡ ಪರ್ವತಗಳುಂಟು.

ಬರ್ಮ್ಮದೇಶದಲ್ಲಿ ಖನಿಜಪದಾರ್ಥಗಳು ಬಹಳ, ಆದರೆ ಅದರ ಉಪಯೋಗಮಾತ್ರ ನೆಟ್ಟಗೆ ಮಾಡುವವರ್ಯಾರೂ ಇಲ್ಲ. ನೀಲ ಮತ್ತು ಕೆಂಪು ಮೊದಲಾದ ರತ್ನಗಳ ಗಣಿಗಳಿರುತವೆ. ಮತ್ತು ಅವುಗಳ ಉತ್ಪನ್ನವೆಲ್ಲ ಅರಸನಿಗೆಸೇರಿದ್ದರಿಂದ ಇವುಗಳದ್ದಕಡೆ ಸರ್ಕಾರದ ಕಡೆಯಿಂದ ಪಹರೆ ಇರುತದೆ. ಕೆರೋಸಿನ್ ಎಣ್ಣೆಯ ಭಾವಿಗಳೂ ಬುಗ್ಗೆಗಳು ಸಹ ಇರಾವತೀ ನದಿಯ ದಡಗಳಮೇಲೆ ಇದ್ದದ್ದು ಕಾಣುತವೆ.

ಇಲ್ಲಿನ ಮುಖ್ಯ ಬೆಳೆಗಳು ಅಕ್ಕಿ (ಇದರಲ್ಲಿ ೧೦೨ ಜಾತಿಗಳುಂಟು.) ಗೋಧಿ, ಜೋಳ, ತರತರದ ಬೇಳೆ, ಹೊಗೆಸೊಪ್ಪು, ಹತ್ತಿ, ಎಳ್ಳು ಸಾಸಿವೆ, ನೀಲಿ ಇತ್ಯಾದಿಗಳಾಗಿರುತವೆ. ಬರ್ಮ್ಮಜನರು ಅತಿ ಪ್ರೀತಿಯಿಂದ ತಿನ್ನುವಂತ ಉಪ್ಪಿನಕಾಯಿ ಮಾಡುವ ಎಲೆಗಳುಳ್ಳ ಒಂದುತರದ ಚಾಗಿಡಗಳು ಸಹ ಇವೆ. ಹಣ್ಣುಹಂಪಲುಗಳು ಹಿಂದುಸ್ಥಾನದಲ್ಲಿ ಸಿಕ್ಕುವ ಜಾತೀಯಗಳೇ. ಸಾಗುವಾನಿ ಮೊದಲಾದ ಉತ್ತಮತರದ ಕಟ್ಟಿಗೆಯ ಮರಗಳಿಂದ ತುಂಬಿರುವಂತ ಅರಣ್ಯಗಳು ಬಹಳ ಉಂಟು; ಹಿಂದುಸ್ತಾನದಲ್ಲಿ ಖರ್ಚಾಗುವಸಾಗುವಾನಿ ಕಟ್ಟಿಗೆಯು ಅಂಶತಃಬರ್ಮ್ಮದೇಶದಿಂದಬರುತದೆ. ಗೋವು, ಎಮ್ಮೆ ಮೊದಲಾದ ವಾಡಿಕೆಯಲ್ಲಿರುವ ಪ್ರಾಣಿಗಳೆಲ್ಲ ಬರ್ಮ್ಮದೇಶದಲ್ಲುಂಟು. ಕುದುರೆಗಳು ಸಣ್ಣವಾಗಿರುತವೆ, ಆನೆಗಳು ಹೆಚ್ಚಾಗಿಇವಮಾರತಿಯ ಕಟ್ಟಿಗೆಯತೊಲೆಗಳನ್ನು ಎಳೆಯುವದಕ್ಕೆ ಕಟ್ಟಲ್ಪಡುತವೆ. ಒಂದು ಮತ್ತು ಎರಡು ಸಹ ಕೋಡುಗಳುಳ್ಳ ಗೇಂಡಾಮೃಗಗಳು ಜಂಗಲುಗಳಲ್ಲಿ ಇರುತವೆ. ಹುಲಿಗಳೂ ಚಿರ್ಚಗಳೂ, ಕರಡಿಗಳೂ ಇತ್ಯಾದಿ ಬೇಟೆಯ ಮುಖ್ಯ ಪಶುಗಳು.

ಬರ್ಮ್ಮಜನರು ಹೆಚ್ಚಾಗಿ ಗಿಡ್ಡರು ಮತ್ತು ಪುಷ್ಟರು.ಅವರತಲೆಯು ಸಣ್ಣದು ಮೋರೆ ಚಟ್ಟೆಯುಳ್ಳದ್ದು ಅವರ ಮೈಯು ಕಂದುಬಣ್ಣವುಳ್ಳದ್ದು,ಮತ್ತುತಲೆಯಲ್ಲಿ ಕೇಶಕೂದಲುವಿಪುಲವಾಗಿದ್ದರೂ ಮೋರೆಯಮೇಲೆ ಹೆಚ್ಚಿರುವದಿಲ್ಲ. ಇವರು ಇತ್ತಲಾಗಿ ಮರೆಯದ ಜನರಿಗೂ ಹೋಲುವದಿಲ್ಲ. ಅಥವಾ ತಮ್ಮ ಮತ್ತೊಂದುಕಡೆ ಒದಗಿರುವ ಚೀನಾದವರಿಗೂ ಹೋಲುವದಿಲ್ಲ. ಇವರ ಭಾಷೆಯು ಏಕಾಕ್ಷರಿಯಾಗಿದೆ. ಅಕ್ಷರಗಳು ಅಸಾಮಿ ಭಾಷೆಯ ಅಕ್ಷರಗಳಂತೆ ದುಂಡಾಗಿರುತವೆ. ಹೆಂಗಸರಿಗೂ ಗಂಡಸರಿಗೂ ಪೋಷಾಗುವ ಒಂದೇ ತರದ್ದು. ಒಂದು ಅಂಗಿ ಮತ್ತು ಒಂದು ಉಡುವ ಧೋತ್ರ. ಹಿಂದೂಜನರಲ್ಲಿ ಹೆಂಗಸರು ಉಡುವ ಸೀರೆಗಳು ಗಂಡಸರ ಧೋತ್ರಗಳಿಗಿಂತ ಸುಮಾರು ಇಮ್ಮಡಿ ಉದ್ದವಿರುತವೆ ಆದರೆ ಅದು ಈ ಬರ್ಮ್ಮಜನರಲ್ಲಿ ಸರಿವಿರುದ್ಧವೆ. ಅಡಿಕೆ ತಿನ್ನುವದೂ, ಬತ್ತಿಗಳನ್ನು ಸೇದುವದೂ ಗಂಡುಸರಲ್ಲಿಯೂ ಹೆಂಗಸರಲ್ಲಿಯೂ ಸರಿಯಾಗಿ ಪ್ರಚಾರದಲ್ಲುಂಟು. ಈ ಜನರು ಇರುವ ಮನೆಗಳು ಬಿದುರುಗಳಿಂದ ಮಾಡುವಂತೆ ಚೌಕಟ್ಟುಗಳಿಂದ ರಚಿಸಲ್ಪಟ್ಟು, ತಾಳೇಮರದ ಎಲೆಗಳಿಂದ ಹೊದಿಸಲ್ಪಡುತವೆ; ಮತ್ತು ನದಿಗಳಿಗೆ ನೆಗಸುಬಂದರೆ ತಮ್ಮ ಮನೆಗಳಿಗೆ ಪೆಟ್ಟು ಹತ್ತಬಾರದೆಂತ ಅವುಗಳನ್ನು ಭೂಮಿಯ ಪೃಷ್ಟಭಾಗದಿಂದ ಕೆಲವು ಫೀಟು ಉನ್ನತ ಕಟ್ಟುತ್ತಾರೆ. ಅವುಗಳಿಗೆ ನಿಚ್ಚಣಿಕೆಯ ಮೇಲಿಂದ ಹತ್ತಬೇಕು ಅರಸರ ಶಾಸನ ಪದವ ಹೊರ್ತು ಯಾರೂ ಕಲ್ಲುಗಳಿಂದ ಮನೆಗಳನ್ನು ಕಟ್ಟಸಬಾರದಂತೆ. ಗಂಡುಸರಿಗಿಂತಲೂ ಹೆಂಗಸರು ಬಹು ಉದ್ಯೋಗಿಗಳಿರುತ್ತಾರೆ ತಮಗೆ ಬೇಕಾದ ಸಾಮಾನುಗಳನ್ನು ಕೊಂಡುಕೊಳ್ಳುವವರೂ, ಮಾರುವವರೂ, ವಸ್ತ್ರಗಳನ್ನು ನೇಯುವವರೂ, ಮನೆಯ ಯೆಲ್ಲಾ ಕೆಲಸಗಳನ್ನು ಮಾಡುವವರೂ ಹೆಂಗಸರೇ ಹಿಂದೂಜನರಲ್ಲಿ ವಾಡಿಕೆಯಾಗಿರುವಂತೆ ಬರ್ಮ್ಮಜನರಲ್ಲಿ ಹೆಂಗಸರಿಗೆ ಅಂತಃಪುರದವರ್ಲ್ಲೇ ರಿದುವದಿಲ್ಲ. ಅವರಿಗೆ ಎಲ್ಲತರದ ಸ್ವತಂತ್ರವಿರುತದೆ ಎಲ್ಲಿ ತಮಾಷೆಗಳನ್ನೂ ಎಲ್ಲಿ ಬಾವ್ಯವಾದಂತ ವಸ್ತುಗಳನ್ನೂ ನೋಡಲಿಕ್ಕೆ ಗಂಡುಸರು ಹೋಗುತ್ತಾರೊ ಅಲ್ಲಿ ಹೆಂಗಸರೂ ಗಂಡುಸರೂ ಒಟ್ಟುಗೂಡಿ ಹೋಗುತ್ತಾರೆ. ಕೋಳಿ ಜಾಜು (ಕೋಳಿ ಅಂಕವು) ಈ ಜನರಲ್ಲಿ ಅತಿ ವಾಡಿಕೆಯಾದ ಮತ್ತು ಪ್ರೀತಿಯ ಆಟವಾಗಿದೆ. ಬೇರೆ ಆಟಗಳು ಸಹ ಸ್ವಲ್ಪ ಸ್ವಲ್ಪ ಉಂಟು. ಜಾತಿ ಬರ್ಮ್ಮಜನರ ಹೊರ್ತು ಬೇರೆ ಅನೇಕ ತರದ ಜನರು ಈ ದೇಶದಲ್ಲುಂಟು. ಪೂರ್ವದಿಕ್ಕಿನ ಸರಹದ್ದಿನ ಮೇಲೆ ಶಾನ್ ಎಂಬ ಜನರೂ, ದಕ್ಷಿಣದಲ್ಲಿ ಕರೇನ್ ಎಂಬ ಜನರೂ ಇರುತ್ತಾರೆ

BANGALORE.—Printed and published for the Proprietor, at the KARNATAKA PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯುಪಗತಸಾರ್ಥ ಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಸಾಹಿತೀಶೋಭಿತಾ ॥ ಮೃಗಾಂಕಹಿತನಾಸರೇನಿಚಿತಮುದ್ರಣಾಸಜ್ಜನೈರ್ದ್ಧಿಶಾಸುಪರಿಪೋಷಿತಾವಿಶತಿಮಾನಸಂಸುಮುದಂ॥

Vol. XIII] BANGALORE—MONDAY, OCTOBER 18, 1886 [No. 42.

ಸಂಪುಟ ೧೩.] ಬೆಂಗಳೂರು — ಸನ್ ೧೮೮೬ನೇ ಇಸವಿ ಅಕ್ಟೋಬರ್ ೧೮ನೇ ತಾರೀಖ್ ಸೋಮವಾರ. [ಸಂಚಿಕೆ ೪೨.

ನೋಟೀಸ್.

ಮೈಸೂರು ದೇಶೀಯ ಪರೀಕ್ಷೆ.

ಅಂಕಗಣಿತದ ಕೀ.

ಮೇಲೆ ತಿಳಿಸಲ್ಪಟ್ಟ ಪರೀಕ್ಷೆಗೆ ನಿಯಮಿಸಲ್ಪಟ್ಟ [illegible] ಅಂಕಗಣಿತ ಪುಸ್ತಕದಲ್ಲಿರುವ ಲೆಕ್ಕಗಳು [illegible] ಎಲ್ಲವುಗಳಿಗೂ [illegible] ಅಂಕಗಣಿತದ [illegible] ಒಂದು [illegible] ತಯಾರುಮಾಡಲ್ಪಟ್ಟು [illegible] ಸಿದ್ಧವಾಗಿದೆ.

ಇದರ ಕ್ರಯ ಅಂಚೆ [illegible] ೧॥ ಅಣೆ [illegible] ಒಟ್ಟಾಗಿ ೧೦ ಪ್ರತಿಗಳು ತೆಗೆದುಕೊಳ್ಳುವವರಿಗೆ ಒಂದು ಪ್ರತಿ [illegible] ಕೊಡಲ್ಪಡುವದು. [illegible] ಮತ್ತು [illegible] ಕಳುಹಿಸತಕ್ಕದ್ದು [illegible] ೧॥ [illegible]

ಬೆಂಗಳೂರು [illegible] } ಪ. [illegible]ರಾವ್,
[illegible] } ಬೆಂಗಳೂರು [illegible]

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA

MONDAY, OCTOBER 18, 1886

೧೮೮೬ನೇ ಅಕ್ಟೋಬರ್ ೧೮ನೇ ತಾ॥ ಸೋಮವಾರ

THE BANGALORE DISTRICT REPRESENTATIONS

ಈ ಸಂವತ್ಸರದ ದಸರಾ ದರ್ಬಾರಿಗೆ ಈ ತಾಲ್ಲೂಕಿನ ಪ್ರತಿನಿಧಿಗಳಾಗಿ ಚುನಾಯಿಸಿ ಕಳುಹಿಸಲ್ಪಟ್ಟವರಲ್ಲೊಬ್ಬರಾದ ಅಪ್ಪೋಜೀರಾವ್ ಮೊ॥ ಮೊದಲಾದವರು ದಿವಾನರವರ ಪರಾಮರ್ಶೆಯ ಬಗ್ಗೆ ಇದರಡಿಯಲ್ಲಿ ಇಪ್ಪತ್ತೊಂದು ವಿಷಯಗಳನ್ನು ಸಭೆಯಲ್ಲಿ ನಿವೇದಿಸಿದರು. ಪ್ರಯೋಜನ ಸದರೀ ವಿಷಯಗಳ ಪೈಕಿ ಕೆಲವು ಒಂದೊಂದು ಸಂವತ್ಸರದಲ್ಲಿ ಈ ಪತ್ರಿಕಾಮೂಲಕ ಸೂಚಿಸಲ್ಪಟ್ಟದ್ದಾಗಿಯೂ, ಬಹು ಜನಾಪೇಕ್ಷಿತವಾದವಾಗಿಯೂ, ಪ್ರಜಾಭಿಪ್ರಾಯವನ್ನು ಗಮನಿಸಿ ಅವರ ಅಪೇಕ್ಷೆಯನ್ನು ನಿವೇದಿಸಬೇಕೆಂಬ ಕೋರಿಕೆಯುಳ್ಳವರಿಗೆ ಪ್ರತಿಪ್ರಯೋಜನವಾದವಾಗಿಯೂ, ಸ್ವತಂತ್ರತಃ ವಿಚಾರಿಸಲಾಗಿ ಅವುಗಳ ಪೈಕಿ ಒಂದೊಂದೇ ಜನಗಳ ಸುಖ ಜೀವನಗಳಾಗಿಯೂ, ಬಹಳ ವ್ಯಯನಿಮಿತ್ತಕವಾದವಾಗಿಯೂ ಇರುವಲ್ಲಿ ಏಕತ್ರ ಎಲ್ಲವೂ ಪ್ರಾಪ್ತವಾದರೆ ಇಲ್ಲಿನ ಸ್ಥಿತಿಯುಂಟಾಗಿತು ತಿಳಿಸಬೇಕಾದುದೇನಿಲ್ಲವು ಮೊ. ಮೊ॥ ಅಪ್ಪೋಜೀರಾವ್ ಅವರು ಬೆಂಗಳೂರು ಡಿಸ್ಟ್ರಿಕ್ಟಿನವರು ತಿಳಿಯಪಡಿಸಿದ ವಿಷಯಗಳ್ಯಾವುವೆಂದರೆ

೧. ಈ ಸೀಮೆಯೊಳು ಕಂದಾಯ ವಸೂಲೀ ಕಾಲದಲ್ಲಿ ಶಾನುಭೋಗರು ರೈತರಿಗೆ ಕೊಡುತಲಿರುವ ರಸೀದಿಗಳು ಸುತರಾಂ ಸರಿಯಾದ್ದಲ್ಲವು. ಟ್ರಿಪ್ಲಿಕೇಟ್ (ಮೂರು ಭಾಗವುಳ್ಳದ್ದು) ಸಾರಮುಳ್ಳ ರಸೀದಿ ಬುಕ್ಕುಗಳನ್ನು ಪ್ರಿಂಟು ಮಾಡಿಸಿ ಶಾನುಭೋಗರಿಗೆ ಕೊಡಬೇಕಲ್ಲದೆ ಯಾರಿಂದಲಾದರೂ ಹಣ ವಸೂಲಾದಲ್ಲಿ ಅದು ಮೂರು ಭಾಗಗಳಲ್ಲಿಯೂ ದಾಖಲ್ಮಾಡಿ ಅವುಗಳ ಪೈಕಿ ಮೊದಲನೆಯದನ್ನು ಶಾನುಭೋಗನು ಸ್ವತಃ ಇಟ್ಟುಕೊಂಡು, ಎರಡನೆಯದನ್ನು ದಾವತೀದಾರನಿಗೆ ಕೊಟ್ಟು ಮೂರನೆಯದನ್ನು ಪ್ರತಿ ತಿಂಗಳಲ್ಲಿಯೂ ಇರಸಾಲ್ ಪಟ್ಟಿಯ ಸಂಗಡ ತಾಲ್ಲೂಕ್ ಕಚ್ಚೇರಿಗೆ ಕಳುಹಿಸುವಂತೆ ಏರ್ಪಾಡು ಮಾಡಿದರೆ ರೈತರಿಗೆ ಕ್ಷೇಮ ಉಂಟುಮಾಡಿದಂತೆಯಾಗುವದಲ್ಲದೆ ಶಾನುಭೋಗರ ದಸ್ತುಗೆ ಸ್ವಲ್ಪವೂ ಅವಕಾಶ ಇರಲಾರದು.

೨. ಇಪ್ಪತ್ತು ರೂಪಾಯಿಗಳಿಗೆ ಒಳಪಟ್ಟ ಸಿವಿಲ್ ಮೊಕದ್ದಮೆಗಳನ್ನು ಫೈಸಲ್ ಮಾಡತಕ್ಕ ಬಗ್ಗೆ ಅನುಕೂಲಿಸುವಂತೆ ಪಂಚಾಯತರ ಏರ್ಪಾಡನ್ನು ಸದ್ಯಃ ಬೆಂಗಳೂರು ಮೈಸೂರು ಈ ಎರಡು ಪಟ್ಟಣಗಳಲ್ಲಾದರೂ ಅಜಮಾಯಿಷೀ ತರೀಖ್‌ಮಾಡಿ ಅದು ನಡೆಯತಕ್ಕ ಕ್ರಮವಂ ತಿಳಿದುಕೊಂಡು ತರುವಾಯ ಸದರೀ ಪದ್ಧತಿಯನ್ನು ಇತರ ಸ್ಥಳಗಳಲ್ಲಿ ಸಹ ಜಾರಿಯೊಳು ತರುವದು ಯೋಗ್ಯವಾಗಿರುತ್ತದೆ.

೩. ಜಿಲ್ಲೆ ಕ್ರಿಮಿನಲ್ ಮೊಕದ್ದಮೆಗಳನ್ನು ಫೈಸಲ್ಮಾಡುವಬಗ್ಗೆ ಬೆಂಗಳೂರು ವ ಮೈಸೂರು ಪಟ್ಟಣಗಳಲ್ಲಿ, ಈಗ ಅನ್ಯದೇಶಗಳಲ್ಲಿ ನಡೆಗೊಂಡಿರುವ ಕ್ರಮದಂತೆ, ಆನರರಿ ಮ್ಯಾಜಿಸ್ಟ್ರೇಟರ (ಅಂದರೆ ಸಂಬಳವಿಲ್ಲದೆ ಗೌರವಾರ್ಥ ನೌಕರಿಯಾಗತಕ್ಕ ಮ್ಯಾಜಿಸ್ಟ್ರೇಟುಗಳೆಂದರ್ಥವು)ಗಳನ್ನು ನಿಯಮಿಸಬೇಕಾದ್ದು ಆವಶ್ಯಕವಾಗಿರುತ್ತದೆ.

೪. ಬೆಂಗಳೂರು ಮತ್ತು ಮೈಸೂರು ಪಟ್ಟಣಗಳ ಮ್ಯುನಿಸಿಪಾಲಿಟಿಗಳಲ್ಲಿ ಅವುಗಳ ಕಮಿಷನರ್‌ಗಳ ನೌಕರನಾತಿಯಬಗ್ಗೆ ಎಲೆಕ್ಟಿವ್‌ಸಿಸ್ಟಂ (ಅಂದರೆ ಪ್ರಜೆಗಳು ತಮಗೆ ಬೇಕಾದವರನ್ನು ಚುನಾಯಿಸಿ ನಿಯಮಿಸುವ) ಪದ್ಧತಿಯನ್ನು ಜಾರಿಯಲ್ಲಿ ತರಬೇಕಾಗಿದೆ ಈ ಪದ್ಧತಿಯು ಪರದೇಶಸ್ಥರ ಸೀಮೆಗಳಲ್ಲಿಯೂ, ಇಲ್ಲಿಗೆ ಸಂಬಂಧಪಟ್ಟ ಸಿವಿಲ್ ವ ಮಿಲಿಟರಿ ಸ್ಟೇಷನಿನಲ್ಲಿಯೂ ಜಾರಿಗೆ ಬಂದು ಈಗ್ಯೆ ಬಹಳ ದಿನಗಳಾದವು.

೫. ಅಕ್ಟ್ರಾಯ್, ಮಗ್ಗದ ತೆರಿಗೆ, ಈಗ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಏರ್ಪಾಡಾಗಿರುವ ಕಟ್ಟಿಗೆ ತೆರಿಗೆ, ಇವುಗಳು ಮರ್ಜಿ ರದ್ದು ಮಾಡತಕ್ಕವಾಗಿರುತ್ತವೆ. ಆಕ್ಟ್ರಾಯಿ ತೆರಿಗೆಯ ವಸೂಲಿಕ್ರಮವು ಪ್ರಜೆಗಳಿಗೆ ಕೇವಲ ಹಿಂಸಾರೂಪವಾದ್ದಾಗಿರುತ್ತದೆ. ಯಂತ್ರಗಳಿಂದ ಉತ್ಪನ್ನವೂ ಅವುಗಳಿಂದ ದಯಾರಾಗತಕ್ಕ ವಸ್ತ್ರಗಳ ಸೌಲಭ್ಯವೂ ಅಧಿಕವಾಗಿ ತನ್ಮೂಲಕ ಈ ದೇಶೀಯರಾದ ನೆಯಿಗೆಯವರ ಜೀವನಕ್ಕೆ ಉಪಾಯವುಂಟಾಗಿ ಅವರು ದಾರಿದ್ರ್ಯವನ್ನನುಭವಿಸುತಲಿರುವಾಗ್ಯೆ ಈಗ ನಡೆಗೊಂಡಿರುವ ಮಗ್ಗದ ತೆರಿಗೆಯು ಸದರೀ ಕಸುಬಿನವರಿಗೆ ಮತ್ತಷ್ಟು ಸಂಕಟವನ್ನುಂಟುಮಾಡಿದೆ. ಕಟ್ಟಿಗೆ ತೆರಿಗೆಯಾದರೋ, ಪ್ರಜೆಗಳಿಗೆ ಕೇವಲ ಹಿಂಸಕರವಾದದ್ದು. ಸರ್ವಸಾಧಾರಣವಾಗಿ ಎಲ್ಲರಿಗೂ ಪ್ರತಿದಿನವಲ್ಲಿಯೂ ಕಟ್ಟಿಗೆಯು ಆವಶ್ಯಕವಾದ ಪದಾರ್ಥವಾಗಿರುವದರಿಂದ ಇಂತಾದ್ದು ತೆರಿಗೆ ಹಾಕಲ್ಪಡಲಿಕ್ಕೆ ಅನರ್ಹವಾದವಾಗಿರುತ್ತದೆ. ಮತ್ತು ಇದಂ ವಸೂಲ್ಮಾಡತಕ್ಕ ವಿಧಾನವು ಜನಗಳಿಗೆ ವ್ಯರ್ಥ ಸಂಕಟಕಾರಿಯಾದದ್ದಾಗಿದೆ.

೬. ಮೊದಲು ಈ ದೇಶದಲ್ಲಿ ರೆವಿನ್ಯೂ ಸರ್ವೇ ಸೆಟಲ್‌ಮೆಂಟ್ ಇಲಾಖೆಯು ಏರ್ಪಟ್ಟ ಕಾಲದೊಳು ಕೆಲವು ತಾಲ್ಲೂಕುಗಳಲ್ಲಿ ಜಮೀನುಗಳ ಸ್ಥಿತಿಗೆ ಮೀರಿ ಜಾಸ್ತೀ ಕಂದಾಯ ಹಾಕಲ್ಪಟ್ಟಿರುವದರಿಂದ ಇದಂ ಕೊಡಲಾರದೆ ಈಗ ರೈತರು ಸಂಕಟಪಡುತಲಿದ್ದಾರೆ. ಅಪೇಕ್ಷಿತವಾದ ಕಾಲದಲ್ಲಿ ಮಳೆಯು ಹಿಡಿಸ್ಕಟ್ಟುವದರಿಂದಲಾಗಲಿ, ಇತರ ಕಾರಣಗಳಿಂದಲಾಗಲಿ, ಒಂದು ಸಂವತ್ಸರದಲ್ಲಿ ಒಬ್ಬ ರೈತನಿಗೆ ಬೆಳೆಯಾಗದಿದ್ದರೆ ಅವನು ಸರ್ಕಾರ ತಗಾದೆಯನ್ನು ಸುಧಾರಿಸಿ ಜೀವನಮಾಡುವದರೊಳಗಾಗಿ ಅವನನು ನೆಯುಂಮಾರಿಕೊಳ್ಳಬೇಕಾಗುತ್ತದೆ. ಆದದರಿಂದ ಅಂತಾ ಜಾಸ್ತೀ ಕಂದಾಯವುಳ್ಳ ತಾಲ್ಲೂಕುಗಳಲ್ಲಿ ತೆರಿಗೆಯನ್ನು ರಿವೈಜ್‌ಮಾಡತಕ್ಕಬಗ್ಯೆ ಒಂದು ಕಮಿಟಿಯನ್ನೇರ್ಪಡಿಸಬೇಕಾದ್ದು ಆವಶ್ಯಕವಾಗಿದೆ.

೭. ರೆವಿನ್ಯೂ ಆಫಸರುಗಳು ತಮ್ಮಬಳಿ ಬರತಕ್ಕ ರೆವಿನ್ಯೂ ಫಿರ್ಯಾದಿಗಳನ್ನು ಫೈಸಲ್ ಮಾಡುವದಕ್ಕಾಗಿ ಒಂದು ತಾರೀಖ್ ಗೊತ್ತುಮಾಡಿ ಆ ತಾರೀಖಿನಲ್ಲಿ ಅರ್ಜಿಗಳನ್ನು ಫೈಸಲ್ಮಾಡುವಂತೆ ಏರ್ಪಾಡುಮಾಡುವದು ಕೇವಲ ಆವಶ್ಯಕವಾಗಿದೆ. ಪ್ರಕೃತಸ್ಥಿತಿಯು ಅರ್ಜಿದಾರರಿಗೆ ಬಹಳ ತೊಂದರೆಗೆ ಕಾರಣವಾಗಿದೆ.

೮. ಈಗಿರುವ ಪೋಬಳೀಸ್ಕೂಲುಗಳಲ್ಲಿ ರಾತ್ರಿಕಾಲದೊಳು ೧ ಅಥವಾ ೧½ ಘಂಟೆಯಕಾಲ ಕೃಷಿಜೀವಿಗಳಾದವರಿಗೆ ಅವರು ಅಪೇಕ್ಷಿಸಿದೊಡೆ ಅವರ ವೃತ್ತಿಗೆ ಬೇಕಾದ ಉಪಯುಕ್ತಾಂಶಗಳನ್ನು ತಿಳಿಸುವಬಗ್ಯೆ ತಕ್ಕ ಏರ್ಪಾಡು ಮಾಡಿದರೆ ಶ್ಲಾಘ್ಯವಾಗಿರುವದು, ಕೆಲವು ಮುಖ್ಯ ಪ್ರದೇಶಗಳಲ್ಲಿ ರಾತ್ರಿಕಾಲದೊಳು ವಿದ್ಯೆಹೇಳುವಂತೆ ನೈಟ್ ಸ್ಕೂಲ್‌ಗಳನ್ನು ಏರ್ಪಾಡು ಮಾಡಬೇಕು.

೯. ಟೆಕ್ನಿಕಲ್ ಎಡ್ಯುಕೇಷನ್ ಎಂದರೆ, ಮರ ಕೆಲಸ, ಗಾರೇಕೆಲಸ, ಕಲ್ಲುಕೆಲಸ ವಗೈರೆ ಕಸಬು ದಾರೀಕೆಲಸಗಳನ್ನು ಕಲಿಸತಕ್ಕಬಗ್ಯೆ ಒಂದು ಸ್ಕೂಲ್ ಏರ್ಪಾಡುಮಾಡುವಂತೆ ಮೊ॥ ಅಪ್ಪಾಜಿಪ್ಪ ಶೆಟ್ಟರುತಾವರನ್ನು ಪ್ರೇರಿಸಿ ಅವರ ಪ್ರಯತ್ನಕ್ಕೆ ಗ್ರಾಂಟನ್ನೆಯಿದೆಂಬ ರೀತಿ ಸಹಾಯಮಾಡಿದರೆ ಇದರಿಂದ ಜನಗಳಿಗೆ ಬಹಳ ಪ್ರಯೋಜನವುಂಟಾಗುವದು.

೧೦. ಬೆಂಗಳೂರು, ಮೈಸೂರು, ಶಿವಮೊಗ್ಗ ಈ ಮೂರು ಪ್ರದೇಶಗಳಲ್ಲಿಮಾತ್ರ ಭಾರೀ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಜ್ಯೂರರ್‌ಗಳನ್ನು ನೌಕರನ್ಮಾಡುವ ಪದ್ಧತಿಯನ್ನು ಜಾರೀಯಲ್ಲಿತರುವದರೆ ಚನ್ನಾಗಿರುವದು.

೧೧. ದಿವಾನ್ ಸಾಹೇಬರು ವಾರಕ್ಕೆ ಮೂರು ದಿವಸಗಳಿಗೆ ಕಡಿಮೆಯಿಲ್ಲದಂತೆ ಅರ್ಜಿದಾರರ ಫಿರ್ಯಾದಿಗಳನ್ನು ಕೇಳಿ ಅವರ ಅರ್ಜಿಗಳನ್ನು ತೆಗೆದುಕೊಂಡು ಫೈಸಲ್ಮಾಡತಕ್ಕಬಗ್ಯೆ ದರ್ಬಾರ್ ಮಾಡಿದರೆ ಪ್ರಜೆಗಳಿಗೆ ಬಹಳ ಅನುಕೂಲವಾಗಿರುವದು. ಈಗ ಜಾರೀಯಲ್ಲಿರುವ ಏರ್ಪಾಡು ದೂರ ಪ್ರಾಂತದಿಂ ಬರತಕ್ಕ ಜನಗಳಿಗೆ ತೊಂದರೆಯಾದದ್ದಾಗಿದೆ.

೧೨. ಶ್ರೀಮನ್ಮಹಾರಾಜರವರ ಕೌನ್ಸಿಲಿನಲ್ಲಿ ಆನರರಿ ಕೌನ್ಸಿಲರ್‌ಗಳೆಂದರೆ, ರುಸುಂ ಇಲ್ಲದೆ ಗೌರವಾರ್ಥ ಕೆಲವುಜನ ಆನರರಿ ಕೌನ್ಸಿಲರ್‌ಗಳನ್ನು ನೌಕರನ್ ಮಾಡಬೇಕು. ಜನಗಳಿಗೆ ಉಪಯುಕ್ತವಾದ ವಿಷಯಗಳಲ್ಲಿ ಅಂತಾ ಮೆಂಬರ್‌ಗಳ ಅಭಿಪ್ರಾಯವನ್ನು ಜನಗಳ ತಿಳುವಳಿಕೆಯಬಗ್ಯೆ ಪ್ರಚುರಗೊಳಿಸಬೇಕಾದ್ದು ಆವಶ್ಯಕವಾಗಿರುತದೆ.

೧೩. ದಿವಾನ್ ಸಾಹೇಬರ ಪ್ರೊಸೀಡಿಂಗ್ಸನ್ನು ಗೆಜೆಟಿನಲ್ಲಿ ಪ್ರಕಟಿಸಿ ಮಾಡುವ ಪದ್ಧತಿಯನ್ನು ಅಗ್ರಾಹ್ಯ ಜಾರೀಯಲ್ಲಿ ತಂದಂತೆ ಕಾಣಿಸಲಿಲ್ಲವಾಗಿ ಅವನ್ನು ಕೂಡಲೇ ಜಾರೀಯಲ್ಲಿತಂದರೆ ಚನ್ನಾಗಿರುವದು.

೧೪. ಈಗ ಅಲ್ಪವಾಗಿ ಸಲ್ಲುತಲಿರುವ ತಾಲ್ಲೂಕ್ ನೌಕರರ ವೇತನವನ್ನು ಜಾಸ್ತೀಮಾಡಬೇಕಾದ್ದು ಆವಶ್ಯಕವಾಗಿದೆ.

೧೫. ಡಿಸ್ಟ್ರಿಕ್ಟ್ ರೆವಿನ್ಯೂ ಶಿರಸ್ತೇದಾರರನ್ನು ಅಮಲ್‌ದಾರ್ ಗ್ರೇಡಿಗೂ ರೆವಿನ್ಯೂ ಮತ್ತು ಜುಡಿಷಲ್ ಹೆಡ್‌ಮುನಿಷೀಯರನ್ನು ಡೆಪ್ಯುಟಿ ಅಮಲ್ದಾರ್ ಗ್ರೇಡಿಗೂ, ಸೆಷನ್ಸ್‌ಕೋರ್ಟ್ ಶಿರಸ್ತೇದಾರ್‌ನ್ನು ಮುನ್ಸಿಫ್ ಗ್ರೇಡಿಗೂ ಬಡ್ತೀಮಾಡಿದರೆ ಉತ್ತಮವಾಗಿರುವದು. ಇದರಿಂದ ಇಷ್ಟು ಉದ್ಯೋಗಸ್ಥರವರು ಕೆಲವುಕಾಲ ಒಂದು ಕೆಲಸದಲ್ಲಿದ್ದು ಬೇಕಾದಾಗ ಬೇರೊಂದು ಕೆಲಸಕ್ಕೆ ಬದಲಾಯಿಸಿಕೊಳ್ಳಲು ಸುಲಭವಾಗಿರುತದೆ. ಇದಲ್ಲದೆ ಎಗ್ಸಿಕ್ಯುಟಿವ್ ಆಫಸರಿಗೆ ಪ್ರಾಮುಖ್ಯತೆ ಕೊಡುವ ಈಗಿನ ಕ್ರಮವು ತಪ್ಪಿಹೋಗುವದು.

೧೬. ಈಗ ನೌಕರರಾಗಿರುವ ಅಗ್ರಿಕಲ್ಚುರಲ್ ಇನ್‌ಸ್ಪೆಕ್ಟರ್‌ಗಳನ್ನು ವ್ಯವಸಾಯ ಮತ್ತು ತೋಟಗಳ ವಿಷಯಗಳಿಗಾದ ಉಪಯುಕ್ತಾಂಶಗಳನ್ನು ಕುರಿತು ರೈತರಿಗೆ ತಿಳಿಸತಕ್ಕಬಗ್ಯೆ ಗ್ರಾಮಾಂತರಗಳಲ್ಲಿ ಅನವರತ ತಿರುಗುತಲಿರುವಂತೆ ಏರ್ಪಾಡು ಮಾಡಬೇಕು.

೧೭. ಲೆಜಿಸ್ಲೆಟಿವ್ ಸೆಕ್ರೆಟರಿ, ಬೆಂಗಳೂರು ಡಿಸ್ಟ್ರಿಕ್ಟ್ ಸ್ಪೆಷಲ್ ಅಸಿಸ್ಟೆಂಟ್, ಬೆಂಗಳೂರು ಸೆಂಟ್ರಲ್‌ಜೈಲ್ ಸೂಪರಿಂಟೆಂಡೆಂಟ್, ಎಜ್ಯುಕೇಷನ್ ಸೆಕ್ರೆಟರಿ, ಮಿಲಿಟರಿ ಸೆಕ್ರೆಟರಿ, ಈ ಕೆಲಸಗಳು ಭಾರೀ ಸಂಬಳ ವುಳ್ಳವುಗಳಾಗಿಯೂ, ನಿಷ್ಪ್ರಯೋಜಕವಾದವಾಗಿಯೂ ಇರುತ್ತವೆ. ಜೈಲ್ ಸೂಪರಿಂಟೆಂಡೆಂಟ್ ಕೆಲಸವನ್ನು ಪೂರ್ವದಂತೆ ಒಬ್ಬ ಮೆಡಿಕಲ್ ಆಫಸರಿಗೂ, ಎಜ್ಯುಕೇಷನ್ ಸೆಕ್ರೆಟರಿ ಕೆಲಸವನ್ನು ಅಂಡರ್‌ಸೆಕ್ರೆಟರಿಯವರಿಗೂ ಕೊಟ್ಟರೆ ಸಾಕಾಗಿರುವದಲ್ಲದೆ ಇವಕ್ಕಾಗಿ ಭಾರೀ ಸಂಬಳವುಳ್ಳ ಕೆಲಸಗಳು ಅನಾವಶ್ಯಕವು, ಆದದರಿಂದ ಇವುಗಳನ್ನು ಕೂಡಲೇ ವಜಾ ಮಾಡುವದು ಯುಕ್ತವಾಗಿರುತ್ತದೆ.

೧೮. ಭಾರೀ ಸಂಬಳಗಳನ್ನು ಪಡೆಯುತಲಿರುವ ಆಫಸರ್‌ಗಳಿಗೆ ಅಂದರೆ ಡೆಪ್ಯುಟಿ ಕಮಿಷನರ್‌ಗಳು ಮುಂತಾದವರಿಗೆ ಟ್ರಾವಲಿಂಗ್‌ಅಲೋವೆನ್ಸ್ ಎಂಬ ಭತ್ಯ ಕೊಡತಕ್ಕದ್ದು ಅನುಚಿತವಾದದರಿಂದ ಅದನ್ನು ಮನ್ನಾ ಮಾಡಬಹುದು. ಈಗ ಪೂರಾ ಮನ್ನಾ ಮಾಡುವದಕ್ಕೆ ಸದ್ಯಃ ಅಸಾಧ್ಯವೆಂದು ತೋರುವ ಪಕ್ಷದಲ್ಲಿ ಆಫಸರ್‌ಗಳು ಖರ್ಚುಮಾಡಿ ಸರ್ಟಿಫೈ ಮಾಡುವಷ್ಟು ಮೊಬಲಗನ್ನು ಮಾತ್ರ ಕೊಟ್ಟರೆ ಸಾಕಾಗಿರುತ್ತದೆ.

೧೯. ಇಲ್ಲಿನ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಸ್ಥಳೀಕಲಾಕಾಮಗಾರಿಯಲ್ಲಿರುವ ಕೆಲಸಗಳಬಗ್ಯೆ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಆವಶ್ಯಕವಾದದಕ್ಕಿಂತ ಜಾಸ್ತೀಯಾಗಿ ಸೂಪರಿಂಟೆಂಡಿಂಗ್ ಆಫಸರ್‌ಗಳು ಏಕತ್ರ ಸೇರಿರುತ್ತಾರೆ. ಅಂತವರನ್ನು ಕೂಡಲೇ ವಜಾ ಮಾಡಬೇಕು. ಮಾರೀಕಣಿವೆ ಕೆರೆ ಕಾಮಗಾರಿ ಉದ್ದೇಶದಿಂದ ಈಚೆಗೆ ನೌಕರರ್‌ಮಾಡಿದ ಆಫಸರನ್ನು ವಾಪಸ್ ಕಳುಹಿಸುವದು ಯುಕ್ತವಾಗಿರುವದೆ.

೨೦. ರಿಪ್ರೆಸೆಂಟೆಟಿವ್‌ಗಳ ಚುನಾವಣೆ ವ ನೌಕರರಾತಿಯನ್ನು ಮೀಟಿಂಗ್ ನಡೆಯುವದಕ್ಕೆ ಒಂದುತಿಂಗಳು ಮುಂಚಿತವಾಗಿ ಮಾಡಿ ಅವರ ಹೆಸರುಗಳನ್ನು ಪ್ರಕಟಿಸಿಮಾಡಬೇಕಲ್ಲದೆ ಅವರು ಸಮಾಜದಲ್ಲಿ ಬಂದು ಮಾತನಾಡತಕ್ಕಬಗ್ಯೆ ಆವಶ್ಯಕಗಳಾದ ವಿಷಯಗಳಲ್ಲಿ ಅವರಿಗೆ ಬೇಕಾಗಿರುವ ಸರ್ಕಾರೀ ಕಾಗದಗಳನ್ನು ಅವರಿಗೆ ಒದಗಿಸಿಕೊಡುವಂತೆ ಹುಕುಂ ಮಾಡಿದರೆ ಚನ್ನಾಗಿರುವದು.

೨೧. ಈಗ ಸಿವಿಲ್‌ಕೋರ್ಟುಗಳಲ್ಲಿ ಸ್ಟ್ಯಾಂಪ್ ಖರ್ಚು ಜಾಸ್ತಿಯಾಗಿರುವದರಿಂದ ಅನೇಕವು ಕದ್ದಮೆಗಳಲ್ಲಿ ಕಕ್ಷಿಗಾರರು ಬಹಳ ನುಕ್ಸಾನ್ ಅನುಭವಿಸುತ್ತಾರೆ. ಎಕ್ಸ್‌ಪಾರ್ಟಿ ಮತ್ತು ಅಂಗೀಕರಿಸದೆ ನಿರಾಕರಿಸಲ್ಪಟ್ಟ ಮೊಕದ್ದಮೆಗಳಲ್ಲಿ ಅರ್ಧ ಕೋರ್ಟ್ ಫೀಜನ್ನು ಕಕ್ಷಿಗಾರರಿಗೆ ರೀಫಂಡ್‌ಮಾಡುವಂತೆ ಹುಕುಂ ಮಾಡಿದರೆ ಅನುಕೂಲವಾಗಿರುವದು.

೨೨. ಈಗಿನ ಚೀಫ್‌ಕೋರ್ಟು ರೆಗ್ಯುಲೇಷನ್ ಪ್ರಕಾರ ಒರಿಜನಲ್ ಸೈಡಿನಲ್ಲಿ ಕುಳಿತು ಫೈಸಲ್ ಮಾಡಿದ ಜಡ್ಜಿಯು ಅದೇ ಮೊಕದ್ದಮೆಯಲ್ಲಿ ಅಪೀಲ್ ಸೈಡಿನಲ್ಲಿ ಸಹ ಕುಳಿತು ಫೈಸಲ್‌ಮಾಡುವದು ಸುತರಾಂ ಸರಿಯಾದ್ದಲ್ಲವು. ಇದರಿಂದ ಕಕ್ಷಿಗಾರರಿಗೆ ಅನಾನುಕೂಲ ಪ್ರಟಾಗಿರುತದೆ. ಈ ನಿಯಮವನ್ನು ಸದರೀ ರೆಗ್ಯುಲೇಷನ್ನಲ್ಲಿ ಬದಲಾಯಿಸತಕ್ಕದ್ದು.

೨೩. ಯುದ್ಧವಗೈರೆ ಪ್ರಕರಣಗಳೊಂದೂ ಇಲ್ಲಿ ಇಲ್ಲದಿರುವಾಗ್ಯೂ ಸುಮಾರು ಯೆರಡುವರೆ ಲಕ್ಷ ರೂಪಾಯಿಗಳ ತನಕ ಅಮೃತಮಹಲ್ ದನಗಳಗಾಗಿ ವ್ಯಯಮಾಡಿಕೊಂಡು ಅವುಗಳ ವಿಚಾರಣೆಯಬಗ್ಯೆ ಸಾಲೀಯಾನಾ ೬೦—೭೦ ಸಾವಿರ ರೂಪಾಯಿಗಳ ಲವಾಜಮಾ ಖರ್ಚು ಇಟ್ಟಿರುವದೂ, ಬಹಳ ಹುಟ್ಟುವಳಿಯಾಗಬಹುದಾದ ಹುಲ್ಲುಗಾವಲುಗಳನ್ನು ರೈತರಿಗೆ ಇಲ್ಲದಂತೆ ಮಾಡಿ ಜುಜಾವೀ ಹುಟ್ಟುವಳಿಗಾಗಿ ಸದರೀ ಕಾವಲುಗಳನ್ನು ಉಪಯೋಗಿಸುವದೂ, ಯುಕ್ತವಲ್ಲವಾಗಿ ಈಡಿಪಾರ್ಟ್‌ಮೆಂಟು ವಜಾ ಮಾಡಬಹುದಾದ್ದಾಗಿರುತದೆ.

೨೪. ಅಂಚೆಯೊತ್ತುಕೊಂಡು ಹೋಗುವ ಕೆಲಸವನ್ನು ಕೆಲವು ಮಾರ್ಗಗಳಲ್ಲಿ ಕುದುರೆ ಟಪಾಲ್ ಕಂಪೆನಿಯವರಿಗೆ ಕೊಡಬಹುದು. ಆದರೆ ಲಾಯಖ್ ಸಿಕ್ಯೂರಿಟಿ ಕೊಟ್ಟು ಈಗಿರುವ ಲವಾಜಮೆ ಖರ್ಚಿಗಿಂತ ಕಡಮೆಯಾಗಿ ಕೆಲಸ ನಡೆಸಲಿಕ್ಕೆ ಅವರು ಒಪ್ಪಿದರೆ ಸದರೀ ಕೆಲಸವನ್ನು ಅವರಿಗೆ ಕೊಡಬಹುದು.

೨೫. ಈ ದೇಶದಪೈಕಿ ಮಂಡ್ಯ, ದಾವಣಗೆರೆ, ಕೋಲಾರ, ವಗೈರೇ ಪ್ರಾಂತಗಳಲ್ಲಿ ಹಸನಾದ ಕಂಬಳಿಗಳು ತಯಾರಾಗುತಲಿವೆ ಈಗ ಪೊಲೀಸಿನವರ ಉಡುಪುಗಳಿಗಾಗಿ ಕೊಡತಕ್ಕ ಚಳಿಗಳಿಗೆ ಸರಿಯಾಗಿ ದೊರಕಬಹುದಾದರೆ ಒಳದೇಶದ ತಯಾರೀ ಕಂಬಳಿಗಳನ್ನು ಕೊಂಡುಕೊಳ್ಳುವದರಮೂಲಕ ಸದರೀ ಕಸಬಿನವರನ್ನು ಪ್ರೋತ್ಸಾಹ ಪಡಿಸಿದರೆ ಚನ್ನಾಗಿರುವದು.

೨೬. ಸುಮಾರ್ ೫೦ ಸಂವತ್ಸರಕ್ಕೆ ಮೇಲ್ಪಟ್ಟು ಅನುಭವದಲ್ಲಿರುವ ಇನಾಂ ಜಮೀನುಗಳಪೈಕಿ ಸರ್ವೇ ಸೆಟಲ್‌ಮೆಂಟಿನ ಸನ್ನದಿನಲ್ಲಿ ಕಂಡದ್ದಕ್ಕಿಂತ ಜಾಸ್ತಿಯಾಗಿ ಜಮೀನು ಅನುಭವದಲ್ಲಿರುವಂತೆ ಕಂಡುಬಂದರೆ ಅದನ್ನು ರಿಜ್ಯಾಂ ಅಂದರೆ, ದಾಖಲ್ಮಾಡಿಕೊಂಡು ಕಂದಾಯ ಹಾಕತಕ್ಕದ್ದು ಅಕ್ರಮವಾಗಿರುತದೆ. ಜಮೀನು ಅನುಭವವನ್ನು ನಂಬಿ ಅನೇಕರು ಭಾರೀ ಮೊಬಲಗು ಕೊಟ್ಟು ಕ್ರಯಕ್ಕೆ ಪಡೆದುಇರುತ್ತಾರೆ; ಇದರಿಂದ ಅವರು ವಿಶೇಷ ನಷ್ಟವನ್ನು ಅನುಭವಿಸಬೇಕಾಗಿರುತದೆ.

೨೭. ಈದೇಶದಲ್ಲಿ ಲ್ಯಾಂಡ್ ಇಂಪ್ರೂವ್‌ಮೆಂಟ್ ಆಕ್ಟು ಜಾರೀಯಲ್ಲಿದ್ದಾಗ್ಯೂ ಅದರಲ್ಲಿ ತಿಳಿಸಲ್ಪಟ್ಟ ನಿಯಮಗಳನ್ನು ಮಾತ್ರ ಇಲ್ಲಿನ ರೆವಿನ್ಯೂ ಅಧಿಕಾರಿಗಳು ಜಾರೀಯಲ್ಲಿತರುವದಿಲ್ಲವು. ಪ್ರಯೋಜನಕರಗಳಾದ ಭಾಗಗಳನ್ನು ಜಾರೀಗೆ ತರುವಂತೆ ರೆವಿನ್ಯೂ ಆಫಿಸರುಗಳಿಗೆ ಹುಕುಂ ಮಾಡಬೇಕಾದ್ದು ಆವಶ್ಯಕವಾಗಿರುತದೆ.

ಮೇಲ್ಕಂಡ ಅಂಶಗಳಪೈಕಿ ಕೆಲವು ಸಾಧ್ಯಗಳಾಗಿಯೂ, ಕೆಲವು ಅಸಾಧ್ಯಗಳಾಗಿಯೂ, ಕೆಲವು ಸಾಧ್ಯಾಸಾಧ್ಯಗಳಾಗಿಯೂ ಇರುವದರಿಂದ ಇವುಗಳಪೈಕಿಯಾವದುಜಾರೀಯಲ್ಲಿತರಲ್ಪಡುವದೋ ಯಾವದು ಬಿಡಲ್ಪಡುವದೋ ಈಗ ಗೊತ್ತಾಗಲಾರದು. ಪರಂತು ಮೇಲ್ಕಂಡ ಪ್ರತ್ಯೇಕವೂ ದಿವಾನರವರಿಗೂ ಸಭಿಕರಿಗೂ ಮುದಸ್ಮಿತವನ್ನು ಉಂಟುಮಾಡದಿರಲಿಲ್ಲವು. ಆದರೆ ಅದರಅರ್ಥಮಾತ್ರ ಏತದ್ರೂಪವಾದದ್ದೋ ಅದು ನಾವು ತಿಳಿಸಲಸಮರ್ಥರಾಗಿದೇವೆ. ಬೆಂಗಳೂರುಡಿಸ್ಟ್ರಿಕ್ಟ್ ಪ್ರತಿನಿಧಿಗಳಂತೆ ಇತರಡಿಸ್ಟ್ರಿಕ್ಟಿನವರು ಸಹ, ತಾವು ಸೂಚಿಸಿದ ವಿಷಯಗಳ ಪ್ರಯೋಜನವನ್ನು ಸುಲಭವಾಗಿಪಡೆಯದೆಹೋದಾಗ್ಯೂ ಅವುಂಸಮಗೆ ಬರೆಯುವವರಾದರೆ ಅವರ ಅಭಿಪ್ರಾಯವು ಇಂತಾವೆಂದು ಈಪತ್ರಿಕಾಮೂಲಕ ಪ್ರಕಟಿಸುವೆವು. ಮಿ. ವೆಂಕಟರಾಮಯ್ಯನವರನ್ನು ಚುನಾಯಿಸುವ ಕಾಲದಲ್ಲಿ ವಿಪರೀತ್ಯಾ ಆಡಳತಕ್ರಮವನ್ನು ಆಕ್ಷೇಪಿಸುವರೆಂದುನಿರೀಕ್ಷಿಸಿರಲಿಲ್ಲವು. ಪರಂತು ಅವರು ಈರೀತಿಕೇಳಿದ್ದನ್ನು ನೋಡಿದರೆ ಮುಂದಿನ ಸಂವತ್ಸರದ ದರ್ಬಾರ್ ಸಾಧಪ್ರವೇಶವನ್ನು ಅವರು ಸ್ವತಃ ಕಳೆದುಕೊಂಡಂತೆ ಎಣಿಸಬೇಕಾಗಿದೆ.

Occasional Notes.
ನೈಮಿತ್ತಿಕವಿಷಯನ್ಯಾಸ.

The Puna new market.—ಪುನೇಯಲ್ಲಿ ಹಣ್ಣುಗಳು ಮತ್ತು ತರ್ಕಾರೀಗಳುಮಾರತಕ್ಕವರಿಗೋಸ್ಕರ ಹೊಸದಾಗಿಕಟ್ಟಲ್ಪಟ್ಟಮಾರ್ಕೆಟ್ಟಿನಕೆಲಸಪೂರ್ತಿಯಾಗಿ ಸದರೀಜನಗಳನ್ನು ಅದರಲ್ಲಿ ಅಂಗಡಿಗಳಿಡುವಂತೆ ಹೇಳಲು, ಬಾರೀಸಂದಾಯಕೊಡುವದಕ್ಕೆ ತಮಗೆ ಇಷ್ಟವಿಲ್ಲವಾಗಿ ಅಲ್ಲಿಗೆ ಯೋಗಲಾರವೆನ್ನುತ್ತಾರಂತೆ

A liberal offer.—ಮುಂಬೈಯಲ್ಲಿ ಪ್ರಸಿದ್ಧ ಹಡಗು ದಳ್ಳಾಳೀದಾರರಾದ ಮೆ|| ಚುಬಲ್‌ದಾಸ ಲಲ್ಲೂಬಾಯಿಯವರ ಸೋದರರಾದ ತ್ರಿಭುವನದಾಸ್ ಲಲ್ಲೂಬಾಯಿ ಯೆಂಬವರು ಜೆಂಸಟ್‌ಜಿ ಜೀಜೀಬಾಯಿಯವರ ಆಸ್ಪತ್ರಿಗೆ ಸೇರಿದಂತೆ ಕ್ಷಯಜುಳಾಪ ರೋಗಪೀಡಿತರಾದವರ ಚಿಕಿತ್ಸೆಯಬಗ್ಯೆ ಪ್ರತ್ಯೇಕವಾಗಿ ಒಂದುಶಾಲೆಯನ್ನು ಕಟ್ಟಿಸುವದಕ್ಕಾಗಿ ೧೦,೦೦೦ ರೂಪಾಯಿಗಳು ತಾವುಕೊಡುವದಾಗಿ ಅಲ್ಲಿನ ಗ್ರ್ಯಾಂಟ್ ಮೆಡಿಕಲ್ ಕಾಲೀಜ್ ಪ್ರಿನ್ಸಿಪಲ್‌ರವರಿಗೆತಿಳಿಸಿರುತ್ತಾರಂತೆ.

A military order.—ಮಿಲಿಟರಿ ಆಫಿಸರ್‌ಗಳು ಕವಾಯತ್‌ದಿಣ್ಣೆಗೆಹೋಗುವಕಾಲದಲ್ಲಿ ಅಥವಾ ಅಲ್ಲಿಂದ ವಾಪಸ್‌ಬರುವಕಾಲದಲ್ಲಿ ತಮ್ಮಕತ್ತಿಗಳನ್ನು ತಮ್ಮ ಕುದುರೆಯವನ ಅಥವಾ ಚಾಕರನವಶಕ್ಕೆ ಕೊಡುವವಾಡಿಕೆ ನೆಲಗೊಂಡಿರುವಂತೆ ತಿಳಿಯಬರುವದರಿಂದ ಮಿಲಿಟರಿ ಗೌರವಕ್ಕೆ ಭಂಜಕವಾದ ಅಂತಾ ವಾಡಿಕೆಯನ್ನು ಕೂಡಲೇ ಬಿಟ್ಟುಬಿಡಬೇಕೆಂತಲೂ, ಅಂತಾ ಸಂದರ್ಭಗಳಲ್ಲಿ ಆಯುಧಗಳನ್ನು ಧರಿಸಿಕೊಂಡಿರಬೇಕೆಂತಲೂ ಕಮಾಂಡರ್ ಇನ್‌ಚೀಫ್‌ರವರು ಹುಕುಂ ಸಾದರ್‌ಮಾಡಿರುತ್ತಾರೆ.

Military preparations.—ಲಂಡನ್‌ಪಟ್ಟಣದಿಂದ ಪಯೋನಿಯರ್‌ಪತ್ರಿಕೆಗೆ ಬಂದ ತಂತಿವರ್ತಮಾನದಮೂಲಕ ಪ್ರೆಂಚಿನವರೂ ಜರ್ಮನೀಯವರೂ ವಿಸ್ತಾರವಾಗಿ ಮಿಲಿಟರಿ ಸನ್ನಾಹಗಳಂ ಮಾಡುತಲಿರುವಂತೆ ತಿಳಿಯಬರುತಿದೆ. ಸದರೀ ಎರಡು ಸಂಸ್ಥಾನಗಳ ನಾವಿಕ ಸೇನಾಸನ್ನಾಹಗಳವಿಷಯವನ್ನುಕುರಿತ ಅನೇಕಅಂಶಗಳು ಹೊರಗಾಗುವದೆಂದು ನಿರೀಕ್ಷಿಸಲ್ಪಟ್ಟಿವೆ.

Fatal end of a matrimony.—ಈಚೆಗೆ, ಲಾಹೋರ್‌ನಲ್ಲಿ ಒಬ್ಬ ಜಮೀನ್ದಾರನು ವಿವಾಹ ಮಾಡಿಕೊಳ್ಳಬೇಕೆಂಬ ಉದ್ದೇಶದೊಡನೆ ಒಂದು ಗ್ರಾಮಕ್ಕೆಹೋಗಿ ಒಂದು ಕನ್ಯೆಯನ್ನುನೋಡಿದನು. ಸದರೀ ಹುಡಿಗಿಗೆ ಇಬ್ಬರು ಸಹೋದರರು,ಅವರಪೈಕಿ ಒಬ್ಬಾತನು ಸಮ್ಮತಿಸಲು ಮತ್ತೊಬ್ಬನು ವಿರೋಧಿಸಿದನು. ಈಮೇರೆ ಕಕ್ಷಿದ್ವಯವುಂಟಾಗಿ ಅವರವರಿಗೆ ಆಗಿಂದಾಗ್ಯೆ ಮುಷ್ಟಿಯುದ್ಧಗಳುನಡೆಯುತಲಿದ್ದವು. ಹೀಗಿರುವಲ್ಲಿ ಒಂದುದಿನ ಸದರೀವಿವಾಹಕ್ಕೆ ವಿರೋಧಿಯಾದವನುಕಾರ್ಯವಶಾತ್‌ಪರಸ್ಥಳಕ್ಕೆಹೋಗಿದ್ದ ಸಂದರ್ಭದಲ್ಲಿ ಗದ್ದಲವಿಲ್ಲದೆ ವಿವಾಹನಡೆದುಹೋಯಿತು. ಪರಸ್ಥಳಕ್ಕೆಹೋಗಿದ್ದವನು ವಾಪಸ್ ಬಂದು ಈ ವರ್ತಮಾನವನ್ನುಕೇಳಲು ಅವನಿಗೆ ಆಗ್ರಹವುಂಟಾಗಿ ಒಂದುದಿನರಾತ್ರಿ ಕೈಯಲ್ಲಿ ಕತ್ತಿಯಂಹಿಡದು ಮದವಣಿಗನು ಮಲಗಿದ್ದ ಕೊಠಡಿಯಲ್ಲಿ ಪ್ರವೇಶಿಸಿ ಅವನನ್ನು ಕಡದುಹಾಕಿದನು. ತಾನೂ ಈಗ ದಸ್ತಗಿರಿಯಾಗಿ ವಿಚಾರಣೆಯೊಳಿದಾನೆ

ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೆ ಪ್ರಕಟಪಡಿಸುವದೇನಂದರೆ,—ಈ ತಿಂಗಳ ೧೨ ಮತ್ತು ೧೩ನೇ ತಾರೀಖ್‌ಗಳಲ್ಲಿ, ಈ ಪತ್ರಿಕೆಗೆ ಬಾಕೀದಾರರಾಗಿರುವ ಚಂದಾದಾರರಿಗೆ ಅವರವರ ಬಾಕೀ ತಪ್ಸೀಲ್ ನಿಕ ಅಲಾಹಿದಾ ಅಂಚೆಯಲ್ಲಿ ಕಾಗದಗಳು ಬರೆದಿರುವದರಿಂದ ಅದಕ್ಕೆ ಬಾಕೀದಾರರೆಲ್ಲರೂ ಕೂಡಲೇ ನಿಗೇಕೊಟ್ಟು ಅವರವರ ಬಾಕೀಗಳನ್ನು ಫೈಸಲ್ಮಾಡಬೇಕೆಂದು ಕೋರುತ್ತೇವೆ. ಹಾಗೆ ಮಾಡದೆ ಉಪೇಕ್ಷಿಸತಕ್ಕವರ ವಿಷಯದೊಳು ಸದರೀ ಕಾಗದದಲ್ಲಿ ಸೂಚಿಸಿರುವಕ್ರಮ ಅವಲಂಬಿಸಲ್ಪಡುವದು.

೧೮-೧೦-೮೬. ಪ್ರೊಪ್ರೈಟರ್.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕ್‌ಜಾತ್‌ವೃತ್ತಾಂತಗಳು.

The Chief Court.—ದಸರಾಹಬ್ಬದಬಗ್ಯೆ ಕೊಡಲ್ಪಟ್ಟ ರಜಾ ಕಳೆದ ಮಂಗಳವಾರದೊಡನೆ ಖತೈಸಿ, ಈ ತಿಂಗಳ ೧೩ನೇ ತಾರೀಖ್ ಬುಧವಾರದಿನ ಇಲ್ಲಿನ ಚೀಪ್‌ಕೋರ್ಟನಲ್ಲಿ ಮರಳಿ ಕೆಲಸಕ್ಕೆ ಪ್ರಾರಂಭವಾಯಿತು.

The Viceroy's visit.—ಇಂಡ್ಯಾರಾಜ್ಯದ ವೈಸ್‌ರಾಯ್ ಸಾಹೆಬರವರು ಬರುವ ನವಂಬರ್ ತಿಂಗಳಲ್ಲಿ ಈ ದೇಶಕ್ಕೆ ಬರುವ ಸಂದರ್ಭದೊಳು ಅವರನ್ನು ಉಚಿತ ಮರ್ಯಾದೆಯೊಡನೆಯೂ ತಕ್ಕ ಗೌರವ ಪುರಸ್ಕಾರಗಳೊಡನೆಯೂ ಬರಮಾಡಿಕೊಳ್ಳುವ ಪ್ರಬಲ ಕಾರ್ಯಕ್ಕೆ ಹಿಡಿಯಬಹುದಾದ ಖರ್ಚುವೆಚ್ಚಗಳಬಗ್ಯೆ ಮೈಸೂರು ಮ್ಯೂನಿಸಿಪಾಲಿಟಿಯವರು ೭,೦೦೦ ರೂಪಾಯಿಗಳು ನಿಷ್ಕರ್ಷಿಸಿರುವದಲ್ಲದೆಇದಕ್ಕೆಭರ್ತಿಯಾಗಿ೩,೦೦೦ ರೂಪಾಯಿಗಳು ಕೊಡಬೇಕೆಂದು ಗವರ್ನಮೆಂಟಿನವರನ್ನು ಕೇಳಲು ಯೋಚಿಸಿರುತ್ತಾರೆ.

The weather.—ಇಲ್ಲಿನ ಹವಾ ವಿಷಯದಲ್ಲಿ ಕಳೆದವಾರದಿಂದೀಚೆಗೆ ಅಧಿಕಾಂತರಗಳ್ಯಾವದೂ ಇಲ್ಲವು. ಆಗಿಂದಾಗ್ಯೆ ಮೋಡ ಮುಸುಕಿ ಅಲ್ಪಸ್ವಲ್ಪ ತುಂತುರುಮಳೆ ಬೀಳುತಲೇ ಇದೆ ರಾಗೀ ಫಸಲಿಗೆ ಇನ್ನೊಂದೆರಡು ಹದ ಮಳೆ ಬೇಕೆನ್ನುತ್ತಾರೆ. ದೈವಾತ್ ಅಂತಾ ಮಳೆ ಬಿದ್ದರೆ ಈಸಲ ರಾಗೀ ಪಸಲ್ ಕೂದಿದಮಟ್ಟಿಗೆ ಚನ್ನಾಗಿ ಫಲಿಸಬಹುದೆಂದು ಕಾಣುತಿದೆ ಅಕ್ಕಿ ಮತ್ತು ತುಪ್ಪದ ಧಾರಣೆಗಳು ಸ್ವಲ್ಪ ಇಳಿದಿದೆ ಇತರ ಪದಾರ್ಥಗಳ ಧಾರಣೆಗಳು ಪ್ರಾಯಶಃ ಏಕರೂಪವಾಗಿಯೇ ಇರುವಂತೆ ತೋರುತಿದೆ. ತರಕಾರಿ ಬಹಳ ಪ್ರಿಯವಾಗಿದೆ. ಮೊಸರಿನ ಧಾರಣೆ ಈ ಕಾಲದಲ್ಲಿ ಇರಬೇಕಾದವಕ್ಕಿಂತಲೂ ದ್ವಿಗುಣವಾಗಿದೆ. ಇದಕ್ಕೆ ಕಾರಣವು ವಿಚಾರಿಸಲಾಗಿ ಹಳ್ಳಿಯವರ ದುರಾಶೆ ವಿನಾ ಬೇರೆಯಾವದೂ ಗೋಚರವಾಗಲಿಲ್ಲವು.

The Treasury Bukshiship.—ಇಲ್ಲಿನ ಹುಜೂರ್ ಟ್ರಜಾನಾ ಬಕ್ಷೀಯವರು ಮೃತಪಟ್ಟದ್ದು ಮೊದಲು ಅವರ ಕೆಲಸ ಖಾಲೀಯಾಗಿರುವದು ಸರಿಯಷ್ಟೆ. ಸದರೀ ಕೆಲಸಕ್ಕೆ ದಿವಾನರವರ ಪ್ರೈವೇಟ್ ಸೆಕ್ರೆಟರಿಯವರಾದ ಮೆ|| ವೈದ್ಯನಾಥಯ್ಯನವರು ನೇಮಕರಾಗಲ್ಪಟ್ಟರೆಂದು ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಯ ಮೂಲಕ ತಿಳಿಯಬಂದು ಬಹಳ ಸಂತೋಷಿಸುತ್ತೇವೆ, ಈ ಕೆಲಸವು ಮಾಹೇಯಾನಾ ನಾನೂರು ರೂಪಾಯಿಗಳ ತಲಬುಳ್ಳದ್ದು, ಮತ್ತು ಗೌರವ್ಯವಾದದ್ದು. ಆದದರಿಂದ ಇದಕ್ಕೆ ದಿವಾನರವರ ಭಾವಮೈದುಂದರೇ ಅರ್ಹರಾದವರು, ಮತ್ತು ಅವರು ರೇವಣೀ ಇಡಬೇಕಾದ ಆವಶ್ಯಕತೆ ಸಹಕಾಣಿಸಲಿಲ್ಲವು.

THE FORT MURDER CASE
EXECUTION OF THE PRISONERS

ಈಗ್ಯೆ ಕೆಲವುಕಾಲದಮೊದಲು ಬಹುಮಂದಿಯವಿಚಾರಕ್ಕೆ ವಿಷಯವಾಗಿದ್ದ ಕೋಟೆಯಖೂನೀಮೊಕದ್ದಮೆಗೆ ಸಂಬಂಧಪಟ್ಟ ನಿರ್ಭಾಗ್ಯರಾದ ಗೋವಿಂದರಾಜಮೊದಲಿ, ಮತ್ತು ವೆಂಕಟಸ್ವಾಮಿ ಎಂಬ ಇಬ್ಬರು ಅಪರಾಧಿಗಳು ಅವರುನಡೆಸಿದ ಕೃತ್ಯಕ್ಕನುಗುಣವಾದ ಫಲವನ್ನು ಗತಶುಕ್ರವಾರದದಿನ ಬೆಳಗ್ಯೆ ಅನುಭವಿಸಿದರು. ಸದರೀ ಇಬ್ಬರ ಆಯುಃಪರಿಮಾಣಕಾಲವು ನಿರ್ಧರಿಸಿ ತಿಳಿಸಲ್ಪಟ್ಟಮೇಲೆ ಅವರು ತಮ್ಮ ಇಷ್ಟಮಿತ್ರರನ್ನು ಕರೆಯಿಸಬೇಕೆಂದು ಅಪೇಕ್ಷಿಸಲು, ಜೆಯಿಲ್ ಸೂಪರಿಂಟೆಂಡೆಂಟರವರು ಅವರನ್ನೆಲ್ಲ ಕರೆಯಿಸಿ ಅಪರಾಧಿಗಳೊಡನೆ ಸಂಭಾಷಣೆಗೆ ಬೇಕಾದ ಅವಕಾಶವಂಕೊಟ್ಟರು. ಗೋವಿಂದರಾಜಮೊದಲಿಯ, ತಾಯಿತಂದೆಗಳೂಭಾರ್ಯೆಯು ಸಹ ಬಂದುನೋಡಿ ಬಹಳ ಗೋಳಾಡಿದರೆಂತಲೂ, ಆಕಾಲದಲ್ಲಿ ಅವರ ಪರಿತಾಪವು ಎಂತವರಿಗೂ ದುಸ್ಸಹವಾದದ್ದಾಗಿತ್ತೆಂತಲೂ ತಿಳಿಯಬಂತು. ಆತನು ವೆಸ್ಲಿಯನ್ ಮಿಷನ್‌ಸ್ಕೂಲಿನಲ್ಲಿ ರೆವರೆಂಡ್ ಹಡ್ಸನ್ಯವರಬಳಿ ವಿದ್ಯಾಭ್ಯಾಸಮಾಡಿದ್ದನಾಗಿಆಅಭಿಮಾನದಮೇಲೆ ಅವರುಸಹ ಆತನುನೋಡುವಬಗ್ಯೆಜೆಯಿಲಿಗೆಹೋಗಿದ್ದರು.ಆಕಾಲದಲ್ಲಿ ಅವನು ತನ್ನ ಮುಕ್ತಿಯಬಗ್ಯೆ ಪ್ರಾರ್ಥಿಸುವಂತೆ ಮೆಸ್ಟರ್ ಹಡ್ಸನ್ಯವರನ್ನು ಕೇಳಿಕೊಂಡಂತೆಯೂ, ಖೈದಿಗಳಿಬ್ಬರೂ ಇಷ್ಟುದಿವಸಗಳಗಿಂತ ಗತ ಗುರುವಾರದದಿನರಾತ್ರಿ ಯಾವ ವಿಧಚಿಂತೆಯೂಯಿಲ್ಲದಂತೆ ನಿರ್ಭರರಾಗಿ ಸುಖನಿದ್ರೆಗೈದರೆಂತಲೂ ತಿಳಿಯಲಾದೆವು. ಶುಕ್ರವಾರದ ದಿನ ಬೆಳಗ್ಯೆ ೫|| ಘಂಟಗೆ ಸರಿಯಾಗಿ ಖೈದಿಗಳು, ಭೋಜನಾನಂತರ ಉರಿಮರದ ಬಳಿಗೆ ಮೃದುವಾಗಿ ನಡೆದುಬಂದರು. ಆಗ ಸೂಪರಿಂಟೆಂಡೆಂಟರವರು, ಖೈದಿಗಳನ್ನು ಕುರಿತು ನೀವು ತಿಳಿಸಬೇಕಾದದ್ದೇನಾದರೂ ಇದ್ದರೆ ಧಾರಾಳವಾಗಿ ಹೇಳಬಹುದೆನಲು ಆಗ ಅವರಿಬ್ಬರೂ, ತಮ್ಮ ಮುದ್ರೆಯನ್ನು ವಾರಸುದಾರರಿಗೆ ಕೊಟ್ಟುಬಿಡುವಂತೆ ಕೇಳಿಕೊಂಡರು ಆಖೈರ ತನಕ ತಾವು ನಿರಪರಾಧಿಗಳೆಂತಲೂ ಖೂನಿಯ ವಿಷಯದಲ್ಲಿ ತಾವು ಸ್ವಲ್ಪವೂ ಸಂಬಂಧಿಸಲಿಲ್ಲವೆಂತಲೂ ವಾದಿಸಿದರು. ಉರಿಮರದ ಬಳಿಗೆ ಕರೆದುಕೊಂಡು ಹೋದಾಗ ಅವರಿಬ್ಬರೂ ಅತಿವೇಗದೊಡನೆ ವಧಾಸ್ಥಾನವು ಹತ್ತಿನಿಂತುಕೊಂಡರು. ಪರಂತು ಪೂರ್ವಭಾವಿಯಾಗಿ ಮಾಡುವ ಬಂಧನಾದಿ ಕ್ರಿಯೆಗಳಂ ಮಾಡುವಾಗ್ಯೆ ಮಾತ್ರ ಅವರು (ತೆಪ್ಪಾಸು ಗೋವಿಂದರಾಜುಲು) ಬಹಳ ಬೆಯಪಟ್ಟರು. ನೇಣು ಹಾಕಲ್ಪಡಲಿಕ್ಕೆ ಎರಡು ಕ್ಷಣಗಳಗೆ ಮುಂಚಿತವಾಗಿ ಗೋವಿಂದರಾಜಮುದಲಿಯು ಘಟ್ಟಿಯಾಗಿ ಗೋವಿಂದಾ! ನಾರಾಯಣಾ!! ಎಂದು ಭಗವನ್ನಾಮ ಸ್ಮರಣೆಯಂ ಮಾಡಿ ಅಲ್ಲಿದ್ದವರೆಲ್ಲರಿಗೂ ತಿಳಿಯುವಂತೆ ಇಂಗ್ಲೀಷಿನಲ್ಲಿ "ನಿರ್ದೋಷ್ಯನಾಗಿಯೇನಾನುಪ್ರಾಣವಂ "ತೊರೆಯುವೆನು; ನನ್ನನ್ನು ಈ ಸ್ಥಿತಿಗೆ ತಂ "ದವರನ್ನು ಸಹ ಭಗವಂತನು ಶಿಕ್ಷಿಸಲಿ; ಅವ "ರೂ ನನ್ನಂತೆಯೇ ಅನುಭವಿಸಲಿ, ಈಶ್ವರನು "ಪ್ರಸನ್ನನಾಗಿ ಮುಕ್ತಿಯಂ ಕೃಪೆಗೈಯಲಿ, ನ "ಮ್ಮ ಪಾಪವಿಮೋಚನಾರ್ಥ ಭಗವಂತನು ತನ್ನ "ಪುತ್ರನಂ ಈಭೂಲೋಕಕ್ಕೆ ಕಳುಹಿಸಿರುವನು "ಆತನಮೂಲಕ ನನ್ನಪಾಪವನ್ನೆಲ್ಲ ಈಶ್ವರನು ಮನ್ನಿಸಲಿ," ಎಂದು ನುಡಿಯುತಿರುವಾಗಲೇಏಕಕಾಲದಲ್ಲಿ ಇಬ್ಬರೂಉರಿಹಾಕಲ್ಪಡಲು, ಕೂಡಲೇ ಅವರ ಭೂಋಣಾನುಬಂಧವು ನಿವೃತ್ತಿಯಾಯಿತು. ವೆಂಕಟಸ್ವಾಮಿಯಪ್ರಾಣವು ನಿರಾಯಾಸವಾಗಿ ಹೋದಾಗ್ಯೂ ಗೋವಿಂದರಾಜು ಲವಮಾತ್ರ ಕ್ಷಣಕಾಲಸಂಕಟಪಟ್ಟು ಪ್ರಾಣಬಿಟ್ಟನುಬಳಿಕ ಮುರ್ದೆಗಳೆರಡೂಅವರವರ ವಾರಸುದಾರರಿಗೆ ಒಪ್ಪಿಸಲ್ಪಡಲು ಅವರು ಅವು ಗಾಡಿಯಲ್ಲಿ ಸಾಗಿಸಿಕೊಂಡುಹೋಗಿತಮ್ಮ ಜಾತಿಕಟ್ಟಲೆಯಪ್ರಕಾರ ಬಳಿಕ ನಡೆಯಬೇಕಾದ ಕ್ರಿಯೆಗಳನ್ನೆಲ್ಲ ಮಾಡಿದರೆಂದು ತಿಳಿಯಲಾದೆವು.

THE MYSORE REPRESENTATIVE ASSEMBLY,—1886
THE REPRESENTATIVE ASSEMBLY

ಮಾಹೇ ಮಜಕೂರ್ ೯ನೇ ತಾರೀಖ್ ಶನಿವಾರದದಿನ ಮಧ್ಯಾಹ್ನಾತ್ಪರ ಮೈಸೂರಲ್ಲಿ ಸಾಬಕ್ ದಿವಾನ್ ಮೆ|| ರಂಗಾಚಾರ್ಯರವರಹೆಸರಿನಿಂದನೂತನವಾಗಿ ಕಟ್ಟಲ್ಪಟ್ಟಿರುವ ಮೆಮೋರಿಯಲ್ ಹಾಲ್‌ನೊಳು ಈ ಸಂವತ್ಸರದ ಪ್ರಜಾ ಪ್ರತಿನಿಧಿಸಮಾಜವು ಸೇರಿತು. ಈಸಭೆ ನಿರ್ಮಾಣವಾಗಿ ಇದರೊಡನೆ ಆರುಸಂವತ್ಸರಗಳು ಪೂರ್ತಿಯಾದವು. ಪ್ರಕೃತ ಸಭೆಗೆ ಡಿಸ್ಟ್ರಿಕ್ಟು ಜಾತಿನಿಂದ ಎಂಟುಮಂದಿ ಪ್ರತಿನಿಧಿಗಳು ಬಂದಿದ್ದರು.

ಬಂದರೀ ಸಂದರ್ಭದಲ್ಲಿ ಮಾಮೂಲಿಪ್ರಕಾರ ಪ್ರಸ್ತುತ ದಿವಾನರಾದ ಮೆ|| ಶೇಷಾದ್ರಿ ಅಯ್ಯರವರು ಅಗ್ರಾಸನವಂ ವಹಿಸಿದ್ದರು. ಇದಲ್ಲದೆ ಆಕಾಲದಲ್ಲಿ, ಈಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಮೆ|| ಲಯಲ್ ಯವರು, ಚೀಫ್‌ಕೋರ್ಟು ಜಡ್ಜಿಗಳು, ಕೌನ್ಸಿಲರ್‌ಗಳು, ಸೆಕ್ರೆಟರಿಗಳು, ಬೆಂಗಳೂರು, ಮೈಸೂರು, ಶಿವಮೊಗ್ಗ ಡಿ|| ಡೆಪ್ಯುಟೀ ಕಮಿಷನರ್‌ಗಳು, ಕಂಟ್ರೋಲರ್, ಅಷ್ಟಗ್ರಾಮ ಮತ್ತು ನಗರಡಿವಿಜನ್ ಸೆಷನ್‌ಜಡ್ಜಿಗಳು, ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್, ಮುಂತಾದ ಬಹುಮಂದಿ ಯೂರೋಪಿಯನ್ ಮತ್ತು ನೇಟಿವ್‌ಆಫಿಸರ್‌ಗಳೂ ಇತರರುಸಹಹಾಜರಿದ್ದರು. ದಿವಾನರವರು ಅಧ್ಯಕ್ಷಾಪ್ರಸಂಗಕ್ಕೆ ಮುಂಚಿತವಾಗಿ ಪೂರ್ವಕಥಾ ವೃತ್ತಾಂತವನ್ನು ತಿಳಿಸಲಾರಂಭಿಸಿಅವರುಗತಸಂವತ್ಸರದಲ್ಲಿ ನಡೆಸಿದ ಆಡಳಿತಕ್ರಮವನ್ನೂ ಮುಂದೆ ಮಾಡಲುದ್ದೇಶಿಸಿರುವ ಏರ್ಪಾಡುಗಳನ್ನೂ ಸಂಸ್ಥಾನದ ಒಟ್ಟು ಆದಾಯವ್ಯಯಗಳ ತಪಸೀಲನ್ನೂ ವಿಸ್ತಾರವಾಗಿ ತಿಳಿಸಿದರು. ಅಡ್ರೆಸ ಓದಲ್ಪಟ್ಟ ತರುವಾಯ ದಿವಾನರವರ ಅಪೇಕ್ಷೆಯ ಪ್ರಕಾರ ಅವರ ಅಂಡರ್ ಸೆಕ್ರೆಟರಿಯಾದ ಮೆ|| ಕೃಷ್ಣಯ್ಯನವರು ಅದನ್ನು [illegible]ದ ಇಂಗ್ಲೀಷುಬಾರದ ಪ್ರತಿನಿಧಿಗಳಿಗೆ ಓದಿ ತಿಳಿಸಿದರು. ಪ್ರಥಮದಿನ ಸಂರಂಭವು ಈರೀತಿ ಪೂರೈಸಿದ ಬಳಿಕ ಪ್ರತಿನಿಧಿಗಳನ್ನು ಮಾರನೆಯ ದಿನ ಬರುವಂತೆ ಆಜ್ಞಾಪಿಸಿದರು. ದಿವಾನರವರ ಅಡ್ರೆಸ್ಸನ್ನು ಈ ಪತ್ರಿಕೆಯನ್ನು ಓದತಕ್ಕವರ ತಿಳುವಳಿಕೆ ಬಗ್ಗೆ ಕ್ರಮವಾಗಿ ಇವಡಿ ಪ್ರಕಟಿಸುತ್ತೇವೆ.

ಶ್ರೀಮನ್ಮಹಾರಾಜ ರಾಜಾಸಾಹೆಬ ಬಹದೂರರವರ ಆಜ್ಞಾನುಸಾರ ಕಳೆದ ಸಂವತ್ಸರದ ರಾಜ್ಯಭಾರದ ಆಡಳಿತಗಳ ಮುಖ್ಯಾಂಶಗಳನ್ನು ಈ ದಿವಸ ತಮಗೆ ಶ್ರುತಪಡಿಸತಕ್ಕದ್ದು ನಮಗೆ ಸಂತೋಷಕರವಾದ ಕೆಲಸವಾಗಿರುತ್ತೆ.

ಈ ಸಂವತ್ಸರದಲ್ಲಿ ಮಳೆ ಬೆಳೆ ಸರಿಯಾಗಿ ನಡೆದು ಕಾಲಸ್ಥಿತಿಯು ಅನುಕೂಲವಾಗಿರುವದರಿಂದ ಶ್ರೀಮನ್ಮಹಾರಾಜಾ ಸರ್ಕಾರದವರಿಗೆ ಯೋಚನೆಗೆ ಕಾರಣವಿಲ್ಲದೆ ಹಾಗೆ ಇದೆ ಯೆಂಬ ಶುಭ ಸಮಾಚಾರವನ್ನು ತಮಗೆ ತಿಳಿಸುವದರಲ್ಲಿ ನಮಗೆ ವಿಶೇಷ ತೃಪ್ತಿ ಉಂಟಾಗಿದೆ. ಈ ಸಭೆಯು ಸೇರಿದ ಪ್ರತಿ ಸಂವತ್ಸರದಲ್ಲೂ ಮಳೆಯು ಸರಿಯಾಗಿ ನಡೆಯಲಿಲ್ಲವೆಂದು ಹೇಳಬೇಕಾದ ಸಂಭವವು ಇರುತ್ತಲೇ ಇತ್ತು. ಕಳೆದ ಸಂವತ್ಸರದಲ್ಲಿಯೂ ಕೂಡ ಅದರ ಹಿಂದಣ ಎರಡು ಸಾಲ್‌ಗಳ ಲಾಗಾಯತು ಸಾಕಾದಷ್ಟು ಮಳೆಯು ನಡೆಸದ ಯೋದ್ಧಾರ ದೆಸೆಯಿಂದ ವಿಶೇಷವಾದ ಕಷ್ಟವು ಪ್ರಾಪ್ತವಾಗಬಹುದೆಂಬ ಯೋಚನೆಗೆ ಆಸ್ಪದವಾಗಿತ್ತೆಂದು ಕಳೆದವರುಷದ ಸಭೆಯಕಾಲದಲ್ಲಿ ವಿವರವಾಗಿ ತಿಳಿಸಿದ್ದೆವಷ್ಟೆ. ಆದರೆ ಹೋದವರುಷ ಸಭೆ ಸೇರಿದ್ದಕಾಲದಲ್ಲಿ ಅನುಕೂಲವಾದ ಹಿಂಗಾರು ಮಳೆಯುಪ್ರಾರಂಭವಾಗಿ ಮೇಲೆ ಕಂಡ ಯೋಚನೆಯು ಪರಿಹಾರವಾಯಿತು. ನಂತರ ಅಕ್ಟೋಬರ್ ಮತ್ತು ಅದರ ಈಚಿನ ತಿಂಗಳುಗಳಲ್ಲಿ ಸಕಾಲಗಳಲ್ಲಿ ವಿಶೇಷವಾದ ಮಳೆಯು ನಡೆದು ಸೀಮೆಯ ಯೆಲ್ಲಾ ಭಾಗಗಳಲ್ಲಿಯೂ ಸಾಧಾರಣವಾಗಿ ಬೆಳೆಯಾದ್ದರಿಂದ ಕಳೆದ ಸಂವತ್ಸರವು ವ್ಯವಸಾಯವಿಷಯದಲ್ಲಿ ಸಾಮಾನ್ಯವಾಗಿ ಅನುಕೂಲವಾದದ್ದಾಗಿ ಇತ್ತು. ಈ ವರುಷದ ಕಾಲಸ್ಥಿತಿಯು ಇದುವರಿವಿಗೆ ವಿಶೇಷವಾಗಿ ಅನುಕೂಲವಾಗಿಯೇ ಇದೆ. ಉತ್ತರ ಮತ್ತು ಈಶಾನ್ಯ ದಿಕ್ಕುಗಳಲ್ಲಿ ಇರತಕ್ಕ ಬೆದ್ದಲು ಡಿಸ್ಟ್ರಿಕ್ಟುಗಳಲ್ಲಿ ಕಳೆದ ತಿಂಗಳವರಿಗೆ ಹೋದ ವರುಷದ ಇದೇಕಾಲದಲ್ಲಿ ಆದ ಮಳೆಯ ಎರಡರಷ್ಟು ಮಳೆಯು ಈವರುಷವೂ ನಡೆದು ಸೀಮೆಯಲ್ಲಿರತಕ್ಕ ಮುಖ್ಯವಾದ ಯೆಲ್ಲಾ ಕೆರೆಗಳೂ ತುಂಬಿ ಇವೆ, ಅಥವಾ ತುಂಬುತಲಿವೆ. ಆದ್ದರಿಂದ ಈ ಸಂವತ್ಸರವು ಏನುಚ ವಿಶೇಷವಾಗಿಸುಖಕರವಾಗಿರಬಹುದೆಂದು ಸೂಚನೆಗಳು ತೋರುತ್ತವೆ.

ಕಳೆದ ಸಂವತ್ಸರ ಜಮಾಖರ್ಚುತಪಸೀಲನ್ನು ಬಾಬವಾರಾಗಿ ಈಗ ತಮಗೆ ಶ್ರುತಪಡಿಸುವೆವು. ಅದರಲ್ಲಿ ಸೇರದೆ ಇರುವ ರೈಲ್ವೆ ಇಲಾಖೆ ಆಡಳಿತಗಳನ್ನು ಪ್ರತ್ಯೇಕವಾಗಿ ತಿಳಿಸುತ್ತೇವೆ.

ಜಮಾ ಬಾಬು.

	1884—85 ರೂ	1885—86 ರೂ
ಲ್ಯಾಂಡ್‌ರೆವಿನ್ಯೂ ಯಾನೆ ಜಮೀನ್‌ಬಾಬ್...	66,83,886	76,41,241
ಆಬ್ಕಾರಿ ..	11,79,625	11,68,722
ಫಾರೆಸ್ಟ್ ..	6,57,564	8,83,098
ಸ್ಟ್ಯಾಂಪ್ ...	4,42,791	4,80,479
ಸಾಯರ್ ...	3,40,699	3,91,139
ಮೊಹತರ್ಫಾ	2,65,102	2,94,927
ಲಾ ಅಂಡ್ ಜಸ್ಟಿಸ್ ಯಾನೆ ಜುಡಿಷಲ್‌ಮತ್ತು ಜೈಲ್‌ಗಳು	69,490	63,970
ಅಂಚೆ ...	61,607	65,303
ರಿಜಿಸ್ಟ್ರೇಷನ್	44,339	50,459
ಅಮೃತಮಹಲ್	34,124	68,464
ವಿದ್ಯಾಭ್ಯಾಸದ ಇಲಾಖೆ	32,348	24,322
ಉಪ್ಪಿನಮೋಕ್ತೆ	24,464	21,623
ಪಬ್ಲಿಕ್‌ವರ್ಕ್ಸ್ ಯಾನೆ ಮರಮ್ಮತ್‌ಬಾಬ್ .	9,296	13,854
ಚಲಾವಣಿ ತಪ್ಪಿದನಾಣ್ಯಗಳ ಕಿಮ್ಮತ್ತು	3,103	2,936
ಚಿಲ್ಲರೆ ಬಾಬುಗಳು	2,22,237	2,60,216
ಜುಮ್ಲಾ	1,00,70,975	1,14,30,754

ಖರ್ಚುಬಾಬ್.

A

	1884—85 ರೂ	1885—86 ರೂ
ಸಬ್ಸಿಡಿ ಯಾನೆ ಪಗದಿ	24,50,000	24,50,000
ಅರಮನೆಖರ್ಚು	10,00,000	10,00,000
ಸರ್ಕಾರೀ [illegible]	5,17,531	4,94,793
ಪೊಲಿಟಿಕಲ್ ಪೆನ್ಷನ್‌ಗಳು ಮತ್ತು ಜಹಗೀರಿಗೆ ಬದಲಾಗಿ ಕೊಡುವ ಅಲೋವನ್ಸ್	1,04,048	1,02,637
[illegible]	7,56,939	7,35,100
ಜುಮ್ಲಾ	48,28,518	47,82,523

B

	1884—85 ರೂ	1885—86 ರೂ
ಹುಜೂರಾಫೀಸುಖರ್ಚು	2,04,097	2,01,119
ವಸೂಲಾತಿ ಖರ್ಚುಬಾಬುಗಳು—		
ಡಿಪ್ಯುಟೀಕಮಿಷನರ್‌ಗಳು ಮತ್ತು ಅವರ ಸಿಬ್ಬಂದಿ	1,35,190	1,40,270
ಅಸಿಸ್ಟೆಂಟ್‌ಕಮಿಷನರ್‌ಗಳು ಮತ್ತು ಅವರ ಸಿಬ್ಬಂದಿ	53,761	58,134
ತಾಲ್ಲೂಕ್‌ಜಾತ್‌ಸಿಬ್ಬಂದಿ	3,15,917	3,13,316
ರೆವಿನ್ಯೂ ಸರ್ವೆ ಇಲಾಖೆ	2,38,918	2,31,026
ಇನಾಂ ಇಲಾಖೆ	7,985	8,265
ಗ್ರಾಮ ನೌಕರರ ತಲಬ್	2,87,724	2,32,315
ಇತರ ಬಾಬ್‌ಗಳು	32,452	20,452
ಆಬ್ಕಾರಿ	18,300	15,576
ಫಾರೆಸ್ಟ್	2,48,028	2,26 070
ಸ್ಟ್ಯಾಂಪ್	18,103	15,524
ಸಾಯರ್	14,505	13,632
ಖಾಜಿಲ್‌ವಾರ್ ಮತ್ತು [illegible]	53,473	60,516
ಅಮೃತಮಹಲ್ ಇಲಾಖೆ	32,104	36,421
ಟ್ರಿಗ್ನಾಮೆಟ್ರಿಕಲ್‌ಸರ್ವೆ	80,483	65,391
ಜುಮ್ಲಾ	17,41,040	16,41,025

C

	1884—85 ರೂ	1885—86 ರೂ
ಲಾ ಅಂಡ್ ಜಸ್ಟಿಸ್ ಯಾನೆ ಜುಡಿಷಲ್‌ಬಾಬ್‌ಮತ್ತು ಜೈಲ್‌ಗಳು	7,58,883	7,38,016
ಪೋಲೀಸ್	4,88,665	5,08,606
ವಿದ್ಯಾಭ್ಯಾಸದ ಇಲಾಖಾ	1,45,130	1,56,429
ಮುಜರಾಯಿ	2,80,955	2,96,819
ಮೆಡಿಕಲ್ ಇಲಾಖಾ	1,32,994	1,47,945
ಪೆನ್ಷನ್‌ಮತ್ತು ಗ್ರಾಚ್ಯುಇಟಿ	2,70,964	2,56,561
ಪಬ್ಲಿಕ್‌ವರ್ಕ್ಸ್ ಯಾನೆ ಮರಮ್ಮತ್‌ಬಾಬ್...	8,93,687	11,32,299
ಅಂಚೆ	1,26,660	1,27,755
ರಿಜಿಸ್ಟ್ರೇಷನ್	25,972	26,672
ಚಿಲ್ಲರೆ ಇಲಾಖೆಗಳು	17,666	19,123
ಬ್ರಿಟಿಷ್ ಆಫೀಸರರ ಫರ್ಲೋ ಅಲೋವನ್ಸ್, ಗ್ರಾಚ್ಯುಯಿಟಿ, ಎಕ್ಸ್‌ಚೇಂಜ್, ಲೀವ್ ಮತ್ತು ಪೆನ್ಷನ್‌ಸಂಬಂಧವಾದ ಖರ್ಚುಗಳು.	65,621	42,590
ಚಿಲ್ಲರೆ ಬಾಬ್‌ಗಳು	1,78,846	2,41,594
ಜುಮ್ಲಾ	33,86,043	36,93,409
ಒಟ್ಟುಜುಮ್ಲಾ	99,55,601	1,01,16,957

ಮೇಲೆ ನಮೂದಾದ ಜಮಾ ಖರ್ಚಿನ ತಖ್ತೆಯಿಂದ ೧೮೮೪—೧೮೮೫ನೇ ಇಸವಿಯಲ್ಲಿ ಒಟ್ಟು ಜಮಾ ೧,೦೦,೭೦,೯೭೫ ರೂಪಾಯಿ. ಒಟ್ಟು ಖರ್ಚು ೯೯,೫೫,೬೦೧ ರೂಪಾಯಿ ಆಗಿ ೧೮೮೫—೮೬ನೇ ಇಸವಿಯ ನಗದಿ ಹುಟ್ಟುವಳಿಯು ೧೧೪,೩೦,೭೫೪ ರೂಪಾಯಿ. ಒಟ್ಟುಖರ್ಚು ೧,೦೧,೧೬,೯೫೭ ರೂಪಾಯಿಆಗಿದೆ ಯೆಂಬುವದು ವ್ಯಕ್ತವಾಗುತ್ತೆ.

ಜಮಾ ಬಾಬಿನ ತಖ್ತೆಯಲ್ಲಿ ಜಮೀನ್ ಬಾಬಿನಲ್ಲಿ ವಿಶೇಷವಾಗಿ ೯½ ಲಕ್ಷ ರೂಪಾಯಿಗಳವರಿಗೂ ಜಾಸ್ತಿಯಾಗಿರುವದೇ ಮುಖ್ಯಾಂಶವಾಗಿರುತ್ತೆ. ಈ ಮೊಬಲಗಿನಲ್ಲಿ ೧೮೮೪—೮೫ನೇ ಇಸವಿ ಜಮಾಬಂದಿ ಮೊಬಲಗುಪೈಕಿ ಆ ವರುಷದಲ್ಲಿ ವಸೂಲಾಗದೆ ಬಾಕಿ ನಿಂತಿದ್ದು ಸಾಲ್ ಮಜಕೂರಿನಲ್ಲಿ ವಸೂಲಾದ ೩|| ಲಕ್ಷ ರೂಪಾಯಿಯು ಸೇರಿದೆ. ೧೮೮೪—೮೫ನೇ ಇಸವಿಯಲ್ಲಿ ಕಾಲಕಾಲದಲ್ಲಿ ಮಳೆ ನಡೆಸದೆ ಇದ್ದ ಸಬಬು ೫½ಲಕ್ಷ ರೂಪಾಯಿಗಳವರಿಗೂ ರಿವಿಷನ್ ಯಾನೆ ಮುಜರೆಯನ್ನೂ, ವಸೂಲ್‌ಬಗ್ಗೆ ವ್ಯವಧಾನವನ್ನೂ ಕೊಡಬೇಕಾದ ಆವಶ್ಯಕವಾಯಿತು. ೧೮೮೪—೮೫ನೇ ಇಸವಿಯಲ್ಲಿ ಪಾಯಿದೆಕೊಟ್ಟು ನಿಂತಿದ್ದಬಾಬತು ಸುಮಾರು ೩|| ಲಕ್ಷ ರೂಪಾಯಿಗಳು ವಜಾ ಜಾತಾ ೧೮೮೫—೮೬ನೇ ಇಸವಿ ಬಾಬತಿನ ಏಕ್ ವಸೂಲಿಯು ೭೩ಲಕ್ಷ ರೂಪಾಯಿಗಳಾಗುತ್ತೆ. ಜಮೀನ್ ಬಾಬಿನಲ್ಲಿ ಈ ಮೊಬಲಗಿಗಿಂತ ಜಾಸ್ತಿಯಾಗಿ ಯಾವಾಗಲೂ ಹುಟ್ಟುವಳಿ ಆಗಿರಲಿಲ್ಲವು.

ಕಳೆದ ೫೦ ವರುಷಗಳಾರಭ್ಯ, ಮುಖ್ಯವಾದ ಈ ಜಮೀನ್‌ಬಾಬಿನ ಹುಟ್ಟುವಳಿಯನ್ನು ನೋಡುವಲ್ಲಿ ಮೊದಲು ೧೦ ವರುಷಗಳಲ್ಲಿ ಸರಾಸರಿ ೫೦| ಲಕ್ಷ ರೂಪಾಯಿ, ಎರಡನೇ ೧೦ ವರುಷಗಳಲ್ಲಿ ೫೩ಲಕ್ಷ ರೂಪಾಯಿ, ಮೂರನೇ ೧೦ವರುಷಗಳಲ್ಲಿ ೬೭| ಲಕ್ಷ ರೂಪಾಯಿ, ನಾಲ್ಕನೇ ೧೦ವರುಷಗಳಲ್ಲಿ ೭೦| ಲಕ್ಷ ರೂಪಾಯಿ, ಈ ಮೇರೆ ಕ್ರಮೇಣ ಜಾಸ್ತಿಯಾಗುತ್ತಾಬಂದು ನಂತರ ೧೮೭೬ನೇ ಇಸವಿ ಲಾಗಾಯತು ೧೮೭೮ನೇ ಇಸವಿ ವರಿಗೆ ಪ್ರಾಪ್ತವಾಗಿದ್ದ ಕ್ರೂರತರವಾದ ಕ್ಷಾಮದ್ದೆಸೆಯಿಂದ ಹುಟ್ಟುವಳಿಯು ವಿಶೇಷವಾಗಿ ಕಮ್ಮಿ ಆದಹಾಗೆ ತಿಳಿಯಬರುತ್ತೆ. ಆದರೆ ಕಳೆದ ೫ ವರುಷಗಳಾರಭ್ಯ ಕ್ರಮೇಣ ಜಾಸ್ತಿಯಾಗುತ್ತಾ ಬಂದು ಪೂರ್ವದ ಸ್ಥಿತಿಗೆ ಬಂದಿದೆ. ೧೮೮೩—೮೪ನೇ ಇಸವಿಯಲ್ಲಿಯೂ ೧೮೮೪-೮೫ನೇ ಇಸವಿಯಲ್ಲಿಯೂ ಜಮೀನ್‌ಬಾಬಿನ ಹುಟ್ಟುವಳಿಯು ಕ್ಷಾಮಕ್ಕೆ ಪೂರ್ವ ಇದ್ದಮೇರೆ ಅಂದರೆ ೭೩ಲಕ್ಷ ರೂಪಾಯಿಗಳಾಗಿತ್ತು. ಮತ್ತು ೧೮೮೪—೮೫ನೇ ಇಸವಿಯಲ್ಲಿ ಕೂಡ ಮೇಲೆ ನಮೂದಿಸಿರುವ ಕಾರಣಗಳಿಂದ ಏಕ್ ವಸೂಲಿಯು ಬಹಳ ಕಮ್ಮಿಯಾದಾಗ್ಯೂ ಜಮಾಬಂದಿ ಮೊಬಲಗೇನೋ ಸ್ವಲ್ಪ ಹೆಚ್ಚು ಕಡಮೆ ೭೩ಲಕ್ಷ ರೂಪಾಯಿಗಳಾಗಿಯೇ ಇತ್ತು. ಈ ಕಾರಣಗಳಿಂದ ೧೮೭೬—೭೮ನೇ ಇಸವಿಗಳ ಕ್ಷಾಮಕ್ಕೆ ಪೂರ್ವ ಸಾಗುವಳಿಯಲ್ಲಿ ಇದ್ದಷ್ಟು ಜಮೀನ್ ಈಗಲೂ ಸಾಗುವಳಿಯಲ್ಲಿ ಇರುವಂತೆ ಊಹಿಸಬಹುದಾದ್ದರಿಂದ ಆ ಕ್ಷಾಮದ್ದೆಸೆಯಿಂದ ಉಂಟಾದ ಕೇಡುಗಳು ನಿವರ್ತಿಯಾಗಿ ಜಮೀನ್‌ಬಾಬಿನ ಹುಟ್ಟುವಳಿಯು ಪೂರ್ವದ ಸ್ಥಿತಿಗೆ ಬಂದಿದೆ ಯೆಂದು ಹೇಳಬಹುದು.

ಫಾರೆಸ್ಟು ಬಾಬಿನಲ್ಲಿ ೧೮೮೪—೮೫ನೇ ಇಸವಿಯಲ್ಲಿ ಸಂದರ್‌ಗೆ ವಿಶೇಷವಾಗಿ ಗಿರಾಕಿ ಇಲ್ಲದೆಯಿತ್ತು. ೧೮೮೫-೮೬ನೇ ಇಸವಿಯಲ್ಲಿ ದಾರಣೆ ಸರಿಯಾಗಿ ದೊರತದ್ದರಿಂದ ವಿಶೇಷವಾಗಿಯೂ ರೈಲ್ ಇಲಾಖೆಗೆ ಸ್ಲೀಪರ್‌ಗಳನ್ನು ಸರಬರಾಯಿ ಮಾಡಿದ್ದರಿಂದಲೂ ಜಾಸ್ತಿಹುಟ್ಟುವಳಿಯಾಯಿತು.

ಕಾಲಸ್ಥಿತಿಯು ಅನುಕೂಲವಾಗಿ ಇದ್ದದರಿಂದುಂಟಾದ ಸುಭಿಕ್ಷದ್ದೆಸೆಯಿಂದ ಇತರಎಲ್ಲಾ ಬಾಬುಗಳಲ್ಲಿಯೂ ಸಾಮಾನ್ಯತಃ ಜಾಸ್ತಿ ಕಂಡುಬಂದಿರುತ್ತೆ.

೧೮೮೫—೮೬ನೇಇಸವಿಯಲ್ಲಿ ಒಟ್ಟುಖರ್ಚು ೧,೦೧,೧೬,೯೫೭ ರೂಪಾಯಿಗಳು, ಅಂದರೆ ಹಿಂದಣ ವರುಷದ ಖರ್ಚಿಗಿಂತ ೧,೬೧,೩೫೬ ರೂಪಾಯಿಗಳು ಜಾಸ್ತಿಯಾಗಿದೆ. ಪಬ್ಲಿಕ್ ವರ್ಕ್ಸ ಯಾನೆ ಮರಮ್ಮತ್ ಇಲಾಖೆಗೆ ವರುಷಂಪ್ರತಿಯಲ್ಲಿಯೂ ಕೊಡುತಲಿದ್ದ ಮೊಬಲಗು ೯½ ಲಕ್ಷ ರೂಪಾಯಿಗಳಾಗಿಇದ್ದದ್ದನ್ನು ಹೋದಸಂವತ್ಸರದಲ್ಲಿ ತಮಿಗೆ ಶ್ರುತಪಡಿಸಿದಕಾರಣಗಳಿಂದ ನೀರಾವರಿ ಕಾಮಗಾರಿಗಳ ಅಭಿವೃದ್ಧಿಗೋಸ್ಕರ ೧½ ಲಕ್ಷರೂಪಾಯಿಗಳವರಿಗೂ ಜಾಸ್ತಿಮಾಡಿದ ಸಬಬು ಈಇಲಾಖೆ ಖರ್ಚಿನಲ್ಲಿಯೇ ೨,೩೮,೬೧೨ ರೂಪಾಯಿಗಳು ಜಾಸ್ತಿ ಯಾಗುವದಕ್ಕೆ ಕಾರಣವಾಯಿತು.

ಒಟ್ಟು ಹುಟ್ಟುವಳಿ ಮೊಬಲಗಿನಲ್ಲಿ ಮೇಲ್ಕಂಡ ಒಟ್ಟು ಖರ್ಚು ಮೊಬಲಗನ್ನು ವಜಾಮಾಡಿದಲ್ಲಿ ೧೩,೧೩,೭೯೭ ರೂಪಾಯಿಗಳು ನಿವಳಶಿಲ್ಕು ನಿಂತಿತು. ಇದರಲ್ಲಿ ಹಿಂದಣ ಸಂವತ್ಸರಗಳ ಎಲ್ಲಾಬಾಬುಗಳ ಬಾಕಿಗಾಗಿ ವಸೂಲಾದಬಗೆ ೪|| ಲಕ್ಷರೂಪಾಯಿಗಳವರಿಗೂ ಸೇರಿಯಿರುತ್ತೆ.

ಈಗ ನಡೆಯುವ ೧೮೮೬—೮೭ನೇ ವರುಷದ ಜಮಾಖರ್ಚು ಬಡ್‌ಜಟ್ ಅಂದಾಜನ್ನು ಹಿಂದಣ ಎರಡುವರುಷಗಳ ಏಕ್ ಜಮಾಖರ್ಚಿನ ಆಧಾರದಮೇಲೆ ತಯಾರ್ಮಾಡಿರುತ್ತೆ. ೧೮೮೫—೮೬ನೇ ಇಸವಿಯಲ್ಲಿ ಒಟ್ಟು ಖರ್ಚು ೧,೦೧,೧೭,೦೦೦ ರೂಪಾಯಿಗಳು ಆಗಿದ್ದಾಗ್ಯೂ ಸಾಲ್ ಮಜಕೂರಿಗೆ ೧,೧೦,೫೮,೦೦೦ ರೂಪಾಯಿಗಳನ್ನು ದಾಖಲ್ಮಾಡಿಯಿರುತ್ತೆ. ಈ ಮೇರೆ ೯,೪೧,೦೦೦ ರೂಪಾಯಿಗಳವರಿಗೂ ಜಾಸ್ತಿಯಾಗಿ ದಾಖಲ್ಮಾಡಿರುವದಕ್ಕೆ ಕಾರಣವೇನಂದರೆ.—

ಶ್ರೀಮನ್ಮಹಾರಾಜ ರಾಜಾಸಾಹೆಬ ಬಹದೂರರವರಿಗೆ ರಾಜ್ಯ ಸುಪುರ್ದಾಗುವವೇಳೆ ಮಾಡಲ್ಪಟ್ಟ ಏರ್ಪಾಟಿನಪ್ರಕಾರ ಅರಮನೆಇಲಾಖೆ ಖರ್ಚಿನಬಗ್ಗೆ ೩ಲಕ್ಷರೂಪಾಯಿ ಜಾಸ್ತಿ ಮಾಡಬೇಕಾಯಿತು. ೧೮೮೧ನೇ ಇಸವಿಯಲ್ಲಿ ಮೌಕೂಫ್ ಮಾಡಲ್ಪಟ್ಟಿದ್ದ ಡಿಸ್ಟ್ರಿಕ್ಟು ಮತ್ತು ತಾಲ್ಲೂಕುಗಳನ್ನು ಈಚೆಗೆ ಯಥಾಪ್ರಕಾರ ಬಹಲಿಮಾಡಿದ್ದರಿಂದ ರೆವಿನ್ಯೂ ಲವಾಜಮೆ ಖರ್ಚಿನಲ್ಲಿ ೪ಲಕ್ಷರೂಪಾಯಿ ಜಾಸ್ತಿಯಾಯಿತು. ಶಿವಾಯಿ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರನ್ನೂ ಹೊಸದಾಗಿ ಏರ್ಪಾಟಾದ ಎರಡು ಡಿಸ್ಟ್ರಿಕ್ಟುಗಳಿಗೆ ಪೊಲೀಸ್ ಅಸಿಸ್ಟೆಂಟರುಗಳನ್ನೂ ಮೈಸೂರುಶಹರನಲ್ಲಿ ಮೌಕೂಫಾಗಿಯಿದ್ದ ಸಬ್‌ಜಡ್ಜ್‌ಕೋರ್ಟನ್ನೂ ಪುನಃ ಮೊಕರರ್ ಮಾಡಿದ್ದರಿಂದ ಸುಮಾರು ೩೬,೦೦೦ ರೂಪಾಯಿಗಳವರಿಗೂ ಜಾಸ್ತಿಖರ್ಚಿಗೆ ಅವಕಾಶವಾಯಿತು. ಇದಲ್ಲದೆ ಈಚೆಗೆ ಸರ್ವೆ ಸೆಟಲ್‌ಮೆಂಟಾದ ಕೆಲವು ತಾಲ್ಲೂಕುಗಳಲ್ಲಿ ಅಮಾನತ್ತಿನಲ್ಲಿ ಇರಿಸಿಯಿದ್ದ ಗ್ರಾಮನೌಕರರ ತಲಬನ್ನು ಈಗಿನ ಏರ್ಪಾಡು ಬದಲಾಯಿಸುವವರಿಗೂ ಸಂಪೂರ್ತಿಯಾಗಿ ಕೊಡಬೇಕಾಗಿ ಬಂದದ್ದರಿಂದ ಈಬಾಬಿನಲ್ಲಿ ೧,೮೬,೦೦೦ ರೂಪಾಯಿಗಳು ಜಾಸ್ತಿಖರ್ಚುದಾಖಲಾಯಿತು.

ಫಾರೆಸ್ಟು ಬಾಬಿನಲ್ಲಿ ಕತ್ತರಿಸೋಣ ಮತ್ತು ಹೊಸದಾಗಿ ಸಸಿಗಳನ್ನು ನಾಟೋಣ ಈ ಕೆಲಸಗಳನ್ನು ವಿಶೇಷವಾಗಿ ನಡೆಸಬೇಕೆಂದು ನಿಶ್ಚೈಸಿರುವದ್ದರಿಂದ ೧,೧೬,೦೦೦ ರೂಪಾಯಿಗಳ ಜಾಸ್ತಿ ಖರ್ಚಾಗಬಹುದಾಗಿ ನಿರೀಕ್ಷಿಸಲ್ಪಟ್ಟಿದೆ. (ಮಿಂಟ್) ಯಾನೆ ಟಂಕಸಾಲೆಯೆಂಬ ಬಾಬನ್ನಿ ನಮಿಗೆ ಬೇಕಾಗುವ ಬೆಳ್ಳಿ ಮತ್ತು ತಾಂಬ್ರದ ಚಿಲ್ಲರೆ ನಾಣ್ಯಗಳನ್ನು ಬ್ರಿಟಿಷ್ ಗವರ್ನ್ಮೆಂಟವರಿಂದ ತರಿಸಿಕೊಳ್ಳುವಬಗ್ಗೆ ಕೊಡಲ್ಪಡುವ ರೂಪಾಯಿಗಳನ್ನು ಖರ್ಚು ಬಾಬಿನಲ್ಲಿಯೂ ಅವಕ್ಕೆ ಪ್ರತಿಯಾಗಿ ಬರುವ ನಾಣ್ಯದ ಮೊಬಲಗನ್ನು ಜಮಾ ಬಾಬಿನಲ್ಲಿಯೂ ತೋರಿಸಿರುವದು ನಾಮಮಾತ್ರವಾದ ಜಮಾ ಖರ್ಚಾಗಿರುತ್ತೆ.

ಪಬ್ಲಿಕ್ ವರ್ಕ್ಸ ಇಲಾಖೆ ಖರ್ಚಿನಬಗ್ಗೆ ಸಾಲೀಯಾನಾ ಕೊಡತಕ್ಕ ಮೊಬಲಗನ್ನು ಹಿಂದಣ ವರುಷದಂತೆ ಈ ಸಂವತ್ಸರದಲ್ಲಿಯೂ ೧೨ಲಕ್ಷ ರೂಪಾಯಿಗಳಾಗಿ ಮೊಕರರ್‌ಮಾಡಿರುವದರಿಂದ ಆ ವರುಷದ ಏಕ್ ಖರ್ಚು ಅಂದರೆ ೧೧,೩೨,೦೦೦ ರೂಪಾಯಿಗಳಿಗಿಂತಲೂ ೬೮,೦೦೦ ರೂಪಾಯಿಗಳು ಜಾಸ್ತಿಯಾಗಿ ಕಂಡಿರುತ್ತೆ. ಶಿವಾಯಿ ಮೈಸೂರು ಶಹರದ ಪಾಕೀಜಾಗೋಸ್ಕರ ೬೦,೦೦೦ ರೂಪಾಯಿಗಳವರಿಗೂ ಕೊಟ್ಟಿರುತ್ತೆ. ಮೇಲೆ ನಮೂದಾದ ಮುಖ್ಯವಾದ ಬಾಬುಗಳಲ್ಲಿ ಈ ಸಂವತ್ಸರಕ್ಕೆ ಜಾಸ್ತಿ ಖರ್ಚು ದಾಖಲಾದ ಸಬಬ್ ೯ಲಕ್ಷ ರೂಪಾಯಿಗಳಮೇಲೆ ಜಾಸ್ತಿ ಖರ್ಚಾಗುವದಕ್ಕೆ ಕಾರಣಗಳಾಗಿವೆ. ಬಡ್ಜಟ್ಟಿನ ಅಂದಾಜ್ ಲೆಕ್ಕವು ಮಂಜೂರಾದ ಲವಾಜಮೆ ಪಟ್ಟಿಗಳ ಪ್ರಕಾರ ತಯಾರ್ಮಾಡಲ್ಪಟ್ಟಿರುತ್ತೆ. ಆದರೆ ಕಾರ್ಯತಃ ಖರ್ಚು ಆಗುವದರಲ್ಲಿ ೧|| ಲಕ್ಷ ರೂಪಾಯಿಗಳವರಿಗೂ ಸವಾವತಿಯಾಗಿ ಉಳಿಯಬಹುದು.

TELEGRAPHIC SUMMARY.

ತಂತಿವರ್ತಮಾನ ಸಂಗ್ರಹವು.

ವೈಯನಾ, ೧೫ನೇ ಅಕ್ಟೋಬರ್.—ಅರಾಜಕತ್ವವನ್ನು ಕೋರುವ ಜನಗಳ ಸಂಘಗಳು ಕೆಂಡು ಹಿಡಿಯಲ್ಪಟ್ಟವು. ವೈಯನಾ ಪಟ್ಟಣದ ಬಾಂಬು ಗುಂಡುಗಳು, ಮತ್ತು ಸರ್ಕಾರ್ ಕಟ್ಟಡಗಳು ಇವುಗಳಿಗೆ ಬೆಂಕಿ ಹಚ್ಚುವುದೇ ಅವರ ಉದ್ದೇಶವಾಗಿರುತ್ತದೆ. ಸದರೀ ಜನಗಳಲ್ಲಿದ್ದ ಮದ್ದುಗುಂಡುಗಳನ್ನು ಅಧಿಕಾರಿಗಳು ಹಿಡಕೊಂಡರು.

ಸೋಫಿಯಾ, ೧೬ನೇ ಅಕ್ಟೋಬರ್.—ರಾಜ ಪ್ರತಿನಿಧಿ ಸಭೆಯ ಚುನಾವಣೆಗೆ ಯಾರು ತಕರಾರ್ ಮಾಡುತ್ತಾರೋ ಅಂತಾ ಅನ್ಯದೇಶೀಯರನ್ನು ದೇಶದಿಂದ ಓಡಿಸಿಬಿಡುವದಾಗಿ ನಮೂದಿಸಿ ರಾಜ ಪ್ರತಿನಿಧಿಗಳು ಒಂದು ಸರ್ಕ್ಯುಲರ್ ಛಾಯಿಪ್ ಮಾಡಿರುತ್ತಾರೆ. ಗಟಿಯಾ ಸರ್ಕಾರದ ತರಫ್ ರಾಯಭಾರಿಯು ಸದರೀ ಸರ್ಕ್ಯುಲರನ್ನು ವಾಪಸ್ ಮಾಡಿ ಜನರಲ್ ಕಾಲ್‌ಬಾರ್ಸ್ ಯವರ ಹುಕುಂ ನಿರೀಕ್ಷಣೆಯಿಂದ ರಾಜ ಪ್ರತಿನಿಧಿಗಳಂಥ ಸರಾಜ್ಯತಂತ್ರವನ್ನು ಕುರಿತ ಸಂಬಂಧವನ್ನು ನಿಲ್ಲಿಸಿ ಇಟ್ಟರು.

ಲಂಡನ್, ೧೬ನೇ ಅಕ್ಟೋಬರ್.—ಈದಿನದ ಟೈಂಸ್ ಪತ್ರಿಕೆಯು ನೇಟಿವ್‌ಗಳನ್ನು ಇಂಡಿಯನ್ ಸಿವಿಲ್ ಸರ್ವಿಸ್ ನೌಕರಿಯಲ್ಲಿ ಸೇರಿಸುವದರುಚಿತವೆಂತಲೂ, ಇಂಡ್ಯದೇಶವನ್ನು ಇಂಗ್ಲಿಷ್ ಕ್ರಮದಮೇಲೆ ಇಂಗ್ಲಿಷ್ ಅಧಿಕಾರಿಗಳ ಮೂಲಕ ಆಳದೇಕೇ ಹೊರ್ತು ನೇಟಿವ್ ಕ್ರಮವನ್ನು ನುಸರಿಸಿ ಆಳಕೊಡದೆಂತಲೂ ಹೇಳುತ್ತದೆ.

ಸೋಫಿಯಾ, ೧೬ನೇ ಅಕ್ಟೋಬರ್.—ನಿನ್ನೆಯ ದಿವಸ ನಡೆದ ಪ್ರತಿನಿಧಿ ಸಭೆಯ ಚುನಾವಣೆಯಲ್ಲಿ ಗವರ್ನ್‌ಮೆಂಟಿನವರಕಡೆ ಅತ್ಯಧಿಕವಾಗಿ ಜನಗಳು ಸೇರಿದರು. ಬಲ್ಗೇರಿಯಾ ಬೇಕಕ್ಕೆ ಸೇರಿದ ಮುಖ್ಯಮುಖ್ಯ ಪಟ್ಟಣಗಳಲ್ಲಿರುವ ರಷ್ಯಾ ದೇಶದವರಕಡೆ ಏಜಂಟರುಗಳು ಸದರೀ ಚುನಾವಣೆಯನ್ನು ನಿರೋಧಿಸುವದಕ್ಕೆ ಪ್ರಯತ್ನಪಟ್ಟರು. ರಷ್ಯಾ ಸರ್ಕಾರದ ಏಜಂಟರು ತಮಗೆ ಮೇಲ್ಪಟ್ಟ ಅಧಿಕಾರಿಗಳ ಹುಕುಂ ಅನುಸರಿಸಿ ಸದರೀ ಚುನಾವಣೆಯು ಅಕ್ರಮವೆಂತಲೂ ಅನುಪಯುಕ್ತವಾದದ್ದೆಂತಲೂ ಬಲ್ಗೇರಿಯಾ ಸರ್ಕಾರಕ್ಕೆ ತಿಳಿಸಿದರು.

ವೈಯನಾ, ೧೬ನೇ ಅಕ್ಟೋಬರ್.—ಲಾರ್ಡ್ ರಂಡಾಲ್ಫ್ ಚರ್ಚಿಲ್‌ಯವರು ಪ್ರೆಸ್ಬರ್ಗ್ ಪಟ್ಟಣದಿಂದ ಇಲ್ಲಿಗೆ ಬಂದು ಸೇರಿದರು.

ಸೆಂಟ್‌ಪೀಟರ್ಸ್‌ಬರ್ಗ್, ೧೬ನೇ ಅಕ್ಟೋಬರ್.—ಬಲ್ಗೇರಿಯಾ ದೇಶವನ್ನು ತಹಸುಂಬಿಸ್ಥಿತಿಗೆ ತರುವದು ಅಸಾಧ್ಯವೆಂತಲೂ ರಷ್ಯಾ ಸರ್ಕಾರದವರು ಕ್ಷಿಪ್ರದಲ್ಲೇ ನಿಂದಿತವಾದ ಕ್ರಮ ನಡೆಸುವರೆಂತಲೂ ರಷ್ಯಾ ದೇಶದ ವೃತ್ತಾಂತ ಪತ್ರಿಕೆಗಳು ಹೇಳುತ್ತಿವೆ.

CORRESPONDENCE

ಮಹಾರಾಜಶ್ರೀ ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸಮಕ್ಷಮಕ್ಕೆ.

ಮೈಸೂರು ಸೀಮೆಯಲ್ಲಿ ಶುದ್ಧವಾದ ಮಲನಾಡು ಪ್ರದೇಶವಾದ ಈ ಸಾಗರದ ಊರಿನಲ್ಲಿ ಪ್ರಿಯವಾಗಿರುವ ನಾಗರಿಕತೆಯನ್ನುವ ಪದಾರ್ಥವನ್ನು ಇಲ್ಲಿನ ಜನಗಳಿಗೆ ಸುಲಭಸಾಧ್ಯ ಮಾಡಿಕೊಡುವ ಇರಾದೆಯಿಂದ ಇಲ್ಲಿ ವಾಸವಾಗಿರುವ ಅನ್ಯದೇಶೀಯರಾದ ಕೆಲವು ದೊಡ್ಡಮನುಷ್ಯರು ಕನಿಕರದೊಡನೆ ರೀಡಿಂಗ್ ರೂಂ ಯೆನ್ನುವ ಒಂದು ಸಭೆಯನ್ನು ಕಲ್ಪಿಸಿ ಸ್ವದೇಶ ಮತ್ತು ದೇಶಾಂತರದ ವರ್ತಮಾನ ಪತ್ರಿಕೆಗಳನ್ನು ತರಿಸುತ್ತಾ ಇರುವದಲ್ಲದೆ ಪ್ರತಿ ಭಾನುವಾರದಲ್ಲಿ ಯಾವ ವಿಷಯಾಂತರಗಳನ್ನು ಕುರಿತು ಚರ್ಚಿಸುವದಕ್ಕಾಗಿ ಡಿಬೇಟಿಂಗ್ ಕ್ಲಬ್ ಯೆಂಬುವದಾಗಿಯೂ ವಿಧಾಯಿಸಿಕೊಂಡಿರುವದು ತಮಗೆ ಸೂಕ್ತ ಇರಬಹುದಷ್ಟೆ.

ಇದೇ ಊರಿನಲ್ಲಿ ವಾಸವಾಗಿರುವ ಮತ್ತೊಬ್ಬ ದೊಡ್ಡಮನುಷ್ಯರು ಮೇಲ್ಕಂಡ ಸಭೆಗೆ ತಾವು ಒಬ್ಬ ಮೆಂಬರಾಗಿರಲು ತುಂಬಾ ಇಷ್ಟವಿದೆಯೆಂದು ವಿನಯ ಪೂರ್ವಕವಾಗಿ ಕೇಳಿಕೊಳ್ಳಲಾಗಿ ಈ ಸಭೆಯ ಪ್ರೆಸಿಡೆಂಟರಾದ ಮತ್ತು ಇಲ್ಲಿನ ಮುನ್ಸಿಫರಾದ ಮ॥ ರಾ॥ ನರಸಿಂಹೈಯ್ಯಂಗಾರ್ಯರವರೂ ಮತ್ತು ಇತರ ಮೆಂಬರುಗಳು ಸದರಿ ಮೇಲೆ ಹೇಳಲ್ಪಟ್ಟ ಹೊಸ ಮೆಂಬರ ಕೋರಿಕೆಯನ್ನಂಗೀಕರಿಸುವವರಾದರು. ಈ ಸಭಿಕರಿಗರಾದೆಯು ಭ್ರಾಂತಿಮೂಲಕ ಉಪಕ್ರಮವಾಯಿತು. ಸಭಾನಿರ್ಣಯವನ್ನನುಸರಿಸಿ ಚಂದಾವಸ್ತ್ರಿಯನ್ನ ಹೊಸ ದೊಡ್ಡಮನುಷ್ಯರ ಬಳಿಗೆ ಕಳುಹಿಸಿರಲಾಗಿ ತಾವು ಸಭೆಗೆ ಸೇರುವ ಇಷ್ಟವಿಲ್ಲವೆನ್ನುವ ಸೂಚಕವಾದ ಮಾತುಗಳನ್ನ ಆಡಿದರು. ಅವರಲ್ಲಿರುವ ಘನತೆಯಲ್ಲಿ ಇದುವೊಂದು ಆಶ್ಚರ್ಯಕರವಾದ್ದೆಂದು ನಾನು ಹೇಳಲಾರೆನು.

ಆಯ್ಯಾ,—ಸರ್ಕಾರೀ ದೊಡ್ಡಮನುಷ್ಯರು ತಮ್ಮ ಅಭಿಪ್ರಾಯವನ್ನು ವಾಪಸು ತೆಗದುಕೊಳ್ಳಲು ಕಾರಣವು, ತಮ್ಮ ಕಷ್ಟಾರ್ಜಿತವಾದ ದ್ರವ್ಯವನ್ನು ವರ್ತಮಾನ ಪತ್ರಿಕೆಗಳಿಗೋಸ್ಕರ ಖರ್ಚುಮಾಡಲು ಮನಸ್ಸು ಬಾರದೆ ಲೋಭದಿಂದಲೋ ತಮ್ಮನ್ನು ಬಹುಕಾಲ ಆಶ್ರಯಿಸಿದ್ದ ಧನಲಕ್ಷ್ಮಿಯು ತಮ್ಮನ್ನು ತೊಲಗಿಯೋಗುತ್ತಾಳೆನ್ನುತ ಭಯದಿಂದಲೋ ಅಥವಾ ತಮ್ಮ ಮನೆಗೆ ನಾಲ್ಕುದಿಕ್ಕಿನಲ್ಲಿರುವ ಗೋಡೆಯೇ ಪ್ರಪಂಚದ ಚತುರ್ದಿಕ್ಕಿನ ಗಡಿಯೆಂದು ಯೆಣಿಸಿ ತಮಗೆ ಗೋಚರವಲ್ಲದ ವರ್ತಮಾನ ನ್ಯೂಸ್‌ಪೇಪರ್‌ಗಳಲ್ಲಿ ಯೇನು ಇರುತ್ತೆನ್ನುವ ಭ್ರಾಂತಿಯಿಂದಲೋ ತಿಳಿಯದು.

ಸರ್ವಜನೋಪಯುಕ್ತವಾದ ಕೆಲಸಕ್ಕಾಗಿ ದ್ರವ್ಯ ಸಹಾಯವನ್ನು ಮಾಡಲು ಮೇಲೆಹೇಳಿದ ದೊಡ್ಡಮನುಷ್ಯರನ್ನ ಪ್ರೇರಿಸಲು ಶ್ರೀ ಪರಮೇಶ್ವರನಿಗೆ ಶಕ್ತಿಯಿಲ್ಲದೆಯೋ ಅವರ ಮನೀಭೂತವಾದ ಶರೀರದಲ್ಲಿ ಹೊಕ್ಕಲು ಪರಮಾತ್ಮನಿಗೆ ದಾರಿ ಸಿಕ್ಕಲಿಲ್ಲವೋ ಅಥವಾ ಈ ನಿಷ್ಪವಾದ ಅಪರೂಪವಾದ ಒಂದು ವಸ್ತುವನ್ನ ಸೃಷ್ಟಿಸಿದಾದಿ ಇರುವದರಿಂದ ತನ್ನ ಮಹಿಮೆಯನ್ನ ಜನರು ಕೊಂಡಾಡಬಹುದೆನ್ನುವ ಇರಾದೆಯಿಂದಲೊ ಇದ ಬಹುದಲ್ಲವೆ? ನನಗಿದು ತಿಳಿಯುತಕ್ಕದ್ದಲ್ಲ ಹೀಗಾ ಕಿಷೊಟ್ಟಿನಲ್ಲಿ ಬಿಗಿಸಿಟ್ಟದ್ದನ್ನು ಕಾದಿರುವವರು ಸ್ಥಿರಂತೀ ಭೂತನಾಗಿ ಇರುವದರಿಂದ ಸದ್ಯ ಪ್ರಸ್ತುತರಾದ ದೊಡ್ಡಮನುಷ್ಯರನ್ನು ಸತ್ಕಾರ್ಯದಲ್ಲಿ ಪ್ರೋತ್ಸಹಿಸಲು ಶ್ರೀಪರಮೇಶ್ವರನಿಗೆ ಅವಕಾಶವಿಲ್ಲವಾಯಿತೆಂದು ನಂಬುತ್ತೇನೆ.

ಅನಂತಪುರ,) ವಿಶ್ವತ್ಪಕ್ಷಪಾತಿ.
ಆಶ್ವೀಜಬಹುಳ ೭. }

ESOTERIC MEANING OF SOME IMPORTANT ARYAN SACRED SYMBOLS.

ಶಾಂತಾಕಾರಂ ಭುಜಗಶಯನಂ ಪದ್ಮನಾಭಂ ಸುರೇಶಂ । ವಿಶ್ವಾಧಾರಂ ಗಗನಸದೃಶಂ ಮೇಘವರ್ಣಂ ಶುಭಾಂಗಂ ॥ ಲಕ್ಷ್ಮೀಕಾಂತಂ ಕಮಲನಯನಂ ಯೋಗಿಹೃದ್ಧ್ಯಾನಗಮ್ಯಂ ವಂದೇ ವಿಷ್ಣುಂ ಭವಭಯಹರಂ ಸರ್ವಲೋಕೈಕನಾಥಂ ॥

ಶ್ರೀಯೊಭುಜಂಗು ಶಯನೆಭುಜಂಗು ಕರೆ ರಥಾಂಗ ಚರಣೇದ್ಯಾಂಗು ॥ ನಿರಾಮ್ಮ್ತದಂ ಗಂಬಿಮಲಂತೆರುಗು ಕೃಪಾಕರುಗು ವ್ರಣವಾಮಿರುಂಗು ॥

ಪರಬ್ರಹ್ಮನಿಗೆ ಪಾಲನಾಶಕ್ತಿಯುಂಟಾದಾಗ ಆತನು ಶ್ರೀವಿಷ್ಣುವಾಗುವನು. ಆತನ ಹಸ್ತದ್ವಯಗಳಲ್ಲಿರುವ ಶಂಖಚಕ್ರಗಳು ಕಾಲಗಳಿಯನ್ನೂ, ಅವಕಾಶವನ್ನೂ ಸೂಚಿಸುತ್ತಿವೆ. ಸೃಷ್ಟಿಕರ್ತನಾದ ಭಗವಂತನು ಬಿಕ್ಕಾಲಾದ್ಯನವಚ್ಛಿನ್ನನಾಗಿರುವನೆಂಬ ಭಾವವು. ಮೂರನೆಯ ಹಸ್ತದಲ್ಲಿರುವ ಗದೆಯು, ಮಾಯಾಸೂಚಕವಾದದು. ಇದು ಸಂಪತ್ತಿನಿಂದುಂಟಾಗುವದು. ಆತನ ಅಭಯಮುದ್ರೆಯು ಕರುಣಾಸೂಚಕವಾದದ್ದು. ಶಾರ್ಙ್ಗವು ಧರ್ಮವನ್ನೂ, ನಂದಕವು ಶಾಂತಿಯನ್ನೂ ಬೋಧಿಸುತ್ತಿವೆ. ಇವು ಚೈತನ್ಯಶಕ್ತ್ಯಕ್ಕೂ, ಆನಂದಕ್ಕೂ ಸಹಕಾರಿಗಳು. ಗರುಡವಾಹನನು ಬ್ರಹ್ಮನ ನಿತ್ಯತ್ವವನ್ನು ಸೂಚಿಸುತ್ತದೆ. ಅದು ಹ್ಯಾಗೆಂದರೆ, ಪ್ರಾಣಿಗಳ ಪ್ರಾಣನಾಶಕಗಳಾದ ವಿಷಸರ್ಪಗಳನ್ನು ಸಂಹರಿಸುವದರಲ್ಲಿ ಗರುಡ ಪಕ್ಷಿಯು ಸಮರ್ಥವಾಗಿರುವಂತೆ ಜನನಮರಣಾತ್ಮಕವಾದ ದುಃಖ ವಿಮೋಚನದಲ್ಲಿ ಬ್ರಹ್ಮನ ಸಾಮರ್ಥ್ಯವನ್ನು ಬೋಧಿಸುತ್ತದೆ.

ಸರಿಗಮಪಧನಿಸಶಾಂತಾಂವೀಣಾಸುಕ್ಯಾಂ ಶುಕಶಾಂತಿಹಸ್ತಾಂಶಾಂ। ಶಾಂತರೂಪವ್ಯಧುಲ ಸ್ವೇಂಶಾಂ ಕುಚಭರತಾಂತಾಂ ನಮಾಮಿ ಶಿವಕಾಂತಾಂ॥

ಮದೇಹಂ ತನುಮಧ್ಯಮೇತವದಾಬದ್ಧಾಂತುಯತ್ನೀವನೆ। ಮಹಾರುದ್ರ ಯೈಸ್ಸುಲಬ್ಧಮಮೃಗವಾಹ್ಯವಸ್ತ್ರಮಬ್ಜನನೆ। ಮಂದಾಲೀಕವಿಲಿಖನಪ್ರಕಮನಂಬಿಜ್ವಶರಾಜ್ಞೋದಿತೆ॥ ಸಿಂಹಮಾಧಾರು ಜಮಮ್ಮ ತಂಶಿವ್ರತತಿಷ್ಠಂತಾಮಣಿಂಶ್ರೀನುತೆ ॥

ಪರಬ್ರಹ್ಮನ ಸಂಹಾರಶಕ್ತಿಯು ಪಾರ್ವತಿಯಾಗಿ ಸ್ತ್ರೀ ರೂಪದಿಂ ವ್ಯಕ್ತಪಡಿಸಲ್ಪಟ್ಟಿದೆ. ಈ ದೇವಿಯ ಉಭಯ ಹಸ್ತಗಳಲ್ಲಿರುವ ಪಾಶಾಂಕುಶಗಳ ಅರ್ಥವು ಹಿಂದೆಯೇ ವಿವರಿಸಲ್ಪಟ್ಟಿರುತ್ತದೆ. ಮೂರನೆಯ ಹಸ್ತದಲ್ಲಿರುವ ಇಕ್ಷುಕೋದಂಡವು (ಕಬ್ಬಿನ ಬಿಲ್ಲು) ಅನವರತ ಚಾಂಚಲ್ಯಯುಕ್ತವಾದ ಮನಸ್ಸು ದೃಢಪಡಿಸಿಕೊಳ್ಳಲ್ಪಡತಕ್ಕದ್ದೆಂಬ ಭಾವವನ್ನು ಸೂಚಿಸುತ್ತದೆ ಮನವನ್ನಾಕರ್ಷಿಸುವ ಶಬ್ದ, ರೂಪ, ರಸ, ಗಂಧ, ಸ್ಪರ್ಶಗಳೆಂಬವೇ ಐದು ಬಾಣಗಳಾಗಿರುತ್ತವೆ. ಅಭಿಮಾನಗಳು ಜಯಿಸಿ ಇಂದ್ರಿಯ ವ್ಯಾಪಾರಗಳಿಗೆ ಒಳಪಡಿಸದೆ ದೃಢವಾಗಿ ಮನವನ್ನಿಟ್ಟುಕೊಂಡಿರಬೇಕಾದ್ದು ಅವಶ್ಯವು. ಸಿಂಹವು ಮೃಗರಾಜನೆನಿಸಿಕೊಂಡಿರುವದರಿಂದ ಅದರ ವಾಹನವು ದೇವಿಯ ಸರ್ವ ವ್ಯಾಪಕತ್ವವನ್ನು ಬೋಧಿಸುತ್ತದೆ.

ಶಾಂತಂಪದ್ಮಾಸನಸ್ಥಂಶಶಧರಮಕುಟಂ ಪಂಚವಕ್ತ್ರಂತ್ರಿನೇತ್ರಂ । ಶೂಲಂವಜ್ರಂ ಚಖಡ್ಗಂಪರಶುಮಭಯದಂ ದಕ್ಷಭಾಗೇವಹಂತಂ । ನಾಗಂಪಾಶಂಚಘಂಟಾಂಪ್ರಳಯಹುತವಹಂಸಾಂಕುಶಂವಾಮಭಾಗೇ। ನಾನಾಲಂಕಾರಯುಕ್ತಂ ಸ್ಫಟಿಕಮಣಿನಿಭಂ ಪಾರ್ವತೀಶಂನಮಾಮಿ ॥

ಸಾನುಜಮುಖದರತಸ್ಯಾ ಕಾಮಿತಫಲದಸ್ವಾಮೀಯವಾಸಸ್ವಂ ॥ ಸ್ವಾಮಿರ್ವಮಹಿ ಸಮಸ್ತೆ ಶ್ರೀಮನ್ ಸ್ತ್ರೀಶ್ವಕಮದೆವಮಾತಾತ್ತೆ ॥

ಪರಬ್ರಹ್ಮನು ಸಂಹಾರಾಪಕಾರವು ಕೈಗೊಂಡಾಗ ಈಶ್ವರನೆಂದು ವ್ಯವಹರಿಸಲ್ಪಡುವನು. ಬ್ರಹ್ಮಜ್ಞಾನವು ಅಜ್ಞಾನಾಂಧಕಾರವೂ ವಸ್ತ್ರೋಲಕ ಪ್ರಕೃತಿಯು ನಿತ್ಯವೆಂಬ ಜ್ಞಾನವೂ ಹೋಗಿ ಬ್ರಹ್ಮನೊಬ್ಬನೇ ನಿತ್ಯನೆಂಬ ತತ್ವಜ್ಞಾನವು ಉಂಟಾಗುವದು ತದೆ ಈಶ್ವರನ ಪಂಚ ಶಿರಸ್ಸುಗಳು ಓಂ ಯೆಂಬ ಪ್ರಣವಾಕ್ಷರದೊಳಗಿರುವ ಅಕಾರ ಉಕಾರ ಮಕಾರ ನಾದ ಬಿಂದು ಇವುಗಳನ್ನೂ, ಜಾಗ್ರತ್ಸ್ವಪ್ನ ಸುಷುಪ್ತಿ ತುರೀಯ ತುರೀಯಾತೀತಗಳೆಂಬ ಐದು ಅವಸ್ಥೆಗಳನ್ನೂ, ಸಾಧಾರಣವಾದ ಯೆರಡು ನೇತ್ರಗಳು ಸೂರ್ಯ ಚಂದ್ರರನ್ನೂ, ಫಾಲನೇತ್ರವು ಕಾಲಾಗ್ನಿಯನ್ನೂ, ದಶಬಾಹುಗಳು ಜ್ಞಾನೇಂದ್ರಿಯ ಪಂಚಕವನ್ನೂ, ಕರ್ಮೇಂದ್ರಿಯ ಪಂಚಕವನ್ನೂ, ಆತನ ಒಂದು ಕೈಯಲ್ಲಿರುವ ತ್ರಿಶೂಲವು ಕಾಲವನ್ನೂ, ವಜ್ರಾಯುಧವು ನಿತ್ಯತ್ವವನ್ನೂ, ಮತ್ತೊಂದು ಹಸ್ತದೊಳಗಣ ಖಡ್ಗವು ಶಾಂತಗುಣವನ್ನೂ, ಇನ್ನೊಂದು ಕೈಯಲ್ಲಿರುವ ಪರಶು ನಿರ್ಮೋಹತ್ವವನ್ನೂ, ಬಲಗಡೆಯ ಕೈಯಲ್ಲಿರುವ ಅಭಯ ಮುದ್ರೆಯು ದಯೆಯನ್ನೂ, ಎಡದ ಒಂದು ಕೈಯಲ್ಲಿರುವ ನಾಗವು ಜನ್ಮ ಪರಂಪರೆಯನ್ನೂ, ಮತ್ತೊಂದು ಕೈಯಲ್ಲಿರುವ ಪಾಶವು ಬಂಧನವನ್ನೂ, ಮಗದೊಂದು ಕೈಯಲ್ಲಿರುವ ಘಂಟೆಯು ನಾದವನ್ನೂ ಮಿಕ್ಕ ಯೆರಡು ಹಸ್ತಗಳೊಳಗಣ ಅಗ್ನಿ ಮತ್ತು ಅಂಕುಶವು ಕ್ರಮವಾಗಿ ಜ್ಞಾನವನ್ನೂ ಕೋಪವನ್ನೂ ಸೂಚಿಸುತ್ತವೆ. ಇವುಗಳಿಂದ ಪರಬ್ರಹ್ಮನು ಕಾಲಾತೀತನು, ನಿತ್ಯನು, ರಾಗಶೂನ್ಯನು, ದಯಾಳು, ಜನನಮೃತ್ಯು ವಿಕಾರರಹಿತನು, ಸರ್ವವ್ಯಾಪಿ, ಕಾಮಕ್ರೋಧಾದಿ ಷಡ್ವರ್ಗಗಳಿಂ ಜಯಿಸಿದವನೆಂದು ವ್ಯಕ್ತವಾಗುತ್ತದೆ ಸ್ವಾಭಾವಿಕವಾಗಿ ಶಂಕೆಯು ಬಾಧಕವಾದದರಿಂದ ಆಂತಾವೃಗಧಾರಿಯಾದ ಈಶ್ವರನು ಸಹ ಕೃಪೆ ಯುಳ್ಳವನೆಂದು ಏರ್ಪಡುತ್ತದೆ. ಆತನ ಜಟಾಮಕುಟದಲ್ಲಿರುವ ಬಾಲಚಂದ್ರನು ಆಹ್ಲಾದಕತ್ವವನ್ನೂ, ಪರಿಶುದ್ಧ ಜ್ಞಾನಾಭಿವೃದ್ಧಿಯನ್ನೂ ಸೂಚಿಸುತ್ತವೆ. ಶಿರಸ್ಸಿನೊಳಿರುವ ಗಂಗೆಯು ಮುಕ್ತಿಗೆ ಶುದ್ಧಜ್ಞಾನವು ಅಪೇಕ್ಷಿತವಾದದ್ದೆಂಬ ಅರ್ಥವನ್ನೂ, ಆತನವಾಹನವಾದ ವೃಷಭವು ಧರ್ಮವನ್ನೂ ಅದರ ನಾಲ್ಕುಕಾಲ್ಗಳು ಕ್ರಮವಾಗಿ ತಪಸ್ಸು, ಸತ್ಯ, ಯಜ್ಞ, ದಾನ ಇವುಗಳನ್ನೂ ಅರುಹುತ್ತವೆ.

AUTHORITIES TO PROV THAT THERE IS ONLY ONE GOD.

೧೮. ಏಕೋನಾರಾಯಣಃ ನದ್ವಿತೀಯೋಸ್ತಿಕಶ್ಚಿತ್ ॥ ನಾರಾಯಣೋಪನಿಷತ್॥

೧೯. ಅಜಏಕೋನಿತ್ಯಮಸ್ಯ ॥ ತುರೀಯಾತೀತಾವಧೂತೋಪನಿಷತ್॥

೧೬. ದೇವಏಕೋನಾರಾಯಣಃ॥ ಸುಬಾಲೋಪನಿಷತ್॥

೧೭. ಏಕೋಹಿರುದ್ರೋ ನದ್ವಿತೀಯಾಯತಸ್ಥುಃ ॥ ಶ್ವೇತಾಶ್ವತರೋಪನಿಷತ್॥

೧೮. ಏಕಏವರುದ್ರೋನಿತ್ಯಸ್ತತೋನ್ಯತ್ಸಕಲಂ ಮೃಷಾ ॥ ಶರಭೋಪನಿಷತ್ ॥

೧೯. ಆತ್ಮಾಹಿಸ್ವಮಹಿಮಸ್ಥೋ ನಿರಪೇಕ್ಷಏಕ ಏವಸಾಕ್ಷೀಸ್ವಪ್ರಕಾಶಃ ॥ ನೃಸಿಂಹೋತ್ತರತಾಪಿನ್ಯುಪನಿಷತ್ ॥

೨೦. ತಮೇಕಮೇವಪಶ್ಯಂತಿ ಪರಿಶುಭ್ರಂವಿಭುಂ ದ್ವಿಜಾಃ ॥ ಮಂತ್ರಿಕೋಪನಿಷತ್ ॥

೨೧. ತುರೀಯಂನಿರಾಕಾರಮೇಕಂಬ್ರಹ್ಮ ॥ ಮಹಾನಾರಾಯಣೋಪನಿಷತ್ ॥

೨೨. ಪತಿಂವಿಶ್ವಸ್ಯೇಶ್ವರಂದೇವಂ ಸಮುದ್ರೇಕಂವಿಶ್ವರೂಪಿಣಂ॥ ಮಹೋಪನಿಷತ್॥

೨೩. ಆತ್ಮಸಂಸ್ಥಾಪ್ಯ ಸರ್ವದಾಏಕಏವಾದ್ವಯಸ್ತಥಾ ॥ ತೇಜೋಬಿಂದೂಪನಿಷತ್॥

೨೪. ಅಥಷ್ಠಾನಂಪರಂತತ್ವಂ ಏಕಂಸಚ್ಛಿವ್ಯಮುಹಕ್ ॥ ಬಹ್ವೃಚೋಪನಿಷತ್॥

೨೫. ಜ್ಯೋತಿರ್ಜ್ಞಾನಂಪರಂಬ್ರಹ್ಮಏಕಮೇವಾದ್ವಿತೀಯಕಮ್। ಸಂವೇದನೀಕರಣಾಕೃತ್ವಾ ಪ್ರಣವೇನವಿಬೋಧಯೇತ್ ॥ ಅಗ್ನಿಪುರಾಣಂ ॥

೨೬. ಪ್ರಾಣೇಪುರುಷಸ್ಯಾಸ್ಯ ಏಕಶ್ಚೈತಿವಿಧಾನ್ಯತೇ ॥ ಅಗ್ನಿಪುರಾಣಂ॥

೨೭. ಸನಾತನಂಸಪ್ರಮಗೀತಸ್ತ್ಯಕ್ತೋಪಪೇದೆ ಮಗುಣ್ಯೈಮಬಗುಣ್ಯವಾಪಿಪಿಃ ॥ ಯಏಕಈಶೋ ಜಗದಾತ್ಮಲೀಲಯಾ ಸೃಜತ್ಯವತ್ಯತ್ತಿನತತ್ರಸಜ್ಜತೇ ॥ ಶ್ರೀಮದ್ಭಾಗವತಂ ॥

೨೮. ಭಗವಾನೇಕಆಸೇದಮಗ್ರಆತ್ಮಾತ್ಮನಾಂವಿಭುಃ॥ ಶ್ರೀಮದ್ಭಾಗವತಂ॥

೨೯. ಯಥೇಂದ್ರಿಯೈಃ ಪೃಥಗ್ದ್ವಾರೈರರ್ಥೋಬಹುಗುಣಾಶ್ರಯಃ, ಏಕೋನಾನಾಯತೇತದ್ವದ್ಭಗವಾನ್ ಶಾಸ್ತ್ರವರ್ತ್ಮಭಿಃ॥ ಶ್ರೀಮದ್ಭಾಗವತಮ್॥

೩೦. ತಸ್ಮಿನ್ಬ್ರಹ್ಮಣ್ಯದ್ವಿತೀಯೇ ಕೇವಲೇ ಪರಮಾತ್ಮನಿ। ಬ್ರಹ್ಮರುದ್ರೌ ಚಭೂತಾನಿ ಭೇದೇನಾಜ್ಞೋನುಪಶ್ಯತಿ ॥ ಶ್ರೀಮದ್ಭಾಗವತಮ್॥

೩೧. ಯಥಾಪುಮಾನ್ನಸ್ವಾಂಗೇಷು ಶಿರಃ ಪಾಣ್ಯಾದಿಷು ಕ್ವಚಿತ್ ।ಪಾರಕ್ಯಬುದ್ಧಿಂ ಕುರುತೇ ಏವಂ ಭೂತೇಷು ಮತ್ಪರಃ ।ಶ್ರೀಮದ್ಭಾಗವತಮ್।

೩೨. ತ್ರಯಾಣಾಮೇಕಭಾವಾನಾಂ ಯೋನಪಶ್ಯತಿವೈಭಿದಾಮ್ । ಸರ್ವಭೂತಾತ್ಮನಾಂಬ್ರಹ್ಮನ್ ಸಶಾಂತಿಮಧಿಗಚ್ಛತಿ ॥ ಶ್ರೀಮದ್ಭಾಗವತಮ್

೩೩. ಗುಣಮಯಗುಣಸಾಮ್ಯೇಚಗುಣವ್ಯತಿಕರೇ ತಥಾ । ಏಕಏವಪರೋಹ್ಯಾತ್ಮಾ ಭಗವಾನೀಶ್ವರೋವ್ಯಯಃ ॥ ಶ್ರೀಮದ್ಭಾಗವತಮ್ ॥

೩೪. ಏಕಾಯಸೋಸ್ಯದ್ವಿಘಟಸ್ತ್ರಿಮೂಲಶ್ಚತುರಸಃ ಪಂಚವಿಧಃ ಷಡಾತ್ಮಾ । ಸಪ್ತತ್ವಗಷ್ಟವಿಟಪೋನವಾಕ್ಷೋದಶಚ್ಛದೀ ದ್ವಿಖಗೋಹ್ಯಾದಿವೃಕ್ಷಃ ॥ ಶ್ರೀಮದ್ಭಾಗವತಮ್ ॥

೩೫. ತ್ವಮೇಕಏವಾಸ್ಯಸತಃ ಪ್ರಸೂತಿಃ ॥ ಶ್ರೀಮದ್ಭಾಗವತಮ್॥

೩೬. ತ್ವಮೇಕ ಆದ್ಯಃ ಪುರುಷೋದ್ವಿತೀಯಃ ॥ ಶ್ರೀಮದ್ಭಾಗವತಮ್॥

೩೭. ಏಕಏವಾದ್ವಿತೀಯೋಸೌ ಐತದಾತ್ಮ್ಯಮಿದಂಜಗತ್ । ಆತ್ಮನಾತ್ಮಾತ್ಮಯಸ್ಸ್ವಭ್ಯಾಃ ಸೃಜತ್ಯವತಿಹಂತ್ಯಜಃ ॥ಶ್ರೀಮದ್ಭಾಗವತಮ್।

೩೮. ಆತ್ಮಾಹ್ಯೇಕಃ ಸ್ವಯಂಜ್ಯೋತಿರ್ನಿತ್ಯೋನ್ಯೋನಿರ್ಗುಣೋಗುಣೈಃ । ಆತ್ಮಸೃಷ್ಟೈಸ್ತತ್ಕೃತೇಷು ಭೂತೇಷು ಬಹುಧೇಯತೇ ॥ ಶ್ರೀಮದ್ಭಾಗವತಮ್ ॥

೩೯. ಏಕಏವಾದ್ವಿತೀಯೋಭೂದಾತ್ಮಾಧಾರೋ ನಿರಾಶ್ರಯಃ ಕಾಲೇನಾತ್ಮಾನುಭಾವೇನ ಸಾಮ್ಯಂನೀತಾಸುಶಕ್ತಿಷು ॥ಶ್ರೀಮದ್ಭಾಗವತಮ್

೪೦. ಏಕಏವಪರೋಹ್ಯಾತ್ಮಾ ಭೂತೇಷ್ವಾತ್ಮನ್ಯವಸ್ಥಿತಃ । ಯಥೇಂದುರುದಪಾತ್ರೇಷು ಭೂತಾನ್ಯೇಕಾತ್ಮಕಾನಿ ಚ ॥ ಶ್ರೀಮದ್ಭಾಗವತಮ್ ॥

BANGALORE:—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning

[illegible]

Vol XIII] BANGALORE—MONDAY OCTOBER 25, 1886 [No 43.

ಸಂಪುಟ ೧೩] ಬೆಂಗಳೂರು —ಸನ್ ೧೮೮೬ನೇ ಇಸವಿ ಅಕ್ಟೋಬರ್ ೨೫ನೇ ತಾರೀಖ್ ಸೋಮವಾರ [ಸಂಚಿಕೆ ೪೩

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು

[illegible]

ಜಾಹೀರಾತು ದರ

[illegible]

NOTICE TO SUBSCRIBERS

[illegible]

NOTICE

VAIDYASARA SANGRAHA

Price including Postage Rs 5 0 0

ವೈದ್ಯಸಾರ ಸಂಗ್ರಹ

[illegible]

ಶ್ರೀ ಡಿ. ವೆಂಕಟರಾವ್, ಅಸ್ಸಿಸ್ಟೆಂಟ್, ಬೆಂಗಳೂರು

ನೋಟೀಸು

ಮೈಸೂರು ದೇಶ ಯ ಪರೀಕ್ಷೆ

ಅಂಕಗಣಿತದ ಕೀ.

[illegible]

ನೋಟೀಸ್

ಬೆಂಗಳೂರು ಪಬ್ಲಿಕ್ ಬ್ಯಾಂಕ್ (ಲಿಮಿಟೆಡ್) ಆಫೀಸಿನ ದ

[illegible]

ತರಾಜಿನಲ್ಲಿ ಪದದ ಕೆಂಡ [illegible] ಮುಂತ [illegible]

[illegible] ದಯಮಾಡ್ಟು [illegible]

[illegible]

ಉದ್ದೇಶವಾಗುವವರು

[illegible]

ತಾ॥ ೧೪ ೧೦ ೧೮೮೬ [illegible] ಎಕ್ಸಿಕ್ಯೂಟರ್

ನೋಟೀಸು.

ಬೆಂಗಳೂರು ಪವರ್ ಮ್ಯೂನಿಸಿಪಾಲಿಟಿ

ಸನ್ ೧೮೮೬ನೇ ಇಸವಿ ಅಕ್ಟೋಬರ್ ೩೦ನೇ ತಾರೀಖ್ ಶನಿವಾರದಿನ [illegible] ಗ್ಗ, ಪವರ್ ಮ್ಯೂನಿಸಿಪಲ್ ಕಮಿಷನರ್‌ಗಳು ಡಿಸ್ಟ್ರಿಕ್ಟ್ [illegible] ರುವ ವಮ್ಮ ಆಬಿ [illegible] ಆಲೋಚನೆಗೆ ಬರ್ಪುವ ವಿಷಯಗಳು

೧ ಸನ್ ೧೮೮೬ನೇ ಇಸವಿ ಸೆಪ್ಟಂಬರ್ ೨೦ ಗಳ ಬಾಬತು [illegible] ಕ್ಕಗಳು, [illegible] ಕುರಿತ [illegible] ಮತ್ತು [illegible] ಗಳು.

೨ ಪವರ್ [illegible] ಡಿಸ್ಟ್ರಿಕ್ಟ್ [illegible] ಮಧ್ಯೆ ಇರುವ [illegible] ದ ಕಟಕಟೆ [illegible] ಕಾಮಗಳ [illegible]

೩ [illegible]

೪ [illegible] ಸಾಹೇಬರು [illegible]

೫ [illegible]

೬ [illegible]

ಬೆಂಗಳೂರು, ೨೦ನೇ ಅಕ್ಟೋಬರ್ ೧೮೮೬

A [illegible]

Vice President,

City Municipal Commission

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA

MONDAY, OCTOBER 25, 1886

೧೮೮೬ನೇ ಅಕ್ಟೋಬರ್ ೨೫ನೇ ತಾ॥ ಸೋಮವಾರ

DEATH OF GENERAL SIR HERBERT MACPHERSON K C B K C S I [illegible]

ಮದರಾಸ್ ಕಮಾಂಡರ್-ಇನ್-ಚೀಫರವರಾದ ಜನರಲ್ ಸರ್ ಹರ್ಬರ್ಟ್ ಮೆಕ್ ಫರ್ಸನ್ ಯವರು ಮಾಹೆ [illegible] ತಾರೀಖ್ ಬುಧವಾರದಿನ ಇರಾವತಿಯೆಂಬ ಹೊಗೇ ಜಹಜಿನಲ್ಲಿ ರಂಗೂನಿಗೆ ಹೋಗುವ ಮಾರ್ಗದೊಳು ಕಾಲಗತಿಯನ್ನೈದಿದರೆಂಬ ವೃತ್ತಾಂತವು ಕೇಳಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ ಈ ಜನರಲ್‌ಯವರು ಸೈನಿಕ ಸನ್ನಿವೇಶವನ್ನು ಸ್ವತಃ ನೋಡಿ [illegible] ವ [illegible] ಮಾಡತಕ್ಕಬಗ್ಗೆ ಭಾಮೊ ಯೆಂಬಸ್ಥಳಕ್ಕೆ ಹೋಗಿದ್ದ ವೇಳೆಯಲ್ಲಿ ಅಲ್ಲಿನ ವಾತೋದಕಗಳೊಂಟದೆ ಅವರಿಗೆ ಪ್ರಬಲ ಜ್ವರ ತಗಲಿ, ಅದರೊಡನೆ [illegible] ಯೆಂಬ ಪ್ರದೇಶಕ್ಕೆ ಕೆಲವು ದಿನಗಳಹಿಂದೆ ವಾಪಸ್ ಬಂದರಂತೆ, ಯಾನಪ್ರಯುಕ್ತವಾದ ಆಲಸ್ಯದಿಂ ಜ್ವರವೇಗವು ದಿನೇ ದಿನೆ ವೃದ್ಧಿಯನ್ನೈದುತಬಂದ್ದಲ್ಲದೆ ಕಡೆಗೆ ಅವರು ರಂಗೂನಿಗೆ ಹೋಗಿ ಸೇರಬೇಕೆಂದು ಹೊರಟಲು ಮಾರ್ಗದಲ್ಲಿ ಮೇಲೆಕಂಡಂತೆ ಶರೀರವಿಯೋಗವು ಪ್ರಾಪ್ತವಾಯಿತೆಂತಲೂ, ಈ ಟಗೆಬಂದ ವೃತ್ತಾಂತದಮೂಲಕ ತಿಳಿಯಲಾದವು ಜನರಲವರ ಪ್ರಾಣೋತ್ಕ್ರಮಣ ವೃತ್ತಾಂತವು ತಿಳದಕೂಡಲೇ ಖನನದಬಗ್ಗೆ ಅವರ ಕಳೇಬರದೊಡನೆ ಜಹಜು ಪ್ರೋಂ ಯೆಂಬ ಸ್ಥಳಕ್ಕೆ ವಾಪಸ್ ಹೋಯಿತು ಬಳಿಕ ಅಲ್ಲಿ ವಿಶಿಷ್ಟ ಮಿಲಿಟರಿ ಮರ್‍ಯಾದೆಗಳೊಡನೆ ನಡೆಯಬೇಕಾದ ಕ್ರಮಗಳೆಲ್ಲವೂ ಜರಗಿದವು ಜನರಲ್ ಮೆಕ್ ಫರ್ಸನ್ ಯವರು ಕಳೆದ ಫೆಬ್ರವರಿತಿಂಗಳ ೨೮ನೇ ತಾರೀಖಿನಲ್ಲಿ ತಮ್ಮ ಭಾರ್‍ಯಾ ಪುತ್ರಿಯರೊಡನೆ ಮದರಾಸಿಗೆಬಂದು ಮಾರ್ಚ ಗುರ್ತೇತಾರೀಖಿನ ದಿನ ಮದರಾಸ್ ಪ್ರೆಸಿಡೆನ್ಸಿಯ ಕಮಾಂಡರ್-ಇನ್-ಚೀಫ್ ಗಿಯೂ ಘನವನ್ನುಹೊಂದಿದ ಗವರ್ನರವರ ಮಂತ್ರಾಲೋಚಕ ಸಮಾಜದ ಯೆರಡನೆಯ ಮೆಂಬರಾಗಿಯೂ ಮೊಕರರಾಗಿ ಸದರೀ ಕೆಲಸಗಳ ಚಾರ್ಜನ್ನು ವಹಿಸಿದರು ಈಚೆಗೆ ಬ್ರಿಟಿಷ್ ನವರ ಸುಸರ್ಪಾದ ಬರ್ಮಾರಾಜ್ಯದ ಮೇಲ್ಭಾಗದಲ್ಲಿ ದರೋಡೆಯವರು ನಡೆಸುತಲಿರುವ ದಂಡಳಿಗಳನ್ನು ಲೂಟಿಗಳನ್ನೂ ಅಡಗಿಸಿ ನವೀನಾರ್ಜಿತವಾದ ದೇಶವನ್ನು ದಾರಿಗೆ ತರುವಬಗ್ಗೆ ಸಮರ್ಥರಾದ [illegible] ರೊಬ್ಬರು ಬೇಕಾಗಿದ್ದಲು ಆಗ ಮಹಾರಾಜ್ಞೀ ಸರ್ಕಾರದವರು ಜನರಲ್ ಮೆಕ್ ಫರ್ಸನ್ ಯವರನ್ನು ಆರಿಸಿ ಬರ್ಮಾದೇಶದಲ್ಲಿ ಈಗ ಯುದ್ಧಸನ್ನದ್ಧವಾಗಿರತಕ್ಕ ವಿಶಿಷ್ಟ [illegible] ಧಿಪತಿತ್ವವನ್ನು ಅವರಿಗೊಪ್ಪಿಸಿ ಅಲ್ಲಿಗೆ ಕಳುಹಿಸಬೇಕಾಯಿತು ಅದೇಪ್ರಕಾರ ಜನರಲ್‌ಯವರು ನೂತನ ಕಾರ್ಯ ಸಮಾಧಾನೋದ್ದೇಶದೊಡನೆ ಕಳೆದತಿಂಗಳ [illegible] ನೇ ತಾರೀಖಿನದಿನ ಮದರಾಸಿನಿಂದ ರಂಗೂನಿಗೆ ಪ್ರಯಾಣವಾದರು ಪರಂತು ದೈವನಿಚ್ಛೆಯು ಅನ್ಯಥಾ ಇದ್ದದರಿಂದ ಕಡೆಗೆ ವಿದೇಶಜನ ಮಧ್ಯದಲ್ಲಿ ಅಸ್ಥಾನದೊಳು ಶರೀರ ಪರಿತ್ಯಾಗ ಮಾಡಬೇಕಾಗಿಬಂತು ಬೆಂಗಾಲ್ ಸ್ಟಾಫ್‌ಕೋರಿಗೆ ಸೇರಿದ ಪ್ರಸಿದ್ಧರಾದ ಈ ಆಫಿಸರವರು ಈಗ್ಯೆ ನಲವತ್ತೊಂದು ವರುಷಗಳ ಕಾಲವಾಗಿ ನೌಕರಿಯೊಳಿದ್ದು ಅನೇಕ ಸಂದರ್ಭಗಳಲ್ಲಿ ತಮ್ಮ ಧೈರ್‍ಯ ಸ್ಥೈರ್‍ಯ ಶೌರ್‍ಯ ಸಾಹಸಗಳನ್ನು ಎತತಿ ವಿಶೇಷವಾಗಿ ತೋರ್ಪಡಿಸಿ, ಅಸಾಧಾರಣಗಳಾದ ಕೀರ್ತಿ ಪ್ರತಿಷ್ಠೆಗಳಂ ಪಡೆದು ಜನಗಳ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿ, [illegible] ನೇ ವಯಸ್ಸಿನಲ್ಲಿ ಇಷ್ಟಮಿತ್ರರ ಅಸಾನ್ನಿಧ್ಯದೊಳು ಗತಿಸಿದ್ದು ಬಹಳ ದುಃಖಿಸತಕ್ಕದ್ದಾಗಿದೆ. ೧೮೫೭ನೇ ಇಸವಿಯಲ್ಲಿ ಪರ್ಷ್ಯಾ ಯುದ್ಧದಲ್ಲಿಯೂ, ೧೮೫೭—೫೮ನೇ ಇಸವಿಗಳಲ್ಲಿ

ಮ್ಯೂಟಿನಿಕಾಲದಲ್ಲಿಯೂ, ೧೮೭೮-೮೦ನೇ ಇಸವಿಗಳಲ್ಲಿ ಆಫ್ಘಾನಿಯುದ್ಧದಲ್ಲಿಯೂ, ೮೨ನೇ ಇಸವಿಯಲ್ಲಿ ಈಜಿಪ್ಟ ಯುದ್ಧದಲ್ಲಿಯೂ, ಸಂಪೂರ್ಣಜಯದೊಡನೆ ಕೆಲವು ಜಾಸ್ತೀಪ್ರಶಸ್ತಿಗಳಂ ಪಡೆದರು. ಇಂತಾ ಪ್ರಸಿದ್ಧರಾದ ಶೂರರ ವಿಯೋಗಜನ್ಯವಾದ ದುಃಖಸೂಚನಾರ್ಥ ಮದರಾಸ ಗವರ್ನಮೆಂಟಿನವರು, ಒಂದು ವಿಶೇಷಪತ್ರಿಕೆಯನ್ನು ಪ್ರಾಯಿಷ್‌ಮಾಡಿ ತನ್ಮೂಲಕ ಮಂತ್ರಾಲೋಚಕ ಸಮಾಜದೊಳಗಣ ಗವರ್ನರವರು ಘನವನ್ನುಳ್ಳಂದಿದ ಲೆಪ್ಟಿನೆಂಟ ಜನರಲ್ ಸರ್ ಹರ್ಬರ್ಟ ಟೆಯಿಲರ್ ಮೆಕ್‌ಫರ್‌ಸನ್ ಯವರ ಮರಣವಿಷಯದಲ್ಲಿ ತಮಗುಂಟಾದ ವ್ಯಾಕುಲವನ್ನು ವ್ಯಕ್ತಪಡಿಸಿ, ದುಃಖಕರವಾದ ಸದರೀ ಸಮಯದಲ್ಲಿ ಫೋರ್ಟಸೇಂಟ ಜಾರ್ಜ ಕೋಟೆಯ ಮೇಲೆ ಇರತಕ್ಕ ಬ್ರಿಟಿಷ್ ಬಾವುಟೆಯನ್ನು ಅರ್ಧಕ್ಕೆ ಇಳಿಸತಕ್ಕದ್ದೆಂತಲೂ, ಗತಿಸಿದವರ ಹೋದೆಗೆ ಅನುಗುಣವಾಗಿ ಗೌರವಾರ್ಥ ಸದರೀ ಗವರ್ನಮೆಂಟಿನ ಆಧಿಪತ್ಯಕ್ಕೊಳಪಟ್ಟ ಮಿಲಿಟರಿ ಸ್ಟೇಷನ್‌ಗಳಲ್ಲೆಲ್ಲ ೧೫ ತೋಪೆಗಳು ಹಾಕತಕ್ಕದ್ದೆಂತಲೂ ಹುಕುಂಮಾಡಿದಪ್ರಕಾರ ಆಚೆಮೊನ್ನೆಯದಿನ ಇಲ್ಲಿನ ಮಿಲಿಟರಿ ಸ್ಟೇಷನಿನಲ್ಲಿ ಸಹ ೧೫ ತೋಪೆಗಳು ಹಾಕಲ್ಪಟ್ಟವು. ಇದಲ್ಲದೆ ಮದರಾಸ್ ಇಲಾಖೆಯಲ್ಲಿರುವ ಹರ್ ಮೇಜಸ್ಟೀಸ್ ಸೈನ್ಯಕ್ಕೆ ಸೇರಿದ ಮಿಲಿಟರಿ ಇಲಾಖಾ ಆಫೀಸರ್‌ಗಳೆಲ್ಲರೂ, ಸದರೀ ತಾರೀಖ್‌ಮೊದಲು ೧೫ ದಿನಗಳವರೆಗೆ ದುಃಖದ ಸೂಚಕ ತೊಡತಕ್ಕದ್ದೆಂದು ಸಹ ಗವರ್ನರವರು ಹುಕುಂ ಮಾಡಿರುತ್ತಾರೆ ಮುಖ್ಯವಾಗಿ ಬರ್ಮಾರಾಜ್ಯದ ಸಂಪಾದನಕ್ರಮವು ಪ್ರತಮೋಪಮಾಡದ್ದಾಗಿದ್ದರೆ, ಅದು ಸಂಪೂರ್ಣವಾಗಿ ಕೈವಶವಾಗಿ ಸ್ವಸ್ಥಿತಿಗೆ ಬರುವದಕ್ಕೆ ಮುಂಚಿತವಾಗಿ ಶೂರರಾಗಿಯೂ, ಬಹಳ ಸಹಾಯಕರಾಗಿಯೂ ಇದ್ದ ಒಬ್ಬ ಆಫೀಸರನ್ನು ಸದರೀ ರಾಜ್ಯಕ್ಕೆ ನರಬಲಿ ಕೊಟ್ಟಂತೆಯಾದದಕ್ಕೋಸ್ಕರ ಚಿಂತಿಸುವೆವು.

ಜನರಲ್ ಮಕ್‌ಫರ್‌ಸನ್‌ಯವರು ಗತಿಸಿದ್ದರಿಂದ ಈಗ ಖಾಲಿಯಾಗಿರುವ ಅವರ ಕೆಲಸಕ್ಕೆ ಅನ್ಯರೊಬ್ಬರು ಖಾಯಮಾಗಿ ನೇಮಕರಲ್ಪಡುವ ತನಕ ಬೆಂಗಳೂರು ಡಿವಿಜನ್ ಕಮಾಂಡಿಂಗ್ ಆಫೀಸರಾಗಿಯೂ, ಅವರಿಗೆ ಎರಡನೇ ಸೀನಿಯರ್ ಆಫೀಸರಾಗಿಯೂ, ಇರುವ ಮೇಜರ್ ಜನರಲ್ ಲೋಲಾಂಡ್ಸ್, ಏ ಸಿ. ಸಿ. ಬಿ ಯವರನ್ನು ಮುಂಗಾಮಿಯಾಗಿ ಕಮಾಂಡರಿನ್‌ಚೀಫರಾಗಿರುವ ಕೆಲಸ ನಿರ್ವಹಿಸುವಂತೆ ಗವರ್ನರವರು ಅಜ್ಞಾಪಿಸಿರುತ್ತಾರೆ. ಮೇಜರ್ ಜನರಲ್ ಲೋಲಾಂಡ್ಸ್‌ಯವರು ೧೮೪೨ನೇ ಇಸವಿಯಲ್ಲಿ ನೌಕರಿಯೊಳು ಪ್ರವೇಶಿಸಿ ೮೪ನೇ ಇಸವಿಯಲ್ಲಿ ಬೆಂಗಳೂರು ಡಿವಿಜನ್ ಕಮಾಂಡಿಂಗ್ ಆಫೀಸರಾಗಿ ನೇಮಕರಲ್ಪಟ್ಟರು. ಇವರು ಹಿಂದಿನ ಕಮಾಂಡರಿನ್‌ಚೀಫರವರಾಗಿದ್ದ ಸರ್. ಫ್ರೆಡರಿಕ್ ರಾಬರ್ಟ ಯವರು ಕೆಲಸವು ಬಿಟ್ಟುಹೋದಮೇಲೆ ಈಗ ಗತಿಸಿದ ಸರ್. ಮೆಕ್‌ಫರ್‌ಸನ್‌ಯವರು ಬಂದು ಚಾರ್ಜುತೆಗೆದುಕೊಳ್ಳುವತನಕ ಸದರೀ ಕಮಾಂಡರಿನ್‌ಚೀಫ್‌ಕೆಲಸವನ್ನು ಮುಂಗಾಮಿಯಾಗಿ ನೋಡುತಲಿದ್ದರು. ಈಗ ಖಾಲಿಯಾಗಿರುವಕೆಲಸಕ್ಕೆ ಬರ್ಮಾಯುದ್ಧಸೇನಾಧಿಪತ್ಯವಂ ವಹಿಸಿ, ಫಲ ಕನಕ ಸಮೃದ್ಧವಾದ ದೇಶವನ್ನು ನಿರಾಯಾಸವಾಗಿ ಸಂಪಾದಿಸಿಕೊಟ್ಟ ಜನರಲ್ ಪ್ರೆಂಡರ್‌ಗ್ಯಾಸ್ಟ್‌ಯವರು ಬಹುಶಃ ನೇಮಕರಲ್ಪಡುವರೆಂದು ಮದರಾಸ್ ಪತ್ರಿಕೆಗಳು ತಿಳಿಸುತಿವೆ. ಇದು ಹೀಗಿರಲಿಕ್ಕಾಗಿ, ಮಹಾರಾಜ್ಞೀ ಪುತ್ರರಾದ ಡ್ಯೂಕ್‌ಆಫ್ ಕಾನಾಟಿಯವರೇ ಕಮಾಂಡರಿನ್‌ಚೀಫರಾಗಿ ಬರುವರೆಂದು ಇನ್ನೂ ಕೆಲವುಪತ್ರಿಕೆಗಳು ಸೂಚಿಸುತಿವೆ. ಎರಡನೆಯ ಏರ್ಪಾಡು ನಿಜವಾಗಿದ್ದು ಅವರುತೆ ನಡೆದರೆ ಎಲ್ಲರಿಗೂ ಬಹಳ ಸಂತೋಷಕರವಾಗಿರುವದು.

Occasional Notes.
ನೈಮಿತ್ತಿಕವಿಷಯನ್ಯಾಸ.

—:0:—

Cholera.—ಹೈದರಾಬಾದ್ ಚಂದ್ರಘಾಟ ಪಟ್ಟಣ ಸೈರೆಪ್ರಾಂತದಲ್ಲಿ ಉಬಾಲೆಜಾಡ್ಯ ಉಪದ್ರವತಲೆದೋರಿರುವಂತೆಯೂ, ಈತಿಂಗಳ ಗುರ್ರೇತಾರೀಖ್‌ಮೊದಲು, ೧೧ನೇ ತಾರೀಖ್‌ವರಿವಿಗೆ ಸದರೀ ಜಾಡ್ಯದಿಂದ ೧೧ಮಂದಿ ಮೃತಪಟ್ಟರೆಂತಲೂ ಮದರಾಸ್‌ಪತ್ರಿಕೆ ಯೊಂದು ತಿಳಿಸುತಿದೆ.

—

The Cashmere Dewanship.—ಕಾಶ್ಮೀರಸಂಸ್ಥಾನದ ದಿವಾನರಾದ ಗೋವಿಂದಸಹಾಯ್ ಯೆಂಬವರು ಸದರೀಕೆಲಸದಲ್ಲಿ ಖಾಯಮಾಗಿ ನಿಯಮಿಸಲ್ಪಟ್ಟು, ರಾಜ್ಯಭಾರದ ನಿಶಿಷ್ಟ ಆಡಳಿತಕ್ಕೂ ಜವಾಬುದಾರರನ್ನಾಗಿ ಮಾಡಲ್ಪಡುವರು.

—

Abolition of the Tirupathy Municipality.—ತಿರುಪತಿ ಮ್ಯೂನಿಸಿಪಾಲಿಟಿಯಿಂದ ಏನೂ ಪ್ರಯೋಜನವಿಲ್ಲವಾಗಿ ಅದನ್ನು ವಜಾ ಮಾಡುವದು ಯುಕ್ತವೆಂದು ಮೆ|| ಕೆನ್ನೀಯೆಂಬವರು ಗವರ್ನಮೆಂಟಿಗೆ ಸಿಫಾರಸ್ಸುಮಾಡಿ ಬರೆದಿರುವಂತೆಯೂ, ಸದರೀ ಸಲಹೆಯಪ್ರಕಾರ ಅವರು ಅದನ್ನು ತೆಗೆಯುವ ತಜವಿಜನಲ್ಲಿದಾರೆಂತಲೂ ಕೇಳುತ್ತೇವೆ

—

A project abandoned.—ಪಂಜಾಬದೇಶದಲ್ಲಿ ವ್ಯವಸಾಯ ಶಾಸ್ತ್ರಪಾಠಶಾಲೆಯೊಂದನ್ನೇರ್ಪಡಿಸಬೇಕೆಂದು ಮಾಡಲ್ಪಟ್ಟ ಪ್ರಯತ್ನವು, ಅದಕ್ಕೆ ಬೇಕಾದ ದ್ರವ್ಯಸಹಾಯ ಮಾಡುವದಕ್ಕೆ ಡಿ|| ಬೋರ್ಡವರು ಸಮ್ಮತಿಸದೆಹೋದದರಿಂದ ಕೈಬಿಡಲ್ಪಟ್ಟಿತು. ಅಂತಾ ಪಾಠಶಾಲೆಗಳನ್ನು ಸ್ಥಾಪಿಸುವದಕ್ಕೆ ಗವರ್ನಮೆಂಟಿನವರಿಗೆ ಸುತರಾಂ ಉಪಪತ್ತಿಸಾಲದೆಂದು ಪಂಜಾಬದೇಶದ ಲೆಪ್ಟಿನೆಂಟ ಗವರ್ನರವರು ಒಪ್ಪಿಕೊಳ್ಳುತ್ತಾರೆ

—

Sale of India Postal Notes.—ಇಂಪೀರಿಯರ್ ಪೋಸ್ಟಾಫೀಸ್‌ಗಳಲ್ಲಿ ಮಣಿಆರ್ಡರುತ ಚಿಲ್ಲರೆ ಮೊಬಲಗುಗಳಿಗೆ ಪೋಸ್ಟಲ್ ನೋಟ್ಸ್ ಯೆಂಬ ಹುಂಡೀ ಚೀಟಿಗಳು ಮಾರುತಲಿದ್ದರಷ್ಟೆ. ಸದರೀ ಏರ್ಪಾಡು ಈ ತಿಂಗಳ ೧೪ನೇ ತಾರೀಖ್ ಮೊದಲು ಮೌಖೂಫ್ ಮಾಡಲ್ಪಟ್ಟತೆಂದು ಪೋಸ್ಟಮಾಸ್ಟರ್ ಜನರಲ್‌ಯವರು ತಿಳಿಸಿ ಇರುತ್ತಾರೆ,

—

The Lahore Durbar.—ಕ್ಷಿಪ್ರದಲ್ಲಿ ಲಾಹೋರನೊಳು ನಡೆಯುವದಾಗಿರುವ ದರ್ಬಾರಿಗೆ ಬರುವ ಉದ್ದೇಶದೊಡನೆ ಕಾಶ್ಮೀರದ ಮಹಾರಾಜರವರು ಈತಿಂಗಳ ೨೪ನೇ ತಾರೀಖಿನಲ್ಲಿ ತಮ್ಮ ರಾಜಧಾನಿಯಿಂದ ಪ್ರಯಾಣವಾಗುವವರಾಗಿದಾರೆ ಪತ್ತಿಯಾಲಾ ಮಹಾರಾಜರವರು ಕಾಹಿಲೇ ಸಬಬ್ ಬರಲಾರರೆಂದು ಕಾಣುತಿದೆ. ರಿಯಾಸ್ ಮತ್ತು ನಭಾ ಸಂಸ್ಥಾನಗಳ ಅರಸರು ಕಾಹಿಲೇ ಯಾಗಿರುತ್ತಾರಾಗಿ ಅವರು ಬರಬೇಕಾದ್ದಿಲ್ಲವೆಂದು ಲೆಪ್ಟಿನೆಂಟ ಗವರ್ನರವರು ತಿಳಿಸಿರುತ್ತಾರೆ.

—

The late riots at Etawah and Delhi ಈಚೆಗೆ ಯಟವಾ ಮತ್ತು ದಹಲಿಯಲ್ಲಿ ಹಿಂದೂಗಳಿಗೂಮಹಮ್ಮದೀಯರ್‌ಜನಗಳಿಗೂ ನಡೆದಕಲಹದ ವಿಷಯವನ್ನು ವಿಚಾರಮಾಡುವಲ್ಲಿ ಅಲಹಾಬಾದ್ ಪಯೋನಿಯರ್ ಪತ್ರಿಕೆ ಹೇಳುವದೇನಂದರೆ"—ಹಿಂದೂ ಜನಗಳೂ ಮುಸಲ್ಮಾನರೂ ಐಕಮತ್ಯದಲ್ಲಿದಾರೆಂದು ಹೇಳುತ್ತಾರೆಯೇ ಹೊರತು ಅವರಿಗೆ ಸಹೃದಯವಿಲ್ಲವೆಂಬವು ಸ್ಪಷ್ಟವಾಗಿ ಕಾಣುತಿದೆ ಸದರೀಯವರಿಬ್ಬರೂ ಮತವಿರುದ್ಧಕವಾದ ದ್ವೇಷಾಸೂಯೆಗಳನ್ನು ತೀರಿಸಿಕೊಳ್ಳುವ ವಿಷಯದಲ್ಲಿ ಸ್ವತಂತ್ರಿಸಿ ಪ್ರವೃತ್ತಿಸಿದರು. ಮತ್ತು ಅವರನ್ನು ಅಣಗಿಸುವದಕ್ಕೆ ದೇಶದಲ್ಲಿ ರಾಜಾಜ್ಞೆಯಿಲ್ಲದೆ ಇರುವದಾದರೆ, ಈ ಸಬಬುತೆ ಸದರೀ ಎರಡು ಮತದವರ ಹಬ್ಬಗಳು ಏಕಕಾಲದಲ್ಲಿ ಪ್ರಾಪ್ತವಾಗಲು ಒಬ್ಬರನ್ನೊಬ್ಬರು ಕಡಿದುಕೊಂಡು ಪ್ರಾಣಬಿಡುವರು. ಎಟವಾ ಮತ್ತು ದಹಲಿಯಲ್ಲಿರುವ ಮಹಮ್ಮದೀಯರ್ ಜನಗಳು ಪ್ರಕೃತ ಸಂದರ್ಭದಲ್ಲಿ ಸಂಪೂರ್ಣ ಅಕ್ರಮ ನಡೆಸಿದವರಾಗಿರುತ್ತಾರೆಂದು ನಾವು ಹೇಳಬೇಕಾಗಿದೆ, ಎಂಬದು.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕಜಾತ್‌ವೃತ್ತಾಂತಗಳು

—

Increase of pay.—ದಿವಾನರವರ ಆಫೀಸ್ ಜನರಲ್ ಇಲಾಖೆಯಲ್ಲಿ, ಖೀಯಿಸುಂ ೩೦ ರೂ|| ಗಳಂತೆ ಇಬ್ಬರಿಗೂ,೧೦ ರೂ|| ಗಳಂತೆ ಐದುಮಂದಿಗೂ, ೫ ರೂ|| ಗಳಂತೆ ಯೆಂಟುಮಂದಿಗೂ ಪರ್ಸನಲ್ ಅಲೋವೆನ್ಸ್ ತರೀಖ್ ಇಜಾಫ ಕೊಟ್ಟಪ್ರಕಾರಂತೆ ಕೇಳುತ್ತೇವೆ.

—

Mr Chengaiya Chetty, B A —ಇಲ್ಲಿನ ಸೂಪರಿಂಟೆಂಡಿಂಗ್ ಇಂಜನಿಯರ್ ಆಫೀಸ ಮ್ಯಾನೇಜರಾದ ಮ|| ಚೆಂಗಯ್ಯಶೆಟ್ಟಿ ಬಿ. ಎ ಯವರ ಮೈಸೂರಿಗೆಬಂದು ಹಾಜರಾಗುವಂತೆ ದಿವಾನರವರು ಹುಕುಂ ಮಾಡಿರುತ್ತಾರೆಂತಲೂ, ಬಹುಶಃ ಇವರಿಗೆ ಅಮಲ್‌ದಾರೀ ಕೊಡಲ್ಪಡುವದೆಂತಲೂ ಪ್ರವಾದವುಂಟಾಗಿದೆ.

—

A rumour.—ಬನಾನಾಜಪ್ತೀ ಕೆಲಸಕ್ಕೆ ನೇಮಕರಲ್ಪಟ್ಟ ಮೆ|| ವೀರಾಸಾಮಿಮೊದಲಿಯಾರ್‌ರವರ ಸ್ಥಾನಕ್ಕೆ ಬೆಂಗಳೂರು ಅಮಲ್‌ದಾರರವರೂ, ಇಲ್ಲಿಗೆ ದೇವನಹಳ್ಳಿ ಅಮಲ್‌ದಾರರಾಗಲಿ ದೊಡ್ಡಬಳ್ಳಾಪುರದ ಅಮಲ್‌ದಾರರಾಗಲಿ ವರ್ಗಮಾಡಲ್ಪಡುವರೆಂತಲೂ ಪ್ರವಾದ ವುಂಟಾಗಿರುತದೆ.

—

Appointment.—ಗತಸಂವತ್ಸರದ ಬಿ ಎ ಪರೀಕ್ಷೆಯಲ್ಲಿ ತೇರ್ಗಡೆಯಾದವರಾಗಿಯೂ, ಹಿಂದೆ ನಂದೀದುರ್ಗ ದಿವಿಜನ್ ಹೆಡ್ ಶಿರಸ್ತೆದಾರರಾಗಿದ್ದ ಮೆ. ಗುಂಡೂಪಂತರವರ ಮೊಮ್ಮಕ್ಕಳಾಗಿಯೂ ಇರುವ ಮೆ ಕೃಷ್ಣಸ್ವಾಮಿ ರಾಯರವರಿಗೆ ದಿವಾನರ ಆಫೀಸನಲ್ಲಿ ಒಂದು ಕೆಲಸ ಕೊಡಲ್ಪಡುವದೆಂದು ಕೇಳಲಿಕ್ಕೆ ಬಹಳ ಸಂತೋಷಿಸುತ್ತೇವೆ ಇವರ ತಲಬ್ ಇಷ್ಟೆಂದು ಇನ್ನು ಗೊತ್ತಾಗಲಿಲ್ಲವು. ವರುತು ಅವರ ತಲಬ್ ಅವರ ಮಹ ಗೌರವಕ್ಕೆ ಅನುಗುಣವಾಗಿರುವದೆಂದು ನಂಬುತ್ತೇವೆ.

—

Mr Pigott, M A —ಇಲ್ಲಿನ ಸೆಂಟ್ರಲ್ ಕಾಲೇಜ್ ಪ್ರೊಫೆಸರಾಗಿ ಈಚೆಗೆ ಇಂಗ್ಲಾಂಡಿನಿಂದ ಬಂದ ಮೆ ಪಿಗಾಟ ಯೆಂಬವರಿಗೆ ಈಗ ಮಾಹೆಯಾನಾ ನಾನೂರು ರೂಪಾಯಿ ಗಳ ಪ್ರಕಾರ ವಿಂಗಡಿಸಿ ಮುಂದೆ ಐದು ಸಂವತ್ಸರಗಳಿಗೊಂದಾವರ್ತಿ ೧೦೦ ರೂಪಾಯಿಗಳವರೆಗೆ, ೮೦೦ ರೂಪಾಯಿಗಳ ತನಕ ಇಜಾಫ ಕೊಡಲ್ಪಡುವದೆಂತಲೂ, ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುತದೆ.

—

The weather.—ಈಸಂವತ್ಸರದಲ್ಲಿ ಹಿಂದೆ ಆಗಿದ್ದಾಗ್ಯೆ ಆದ ಪ್ರಬಲವರ್ಷಗಳ ದೆಸೆಯಿಂದ ಕೆರೆಕುಂಟೆಗಳು ತುಂಬಿರುವದಲ್ಲದೆ ಆಗಿದ್ದಾಗ್ಯೆ ಬೀಳುತಲಿರುವ ತುಂತುರುಮಳೆಯಿಂದ ರಾಗಿ ಪೈರು ಸಂಪೂರ್ಣ ಫಲದಾಯಕ ವಾಗುವದಕ್ಕೆ ಸಂದೇಹವಿಲ್ಲವು. ಇನ್ನು ಕಾಲಕ್ರಮೇಣ ಎಲ್ಲಾ ಪದಾರ್ಥಗಳ ಧಾರಣೆಗಳು ಇಳಿದು ಕ್ಷೇಮವುಂಟಾಗಬಹುದೆಂದು ತೋರುತಿದೆ.

—

The Mysore Govt. Press.—ಈಗ್ಯೆ ಅನೇಕ ಸಂವತ್ಸರಗಳ ಮೊದಲು ಈ ಗವರ್ನಮೆಂಟ ಪ್ರೆಸ್ ಆಫೀಸ್ ಮ್ಯಾನೇಜರ್ ಕೆಲಸವನ್ನು ನಿರುಪಚಾರವಾಗಿ ನೋಡುತಲಿದ್ದ ಮೆ. ರಂಗಯ್ಯನವರು ತಮ್ಮ ಕೆಲಸದಿಂದ ನಿವೃತ್ತರಾಗತಕ್ಕದ್ದೆಂದು ದಿವಾನರವರು ಮಾಡಿದ ಹುಕುಂ ಪ್ರಕಾರ ಕಳೆದ ತಿಂಗಳ ಮೊದಲು ಮೂರು ತಿಂಗಳ ಕಾಲ ಪ್ರಿವಿಲೇಜ್ ರಜಾ ಪಡಕೊಂಡಿರುತ್ತಾರಾಗಿ ಅದು ತೀರಿದ ಕೂಡಲೇ ತಮ್ಮ ಕೆಲಸದಿಂದ ನಿವೃತ್ತರಾಗುವರೆಂದು ಕೇಳುತ್ತೇವೆ. ಮುಂದೆ ಮ್ಯಾನೇಜರ್ ಇಸಂ ಮೌಖೂಫ್ ಮಾಡಲ್ಪಟ್ಟು ಕಂಪೆನಿಯವರ ಲೀಲೆ ದೆಪ್ಯುಟಿ ಮ್ಯಾನೇಜರೇ ಸದರೀ ಕೆಲಸದಲ್ಲಿ ನಿಯಮಿಸಲ್ಪಡುವರೆಂದು ಕೇಳುತ್ತೇವೆ.

Huzoor Khajana Buckshi's Post. ಮಾಹೇ ಮಜಕೂರ್ ೮ನೇ ತಾರೀಖಿನ ಈ ಪತ್ರಿಕಾ ಮೂಲಕ ನಾವು ಸೂಚಿಸಿದ್ದ ಪ್ರಕಾರ ಹುಜೂರ್ ಖಜಾನೆ ಬಕ್ಷೀ ಕೆಲಸವು ಗತಿಸಿದ ಮೆ. ವೆಂಕಟಾಚಲ ಮುದಲಿಯಾರ್‌ರವರ ತಮ್ಮಂದಿರಾದ ಮೈಸೂರು ಅಮಲ್‌ದಾರ ಮೆ. ವೀರಾಸಾಮಿ ಮುದಲಿಯಾರವರಿಗೆ ಕೊಡಲ್ಪಟ್ಟಿತೆಂಬ ವೃತ್ತಾಂತವಂ ಕೇಳಿ ಬಹಳ ಸಂತೋಷಿಸುತ್ತೇವೆ. ಸದರೀ ಕೆಲಸಕ್ಕೆ ಮೆ ವೀರಾಸಾಮಿ ಮುದಲಿಯಾರ್‌ರವರೇ ಅರ್ಹರೆಂತಲೂ, ಅವರಿಗೆ ಕೊಟ್ಟರೇನೇ ನ್ಯಾಯವಾಗಿರುವದೆಂತಲೂ, ಯಾವ ಅಭಿಪ್ರಾಯದ ಮೇರೆ ಯೆಲ್ಲರಿಗಿಂತಲೂ ಮೊದಲು ನಾವು ಸೂಚಿಸಿದೆವೋ ಅದೇ ಸತ್ಯಾಭಿಪ್ರಾಯವೇ ದಿವಾನರವರಿಗೂ ಉಂಟಾಗಿರಬಹುದೆಂಬದಕ್ಕೆ ಅವರುಮಾಡಿದ ಈ ಏರ್ಪಾಡೇ ಸಾಕ್ಷಿಯಾಗಿರುತಿದೆ. ಶ್ಲಾಘ್ಯವಾದ ಪ್ರಸಕ್ತ ಏರ್ಪಾಡಿನಿಂದ ದಿವಾನರವರು ಹಿಂದಿನವರ ವಂಶ ಗೌರವವನ್ನೂ, ಚಿರಕಾಲಿಕವಾದ ಅವರ ಇಲ್ಲಿನ ಸಂಬಂಧವನ್ನೂ, ಅರ್ಹತೆಯನ್ನೂ ಯೇಕಕಾಲದಲ್ಲಿ ಪುರಸ್ಕರಿಸಿ ಗೌರವಿಸಿದಂತೆಯಾಯಿತು. ಮುಖ್ಯವಾಗಿ ಮೆ. ವೆಂಕಟಾಚಲ ಮುದಲಿಯಾರ್‌ರವರ ಕಾಲಾನಂತರ ಬಕ್ಷೀಗಿರಿಗೆ ಬರಲಿಕ್ಕೆ ಅರ್ಹರನೇಕರಿದ್ದಾಗ್ಯೂ ದಿವಾನರವರು ಉಚಿತಜ್ಞತೆಯೊಡನೆ ಮಾಡಿದ ಈಗಿನ ಏರ್ಪಾಡಿನಂತೆ ಅನ್ಯರ ನೇಮಕರಾತಿಯು ಎಲ್ಲರಿಗೂ ಸಂತೋಷಕರವಾದದ್ದಾಗಿರಲಾರದು. ಮೆ. ವೀರಾಸಾಮಿಮುದಲಿಯಾರ್‌ರವರು ತಮ್ಮ ಅಣ್ಣಂದಿರುತೆ ಸಮಾನ ಅಧಿಕಾರವೇತನವಂ ಬದ್ಧಿಯನ್ನು ಹೊಂದಿ ಅವರ ಸ್ಥಾನಾಪನ್ನರಾಗಿಯೇ ನೇಮಕರಾಗಿರುವದರಿಂದ ಹಿಂದಿನವರ ಕೀರ್ತಿ ಪ್ರಾಶಸ್ತ್ಯಗಳೇ ಇವರನ್ನೂ ಅನುವರ್ತಿಸುವವೆಂದೇಳಸುತ್ತೇವಲ್ಲದೆ ಅವರಿಗುಂಟಾದ ಸಂತೋಷಾಧಿಕಾರಗಳಿಗಾಗಿ ನಾವು ಈ ಸಂದರ್ಭದಲ್ಲಿ ಶುಭವಾದನ ಮಾಡುವೆವು. ಖಜಾನೆ ಬಕ್ಷೀ ಕೆಲಸಕ್ಕೆ ಇದುವರಿವಿಗೂ ಇದ್ದ ೮೦೦ ರೂಪಾಯಿಗಳ ತಲಬ ೬೦೦ರಕ್ಕೆ ತಗ್ಗಿಸಲ್ಪಟ್ಟಿತೆಂದು ಕೇಳುತ್ತೇವೆ.

TELEGRAPHIC SUMMAMRY
ತಂತಿವೃತ್ತಾಂತ ಸಂಗ್ರಹವು.

—

ಪೇರಿಸ್, ೧೫ನೇ ಅಕ್ಟೋಬರ್.—ಲಂಡನ್ ಪತ್ರಿಕೆಗಳು ಫ್ರಾಂಚಿನವರ ಮೇಲೆಮಾಡಿದ ಆಕ್ಷೇಪಣೆಗಳಿಗೆ ಜವಾಬ್ ಕೊಡುವಲ್ಲಿ ಫ್ರಾಂಚ್‌ದೇಶದ ವೃತ್ತಾಂತ ಪತ್ರಿಕೆಗಳು ತಿಳಿಸುವದೇನಂದರೆ, ಫ್ರಾಂಚಿನವರು ಯುದ್ಧಪ್ರಯತ್ನಗಳು ಮಾಡುತ್ತಾರೆಂತಲಾಗಲಿ ಏತಾರಿಗಳು ನಡೆಸುತ್ತಾರೆಂತಲಾಗಲಿ ಹೇಳುವದನುಚಿತವಾದದ್ದು, ಫ್ರಾಂಚ್ ಸರ್ಕಾರಕ್ಕೆ ಸಮಾಧಾನದಲ್ಲಿ ಅಭಿಪ್ರಾಯವೇ ಹೊರ್ತು ಅನ್ಯಥಾ ಅಲ್ಲವು, ಅವರ ಸೇನೆಯಾದರೋ ತಮ್ಮ ರಕ್ಷಣೆಗೆ ಹೊರತು ಅನ್ಯರಮೇಲೆ ಯುದ್ಧಮಾಡುವದಕ್ಕಲ್ಲವು, ಎಂಬದು.

ಲಂಡನ್, ೧೬ನೇ ಅಕ್ಟೋಬರ್.—ಬಲ್ಗೇರಿಯಾದೇಶದ ಅರಸರಾದ ಪ್ರಿನ್ಸ್ ಅಲೆಗ್ಸಾಂಡರ್ ಯವರು ರಾಜ್ಯವಂ ಬಿಟ್ಟು ಹೊರಟುಹೋದರಷ್ಟೆ, ಸದರೀಯವರಿಗೆ ಬದಲು ಒಬ್ಬರನ್ನು ಚುನಾಯಿಸಬೇಕಾದ ಅಂಶವನ್ನು ಕುರಿತು ದೊಡ್ಡ ಸಂಸ್ಥಾನಾಧಿಪತಿಗಳು ಚರ್ಚಿಸುತಲಿದಾರೆ.

ಇಂಗ್ಲಾಂಡದೇಶದಪ್ರಕೆ ಯೆಲ್ಲಾಕಡೆಯಲ್ಲೂ ನಾಶಕರವಾದ ಬಿರುಸೂಳಿ ಹೊಡೆದು ಅನೇಕ ಸ್ಥಳಗಳಲ್ಲಿ ಜಲಪ್ರಳಯ ವುಂಟಾಯಿತು. ಜಹಜುಗಳು ಅನೇಕವಾಗಿ ಒಡೆದುಹೋಗಿ ಪ್ರಾಣಹಾನಿಗಳು ಬಹಳವಾಗಿ ಆಯಿತು.

ಸೋಫಿಯಾ, ೧೭ನೇ ಅಕ್ಟೋಬರ್.—ರಾಜಪ್ರತಿನಿಧಿ ಸಭೆಯು ಈ ತಿಂಗಳ ೨೭ನೇ ತಾರೀಖಿನಲ್ಲಿ ಸೇರಬೇಕೆಂದು ಯೇರ್ಪಾಡಾಗಿರುತಿದೆ. ಬಲ್ಗೇರಿಯಾ ದೇಶಕ್ಕೆ ಮುಂದಿನ ಅರಸರ ಚುನಾವಣೆಯ ವಿಷಯದಲ್ಲಿ ತುರ್ಕೀ ಸುಲ್ತಾನರವರ ಅಭಿಪ್ರಾಯವನ್ನು ತಿಳಿದು ಬರತಕ್ಕಬಗ್ಯೆ ಬಲ್ಗೇರಿಯಾ ಸರ್ಕಾರದವರು ತಮ್ಮಕಡೆ ಯೊಬ್ಬರನ್ನು ಕಾನ್‌ಸ್ಟಾಂಟಿನೋಪಿಲ್ ಪಟ್ಟಣಕ್ಕೆ ಕಳುಹಿಸುತಲಿದಾರೆ

ಬಳ್ಳಾರಿ, ೨ನೇ ಅಕ್ಟೋಬರ್.—ಮ್ಯೂನಿಸಿಪಾಲಿಟಿಯವರ ಮನಸ್ಸಿನ ವರ್ತನೆಕ್ಕಾಗಿ ಎಲ್ಲಾ ಅಂಗಡಿಗಳೂ ಷಾಪುಗಳೂ ಬಂದುಮಾಡಲ್ಪಟ್ಟವು. ಮ್ಯೂನಿಸಿಪಾಲಿಟಿಯ ಪ್ರೆಸಿಡೆಂಟರನ್ನು ತೆಗೆದು ಹಾಕಬೇಕೆಂದು ಪ್ರಜೆಗಳು ಉದ್ಯೋಗಿಸುತಲಿದ್ದಾರೆ. ಇದಕ್ಕೆ ಕಾರಣವನ್ನು ವಿಚಾರಿಸಲಾಗಿ ಅವರು ಸ್ವತಂತ್ರಿಸಿ ಮ್ಯೂನಿಸಿಪಲ್ ತೆರಿಗೆ ಹಾಕಿದ್ದೇ ಎಂದು ತಿಳಿಯಬರುತ್ತದೆ.

THE MYSORE REPRESENTATIVE ASSEMBLY,—1886

ಗತವಾರದಶೇಷವು

ರೈಲ್ವೆ—ಗತಸಾಲಿನಲ್ಲಿ ತುಮಕೂರು ಗುಬ್ಬಿ ರೈಲ್ವೆ ತಯಾರಿಗೋಸ್ಕರ ಮೂಲಧನವು ೪,೧೬,೮೩೩ ರೂಪಾಯಿಗಳು ಖರ್ಚಾಗಿರುತ್ತೆ. ಇದುವರಿಗೆ ಪ್ರಾರಂಭಿಸಿದ ೧೪ ಮೈಲಿಗಳ ರೈಲ್ವೆ ಲೈನಿನಿಂದ ಕಳೆದ ಸಾಲಿನಲ್ಲಿ ೪,೪೩ [illegible] ರೂಪಾಯಿಗಳು ಹುಟ್ಟುವಳಿಯಾಯಿತು. ಇವರಲ್ಲಿ ಟ್ರಾಂವೆ ವರ್ಕ್ಸಿನ ಖರ್ಚು [illegible] ರೂಪಾಯಿಗಳು ವಜಾ ಜಾತಾ ನಿವಳ ೨,೧೫,೯೩೩ ರೂಪಾಯಿಗಳು ನಷ್ಟವಾಗಿವೆ. ರೈಲ್ವೆ ತಯಾರಿಗೋಸ್ಕರ ೧೮೮೬ನೇ ಇಸವಿ ೩೧ನೇ ಮಾರ್ಚವರಿಗೆ ಖರ್ಚಾಗಿರುವ ಮೂಲಧನವಾದ ೧೮,೨೨೩ ರೂಪಾಯಿಗಳ ಮೇಲ್ಕಂಡ ನಿವ್ವಳ ಮೊಬಲಗನ್ನು ಹೂಡಿದರೆ ಸೇಕಡಾ ೩—೫—೪ ಆಗುತ್ತೆ.

ನಮ್ಮ ರೈಲ್ವೆಯನ್ನು, ದಕ್ಷಿಣ ಮಹಾರಾಷ್ಟ್ರದ ರೈಲ್ವೆ ಕಂಪೆನಿಯವರಿಗೆ ವಹಿಸಿಕೊಡುವಬಾಬಿನಲ್ಲಿ ನಡೆಯುತ್ತಿದ್ದ ಪತ್ರವಿಷಯಗಳ ಸ್ವಭಾವವನ್ನು ತಮಗೆ ಸಂಕ್ಷೇಪವಾಗಿ ಕಳೆದ ಸಂವತ್ಸರದಲ್ಲಿ ತಮಗೆ ತಿಳಿಸಿದ್ದೆವಷ್ಟೆ. ಅವರಿಂಡೀಯಾ ಸ್ಟೇಟ್ ಸೆಕ್ರೆಟರಿಯವರು ಮೈಸೂರು ಸಂಸ್ಥಾನದ ಪರವಾಗಿ ಏರ್ಪಾಡುಗಳನ್ನು ಪ್ರತ್ಯೇಕಿಸಿರುತ್ತಾರೆ. ಈ ಕರಾರಿನ ಪ್ರಕಾರ ಸದರೀ ಕಂಪೆನಿಯವರು ೧೨,೦೦,೦೦೦ ಪೌಂಡುಗಳ ಸಾಲವನ್ನು ತೆಗೆದು ಸ್ಟೇಟ್ ಸೆಕ್ರೆಟರಿಯವರಲ್ಲಿ ಸಾಲವಾಗಿ ಕೊಡಬೇಕೆಂದು ವಹಿಸಿರುತ್ತಾರೆ. ಈ ಸಾಲಾ ತೆಗೆಯುವ ಕಾಲದಲ್ಲಿ ನಿಲಾಯತಿಯಲ್ಲಿ ನಗದು ಹಣಕ್ಕೆ ವಿಶೇಷವಾದ ಗಿರಾಕಿಯಿದ್ದ ಸಬಬು ಸೇಕಡಾ ವರುಷ ೧ಕ್ಕೆ ೪ ದಮೇರೆ ಬಡ್ಡಿಗೆ ಸಾಲಾ ತೆಗೆಯಬೇಕಾಗಿಬಂತು. ಅದ್ದರಿಂದ ಹೋದಸಂವತ್ಸರದಲ್ಲಿ ತಮಗೆ ತಿಳಿಸಿದ್ದಮೇರೆ ಸೇಕಡಾ ೩½ಗೆ ಬದಲಾಗಿ ನಾವು ಆ ಕಂಪೆನಿಯವರಿಗೆ ಸೇಕಡಾ ೪ರ ಮೇರೆಯೇ ಬಡ್ಡಿಯನ್ನು ಕೊಡಬೇಕಾಗಿಬಂತು. ಶಿವಾಯಿ ಕಳೆದವರುಷದ ಸರಿಯಾಗಿ ನಮೂದಿಸಿದ್ದ ಮೊಬಲಗಿಗಿಂತ ಬಹಳ ಜಾಸ್ತಿ ಮೊಬಲಗಿನಮೇಲೆ ಈ ಜಾಸ್ತಿ ದರದ ಬಡ್ಡಿಯನ್ನು ಕೊಡಬೇಕಾಗುತ್ತದಾಗಿ ತಮಗೆ ಪ್ರದರ್ಶಿಸಿದ್ದ ದ್ರವ್ಯ ಸಂಬಂಧವಾದ ಏರ್ಪಾಡುಗಳನ್ನು ಈಚೆಗೆ ವಿಶೇಷವಾಗಿ ಬದಲಾಯಿಸಬೇಕಾಗಿಬಂತು. ಈಗ ನಡೆದಿರತಕ್ಕ ಕರಾರಿಗೂ ಕಳೆದಸಭೆಯಕಾಲದಲ್ಲಿ ನಾವು ತಮಗೆ ತಿಳಿಸಿದ ಷರತ್ತುಗಳಿಗೂ ಇತರ ಭಾಗಗಳಲ್ಲಿ ವ್ಯತ್ಯಾಸವೇನೂ ಇರುವದಿಲ್ಲ. ಆದರೆ ಕಂಟ್ರ್ಯಾಕ್ಟು ದಸ್ತ್ರವಜೀರ ಕಾಪಿಯಾಗಲಿ ಈ ಭಾಗದಲ್ಲಿ ಇಂಡಿಯಾ ಗವರ್ನಮೆಂಟಿನವರ ಫೈನಾನ್ಸಿಯಲ್ ಅಪ್ಪಣೆಯಾಗಲಿ ಇನ್ನೂ ತಲುಪಿಯಿಲ್ಲವಾದ್ದರಿಂದ ಈಸಂಬಂಧವಾಗಿ ಹೆಚ್ಚುಸಮಾಚಾರವನ್ನು ತಮಗೆ ತಿಳಿಸುವದಕ್ಕಾಗಲಿ ಕಂಪೆನಿಯವರಿಗೆ ನಿಷ್ಕರ್ಷೆಯಾಗಿ ಸಾಲೀಯಾನಾ ಕೊಡತಕ್ಕ ಭಾರಿಬಡ್ಡಿಯನ್ನು ಸರೀಸಾಗಿ ಸಲ್ಲುವ ವಿಷಯದಲ್ಲಿ ಆಗಲಿ ಕಂಟ್ರ್ಯಾಕ್ಟು ಪ್ರಕಾರ ೫೦ ವರುಷಗಳ ತರುವಾಯ ಸಾಲದಮೊಬಲಗನ್ನು ಯಾವಪ್ರಕಾರ ಸಂದಾಯ ಮಾಡಬೇಕೆಂಬ ವಿಷಯದಲ್ಲಿ ಆಗಲಿ ಮಾಡಬೇಕಾದ ಏರ್ಪಾಡುಗಳ ಫಲಾನೆಯವುಗಳೆಂದು ಖಚಿತವಾಗಿ ಹೇಳುವದಕ್ಕೆ ಪ್ರಸ್ತುತ ಸಾಧ್ಯವಲ್ಲದೆಯಿದೆ.

ಇಂಡಿಯಾ ಗವರ್ನಮೆಂಟಿನವರ ಅಪ್ಪಣೆಮೇರಿಗೆ ನಮ್ಮ ರೈಲ್ವೆಯ ವಿಚಾರಣೆಯು ದಕ್ಷಿಣ ಮಹಾರಾಷ್ಟ್ರ ಕಂಪೆನಿಯವರಿಗೆ ೧೮೮೬ನೇ ಇಸವಿ ಜುಲೈ ಮೊದಲನೇತಾರೀಖಿನಲ್ಲಿ ವಹಿಸಿಕೊಡಲ್ಪಟ್ಟಿತು. ಇದರಿಂದ ಈಗ ನಡೆಯುತ್ತಿರುವರೈಲ್ವೆಯನ್ನು ಅಭಿವೃದ್ಧಿಮಾಡುವ ಮತ್ತು ಮುಂದಕ್ಕೆ ಬಡಾಯಿಸುವ ವಿಷಯದಲ್ಲಿ ದ್ರವ್ಯಾನುಕೂಲತೆ ಮತ್ತು ಜನಸಹಾಯವುಳ್ಳ ಈಕಂಪೆನಿಯವರು ಸರಕಾರದವರಂತೆಯೇ ಆಸಕ್ತಿವುಳ್ಳವರಾಗಿರುವರು. ಸದರಿ ಕಂಪೆನೀಗೆ ಸಂಬಂಧಪಟ್ಟಜನರು ತ್ವರ್ಯದಲ್ಲಿಯೇ ಕೆಲಸಕ್ಕೆ ಪ್ರಾರಂಭಿಸಿ ಸಾಧ್ಯವಾದಷ್ಟು ಜಾಗ್ರತೆಯಲ್ಲಿ ಕೆಲಸವನ್ನು ನಡಿಸುತ್ತಾರೆ ಎಂಬುವದಕ್ಕೆ ಏನೇನೂ ಸಂದೇಹವಿರುವದಿಲ್ಲ.

ಮೈಸೂರುಇಲಾಖೆ ಇಂಜನೀರುಗಳು ಗುಬ್ಬಿಲಾಗಾಯಿತು ಹರಿಹರದವರಿಗೆಹಾಕಿಯಿರುವಮಾರ್ಗಕ್ಕಿಂತಲೂಸಮೀಪವಾದ ಮತ್ತು ನೆಟ್ಟಗೆಇರತಕ್ಕಮಾರ್ಗವನ್ನು ಕಲ್ಪಿಸಬೇಕೆಂಬ ಪ್ರಸಕ್ತಿಯುಂಟಾದುದೇಳೆದಿಯಿತು. ಅದರಸ್ವಲ್ಪಸುತ್ತಾಗಿದ್ದಾಗ್ಯೂ ತಿಪಟೂರು, ಅರಸೀಕೆರೆ, ಕಡೂರು ಬೀರೂರು ಇವುಗಳ ಮೇಲೆ ಹೋಗತಕ್ಕ ಮಾರ್ಗವೇ ಈಸೀಮೆಯ ವ್ಯಾಪಾರಾಭಿವೃದ್ಧಿಗೆ ಅನುಕೂಲವಾದ್ದೆಂಬ ಅಭಿಪ್ರಾಯವನ್ನು ಶ್ರೀಮನ್ಮಹಾರಾಜಾ ಸರ್ಕಾರದವರು ಈಗಲೂ ಅವಲಂಬಿಸಿ ಇರುತ್ತಾರೆ. ಆದರೆ ಈಗ ನಾವು ಹಾಕಿರುವ ಮಾರ್ಗವು ಬದಲಾಯಿಸುವ ಅಂದಾಜು ತೋರುವದಿಲ್ಲ. ಬಳ್ಳಾರಿಗೀಕಡೆ ಒಂದು ರೈಲ್ವೆಯನ್ನು ಹಾಕುವ ಉದ್ದೇಶದಿಂದ ಬೆಂಗಳೂರಿಂದ ಹಿಂದುಪುರದವರಿಗೆ ಒಂದುರೀತಿಯನ್ನು ಸರ್ವೆ ಮಾಡಿ ಈಗ ಗುರುತಾಕುತ್ತಾಯಿದೆ.

ದಕ್ಷಿಣ ಮಹಾರಾಷ್ಟ್ರ ಕಂಪೆನೀಯವರಿಗೆ ವಹಿಸಿಕೊಡುವವರಿಗೆ ನಮ್ಮರೈಲ್ವೆಗೋಸ್ಕರ ದಗಲಿರುವ ಒಟ್ಟುಖರ್ಚನ್ನು ಈಕೆಳಗೆ ತಪಶೀಲ್ವಾರಾಗಿ ತೋರಿಸಿರುತ್ತೆ.

೧೮೮೬ನೇಇಸವಿ ೩೦ನೇಜೂನ್ ವರಿಗೆರೈಲ್ವೆ ತಯಾರೀ ಮತ್ತು ರೈಲ್ವೆ ಸರ್ವೆಗಳಿಗಾಗಿ ತಗಲಿರುವ ಖರ್ಚಿನ ತಪಶೀಲು.

I	(ಎ)	ಈಗ ನಡೆಯುತ್ತಲಿರುವ 140 ಮೈಲಿಗಳ ಘಾಸಲೆ ರೈಲ್ವೆ ತಯಾರಿಗೋಸ್ಕರ ತಗಲಿರುವ ಮೂಲಧನ	65,14,690
	(ಬಿ)	ಮೇಲ್ಕಂಡ ಮೊಬಲಗಿಗೆ ಬಡ್ಡಿ ಸೇಕಡಾ 4ರೂಪಾಯಿ ಮೇರೆ ಬಡ್ಡಿ ಲೆಖ್ಖಮಾಡಿ ಮೊಬಲಗು ವಜಾ ಜಾತಾ ಹುಟ್ಟುವಳಿ ಕಾಲದ ರಜಲ್ ಸಮೇತ	5,79,020
		ಮಾಸ್ಲು ರೈಲ್ವೆ ತಯಾರಿಖರ್ಚು	70,93,710
II		ಇತರ ಲಾಗಾಯಿತು ಹರಿಹರದವರಿಗೆ ರೈಲ್ವೆ ತಯಾರಿಖರ್ಚು	
	(ಎ)	ಸರ್ವೆಗಳಿಗೋಸ್ಕರವೂ ಮತ್ತು ಸ್ಟೋರ್ಸುಗಳಿಗೋಸ್ಕರವೂ ಮೂಲಧನ ಖರ್ಚು	3,49,176
	(ಬಿ)	ಸ್ಟೋರ್ ನಮೂದಾಗಿರುವ ಸಾಮಾನು ಮೊಬಲಗಿನಮೇಲೆ ಬಡ್ಡಿ ಲೆಖ್ಖಮಾಡಿದ್ದು.	16,262
		ಜಾಮ	3,65,438
III		ಇತರ ರೈಲ್ವೆಗಳು ಅಂದರೆ ಹಿಂದೂಪುರ, ಶಿವಮೊಗ್ಗಾ ಮತ್ತು ನಂಜನಗೂಡು ಲೈನುಗಳ ಸರ್ವೆಖರ್ಚು	
	(ಎ)	ಮೂಲಧನ	38,294
	(ಬಿ)	ಬಡ್ಡಿ	1,601
			39,895
		ಒಟ್ಟುಜಾಮಾ	71,99,043

ನಗದಿಯಾಗಿನ ಹಿಂದಣಆದಾಯ.—ಈಸೀಮೆಯು ಶ್ರೀಮನ್ಮಹಾರಾಜರವರ ಸುಪರ್ದು ಆದಲಾಗಾಯಿತು ೫ವರುಷಗಳು ಗತಿಸಿಯಿರುವದರಿಂದ ಈ ೫ವರುಷಗಳ ಜಮಾಖರ್ಚು ವಿಷಯಕವಾದ ಆತಳತೆಗಳನ್ನು ತಮ್ಮ ತಿಳುವಳಿಕೆಗೋಸ್ಕರ ಸಂಕ್ಷೇಪವಾಗಿ ತಿಳಿಸುವೆವು. ಅದೇನಂದರೆ ೧೮೮೧ನೇಇಸವಿ ಏಪ್ರಿಲ್ ಮೊದಲಾಗಾಯಿತು ೧೮೮೬ನೇಇಸವಿ ಮಾರ್ಚ ೩೧ವರಿಗಿನ ೫ ವರುಷಗಳ ಎಲ್ಲಾಬಾಬುಗಳ ಜಮಾಖರ್ಚನ್ನು ಈಕೆಳಗಣ ತಖ್ತೆಯಲ್ಲಿ ತೋರಿಸಿ ಯಿರುತ್ತೆ.

ಜಮಾ.	ರೂಪಾಯಿ.
1881ನೇ ಇಸವಿ ಮಾರ್ಚ 31ನೇ ತಾರೀಖಿನಲ್ಲಿಯಿದ್ದ ಶಿಲ್ಕು	24,07,438
1881ನೇ ಇಸವಿ ಏಪ್ರಿಲ್ ಮೊದಲಾಗಾಯಿತು 1886ನೇ ಮಾರ್ಚ 31 ರ ವರಿಗೆ ಹರಪಕೀ ಬಾಬುಗಳಿಂದಮು	5,52,08,280
ರೈಲ್ವೆಗೋಸ್ಕರವಾಗಿ ಮಾಡಿದ ಸಾಲದ ಮೊಬಲಗು.	20,00,000
ಜಾಂಲಾ	5,96,15,718

ಖರ್ಚು.	ರೂಪಾಯಿ.
ರೈಲ್ವೆ ಶಿವಾಯಿ ಇತರ ಎಲ್ಲಾಬಾಬುಗಳ ಖರ್ಚು.	5,21,52,468
ರೈಲ್ವೆ ತಯಾರಿಗೋಸ್ಕರ ತಗಲಿದ ಕ್ಯಾಪಿಟಲ್ ವಾಲ ಮೂಲಧನ	41,97,295
ಜಾಂಲಾ	5,63,49,763
1886ನೇ ಇಸವಿ ಮಾರ್ಚ 31ನೇ ತಾರೀಖಿನಲ್ಲಿ ಹಾಜರಿದ್ದ ಶಿಲ್ಕು	32,65,955
ಜಾಮ್ಲಾ	5,96,15,718

ಮೇಲೆಕಂಡ ತಖ್ತೆಯ ಅವಲೋಕನದಿಂದ ರಾಜ್ಯಸುಪರ್ದಾದ ವೇಳೆಯಲ್ಲಿ ೨೪,೦೭,೪೩೮ ರೂಪಾಯಿಗಳ ಶಿಲ್ಕು ನಗದು ಹಾಜರಿಯಲ್ಲಿ ಇದ್ದು ಈಚೆಗೆ ಪ್ರತಿವರುಷದಲ್ಲಿಯೂ ಖರ್ಚುಜಾತಾ ಉಳಿದನಿವಳ ಶಿಲ್ಕು ಮೊಬಲಗನ್ನು ಸೇರಿಸಿದ [illegible] ರೂಪಾಯಿಗಳಶಿಲ್ಕು ಇರುವದರಿಂದ, ಕಳೆದ ಐದುವರ್ಷಗಳಲ್ಲಿ ಇದ್ದ ೮,೫೮,೫೧೭ ರೂಪಾಯಿಗಳ ಶಿಲ್ಕು ಜಾಸ್ತಿ ಆಗಿರುವದಾಗಿಯೂ ತಿಳಿಯಬರುತ್ತೆ. ಇದಲ್ಲದೆ ಮೈಸೂರು ಲಾಗಾಯಿತು ಗುಬ್ಬಿವರಿಗಿನ ರೈಲ್ವೆ ತಯಾರಿಗಾಗಿಖರ್ಚಾಗಿರುವ ಮೇಲೆನಮೂದಾದ ೪೧,೯೭,೨೯೫ ರೂಪಾಯಿಗಳು ಆಸ್ತಿಯಾಗಿಯೇ ಭಾವಿಸಬಹುದು. ಈಪೈಕಿ ೧೮೮೬ನೇ ಇಸವಿ ರೈಲ್ವೆಸಾಲದ ಬಾಬತು ೨೦ ಲಕ್ಷರೂಪಾಯಿಗಳು ಹೋಗಲಾಗಿ ಬಾಕಿ ಉಳಿಯುವ ೨೧,೯೭,೨೯೫ ರೂಪಾಯಿಗಳು ರೆವಿನ್ಯೂ ಹುಟ್ಟುವಳಿಯಿಂದಲೇ ಒದಗಿಸಿ ಕೊಟ್ಟಿರುವದಾಗಿ ಇದೆ.

ಈರೀತಿಯಾಗಿ ೫ ವರುಷಗಳಲ್ಲಿ ಸುಮಾರು ೩೦॥ ಲಕ್ಷರೂಪಾಯಿಗಳವರಿಗೆ ಮಿಗಲಿತಿಯಾಗಿ ಆಗುತ್ತೆ. ಇದು ಕೃತಾರ್ಥತೆಯಾದ್ದಾಗಿದೆ. ಆದರೆ, ಕೆರೆ, ನಾಲೆ, ರಸ್ತೆ ಮುಂತಾದ ಪಬ್ಲಿಕ್ ವರ್ಕ್ಸ್ ಖರ್ಚನ್ನು ವಿಶೇಷವಾಗಿ ತಗ್ಗಿಸಿದ್ದರಿಂದಲೂ, ಕೆಲವು ಇಲಾಖೆಗಳಲ್ಲಿ ಕೆಲಸ ಸರಿಯಾಗಿ ನಡೆಯಲೂ ಕೂಡ ತೊಂದರೆ ಬಗುವ ಮಟ್ಟಿಗೂ ಇತರ ಎಲ್ಲಾ ಇಲಾಖೆಗಳಲ್ಲಿಯೂ ಮುನಾಸಬ್ ಖರ್ಚು ಕಮ್ಮಿ ಮಾಡಿದ್ದರಿಂದಲೂ, ಮೇಲೆಕಂಡಮೇರೆ ದ್ರವ್ಯವು ಶೇಖರವಾಗಲು ಅವಕಾಶವಾಯಿತು. ರೈಲ್ವೆ ತಯಾರಿಗೋಸ್ಕರ ಬೇಕಾದ ದ್ರವ್ಯವನ್ನು ಜಮಾಯಿಸಬೇಕಾದ ಉದ್ದೇಶದಿಂದ ಈ ಮೇರೆಗೆ ಖರ್ಚು ಕಮ್ಮಿ ಮಾಡಿದ್ದೇ ಶಿವಾಯಿ ಖಜಾನೆಯಲ್ಲಿ ವೃಥಾ ಹೆಚ್ಚು ಹಣವನ್ನು ಶೇಖರಪಡಿಸಿಟ್ಟುಕೊಳ್ಳಬೇಕೆಂಬ ಅಭಿಲಾಷೆಯಿಂದಲ್ಲ; ಈ ರೈಲ್ವೆ ಕೆಲಸವು ಕ್ಷಾಮ ಪರಿಹಾರಕ ಕಾರ್ಯಗಳಿಗೆ ಬಹಳ ಅವಶ್ಯಕವಾದ್ದೆಂಬ ವಿಷಯವು ೧೮೭೬—೭೮ನೇ ಇಸವಿಗಳ ಕ್ಷಾಮ ಕಾಲದಲ್ಲಿ ಬ್ರಿಟಿಷ್ ಗವರ್ನಮೆಂಟಿನವರ ತಿಳುವಳಿಕೆಗೆ ಬಂದು ಅವರು ಈ ಕೆಲಸವನ್ನುಪಕ್ರಮಿಸಿ ರಾಜ್ಯವು ಶ್ರೀಮನ್ಮಹಾರಾಜರವರ ಸುಪರ್ದಾಗುವವರಿಗೆ ೩೬ಲಕ್ಷ ರೂಪಾಯಿಗಳ ವರಿಗೂ ಖರ್ಚುಮಾಡಿದ್ದರು. ರಾಜ್ಯವು ಸುಪರ್ದಾದನಂತರ ರೈಲ್ವೆಯನ್ನು ಸಾಧ್ಯವಾದಷ್ಟು ಜಾಗ್ರತೆಯಾಗಿ ಪ್ರಾರಂಭಿಸಬೇಕೆಂದು ದರ್ಬಾರಿನವರು ತೀರ್ಮಾನಿಸಿ, ಇದಕ್ಕೆ ಬೇಕಾದ ದ್ರವ್ಯವನ್ನು ಹಾಜರ್ ಶಿಲ್ಕು ಮೊಬಲಗುಪೈಕಿ ವಿಶೇಷವಾಗಿ ಉಪಯೋಗಿಸಿಕೊಳ್ಳುವದರ ಮೂಲಕವೂ, ೨೦ಲಕ್ಷ ರೂಪಾಯಿಗಳನ್ನು ಸಾಲಾ ತೆಗೆಯುವದರಮೂಲಕವೂ, ಮೇಲ್ಕಂಡ ಇಲಾಖೆಗಳಲ್ಲಿಯೂ ಖರ್ಚು ಕಮ್ಮಿ ಮಾಡುವದರಮೂಲಕವೂ, ಒದಗಿಸಬೇಕೆಂದು ನಿಷ್ಕರ್ಷೆ ಮಾಡಿದರು. ಈ ಪ್ರಕಾರ ಜಾರಿಗೆ ತಂದದ್ದು ಬಹಳ ಸಫಲವಾಯಿತು. ಹ್ಯಾಗಂದರೆ, ಗುಬ್ಬಿವರಿವಿಗೆ, ೧೪೦ ಮೈಲಿಗಳ ಘಾಸಲೆಯುಳ್ಳ ರೈಲ್ವೆ ಪೂರೈಸಲ್ಪಟ್ಟಿತು. ಮತ್ತು ದಕ್ಷಿಣ ಮಹಾರಾಷ್ಟ್ರ ಕಂಪೆನಿಯವರೊಡನೆ ಹಾಲೀ ನಡೆಯುತಲಿರುವ ಕರಾರ್‌ಗಳಿಗೆ ಸಂಬಂಧವಾಗಿ ದೊರೆತಂಥ ಇಂಡ್ಯಾ ಗವರ್ನಮೆಂಟಿನವರ ಅಪ್ಪಣೆಯು ದೊರೆಯದೆ ಇದ್ದಲ್ಲಿ ಇದುವರಿಗೆ ಇನ್ನು ೩೦ ಮೈಲಿಗಳ ಘಾಸಲೆಯುಳ್ಳ ತಿಪಟೂರುವರಿಗಿನ ರೈಲ್ವೆಯನ್ನು ಪೂರೈಸಬಹುದಾಗಿತ್ತು. ಆದರೆ ಹಿಂದಿನ ಸಭೆಗಳಲ್ಲಿ ನಾವು ತಮಗೆ ತಿಳಿಸಿರುವಮೇರೆ ಪಶ್ಚಿಮ ಸಮುದ್ರತೀರಕ್ಕೆ ಹಾಕಿರುವ ದಕ್ಷಿಣ ಮಹಾರಾಷ್ಟ್ರ ರೈಲ್ವೆಯೊಡನೆ ನಮ್ಮರೈಲ್ವೆಯನ್ನು ಸೇರಿಸಬೇಕಾದಭಾರಿಕೆಲಸವು ಮಾಮೂಲ್ ಹುಟ್ಟುವಳಿಯಿಂದಲೇ ಉಚಿತವಾದ ಕಾಲದೊಳಗೆ ಪೂರೈಸತಕ್ಕದ್ದು ಸಾಧ್ಯವಾದ ಕೆಲಸವಲ್ಲ. ಹೀಗೆ ಮಾಮೂಲ್ ಹುಟ್ಟುವಳಿಯಿಂದಲೇ ಈ ಕೆಲಸವನ್ನು ಜರಿಗಿಸಬೇಕಾದರೆ ಇತರ ಮುಖ್ಯವಾದ ಅನೇಕ ಜಿಲ್ಲೆಕೆಲಸಗಳನ್ನು ಉದ್ದಾಂಗವಾಗಿ ಉಪೇಕ್ಷಿಸಬೇಕಾಗಿ ಇರುತ್ತಿತ್ತು. ಆದಕಾರಣ ರೈಲ್ವೆ ಕೆಲಸವು ಪಣಾಯಿದೇಶದ ದ್ರವ್ಯದ ಮೂಲಕವಾಗಿ ನಡಿಯತಕ್ಕದ್ದಕ್ಕೆ ಈಗ ಮಾಡಿಯಿರುವ ಏರ್ಪಾಟು ಸರ್ಕಾರಕ್ಕೆ ನಿಸ್ಸಂದೇಹವಾಗಿ ಪ್ರಯೋಜನ ಕರವಾದ್ದಾಗಿಯಿದೆ. ಹ್ಯಾಗಂದರೆ, ನಮಿಗೆ ಬಹಳ ಅವಶ್ಯಕವಾಗಿರುವ ಸಂಪೂರ್ಣವಾದ ರೈಲ್ವೆ ಲೈನು ಸ್ವಲ್ಪಕಾಲದೊಳಗಾಗಿಯೇ ಪೂರ್ತಿಯಾಗುವದಲ್ಲದೆ ಸೀಮೆಯಮಾಮೂಲು ಹುಟ್ಟುವಳಿಯನ್ನು ಇತರ ಕೆಲಸಗಳಿಗೆ ಉಪಯೋಗಿಸಲು ಅವಕಾಶವಾಗುತ್ತೆ.

ಮೇಲೆಕಂಡ ಕೆಲಸಗಳಪೈಕಿ ಸೀಮೆಯ ಕ್ಷೇಮಲಾಭಕ್ಕೆ ಆವಶ್ಯಕಗಳಾದ ನೀರಾವರೀ ಕಾಮಗಾರಿಗಳು ವಿಶೇಷ ಮುಖ್ಯವಾದವುಗಳು, ಇವುಗಳನ್ನು ಒಳ್ಳೇಸ್ಥಿತಿಯಲ್ಲಿ ಇಟ್ಟುಕೊಂಡಿರುವದು ಮತ್ತು ವೃದ್ಧಿಪಡಿಸುವದು ಸಹ ಆವಶ್ಯಕವಾದದ್ದು. ರಾಜ್ಯಸುಪರ್ದಾದ ಲಾಗಾಯಿತು ನೀರಾವರೀ ಕಾಮಗಾರಿಗಳಿಗೋಸ್ಕರ ಸಂಭವಿಸಿಯಿರುವ ಸಾಲ್ವಾರ್ ಖರ್ಚನ್ನು ಈಕೆಳಗೆ ವಿವರಿಸಿಯಿದೆ.

		ರೂಪಾಯಿಗಳು.
1881—82	...	3,28,368
1882—83	...	2,85,297
1883—84	...	3,54,189
1884—85	...	3,41,520
1885—86	...	4,54,145
1886—87	(ಅಂದಾಜ್)	6,85,300

ಈ ಅಂಕೆಗಳನ್ನು ಪರ್ಯಾಲೋಚಿಸಿನೋಡಿದರೆ ರೈಲ್ವೆ ತಯಾರೀಗೆ ಅನ್ಯದೇಶದ ದ್ರವ್ಯವು ಸಹಾಯ ವಾಗುತ್ತೆಂಬ ನಿರೀಕ್ಷಣೆಯ ಮೇಲೆ ೧೮೮೫—೮೬ನೇ ಇಸವಿವರಿಗೆ ಮಾಡಲ್ಪಟ್ಟ ಖರ್ಚಿಗಿಂತಲು ೧೮೮೬—೮೭ನೇ ಇಸವಿಯಲ್ಲಿ ನೀರಾವರಿ ಕೆಲಸಗಳಿಗೋಸ್ಕರ ಸರ್ಕಾರದವರುಜಾಸ್ತಿಖರ್ಚು ಮಾಡಿದಾರೆಂಬುವದೂ ಮತ್ತು ಹಾಲ್ ಮಜಕೂರಿನಲ್ಲಿ ರೈಲ್ವೆಯು ಸಂಪೂರ್ಣವಾಗಿ ನಮ್ಮ ಕೈತಪ್ಪಿಹೋಗುತ್ತೆಂಬ ನಂಬಿಕೆಯಮೇರೆ ಎಲ್ಲಾತರಹೇದ ನೀರಾವರಿ, ಕಾಮಗಾರಿಗಳನ್ನು ದುರುಸ್ತು ಮಾಡುವದರಲ್ಲಿಯೂ ಬಡಾಯಿಸುವದರಲ್ಲಿಯೂ ಅಭಿವೃದ್ಧಿಪಡಿಸುವದರಲ್ಲಿಯೂ ೬½ ಲಕ್ಷರೂಪಾಯಿಗಳವರಿಗೆ ಖರ್ಚು ಮಾಡಬೇಕೆಂದು ಉದ್ದೇಶಿಸಿ ಇದಾರೆಂಬುವದೂ ಸಹ ಸ್ಪಷ್ಟವಾಗುತ್ತೆ.

ಈಸೀಮೆಯ ಹುಟ್ಟುವಳೀ ಅಭಿವೃದ್ಧಿಗೆಕಾಲಸ್ಥಿತಿಯ ಅನುಕೂಲತೆಯೇ ಮುಖ್ಯವಾಗಿ ಆಧಾರವಾಗಿ ಇರುವದರಿಂದಲೂ ಕೆಲವು ಸಂವತ್ಸರಗಳಲ್ಲಿ ಉತ್ಕೃಷ್ಟವಾದ ಬೆಳೆ ಮತ್ತು ಕೆಲವು ವರ್ಷಗಳಲ್ಲಿ ನಿಕೃಷ್ಟವಾದ ಬೆಳೆ ಆಗೋಣದರಿಂದ ನೀರಾವರಿಕೆಲಸಗಳ ಅಭಿವೃದ್ಧಿಗೋಸ್ಕರ ಹುಟ್ಟುವಳಿಪೈಕಿ ಸಾಲೀಯಾನಾ ಎಷ್ಟುಮಟ್ಟಿಗೆ ಖರ್ಚು ಮಾಡಬಹುದೋ ಅದನ್ನು ಖಚಿತವಾಗಿ ಈಗಲೇ ಹೇಳುವದು ಅಸಾಧ್ಯವಾಗಿ ಇರುತ್ತೆ. ಆದರೆ ಇತರಬಾಬುಗಳಿಗೆ ಯುಕ್ತವಾದ ಖರ್ಚನ್ನು ಮಾಡುವದರಸಂಗಡ ಈ ನೀರಾವರಿಕೆಲಸಗಳಿಗೆ ಎಷ್ಟುಮಟ್ಟಿಗೆ ಹೆಚ್ಚು ಹಣವನ್ನುಕೊಡಲು ಸಾಧ್ಯವಾಗುವದೋ ಅಷ್ಟು ಮೊಬಲಗನ್ನು ಕೊಡುವದಕ್ಕೆ ತರಹೂದು ಮಾಡುವವಿಷಯದಲ್ಲಿ ಲೇಶವು ಸಂದೇಹವಿಲ್ಲವು. ನಮ್ಮಸೀಮೆಯಲ್ಲಿ ಮಾಡಬೇಕಾದ ಶ್ಲಾಘನೀಯಗಳಾದ ಹಾಲೀ ಕಿಫಲವಾಗಿ ಹಿರುತ ಉತ್ತರೋತ್ತರ ಪ್ರಯೋಜಕಗಳಾಗುವ ಕೆರೆಗಳನ್ನು ದುರುಸ್ತುಮಾಡುವ ಮತ್ತು ವೃದ್ಧಿಪಡಿಸುವ ಕೆಲಸಗಳು, ಕಾವೇರಿ ಮುಂತಾದ ನದಿಗಳಿಂದ ಹುಟ್ಟಿರುವ ನಾಲೆಗಳ ಬಡಾವಣೆ ಮತ್ತು ದುರುಸ್ತುಮಾಡುವ ಕೆಲಸಗಳು, ಮಾರಿಕಣಿವೆ ಮತ್ತು ಆವಶ್ಯಕವಾಗಿರುವ ಇತರಸ್ಥಳಗಳಲ್ಲಿ ನೂತನವಾಗಿ ಕೆರೆಗಳನ್ನು ಕಟ್ಟುವ ಕೆಲಸಗಳು, ವಿಶೇಷವಾಗಿರುವದರಿಂದಈ ನೀರಾವರಿ ಕಾಮಗಾರಿಖರ್ಚಿಗೆ ಪರಿಮಿತಿಯನ್ನು ಕಲ್ಪಿಸದೆ ಸರಕಾರದವರಿಗೆ ದ್ರವ್ಯಾನುಕೂಲತೆ ಪ್ರಾಪ್ತವಾದಹಾಗೆಲ್ಲ ಈಬಗ್ಗೆ ಉಪಯೋಗಿಸುತ್ತಾ ಬರಬೇಕೆಂದು ಮಹಾರಾಜಾ ಸರಕಾರದವರು ತೀರ್ಮಾನಿಸಿಯಿದಾರೆ. (ಸಶೇಷ)

SUMMRY OF NEWS
ವೃತ್ತಾಂತ ಸಂಗ್ರಹವು.

ಬರ್ಮಾದೇಶದ ಪ್ರಜಾಸಂಖ್ಯೆಯು೩೭,೩೬,೭೭೧

ಮಧ್ಯ ಇಂಡ್ಯಾ ಪ್ರಾಂತದೊಳಗೆ ಕ್ಷಾಮ ಪ್ರಾಪ್ತವಾಗುವ ಸಂಭವವಿರುವಂತೆತಿಳಿಯಬರುತಿದೆ.

ಧಾರ್ವಾಡದಲ್ಲಿ ಕಳ್ಳರ ಅವಾಂತರ ಬಲವಾಗಿರುವಂತೆ ತಿಳಿಯಬರುತಿದೆ ಪೊಲೀಸಿನವರು ನಿದ್ರೆ ಮಾಡುತ್ತಾರೋ?

ಬಡೋದೆಯ ಗಾಯಕವಾದದಾದ ಶ್ರೀಮಂತ ಸಯಾಜೀರಾವ್ ಮಹಾರಾಜರವರು ಬರುವ ನವೆಂಬರ್ ತಿಂಗಳಲ್ಲಿ ವಿಲಾಯತಿಗೆ ಹೋಗತಕ್ಕವರಾಗಿದಾರಂತೆ.

ಹವಾ—ಮುಂಬೈಯಲ್ಲಿ ಮಳೆಗಾಲವು ತೀರಿತೆನ್ನಬಹುದು. ಸೂರ್ಯನ ಕಿರಣದ ಜ್ವಾಲೆಯು ಬಹಳವಾಗಿರುವದರಿಂದ ಶರೀರವೆಲ್ಲ ಕೆಳೆಯಿಂದ ಉಬ್ಬೆ ಹಾಕಿದಂತಾಗುತದೆ; ರೋಗಗಳೇನೂ ಇಲ್ಲ.

ಬರೋದೆಯ ಗಾಯಕವಾಡೀ ಮಹಾರಾಜರವರು ತಮ್ಮ ರಥಕ್ಕಾಗಿ ಕೇಪ ಆಫ್ ಗುಡ ಹೋಪ್ ನಿಂದ ೧೫,೦೦೦ ರೂಪಾಯಿ ಕ್ರಯವುಳ್ಳ ಆರು ಕುದುರೆಗಳನ್ನು ತರಿಸಿರುತ್ತಾರಂತೆ.

ವಿಲಾಯತಿಯೊಳಗಿನ ಸೈನ್ಯದವರಿಗೋಸ್ಕರ ೫೦ ಸಾವಿರ, ಇಂಡ್ಯದೇಶದ ಸೈನ್ಯದವರಿಗೋಸ್ಕರ ೫೬ ಸಾವಿರ ಹೊಸ ತುಪಾಕಿಗಳು ಬರುವ ವರುಷದಲ್ಲಿ ತಯಾರ್ ಮಾಡಲ್ಪಡುವವಂತೆ.

ಮುಂದರೇ ದೇಶಕ್ಕೆ ರೆಯಿಲ್‌ರಸ್ತೆಯನ್ನು ಹಾಕುವದಾಗಿ ಗೊತ್ತಾಗಿರುತದೆ. ಅದಕ್ಕೆ ೫೦ಲಕ್ಷ ರೂಪಾಯಿಗಳು ತಗಲುವದಂತೆ, ಈ ಹಣವನ್ನು ಯೆಲ್ಲಿಂದ ಯಾರು ತರಬೇಕೆಂಬ ವಿಚಾರ ನಡೆಯುತಲಿರುವದಾಗಿ ತಿಳಿಯಬರುತಿದೆ.

ಆತ್ಮ ಹತ್ಯೆ—ಬೇತವಾಟಿಯೊಳಿರುತಿದ್ದ ಫೆರ್ನಾಂಡಿಸ್ ಎಂಬವನೊಬ್ಬನು ಒಬ್ಬ ತರುಣಿಯಲ್ಲಿ ಮೋಹವುಳ್ಳವನಾಗಿರಲು, ಅವಳಕೂಡ ವಿವಾಹ ಮಾಡಿಕೊಳ್ಳಬೇಕೆಂಬ ತನ್ನ ಇಚ್ಛೆಗೆ ತನ್ನ ತಾಯಿಯು ಸಮ್ಮತಿಸಲಿಲ್ಲವಾಗಿ ಅವನು ಅಫೀಂ ತಿಂದು ಆತ್ಮಹತ್ಯ ಮಾಡಿಕೊಂಡನು

ಮತ್ಸ್ಯವೃಷ್ಟಿ—ಇಂಗ್ಲಾಂಡಿನಲ್ಲಿ ಕೊವನ್ ಸಾಯಿಡ ಎಂಬ ಪ್ರದೇಶದೊಳು ಕಳೆದತಿಂಗಳ ೭ನೇ ತಾರೀಖಿನ ದಿನ "ನೊಣಗಳ ಮಳೆ" ಬಿತ್ತು!!! ಸ್ಟೇಶನಿನಿಂದ ಸುಮಾರು ಅರ್ಧಮೈಲಿನ ವರೆಗೆ ಎಲ್ಲಿ ನೋಡಿದರೂ ನೊಣಗಳ ರಾಶಿಯೇ ಬಿದ್ದಿತ್ತಂತೆ! ಏನಿದು! ಕಲಿಯುಗದ ಮಹಿಮೆಯೋ?

ಪುನೆಯ ಬಾಲಿಕಾ ಪಾಠಶಾಲೆಯೊಳಗಿನ ೫೦ ಹುಡಿಗಿಯರಪೈಕಿ ೫೭ ಹುಡಿಗಿಯರು ೧೨ ವರುಷ ಪ್ರಾಯದವರೂ, ೭ ಹುಡಿಗಿಯರು ೧೭ಕ್ಕೆ ಮೀರಿದವರೂ, ೮ ಹುಡಿಗಿಯರು ೧೮ಕ್ಕೆ ಮೀರಿದವರೂ ೩ ಹುಡಿಗಿಯರು ೧೫ ೧೬ಕ್ಕೆ ಮೀರಿದವರೂ ಇರುತ್ತಾರಂತೆ? ಮೈಸೂರು ಬಾಲಿಕಾ ಪಾಠಶಾಲೆಯಲ್ಲಾದರೋ ಹಾಗಲ್ಲವು, ಅಲ್ಲಿ ಒಂದು ಯೆರಡು ಮೂರು ಮಕ್ಕಳ ತಾಯಿಗಳೇ ಬಹಳವಾಗಿರುತ್ತಾರಂತೆ.

ಅಲಹಾಬಾದ್ ಸ್ಟೇಶನಿನೊಳಗಿನ ವೆಯಿಟಿಂಗ್ ರೂಂಅಂದರೆ ಪ್ರಯಾಣಸ್ಥರು ವಿಶ್ರಮಿಸಿಕೊಳ್ಳುವಬಗ್ಯೆ ಪ್ರತ್ಯೇಕಿಸಿಡಲ್ಪಟ್ಟಿರುವ ಕೋಣೆಯೊಳಗೆ ಒಬ್ಬ ಯೂರೋಪಿಯರ್ನ ಸ್ತ್ರೀಯು, ಒಬ್ಬ ನೇಟಿವಿನ ಸಂಗಡ ಕೂತುಕೊಂಡು ಮಾತಾಡುತಿದ್ದದನ್ನು ಅವಳ ಗಂಡನು ನೋಡಿ ಸಿಟ್ಟುಳ್ಳವನಾಗಿದ್ದರಿಂದ ಈಗ ಅವಳು ಅವನ ಕೂಡ ಆದ ವಿವಾಹ ಸಂಬಂಧವನ್ನು ತೆಗದು ಹಾಕಬೇಕೆಂದು ಸರ್ಕಾರದೊಳಗೆ ಫಿರ್ಯಾದು ಮಾಡಿರುತ್ತಾಳಂತೆ! ಇವಳು ಪತಿಯ ಆಜ್ಞಾಧಾರಕಳೂ, ಸೇವಾತತ್ಪರಳೂ ಅಲ್ಲವೇ!

EXIRACIS.

ಅರಸರು ತಮ್ಮ ಸುಖೋಪಭೋಗಗಳಿಗೂ ವಿಲಾಸಗಳಿಗೂ ವೆಚ್ಚಮಾಡುವ ಹಣವನ್ನೆಲ್ಲ ಪ್ರಜೆಗಳೇ ಕೊಡಬೇಕಾಗಿರುವ ವಾಡಿಕೆಯು ಕೇವಲ ಅನ್ಯಾಯವೆಂತ ಜನರು ಹೇರೆಯಿಹುತಿದ್ದಾಗ್ಯೂ ನಮ್ಮ ಸರ್ಕಾರದವರು ಯೆಂದಿನಂತೆ ತಮ್ಮ ಬಾದಷಾಹೀ ಕ್ರಮವನ್ನು ನಡೆಸುವದು ಬೆಚ್ಚಿ ದುಃಖಕ್ಕೆ ಕಾರಣವಾಗಿರುವದು ಅರಸುಮಕ್ಕಳಿಗೆ ಊರು ತಿರಿಗಿಸಿ ಮೆರವಣಿಗೆ ಮಾಡುವದಕ್ಕೂ, ಸಿಂಲಾ ಯಾತ್ರೆಗೆ ಹೋಗುವದಕ್ಕೂ, ಗವರ್ನರ್ ಸಾಹೇಬರ ಭೋಜನದ ಕಾಲದಲ್ಲಿ ಬ್ಯಾಂಡ್ ವಾದ್ಯವನ್ನು ಬಾರಿಸುವದಕ್ಕೂ, ತಮ್ಮ ಅರಸುಮಕ್ಕಳ ಮೊದಲಾದವರ ದೊಡ್ಡ ದೊಡ್ಡ ಚಿತ್ರಪಟಗಳನ್ನು ತೆಗಿಸಿ ಪ್ರಸಿದ್ಧವಾದಕಟ್ಟಡಗಳಲ್ಲಿ ಇಡಿಸುವದಕ್ಕೂ ತಗಲುವ ವೆಚ್ಚವನ್ನು ನಾವೇ ಒಪ್ಪಬೇಕೆಂಬುವ ಸಂಗತಿಯು ಬಹು ಅನ್ಯಾಯವಾದದ್ದಾಗಿರುತದೆ ಆದರೆ ನಮ್ಮ ದಯಾಳುಗಳಾದ ಸ್ವಿನಾಪ್ಸ ಕಮಿಟಿಯವರ ಲಕ್ಷ್ಯವು ಗವರ್ನರವರ ಭೋಜನ ಕಾಲದಲ್ಲಿ ಮಾಡುವ ಬ್ಯಾಂಡ್ ವಾದ್ಯದ ಖರ್ಚಿನ ಕಡೆಗೆ ಮಾತ್ರವೇ ಹೋಗಿ ಎತ್ತಿಸಿ ಆ ಪ್ರಕಾರ ಮಾಡಿದರೆ ಏನು ಅಡ್ಡಿಯಾಗುವದೆಂದು ಮುದರಾಸ್ ಗವರ್ನರವರಾದ ಗ್ರಾಂಟ್‌ಡಫ್ ದೊರೆಗಳನ್ನು ಕೇಳಿದಾರೆ ಗ್ರಾಂಟ್‌ಡಫ್‌ದೊರೆಗಳು ಆ ಗಬಡುವಿಂದು ಅಂದರೆ ಈ ಬ್ಯಾಂಡ್ ವಾದ್ಯದ ಖರ್ಚು ಬಹುತಃ ಕಡಿಮೆಯಾಗಿದೆಯೆಂದು ತೋರುತಿದೆ ಅವರೇ ಆ ಪ್ರಕಾರ [illegible] ದುವಾಲುಸಮಾನಾಸವು ದೊರೆಯುತೆ [illegible] ನಾವಿದಾವ ಹೆಮ್ಮೆಪಡುವ

ಈಗ್ಗೆ ಎರಡುಮೂರುವಾರಗಳಹಿಂದೆ ತಿರುತ್ತುರೈ ಪೂಂದಿಯೆಂಬ ಹಿಂದುಗ್ರಾಮದವನಾದ ಸ್ವಾಮಿ, ಕೆಲವರು ಹೆಂಗಸರೂ ಗಂಡುಸರೂ ಸಹಿತ ಪ್ರಯಾಣಮಾಡುತಿರುವಾಗ್ಯೂ ಅವರಲ್ಲಿ ಸಕಲಾಭರಣ ಭೂಷಿತಳಾಗಿದ್ದ ಸುಂದರಿಯಾಗಿಯಾಗಿದ್ದ ಸುಮಾರು ೩೦ ವರುಷಗಳ ವಯಸ್ಸುಳ್ಳ ಒಬ್ಬ ಹೆಂಗಸು ದೇಹಬಾಧೆತಾಳಲಾರದೆ ಗಾಡಿಇಳಿದು ಸಮೀಪದಲ್ಲಿದ್ದ ಒಂದು ತಾಟೀ ತೋಪಿಗೆ ಹೋದಳು. ಗಾಡಿಯಾತ್ರೆ ರಸ್ತೆಯಲ್ಲಿ ಮೆತ್ತಗೆ ಹೋಗುತಲಿತ್ತು. ಇತ್ತಲಾಗಿ ಸದರೀತೋಪಿನಲ್ಲಿ ಕಳ್ಳೆಇಳಿಸುತಲಿದ್ದ ಒಬ್ಬ ಈಡಿಗರವನು ಒಂದುಮರದಮೇಲಿನಿಂದ ಏಕಾಂಗಿಯಾಗಿಬಂದಹೆಂಗಸನ್ನೂ, ಅವಳು ಧರಿಸಿಕೊಂಡಿದ್ದ ಅಮೂಲ್ಯಗಳಾದ ಆಭರಣ ಬಾಹುಳ್ಯವನ್ನೂ [illegible] ಇಳಿದು ಅವಳನ್ನು ಹಿಮ್ಮೆಟ್ಟಿ [illegible] ಸ್ವಲ್ಪ ದೂರಹೋಗಿಅವಳಂತೆ [illegible] ನಿಲ್ಲಿಸಿ ಆಭರಣಗಳನ್ನೆಲ್ಲ ತೆಗೆದಿಡುವಂತ ಬೆದರಿಸಿ, ಹಾಗೆ ಮಾಡದಿದ್ದಕ್ಕೆ ತನ್ನಕೈಯಲ್ಲಿರುವ ಮಚ್ಚಿನಿಂದ ಶಿರವ ಕಡಿದುಬಿಡುವನೆಂದು ಹೇಳಿದನು ಆಗ ನಿಸ್ಸಹಾಯಕಳಾದ ಆಹೆಂಗಸು ಬಹುಸಬ್ಬುಟ್ಟ [illegible] ರಿನಿದ್ದ ಆಭರಣಗಳನ್ನೆಲ್ಲ ತೆಗೆದುಬಿಟ್ಟು ಕಡೆಗೆ ತನ್ನ ಕಾಲಿನೊಳಿದ್ದ ಬೆಳ್ಳಿಯುಳಿಯನ್ನು ತೆಗೆಯುವದಕ್ಕಾಗದೆ ಅವಸ್ಥೆಪಡುತಲಿರುವಾಗ್ಯೆ ಸಮೀಪದಲ್ಲಿ ಆಕನು ಅವಳ ಕಾಲನ್ನು ಕಡಿಯಲಿಕ್ಕೆ ಉಪಕ್ರಮಿಸಿದನು ಆಗ ಬೇರಳಾದ ಆ ಹೆಂಗಸು ಸಮಯನೋಡಿ ಅವನು ಪಕ್ಕದಲ್ಲಿಟ್ಟಿದ್ದ ಮಚ್ಚನ್ನು ಅತಿ ಚಾತುರ್ಯದಿಂದ ಅಪಹರಿಸಿ ಯುಕ್ತಿಯಿಂದ ಅವನನ್ನು ಯುದ್ಧದಲ್ಲಿ ತುಂಡುಮಾಡಿಬಿಟ್ಟಳು. ಸಹಜವಾಗಿ ತಾನುಮಾಡಿದ ಸಾಹಸಕೃತ್ಯಕ್ಕೆ ಅಂಜಿ ಮೂರ್ಛೆಹೋದಳು. ಇಷ್ಟರಲ್ಲಿ, ದಾರಿಹೋಕರಿಗಾಗಿ ಹೋದಹೆಂಗಸು ಬಹುಹೊತ್ತಾದರೂ ಬರಲಿಲ್ಲವಲ್ಲಾ ಎಂದು ಕೊಂಡು ಅವಳ ಬಂಧುಗಳು ಹುಡುಕುತ ಬಂದು ಅವಳಸ್ಥಿತಿಯನ್ನುನೋಡಿ ಇದಲ್ಲದೆ ಅಳೆಯ ತರಣಾಗತನಾಗಿ ಬಿದ್ದಿರುವ ಕಿರಾತಕನ ಶರೀರವನ್ನೂ ಸ್ವಲ್ಪದೂರದಲ್ಲಿ ಬಿದ್ದಿದ್ದ ಮುಂಡವನ್ನು ನೋಡಿಕೊಂಡರು. ಈಗ ಈಪ್ರಕರಣವು ತುಂಜಾವೂರು ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ದರ್ಯಾಪ್ತಿಯಲ್ಲಿರುವ ತರುವಾಯ ಪೊಲೀಸಿನವರು ದೇಶಾಭಿಮಾನಿಯೆಂಬ ದ್ರಾವಿಡಪತ್ರಿಕೆಯೊಂದು ತಿಳಿಸುತಿದೆ ಧನಾಶೆಯಿಂದಲ್ಲವೇ ಸದರೀ ಈಡಿಗರವನು ತನ್ನಮೃತ್ಯುವನ್ನು ತಾನಾಗಿ ತಂದುಕೊಂಡನು! ಈಸ್ವೀರಕೃಪೆಯಿಂದಲಭಿಸಿದವಸ್ತುಕ್ಕೇ ತೃಪ್ತರಲ್ಲದೆ ಅನ್ಯರಸ್ವತ್ತಿಗೆ ಆಶ್ಯಾಶಿಗೊಳ್ಳತಕ್ಕವರ ಪರಿಣಾಮವಲ್ಲವಾ ಆಯ್ಯರಿಗೆ ಈರೂಪ ವಾದದ್ದಾಗಿಯೇ ಇರುವದು. ಆಂಧ್ರಪ್ರಕಾಶಿಕಾ

ಮುನಸಫ ಕೆಲಸವು ಹೈಕೋರ್ಟ ವಕೀಲರಿಗಾಗಲಿ, ಅಥವಾ ಎಲ್ ಎಲ್, ಬಿ. ಪರೀಕ್ಷೆ ಕೊಟ್ಟವರಿಗಾಗಲಿ ಇದುವರಿನಿಗ ಕೊಡಲ್ಪಡುತಿರ್ತಷ್ಟೆ. ಆದರೆ ೧೮೯೦ನೇ ಇಸವಿಯ ಮೊದಲು ಈ ಶ್ರೇಷ್ಠವಾದ ಉದ್ಯೋಗವು ಇಷ್ಟು ಸುಲಭವಾಗಿ ಶಿಕ್ಕಲಿಕ್ಕಿಲ್ಲವು ಯಾರು ತಪ್ಪದೆ ಮೂರು ವರುಷಗಳ ತನಕ (೧)ಮೊದಲು ಯಾವದಾದರೊಂದು ಸಿವಿಲ್‌ಕೋರ್ಟಿನಲ್ಲಿ ವಕೀಲ್ ಕೆಲಸ ಮಾಡುವರೋ. ಅಥವಾ (೨) ಸ್ಮಾಲ್ ಕಾಜ್, ಡಿಸ್ಟ್ರಿಕ್ಟ ಅಥವಾ ಸಬಾರ್ಡಿನೇಟ ಜಡ್ಜ ಕೋರ್ಟಗಳಲ್ಲಿಸರ್ಕಾರೀವಕೀಲರ ಯಾ ರಿಜಿಸ್ಟ್ರಾರ್ ಅಥವಾ ಕ್ಲಾರ್ಕ ಆಫ್ ದಿ ಕೋರ್ಟಿನವರ ಕೈಕೆಳಗೆ ಅಸಿಸ್ಟೆಂಟ್ ರಾಗಿ ಕೆಲಸ ನೋಡುವರೋ, ಅಥವಾ (೩) ಮೇಲಿನ ಕೋರ್ಟಗಳಲ್ಲೊಂದರಲ್ಲಿ ಕ್ಲಾರ್ಕ ಆಫ್ ದಿ ಕೋರ್ಟ, [illegible] ಶಿರಸ್ತೇದಾರಿ, ಅಥವಾ ನಾಜರ್ ಕೆಲಸ ನೋಡುವರೋ ಅಥವಾ (೪) ಮೂರು ವರುಷಗಳವರಿನಿಗ [illegible] ಮೇಲಿಹೇಳಿದ [illegible] [illegible]

[illegible]

ಎಸ್ತ್ರಪೋಲ ಎಂಬ [illegible] [illegible] ನಗಳಿಲ್ಲ ಮಾಡಿದ್ದ [illegible] ರಾಜಧಾನಿಯಾದ ಮಾಂಡಲೇ [illegible] ಎಂಬ ಒಂದು ತರದ ನುಣುಪಾದ ಕಲ್ಲುಗಳಿಂದ ಒಂದು ದೊಡ್ಡ ಗುಡ್ಡ ಉಂಟು. ಆ ಕಲ್ಲುಗಳಿಂದ ಬೌದ್ಧನ ಪ್ರತಿಮೆಗಳನ್ನು ಉತ್ತಮರೀತಿಯಿಂದ ಮಾಡುತ್ತಾರೆ ಬರ್ಮಾಜನರು ಘಂಟೆಗಳನ್ನು ಎರಕ ಹುಯ್ಯುವದರಲ್ಲಿಯೂ, ಮುಲಾಂ ಮಾಡುವ ಕೆಲಸದಲ್ಲಿಯೂ ಬಹು ನಿಪುಣತೆಯನ್ನು ಹೊಂದಿರುತ್ತಾರೆ ಮತಸಂಬಂಧವಾದ ಇಮಾರತಿಗಳಲ್ಲಿ ಸನ್ಯಾಸಿಮಠಗಳು, ದೇವಸ್ಥಾನಗಳು ಎಂತೆರಡು ಭೇದಗಳುಂಟು. ಇವುಗಳಲ್ಲಿ ಮೊದಲನೆಯವು–ಜಾತಿ ಗುರುಗಳಿರುವಂತಾ ಮನೆಗಳು; ಎರಡನೆಯವು ತಮ್ಮ ಮತ ಸಂಬಂಧವಾದ ಉಪಾಸನೆಗಳು ಗುರುತುಗಳನ್ನು ಇಡುವಂತಾ ಮನೆಗಳಾಗಿರುತಿವೆ ಬರ್ಮಾದೇಶದಲ್ಲಿ ಜನಗಳು ಈಚಿಗೆ ದಿವುಗಾಗಿಕಟ್ಟಿದಂತಾದ ನೆಗಳುಕಟ್ಟಿಗೆಯದಾಗಿರುತಿವೆ. ರಾಜಗೃಹಗಳೂ, ಸನ್ಯಾಸಮಠಗಳೂ ಅಪ್ರತಿಮ ಸೌಂದರ್ಯವುಳ್ಳವುಗಳಾದರೂ ನಿರರ್ಥಕ ವೈಭವವು ತೋರಿಸುವದುದಾಗಿರುತಿವೆ ಇಂತಾ ದೇವಸ್ಥಾನಗಳಬಳಿ ಪ್ರಯಾಣಸ್ಥರಸಲವಾಗಿ ಒಂದೊಂದುಧರ್ಮಶಾಲೆಇರುತಿದೆ. ಚಿತ್ರಬರೆಯುವದರಲ್ಲಿ ಬರ್ಮಾಶಿಲ್ಪಗಾರರು ನಿಪುಣತೆಯನ್ನೂಕಲ್ಪನಾಶಕ್ತಿಯನ್ನೂಬಹಳತೋರಿಸುತ್ತಾರೆ ದೇವಸ್ಥಾನಗಳಿಗೆ ಮುಲಾಂ ಹಾಕುವದರಲ್ಲಿ ಬಹಳ ಹಣ ಖರ್ಚು ಮಾಡುತ್ತಾರೆ. ಹ್ಯಾಗಂದರೆ –ಒಂದು ದೇವಸ್ಥಾನಕ್ಕೆ ಸುಮಾರು ನಾಲ್ಕುಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿ ಬಂಗಾರದ ಮುಲಾಂ ಮಾಡಿದ್ದಾರಂತೆ. ಈ ದೇಶದಲ್ಲಿ ವಾಡಿಕೆಯಾಗಿ ಪ್ರಚಾರದಲ್ಲಿರುವ ಮತವು ಬೌದ್ಧಮತವಾಗಿದೆ ಈ ಮತಸ್ಥಾಪಕನು ಎಲ್ಲರಿಗೂ ತಿಳಿದವನೆ. ಈತನು ಉತ್ತರ ಹಿಂದುಸ್ಥಾನದಲ್ಲಿರುವಒಬ್ಬಅರಸನಮಗನಾಗಿ, ಸುಮಾರು ೩,೦೦೦ವರುಷಗಳಿಂದೆಹುಟ್ಟಿದ್ದನೆಂದು ಹೇಳುತ್ತಾರೆ ಇವನು [illegible] ಯೆಂತ ಹೇಳುವರು. ಇವರ ರೀತಿ ಮತ್ತು ಧರ್ಮಸಂಬಂಧವಾದ ಕೆಲವು ಕಟ್ಟಳೆಗಳು ಉತ್ತಮವಾಗಿವೆ ಇವನು [illegible] ಒಂಬತ್ತನೆಯ ಅವತಾರವವನೆನ್ನುತ್ತಾರೆ. ಹಿಂದೂ ಧರ್ಮಕ್ಕೂ, ಬೌದ್ಧ ಧರ್ಮಕ್ಕೂ ಭೇದವೇನೆಂದರೆ –ಹಿಂದೂ ಜನರೊಳಗೆ [illegible] ದೇವರಪ್ರಾರ್ಥನೆಯುಂಟು, ಬೌದ್ಧಮತಸ್ಥರೊಳಗೆ ಆಗಿಲ್ಲ. ತಾನು [illegible]

[illegible] ನಾನು ಬೌದ್ಧನನ್ನು ನಂಬಿಕೊಳ್ಳುತ್ತೇನೆ. ೨ ನಾನು ಅವನ ಧರ್ಮದಲ್ಲಿ ಪೂರ್ಣವಿಶ್ವಾಸವಿಟ್ಟಿರುತ್ತೇನೆ ೩ ನಾನು ಅವನ ಗುರುತ್ವವನ್ನು [illegible] ಬೌದ್ಧಮತದ ಗುರುಗಳು ಹಳದಿ ವಸ್ತ್ರದ ನಿಲುವಂಗಿಯನ್ನು ತೊಟ್ಟುಕೊಳ್ಳುತ್ತಾರೆ [illegible] ಬಹಳಜನರು ಸ್ವಲ್ಪದಿವಸಗಳವರಿಗೆ [illegible] ಅವರು ಹಾಗೇ ಇರತಕ್ಕ [illegible] ವನ್ನು ಅಂಗೀಕರಿಸಲಿಕ್ಕೆ ಅಡ್ಡಿ ಇರುವದಿಲ್ಲ. ಅರಸನು ಸರ್ವವ್ಯಾಪಕನು, ಪ್ರಜೆಗಳ ಜೀವ ಮತ್ತು ಜಹಗಿರಿಗಳು ಪೂರ್ಣವಾಗಿ ಅರಸನಿಗೆ ಸಲ್ಲಿದ್ದವು [illegible] ಸುವವನೂ [illegible] ದಲ್ಲಿಯೇ ಇದ್ದವು. ರಾಜನ [illegible] ವರ ಬಂಗಾರದ [illegible] ತ್ಯಾಗ ಮತ್ತೆ, ಅವನಕಿವಿಗಳೆನ್ನ [illegible] ಬಂಗಾರದ ಕಿವಿಗಳೆಂದೂ, [illegible] ಬಂಗಾರದಚರಣಗಳೆಂದೂ ಹೇಳಬೇಕು. ಅವನ ಹೆಸರುಕೂಡ ಉಚ್ಚರಿಸಲಾಗದಷ್ಟು ಪವಿತ್ರವಾದ್ದು! ಅವನಿಗೆ "ಆಕಾಶ ಮತ್ತು ಮರಣಗಳೊಡೆಯ" ನೆಂತಲೂ, ವಿದ್ಯಾಧಿಪತಿ ಎಂದಲೂ, ಸಹಸ್ರ ಪ್ರಾಪತಾಂಭವನೆಂತಲೂ ಬಹಳ ಪ್ರಶಸ್ತಿಗಳುಂಟು. ಈಜನರಲ್ಲಿ ನಮ್ಮ ಬಿಳಿಆನೆಯು ಮತ್ತೊಂದು ಜನ್ಮದಲ್ಲಿ ಬೌದ್ಧನೇ ಆಗುವದೆಂಬ ಭಾವನೆಯು ಬಹಳ ಇರುವದರಿಂದ, ಅದನ್ನು ರಾಜನ ಅನಂತರ ಬಹುವಾಗಿ ಗೌರವಿಸುತ್ತಾರೆ; ಮತ್ತು ಸ್ವಲ್ಪ ಜನರು ಅದಕ್ಕೆ ಪೂಜೆಯನ್ನು ಸಹ ಮಾಡುತ್ತಾರೆ. ಅದಕ್ಕೆ ಮಲಗುವದಕ್ಕೆ ಜಾಜೀಳಮೇಲೆ ರೇಷ್ಮೆ ವಸ್ತ್ರಗಳನ್ನು ಹಾಸುತ್ತಾರೆ, ಮತ್ತು ತಿನ್ನಲಿಕ್ಕೂ ನೀರು ಕುಡಿಯಲಿಕ್ಕೂ ಬಂಗಾರದ ಪಾತ್ರೆಗಳನ್ನೇ ಬಳಸುವರು. —ಮುಂಬೈ ಕನ್ನಡ ಸುವಾರ್ತೆ.

BANGALORE.—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧವೃತ್ತಪ್ರಸಂಗಸಾರ್ಥ್ಯ ಕರ್ಣಾಟಕಪ್ರಕಾಶಿಕಾಭಿಧಾಪ್ರಥಿತಸಾಹಿತೀಶ್ರೋಭಿತಾ ॥ ಪ್ರಗಾಢಹಿತವಾಸರೇನಿಹಿತಮುದ್ರಣಾಸಜ್ಜನೈರ್ದಿವಾನಿಶಮಯುಕ್ತಾದಿಕೆತಿಮುದಾನಸಂಸುಖದಾ

Vol. XIII.] BANGALORE—MONDAY NOVEMBER 1, 1886. [No. 44.

ಸಂಪುಟ ೧೩.] ಬೆಂಗಳೂರು—ಸನ್ ೧೮೮೬ನೇ ಇಸವಿ ನವಂಬರ್ ೧ನೇ ತಾರೀಖು ಸೋಮವಾರ. [ಸಂಚಿಕೆ ೪೪.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

[illegible]

ಜಾಹೀರಾತು ವಿವಾದ.

[illegible]

NOTICE TO SUBSCRIBERS

[illegible]

NOTICE.

VAIDYASARA SANGRAHA

Price including Postage, Rs 5-0-0

ವೈದ್ಯಸಾರ ಸಂಗ್ರಹ.

[illegible]

[illegible] ... ... ರೂ॥ ೫—೦—೦

[illegible]

[illegible]

ನೋಟೀಸ್.

ಮೈಸೂರು ದೇಶೀಯ ಪರೀಕ್ಷೆ.

ಅಂಕಗಣಿತದ ಕೀ.

ಮೇಲೆ ತಿಳಿಸಲ್ಪಟ್ಟ ಪರೀಕ್ಷೆಗೆ ವಿಧಿಸಲ್ಪಟ್ಟಿರುವ ಅಂಕಗಣಿತದ ಪುಸ್ತಕದಲ್ಲಿರುವ ಲೆಕ್ಕಗಳು ಸುಲಭಸಾಧ್ಯವಾಗಿ ಎಲ್ಲರಿಗೂ ತಿಳಿಯುವಂತೆ ಅಂಕಗಣಿತದ ಕೀ ಎಂಬ ಗ್ರಂಥ ಒಂದು ನೂತನವಾಗಿ ತಯಾರ್ಯಾಗಲ್ಪಟ್ಟು ಬಿಕರಿಗೆ ಸಿದ್ಧವಾಗಿದೆ. ಇದರ ಕ್ರಯ ಅಂಚೆ ಹಾಸಲ್ ಬೇರೆ ೧-೩-೦.

ಒಟ್ಟಾಗಿ ೧೦ ಪ್ರತಿಗಳು ತೆಗೆದುಕೊಳ್ಳುವವರಿಗೆ ಒಂದು ಬಹುಮಾನ ಪ್ರತಿ ಕೊಡಲ್ಪಡುವುದು. ಮನಿಯಾರ್ಡರ್ ಮತ್ತು ಅಂಚೆ ಸ್ಟಾಂಪುಗಳ ಮೂಲಕ ಕಳುಹಿಸತಕ್ಕದ್ದು. ಸ್ಟಾಂಪುಗಳು ಕಳುಹಿಸುವವರು ರೂ॥ ೧ಕ್ಕೆ ೧ಆಣೆ ಪ್ರಕಾರ ಡಿಸ್ಕೌಂಟ್ ಸೇರಿಸಿ ಕಳುಹಿಸತಕ್ಕದ್ದು.

ಬೆಂಗಳೂರು } ವಿ. ಅಪ್ಪಾಜಿರಾವ್,
೨೩-೧೦-೮೬ } ಬೆಂಗಳೂರು ನಗರ್ತಪೇಟೆ.
ಕಾಳೇಪತಯ್ಯನ ಕೇರಿಮುಖಪೇಟೆ

ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿ.

ಇಸ್ತಿಹಾರನಾಮೆ

ನಂ. ೨೨೨.

ಸನ್ ೧೮೮೭ನೇ ಇಸವಿ ಜನವರಿ ಗುರ್ತ್ರೀ ತಾ॥ ಮೊದಲುಗೊಂಡು ೧೮೮೭ನೇ ಡಿಸೆಂಬರ್ ೩೧ನೇ ತಾರೀಖಿನವರೆಗೆ, ಬೆಂಗಳೂರು ಸಿಟಿಯಲ್ಲಿ, ಮ್ಯುನಿಸಿಪಲ್ ಸೆಕ್ಷನ್ [illegible] ಪ್ರಕಾರ ಪಡೆಯತಕ್ಕ ಸಿಟಿ ಪಡೆದುಪಟ್ಟ ಪರವಾನಿಗೆ [illegible] ಸನ್ ೧೮೮೬ನೇ ಇಸವಿ ನವಂಬರ್ ೧೫ನೇ ತಾರೀಖಿನವರೆಗೆ ಅವರವರ ರುಜುಮಾಡಿರುವವರು ಬರಮಾಡಿಕೊಳ್ಳುವರು.

೨. ಆದಿತ್ಯವಾರ ಮತ್ತು ರಜಾದಿನಗಳುವಿನಾ ಇತರದಿನಗಳಲ್ಲಿ ಹಗಲು ೧೧ಘಂಟೆಯು ಲಾಗಾಯತು ೪ ಘಂಟೆಯೊಳಗಾಗಿ ಸಿಟಿ ಮ್ಯುನಿಸಿಪಲ್ ಆಫೀಸಿಗೆ ಬಂದು ಅವರ ತಪಸೀಲ್ ತಿಳುಕೊಳ್ಳಬಹುದು. ಬೆಂಗಳೂರು ಸಿಟಿಯಲ್ಲಿ ದೀಪಗಳು ಹಚ್ಚುತಕ್ಕಬಗ್ಗೆ ಕೊಡಲ್ಪಟ್ಟ ದರಖಾಸ್ತು ಲಕೋಟೆಯಮೇಲೆ ಬರೆಯತಕ್ಕದ್ದು.

೩. ದರಖಾಸ್ತುಗಳಸಂಗಡ ಠೇವಣಾತಿಬಗ್ಗೆ ೫೦ ರೂಪಾಯಿಗಳು ನಗದು ಅಥವಾ ಅದಕ್ಕೆ ತಕ್ಕಷ್ಟು ಕರೆನ್ಸೀನೋಟು ಕಳುಹಿಸಿದ ಹೊರತು ಯಾವ ದರಖಾಸ್ತೂ ಅಂಗೀಕರಿಸಲ್ಪಡಲಾರದು.

೪. ಯಾರ ದರಖಾಸ್ತು ಅಂಗೀಕರಿಸಲ್ಪಡುತ್ತದೆಯೋ ಅಂತಾ ದರಖಾಸ್ತುದಾರನಿಂದ ಹಾಜರ್ಮಾಡಲ್ಪಡುವ ಠೇವಣಾತಿಯು ನಿಲ್ಲಿಸಿಕೊಳ್ಳಲ್ಪಡುವದು, ಅವನ ದರಖಾಸ್ತು ಮಂಜೂರ್ಮಾಡಲ್ಪಟ್ಟ ಸಂಗತಿ ಅವನಿಗೆ ತಿಳಿಸಲ್ಪಟ್ಟ ಒಂದು ವಾರದೊಳಗಾಗಿ ಆವಶ್ಯಕವಾಗಿ ಅವನು ಬರೆದು ಕೊಡಬೇಕಾದ ಕಂಟ್ರಾಕ್ಟು ಮುಚ್ಚಳಿಕೆಯನ್ನು ಬರೆದುಕೊಡುವದಕ್ಕೆ ತಪ್ಪಿಹೋಗುವನಾದರೆ ಅವನಠೇವಣಾತಿ ಮೊಬಲಗು ವಾಪಸ್ ಕೊಡಲ್ಪಡಲಾರದು. ಯಾವ ದರಖಾಸ್ತನ್ನಾದರೂ ಸಬಬ್ ನಮೂದಿಸದೆ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಪ್ರೆಸಿಡೆಂಟರವರು ಉಳಿಸಿಕೊಂಡಿರುತ್ತಾರೆ.

ಬೆಂಗಳೂರು, ಸಿಟಿ ಮ್ಯುನಿಸಿಪಲ್ ಆಫೀಸ್,
೩೦ನೇ ಅಕ್ಟೋಬರ್ ೧೮೮೬.

A. SRINIVASA CHARLU,
Vice-President,
City Municipal Commission.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, NOVEMBER 1, 1886.

೧೮೮೬ನೇ ನವಂಬರ್ ೧ನೇ ತಾ॥ ಸೋಮವಾರ.

DEWAN BAHADUR RAGHUNATHAROW

ಈಚೆಗೆ ಇಂದೂರ್ ಸಿಂಹಾಸನದಲ್ಲಿ ಪ್ರತಿಷ್ಠಿತರಾದ ಮಹಾರಾಜಾ ಶಿವಾಜಿರಾವ್ ಹೋಲ್ಕರರು, ತಮಗೆ ಪ್ರಧಾನ ಮಂತ್ರಿಯಾಗಿಯೂ ಮಾರ್ಗದರ್ಶಕರಾಗಿಯೂ ಇರುತ್ತ ತಮ್ಮ ರಾಜ್ಯವನ್ನಾಳತಕ್ಕಬಗ್ಗೆ ಮದರಾಸ್ ಡೆಪ್ಯುಟಿ ಕಲೆಕ್ಟರಾದ ದಿವಾನ್‌ಬಹದೂರ್ ರಘುನಾಥರಾಯರವರ ನೌಕರಿಯನ್ನು ಇಂಡ್ಯ ಗವರ್ನಮೆಂಟಿನವರ ಮೂಲಕ ಅಪೇಕ್ಷಿಸಿದರಮೇಲೆ ರಾಯರವರು ಅದು ಅಂಗೀಕರಿಸಿ ಕ್ಷಿಪ್ರದೊಳು ಇಂದೂರಿಗೆ ಪ್ರಯಾಣವಾಗುವರೆಂಬ ವೃತ್ತಾಂತವು ಕೇಳಿ ನಮ್ಮಂತೆ ಏತದ್ದೇಶೀಯರು ಸಹ ಬಹಳವಾಗಿ ಸಂತೋಷಿಸುವರೆಂದು ನಂಬುತ್ತೇವೆ. ದಿವಾನ್ ಬಹದೂರರವರು, ೧೮೩೪ನೇ ಇಸವಿಯುಮೊದಲು ೪೦ನೇ ಇಸವಿಯತನಕ (ಪ್ರಾತಿನಿಧ್ಯವಾಗಿ ಏದು ಸಂವತ್ಸರಗಳಕಾಲ) ವಿಸ್ತಾರವಾದ ಇಂದೂರು ರಾಜ್ಯವನ್ನು ಸ್ವಾಧೀನದೊಳಟ್ಟುಕೊಂಡುಸಕಲ ಜನಾಂಗೀಕಾರವಾದ ರೀತಿಯಿಂದ ಪ್ರಭುತ್ವವಮಾಡಿ ಕೀರ್ತಿ ಪ್ರತಿಷ್ಠೆಯು [illegible] ಈಗ ಅದೇ [illegible] ಅವರಿಗೆ ಪ್ರಾಪ್ತವಾದ [illegible] ನಾವು ಅಂತರವಾದ ಉಲ್ಲಾಸದ ಮಾತವನ್ನೆತ್ತಿದೊಡನೆ ಸೂಚಿಸುವವನಾಗಿದೆವು. ಹೋಲ್ಕರ್ ಮಹಾರಾಜರವರು ಇತರಾಪೇಕ್ಷೆಯಾ ಮಹಾರಾಜಶ್ರೀ ರಘುನಾಥರಾಯರವರನ್ನೇ ಪ್ರಾಧಾನ್ಯೇನ ಅಪೇಕ್ಷಿಸಿದ್ದೂ, ಅಂತಾಅಪೇಕ್ಷೆಯನ್ನು ಇಂಡ್ಯ ಗವರ್ನಮೆಂಟಿನವರು ಪುರಸ್ಕರಿಸಿ ನಡಿಸಿದ್ದೂ, ಅದು ತಿರಸ್ಕರಿಸದೆ ರಾಯರವರು ಅಂಗೀಕರಿಸಿದ್ದೂ ಒಂದಕ್ಕಿಂತ ಒಂದು ಬಹಳ ಕೊಂಡಾಡತಕ್ಕದ್ದಾಗಿರುತ್ತದೆ. ರಾಯರವರ ಉನ್ನತಪದಪ್ರಾಪ್ತಿಯು ನಮಗೆ ಜನಾನಂದಕರವಾದದ್ದಾಗಿದ್ದರೂ, ಅವರ ತಾತ್ಕಾಲಿಕ ವಿಶ್ಲೇಷವು ಪ್ರಬಲನಷ್ಟರೂಪೇಣ ಸ್ವದೇಶೀಯರಿಂದ ಗಣಿಸಲ್ಪಡದಿರಲಾರದು. ಆಥವಾ ರಾಯರವರ ಸಂಬಂಧ ದಿಂದುಂಟಾಗಬಹುದಾದ ಮಹತ್ಪ್ರಯೋಜನವನ್ನು ಸ್ವದೇಶೀಯರು ಕಳೆದುಕೊಂಡು, ಈಗಅವರಿಗುಂಟುಮಾಡುತ್ತ ಯಾಗುವದಲ್ಲದೇಲೀ ಲ್ಲವು. ಮ॥ ರಾ॥ ರಘುನಾಥರಾಯರವರು ವಿಶೇಷದಾಟ್ಟರೀಯುಳ್ಳ ತಮ್ಮಸರ್ಕಾರ್ ಪಗ್ಗೈತ ಕೆಲಸಗಳೊಡನೆ ಸ್ವದೇಶೀಯರ ಪ್ರಾಬವಾಭಿವೃದ್ಧಿಯಂಬಯಸಿ ಅದಕ್ಕಾಗಿ ಅವರು ಅನುಭವಿಸಿದ ಬಹುವಿಧಕಾಯಿಕಮಾನಸಿಕ ಕ್ಲೇಶಗಳನ್ನು ಅವರುತ ಅನ್ಯರ್ಯಾರೂಸಹಿಸಲಾರರೆಂದು ನಾವು ದೃಢವಾಗಿಹೇಳಬಲ್ಲೆವು. ಸಾಮುದಾಯಕಗಳಾದ ಆಚಾರವ್ಯವಹಾರವಿಷಯಗಳಲ್ಲಿಯೂ,ಅಧ್ಯಾತ್ಮವಿಚಾರವಾಗಿಯೂ,ರಾಯರವರು,ಸ್ವದೇಶಾನ್ಯದೇಶಗಳಲ್ಲಿ ಆಗಿಂದಾಗ್ಯೆ ಮಾಡುತಲಿದ್ದ ಉಪನ್ಯಾಸಗಳಿಂದಲೂ, ಬರೆಯುತಲಿದ್ದ ಲೇಖನಗಳಿಂದಲೂ, ನಡೆಸುತಲಿದ್ದ ವಿಚಾರಗಳಿಂದಲೂ, ಪ್ರಕಟಿಸುತಲಿದ್ದ ಗ್ರಂಥಗಳಿಂದಲೂ, ಅವರ ಕೀರ್ತಿಪ್ರಾಶಸ್ತ್ಯಗಳು ದಿನೇದಿನೆ ಅಭಿವೃದ್ಧಿಯ ನೈರ್ಮಲ್ಯ ಬಂದದರಿಂದ ಈಚೆಗೆ ಅವರ ಪರಿಚಯ ಸಾಹಚರ್ಯಗಳನ್ನು ಅಪೇಕ್ಷಿಸದೆ ಯಿದ್ದವರಿಲ್ಲವು.

ಸ್ವದೇಶೀಯರಅಭಿವೃದ್ಧಿಯಬಗ್ಗೆ ಅವರುಮಾಡಿದ ಶ್ಲಾಘ್ಯಗಳಾದ ಉಪಕಾರಗಳ ಪ್ರಯೋಜನಗಳನ್ನು ಇತರಾಪೇಕ್ಷೆಯ ಸ್ವದೇಶೀಯರು ಬಹುವಿಧವಾಗಿ ಅನುಭವಪೂರ್ವಕ ತಿಳಿದುಕೊಂಡಿರುತ್ತಾರೆ. ದಿವಾನ್ ಬಹದೂರರವರಿಗೆ ಈಗ ಐವತ್ತೈದುವರುಷಗಳ ವಯಸ್ಸಾಗಿದ್ದರೂ ಅಲೌಕಿಕವಾದ ಅವರ ಲೌಕಿಕಾನುಭವವೂ, ಅರೋಗದೃಢಗಾತ್ರತ್ವವೂ, ನಿಯತವಾದ ಮನೋಧೈರ್ಯವೂ, ಅಕುಟಿಲವಾದ ಸ್ವಭಾವವೂ, ನಿರಪೇಕ್ಷಣೀಯವಾದ ಪ್ರಾಮಾಣಿಕತೆಯೂ,ನಿರ್ಮಲವಾದ ಪ್ರವೃತ್ತಿಯೂ,ಅವರುಅಪೇಕ್ಷಿಸಿದ್ದ ನಿವೃತ್ತಿಸುಖವನ್ನು ಘಟಿಯಿಸದೆ ಇನ್ನುಕೆಲವು ಕಾಲ ಸಾಮುದಾಯಕವಾದ ಕೀರ್ತಿಪ್ರತಿಷ್ಠೆಗಳಿಗಾಗಿ ನೌಕರಿಯೊಳಿರುವಂತೆ ಮಾಡಿದವೆಂಬದಕ್ಕೆ ಈಚೆಗೆ ಮದರಾಸ್ ಗವರ್ನಮೆಂಟಿನವರು ಕೊಟ್ಟ ನಿರೂಪವೇ ಸಾಕಾದ ದೃಷ್ಟಾಂತವಾಗಿರುತ್ತದೆ. ವಿಶೇಷ ಗುಣಾಢ್ಯರಾದ ಸದರೀ ದೊಡ್ಡಮನುಷ್ಯರು ಈಗ ನಿರ್ವಹಿಸುತಲಿರುವ ಒಂದು ಡೆಪ್ಯುಟಿ ಕಲೆಕ್ಟರ್ ಕೆಲಸಕ್ಕಿಂತಲೂ, ಗೌರವ್ಯವಾದ ಉನ್ನತಪದವಿಯಲ್ಲಿ ಇರಬಹುದಾಗಿದ್ದರೂ ಸಾಧಾರಣವಾಗಿ ಪರೋಪಸರ್ಪಣಮಾಡಿ, ತಮ್ಮ ಅಂತಃಕರಣಕ್ಕೆ ವಿರುದ್ಧವಾಗಿ ಕೋರಿದಾಗ್ಯೂ ಪರಕೃದಯಾಸು ರಂಜನಾರ್ಥ ಕುಮಾರ್ಗಗಳಲ್ಲಿ ಪ್ರವೇಶಿಸಿ ತನ್ಮೂಲಕವಾದ ಸ್ವಪ್ರತಿಷ್ಟೆಯಂ ಪಡೆಯಬೇಕೆಂಬ ಸ್ವಭಾವವುಳ್ಳವರಲ್ಲವಾದದರಿಂದಲೂ, ಸಮಯಾನುಸಾರವಾಗಿ ಪರ್ಗಸದೆ ಶತವಿಧ ನಿಷ್ಠುರದಿಂ ಯುಕ್ತವಾದ ಸ್ವಮಾರ್ಗವನ್ನೇ ಅವಲಂಬಿಸತಕ್ಕವರಾದದರಿಂದಲೂ ಅಧಿಕಾರಾಭಿವೃದ್ಧಿಗೆ ಆಗಿಂದಾಗ್ಯೆ ಪುಂಟಾಗಿದ್ದ ಅವಕಾಶಗಳೆಲ್ಲವೂ ವಿಫಲಗಳಾದವು. ಆದಾಗ್ಯೂ ಸುಗುಣಗಳೆಂದಿಗಾದರೂ ತಕ್ಕಫಲವನ್ನುಂಟುಮಾಡದೆ ಹೋಗಲಾರವಾಗಿ ಅವರ ಗುಣಗಳೇ ಅವರುಂ ಪ್ರಕೃತ ಮಹೋನ್ನತಪದವಿಗೆತಂದವೆಂದು ಹೇಳಬಹುದಾಗಿದೆ. ಈಕಾಲದಲ್ಲಿ ದಾಸತ್ವವನ್ನು, ಮುಖಸ್ತುತಿಯೂ, ಅಭಿಮಾನ ಸಂಪಾದಕವಾದ ಯಾಚನೆಯೂವುಳ್ಳ ಮನುಷ್ಯನು ಅಭಿವೃದ್ಧಿಗೆ ಬರುವಂತೆ ಸ್ವಾತಂತ್ರ್ಯವುಳ್ಳವನು ಬರಲಾರನೆಂಬದಕ್ಕೆ ಮ॥ ರಾ॥ ರಘುನಾಥರಾಯರನ್ನೇ ಮುಖ್ಯ ಉದಾಹರಣತ್ವೇನ ಇಲ್ಲಿ ನಮೂದಿಸುತೇವು. ೧೮೫೪ನೇ ಇಸವಿಯಲ್ಲಿ ಸರ್ಕಾರ್ ನೌಕರಿಯೊಳು ಪ್ರವರ್ತಿಸಿ ಅದು ಮೊದಲು ನಾಲ್ಕು ಸಂವತ್ಸರಗಳು ಮಾತ್ರವೇ ಖಾಜೇವಾರಿ ಉದ್ಯೋಗದಲ್ಲಿದ್ದರಲ್ಲದೆ ಆಗ ಅಲ್ಲಿ ಅವರು ಸಂಪಾದಿಸಿದ ಕೀರ್ತಿ ಪ್ರಾಶಸ್ತ್ಯಗಳನ್ನು ಗವರ್ನಮೆಂಟಿನವರು ಪುರಸ್ಕರಿಸಿ ಕೂಡಲೇ ಅವರಂ ಡೆಪ್ಯುಟಿಕಲೆಕ್ಟರ್‌ಕೆಲಸಕ್ಕೆ ಬಡ್ತಿಮಾಡಿದರು. ೧೮೬೦ನೇ ಇಸವಿಯ ಮೊದಲು ೬೪ನೇ ಇಸವಿಯ ತನಕ ನಾರ್ತ ಆರ್ಕಾಟ್ ಮತ್ತು ಕರ್ನೂಲ್ ಡಿಸ್ಟ್ರಿಕ್ಟುಗಳಲ್ಲಿ ಸದರೀಡಿಸ್ಟ್ರಿಕ್ಟುಗಳ ಇರ್ರಿಗೇಷನ್ ಕ್ಯಾನಾಲ್ ಕಂಪೆನಿಗೆ ಸೇರಿದ ಸ್ವಪರಿತ್ಯಾಗ ಅಧಿಸರಾಗಿ ಮೊಕರರ್ಮಾಡಲ್ಪಟ್ಟಿದ್ದರು. ಬಳಿಕ ಎರಡುವರುಷಗಳಕಾಲ ಅವರಿಗೆ ರೆಯಿಲ್ವೆ ಇಲಾಖೆಯ ಸಂಬಂಧವುಂಟಾಗಿತ್ತು. ೧೮೬೬ನೇ ಇಸವಿಯಲ್ಲಿ ಹಿಂದಿನ ಏದುಸಂವತ್ಸರಗಳ ಬ್ರಿಟಿಷ್‌ಗವರ್ನಮೆಂಟ್ ನೌಕರಿಯ ಹಕ್ಕುದಾರಿಯೊಡನೆ ಗವರ್ನಮೆಂಟಿಗೆ ಕೊಡಬೇಕಾದ ಪೆನ್ಷನ್ ಸಂಬಂಧ

ವಾದ ಕಂಟ್ರಿಬ್ಯೂಷನ್ ಇಲ್ಲದಂತೆ ಗತಿಸಿದ ಹೋಳ್ಕರ್ ಮಹಾರಾಜರವರಿಗೆ ಮಂತ್ರಿಯಾಗಿ ಇಂಡ್ಯ ಗವರ್ನಮೆಂಟಿನವರು ನೇಮಕರ್ಮಾಡಿದರು. ಪರಂತು ಮಿ. ರಘುನಾಥರಾಯರವರು ಬಹುಕಾಲ ಸದರೀ ನೌಕರಿಯೊಳಿರಲಿಲ್ಲವು. ಸಾಬಿಕ್ ಹೋಳ್ಕರ್ ಮಹಾರಾಜರವರು ಈಗಿನ ಕೆಲವು ಸಂಸ್ಥಾನಾಧಿಪತಿಗಳಂತೆ ತಾಟಸ್ಥ್ಯ ಭಾವವಂ ವಹಿಸಿ ನ್ಯಸ್ತಭರರಾಗಿರುವ ಸ್ವಭಾವವುಳ್ಳವರಲ್ಲವಾದದರಿಂದ ಅವರು ಆಡಳಿತ ವಿಷಯದಲ್ಲಿ ಕೆಲವು ಮಟ್ಟಿಗೆ ಪ್ರವೇಶಿಸುತ ಬಂದದರಿಂದಲೂ, ಅಷ್ಟರ ಪಾರತಂತ್ರ್ಯವನ್ನು ಸಹ ಸಹಿಸಲಿಕ್ಕೆ ರಾಯರವರಿಗೆ ಇಷ್ಟವಿಲ್ಲದೆ ಹೋದದರಿಂದಲೂ, ಅಲ್ಲಿನ ಸಂಬಂಧವು ಐದು ವರುಷಗಳಿಗೆ ಎರಡು ತಿಂಗಳ ಮುಂಚಿತವಾಗಿಯೇ ನಿವೃತ್ತಿಯಾಗಬೇಕಾಗಿ ಬಂತು. ಆದಾಗ್ಯೂ ಏತನ್ಮಧ್ಯೆ ಅವರು ಸಂಸ್ಥಾನಕ್ಕೂ, ಪ್ರಜೆಗಳಿಗೂ, ವಿಶೇಷತಃ ಮಹಾರಾಜರಿಗೂ ಪ್ರಯೋಜನಕರಗಳಾದ ಬಹು ಯೇರ್ಪಾಡುಗಳನ್ನು ಮಾಡದಿರಲಿಲ್ಲವು. ಪ್ರಕೃತ ಹೋಳ್ಕರ್ ಮಹಾರಾಜರವರು ಮಿ ರಘುನಾಥರಾಯರವರ ನೌಕರಿಯನ್ನು ಅಪೇಕ್ಷಿಸಿದ್ದು ಬಹಳ ವಿಶೇಷವೆನ್ನಬೇಕಾಗಿದೆ ಪ್ರಭುತ್ವ ನಿರ್ವಹಣೆಯ ವಿಷಯದಲ್ಲಿ ಮಹಾರಾಜರವರಿಗೆ ಸಹಾಯಕರಾಗಿಯೂ, ಆಲೋಚಕರಾಗಿಯೂ, ಆಪ್ತರಾಗಿಯೂ ಇರಲಿಕ್ಕೆ ಅವರಿಗಿಂತಲೂ ಅರ್ಹರಾದ ಬೇರೊಬ್ಬರೂ ನಮ್ಮ ಬುದ್ಧಿಸ್ಥವಾಗಲಿಲ್ಲವು ಅಂತವರ ಯೋಗ್ಯತೆಯ ಮತ್ತು ಕೀರ್ತಿ ಪ್ರಾಶಸ್ತ್ಯಗಳ ಪರಿಭಾವನೆಯಿಂದ ಗೌರವ್ಯವಾದ "ದಿವಾನ್ ಬಹದೂರ್" ಎಂಬ ಪ್ರಶಸ್ತಿಯು ಇಂಡ್ಯ ಗವರ್ನಮೆಂಟಿನವರಿಂದ ಕೊಡಲ್ಪಟ್ಟದ್ದೇ ಹೊರ್ತು ಕೇವಲ ಔಪಚಾರಿಕವಾಗಿ ಸ್ವಪ್ರಯೋಜನಪರರಾದ ಕೆಲವರು ತಾಬೇದಾರರಿಂದ ಉಲ್ಲಾಸಾರ್ಥ ಕೊಡಲ್ಪಟ್ಟ ಅಲ್ಕಾಬ್ ಎಷ್ಟುಮಾತ್ರವೂ ಅಲ್ಲವು. ದಿವಾನಗಿರಿಯು ಸಾಧಾರಣವಾಗಿ ಅವರ ಮನೆತನಕ್ಕೆ ನಡೆದುಬಂದ ಉದ್ಯೋಗವಾಗಿರುತಿದೆ. ಅವರ ತಂದೆಗಳಾದ ಮ|| ರಾ|| ಕೊಲ್ಲಂ ವೆಂಕಟರಾಯರವರು ಇಂಡ್ಯ ಗವರ್ನಮೆಂಟಿನವರಿಂದ "ರಾಯ ರಾಯ ರಾಯ" ಎಂಬ ಅಸಾಧಾರಣವಾದ ಪ್ರಶಸ್ತಿಯಂ ಪಡೆದು ದಿವಾನರಾಗಿದ್ದರು ಅವರ ಕನಿಷ್ಠ ಪಿತಾಮಹ ಮ|| ರಾ|| ರಂಗರಾಯರವರು ತಿರುವಾಂಕೂರ್ ಸಂಸ್ಥಾನದ ದಿವಾನರಾಗಿದ್ದರು. ಅವರ ಸಹೋದರರಾದ ರಾಜಾ ಸರ್ ಟಿ. ಮಾಧವರಾಯರವರು ಕ್ರಮವಾಗಿ ತಿರುವಾಂಕೂರ್, ಇಂದೂರ್, ಬಡೋದೇ ಈ ಸಂಸ್ಥಾನಗಳಲ್ಲಿ ದಿವಾನಗಿರಿ ಮಾಡಿದರು. ಈಗ ಅವರು ಸ್ವಯಂ ದಿವಾನರಾದರು. ಹೀಗೆ ಪಾರಂಪರ್ಯೇಣ ದಿವಾನರುಗಳೆನಿಸಿಕೊಂಡವರ ಸಂತತಿಯವರ ಪೈಕಿ ಈ ದೇಶದಲ್ಲಿ ಕೂಡ ಒಬ್ಬರು ಉನ್ನತಾಧಿಕಾರದೊಳಿರುವದರಿಂದ ಕಾಲಕರ್ಮಾನುಕೂಲ್ಯಗಳುಂಟಾಗಿ ದೈವವು ಸಹಕಾರಿಯಾಗಿದ್ದರೆ ಅವರನ್ನು ಸಹ ಒಂದು ಕಾಲ ವಿಶೇಷದಲ್ಲಿ ನಾವು ಇಲ್ಲಿನ ದಿವಾನರಾಗಿ ನೋಡದೆ ಹೋಗಲಾರೆವು. ಹಾಗೆ ಘಟಿಸಿದ ಪಕ್ಷದಲ್ಲಿ ಅವರು ಸರ್ವಸಮನಾಗಿ ವರ್ತಿಸುವರೆಂಬ ನಂಬಿಕೆಯನ್ನು ಪ್ರಕೃತ ಅವರ ಸ್ಥಿತಿಯೇ ದೃಢಪಡಿಸುತಿದೆ. ಮ|| ರಾ|| ಕೊಲ್ಲಂ ವೆಂಕಟರಾಯರವರಿಗೂ ಈ ದೇಶಕ್ಕೂ ಉಂಟಾಗಿದ್ದ ಅನಾದಿ ಸಂಬಂಧವನ್ನೂ ಅವರು ಇಲ್ಲಿಗಾಗಿ ಮಾಡಿದ ಮೆಹನತ್ತನ್ನೂ ಪರಿಭಾವಿಸಿ ನೋಡಿದರೆ ತತ್ಸಂತತಿಯವರಿಗೆ ಮಾತ್ರ ಇಲ್ಲಿ ಯಾತಕ್ಕೆ ಹಕ್ಕಿಲ್ಲದೆ ಹೋಗಬೇಕು? ಮುಖ್ಯವಾಗಿ ಗೌರವ್ಯನಾದ ವಂಶದಲ್ಲಿ ಜನಿಸಿ ಗೌರವ್ಯವಾದ ಪದವಿಯನ್ನೈದಿ ಗೌರವ್ಯರೆನಿಸಿಕೊಂಡಿರುವ ಮ|| ರಾ|| ರಘುನಾಥರಾಯರವರಿಗೆ ಪ್ರಕೃತ ಅಧಿಕಾರದಲ್ಲಿ ಉತ್ತರೋತ್ತರಾಭಿವೃದ್ಧಕವಾದ ಶ್ರೇಯಸ್ಸಂತೋಷ ಸೌಭಾಗ್ಯಗಳುಂಟಾಗಬೇಕೆಂದು ಕೋರುವೆವು.

Occasional Notes.
ನೈಮಿತ್ತಿಕವಿಷಯನ್ಯಾಸ.

—.o.—

Preparations for the reception of the Viceroy.—ವೈಸರಾಯಿಯವರು ಬಡೋದೆ ಸಂಸ್ಥಾನಕ್ಕೆ ಬರುವದಾಗಿ ನಿಷ್ಕರ್ಷಿಸಿದರೆಂಬ ವರ್ತಮಾನತಿಳಿದಕೂಡಲೇ ಒಂದುಕಮಿಟಿ ಏರ್ಪಾಡಾಗಿ ಆಕಾಲದಲ್ಲಿ ನಡೆಯಬೇಕಾದ ಉತ್ಸವಾದಿಗಳಬಗ್ಗೆ ಮೂರುಲಕ್ಷರೂಪಾಯಿಗಳು ಮಂಜೂರ್ಮಾಡಲ್ಪಟ್ಟತು. ಕೇವಲ ಆತುರದೊಡನೆ ಪ್ರಬಲ ಸನ್ನಾಹಗಳು ನಡೆಯುತಲಿವೆ. ಗುಜರಾತಿಪ್ರಾಂತದಿಂದ ಬಹುಮಂದಿ ಕೆಲಸಗಾರರುಬಂದು ಬಡೋದೆ ಪಟ್ಟಣದಲ್ಲೂ ಆಸಪಾಸ್ ಪ್ರದೇಶಗಳಲ್ಲೂ ವಿವಿಧಾಲಂಕಾರ ಯುಕ್ತವಾದ ಕಮಾನುಗಳು ಕಟ್ಟುತಲಿದಾರೆ, ಎಂದು ಒಂದಾನೊಂದು ಪತ್ರಿಕೆ ಹೇಳುತಿದೆ.

—

Military Strength—ಯೂರೋಪ್ ಖಂಡದ ಪೈಕಿ ಪ್ರಸಿದ್ಧರಾದ ಸಂಸ್ಥಾನಾಧಿಪತಿಗಳ ಸೇನಾಬಲ ಸಂಖ್ಯೆಯನ್ನು ಕುರಿತು ಇಂಗ್ಲಿಷ್ ಪತ್ರಿಕೆಯೊಂದು ತಿಳಿಸುತಿದೇನಂದರೆ —

ಸಂಸ್ಥಾನಗಳಲ್ಲಿ	ಮಿಕ್ಕ ಕಾಲದಲ್ಲಿರುವದು	ಯುದ್ಧಕಾಲ (ದಲ್ಲಿ ವಿನಿಯೋಗಿಸುವದು
ಆಸ್ಟ್ರಿಯಾ	೨,೭೨,೦೦೦,	೧೧,೦೦,೦೦೦
ಜರ್ಮನಿ	೪,೫೦,೦೦೦,	೧೫,೩೬,೦೦೦
ಫ್ರಾನ್ಸ	೫,೧೦,೦೦೦,	೩೨,೫೮,೦೦೦
ರಷ್ಯಾ	೭,೦೦,೦೦೦,	೨೩,೦೦,೦೦೦

ಇವುಗಳ ಪೈಕಿ ಜರ್ಮನೀಯವರ ಸೈನ್ಯವು ಬಹಳ ತರಬಿಯತ್ತಾದದ್ದಾಗಿಯೂ, ಬಹಳ ಬಂದೋಬಸ್ತಿಯುಳ್ಳದ್ದಾಗಿಯೂ ಇರುತಿದೆ. ರಷ್ಯಾದವರ ಸೈನ್ಯವು ಅಭ್ಯಾಸವುಳ್ಳದ್ದಾಗಿರುತಿದೆ. ಫ್ರೆಂಚಿನವರ ಸೈನ್ಯವು ಧೈರ್ಯ ಶೌರ್ಯವುಳ್ಳದ್ದಾಗಿಯೂ, ಕ್ಲೇಶಸಹಿಷ್ಣುತೆಯುಳ್ಳದ್ದಾಗಿಯೂ ಇರುತಿದೆ. ಇಂಗ್ಲಿಷ್ ಸೈನ್ಯದ ಸಾಹಸ ಪರಾಕ್ರಮಗಳು ಕಾಲಕ್ಕೆ ಸಿದ್ಧವಾಗುವ ಕಾಫ ರೊಟ್ಟಿಯ ಮೇಲೆ ಏರ್ಪಡತಕ್ಕವಾಗಿರುತಿವೆ, ಎಂಬದು.

—

The Czar of Russia—ಲೋಕದಲ್ಲಿ ಪ್ರಾಣಭೀತಿಯೆಂಬದೊಂದನ್ನೂ ಬಿಟ್ಟದ್ದಲ್ಲವು. ರಷ್ಯಾ ಚಕ್ರವರ್ತಿಯವರಾದ ಜಾರ್‌ಯವರು ತಮ್ಮ ಪ್ರಜೆಗಳ ಇಷ್ಟಕ್ಕೆ ಅನ್ಯಥಾ ಪ್ರವರ್ತಿಸುತ ನಿರಂಕುಶಾಧಿಕಾರವಂ ಚಲಾಯಿಸುವದರಿಂದ ಅವರ ಪ್ರಾಣವು ಯಾವಾಗಲೂ ಸಾಪಾಯವಾದದ್ದಾಗಿರುತಿದೆ. ಇದಕ್ಕಾಗಿಯೇ ಅವರು ಅಂಗರಕ್ಷಕರಿಲ್ಲದೆ ಒಂದು ಕ್ಷಣವಾದರೂ ಏಕಾಂಗಿಯಾಗಿರುವದಿಲ್ಲವು. ಹೀಗಿದ್ದಾಗ್ಯೂ ನಿಹಿಲಿಸ್ಟ ಜನಗಳು ಸಕಲೋಪಯವಂ ಮಾಡಿ ಚಕ್ರವರ್ತಿಯವರನ್ನು ಖೂನ ಮಾಡುತ್ತಾರೆ ಈ ಜನಗಳಿಂದಲೇ ಗತಿಸಿದ ಚಕ್ರವರ್ತಿಯವರು ಸಹ ತಮ್ಮ ಪ್ರಾಣವಂ ಕಳೆದುಕೊಂಡರು. ಪ್ರಕೃತ ಚಕ್ರವರ್ತಿಯವರು ಈಚೆಗೆ ಒಂದು ದಿನ ವಾರ್ಸಾ ಪಟ್ಟಣಕ್ಕೆ ಹೋಗುವದಕ್ಕೆ ಹಿಂದಿನ ದಿನದೊಳು, ತಮ್ಮ ವಿರುದ್ಧ ಕೋಟಿಗೆ ಸೇರಿದ ನಿಹಿಲಿಸ್ಟ ಜನಗಳ ಪೈಕಿ ಒಬ್ಬನನ್ನು ಗಲ್ಲಿಗೆ ಹಾಕಿಸಿದ್ದು ಅವರ ಭೀತಿಗೆ ಮತ್ತಷ್ಟು ಸಹಕಾರಿಯಾಗಿ, ಮಾರನೆಯ ದಿನ ಜಾರ್‌ಯವರು ಸಂಚಾರ ಮಾಡಿದ ರಯಿಲ್ ಮಾರ್ಗದ ಎರಡು ಪಾರ್ಶ್ವದಲ್ಲಿಯೂ, ಆಯುಧ ಪಾಣಿಗಳಾದ ಸೋಲ್ಜರ್‌ಗಳನ್ನು ಕಡೆಗೂ ನಿಲ್ಲಿಸಿ ರಸ್ತೆಗೆ ಸಮೀಪದಲ್ಲಿ ಯಾರು ಬಂದಾಗ್ಯೂ ಅವರಂ ಗೋಲಿಯಿಂದ ಹೊಡೆಯುವಂತೆ ಹುಕುಂ ಕೊಡಬೇಕಾಯಿತು. ಒಂದರ ಹಿಂದೆ ಒಂದು ಪ್ರಕಾರ ಮೂರು ಟ್ರೇನುಗಳು ಬರುವಂತೆಯೂ, ಮೊದಲನೆಯದು, ಚಕ್ರವರ್ತಿಯವರಿಗಾಗಿಯೂ, ಎರಡನೆಯದು, ಅವರ ಸರಂಜಾಂಗಳಿಗಾಗಿಯೂ, ಮೂರನೆಯದು, ಮಾರ್ಗದಲ್ಲಿ ರೈಲ್ ಗಾಡಿಗೇನಾದರೂ ಅಪಾಯವುಂಟುಮಾಡಲ್ಪಟ್ಟದ್ದ ಪಕ್ಷಕ್ಕೆ ಅದಂ ದುರಸ್ತಿ ಮಾಡಲಿಕ್ಕೆ ಬೇಕಾದ ಕೆಲಸದವರು ಮತ್ತು ಸಾಮಾನು ಇವುಗಳಿಗಾಗಿಯೂ, ವಿನಿಯೋಗಿಸಲ್ಪಡತಕ್ಕದ್ದೆಂತಲೂ, ಹುಕುಂ ಮಾಡಬೇಕಾಯಿತು. ಒಂದುವೇಳೆ ಮಾರ್ಗದಲ್ಲಿ ಯಾವದಾದರೂ ಅಪಾಯದಿಂದ ಜಾರ್‌ಯವರ ಗಾಡಿಯು ನಿಂತುಹೋದಲ್ಲಿ ಆಗ ನಿಹಿಲಿಸ್ಟ ಜನಗಳಿಂದ ಅವರಿಗೆ ಪ್ರಾಣಹಾನಿ ಉಂಟಾಗಬಹುದೆಂಬ ಅತಿ ಶಂಕೆಯೊಡನೆ ರಯಿಲ್ವೇ ಕೆಲಸದವರನ್ನು ಸಂಗಡ ಕರೆದುಕೊಂಡು ಹೋಗಬೇಕಾಯಿತು. ಇಷ್ಟು ಬಂದೋಬಸ್ತಿಯೊಡನೆ ಪ್ರಯಾಣ ಮಾಡಿದಾಗ್ಯೂ ಚಕ್ರವರ್ತಿಯವರಿಗೆ ಪ್ರಾಣಭೀತಿಯೆಂಬದು ಪ್ರಬಲವಾದದರಿಂದ ಅವರು ಪದೇಪದೆ ಗಾಡಿಗಳನ್ನು ಬದಲಾಯಿಸುತಲೂ, ಸ್ಟೇಷನುಗಳ ಸಮೀಪಕ್ಕೆ ಬರುವಾಗ್ಯೆ ಗಾಡಿಯ ಕಿಟಕಿಗಳನ್ನು ಮುಚ್ಚಿಕೊಳ್ಳುತಲೂ, ತಮ್ಮ ಪ್ರಯಾಣ ಕಾಲದಲ್ಲಿ ಪ್ರತಿ ಕ್ಷಣವನ್ನೂ ಒಂದು ಯುಗದಂತೆ ಕಳೆಯುತಲೂ, ಉದ್ದಿಷ್ಟ ಸ್ಥಳವಂ ತಲಪಿದರೆಂದು ಒಂದು ಇಂಗ್ಲಿಷ್ ಪತ್ರಿಕೆ ತಿಳಿಸುತಿದೆ ಇದೇ ಅಭಿಪ್ರಾಯದೊಡನೆ ಈ ಇಂಡ್ಯ ದೇಶದಲ್ಲಿ ಸಹ ನೇಟಿವ್ ಸಂಸ್ಥಾನಾಧಿಪತಿಗಳೂ, ಅವರ ದಿವಾನರುಗಳೂ ಯಾವಾಗಲೂ, ಅಂಗರಕ್ಷಕರಿಲ್ಲದೆ ಹೊರಗೆ ಹೊರಡುವದಿಲ್ಲವು ರಾಜಭಕ್ತಿ ವಿಶ್ವಾಸಾದಿಗಳಿಂದ ನಿಬಿಡಿತವಾದ ಇಂತಾ ಇಂಡ್ಯ ದೇಶೀಯರ ವಿಷಯದಲ್ಲಿ ಅಂತಾ ಅಭಿಪ್ರಾಯವ್ಯಾತಕ್ಕೆ ಉಂಟಾಯಿತೆಂದರೆ—ಮೇಲೆ ತಿಳಿಸಲ್ಪಟ್ಟ ಅರಸರ ಮತ್ತು ಅವರ ದಿವಾನರುಗಳ ಆಡಳಿತ ಕ್ರಮವೆಂಬದು ಅಂತವರ ಭಕ್ತಿ ವಿಶ್ವಾಸ ಸಹನೆಗಳನ್ನು ಕೂಡ ಹೋಗಲಾಡಿಸತಕ್ಕದ್ದಾಗಿರುವದರಿಂದಲೇ. ಅವರಿಗೆ ಅನ್ಯಮೂಲಕವಾದ ಭೀತಿಯು ಬಲವತ್ತರವಾಗಿ, ಯಾವಾಗಲೂ, ದಾರಾಳವಾದ ಸಂಚಾರಕ್ಕೂ, ಇಷ್ಟಮಿತ್ರರ ಅವಲೋಕನಕ್ಕೂ ಅವಕಾಶವಿಲ್ಲದ ಕೂಪ ಕೂರ್ಮಗಳಂತೆ ತಮ್ಮ ಗೃಹಾಂತರಾಂತರದೊಳು ನಾಲ್ಕು ಬಾಗಿಲುಗಳನ್ನು ಮುಚ್ಚಿಕೊಂಡು ಪಹರೆಯವರನ್ನು ನೋಡುತ ಕಾಲವಂ ಕಳೆಯುತಲಿರಬೇಕಾಗಿರುತಿದೆ ಕದಾಚಿತ್ ಅಂತವರು ಹೊರಗೆ ಬರಬೇಕಾದರೆ ಚತುರಂಗಬಲವು ಅವರ ತಲೆಬಾಗಿಲಲ್ಲಿ ಕಾದಿರಬೇಕಾಗಿರುತಿವೆ ಇದಕ್ಕೆ ಕಾರಣವು ಎಷ್ಟಾದರೂ ದೋಷವನ್ನು, ತನ್ಮೂಲಕ ಆತ್ಮನ ಚಿಂತೆಯೂ ವಿನಾ ಬೇರೊಂದೂ ಅಲ್ಲವು ... ಗಸಂ ತಮ್ಮ ಕಾಲಂ ಕಳೆಯುವಪರ್ಯಂತಲೂ ಪುರೋದೃಷ್ಟಿಯೊಡನೆ ನೋಡಿ ನಡೆವುದು ಒಳ್ಳೇದಲ್ಲವೇ! ಎಂದು ಒಂದು ... ಪತ್ರಿಕೆಯೊಂದು ಅಭಿಪ್ರಾಯ ಪಡುತಿದೆ.

—

The Viceroy's visit—ವೈಸರಾಯಿಯವರ ಆಗಮನೋತ್ಸವವು ಯಾವದೊಂದು ವಿಷಯದಲ್ಲೂ ಅದು ಒಬ್ಬರಿಗೂ ಗೋಚರವಲ್ಲದೆ ಹೋದಾಗ್ಯೂ, ಅವರು ಇಲ್ಲಿಗೆ ಬರತಕ್ಕ ಕಾಲವು ಸಮೀಪವಾಗುತ ಬಂದಹಾಗೆ ಇಲ್ಲಿನವರೆಲ್ಲರೂ ಅತ್ಯುತ್ಸಾಹದೊಡನೆ ಅದಕ್ಕಾಗಿ ... ವಿದ ತಾತ್ಪರ್ಯಗಳಿಂದ ಮುಂದಾಗುತಲಿರುವದಕ್ಕಾಗಿ ಸಂತೋಷಿಸುತ್ತೇವೆ ಇಲ್ಲಿನ ಮ್ಯೂನಿಸಿಪಾಲಿಟಿಯವರು ರಾಜಮಾರ್ಗಗಳನ್ನು ದುರಸ್ತು ಮಾಡಿಸುವದರ ಮೂಲಕವಾಗಿಯೂ, ಚರಂಡಿಗಳನ್ನು ಪಾಕೀಜ ಮಾಡಿಸುವದರ ಮೂಲಕವಾಗಿಯೂ, ರಸ್ತೆಗಳಲ್ಲಿರುವ ಸಾಲ್ ಗಿಡಗಳನ್ನು ಕಡಿಸಿ ಕ್ರಮಪಡಿಸುವದರ ಮೂಲಕವಾಗಿಯೂ, ಬರತಕ್ಕವರ ಮನಸ್ಸಂತೋಷ ಪಡಿಸುವದರಲ್ಲಿ ನಿರತರಾಗಿದಾರೆ ಧನವಂತರು, ತಮ್ಮ ಧನವಂ ಈ ಸಂದರ್ಭದಲ್ಲಿ ಏತದ್ವಿಷಯಕ್ಕಾಗಿ ವಿನಿಯೋಗಿಸುವದರ ಮೂಲಕ ತಮ್ಮ ಔದಾರ್ಯವಂ ತೋರ್ಪಡಿಸಿ ವೈಸರಾಯಿಯವರ ಪ್ರಶಂಸೆಗೆ ವಿಷಯರಾಗಬೇಕೆಂಬ ಕೋರಿಕೆಯೊಡನೆ ಬೇಕಾದಂತೆ ದ್ರವ್ಯ ಸಹಾಯ ಮಾಡುವದರಲ್ಲಿ ಅತ್ಯುತ್ಸಾಹಿಗಳಾಗಿದ್ದಾರೆ. ಶಿಲ್ಪಿಗಳು, ತಮ್ಮ ಚಿತ್ರಕಲಾಕೌಶಲ್ಯವಂ ಹೊರಪಡಿಸಿ ಲಾರ್ಡ್ ಡಫ್ರಿನ್‌ಯವರ ಹೃದಯವನ್ನಾಕರ್ಷಿಸುವ ತಾತ್ಪರ್ಯದೊಡನೆ ನೂತನ ವಿಷಯ ಪರಿಭಾವನಾನಿರತರಾಗಿ ತಮ್ಮ ಉಪಕರಣಗಳಂ ಶೇಖರಿಸಿಕೊಳ್ಳುತಲಿದಾರೆ. ಹುವ್ವಾಡಿಗರು, ವಿವಿಧ ಮಾಲಿಕಾ ನಿರ್ಮಾಣಚಾತುರ್ಯ ಪ್ರದರ್ಶನದಿಂ ಗವರ್ನರ್ ಜನರಲ್ಲವರ ಅಭಿಮಾನಕ್ಕೆ ಗುರಿಯಾಗಬೇಕೆಂಬ ಉದ್ದೇಶದೊಡನೆ ತಾದೃಶ ಸಾಮಗ್ರೀ ಸಂಭರಣಶೀಲರ ಪ್ರಯತ್ನವುಳ್ಳವರಾಗಿದಾರೆ ನೃತ್ಯಗೀತ ವಾದ್ಯದವರು, ತತ್ತದ್ವಿದ್ಯಾಕೌಶಲ್ಯವಂ ಪ್ರಕಟಿಸುವದರ ಮೂಲಕ ಮಹಾರಾಜ್ಞೀ ಪ್ರತಿನಿಧಿಯವರ ಹೃದಯವನ್ನಾಕರ್ಷಿಸಬೇಕೆಂಬ ಸಂಕಲ್ಪವುಳ್ಳವರಾಗಿ, ವಾದ್ಯೋಪಕರಣಗಳನ್ನು ದುರಸ್ತು ಮಾಡುವದರಲ್ಲಿಯೂ ಮರೆತಿರುವದನ್ನು ಜ್ಞಾಪಿಸಿಕೊಳ್ಳುವದರಲ್ಲಿಯೂ ಆತುರರಾಗಿದಾರೆ ಇಂಗ್ಲಿಷ್ ಪಾಚಕರು, ಪಾಕಶಾಸ್ತ್ರದಲ್ಲಿರುವ ತಮ್ಮ ಪ್ರವೀಣತೆಯನ್ನು ತೋರ್ಪಡಿಸುವದರ ಮೂಲಕ ವೈಸರಾಯಿಯವರ ವಿಶ್ವಾಸಪಾತ್ರರಾಗಬೇಕೆಂದು ಕೊಂಡು ಷಡ್ರಸೋಪೇತಗಳಾದ ಪದಾರ್ಥ ಪಕ್ವಕ್ರಮವನ್ನರಿಯುವ ಬಗ್ಗೆ ಪಾಕಶಾಸ್ತ್ರ ಪುಸ್ತಕಗಳನ್ನು ಈಗಿನಿಂದ ತಿರುಗಿಸುತಲಿದಾರೆ ಭಾಷಾ ಪ್ರವೀಣರಾದ ಪಂಡಿತರು, ತಮ್ಮ ವಾಕ್ಯರಚನಾ ಸಾಮರ್ಥ್ಯವನ್ನೂ ವಿದ್ಯಾ ವೈದಗ್ಧ್ಯವನ್ನೂ ತೋರ್ಪಡಿಸಿ ಮುಖ್ಯಾಧಿಕಾರಿಯ ಪ್ರಶಂಸೆಗೆ ಪಾತ್ರರಾಗಬೇಕೆಂಬ ಕೋರಿಕೆಯೊಡನೆ ತಾವು ಬರೆಯುವದಾಗಿರುವ ವಿಜ್ಞಾಪನ ಪತ್ರಿಕೆಗಳಿಗೆ ತಕ್ಕ ಶಬ್ದಗಳನ್ನೂ ವಿಷಯಗಳನ್ನೂ ಹುಡುಕಿಕೊಳ್ಳುವದರಲ್ಲಿ ವ್ಯಾಪೃತರಾಗಿದಾರೆ. ಸಂಸ್ಕೃತ ಪಂಡಿತರು, ಹೊಸದಾಗಿ ಬರತಕ್ಕವರನ್ನು ಯಾವ ವಿಧವಾಗಿ ಉತ್ಪ್ರೇಕ್ಷಿಸಿ ವರ್ಣಿಸುವದರ ಮೂಲಕ ಅವರ ಅವಧಾನವಂ ಸೆಳೆಯಬಹುದೆಂದು ಪೂರ್ವಕವಿಪ್ರಣೀತಗಳಾದ ಗ್ರಂಥಾನ್ವೇಷಣದೊಳು ನಿರತರಾಗಿದಾರೆ. ಸರ್ಕಾರ್ ಉದ್ಯೋಗಸ್ಥರು, ತಮ್ಮ ... ಯಿಲ್ಲದೆ ಸಕಲೋಪಾಯದಿಂದಲೂ ಮೇಲೆ ... ರನ್ನೆಲ್ಲ ಪ್ರೇರಿಸುತಲೂ, ... ಗಳು ... ತಲೂ, ಆಗ ತಮ್ಮ ವಾಗ್ಮಿತೆಯಂ ತೋರಿಸುತಲೂ, ... ವಿನಿಯೋಗಿಸುತಲೂ ಇರುವದರ ಮೂಲಕ ತಾವು ನೇಟಿವ್ ... ಗವರ್ನಮೆಂಟಿನವರಲ್ಲಿ ರಾಜಭಕ್ತಿ ಕೃತಜ್ಞತಾದಿಗಳುಳ್ಳವರಾಗಿದಾರೆಂಬ ಸೂಚಕೆಯನ್ನುಂಟುಮಾಡುವ ಬಗ್ಗೆ ತಕ್ಕ ಸನ್ನಾಹದೊಳಿದಾರೆ ಮಹಾರಾಜ ... ರವರು ತಮ್ಮ ... ಗೌರವಿಸಿ ಪುರಸ್ಕರಿಸುವಂತಾ ... ಪರಿವಾರ ... ವಿಷಯಗಳನ್ನೆಲ್ಲ ಕ್ರಮಪಡಿಸಿಕೊಳ್ಳುವದರಲ್ಲಿ ಅತ್ಯಾದರರಾಗಿದಾರೆ. ಶ್ರೀ ಮನ್ಮಹಾರಾಜರವರು ತಮ್ಮ ಪಿತೃಗೌರವವನ್ನು ಪುರಸ್ಕರಿಸುವದರ ... ಮಹಾರಾಜ್ಞೀ ಸರ್ಕಾರದವರು ... ಪ್ರೀತಿಗೌರವಗಳನ್ನೂ ಉಪಕಾರಗಳನ್ನೂ ಸ್ಮರಿಸತಕ್ಕ ... ಅವರ ... ಬರತಕ್ಕ ... ಗೌರವಗಳ ... ಸಂಸ್ಥಾನದ ... ಗಳಿಗೂ ಅನುಗುಣಗಳಾಗಿರುವಂತೆ ಮಾಡಬೇಕಾದ ಸತ್ಕಾರಕ್ರಮಗಳನ್ನು ಅವರ ಮೂಲಕ ತಾವು ಪಡೆಯಬೇಕೆಂದುದ್ದೇಶಿಸಿರುವ ಪ್ರಯೋಜನಾಂಶಗಳನ್ನೂ ಕುರಿತು ಆಲೋಚಿಸುತಲಿರಬಹುದು ಬ್ರಿಟಿಷ್ ರೆಸಿಡೆಂಟರವರು ನೇಟಿವ್ ಸಂಸ್ಥಾನದಲ್ಲಿದ್ದುಕೊಂಡು ತಾವು ಮಾಡಿದ ಕಾರ್ಯನಿರ್ವಹಣೆಯಂ ಕುರಿತು ವೈಸರಾಯಿಯವರಿಗೇನು ತಿಳಿಸಬೇಕೋ ಅದರ ಪರ್ಯಾಲೋಚನೆಯಲ್ಲಿ ನಿರತರಾಗಿದಾರೆ ಹೀಗೆ ಯೆಲ್ಲರೂ ಒಂದೊಂದು ವಿಷಯದೊಳು ವ್ಯಾಪೃತರಾಗಿರುವದಂ ಕಂಡು ಪರ್ಜನ್ಯನು ತಾನು ಸುಮ್ಮನಿರಬಾರದೆಂದೆಣಿಸಿ ಭೂಮಿಯಂ ತಂಪುಮಾಡಿ ವೈಸರಾಯಿಯವರಿಗೆ ಸಂತೋಷವನ್ನುಂಟುಮಾಡಬೇಕೆಂದು ಉಚಿತ ವ್ಯವಧಾನದೊಡನೆ ವರ್ಷವಂ ಕೃಪೆಗೈಯುತಲಿದಾನೆ ಅತಿ ಶೀತಳದಿಂ ಲಾರ್ಡ್ ಡಫ್ರಿನ್‌ಯವರಿಗೆ ಆಯಾಸವನ್ನುಂಟುಮಾಡಕೂಡದೆಂದೆಣಿಸಿ ಮಾರ್ತಾಂಡನು ತನ್ನ ಕಿರಣ ಪ್ರಚಾರ ತತ್ಪರನಾಗಿದಾನೆ. ಮಾರುತನು ಸ್ವಶಕ್ತಿಯಂ ತೋರಿಸುವದರ ಮೂಲಕ ಗವರ್ನರ್ ಜನರಲ್ಲವರಿಗೆ ದೇಹಾಯಾಸವನ್ನುಂಟುಮಾಡಕೂಡದೆಂದೆಣಿಸಿ ತನ್ನ ವೇಗವಂ ಅಡಗಿಸಿಕೊಳ್ಳುತಲಿದಾನೆ. ಎಂಬದಾಗಿ ಅವರವರು ಮಾಡುತಿರುವ ಕಾರ್ಯಗಳನ್ನು ಇಲ್ಲಿನ ಬಾತಮಿದಾರನೊಬ್ಬನು ವಿವರಿಸುತ್ತಾನೆ ಇಷ್ಟರ ಸಂಭ್ರಮದೊಡನೆ ದಯಮಾಡತಕ್ಕ ಲಾರ್ಡ್ ಡಫ್ರಿನ್‌ಯವರ ಆಗಮನವು ಗತ ಐವತ್ತು ಸಂವತ್ಸರಗಳ ಕಾಲವಾಗಿ ಬ್ರಿಟಿಷ್ ಪಾಲನೆಯೊಳಿದ್ದು ಸ್ವರಾಜರ ಅಧಿಪತ್ಯಕ್ಕೊಳಗಾದ ಇಲ್ಲಿನ ಪ್ರಜೆಗಳ ಹೃದಯದಲ್ಲಿ ಚಿರನಿರೂಢವಾಗಿರುವಂತೆ ಸ್ಥಿರವಾದ ಯಾವದಾದರೊಂದುಪಕಾರವನ್ನು ಪ್ರತಿಯಾಗಿ ಮಾಡದಿರಲಾರದೆಂದು ನಂಬುತ್ತೇವೆ.

LOCAL AND PROVINCIAL NEWS.

ಒಳದೇಶಮತ್ತು ತಾಲ್ಲೂಕಿಜಾತಿವೃತ್ತಾಂತಗಳು.

Chief Court Sessions.—ಈ ದಿನ ಚೀಫ್ ಕೋರ್ಟ್ ಸೆಷನ್ ವಿಚಾರಣೆಯುಪಕ್ರಮವಾಗುವದಲ್ಲದೆ ಚೀಫ್ ಜಡ್ಜಿಯವರಾದ ಮಿ. ಶ್ಯಾಪಿಂಕ ಯವರು ದರ್ಯಾಪ್ತು ಮಾಡುವರು

Increase of pay —ಈಗ ದಿವಾನ್ ಆಫೀಸಿನಲ್ಲಿ ಸ್ಯೂಪರ್ನ್ಯೂಮರರಿ ತರೀಕ ಕೆಲಸನೋಡುತಲಿರುವ ಡೇಟಿ ಅಮಲ್ದಾರ್ ಮೆ|| ವೆಂಕಟರಂಗೈಯ್ಯಂಗಾರ್ರವರಿಗೆ ದಿವಾನರವರು ೫೦ ರೂಪಾಯಿಗಳು ತಲಬ್ ಇಜಾಫೆ ಮಾಡಿದರೆಂದು ಗತವಾರದ ಒಳದೇಶದ ಈವಿನಿಂಗ್‌ಮೆಯಿಲ್ ಪತ್ರಿಕೆ ತಿಳಿಸುತಿದೆ. ಅನೇಕ ಕಾರಣಗಳಿಂದ ಸದರೀ ವಿಷಯವು ನಮ್ಮ ನಂಬಿಕೆಗೆ ಬಿಗುವುವದಿಲ್ಲದೆಯಿಂತೆ

The British Resident —ನಾಳೆಯ ದಿನ ಬ್ರಿಟಿಷ್ ರೆಸಿಡೆಂಟರವರು ಮೈಸೂರಿಂದ, ಸಾಧಾರಣ ರಸ್ತೆಯು ಮಾರ್ಗವಾಗಿ ಈ ವೂರಿಗೆ ದಯಮಾಡುವರೆಂದು ತಿಳಿಯಬರುತಿದೆ. ರೆಸಿಡೆಂಟರವರು ನಾಗರ್ಪೋಳು ಅಲ್ಲಿಯಲ್ಲಿ ನೋಡತಕ್ಕ ಮನೆ ಕಟ್ಟುವ ಬಗ್ಗೆ ಈಸಂ ರಿಪೋರ್ಟ್ ಪ್ರಯಾಣವು ತೀರದು ಕಾರಡಾಯಿದ್ದು ಬರುವಂತೆ ಕಾಣುಂದೆ.

Appointment ಮೈಸೂರು ಸ್ಟೇಟ್ ರೈಲ್ವೆ ಟ್ರಾಫಿಕ್ ಸೂಪರಿಂಟೆಂಡೆಂಟರಾಗಿದ್ದ ಮಿ. ಪ್ರುಪ್ಸ್ ಟೀ ಪ್ರರಿಗೆ ಸದರೀ ರೆಯಿಲ್ ದಾರಿಯು ದಕ್ಷಿಣ ಮಹಾರಾಷ್ಟ್ರ ರೆಯಿಲ್ವೆ ಕಂಪನಿಗೆ ಒಪ್ಪಿಸಲ್ಪಟ್ಟರಿಂದ ಅದರ ಸಂಬಂಧ ತಪ್ಪಿದಾಯಿತ್ತು ಸದರೀಯವರು ೩ನೇ ಗ್ರೇಡ್ ಅಸಿಸ್ಟೆಂಟ್ ಕಮೀಷನರಾಗಿ ನೇಮಕರಮ್ಮಿಟ್ಟು ಪ್ರಟ ಕಳೆದ ವಾರದ ಮೈಸೂರು ಗೆಜೆಟಿನಿಂದ ಲಕ ತಿಳಿಯುಬರುತದೆ.

The Mysore State Railway —ಕಳೆದ ತಿಂಗಳ ೯ನೇ ತಾರೀಖಿಗೆ ಪ್ರೈದಾದ ವಾರದಲ್ಲಿ, ಮೈಸೂರು ಸ್ಟೇಟ್ ರೈಲ್ವೆ ದಾರಿಯಿಂದ ಈಗ ದಕ್ಷಿಣ ಮಹಾರಾಷ್ಟ್ರ ರೆಯಿಲ್ವೆ ಕಂಪೆನಿಯವರ ವಿಚಾರಣೆಗಾಗಿರುವ, ಮೈಸೂರು ರೈಲ್ವೆನಲ್ಲಿ ೫೦,೦V೦ ರೂಪಾಯಿಗಳು ಹುಟ್ಟುವಳಿಯಾಯಿತೆಂದು ತಿಳಿಯುಬಂದಿದ್ದು. ಗತಸಂವತ್ಸರದ ಇದೇವಾರದಲ್ಲಿ ರೈಲ್ವೆಯು ಇಲ್ಲಿನ ಸರ್ಕಾರದವರ ಸಂಬಂಧದಲ್ಲಿದ್ದಾಗ V,೭೬೭ ರೂಪಾಯಿಗಳು ಕಡಿಮ್ಮೆಯಾಗಿದ್ದವು ಜಾಸ್ತಿಯ ಹುಟ್ಟುವಳಿಗೆ ದಸರಾಹಬ್ಬಕ್ಕೆ ಮೈಸೂರಿಗೆಯೋಗಿಬಂದ ಜನಗಳ ಬಾಹುಳ್ಯವೇ ಕಾರಣವೆಂದು ಗೊತ್ತಾಯಿತು.

The Viceroy's visit.—ಈತಿಂಗಳ ಆಖೈರಿಭಾಗದಲ್ಲಿ ಇಲ್ಲಿಗೆ ಬರುವವರಾಗಿರುವ ವೈಸರಾಯಿಯವರಿಗೆ ಒಪ್ಪಿಸತಕ್ಕಬಗ್ಗೆ ಮುನ್ಸಿಸಿಪಾಲಿಟಿಯವರು, ಪ್ರತ್ಯೇಕವಾಗಿ ಇಂಗ್ಲೀಷಿನಲ್ಲಿ ವಿಜ್ಞಾಪನೆಪತ್ರಿಕೆ ತಯಾರಿಸ್ಮಾಡುವ ಪ್ರಯತ್ನದಲ್ಲಿದ್ದರೂ ಸಾಮಾನ್ಯವಾಗಿ ಜನಗಳೆಲ್ಲರೂ ಸೇರಿ, ದೇಶಭಾಷೆಯಿಂದ ತಮ್ಮ ಹೃದಯಾಗಮವಾದ ರಾಜಭಕ್ತಿ ವಿಶ್ವಾಸಗಳನ್ನು ಸೂಚಿಸತಕ್ಕ ಒಂದು ವಿಜ್ಞಾಪನ ಪತ್ರಿಕೆಯನ್ನು ಬರೆದು ಉಚಿತರೀತಿಯಿಂದ ವೈಸರಾಯಿಯವರಿಗೊಪ್ಪಿಸಿದರೆ ಒಪಳ ಚನ್ನಾಗಿರುವದಲ್ಲದೆ ಏತದ್ದೇಶೀಯರೂ ಮಾಸುಷ ಧರ್ಮವೃಕ್ಷವೆಂದು ಲೋಕಪ್ರಸಿದ್ಧಿದಂತೆಯಾಗುವನು.

The weather.—ಕಾಲಸ್ಥಿತಿಯು ಗತವಾರದೊಳಿದ್ದಂತೆಯೇ ಇದೆ. ಆಗಿಂದಾಗ್ಯೆ ವರ್ಷಪತನವೂ, ಮಿಕ್ಕ ಕಾಲದಲ್ಲಿ ತೀಕ್ಷ್ಣವಾದ ಬಿಸಿಲಿನ ರಭಸವೂ, ಕದಾಚಿತ್ ಮೇಘಾಪರಣವೂ, ಸಂಕೀರ್ಣವಾದ ಋತುಲಕ್ಷಣವನ್ನು ವ್ಯಕ್ತಪಡಿಸುತಲಿದೆಯಲ್ಲದೆ ಫಲಸಮೃದ್ಧಿಯನ್ನು ಸೂಚಿಸುತಿದೆ. ಈಗಿನ ಕಾಲಸ್ಥಿತಿಯು ಮುಖ್ಯೇ ಫಸಲಿಗೆ ಬಹಳ ಅನುಕೂಲವಾಗಿರುತಿದೆ.

The Remount Depot, Oosoor.—ಹೊಸೂರು ರಿಮೌಂಟ್ ಡಿಪೋನಲ್ಲಿ ಯಾವಾಗ್ಯೂ ಫೌಜ್ ಕುದುರೆಗಳು ಕೆಲವು ಇರುತಲಿವೆಯಷ್ಟೆ. ಸದರೀ ಕುದುರೆಗಳ ಚಾಕರಿಬಗ್ಗೆ ಇದುವರಿವಿಗೆ ಯೆರಡು ಕುದುರೆಗಳಿಗೆ ಮೊಹೀಯಾನಾ ೫ ರೂಪಾಯಿಗಳ ತಲಬಿನಲ್ಲಿ ಒಬ್ಬ ಆಳನಂತೆ ಇಡುತ ಅದಕ್ಕೆ ಬೇಕಾದ ಜನಗಳು ಸಿಕ್ಕುತಬಂದರು. ಈಚೆಗೆ ಅಲ್ಲಿ ಕುದುರೆಗಳ ಸಂಖ್ಯೆ ಕಮ್ಮಿಯಾಗುತಬಂದು ಕಸಬ್ದಾರರು ಅನ್ಯತ್ರ ಜೀವನೋಪಾಯವಂ ಹುಡಿಕಿಕೊಂಡು ಹೊರಟುಹೋದರು. ಈಗ ಮರಳ ಕುದುರೆಗಳ ಸಂಖ್ಯೆಯನ್ನು ಒಂದುಸಾವಿರಕ್ಕೆ ಹೆಚ್ಚಿಸುವಂತೆ ಹುಕುಂ ಆಗಿ ಕುದುರೆಗಳು ಜಮಾಯಿಸುತಲಿರುವದರಿಂದ ಅವುಗಳಿಗೆ ಆಳುಗಳು ಸಿಕ್ಕದೆ ಪರಸ್ಥಳಗಳಿಗೆ ಚಾಕರರನ್ನು ಜಮಾಯಿಸುವಂತೆ ಅಡ್ವರ್ಟೈಸ್‌ಗಳು ಕಳುಹಿಸಿಕೊಡುವಂತೆ ತಿಳಿಯಬಾದೆವು.

The Mysore Maharaja's charity at Tirupathi —ತಿರುಪದಿ ಕ್ಷೇತ್ರದಲ್ಲಿ ಮೈಸೂರು ಮಹಾರಾಜರವರಿಂದ ಬಹುಕಾಲದ ಮೊದಲು ನಡೆಯುತಬರುವ ಧರ್ಮಕಾರ್ಯಗಳನ್ನು ಕುರಿತು ನಮ್ಮ ತಿರುಪದಿ ಬಾತಮಿದಾರನು ಬರೆದಿರುವ ಲೇಖನವು ಬಹಳ ವಿಸ್ತಾರವಾಗಿರುವದರಿಂದ ಅದನ್ನು ಈ ವಾರದಲ್ಲಿ ಪ್ರಕಟಿಸುವದಕ್ಕೆ ಸ್ಥಳ ಸಂಕೋಚದಿಂದ ಮುಂದಿನವಾರಕ್ಕೆ ನಿಲ್ಲಿಸಿರುತ್ತೇವೆ. ಈ ಸಂವತ್ಸರದ ಬ್ರಹ್ಮೋತ್ಸವಕಾಲದೊಳು ಮಹಾರಾಜರವರ ಸತ್ರದಲ್ಲಿ ಸ್ಮಾರ್ತ ವೈಷ್ಣವರಿಗೂ, ಶ್ರೀ ಪರಕಾಲ ಮಠದಲ್ಲಿ ಶ್ರೀವೈಷ್ಣವರಿಗೂ ತಕ್ಕಿಂಗಿಗೆ ಅತಿಕ್ರಮಿಸಿ ಸಂತರ್ಪಣೆ ನಡೆದಂತೆ ತಿಳಿಯಬರುತಿದೆ. ಪರಸ್ಪರ ಮತಸಂಬಂಧವಾದ ದ್ವೇಷಾಸೂಯೆಗಳಿಂದ ಸದರೀ ವಿಷಯದಲ್ಲಿ ಪಕ್ಷಪಾತ ನಡೆದಂತೆ ಪ್ರಕಾಶಿಸುತ್ತಿ ತಪ್ಪಿಲ್ಲವು.

Disallowed —ಈಚೆಗೆ ಇಲ್ಲಿನ ಸಿವಿಲ್ ಪಮಿಶಿಟಿ ಸ್ಟೇಷನ್ ಸಿವಿಲ್ ಕೋರ್ಟ್ ಇಂಟರ್ ಪ್ರಿಟರ್ ಕೆಲಸವು ಖಾಲಿಯಾಗಲು, ಅದಕ್ಕೆ ಕರ್ನಲ್ ಹಿರಿಯವರ ಪ್ರಯತ್ನದ ಮೇಲೆ ಮೆ|| ಕೃಷ್ಣರಾಯರೆಂಬುವರು ನೇಮಕರಮ್ಮಿಡಲ್ಪಟ್ಟರಷ್ಟೆ. ಅವರ ನೌಕರಿಜಾತಿಯ ಕಾಲದಲ್ಲಿ ಗವರ್ನಮೆಂಟ್ ರಿಜೊಲ್ಯುಷನ್ನಲ್ಲಿ ತಿಳಿಸಲ್ಪಟ್ಟಿರುವ ಎಳೆವಯಸಗಳ ಮುಖ್ಯಪ್ರಮಾಣಕ್ಕಿಂತಲೂ, ಮೇಲ್ಪಟ್ಟಿರುವದರಿಂದ ಅಂತಹರ ನೌಕರಿಜಾತಿಯನ್ನು ನಂಜೂರುಮಾಡಲಾರರೆಂದು ಮದರಾಸ್ ಕಂಟ್ರೋಲ್ ಜನರಲ್ಲವರು ನಿರಾಕರಿಸಿದರೆಂತಲೂ, ಅವರನ್ನು ಖಾಯಮಾಗಿ ಇಟ್ಟುಕೊಳ್ಳುವ ವಿಷಯದಲ್ಲಿ ಕರ್ನಲ್ ಹಿರಿಯವರು ಪ್ರಯತ್ನಪಡಲಾರರೆಂತಲೂ, ಅದರಿಂದ ಮೆ|| ಕೃಷ್ಣರಾಯರವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಹಿಂದಿನಂತೆ ಲಾಯರ್ ಕಸಬನ್ನೇ ಅವಲಂಬಿಸುವರೆಂತಲೂ ತಿಳಿಯಬರುತಿದೆ.

THE MYSORE REPRESENTATIVE ASSEMBLY,—1886.

ಗತವಾರದನೇಪಥ್ಯ.

ಸ್ಪೆಷಲ್ ನೀರಾವರಿ ಕೆಲಸಗಳು—ಸಾಲ್ ಮಜಕೂರಿನ ಬಜೆಟ್ಟಿನಲ್ಲಿ ನೀರಾವರಿ ಕಾಮಗಾರಿಗೆ ಧಾರಾಳವಾದ ಖರ್ಚು ದಾಖಲ್ಮಾಡಿರುವದ್ದರಿಂದ ಅನೇಕ ಮುಖ್ಯವಾದ ಕೆಲಸಗಳನ್ನು ನಡೆಸುವದಕ್ಕೆ ಅವಕಾಶವಾಗಿರುತ್ತೆ. ಇವುಗಳನ್ನೈಕೆ ಮುಖ್ಯವಾದವುಗಳು ಯಾವವಂದರೆ.

(೧.) ರಾಮಪುರದ ನಾಲೆ ಅಭಿವೃದ್ಧಿ ಮತ್ತು ಬತಾವಣೆ ಇವರಿಂದ ವಿಶೇಷವಾದ ಫಾಯಿದೆ ವುಂಟೆಂದು ಹೇಳಲು ಸಂದೇಹವಿಲ್ಲ. ಇದಕ್ಕೆ ಸಂಬಂಧಿಸಿದ ಅಂದಾಜ್ ವಗೈರೆ ಹಾಲೀ ಆಲೋಚನೆಯಲ್ಲಿ ಇರುತ್ತೆ.

(೨.) ವಿರಜಾನದೀ ನಾಲೆಯ ಬತಾವಣೆ. ಇದರ ಸಾಧ್ಯಾಸಾಧ್ಯತೆವಿಷಯದಲ್ಲಿ ವಿಚಾರ ಮಾಡುತ್ತಲಿದೆ.

(೩.) ಮದ್ದೂರು ಅಣೆಯ ನಾಲೆ ಬತಾವಣೆ ಮತ್ತು ರಾಮಸಮುದ್ರ, ರಾಜಪರಮೇಶ್ವರೀ, ನಾಲೆಗಳ ಅಭಿವೃದ್ಧಿ, ಈ ಕೆಲಸಗಳು ಈಗ ನಡೆಯುತಲಿವೆ.

ಅನೇಕ ಚಿಲ್ಲರೆ ತಲಾವುಗಳು ಶಿವಾಯಿ ೧೫೦ ದೊಡ್ಡಕೆರೆಗಳ ಕಾಮಗಾರಿಗಳನ್ನು ಬಜೆಟ್ಟಿನಲ್ಲಿ ದಾಖಲ್ಮಾಡಿರುವದರಿಂದ ಮುಖ್ಯವಾದ ಹಳೇಕೆರೆಗಳ ವಿಚಾರವನ್ನು ಉಪೇಕ್ಷೆಮಾಡಿಲ್ಲವೆಂಬುವದು ತಮಗೆ ಗೋಚರವಾಗಬಹುದು. ಶೀಮೆಯಲ್ಲಿ ಅಲ್ಲಲ್ಲಿರತಕ್ಕ ಅನೇಕ ಸಣ್ಣಸಣ್ಣ ಕೆರೆಗಳ ದುರಸ್ತಿವಿಷಯದಲ್ಲಿ ರೈತರ ಸಹಾಯವನ್ನು ಹೊಂದುವದಕ್ಕೋಸ್ಕರ ಉದ್ದೇಶಿಸಿ ಇದ್ದ ಏರ್ಪಾಟನ್ನು ಪರೀಕ್ಷಾರ್ಥವಾಗಿ ಕೆಲವುತಾಲ್ಲೂಕುಗಳಲ್ಲಿ ಜಾರಿಗೆ ತರುತ್ತೆಂದು ಕಳೆದಸಂವತ್ಸರದ ಸಭೆಯಲ್ಲಿ ಸೂಚಿಸಿಯಿದ್ದವಷ್ಟೆ. ಆಗ ೫೦೦ ರೂಪಾಯಿಗಳಿಗಿಂತ ಕಮ್ಮಿ ಹುಟ್ಟುವಳಿಯುಳ್ಳ ಕೆರೆಗಳವಿಷಯದಲ್ಲಿ ಈ ಏರ್ಪಾಟನ್ನು ಜಾರಿಯಲ್ಲಿ ತರಬೇಕೆಂಬದಾಗಿ ಉದ್ದೇಶಿಸಿಯಿತ್ತು. ಆದರೆ ರೈತರ ಕ್ಷೇಮಕ್ಕಾಗಿ ಅನುಭವಶಾಲಿಗಳಾದ ಆಫೀಸರರ ಅಭಿಪ್ರಾಯಾನುಸಾರ ಮೇಲ್ಕಂಡ ೫೦೦ ರೂಪಾಯಿಗಳ ಹದ್ದನ್ನು ೩೦೦ ರೂಪಾಯಿಗಳಿಗೆ ತಗ್ಗಿಸಿ ಪ್ರತಿ ಡಿಸ್ಟ್ರಿಕ್ಟಿನಲ್ಲಿಯೂ ಒಂದೊಂದು ತಾಲ್ಲೂಕಿನಲ್ಲಿ ಸದರೀಏರ್ಪಾಟನ್ನು ಜಾರಿಯಲ್ಲಿ ತಂದಿರುವದನ್ನ ನಡೆಯುತಲಿದೆ. ಸರ್ಕಾರದವರು ಈಏರ್ಪಾಡನ್ನು ಆಸಕ್ತಿಯಿಂದಅಜಮಾಯಿಷೀ ಮಾಡುತಲಿದಾಗೆ ಮತ್ತು ಸ್ಥಳದ ರೆವಿನ್ಯೂ ಆಫೀಸರರು ಈಏರ್ಪಾಡು ಸರಿಯಾಗಿ ನಡೆಯಬೇಕೆಂಬ ಉದ್ದೇಶದಿಂದ ಸರ್ವಸನ್ನಾಹಗಳನ್ನು ಮಾಡುತಲಿರುವದು ಸಂತೋಷಕರವಾಗಿದೆ.

ಮಾರಿ ಕಣಿವೇ ಕೆರೆ ಕಾಮಗಾರಿ ವಿಷಯದಲ್ಲಿ ಸರ್ಕಾರದವರು ವಿಚಾರ ಮಾಡುತಿದ್ದಾರೆಂದು ತಮಿಗೆ ಕಳೆದ ಸಂವತ್ಸರದಲ್ಲಿ ತಿಳಿಸಿದ್ದೆವಷ್ಟೆ. ಶೀಮೆಯ ಸ್ಥಿತಿಯನ್ನೂ, ಈ ಅದ್ಭುತವಾದ ಕಾಮಗಾರಿಬಗ್ಗೆ ತಗಲಬಹುದಾದ ಲಾಗುವತನ್ನೂ, ಯೋಚನೆಮಾಡಿ ಪ್ರಕೃತದಲ್ಲಿ ಈ ಕೆಲಸವನ್ನು ಲವಾನತ್ತಿನಲ್ಲಿಟ್ಟು ವಿಶೇಷ ಉಪಯೋಗಗಳಾದ ಸಣ್ಣ ಕಾಮಗಾರಿಗಳನ್ನು ನಡೆಸಬೇಕೆಂದು ತೀರ್ಮಾನ ಮಾಡಬೇಕಾಗಿ ಬಂತು. ಆದರೆ ಇಷ್ಟು ಮುಖ್ಯವಾದ ಸದರೀ ಕೆಲಸವನ್ನು ಶುದ್ಧಾಂಗವಾಗಿ ತ್ಯಜಿಸಬೇಕೆಂಬದಾಗಿ ಯೋಚಿಸಿರುವದಿಲ್ಲ. ಲಾಗುವತು ವಿಶೇಷ ಭಾರಿಯಾದಾಗ್ಯೂ ಜಲವಸತಿ ಇಲ್ಲದ ಚಿತ್ರದುರ್ಗದ ಪ್ರಾಂತ್ಯದಲ್ಲಿ ಕ್ಷಾಮ ನಿವಾರಣಾರ್ಥ ಈ ಯೇರ್ಪಾಡು ಮಾಡತಕ್ಕದ್ದು ಗವರ್ನಮೆಂಟನವರ ಮುಖ್ಯ ಕೆಲಸವಾಗಿರುತ್ತೆಯಾದ್ದರಿಂದ ಲಾಗವಡಿನ ಯೋಚನೆ ಹೆಚ್ಚಿಸಿಕೊಳ್ಳತಕ್ಕದ್ದಲ್ಲ. ಈ ಕಾಮಗಾರಿ ನಡೆಸುವದರಲ್ಲಿ ಪೂರ್ವದಲ್ಲಿ ನಿರೀಕ್ಷಿಸಿದ್ದದಕ್ಕಿಂತಲೂ ಜಾಸ್ತಿಯಾದ ಕಷ್ಟವೂ ನಷ್ಟವೂ ಪ್ರಾಪ್ತವಾಗಬಹುದೆಂದು ಈ ಕಸಬಿನಲ್ಲಿ ಮಾಹೆತ್ತುಳ್ಳವರಿಂದ ಈಚೆಗೆ ತಿಳದುಬಂದಿದೆ. ಕಣಿವೆ ಮಧ್ಯೆ ಹರಿಯುವ ನದಿಗೆ ಅಡ್ಡಲಾಗಿ ಹಾಕಬೇಕಾದ ಅಣೆಯ ಅಸ್ತಿಭಾರಕ್ಕೇನೇ ಸುಮಾರ್ ೩ಲಕ್ಷ ರೂಪಾಯಿಗಳು ತಗಲಬಹುದು. ಉತ್ತರೋತ್ತರ ಈ ಅಸ್ತಿಭಾರವು ಭದ್ರವಾದ್ದಲ್ಲವೆಂದು ಕಂಡುಬಂದಲ್ಲಿ ಇಷ್ಟು ಖರ್ಚು ಕೂಡ ವ್ಯರ್ಥವಾಗುತ್ತೆ. ಆದರೆ ದ್ರವ್ಯಾನುಕೂಲವಾದಾಗ ಸ್ಥಿರವಾದ ಅಸ್ತಿಭಾರವನ್ನುಕಂಡು ಹಿಡಿಯುವ ಪ್ರಯತ್ನವನ್ನು ನಾಮೋಣಾಗುತ್ತೆ.

ಸ್ಪೆಷಲ್ ಮರಮತ್ ಕಾಮಗಾರಿಗಳ ಸಂಗತಿಯನ್ನು ಪೂರೈಸುವದಕ್ಕೆ ಮುಂಚಿತವಾಗಿ, ರಸ್ತೆ ಸೇತುವೆಗಳ ಆವಶ್ಯಕತೆಯನ್ನು ಮರೆತು ಇಲ್ಲವೆಂಬದಾಗಿಯೂ ನೀರಾವರಿ ಕಾಮಗಾರಿಗಳು ಬಹಳ ಆವಶ್ಯಕವಾದವುಗಳಾದಾಗ್ಯೂ ರಸ್ತೆಬಾಬನ್ನು ಶುದ್ಧಾಂಗ ಉಪೇಕ್ಷಿಸಿ ಎಲ್ಲಾ ಹಣವನ್ನು ನೀರಾವರಿ ಕೆಲಸಗಳಿಗೇನೇ ಖರ್ಚುಮಾಡುತ್ತೆಂದು ತಿಳಿಯಕೂಡದು ; ಇವುಗಳಿಗೆ ಆವಶ್ಯಕವಾದ ಗಮನವನ್ನೂ ಹಣವನ್ನೂ ಕೊಡುವದರಲ್ಲಿ ಏನೂ ನ್ಯೂನತೆಯಿಲ್ಲ. ಈ ವರುಷದಲ್ಲಿ ಅನೇಕ ಚಿಲ್ಲರೆ ರಸ್ತೆಗಳು ರೈಲ್ವೆ ಸ್ಟೇಷನ್‌ಗಳಿಗೆ ಸೇರತಕ್ಕ ಅಡ್ಡ ಮಾರ್ಗಗಳು ಸಹ ತಯಾರಾಗುವದು ಶಿವಾಯಿ ಮದ್ದೂರಿಗೂ ಮಳವಳ್ಳಿಗೂ ಮಧ್ಯೆ ಹೆಬ್ಬ ಹಳ್ಳದ ಸೇತ್ವೆ ಒಂದು, ಹರಿಹರಕ್ಕೂ ಮಲೆ ಬೆನ್ನೂರಿಗೂ ಮಧ್ಯೆ ಸೂಳೇಕೆರೆ ಹಳ್ಳದ ಸೇತ್ವೆ ಒಂದು, ಈ ಮೇರೆ ಎರಡು ಭಾರಿ ಸೇತುವೆ ಕಾಮಗಾರಿಗಳು ನಡೆಯುತಲಿವೆ. ಬೇಲೂರುಬಳಿ ಇರುವ ಯಗಚಿ ನದಿಗೆ ಸೇತುವೆ ಕಟ್ಟತಕ್ಕದ್ದು ಬಹಳ ಆವಶ್ಯಕವೆಂದು ಶ್ರೀಮನ್ ಮಹಾರಾಜರವರ ಪಾಸ್ಸವಾರಿಯು ಆ ಪ್ರಾಂತ ಚಿತ್ತೈಸಿದ್ದ ವೇಳೆಯಲ್ಲಿ ಅರಿಕೆಯಾಗಿ ಈಚೆಗೆ ಅಂದಾಜ್ ತಯಾರಾಗಿ ಕೂಡ್ಲೆ ಮಂಜೂರಾಗುವದರಲ್ಲಿದೆ.

ಈ ಭಾಗವನ್ನು ಪೂರ್ತಿಮಾಡುವದಕ್ಕೆ ಮುಂಚಿತವಾಗಿ ತಮಿಗೆ ತಿಳಸತಕ್ಕ ಒಂದು ಅಂಶವಿದೆ ಅದೇನಂದರೆ—ಕಳೆದ ೫ ವರುಷಗಳಲ್ಲಿ ಪಬ್ಲಿಕ್ ವರ್ಕ್ಸ್ ಯಾನೆ ಮರಮತ್ ಕಾಮಗಾರಿಗಳಗಾಗಿ ಸಾಲೀಯಾನಾ ಸರಾ ಸರಿ ೯,೯೦,೩೭೪ ರೂಪಾಯಿಗಳು ಖರ್ಚಾಗಿರುತ್ತೆ. ಹಾಮಾತ್ಪೂರ್ವ ೫ ವರುಷಗಳಲ್ಲಿ ಸರಾಸರಿ ೧೬,೨೩,೭೯೦ ರೂಪಾಯಿಗಳು ಖರ್ಚಾಗಿದೆ. ನಾವು ಮೇಲೆಹೇಳಿರುವ ಮೇರೆ ನಡೆಯುವ ಸಂವತ್ಸರದಲ್ಲಿ ೧೭ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ಉದ್ದೇಶಿಸಿದೆ.

ಭಂಗಾರಗಣಿ.—ಕೋಲಾರ ಡಿಸ್ಟ್ರಿಕ್ಟಿನಲ್ಲಿ ಮೈಸೂರು ಗೋಲ್ಡ್ ಮೈನಿಂಗ್ ಕಂಪೆನಿಯವರಿಗೆ ವಿಶೇಷ ಲಾಭ ಬರುತಿದೆ ಆದಕಾರಣ ಈ ಶೀಮೆಯಲ್ಲಿ ಭಂಗಾರ ತೆಗೆಯುವ ಕಸಬು ಈಚೆಗೆ ಬಹಳವಾಗಿ ಪ್ರಚುರಗೊಂಡು ಇರುವದರಿಂದ ಇದು ಉತ್ತರೋತ್ತರ ವಿಶೇಷ ಆದಾಯವನ್ನುಂಟುಮಾಡಬಹುದಾಗಿ ತೋರುತ್ತೆ. ಮೈಸೂರು ಕಂಪೆನಿಯವರ ಗಣಿಗಳ ಆಜೂ ಬಾಜೂನಲ್ಲಿಯೂ ಮತ್ತು ಇತರ ಸ್ಥಳಗಳಲ್ಲಿಯೂ ಇರತಕ್ಕ ಅನೇಕ ಕಂಪೆನಿಗಳವರು ಈ ಬಗೆ ಕೆಲಸವನ್ನು ಮಾಡುತಲಿದಾರೆ. ಅಥವಾ ಕೂಡಲೇ ಕೆಲಸಕ್ಕೆ ಪ್ರಾರಂಭಿಸುವರಾಗಿದಾರೆ. ಭಂಗಾರ ದೊರಕಬಹುದಾದ ಸ್ಥಳಗಳಲ್ಲಿ ಬಹಳ ಆಳದವರಿಗೂ ಗಣಿ ಗುಂಡಿಗಳನ್ನು ಅಗೆದು ಇರುತ್ತಾರೆ. ಅದರೊಳಗಣ ಸುವರ್ಣ ಗರ್ಭಗಳಾದ ಶಿಲೆಗಳನ್ನು ತೆಗದು ಪುಡಿಮಾಡುವದಕ್ಕೂ ಅದರಿಂದಭಂಗಾರವನ್ನು ತೆಗೆಯುವದಕ್ಕೂ ವಿಶೇಷ ಲಾಗವಡು ತಗಲಿರತಕ್ಕ ಯಂತ್ರಗಳು ತರಿಸಲ್ಪಟ್ಟು ಸ್ಥಾಪನೆಯಾಗಿವೆ. ಮತ್ತು ಗಣಿಗಳಲ್ಲಿ ಕೆಲಸ ಮಾಡತಕ್ಕ ಜನಗಳ ವಾಸಕ್ಕೋಸ್ಕರ ಮಜಬೂತಾದ ಕಟ್ಟಡಗಳು ಕಟ್ಟಲ್ಪಟ್ಟಿವೆ. ಸ್ವರ್ಣ ಗರ್ಭಗಳಾದ ಕಲ್ಲುಗಳು ದೊರಕುವ ಪ್ರದೇಶದವರಿವಿಗೆ ಗಣಿಯ ಗುಂಡಿಗಳು ತೆಗಿಯಲ್ಪಟ್ಟು ಈಗ ಪ್ರತಿ ದಿನವಲ್ಲಿಯೂ ವಿಶೇಷವಾಗಿ ಭಂಗಾರವು ತೆಗಿಯುತ್ತಿದಾರೆ. ಮೈಸೂರು ಕಂಪೆನಿಎಂಬ ಒಂದು ಕಂಪೆನಿ ಯವರಿಂದಲೇ ಅವರ ಗಣಿಯಲ್ಲಿ ಉತ್ಪತ್ತಿಯಾದ ಚಿನ್ನದ ಖರೀದಿಯಮೇಲೆ ರಾಜಾಯಕ್ಕೆ ೩೩,೩೬V ರೂಪಾಯಿಗಳು ಈವರಿಗೆ ವಸೂಲ್ ಬಂದಿರುತ್ತೆ. ಆದರೆ ಈಕೈಬಿಯು ಯಾವರೀತಿಯಾಗಿ ಪರಿಣಮಿಸ ಬಹುದೋ ಅದನ್ನು ಈಗ ಹೇಳುವ ಭಾಗದಲ್ಲಿ ಶ್ರೀಮನ್ಮಹಾರಾಜಾ ಸರ್ಕಾರದವರು ಬಹಳ ಜಾಗರೂಕರಾಗಿ ಇರಬೇಕಾಗಿ ಇದೆ. ಯಾಕೆಂದರೆ ಅನೇಕಕಡೆಗಳಲ್ಲಿ ಭಂಗಾರ ಗಣಿಗಳ ಕಸಬು ನೆಚ್ಚಿಕೆ ಇಲ್ಲದ ವ್ಯಾಪಾರವಾಗಿದೆ. ಆದರೆ ಮೈಸೂರುದೇಶದಲ್ಲಿ ಪೂರ್ವಕಾಲದಲ್ಲಿ ಭಂಗಾರವು ವಿಶೇಷವಾಗಿ ತೆಗೆಯಲ್ಪಡುತಿತ್ತೆಂಬುವದು ಮತ್ತು ಆ ಕಾಲದಲ್ಲಿ ಕೆಲಸ ನಡೆಸಲ್ಪಟ್ಟ ಗಣಿಗಳು ಶೀಮೆಯ ಎಲ್ಲಾ ಕಡೆಗಳಲ್ಲೂ ಈಗಲೂ ಹಾಜರಿದೆ ಯೆಂಬುವದು ಸಹ ಜನಜನಿತವಾದ ಮತ್ತು ಪುರಾಣಸಿದ್ಧವಾದ ಅಂಶವಾಗಿದೆ ಎಂದು ಹೇಳುವದರಲ್ಲಿ ಯಾವದೊಂದೂ ಅಭ್ಯಂತರವೂ ಇಲ್ಲ. ಈಗ ಕೋಲಾರ ಗಣಿಗಳಉತ್ಪತ್ತಿಯನ್ನು ನೋಡುವದರಿತಕ್ಕ ನೂತನ ಯಂತ್ರಗಳ ಸಹಾಯದಿಂದ ಈ ದೇಶದ ಅನೇಕ ಕಡೆಗಳಲ್ಲಿ ಭಂಗಾರವು ಲಾಭಕರವಾಗಿ ದೊರೆಯಬಹುದೆಂದು ಹೇಳಬಹುದಾಗಿ ತೋರುತ್ತೆ. ಆದಕಾರಣ ಈ ಕಸಬು ಅಭಿವೃದ್ಧಿಯಾದಲ್ಲಿ ಶೀಮೆಗೆ ಸದ್ಯಕ್ಕೆ ಸುವರ್ಣ ರವಾ ವದಲ್ಲದೆ ಈಗ ಚರ್ಚೆಯಲ್ಲಿರುವ ಸಂದೇಹ ನಿವರ್ತಿಯಾಗುವದಾದ್ದರಿಂದ ಈ ಭಾಗದಲ್ಲಿ ಶ್ರೀಮನ್ಮಹಾರಾಜಾ ಸರ್ಕಾರದವರು ಯಾವಾಗಲೂ ಬೆಸಿಕೊಂಡು ಬಂದಿರುವಂತೆಯೇ ಸರ್ಕಾರಿ ಶ್ರುತ್ತ ಜನರ ಸ್ವಂತ ಹಕ್ಕುಗಳಿಗೆ ಲೋಪವಿಲ್ಲ

ಕೆ ಸಾಧ್ಯವಾದ ಮಟ್ಟಿಗೆ ಪ್ರೋತ್ಸಾಹವನ್ನು ಕೊಡಬೇಕೆಂದು ಉದ್ದೇಶಿಸುತ್ತಾರೆ. ಇತರ ಶೀಮೆಗಳಲ್ಲಿ ಜಾರಿಯಲ್ಲಿರುವಂಥ ಭಂಗಾರದ ಗಣಿ ಕೆಲಸದಬಗ್ಗೆ ೫೦ ವರುಷಗಳ ಕೌಲಿನಮೇಲೆ ಸ್ವಲ್ಪ ಸ್ವಲ್ಪ ಪ್ರದೇಶಗಳನ್ನು ಕೊಡುವದಕ್ಕೆ ಬದಲಾಗಿ ಈ ಶೀಮೆಯಲ್ಲಿ ೩೦ ವರುಷಗಳ ಕೌಲಿನ ಮೇಲೆ ಒಂದು ಮೈಲಿ ಲಾಂಬಿ ಒಂದು ಮೈಲಿ ರುಂದಿ ಘಾಸಲೆಯುಳ್ಳ ಪ್ರದೇಶಗಳನ್ನು ಕೊಡುತ್ತೆ. ಈ ಪ್ರಕಾರ ದರಖಾಸ್ತುದಾರರಿಗೆ ವಿಸ್ತಾರವಾದ ಪ್ರದೇಶಗಳನ್ನು ಕೊಡುವದರಲ್ಲಿ ಅವರು ವಿಶೇಷ ದ್ರವ್ಯವನ್ನು ಈ ಬಗ್ಗೆ ವ್ಯಯಮಾಡುವದಕ್ಕೆ ಅವಕಾಶ ಉಂಟಾಗುವದು. ಗಣಿ ಕೆಲಸ ನಡೆಯುವ ಕುರುವಿನಲ್ಲಿಯೇ ಇತರ ದೇಶಗಳಲ್ಲಿ ಜಮೀನಿನ ವಿಸ್ತೀರ್ಣದಮೇಲೆ ವಸೂಲ್ಮಾಡುವ ತೊಂದರೆಕರವಾದ ಮತ್ತು ಭಾರಿಯಾದ ಕಂದಾಯಕ್ಕೆ ಬದಲಾಗಿ ವಾಸ್ತವ್ಯವಾಗಿ ಉತ್ಪತ್ತಿಯಾದ ಭಂಗಾರದ ಮೌಲ್ಯದಮೇಲೆ ರಾಜಧನವನ್ನು ತೆರಬೇಕೆಂದು ಕ್ಲುಪ್ತಪಡಿಸುವದರಿಂದ ಗಣಿ ಕೆಲಸದ ಅಭಿವೃದ್ಧಿಬಗ್ಗೆ ಕುಂದಕವಾಗದ ಹಾಗೆ ಸರ್ಕಾರದ ಹಕ್ಕುಗಳನ್ನು ಕಾಪಾಡುವದಕ್ಕೆ ಅವಕಾಶವಾಗಿರುತ್ತೆ. ಈ ಪ್ರಕಾರ ಧಾರಾಳವಾದ ಷರತ್ತುಗಳನ್ನು ಮಾಡಿಕೊಟ್ಟಿದ್ದಾಗ್ಯೂ ಕೋಲಾರದ ಗಣಿಗಳಲ್ಲಿ ಶಿವಾಯಿ ಇತರ ಕಡೆಗಳಲ್ಲಿ ನಾವು ನಿರೀಕ್ಷಿಸಿದಷ್ಟು ಮಟ್ಟಿಗೂ ನಿಜವಾಗಿ ಕೆಲಸ ಮಾಡತಕ್ಕ ಕಂಪೆನಿಗಳು ವಿಶೇಷವಾಗಿ ಏರ್ಪಡಲಿಲ್ಲವು. ಶಿವಾಯಿ ಜಮೀನುಗಳಿಗೇನೆ ಭಾರೀ ಖರೀದಿ ಕೊಟ್ಟು ಗಣಿ ಕೆಲಸದ ಖರ್ಚಿಗೆ ಬೇಕಾಗಿ ಒದಗಿಸಿ ಕೊಂಡಿದ್ದ ಮೂಲಧನವನ್ನು ಕಮ್ಮಿ ಮಾಡಿಕೊಂಡು ನಷ್ಟಪಟ್ಟಿರುವವರನ್ನು ನೋಡಿ ಅಗೋಚರವಾದ ಜಮೀನುಳ್ಳ ಈ ಗಣಿ ಪ್ರದೇಶಗಳಿಗೆ ವಿಶೇಷ ಭಾರಿ ಖರೀದಿಯನ್ನು ಕೊಟ್ಟು ಕೊಂಡುಕೊಳ್ಳಲು ಕಂಪೆನಿಯವರು ಹಿಂತೆಗೆಯುವದು ಸ್ವಾಭಾವಿಕವೇ ಸರಿ. ಆದಕಾರಣ ನಮ್ಮದೇಶದಲ್ಲಿರತಕ್ಕ ಸ್ವರ್ಣ ಗರ್ಭಿತವಾದ ಜಮೀನುಗಳು ದೈರೆಕ್ಟಾಗಿ ನಿಜವಾಗಿ ಕೆಲಸ ಮಾಡತಕ್ಕ ಕಂಪೆನಿಗಳಿಗೆ ಸಿಕ್ಕುವಹಾಗೆ ಮಾಡಲು ಹಾಲೀ ಜಾರಿಯಲ್ಲಿರುವ ಏರ್ಪಾಡನ್ನು ಎಷ್ಟುಮಟ್ಟಿಗೆ ಯಾವ ವಿಧವಾಗಿ ಬದಲಾಯಿಸಬೇಕೆಂಬುವ ವಿಷಯವು ತ್ವರಿತವಾಗಿ ಇತ್ಯರ್ಥವಾಗತಕ್ಕದಾಗಿರುತ್ತೆ. ಈ ಸ್ಥಿತಿಯಲ್ಲಿ ಈ ಭಾಗದಲ್ಲಿ ಇದರಡಿ ನಮೂದಿಸಿರುವ ಮೇರೆ ಏರ್ಪಾಡುಮಾಡುವದುಚಿತವೆಂದು ತೋರುತ್ತೆ.

೧ನೇದು. ಶೀಮೆಯಲ್ಲಿ ಯಲ್ಲಿ ಬೇಕಾದಾಗ್ಯೂ ಭಂಗಾರದ ಜಮೀನ್ ಅಜಮಾಯಿಷಿ ಮಾಡುವಂತಹದಕ್ಕೆ ಯಾವದೊಂದು ಛಾರ್ಜ್ ಇಲ್ಲದೆ ಅಪ್ಪಣೆ ಕೊಡತಕ್ಕದ್ದು.

೨ನೇದು. ತಕ್ಕ ಸಾಧನ ಸಾಮಗ್ರಿಯೊಡನೆ ಅಜಮಾಯಿಷಿ ಕೆಲಸವನ್ನು ನಿಷ್ಪತ್ತಿ ಇಲ್ಲದೆ ನಡೆಸಿದಲ್ಲಿ ಸದರೀ ಪ್ರಕಾರ ನಡೆಸುವವರಿಗೆ ಕ್ಲುಪ್ತವಾದ ಜಮೀನನ್ನು ಕೊಡುತ್ತೇವೆಂದು ಬರವಸೆ ಕೊಡತಕ್ಕದ್ದು;

೩ನೇದು. ಮೇಲ್ಕಂಡ ಜಮೀನನ್ನು ಸದರೀ ಅಜಮಾಯಿಷಿದಾರರು ಕ್ಲುಪ್ತವಾದ ಮಿಯಾದಿಯೊಳಗೆ ಅವರು ಅಜಮಾಯಿಷಿಮಾಡಿದ ಪ್ರದೇಶದಲ್ಲಿ ಚುನಾಯಿಸತಕ್ಕದ್ದು.

೪ನೇದು. ಗವರ್ನಮೆಂಟಿನವರು ಜಮೀನನ್ನು ಮಂಜೂರ್ಮಾಡುವದಕ್ಕೆ ಮುಂಚಿತವಾಗಿ ದರಖಾಸ್ತುದಾರರು ಗಣಿ ಕೆಲಸ ನಡೆಸುವದಕ್ಕೆ ಬೇಕಾದ ಮೂಲಧನವಿದೆ ಯೆಂಬದನ್ನು ನಿದರ್ಶನ ಪಡಿಸತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಅವರ ಹಕ್ಕನ್ನು ಕಳೆದುಕೊಳ್ಳತಕ್ಕದ್ದು.

೫ನೇದು. ಕೆಲಸ ನಡೆಸುವದಕ್ಕೆ ಯೆಷ್ಟುಮೂಲಧನವಿರುತ್ತೊ ಅದಕ್ಕೆ ಸರಿಯಾಗಿ ಮುಂದಾಗಿ ಕ್ಲುಪ್ತಮಾಡುವ ವಿಸ್ತೀರ್ಣವುಳ್ಳ ಜಮೀನನ್ನು ಕೊಡತಕ್ಕದ್ದು.

ಈಮೇರೆ ಏರ್ಪಾಡು ಮಾಡೋಣವಾದಲ್ಲಿ ಈ ವ್ಯಾಪಾರದಲ್ಲಿ ಹಣವನ್ನು ಹಾಕಬೇಕೆಂಬವರಿಗೆ ಧೈರ್ಯ ಉಂಟಾಗಬಹುದು. ಸರಿಯಾಗಿ ಅಜಮಾಯಿಷಿ ಕೆಲಸ ನಡೆಸುವದಕ್ಕೆ ಅಲ್ಪ ಆಗುವ ಹಣ ಖರ್ಚಾದಾಗ್ಯೂ ಅಜಮಾಯಿಷಿಯು ಪೂರೈಸಿದನಂತರ ಕ್ಲುಪ್ತವಾದ ವಿಸ್ತೀರ್ಣದ ಜಮೀನ್ ಸಿಕ್ಕುತ್ತೆಂಬ ಭರವಸೆ ಇರೋಣದರಿಂದ ದರಖಾಸ್ತುಮಾಡಲು ಅಪೇಕ್ಷೆಯುಳ್ಳವರಿಗೆ ವಿಶೇಷ ತೊಂದರೆ ಇರುವದಿಲ್ಲ. ಈ ಮೇರೆ ಮಾಡುವದರಲ್ಲಿ ನಮ್ಮ ದೇಶದಲ್ಲಿರುವ ಸ್ವರ್ಣಗರ್ಭಿತವಾದ ಭೂಮಿಗಳನ್ನು ನಿಜವಾಗಿ ಕೆಲಸ ನಡೆಸತಕ್ಕ ಕಂಪೆನಿಯವರು ತೆಗದುಕೊಳ್ಳುವದಕ್ಕೂ ತನ್ಮೂಲಕ ಈ ಕಸಬು ಶಾಶ್ವತವಾಗಿ ನೆಲೆಗೊಳ್ಳುವದಕ್ಕೂ ಅನುಕೂಲವಾಗುತ್ತೆ.

ಈ ಸಂಸ್ಥಾನದಲ್ಲಿ ಹಿಂದಣ ಅರಸರುಗಳ ರಾಜ್ಯಭಾರದಲ್ಲಿ ಭಂಗಾರ ಗಣಿ ಸಂಬಂಧವಾಗಿ ಏನೇನು ಕೆಲಸಗಳು ನಡೆದವೆಯೋ ಅವುಗಳನ್ನು ತಿಳಿದುಕೊಂಡು ಯಾವ ಯಾವ ಪ್ರದೇಶಗಳಲ್ಲಿ ಯಾವ್ಯಾವ ಲೋಹಗಳ ಗಣಿಗಳು ಇರುತವೆಯೋ ಅದನ್ನು ಪತ್ತೆಮಾಡಿ ಸ್ವರ್ಣಗರ್ಭಿತವಾದ ಭೂಮಿಗಳು ಇರತಕ್ಕ ಮುಖ್ಯವಾದ ಪ್ರದೇಶಗಳನ್ನೂ ಪೂರ್ವದಲ್ಲಿ ಕೆಲಸ ನಡೆಯುತಿದ್ದ ಸ್ಥಳಗಳನ್ನೂ ಟೋಪೋಗ್ರಾಫಿಕಲ್ ಸರ್ವೆ ಮ್ಯಾಪುಗಳಮೇಲೆ ಗುರ್ತುಮಾಡಿ ಯೆಲ್ಲಾ ಕೆಲಸವೂ ಪೂರೈಸಿದನಂತರ ಒಂದು ರಿಪೋರ್ಟ ಕೊಡತಕ್ಕಬಗ್ಗೆ ಸರ್ಕಾರದ ತರಫ ಕೆಲವು ಆಫೀಸರರು ಈಗ ಅಜಮಾಯಿಷಿ ಕೆಲಸಗಳನ್ನು ನಡೆಸುತಲಿದ್ದಾರೆ. ಇವರ ಕೆಲಸವು ಇನ್ನು ಕೆಲವು ತಿಂಗಳೊಳಗೆ ಪೂರೈಸಬಹುದು. ಇವರ ರಿಪೋರ್ಟ ತಯಾರಾದನಂತರ ಇವರು ಮಾಡಿದ ಕೆಲಸವನ್ನು ಗವರ್ನಮೆಂಟ ಜಿಯಾಲೋಜಿಸ್ಟ ಯಾನೆ ಭೂಸ್ವರೂಪ ಶಾಸ್ತ್ರಜ್ಞರಿಂದ ಪರಿಷ್ಕರಿಸಲ್ಪಟ್ಟಮೇಲೆ ಸಮಸ್ತ ಜನಗಳ ತಿಳುವಳಿಕೆಬಗ್ಗೆ ಪ್ರಕಟಿಸಲ್ಪಡುತ್ತೆ. ಇದರಿಂದ ಹಾಜು ನಿರ್ದಿಷ್ಟವಾದ ಪ್ರದೇಶದಲ್ಲಿ ಫಾಯಿದೆಯಾಗುವಷ್ಟು ಭಂಗಾರ ಸಿಕ್ಕುತ್ತೆಯೇ ಇಲ್ಲವೆಂಬದನ್ನು ನಿರ್ಧರ ಪಡಿಸುವದಕ್ಕೆ ಆಗುವದಿಲ್ಲವಾದಾಗ್ಯೂ ಮುಖ್ಯವಾದ ಸ್ವರ್ಣಗರ್ಭಿತವಾದ ಭೂಮಿಗಳು ಫಲಾನೆ ಪ್ರದೇಶದಲ್ಲಿ ಇರುವದೆಂದಾದರೂ ತಿಳಿಯಲು ಅವಕಾಶ ಉಂಟಾಗುತ್ತೆ. ಅಪೇಕ್ಷೆಯುಳ್ಳ ದರಖಾಸ್ತುದಾರರುಗಳಿಗೆ ಅಜಮಾಯಿಷಿಗೆ ಬೇಕಾಗುವ ಯಂತ್ರಸಾಮಗ್ರಿಗಳ ವಿಷಯದಲ್ಲಿ ಅನುಕೂಲತೆಯನ್ನು ಕಲ್ಪಿಸುವದು ಯುಕ್ತವಾಗಿಯೇ ಇರುತ್ತೆ. ಆದರೆ ಇಂತಾ ಸಾಮಗ್ರಿಗಳನ್ನು ಸರ್ಕಾರದವರು [illegible] ಹುಟ್ಟದಹೊರತು ಪ್ರಕೃತದಲ್ಲಿ ಗವರ್ನಮೆಂಟಿನವರು ಪ್ರವೇಶಿಸಕೂಡದಾಗಿದೆ.

ಮುಖ್ಯವಾಗಿ, ಅಜಮಾಯಿಷಿ ಕೆಲಸಗಳಿಗೆ ಬೇಕಾದಷ್ಟು ಅನುಕೂಲ್ಯಗಳನ್ನು ಕಲ್ಪಿಸಿ, ಭಂಗಾರ ತೆಗೆಯುವ ಕೆಲಸವನ್ನು ನಿಜವಾಗಿ ನಡೆಸುವ ಕಂಪೆನಿಯವರಿಗೆ ಮಾತ್ರ ಜಮೀನುಗಳನ್ನು ಕೊಡುವದರಮೂಲಕ ಈ ಕಸಬಿನ ಅಭಿವೃದ್ಧಿಗೋಸ್ಕರ ಬೇಕಾಗುವ ವಿಶೇಷವಾದ ದ್ರವ್ಯವು ಈ ಶೀಮೆಗೆ ಬಂದು ಹಾಲಿ ನೆಲೆಗೆ ಇಲ್ಲದ ಈ ಕಸಬು ಮುಂದೆ ಪ್ರಾರ್ಜಿತವಾಗಿ ನೆಲೆಯಾಗಿರಬೇಕೆಂಬುವದೇ ಶ್ರೀಮನ್ಮಹಾರಾಜಾ ಸರ್ಕಾರದವರ ಮುಖ್ಯೋದ್ದೇಶವಾಗಿರುತದೆ.

SUMMARY OF NEWS
ವೃತ್ತಾಂತ ಸಂಗ್ರಹವು.

ಒಬ್ಬ ಬ್ರಾಹ್ಮಣಸ್ತ್ರೀಯು ಒಬ್ಬ ಶೂದ್ರನನ್ನು ಕೂಡಿಕೊಂಡಿರುವದು ಅವಳ ೧೧-೧೨ ವರುಷ ಪ್ರಾಯದ ಹುಡುಗನ ಮನಸ್ಸಿಗೆ ಬಂದು, ಈ ಪ್ರಕಾರ ಬಾಳುವೆಮಾಡುವದು ಯೋಗ್ಯವಲ್ಲವೆಂದು ಬುದ್ಧಿವಾದಹೇಳಿದ ಅವನನ್ನು ಚಂಡಾಳಳಾದ ಅವಳು ಕಡಿದು ಕಟ್ಟು ತುಂಡುಮಾಡಿಬಿಸಾಡಿದಳಂತೆ. ಹೊಟ್ಟೆಯಲ್ಲಿಹುಟ್ಟಿದ ಮಗನಿಗಿಂತಲೂ ಈ ಪಾಪಿಗೆ ವಿಟನೇ ಹೆಚ್ಚು ಪ್ರೀತಿಯುಳ್ಳವನಾದನಲ್ಲವೇ!

ಶಾಂತಿಭೇದಿ ಉಪದ್ರವಕ್ಕೆ ಚೀನಾದೇಶದಲ್ಲಿ ವಿಚಿತ್ರವಾದ ಚಿಕಿತ್ಸೆಯನ್ನು ಮಾಡುತ್ತಾರೆ. ಈ ರೋಗವು ತಗಲಿದಕೂಡಲೆ ವೈದ್ಯನು ಒಂದು ಪೆಟ್ಟಿಗೆ ಸೂಜಿಗಳನ್ನು ತೆಗೆದುಕೊಂಡುಬಂದು ರೋಗಿಯ ಎರಡುಕಣ್ಣಿನಲ್ಲೂ ಕಿವಿಯಹಿಂದೆಯೂ ಆ ಸೂಜಿಗಳಿಂದ ಚುಚ್ಚುತ್ತಾನೆ. ಅದರಿಂದ ರಕ್ತಸುರಿಯುವದಕ್ಕೆ ಉಪಕ್ರಮವಾಗುವದು. ಅನಂತರದಲ್ಲಿ ೨ ತುಟಿಗಳಿಗೂ ಎದೆಯ ಎರಡುಪಾರ್ಶ್ವಗಳಲ್ಲಿಯೂ ನಾಭಿಗೂ ಅನೇಕ ಸೂಜಿಗಳನ್ನು ಚುಚ್ಚುತ್ತಾನೆ. ಈ ಭಾಗಗಳಿಂದಲೂ ರಕ್ತವುಸುರಿಯುತ್ತಿರುವದು. ಹೀಗೆ ಕೆಲವುಘಂಟೆಮಾಡಿದರೆ ಆ ಮನುಷ್ಯನಿಗೆ ಗುಣವಾಗುವದಂತೆ

ಸೂರ್ಯಗ್ರಹದಿಂದ ಕೆಲವುಭಾಗಗಳು ಬಹಳವೇಗವಾಗಿ ಆಕಾಶಮಾರ್ಗವನ್ನು ಕುರಿತುಹೋಗುತ್ತವೆ ಎಂಬದಾಗಿಯೂ, ಇವುಗಳೇ ಧೂಮಕೇತುಗಳೆಂಬದಾಗಿಯೂ, ಮಿಣುಕತಕ್ಕ ನಕ್ಷತ್ರಗಳೆಲ್ಲ ಸೂರ್ಯನು ಗ್ರಹಗಳೆಂಬದಾಗಿಯೂ, ಇವುಗಳಿಂದಲೂ ಉದಿಯಿರತಕ್ಕ ಕೆಲವುಭಾಗಗಳು ಧೂಮಕೇತುಗಳಾಗುತ್ತವೆಂಬದಾಗಿಯೂ, ಈ ನಕ್ಷತ್ರಗಳಿಂದ ಉರಿ ಸ್ವಲ್ಪವಾಗಿ ಬಂದರೆ ಅವುಗಳನ್ನೇ ನಕ್ಷತ್ರಪತನವೆಂಬದಾಗಿ ತಿಳಿದುಕೊಳ್ಳುತ್ತಿರುಬದಾಗಿಯೂ, ಆಧುನಿಕರಾದ ಕೆಲವರು ಜ್ಯೋತಿಷ್ಕರು ಸಿದ್ಧಾಂತ ಮಾಡಿರುತ್ತಾರೆ.

ಗ್ರಾಮಗಳಮೇಲೆ ಬಂದ ಈ ಸಂಕಟವನ್ನು ತಪ್ಪಿಸಲಿಕ್ಕೆ [illegible] ಯಮಾಡಿದರು ಆಗ ಮೂರುಜನ [illegible] ನಾಲ್ಕುಜನ ಹೊಸಬರೂ ತಾವಾಗಿ ಮುಂದಕ್ಕೆ ಬಂದು ತಮ್ಮಗ್ರಾಮದಬಗ್ಗೆ ತಾವು [illegible] ವಿದ್ದೇವೆಂದು ತಿಳಿಸಿದರು ಆದರೆ [illegible] ಗಂದಸರು [illegible] ದಿಂದ ಅವರು ಹಿಂದಕ್ಕಾದರು. [illegible] ಸಿದ್ಧರಾದರು [illegible] ದ ತಮ್ಮಸುತ್ತಲಿನ ಜನರಿಗೆ ಎಲ್ಲಾ ನಮ್ಮ [illegible] ಮಗರನ್ನು ಕರೆದು ಅವರಕಣ್ಣಮುಂದ [illegible] ಪತ್ತೆಗಳನ್ನು [illegible] ಸರಕಾರದವರಿಗೆ [illegible] ತಿ, ಇಲ್ಲವಾದರೆ ಅವರು [illegible] ನ್ನು ನಂಬಲಿಕ್ಕೆ [illegible] ವ್ಯಬಂಧಾವರೂ [illegible] ಕೊಳ್ಳುವರೇ?

[illegible] ಬಂದರೂ, ಆ ದೇಶವು ಇನ್ನೂ [illegible] ಮ್ಮ ಸರಕಾರದವರ [illegible]. ಬ್ರಹ್ಮ ದೇಶವನ್ನು ಕೈವಶಮಾಡಿ ಕೊಳ್ಳುವದು ಮಾದಲಿಗೆ ಬರೇ [illegible] ಕಂಡರೂ, ಈಗ ಅದು [illegible] ಯು ದೂರವಾದಂತೆ ಕಾಣುತ್ತದೆ. ಅಲ್ಲಿಯ ರಾಜನನ್ನು ಜಯಿಸಿದರೂ ಅಲ್ಲಿಯ ಜನರನ್ನು ಜಯಿಸಲಿಕ್ಕೆ ಇನ್ನೂ ಆಗಲಿಲ್ಲ ಅವರು "ಡೆಕಾಯಿಟ್ಸ" ಅಂದರೆ ದಗಾಖೋರರೆಂದು [illegible] ತಮ್ಮ ದೇಶಕ್ಕಾಗಿಯೂ ತಮ್ಮ ಸ್ವಾತಂತ್ರ್ಯಕ್ಕಾಗಿಯೂ ಹೋರಾಡುತ್ತಿದ್ದಾರೆ. ನಮ್ಮಸರ್ಕಾರದವರ ಸೇನೆಯು [illegible] ವ್ಯವಹಾರ [illegible] ಸಂಭವ. ಆದರೂ ಅಲ್ಲಿಯ ಜನ್ಯ ಅಧಿಪಗಳು [illegible] ನರಿಗೆ ವಶ್ಯೇ ಆಶ್ರಯ ಕೊಡುವದರಿಂದ, ಇದುವರಿಗೂ ತಮ್ಮಸ್ವಾತಂತ್ರ್ಯವನ್ನು ಕಾದುಕೊಂಡಿದ್ದಾರೆ ಆದರೆ ನಮ್ಮ ಸರಕಾರದವರಿಗೂ ಈ ದೇಶಾಧಿವಾಸಿಗಳಾದ "ದಗೆಖೋರ" ರಿಗೂ ನಡೆಯುವ ಯುದ್ಧದಲ್ಲಿಯೂ, ಅಪೇಕ್ಷಿತರುವ ಇತರಜನರಿಗೆ ಬಹಳ ತೊಂದರೆಯಾಗಿದ. ಹ್ಯಾಗೆಂದರೆ, ಬ್ರಿಟಿಷ ಸೇನೆಯ ಭೀತಿಯಿಂದ ಈ "ದಗಾಖೋರ" ರುಬಂದು ಈ ಬಡಜನರ ಹಳ್ಳಿಗಳನ್ನು ಲೂಟಿ ಮಾಡುತ್ತಾರೆ. ದಂಗೆಖೋರರು ಬಂದಿದ್ದಾರೆಂಬ ಸುದ್ದಿಯನ್ನು ಕೇಳಿದ ಕೂಡಲೆ ಬ್ರಿಟಿಷಸೈನ್ಯದವರು ಬಂದು ನೋಡಲು ಅವರು ಸಿಕ್ಕದಿರಲು ಆ ಹಳ್ಳಿಗಳನ್ನು ಅಗ್ನಿದೇವತೆಗೆ ಬಲಿಕೊಟ್ಟುಬಿಡುತ್ತಾರೆ ಈ ಪ್ರಕಾರ ಇಬ್ಬರ ಕೈಯಿಂದಲೂ ಅಲ್ಲಿಯ ಬಡಜನರು ಸಾಯುವ ಕಾಲ ಬಂದಿರುತ್ತದೆ ಇಷ್ಟುದಿನದ ಯುದ್ಧದ ಮಾದರಿಯಿಂದ ಬೇಸರಪಟ್ಟು ನಮ್ಮ ಸರಕಾರದವರು ಈಗ ಹೇರಳ ಸೈನ್ಯವನ್ನು ಕೂಡಿಸಿ ಎಲ್ಲ ದಿಕ್ಕುಗಳಿಂದಲೂ ಏಮ್ಮೆಲೇ ಯುದ್ಧನಡಿಸಿ ಈ ದಂಗೆಖೋರರನ್ನು ಅಣಗಿಸಿ ಬಿಡಬೇಕೆಂದು ಆಲೋಚಿಸಿದ್ದರು. ಆದರೆ ಇದರ ಸಿದ್ಧತೆ ಮಾಡುವಷ್ಟರಲ್ಲಿ ಅಲ್ಲಿಯ ಸೇನೆಯ ಮುಖ್ಯನಾಯಕರಾದ ಸರ್. ಹರ್ಬರ್ಟ ಮೆಕ್ಫರ್ಸನ್ ಎಂಬವರು ಸತ್ತುಹೋದರು. ಇವರಅಧಿಕಾರಕ್ಕೆ ಇನ್ನೊಬ್ಬರು ಬರುವವರೆಗೆ ಈ ಕೆಲಸವು ಹಿಂದಕ್ಕೆ ಬೀಳುವದಾಯಿತು. ಇದೇಪ್ರಕಾರ ಇನ್ನು ಎಷ್ಟು ದಿವಸಗಳು ಹೋಗುತ್ತವೋ ತಿಳಿಯದು.

ಬರೋಡೆಯ ಗಾಯಕವಾಡ ಮಹಾರಾಜರವರೂ ಹೈದರಾಬಾದು ನಿಜಾಂ ಸರ್ಕಾರದವರೂ ಲಾರ್ಡ ಡಫರಿನ್ನವರ ಸವಾರಿಯು ದಿಲ್ಲಿಗೆ ಬರುವ ಸಮಯ ಅವರನ್ನು ಗೌರವದಿಂದ ಬರಮಾಡಿಕೊಳ್ಳಲಿಕ್ಕೆ ಲಕ್ಷಗಟ್ಟಲೆ ರೂಪಾಯಿಗಳನ್ನು ವ್ಯಯ ಮಾಡುತ್ತಾರೆಂಬದಾಗಿರುವ ವರ್ತಮಾನವು ಈ ಗಜೆಟಿಯಲ್ಲೂ ಪ್ರಕಟವಾಗಿರುತದೆ. ಲಾರ್ಡ ದಫರಿನ್ ಹಿಂದುಸ್ಥಾನದ ಮಹಾರಾಣಿಯವರ ಪ್ರತಿನಿಧಿಗಳಿಗೆ ಈ ಸಾಮಂತ ಅರಸರು ತೋರಿಸಬೇಕಾದ ಸನ್ಮಾನವು ಯೋಗ್ಯವೇ. ಆದರೆ ಇಂತಾ ಪ್ರಸಂಗಕ್ಕಾಗಿ ಲಕ್ಷಗಟ್ಟಲೆ ರೂಪಾಯಿಗಳನ್ನು ಹಾಳುಮಾಡಿಕೊಳ್ಳುವದು ಯೋಗ್ಯವಾಗಿರಲಿಲ್ಲ. [illegible]

[illegible] ೧ನೇ ತಾ॥ ರಿಂದ [illegible] ರಾತ್ರಿ ೯ ಘಂಟೆ ೪೫ ಮಿನಿಟಿಗೆ ಗದಗಿಗೆ ಮುಟ್ಟುತದೆ. ಮತ್ತು ಇದರ ವಾಪಸ್ ಬಂಡಿ ಧಾರವಾಡದಿಂದ ಗದಗಿನಹೋಗಲಿಕ್ಕೆ ತರ್ತಾಸಿನ ದರವಸ್ತಾಗ ೧೦ಘಂಟೆ ೩೫ಮಿನಿಟಿಗೆ ಹೊರಡುವದೆಂತ ನಮ್ಮವಾಚಕರಿಗೆ ಗೊತ್ತೇ ಇರಬಹುದು. ೩ನೇ ಗಾಡಿಯು ರಾತ್ರಿ ಹೊರಟು ೧೦ ಮಿನಿಟಿಗೆ ಇಲ್ಲಿಂದಹೊರಟು ಪೂನಾ ಮಾರ್ಗವಾಗಿ ಮುಂಬಯಿಗೆ ಗದಗಮಾರ್ಗವಾಗಿ ಮದ್ರಾಸಿಗೆ ಮತ್ತು ಹುಬ್ಬಳ್ಳಿಯಮಾರ್ಗವಾಗಿ ಹರಿಹರಕ್ಕೆ ಹೋಗುವದು.

BANGALORE.—Printed and published for the Proprietor, at the KARNATIC Press.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪುಷ್ಪಪುಷ್ಪಿತವನವಾರ್ಕ್ಣ ಕರ್ಣಾಟಕಪ್ರಕಾಶನಪರಾಭಿದಾಪ್ರಥಿತಸಾಹಿತೀಶೋಭಿತಾ ॥ [illegible]

Vol. XIII.] BANGALORE—MONDAY NOVEMBER 8, 1886. [No. 45.

ಸಂಪುಟ ೧೩.] ಬೆಂಗಳೂರು:—ಸನ್ ೧೮೮೬ನೇ ಇಸವಿ ನವಂಬರ್ ೮ನೇ ತಾರೀಖ್ ಸೋಮವಾರ. [ಸಂಚಿಕೆ ೪೫

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

[illegible]

ಪ್ರಕಟನೆಯ ರಿವಾಜ್.

[illegible]

NOTICE TO SUBSCRIBERS.

[illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA

Price including Postage, Rs 5-0-0

ವೈದ್ಯಸಾರ ಸಂಗ್ರಹ.

[illegible]

ನೋಟೀಸ್.

ಮೈಸೂರು ದೇಶೀಯ ಪರೀಕ್ಷೆ.

ಅಂಕಗಣಿತದ ಕೀ.

ಮೇಲೆ ತಿಳಿಸಲ್ಪಟ್ಟ ಪರೀಕ್ಷೆಗೆ ನಿಯಮಿಸಲ್ಪಟ್ಟಿರುವ ಅಂಕಗಣಿತ ಪುಸ್ತಕದಲ್ಲಿರುವ ಲೆಕ್ಕಗಳು ಸುಲಭಸಾಧ್ಯವಾಗಿಯೆಲ್ಲರಿಗೂ ತಿಳಿಯುವಂತೆ ಅಂಕಗಣಿತಾದರ್ಶವೆಂಬ ಗ್ರಂಥ ಒಂದು ನೂತನವಾಗಿ ತಯಾರ್ಮಾಡಲ್ಪಟ್ಟು ಬಿಕರಿಗೆ ಸಿದ್ಧವಾಗಿದೆ. ಇದರ ಕ್ರಯ ಅಂಚೆಯಖರ್ಚು ಸಹಿತ [illegible].

ಒಟ್ಟಾಗಿ ೧೦ ಪ್ರತಿಗಳು ತೆಗೆದುಕೊಳ್ಳುವವರಿಗೆ ಒಂದು ಜಾಸ್ತಿ ಪ್ರತಿ ಕೊಡಲ್ಪಡುವದು. ಮೊಬಲಗು ಮನಿ ಆರ್ಡರ್ ಮತ್ತು ಅರ್ಧಾಣೆ ಸ್ಟಾಂಪುಗಳ ಮೂಲಕ ಕಳುಹಿಸತಕ್ಕದ್ದು. ಸ್ಟಾಂಪುಗಳು ಕಳುಹಿಸುವವರು ರೂ|| ೧ಕ್ಕೆ ೧ಆಣೆ ಪ್ರಕಾರ ಡಿಸ್ಕೌಂಟ್ ಸೇರಿಸಿ ಕಳುಹಿಸತಕ್ಕದ್ದು.

ಬೆಂಗಳೂರು ೩೧-೧೦-೮೬ } ಪ. ಅಪ್ಪಾಜಿರಾವ್, ಬೆಂಗಳೂರು ಪಾನಕಪೇಟೆ, [illegible]

ಬೆಂಗಳೂರು ಪಹರ್ ಮ್ಯುನಿಸಿಪಾಲಿಟಿ.

ಇಸ್ತಿಹಾರನಾಮೆ

ನಂ. ೧೨೩.

ಸನ್ ೧೮೮೭ನೇ ಇಸವಿ ಜನವರಿ ಮೊದಲ್ನೇ ತಾ|| ಆರಾಭ್ಯ ೧೮೮೭ನೇ ಡಿಸೆಂಬರ್ ೩೧ನೇ ತಾರೀಖು ವರೆವಿಗೆ, ಬೆಂಗಳೂರು ಸಿಟಿಯಲ್ಲಿ, ಮ್ಯುನಿಸಿಪಲ್ ಸಿಲ್ಕ್ ಬೀದಿಗಳ ಹಚ್ಚಿ ತಕ್ಕ ಬಗ್ಯೆ ಬರತಕ್ಕ ಸೀಲ್ ಮಾಡಲ್ಪಟ್ಟ ದರಖಾಸ್ತುಗಳನ್ನು ಸನ್ ೧೮೮೬ನೇ ಇಸವಿ ನವಂಬರ್ ೧೫ನೇ ತಾರೀಖಿನವರಿವಿಗೆ ಇವರಡಿ ರುಜುಮಾಡಿರುವವರು ಬರಮಾಡಿಕೊಳ್ಳುವರು.

೨. ಆದಿತ್ಯವಾರ ಮತ್ತು ರಜಾದಿನಗಳು ವಿನಾ ಇತರ ದಿನಗಳಲ್ಲಿ ಹಗಲು ೧೧ ಘಂಟೆಯ ಲಾಗಾಯತು ೪ ಘಂಟೆಯೊಳಗಾಗಿ ಸಿಟಿ ಮ್ಯುನಿಸಿಪಲ್ ಆಫೀಸ್ಸಿಗೆ ಬಂದು ಅದರ ತಪಸೀಲ್ ತಿಳಿದುಕೊಳ್ಳಬಹುದು ಬೆಂಗಳೂರು ಸಿಟಿಯಲ್ಲಿ ಬೀದಿಗಳು ಹಚ್ಚುವತಕ್ಕ ಬಗ್ಯೆ ಕೊಡಲ್ಪಟ್ಟ ದರಖಾಸ್ತಿಂದು [illegible] ಬರೆಯತಕ್ಕದ್ದು.

೩. ದರಖಾಸ್ತುಗಳ ಸಂಗತ ಠೇವಣಾತಿ ಬಗ್ಯೆ ೫೦ ರೂಪಾಯಿಗಳು ನಗದು ಅಥವಾ ಅದಕ್ಕೆ ತಕ್ಕಷ್ಟು ಕರ್ನಸೀನೋಟು ಕಳುಹಿಸಿದ ಹೊರತು ಯಾವ ದರಖಾಸ್ತೂ ಅಂಗೀಕರಿಸಲ್ಪಡಲಾರದು.

೪. ಯಾರ ದರಖಾಸ್ತು ಅಂಗೀಕರಿಸಲ್ಪಡುತಿದೆಯೋ ಅಂತಾ ದರಖಾಸ್ತುದಾರನಿಂದ ಹಾಜರ್ಮಾಡಲ್ಪಡುವ ಠೇವಣಾತಿಯು ನಿಲ್ಲಿಸಿಕೊಳ್ಳಲ್ಪಡುವದು, ಅವನ ದರಖಾಸ್ತು ಮಂಜೂರ್ಮಾಡಲ್ಪಟ್ಟ ಸಂಗತಿ ಅವನಿಗೆ ತಿಳಿಸಲ್ಪಟ್ಟ ಒಂದು ವಾರದೊಳಗಾಗಿ ಆವಶ್ಯಕವಾಗಿ ಅವನು ಬರೆದುಕೊಡಬೇಕಾದ ಕಂಟ್ರಾಕ್ಟು ಮುಚ್ಚಳಿಕೆಯನ್ನು ಬರೆದುಕೊಡುವದಕ್ಕೆ ತಪ್ಪಿಹೋಗುವನಾದರೆ ಅವನ ಠೇವಣಾತಿ ಮೊಬಲಗು ವಾಪಸು ಕೊಡಲ್ಪಡಲಾರದು. ಯಾವ ದರಖಾಸ್ತನ್ನಾದರೂ ಸಬಬ ನಮೂದಿಸದೆ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಜೋಡಿಸನವರು ಉಳಿಸಿಕೊಂಡಿರುತ್ತಾರೆ.

ಬೆಂಗಳೂರು, ಸಿಟಿ ಮ್ಯುನಿಸಿಪಲ್ ಆಫೀಸು,
೨೨ನೇ ಅಕ್ಟೋಬರ್ ೧೮೮೬.

A. Srinivasa Charlu,
Vice-President,
City Municipal Commission.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, NOVEMBER 8, 1886.

೧೮೮೬ನೇ ನವಂಬರ್ ೮ನೇ ತಾ|| ಸೋಮವಾರ.

THE LATE MR. SHAMIER, ADVOCATE.

ಮೈಸೂರು ದೇಶದ ಕೋರ್ಟುಗಳಲ್ಲಿ ಈಗ್ಗೆ ಅನೇಕ ಸಂವತ್ಸರಗಳವೊದಲು ವಕಾಲತ್ ಮಾಡುತಲಿದ್ದ ಅಡ್ವೋಕೇಟ್ ಮ. ಚೋಳಂಗಿಪುರದ ಶಾಮಯ್ಯರವರು ಮೊನ್ನೆ ಮಜಕೂರ್ ೪ನೇ ತಾರೀಖು ಗುರುವಾರದ ದಿನ ರಾತ್ರಿ ಸುಮಾರ್ ೧ಘಂಟೆಗೆ ಈ ಊರು ಕಾಶೀ ವಿಶ್ವೇಶ್ವರ ದೇವಸ್ಥಾನದ ಬಳಿ ಇರುವ ಸ್ವಗೃಹದೊಳು ಕಾಲಗತಿಯನ್ನೈದಿದ ವೃತ್ತಾಂತವಂ ಪ್ರಕಟಿಸಲು ನಾವು ಬಹಳವಿಷಾದಿಸುತ್ತೇವೆ. ಈ ದೊಡ್ಡ ಮನುಷ್ಯರಿಗೆ ಈಗ್ಯೆ ಸುಮಾರು ಒಂದುವರೆತಿಂಗಳ ಹಿಂದೆ ಬೆನ್ನು ಫಣಿ ಎದ್ದು ಅದು ದಿನೆ ದಿನೇ ಅಭಿವೃದ್ಧಿಯನ್ನೈದುತ ಬಂದದರಿಂದ ತನ್ನಿವಾರಣಾರ್ಥ ಸಮರ್ಥರಾದ ಇಂಗ್ಲಿಷ್ ಚಿಕಿತ್ಸಕರ ಮೂಲಕ ಪ್ರತಿಕ್ರಿಯೆಯಂ ಮಾಡಿಸುವಾಗ್ಯೆ ಅದು ಸ್ವಲ್ಪ ಅನುಕೂಲದಶೆಗೆ ಬರಲು, ಹಿಂದೆ ಬಹುಕಾಲದ ಮೊದಲು ಅವರನುಭವಿಸುತಬಂದ ಬಹುಮೂತ್ರರೋಗಾಧಿಯು ಪ್ರಬಲವಾಗಿ ಅದೇ ಕಡೆಗೆ ಅವರ ಮರಣಕ್ಕೆ ಕಾರಣವಾಯಿತು; ಮ. ಶಾಮಯ್ಯರವರಿಗೆ ಚಿಕಿತ್ಸೆ ಮಾಡುತಲಿದ್ದ ಅಸಿಸ್ಟೆಂಟ್ ಸರ್ಜಿಯನ್ ಮ. ರಂಗಸಾಮಿ ಪಿಳ್ಳೆಯವರೂ ಮ. ಆರೋಗ್ಯಂ ಪಿಳ್ಳೆಯವರು ಸಹ ಮೃತರವಿಷ್ಟವರ ಆರೋಗ್ಯ ವಿಷಯದಲ್ಲಿ ಭರವಸೆಯುಳ್ಳವರಾಗಿದ್ದಾಗ್ಯೂ ಅವರು ಮಾಡುವ ಬಹುವಿಧ ಚಿಕಿತ್ಸೆಗಳೆಲ್ಲವೂ ಕಾಲಗತಿಯಿಂದ ನಿಷ್ಪ್ರಯೋಜಕಗಳಾದವು. ಲೋಕದಲ್ಲಿ ಮನುಷ್ಯನ ಗುಣದೋಷಗಳು ಅವನ ಕಾಲಾನಂತರ ಯಥಾವತ್ತಾಗಿ ಹೊರಗಾಗುವಂತೆ ಜೀವಿಸಿರುವಾಗ್ಯೆ ಪ್ರಕಟವಾಗಲಾರದು. ಮ.ಶಾಮಯ್ಯರವರ ಪರಿಚಯವನ್ನು ಮಾಡಿ ಅವರ ಶೀಲಸ್ವಭಾವಗಳನ್ನು ಚೆನ್ನಾಗಿ ಅರಿತವರು ಕೆಳಗಣ ನಮ್ಮ ಅಭಿಪ್ರಾಯವನ್ನು ಅನುಮೋದಿಸದಿರಲಾರರು. ಸದರೀ ದೊಡ್ಡ ಮನುಷ್ಯರು ಸ್ವಭಾವತಃ ಪರಿಶುದ್ಧರು, ಉದಾರಿ, ಖಂಡಿತವಾದಿ ಅಕುಟಿಲರು, ಸ್ನೇಹಪರರು, ಮತ್ತು ಪಾಪಭೀರುವವಲ್ಲದೆ ತಮ್ಮ ವೃತ್ತಿಯಲ್ಲಿ ಸಾಧ್ಯವಾದವುಟ್ಟಿಗೆ ಕಕ್ಷಿಗಾರರನ್ನು ತೃಪ್ತಿಪಡಿಸಿ ಪ್ರತಿಷ್ಠೆಯಂ ಪಡೆಯಬೇಕೆಂಬ ಕೋರಿಕೆಯೂ, ಮನುಷ್ಯನ ಹ್ರಾಸವೃದ್ಧಿಸ್ಥಿತಿಗಳು ಕ್ಷಣಿಕಗಳಾದದರಿಂದ ಸಾಧ್ಯವಾದಮಟ್ಟಿಗೆ ಅನುಕೂಲವಾದಾಗ ಅನ್ಯರಿಗೆ ಉಪಕಾರ ಮಾಡಬೇಕೆಂಬ ಅಭಿಪ್ರಾಯವೂ ವುಳ್ಳವರಾಗಿದ್ದರು. ಪ್ರಸಕ್ತ ದೊಡ್ಡ ಮನುಷ್ಯರು ತಮ್ಮ ಬಾಲ್ಯದಶೆಯನ್ನು ಸಾಮಾನ್ಯಸ್ಥಿತಿಯೊಳು ಕಳೆದವರಾದದರಿಂದ ಅದನ್ನು ಆಗಿಂದಾಗ್ಯೆ ಸ್ಮರಿಸಿಕೊಳ್ಳುತ ಅನುಪಪತ್ತಿ ಪೀಡಿತರಾದವರಿಗಾಗಿ ಬಹಳ ಅನುತಪಿಸುತಲಿದ್ದರು ಧನಿಕನಾಗರಿಕತ್ವ ಪ್ರತಿಬಂಧಕವಾದ ದಾತೃತ್ವವು ಸದರೀ ದೊಡ್ಡ ಮನುಷ್ಯರನ್ನನುಸರಿಸಿದ್ದದರಿಂದ ಇತರರಂತೆ ಅವರು ವಿಶೇಷ ಉಪಪನ್ನರಾಗದೆ ಹೋದರು. ಇದಲ್ಲದೆ ಅವರ ಖಂಡಿತಸ್ವಭಾವವು ಅವರ ಪ್ರಾಭವಾಭಿವೃದ್ಧಿಗೆ ಕಾರಣವಾಗಿತ್ತು. ಮುಖ್ಯವಾಗಿ ಬಾಲಕುಟುಂಬವು ಸದರೀಯವರ ಮರಣದಿಂ ಬಹಳ ಸಂಕಟಕ್ಕೆ ಗುರಿಯಾಗಬೇಕಾದಿತಲ್ಲದೆ ಇಲ್ಲಿನ ಅಡ್ವೋಕೇಟ್ ಸಮೂಹಕ್ಕೆ ಪ್ರಬಲ ನಷ್ಟವುಂಟೆಂದೆಣಿಸಬೇಕಾಗಿದೆ. "ಅನ್ಯಥಾಚಿಂತಿತಂ ಕಾರ್ಯಂ ದೈವಮನ್ಯತ್ರ ಚಿಂತಯೇತ್" ಎಂಬದಾಗಿ ಮನುಷ್ಯನೊಂದೆಣಿಸಿದರೆ ದೈವವೊಂದೆಣಿಸುವದರಿಂದ ಮನುಷ್ಯನ ಕೋರಿಕೆ ಪ್ರಯತ್ನಗಳ್ಯಾವವೂ ಪ್ರಯೋಜನಕಾರಿಗಳಲ್ಲವೆಂಬದಕ್ಕೆ ಮೇಲೆ ಕಂಡ ವಿಷಯವೇ ಸಾಕಾದ ದೃಷ್ಟಾಂತವಾಗಿರುತಿದೆ.

THE VICEROY'S WELCOME ADDRESS.

ಗತವಾರದಲ್ಲಿ ನಾವು ತಿಳಿಸಿದ್ದ ಕನ್ನಡ ಅಡ್ರೆಸ್ ವಿಷಯವು ಇಲ್ಲಿನವರಷ್ಟೇ ಯಾರ ಅವಧಾನಕ್ಕೂ ಬಿದ್ದಂತೆ ತೋರಲಿಲ್ಲವು. ಪ್ರಜಾಪ್ರತಿ ನಿಧಿಗಳೆಂದೆನ್ನಿಸಿಕೊಂಡಿರುವ ಮ್ಯುನಿಸಿಪಾಲಿಟಿಯವರ ಪ್ರಯತ್ನವೇ ಸಾಕಾದ್ದೆಂದು ಭಾವಿಸಿ ತಟಸ್ಥರಾದಂತೆ ಕಾಣುತಿದೆ. ಉಚಿತ ಸಂದರ್ಭಗಳಲ್ಲಿ ಆಲಸಿಕೆಯೂ, ಅಕಾಲದಲ್ಲಿ ಅತಿ ಜಾಗರೂಕತೆಯೂ ಪರ್ಯವಸಾನದಲ್ಲಿ ಸಮಾನ ಫಲದಾಯಕಗಳಾಗದೆ ಹೋಗಲಾರದು. ಅನೇಕಸಹಸ್ರ ಪ್ರಜೆಗಳುಳ್ಳ ಇಷ್ಟು ದೊಡ್ಡ ಪಟ್ಟಣದಲ್ಲಿ ಸ್ವತಂತ್ರವಾದ ಅಭಿಪ್ರಾಯಪ್ರವೃತ್ತಿಗಳೆಂಬವು ದುರ್ಲಭವಾದದಕ್ಕಾಗಿ ಎಷ್ಟು ಆಶ್ಚರ್ಯಪಟ್ಟಾಗ್ಯೂ ಸಾಲದೆ ಇದೆ. ಮುಖ್ಯವಾಗಿ ಈ ದೇಶೀಯರ ಶೀಲಸ್ವಭಾವಗಳನ್ನು ಬಹುಕಾಲದಿಂ ತಿಳಿದು ಅನುಭವಿಸಿದ ಲೇಟ್ ಸರ್ ಮಾರ್ಕ್ ಕಬ್ಬನ್ ಸಾಹೇಬರವರು ಒಂದು ಸಂದರ್ಭದಲ್ಲಿ ಇಂಡ್ಯ ಗವರ್ನಮೆಂಟಿನವರಿಗೆ ಇಲ್ಲಿನವರ ಪ್ರಶಂಸೆಯನ್ನು ಮಾಡಿಸಬೇಕಾಗಿ ಬಂದ ಕಾಲದಲ್ಲಿ ಇಲ್ಲಿನ ಜನಗಳ ಸ್ವಭಾವವನ್ನು ಗುರಿ ಇಟ್ಟಂತೆ ಕಂಡು ಹಿಡಿದು ವಿವರಿಸಿದ ಪ್ರತಿಶಬ್ದವೂ ನಮ್ಮ ಸ್ಮರಣೆಗೆ ಪ್ರತಿ ಕ್ಷಣದಲ್ಲಿಯೂ ಬಾರದೆ ಇರಲಿಲ್ಲವು. ಮೈಸೂರು ದೇಶೀಯರ ರಾಜಭಕ್ತಿ ಕೃತಜ್ಞತಾದಿ ಭಾವಗಳಿಗಿಂತಲೂ, ಸ್ವಾಭಾವಿಕಗಳಾದ ಅವರ ಹೇಡಿತನವೂ, ಲೌಲ್ಯವೂ, ಔದಾಸೀನ್ಯವೂ, ಅವರಿಗೆ ವಿಶೇಷ ಸಾತ್ವಿಕತ್ವವನ್ನುಂಟುಮಾಡಿವೆ ಎಂಬದು. ಈ ಊರಲ್ಲಿ ಅಸಂಖ್ಯಾತಗಳಾದ ಅಸೋಸಿಯೇಷನ್‌ಗಳಿದ್ದಾಗ್ಯೂ ಅವರಿಗೆ ಸಹ ಪ್ರಜೆಗಳ ತರಫ ಸಾಮುದಾಯಕವಾದ ಒಂದು ವಿಜ್ಞಾಪನ ಪತ್ರಿಕೆಯಂ ಸ್ವದೇಶ ಭಾಷೆಯಲ್ಲಿ ರಚಿಸಿ ವೈಸರಾಯಿಯವರಿಗೆ ಒಪ್ಪಿಸಬೇಕೆಂಬ ತಾತ್ಪರ್ಯವುಟ್ಟದೆ ಹೋಯಿತು. ಪ್ರಾಧಾನ್ಯೇನ ದೇಶಭಾಷೆಯನ್ನು ಉಪಯೋಗಿಸಲಿಕ್ಕೆ ನಮ್ಮ ಮುಖ್ಯೋದ್ದೇಶವೇನಾದರೆ, ಇಂಗ್ಲಿಷ್ ಭಾಷಾಜ್ಞಾನವಿಲ್ಲದ ಬಹುಮಂದಿಯ ಹೃದಯಂಗಮವಾದ ಭಾವವು ಇಂತಾದ್ದೆಂದು ವೈಸರಾಯಿಯವರಿಗೆ ತಿಳಿಸಬೇಕಾದ್ದಕ್ಕೆ ಇದಕ್ಕಿಂತಲೂ ಬೇರೆ ಸಾಧನಗಳಿಲ್ಲವು. ಆದದರಿಂದ ಈ ಸಂದರ್ಭದಲ್ಲಿ ಇಂಗ್ಲಿಷ್ ತರ್ಜುಮೆ ಕೂಡಿದ ಕನ್ನಡ ವಿಜ್ಞಾಪನಪತ್ರಿಕೆಯನ್ನು ತಯಾರ್ಮಾಡಿ ತಮಗೆ ತಿಳಿಸಬೇಕಾದ ಅಂಶಗಳನ್ನೆಲ್ಲ ತನ್ಮೂಲಕ ಶ್ರುತಪಡಿಸಲಿಕ್ಕೆ ಇದಕ್ಕಿಂತಲೂ ಅನುಕೂಲವಾದ ಕಾಲವು ಇಲ್ಲಿನವರಿಗೆ ಬೇರೇ ದೊರೆಯಲಾರದು.

Occasional Notes.
ನೈಮಿತ್ತಿಕವಿಷಯನ್ಯಾಸ.

—:o:—

A report.—ಗುಜರಾತೀ ಪಹರಿನಲ್ಲೂ ಅದರ ಆಸಪಾಸ ಪ್ರದೇಶದಲ್ಲೂ ಆಯಾಯಜಾತಿ ಜನಗಳಲ್ಲಿ ಪ್ರಬಲ ಕಲಹ ಪ್ರಾರಂಭವಾಗಿರುವಂತೆ ವರ್ತಮಾನ ಬಂದಿರುತಿದೆ.

—

Reduction of salaries of railway employes.—ಬರುವ ಜನವರಿ ತಿಂಗಳ ಲಾಗಾಯತು ರೆಯಿಲ್ವೆ ಇಲಾಖಾ ನೌಕರರ ಸಂಬಳಗಳ ಮೈಕಿ ಸೇಕಡಾ ಹತ್ತರಮೇರೆ ಕಮ್ಮಿ ಮಾಡಲ್ಪಡುವದೆಂದು ಒಂದುಬಗೆ ಪ್ರವಾದ ಉಂಟಾಗಿದೆ.

—

A distinguished visitor.—ಹಿಂದೆ ಇಂಡ್ಯಾರಾಜ್ಯದಸೆಕ್ರೆಟರಿಯಾಗಿದ್ದ ಲಾರ್ಡ್ ಹಾರ್ಟಿಂಗ್ಟನ್ ಸಾಹೇಬರವರು ಈತಿಂಗಳ ಆದಿಭಾಗದಲ್ಲಿ ಇಂಡ್ಯಾರಾಜ್ಯವನ್ನು ನೋಡುವ ಉದ್ದೇಶದೊಡನೆ ಪ್ರಯಾಣ ಮಾಡುವವರಾಗಿದಾರೆಂದು ಒಂದಾನೊಂದು ಲಂಡನ್ ಪತ್ರಿಕೆ ತಿಳಸುತದೆ.

—

Burmah Railway.—ಬರ್ಮಾದೇಶದ ರೈಲ್ವೆ ರಸ್ತೆಯನ್ನು ಪೂರ್ತಿಮಾಡುವಂತೆ ಸ್ಟೇಟ್ ಸೆಕ್ರೆಟರಿಯಿಂದ ತಂತಿಮೂಲಕ ಇಂಡ್ಯ ಗವರ್ನ್‌ಮೆಂಟಿಗೆ ತಂತಿವೃತ್ತಾಂತ ಬಂದಿರುತಿದೆ. ಸದರೀ ರಸ್ತೆಯು ಟಾಂಗೊ ಯೆಂಬ ಪಹರಿನಿಂದ ಮಾಂಡಲೇ ಪಟ್ಟಣದವರಿವಿಗೆ ೨೨೦ ಮೈಲಿಗಳ ಫಾಸಲೆ ಇರುತಿದೆ. ಕೂಡಲೇ ಕೆಲಸಕ್ಕೆ ಪ್ರಾರಂಭವಾಗುವದು

—

The Vice-Chancellor of the Calcutta University.—ಕಲ್ಕತ್ತಾ ಯೂನಿವರ್ಸಿಟಿ ವೈಸ್ ಚಾನ್ಸಲರಾದ ಮಿ. ಇಲ್‌ಬರ್ಟ್‌ಯವರು ಬೇರೆ ಕೆಲಸದಮೇಲೆ ವಿಲಾಯತಿಗೆ ಹೋಗುತ್ತಾರಾಗಿ ಸದರೀಯವರ ಇಲ್ಲಿನ ಕೆಲಸಕ್ಕೆ ಪ್ರಾಯಶಃ ಡಾಕ್ಟರ್ ಪಬ್ಬಿಯೂ ಪಬ್ಬಿಯೂ ಹಂಟರವರು ನಿಯಮಿಸಲ್ಪಡಬಹುದೆಂದು ಒಂದಾನೊಂದು ಪತ್ರಿಕೆ ಹೇಳುತಿದೆ.

—

The health of the Rajas of Jhind and Nabha.—ಝಿಂದ್ ಮತ್ತು ನಭಾಸಂಸ್ಥಾನದ ಅರಸರುಗಳು ಶರೀರಾಲಸ್ಯದಿಂದ ಲಾಹೋರ್ ದರ್ಬಾರಿಗೆಹೋಗಲು ಅನುಕೂಲ ವಿಲ್ಲದೆ ಇದೆಯೆಂದು ಹಿಂದಿನ ಪತ್ರಿಕೆಯಮೂಲಕ ತಿಳಸಿದ್ದೆವಷ್ಟೆ. ಸದರೀ ಇಬ್ಬರಿಗೂ ಈಚೆಗೆ ಆರೋಗ್ಯವುಂಟಾಗಿ ದರ್ಬಾರಿಗೆ ಹೋಗುವದಕ್ಕೆ ಶಕ್ತರಾಗಿದಾರೆಂದು ಕೇಳಿ ಸಂತೋಷಿಸುತ್ತೇವೆ.

—

A decision of the Nizam's Govt.—ನಿಜಾಂಸರ್ಕಾರದವರು ತಮ್ಮನೌಕರಿಯೊಳರುವ ಯೂರೋಪಿಯನ್ ಆಫೀಸರ್‌ಗಳ ಉಪಯೋಗಾರ್ಥ ಒಂದುಬಗೆ ದುಸ್ತುಗಳನ್ನು ತಯಾರುಮಾಡಿಸಬೇಕೆಂದು ನಿರ್ಣಯಿಸಿ ಆಬಗ್ಗೆ ತಯಾರಾದನಮೂನೆಯನ್ನು ಸದರೀಸಂಸ್ಥಾನದ ದಿವಾನರವರು ಮಂಜೂರ್ಮಾಡಿರುತ್ತಾರಾಗಿ ಕ್ಷಿಪ್ರದೊಳು ಸದರೀಆಫೀಸರುಗಳೆಲ್ಲರೂ ಹಸುರುಬಣ್ಣವುಳ ಕಲಾಬತ್ತೂ ಪೂರ್ಣ ದುಸ್ತುಗಳನ್ನು ಧರಿಸಿಕೊಳ್ಳುವರೆಂದು ಅಲ್ಲಿನಪತ್ರಿಕೆಯೊಂದರಮೂಲಕತಿಳಿಯಲಾದೆವು

—

The Civil Service Commission.—ಸಿವಿಲ್ ಸರ್ವಿಸ್ ನೌಕರಿಯ ವಿಮರ್ಶೆಯಬಗ್ಗೆ ಯೇರ್ಪಾಡಾಗಿರುವ ಸಂಘದಲ್ಲಿ ನೇಟಿವ್ ಜನಗಳ ತರಫೆ ಪ್ರತಿನಿಧಿಗಳಾಗಿ ಸೇರುವದಕ್ಕೆ ಲಾಯಖಾದವರೆಂದು ಆನರೆಬಲ್ ಜಸ್ಟಿಸ್ ಮುತ್ತುಸಾಮಿ ಅಯ್ಯರ್, ಆನರೆಬಲ್ ಮೀರ್ ಹ್ಯುಮಯೂನ್ ಜಾ ಬಹದೂರ್, ಮತ್ತು ಮೆ॥ ಭಾಷ್ಯಮಯ್ಯಂಗಾರ್ರವರು, ಇವರುಗಳನ್ನು ಮದರಾಸ್ ಗವರ್ನ್‌ಮೆಂಟಿನವರು ಶಿಫಾರಸ್ ಮಾಡಿರುವದಾಗಿ ಮದರಾಸಿನಲ್ಲಿ ಪ್ರಸ್ತಾಪ ವುಂಟಾಗಿರುವಂತೆ ಅಲ್ಲಿನ ಪತ್ರಿಕೆ ಯೊಂದರಮೂಲಕ ತಿಳಿಯಬರುತಿದೆ.

—

The Boundary Commission.—ಅಫ್ಘಾನಿಸ್ತಾನ್ ದೇಶಕ್ಕೂ ರಷ್ಯಾದೇಶಕ್ಕೂ ಸರಹದ್ದು ವ್ಯವಸ್ಥೆಯಬಗ್ಗೆ ಯೇರ್ಪಾಟಾಗಿದ್ದ ಸಂಘದವರು ತಮ್ಮ ಕೆಲಸಗಳು ಪೂರ್ತಿಮಾಡಿಕೊಂಡು ಕಾಬೂಲಿಗೆಬಂದ ಸಂದರ್ಭದಲ್ಲಿ ಅಲ್ಲಿನ ಅಮೀರರವರು ಪ್ರಬಲ ದರ್ಬಾರ್ಮಾಡಿ ಅವರೆಲ್ಲರನ್ನೂ ಉಚಿತ ಮರ್ಯಾದೆಯೊಡನೆ ಬರಮಾಡಿಕೊಂಡು, ಕಳೆದ ತಿಂಗಳ ೨೧ನೇ ತಾರೀಖಿನಲ್ಲಿ ಅವರೆಲ್ಲರಿಗೂ ತಮ್ಮ ಅರಮನೆಯಲ್ಲಿ ಔತಣ ಮಾಡಿಸಿದರು. ಅದೇ ತಿಂಗಳ ೨೮ನೇ ತಾರೀಖಿನಲ್ಲಿ ಅವರೆಲ್ಲರೂ ಕಾಬೂಲಿನಿಂದ ಪ್ರಯಾಣವಾದರು. ಸದರೀ ಸಂಘದವರು ಕಾಬೂಲಿನಲ್ಲಿದ್ದ ಕಾಲನೆಲ್ಲ ಅಮೀರರವರು ಅವರ ವಿಷಯದಲ್ಲಿ ವಿಶೇಷ ಪ್ರೀತಿ ಗೌರವಗಳೊಡನೆ ಉಪಚಾರಮಾಡಿದರು.

—

Affairs at Mandalay.—ರಂಗೂನ್ ಗೆಜೆಟ್ ಪತ್ರಿಕೆ ತಿಳಸುವದೇನಂದರೆ—ಬರ್ಮಾ ದೇಶದಿಂದ ಬಂದ ಕಾಗದಗಳ, ತಂತಿ ವೃತ್ತಾಂತಗಳ, ಮತ್ತು ಸರ್ಕಾರೀ ವರ್ತಮಾನಗಳಮೂಲಕ ಬರ್ಮಾದೇಶದ ಸ್ಥಿತಿಯು ಕೇವಲ ಅತೃಪ್ತಿಕರವಾಗಿರುವಂತೆ ವ್ಯಕ್ತವಾಗುವದಿದೆ. ಪ್ರಾಣಹಾನಿಗಳು ಅಧಿಕವಾಗಿಲ್ಲವೆ ಹೊರತಾಗ್ಯೂ ಯೆಲ್ಲಕಡೆಗಳಲ್ಲೂ ದರೋಡೆ ಗುಂಪಿನವರು ವಿಶೇಷ ಧೈರ್ಯ ಸಾಹಸಗಳನ್ನು ತೋರಿಸುತಲಿದಾರೆ. ನಿಷ್ಪಕ್ಷಪಾತತೆಯಿಂದ ಆಲೋಚಿಸಿ ನೋಡಿದರೆ, ದೇಶದಲ್ಲಿ ಗದ್ದಲ ಅಣಗಿ ಸಮಬಂದಿಸ್ಥಿತಿಗೆ ಬರುವದಕ್ಕೆ ಬದಲಾಗಿ ಅವರ ಸ್ಥಿತಿಯು ಮತ್ತಷ್ಟು ಕೆಡಿಕೆಗೆ ಬರುತಲಿದೆಯೆಂದು ನಿರ್ಧರಿಸಬೇಕಾಗಿದೆ, ಎಂಬದು.

—

The Indian Civil Service Commission—ಇಂಡ್ಯದೇಶದ ಸಿವಿಲ್ ಸರ್ವಿಸ್ ನೌಕರಿಯ ವಿಷಯವನ್ನು ಕುರಿತು ರಸಿಖೀಮಾಡತಕ್ಕಬಗ್ಗೆ ಈಚೆಗೆ ಯೇರ್ಪಾಡಾದ ಸಂಘದಲ್ಲಿ, ಅದರ ಮೆಂಬರ್‌ಗಳ ಚುನಾವಣೆ ವಿಷಯದೊಳು ಗವರ್ನ್‌ಮೆಂಟಿನವರು ಮಾಡಿರುವ ನಿರ್ಣಯಕ್ಕೆ ಅನುಗುಣವಾದ ಜಾಡಿನಲ್ಲಿ ಅನುಭವವುಳ್ಳವರಾಗಿಯೂ ಕಾಯಿದಾ ಕಾನೂನ್‌ಗಳನ್ನು ಚೆನ್ನಾಗಿ ಅರಿತವರಾಗಿಯೂ ಇರುವ ಮದರಾಸ್ ಹೈಕೋರ್ಟ್ ಸಾಬಕ್ ಚೀಫ್ ಜಸ್ಟಿಸ್ ಸರ್ ಚಾರ್ಲ್ಸ್ ಟರ್ನರವರು ಒಬ್ಬ ಮೆಂಬರಾಗಿ ನಿಯಮಿಸಲ್ಪಡುವರೆಂದು ಲಂಡನ್ ಪಟ್ಟಣದಿಂದ ಪಯೋನಿಯರ್ ಪತ್ರಿಕೆಗೆ ತಂತಿವೃತ್ತಾಂತ ಬಂದಿರುತಿದೆ.

—

Infant marriage and enforced widowhood.—ಕೇವಲ ಬಾಲ್ಯದಶೆಯಲ್ಲಿ ಮಕ್ಕಳಿಗೆ ವಿವಾಹ ಮಾಡುವಣ ಮತ್ತು ವಿಧವೆಯರು ಪುನಃ ವಿವಾಹ ಮಾಡಿಕೊಳ್ಳಕೂಡದೆಂಬ ನಿರ್ಬಂಧ ವುಂಟುಮಾಡಿರುವಣ, ಈ ವಿಷಯದಲ್ಲಿ ಇಂಡ್ಯ ಗವರ್ನ್‌ಮೇಟಿನವರು ಮಾಡಿದ ನಿರ್ಣಯವನ್ನು ಕುರಿತು ವಿಚಾರಮಾಡುವಲ್ಲಿ ಹಿಂದೂ ಪೆಟ್ರಿಯಾಟ್ ಯೆಂಬ ಪತ್ರಿಕೆ ತಿಳಸುವದೇನೆಂದರೆ—ಗೌರವ್ಯರಾದ ನಮ್ಮ ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀಯವರ ಪ್ರತಿನಿಧಿಗಳವರು ಈ ವಿಷಯದಲ್ಲಿ ಮಾಡಿದ ನಿರ್ಣಯದಬಗ್ಗೆ ನಮ್ಮ ದೇಶೀಯರಿಗೆ ನಾವು ಶುಭವಾದನ ಮಾಡುತ್ತೇವೆ. ಸದರೀ ನಿರ್ಣಯವು ಸಂಪೂರ್ಣ ನ್ಯಾಯಬದ್ಧವಾಗಿಯೂ ತೃಪ್ತಿಕರವಾಗಿಯೂ ಇರುತಿದೆ. ಅಂತಾ ನಿರ್ಣಯಮಾಡಿದ ರಾಜತಂತ್ರಜ್ಞರು ಯೆಲ್ಲಬಗೆ ಗೌರವಕ್ಕೂ ಅರ್ಹರಾಗಿರುತ್ತಾರೆ. ಲಾರ್ಡ್ ಡಫ್ರಿನ್ ಸಾಹೇಬರವರ ಆಡಳತೆಕಾಲದಲ್ಲಿ ಮೇಲಿನ ವಿಷಯದೊಳು ಅವರ ನಿರ್ಣಯವು ಮೇಲಿನಂತೆಯೇ ಇರುವವರೆಬ ಭಾಗದಲ್ಲಿ ಪ್ರಜೆಗಳಿಗೆ ಎಷ್ಟುಮಾತ್ರವೂ ಸುಖವು ವುಂಟಾಗಿರಲಿಲ್ಲವು. ಮುಂದೆ ರಾಜ್ಯಾಡಳತಕ್ಕೆಬರತಕ್ಕವರುಸಹ ಮೇಲಿನಂತಾ ವಿವೇಕಪೂರ್ವಕವಾದ ಮತ್ತು ತೃಪ್ತಿಕರವಾದ ಸಿದ್ಧಾಂತವನ್ನವಲಂಬಿಸಬೇಕೆಂತಲೂ,ಗವರ್ನ್‌ಮೆಂಟಿನವರುತಮ್ಮಕರ್ತವ್ಯವನ್ನು ಮಾಡುವದರಮೂಲಕ ಶ್ಲಾಘನೆಗೆ ವಿಷಯರಾಗಬೇಕೆಂಬ ಭಾವವುಂಟಾಗಿ ಅದು ಅನ್ಯದೇಶೀಯರಾದ ಅವರಿಗೆ ತಮ್ಮಪ್ರಜೆಗಳ ಗೃಹಕೃತ್ಯ ಪದ್ಧತಿವಿಷಯದಲ್ಲಿ ಪ್ರವೃತ್ತಿಯನ್ನುಂಟುಮಾಡಲಾರದೆಂತಲೂ ನಿರೀಕ್ಷಿಸಲ್ಪಟ್ಟದೆ, ಎಂಬದು.

ನೋಟೀಸ್.

ಈದಿನರಾತ್ರಿ ೯ ಗಂಟೆಮೊದಲುಗೊಂಡು ತುಳಶೀತೋಟದಬಳಿ ಇರುವ ಚಕ್ರದಲ್ಲಿ ಬಹಳ ಆಶ್ಚರ್ಯವಾದ ವಿನೋದಗಳು ಮತ್ತು ಮನೋಹರವಾದ ನಾನಾವಿಧಆಟಗಳು ನಡೆಯುವದಲ್ಲದೆ ಹಿಂದು ದೇವರುಗಳು ಸ್ವಸ್ವರೂಪಗಳಿಂದತೋರಿಸಲ್ಪಡುತ್ತೆಯಾಗಿ ಸಕಲದೊಡ್ಡಮನುಷ್ಯರೂ ಬಂದು ನೋಡಬೇಕೆಂಬದಾಗಿ ಕೋರುತ್ತೇವೆ.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕ್‌ಜಾತಿವೃತ್ತಾಂತಗಳು.

—

Birth of a son.—ಮೈಸೂರುಡಿಸ್ಟ್ರಿಕ್ಟ ಅ॥ ಕಮ್ಮಿಷನರಾದ ದಳವಾಯ್ ಮ್ಯ॥ ರಾ॥ ದೇವರಾಜೇ ಅರಸಿನವರಿಗೆ ಕಳೆದ ಮಂಗಳವಾರದದಿನ ಮಧ್ಯಾನ್ಹ ೩ಘಂಟೆ ೨೦ನಿಮಿಷಕ್ಕೆ ಪುತ್ರೋತ್ಸವವಾದದು ಕೇಳಬಹಳಸಂತೋಷಿಸುತ್ತೇವೆ

—

Privilege leave—ಕಡೂರು ಡಿಸ್ಟ್ರಿಕ್ಟ ಕೊಪ್ಪತಾಲ್ಲೂಕು ಅಮಲ್‌ದಾರ್ ಮ॥ರಾ॥ಲಕ್ಷ್ಮೀನಾರಣಪ್ಪನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್‌ಲಾಗಾಯತು ೩೫ ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟರುತವೆ.

—

Holiday.—ನಾಳೆಯದಿನ ಶ್ರೀಮನ್ಮಹಾರಾಜ್ಞೀಯವರ ಜ್ಯೇಷ್ಠಪುತ್ರರಾದ ಪ್ರಿನ್ಸಾಫ್‌ವೇಲ್ಸ್‌ರವರವರ್ಷವರ್ಧಂತಿಯಾದದರಿಂದತಪ್ಪುಯುಕ್ತ ಸಿವಿಲ್ ವ ಮಿಲಟರಿ ಸ್ಟೇಷನಿಗೂ, ಮೈಸೂರು ಸರ್ಕಾರಿಗೂ ಸೇರಿದ ಕೋರ್ಟುಗಳಿಗೂ ಮತ್ತು ಇತರಸರ್ಕಾರಿಖಾತೆಗಳಿಗೂ ರಜಾಕೊಡಲ್ಪಡುವದು

—

Arrival—ಶ್ರೀಮನ್ಮಹಾರಾಜರವರ ಮಿಲಿಟರಿ ಸೆಕ್ರೆಟರಿಯಾದ ಕರ್ನಲ್ ಜೀ ಯವರು ಗತ ಗುರುವಾರದದಿನ ಮೈಸೂರಿಂದ ಇಲ್ಲಿಗೆಬಂದರು. ಬಹುಶಃ ವೈಸರಾಯಿಯವರ ಆಗಮನಕಾಲದಲ್ಲಿ ಮಾಡಬೇಕಾದ ಸ್ವಾಗತ ಸಂವಿಧಾನಗಳಿಗೆ ಈಗ ಅಂದಾಜು ಮಾಡಬೇಕಾದ ಏರ್ಪಾಡುಗಳಿಗಾಗಿರಬಹುದಲ್ಲವೆ ?

—

Appointment.—ಬೆಂಗಳೂರು ಕನ್ಸಲ್ಟಿಂಗ್ ಇಂಜನಿಯರವರ ಆಫೀಸ್ ಮ್ಯಾನೇಜರ್ ಮೆ॥ ಚೆಂಗಯ್ಯಶೆಟ್ಟರವರು ಆಜಮಾಯಿಷೀ ತರೀಖ್ ನಾಲ್ಕನೇ ಗ್ರೇಡ್ ಸ್ಯೂಪರ್ ನ್ಯೂಮರರಿ ಅಮಲ್‌ದಾರರಾಗಿ ನೌಕರರ್ಮಾಡಲ್ಪಟ್ಟು ಮೆ॥ ವೀರಾಸಾಮಿ ಮೊದಲಿಯಾರ್ರವರಿಗೆ ಬದಲಾಗಿ ಮೈಸೂರು ತಾಲ್ಲೂಕಿಗೆ ಕೆಲಸದಮೇಲೆ ಕಳುಹಿಸಲ್ಪಟ್ಟರುತ್ತಾರೆ.

—

The middle School Examination.—ಬರುವತಿಂಗಳ ಗುರ್ರೇ ತಾರೀಖ್ ಬುಧವಾರದ ಮೊದಲು ೩ನೇ ತಾರೀಖ್ ಮಂಗಳವಾರದತನಕ (ಉಭಯದಿನಗಳೂ ಸೇರಿ) ಈಸಲದ ಮಿಡಿಲ್ ಸ್ಕೂಲ್‌ಪರೀಕ್ಷೆಗೆ ಪ್ರಾರಂಭವಾಗಿ, ಈಪುರದೊಳು ಸೆಂಟ್ರಲ್‌ಕಾಲೀಜ್‌ನಲ್ಲಿಯೂ,ಮೈಸೂರೊಳು ಮಹಾರಾಜರವರ ಕಾಲೀಜ್‌ನಲ್ಲಿಯೂ, ಶಿವಮೊಗ್ಗೆಯೊಳು ಅಲ್ಲಿನ ಕಾಲೀಜ್‌ನಲ್ಲಿಯೂ, ಹಾಸನದೊಳು ಅಲ್ಲಿನ ಹೈಸ್ಕೂಲ್‌ನಲ್ಲಿಯೂ, ಬೆಳಗ್ಗೆ ೯ಘಂಟೆಯ ಮೊದಲು ಸಾಯಂಕಾಲ ೫ ಘಂಟೆಯತನಕ ನಡೆಯುವದು.

—

Mail train.—ಈಗ ಪ್ರತಿನಿತ್ಯವೂ ಈ ಪುರದಿಂದ ರೈಯಿಲ್‌ಗಾಡಿಯು ಬೆಳಗ್ಗೆ ೪॥ಘಂಟೆಗೆ ಸರಿಯಾಗಿ ಮೈಸೂರಿಗೆ ಹೊರಡುತಲಿದೆಯಷ್ಟೆ. ಈ ಕ್ರಮವನ್ನು ತಪ್ಪಿಸಿ ಮುಂದೆ ೧॥ ಘಂಟೆಗೆ ಬಿಡಲ್ಪಡಲಿಕ್ಕೆ ತಕ್ಕ ಯೇರ್ಪಾಡುಗಳನ್ನು ಮಹಾರಾಷ್ಟ್ರ ರೆಯಿಲ್ವೇ ಕಂಪೆನಿಯವರು ಆಲೋಚಿಸುತಲಿರುವದಾಗಿ ತಿಳಿಯಬರುತಿದೆ. ಇದು ನಿಜವಾಗಿರುವ ಪಕ್ಷಕ್ಕೆ ಈ ಯೇರ್ಪಾಡು ಪ್ರಯಾಣಸ್ಥರಿಗೆ ಬಹಳ ಅನುಕೂಲವಾದದ್ದೆಂಬದರೊಳೇನೂ ಸಂಶಯವಿಲ್ಲವು.

The Mysore Police—ಈಶೀಮೆಯ ಪೋಲೀಸ್‌ಬಂದೋಬಸ್ತಿಯ ಸೊಬಗನ್ನು ಈಸಲದ ಕರ್ನ ಚೆನ್ನಾಗಿ ಸೂಚಿಸತಕ್ಕದ್ದಾಗಿರುತಿದೆ. ಒಬ್ಬ ಜೆಟ್ಟಿಯು ಸಾಲದೆ ಇಬ್ಬರು ಜೆಟ್ಟಿಯರು ಪ್ರತ್ಯೇಕಪ್ರತ್ಯೇಕವಾಗಿ ದರೋಡೆಮೊಕದ್ದಮೆಗಳನ್ನೂ ಖೂನೀಮೊಕದ್ದಮೆಗಳನ್ನೂ ಒಂದುಕ್ಷಣ ಮಾತ್ರವೂ ವಿರಾಮವಿಲ್ಲದೆ ಗತವಾರವೆಲ್ಲವೂ ದರ್ಯಾಫ್ತುಮಾಡಿದರು. ಅವು ಇನ್ನೂ ಪೂರೈಸಿದಂತೆ ತೋರಲಿಲ್ಲವು. ದರೋಡೆಯವರನ್ನು ನೋಡಿದರೆ ಅವರ ರೂಪವೇಷಗಳು ಅತಿ ಭಯಂಕರವಾಗಿರುತಿವೆ. ಇಂತಾ ಗುಂಪಿನವರು ಇನ್ನೂ ಅನೇಕರು ಇರಬಹುದೆಂದು ತೋರುತಿದೆ.

—

Judicial—ಸಿವಿಲ್ ವ ಮಿಲಿಟರಿ ಸ್ಟೇಷನ್ ಸ ಕೆಂಡ್‌ಮ್ಯಾಜಿಸ್ಟ್ರೇಟ ಮಿ ಅಬ್ದುಲ್ ರಹಿಮಾನ್ ಸಾಹೆಬರಿಗೆ ತಮ್ಮಅಧಿಕಾರಸರಹದ್ದಿನೊಳಗಾಗಿ ಬರತಕ್ಕ ೫೦೦ ರೂಪಾಯಿಗಳಗೊಳಪಟ್ಟ ಸಿವಿಲ್ ಮೊಕದ್ದಮೆಗಳನ್ನೆಲ್ಲ ದರ್ಯಾಫ್ತು ಮಾಡಲಿಕ್ಕೆ ಮುನಸಫ್ ಅಧಿಕಾರ ಕೊಡಲ್ಪಡುವದೆಂದು ತಿಳಿಯಬರುತಿದೆ. ಇವರ ಫೈಸಲಿನಮೇಲೆ ಅಪೀಲ್ ಸಿವಿಲ್ ವ ಸೆಷನ್ಸ್ ಕೋರ್ಟಿಗೆ ಮಾಡಲ್ಪಡುವದು ಈ ಯೇರ್ಪಾಡು ಈ ಸಾಲ ಆಖೈರೊಳಗಾಗಿ ಜಾರಿಯಲ್ಲಿ ಬರಬಹುದೆಂದು ಕಾಣುತಿದೆ

—

M K P Puttanna Chetty.—ಮೆ॥ ಪುಟ್ಟಣ್ಣಶೆಟ್ಟರವರು ಅಸಿಸ್ಟಂಟ್‌ಕಮಿಷನರಾಗಿ ನೌಕರರಾಗಿಮಿಸ್ಟರ್ ಕೃಷ್ಣಸ್ವಾಮಿಅಯ್ಯಂಗಾರ್ರವರಿಗೆ ಬದಲು ಪ್ರೊಬೇಷನ್ ಅಸಿಸ್ಟಂಟ್‌ಕಮಿಷನರಾಗಿ ಕೆಲಸ ನೋಡುವಂತೆ ಹುಕುಂಮಾಡಲ್ಪಟ್ಟರೆಂದು ಗತವಾರದಲ್ಲಿ ತಿಳಸಿದ್ದೆವಷ್ಟೆ. ಅವರು ಮುಂದೆ ತಮಗೆ ಕೊಡಲ್ಪಟ್ಟ ಉದ್ಯೋಗದಲ್ಲಿ ತಾವು ಹ್ಯಾಗೆ ವರ್ತಿಸತಕ್ಕದ್ದೋ ತಮ್ಮ ಮದ್ವಿಪವಾದ ನೌಕರಿಯು ದರ್ಬಾರಿಗೆ ಸಮರ್ಪಕವಾಗಿ ಸಂತೋಷಕವಾಗಿರುವದೋ ಮುಂತಾದ ವಿಷಯಗಳನ್ನು ದಿವಾನರ ಮೂಲಕ ಬುದ್ಧಿ ಕೇಳಿ ತಿಳಿದುಕೊಳ್ಳುವಬಗ್ಗೆ ಗತವಾರದಲ್ಲಿ ಮೈಸೂರಿಗೆ ಹೋದರೆಂದು ಒಳದೇಶದ ಡೆಮಿಲೀಪ್ರೋಸ್ಟು ಪತ್ರಿಕೆ ತಿಳಸುತಿದೆ.

—

Free Passes—ದಕ್ಷಿಣ ವ ಮಹಾರಾಷ್ಟ್ರ ರೆಯಿಲ್ವೇ ಇಲಾಖೆಯಲ್ಲಿ ನೌಕರರು ಕಂಪನಿಯ ಕೆಲಸಕ್ಕಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಮಾಡಲ್ಪಟ್ಟು ಹೋಗತಕ್ಕ ಸಂದರ್ಭಗಳಲ್ಲೆಲ್ಲ ಅವರಿಗೆ ರೆಯಿಲ್ವೇ ಚಾರ್ಜ್ ಇಲ್ಲದೆ ಫ್ರೀ ಪ್ಯಾಸ್ ಕೊಡಲ್ಪಡುವದಲಿತ್ತು. ಈ ಕ್ರಮವು ತಪ್ಪಿ ಮುಂದೆ ಇತರರಂತೆ ಅವರೂ ಟಿಕೆಟುಗಳು ತೆಗೆದುಕೊಳ್ಳುವಬಗ್ಗೆ ಟಿಕ್ಕೆಟಿನ ದರವು ಟ್ರಾಫಿಕ್ ಇಲಾಖೆಯವರಿಂದ ಕೊಡಲ್ಪಡತಕ್ಕದ್ದೆಂದು ವ್ಯವಸ್ಥೆ ಯಾಗಿರುವಂತೆ ಕೇಳಲಾದೆವು.

—

The Resident.—ಗತವಾರದಲ್ಲಿ ನಾವುತಿಳಿಸಿದ್ದಪ್ರಕಾರ ಬ್ರಿಟಿಷ್ ರೆಸಿಡೆಂಟರವರು ಗತ ಮಂಗಳವಾರದದಿನ ಸಾಯಂಕಾಲ ಇಲ್ಲಿಗೆ ದಯಮಾಡಿದರು ಅವರನ್ನುಎದುರುಗೊಳ್ಳುವಬಗ್ಗೆ ಬಹುಮಂದಿ ದೊಡ್ಡಮನುಷ್ಯರು ಹೋಗಿದ್ದರಲ್ಲದೆ ಮಾಮೂಲಿಪ್ರಕಾರ ನಡೆಯಬೇಕಾದ ತೋಪಿ ವಗ್ಯೆರೆ ಮರ್ಯಾದೆಗಳೆಲ್ಲ ಜರಿಗಿದವು. ವೈಸರಾಯಿಯವರ ಆಗಮನಾರ್ಥ ರೆಸಿಡೆನ್ಸಿ ಬಂಗ್ಲೆಯು ರಿಪೇರಿ ರಾಗುತಲಿರುವದರಿಂದ ರೆಸಿಡೆಂಟರವರು ಸದ್ಯಕ್ಕೆ ಸೆಂಟ್ರಲ್‌ಜೈಯಿಲಿಗೆ ಎದುರಿಗೆಯಿರುವ ಮತ್ತು ಹಿಂದೆ ಸರ್ ಮಾರ್ಕ್ ಕ್ಯೂಬನ್‌ಯವರು ವಾಸಿಸುತಲಿದ್ದ ಬಂಗ್ಲೆಯಲ್ಲಿ ನೆಲೆಸಿದಾರೆ.

—

The Viceroy's Casket.—ವೈಸ್‌ರಾಯಿಯವರಿಗೆ ಇಲ್ಲಿನ ಟೌನ್ ಮ್ಯೂನಿಸಿಪಾಲಿಟಿಯವರು ಒಪ್ಪಿಸಬೇಕೆಂದುದ್ದೇಶಿಸಿರುವ ಅಡ್ರಸ್ಸನ್ನು ಇಟ್ಟು ಕೊಡುವಬಗ್ಗೆ ೫೦೦ ರೂಪಾಯಿಗಳ ಕ್ರಯದಲ್ಲಿ ಒಂದು ಸಂಪುಟ ತಯಾರುಮಾಡುವದಕ್ಕಾಗಿ ಮದರಾಸ್ ಪಿ ಆರ್. ಅಂಡ್ ಸನ್ಸ್ ಕಂಪೆನಿಯವರಿಗೆ ತಿಳಿಸಿದ್ದಪ್ರಕಾರ ಅವರು ಸದರೀ ಸಂಪುಟವನ್ನು ತಯಾರುಮಾಡಿ ಈತಿಂಗಳ ೩೦ನೇ ತಾ॥ಗೆ ಸರಿಯಾಗಿ ಇಲ್ಲಿಗೆಬಂದು ಸೇರುವದೆಂ ತೆ

...ನವೆಮೆಯಿಂದ ಟ್ರಿಮ್ಸನ್ನಲ್ಲಿ ಕಳುಹಿಸುವದಾಗಿ ತಿಳಿಯಪಡಿಸಿದ್ದಾರೆಂದು ತಿಳಿಯಬರುತ್ತದೆ.

The Government Press.—ಮೈಸೂರು ಗವರ್ನಮೆಂಟ್ ಪ್ರೆಸ್ ಆಫೀಸಿನ ಮ್ಯಾನೇಜರವರು ಪೆನ್ಷನ್‌ಮೇಲೆ ನಿವೃತ್ತರಾಗುವರೆಂದು ವಗೈರೆ ಹಿಂದಿನವಾರದಲ್ಲಿ ತಿಳಿಸಿದ್ದೇವಷ್ಟೆ. ಸದರೀಯವರ ಕೆಲಸವು ಡೆಪ್ಯುಟೀ ಮ್ಯಾನೇಜರ್ ಮ. ಹರ್ಕೆರ್ಟೆಯವರಿಗೆ ಆದಂತೆಯೂ, ವರುತು ಹಿಂದಿನ ತಲಬ ಸಲ್ಲಲಾರದೆಂತಲೂ, ಈ ಸಂದರ್ಭದಲ್ಲಿ ಸದರೀ ಇಲಾಖಾ ದಾರರಿಗೆ ಕೆಲಸರಿಗೆ ತಲಬ ಇಜಾಫೆ ಆಗಬಹುದೆಂತಲೂ ತಿಳಿಯಬರುತ್ತದೆ.

The Mysore Pushpavati Bank. ಮೈಸೂರು ದೇಶದಲ್ಲಿ ವ್ಯಾಕಾರದಬಗ್ಯೆ, ತತ್ಕಾಲ ನಗದ್ ಲೇವಾದೇವಿಗಾಗಿ ಅನೇಕ ಬ್ಯಾಂಕ್‌ಗಳೇರ್ಪಟ್ಟು ಕ್ಷಾಮದ ಸಬಬಿನಮೇಲೆ ಅವು ಏಟಿನಿಂದ ದಿವಾಳೀ ಯೆಬ್ಬಿಸಲ್ಪಟ್ಟವಿಷಯ ಪ್ರಸಿದ್ಧವಷ್ಟೆ. ಈ ಯೋಜನಾಕರ್ತರಲ್ಲಿ ಕೆಲವರು ದೇಶಭ್ರಷ್ಟರಾದವರು, ಕೆಲವರು ಸಜಾ ಅನುಭವಿಸಿದರು. ಇನ್ನುಳಿದ ಅಪಪ್ರಥೆಗೆ ಗುರಿಯಾದಾಗ್ಯೂ ಪುರಳ ಏಜಂಟರುಗಳಂತಾ ಕೆಲಸಗಳನ್ನೇ ಮಾಡುವದು ಶೇರ್ ಕಮೂಪಕ್ಷೇ ಕೇವಲ ಅಪಮಾನಕರವಾಗಿರುತ್ತದೆ. ಮೈಸೂರಲ್ಲಿದ್ದ ಪುಷ್ಪವತೀ ಸಹಾಯ ಬ್ಯಾಂಕ ಆಡಳಿತವನ್ನು ಕುರಿತು ಹಿಂದೆಯೇ ಈ ಪತ್ರಿಕೆಯಮೂಲಕ ಸಾಕಾದಮಟ್ಟಿಗೆ ತಿಳಿಸಿದ್ದೇವಷ್ಟೆ. ಸದರೀ ಮೊಕದ್ದಮೆಯಲ್ಲಿ ಮ್ಯಾನೇಜಿಂಗ್ ಡೈರೆಕ್ಟರಿಗೆ ಆರುವರುಷಗಳ ಕಠಿಣ ಬೈದೂ, ಯೆರಡುಸಾವಿರ ರೂಪಾಯಿಗಳ ಜುರ್ಮಾನೆಯೂ, ಅಥವಾ ಜುರ್ಮಾನೆಗೆ ಬದಲು ೩ ವರುಷಗಳ ಬೈದೂ ವಿಧಿಸಲ್ಪಟ್ಟವು. ಇಂತವರಿಗೆ ಇನ್ನೂ ಜಾಸ್ತೀ ಸಜಾ ಕೊಡುವದನ್ನು ಯೆಲ್ಲರೂ ಸಂತೋಷದೊಡನೆ ನಿರೀಕ್ಷಿಸಬೇಕಾಗಿದೆ.

Mr. S. B. Ramaswamy Iyengar. ಲೇಟ್ ಮೈಸೂರು ಕಮಿಷನನಲ್ಲಿ ಬಹುಕಾಲ ನೌಕರಿಮಾಡಿ ಪೆನ್ಷನ್‌ಮೇಲೆ ನಿವೃತ್ತರಾದ ಅಸಿಸ್ಟೆಂಟ್ ಕಮಿಷನರ್ ಮ. ಎಸ್. ಬಿ. ಕೃಷ್ಣಸ್ವಾಮಯ್ಯಂಗಾರ್ರವರ ದ್ವಿತೀಯ ಪುತ್ರರಾದ ಮ. ಎಸ್. ಬಿ. ರಾಮಸ್ವಾಮಯ್ಯಂಗಾರ್ರವರು ಇಷ್ಟಮಿತ್ರರನ್ನೆಲ್ಲ ತೊರೆದು ಅಜ್ಞಾತವಾದ ದೇಶಾಂತರದಲ್ಲಿ ವಸಿಸುತ ಬ್ಯಾರಿಸ್ಟರ್ ಪರೀಕ್ಷೆಯಬಗ್ಯೆ ಓದುತಲಿದ್ದರಷ್ಟೆ. ಇವರು ಈಚೆಗೆ ಸದರೀ ಪರೀಕ್ಷೆಯಲ್ಲಿ ತೇರ್ಗಡೆಯಾದರೆಂತಲೂ, ಬರುವತಿಂಗಳ ಅಂತ್ಯಭಾಗದಲ್ಲಿ ಸ್ವದೇಶಕ್ಕೆ ಬರುವರೆಂತಲೂ, ಅವರ ತಂದೆಗಳಿಗೆ ಬಂದ ಕುಶಿ ವೃತ್ತಾಂತವು ಕೇಳಿ ನಾವು ಬಹಳ ಸಂತೋಷಿಸುವೆವು. ಬಹುದ್ರವ್ಯ ವ್ಯಯವೂ, ಬಹುಜನಾಪವಾದವೂ, ಅನೇಕ ಸ್ವಜನವಿದ್ವೇಷವೂ, ಚಿರಕಾಲಿಕವಾದ ಶರೀರಶ್ರಮವೂ, ಮಂ. ರಾಮಸ್ವಾಮಯ್ಯಂಗಾರ್ರಿಗೆ ಸಫಲವಾದವಕ್ಕೋಸ್ಕರ ಯೆಲ್ಲರೂ ಸಂತೋಷಿಸಬೇಕಾಗಿರುತ್ತದೆ. ಇವರಿಂದಲೇ ಮುಂದೆ ದಾಕ್ಷಿಣಾತ್ಯರು ಸಮುದ್ರಯಾನ ಮಾಡಬಹುದೇ ಕೂಡದೇ ಯೆಂಬ ವಿಚಾರ ಆಖೈರಾಗಿ ನಿರ್ಣಯವಾಗಬೇಕಾಗಿರುತ್ತದೆ.

A false report.—ಮುಂಬೈಯಲ್ಲಿ ಛಾಪಿಸಲ್ಪಡುವಹಪ್ತೆಕಸುಬೋಧಮೆಂಬಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿದ್ದ ತುಮಕೂರು ಖಾತರಿದಾರನ ಬರವಣಿಗೆಯನ್ನು ಸಂಗ್ರಹಿಸಿ ಈ ಪತ್ರಿಕೆಯ ಮತ್ತೊಂದುಕಡೆ ಸಕಲರ ತಿಳುವಳಿಕೆಯಬಗ್ಯೆ ಪ್ರಕಟಿಸಿರುತ್ತೇವೆ. ಅದರಲ್ಲಿ ಕಂಡ ಕೃತ್ಯ ವಾಸ್ತವವಾಗಿ ನಡೆದಿರುವ ಪಕ್ಷಕ್ಕೆ ಸಮೀಪದಲ್ಲಿರುವ ನಮಗೆ ಮೊದಲು ತಿಳಿದು ನಾವು ಈ ಪತ್ರಿಕೆಯಮೂಲಕ ಅನ್ಯದೇಶದಲ್ಲಿರತಕ್ಕವರಿಗೆ ತಿಳಿಸಬೇಕಾದ್ದು ಸ್ವಾಭಾವಿಕವಾಗಿದ್ದಾಗ್ಯೂ ಅದಕ್ಕೆ ಅವಕಾಶವಿಲ್ಲವಾಯಿತಲ್ಲಾ ಯೆಂಬ ಚಿಂತೆಯಿಂದ ವಿಚಾರಿಸುವಲ್ಲಿ ಅದು ಕೇವಲ ಕಲ್ಪಿತವೆಂದು ತಿಳಿಯಬಂತು. ಖಾತರಿದಾರರಿಗೆ ಕೊಡುವ ದುಡುಮಿಗೆ ಫಲ ಈ ರೀತಿಯಾದಮೇಲೆ ಅಂತಾ ಖಾತರಿದಾರರನ್ನಿಟ್ಟುಕೊಂಡಿರುವ ಪತ್ರಿಕಾಕರ್ತರ ಗೌರವ ಉಳಿಯುವ ಬಗೆ ಹ್ಯಾಗೋ ಕಾಣೆವು.

THE MYSORE REPRESENTATIVE ASSEMBLY,—1886.

ಗತವಾರದಶೇಷವು.

ವಿದ್ಯಾಭ್ಯಾಸ.—ಶ್ರೀಮನ್ಮಹಾರಾಜಾ ಸರ್ಕಾರದವರು ವಿದ್ಯಾಭ್ಯಾಸದ ಸಂಗತಿಯು ವಿಶೇಷ ಮುಖ್ಯವಾದ್ದೆಂದು ಭಾವಿಸಿದವರಾಗಿ, ಈ ಮುಖ್ಯೋದ್ದೇಶಗಳಿಗೆ ಅನುಗುಣವಾಗಿ ಏರ್ಪಡಿಸಿರುವ ಕ್ರಮಗಳನ್ನು ವಿವರಿಸುತ್ತೇವೆ. ಏನೆಂದರೆ:—ಬಾಲಕರಿಗೆ ಆರಂಭ ಶಿಕ್ಷೆಗೂ ತದುತ್ತರ ವಿದ್ಯಾಭ್ಯಾಸಕ್ಕೂ ಯೇರ್ಪಟ್ಟಿರುವ ಕ್ರಮಗಳು ಮಲಿನ ಹೊಂದದಹಾಗೆ ಅವುಗಳನ್ನು ಒಳ್ಳೇ ಸ್ಥಿತಿಯಲ್ಲಿ ಕಾಪಾಡಿ, ಖಾಸ ಸರ್ಕಾರ್ ಪಾಠಶಾಲೆಗಳ ಮೂಲಕವೂ, ಸರ್ಕಾರಿ ಯಲ್ಲದ ಪಾಠಶಾಲೆಗಳಿಗೆ ದ್ರವ್ಯಸಹಾಯ ಮಾಡುವದರಮೂಲಕವೂ, ಎಲ್ಲಾ ತರಗತಿಯ ಜನಗಳಿಗೂ ಉಪಯೋಗವಾಗುವಹಾಗೆ ಮಾಡತಕ್ಕದ್ದು. ದೇಶಭಾಷೆ ಮತ್ತು ಪ್ರಾಚೀನವಾದ ಸಂಸ್ಕೃತಭಾಷೆ ಇವುಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸುವ ಪರ್ಯಂತ ವ್ಯಾಸಂಗವನಡಸತಕ್ಕಬಗ್ಯೆ ಪ್ರೋತ್ಸಾಹ ಪಡಿಸತಕ್ಕದ್ದು.—ಜನಸಮ್ಮತಿಯುಂಟಾಗುವರೀತ್ಯಾ ನಮ್ಮ ಸಂಪ್ರದಾಯವನ್ನನುಸರಿಸಿ ಸ್ತ್ರೀ ವಿದ್ಯಾಭ್ಯಾಸವನ್ನು ಪ್ರಚುರಪಡಿಸಿ ಅಭಿವೃದ್ಧಿ ಗೊಳಿಸತಕ್ಕದ್ದು. ವಿದ್ಯಾ ಪ್ರಗತ್ಯತೆಯನ್ನು ಪ್ರೋತ್ಸಾಹ ಪಡಿಸತಕ್ಕದ್ದು. ವೈದ್ಯ, ಇಂಜನಿಯರಿಂಗ್ ಯಾನೆ ಮರಾಮತ್ತು ಮುಂತಾದ ಕಸಬುದಾರೀ ವಿದ್ಯೆಗಳಲ್ಲಿ ಹುಡುಗರನ್ನು ತಯಾರುಮಾಡತಕ್ಕದ್ದಕ್ಕೆ ಸರಿಯಾದ ಯೇರ್ಪಾಡುಗಳನ್ನು ಮಾಡತಕ್ಕದ್ದು ಸದರಿ ಸರ್ಕಾರದವರ ಮುಖ್ಯೋದ್ದೇಶಗಳಾಗಿರುತ್ತೆ. ಆದಕಾರಣ ದೇಶಭಾಷೆಯ ವ್ಯಾಸಂಗಕ್ಕೆ ಪ್ರಾಮುಖ್ಯತೆಯನ್ನು ಉಂಟುಮಾಡುವದಕ್ಕೋಸ್ಕರ "ಮೈಸೂರು ಲೋಕಲ್ ಎಗ್ಜಾಮಿನೇಷನ್ ಯಾನೆ ಮೈಸೂರು ದೇಶೀಯ ಪರೀಕ್ಷೆ" ಎಂಬವನ್ನು ವರುಷ ಪ್ರತಿಯಲ್ಲಿಯೂ ನಡೆಯಲು ಏರ್ಪಡುಮಾಡಿರುತ್ತೆ; ಮೈಸೂರಲ್ಲಿರುವ ಸಂಸ್ಕೃತ ಪಾಠಶಾಲೆಗೆ ಸಂಬಂಧವಾಗಿ ಸಕಲ ಶಾಸ್ತ್ರಗಳಲ್ಲಿಯೂ ವಿದ್ವತ್ಪರೀಕ್ಷೆಯನ್ನು ಕಲ್ಪಿಸಿರುತ್ತೆ. ಸ್ತ್ರೀ ವಿದ್ಯಾಭ್ಯಾಸದ ವಿಷಯದಲ್ಲಿ ನಿರಾಕ್ಷೇಪಣೆಗಳಾದ ಯೇರ್ಪಾಡುಗಳು ಮಾಡಿರೋಣವರಿಂದ ವಿಶೇಷ ಪ್ರಚುರಗೊಂಡು ಇತರರಿಗೆ ಮೇಲ್ಪಂಕ್ತಿರೂಪವಾಗಿರುವ ಮೈಸೂರು ಶ್ರೀಮನ್ ಮಹಾರಾಣಿಯವರ ಬಾಲಿಕಾ ಪಾಠಶಾಲೆಗೆ ವಿಶೇಷವಾಗಿ ಧನಸಹಾಯವು ಕೊಡಲ್ಪಟ್ಟಿರುತ್ತೆ. ಇಂಗ್ಲಿಷ್ ಕಾಲೀಜ್ ಮತ್ತು ಹೈಸ್ಕೂಲುಗಳಲ್ಲಿ ವಿಶೇಷ ಸಮರ್ಥರಾದ ಬೋಧಕರನ್ನು ಮೊಕರರ್‌ಮಾಡಿರುವದಲ್ಲದೆ ಈ ಇಲಾಖೆಯಲ್ಲಿ ಶಕ್ತರಾದ ವಿದ್ವಾಂಸರು ಕಾಯಂಮಾಗಿ ಸೇರುವದಕ್ಕೂ ಅವರುಗಳು ಸರಿಯಾಗಿ ಕೆಲಸ ಮಾಡತಕ್ಕದ್ದಕ್ಕೂ ಅವರುಗಳ ತಲಬ ಮತ್ತು ಅಭಿವೃದ್ಧಿ ವಿಷಯಗಳಲ್ಲಿ ತಕ್ಕ ಪ್ರೋತ್ಸಾಹಗಳನ್ನು ಕಲ್ಪಿಸಿರುತ್ತೆ. ಇದಲ್ಲದೆ ಅನುಕೂಲ ಸಾಮಗ್ರಿ ಸಹಿತವಾಗಿ ಬ್ರಿಟಿಷ್ ದೇಶದಲ್ಲಿರುವ ಮೆಡಿಕಲ್, ಇಂಜನಿಯರಿಂಗ್, ಅಗ್ರಿಕಲ್ಚರಲ್ ಮತ್ತು ಫಾರೆಸ್ಟ್ ಕಾಲೀಜ್‌ಗಳಲ್ಲಿ ಕಸಬುದಾರೀ ವಿದ್ಯಾ ವ್ಯಾಸಂಗಕ್ಕೋಸ್ಕರ ಶಕ್ತರಾದ ವಿದ್ಯಾರ್ಥಿಗಳನ್ನು ಚುನಾಯಿಸಿ ಅವರುಗಳಿಗೆ ದಾರಾಳವಾಗಿ ವಿದ್ಯಾರ್ಥಿ ವೇತನವನ್ನು ಕಲ್ಪಿಸಿರುತ್ತೆ.

ಪ್ರಾಚೀನ ವಿಷಯ ವಿಚಾರ.—ಮೈಸೂರು ದೇಶದಲ್ಲಿರತಕ್ಕ ಪ್ರಾಚೀನ ವಿಷಯಗಳ ಕ್ರಮವಾದ ಅನ್ವೇಷಣೆ ಮತ್ತು ವಿಚಾರವು ಕಳೆದ ವರುಷದ ಮರುವಿನಲ್ಲಿ ಪ್ರಾರಂಭ ಮಾಡಲ್ಪಟ್ಟಿತು. ಈ ದೇಶದಲ್ಲಿ ಶೇಷವಾಗಿರುವ ಪುರಾತನ ಶಾಸನಗಳನ್ನು ಸಂಪೂರ್ಣವಾಗಿ ಪರಿಶೋಧಿಸುವಬಗ್ಯೆ ತಕ್ಕ ಏರ್ಪಾಡು ಮಾಡಿರುತ್ತೆ. ಇದುವರಿವಿಗೆ ಪರೀಕ್ಷಿಸಿರುವದರಲ್ಲಿ ಈ ವಿಚಾರದಿಂದ ಬಹಳ ಮುಖ್ಯವಾದ ಸಂಗತಿಗಳು ಗೋಚರಕ್ಕೆ ಬರಬಹುದೆಂದು ತೋರುತ್ತೆ. ನಮಗೆ ನೆರೆ ಸೀಮೆಯಾದ ಬೊಂಬಾಯಿ ಮತ್ತು ಮದರಾಸ ಪ್ರೆಸಿಡೆನ್ಸಿಗಳಲ್ಲಿ ಈ ಭಾಗದ ವಿಚಾರವನ್ನು ಮೊದಲೇ ಕ್ರಮವಾಗಿ ಆರಂಭಿಸಿರುತ್ತಾರೆ. ಮೈಸೂರು ಸಂಸ್ಥಾನವು ಸದರೀ ಉಭಯ ದೇಶಗಳ ಮಧ್ಯದಲ್ಲಿರುವದರಿಂದ ಆ ದೇಶಗಳಲ್ಲಿ ದೊರಕುತಲಿರುವದಕ್ಕೆ ದ್ಯೋತಕಗಳಾಗಲಿ ಸಂಬಂಧ ಸಂಗತಿಗಳಾಗಲಿ ಈ ದೇಶದಲ್ಲಿ ದೊರಕಬಹುದು. ಈ ಮುಖ್ಯವಾದ ಕೆಲಸವನ್ನು ಪಂಡಿತರಾಗಿಯೂ ಹಿಂದುಸ್ಥಾನದೇಶದ ಪ್ರಾಚೀನವಿಷಯ ವಿಚಾರಗಳಲ್ಲಿ ಕ್ರಮವಾದ ಯೋಗ್ಯತೆಯನ್ನು ಪಡೆದಿರುವರಾಗಿಯೂ ಅನುಭವಶಾಲಿಗಳಾಗಿಯೂ ಇರುವ ಮ. ಎಲ್. ರೈಸ್, ಸಿ. ಐ. ಇ ಯವರಿಗೆ ವಹಿಸಿಕೊಟ್ಟಿರುತ್ತೆ. ಅವರು ಈ ಕೆಲಸವನ್ನು ತೃಪ್ತಿಕರವಾಗಿ ಪೂರೈಸುವರು. ಅವರು ಇದುವರಿಗೆ ಸ್ವಲ್ಪ ಹೆಚ್ಚು ಕಡಮೆ ೧೪ ತಾಲ್ಲೂಕುಗಳಲ್ಲಿ ಸಂಚಾರವಾಡಿ ೧೫೦೦ ಶಾಸನಗಳಿಗಿಂತ ಜಾಸ್ತಿಯಾಗಿ ಸಂಗ್ರಹಿಸಿದಾರೆ. ಇವುಗಳ ಫಲಿತಾರ್ಥವನ್ನು ಆಗಿಂದಾಗ್ಯೆ ಛಾಪಿಸಿ ಪ್ರಕಟಿಸತಕ್ಕಬಗ್ಯೆ ಏರ್ಪಾಡುಗಳು ಮಾಡಿರುತ್ತೆ. ಈಗ ನಡೆಯುತ್ತಿರುವ ಅನ್ವೇಷಣೆ ಮತ್ತು ವಿಚಾರದ ದೆಸೆಯಿಂದ ಹೃದಯಂಗಮವಾದ ಮೈಸೂರುದೇಶದ ಪೂರ್ವಕಾಲದ ಚರಿತ್ರೆಗಳಿಗೆಸಂಬಂಧಗಳಾಗಿ ಹೊಸದಾದ ಮತ್ತು ಪ್ರಯೋಜಕಗಳಾದ ಸಂಗತಿಗಳು ಪ್ರಕಾಶಕ್ಕೆ ಬರುವದೆಂದು ಸರ್ಕಾರದವರು ದೃಢವಾಗಿ ನಂಬಿದಾರೆ

ಕಾನೂನುಗಳ ಏರ್ಪಾಡು.—ಲೆಜಿಸ್ಲೇಟಿವ್ ಇಲಾಖೆಯಲ್ಲಿ ತಮಗೆ ತಿಳಿಸತಕ್ಕ ಹೊಸ ಸಂಗತಿಗಳು ವಿಶೇಷವಿರುವದಿಲ್ಲ. ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ರೆಗ್ಯುಲೇಷನ್ ಯೆಂಬ ೧೮೮೬ ನೇ ಇಸವಿ ೧ನೇ ನಂಬರ್ ರೆಗ್ಯುಲೇಷನ್ ಕಳೆದ ಏಪ್ರಿಲ್‌ತಿಂಗಳಲ್ಲಿ ಮಂಜೂರಾಗಿ ಜಾರೀಯಲ್ಲಿಬಂದಿರುತ್ತೆ. ಈ ರೆಗ್ಯುಲೇಷನ್ ಸಂಬಂಧದಲ್ಲಿ ಯೂರೋಪಿಯನ್ ಬ್ರಿಟಿಷ್ ಸಬ್ಜೆಕ್ಟ್‌ಗಳ ವಿಷಯವಾಗಿ, ಬ್ರಿಟಿಷ್ ಇಂಡಿಯಾ ಸೀಮೆಗಳಲ್ಲಿ ಪ್ರೆಸಿಡೆನ್ಸಿ ಟೌನ್‌ಗಳ ಹೊರಗೆ "ಜಸ್ಟಿಸ್ ಆಫ್ ದಿ ಪೀಸ್" ಅಲ್ಲದ ಮೇಜಿಸ್ಟ್ರೇಟರು ಮತ್ತು ಪೊಲೀಸ ಆಫಿಸರರು ಯಾವ ಅಧಿಕಾರವನ್ನು ಚಲಾಯಿಸುತ್ತಾರೆಯೋ ಅದೇ ಅಧಿಕಾರವನ್ನು ಮೈಸೂರು ಸೀಮೆಯಲ್ಲಿರತಕ್ಕ ಮ್ಯಾಜಿಸ್ಟ್ರೇಟರು ಮತ್ತು ಪೊಲೀಸ ಆಫಿಸರರು ಚಲಾಯಿಸಬಹುದೆಂದು ಇಂಡಿಯಾ ಗವರ್ನಮೆಂಟನವರು ಅಪ್ಪಣೆ ಮಾಡಿರುತ್ತಾರೆ.

ಕಳೆದ ಸಂವತ್ಸರದಲ್ಲಿ ನಮೂದ ಮಾಡಿದ್ದ ರೆವಿನ್ಯೂ ಕೋಡಿನ ಮಸವಿದೆಯನ್ನು ಸಂಪೂರ್ಣವಾಗಿ ಪರಿಷ್ಕರಿಸಿ ಬ್ರಿಟಿಷ್ ರೆಸಿಡೆಂಟ್ ಸಾಹೆಬರವರಲ್ಲಿಗೆ ಈಚೆಗೆ ರವಾನಿಸಿರುತ್ತೆ. ಈ ಕೋಡಿನ ಪ್ರಕಾರ ಜಾರೀಗೆ ಬರಬೇಕಾದ ರೂಲ್ಸ್‌ಗಳ ಮಸವಿದೆಯೂ ತಯಾರಾಗಿ ಈಗ ಆಲೋಚನೆಯಲ್ಲಿರುತ್ತೆ.

ಲೋಕಲ್ ಬೋರ್ಡ್ ರೆಗ್ಯುಲೇಷನನ್ನು ಆಫಿಷಿಯೇಟಿಂಗ್ ರೆಸಿಡೆಂಟರಾಗಿದ್ದ ಮ. ಗರ್ಡ್‌ಸ್ಟನ್ ಸಾಹೆಬರು ತಮ್ಮ ಸೀಲ್‌ಡಾಕ್ ಯಾದಿ ಯೊಡನೆ ಇಂಡಿಯಾ ಗವರ್ನಮೆಂಟಿಗೆ ಕಳುಹಿಸಿದ್ದದ್ದು ವಾಪಸು ಬಂದಿರುತ್ತೆ. ಅದು ಈಗ ಚರ್ಚೆಯಲ್ಲಿರುತ್ತೆ.

ಬೆಂಗಳೂರು ಟೌನ್ "ಹ್ಯಾಕ್ನಿ ಕ್ಯಾರೆಜಸ್" ಯಾನೆ ಬಾಡಿಗೆ ಗಾಡಿಗಳಸಂಬಂಧವಾದ ಇನ್ನೊಂದು ರೆಗ್ಯುಲೇಷನಿನ ಮಸವಿದೆಯನ್ನು ಇಂಡಿಯಾ ಗವರ್ನಮೆಂಟನವರ ಮಂಜೂರಾತಿಬಗ್ಯೆ ರವಾನಿಸಿ ಇರುತ್ತೆ.

ಮೈಸೂರುಸೀಮೆಯಲ್ಲಿ ಜಾರೀಯಲ್ಲಿರುವ ಎಲ್ಲಾ ಕಾನೂನುಗಳನ್ನೂ ಕ್ರೋಢೀಕರಿಸಿ ಶುದ್ಧಪಡಿಸತಕ್ಕಬಗ್ಯೆ (ಮೈಸೂರು ಲಾ ಅಮೆಂಡ್‌ಮೆಂಟ್ ರೆಗ್ಯುಲೇಷನ್) ಎಂಬ ಕಾನೂನಿನ ಮಸವಿದೆಯು ತಯಾರಾಗಿ ಈಗ ಚರ್ಚೆಯಲ್ಲಿದೆ. ರಾಜ್ಯ ಸುಪುರ್ದಾಗುವದಕ್ಕೆ ಪೂರ್ವ ಆಗಿಂದಾಗ್ಯೆ ಸೀಮೆಯಲ್ಲಿ ಜಾರೀಗೆಬಂದಿದ್ದ ಬ್ರಿಟಿಷ್ ಕಾನೂನುಗಳಲ್ಲಿ ಈಗಿನ ಸ್ಥಿತಿಗೆ ಅನುಕೂಲವಾಗಿರುವ ರೀತಿ ಅಲ್ಲಲ್ಲಿ ಕೆಲವು ಮಾತುಗಳನ್ನು ಈ ರೆಗ್ಯುಲೇಷನ್ ಮೂಲಕ ತಿದ್ದುಪಡಿ ಮಾಡಿರುತ್ತೆ.

"ಕಂಪನಿಗಳು, ಬಂದೀಖಾನೆಗಳು, ಕೈದಿಗಳ ಸಾಕ್ಷ್ಯ, ಮ್ಯುನಿಸಿಪಾಲಿಟಿಗಳ ಆಡಳಿತ, ಫಾರೆಸ್ಟ್‌ಗಳ ಆಡಳಿತ" ಈ ವಿಷಯಗಳಿಗೆ ಸಂಬಂಧಪಟ್ಟ ಕಾನೂನುಗಳ ಮಸವಿದೆಗಳು ಈಗ ಆಲೋಚನೆಯಲ್ಲಿರುತ್ತೆ.

ಅಂಚೆ.—ಕಳೆದ ಸಂವತ್ಸರದ ಸಭೆಯಲ್ಲಿ ನಮ್ಮ ಅಂಚೆ ಇಲಾಖೆಯ ವಿಷಯವಾಗಿ ಇಂಡಿಯಾ ಪೋಸ್ಟ್ ಆಫೀಸ ಡೈರೆಕ್ಟರ್ ಜನರಲ್‌ರವರು ಮಾಡಿದ್ದ ಎರಡು ಸವಾಲ್‌ಗಳನ್ನು ತಮ್ಮ ಆಲೋಚನೆಬಗ್ಯೆ ತಿಳಿಸಿದ್ದೆವಷ್ಟೆ. ಅವು ಯಾವವೆಂದರೆ.—೧ನೇದು, ಮೈಸೂರು ಸೀಮೆಯ ಅಂಚೆ ಇಲಾಖೆ ಆಡಳಿತವನ್ನು ಸಂಪೂರ್ಣವಾಗಿ ಬ್ರಿಟಿಷ್ ಪೋಸ್ಟಲ್ ಇಲಾಖೆಯವರು ವಹಿಸಿಕೊಂಡು ಎಲ್ಲಾ ವಿಷಯಗಳಲ್ಲಿಯೂ ಮೈಸೂರು ಸೀಮೆಯನ್ನು ಬ್ರಿಟಿಷ್ ದೇಶದಂತೆಯೇ ಆಚರಿಸತಕ್ಕದ್ದು. ೨ನೇದು, ಮೈಸೂರು ಗವರ್ನಮೆಂಟನವರು ಬ್ರಿಟಿಷ್ ಸೀಮೆಯಲ್ಲಿ ಜಾರೀಯಲ್ಲಿರುವ ಎಲ್ಲಾ ರೂಲ್ಸ್‌ಗಳನ್ನೂ ಮತ್ತು ಹಾಸಲ್ ದರಗಳನ್ನೂ ಜಾರೀಯಲ್ಲಿ ತಂದು (ಮೈಸೂರು) ಯೆಂಬ ಮಾತು ಛಾಪಿಸಲ್ಪಟ್ಟರತಕ್ಕ ಬ್ರಿಟಿಷ್ ಪೋಸ್ಟೇಜ್ ಸ್ಟ್ಯಾಂಪುಗಳನ್ನು ಉಪಯೋಗಿಸತಕ್ಕದ್ದು; ಶಿವಾಯಿ ಬ್ರಿಟಿಷ್ ಸೀಮೆಯಲ್ಲಿ ಜಾರೀಯಲ್ಲಿರುವ ಮಣಿ ಆರ್ಡರ್, ಇನ್ಷೂರೆನ್ಸ್, ವ್ಯಾಲ್ಯೂ ಪೇಯೇಬಲ್ ಪಾರ್ಸೆಲ್ ವಗೈರೆ ಇತರ ಏರ್ಪಾಡುಗಳನ್ನು ನಮ್ಮಸೀಮೆಯಲ್ಲೂ ಜಾರೀಯಲ್ಲಿಡುವದು ಸರ್ಕಾರಿಯಾಗಲಿ ಸಾಹುಕಾರಿಯಾಗಲಿ ಒಳದೇಶದಬಾಬತು ಹಾಸಲ್‌ಸಂದಿರುವ ಡಪೋಬಸ್ತುಲಕೋಟೆಗಳಿಗೂ ಈಸೀಮೆಯಿಂದ ಬ್ರಿಟಿಷ್ ದೇಶಕ್ಕೆ ಹೋಗತಕ್ಕದ್ದಕ್ಕಾಗಲಿ ಅಲ್ಲಿಂದ ಈದೇಶಕ್ಕೆ ಬರತಕ್ಕದ್ದಕ್ಕಾಗಲಿ ಪುನಃಹಾಸಲ್‌ವಸೂಲ್ ಮಾಡಕೂಡದೆಂಬುವದು. ಈ ವಿಷಯದಲ್ಲಿ ಒಂದುವೇಳೆ ಸರ್ಕಾರಕ್ಕೆ ನಷ್ಟವಾದಾಗ್ಯೂ ಅಂಚೆ ಇಲಾಖೆಯನ್ನು ದರ್ಬಾರಿನವರಸುಪರ್ದಿನಲ್ಲೇ ಇಟ್ಟುಕೊಳ್ಳಬೇಕೆಂದು ತಾವೆಲ್ಲರೂ ಐಕಮತ್ಯವಾಗಿ ಅಭಿಪ್ರಾಯ ಪಟ್ಟದ್ದರಿಂದ ಈ ಇಲಾಖೆಯನ್ನು ಬ್ರಿಟಿಷ್ ಇಂಪೀರಿಯಲ್ ಪೋಸ್ಟಲ್ ಇಲಾಖೆಯವರ ಸುಪರ್ದಿಗೆ ಕೊಡುವದು ಯುಕ್ತವಾಗಿ ಕಾಣಿಸುವದಿಲ್ಲವೆಂದೂನ್ನೂ; ಮೇಲೆಕಂಡ ೨ನೇ ಸವಾಲಿಗೆ ಒಪ್ಪಿಕೊಂಡು ಬ್ರಿಟಿಷ್‌ದೇಶದ ಎಲ್ಲಾ ರೂಲ್ಸ್‌ಗಳನ್ನೂ ಇಲ್ಲಿ ಜಾರಿಯಲ್ಲಿ ತಂದು ಉಭಯ ಸರ್ಕಾರಗಳಲ್ಲಿಯೂ ಪರಸ್ಪರ ಸಮಾನಾಚರಣೆಗೆ ಸಮ್ಮತರಾಗಿದೇವೆಂದೂನ್ನೂ ರೆಸಿಡೆಂಟ್ ಸಾಹೆಬರವರಿಗೆ ತಿಳಿಸಿದ್ದಕ್ಕೆ ೨ನೇ ಸವಾಲಿನ ಷರತ್ತುಗಳು ಜಾರೀಯಲ್ಲಿರುವ ಇತರ ಕೆಲವು ನೇಟಿವ್ ರಾಜ್ಯಗಳಲ್ಲಿ ಕೆಲವು ಭಾಗಗಳಲ್ಲಿ ಕೆಲಸಗಳಿಗೆ ಅನನುಕೂಲ ಸಂಭವಿಸುತಲಿರುವದರಿಂದ ಈ ಸಂಗತಿಯಲ್ಲಿ ಹೆಚ್ಚಾದ ಅನುಭವವು ಆಗುವವರಿಗೆ ಈ ಏರ್ಪಾಡನ್ನು ಇತರ ರಾಜ್ಯಗಳಿಗೆ ಜಾರೀಯಲ್ಲಿತರುವದಕ್ಕಾಗುವದಿಲ್ಲವೆಂದು ಜವಾಬ್ ಅಪ್ಪಣೆ ಕೊಡಿಸಿರುತ್ತಾರೆ. ಆದ್ದರಿಂದ ಈ ವಿಷಯವು ಪ್ರಸ್ತುತಅಮಾನತಿನಲ್ಲಿರತಕ್ಕದ್ದಾಗಿದೆ.

ಶ್ರೀಮನ್ಮಹಾರಾಜ ರಾಜಾಸಾಹೆಬ್‌ಬಹದ್ದರವರು ರಾಜ್ಯದಆಳ್ವಿಕೆಯನ್ನು ವಹಿಸಿದ ಈಚೆಗೆ ಮೊದಲನೆ ದಫಾ ಕಳೆದ ಸಂವತ್ಸರದಲ್ಲಿ ತಾಲ್ಲೂಕ ಜಾತಿನಮೇಲೆ ಚಿತ್ತೈಸಿ, ವ್ಯವಸಾಯ, ಹವಾ, ಜನಗಳ ನಡತೆ, ಪದ್ಧತಿ, ಇವುಗಳಲ್ಲಿ ಸಂಸ್ಥಾನದ ಇತರ ಭಾಗಗಳಿಗೆ ವಿಲಕ್ಷಣವಾಗಿ ಮನೋಹರವಾಗಿರುವ ಪಶ್ಚಿಮದಿಕ್ಕಿನ ಡಿಸ್ಟ್ರಿಕ್ಟ್‌ಗಳನ್ನು ಖುದ್ದು ಪರಾಂಬರಿಕೆ ಮಾಡೋಣಾಯಿತು. ಮತ್ತು ಸಾವಧಾನದಿಂದ ಅನೇಕ ಸ್ಥಳಗಳಲ್ಲಿ ಸಂಚಾರ ಮಾಡಿ ತಮ್ಮ ಪ್ರಜೆಗಳ ಸ್ವಂತ ಗ್ರಾಮಗಳಲ್ಲಿ ಅವರನ್ನು ಪರಾಂಬರಿಸಿದ್ದರಿಂದ ಶ್ರೀಮನ್ಮಹಾರಾಜರವರಿಗೆ ದೇಶದ ಸ್ಥಿತಿಯು ವಿಶೇಷವಾಗಿ ಮನವರಿಕೆಗೆ ಬರಲು ಕಾರಣವಾಯಿತು. ಸವಾರಿ ಚಿತ್ತೈಸಿದ್ದವೇಳೆ ಸಮಸ್ತ ಪ್ರಜೆಗಳು ತೋರಿಸಿದ ರಾಜಭಕ್ತಿ ಮತ್ತು ವಿಶ್ವಾಸದ ಜ್ಞಾಪಕವು ಶ್ರೀಮನ್ಮಹಾರಾಜರವರ ಮನದಲ್ಲಿ ನೆಲೆಗೊಂಡಿದೆ ಎಂಬುದ ಅಂಶವನ್ನು, ಸಂಸ್ಥಾನದ ಎಲ್ಲಾ ಕಡೆಗಳ ಪ್ರಜಾಪ್ರತಿನಿಧಿಗಳು ಸಭೆ ಸೇರಿರುವ ಈ ಸಮಯದಲ್ಲಿ ತಮಗೆ ತಿಳಿಯಪಡಿಸಬೇಕೆಂದು ಶ್ರೀಮನ್ಮಹಾರಾಜರವರು ಆಜ್ಞಾಪಿಸಿರುವದಲ್ಲದೆ ಆಪ್ರಾಂತ್ಯ ಸಂಚರಿಸಿದಾಗ ನಿಮ್ಮಗಳ ಕೊರತೆ ಕೋರಿಕೆಗಳು ವಿದಿತವಾಗಿ ನಿಮ್ಮಗಳ ಕ್ಷೇಮಾಭಿವೃದ್ಧಿಗೋಸ್ಕರ ಆಗಬೇಕಾಗಿರುವ ಕಾರ್ಯಗಳನ್ನು ನೆರವೇರಿಸುವ ಭಾಗದಲ್ಲಿ ಸಕಲ ಸಾಹಸವನ್ನು ಮಾಡುವರಾಗಿದಾರೆಂದು ತಾವುಗಳು ದೃಢವಾಗಿ ತಿಳಿದು ಇರತಕ್ಕದ್ದೆಂದು ತಮಗೆ ತಿಳಿಸುವಂತೆಯೂ ಶ್ರೀಮನ್ಮಹಾರಾಜರವರು ಅಪ್ಪಣೆ ಕೊಟ್ಟಿರುತ್ತಾರೆ.

[illegible] MYSORE POLICE.—ತುಮಕೂರು ಡಿಸ್ಟ್ರಿಕ್ಟಿನಲ್ಲಿ ಇದರ [illegible] ವಿಚಿತ್ರವಾದ ಒಂದುಮೊಕದ್ದಮೆಯು ನಡೆದು ವರ್ತಮಾನವಾಗಿರುವಂತೆ ಅಲ್ಲಿನ ಬಾತಮೀದಾರನೊಬ್ಬನು ಮುಂಬೈ ಹವ್ಯಕ ಸುಬೋಧಪತ್ರಿಕೆಗೆ ಬರೆದಿರುತ್ತಾನಾಗಿ ಅದನ್ನು ಜನಗಳ ತಿಳುವಳಿಕೆಬಗ್ಗೆ ಇದರಡಿ ಪ್ರಕಟಿಸುವೆವು:

ಈಗ ೪_೧೦ ದಿವಸದಹಿಂದೆ ತುಮಕೂರಿನ ಸಮೀಪದ ಒಂದುಹಳ್ಳಿಯಲ್ಲಿ ಒಬ್ಬ ಗೃಹಸ್ಥನು ತನ್ನಹೆಂಡತಿಯು ತವರಮನೆಗೆಹೋಗಿ ಬಹಳ ದಿವಸಗಳಾದಕಾರಣ ಕರಕೊಂಡು ಬರಬೇಕೆಂದು ಮಾವನಮನೆಗೆಹೋಗಿ ಹೆಂಡತಿಯನ್ನು ಕಳುಹ ಹೇಳಲು ಅವರು ಇನ್ನೂ ಎರಡುದಿನದಮೇಲೆ ಕರಕೊಂಡು ಹೋಗುಅಂದವಕ್ಕೆ ಸಿಟ್ಟುಮಾಡಿಕೊಂಡು ಹಾಗೇ ತಿರುಗಿ ಮನೆಗೆ ಬರಲಿಕ್ಕೆ ಹೊರಟನು. ಇದನ್ನುನೋಡಿ ಅವನಹೆಂಡತಿಯು ತಾನೂ ಹೋಗುತ್ತೇನೆಂತ ೧೪ ವರುಷದಪ್ರಾಯದ ಗಂಡುಶಿಶುವನ್ನು ಎತ್ತಿಕೊಂಡು ಗಂಡನಹಿಂದೆ ಹೊರಟಳು. ಆ ಗಂಡನು ಕೋಪಾಯಮಾನನಾದ್ದರಿಂದ ಹೆಂಡತಿ ಬಂದಳೋ ಇಲ್ಲವೊಯೆಂತ ತಿರುಗಿನೋಡಲೇಯಿಲ್ಲ. ಮುಂದೆ ನಡೆದನು. ಇವಳು ಹಿಂದಿನಿಂದ ಹುಡುಗನ ಕರಕೊಂಡು ಅವನಷ್ಟು ನಡಿಯಲಾಗದಕಾರಣ ಹಿಂದೆಹಿಂದೆಬಿದ್ದು ೧। ಮೈಲು ಅಂತರಕ್ಕೆ ನಿಂತಳು. ಇವಳ ತವರಮನೆಯಿಂದ ಸುಮಾರು ೪ ಮೈಲಿನಲ್ಲಿ ಹಾದಿಯಮೇಲೆ ಒಂದು ಪೋಲೀಸಸ್ಟೇಷನಿದ್ದು ಅಲ್ಲಿಗೆ ಬರುವದರೊಳಗೆ ಮೊಬ್ಬಾಯಿತು, ಆಗ ಇವಳು ಬರುವದನ್ನುನೋಡಿ ಆ ಠಾಣೆಯ ಶಿಪಾಯರು ಅಮ್ಮಾ ಈ ಸಾಯಂಕಾಲದಹೊತ್ತು ಒಬ್ಬರೇ ಎಲ್ಲಿಹೋಗುತ್ತೀರಿ ಯೆಂದುಕೇಳಲು ಅವಳು ತನ್ನ ಎಜಮಾನರು ಮುಂದೆ ಮನೆಗೆ ಹೋದರು, ನಾನೂ ಹೋಗುತ್ತೇನೆಯೆಂದುಹೇಳಲು ಈ ರಾತ್ರಿಯಲ್ಲಿ ನೀವು ಹೋಗಕೂಡದು. ಇಲ್ಲಿ ತುಡುಗರಬಾಧೆ ಬಹಳವಾದ್ದರಿಂದ ಇಲ್ಲೇ ಸ್ಟೇಷನಿನಲ್ಲಿ ಜಾಗಾಕೊಡುತ್ತೇವೆ. ಮಲಗಿಕೊಂಡು ಬೆಳಗ್ಗೆಯೆದ್ದು ನೀವು ನಿಮ್ಮಮನೆಗೆ ಹೋಗಬಹುದುಯೆಂತ (ಅವಳ ಮತ್ತು ಮಗುವಿನ ಮೈಮೇಲಿನ ಭಂಗಾರದಡಾಗೀನೆಗಳ ಆಶೆಯಿಂದ ಕಪಟಹೃದಯರಾಗಿ) ಹೇಳಿ ಮುಂದೆ ಹೋಗಲಿಕ್ಕೆ ಅಟಕಾಯಿಸಿ ಅಲ್ಲೇ ಮಲಗಿಸಿದರು. ಇವಳು ಮಲಗಿಕೊಂಡರೂ ಗಂಡನು ಸಿಟ್ಟುಮಾಡಿಕೊಂಡು ಬಿಟ್ಟುಹೋದ ಕಾರಣದಿಂದಲೂ, ಸ್ಟೇಷನಿನಲ್ಲಿ ಒಬ್ಬಳೇ ಚಿಕ್ಕಹುಡುಗನಸಮೇತ ಡಾಗೀನೆಗಳನ್ನಿಟ್ಟುಕೊಂಡು ಮಲಗಿರುವಕಾರಣದಿಂದಲೂ ಅವಳಿಗೆ ನಿದ್ರೆಬಾರದಿದ್ದರೂ ಸುಮ್ಮನೆ ನಿದ್ರೆಮಾಡಿ ಮಲಗಿಕೊಂಡಳು. ಸುಮಾರು ೨ ಘಂಟೆರಾತ್ರಿಯ ಸಮಯ ಶಿಪಾಯರೆಲ್ಲರೂ ಎಚ್ಚತ್ತು ಇವಳನ್ನೂ ಮಗುವನ್ನೂ ಹತಮಾಡಿ ಡಾಗಿನೆಗಳನ್ನೂ ಅಪಹರಿಸಬೇಕೆಂದು ತಮ್ಮ ತಮ್ಮೊಳಗೆ ಗುಪ್ತಮಾತುಗಳನ್ನಾಡುವದು ಇವಳ ಕಿವಿಗೆಬೀಳಿ ಮನದೊಳಗೆ ಬಹಳಅಂಜಿಕೊಂಡು ಇದಕ್ಕೆ ಇನ್ನುಉಪಾಯವೇನೆಸಬೇಕಾಯಿತೆಂದು ಆಲೋಚಿಸಿ ತನ್ನ ಮತ್ತು ಶಿಶುವಿನ ಡಾಗೀನೆಗಳನ್ನೆಲ್ಲ ತೆಗದು ತನ್ನಕುಪಸದೊಳಗೆ ಕಟ್ಟಿ ತನಗೆ ಹೊರಗೆಹೋಗಬೇಕೆಂದು ಹೇಳಿ ಶಿಶುವನ್ನು ಅಲ್ಲೇಮಲಗಿಸಿ ಒಬ್ಬ ಶಿಪಾಯಿಯನ್ನು ಸಂಗಡ ಕರೆದುಕೊಂಡುಒಂದು ಫರ್ಲಾಂಗದೂರವಿರುವ ನೀರಿನಸಮೀಪ ಹೋಗಿರುವಲ್ಲಿ ಆ ಶಿಪಾಯಿಯು ಇವಳನ್ನುನೋಡಿ ಅಮ್ಮಾ ನೀವುಬರುತ್ತ ಡಾಗೀನೆ ಇಟ್ಟುಕೊಂಡು ಬಂದಿದ್ದೀರಿ ಈಗ ಇರುವದಿಲ್ಲ ಏನುಮಾಡಿದಿರೆಂದು ಕೇಳಲು ನಿಮ್ಮಸ್ಟೇಷನಿನೊಳಗೆ ಕಟ್ಟಿ ಗೂಟಕ್ಕೆ ಸಿಕ್ಕಿಸಿದ್ದೇನೆಯೆನ್ನಲು, ಸ್ಟೇಷನಿನಲ್ಲಿರುವ ಶಿಪಾಯಿಯರು ತನಗೆ ಸೂನ್ನೆಸುತ್ತಾರೆಂಬ ಸಂಶಯದಿಂದ ಅಮ್ಮಾ ಬೇಗಬನ್ನಿರೆಂದು ಹೇಳಿಬಿಟ್ಟು ತಾನು ಸ್ಟೇಷನಿಗೆ ಓಡಿಬಂದು ಅಲ್ಲಿಯವರು ಇವನು ಸಹ ಇಟ್ಟಿರುವ ಡಾಗೀನೆಗಳನ್ನೆಲ್ಲ ತೆಗದುಕೊಂಡು ಸಂತೋಷದಿಂದ ಒಳಗೆಕೂತುಕೊಂಡಿದ್ದರು. ಇವಳು ಹೊರಗೆನಿಂದಬರುತ್ತ ತನ್ನ ಡಾಗಿನೆಯೆಲ್ಲ ತೆಗದುಕೊಂಡರು, ಜೀವವನ್ನಾದರೂ ಹ್ಯಾಗೆ ಕಾದುಕೊಳ್ಳಬೇಕಾಯಿತೆಂದು ಯೋಚಿಸುತ್ತಬಂದು ಸ್ಟೇಷನ್ ಹತ್ತಿರ ನಿಂತು ನೋಡಲು ಆಸ್ಟೇಷನಿಗೆ ಹೊರಗೆಬೀಳತಕ್ಕಬಾಗಲು ಬಂದೇಯಿರುವದನ್ನುನೋಡಿ ಧೈರ್ಯದಿಂದಬಂದು ಅವಳೇಬಾಗಲುತೆರೆದು ಹೊರಗೆನಿಂದ ಚಿಲಕಹಾಕಿ ಬಾಗಿಲಲ್ಲೇ ಹೊರಗೆಕುಳಿತುಕೊಂಡಳು. ಇದನ್ನುನೋಡಿ ಶಿಪಾಯಿಯರು ಕದವನ್ನುತೆರೆಲಿಕ್ಕೂ ಮುರಿಯಲಿಕ್ಕೂ ನಾನಾ ಉಪಾಯಗಳನ್ನುಮಾಡಲು ಅವೆಲ್ಲ ನಿಷ್ಪ್ರಯೋಜನವಾಗಿ ಇವಳನ್ನು ನಾನಾವಿಧದಿಂದ ಹೆದರಿಸಿದರೂ ನಿನ್ನಮಗುವಿನಕುತ್ತಿಗೆ ಮುರಿಯುತ್ತೇವೆಂದು ಭಯಹುಟ್ಟಿಸಿದಾಗ್ಯೂ ಇವಳು ಬಾಗಿಲ ತೆರಿಯದಿರಲು, ಆಗ ಕ್ರೂರಕರ್ಮಿಗಳು ಆ ಶಿಶುವಿನ ಕೈಕಡಿದು ಕಿಟಕಿಯಿಂದ ಹೊರಗೆಬಿಸಾಡಿದರು. ಇದನ್ನುನೋಡಿ ಅವಳ ಮನದೊಳಗೆ ಮಹಾದುಃಖಉಂಟಾದರೂ ಕೂಡಾ ಶಿಶುವಿನಸಂಗಡ ತಾನೂ ಸಾಯಬೇಕೆಂಬ ನಿಶ್ಚಯದಿಂದಧೈರ್ಯತಾಳಿ ಬಾಗಿಲುಮಾತ್ರ ತೆರಿಯಲಿಲ್ಲ. ಅಷ್ಟರೊಳಗೆ ಸುಮಾರು ಬೆಳಗಿನಝಾವ ಅರ್ಧಕಳೆಯಲು ಅಷ್ಟರಲ್ಲಿ ಸರಕೀಟಗೆಹೊರಟ ಮೈಸೂರು ಮಾಜೀ ದಿವಾನ್ ಪೂರ್ಣಯ್ಯನವರ ಮೊಮ್ಮಕ್ಕಳಾದ ಡೆಪ್ಯುಟಿಕಮಿಷನರ್ ಮ|| ರಾ|| ಕೃಷ್ಣಮೂರ್ತಿಗಳು ತಮ್ಮ ಪರಿವಾರಸಮೇತ ಗಾಡಿಗಳಮೇಲೆ ಬರುವವರು ಅದೇಸ್ಟೇಷನ್ಮಾರ್ಗವಾಗಿ ಬರಲು ಸ್ಟೇಷನ್ಮುಂದೆ ಕೂತಿರುವ ಸ್ತ್ರೀಯಳನ್ನು ವಿಚಾರಿಸುವನಿಮಿತ್ತ ಗಾಡಿಯಿಂದ ಇಳಿಯಲು ಆಸ್ತ್ರೀಯಳು ಇವರಮುಂದೆ ಮಾರ್ಗದಲ್ಲಿ ಅಡ್ಡಬಿದ್ದು ನಡೆದ ಸಂಗತಿಯನ್ನೆಲ್ಲ ಅರಿಕೆಮಾಡಿಕೊಳ್ಳಲು ಸ್ಟೇಷನ್ಬಾಗಲು ತೆಗಿಯುವದರೊಳಗೆ ೬ಮಂದಿ ಶಿಪಾಯಿಯರೂ ಇವಳ ಡಾಗೀನೆಗಳೆಲ್ಲನೂ ಕೂಡಾ ಶಿಕ್ಕಿದವು. ಆಗ ಅವರೆಲ್ಲರನ್ನು ಕೈದುಮಾಡಿಕೊಂಡು ಆಸ್ತ್ರೀಯಳಿಗೆ ತಮ್ಮ ಗಾಡಿಯೊಳಗೆ ಒಂದುಗಾಡಿಯನ್ನು ತೆರವುಮಾಡಿಕೊಟ್ಟು ಅದರೊಳಗೆಕೂಡಿಸಿ ಸಂಗಡ ಮನುಷ್ಯನನ್ನುಕೊಟ್ಟು ಅವಳ ತವರುಮನೆಗೆ ಕಳುಹಿಸಿಕೊಟ್ಟು ತಾವು ಸದರೀ ಶಿಪಾಯಿಯರನ್ನೂ ಮೃತಹೊಂದಿದ ಶಿಶುವಿನಶವವನ್ನೂ ತೆಗಿಸಿಕೊಂಡು ತುಮಕೂರಿಗೆಹೋದರು. ಈಗ ಆಕೇಸ್ಯು ಸೆಷನ್ಜಡ್ಜಿಯರಲ್ಲಿ ನಡೆಯುತಲಿದೆ. (ಗದ್ದೆ ತಿನ್ನಬಾರದೆಂತ ಬೇಲಿಕಟ್ಟಿದರೆ ಬೇಲಿಎದ್ದು ಗದ್ದೆತಿಂದುತಾಯಿತಲ್ಲವೆ.)

SUMMARY OF NEWS.
ವೃತ್ತಾಂತ ಸಂಗ್ರಹವು.

Sir M. E. Grant Duff.—ಮದರಾಸ್ ಗವರ್ನರಾದ ಸರ್. ಎಂ. ಇ. ಗ್ರಾಂಟ ಡಫ್ ಸಾಹೆಬರವರು, ಬರುವ ಡಿಸಂಬರ್ ೧ನೇ ತಾರೀಖಿನಲ್ಲಿ ಹೊರಡುವದಾಗಿರುವ ಮೇಯಿಲ್ ಸ್ಟೀಮರ್ನಲ್ಲಿ ಸ್ವದೇಶಕ್ಕೆ ಪ್ರಯಾಣವಾಗುವವರಾಗಿದಾರೆ.

Mr. D. E. S. White.—ಸರ್ಕಾರ್ ನೌಕರಿಯ ವಿಷಯದಲ್ಲಿ ಯೇರ್ಪಟ್ಟಿರುವ ಸಮಾಜದೊಳು ಮೆ|| ವೈಟ ಯೆಂಬವರನ್ನು ಒಬ್ಬ ಮೆಂಬರಾಗಿ ಮೊಕರರ್ಮಾಡುವಂತೆ ವೈಸರಾಯ್ ಸಾಹೆಬರವರು ಅವರಿಗೆ ತಿಳಿಸಲು ಅವರು ಅದನ್ನು ಕೇವಲ ಕೃತಜ್ಞತೆಯೊಡನೆ ಅಂಗೀಕರಿಸಿರುತ್ತಾರೆ.

A pension to the family of the late Dewan.—ತಿರುವಾಂಕೂರು ಸಂಸ್ಥಾನದ ಸಾಬಕ ದಿವಾನರಾದ ಮೆ. ನನ್ನುಪಿಳ್ಳೆಯವರ ಕುಟುಂಬಕ್ಕೆ ಸದರೀ ಸಂಸ್ಥಾನದ ಮಹಾರಾಜರವರು ಮಾಹೆಯಾನಾ ೧೫೦ ರೂಪಾಯಿಗಳ ಪೆನ್ಷನ್ ಕೊಡತಕ್ಕದ್ದೆಂದು ಹುಕುಂ ದಯಪಾಲಿಸಿ ಇರುತ್ತಾರೆ.—ಹಿಂದು.

A rumour.—ತಿರುವಾಂಕೂರು ಮಹಾರಾಜರವರು ತಮ್ಮ ಪರಿವಾರದೊಡನೆ ಕಾಶಿ, ಕಲ್ಕತ್ತಾ ಮೊದಲಾದ ಪ್ರದೇಶಗಳಿಗೆ ಸಂಚಾರಾರ್ಥ ಈ ತಿಂಗಳ ಕಡೇಭಾಗದಲ್ಲಿ ಪ್ರಯಾಣವಾಗುವವರಾಗಿದಾರೆಂಬ ಪ್ರವಾದವುಂಟಾಗಿದೆ, ಪರಂತು ಈ ವಿಷಯದಲ್ಲಿ ಖಂಡಿತವಾದ ವರ್ತಮಾನ ತಿಳಿಯಬರಲಿಲ್ಲವು.—ವೆ. ಸ್ಟಾರ್.

Exodus to the Hills.—ಗವರ್ನಮೆಂಟ ನೌಕರರು ಬೇಸಿಗೆಯಬಗ್ಗೆ ನೀಲಗಿರಿಗೆ ಹೋಗಿ ವಾಸಮಾಡುವ ಕಾಲದಲ್ಲಿ ಅವರಿಗೆ ಹಿಡಿಯುವ ಖರ್ಚಿನಲ್ಲಿ ನೇಕಡಾ ೩೦ರೂ|| ಮೇರೆ ಕಮ್ಮಿ ಮಾಡುವಂತೆ ಹುಕುಂ ಹುಟ್ಟಿರುತಿದೆ. ಆಯಾ ಸೆಕ್ರೆಟರಿಗಳ ಇಲಾಖೆಯಲ್ಲಿ ಯೆಷ್ಟುಮಂದಿ ಹೋಗತಕ್ಕದ್ದು ಮತ್ತು ಯೆಷ್ಟುಕಾಲ ಅಲ್ಲಿ ವಾಸವಾಗಿರತಕ್ಕದ್ದೆಂಬ ವಿಷಯದಲ್ಲಿ ಹುಕುಂ ನಿರೀಕ್ಷಿಸಲ್ಪಟ್ಟಿದೆ.—ಹಿಂದು.

The Mahajana Sabha Conference.—ಮದರಾಸ್ ಮಹಾಜನ ಸಭೆಯವರು ಈಸಲ ತಮ್ಮ ಸಾಂವತ್ಸರಿಕ ಸಭೆಯನ್ನು ತಪ್ಪಿಸಿ ಮುಂದಿನಸಂವತ್ಸರಕ್ಕೆ ಇಟ್ಟುಕೊಳ್ಳಬೇಕೆಂದು ನಿರ್ಣಯಿಸಿರುತ್ತಾರೆ, ಯಾತಕ್ಕೆಂದರೆ, ಬರುವ ಡಿಸಂಬರ್ ೨೭,೨೮, ಮತ್ತು ೩೦ನೇ ತಾರೀಖುಗಳಲ್ಲಿ ಕಲ್ಕತ್ತೆಯೊಳು ಇಂಡ್ಯದೇಶದ ನ್ಯಾಷನಲ್ ಕಾಂಗ್ರಸ್ ಯೆಂಬ ಪ್ರಬಲ ಸಮಾಜ ಸೇರುತಿದೆಯಾಗಿ ಪ್ರಮುಖರಾದವರನೇಕರು ಅದಕ್ಕೆ ಹೋಗಬೇಕಾಗಿರುವದು.

The Agent and Manager, Madras Railway.—ಮದರಾಸ್ ರೈಯಿಲ್ವೆ ಏಜಂಟ ವ ಮ್ಯಾನೇಜರಾದ ಮೆ. ಸಾಂಡರ್ಸಯವರು ಕೆಲವುಕಾಲದಮೊದಲು ರಜಾಮೇಲೆ ಸ್ವದೇಶಕ್ಕೆ ಹೋಗಿರುತ್ತಾರೆಯಷ್ಟೆ, ಸದರೀಯವರು ಈ ತಿಂಗಳ ೭ನೇ ತಾರೀಖಿನದಿನ ವಾಪಸ ಬರುವದಾಗಿ ನಿರೀಕ್ಷಿಸಲ್ಪಟ್ಟಿದೆ. ಅವರು ಬಂದು ತಮ್ಮ ಕೆಲಸವನ್ನು ವಹಿಸಿದಮೇಲೆ ಅವರ ಸ್ಥಾನದಲ್ಲಿ ಬದಲೀ ನೋಡುತಲಿದ್ದ ಮೆ. ರಾಬರ್ಟಸನ್ಯವರು ತಮ್ಮ ಕಾಯಂ ಕೆಲಸಕ್ಕೆ, ಅಂದರೆ ಚೀಫ ಇಂಜಿನಿಯರ್ ಕೆಲಸಕ್ಕೆ ವಾಪಸ ಹೋಗುವರು.

A widow marriage at Tinnevelli.—ನವೀನ ನಾಗರಿಕಾಭಿಲಾಷಿಯಾದ ಒಬ್ಬಾತನು ಬರೆಯುತ್ತಾನೇನನೆ:—ಕಳೆದ ತಿಂಗಳ ೩೦ನೇ ತಾರೀಖಿನಲ್ಲಿ ಧನಿಕನಾದ ಒಬ್ಬನ ಕುಟುಂಬಕ್ಕೆ ಸೇರಿದ ಹನ್ನೊಂದುವರುಷಗಳ ವಯಸ್ಸುಳ್ಳ ಒಬ್ಬ ಬಾಲ ವಿತಂತುವಿಗೆ ನಿನ್ನೆಯದಿನ ಅಗಸರಪೇಟೆಯಲ್ಲಿ ವಿವಾಹ ನಡೆಯಿತು. ಮದವಣಿಗನೂ ಮದವಣಗಿತ್ತಿಯೂ ಚಪಕಲನ್ ಬ್ರಾಹ್ಮಣರೆಂಬ ವೈಷ್ಣವರು. ಈ ವಿವಾಹದಲ್ಲಿ ವಿಶೇಷವೇನಂದರೆ, ಮದವಣಿಗನಿಗೆ ಮೊದಲನೆಯ ಹೆಂಡತಿಯೊಬ್ಬಳಿದ್ದಾಳೆ. ಇಬ್ಬರೂ ಉಪಪತ್ತಿಯುಳ್ಳವರು, ಅನ್ಯರ ಸಹಾಯಾಪೇಕ್ಷಿಗಳಲ್ಲವು.

ಇಲ್ಲಿನ ಎಲ್ಲ ವಾರ್ಷಿಕೋತ್ಸವಗಳ ಪೈಕಿ ಬಹು ಶ್ರೇಷ್ಠವಾದ್ದೆಂದು ತೋರುವ ಈ ದೀಪಾವಳಿ ಮಹೋತ್ಸವವು ಕಳೆದ ಮಂಗಳವಾರದಿಂದ ಶುಕ್ರವಾರದವರಿಗೆ ಬಹು ರಮಣೀಯವಾಗಿ ಪ್ರತ್ಯಕ್ಷವಾಯಿತು. ಈ ಉತ್ಸವದ ವಿಷಯವನ್ನು ಎಷ್ಟರಮಟ್ಟಿಗೆ ವರ್ಣಿಸಿದರೂ ಅದೆಲ್ಲ ಬಹು ಸ್ವಲ್ಪವೇ ಆಗಿರುವದು. ಮಂಗಳವಾರ ರಾತ್ರಿ ಆದಷ್ಟು ಜನರ ಗೌಜು, ಕಳೆದ ೪ ವರುಷಗಳಿಂದ ಆಗಿರಲಿಲ್ಲವೆಂದು ಹೇಳುತ್ತಾರೆ. ಇದೀ ಪಟ್ಟಣದ ಚಚ್ಚೌಕ ೧೨ ದರವಾಜಿ ವಿಸ್ತೀರ್ಣವೆಲ್ಲ ಬರೇ ದೀಪಮಯವಾಗಿಯೇ ಕಾಣುತಿತ್ತು. ಪೋಲೀಸಿನವರ ದಾಬದಬ್ಬಿಗೆ ಲಕ್ಷಾವಧಿ ಸಾರೋಟುಗಳೆಲ್ಲ ಅತಿ ಮಂದಗಮನದಿಂದ ಪುರವನ್ನು ಶೋಭಿಸಿದವು. ಇಷ್ಟಾದರೂ ಎಷ್ಟೋ ಗಾಡಿಕಾರರು ಪೋಲೀಸಿನವರ ದೊಣ್ಣೆಪೆಟ್ಟನ್ನು ತಿನ್ನದೆ ಇರಲಿಲ್ಲ. ಒಟ್ಟಿಗೆ ಈ [illegible] ಸಂಬಂಧ ಪಟಾಕಿ ಮೊದಲಾದ ಮದ್ದಿನ ಸಾಮಾನುಗಳು ೬,೦೦,೦೦೦ ರೂಪಾಯಿಗಳದು ಖರ್ಚಾದವು.

Rising in Afghanistan.—ಭಾವಲ್ಪುರ, ಅಕ್ಟೋಬರ್ ೩೦.—ಅಫಘಾನಿಸ್ಥಾನ ದೇಶದಲ್ಲಿನ ಘಿಲ್ಜಿಯೆಂಬ ಜಾತಿಯವರಪೈಕಿ ಒಂದು ಗುಂಪಿನವರು ಅಮೀರರವರಮೇಲೆ ಕಲಹಿಸುವರೆಂದು ವರ್ತಮಾನ ಬಂದಿರುತಿದೆ. ಸದರೀ ಕಲಹವು ಗಿಜ್ನಿಯ ಆಫಘಾನ ಪ್ರದೇಶಗಳಲ್ಲಿ ಸದ್ಯಕ್ಕೆ ಮಿತವಾಗಿರುವಂತೆ ಕಾಣುತಿದೆ. ಅಲ್ಲಿ ಅಮೀರರವರ ರಿಜಮೆಂಟುಗಳಪೈಕಿ ಯೊಂದು ಖಜಾನೇ ಪತ್ತರಿಯಮೇಲೆ ಹೋಗುತ್ತಿರುವಲ್ಲಿ ಸದರೀಕಲಹಪ್ರವೃತ್ತರು ಬಂದು ಮೇಲೆಬಿದ್ದು ಅವರನ್ನೆಲ್ಲ ಚದರಿಸಿ ಬಿಟ್ಟರು. ಅಫಘಾನಿಸ್ಥಾನ ದೇಶದ ಉತ್ತರ ಭಾಗದಲ್ಲಿ ಅಮೀರರವರಿಗೆ ಬಹಳ ತೊಂದರೆಯುಂಟುಮಾಡುತಲಿದ್ದ ಸಾದುಯೆಂಬ ಕಳ್ಳನು ಕಲಹಿಗಳ ಗುಂಪಿಗೆ ಸೇರಿರುತ್ತಾನೆ, ಸದರೀ ಜನಗಳಾದರೋ, ಪ್ರಸಿದ್ಧನಾದ ಮುಲ್ಲಾ ಮುಷ್ಕಿ ಆಲಂ ಯೆಂಬವನ ಮಕ್ಕಳನ್ನು ತಮ್ಮ ಗುಂಪಿಗೆ ತಲೆವರಾಗಿ ಮಾಡಿಕೊಂಡಿರುತ್ತಾರೆ. ಇದು ಶಿವಾಯಿ ಹಜಾರಾ ಯೆಂಬ ಜನಗಳು ಘಿಲ್ಜಿ ಜನಗಳ ಗುಂಪಿಗೆ ಸೇರಿರುವದಾಗಿ ಹೇಳಕೊಳ್ಳುತ್ತಾರೆ. ಹಿಂದು ಕಾಲದಲ್ಲಾದರೂ ಅಮೀರರವರು ಘಿಲ್ಜಿ ಜನಗಳ ಪ್ರೀತಿ ಗೌರವಗಳಿಗೆ ವಿಷಯರಾಗದೆ ಹೋದರು. ಅವರ ಗುಂಪಿಗೆ ಮುಖಂಡರಾದ ಇಬ್ಬರನ್ನು ಯೆರಡುವರುಷಗಳಹಿಂದೆ ಅಮೀರರವರು ಕೊಂದುಹಾಕಿದರು. ಈಗಿನ ಕಲಹಕ್ಕೆ ಅತ್ಯಧಿಕವಾದ ತೆರಿಗೆಮೊಕರರ್ ಮಾಡಿದ್ದೇ ಕಾರಣವಾಗಿರುತಿದೆ.

ಅಲಹಾಬಾದ್, ೩೧ನೇ ಅಕ್ಟೋಬರ್, ೮೬.—ಕೇವಲಪ್ರಬಲವಾದಘಿಲ್ಜಿಜಾತಿಯವರಪೈಕಿ ಮುಖ್ಯವಾದ ಯೆರಡು ಗುಂಪಿನವರು, ಇಪ್ಪತ್ತುನಾಲ್ಕು ಸಾವಿರ ಕುಟುಂಬದವರಿವಿಗೆ, ಅಮೀರರವರು ಮೊಕರರ್ಮಾಡಿದ ಜಾಸ್ತೀ ಕಂದಾಯದಬಗ್ಗೆ ಕೋಪಗೊಂಡು ಆಯುಧಪಾಣಿಗಳಾಗಿ ಅಮೀರರವರನ್ನು ತಿರಸ್ಕಾರ ಮಾಡಿಬಿಟ್ಟರು. ಗಿಜ್ನಿಯ ದಕ್ಷಿಣ ಭಾಗದಲ್ಲಿರುವ ಹಜಾರ ಜನಗಳಪೈಕಿ ಅನೇಕರು ಅವರ ಗುಂಪಿಗೆ ಸೇರಿರುತ್ತಾರೆ. ಅಮೀರರವರ ಖಜಾನೆಯೊಡನೆ ಉಸ್ತುವಾರೀ ಹೋಗುತಲಿದ್ದ ರಿಜಿಮೆಂಟಿನಮೇಲೆ ಬಿದ್ದು ಹೊಡೆದು ಅವರನ್ನೆಲ್ಲ ಓಡಿಸಿಬಿಟ್ಟು ಹಣವನ್ನೆಲ್ಲ ಸ್ವಾಧೀನಪಡಿಸಿಕೊಂಡರು. ಗಿಜ್ನಿ ಗ್ಯಾರಿಸನ್ ಸೇನೆಯು ಸಹಾಯಾರ್ಥ ಅಮೀರರವರು ನಾಲ್ಕು ರಿಜಿಮೆಂಟ ಸೇನೆ ಮತ್ತು ಕೆಲವು ತೋಪುಗಳು ಕಳುಹಿಸಿರುತ್ತಾರೆ. ಕಲಹಪೀಡಿತವಾದ ಪ್ರದೇಶಗಳ ಬಂದೋಬಸ್ತಿಯಬಗ್ಗೆ ಇನ್ನು ಸೇನೆಗಳನ್ನು ಕಳುಹಿಸುವರು.—ಇಂಡ್ಯ ಟೈಂಸ್.

ಮುಂಬೈಯಲ್ಲಿ ಸಪೇತಗಲ್ಲಿ ಎಂಬದೊಂದು ರಂಡೆಯರಪೇಟೆ ಇರುತದೆಂದು ಎಲ್ಲರಿಗೂ ಕೇಳಿಯಾದರೂ ಗೊತ್ತಿರಬಹುದು; ಈ ಗಲ್ಲಿಯಲ್ಲಿ ಫಸ್ಟ ಯುರೋಪಿಯನ್ ಮತ್ತು ಎಹೂದೀ ಮುಂತಾದ ಕೆಂಪುವರ್ಣದ ಸೂಳೆಯರು ಇರುತ್ತಾರೆ. ಇವರು ದಾರಿಯಲ್ಲಿ ಹೋಗುವ ಶೃಂಗಾರ ಪುರುಷರನ್ನು ನೋಡಿದರೆ (ಜಾನೀ ಕಮ್ಇನ್ ಕಮ್ಇನ್) ಎಂತ ಕರೆಯುವದುಂಟು. ಕಳೆದ ಬುಧವಾರ ಇಲ್ಲಿಗೆ ವಿದ್ಯಾ ಗೌರವವನ್ನು ಪಡೆಯಲಿಕ್ಕೆ ಬಂದಿರುವ ಕೆಲವು ಕರ್ಣಾಟಕಸ್ಥ ವಿದ್ಯಾರ್ಥಿಗಳು ಈ ಗಲ್ಲಿಯಲ್ಲಿ ಹೋಗಿ ಅವರಪೈಕಿ ಒಬ್ಬನು ಅವಳೊಡನೆ ೨ ರೂಪಾಯಿ ಪಣವನ್ನು ನಿಷ್ಕರ್ಷೆ ಮಾಡಿ ಒಳಗೆ ಹೋಗಲು ಬಾಕಿಯವರು ಅಲ್ಲಿಯೇ ಅತ್ತಿತ್ತ ಸುಳಿದಾಡುತ್ತಿದ್ದರು. ಅಷ್ಟರಲ್ಲಿ ಒಳಗೆ ಹೋದವನು ಕೈಗಾಣಿಕೆಯನ್ನು ರೀತಿಯಂತೆ ಕೊಟ್ಟು ಅಪ್ರವರ್ತನಾಗಿ ತನ್ನ ಮನೋಭಿಲಷಿತ ಕಾಮನ ಪೂರ್ತಿಯ ಆನಂದಕಾಲ ಸಮೀಪಿಸಿತೆಂಬ ಆನಂದದೊಡನೆ ಸವಾರನಾಗಲು, ಆಗ ಅವಳು ನಿನ್ನಲ್ಲಿ ರೋಗವಿರುವದೆಂಬ ನೆವನವನ್ನು ಹೇಳಿ ([illegible]) ಎಂತ ಇವನನ್ನು ಹೊರಗೆ ಹಾಕಿದಳು. ಕಡೆಗೆ ತನ್ನ ಮಿತ್ರರನ್ನು ಕರೆದುಕೊಂಡು ತಾನು ಕೊಟ್ಟ ಹಣವನ್ನು ತಿರಿಗಿ ಕೊಡೆಂದು ಕೇಳಲು ಆಗ ಅವಳು ಒಳಗೆ ಸಿದ್ಧವಿರುತ್ತಿದ್ದ ಪ್ರೋಕ್ಷಣೆ ಪಾತ್ರೋದಕ ಸ್ನಾನವನ್ನು ಗೈಸಿ ಕಳುಹಿಸಿದಳು, ಆದ್ರವಸ್ತ್ರಶೋಭಿತರಾದ ಈ ವಿದ್ಯಾರ್ಥಿಗಳು ಗುರ್ತಿನವರನ್ನು ಕಂಡ ಕೂಡಲೇ ಸಂದು ಮೂಲೆಯೊಳಗಿನ ನೆರಳಿನ ಆಧಾರದಿಂದ ಹ್ಯಾಗಾದರೂ ಬಿಡಾರ ಸೇರಿಕೊಂಡ ಕಾರಣ ತಮ್ಮ ಮಾನವನ್ನು ಕಾಯಿದುಕೊಂಡರೆಂದು ತಿಳಿದದ್ದು ಯೋಗ್ಯವೇ ಸರಿ, ಆದರೆ ವಿದ್ಯಾರ್ಥಿಗಳೆಂಬದರಿಂದ ಅವಳು ಮಾಡಿದ್ದು ಉಚಿತವೇ ಆಯಿತೆಂದು ಹೇಳಬಹುದು, ಇಲ್ಲವಾದರೆ ಎಷ್ಟುಮಂದಿ ಡಾಕ್ಟರುಗಳ ಕಾಲನ್ನು ಹಿಡಿಯಬೇಕಾಗುತಿತ್ತೋ? ಹ. ಸು.

BANGALORE:—Printed and published for the Proprietor, at the KARNATIC Press.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಜಾನುವಿನಿತನ್ಯ ವ್ಯಸನಗವಾರ್ತ್ತ ಕರ್ಣ್ಣಾಟಕಪ್ರಕಾಶಿಕಾ ... ॥ ... ಸುಮಂದಂ

Vol. XIII] BANGALORE—MONDAY NOVEMBER 15, 1886 [No 46.

ಸಂಪುಟ ೧೩.] ಬೆಂಗಳೂರು — ಸನ್ ೧೮೮೬ನೇ ಇಸವಿ ನವಂಬರ್ ೧೫ನೇ ತಾರೀಖ್ ಸೋಮವಾರ. [ಸಂಚಿಕೆ ೪೬.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ... [illegible] ... ೧೨—೦—೦

ಇಂಗ್ಲಿಷ್ ... [illegible] ... ೬—೦—೦

ಕನ್ನಡ ... [illegible]

... [illegible] ... —೦—೦

... [illegible] ... —೦—೦

[illegible]

ಪ್ರಕಟನದ ಅಂದಾಜ್

... [illegible] ... ೦—೨—

... [illegible] ... ೦—೧—

NOTICE TO SUBSCRIBERS

[illegible]

೧ [illegible]

೨ [illegible]

೩ [illegible]

೪ [illegible]

NOTICE.

VAIDYASARA SANGRAHA

Price including Postage Rs 5 0-0

ವೈದ್ಯಸಾರ ಸಂಗ್ರಹ

ಈ ಗ್ರಂಥ ... [illegible] ...

... [illegible] ...

... ರೂ|| ೫—೦—೦

... ೦—೬—೦

... [illegible] ... ಬೆಂಗಳೂರು

ನೋಟೀಸ್

ಮೈಸೂರು ದೇಶೀಯ ಪರೀಕ್ಷೆ

ಅಂಕಗಣಿತದ ಕೀ.

[illegible] ... ರೂ|| ೧ ... [illegible]

... [illegible] ... ಬೆಂಗಳೂರು ... [illegible]

... [illegible]

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA

MONDAY, NOVEMBER 15 1886

೧೮೮೬ನೇ ನವಂಬರ್ ೧೫ನೇ ತಾ|| ಸೋಮವಾರ.

AN APPEAL

ಈ ಸಂಸ್ಥಾನದ ಪ್ರಕೃತ ರಾಜ್ಯತಂತ್ರಕ್ರಮಕ್ಕೆ ಮಹಿಮಾ ... ಗಿ ... ರುವ ಪ್ರಜಾ ಪ್ರತಿನಿಧಿ ಸಮಾಜದ ಮುಖ್ಯರಲ್ಲೊ ... ತಮ್ಮ ... ದಾರಿಯಲ್ಲಿ ಶ್ರೀ ... ಮಹಾರಾಜರವರಿಗೆ ಒಂದು ವಿಜ್ಞಾಪನಪತ್ರಿಕೆಯನ್ನು ಕಳುಹಿ ಅದರ ಪ್ರತಿಯನ್ನು ಪ್ರಕಟನೆಯ ಬಗ್ಗೆ ಬಳ್ಳಾರಿ ಈವನಿಂಗ್ ಮೆಯಿಲ್ ಪತ್ರಿಕೆಗೆ ಕಳುಹಿಸಿರುತ್ತಾರೆ. ಆ ಅರ್ಜಿಯು ಗತ ಬುಧವಾರದ ಸದರೀ ಮೆಯಿಲ್ ಪತ್ರಿಕೆಯಲ್ಲಿ ಪ್ರಕಟವಾಗಿದ್ದದನ್ನು ಆರ್ಜಿಯಾಗಿ ನೋಡಿದೆವು. ಶ್ರೀಮನ್ಮಹಾರಾಜರವರ ಅವಧಾನವನ್ನು ಬೇಡಿ ಪದಾರು ಮುಖ್ಯ ವಿಷಯಗಳು ಮೇಲೆಕಂಡ ಅರ್ಜಿಯಲ್ಲಿ ನಮೂದಿಸಲ್ಪಟ್ಟಿರುತ್ತವೆ. ಅವುಗಳ ಪ್ರಕಾರ ... ರೆಪ್ರೆಸೆಂಟೇಟಿವ್ ... ಮಾಡಲ್ಪಟ್ಟ ... ರೂಲ್ಸುಗಳ ಮೇಲೆ ... ನ ನಿಯಾಮಕ ... ಪ್ರತಿನಿಧಿಗಳು ತಿಳಿಸಿದ ... ದಿವಾನರವರು ... ಏಕೆ ... ಮೆಂಬರ್‌ಗಳ ಅಭಿಪ್ರಾಯಗಳಿಗೆ ... ಪ್ರತ್ಯಕ್ಷವಾಗಿಯೂ ... ಉಂಟುಮಾಡಿ ಉತ್ತರ ಹೇಳದ್ದಾಗ್ಯೂ ... ಉಪೇಕ್ಷಿಸಲ್ಪಟ್ಟ ... ರುತ್ತಿದೆ. ಈ ದೇಶದಲ್ಲಿ ಜ್ಯುಡಿಷಿಯಲ್ ... ನೊಳಗೂ ಸಿವಿಲ್ ... ವಹಾರಗಳಲ್ಲಿಯೂ ... ಕೋರ್ಟುಗಳೇರ್ಪಟ್ಟ ಪ್ರಮಾದವಶಾತ್ ಒಬ್ಬರು ಮಾಡುವ ಫೈಸಲನ್ನು ಯುಕ್ತಾಯುಕ್ತ ವಿಚಾರಪೂರ್ವಕ ವಿಮರ್ಶಿಸುವುದಕ್ಕೆ ಮೇಲ್ಪಟ್ಟ ಉನ್ನತಾಧಿಕಾರಿಗಳ ನೇಮಕವಿರುವಂತೆ ... ಆದಾಲತಿನಲ್ಲಿ ದಿವಾನರವರಿಗಿಂತ ಅನ್ಯರೊಬ್ಬರಿಲ್ಲದ್ದರಿಂದ ಅವರ ಆದರಸ್ಸುಗಳು ವಿಲಂಬವಾಗಿ ... ಲೂ, ಪ್ರಮಾದವಶದಿಂದಲಥವಾ ಅಜಾಗರೂಕತೆಯಿಂದ ವಿರುದ್ಧವಾಗಿ ದಿವಾನರು ಕೊಡುವ ಫೈಸಲಿನ ಮೇಲೆ ಅಪೀಲನ್ನು ಹಿಡಿಯದಕ್ಕವಕಾಶವಿಲ್ಲದ್ದರಿಂದ ... ಈಗ ಜನರಿಗಳಿಗುಂಟಾಗಿರುವ ಸಂಕಟವನ್ನು ಹೋಗಲಾಡಿಸಿ ಮಹಾರಾಜರವರೇ ಸ್ವತಂತ್ರರಾದ ಮಂತ್ರಾಲೋಚಕರಿರುವ ಕೌನ್ಸಿಲನ್ನು ಏರ್ಪಡಿಸುವಂತೆಯೂ ... ದಿವಾನರ ಮೇಲೆ ಬರುವ ... ಗಳನ್ನು ವಿಚಾರಿಸಿ ಪೈಸಲ್ ಮಾಡಬೇಕೆಂಬದು ಮೊದಲನೆಯ ಅಂಶವಾಗಿರುತ್ತದೆ. ಈ ಸಂಸ್ಥಾನದ ರೈಲ್ವೇ ಲೈನ್‌ಯು ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪೆನಿಯವರ ಸುಪರ್ದಿಗೆ ಸೇರಿದ ... ಮಹಾರಾಜಾ ಸರ್ಕಾರದ ಅನುಮತಿಯ ಮೇರೆ ಬೆಂಗಳೂರು ರೈಲ್ವೇ ವರ್ಕ್‌ಷಾಪಿನಲ್ಲಿ ವ್ಯವಸಾಯೋಪಯೋಗಿಗಳಾದ ಯಂತ್ರಾದಿ ಸಾಧನಗಳು ತಯಾರಾಗಿ ... ಕೊಡಲ್ಪಡುತ್ತಿದ್ದದ್ದು ಬಹಳ ಪ್ರಯೋಜನಕರವಾಗಿಯೂ, ... ಉಪಕಾರಕವಾಗಿಯೂ. ಸಂಸ್ಥಾನಕ್ಕೆ ಆದಾಯಕರವಾಗಿಯೂ ಇದ್ದದರಿಂದ ಅದನ್ನು ... ಕಂಪೆನಿಯವರು ಮೊಕೂಫ್ ಮಾಡಿದ್ದು ಯುಕ್ತವಲ್ಲವಾಗಿ ... ಜನರ ... ಕೆಲಸಗಳನ್ನು ಸಹ ಸದರೀ ವರ್ಕ್‌ಷಾಪಿನಲ್ಲಿ ... ಆಗಬೇಕೆಂಬದು ಎರಡನೆಯದಾಗಿರುತ್ತದೆ. ಸಾಬಕ್ ದಿವಾನ್ ಸಿ. ರಂಗಾಚಾರ್ಯರವರು ತರೀ ಜಮೀನುಗಳಿಗೆ ರಿಮಿಷನ್ ಕೊಡುವ ಪದ್ಧತಿಯನ್ನು ಜಾರಿಗೆ ತಂದದ್ದು ರೈತರಿಗೆ ಬಹಳ ಅನುಕೂಲವಾದದ್ದಾಗಿದ್ದು ಅದನ್ನು ಈಗಿನ ದಿವಾನರವರು, ಬೆಳೆಯಾದ ... ವರುಷಗಳ ಸರಾಸರಿ ... ರಿಮಿಷನ್ ... ಈಗ ತರೀ ಜಮೀನುಗಳಿಗೆ ರಿಮಿಷನ್ ಕೊಡಲ್ಪಡಲಾರದೆಂಬ ಬಲ್ಪದ ... ಮೇಲೆ ಸದರೀ ಕ್ರಮವನ್ನು ಮೊಕೂಫ್ ಮಾಡಿಸಿದರು. ಇದರಿಂದ ಈ ದೇಶದಲ್ಲಿ ಮಳೆ ಬೆಳೆಗಳು ಅನಿಯತಗಳಾಗಿ ... ನಿಯತವಾಗಿರುವ ... ಬಹು ನಷ್ಟವನ್ನನುಭವಿಸುವ ... ನಿರ್ಗತಿಕರಾಗಿ ದೇಶಭ್ರಷ್ಟರಾಗುವದು ಪ್ರತ್ಯಕ್ಷವಾಗಿರುವದರಿಂದ ಪೂರ್ವದ ರಿಮಿಷನ್ ಪದ್ಧತಿಯನ್ನೇ ಮರಳಿ ನಡೆಸಬೇಕೆಂಬದು ಮೂರನೆಯದಾಗಿರುತ್ತದೆ. ಕಂದಾಯದ ಬಿಸ್ತನ್ನು ಕಳಿಂದಕ್ಕೆ ಹೆಚ್ಚಿಸುವುದು ... ಪ್ರತಿ ಸಂವತ್ಸರದ ... ಇನ್ನಲ್ಲಿಯೂ ತಿಳಿಸ ... ಪಡಿಸಿಲ್ಲವಾಗಿ ಅದ್ಯಾಪಿ ಆ ವಿಷಯ ... ತವಿರುವದರಿಂದ ಅದನ್ನು ಈ ಸಲ ... ಪರ್ಯಾಲೋಚಿಸಿ ತೀರ್ಮಾನಿಸಬೇಕೆಂಬದು ನಾಲ್ಕನೆಯದಾಗಿರುತ್ತದೆ. ... ಗಳಲ್ಲಿ ಸರ್ವೇ ಆಧಾರಕ್ಕಿಂತ ಜಾಸ್ತಿಯಾಗಿ ಅನುಭವದಲ್ಲಿರುವ ಜಮೀನುಗಳಿಗೆ ಪ್ರತ್ಯೇಕ ಕಂದಾಯ ... ವಸೂಲ್ಮಾಡುವ ವಿಷಯ ಸಹ ಸರ್ಕಾರದವರ ಅವಧಾನಕ್ಕೆ ... ರಲಿಲ್ಲವು ಅದು ರೈತರಿಗೆ ನಿಷ್ಪ್ರಯೋಜಕವಾದುದು. ಈಗಲಾದರೂ ಸದರೀ ವಿಷಯವು ವ್ಯವಸ್ಥೆ ಮಾಡತಕ್ಕದ್ದಾಗಿರುತ್ತದೆ. ಹಾಗೆ ನಡದಿದ್ದರೆ ಇನಾಂದಾರರೆಲ್ಲರೂ ವ್ಯರ್ಥವಾಗಿ ... ಗಳಿಗೆ ಕಾರಣವಾಗಿರುತ್ತದೆಂಬದು ಐದನೆಯದಾಗಿರುತ್ತದೆ. ಸಂಸ್ಥಾನದ ಸಾಲ ತೀರಿಸುವ ಉದ್ದೇಶದಿಂದಲೂ, ಕ್ಷಾಮಕಾಲದಲ್ಲಿ ಪ್ರಜೆಗಳಿಗೆ ಸಹಾಯಮಾಡುವ ಉದ್ದೇಶದಿಂದಲೂ, ಸಾಬಕ್ ದಿವಾನ್ ಸಿ ರಂಗಾಚಾರ್ಯರವರು ಇಲಾಖೆಗಳನ್ನೆಲ್ಲ ತಗ್ಗಿಸಿ ಲವಾಜಮೆಯನ್ನು ಕಡಮೆಮಾಡಿ ತೆಹಬಂದಿಗೆ ಕೆಲವು ಮಟ್ಟಿಗೆ ತಂದಿದ್ದದನ್ನು ಪ್ರಕೃತ ದಿವಾನರವರು ಮರಳಿ ಅವುಗಳನ್ನೆಲ್ಲ ಜಾಸ್ತಿಮಾಡಿ ಮಿ ... ಯವರ ಮಬಾದೀ ... ಲತನ್ನನುಸರಿಸಿದರು. ... ಬಜೆಟ್ ... ರುವದರಿಂದ ಅದಂ ಹೆಚ್ಚಿಸಿ ಮಿ ರಂಗಾಚಾರ್ಯರವರ ಮಿತವ್ಯಯ ಕ್ರಮವನ್ನೇ ಮರಳಿ ನಡಿಗೊಳಿಸದರೆ ಅರ್ಥಪ್ರಯುಕ್ತವಾದ ಸರ್ಕಾರದವರ ತಗಾದೆಯು ನಿರ್ಭಾಗ್ಯರಾದ ರೈತರಿಗೆ ತಪ್ಪುವದೆಂಬದು ಆರನೆಯದು. ರೆವಿನ್ಯೂ ಕೋಡಿನಲ್ಲಿ ಕಡಿಮೆಯೆಂದು ಉಪಯೋಗಿಸಲ್ಪಟ್ಟಿರುವ ಶಬ್ದಾರ್ಥವನ್ನು ಲಪಿಚ್ಛನ್ನವಾಗಿ ಮೂವತ್ತು ಸಂವತ್ಸರಗಳಿಗೆ ಮೇಲ್ಪಟ್ಟು ಎತಬಿಡದೆ ಸಾಗುವಳೀ ಮಾಡತಕ್ಕವನೆ ವಿಷಯದಲ್ಲಿಯೇ ಉಪಯೋಗಿಸುವಂತೆ ಕೋಡಿನಲ್ಲಿ ಬದಲಾಯಿಸಬೇಕೆಂಬದು ಆಖೈರ್ ಪ್ರಾರ್ಥನೆಯಾಗಿರುತ್ತದೆ. ಇದಕ್ಕೆ ಶ್ರೀಮನ್ಮಹಾರಾಜರವರು ಅದ್ಯಾಪಿ ಜವಾಬ್ ಕೊಟ್ಟಂತೆ ತೋರಲಿಲ್ಲವು.

ಮೇಲೆಕಂಡ ಅರ್ಜಿಯಲ್ಲಿ ತಿಳಿಸಲ್ಪಟ್ಟ ಪ್ರತ್ಯಂತವು, ವಿಚಾರಾರ್ಹವಾಗಿರುವದರಿಂದ ಅದರ ಮೇಲಣ ನಮ್ಮ ಅಭಿಪ್ರಾಯವನ್ನು ಮತ್ತೊಂದು ಸಂದರ್ಭದಲ್ಲಿ ತಿಳಿಸುವೆವು.

Occasional Notes.

ನೈಮಿತ್ತಿಕವಿಷಯನ್ಯಾಸ

The Bellary Kistna Railway—ಬಳ್ಳಾರಿಯಿಂದ ಕೃಷ್ಣಾವರಿವಿಗೆ ರೈಯಿಲ್ ರಸ್ತೆ ಹಾಕದಕ್ಕ ಬಗ್ಗೆ ತಯಾರಾದ ೧೮೪ ಲಕ್ಷರೂಪಾಯಿಗಳ ಅಂದಾಜ್ ಪಟ್ಟಿಯನ್ನು ಇಂಡ್ಯ ಸ್ಟೇಟ್ ಸೆಕ್ರೆಟರಿಯವರು ಮಂಜೂರ್ಮಾಡಿರುತ್ತಾರೆ.

A dispute referred to arbitration—ಕಾಲಿಹಾಸಾ ಸಂಸ್ಥಾನದ ಅರಸರಿಗೂ ಅವರ ಸಹೋದರರಿಗೂ ಪ್ರಾಪ್ತವಾಗಿರುವ ಕಲಹವನ್ನು ವ್ಯವಸ್ಥೆಯ ಬಗ್ಗೆ ಗವರ್ನಮೆಂಟಿನವರು ಜೆಸ್ಟಿಸ್ ಬರ್ಡ್‌ವುಡ್ ಮತ್ತು ಕಾಟೀ ವಾಡಿದೇಶದ ಇಬ್ಬರು ನೇಟೀವ್ ಅರಸರುಗಳಿಗೆ ಒಪ್ಪಿಸಿ ಇರುತ್ತಾರೆ

Suppression of Ghilzai rising—ಘುಜ್ನಿ ಪ್ರಾಂತದಲ್ಲಿ ಘಿಲ್ಜೀ ಎಂಬ ಜಾತಿಯವರು ಅವಿಸಾರರ ಮೇಲೆ ಕಲಿಹಿಸುತಲಿರುವಂತೆ ಹಿಂದಿನ ವಾರದ ಪತ್ರಿಕೆ ... ತಿಳಿಸಿ ಇದ್ದದ ಪ್ಲೆಟಸದರೀ ಕಲಹವು ಈಗ ಸಂಪೂರ್ಣವಾಗಿ ಅಣಗಿಸಲ್ಪಟ್ಟಂತೆ ತಿಳಿಯ ಬರುತ್ತದೆ.

Presentation of a dress of honour—ಇಂದೂರ್ ಸಂಸ್ಥಾನದ ಸಾಬಕ್ ದಿವಾನರಾದ ಮೆಸಾನಾ ಮೊರೋಜಿ ಯೆಂಬವರು ತಮ್ಮ ಕೆಲಸವ ಬಿಟ್ಟು ಇಂದೂರಿನಿಂದ ಹೊರಡುವದಕ್ಕೆ ಮುಂಚಿತವಾಗಿ ಮಹಾರಾಜರವರು ಅವರಿಗೆ ಮರ್ಯಾದಾರ್ಥ ಅಪ್ಪಟ್ ತರಹ ಒಂದು ದುಸ್ತೂ, ೫೦೦೦ ರೂಪಾಯಿಗಳ ಇನಾಮೂ ಕೊಟ್ಟಿರುತ್ತಾರೆ

A recommendation—ಇಂಡ್ಯ ರಾಜ್ಯದ ಲವಾಜಮಾ ಕಮ್ಮಿ ಮಾಡುವ ಬಗ್ಗೆ ಯೇರ್

ಟ್ಟರುವ ಕಮ್ಮಿಟಿಯವರು ಪುನೇಯಲ್ಲಿ ಸೇರಿ ಮುಂಬೈ ಪ್ರಸಿಡೆನ್ಸಿಯೊಳಗಣ ವಿಶಿಷ್ಟ ಸ್ಕೂಲುಗಳನ್ನು ತೆಗದುಹಾಕಬೇಕೆಂದು ಶಿಪಾರಸ್ಸುಮಾಡಿರುತ್ತಾರೆ. ಡಖನ್ ಕಾಲೇಜನ್ನು ತೆಗದು ಹಾಕುವದನುಚಿತವೆಂದು ಗವರ್ನಮೆಂಟಿಗೆ ಅರ್ಜಿ ಬರೆದು ಕೊಳ್ಳಬೇಕೆಂಬ ಉದ್ದೇಶದೊಡನೆ ಪುನೆಯ ಸಾರ್ವಜನಿಕ ಸಭೆಯವರು *ಈಚೆಗೆ ಸಮಾಜ ಸೇರಿದ್ದರು.

Recognition of services.—ಅನೆಘೂನಿಸ್ತಾನದೇಶಕಕ್ಕೂ ರಷಿಯಾದೇಶಕ್ಕೂ ಸರಹದ್ದು ವ್ಯವಸ್ಥೆಯಬಗ್ಗೆ ಏರ್ಪಟ್ಟದ್ದ ಕಮ್ಮಿಷನ್‌ಸಂಗಡಹೋಗಿ ಮಾಡಿದ ಮೆಹನತ್ತಿನಬಗ್ಗೆ ರಿಸಾಲ್‌ದಾರ್ ಮೇಜರ್ ಮಹಮ್ಮದ್‌ಖಾನ್ ಎಂಬಾತನಿಗೆ, ಆತನ ಜೀವಮಾನಪರಿವಿಗೆ ಅನುಭವಿಸುವಂತೆ, ಸಾಲಿಯಾನಾ ೪೦೦ ರೂಪಾಯಿಗಳ ಹುಟ್ಟುವಳಿಯುಳ್ಳ ಜಹಗೀರೂ, ಅದೇಸಂದರ್ಭದಲ್ಲಿ ಮಹನ್ನತಿ ಮಾಡಿದ ಬಾಬಾಖಾನ್ ಎಂಬಾತನಿಗೆ ೨೦೦ ಎಕ್ರೆ ಬಂಜರ್ ಜಮೀನೂ ಇಂಡ್ಯ ಗವರ್ನಮೆಂಟಿನವರು ಕೊಡುವವರಾಗಿರುತ್ತಾರೆ.

Theft.—ಹೈದರಾಬಾದಿಗೆ ಸೇರಿದ ಗೋಲಕೊಂಡೆಯಲ್ಲಿರುವ ನಿಜಾಮರವರ ಅರಮನೆಯ ಕೊಠಡಿಗಳಪೈಕಿ ಯೊಂದರಲ್ಲಿ ಅವರೂ ಅವರ ಜನಾನಾ ಹೆಂಗಸರೂ ಧರಿಸಿಕೊಳ್ಳುವ ಅನರ್ಘ್ಯಗಳಾದ ಬಟ್ಟೆಗಳೂ ಮತ್ತು ಜವಾಹಿರ್ ಆಭರಣಗಳೂ ಪೆಟ್ಟಿಗೆಗಳಲ್ಲಿಡಲ್ಪಟ್ಟರುವವು. ನಿಜಾಮರವರು ಕೋಟೆಯಿಂದ ಹೊರಗೆ ಹೋಗುವ ಕಾಲಗಳಲ್ಲಿ ಸದರೀ ಪಾತ್ರೆಗಳ ಬಾಯಿಗಳಿಗೆ ಬಟ್ಟೆಹಾಕಿ ಮುಚ್ಚಿ ಹಗ್ಗಗಳಿಂದ ಬಿಗಿದು ಸೀಲ್ ಮಾಡಿ ಒಂದು ಕೊಟ್ಟಡಿಯಲ್ಲಿಟ್ಟು ಬೀಗ ಹಾಕಿಕೊಂಡು ಬರುವದು ವಾಡಿಕೆಯಾಗಿರುತಿದೆ. ಈಚೆಗೆ ಕಳ್ಳರು ಸದರೀ ಕೊಠಡಿಯ ಬೀಗ ಮುರಿದು ಒಳಗೆ ನುಗ್ಗಿ, ಅಲ್ಲಿಟ್ಟದ್ದ ಸುಮಾರು ಆರೇಳು ಲಕ್ಷ ರೂಪಾಯಿಗಳ ಕ್ರಯವಾಗುವಷ್ಟು ಜವಾಹಿರ್‌ಗಳನ್ನು ಕದ್ದು ಕೊಂಡು ಹೋದರೆಂದು ಅಲ್ಲಿನ ಪತ್ರಿಕೆಯೊಂದರ ಮೂಲಕ ತಿಳಿಯ ಬರುತದೆ.

LOCAL AND PROVINCIAL NEWS.

ಒಳದೇಶಮತ್ತು ತಾಲ್ಲೂಕುಗಳ ವೃತ್ತಾಂತಗಳು.

A sad catastrophe.—ಗತ ಮಂಗಳವಾರ ದದಿನರಾತ್ರಿಯ ಘೂಳಿ ಮಳೆಯಿಂದ ಊನ್ನೂರು ಅಕ್ಕಿಪೇಟೆಯಲ್ಲಿ ಒಂದುಮನೆ ಕವಿದು ಬಿದ್ದ ದರಿಂದ ಏಕಕಾಲದಲ್ಲಿ ಆರು ಜನ ಮೃತಪಟ್ಟಂತೆ ಕೇಳುತ್ತೇವೆ.

Mr. L. Ricketts.—ಆದಿತ್ಯವಾರದದಿನ ಮೈಸೂರಿಗೆ ಹೋಗಿದ್ದ ಪೊಲೀಸ್ ಮತ್ತು ಫೂರೆಸ್ಟ್ ಇನ್ಸ್‌ಪೆಕ್ಟರ್ ಜನರಲ್ಲರವರು ಗತ ಸೋಮವಾರದದಿನ ಇಲ್ಲಿಗೆ ವಾಪಸು ಬಂದರು. ಇವರು ಮೈಸೂರಿಗೆ ಹೋಗಲಿಕ್ಕೆ ಅಲ್ಲಿಯ ಪೊಲೀಸ್ ಬಂದೋಬಸ್ತಿನಬಗ್ಗೆ ಮಾಡಬೇಕಾದ ಏರ್ಪಾಡುಗಳನ್ನು ಕುರಿತು ದಿವಾನರೊಡನೆ ಆಲೋಚನೆ ಮಾಡಬೇಕಾದದ್ದೇ ಕಾರಣವಾಗಿರಬಹುದೆಂದು ಒಳದೇಶದ ಸ್ಪೆಕ್ಟೇಟರ್ ಪತ್ರಿಕೆಯು ಅನುಮಾನಿಸುತಿದೆ ಆದರೆ ಇಸವಾಗಿರುವದಕ್ಕೆ ಆದರಂತೆ ಏನೊಂದೂ ಅಧಿಕವಾಗಿ ತಿಳಿದಿಲ್ಲ.

The next University Examination.—ಈ ಸಂವತ್ಸರದ ಎಫ್ ಏ ಮತ್ತು ಎಂ. ಏ. ಪರೀಕ್ಷೆಗಳಿಗೆ ರೆವರೆಂಡ್ ಟಿ. ಸ್ಲೇಟರ್ ಎಂ. ಏ ಯವರು ಚರಿತ್ರ ಪರೀಕ್ಷಕರಾಗಿಯೂ, ಸೆಂಟ್ರಲ್ ಕಾಲೇಜ್ ಪ್ರಿನ್ಸಿಪಾಲರಾದ ಮೆ|| ಕೋಕ್ ಯವರು ಶಾಸ್ತ್ರ ಪರೀಕ್ಷಕರಾಗಿಯೂ, ಸೆಂಟ್ರಲ್ ಕಾಲೇಜ್ ಅಸಿಸ್ಟೆಂಟ್ ಪ್ರೊಫೆಸರ್ ಮೆ|| ಮೆಕೆಂಜಿಯವರು ನ್ಯಾಯಶಾಸ್ತ್ರ ಗಣಿತ ಶಾಸ್ತ್ರ ಪರೀಕ್ಷಕರಾಗಿಯೂ ನೇಮಕರಾಗಿ ಹಾಕಲ್ಪಟ್ಟರುವಂತೆ ತಿಳಿಯ ಬರುತಿದೆ. ಬರುವ ತಿಂಗಳ ೧೫ನೇ ತಾರೀಖಿನ ಮೊದಲು ಮೆಟ್ರಿಕ್ಯುಲೇಷನ್ ಮತ್ತು ಎಫ್ ಏ ಪರೀಕ್ಷೆಗಳು ನಡೆಯುವವು.

Dacoity.—ಈಗ್ಯೆ ಏಳೆಂಟು ತಿಂಗಳ ಹಿಂದೆ ಪಾವಗಡ ಪ್ರಾಂತದಲ್ಲಿ ನಡೆದ ದರೋಡೆ ಮೊಕದ್ದಮೆಯ ವಾರ್ತೆಯನ್ನೋದಿತು. ಮೆ|| ತುಮಕೂರು ಜಡ್ಜಿಯವರು ಆರು ಮಂದಿಗೆ ೭ ವರುಷಗಳು, ನಾಲ್ವರಿಗೆ ೧೦ ವರುಷಗಳು, ಈ ರೀತಿ ಋಣ ಜಮ ಸಜಾ ವಿಧಿಸಿದರು. ಅಪರಾಧಿಗಳು ದಂಡನೆಯ ವಿಷಯವಾಂ ಕೇಳಿ ಆಶ್ಚರ್ಯ ಪಟ್ಟರಂತೆ.

ಕಳೆದ ಆಗಸ್ಟ್ ತಿಂಗಳ ೧೦ನೇ ತಾರೀಖಿನಲ್ಲಿ ಕೆಸ್ಸಿಂಗ್ಟನ್ ಚೆನ್ನಪಟ್ಟಣಕ್ಕೆ ಮಧ್ಯೆ ದರೋಡೆ ನಡೆಸಿದರೆಂದು ಆರೋಪಿಸಲ್ಪಟ್ಟ ಹತ್ತುಮಂದಿಯೂ ನಿರಪರಾಧಿಗಳೆಂದು ಅಸ್ಸೆಸರುಗಳು ಅಭಿಪ್ರಾಯ ಪಟ್ಟದ್ದಾಗ್ಯೂ ಜಡ್ಜಿಯವರು ಭಿನ್ನಾಭಿಪ್ರಾಯದೊಡನೆ ಅವರ ಪೈಕಿ ಒಬ್ಬನಿಗೆ ಮಾತ್ರ ಮೆ|| ರಾಮಚಂದ್ರಯ್ಯನವರು ೭ ವರುಷಗಳ ಸಜಾ ವಿಧಿಸಿ ಮಿಕ್ಕವರನ್ನೆಲ್ಲ ಅಸ್ಸೆಸರ ಅಭಿಪ್ರಾಯವನ್ನಂಗೀಕರಿಸಿ ತಪ್ಸಿರ್ ಸಾಬೀತಾಗದ ಕಾರಣದ ಮೇಲೆ ಖುಲಾಸೆ ಮಾಡಿದರು.

The late rains.—ಗತ ಕುಜ ಬುಧವಾರಗಳ ತುಪಾನಿನವೆಸೆಯಿಂದ ಅಲ್ಲಿಯಲ್ಲಿ ರಾಗಿಪೈರುಗಳಿಗೆ ಬಹಳನಷ್ಟಗೆ ಅಂದರೆ ರೈತರು ಧಾನ್ಯದ ಲಾಭ್ಯವನ್ನು ನಿರೀಕ್ಷಿಸುವನಷ್ಟಗೆಲ್ಲಾ ಗ್ಯಾನುಂಟಾದಂತೆ ತಿಳಿಯಬರುತಿದೆ. ಈದೇಶದ ರೈತರು ಗದ್ದೆಯ ನೀರಿನಲ್ಲಿ ಮುಳುಗಿ ತೇಲುತ್ತಿಸ್ಸೆ ಬಾಧಪ್ರೇಕ್ಷನಾದವರಿಂದ ಅವರ ನಿರೀಕ್ಷಣೆ ಗಣನೀಯವಲ್ಲವು. ವರುತು ತುಗ್ಯೆ ೭ವರುಷಗಳಲ್ಲಿ ಈ ತಿಂಗಳೊಳು ಬಿದ್ದಮಳೆಯ ಪರಿಮಾಣವನ್ನು ತಾಳೆಹಾಕಿ ನೋಡಿದರೆ ಮಾಹೇ ಮಜಕೂರ್ ೧ ನೇ ತಾರೀಖ್ ಮೊದಲು ೧೦ ನೇ ತಾರೀಖ್ ವರೆಗೆ ಆದ ಮಳೆಯು ಅಧಿಕವಾದೆಂದರ್ಸುತಿದ, ಅದರಾ ವಿವರವೇ,

೧೮೭೯ನೇ ಇಸವಿಯಲ್ಲಿ ನವಂಬರ್ ೧ನೇ ತೂದಲು ೧೦ರ ವರೆಗೆ ಬೈದಾದ ವಾರವಲ್ಲಿ

೩೪ ಸೆಂಟಿ

೧೮೮೦	ಡಿಟೊ	೨ ಅಂಗುಲ ೩೪ ಸೆಂಟ್ಸ್
೧೮೮೧	ಡಿಟೊ	೪ ಅಂಗುಲ ೬೦ ಸೆಂಟ್ಸ್
೧೮೮೨	ಡಿಟೊ	೩ ಅಂಗುಲ ೭೦ ಸೆಂಟ್ಸ್
೧೮೮೪	ಡಿಟೊ	೧ ಅಂಗುಲ ೬೪ ಸೆಂಟ್ಸ್
೧೮೮೫	ಡಿಟೊ	೫೦ ಸೆಂಟಿಗಳು
೧೮೮೬	ಡಿಟೊ	೬ ಅಂಗುಲ ೩೦ ಸೆಂಟಿಗಳು

A new weekly Journal.—ಗತ ಸೋಮವಾರದ ನೊದಲು, ಪ್ರತಿ ಶನಿವಾರದಲ್ಲಿಯೂ, ವಿಜಯಧ್ವಜವೆಂಬ ಹೆಸರುಳ್ಳ ಒಂದು ಕನ್ನಡ ವೃತ್ತಾಂತ ಪತ್ರಿಕೆಯು ಬಳ್ಳಾರಿ ಕಾಲೇಜಿನಿಂದಲ್ಲಿ ಪ್ರಕಟಿಸಲ್ಪಡುತ್ತಿದೆಯಲ್ಲವೆ ಅದರ ಪ್ರಥಮ ಸಂಚಿಕೆಯೊಂದು ನಮ್ಮ ಪರಾಮರಿಕೆಯ ಬಗ್ಗೆ ಕಳುಹಿಸಲ್ಪಟ್ಟರು. ಅವು ನಾವು ಉತ್ಸಾಹದೊಡನೆ ಪರಿಗ್ರಹಿಸಿ ನೋಡಲು ಅದು ಯಾವ ವಿಧದಿಂದಲೂ ವಿಶೇಷ ಗೌರವವನ್ನು ನಮಗೆ ಪ್ರಂಯ ಮಾಡದೆ ತೋರಿತು. ದರುಕು ಅವರ ಚಾಳ್ಕೆಕೆಯು ಅವರ ಪರಿನಿವರ್ತಸಿ... ನುಡಿವರಿಂದ ಅದರರು ... ಸಾಮಾನ್ಯಳಾಗಿರುವ ಇವರ ಹೊಡಾಮೌಲ್ಯವು ಸಾಲೀಯಾನಾ ೨|| ರೂಪಾಯಿ. ಗಳೆದಿಲ್ಪಟ್ಟರುವದರಿಂದ ಬಡವರಿಗೆ ಬಹಳ ಪ್ರಯೋಜನ ವುಂಟಾದರೂ ರಸಸ್ವಕ ಅನವರೋತ್ಪಿಸಬಹುದಾದ ಪ್ರಯೋಜನವನ್ನು ಅದು ಸುದಿಯ ಸುವರಿಂದ ವಿಷಯಗಳು ಮಾತ್ರ ಸ್ವಲ್ಪ ಸುದೇಹಿಸಬೇಕಾಗಿದೆ ಈಗ ಪತ್ರಿಕಾ ನಿರ್ವಹಣ ಪ್ರವರ್ತಕರಾಗಿನೇರಿರುವರೆಲ್ಲರೂ, ಪ್ರಾಯೋಜ ದನಿಕರಾಗಿರುವಂಕೆ ತೋರುವದರಿಂದ ಅವರು ಪತ್ರಿಕಾ ಗೌರವ ಸಂಪಾದನೆಯೊಳು ಸೃಷ್ಟಿಯಿಟ್ಟು ಯಥೋಚಿತ ಕನ್ನಡಬಲ್ಲವರ ಸಹಾಯದ ಮೂಲಕ ಪತ್ರಿಕೆಯನ್ನು ಜರಿಗಿಸುವರಾದರೆ ಕೆಲವು ಮಟ್ಟಗೆ ಅವರ ಉದ್ದೇಶ ಪ್ರಯತ್ನಗಳು ಕೈಗೂಡಬಹುದು. ಜನಗಳು ಪ್ರಸಕ್ತ ಪತ್ರಿಕೆಯ ಗುಣ ದೋಷ ವಿಮರ್ಶ ಮಾಡದೆ ಹೋದಾಗ್ಯೂ ಪ್ರತಿಪಾಧಿಕರ ಪ್ರಯತ್ನಕ್ಕಾಗಿಯಾದರೂ ಅದು ಪರಿಗ್ರಹಿಸಿ ಸಾಧ್ಯವಾದಸಹಾಯ ಮಾಡುವ ... ಚಿರಕಾಲ ಅದು ಜೀವಿಸಿರುವಂತೆ ಮಾಡಬೇಕೆಂದು ಕೋರುವೆವಲ್ಲದೆ ಮುಂದೆ ಗ್ರಿಷ್ಮಬುತು ಸನ್ನಿಹಿತವಾಗಿರುವದರಿಂದ ಜಯ ಕಬ್ಬ ಪ್ರವರ್ತಕವಾದ ಧ್ವಜಪಟವು ಸೂರ್ಯಾತಪದಿಂದಾತಪ್ತವಾಗದಿರಬೇಕೆಂದು ಕೋರುವೆವು.

Programme of the Viceroy's stay at Bangalore.—ವೈಸರಾಯಿಯವರು ಬರುವತಿಂಗಳ ೨ನೇ ತಾರೀಖ್ ಗುರುವಾರದದಿನ ಸಾಯಂಕಾಲ ೫|| ಘಂಟೆಗೆ ಬೆಂಗಳೂರುದಂಡಿಗೆ ಸ್ಟೇಷನಿನಲ್ಲಿಳಿದು ಇಳಿದು ಅಲ್ಲಿಂದ ರೆಸಿಡೆನ್ಸಿಬಂಗ್ಲೆಗೆ ಹೋಗುವಾಗ್ಯೆ ಮಧ್ಯಮಾರ್ಗದಲ್ಲಿ ಸಿಟಿ ಮ್ಯುನಿಸಿಪಾಲಿಟಿಯವರಿಂದೊಪ್ಪಿಸಲ್ಪಡುವ ವಿಜ್ಞಾಪನಪತ್ರಿಕೆಯನ್ನು ಅಂಗೀಕರಿಸುವರು. ಆದಿನರಾತ್ರಿ ೮ಘಂಟೆಗೆ ದೊಡ್ಡಔತಣ ನಡೆಯುವದು. ಬಳಿಕ ೯|| ಘಂಟೆಗೆ ರೆಸಿಡೆನ್ಸಿ ಬಂಗ್ಲೆಯಲ್ಲಿ ದರ್ಬಾರಿರುವದು. ಡಿಸೆಂಬರ್ ತಾರೀಖ್ ಶುಕ್ರವಾರದದಿನ ಪ್ರಾತಃಕಾಲದಲ್ಲಿ ಭೋಜನಾನಂತರ ಪೆರೇಡ್ ಗ್ರೌಂಡಿನಲ್ಲಿ ನಡೆಯುತಕ್ಕಸೈನಿಕ ಕೌಶಲ್ಯಪ್ರದರ್ಶಕ ವಿನೋದ ವೀಕ್ಷಣಾನಂತರ ನ್ಯೂಯೋಹಾರ್ ವಗೈರೆ ಮಿಲಿಟರಿಸ್ಟೇಷನ್ನಲ್ಲಿನ ಮುಖ್ಯಪ್ರದೇಶಗಳಿಗೆ ಹೋಗುವರು. ಆದಿನಮಧ್ಯಾಹ್ನ ೪|| ಘಂಟೆಯತನಕ ವಿರಾಮ ಬಳಿಕ ಪೋಲೋಮ್ಯಾಚ್‌ನಾಗಿ ಕೋಲಾರಕ್ಕೆ ಮತ್ತು ಲಾಲ್‌ಬಾಗಿಗೆ ಹೋಗುವರು. ರಾತ್ರಿ ೮ ಘಂಟೆಗೆ ಭೋಜನಾನಂತರ ರೆಸಿಡೆನ್ಸಿಯಲ್ಲಿ ನರ್ತನ. ಡಿಸೆಂಬರ್ ೪ನೇ ತಾರೀಖ್ ಶನಿವಾರದಲ್ಲೆ ವಿರಾಮ. ಮಧ್ಯಾಹ್ನದಲ್ಲಿ ಫಲಹಾರಾನಂತರ ಲಾರೆನ್ಸ್‌ಗ್ಲಾರ ಸವಾರಿ ಮುಂತಾದವು ನಡೆಸುವರು. ಆ ರಾತ್ರಿ ೮ಘಂಟೆಗೆ ಭೋಜನಾನಂತರ ಸ್ಟೇಷನ್‌ರೈಲ್ವೆಯಲ್ಲಿ ತಿರುಚನಾಪಳ್ಳಿಗೆ ಪ್ರಯಾಣಮಾಡುವರು. ಈಗ ಸದ್ಯಃ ಅನುಮಾನಿಸಬಹುದಾದ್ದಗಳು ಮೇಲೆಕಂಡಂತೆ ವ್ಯವಸ್ಥೆಯಾಗಿದ್ದು ಪ್ರಾಯಶಃ ಅದು ಮುಂದೆ ಬದಲಾಯಿಸಬಹುದು ಬದಲಾಯಿಸಬಹುದೆಂದು ತೋರುತಿದೆ.

TELEGRAPHIC SUMMARY

ರಂತಿವೃತ್ತಾಂತ ಸಂಗ್ರಹವು.

ಲಂಡನ್, ೯ನೇ ನವಂಬರ್.—ಈಚೆಗೆ ಟರ್ಕಿಯವರಿಗೂ ಇಂಗ್ಲಾಂಡ್ ದೇಶದವರಿಗೂ ಯೊಂದು ಸುಳಿ ಇರುವಂತಹ ಸ್ನೇಹಸಂಬಂಧಕ್ಕೆ ಉಂಟಾಗಿದ್ದ ಕೊರತೆಯು ಸ್ವಲ್ಪ ಈಗ ಹಿಂದಕ್ಕಿಂದ ಅಧಿಕವಾಗಿವೆಂಬ ವುಂಟಾಗಿದೆ.

ಲಂಡನ್, ೮ನೇ ನವಂಬರ್.—ಪಾರ್ಲಿಮೆಂಟ್ ಸಮಾಜವು ಡಿಸೆಂಬರ್ ೫ನೇ ತಾರೀಖ್ ವರೆಗೆ ನಿಲ್ಲಿಸಲ್ಪಟ್ಟಿತು.

ಟಿಬರ್ನೆಸ್ಸೊ, ೧೦ನೇ ನವಂಬರ್.—ಬಲ್ಗೇರಿಯಾ ದೇಶದ ಅವಿಸ್ತಕ ವಿಷಯಬಗ್ಗೆ ಯಾ ನಾಯಕರು ... ಮೆ ರಾಜಪುತ್ರರಾದ ವಾಲ್ದಿಮಾರ್ ಯವರನ್ನು ಬಲ್ಗೇರಿಯ ಸಿಂಹಾಸನಕ್ಕೆ ಅರಸರಾಗಿ ಚುನಾಯಿಸಿಕೊಂಡರು.

ಲಂಡನ್, ೧೦ನೇ ನವಂಬರ್.—ಮದರಾಸ್ ಕಮಾಂಡರ್ ಇನ್‌ಚೀಫ್ ಜನರಲ್ ... ರಾಬರ್ಟ್ಸ್ ನೂತನ ಕಮಾಂಡರ್‌ ಇನ್‌ ಚೀಫ್ ಆದ ಬರ್ಮಾದೇಶಕ್ಕಾದ ಯವರು ಮುಂಬೈಗೆ ಬರುವುದನ್ನು ಕೆಲಸಕ್ಕೆ ಹೋಗಲ್ಪಡುತ್ತಾರೆ ಸ್ಪಷ್ಟವಾಗಿ ಪ್ರಕಟಿಸಲ್ಪಟ್ಟಿದೆ.

ಕೋಪನ್‌ಹೇಗನ್, ೧೧ನೇ ನವಂಬರ್.—ಬಲ್ಗೇರಿಯಾದೇಶದ ರಾಜಪ್ರತಿನಿಧಿ ಸಮಾಜದವರು ತಮ್ಮ ರಾಜ್ಯಾಧಿಪತ್ಯವು ಕೈಗೊಳ್ಳಬೇಕೆಂದು ಪ್ರಿನ್ಸ್ ವಾಲ್ಡಿಮಾರ್ ಯೆಂಬವರಿಗೆ ಬರೆದ ಕಾಗದಕ್ಕೆ ಅವರು ಕೊಟ್ಟ ಪ್ರತ್ಯುತ್ತರದಲ್ಲಿ ತಾವು ಸದರೀ ಸಂಸ್ಥಾನಾಧಿಪತ್ಯವು ಒಪ್ಪಿಕೊಳ್ಳುವ ವಿಷಯದಲ್ಲಿ ತಮ್ಮ ತಂದೆಗಳು ನಿರ್ಧರಿಸಬೇಕೆಂದೂ ತಮಗೆ ಇರುವ ಕರ್ತವ್ಯಗಳು ಹಾಗೆ ಒಪ್ಪಿಕೊಳ್ಳುವದಕ್ಕೆ ಅವಕಾಶ ಕೊಡಲಾರವೆಂದೂ ತಿಳಿಸಿದರು.

ಲಂಡನ್, ೧೧ನೇ ನವಂಬರ್.—ಮೆ. ಹರ್ಬರ್ಟ್ ಗ್ಲಾಡ್‌ಸ್ಟನ್ ಯವರು ಮುಂಬೈ ಯಿಂದ ಹೊಗೇಜಹಜಿನಲ್ಲಿ ಸ್ವದೇಶಕ್ಕೆ ಪ್ರಯಾಣವಾಗಿರುತ್ತಾರೆ.

ಪ್ಯಾರಿಸ್, ೧೧ನೇ ನವಂಬರ್.—ಫ್ರಾನ್ಸ್‌ದೇಶದ ದಕ್ಷಿಣಭಾಗದಲ್ಲೂ ಇಟಲೀದೇಶದಲ್ಲೂ ಪ್ರಬಲ ನಾಶಕರವಾದ ಪ್ರವಾಹಗಳುಂಟಾಯಿತು.

ಕೋಪನ್‌ಹೇಗನ್, ೧೧ನೇ ನವಂಬರ್.—ಡೆನ್ಮಾರ್ಕ್ ದೇಶದ ಅರಸರು ತಮ್ಮ ಮಕ್ಕಳಾದ ಪ್ರಿನ್ಸ್ ವಾಲ್ಡಿಮಾರ್ ಯವರು ಬಲ್ಗೇರಿಯಾದೇಶದ ಸಿಂಹಾಸನವನ್ನು ಒಪ್ಪಿಕೊಳ್ಳುವದಕ್ಕೆ ತಾವು ಒಪ್ಪುವದಿಲ್ಲವೆಂದು ನಿರಾಕರಿಸಿಬಿಟ್ಟರು. ಆದದರಿಂದ ಪ್ರಿನ್ಸ್ ವಾಲ್ಡಿಮಾರ್ ಯವರು ಬಲ್ಗೇರಿಯಾದೇಶದ ದೊಡ್ಡ ಸಭಿಕರಿಗೆ ತಮ್ಮ ತಂದೆಯ ಅಭಿಪ್ರಾಯವನ್ನು ತಂತಿಮೂಲಕ ತಿಳಿಸಿದ್ದರು.

ಲಂಡನ್, ೧೩ನೇ ನವಂಬರ್.—ರುಮೇನಿಯಾ ದರ ಹಾಸ್ಟೀಯಿಯಾಗುವದಕ್ಕೆ ಕಾರಣವನ್ನು ನಿರ್ಧರಿಸಿ ಅದನ್ನು ವ್ಯವಸ್ಥೆಗೆ ತರತಕ್ಕಬಗ್ಗೆ ಯೇರ್ಪಾಡಾದ ಸಂಸದವರ ನಿನ್ನೆಯದಿನ ಮೊದಲನೆಯ ಅವರ್ತಿ ಸಭೆಸೇರಿದ್ದರು.

NEWS LETTERS.

ವೃತ್ತಾಂತ ಪತ್ರಿ.

ಕೊಳ್ಳೆ ಗಾ|| ೧ನೇ ನವಂಬರ್.—ಈ ಸಂಸ್ಥಾನದಲ್ಲಿ ಸ್ತ್ರೀವಿದ್ಯಾಭ್ಯಾಸವು ಬಹಳವಾಗಿ ಉಪೇಕ್ಷಿಸಲ್ಪಟ್ಟಿದೆ. ಸಾಮಾನ್ಯವಾಗಿ ಬಾಲಕರ ವಿದ್ಯಾಭ್ಯಾಸ ಸಹ ವಿಶೇಷ ಅಭಿವೃದ್ಧಿಯೊಳ್ಳವು. ಸಮರ್ಥರಾದ ವಿದ್ಯಾಗುರುಗಳವಿಚಾರಕೆಯಲ್ಲಿ ಈ ಸಂಸ್ಥಾನದೊಳೊಂದು ಹೈಸ್ಕೂಲ್ ಸ್ಥಾಪಿಸಲ್ಪಟ್ಟು ಅದು ಕ್ರಮೇಣ ಅಭಿವೃದ್ಧಿಗೆ ಬರುತಲಿರುವದು ನಮಗೆಲ್ಲ ಕೇವಲ ಕೀರ್ತಿಕರವಾಗಿದೆ. ಇದಲ್ಲದೆ ಸಂಸ್ಥಾನದೊಳು ಅಲ್ಲಿ ಯಲ್ಲಿ ಡಿಸ್ಟ್ರಿಕ್ಟ್ ಸ್ಕೂಲುಗಳನ್ನಿಟ್ಟು ಅಭಿವೃದ್ಧಿಪಡಿಸುತಿರುವರು. ಅದಾಗ್ಯೂ ತಿರುಮಕೂಡ್ಲು ಸಂಸ್ಥಾನದವರುಗಳು ವಿದ್ಯಾಭಿವೃದ್ಧಿಯಲ್ಲಿ ಸರ್ಕಾರದವರ ಸ್ಕೂಲ ತಕ ಸಹಾಯಗಳು ಕಡಮೆಯೆಂತ ಕಾಣುವದು.

ಶ್ರೀರಂಗಪಟ್ಟಣ, ತಾ|| ೩ನೇ ನವಂಬರ್.—ಮದರಾಸ್ ಗವರ್ನಮೆಂಟಿನವರ ಜನರಲ್ ಸಾರ್ಜಂಟ್ ತಿಯಿಂದ ನಮ್ಮಸಂಸ್ಥಾನದವರ ಗಾರ್ಡಿಯನಾಗಿ ನೇಮಕರಾದ ಜನರಲ್ ಡಿಜಾರೆಟರ್ ಬಂದುದೇ ವಿದ್ಯಾಗುರುವಾಗಿರುವರು. ಇವರು, ಜಿಲ್ಲೆಯ ಬ್ರಾಹ್ಮಣಾಧಿಕಾರಿಗಳಾಗಿ ಬರುವತನಕ ಸ್ಥಾನಾಪತಿಯಾಗಿ ನೇಮಕರಾಗಿರುತ್ತಾರೆ. ... ಈ ... ಶಿವಗಳ ... ಕೆಲವು ಮೊಕದ್ದಮೆಗಳು ಹೈಕೋರ್ಟಿನವರು ಮಹಾರಾಜರವರ ಪ್ರಿವಿಕೌನ್ಸಿಲ್‌ಗೆ ಅಪೀಲ್ ಮೊಕದ್ದಮೆಗಳಲ್ಲಿ ತಾವೇ ಪ್ರತಿನಿಧಿಗಳಾಗಿರುತಲಿದ್ದರು. ಈಗ ... ಹಿರಿಯರು ... ತೀರ್ಪು ... ಅಪೀಲ್ ಜಡ್ಜಿಯವರು, ಅವರ ... ಈಗ ನ್ಯಾಯ ... ರಿಂದ ... ಇನ್ನೂ ... ಪ್ರಕಾರ ಈಗ ... ಹಿತ್ತಿ ...

ಈಚೆಗೆ ... ಬಳ್ಳಾರಿ ... ಕೆಲಸಕ್ಕೆ ಹೊಸದಾಗಿ ನೂರೈವತ್ತು ಒಬ್ಬ ಗುಮಾಸ್ತೆಗೆ ... ಸರ್ಕಾರ ಕಚೇರಿಯಲ್ಲಿ ಹೋ ... ಉದ್ಯೋಗದ ಕೆಲಸ ಕೊಡಲ್ಪಟ್ಟಿತು. ಇದು ಕೇವಲ ಅಭಿವೃದ್ಧಿಕರವಾದ ಸಂಗತಿ ಹೊರ್ತು ನ್ಯಾಯ್ಯವಾದದ್ದಲ್ಲವು. ಇಂಥಾ ಪಕ್ಷಪಾತಗಳು ಮೈಸೂರಿನಲ್ಲಿಯೂ ತಪ್ಪುವದಿಲ್ಲವು.

ಇಲ್ಲಿ ಕಾಲಸ್ಥಿತಿಯು, ಜನಾರೋಗ್ಯವೂ, ಪೈರುಗಳ ಸ್ಥಿತಿಯೂ, ಅನುಕೂಲಗಳಾಗಿವೆ.

ಗುತ್ತಿ ತಾ|| ೧೦ನೇ ನವಂಬರ್.—ಮಾಹೇ ಮಜಕೂರ್ ೫ನೇ ತಾರೀಖ್ ಮಂಗಳವಾರದದಿನ ಮಧ್ಯಾಹ್ನ ೨|| ಘಂಟೆಗೆ ಹೊರಟ ಮೇಯಿಲ್ ಟ್ರೈನು, ಅದೇದಿನ ಸಾಯಂಕಾಲ ೭ಘಂಟೆಗೆ ತಾಳ್ಳಿಂದ ಹೊರಟ ಪ್ಯಾಸಿಂಜರ ಟ್ರೈನೂ, ತಿರುಪತಿ ಮತ್ತು ಪ್ರೊದಿನೆಮಧ್ಯೆ ಪ್ರಬಲವರ್ಷದಿಂದ ಪೊಂದ ರೈಲ್ವೆ ರಸ್ತೆ ಕೊಚ್ಚಲ್ಪಟ್ಟು ಗಾಡಿ ಸಂಚಾರಕ್ಕೆ ಅಭ್ಯಂತರವಾದದರಿಂದ ನಾವಕಾಶವಾಗಲಿಕ್ಕೆ ಕಾರಣವಾಯಿತು. ಪ್ಯಾಸಿಂಜರ ಸ್ಪೆಷಲ್ ಟ್ರೈನು ಮಾತ್ರ ಸಮೀಪವರಿಗೆ ಹೋಗಿ ಅಲ್ಲಿಂದ ಕಸೆದಾಗಿ ಹಿಂತಿರಿಗಿಹೋಗಬೇಕಾಯಿತು. ತಿರುಪತಿ ಮತ್ತು ಪ್ರೊದಿನೆ ಮಧ್ಯೆ ಇರುವ ಸುಮಾರು ಕಟ್ಟಡಗಳು ಬಹಳ ಅಪಾಯಸ್ಥಿತಿಯೊಳಿದ್ದು ಈಚೆಗೆ ಕೊಚ್ಚಿಹೋದಂತೆ ತಿಳಿಯಬರುತದೆ. ಮಂಗಳವಾರದದಿನ ಮುಂಬೈ ಮೈಲ್ ಟ್ರೈನಿನಲ್ಲಿ ಬಂದಪ್ರಯಾಣಸ್ಥರು ಶ್ರೀ... ಗೆ ಬರುವದಕ್ಕೆ ಬೇರೆ ಮಾರ್ಗವಿಲ್ಲದೆ ಹಿಂದು

ದೊಡ್ಡಹೊಳೆಯನ್ನು ದಾಟಿ [illegible] ಯಿಂದ ದಾಟಹೋಗಬೇಕಾಯಿತು. [illegible] ಭಾಗಗಳೆಲ್ಲವನ್ನು [illegible] ರೆವಿನ್ಯೂ ಟ್ರಿಬ್ಯೂನಲ್ ಮೆಂಬರರೂ, ಡೆಪ್ಯುಟಿ ಚೀಫ್ ಇಂಜನಿಯರರೂ ರಸ್ತೆಯ [illegible] ಬಗ್ಗೆ ಇಲ್ಲಿಗೆ ಬಂದಿದ್ದು ಹೋದರು. ವರ್ಷಾಧಿಕ್ಯದಿಂದ ಕೆರೆಗಳು ಕೆಲವುಕಡೆ ಒಡೆದುಹೋದವು. ನಿನ್ನೆ ಮೊನ್ನೆಯಿಂದ ಸ್ವಲ್ಪ ಸೂರ್ಯರಶ್ಮಿಯುಂಟಾಗಿದೆ. ಸೋಮ ಮಂಗಳ ವಾರಗಳಲ್ಲಿ ಬಿಸಿಲಂಬುದೇ ಅಸಾಧ್ಯವಾಗಿತ್ತು. ಈ ವರ್ಷವು ಅನೇಕವಿಧವಾದ ಕಷ್ಟಗಳಿಗೆ ಕಾರಣವಾಯಿತು.

ಕಾಕಿನಾಡಾ, ತಾ॥ ೨ನೇ ನವೆಂಬರ್—ಈಗ್ಯೆ ೧೫ದಿನಗಳ ಮೊದಲು ಆಗಿಂದಾಗ್ಯೆ ಒಳ್ಳೇ ಮಳೆಯಾಗಿ ಎತ್ತ ನೋಡಿದರೂ ಜಲಮಯವಾಗಿದೆ. ಇಲ್ಲಿನ ಮ್ಯುನಿಸಿಪಾಲಿಟಿಯವರ ಅಶ್ರದ್ಧೆಯಿಂದ ರಸ್ತೆಗಳು ಬಹಳ ಕೆಟ್ಟಿವೆಯೆಂದು ಎಲ್ಲರೂ [illegible] ಹೇಳುವವರಿಲ್ಲದೆಯಿದೆ.

ಇಲ್ಲಿನ ಡಿಸ್ಟ್ರಿಕ್ಟ್ ಜಡ್ಜಿಯವರು [illegible] ವರ್ಗವಾಗುವರೆಂದು ಪ್ರವಾದವುಂಟಾಗಿದೆ. ಇವರ ಸಂಬಂಧ ನಿವೃತ್ತಿಯು ಇಲ್ಲಿನವರಿಗೆಲ್ಲ ಮಿತಿಯಿಲ್ಲದ [illegible] [illegible] [illegible] ಪ್ರಜೆಗಳು [illegible]

[illegible]

[illegible] ದರು ಅನೇಕ [illegible] ಇಂಗ್ಲಿಷ್ ಪ್ರಭುತ್ವವು ಈರೀತಿಯಾದ ಅವಾಸ [illegible] ವಿದ ಅಭ್ಯಾಸವಾಗಿದೆ. [illegible] ಇಂಬುದು ಬಹುದಿನ್ನಲ್ಲಿಯೂ [illegible]

ಮೇಲುಕೋಟೆ ತಾ॥ [illegible] ೧೮೮೬

ಶ್ರೀ ಸಂಪತ್ಕುಮಾರ

[illegible]

[illegible]

ಸ್ವಾರ್ಗ [illegible] ಸಾಕ್ಷ್ಯ ದು । ಸು [illegible] [illegible] ವ್ಯಾಪಿ [illegible] ಪ್ರಪದ್ಯೇ॥

(ಸರ್ವವ್ಯಾಪಾಗ್ಯ [illegible] ಕ್ಷತ್ರಿಯ [illegible]) ಎಂಬರೀತ್ಯಾ ಬ್ರಾಹ್ಮಣರಿಗೆ ಶಾಸ್ತ್ರಗಳಲ್ಲಿ ಪತ್ರಿಸ್ಥವು ಒಂದು ಮುಖ್ಯ ಪ್ರಯೋಜನವಾದ್ದರಿಂದ ಅಭ್ಯಾಸ ಸಾಧ್ಯವಾದ ಅದರ ಅಭಿವೃದ್ಧಿಗೋಸ್ಕರ ಪ್ರತಿಶನಿವಾರದಲ್ಲೂ ಈ ಪಾಠಶಾಲಾ ಸಭ್ಯರು [illegible] ರಾತ್ರಿ ೭ಘಂಟೆಯಿಂದ ೧೦ ಘಂಟೆಯವರೆಗೂ ನಿಷ್ಪತ್ತಿಸವಾದವು ಕೇಳಬೇಕೆಂದು ಉದ್ದೇಶಿಸಿರುವದನ್ನು ಇದರಲ್ಲಿ ಕುತೂಹಲಪ್ರಿಯರೆಲ್ಲರೂ ಅನುಮೋದಿಸದೆ ಇರಲಾರರೆಂದು ನಂಬುತ್ತೇನೆ.

೧. ಅವರೇ ಈವಾರದಲ್ಲಿಯೇ ಮುಂದಣವಾದದಲ್ಲಿನ [illegible] ಗಳನ್ನು ತೋರಿಸುವಹಾಗೆ ಮಾಡಿ [illegible] ಪ್ರಕಟಿಸಲ್ಪಡುವದು. ಅದರಿಂದ ಅಂತಾವಿಷಯಗಳನ್ನು ಚೆನ್ನಾಗಿ ಅಭ್ಯಾಸಿಸಿ ಗಮನಿಸಲಿಕ್ಕೆ ಸಭೆಯಲ್ಲಿ ಪ್ರಸಂಗಿಸುವವರಿಗೆ ಸೌಲಭ್ಯವುಂಟಾಗುವದಲ್ಲದೆ [illegible] ಬಹಳ ಅಭಿವೃದ್ಧಿಗೆ ಬರುವದು. ಹೀಗೆ ಮಾಡುವವರಿಂದ ಬಹಳ ಶ್ಲಾಘ್ಯತೆಯೂ ತೃಪ್ತಿಯುಕ್ತವಾದ ಗೌರವನೂ ಶಬ್ದನುಗುಣವಾದ ಲಾಭಗಳೂ ಸ್ವತಯೇವ ಉಂಟಾಗದೆ ಹೋಗಲಾರವು.

೨. ಮತ್ತು ಈ ಸಮಯದಲ್ಲಿ ನಡೆಯುವ ಸಭೆಗೆ ನಿರ್ಮತ್ಸರರಾದ ವಿದ್ಯಾಪಕ್ಷಪಾತಿಗಳೂ ಮೆಂಬರ್‌ಗಳೂ ಪ್ರತಿವಾರದಲ್ಲೂ ಈ ಸಭೆಯನ್ನಲಂಕರಿಸಬೇಕಾಗಿ ಪ್ರಾರ್ಥಿಸುವೆವು.

೩. ಮತ್ತು ಪ್ರತಿಸಂವತ್ಸರದ ಶ್ರೀಜಯಂತಿ ಪ್ರವರಸಂಭ್ರಮ ಮಹೋತ್ಸವದಲ್ಲಿ ದೊಡ್ಡ ಸಭಾ [illegible] ಸಾಂವತ್ಸರಿಕ ಪರೀಕ್ಷೆಯು ಜರುಗುವದರಿಯೂ, ಅದರಲ್ಲಿ ತೇರ್ಗಡೆಯಾದ ಈ ಪಾಠಶಾಲೆಗೆ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಯಥೋಚಿತ ಬಹುಮಾನ ನಡೆಸಿ ಪ್ರೋತ್ಸಾಹಪಡಿಸುವ ಏರ್ಪಾಡು ಒಂದು ಸಭಿಕರ ಆಲೋಚನೆಯಲ್ಲಿದೆ.

೪. ಮತ್ತು ಈಪ್ರಕಾರ ಪ್ರಸಂಗದಲ್ಲಿ ಶ್ಲಾಘ್ಯತೆಯನ್ನು ಹೊಂದುವವರಿಗೆ ಪ್ರತಿವಾರದಲ್ಲೂ ಯೋಗ್ಯತೆಗೆ ಸರಿಯಾದ ಸರ್ಟಿಫಿಕೇಟುಗಳು ಕೊಡಲ್ಪಡುವವು. ಆದರೆ ಸರ್ಟಿಫಿಕೇಟುಪಡೆಯತಕ್ಕವರು ಸ್ವಸ್ವೇಚ್ಛಾನುಸಾರವಾದ ಪತ್ರಿಕಾಗದ ದಬ್ಬಣವನ್ನು ಸಿದ್ಧಪಡಿಸಿಕೊಳ್ಳಬೇಕು, [illegible] ಒಡೆದ ಅಭಿಪ್ರಾಯವನ್ನು ಅನುಮೋದಿಸಿ [illegible] ಸ್ವೀಕರಿಸುವವರು [illegible] ನೆಂಬ ಸಭಿಕರು [illegible] ಸಂಭವಕ್ಕೆ ಬರುವದರಿಂದ ಉತ್ತರೋತ್ತರ [illegible] ನಾಗರಿಕರು [illegible] [illegible]

೫. [illegible] ಈ ಪಾಠಶಾಲೆಯು ಶ್ರೀ [illegible] ಸರ್ವಸ್ವ [illegible] ಗಿ ಪ್ರವರ್ತಿಸುತ್ತಾ ಬರುವದರಿಂದ ಇದನ್ನು ಅನುಮೋದಿಸಲು ಸಾಮರ್ಥ್ಯವಾದ ವಿಲಾಸ [illegible] ಕಾರವೆಂದು ಸಾಮಾನ್ಯವು [illegible]

೬. ಮತ್ತು ಈ ಸಭೆಯಲ್ಲಿ ಅರ್ಥಾರ್ಥವಾಗಿ ವ್ಯಾಪಕ [illegible] ವಿಷಯಗಳನ್ನು ಗಂಭೀರವಾಗಿ ಪತ್ರಿಕೆಯಲ್ಲಿ ಬರೆದು ಉಪನ್ಯಾಸವಾಡತಕ್ಕದು. ಅಂತಾ ಉಪನ್ಯಾಸಗಳು [illegible] ಪಕ್ಷ [illegible] ಅದಕ್ಕೆ ಮತ್ತೊಂದುವಾರದ ಸಮಾಧಾನವು [illegible] ಬುದ್ಧಿಶಾಲಿಗಳಿಂದ ಉಪನ್ಯಾಸ ಮಾಡಲ್ಪಡುವದು.

ಕೋಲಾರ, ತಾ॥ ೫ನೇ ನವೆಂಬರ್—ಈಗ್ಯೆ [illegible] ತಿಳಿಸಬೇಕಾದ ವಿಷಯಗಳೇನೂ ಇಲ್ಲ [illegible] ವಾಗದೆ ಇದ್ದದರಿಂದ ನಿಮ್ಮ ಪತ್ರಿಕೆಗೆ ಬರೆಯಲಿಲ್ಲವಾಯಿತು. ಈಗಲೂ ಈ ಕಾಗದ ಸಹ ಸಾಮಾನ್ಯ ವಿಷಯವನ್ನೇ [illegible] ನ್ಯಾಯ [illegible] ತಿಳಿಸುತ್ತೇನೆ [illegible]

ಹವಾ—ಇಲ್ಲಿನ ಕಾಲಸ್ಥಿತಿಯು ಬಹಳ ಅನುಕೂಲವಾಗಿಯೂ [illegible] ಸುಖಕರವಾಗಿಯೂ ಇದೆ. [illegible] ಪಸರಿಗಳು [illegible] ಚೆನ್ನಾಗಿದೆ. ಈಚೆಗೆ ಆದ ಸಕಾಲ ಮಳೆಯಿಂದ ಧಾನ್ಯ ಸಮೃದ್ಧಿಯು ಆಗುವಂತೆ ಜನಾರೋಗ್ಯವೂ ಸರ್ವತ್ರ ಏಕರೂಪವಾಗಿಯೇ ಇದೆ. ದವಸಗಳಿಗೂ ಸುಭಿಕ್ಷವು [illegible] ಈಗ್ಯೆ ಎರಡುವಾರಗಳಿಂದ ಏಕರೂಪವಾಗಿದೆ.

ಇಲ್ಲಿನ ಪ್ರೊಬೇಷನರಿ ಆಫೀಸರಾದ ಮ॥ ಶ್ರೀನಿವಾಸರವರು ಮಿರಾಜ್‌ನಿಂದ ಕೋಲ್ಹಾಪುರದವರೆಗೆ ೨೦ ಮೈಲಿಗಳವರೆವಿಗೆ [illegible] ಲಕ್ಷ ರೂಪಾಯಿಗಳ ಖರ್ಚಿನಲ್ಲಿ ರೈಲ್ವೆರಸ್ತೆ ಹಾಕತಕ್ಕಬಗ್ಗೆ ಈ [illegible] ಗವರ್ನ್‌ಮೆಂಟಿನವರ ಮಂಜೂರಾತಿಯು [illegible] ಸರ್ವೇ ಕೆಲಸವು ಶೀಘ್ರದಲ್ಲಿಯೇ ಪ್ರಾರಂಭವಾಗುವದು. ಈ ರೈಲ್ವೇ ಜಂಕ್ಷನ್ನಲ್ಲಿ ಸಾಸ್ಥಾನದವರೇ ಜರಿಸಬೇಕಾಗಿರುತ್ತದೆ.

[illegible] ವಿದ್ಯೆಗಳನ್ನು, ಅಂದರೆ ಕೈ ಕೆಲಸಗಳನ್ನು ಜನಗಳಿಗೆ ಕಲಿಸುವಬಗ್ಗೆ ಒಂದು ಶಾಲೆಯನ್ನು ಸ್ಥಾಪಿಸುವ ಆಲೋಚನೆಯು ಇಲ್ಲಿನ ಅಧಿಕಾರಿಗಳಿಗೆ ಉಂಟಾಗಿದೆ. ಬರುವ ಡಿಸೆಂಬರ್ ತಿಂಗಳಲ್ಲಿ ಬಾಲಿಕಾ ವೈದ್ಯ ಪಾಠಶಾಲೆಯೊಂದು ತೊಡಗಲ್ಪಡುವದಾಗಿದೆ, ಅಮೆರಿಕಾ ದೇಶಕ್ಕೆ ಹೋಗಿ ಓದಿ ತೇರ್ಗಡೆಯಾಗಿ ಪ್ರಶಸ್ತಿಯಂ ಪಡೆದಿರುವ ಆನಂದಬಾಯಿ ಜೋಷಿಯೆಂಬಾಕೆಯು ಮಾಸಿಯಾನಾ ೩೦೦ ರೂಪಾಯಿಗಳ ಸಂಬಳದಲ್ಲಿ ಸದರೀ ಪಾಠಶಾಲೆಯ ಪ್ರಥಮೋಪಾಧ್ಯಾಯಿನಿಯಾಗಿ ನೇಮಕವಾಗುವಳು. ಈ ಏರ್ಪಾಡಿನಿಂದ ಬಹಳ ಪ್ರಯೋಜನ ಉಂಟಾಗುವದು ಇಲ್ಲಿನವರು ನಂಬಿದ್ದಾರೆ. ಇದು ಯಾವ್ವರ ಮಟ್ಟಿಗೆ ಜನಗಳಿಗೆ ಫಲಕಾರಿಯಾಗುವದೋ ತಿಳಿಯಲಿಲ್ಲವು. ಅದು ಮುಂದೆ ನಿರ್ಧರಿಸಬೇಕಾದ ವಿಷಯವಾಗಿರುತ್ತದೆ.

ನಮ್ಮ ಮಹಾರಾಜರವರನ್ನು ರಾಜಕೋಟೆಗೆ ಕಳುಹಿಸಲಿಕ್ಕೆ ಮ॥ ಶ್ರೀವಾಸ್ತವರವರಿಗೆ ಸುತರಾಂ ಇಷ್ಟವಿಲ್ಲವೆಂದು ಕೇಳುತ್ತೇನೆ. ಜನಗಳು ಸಹ ಸಮಾನಂಬಿಸ್ರುವ ಪ್ರಕಾರವಾಗಿ ಮಹಾರಾಜರವರು ಅಲ್ಲಿಗೆ ಹೋಗುವದರಿಂದೇನೂ ಪ್ರಯೋಜನವಿಲ್ಲವೆನ್ನುತ್ತಾರೆ. ಇದಕ್ಕೆ ಅನೇಕ ಕಾರಣಗಳುಂಟು. ಕೋಲ್ಹಾಪುರಕ್ಕೂ ರಾಜಕೋಟೆಗೂ ಇರುವ ದೂರ ಯಾತ್ರೆಯಿಂದ ಉಂಟಾಗುವ ಅನಾರೋಗ್ಯವನ್ನು ಗತಿಸಿದ ರೀಜೆಂಟರವರು ಒಹಳವಾಗಿ ಅನುಭವಿಸಿದರು.

[illegible] ರೀಜೆಂಟರವರು ಕೆಲಸದಿಂದ ನಿವೃತ್ತರಾಗುವವರಾಗಿದ್ದಾರೆ. ಪ್ರಜೆಗಳ ಮರಳಿ ರೀಜನ್ಸೀ ಮೊದಲಾದ ಏರ್ಪಾಡುಮಾಡಿದರೆ ಬೇಸರವಾಗಿರುವರು. ಪ್ರೊಬೇಷನರಿ ಆಫೀಸರ ಒಳ್ಳೆಯವರಾಗಿ [illegible] ದ್ದರೂ, ಜನಗಳು ನೇಟಿವ್ ರೀಜಂಟರನ್ನೇ ಬಹಳವಾಗಿ ಅಪೇಕ್ಷಿಸುತ್ತಾರೆ. ಇದಕ್ಕೆ ಯೋಗ್ಯರು [illegible] ದೊಡ್ಡಮನುಷ್ಯರು ಇರುತ್ತಾರೆ. [illegible] ಅವರ ಹೆಸರುಗಳನ್ನು ಮೇಲಕ್ಕೆ ತಿಳಿಸಿದರೆ ಬಹುಶಃ ಅವರಿಗೆ ರೀಜಂಟ ಕೆಲಸ ಆದರೂ ಆಗಬಹುದು. [illegible] ರೀಜನ್ಸೀ ವಿವಾದದ ವಿಷಯವನ್ನು ಕುರಿತು ವೃತ್ತಾಂತಪತ್ರಿಕೆಗಳಲ್ಲವೂ ವಿಚಾರಪೂರ್ವಕ ಘೋಷಿಸಬೇಕೆಂದು ಜನಗಳ್ಳರೂ ಬಹಳ ಅಪೇಕ್ಷೆಯುಳ್ಳವರಾಗಿದ್ದಾರೆ. ಮಿಕ್ಕ ವಿಷಯಗಳನ್ನು ಮುಂದಿನ ಕಾಗದದಲ್ಲಿ ವಿವರಿಸುವೆನು.

ತಿರುವನಂತಪುರ, ತಾ॥ ೩೧ನೇ ಅಕ್ಟೋಬರ್—ಕೇರಳದೇಶಕ್ಕೆ ಪ್ರಧಾನ ನಗರವಾದ ಈ ತಿರುವನಂತಪುರವು ಈಗ್ಯೆ [illegible] ಬಹಳ ನೇಟಿವ್ ಒತ್ತರಿಂದಲೂ ಅವರು ತಮ್ಮ ಇಷ್ಟಾನುಸಾರ ಆಗಿಂದಾಗ್ಗೆ ನೇಮಕವಾಗತಕ್ಕ ದಿವಾನರುಗಳಿಂದ [illegible] ಈ ಸಂಸ್ಥಾನದ [illegible] ತಮ್ಮ ಪತ್ರಿಕೆಯಲ್ಲಿ ಸಕೃತ [illegible] ಬರೆಯಲ್ಪಡ [illegible] ವೃತ್ತಾಂತಗಳನ್ನು ನಿಜವಾಗಿ ತಮಗೆ ಒರೆಯತಕ್ಕವರಿಲ್ಲದ್ದೇ ಕಾರಣವೆಂದೆಣಿಸಿ ಪ್ರತಿ ವಾರವೂ [illegible] ವಿಶೇಷಾಂಶಗಳನ್ನು ಕುರಿತು ತಮ್ಮ ಪತ್ರಿಕೆಗೆ ಬರೆಯಬೇಕೆಂಬ ಸಂಕಲ್ಪದೊಡನೆ ಪ್ರಾರಂಭಿಸಿದ ಈ ಕಾಗದಕ್ಕೆ ಮಂಗಳಾಚರಣೆಯೋಪಾದಿಯಲ್ಲಿ ಶುಭ ಸೂಚಕವಾದ ಶ್ರೀಮನ್ಮಹಾರಾಜರವರ ವರ್ಷವರ್ಧಂತಿಯ ವೃತ್ತಾಂತವನ್ನೇ ಪ್ರಥಮದಲ್ಲಿ ತಿಳಿಸುವೆನು.

ಪಕ್ಷಿ, ಮಂಗಳವಾರ ೨ನೇ ತಾರೀಖಿನದಿನ ಮಹಾರಾಜರವರಿಗೆ ವರ್ಷವರ್ಧಂತಿ ಮಹೋತ್ಸವವು ಸಂಭ್ರಮವಾಗಿ ಜರಿಗಿತು. ಆದಿನ ಬೆಳಿಗ್ಯೆ ೮ ಘಂಟೆಗೆ ಸರಿಯಾಗಿ ಮಹಾರಾಜರವರ ಸವಾರಿ ದೇವರ ದರ್ಶನಾರ್ಥ ಅನೇಕ ದೇವಾಲಯಗಳಿಗೆ ಚಿತ್ತೈಸಿದರು. [illegible] ಗೌರವಾರ್ಥ ಮಾಮೂಲಿನಪ್ರಕಾರ ತೋಪೆ ನಗ್ಯಾರಿ ಮುಂತಾದವುಗಳೂ, [illegible] ಸಂತರ್ಪಣೆಯೂ ಜರಿಗಿದವು. ನಮ್ಮ ಮಹಾರಾಜರವರೂ ಅವರ ಪೂರ್ವಿಕರೂ ಯಾವಾಗಲೂ ಭಗವದ್ಭಕ್ತಿಯೂ ಬ್ರಾಹ್ಮಣಾಭಿಮಾನವೂ ಉಳ್ಳವರಾದದರಿಂದಲೂ, ಅವರು ಬ್ರಾಹ್ಮಣ ಸಂತರ್ಪಣವೇ ಕರ್ತವ್ಯವೆಂದೆಣಿಸಿರುವದರಿಂದಲೂ ಬ್ರಾಹ್ಮಣಭೋಜನವು ಯುಕ್ತವಾಗಿಯೂ ಯೂರೋಪಿಯರಿಗೆ ನಡೆಯುವ ಔತನ ಖರ್ಚು ಇಲ್ಲಿ ಅಲ್ಪವಾದದ್ದಾಗಿರುವದು.

ಇಲ್ಲಿನ ನಾಯರ ಸ್ತ್ರೀಯರು ವಿದ್ಯಾವಂತರಾಗುತ ಬರುವಾಗ್ಗೆಲ್ಲ ಅವರ ಅಭಿರುಚಿಯೂ ನಡತೆಯು ಸಹ ಬದಲಿಸುತಿವೆ. ಈ ತಿಂಗಳ ೨೬ನೇ ತಾರೀಖ್ ಮಂಗಳವಾರದದಿನ ತಿರುವನಂತಪುರ ಮಲಯಾಳ ಸಭೆಯವರಿಂದ ಮಹಾರಾಜರ ಕಾಲೇಜ್ ಹಾಲಿನಲ್ಲಿ ಆಡಲ್ಪಟ್ಟ ಚಂದ್ರಮುಖೀ ವಿಲಾಸವೆಂಬ ನಾಟಕವನ್ನು ನೋಡುವಬಗ್ಯೆ ಬಹುಮಂದಿ ನಾಯರ್ ಹೆಂಗಸರು ತಮ್ಮ ಪತಿಯರೊಡನೆ ಸಂಕೋಚವಿಲ್ಲದೆ ಧಾರಾಳವಾಗಿ ಬಂದು ನೋಡಿ ಹೋದರು. ದೊಡ್ಡಮನುಷ್ಯರು ಅನ್ಯರಿಗೆ ಉಪಮಾನರಾಗಿ ಏರ್ಪಟ್ಟದ್ದು ಇನ್ನು ಅಲ್ಪ ಸ್ವಲ್ಪ ಜನಗಳಿಗೆ ಉಂಟಾಗಿರುವ ಶ್ರದ್ಧಾಜಾಡ್ಯವನ್ನು ಹೋಗಲಾಡಿಸಲಿಕ್ಕೆ ಕಾರಣವಾಯಿತು.

ಗವರ್ನ್‌ಮೆಂಟಿನವರು ಮಾಲೀಯಾನಾ ೪೫,೦೦೦ ರೂಪಾಯಿಗಳ ಅತ್ಯಲ್ಪ ಪ್ರಯೋಜನ ದೃಷ್ಟಿಯೊಡನೆ ತಮ್ಮದೇಶದ ವ್ಯವಸಾಯಾಭಿವೃದ್ಧಿಗೆ ಮುಖ್ಯಾಧಾರಭೂತವಾಗಿದ್ದ ಪೆರಿಯಾರೆಂಬ ನದಿಯನ್ನು ಬ್ರಿಟಿಷ್ ರಾಜ್ಯಕ್ಕೆ ತಿರಿಗಿಸಲಿಕ್ಕೆ ಒಡಂಬಟ್ಟರು. ಮ॥ ಶೇಷಯ್ಯ ಶಾಸ್ತ್ರಿಗಳ ದಿವಾನಗಿರಿ ಕಾಲದಮೊದಲು ಈ ನದಿಯ ವಿಷಯವಾಗಿ ಇಲ್ಲಿನ ಸರ್ಕಾರದವರಿಗೂ, ಮದರಾಸ್ ಗವರ್ನ್‌ಮೆಂಟಿನವರಿಗೂ ಕಾಗದಪತ್ರಗಳು ನಡೆಯುತಲಿದ್ದವು. ಹಿಂದೆ ಒಂದಾವರ್ತಿ ಇದರ ವಿಚಾರ ಒಂದಾಗ ಮ॥ ರಾ॥ ಶೇಷಯ್ಯ ಶಾಸ್ತ್ರಿಗಳವರು ಸದರೀ ನದಿಯಂ ಕಟ್ಟಿಬಿಡುವದರಿಂದ ತಿರುವಾಂಕೂರು ಸಂಸ್ಥಾನದ ಆಯತಿಯು ಬಹಳವಾಗಿ ನಷ್ಟವಾಗುವದೆಂದು ತಿಳಿಸಿ ಅದರ ಮೇಲೆ ಮದರಾಸ ಗವರ್ನ್‌ಮೆಂಟಿನವರಿಗೆ ವಿಶೇಷ ಜರೂರಿದ್ದರೆ ತಾವು ಕೇಳುವಷ್ಟು ದ್ರವ್ಯ ಕೊಡಬೇಕೆಂದು ಬರೆದರು. ಅಪೇಕ್ಷಿಸಿದ ಮೊಬಲಗು ವಿಶೇಷವಾಗಿದ್ದದರಿಂದ ಅದಕ್ಕೆ ಅವರು ಸಮ್ಮತಿಸಲಿಲ್ಲವು. ಸಾಬಿಕ ಮಹಾರಾಜರವರ ಕಾಲದಲ್ಲಿ ಅದೇ ವಿಷಯ ಮರಳಿ ಪ್ರಸ್ತಾಪಕ್ಕೆ ಬರಲು, ಆಗ ಮಹಾರಾಜರವರು ತಮ್ಮ ಸಂಸ್ಥಾನದ ಮಧ್ಯೆ ಇರುವ ಅಂಜಂಗೋ ಮತ್ತು ತಾಂಗಚೇರಿ ಯೆಂಬ ಎರಡು ತುಕಡಿಗಳು ಬ್ರಿಟಿಷರವರ ಸುಪರ್ದಿನಲ್ಲಿರುವದರಿಂದ ಅದು ಬಿಟ್ಟುಕೊಟ್ಟರೆ ನದಿಯನ್ನು ತಿರಿಗಿಸಲಿಕ್ಕೆ ಸಮ್ಮತಿಸುವದಾಗಿ ತಿಳಿಸಿದರು. ಇದಕ್ಕೆ ಮದರಾಸ ಗವರ್ನ್‌ಮೆಂಟಿನವರು ಸಮ್ಮತಿಸಿದರೂ ಸದರೀ ಎರಡು ಪ್ರದೇಶಗಳಲ್ಲಿರುವ ಪ್ರಜೆಗಳು ನೇಟಿವ್ ಅರಸರ ಅಧಿಕಾರಕ್ಕೆ ಒಳಗಾಗಲಿಕ್ಕೆ ಸಮ್ಮತಿಸದೆ ಹೋದದರಿಂದ ಆಗ ಸಹ ಅದರ ಪ್ರಯತ್ನ ತಪ್ಪಿಹೋಯಿತು. ಇಲ್ಲಿ ಯಾವ ಸಂಬಂಧವೂ ಅಭಿಮಾನವೂ ಅಕ್ಕರೆಯೂ ಇಲ್ಲದ ಒಬ್ಬ ಅನ್ಯದೇಶೀಯರು ಮುಖ್ಯ ಕಾರ್ಬಾರೀ ಅಧಿಕಾರಿಯಾಗಿರುವಾಗ್ಯೆ ಇಂತಾ [illegible] ಒಂದರ ಮೇಲೊಂದು [illegible] ನವರ ಪ್ರವೇಶವು ಬಲಾತ್ಕರಿಸಲ್ಪಟ್ಟರೆ ಅದು ಮಹಾರಾಜರ ಪ್ರಯೋಜನಕ್ಕೆ ಅನ್ಯಥಾ ಪರಿಣಮಿಸುವದಲ್ಲದೆ ಬೇರೆ ಯಾವಬಗೆಯಾಗಿರುವದು?

ಇಲ್ಲಿನ ದಿವಾನರಾದ ಮ॥ ರಾಮಯ್ಯಂಗಾರ್ಯವರು ತಮ್ಮ ಅಧಿಪತ್ಯದ ಅಂತಿಮದಶೆಯನ್ನು ಯಾವದಾದರೊಂದು ವಿಷಯದಿಂ ಪ್ರಸಿದ್ಧಪಡಿಸಿ ಸ್ಮರಣೀಯವಾಗಿ ಮಾಡಬೇಕೆಂಬ ಸಂಕಲ್ಪವುಳ್ಳವರಾಗಿ ಈಗ್ಯೆ ಎರಡು ವಾರದ ಮೊದಲು ರೈಲ್ವೇ ವಿಷಯವನ್ನು ಕುರಿತು ಆಲೋಚಿಸುತಲಿದ್ದಾರೆ. ಅದರ ತೀರ್ಮಾನವು ಕ್ಷಿಪ್ರದೊಳು ಇಲ್ಲಿಗೆ ಬರುವದಾಗಿ ನಿರೀಕ್ಷಿಸಲ್ಪಟ್ಟಿರುವ ಸೌತ್ ಇಂಡ್ಯಾ ರೈಲ್ವೆ ಏಜೆಂಟರು ಬಂದ ಕೂಡಲೇ ಹೊರಗಾಗಬಹುದೆಂದೆಣಿಸುವೆನು. ಇಲ್ಲಿನ ಪ್ರಭುತ್ವಕ್ರಮವನ್ನು ನೋಡಲಾಗಿ ಮದರಾಸ್ ಗವರ್ನ್‌ಮೆಂಟಿನವರ ಪ್ರವೇಶವು ಅಪೇಕ್ಷಿತವೆಂದು ತೋರುತಿದೆ. ಇಲ್ಲಿ ದಿವಾನರವರಿಗೂ ಮಹಾರಾಜರಿಗೂ ಐಕಮತ್ಯ ಸಾಲದು. ದಿವಾನರಿಗೂ ಪ್ರಜೆಗಳಿಗೂ ಪರಸ್ಪರಾನುಗವಿಲ್ಲವು. ದಿವಾನರ ವರ್ತನವು ಕೇವಲ ಐಚ್ಛಿಕವಾದದ್ದು. ಪ್ರಜಾಭಿಪ್ರಾಯವು ಆದರಿಸಲ್ಪಡುವದಿಲ್ಲವು. ನ್ಯಾಯವು ಅದೃಷ್ಟಾಯತ್ತವು. ಈ ಸ್ಥಿತಿಯಲ್ಲಿರುವ ಸಂಸ್ಥಾನವು ಸಂಪೂರ್ಣವಾಗಿ ಕಡುವವರಿಗೆ ತಟಸ್ಥರಾಗಿ ನೋಡುತಲಿದ್ದು ಬಳಿಕ ಅವ್ಯವಸ್ಥಾ ನಿಮಿತ್ತದಿಂ ರಾಜ್ಯವನ್ನು ಆಕ್ರಮಿಸಿಕೊಳ್ಳುವದಕ್ಕಿಂತಲೂ, ಉಚಿತಕಾಲದಲ್ಲಿ ಸೂಕ್ಷ್ಮವಾಗಿ ತಿಳಿಸುವ ಬುದ್ಧಿ ವಾದವು ಬಹಳ ಪ್ರಯೋಜನಕರವಾಗಿರುವದು.

SUMMARY OF NEWS
ವೃತ್ತಾಂತ ಸಂಗ್ರಹವು.

ರುಸ್ಯರು ಬರ್ಲಿನನ ಒಪ್ಪಂದವನ್ನು ಮುರಿದು ಬಿಟ್ಟರೆ ಇಂಗ್ಲಿಷನವರು ಕ್ರೀಟ ಯೆಂಬ ಬೆಟ್ಟವನ್ನು ತಮ್ಮ ವಶಕ್ಕೆ ತೆಗದುಕೊಳ್ಳುವರಂತೆ.

ಕಳೆದ ವರುಷದ ಪರೀಕ್ಷೆಗಳಲ್ಲಿ ಹ್ಯಾಗೆ ಪ್ರಶ್ನೆಯ ಕಾಗದಗಳು ಉಮೇದವಾರರಿಗೆ ಮುಂದಾಗಿ ತಿಳದು ಬಂದಿದ್ದವೋ, ಅದರಂತೆ ಈ ವರುಷವಲ್ಲಿಯೂ ಕೆಲವು ಫಸ್ಟ್ ಬಿ. ಎ. ಉಮೇದ್ವಾರರಿಗೆ ತಿಳದು ಬಂದಿವೆಂತ ಒಬ್ಬ ವಿದ್ಯಾರ್ಥಿಯು ತನ್ನ ರುಜುನಿಶಿ ಇಲ್ಲಿನ ಒಂದು ಡೆಯಿಲೀ ಪತ್ರಿಕೆಗೆ ಬರೆದಿರುತ್ತಾನೆ.—ಕ. ಸು.

ಮಹಾರಾಜ ಧುಲೀಪಸಿಂಗರವರು ಪಾರಿಸ್ ಪಟ್ಟಣದೊಳಗೆ ಯಾವನೊಬ್ಬ ಇಂಗ್ಲಿಷನಿಗೂ ಭೇಟಿಯಾಗದೆ ಯಾವಾಗಲೂ ಏಕಾಂತವಾಸದೊಳಗಿರುತ್ತಾರೆಂತಲೂ, ಇದರ ಕಾರಣವು ಅವರು ತಮ್ಮ ಕುಟುಂಬದೊಳಗಿನವರ ಚರಿತ್ರೆಯನ್ನು ಬರೆಯುವದರಲ್ಲಿ ನಿಮಗ್ನರಾಗಿರುತ್ತಾರೆಂಬದೇ ಯೆಂದೂ ಒಂದಾನೊಂದು ಪತ್ರಿಕೆಯಿಂದ ತಿಳಿಯುತ್ತದೆ.

ಒಬ್ಬ ಹುಚ್ಚು ಮುಸಲ್ಮಾನನು ಕಲ್ಕತ್ತೆಯೊಳಗಿನ ಒಬ್ಬ ಮ್ಯಾಜಿಸ್ಟ್ರೇಟನಿಗೆ ಒಂದು ವಿಲಕ್ಷಣವಾದ ಅರ್ಜಿಯನ್ನು ಬರೆದಿದ್ದಾನಂತೆ ಅದೇನಂದರೆ, "ನಾನು ವಿಲಾಯತಿಗೆ ಹೋದಾಗ ಮಹಾರಾಣಿ ಮೊರೆಗಳವರು ತಮ್ಮ ಕುಮಾರ್ತೆ ಯಾದ ಬ್ಯಾಟ್ರಿಸ್ ಎಂಬವಳನ್ನು ನನಿಗೆ ಲಗ್ನ ಮಾಡಿಕೊಡುತ್ತೇವೆಂದು ವಚನಕೊಟ್ಟಿದ್ದರು. ಕಾನ್‌ಸ್ಟಾಂಟಿನೋಪಲಿನ ಸುಲ್ತಾನನು ನನಿಗೆ ಕೊಟ್ಟ ಹಣವನ್ನು ನಾನು ರಾಣಿ ಸಾಹೆಬರಿಗೆ ಕೈಗಡವಾಗಿ ಕೊಟ್ಟೆನು. ಈಗ ಅವರು ತಮ್ಮ ಮಗಳನ್ನೂ ಕೊಡುವದಿಲ್ಲ, ಅಥವಾ ನಾನುಕೊಟ್ಟ ಹಣವನ್ನೂ ಸಹ ನನಿಗೆ ತಿರಿಗಿ ಕೊಡುವದಿಲ್ಲ, ಮತ್ತು ಈ ದೇಶದ ರಾಜ್ಯವನ್ನು ನನಿಗೆ ಕೊಡಬೇಕೆಂದು ಲಾರ್ಡ್ ಮೇಯೋರವರ ಹತ್ತರ ಮಾತಾಡಿದ್ದೆನು; ಆದರೆ ಅವರೂ ಅದನ್ನು ದುರ್ಲಕ್ಷಿಸಿದರು, ಎಂಬದು.

ಮೊಹರಂ ಅಥವಾ ಬಾಬಯ್ಯದೇವರಹಬ್ಬ—ಮಹಾ ಗುರುಗಳಾದ ಮಹಮ್ಮದ ಎಂಬವರ ಮೊಮ್ಮಕ್ಕಳಾದ ಹಸೆನ ಹುಸೇನ ಎಂಬವರು ಮಹಾವಿಯಾ ಎಂಬ ಧೊರೆಯ ಮಗನಾದ ಯಜೀದ್ ಎಂಬವನೊಡನೆ ಕರಬಲಾ, ಮೈದಾನದಲ್ಲಿ ಯುದ್ಧಮಾಡಿದ ಕಾಲ. ಮೊಹರಂ ಅಂದರೆ ದುಃಖ ಕಾಲ. ಯಜೀದನು ಜಯಪ್ರದವನ್ನು ಹೊಂದಿದ ತರುವಾಯ ಅವನ ಸೈನ್ಯಗಳು ಹಸೆನ ಹುಸೇನ ದೇವರುಗಳ ದೇಹವನ್ನು ತುಂಡು ತುಂಡಾಗಿ ದಂಡಿಸಿ ಖಂಡಿಸಿ ಅವರ ಕೈಗಳನ್ನು ಕತ್ತರಿಸಿ ಕಡ್ಡಿಗಳಿಗೆ ಪೋಣಿಸಿಕೊಂಡು ಅವರ ಕರುಳುಗಳನ್ನು ಮಾಲೆಯಾಗಿ ಧರಿಸಿಕೊಂಡು ಜಯಪ್ರದಹೊಂದಿದ ಸಂತೋಷದಲ್ಲಿ ಕುಣಿದಾಡುತಿದ್ದರಂತೆ. ಈಗಿನ ಮುಸಲ್ಮಾನರು ತಾವುಮಾಡುವದನ್ನು ತಾವೇ ಗ್ರಹಿಸದೆ ಯಜೀದನ ಸೇವಕರಂತೆ ತಮ್ಮ ಗುರುಮರಿಗಳನ್ನು ದೂಷಿಸುತ್ತಾ ದಿಗಂಬರರಾಗಿ ಬೀದಿಗಳಲ್ಲಿ ಕುಣಿದಾಡುತ್ತಾ ತಿರುಗಾಡುವದು ಅತಿ ಚೋದ್ಯ! ಕೀಳುಜಾತಿಯವರಾದ ಹಿಂದೂಜನರು ಇವರುಗಳೊಡನೆ ಸೇರಿಕೊಂಡು ಕುಣಿದಾಡುವದು ಇನ್ನೂ ವಿಶೇಷ.

ಕಳೆದ ಸೋಮವಾರದಿಂದ ಯೂನಿವರ್ಸಿಟಿ ಪರೀಕ್ಷೆಗಳಿಗೆ ಪ್ರಾರಂಭವಾಯಿತು. ಬಿ. ಇ., ೧ನೇ ಬಿ. ಎ., ಎಫ್. ಸಿ. ಇ., ೧ನೇ ಬಿ. ಎಲ್. ಸಿ., ಈ ಪರೀಕ್ಷೆಗಳು ಮುಗಿಯುತ್ತಾ ಬಂದವು ಮುಂದಿನ ಸೋಮವಾರ ೨ನೇ ಬಿ. ಎ., ಎಲ್. ಎಲ್. ಬಿ. ಪರೀಕ್ಷೆಗಳು ಪ್ರಾರಂಭವಾದವು. ಹೋದವರುಷ ಯೂನಿವರ್ಸಿಟಿ ಪರೀಕ್ಷೆಗಳಲ್ಲಿ ಆದ ಗಡಿಬಿಡಿಯು ಪುನಃ ಈ ವರುಷವೂ ಆಗದಂತೆ ಯೂನಿವರ್ಸಿಟಿ ಅಧಿಕಾರಿಗಳು ಅತಿಶಯ ಜಾಗ್ರತೆ ತೆಗೆದುಕೊಳ್ಳುತ್ತಾರಂತೆ. ನಾಳೆ ಪರೀಕ್ಷೆ ಆಗುವ ವಿಷಯದ ಪ್ರಶ್ನೆಗಳನ್ನು ಈ ಹೊತ್ತು ಇಂತಿಷ್ಟೇ ಘಂಟೆಗೆ ಪರೀಕ್ಷಕರು ತಂದು ರಿಜಿಸ್ಟ್ರಾರವರ ಕೈಯಲ್ಲಿ ಕೊಡುತ್ತಾರೆ. ಇವರು ಕೂಡಲೇ ಅವುಗಳನ್ನು ತೆಗೆದುಕೊಂಡು ಹೋಗಿ ಸರ್ಕಾರ್ ಛಾಪಖಾನೆಯಲ್ಲಿ ಛಾಪಿಸಲಿಕ್ಕೆ ಕೊಡುತ್ತಾರೆ. ಅಂದಿನಿಂದ ಪ್ರಶ್ನೆಯ ಕಾಗದಗಳನ್ನು ಹುಡುಗರಿಗೆ ಹಂಚುವವರಿಗೆಭಾವಿ ಕೆಲಸ ಮಾಡುವವರನ್ನು ಹೊರಗೆ ಬಿಡದೆಬೀಗದ ಕೋಣೆಯಲ್ಲಿ ಇಟ್ಟುಬಿಡುತ್ತಾರಂತೆ! ಪ್ರಶ್ನೆಗಳು ಹೊರಬೀಳುವ ದ್ವಾರವು ಛಾಪಖಾನೆಯೊಂದೇ ಆದರೆ ಯೂನಿವರ್ಸಿಟಿಯ ಅಧಿಕಾರಿಗಳು ತೆಗದುಕೊಂಡ ಈ ಮುಂಜಾಗ್ರತೆಯು ಕೆಲಸಕ್ಕೆ ಬಿದ್ದೀತು. ಆದರೆ ಇದೊಂದೇ ದ್ವಾರವಲ್ಲದಿದ್ದರೆ ಇದರಿಂದ ವಿಶೇಷ ಪ್ರಯೋಜನವಾದೀತೆಂದು ನಾವು ತಿಳಿಯುವದಿಲ್ಲ.

ವರ್ತಮಾನ ಪತ್ರಿಕೆಗಳ ಸ್ಥಿತಿಯನ್ನು ಮೇಲ್ಪಡಿಸಲಿಕ್ಕೆ ಯಾವ್ಯಾವರೀತಿಗಳುಂಟು ಆದರೆ ಇತ್ತಲಾಗಿ ಹಲವು ವರ್ತಮಾನ ಪತ್ರಕರ್ತರು ಇವಕ್ಕೊಂದು ಸುಲಭ ಉಪಾಯವನ್ನು ಹುಡಿಕಿ ತೆಗದಿದ್ದಾರೆಂದು ಕಾಣುತದೆ. ಅದೇನಂದರೆ —ತಮ್ಮಷ್ಟಕ್ಕೆ ತಮ್ಮ ದೊಡ್ಡಸ್ತಿಕೆಯ ಹೊಗಳಿಕೆಯನ್ನು ಬಡಕೊಳ್ಳುತ್ತಿರುವದು! ಒಬ್ಬರು ನಮ್ಮ ಪತ್ರವು ಅತಿಶಯವಾಗಿ ಪ್ರಸಾರವಾಗುತದೆ, ಇನ್ನೊಬ್ಬರು ನಮ್ಮ ಪತ್ರದ ಪ್ರಸಾರವು ಒಂದೇ ವರುಷಕಾಲದಲ್ಲಿ ಈ ಭಾಷೆಯ ಇತರ ಎಲ್ಲ ಪತ್ರಗಳ ಪ್ರಸಾರಕ್ಕೂ ಮಿಕ್ಕಿಹೋಯಿತೆಂದು ಹೇಳಲಿಕ್ಕೆ ನಾವು ಬಹಳ ಸಂತೋಷಪಡುತ್ತೇವೆ, ಈ ಪ್ರಕಾರ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ದೊಡ್ಡಸ್ತಿಕೆಯ ಡೌಲು ತೋರಿಸಿ ಅಲ್ಪ ಸ್ವಲ್ಪ ಮಹತ್ವ ಹೊಂದಲಿಕ್ಕೆ ಪ್ರಯತ್ನಿಸುತ್ತಾರೆ. ಈಗ, ವರ್ತಮಾನಪತ್ರಕರ್ತರು ತಮ್ಮ ಪತ್ರದ ಪ್ರಸಾರವನ್ನು ಜಾಹೀರಗ ಪಡಿಸುವದಕ್ಕೆ ಎಷ್ಟು ಆತುರವುಳ್ಳವರಾಗಿರುತ್ತಾರೆಂಬದು ಗೂಢವಾದ ಸಂಗತಿಯಲ್ಲ. ಹೆಂಗಸರಿಗೆ ವಯಸ್ಸು ಕೇಳಿದರೆ ಹ್ಯಾಗೋ, ಪಕ್ಕೀರಿಗೆ, ತಂದೆಯ ಹೆಸರು ಕೇಳಿದರೆ ಹ್ಯಾಗೋ ಹಾಗೆಯೇ ವರ್ತಮಾನ ಪತ್ರಕರ್ತರಿಗೆ ಅವರ ಪತ್ರಗಳ ಪ್ರಸಾರವೆಷ್ಟೆಂದು ಕೇಳಿದರೆ ಹಿತವಾಗುವದಿಲ್ಲ. ಅವರು ತಮ್ಮ ಪತ್ರಕ್ಕೆ ಸಂಬಂಧವಾಗುವ ಯಾವ ಗುಪ್ತಸಂಗತಿಯನ್ನು ಹೇಳದೇ ಇದ್ದರೂ ಒಂದುವೇಳೆ ಹೇಳ್ಯಾರು, ಆದರೆ ಪತ್ರದ ಪ್ರಸಾರವೆಷ್ಟೆಂಬದುಮಾತ್ರ ಅವರ ಬಾಯಿಂದ ಎಂದೂ ಹೊರಬೀಳಲಿಕ್ಕಿಲ್ಲ. ಇದಕ್ಕೆ ಅಪರೂಪ ಅಪವಾದಗಳುಂಟು. ಆದರೆ ಇಂಥವರು ತಮ್ಮ ಪತ್ರದ ಪ್ರಸಾರವೆಷ್ಟೆಂಬದನ್ನು ತಮ್ಮ ಪತ್ರದ ಮೇಲೆಯೇ ಸ್ಪಷ್ಟವಾಗಿ ಬರೆಯಲು ಧೈರ್ಯಗೊಳ್ಳುತ್ತಾರೆ. ಇತರರು "ಅತಿಶಯಪ್ರಸಾರ"ವೆಂಬ ಪದದಲ್ಲೇ ಸಮಾಧಾನ ಹೊಂದುತ್ತಾರೆ. ಹೀಗಿರುತ್ತಾ ತಮ್ಮ ಭಾಷೆಯ ಇತರ ಪತ್ರಗಳ ಪ್ರಸಾರಕ್ಕಿಂತಲೂ ತಮ್ಮಪತ್ರದ ಪ್ರಸಾರವು ಒಂದೇ ವರುಷ ಕಾಲದಲ್ಲಿ ಮಿಕ್ಕಿಹೋಯಿತೆಂದು ಡೌಲು ಮೆರಿಸುವವರಿಗೆ ತಮ್ಮ ಭಾಷೆಯ ಇತರ ಪತ್ರಗಳ ಪ್ರಸಾರವು ಹ್ಯಾಗೆ ತಿಳಿಯಿತೆಂಬದು ಒಂದು ಆಶ್ಚರ್ಯದ ಮಾತೇ ಸರಿ. ಒಂದುವೇಳೆ ತಮ್ಮ ಪತ್ರದ ಪ್ರಸಾರವು ಎಷ್ಟು ಬೆಳೆಯಿತೆಂದು ಧೈರ್ಯವಿದ್ದರೆ (ಕೇಸರಿ) ಮುಂತಾದ ಕೆಲವು ಪತ್ರಕರ್ತರಂತೆ ಪ್ರತಿ ವಾರಕ್ಕೆ ತಮ್ಮ ಪತ್ರದ ಯೆಷ್ಟು ಪ್ರತಿಗಳು ಖರ್ಚಾಗುತವೆಂದು ಬರೆಯಲಿಕ್ಕೆ ಅಡ್ಡಿ ಉಂಟೋ! ನಮಗೇನೂ ತೋರುವದಿಲ್ಲ. ಹೀಗೆ ಮಾಡದೆ ಎಲ್ಲಿ ಯೂ ಕೈಹಾಲು ತೆಗೆದಂತಾ ಮಾತುಗಳಿಂದ ಆತ್ಮಸ್ತುತಿಯನ್ನು ಮಾಡಿಕೊಳ್ಳುವದು ಯೋಗ್ಯವೆಂದು ತೋರುವದಿಲ್ಲ. ಇದನ್ನಾದರೂ ಅನ್ಯರಿಗೆ ಯೆಷ್ಟರವರಿಗೆ ಬಾಧಿಸುವದಿಲ್ಲವೋ ಅಷ್ಟರವರಿಗೆ ಯಾರೂ ಸಹನ ಮಾಡುವದು ಸರಿಯೇ. ಆದರೆ ತಮ್ಮ ಭಾಷೆಯೊಳಗಿನ ಇತರ ಪತ್ರಗಳ ಮಹತ್ವವು ಕಡಿಮೆಯಾಗಿ ತಮ್ಮ ಶ್ರೇಷ್ಠತ್ವವೇ ಜನರ ಮನಸ್ಸಿನಲ್ಲಿ ಬಿಂಬಿಸುವರೀತಿಯಲ್ಲಿ ಆತ್ಮ ಸ್ತುತಿಯನ್ನು ಮಾಡಿಕೊಳ್ಳುವದುಒಳ್ಳೇ ಒಳ್ಳೇ ಪ್ರಶಸ್ತವಾಗಿ ಕಾಣುವದಿಲ್ಲ. ಒಬ್ಬರ ಡಂಭಾಚಾರದ ಮಾತುಗಳಮೇಲೆ ಇನ್ನೊಬ್ಬರ ಮಹತ್ವವು ಅವಲಂಬಿಸಿದ್ದೀತೆಂದುನಮಗಂತೂ ಕಾಣುವದಿಲ್ಲ, ಇನ್ನೇನೋ! ಇಂಥಾ ಆತ್ಮಸ್ತುತಿಯಿಂದ ಸ್ವತಃ ತಮಗೂ ವಿಶೇಷ ಲಾಭವಾದೀತೆಂದು ಅವರು ತಿಳಕೊಳ್ಳುವದೂ ಯೋಗ್ಯವಲ್ಲ. ಇದರಿಂದ ಒಂದುವೇಳೆ ಅಜ್ಞ ವಾಚಕರಿಗೂ ಕೆಲವು ವ್ಯಾಪಾರಿಗಳಿಗೂ ಕೆಲವು ದಿನಗಳ ಮಟ್ಟಿಗೆ ಭ್ರಮೆಗೊಳಿಸಲಿಕ್ಕಾದೀತೇ ಹೊರ್ತು ಇನ್ಯಾವ ಪ್ರಯೋಜನವೂ ನಮಗೆ ತೋರುವದಿಲ್ಲ. ವರ್ತಮಾನ ಪತ್ರಗಳ ನಿಜವಾದ ಬೆಲೆಯು ಜನರಿಗೆ ತನ್ನಷ್ಟಕ್ಕೆ ತಿಳಿಯದೆ ಇರದು.

ಕನ್ನಡಸುವಾರ್ತೆ.

ಬ್ರಹ್ಮದೇಶದ ವಿಷಯವನ್ನು ಕುರಿತು.

ಇಂಗ್ಲಿಷರು ಬ್ರಹ್ಮದೇಶವನ್ನು ಕೈವಶ ಮಾಡಿಕೊಂಡದರಿಂದ ನಮ್ಮ ಹಿಂದುಸ್ಥಾನವು ಎಷ್ಟರಮಟ್ಟಿಗೆ ಲುಕ್ಸಾನನ್ನು ಸಹಿಸಬೇಕಾಯಿತೆನ್ನುವದು ಈ ಮೊದಲು ನಾವು ಕೊಟ್ಟ ವಿಷಯಗಳನ್ನೋದಿದ ಎಲ್ಲ ಚಿಕ್ಕ ವಾಚಕರಿಗೂ ವಿದಿತವೇ ಇದೆ. ದುರ್ದೈವದಿ ಥೀಬಾರಾಜನನ್ನು ಪದಚ್ಯುತ ಮಾಡಿದ ಕಾಲದಲ್ಲಿ, ನಮ್ಮ ಲಾರ್ಡ್ ಡಫ್ರಿನ್ ರಾಯ ದೊರೆಗಳವರು ಮಾಡಿದ ಭಾಷಣದಲ್ಲಿ ಈ ಬ್ರಹ್ಮದೇಶವನ್ನು ತೆಗದುಕೊಂಡದ್ದರಿಂದ ಇಂಗ್ಲಿಷರಿಗೂ ಹಾಗೂ ಹಿಂದುಸ್ಥಾನದವರಿಗೂ ಕೂಡಾ ಬಹಳ ಲಾಭವಾಯಿತೆಂದು ಆಡಿ ತೋರಿಸಿದರು. ಆದರೆ ಅಂದಿನಿಂದ ಇಂದಿನವರಿಗೂ ಅಲ್ಲಿ ನಡೆದ ಹಾಗೂ ನಡಿಯುತ್ತಲಿರುವ ಪ್ರತಿ ದಿವಸದ ಭಯಂಕರವಾದ ಪರಿಣಾಮದ ವಿಷಯದಲ್ಲಿ ಯಾವ ರೀತಿ ವೃತ್ತಾಂತಗಳು ಕೇಳ ಬರುತ್ತವೋ, ಅವೆಲ್ಲ ನಮ್ಮ ವೈಸರಾಯರವರು ಮಾಡಿದ ಭಾಷಣಕ್ಕೆ ಅಗದೀ ವಿರುದ್ಧವಿರುತ್ತವೆ. ಬ್ರಹ್ಮದೇಶವನ್ನು ಕೈವಶ ಮಾಡಿಕೊಂಡಂದಿನಿಂದ ಅಲ್ಲಿಯ ಜನರ ಸ್ಥಿತಿಯು ಹ್ಯಾಗೆ ಅಶಾಂತತೆಯನ್ನು ಹೊಂದಿರುತ್ತದೋ ಅದರಂತೆ ನಾವು ಸದಾ ಶಾಂತತೆಯನ್ನು ಪಡೆಯಲಿಲ್ಲ. ಇದುವರಿಗೆ ಬರ್ಮಾದೇಶದ ಸಂಬಂಧವಾಗಿ ಹಿಂದುಸ್ಥಾನದ ಜನರ ದ್ರವ್ಯಗಳು ನಿರರ್ಥಕವಾಗಿ ವ್ಯಯವಾದವು ಮತ್ತು ಒಳ್ಳೊಳ್ಳೇ ಗೃಹಸ್ಥರನೇಕರು ಆ ದೇಶಕ್ಕಾಗಿ ಬಲಿಬಿದ್ದರು. ಇಷ್ಟೇ ಅಲ್ಲ ಇನ್ನು ಮುಂದೆ ಪ್ರತಿ ವರುಷಕ್ಕೆ ೧೧,೦೦,೦೦೦ ರೂಪಾಯಿಗಳು ಆ ದೇಶದ ಖರ್ಚಿನ ಬಗ್ಗೆಗಿ ಅಂದಾಜ್ ಮಾಡಿ ಅವನ್ನು ಈ ಹಿಂದುಸ್ಥಾನದಿಂದಲೇ ಹಾಕಬೇಕೆಂದು ನಿಶ್ಚಯಿಸಿದ್ದಾರೆ. ಯಾವ ಕ್ಷುಲ್ಲಕ ವಿಷಯಕ್ಕಾಗಿ ಇಂಗ್ಲಿಷರಿಗೆ ಇಂಥ ಅವಿಚಾರ ಬುದ್ಧಿ ಪ್ರಾಪ್ತವಾಯಿತೋ! ಇದು ಕೈಸ್ತರ ಅನೇಕ ಪ್ರಾಣಗಳು ಹಾಗೂ ದ್ರವ್ಯ ಸಹ ನಷ್ಟವಾಯಿತು. ಇದರ ಬಗ್ಗೆಗಿ ನಮ್ಮ ವೈಸರಾಯ ದೊರೆಗಳವರ ಮೈಸೂ ಭಾಷಣವು ಮುಂದೆ ನಮಗೆ ಯಾವ ವಿಧವಾದ ಅನುಪಕಾರಕ ಹಿತವನ್ನುಂಟು ಮಾಡೀತೋ ಅದೇನೂ ನಮಗೆ ಕಲ್ಪನೆ ಸಹ ಆಗುವದಿಲ್ಲ. ಈ ದೇಶವನ್ನು ತೆಗದುಕೊಳ್ಳುವ ಕಾಲದೊಳು ಪಾರ್ಲಮೆಂಟ "ಹೌಸ್ ಆಫ್ ಕಾಮನ್ಸ್" ದಲ್ಲಿ ಮಿ. ಹಂಟರ್ ಮತ್ತು ಮಿ. ಸ್ಮಿತ್ ಮುಂತಾದವರು ಭುಂಜಾಸ್ತೋಷ ಮಾಡಿದ್ದರ ತಾತ್ಪರ್ಯವು ಈಗಲಾದರೂ ಜನರಿಗೆ ಸ್ಪಷ್ಟವಾಗದಿರದು. ಆ ಕಾಲದಲ್ಲಿ ಇಂಗ್ಲಿಷರಿಗೆ ಹ್ಯಾಗಾದರೂ ಖರ್ಚನ್ನು ಮೆಲ್ಲಗೆ ಹಿಂದುಸ್ಥಾನದ ಮೇಲೆ ಹೊರಿಸಿ ಅದರಿಂದಾಗುವ ಮಹಾ ಲಾಭವನ್ನು ನಾವೇ ಅನುಭವಿಸಲಿಕ್ಕೆ ಪಾತ್ರರಾದೇವೆಂಬ ಕಲ್ಪನೆ ಬಂದಿತ್ತೋ! ಅದಲ್ಲ ಈಗ ಬರ್ಮಾಯಲ್ಲಿ ಜೋರು ಮಾಡಿದಂತಾಗಿರುತ್ತದೆ. ಅಲ್ಲಿರುವ ಮಿಲಿಟರಿ ಜನರು ಆ ಬರ್ಮಾ ಜನರ ಮೇಲೆ ಯಾವ ಪ್ರಕಾರವಾದ ಜುಲುಮನ್ನು ನಡಿಸುತ್ತಾರೆಂಬವನ್ನು ಕುರಿತು ಬರುವ ಸಂಗತಿ ವೃತ್ತಾಂತಗಳನ್ನು ನೋಡಿದರೆ ಬಹು ದುಃಖಕರವಾಗಿರುತ್ತವೆ. ಅವರ ದೇವಾಲಯಗಳನ್ನು ಕೆಡಿಸುವದೂ ಹಾಗೂ ಆ ಬೌದ್ಧಗುರುಗಳನ್ನು ಪೀಡಿಸುವದೂ ಇದೆಲ್ಲ ಆ ಜನರ ಶಾಂತತೆಯ ಉಪಾಯವೆಂದು ಆ ಸೈನ್ಯದ ಮುಖ್ಯಸ್ಥರು ತಿಳಕೊಂಡು ತಮ್ಮ ಕೈಕೆಳಗಿನವರಿಗೆ ಈ ರೀತಿ ಕಾರ್ಯಭಾಗ ನಡಿಸುವದಕ್ಕೆ ಅನುಮೋದನ ಕೊಟ್ಟದ್ದರೆ ಮಾತ್ರ ಅವರಂಥ ಬುದ್ಧಿ ಶೂನ್ಯರು ಈ ಜಗತ್ತಿನಲ್ಲಿಯೇ ಶಿಕ್ಕಲಾರರೆಂದರೂ ಅಡ್ಡಿಇಲ್ಲ. ಜನರ ಶಾಂತತೆಗೆ ಸಾಮೋಪಚಾರದಂಥ ಮುಖ್ಯವಾದ ಉಪಾಯವು ಇನ್ಯಾವದೂ ಇರಲಾರದು. ಒಟ್ಟಿನ ಮೇಲೆ ಇಷ್ಟರಮಟ್ಟಿಗೆ ಹೇಳಬಹುದಲ್ಲ. ಬರ್ಮಾದೇಶವು ಬಹು ದುಸ್ಸಹ ಸ್ಥಿತಿಯಲ್ಲಿರುತ್ತದೆ. ಅಲ್ಲಿ ಶಾಂತತೆಯನ್ನು ಕಾಣಬೇಕಾದರೆ ಇನ್ನೂ ಅನೇಕ ವರುಷಗಳು ಬೇಕಾದಾವು. ಅದುವರೆಗೆ ನಿಷ್ಕಾರಣದಿಂದ ಅನ್ಯಾಯವಾಗಿ ಹಿಂದುಸ್ಥಾನವು ದಂಡ ತೆರಬೇಕಾಗುವದು. "ಅಗಸಿಯ ದೋಷ್ಕ್ಕೆ ಪರದೇಶಿಯ ತಲೆ" ಯಾರಪ್ಪನ ಗಂಟೇನು ಸರಿಯಾಯಿತು.

THE MYSORE GAZETTE
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಹೊರಹೊರಟಾದ ಇಸ್ತಿಹಾರ್‌ನಾಮೆಗಳು

ಕ್ಯಾಂಪ್ ನಂಬರ್—೯೧೦ ತಾ|| ೬ನೇ ನವೆಂಬರ್ ೧೮೮೬—ಬೆಂಗಳೂರು ರೀಕ್ ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ಇದರಡಿಕಂಡ ಅಮಲ್ದಾರರ ವರ್ಗಾವರ್ಗಗಳು ಮಂಜೂರ್ಮಾಡಲ್ಪಟ್ಟವೆ. ಗೋರೀಬಿದನೂರು ತಾಲ್ಲೂಕು ಅಮಲ್ದಾರ್ ಶೇ ಶಾಮೈಯ್ಯಂಗಾರ್ಯರು ಮಾಲೂರು ತಾಲ್ಲೂಕಿಗೆ ಅಮಲ್ದಾರಾಗಿ ಕೂಡಲೇ ಅಲ್ಲಿಗೆ ಹೋಗಿ ಹಾಜರಾಗತಕ್ಕದ್ದು. ಮಾಲೂರುತಾಲ್ಲೂಕು ಅಮಲ್ದಾರರು ಮಿಯರ್ ನಿಜಾಮುದ್ದೀನ್ ಅಲ್ಲೀಖಾನರು ಗೋರೀಬಿದನೂರು ತಾಲ್ಲೂಕು ಅಮಲ್ದಾರರಾಗಿ ಕೂಡಲೇ ಕೆಲಸದಮೇಲೆ ಹಾಜರಾಗತಕ್ಕದ್ದು.

ಕ್ಯಾಂಪ್ ನಂ. ೯೯೬—ಕ್ರಿಮಿನಲ್ ಪ್ರೊಸಿಜರ್ ಕೋಡಿನ ೧೦ನೇ ಸೆಕ್ಷನ್ ಪ್ರಕಾರ ಮೈಸೂರು ತಾಲ್ಲೂಕು ಅಮಲ್ದಾರ್ ಎಂ ಚೆಂಗಯ್ಯ ಶೆಟ್ಟರಿಗೆ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟವೆ.

ಕ್ಯಾಂಪ್ ನಂ ೧೦೦೫—ಇದರಡಿಕಂಡ ಅಮಲ್ದಾರರ ವರ್ಗಾವರ್ಗಗಳು ಮಂಜೂರ್ಮಾಡಲ್ಪಟ್ಟವೆ. ಶಿಕಾರಿಪುರ ತಾಲ್ಲೂಕು ಅಮಲ್ದಾರ್ ವಿ ಸೀತಾರಾಮಯ್ಯನವರು ಜಗಳೂರುತಾಲ್ಲೂಕು ಅಮಲ್ದಾರ್ ವ ಮೂರನೇಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೂಡಲೇ ಕೆಲಸದಮೇಲೆ ಹಾಜರಾಗತಕ್ಕದ್ದು. ಜಗಲೂರುತಾಲ್ಲೂಕು ಅಮಲ್ದಾರ್ ಶ್ರೀನಿವಾಸರಾಯರವರು ಕಡೂರು ತಾಲ್ಲೂಕು ಅಮಲ್ದಾರರಾಗಿ ಕೂಡಲೇ ಕೆಲಸದಮೇಲೆ ಹಾಜರಾಗತಕ್ಕದ್ದು.

ನಂ ೧೯೬—ತಾ|| ೧೦ನೇ ನವಂಬರ್ ೬—ಮಿ ವಿ ಎ. ಮಾಧವರಾವ್ ಬಿ ಎ ಯವರು ೧೮೮೬ನೇ ಇಸವಿ ನವಂಬರ್ ೩ ನೇತಾರೀಖಿನಪ್ರಾರ್ವನ್ಹದಲ್ಲಿ ಶಿವಮೊಗ್ಗಾ ಡಿ|| ಡೆಪ್ಯೂಟಿಕಮಿಷ್ನರವರ ಆಫೀಸ್ ಚಾರ್ಜನ್ನು ಮರಳಿ ವಹಿಸಿದರು.

ನಂ ೧೯೭—ತುಮಕೂರ್ ಮುನ್ಸಫ್ ಸರದಾರ ರಾಜಯ್ಯಂಗಾರ್ಯರಿಗೆ ಮಾಹೇಮಜಕೂರ್ ೧೦ನೇತಾರೀಖಿನಿಂದ ಅರ್ಜಿತಲಬಿನಮೇಲೆ ೩ ಪ್ಪತ್ತುರುದಿನಗಳ ಪ್ರಿವಿಲೀಜ್‌ರಜಾ ಕೊಡಲ್ಪಟ್ಟಿರುತಿವೆ.

ಹಾಸನ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರ್ ಮತ್ತು ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಮ|| ಕೆ. ರಾಮಚಂದ್ರರಾಯರವರಿಗೆ, ೧೮೮೨ನೇ ಇಸವಿ ೧ನೇ ನಂಬರ್ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ ೩೭ನೇ ಸೆಕ್ಷನ್ ಪ್ರಕಾರ ಇದರಡಿಕಂಡ ಅಧಿಕಾರಗಳು ಕೊಡಲ್ಪಟ್ಟಿರುತಿವೆ.

೧ ಕ್ರಿಮಿನಲ್ ಪ್ರೊಸಿಜ್ಯೂರ್‌ಕೋಡಿನ ೧೮೩ನೇ ಸೆಕ್ಷನ್ನನುಸರಿಸಿ ಬಾನ್‌ಬಾರ್ ಕೇಸುಗಳು ಮಾಡಿಸಿರುವಂತೆ ಹುಕುಂಮಾಡುವದಕ್ಕೆ.

೨ ಪಿನಲ್‌ಕೋಡಿನ ೧೪೪ನೇ ಸೆಕ್ಷನ್ನಿನ ಪ್ರಕಾರ ಹುಕುಂಮಾಡಲಿಕ್ಕೆ.

೩ ಐಪಲ್‌ಕೋಡಿನ ೧೭೪ನೇ ಸೆಕ್ಷನ್‌ಪ್ರಕಾರ ಮರಣಕಾರಣವನ್ನು ವಿಚಾರಣೆಮಾಡಲಿಕ್ಕೆ.

೪. ಐಪಲ್‌ಕೋಡಿನ ೧೯೦ನೇ ಸೆಕ್ಷನ್ ಪ್ರಕಾರ ಫಿರ್ಯಾದಿಬಂದಮೇಲೆ ತಕ್ಸೀರ್‌ಗಳವಿಚಾರಣೆ ತೆಗದುಕೊಳ್ಳಲಿಕ್ಕೆ.

೫. ಐಪಲ್‌ಕೋಡಿನ ೧೯೦ನೇ ಸೆಕ್ಷನ್ ಪ್ರಕಾರ ಪೊಲೀಸ್‌ನವರು ರಿಪೋರ್ಟುಮಾಡುವತಕ್ಸೀರ್‌ಗಳವಿಷಯದಲ್ಲಿ ವಿಚಾರಣೆ ತೆಗೆದುಕೊಳ್ಳಲಿಕ್ಕೆ.

BANGALORE —Printed and published for the Proprietor, at the KARNATIC PRESS.—1886

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧವೃತ್ತ [illegible] ಪ್ರಕಾಶನಪರಾಭಿಜಾತ್ಯನಿಶ್ಚಿತಾಹಿತೇಕ್ಷಿತಾ ॥ ಮೃಗಾಂಕಚಿಹ್ನಿತವಾಸರೇನಿಹಿತಮುದ್ರಣಾಸಜ್ಜನೈರ್ದ್ವಿಧಾಸುವರಿಪೂಜಿತಾದಿಕರ್ಣಾಟಸಂಸಂಸ್ಕೃತಾ॥

Vol. XIII.] BANGALORE—MONDAY, NOVEMBER 22, 1886. [No. 47.

ಸಂಪುಟ ೧೩.] ಬೆಂಗಳೂರು:—ಸನ್ ೧೮೮೬ನೇ ಇಸವಿ ನವಂಬರ್ ೨೨ನೇ ತಾರೀಖು ಸೋಮವಾರ. [ಸಂಚಿಕೆ ೪೭.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಮುಂಗಡ ಚಂದಾದ ದರ [illegible].

ಇಂಗ್ಲಿಷು ಮತ್ತು ಕನ್ನಡ [illegible] ೧೨—೦—೦

ಇಂಗ್ಲಿಷು [illegible] ೬—೦—೦

ಕನ್ನಡ [illegible] ೬—೦—೦

[illegible] ೦—೮—೦

[illegible]

ಪ್ರಕಟನೆಯ ರಿವಾಜ್.

[illegible] ೦—೩—೦

[illegible] ೦—೨—೦

NOTICE TO SUBSCRIBERS.

[illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA

Price including Postage, Rs. 5-0-0

ವೈದ್ಯಸಾರ ಸಂಗ್ರಹ.

[illegible]

[illegible] ರೂ॥ ೫—೦—೦

[illegible] ೦—೬—೦

[illegible]

ನೋಟೀಸ್.

ಯಲೆಕ್ಟ್ರೋ ಗ್ಯಾಲ್ವಾನಿಕ್ ರಿಂಗ್, ಲಾಕೆಟ್, ಸಾಸ್ತ್ರ ಬಗೆ.

ಉಂಡೆ, ಉಂಡೆಗಾತ್ರಾ ಸಂಬಂಧವಾದ ಮತ್ತು ವಿದ್ಯುತ್ತಿನ ಶಕ್ತಿಪ್ರಸಾರ ಸಂಬಂಧವಾದ ಉಂಗರ, ಪತಕ, [illegible], ಇವುಗಳು, ಕಲ್ಕತ್ತ ಬಜಾರು [illegible] ನಂಬರ್ ಗೃಹದೊಳಗಿರುವ ಪಿ. ಸಿ. ದಾಸ್ [illegible]ರಿಂದ ತಯಾರಾಗಲ್ಪಡುತದೆ.

ಇವು ಸಕಲ ರೋಗಗಳಿಗೂ ಆಶ್ಚರ್ಯಕರವಾದ ಪರಿಹಾರಕವಾದವು



ಯುರೋಪಿಯನ್ ವೈದ್ಯಶಾಸ್ತ್ರಜ್ಞರು ನೇಟಿವ್ ವೈದ್ಯ ಪದ್ಧತಿಯನ್ನು [illegible] ರೋಗ ನಿವಾರಣೆ [illegible]

ಉಂಗರಗಳು—[illegible] ರೂ॥ ೧—೮—೦ ರೂಪಾಯಿ. ಪತಕ—[illegible] ರೂಪಾಯಿ, [illegible] ೧—೪—೦. ಲಾಕೆಟ್—[illegible] ರೂಪಾಯಿ, [illegible] ೧—೮—೦ [illegible] ಅಣೆ, [illegible] ಅಣೆ. ಉಂಗರಗಳು ಮತ್ತು [illegible] ಕಳುಹಿಸಲ್ಪಡುವವು.

ನೋಟಿಸ್.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನೆಂದರೆ.

ಸನ್ ೧೮೮೭ನೇ ಏಪ್ರಿಲ್ ಗುರ್ಸೇ ತಾರೀಖ್ ಥಾಗಾಯತು ಸನ್ ೧೮೮೮ನೇ ಮಾರ್ಚಿ ೩೧ನೇ ತಾರೀಖ್‌ವರಿವಿಗೆ, ಹೊಸೂರು ರಿಮೌಂಟ್ ಡಿಪೋಗೆ ಇದರಡಿ ನಮೂದ್ ಮಾಡಲ್ಪಟ್ಟಿರುವ ಜಿನಸಿಗಳು ಬೇಕಾಗಿರುವದರಿಂದ ಅವುಗಳ ಸರಬರಾಯ್ ಬಗ್ಯೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳನ್ನು ರಿಮೌಂಟ್ ಡೆಪೋ ಸೂಪರಿಂಟೆಂಡೆಂಟರವರು, ಸನ್ ೧೮೮೬ನೇ ಇಸವಿ ಡಿಸೆಂಬರ್ ೧೮ನೇ ಮಧ್ಯಾಹ್ನ ೧೨ ಘಂಟೆಯವರಿವಿಗೆ ಬರಮಾಡಿಕೊಳ್ಳುವರು.

ಇದನ್ನು ಕುರಿತ ಜಾಸ್ತಿ ತಪಸೀಲ್ ತಿಳಿಯಬೇಕಾದವರು, ಸನ್ ೧೮೮೬ನೇ ಇಸವಿ ನವಂಬರ್ ೫ನೇ ಮತ್ತು ೧೨ನೇ ನಂಬರ್ ಫೋರ್ಟ್ ಸೇಂಟ್ ಜಾರ್ಜ್ ಗೆಜೆಟ್ ೨ನೇ ಭಾಗ, ೧,೫೧೬ನೇ ಪುಟದಲ್ಲಿ ಪ್ರಕಟಿಸಿರುವ ಪ್ರಕಟನೆಯನ್ನು ನೋಡಿ ತಿಳಿದುಕೊಳ್ಳತಕ್ಕದ್ದು.

ಹುರಳಿ.

ನೆಲ್ಲುಹುಲ್ಲು.

ರಾಗೀ ಹುಲ್ಲು.

ಹಸೀ ಹುಲ್ಲು.

ರಿಮೌಂಟ್ ಡಿಪೋ ಹೊಸೂರು,

೧೩ನೇ ನವಂಬರ್, ೧೮೮೬.

JOHN LAING, COLONEL,
Supt, Reserve Remount Depot.

ಪ್ರಕಟನೆ.

ಮೈಸೂರು ದೇಶೀಯ ಪರೀಕ್ಷೆ.

ಅಂಕಗಣಿತದ ಕೀ.

[illegible] ಪರೀಕ್ಷೆಗೆ [illegible] ಅಂಕಗಣಿತ ಪುಸ್ತಕದಲ್ಲಿರುವ ಲೆಕ್ಕಗಳು ಸುಲಭವಾಗಿ [illegible] ತಿಳಿಯುವಂತೆ ಅಂಕಗಣಿತಾದರ್ಶವೆಂಬ ಗ್ರಂಥ [illegible] ಪ್ರಕಟಿಸಿ ಸಿದ್ಧಮಾಡಿದೆ. ಇದರ ಕ್ರೌನ್ ಆಕ್ಟೇವೊ ಸೈಜ್ [illegible]

ಒಟ್ಟಾಗಿ ೧೦ ಪ್ರತಿಗಳು ತೆಗೆದುಕೊಳ್ಳುವವರಿಗೆ ಒಂದು ಜಾಸ್ತಿ ಪ್ರತಿ ಕೊಡಲ್ಪಡುವದು. ಬೆಂಗಳೂರು ಮನಿ ಆರ್ಡರ್ ಮತ್ತು [illegible] ಕಳುಹಿಸತಕ್ಕದ್ದು. ಸ್ಟಾಂಪುಗಳು ಕಳುಹಿಸುವವರು ರೂ॥ ೧ಕ್ಕೆ [illegible] ಕಳುಹಿಸತಕ್ಕದ್ದು.

ಬೆಂಗಳೂರು, ೧೫—೧೧—೮೬. ವಿ. ಅಪ್ಪಾಜಿರಾವ್, ಬೆಂಗಳೂರು ನಗರ್ತಪೇಟೆ, ಕಾಸೀಸೆಟ್ಟಿ, ಕೋಮಟಿಸೇಟ್

ನೋಟಿಸ್.

ಇದರಿಂದ ಸಮಸ್ತರುಗಳಿಗೂ ತಿಳಿಯಪಡಿಸುವದೇನೆಂದರೆ.—

ಸನ್ ೧೮೮೬ನೇ ಇಸವಿ ಡಿಸೆಂಬರ್ ೩ನೇ ತಾರೀಖ್ ಮೊದಲು [illegible] ತಾರೀಖ್ ವರಿವಿಗೆ ಉಭಯದಿನಗಳು [illegible] ತಿರುಚ್ಚಾನೂರು ಅಥವಾ ಅಲಮೇಲುಮಂಗಾಪುರದಲ್ಲಿ ಶ್ರೀಮನ್ ಮಧ್ವಸಿದ್ಧಾಂತೋನ್ನಾಹಿನೀ ಸಭೆಯ ಸಾಂವತ್ಸರಿಕ ಸಭೆ ನಡೆಸಲ್ಪಡುವದಾಗಿ ಅದರ ಪ್ರೋತ್ಸಾಹಕರು, ಶ್ರೇಯೋಭಿಲಾಷಿಗಳು, ಮತ್ತು ಇತರ ದೊಡ್ಡ ಮನುಷ್ಯರು ಸಹ ದಯಮಾಡಿ ಸದರಿ ಸಭೆಯನ್ನು ಗೌರವಿಸಬೇಕೆಂದು ಇದರಿಂದ ಪ್ರಾರ್ಥಿಸಲ್ಪಡುತ್ತಾರೆ.

ಮುಕಾಂ ಬನೋಜಿಪ್,

ಕಂಚಿ ಸುಬ್ಬರಾವ್,

೧೪—೧೧—೮೬ ಆನರರಿ ಸೆಕ್ರೆಟರಿ.

ನೋಟಿಸ್.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೮೬ನೇ ಇಸವಿ ನವಂಬರ್ ೨೬ನೇ ತಾರೀಖ್ ಶುಕ್ರವಾರ ಪ್ರಾತಃಕಾಲ ೭½ ಘಂಟೆಗೆ ಸಿಟಿ ಮ್ಯುನಿಸಿಪಲ್ ಕಮಿಷನರ್‌ಗಳು ಡಿಸ್ಟ್ರಿಕ್ಟ್ ಆಫೀಸ್ ಕಛೇರಿಯಲ್ಲಿರುವ ತಮ್ಮ ಆಫೀಸಿನೊಳು ಮೀಟಿಂಗ್ ಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳು.

೧. ಸನ್ ೧೮೮೬ನೇ ಇಸವಿ ಅಕ್ಟೋಬರ್ ಮಾಹೇ ಬಾಬತು ಚಾಲತಿ ನಗದು ಜಮಾಖರ್ಚು ಲೆಕ್ಕಗಳು ಮತ್ತು ಮರಣಲೆಕ್ಕಗಳು.

೨. ದೇವೀಗಾರ್ಡನ್ ಹಾಕಿಕೊಳ್ಳಬೇಕಾದ್ದು ಅನಿವಾರ್ಯ ವಾದದ್ದೆಂಬ ವಾಡಿಕೆಯನ್ನು ಬೆಂಗಳೂರು ಷಹರಿನಲ್ಲಿ ಜಾರೀಗೆ ತರಬೇಕೆಂದು ಸೂಚಿಸಿ ಮೈಸೂರು ಗವರ್ನಮೆಂಟ್ ಸೀನಿಯರ್ ಸರ್ಜನ್‌ರವರು ಬರೆದ ಸನ್ ೧೮೮೬ನೇ ಇಸವಿ ಅಕ್ಟೋಬರ್ ೨೭ನೇ ಮತ್ತು ೪೮೩ನೇ ನಂಬರ್ ಲೆಟರ್.

೩. ಸನ್ ೧೮೮೭—೮೮ನೇ ಇಸವಿ ಬಡ್ಜೆಟ್ ತಯಾರಿಸತಕ್ಕ ಹೊಸ ಕಾಮಗಾರಿಗಳ ಪಟ್ಟಿ.

೪. ಬೆಂಗಳೂರು ಷಹರಿನಲ್ಲಿ ಮ್ಯುನಿಸಿಪಲ್ ದೀಪಗಳು ಹಾಕುವದಕ್ಕಾಗಿ ಬಂದ ದರಖಾಸ್ತುಗಳ ವ್ಯವಸ್ಥೆ.

೫. ಬೀದಿಗಳಲ್ಲಿ ಭಿಕ್ಷುಕರಿಂದ ಉಂಟಾಗಿರುವ ತೊಂದರೆಗಳ ವಿಷಯದಲ್ಲಿ ಅಪೋತಿಕರಿ ಟಿ. ಬಿ. ಶ್ರೀನಿವಾಸಯ್ಯಂಗಾರ್ಯರವರು ಬರೆದುಕೊಂಡ ಅರ್ಜಿ.

೬. ಷಹರಿನಲ್ಲಿ ಆಕ್ಟ್ರಾಯ್ ತೆರಿಗೆಯನ್ನು ವಜಾಮಾಡಬೇಕೆಂದು ಬೆಂಗಳೂರು ಷಹರ್ ನಿವಾಸಿಗಳು ಬರೆದುಕೊಂಡ ಅರ್ಜಿ.

೭. ಈಗ ನಡೆಯುತಲಿರುವ ಮತ್ತು ಪ್ರಾರ್ಥಿಸಿದ ಕಾಮಗಾರೀ ಹೆಸರು ನಮೂದು ಪಟ್ಟಿ.

ಬೆಂಗಳೂರು,

೧೯ನೇ ನವಂಬರ್ ೮೬.

A. SRINIVASA CHARLU,
Vice-President,
City Municipal Commission.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, NOVEMBER 22, 1886.

೧೮೮೬ನೇ ನವಂಬರ್ ೨೨ನೇ ತಾ॥ ಸೋಮವಾರ.

THE VICEROY'S VISIT TO MYSORE

ಶ್ರೀಮತು ಮಹಾರಾಜ್ಞೀಯವರ ಪ್ರತಿನಿಧಿಯಾದ ವೈಸರಾಯಿ ವ ಗವರ್ನರ್ ಜನರಲ್ ಲಾರ್ಡ್ ಡಫ್ರಿನ್‌ಯವರು ಇಲ್ಲಿಗೆ ದಯಮಾಡುವ ಕಾಲವು ಸನ್ನಿಹಿತವಾಗಿರುವದರಿಂದ ಅವರ ಸ್ವೀಕಾರ ಪ್ರಾರ್ಥ್ಯಗಳಿಗೆ ಅನುಗುಣವಾದ ವಿಭವದೊಡನೆ ಅವರು ಬರಮಾಡಿಕೊಂಡು ಸತ್ಕರಿಸುವುದಕ್ಕೆ ಈ ಪ್ರಾಂತದಲ್ಲಿಯೂ ಮೈಸೂರಲ್ಲಿಯೂ ಸಹ ಪುರಾಲಂಕಾರಾದಿ ಸಕಲವಿಧ ಏರ್ಪಾಡುಗಳೂ ವಿಶೇಷತಃ ನಡೆಸಲ್ಪಡುತಲಿವೆ. ವೈಸರಾಯಿಯವರ ಆಗಮನೋದ್ದೇಶಮಾತ್ರ ಹಿಂದಿನಾವೃತಿ ಳಸಿದ್ಧಂತೆ ಅದ್ಯಾಪಿ ಹೊರಗಾಗಲಿಲ್ಲವು. ಪರಂತು ಬಹುವಿಧ ರಾಜ್ಯಕಾರ್ಯ ವ್ಯಾಪೃತರಾದ ಸದರೀ ದೊಡ್ಡ ಮನುಷ್ಯರು ಉದ್ದೇಶವಿಲ್ಲದೆ ಕೇವಲ ಇಲ್ಲಿ ನಡೆಸಲ್ಪಡುವ ವಿನೋದ ದರ್ಶನಾರ್ಥವೇ ಬಂದು ಇಲ್ಲಿನ ಸತ್ಕಾರವಂ ಸುತೃಪ್ತರಾಗಿ ಸುಮ್ಮನೆ ಹೋಗುವರೆಂದು ಪುರೋದೃಷ್ಟಿಯುಳ್ಳವರೊಬ್ಬರೂ ಹೇಳಲಾರರು. ಪೂರ್ವದೊಳು ಗವರ್ನರ್ ಜನರಲ್‌ಗಳಾಗಿದ್ದ ಲಾರ್ಡ್ ಬೆಂಟಿಂಕ್, ಲಾರ್ಡ್ ಡೆಲ್‌ಹೌಸಿ, ಲಾರ್ಡ್ ಲಿಟ್ಟನ್ ಸಾಹೇಬರುಗಳು ಈ ದೇಶಕ್ಕೆ ಬಂದು ಒಂದೆರಡು ದಿನಗಳ ತನಕ ಇಲ್ಲಿದ್ದು ಹೊರಟುಹೋದ ಕಾಲದಲ್ಲಿ, ಅವರ ಆಗಮನ ಉದ್ದೇಶ ಪ್ರಯತ್ನಗಳು ಅವ್ಯಕ್ತಗಳಾಗಿದ್ದರೂ, ತರುವಾಯ ಅವು ಪ್ರಬಲ ವಿನಿಮಯಗಳಿಗೆ ಕಾರಣವಾದಂತ ಪ್ರಕಟವಾದವು. ಪ್ರಸ್ತುತ ವೈಸರಾಯಿ

ಯವರನ್ನು ಕೇವಲ ಸಾಮಾನ್ಯೇನ ಭಾವಿಸಬಾರದೆಂದು ಅವರು ಇಂಡ್ಯದೇಶಕ್ಕೆ ಬಂದತರುವಾಯ ಇಲ್ಲಿ ನಡೆಸಿದ ಅನೇಕ ಆಡಳಿತಗಳೇ ತಿಳಿಸುತಿವೆ. ಈಮೈಸೂರು ರಾಜ್ಯವಾದರೋ, ಇತರ ನೇಟಿವ್‌ರಾಜ್ಯಗಳಂತಲ್ಲವು. ಯಾತಕ್ಕೆಂದರೆ, ಇತರ ರಾಜ್ಯಗಳು ನೇಟಿವ್ ದೊರೆಗಳಿಂದ ಅನುಸ್ಯೂತವಾಗಿ ಪಾಲಿಸಲ್ಪಡುತ ಬ್ರಿಟಿಷ್ ಬಾರ್ಣಸಬ್ಜೆಕ್ಟುಗಳ ಸಂಬಂಧಕ್ಕೆ ದೂರವಾಗಿದ್ದಾಗ್ಯೂ, ಮೈಸೂರುರಾಜ್ಯವು ವ್ಯತ್ಯಸ್ತಸ್ಥಿತಿಯನ್ನೈದಿರುವದರಿಂದ ಇಲ್ಲಿನ ಆಡಳಿತವಿಷಯದಲ್ಲಿ ಬ್ರಿಟಿಷ್ ಗವರ್ನಮೆಂಟಿನವರ ಸಂಬಂಧವೂ ಅವರ ವಿಚಾರಕ್ಕೆ ಅರ್ಹಗಳಾದ ಅನೇಕವಿಷಯಗಳೂ ಉಂಟು. ಅವುಗಳಪೈಕಿ ಎಷ್ಟು ಈಗನ್ಯೆಸ್ ರಾಯಿಯವರ ಪರ್ಯಾಲೋಚನೆಗೆ ಅರ್ಹಗಳಾಗಬಹುದೆಂದು ಆಲೋಚಿಸಲಾಗಿ ನಮಗೆ ತೋರುವ ವ್ಯಾಸಂಗದರೆ.—

೧. ಇಂಗ್ಲಿಷ್ ಆಡಳಿತಕ್ರಮದಿಂ ನೇಟಿವ್‌ಗಳೇ ಈ ರಾಜ್ಯವನ್ನು ಸದ್ಯಃ ಪಾಲಿಸುತಲಿರುವದರಿಂದ ಪ್ರಜೆಗಳು ಯೂರೋಪಿಯನ್ನರ ಸಾಕ್ಷಾದ್ವಿಚಾರಣೆಯಲ್ಲಿದ್ದಾಗ ತೃಪ್ತರಾಗಿದ್ದರೆ, ಅಥವಾ ಸ್ವದೇಶಾಧಿಪತ್ಯದಲ್ಲಿ ತೃಪ್ತರಾಗಿದಾರೆಯೋ ಯೆಂಬ ವಿಷಯ ಪ್ರಥಮತಃ ವಿಚಾರಾರ್ಹವಾದದ್ದಾಗಿರುತಿದೆ.

೨. ಮೈಸೂರು ಮಹಾರಾಜರವರು ಇತರ ನೇಟಿವ್ ಅರಸುಗಳಂತೆ ಪ್ರಯೋಜನವನ್ನು ರಲ್ಲವಾಗಿ ಅವರಿಗಿರುವ ದುರ್ಭರವಾದ ಋಣವನ್ನಾದರೆ ತೀರಿಸಲಾಲೋಚಿಸಿಬಿಡಾರೆ ಎಂಬದಂತಿಳಿದುಕೊಳ್ಳತಕ್ಕದ್ದಾಗಿರುತಿದೆ.

೩. ಸಾಲೀದಯಾನಾನಿಗದಿಯಾದ, ಸವಸಿಡೀ ಬಾಬತು ಜಾಸ್ತೀ ಬಾಗವನ್ನು ಅರ್ಥಾನುಪಪತ್ತಿಯ ಭಾವನಮೇಲೆ ಕೆಲವು ಸಂವತ್ಸರಗಳ ತನಕ ನಿಲ್ಲಿಸಿಕೊಂಡಿದಾರೆಯಷ್ಟೆ, ಅಂತಾ ಕಾಲವು ಕಳೆದಮೇಲಾದರೂ ಈ ಸಂಸ್ಥಾನವು ಅದಂ ಕೊಡವಲಿಕ್ಕೆ ಅನುಗುಣವಾದದ್ದಾಗಿದೆಯೋ ಯೆಂಬದು ವಿಚಾರಾರ್ಹವಾದದ್ದು.

೪. ಶ್ರೀರಂಗಪಟ್ಟಣವು ನೇಟಿವ್ ರಾಜ್ಯದೊಡನೆ ಸಂಪೂರ್ಣವಾಗಿ ಸೇರಿಹೋದಮೇಲೆ ನವಾಬ್ ಹೈದರಲ್ಲೀಖಾನರ ಮತ್ತು ಟೀಪೂ ಸುಲ್ತಾನರ ಗುಂಬಜ್‌ಗಳಲ್ಲಿಯೂ, ಕೆಲವರು ಯೂರೋಪಿಯನ್ ಆಫಿಸರಿಗಳ ಸಿಮಿಟ್ರಿಗಳಲ್ಲಿಯೂ ನಡೆಯತಕ್ಕ ಧರ್ಮಗಳನ್ನೂ ಅವುಗಳ ಉಸ್ತುವಾರಿಗಳನ್ನೂ ಕುರಿತು ಸನ್ನದಿನಲ್ಲಿ ಸ್ಪಷ್ಟವಾಗಿ ವ್ಯವಸ್ಥೆಯಾದಂತೆ ತೋರಲಿಲ್ಲವು. ಆದದರಿಂದ ಶ್ರೀರಂಗಪಟ್ಟಣಕ್ಕೆ ವೈಸರಾಯಿಯವರು ಹೋಗುವ ಈ ಸಂದರ್ಭದಲ್ಲಿ ಸದರೀ ಅಂಶ ಕೂಡ ಅವರ ಜ್ಞಾಪಕದೊಳಿರಬಹುದು.

೫. ಬೆಂಗಳೂರು ಸಿವಿಲ್ ವ ಮಿಲಿಟರಿ ಸ್ಟೇಷನಿನಲ್ಲಿ ಕಾಯುಮಾಗಿಡಲ್ಪಟ್ಟಿರುವ ಬ್ರಿಟಿಷ್ ಸೈನ್ಯವನ್ನು ಬಲಪಡಿಸಬೇಕೋ, ಅಥವಾ ಪ್ರಕೃತ ಇರುವದೇ ಸಾಕಾದದ್ದೋ ಎಂಬದೂ, ಮದರಾಸ್ ಪ್ರಿಸಿಡೆನ್ಸಿಯ ಮಿಲಿಟರಿ ಹೆಡ್‌ಕ್ವಾರ್ಟರನ್ನು ಈಪೂರದಲ್ಲಿ ಮಾಡುವದಕ್ಕೆ ಸಾಧ್ಯವಹುದೇ ಎಂಬದೂ ಜ್ಞಾತವ್ಯವು.

೬. ಮೈಸೂರು ಸವಾರಿ ಏ ಸ್ ಫೌಜ್ ಒಳದೇಶದ ಬಂದೋಬಸ್ತಿಗೆ ಮಾತ್ರ ಉಪಯುಕ್ತವಾದ್ದಾಗಿದೆಯೋ ಕಾಲವಿಶೇಷದಲ್ಲಿ ಬ್ರಿಟಿಷ್ ಸೈನ್ಯಕ್ಕೆ ಸಹಾಯಕವಾಗುತಿದೆಯೋ; ಮತ್ತು ಈಗ ಹಂಗಾಮಿಯಾಗಿ ಏರ್ಪಾಟಾಗಿರುವ ಸೈನ್ಯದ ಪರಿಮಿತಿಯನ್ನು ಬದಲಾಯಿಸಲಿಕ್ಕೆ ಸಾಧ್ಯವಾಗುವದೇ ಎಂಬದು ಸಹ ವಿಮರ್ಶಾರ್ಹವು.

೭. ಮದರಾಸ ರೈಲ್ವೆಯು ಈದೇಶದಲ್ಲಿ ಈವರೆಗೂ ತನಕ ವ್ಯಾಪಿಸಿರುವದರಿಂದ ರೈಲ್ವೇ ಲೈನಿನಲ್ಲಿ ನಡಿಯತಕ್ಕ ಆಫೀಸರಗಳ ವಿಮರ್ಶೆಯ ಬಗ್ಗೆ ಇದುವರಿವಿಗೆ ಮಾಡಲ್ಪಟ್ಟಿರುವ ಏರ್ಪಾಡುಗಳಪೈಕಿ ಯಾವದಾದರೂ ಬದಲಾಯಿಸಲ್ಪಡತಕ್ಕದ್ದಿದೆಯೋ ಯೆಂಬದು ಸಹ ನಿಷ್ಕರ್ಷೆಯಾಗತಕ್ಕದ್ದು.

೮. ಈದೇಶದಲ್ಲಿ ಪ್ರಚಾರದೊಳಿರುವ ಗೋಲ್ಡ್ ಮೈನಿಂಗ್ ಕಂಪೆನಿಯವರಿಗೂ ಮೈಸೂರು ಸರ್ಕಾರದವರಿಗೂ ನಡೆದಿರುವ ಕರಾರುಗಳಲ್ಲೇನಾದ ಬದಲಾವಣೆಗಳು ಮಾಡಬೇಕಾದ್ದುಂಟೇಯೆಂಬದು ಚಿಂತನೀಯವು.

೯. ಈದೇಶದಲ್ಲಿ ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪೆನಿಯವರು ಈಗ ಹಾಕಬೇಕೆಂದು ಉದ್ದೇಶಿಸಿರುವ ರೈಲ್ವೆಯು ಎಷ್ಟುಮಟ್ಟಿಗೆ ಸ್ವದೇಶಾಭ್ಯುದಯಕ್ಕೆ ಪ್ರಯೋಜನಕರವಾದದ್ದೆಂಬದೂ, ಯೂರೋಪಿಯನ್ ಕಾಫಿಪ್ಲಾಂಟರ್‌ಗಳಿಗೆ ಅದು ಯೆಷ್ಟರಮಟ್ಟಿಗೆ ಸಹಕಾರಿ ಯಾಗಬಹುದೆಂಬದೂ, ರೈಲ್ವೆಯು ಅವಿಚ್ಛಿನ್ನವಾಗಿ ೫೦ ವರುಷಗಳತನಕ ಕಂಪೆನಿಯವರ ಸ್ವಾಧೀನದೊಳಿರುವದರಿಂದ ನೇಟಿವ್‌ಅರಸರ ಅಧಿಕಾರಕ್ಕಾಗಲಿ, ಕಂಪೆನಿಯವರ ಪ್ರಯೋಜನಕ್ಕಾಗಲಿ ಭಂಗ ವುಂಟಾಗುವದೇ ಎಂಬದೂ ಅರಿಯಬೇಕಾದವು.

ಹೀಗೆಯೇ ಇನ್ನೂ ಅನೇಕ ರಾಜಕೀಯ ವಿಷಯಗಳು, ಲಾರ್ಡ್ ಡಫ್ರಿನ್ ಯವರ ಅವಧಾನಕ್ಕೆ ವಿಷಯಗಳಾಗಿರಬಹುದು. ಯಾತಕ್ಕೆಂದರೆ, ಹೈದರಾಬಾದ್ ಪ್ರಯಾಣವು ಅಲ್ಲಿನ ನಿಜಾಮರವರಿಗೂ, ಅವರ ಮಂತ್ರಿಯವರಿಗೂ ಈಗ್ಗೆ ಕೆಲವು ಕಾಲದಿಂದುಂಟಾಗಿರುವ ವೈಮನಸ್ಯ ನಿವಾರಣಾರ್ಥವೆಂದು ಅನೇಕರು ಭಾವಿಸಿರುತ್ತಾರೆ. ನೀಲಗಿರಿಗೆ ಹೋಗುವಾಗ್ಯೆ ಮಾರ್ಗವಶಾತ್ ಇಲ್ಲಿ ಮೊಕ್ಕಾಂ ಹೋಗುವರೇನೋ ಎಂದುಂಟಾಗಿದ್ದ ಜನಗಳ ಭಾವನೆಯು ತಪ್ಪು ಪಕ್ಷ ಇಲ್ಲಿಗೇ ಬರುವಂತೆ ನಿಷ್ಕರ್ಷೆಯಾಗಿದೆ. ಆದದರಿಂದ ವೈಸರಾಯಿಯವರ ಏತದ್ದೇಶಯಾತ್ರೆಯು ಮೇಲೆಕಂಡ ವಿಷಯಗಳಪೈಕಿ ಯಾವದೋ ಒಂದನ್ನುದ್ದೇಶಿಸಿದ್ದಾಗಿಯೇ ಇರುವದೆಂದು ಧಾರಾಳವಾಗಿ ಯೆಣಿಸಲ್ಪಡಬಹುದಾಗಿದೆ, ಪರಂತು ಪ್ರಕೃತ ಸಂದರ್ಭದಲ್ಲಿ ಮೇಲೆ ತಿಳಿಸಲ್ಪಟ್ಟ ರಾಜಕೀಯ ವಿಷಯಗಳನ್ನು ಕುರಿತ ನಮ್ಮ ಅಭಿಪ್ರಾಯವನ್ನು ಪ್ರಕಟಪಡಿಸದೆ ಈ ವಿಚಾರವನ್ನು ಇಷ್ಟಕ್ಕೇ ಬಿಡುವೆವು.

AN APPEAL TO THE MAHARAJA

ಮೈಸೂರು ಪ್ರಜಾ ಪ್ರತಿನಿಧಿ ಸಭಾಸದ ಮೆಂಬರಿಗಳ ಪೈಕಿ ಕೆಲವರು ಈಚೆಗೆ ಶ್ರೀಮನ್ ಮಹಾರಾಜರವರಿಗೆ ಒಪ್ಪಿಸಿದ ಅರ್ಜಿಯಸಾರಾಂಶವನ್ನು ಗತವಾರದಲ್ಲಿ ತಿಳಿಸಿ ಅದನ್ನು ಕುರಿತ ನಮ್ಮ ಅಭಿಪ್ರಾಯವನ್ನು ಮತ್ತೊಂದುಸಂದರ್ಭದಲ್ಲಿ ತಿಳಿಸುವುದಾಗಿ ಸೂಚಿಸಿದ್ದೆವಷ್ಟೆ. ಏತನ್ಮಧ್ಯೆ ಸದರೀಅರ್ಜಿಯನ್ನೋದಿ ಗುಣದೋಷ ವಿಚಾರಮಾಡತಕ್ಕಸ ಚಿರಾನುಭವವುಳ್ಳವನೊಬ್ಬಾತನು ಲವರಮೇಲೆ ಆಕ್ಷೇಪಿಸಿ ನಮಗೆ ಬರೆದ ಲೇಖನವನ್ನು ಯಥಾವಸ್ಥಿತವಾಗಿ ಇದರಡಿ ಪ್ರಕಟಿಸುವೆವು, ಏನೆಂದರೆ,—

ಈಚೆಗೆ ಮಹಾರಾಜ ಸನ್ನಿಧಿಯಲ್ಲಿ ಒಪ್ಪಿಸಲ್ಪಟ್ಟ ಅರ್ಜಿಯಲ್ಲಿ ನಮೂದಾಗಿರುವ ವಿಷಯಗಳನ್ನಾಲೋಚಿಸಿದರೆ ಅರ್ಜೀದಾರರ ಅನನುಭವವೂ ಅನಭಿಜ್ಞತೆಯೂ ವ್ಯಕ್ತವಾಗುತಿವೆ. ಇದಲ್ಲದೆ ಅವರು ಸಾಧ್ಯಾಸಾಧ್ಯಗಳನ್ನೂ ಯುಕ್ತಾಯುಕ್ತಗಳನ್ನೂ ಪರ್ಯಾಲೋಚಿಸಿ... ಲಿಲ್ಲವೆಂಬದು ಕ್ರಮವಾಗಿ ನಿರೂಪಿಸಲ್ಪಡುವದು ಹ್ಯಾಗೆಂದರೆ, ರಿವಿನ್ಯೂ ಕೋಡಿನ ವಿಷಯವನ್ನು ಕುರಿತ ಸರಿಕೆಗಳಿಗೆ ... ವೆಂಬ ಮೊದಲನೆಯವಿಷಯಕ್ಕೆ ಉತ್ತರವು ಪ್ರಸಿದ್ಧವಾಗಿರುವಲ್ಲಿ ಅದಂ ತಿಳಿಯದೆ ವ್ಯರ್ಥವಾಗಿ ದಿವಾನರನ್ನು ಬದಲಾಂ ಮಾಡಲೆತ್ನಿಸುವದು ಪ್ರತಿನಿಧಿಗಳ ಅಸಹಿಷ್ಣುತೆಯನ್ನು ಸೂಚಿಸುತಿದೆ. ರವಿನ್ಯೂಕೋಡನ್ನು ಜಾರೀಗೆ ಕ್ಷಿಪ್ರದಲ್ಲಿ ತರುವೆವೆಂಬದಾಗಿ ಈಗ್ಯೆ ಐದುವರುಷಗಳಕಾಲವಾಗಿ ತಪ್ಪದೆ ಪ್ರತಿವರುಷದ ಮೀಟಿಂಗನಲ್ಲಿಯೂ ದಿವಾನರವರು ಹೇಳುತಬಂದು ಆ ಪ್ರತಿಜ್ಞೆಯು ಈಡೇರದೆಹೋದಕಾರಣ ಇನ್ನು ಅದರವಿಚಾರವನ್ನು ಎತ್ತುವದೇ ಉಚಿತವಲ್ಲವೆಂದೆಣಿಸಿ ಈಸುವ ಅಕ್ರೋಸನಲ್ಲಿ ಬೇಕೆಂದು ಅದನ್ನು ಉದಾಸೀನ ಮಾಡಿದರೆಂದು ತಿಳಿದಿದ್ದಾಗ್ಯೂ, ಗವರ್ನಮೆಂಟಿನವರ ಮಂಜೂರಾತಿಯಂ ಪಡೆಯದೆ ಜಾರೀಯಲ್ಲಿ ತರುವಷ್ಟು ಸ್ವಾತಂತ್ರ್ಯ ಈ ಸರ್ಕಾರಕ್ಕೆ ಯಿಲ್ಲವೆಂಬದು ತಿಳಿದಿದ್ದಾಗ್ಯೂ, ಬ್ರಿಟಿಷ್ ಗವರ್ನಮೆಂಟಿನವರ ವಿಚಾರಕ್ಕೆ ಏತದಪೇಕ್ಷ ಯಾ ವಿಶೇಷ ವಿಷಯಗಳಿರುವದರಿಂದ ಅದು ಅಷ್ಟರ ಪ್ರಾಧಾನ್ಯವಲ್ಲವೆಂದು ನಿಷ್ಕೃಷ್ಟವಾಗಿದ್ದಾಗ್ಯೂ, ಇಲ್ಲಿನ ಆಡಳಿತವು ಜೆಗುಪ್ಸಾಪ್ರಾಪ್ಯಕವಾದದ್ದೆಂದು ಅರಿತಿದ್ದಾಗ್ಯೂ, ಅವುಗಳೊಂದನ್ನೂ ಗಣಿಸದೆ ದಿವಾನರು ಬಾಯಿತೆರದು ಜವಾಬ್‌ಕೊಡುತಿಲ್ಲವೆಂದು ನೂತನವಾಗಿ ಈಗ ಅವರನ್ನಾಕ್ಷೇಪಿಸುವದು ಯುಕ್ತವಲ್ಲವಾಗಿ ಇದು ವ್ಯರ್ಥವಿಚಾರವು. ಮಂತ್ರಾಲೋಚಕ ಸಮಾಜದಲ್ಲಿ ಸ್ವತಂತ್ರರಾದ ಮೆಂಬರಿಗಳೊಡನೆ ಮಹಾರಾಜರವರೇ ಅಗ್ರಾಸನವಂಪಹಿಸಿ ರೆವಿನ್ಯೂ ಬಾಬ್‌ನಲ್ಲಿ ದಿವಾನರ ಫೈಸಲಿನಮೇಲೆ ಬರುವ ಅಪೀಲ್‌ಗಳನ್ನು ಹಿಡದುವಿಚಾರಿಸಬೇಕೆಂಬ ಎರಡನೆ ... ಅಂಶವು ಆಲೋಚಿಸದೆ ತಿಳಿಸಲ್ಪಟ್ಟದ್ದಾಗಿದೆ. ಇಂಡ್ಯ ಗವರ್ನಮೆಂಟಿನವರ ... ಮಹಾರಾಜರವರಿಗೆ ಕೌನ್ಸಿಲ್ ಪ್ರೆಸಿಡೆಂಟರಾಗಿರಬೇಕಾಗಿದ್ದರೂ ... ತಮ್ಮ ಅಧಿಕಾರವನ್ನು ದಿವಾನರವಶದಿ ... ಕ್ಕೆ ವ್ರಂಟೂದ ಕಾರಣವು ಸ್ಪಷ್ಟವಾಗಿದ್ದಾಗ್ಯೂ ಅನರ್ಘವಾದ ಮಹಾರಾಜರ ಕಾಲವನ್ನು ಇಂತಾ ಅಲ್ಪವಿಷಯಗಳಿಂದ ಕಳೆಯುವಂತೆ ಅಪೇಕ್ಷಿಸಿ ಅವರ ಸುಖಾನುಭವಕ್ಕೊಂದು ಕೊರತೆಯುಂಟುಮಾಡಲಾರಂಭಿಸುವದು ಅಯೋಗ್ಯವೆಂದು ತಿಳಿದಿದ್ದಾಗ್ಯೂ ಸ್ವತಂತ್ರರಾದ ಕೌನ್ಸಿಲರಿಗಳ ಸಂಬಂಧವು ಪಬ್ಲಿಕ್ ಪ್ರವೃತ್ತಿ ನಿರೋಧಕವಾದದ್ದಾದಕಾರಣ ಅಂತಾ ಅನಪೇಕ್ಷಿತ ಸ್ವಾತಂತ್ರ್ಯವು ಅಸಾಧ್ಯಕವೆಂದು ತೋರಿದ್ದಾಗ್ಯೂ ಮಹಾರಾಜರಿಗೆ ವ್ಯರ್ಥಶ್ರಮ ಕೊಡಲಾರಂಭಿಸಿದಂತಾ ನಿರಭಿಮಾನಿಗಳಾದ ಅರ್ಜೀದಾರರನ್ನೇನೆಂದು ಕರೆಯಬಹುದು? ಮಹಾ ಮಹಾರಾಜರೇ ಅಗ್ರಾಸನವಂ ವಹಿಸುತ್ತಾರೆಂದುಕೊಳ್ಳುವಾ; ರೆವಿನ್ಯೂ ಆಡಳಿತಕ್ಕೆ ಜ್ಯುಡಿಷಲ್ ಬಾಬನ್ನು ದೃಷ್ಟಾಂತವಾಗಿ ಹೇಳಕೂಡದು. ಜ್ಯುಡಿಷಲ್ ಬಾಬ್‌ನಲ್ಲಿ ಎಷ್ಟರ ಅನುಕೂಲ್ಯಗಳಿರುವವೋ ರೆವಿನ್ಯೂ ವಿಷಯದಲ್ಲಿ ಸಹ ಅಷ್ಟರ ಅನುಕೂಲ್ಯವಿಲ್ಲದಿರಲಿಲ್ಲವು. ಜ್ಯುಡಿಷಲ್‌ನಲ್ಲಿ ಒರಿಜನಲ್ ಅಪೀಲ್ ಸ್ಪೆಷಲ್ ಅಪೀಲುಗಳೆಂಬದಾಗಿ ಮೂರುವಿಧ ವಿಚಾರಣಾಧಿಕಾರಗಳು ಪ್ರತ್ಯೇಕ ಮೂವರು ಆಫಿಸರಗಳಿಗಿರುವಂತೆ ರೆವಿನ್ಯೂ ವಿಷಯದಲ್ಲಿಯೂ ಅಮಲ್‌ದಾರ್, ಅಸಿಸ್ಟೆಂಟ್‌ಕಮಿಷನರ್, ಡೆಪ್ಯುಟಿಕಮಿಷನರಗಳೂ, ಕೆಲವು ಸಂದರ್ಭಗಳಲ್ಲಿ ಸರ್ವೇ ಮತ್ತು ಸೆಟಲ್‌ಮೆಂಟ್ ಆಫೀಸರಿಗಳೂ, ಕ್ರಮದಿಂ ಅಪೀಲ್ ವಿ... ಕಾರಕರಾಗಿರುವಲ್ಲಿ ಇಷ್ಟು ಸಾಲದೆ ಮಹಾರಾಜ ... ಸ್ವಂತ ಫೈಸಲಾತಿಯನ್ನು ಅಪೇಕ್ಷಿಸಿದರೆ ಅವರ ಫೈಸಲಿನಮೇಲೆ ಕೂಡ ಇನ್ನೊಂದು ಅಪೀಲ್ ಕೋರ್ಟಿರಬೇಕಾಯಿತಷ್ಟೆ, ಕಡೆಗೂ ಇದುಗೊತ್ತಿಲ್ಲದೆಹೀನವಸ್ತಾಪ್ರಸಂಗಕ್ಕೆಕಾರಣರಾಗುವದು ಮಾಸಲಾ ರಿವಿನ್ಯೂಬಾಬ್‌ನಲ್ಲಿದಿವಾನರ ಮೇಲೆ ಅಪೀಲ್ ವಿಚಾರಣೆಯಂ ಮಹಾ ರಾಜರವರು ಸ್ವಾತಃ ಮಾಡಬೇಕೆನ್ನುವ ಪಕ್ಷಕ್ಕೆ ಚೀಫ್ ಜಡ್ಜಿಯವರ ಪ್ರತಿ ಫೈಸಲೂ ಮಹಾ ರಾಜರವರ ಪುನರ್ವಿಮರ್ಶೆಗೊಳಪಡ ಬೇಕಾಗಿರುತಿದೆ. ಅಷ್ಟರ ವ್ಯವಧಾನವಿಲ್ಲದಿರುವಾಗ್ಯೆ ಈ ಪ್ರಸ್ತಾವವೇ ಕೇವಲ ಅನುಚಿತವಾದದ್ದು. ಮೈಸೂರು ಸ್ಟೇಟ್ ರೈಲ್ವೆಯು ... ರೈಲ್ವೇ ಕಂಪೆನಿಯ ... ಕ್ಕೆ ಒಪ್ಪಿಸಲ್ಪಟ್ಟು ಅದರ ... ಲ್ಲಿನಸಾರಿಗೆ ಕುರಿತ್ತಾಂಗ ... ಅವರ ವರ್ಕ್‌ಷಾಪಿನಲ್ಲಿ ಜನಗಳ ಸ್ವಂತ ಕೆಲಸವನ್ನು ಮಾಡಿಸಲಿಕ್ಕಾಗಲಿ ಮಾಡುವಂತೆ ಹುಕುಂ ಮಾಡುವದಕ್ಕಾಗಲಿ ಮಹಾ ರಾಜಾ ಸರ್ಕಾರದವರಿಗೆ ಸ್ವಾತಂತ್ರ್ಯವಿಲ್ಲವೆಂಬ ಅಂಶವನ್ನು ಸದರೀ ಪ್ರತಿನಿಧಿಗಳು ಆಲೋಚಿಸದೆ ಹೋದದ್ದು ಆಶ್ಚರ್ಯಕರವಾದದ್ದು. ಪರೀರಿವಿಮರ್ಷ ವಿಷಯವು ಕೇವಲ ಸ್ವಪ್ರಯೋಜನಪರರಾದ ಅನುಭವನಿಲ್ಲದವರಿಂದ ತಿಳಿಸಲ್ಪಟ್ಟದ್ದಾಗಿ ತೋರುತಿದೆ, ಯಾತಕ್ಕೆಂದರೆ, ಜಲಾಧಾರದ ಸರಾಸರಿಯ ಮೇಲೆ ಕಂದಾಯ ಹಾಕಿದ ಪದ್ಧತಿಯು ಕೇವಲ ಮೊ|| ರಂಗಾಚಾರ್ಯರವರ ಕಾಲದಲ್ಲಿ ಏರ್ಪಟ್ಟ ಪದ್ಧತಿಯಲ್ಲವು. ಇದು ಪೂರ್ವದಲ್ಲಿಯೇ ನೆಲಗೊಂಡಿದ್ದು ಸರ್ವೇಯ ಮೇಲೆ ಮಾಕೂಫಾಯಿತು. ಅದನ್ನು ಮರಳ ಏರ್ಪಡಿಸುವದು ಸರ್ವೇ ರೂಲ್ಸಿಗೆ ವಿರುದ್ಧವಾದದ್ದಾಗಿರುತಿದೆ. ಸರ್ವೇ ರೂಲ್ಸಿನ ಪ್ರಕಾರ ಮೂವತ್ತು ವರುಷಗಳ ಸರಾಸರಿ ಹುಟ್ಟುವಳಿಯ ಮೇಲೆ ಭೂಗುಣವನ್ನನುಸರಿಸಿ ಕಂದಾಯ ಠರಾವ್ ಮಾಡಿ, ಅದುವರಿವಿಗೂ ಗ್ಯಾರಂಟಿ ಮಾಡಿರುವದರಿಂದ, ಅದನ್ನು ತಪ್ಪಿಸುವ ಪಕ್ಷಕ್ಕೆ ಸರ್ವೇ ಪದ್ಧತಿಯೇ ಪಾಳಾಗಿ ಹೋಗ ಬೇಕಾಗುವದಲ್ಲದೆ ಈಗ ರೈತರು ಕೊಡುವ ಕಂದಾಯಕ್ಕಿಂತಲೂ ಜಾಸ್ತೀ ಕೊಡಬೇಕಾಗಿರುವದು. ಆದದರಿಂದ, ಈ ವಿಷಯದಲ್ಲಿ ಮುಂಚೈ ಗವರ್ನಮೆಂಟಿನವರ ಕ್ರಮ ಅರ್ಜೀದಾರರಿಗೆ ಸ್ಪಷ್ಟವಾಗಿ ತಿಳಿದಿದ್ದರೆ ಈರೀತಿ ಎಂದಿಗೂ ಕೇಳಲಾರರು. ಈಗನೆಲೆಗೊಂಡಿರುವ ಕಂದಾಯದ ಬಿಸ್ತುಗಳನ್ನು ಬದಲಾಯಿಸಲಿಕ್ಕೆ ಪ್ರಬಲ ಕಾರಣಗಳ್ಯಾವದೂ ಅರ್ಜಿಯಲ್ಲಿ ತಿಳಿಸಲ್ಪಟ್ಟಂತೆ ಕಾಣಿಸಲಿಲ್ಲವು. ಮುಖ್ಯವಾಗಿ ಈದೇಶದಲ್ಲಿ ರಾಗಿಯು ಮುಖ್ಯ ಆಹಾರ ಧಾನ್ಯವಾಗಿರುವದರಿಂದ ಅಂತಾ ಚಿತ ಪಸಲಿನ ಕಟಾವ್ ಆಯಾಮನ್ನು ಅನುಸರಿಸಿ ಬಿಸ್ತುಗಳೇರ್ಪಡಿಸಲ್ಪಟ್ಟಿರುವದರಿಂದ ಬಹುಕಾಲದಿಂ ನಡೆದುಬರುವ ಪದ್ಧತಿಯನ್ನು ಬದಲಾಯಿಸಲಿಕ್ಕೆ ಯಾವದಾದರೂ ಪ್ರಬಲ ಕಾರಣಗಳಿರಬೇಕಷ್ಟೆ. ಅಂತಾ ದೊಡ್ಡೊಂದೂ ಕಾಣಲಿಲ್ಲವು. ರೈತರ ಸೌಕರ್ಯಾರ್ಥವೆಂದು ... ಕ್ಷಕ್ಕೆ ಅಂತಾ ಸೌಕರ್ಯ ಬದ್ದಾಗ ಕಂದಾಯ ನೋಡಿ ಮಾಡುವವರ ತನಕ ಸಂಬಂಧಿಸಿದ್ದಾಗಿರುವದರಿಂದ ಅದು ಸಹ ಪಸೂಲ್ಮಾಡತಕ್ಕದೆಂದು ಕೇಳಬಹುದಷ್ಟೆ. ಇದು ಕೇವಲ ಅನವಶ್ಯ ಪ್ರಸಂಗವಾಗಿರುತಿದೆ. ಆದದರಿಂದ ಇದು ಎಷ್ಟರಸರಿಗಣನೀಯವಾದದ್ದಲ್ಲವು. ಜೋಡಿ ಗ್ರಾಮಗಳ ಏಕ್ಸೈಸ್ ಇನಾಮತಿಯನ್ನು ಕುರಿತು ಅರ್ಜಿದಾರರು ತಿಳಿಸಿದ ಮಾತು ಭ್ರಾಂತಿ ಕಲ್ಪಿತವಾದದ್ದು. ಜೋಡಿ, ಕಾಯಂಗುತ್ತಾ, ಸರ್ವಮಾನ್ಯ ಗ್ರಾಮಗಳಿಗೆ ಸ್ಪೆಷಲಾಯಿಷೀ ಜಾಸ್ತೀ ದಾಯಿಪೂರಾ ಹಣವು ಕೇವಲ ಅಸಿದ್ಧವಾದದ್ದು. ಇದ ಸರಿವಿಗೆ ಅಂತಾ ಹುಕುಂ ಮಾಗಲಿ ಪದ್ಧತಿಯಾಗಲಿ ಜಾರೀಯೊಳು ಬರಲಿಲ್ಲವು. ಅಮಾಬಿಸಿ ಖರ್ಚ ಡಿಸ್ಟ್ರಿಕ್ಟ್ ನ ತಾಲ್ಲೂಕುಗಳ ಏರ್ಪಾಡು ... ಲ್ಪಷ್ಯತೆಂಬ ವಿಷಯವು ಅರ್ಜೀದಾರರಿಗೆ ವಿನಾಮ್ಯವಿಗೂ ಅಸಮಾಧಾನ ವಾದದ್ದಲ್ಲವು. ನೇಟಿವ್ ಅಸ್ಮಿನಿಸ್ಟ್ರೇಷನ್ ನೆಲಗೊಂಡಮೇಲೆ ವಿಚಾರಣಾಕ್ರಮವು ಸದರಿ ದೇಶದೊಳು ದರೋಡೆಗಳೂ, ಖೂನಿಗಳೂ, ಕನ್ನಚೋರಿಗಳೂ, ಜಾಸ್ತಿಯಾಗುತಿರುವದೂ, ಕಂದಾಯವು ಸರಿಯಾಗ ವಸೂಲಾಗದೆ ಬಾಕೀನಿಲ್ಲುವದೂ ಅರ್ಜೀದಾರರಿಗೆ ತಿಳಿದಿರುವಪಕ್ಷಕ್ಕೆ ರೆವಿನ್ಯೂ ಆಡಳಿತದ ಸೌಕರ್ಯಾರ್ಥವಾಗಿಯೂ, ದೇಶದ ಬಂದೋಬಸ್ತಿಗಾಗಿಯೂ, ಜನಗಳ ಅನುಕೂಲ್ಯಕ್ಕಾಗಿಯೂ, ನ್ಯಾಯವು ಸುಲಭವಾಗಿ ಲಭಿಸುವಕ್ಕಾಗಿಯೂ ಮಾಡಲ್ಪಟ್ಟ ಏರ್ಪಾಡುಗಳು ತಪ್ಪೆಂದು ಹೇಳಲಾಗದು. ಇನ್ನೂ ವಿಚಾರಿಸಿದರೆ ಅಲ್ಲೂಕ್ ಟಿಬ್ಬಂದಿಯನ್ನು ಬಲಪಡಿಸಬೇಕಾದ್ದುಚಿತವಾಗಿರುತಿದೆ. ಪ್ರಜಾಭಿಪ್ರಾಯವನ್ನು ಗೌರವಿಸಿಕೇಳಿ ಅದರಂತೆ ನಡೆಸದಷ್ಟು ಸಾಧಕೊಟ್ಟು ... ಮುಂದಾಗುವಪಕ್ಷಕ್ಕೆ ಅದನ ಅವಮಾನಪ್ಟ ತರಬೇಕಾದ ವಿಷಯಗಳಂತಾ ತಲ್ಲವು. ಅನನುಭವದಿಂ ಈಪ್ರಶ್ನೆಗಳನ್ನು ... ಕೇವಲ ... ಅರ್ಜೀಗಳಲ್ಲಿ ಅಗೌರವವೂ ... ಜಾಸ್ತಿ ... ಕ್ಕೆ ಕಾರಣವಾಗುತಿದೆ. ಅರ್ಜೀದಾರರಿಂದ ಒಪ್ಪಿಸಲ್ಪಟ್ಟ ಅರ್ಜಿಯು ಕಾರ್ಯಕಾರಿಯಾಗಿ ಮಹಾರಾಜರವರು ಅದಕ್ಕೆ ನಿರೀಕ್ಷೆ ಕೊಡುವಂಬ ನಂಬಿಕೆಯಿರುವ ಪಕ್ಷಕ್ಕೆ ವಿ ... ಕಂಡವಕ್ಕಿಂತ ಪ್ರಬಲಗಳಾಗಿಯೂ, ಪ್ರಜಾ ಪರಕರಗಳಾಗಿಯೂ, ಸಾಧ್ಯಗಳಾದವಾಗಿಯೂ, ನಿರಾಕ್ಷೇಪಣೀಯಗಳಾದವಾಗಿಯೂ ಯಿರತಕ್ಕದು ಯಾತಕ್ಕೆ ಸೂಚಿಸಬಾರದಾಗಿತ್ತು. ಡಿಸ್ಟ್ರಿಕ್ಟುಗಳೂ ತಾಲ್ಲೂಕುಗಳೂ ನಿರರ್ಥಕವಾದವೆಂದು ಹೇಳುವದಕ್ಕಿಂತಲೂ, ಯೂರೋಪಿಯನ್ ಆಫಿಸರಗಳಿಗೆನಲ್ಲು ತಲಿದ್ದಂತೆ ನೇಟಿವ್‌ಗಳಿಗೆ ಕೊಡಲ್ಪಡುವ ಸಂಬಳನ್ನು ಹೆಗ್ಗಿಸಬೇಕೆಂದು ಯಾತಕ್ಕೆ ಕೇಳಬಾರದು. ರಿಮಿಷನ್‌ಕೊಡಬೇಕೆಂದು ಕೇಳುವದಕ್ಕಿಂತಲೂ, ಬಂಜರ್ ಜಮೀನುಗಳನ್ನು ಆಬಾದಿಗೆ ತರುವಂತೆ ಪ್ರಯತ್ನಕ್ಕೆಕೊಟ್ಟು ಹುಟ್ಟುವಳಿಯನ್ನು ವೃದ್ಧಿಪಡಿಸಿದರೆ ಯೆಲ್ಲರಿಗೂ ಪ್ರಯೋಜನಕರವಾಗಿರುವದೆಂದು ಯಾಕೆ ತಿಳಿಸಬಾರದು. ಇಂತಾ ಅನೇಕವಿಷಯಗಳನ್ನು ಬಿಟ್ಟು ಅಲ್ಪವಾದವುಗಳಿಗಾಗಿ ಪೇಚಾಡುವದರಿಂದ ಪ್ರಯೋಜನವಿಲ್ಲ

ದಹೋಗುವದೊಂದು, ಅಗೌರವವೊಂದು, ಇ ವೆರಡೇ ನಮಗೆ ಲಭ್ಯವು. ಮುಖ್ಯವಾಗಿ ಇಂತಾವಿ ಷಯಗಳನ್ನು ಕುರಿತು ಸೂಚಿಸುವಾಗ್ಯೆ ದೀರ್ಘ ದೃಷ್ಟಿಯು ಬಹಳವಾಗಿರಬೇಕಾದ್ದು ಆವಶ್ಯಕ ವಾಗಿರುತ್ತದೆ.

LORD DUFFERIN'S VISIT TO PONDICHERY.

ಲಾರ್ಡ್ ಡಫ್ರಿನ್‌ಯವರು ದಕ್ಷಿಣದೇಶ ಸಂಚಾ ರ ಕಾಲದೊಳು ಮಧ್ಯೆ ತಿರುಚಿನಾಪಲ್ಲಿ ಮಾರ್ಗ ವಾಗಿ ಫ್ರೆಂಚಿನವರ ಅಧಿಕಾರಕ್ಕೊಳಪಟ್ಟಿರುವ ಪುದುಚ್ಚೇರಿಗೆ ಹೋಗಿದ್ದು ರಾಜಕೀಯ ಕಾರಣ ಒಂದು ತಲೆದೋರಿ ಅದು ಅಲ್ಲಿಯಲ್ಲಿ ವಿಶೇಷತಃ ಪ್ರಸ್ತಾಪಿಸಲ್ಪಡುತಲಿರುವಾಗ್ಯೆ ಕಲ್ಕತ್ತೆಯು ಪ ತ್ರಿಕೆಯೊಂದು ತಿಳಿಸುತ್ತದೇನೆಂದರೆ, ಯಾವದೋ ಕಾರಣಕ್ಕಾಗಿ ಪ್ರತಿದ್ವಂದ್ವಿ ಯಿಲ್ಲದೆ ಬ್ರಿಟಿಷ್ ನವರು ... ಬರ್ಮಾ ರಾಜ್ಯವು ಕೇವಲ ಬ್ರಿ... ವಶಕ್ಕೆ ಬರುತ್ತಿಲ್ಲವೆಂದು ಲಾರ್ಡ್ ಡಫ್ರಿನ್‌ಯವರಿಗೆ ಈಚೆಗೆ ತೋರಿತು, ಅದರ ಗಲಾಟೆಯಿಂದ ಗೌರವವಾಗಿ ತಪ್ಪಿಸಿ ಕೊಳ್ಳುವ ತಾತ್ಪರ್ಯದಿಂದ, ಈಗ ಫ್ರೆಂಚ್ ಸರ್ಕಾರದವರ ಸಂರಕ್ಷಣೆಯೊಳು ಸುರಕ್ಷಿತರಾಗಿ ಪುದುಚ್ಚೇರಿ ಯಲ್ಲಿ ವಾಸಿಸುತಲಿರುವ ಬರ್ಮಾ ರಾಜ ಮುಖ್ಯರಾ ದ ಮಿಂಗೂರ್‌ರಾಜ ಪುತ್ರರನ್ನು ಮರಳಿ ಬರ್ಮಾ ಸಿಂಹಾಸನದಲ್ಲಿ ಕುಳ್ಳಿರಿಸಿ ಬ್ರಿಟಿಷ್ ಗವರ್ನ ಮೆಂಟಿಗೆ ಅನುಕೂಲಗಳಾದ ಷರತ್ತುಗಳಲ್ಲ ... ಸಂಕಲ್ಪ ... ಗಿ ... ತವು ... ಕ್ಕೆ ... ಪ್ರಸ್ತಾಪನ ಹೊಗುವದೆಂದು ... ದೆ ಎಂಬದು. ಇಂತಾ ಪ್ರಸ್ತಾವಕ್ಕೆ ಕಾರಣವೇ ನೆಂದು ... ಮತ್ತಗೆ ... ಬರ್ಮಾ ರಾಜ್ಯದ ಪ್ರಸ್ತುತ ಸ್ಥಿತಿಯು ... ಬ್ರಿಟಿಷ್ ಸರ್ಕಾರದವರು ಅದ ... ಸ್ವಾಧೀನ ಪಡಿಸಿದಲಾಗಾಯಿತು ... ರಾಜ್ಯರಾದ ದರೋಡೆಯವರ ಅಟ ಪಾಳಗಳಿಂದಲೂ, ದುರ್ಗಮವಾದ ಪ್ರ ದೇಶಗಳಿಂದಲೂ, ರಾಜ ಭಕ್ತಿ ವಿಹೀನರಾದ ಪ್ರ ಜೆಗಳಿಂದಲೂ, ಅಸಂತೋಷ್ಯಕರಗಳಾದ ವಾತೋ ದಕಗಳಿಂದಲೂ, ಅನ್ಯೋನ್ಯ ದ್ವೇಷದ ಬಹಳತರ ದಿಂದ, ರಾಜ್ಯವು ಗವರ್ನಮೆಂಟಿನವರು ನಿರೀಕ್ಷಿ ಸುವಷ್ಟು ಕಾಲದೊಳಗಾಗಿ ಸ್ವಾಧೀನಕ್ಕೆ ಬರು ವಂತೆ ಕಾಣಲಿಲ್ಲವು. ದುರಾಚಾರತನಗಳನ್ನನು ಭವಿಸುವದಕ್ಕಿಂತಲೂ ಅವರ ಸಂಭವವನ್ನು ನಿವೃತ್ತಿ ಮಾಡಿ ಕೊಳ್ಳುವದೊಂದರೆ ನೆಲಭರಿತ ವಾದದೇಶವನ್ನು ಬಿಡಲಿಕ್ಕೆ ಮನ ಒಪ್ಪುವದೆ. ಹಸ್ತಗತಗಳಾದ ರತ್ನಗಳನ್ನು ಅನ್ಯರಿಗೆ ಒ ಪ್ಪಿಸಲಿಕ್ಕೆ ... ತ್ತದೆ. ... ಲ್ಯವಾದ ಬ್ರಹ್ಮ ... ಕಳೆಯ ಲಿಕ್ಕೆ ಮನ ಪ್ರೋತ್ಸಾಹ ... ನಿಸ್ಸಂದೇಹ ದಿಂದ ದೋಷ ಸ್ಥೈರ್ಯವು ಮರಳಿ ಕರೆಯಿಸಲಿ ಕ್ಕೆ ಲಜ್ಜೆಯು ಹೆಚ್ಚಾಗಿ ತೋರುತ್ತದೆ. ಇದುವ ರಿವಿಗೆ ವ್ಯಯವಾದ ಧನವೂ ಲಯವಾದ ಪ್ರಾಣ ಗಳೂ ನಿರರ್ಥಕಗಳಾಗುವದರಿಂದ ಕಾರ್ಯವನ್ನ ಪ್ರೊಯಿಸುವ ಬಲವಾಗ ... ಳಿ ಲ್ಲವೂ ಮೇಲೆಕಂಡ ಪ್ರವಾಹಕ್ಕೆ ... ಮಸ್ಸಿಗಳಾಗಿ ಪರ್ಯವಸಿತ್ತವೆ. ಇಂಗ್ಲಿಷರು ನಿ ಬಂಧವು ತಪ್ಪಿಸಿಕೊಂಡು ಫ್ರೆಂಚಿನವರ ಆಶ್ರಯ ವು ಕೋರಿ ಈಗ ಅವರಬಳಿ ಇರುವ ಮಿಂಗೂರ್ ರಾಜಪುತ್ರರವಿಷಯದಲ್ಲಿ ಸದರೀ ಸರ್ಕಾರದವರು ವ್ಯಕ್ತಪಡಿಸುತಲಿರುವ ಪ್ರೀತಿ ಗೌರವಗಳನ್ನು ಅವರು ಯೆಂದಿಗೂ ಮರೆಯಲಾರರು. ಮಾಂಡ ಲೇ ಪಟ್ಟಣದಲ್ಲಿ ಅನ್ಯ ಸಂಸ್ಥಾನದವರು ಗೂಢ ವಾಗಿ ನಡೆಸುತಲಿದ್ದ ಪಿತೂರಿಯೇ ಲಾರ್ಡ್ ಡ ಫ್ರಿನ್‌ಯವರ ಪ್ರವೇಶಪೂರ್ವಕವಾದ ತೀಬಾ ಅ ರಸರ ಪದಚ್ಯುತಿಗೂ, ದೇಶವು ಬ್ರಿಟಿಷ್ ರಾಜ್ಯ ದೊಡನೆ ದಾಖಲಾಗಲಿಕ್ಕೂ ಕಾರಣವಾಯಿತೆಂಬ ದು ಸ್ಪಷ್ಟವಾಗಿದೆ. ಇಂತಾ ಅನ್ಯದೇಶೀಯರ ಸಂಬಂಧವಲ್ಲದೇ ಗ್ಲಾಡ್‌ಸ್ಟನ್‌ಯವರಹೃದಯ ದೊಳು ಸಹ ರಾಜ್ಯವನ್ನು ದಾಖಲ್ಮಾಡಿಕೊಳ್ಳು ವಣವು ನ್ಯಾಯವೆಂದು ತೋರ್ಪಡಿಸಿದ್ದು? ರಾ ಜಪುತ್ರರಾದ ಮಿಂಗೂರ್‌ಯವರಿಗೆ ಫ್ರೆಂಚ್ ಸ ರ್ಕಾರದವರಲ್ಲಿ ಕೃತಜ್ಞತಾದಿ ಸದ್ಭಾವ ವಿರುವ ಪಕ್ಷಕ್ಕೆ ಅಂತವರ ಸಂಬಂಧವನ್ನು ಕಳೆದುಕೊ ಳ್ಳದೆ ಅವರ ಆಶ್ರಿತರಾಗಿರಬೇಕಾದ್ದೇ ನ್ಯಾಯ ವಾದ್ದರಿಂದ ಅಂತವರನ್ನು ಮರಳಿ ಬರ್ಮಾರಾಜ್ಯ ಕ್ಕೆ ಅರಸರನ್ನಾಗಿ ಇಂಗ್ಲಿಷಿನವರು ಮೊಕರರ್ಮಾ ಡುವದುವಿವೇಕವಾದಮೇರ್ಗವೆನ್ನಬಹುದೆ? ವಿ ವೇಕವೆಂದ್ಯಾತಕ್ಕೆ ಹೇಳಬಾರದು? ಅಫ್‌ಘಾನಿ ಸ್ಥಾನದೇಶದಈಗಿನಅಮೀರರಾದ ಅಬ್ದುಲ್‌ರಹಿ ಮಾನರವರು ರಷ್ಯಾದವರ ಆಶ್ರಿತರಾಗಿದ್ದಾಗ ಅ ವರಂತರೆಯಿಸಿ, ತೀಬಾ ಅರಸರಂತೆ ಕಾಬೂಲ್ ರಾಜ್ಯವನ್ನು ಉಚ್ಛೃಂಖಲವಾಗಿ ಪಾಲಿಸುತಲಿ ದ್ದ ಯಾಕೂಬ್ ಖಾನರಿಗೆ ಬದಲಾಗಿ ಮೊಕರ ರ್ಮಾಡುವಂತೆ ಅಲ್ಲಿನ ಆಡಳಿತವು ಪರ್ಯವಸಾನವ ನ್ನೈದಲಿಲ್ಲವೆ? ಆಗ್ಯೆ ಕಾಬೂಲ್‌ದೇಶದ ಸ್ಥಿತಿ ಯು ಬರ್ಮಾದೇಶದ ಪ್ರಸ್ತುತ ಸ್ಥಿತಿಯಂತಿರಲಿಲ್ಲ ವೆ? ಬ್ರಿಟಿಷರವರಿಗೆ ಅಲ್ಲಿನ ಆಡಳಿತದಿಂ ಬಹು ದವ್ಯವ್ಯಯವೂ, ಅನೇಕ ಪ್ರಾಣನಾಶವೂ ವಂ ಟಾದಾಗ್ಯೂ ದೇಶವು ತಹಬಂದಿಗೆ ಬಾರದೆ, ಕಡೆ ಗೆ ಶತ್ರುಪಕ್ಷಾವಲಂಬಿಯಾಗಿದ್ದ ಅದೇ ರಾಜವಂ ಶಕ್ಕೆ ಸೇರಿದ ಜೇರೊಬ್ಬರನ್ನು ಮೊಕರರ್ಮಾಡಿ ಸಂತೋಷ ಗೌರವದೊಡನೆ ಹಿಂದಿರಿಗಿ ಬರಲಿಲ್ಲ ವೆ? ಈ ಸಂದರ್ಭದಲ್ಲಿ ಸಹ ಮಿಂಗೂರ್ ರಾಜ ಪುತ್ರರನ್ನು ಬರ್ಮಾರಾಜ್ಯಕ್ಕೆ ಅರಸರನ್ನಾಗಿ ಮೊ ಕರರ್ಮಾಡಿ ಅಂತಾ ಪರೀಕ್ಷೆಯನ್ನೇ ಬರ್ಮಾದೇಶದ ವಿಷಯದಲ್ಲಿಯೂ ಯಾತಕ್ಕೆ ಮಾಡಲಾಗದು? ಈ ರೀತಿ ಮಾಡಿದೊತೆ ಬ್ರಿಟಿಷ್ ಗವರ್ನಮೆಂ ಟಿಗೆ ಬಹಳಕೀರ್ತಿಕರವಾಗಿರುವದೆಂಬದಕ್ಕೆ ಸ್ವಲ್ಪ ಮಾತ್ರವೂ ಸಂದೇಹವಿಲ್ಲವು. ಪರಂತು ಇಂತಾ ಸಂಧಿಯಂ ನಡಸಲಿಕ್ಕೆ ಫ್ರೆಂಚ್ ಸರ್ಕಾರದವ ರು ಸಮ್ಮತಿಸುವರೆಂಬ ಅಂಶ ಸಂದೇಹಾಸ್ಪದವಾ ಗಿವೆ. ಯಾತಕ್ಕೆಂದರೆ, ತೀಬಾ ಅರಸರನ್ನು ಪುದುಚ್ಚೇರಿಗೆ ಸಮೀಪವಾದ ರಾಣಿಪೇಟೆಯ ಲ್ಲಿರುವದು ಪ್ರಮಾದವೆಂಬ ಭಾವದಿಂ ರತ್ನಗಿರಿ ಗೆ ಸಾಗಿಸಿದ್ದನ್ನು ಫ್ರೆಂಚ್ ಸರ್ಕಾರದವರು ಅರಿಯದಿರುವರೆ? ಬರ್ಮಾ ರಾಜರ ಐಶ್ವರ್ಯ ಸ್ಥವನ್ನು ನಿರಾತಂಕವಾಗಿ ಬ್ರಿಟಿಷ್ ಸೈನ್ಯವು ಲೂಟಿ ಮಾಡಿದ್ದನ್ನೂ, ಬರ್ಮಾ ರಾಜಸಂತತಿಯವರ ಅವರ ನಗಳಾದ ರತ್ನಾಭರಣಗಳೆಲ್ಲವೂ ಲಂಡನ್ ಬಜಾರ್ ಮಾರ್ಕೆಟುಗಳಲ್ಲಿ ವಿಕ್ರಯಿಸಲ್ಪಟ್ಟದ್ದ ನ್ನೂ, ತೀಬಾ ಅರಸರಿಗೆ ಇಂಗ್ಲಿಷರು ಕೊ ಟ್ಟ ವಾಗ್ದಾನವು ಈಗ ರೂಪಾಂತರವನ್ನೈದಿ ದ್ದನ್ನೂ, ಬರ್ಮಾರಾಜ್ಯಕ್ಕೆ ಹಕ್ಕುದಾರರಾದವ ರು ಪರಪಕ್ಷಾವಲಂಬಿಯಾಗಿರುವದು ಇಂಗ್ಲಿ ಷಿನವರಿಗೆ ಆಲೋಚನೀಯಾಂಶವೆಂಬದನ್ನೂ, ಬ ರ್ಮಾ ದೇಶವನ್ನು ಬಿಟ್ಟು ಬಂದ ಮೊದಲು ಅನು ಭವಿಸಿದ ಪರಿಚಯಗಳನ್ನೂ, ಮಿಂಗೂರ್ ಅರಸ ರು ಪರ್ಯಾಲೋಚಿಸದೆ ಇರುವರೆ? ಈ ಕಾರ್ಯ ಕಾರಣಗಳನ್ನು ಆಲೋಚಿಸಲಾಗಿ ಮೇಲೆ ಕಂಡ ಪ್ರವಾಹವು ಸುಲಭವಾಗಿ ಸಂಭವಿಸದ್ದಾಗಿದೆ.

Occasional Notes.

ನೈಮಿತ್ತಿಕವಿಷಯಗಳು

A princely subscription.—ಜಯಪು ರದ ಮಹಾರಾಜರವರು ಲಾರ್ಡ್ ಡಫರಿನ್‌ಸಾಹೆಬ ರವರ ಭಾರ್ಯೆಯವರಿಂದ ಸ್ಥಾಪಿಸಲ್ಪಟ್ಟಿರುವ ಫಂ ಡಿಗೆ ಐದುಲಕ್ಷರೂಪಾಯಿಗಳು ಚಂದಾಮಾಡಿ ದರೆಂದು ತಿಳಿಯಲಾದೆವು.

The Finance Committee.—ರಾಜ್ಯ ರಾಜ್ಯದಖರ್ಚುಗಳನ್ನು ಕಮ್ಮಿಮಾಡುವದಕ್ಕಾ ಗಿ ಏರ್ಪಟ್ಟಿರುವ ಕಮಿಟಿಯವರು ಈಗ ಕಲ್ಕ ತ್ತೆಯೊಳಿರುತ್ತ, ಅಲ್ಲಿನ ಡ್ಯೆರೆಕ್ಟರ್‌ನ ಆಯಾ ಖಾತೆಗಳ ರಿಜಿಸ್ಟರ್‌ಗಳಮೂಲಕ ಅದ ರ ಖರ್ಚುಗಳನ್ನು ಕುರಿತು ಪರಿಶೋಧಿಸುತ ಲಿದಾರೆ.

New rifles for the French Army.— ಫ್ರೆಂಚ್ ಸೈನ್ಯಕ್ಕಾಗಿ ತಯಾರಾಗುತಲಿರುವ ಹೊಸ ನಮೂನೆ ರೈಫಲ್ ಬಂದೂಕ್‌ಗಳ ಕೆಲಸ ವು ಅತಿ ಜಾಗ್ರತೆಯಿಂದ ನಡೆಯುತೆ ನಾಲ್ಕಾರು ತಿಂಗಳೊಳಗಾಗಿಯೇ ವಿಶಿಷ್ಟ ಇರ್ಫಾಕ್ಟ್ರಿಸೇ ನೆಗೂ ಸದರೀ ಬಂದೂಖ್‌ಗಳು ಸರಬರಾಯ್ ಮಾ ಡಲ್ಪಡುವವು. ಇದರ ಲಾಗುವತು ನಾಲ್ಕುಕೋ ಟಿ ರೂಪಾಯಿಗಳಾಗಬಹುದೆಂದು ಅಂದಾಜಾಗಿ ರುತದೆ.

Suppression of the Ghilzai insurrection.—ಕಾಬೂಲ್ ರಾಜ್ಯದಲ್ಲಿ ಘಿಲ್‌ಜೆ ಎಂಬ ಜಾತಿಯವರು ಅಮೀರರ ಮೇಲೆ ಕಲಹಿಸಿದರೆಂ ದು ಪತ್ರಿಕೆ ಹಿಂದಿನ ವಾರದಲ್ಲಿ ತಿಳಿಸಿ ಇದ್ದೆವ ಷ್ಟೆ. ಅಮೀರರವರ ಜನರಲಾದ ಗುಲಾಂ ಹೈದರ್ ಖಾನರವರು ಘಿಲ್ಜೀಯವರನ್ನು ಕಲಹಗಳಿಂದ ಬಿಡಿಸುವದಕ್ಕಾಗಿ ಹೋಗುತ್ತಿರುವಲ್ಲಿ ಘಾಟ ಯಬಳಿ ಕಲಹಿಗಳು ಬಂದು ಅವರನ್ನು ಮುತ್ತಿ ಕೊಂಡರು. ಆದಾಗ್ಯೂ ಜನರಲ್ ಅವರನ್ನೆಲ್ಲ ಚದರಿಸಿ ಬಿಟ್ಟು ಘಿಲ್ಜಿಗೆ ಹೋಗಿ ಮೇಲೆ ಶ ತ್ರುಗಳನ್ನು ಪ್ರಬಲಸೈನ್ಯದೊಡನೆ ಹೊಡೆದು ಓಡಿಸಿ ಬಿಟ್ಟರೆಂದು ಈಚೆಗೆ ತಿಳಿಯ ಬರುತ್ತದೆ.

The state jewels of Baroda.—ಬರೋ ಡೇ ಸಂಸ್ಥಾನದ ಜವಾಹಿರ್‌ಗಳಪೈಕಿ ಪ್ರಾಯ ಶಃ ಯೆಲ್ಲವೂ ಮನೆ ಪರುವೆರಾಗತವಾದವು. ಅ ವುಗಳಪೈಕಿ ಒಂದು ದೊಡ್ಡ ವಜ್ರವಿರುತ್ತದೆ, ಅ ದರ ಕ್ರಯ ಐಂಭತ್ತುಲಕ್ಷ ರೂಪಾಯಿಗಳು. ಜೇರೆಯೊಂದು ವಜ್ರದ ಕಂಠಾಭರಣವಿದೆ, ಅದರ ಕ್ರಯ ಇಪ್ಪತ್ತೈದುಲಕ್ಷ ರೂಪಾಯಿಗಳು. ವೈಸರಾಯಿಯವರು ಅಲ್ಲಿಗೆ ದಯಮಾಡಿದ್ದ ಸಂ ದರ್ಭದಲ್ಲಿ ದರ್ಶನೀಯಗಳಾದವೆಂದು ಹೊರಗಿಡ ಲ್ಪಟ್ಟ ಜವಾಹಿರ್‌ಗಳು ನಾಲ್ಕುಕೋಟಿ ರೂಪಾ ಯಿಗಳಿಗಿಂತಲೂ ಅಧಿಕವಾಗಿ ಅಂದಾಜ್ ಮಾಡ ಲ್ಪಟ್ಟವು.

LOCAL AND PROVINCIAL NEWS.

ಬಳದೇಶವುಸ್ತು ತಾಲ್ಲೂಕುಜಾತಿವೃತ್ತಾಂತಗಳು.

Transfer.—ಬೆಂಗಳೂರು ಡಿಸ್ಟ್ರಿಕ್ಟು ಪ್ರೊ ಲೀಸ್ ಸೂಪರಿಂಟೆಂಡೆಂಟ್ ಮಿ. ರಾಘವಾಚಾರ್ಯು ಮೈಸೂರು ಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪಟ್ಟ ರುವಂತೆ ಕೇಳುತ್ತೇವೆ.

Mr. V. N. Narasimmiengar.— ಅಷ್ಟಗ್ರಾಮ ಡಿವಿಜನ್ ಸೆಷನ್ ಜಡ್ಜಿಯರಾಗಿ ದ್ದ ಮಿ. ವಿ. ಎನ್. ನರಸಿಮ್ಹಯ್ಯಂಗಾರ್ರವರಿಗೆ ಮಾಸೇಯಾನಾ ೨೫೦ ರೂಪಾಯಿಗಳ ಪೆನ್ಷನ್ ಕೊಡಲ್ಪಟ್ಟಂತೆ ಕೇಳುತ್ತೇವೆ.

A Sanscrit address to the Viceroy ವೈಸರಾಯಿಯವರು ಮೈಸೂರಿಗೆ ದಯಮಾ ಡುವಕಾಲದಲ್ಲಿ ಅವರಿಗೆ ಅಲ್ಲಿ ಒಪ್ಪಿಸತಕ್ಕಬಗ್ಯೆ ಶೃಂಗೇರಿ ಶ್ರೀಮಠದಿಂದ ಒಂದು ಸಂಸ್ಕೃತವಿ ಜ್ಞಾಪನಪತ್ರಿಕೆ ತಯಾರಾಗಿರುವುದೆಯೂ ಅ ದನ್ನು ಒಪ್ಪಿಸುವದಕ್ಕಾಗಿ ಮುದರಾಸಿನಿಂದ ಒಂದು ಜೆಳ್ಳಿಸಂಪುಟವು ನಿರೀಕ್ಷಿಸಲ್ಪಟ್ಟರು ವುದೆಯೂ ಕೇಳುತ್ತೇವೆ.

Transfer.—ಹೊನ್ನಾಳಿ ಮುನಸಫ ಮಿ ಸ್ಟರ್ ರಾಮಸ್ವಾಮಯ್ಯಂಗಾರ್ರವರಮೇಲೆ ತರ ಲ್ಪಟ್ಟ ಮೊಕದ್ದಮೆಯು ಚೀಫ್ ಜಡ್ಜಿಯವ ರಿಂದ ವಿಚಾರಣೆಮಾಡಲ್ಪಟ್ಟದರಲ್ಲಿ ಅವರು ನಿ ರಪರಾಧಿಯೆಂದು ಏರ್ಪಟ್ಟಿತಷ್ಟೆ. ಸದರೀಯ ವರು ನೆಲಮಂಗಲ ಮುನಸಫಿಕೆಲಸಕ್ಕೂ ಅಲ್ಲಿನ ಮುನಸಫರು ಚಿಕ್ಕಬಳ್ಳಾಪುರಕ್ಕೂ ವರ್ಗಮಾ ಡಲ್ಪಡುವರೆಂದು ಕೇಳುತ್ತೇವೆ.

Charity.—ದಿವಾನ್ ಕಚ್ಚೇರಿ—ಹನುಮಂ ತನಾಯಕರು ಈವೂರು ಕೋಟೆ ಹಿಂದುಗ ಡೆ ಇರುವ ದೊಡ್ಡ ಬಸವೇಶ್ವರ ದೇವಸ್ಥಾನ ದಲ್ಲಿ ಈ ತಿಂಗಳ ೨೩ನೇ ತಾರೀಖ್ ಮಂಗಳ ವಾರ ಹಗಲು ೧೦ ಘಂಟೆಯ ಮೊದಲು ಸಾಯಂ ಕಾಲ ೬ಘಂಟೆಯವರಿವಿಗೆ ಸಮಾರಾಧನೆ ಮಾಡು ತ್ತಾರಾಗಿ ಬೇಕಾದವರು ಅಲ್ಲಿಗೆ ಬಂದು ಊಟಾ ಮಾಡಿಕೊಂಡು ಹೋಗಬಹುದೆಂದು ಪ್ರಾರ್ಥಿ ಸುತ್ತಾರೆ.

THE MYSORE GAZETTE.

ಮೈಸೂರು ಗೆಜೆಟ್.

ಮೊಕ್ಕಾಂ ನಂ. ೧೦೨೮, ೪ನೇ ನವೆಂಬರ್.— ಪ್ರೊಬೇಷನರಿ ಅ|| ಕಮಿಷನರ್ ಮತ್ತು ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಮೆ|| ವಿ. ನಂಜುಂಡಯ್ಯ ನವರು ಕ್ರಿಮಿನಲ್ ಮೊಕದ್ದಮೆಗಳಲ್ಲಿ ಫಿರ್ಯಾದಿಗ ಳ ಮತ್ತು ಸಾಕ್ಷಿಗಳ ಸಾಕ್ಷ್ಯವನ್ನು ಸ್ವದಸ್ತೂ ರ್ ಇಂಗ್ಲಿಷ್‌ಭಾಷೆಯಲ್ಲಿ ತೆಗದುಕೊಳ್ಳಲಿಕ್ಕೆ ಹು ಕುಂಕೊಡಲ್ಪಟ್ಟಿರುತ್ತಾರೆ.

ಮೊಕ್ಕಾಂ ನಂ. ೧೦೩೨, ೧೫ನೇ ನವೆಂಬರ್. ಕೋಲಾರ ಚಿಂತಾಮಣಿ ಸಿಡ್ಲಘಟ್ಟ ... ತಾಲ್ಲೂಕು ಶಿ ರಸ್ತೇದಾರ್ ಗಂಗಾಧರಪ್ಪನವರು, ಸದರೀತಾಲ್ಲೂ ಕು ಚಾರ್ಜಿನಲ್ಲಿರುವ ಕಾಲದಲ್ಲಿ ಚಲಾಯಿಸತಕ್ಕ ಬಗ್ಯೆ ೩ನೇಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಕೊ ಡಲ್ಪಟ್ಟಿರುತ್ತಾರೆ.

ಮೊಕ್ಕಾಂ, ನಂ ೧೦೩೯.—ನಾಲೂರು ತಾ ಲ್ಲೂಕು ಅಮಲ್‌ದಾರ್ ಸೈಯದ್ ಅಲ್ಲೀಖಾನ ರು ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯತು ಒಂದುತಿಂಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟದಾರೆ.

ಮೊಕ್ಕಾಂ, ನಂ, ೧೦೫೪—ಇದರಡಿಬರುವ ಅ ಸಿಸ್ಟೆಂಟ್ ಕಮಿಷನರ್‌ಗಳಸ್ಥಳ, ವರ್ಗಾವರ್ಗಿಗ ಳು ಮತ್ತು ಮೊಕರರಾತಿಹುಕುಂಮಾಡಲ್ಪಟ್ಟವೆ ಅಸಿಸ್ಟೆಂಟ್ ಕಮಿಷನರ್ ಮೆ|| ಕೆ. ಪಿ. ಪುಟ್ಟ ಣ್ಣಶೆಟ್ಟರು ಶಿವಮೊಗ್ಗ ಡಿಸ್ಟ್ರಿಕ್ಟಿಗೆ ನಿಯ ಮಿಸಲ್ಪಟ್ಟು ಸದರೀ ಡಿಸ್ಟ್ರಿಕ್ಟು ಪೊಲೀಸ್ ಚಾರ್ಜಿನಲ್ಲಿರತಕ್ಕದ್ದು.

ಮೆ|| ಸೈಯದ್ ನಸುರುದೀನ್‌ಯವರು ಶಿವ ಮೊಗ್ಗ ಡಿಸ್ಟ್ರಿಕ್ಟಿನಿಂದ ಬೆಂಗಳೂರು ಡಿಸ್ಟ್ರಿ ಕ್ಟಿಗೆ ವರ್ಗಮಾಡಲ್ಪಟ್ಟಿರುತ್ತಾರೆ.

ಮೆ|| ಬಿ. ತಿರುಮಲಾಚಾರ್ಯು ಕೋಲಾರ್ ಡಿ|| ನಿಂದ ಶಿವಮೊಗ್ಗಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪ ಟ್ಟಿರುತ್ತಾರೆ.

ಮಿ. ಪಿ. ಪಂಚನದ ರಾಯರು ಶಿವಮೊಗ್ಗಾ ಡಿಸ್ಟ್ರಿಕ್ಟಿನಿಂದ ಕೋಲಾರ್ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

ಕೋಲಾರ ಡಿಸ್ಟ್ರಿಕ್ಟುಪೊಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಮಿ. ಎ. ಕೃಷ್ಣಸ್ವಾಮಯ್ಯಂಗಾ ರ್ರವರು, ಬೆಂಗಳೂರು ಡಿಸ್ಟ್ರಿಕ್ಟಿಗೆ ವರ್ಗಮಾ ಡಲ್ಪಟ್ಟ ಮಿ. ವಾರ್ಡ್‌ಯವರಿಗೆ ಬದಲು ಬೆಂಗ ಳೂರಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಆಫೀಸ ನಲ್ಲಿ ಕೆಲಸಮಾಡತಕ್ಕಬಗ್ಯೆ ವರ್ಗಮಾಡಲ್ಪಟ್ಟಿ ರುತ್ತಾರೆ.

ಕೋಲಾರ ತಾಲ್ಲೂಕು ಅಮಲ್‌ದಾರ್ ಮಿ. ಜೆ. ಜೆ. ಸಾರ್ಜೆಯವರು, ಮಿ. ಎಲ್. ಬಿ. ಕ್ಲಾರ್ಕ್ ಯವರು ಬೇರೆ ಕೆಲಸದಮೇಲಿರುವ ಕಾಲದಲ್ಲಿ, ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತ ನಕ ಕೋಲಾರ್ ಡಿಸ್ಟ್ರಿಕ್ಟು ಪೊಲೀಸ್ ಚಾ ರ್ಜಿನಲ್ಲಿರತಕ್ಕಬಗ್ಯೆ, ೪ನೇ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನರಾಗಿ ಮೊಕರರ್ಮಾಡಲ್ಪಟ್ಟದಾರೆ.

ಮೊಕಾಂ ನಂ. ೧೧೨೦.—ಮೈಸೂರು ಮು ನಸಫ ಮಿ. ನೈಡಯವರು, ಮತ್ತೊಂದುಹು ಕುಂ ಕೊಡಲ್ಪಡುವ ತನಕ, ಮೈಸೂರು ಸಿ ಟಿಯಲ್ಲಿ ಸ್ಪೆಷಲ್ ಡ್ಯೂಟಿಯ ಮೇಲೆ ನಿಯಮಿಸ ಲ್ಪಟ್ಟದಾರೆ. ಅಂತಾ ಕೆಲಸದ ಮೇಲಿರುವ ಕಾಲದಲ್ಲಿ, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ ೧೨ನೇ ಸೆಕ್ಷನ್ ಪ್ರಕಾರ ೧ನೇ ಕ್ಲಾಸ್ ಮ್ಯಾಜಿ ಸ್ಟ್ರೇಟ್ ಅಧಿಕಾರಗಳು ಮತ್ತು ೪ನೇ ಷೆಡ್ಯೂ ಲ್‌ನಲ್ಲಿ ಹೇಳಿರುವ ಜಾಸ್ತೀ ಅಧಿಕಾರಗಳು ಕೊ ಡಲ್ಪಟ್ಟಿರುತ್ತಾರೆ.

೧. ೧೩೩ನೇ ಸೆಕ್ಷನ್ ಅನುಸರಿಸಿ ಸ್ಥಳದಲ್ಲಿ ನ ಹೇಸಿಕೆಗಳ ವಿಷಯದಲ್ಲಿ ಹುಕುಂ ಮಾಡ ಲಿಕೆ ಅಧಿಕಾರ.

೨. ೧೪೩ನೇ ಸೆಕ್ಷನ್ ಅನುಸರಿಸಿಹೇಸಿಕೆ ಗಳು ಬಾರ್ ಬಾರ್ ನಡೆಯದಂತೆ ನಿರೋಧಿಸುವ ಬಗ್ಯೆ ಹುಕುಂಮಾಡಲಿಕ್ಕೆ ಅಧಿಕಾರ.

೩. ೧೫೮ನೇ ಸೆಕ್ಷನ್‌ಅನುಸರಿಸಿ ಲಾಷ್ ವಿ ಚಾರಣೆ ಮಾಡಲಿಕ್ಕೆ ಅಧಿಕಾರ.

೪. ೧೯೧ನೇಸೆಕ್ಷನ್ ಅನುಸರಿಸಿ ಫಿರ್ಯಾದ ನಮೇಲೆ ತಕ್ಸೀರ್‌ಗಳ ವಿಚಾರಣೆ ಮಾಡಲಿಕ್ಕೆ ಅಧಿಕಾರ.

೫. ೧೯೧ನೇ ಸೆಕ್ಷನ್‌ಅನುಸರಿಸಿ ಪೊಲೀ ಸ್ ರಿಪೋರ್ಟ್‌ಗಳ ಮೇಲೆ ತಕ್ಸೀರ್‌ಗಳ ವಿಚಾ ರಣೆಯಬಗ್ಯೆ ಅಧಿಕಾರ.

೬. ೧೯೧ನೇಸೆಕ್ಷನ್ ಅನುಸರಿಸಿ ತಿಳುವಳಿ ಕೆಯಮೇಲೆ ತನಿಖೆಮಾಡಲಿಕ್ಕೆ ಅಧಿಕಾರ.

SUMMARY OF NEWS.
ವೃತ್ತಾಂತ ಸಂಗ್ರಹವು.

ಮಹಾರಾಣಿ ಸರ್ಕಾರದವರು ರಾಜ್ಯಭಾರ ಮಾಡತಕ್ಕ ೫೦ ವರುಷಗಳು ಪೂರ್ಣವಾದ್ದರಿಂದ ಇನ್ನು ಹೊಸ ರೂಪಾಯಿಗಳು ತಯಾರಾಗುವದಲ್ಲದೆ ಅವುಗಳಮೇಲೆ ಮಹಾರಾಣಿಯವರ ವೃದ್ಧ ಮುದ್ರೆಯು ಮುದ್ರಿಸಲ್ಪಡಬಹುದು.

ವಾಯುವ್ಯ ಪ್ರಾಂತದಲ್ಲಿ ೧೩ಲಕ್ಷ ರೂಪಾಯಿ ಮಧ್ಯಪ್ರಾಂತದಲ್ಲಿ ೨ಲಕ್ಷ ರೂಪಾಯಿ, ಮುಂಬೈ ಇಲಾಖೆಯಲ್ಲಿ ೫೪ಲಕ್ಷ ರೂಪಾಯಿ, ಮತ್ತು ಮದರಾಸ್ ಇಲಾಖೆಯಲ್ಲಿ ೧೦ ಲಕ್ಷರೂಪಾಯಿ, ಈ ಮೇರಿಗೆ ಸರ್ಕಾರದವರಿಂದ ನೇಮಿಸಲ್ಪಟ್ಟ ಫೈನಾನ್ಸ್ ಕಮಿಟಿಯವರು ಎಲ್ಲಾ ಸರ್ಕಾರೀ ಎಸ್ಟಾಬ್ಲಿಷಮೆಂಟನಲ್ಲಿ ಕಡಮೆಮಾಡಿದರು.

ನಮ್ಮ ಹಿಂದೂಜನರ ಅಭಿವೃದ್ಧಿಯೆಲ್ಲವೂ ಒಂದು ಜಾತಿ ಮಾತ್ಸರ್ಯದಿಂದ ತಲೆ ಕೆಳಗಾಗುತ್ತದೆಂಬವನ್ನು ಸುಜ್ಞಾನಿಗಳಾದ ಕೆಲವು ವಿದ್ವಾಂಸರು ಇದನ್ನು ಹೋಗಲಾಡಿಸಲು ಪ್ರಯತ್ನಪಡುತ್ತಾರೆ. ಆದರೆ ಕೆಲವು ಆಧುನಿಕ ಪಂಡಿತ ವೇಷಧಾರಿಗಳಿಗೆ ಮಾತ್ರ ಮೇಲಿನ ವಿದ್ವಾಂಸರ ಮತವು ಮನಃಪೂರ್ವಕ ಸಮ್ಮತವಾಗಿದ್ದರೂ ಬಾಹ್ಯವಾಗಿ ತಮ್ಮ ನಿಜ ಭೇದವನ್ನು ತೋರಿಸದೆ ಅನ್ಯಮಾರ್ಗದಿಂದ ತಮ್ಮ ಇಷ್ಟಾರ್ಥ ಸಿದ್ಧಿಸಬೇಕೆಂದು ಯುಕ್ತಿ ಪ್ರಯುಕ್ತಿಗಳಿಂದ ಪ್ರಯತ್ನಿಸುತ್ತಾರೆ. ಆದರೆ ಅವರ ಮನೋಭಿಪ್ರಾಯವೆಲ್ಲ ಮುಚ್ಚಿಟ್ಟ ಕಸ್ತೂರಿಯ ಭರಣಿಯಂತೆಯೇ ಸರಿ ಎಂದು ಗ್ರಹಿಸಿ ತಮ್ಮ ಮನೋಭಿಪ್ರಾಯವನ್ನು ಹಿಂದಕ್ಕಿಟ್ಟರೆ ನಮ್ಮ ದೇಶ ಮಾತೆಯನ್ನು ಸತ್ಕಾರ ಮಾಡಿದಂತಾಗುವದು.—ಹಿಂದ್ಯಕ್ ಸುಬೋಧವು.

ಯೂರೋಪುದೇಶವೆಲ್ಲೆಲ್ಲಾ ಅಸಮಾಧಾನವು ಪೂರ್ಣವಾಗಿ ವ್ಯಾಪಿಸಿದ್ದು ಈಗ ಬಿರಿದಿನಗಳಲ್ಲಿ ಯುದ್ಧವು ನಡೆಯುವ ಲಕ್ಷಣಗಳು ತೋರಿ ಬರುತ್ತಾ ಇವೆ. ಅದರಲ್ಲಿ ಮುಖ್ಯವಾಗಿ ರಾಜ್ಯತೃಷೆಯಿಂದ ಬಾಯಾರಿರುವ ರಷ್ಯಾದೇಶದವರು ತಮ್ಮ ರಾಜ್ಯವನ್ನು ವಿಸ್ತೀರ್ಣ ಪಡಿಸುವದಕ್ಕೆ ಬಹುವಿಧವಾಗಿ ಪ್ರಯತ್ನ ನಡೆಸಿರುತ್ತಾರೆ. ಚಿಕ್ಕ ಇಲಿಯನ್ನು ಹಿಡಿಯಲಿಕ್ಕೆ ತೀಕ್ಷ್ಣದೃಷ್ಟಿಯಿಂದ ರೆಪ್ಪೆ ಕೆಡದಿರುವಂತೆ ಈ ರಷ್ಯಾದೇಶದವರು ಕಾನಸ್ಟಾಂಟಿನೋಪಲಿನಮೇಲೆ ಆಸೆಯು ಜಾತಿಯನ್ನು ಬಗೆದು ನಾನಾ ತರದಿಂದ ಕಲಹಕ್ಕೆ ಕಾರಣಗಳನ್ನು ಹುಡುಕುತ್ತಿರುವರು. ಇಂಗ್ಲೀಷರಂತೆ ಕಾರ್ಯನಿಪುಣಗಳೂ, ಧೈರ್ಯವಂತರೂ, ರಾಜ್ಯಲೋಭಿಗಳೂ ಇವೇ ಯಾರೋಪನಲ್ಲಿ ಯಾರೂ ಸಿಕ್ಕಲಿಕ್ಕಿಲ್ಲವೆಂತ ಪ್ರಕೃತದಲ್ಲಿ ನಾವು ನೆನಸಿಕೊಂಡಿದ್ದೆವು. ಆದರೆ ನಾವು ಈಗ ರಷ್ಯಾ [illegible] ವರ್ತನೆಯ ಪಟ್ಟಿಯನ್ನು ನೋಡಿದರೆ ಇಂಗ್ಲೀಷರ ಮೇಲೆಯೂ ಮೇಲ್ಕೈ ಮಾಡಿದರೆಂದು ನಮ್ಮಿಂದ ಹೇಳದೆ ಇರೋಣಾಗದು.—ಚಂದ್ರೋದಯ.

ಬ್ರಹ್ಮದೇಶದಲ್ಲಿ ಕಾಲಿಟ್ಟಕೂಡಲೇ ಬ್ರಿಟಿಷ ಸರಕಾರದವರು ಮಿಂಡ್ಲಾಯೆಂಬದೊಂದು ಮುಖ್ಯಗ್ರಾಮವನ್ನು ತಮ್ಮವಶಕ್ಕೆ ತೆಗೆದುಕೊಂಡರು. ಅಂದಿನಿಂದ ಇದುವರಿಗೆ ಅಲ್ಲಿ ಇವರ ಸೈನ್ಯವು ಠಾಣ್ಯವಾಗಿರುತ್ತದೆ. ಕೆಲವು ದಿನಗಳ ಇತ್ತಲಾಗಿ ಇಲ್ಲಿಯ ದಂಗೆಗಾರರಲ್ಲಿ ೫೦ ಜನರು ರಾತ್ರಿಸಮಯ ಒಂದುಗ್ರಾಮವನ್ನು ಲೂಟಿಮಾಡಿ, ಅರ್ಧಗ್ರಾಮವನ್ನೂ ನಾಲ್ಕು ದೋಣಿಗಳನ್ನೂ ಸುಟ್ಟು, ಆಗ್ರಾಮದ ಗೌಡನನ್ನು ಹಿಡಿದು ಒಯ್ದರಂತೆ. ಬ್ರಿಟಿಷ ಸೈನ್ಯದವರಿಗೆ ಇದರ ವರ್ತಮಾನವುಟ್ಟಿ ಅವರು ಬರುವವರೊಳಗೆ ಈ ದಂಗೆಯೋರರು ಇಷ್ಟೆಲ್ಲ ಚಾರಿಬಾರ್ ನಡೆಸಿ ಓಡಿಹೋದರು. ಪ್ರತ್ಯಕ್ಷ ಬ್ರಿಟಿಷ ಸೇನೆಯ ಠಾಣ್ಯವಿದ್ದಲ್ಲಿ ಸಹ ದಂಗೆಗಾರರ ಬಲವು ಇಷ್ಟರಮಟ್ಟಿಗೆ ನಡೆಯುವದಾದಮೇಲೆ, ಇತರ ಸ್ಥಳಗಳ ಸ್ಥಿತಿಯನ್ನು ಸಹಜವಾಗಿಯೇ ಊಹಿಸಬಹುದು. ಈ ವರ್ತಮಾನವನ್ನು ಕೇಳಿ ಸಿವಿಲ್ ಅಂಡ್ ಮಿಲಿಟರಿ ಗೆಜೆಟ ಎಂಬ ಇಂಗ್ಲೀಷ್ ಪತ್ರಕರ್ತರು ಸಹ ಬ್ರಿಟಿಷ ಸರಕಾರದವರ ಅಧಿಕಾರದ ಈ ಸ್ವರೂಪವು ಸಮಾಧಾನಕರವಾಗಿ ಕಾಣುವದಿಲ್ಲ ವೆಂದು ಹೇಳುತ್ತಾರೆ. ಇಷ್ಟಾದರೂ ಇನ್ನು ಶೀಘ್ರದಲ್ಲಿಯೇ ಬ್ರಹ್ಮದೇಶದಲ್ಲಿ ಶಾಂತತೆಯನ್ನು ನೆಲೆಗೊಳಿಸುವೆವೆಂದು ದಫ್ತರಿನ್ ಪ್ರಭುಗಳಿಗೆ ದೃಢವುಂಟು.—ಕನ್ನಡಸುವಾರ್ತೆ.

ಇತ್ತಲಾಗಿ ನಮ್ಮ ಜನರಲ್ಲಿ ಬಹುಮೂತ್ರದ ರೋಗವು ಹೆಚ್ಚಾಗಿ ಹಬ್ಬುತ್ತ ನಡೆದದೆ. ಈ ಭಯಂಕರ ರೋಗಕ್ಕೆ ಎಷ್ಟೋ ಅಲೋಪತಿ ಔಷಧಿಗಳು ಬಳಿಬೀಳುತ್ತವ ಬಹುಮೂತ್ರದಮೇಲೆ ಅನೇಕ ಔಷಧಗಳಿರುತವೆ, ಆದರೆ ಅವುಗಳೊಳಗೆ ಯಾವದೊಂದರಿಂದಲಾದರೂ ಈ ರೋಗವು ಗುಣವಾದದ್ದು ನಮ್ಮ ಕೇಳುವಿಕೆಯಲ್ಲಿ ಬರಲಿಲ್ಲ. ದಿ ಬ್ರಿಟಿಷ ಅಕ್ವೆ ಕಲೋನಿಯಲ್ ಡ್ರಗಿಸ್ಟ ಎಂಬ ವೈದ್ಯಕಿ ವರ್ತಮಾನಪತ್ರದ ಎಡಿಟರಾದ ಮಿಸ್ತರ್ ಸ್ಕಾಟ ಎಂಬವರು ಈರೋಗದಮೇಲೆ ಒಂದು ಸಾಧಾರಣ ಔಷಧವನ್ನು ಹುಡುಕಿ ತೆಗೆದಿದ್ದಾರಂತೆ. ಅದೇನೆಂದರೆ,—ನೇರಳೆಹಣ್ಣಿನ ಬೀಜವು ಬಹುಮೂತ್ರನಾಶದ ಮೂತ್ರಪೀಡೆಯಾಗುತ್ತದೆ; ಇದರಕಾರಣವು ಅದರೊಳಗಿರುವ ಸತ್ವವೆಂಬ ಒಂದು ದ್ರವ್ಯವೇ ಈ ದ್ರವ್ಯದ ಹುಟ್ಟುವಿಕೆಯನ್ನು ಪ್ರತಿಬಂಧಿಸುವ ಶಕ್ತಿಯು ನೇರಳೆಬೀಜದಲ್ಲಿ ಇರುತ್ತದೆಂದು ಪೌ|| ಸ್ಕಾಟರವರು ಅನುಭವತೆಗೆದುಕೊಂಡಿರುತ್ತಾರೆ. ಆದರೆ ಇದರಿಂದ ಬಹುಮೂತ್ರವು ಪೂರ್ಣವಾಗಿ ಗುಣವಾಯಿತೋ ಏನೋ ಎಂಬದು ಅವರಿಗೆ ಇನ್ನೂ ದೃಢವಾಗಲಿಲ್ಲವಂತೆ. ಈವಿಷಯಕ್ಕೆ ಎಲ್ಲ ವೈದ್ಯರ ಲಕ್ಷ್ಯಕೊಡತಕ್ಕದ್ದು ಯೋಗ್ಯವು—ಕನ್ನಡಸುವಾರ್ತೆ.

ಕನ್ನಡ ಜಿಲ್ಲೆಯೊಳಗೆ ಇತ್ತಲಾಗಿ ಜಾತಿಮಾತ್ಸರ್ಯವು ಬಹುತರದಿಂದ ಪ್ರಬಲಗೊಳ್ಳುವಂತ ಕಾಣುತದೆ. ಹೀಗೆ ಒಬ್ಬರಿಗೊಬ್ಬರು ಬನ್ನೆರ ಮಾಡುವದರಿಂದ ಪರಸ್ಪರ ತಮಗೊಂದು ನಿಧನದ ಲಾಭವಿರುತದೆಂದು ತಿಳಕೊಂಡು ತಮ್ಮ ತಮ್ಮ ನಡತೆ ನಡಾವಳಿಗಳನ್ನು ನೀತಿ ಬಾಹ್ಯವಾಗಿ ಅನುಸರಿಸುತ್ತಿರುವದು ಅಗಾಧ ಮಾಡಿ ಮಿಂಚಿನಂತೆ ಚಮಕಲಿಕ್ಕೆ ಪ್ರಾರಂಭವಾಗಿರುತವೆ. ಕೆಲವರು ಯುರೋಪಿಯನ್ ಜನರ ಹಿತವಡೆಯುವರ ದೆಸೆಯಿಂದಲೂ, ಕೆಲರು ಹಿಂದಿಕ್ಕಿರುವವರು ಮುಂದೆ ಬಂದರೆ ತಾವು, ತಮವರು ಮುಂದಿನವರಿಗಿಂತಲೂ ತಾವು ನಿಮ್ನರಾಗಿ ಮುಂದಕ್ಕೆ ಹೋಗದೇ ಹೋಗಬಹುದು, ಮತ್ತು ತಮವರು ಅನ್ಯರು ವೃದ್ಧಿಯಾದರೆ ತಮಗೆ ಮುಂದಕ್ಕಾದ ಹಾನಿ ಸಂಭವಿಸೀತೆಂದೂ, ಮತ್ತು ಕೆಲರು ಬೇರೆಯವರು ವೃದ್ಧಿಹೊಂದಿ [illegible] ಭೂಪಾಲಕ್ಕೇನೇ ಮುಖ್ಯ [illegible] ಹೀಗೆ ಈ ರೀತಿ ಪರಸ್ಪರ [illegible] ಯು ಬೆಳೆಯುತ್ತ [illegible] ರಿಸುವದಕ್ಕೆ [illegible]. ಹೀಗಾದ ನೋಡಿದರೆ ಎದು [illegible] ಕಾಲದಲ್ಲಿ ಬರುವ ದುಷ್ಪರಿಣಾಮವೇ ಇದ ಎಂದೇನೋ ಎಂತ ಸಂಶಯವಾಗುತದೆ. ಆದ್ದರಿಂದ ಅಲ್ಲಿನ ಈ ಜಾತಿ ಮಾತ್ಸರ್ಯವು ಕೇವಲ ಪ್ರಳಯ ಸ್ವರೂಪವಾಗಿರುತದೆಂತಲೂ ಇದರಿಂದ ಯಾವ ಜನರ ಹೇತುವೂ ಕೂಡ ಸಿದ್ಧಿಸದೆ ಸರ್ವತ್ರ ಮಹತ್ತರವಾದ ಹಾನಿ ಸಂಭವಿಸೀತೆನ್ನುವದನ್ನು ಸದಾ ಅಲ್ಲಿನ ಅಭಿಮಾನಿ ಉಮೇದ್ವಾರ ಜನರು ವಿಚಾರದೃಷ್ಟಿಯಿಂದ ನಿರೀಕ್ಷಿಸಿದರೆ ಸಹಜವೇ ಕಂಡು ಬರುವದು. ಪರಸ್ಪರ ಪ್ರೀತಿ ಮಾಡುವದರಿಂದ ದೇಶಕ್ಕೆ ಯಾವ ವಿಧವಾದ ಲಾಭವು ಎಷ್ಟರಮಟ್ಟಿಗೆ ಕಾಣಬಂದೀತೋ? ಅದರಂತೆ ದ್ವೇಷ ಮಾಡುವವರಿಂದ ಅದರಷ್ಟು ಶತಧಾ ಹಾನಿಯು ಬಹು ಬೇಗನೆ ಸಂಭವಿಸೀತೆನ್ನುವದರಲ್ಲಿ ಏನೇನೂ ಸಂಶಯವಿಲ್ಲ. ಆದ್ದರಿಂದ ಅಲ್ಲಿನ ಜನರು ಇದನ್ನು ಮನಃಪೂರ್ವಕ ಮರೆತು ತಮ್ಮೊಳಗೆ ಮಿತ್ರತ್ವವನ್ನುಂಟುಮಾಡಿಕೊಳ್ಳಲೆಂದು ಬಯಸುತ್ತೇವೆ.—ವಿಜಯ.

ಕ್ರಿಶ್ಚಿಯನ್ ಭೋಳತನದ ಒಂದುಹೊಸ ಉದಾಹರಣೆಯು ಸಿಕ್ಕಿರುತದೆ, ಅದೇನೆಂದರೆ. ಅಂಬಾಲೆಯ ಡೆಪ್ಯುಟಿಕಮಿಷನರಾದ ಮಿಸ್ತರ್ ಬುಲ್ಮರ್ ರ ಹೆಂಡತಿ ಮಿಸ್ಟ್ರೆಸ್ ಬುಲ್ಮರ್ ಎಂಬವಳು ಅತಿಭಾವಿಕ ಕ್ರಿಶ್ಚಿಯನ್ ರೊಳಗೆ ಗಣನೆಮಾಡಲ್ಪಡುತ್ತಾಳಂತೆ. ಈಸಾಧ್ವಿಯು ಸುಮಾರು೧೭-೧೮ ವರುಷಪ್ರಾಯದ ಒಬ್ಬ ನೇಟಿವ್ ಹುಡುಗನಿಗೆ, ಮುಕ್ತಿಫೌಜಿನಲ್ಲಿ ನಿನಗೆ ಕಪ್ತಾನಿಯಕೆಲಸ ಕೊಡಿಸುತ್ತೇನೆಂದು ಹೇಳಿ ಅವನನ್ನು ಮುಂಬೈಗೆ ಕಳುಹಿಸುವವಳಿದ್ದಳು. ಅಷ್ಟರಲ್ಲಿ ರೈಲ್ವೆಸ್ಟೇಷನಿನಮೇಲೆ ಒಬ್ಬಗೃಹಸ್ಥನು ಇವನನ್ನು ಕುರಿತು ನೀನು ಎಲ್ಲಿಹೋಗುತ್ತಿ ಎಂದು ಕೇಳಿದನು. ಮುಂಬೈಗೆ ಎಂದು ಇವನು ಉತ್ತರಕೊಟ್ಟನು. ಯಾಕೆ ಎಂತ ಪುನಃಕೇಳಲು ಮುಂಬೈಯಲ್ಲಿ ಒಂದು ಹೊಸ ರಿಜಿಮೆಂಟಿನ ಕಪ್ತಾನಿಯ ಜಾಗವು ನನಗೆ ಸಿಕ್ಕುತದೆ, ಎಂದು ಹೇಳಿ ತನ್ನ ಕೈಯಲ್ಲಿದ್ದ ಒಂದು ಪತ್ರವನ್ನು ತೋರಿಸಿದನು. ಈ ಗೃಹಸ್ಥನು ಅದನ್ನು ತೆರೆದು ಓದುವದರಲ್ಲಿ ಮಿಸ್ಟ್ರೆಸ್ ಬುಲ್ಮರ್ ಳು ಮುಂಬೈ ಮುಕ್ತಿಫೌಜಿಗೆ ಸಂಬಂಧಪಟ್ಟ ಒಬ್ಬ ಮಿಸ್ ಬೂತ್ ಎಂಬವಳಿಗೆ, ಈ ಹುಡುಗನು ನಿಮ್ಮ ರಿಜಿಮೆಂಟಿಗೆ ಸೇರಲಿಕ್ಕೆ ಬಹಳ ಆತುರಪಡುತ್ತಾನಾದ್ದರಿಂದ ಇವನನ್ನು ಕಳುಹಿಸಿದ್ದೇನೆ, ಎಂದು ಬರೆದಿದ್ದನ್ನು ಕಂಡನು. ಆಗ ಇವನು ರಿಜಿಮೆಂಟೆಯೆಂಬವರತರ್ಫವು ಸಾಲ್ವೇಶನ್ ಆರ್ಮಿಯೆಂದು ತಿಳಿದು ನೀನು ಜಾತಿಕೆಡಲಿಕ್ಕೆ ಹೋಗುತ್ತಿಯೋ ಯೆಂದುಕೇಳಿ ಕಾಗದದೊಳಗಿನ ಮಜಕೂರು ಅವನಿಗೆ ತಿಳಿಸಿದನು. ಇದನ್ನು ಆಹುಡುಗನು ಕೇಳಿ ಬಹು ಆಶ್ಚರ್ಯಪಟ್ಟು, ಬುಲ್ಮರ್ ಧೊರೆಸಾನಿಯು ರೆಗೆಯಿಂದ ಈ ಪ್ರಕಾರ ಮೋಸವಾಗುವದಿಕ್ಕಿಲ್ಲ, ನನಗೆ ನಿಜವಾಗಿ ಒಂದು ಮಿಲಿಟರಿ ರಿಜಿಮೆಂಟನಲ್ಲಿ ಕಪ್ತಾನಿಯ ಜಾಗ ಸಿಕ್ಕುತ್ತದೆಂದು ದೃಢವಾಗಿ ಹೇಳಿದನು. ಆಗ ಈ ಗೃಹಸ್ಥನು ಪುನಃ ನಿಜವಾದ ಸಂಗತಿಗಳನ್ನೆಲ್ಲ ಚೆನ್ನಾಗಿ ತಿಳಿಯುವಂತೆ ಹೇಳಲು ಹುಡುಗನು ನಿರಾಶನಾಗಿ ಮನೆಗೆ ತಿರುಗಿ ಹೋದನು. ಈಕತೆಯು ಲಾಹೋರ ಟ್ರಿಬ್ಯೂನ್ ಎಂಬ ಪತ್ರದಲ್ಲಿರುತದೆ. ಕೆಲವುದಿನಗಳಹಿಂದೆ ಬೆಂಗಳೂರಿನಲ್ಲಿ ಸಹ ಕ್ರಿಶ್ಚಿಯನ್ ಭೋಳೆತನದ ಇನ್ನೊಂದು ಉದಾಹರಣೆಯು ಸಂಭವಿಸಿತು. ಕ್ರಿಶ್ಚಿಯನ್ ಮಿಷನರಿಗಳು ಇತ್ತಲಾಗಿ ತಮ್ಮ ಮತವನ್ನು ಪ್ರಸರಿಸಲಿಕ್ಕೆ ಈಗ ಎಲ್ಲಿನೋಡಿದರೂ ಅನೇಕ ಯುಕ್ತಿಯನ್ನು ಉಪಯೋಗಿಸುವದು ಕಾಣುತ್ತದೆ.—ಕ. ಸು.

ಮದ್ಯಪಾನ ಮಹಾಪಾಪವೆಂಬದಾಗಿ [illegible] [illegible] ಸುಮಾರು ಕೆಲವು ತಾಲ್ಲೂಕಿನವರು [illegible] ಜನರು ಮಾಡಿಕೊಂಡಿರುವ ಕಟ್ಟಳೆ ಬಹು ಸ್ತುತ್ಯವಾದದ್ದಾಗಿರುತ್ತದೆ. ಈ ಸತ್ಕೃತ್ಯಕ್ಕೆ ಎಲ್ಲರೂ ಸಹಾಯ [illegible] ಬಹು ಅನುಕೂಲವಾದದ್ದು. ಈ ಜನರು [illegible] ನಾವು [illegible] ಈ [illegible] ಬಹಳ [illegible] ಮುಖ್ಯವಾಗಿ [illegible] ಹೋಗುತ್ತಾರೆ. ಅವರಬಗ್ಗೆ ಉಪಾಧಿಗಳು ಯಾವಲ್ಲಿ ಮದ್ಯಪಾನದ ಚಾಳಿಯು ಸೇರುತ್ತದೋ ಅಲ್ಲ ದೃಷ್ಟಿಗೋಚರವಾಗದೆ ಇರಲಿಕ್ಕಿಲ್ಲವೆಂಬುದು ಸತ್ಯವು. ಹೀಗಿರಲು ಎಲ್ಲಜನರು ಈ ವ್ಯಸನವನ್ನು ದೇಶದಿಂದ ಹೊರಡಿಸಿಕೊಳ್ಳುವದೇ ಬಹು ಯೋಗ್ಯವೆಂದು ಪ್ರತಿ ಒಬ್ಬ ಸಮಂಜಸ ಗೃಹಸ್ಥರು ಹೇಳದೆ ಇರರು. ಅಂದರೆ ಈಗ ಈ ಮದ್ಯಪ್ರಸಾರವು ಆಂಗ್ಲೇಯ ವಿದ್ಯೆಯ ಛಾಳಿಯ ಸ್ಪರ್ಶವು ಆದ ಹಕ್ಕ ಬಾಲಕರಿಂದ ಮುದಿಪ್ರಾಯದ "ಮುಟಪರ್ಮ" ರ ತನಕ ಉಂಟಾಗಿರುತದೆ. ಯಾವ ಧರ್ಮದಲ್ಲಿ ಈ ಮದ್ಯವು ನಿಷೇಧವಾಗಿದೆಯೆಂದು ವೇದಗಳೂ ಶಾಸ್ತ್ರಗಳೂ ಪುರಾಣಗಳೂ ಕೂಗುತವೋ ಆ ಧರ್ಮಕ್ಕೆ ಸೇರಿದ ಜನರು ಇದರ ಸ್ವಾದನನ್ನು ಬಹು ಹರುಷದಿಂದ ಮಾಡುವದನ್ನು ಕಾಣುವ ನಮ್ಮ ಪಾಪದ ಕಣ್ಣುಗಳೂ ಕೇಳುವ ಪಾಪದ ಕಿವಿಗಳೂ ಧಿಕ್ಕಾರವಾಗಲಿ. ಈಗಲು ಸಾರಾಯಿ ಸೀಷೆಗಳನ್ನು ಕೈಯಲ್ಲಿ ಹಿಡಿದು ಬೀದಿಯಿಂದ ಬೀದಿಗಳಿಗೆ ಅಡ್ಡಾಡಲಿಕ್ಕೆ ಯಾವ ಯೂರೋಪಿಯನ್ನರೊಳು ಪ್ರತಿಬಂಧಕವಿಲ್ಲವೋ ಅಂತವರು ಸಹ ನೀತಿಯನ್ನು ಕಲಿತು ಈ ಮದ್ಯಸೇವನದಿಂದುಂಟಾಗುವ ನಷ್ಟಗಳನ್ನು ಕಂಡು ಇದನ್ನು ತಮ್ಮಿಂದ ತಪ್ಪಿಸಿಕೊಳ್ಳಲಿಕ್ಕೆ ಆದಷ್ಟು ಪ್ರಯತ್ನ ಮಾಡುತ್ತಾ ಇರುವಾಗ ನಮ್ಮ ದೇಶೀಯ ಬಾಟಲ್ ಮಿತ್ರರಿಗೆ ತಾವು ಮಾಡುವ ಆಚಾರವು ಎಷ್ಟು ನಾಚಿಕೆಯುಳ್ಳದ್ದೆಂಬ ಸಂಗತಿಯು ತಿಳಿಯಲಿಲ್ಲವೆ? ಎದೆಯನ್ನು ಸೀಳಿದರೆ ನಾಲ್ಕು ಅಕ್ಷರಗಳು ಇಲ್ಲದಿದ್ದರೂ ದಂಭದಿಂದ ವರ್ತಿಸುವ ಕೆಲವರು ಬಾಟಲ್ ಭಕ್ತರಾಗಿ "ಎಜ್ಯುಕೇಟೆಡ್" ಎಂಬಗರ್ವದಿಂದ ಶತಮಾನದಸುಧಾರಕರೊಳಗೆ ಕೂಡಿಕೊಳ್ಳಲಿಕ್ಕೆ ಹಿಂದೆ ಮುಂದೆ ಯತ್ನ ನಡಸುವದನ್ನು ಕಂಡು ಹೆಚ್ಚಾಗಿ ದುಃಖಪಡುತ್ತೇವೆ. ಇನ್ನು ನಾವು ಯಲ್ಲಾ ಬಾಟಲ್ ಭಕ್ತರಿಗೆ ಕಿವಿಹಿಂಡಿ ಬೋಧನೆಯನ್ನು ಹೇಳುವದಕ್ಕೆ ಎಷ್ಟುಮಾತ್ರಕ್ಕೂ ಶಕ್ತರಲ್ಲವೆಂಬುವ ವಿಚಾರವು ಆಗಾಗ್ಯೆ ನಮಗೆ ಹೊಳೆಯದಿರಲಿಲ್ಲವು. ಯಾತಕೆಂದರೆ ನಮ್ಮಂಪಿನೊಳಗಿನ ಅನೇಕರು ಯೂನಿವರ್ಸಿಟಿಯ ಬಿರುದಾವಳಿಗಳನ್ನು ಕೊರಳಲ್ಲಿ ಧರಿಸುತ್ತಾರೆ ಅಂತವರಮುಂದೆ, ಎಲೋ ಅಪ್ಪಾ!, ನೀವು ಮಾಡುವದು ನೀಚವಾದದ್ದು ಎಂದು ಯಾರು ಹೇಳಕೂಡದು! ಧರ್ಮಗುರುಗಳು, ಮಠಾಧಿಪರು, ಎಂಬದಾಗಿ ಧರ್ಮದ ಸ್ವಾಮಿತ್ವವನ್ನು ವಹಿಸಿ ಇರುವವರು ಕಣ್ಣುಮುಚ್ಚಿ ಯಥೇಷ್ಟವಾಗಿ ನಿದ್ರೆಮಾಡುತ್ತಾರೆ. ಅವನು ಸಿದ್ಧಕಣ್ಣಿನಿಂದ ಯೆಚ್ಚತ್ತು, ಮುಂದೆ ಒಂದು ಬಹಿಷ್ಕಾರ ಮುಂತಾದ ಪ್ರಸ್ತಾವವನ್ನು ಮಾಡಿದರೆ ಮರುದಿವಸವೇ ಜಿಲ್ಲೇ ಕೋರ್ಟನ್ನು ಕೈಯಲ್ಲಿ ತೆಗೆದುಕೊಂಡು ಶುದ್ಧ ಪತ್ರಿಕೆಯನ್ನು ಕೊಡುವರು. ಇಷ್ಟುಮಾತ್ರ ವರಹಾ ಬಿಸಾಕಿದರೆ ಆಯಿತು; ಶುದ್ಧ ಪತ್ರಿಕೆಯನ್ನು ಪಡೆದುಕೊಂಡರೆ ತೀರಿತು; ಸಾರಾಯಿ ಬಾಟಲಿಗಳನ್ನು ಮನೆಯಲ್ಲಿ ಉಳ್ಳಿಡಿಸಿದರೂ ಚಿಂತೆಯಿಲ್ಲ ಎಂಬ ಭಾವನೆಯವರು ಕೆಲವರು ಇರುತ್ತಾರೆ. ಕೆಲವರುತೂ "ನಾಸ್ತಿ ಬ್ರಾಹ್ಮಣಯನ್ನು ಬಲ್ಲೆವು" ಎಂದು ಹೇಳುತ್ತಲ್ಲಿ ಸ್ವತಃ [illegible] ನಡೆಸುತ್ತಾರೆ. ಇಂಥವರಿಗೆ ಕರೆದು ನಾಲ್ಕು ಮೂರ್ಖರು [illegible] ಹಿಂದುಸ್ಥಾನವನ್ನು ಈಗ ಯಾವ ಸ್ವರೂಪಕ್ಕೆ ತಂದು ಬಿಟ್ಟಿರುತ್ತಾರೆ! ಹಿಂದುಸ್ಥಾನದ ಜನರು ಬಹು ಸುಶೀಲರು, ಧರ್ಮದಲ್ಲಿ ತಮ್ಮ [illegible] ವರು, ಗುರು ಹಿರಿಯರ ವಾಕ್ಯಗಳನ್ನು ಸನ್ಮಾನಿಸುವವರು, ಪೂರ್ವಜರ ನಡಾವಳಿಯನ್ನು ಅನುಸರಿಸುವವರು, ಎಂದು ಯಾವ ವಿಷಯ [illegible] ಲೋಕದಲ್ಲಿ [illegible] ಅಂದವರೇ ಈಗ [illegible] ಬಾರಕ್ಕೆ ಬಿಳಿದಷ್ಟುದ್ದು [illegible]? ಯಾವ ಜನಾಂಗದವರ [illegible] ಬಂಗಾರದ ಅಕ್ಷರಗಳಿಂದ ಬರಯಲಿಕ್ಕೆ ಯೋಗ್ಯವಾಗಿದ್ದವೋ ಅಂತವರು ಈಗ ಪಾರ್ಸೀ ಅಂಗಡಿಗಳಿಗೆ [illegible] [illegible] ಬಾಟಲ್ ಎಂತ ಬರಸಿ ಬರು [illegible] ನಾವು ಅಳಬಹುದೋ? ನಗಬಹುದೋ? [illegible] ಅಗದಿ, ಈಪಟದ್ಯವನ್ನು ಎಲ್ಲ [illegible] ಬಹುದಕ್ಕಿದ್ದಾಗಿದೆ. ಇದನ್ನು [illegible] ಈ ಹೊತ್ತು ನಮಗೆ ಮೂರು [illegible] ಉತ್ತಮ ಉಪಾಯಗಳು [illegible]. ಅವು ಯಾವವೆಂದರೆ:—

೧. ಮದ್ಯ ಕುಡಿಯುವವರು ತಾವಾಗಿಯೇ ಇದರಿಂದುಂಟಾಗುವ ಕೆಡಕು ಪರಿಣಾಮಗಳನ್ನು ತಿಳಿದುಕೊಂಡು ಬಿಡಬೇಕು. ೨. ಆಯಾಯ ಧರ್ಮದ ಗುರುಗಳು ಅಂತವರಿಗೆ ಪಕ್ಷಪಾತವಿಲ್ಲದೆಯೂ, ಶಂಕೆಯಿಲ್ಲದೆಯೂ ಮತ್ತು ತಮಗೆ ತಪ್ಪಿಂದ ಬರುವಹಣದ ಆಸೆಗೆಲಕ್ಷ್ಯಕೊಡದೆಯೂ, ಅವರು ದೊಡ್ಡವರೆಂಬದರ ಕಡೆಗೆ ನೋಡದೆಯೂ ಬಹಿಷ್ಕಾರವನ್ನು ಹಾಕಬೇಕು. ೩. ಇವೆರಡು ಉಪಾಯಗಳು ತಪ್ಪಿದರೆ ಇನ್ನೊಂದು ಸುಲಭೋಪಾಯ ಉಂಟು. ಆ ಬಾಟಲ್ ನ ಭಕ್ತರ ಮಿತ್ರರು ಅವರನ್ನು ತಿರಸ್ಕರಿಸಬೇಕು, ಬೋಧನೆ ಹೇಳಬೇಕು, ತಮ್ಮ ಪಂಕ್ತಿ ಭೋಜನಕ್ಕೆ ಕರೆಯಬಾರದು. ಈ ಉಪಾಯಗಳಲ್ಲಿ ಯಾವದೊಂದನ್ನು ಮಾಡಿದರೂ ನಮ್ಮ ಮನೋರಥವು ಸಿದ್ಧಿಯಾಗಬಹುದು.

BANGALORE:—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಶಮವಿವಿಧಪ್ರವೃತ್ತ್ಯವಗನಾರ್ಥ್ಯ ಕರ್ಣಾಟಕಪ್ರಕಾಶನವರಾಭಿದಾಪ್ರಶಿತಸಾಹಿತೀಕೋಭಿತಾ ॥ ಮೃಗಾಂಕಹಿತವಾಸರನಿಹಿತಮುದ್ರಣಾಸಜ್ಜನ್ಸ್ಯೆರ್ದ್ದಿ ಕಾಸುವರಿಬೆಂಬಕಾಧಿಕಶಿತಾನಸುಸುಮುದ

Vol. XIII.] BANGALORE—MONDAY, NOVEMBER 29, 1886. [No. 48.

ಸಂಪುಟ ೧೩.] ಬೆಂಗಳೂರು:—ಸರ್ ೧೮೮೬ನೇ ಇಸವಿ ನವಂಬರ್ ೨೯ನೇ ತಾರೀಖ್ ಸೋಮವಾರ. [ಸಂಖ್ಯೆ ೪೮.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ಶೀಟುಕೋರ್ಸ್ಕರ್ತ್ರ ಕರಿಕೆ ... ರೂ ೧೦—೦—೦

ಇಂಗ್ಲಿಷ್ ಶೀಟುಕೋರ್ಸ್ಕರ್ತ್ರ ಕರಿಕೆ ... ... ೬—೦—೦

ಕನ್ನಡ ಶೀಟುಕೋರ್ಸ್ಕರ್ತ್ರ ಕರಿಕೆ ... ೬—೦—೦

ಹೊರಗಿನವರಿಗೆ ... ೦—೮—೦

ಸೂಚನೆ.—[illegible]

ಪ್ರಕಟನೆಯ ರಿವಾಜ್.

ಮೊದಲನೇ ದಫಾಕ್ಕೆ ... ೦—೩—೦

ಎರಡನೇ ದಫಾಕ್ಕೆ ... ೦—೨—೦

NOTICE TO SUBSCRIBERS.

[illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA.

Price including Postage, Rs. 5-0-0

ವೈದ್ಯಸಾರ ಸಂಗ್ರಹ.

[illegible]

... ... ರೂ॥ ೫—೦—೦

[illegible]

ನೋಟೀಸ್.

ಯಲೆಕ್ಟ್ರೋ ಗ್ಯಾಲ್ವಾನಿಕ್ ರಿಂಗ್, ಲಾಕೆಟ್, ಮತ್ತು ಆರುಲೆಟ್,

ಅಂದರೆ, ಅಂತರ್ಗತವಾಗಿ ಸಂಬಂಧವಾದ ಮತ್ತು ವಿದ್ಯುತ್ತಿಯ ಶಕ್ತಿಪ್ರಕಾಶ ಸಂಬಂಧವಾದ ಉಂಗರ, ಪತಕ, ಕೋಲ್ಬಳೆ, ಇವುಗಳು, ಕಲ್ಕತ್ತೆ ಬಿಸಿಯತುಲಾ ಬೀದಿಯಲ್ಲಿ ೭೩ನೇ ನಂಬರ್ ಗೃಹದೊಳಿರುವ ಪಿ. ಸಿ. ದಾಸ್ ಯೆಂಬವರಿಂದ ತಯಾರ್ಮಾಡಲ್ಪಟ್ಟಿರುತವೆ.

ಇವು ಸಕಲ ರೋಗಗಳಿಗೂ ಆಶ್ಚರ್ಯಕರವಾದ ಪರಿಹಾರಕವಾದವು.

ಯುರೋಪಿಯನ್ ವೈದ್ಯಶಾಸ್ತ್ರಜ್ಞರೂ ನೇಟಿವ್ ವೈದ್ಯಪದ್ಧತಿಯನ್ನು ಅನುಸರಿಸತಕ್ಕವರೂ ಸಾಧಾರಣವಾಗಿ ಮಾಡುವ ಚಿಕಿತ್ಸೆಗಳಿಗಿಂತಲೂ ಸರಿಯೇ ಉಂಗರಗಳು ಮೊದಲಾದವು ಬಹಳ ಯೋಗ್ಯವಾದ ಪರಿಹಾರಕಗಳೆಂದು ಯೇರ್ಪಟ್ಟಿರುವದರಿಂದ ಅವುಗಳ ಅಸಾಧಾರಣವಾದ ರೋಗನಿವೃತ್ತಕಶಕ್ತಿಯನ್ನು ಕುರಿತು ವಿಶೇಷವಾಗಿ ತಿಳಿಸುವದು ಅನಾವಶ್ಯಕವಾಗಿರುತದೆ. ಹಿಂದೆ ಬಹುಕಾಲದಿಂದಲೂ ಇದುವರಿವಿಗೆ, ಮೇಲಿನ ಉಂಗರಗಳು ಮೊದಲಾದವುಗಳ ವಿಷಯದಲ್ಲ ನಡೆಸಲ್ಪಟ್ಟ ವಿಚಾರವೂ ಅನುಭವಗಳುಳ್ಳ ಅಲ್ಪಕಾಲಮಾತ್ರಕ್ಕಾಗಿಯೇ ಮಾಡಲ್ಪಟ್ಟ ಆದರ ಸುಳ್ಳು ಪ್ರಚಾರವೂ, ರೋಗ ಪರಿಹಾರಕವಾದ ಇತರ ಪದಾರ್ಥಗಳ ವಿಷಯದಲ್ಲ ಮಾತ್ರ ಲ್ಬದಲ್ಲಿವೆಂದು ಮಾತ್ರ ಹೇಳುವದು ಸಾಕಾಗಿರುವದು. ಆದದರಿಂದ ಪ್ರಕೃತ ಸಂದರ್ಭದಲ್ಲಿ ಈ ಹೊಸ ಉಂಗರಗಳನ್ನು ಕುರಿತು ಇನ್ನು ಯರಡು ಮಾತುಗಳಂ ಆಡಬೇಕು, ಯೇನೆಂದರೆ, ನನ್ನ ಹೊಸ ಉಂಗರವನ್ನು ಹಾಕಿಕೊಂಡು ನೋಡಿದರೆ ತರುವಾಯ ಆಧಿಕ ಕ್ರಯಕೊಟ್ಟು ಕಂಡವರಲ್ಲ ಬೇರೆ ಪದಾರ್ಥಗಳನ್ನು ಯಾರೂ ಕೊಂಡುಕೊಳ್ಳಲಾರರು. ನನ್ನ ಪದಾರ್ಥಗಳಮೇಲೆ ಪಿ. ಸಿ. ಡಿ. ಯೆಂಬ ಗುರುತು ಇರುತದೆ.

ಉಂಗರಗಳು—ಡಜನಿಗೆ ೧೪ ರೂ॥ ಒಂದ್ಕೆ ೧ ರೂ ೮ ಆಣೆ. ಪತಕ—ಡಜನಿಗೆ ೧೨ ರೂಪಾಯಿ, ಒಂದ್ಕೆ ೧-೪-೦. ಕೋಲ್ಬಳೆ—ಡಜನಿಗೆ ೧೪ ರೂಪಾಯಿ, ಒಂದ್ಕೆ ೧—೮—೦ ರೂ. ಪಾಸಲ್ ಗಳಿಂದ ಒರವರಿವಿಗೆ ೪ ಆಣೆ. ಪಿಐದ ೧೨ ರವರಿವಿಗೆ ೧೦ ಆಣೆ. ಉಂಗರಗಳು ಮತ್ತು ಕೋಲ್ಬಳೆಗಳು ಬೇಕಾದವರು ಅಳತೆಗಳು ಕಳುಹಬೇಕು. ಹಣ ಬಂದು ತಲುಪಿದ ಕೂಡಲೆ ಪದಾರ್ಥಗಳು ರವಾನಿಸಲ್ಪಡುವವು. ಅಥವಾ ವಾಲ್ಯೂಪೇಯಬಿಲ್ ಪೋಸ್ಟಿನಲ್ಲಿ ಕಳುಹಿಸಲ್ಪಡುವವು.

ನೋಟಿಸ್.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನೆಂದರೆ. ಸರ್ ೧೮೮೭ನೇ ಯೇಪ್ರಿಲ್ ಒಂದ್ನೇ ತಾರೀಖ್ ಲಾಗಾಯತು ಸರ್ ೧೮೮೮ನೇ ಮಾರ್ಚಿ ೩೧ನೇ ತಾರೀಖ್ ವರಿವಿಗೆ, ಹೊಸೂರು ರಿಮೌಂಟಿ ಡಿಪೊವಿಗೆ ಇದರಡಿ ನಮೂದ್ ಮಾಡಲ್ಪಡುವ ಜಿನಿಸಿಗಳು ಬೇಕಾಗಿರುವದರಿಂದ ಅವ್ಯುಗಳ ಸರಬರಾಯ್ ಬಗ್ಯೆ ಬರುವ ಮೊಹರ್‌ಮಾಡಲ್ಪಟ್ಟ ದರಖಾಸ್ತುಗಳನ್ನು ರಿಮೌಂಟಿ ಡಿಪೊ ಸೂಪರಿಂಟೆಂಡೆಂಟರವರು, ಸರ್ ೧೮೮೬ನೇ ಇಸವಿ ಡಿಸಂಬರ್ ೧೮ನೇ ಮರ್ಸ್ತಂ ಮಧ್ಯಾನ್ಹ ೧೨ ಘಂಟೆಯವರಿವಿಗೆ ಬರಮಾಡಿಕೊಳ್ಳುವರು.

ಇದನ್ನ ಕುರಿತ ಜಾಸ್ತೀ ತಫಸೀಲ್ ತಿಳಿಯಬೇಕಾದವರು, ಸರ್ ೧೮೮೬ನೇಇಸವಿ ನವಂಬರ್ ೯ನೇ ಮರ್ಸ್ತಂ ೪೫ನೇ ನಂಬರ್ ಫೋರ್ಟ್ಸೆಂಟ್ ಜಾರ್ಜ್ ಗಜೆಟ್ ೬ನೇ ಭಾಗ, ೧,೫೦೬ನೇ ಪುಟದಲ್ಲಿ ಛಾಯಿಷ್ ಆಗಿರುವ ಪ್ರಕಟನೆಯನ್ನು ನೋಡಿ ತಿಳಕೊಳ್ಳತಕ್ಕದ್ದು.

ಹುರಳಿ.
ನೆಲ್ಲುಹುಲ್ಲು.
ರಾಗೀ ಹುಲ್ಲು.
ಹಸೀ ಹುಲ್ಲು.

ರಿಮೌಂಟಿ ಡಿಪೊ ಹೊಸೂರು,
೧೩ನೇ ನವಂಬರ್, ೧೮೮೬.

JOHN EWING, COLONEL,
Supt., Reserve Remount Depot.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, NOVEMBER 29, 1886.

೧೮೮೬ನೇ ನವಂಬರ್ ೨೯ನೇ ತಾ॥ ಸೋಮವಾರ.

H. E. THE VICEROY'S TOUR.

ವೈಸ್‌ರಾಯ್ ವ ಗವರ್ನರ್‌ಜನರಲ್ಲವರಾದ ಲಾರ್ಡ್ ಡಫ್ರಿನ್ ಯವರ ಸಂಚಾರಕ್ರಮವು ಇದರಡಿ ಕಂಡಂತೆ ಈಚೆಗೆ ನಿಶ್ಚಯಿಸಲ್ಪಟ್ಟಿರುವದಾಗಿ ತಿಳಿಯಬರುತಿದೆ. ಹ್ಯಾಗೆಂದರೆ,—

ವೈಸ್‌ರಾಯಿಯವರ ಸಂಚಾರಾರ್ಥ ನಿಶ್ಚಿತಪ್ಪವಾಗಿರುವ ಸ್ಪೆಷ್ಯಲ್ ಟ್ರೈನ್ ಹೋಗಿಬರುವ ಬಗ್ಯೆ ದಕ್ಷಿಣಮಹಾರಾಷ್ಟ್ರ ರೆಯಿಲ್ವೇ ಕಂಪೆನಿಯವರಿಂದ ಇದರಡಿ ಕಂಡಂತೆ ಕಾಲಕ್ಲಪ್ತ ಮಾಡಲ್ಪಟ್ಟಿರುತಿದೆ. ೩೦ನೇ ತಾರೀಖ್ ಮಂಗಳವಾರದ ದಿನ ಬೆಳಗ್ಯೆ ೮ ಘಂಟೆಗೆ ಸರಿಯಾಗಿ ವೈಸ್‌ರಾಯಿಯವರ ಸವಾರಿಯುಳ್ಳ ಮದರಾಸ್ ಸ್ಪೆಷ್ಯಲ್‌ಟ್ರೈನ್ ಸಿಟಿ ಸ್ಟೇಷನಿಗೆ ಬಂದು ಸೇರುವದು. ಕೂಡಲೇ ಸನ್ನದ್ಧವಾಗಿರುವ ಮೈಸೂರು ಸ್ಪೆಷ್ಯಲ್ ಟ್ರೈನ್‌ನಲ್ಲಿ ಹೊರಟು ಬೆಳಗ್ಯೆ ೯। ಘಂಟೆಗೆ ಮದ್ದೂರು ಸೇರಿ ಅಲ್ಲಿ ೩೫ ನಿಮಿಷಗಳ ತನಕ ವಿಶ್ರಾಂತಿಯಂ ಹೊಂದುವರು. ಅಲ್ಲಿಂದ ೧೦॥ ಘಂಟೆಗೆ ಶ್ರೀರಂಗಪಟ್ಟಣ ಸೇರಿ ಭೋಜನಾರ್ಥ ೧। ಘಂಟೆ ತನಕ ಅಲ್ಲಿ ದಯಮಾಡಿದ್ದು ಅಲ್ಲಿಂದ ೧೧ ಘಂಟೆ ೪೦ ನಿಮಿಷಗಳಿಗೆ ಮೈಸೂರು ತಲುಪುವರು.

೨ನೇ ತಾರೀಖ್ ಗುರುವಾರದ ದಿನ ಬೆಳಗ್ಯೆ ೧೧ ಘಂಟೆಗೆ ಶ್ರೀರಂಗಪಟ್ಟಣದಿಂದ ಹೊರಟು ಮದ್ದೂರಲ್ಲಿ ಅರ್ಧಘಂಟೆಯ ಕಾಲ ಫಲಹಾರಾರ್ಥ ನಿಂತು ಸಾಯಂಕಾಲ ೪॥ ಘಂಟೆಗೆ ಇಲ್ಲಿಗೆ ಬಂದು ಸೇರುವರು.

ವೈಸ್‌ರಾಯಿಯವರು ಬೆಂಗಳೂರು ಸಿಟಿ ಸ್ಟೇಷನಿನಲ್ಲಿ ವಿಶಿಷ್ಟ ಸಿವಿಲ್ ವ ಮಿಲಿಟರಿ ಆಫೀಸರ್‌ಗಳಿಂದ ಬರಮಾಡಿ ಕೊಳ್ಳಲ್ಪಡುವರಲ್ಲದೆ, ಸ್ಟೇಷನಿನಿಂದ ರೆಸಿಡೆನ್ಸೀ ಬಂಗ್ಲೆಗೆ ದಯಮಾಡುವಾಗ್ಯೆ ಮಧ್ಯಮಾರ್ಗದಲ್ಲಿ ಸಿಟಿ ಮತ್ತು ಕಂಟೋನ್ಮೆಂಟ್ ಮ್ಯುನಿಸಿಪಾಲಿಟಿಯವರ ವಿಜ್ಞಾಪನ ಪತ್ರಿಕೆಗಳ ನ್ನಂಗೀಕರಿಸುವರು. ಆ ದಿನ ರಾತ್ರಿ ೮ ಘಂಟೆಗೆ ರೆಸಿಡೆಂಟರ ಬಂಗ್ಲೆಯಲ್ಲಿ ಔತಣವು ನಡೆದಬಳಿಕ ೧೦॥ ಘಂಟೆಗೆ ದರ್ಬಾರ್ ಮಾಡುವರು. ೩ನೇ ತಾರೀಖ್ ಶುಕ್ರವಾರದದಿನಬೆಳಗ್ಯೆ ಭೋಜನಾನಂತರ ಪರೇಡ್ ಗ್ರೌಂಡಿನಲ್ಲಿ, (ಕವಾಯತ್‌ಮೈದಾನಿನಲ್ಲಿ) ಪಟ್ಟಾಳದಳಹಣಾದಿ ಸೈನಿಕ ಕೌಶಲ್ಯ ಪ್ರದರ್ಶಕಗಳಾದ ವ್ಯಾಯಾಮ ವಿಶೇಷವೀಕ್ಷಣಾನಂತರ ಹೋಯೋಹಾಲಿಗೂ, ಮತ್ತು ಕಂಟೋನ್ಮೆಂಟಿನ್ಲಿ ದರ್ಶನೀಯಗಳಾದ ಪ್ರದೇಶಗಳಿಗೂ ದಯಮಾಡುವರು. ಮಧ್ಯಾನ್ಹದ್ಮೇಲೆ ೪॥ ಘಂಟೆಯತನಕ ವಿಶ್ರಾಂತಿಯನ್ನನುಭವಿಸುತಲಿದ್ದು ತರುವಾಯ ಪೇಟೆಯಮಾರ್ಗವಾಗಿ ಕೋಟೆ ಮತ್ತು ಲಾಲ್‌ಬಾಗಿಗೆ ಹೋಗಿ ಅಲ್ಲಿಂದ ಕಬ್ಬನ್ ಪಾರ್ಕಿನಲ್ಲಿ ನಡೆಯುವ ಬ್ಯಾಂಡ್ ವಾದ್ಯವನ್ನಾಲೈಸುವರು. ರಾತ್ರಿ ೮ ಘಂಟೆಗೆ ರೆಸಿಡೆನ್ಸೀ ಬಂಗ್ಲೆಯಲ್ಲಿ ಭೋಜನವೂ, ಅನಂತರ, ನರ್ತನವೂ ನಡೆಯುವವು. ೪ನೇ ತಾರೀಖ್ ಶನಿವಾರ ಪ್ರಾತಃಕಾಲದೊಳು ವಿರಾಮ,ಮಧ್ಯಾನ್ಹದ್ಮೇಲೆ ೧೨ನೇ ಲ್ಯಾನ್ಸರ್‌ಗಳೊಡನೆ ಫಲಹಾರವಂ ತೀರಿಸಿಕೊಂಡು ಸವಾರಿ ಮುಂತಾದವುಗಳಲ್ಲಿ ಅವರು ಪಡೆದಿರುವ ಕುಶಲತೆಯಂ ನೋಡುವರು. ರಾತ್ರಿ ಭೋಜನಾನಂತರ ೮ ಘಂಟೆಗೆ ಸ್ಪೆಷಲ್ ಟ್ರೈನಿನಲ್ಲಿ ತಿರುಚನಾಪಳ್ಳಿಗೆ ಪ್ರಯಾಣಮಾಗುವರು. ೫ನೇ ತಾರೀಖ್ ಭಾನುವಾರದದಿನ ತಿರುಚನಾಪಳ್ಳಿಯಲ್ಲಿ ಮೊಕ್ಕಾಂಮಾಡಿ ೬ನೇ ತಾರೀಖ್ ಸೋಮವಾರದದಿನ ಅಲ್ಲಿಂದ ಮಧುರೆಗೆ ಹೋಗುವರಲ್ಲದೆ ಅಲ್ಲಿಗೆ ಸಮೀಪವಾದ ಪಳ್ಳಂ ಯೆಂಬ ಪ್ರದೇಶವಂ ಅವಲೋಕಿಸಿ ೯ನೇ ತಾರೀಖ್ ಬುಧವಾರದದಿನ ಬೆಳಗ್ಯೆ ಮದರಾಸಿಗೆ ಪ್ರಯಾಣವಾಗಿ ಆ ದಿನವೇ ಕ್ಲೈವ್‌ಯೆಂಬ ಸ್ಟೀಮರಿನಲ್ಲಿ ಕಲ್ಕತ್ತೆಗೆ ದಯಮಾಡುವಂತೆ ನಿರ್ಣಯವಾಗಿರುತಿದೆ.

ಅನಾದಿಸಿದ್ಧವಾದ ಈ ಕರ್ಣಾಟದೇಶಕ್ಕೆ ನಾಳೆಯದಿನ ಪ್ರಾತಃಕಾಲದೊಳು ಸಕಲ ಸುಖದಧಿರಾಮರಾಗಿಯೂ, ಅನವಧಿಕ ಸೌಜನ್ಯ ಮಾನ್ಯರಾಗಿಯೂ ಇರುವ ಶ್ರೀಮನ್ಮಹಾರಾಜ್ಞೀ ಸಾಮ್ರಾಜ್ಯ ಚಕ್ರವರ್ತಿನೀಯವರ ಪ್ರತಿನಿಧಿಗಳಾದ ಲಾರ್ಡ್ ಡಫ್ರಿನ್‌ಯವರ ಆಗಮನವು ಅನನ್ಯಾಪಲಂಬಿಗಳಾದ ನಮ್ಮೆಲ್ಲರಿಗೂ, ಆನಂದಾವಹವಾಗಿಯೂ, ಆಶಾಸ್ಪದವಾಗಿಯೂ ಇರುವ ವಿಷಯವಾಗಿರುವದರಿಂದ ಈ ಸಂದರ್ಭದಲ್ಲಿ ನಮ್ಮ ಹೃದಯಂಗಮಗಳಾದ ರಾಜಭಕ್ತಿ ವಿಶ್ವಾಸಕೃತಜ್ಞತಾದಿ ಭಾವಗಳನ್ನು ಅವರಸನ್ನಿಧಿಯಲ್ಲಿ ವ್ಯಕ್ತಪಡಿಸುವೆವು.

ಪುರಾತನವಾದ ಈ ಕರ್ಣಾಟ ರಾಜಸಂತತಿಯು ಅವಿಚ್ಛಿನ್ನವಾಗಿ ಬೆಳೆಯುವಂತೆ ನಮ್ಮ ಮಹಾರಾಜರವರ ಸ್ವೀಕಾರವನ್ನು ಅಂಗೀಕರಿಸಿ, ಅವರ ವಿದ್ಯಾಭಿವೃದ್ಧಿ ಮುಂತಾದ ಸರ್ವ ವಿಷಯಗಳಲ್ಲಿಯೂ ಗೌರವ ಶ್ರದ್ಧೆಗಳೊಡನೆ ವಿಚಾರಿಸುತ ಪ್ರಭುತ್ವವಾದ ರಾಜ್ಯಭಾರವನ್ನು ವಹಿಸುವದಕ್ಕೆ ಸಮರ್ಥರನ್ನಾಗಿಮಾಡಿಪ್ರರ್ವಾಗ್ರಾನತಂತೆಪ್ಪನ್ನವರಿಗೆಒಪ್ಪಿಸಿ ಮಹತ್ತರವಾದಯೀ ವಿಮೋಚನಾರ್ಥ ಸಹಸಿಟಿಯನ್ನು ಕೆಲವು ಕಾಲದ ತನಕನಿಲ್ಲಿಸಿ, ಮೈಸೂರುದೇಶೀಯರ ಆನುಕೂಲ್ಯಕ್ಕೂ, ಸುಖಕ್ಕೂ, ಪ್ರಯೋಜನಕ್ಕೂ ಅನುಕೂಲಗಳಾದ ಮಾರ್ಗಗಳು ಕಲ್ಪಿಸಿ, ಮಹಾರಾಜ್ಞೀಯವರ ಸಾಕ್ಷಾತ್ಪಾಲನೆಯೊಳಿರುವ ಪ್ರಜೆಗಳಂತೆ ನಾವುಸುಖಸಂತೋಷಗಳನ್ನನುಭವಿಸುವಂತೆಮಾಡಿದಮಹಾರಾಜ್ಞೀ ಸರ್ಕಾರದವ ರಮಹಾಪಕಾರಗಳುಚಿರಸ್ಮರಣೀಯಗಳಾಗಿರುತವೆ, ಪರಂತು ಬ್ರಿಟಿಷ್ ಗವರ್ನಮೆಂಟಿನವರ ಕೋರಿಕೆಯು ಏತದ್ದೇಶೀಯರ ಪರಿಶ್ರಮ ವಿಲಸನದಿಂದ ಫಲಿಸದೆ ಹೋದ ಹಾಗೆ ಮಾತ್ರ ನಮ್ಮ ಹೃದಯದೊಳು ಪ್ರಭಾವಾಗಿರುತಿದೆ. ಅದರ ಕಾರಣ

ವು ಬ್ರಿಟಿಷ ಗವರ್ನಮೆಂಟಿನವರ ಪ್ರತಿನಿಧಿಗಳಾಗಿದ್ದ ಅಧಿಕಾರಿಗಳಿಂದಏರ್ಪಟ್ಟದಾಗಿರುವದರಿಂದ ಅದು ಅವರಿಂದಲೇ ನಿವಾರಣವಾಗತಕ್ಕದ್ದಾಗಿರುತಿದೆ. ಈಸಂದರ್ಭದಲ್ಲಿ ವೈಸ್‌ರಾಯಿಯವರಿಗೊಪ್ಪಿಸಲ್ಪಡುವ ವಿಜ್ಞಾಪನಪತ್ರಿಕೆಗಳೆಲ್ಲವೂ ಅತಿ ಚಿರಪ್ರಾರ್ಥಿತವಿಷಯದಿಂ ಪ್ರಜೆಗಳಿಗುಂಟಾದ ಆನಂದಾತಿಶಯವನ್ನೂ ಮಹಾರಾಜರವರ ವಿಷಯದೊಳಗಿರುವ ಅಂತರಂಗಳಾದ ಭಕ್ತಿ ಗೌರವ ವಿಶ್ವಾಸಗಳನ್ನೂ, ಅವರ ಅಭ್ಯುನ್ನತಿಯಲ್ಲುಂಟಾಗಿರುವ ಉತ್ಕಟವಾದ ಅಪೇಕ್ಷೆಯನ್ನೂ, ಅವರ ವೈಭವಪ್ರಾಭವಗಳಲ್ಲಿರುವ ವಿಶೇಷವಾದ ತಾತ್ಪರ್ಯವನ್ನೂ ವ್ಯಕ್ತಪಡಿಸುವದಾಗಿರಬಹುದೇಹೊರತು ಪ್ರಜೆಗಳ ಅಪೇಕ್ಷಿತಾಂಶವನ್ನೂ ನ್ಯೂನತೆಯನ್ನೂ ಅವರ ಸುಖಸಂತೋಷಗಳನ್ನೂ ಪ್ರಕಟವಾಗಿ ವ್ಯಕ್ತಪಡಿಸುವದಾಗಿರಲಾರವೆಂಣಿಸುತ್ತೇವೆ. ಪ್ರಜೆಗಳನ್ಯೆಜವಾದ ಭಾವ ಪ್ರದರ್ಶನಕ್ಕೆ ಪ್ರುಂಟಾಗಿರುವ ಪ್ರತಿಬಂಧಕ ಸಾಮಗ್ರಿಯನ್ನು ಬ್ರಿಟಿಷ ರೆಸಿಡೆಂಟರವರು ಚೆನ್ನಾಗಿ ಅರಿತಿರುತ್ತಾರಾಗಿ, ಅವರಮೂಲಕ ಈ ದೇಶದ ತಾತ್ಕಾಲಿಕ ಸ್ಥಿತಿಯನ್ನು ವೈಸ್‌ರಾಯಿಯವರು ಚೆನ್ನಾಗಿ ಅರಿತು ಬ್ರಿಟಿಷ ಗವರ್ನಮೆಂಟಿನವರ ಉದ್ದೇಶ ವೈಸಲ್ಯಕ್ಕೆ ಪ್ರುಂಟಾಗಿರುವ ಕಾರಣವನ್ನು ನಿವೃತ್ತಿಮಾಡಬೇಕೆಂಬದೇ ಸ್ವಾಗತ ಪೂರ್ವಕವಾದ ನಮ್ಮ ವಿಜ್ಞಾಪನೆಯಾಗಿರುತಿದೆ.

A JOURNAL IN WOMB

ಗತ ಶುಕ್ರವಾರದದಿನ ಮೈಸೂರಿಂದ ನಮಗೆ ಬಂದ ಒಂದು ಪ್ರಕಟನ ಪತ್ರಿಕೆಯನ್ನು ನೋಡಲಾಗಿ ಈ ದೇಶದ ರಾಜಧಾನಿಯಾದ ಮೈಸೂರಲ್ಲಿ ಬಹುಕಾಲದವರೆವಿಗೂ ಉಂಟಾಗಿರುವಂತೆ ಭಾವಿಸಲ್ಪಟ್ಟಿರುವ ಒಂದು ಪ್ರಬಲ ಕೊರತೆಯನ್ನು ನಿವಾರಿಸುವ ಉದ್ದೇಶದೊಡನೆ ಬರುವ ಜನವರಿ ತಿಂಗಳ ಮೊದಲು "ಮೈಸೂರು ವೃತ್ತಾಂತ ದರ್ಪಣ" ವೆಂಬ ಅಭಿದಾನವುಳ್ಳ ಒಂದು ಕನ್ನಡ ಪತ್ರಿಕೆಯನ್ನು ಪ್ರತಿ ಬುಧವಾರವೂ ಪ್ರಕಟಿಸುವಂತೆ ಸಂಕಲ್ಪಿಸಿರುವಂತಾ ಪ್ರಬಲ ಕಾರ್ಯವನ್ನು ಅತಿ ಸಾಹಸವರರಾದ ಅಲ್ಲಿನ ದೊಡ್ಡಮನುಷ್ಯರು ಕೆಲವರು ವಹಿಸಿರುವಂತೆ ತಿಳಿದು ಬಹಳಸಂತೋಷಿಸುವೆವು. ಸದರೀ ಪತ್ರಿಕೆಯು ಏತದ್ದೇಶೀಯರಿಗುಂಟಾಗಿರುವ ಅಪಪ್ರಥೆಗಳನ್ನು ಹೋಗಲಾಡಿಸಿಅವರಿಗೊಂದುಪ್ರಾಶಸ್ತ್ಯವನ್ನುಂಟುಮಾಡುವ ಪ್ರಯತ್ನವುಳ್ಳದ್ದಾಗಿರುವದರಿಂದಲೂ, ಅಂತಾ ಪ್ರಯತ್ನವು ನೆರವೇರಿಸುವಬಗ್ಗೆ ಅಸಾಧಾರಣಗಳಾದ ಇದರಡಿಕಂಡ ಪ್ರತಿಜ್ಞೆಗಳನ್ನು ಬಹಿರಂಗವಾಗಿ ಮಾಡಿರುವದರಿಂದಲೂ ಇತರಾಪೇಕ್ಷಯಾ ಅದು ಪ್ರಬಲವಾದದ್ದಾಗಿರುವದೆಂದು ನಂಬುತ್ತೇವೆ.

(ಈಪತ್ರಿಕೆಯು ಡಿಮಿಮ್ಮಿ ಎರಡು ಫಾರಂ ಪುಟವುಳ್ಳದ್ದಾಗಿ ಸ್ವದೇಶ ವರ್ತಮಾನಗಳು, ನೈಮಿತ್ತಿಕ ವಿಷಯನ್ಯಾಸಗಳು, ಒಳದೇಶ ವೃತ್ತಾಂತಗಳು, ದೇಶಾಂತರ ವರ್ತಮಾನ ಪತ್ರಿಕೆಗಳ ಸಾರಾಂಶಗಳು, ರಾಜಕೀಯ ವಿಷಯಗಳು, ಅಮೆರಿಕಾ ಇಂಗ್ಲೆಂಡ್ ಮೊದಲಾದ ದ್ವೀಪಾಂತರ ವರ್ತಮಾನ ಪತ್ರಿಕೆಗಳಿಂದ ಸಂಗ್ರಹಿಸಲ್ಪಡುವ ವಿಶೇಷ ಸಂಗತಿಗಳು ತಂತಿ ವರ್ತಮಾನಗಳು, ಗೆಜೆಟಿನ ಸಾರಾಂಶಗಳು, ಇವುಗಳಿಂದ ಮುಖ್ಯವಾಗಿ ಭರಿತವಾಗಿರುವದಲ್ಲದೆ ವರ್ತಕರಿಗೂ ವ್ಯವಸಾಯಗಾರರಿಗೂ, ವಿದ್ಯಾರ್ಥಿಗಳಿಗೂ,ವಿದ್ಯಾರ್ಥಿನೀಯರಿಗೂ ಪ್ರಯೋಜನಕರಗಳಾದ ಬಹು ಸಂಗತಿಗಳನ್ನೊಳಗೊಂಡದ್ದಾಗಿಯೂ ಇರುವದು. ಈಪತ್ರಿಕೆಯಲ್ಲಿ ದೂಷಣೆಯೇ ಪ್ರಾಧಾನ್ಯವೆಂದು ಜನರನ್ನು ನಿರ್ನಿಮಿತ್ತವಾಗಿ ದೂಷಿಸಲು ಎಂದಿಗೂ ಎತ್ನಿಸುವದಿಲ್ಲ. ಸ್ವದೇಶೀಯರು ಅನ್ಯದೇಶೀಯರು ಎಂಬ ವ್ಯತ್ಯಾಸವನ್ನು ನೋಡುತ್ತಾ ಸ್ವದೇಶೀಯರ ತಪ್ಪಿತಗಳನ್ನು ಮರೆಮಾಚಿ ಅನ್ಯದೇಶೀಯರ ತಪ್ಪಿತಗಳನ್ನೇ ಆರಿಸಿ ದೂಷಿಸುವದಕ್ಕೂ ಯತ್ನಿಸುವವರಲ್ಲ ಎಲ್ಲಿ ಗುಣವಿದ್ದರೂ ಅದನ್ನು ಅತ್ಯಂತ ಆಹ್ಲಾದದಿಂದ ಕೊಂಡಾಡುವೆವು ಎಲ್ಲಿ ದೋಷವಿದ್ದರೂ ಅದನ್ನು ನಿರ್ಭೀತಿಯಿಂದ ಪ್ರಚುರ ಪಡಿಸುವೆವು. ರಾಜಕೀಯವಾದ ವಿಷಯಗಳಲ್ಲಿಯೂ, ನೈಮಿತ್ತಿಕ ವಿಷಯನ್ಯಾಸಗಳಲ್ಲಿಯೂ, ಪ್ರಜೆಗಳ ಸುಖಕ್ಕೆ ಕೊರತೆಯುಂಟುಮಾಡತಕ್ಕ ಸಂದರ್ಭಗಳೇನಾದರೂ ಇದ್ದಲ್ಲಿ ಅಂತಾ ಪ್ರಮೇಯಗಳನ್ನು ನಾವು ಪ್ರಯತ್ನ ಪುರಸ್ಸರವಾಗಿ ಪ್ರಚುರಪಡಿಸುವೆವಲ್ಲದೆ ಅಧಿಕಾರಿಗಳ ಸ್ವಂತ ನಡವಳಿಕೆಗಳನ್ನು ಕುರಿತು ಎಂದಿಗೂ ದೂಷಿಸಲು ಯತ್ನಿಸುವವರಲ್ಲ.")

ಮೇಲೆ ಕಂಡ ಪ್ರತಿಜ್ಞೆಗಳು ಅನ್ಯರಿಗೆ ಅಸಾಧ್ಯವಾದ ಕಾರಣ ಅಭಿಮನ್ಯುವಿನಂತೆ ಗರ್ಭಗತವಾಗಿರುವ ಸದರೀ ಪತ್ರಿಕೆಗೆ ಈಗಲೇ ಉಂಟಾಗಿರತಕ್ಕ ನಿಸ್ಪೃಹತೆಯನ್ನು ಕಂಡು ಅನೇಕರು ಆಶ್ಚರ್ಯ ಪಟ್ಟಿರಬಹುದೆಂದೆಣಿಸುತ್ತೇವೆ. ಇಂತಾ ಉತ್ತಮಗುಣ ಪ್ರದರ್ಶಕವಾದ ಪತ್ರಿಕೆಯು ತಾನು ಸಂಕಲ್ಪಿಸಿರುವ ಪ್ರತಿಜ್ಞೆಗಳನ್ನೆಲ್ಲ ತತ್ತತ್ಕಾಲವಲ್ಲಿ ನಿರ್ವಂಚನೆಯಾಗಿ ನಿರ್ದಾಕ್ಷಿಣ್ಯದಿಂ ಈಗ ಪ್ರಕಟಿಸಿರುವಂತೆ ಜರಿಗಿಸುವದರ ಮೂಲಕ ಈ ದೇಶಕ್ಕೊಂದು ಪ್ರತಿಷ್ಠೆಯನ್ನುಂಟುಮಾಡದೆ ಇರಲಾರದೆಂದು ನಂಬುತ್ತೇವೆ.

ಪ್ರತಿ ವರ್ಷದಲ್ಲಿಯೂ ಚಂದಾ ಹಣವನ್ನು ಮುಂಗಡವಾಗಿ ಕೊಡುವದಕ್ಕಿಂತಲೂ ಸ್ಥಳದವರು ೧೦ ರೂಪಾಯಿ, ಪರಸ್ಥಳದವರು ೧೧॥ ರೂಪಾಯಿಗಳು ಈಮೇರೆಗೆ ಮುಂಗಡವಾಗಿ ಅಂದರೆ ಡಿಸಂಬರ್ ಆಖೈರೊಳಗಾಗಿ ಈಪತ್ರಿಕಾಭಿವೃದ್ಧಿಗಾಗಿಯೇ ನಾವು ಏರ್ಪಡಿಸಿರುವ ಮೂಲತತ್ವ ಸಹಾಯ ಮಾಡುವದರ ದ್ವಾರಾ ನಮಗೆ ಪ್ರೋತ್ಸಾಹವನ್ನುಂಟುಮಾಡುವ ಉಪಕಾರಿಗಿಗೆ ಈ ಪತ್ರಿಕೆಯು ಎಂದೆಂದಿಗೂ ಕೃತಜ್ಞತೆಯಿಂದ ಉಚಿತವಾಗಿಯೇ ಕಳುಹಿಸಲಾಗುವದು ಮಾತ್ರವಲ್ಲದೆ ಪ್ರತಿ ವರ್ಷದಲ್ಲಿಯೂ ಒಂದು ಆಂಗ್ಲೇಯವನ್ನಾಕ್ಯುಲರ್ ಪಾಕೆಟ್ ಡೈರಿಯು ಮರ್ಯಾದಾರ್ಥವಾಗಿ ಕಳುಹಿಸಲಾಗುವದು. ಪತ್ರಿಕೆಯು ಆರಂಭಿಸಿದ ನಂತರ ಮೂಲತತ್ವ ಸಹಾಯ ಮಾಡುವವರಾಗಿ ಅಪೇಕ್ಷಿಸಿದರೆ ಸ್ಥಳದವರು ೧೨ ರೂಪಾಯಿ, ಪರಸ್ಥಳದವರು ೧೪ ರೂಪಾಯಿಗಳು ಈಮೇರೆಗೆ ಕೊಡಬೇಕಾಗುವದು.

ಮೇಲೆಕಂಡ ಚಂದಾ ವಿಷಯಕವಾದ ನಿಬಂಧನೆಯನ್ನುನೋಡಲಾಗಿ ಸದರೀ ಪತ್ರಿಕೆಯು ಕೇವಲ ಲೋಕೋಪಕಾರದೃಷ್ಟಿಯುಳ್ಳದ್ದೆಂಬಅಂಶವೂ ವ್ಯಕ್ತವಾಗದಿರಲಿಲ್ಲವು. ನಶ್ವರವಾದ ಪ್ರಪಂಚದಲ್ಲಿ ಮರ್ತ್ಯರಿಂದಮಾಡಲ್ಪಟ್ಟ ಮೇಲೆಕಂಡ ನಿಯತ ಪ್ರತಿಜ್ಞೆಯು ಅಸಾಧ್ಯವಾದದ್ದೆಂದೆಣಿಸಿ, ಅಂತಾ ಸೌಕರ್ಯವು ಬಳಸಿಕೊಳ್ಳಲಿಕ್ಕೆ ಜನಗಳು ಆತುರಗೊಳ್ಳುವರಾದಾಗ್ಯೂ, ಮೈಸೂರು ಶ್ರೀಕೃಷ್ಣವತೀ ಸಹಾಯ ಸಂಘದ ಸ್ಮರಣೆಯು ಅವರ ಹೃದಯವಲ್ಲಿ ನೂತನವಾಗಿರುವದರಿಂದ ತಾದೃಶ ಬಾಧವು ಏತದ್ವಿಷಯದೊಳು ಸಹ ಮೆಲ್ಲಿ ವಿನಿಯೋಗಿಸಲ್ಪಡುವದೋ ಎಂಬ ಭೀತಿ ಮಾತ್ರ ನಮ್ಮನ್ನು ಬಾಧಿಸುತಲಿದೆ ಆದಾಗ್ಯೂ ಪ್ರಸಕ್ತ ಪತ್ರಿಕೆಯಲ್ಲಿ ಪ್ರಕಟಿಸಲುದ್ದೇಶಿಸಿರುವ ವಿಷಯಗಳೆಲ್ಲವೂ ಇತರ ಪತ್ರಿಕೆಗಳಲ್ಲಿ ಕಾಣಬರತಕ್ಕವಾದರೂ ಅಜ್ಞಾತವಾದ "ನೈಮಿತ್ತಿಕವಿಷಯನ್ಯಾಯವೆಂಬ" ಒಂದುವಿಷಯದಿಂದ ಆ ಪತ್ರಿಕೆಯು ಉಪಶೋಭಿತವಾಗಿರಬಹುದಾಗಿ ಅನ್ಯತ್ರ ಅಲಭ್ಯವಾದ ಅಂತಾ ನವೀನ ವಿಷಯವು ತಿಳಿದುಕೊಳ್ಳುವದಕ್ಕಾಗಿಯಾದರೂ ವಿದ್ಯಾವಂತರಾದವರನೇಕರು ಇತರಪತ್ರಿಕಾಪೇಕ್ಷಯಾ ಚಂದಾದಾರರಾಗುವರೆಂದು ನಂಬುತ್ತೇವೆ. ಹೀಗೆ ಪರಿದಾಪ್ಯಗಳಾದ ವಿಷಯಗಳನ್ನು ಪ್ರಚಾರಮೊಳು ತಂದ ಮೈಸೂರು ದೇಶೀಯರಿಗೊಂದು ಅಭ್ಯುದಯಾಭಿಲಾಷೆಯೊಡನೆ ಮಾಡಲ್ಪಡುವ ಪ್ರಕೃತ ಪ್ರಯತ್ನಕ್ಕೆ ಸಕಲಪಿಧಾನುಕೂಲ್ಯಗಳುಂಟಾಗಬೇಕೆಂದು ಕೋರುವೆವು.

Occasional Notes.
ನೈಮಿತ್ತಿಕವಿಷಯನ್ಯಾಸ.

A new paper—ಕೃಷಿಜೀವಿಗಳಪ್ರಯೋಜನವಂಕುರಿತು ವಾದಿಸುವದಕ್ಕಾಗಿ ಪುನೇಯಲ್ಲಿ ಇಂಡಿಯನ್ ವರ್ಕಮನ್ ಎಂಬ ಅಭಿದಾನದಿಂದ ಹೊಸಪತ್ರಿಕೆಯೊಂದು ಕ್ಷಿಪ್ರದಲ್ಲಿ ಪ್ರಾರಂಭವಾಗುವದೆಂದು ಕೇಳುತ್ತೇವೆ

A municipal loan.—ಸಿಂಲಾದಲ್ಲಿ ಕಟ್ಟಲ್ಪಡುತಲಿರುವ ಟೌನ್‌ಹಾಲ್‌ಎಂಬ ಕಟ್ಟಡದಕೆಲಸವನ್ನು ಪೂರ್ತಿಮಾಡುವದಕ್ಕಾಗಿ ಇಂಡ್ಯಗವರ್ನಮೆಂಟಿನವರು ಅಲ್ಲಿನ ಮ್ಯುನಿಸಿಪಾಲಿಟಿಯವರಿಗೆ ಸಾಲೀಯಾನಾ ನೇಕಡ ೪ರೂಪಾಯಿಗಳ ದರಬಡ್ಡಿಯಮೇಲೆ, ೧,೭೫,೦೦೦ ರೂಪಾಯಿಗಳ ಸಾಲಕೊಡುವವರಾಗಿದಾರೆಂದು ಪಯೋನಿಯರ್‌ಪತ್ರಿಕೆ ಹೇಳುತಿದೆ.

News from Upper Burmah.—ಉತ್ತರ ಬರ್ಮಾದೇಶದಲ್ಲಿನ ಡಕಾಯಿತಜನಗಳಿಗೂ ಬ್ರಿಟಿಷ್‌ಸೇನೆಗೂ ಈಚೆಗೆನಡೆದಯುದ್ಧದಲ್ಲಿ ೫೧ನೇ ರಿಜಿಮೆಂಟಗೆಸೇರಿದ ಲೆಫ್ಟಿನೆಂಟ್ ಬಾಲ್‌ಡೋರ್ ಯವರಿಗೆ ಪ್ರಾಣಾಪಾಯಕರವಾದ ಜಖಂ ಆಯಿತೆಂತಲೂ, ಪೋಲೀಸ್ ಸೂಪರಿಂಟೆಂಡೆಂಟಾದ ಮ|| ರೇಯಂಬವರು ಗೋಲೀಯಿಂದ ಹೊಡೆಯಲ್ಪಟ್ಟರೆಂತಲೂ ತಿಳಿಯಬರುತಿದೆ.

A female graduate—ಮುಂಬೈ ಯೂನಿವರ್ಸಿಟಿ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾದವರಪೈಕಿ, ರೆವರೆಂಡ್ ಮ|| ಸೊರಾಬ್‌ಜಿಯವರ ಮಗಳು, ಪುನೇಯಲ್ಲಿನ ವಿಕ್ಟೋರಿಯಾ ಹೈಸ್ಕೂಲ್ ಲೇಡೀ ಸೂಪರಿಂಟೆಂಡೆಂಟರಾದ ಮಿಸ್ಟ್ರೆಸ್ ಸೊರಾಬ್‌ಜಿಯವರ ಮಗಳಾದ ಮಿಸ್ ಕಾರ್ನೀಲಿಯಾಯೆಂಬ ಹುಡಿಗಿಯು ಒಬ್ಬಳಾಗಿರುತ್ತಾಳೆ

The next Viceroy of India.—ಇಂಡ್ಯರಾಜ್ಯದ ಪ್ರಕೃತ ವೈಸ್‌ರಾಯಿಯವರಿಗೆ ನಿಷ್ಕಲ್ಪವಾಗಿರುವ ವಾಯಿದೆ ಪೂರ್ತಿಯಾಗುವದಕ್ಕೆ ಇನ್ನುಮೂರುವರುಷಗಳವೆಯಷ್ಟೆ ಅದುತೀರಿಹೋದಬಳಿಕ ಹೋಗುವಲ್ಲಿ ಅವರಕೆಲಸಕ್ಕೆ ಲಾರ್ಡ ಲೋರ್ನ್‌ಯೆಂಬವರು ನಿಯಮಿಸಲ್ಪಡತಕ್ಕದ್ದೆಂದು ವ್ಯವಸ್ಥೆಯಾಗಿರುವಂತೆ ಒಂದಾನೊಂದುಪತ್ರಿಕೆ ಹೇಳುತಿದೆ.

The lessees of ruby mines in Upper Burmah—ಉತ್ತರ ಬರ್ಮಾದೇಶದೊಳು ತೀಬಾಯವರು ರಾಜ್ಯವಾಳುತಿದ್ದಕಾಲದಲ್ಲಿ ಅಲ್ಲಿನ ಕೆಂಪುಗಳನ್ನು ಗುತ್ತಿಗೆಮಾಡಿಕೊಂಡವರು ಅವುಗಳಮೇಲಿನ ತಮ್ಮಹಕ್ಕು ಮತ ಪರಂಪರಾಗತವಾದದ್ದೆಂತಲೂ ಅವುಗಳನ್ನು ತಾವು ಬಿಡುವದಿಲ್ಲವೆಂತಲೂ ಹೇಳುತ ಬ್ರಿಟಿಷಸೇನೆಯನ್ನು ಎದುರಿಸುವದಕ್ಕಾಗಿ ಒಗ್ಗಟ್ಟಾಗುತಲಿದಾರಂತೆ.

The *Amrita Bazar Patrika* says—ನೈಸ್‌ರಾಯಿಯವರು ಬರೋಡೇ ಸಂಸ್ಥಾನಕ್ಕೆ ಹೋಗಿದ್ದಅಂಶವನ್ನು ನಮೂದಿಸಿ ಕಲ್ಕತ್ತೆಯ ಅಮೃತಬಜಾರ್‌ಪತ್ರಿಕೆಹೇಳುವದೇನೆಂದರೆ,—ಬರೋಡೇಸಂಸ್ಥಾನ 'ದಳಿದ ಚಿನ್ನ ಮತ್ತು ಬೆಳ್ಳಿ ತೋಪುಗಳನ್ನು ಕರಗಿಸಿ ಮಾರಿಬಿಟ್ಟು ಅವರಲ್ಲಿ ಬರುವ ಹಣವನ್ನು ಹೊಸದಾಗಿ ತೋಫುಗಳು ಹುಯಿಸುವದಕ್ಕಾಗಲಿ ಅಥವಾ ಉಪಯುಕ್ತವಾದ ಬೇರೆ ಕೆಲಸಕ್ಕಾಗಲಿ ಉಪಯೋಗಿಸಲ್ಪಡಬಹುದು, ಎಂಬದು.

Fire at Moulmein—ಈಚೆಗೆ ಒಂದು ಮುಂಬೈ ಪತ್ರಿಕೆಗೆ ಬಂದ ತಂತಿ ವೃತ್ತಾಂತದ ಮೂಲಕ,ಗತಸೋಮವಾರದ ದಿನ ಮೌಲ್‌ಮೀನ್ ಎಂಬ ಪ್ರದೇಶದಲ್ಲಿ ಅಗ್ನಿಪ್ರವೇಶವಾಗಿ ಅದರಿಂದ ಸುಮಾರು ಇಪ್ಪತ್ತುಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ನಷ್ಟಸಂಭವಿಸಿದಂತೆ ತಿಳಿಯಲಾದೆವು.

The Governor of Bombay—ಮುಂಬೈ ಗವರ್ನರವರು ಕಾಟೀವಾಡಿ ಪ್ರಾಂತಕ್ಕೆ ಬರುವ ಗುರುವಾರದದಿನ ದಯಮಾಡುವರೆಂತಲೂ, ೩ನೇ ತಾರೀಖಿನಲ್ಲಿ ರಾಜಕೋಟೆ ಸಂಸ್ಥಾನದೊಳು ಅಶ್ವಪ್ರದರ್ಶಕ ಸಭೆಯಂ ನೋಡಿಕೊಂಡು ಮಾರನೆಯದಿನ ನಡೆಯುವ ದರ್ಬಾರಿನಲ್ಲಿ ಭಾವನಗರದ ಠಾಕೂರ್ ಸಾಹೆಬರವರಿಗೆ ಜಿ. ಸಿ. ಎಸ್. ಐ ಎಂಬ ಅಭ್ಯಾಬನ್ನು ಇಂಡ್ಯ ಗವರ್ನಮೆಂಟಿನವರ ಪರವಾಗಿ ಒಪ್ಪಿಸಿ ಬರುವರೆಂದು ಕೇಳುತ್ತೇವೆ.

Financial condition of the Hyderabad State.—ಹೈದರಾಬಾದ್ ಸಂಸ್ಥಾನದ ಅರ್ಥ ವಿಷಯಕವಾದ ಸ್ಥಿತಿಯು ಇನ್ನೂ ಅಪೇಕ್ಷಿಸತಕ್ಕಂತಾ ನ್ಯೂನತೆಯೊಳಇಲ್ಲವು. ಫಸಲಿ೧೨೯೫ನೇ ಇಸವಿವಿಗೆ ಚೈದಾದ(ಅಕ್ಟೋಬರ್‌ಆಖೈರಿಗೆ) ಸಾದರ್ ಖಜಾನೆ ರಿಪೋರ್ಟನಿಂದ ಖಜಾನೆಯಲ್ಲಿಸಿಲ್ಕು ೪೦ ಲಕ್ಷ ರೂಪಾಯಿಗಳಿರುವಂತೆಯೂ, ಸದರೀ ಸಾಲಿನಲ್ಲಿ ಸಂಸ್ಥಾನಕ್ಕೆ ಒಟ್ಟು ಹುಟ್ಟುವಳಿಯು ೩॥ ಕೋಟಿ ರೂಪಾಯಿಗಳೆಂತಲೂ ತಿಳಿಯಲಾದೆವು

Reduction in the Police Department.—ಪೋಲೀಸ್ ಇಲಾಖೆಯಲ್ಲಿ ಕೆಲವು ಮಟ್ಟಿಗೆ ಖರ್ಚು ಕಡಮೆ ಮಾಡಬೇಕೆಂದು ಫೈನಾನ್ಸ್ ಕಮಿಟಿಯವರು ತಿಳಸಿದ ಸಲಹೆಯನ್ನು ಬೆಂಗಾಲ್ ಗವರ್ನಮೆಂಟನವರು ಒಪ್ಪದೆ ಆಕ್ಷೇಪಿಸಿ, ಸದರೀಇಲಾಖೆಯಲ್ಲಿ ಆಫಿಸರ್‌ಗಳ ಪ್ರತ್ಯಾಶೆಗೆ ನ್ಯಾಯವಾಗಿ ಭಾರಿತಲಬುಳ್ಳ ಡಿ|| ಇನ್‌ಸ್ಪೆಕ್ಟರ್ ಜನರಲ್ ಕೆಲಸಗಳೆರಡುಮಾತ್ರವೇ ಇರುವದರಿಂದ ಅದನ್ನು ವಜಾ ಮಾಡಲಿಕ್ಕಾಗುವದಿಲ್ಲವೆಂದು ತಿಳಸಿರುತ್ತಾರಂತೆ.

The Raja of Basti.—ಬಸ್ತಿ ರಾಜರವರು, ತಾವು ಮೋಹಿಸಿದ್ದ ಒಂದು ಹುಡಿಗಿಯ ಮತ್ತು ಅವಳ ತಂದೆಯ ಖೂನಿಗೆ ಪ್ರೇರಕರಾಗಿದ್ದರೆಂಬ ತಪ್ಪಿತದ ಬಗ್ಗೆ ಈಚೆಗೆ ಸೆಷನ್ ಜಡ್ಜಿಯವರಿಂದ ದರ್ಯಾಪ್ತಿ ಮಾಡಲ್ಪಟ್ಟು ತಕ್ಸೀರ್ ರುಜುವಾತಾದ್ದರಿಂದ ಅವರಿಗೆ ಜಡ್ಜಿಯವರು ನಾಲ್ಕು ಘಂಟೆಗಳ ಕಾಲ ಖೈದ ಸಜಾ ವಿಧಿಸಿದರಲ್ಲದೆ, ಅವರಿಗೆ ಕೊಡಲ್ಪಟ್ಟದ್ದ ರಾಜಾಯೆಂಬ ಅಲ್ಕಾಬನಹ ಸರ್ಕಾರದವರಿಂದವಾಪಸ ತೆಗೆದುಕೊಳ್ಳಲ್ಪಟ್ಟಿತೆಂದುಉತ್ತರದೇಶದ ಪತ್ರಿಕೆಯೊಂದು ತಿಳಸುತಿದೆ.

Preparation at Jummoo.—ಕಾಶ್ಮೀರದೇಶಕ್ಕೆ ಪ್ರಧಾನ ನಗರವಾದ ಜಮ್ಮೂ ಪಟ್ಟಣದಲ್ಲಿ ಮಹಾರಾಜ್ಞೀ ಪುತ್ರರಾದ ಡೋಕಾಫ್ ಕಾನಾಟರವರನ್ನು ಗೌರವ ಪೂರ್ವಕವಾಗಿ ಬರಮಾಡಿಕೊಳ್ಳುವ ಬಗ್ಗೆ ಬಹಳ ಪ್ರಯತ್ನಗಳು ನಡೆಸಲ್ಪಡುತಲಿವೆಯಂತೆ. ಅವರ ಉಪಯೋಗದ ಬಗ್ಗೆ ಮಹಾರಾಜರವರ ಹೊಸ ಅರಮನೆಯು ಅಲಂಕರಿಸಲ್ಪಡುತಲಿರುವದಾಗಿ ತಿಳಿಯಬರುತಿದೆ

Banquet to the Governor—ಬರುವ ಬುಧವಾರದದಿನ ಮದರಾಸ್ ಬ್ಯಾಂಕ್ವೆಟಿಂಗ ಹಾಲಿನಲ್ಲಿ ಘನವನ್ನು ಹೊಂದಿದ ಮದರಾಸ್ ಗವರ್ನರವರಿಗೆ ವಿಜಯನಗರದ ಮಹಾರಾಜರವರು ಸ್ವದೇಶಯಾತ್ರಾಯುಕ್ತವಾದ ಶುಭವಾದನದಬಗ್ಗೆ ಔತನಮಾಡಿಸುವರೆಂತಲೂ, ಅದಕ್ಕೆ ಮಹಾರಾಜರವರು ಅನೇಕ ದೊಡ್ಡ ಮನುಷ್ಯರಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸಿರುತ್ತಾರೆಂತಲೂ ಮದರಾಸ್ ಮೇಯಿಲ್‌ಪತ್ರಿಕೆ ತಿಳಸುತಿದೆ ಗ್ರಾಂಟ್ ಡಫ್‌ಯವರು ತ ರಾಜ್ಯದಲ್ಲಿ ಗತ ಐದು ಸಂವತ್ಸರಕಾಲದೊಳು ತಾವು ಏತದ್ದೇಶೀಯರಿಗೆ ಏನೇನು ಉಪಕಾರಮಾಡಿ ಅವರ ಪ್ರೀತಿವಿಶ್ವಾಸಗಳಂ ಸಂಪಾದಿಸಿದಂತೆ ತಿಳಸುವರಾಗಿ ದಾರೆಯೋ ನೋಡಬೇಕು.

Law Examinations—ತಳೆದ ತಿಂಗಳ ೧೯–೨೦–೨೧ನೇ ತಾರೀಖುಗಳಲ್ಲಿ ರಿಂಕನ್ ಇನ್ ಯೆಂಬ ಕಟ್ಟಡದಲ್ಲಿ ಲಾ ವಿದ್ಯಾರ್ಥಿಗಳಿಗೆ ಆಖೈರಾದ ಸಾಮಾನ್ಯ ಪರೀಕ್ಷೆ ಜರಿಗಿತು. ಈ ಪರೀಕ್ಷೆಯಲ್ಲಿ ತೃಪ್ತಿಕರವಾಗಿ ತೇರ್ಗಡೆಯಾಗಿ ಸರ್ಟಿಫಿಕೇಟುಗಳನ್ನು ಪಡೆದವರಲ್ಲಿ ಇದರಡಿ ಕಂಡವರು ಸಹ ಸೇರಿರುತ್ತಾರೆ. ಮಿಡಿಲ್ ಟೆಂಪಲ್‌ಗೆ ಸೇರಿದ, ಅಜಿಜ್ ಅಹಮದ್ ಸೂರೀಶಚಂದರ್ ವಿಶ್ವಾಸ, ಪಂಡಿತ ವಿಷ್ಣು ನಾರಾಯಣದಾರ್, ಇನ್ನರ್ ಟೆಂಪಲಿಗೆ ಸೇರಿದ ಸೇಯ್ಯದ್ ಮುತುಲಾ, ಇನ್ನರ್ ಟೆಂಪಲಿಗೆ ಸೇರಿದ ಸೇಯ್ಯದ್ ಎಸ್. ಬಿ. ರಾಮಸ್ವಾಮಿಯ್ಯಂಗಾರ್ರು. ಇದಲ್ಲದೆ ಇದರಡಿ ಕಂಡ ವಿದ್ಯಾರ್ಥಿಗಳು ರೋಮನ್ ಲಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುತ್ತಾರೆ. ರಾಮಭಕ್ತ, ಷೇಕ್ ಮಹಮದುಸೇನ್, ಹರಿಲಾಲ್‌ಮುಕರ್ಜಿ, ಗುಲಾಂಮಹಮದ್ ಬಾಪಮಿಯಾ ಮುನಿಷಿ, ರಾಜಾನಕಾಂತಸೇನ್.

The *Indu Prakash* says.—ವೈಸ್‌ರಾಯಿಯವರ ದೇಶಸಂಚಾರವಿಷಯದಲ್ಲಿ ಮುಂಬೈ ಇಂದುಪ್ರಕಾಶಪತ್ರಿಕೆಹೇಳುವದೇನೆಂದರೆ,–ವೈಸ್‌ರಾಯಿಯವರು ಸಂವತ್ಸರಕ್ಕೊಂದಾವರ್ತಿ ದೇಶಸಂಚಾರ ಮಾಡುವದರಮೂಲಕ ಆಳುವವರಿಗೂ ಆಳಲ್ಪಡತಕ್ಕವರಿಗೂ ಸಮಾಗಮ ಪ್ರುಂಟಾದಾಗ್ಯೂ ಅದರಿಂದ ಯಾವ ಉದ್ದೇಶ ಪೂರ್ತಿಯೂ ಉಂಟಾಗುವಂತೆ ಕಾಣಲಿಲ್ಲವು. ಅಂತಾ ದೇಶಸಂಚಾರದಿಂದ ಕಷ್ಟಾರ್ಜಿತವಾದ ಪ್ರಜೆಗಳ ದ್ರವ್ಯ ಬಹಳಮಟ್ಟಿಗೆ ವ್ಯಯವಾಗಿ, ಪ್ರಜೆಗಳಸ್ಥಿತಿಯ ವಿಷಯದಲ್ಲಿ ವೈಸ್‌ರಾಯ್‌ಯವರಿಗೆ ತಪ್ಪಾದ ಒಂದು ಭಾವ ಹುಟ್ಟುವದಲ್ಲದೆ ಅವರಿಗೆ ತೊಂದರೆಗೂಕೆಡುಕಿಗೂಕಾರಣವಾಗುತಿದೆ, ಎಂಬದು.

The Gaekwar's new palace at Baroda.—ಬರೋಡೇ ಗಾಯಕವಾಡಿಯವರು ತಮ್ಮ ರಾಜಧಾನಿಯೊಳು ಈಚೆಗೆ ಹೊಸದಾಗಿ ಕಟ್ಟಿಸಿರುವ ಅರಮನೆಯು, ಇಂಡ್ಯದೇಶದೊಳು, ನವೀನಶಿಲ್ಪ ಕಲಾಕೌಶಲ್ಯ ಪ್ರದರ್ಶಕವಾಗಿ ಕಟ್ಟಲ್ಪಟ್ಟಿರುವ ಸುಂದರಗಳಾದ ಕಟ್ಟಡಗಳಲ್ಲೊಂದಾಗಿರುತಿದೆ. ಸದರೀಕಟ್ಟಡಕ್ಕಾಗಿ ಒಟ್ಟು ಇಪ್ಪತ್ತುನಾಲ್ಕುಲಕ್ಷರೂಪಾಯಿಗಳು ವ್ಯಯವಾದಂತೆ ತಿಳಿಯಬರುತಿದೆ. ಇಂಗ್ಲಿಷ್ ಇಂಜನಿಯರ್‌ಗಳಿಂದ ತಯಾರುಮಾಡಲ್ಪಟ್ಟ ಪ್ಲ್ಯಾನ್ ಅನುಸರಿಸಿ ಅವರ ವಿಚಾರಣೆಗೆ ಒಳಪಟ್ಟು ನಡೆದಕೆಲಸದ ಲಾಗುವ

ತು ಅಷ್ಟು ಗುಣವೇನೂ—ಆಶ್ಚರ್ಯವಲ್ಲವು.

Celebration of Queen's Jubilee at Jeypore.—ಮಹಾರಾಜ್ಞೀ(ಇಂಡ್ಯ ಚಕ್ರವರ್ತಿನೀ)ಯವರ ಸಿಂಹಾಸನಾರೋಹಣ ಪ್ರಯುಕ್ತವಾದ ಮಹೋತ್ಸವವನ್ನು ಜಯಪುರದ ಮಹಾರಾಜರವರು ತಮ್ಮ ಸಂಸ್ಥಾನದೊಳು ಆಚರಿಸುವ ಸಂದರ್ಭದಲ್ಲಿ ಇಂಡ್ಯಾ ದೇಶದ ಹೆಂಗಸರಿಗೆ ವೈದ್ಯ ವಿಷಯವಾದ ಸಹಾಯ ಮಾಡುವ ಉದ್ದೇಶದಿಂದ ಡಪರಿನ್ ಸಾಹೇಬರಿಂದ ಏರ್ಪಟ್ಟಿರುವ ನಿಧಿಗೆ ಒಂದು ಲಕ್ಷ ರೂಪಾಯಿಗಳು ಇನಾಮಾಕೊಡಬೇಕೆಂದು ಯೋಚಿಸುತಲಿರುವಂತೆ ಒಂದಾನೊಂದು ಪತ್ರಿಕೆ ಹೇಳುವದೆ. ಕಾರ್ಯಗೌರವಕ್ಕಾಗಿ ಅರ್ಥ ಸಹಾಯ ಮಾಡಿದರವರ ದುರ್ಲಭರಾಗಿದ್ದರೂ ಕಾರ್ಯ ಪ್ರವೃತ್ತ ಕರಗಳ ಲದ ಮತ್ತು ಸಂತೋಷಾರ್ಥವಾಗಿ ಯಾವದೊ ಮೇಲೆ ಬಿದ್ದು ಬರತಕ್ಕವರಿಲ್ಲವೇ ಹೋಗಲಿಲ್ಲವು.

LOCAL AND PROVINCIAL NEWS.

ಒಳದೇಶ ಮತ್ತು ತಾಲ್ಲೂಕುವಾರ್ತೆಗಳು.

Southern Mahratta Railway.—ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪನಿಯ ಅಸಿಸ್ಟೆಂಟ್ ಟ್ರಾಫಿಕ್ ಮ್ಯಾನೇಜರಾದ ಮೆ|| ಜೇಮ್ಸ್ ಕ್ಲೈಗ್ ಎಂಬುವರು ಈಚೆಗೆ ಈ ಪೇಟೆಗೆ ಬಂದು ತಮ್ಮ ಇಲಾಖೆಯ ಉದ್ಯೋಗಸ್ಥರಿಗೆಲ್ಲ ಒಂದು ಹೊಸ ನಮೂನೆಯುಳ್ಳ ವಸ್ತ್ರ ಏರ್ಪಡಿಸಿ ಅದರಂತೆ ಎಲ್ಲರೂ ಧರಿಸಿಕೊಳ್ಳಬೇಕೆಂದು ಹುಕುಂ ಮಾಡಲು, ಅವರಲ್ಲಿ ನೇಟಿವ್‌ಗಳೆಲ್ಲರೂ, ತತ್ರಾಪಿ ಬ್ರಾಹ್ಮಣರು ಬೂಟ್ಸು ಹಾಕಿಕೊಳ್ಳಲಿಕ್ಕೆ ನಿರಾಕರಿಸಿ ಅದು ತಮಗೆ ಅನಾವಶ್ಯಕವಿಲ್ಲವೆಂದು ಪ್ರತಿಬೋಧಿಸಿದರೆಂದು ಕೇಳಲ್ಪಟ್ಟಿದೆ. ಈಗ ಸಂಕೋಚವಿಲ್ಲದೆ ಆಚಾರನ್ನಪ್ಪ ರೀತಿಯನುಯೋಗಿಸಲ್ಪಡುತಲಿರುವ (ಟ್ರಾಫಿಕ್ ಮ್ಯಾನೇಜರ) ಗೌರವವಾದವಲ್ಲವೇ! ಟ್ರಾಫಿಕ್ ಮ್ಯಾನೇಜರ್ ಏರ್ಪಡಿಸುವವುಗಳ ವೈಖರಿ ಈಗ ಯಾವದು ಬಿದ್ದಿಟ್ಟಿದೆ?

The City Municipal Cricket.—ಮೈಸೂರು ರಾಜಿಯವರಿಗೆ ಒಪ್ಪಿಸುವ ವಿಜ್ಞಾಪನ ಪತ್ರಿಕೆಯನ್ನು ಬರುಬ್ಬೆ ಸಿಟಿ ಮ್ಯುನಿಸಿಪಾಲಿಟಿಯವರ ಬಲಕ್ಷ್ಮೀಯ ಮೇಲೆ ಮಹಾರಾಜ್ ಪಿ. ಅರ್. ಅರ್ಕಾರ್ಸಿಬಾಗದಿಂದ ದಮೂರ್ಸಾಬಿಯಿದ್ದಲ್ಲಷ್ಟು ಸುಭುವು (ಕ್ರಾಸ್‌ಕಟ್) ಗದ ಗುರುವಾರದ ದಿನ ಇಲ್ಲಿಗೆ ಬಂದು ತಲುಪಿದೆಯೂ, ಅದು ಬಹಳ ಶ್ಲಾಘನೀಯವಾಗಿ ನೂತನಪ್ರಿಯಮೆಯಿಯೂ, ಅವರ ಮಿತ್ರಗಳನ್ನು ಬರೆದ ಅಲಂಕಾರಗಳೂ, ವಿಜೆ ಮಹಾರಾಜರವರ ಅರಮನೆ, ಚೀಪ್ ಕೋರ್ಟ್ ಕಶ್ಚೇರಿ, ಅವರ ಎದುರು ಭಾಗದೊಳಿರುವ ಮ್ಯೂಜಿಯು, ಅಲಸೂರು ಸೋಮೇಶ್ವರದೇವಸ್ಥಾನ ಇವುಗಳೆಲ್ಲವೂ ಅತಿ ಮನೋಹರವಾಗಿ ಕೆತ್ತಲ್ಪಟ್ಟಿರುವದು ಕಂಡು, ಇದಕ್ಕೆ ೩೦೦ ರೂಪಾಯಿಗಳ ಲಾಗುವದು ಎಂ... ಎಂದಿರುವ ಕೇಳಲ್ಪಟ್ಟಿದೆ.

Decorations in Pettah.—ಮೈಸೂರಾಧೀಶರವರ ಆಗಮನಾರ್ಥ ಮಾಡಲ್ಪಟ್ಟಿರುವ ಅಲಂಕಾರಾದಿಗಳಿಂದ ಈ ಪೂರಾ ನೂತನದಂತೆ ತೋರ್ಪ ಬಹಳ ನೇತ್ರಾನಂದಕರವಾಗಿದೆ. ದೊಡ್ಡ ಪೇಟೆ ಲೌರ್ಡ ರಿಪ್ಪೆನ್‌ಯವರ ಸಂಚಾರ ಮಾರ್ಗವಾದ ಈ ಪೂರಾ ಧರ್ಮ ಬೀದಿ ಕೆರೆ ಕಟ್ಟೆಯ ಮೇಲ್ಭಾಗವು ಬಹುವಿಸಾಲಂಕಾರದಿಂ ಮನೋಹರತೆಯಾಗಿ ಅಭ್ಯಾಗತರ ಹೃದಯವು ಸುಪ್ರೀತರ್ಣ ಸ್ಥಿತಿಗೆ ಪಡಿಸಿಕೊಳ್ಳುತಿರುತ್ತೆ ನಮ್ಮ ಪ್ರವೃತ್ತ ಕಣ್ಣಿಗೆ ಸುರಿದಿದೆ. ಬಹುದಿವಸ ಸಂಚಾರಮಾಡಿ ಚಿಕೆಗೆತವನುತಿದ್ದವನುಕ್ಕೆ ಗುಂಡುಬಿದ್ದು ಬರುವ ಮೈಸೂರು ರಾಯರುವರ ಕಣ್ಣಿಗೆ ಇಲ್ಲಿನವರು ಮಾಡಿರುವ ಅಲಂಕಾರಾದಿಯೇರ್ಪಾಡುಗಳು ಎಷ್ಟು ಮಟ್ಟಿಗೆ ಆನಂದಕರವಾಗಿ ತೋರಿ ಲಭಿಸಲ್ಪಡಬೇಕಿರುವದೋ ತಿಳಿಯಲಾರದು.

A query.—ಆಶೀನೇಯ ಕಾಪ್ರಿಸ್ಪೊಂಡೆಂಟರೊಬ್ಬರು ಇಲ್ಲಿನ ಒಂದು ಇಂಗ್ಲಿಷ್ ಪತ್ರಿಕೆಯನ್ನು ಕುರಿತು ಪ್ರಶ್ನೆಮಾಡುತ್ತಾರೆ ಏನೆಂದರೆ—ಯಾವ ನಾನಾ ಸರ್ಕಾರ ವಿಷಯವನ್ನು ಕುರಿತು ಬಿ ನಾಂಚನರಿಗೆ ಎಷ್ಟಾವರ್ತಿ ಅರ್ಜಿಬರೆದು ಕೊಂಡಾಗ್ಯೂ ಪ್ರತ್ಯುತ್ತರವೇ ಕೊಡಲಾರದಲ್ಲಾ! ಹೀಗೆ ಬರತಕ್ಕ ಕಾಗದ ಪತ್ರಗಳೊಂದಕ್ಕೂ ಜವಾಬು ಕೊಡಬೇಡೆಂದು ಇಂಡ್ಯ ಗವರ್ನಮೆಂಟನವರು ಯಾವದಾದರೊಂದು ದೆಸ್ಪ್ಯಾಚಿನ ಮೂಲಕ ತಿಳಿಸಿದ್ದಾರೆಯೇ? ಹಾಗಿರುವಪಕ್ಷಕ್ಕೆ ಅದು ತಮಗೆ ತಿಳಿದಿದ್ದರೆ ದಯಮಾಡಿ ನನಗೆ ತಿಳಿಸುವಿರಾ ದರೆ ನನ್ನಂತೆ ಬಹುಮಂದಿ ಅರಿತು ನಿರ್ಭರದಾಗಿರುವರು, ಎಂಬದು. ಎಲ್ಲರ ವರ್ತನೆಗಳಗೂ ನಿಧಾಯಕರಾಗಿ ಏರ್ಪಟ್ಟಿರುವಂತ ಸಾರ್ವಭೌಮರಾದ ಬ್ರಿಟಿಷ್ ಗವರ್ನಮೆಂಟಿನವರ ಪ್ರತಿನಿಧಿಯೇ ಏತದ್ದೇಶೀಯರ ಭಾಗ್ಯವಶಾತ್ ನಾಳೆಯದಿನ ಇಲ್ಲಿಗೆ ಬರುವರಾದ್ದರಿಂದ ಅವರ ಮೂಲಕವೇ ಅನಿವಾರ್ಯವಾದ ತಮ್ಮ ಸಂಕಟವನ್ನು ಕಾಫಿ ಪ್ಲಾಂಟರಗಳು ನಿವಾರಣ ಮಾಡಿಕೊಂಡು ಅದರಫಲಿತಾಂಶವನ್ನು ಹೊರಪಡಿಸುವರೆಂದು ನಂಬುತ್ತೇವೆ.

The Pettah Dispensary.—ಪೇಟೆಯ ಆಸ್ಪತ್ರಿಯ ವಿಷಯದೊಳು ಈಚೆಗೆ ಆಗಿಂದಾಗ್ಯೆ ಪ್ರಯಾಗುತಲಿದ್ದ ರೋಗಿಗಳ ಫಿರ್ಯಾದಿಯು ನಿವೃತ್ತಿಯಾಗುವ ಕಾಲ ಪ್ರಾಪ್ತವಾದದಕ್ಕೋಸ್ಕರ ಬಹಳ ಸಂತೋಷಿಸುವೆವು. ಅದೇನೆಂದರೆ, ಪೇಟೆ ಆಸ್ಪತ್ರಿಯನ್ನು ಸಿಟಿಮಾರ್ತಾರ್ನ್ ಆಸ್ಪತ್ರಿಯೊಡನೆ ಸೇರಿಸಲಾಗದೆಂದು ನಿಷೇಧಿಸಿದವರೊಳು ನಾವೂ ಒಬ್ಬರಾಗಿದ್ದೆವು. ಪರಂತು ಸದರೀ ಆಸ್ಪತ್ರಿಯ ನೌಕರರ ವರ್ತನವು ನಮ್ಮ ಪೂರ್ವಾಭಿಪ್ರಾಯವನ್ನು ಹೋಗಲಾಡಿಸುವಂತಾದ್ದಾಗಿ ಏರ್ಪಟ್ಟದರಿಂದಲೂ, ಚಿಕಿತ್ಸಾ ವಿಷಯದಲ್ಲಿ ನೂತನ ಆಸ್ಪತ್ರಿಯನ್ನೇ ಯೆಲ್ಲರೂ ಅಪೇಕ್ಷಿಸುವಸ್ಥಿತಿಯೊಳದು ಬರುತಲಿರುವದರಿಂದಲೂ, ಪೇಟೆ ಆಸ್ಪತ್ರಿಯನ್ನು ಹೊಸ ಆಸ್ಪತ್ರಿಯೊಡನೆ ಸೇರಿಸುವದೇ ಯೋಗ್ಯವೆಂಬ ಭಾವ ನಮಗೆ ತೋರಿ ಅದಂ ಈಚೆಗೊಂದು ಸಂದರ್ಭದಲ್ಲಿ ವ್ಯಕ್ತಪಡಿಸಿದ್ದೆವು. ಅದೇ ಪ್ರಕಾರ ಕೆಲವು ಪತ್ರಗಳ ಮೇಲೆ ಸಿಟಿ ಮಾರ್ತಾನ್‌ಯವರ ಆಸ್ಪತ್ರಿ ವಿಚಾರಣಾಧಿಕಾರಿಗಳ ಶೋಧಿಸಿಯಂತೆ ಸಿಟಿ ಮ್ಯುನಿಸಿಪಾಲಿಟಿಯವರು ಕಳೆದ ಶುಕ್ರವಾರದ ದಿನ ಸೇರಿದ ಮೀಟಿಂಗಿನಲ್ಲಿ ಅದರ ವಿಚಾರಣೆಗೊಪ್ಪಿಸಿ ಬಿಡುವಂತೆ ತೀರ್ಮಾನಿಸಿದರೆಂಬ ವೃತ್ತಾಂತವನು ಕೇಳಿ ಬಹಳ ಸಂತೋಷಿಸಿದೆವು. ಇನ್ನು ಮೇಲಾದರೂ ಜನಗಳಿಗೆ ಸುಖವುಂಟಾಗಬಹುದೆಂದೆಣಿಸುತ್ತೇವೆ.

THE MYSORE GAZETTE

ಮೈಸೂರು ಗೆಜೆಟ.

—

ಶ್ರೀಮನ್ಮಹಾರಾಜ ರಾಜೇಶ್ವರ ... ಮೈಸೂರು
... ಸರಕಾರದ ಅಪ್ಪಣೆ ಪ್ರಕಾರ ...

—

ಇಸ್ತಿಹಾರನಾಮೆ.

—

ತಾರೀಖ್ ೨೧ನೇ ನವೆಂಬರ್ ೧೮೮೭.

ಇಂಡ್ಯಾದೇಶದ ವೈಸ್‌ರಾಯಿ ವ ಗವರ್ನರ್ ಜನರಲ್‌ಯವರಾದ ಬಹುಮಾನವನ್ನು ಪಡೆದ ದಿ ರೈಟ್ ಆನರೆಬಲ್ ದಿ ಅರಲ್ ಆಫ್ ಡಫರಿನ್, ಕೆ. ಪಿ., ಜಿ. ಎಂ. ಎಸ್. ಐ., ಜಿ. ಸಿ. ಬಿ., ಜಿ. ಸಿ. ಎಂ. ಜಿ., ಪಿ. ಸಿ. ಯವರು, ೧೮೮೭ನೇ ಇಸವಿ ನವಂಬರ್ ೩೦ನೇ ತಾರೀಖು ಬುಧವಾರ ಮಧ್ಯಾಹ್ನ ೧೨॥ ಘಂಟೆಗೆ, ಸ್ಪೆಷಲ್ ಟ್ರೈನ್‌ನಲ್ಲಿ ಮೈಸೂರಿಗೆ ಸವಾರಿ ದಯಮಾಡುವರು.

೧. ಬಹುಮಾನವನ್ನು ಪಡೆದ ಗವರ್ನರ್ ಜನರಲ್‌ಯವರು ರೈಲ್ವೇ ಸ್ಟೇಷನಿಗೆ ದಯಮಾಡಿದ ಒಡನೆ, ಸಲಾಂ ಬತೇರಿ ಮೇಲಿನಿಂದ ೩೧ ಸಲಾಮಿನ ತೋಪೆಗಳು ಉಡಾಯಿಸಲ್ಪಡತಕ್ಕದ್ದು.

೨. ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರ ಅರಮನೆ ಫೌಜ್ ಪೈಕಿ ಸಲಾಂ, ಬ್ಯಾಂಡ್ ಮತ್ತು ನಿಷಾನಿಯೊಡನೆ ರೈಲ್ವೇ ಸ್ಟೇಷನಿನ ಪ್ಲಾಟ್ ಫಾರಮ್‌ನಲ್ಲಿ ಹಾಜರಿದ್ದು, ಬಹುಮಾನವನ್ನು ಪಡೆದ ಗವರ್ನರ್ ಜನರಲ್‌ಯವರು ರೈಲಿಂದಿಳಿದೊಡನೆ ಮರ್ಯಾದೆ ನಡೆಸತಕ್ಕದ್ದು.

೩ ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರು ಬ್ರಿಟಿಷ್ ರೆಸಿಡೆಂಟರೊಡನೆ ಸ್ಟೇಷನಿನಲ್ಲಿ ಗವರ್ನರ್ ಜನರಲ್‌ಯವರನ್ನು ಎದುರುಗೊಳ್ಳುವರು. ಮೈಸೂರು ಸರ್ಕಾರಕ್ಕೆ ಸೇರಿದ ಮುಖ್ಯರಾದ ಯುರೋಪಿಯನ್ ವ ನೇಟಿವ್ ಆಫಿಸರಗಳೂ, ಮತ್ತು ಮೈಸೂರು ಮ್ಯುನಿಸಿಪಲ್ ಬೋರ್ಡಿನ ಮೆಂಬರಗಳು ಸಹ ಹಾಜರಿರುವ ಬಗ್ಗೆ ಅಪೇಕ್ಷಿಸಲ್ಪಡತಕ್ಕದ್ದು.

ಉತಾರ್ರು.

ಮಿಲಿಟರಿ ಆಫಿಸರಗಳು—ಯೂನಿಫಾರಂ ಯಾನೆ ಮಿಲಿಟರಿ ಪೋಷಾಕು.

ಯೂರೋಪಿಯನ್ ಸಿವಿಲ್ ಆಫಿಸರಗಳು—ಸಾಯಂಕಾಲದ ಡ್ರೆಸ್.

ನೇಟಿವ್ ಆಫಿಸರಗಳು—ದರ್ಬಾರ್ ಡ್ರೆಸ್.

೪ ಬಹುಮಾನವನ್ನು ಪಡೆದ ವೈಸ್‌ರಾಯ್ ವ ಗವರ್ನರ್ ಜನರಲ್‌ಯವರಿಗೆ, ಮ್ಯುನಿಸಿಪಲ್ ಕಮ್ಮಿಷನರಗಳಿಂದ ರೈಲ್ವೇ ಪ್ಲಾಟಫಾರಂನಲ್ಲಿ ಸುಮಾಗಮನ ವಿಜ್ಞಾಪನ ಪತ್ರಿಕೆಯು ಒಪ್ಪಿಸಲ್ಪಡತಕ್ಕದ್ದು.

೬. ರೈಲ್ವೇ ಸ್ಟೇಷನಿನ ಹೊರಪಾರ್ಶ್ವದಲ್ಲಿ, ಮೈಸೂರು ಬಾರ್ ಇಲಾಖೆಯ ಕೆಲವು ಫೌಜ್, ಬ್ಯಾಂಡ್ ಮತ್ತು ನಿಷಾನಿಯೊಡನೆ ಮುಜರೆ ಉದ್ದಿಶ್ಯ ಹಾಜರಿದ್ದು, ಬಹುಮಾನವನ್ನು ಪಡೆದ ವೈಸ್‌ರಾಯ್‌ಯವರು ಸ್ಟೇಷನ್‌ಬಿಟ್ಟು ಸವಾರಿ ಚಿತ್ತೈಸುವಾಗ ಫರ್ಜಂದ್ ಮಾಡತಕ್ಕದ್ದು.

೭. ಬಹುಮಾನವನ್ನು ಪಡೆದ ವೈಸ್‌ರಾಯಿಯವರು, ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರೊಡನೆ ರೋವರ್ ರೆಸಿಡೆನ್ಸಿ ಬಂಗ್ಲೆಗೆ ಸವಾರಿ ಚಿತ್ತೈಸುವರು, ಸದರೀ ಸವಾರಿಯೊಡನೆ ಶ್ರೀಮನ್ ಮಹಾರಾಜಾ ಸರ್ಕಾರದವರ ಬಾಡೀಗಾರ್ಡ ಮತ್ತು ಮೈಸೂರು ಸವಾರ್ ಫೌಜಿನ ರಾಜಾ ಸರಿತನತ್ ಸುದಾ ಇರತಕ್ಕದ್ದು. ರೈಲ್ವೇ ಸ್ಟೇಷನಿನ ಹೊರಗಡೆ ರಸ್ತೆಯ ಬಾಜೂನಲ್ಲಿ ಮೈಸೂರು ಸಂಸ್ಥಾನದ ರಾಜಬಿರುದುಗಳು ಇರತಕ್ಕವು. ಲೋವರ್ ರೆಸಿಡೆನ್ಸಿಬಂಗ್ಲೆಗೆ ಹೋಗುವ ಭಾರಾಮಾರ್ಗದ ಉಭಯ ಪಾರ್ಶ್ವಗಳಲ್ಲೂ, ಘನವನ್ನು ಹೊಂದಿದ ಶ್ರೀಮನ್ ಮಹಾರಾಜಾ ಸರ್ಕಾರದವರ ದಾಚೀದಾರರ ವ ಭಾರಕೀರದವರ ಸೈನ್ಯವೂ ಮೈಸೂರು ಸವಾರ್‌ಫೌಜ್ ಸುದಾ ಸಾಲಾಗಿ ಜಮಾಯಿಸಿರತಕ್ಕದ್ದು.

೮. ಮೈಸೂರು ಬಾರ್ ಇಲಾಖೆಯ ಕೆಲವು ಫೌಜ್, ಲೋವರ್‌ರೆಸಿಡೆನ್ಸಿ ಬಂಗ್ಲೆಯಲ್ಲಿ ಬ್ಯಾಂಡ್ ವ ನಿಷಾನಿಗಳೊಡನೆ ಹಾಜರಿದ್ದು ಬಹುಮಾನವನ್ನು ಪಡೆದ ವೈಸ್‌ರಾಯಿಯವರ ಸವಾರಿ ಅಲ್ಲಿಗೆ ಚಿತ್ತೈಸಿದಒಡನೆ ಫರ್ಜಂದ್ ಮಾಡತಕ್ಕದ್ದು.

೯. ಬಹುಮಾನವನ್ನು ಪಡೆದ ವೈಸ್‌ರಾಯಿಯವರು ಲೋವರ್ ರೆಸಿಡೆನ್ಸಿ ಬಂಗ್ಲೆಗೆ ದಯಮಾಡಿಸಿದ ಒಡನೆ ಕೋಟೆಬತೇರಿ ಮೇಲಿನಿಂದ ಗೌರವಾರ್ಥ ೩೧ ತೋಪೆಗಳು ಉಡಾಯಿಸಲ್ಪಡುವವು.

೧೦ ಬಹುಮಾನವನ್ನು ಪಡೆದ ವೈಸ್‌ರಾಯಿಯವರು, ೧೮೮೭ನೇ ಇಸವಿ ಡಿಸೆಂಬರ್ ೩ನೇ ತಾರೀಖಿನ ಶನಿವಾರ ಮೈಸೂರಿನಿಂದ ಶ್ರೀರಂಗಪಟ್ಟಣಕ್ಕೆ ಸವಾರಿ ಚಿತ್ತೈಸುವರು, ಆ ಕಾಲದಲ್ಲಿ ಗೌರವಾರ್ಥ ೩೧ ತೋಪೆಗಳು ಉಡಾಯಿಸಲ್ಪಡುವವು; ಅಲ್ಲಿಂದ, ಮಧ್ಯಾಹ್ನ ೧॥ಘಂಟೆಗೆ ಶ್ರೀರಂಗಪಟ್ಟಣದ ಕೋಟೆ ಸ್ಟೇಷನ್‌ನಿಂದ ಹೊರಟು ಸಾಯಂಕಾಲ ೬॥ ಘಂಟೆಗೆ ಬೆಂಗಳೂರು ಕಂಟೋನ್ಮೆಂಟ್ ಸ್ಟೇಷನ್ ತಲಪತಕ್ಕದ್ದಾಗಿ ಗೊತ್ತುಮಾಡಲ್ಪಟ್ಟಿರುವ ಸ್ಪೆಷಲ್ ಟ್ರೈನ್‌ನಲ್ಲಿ ಬೆಂಗಳೂರಿಗೆ ಸವಾರಿ ಚಿತ್ತೈಸುವರು.

NEWS LETTERS.

ವೃತ್ತಾಂತ ಪತ್ರ.

ಹೊಳೇನರಸೀಪುರ, ತಾ||೨೬—೧೧—೮೭.
ಈ ಸಂವತ್ಸರದಲ್ಲಿ ಮಳೆಯು ಕಾಲಕಾಲಕ್ಕೆ ಸರಿಯಾಗಿ ಬಂದದರಿಂದ ಅಕ್ಕಿ ರಾಗಿ ಪದ್ಯೆರೆಧಾನ್ಯಗಳು ಕೊಡಿದಮಟ್ಟಿಗೂ ಅಗ್ಗವಾಗಿಯೇ ಇದೆ. ವಿಶೇಷ ನಮೂದಿಗೆ ಅರ್ಹವಾದ ಬೇರೇ ಸಂಗತಿಗಳೇನೂ ಇಲ್ಲ.

ಈ ತಾಲ್ಲೂಕು ಅಮಲ್ದಾರ್ ಮೆ|| ಗೋಪಾಲಕೃಷ್ಣಯ್ಯಂಗಾರು ಕಾಡನೂರು ಗ್ರಾಮ ಜಮಾಬಂದಿಪ್ರಯುಕ್ತ ಹೋಗಿರುತ್ತಾರೆ.

ಹಾಸನ ಡಿ|| ಪೊಲೀಸ್ ಸೂಪರಿಂಟೆಂಡೆಂಟ್ ಇನ್ಸ್‌ಪೆಕ್ಟರವರಾದ ಮೆ|| ಚೊಕ್ಕಲಿಂಗಂಪಿಳ್ಳೆಯವರು ಒಂದು ಮೊಕದ್ದಮೆಯ ಪತ್ತೆಗಾಗಿ ಈವೂರಿಗೆ ಬಂದಿರುತ್ತಾರೆ.

ಆಮೊಕದ್ದಮೆಯು ಇದೇತಾಲ್ಲೂಕಿನ ಒಂದು ಗ್ರಾಮದಲ್ಲಿ ಕೆಲವು ಹುಡಿಗರು ಕಳವಾದಂತೆ ಬಂದಿರೋರ್ಟಿನ ಮೇಲೆ, ಈ ತಾಲ್ಲೂಕು ಇನ್ಸ್‌ಪೆಕ್ಟರ್ ನಾರಾಯಣಸ್ವಾಮಿ ನಾಯುಡುರವರು ಬೇ ಫಾರಂ ಕೊಟ್ಟದ್ದಕ್ಕೆ ಇಲ್ಲಿನ ಪ್ರೋಫಿಸರ್ ಮ್ಯಾಜಿಸ್ಟ್ರೇಟರು, ಪೋಲೀಸಿನವರು ಸರಿಯಾದ ನಡವಳಿಕೆ ನಡಿಸಿದ್ದರೆ ಪತ್ತೆಯಾಗಬಹುದಾಗಿತ್ತೆಂದು ಆರ್ಡರ್ ಮಾಡಿದ್ದಾಗಿಯೂ, ಅದರಮೇಲೆ ಮೆ|| ಚೊಕ್ಕಲಿಂಗಂಪಿಳ್ಳೆಯವರನ್ನು ಕಳುಹಿಸಿದರೆಂತಲೂ, ಅದರತನಿಖೆಗಾಗಿಯೇ ಬಂದಿದ್ದಾರೆಂತಲೂ ನಿನ್ನೆಯದಿವಸ ಏಫಾರಂ ಕೊಟ್ಟು ಅಪರಾಧಿಗಳಿಗೆ ಪ್ರಾಸಸ್ ಅಪೇಕ್ಷಿಸಿದಾರೆಂತಲೂ ತಿಳಿಯಬರುತದೆ.

ಬಹಳದಿವಸಗಳಿಂದಲೂ ಕೇವಲ ಅನಾದರಣೆಯಲ್ಲಿದ್ದ ಈ ಗ್ರಾಮದ ಪಾಕೀಜೆ ವಿಷಯವು ಈಗ ಬಂದಿರುವ ಮೆ|| ಚೊಕ್ಕಲಿಂಗಂಪಿಳ್ಳೆಯವರ ತಿಳುವಳಿಕೆಗೆ ಹ್ಯಾಗೋ ಬಂದು ಅವರು ಮ್ಯೂನಿಸಿಪಲ್ ಛೇರ್ಮನ್ ವಗೈರೆರಿಗೆ ಹೆಚ್ಚರವಡಿಸಿದ್ದರಮೇಲೆ ಸದರೀ ನೌಕರರು ಯಾವಾಗಲೂ ಅಂಟದ್ದಸೋಮಾರಿತನವನ್ನು ಬಿಟ್ಟು ಬಲಾತ್ಕಾರದಿಂದ ನಿರ್ವಾಹವಿಲ್ಲದೇ ಕೆಲಸಮಾಡುತಲಿದಾರೆ ಈ ವೂರು, ಈಗ ೩—೪ ದಿವಸಗಳಾರಭ್ಯ ನೋಡುವದಕ್ಕೆ ಕೊಂಚ ಲಕ್ಷಣವಾಗಿಯೂ ಇದ್ದಮಟ್ಟಿಗೆ ಸಾಕಾಗಿಯೂ ಇದೆ.

ಆದರೆ ಬೀದಿಬೀದಿಗಳಲ್ಲಿ ಹಂದಿ ಮತ್ತು ಕತ್ತೆ ಕುದುರೆ ಗುಂಪುಗಳು ಬಹಳವಾಗಿ ರಾತ್ರಿವೇಳೆ, ಹಗಲುವೇಳೆಎಂಬ ಭೇದವೇ ಇಲ್ಲದೆ, ಸಂಚರಿಸುತಲಿವೆ.

ಇವುಗಳನ್ನ ದೊಡ್ಡಿಗಾದರೂ ಕಳುಹಿಸೋಣವೆಂದರೆ ಅದುಯಿದ್ದ ಪೂರ್ವಮುಂಚಿನದಿನಗಳಲ್ಲಿ ಇಲ್ಲಿಕಕ್ಕೆ ಸ್ಥಳವನ್ನು ಸಾಗುವಳಿಗೆ ಕೊಟ್ಟುಬಿಟ್ಟದ್ದಾರೆ ಸಾಗುವಳೀದಾರು ದೊಡ್ಡಿಯನ್ನು ಒಳಕ್ಕೆ ಸೇರಿಸಿ ಬೇಲಿಯನ್ನ ಹಾಕಿಕೊಂಡಿದಾರೆ.

ಇಲ್ಲಿನ ಅಧಿಕಾರಿಗಳಿಗೆ ಅನೇಕಸಾರೆ ಪ್ರಜೆಗಳು ಹೇಳಿಕೊಂಡಾಗ್ಯೂ ನಿಷ್ಪಲವಾಗಿಯೇ ಪರಿಣಮಿಸಿತು. ಈ ದುಃಖವನ್ನು ಮತ್ಯಾರಿಗೆ ಹೇಳಿಕೊಳ್ಳೋಣ.

ಕೋಟೆಯಲ್ಲಿ ಪೋಲೀಸಿನವರ ಸಂಚಾರವು ರಾತ್ರಿವೇಳೆಯಲ್ಲೇ ಅಪೂರ್ವವಾಗಿರುವಲ್ಲಿ ಹಗಲು ಹೊತ್ತಿನಲ್ಲೇನು ಹೇಳುವಣ.

ಮೆ|| ಚೊಕ್ಕಲಿಂಗಂಪಿಳ್ಳೆಯವರ ಹೆಸರು ಸಾರ್ಥಕ್ಯವನ್ನು ಹೊಂದುವರೀತಿ ಅವರಿರುವತನಕ ಆದರೂ ವೂರು ಚೊಕ್ಕಟವಾಗಿರಬಹುದೆಂದು ನಂಬುತ್ತೇವೆ.

ಅವರು ಇಲ್ಲಿಗೆ ಬಂದದಕ್ಕೆ ಪೋಲೀಸಿನವರ ಸಂಚಾರವು ರಾಮುರಿಕೆಯು ದಿವಸಕ್ಕೆ ಒಂದಾವರ್ತಿಯಾದರೂ ಕೋಟೆಯವಿನಯದಲ್ಲಿರುವಂತೆ ಮಾಡಿಸಿದರೆ ಈ ವೂರಿಗೆ ಅವರ ಆಗಮನವು ಇನ್ನೂ ಸಾರ್ಥಕ್ಯವ ಹೊಂದಬಹುದು.

SUMMARY OF NEWS.

ವೃತ್ತಾಂತ ಸಂಗ್ರಹವು.

ಆಫೆಗಾನ್ ಬೌಂಡರೀಕಮಿಷನ್‌ಗೋಸ್ಕರ ತಗಲಿದ ಖರ್ಚು ಸುಮಾರು ಅರ್ಧಕೋಟಿ ರೂಪಾಯಿಗಿಂತಲೂ ಮೀರುವದಂತೆ.

ಕೊಲ್ಹಾಪುರದಿಂದ ಮಿರಜೆಯವರಿಗೆ ರೈಲು ರಸ್ತೆಯನ್ನು ಹಾಕುವದಕ್ಕೆ ಸರಕಾರದವರು ಮಂಜೂರ್ ಮಾಡಿರುತ್ತಾರೆ.

ಅಹಮ್ಮದ್ ನಗರದ ಒಬ್ಬ ಬ್ರಾಹ್ಮಣನು ತನ್ನ ಹೆಂಡತಿಯನ್ನು ವಿಷಹಾಕಿ ಕೊಲ್ಲಬೇಕೆಂದು ಪ್ರಯತ್ನಿಸಿದರಿಂದ ಅವನಿಗೆ ೭ ವರುಷಗಳ ಶಿಕ್ಷೆಯಾಗಿರುತದೆ.

ಇಂಗ್ಲಿಷ್‌ನವರಿಗೂ ತುರ್ಕಿಯವರಿಗೂ ಪ್ರಾಂಬಾಗಿದ್ದ ಅಸಮಾಧಾನವು ಶಾಂತವಾಗಿ ಈಗ ಉಭಯರೂ ಮೊದಲಿನಂತೆಯೇ ಸ್ನೇಹಭಾವದಿಂದಿದ್ದಾರಂತೆ.

ಯುರೋಪ್‌ಖಂಡದೊಳಗೆ ಇಟಲಿ, ಫ್ರಾನ್ಸ್, ಜರ್ಮನಿ, ಸ್ವಿಟ್ಜರ್ಲ್ಯಾಂಡ್, ಮತ್ತು ಅಮೆರಿಕಾ ಖಂಡದೊಳಗಿನ ಅನೇಕ ಭಾಗದೊಳಗೆ ದಿನೇದಿನೇ ಪ್ರೇತದಹನ ಸಂಸ್ಕಾರವೇ ಉತ್ತಮವೆನ್ನುವವರ ಸಂಖ್ಯೆಯು ಹೆಚ್ಚುತಬರುತಲಿದೆ.

ಚೇಳುಕಚ್ಚಿದರೆ ಮದಗುಣಿಕಿ ಎಲೆಯನ್ನು ಚನ್ನಾಗಿಹಿಂಡಿ ರಸತೆಗೆದು ಕಚ್ಚಿದಸ್ಥಾನದಲ್ಲಿ

ಹಚ್ಚುವದರಿಂದ ವಿಷವು ತತ್ಕಾಲದಲ್ಲಿ ಇಳಿಯುತದಂತೆ. ಅಥವಾ ನವಾಸಾಗರ ಅಗಿದಳ ಇನೆರಡನ್ನು ನೀರಲ್ಲಿಕೇದು ಕಚ್ಚಿದಜಾಗಾದಲ್ಲಿ ಹಚ್ಚಿದರೆ ತತ್ಕಾಲದಲ್ಲಿ ವಿಷ ಇಳಿಯುತದಂತೆ, ಇದನ್ನು ಅನುಭವಕ್ಕೆ ತೆಗದುಕೊಳ್ಳಿರಿ.—ಗ. ರ.

ಮುಂಬೈ ಮಾರುವಾಡಿಯರು ಕೆಲವುದಿವಸಗಳ ಬೀಂಡಿ ಬಜಾರ್‌ನಲ್ಲಿ ಮಾರುವಂತಾ ೨—೩ನ ಮೂನೆಯ ತುಪ್ಪವನ್ನು ಗವರ್ನಮೆಂಟ ಕೆಮಿಕಲ್ ಅನಲೈಜರಿಗೆ ಶೋಧನೆಮಾಡುವದಕ್ಕೆ ಕಳುಹಿಸಿದರು. ಇದರಲ್ಲಿ ಒಂದನೇದು ಶುದ್ಧ ತುಪ್ಪವೇಂತಲೂ ಉಳಿದವು ಮಿಶ್ರವಾಗಿ ಮಾಡಿರುವದರಿಂದ ಅಶುದ್ಧವಾದವುಗಳೆಂತಲೂ ತಿಳುವಳಿಕೆಗೆ ಬಂತು. ಈ ಅಶುದ್ಧವಾದ ತುಪ್ಪದಲ್ಲಿ ಮೃಗಗಳ ಚರ್ಬಿ ಅಂದರೆ ಕೊಬ್ಬು ಮಿಶ್ರವಾಗಿರುತದೆ.

ಒಬ್ಬ ಫ್ರೆಂಚ್ ದೊರೆಸಾನಿಯು ತನ್ನ ಗಂಡನು ವಿಶ್ವಾಸಘಾತಕದ ದೋಷಾರೋಪಣೆಯಿಂದ ಕೈದುಮಾಡಲ್ಪಟ್ಟನೆಂಬ ಸುದ್ದಿಯನ್ನು ಕೇಳಿ ಆತ್ಮಹತ್ಯಮಾಡಿಕೊಂಡಳು. ತಂದೆಯಸಂಗಡ ಇರುತಿದ್ದ ಅವನ ಸಹೋದರಿಯು ತನ್ನ ಅಣ್ಣನನ್ನು ಕೈದುಮಾಡಿದ್ದನ್ನೂ, ನಾದಿನಿಯು ಆತ್ಮಹತ್ಯಮಾಡಿಕೊಂಡದ್ದನ್ನೂ ಕೇಳಿ ಮನೆಯ ಮೇಲುಪ್ಪರಿಗೆಯ ನಾಲ್ಕನೇಅಂತಸ್ತಿನ ಮೇಲಿಂದ ಕೆಳಗೆಹಾರಿ ಪ್ರಾಣಬಿಟ್ಟಳು. ಬಡತಂದೆಯು ಬುದ್ಧಿಭ್ರಷ್ಟನಾದನಂತೆ.

ಕೊಲ್ಹಾಪುರದ ರೈಲ್ವೇಸ್ಟೇಷನಿನ ಇಬ್ಬರು ಕೈಯರ್ಮನ್‌ಗಳೂ ಒಬ್ಬ ಗಾರ್ಡನೂ ಕೂಡಿ ಹಗಲು ೧೨ ಘಂಟೆಯಲ್ಲಿ ಒಬ್ಬ ಮುಸಲ್ಮಾನಸ್ತ್ರೀಯಳ ಮೇಲೆ ಜುಲುಂಮಾಡಿ ಪೋಲೀಸಿನವರಿಗೂ ಬೇರೆ ಕೆಲವರಿಗೂ ಹೊಡೆದದ್ದರಿಂದ ಪ್ರತಿಒಬ್ಬರಮೇಲೆ ಈ ಚಾರ್ಜ ಹೊರಿಸಿರುತ್ತಾರಂತೆ. ಇತ್ತಲಾಗಿ ರೈಲ್ವೇಯಿಲಾಖೆಯೊಳಗಿನ ಕಾಮರೂಪಿಗಳಾದ ಇಂತಾ ಬಿಳೀಕೋಣಗಳು ಸಭ್ಯರಾದ ಹಿಂದೂಸ್ತ್ರೀಯರಮೇಲೆ ಅತಿ ಲಜ್ಜಾಸ್ಪದವಾದ ಬಂಡತನವನ್ನು ನಡಿಸುವದು ಬಹಳವಾಗಿ ತಿಳಿಯಬರುತಿವೆ. ಇಂತವರಿಗೆ ಭಯಂಕರವಾದ ಶಾಸ್ತಿಯಾಗದಿದ್ದರೆ ಈತರದ ಜುಲುಂ ಇನ್ನೂ ಎಷ್ಟಾಗುವದೋ ನಾವರಿಯೆವು.

ಈಗ ಸರಕಾರೀ ಖರ್ಚು ಎಲ್ಲಿ ಹ್ಯಾಗೆ ಕಡಮೆ ಮಾಡಬೇಕೆಂಬದನ್ನು ಆಲೋಚಿಸಲಿಕ್ಕಾಗಿ ಫೈನಾನ್ಸ ಕಮಿಟಿಯು ನೇಮಿಸಲ್ಪಟ್ಟಿರುತದಷ್ಟೆ. ಇಂತಾ ಸಮಯದಲ್ಲಿ ಈ ಕಮಿಟಿಯನ್ನು ನೇಮಿಸಿದವರೇ ಈ ರೀತಿಯಲ್ಲಿ ಸರ್ಕಾರಿ ಹಣವನ್ನು ನಿರರ್ಥಕವಾಗಿ ಖರ್ಚುಮಾಡುವದು ಯೋಗ್ಯವೇ ಹ್ಯಾಗೆಂಬದು ಡಫರಿನ್ ಪ್ರಭುಗಳ ಮನಸ್ಸಿನಲ್ಲಿ ಹ್ಯಾಗೆ ಬರಲಿಲ್ಲವೆಂಬದು ಆಶ್ಚರ್ಯಕರವಾದ್ದಾಗಿರುತದೆ. ಮತ್ತು ಇವರ ಪ್ರಯಾಣಕ್ಕೆ ತಗಲುವ ಸಾವಿರಾರು ರೂಪಾಯಿಗಳ ಹೊರೆಯು ಕಟ್ಟಕಡೆಗೂ ಬಡರೈತರಮೇಲೆ ಬೀಳುವದೇಅಲ್ಲವೆ?

ಮದರಾಸ ಇಲಾಖೆಯಲ್ಲಿ ಮೊದಲು ತಹಸಿಲ್‌ದಾರರಾಗಿದ್ದ ಮ. ಜೋನ್ಸ ಎಂಬವರು ಜಮಾಬಂದಿಯ ಸಮಯದಲ್ಲಿ ಕಲೆಕ್ಟರ್, ಕಮಿಷನರ್ ಮುಂತಾದವರು ಮಾಡುವ ಸರ್ಕೀಟಿಗಳ ವಿಷಯವಾಗಿ ಒಂದು ಚಿಕ್ಕ ಪುಸ್ತಕವನ್ನು ರಚಿಸಿರುತ್ತಾರೆ. ಅದರಲ್ಲಿ ಅವರು ಈ ಅಧಿಕಾರಿಗಳ ಒಳನೌಕರರು ರೈತರನ್ನು ಹ್ಯಾಗೆ ಸುಲಿಯುತ್ತಾರೆ, ಮತ್ತು ಇದು ಮೇಲಧಿಕಾರಿಗಳಿಗೆ ಗೊತ್ತಿದ್ದರೂ ಅವರು ಹ್ಯಾಗೆ ಸುಮ್ಮನಿರುತ್ತಾರೆಂಬದನ್ನು ಚನ್ನಾಗಿ ವರ್ಣಿಸಿದ್ದಾರೆ. ಸಾಧಾರಣವಾಗಿ ಕಲೆಕ್ಟರ್, ಕಮಿಷನರ್ ಮುಂತಾದವರ ಸರ್ಕೀಟಿಗಳೇ ಜನರಿಗೆ ಇಷ್ಟು ತೊಂದರೆಗೆ ಕಾರಣವಾಗುವದಾದಮೇಲೆ, ಗವರ್ನರ್ ಜನರಲ್ ಮುಂತಾದವರ ಸರ್ಕೀಟಿಗಳು ಜನರನ್ನು ಯೆಷ್ಟು ತೊಂದರೆಗೆ ಒಳಪಡಿಸುತವೆಂದು ವಾಚಕರೇ ಊಹಿಸಲಿ.

ಒಳ್ಳೇ ಉತ್ತೇಜನವು—ಕುಂದಾಪುರದಲ್ಲಿ ಹೆಡ್ ಅಸಿಸ್ಟೆಂಟ ಕಲೆಕ್ಟರ್ ಮತ್ತು ಮ್ಯಾಜಿಸ್ಟ್ರೇಟ ಧೊರೆಗಳಿಗೆ ಒಂದು ಹೊಸ ಬಂಗಲೆ ಕಟ್ಟಲ್ಪಡುತಲಿದೆ. ಬುನಾದಿಯನ್ನು ಕಟ್ಟಲಿಕ್ಕೆ ಖಣಿಗಳನ್ನು ಅಗೆಯುವಾಗ ಸುಮಾರು ೧೫೦ ರೂಪಾಯಿ ಮೊಬಲಗಿನ, ಸೀಸದ ಘಟ್ಟಿ, ಕಬ್ಬಿಣ ಸಾಮಾನು, ಕಂಚಿನಪಾತ್ರೆಗಳು, ತಾಂಬ್ರದ ನಳಿಗೆಗಳು, ಬೆಳ್ಳಿ ತಗಡುಗಳು, ಬಿಂಗಾಣಿಗಳು, ಗ್ಲಾಸುಗಳು, ಮುಂತಾದ ಒಡವೆಗಳು ಮಣ್ಣಿನ ಅಡಿಯಲ್ಲಿ ದೊರಕಿ ಬಂಗಲೇ ಕಂಟ್ರಾಕ್ಟರ್ ಲೂಯಿಸ್ ಯೆಂಬ ಇಟಾಲಿಯನವರಿಂದ ಸರ್ಕಾರಕ್ಕೆ ಒಪ್ಪಿಸಲ್ಪಟ್ಟವು. ಇವೆಲ್ಲ ಮೇಲೆ ಉದ್ಯೋಗಸ್ಥರ ಅಪ್ಪಣೇಪ್ರಕಾರ ಈ ನವಂಬರ್ ೯ನೇ ತಾರೀಖಿನಲ್ಲಿ ತಹಸೀಲ್‌ದಾರರವರು ಹರಾಜ್‌ಮಾಡಿದ್ದರಲ್ಲಿ ಸುಮಾರು ೧೫೦ ರೂಪಾಯಿವರಿಗೆ ಪ್ರಾಪ್ತವಾಯಿತು. ಅದರಲ್ಲಿ ೮ನೇ ೩ ಅಂಶ [ಸುಮಾರ್ ೧೧೦ ವರೆಗೆ] ಅಪ್ಪಣೆಪ್ರಕಾರ ಕಂಟ್ರಾಕ್ಟರಿಗೆ ಇನಾಂ ಬಟವಾಡೆಯಾಯಿತು. ಈ ಒಡವೆಗಳು ನೂರಾರುಮಂದಿ ಕೂಲಿಯವರು ಅಗೆಯುವಾಗ ಬಹಿರಂಗವಾಗಿ ದೊರಕಿವವು. ಒಬ್ಬನೇ ಕಂಡು ಒಪ್ಪಿಸಿದ್ದಾಗಿದ್ದರೆ ಎಷ್ಟು ದೊಡ್ಡ ಇನಾಂ ಸಿಕ್ಕುತಿತ್ತೋ ನಿರ್ಣಯಿಸಕೂಡದೆಂದು ಜನರು ಹೇಳುತ್ತಾರೆ. ಈ ಬಂಗಲೇ ಸ್ಥಳವು ಮುಂಚಿನ ನಗರ ಸಂಸ್ಥಾನದವರ ಕೋಟೆಯಸ್ಥಳವಾಗಿತ್ತು. ಕೆಲವುವರುಷದಿಂದಿತ್ತಲಾಗಿ ಮಣ್ಣಿನಲ್ಲಿ ಬೆಳ್ಳಿಯಕುದುರೆ ಜೀನುಸಿಕ್ಕಿದವಲ್ಲದೆ ಮೇಲೆಹೇಳಿದ ಖಣಿಗಳನ್ನೂ ಪಾಯಗಳನ್ನೂ ಅಗೆಯುವಾಗ ಸುಟ್ಟುಹೋದ ಅಕ್ಕಿಯರಾಶಿಗಳೂ ಇತರಧಾನ್ಯಗಳ ಸಣ್ಣ ರಾಶಿಗಳೂ ಸಿಕ್ಕಿದವು. ಸೀಸದ ಘಟ್ಟಿಯಮೇಲೆ ೧೭೬೩ ಎಂಬ ಇಸವಿ ಅಂಕೆಗಳೂ ಇತ್ತು. ಇನ್ನೂ ಸದರೀಸ್ಥಳವನ್ನು ಸರ್ಕಾರದವರುಶೋಧಿಸುತಿದ್ದರೆ ಎಷ್ಟು ದ್ರವ್ಯವನ್ನು ಸಿಕ್ಕಬಹುದಾಗಿತ್ತೋ ದೇವರುಬಲ್ಲ.

ಕುಲಾಬೆಯ ಕಲೆಕ್ಟರವರು ಈ ಕೆಳಗಿನ ಚಮತ್ಕಾರವಾದ ಜಾಹಿರ್‌ನಾಮೆಯನ್ನು ಪ್ರಸಿದ್ಧಪಡಿಸಿರುತ್ತಾರಂತೆ.—ಮಹಬೂಬ್ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ, ರಿಖಿಲ್ಲಾ, ಕುಲಾಬಾ, ಇವರ ಕಡೆಯಿಂದ, ಇದರಮೂಲಕ ಎಲ್ಲಾ ಜನರಿಗೆ ನೋಟಿಸ ಕೊಡೋಣಾಗುತ್ತದೇನಂದರೆ. ಸಾರಾಯಿ ಕ್ರಯಕ್ಕೆ ತೆಗದುಕೊಳ್ಳುವ ಮತ್ತು ಕುಡಿಯುವ ಹಕ್ಕು ಇದ್ದವರು ಅದನ್ನು ಕ್ರಯಕ್ಕೆ ತೆಗದುಕೊಳ್ಳಲೂ ಬಾರದು, ಕುಡಿಯಲೂ ಬಾರದು ಯೆಂದು ಕೆಲವು ಕೆಟ್ಟಜನರು ಬಲಾತ್ಕಾರ ಪಡಿಸುತ್ತಾರೆಂತಲೂ, ಯಾರು ಕೇಳುವದಿಲ್ಲವೋ ಅವರನ್ನು ಹೊಡೆಯುತ, ಅಥವಾ ಬೇರೆ ರೀತಿಯಿಂದ ಅವರನ್ನು ನಷ್ಟಪಡಿಸುತಬಿಡರಿಕೆ ತೋರಿಸುತ್ತಾರೆಂತಲೂ ನನ್ನ ಕೇಳ್ವಿಕೆಯಲ್ಲಿ ಒಂದಿರುತದೆ. ಆದದರಿಂದ ಇಂತಾ ಜನರಿಗೆ ತಾಕೀದು ಕೊಡೋಣವರಲ್ಲಿ ತಿಳಿಸುವದೇನಂದರೆ, ಇವರು ಈ ತಮ್ಮ ವರ್ತನದಿಂದ ತಮ್ಮನ್ನು ಫೌಜದಾರಿ ಕಟ್ಲೆಗೆ ಪಾತ್ರರನ್ನಾಗಿಮಾಡಿಕೊಳ್ಳುತ್ತಾರೆ. ಜನರಿಗೆ ತಮ್ಮ ಮರ್ಜಿಯಂತೆ ಸಾರಾಯಿ ಕುಡಿಯುವದಕ್ಕೆ ಅಥವಾ ಕುಡಿಯದೆ ಇರುವದಕ್ಕೆ ಪೂರ್ಣ ಸ್ವಾತಂತ್ರ್ಯವಿರುತದೆ. ಮತ್ತು ಜನರು ಕುಡಿಯಬಾರದೆಂತ ಯಾವನು ಅವರನ್ನು ಜಡರಿಸುವನೋ ಅಥವಾ ಹೊಡೆಯುವನೋ ಅವನಮೇಲೆ ಫೌಜದಾರಿ ಕಟ್ಲೆ ಮಾಡಲ್ಪಟ್ಟು ಕಾಯಿದೆಯಲ್ಲಿ ವಿಧಿಸಿದ ಪೂರ್ಣ ಶಿಕ್ಷೆಯು ಕೊಡೋಣಾಗುತು. ಹುಡುಕುಡುಕತನಕ್ಕೆ ಇದೊಂದುಬಗೆ ಪ್ರೋತ್ಸಾಹವು.

ಒಬ್ಬ ವಿದ್ವಾಂಸನು ಚನ್ನಾಗಿ ಬದುಕಬೇಕೆಂಬವರಿಗೆ ಕೆಲವು ಬುದ್ಧಿಮಾತುಗಳನ್ನು ಹೇಳಿದ್ದಾನೆ. ಏನಂದರೆ—ಯೋಚನೆಮಾಡಿ ನಿನ್ನ ಶಕ್ತ್ಯನುಸಾರವಾಗಿ ಯಾವದಾದರೂ ಒಂದು ಕಸಬನ್ನು ಅವಲಂಬಿಸಲು ಉದ್ಯುಕ್ತನಾದ ಮೇಲೆ ಅದನ್ನುಬಿಡಬೇಡ. ಚಂಚಲಚಿತ್ತನಾಗಿ ಇರಬೇಡ. ಗಾಬರಿಬೀಳದೆ ಎಲ್ಲಾಕೆಲಸಗಳನ್ನು ಬೇಗ ಮಾಡುತ್ತಿರು. ಕೆಲಸಮಾಡುವದರಲ್ಲಿ ಒಂದುಕ್ರಮವನ್ನು ಅನುಸರಿಸಿನಡೆ. ಪ್ರಯತ್ನಮಾಡಿದ ಕೆಲಸ ಮನಸ್ಸಿನಲ್ಲಿಟ್ಟುಮಾಡು. ಈಗ ಮಾಡತಕ್ಕ ಕೆಲಸವನ್ನು ನಾಳೆ ಮಾಡುತ್ತೇನೆಂದು ಉದಾಸೀನನಾಗಿರಬೇಡ. ಪರಾಪೇಕ್ಷೆಯಿಲ್ಲದೆ ಆತ್ಮಾವಲಂಬಿಯಾಗಿಯಿರು. ಮಾಡತಕ್ಕ ಕೆಲಸಗಳಲ್ಲಿ ವಿಶೇಷವಾಗಿ ಎಲ್ಲರತಾತ್ಪರ್ಯವನ್ನು ಕೇಳಬೇಡ. ಹಿತಚಿಂತಕರಾದವರೊಡನೆ ಯೋಚಿಸಿ ನಿನ್ನಬುದ್ಧಿಗೆ ತೋರಿದಂತೆ ನಡೆಸು. ಆಡಿದಮಾತನ್ನು ಕಾಲಕ್ಕೆ ಸರಿಯಾಗಿನೆರವೇರಿಸು. ನಿದ್ದೇಮಾಡುವಾಗ ವಿನಾ ಮಿಕ್ಕಕಾಲದಲ್ಲಿ ಮನಸಿಟ್ಟು ನಿನ್ನ ಉದ್ಯೋಗವಮಾಡುತ್ತಿರು. ಒಂದು ನಿಮಿಷವೂ ಸೋಮಾರಿಯಾಗಿರಬೇಡ. ತ್ರಿಕರಣಶುದ್ಧಿಯುಳ್ಳವನಾಗಿರು. ಕೈಲಾದಮಟ್ಟಿಗೂ ಅನಾಥರಿಗೆ ಸಹಾಯಮಾಡು. ಅಹಿತವಾದ ಮಾತುಗಳನ್ನು ಯಾವಾಗಲೂ ಆಡಬೇಡ. ಬಹುವೇಗವಾಗಿ ದ್ರವ್ಯವನ್ನು ಸಂಪಾದಿಸಬೇಕೆಂದು ಆತುರಪಡಬೇಡ. ವಿದ್ಯೆಯೂ ಧನವೂ ಸ್ವಲ್ಪಸ್ವಲ್ಪವಾಗಿ ಬಂದರೆ ಬಹುಕಾಲದವರಿಗೂ ಇರುವವು. ಇದಲ್ಲದೆ ಮನಸ್ಸಿಗೆ ನೆಮ್ಮದಿಯನ್ನು ಉಂಟುಮಾಡುವದು. ಏಣಿಹಾಕಿಕೊಂಡು ಹತ್ತತಕ್ಕವನು ಒಂದೊಂದುಮೆಟ್ಟಿಲಾಗಿ ಹತ್ತಬೇಕು. ಹಾಗಿಲ್ಲದೆ ಆತುರಪಟ್ಟರೆ ಹತ್ತುವದೇ ಅಸಾಧ್ಯವಾಗುವದು. ಲೋಕದಲ್ಲಿ ಕೀರ್ತಿಯನ್ನೂ ದ್ರವ್ಯವನ್ನೂ ಪಡೆದಿರತಕ್ಕವರಲ್ಲಿ ಯಾರೂ ಒಂದೇದಿನದಲ್ಲಿ ಅವುಗಳನ್ನು ಪಡೆಯಲಿಲ್ಲ.

ಸಿಂಧಿಯಾ ಮಹಾರಾಜರು ಪ್ರಾಣಬಿಡುವಾಗ್ಯೆ ಯುವರಾಜನಾದ ತನ್ನ ಚಿಕ್ಕಮಗನಿಗೆ ಇಂಗ್ಲಿಷ ಕಲಿಸಬಾರದೆಂಬ ಅಪೇಕ್ಷೆಯು ತಿಳಿಸಿದ್ದರು. ಆ ಮಹಾರಾಜರಿಗೆ ತನ್ನದೇ ಹಟವೂ ತನ್ನದೇ ಬುದ್ಧಿಯೂ ಇರುತಿತ್ತು. ಗವರ್ನಮೆಂಟನವರು ಈ ರೀತಿಯಿಂದ ನಡೆಯುವಂತಾದ್ದು ನಮಗೆ ಕಾಣುವದಿಲ್ಲ. ಈಗ ಪ್ರಕೃತ ಅವರಿಗೆ ಕಲಿಸುವದಕ್ಕೆ ಇಂಗ್ಲಿಷ ಉಪಾಧ್ಯಾಯನು ನೇಮಿಸುವದಿಲ್ಲ. ಅವರಿಗೆ ಮದ್ದು ಕೊಡುವದಕ್ಕೆ ನೇಮಿಸಲ್ಪಟ್ಟ ಡಾಕ್ಟರ್ ಕೋಪಸಿಸರವರು ಈಗ ಇಂಗ್ಲಿಷಭಾಷೆ ಕಲಿಸ್ಯಾರು, ನಾಮದಾರ್ ವೈಸರಾಯಿಯವರು ಮ ಸರ. ಲೆಪೆಲ್ ಗ್ರಿಫಿನರವರು ಸಿಂಧಿಯಾ ಮಹಾರಾಜರ ಕೋರಿಕೆಮೇರಿಗೇನೆ ಆ ಮಹಾರಾಜಪುತ್ರನು ಇಂಗ್ಲಿಷ ರೀತಿಗಳು ಹೆಚ್ಚಾಗಿ ಅನುಸರಿಸಬೇಡವೆಂತ ತಾತ್ಪರ್ಯಪಡುತ್ತಾರೆ. ಗತ ಜಿಯಾಜಿರಾವ್ ಸಿಂಧಿಯಾ ಮಹಾರಾಜರಿಗೆ ಹಿಂದುಸ್ಥಾನದ ಜನರು ತಮ್ಮ ದೇಶಾಚಾರವನ್ನು ಬಿಟ್ಟು ಇಂಗ್ಲಿಷ ಆಚಾರಗಳನ್ನು ಅನುಸರಿಸುವದನ್ನುನೋಡುವದಕ್ಕೆ ಸಹಿಸುತ್ತಿದ್ದಿಲ್ಲವಾದ್ದರಿಂದ ತನ್ನ ಕುಮಾರನಿಗೆ ಆತಹುಟ್ಟಿದವೂರು ಪದ್ಧತಿಪ್ರಕಾರವೇ ಪೂರ್ವರೀತಿಗಳೂ ಕ್ರಮಗಳೂ ನಡತೆಗಳೂ ಕಲಿಸಬೇಕೆಂಬ ಅಭಿಪ್ರಾಯ ಪ್ರಸಾಯುವಾಗ್ಯೆ ವಿಶೇಷವಾಗಿರಲಿಕ್ಕೆ ಕಾರಣವು.

ಒಬ್ಬ ಜಾತವಿಹಾರನು ಕೆಳಗೆ ಕಾಣಿಸಿದ ಆಶ್ಚರ್ಯವಾದ ಸಂಗತಿಯನ್ನು ಒಂದು ಪುಣೆಯ ಪತ್ರಿಕೆ ಬರೆಯುತ್ತಾನೆ. ಒಬ್ಬ ಬ್ರಾಹ್ಮಣಸ್ತ್ರೀಯು ತನ್ನ ಹುಡುಗನನ್ನೂ ಒಬ್ಬ ಮುದಿ ನೌಕರನನ್ನೂ ಸಂಗಡ ಕರಕೊಂಡು ಕೊಲ್ಹಾಪುರಕ್ಕೆ ಸಮೀಪದಲ್ಲಿರುವ ಒಂದು ಹಳ್ಳಿಗೆ ರಾತ್ರಿಹೊತ್ತು ಹೋಗುತಿದ್ದಳು. ಆ ನೌಕರನು ಆ ಹೆಂಗಸಿನ ಮತ್ತು ಆ ಹುಡುಗನ ಮೈಮೇಲೆಯಿರುವ ಆಭರಣಗಳನ್ನು ತೆಗೆಯಬೇಕೆಂಬದಾಗಿ ಅವರಿಬ್ಬರನ್ನು ಕೊಲ್ಲುವದಕ್ಕೆ ಆಲೋಚಿಸಿ ನಿಮ್ಮ ಆಭರಣಗಳಿಗಾಗಿ ನಿಮ್ಮನ್ನು ಕೊಲ್ಲುತ್ತೇನೆಂಬದಾಗಿ ಆ ಹೆಂಗಸಿಗೆ ಹೇಳಿದನು. ಅದಂ ಕೇಳಿ ಆ ಹೆಂಗಸು ಗಾಬರಿಪಟ್ಟು ಆಭರಣಗಳು ಬೇಕಾದರೆ ತೆಗದುಕೊ, ಪ್ರಾಣಮಾತ್ರ ಬಿಡು ಯೆಂಬದಾಗಿ ಬೇಡಿಕೊಂಡಳು. ಆ ಮಾತನ್ನು ಆತನು ಕೇಳದೆಹೋದ್ದರಿಂದ ಪ್ರಥಮದಲ್ಲಿ ನನ್ನನ್ನುಕೊಲ್ಲು, ತರುವಾಯ ಹುಡುಗನನ್ನುಕೊಲ್ಲು ಯೆಂಬದಾಗಿ ಬಹುದೈನ್ಯದಿಂದ ಬೇಡಿಕೊಳ್ಳಲು ಆತನಿಗೆ ಕರುಣ ಹುಟ್ಟದೆ ತನ್ನಕೈಯಲ್ಲಿದ್ದ ಕೊಡ್ಲಿಯಿಂದ ಆ ಹೆಂಗಸನ್ನ ಹೊಡೆದನು. ಪೆಟ್ಟು ಅವಳಮೇಲೆ ಬೀಳದೆ ತಪ್ಪಿಹೋಯಿತು. ಎರಡನೆದೆಬ್ಬೆ ಹೊಡಿಯುವಾಗ್ಯೆ ಕೊಡ್ಲಿಮೊನೆಯು ಹಾರಿಹೋದ್ದರಿಂದ ಕೊಲ್ಲುತ್ತೇನೆಂದು ಹತ್ತರಯಿರುವ ಕಲ್ಲು ಯೆತ್ತಲಿಕ್ಕೆ ಕೈಹಾಕಲು ಅದರಅಡಿಯಿಂದ ಸರ್ಪಬಂದು ಅವನಕಾಲಿಗೆ ಸುತ್ತಿಕೊಂಡಿತು. ಹೀಗಿರುತ್ತಿರುವಾಗ ಅಲ್ಲಿನ ಮಾಮಲೇದಾರು ಮಷಾಲಗಳುಹಚ್ಚಿಕೊಂಡು ತಮ್ಮಭೃತ್ಯರೊಡನೆ ಆ ಮಾರ್ಗವಾಗಿ ಹೋಗುತ್ತಿರುವಾಗ ಆ ಹೆಂಗಸನ್ನುನೋಡಿ ನಡೆದ ಸಂಗತಿಗಳನ್ನ ವಿಚಾರಿಸಿ ಸ್ವಾಮಿದ್ರೋಹಿಯಾದ ಸದರೀಯವನನ್ನ ಸರ್ಪದಿಂದಬಿಡಿಸಿ ತನಿಖೀಮಾಡುವದಕ್ಕೆ ಅವನನ್ನ ಕಟೀಯಲ್ಲಿಟ್ಟಿರುತ್ತಾರೆ.

ಮಹಾರಾಣಿಯವರ ಪ್ರತಿನಿಧಿಗಳಾದ ಲಾರ್ಡ ಡಫರಿನ್ ಧೊರೆಗಳವರು ಹಿಂದುಸ್ಥಾನದ ದಕ್ಷಿಣ ಪ್ರದೇಶದ ಸಂಚಾರಾರ್ಥ ಹೊರಟು ಕೆಲವು ದಿವಸಗಳಾಗಿರುತವೆ. ಇವರು ಲಾಹೋರು, ಭಾವಲಪುರ, ಬಡೋದೆ, ಮೊದಲಾದ ಸ್ಥಳಗಳಲ್ಲಿ ಪೂಜ್ಯವಾದ ತಮ್ಮ ದರ್ಶನವನ್ನಿತ್ತು ಈಗ ಪ್ರಖ್ಯಾತವಾದ ನಮ್ಮ ಮುಂಬೈ ಪಟ್ಟಣಕ್ಕೆ ಬಂದಿರುತ್ತಾರೆ. ಬಡೋದೆಯಲ್ಲಿ ಇವರ ಆಗಮನ ಸಮಾರಂಭಕ್ಕಾಗಿ ಮೂರುಲಕ್ಷ ರೂಪಾಯಿ ವೆಚ್ಚವಾಯಿತು. ಪಟ್ಟಣವು ಅತಿ ರಮಣೀಯವಾಗಿ ಶೃಂಗಾರಿಸಲ್ಪಟ್ಟಿತ್ತು. ಡಫರಿನ ಪ್ರಭುಗಳವರ ಸನ್ಮಾನಾರ್ಥ ಊಟ, ಔತನ, ಆಟ, ತಮಾಷೆ, ಬಾಣ, ಬಿರುಸು ಮುಂತಾದ ವೈಭವಗಳು ಬಿಕ್ಕಿಲ್ಲದೆ ನಡೆದವು ಇದೇಪ್ರಕಾರ ಭಾವಲಪುರದ ಅರಸರವರೂ ಬಹುಮಾನ ಪೂರ್ವಕವಾಗಿ ವೈಸರಾಯ್ ಧೊರೆಗಳವರ ಆದರಾತಿಥ್ಯವನ್ನು ಮಾಡಿದರು. ಇವೆಲ್ಲ ಹಿಂದುಸ್ಥಾನದೊಳಗಿನ ಅರಸರ ಈಗಿನ ಪರಾಧೀನ ಸ್ಥಿತಿಗೆ ಸರಿಯಾಗಿಯೂ ಬಹುಮಾನ್ಯೋಪಚಾರಗಳನ್ನಾಚರಿಸುವಂತೆ ನಮ್ಮ ಬ್ರಿಟಿಷ ಸರ್ಕಾರದವರ ಮನಸ್ಸನ್ನು ರಂಜಿಸುವಂತೆಯೂ ಆಯಿತು. ನಿಜವು. ಆದರೆ ಮುಂದಕ್ಕೆ ಅಹಮದಾಬಾದ್ ಮತ್ತು ಸೂರತ್ ಪಟ್ಟಣಗಳಲ್ಲಿ ಇವರಿಗೆ ತಕ್ಕ ಮಾನಮರ್ಯಾದೆ ನಡೆಯಲಿಲ್ಲವೆಂದು ಹೇಳುತ್ತಾರೆ. ಅಹಮದಾಬಾದಿನವರು ವಿಜ್ಞಾಪನ ಪತ್ರದಲ್ಲಿ ವೈಸ್‌ರಾಯ್‌ಗಳನ್ನು ಮುಖಸ್ತುತಿ ಮಾಡುವದಕ್ಕೆಬದಲು ಅವರ ಕಾರಬಾರನಲ್ಲಿ ಜನರಿಗೆ ಉಂಟಾದ ಕಷ್ಟಗಳನ್ನೆಲ್ಲ ವರ್ಣಿಸಿ ಇವುಗಳನ್ನು ದೂರಪಡಿಸುವಂತೆ ಬೇಡಿಕೊಂಡಿದ್ದರು. ಈ ತರದ ಮಾನಪತ್ರವು ತಯಾರಾಗಿರುತದೆಂತ ಧೊರೆಗಳವರಿಗೆ ಮೊದಲೇ ತಿಳಿಯಬಂದಿದ್ದಕಾರಣ ಅದನ್ನು ಅವರು ಸ್ವೀಕರಿಸಲಿಕ್ಕೆ ಒಪ್ಪಲಿಲ್ಲ. ಸೂರತಿನವರು ಮಾನಪತ್ರವನ್ನು ಕೊಡುವ ಸಭೆಗೆ ಹೋಗದ್ದರಿಂದ ಡಫರಿನ್ ಪ್ರಭುಗಳು ಅಲ್ಲಿಗೆ ಹೋಗುವದನ್ನೇ ಮನ್ನಾಮಾಡಿಬಿಟ್ಟರು. ಈರೀತಿ ಪ್ರಜೆಗಳು ತಮ್ಮ ಅಸಂತೋಷವನ್ನು (ಇದಕ್ಕೆ ಅಸಂತೋಷವೆಂದೆನ್ನಬೇಕಾದರೆ) ತೋರಿಸಿದ್ದಕ್ಕೆ ಮೊದಲನೇ ಉದಾಹರಣೆಯಾಗಿದೆ. ಕೆಲವರು ಈ ಪ್ರಕಾರ ಈ ಜನರು ಮಾಡಿದ್ದು ಸರಿಯಾಗಿಲ್ಲವೆನ್ನುತ್ತಾರೆ. ಯಾವ ಕಾರ್ಯವನ್ನಾದರೂ ವಿಪರೀತವಾಗಿ ಮಾಡುವದು ಅಯೋಗ್ಯವೆಂತ ನಾವು ಸಹ ಒಪ್ಪುತ್ತೇವೆ ಆದರೆ ಜನರ ದುಃಖನಿವಾರಣೆಗೋಸ್ಕರ, ನಾನಾ ಸಂಕಟಗಳನ್ನು ಅನುಭವಿಸುವ ಸಮಯದಲ್ಲಿ ಅವರು ಯಾವದನ್ನಾಗಲಿ ಉಪಾಯವನ್ನು ಮಾಡುವಂತಾದ್ದು ಆಶ್ಚರ್ಯವಲ್ಲವು. ಜನರು ಈ ಪ್ರಕಾರವಾದ ನಡತೆಯು ಅಂತ್ಯತ ಪರಿಣಾಮವು ಯೇನಾದರಾಗಲಿ, ಸದ್ಯಕ್ಕೆ ಅದು ಡಫರಿನ್ ಧೊರೆಗಳವರ ಹೃದಯವನ್ನು ಚುಚ್ಚದೆ ಇರಲಾರದೆಂಬದು ತೋರುತದೆ. ಜನರು ಎಷ್ಟು ಬಡತನದಲ್ಲಿ ಬಳಲುತ್ತಿದ್ದರೂ ಅವರಿಗೆ ಯೆಷ್ಟು ಸಂಕಟಗಳಿದ್ದರೂ ಅವರು ಯಾವಾಗಲೂ ಸಂತೋಷವನ್ನೇ ತೋರಿಸುತ್ತಿರಬೇಕೆಂತ ಆಶಿಸುವದು ಎಷ್ಟು ಅಯೋಗ್ಯವು? ಇರಲಿ ಈ ಪ್ರಕಾರ ನಡೆದದ್ದರ ಸಲುವಾಗಿ (ಇದು ಅಸಮಾಧಾನದ ಕುರುಹು ಎಂದು ತಿಳಕೊಂಡರೂ) ಕ್ರೋಧವನ್ನು ಪಡದೆ ಜನರು ಯಾವಕಾರಣದಿಂದ ಅಸಮಾಧಾನವಾಗಿರುತ್ತಾರೆಂಬದರ ವಿಚಾರವನ್ನು ಮಾಡುವಣವೆಂದು ನಮ್ಮ ಮಹಾರಾಣೀ ಸರ್ಕಾರದವರ ಮುಖ್ಯಪ್ರತಿನಿಧಿಗಳಾದ ಡಫರಿನ್ ಧೊರೆಗಳಿಗೆ ಯಾಕೆತೋರುವದಿಲ್ಲವು? ಮುಂಬೈಯಲ್ಲಿ ಸಹ ಮೊದಲನೇ ಸರ್ತಿ ಇಲ್ಲಿಗೆ ಬಂದಾಗ ಇವರಿಗೆ ಸಿಕ್ಕಿದ ಸನ್ಮಾನವು ಜನರ ಕಡೆಯಿಂದ ಸಿಕ್ಕೀತೆಂತ ಹೇಳಲಿಕ್ಕಾಗುವದಿಲ್ಲ. ಇಲ್ಲಿ ಬಂದನಂತರ ಇವರ ಶರೀರ ಸ್ಥಿತಿಯು ನೆಟ್ಟಗಿರಲಿಲ್ಲ ಇದರಿಂದಲೇ ಇಲ್ಲಿನ ಸೆಕ್ರೆಟರಿಯೇಟಿನಲ್ಲಿ ಆದ (ಲೆವಿ) ದರ್ಬಾರಿಗೆ ಸಮಾವೇಶವಾಗಲಿಲ್ಲ. ಮತ್ತು ಇದರಿಂದಲೇ ಇವರ "ಪ್ರೋಗ್ರಾಮಿ" ನಲ್ಲೂ, ವಿಶೇಷ ಹೆಚ್ಚುಕಡಮೆ ಯಾಗಬೇಕಾಯಿತು.

BANGALORE:—Printed and published for the Proprietor, at the KARNATIC PRESS.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಜಾನುಮಿವಿನದಪ್ರವೃತ್ತ್ಯುಪಗವಾರ್ಥ ಕರ್ಣ್ಣಾಟಕಪ್ರಕಾಶನಪರಾಭದಾಪ್ರಥಿತಾಪಹಿತೀಕೂದಿಕಾ ॥ ಮೃಗಾಂಕಹಿತವಾಸರೇನಿಹಿತಮುಪ್ರಣಾಸಜ್ಜ್ನೈರ್ಹಿಕಾನುವಲಿಯುತಾದಿಕತಿವಾನಸುಸುಮದಂ॥

VOL. XIII.]	BANGALORE:—MONDAY, DECEMBER 6, 1886.	[No 49.
ಸಂಪುಟ ೧೩.]	ಬೆಂಗಳೂರು:—ಸನ್ ೧೮೮೬ನೇ ಇಸವಿ ಡಿಸೆಂಬರ್ ೬ನೇ ತಾರೀಖು ಸೋಮವಾರ.	[ಸಂಖ್ಯೆ ೪೯.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಬೆಂಗಳೂರು ಮತ್ತು [illegible] ... ... ೧೧—೦—೦

[illegible] ... ... ೬—೦—೦

[illegible] ... ... ೬—೦—೦

[illegible] ೭—೦—೦

[illegible] ೧—೮—೦

ಷರಾ,—[illegible]

ಪ್ರಕಟನೆಯ ರಿವಾಜ್.

[illegible] ೧೪॥ ೦—೨—೦

[illegible] ೧೪॥ ೦—೧—೦

NOTICE TO SUBSCRIBERS.

[illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA

Price including Postage, Rs. 5-0-0

ವೈದ್ಯಸಾರ ಸಂಗ್ರಹ.

[illegible]

[illegible] ... ... ರೂ॥ ೫—೦—೦

[illegible] ೦—೮—೦

[illegible]

ನೋಟೀಸ್.

ಮೆಲಕ್ಟ್ರೊ ಗ್ಯಾಲ್ವಾನಿಕ್ ರಿಂಗ್, ಲಾಕೆಟ್, ಮತ್ತು ಆರಂಡಿಗೆ,

ಅಂದರೆ, ಅಂತರ್ಗತ್ತಾಗ್ನಿ ಸಂಬಂಧವಾದ ಮತ್ತು ವಿದ್ಯುತ್ತಿಯ ಶಕ್ತಿಯುಳ್ಳ ಉಂಗುರ, ಪತಕ, ತೋಳ್ಬಳೆ, ಇವುಗಳು, ಕಲ್ಕತ್ತೆ ಬಝಾರ್ ಬೀದಿಯಲ್ಲಿ ೩೦ನೇ ನಂಬರ್ ಗೃಹದಲ್ಲಿರುವ ಪಿ. ಸಿ. ದಾಸ್ ಎಂಬುವರಿಂದ ತಯಾರಾಗಲ್ಪಟ್ಟಿರುತವೆ.

ಇವು ಸಕಲ ರೋಗಗಳಿಗೂ ಆಶ್ಚರ್ಯಕರವಾದ ಪರಿಹಾರಕವಾದವು.

ಯೂರೋಪಿಯರ್ ವೈದ್ಯಶಾಸ್ತ್ರಜ್ಞರೂ ನೇಟಿವ್ ವೈದ್ಯಪದ್ಧತಿಯನ್ನು ಅನುಸರಿಸುವವರೂ ಸಾಧಾರಣವಾಗಿ [illegible] ದವು ಹೀಗೆ ನೋವ್ವಾದ ಪರಿಹಾರಕಗಳೆಂದು ಯೋಚಿಸ್ಪಟ್ಟಿರುವದರಿಂದ [illegible] ಅಸಾಧಾರಣವಾದ ರೋಗನಿವೃತ್ತಿ ಶಕ್ತಿಯನ್ನು ಕುರಿತು ವಿಶೇಷವಾಗಿ [illegible] ಹೇಳಬೇಕಾಗಿರುತ್ತದೆ. [illegible] ಪರಿಹಾರಕಗಳಾದ ಇವರ ಪದಾರ್ಥಗಳ ವಿಷಯದಲ್ಲಿ ವಾದವಿಲ್ಲವೆಂದು ಮಾತ್ರ ಹೇಳುವದು ಸಾಕಾಗಿರುತ್ತದೆ. ಆದರೆ ಸ್ವಲ್ಪ ಸಂದರ್ಭದಲ್ಲಿ ಈ ಹೊಸ ಉಂಗುರಗಳನ್ನು ಕುರಿತು ಇನ್ನೊಂದು ಮಾತುಹೇಳಬೇಕು, ಯಾವದೆಂದರೆ, ನಕ್ಲ ಹೊಸ ಉಂಗುರವನ್ನು ಹಾಕಿಕೊಂಡು ನಕಲಿದಿನ ತರುವಾಯ ಅವರ ಕೃತ್ರಿಮ ಕೆಲವರಲ್ಲಿ ಬೇರೆ ಪದಾರ್ಥಗಳನ್ನು ಯಾರೂ ಕೊಂಡುಕೊಳ್ಳಬಾರದ. ನನ್ನ ಪದಾರ್ಥಗಳಮೇಲೆ ಪಿ. ಸಿ. ಡಿ. ಯೆಂಬ ಗುರುತು ಇರುತ್ತದೆ.

ಉಂಗುರಗಳು—ಡಜನಿಗೆ ೧೪ ರೂ॥ ಒಂದಕ್ಕೆ ೧ ೮-೦ ರೂ. ಪತಕ—ಡಜನಿಗೆ ೧೨ ರೂಪಾಯಿ, ಒಂದಕ್ಕೆ ೧-೪-೦. ತೋಳ್ಬಳೆ—ಡಜನಿಗೆ ೧೪ ರೂಪಾಯಿ, ಒಂದಕ್ಕೆ ೧-೮-೦ ರೂ. ಹಾಸಲು ಒಂದರ ಕಿರವಿನಿಗೆ ೪ ಆಣೆ, ಎರಡು ೧೨ ಡಜನಿನಿಗೆ ೧೦ ಆಣೆ. ಉಂಗುರಗಳು ಮತ್ತು ತೋಳ್ಬಳೆಗಳು ಬೇಕಾದವರು ಅಳತೆಗಳು ಕಳುಹಬೇಕು. ಹಣ ಬಂದು ತಲುಪಿದ ಕೂಡಲೆ ಪದಾರ್ಥಗಳು ರವಾನಿಸಲ್ಪಡುವದು ಅಥವಾ ವಾಲ್ಯೂಪೇಯಬಿಲ್ ಪೋಸ್ಟಿನಲ್ಲಿ ಕಳುಹಿಸಲ್ಪಡುವವು.

ನೋಟೀಸ್.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನೆಂದರೆ.

ಸನ್ ೧೮೮೭ನೇ ಏಪ್ರಿಲ್ ಗುರ್ರೇ ತಾರೀಖ್ ಲಾಗಾಯತು ಸನ್ ೧೮೮೮ನೇ ಮಾರ್ಚಿ ೩೧ನೇ ತಾರೀಖ್‌ವರಿವಿಗೆ, ಹೊಸೂರು ರಿಮಾಂಟ್ ಡಿಪೋಗೆ ಇವರತಿ ನಮೂದ್ ಮಾಡಲ್ಪಡುವ ಜಿನಿಸಿಗಳು ಬೇಕಾಗಿರುವದರಿಂದ ಅವುಗಳ ಸರಬರಾಯ್ ಬಗ್ಗೆ ಬರುವ ಮೊಹರ್‌ಮಾಡಲ್ಪಟ್ಟ ಪದವಾಸ್ತುಗಳನ್ನು ರಿಮಾಂಟ್ ಡಿಪೊ ಸೂಪರಿಂಟೆಂಡೆಂಟರವರು, ಸನ್ ೧೮೮೬ನೇ ಇಸವಿ ಡಿಸೆಂಬರ್ ೧೮ನೇ ಶನಿವಾರ ಮಧ್ಯಾಹ್ನ ೧೨ ಘಂಟೆಯವರಿವಿಗೆ ಬರಮಾಡಿಕೊಳ್ಳುವರು.

ಇದನ್ನು ಕುರಿತ ಜಾಸ್ತೀ ತಫಸೀಲ್ ತಿಳಿಯಬೇಕಾದವರು, ಸನ್ ೧೮೮೬ನೇ ಇಸವಿ ನವಂಬರ್ ೯ನೇ ಮಂಗಳವಾರ ೪೫ನೇ ನಂಬರ್ ಫೋರ್ಟ್ ಸೇಂಟ್ ಜಾರ್ಜ್ ಗೆಜೆಟ್ ಎಂಟನೇ ಭಾಗ, ೧,೫೫೭ನೇ ಪುಟದಲ್ಲಿ ಛಾಯಿಸ್ಪ ಆಗಿರುವ ಪ್ರಕಟನೆಯನ್ನು ನೋಡಿ ತಿಳಿದುಕೊಳ್ಳತಕ್ಕದ್ದು.

ಹುರಳಿ,

ನೆಲ್ಲುಹುಲ್ಲು,

ರಾಗೀ ಹುಲ್ಲು,

ಹಸೀ ಹುಲ್ಲು.

ರಿಮಾಂಟ್ ಡಿಪೊ ಹೊಸೂರು,

೧೩ನೇ ನವಂಬರ್, ೧೮೮೬.

JOHN EWING, COLONEL,
Supt., Reserve Remount Depot.

ನೋಟಿಸ್.

ಮಹಾರಾಜಾ ಆಫ್ ಮೈಸೂರ್ ಸ್ಪಿನ್ನಿಂಗ್ ಮತ್ತು ಮ್ಯಾನ್ಯುಫ್ಯಾಕ್ಚರಿಂಗ್ ಕಂಪೆನಿ, (ಲಿಮಿಟೆಡ್.)

ಮೇಲಿನ ಕಾರ್ಖಾನೆ ಆವರಣದಲ್ಲಿ ಇದರಡಿ ನಮೂದ್‌ಮಾಡಲ್ಪಡುವ ಕಟ್ಟಡಗಳು ಕಟ್ಟಬೇಕಾಗಿರುತಿದೆ.

೧ನೇ—ಇದುವರಿವಿಗೇನೆ ಸವರೀ ಸ್ಥಳದಲ್ಲಿ ಕಟ್ಟಲ್ಪಟ್ಟಿರುವ ಕಟ್ಟಡಕ್ಕೆ ಸಮನಾದ ಒಂದು ಬಂಗ್ಲೆ.

೨ನೇ—ಅರಳೆಯಿಡತಕ್ಕ ಬಗ್ಗೆ ಒಂದುಮನೆ ಇವಕ್ಕೆ ಕಲ್ಲುಕೊಡಗಳು ನಿಲ್ಲಿಸಿ ಸ್ಥಳದ ಮೇಲಿನ ಕಲ್ಲಿನ ಹಾಕತಕ್ಕದ್ದು.

ಮೇಲಿನ ವಿಷಯವನ್ನು ಕುರಿತ ಯಾವದಂಶವನ್ನು ತಿಳಿಯಕೋರತಕ್ಕವರು ಕಾರ್ಖಾನೇ ಆಫೀಸಿನಲ್ಲಿ ಇವರಡಿ ರುಜುಮಾಡಿರುವವರನ್ನು ಕೇಳಿ ತಿಳಿಯಬಹುದು.

ಬೆಂಗಳೂರು
೩ನೇ ನವಂಬರ್೮೬. } W. SMITH, P. P. Secretaries, & Agent's

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, DECEMBER 6, 1886.

೧೮೮೬ನೇ ಡಿಸೆಂಬರ್ ೬ನೇ ರಾ॥ ಸೋಮವಾರ.

THE VICEROY'S VISIT TO MYSORE.

ಸನ್ ೧೮೭೭ನೇ ಇಸವಿಯಲ್ಲಿ ಶ್ರೀಮನ್ಮಹಾರಾಜ್ಞೀ ಪ್ರತಿನಿಧಿಯಾಗಿದ್ದ ಲಾರ್ಡ್ ಲಿಟ್ಟನ್‌ರವರು ಈ ದೇಶಕ್ಕೆ ದಯಮಾಡಿದ ಸಂದರ್ಭದೊಳು ಈ ರಾಜ್ಯವು ದುರ್ಭಿಕ್ಷದಿಂ ಪೀಡಿತವಾಗಿ ತನ್ಮೂಲಕ ಅನೇಕಲಕ್ಷ ಪ್ರಜೆಗಳು ಮೃತಪಡುತ ಪ್ರಜೆಗಳೆಲ್ಲರು ಖಿನ್ನರಾಗಿ ಬಹುವಿಧ ಶ್ರಮಗಳನ್ನನುಭವಿಸುತಲಿದ್ದದರಿಂದ ತಮ್ಮ ರಾಜಭಕ್ತಿ ಕೃತಜ್ಞತಾದಿ ಭಾವಗಳನ್ನು ಉಚಿತರೀತಿಯಿಂದ ವ್ಯಕ್ತಪಡಿಸಲಿಕ್ಕೆ ಅಸಮರ್ಥವಾಗಿತ್ತು. ಪ್ರಕೃತ ಸಂದರ್ಭದಲ್ಲಿ ರಾಜ್ಯವು ತಾದೃಶ ಸ್ಥಿತಿಯಿಂದ ವಿಮುಕ್ತವಾಗಿ ನೇಟಿವ್ ಅರಸರ ಪ್ರಭುತ್ವದೊಳು ಅಭಿವೃದ್ಧಿಯಾಗಿರುವುದೆಯೂ, ಇಲ್ಲಿನ ಜನಗಳೆಲ್ಲರೂ ವಿಶೇಷ ಸುಖ ಸಮಾಧಾನದೊಳಿರುವುದೆಯೂ ಸ್ಪಷ್ಟವಾಗಿ ಪ್ರಶಂಸಿಸಿಕೊಳ್ಳುವಂತಾದದರಿಂದ ಈಗ ಲಾರ್ಡ್ ಡಫ್ರಿನ್‌ರವರ ಆಗಮನ ವಿಷಯದೊಳು ವಿಶೇಷಯಿಗೆ ಉಂಟಾಗಿರುವ ಆನಂದಾತಿಶಯವನ್ನು ನಾನಾ ಪ್ರಕಾರದಿಂ ವ್ಯಕ್ತಗೊಳಿಸಲೆತ್ನಿಸಿ ತತ್ಸ್ವಾಗತ ಗಳಾದ ಸನ್ಮಾನಗಳೊಳು ಸ್ವಲ್ಪವೂ ಕೊರತೆ ಇಲ್ಲದಂತೆ ನಡೆಸಿದರು. ಪೂರ್ವದಲ್ಲಿ ನಿಶ್ಚಯವಾಗಿದ್ದಂತೆ ವೈಸ್‌ರಾಯಿಯವರು ತಮ್ಮ ಪರಿವಾರದೊಡನೆ ಗತ ಸೋಮವಾರದದಿನ ರಾತ್ರಿ ೭ ಘಂಟೆಗೆ ಸರಿಯಾಗಿ ಸ್ಪೆಶ್ಯಲ್ ಟ್ರೈನಿನಲ್ಲಿ ಇಲ್ಲಿಗೆ ದಯಮಾಡಿ ಆ ರಾತ್ರಿ ಇಲ್ಲಿನ ರೈಲ್ವೇ ಸ್ಟೇಷನ್ನಿನಲ್ಲಿಯೇ ಬಿಜಮಾಡಿದ್ದು ಮಾರನೆಯ ದಿನ ಬೆಳಗ್ಗೆ ೮ ಘಂಟೆಗೆ ಮೈಸೂರಿಗೆ ಪ್ರಯಾಣವಾದರು. ಸವರೀ ಸಂದರ್ಭವು ಕೇವಲ ಗೋಪ್ಯವಾದದ್ದಾಗಿದ್ದದರಿಂದ ವಿಶೇಷ ಸಂರಂಭಗಳಿಗೊಂದಕ್ಕೂ ಅವಕಾಶ ವಿರಲಿಲ್ಲವು.

ವೈಸ್‌ರಾಯಿಯವರ ಸವಾರಿಯು ೧೧½ ಘಂಟೆಗೆ ಸರಿಯಾಗಿ ಮೈಸೂರು ಸ್ಟೇಷನ್ ತಲುಪಿತು. ಅದಕ್ಕೆ ಪೂರ್ವಭಾವಿಯಾಗಿ ಅವರ ಆಗಮನವ ನಿರೀಕ್ಷಿಸುತ ಶ್ರೀಮನ್ ಮಹಾರಾಜರವರೂ, ಬ್ರಿಟಿಷ್ ರೆಸಿಡೆಂಟರವರೂ, ಸಂಸ್ಥಾನದ ಇತರ ಅಧಿಕಾರಿಗಳೂ, ಪ್ರಮುಖರೂ ಪರ್ದೆಕರೂ ವಿಶಿಷ್ಟ ಪರಿಧವಳಗಳೊಡನೆ, ಕಾದಿದ್ದರು. ವೈಸ್‌ರಾಯಿಯವರ ಸವಾರಿ ಚಿತ್ತೈಸಿದಕೂಡಲೆ ಸುಬಾಗಮನ ಸೂಚಕಗಳಾದ ಕುಶಲ ಪ್ರಶ್ನೆಗಳಾದ ಬಳಿಕ ಮಹಾರಾಜರವರೊಡನೆ ಸ್ಟೇಷನಿನ ಹೊರಪಾರ್ಶ್ವದಲ್ಲಿ ನಿರ್ಮಿಸಲ್ಪಟ್ಟಿದ್ದ ವಿಶಾಲ ರಮಣೀಯವಾದ ಮಂಟಪದಲ್ಲಿ ಸ್ವಲ್ಪಕಾಲದಯಮಾಡಿದ್ದು ಅಲ್ಲಿಪಡದಲ್ಪಟ್ಟಿದ್ದ ಪುರಾಲಂಕಾರಾದಿ ಸನ್ನಿವೇಶಗಳನ್ನೊಳೆರಡಿ ಅನುದಿಸುತ ಮಹಾರಾಣಿಯವರ ಬಾಲಿಕಾಪಾಠಶಾಲೆಯವರಿಂದೊಪ್ಪಿಸಲ್ಪಟ್ಟ ವಿಜ್ಞಾಪನ ಪತ್ರಿಕೆಯನ್ನು ಪರಿಗ್ರಹಿಸಿ ಅದಕ್ಕೆ ಸಮುಚಿತ ಶಬ್ದಗಳಿಂದ, ಸ್ತ್ರೀವಿದ್ಯಾಭ್ಯಾಸದೊಳು ಈ ಸಂಸ್ಥಾನವು ಇತರಾಪೇಕ್ಷೆಯಾ ಪಡೆದಿರುವ ಪ್ರಾಶಸ್ತ್ಯಕ್ಕಾಗಿಯೂ, ವಿದ್ಯೆಯಲ್ಲಿ ಮಹಾರಾಣಿಯವರು ವಹಿಸಿರುವ ವಿಶೇಷ ಅಕ್ಕರೆಗಾಗಿಯೂ, ಬಾಲಿಕೆಯರು ಪಡೆದಿರುವ ಗಾನ ವಿದ್ಯಾ ನೈಪುಣ್ಯಕ್ಕಾಗಿಯೂ, ತಾವು ಬಹಳ ಸಂತೋಷಿಸುವದುಮಾತ್ರವಲ್ಲದೆ ತಾವು ತಾಭಿವೃದ್ಧಿಯನ್ನೇ ಯಾವಾಗಲೂ ಕೇಳಲು ಅಪೇಕ್ಷಿಸುವಂತೆ ತಿಳಿಸಿ ಸವಾರಿಯು ಮಹಾರಾಜರೊಡನೆ ರೆಸಿಡೆನ್ಸಿಗೆ ದಯಮಾಡಿಸಿತು. ಮೆಮೋರಿಯಲ್ ಟೌನ್‌ಹಾಲ್ ಕಾಡಿದ್ದ ಮ್ಯುನಿಸಿಪಾಲಿಟಿಯವರು ತಮ್ಮ ವಿಜ್ಞಾಪನೆಪತ್ರಿಕೆಯನ್ನೊಪ್ಪಿಸಿ ಆಸಂದರ್ಭದೊಳು ತಮಗುಂಟಾಗಿರುವ ಸಂತೋಷವನ್ನೂ ರಾಜಭಕ್ತಿ ವಿಶ್ವಾಸಗಳನ್ನೂ ಅರುಹಿ ತಾವು, ತಮ್ಮ ಮಹಾರಾಜರಪಾಲನೆಯೊಳು ಅನುಸರಿಸಲ್ಪಟ್ಟಿರುವ ಪ್ರಕೃತ ರಾಜ್ಯತಂತ್ರಕ್ರಮಕ್ಕೆ ತೃಪ್ತರಾಗಿ ಸುಖಸಮಾಧಾನದಿಂದಿರುವಂತೆ ಹೇಳಿದರು. ಅದನ್ನಾಲೈಸಿ ವೈಸ್‌ರಾಯಿಯವರು, ಬಹಳ ಸುಖಾವಹವಾದ ಸ್ಥಿತಿಯೊಳು ಪ್ರಜೆಗಳು ಇರುವ ಅಂಶವನ್ನೂ, ದೇಶವು ಸುಭಿಕ್ಷವಾಗಿ ಫಲಭರಿತವಾಗಿರುವದನ್ನೂ, ಪ್ರಕೃತ ರಾಜ್ಯತಂತ್ರಕ್ರಮದೊಳು ಪ್ರಜೆಗಳು ತೃಪ್ತರಾಗಿರುವದನ್ನೂ ತಾವು ಚೆನ್ನಾಗಿ ಅರಿತಿರುವಂತೆಯೂ, ನಿಮ್ಮಮೂಲಕ ಅದುಗಳು ತಾವು ಈಗ ಬಹಳ ಸಂತೋಷಿಸಿರುವಂತೆಯೂ, ತಿಳಿಸಿದರು. ತರುವಾಯ ವೈಸ್‌ರಾಯಿ ಯವರು ವಿವಿಧಾಲಂಕಾರದೊಡನೆ ಕರಗಾಗಿ ಪರಿಷ್ಕೃತವಾಗಿದ್ದ ರೆಸಿಡೆನ್ಸೀ ಬಂಗ್ಲೆಗೆ ದಯಮಾಡಿದರು. ಆದಿನಮಧ್ಯಾಹ್ನ ಶ್ರೀಮನ್ಮಹಾರಾಜರವರು

ಸಕಲ ಮರ್ಯಾದೆಗಳೊಡನೆ ಲಾರ್ಡ್ ಡಫ್ರಿನ್‌ಯವರ ಸಂದರ್ಶನಾರ್ಥ ಹೋಗಿದ್ದರು. ಅದೇ ದಿನ ಸಾಯಂಕಾಲ ನಾಲ್ಕು ವರೆ ಗಂಟೆಯ ಮೇಲೆ ವೈಸ್‌ರಾಯಿಯವರು ರಾಜಭವನಕ್ಕೆ ದಯಮಾಡಿದ್ದರು. ಆ ರಾತ್ರಿ ಜಗನ್ಮೋಹನ ಬಂಗ್ಲೆಯಲ್ಲಿ ವೈಸ್‌ರಾಯಿಯವರಿಗೆ ಔತನವು ನಡೆಸಲ್ಪಟ್ಟಿತು. ಆ ಕಾಲದಲ್ಲಿ ಸುಮಾರು ೫೦ ಜನ ಮಂದಿ ಯೂರೋಪಿಯನ್ ಆಫಿಸರುಗಳು ಹಾಜರಿದ್ದರು. ಶ್ರೀಮನ್ಮಹಾರಾಜರವರು, ಅವರ ಸಹೋದರರಾದ ಸುಬ್ರಹ್ಮಣ್ಯರಾಜೇ ಅರಸಿನವರು, ದಿವಾನರವರು, ಇತರ ದೊಡ್ಡ ಅಧಿಕಾರಿಗಳು ವಗೈರೆ ಬಹುಮಂದಿ ಆ ಕಾಲದಲ್ಲಿ ನೆರೆದಿದ್ದರು. ಆಯುರಾರೋಗ್ಯ ಪ್ರಾರ್ಥನಾಪೂರ್ವಕವಾದ ಪಾನಾನಂತರ ದಿವಾನರವರು ಮಹಾರಾಜರವರಿಂದಾಜ್ಞಪ್ತರಾಗಿ ಸಮಯೋಚಿತಗಳಾದ ಶಬ್ದಗಳಿಂದ ವೈಸ್‌ರಾಯಿಯವರ ಆಗಮನದಿಂದುಂಟಾದ ಸಂತೋಷಾತಿಶಯವನ್ನೂ, ಪ್ರಸಿದ್ಧವಾದ ಈ ಸಂಸ್ಥಾನವನ್ನು ಬ್ರಿಟಿಷರವರು ಜಯಿಸಿ, ಹ್ರಾಸವನ್ನೈದಿದ್ದ ರಾಜವಂಶವನ್ನುದ್ಧರಿಸಿ ಅದಂ ಅವರಿಗೊಪ್ಪಿಸಿ ರಾಜ್ಯಾಭಿವೃದ್ಧಿಯೊಳು ನಿರತರಾಗಿರತಕ್ಕ ವಿಷಯದಲ್ಲಿ ಉಂಟಾಗಿರುವ ಕೃತಜ್ಞತಾದಿ ಭಾವವನ್ನೂ, ಬ್ರಿಟಿಷ್ ರಾಜ್ಯತಂತ್ರವನ್ನನುಸರಿಸಿ ಪ್ರಭುತ್ವ ಮಾಡುವ ಪದ್ಧತಿಯೊಳು ಉಂಟಾಗಿರುವ ಬಹುವಿಧ ನಿರ್ಬಂಧಗಳನ್ನೂ, ಗತ ಐದು ವರುಷಗಳ ಕಾಲದಲ್ಲಿ ಈ ದೇಶಾಭಿವೃದ್ಧಿಯ ಬಗ್ಗೆ ಮಾಡಲ್ಪಟ್ಟ ನೀರಾವರಿ ಕೆಲಸ, ವಿದ್ಯಾಭಿವೃದ್ಧಿ ವಗೈರೆ ಬಹುವಿಧ ಏರ್ಪಾಡುಗಳನ್ನೂ, ಕುರಿತು ತಿಳಿಸಿದರು. ತರುವಾಯ ವೈಸ್‌ರಾಯಿಯವರು ಮಹಾರಾಜರವರ ಶ್ರೇಯಃ ಪ್ರಾರ್ಥನಾ ಸೂಚಕವಾಗಿ ಪಾನವಂ ಗ್ರಹಿಸಲು ಪ್ರಕ್ರಮಿಸಿ ತಿಳಿಸಿದ ಅಂಶಗಳಲ್ಲಿ ಪ್ರತಿಯೊಂದೂ ಅರ್ಥ ಬಾಹುಳ್ಯವುಳ್ಳದ್ದಾಗಿಯೂ, ಅನುಭವ ಪ್ರದರ್ಶಕವಾದದ್ದಾಗಿಯೂ ಇತ್ತು. ಕ್ಷಾಮ ಕಾಲದಲ್ಲಿ ಈ ದೇಶಕ್ಕೆ ಉಂಟಾಗಿದ್ದ ದುರ್ದಶೆಗಳನ್ನು ಜ್ಞಾಪಿಸಿಕೊಂಡು ಅವುಗಳೊಡನೆ ವಿತತ ಕ್ಷಣನವೈಂತ ಅದು ಕ್ರಮೇಣ ಅಭಿವೃದ್ಧಿಯನ್ನೈದಿ ಈಗ ಉತ್ತಮ ದೃಢಸ್ಥಾನವಾದ ಸುಸ್ಥಿತಿಗೆ ಬಂದಿರುವದಕ್ಕಾಗಿ ಮಹಾರಾಜರವರ ಭಾಗ್ಯ ವಿಶೇಷವಂ ಬಹಳವಾಗಿ ಕೊಂಡಾಡುತಂತೆಯೂ, ಬ್ರಿಟಿಷರವರಿಂದ ನ್ಯಾಯಸ್ಥಾಪಿತವಾದ ರಾಜ್ಯತಂತ್ರಕ್ರಮಕ್ಕೊಳಪಟ್ಟು ಪಾಲಿಸಲ್ಪಡುವದಕ್ಕೆ ನೇಟಿವ್ ಸಂಸ್ಥಾನವು ಇದು ಒಂದೆಯೆಂತಲೂ, ರಾಜ್ಯ ಸುಧಾರಣೆಯ ನೇಟಿವ್ ಸಂಸ್ಥಾನಗಳು ಒಂದೊಂದು ವಿಷಯದಲ್ಲಿ ತಾರತಮ್ಯವುಳ್ಳದ್ದಾಗಿದ್ದರೂ, ಕೆಲವರು ಅರಸರು ತಮಗೆ ದೈವಾನುಗ್ರಹದಿಂ ಪ್ರಾಪ್ತವಾದ ಪದವಿಯ ಸ್ವರೂಪವನ್ನೂ ತತ್ಸಂಬಂಧ ಕರ್ತವ್ಯವನ್ನೂ ಚನ್ನಾಗಿ ಅರಿತವರಾಗಿದ್ದಾಗ್ಯೂ, ಇತರರು ಅವುಗಳ ವಿಷಯದಲ್ಲಿ ಅಲ್ಪಜ್ಞಾನವುಳ್ಳವರಾಗಿದ್ದರೂ, ಅವರೆಲ್ಲರೂ ಬ್ರಿಟಿಷ್ ಸರ್ಕಾರದವರಲ್ಲಿ ಅತ್ಯಂತ ಭಕ್ತಿ ಗೌರವವುಳ್ಳವರಾಗಿದ್ದಾರೆಂಬ ವಿಷಯವಾತ್ರ ತಮಗೆ ಬಹಳ ನಂಬಿಕೆಯನ್ನೂ ಸಂತೋಷವನ್ನೂ ಉಂಟುಮಾಡುತದೆಂತಲೂ, ತಿಳಿಸಿ ದೇಶವು ಅಭಿವೃದ್ಧಿ ಸ್ಥಿತಿಯೊಳಿರುವದಂ ಕೇಳಿ ಬಹಳವಾಗಿ ಕೊಂಡಾಡಿದರು.

ಬುಧವಾರದ ದಿನ ಬೆಳಿಗ್ಗೆ ವೈಸ್‌ರಾಯಿಯವರು ಮಹಾರಾಜರವರೊಡನೆ ಮೈಸೂರಿಗೆ ಐದು ಮೈಲುಗಳ ಫಾಸಲೆಯೊಳಿರುವ ಹಿಂಕಲ್‌ಯೆಂಬ ಪ್ರದೇಶಕ್ಕೆ ಮೃಗಯಾವಿನೋದಾರ್ಥ ದಯಮಾಡಿ ದ್ದು ೯ ಘಂಟೆಗೆ ಮೈಸೂರಿಗೆ ವಾಪಸು ಬಂದರು. ಮೈಸೂರಲ್ಲಿ ಕಟ್ಟಲ್ಪಡುವದಾಗಿರುವ ಮಾರ್ಕೆಟ್ಟಿಗೆ ಸಮೀಪದೊಳು, ವೈಸ್‌ರಾಯಿಯವರ ಹೆಸರಿನಲ್ಲಿ ನಿರ್ಮಿಸಲ್ಪಡಬೇಕೆಂದುದ್ದಿಷ್ಟವಾಗಿದ್ದ ಒಂದು ಸರೋವರದ ನಿರ್ಮಾಣಕಾರ್ಯವು ಲಾರ್ಡ್ ಡಫ್ರಿನ್‌ಯವರಿಂದ ಉಪಕ್ರಮಿಸಲ್ಪಟ್ಟು ಅವರ ಆಗಮನವು ಚಿರಸ್ಮರಣೀಯವಾಗಿರುವಕೆ ಅದು ಅವರ ಹೆಸರಿನಿಂದಲೇ ನೆಲಗೊಳಿಸಲ್ಪಟ್ಟಿತು. ತರುವಾಯ ಲೇಡಿ ಡಫರಿನ್‌ಯವರಿಂದ ಮಹಾರಾಜರವರ ಗರಲ್ಸ್ ಸ್ಕೂಲ್ ವಿದ್ಯಾರ್ಥಿನೀಯರಿಗೆ ಬಹುಮಾನ ಕೊಡಲ್ಪಟ್ಟವು. ಆ ಕಾಲದಲ್ಲಿ ಪಾಠಶಾಲೆಯ ಸಾಂವತ್ಸರಿಕ ರಿಪ್ರೋರ್ಟು ಓದಲ್ಪಟ್ಟಿತಲ್ಲದೆ ಬಾಲೆಯರು ಗಾನ ವಿದ್ಯೆಯಲ್ಲಿ ತಾವು ಪಡೆದಿರುವ ಕುಶಲತೆಯನ್ನು, ನಾನಾಪ್ರಕಾರದಿಂ ವ್ಯಕ್ತಪಡಿಸಿದರು. ಮೇಲೆ ತಿಳಿಸಲ್ಪಟ್ಟ ರಿಪ್ರೋರ್ಟಿನ ಮೂಲಕ ಈಗ ಸರಾಸರಿ ೬೩ ಮಂದಿ ಹುಡಿಗಿಯರು ಓದುತಲಿರುವಂತೆಯೂ, ಗತ ಮೂರು ತಿಂಗಳ ಕಾಲದಲ್ಲಿ ಸದರೀ ಶಾಲೆಗಾಗಿ ೯೭೩ ರೂಪಾಯಿಗಳು ಜಮಾ ಬಂದಿರುವಂತೆಯೂ, ಅದ್ದಕ್ಕೆ ೧೯೩೭ ರೂಪಾಯಿಗಳು ಸರ್ಕಾರದಿಂದ ಕೊಡಲ್ಪಟ್ಟವೆಂತಲೂ ಮಿಕ್ಕ ಮೊಬಲಗು ಪ್ರಜೆಗಳಿಂದಲೂ, ದೇವರಾಜ ಬಹದೂರ್ ಧರ್ಮನಿಧಿಯಿಂದಲೂ, ಆನರೇಬಲ್ ಸೆಕ್ರೆಟರಿ ಮ|| ನರಸಿಂಹಯ್ಯಂಗಾರ್ಯರಿಂದಲೂ, ಕೊಡಲ್ಪಟ್ಟವೆಂತಲೂ, ಈ ಪೈಕಿ [illegible] ರೂಪಾಯಿಗಳು ಜಾತಾ ಮಿಕ್ಕ ಮೊಬಲಗೆಲ್ಲ ವಿದ್ಯಾರ್ಜನೆಯರಿಗೆ ಪಾರಿತೋಷಿಕವಾಗಿ ಕೊಡಲ್ಪಟ್ಟಿತೆಂತಲೂ ತಿಳಿಯಬರುತದೆ.

ವಿದ್ಯಾರ್ಥಿನೀಯರಿಗೆ ಇನಾಂಗಳು ಕೊಡಲ್ಪಟ್ಟ ಬಳಿಕ ವೈಸ್‌ರಾಯಿಯವರು ಅರಮನೆಗೆ ದಯಮಾಡಿದರು. ಅಲ್ಲಿ ಕೊಡಗಿನಿಂದ ಬಂದಿದ್ದ ಪ್ರತಿನಿಧಿಗಳನ್ನು ಭರಮಾಡಿಕೊಂಡು ಅವರ ವಿಜ್ಞಾಪನಾಪತ್ರಿಕೆಯನ್ನಾಲೈಸಿ ಅದರೊಳು ತಿಳಿಸಲ್ಪಟ್ಟಿದ್ದ ಮುಖ್ಯವಿಷಯಗಳಿಗೆಲ್ಲ ಸಂಗ್ರಹವಾಗಿ ಜವಾಬು ಕೊಟ್ಟರು. ಅವರ ಜವಾಬಿನ ವೇನೆಂದರೆ, ಕೊಡಗು ದೇಶದ ತಾತ್ಕಾಲಿಕ ಸ್ಥಿತಿಯನ್ನು ಸುವರ್ಣನವನ್ನೂ ತಾವು ಚನ್ನಾಗಿ ಅರಿತಿರುವಂತೆಯೂ, ಚರಿತ್ರ ಸಂಬಂಧಗಳಾದ [illegible] ಪ್ರಸಿದ್ಧ ಪ್ರಾಶಸ್ತ್ಯಗಳಿಂದ ಕೊಡಗುವಾಸಿಯರು ಸ್ವತಂತ್ರ ಮುಖ್ಯವರಾಗಿದಾರೆಯೋ ಅಂತಹರೀತಿ ಸ್ವತಂತ್ರ್ಯಗಳನ್ನೂ, ಬುಗರ್ಮಂಟಾಗಲಾರವೆಂತಲೂ, ಸ್ವಾತಂತ್ರ್ಯಗಳಾದ ಮನ್ನಣೆ ನ್ಯಾಯಗಳಾದ ಕರ್ತವ್ಯವನ್ನತಿಕ್ರಮಿಸಿ ಜನಗಳ ಜಾತಿ ಮತಾಚಾರಗಳ ವಿಷಯದೊಳು ತಾವ್ಯಾರೂ ಗವರ್ನಮೆಂಟಿನವರು ಯಾವದಾದರೊಂದು ಕಟ್ಟಳೆಯಂ ಮಾಡುವರಾದರೆ ಅಂತಹ ಕಾಲವು ಕೇವಲ ದುರ್ದಿನವೆಂದು ಭಾವಿಸಲ್ಪಡದೇ ಹೋದ್ದು ಸಹಜವೆಂತಲೂ, ಆವಶ್ಯಕಗಳಾದ ಭಾಗಗಳಲ್ಲಿ ರೈಲ್ವೆ ವಿಸ್ತೀರ್ಣವನ್ನು ಬಲಪಡಿಸಬೇಕೆಂಬದೇ ಮಹಾರಾಜ್ಞೀ ಸರ್ಕಾರದವರ ಮುಖ್ಯೋದ್ದೇಶವೆಂತಲೂ, ವಿಜ್ಞಾಪನಾಪತ್ರಿಕೆಯಲ್ಲಿ ಸೂಚಿಸಲ್ಪಟ್ಟ ರಾಜಭಕ್ತಿ ಗೌರವ ವಿಶ್ವಾಸ ಪ್ರದರ್ಶಕಗಳಾದ ವಾಕ್ಯಾವಳಿಗಳನ್ನು ಆಕೆಯವರ ದಿವ್ಯಸನ್ನಿಧಿಯಲ್ಲಿ ವಿಜ್ಞಾಪಿಸುವಂತೆಯೂ, ಕೊಡಗು ರಾಜ್ಯ ಸಂಬಂಧವಾದ ವಿನಿಮಯಗಳೊಂದೂ ನಡೆಸಲ್ಪಡಲಾರವೆಂಬದು, ಪ್ರತಿನಿಧಿಯವರ ಪೈಕಿ ಪ್ರಮುಖರಾಗಿದ್ದ ಮ|| ಗಣಪತಿಯವರೊಡನೆ ಕೆಲ್ಪ ಕ್ಷಣಗಳ ತನಕ ಮಾತನಾಡುತಲಿದ್ದು ಬಳಿಕ ಅವರೆಲ್ಲರಿಗೂ ಅನುಜ್ಞೆಯನ್ನಿತ್ತರು.

ಕೊಡಗು ಸಾಮಾಜಿಕರು ಹೊರಟುಹೋದ ಬಳಿಕ ಮೈಸೂರು ಪ್ರಜಾ ಪ್ರತಿನಿಧಿ ಸಾಮಾಜಿಕರ ಪೈಕಿ ಕೆಲವರು ಅಂದರೆ—ಮ|| ಅಡ್ವೊಕೇಟ್ ರಾಘವಾಚಾರ್ಯರು, ಮ|| ಅಂಚೇ ಅಣ್ಣಯ್ಯ ಪಂಡಿತರು, ವಗೈರೇರು ಬಂದು ತಮ್ಮ ವಿಜ್ಞಾಪನ ಪತ್ರಿಕೆಯನ್ನೋದಲು, ಅದಕ್ಕೆ ವೈಸ್‌ರಾಯಿಯವರು, ಸದರೀ ಪತ್ರಿಕೆಯಲ್ಲಿ ಸೂಚಿಸಲ್ಪಟ್ಟ ಸಾರ್ವತ್ರಿಕವಾದ ಸುಖ ಸಮಾಧಾನವನ್ನು ಕೇಳಿ ಸಂತೋಷಿಸುವಂತೆಯೂ, ಈಗಿನ ಪ್ರಭುತ್ವಕ್ರಮದಿಂದೆಲ್ಲರೂ ಸಂತೃಪ್ತರಾಗಿದಾರೆಂದು ಹೇಳಿದ ಅಂಶವು ಕೇಳಲಿಕ್ಕೆ ಆಹ್ಲಾದಕರವಾಗಿರುವಂತೆಯೂ, ಉನ್ನತದೇಶದ ಅರಸರಪೈಕಿ ವಿದ್ಯಾ ವಿವೇಕ ನಾಗರಿಕ ಸುಸಂಪನ್ನರಾದ ಅರಸರ ಪಾಲನೆಗೊಳಗಾದದ್ದು ಮೈಸೂರು ದೇಶೀಯರ ಭಾಗ್ಯವಿಶೇಷವೆಂದು ಸೂಚಿಸಿದ ಮಾತು ಆಶ್ಚರ್ಯಪಡತಕ್ಕದ್ದಲ್ಲವೆಂತಲೂ, ಕ್ಷಾಮ ಮತ್ತು ರೈಲ್ವೇ ವಿಷಯವಾಗಿ ತಿಳಿಸಲ್ಪಟ್ಟ ಅಂಶ ಆಲೋಚನಲ್ಪಡತಕ್ಕದ್ದೆಂತಲೂ, ಪ್ರಸಿದ್ಧರಾದ ತದ್ದೇಶ ಕಮಿಷನರ್, ಅಂದರೆ ಲ ರ್ಡ್ ರಿಪ್ಪನ್‌ಯವರ ಅಧಿಕಾರಕಾಲದೊಳು ರೈಲ್ವೆಯ ಅಭಿವೃದ್ಧಿಗಾಗಿಯೂ, ಕ್ಷಾಮ ನಿವಾರಣೆಗಾಗಿಯೂ ಪ್ರಬಲ ಏರ್ಪಾಡು ಮಾಡಲ್ಪಟ್ಟವೆಂದಲೂ ವರಂತು ವ್ಯಯನಿಮಿತ್ತದಿಂ ಸದರೀ ಪ್ರಯತ್ನವು ಸಫಲವಾಗಲಿಲ್ಲವೆಂತಲೂ, ಏತದ್ದೇಶೀಯರ, ತತ್ರಾಪಿ ಸ್ತ್ರೀಯರ ವಿದ್ಯಾಭಿವೃದ್ಧಿ ಯುವಿಶೇಷ ಸಂತೋಷಕರವಾದದ್ದೆಂತಲೂ, ಇಂತಾ ವಿದ್ಯಾಬುದ್ಧಿ ವಿವೇಕ ಸಂಪನ್ನರಾದವರು ಮಹಾರಾಜರವರಿಗೆ ಆಲೋಚಕರಾಗಿರುವದು ಕಂಡು ತಾವು ಬಹಳ ಸಂತೋಷಿಸುವಂತೆಯೂ, ಅಂತವರ ಸಹಾಯದಿಂ ಸಂಸ್ಥಾನಕ್ಕೂ ಮಹಾರಾಜರಿಗು ಸಹ ವಿಶೇಷ ಪ್ರಯೋಜನಕರವಾಗದೆ ಹೋಗಲಾರದೆಂದಲೂ ಸೂಚಿಸಿದರು.

ಈ ದೇಶದ ಕಾಟ ಪ್ಲ್ಯಾಂಟರ್‌ಗಳ ಪರವ ಬಂದಿದ್ದ ದೊಡ್ಡಮನುಷ್ಯರು ತಮ್ಮ ವಿಜ್ಞಾಪನ ಪತ್ರಿಕೆಯನ್ನೊಪ್ಪಿಸಿ ಆನ್ನಾಟಿಕ ಶ್ರೀಮನ್ಮಹಾರಾಜ್ಞೀಯವರಲ್ಲಿಯೂ ಅವರ ಪ್ರತಿನಿಧಿಯಾದ ವೈಸ್‌ರಾಯಿಯವರಲ್ಲಿಯೂ ತಮಗಿರತಕ್ಕ ನಿರರ್ಗಳವಾದ ಭಕ್ತಿ ಗೌರವ ವಿಶ್ವಾಸಗಳನ್ನು ಸಮುಚಿತ ಶಬ್ದಗಳಿಂ ವ್ಯಕ್ತಪಡಿಸಿ, ನ್ಯಾಯಾಭಿವರ್ಧನವಾಗಿಯೂ, ಪರಸ್ಪರವಾಗಿ [illegible] ಸ್ವಾರ್ಥ ಪ್ರಯೋಜನಕರಗಳಾಗಿಯೂ ಇರತಕ್ಕ ವಿಷಯಗಳಲ್ಲಿ ಯಾವಾಗಲೂ ಇಂಡ್ಯ ಗವರ್ನಮೆಂಟಿನವರು ಅವರಾಗ ಕೊಡುತಲಿತದೇಕಂದು [illegible] ಸೂಚಿಸಿದರು. [illegible]

ಆ ದಿವಸ ರಾತ್ರಿ ಅರಮನೆಯ [illegible] [illegible] ಗುರುವಾರದ ದಿವಸ [illegible] ಶ್ರೀರಂಗಪಟ್ಟಣಕ್ಕೆ ದಯಮಾಡಿ ಅಲ್ಲಿ ದರ್ಶನೀಯಗಳಾದ [illegible] ಚರಿತ್ರಸಂಬಂಧಗಳಾದ ವಿಷಯಗಳ [illegible] ಕಟಾಕ್ಷಿಸುತ, ಕೊರರಾದ ಬಹುಮಂದಿ ಬ್ರಿಟಿಷ್ ಆಫಿಸರುಗಳ ಸಾಹಸ ಪ್ರದರ್ಶನಕ್ಕೆ [illegible] ಗಳಾಗಿದ್ದ ಅಂಶಗಳನ್ನೆಲ್ಲ ಸ್ಮರಿಸಿಕೊಂಡು ಅಲ್ಲಿಂದ ಅದಿನ ಮಧ್ಯಾಹ್ನ ೧೨ ಘಂಟೆಗೆ ಸರಿಯಾಗಿ ತಮ್ಮ ಪರಿವಾರದೊಡನೆ ಬೆಂಗಳೂರಿಗೆ ಸ್ಪೆಷಲ್ ಟ್ರೇನ್ನಲ್ಲಿ ದಯಮಾಡಿದರು. ಸಮುದ್ರ [illegible] ರ್ಣನ [illegible] ಸವ್ಯ [illegible] [illegible] ಸಾಯಂಕಾಲ ೪ ಘಂಟೆಗೆ ಸರಿಯಾಗಿ [illegible] ಸವಾರಿಯು [illegible] ರೆಂತೆ ನಿಶ್ಚಯಿಸಲ್ಪಟ್ಟ [illegible] ಪ್ರಯುಕ್ತ ಇಲ್ಲಿನ ಪಬ್ಲಿಕ್ ಆಫಿಸ್ ಬಿಲ್ಡಿಂಗ್ಸ್ ಮೊದಲುಗೊಂಡು ರೆಸಿಡೆನ್ಸಿ ಬಂಗ್ಲೆಯ ತನಕ ವಿವಿಧಾಲಂಕಾರಾದಿ ಸಕಲ ಸನ್ನಾಹಗಳೂ ಸ್ವಾಗತ ಸುವಿಧಾನಗಳೂ ಮಾಡಲ್ಪಟ್ಟಿದ್ದವು. ಮಹಾರಾಜ್ಞೀ ಪ್ರತಿನಿಧಿಯನ್ನು ಗೌರವಪುರಸ್ಸರವಾಗಿ ಬರಮಾಡಿಕೊಳ್ಳುವದಕ್ಕೆ ಇಲ್ಲಿನ ಮಿಲಿಟರಿ ಸ್ಟೇಷನ್ನಲ್ಲಿರುವ ವಿಶಿಷ್ಟ ಬ್ರಿಟಿಷ್ ಸೈನ್ಯವೂ ಮಹಾರಾಜರವರ ಸೈನ್ಯವೂ ಕ್ರಮಪ್ರಕಾರವಾಗಿ ಬಾಜ್ಯಾರಣದಲ್ಲಿ ಕಾದಿದ್ದವು. ಪರರ್ಬಾರುಬಿಡಿಕೆಯ ದಕ್ಷಿಣ ದಿಗ್ಭಾಗದಲ್ಲಿ ಸಿಟಿ ಮ್ಯೂನಿಸಿಪಾಲಿಟಿಯವರಿಂದ ವಿರಚಿಸಲ್ಪಟ್ಟ ರಮಣೀಯ ವಿನ್ಯಾಸ ಕೋಶಿತವಾದ ಮಂಟಪದಲ್ಲಿ ಮ್ಯೂನಿಸಿಪಲ್ ಪ್ರೆಸಿಡೆಂಟರು ಕಮಿಷನರುಗಳು ಮೊದಲಾದ ಬಹುಮಂದಿ ನೇಟಿವ್ ದೊಡ್ಡಮನುಷ್ಯರು ಕಾದಿದ್ದರು. ವೈಸ್‌ರಾಯಿಯವರ ಆಗಮನ ಸೂಚನಾರ್ಥ ಅವರ ಗೌರವಾನುಗುಣವಾಗಿ ಪದ್ಧತಿಪ್ರಕಾರ ೩೧ ತೋಫ್ ಹಾಕಲ್ಪಟ್ಟವು. ಲಾರ್ಡ್ ಡಫ್ರಿನ್‌ಯವರು, ತಮ್ಮ ಭಾರ್ಯೆಯೊಡನೆ ದಿವ್ಯಾಶ್ವಗಳಿಂದಲಂಕೃತವಾಗಿ ಸನ್ನದ್ಧವಾಗಿದ್ದ ರಾಜಾರ್ಹವಾದ ರಥದಲ್ಲಿ ಕುಳಿತು ಸ್ಟೇಷನ್ನಿಂದ ಪಾರ್ಶ್ವಾಂಗರಕ್ಷಕರೊಡಗೂಡಿ ಹೊರಡಲ್ಪಟ್ಟು ತಮ್ಮ ಆಗಮನಾರ್ಥ ಮಾಡಲ್ಪಟ್ಟಿದ್ದ ರಾಜಮಾರ್ಗ ಪರಿಷ್ಕರಣಾದ್ಯಲಂಕಾರಗಳನ್ನೀಕ್ಷಿಸಲು ಮೋದಿಸುತ ತಮ್ಮ ಸಂದರ್ಶನಾರ್ಥ ಮಾರ್ಗೋಭಯಪಾರ್ಶ್ವಗಳಲ್ಲಿಯೂ ಬಂದು ಕಾದಿದ್ದ ಅನೇಕ ಸದಸ್ಯ ಪ್ರಜೆಗಳ ಕಣ್ಣಿಗೆ ಆಹ್ಲಾದವನ್ನುಂಟುಮಾಡುತ ಕ್ರಮವಾಗಿ ಮೇಲೆ ಕಂಡ ಚಪ್ಪರಕ್ಕೆ ದಯಮಾಡಿ ಅಲ್ಲಿ ವೈಸ್ ಪ್ರೆಸಿಡೆಂಟರಾದ ಮ|| ಶ್ರೀನಿವಾಸಾಚಾರ್ಯರಿಂದ ಓದಲ್ಪಟ್ಟ ವಿಜ್ಞಾಪನ ಪತ್ರಿಕೆಯನ್ನಾಲೈಸಿ ಅದಕ್ಕೆ ಉತ್ತರರೂಪವಾಗಿ, ವಿಜ್ಞಾಪನ ಪತ್ರಿಕೆಯಲ್ಲಿ ಕಾಣಿಸಿರುವಂತೆ ಉಪವತ್ತಿ ವಿಷಯದಲ್ಲಿ ಯಾದ್ದಿವಸವಾದ ಕೊರತೆಯೂ ತಮ್ಮ ದೃಷ್ಟಿಗೆ ಕಂಡುಬರಲಿಲ್ಲವೆಂತಲೂ, ದೇಶವು ಸುಭಿಕ್ಷವಾಗಿ ಜನಗಳು ಸುಖ ಸಮಾಧಾನದಿಂದಿರುವ ವೃತ್ತಾಂತವು ಬಹಳ ಸಂತೋಷವನ್ನುಂಟುಮಾಡುತದೆಂತಲೂ, ಸಪಸಿಡಿ ಸದ್ಯಃ ಮಾಫಿ ಮಾಡಲ್ಪಟ್ಟ ವಿಷಯದಲ್ಲಿ ತಮಗೆ ಬಹಳ ಸಂತೋಷವೆಂತಲೂ, ಮುಂದೆ ರಾಜ್ಯಕ ಸಹಾಯದ ಮಾಫಿಗೆ ಇಂಡ್ಯಗವರ್ನಮೆಂಟಿನವರ ಬುದ್ಧ್ಯಾಶಯವೇನೆಂದು ಕಾಲ ದೇಶಸ್ಥಿತಿಯಿಂ ನಿಜವಾಗಿ ತೋರುವ ಸಂದರ್ಭದಲ್ಲಿ ಹಾಗೆ ಮಾಡಲು ಯಾವಾಗಲು ಸನ್ನದ್ಧರಾಗಿರುವರೆಂತಲೂ, ದೇಶವು ಈಗ ಅಭಿವೃದ್ಧಿಯ ಕ್ರಮದಲ್ಲಿರುವಂತೆ ತಿಳಿಸುವದರಿಂದ ಅಂ ತಾವು ಉತ್ತರೋತ್ತರಾಭಿವೃದ್ಧಿಯು ಪ್ರಜಾಧೀನವಾಗಿರುವವರಿಂದ ಅದು ಅವರು ಬಲಪಡಿಸಿಕೊಳ್ಳಬೇಕೆಂತಲೂ ತಿಳಿಸಿದರು. ತರುವಾಯ ಗವರ್ನಮೆಂಟ್ ಸ್ಕೂಲ್ ವಿದ್ಯಾರ್ಥಿನೀಯರು ಕೆಲವರು ಲೇಡಿ ಡಫ್ರಿನ್‌ಯವರ ಮತ್ತು ಅವರ ಭರ್ತೃಯವರ ಸುಸ್ವಾಗಮನ ಸೂಚಕವಾದ ಗಾನವನ್ನು ಪ್ರಾರಂಭವಾಗಿರುತ್ತಾದಿ ಅವರಿಬ್ಬರಿಗೂ ಪುಷ್ಪಾಂಜಲಿ ಮಾಡಿದ್ದರು. ಬಳಿಕ ಬ್ರಹ್ಮಶ್ರೀ ಮ|| ಚಂದ್ರಶೇಖರ ಶಾಸ್ತ್ರಿಗಳು ಗೀರ್ವಾಣ ಭಾಷೆಯಲ್ಲಿ ರಚಿಸಿದ ಇದರ ಕೆಳಗಿನ ಎರಡು ಮಂಗಳ ಶ್ಲೋಕಗಳನ್ನು ಓದಿದರು.

ಶ್ಲೋ || —ಅಸ್ಮಿನ್ಸುವಾಗಮನಮಾಶೇಸ್ಮಬಹುಮಾನಮನುಜಭಾವಯತಿ | ಸುರುಚಿರದಾನ ಜನ ವಿರ್ಣಭಾಜ [illegible] ಸುಶವಳಿನಪ್ರತಿ [illegible] ಮರ್ತ್ಯ [illegible] ಪಾರ್ಲ ಹೆಚ್ಚು ರಾಜ [illegible] ಶ್ರೀದ್ವಾರಣಸ್ಥರವು [illegible] ಭಾರತದಯಃ || ಚ [illegible] ಮುಂಜಿಲಾಭರಣ [illegible] ಶ್ರೀನೃಸಿಂಹಲಕ್ಷ್ಮೀ [illegible] ನನಾನುವುಹಂಭಾಜ್ಞೀಬುಚೋದಕ್ಷಿಣಾ |

ಉಭಯಪಾರ್ಶ್ವಗಳಲ್ಲಿಯ ಊ ದ್ವಾರ ತೋರಣವಿರಾಜಿತಗಳಾದ ಮಂಟಪ ಮಾರ್ಗಗಳಿಂದಲೂ, ಕದಳೀ ಸ್ತಂಭಗಳಿಂದಲೂ, ಪತಾಕೆಗಳಿಂದಲೂ ಅ [illegible] ಕಟ್ಟಲ್ಪಟ್ಟದ್ದ ಮಂಟಪಗಳಿಂದಲೂ [illegible], ಸಾಲ್ಗಳಿಂ ನಿಲ್ಲಿಸಲ್ಪಟ್ಟಿದ್ದ ಕಟಿಸ ಸಿಪಾಯಿಗಳಿಂದಲೂ, ಬ್ಯಾಂಡ್ ಮುಂತಾದ ವಾದ್ಯಘೋಷಗಳಿಂದಲೂ ಅಲಂಕೃತವಾಗಿ ದೇವಾಂಘ್ರಿಸಗಳಿಯು ಕಲ್ಯಾಣವಾಟಿ [illegible] ಮಾರ್ಗಗಳಲ್ಲಿ ವೈಸ್‌ರಾಯಿಯವರು [illegible] ಬಂಗ್ಲೆಯ ಮುಂಭಾಗದಲ್ಲಿ [illegible] ಸ್ಟೇಷನಿನ ಮ್ಯೂನಿಸಿಪಾಲಿಟಿಯವರಿಂದ (ಸ್ವಾಗತಾವಿಜ್ಞಾಪನ) [illegible] ವಾಗಿಯೂ [illegible] ಯುಕ್ತವಾಗಿಯೂ, [illegible] ಯಾಗಿಯೂ [illegible] ಪ್ರದರ್ಶಕವಾಗಿಯೂ ಇದ್ದ ಸುಂದರ [illegible] ಅಲ್ಲಿನವರ ವಿಜ್ಞಾಪನ ಪತ್ರಿಕೆಯಂ ಕೈಗೊಂಡು ಅವರಿಂದಪೇಕ್ಷಿತಗಳಾದ ಜಲವಸತಿ ಸ್ವದೇಶ ಪರಿಪಾಲನಾಧಿಕಾರ, ನ್ಯಾಯ ಸಂಪಾದನಾನುಕೂಲತೆ (ಅಪೀಲ್ ಕೋರ್ಟು ಸ್ಥಾಪನ) ಮೊದಲಾದ ವಿಷಯಗಳಿಗೆಲ್ಲ ಅನುಕೂಲಗಳಾದ ಉತ್ತರಗಳ ಮೂಲಕ ಅವರು ಸುಪ್ರಸನ್ನಗೊಳಿಸಿ, ಅಲ್ಲಿ ಏತತ್ಕಾಲದೊಳು ನೆರೆದಿದ್ದ ವಿದ್ಯಾರ್ಥಿ ಸಮೂಹವಂ ಕಂಡು ಆನಂದಿಸುತ ರೆಸಿಡೆನ್ಸಿ ಬಂಗ್ಲೆಗೆ ದಯಮಾಡಿದರು. ಅದೇ ದಿನ ರಾತ್ರಿ ೯ ಘಂಟೆಯ ಮೇಲೆ ರೆಸಿಡೆನ್ಸಿ ಬಂಗ್ಲೆಯಲ್ಲಿ ಪ್ರಬಂಧ ಡಿನ್ನರ್ ನಡೆಯಿತು. ಶುಕ್ರವಾರದ ದಿನ ಬೆಳಿಗ್ಗೆ ಪರೇಡ್ ಗ್ರೌಂಡಿನಲ್ಲಿ ಸೈನಿಕ ಶಕ್ತಿ ಪ್ರದರ್ಶಕಗಳಾದ ವ್ಯಾಯಾಮ ಕವಾಯತ್ತನ್ನು ನೋಡಿ ಸಂತೋಷಿಸಿ ಅಲ್ಲಿಂದ ಮೇಯೋಹಾಲಿಗೆ ದಯಮಾಡಿ, ಅಲ್ಲಿ ಒಪ್ಪಿಸಲ್ಪಟ್ಟ ಸ್ವಾಗತಪೂರ್ವಕವಾದ ವಿಜ್ಞಾಪನಪತ್ರಿಕೆಯಂ ಪರಿಗ್ರಹಿಸಿ ಅಲ್ಲಿಂದ ಕಂಟೋನ್ಮೆಂಟ್ ಪೈಕಿ ಕೆಲವು ಪ್ರದೇಶಗಳನ್ನು ಕಟಾಕ್ಷಿಸುತ ಅಲಸೂರು ಕೆರೆಯ ಮಾರ್ಗವಾಗಿ ರೆಸಿಡೆನ್ಸಿ ಬಂಗ್ಲೆಗೆ ವಾ

ವಶ್ ದಯಮಾಡಿದರು. ಆದಿನ ಸಾಯಂಕಾಲ ಎಲಹಂಕದ ಬಾಗಿಲು ಮಾರ್ಗವಾಗಿ ಕೋಟೆಗೆ ಹೋಗಿ ಅಲ್ಲಿನವರ ಸತ್ಕಾರವನ್ನನುಮೋದಿಸಿ ಲಾಲ್‌ಬಾಗನ್ನು ನೋಡಿಕೊಂಡು ಬಂಗ್ಲೆಗೆ ಸವಾರಿ ಚಿತ್ತೈಸಿದರು. [illegible] ದಿವಾನರಾದ ಮ. ಶೇಷಾದ್ರಿ ಅಯ್ಯರವರಿಗೂ, ಸಾಬಿಕ ಓವರ್ ಪೂಜಾರ್ ಯ್ಯನವರ ಪ್ರಸಾಪ್ರರಾದ ಮ. ಕೃಷ್ಣಮೂರ್ತಿ ಯವರಿಗೂ ವೈಸ್‌ರಾಯಿಯವರು ಕೆಲವು ಕ್ಷಣ ಗಳ [illegible] ಪ್ರತ್ಯೇಕವಾಗಿ ಜೇಟಿಯನ್ನಿತ್ತು [illegible] ವಿನವರೂ ತಿಳಿಯಲಾರೆವು. ಶನಿವಾರದಿನ ರಾತ್ರಿ ೮ ಘಂಟೆಗೆ ವೈಸ್‌ರಾಯಿಯವರು ಪ್ಲೆಟ್ ಫಾರ್ಮ್‌ನಲ್ಲಿ ತಿರ [illegible] ದಯಮಾಡಿದರು. [illegible] ದರ್ಶ [illegible] ನಾಳಿಯ ದಿನ [illegible] ಯಂಗೆ ಕ ದಯಮಾಡುವುದಕ್ಕೆ [illegible] ನಿಶ್ಚಯಿಸ್ಪಟ್ಟಿರುತ್ತದೆ

ಈ [illegible] ನಾವು [illegible] ದಿವಾನರು [illegible] ವಿನೋದಗಳು [illegible] ಗಳಾಗಿದ್ದಪ್ಪು [illegible] ಯಂಗಾರವರ [illegible] ದೃಶ್ಯಗಳನ್ನೂ, ಸಂಪೂರ್ಣಗಳ [illegible] ಮೂಡಿ [illegible] ಯುವದಕ್ಕಾಗಿ [illegible] ಕೆನಲಾಗದೆ ಬರಲಾರವು

[illegible]
ನ್ಯಾಯ [illegible]

The H[illegible] [illegible] C S I — [illegible] ಅನಂತೆ [illegible] ಗಲಿಗೆ [illegible] ನಗರದ [illegible] ದ್ವಾರದ ಸವಿ [illegible] ಮೈಸೂರಿಗೆ ಬಂದು [illegible]

The [illegible] ಜೆನೆರಲ್ ಜ್ಯಾನಿ [illegible] ಯನ್ನು [illegible] ಮೈಸೂರಿನ [illegible] ಕೆಂಪು ಪ್ರಾನ್ಸ್ [illegible] ವರು [illegible] ಕೈಯಾ [illegible]

Comp[illegible] of C[illegible] — [illegible] ನರ್ಮ [illegible] ಬೆಳ [illegible] ಗವರ್ನರ್ [illegible] ರಾಗಿ ಮೊಕದ್ದಮೆ [illegible] ಬರುವ ಸ್ಥಿತಿ [illegible] ಸೇರುವ

A Legislative Council to the N. W Provinces — ವಾಯವ್ಯದೇಶದ [illegible] ಕೆ [illegible] ಸಭೆ ಕೊಂಡ ನ್ನೇರ್ಪಡಿಸಿಕೊಳ್ಳು ವುದೆ ಮುಂದಾಲೋಚಿಸುವುದಾಗಿ ಎಂಗ್ಲೆಂಡಿನವ ಮೊಪೆ ಗೆಜೆಟಿನಲ್ಲಿಪ್ರಯಿಸಲ್ಪಟ್ಟಿರುವುದರಿಂದ ನಿದರೀದೇಶದ ಲೆಪ್ಟಿನೆಂಟ್ ಗವರ್ನರವರು ಸದರೀ ಸಭೆಗೆ ಏಂಟುಮಂದಿ ಮೆಂಬರ್‌ಗಳನ್ನು ಸಂಪ್ರ ತಿಮಾಡಿಕೊಳ್ಳುವರು.

Sir Charles Turner, C S I — ಹಿಂದೆ ಮದರಾಸ್ ಹೈಕೋರ್ಟ್ ಚೀಫ್ ಜಡ್ಜಿಯರಾಗಿದ್ದು ನಿರ್ವೃತ್ತಿ ಸುಖಾನುಭವದಬಗ್ಗೆ ಸ್ವದೇಶಕ್ಕೆ ಹೊರಟುಹೋದ ಸರ್ ಚಾರ್ಲೆಸ್ ಟರ್ನರ್, ಸಿ ಎಸ್. ಐ. ಯವರು ಲಂಡನ್ನಿನ ಕವಿನ್ಸಿ [illegible] ಯೇರ್ಪಟ್ಟ ಸುಧಾರ್ದಲ್ಲಿ ಪಿಬ್ಬ ಮೆಂಬರಾಗಿ ನಿಯಮಿಸಲ್ಪಟ್ಟಿರಸ್ತೆ. ಸದರೀಯವರು ಈದಿನ ಮುಂಜ್ಯೆಗೆ ಬಂದು ಈತಿಂಗಳ ೧೫ನೇ ತಾರೀಖಿನಲ್ಲಿ ಲಾಹೋರ್‌ನಲ್ಲಿ ಅನ್ನಾರೆವರಾ ಸಭೆಸೇರು ವಕಾಲಕ್ಕೆ ಸರಿಯಾಗಿ ಅಲ್ಲಿಗೆ ಹೋಗಿ ಸೇರುವರು. ಸದರೀಯವರುಪ್ರಕೃತ ಕೆಲಸವಲ್ಲಿರುವ ವರಿವಿಗೆ ಮಾಹೆಯಾನಾ ೩೦೦೦ ರೂಪಾಯಿಗಳವೇ ತ ಆಸರಿಗೆ ರುಸುಂ ಸಲ್ಲುವದೆಂಬ ಪ್ರವಾದವುಂಟಾಗಿದೆ.

The Hyderabad police.—ಹೈದರಾಬಾದ್ ಸಂಸ್ಥಾನದಲ್ಲಿ ಪ್ರಕಟಸಲ್ಪಡುವ ಒಂದಾನೊಂದು ಪತ್ರಿಕೆ ಹೇಳುವದೇನುವದೆ—ಈದೇಶದ ಡಿಸ್ಟ್ರಿಕ್ಟುಗಳಲ್ಲಿ ಈಗ ಸಂಚಾರಮಾಡುವರು ದರೋಡೆಗಳು, ಇಷ್ಟು ಅಲ್ಪಕಾಲದೊಳಗಾಗಿ ಇಲ್ಲಿನ ಪೊಲೀಸ್ [illegible] ಉಂಟಾಗಿರುವ ಏವಲಾವಣೆಯನ್ನು ನೋಡಿ ಆಶ್ಚರ್ಯವಾದವೆ [illegible] ನಿಜಾಮುರವರ ಪೊಲೀಸ್‌ನವರ್ಯು ಇಷ್ಟು ಸಮರ್ಥವಾದದ್ದಾಗಿ ಕಂಡುಬರುವದುಮೋಗುವದು ಬಹಳ ಸಂತೋಷಕರವಾದ ದ್ದಾಗಿದೆ, ಎಂಬದ.

Influx of famine immigrants into Poona.—ಪೂನೋದೂ ಪತ್ರಿಕೆಯ ವರ್ತಮಾನದಾರರು ಬರೆಯುತ್ತಾ ನೆಂದುವದೆ—[illegible] ದ್ವಾರಿಕಸ್ಥ ವ್ರಜ್ಮಿ [illegible] ಪ್ರದೇಶಗಳಿಂದ ಜನಗಳು [illegible] ಬಂದು ಸೇರುವದು ಇಲ್ಲಿನವರಿಗೆ ಅಷ್ಟು [illegible] ಲ್ಲವು. [illegible] ಪ್ರದೇಶಗಳಿಗೆ ರಹ್ದಾಗುತ್ತ [illegible] ಕಮ್ಮಿಯಾಗುತ [illegible] ಪ್ರದೇಶಗಳಲ್ಲಿ [illegible] ಹೆಚ್ಚಾಗಿ [illegible], ಎಂಬದು

CORRESPONDENCE
ಮಹಾರಾಜಶ್ರೀ ಕರ್ನಾಟಕ ಪ್ರಕಾಶಿಕಾ ಎಡಿಟರ ವರ ಸಮುಖಕ್ಕೆ,

ಅಯ್ಯಾ—[illegible] ಎಡಿಟರವರೇ! ಗತವಾರದ ತಮ್ಮ ಪತ್ರಿಕೆಯಲ್ಲಿ "ಮೈಸೂರು ವೃತ್ತಾಂತ ದರ್ಪಣ" ಎಂಬ ಹೆಸರಿನಿಂದ ಬೊರಮತ ಪತ್ರಿಕೆಯ [illegible] ವಿವರವಾಗಿ ತಾವು ವಿ [illegible] ವಾದ ಪ್ರೀಕಟಗಳಲ್ಲೆಲ್ಲ ವೃದ್ಧಿಯಾಗಿ [illegible] ಗಳಾದವಾಗಳೆಸಿರಿ. ಅವರೆ ಏನಿದ್ದ ವತ್ರಿಕೆಯೊಳು ವದೆಗಾರ [illegible] ಗಳನ್ನೆಲ್ಲ ತಕ್ಕತ್ತಾಗ [illegible] ನಿರ್ವಾ [illegible] ಹೈಯಪಿವಳೂ, ಜರಿಗುವವನಿಯ ತಾನವ್ಯಾಗೋಯಿಂಬ ಸಂಶಯವು ವೆರುಗಿ ಉಂಟಾದವಾಗೆ ಕಾಣಬರುವದೆ. ವಿವರುಗಳು ನಮ್ಮ ಬಳವಳಿಗೆ ಬಾರದಿರುವ ಸಂದರ್ಭಗಳಲ್ಲಿ ಯತ್ನವಿಲ್ಲ, ಮಿಕ್ಕಾದ ಎಲ್ಲಾ ಸಂದರ್ಭಗಳಲ್ಲಿಯೂ ನಮ್ಮಲ ಯು, ನಮಗೆ ಅನುಕೂಲವಾಗಿಯೇ ಮಿದ್ದುಕೊಂಡು ಪ್ರತಿಜ್ಞಾಪಾಲನಿಯೂ ಮಾಡಿಸುವವರಲ್ಲಿ ಸಂಡಿದ ಯಾಸಂದೇಹವಿಲ್ಲ

ದಂಡಾವಿಲೆಯುತವಾದ ನಿಬಂಧನೆಯನ್ನು ಸ್ವಯಂ ಅವಮಾನವನ್ನೂ ಜನರಿಗೆ ಜೀತಿಯನ್ನೂ ಉಂಟುಮಾಡಿವಷ್ಟುಸೂರು ಪುಷ್ಪವತಿಸಭಾಯನಿದಿಯ ಸಾಧ್ಯತೆವನ್ನು ಕೊಂಡೋವಾಗಿದೆ. ಆದರೆ ಸ್ವಲ್ಪವು ಗೂರದ್ದಟ್ಟ ಆಲೋಚನೆಯಿಲ್ಲದೆ ಅನ್ಯಾಯದಿಂದ ಮಹದೈಶ್ವರ್ಯವನ್ನು ಪಡೆಯ ಜೇಕೆಂಬ ಆಶಾಪರರಾಗಿ ಸದರೀ ಪುಷ್ಪವತಿಸ ಭಾಯನಿಧಿಗೆ ಸೇರಿದ್ದ ಮೆಂಬರ್‌ಗಳ ಅವಸ್ಥೆ ಯನ್ನುಕುರಿತು ಎಷ್ಟುಸಂಚಿಕೆಗಳು ಬರೆದರೆತಾನೆ ಸಾಧ್ಯವಾದೀತು? ಆ ಪುಷ್ಪವತಿ ರಾಮಾಯಣವನ್ನು ನಮ್ಮಪತ್ರಿಕಾದ್ವಾರಾ ಆಗಾಗ್ಯೆ ಉದಹರಿಸುವವರಾಗಿದ್ದೇವೆ. ಅವರ ಮೆಂಬರ್‌ಗಳಲ್ಲಿ ಮುಕ್ಕಾಲು ಮೂರುವೀಸವಾಲು ಜನರು ಹೆಂಗಸರೇ ಆಗಿಯಿದ್ದರು. ಉಳಿದ ವೀಸವಾಲು ಜನರಾದ ಗಂಡಸರಾದರೋ ಹೆಂಗಸರ ಬುದ್ಧಿಗಳಿಗಿಂತಲೂ ಕ್ಲಾಸ್ಯತೆರಗಳಾದ ಬುದ್ಧಿಯುಳ್ಳವರಾಗಿದ್ದರೆಂಬುವದು ಅನೇರುಪೋವದೊನವೇ ಉದ್ದೋಗಿಸುತಲಿರುವಲ್ಲಿ ನಮ್ಮಹೇಳಿಕೆಯು ಅನಾವಶ್ಯಕವಂತಲೇ ಹೇಳಬೇಕು. ಚನ್ನ ಜೆಳ್ಳಿ ನಗನನ್ನು ಒತ್ತೆಯಿಟ್ಟು ಸೇರಿದ ೧—೦ ರುತಿ ಬಡ್ಡಿಕೊಡಲು ಒಪ್ಪಿ ನರುಯುಕ್ಕೆ ಸಾಲವನ್ನುಕೇಳುವನಜ್ಞನಿಗೆ ಕೊಳಲಾರದೆ ಹಿಂದುಮುಂದು ನೋಡುವಿದ [illegible] ಯುಕ್ತನಂತರು ಹಿಂದೀವರುಸುಕಾಲದಲ್ಲಿ ಜನಸ್ಥಿಗುಣವನ್ನುಕೊಡುವೆವೆಂದುಹೇಳಿದಮಾರುಗಳಿಗೆ ಸುರುಳಿ ಮೋಸಹೋದರೆ ಅವಕ್ಕೆ ಯಾರು ಏನುಮಾಡ್ಯಾರು? ಅವರಂತೆಗೆ ಸದ್ಯಕವಾದ ಸಲವೇ ಅವರಿಗೆ ಲಭಿಸಿತು. ಅತ್ತ ಹಾವರಮಾಡಿದರೆ ನೋವಿಲ್ಲ ಜಾದರ ಮಾಡುತ್ತಾಳೆಂಬುದನ್ನು ಸಿದ್ಧಾಂತವಾಗಿ ಹೇಳಬಹುದೇ? ಎಂಬದೂ ಗೋಚರಿಸ್ಸಾಗಿದಲ್ಲ. ಮೇಲ್ಕಂಡ ಅಕ್ಷೇಪಕರಗಳೂವರ ನಮಿಗೆ ಬಾಮುಂದಿನ ರು ಕಾಗದವನ್ನು ಒಳೆದಿರುತ್ತಾರಲ್ಲದೆ (ವುಂದುಗಡೆ) ಎಂಬ ಪದಕ್ಕೆ ಅರ್ಥವನ್ನುನಸಾಳಿಳುನ್ನಾರಿಸಿಸಿ, ಅವಿರಾದಿಂ ತಾವು ಸ್ವಲ್ಪಅವಕಾಶವನ್ನು ತೋರಿಸಿವರ ವನ್ನುಪತ್ರಿಕೆಯ ಮ ಕವಾಗಿಯೇ ನ್ನು ಅಭಿಪ್ರಾಯವನ್ನು [illegible] ಲಪಟ ಬಿಟ್ಟಿನ್ನಸುತ್ತೇವೆ ಕಾರ್ಯಪ್ರಾರಂಭದಲ್ಲಿ ಕುಟುಕರಗಳಾದ ನಾರುಗಳಲ್ಲದ [illegible] ನಾಮುಗಳನ್ನುಜ್ಞಾರಿಸಿಬಾರದೆಂಬ ಹಿರಿಯರ ಬುದ್ಧಿವಾದಗಳನ್ನು ಸ್ಮರಿಸಗೆಂದು ಪ್ರಸಿದ್ಧಪ್ರತ್ರಿಕೆಯಲ್ಲಿ ವ್ಯಕ್ತಗೊಳಿಸಲು ಹಿಂಜರಿದೆವಲ್ಲ. ಮತ್ತ್ಯಾವ ವಿಳಕೆಯಿಂದ ಲಾವಲ್ಲವು ಪತ್ರಿಕೆಯು ವರದಾಲ ಉಜ್ಜೀವಿತವಾಗಿ ನಿಮಯುತಲಿರವೇಕೆಂಬ ಅಭಿಪ್ರಾಯದನ್ನ [illegible] ಪಕ್ಷವಾಗಿ ಸಿಂದು [illegible] ಪ್ರಯತ್ನಗಳೆಲ್ಲದುವ್ನು ನಡಸುತಿದ್ದಿಕೆ ದ್ವೇಷಸುಕಲ್ಪವು ವ್ಯಗಿರುವದೋ ಅದನ್ನು [illegible] ರಾ ಪುಣ್ಯಾನುಬಾವರ [illegible] ಬಲದಿಂದ ನಮ್ಮ ಪ್ರಯತ್ನಗಳೆಲ್ಲವೂ ಈಡೇರಬಹುದೆಂಬ ಜರನೆಯು ನವುಗೆ [illegible] ವಾಗಿದ ಹಾಗೂ ಒಂದುವೇಳೆ ಯತ್ನಿಸಿದ ಕಾರ್ಯವು ಅರ್ಥವಲ್ಲಿಯೇ ಮುಗಿವಾಗುವಂತೆ ದೈವತಸುಕಲ್ಪ ವಿದ್ದರೆ ಪತ್ರಿಕಾರುಟ ತೊಡಿರು ಅ ವರುಷಗಳೊಳಗಾಗಿ ಪತ್ರಿಕೆಯು ನಿಂತುಹೋಗುವ ಸಂದರ್ಭದಲ್ಲಿ (ತಾತ್ಪರ್ಯವಾಗಿಯೂ ನಯಮಂಪತೆ ಹಿರಿಯರು ಲನು ಗ್ರಹಿಸಿ) ಮೊನೇಟರಿಗುವಿಗೆ ಸಹಾಯಮಾಡಿರುವ ಪ್ರತ್ಯದಲ್ಲಿ ಸದಾರ್ವಾಪ್ಪು ವಾಪಸ್ ಮಾಡಲಾಗುವವು ಎಂಬ ಅಂಶವನ್ನು ನಾವು ದೃಢವಾಗಿ ಹೇಳುತ್ತೇವೆ. ಎಂದೆಂದಿಗೂ ಅಂದಿರೆ ಕಾಣಿ [illegible] ಯುವವರಿಗೂ, ಯತ್ನೀಕರು ಸಜ್ಜನಿಗಳಾಗಿರುವವರಿಗೂ, ಪತಿಕೆಯು ನಡೆಯುತಲಿರುವವರಿಗೂ ಎಂಬ ಅರ್ಥಗಳುದ್ಯೋತಕಗಳಲ್ಲದೆ ಚೀಟಿಪಲ್ಲವು. ಅಯ್ಯಾ ಎಡಿಟರವರೇ, ಈ ಪತ್ರಿಕೆಯಬಲದಿಂದ ರಾವು ದ್ರವ್ಯಾರ್ಜನೆಗಾಗಿ ವರಾಗೋಣ ಅಲ್ಲವೆ ನಾವು ದುವ್ಯಾಜದಿಂಸಿಯಂ ನಾಡುವದು. ಬೆಟ್ಟವನ್ನು ದೂರಕ್ಕೆ ನುಣ್ಣಗಿರುವದಾಗಿದೆ, ಹತ್ತಿರಕ್ಕೆ ಹೋದರಲ್ಲವೆ ಅದರ ನಿಜಸ್ಥಿತಿಯು ಗೊತ್ತಾಗುವದು. ಪತ್ರಿಕಾಪ್ರಚಾರಮಾಡುವದರಿಂದ ವಿಶೇಷ ದ್ರವ್ಯಸಂಪಾದನೆ ಆಗುವದೆಂದು ಅನೇಕರು ಭ್ರಾಂತಿಪಡುತಲಿದ್ದಾರೆ ಅವರಿಗೀಬಾಬ್ತು ಅವರಿಗೆ ಚೆನ್ನಾಗಿ ತಿಳಿಯದ ದೇಶವೆಂದ ನಾವು ಇಂತವರನ್ನು ನಿಂದಿಸಲಾರೆವು ಹುಡುಗಿತನವು, ರಾವು ಯಾವ ವಾಂಛೆಗಳಿಲ್ಲಕ್ಕ ಪೋಷವದಾರುಬಿದ್ದಿಲ್ಲೋ ಅವೇ ದಾಸ್ಯೆಯ್ಯನ ನ ವಿಷ್ಯಕ್ಕೆ ನಾವು ಹೋಷದಾಚಲು ಆರು ಛ ಮಾಡುವವರಾಗಿದ್ದೇವೆಮೇಲಕೊಂಡ ಜೆಳಿ ಯಾವವಿಧವಾದ ತಾತ್ಪರ್ಯವಿದಿಲೂ ಅಲ್ಲ ಪ್ರ ಸವಾದೇನೆಯನ್ನು ಬಂಡಿಯೊಡನೆ ಹೇಳಿಕೆಗೊಂ ಡರೆ ಅದನ್ನು ಗ್ರಹಿಸಿ ಪಶ್ಚಾತ್ತಾಪಪಡಬಲ್ಲಳೆ. ಪ್ರಸವವೇದನೆಯಂತೆ ಅಂತರ್ಗತವಾಗಿರುವ ಈ ಮಹದ್ದುಃಖವನ್ನು ತನ್ನಂತಾ ಅನುಭವಶಾಲಿಗಳಾದವರು ಬಲ್ಲರಲ್ಲದೆ ಎಲ್ಲರಿಗೂ ತಿಳಿಯಪಡಿಸುವದು ಅಸಾಧ್ಯವಾಗಿರುವದರಿಂದ ಈಅಂಶವನ್ನೇ ಕುರಿತು ವಿಶೇಷವಾಗಿ ನಾವು ಉಪನ್ಯಾಸಮಾಡುವದರಿಂದ ಫಲವು ತೋರಲಿಲ್ಲವು.

ತಮ್ಮ ವಿಧೇಯನಾದ,
B. Soobba Row,
ಮೈಸೂರು ವೃತ್ತಾಂತ ದರ್ಪಣ, ಮೈಸೂರು.

ಅಯ್ಯಾ—ಈಕೆಳಗೆ ಬರೆದುಯಿರುವ ಕೆಲವು ಅಂಶವನ್ನ ತಮ್ಮಪತ್ರಿಕೆಯಲ್ಲಿಪ್ರಯಿಸುವದಕ್ಕೂ ಅವಕಾಶಕೊಡಬೇಕೆಂದು ವಿನಯದೊಡನೆ ಬೇಡಿಕೊಳ್ಳುತ್ತೇನೆ.

ನಿರ್ವಾತೃತ್ವರ್ಯದೊಡನೆಯಿದ್ದ ಈ ಮಲೆನಾಡು ತಾಲ್ಲೂಕುಗಳು ಖೂನಿ ಮತ್ತು ದುರ್ಮರಣಗಳಿಗೆ ತೌರಮನೆಯಾಗಿರುವದಕ್ಕಾಗಿ ವ್ಯಸನಪಡದಬೇಕಾಗಿದೆ.

ಈ ವರ್ಷದಲ್ಲಿ ಸಾಗರ ಮತ್ತು ಸೊರಬ ದತಾಲ್ಲೂಕುಗಳಲ್ಲಿ ನಾಲ್ಕು ಖೂನಿಗಳು ಮತ್ತು ಅನೇಕ ದುರ್ಮರಣಗಳು ಪ್ರಾಪ್ತವಾದವು. ಖೂನಿಗಳ ಪತ್ತೆಮಾಡುವದಕ್ಕೆ ನಮ್ಮ ಅಸಿಸ್ಟೆಂಟ್ ಕಮಿಷನರ್ ಮ|| ನಸರುದ್ದೀನ್‌ಸಾಹೇಬರವರು ಬಹು ಪ್ರಸಕ್ತಿಸುತರಾದರು. ಆದರೆ ಒಂದುಖೂನಿ ಕದ್ದಮೆಯಲ್ಲಿಖೂನಿಮಾಡಿದವನು ಹುಚ್ಚು ಹಿಡಿದನೆಂತಲೂ ಮತ್ತೊಂದುಕೇಸಿನಲ್ಲಿಖೂನಿಮಾಡಿದವರು ತಾವುನಡೆಸಿದ ಕೃತ್ಯವನ್ನು ಸ್ವೀಕರಿಸಿಕೊಂಡರಲ್ಲವೆಂತಲೂ,ಇನ್ನೊಂದುಕೇಸು ಪತ್ತೆಯಿಲ್ಲವೆಂತಲೂ ಫೈಸಲಾದವು. ನಾಲ್ಕನೇಖೂನಿ ಕದ್ದಮೆಯಲ್ಲಿ ಸದರೀ ಪೋಲೀಸ್ ಅ|| ಕಾ|| ಸಾಹೇಬರವರು ಖುದ್ದು ಪ್ರವರ್ತಿಸಲಿಲ್ಲವಾಗಿ ಸದರೀಕೇಸು ಅದ್ಯಾಪಿ ಸಾಗರದ ಮುನಿಸಿಪಕೋರ್ಟಿನಲ್ಲಿ ತೊಗಡಿಸುತ್ತಾ ಯಿದೆ. ಯದ್ಯಪಿ ಮೊಕದ್ದಮೆ ಪತ್ತೆಯಾಗಿ ತಪ್ಪಿತಸ್ಥರಿಗೆ ಶಿಕ್ಷೆ ಆಗದೆಯಿದ್ದಾಗ್ಯೂ ನ ವಿಶ್ವತ್ಯೆ ಯೆಲ್ಲರಿಗೂ ತಿಳಿಯುವಹಾಗೆ ಆಯಿತು.

ಈ ಸಾಗರ ಮತ್ತು ಸೊರಬದ ತಾಲ್ಲೂಕುಗಳಲ್ಲಿ ಜ್ವರರೋಗವು ಬಹಳವಾಗಿ ವ್ಯಾಪಿಸಿ ಕಟಾವಿಗೆ ಪದಗಿಯಿರುವ ಭತ್ತದಪೈರು ಕುಯ್ಯಲು ಅವಕಾಶವಿಲ್ಲವಾಗಿಯದೆ. ಇದುವರಿಗೆ ಈಪ್ರಾಂತ ರ್ಯದಿಂದ ಜನನಾಶ ಇಲ್ಲವಾದಾಗ್ಯೂ ಅಕಸ್ಮಾತ ಮರಣದ ಹಿಯರಿಂಗ್ ಸಮಿಪದಲ್ಲಿ ಇಟ್ಟುಯಿರುವದಾಗಿ ಕೇಳುತ್ತೇನೆ. ಶಿವಮೊಗ್ಗ ಪುರದಿನಲ್ಲಿ ಸಹ ಈ ಪ್ರಸಂಗವು ಬಹಳ ಲಜ್ಜೆಯಕರವಾಗಿದೆಯೆಂತ ಕೇಳಲು ವಿಷಾದಿಸುತ್ತೇನೆ.

ಇಲ್ಲಿನ ಅಸ್ಪತ್ರೆ ಅಸಿಸ್ಟೆಂಟರಾಗಿಯಿದ್ದ ಮಿಸ್ಟರ್ ರಂಗರಾಮಾನುಜನಾಯುಡರವರು ಕಾಹಿಲೆ ಸಬಬು ಹಾಸನಕ್ಕೆ ವರ್ಗವಾಗಿ ದಯಮಾಡುವ ವೇಳೆ ಅವರಿಗೆ ಬಹುಮಾನ ಮಾಡುವದುದ್ದಿಶ್ಯ ರೀಡಿಂಗ್‌ರೂಮಿನ ಪ್ರಸಿಡೆಂಟರಾದ ಮ|| ರಾ|| ನಸಿಘೆ ನರಸಿಮ್ಮಯ್ಯಂಗಾರ್ರವರು ಸ್ವಂತಯತಿ ವಿಲಾಡಿಂಗನ್‌ಮಾಡಿ ಸದರೀ ನಾಯುಡರವರಿಗೆನಸ್ಸನ್ ತಾಂಬೂಲ ಒಪ್ಪಿಸಿ ಮನೋಹರವಾದ ಒಂದು ಪ್ರಸಂಗವನ್ನು ಮಾಡಿದವರಾದರು. ಸುತರಾಂ ನರೆಯನ್ನು ಅರಿಯದ ಈ ಮಲೆನಾಡು ಪ್ರದೇಶದಲ್ಲಿನ ಜನಗಳಲ್ಲಿ ನಾಗರಿಕತೆಯನ್ನಪ್ರಯುಮೂಡಲು ಇದು ಒಳ್ಳೆದಾಖಲೆಯಾಗಿರುತ್ತೆ. ಇಂತಾ ಸಾರ್ವಜನೋಪಯುಕ್ತವಾದ ರೀಡಿಂಗ್‌ರೂಮಿಗೆ ಯಥಾಶಕ್ತಿ ಸಹಾಯವನ್ನು ಮಾಡಿ ಪನೋದಕಾರವನ್ನು ಮಾಡುತ್ತಾ ಸುಖಪಡದೆ ಏನೋ ಹಿಂದು ದುರಾಗ್ರಹದಿಂದ ಸುಮ್ಮನೆಯಿರುವರು ದುರಾದೃಷ್ಟವಂತರೆಂದು ಹೇಳಬೇಕಲ್ಲವೆ?

ಈ ಸಾಗರವು ಬಹಳ ವ್ಯಾಪಾರಸ್ಥಳವಾಗಿಯೂ ಮಲೆನಾಡಿನಲ್ಲಿ ಮುಖ್ಯರಂಗವಾಗಿಯೂ ಇರುವ ಸಬಬು ಇಲ್ಲಿ ಗಂಧದಕೋಟಿಯನ್ನ ಇಟ್ಟದ್ದಾದರೆ ಸರಕು ಜಮಾಯಿಸಲು ಮತ್ತು ಅವನ್ನ ಪತ್ತೇನಮಾರಿ ಮೂಲಕ ಬೊಂಬಾಯಿಗೆ ಸಾಗಿಸಲು ಅನುಕೂಲಯಿರುವ ಸಬಬು ಈ ವಿಷಯವನ್ನ ನಮ್ಮಡೆಪ್ಯುಟಿ ಕಮಿಷನರ್ ಸಾಹೇಬರವರು ತಮ್ಮ ಘನವಾದ ಚಿತ್ತಕ್ಕೆ ತರುವರೆಂದು ನಂಬುತ್ತೇನೆ

ಸಕಲ ಮರ್ಯಾದೆಗಳೊಡನೆ ಲಾರ್ಡ್ ದಫ್ರಿನ್‌ಯವರ ಸಂದರ್ಶನಾರ್ಥ ಹೋಗಿದ್ದರು. ಅದೇದಿನ ಸಾಯಂಕಾಲ ನಾಲ್ಕುವರೆ ಘಂಟೆಯ ಮೇಲೆ ವೈಸ್‌ರಾಯಿಯವರು ರಾಜಭವನಕ್ಕೆ ದಯಮಾಡಿದ್ದರು ಆಗ [illegible]ಯಲ್ಲಿ ವೈಸ್‌ರಾಯಿಯವರಿಗೆ ಔತಣನಡೆಸಲ್ಪಟ್ಟಿತು. ಆಕಾಲದಲ್ಲಿ ಸುಮಾರು ೫೦ ಮಂದಿ ಯೂರೋಪಿಯನ್ ಅತಿಥಿಗಳು ಹಾಜರಿದ್ದರು. ಶ್ರೀಮನ್ಮಹಾರಾಜರವರು, ಅವರ ಸಹೋದರರಾದ ಸುಬ್ರಮಣ್ಯರಾಜೇ ಅರಸಿನವರು, ದಿವಾನರವರು, ಇತರೆ ಕೆಲವು ಅಧಿಕಾರಿಗಳು ವಗೈರೆ ಬಹುಮಂದಿ ಆಕಾಲದಲ್ಲಿ ನೆರೆದಿದ್ದರು. ಆ ಯುವರಾಜಾರೋಗ್ಯ ಪ್ರಾರ್ಥನಾಪೂರ್ವಕವಾದ ಪಾನಾನುತರ ದಿವಾನರವರು ಮಹಾರಾಜರವರಿಂದಾಜ್ಞಪ್ತರಾಗಿ ಸಂದರ್ಭೋಚಿತಗಳಾದ ಶಬ್ದಗಳಿಂದ ವೈಸ್‌ರಾಯಿಯವರ ಆಗಮನದಿಂದುಂಟಾದ ಸಂತೋಷಾತಿಶಯವನ್ನೂ, ಪ್ರಸಿದ್ಧವಾದ ಈ ಸಂಸ್ಥಾನವನ್ನು ಬ್ರಿಟಿಷರವರು ಜಯಿಸಿ, ಹ್ರಾಸವನ್ನೈದಿದ್ದ ರಾಜವಂಶವನ್ನುದ್ಧರಿಸಿ ಅದಂ ಅವರಿಗೊಪ್ಪಿಸಿ ರಾಜ್ಯಾಭಿವೃದ್ಧಿಯೊಳು ನಿರತರಾಗಿರತಕ್ಕ ವಿಷಯದಲ್ಲಿ ಉಂಟಾಗಿರುವ ಕೃತಜ್ಞತಾದಿ ಭಾವವನ್ನೂ, ಬ್ರಿಟಿಷ್ ರಾಜ್ಯತಂತ್ರಕ್ರಮವನ್ನನುಸರಿಸಿ ಪ್ರಭುತ್ವಮಾಡುವವರೊಳುಂಟಾಗಿರುವ ಬಹುವಿಧ ನಿರ್ಬಂಧಗಳನ್ನೂ, ಗವರ್ನರುಗಳ ಕಾಲದಲ್ಲಿ ಈ ದೇಶಾಭಿವೃದ್ಧಿಯ ಬಗ್ಗೆ ಮಾಡಲ್ಪಟ್ಟ ನೀರಾವರಿ, ವಿದ್ಯಾಭಿವೃದ್ಧಿ ವಗೈರೆ ಬಹುವಿಧ ಏರ್ಪಾಡುಗಳನ್ನೂ, ಕುರಿತು ತಿಳಿಸಿದರು. ತರುವಾಯ ವೈಸ್‌ರಾಯಿಯವರು ಮಹಾರಾಜರವರ ಶ್ರೇಯಃ ಪ್ರಾರ್ಥನಾ ಸೂಚಕವಾಗಿ ಪಾನವಂ ಗ್ರಹಿಸಲು ಪ್ರಕ್ರಮಿಸಿ ತಿಳಿಸಿದ ಅಂಶಗಳಪೈಕಿ ಪ್ರತಿಪದವೂ ಅರ್ಥಪುಷ್ಟಿಯುಳ್ಳದ್ದಾಗಿಯೂ, ಅನುಭವಪ್ರದರ್ಶಕವಾದದ್ದಾಗಿಯೂ ಇತ್ತು. ಪ್ರಾಕ್ತನಕಾಲದಲ್ಲಿ ಈ ದೇಶಕ್ಕೆ ಉಂಟಾಗಿದ್ದ ಮಹತ್ತುಗಳನ್ನು ಜ್ಞಾಪಿಸಿಕೊಂಡು ಅದುವರೆವಿಗೂ ವಿಶೇಷಣವರ್ಯಂತ ಅದು ಕ್ರಮೇಣ ಅಭಿವೃದ್ಧಿಯನ್ನೈದುತ ದೃಶ್ಯಮಾನವಾದ ಪ್ರಕೃತಸ್ಥಿತಿಗೆ ಬಂದಿರುವದಕ್ಕಾಗಿ ಮಹಾರಾಜರವರ ಭಾಗ್ಯವಿಶೇಷವಂ ಬಹಳವಾಗಿ ಕೊಂಡಾಡುವುದಲ್ಲದೆಯೂ, ಬ್ರಿಟಿಷರವರಿಂದ ವ್ಯವಸ್ಥಾಪಿತವಾದ ರಾಜ್ಯತಂತ್ರಕ್ರಮಕ್ಕೊಳಪಟ್ಟು ಪಾಲಿಸಲ್ಪಡತಕ್ಕ ನೇಟಿವ್ ಸಂಸ್ಥಾನವು ಇದು ಒಂದೆಯೆಂಬುದೂ, ತಾವು ಸಂಚಾರ ಮಾಡಿದ ನೇಟಿವ್ ಸಂಸ್ಥಾನಗಳು ಒಂದೊಂದು ವಿಷಯದಲ್ಲಿ ತಾರತಮ್ಯವುಳ್ಳದ್ದಾಗಿದ್ದರೂ, ಕೆಲವರು ಅರಸರು ತಮಗೆ ದೈವಾನುಗ್ರಹದಿಂ ಪ್ರಾಪ್ತವಾದ ಪದವಿಯ ಸ್ವರೂಪವನ್ನೂ ತತ್ಸಂಬಂಧ ಕರ್ತವ್ಯವನ್ನೂ ಚೆನ್ನಾಗಿ ಅರಿತವರಾಗಿದ್ದಾಗ್ಯೂ, ಇತರರು ಅವುಗಳ ವಿಷಯದಲ್ಲಿ ಅಲ್ಪಜ್ಞಾನವುಳ್ಳವರಾಗಿದ್ದರೂ, ಅವರೆಲ್ಲರೂ ಬ್ರಿಟಿಷ್ ಸರ್ಕಾರದವರಲ್ಲಿ ಅತ್ಯಂತ ಭಕ್ತಿ ಗೌರವವುಳ್ಳವರಾಗಿದ್ದಾರೆಂಬ ವಿಷಯಮಾತ್ರ ತಮಗೆ ಬಹಳ ನಂಬಿಕೆಯನ್ನೂ ಸಂತೋಷವನ್ನೂ ಉಂಟುಮಾಡುತ್ತದೆಂತಲೂ ತಿಳಿಸಿ ದೇಶವು ಅಭಿವೃದ್ಧಿ ಸ್ಥಿತಿಯೊಳಿರುವದಂ ಕೇಳಿ ಬಹಳವಾಗಿ ಕೊಂಡಾಡಿದರು.

ಬುಧವಾರದದಿನ ಬೆಳಗ್ಗೆ ವೈಸ್‌ರಾಯಿಯವರು ಮಹಾರಾಜರವರೊಡನೆ ಮೈಸೂರಿಗೆ ಐದು ಮೈಲುಗಳ ಫಾಸಲೆಯೊಳಿರುವ ಹಿರ್ಕರೆಯೆಂಬ ಪ್ರದೇಶಕ್ಕೆ ಮೃಗಯಾವಿನೋದಾರ್ಥ ದಯಮಾಡಿದ್ದು ೯ ಘಂಟೆಗೆ ಮೈಸೂರಿಗೆ ವಾಪಸುಬಂದರು ಮೈಸೂರಲ್ಲಿ ಕಟ್ಟಲ್ಪಡುವದಾಗಿರುವ ಮಾರ್ಕೆಟ್ಟಿಗೆ ಸವಿಾಪದೊಳು, ವೈಸ್‌ರಾಯಿಯವರ ಹೆಸರಿನಲ್ಲಿ ನಿರ್ಮಿಸಲ್ಪಡಬೇಕೆಂದುದ್ದಿಷ್ಟವಾಗಿದ್ದ ಒಂದು ಸರ್ವೀಸವರ ನಿರ್ಮಾಣಕಾರ್ಯವು ಲಾರ್ಡ್ ಡಫ್ರಿನ್‌ಯವರಿಂದ ಉಪಕ್ರಮಿಸಲ್ಪಟ್ಟು ಅವರ ಆಗಮನವು ಚಿರಸ್ಮರಣೀಯವಾಗಿರುವಕೆ ಅದು ಅವರ ಹೆಸರಿನಿಂದಲೇ ನೆಲೆಗೊಳಿಸಲ್ಪಟ್ಟಿತು. ತರುವಾಯ ಲೇಡಿ ಡಫರಿನ್‌ಯವರಿಂದ ಮಹಾರಾಜರವರ ಗರಲ್ಸ್‌ಸ್ಕೂಲ್ ವಿದ್ಯಾರ್ಥಿನೀಯರಿಗೆ ಬಹುಮಾನಕೊಡಲ್ಪಟ್ಟವು ಆಕಾಲದಲ್ಲಿ ಪಾಠಶಾಲೆಯ ಸಾಂವತ್ಸರಿಕ ರಿಪೋರ್ಟು ಓದಲ್ಪಟ್ಟಿತಲ್ಲದೆ ಬಾಲೆಯರು ಗಾನ ವಿದ್ಯೆಯಲ್ಲಿ ತಾವು ನಡೆದಿರುವ ಕುಶಲತೆಯನ್ನು, ನಾನಾಪ್ರಕಾರದಿಂ ವ್ಯಕ್ತಪಡಿಸಿದರು ಮೇಲೆ ತಿಳಿಸಲ್ಪಟ್ಟ ರಿಪೋರ್ಟಿನಮೂಲಕ ಈಗ ಸರಾಸರಿ ೬೩ ಮಂದಿ ಹುಡುಗಿಯರು ಓದುತ್ತಿರುವಂತೆಯೂ, [illegible] ಗಳ ಕಾಲದಲ್ಲಿ ಸದರೀ ಪಾಠಶಾಲೆಗಾಗಿ ೨೫೦೦ ರೂಪಾಯಿಗಳು ಖರ್ಚಾಗಿರುವಂತೆಯೂ, ಅದ್ರಪೈಕಿ ೧೪೩೩ ರೂಪಾಯಿಗಳು ಸರ್ಕಾರದಿಂದಲೇ ಕೊಡಲ್ಪಟ್ಟವೆಂತಲೂ ಮಿಕ್ಕ ಮೊಬಲಗು ಪ್ರಜೆಗಳಿಂದಲೂ, ದೇವರಾಜಬಹದೂರ್ ಧರ್ಮಛತ್ರದಿಂದಲೂ, ಆನರೆರಿ ಸೆಕ್ರೆಟರಿ ಮೆ|| ನರಸಿಂಹಯ್ಯಂಗಾರ್ಯರಿಂದಲೂ, ಕೊಡಲ್ಪಟ್ಟವೆಂತಲೂ, ಈ ವೃತ್ತ [illegible] ರೂಪಾಯಿಗಳು ಖಾತೆ ಮಿಕ್ಕ ಮೊಬಲಗೆಲ್ಲ ವಿದ್ಯಾರ್ಥಿನಿಯರಿಗೆ ಪಾರಿತೋಷಿಕವಾಗಿ ಕೊಡಲ್ಪಟ್ಟಿತೆಂಬುದೂ ತಿಳಿಯಬರುತದೆ

ವಿದ್ಯಾರ್ಥಿನೀಯರಿಗೆ ಇನಾಂಗಳು ಕೊಡಲ್ಪಟ್ಟಬಳಿಕ ವೈಸ್‌ರಾಯಿಯವರು ಅರಮನೆಗೆ ದಯಮಾಡಿದರು ಅಲ್ಲಿ ಕೊಡಗಿನಿಂದ ಬಂದಿದ್ದ ಪ್ರತಿನಿಧಿಗಳನ್ನು ಬರಮಾಡಿಕೊಂಡು ಅವರ ವಿಜ್ಞಾಪನಪತ್ರಿಕೆಯನ್ನಾಲೈಸಿ ಅದರೊಳು ತಿಳಿಸಲ್ಪಟ್ಟಿದ್ದ ಮುಖ್ಯವಿಷಯಗಳಿಗೆ ಸಂಗ್ರಹವಾಗಿ ಜವಾಬಕೊಟ್ಟರು ಅದರ ಸಾರಾಂಶವೇನಂದರೆ, ಕೊಡಗುದೇಶದ ತಾತ್ಕಾಲಿಕಸ್ಥಿತಿಯನ್ನು ಸಂದರ್ಶನದಿಂ ತಾವು ಚೆನ್ನಾಗಿ ಅರಿತಿರುವುದೆಯೂ, ಚರಿತ್ರ ಸಂಬಂಧಗಳಾದ ಯುದ್ಧದ ಪ್ರಾಶಸ್ತ್ಯಗಳಿಂದ ಕೊಡಗುದೇಶೀಯರು ಪ್ರತಿಷ್ಠೆಯುಳ್ಳವರಾಗಿದಾರೆಯೆಂದೂ ಅಂಗ್ರೇಜಿ ಶಾಸ್ತ್ರಸ್ತ್ಯಗಳಿಂದಪಕ್ಕೊ ಬಂಗ್ಲೆಗಳು [illegible] ತಮಗಲೂ, ಸ್ವಾತಂತ್ರ್ಯಗಳಾದ ಮತ್ತು ಸ್ವಾಭ್ಯಗಳಾದ ಕಾರ್ಯತಂತ್ರಕ್ರಮಿಸಿ ಜನಗಳ ಜಾತಿ ಮತಾಚಾರಗಳ ವಿಷಯದೊಳು ಇಷ್ಟ ಗವರ್ನಮೆಂಟಿನವರು ಯಾವದಾದರೆ ಆಡುತ್ತಿಲ್ಲ ಳಿಂದ ನಾಡುವರಾದರೆ ಅಂತಾಕಾಲವು ಶಾಶ್ವತ ಮಹಿತವಾದು ಬಾಧಿಸಲ್ಪಡವೇಕಾದ್ದು ಸಹಸ ವೆಂತಲೂ, ಆವ್ಯಕಗಳಾದಭಾಗಗಳಲ್ಲಿ ರೈಯತರಿ ವಿಸ್ತೀರ್ಣವನ್ನು ಬಲಪಡಿಸಬೇಕೆಂಬದೇ ಮಹಾರಾಜ್ಞೀ ಸರ್ಕಾರದವರ ಮುಖ್ಯೋದ್ದೇಶವೆಂತಲೂ, ವಿಜ್ಞಾಪನಪತ್ರಿಕೆಯಲ್ಲಿ ಸೂಚಿಸಲ್ಪಟ್ಟ ರಾಜಭಕ್ತಿ ಗೌರವ ವಿಶ್ವಾಸ ಪ್ರದರ್ಶಕಗಳಾದ ವಾಕ್ಯಾಬಾವವನ್ನು ಆಕೆಯ ಕರ ದಿವ್ಯಸನ್ನಿಧಿಯಲ್ಲಿ ವಿಜ್ಞಾಪಿಸುವಂತೆಯೂ ಕೊಡಗು ರಾಜ್ಯ ಸಂಬಂಧವಾದ ವಿನಿಮಯಗಳೊಂದೂ ನಡೆಸಲ್ಪಡಲಾರವೆಂಬವು, ಪ್ರತಿನಿಧಿಯವರಪೈಕಿ ಪ್ರಮುಖರಾಗಿದ್ದ ಮೆ. ಗಣಪತಿಯವರೊಡನೆ ಕೆಲ್ಪಕ್ಷಣಗಳವರೆಗೆ ಮಾತಾಡುತ್ತಿದ್ದು ಬಳಿಕ ಅವರೆಲ್ಲರಿಗೂ ಅನುಜ್ಞೆಯನ್ನಿತ್ತರು.

ಕೊಡಗು ಸಾಮಾಜಿಕರು ಹೊರಟುಹೋದಬಳಿಕ ಮೈಸೂರು ಪ್ರಜಾ ಪ್ರತಿನಿಧಿ ಸಮಾಜದವರಪೈಕಿ ಕೆಲವರು ಅಂದರೆ—ಮೆ ಅಡ್ವೋಕೇಟ್ ರಾಮಾಚಾರ್ಯರು, ಮೆ|| ಅಂಬ್ಳೇ ಅಣ್ಣಯ್ಯ ಪಂಡಿತರು, ವಗೈರೇರು ಬಂದು ತಮ್ಮ ವಿಜ್ಞಾಪನ ಪತ್ರಿಕೆಯನ್ನೋದಲು, ಅದಕ್ಕೆ ವೈಸ್‌ರಾಯಿಯವರು, ಸದರೀ ಪತ್ರಿಕೆಯಲ್ಲಿ ಸೂಚಿಸಲ್ಪಟ್ಟ ಸಾರ್ವತ್ರಿಕವಾದ ಸುಖ ಸಮಾಚಾರವಂ ಕೇಳಿ ಸಂತೋಷಿಸುವಂತೆಯೂ, ಈಗಿನ ಪ್ರಭುತ್ವಕ್ರಮದಿಂದೆಲ್ಲರೂ ಸಂತೃಪ್ತರಾಗಿರುವದೆಂದು ಹೇಳಿದ ಅಂಶವು ಕೇಳಲಿಕ್ಕೆ ಆಹ್ಲಾದಕರವಾಗಿರುವಂತೆಯೂ, ಐರೋಪ್ಯದೇಶದ ಅರಸರಪೈಕಿ ವಿದ್ಯಾವಿವೇಕ ನಾಗರಿಕ ಸಂಪನ್ನರಾದ ಅರಸರ ಪಾಲನೆಗೊಳಗಾದವು ಮೈಸೂರು ದೇಶೀಯರ ಭಾಗ್ಯವಿಶೇಷವೆಂದು ಸೂಚಿಸಿದ ಮಾತು ಆಶ್ಚರ್ಯವಪಡತಕ್ಕದ್ದಲ್ಲವೆಂತಲೂ, ಪ್ರಾಮುಖ್ಯ ರೆಯಿಲ್ವೇ ವಿಷಯವಾಗಿ ತಿಳಿಸಲ್ಪಟ್ಟ ಅಂಶ ಆಲೋಚಿಸಲ್ಪಡದಿರಲಾರದೆಂತಲೂ, ಪ್ರಸಿದ್ಧರಾದ ವಸ್ಕ್ರಿಪ್ಷನ್‌ಕರ್ತ, ಅಂದರೆ ಲಾರ್ಡ್ ರಿಪನ್‌ಯವರ ಅಧಿಕಾರ ಕಾಲದೊಳು ಲೋಕಲ್‌ಸೆಲ್ಫ್ ಅಭಿವೃದ್ಧಿಗಾಗಿಯೂ, ಕ್ಷಾಮ ನಿವಾರಣೆಗಾಗಿಯೂ ಪ್ರಬಲ ಏರ್ಪಾಡು ಮಾಡಲ್ಪಟ್ಟದೆಂದೋ ಪರಂತು ಪ್ರಾಯನಿಮಿತ್ತದಿಂ ಸದರೀ ಪ್ರಯತ್ನವು ಸಫಲವಾಗಲಿಲ್ಲವೆಂತಲೂ, ಐರೋಪ್ಯದೇಶೀಯರ, ತತ್ರಾಪಿ ಸ್ತ್ರೀಯರ ವಿದ್ಯಾಭಿವೃದ್ಧಿಯು ವಿಶೇಷ ಸಂತೋಷಕರವಾದದ್ದೆಂತಲೂ, ಇಂತಾ ವಿದ್ಯಾಬುದ್ಧಿ ವಿವೇಕ ಸಂಪನ್ನರಾದವರು ಮಹಾರಾಜರವರಿಗೆ ಆಲೋಚಕರಾಗಿರುವದಂ ಕಂಡು ತಾವು ಬಹಳ ಸಂತೋಷಿಸುವಂತೆಯೂ, ಅಂತಹರ ಸಹಾಯದಿಂ ಸಂಸ್ಥಾನಕ್ಕೂ ಮಹಾರಾಜರಿಗೂ ಸಹ ವಿಶೇಷ ಪ್ರಯೋಜನಕರವಾಗದೆ ಹೋಗಲಾರದೆಂತಲೂ ಸೂಚಿಸಿದರು.

ಈ ದೇಶದ ಕಾಫಿ ಪ್ಲಾಂಟರ್‌ಗಳ ತರಫ ಬಂದಿದ್ದ ದೊಡ್ಡಮನುಷ್ಯರು ತಮ್ಮ ವಿಜ್ಞಾಪನ ಪತ್ರಿಕೆಯನ್ನೊಪ್ಪಿಸಿ ತನ್ಮೂಲಕ ಶ್ರೀಮನ್ಮಹಾರಾಜ್ಞೀಯವರಲ್ಲಿಯೂ ಅವರ ಪ್ರತಿನಿಧಿಯಾದ ವೈಸ್‌ರಾಯಿಯವರಲ್ಲಿಯೂ ತಮಗಿರತಕ್ಕ ನಿರ[illegible]ಗಳಾದ ಭಕ್ತಿ ಗೌರವ ವಿಶ್ವಾಸಗಳನ್ನು ಸಮುಚಿತ ಶಬ್ದಗಳಿಂ ವ್ಯಕ್ತಪಡಿಸಿ, ವ್ಯಾ[illegible] ನಗಳಾಗಿಯೂ, [illegible] ಗಳಾಗಿಯೂ, ಸ್ವಾತ್ರಯೋಜನಪರರಗಳಾಗಿಯೂ ಇರತಕ್ಕ ವಿಷಯಗಳಲ್ಲಿ ಯಾವಾಗಲೂ ಐಕ್ಯ ಗಹನ [illegible] ಅವಮಾನ [illegible] [illegible] ಪ್ರತಿನಿಧಿಯಾಗಿ ನೀವು ಈಗ ಕಳುಹಿಸಲ್ಪಟ್ಟ ಬಂದಿರುತ್ತೀರಾ [illegible] ಮಹಾರಾಜ್ಞೀಯವರಲ್ಲಿಯೂ, ಅವರ ಪ್ರತಿನಿಧಿ ಎಲ ವಲ್ಲಿಯೂ, [illegible] ಗಳನ್ನು ಚಕ್ರವರ್ತಿನೀಯವರಿಗೆ [illegible] [illegible] ವ್ಯಾಪಾರ [illegible] ಗಳ ವಿಷಯ [illegible] ತಾವು [illegible] [illegible]

[illegible] ಸರ್ವ ಶ್ರೀಕಂಠರಾಯರು [illegible] ಗುರುಮಾ [illegible] ಶ್ರೀರಂಗಪಟ್ಟಣಕ್ಕೆ ದಯಮಾಡಿ ಅಲ್ಲಿ ದರ್ಶನೀಯಗಳಾದ [illegible] ಚರಿತ್ರಸಂಬಂಧಗಳಾದ ವಿಷಯಗಳನ್ನೆಲ್ಲ ಕಟಾಕ್ಷಿಸುತ, ಶೂರರಾದ ಬಹುಮಂದಿ [illegible] ಪ್ರವರ್ತನಕ್ಕೆ [illegible] ಗಳಾಗಿದ್ದ ಅಂಶಗಳನ್ನೆಲ್ಲ ಸ್ಮರಿಸಿಕೊಂ[illegible] ಮೇಲ್ಪಟ್ಟ ಕಾವೇರಿ [illegible] ದಯಮಾಡಿದುದು, ಸಮುದ್ರ [illegible] ರಾಜ್ಞೀ ಪ್ರತಿನಿಧಿಯನ್ನು ಗೌರವ ಪುರಸ್ಸರವಾಗಿ ಬರಮಾಡಿಕೊಳ್ಳುವುದಕ್ಕೆ ಇಲ್ಲಿನ ಮಿಲಿಟರಿ ಸ್ಟೇಷನ್ನಲ್ಲಿರುವ ಮಿಸ್ಟರ್ ಬ್ರಿಟಿಷ್ ಸೈನ್ಯವೂ ಮಹಾರಾಜರವರ ಸೈನ್ಯವೂ ರೈಲ್ವೇ ಸ್ಟೇಷನಿನ ಬಾಹ್ಯಾಂಗಣದಲ್ಲಿ ಕಾದಿದ್ದವು ಸರ್ಕಾರುಬಂಗಲೆಯ ದಕ್ಷಿಣ ದಿಗ್ಭಾಗದಲ್ಲಿ ಪ್ರಾನಿನೆಪಾಲಿಟಿಯವರಿಂದ ವಿರಚಿಸಲ್ಪಟ್ಟ ರಮಣೀಯ ವಿನ್ಯಾಸ ಶೋಭಿತವಾದ ಮಂಟಪದಲ್ಲಿ ಮ್ಯೂನಿಸಿಪಲ್ ಪ್ರೆಸಿಡೆಂಟರು ಕಮಿಷನರ್‌ಗಳು ಮೊದಲಾದ ಬಹುಮಂದಿ ನೇಟಿವ್ ದೊಡ್ಡಮನುಷ್ಯರು ಕಾದಿದ್ದರು. ವೈಸ್‌ರಾಯಿಯವರ ಆಗಮನ ಸೂಚನಾರ್ಥ ಅವರ ಗೌರವಾನುಗುಣವಾಗಿ ಪದ್ಧತಿಪ್ರಕಾರ ೩೧ ತೋಫೆ ಹಾರಿಸಲ್ಪಟ್ಟವು ಲಾರ್ಡ್ ಡಫ್ರಿನ್‌ಯವರು, ತಮ್ಮ ಭಾರ್ಯೆಯೊಡನೆ ದಿವ್ಯಾಸ್ತ್ರಗಳಿಂದಲಂಕೃತವಾಗಿ ಸನ್ನದ್ಧವಾಗಿದ್ದ ರಾಜಾರ್ಹವಾದ ರಥದಲ್ಲಿ ಕುಳಿತು ಸ್ಟೇಷನ್ನಿಂದ ಪಾರ್ಶ್ವಾಂಗರಕ್ಷಕರೊಡಗೂಡಿ ಹೊರಟು ತಮ್ಮ ಆಗಮನಾರ್ಥ ಮಾಡಲ್ಪಟ್ಟಿದ್ದ ರಾಜಮಾರ್ಗದ ಪರಿಷ್ಕರಣಾದ್ಯಲಂಕಾರಗಳಂ ವೀಕ್ಷಿಸಲು ಮೋದಿಸುತ ತಮ್ಮ ಸಂದರ್ಶನಾರ್ಥ ಮಾರ್ಗಪಾರ್ಶ್ವಗಳಲ್ಲಿಯೂ ಬಂದು ಕಾದಿದ್ದ ಅನೇಕ ಸಹಸ್ರ ಪ್ರಜೆಗಳ ಕಣ್ಣಿಗೆ ಆಹ್ಲಾದವನ್ನುಂಟುಮಾಡುತ ಕ್ರಮವಾಗಿ ಮೇಲೆಕಂಡ ಚಪ್ಪರಕ್ಕೆ ದಯಮಾಡಿ ಅಲ್ಲಿ ಪ್ರೆಸಿಡೆಂಟರಾದ ಮೆ. ಶ್ರೀನಿವಾಸಾಚಾರ್ಯರಿಂದ ಓದಲ್ಪಟ್ಟ ವಿಜ್ಞಾಪನ ಪತ್ರಿಕೆಯನ್ನಾಲೈಸಿ ಅದಕ್ಕೆ ಉತ್ತರರೂಪವಾಗಿ, ವಿಜ್ಞಾಪನ ಪತ್ರಿಕೆಯಲ್ಲಿ ಕಾಣಿಸಿರುವಂತೆ ಉಪಪತ್ತಿ ವಿಷಯದಲ್ಲಿ ಯದ್ವಿಷಮವಾದ ಕೊರತೆಯೂ ತಮ್ಮ ದೃಷ್ಟಿಗೆ ಕಂಡುಬರಲಿಲ್ಲವೆಂತಲೂ, ದೇಶವು ಸುಭಿಕ್ಷವಾಗಿ ಜನಗಳು ಸುಖ ಸಮಾಧಾನದಿಂದಿರುವ ವೃತ್ತಾಂತವು ಬಹಳ ಸಂತೋಷವನ್ನುಂಟುಮಾಡಿತೆಂತಲೂ, ಸರ್ ಸಿಡಿ ಸಪ್ಟೋ ಮಾರ್ಷ ಮಾತಲ್ಪಟ್ಟ ವಿಷಯದಲ್ಲಿ ತಮಗೆ ಬಹಳ ಸಂತೋಷವೆಂತಲೂ, ಮುಂದೆ ರಾಜ್ಯ ಸಹಾಯವು ಮಾಡಲಿಕ್ಕೆ ಇಂಡ್ಯಾಗವರ್ನಮೆಂಟಿನವರ ಬುದ್ಧ್ಯಾಳವೃತ್ತಿಯು ಕಾಲ ದೇಶಸ್ಥಿತಿಯಿಂ ನಿಜವಾಗಿತೋರುವಪಕ್ಷದಲ್ಲಿ ಹಾಗೆಮಾಡಲು ಯಾವಾಗಲು ಸನ್ನಿದ್ಧರಾಗಿರುವರೆಂತಲೂ, ದೇಶವು ಈಗ ಅಭಿವೃದ್ಧಿಯನ್ನೈದುತಲಿರುವಂತೆ ತಿಳಿಸುವದರಿಂದ ಅಂ[illegible] ಪ್ರಜಾದೀನಗಳಾಗಿರುವವರಿಂದ ಅದು ಅವರು ಬಲಪಡಿಸಿಕೊಳ್ಳಬೇಕೆಂದೂ ತಿಳಿಸಿದರು ತರುವಾಯ ಗವರ್ನಮೆಂಟ್ ಸಂಸ್ಕೃತವಿದ್ಯಾರ್ಥಿನೀಯರು ಕೆಲವರು ಲಾರ್ಡ್ ದಫ್ರಿನ್‌ಯವರ ಮತ್ತು ಅವರ ಭಾರ್ಯೆಯವರ ಸುಸ್ವಾಗತ ಸೂಚಕವಾದ ಗಾನವನ್ನು ಶ್ರಾವ್ಯವಾಗಿ ಮಾಡಿ ಅವರಿಗೆ ಪುಷ್ಪ[illegible] ಬಳಿಕ ಬ್ರಿಟಿಷ್ [illegible] ಗಳು ಗೀತೆ [illegible] [illegible]

[illegible]

ಉಭಯಪಾರ್ಶ್ವಗಳಲ್ಲಿಯೂ ದ್ವಾರತೋರಣ [illegible] ಗಳಿಂದಲೂ, ಪತಾಕೆ [illegible] ಪಟ್ಟಿರುವ [illegible] ಗಳಿಂದಲೂ [illegible] ಅಲಂಕೃತವಾಗಿ [illegible] ಕಲ್ಯಾಣಮಂಟ[illegible] ಲಕ್ಷ್ಮೀ [illegible] ದ (ಸ್ವಾಗತ[illegible]) ಎಂಬ [illegible] ಅಲಂಕಾರಯುಕ್ತವಾಗಿಯೂ, [illegible] ದಿವಾನಂ ಪ್ರವೇಶಿಸಿ ಅಲ್ಲಿನವರಿಂ ವಿಜ್ಞಾಪನಪತ್ರಿಕೆಯಂಕೈಗೆ ಕೊಂಡು ಅವರಿಂದಪೇಕ್ಷಿತಗಳಾದ ಜಲಪಸತ ಸ್ವದೇಶ ಪರಿಪಾಲನಾಧಿಕಾರ, ನ್ಯಾಯ ಸಂಪಾದನಾನುಕೂಲತೆ (ಅಪೀಲ್ ಕೋರ್ಟ್ ಏರ್ಪಾಡು) ಮೊದಲಾದ ವಿಷಯಗಳಿಗೆಲ್ಲ ಅನುಕೂಲಗಳಾದ ಉತ್ತರಗಳಮೂಲಕ ಅವರು ಸಂತೃಪ್ತಿಗೊಳಿಸಿ, ಅಲ್ಲಿ ಏಕಕಾಲದೊಳು ನೆರೆದಿದ್ದ ವಿದ್ಯಾರ್ಥಿ ಸಮೂಹವನ್ನು ಅನುಸರಿಸುತ ರೆಸಿಡೆನ್ಸಿಬಂಗ್ಲೆಗೆ ದಯಮಾಡಿದರು. ಅದೇದಿನ ರಾತ್ರಿ [illegible] ರೆಸಿಡೆನ್ಸಿಬಂಗ್ಲೆಯಲ್ಲಿ ಪ್ರಬಲವಾದ ಡಿನ್ನರ್ ನಡೆಯಿತು. ಶುಕ್ರವಾರದ ದಿನಬೆಳಗ್ಗೆ ಪರೇಡ್‌ಗ್ರೌಂಡಿನಲ್ಲಿ ಸೈನಿಕ ಪಾಠಕಲಾಪ್ರದರ್ಶಕಗಳಾದ ವ್ಯಾಯಾಮಕವಾಯತ್ತನ್ನು ನೋಡಿ ಸಂತೋಷಿಸಿ ಅಲ್ಲಿಂದ ಮೇಯೋಹಾಲಿಗೆ ದಯಮಾಡಿ, ಅಲ್ಲಿ ಒಪ್ಪಿಸಲ್ಪಟ್ಟ ಸ್ವಾಗತಪೂರ್ವಕವಾದ ವಿಜ್ಞಾಪನಪತ್ರಿಕೆಯಂ ಪರಿಗ್ರಹಿಸಿ ಅಲ್ಲಿಂದ ಕಂಟೋನ್ಮೆಂಟ್ ಪೈಕಿ ಕೆಲವು ಪ್ರದೇಶಗಳನ್ನು ಕಟಾಕ್ಷಿಸುತ ಅಲಸೂರುಪೇಟೆಯಮಾರ್ಗವಾಗಿ ರೆಸಿಡೆನ್ಸೀಬಂಗ್ಲೆಗೆ ವಾ

ದಸ್ ದಯಮಾಡಿದರು. ಆದಿನ ಸಾಯಂಕಾಲ ಎಲಹಂಕದ ಬಾಗಿಲು ಮಾರ್ಗವಾಗಿ ಕೋಟೆಗೆ ಹೋಗಿ ಅಲ್ಲಿನವರ ಸತ್ಕಾರವನ್ನು ಮನ್ನಿಸಿ ಲಾಲ್‌ಬಾಗನ್ನು ನೋಡಿಕೊಂಡು ಬಂಗ್ಲೆಗೆ ಸವಾರಿ ಚಿತ್ತೈಸಿದರು. ಮೊನ್ನೆ [illegible] ದಿನ ಮುಧ್ಯಾಹ್ನಾನಂತರ ಈ ಸಂಸ್ಥಾನದ ದಿವಾನರಾದ ಮ. ಶೇಷಾದ್ರಿ ಅಯ್ಯರವರಿಗೂ, ಸಾಬಿಕ್ ದಿವಾನ್ ಪೂರ್ಣಯ್ಯನವರ ಪ್ರಪೌತ್ರರಾದ ಮ. ಕೃಷ್ಣಮೂರ್ತಿಯವರಿಗೂ ವೈಸ್‌ರಾಯಿಯವರು ಕೆಲವು ಕ್ಷಣಗಳಕಾಲ ಪ್ರತ್ಯೇಕವಾಗಿ ಭೇಟಿಯನ್ನಿತ್ತು ಗೌರವಿಸಿದರೆಂದು ತಿಳಿಯಲಾದೆವು. ಶನಿವಾರದಿನ ರಾತ್ರಿ ೮ ಘಂಟೆಗೆ ವೈಸ್‌ರಾಯಿಯವರು ಸ್ಪೆಷ್ಯಲ್ ಟ್ರೈನಿನಲ್ಲಿ ತಿರುಚನಾಪಲ್ಲಿಗೆ ದಯಮಾಡಿದರು. ಲೇಡಿ ಡಫ್ರಿನ್‌ಯವರು ಮಾತ್ರ ಬೆಂಗಳೂರು ಪಟ್ಟಣದಿಂದ ನಾಳೆಯದಿನ ಬರತಕ್ಕ ಪುತ್ರೀ ಪುತ್ರರು ಬರುವಾಪೇಕ್ಷೆಯಿಂದ ಮುಕ್ಕಾಂ ಮಾಡಿದರು. ಬುಧವಾರದಿನ ದಕ್ಷಿಣ ಕನ್ನಡದ ಕಡೆಗೆ ದಯಮಾಡುವರೆಂದು ನಿಶ್ಚಯವಾಗಿರುತಿದೆ.

ಈ [illegible] ಪೇಟೆ ಮತ್ತು ದಂಡಿನ [illegible] ನಿಂದ ವೈಸ್‌ರಾಯಿ [illegible] ಸಂಗತಿಗಳು [illegible] ಇಲ್ಲಿನ [illegible] ಸಾಹುಕಾರರು, [illegible] ಮುಖ್ಯರಾದ ದೊಡ್ಡ ಮನುಷ್ಯರಿಂದಲೂ ಸೇರಿ ಮಾಡಿದ ಮಹಾಸಭೆ, ಅಲಂಕಾರ, [illegible] ವನ್ನೂ, [illegible] ಮಾಡಿದ್ದು ಮಾತ್ರವಲ್ಲವೆ [illegible] ಗಳಿಗೆ ಪಿರ ಪರ [illegible] ಗೋಸ್ಕರ [illegible] ಅಗತ್ಯವಾಗಿರುವದಕ್ಕಾಗಿ [illegible] ಬಾಧ್ಯರಾಗದೆ [illegible]

Occasional Notes

ಪ್ರಸಂಗೋಚಿತ ವಾರ್ತೆಗಳು.

The Hon. W. W. Hunter, C. S. I.—ಆನರೇಬಲ್ [illegible] ಯವರು [illegible] ರಿಂದ [illegible] ಹೋಗಿ [illegible] ಸದರೀಯವರು [illegible] ದೈಗೆ [illegible]

The [illegible]—[illegible] ಜೆನಿಯಸ್ [illegible] ಹೋಗುತ್ತಿರುವ [illegible] ಯನ್ನು [illegible] ಮಹೋದಯಗಳು [illegible] ರೈಫರ್‌ಬಾದ [illegible] ತಮ್ಮ ಕೈಲ್ [illegible] ದರು [illegible] ಪ್ರೋವಿನ್ಸಿನ [illegible] ಟಿ [illegible] ಕ್ಷೇತ್ರ [illegible]

Closing of Cantonments—[illegible] ಶರ್ಮಾ [illegible] ಗಾರಿಸನ್ [illegible] ಮಹಾ [illegible] ಸ್ಟೇಷನ್ [illegible] ದೇಶಗಳ [illegible] ಪ್ರಮಾಣ [illegible] ದೇಶನ [illegible] ಸೇರ್‌ಜೆಂಟ್ [illegible] ಪ್ರೆಸಿಡೆನ್ಸಿ ಗವರ್ನರಾಗಿ ಮೊಕದ್ದಮ್ಮೆ [illegible] ಬರುವ [illegible] ರಿ ಲೆಫ್ಟಿನೆಂಟ್ [illegible] ಯವರು [illegible] ಬಂದು ಸೇರುವರು.

A Legislative Council to the N. W. Provinces.—ವಾಯವ್ಯದೇಶದ ಗವರ್ನಮೆಂಟಿನ [illegible] ಗುರ್ರೇಕಾಲೀಬ್‌ [illegible] ಸ್ವಾಯತ್ತ ಸಂಬಂಧ [illegible] ಮುಂಜಾಗ್ರತೆಯಾಗಿ [illegible] ಗವರ್ನ್‌ಮೆಂಟ್ ಗೆಜೆಟಿನಲ್ಲಿ [illegible] ಸವರಿಸಿಕೊಂಡ ಲೆಫ್ಟಿನೆಂಟ್ ಗವರ್ನರವರು ಸದರೀ ಸಭೆಗೆ ಒಂಬತ್ತುಮಂದಿ ಮೆಂಬರ್‌ಗಳನ್ನು ನಿರ್ಧಾರ ಮಾಡಿಕೊಳ್ಳುವರು.

Sir Charles Turner, C. S. I.—ಹಿಂದೆ ಮದರಾಸ್ ಹೈಕೋರ್ಟ್ ಚೀಫ್ ಜಡ್ಜಿಯರಾಗಿದ್ದು ನಿವೃತ್ತಿ ಸುಖಾನುಭವದಬಗ್ಗೆ ಸ್ವದೇಶಕ್ಕೆ ಹೊರಟುಹೋದ ಸರ್ ಚಾರ್ಲಿಸ್ ಟರ್ನರ್, ಸಿ. ಎಸ್. ಐ. ಯವರು ಲಾಪಬ್ಲಿಕ್ ಕಮಿಷನ್‌ಬಗ್ಗೆ ಯೇರ್ಪಟ್ಟ ಸಂಘದಲ್ಲಿ ಒಬ್ಬ ಮೆಂಬರಾಗಿ ನಿಯಮಿಸಲ್ಪಟ್ಟರಷ್ಟೆ. ಸದರೀಯವರು ಈದಿನ ಮುಂಜೈಗೆ ಬಂದು ಈತಿಂಗಳ ೧೫ನೇ ತಾರೀಖಿನಲ್ಲಿ ಲಾಹೂರಿನಲ್ಲಿ ಅವ್ವಲ್‌ದಫಾ ಸಭೆಸೇರುವಕಾಂಕ್ಷೆ ಸರಿಯಾಗಿ ಅಲ್ಲಿಗೆ ಹೋಗಿ ಸೇರುವರು. ಸದರೀಯವರು ಪ್ರಕೃತ ಕೆಲಸದಲ್ಲಿರುವ ಪರಿನಿಗೆ ಮಾಹೆಯಾನಾ ೭,೦೦೦ ರೂಪಾಯಿಗಳಮೇರೆ ಅವರಿಗೆ ರುಸುಂ ಸಲ್ಲುವದೆಂಬ ಪ್ರವಾದ ವುಂಟಾಗಿದೆ.

The Hyderabad police.—ಹೈದರಾಬಾದ್ ಸಂಸ್ಥಾನದಲ್ಲಿ ಪ್ರಕಟಿಸಲ್ಪಡುವ ಒಂದಾನೊಂದು ಪತ್ರಿಕೆ ಹೇಳುವದೇನೆಂದರೆ—ಆದೇಶದ ಡಿಸ್ಟ್ರಿಕ್ಟುಗಳಲ್ಲಿ ಈಗ ಸಂಚಾರ ಮಾಡುವಂಥಾವರು ಯಾರೇ ಆಗಲಿ, ಅಷ್ಟು ಅಲ್ಪಕಾಲದೊಳಗಾಗಿ ಇಲ್ಲಿನ ಪೊಲೀಸ್ ಇಲಾಖೆಯಲ್ಲಿ ಉಂಟಾಗಿರುವ ಬದಲಾವಣೆಯನ್ನು ನೋಡಿ ಆಶ್ಚರ್ಯಪಡದೆ [illegible] ಹಿಂದಿನ ಕ್ರಮಗಳೆಲ್ಲವು ಸಂಪೂರ್ಣವಾಗಿ ಬದ್ಲು ನಿಜಾಮರವರ ಪೊಲೀಸು [illegible] ಸೇರು ಇಷ್ಟು ಸಮರ್ಥವಾದದ್ದಾಗಿ ಕಂಡುಬರುವದನ್ನು ನೋಡುವದು ಬಹಳ ಸಂತೋಷಕರವಾದ ಸಂಗತಿ, ಎಂದು.

Influx of famine emigrants into Berars.—ಬಾಂಬೇ ಗೆಜೆಟ್ ಪತ್ರಿಕೆಯು ಬಿರಾರ್ ಬಾದಲಿನವರು ಬರೆಯುತ್ತಾನೆನುವದೇ—ಸೆಂಟ್ರಲ್ ಪ್ರಾವಿನ್ಸಸ್ ಯೆಂಬ ಮಧ್ಯರಾಷ್ಟ್ರದಲ್ಲಿ ಕ್ಷಾಮ ಪೀಡಿತವಾದ ಪ್ರದೇಶಗಳಿಂದ ಜನಗಳು ಬಿರಾರಿಗೆ ಬರುತ್ತಿರುವದು ಇಲ್ಲಿನವರಿಗೆ ಅಪ್ರಿಯವಾದ ಚಿಂತೆಯನ್ನುಂಟುಮಾಡಿಲ್ಲವು. ಹೀಗಿರುವಲ್ಲಿ ಲಭ್ಯವಾದ ವಾರ್ತೆಗಳು ವಿಸ್ತಾರವಾಗಿ ಮುಂದೆ ಪೊಡಲಾದ ಪ್ರದೇಶಗಳಿಗೆ ಪ್ರಸ್ತಾಪಗುತ್ತ ದೇಶದಲ್ಲಿ [illegible] ಕಮ್ಮಿಯಾಗುತ [illegible] ಮಧ್ಯರಾಷ್ಟ್ರದ ಚೀಫ್ ಕಮಿಷನರ [illegible] ವಿರವಾದ ಪ್ರದೇಶಗಳಲ್ಲಿ [illegible] ಕಾಮಗಾರಿಗಳನ್ನು ಪ್ರಾರಂಭಿಸಿರುತ್ತಾರೆ [illegible] ಎಂದು.

CORRESPONDENCE

ಮಹಾರಾಜಶ್ರೀ ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸನ್ನಿಧಾನಕ್ಕೆ

ಅಯ್ಯಾ—ಪ್ರಿಯಮಿತ್ರರಾದ ಎಡಿಟರವರೆ! ಗತವಾರದ ತಮ್ಮ ಪತ್ರಿಕೆಯಲ್ಲಿ ಮೈಸೂರುವೃತ್ತಾಂತ ದರ್ಪಣ" ಎಂಬ ಹೆಸರಿನಿಂದ ಹೊರಡುವ [illegible] ವಿಷಯವಾಗಿ ಬರೆದು ವಿಸ್ತಾರಪಡಿಸಿರುವ ಸಂಗತಿಗಳೆಲ್ಲವೂ ಹೃದಯಾ [illegible] ಗಳಾದವುಗಳೇಸರಿ. ಆದರೆ ಪ್ರಸಿದ್ಧ ಪತ್ರಿಕೆಗಳು ವಹಿಸಿರುವ ಸಂಕಲ್ಪಗಳನ್ನೆಲ್ಲ ತತ್ಕಾಲ [illegible] ನಿರ್ವಹಿಸುವದರಿಂದಲೂ, ನಿರ್ವಿಘ್ನವಾಗಿಯೂ, ಜರಿಗಿಸುತ್ತಿರುವ ದಾರಿಯೇ ಗೋಚರಿಸುವಂತೆ ಅನ್ನುವ ಪೆರುಗೆ ಉಂಟಾದವಾಗ ಕಾಣುವರು. ವಿಷಯಗಳು ನಮ್ಮ ತಿಳುವಳಿಗೆ ಬಾರದಿರುವ ಸಂದರ್ಭಗಳಲ್ಲಿ ಯತ್ನವಿಲ್ಲ, ಮಿಕ್ಕಾದ ಎಲ್ಲಾ ಸಂದರ್ಭಗಳಲ್ಲಿಯೂ ನಮ್ಮಿಂದ ಸಾಧ್ಯವಾದಷ್ಟು, ನಮಗೆ ಅನುಕೂಲವಾಗಿಯೇ ಯಿದ್ದುಕೊಂಡು ಪ್ರತಿಜ್ಞಾಪಾಲನೆಯಂ ಮಾಡುವದರಲ್ಲಿ ಕಿಂಚಿತ್ತೂ ಸಂದೇಹವಿಲ್ಲ.

ಚಂದಾವಿಷಯಕವಾದ ನಿಬಂಧನೆಯಲ್ಲಿ ಸ್ವಯಂ ಅವಮಾನವನ್ನೂ ಜನರಿಗೆ ಭೀತಿಯನ್ನೂ ಉಂಟುಮಾಡಿದೆವೆಂಬುದಕ್ಕೆ, ಪುಸ್ತಕಾಸಹಾಯನೆಂಬ ಸಾಧ್ಯವನ್ನು ಕೊಡಬೇಕಾಗಿದೆ. ಆದರೆ ಸ್ವಲ್ಪವು ದೂರದೃಷ್ಟಿ ಆಲೋಚನೆಯಿಲ್ಲದೆ, ಅನಾಯಾಸದಿಂದ ಮಹಾಪ್ರಕೃತಿಯನ್ನು ವಹಿಯಬೇಕೆಂಬ ಆತುರದಿಂದಾಗಿ ಸದರೀ ಪುಸ್ತಕದ ಸಹಾಯನಿಧಿಗೆ ಸೇರಿದ್ದ ಮೆಂಬರ್‌ಗಳ ಅವಸ್ಥೆಯನ್ನು ಕುರಿತು ಎಷ್ಟುಸಂಚಿಕೆಗಳು ಬರೆದರೆ ತಾನೆ ಸಾಧ್ಯವಾದೀತು? ಆ ಪುಸ್ತಕದ ರಾಮಾಯಣವನ್ನು ನಮ್ಮ ಪತ್ರಿಕಾದ್ವಾರಾ ಆಗಾಗ್ಗೆ ಉದಹರಿಸುವದರಾಗಿದ್ದೇವೆ. ಅವರ ಮೆಂಬರ್‌ಗಳಲ್ಲಿ ಮುಕ್ಕಾಲು ಮೂರುವೀಸಪಾಲು ಜನರು ಹೆಂಗಸರೇ ಆಗಿಯಿದ್ದರು. ಉಳಿದ ವೀಸಪಾಲು ಜನರಾದ ಗಂಡಸರಾದರೋ ಹೆಂಗಸರ ಬುದ್ಧಿಗಳ ಗಿಂತಲೂ ಕಡಿಮೆಯಾದ ಬುದ್ಧಿಯುಳ್ಳವರಾಗಿದ್ದರೆಂಬುವದು ಅವರು ಹೋದದಾರಿಯೇ ಉದ್ಘೋಷಿಸುತ್ತಿರುವಲ್ಲಿ ನಮ್ಮ ಹೇಳಿಕೆಯು ಅನಾವಶ್ಯಕವೆಂತಲೇ ಹೇಳಬೇಕು. ಚಿನ್ನ ಬೆಳ್ಳಿ ನಗಗಳನ್ನು ಒತ್ತೆಯಿಟ್ಟು ನೀಕದ ೧—೦ ರುತೆ ಬಡ್ಡಿಕೊಡಲು ಒಪ್ಪಿ ಸಣ್ಣಯಾರ್ಜಿ ಸಾಲವನ್ನು ಕೇಳುವಸಜ್ಜನರಿಗೆ ಕೊಡಲಾರದೆ ಹಿಂದುಮುಂದು ನೋಡುತಲಿದ್ದ ಯುಕ್ತಿವಂತರು ಒಂದೇವರುಷ ಕಾಲದಲ್ಲಿ ದವಳ್ಳಿಗುಣಕವನ್ನು ಕೊಡುವೆವೆಂದು ಹೇಳಿದ ಮಾತುಗಳಿಗೆ ಮರುಳಾಗಿ ಮೋಸಹೋದರೆ ಅದಕ್ಕೆ ಯಾರು ಏನುಮಾಡ್ಯಾರು? ಅವರಂತೆಗೆ ಸದೃಶವಾದ ಫಲವೇ ಅವರಿಗೆ ಲಭಿಸಿತು. ಅತ್ತ ಸಾವಿರಮಾಡಿದರೆ ನೋಡುವ ಕಾಪರ ಮಾದು [illegible] ಎಂಬುದನ್ನು ಸ್ಪಷ್ಟವಾಗಿ ಹೇಳಬಹುದೇ? ಎಂದಿಗೂ ಹೇಳಲಿಕ್ಕಾಗುವದಿಲ್ಲ. ಮೇಲ್ಕಂಡ ಆಕ್ಷೇಪಣೆಗಳೊಡನೆ ನಮಗೆ ಬಹುಮಂದಿ ಜನರು [illegible] ಒಪ್ಪಿಸುತ್ತಾರಲ್ಲವೆ (ಎಂದಿಗೂ) ಎಂಬ ಪದಕ್ಕೆ ಅರ್ಥವನ್ನು ಸಹ ಹೇಳುತ್ತಾರೆಯಾಗಿ, ಅದಾಗ್ಯೂ ತಾವು ಸ್ವಲ್ಪಅವಕಾಶವನ್ನು ಕೊಡಿಸಿದರೆ ನಮ್ಮ ಪತ್ರಿಕೆಯು ಏಕಾವಾಗಿಯೇ ನಮ್ಮ ಅಭಿಪ್ರಾಯವನ್ನು ಪ್ರಕಟಿಸಲು ಅಪೇಕ್ಷಿಸುತ್ತೇವೆ. ಕಾರ್ಯ ಪ್ರಯತ್ನದಲ್ಲಿ ಕುಪಕರಗಳ [illegible] ಮಾತುಗಳಲ್ಲದ ಅಲಂಕರಗಳ [illegible] ಮಾತುಗಳನ್ನುಚ್ಚರಿಸಬಾರದೆಂಬ ಹಿರಿಯರ ಬುದ್ಧಿವಾದಗಳನ್ನು ಸ್ಮರಣೆಗೆ ತಂದು ಪ್ರಬುದ್ಧಪತ್ರಿಕೆಯಲ್ಲಿ ವ್ಯಕ್ತಗೊಳಿಸಲು ಹಿಂಜರಿದೆನಲ್ಲದೆ ಮತ್ಯಾವ ಎಣಿಕೆಯಿಂದ ಲ್ಲ [illegible] ಪತ್ರಿಕೆಯು ಚಿರಕಾಲ ಉಜ್ಜೀವಿದವಾಗಿ ನಡೆಯುತಲಿರಬೇಕೆಂಬ ಅಭಿಪ್ರಾಯದ ಶ್ರೇಯ [illegible] ಕರವನ್ನಾಗಿ [illegible] ಸಾಯುತ್ತಿದ್ದ [illegible] ಪ್ರಯತ್ನಗಳೆಲ್ಲವನ್ನೂ ನಡೆಸುತಲಿದ್ದೇವೆ. ದೈವಸಂಕಲ್ಪವು ಹ್ಯಾಗಿರುವದೋ ಅದನ್ನು ತಿಳಿಯಲು ನಾವು ಸಮರ್ಥರೇ? ತಮ್ಮಂತಾ ಮಹಾನುಭಾವರ ಅನುಗ್ರಹದ ಬಲದಿಂದ ನಮ್ಮ ಪ್ರಯತ್ನಗಳೆಲ್ಲವು ಕೈಗೂಡುವದೆಂಬ ಭರವಸೆಯು ನಮಗೆ ಬಲವಾಗಿದೆ. ಹಾಗೂ ಒಂದುವೇಳೆ ಯತ್ನವು ಕಾರ್ಯವು ಅರ್ಧದಲ್ಲಿಯೇ ಭಂಗವಾಗುವಂತೆ ದೈವಸಂಕಲ್ಪ ವಿದ್ದರೆ ಪತ್ರಿಕಾದಿಂಬ ಕಳೆದು [illegible] ಮನುಷ್ಯಗಳೊಳಗಾಗಿ ಪತ್ರಿಕೆಯು ನಿಂತುಹೋಗುವ ಸಂದರ್ಭದಲ್ಲಿ (ಕಾಕ್ಷಿಕವಾಗಿಯೇ ನಡೆಯುವಂತೆ ಹಿರಿಯರು ಅನುಗ್ರಹಿಸಲಿ) ದೊಡ್ಡವರ ಸಹಾಯಮಾಡಿರುವ ದ್ರವ್ಯದಲ್ಲಿ ಸಹ ಆರ್ಧವು ವಾಪಸ್ ಮಾಡಲಾಗುವದು ಎಂಬ ಅಂಶವನ್ನು ನಾವು ದೃಢವಾಗಿ ಹೇಳುತ್ತೇವೆ. ಎಂದೆಂದಿಗೂ ಅಂದರೆ ಕುಪಿನಿದಾಯುವವರಿವಿಗೂ, ಯತ್ನೀಕರು ಸಜೀವಿಗಳಾಗಿರುವವರಿಗೂ, ಪತ್ರಿಕೆಯು ನಡೆಯುತಲಿರುವವರಿಗೆ ಆ ಎಂಬ ಅರ್ಥಗಳುದ್ಯೋತಕಗಳಲ್ಲದೆ ಬೇರೆಯಿಲ್ಲವು. ಅಯ್ಯಾ ಎಡಿಟರವರೇ, ಈ ಪತ್ರಿಕೆಯಬಲದಿಂದ ನಾವು ದ್ರವ್ಯಾರ್ಜನೆಮಾಡಿ ನಹಾಗಯೇ ಅಲ್ಲವೆ ನಾವು ದ್ರವ್ಯಾರ್ಜನೆಯಂ ಮಾಡುವದು. ವಿಷ್ಟವು ದೂರಕ್ಕೆ ಸುಣ್ಣಗಿರುವಹಾಗಿದೆ, ಹತ್ತಿರಕ್ಕೆಹೋದರಲ್ಲವೆ ಅದರ ನಿಜಸ್ಥಿತಿಯು ಗೊತ್ತಾಗುವದು. ಪತ್ರಿಕಾಪ್ರಚಾರಮಾಡುವವರಿಂದ ವಿಶೇಷ ದ್ರವ್ಯಸಂಪಾದನೆ ಆಗುವದೆಂದು ಅನೇಕರು ಭ್ರಾಂತಿಪಡುತಲಿದ್ದಾರೆ. ಅದರಲಿ [illegible] ಅವರಿಗೆ ಚೆನ್ನಾಗಿ ತಿಳಿಯದದೇ [illegible] ನಾವು ಅಂತವರನ್ನು ನಿಂದಿಸಲಾರೆವು. ಪ್ರಿಯಮಿತ್ರರೇ, ತಾವು ಯಾವ ವಾಕ್ಯಕ್ಕೆ [illegible] ಲಿದ್ದಿರೋ ಅದೇ ವಾಕ್ಯ [illegible] ನ [illegible] ಕ್ಕೆ ನಾವು ಹೊಣೆಯಾಗಲು ಆರಂಭ ಮಾಡುವವರಾಗಿದ್ದೇವೆಯೇಹೊರ್ತು ಬೇರೆಯಾವವಿಧವಾದ ತಾತ್ಪರ್ಯದಿಂದಲೂ ಅಲ್ಲ. ಪ್ರಸವವೇದನೆಯನ್ನು ಬಂಜೆಯೊಡನೆ ಕೇಳಿಕೊಂಡರೆ ಅದನ್ನು ಗ್ರಹಿಸಿ ವ್ಯಾಖ್ಯಾನಿಸಬಲ್ಲಳೆ. ಪ್ರಸವವೇದನೆಯಂತೆ ಅಂತರ್ಗತವಾಗಿರುವ ಈ ಮಹದ್ದುಃಖವನ್ನು ತಮ್ಮಂತಾ ಅನುಭವಶಾಲಿಗಳಾದವರು ಬಲ್ಲರಲ್ಲದೆ ಎಲ್ಲರಿಗೂ ತಿಳಿಯಪಡಿಸುವದು ಅಸಾಧ್ಯವಾಗಿರುವದರಿಂದ ಈಅಂಶದನ್ನೇ ಕುರಿತು ವಿಶೇಷವಾಗಿ ನಾವು ಉಪನ್ಯಾಸಮಾಡುವದರಿಂದ ಫಲವು ತೋರಲಿಲ್ಲವು.

ತಮ್ಮವಿಧೇಯನಾದ,

B. Soobba Row,

ಮೈಸೂರು ವೃತ್ತಾಂತ ದರ್ಪಣ, ಮೈಸೂರು.

ಅಯ್ಯಾ—ಈಕೆಳಗೆ ಬರೆಯುವ ಕೆಲವು ಅಂಶವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲು ಅವಕಾಶಕೊಡಬೇಕೆಂದು ವಿನಯದೊಡನೆ ಬೇಡಿಕೊಳ್ಳುತ್ತೇನೆ.

ನಿರ್ವಾತ್ಸಲ್ಯದೊಡನೆ ಯಿದ್ದ ಈ ಮಲೆನಾಡು ತಾಲ್ಲೂಕುಗಳು ಖೂನಿ ಮತ್ತು ದುರ್ಮರಣಗಳಿಗೆ ತೌರಮನೆಯಾಗಿಯಿರುವದಕ್ಕಾಗಿ ವ್ಯಸನಪಡಬೇಕಾಗಿದೆ.

ಈ ವರ್ಷದಲ್ಲಿ ಸಾಗರ ಮತ್ತು ಸೊರಬ ದತಾಲ್ಲೂಕುಗಳಲ್ಲಿ ನಾಲ್ಕು ಖೂನಿಗಳು ಮತ್ತು ಅನೇಕ ದುರ್ಮರಣಗಳು ಪ್ರಾಪ್ತವಾದವು. ಖೂನಿಗಳ ಪತ್ತೇಮಾಡುವದಕ್ಕೆ ನಮ್ಮ ಅಸಿಸ್ಟೆಂಟ್ ಕಮಿಷನರ್ ಮ|| ನರಸುದೀಕ್ಷಸಾಹೇಬರವರು ಬುದ್ಧಿ ಪ್ರದರ್ಶಿಸುವರಾದರು. ಆದರೆ ಒಂದುಖೂನಿಯಲ್ಲಿ ಖೂನಿಮಾಡಿದವನು ಹುಚ್ಚುಹಿಡಿದವನೆಂತಲೂ ಮತ್ತೊಂದುಕೇಸಿನಲ್ಲಿ ಖೂನಿಮಾಡಿದವರು ತಾವುನಡೆಸಿದ ಕೃತ್ಯವನ್ನು ಸ್ಪಷ್ಟೀಕರಿಸಿಕೊಡಲಿಲ್ಲವೆಂತಲೂ, ಇನ್ನೊಂದುಕೇಸು ಪತ್ತೇಯಿಲ್ಲವೆಂದಲೂ ವೈಸಲಾದವು. ನಾಲ್ಕನೇದೊಡ್ಡದರಲ್ಲಿ ಸದರೀ ಪೊಲೀಸ್ ಅ|| ಕ|| ಸಾಹೇಬರವರು ಬುದ್ಧಿ ಪ್ರದರ್ಶಿಸಲಿಲ್ಲವಾಗಿ ಸದರೀಕೇಸು ಅದ್ಯಾಪಿ ಸಾಗರದ ಮುನಸಿಫ್‌ಕೋರ್ಟಿನಲ್ಲಿ ತೂಗಡಿಸುತ್ತಾಯಿದೆ. ಯಿದ್ದಾಗ್ಯೂ ಹೊಸದ್ದವನ್ನು ಪತ್ತೇಹಿಗೆ ತಪ್ಪಿತಸ್ಥರಿಗೆ ಶಿಕ್ಷೆ ಆಗದೆಯಿದ್ದಾಗ್ಯೂ ನಡೆವಕೃತ್ಯ ಯೆಲ್ಲರಿಗೂ ತಿಳಿಯುವಹಾಗೆ ಆಯಿತು.

ಈ ಸಾಗರ ಮತ್ತು ಸೊರಬದ ತಾಲ್ಲೂಕುಗಳಲ್ಲಿ ಜ್ವರೋಪದ್ರವ ಬಹಳವಾಗಿ ವ್ಯಾಪಿಸಿ ಕಟಾವಿಗೆ ಪದಗಿಯಿರುವ ಬತ್ತದಪೈರು ಕುಯ್ಯಲು ಅವಕಾಶವಿಲ್ಲವಾಗಿಯಿದೆ. ಇದುವರಿಗೆ ಈಜ್ವರದಿಂದ ಜನನಾಶ ಇಲ್ಲವಾದಾಗ್ಯೂ ಅಕಸ್ಮಾತ್ ಮರಣದ ಹಿಯರಿಂಗ್ ಸಮೀಪದಲ್ಲಿ ಇಟ್ಟುಕೊಂಡಿರುವದಾಗಿ ಕೇಳುತ್ತೇನೆ. ಶಿವಮೊಗ್ಗೆ ಷಹರಿನಲ್ಲಿ ಸಹ ಈ ಪ್ರಸವದ್ರವ ಬಹಳ ಅಪಾಯಕರವಾಗಿಯಿದೆಯೆಂತ ಕೇಳಲು ವಿಷಾದಿಸುತ್ತೇನೆ.

ಇಲ್ಲಿನ ಅಸ್ಪತ್ರೆ ಅಸಿಸ್ಟೆಂಟರಾಗಿಯಿದ್ದ ಮಿಸ್ಟರ್ ರಂಗರಾಮಾನುಜನಾಯಿಡರವರು ಕಾಪಿಲೆ ಸಬಬು ಹಾಸನಕ್ಕೆ ವರ್ಗವಾಗಿ ದಯಮಾಡುವ ವೇಳೆ ಅವರಿಗೆ ಬಹುಮಾನ ಮಾಡುವದ್ದಿಕ್ಕೆ ರೀಡಿಂಗ್‌ರೂಮಿನ ಪ್ರೆಸಿಡೆಂಟರಾದ ಮ|| ರಾ|| ಮುನಸಿಫ್ ನರಸಿಂಹಯ್ಯಂಗಾರ್ರವರು ಸ್ಪೆಷಿಯಲ್ ಮೀಟಿಂಗ್‌ಮಾಡಿ ಸದರೀ ನಾಯಿಡರವರಿಗೆಪುಷ್ಪ ತಾಂಬೂಲ ಒಪ್ಪಿಸಿ ಮನೋಹರವಾದ ಒಂದು ಪ್ರಸಂಗಸಹ ಮಾಡುವರಾದರು. ಸುತರಾಂ ನಡತೆಯನ್ನು ಅರಿಯದ ಈ ಮಲೆನಾಡು ಪ್ರದೇಶದಲ್ಲಿನ ಜನಗಳಲ್ಲಿ ನಾಗರಿಕತೆಯನ್ನುಂಟುಮಾಡಲು ಇದು ಒಳ್ಳೇದಾಬಲೆಯಾಗಿರುತ್ತೆ. ಇಂತಾ ಸಾರ್ವಜನೋಪಯುಕ್ತವಾದ ರೀಡಿಂಗ್‌ರೂಮಿಗೆ ಯಥಾಶಕ್ತಿ ಸಹಾಯವನ್ನುಮಾಡಿ ಜನೋಪಕಾರವನ್ನು ಮಾಡುತ್ತಾ ಸುಖಪಡದೆ ಏನೋ ಒಂದು ದುರಾಗ್ರಹದಿಂದ ಸುಮ್ಮನೆಯಿರುವವರು ದುರಾಭ್ಯಸ್ತರೆಂತಲೇ ಹೇಳಬೇಕಲ್ಲವೆ?

ಈ ಸಾಗರವು ಬಹಳ ವ್ಯಾಪಾರಸ್ಥಳವಾಗಿಯೂ ಮಲೆನಾಡಿನಲ್ಲಿ ಮಧ್ಯರಂಗವಾಗಿಯೂ ಇರುವ ಸಬಬು ಇಲ್ಲಿ ಗಂಧದಕೋಟೆಯನ್ನ ಇಟ್ಟರಲ್ಲಿ ಪಡಿ ಸರಕು ಜಮಾಯಿಸಲು ಮತ್ತು ಅವನ್ನ ಶತ್ತೇಮಾರಿ ಮೂಲಕ ಬೊಂಬಾಯಿಗೆ ಸಾಗಿಸಲು ಅನುಕೂಲಯಿರುವ ಸಬಬು ಈ ವಿಷಯವನ್ನೆ ನಮ್ಮ ಡೆಪ್ಯುಟಿ ಕಮಿಷನರ್ ಸಾಹೇಬರವರು ತಮ್ಮ ಘನವಾದ ಚಿತ್ತಕ್ಕೆ ತರುವರೆಂದು ನಂಬುತ್ತೇನೆ

ಳೊತ್ತುತುಂಬುವರಗಳು ಗುಂಪ್ರಕೇರಿ ತಾವ್ರಾರಿನಲ್ಲಿ ಒಬ್ಬ ಬ್ರಾಹ್ಮಣ ವಿಧವಾಸ್ತ್ರೀಯನ್ನು ಘಟ್ಟದೊಳಗೆ ಸಾಗಿಸಿಕೊಂಡುಹೋಗುವ ಇರಾದೆಯಿಂದ ಆಕೆಯನ್ನು ಮನೆಯಿಂದ ದುರೆಮಾಡಿ ಎರಡನೆ ಗ್ರಾಮಕ್ಕೆ ಸಾಗಿಸಿಕೊಂಡುಹೋದ ಮಾರನೇ ದಿವಸ ಪೋಲೀಸಿನವರ ಸಹಾಯದಿಂದ ಆಕೆಯನ್ನು ಪತ್ತೇಮಾಡಿ ಕರೆತಂದರು. ಆದರೆ ಮನೆಯ ಯಜಮಾನನು ಆಕೆಯನ್ನು ಸ್ವೀಕರಿಸಿಕೊಳ್ಳಬಹುದೆಂದು ಚಿಂತಿಸುತ್ತಾಯಿರಲಾಗಿ ಸದರೀ ಹೆಂಗಸು ತಾನು ಓಡಿಹೋಗಿ ಇದ್ದ ಗ್ರಾಮಕ್ಕೆ ಸಮೀಪವಾಗಿ ಇರುವ ಒಂದು ಪುಣ್ಯತೀರ್ಥದ ಸ್ನಾನಕ್ಕೋಸ್ಕರ ಹೋಗಿಯಿದ್ದದ್ದೇ ಶಿವಾಯಿ ದುಶ್ಯಾಸಯರಾದಿಯಿಂದಲೂ ಅಲ್ಲವೆಂದು ಹೇಳಿದ ಹಬ್ಬು ಆಕೆಯನ್ನು ಅನುಕೂಲವಾಗಿಸ್ಸನೆ ಮನೆಯಲ್ಲಿಯಿಟ್ಟುಕೊಳ್ಳಲು ಅವಕಾಶವಾಯಿತು. ಈಗಿನ ನಾಗರಿಕತೆಯಲ್ಲಿ ಇದು ಅತಿಶಯವಾದ ಕೆಲಸವೆಂದು ಹೇಳಲು ಕಾರಣವಿಲ್ಲ.

ಸಾಗರ. } ತಮ್ಮ ವಿಧೇಯನಾದ,
೧೮—೧೧—೮೬. } ಬಾತಮಿದಾರ.

SUMMARY OF NEWS.
ವೃತ್ತಾಂತ ಸಂಗ್ರಹವು.

The Raja of Venkatagiri.—ಘನವರನ್ನು ಹೊಂದಿದ ವೆಂಕಟಗಿರಿ ಅರಸರವರು ಈತಿಂಗಳ ಗುತ್ರೀ ತಾರೀಖು ಬುಧವಾರದದಿನ ಪ್ರಾತಃಕಾಲ ಮದರಾಸಿಗೆ ಬಂದರು.

The new Sheriff.—ಮ|| ಪಿ. ಎಸ್. ರಾಮಸ್ವಾಮಿ ಮೊದಲಿಯಾರ್ರವರು ಮದರಾಸ್ ಷರೀಫ಼ ಕೆಲಸಕ್ಕೆ ನೇಮಕರಾಗ್ತಲ್ಪಟ್ಟಿರುವಂತೆ ಮುಂದಿನ ಫ್ರೋರ್ಟ್ ಸೇಂಟ್‌ಜಾರ್ಜ್ ಗೆಜೆಟಿನಲ್ಲಿ ಪ್ರಾಯಶಃ ಪ್ರಕಟವಾದಲ್ಪಡುವದು.

Another Banquet to the Governor.—ಮದರಾಸ್ ಗವರ್ನರಾದ ಸರ್. ಗ್ರ್ಯಾಂಟ್ ಡಫ಼ರವರಿಗೆ ಮ. ಪಿ. ಎಸ್. ರಾಮಸ್ವಾಮಿಮೊದಲಿಯಾರ್ರವರು ಬೀಚಿನಲ್ಲಿರುವ ತಮ್ಮ ವಾಸಗೃಹದಲ್ಲಿ ಬರುವಳಿಯದಿನ(ಶನಿವಾರ) ಔತಣಮಾಡಿಸುವರು.

The Madras Small Cause Court.—ಮದರಾಸ್ ಸ್ಮಾಲ್‌ಕಾಸ್‌ಕೋರ್ಟಿನ ಎರಡನೆಯ ಜಡ್ಜಿಯಾದ ಮ. ಪಿ. ಶ್ರೀನಿವಾಸರಾಯರವರು ಬರುವ ಸಪ್ತಾಹಮಾರ್ಚಿ ಆದಿಭಾಗದಲ್ಲಿ ಪೆನ್ಶನ್ ಮೇಲೆ ತಮ್ಮ ಕೆಲಸದಿಂದ ನಿವೃತ್ತರಾಗುವರೆಂದು ಹೇಳಿಕೊಳ್ಳುತ್ತಾರೆ.

A tragedy at Shulur.—ಕಳೆದ ತಿಂಗಳ ೨ನೇ ತಾರೀಖು ಪ್ರಾತಃಕಾಲ ೯ಘಂಟೆಗೆ ಮದರಾಸ್ ಶೂಲೆಯಲ್ಲಿ ಒಂದು ಖೂನಿಯಾಯಿತು ಹ್ಯಾಗೆಂದರೆ—ಒಬ್ಬ ಸೋಲ್ಜರನು ತನ್ನ ಹೆಂಡತಿಯನ್ನು ಹಿಡಕೊಂಡು ಅವಳನ್ನು ಎತ್ತಿ ನೆಲದಮೇಲಿಕ್ಕಿ ಕತ್ತಿಯಿಂದ ಅವಳ ಕುತ್ತಿಗೆಯನ್ನು ಕುಯಿದುಹಾಕಿದನು. ಅವಳ ತಾಯಿಯು ಈ ಅನ್ಯಾಯವನ್ನು ತಪ್ಪಿಸುವದಕ್ಕೆ ಯತ್ನಿಸುವದರೊಳಗಾಗಿ ಸದರೀ ಘಾತುಕನು ಹೆಂಡತಿಯನ್ನು ಕಡಿದುಹಾಕಿಬಿಟ್ಟು ಅತ್ತೆಯಮೇಲೆ ತಿರುಗಿಬಿದ್ದು ಅವಳ ಕೈಮೇಲೂ ಕೆನ್ನೆಯಮೇಲೂ ಬಲವಾದ ಗಾಯಗಳು ಮಾಡಿದನು. ಅವಳು ಬಾಯಿಬಡಕೊಳ್ಳಲು ಸದರೀಯವನು ಪರಾರಿಯಾದನು. ಅವನಿನ್ನೂ ಪತ್ತೇಯಿಲ್ಲವು. ಈ ವಿಷಯವನ್ನು ಕುರಿತು ಪೋಲೀಸ್ ದರ್ಯಾಫ್ತು ನಡೆಯುತಲಿದೆ.—ಮೆಯಿಲ್.

ಅಮೇರಿಕದೊಳಗೆ ನ್ಯೂಯಾರ್ಕ್ ಯೆಂಬ ಪಟ್ಟಣದಲ್ಲಿ ಒಬ್ಬ ಯೂರೋಪಿಯನ್ ಲೇಡಿಗೆ ಎರಡು ಕೈಗಳಿಲ್ಲದೆ ಇರಲು, ಅವಳನ್ನು ಯಾರೂ ಲಗ್ನಮಾಡಿಕೊಳ್ಳುವದಕ್ಕೆ ಒಪ್ಪದೆ ಇರುತ್ತಿದ್ದಳು. ಆದರೆ ಒಬ್ಬ ಯೂರೋಪಿಯನು ಅವಳ ಸುಂದರವಾದ ರೂಪಕ್ಕೆ ಮೋಹಪಟ್ಟು ಲಗ್ನಮಾಡಿಕೊಳ್ಳುವದನ್ನು ನಿಶ್ಚಯಮಾಡಿದನು. ವಿವಾಹದ ದಿವಸ ದಂಪತಿಯರು ಪರಸ್ಪರರಿಗೆ ಕರಾರ್ ಬರಕೊಡುವ ಪದ್ಧತಿಯು ಯೂರೋಪಿಯನ್ ಜನರೊಳಗೆ ಇರುವ ಪ್ರಯುಕ್ತ ಅದರಂತೆ ಅವರ ಸಾಕ್ಷಿಯು ಎರಡು ಕರಾರ್ ಕಾಗದಗಳನ್ನು ಬರೆಯಲು ವರನು ತನ್ನ ದೇಹದ ಬರೆದ ಕರಾರಿಗೆ ಸಹಿ ಮಾಡಿ ಹೆಂಡತಿಯು ಸಹಿ ಕೊಡ್ಬೇಕೆಂದನು. ಈ ಹೆಂಡತಿಗೆ ಸಹಿ ಮಾಡುವದಕ್ಕೆ ಕೈಯಿಲ್ಲ. ಆವಾಗ ಅವಳು ತನ್ನ ಕಾಲ ಬೆರಳಸಂದಿಗೆ ಲೇಖಣಿಯನ್ನು ಸಿಗಿಸಿಕೊಂಡು ಉತ್ತಮವಾದ ಅಕ್ಷರಗಳಿಂದ ಸಹಿ ಮಾಡಿದಳು. ಜಗತ್ತಿನಲ್ಲಿ ಜನರು ಉಂಗುರಗಳನ್ನು ಕೈ ಬೆರಳಿನಲ್ಲಿರುತ್ತಾರೆಯಷ್ಟೆ? ಇವಳು ಕಾಲ ಬೆರಳಿನಲ್ಲಿಡುತ್ತಿದ್ದಳು; ಊಟ ಮುಂತಾಗಿ ಇತರರು ಕೈಯಿಂದ ಮಾಡುತ್ತಿರುವ ಸಾಧಾರಣ ಕೆಲಸಗಳನ್ನೆಲ್ಲ ಅವಳು ಕಾಲಿನಿಂದಲೇ ಮಾಡುತಿದ್ದಳಂತೆ; ನೋಡಿರಿ !! ಚಿಕ್ಕಂದಿನಿಂದ ಹ್ಯಾಗೆ ಸಾಧನೆ ಇಡುತ್ತಾರೋ ಅದರಂತೆ ದೇವರು ಅನುಕೂಲಿಸುತ್ತಾನೆಂಬದರಲ್ಲಿ ಸಂಶಯವಿಲ್ಲ.

Resignation of Nawab Salarjung.—ಅಡ್ವೊಕೇಟ್ ಆಫ್ ಇಂಡಿಯಾಯೆಂಬ ಪತ್ರಿಕೆಯ ಹೈದರಾಬಾದ್ ಬಾತಮಿದಾರನು ಕಳೆದತಿಂಗಳ ೨ನೇ ತಾರೀಖಿನಲ್ಲಿ ಬರೆಯುತ್ತಾನೇನ ನಡೆ—ಕಳೆದತಿಂಗಳ ೨ನೇ ತಾರೀಖು ಶನಿವಾರದದಿನ ವೈಸರಾಯಿಯವರು ನಿಜಾಮರವರೊಡನೆ ಮಾತನಾಡಿದಸಂದರ್ಭದಲ್ಲಿ ಸಾಲಾರ್‌ಜಂಗರವರನ್ನು ಮಂತ್ರಿಕೆಲಸದಿಂದ ನಿವೃತ್ತಿಮಾಡಬೇಕೆಂದು ನಿಜಾಮರವರಿಗೆ ಉಂಟಾಗಿರುವ ಅಭಿಪ್ರಾಯವನ್ನು ಜಾರೀಯಲ್ಲಿತರುವದಕ್ಕೂ ಅವರಸ್ಥಾನಕ್ಕೆ ಅಮಿರೇ ಕಬೀರ್‌ಯವರ ಕುಟುಂಬಕ್ಕೆ ಸೇರಿದವರೊಬ್ಬರನ್ನು ನಿಯಮಿಸುವದಕ್ಕೂ ತಾವು ಸಮ್ಮತಿಸುವವಾಗಿ ನಿಜಾಮರವರಿಗೆ ತಿಳಿಸಿಯಿರುತ್ತಾರೆ. ನವಾಬ್ ಸಾಲಾರ್ ಜಂಗರವರು ನೌಕರಿಯಿಂದ ನಿವಾಲಸ್ ಮಾಡಲ್ಪಡತಕ್ಕವರಾಗಿದ್ದು ಗವರ್ನರ್ ಜನರಲ್‌ಯವರ ಅಧಿಕಾರಬಲದಿಂದ ರಾಜೀನಾಮ ಕೊಡುವದಕ್ಕೆ ಅವಕಾಶಕೊಡಲ್ಪಟ್ಟರು. ಸಾಲಾರ್‌ಜಂಗರವರ ವಿಷಯದಲ್ಲಿ ಸಾಮಾನ್ಯವಾಗಿ ಎಲ್ಲರಿಗೂ ಅನುತಾಪವುಂಟಾದಾಗ್ಯೂ ಈ ಕೆಲಸಕ್ಕೆ ಕಾರಣಭೂತರಾದ ಬಹುಮಂದಿ ಅವರ ಆಪ್ತರವಿಷಯದಲ್ಲಿ ಪಶ್ಚಾತ್ತಾಪಪಡುವರೆಂದು ಬರುವದಿಲ್ಲವು. ಸದರೀ ಆಪ್ತರಜನರು, ನಿಜಾಮರವರ ಅಭಿಪ್ರಾಯವನ್ನು ಮಂತ್ರಿಯವರು ಪ್ರತಿಭಟಿಸುವವಿಷಯದಲ್ಲಿ ಪ್ರೋತ್ಸಾಹಕರಾಗಿದ್ದರಲ್ಲದೆ ಮಂತ್ರಿಯವರಿಗೆ ಸೈತ ಸಹಾಯಕರೆಂದು ಸಹ ತಿಳಿಸುತಿದ್ದರು. ಇದರದೆಸೆಯಿಂದ ಇಂಗ್ಲೀಷುಗವರ್ನಮೆಂಟಿನವರು ದಮ್ಮಕಸ್ಯೆಗೆ ಪ್ರೋತ್ಸಹಕರಾಗುವರೆಂಬ ಭರವಸೆಯನ್ನು ಸಾಲಾರ್‌ಜಂಗರವರು ಉಂಟುಮಾಡಿದ ಕೆಲಸವು ವ್ಯರ್ಥವಾಯಿತು. ಇಂಡ್ಯ ಗವರ್ನಮೆಂಟ್ ಫಾರಿನ್ ಸೆಕ್ರೆಟರಿಯಾದ ಮೆ|| ಡ್ಯೂರಾಂಡ್‌ಯವರು ಇನ್ನು ಕೆಲವುದಿನಗಳವರೆಗೆ ಇಲ್ಲಿಯಿರುತ್ತಾರೆ. ನವಾಬ್ ಖುರ್ಷೀದ್‌ಜಾಯವರೋ ಅಥವಾ ಅವರ ಸಹೋದರರಾದ ವೈಕಾರುಲ್ ಉಮರಾಯವರೊ ಅಥವಾ ಒಬ್ಬರೂ ಸೇರಿಯೊ ಮಂತ್ರಿಕೆಲಸದಲ್ಲಿ ನಿಯಮಿಸಲ್ಪಡುವರೆಂಬ ಅಂಶವೂ ಇನ್ನೂ ನಿಶ್ಚಯವಾಗಲಿಲ್ಲವು. ಖುರ್ಷೀದ್‌ಜಾಯವರು ನಿಯಮಿಸಲ್ಪಡುವದಕ್ಕೆ ಅವಕಾಶಗಳು ಬಹಳ ತರವಾಗಿರುತಿದೆ. ವೈಕಾರುಲ್ ಉಮರಾಯೆಂಬವರನ್ನು ನಿಯಮಿಸಬೇಕೆಂದು ನಿಜಾಮರವರಿಗೆ ಇಚ್ಛೆಯಲ್ಲಿರುವಂತೆ ತಿಳಿಯಬರುತಿದೆ. ಈಗ ನಾಲ್ಕು ಘಂಟೆಯ ಸಮಯವಾಗಿದ್ದಾಗ್ಯೂ ನಿಜಾಮರವರು ತಮ್ಮ ಅಭಿಪ್ರಾಯವನ್ನು ಹೊರಪಡಿಸಲಿಲ್ಲವು. ಬರುವ ಈ ದಿವಸ ಸಾಯಂಕಾಲ ದರ್ಬಾರು ಮಾಡಿ ಆಕಾಲದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವರೆಂದು ಹೇಳಿಕೊಳ್ಳುತ್ತಾರೆ. ಸದರೀ ದರ್ಬಾರಿನಲ್ಲಿ ಮೆ. ಡ್ಯೂರಾಂಡ್‌ಯವರು ಹಾಜರಿರುವರು. ಸಾಲಾರ್‌ಜಂಗರವರು ತಮ್ಮ ಕೆಲಸದಲ್ಲಿ ಕಾಯಂಯಿರುವದಕ್ಕೆ ಸ್ವಲ್ಪ ಅವಕಾಶವುಂಟೆಂಬ ಪ್ರವಾದವಿದೆ. ಆದಪಕ್ಷಕ್ಕೆ ಬೇರೆಯೊಬ್ಬರು ಅವರಿಗೆ ಸಹಾಯಕರಾಗಿ ನಿಯಮಿಸಲ್ಪಡುವರು, ಎಂಬದು.

ಸೇವಾವೃತ್ತಿ ಹಾಗೂ ಗುಲಾಮತನವು ಇವೆರಡೂ ಒಂದೇವರ್ಗದವುಗಳಾದರೂ, ಗುಲಾಮತನವು ಸೇವಾವೃತ್ತಿಯಕ್ಕಿಂತಲು ಕಡಿಮೆದರ್ಜೆಯದೆಂದು ಬಹುಜನ ಸರ್ವರು ಒಪ್ಪಿಕೊಳ್ಳುತ್ತಾರೆ. ಸರಿ; ಆದರೆ ಇತ್ತಕಡೆಗೆ ಕಾಲವ್ಯಸನೀಯ್ಯದಿಂದ ಸೇವಾವೃತ್ತಿಯು ಕೀಳುಸ್ಥಿತಿಯನ್ನು ಹೊಂದಿದಂತೆ ನಮ್ಮ ಕಣ್ಣುಗಳಿಂದ ನೋಡಿ, ಕಿವಿಗಳಿಂದ ಕೇಳುವದಲ್ಲದೆ ಅನುಭವಕ್ಕೆ ಸಹ ಬಂದಿರುವದು ನೋಡಿರಿ. ಇತ್ತಕಡೆಗೆ ಸ್ವದೇಶೀಯರು ತಮ್ಮ ಕುಲಧರ್ಮವನ್ನು ತ್ಯಜಿಸಿ ರಾಜಭಾಷಾ ಕಲಿತು ವಿದ್ವಾನರಾಗಿ ಪರರ ಸೇವಾ ವೃತ್ತಿಯನ್ನು ಅಪೇಕ್ಷಿಸಿ ಸರ್ಕಾರದಲ್ಲಿ ಎಂತಾದ್ದೇ ಆಗಲಿ ಒಂದು ನೌಕರಿ ಸಂಪಾದಿಸುತ್ತಾರೆ. ಸರ್ವರು ಇದೇ ಮಾರ್ಗ ಅವಲಂಬಿಸುವದನ್ನು ಕಂಡು ಗೌರಕಾಯಸ್ಥರು ನಮ್ಮನ್ನು ಯಾವಪ್ರಕಾರ ನಡೆಸುತ್ತಾರೆಂಬದನ್ನು ಕುರಿತು ಸ್ವಲ್ಪ ಆಲೋಚನೆ ಮಾಡಿದರೆ ಮೈಮೇಲೆ ನವಿರು ಏಳದೆ ಇರಲಾರದು. "ಯಥಾರಾಜಾತಥಾಪ್ರಜಾ" ಎಂಬ ವಾಕ್ಯಕ್ಕೆ ಸರಿಯಾಗಿ ಇಂಗ್ಲೀಷರು ನಮ್ಮನ್ನು ಹ್ಯಾಗೆ ಕೀಳರೆಂದು ನೆನಸುತ್ತಾರೋ ಹಾಗೇವೇ ನಮ್ಮಲ್ಲಿ ಸುಶಿಕ್ಷಿತರಿಂದ ರಾವ್‌ಸಾಹೇಬ್ ರಾವ್ ಬಹದ್ದೂರ್ ಪದವಿಗೆ ಏರಿದವರಲ್ಲಿ ಕೆಲವರು ಅವರಂತೆ ವರ್ತಿಸಲಾರಂಭಿಸಿರುವದು ಬಹಳ ಆಶ್ಚರ್ಯವಾಗುತದೆ. ಪರದೇಶಸ್ಥರಾದ ಇಂಗ್ಲೀಷಿನವರಿಗಿಂತಲೂ ನಮ್ಮವರೇ ನಮಗೆ ಬಾಧಕರಾಗಿದ್ದಾರೆ.

ಇಂಗ್ಲೀಷಿನವರ ಸುಗುಣಗಳ ಮಾದರಿಯನ್ನು ತೆಗೆದುಕೊಳ್ಳದೆ ತಮ್ಮಲ್ಲಿದ್ದ ನ್ಯೂನ್ಯತೆಗಳನ್ನು ಮಾಡಿಕೊಳ್ಳುವದರ ಬದಲಾಗಿ ಹೀನಗುಣಗಳ ಅಂಗೀಕಾರವಾದುದು ನಮ್ಮ ದುರ್ದೈವವೆಂದು ತಿಳಿಯಬೇಕೇ ಹೊರ್ತು ಬೇರೆ ಉಪಾಯವಿಲ್ಲ. ಕೆಲವು ಸಾಹೇಬ ಜನರು "ಡ್ಯಾಮ್, ಫ್ಲೂಲ್, ಸುವ್ವರ್, ಗದ್ಧಾ, ಸ್ಟುಪಿಡ್ ಎಂದು ತಮ್ಮ ಕೈಕೆಳಗಿನ ನೌಕರ ಜನರಮೇಲೆ ಪುಷ್ಪವೃಷ್ಟಿ ಗರೆಯುತ್ತಾರೆಂದು ಯಾಕಪ್ಪ ೬—೮ ರೂಪಾಯಿ ತಲಬಿನ ಪೋಲೀಸ್ ಶಿಪಾಯಿ ಸಹ ಬಡಬಗ್ಗರ ಮೇಲೆ ಇಂತಹ ಪುಷ್ಪಮಾಲಿಕೆಯಿಂದ ಪ್ರಹಾರಮಾಡದೆ ಬಿಡುವದಿಲ್ಲ. ಅಂದಮೇಲೆ ರಾ. ಸಾ. ರಾ. ಬ. ಇವರ ವಿಷಯವಾಗಿ ಮಾತಾಡುವ ಸೋಜಿಗವೇ ಇಲ್ಲ. ಕೈಕೆಳಗಿನ ನೌಕರರಮೇಲೆ ಪುಷ್ಪವೃಷ್ಟಿ ಸುರಿಸುವದು ಎಷ್ಟು ಭೂಷಣಾಸ್ಪದವಾಗಿದ್ದೀತು !!

ಇನ್ನು ಸೇವಾವೃತ್ತಿಯಲ್ಲಿ ಕಿಂಚಿತ್ ಸುಖವೆಂಬದು ಇರುವದಂತಾದರೆ, ಅದು ಎಲ್ಲಿ? ಯೆಂದರೆ ಮೇಲಧಿಕಾರಿಗಳು ಸಜ್ಜನರಿದ್ದು ಸಭ್ಯ ಪ್ರಚೂತರಾಗಿರಬೇಕು; ಅಂದರೆ ಚಾಕರರಿಗೆ ಸುಖವಾಗುವದು. ಮತ್ತು ನಮ್ಮ ಯಜಮಾನನನ್ನು ಕೊಂಡಾಡುತ್ತಾನೆ, ಇಂತಾ ಯಜಮಾನರು ಸಾಂಪ್ರತ ಸಿಕ್ಕುವದು ಅಪರೂಪವು. [illegible] ಅದರಿಂದ ಸೇವಾವೃತ್ತಿಯು ಗುಲಾಮಗಿರಿಯಂತಿರುತದೆ. [illegible] ಅವನ ಸ್ವರೂಪದ ನಡಿನುಡಿಗಳನ್ನು ಕೆಡಿಸಿಬಿಡುತದೆ. ಸೇವಾವೃತ್ತಿಯನ್ನು ಅನುಸರಿಸುವವನು, ತನ್ನಲ್ಲಿದ್ದ ಮಾನ, ಲಜ್ಜೆ, ಶಿಷ್ಟ, ಇವುಗಳನ್ನು ತೆಗೆದುಬಿಟ್ಟು, ಬಹುನಮ್ರತೆ, ಮುಖಸ್ತುತಿ ಮುಂತಾದ, ತನ್ನ ಯಜಮಾನನು ಮೆಚ್ಚುವ ಗುಣಗಳನ್ನೆಲ್ಲ ಚನ್ನಾಗಿ ಕಲಿತುಕೊಂಡಿರಬೇಕು. ಇದೇ ಚಾಕರಿಯ ಉತ್ತಮ ಗುಣಗಳು. ಇವುಗಳಿದ್ದ ಮನುಷ್ಯನೆಲ್ಲದರಲ್ಲಿ ಪಾರಾಗುತ್ತಾನೆ. ಈಗ ನಮ್ಮಸ್ಥಿತಿ ಹ್ಯಾಗಿರುವದಂದರೆ.—ಪರಕೀಯರು ನಮ್ಮನ್ನಾಳುತ್ತಾರೆ. ನಮ್ಮ ನಮ್ಮೊಳಗೆ ನಾವು ದ್ವೇಷಭಾವದಿಂದಿರುತ್ತೇವೆ. ನಮ್ಮ ನಮ್ಮಲ್ಲೇ ವೈಮನಸ್ಸು ಹೆಚ್ಚುತ್ತಾ ನಡೆದಿದೆ. ಬುಧಪ್ರೀತಿ, ದೇಶಕಲ್ಯಾಣವೆಂಬದು ನಮಗೆ ಮೊದಲೇ ಗೊತ್ತಿಲ್ಲ. ಎಂತೆ ಈಗ ನೌಕರಿಯು ದಾಸತ್ವಕ್ಕಿಂತಲು ದುಸ್ಸಹವಾಗಿರುತದೆ. ಆದ್ದರಿಂದ ಸ್ವತಂತ್ರ ಉದ್ಯೋಗವೇ ಲೇಸು.—ಚಂದ್ರೋದಯ.

"ಅವಿಚಾರ್ಯ್ಯಕೋಪಮಹಾಸರ್ಪೋ ಕ್ಯಂದನ ಕಿಂ ವಿಷಾಯತೆ?"

ಈ ಕಾಲದಲ್ಲಿ ಯಾವನು ಖಂಡಿತ ವಾದಿತ್ವವನ್ನು ವಹಿಸುವನೋ ಅವನೇ ಲೋಕಕ್ಕೆಲ್ಲ ಕಂಟಕನಾದವನಾಗುತ್ತಾನೆ. ಇದು ಸರ್ವಸಾಧಾರಣವಾದ ಒಂದು ವಿಷಯವಾಗಿರುತದೆ. ಇದರಲ್ಲಿ ಹೆಚ್ಚಾಗಿ ಕೋಪಕ್ಕೆ ಬರತಕ್ಕವರೆಂದರೆ ಮೇಲಿನ ನೇಮವನ್ನನುಸರಿಸಿದ ವರ್ತಮಾನ ಪತ್ರಿಕರ್ತರೇ ವಿನಾ ಬಾಕಿಯವರೇನು ಮುಂದೋರುವದಿಲ್ಲ. ಅವರೆ ಯಾವವನು ನಿಷ್ಪಕ್ಷಪಾತಿಯಾಗಿರುವನೋ ಅವನು ಕ್ಷುಲ್ಲಕವಾದ ಅನ್ಯ ವದಂತಿಗಳ ಕಡೆಗೆ ಲಕ್ಷ್ಯಕೊಡಲಿಕ್ಕಿಲ್ಲವೆನ್ನುವದು ನಿಜ ವಿದ್ದಾಗ್ಯೂ ತನ್ನ ಕರ್ತವ್ಯಕರ್ಮವನ್ನು ನಿರ್ಭೀತಿಯಿಂದ ಮುಂದರಿಸದೆ ಇರನು. ವರ್ತಮಾನ ಪತ್ರಕರ್ತರ ಕರ್ತವ್ಯದಲ್ಲಿ ಜನರಿಗೆ ವಿಶೇಷ ಲಾಭಕರವಾಗಿರುವ ಅನೇಕ ವಿಷಯಗಳು ಸಮಾವೇಶವಾಗಿರುತವೆ. ಯಾವದಾದರೊಂದು ಗುಪ್ತ ವಿಷಯವನ್ನಾದರೂ ಪ್ರಕಟಪಡಿಸಲಿಕ್ಕೆ ವರ್ತಮಾನ ಪತ್ರಕರ್ತರು ಸಮರ್ಥರಿರುತ್ತಾರೆ. ಅದರೆ ಅವರು ಸ್ವತಃ ತಿಳಿದಿರಲಿ, ಅಥವಾ ತಮ್ಮ ಬಾತಮಿದಾರರಿಂದ ನಿಶ್ಚಯ ತಿಳುವಳಿಕೆಗೆ ಬಂದಿರಲಿ, ಅಥವಾ ಲೋಕದ ಸ್ಥಿತಿಗತಿಯ ಊಹೆಯಮೇಲಿಂದಾಗಲಿ, ಬಾಜಾರಿಯಾಗಿ ಕೇಳಿರುವ ವರ್ತಮಾನಗಳಿ, ಅವುಗಳನ್ನು ತನ್ನ ಮನಸ್ಸಿಗೆ ಪೃಥಕ್ ಪಡುವಂತೆ ಚನ್ನಾಗಿ ವಿಚಾರಮಾಡಿ ವರ್ತಮಾನ ಪತ್ರಕರ್ತನು ಪ್ರಕಾಶಕ್ಕೆ ತರಲಿಕ್ಕೇಬೇಕು ! ಒಂದುವೇಳೆ ಇಂತಾ ವಿಷಯಗಳನ್ನು ಹೊರಪಡಿಸುವಾಗ ಜನರ ಪ್ರಾರಿನ ಕಡೆಗಾಗಲಿ, ಸರ್ಕಾರದವರ ಅಂಜಿಕೆಯ ಬಗ್ಯಾಗಲಿ, ಅಧಿಕಾರಿಗಳ ಅಪ್ರಸಾದದಗೋಸ್ಕರವಾಗಲಿ, ಹೆದರಿ ಯಾವ ವರ್ತಮಾನ ಪತ್ರಕರ್ತರು ತಮ್ಮ ಕರ್ತವ್ಯದ ಕಡೆಗೆ ದುರ್ಲಕ್ಷ್ಯಮಾಡುವರೋ? ಅವರು ಹಾಗೆ ಮಾಡುವದಕ್ಕಿಂತ ಆ ತಮ್ಮ ಕರ್ತವ್ಯ [illegible] ನಡಿಸದೆ ಇರುವದೇ ಒಳ್ಳೆಯದು. [illegible] ವಾದದರೊಂದು ವಿಷಯಗಳಲ್ಲಿಯೇ ಆಗಲಿ, ನ್ಯಾಯವಾಗಿ ತಿಳಿದುಬಂದ ಸಂಗತಿಯನ್ನು ಪ್ರಕಾಶ ಪಡಿಸಲಿಕ್ಕೆ ವರ್ತಮಾನ ಪತ್ರಕರ್ತರು ಬಾಧ್ಯರಿದ್ದಾಗ್ಯೂ ಸಮಯಬಂದಾಗ [illegible] ನಿಮಗೆ ಹ್ಯಾಗೆ ತಿಳಿಯಿತು ? ನಿಮಗೆ ಯಾರು ತಿಳಿಸಿದರು? ಎಂಬ ಇಂತಾ ಪ್ರಶ್ನೆಗಳನ್ನು ಮಾಡಿದರೆ ಅಂತಾ ಪ್ರಶ್ನೆಗಳಿಗೆ ವರ್ತಮಾನ ಪತ್ರಕರ್ತರು ಉತ್ತರ ಕೊಡಲಿಕ್ಕೇಬೇಕು, ಯೆಂಬದಕ್ಕೆ ಜವಾಬುದಾರರಲ್ಲವು. ಹಾಗೂ ಯಾರು ತಮಗೆ ನಿಜವಾದ ಗುಪ್ತ ಬಾತಮಿಗಳನ್ನು ಕೊಟ್ಟಿರುತ್ತಾರೋ ಅಂತವರನ್ನು ತೋರಿಸಿ ಕೊಡುವದು ಆ ವರ್ತಮಾನ ಪತ್ರಕರ್ತರ ಸದ್ಧರ್ಮಕ್ಕೆ ಬಾಹ್ಯವಾದ ಮಾತಾಗಿದೆ.

|ಮೋಚಿಗೋಪಿಗುಣತಾಂ ಯಾತಿ ಪ್ರೋಕ್ತ
ಫಲವತಿ ಚೇತ್ಸ್ಯತಾ ||

ಈ ನಮ್ಮ ಹಿಂದುಸ್ಥಾನದ ಪ್ರಜೆಗಳೆಲ್ಲ ಸುವಾಲಿಸಿದ ಜನರಿಂದ ಕೀಸವಾರ್ಥವಾಗ ಎಕಿಸಲ್ಪಡುತ್ತಾರೆ. ಆದರೆ ಇತ್ತೀಚಿನಲ್ಲಿ ಹಿಂದುಸ್ಥಾನದಲ್ಲಿ ವಿದ್ಯಾ ಪ್ರಚಾರವು ಭರಭರಾಟಿಯಲ್ಲಿ ಬರುತ್ತಿದ್ದಕಾರಣ ಅನೇಕರು ವಿಚಾರವಂತರಾಗಿ ತಮ್ಮ ಸ್ಥಿತಿಗತಿಗಳನ್ನು ಮತ್ತು ತಮಗೊದಗಿದ, ಹಾಗೂ ಒದಗುವ, ಸುಖ ಕಷ್ಟಗಳ ಪರಿಣಾಮಗಳನ್ನು ತಿಳಿಯಲಿಕ್ಕೆ ಸಮರ್ಥರಾಗಿರುತ್ತಾರೆ. ಇಂತಾ ಕಾಮದುರ್ಗವು ಸರ್ವತ್ರ ತೆರೆದಿರಲಿಲ್ಲವಾದಾಗ್ಯೂ ಇಂತಾ ವಿಷಯಗಳನ್ನು ತಿಳಿಯುವದಕ್ಕೆ ವರ್ತಮಾನ ಪತ್ರಗಳೇ ಈ ಜನರಿಗೆ ಒಂದು ಬಹುದೊಡ್ಡ ಸಾಧನವಾಗಿರುತವೆ. ಆದರೆ ಅನೇಕಜನರ ಲಕ್ಷ್ಯವೆಲ್ಲ ವರ್ತಮಾನ ಪತ್ರಕರ್ತರ ಕಡೆಗೆ ಕೇಂದ್ರೀಕರಿಸುತ್ತಾ ಬಂದದ್ದಂತೂ ಸಿದ್ಧವಾದ ಮಾತೇ ಸರಿ. ಈಗ ಆಡಿ, ಮತ್ತು ಮೆದರ್ಬಾನರ ಲಾರ್ಡ್ ಯಡ್‌ಮಂಡ್, ರಾಬಿನ್‌ಸನ್, ರಾವ್ ಬಹದ್ದೂರ್, ಎಸ್ಕ್ವಯರ್, ಕರ್ನಲ್ ಮೇಜರ್ ಸರ್ ಲಾರ್ಡ್‌ರವರಿಗಲ್ಲ ವರ್ತಮಾನ ಪತ್ರಗಳೇ ತಮ್ಮ ಪ್ರತಿಷ್ಠೆ ಸ್ಥಾನವನ್ನು ದೊರಿಸಿಕೊಟ್ಟಿವೆಯೆಂದು ಒಪ್ಪಿಸಿಕೊಂಡಿದಾರೆ. ನಮ್ಮ ದೇಶದಲ್ಲಿ ಅಲ್ಪ ಸ್ವಲ್ಪ ವರ್ತಮಾನ ಪತ್ರಗಳ ಪ್ರಸಾರವಿದ್ದಾಗ್ಯೂ ಯಷ್ಟೊ ಅಧಿಕಾರಿಗಳು ತಮ್ಮ ಅಧಿಕಾರಕ್ಕೆ ಮುಕ್ತವಾಗಿ ಬಳಸಿಟ್ಟ ಕೃತ್ಯಗಳಲ್ಲಿ ತಪ್ಪು ನಡೆಯುವದಕ್ಕೆ ಅಂಜುವದಿಲ್ಲ. ಹೀಗಿದ್ದು ವರ್ತಮಾನ ಪತ್ರಗಳ ಪ್ರಸಾರವೇ ಇಲ್ಲದೆ ಇದ್ದರೆ ಅಂತವರನ್ನು ಯಾರು ಮಾತಾಡಿಸುತ್ತಿದ್ದರು. ಸುಧಾಕರ.

BANGALORE:—Printed and published for the Proprietor, at the KARNATIC Press.—1886.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

ಪ್ರಕಾಮವಿವಿಧಪ್ರವೃತ್ತ್ಯುಪಗಮಾರ್ಥ ಕರ್ಣಾಟಕಪ್ರಕಾಶನವರಾಭಿಧಾಪ್ರಥಿತಸಾಹಿತೀಲೋಧಿತಾ । ಮೃಗಾಂಕಹಿತವಾಸರನಿಹಿತಮುದ್ರಣಾಸಜ್ಜಸ್ತ್ರೀ ಪ್ರಕಾಸುವರ [illegible] ।

Vol XIII] BANGALORE—MONDAY DECEMBER 13 1886 [No 50.

ಸಂಪುಟ ೧೩.] ಬೆಂಗಳೂರು —ಸರ್ ೧೮೮೬ನೇ ಇಸವಿ ಡಿಸೆಂಬರ್ ೧೩ನೇ ತಾರೀಖ್ ಸೋಮವಾರ. [ಸಂಚಿಕೆ ೫೦.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

ಇಂಗ್ಲಿಷ್ ಮತ್ತು ಕನ್ನಡ ಕೆಲಸ [illegible] ೧ಕ್ಕೆ		೧೦—೦—೦
ಇಂಗ್ಲಿಷ್ [illegible] ೧ಕ್ಕೆ		೬—೦—೦
ಕನ್ನಡ [illegible]		೬—೦—೦
ಬಿಡಿ	೧ಕ್ಕೆ	೦—೮—೦

ಸೂಚನೆ —[illegible]

ಪ್ರಕಟನೆಯ ಕಿರಾಯಿ.

[illegible]	೧ಕ್ಕೆ	೦—೨—೦
[illegible]	೧ಕ್ಕೆ	೦—೧—೦

NOTICE TO SUBSCRIBERS

[illegible]

೧. ಕರ್ಣಾಟಕ ಪ್ರಕಾಶಿಕೆಯ [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA

Price including Postage, Rs ೨-0-0

ವೈದ್ಯಸಾರ ಸಂಗ್ರಹ.

ಈ ಗ್ರಂಥ [illegible]

[illegible]	೩—೦—೦
[illegible]	೦—೬—೦

[illegible]

ನೋಟೀಸ್

ಎಲೆಕ್ಟ್ರೋ ಗ್ಯಾಲ್ವಾನಿಕ್ ರಿಂಗ್, ಲಾಕೆಟ್, ಮತ್ತು ಆರುಲೆಟ್,

ಒಂದೆ, ಅಂತರ್ಗತ [illegible] ಸಂಬಂಧವಾದ ಮತ್ತು ವಿದ್ಯುಚ್ಛಕ್ತಿ ಪ್ರಕಾಶ ಸಂಬಂಧವಾದ ಉಂಗರ, ಪದಕ, [illegible], ಇವುಗಳು, ಕಲ್ಕತ್ತೆ [illegible] ಪಿ ಸಿ ದಾಸ್ ಎಂಬವರಿಂದ ತಯಾರಾಗಿ ಇಟ್ಟಿರುತ್ತವೆ

ಇವು [illegible] ಆಶ್ಚರ್ಯಕರವಾದ ಪರಿಹಾರಕವಾದವು



[illegible] ವೈದ್ಯಶಾಸ್ತ್ರಜ್ಞರೂ [illegible] ಸಾಧಾರಣವಾಗಿ [illegible] ಉಂಗರಗಳು ಮೊದಲಾದವು [illegible] ಪರಿಹಾರಕಗಳೆಂದು [illegible] ರೋಗನಿವೃತ್ತಿ [illegible] ವಿಶೇಷವಾಗಿ ತಿಳಿಸುವದು [illegible] ಉಂಗರಗಳು ಮೊದಲಾದವುಗಳ ವಿಷಯದಲ್ಲಿ [illegible] ಅಲ್ಪಕಾಲದೊಳಗಾಗಿಯೂ [illegible] ರೋಗ ಪರಿಹಾರಕವಾದ ಇತರ ಪದಾರ್ಥಗಳ ವಿಷಯದಲ್ಲಿ [illegible] ವಿಸ್ತೃತ ಸಂದರ್ಭದಲ್ಲಿ ಈ ಹೊಸ ಉಂಗರಗಳನ್ನು ಕುರಿತು ಇನ್ನೂ ಹೆಚ್ಚು ಮಾತುಗಳು [illegible] ಉಂಗರವನ್ನು [illegible] ಪದಾರ್ಥಗಳನ್ನು [illegible] ಪದಾರ್ಥಗಳ ಮೇಲೆ ಪಿ ಸಿ ಡಿ ಎಂಬ ಗುರುತು ಇರುತ್ತದೆ

ಉಂಗರಗಳು—ಡಜನಿಗೆ ೧೫ ರೂ॥ ೧ಕ್ಕೆ ೧ ೪ ೦ ರೂ ಪದಕ—ಡಜನಿಗೆ ೧೨ ರೂಪಾಯಿ, ೧ಕ್ಕೆ ೧-೪-೦. [illegible]—ಡಜನಿಗೆ ೧೫ ರೂಪಾಯಿ, ೧ಕ್ಕೆ ೧-೪-೦ ರೂ [illegible] ಉಂಗರಗಳು ಮತ್ತು [illegible] ಪದಾರ್ಥಗಳು [illegible] ವಾಲ್ಯೂ ಪೇಯಬಲ್ ಪೋಸ್ಟಿನಲ್ಲಿ ಕಳುಹಿಸಲ್ಪಡುವವು

LITTLE'S ORIENTAL BALM.

ಲಿಟಿಲ್ ಎಂಬವನಿಂದ ತಯಾರಾಗಿಡಲ್ಪಟ್ಟ "ಓರಿಯೆಂಟಲ್ ಬಾಮ್" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಫಲವಾದ [illegible] ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧವಾದ ಸಂಧಿನೋವುಗಳೂ ನಿವೃತ್ತಿಯಾಗುವವು ಮುಖ್ಯವಾಗಿ [illegible] ವಾದ ವಾತರೋಗಗಳು, [illegible], ಗಂಟುನೋವು, ಜ್ವರ, ಸಿಡುಬುನೋವು, ಕೀಲುವಾಯು, ಸೊಂಟವಾಯು, [illegible] ನೋವು, ತಲೆನೋವು, ತಿಮಿರುವಾಯು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ [illegible] ಪ್ರಯೋಜನವನ್ನುಂಟುಮಾಡತಕ್ಕದ್ದು ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೆಲವಾವರ್ತಿ [illegible] ಚೆನ್ನಾಗಿ ತಿಕ್ಕಿದರೆ ಸಮಸ್ತವಾಗಿ [illegible] ರೋಗಗಳೆಲ್ಲಾ [illegible] ನಿವೃತ್ತಿ [illegible] ಉತ್ತಮತೈಲವಾಗಿರುತ್ತದೆ ಸಕೃತ್ಸ್ನಾನದಿಂದಲೇ [illegible] ಮತ್ತು [illegible] ಉಂಟಾಗುವ ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣಗುಣವನ್ನುಂಟುಮಾಡುವದು. ಆದ್ಯಂತವಾದ ಈ ಔಷಧವನ್ನು [illegible] ಅದರ ಪ್ರಯೋಜನವು ಸ್ವತಃ ವ್ಯಕ್ತವಾಗುವದು. ಈ ತೈಲವು ಶೀತಗಾಳಿ [illegible] ಸಂಚರಿಸುವಂಥಾ ಪ್ರಯಾಣಿಕರು, [illegible], ದೇಶಾಟನ ಮಾಡುವವರು, [illegible] ಅಮೂಲ್ಯವಾದದ್ದು

ಪರಿಶೀಲಕರ ಅಭಿಪ್ರಾಯವು.

[illegible] ಫಾರ್ಮಸ್ಯೂಟಿಕಲ್ ಸೊಸೈಟಿ ಎಂಬ [illegible] ಪ್ರಸಿದ್ಧರಾಗಿಯೂ, [illegible] ಜಿಯಾಲಜಿಕಲ್ ಸೊಸೈಟಿ ಎಂಬ [illegible] "[illegible] ಆಫ್ ಯೂರಪ್" ಎಂಬ ಗ್ರಂಥ [illegible] ರಸಾಯನಶಾಸ್ತ್ರ ವಿಷಯಕವಾದ ಅನೇಕ [illegible] ಇರುವ ಪ್ರೊಫೆಸರ್ ಟಿಚ್ ಬೋರ್ನ್ (C R Tichborne, L L D, F C S, M R I A,) ಎಂಬವರು ಅಭಿಪ್ರಾಯ ಪಟ್ಟಿರುತ್ತಾರೇನೆಂದರೆ—ಲಿಟಿಲ್ ಎಂಬವರ ಓರಿಯಂಟಲ್ ತೈಲವನ್ನು [illegible] ಪರೀಕ್ಷಿಸಿದ್ದರಲ್ಲಿ ಇದು [illegible] ಇದು [illegible] ಉಪಯೋಗಿಸಲ್ಪಡುವಾಗ [illegible] ರೋಗ [illegible] ಈ ಮಿಶ್ರಿತ ಔಷಧವು [illegible] ಎರಡು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆ [illegible] ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯಿಂದ ತಯಾರಾಗಿ [illegible] ಇರುತ್ತದೆ

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ

ಇದು [illegible] ಔಷಧ [illegible], ಮದರಾಸ್ [illegible] ನಂಬರ್ [illegible] ಎ ಸಿ [illegible] ಯವರಲ್ಲಿಯೂ, ಈ ಊರಿನಲ್ಲಿರುವ ಅವರ ಏಜಂಟ್‌ಗಳಾದ ಜೆ [illegible] ಯವರಲ್ಲಿಯೂ, [illegible] ಕಂಪೆನಿಯವರಲ್ಲಿಯೂ ದೊರೆಯುವದು

ನೋಟಿಸ್.

ಮಹಾರಾಜಾ ಆಫ್ ಮೈಸೂರ್ ಸ್ಪಿನ್ನಿಂಗ್ ಮತ್ತು ಮ್ಯಾನ್ಯುಫ್ಯಾಕ್ಚರಿಂಗ್ ಕಂಪೆನಿ, (ಲಿಮಿಟೆಡ್)

ಮೇಲಿನ ಕಂಪೆನಿ [illegible] ಆವರಣದಲ್ಲಿ [illegible] ನಮೂದಿಸಲ್ಪಡುವ ಕಟ್ಟಡಗಳು ಕಟ್ಟಬೇಕಾಗಿರುತ್ತದೆ.

೧ನೇ—ಇದುವರೆಗೇನೇ ಸದರೀ ಸ್ಥಳದಲ್ಲಿ ಕಟ್ಟಲ್ಪಟ್ಟಿರುವ ಕಟ್ಟಡಕ್ಕೆ ಸಮನಾದ ಒಂದು ಬಂಗ್ಲೆ

೨ನೇ—ಅರಳೆಯದಕ್ಕೆ [illegible] ಒಂದು ಮನೆ, ಇದಕ್ಕೆ ಕಲ್ಲು [illegible] ನಿಲ್ಲಿಸಿ ಸ್ಥಳದ [illegible] ಕಟ್ಟಡದ [illegible]

ಮೇಲಿನ ವಿಷಯವನ್ನು ಕುರಿತ ಯಾವತಂಕ ವನ್ನು ತಿಳಿದುಕೊಳ್ಳಬೇಕಾದರೂ ಕಂಪೆನಿ ಆಫೀಸಿನಲ್ಲಿ ಇದರ [illegible] ರವರನ್ನು ಕೇಳಿ ತಿಳಿದುಕೊಳ್ಳಬಹುದು.

ಬೆಂಗಳೂರು, ೩ನೇ ನವಂಬರ್ ೮೬ } W Smith, *P. P Secretaries, and Agents*

ನೋಟಿಸ್.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಸರ್ ೧೮೮೬ನೇ ಇಸವಿ ಡಿಸೆಂಬರ್ ೨೦ನೇ ತಾರೀಖ್ ಪ್ರಾತಃಕಾಲ ೭½ ಘಂಟೆಗೆ ಸಿಟಿ ಮ್ಯುನಿಸಿಪಲ್ ಕಮ್ಮಿಷನರ್‌ಗಳು, ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡದಲ್ಲಿರುವ ತಮ್ಮ ಆಫೀಸಿನಲ್ಲಿ ಮೀಟಿಂಗ್ ನೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳು.

೧. ಸರ್ ೧೮೮೬ನೇ ಇಸವಿ ನವಂಬರ್ ಮಾಹೇ ಬಾಬತು ಚಾಲತಿ ನಗದು ಜಮಾ ಖರ್ಚ್ ಲೆಕ್ಕಗಳು ಮತ್ತು ಮರಣ ಲೆಕ್ಕ.

೨. ಸರ್ ೧೮೮೭—೮೮ನೇ ಇಸವಿ ಬಜೆಟ್ ಲೆಕ್ಕಕ್ಕೆ ಸೇರಿಸಲ್ಪಡಬೇಕೆಂಬ ಆಲೋಚನೆಯಲ್ಲಿರುವ ಹೊಸ ಗಾಮಗಾರೀಗಳನ್ನು ಕುರಿತು ಸಬ ಕಮ್ಮಿಟಿಯವರು ಮಾಡಿದ ರಿಪೋರ್ಟ್

೩. ಸಿಟಿ ಮಾರ್ಕೆಟಿನಲ್ಲಿ ಮುಂದೆ ನಡೆಯುವ ತಮಾಷೆ ಕಾಲದಲ್ಲಿ ಕೊಡಬೇಕಾದ ಇನಾಮುಗಳು ಮತ್ತು ಅದಕ್ಕೆ ಸಂಬಂಧಪಟ್ಟ ಇತರ ಖರ್ಚುಗಳು

೪. ಹಿಂದೆ [illegible] ತಮಗೆ ಪೆನ್ಶನ್ ಕೊಡಬೇಕೆಂದು ಬರೆದು ಕೊಂಡ ಅರ್ಜಿ.

೫. ಮಹರ್ ಆಕ್ಷೇಪಣೆಯನ್ನು ಸೇರಿ [illegible] ದಾರಯವರ ಆಕ್ಷೇಪಣೆಗೆ ವರ್ಗಮಾಡುವ ವಿಷಯದಲ್ಲಿ [illegible] ಬರೆದುಕೊಂಡ ಅರ್ಜಿ.

ಸಿಟಿ ಮ್ಯುನಿಸಿಪಲ್ ಆಫೀಸ್,
ಬೆಂಗಳೂರು, ತಾ॥ ೧೦ನೇ ಡಿಸೆಂಬರ್ ೧೮೮೬.

A Srinivasa Charlu,
Vice-President,
City Municipal Commission.

ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೆ ಪ್ರಕಟಿಸುವದೇನೆಂದರೆ,—

ಸರ್ ೮೫ ಮತ್ತು ೮೬ನೇ ಇಸವಿಗಳಿಗೆ ಬಾಕೀದಾರರಾಗಿರತಕ್ಕವರು ತಮ್ಮ ತಮ್ಮ ಬಾಕೀಗಳನ್ನು ಕಳುಹಿಸಿಕೊಡಬೇಕೆಂದು ಅನೇಕಸಾರಿ ನಾವು ತಿಳಿಸಿದ್ದಾಗ್ಯೂ ಬಹುಮಂದಿ ಅದಕ್ಕೆ ಇದುವರೆವಿಗೆ ನಿಗಾ ಕೊಡದೆ ಇರುತ್ತಾರೆ. ಅಂತವರ ಬಾಕೀ ವಸೂಲೀ ವಿಷಯದಲ್ಲಿ ಖಂಡಿತವಾದ ಪ್ರಯತ್ನ ನಡೆಸಲ್ಪಡುವದಲ್ಲದೆ ಈ ತಿಂಗಳ ಆಖೈರಿನಲ್ಲಿ ಅವರ ಹೆಸರಿನ ಪತ್ರಿಕೆಗಳು ನಿಲ್ಲಿಸಲ್ಪಡುವವು

ಇದುವರೆವಿಗೆ ಚಂದಾ ಬಾಕೀಯನ್ನು ಪೂರಾ ಸಂದಾಯ ಮಾಡಿರತಕ್ಕವರಿಗೆ ಮಾತ್ರವೇ ಮುಂದಿನ ಸಾಲಿನಲ್ಲಿ ಪತ್ರಿಕೆ ರವಾನಿಸಲ್ಪಡುವದು. ಅವರೆಲ್ಲರು ದಯಮಾಡಿ ಚಂದಾ ಮೊಬಲಗನ್ನು ತಕ್ಷಣವೇ ಅಡ್ವಾನ್ಸ್ ಕಳುಹಿಸಿ ಕೊಡಬೇಕು. ಮುಂದಿನ ಸಾಲಿಗೆ ಪತ್ರಿಕೆಯ ಅಪೇಕ್ಷೆ ಇಲ್ಲದವರು ಅಂತಾ ಅಭಿಪ್ರಾಯವನ್ನು ಈ ತಿಂಗಳ ೨೦ನೇ ತಾರೀಖಿನೊಳಗಾಗಿ ನಮಗೆ ತಿಳಿಸಿಬಿಡುವದು ಉಚಿತವಾಗಿರುವದು.

ಮುಂದಿನ ಸಾಲಿಗೆ ಹೊಸದಾಗಿ ದರಖಾಸ್ತು ಮಾಡತಕ್ಕವರು ಚಂದಾ ಅಡ್ವಾನ್ಸ್ ಕಳುಹಿಸಿ ಕೊಡಬೇಕು ಅದಿಲ್ಲದ ದರಖಾಸ್ತುಗಳಿಗೆ ಸುತರಾಂ ನಿಗಾ ಕೊಡಲ್ಪಡಲಾರದು. ಈ ತಿಂಗಳಿಗೆ ಕಮ್ಮಿಯಾದ ದರಖಾಸ್ತುಗಳು ಅಂಗೀಕರಿಸಲ್ಪಡಲಾರವು.

೧೨—೧೨—೮೬. ಪ್ರೊಪ್ರೈಟರ್, ಕ. ಪ್ರ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA

MONDAY, DECEMBER 13, 1886

೧೮೮೬ನೇ ಡಿಸೆಂಬರ್ ೧೩ನೇ ತಾ|| ಸೋಮವಾರ.

PROFESSOR MAXMULLER ON HINDU WIDOW MARRIAGE

ಪ್ರಸಿದ್ಧ ಜರ್ಮನ್ ಪಂಡಿತರಾದ ಪ್ರೊಫೆಸರ್ ಮ್ಯಾಕ್ಸ್ ಮುಲ್ಲರ್‌ಯವರು ಆರ್ಯಜನಾನುಮೋದಕರಾಗಿಯೂ, ಆರ್ಯ ಮತಾಭಿಮಾನಿಯಾಗಿಯೂ ಆರ್ಯ ಸಂಪ್ರದಾಯಾಭಿಮಾನಿಯಾಗಿಯೂ, ಇರುವ ಅಂಶವು ಪ್ರಸಿದ್ಧವೇಯಷ್ಟೆ. ಇವರು ಸಕಲ ವೇದಭಾಷ್ಯಗಳನ್ನೂ ಸ್ಮೃತಿ ಶ್ರುತಿಗಳನ್ನೂ ಪರಿಶೋಧಿಸಿ, ವಿಚಾರಮಾಡಿ ನಮ್ಮ ಪೂರ್ವಿಕರ ವಿದ್ಯಾ ಬುದ್ಧಿ ವಿವೇಕಾದಿ ಸುಗುಣಗಳಿಗಾಗಿ ಆಶ್ಚರ್ಯಪಡುತ್ತ ಅವರನ್ನನವರತ ಕೊಂಡಾಡುತಲಿರುತ್ತಾರೆ. ವಿಧವಾ ಹಿತಕಾರಣ ಪ್ರವರ್ತಕರಲ್ಲೊಬ್ಬರಾದ ಮ॥ ಮಲಬಾರಿಯೆಂಬೊಬ್ಬ ಪಾರಸೀ ದೊಡ್ಡಮನುಷ್ಯರಿಗೆ ಬಾಲ್ಯವಿವಾಹ ಮತ್ತು ನಿರ್ಬಂಧಪೂರ್ವಕವಾದ ವೈಧವ್ಯ, ಇವುಗಳ ವಿಷಯದೊಳು ಸದರೀ ದೊಡ್ಡಮನುಷ್ಯರು ಬರೆದ ಒಂದು ಲೇಖನವು ಈಚೆಗೆ ಕೆಲವು ಇಂಗ್ಲಿಷ್ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದುದರಿಂದಲೂ ಅದರೊಳು ನವೀನಗಳಾದ ಕೆಲವು ಸಂಗತಿಗಳು ಕಂಡುಬಂದದರಿಂದ ಸದರೀ ಲೇಖಕರ ಮುಖ್ಯಾಭಿಪ್ರಾಯವನ್ನು ಈ ಪತ್ರಿಕೆಯನ್ನೋದುವಜನರ ತಿಳುವಳಿಕೆಯಬಗ್ಯೆ ಪ್ರಕಟಿಸುವೆವು.

ಮಿತ್ರರೆ,—ನೀವು ಇದುವರಿವಿಗೆ ಎಡಬಿಡದೆ ಮಾಡಿದಂಥಾ ಮಹತ್ಪ್ರಯತ್ನಗಳೆಲ್ಲವೂ ನಿಷ್ಫಲಗಳಾದವು ಎಂದು ಚಿಂತಿಸುತ್ತ ಈ ಲೇಖನವು ತಮಗೆ ಬರೆದೆನೆಂದು ತಾವು ತಿಳಿಯಲಾಗದು. ಬಹುಕಾಲದಮೊದಲು ನಡೆದುಬರುತಲಿರುವಂಥಾ ಪೂರ್ವ ಸಂಪ್ರದಾಯದ ಪ್ರಾಬಲ್ಯವನ್ನಾಲೋಚಿಸಿದರೆ ನಿಮ್ಮ ಪ್ರಕೃತ ಪ್ರಯತ್ನವು ಅಪಜಯವನ್ನೈದಿದ್ದು ಸಹಜವೆಂತಲೇ ಎಣಿಸಬೇಕು. ಪರಂತು ಇಂಥಾ ವಿಘ್ನಗಳು ಭವಿಷ್ಯಚ್ಛುಭಸೂಚಕಗಳೆಂದು ನೀವರಿಯತಕ್ಕದ್ದು. ಈಗ ಗವರ್ನಮೆಂಟಿನವರು ಎಷ್ಟರಮಟ್ಟಿಗೆ ನಿಮ್ಮ ಉದ್ದೇಶಪ್ರಯತ್ನಗಳನ್ನು ಅನುಮೋದಿಸಿ ಅವುಗಳಿಗೆ ಸಹಾಯಮಾಡುವವಿಷಯದಲ್ಲಿ ಉತ್ತರಕೊಟ್ಟಿರುತ್ತಾರೋ ಅದಕ್ಕಿಂತಲೂ ಅಧಿಕವಾಗಿ ಅವರಮೂಲಕ ದೊರೆಯುವದೆಂಬ ಪ್ರತ್ಯಾಶೆಯನ್ನು ನೀವು ಇಡಬಾರದು. ಈಗ್ಯೆ [illegible] ಸಂವತ್ಸರಗಳಹಿಂದೆ ನೆಲಗೊಂಡಿದ್ದ ಇಂಡ್ಯ ಗವರ್ನಮೆಂಟಿನವರಸ್ಥಿತಿಗೂ ಪ್ರಕೃತಸ್ಥಿತಿಗೂ ಬಹಳ ತಾರತಮ್ಯವಿಲ್ಲದಿರಲಿಲ್ಲವು. ಇಂಡ್ಯಾದೇಶದ ಮುಖ್ಯಾಧಿಕಾರವು ಇಂಗ್ಲಾಂಡಿನೊಳಿರುವ ಪಾರ್ಲಿಮೆಂಟಿನ ಉಭಯ ಸಾಮಾಜಿಕರ ಅಧೀನವಾದದ್ದಾಗಿರುತಿದೆ. ಈಸ್ಟಿಂಡಿಯಾ ಕಂಪೆನಿಯವರ ಸುಫರ್ದಿನೊಳಿದ್ದ ಇಂಡ್ಯರಾಜ್ಯವನ್ನು ಮಹಾರಾಜ್ಞೀ ಸರ್ಕಾರ್ ದಾಖಲ್ಮಾಡುವದು ಕೇವಲ ಅನುಚಿತವೆಂಬದಾಗಿ ಖಂಡಿಸಿ ವಾದಿಸಿದ ಮಿಲ್ ಯೆಂಬವರನ್ನು ಆಗ್ಯೆ ಯೆಲ್ಲರೂ ಬಹಳವಾಗಿ ನಿಂದಿಸಿದರು. ಈಗಲೂ ಅವರ ಅಭಿಪ್ರಾಯವು ಅಯೋಗ್ಯವೆಂದು ತೋರದಿರಲಿಲ್ಲವು. ಗವರ್ನಮೆಂಟಿನ ತಾತ್ಕಾಲಿಕ ಸ್ಥಿತಿಯನ್ನಾಲೋಚಿಸಿದರೆ ನಿಮ್ಮ ಪ್ರಯತ್ನಕ್ಕೆ ಸಾಧಕಗಳಾದ ಸಹಾಯವು ಈಗ ಲಭಿಸಿದ್ದಕ್ಕಿಂತಲೂ ಅಧಿಕವಾಗಿ ದೊರೆಯುವದೆಂದು ಆಶಿಸಬಾರದು. ಪರಂಪರೆಯಾ ಅನುವರ್ತಿಸಿ ಬಂದಿರುವ ಆಚಾರಗಳನ್ನು ನಿರೋಧಿಸುವಬಗ್ಯೆ ಸರ್ಕಾರದವರು ಯೋಗ್ಯಗಳಾದ ಸಾಧನಗಳನ್ನು ಕಲ್ಪಿಸದೆಯೂ ಆವಶ್ಯಕಗಳಾದ ನ್ಯಾಯನಿಬಂಧನೆಗಳನ್ನೇರ್ಪಡಿಸದೆಯೂ, ಇರುವದು ಕೇವಲ ವಿವೇಕವೆಂದು ನಾನು ಹೇಳಲಾರೆನು. ಬಾಲ್ಯವಿವಾಹವಾಗಲಿ, ನಿರ್ಬಂಧರೂಪವಾದ ವೈಧವ್ಯವಾಗಲಿ, ಧರ್ಮವಿರುದ್ಧವಾದವೆಂದು ನಾನು ಹೇಳುವದಿಲ್ಲವು, ಪರಂತು ಈಗ ಅವುಗಳಿಂದುಂಟಾಗುವದುಃಖನಿವೃತ್ತ್ಯರ್ಥ ಸರಕಾರದವರು ಯೋಗ್ಯವಾದ ಒಂದು ನಿಬಂಧನೆಯನ್ನು ಮಾಡತಕ್ಕದ್ದು ವಿಹಿತವಾಗಿರುತಿದೆ. ಬಾಲ್ಯ ವಿವಾಹ ಮಾಡುವವಿಷಯದಲ್ಲಿ ಶ್ರುತಿಸ್ಮೃತಿಗಳ್ಯಾವದರಲ್ಲಿಯೂ ಬೇಕಾದ ಆಧಾರಗಳು ತತ್ಪಕ್ಷಾವಲಂಬಿಗಳಿಗೆ ದೊರೆಯಲಾರವೆಂದು ನಾನು ದೃಢವಾಗಿ ಹೇಳಬಲ್ಲೆನು. ಇಂಥಾ ನನ್ನ ನಿಷ್ಕೃಷ್ಟವಾದ ಅಭಿಪ್ರಾಯವನ್ನು ಖಂಡಿಸಿ ವಾದಿಸುವಂಥಾ ಪಂಡಿತನಾವನೂ ಇರಲಾರನು. ಸ್ಮೃತಿಕರ್ತರಲ್ಲಿ ಪ್ರಸಿದ್ಧರಾಗಿದ್ದ ಮನುವು, ಪುರುಷನು ೨೪ನೇಯ ವಯಸ್ಸಿನಲ್ಲಿ ವಿವಾಹಮಾಡಿಕೊಳ್ಳಬೇಕೆಂತಲೂ, ಸ್ತ್ರೀಯು ದೇಶಸಮಯಾಚಾರ ವಯಃಪ್ರಕೃತ್ಯನುಗುಣವಾಗಿ ಮೇಲೆತಿಳಿಸಿದ ಪುರುಷನ ವಯಸ್ಸಿಗೆ ಅನುಸಾರವಾಗಿರುವಂತೆ ವಿವಾಹಮಾಡಿಕೊಳ್ಳತಕ್ಕದ್ದೆಂತಲೂ ಅಭಿಪ್ರಾಯಪಟ್ಟಿರುತ್ತಾರೆ. ಪರಂತು ಬಾಲ್ಯವಿವಾಹ ಮತ್ತು ಆಮರಣ ನಿರ್ಬಂಧಕರವಾದ ವೈಧವ್ಯವಿಷಯಗಳಲ್ಲಿ ಮಾತ್ರ ಯಾವ ಪ್ರಮಾಣಗಳೂ ಕಾಣಿಸಲಿಲ್ಲವು. ಶ್ರುತಿಸ್ಮೃತಿಗಳಲ್ಲಿ ಯಾವ ಆಧಾರವೂ ಇಲ್ಲದಿರುವಂಥಾ ಪ್ರಸಕ್ತವಿಷಯವನ್ನು ಕುರಿತು ಸಮರ್ಥರಾದ ನಿಮ್ಮ ದೇಶದ ಪಂಡಿತರೇ ಸಾಕಾದಷ್ಟುಮಟ್ಟಿಗೆ ವಿಚಾರಮಾಡಿರುವದರಿಂದ ಅದಕ್ಕಿಂತ ಅಧಿಕವಾದ ಅಭಿಪ್ರಾಯವನ್ನು ನಾನು ಕೊಡಲಾರೆನು. ಸಂಸ್ಕೃತ ವಿದ್ಯಾಭ್ಯಾಸದ ಮಹಿಮೆಯು ಅಪಾರವಾದದ್ದಾದಕಾರಣ ನನ್ನಂಥಾ ಮ್ಲೇಚ್ಛನಿಗೆ ಸಹ ತದ್ಭಾಷಾಭ್ಯಾಸವು ವಿಶೇಷ ಪ್ರಯೋಜನಕಾರಿಯಾಗದಿರಲಿಲ್ಲವು. ಸಹಗಮನ ಪದ್ಧತಿಯಂ ನಿಷೇಧಿಸಿದಕಾಲದಲ್ಲಿ ಅನೇಕ ಹಿಂದೂ ವಿದ್ವಾಂಸರು ವೇದವಾಕ್ಯಕ್ಕೆ ನಷ್ಟವಾದ ಶಾಖೆಯಿಂದ ಸಹಗಮನವು ಆವಶ್ಯಕರ್ತವ್ಯವೆಂಬ ವಿಷಯದೊಳು ಆಧಾರವಾಗಿ ಅನೇಕ ಪ್ರಮಾಣವಚನಗಳನ್ನು ಉಪಹರಿಸಿದ್ದದ್ದು ನಿಮ್ಮ ಜ್ಞಾಪಕದೊಳಿರಬಹುದಷ್ಟೆ. ವೇದಭಾಷ್ಯವನ್ನು ತಿದ್ದಿ ತಮ್ಮ ಪಕ್ಷಕ್ಕೆ ಆಧಾರವನ್ನಾಗಿ ಮಾಡಿಕೊಂಡು ವಾದಿಸುತಲಿದ್ದರೇಹೊರ್ತು ಸಹಗಮನವು ಕೂಡದೆಂದು ಪ್ರತಿಷೇಧಿಸುವಂಥಾ ಗೃಹ್ಯಸೂತ್ರ ವಚನವನ್ನು ನಾನು ಉದಹರಿಸಿ ಒಡಂಬಡಿಸುವತನಕ ಅವರು ಸುಮ್ಮನಿರದೆಹೋದರು. ವಿವಾಹಕ್ಕೆ ವಯಃಪರಿಮಾಣವಿಷಯವಾಗಿ ೧೮೭೮ನೇ ಇಸವಿಯಲ್ಲಿ ನಾನುಬರೆದು ಪ್ರಕಟಿಸಿದಂಥಾ (ಹಿಬ್ಬರ್ಟಲೆಕ್ಚರ್ಸ್) ಎಂಬಗ್ರಂಥದ ೩೫೦—೩೬೩ನೇ ಪುಟಗಳಲ್ಲಿ ಕೆಲವು ಮುಖ್ಯವಾಕ್ಯಗಳನ್ನು ಬರೆದಿದ್ದೆನು. ಸದರೀ ಗ್ರಂಥವು ಈಗ ಇಂಡ್ಯದೇಶದ ಅನೇಕ ಆಧುನಿಕಭಾಷೆಗಳಲ್ಲಿ ತರ್ಜುಮೆ ಮಾಡಲ್ಪಟ್ಟಿರುತಿದೆ. ಯಾವ ಪಂಡಿತನೇ ಆಗಲಿ, ಬಾಲ್ಯವಿವಾಹವು ಶ್ರೇಷ್ಠವೆನ್ನುವಬಗ್ಯೆ ಶ್ರುತಿ ಅಥವಾ ಸ್ಮೃತಿವಚನಗಳನ್ನು ಆಧಾರವಾಗಿ ತಿಳಿಸಿ ಅದಂ ಸಾಧಿಸಿಕೊಳ್ಳುವಷ್ಟು ಸಾಹಸವುಳ್ಳವನಾಗಿರುವ ವಿಷಯದಲ್ಲಿ ನಾನು ಬಹಳ ಸಂಶಯಿಸುತ್ತೇನೆ. ಪರಂತು ಅದಕ್ಕೆ ಬದಲು ಅವರು ಆಚಾರ ಅಥವಾ ದೇಶಧರ್ಮಗಳನ್ನು ಪ್ರಮಾಣತ್ವೇನ ವಾದಿಸಬಹುದು. ಅಲ್ಲಿಯೂ ಅಂಥಾ ಆಚಾರವೂ ನಿಬಂಧನ ಗ್ರಂಥಗಳೂ ಶ್ರುತಿಸ್ಮೃತಿ ವಾಕ್ಯಗಳಿಗೆ ಭಿನ್ನಿಸಿದ ಪಕ್ಷದಲ್ಲಿ ಅವು ಪ್ರಮಾಣಗಳಾಗಲಾರವೆಂಬದು ಅವರುಜ್ಞಾಪಕದೊಳು ಬರುವವರಿಗೆ ಮೇಲೆಕಂಡಂತೆ ತಿಳಿಸಬಹುದು. ಶ್ರುತಿಸ್ಮೃತಿಗಳಲ್ಲಿ ಆಧಾರ ಉಂಟೆಂದು ವಾದಿಸುತಲಿದ್ದವರ ಶಕ್ತಿಯು ಭಂಗವನ್ನೈದಿದಾಗ್ಯೂ ಅವರ ವಾದವೆಲ್ಲವೂ, ಬಾಲ್ಯವಿವಾಹ ಹಿಂದೂ ಸಂಪ್ರದಾಯವನ್ನನುಸರಿಸಿದ್ದಾದಕಾರಣ, ಗವರ್ನಮೆಂಟಿನವರ ನಿರ್ಬಂಧಪೂರ್ವಕವಾದ ಪ್ರವೇಶವು ಅನಾವಶ್ಯಕವೆಂಬದಾಗಿರುತಿದೆ. ಜನಗಳಿಗೆ ಇದರಿಂದ ಯಾವವಿಧಬಾಧೆಯೂ ಉಂಟಾಗದಿರುವಪಕ್ಷಕ್ಕೆ ಅದರಮೇಲೆ ನನಗೆ ತಿಳಿಸಬೇಕಾದ್ದೊಂದೂ ಇರುತಲಿರಲಿಲ್ಲವು. ಆಚಾರವನ್ನನುಸರಿಸಿಯಾಗಲಿ, ಅನ್ಯಥಾ ಆಗಲಿ ಪ್ರತಿ ಮನುಷ್ಯನಿಗೂ ಉಂಟಾಗುವ ಹಾನಿಯಿಂದ ಅವನಂ ನಿವೃತ್ತಿಮಾಡಿ ಕಾಪಾಡುವಷ್ಟು ಶಕ್ತಿಯು ಗವರ್ನಮೆಂಟಿಗೆ ಯಾವಾಗ ಇಲ್ಲದೆಹೋಗುತಿದೆಯೋ ಆಗ ಅದಕ್ಕೆ ಗವರ್ನಮೆಂಟು ಎಂಬ ಹೆಸರೇ ಅನರ್ಹವಾದದ್ದು. ವಿವಾಹಾತ್ಪೂರ್ವ ಕೊಡಲ್ಪಡುವ ವಾಗ್ದಾನವೆಂಬದು ಜನಗಳಿಗೆ ಹಾನಿಕರವಾದದ್ದಾಗಿರುತಿದೆ, ಹ್ಯಾಗೆಂದರೆ, ಅಂಥಾ ವಾಗ್ದಾನಮಾಡುವ ಕಾಲದಲ್ಲಿ ಅದರ ಸ್ವಭಾವವನ್ನು ಪರ್ಯಾಲೋಚಿಸಿ ತಿಳಿದುಕೊಳ್ಳುವಷ್ಟು ಜ್ಞಾನವು ವಧೂವರರಿಬ್ಬರಿಗೂ ಇರುವದಿಲ್ಲವು ಮತ್ತು ಆಗ್ಯೆ ಅವರ ಆಲೋಚನೆ ಸಹ ಕೇಳಲ್ಪಡುವದಿಲ್ಲವು. ಇಂಥಾ ವಾಗ್ದಾನಗಳಿಂದುಂಟಾಗುವದುಃಖಗಳಿಂದವಿಮುಕ್ತರನ್ನಾಗಿ ಮಾಡಬೇಕೆಂದು ಯಾರಾದರು ಗವರ್ನಮೆಂಟಿನವರನ್ನು ಅಪೇಕ್ಷಿಸಿದರೆ ಹಾಗೆ ಅಪೇಕ್ಷಿಸುವವನನ್ನಾದರೂ, ಅಪೇಕ್ಷಿಸುವಂತಾವಳನ್ನಾದರೂ, ಕಾಪಾಡಬೇಕಾದ್ದು ಅವರ ಮುಖ್ಯ ಕರ್ತವ್ಯವಾಗಿರುತಿದೆ. ಇಂಥಾ ಉಚಿತ ಕರ್ತವ್ಯವು ನೆರವೇರಿಸುವ ವಿಷಯದಲ್ಲಿ ಗವರ್ನಮೆಂಟಿನವರು ಸ್ವಕೀಯರಾಗಿದ್ದರೇನು ಪರಕೀಯರಾಗಿದ್ದರೇನು? ಅದರಿಂದ ಬಾಧಕವೊಂದೂ ಕಾಣೆನು. ಯಾರ ಪಾಲನೆಯನ್ನು ನೀವು ಅಂಗೀಕರಿಸಿ ತನ್ಮೂಲಕ ಅದರ ಪ್ರಯೋಜನಗಳನ್ನೆಲ್ಲ ಅನುಭವಿಸುವ ತನಕಲೇ ಅದು ನಿಮ್ಮ ಸರ್ಕಾರವೆಂದೆನ್ನಿಸಿಕೊಂಡಿರುವದು. ಈಗ ಅಂಥಾ ಸರ್ಕಾರದವರು ಅಕ್ರಮವಾದ ವಿಷಯವನ್ನು ತಡೆಯಲು ತಾವು ಪ್ರವೇಶಿಸುವದಿಲ್ಲವೆಂದು ಹೇಳುವದು ಅನುಚಿತವು. ಮದ್ಯಪಾನವನ್ನೂ, [illegible] ತಪ್ಪಿಸುವಬಗ್ಯೆ ಗವರ್ನಮೆಂಟಿನವರ ಸಹಾಯವಂ ನೀವು ಅಪೇಕ್ಷಿಸಲಿಲ್ಲವೆ, ಆ ಕಾಲದಲ್ಲಿ ಪಾನಗಾರರು, ಅದು ತಮ್ಮ ಅನಾದಿ ಕುಲಧರ್ಮವೆಂತಲೂ, ತಾವು ತಮ್ಮ ಇಷ್ಟದೇವತೆಯ ದಾಸಾನುದಾಸರಾಗಿ ಅವರ ಪ್ರೀಣನಾರ್ಥ ಮಾಡುವಂಥಾ ಕಾರ್ಯವೆಂತಲೂ, ಅದರಿಂದ ಅದು ತಡೆಯಲಾಗದೆಂತಲೂ ಬಹುವಿಧವಾಗಿ ಗವರ್ನಮೆಂಟಿನವರನ್ನು ಪ್ರಾರ್ಥಿಸಿಕೊಂಡಾಗ್ಯೂ ಅವುಂ ಕೇಳದೆ ತಮ್ಮ ಕರ್ತವ್ಯವನ್ನು ನಿರ್ದಾಕ್ಷಿಣ್ಯವಾಗಿ ಮಾಡಿದರು. ವಿವೇಕ ಸಂಪನ್ನಳಾದ ಪೂರ್ಣವಯಸ್ಸುಳ್ಳ ಒಬ್ಬ ತರುಣಿಯಂ ಕುರಿತು, ಪತಿ ಮೃತನಾದಕೂಡಲೇ ಆತನೊಡನೆ ಸಹ ಗಮನ ಮಾಡುವದು ಒಳ್ಳೆಯದೆ? ನಿನ್ನಿಂದ ತಿರಸ್ಕೃತನಾದ ಮತ್ತು ನಿನಗೆ ನೀಚನೆಂದು ತೋರಿದ ಅನನುರೂಪನಾದ ಒಬ್ಬ ಪುರುಷನಂ ಸೇರಿ ಯಾವಜ್ಜೀವ ದುಃಖವಂ ಕಳೆಯುವದು ಅಭಿಮತವಾದದ್ದೇ ಯೆಂದು ಕೇಳುವಿರಾದರೆ ಅದಕ್ಕೆ ಆಕೆಯ ಉತ್ತರ ನಿಸ್ಸಂಶಯವಾಗಿ ಪ್ರತಿಷೇಧೋಕ್ತಿಯಾಗಿಯೇ ಇರುವದೆಂದು ನಂಬುತ್ತೇನೆ. ಬಾಲ್ಯದಶೆಯೊಳಿರುವ ಇಂಥ ವಿಷಯದಲ್ಲಿ ಮಾತತ್ಕ್ಷಣ ನಿಶ್ಚಿತಾರ್ಥವು ಅಕ್ರಮವಾದದ್ದು. ಮತ್ತು ಅಂತರವಿವಾಹವ್ರತಕ್ಕೆ ವಿರೋಧವಾದದ್ದು. ಮೊದಲನೆಯದರೊಳು ದುಃಖಪಡುವವರು ಅಪೇಕ್ಷಿಸುವಸಾಧ್ಯಗಳಾದ ಸಹಾಯಗಳನ್ನೆಲ್ಲ ಸರ್ಕಾರದವರು ಮಾಡಬೇಕಾದ್ದಲ್ಲವೆ ವಿವಾಹವಿಷಯದಲ್ಲಿ ಅಪರಾಧಿಗಳನ್ನು ದಂಡಿಸಬೇಕು. ಗವರ್ನಮೆಂಟಿನವರ ಪ್ರವೇಶವು ಕೂಡದೆಂದು ಉಂಟಾಗಿರುವ ನಿರ್ಭಾಗ್ಯ ಅಭಿಪ್ರಾಯವು ಅವರಲ್ಲಿ ಪ್ರಯೋಜನಾಪೇಕ್ಷಿಗಳಾದ ಕೆಲವರು ತಿಳಿಸುವ ಕಾರಣರೂಪವಾದದ್ದಾಗಿದೆಯಲ್ಲದೆ ಆರ್ಯನೆನಿಸಿಕೊಳ್ಳಲು ಅರ್ಹನಾದ ಪುರುಷನ್ಯಾವನೂ ಇಂತಾ ದುಷ್ಕೃತ್ಯಗಳನ್ನು ಸಹಿಸಲಾರನು ಮತ್ತು ಅವು ನ್ಯಾಯವೆಂದು ತಿಳಿಸಲಾರನು. ಗವರ್ನಮೆಂಟಿನವರು ತಮ್ಮ ಅಶಕ್ತತೆಯನ್ನು ಏವಂರೀತ್ಯಾ ವ್ಯಕ್ತಪಡಿಸಿದಾಗ ಬಾಲಕರಾದ ವಧೂವರರಸ್ಥಿತಿಗತಿಗಳಂ ಕುರಿತು ವಿವರಿಸಿರುವ ನಿಮ್ಮ ಬರವಣಿಗೆಯನ್ನು ಓದಿದ ಒಬ್ಬ ಇಂಗ್ಲಿಷನವನಿಗೆ ಉಂಟಾಗುವ ನ್ಯಾಯವಾದ ಆಗ್ರಹವು ತಮಗೂ ಉಂಟಾದಂತೆ ತಿಳಿಸಬೇಕಾಗಿಯಾದರೂ ಯಿತ್ತು. ಹಾಗೆ ಅವರು ತಿಳಿಸಿರುವರಾದರೆ ವಿಶೇಷ ಬಾಧಕವಾಗಿರಲಾರದು. ಮತ್ತು ಅಸಮಪಕ್ಷ ಪ್ರಸಕ್ತವಿಷಯದಲ್ಲಿ ಆಸಕ್ತಿಗೊಂಡಿರುವಂಥಾ ನಿಮಗೂ ನಿಮ್ಮ ಪ್ರಯತ್ನಕ್ಕೆ ಸಹಾಯಮಾಡುವವರಿಗೂ ಪ್ರೋತ್ಸಾಹ ಉಂಟುಮಾಡುವಂತೆಯಾದರೂ ಆಗಿರುವದು. ಹೀಗಿದ್ದಾಗ್ಯೂ ಎಂದಿಗಾದರೂ ನ್ಯಾಯವುಂಟಾಗದೆಹೋಗಲಾರದೆಂಬವರಮೇಲೆ ದೃಢವಾದ ನಂಬಿಕೆಯುಳ್ಳವರಾಗಿರಿ. ಈ ವಿಷಯದೊಳು ಒಂದು ಸಣ್ಣಗ್ರಂಥವಂಬರೆದು ಅದರಲ್ಲಿ ಪ್ರಸಿದ್ಧಗಳಾದ ಮತ್ತು ಯಥಾವಸ್ಥಿತಗಳಾದವಿಷಯಗಳನ್ನೇ ತಿಳಿಸಿ ಅದಂ ಇಂಗ್ಲಾಂಡದೇಶದ ಸ್ತ್ರೀಯರಿಗೆ ಕಳುಹಿಸಬೇಕು. ಅವರು ಇಲ್ಲಿ ವಿಶೇಷವ್ಯಾಪಕರಾಗಿರುತ್ತಾರಲ್ಲದೆ ಅವರೊಳು ಶ್ಲಾಘ್ಯವಾದಒಂದುಗುಣವುಂಟು. ಅದು ಯಾವದೆಂದರೆ, ಪರಾಜಯವನ್ನೈದದಿರುವಂಥ ದೇಶದಲ್ಲಿ ನಡೆಯುವದನ್ನು ಇಂಗ್ಲಿಷ್ ಸರ್ಕಾರದವರು ನೋಡಿ ಸಹಿಸುತಲಿದ್ದಾರೆಂಬ ಅಂಶ ಅವರಿಗೊಂದಾವರ್ತಿ ತಿಳಿಯಬಂದಪಕ್ಷಕ್ಕೆ ಅದಂ ಪಾರ್ಲಿಮೆಂಟಿನ ಪ್ರತಿನಿಧಿಗಳಿಗೆ ತಿಳಿಸಿ ಇಂಗ್ಲಾಂಡಿನಪ್ರತಿಷ್ಠೆಗೆ ಉಂಟಾದ ಮಾಲಿನ್ಯವನ್ನು ನಿವೃತ್ತಿಮಾಡಿದಹೊರತು ನೀವು ಮರಳಿ ಸದರೀ ಸಭಾಪ್ರವೇಶಕ್ಕೆ ಅರ್ಹರಾಗಲಾರಿರೆಂದು ತಿಳಿಸುವರು. ಯಾವಾಗಲು ಸ್ತ್ರೀಯರು ಧೈರ್ಯಸಾಹಸಗಳುಳ್ಳವರಾದಕಾರಣ ಅವರಿಗೆ ಯಾವಾಗ ಪ್ರಬಲಾನ್ಯಾಯಕರವಾದದ್ದೆಂದು ತೋರಿದಲ್ಲಿ ಆಗ ಅವರು ಅಪ್ರೇರಿತರಾಗಿ ಶಕ್ತ್ಯಪ್ರಯತ್ನಗಳಂ ಮಾಡಬೇಕೆಂಬ ಪ್ರತಿಜ್ಞೆಯುಳ್ಳವರಾಗಿರುತ್ತಾರೆ. ನಿಮ್ಮದೇಶೀಯರಾದ ಸ್ತ್ರೀಯರಿಗೆಲ್ಲ ವಿದ್ಯಾಭ್ಯಾಸಮಾಡಿಸುವಿರಾದರೆ ಆಗ ಅವರು ಸ್ವತಃ ಪ್ರವರ್ತಿಸಿ ಸಮಯೋಚಿತವಾಗಿ ವರ್ತಿಸತಕ್ಕ ಗವರ್ನಮೆಂಟಿನವರನ್ನೂ ಅಧೈರ್ಯಶಾಲಿಗಳಾದ ನಿಮ್ಮದೇಶದ ವೈಲಕ್ಷಣ್ಯಾಪಹಾಗಳನ್ನೂ ತಿದ್ದಿ ಪ್ರಸಕ್ತವಿಷಯವನ್ನು ಕ್ರಮಪಡಿಸಿಕೊಳ್ಳುವರು. ಇಂತಾ ನನ್ನ ಲೇಖನವಂನೋಡಿ ಇಂಡ್ಯದೇಶೀಯರಾದ ನನ್ನಮಿತ್ರರನೇಕರು ಆಗ್ರಹಪಡುವರೆಂಬದು ನಾನುಬಲ್ಲೆನು. ಪರಂತು ಅವರ ಪ್ರತ್ಯಕ್ಷ ಸಮಾಗಮವು ಉಂಟಾಗಿದ್ದರೆ ಆಗ ಅವರೊಡನೆ ವಿಚಾರಪೂರ್ವಕ ಅವರಿಗಿಂತಲೂ ನಿಜವಾದ ಆರ್ಯಶಬ್ದಕ್ಕೆ ಉಂಟಾಗಿರುವ ದೋಷವಂ ಹೋಗಲಾಡಿಸಿ ಅದನ್ನು ಶುದ್ಧವಾದವನ್ನಾಗಿ ಮಾಡಲಪೇಕ್ಷೆಯುಳ್ಳವನುಬಲಂ ಎವಂ ನಿರೂಪಿಸುತಲಿದ್ದೆನು. ಈ ವಿಚಾರವನ್ನು ಸಮರ್ಥರಾದ ನಿಮ್ಮವರೇ ಅನೇಕರು ನಡೆಸುವರೆಂದು ತಿಳಿದುಕೊಂಡು ಇದ್ದದರಿಂದಲೂ, ನನಗೆ ಇಂತಾವಿಷಯಗಳಲ್ಲಿ ವಿಶೇಷ ವಿಚಾರಮಾಡಲಿಕ್ಕೆ ಅವಕಾಶಸಾಲದೆಯಿದ್ದದರಿಂದಲೂ, ಇಷ್ಟವಿಲ್ಲದ್ದರಿಂದಲೂ ನಾನು ಇದುವರಿವಿಗೂ ಯಾವವಿಧಅಭಿಪ್ರಾಯವನ್ನೂ ಕೊಡದೆಇದ್ದದ್ದು ಮಾತ್ರವಲ್ಲದೆ ಈವಿಷಯವಾಗಿ ಬಹುಕಾಲದಿಂದ ನಾನು ಕಾಗದಬರೆದವನಲ್ಲವು. ಪರಂತು ಈ ವಿಷಯದೊಳು ನೀವೀಗ ಭಗ್ನಪ್ರಯತ್ನ ಪೃಷ್ಠವರಾದಂತೆ ತಿಳಿಯಬಂದದರಿಂದ ಇನ್ನು ನನ್ನ ಮೌನವು ಸಲ್ಲದೆಂದು ತಿಳಿದೆನು. ಇಂಡ್ಯಾದೇಶದೊಳಿರುವ ನನ್ನಮಿತ್ರರು ಈವಿಷಯದಲ್ಲಿ ನನ್ನನ್ನು ನಿಂದಿಸುವಂತಿದ್ದಲ್ಲಿ ಅದನ್ನು ನಾನು ಪ್ರತಿಷ್ಠಾಕರೂಪೇಣ ಭಾವಿಸುವೆನು. ಪಾರಸಿಯಾದ ನಿಮ್ಮನ್ನೇ ಅವರು ಅಜ್ಞಾನಿಯೆಂದು ಕರೆಯುವರಾದರೆ ಮ್ಲೇಚ್ಛನಾದ ನನ್ನನ್ನು ಅದಿನ್ನೇನೆಂದು ಕರೆಯುವರೋ ಅದಂ ನೀವೇ ಆಲೋಚಿಸಬಹುದು.

ತಮ್ಮವಿಧೇಯ ಮ್ಯಾಕ್ಸ್‌ಮುಲ್ಲರ್.

Occasional Notes.
ನೈಮಿತ್ತಿಕವಿಷಯನ್ಯಾಸ

Mr. H M Durand—ಇಂಡ್ಯ ಗವರ್ನಮೆಂಟಿ ಫಾರಿನ್‌ಇಲಾಖಾ ಸೆಕ್ರೇಟರಿಯಾದ ಮ॥ ಡ್ಯೂರಾಂಡ್, ಸಿ. ಎಸ್ ಐ ಯವರು ಮೂರುತಿಂಗಳ ರಜಾಮೇಲೆ ಸ್ವದೇಶಕ್ಕೆ ಹೋಗಿರುತ್ತಾರೆ.

Life prisoners in Hyderabad—ಹೈದರಾಬಾದ್ ಸಂಸ್ಥಾನದಲ್ಲಿ ಯಾವಜ್ಜೀವಪರ್ಯಂತ ಅನುಭವಿಸುವಂತೆ ದಂಡಿಸಲ್ಪಟ್ಟಿರುವ ಕೈದಿಯರನ್ನು ದ್ವೀಪಾಂತರಕ್ಕೆ ಕಳುಹಿಸಬೇಕೆಂದು ನಿರ್ಣಯಿಸಿ ಅಂತಾವರನ್ನು ಅಂಡಮಾನ್ದ್ವೀಪದಲ್ಲಿ ಇಟ್ಟುಕೊಳ್ಳುವವಿಷಯದೊಳು ಬ್ರಿಟಿಷ್ ಗವರ್ನಮೆಂಟಿನವರೊಡನೆ ಏರ್ಪಾಡುಗಳು ಮಾಡುತಲಿರುವಂತೆ ಸಿಕಂದರಾಬಾದ್ ಪತ್ರಿಕೆಯೊಂದು ಹೇಳುತಿದೆ.

Extention of railways—ನಿಜಾಂಸರ್ಕಾರಕ್ಕೆ ಸೇರಿದ ಸಿಂಗರೇಣಿಯೆಂಬ ಸ್ಥಳದಿಂದ ಕೃಷ್ಣಾಡಿಸ್ಟ್ರಿಕ್ಟು ಬೆಜವಾಡಾವರಿವಿಗೂ ಬರುವ ಬರುವತಿಂಗಳಲ್ಲಿ ಹೊಗೇಗಾಡಿಗಳುನಡೆಸಲ್ಪಡುವವೆಂತಲೂ, ಅದೇಕಾಲದಲ್ಲಿ ಬಳ್ಳಾರಿ-ಕೃಷ್ಣಾ ನೆಲ್ಲೂರು-ಕಡಪಾ ರೈಲಿನಲ್ಲೂ ರೈಲುಗಾಡಿಗ

ನಡೆಸುವದಕ್ಕೆ ಪ್ರಾರಂಭವಾಗುವದೆಂತಲೂ ತಿಳಿಯಬರುತ್ತಿದೆ.

The chief justice of Gwalior.—ಮೈಸೂರು ಸಂಸ್ಥಾನದಲ್ಲಿ ಜಡ್ಜಿಯಾಗಿದ್ದ ಮೆ|| ಕೆ. ಶ್ರೀನಿವಾಸರಾವ್ ಬಿ. ಎ. ಯವರು ಗ್ವಾಲಿಯರ ಸಂಸ್ಥಾನದ ಹೈಕೋರ್ಟು ಚೀಫ್ ಜಡ್ಜಿಯರಾಗಿ ನೇಮಕರಾಗಲ್ಪಟ್ಟರೆಂದು ತಿಳಿಯಬರುತ್ತಿದೆ. ಈ ದೊಡ್ಡಮನುಷ್ಯರು ರಾಜಾ ಸರ್ ಟಿ. ಮಾಧವರಾಯರವರ ಅನುಬಂಧಿಯೆಂದು ಕೇಳುತ್ತೇವೆ.

Native Barristers.—ಇಂಡ್ಯಾದೇಶದಿಂದ ಇಂಗ್ಲಾಂಡಿಗೆ ಹೋಗಿ ಬ್ಯಾರಿಸ್ಟರಪರೀಕ್ಷೆಗಾಗಿ ಓದುತಲಿದ್ದ ನೇಟಿವ್‌ಗಳಪೈಕಿ ಇದರಡಿ ಕಾಣಿಸುವ ಹೆಸರುಳ್ಳವರು ತೇರ್ಗಡೆಯಾಗಿರುತ್ತಾರೆ. ಮೆ|| ಸೆವೂರು ಬಿಳಿಗಿರಿರಂಗ ರಾಮಸ್ವಾಮಿ ಅಯ್ಯಂಗಾರ್, ಗುರೇಶ ಚಂದ್ರವಿಶ್ವಾಸ್, ಅಜೀಜ್ ಅಹಮ್ಮದ್, ಬಿ. ಎ. ಯವರು.

The Dewan of Cashmere.—ಕಾಶ್ಮೀರ ದೇಶದ ಮಹಾರಾಜರವರ ನೌಕರಿಯಲ್ಲಿರುವ ಅಧಿಕಾರಿಗಳಪೈಕಿ ದಿವಾನ್ ಲಕ್ಷ್ಮಣದಾಸ್‌ಯವರು ಕೇವಲ ಶಕ್ತರಾಗಿಯೂ ಉತ್ತಮರಾಗಿಯೂ ಇರುವದರಿಂದ ಅವರೇ ಪ್ರಧಾನಮಂತ್ರಿಯಾಗುವವರಾಗಿದ್ದಾರೆ. ಆದರಿಂದರೇ ಅಲ್ಲಿನ ಆಡಳಿತಗಳೆಲ್ಲವೂ ವಿಮರ್ಶೆಯಾಗಿ ಸುವ್ಯವಸ್ಥಿತಿಗೆ ಬರಬೇಕಾಗಿದೆಯೆಂದು ಉತ್ತರದೇಶದ ಪತ್ರಿಕೆಯೊಂದು ತಿಳಿಸುತ್ತಿದೆ.

A royal tour.—ತಿರುವಾಂಕೂರು ಸಂಸ್ಥಾನದ ಯುವರಾಜರಾದ ಘನವನ್ನು ಹೊಂದಿದ ರಾಮವರ್ಮಯವರು ಮದರಾಸಿಗೆ ದಯಮಾಡುತ್ತಾರಾಗಿ ಮಾರ್ಗದಲ್ಲಿ ಅವರಿಗೆ ಬೇಕಾದ ಸಹಾಯಗಳನ್ನೆಲ್ಲ ಸಾಧುವಂತೆ ತಿರುನೆಲ್ವೇಲಿ, ಮಧುರೆ, ತಿರುಚನಾಪಲ್ಲಿ, ತಂಜಾವೂರು, ದಕ್ಷಿಣ ಆರ್ಕಾಟು, ಚಿಂಗಲ್‌ಪಟ್ಟು, ಪುದುಚ್ಚೇರಿಯಲ್ಲಿರುವ ಬ್ರಿಟಿಷರವರ ಏಜಂಟು, ಇವರೆಲ್ಲರನ್ನೂ ಮದರಾಸ್ ಗವರ್ನಮೆಂಟಿನವರು ಅಪೇಕ್ಷಿಸಿರುತ್ತಾರೆ. ಅರಸರವರು ಈತಿಂಗಳು ೨೦ನೇ ತಾರೀಖ್ ಸೋಮವಾರ ಸಾಯಂಕಾಲ ಮದರಾಸಿಗೆ ಬಂದು ಸೇರುವರು.

Asks the Amrita Bazar Patrika.—ಅಮೃತಬಜಾರ ಪತ್ರಿಕೆ ಪ್ರಶ್ನೆಮಾಡುವದೇನೆಂದರೆ—ಭಿನ್ನ ಭಿನ್ನಗಳಾದ ಪ್ರಯೋಜನಗಳುಳ್ಳ ಬಹುವಿಧ ಪ್ರಜೆಗಳನ್ನು ಧರಿಸಿಕೊಂಡಿರುವ ವಿಸ್ತಾರವಾದ ಇಂಡ್ಯಾದೇಶವನ್ನು ಆಳುವ ಕ್ರಮವನ್ನು ಇಂಗ್ಲಿಷ್ ಜನಗಳು ಯಾತಕ್ಕೆ ವಹಿಸಬೇಕು? ಇಂಡ್ಯಾದೇಶೀಯರು ತಮಗೆ ಕೊಡುವ ಪಗಾರಿಗೆ ತಕ್ಕ ಖಾತರೀ ಮಾಡಿಕೊಂಡು ಸ್ವದೇಶಕ್ಕೆ ಹೋಗಿ ನೆಮ್ಮದಿಯೊಡನೆ ಯಾತಕ್ಕೆ ಇರಬಾರದು? ಕಡೆಗೆ ಇಂಡ್ಯಾದೇಶೀಯರು ತಕ್ಕ ಜಾಮೀನ್ ಕೊಟ್ಟು ಕ್ರಮವಾಗಿ ಪಗಾರಿಯನ್ನು ಕೊಡುವದಾಗಿ ಒಪ್ಪಿಕೊಂಡರೆ ಆಗ ಇಂಗ್ಲಿಷಿನವರು ತಮ್ಮ ದೇಶಕ್ಕೆ ಹೊರಟುಹೋಗುವರೆ? ಎಂಬದು.

Joint stock companies.—ಮದರಾಸ್ ಜಾಯಿಂಟ್ ಸ್ಟಾಕ್ ಕಂಪೆನಿಗಳ ರಿಜಿಸ್ಟ್ರಾರಾದ ಮಹಾರಾಜಶ್ರೀ ಹರಿರಾಯರವರು ಗವರ್ನಮೆಂಟಿಗೆ ಬರೆದ ಸನ್ ೧೮೮೫—೮೬ನೇ ಇಸವಿಯ ರಿಪೋರ್ಟಿನಲ್ಲಿ ತಿಳಿಸುವದೇನೆಂದರೆ,—ಚೆಂಗಲ್‌ಪಟ್ಟು ಡಿಸ್ಟ್ರಿಕ್ಟಿಗೆ ಸೇರಿದ ಮಧುರಾಂತಕಂ ತಾಲೂಕು ಒಂದರಲ್ಲಿಮಾತ್ರ ಆರುತಿಂಗಳ ಕಾಲದೊಳಗಾಗಿ ೮೦ ಫಂಡುಗಳು ಏರ್ಪಾಡಾದವು. ಚೆನ್ನಪಟ್ಟಣ (ಮದರಾಸ) ದಲ್ಲಿರುವ ಫಂಡ್‌ಗಳನ್ನು ಸೇರಿಸಿದರೆ ಒಟ್ಟು ೨೦೬ ಫಂಡ್‌ಗಳು ರಿಜಿಸ್ಟರಾಗಿರುತ್ತವೆ. ಈ ದೌರ್ಭಾಗ್ಯಫಂಡ್‌ಗಳಿಗೆ ಕೇವಲ ಸ್ವಪ್ರಯೋಜನ ದೃಷ್ಟಿಯುಳ್ಳವರೂ, ಶಿಕ್ಷಾಸ್ಮೃತಿಯಲ್ಲಿ ಕಂಡಿರುವ ಅಪರಾಧಗಳೆಂಬುದಾಗಿ ಸಹಾ ಅನುಭವಿಸಿದವರೂ, ಜೀವನೋಪಾಯವಿಲ್ಲದೆ ಬೆಸರಿಲ್ಲದ ಅರ್ಜಿಗಳು ಬರೆಯತಕ್ಕವರೂ, ಸುಳ್ಳುಹೇಳುವದಕ್ಕೆ ಹಿಂಜರಿಯದವರೂ ಕಾರ್ಯನಿರ್ವಾಹಕರಾಗಿ ಏರ್ಪಟ್ಟಿರುತ್ತಾರೆ. ಇದುವರಿವಿಗೇ ಈ ಅನೇಕಫಂಡ್‌ಗಳು ನಾಶವಾದವು. ಅದರಿಂದ ತಮ್ಮ ಹೊಟ್ಟೆಗೆ ಸಹ ತಿನ್ನದೆ ಮಣ್ಣುಕೂಡ ಹಾಕಿ ಫಂಡಿನ ತಗಾದೆಗಳಿಗೆ ಕೊಟ್ಟ ಬಡವರ ಕಷ್ಟವನ್ನು ಹೇಳಲಸಾಧ್ಯವಾಗಿರುತ್ತಿದೆ. ಇಂತಾಫಂಡುಗಳನ್ನು ಖಂಡಿತವಾಗಿ ರಿಜಿಸ್ಟರಿಗೆ ತರಬೇಕು, ಹಾಗೆಮಾಡದೆಹೋದರೆ ಶಿಕ್ಷೆ ವಿಧಿಸಲ್ಪಡುವದೆಂದು ೧೮೬೦ನೇ ಇಸವಿಯ ೬ನೇ ನಂ|| ಶಾಸನದಲ್ಲಿ ನಮೂದಿಲ್ಲದೆಹೋದದರಿಂದಲೇ ದಿಕ್ಕಿಲ್ಲದ ಫಂಡುಗಳು ಬೀದಿಬೀದಿಗಳಲ್ಲೂ ಗ್ರಾಮಗ್ರಾಮಗಳಲ್ಲೂ ಹಿಂದೆರಡುಫಂಡುಗಳೇರ್ಪಾಡಾಗುವದಕ್ಕೆ ಕಾರಣವಾಯಿತು. ಆದದರಿಂದ ಖಂಡಿತವಾಗಿ ರಿಜಿಸ್ಟರ್‌ಮಾಡಬೇಕೆಂದು ಆಕ್ಟನ್ನು ತಿದ್ದುಪಡಿಮಾಡಬೇಕಾದ್ದಲ್ಲದೆ ಸದರೀಫಂಡುಗಳ ತನಿಖೆಬಗ್ಗೆ ಇನ್‌ಸ್ಪೆಕ್ಟರನ್ನು ನೇಮಕರಮಾಡಬೇಕಾದ್ದು ಅತ್ಯಾವಶ್ಯಕವಾಗಿರುತ್ತಿದೆ. ಮತ್ತು ಸದರೀಫಂಡಿನ ಕಾರ್ಯನಿರ್ವಾಹಕರು ಪ್ರಾಮಾಣಿಕರಾಗಿರಬೇಕೆಂತಲೂ ರಾಜಘೋಷಿತಿಯೊಡನೆ ಕಾರ್ಯನಿರ್ವಹಣೆಗೋಸ್ಕರ ಪ್ರತಿಫಂಡಿನ ಅಧಿಕಾರಿಯೂ ೧೦೦೦ ರೂಪಾಯಿಗೆ ಗವರ್ನಮೆಂಟಿಗೆ ನಗದು ಜಾಮೀನ್ ಕೊಡಬೇಕೆಂತಲೂ ಹುಕುಂ ಮಾಡಬೇಕು ಈಗ ಅಂತಾ ನಿರ್ಬಂಧಯಾವದೂ ಇಲ್ಲದೇಹೋದದರಿಂದಲೇ ನಿರಕ್ಷರಕುಕ್ಷಿಗಳೂ ಅನಾಮಧೇಯರುಸಹ ಫಂಡುಗಳನ್ನೇರ್ಪಡಿಸಿ ಬಡವರ ಕಣ್ಣುಗಳಿಗೆ ಮಣ್ಣುಹಾಕಿ ಅವರನ್ನು ಮೋಸಗೊಳಿಸಿ ತಾವು ಚಿನ್ನದಬಳೆಗಳನ್ನು ಹಾಕಿಕೊಳ್ಳುವದಕ್ಕೂ ಕಲಾಬತ್ತು ಬಟ್ಟೆಗಳನ್ನು ಟ್ಟುಕೊಳ್ಳುವದಕ್ಕೂ, ಮಹಡಿಮನೆಗಳಂ ಕಟ್ಟಿಸಿಕೊಳ್ಳುವದಕ್ಕೂ, ಅನುಕೂಲವುಂಟಾಗಿದೆಯೆಂಬದು. ಇಂತಾ ರಿಪೋರ್ಟಿನಮೇಲೆ ಸದರೀಆಕ್ಟಿನ ೬೩, ೬೪, ೬೫, ೬೭, ೭೪, ಈಸೆಕ್ಷನುಗಳನ್ನನುಸರಿಸಿ ಚೆನ್ನಪಟ್ಟಣದಲ್ಲಿರುವಫಂಡುಗಳಮೇಲೆರಿಜಿಸ್ಟ್ರಾರವರು ನಡೆಸಿದ ಅಮಲಿಗೆ ಪರ್ಯವಸಾನವನ್ನು ತಿಳಿಸಬೇಕೆಂತಲೂ, ಇದೇ ವಿಷಯವಾಗಿ ೧೮೬೯ನೇ ಇಸವಿ ಡಿಸಂಬರ್ ೨ನೇತಾರೀಖಿನ ೩೩೦೪ನೇ ನಂಬರ್ ಹುಕುಮಿನ ಎಕ್ಷೇಕಲಂ ಅನುಸರಿಸಿ ಡಿಸ್ಟ್ರಿಕ್ಟ್ ಜಾತಿನಲ್ಲಿರುವ ಫಂಡ್‌ಗಳನ್ನು ಕುರಿತು ಆಯಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಏನಾದರು ರಿಪೋರ್ಟು ಮಾಡಿದಾರೆಯೆಂಬ ಅಂಶವನ್ನೂ ತಮಗೆ ರಿಪೋರ್ಟ್ ಮಾಡಬೇಕೆಂತಲೂ ಗವರ್ನಮೆಂಟಿನವರು ಹುಕುಂ ಮಾಡಿರುತ್ತಾರೆ, ಎಂದು ಮದರಾಸ್ ಆಂಧ್ರಪ್ರಕಾಶಿಕಾಪತ್ರಿಕೆಯೇಳುತಿದೆ.

ಈ ವಿಷಯದಲ್ಲಿ ಸರ್ಕಾರದವರು ಪ್ರಾರಂಭಿಸಿರುತ್ತಿದ್ದು ಇಂತಾ ಸಂಘಗಳ ಏಜಂಟ್ ಮೊದಲಾದ ಅಧಿಕಾರಿಗಳ ಪ್ರಾಮಾಣಿಕತೆಯ ವಿಷಯದಲ್ಲಿ ತಕ್ಕಬಂದೋಬಸ್ತು ಮಾಡುವರೆಂದು ಕೋರುವೆವು.

LOCAL AND PROVINCIAL NEWS.
ಒಳದೇಶವುತ್ತು ತಾಲ್ಲೂಕುಜಾತಿವೃತ್ತಾಂತಗಳು.

---:o:---

Sick leave.—ಶಿವಮೊಗ್ಗಾ ಡಿ|| ಸಿವಿಲ್ ಸರ್ಜನರಾದ ಮೆ|| ಸಾಸ್‌ಮೂರ್ಯವರು ಶಾಹಿಲೇ ಸಬಬ್ ಎರಡುತಿಂಗಳ ರಜಾ ಪಡಕೊಂಡಿರುವಂತೆ ಕೇಳುತ್ತೇವೆ.

Christmas Holidays.—ಈಸಲದ ಕ್ರಿಸ್ಟಮಸ್ ಹಬ್ಬದ ಬಗ್ಗೆ ಈತಿಂಗಳ ೨೩ನೇ ತಾರೀಖ್ ಬೃಹಸ್ಪತಿವಾರದ ಮೊದಲು ಜನವರಿ ೫ನೇ ತಾರೀಖ್ ಬುಧವಾರದವರಿವಿಗೆ ಉಭಯದಿನಗಳು ಸೇರಿ ಈ ಸಂಸ್ಥಾನದ ತಮಾಂ ಇಲಾಖೆಗಳಿಗೂ ರಜಾ ಕೊಡಲ್ಪಟ್ಟಿರುತದೆ. ಈರಜಾ ತಾಲ್ಲೂಕು ಕುಚೇರಿಗಳಿಗೂ ಜಮಾಬಂದೀ ಆಫೀಸರ್‌ಗಳಿಗೂ ಸಂಬಂಧಪಡುವದಿಲ್ಲವು.

A rumour.—ಮೈಸೂರು ದೇಶದಲ್ಲಿ ಯುದ್ಧ ನೌಕರಿಯ ಬಗ್ಗೆ ಮದರಾಸಿನಲ್ಲಿರುವ ಇನ್‌ಫಾಂಟ್ರೀ ಸೇನೆಯು ಹೊರಟುಹೋಗುವದಾಗಿ ಅಲ್ಲಿನ ಪಟ್ಟೇ ವಗೈರೇ ನೌಕರಿಗಳ ಬಗ್ಗೆ ಈಸಂಸ್ಥಾನದ ಬಾರ್‌ಸ್ಟೆಷನನ್ನು ತೆಗೆದಿಹಾಕಿಸಿಕೊಳ್ಳಬೇಕೆಂದು ಮದರಾಸ್ ಗವರ್ನಮೆಂಟಿನವರು ಮಹಾರಾಜಾ ಸರ್ಕಾರಕ್ಕೆ ಬರೆದಿರುವಂತೆ ಇಲ್ಲಿ ಒಂದು ಪ್ರವಾದ ಪ್ರಚುರಗೊಂಡಿದೆ.

Transfer.—ಶಿವಮೊಗ್ಗಾ ಡಿ|| ಸಿವಿಲ್ ಸರ್ಜನ್ ಮೆ|| ಸಾಸ್‌ಮೂರ್ಯವರು ಎರಡುತಿಂಗಳ ರಜಾ ಪಡಕೊಂಡದರಿಂದ ಅವರಕೆಲಸಕ್ಕೆ ಮೈಸೂರಲ್ಲಿರುವ ಅಸಿಸ್ಟೆಂಟ್ ಸರ್ಜನ್ ಮೆ|| ಜಾಕ್ಸೇಯವರೂ, ಅವರಕೆಲಸಕ್ಕೆ ಬೆಂಗಳೂರು ಸಬ್‌ಪತ್ರಿಯಲ್ಲಿರುವ ಅ|| ಸರ್ಜನ್ ಮೆ|| ಆರೋಗ್ಯಂಪಿಳ್ಳೆಯವರೂ ವರ್ಗಮಾಡಲ್ಪಟ್ಟದ್ದಲ್ಲದೆ, ಪ್ರಸವಾಸ್ಪತ್ರಿಯಕೆಲಸಕ್ಕೆ ಹೊಸದಾಗಿ ಪ್ಯಾಸ್‌ಮಾಡಿಬಂದ ಅಸಿಸ್ಟೆಂಟ್ ಸರ್ಜನ್ ಮೆ|| ಸ್ಟರ್ ಲಕ್ಷ್ಮಣಸ್ವಾಮಿಯೆಂಬವರು ನೇಮಕರಾಗಲ್ಪಟ್ಟರೆಂದು ತಿಳಿಯಬರುತಿದೆ.

The F A and Matriculation Examinations.—ಬರುವ ಬುಧವಾರದದಿನ ಈಸಲದ ಎಫ್. ಎ. ಮತ್ತು ಮೆಟ್ರಿಕ್ಯುಲೇಷನ್‌ಪರೀಕ್ಷೆಗೆ ಪ್ರಾರಂಭವಾಗುವದು. ಈಸಲವೂ ಈಪರೀಕ್ಷೆಗಳಿಗೆ ಅನೇಕಸಹಸ್ರ ವಿದ್ಯಾರ್ಥಿಗಳು ದರಖಾಸ್ತುಮಾಡಿರುತ್ತಾರೆ. ಜನಗಳ ವಿದ್ಯಾಭ್ಯಾಸ ಈರೀತಿ ವೃದ್ಧಿಹೊಂದುತಲಿರುವದಕ್ಕೆ ಅನುಗುಣವಾಗಿ ಗವರ್ನಮೆಂಟಿನ ಏರ್ಪಾಡಿನಲ್ಲಿ ಬದಲಾವಣೆಗಳು ಮಾಡಲ್ಪಟ್ಟರೆ ಉಚಿತವಾಗಿರುವದು. ಅಂದರೆ ವಿದ್ಯಾವಂತರಾದವರಿಗೆ ಜೀವನೋಪಾಯವು ಬಹುವಿಧವಾಗಿರುವದರಿಂದ ಅವುಗಳಲ್ಲಿ ಅವರಿಗೆ ತಕ್ಕ ಪ್ರೋತ್ಸಾಹವನ್ನುಂಟುಮಾಡಬೇಕೆಂಬದು.

Murder.—ಕಳೆದ ಶುಕ್ರವಾರದದಿನ ರಾತ್ರಿ ಈವೂರು ಸಿಲ್ಲೇದಾರ್ ಸೇನೆಗೆ ಸೇರಿದ ಒಬ್ಬ ಮುಸಲ್ಮಾನನು ಸದರೀ ಲೈನಿಗೆ ಆಚೆಯಿರುವ ಮಳವಳ್ಳಿ ಚಿಕ್ಕಣ್ಣನವರ ಸತ್ರದಲ್ಲಿ ಸುಮಾರು ೧೨ ವರುಷಗಳ ವಯಸ್ಸುಳ್ಳ ತನ್ನ ಮಗಳನ್ನು ಪಕ್ಕದಲ್ಲಿ ಮಲಗಿಸಿಕೊಂಡು ನಿದ್ರೆಹೋಗುತಲಿದ್ದು ಬೆಳಿಗ್ಗೆಯೆದ್ದು ನೋಡುವಲ್ಲಿ ಸದರೀಹುಡಿಗಿಯ ಎದೆಯಮೇಲೆ ಒಂದು ದೊಡ್ಡಕಲ್ಲುಯಿಟ್ಟಿತ್ತು. ಅವಳೂ ಮೃತಪಟ್ಟಿದ್ದಳು. ಈ ಸಂಗತಿ ಪೋಲೀಸ್‌ನವರಿಗೆ ರಿಪೋರ್ಟಾಯಿತು. ಈಖೂನಿಗೆ ಪ್ರಾಣಹಾನಿಕಾರಣವಾಗಲಿ ಅದನ್ನು ನಡೆಸಿದ ಆಸಾಮಿಗಳಾಗಲಿ ಅಷ್ಟಾಗಿ ಪತ್ತೇ ಇಲ್ಲವು.

Elopement.—ಈವೂರು ಬಳೇಪೇಟೆಯಲ್ಲಿರುವ ಹೊಸಕೋಟೆ ವೆಂಕಟಸಾನಿ ಯೆಂಬವಳು ಸಾಕಿಕೊಂಡಿದ್ದ ಸುಮಾರು ೧೬ ವರುಷಗಳ ವಯಸ್ಸುಳ್ಳ ನಂಜುಂಡೇಶ್ವರಿಯನ್ನು, ಅವಳ ತಾಯಿಗೆ ತಿಳಿಸದಂತೆ ಅವಳ ಶೋಭನಯಿಂದ ತಪ್ಪಿಸಿ ಮನೆಯೊಳಿದ್ದ ನಗಗಳೊಡನೆ ಈವೂರು ಜವಳೀವರ್ತಕರಪೈಕಿ ಧನಿಕನೊಬ್ಬಾತನು ತಮ್ಮ ಸ್ವಾಧೀನಮಾಡಿಕೊಂಡಿರುವಂತೆಯೂ, ಅದು ಈಚೆಗೆ ಪತ್ತೇಯಾಗಿ ಅವಳ ತಾಯಿಯು ಕಳವುಬಗ್ಗೆ ಮಗಳಮೇಲೆ ಟೌನ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಫಿರ್ಯಾದುಮಾಡಿರಲು ಅದು ವಿಚಾರಣೆಯಾಗುತಲಿರುವಂತೆ ತಿಳಿಯಬರುತಿದೆ. ಈ ಕ್ರಮವು ಈತನೊಬ್ಬನಿಂದಲೇ ಅನುಸರಿಸಲ್ಪಡುತಲಿರುವದಿಲ್ಲವು. ಈತನಂತೆ ದೊಡ್ಡ ಮನುಷ್ಯರೆಂದೆನ್ನಿಸಿಕೊಳ್ಳಬೇಕೆಂಬ ಕುತೂಹಲವುಳ್ಳ ಪರಂತು ದುರ್ವೃತ್ತರಾದವರ್ತಕರು ವಗೈರೆ ಅನೇಕರು ಮೇಲೆಕಂಡಂತೆಯೇ ನಾಯಕಸಾನಿ ಹುಡಿಗಿಯರನ್ನು ವಿಶಿಷ್ಟ ಆಸ್ತಿಯೊಡನೆ ಸ್ವಾಧೀನಪಡಿಸಿಕೊಂಡಿರುತ್ತಾರೆ. ಇತರ ವ್ಯಾಪಾರಗಳಂತೆ ಇದೂ ತಮಗೊಂದು ವ್ಯಾಪಾರವೆಂದು ಭಾವಿಸಿರುವಂತೆ ತೋರುತಿದೆ.

CORRESPONDENCE
ಮಹಾರಾಜಶ್ರೀ ಕರ್ನಾಟಕ ಪ್ರಕಾಶಿಕಾ ಎಡಿಟರವರ ಸಮುಕ್ಷಮಕ್ಕೆ.

ಅಯ್ಯಾ,—ಕಲ್ಪದ್ರುಮದೋಪಾದಿಯಲ್ಲಿ ಕೇವಲ ಪರೋಪಕಾರಕ್ಕೋಸ್ಕರವಾಗಿ ಮೈಸೂರು ವೃತ್ತಾಂತ ದರ್ಪಣವು ಗಭರ್ಕೋಶದಲ್ಲಿ ವೃದ್ಧಿಯನ್ನೈದುತ ಇರುವ ವಾರ್ತೆಯನ್ನು ತಮ್ಮ ಪತ್ರದ್ವಾರಾತಿಳಿದು ಆನಂದಸುಖೋದಧಿಯಾದೆನು. ಆದರೆ ಈ ವಿಷಯದಲ್ಲಿ ಇನ್ನೂ ಕೆಲವು ಅಂಶಗಳನ್ನ ತಿಳಿಯಬೇಕಾಗಿರುವದನ್ನ ಈ ಕೆಳಗೆ ಬರೆಯುತ್ತೇನೆ ದಯಮಾಡಿ ಸಂದೇಹವನ್ನು ಪರಿಹಾರಮಾಡಬೇಕು.

ಪರಸ್ಥಳದವರು ಒಂದೇ ದಫಾ ೧೫ ರೂಪಾಯಿಗಳನ್ನ ಕೊಟ್ಟರೆ ಈ ಪತ್ರಿಕೆಯನ್ನ ಯಾವೊತ್ತಿಗೂ ಉಚಿತವಾಗಿ ಕಳುಹಿಸುತ್ತೇವೆಂದು ಪ್ರತಿಜ್ಞೆಮಾಡಿ ಇರುತ್ತಾರಷ್ಟೆ. ಯೆಂದೆಂದಿಗೂ ಯೆನ್ನುವ ಶಬ್ದವು ಹಣ ಕಳುಹಿಸಿದವನು ಇರುವವರಿಗೆ ಎಂತಲೋ ಅಥವಾ ಪೇಪರ್ ನಡೆಯುವ ವರಿಗೂ ಯೆಂಲೋ ಅಥವಾ ಹಿಂದಿ ಸರ್ವಮಾನ್ಯಕೊಟ್ಟಂತೆ ಹಣ ಕೊಟ್ಟವರ ವಂಶ ಪರಂಪರೆಯಾಗಿಎಂತಲೋ ಗೊತ್ತಾಗುವದಿಲ್ಲವಾಗಿ ಈ ಅಂಶವನ್ನ ತಿಳಿದಕರುವಾಯ ಅನೇಕರು ಕಲ್ಪದ್ರುಮದ ಆಸರೆತಿಯನ್ನು ಹೊಂದಲು ಇಷ್ಟವುಳ್ಳವರಾಗಿದಾರೆ.

ಅಮೇರಿಕಾ ಖಂಡದಲ್ಲಿ ಮೆ|| ರೋತ್ಸ್ಯಾನೊ ಕಂಪೆನಿಯವರು ಬಹಳ ಸುಲಭ ಖರೀದಿಗೆ ಗಡಿಯಾರಗಳು ವಿಕ್ರಯಿಸುವದಾಗಿ ೧೮೮೧ನೇ ಇಸವಿಯಲ್ಲಿ ಪತ್ರಗಳ ದ್ವಾರಾ ಪ್ರಕಟಿಸಲಾಗಿ ಅಗ್ಗದ ಆಶೆಪಟ್ಟು ನಾವುಗಳೆಲ್ಲರೂ ಹಣವನ್ನು ಕಳುಹಿಸಿರಲಾಗಿ ಸದರೀ ಕಂಪೆನಿಯವರು ತ್ವರೆವ್ಯಧಹಾಗೆ ಪರಿಣಮಿಸಿ ನಾವುಗಳು ದ್ರವ್ಯವನ್ನು ಹೋಗಲಾಡಿಸಿಕೊಂಡೆವು. ಆದ್ದರಿಂದ ತಪ್ಪೋತ್ಸಾಹತೆಯವಾಗಿ ಸುಲಭವಾದ ಮೇಲೆಕಂಡ ಪತ್ರಿಕೆಗೋಸ್ಕರ ಚಂದಾ ಹಣವನ್ನ ಕಳುಹಿಸಲು ನಾನು ವಿಜ್ಞಾಪನ ಮಾಡಿಕೊಂಡಿರುವ ಅಂಶಗಳಿಗೆ ತಮ್ಮಿಂದ ಜವಾಬ್ ನಿರೀಕ್ಷಿಸಬೇಕಾಗಿದೆ.

NEWS LETTERS.
ವೃತ್ತಾಂತ ಪತ್ರ.

ಈವೂರು ಸುತ್ತಲೂ ಎತ್ತನೋಡಿದರೂ ನೋಟಕರ ಕಣ್ಣಿಗೆ ಅತ್ಯಾನಂದವಂ ಗೊಳಿಸುವ ಭತ್ತದ ಪೈರು ಭಂಗಾರದ ಬಣ್ಣವಂ ತಾಳಿ ಲಕ್ಷ್ಮಿಯೆಂದೊಡಗೂಡಿದ ಸ್ತ್ರೀಯಂತೆ ಶಿರಬಾಗಿಸಿವೆ. ಕೆಲವುಕಡೆ ರೈತರು ಭತ್ತದ ಪೈರುಗಳಂ ಕುಯ್ಯುವದು, ಅರಿ ಹಾಕುವದು, ಒಟ್ಟುವದು, ಈ ಮೊದಲಾದ ಕೆಲಸಗಳು ಮಾಡುವದರಲ್ಲಿ ಮುತವರ್ಜಿಯುಳ್ಳವರಾಗಿದಾರೆ.

೮—೧೦ ದಿವಸಗಳ ಹಿಂದೆ ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರ್ ಮೆ. ಬಿ. ದೇಶಿಕಾ ಚಾರ್ಯರವರು ಈ ವೂರಿಗೆ ಸ್ಕೂಲುಗಳ ಪರಿಕ್ಷಾರ್ಥ ದಯಮಾಡಿದ್ದರು. ೨—೩ ದಿವಸಗಳ ವರಿಗೂ ಇಲ್ಲಿಯೇ ಇದ್ದು ಈ ವೂರಲ್ಲಿರುವ ಗವರ್ನಮೆಂಟ್ ಕನ್ನಡ ಸ್ಕೂಲ್ ಮತ್ತು ಪೇಟೆ ಬ್ರಾಂಚ್ ಸ್ಕೂಲ್ ಇವುಗಳನ್ನ ಆದಮಾಯಿಷ್ ಮಾಡಿದನಂತರ ಚನ್ನರಾಯಪಟ್ಟಣ ಪ್ರಾಂತ್ಯಕ್ಕೆ ದಯಮಾಡಿದರು. ಸ್ಕೂಲುಗಳ ಕೆಲಸಗಳ ವಿಷಯದಲ್ಲಿ ಇನ್‌ಸ್ಪೆಕ್ಟರವರು ತೃಪ್ತಿಯನ್ನು ಹೊಂದಿದರೆಂದು ಕೇಳುತ್ತೇವೆ.

ನಮ್ಮ ಡೆಪ್ಯುಟಿ ಕಮ್ಮಿಷನರವರಾದ ಮೆ. ಅ ನಂದರಾವ್‌ಜಿ ಬಿ. ಎ ಯವರು ತಮ್ಮ ಆಫೀಸ್ ರೆವಿನ್ಯು ಶಿರಸ್ತೇದಾರ್, ರೆವಿನ್ಯು ಹೆಡ್ ಮುನಿಷಿಯರು, ಜ್ಯುಡಿಷಲ್ ಹೆಡ್ ಮುನಿಷಿಯರು, ಕುರಹಮ್ಮತ್ ಅಕೌಂಟೆಂಟ್, ಜ್ಯುಡಿಷಲ್ ಡೆಪ್ಯುಟಿ ಮುನ್ಷಿಯರು, ಇನ್ನು ಕೆಲವರು ಸೈಟರ್ ವಗೈರೆ ತಬ್ಬಂದಿಗಳ ಸಮೇತ ಈ ವೂರಿಗೆ ಈ ತಿಂಗಳು ೫ನೇತಾರೀಖ್ ಭಾನುವಾರದದಿವಸ ಜಮಾಬಂದೀ ಉದ್ದಿಶ್ಯ ದಯಮಾಡಿದರು. ಇದೇ ತಿಂಗಳ ೭ನೇ ತಾರೀಖಿಗೆ ಇದೇ ಮೊಕ್ಕಾಂನಲ್ಲಿ ಒಂದು ಕ್ರಿಮಿನಲ್ ಕೇಸ್ ಹಿಯರಿಂಗ್ ಇಟ್ಟದ್ದಾರಾಗಿ ಇವರ ಸವಾರಿಯು ಈಮಾಹೇ ಆಖೈರ್ ವರಿಗೂ ಇಲ್ಲಿಯೇ ಚಿಕ್ಕಸಿರುವದೆಂದು ತೋರುತದೆ. ನಮ್ಮ ಡೆಪ್ಯುಟಿ ಕಮ್ಮಿಷನರವರ ಸವಾರಿಯು ಇಲ್ಲಿಗೆ ದಯಮಾಡಿದ ಮಾರನೇ ದಿವಸದಿಂದಲೂ ಮಕ್ಸನಿಸಿಪಾಲಿಟಿ ವಿಷಯದಲ್ಲಿ ಕೊಂಚ ಆಸಕ್ತಿ ತೆಗೆದುಕೊಳ್ಳುವದಾಗಿ ಕಾಣುತ್ತೆ. ಹ್ಯಾಗಾದರೂ ಸದ್ಯ ಪ್ರಾರಂಭವಾಗಿದೆ. ಡೆಪ್ಯುಟಿ

ಕಮಿಶ್ನರರ ಸಾಹೇಬರು ಇಲ್ಲಿರುವತನಕ ಈಗ ಇರುವ ಪೋಲೀಸ್ ಸ್ಥಿತಿ ನೆಲಗೊಂಡಿರಬಹುದೆಂದು ತೋರುತ್ತೆ. ಇವರು ಕಳೆದಸೆಪ್ಟಂಬರ್ ತಿಂಗಳಲ್ಲಿ ಈವೂರಿಗೆ ಬಿಜಮಾಡಿದ್ದಾಗ್ಯೆ ಇಲ್ಲಿ ಒಂದು ಡಿಸ್ಪೆನ್ಸರಿ ಇಡಿಸಬೇಕೆಂತ ಪ್ರಜೆಗಳು ಹೇಳಿಕೊಂಡಿದ್ದರು. ಅವರ ಪ್ರಾರ್ಥನೆ ಶೀಘ್ರದಲ್ಲಿಯೇ ನೆರವೇರುವಹಾಗೆ ಕಾಣುತ್ತೆ. ಹ್ಯಾಗೆಂದರೆ ಇಲ್ಲಿನ ಮುನ್ಸಿಫ್ ಕೋರ್ಟಿಗೆ ಒಂದು ಪೋಲ್ದಮೈಲುವಲ್ಲಿರುತ್ತೆಯಾಗಿ ಹಾಸನದಲ್ಲಿರುವ ಡಾಕ್ಟರ್ ಅಚ್ಯುತರಾಯರವರು ಸೋಮವಾರ ದಯಮಾಡಿದ್ದರು. ಆಗ್ಯೆ ಡಿಸ್ಪೆನ್ಸರಿ ಕಟ್ಟತಕ್ಕ ಸ್ಥಳದ ಪ್ರಕಾಸೆ ಬಂದು ಸದರೀ ಕಟ್ಟಡವನ್ನು ಕೋರ್ಟಿಯ ಬಲಗಡೆಗೆ ಹೊಸದಾಗಿ ಈ ಮಧ್ಯೆ ಮಾಡಲ್ಪಟ್ಟ ಹೊಲದಲ್ಲಿ ಕಟ್ಟಬೇಕೆಂತ ನಿಷ್ಕರ್ಷೆ ಆದದ್ದಾಗಿ ಕೇಳುತ್ತೇವೆ—ಹಾಸನ.

ಈಚೆಗೆ ಇಲ್ಲಿನ ಮುನ್ಸಿಫರು ಕೋರ್ಟನ್ನು ರಾತ್ರಿ ೭—೮ ಘಂಟೆಗಳತನಕ ಮಾಡುತಲಿದಾರೆ. ಈ ಪದ್ಧತಿಯು ದರಸ್ಥಳದ ಕಕ್ಷಿಗಾರರಿಗೂ ಮತ್ತು ಸಾಕ್ಷಿಗಾರರಿಗೆ ಸಹ ಬಹಳ ಅನಾನುಕೂಲವನ್ನು ಉಂಟುಮಾಡುತವೆ ಮುನಸಫ ಮ. ಸಿ ಸುಬ್ಬರಾಯರವರನ್ನು ಈಪದ್ಧತಿ ಬದಲಾಯಿಸಬೇಕೆಂತ ಕಕ್ಷಿಗಾರರು ವಗ್ಯೆರೇರು ಅನೇಕವಭಾಪ್ರಾರ್ಥಿಸಿಕೊಂಡಾಗ್ಯೂ ಅವರ ಚಿತ್ತಕ್ಕೆ ಬಾರದೆ ಇದೆ. ಅದಲ್ಲದೆ ಇನ್ನೊಂದು ಅನಾನುಕೂಲ ಉಂಟು, ಅದು ಯಾವದೆಂದರೆ, ಒಂದು ಹುಚ್ಚದಮೇಲೆ ಒಂದು ತಕರಾರ್ ಮೊಕದ್ದಮೆಯು ವಿಚಾರಣೆಗೆ ಕೈ ಹಚ್ಚುತ್ತಾರೆ. ಅದು ಆ ದಿವಸ ಮುಗಿಯುವ ಸಂಭವ ವಿಲ್ಲವೆಂತ ತಿಳದಾಗ್ಯೂ ಬಾಕಿ ಕೇಸಿನ ಕಕ್ಷಿಗಾರರನ್ನೆಲ್ಲ ಆಖೈರ್ ವರಿಗೂ ಕಾಯಿಸಿ ನಂತರ ನಾಳೆ, ನಾಡಿದ್ದು, ಮತ್ತೊಂದು ತಾರೀಖ್ ಇನ್ನೊಂದಕ್ಕೆ ಅಡ್ಜರ್ನ್ ಯೆಂತ ಹೇಳುತ್ತಾರೆ. ಈ ವೂರು ಒಂದು ದ್ವೀಪದಂತೆ ಇದೆ. ಮೇಲ್ಪಟ್ಟ ಅಧಿಕಾರಿಗಳೊಂದಿಗಾದರೂ ಈ ಅನಾನುಕೂಲ ಪರಿಹಾರಾರ್ಥ ಹೇಳಿಕೊಳ್ಳೋಣವೆಂದರೆ ಅವರಿರತಕ್ಕಸ್ಥಳ ದೂರ, ಅವರು ಇಲ್ಲಿಗೆ ದಯಮಾಡಿದಾಗಲಾದರೂ ಹೇಳಿಕೊಳ್ಳೋಣವೆಂದರೆ ಅವರ ಆಗಮನವು ಇಲ್ಲಿಗೆ ಈಚೆಗೆ ಅಪೂರ್ವವಾಗಿಯೇ ಹೋಯಿತು.

ದೇವರೇ ಗತಿ?

ಇಲ್ಲಿನ ಮರಹೆಮ್ಮತ್ ಇಲಾಖೆಯ ಕನ್ನಡ ಮುತ್ಸದ್ದೀ ಕೆಲಸಕ್ಕೆ ಭವಾನಿ ಶಂಕರಯ್ಯರೆಂಬವರು ಬಂದಿರುತ್ತಾರೆ.

SUMMARY OF NEWS
ವೃತ್ತಾಂತ ಸಂಗ್ರಹವು.

ಕಲಿಕತ್ತೆಯೊಳಗಿನ ರಾಲೀಬ್ರದರ್ಸ್ ಕಂಪನಿಯಲ್ಲಿ ಯಾರೋ ಒಬ್ಬ ಉಚ್ಚನು ಸುಳ್ಳುಹುಂಡಿಯನ್ನು ಮಾಡಿ ೯ಸಾವಿರರೂಪಾಯಿಯನ್ನು ವೈದನಂತೆ ಉಚ್ಚನಾದರೂ ಪಕ್ಕಾ ಉಚ್ಚನೇ ಸರಿ.

ಮದುರವಾದ ಗಾಯನದ ಧ್ವನಿಯನ್ನು ಕೇಳಿ ಮಾನುಗಳು ಮೋಹಿಸಸಿಸಿ ಬರುತ್ತವೆಂತಲೂ, ಅದರಿಂದ ಅನಾಯಾಸವಾಗಿ ಅವು ಕೈಗೆ ಸಿಕ್ಕುತವೆಂತಲೂ ಇಟಲಿಯೊಳಗಿನ ಒಬ್ಬ ಚಾಕರಿಯವನು ತನ್ನ ಎಜಮಾನನಿಗೂ ಅವನಮಿತ್ರನಿಗೂ ಖಾತರೀಮಾಡಿಕೊಟ್ಟನಂತೆ.

ಬಂಗಾಳೆಯಲ್ಲಿ ೧೮೮೬ನೇ ಇಸವಿ ಅಕ್ಟೋಬರ್ ವರಿಗೆ ಧರ್ಮಶಿವಶಿತ್ರಗಳು ೬೩೭ ಇರುತಿವೆ. ಇವುಗಳಿಗೆ ಸಾಲೀಯಾನಾ ೧,೬೩,೬೨೭ರೂಗಳು ಖರ್ಚಾಗುತವೆ ಇದಕ್ಕೆಯೂರೋಪಿಯನ್ನರುಗಳಿಂದ ಚಂದಾ ಮೂಲಕ ವಸೂಲಾಗುವ ೧೬೮೭೦ ರೂಪಾಯಿಗಳು ಜಾತಾ ಉಳದ ಮೊಬಲಗು ನೇಟವ್ ದೊಡ್ಡಮನುಷ್ಯರಿಂದ ಸಹಾಯವಾಗುತಿದೆ.

ಬರ್ಮಾದೇಶದಲ್ಲಿ ಕಳೆದ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ವಸೂಲಾದದ್ದು ೬,೫೦,೦೦೦ ರೂಪಾಯಿಗಳು, ಅದರಲ್ಲಿಕಿ ಅರ್ಧಮೊಬಲಗು ಡಿವಿಜನ್ ಟ್ರೆಜರಿನಲ್ಲಿ ಹುಟ್ಟುವಳಿಯಾದದ್ದು. ಸದರೀ ಎರಡು ತಿಂಗಳಲ್ಲಿ ಖರ್ಚಾದದ್ದು ೮,೬೫,೦೦೦ ರೂಪಾಯಿಗಳು. ಅಷ್ಟಕೆ ಪೋಲೀಸ್ ಸಿಬ್ಬಂದಿಖರ್ಚು ೬,೩೫,೦೦೦ ರೂಪಾಯಿಗಳೆಂದು ತಿಳಿಯಬರುತದೆ ಮೇಲಿನ ಅಂಕೆಗಳಿಂದಲೇ ಅಲ್ಲಿನ ಅಥೋರ್ಗತಿಯು ಸ್ಪಷ್ಟವಾಗುತಿದೆ.—ಆ. ಪ್ರ

ಹಿಂದೂ ವೈದ್ಯಶಾಸ್ತ್ರಕ್ಕೆ ಪುನರ್ಜೀವನವಾಗುವದಕ್ಕೆ ಆರಂಭವಾಗಿದೆ. ಕವಿರಾಜ ವಿಜಯರತ್ನ ಸೇನರೆಂಬುವರು ಅಷ್ಟಾಂಗಹೃದಯವೆಂಬ ವೈದ್ಯಗ್ರಂಥವನ್ನು ದೇಶಭಾಷೆಯಿಂದ ಮಾಡುವದಕ್ಕೆ ತೊಡಗಿದ್ದಾರೆ ಆ ಕೃತ್ಯಕ್ಕೆ ಸಹಾಯ ಮಾಡುವದಕ್ಕಾಗಿ ಬಂಗಾಳೇ ಸರ್ಕಾರದವರು ಅದರ ಅನೇಕ ಪ್ರತಿಗಳು ಕೊಂಡಿರುತ್ತಾರೆ. ನಮ್ಮ ದೇಶದಲ್ಲಿಯು ಸದರೀಗ್ರಂಥವನ್ನು ಕನ್ನಡಿಸಿ ಅಚ್ಚು ಹಾಕಿ ಲೋಕಕ್ಕೆ ಪ್ರಕಾಶಮಾಡುವಂತವರು ಇಲ್ಲವೊ?—ವಿಜಯಧ್ವಜ.

ಮ. ಸಿ. ಪಿ ಇಡಿ ಬರ್ಸ್ಟರಿಗಳು ಹೊದನಂತರ ಡಾಕ್ಟರ್, ಡಬ್ಲ್ಯು ಹಂಟರ್‌ದೊರೆಗಳಿಗೆ ಕಲಕತ್ತೆ ಯೂನಿವರ್ಸಿಟಿಯ ವೈಸ್ ಛಾನ್ಸಲರಾಗಿ ನೇಮಿಸಿರುತ್ತಾರೆ. ಈ ಪದವಿಗೆ ಡಾಕ್ಟರ್ ರಾಜೇಂದ್ರಲಾಲ್‌ಮಿತ್ರರಿಗೆ ಯಾ ಹೈಕೋರ್ಟ ಜಡ್ಜಿಯರಾದ ರೋಮೇಶ ಚಂದ್ರಮಿತ್ರರಿಗೆ ಸರ್ಕಾರದವರು ನೇಮಿಸಬೇಕಾಗಿತ್ತೆಯೆಂತ ಹಿಂದು ಪೆಟ್ರಿಯಾಟಿ ಎಂಬವತ್ರವು ಅನ್ನುತವೆ.—ವಿಜಯಧ್ವಜ

ಗೋವೆಯ ಹೊಸ ಗವರ್ನರ್ ಜನರಲಾದ ರಿಯರ್ ಎಡ್ಮಿರಲ್ ಅಗಸ್ಟೋಸಿಜರ್ ಕಾರ್ಡೋಸೋಡಿಕಾರವ್ಹೇರೋ ಎಂಬವರು ಹಿಂದುಸ್ಥಾನಕ್ಕೆ ತಮ್ಮ ಕೆಲಸದಮೇಲೆ ಬರುವದಕ್ಕೋಸ್ಕರ ಕಳೆದ ತಿಂಗಳ ೧೧ನೇ ತಾರೀಖಿನ ದಿವಸ ಪೋರ್ಚುಗಲ್‌ನಿಂದ ಹೊರಟರೆಂದು ಲಿಸ್ಬನ್‌ನಿಂದ ಬಂದ ತಂತಿ ವರ್ತಮಾನದಿಂದ ತಿಳಿಯುತದೆ.—ಚಂದ್ರೋದಯ

ಮುರ್ಷದಾಬಾದ್‌ಹತ್ತಿರ ಅಶ್ರಿಯಗುಂಜಿಎಂದಬಲ್ಲಿರಿಯಧನವತಸಿಂಗ್‌ಎಂಬಒಬ್ಬ ಶ್ರೀಮಾನ್ ಗೃಹಸ್ಥನು ಬಹಳ ಸಂಕಟದಿಂದಿದ್ದು ಈಶ್ವರಾನುಗ್ರಹದಿಂದ ಹುಷಾರ್ ಆದಕಾರಣ ಅವನು ತನ್ನ ಪರಗಣೆಯೊಳಗಿನ ಎಲ್ಲಾ ರೈತಜನರಿಗೂ ಒಂದೊಂದುಲಾಡು ಹಂಚಿದನು. ಆಶ್ರತಿಒಂದು ಲಾಡಿನಲ್ಲಿಯೂ ಒಂದೊಂದುತೊಲೆತೂಕ ಬಂಗಾರವನ್ನು ಹಾಕಿಸಿದ್ದನಂತೆ! ಇದೇಗುಪ್ತದಾನವು

ಅದ್ಭುತ ಚಮತ್ಕಾರ—ಅಮೇರಿಕದಲ್ಲಿ ಒಬ್ಬ ಲಕ್ಕರೀ ಕಾಮದಾರನ ಮಗಳಿಗೆ ಮೊಲೆ ಕುಡಿಯುವಾಗ್ಯೆ ಯೆನೆಸೀ ಒಂದುತೆರದ ಬೇನೆಬಂದು ಆ ಹುಡಿಗಿ ಮೂಕಳಾದಳು ಅದು ನೆಟ್ಟಗಾಗಬೇಕೆಂಬ ವಿಷಯಕ್ಕೆ ಅವಳತಂದೆಯು ಬಹುಪ್ರಯತ್ನ ಮಾಡಿದನು, ಆದರೆಎಲ್ಲವ್ಯರ್ಥವಾಯಿತು ಕಡೆಗೆ ಮೊನ್ನೆ ಆವ ಬಕೆಯಿಂದ ಬೆದರಿ ಬಾಯಿ ಬಂತಂತೆ.—ಚಂದ್ರೋದಯ.

ವ್ಯಭಿಚಾರದ ಪರಿಣಾಮ—ನಸಲಗುಂದ ತಾಲೂಕಿಗೆಸೇರಿದ ಅರಕೇರಿಯಲ್ಲಿ ಒಬ್ಬ ಹೆಂಗಸು ಹೊಲದಲ್ಲಿ ತನ್ನ ಜಾರನೊಂದಿಗೆ ವಿಷಯಸುಖವನ್ನನುಭೋಗಿಸತ್ತಿರುವದನ್ನು ಅವಳಗಂಡನು ಪ್ರತ್ಯಕ್ಷವಾಗಿ ನೋಡಿದ್ದರಿಂದ ತನ್ನಹೆಂಡತಿಯ ಈತೆರದ ಅಘೋರಕೃತ್ಯವನ್ನು ಕಂಡು ಸಹಿಸಲಾರದೆ ಅವರಿಬ್ಬರನ್ನೂ ತನ್ನ ಕೈಯಲ್ಲಿದ್ದ ಕುಡುಗೋಲಿನಿಂದ ಕೊಂದುಬಿಟ್ಟನೆಂತಲೂ ಈಗ ಆ ಖಟ್ಲೆಯು ಸೆಷನ್ ಕೋರ್ಟಿಗೆ ಕಮಿಟ್ ಆಗಿರುತ್ತದೆಂತಲೂ ತಿಳಿಯುತ್ತದೆ.

ಸುಮಾರು ಒಂದುವರುಷದಹಿಂದೆ ಹೈದರಾಬಾದ್ ನಿಜಾಮರವರು, ತನ್ನ ಪ್ರಧಾನಿಯವರ ವಶಕ್ಕೆ ೩೮ಲಕ್ಷ ರೂಪಾಯಿಗಳುಕೊಟ್ಟು ಅದನ್ನು ಸರ್ಕಾರ್‌ಖಜಾನೆಯಲ್ಲಿಟ್ಟಿರುವಂತೆ ಹೇಳಿದಂತೆಯೂ, ಅದಕ್ಕಿಂತಲೂ ಸರ್ಕಾರ್‌ಪತ್ರ ತೆಗದಿಟ್ಟರೆ ೬೦ಸಾವಿರ ರೂಪಾಯಿಗಳ ಬಡ್ಡಿ ಬರುವದೆಂದು ಮಂತ್ರಿಯವರು ತಿಳಿಸಿದ್ದಕ್ಕೆ ನಿಜಾಮರವರು ಒಪ್ಪಿದಂತೆಯೂ, ಆಮೇಲೆ ಪತ್ರಗಳು ಖರೀದಿಮಾಡಲ್ಪಟ್ಟ ಅಂಶ ಸಹ ನಿಜಾಮರವರಿಗೆ ತಿಳಿಸಲ್ಪಟ್ಟಂತೆಯೂ, ತರುವಾಯ ನಿಜಾಮರವರು ಸದರೀಪತ್ರಗಳನ್ನುಕುರಿತು ವಿಚಾರಿಸಲಾಗಿ ಅದರಪತ್ತೆಯೇ ಸಿಕ್ಕಲಿಲ್ಲವೆಂತಲೂ ತಿಳಿಯಬರುತಿದೆ.-ಆಂಧ್ರಪ್ರಕಾಶಿಕಾ.

ಕಳೆದತಿಂಗಳ ತಾರೀಖ್ ೬ನೇ ದಿನ ನೀಮಚ್ ಯೆಂಬದರಲ್ಲಿಒಂದುಭಯಂಕರಸಂಗತಿಯು ಸಂಭವಿಸಿತು ಅದೇನಂದರೆ,—ಒಬ್ಬಾನೊಬ್ಬ ಕೂಲಿಕಾರನು ಒಬ್ಬ ತರುಣಹೆಂಗಸಿನ ರೂಪ ಲಾವಣ್ಯಾತಿಶಯಗಳಿಗೂ ಅವಳ ಅಂಚಿಚಂದಕ್ಕೂ ಮರುಳಾಗಿ ಅವಳನ್ನು ವಶಮಾಡಿಕೊಳ್ಳಬೇಕೆಂದು ಮಾಡಿದ ಪ್ರಯತ್ನವೆಲ್ಲವೂ ವ್ಯರ್ಥವಾಯಿತೆಂದು ಅವಳು ಮಾರ್ಗವಿಡಿದು ಹೋಗುತ್ತಿರುವಾಗ ಕೈಯಲ್ಲಿ ಒಂದುಕತ್ತಿಯನ್ನು ಹಿಡಿದುಕೊಂಡು ಬಂದು ನಡುಬೀದಿಯಲ್ಲಿ ಅವಳನ್ನು ಹಿಡಿದು ಶಸ್ತ್ರದಿಂದ ಘಾಯಮಾಡಿ ಓಡಿಹೋದನು. ಈಗ ಅವನನ್ನು ಪೋಲೀಸಿನವರುಹಿಡಿದಿರುತ್ತಾರಂತೆ

ಚತುಷ್ಪದಪಕ್ಷಿ—ದಕ್ಷಿಣ ಅಮೇರಿಕಾಖಂಡದಲ್ಲಿರುವ ಅಮೇಜಾನ್ ಎಂಬ ನದಿಯ ಮುಖದ ಹತ್ತಿರ ಮ್ಯಾರಾಜೋ ಎಂಬ ಪ್ರಾಂತದೊಳಗೆ ಸಿಗ್ಯಾನೂ ಎಂಬದೊಂದು ಚತುಷ್ಪದಪಕ್ಷಿಯು ಸಿಕ್ಕಿರುತದೆ. ಈಪಕ್ಷಿಯು ಸಣ್ಣದಿರುವಾಗಮಾತ್ರ ಅದಕ್ಕೆ ನಾಲ್ಕು ಕಾಲುಗಳಿರುತವೆ. ಹಾಗೂ ಆಗ ಅದು ನಾಲ್ಕುಕಾಲುಗಳಿಂದ ನಡಿಯುತ್ತದೆ. ಆದರೆ ಆಪಕ್ಷಿಯು ದೊಡ್ಡದಾಗುತ್ತಾ ಹೋದಹಾಗೆ ಅದರ ಎರಡುಕಾಲುಗಳು ರೆಕ್ಕೆಯೊಳಗೆ ಸೇರಿಹೋಗಿ, ಇತರಪಕ್ಷಿಗಳಂತೆ ಎರಡೇಕಾಲುಗಳುಮಾತ್ರ ಇರುತ್ತವಂತೆ. ವಿಸ್ತಾರವಾದ ಈಭೂಮಂಡಲದಮೇಲೆ ಸರ್ವಜ್ಞನಾದ ಸೃಷ್ಟಿಕರ್ತನು ಎಂತೆಂತಾ ವಿಚಿತ್ರವಾದ ವಸ್ತುಗಳನ್ನು ನಿರ್ಮಿಸಿರುವನೋ?

ರಾಮಪುರದ ನಂಸ್ಥಾನದನವಾಬಸಾಹೇಬರು ಪುರಾದನದಲ್ಲಿ ಭವ್ಯವಾಗಿ ಕಟ್ಟಿರುವ ಜಿಮ್ನಾಸಿಯಮ್ಮನ್ನು ದುರಸ್ತುಮಾಡುವ ದೆಸೆಯಿಂದ ೧ ಲಕ್ಷ ೫೦ ಸಾವಿರ ರೂಪಾಯಿಯನ್ನು ಕೊಡಬೇಕೆಂದ ಸಂಕಲ್ಪಮಾಡಿದ್ದರಲ್ಲಿ ಈಗ ಪಾಲೀ ೫೦ಸಾವಿರರೂಪಾಯಿಯನ್ನುಕೊಟ್ಟರು. ೧ ಲಕ್ಷ ರೂಪಾಯಿ ಕೊಡತಕ್ಕವರಿದ್ದಾರೆ. ಏನೂ ನಾಡುರಸ್ತಾಗದ ಮಸೀದಿಯನ್ನು ದುರಸ್ತಿಮಾಡಲಿಕ್ಕೆ ಇಷ್ಟೆಲ್ಲ ಹಣ ಯಾಕೆಬೇಕೋ ಕೇಳುವವರ್ಯಾರು, ಸಮುದ್ರಕ್ಕೆ ಜೇನಿಹತ್ತಿದರೆ ವಿಗ್ನನುಮಾಸಳಿಗಳು ಗುದ್ದಡವುತ್ತವು ಯೆಂಬುಕಥೇ ಸರಿ.—ಕನ್ನಡಸುವಾರ್ತ

ಸೆಂಟಪಿಟರ್ಸ್ ಬರ್ಗ್ ಎಂಬ ರುಷ್ಯದ ರಾಜಧಾನಿಯಲ್ಲಿ ಕೆಲವು ಸ್ತ್ರೀಯರು ೨೫ ವರ್ಷಪ್ರಾಯವಾಗುವ ಮುಂಚೆ ಲಗ್ನ ಮಾಡಿಕೊಳ್ಳಬಾರದೆಂಬ ಪ್ರತಿಜ್ಞೆಯಿಂದ ಒಂದುಸಂಘ ಮಾಡಿರುತ್ತಾರೆ. ಈ ಸಂಘಕ್ಕೆ ಸೇರಿದವರು ಗುರುತಿಟ್ಟಿಯುವದಕ್ಕಾಗಿ ಒಂದು ಚಿನ್ನದ ರವಕಿಯನ್ನು ಧರಿಸುತ್ತಾರೆ. ಸುಧಾರಣವಿಷಯದಲ್ಲಿ ವಿಲಾಯತಿಯಜನರು ನಮಗೆ ಬೇಕಾದ್ದು ತಾವೆ ಹಿಂದುದೇಶದಲ್ಲಿ ಆದರೆ ಸತ್ಕಾರ್ಯಗಳಲ್ಲಿ ತಾವು ಮುಟ್ಟಲಾಗಿ ಮದುಗಿಯರಿಗೆ ಪದನೆರವಾದ ವಯಸ್ಸುತುಂಬುವನುಂಚೆ ಲಗ್ನ ಮಾಡಬಾರದೆಂಬ ಅಲ್ಪಸಂಗತಿಯಲ್ಲಿ ಸಹ ಸರ್ಕಾರದವರ ಸಹಾಯವು ಕೇಳಿಸಿ ಪ್ರಯೋಜನವಾಗಿ ಗುಲ್ಲುಮಾಡುವದು ನೋಡುವಾಗ್ಯೆ ನಮ್ಮ ಜನರಲ್ಲಿ ಸ್ವಸಹಾಯದ ಸಂಗತಿಯಲ್ಲಿ ಹ್ಯಾಗನಡಿಯಬೇಕೆಂಬದು ಬುದ್ಧಿಮಂತರಿಗೆ ಸಹ ತೋಚುವದಿಲ್ಲವೆಂಬುವದು ಆಶ್ಚರ್ಯವಲ್ಲವೋ?

ಶ್ರೀಮತ್ ವಿಕ್ಟೋರಿಯಾ ಮಹಾರಾಣೀಯವರು ಪಟ್ಟಕ್ಕೆ ಬಂದು ಬರುವ ಜಾನ್ಯೆತಿಂಗಳಲ್ಲಿ ೫೦ ವರುಷಗಳು ಸಂಪೂರ್ಣವಾಗುತ್ತವೆ ಇದರ ನಿಮಿತ್ತ ಆ ಸಮಯದಲ್ಲಿ "ಜ್ಯೂಬಿಲಿ" ಯೆಂಬದೊಂದು ಮಹಾ ಉತ್ಸವ ಮಾಡುವ ಆಲೋಚನೆ ನಡೆಯುತದೆ. ಇದು ಯಾವರೀತಿಯಿಂದ ನೆರವೇರಿಸಲ್ಪಟ್ಟೀತೆಂಬದು ಈಗಲೇ ನಿಶ್ಚಯವಾಗಲಿಲ್ಲವಾದರೂ, ಹಿಂದುಸ್ಥಾನದ ಅರಸುಮಕ್ಕಳ ಕಡೆಯಿಂದ ಹಾಕಲ್ಪಡುವ ಮತಿಗೆ ಅಂಕೆಗಳ ಮೇಲಿಂದ ನೋಡಿದರೆ, ಇದರ ಭವ್ಯತೆಯು ಸಾಧಾರಣದಲ್ಲಿ ನಿಲ್ಲಲಿಕ್ಕಿಲ್ಲವೆಂದು ಕಾಣುತದೆ, ಜಯಪುರದ ಮಹಾರಾಜರು ಈ ಉತ್ಸವದ ನಿಮಿತ್ತ ಒಂದುಲಕ್ಷ ರೂಪಾಯಿ ವಂತಿಗೆ ಕೊಡತಕ್ಕವರಿದ್ದಾರೆ. ಈ ಮಾದರಿಯಲ್ಲಿ ಕೊಡಿಸಿದರೆ ಅರಸುಮಕ್ಕಳುಗಳ ವಂತಿಗೆಯೇ ೫೦ ಲಕ್ಷಕ್ಕಾದರೂ ಮಿಕ್ಕಿಹೋದೀತೆಂದು ಕಾಣುತದೆ ರಾಜನಿಧಿಯನ್ನು ಅಳಿಯುವ ಪ್ರಮಾಣವೇ ವಂತಿಗೆಯಾದಮೇಲೆ ಅರಸು ಮಕ್ಕಳಾದರೂ ಏನುಮಾತ್ಯಾರು? ಆದರೆ ರಾಜನಿಷ್ಟೆಯನ್ನು ತೋರಿಸುವ ತಮ್ಮ ಅತ್ಯಾಸಕ್ತಿಯಲ್ಲಿ ತಮ್ಮ ತಮ್ಮ ಸಂಸ್ಥಾನಗಳ ಸಾಲದಭಾರವನ್ನ ಹೆಚ್ಚಿಸಿಕೊಳ್ಳದೆ ಇದ್ದರೆ ಸಾಕು.

ಬರ್ಮಾದೇಶದ ತೀಬಾ ಅರಸನನ್ನು ಮರಳಿ ಗಾದಿಯಮೇಲೆ ಕೂಡಿಸಬೇಕೆಂಬದನ್ನು ಕುರಿತು ಸರ್ಕಾರದವರು ವಿಚಾರಮಾಡ ತೊಡಗಿದಾರೆಂದು ಕಲ್ಕತ್ತೆಯ ಒಂದು ಇಂಗ್ಲಿಷ್‌ಪತ್ರಿಕೆಯು ಹೇಳುತದೆ. ಆದರೆ, ಈ ಸುದ್ದಿಯಲ್ಲಿ ಎಷ್ಟರಮಟ್ಟಿಗೆ ನಿಜತ್ವವು ಉಂಟೆಂಬದು ನಮ್ಮಿಂದ ಹೇಳೋಣಾಗದು. ಅತಿರಥ ವೀರರಾದ ಜನರಲ್ ರಾಬರ್ಟ್ಸಯವರು ಒಂದುವೇಳೆ ಈ ತರದ ಏರ್ಪಾಡುವಿನಾ ಬರ್ಮಾದೇಶದಲ್ಲಿ ಶಾಂತತೆ ಯಾಗಲಿಕ್ಕಿಲ್ಲವೆಂದು ಮನಸ್ಸಿನಲ್ಲಿತಂದರೆ ಹತಭಾಗ್ಯನಾದ ತೀಬಾ ಅರಸು ಪುನಃ ಗಾದಿಯಮೇಲೆ ಕೂತು ತನ್ನ ರಾಜಶ್ರೀಯನ್ನು ಅನುಭವಿಸುವ ಸುಖದ ದಿವಸಗಳು ಸಮೀಪಿಸಿದವೆಂದು ಹೇಳಲಿಕ್ಕೆ ಸಂದೇಹವಿಲ್ಲ. ಆದರೆ ಬರ್ಮಾದೇಶವನ್ನು ಬ್ರಿಟಿಷ್ ರಾಜ್ಯ ಸೇರಿಸುವ ವಿಷಯಕ್ಕೆ ನಮ್ಮ ಸರ್ಕಾರದವರು ಪ್ರಥಮದಲ್ಲಿ ಪೂರ್ಣ ವಿಚಾರ ಮಾಡದೆ ಇದ್ದುದರಿಂದ ಅವರಿಗೆ ಈಗ ಈ ಮಾದರಿಯ ತೊಂದರೆಗಳೂ, ಅಪಮಾನವೂ, ಆಗುತ್ತವೆಂಬ ಅಂಶದಲ್ಲಿ ಸೋಜಿಗವೇನು? ಚಂದ್ರೋದಯ.

ಪ್ರೊಫೆಸರ್ ಮ್ಯಾಕ್ಸ್ ಮುಲ್ಲರ್ ದೊರೆಗಳ ಕಡೆಯಿಂದ ಮ. ಮಲಬಾರಿಯವರಿಗೆ (ಹಿಂದೂ ವಿದವೆಯರ ಸಹಾಯಕರ್ತರು) ಬಂದಿರುವ ಪತ್ರದಲ್ಲಿ ಕೆಲವು ಉಪಯುಕ್ತವಾದ ಸೂಚನೆಗಳಿರುವದರಿಂದ ಅದರ ಸಾರಾಂಶವನ್ನು ಇಲ್ಲಿ ಕೊಡುತ್ತೇವೇನಂದರೆ —ಪುರಾತನ ಲೋಕರೀತಿಯನ್ನು ಬದಲಾಯಿಸುವದು ಪ್ರಯಾಸವಾದದ್ದರಿಂದ ಅಂತಾ ಸಾಹಸಕ್ಕೆ ಪ್ರಥಮತಃ ಪರಾಜಯ ಉಂಟಾಗುವದು ಸಹಜವು ಆದರೆ ಕೈಕೊಂಡ ಕೃತ್ಯವನ್ನು ಶ್ರದ್ಧೆಯಿಂದ ಮುಂದು ನಡೆಸಿದರೆ ಸಫಲವಾದೀತೆಂಬ ಉತ್ತೇಜನವನ್ನು ಕೊಟ್ಟು ಮುಂದರಿಸುತ್ತಾರೆ ಹ್ಯಾಗಂದರೆ—ಹಿಂದುಸ್ಥಾನದ ಸರ್ಕಾರವು ೫೦ ವರುಷಗಳ ಹಿಂದೆ ಹ್ಯಾಗಿತ್ತೋ ಹಾಗೇ ಈಗ ಇರುವದಿಲ್ಲ. ಅದ್ದರಿಂದ ಸರ್ಕಾರದವರು ತಾವು ಹಿಂದೆ ಜನರ ಧರ್ಮ ವಿಚಾರಗಳಲ್ಲಿ ಕೈಹಾಕಲಿಕ್ಕಿಲ್ಲವೆಂತ ಉತ್ತರ ಕೊಟ್ಟದ್ದು ಈಗಿನ ಸರ್ಕಾರದ ಸ್ಥಿತಿಗೆ ತಕ್ಕದ್ದೇ ಆಗಿರುತದೆ ಬಾಲವಿವಾಹ ಮತ್ತು ಒತ್ತಾಯದ ವೈದವ್ಯ ಇವು ಕೆಟ್ಟವಲ್ಲ ಆದರೆ ಇವುಗಳಿಂದ ಸಂಭವಿಸುವ ಪರಿಣಾಮಗಳುಮಾತ್ರ ಕೆಟ್ಟದ್ದಾಗಿರುತದೆ ಇದನ್ನು ಬಿಡುವಮಾಡಿದವರಿಗೆ ಸ್ವಜಾತಿಯವರು ಬಹಿಷ್ಕಾರ ಹಾಕ್ಯಾರು, ಆದರೆ ಬಹಿಷ್ಕರಿಸಲ್ಪಟ್ಟವನಿಗೆ ಜಾತಿ ಗೃಹಸ್ಥರ ಕಾಗದವಿದ್ದರೆ ಸರ್ಕಾರದವರು ಅವನನ್ನು ಬಹಿಷ್ಕರಿಸದ ಹಾಗೆ ಮಾಡುವದು ಉಚಿತವೇ ಸರಿ ಬಾಲವಿವಾಹ ಅಥವಾ ಒತ್ತಾಯದ ವೈಧವ್ಯ ಇವುಗಳಿಗೆ ಯಾವಶಾಸ್ತ್ರಗಳ ಆಧಾರವೂ ಇಲ್ಲ. ಮತ್ತು ಇದಕ್ಕೆ ಯಾವ ಪಂಡಿತನಾದರೂ ಆಧಾರ ತೋರಿಸುವಂತೆ ಇರುವದಿಲ್ಲ, ಇವುಗಳನ್ನು ನಿಲ್ಲಿಸಿ ಬಿಡುವದಕ್ಕೆ ನಿಮಗೆ ಉಪಾಯವನ್ನು ಸೂಚಿಸುವದೇನಂದರೆ —ನೀವು ಇವುಗಳ ವಿಷಯವನ್ನು ಕುರಿತು ಎಲ್ಲಾ ಸಂಗತಿಗಳನ್ನು ನಮೂದಿಸಿ ಒಂದು ಚಿಕ್ಕ ಪುಸ್ತಕವನ್ನುಛಾಪಿಸಿ ಅದನ್ನು ಇಂಗ್ಲಾಂಡಿನೊಳಗಿನಸ್ತ್ರೀಯರಿಗೆಕಳುಹಿಸಬೇಕು ಅವರು ಇದನ್ನುಓದಿ ದಾಕ್ಷಿಣ್ಯ ವಿಸ್ಮಿತರಾಗಿ ಪಾರ್ಲಿಮೆಂಟ ಸಭೆಯವರಿಗೆ ತಿಳಿಸಿ ಸರ್ಕಾರದವರು ಇದರಲ್ಲಿಕೈಹಾಕಬೇಕೆಂತ ಹಟಹಿಡಿಯುವರು, ಹೀಗಾದನಂತರ ನಿಮ್ಮ ಪ್ರಯತ್ನ ಪೂರ್ಣವಾದೀತು, ಎಂಬದು. ಚಂದ್ರೋದಯ.

BANGALORE.—Printed and published for the Proprietor, at the KARNATAKA PRESS.—1886

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

[illegible]

Vol XIII.] | BANGALORE—MONDAY, DECEMBER 20, 1886. | [No. 51.

ಸಂಪುಟ ೧೩.] | ಬೆಂಗಳೂರು:—ಸರ್ ೧೮೮೬ನೇ ಇಸವಿ ಡಿಶಂಬರ್ ೨೦ನೇ ತಾರೀಖ್ ಸೋಮವಾರ. | [ಸಂಖ್ಯೆ ೫೧.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ನಿರ್ಣಯವು.

[illegible] ಕನ್ನಡ [illegible]
[illegible] ೧೧—೦—೦
ಇಂಗ್ಲಿಷ್ [illegible]
[illegible] ೬—೦—೦
ಕನ್ನಡ [illegible]
[illegible] ೬—೦—೦
[illegible] ೦—೯—೦

[illegible]

ಪ್ರಕಟನೆಯ ರಿವಾಜ್.

[illegible] ೦—೨—೦
[illegible] ೦—೧—೦

NOTICE TO SUBSCRIBERS.

[illegible]

೧. [illegible]

೨. [illegible]

೩. [illegible]

೪. [illegible]

NOTICE.

VAIDYASARA SANGRAHA

Price including Postage, Rs. 5-0-0

ವೈದ್ಯಸಾರ ಸಂಗ್ರಹ.

[illegible]

[illegible] ... ... ರೂ|| ೫—೦—೦
[illegible] ೦—[illegible]—೦
[illegible]

ನೋಟೀಸ್.

ಯಿಲೆಕ್ಟ್ರೊ ಗ್ಯಾಲ್ವ್ಯಾನಿಕ್ ರಿಂಗ್, ಲಾಕೆಟ್, ಮತ್ತು ಅರಂಲೆಟ್,

ಅಂದರೆ, ಅಂತರ್ಗತಾಗ್ನಿ ಸಂಬಂಧವಾದ ಮತ್ತು ವಿದ್ಯುತಿಯ ಶಕ್ತಿಪ್ರಕಾಶ ಸಂಬಂಧವಾದ ಉಂಗರ, ಪತಕೆ, ತೋಳ್‌ಬಳೆ, ಇವುಗಳು, ಕಲ್ಕತ್ತೆ ಬನಿಯತುಲಾ ಬೀದಿಯಲ್ಲಿ ೩೮ನೇ ನಂಬರ್ ಗೃಹದೊಳಿರುವ ಪಿ. ಸಿ. ದಾಸ್ ಯೆಂಬವರಿಂದ ತಯಾರ್ಮಾಡಲ್ಪಟ್ಟಿರುತವೆ

ಇವು ಸಕಲ ರೋಗಗಳಿಗೂ ಆಶ್ಚರ್ಯಕರವಾದ ಪರಿಹಾರಕವಾದವು.

ಯುರೋಪಿಯನ್ ವೈದ್ಯಶಾಸ್ತ್ರಜ್ಞರೂ ನೇಟಿವ್ ವೈದ್ಯಪದ್ಧತಿಯನ್ನು ಅನುವರ್ತಿಸತಕ್ಕವರೂ ಸಾಧಾರಣವಾಗಿ ಮಾಡುವ ಚಿಕಿತ್ಸೆಗಳಿಗಿಂತಲೂ ಸದರೀ ಉಂಗರಗಳು ಮೊದಲಾದವು ಬಹಳ ಯೋಗ್ಯವಾದ ಪರಿಹಾರಕಗಳೆಂದು ಯೇರ್ಪಟ್ಟಿರುವದರಿಂದ ಅವುಗಳ ಅಸಾಧಾರಣವಾದ ರೋಗನಿವೃತ್ತಿಕ ಶಕ್ತಿಯನ್ನು ಕುರಿತು ವಿಶೇಷವಾಗಿ ತಿಳಿಸುವದು ಅನಾವಶ್ಯಕವಾಗಿರುವದು. ಹಿಂದೆ ಒಕ್ಕೂಟದವರಿಂದಲೂ ಇದುವರಿವಿಗೆ, ಮೇರಿನ ಉಂಗರಗಳು ಮೊದಲಾದವುಗಳ ವಿಷಯದಲ್ಲಿ ವರ್ತಮಾನಪತ್ರಿಕೆ ವಿಚಾರವೂ ಅದುತ್ತಿಲ್ಲಯುಬಂದ ಅಲ್ಪಕಾಲದೊಳಗಾಗಿಯೇ ಮಾಡಲ್ಪಟ್ಟ ಅದರ ಸುಕೀರ್ತಿಯೂ, ರೋಗಪರಿಹಾರಕವಾದ ಇತರ ಪದಾರ್ಥಗಳ ವಿಷಯದಲ್ಲಿ ಮಾಡಲ್ಪಡಲಿಲ್ಲವೆಂದು ಮಾತ್ರ ಹೇಳುವದು ಸಾಕಾಗಿರುವದು ಆದದರಿಂದ ಪ್ರಕೃತ ಸಂದರ್ಭದಲ್ಲಿ ಈ ಹೊಸ ಉಂಗರಗಳನ್ನು ಕುರಿತು ಇನ್ನೂ ಯೆರಡು ಮಾತುಗಳಂ ಆಡಬೇಕು, ಯೇನಂದರೆ, ನನ್ನ ಹೊಸ ಉಂಗರವನ್ನು ಹಾಕಿಕೊಂಡು ನೋಡಿದ ತರುವಾಯ ಅಧಿಕ ಕ್ರಯಕೊಟ್ಟು ಕಂಡವರಲ್ಲಿ ಬೇರೆ ಪದಾರ್ಥಗಳನ್ನು ಯಾರೂ ಕೊಂಡುಕೊಳ್ಳಲಾರರು. ನನ್ನ ಪದಾರ್ಥಗಳಮೇಲೆ ಪಿ. ಸಿ. ಡಿ. ಯೆಂಬ ಗುರುತು ಇರುವದು.

ಉಂಗರಗಳು—ಡಜನಿಗೆ ೧೫ ರೂ|| ೧ಕ್ಕೆ ೧ ೮—೦ ರೂ ಪತಕ—ಡಜನಿಗೆ ೧೦ ರೂಪಾಯಿ, ೧ಕ್ಕೆ ೧—೪—೦. ತೋಳ್‌ಬಳೆ—ಡಜನಿಗೆ ೧೫ ರೂಪಾಯಿ, ೧ಕ್ಕೆ ೧—೮—೦ ರೂ ಪಾರ್ಸಲ್ ೧ರಿಂದ ೬ರವರಿವಿಗೆ ೫ ಆಣೆ, ೭ರಿಂದ ೧೦ರವರಿವಿಗೆ ೧೦ ಆಣೆ. ಉಂಗರಗಳು ಮತ್ತು ತೋಳ್‌ಬಳೆಗಳು ಬೇಕಾದವರು ಅಳತೆಗಳು ಕಳುಹಿಸಬೇಕು. ಹಣ ಬಂದು ತಲುಪಿದ ಕೂಡಲೇ ಪದಾರ್ಥಗಳು ರವಾನಿಸಲ್ಪಡುವವು; ಅಥವಾ ವ್ಯಾಲ್ಯೂಪೇಯಬಲ್ ಪೋಸ್ಟಿನಲ್ಲಿ ಕಳುಹಿಸಲ್ಪಡುವವು.

ಪ್ರಕಟನೆ.

ಕರ್ಣಾಟಕ ಮುದ್ರಾಕ್ಷರಶಾಲೆಯಲ್ಲಿ ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಬೇಕಾದ ತೆರನಾದ ಕೆಲಸಗಳು ಸುಲಭಚಾರ್ಜಿಗೆ ಕ್ಷಿಪ್ರವಾಗಿ ಮಾಡಿಕೊಡಲ್ಪಡುತ್ತೆ. ಯಾವ ಕೆಲಸವನ್ನಾಗಲಿ ಮಾಡಿಸುವ ಅಪೇಕ್ಷೆಯುಳ್ಳವರು ಸದರೀಕಾರ್ಖಾನೆ ಪ್ರೊಪ್ರೈಟರಿಗೆ ತಿಳಿಸತಕ್ಕದ್ದು. ಅವರು ಬಳೇಪೇಟೆಯಲ್ಲಿ ೪೪ನೇ ನಂಬರ್ ಮನೆಯೊಳಿರುತ್ತಾರೆ.

ಬೆಂಗಳೂರು, ೩ನೇ ನವಂಬರ್೮೬.

ORIENTAL BALM

ರಿಟಲ್ ಯೆಂಬವರಿಂದ ತಯಾರ್ಮಾಡಲ್ಪಟ್ಟ "ಬಾಧಕಸಂಹಾರಿಣೀ" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಫಲವಾದ ನವೀನ ಪ್ರತಿಕ್ರಿಯಾರೂಪವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿಬಂಧಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಬೆರಳಿನ ವಾತರೋಗಗಳು, ಕಾಸ, ಗಂಟಲುನೋವು ಉರಿ, ನರುವುನೋವು, ಶೀಲವಾಯು, ಕಟಿವಾಯು, ಉಳುಕು ನೋವು, ತಲೆನೋವು, ತಿಮಿರವಾಯು ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನುಂಟುಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ ಕೆಲವಾವರ್ತಿ ಸವರಿ ಲಾಭವುಂಟಾಗುವಂತೆ ಚೆನ್ನಾಗಿ ತಿಕ್ಕತಕ್ಕದ್ದು. ಸಕ್ಕರೆ [illegible] ದಲ್ಲಿ ಸಹಜಗಳಾದ ಯೆಲ್ಲಾ ನೋವುಗಳನ್ನು ನಿವೃತ್ತಿ ಮಾಡುವಂಥಾ ಉತ್ತಮತೈಲವಾಗಿರುತ್ತೆ. [illegible] ದಲ್ಲೇ ಅರತಲೆನೋವು ಮತ್ತು ಜೋಮು ಪಕ್ಷವಾತ ನಿವೃತ್ತಿಯಾಗುವದು ಗಂಟಲು [illegible] ಉರಿ ಅಥವಾ ವ್ರಣಗಳಿಗೆ ಈ ತೈಲವು ಅದ್ಭುತವಾದ ಮತ್ತು ಶೀಘ್ರವಾದ ಸುಪ್ರಯೋಗಗುಣವನ್ನುಂಟುಮಾಡುವದು. ಅದ್ಭುತವಾದ ಈ ಔಷಧವನ್ನು ಅಭ್ಯಾಸಮಾಡಿದ್ದರೆ ಅದರ ಪ್ರಯೋಜನವು ಸ್ವತಃ ವ್ಯಕ್ತವಾಗುವದು. ಈ ತೈಲವು ಶೀತಗಾಳಿ ಮಂಜು ಮುಂತಾದವುಗಳಿಗೊಳಗಾಗಿ ಸಂಚರಿಸುವಂಥಾ ಪ್ರಯಾಣಿಕರು, ಬೇಟೆಯಾಡುವವರು, ದೋಣಿ [illegible] ಮಾಡುವವರು, ಮುಂತಾದವರಿಗೆಲ್ಲ ಅಮೂಲ್ಯವಾದದ್ದು.

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯೆಂಬ ಔಷಧಶಾಲೆಯ ಪ್ರೆಸಿಡೆಂಟರಾಗಿಯೂ, ಸದರೀ ದೇಶದ ಬಯಾಲಜಿಕಲ್ ಸೊಸೈಟಿ ಯೆಂಬ [illegible] ಸಮಾಜದ ಮೆಂಬರಾಗಿಯೂ, "ಮಿನರಲ್ ವಾಟರ್ಸ್ ಆಫ್ ಯೂರಪ್" ಎಂಬ ಗ್ರಂಥಕರ್ತರಾಗಿಯೂ, [illegible] ವಿಷಯಕವಾದ ಅನೇಕ ಲೇಖನಾಧಿಕಾರಿಯಾಗಿಯೂ, ಇರುವ ಪ್ರೊಫೆಸರ್ ಟಿಚ್ ಬೋರ್ನ್ (C. R. TICHBORNE, L. L. D., F. C. S., M. R. I. A.,) ಯೆಂಬವರು ಅಭಿಪ್ರಾಯ ಪಟ್ಟಿರುತ್ತಾರೇನಂದರೆ—ರಿಟಲ್‌ಯವರ ಓರಿಯಂಟಲ್‌ತೈಲವನ್ನು ಜಾಗರೂಕತೆಯಿಂದ ಪರೀಕ್ಷಿಸಿದ್ದರೊಳು ಇದು ಬಹುವಿಧ ಮೂಲಿಕೆಗಳ ರಸಮಿಶ್ರವಾದ ತೈಲವೆಂದೇರ್ಪಟ್ಟಿತಲ್ಲದೆ, ಇದು ಹೊರಗೆ ಉಪಯೋಗಿಸಲ್ಪಡುವಾಗ ಪಕ್ಷವಾತ ನಿರುಪದ್ರವಕರವಾದದ್ದಾಗಿದ್ದರೂ, ನಿಜವಾಗಿ ಪ್ರಬಲ ರೋಗನಿವಾರಕ ಶಕ್ತಿಯುಳ್ಳದ್ದಾಗಿರುತದೆ. ಈ ಮಿಶ್ರೌಷಧವು ನರಗಳನ್ನು ಸ್ಥಿಮಿತಕ್ಕೆ ತರತಕ್ಕದ್ದಾಗಿರುವದರಿಂದ ಇದು ಯಾವ ತರದ ರೋಗಗಳಿಗೆ ಉಪಯುಕ್ತವೆಂದು ತಿಳಿಸಲ್ಪಟ್ಟಿದೆಯೋ ಸದರೀ ರೋಗಗಳಲ್ಲಿ ಅದರ ಪ್ರಯೋಜನವು ವ್ಯಕ್ತವಾಗುವದು. ಈ ತೈಲವು ಸಂಪೂರ್ಣ ಜಾಗರೂಕತೆಯೊಡನೆ ತಯಾರ್ಮಾಡಲ್ಪಟ್ಟಿರುತದೆ.

ಇದರ ಕ್ರಯ—ಸೀಸೆ ಒಂದಕ್ಕೆ ೧ ರೂಪಾಯಿ

ಇದು ವಿಪ್ರ ಔಷಧ ಶಾಲೆಯಲ್ಲಿಯೂ, ಮದರಾಸ್ ಶೆಂಬುದಾಸ್ ಬೀದಿಯಲ್ಲಿ, ೨೦ ನೇ ನಂಬರ್ ಮನೆಯೊಳಿರುವ, ಎ. ಸಿ. ಬೆರ್ರಿಮನ್ ಯವರಲ್ಲಿಯೂ, ಈ ಊರಲ್ಲಿರುವ ಅವರ ಏಜಂಟ್‌ಗಳಾದ ಜೆ. ವೆಸ್ಟ್ ಯವರ ಕಂಪನಿಯಲ್ಲಿಯೂ, ಹಿ. ಕೆಪ್ಟನ್ ಅಂಡ್ ಕಂಪನಿಯವರಲ್ಲಿಯೂ, ರಿಗ್ಸ್ ಅಂಡ್ ಕಂಪನಿಯವರಲ್ಲಿಯೂ ದೊರೆಯುವದು.

AGENTS. J. WEST, *Chemist & Co.*, ; CAPTAIN & Co., ;
RIGGS & Co., ; and of A. C. BERRYMAN,
20, Semboodas Street, Madras.

ನೋಟಿಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟು ಗುಬ್ಬಿ ತಾಲ್ಲೂಕು ಕಸಬಾದಲ್ಲಿ ಚೆಲ್ಲಪಟ್ಟೆ ಕೊತ್ತವಾಲ್ ಚಾವಡಿ ಪಕ್ಕದಲ್ಲಿರುವ ಬೀರಪ್ಪರು. ಖರೀದಿ ಮ|| ರಾ|| ಲಕ್ಷ್ಮಯ್ಯ ಶೆಟ್ಟರ ಮನೆಯೆಂಬ ಅಡ್ಡಹೆಸರುಳ್ಳ ಮನೆ ಅಂಗಡಿಗಳು ಮತ್ತು ಬವಳೀ ಪೇಟೇಲಿರುವ ಮನೆ ೧, ಗಾಣಿಗರ ಪೇಟೇಲಿರುವ ಮನೆ ೧, ವೆಸ್ಲಿಯನ್ ಮಿಷನ್ ಬಂಗ್ಲೇ ಬಳಿ ಇರುವ ಹೊಲ ೧, ಇವುಗಳಿಗೆ ಗುಬ್ಬಿ ಕಸಬದ ಸಾಹುಕಾರ್ ಮ|| ರಾ|| ನಾರಾಯಣಶೆಟ್ಟರ ಮೊಮ್ಮಗ ಬೆಂಗಳೂರಲ್ಲಿ ಜ್ಯುಯಲರ್, ಮತ್ತು ಕಂಟ್ರ್ಯಾಕ್ಟರ್ ವ್ಯಾಪಾರಮಾಡುವ ಮ|| ರಾ|| ಬಿ. ಜಿ. ಗೋವಿಂದಶೆಟ್ಟಿಯು ಪಟ್ಟೇದಾರನಾಗಿದಾನೆ, ಆದಕಾರಣ ನನ್ನ ಅನುಮತಿಲ್ಲದೆ ಇತರರು ಈ ಸ್ವತ್ತುಗಳನ್ನು ಯಾರೂ ಯಾರಿಂದಲೂ ಯಾವ ವಿಧವಾಗಿಯೂ ಪಡೆಯಕೂಡದು, ಹಾಗೆ ಪಡೆದಲ್ಲಿ ಮುಂದೆ ಆಗತಕ್ಕ ನಷ್ಟಕ್ಕೆ ಗುರಿಯಾಗಿರುತ್ತಾರೆಂದು ತಿಳಿಯಪಡಿಸುತದೆ.

೧೪—೧೨—೮೬. ಬಿ. ಜಿ. ಗೋವಿಂದಶೆಟ್ಟಿ.

ನೋಟಿಸ್.

ಇದರಿಂದ ನಮ್ಮ ಚಂದಾದಾರರಿಗೆ ಪ್ರಕಟಪಡಿಸುವದೇನಂದರೆ,—

ಸರ್ ೮೫ ಮತ್ತು ೮೬ನೇ ಇಸವಿಗಳಿಗೆ ಬಾಕೀದಾರರಾಗಿರತಕ್ಕವರು ತಮ್ಮ ತಮ್ಮ ಬಾಕೀಗಳನ್ನು ಕಳುಹಿಸಿಕೊಡಬೇಕೆಂದು ಅನೇಕದಫೆ ನಾವು ತಿಳಿಸಿದ್ದಾಗ್ಯೂ ಬಹುಮಂದಿ ಅದಕ್ಕೆ ಇದುವರಿವಿಗೆ ನಿಗಾಕೊಡದೆ ಇರುತ್ತಾರೆ. ಅಂತವರ ಬಾಕೀ ವಸೂಲೀ ವಿಷಯದಲ್ಲಿ ಖಂಡಿತವಾದ ಪ್ರಯತ್ನ ನಡೆಸಲ್ಪಡುವದಲ್ಲದೆ ಈ ತಿಂಗಳ ಆಖೈರಿನಲ್ಲಿ ಅವರ ಹೆಸರಿನ ಪತ್ರಿಕೆಗಳು ನಿಲ್ಲಿಸಲ್ಪಡುವವು

ಇದುವರಿವಿಗೆ ಚಂದಾ ಬಾಕೀಯನ್ನು ಫೈಸಲ್ ಮಾಡಿರತಕ್ಕವರಿಗೆ ಮಾತ್ರವೇ ಮುಂದಿನ ಸಾಲಿನಲ್ಲಿ ಪತ್ರಿಕೆ ರವಾನಿಸಲ್ಪಡುವದು.

ಅವರೆಲ್ಲರು ದಯಮಾಡಿ ಚಂದಾ ಮೊಬಲಗನ್ನು ಕೂಡಲೇ ಅಡ್ವಾನ್ಸ್ ಕಳುಹಿಸಿ ಕೊಡಬೇಕು. ಮುಂದಿನ ಸಾಲಿಗೆ ಪತ್ರಿಕೆಯ ಅಪೇಕ್ಷೆ ಇಲ್ಲದವರು ಅಂತಾ ಅಭಿಪ್ರಾಯವನ್ನು ಈ ತಿಂಗಳ ೨೫ನೇ ತಾರೀಖಿನೊಳಗಾಗಿ ನಮಗೆ ತಿಳಿಸಬಹುದು ಉಚಿತವಾಗಿರುವದು.

ಮುಂದಿನ ಸಾಲಿಗೆ ಹೊಸದಾಗಿ ದರಖಾಸ್ತು ಮಾಡತಕ್ಕವರು ಚಂದಾ ಅಡ್ವಾನ್ಸ್ ಕಳುಹಿಸಿ ಕೊಡಬೇಕು. ಅದಿಲ್ಲದ ದರಖಾಸ್ತುಗಳಿಗೆ ಸುತರಾಂ ನಿಗಾ ಕೊಡಲ್ಪಡಲಾರದು. ೨ ತಿಂಗಳಿಗೆ ಕಮ್ಮಿಯಾದ ದರಖಾಸ್ತುಗಳು ಅಂಗೀಕರಿಸಲ್ಪಡಲಾರವು.

೧೨—೧೨—೮೬. ಪ್ರೊಪ್ರೈಟರ್, ಕ. ಪ್ರ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, DECEMBER 20, 1896

೧೮೯೬ನೇ ಡಿಸಂಬರ್ ೨೦ನೇ ತಾ|| ಸೋಮವಾರ.

THE LOCAL ADDRESSES AND THE VICEROY'S REPLY

ಇಂಡ್ಯಾರಾಜ್ಯದ ವೈಸ್‌ರಾಯ್ ಮತ್ತು ಗವರ್ನರ್ ಜನರಲ್ ರವರ ಲಾರ್ಡ್ ಡಫ್ರಿನ್ ಸಾಹೇಬರವರು ಈ ತಿಂಗಳ ಆದಿಭಾಗದಲ್ಲಿ ಈ ದೇಶಕ್ಕೆ ದಯಮಾಡಿದ್ದ ಸಂದರ್ಭದೊಳು ಮೈಸೂರು ಮತ್ತು ಈಪ್ರಾಂತಿನ ಮ್ಯೂನಿಸಿಪಾಲಿಟಿಯವರು ಅವರಿಗೆ ಒಪ್ಪಿಸಿದ ಅಡ್ರೆಸ್ ಎಂಬ ವಿಜ್ಞಾಪನಪತ್ರಿಕೆಗೆ ಸದರೀ ಸಾಹೇಬರವರು ಹೇಳಿದ ಜವಾಬಿನಲ್ಲಿ, ಈರಾಜ್ಯದ ತಾತ್ಕಾಲಿಕ ಸ್ಥಿತಿಯನ್ನು ಕುರಿತು ತಿಳಿಸಲ್ಪಟ್ಟ ಅಭಿಪ್ರಾಯಕ್ಕೆ ಅವರವರಿಗೆ ತೋಚಿದಂತೆ ನಾನಾವಿಧಅರ್ಥಗಳು ಮಾಡಲ್ಪಡುತ್ತಿವೆ. ಸದರೀಸಾಹೇಬರವರು ಆಕಾಲದಲ್ಲಿ ಈರಾಜ್ಯವು ಚೆನ್ನಾಗಿದೆಯೆಂದು ತಿಳಿಸಿದಮಾತಿಗೆ ಟಿಪ್ಪುಸುಲ್ತಾನರ ಆಡಳಿತದ ಉತ್ತರಭಾಗದಲ್ಲಿ ಪ್ರಜೆಗಳು ಅನುಭವಿಸಿದ ಬಹುವಿಧ ಕಷ್ಟಗಳೆಲ್ಲವೂ ನಿವೃತ್ತಿಯಾಗಿ ಈಗ ಸುಖಸ್ಥಿತಿಯಲ್ಲಿದೆಯೆಂಬರ್ಥವೆಂದು ಕೆಲವರು; ಈ ದೇಶದಲ್ಲಿ ಬ್ರಿಟಿಷರವರು ಐವತ್ತು ಸಂವತ್ಸರಗಳಕಾಲ ಮಾಡಿದ ಆಡಳಿತದಲ್ಲಿ ಹಿಂದಿನ ದುಸ್ಥಿತಿಗಳೆಲ್ಲವು ತಪ್ಪಿ ದುಷ್ಟರೆಲ್ಲರು ಮೂಲೆಗೆ ತಳ್ಳಿಸಲ್ಪಟ್ಟು ನ್ಯಾಯನಿಬಂಧನೆಗಳೇರ್ಪಟ್ಟು ಯೆಲ್ಲವೂ ಒಂದುಕ್ರಮಕ್ಕೆ ತರಲ್ಪಟ್ಟಿರುವದರಿಂದ ಈಗ ಚೆನ್ನಾಗಿದೆಯೆಂದು ಬೇರೆ ಕೆಲವರು; ಈ ರಾಜ್ಯವನ್ನು ಸ್ವರಾಜರ ವಶಕ್ಕೆ ಒಪ್ಪಿಸುವಕಾಲದಲ್ಲಿ ಯಾವ ಕ್ರಮವನ್ನನುಸರಿಸಿ ಮುಂದೆ ರಾಜ್ಯಾಡಳಿತವನ್ನು ನಡಸಬೇಕೆಂದು ವ್ಯವಸ್ಥೆಯಾಯಿತೋ ಅದರಂತೆಯೇ ನಡೆದುಬರುವದರಿಂದ ರಾಜ್ಯವು ಚೆನ್ನಾಗಿದೆಯೆಂಬರ್ಥವೆಂದು ಇನ್ನು ಕೆಲವರು; ಗತಿಸಿದ ಘೋರಕ್ಷಾಮದಿಂದ ಪ್ರಜೆಗಳು ತಮ್ಮ ಪ್ರಾಣ ಮಾನ ಧನಗಳನ್ನೆಲ್ಲ ಹೋಗಲಾಡಿಸಿಕೊಂಡು ಬಹುವಿಧ ಕಷ್ಟಗಳನ್ನನುಭವಿಸುತ್ತಿದ್ದ ಕಾಲ ದೈವಾನುಗ್ರಹದಿಂದ ತಪ್ಪಿ ಅದರಿಂದೀಚೆಗೆ ಮಳೆ ಬೆಳೆ ಚೆನ್ನಾಗಿ ಆಗುತ್ತಲಿರುವದರಿಂದ ದೇಶವು ಸುಭಿಕ್ಷಸ್ಥಿತಿಯಲ್ಲಿದೆಯೆಂಬರ್ಥವೆಂದು ಇತರರು ಕೆಲವರು.

ಮೇಲೆ ತಿಳಿಸಲ್ಪಟ್ಟನಾಲ್ಕುವಿಧ ಅರ್ಥಕಲ್ಪನೆಯನ್ನು ನಾವು ಅಂಗೀಕರಿಸಿ, ರಾಜ್ಯದ ಸ್ಥಿತಿಯಂತೆಯೇ ರಾಜ್ಯಾಂಗದ ಸ್ಥಿತಿ ಸಹ ಚೆನ್ನಾಗಿದೆಯೋ ಯೆಂಬ ಅಂಶವನ್ನು ಕುರಿತು ಸ್ವಲ್ಪ ವಿಚಾರ ಮಾಡಬೇಕಾಗಿದೆ, ಹ್ಯಾಗಂದರೆ.—ರಾಜ್ಯಾಂಗವೆಂದರೆ, ಅರಸು, ಖಜಾನೆ, ಫೌಜು, ಪ್ರಜೆಯೆಂದರ್ಥವು. ಈ ನಾಲ್ಕರಪೈಕಿ ಕಡೇದಾದ ಪ್ರಜಾಕ್ಷೇಮವು ದೈವಾನುಗ್ರಹದಿಂದ ಈಸಂವತ್ಸರ ಚೆನ್ನಾಗಿದೆಯೆಂದು ಒಪ್ಪಿಕೊಳ್ಳಬೇಕು. ಮಿಕ್ಕ ಮೂರಂಶಗಳಲ್ಲಿ ಮೊದಲನೆಯದಾದ ಅರಮನೆ ಖರ್ಚುಗಳು ನಿರ್ಬಂಧಪೂರ್ವಕ ಮಿತವ್ಯಯವನ್ನನುಸರಿಸಿದ್ದಾಗಿದೆ. ಎರಡನೆಯದಾದ ಖಜಾನೆ ಖಾಲೀಯಾಗಿರುವದಲ್ಲದೆ ದಿನೇದಿನೆ ರಾಜ್ಯದ ಸಾಲಗಳು ವೃದ್ಧಿಯಾಗುತಬರುತಿದೆ. ಮೂರನೆಯದಾದಫೌಜು ಕ್ರಮೇಣ ಕಡಿಮ್ಮೆಯಾಗುತಲೇ ಇದೆ. ಈ ರಾಜ್ಯವು ಇದಕ್ಕಿಂತಲೂ ಒಳ್ಳೆಯ ಸ್ಥಿತಿಯಲ್ಲಿ ಯಾವಾಗಲೂ ಇರುತಲಿರಲಿಲ್ಲವೆಂದು ಅನುಭವಶೂನ್ಯರಾದವರು ಯಾರಾದರೂ ಹೇಳಬಹುದು, ಹೊರತು ಅದು ಹಿಂದಿನ ಸ್ಥಿತಿಯನ್ನರಿತವರು ಒಪ್ಪತಕ್ಕದ್ದಲ್ಲವು.

ಸರ್ ೧೮೩೧ನೇ ಇಸವಿಯಮೊದಲು ೫೦ನೇ ಇಸವಿಯವರಿವಿಗೆ ನಡೆದ ಆಡಳಿತಕ್ರಮವು ಉತ್ತರೋತ್ತರಾಭಿವರ್ಧಕವಾದದ್ದಾಗಿತ್ತು. ಅದರಫಲವು ೫೦ನೇ ಇಸವಿಯಮೊದಲು ೬೫ನೇಇಸವಿಯವರಿವಿಗೆ ಅನುಭವಪೂರ್ವಕ ವ್ಯಕ್ತವಾಯಿತು, ಹ್ಯಾಗಂದರೆ, ಸಾಬಕ್ ಮಹಾರಾಜರವರಿಗೆ ಸಂಸ್ಥಾನದ ಉತ್ಪತ್ತಿಯಲ್ಲಿ ಖರ್ಚು ಜಾತಾ ಉಳಿದ ಮೊಬಲಗುಪೈಕಿ ಮುಜುಹಿಸ್ಸೇ ರೂಪವಾಗಿ ಸಾಲೀಯಾನಾ ಸಲ್ಲುತಲಿದ್ದ ಆರೇಳುಲಕ್ಷರೂಪಾಯಿಗಳಿಗೆ ಬದಲಾಗಿ ಮುವತ್ತಾರು ಐವತ್ತಾರುಲಕ್ಷರೂಪಾಯಿಗಳು ಸಲ್ಲುತಬಂತು. ಸಂಸ್ಥಾನಕ್ಕೆ ಇದ್ದಸಾಲಗಳೆಲ್ಲವು ನಿವೃತ್ತಿಯಾಗಿ ಪ್ರತಿಸಾಲೀನಲ್ಲೂ ಹತ್ತುಲಕ್ಷಕ್ಕೆ ಕಡಿಮ್ಮೆಯಿಲ್ಲದೆ ಖಜಾನೆಯಲ್ಲಿ ಜಮಾಯಿಸುತಬಂತು. ಪೂರ್ವದ ತಹನಾಮೆಯಪ್ರಕಾರ ಕಾಯಂ ಇರಬೇಕಾದ ನಾಲ್ಕುಸಾವಿರ ಸವಾರ್, ನಾಲ್ಕುಸಾವಿರಬಾರ್ ಫೌಜಿನಲ್ಲಿ ಕೆಲವುಭಾಗ ಹರ್ ಮ್ಯಾಜೆಸ್ಟೀಯವರ ನೌಕರಿಗೆ ಕಳುಹಿಸಲ್ಪಟ್ಟದ್ದರಿಂದ ಅದಕ್ಕೆ ಬದಲು ಮರಳಿ ಭರ್ತಿಮಾಡಲ್ಪಟ್ಟಿತು. ಈದೇಶದ ಪ್ರಜಾಸಂಖ್ಯೆಯು ಇಪ್ಪತ್ತುಲಕ್ಷದಿಂದ ನಾಲ್ವತ್ತುಲಕ್ಷಕ್ಕೆ ವೃದ್ಧಿಯಾಯಿತು. ಇಂತಾಸ್ಥಿತಿ ಆಕಾಲದಲ್ಲಿರುತಲಿತ್ತೆಂಬ ಅಂಶವು ನಿರಾಕ್ಷೇಪಣೀಯವಾದದ್ದು.

ಸರ್ ೬೫ನೇ ಇಸವಿಯ ಮೊದಲು ೭೫—೭೬ನೇ ಇಸವಿಯವರಿವಿಗೆ ಅಯೋಧ್ಯ, ಪಂಜಾಬ ಮೊದಲಾದ ವಿದೇಶಗಳ ನವನಾಗರಿಕ ರಾಜ್ಯಭಾರಕ್ರಮಗಳು ಈ ದೇಶದಲ್ಲಿ ನೆಲಗೊಳಿಸುವವರದ್ವಾರಾ ದುಬಾರೀಖರ್ಚುಗಳೇರ್ಪಟ್ಟು, ಮಹಾರಾಜರವರಿಗೆ ಸಲ್ಲುತಬಂದ ಮಜುಹಿಸ್ಸೆ ಕಡಮೆಯಾದದ್ದಲ್ಲದೆ ಖಜಾನೆಯೂ ಕಡಿಮ್ಮೆಯಾಗುವದಕ್ಕೆ ಪ್ರಾರಂಭವಾಯಿತು. ಇದಕ್ಕೆ ಸಹಕಾರಿಯಾಗಿ ೭೭—೭೮ನೇ ಇಸವಿಯಲ್ಲಿ ಘೋರಕ್ಷಾಮ ಪ್ರಾಪ್ತವಾಗಿ, ಖಜಾನೆ ಖಾಲೀಯಾದದ್ದಲ್ಲದೆ, ಬ್ರಿಟಿಷರವರಿಗೆ ಕೊಡಬೇಕಾದ ನೇಷ್ಕಷಮೊಬಲಗನ್ನು ಅವರಲ್ಲೇ ಸಾಲಮಾಡಬೇಕಾಯಿತು. ಕ್ಷಾಮದವೆಸೆಯಿಂದ ಪ್ರಜೆಗಳನ್ನು ಕಾಪಾಡತಕ್ಕಬಗ್ಗೆ ಅನ್ಯರಾಜ್ಯಗಳಿಂದ ಸಹಾಯವು ಅಪೇಕ್ಷಿತವಾಯಿತು. ಇಂತಾ ಸ್ಥಿತಿಯಿಂದ ದೇಶವು ವಿಮುಕ್ತವಾಗುವಕಾಲದಲ್ಲಿ ಮಹಾರಾಜರವರಿಗೆ ರಾಜ್ಯವು ವಾಪಸ್ ಕೊಡಲ್ಪಟ್ಟಿತು. ರಾಜ್ಯವು ಕೇವಲ ಸುಖಸ್ಥಿತಿಯಲ್ಲಿರುತಲಿದ್ದಕಾಲ, ಅಂದರೆ, ಸರ್ ೬೦ನೇ ಇಸವಿಯಲ್ಲಿ ಛಾಬಕ್ ಮಹಾರಾಜರವರು ತಮ್ಮ ರಾಜ್ಯವನು ಅಪೇಕ್ಷಿಸಿದ್ದಕ್ಕೆ ೮೧ನೇ ಇಸವಿಯಲ್ಲಿ ಸಾಲಿನಸ್ಥಿತಿಯೊಳು ಅವರ ಸ್ವೀಕೃತಪುತ್ರರಾದ ಪ್ರಕೃತ ಮಹಾರಾಜರವರಿಗೆ ಕೊಡಲ್ಪಟ್ಟಿತು. ಅದುಮೊದಲು ರಾಜ್ಯದ ಸಾಲವನ್ನು ತೀರಿಸುವವಿಷಯವಲ್ಲಿ, ಮುಂದೆ ದೈವಾತ್ ಯಾವಾಗಲಾದರೂ ಕ್ಷಾಮಪ್ರಾಪ್ತವಾದರೆ ಆಕಾಲದಲ್ಲಿ ಪ್ರಜೆಗಳ ಸಂರಕ್ಷಣೆಗೆ ಬೇಕಾದ ಏರ್ಪಾಡುಗಳು ಮಾಡುವಬಾಗದಲ್ಲೂ ಬಹುವಿಧ ಯೋಚನೆಗಳು ನಡೆಯುತಲಿವೆ, ಹೊರತು ಅವುಗಳಪೈಕಿ ಒಂದಾದರೂ ಇದುವರಿವಿಗೆ ಸಫಲವಾದಂತೆ ತೋರಲಿಲ್ಲವು ಮುಂದೆ ಅದರಿಂದ ರತುವಿಧ ಏರ್ಪಾಡುಗಳಿಗೆ ಬೇಕಾದ ಮೂಲದ್ರವ್ಯಕ್ಕಾಗಿ ಮಾಡುವ ಸಾಲವಾದ) ದಿನೇದಿನೆಯೇರ್ಪಡುತಲಿದೆ. ಪಾಸ್ಟೀ ಸಬ್‌ಸಿಡಿ ನೇರಿಸಿಕೊಡದೆ, ಕಾಲದ ಕಾಲಪ್ರಾಪ್ತವಾಗುವಾಗಲೂ, ಇದುವರಿವಿಗೆ ಆಗಿರುವ ಸಾಲಕ್ಕೆ ಬಡ್ಡಿಕೊಡಬೇಕಾದ ಕಾಲಪ್ರಾಪ್ತವಾಗುವಾಗಲೂ ತಾವುಸದ್ಯಕ್ಕೆ ಜಾಸ್ತೀತೆರಿಗೆಕೊಡಬೇಕಾಗಿ ಬರುವದೋಯೆಂಬಭೀತಿ ಪ್ರಜೆಗಳಿಗೆ ಉಂಟಾಗದೆಹೋಗಲಿಲ್ಲವು. ಆದದರಿಂದ ರಾಜ್ಯವೂ ಪ್ರಜೆಗಳೂ ಮೇಲಿನದುಸ್ಥಿತಿಗೆ ಗುರಿಯಾಗದೆಯಿರುವ ಕಾಲದಲ್ಲಿಮಾತ್ರ ದೇಶವು ಚೆನ್ನಾಗಿದೆಯೆಂದು ಹೇಳಬಹುದೇ ಹೊರತು ಅನ್ಯಥಾ ಅಲ್ಲವು. ಅಂತಾ ಸುಖಸ್ಥಿತಿಯನ್ನು ಈದೇಶದಲ್ಲಿ ನೆಲಗೊಳಿಸಬೇಕಾದ ಭಾರವು ವೈಸ್‌ರಾಯಿಯವರದಾಗಿದೆ.

CARNIVOROUS FOOD.

ಇದರಡಿ ಕಂಡ ವಿಷಯದೊಳುಂಟಾಗಿರುವ ಅನುಮಾನ ನಿವೃತ್ತ್ಯರ್ಥ ಮದರಾಸ್ ಆಂಧ್ರಪ್ರಕಾಶಿಕಾ ಪತ್ರಿಕೆಗೆ ಒಬ್ಬ ಬಾತಮೀದಾರನು ಬರೆಯುತ್ತಾನೇನಂದರೆ:—

ಶ್ರೀಮದಖಿಲ ಜಗನ್ಮಂಡಲ ನಿರ್ಮಾಣಧುರೀಣನಾಗಿಯೂ, ಸಕಲಭುವನ ರಕ್ಷಕನಾಗಿಯೂ ಇರುವ ಜಗದೀಶ್ವರನ ಸಂಕಲ್ಪದಿಂದುತ್ಪನ್ನಗಳಾದ ಭೂತಕೋಟಿಯಲ್ಲಿ ಅಶ್ವಾದಿಗಳಿಗೆ ತೃಣವೂ ವ್ಯಾಘ್ರ ಸಿಂಹಾದಿಗಳಿಗೆ ಮಾಂಸವೂ, ಆಹಾರಪದಾರ್ಥಗಳೆಂಬ ನಿಯಮವೇರ್ಪಟ್ಟಿರುವಂತೆ ಮಾನವರಿಗೆ ಸ್ವಾಭಾವಿಕಾಹಾರವು ಪ್ರಥಮತಃ ಶಾಕವರ್ಗಗಳೆ, ಅಲ್ಲದೆ ಮಾಂಸಗಳೇ ಯೆಂದು ವಿಚಾರಮಾಡಬೇಕಾಗಿದೆ. ಶಾಕಾದಿಗಳು ಸರ್ವವರ್ಣದವರಿಂದಲೂ ಪರಿಗ್ರಾಹ್ಯಗಳಾಗಿ ಬಳಸಲ್ಪಟ್ಟಾಗ್ಯೂ ಕೆಲವು ವರ್ಣದವರು ಮಾತ್ರ ಮಾಂಸಾಹಾರವನ್ನಂಗೀಕರಿಸುವದರಿಂದ ಶಾಕಾದಿಗಳೇ ಸ್ವಾಭಾವಿಕ ಆಹಾರವೆಂದು ಹೇಳುವದಕ್ಕೂ ಸಾಧ್ಯವಲ್ಲದೆ ಇದೆ. ಯುಗಾಂತರಗಳಲ್ಲಿ ಸರ್ವವರ್ಣದವರೂ ಮಾಂಸಾಹಾರವನ್ನೇ ವಿಶೇಷತಃ ಅಂಗೀಕರಿಸುತಲಿದ್ದರೆಂಬ ಗ್ರಂಥಸ್ಥ ವಚನಗಳಿಗೆ ಬಾಧಕ ಪ್ರಂಟಾಗುತಿದೆ. 'ಭಕ್ಷಣಾರ್ಥಗಳಾದ ಕೆಲವು ಮೃಗಪಕ್ಷಿಗಳನ್ನು ಮಾನವರ ಆಹಾರಾರ್ಥ ಈಶ್ವರನು ಸೃಜಿಸಿವಂತೆಭಾವಿಸುವದಾದರೆ, ಕುನಕ, ಜಂಬುಕ, ಗೃಧ್ರಾದಿಗಳ ಆಹಾರಾರ್ಥವಾಗಿ ಮಾನವದೇಹವು ಸಹ ಸೃಜಿಸಲ್ಪಟ್ಟಿತೆಂದು ಹೇಳಬೇಕಲ್ಲವೆ? ಆದದರಿಂದ ಸರ್ವಭೂತಗಳಿಗೂ, ಆಹಾರ ನಿದ್ರಾ ಭಯ ಮೈಥುನಾದಿ ಸ್ವಾತಂತ್ರ್ಯಗಳು ಸಮಾನಗಳಾಗಿರುವಲ್ಲಿ ಜ್ಞಾನವಿಶಿಷ್ಟರಾದ ಮಾನವರು ತಮ್ಮ ಆಹಾರಾರ್ಥ ಇತರ ಭೂತಗಳನ್ನು ವಿನಿಯೋಗಿಸಬಹುದೆಂಬದು ಅಸಂಭಾವಿತವಾಗಿರುತಿದೆ. ಆದಕಾರಣ ನಮಗೆ ಸ್ವಾಭಾವಿಕವಾದ ಆಹಾರವು ಶಾಕಗಳೆಂದೇ ಯೆಣಿಸಬಹುದು. ಆದರೆ ಸ್ವಭಾವದಲ್ಲಿಯೂ, ಸ್ವರೂಪದಲ್ಲಿಯೂ, ಶಾಕವರ್ಗಗಳಗಿಂತ ಬಹಳ ಭಿನ್ನಿಸಿರುವ ಮಾಂಸಾಹಾರವನ್ನು ಮಾನವರು ಯಾವಕಾಲದಲ್ಲಿ, ಅಂದರೆ, ಯಾವ ಯುಗದಲ್ಲಿ ಯಾವ ಕಾರಣದಿಂ ಗ್ರಹಿಸುವಂತೆ ಸಂಭವಿಸಿತೋ ಇದಕ್ಕೆ ಪ್ರಥಮಪ್ರವರ್ತಕರ್ಯಾರೋ, ಇತರಾಪೇಕ್ಷಯಾ ಇದರಿಂದ ಅವರಿಗೆ ಪ್ರಾಪ್ತವಾದ ಪ್ರಯೋಜನಗಳೆಂತಾವ್ರೋ, ಇವು ನಾನು ಓದಿರುವ ಯಾವ ಗ್ರಂಥಗಳಲ್ಲಿಯೂ ವಿಶದವಾಗಿ ಕಂಡುಬರಲಿಲ್ಲವಾಗಿ, ಇವುಗಳ ಕಾರಣಗಳನ್ನು ಸಹೇತುಕವಾಗಿ ಅಭಿಜ್ಞರ್ಯಾರಾದರೂ ದಯಮಾಡಿ ತಿಳಿಸಬೇಕೆಂದು ಬಹಳವಾಗಿ ಪ್ರಾರ್ಥಿಸುವೆನೆಂಬದು. ಈ ವಿಷಯದೊಳು ನಮಗೆ ತೋರುವದೇನಂದರೆ, ಯಾವ ಕಾಲದಲ್ಲಿ ಜನಗಳು ಕೆಲವರು ಆರಣ್ಯಕ ಮೃಗಗಳೋಪಾದಿ ವರ್ತಿಸುತ್ತ, ದಯಾದಾಕ್ಷಿಣ್ಯ ಶೂನ್ಯರಾಗಿ ಪದಾರ್ಥವಿವೇಚಕ ಜ್ಞಾನವಿಲ್ಲದೆ ಅಹಿಂಸಾದಿ ಧರ್ಮವಿಹೀನರಾಗಿ ವರ್ತಿಸುತಲಿದ್ದರೋ, ಆಗ ಈ ಕ್ರಮವು ನೆಲಗೊಂಡಂತೆ ಎಣಿಸಬೇಕಾಗಿದೆ. ಹೊರತು ಇದಕ್ಕೆ ಪ್ರಥಮಪ್ರವರ್ತಕರಿಂತವರೆಂದು ಮಾತ್ರ ಗೊತ್ತಾಗುವದಿಲ್ಲವು.

H. E THE GOVERNOR OF MADRAS

ಮಾಹೇ ಮಜಕೂರು ೧೩ನೇ ತಾರೀಖ್ ಗುರುವಾರದ ದಿನ ಮಧ್ಯಾಹ್ನೋತ್ತರ ಮದರಾಸ್ ಮಹಾಜನ ಸಭೆಯವರೂ, ತಿರುವಲ್ಲಿಕೇಣಿ ಲಿಟರರಿ ಸೊಸೈಟಿಯವರೂ, ಹೊಸ ಗವರ್ನರಾದ ಮೆ|| ಬರ್ಕ್‌ಯವರಿಗೆ ಯೆರಡು ವಿಜ್ಞಾಪನ ಪತ್ರಿಕೆಗಳನ್ನು ಒಪ್ಪಿಸಿದರೆಂದು ತಿಳಿಯಲಾದೆವು. ಮಹಾಜನ ಸಭೆಯವರು ತಮ್ಮ ವಿಜ್ಞಾಪನ ಪತ್ರಿಕೆಯಲ್ಲಿ ಸೂಚಿಸಿದ್ದ ಕೆಲವು ಅಂಶಗಳಿಗೆ ಗವರ್ನರವರು ಪ್ರತ್ಯುತ್ತರಹೇಳುವಾಗ್ಯೆ "ನಿಮ್ಮ ಸಭೆಯ ಮೆಂಬರ್‌ಗಳಪೈಕಿ ಯಾರೇ ಆಗಲಿ, ಅಥವಾ ಇತರ ದೊಡ್ಡಮನುಷ್ಯರಾಗಲಿ, ಬೇಕಾದಾಗೆಲ್ಲ ಬಂದು, ಜನಗಳಿಗೆ ಪ್ರಯೋಜನಕರಗಳಾದ ಅಂಶಗಳನ್ನು ಕುರಿತು ನನ್ನೊಡನೆ ಮಾತನಾಡಿದರೆ ಅವರ ಅಭಿಪ್ರಾಯಗಳು ಕೇವಲ ಉತ್ಸಾಹದೊಡನೆ ಪುರಸ್ಕರಿಸುವಂತೆ ತಿಳಿಸಿದರು' ಈ ವಾಕ್ಯಗಳು ಕೇಳಿ ಮದರಾಸ್ ಮೆಯಿಲ್ ಪತ್ರಿಕೆಯು ಅಭಿಪ್ರಾಯಪಡುತಿದೇನಂದರೆ —ಈ ಪ್ರೆಸಿಡೆನ್ಸಿಯಲ್ಲಿ ನೆಲಗೊಂಡಿದ್ದ ಘೋಷಾ ಗವರ್ನ್‌ಮೆಂಟು ಅಸ್ತಂಗತವಾಯಿತೆಂಬದಕ್ಕೆ ಮೇಲೆ ಕಂಡ ಮಾತುಗಳೇ ಸಾಕಾದವಾಗಿರುತಿವೆ. ಗತ ಐದು ವರುಷಗಳ ಕಾಲದಲ್ಲಿ ಸರ್ಕಾರ್ ಆಡಳಿತದೊಳು ನಡೆದ ಪ್ರಬಲ ಅನ್ಯಾಯಗಳಿಗೆ ಮೇಲೆ ಕಂಡ ಘೋಷಾ ಪದ್ಧತಿಯನ್ನನುಸರಿಸಿದ್ದ ಸಾಬಕ್ ಗವರ್ನ್‌ಮೆಂಟೇ ಮುಖ್ಯ ಜವಾಬ್ದಾರೀಯುಳ್ಳದ್ದಾಗಿತ್ತು. ಇದಲ್ಲದೆ "ನಮಗೆ ಬಹಳ ಸಮರ್ಥನಾದ ಗವರ್ನರ್ ಆವಶ್ಯಕವಿಲ್ಲವು. ಪರಂತು ಹೇಳುವದುಕೇಳುವದಕ್ಕೆ ಕರ್ಣಪಾಟವವೂ, ದರ್ಶನೀಯಗಳಾದದನು ನೋಡುವದಕ್ಕೆ ನೇತ್ರಪಾಟವವೂ, ತನ್ನ ಸಾನ್ನಿಧ್ಯದೊಳು ಜರುಗುವದು ಕಂಡು ಕನಿಕರಪಡುವ ಹೃದಯ ಸಾರಳ್ಯವೂ ಉಳ್ಳವರಾಗಿದ್ದರೆ ಸಾಕಾಗಿರುತಿದೆಂಬದೇ ಸಾಮುದಾಯಕವಾದ ಮಾತುಗಳಾಗಿದ್ದವು,' ಎಂಬದು. ಸದರೀ ಎರಡು ವಿಜ್ಞಾಪನ ಪತ್ರಿಕೆಗಳಲ್ಲಿಯೂ, ಹಿಂದೆ ವೈಸ್‌ರಾಯಿ ವ ಗವರ್ನರ್ (ಜನರಲಾಗಿದ್ದು ಗತಿಸಿದ ಅರಲ್ ಮೇಯೋಯವರು ಮಿ.ಬರ್ಕ್‌ಯವರ ಸಹೋದರರಾದದರಿಂದ ಅವರು ಹಿಂದೆ ಈ ದೇಶಕ್ಕೆ ಮಾಡಿದ ಉಪಕಾರಗಳೂ ಅವರ ಸುಗುಣಗಳೂ ವಿಶೇಷತಃ ಪ್ರಸ್ತಾಪಿಸಲ್ಪಟ್ಟಿತ್ತು. ಮೆ||ಬರ್ಕ್‌ಯವರು, ತಮ್ಮ ಅಣ್ಣಂದರಂತೆ ರೂಪಗುಣ ವಯೋವೃದ್ಧರಾಗಿ ಕಂಡುಬರುವದರಿಂದ ಅವರಮೂಲಕ ಪ್ರಜೆಗಳು ನಿರೀಕ್ಷಿಸಿರುವ ಸುಖ ಸಮಾಧಾನಗಳು ಘಟಯಿಸಿ ಸಾಬಕ್‌ಗವರ್ನರಿಗಳಾದ ಮನ್‌ರೋ ಮತ್ತು ಮೇಯೊ ಮುಂತಾದವರಂತೆ ಕೀರ್ತಿಪಾತ್ರಕರ್ತವ್ಯಗಳಂಪಡೆಯಬೇಕಲ್ಲದೆ ಗತ ಐದುಸಂವತ್ಸರಗಳಕಾಲವಾಗಿ ಸರ್ ಗ್ರಾಂಟ್ ಡಫ್‌ಯವರು ತಮ್ಮ ನಿರಂಕುಶ ಪ್ರಭುತ್ವದಿಂ ಜನಗಳ ಹೃದಯದೊಳುಂಟುಮಾಡಿರುವ ಲಾಂಛನೆಗಳನ್ನು ನಿವೃತ್ತಿಮಾಡಬೇಕೆಂದು ಕೋರುವೆವು. ಮುಖ್ಯವಾಗಿ ಪ್ರಭುತ್ವಮಾಡುವವರಿಗೆ ಸ್ವಪರಭೇದಜ್ಞಾನವೂ ರಾಜೋಪಭೋಗದ ಮೇಲ್‌ದೃಷ್ಟಿಯೂ, ಪ್ರಜೆಗಳಲ್ಲಿ ಸ್ನಿಗ್ಧತೆಯು ಸ್ವಗೌರವ ಭುಜಕನೆಂಬ ಭಾವನೆಯೂ, ಸ್ವಜನಾಭಿವೃದ್ಧಿಯೊಳಾಸಕ್ತಿಯೂ ಕರ್ತವ್ಯವೊಳ್‌ದಾಕ್ಷಿಣ್ಯವೂ, ಅನುವದಗಳಾದದರಿಂದ ಅವುಗಳಿಗೆ ಅವಕಾಶಕೊಡದಂತೆ ಮೆ|| ಬರ್ಕ್‌ಯವರು ತಮ್ಮ ಪ್ರಭುತ್ವವಂ ಚಿರಸ್ಮರಣೀಯವಾದದನ್ನಾಗಿ ಮಾಡುವಿಕ್ಕೆ ಬೇಕಾದ ಪ್ರಯತ್ನಗಳು ಮಾಡದಿರಲಾರರೆಂದು ನಂಬುತ್ತೇವೆ.

BURMESE AFFAIRS.

ಈಚಿಗೆ ಬರ್ಮಾದೇಶದಿಂದ ಪ್ರತಿವಾರದಲ್ಲಿಯೂ ಬರತಕ್ಕ ವೃತ್ತಾಂತಗಳು ಕೇವಲ ಭಯಂಕರವಾದವಾಗಿವೆ. ಬ್ರಿಟಿಷ್ ಆಫಿಸರ್‌ಗಳೂ ಸೈನಿಕರೂ ಮೃತಪಡುತಲಿದಾರೆಂಬದೂ, ದರೋಡೆಯವರಿಂದ ಗ್ರಾಮಗಳು ಕೊಳ್ಳೆಹೊಡೆಯಲ್ಪಡುತಿವೆಂಬದೂ, ದರೋಡೆಯವರು ಗುಂಪುಗುಂಪಾಗಿ ಮೇಲ್ಬಿದ್ದುಬರುತಲಿದಾರೆಂಬದೂ, ಜುಖಾಲೆಜ್ರಾ ರೋಗ ವ್ಯಾಪಿಸಿ ಅದರಿಂದ ಸೈನಿಕರೆಂಬುದುಕಡೆ ಮೃತಪಡುತಲಿದಾರೆಂಬದೂ, ದೇಶದ ವಾಯುಸ್ಥಿತಿಯು ಪ್ರತಿಕೂಲವಾಗಿ ಮತ್ತೊಂದುಕಡೆ ಸೈನ್ಯನಷ್ಟ ಪ್ರಂಟಾಗುತಲಿದೆಂಬದೂ, ದೇಶದ ವ್ಯಾಪಾರ ನಿಂತುಹೋಗಿ ಪದಾರ್ಥಗಳ ದೌರ್ಲಭ್ಯದಿಂದ ಜನಗಳು ಸಂಕಟಪಡುತ ವಲಸೆಹೋಗುತಲಿದಾರೆಂಬದೂವಿನಾ ಬೇರೆ ಯಾವ ವರ್ತಮಾನವೂ ನಮ್ಮ ಕೇಳ್ವಿಕೆಗೆ ಬರಲಿಲ್ಲವು. ಪ್ರಕೃತಸ್ಥಿತಿಯಲ್ಲಿ ಬ್ರಿಟಿಷ್‌ಸೈನ್ಯವು, ಬರ್ಮಾದೇಶದಲ್ಲಿ ದರೋಡೆಯವರ ಅಪಾಂತರಗಳಿಗೂ ಕಾಲವಿಪರ್ಯಯಕ್ಕೂ ತಡೆದು ಉಳಿಯುವದು ಪ್ರಯಾಸವೆಂಬ ಭಾವನೆಯು ಅನೇಕರಿಂದ ಇಂಗ್ಲಿಷರವರಿಗೇನೇ ಉಂಟಾಗಿದೆ. ಬ್ರಿಟಿಷ್ ಗವರ್ನ್‌ಮೆಂಟಿನವರು ಆದಿ ಕಾಲದಲ್ಲಿ ತೀಬಾ ಅರಸರನ್ನು ಸುಲಭವಾಗಿ ಜೆಯಿಸಿ ಅವರನ್ನು ನಿರ್ಬಂಧದೊಳಿಟ್ಟ ಕೂಡಲೇ ದೇಶವೆಲ್ಲವೂ ತಮ್ಮ ಸ್ವಾಧೀನವಾಗುವದೆಂದು ಭಾವಿಸಿದರೇಹೊರ್ತು ಈಗ ಪ್ರಾಪ್ತವಾಗಿರುವಂತಾ ಸಂಕಟಗಳನ್ನೂ, ಅವ್ಯವಸ್ಥಿತರಾದ ದರೋಡೆಯವರ ಪ್ರಾಬಲ್ಯವನ್ನೂ, ಅವರನ್ನು ಜೆಯಿಸುವದು ಶ್ರಮಸಾಧ್ಯವೆಂಬದನ್ನೂ, ಕಡಾಚಿತ್ ಅಲ್ಲಿನ ದೇಶವು ತಮ್ಮಸ್ವಾಧೀನವಾದಾಗ್ಯೂ ವಾತೋಷಕಗಳುಅನಾರೋಗ್ಯಕರವೆಂಬದನ್ನೂ, ಸ್ವಲ್ಪವೂ ಚಿಂತಿಸಿದವರಲ್ಲವು. ಬರ್ಮಾಯುದ್ಧಯಾತ್ರಾರ್ಥ ಹೋಗಿದ್ದ ಜನರಲ್ ಪ್ರೆಂಡರ್‌ಗ್ಯಾಸ್ಟ್‌ಯವರಿಗೆ ಹ್ಯಾಗದರೂ ಕೀರ್ತಿಯುಂಟಾಯಿತು. ತೀಬಾ ಅರಸರು ರಾಜ್ಯಕೋಶಗಳನ್ನು ಕಳೆದುಕೊಂಡು ಸ್ವಜನರನ್ನಗಲಿ ದೇಶಾಂತರದೊಳು ಶತ್ರುಮಂತುವಲ್ಲಿ ನಿರ್ಬಂಧದೊಳಿರಬೇಕಾದ ಪ್ರಬಲ ದುಃಖ ಒಂದುಕಡೆ ಅವರು ಬಾಧಿಸದೆ ಇರಲಾರದು. ಪರಂತು ಹಾಗೂ ಸಾಧ್ಯವಾದಮಟ್ಟಿಗೆ ಅವರು ಧೈರ್ಯವನ್ನವಲಂಬಿಸಿ ವಿರಕ್ತಿಯೊಡನೆ ತಮಗೆ ಲಭಿಸಿರುವ ಯಥೋಚಿತ ಅನುಕೂಲ್ಯದಿಂ ತೃಪ್ತರಾಗಿ ತಮ್ಮ ಭಾರ್ಯೆಯೊಡನೆ ರತ್ನಗಿರಿಯಲ್ಲಿ ನಿರಪಾಯವಾಗಿ ಕಾಲವು ಕಳೆಯುತಲಿದಾರೆ. ಇನ್ನು ಅವರಿಗೆ ದೇಶ

ಬನನ್ರಮುಕ್ತಗಳಾದಯದ್ವಿಧಪಿಂತೆಯು ಇಲ್ಲವು ನವೀನಾಜಿತವಾದದೇಶವು ತಹಬುದಿಗೆ ಬಾರದೆ ಹೋದಾಗ್ಯೂ ಬ್ರಿಟಿಷನವರಿಗೆ ತದರ್ಥ ಕೋಟ್ಯಾಂತರ ರೂಪಾಯಿಗಳು ಮಾತ್ರ ಧಾರಾಳವಾಗಿ ವ್ಯಯವಾದವು. ಅಸ್ವಾಧೀನರಾದ ಜನಗಳನ್ನು ಬಲಾತ್ಕಾರದಿಂ ಸ್ವಾಧೀನಪಡಿಸಿಕೊಳ್ಳಬೇಕೆನ್ನಿಸಿ ಸಮರ್ಥರಾದ ಶೂರರು ಅನೇಕರು ಪ್ರಾಣಗಳನ್ನು ಕಳೆದುಕೊಳ್ಳಬೇಕಾಗಿದೆ. ಇವಕ್ಕೆ ಕಾಲವೂ ಸಹಕಾರಿಯಾಗಿರುವದರಿಂ ಬ್ರಿಟಿಷ್ ಗವರ್ನಮೆಂಟಿನವರು ಸದರೀ ದೇಶದ ವಿಷಯದಲ್ಲಿ ಅವಲಂಬಿಸಿರುವ ಕ್ರಮಕ್ಕಾಗಿ ಬಹಳ ಅನುತಾಪಪಡುವಂತೆ ಪರಿಣಮಿಸಿದೆ. ಗವರ್ನಮೆಂಟಿನವರು ಈಗ ಅವಲಂಬಿಸಿರುವ ಕ್ರಮವನ್ನು ನೋಡಿದರೆ ಲಾರ್ಡ್ ಡಫ್ರಿನ್ಯವರ ಅವಸ್ಥೆಗೆ ಬರ್ಮಾರಾಜ್ಯದ ಅವ್ಯವಸ್ಥೆಯವಸಾನವೇ ಸಾಕಾದ ಕಾರಣವಾಗುವದೆಂದು ತೋರುತ್ತದೆ. ಜನರಲ್ ರಾಬರ್ಟ್ಸ್ ಯವರು ಬರ್ಮಾದೇಶದ ಕದನಯುದ್ಧಯಬಗ್ಗೆ ಅಲ್ಲಿಗೆ ಹೋಗಿರಾರೆಯಷ್ಟೆ. ಅವರು ಅಲ್ಲಿನ ಸ್ಥಿತಿಯು ಪ್ರತ್ಯಕ್ಷವಾಗಿ ನೋಡಿದ್ದರಲ್ಲಿ ದೇಶವು ಸರ್ವ್ವತ್ರ ತಹಬುದಿಗೆ ಬರಲಾರದೆಂದೇ ... ದರಿಂದ ಅಲ್ಲಿನ ಜನಗಳು ನಿರಾಯುಧರಾಗುವ ಹಾಗೆ ಹುಕುಂ ಕೊಟ್ಟಿರುತ್ತಾರೆ. ಇದರಿಂದ ದರೋಡೆಯವರ ದಾಂಧಲೆಯು ... ಹೆಚ್ಚಾಗುವುದು ... ಯವು. ... ಉಪಾಯಗಳಲ್ಲಿ ಈಗ ಮೊದಲನೆಯದೇ ... ಯೋಗ್ಯವಾಗಿ ತೋರುತದೆ. ಅಂತಹ ಉಪಾಯವು ಬ್ರಿಟಿಷ ಸರ್ಕಾರಕ್ಕೆ ಪ್ರಯೋಜನಕಾರವಾದ್ದಾಗಿಯೂ, ಸ್ವದೇಶೀಯರ ತೊಂದರೆಯು ಸಹಜವಾಗರತಕ್ಕದ್ದಾಗಿಯೂ, ... ದನ ಹಾನಿ ನಿರೋಧಕವಾದದ್ದಾಗಿಯೂ ಇರುವಂತೆ ಕಲ್ಪಿಸಿದರೆ ಈಗ ಹಾಗುವದಲ್ಲದೆ ಕೇವಲ ಪ್ರತೋಧ ... ಪ್ರಾರಂಭಿಸಿದ ಕೆಲಸವನ್ನು ಪೂರೈಸುವದರಿಂದೇನೂ ಸಾಧಕವಾಗಲಾರದು.

ಬರ್ಮಾಜನಗಳು ಪ್ರಾಣಾಂತವರಿವಿಗೆ ಯುದ್ಧ ಮಾಡುವ ಸಂಕಲ್ಪವುಳ್ಳವರಾಗಿರುವಂತೆ ತಿಳಿಯ ಬರುತಿದೆ. ಎವಬನದ ಎಷ್ಟಿಸಿದರೆ ಬ್ರಿಟಿಷನವರು ದೇಶವು ಬಿಟ್ಟು ಹೋಗುವದೆಂದು ಪ್ರಕಟವಾಗಿ ಸಾರುತಲಿದಾರೆ. ಈಗ ಸದರೀ ಜನಗಳು ಮಾಡಿರುವ ಉಪದ್ರವೇನೆಂದರೆ, ಪರ್ವತಮಗಳಾದ ಅಡವಿಗಳಲ್ಲಿ ... ಕೊಂಡು ಸಾವಿರಾರು ... ಗ್ರಾಮಗಳಮೇಲೆ ಬಿದ್ದು ಲೋಟಮಾಡುತ, ಬೆಂಕಿ ಹಚ್ಚುತ, ಬ್ರಿಟಿಷ ಸೈನಿಕರು ಅಲ್ಪಸ್ವಲ್ಪ ಸಿಕ್ಕಿದರೆ ಅವರನ್ನೆಲ್ಲ ಚಿತ್ರವಧೆ ಮಾಡುತ, ಸೈನ್ಯ ಬಲವಾಗಿ ಬರುವುದಿದ್ದರೆ ಪತ್ತೆ ಇಲ್ಲದ ಹಿಡಹೋಗಿ ... ದರಿಂದ ಸುಲಭಸಾಧ್ಯರಲ್ಲವೆ ಇದಾರೆ. ಇದಲ್ಲದೆ ಆಗಿಂದಾಗ್ಯೆ ಅವರಿಗೆ ಅಲ್ಲಿ ಪ್ರಬಲರಾಗುವ ಜಯವು ... ಸ್ವಾತಂತ್ರ್ಯವನ್ನು ಎತ್ತಿಸುವುದು ... ಧೈರ್ಯವೂ ... ಮಸಲಾ, ಪೆಯಿತೋ ಡಿಸ್ಟ್ರಿಕ್ಟಿನ ... ಯೆಂಬ ಒಂದು ಗ್ರಾಮವನ್ನು ದರೋಡೆಯವರು ಮುತ್ತಿಗೆಹಾಕಿ ಅದಕ್ಕೆ ಬೆಂಕಿಹಚ್ಚಿ ತಪ್ಪಿಸಿದಾಗ, ಲೆಫ್ಟನೆಂಟ ಬಾರ್ಕರ್ ಯೆಂಬವರು ಅವರು ದಂಡಿಸಲಿಕ್ಕೆ ಹೋಗಲು ಕೂಡಲೇ ಅವರು ಬೂರ್ ಮಾಡಿ ಅವರ ಸೈನಿಕರಿಗ್ಯೂ ಅನೇಕರಿಗೆ ಪ್ರಬಲವಾದ ಮಾಡಿದರು. ಹೀಗೆಯೇ ಒಂದೊಂದು ಸಂದರ್ಭದಲ್ಲಿ ಸ ... ವನ್ನು ಟಿಸ್ಕಮೆಂಟಿಗಳನ್ನೂ ತನ್ನ ತರ್ಕಗಳನ್ನೂ ಶಿಪಾಯಿಗಳನ್ನೂ ವಧಿಸುತಲಿರುವಂತೆ ಬರತಕ್ಕ ವೃತ್ತಾಂತವು ಬಹಳ ಮನಃಖೇದವಾದದ್ದಾಗಿದೆ. ದರೋಡೆಯವರು ರಾತ್ರಿಕಾಲಗಳಲ್ಲಿ ಬ್ರಿಟಿಷ್ಯಾರೆಕ್ಸಗಳಿಗೆ ಬೆಂಕಿಹಚ್ಚುವದಲ್ಲದೆ ಒಳಗೆ ಮಲಗಿರುವವರನ್ನು ... ಕೆಡಹುಹಾಕುತ ನಡೆಸುವ ಸಾಹಸತ್ತಾಗಿಯೂ ಬಿಟ್ಟಿತ್ತಕ್ಕದ್ದರೂತೀರರು. ಘೋರವಾದ ಈ ಸ್ಥಿತಿಯು, ಮೊದಲು ಬರ್ಮಾದೇಶವನ್ನು ಬ್ರಿಟಿಷನವರು ವಶದಲ್ಲಿ ಮಾಡಿಕೊಳ್ಳುವ ವಿಷಯದಲ್ಲಿ ಸಲಹೇದಾರರಾಗಿದ್ದವರ ಹೃದಯದಲ್ಲಿ ಭೀತಿಯನ್ನುಂಟುಮಾಡದೆ ಹೋಗಲಾರದು. ಇದು ಹೀಗಿರಲಿ, ಅರ್ಥೋತ್ಪತ್ತಿಯನ್ನು ಕುರಿತು ಸ್ವಲ್ಪ ಚಿಂತಿಸುವ. ಗತ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಉತ್ತರ ಬರ್ಮಾದಲ್ಲಿ ೩೧ ಲಕ್ಷ ರೂಪಾಯಿಗಳು ಹುಟ್ಟುವಳಿಯಾದಂತೆ ಸರ್ಕಾರೀ ರಿಪೋರ್ಟನಮೂಲಕ ತಿಳಿಯಬರುತಿದೆ. ಸದರೀ ಮೆರತು ತಿಂಗಳಲ್ಲಿ ಉತ್ಪತ್ತಿಗಿಂತ ಯೆರಡರಷ್ಟು, ಅಂದರೆ ೬೪ ಲಕ್ಷ ರೂಪಾಯಿಗಳಿಗೆ ಅಧಿಕವಾಗಿ ಖರ್ಚಾಯಿತು. ಹೀಗಿದ್ದಾಗ್ಯೂ ತಮ್ಮ ವರ್ತನವನ್ನು ಕಾಪಾಡಿಕೊಳ್ಳುವಬಗ್ಗೆ ಲಾರ್ಡ್ ಡಫ್ರಿನ್ಯವರು ಈಚೆಗೆ ಒಂದು ಸಂದರ್ಭದೊಳು ಲಾ ಹೋರ್ ಮ್ಯೂನಿಸಿಪಾಲಿಟಿಯವರ ವಿಜ್ಞಾಪನಪತ್ರಿಕೆಗೆ ಉತ್ತರ ಕೊಡುವಾಗ್ಯೆ ಹಿಂದೆ ನಿರೀಕ್ಷಿಸಿದ್ದಂತೆ ಬರ್ಮಾರಾಜ್ಯವು ಪ್ರಯಾಬಾಬತಿನದಾಗಿರಲಾರದೆಂದು ಜನಗಳಿಗೆ ಭರವಸೆವುಂಟುಮಾಡಿದರು. ದೌರ್ಭಾಗ್ಯವಶಾತ್ ಖರ್ಚುಬಾಬುಗಳು ಜಾಸ್ತಿಯಾಗುತ ಬರುತಲಿದೆಯಲ್ಲದೆ ದೇಶದ ಉತ್ಪತ್ತಿ ಅಧಿಕವಾಗುವ ಸೂಚನೆಯೊಂದೂ ಕಾಣಿಸಲಿಲ್ಲವು. ಮೊದಲು ಸಂವತ್ಸರದೊಳು ಅಂದಾಜ್ ಮಾಡಲ್ಪಟ್ಟದ್ದು ೭೦ ಲಕ್ಷ ರೂಪಾಯಿಗಳಿಗಿಂತಲೂ ಖರ್ಚು ಅಧಿಕವಾಯಿತು. ಸರ್ವಪ್ರಕಾರದಲ್ಲಿಯೂ ದೇಶವು ತೊಂದರೆಯಿಂದಲೂ ಕತ್ತಲೆಯಿಂದಲೂ ಸ್ವಾಧೀನವಾಗುವಂತೆ ತೋರಲಿಲ್ಲವು.

Occasional Notes.

ನೈಮಿತ್ತಿಕವಿಷಯನ್ಯಾಸ.

A new line of railway opened.—ಪುನೇಯಿಂದ ಕೊರಿಗಾಂಯೆಂಬ ಪ್ರದೇಶದವರಿವಿಗೆ ಹೊಸದಾಗಿ ಹಾಕಲ್ಪಡುತಲಿದ್ದ ರೈಲ್ ರಸ್ತೆಯ ಕಾಮಗಾರಿ ಪೂರ್ಣವಾಗಿ ಈಗ ಗಾಡಿಗಳು ನಡೆಸಲ್ಪಡುತಲಿವೆ.

A durbar.—ಈ ತಿಂಗಳ ೧೦ನೇ ತಾರೀಖಿನಲ್ಲಿ ರಾಜಕೋಟಯೆಂಬ ಪ್ರದೇಶದೊಳು, ಕಾಟಿವಾಡಿ ದೇಶದ ಅರಸರುಗಳನ್ನು ಬರಮಾಡಿಕೊಂಡು ಅವರಿಗೆ ಭೇಟಿ ಕೊಡುವದಕ್ಕಾಗಿಯೂ, ಭಾವನಗರದ ಠಾಕೂರ್ ಯವರಿಗೆ ನೈಟ್ ಗ್ರಾಂಡ್ ಕಮಾಂಡರ್ ಅವೆದ ಸ್ಟಾರ್ ಆಫ್ ಇಂಡಿಯಾ ಯೆಂಬ ಘನವಾದ ಪ್ರಶಸ್ತಿಯು ಒಪ್ಪಿಸುವದಕ್ಕಾಗಿಯೂ, ಮುಂಬಯಿ ಗವರ್ನರಾದ ಲಾರ್ಡ್ ರೀ ಯೆಂಬವರಿಂದ ಒಂದು ದರ್ಬಾರ್ ಮಾಡಲ್ಪಟ್ಟಿತು.

Obituary.—ಬಹುಕಾಲದಮೊದಲು ಕಲ್ಕತ್ತೆಯ ಪೆಟ್ಟಿ ಮ್ಯಾಜಿಸ್ಟ್ರೇಟಾಗಿದ್ದ ರಾಜಾ ನರೇಂದ್ರ ಕೃಷ್ಣ ಯೆಂಬವರು ಜಿಟಿ ಬೃಹಸ್ಪತಿವಾರದವಿನ ಮೃತಪಟ್ಟರು. ಈ ದೊಡ್ಡಮನುಷ್ಯರೂ ಇವರ ಶ್ರೀಮಂತರೂ ಮಾಡಿದ ಸ್ವಾಮ್ಯದ ನೌಕರಿಯು ಪರಿಭಾವಿಸಿ ಇಂಡ್ಯಾ ಗವರ್ನಮೆಂಟಿನವರು ಇವರಿಗೆ ರಾಜಾಬಹದ್ದೂರೆಂಬ ಅಭ್ಯಾಸವು ಕೊಟ್ಟಿದ್ದರು.

The Public Service Commission.—ಹಿಂದ್ವರಾಜ್ಯದ ನೌಕರಿಗಳ ವ್ಯವಸ್ಥೆಯಬಗ್ಗೆ ಯೋಜಿತವಾಗಿರುವ ಸಂಘದವರು ಪ್ರಾಯಶಃ ಈ ತಿಂಗಳ ೨೭ ಮತ್ತು ೨೮ನೇ ತಾರೀಖುಗಳಲ್ಲಿ ಲಾಹೋರಿನಿಂದ ಪ್ರಯಾಣವಾಗಿ ಅಲಹಾಬಾದಿಗೆ ಹೋಗಿ ಅಲ್ಲಿ ಹತ್ತು ದಿನಗಳಕಾಲ ಇರುವರು. ಅಲ್ಲಿಂದ ಹೊರಟು ಮದರಾಸಿಗೆ ಬಂದು ಅಲ್ಲಿನ ಕೆಲಸಗಳನ್ನೆಲ್ಲ ತೀರಿಸಿಕೊಂಡು ಮುಂಬೈ ಮತ್ತು ನಾಗಪುರಿಗೆ ಹೋಗಿ ಕ್ರಮೇಣ ಕಲ್ಕತ್ತೆಗೆ ಸೇರುವರು.

The railway line from Goa to Bombay.—ಮುಂಬೈಯಿಂದ ಗೋವಾ ವರಿವಿಗೆ ಹಾಕಲ್ಪಡುತಲಿರುವ ರೈಲ್ ರಸ್ತೆಯ ಕಾಮಗಾರಿ ಪೂರ್ತಿಯಾಗಿ ಬರುವ ಜನವರಿ ೧೫ನೇ ತಾರೀಖಿನಲ್ಲಿ ಪ್ರಯಾಣಸ್ಥರ ಗಾಡಿ ನಡೆಸಲ್ಪಡುವವು. ಮುಂಬೈಯಿಂದ ಗೋವಾವಿಗೆ ಚಾರ್ಜ ೧ನೇ ತರಗತಿ ಯವರಿಗೆ ರೂ|| ೨೫, ೨ನೇ ತರಗತಿಗೆ ರೂ|| ೧೨ ೩ನೇ ತರಗತಿಗೆ ರೂ|| ೬. ಸದ್ಯಃ ಮೂವತ್ತು ಘಂಟೆಯಕಾಲದ ಪ್ರಯಾಣ, ಪರಂತು ಮಧ್ಯಮಾರ್ಗಗಳಲ್ಲಿನ ಪ್ರತಿಬಂಧಕಗಳೆಲ್ಲ ನಿವೃತ್ತಿಯಾದಮೇಲೆ ೨೪ ಘಂಟೆಯಕಾಲದ ಪ್ರಯಾಣ.

A donation.—ಬಾವನಗರದ ಮಹಾರಾಜರವರು, ಲಾಹೋರಿನಲ್ಲಿ ಹೆಂಗಸರ ಉಪಯೋಗಾರ್ಥ ಲೇಡೀ ಎಚ್ಚಿಸನ್‌ಯವರಿಂದ ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ವೈದ್ಯಶಾಲೆಯ ಸಹಾಯಾರ್ಥ ೨,೦೦೦ ರೂಪಾಯಿಗಳು ಕಳುಹಿಸಿಕೊಟ್ಟದ್ದಲ್ಲದೆ ಲೆಫ್ಟನೆಂಟ ಗವರ್ನರವರು ಈಚೆಗೆ ಕಾಹಿಲೇಯಾಗಿದ್ದು ಅವರಿಗೆ ಆರೋಗ್ಯವುಂಟಾದ ಬಗ್ಗೆ ಪ್ರಾರ್ಥನಾರೂಪವಾಗಿ ಸದರೀ ಶಾಲೆಗೆ ಮರಳಿ ೧,೦೦೦ ರೂಪಾಯಿಗಳು ಕೊಟ್ಟಿರುತ್ತಾರೆ.

LOCAL AND PROVINCIAL NEWS.

ಒಳದೇಶಮತ್ತು ತಾಲ್ಲೂಕಿನ ವೃತ್ತಾಂತಗಳು.

The Poona Engineering College.—ಪುನೇ ಇಂಜಿನಿಯರಿಂಗ್ ಕಾಲೇಜಿನಲ್ಲಿ ಓದುವಬಗ್ಗೆ ಈ ದೇಶದಿಂದ ಹೋಗಿದ್ದ ವಿದ್ಯಾರ್ಥಿಗಳ ಪೈಕಿ ಇವರಡಿ ಕಂಡವರು ಪೇರ್ಗ್ ... ಮಾಡಿದರೆಂದು ತಿಳಿಯಲಾದೆವು. ನರಸಿಂಹಯ್ಯಂಗಾರ್, ಅಣ್ಣಾಜಿರಾವ್, ನೆಲ್ಲೂರು ರಾಮರಾವ್, ಕೃಷ್ಣಯ್ಯಂಗಾರ್, ಕರ್ಪೂರ ಶ್ರೀನಿವಾಸರಾವ್, ಕಾಮಹಳ್ಳಿ ಕೃಷ್ಣಯ್ಯಂಗಾರ್, ನವರತ್ನ ರಾಮರಾವ್, ನೂಜಿವಿನಕೆರೆ ರಾಮಸ್ವಾಮಯ್ಯಂಗಾರ್.

The University Examinations.—ಈ ಸಲ ಮದರಾಸ್ ಯೂನಿವರ್ಸಿಟಿಯು ಮಟ್ರಿಕ್ಯುಲೇಷನ್ ಎಫ್. ಎ. ಪರೀಕ್ಷೆಗಳು ಗತ ಬುಧವಾರದವಿನ ಪ್ರಾರಂಭವಾಗಿ ಈ ದಿನ ಪೂರೈಸುವವು. ಈ ಸಲ ಪ್ರಶ್ನೆಪತ್ರಿಕೆಗಳಲ್ಲಿ ಕೆಲವುವಿದ್ಯಾರ್ಥಿಕ್ಕವೆಲ್ಲವೂ ವಿದ್ಯಾರ್ಥಿಗಳ ಯೋಗ್ಯತಾನುಗುಣವಾದವಾಗಿಯೇಯಿದ್ದವು ತತ್ರಾಪಿ ಕನ್ನಡಪತ್ರಿಕೆಯು ಬಹಳ ಕಠಿಣವಲ್ಲದೆಯೂ, ಕೇವಲ ಸುಲಭವಲ್ಲದೆಯೂ ಸಾಧಾರಣವಾಗಿತ್ತು. ಅರವ ತೆಲುಗು ಪತ್ರಿಕೆಗಳು ಸಹ ಸುಲಭವಾದವೆಂತಲೇ ಹೇಳಬಹುದು. ಎಫ್. ಎ. ಪರೀಕ್ಷೆಗೆ ಸೆಂಟ್ರಲ್ ಕಾಲೇಜಿನಿಂದ ಬಹುಮಂದಿ ಹೋಗಿದ್ದಾರೆ. ಈ ಸಲ ಸೆಂಟ್ರಲ್ ಕಾಲೇಜಿನಲ್ಲಿ ಸ್ಥಳಸಾಲದೇ ಎಫ್. ಎ. ಪರೀಕ್ಷೆಯು ಲಂಡನ್‌ಮಿಷನ್ ಸ್ಕೂಲ್ ಹಾಲಿನೊಳು ಜರಿಗಿತು. ಮೆ|| ಕೂಕ್ ಯವರ ವಿಚಾರಣಾಕ್ರಮದೊಳು ಪರೀಕ್ಷೆಗಳು ವ್ಯವಹಾರಗಳೊಂದೂ ಇಲ್ಲದೆ ಕ್ಷಾಂತಿಯಿಂದವಂತಲೇ ಹೇಳಬಹುದಾಗಿದೆ.

Prosecution.—ಈ ಡಿಸ್ಟ್ರಿಕ್ಟಿನ ತಾಲ್ಲೂಕು ಇನ್ಸ್ಪೆಕ್ಟರಗಳಪೈಕಿಯೊಬ್ಬರು, ಅವರು ಮೊದಲಿದ್ದ ಸ್ಥಳದಲ್ಲಿ ಒಬ್ಬ ಅಕ್ಕಸಾಲಿಗರನ ಮೇರೆ ಭಂಗಾರದಮುಟ್ಟಿಯನ್ನೂ ಕಳವುಮಾಡಿ ಅಂಗಶೋಧನೆಮಾಡುವಕಾಲದಲ್ಲಿ ಸದರೀಮುಟ್ಟಿಯನ್ನು ನುಂಗಿದನೆಂದು ವಗೈರೆ ಚಾರ್ಜುಮಾಡಿದ್ದ ಮೊಕದ್ದಮೆಯನ್ನು ಮ್ಯಾಜಿಸ್ಟ್ರೇಟರು ದರ್ಯಾಪ್ತುಮಾಡಿ ಅವನನ್ನು ಖುಲಾಸೆಮಾಡಿದರೆಂತಲೂ, ಸದರೀಮೊಕದ್ದಮೆಯ ಅಪರಾಧಿಯು, ತನ್ನಮೇಲೆ ಇನ್ಸ್ಪೆಕ್ಟರು ಬನಾವಣೆಮೊಕದ್ದಮೆಯನ್ನು ತಂದರೆಂತಲೂ ಅದಕ್ಕಾಗಿ ಅವರಮೇಲೆ ಪ್ರಾಸಿಕ್ಯೂಷನ್ ನಡಿಸಲಿಕ್ಕೆ ಹುಕುಂ ಆಗಬೇಕೆಂತಲೂ, ಜೇಲಕೋರ್ಟಿಗೆ ಅರ್ಜಿ ಕೊಟ್ಟದರ ಮೇಲೆ ಅವರು ಮೊಕದ್ದಮೆಯ ಹಿಂದಿನ ರಿಕಾರ್ಡುಗಳನ್ನು ತರಿಸಿನೋಡಿ ಇನ್ಸ್ಪೆಕ್ಟರಿಗೆ ನೋಟಿಸ್ ಮೂಲಕ ಪ್ರಾಸಿಕ್ಯೂಷನ್‌ಮಾಡದೆ ಇರಲಿಕ್ಕೆ ಕಾರಣವನ್ನು ತೋರಿಸಬೇಕೆಂದು ತಿಳಿಸಿದರೆಂದು ತಿಳಿಯಬರುತಿದೆ.

Suspension.—ಇಲ್ಲಿನ ಟೌನ್ ಪೊಲೀಸ್ ಇನ್ಸ್ಪೆಕ್ಟರಾದ ಮೆ|| ಸಾಲಾರ್‌ಖಾನರು ಸಾಬಕ್ ಈ ಪ್ರೂರು ರಾಣೀಸಿಂಗ ಕೆಡಿಟಿಯಲ್ಲಿರುವ ಪುರ್ಣಾಷೀ ಶೇಕ್ ಅಹಮದ್ ಯೆಂಬಾತನಮೇಲೆ ತರಲ್ಪಟ್ಟದ್ದ ಖೂನಿಮೊಕದ್ದಮೆಯಲ್ಲಿ ನಡಿಸಿದ ಅಕ್ರಮದಿಯೇ ಅಪರಾಧಿಯ ಖುಲಾಸೆಗೆ ಕಾರಣವಾಯಿತೆಂಬ ಸಬಬಿನಮೇಲೆ ಐದಾರು ತಿಂಗಳು ಕಳೆದಬಳಿಕ ಈಗ ಇನ್ಸ್ಪೆಕ್ಟರ್ ಜನರಲ್ಲವರು ಅವರನ್ನು ಸಸ್‌ಪೆಂಡ್‌ಮಾಡಿ, ಅವರಿಗೆ ಬದಲು ಮೈಸೂರು ಟೌನ್ ಹೆಡ್ ಇನ್ಸ್ಪೆಕ್ಟರ್ ಮೆ|| ಹಾರ್ವಿ ಯೆಂಬವರನ್ನೂ ಅವರ ಕೆಲಸಕ್ಕೆ ಇಲ್ಲಿನ ಡಿಟೆಕ್ಟಿವ್ ಪೊಲೀಸ್ ಇನ್ಸ್ಪೆಕ್ಟರಾದ ಮೆ|| ಬ್ಯಾಲಾರ್ಡ್‌ಯವರನ್ನೂ ಹುಂಗಾಮಿಯಾಗಿ ಮೊಕರರ್ಮಾಡಿರುತ್ತಾರೆಂದು ತಿಳಿಯಲಾದೆವು. ಈ ಮೊಕದ್ದಮೆಯಲ್ಲಿ ಮೆ|| ಸಾಲಾರ್‌ಖಾನರು ಮೊದಲು ನಡೆಸಬೇಕಾಗಿದ್ದ ಕ್ರಮಗಳಲ್ಲಿ ಸ್ವಲ್ಪವೂ ಕೊರತೆಮಾಡದೆ ತಮ್ಮ ಕರ್ತವ್ಯವನ್ನು ನೆರವೇರಿಸಿದರೆಂದು ಕೇಳುತ್ತೇವೆ.

Attempt at murder.—ನಿನ್ನೆಯದಿನ ಬೆಳಗ್ಗೆ ಏಳುಮುಕ್ಕಾಲ್ ಘಂಟೆಯ ಸಮಯದಲ್ಲಿ ಈ ಊರಿಗೆ ಸಮೀಪದೊಳಿರುವ ಒಂದು ಗ್ರಾಮದಲ್ಲಿರುವ ಒಬ್ಬ ಹೆಂಗಸು ಬೆರಣಿಮಾರಿಕೊಂಡು ಮನೆಗೆ ವಾಪಸ್ ಹೋಗುತಲಿರುವಾಗ್ಯೆ ಪಾಟರ್ ಷಾಪ್ ಜೆಕ್ಟನಬಳಿ ಒಬ್ಬ ಯೂರೋಪಿಯನ್ ಸೋಲ್ಜರನು ಅವಳಮೇಲೆಬಿದ್ದು ಜುಲುಂಮಾಡಲೆತ್ನಿಸಲು ಅದನ್ನು ನೋಡುತಲಿದ್ದ ಚಕ್ಕಸಂದ್ರ ಗ್ರಾಮದ ಒಬ್ಬ ರೈತನು ಅವಳನ್ನು ಬಿಡಿಸಲಿಕ್ಕೆ ಹೋಗುವಲ್ಲಿ ಅವನನ್ನು ಸದರೀ ಸೋಲ್ಜರ್ ತನ್ನ ಸನಿಯರ್ನಿಂದ ತಿವಿಯಲು, ಅವನು ಮೂರ್ಛಿತನಾಗಿ ನೆಲದಮೇಲೆಬಿದ್ದನು. ಇಷ್ಟರಲ್ಲಿ ಇನ್ನಿಬ್ಬರು ಬಂದು ಸೋಲ್ಜರನ್ನು ಹಿಡಿಯಲಿಕ್ಕೆ ಹೋದಾಗ ಅವನು ತನ್ನ ಟೋಪಿಯನ್ನು ಎಸೆದು ತನ್ನ ರಿಜಿಮೆಂಟಿಕಡೆ ಓಡಿಹೋದನು. ಜಖಮಾದ ಮನುಷ್ಯನು ಈಗ ಆಸ್ಪತ್ರೆಯಲ್ಲಿ ಅಪಾಯಸ್ಥಿತಿಯೊಳಿರುವಂತೆ ಕೇಳುತ್ತೇವೆ. ಈಗ ದೊರೆತಿರುವ ಟೋಪಿಯ ನಂಬರ್‌ದಿನಿಂದ ಸೋಲ್ಜರನ್ನು ಪತ್ತೇಮಾಡಿ ಘಾತನೆಗೊಳಪಡಿಸಬಹುದಾಗಿರುವದರಿಂದ ಇದು ಶೀಘ್ರದಲ್ಲಿ ಫೈಸಲ್ಯಾಗಬಹುದೆಂದು ನಂಬುತ್ತೇವೆ. ವೈಯಾಳಿಕಾವಲದ ಬಳಿ ಮೊಕ್ಕಾಂ ಮಾಡಿರುವ ರಿಜಿಮೆಂಟಿನ ಸೋಲ್ಜರ್‌ಗಳು ಆ ಮಾರ್ಗದಲ್ಲಿಯೂ ಆಸಪಾಸಿನಲ್ಲಿಯೂ ಸಂಚಾರಮಾಡತಕ್ಕ ಹಿಂದೂ ಸ್ತ್ರೀಯರ ವಿಷಯದಲ್ಲಿ ಮಾಡತಕ್ಕ ಜುಲುಂಗಳು ದುಸ್ಸಹವಾದದ್ದಾಗಿರುವದರಿಂದ ಅಲ್ಲಿನ ಬಂದೋಬಸ್ತಿಯಬಗ್ಗೆ ಮಿಲಿಟರಿ ಅಧಿಕಾರಿಗಳು ತಕ್ಕ ಏರ್ಪಾಟು ಮಾಡಬೇಕಲ್ಲದೆ ಮೈಸೂರು ಸರ್ಕಾರದವರು ಅಲ್ಲಿಂಯ ಪೊಲೀಸ್ ಸ್ಟೇಷನ್ನೇರ್ಪಡಿಸಿ ಕ್ರಮವಾದ ಶಿಬ್ಬಂದಿಗಳನ್ನು ಮೊಕರರ್ಮಾಡಬೇಕಾದ್ದು ಬಹಳ ಆವಶ್ಯಕವಾಗಿರುತಿದೆ.

CORRESPONDENTS.

ಮಹಾರಾಜಶ್ರೀ ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸಮಕ್ಷಮಕ್ಕೆ.

ಅಯ್ಯಾ, ಪ್ರಿಯಮಿತ್ರರೆ! ಗುಣೈಕಪಕ್ಷಪಾತವನ್ನುಳ್ಳ ತಮ್ಮ ಪತ್ರಿಕೆಯಲ್ಲಿ ಸ್ವಲ್ಪ ಅವಕಾಶವಂ ಕೊಡಿಸಿದರೆ, ನಮ್ಮ ಭವಿಷ್ಯತ್ಪತ್ರಿಕೆಗೆ ಚಂದಾದಾರರಾಗಬಹುದಾದ ನಮ್ಮ ಮಿತ್ರರೊಬ್ಬರು ತಮ್ಮ ನಿನ್ನೆಯವಾರದಪತ್ರಿಕಾಮುಖೇನ ಮಾಡಿರುವ ಅಸಾಧಾರಣವಾದ ಪ್ರಶ್ನೆಗೆ ಉತ್ತರವನ್ನು ಬರೆಯುವೆನು.

ಅಯ್ಯಾ, ಪ್ರೋತ್ಸಾಹಿ ಶಿರಾಮಣಿಗಳೆ! ನಮ್ಮ ಪ್ರಸಿದ್ಧಪತ್ರಿಕೆಯ ದೆಸೆಯಿಂದ ತಮಗುಂಟಾಗಿರುವ ಸಂಶಯ ನಿವಾರಣಾರ್ಥವಾಗಿ, ತಾವು ಮಾಡಿರುವ ಪ್ರಶ್ನೆಗೆ ಡಿಸಂಬರ್ ೬ನೇ ಮಂಗಳವಾರದ ಇದೇ ಪತ್ರಿಕೆಯಲ್ಲಿ ಸದುತ್ತರವು ಬರೆಯಲ್ಪಟ್ಟಿರುವದರಿಂದ, ತಾವು ನಮ್ಮಲ್ಲಿ ಅಭಿಮಾನವಿಟ್ಟು ಅದನ್ನೇ ತಿರಿಗಿ ಪರಾಮರಿಸಬೇಕೆಂದು ಕೋರುವೆವು.

ಎತ್ತೀಕರ ಜೀವಮಾನದವರಿವಿಗೂ, ಪತ್ರಿಕೆಯು ಕಳುಹಿಸಿ ಕೊಡಲಾಗುವದೆಂದು ವಾಗ್ದಾನ ಮಾಡತಕ್ಕದ್ದೂ ಕೂಡ ಅಸಾಧ್ಯವಾಗಿ ಕ್ಷಮಿಸುವಂತೆ ಕಾಣಬರುತಲಿರುವಲ್ಲಿ, ಪ್ರೋತ್ಸಾಹಕರ ಮುಖ ಪಾರುಪತ್ಯವಾಗಿ ಕೊಡುವೆವೆಂದು ವಾಗ್ದಾನ ಮಾಡುವದು ಮನುಷ್ಯರಿಗೆ ಅಸಾಧ್ಯವೆಂಬ ಅಂಶವು ತಮ್ಮ ಆಲೋಚನೆಗೆ ಬಾರದೆ ಹೋದದಕ್ಕಾಗಿ ಕೇವಲ ಪಶ್ಚಾತ್ತಾಪ ಪಡಬೇಕಾಗಿದೆ. ಒಬ್ಬ ಮನುಷ್ಯನು ಹೊಸದಾಗಿ ಒಂದು ಕಾರ್ಯವನ್ನು ಯತ್ನಮಾಡಿದರೆ, ಆ ಕೆಲಸದಲ್ಲಿ ಆತನಿಗಿರುವಷ್ಟು ಮುತವರ್ಜಿಯು ಮತ್ತೊಬ್ಬನಿಗೆ ಉಂಟಾಗಲಾರದೆಂಬ ಅಂಶವು ತಮಗೂ ಗೊತ್ತೇ ಇದೆಯಷ್ಟೆ. ಹೀಗಿರುವಲ್ಲಿ ಎತ್ತೀಕರಾದ ನಮ್ಮ ಜೀವಮಾನಾನಂತರ ಸದರೀ ಪತ್ರಿಕೆಯು ತಮಗೆ ಕಳುಹಿಸಲ್ಪಡಲಾಗುವದೆಂಬ ಅಂಶವನ್ನು ತಾವು ಹ್ಯಾಗೆತಾನೆ ಯೋಚಿಸಬಹುದು. ನಮ್ಮಗಳ ಸರ್ವಪ್ರಯತ್ನದಿಂದಲೂ ನಮ್ಮಗಳ ಜೀವಮಾನಗಳ ವರಿವಿಗೂ ಸದರೀ ಪತ್ರಿಕೆಯನ್ನು ನಿರ್ವಿಘ್ನವಾಗಿ ನಡೆಸಿಕೊಂಡು ಬರಬೇಕೆಂದಿರುವ ನಮ್ಮ ಅಭಿಪ್ರಾಯವನ್ನು

ಪ್ರೋತ್ಸಾಹಿಸತಕ್ಕ ಶಕ್ತಿಯು ಶ್ರೀಮನ್ನಾರಾಯಣನಲ್ಲಿ ಸೇರಿದೆ.

ಈಗಿನ ಕಾಲದಲ್ಲಿ ನೂತನವಾಗಿ ಯತ್ನಮಾಡಲ್ಪಡುವ ಕಾರ್ಯವು ಯತ್ನೀಕರ ಜೀವಮಾನದವರಿವಿಗೂ ನಿರ್ವಿಘ್ನವಾಗಿ ನಡೆದರೆ ಸಾಕಾಗಿರುತದೆ. ಮೂಲಧನಕ್ಕೆ ಸಹಾಯಮಾಡುವ ಮಹಾನುಭಾವರಿಗೆ ಎಂದೆಂದಿಗೂ ಪತ್ರಿಕೆಯು ಉಚಿತವಾಗಿ ಕಳುಹಿಸಲಾಗುವದೆಂಬ ವಾಗ್ದಾನ ಮಾಡಿರುವದು ನಿಜ. ಅದಕ್ಕೆ ಸಂದೇಹವಿಲ್ಲ. ನಮ್ಮ ಕಾಲಾನಂತರ ನಮ್ಮ ಹಿಂಬಾಲಕರು ನಮ್ಮಗಳಂತೆಯೇ ಸ್ವದೇಶ ವಾತ್ಸಲ್ಯಕ್ಕೆ ಕಟ್ಟುಬಿದ್ದು ನಾವು ಮಾಡಿರುವ ಪ್ರಯತ್ನವನ್ನ ತಮ್ಮದೆಂದು ಭಾವಿಸುತ, ಅದಕ್ಕೆ ಕುಂದಕ ವುಂಟಾಗದಂತೆ ಸ್ಥಿರಬುದ್ಧಿಯಿಂದ ನಿಂತು ನೆರವೇರಿಸುತಬಂದರೆ ನಾವು ಧನ್ಯರೇ ಆದೆವು. ಅಯ್ಯೊ! ನಾವು ಮಾಡಿರುವ ಪ್ರಯತ್ನವನ್ನೇ ಸಾಂಗವಾಗಿ ನೆರವೇರಿಸುವಂತೆ ನಿಲ್ಲುವ ನಮ್ಮ ಹಿಂಬಾಲಕರು ನಮ್ಮ ಪ್ರತಿಜ್ಞೆಗಳನ್ನು ನೆರವೇರಿಸದಿರುವರೆ? ಅದು ಹಾಗಿರಲಿ, ಭವಿಷ್ಯದ್ವಿಚಾರವಿನ್ಯಾಸದಿಂದ ಈಗ ಫಲವಿಲ್ಲ. ಸ್ವದೇಶೀಯರೆಲ್ಲರೂ, ದೇಶಾಭಿಮಾನಕ್ಕೆ ಬದ್ಧರಾಗಿ, ನೂತನಕಾರ್ಯ ಪ್ರೋತ್ಸಾಹಕರಾಗುವದರ ದ್ವಾರಾ ನಮಗೆ ಸಹಾಯವ ಮಾಡಿದರೆ ನಮ್ಮ ಜೀವಮಾನದ ವರಿವಿಗೂ ಪತ್ರಿಕೆಯನ್ನು ನಿರ್ವಿಘ್ನವಾಗಿ ನೆರವೇರಿಸುವದಕ್ಕೆ ಯಾವ ಅಭ್ಯಂತರವೂ ಇಲ್ಲ, ಅದುವರಿವಿಗೂ ತಮ್ಮಂತಾ ಪ್ರೋತ್ಸಾಹಕರುಗಳಿಗೆ ಪತ್ರಿಕೆಯು ಕೃತಜ್ಞತಾ ಪೂರ್ವಕವಾಗಿ ಉಚಿತವಾಗಿಯೇ ಕಳುಹಿಸಿ ಕೊಡುವದರಲ್ಲಿಯೂ ಸಂದೇಹವಿಲ್ಲ. ಹಾಗಲ್ಲದೆ ದೇಶ ವಾತ್ಸಲ್ಯಕ್ಕೆ ಈಗ ಮೊದಲಾಡುತಲಿರುವ ನಮ್ಮ ಪ್ರಿಯ ಮಿತ್ರರಾದ ಕರ್ಣಾಟಕ ಪ್ರಕಾಶಿಕಾ ಎಡಿಟರವರಿಗೆ ತೋರಿಸುತ್ತಾ ಬರುತಲಿರುವ ಪ್ರೋತ್ಸಾಹವನ್ನೇ ನಮಗೂ ತೋರಿಸುತ್ತಾ ಬಂದಲ್ಲಿ "ಎಂದೆಂದಿಗೂ" ಎಂಬ ಪದಕ್ಕೆ ಪತ್ರಿಕೆಯು ನಡೆಯುವವರಿವಿಗೆ ಎಂಬ ಅರ್ಥಮಾತ್ರವನ್ನೇ ಮಾಡಿಕೊಳ್ಳಬೇಕಲ್ಲವೆ?

ಮಿತ್ರರೆ! ನಮ್ಮ ಪ್ರಯತ್ನಗಳೆಲ್ಲವೂ ನಿರರ್ಥಕಗಳಾಗಿ ಸ್ವದೇಶೀಯರ ಸಹಾಯ ಸಂಪತ್ತಿಯು ಸಾಲದೆ ಅಲ್ಪಕಾಲದಲ್ಲಿಯೇ ಪತ್ರಿಕೆಯು ನಿಂತುಹೋಗುವದಾಗಿದ್ದ ಪಕ್ಷದಲ್ಲಿ ಮಹಾ ೧ಕ್ಕೆ ಸ್ಥಳದವರಿಗೆ ೧ರೂಪಾಯಿನಂತೆಯೂ, ಪರಸ್ಥಳದವರಿಗೆ ೨ ರೂಪಾಯಿನಂತೆಯೂ ನಡೆದಷ್ಟು ದಿವಸಕ್ಕೆ ವಜಾ ಜಾತಾ ನಿಂತ ಮೊಬಲಗು ವಾಪಸ್ಸು ಮಾಡತಕ್ಕದ್ದೆಂದು ಈಚೆಗೆ ನಡೆದ ಮಿಟಿಂಗಿನಲ್ಲಿ ನಿಶ್ಚೈಸಲ್ಪಟ್ಟಿರುವದು. ನಮ್ಮ ದೇಶೀಯರಲ್ಲಿ ಅನೇಕರು ದೇಶಾಂತ್ರಿಗಳು ಪತ್ರಿಕೆಯ ಬಳಿಗೆ ವಿಚಾರಶೂನ್ಯರಾಗಿ ಅದ್ಯಾಪಿ ನುಗ್ಗಿರುವಾಗ್ಯೂ ಸ್ವದೇಶೀಯರು ಮಾಡುವ ಪ್ರಯತ್ನಕ್ಕೆ ಸಹಾಯ ಮಾಡತಕ್ಕದ್ದು ತಮಗೆ ಸಹಜ ಧರ್ಮವೆಂದು ಭಾವಿಸದೆ, ಕಾಕ್ಹಿಕ ಪ್ರಶ್ನೆಗಳನ್ನು ಮಾಡುವದರದ್ವಾರಾ ಮುಂದಾಗಿ ಬಂದು ನಮಗೆ ಆಶ್ಚರ್ಯವನ್ನು ಕಲ್ಪಿಸಲಿಚ್ಛಿಸುವವರಲ್ಲಿ ಆಸಕ್ತಿಯು ಹೋಗಿರುವದಕ್ಕಾದರೂ ನಾವು ಸಂತೋಷಿಸಬೇಕಾಗಿದೆ. ಅಯ್ಯಾ, ಮಿತ್ರರೆ, ತಮ್ಮ ಹೆಸರೇನು? ತಮ್ಮ ಸ್ಥಳವು ಯಾವದು? ಪತ್ರಿಕೆಯಲ್ಲಿ ಅವುಗಳನ್ನು ಕೊಡುವದಕ್ಕೆ ಹಿಂದುಳಿದ ಕಾರಣವೇನೋ ಅದನ್ನು ಕುರಿತು ಎಷ್ಟು ಯೋಚಿಸಿದಾಗ್ಯೂ ನಮಗೆ ಗೊತ್ತಾಗಲಿಲ್ಲವು. ತಾವು ಮಾಡಿದ ಪ್ರಶ್ನೆಗಳಿಗೆ ಸ್ವಲ್ಪವೂ ಆಗ್ರಹವಿಲ್ಲ. ಆದರೆ ಮ|| ರೋಡ್ಯಾನೆ ಯವರು ಕೊಟ್ಟ ಪ್ರಕಟನ ಪತ್ರಿಕೆಯಮೇಲೆ ಮೊಬಲಗನ್ನು ರವಾನಿಸಿ ಕೊಡುವಾಗ ಯಾತಕ್ಕೆ ಇಷ್ಟು ಯೋಚನೆ ಮಾಡಲಿಲ್ಲವೆಂಬ ಅದನ್ನು ತಿಳಿಯ ಕೇಳಬೇಕೆಂಬ ಕುತೂಹಲವು ನಮಗೆ ಬಹಳವಾಗಿ ಅಂಟಕೊಂಡಿದೆ. ಒಬ್ಬನೇ ಒಂದು ಕೆಲಸವನ್ನು ಹಿಡಿದರೆ ಆತನಿಗೆ ಅದು ಅತ್ಯಂತ ಶ್ರಮ ಸಾಧ್ಯವಾಗಿ ಪರಿಣಮಿಸುವದಷ್ಟು ನಾಲ್ಕು ಜನರು ಸೇರಿದರೆ ಮತ್ತಷ್ಟು ಸುಲಭವಾಗಿ ನೆರವೇರಿಸಬಹುದು. ನೂರಾರು ಜನರು ಸೇರಿ ನಿರಾಯಾಸದಿಂದ ಸಾಂಗವಾಗಿ ನೆರವೇರಿಸುತಬ ಅಂಶವನ್ನು ನಾವು ತಿಳಿಸಲು ಆವಶ್ಯಕವಿಲ್ಲ. ನಾವು ಮಾಡಿರುವ ಪ್ರಯತ್ನವು ಒಬ್ಬರಿಂದ ಆಗತಕ್ಕದ್ದಲ್ಲ. ದೇಶಾಭಿಮಾನಿಗಳೆಲ್ಲರೂ ಒಂದೇ ಮನಸ್ಸನ್ನು ಮಾಡಿ ಸಹಾಯಕರಾಗಿ ನಿಂತು ರಾಜಧಾನಿಯಲ್ಲಿ ಹೊಸದಾಗಿ ಹೊರಡಿಸಬೇಕೆಂದಿರುವ ನಮಗೂ, ಉಪರಾಜಧಾನಿಯಾದ ಬೆಂಗಳೂರಿನಲ್ಲಿ ಹೊರಡಿಸುತಲಿರುವ ನಮ್ಮ ಪ್ರಿಯ ಮಿತ್ರರಾದ ಕರ್ಣಾಟಕ ಪ್ರಕಾಶಿಕಾ ಎಡಿಟರವರಿಗೂ ಸಹಾಯ ಮಾಡುತ ಬಂದರೆ ಅದರಿಂದುಂಟಾಗುವ ಫಲಾ ಫಲಗಳು ಕಾಲಾನಂತರ ಅನುಭವಕ್ಕೆಬಾರದೇಹೋಗಲಾರವು.

ಮೈಸೂರು.
ತಾ|| ೧೮—೧೨—೮೬

P. Soobba Row,
ಮ್ಯಾನೇಜರ್
ಮೈಸೂರು ವೃತ್ತಾಂತ ದರ್ಪಣ

SUMMARY OF NEWS
ವೃತ್ತಾಂತ ಸಂಗ್ರಹವು.

ಅದ್ಭುತಾಕಾರ ಪ್ರತಿಮೆ—ಕಾಬೂಲ್ ಮತ್ತು ಬಲ್ಖ ಇವುಗಳ ನಡುವೆ ಮಾರ್ಗದ ಮೇಲೆ ೧೭೩ ಪೂಟ ಎತ್ತರವಾದ ಬೌದ್ಧಮತಸ್ಥಾಪಕನಾದ ಬುದ್ಧನ ಪ್ರತಿಮೆಯು ಇದುವರಿಗೂ ಇರುತದೆಂತ ಇಂಡಿಯನ್ ಡೇಲಿ ನ್ಯೂಸ್ ಪತ್ರಕರ್ತರು ಬರೆಯುತ್ತಾರೆ.

ಹಿಂದುಸ್ಥಾನದ ಆದಾಯಕ್ಕಿಂತಲೂ ವೆಚ್ಚವೇ ಹೆಚ್ಚಾಗಿರುತದೆಂಬದಕ್ಕೋಸ್ಕರ ಅತಿ ತ್ವರ ಖರ್ಚು ಕಡಮೆ ಮಾಡುವ ವಿಚಾರ ನಡೆದಿದೆಯಷ್ಟೆ. ಆದರೆ ಈಗ ಸಿವಿಲ್ ಸರ್ವೆಂಟರಲ್ಲದ ಮೇಲುದ್ಯೋಗಸ್ಥರು (ಅನ್‌ಕವೆನಾಂಟೆಡ್ ಸಿವಿಲ್ ಸರ್ವಿಸ್) ಸಿವಿಲ್ ಇಂಜನಿಯರೂ, ಲಷ್ಕರ್ ಖಾತೆಯುವರಲ್ಲದ ಬೇರೆ ದೊಡ್ಡ ಉದ್ಯೋಗಸ್ಥರೂ ಕೂಡಿ, ಸಿವಿಲ್ ಸರ್ವೆಂಟರಿಗೆ ಸಂಬಳ, ಪೆನಷನ್ ಮುಂತಾದ ಯಾವ ತರದ ಹಕ್ಕುಗಳಿರುತವೋ ಅದೇತರದ ಹಕ್ಕುಗಳು ತಮಗೂ ಇರಬೇಕೆಂಬದಾಗಿ ಪಾರ್ಲಿಮೆಂಟನಲ್ಲಿ ಗುದ್ದಾದಲಿಕ್ಕೆ ಪ್ರಯತ್ನ ನಡೆಸುತ್ತಾರೆಂತ ಕೇಳುತ್ತೇವೆ. ಸರ್ಕಾರದವರು ಅವರು ಬೇಡುವ ಹಕ್ಕುಗಳನ್ನು ಕೊಟ್ಟರೆ ಹಿಂದುಸ್ಥಾನದಮೇಲೆ ಇದೊಂದು ಭಾರವಾದ ಹೊರೆಯನ್ನು ಹೊರಿಸಿದಂತಾಗುವದೆಂದು ಹಿಂದುಸ್ಥಾನದ ಕಲ್ಯಾಣವನ್ನಿಚ್ಛಿಸುವ ಪ್ರತಿಒಬ್ಬನೂ ಸಹ ಹೇಳಬಹುದು. ಸರ್ಕಾರದವರು ಅವರ ಅರ್ಜಿಗೆ ಕಿವಿ ಕೊಟ್ಟರೆ ಒಂದು ಪಾಲು ಖರ್ಚು ಕಡಿಮೆಮಾಡಿ ಎರಡುಪಾಲು ಖರ್ಚು ಹೆಚ್ಚುಮಾಡಿದಂತೆ ಮಾತ್ರ ಆಯಿತಲ್ಲದೆ ಹಿಂದುಸ್ಥಾನದ ರೈತರ ಕಲ್ಯಾಣ ಮಾಡಿದಂತೆಯೂ ತಮಗೆ ಆದಾಯ ಮಾಡಿಕೊಂಡಂತೆಯೂ ಆದೀತೆಂತ ನಾವು ಹೇಳಲಾರೆವು. ಆದ್ದರಿಂದ ಸರ್ಕಾರದವರು ಅವರ ಅರ್ಜಿಗೆ ಲಕ್ಷ್ಯ ಕೊಟ್ಟರೆಂಬದಾಗಿ ನಾವು ತಿಳಕೊಳ್ಳುವದಿಲ್ಲ

ಬಾಣಂತಿತನದ ವಿಲಕ್ಷಣ ಚಾತುರ್ಯ—ಬಡೋದೆಯಲ್ಲಿ ಪೋರ್ವಾಡಿ ದೇವಾಲಯದ ಹತ್ತಿರ ಇರುವ ಒಬ್ಬ ಬ್ರಾಹ್ಮಣನ ಹೆಂಡತಿಯು ೧೨ ತಿಂಗಳ ವರಿಗೂ ಗರ್ಭಿಣಿಯಾಗಿ ತೋರಿಸಿಕೊಂಡಳು. ಹಾಗೂ ಅವಳಿಗೆ ಬಯಕೆ ಊಟ ಉಪಚಾರಗಳೆಲ್ಲ ಯಥಾ ಸಾಂಗವಾಗಿ ನಡೆದವು. ಎಷ್ಟು ದಿನದವರಿಗೆ ಅವಳು ಅರಿವೆಯ ಸಿಂಬೆಯನ್ನು ಕಟ್ಟಿಕೊಂಡು ಕೃತ್ರಿಮ ಬಸುರಿನ ಹೊಟ್ಟೆ ಬೆಳಸಿಕೊಂಡು ೮—೧೦ ದಿನಗಳ ಹಿಂದೆ ತನ್ನ ನೆರೆಯವನ ಹೆಂಡತಿಯು ಎಲ್ಲಿಯೋ ಹೊರಗೆಹೋದ ಸಮಯ ಸಾಧಿಸಿ ಅವಳ ಚಿಕ್ಕ ಮಗಳನ್ನು ತಂದು ಬಾಣಂತಿತನದ ಎಲ್ಲಾ ವಿಧಿಯನ್ನು ಮುಗಿಸಿ ಆ ಕೂಸನ್ನು ಬಚ್ಚಲಮನೆಯಲ್ಲಿಟ್ಟು ಒಬ್ಬ ಹುಡುಗನನ್ನು ಕರೆದು ಆ ಕೂಸಿಗೆ ಸ್ನಾನಮಾಡಿಸಲಿಕ್ಕೆ ಹೇಳಿದಳು, ಆದರೆ ಆ ಕೂಸಿನ ಕಿವಿ ಚುಚ್ಚಿದ್ದನ್ನೂ ಕೈಗೆ ಬಳೆಗಳಿರುವದನ್ನೂ ನೋಡಿ ಅವಳು ಅಲ್ಲಿಂದ ಓಡಿಹೋದಳು. ಇಷ್ಟೆಲ್ಲ ಆಗುವದರೊಳಗೆ ಆ ಕೂಸಿನ ತಾಯಿಯು ಮಗಳನ್ನು ಹುಡುಕುತ್ತಾ ಹುಡುಕುತ್ತಾ ಅಲ್ಲಿಗೆಬಂದು ತನ್ನಮಗಳ ಗುರ್ತುಹಿಡಿದು ನಡೆದ ಸಂಗತಿಯನ್ನು ಪೋಲೀಸ್‌ನವರಿಗೆ ತಿಳಿಸಿದ್ದರಿಂದ ಈಗ ಆಬಾಣಂತಿಯಮೇಲೆ ಕಟ್ಲೆ ನಡೆದಿರುತ್ತದೆಂದು ತಿಳಿಯುತ್ತದೆ. ಓಮಕ್ಕಳಿಲ್ಲದ ಬಂಜೆಯರೇ! ಬಂಜೆಯೆಂಬ ಹೆಸರನ್ನು ಹೋಗಲಾಡಿಸುವದಕ್ಕೆ ಮಾಡಿದ ಈಸ್ತ್ರೀಯ ಕೃತ್ಯವನ್ನು ನೀವು ಅನುಸರಿಸಬೇಡಿರಿ. ಮಕ್ಕಳಆಶೆಗಾಗಿ ಈತರದಿಂದ ಮಾನಹಾನಿ ಮಾಡಿಕೊಳ್ಳುವದಕ್ಕಿಂತಲೂ ಬಂಜೆಯೆಂಬ ಬಿರುದೇ ನಾವಿರಪಾಲಿಗೆ ಲೇಸು.

ಹಿಂದುಸ್ಥಾನದವರಿಗೆ ಪ್ರಸ್ತುತ ಪಾರ್ಲಿಮೆಂಟ ಸಭೆಯಲ್ಲಿ ಸ್ಥಳ ದೊರಕುವದು ಅಸಾಧ್ಯವೆಂತ ಎಷ್ಟೋ ಕಾರಣಗಳಿಂದ ಕಂಡುಬಂದಿದೆಯಷ್ಟೆ. ಆದರೆ ನಾವು ನಮ್ಮ ಧೈರ್ಯ ಬಿಡದೆ ಸತ್ಯ ಪ್ರಯತ್ನವನ್ನು ತುದಿಮುಟ್ಟಿಗೆ ಮಾಡದೆ ಇರಬಾರದು. ಒಂದಲ್ಲಾ ಒಂದು ರೀತಿಯಿಂದ ಈ ನಮ್ಮ ಸಂಕಲ್ಪವನ್ನು ಸಾಧಿಸಿಕೊಳ್ಳುವ ಆಲೋಚನೆಯನ್ನು ಯಾವಾಗಲೂ ಮಾಡುತ್ತಾ ಇರಬೇಕು. ಇದುವರಿಗೆ ನಮ್ಮ ರಾಜ್ಯಕರ್ತರು ನಮಗೆ ಪಾರ್ಲಿಮೆಂಟ ಸಭೆಯಲ್ಲಿ ಸ್ಥಳ ದೊರಕ ಕೊಡದಂತೆ ಹೇಳಲಿಕ್ಕೆ ತೋರಿಸಿರುವ ಮುಖ್ಯ ಕಾರಣವು ನಮ್ಮ ಕಡಮೆ ಯೋಗ್ಯತೆಯೇ ಆಗಿರುತದೆ. ಆದರೆ ನಮ್ಮ ರಾಜ್ಯಕರ್ತರಿಗೆ ಹಿಂದುಸ್ಥಾನದವರು ಪಾರ್ಲಿಮೆಂಟನಲ್ಲಿ ಕೂಡಲಿಕ್ಕೆ ಯೋಗ್ಯರೆಂತ ಒಪ್ಪುವತನಕ ಹಿಂದುಸ್ಥಾನದ ಜನಸಂಖ್ಯೆಗೆ ಸರಿಯಾಗಿ ಹೆಚ್ಚು ಕಡಿಮೆ ಕೆಲವು ಹೊಸ ಸ್ಥಳಗಳನ್ನು ಈದೇಶದ ಪಸರಿವಲ್ಲಿ ನಿರ್ಮಿಸಿ ಅವುಗಳನ್ನು ಇಂಗ್ಲಿಷಿನವರಿಗೆ ಕೊಡುತ್ತಾ ಬರಬೇಕು. ಆದರೆ ಈ ಸ್ಥಳಗಳಿಗೆ ಎಂಬದಾಗಿ ಆರಿಸುವ ಹಕ್ಕು ಹಿಂದುಸ್ಥಾನದವರ ಕೈಯಲ್ಲಿಯೇ ಇರತಕ್ಕದ್ದು, ಹಾಗಿಯೇ ಈ ಸ್ಥಾನಗಳನ್ನು ದೊರಕಿಸಿಕೊಳ್ಳಲಿಕ್ಕೆ ಪ್ರಯತ್ನಿಸುವವರು ಹಿಂದುಸ್ಥಾನದ ಜನರಿಗೆ ಹಿತರಾಗಿ ತಾವು ಹಿಂದುಸ್ಥಾನದ ಗೋಸ್ಕರ ಏನೇನು ಮಾಡುವೆವು ಎಂಬುವ ಪ್ರಾರ್ಥಿ ವಿಶ್ವಾಸವನ್ನು ಕೊಡತಕ್ಕದ್ದು. ಈ ತರಹ ಇರುವವರಲ್ಲಿ ಬಹುಮತದಿಂದ ಯಾರನ್ನಾದರೂ ಆರಿಸಿ ಅವರನ್ನು ಹಿಂದುಸ್ಥಾನದ ಗೋಸ್ಕರವೆಂತಲೇ ಪಾರ್ಲಿಮೆಂಟ ಸಭಾಸದರಾಗಿ ನೇಮಿಸಬೇಕು. ಹೀಗಾದ್ದರಿಂದ ಹಿಂದುಸ್ಥಾನದ ವಿಷಯವಾದ ವಿವಾದ ನಡೆಯುವಾಗ ಪಾರ್ಲಿಮೆಂಟ ಸಭೆಯಲ್ಲಿ ನಮ್ಮ ಕಡೆಯ ಜನರು ನಮ್ಮ ಹಿತವನ್ನು ಕಾಪಾಡಿಸಿಕೊಳ್ಳಲಿಕ್ಕೆ ಯಾವಾಗಲೂ ಇದ್ದ ಹಾಗೆ ಆದೀತು. ಇದೇಪ್ರಕಾರ ಸ್ವಲ್ಪ ಕಾಲದ ತನಕ ನಡೆದು, ತರುವಾಯ ನಮ್ಮ ಸರ್ಕಾರದವರಿಗೆ ಹಿಂದುಸ್ಥಾನದವರು ಯೋಗ್ಯರೆಂತ ಕಂಡುಬಂದಮೇಲೆ ಆ ಸ್ಥಾನಗಳನ್ನು ಹಿಂದುಸ್ಥಾನದವರಿಗೆ ಕೊಡಬೇಕು. ಈ ರೀತಿ ಮಾಡಿದರೆ ನಮ್ಮ ರಾಜ್ಯಕರ್ತರು ನಮ್ಮ ಬಯಕೆಯನ್ನ ಪೂರ್ಣಮಾಡಿದಂತೆ ಆಗಿ ಇದರಿಂದ ನಮಗೂ ಅವರಿಗೂ ಬಹಳ ಲಾಭವಾಗುವದು.

ಆಹಾರ ನಿರ್ಣಯ

ಶ್ಲೋ|| ಮನುಜಾನಾಂ ವಲಕ್ಷಾಸ್ಯುಃ | ವಿಕಲ್ಪಕ್ಷಾಸ್ಸ್ವಲೋಪವಾಃ| ಕ್ರಿಮಿಕೀಟಾದ್ಯಸಂಖ್ಯಾಶ್ಚ | ಪಕ್ಷಿಣಸ್ಸುತ್ರಸೋದಶ | ತ್ರಿಕರ್ಲಕ್ಷಂಗವಾಶ್ವಾದಿ | ಲಕ್ಷಮೇಕಂರುಮಾನುಷಾಃ||

ಶ್ಲೋ|| ತ್ರಿಂಶಲ್ಲಕ್ಷಂ ಪಕ್ಷಾತ್ಕಾಹಾರೋ | ಮಾಂಸ್ಯ ಷೋಡಶಲಕ್ಷಕಂ | ಪಶ್ವರ್ಥಸಪ್ತಲಕ್ಷಾಂ ತೃಣಭಕ್ಷಂತ್ರಿಲಕ್ಷಕಂ | ಮೃತ್ತಿಕಾಂಚಚತುರ್ಲಕ್ಷಂ ಕಾಷ್ಟಭಕ್ಷಂತ್ರಿಲಕ್ಷಕಂ | ಮುಕ್ತಂದಂಚತುರ್ಲಕ್ಷಂ | ಅಂದಕಾದಂತ್ರಿಲಕ್ಷಕಂ | ಅಸ್ಥಿಲಕ್ಷಂಪಹಾರಂ | ಅಗ್ನಿಭಕ್ಷಂತ್ರಿಲಕ್ಷಕಂ | ಆತಪಂಚತ್ರಿಲಕ್ಷಂಚ | ವಾಯುಭಕ್ಷಂತ್ರಿಲಕ್ಷಕಂ | ತ್ರಿಲಕ್ಷಂ ಚನಿರಾಹಾರಂ | ಅನ್ನಾಹಾರಂತುಲಕ್ಷಕಂ | ಪಾಷಾಣಾದಾಶ್ಚತುರ್ಲಕ್ಷಂ | ಮೂಲಭಕ್ಷಂತ್ರಿಲಕ್ಷಕಂ | ರೋಮಹಾರಂದ್ವಿಲಕ್ಷಂಚ | ಶೋಣಿತಂಚ ಷಟ್ಲಕ್ಷಕಂ | ಶಲ್ಯಾಹಾರಂದ್ವಿಲಕ್ಷಸ್ಯ | ದ್ವಿಪಾತ್ಕಾಹಾರಂತುಲಕ್ಷಕಂ ||

ಆಯುರ್ದಾಯ ನಿರ್ಣಯಂ.

ಶ್ಲೋ|| ಗಜೆ ಪ್ರೋಕ್ತಸುಕದ್ವಾಕ್ಷ | ಸರ್ಪಾಣಾಂ ಚಸಹಸ್ರಕಂ | ಶ್ವಾನವಾನರಭಲ್ಲೂಕ | ಮಂಡೂಕಾನಾಂಶತತ್ರಯಂ | ಪಂಚಾಶದುತ್ತರಶತಂ, ರಾಕ್ಷಸಾನಾಂಪ್ರಕೀರ್ತಿತಂ | ನರಾಣಾಂಕುಂಜರಾಣಾಂಚ | ವಿಂಶೋತ್ತರಶತಂವಿದುಃ | ದ್ವಾತ್ರಿಂಶತಾಯುರಶ್ವಾನಾಂ | ಪಂಚವಿಂಶತ್ಖರೋಷ್ಟ್ರಯೋಃ | ವೃಷಾಮಹಿಷಯೋಶ್ಚೈವ| ಚತುರ್ವಿಂಶತಿರೇವಚ | ವಿಶತಾಯುರ್ಮಯೂರಾಣಾಂ | ಛಾಗಾದೀನಾಂತುಷೋಡಶಂ | ಹಂಸಸ್ಯ ಪಂಚದಶಕಂ| ದ್ವಾದಶಾಜಾವಿಕಂಕುನಾಂ | ದಶಪಾರಾವತಸ್ಯ ಪ್ರವಕ್ತು ಕ್ಕುಟಸ್ಯಾಷ್ಟವತ್ಸರಾಃ | ಬುದ್ಬುದಾನಾಂ ಅಂಡಜಾನಾಂ || ಸಪ್ತಸಂಖ್ಯಸಮಾಸ್ಮೃತಾಃ | ಕೃತೆ ದಶಸಹಸ್ರಾಣಾಂ ಸಂಖ್ಯಯಾಃ ಪರಿಕೀರ್ತಿತಾಃ|| ತ್ರೇತಾಯಾಂತ್ರಿಸಹಸ್ರಂತು || ದ್ವಾಪರೆ ದ್ವಿಸಹಸ್ರಕಂ || ಕಲೌಸಹಸ್ರಮಾಖ್ಯಾತಂ| ನೃಣಾಮಾಯುರ್ಮನೀಷಿಭಿಃ || ಪತ್ಮಲೋಕಾತ್ಪ್ರಯಾಲೋನಾ | ಕ್ಷುದ್ರಕೃತ್ಯಾದಿಕಾರಣಾತ್ | ದಿನೆದಿನೆಕ್ಷಯಾಂಯಾಂತಿ | ನೃಣಾಮಾಯುಃಕಲೌಯುಗೆ || ಅಷ್ಟೋತ್ತರಶತಂನೃಣಾಂ | ಶತಮಾಯುರ್ವಿನಿರ್ಣಯಃ | ತತ್ರಾಪಿನಿಯತಿರ್ನಾಸ್ತಿ | ಪಾಪಯೋಗಾದಿನೆದಿನೆ || ಪಿತೃದ್ರೋಹಾತ್ಕೃತಘ್ನತ್ವಾದ್ದೀರ್ಘಮಾಯ್ವಲ್ಪತಾಂನಯೇತ್ || ದೇವದ್ವಿಜಗುರುದ್ರೋಹಸ್ತ್ರೀಪರದಾರಕಾಮಿನಃ| ಅಲ್ಪಾಯುಷಾನರಾಂಲೋಕೆ | ಶಿವ್ಯತ್ರಮ್ಯಮಜೀವಿನಃ | ಯೆಸ್ವಾತ್ವಾಶ್ಚದಸ್ಮಿಷ್ಟಾ | ಶಿವಾಂಪ್ರೂರ್ಣಂಪಿನಿದಿನೆ|| ವಿಯೋನಿಜನ್ನಿನೋಯೆಷ್ಯ | ತಸ್ಮಾಯುಸಾವಲೋಕಯೆತ್ | ಬಾಲ್ಯಮೆವಪ್ರಯಾಯಂತೆ | ರುಣನೋತ್ರಕಲೌಯುಗೆ | ಆ ಪ್ರಕಾಶಿಕಾ.

ಹಿಂದುಸ್ಥಾನದ ಕಾರಬಾರಕ್ಕೆ ಸಂಬಂಧಿಸಿದ ದೊಡ್ಡ ದೊಡ್ಡ ಉದ್ಯೋಗಗಳನ್ನು ಸ್ವದೇಶಜನರಿಗೆ ಕೊಡುವದರ ಕುರಿತು ವಿಚಾರಮಾಡಲಿಕ್ಕೆ ನೇಮಿಸಲ್ಪಟ್ಟ ಸಭಿಕರು ಆ ವಿಷಯದಮೇಲೆ ಜನರ ಅಭಿಪ್ರಾಯಗಳನ್ನು ಕೇಳಲಿಕ್ಕೆ ಸಿದ್ಧರಾಗಿದ್ದಾರೆಂತ ಈ ಕೆಳಗಿನ ಸರ್ಕಾರೀ ಗೆಜೆಟಿನಲ್ಲಿ ಪ್ರಕಟವಾದ ಠರಾವಿನ ಮೇಲಿಂದ ತಿಳಿಯುತದೆ. "ಹಿಂದುಸ್ಥಾನದ ಸರ್ಕಾರದವರ ೩೬ನೇ ಠರಾವಿನ ಪ್ರಕಾರ ಯುರೋಪಜನರಿಗೆ ... ಒಳಗಿನ ದೊಡ್ಡ ದೊಡ್ಡ ಸರ್ಕಾರಿ ಕೆಲಸಗಳನ್ನು ಕೊಡುವದರ ಉದ್ದೇಶವಾಗಿ ನೇಮಿಸಲ್ಪಟ್ಟ ಸಭೆಯವರು ಯಾವ ಸಂಘದವರ ಕಡೆಯಿಂದಾಗಲಿ, ಸಮೂಹದವರ ಕಡೆಯಿಂದಾಗಲಿ, ಸರ್ಕಾರಿ ಉದ್ಯೋಗವಿರುವ ಅಥವಾ ಇಲ್ಲದ ಗೃಹಸ್ಥರ ಕಡೆಯಿಂದಾಗಲಿ ಪ್ರತ್ಯೇಕ ಪ್ರತ್ಯೇಕ ಅಭಿಪ್ರಾಯಗಳನ್ನು ಸಂತೋಷದಿಂದ ಸ್ವೀಕರಿಸುವರು." ಜನರಿಗೆ ತಮ್ಮ ಕಷ್ಟಗಳನ್ನು ಸರ್ಕಾರದವರ ಮುಂದಿಡುವದಕ್ಕೆ ಬಂದೊದಗಿದ ಸಮಯವನ್ನು, ಮೌನವನ್ನು ಧರಿಸಿ ಕಳಕೊಳ್ಳಲಿಕ್ಕಿಲ್ಲವೆಂತ ನಮ್ಮ ಪೂರ್ಣ ನಂಬಿಕೆಯುಂಟು. ಬಡವರೂ, ದನವಂತರೂ, ವೃದ್ಧರೂ, ವ್ಯಾಪಾರ ಮೊದಲಾದ ಸ್ವತಂತ್ರ ಉದ್ಯೋಗವನ್ನು ಮಾಡುವವರೂ ಪ್ರಯತ್ನ ... ಈ ಸಭೆಯಿಂದ ಉಂಟಾಗುವ ಹಿತಾಹಿತಗಳಿಗೆ ಸರಿಸಮಾನ ಭಾಧ್ಯರಾಗುತ್ತಾರೆ. ಬಡವರು ಸಾವ್ಕಾರು ನಮಗ್ಯಾಕೆ ಕೇಳುತ್ತಾರೆ ಎಂತ ತಿಳಕೊಂಡು ಸುಮ್ಮನೆ ಇದ್ದಾರು. ದನವಂತರು ಸಾವಲ್ಲಿ, ನಮಗೆ ಸರ್ಕಾರದ ಬಾಗಲಲ್ಲಿ ಚಾಕರಿ ಬೇಡಲಿಕ್ಕೆ ಹೋಗುವದುಂಟೇ ಎಂಬ ಅಹಂಕಾರದಿಂದಲೇ ಇದ್ದಾರು. ವೃದ್ಧರು ತಮ್ಮ ಆಯುಷ್ಕಾಲವು ಸವೆದಾಯಿತಿದೆ, ಈ ಸುಧಾರಣೆ ವಿಷಯಗಳು ಈಗ ನಮಗ್ಯಾಕೆ ಎಂತ ಕೇಳುವರು. ವ್ಯಾಪಾರಸ್ಥರೂ ಬೇಸಾಯಗಾರರೂ ಮೊದಲಾದವರು ನಮ್ಮ ಕೆಲಸಬಿಟ್ಟು ನಮಗ್ಯಾಕೆ ಈ ಪಂಚಾಯತಿ ಯೆಂತ ತಮ್ಮೊಳಗೆ ಹೇಳಿ ಏನೂ ಮಾಡದೆ ಇದ್ದಾರು. ಆದರೆ ಹಾಗಲ್ಲ, ಹಿಂದೂ ಜನರಿಗೆ ಸರ್ಕಾರದ ಆತಳಿತೆಯಲ್ಲಿ ಹೆಚ್ಚು ಕೈ ಇದ್ದದರಿಂದ ಉಂಟಾದೀತಾದ ಲಾಭವನ್ನು ಚನ್ನಾಗಿ ಮುಂದೃಷ್ಟಿಯಿಂದ ವಿಚಾರಿಸಿ ತಮಗೂ ಈ ಸಭೆಯ ಕಾರ್ಯದಲ್ಲಿ ಅಂಗ ಉಂಟೆಂದು ತಿಳಕೊಂಡು ತಮ್ಮ ತಮ್ಮ ಸೂಚನೆಗಳನ್ನು ಮಾಡತಕ್ಕದ್ದು. ಸರ್ಕಾರದವರು ತಮ್ಮಲ್ಲಿ ನಿರ್ವಾದ ನ್ಯಾಯವಿರುತದೆಂತ ತೋರಿಸಲಿಕ್ಕೆ ಇಂತಾ ಸಭೆಗಳನ್ನು ನಿರ್ಮಿಸುವ ಕಾಲವೇ ಜನರು ತಮ್ಮ ಸುದಿನವೆಂತ ಎಣಿಸಿ ಯಾಕೆ ಅದರ ಪ್ರಯೋಜನ ಮಾಡಿಕೊಳ್ಳಬಾರದು? ಆದಕಾರಣ ಜನರು ತಮ್ಮ ಕರ್ತವ್ಯವನ್ನೂ ಹಿತವನ್ನೂ ದುರ್ಲಕ್ಷಿಸಬಾರದು.

BANGALORE —Printed and published for the Proprietor, at the KARNATIC PRESS —1886

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

Published every Monday Morning.

[illegible]

Vol. XIII] BANGALORE—MONDAY, DECEMBER 27, 1886. [No. 52.

ಸಂಪುಟ ೧೩.] ಬೆಂಗಳೂರು —ಸನ್ ೧೮೮೬ನೇ ಇಸವಿ ಡಿಸೆಂಬರ್ ೨೭ನೇ ತಾರೀಖು ಸೋಮವಾರ. [ಸಂಚಿಕೆ ೫೨

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ನಿರ್ಣಯವು.

[illegible]

ಪ್ರಕಟನೆಯ ರಿವಾಜು.

[illegible]

NOTICE TO SUBSCRIBERS

[illegible]

NOTICE.

VAIDYASARA SANGRAHA

Price including Postage, Rs. 1-0-0

ವೈದ್ಯಸಾರ ಸಂಗ್ರಹ

[illegible]

ನೋಟೀಸ್.

ಎಲೆಕ್ಟ್ರೊ ಗ್ಯಾಲ್ವಾನಿಕ್ ರಿಂಗ್, ಲಾಕೆಟ್, ಮತ್ತು ಅರಂಟಪ,

ಅಂದರೆ, ಅಂದಗವಾಗಿ, ಸಂಬಂಧವಾದ ಮತ್ತು ವಿದ್ಯುತಿನ ಶಕ್ತಿ ಪ್ರಕಾರ ಸಂಬಂಧವಾದ ಉಂಗರ, ಪದಕ, [illegible] ಬಜಾರಿನಲ್ಲಿ ಇರುವ ಪಿ. ಸಿ. ದಾಸ್ ಯೆಂಬವರಿಂದ ಮಾರಲ್ಪಡುತ್ತಿರುತವೆ

ಇವು ಸಕಲ ಕಾಯಿಲೆಗಳಿಗೂ ಆಶ್ಚರ್ಯಕರವಾದ ಪರಿಹಾರಕವಾದದ್ದು.



[illegible] ವೈದ್ಯ ಪದ್ಧತಿಯನ್ನು [illegible] ರವ ಪತ್ರಗಳಿಂದಲೂ ಸದರೀ ಉಂಗರಗಳು ಮೊದಲಾದವು ಬಹಳ ಯೋಗ್ಯವಾದ ಪರಿಹಾರಕಗಳೆಂದು ಯೇರ್ಪಟ್ಟಿರ [illegible] ಶಕ್ತಿಯ [illegible] ವಿಶೇಷವಾಗಿ [illegible] ಹೊಂದುವುದು [illegible] ಉಂಗರಗಳನ್ನು [illegible] ನೋಡಿ, ನಮ್ಮ ಹೊಸ ಉಂಗರವನ್ನು ಹಾಕಿಕೊಂಡು ನೋಡಿದರೆ ಪರಿಣಾಮ [illegible] ಕಂಡವರು [illegible] ಪಿ. ಸಿ. ದಿ. [illegible]

ಉಂಗರಗಳು—ದೊಡ್ಡದ್ದು ೧೪ ರಂ [illegible] ೧೦ ರೂ [illegible] ೧೨ ರೂಪಾಯಿ, [illegible] ೧೪ ರೂಪಾಯಿ, [illegible] ಉಂಗರಗಳು ಮತ್ತು [illegible]

ಪ್ರಕಟನೆ

ಕರ್ಣಾಟಕ ಮುದ್ರಾಕ್ಷರಶಾಲೆಯಲ್ಲಿ ಇಂಗ್ಲಿಷಿನಲ್ಲಿಯೂ ಕನ್ನಡದಲ್ಲಿಯೂ ಬೇಕಾದ ತರಹೆ ಕೆಲಸಗಳು ಸುಲಭಚಾರ್ಜಿಗೆ ಕ್ಷಿಪ್ರವಾಗಿ ಮಾಡಿಕೊಡಲ್ಪಡುತ್ತೆ. ಯಾವ ಕೆಲಸವನ್ನಾಗಲಿ ಮಾಡಿಸುವ ಇಚ್ಛೆಯುಳ್ಳವರು ಸದರೀ ಕಾರ್ಖಾನೆ ಪ್ರೊಪ್ರೈಟರಿಗೆ ತಿಳಿಸಬೇಕು. ಅವರು ಬಳೇಪೇಟೆಯಲ್ಲಿ [illegible] ನಂಬರ್ ಮನೆಯೊಳಿರುತ್ತಾರೆ

ಬೆಂಗಳೂರು, ೩೦ನೇ ನವಂಬರ್೮೬.

LITTLE'S

ORIENTAL BALM

ಲಿಟಲ್ ಯೆಂಬುವರಿಂದ ತಯಾರು ಮಾಡಲ್ಪಟ್ಟ "ಬಾಧಶಮನಕಾರಿಣಿ" ಎಂಬ ಪೂರ್ವದೇಶ ಸಂಬಂಧವಾದ ಅಮೂಲ್ಯ ತೈಲವು ಸ್ವಶಕ್ತಿ ಪ್ರದರ್ಶಕವಾದದ್ದು, ಮತ್ತು ಸಫಲವಾದ ನವೀನ ಪ್ರಶಸ್ತ ಸಾರೂಪವಾದ ಔಷಧವು. ಇದರಿಂದ ಸಕಲ ವಾತರೋಗಗಳೂ, ವಾತಸಂಬಂಧಗಳಾದ ಸಂಧಿವಾತಗಳೂ ನಿವೃತ್ತಿಯಾಗುವವು. ಮುಖ್ಯವಾಗಿ ಬಹಳ ಕಾಲದ ವಾತರೋಗಗಳು, ಕಾಲು, ಗಂಟಿನಲ್ಲಿ ಉರಿ, ನರಂಪುನೋವು, ಕೀಲುವಾಯು, ಕಟಿವಾಯು, ಉಳುಕು ನೋವು, ತಲೆನೋವು, [illegible] ಮುಂತಾದ ರೋಗಗಳಿಗೆಲ್ಲ ನಿಸ್ಸಂದೇಹವಾಗಿ ಬಹಳ ಪ್ರಯೋಜನವನ್ನು ಮಾಡತಕ್ಕದ್ದು. ಈ ತೈಲವನ್ನು ನೋವುಳ್ಳ ಸ್ಥಳಗಳಲ್ಲಿ [illegible] ಸವರಿ [illegible] ತಕ್ಷಣವಾಗಿ [illegible] ಯೋಗ್ಯ [illegible] ಗಳನ್ನು ನಿವೃತ್ತಿ ಮಾಡುವಂತಾ ಉತ್ತಮತೈಲವಾಗಿರುತ್ತೆ. ಸರ್ವೇಸಾಮಾನ್ಯವಾಗಿ [illegible] ನಿವೃತ್ತಿಯಾಗುವದು. ಗಂಟಿನಲ್ಲುಂಟಾಗುವ ಉರಿ [illegible] ಗಳಿಗೆ ಈ ತೈಲವು ಉದ್ಭುತವಾದ ಮತ್ತು ಶೀಘ್ರವಾದ ಸಂಪೂರ್ಣಗುಣವನ್ನುಂಟು ಮಾಡುವದು. [illegible] ಈ ಔಷಧವನ್ನು [illegible] ಅವರ [illegible] ಸ್ವತಃ [illegible] ಪ್ರತ್ಯಕ್ಷವಾಗುವದು. ಈ ತೈಲವು [illegible] ಮುಂತಾದ [illegible] ಪ್ರಮಾಣಪತ್ರಗಳು, [illegible] ಮುಂತಾದ [illegible] ಅಮೂಲ್ಯವಾದದ್ದು

ಪರಿಶೀಲಕರ ಅಭಿಪ್ರಾಯವು.

ಐರ್ಲ್ಯಾಂಡ್ ದೇಶದ ಫಾರ್ಮಸ್ಯೂಟಿಕಲ್ ಸೊಸೈಟಿಯ ಔಷಧಶಾಲೆಯ ಪ್ರಸಿದ್ಧರಾಗಿಯೂ, [illegible] ಸಮಾಜದ ಸಭಿಕರಾಗಿಯೂ, [illegible] ಎಂಬ ಗ್ರಂಥಕರ್ತರಾಗಿಯೂ, [illegible] ಇರುವ ಪ್ರೊಫೆಸರ್ ಟಿಚ್ ಬೋರ್ನ್ (C R. Tichborne, L. L. D., F. C. S., M. R. I. A.) ಯೆಂಬುವರು [illegible] ಲಿಟಲ್ ರವರ [illegible] ತೈಲವನ್ನು [illegible] ಇದು [illegible] ರೋಗ [illegible] ಈ ತೈಲವು ಸಂಪೂರ್ಣ ಬಾಧಶಮನಕಾರಿಯೆಂದು ತಯಾರು ಮಾಡಲ್ಪಟ್ಟಿರುತ್ತದೆ.

ಇದರ ಕ್ರಯ—ಸೀಸೆ ೧ಕ್ಕೆ ೧ ರೂಪಾಯಿ

ಇದು ಮಿಸ್ಟರ್ ಜೆ ವೆಸ್ಟ್ ಕಂಪೆನಿಯವರಲ್ಲಿಯೂ, ಮದರಾಸ್ [illegible] ನಂಬರ್ ಮನೆಯೊಳಿರುವ [illegible] ಈ ಪಟ್ಟಣದಲ್ಲಿರುವ ಅವರ ಏಜೆಂಟರ ಬಳಿ [illegible] ಲ್ಲಾಸ್ಯೂಯಾಗ, ಬಿ ಕೆಪ್ಟೆನ್ ಅಂಡ್ ಕಂಪೆನಿಯವರಲ್ಲಿಯೂ, ರಿಗ್ಸ್ ರವರ ಕಂಪೆನಿಯವರಲ್ಲಿಯೂ ದೊರೆಯುವದು.

AGENT.—Messrs. J. WEST, & Co., Chemists &c. CAPTAIN & Co.,
RIGGS & Co., and of A. C. BERRYMAN,
20, Sembodas Street, Madras.

ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ, ತುಮಕೂರು ಡಿಸ್ಟ್ರಿಕ್ಟ್ ಗುಬ್ಬಿ ತಾಲ್ಲೂಕು ಕಸಬಾದಲ್ಲಿ ಚೆಲ್ಲದಪ್ಯಾಟೆ ಕೊತ್ತವಾಲ್ ಚಾವಡಿ ಪಕ್ಕದಲ್ಲಿರುವ ಬೇರೆಯರು, ಜುಲಿಬಿ ಮ॥ ರಾ॥ ಲಕ್ಷ್ಮಯ್ಯ ಶೆಟ್ಟರ ಮನೆಸಂಬಂಧ ಉತ್ತರಕೆಸರುಳ್ಳ ಮನೆ ಅಂಗಡಿಗಳು ಮುಂದುಗಡೆ ಪಡಸಾಲೆ ಸೇರಿರುವ ಮನೆ ೧, ಗಾಣಿಗರ ಪೇಟೆಯಲ್ಲಿರುವ ಮನೆ ೧, ವೆಸ್ಲಿಯನ್ ಮಿಷನ್ ಬಂಗ್ಲೆ ಬಳಿ ಇರುವ ತೋಟ ೧, ಇವುಗಳಿಗೆ ಗುಬ್ಬಿ ಕಸಬದ [illegible] ಮ॥ ರಾ॥ ನಾರಾಯಣಶೆಟ್ಟರ ಮೊಮ್ಮಗ ಬೆಂಗಳೂರಿನಲ್ಲಿ ಜಾಯಿಂಟ್, ಮತ್ತು ಕಂಟ್ರ್ಯಾಕ್ಟರ್ ವ್ಯಾಪಾರಮಾಡುವ ಮ॥ ರಾ॥ ಬಿ ಜೆ ಗೋವಿಂದಶೆಟ್ಟಿಯು ಹಕ್ಕುದಾರನಾಗಿದ್ದಾನೆ, ಆದಕಾರಣ ನನ್ನ ಅನುಮತಿಯಿಲ್ಲದೆ ಇತರರು ಈ ಸ್ವತ್ತುಗಳನ್ನು ಯಾರೂ ಯಾರಿಂದಲೂ ಯಾವ ವಿಧವಾಗಿಯೂ ಪಡೆಯತಕ್ಕದ್ದು, ಹಾಗೆ ಪಡೆದಲ್ಲಿ ಮುಂದೆ ಆಗತಕ್ಕ ನಷ್ಟಕ್ಕೆ ಗುರಿಯಾಗುತ್ತಾರೆಂದು ತಿಳಿಯಪಡಿಸುತದೆ.

೧೯—೧೨—೮೬. ಬಿ. ಜೆ. ಗೋವಿಂದಶೆಟ್ಟಿ.

ನೋಟೀಸ್.

ಇದರಿಂದ ನಮ್ಮ ಚಂದಾದಾರರಿಗೆ ಪ್ರಕಟಪಡಿಸುವದೇನೆಂದರೆ,—

ಸನ್ ೮೫ ಮತ್ತು ೮೬ನೇ ಇಸವಿಗಳಿಗೆ ಬಾಕೀದಾರರಾಗಿರತಕ್ಕವರು ತಮ್ಮ ತಮ್ಮ ಬಾಕೀಗಳನ್ನು ಕಳುಹಿಸಿಕೊಡಬೇಕೆಂದು ಅನೇಕಸಾರಿ ತಿಳಿಸಿದ್ದಾಗ್ಯೂ ಬಹುಮಂದಿ ಅದಕ್ಕೆ ಇದುವರಿವಿಗೆ ನಿಗೇಕೊಡದೆ ಇರುತ್ತಾರೆ. ಅಂತವರ ಬಾಕೀ ವಸೂಲೀ ವಿಷಯದಲ್ಲಿ [illegible] ಪ್ರಯತ್ನ ನಡೆಸಲ್ಪಡುವದಲ್ಲದೆ ಈ ತಿಂಗಳ ಆಖೈರಿನಲ್ಲಿ ಅವರ ಹೆಸರಿನ ಪತ್ರಿಕೆಗಳು ನಿಲ್ಲಿಸಲ್ಪಡುತವೆ

ಇದುವರಿವಿಗೆ ಚಂದಾ ಬಾಕೀಯನ್ನು ಪೂರಾ ಸಂದಾಯ ಮಾಡಿರತಕ್ಕವರಿಗೆ ಮಾತ್ರವೇ ಮುಂದಿನ ಸಾಲಿನಲ್ಲಿ ಪತ್ರಿಕೆ ರವಾನಿಸಲ್ಪಡುವದು.

ಅವರೆಲ್ಲರು ದಯಮಾಡಿ ಚಂದಾ ಹಣವನ್ನು ಕೂಡಲೇ ಅಡ್ವಾನ್ಸ್ ಕಳುಹಿಸಿ ಕೊಡಬೇಕು. ಮುಂದಿನ ಸಾಲಿಗೆ ಪತ್ರಿಕೆಯ ಅಪೇಕ್ಷೆ ಇಲ್ಲದವರು ಅಂತಾ ಅಭಿಪ್ರಾಯವನ್ನು ಈ ತಿಂಗಳ ೩೧ನೇ ತಾರೀಖಿನೊಳಗಾಗಿ ನಮಗೆ ತಿಳಿಸಿಬಿಡುವದು ಉಚಿತವಾಗಿರುವದು.

ಮುಂದಿನ ಸಾಲಿಗೆ ಹೊಸದಾಗಿ ದರಖಾಸ್ತು ಮಾಡತಕ್ಕವರು ಚಂದಾ ಅಡ್ವಾನ್ಸ್ ಕಳುಹಿಸಿ ಕೊಡಬೇಕು. ಅಪ್ಪಿಲ್ಲದ ದರಖಾಸ್ತುಗಳಿಗೆ ನಾವು ವಿಗೇ ಕೊಡಲ್ಪಡಲಾರದು. [illegible] ಗೆ ಕಳುಹಿಸುವ ದರಖಾಸ್ತುಗಳು ಅಂಗೀಕರಿಸಲ್ಪಡಲಾರವು.

೧೯—೧೨—೮೬. ಪ್ರೊಪ್ರೈಟರ್, ಕ. ಪ್ರ.

NOTICE.

ಇದರಿಂದ ಮುಂಬೈ ಸ್ಥಳೀಕರಾದ ವಿಶ್ವನಾಥ ರಾಮಚಂದ್ರ ಕಾಳೇಯೆಂಬ ನಾನು ಸಮಸ್ತಜನರಿಗೂ ತಿಳಿಯಪಡಿಸುವದೇನಂದರೆ,—ಮುಂಬೈಯಲ್ಲಿ ನಾನು ಸಂಗೀತಶಾಸ್ತ್ರ ವಿಷಯಕವಾದ ಕೆಲವು ಗ್ರಂಥಗಳನ್ನು ಛಾಪಿಸಿರುತ್ತೇನೆ. ಇದಲ್ಲದೆ ಸಿತಾರ್, ವೀಣೆ, ತಬ್ಲಾ, ಮುಂತಾದ ವಾದ್ಯಗಳನ್ನು ಗುರುವಿಲ್ಲದೆ ಬಾರಿಸಲು ಕಲಿತುಕೊಳ್ಳುವಂತೆ ನೂತನ ವಾದನಮಾರ್ಗವನ್ನು ಕಂಡುಹಿಡಿದು ಪುಸ್ತಕಗಳನ್ನುಛಾಪಿಸಿದೇನೆ. ಇವುಗಳ ಸಹಾಯದಿಂದ ಅನೇಕರು ಕಲಿತುಕೊಂಡಿದ್ದಾರೆ. ಇಲ್ಲಿನ ಜನಗಳಿಗೆ ಹಿಂದುಸ್ತಾನಿಯನ್ನು ಹಾಡುವ ಮತ್ತು ಬಾರಿಸುವ ಮಾರ್ಗ ತಿಳಿಯದೆ ಇರುವದರಿಂದ ಸತಾರ್ ವೀಣೆ ಇವುಗಳನ್ನು ಸ್ವತಃ ಕಲಿಯುವಂತೆ ಅವರಂ ಸುಬ್ಬರಾಯರಿಂದ ಕನ್ನಡಭಾಷೆಯಲ್ಲಿ ಭಾಷಾಂತರವಾಡಿಸಿ ಛಾಪಿಸಲುದ್ಯುಕ್ತನಾಗಿದ್ದೇನೆ. ಈ ದೇಶದಲ್ಲಿ ಸಕಲರೂ ಈ ಗ್ರಂಥಸಹಾಯದಿಂದ ಸತಾರ್ ವೀಣೆ ಇವುಗಳನ್ನು ಕಲಿಯಲಿಕ್ಕೆ ಸಾಧ್ಯವಹುದೆಂದು ನಂಬಿದ್ದೇನೆ, ಆದದರಿಂದ ಈಹೊಸಗ್ರಂಥವನ್ನು ತರಿಸಿ ನೋಡಬೇಕೆಂಬದೇ ನನ್ನ ಮುಖ್ಯ ಕೋರಿಕೆಯಾಗಿರುತ್ತದೆ.

ಇದರ ಕಿಮ್ಮತ್ತು ಚಂದಾದಾರರಿಗೆ ಮಾತ್ರ ೧ರ[illegible]. ಪುಸ್ತಕವು ಬರುವ ಜನವರಿ ತಿಂಗಳೊಳಗಾಗಿ ಪ್ರಸಿದ್ಧಿಸಿ ಬಿಕರಿಗೆ ಸಿದ್ಧವಾಗುವದು. ಗ್ರಂಥಾಪೇಕ್ಷೆಯುಳ್ಳವರು ಜನವರಿ ಆಖೈರೊಳಗಾಗಿ ಚಂದಾವೊಂದನ್ನು ಸದರ್ ಮಹಾರಾಟಾ ರೆಯಿಲ್ವೇ ಕ್ಯಾಷಿಯರ್ ಘೋಂಡೋ ರಾಮಚಂದ್ರ ಖಾಡಿಲ್‌ಕರ್ ಯವರವರಿಗೆ ಕಳುಹಿಸತಕ್ಕದ್ದು. ಸತಾರ್ ವಾದ್ಯವನ್ನು ಪಡೆಯಲಪೇಕ್ಷೆಯುಳ್ಳವರು ಮೇಲೆ ಹೇಳಿದವರಿಂದ ಸರಿಯಾಗಿ ಕೊಡು ತರಿಸಿಕೊಳ್ಳಬಹುದು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, DECEMBER 27, 1886.
೧೮೮೬ನೇ ಡಿಸಂಬರ್ ೨೭ನೇ ತಾ|| ಸೋಮವಾರ.

NOTICE TO OUR SUBSCRIBERS AND READERS

ನಮ್ಮ ಚಂದಾದಾರರಿಗೂ ಈಪತ್ರಿಕೆಯನ್ನು ಓದತಕ್ಕ ಇತರರಿಗೂ ಇದರಿಂದ ನಾವು ಪ್ರಕಟಪಡಿಸುವದೇನಂದರೆ—ಮುಂದಿನ ಶನಿವಾರವು ಇಂಗ್ಲಿಷ್ ಸಂವತ್ಸರಾದಿಯಾದದರಿಂದಲೂ, ಕ್ರಿಸ್ಮಸ್ ಹಬ್ಬವಾದದರಿಂದಲೂ, ಆಬಗ್ಗೆ ನಮ್ಮ ಕಾರ್ಖಾನೆ ನೌಕರರೆಲ್ಲರಿಗೂ ರಜಾ ಕೊಡುವದು ವಾಡಿಕೆಯಾಗಿ ನಡೆದುಬರುವದರಿಂದಲೂ, ಜನವರಿ ೩ನೇ ತಾರೀಖು ಸೋಮವಾರದ ಪತ್ರಿಕೆ ನಿಲ್ಲಿಸಲ್ಪಟ್ಟಿರುತ್ತದೆ.

ADDITION TO HIS HIGHNESS THE MAHARAJA'S FAMILY

ಶುಭಮಸ್ತು.

ಮಾಹೇಮುಜಕೂರ್ ೨೩ನೇ ತಾರೀಖು ಗುರುವಾರದದಿನ ಶುಭಮುಹೂರ್ತದಲ್ಲಿ ಶ್ರೀಮನ್ಮಹಾರಾಜಾ ಚಾಮರಾಜೇಂದ್ರ ಒಡೆಯರ್ ಬಹದೂರವರಿಗೆ ಅವರ ವಂಶಾಭಿಮಾನದೇವತೆಯು ಮೂರ್ತೀಕರಿಸಿ ಅವತರಿಸಿದಂತೆ ತೃತೀಯಪುತ್ರಿಕಾರತ್ನವು ಉದ್ಭವಿಸಿದ ಶುಭವೃತ್ತಾಂತವು ಅವರ ಪ್ರಜೆಗಳೆಲ್ಲರಿಗೂ ಆನಂದಾನುಭವವನ್ನುಂಟುಮಾಡಿತು. ಹೀಗೆಯೇ ಮಹಾರಾಜರವರು ಆಯುರಾರೋಗ್ಯೈಶ್ವರ್ಯ ಸಂತಾನಾದಿ ಸಕಲ ಸೌಭಾಗ್ಯಗಳೊಡನೆ ನಿರವಧಿಕಸುಖಸಂತೋಷಗಳನ್ನನುಭವಿಸುತ್ತ ಬರಬೇಕೆಂತಲೂ, ಕರ್ಣಾಟ ರಾಜವಂಶವು ನಿರಂತರಾಭಿವೃದ್ಧಿಯುಳ್ಳದ್ದಾಗಿರಬೇಕೆಂತಲೂ ಪ್ರಾರ್ಥಿಸುವೆವು.

OUR CRITICS.

ಕರ್ಣಾಟಕ ಪ್ರಕಾಶಿಕೆಯು, ಯಾವಾಗಲೂ ದೋಷೋದ್ಘಾಟನ ಮಾಡುವಣವೇ ಸ್ವಭಾವಗುಣವುಳ್ಳದ್ದಾಗಿಯೂ, ಗುಣವನ್ನು ದೋಷವನ್ನಾಗಿಯೂ, ದೋಷವನ್ನು ಗುಣರೂಪವಾಗಿಯೂ ಭಾವಿಸುವ ಲಕ್ಷಣಾತಸ್ವಭಾವವುಳ್ಳದ್ದಾಗಿಯೂ ಇರುವದರಿಂದ, ಅನ್ಯದೇಶೀಯರ ಪ್ರಾಭವವನ್ನು ನೋಡಿ ಸಹಿಸಲಾರದ್ದೆಂತಲೂ, ಅಲ್ಪಗಳಾದ ಅವರ ಲೋಪಗಳನ್ನೆಲ್ಲ ಪ್ರಬಲಪಡಿಸಿ ದೂಷಿಸುವ ಸಂಕಲ್ಪವುಳ್ಳದ್ದೆಂತಲೂ, ಸ್ವದೇಶೀಯರ ದೋಷಗಳನ್ನು ಮರೆಮಾಡಿ ಅವರಂ ಭೂಷಿಸುವ ಪ್ರವೃತ್ತಿಯುಳ್ಳದ್ದೆಂತಲೂ ಈಚೆಗೆ ಕೆಲವರು ಈಪತ್ರಿಕೆಯನ್ನು ನಾನಾಪ್ರಕಾರದಿಂ ದೂಷಿಸಲಾರಂಭಿಸಿದಾರೆ. ಇಂತಾ ಅಪಪ್ರಥೆಯು ಇದಕ್ಕೆ ಆದಿಯಿಂದಲೂ ತಪ್ಪಿದ್ದಲ್ಲವು. ಅದುಹ್ಯಾಗೆಂದರೆ ಈದೇಶವು ಬ್ರಿಟಿಷರವರ ಸಾಕ್ಷಾತ್ಪಾಲನೆಯೊಳಿದ್ದಾಗ ನಾವು ಶ್ರೀಮನ್ಮಹಾರಾಜರವರ ಅಭ್ಯುದಯವನ್ನು ಬಯಸಿ ಸದಾ ವಾದಿಸುತಲಿದ್ದೆವು. ಆಗ ಅದಕ್ಕೆ ಪ್ರತಿಕಕ್ಷಿಯವರು ನಮ್ಮನ್ನು ಬಹುವಿಧವಾಗಿ ದೂಷಿಸಿ ನಮ್ಮ ಪ್ರಯೋಜನಗಳಿಗೆಲ್ಲ ಬೇಕಾದಂತೆ ಹಾನಿಯುಂಟುಮಾಡಿದರು. ದೈವಾನುಗ್ರಹದಿಂದ ನಮ್ಮ ಪಕ್ಷವು ಜಯಿಸಿ ನಮ್ಮ ಕೋರಿಕೆಯು ಈಡೇರಿದ್ದರಿಂದ ಮೊದಲಿದ್ದ ಅಪಪ್ರಥೆಯಿಂದ ವಿಮುಕ್ತರಾದೆವು. ಈಗ ಪದ್ದೇಶೀಯರ ಪ್ರಾಭವವನ್ನು ಕೋರುವದರಿಂದ, ಹಾಗೆಯೇ ಇದಕ್ಕೆ ವಿರೋಧಿಗಳು ನಮ್ಮನ್ನು ಪಲವಿಧವಾಗಿ ದೂಷಿಸುತಲಿದಾರೆ. ತನ್ಮೂಲಕ ಈಗಲೂ ಬಹುವಿಧ ಪ್ರಯೋಜನಹಾನಿಯಂ ನಾವು ಅನುಭವಿಸದಿರಲಿಲ್ಲವು. ಆದರೆ ಹಿಂದಿನ ನಮ್ಮ ಅಪಪ್ರಥೆಯು ಹ್ಯಾಗೆ ನಿವಾರಣವಾಯಿತೋ ಅದರಂತೆ ಈಗುಂಟಾಗಿರುವದು ಸಹ ನಿವೃತ್ತಿಯಾಗಬೇಕೆಂದು ಕೋರುವೆವು. ಯದ್ಯಪಿ ಅದು ಯಾವ ಕಾಲದಲ್ಲಿ ಯಾವ ರೀತಿಯಿಂದ ಹೋಗುವದೋ ಅದಂ ಈಗ ಊಹಿಸಿ ತಿಳಿಸಲು ಸಾಧ್ಯವಲ್ಲವು. ಮೇಲೆಕಂಡ ಎರಡು ಸಂದರ್ಭಗಳಲ್ಲಿಯೂ ನಮಗೆ ಪ್ರಾಪ್ತವಾದ ಅಪಪ್ರಥೆಗಳಿಗೆ ಮೈಸೂರು ಮಹಾರಾಜರವರೂ ಅವರ ಪ್ರಜೆಗಳಾದ ಪರದೇಶೀಯರೂ ಮುಖ್ಯ ಕಾರಣಭೂತರಾಗಿ ಏರ್ಪಟ್ಟದರಿಂದ, ಅವರುಗಳಾದರೂ ಪರಸ್ಪರಾನುಕೂಲ್ಯವುಳ್ಳವರಾಗಿದಾರೆಯೇ ಎಂಬಅಂಶ ಈಗ ವಿಚಾರಾರ್ಹವಾಗಿದೆ. ನಮ್ಮ ವಿಷಯವಂ ಕುರಿತು ಆಲೋಚಿಸುವಲ್ಲಿ ಮಹಾರಾಜರವರಿಗೂ ಅವರ ಪ್ರಜೆಗಳಿಗೂ ಅನುರಾಗವಿಲ್ಲದಿದ್ದರೂ, ಅಥವಾ ವುಂಟಾದಾಗ್ಯೂ ನಮಗೆ ಪ್ರಾಪ್ತವಾಗಿರುವ ದೋಷವು ತೊಲಗುವದರೊಳೇನೂ ಸಂದೇಹವಿಲ್ಲವು. ಹ್ಯಾಗಂದರೆ-ಸ್ವಪ್ರಜೆಗಳಲ್ಲಿ ಮಹಾರಾಜರವರಿಗೆ ಅನುರಾಗವಿಲ್ಲದಿದ್ದರೆ ತತ್ಸಂಬಂಧವೇ ಸೌಖ್ಯವಾಲಕ ಲಕ್ಷಣಗಳಿಗೆ ಭಂಗ ಪ್ರಾಪಿಸುವದು. ಅನುರಾಗ ವುಂಟಾಗಿದ್ದರೆ ಅನ್ಯರ ವಿಚಾರಕ್ಕೇ ಅವಕಾಶವಿರುವದಿಲ್ಲವು. ಪರಂತು ಕೆಲವು ವಿಷಯಗಳಲ್ಲಿ ವುಂಟಾಗಿ ಇನ್ನು ಕೆಲವು ವಿಷಯಗಳಲ್ಲಿ ಇಲ್ಲದಿದ್ದರೆ ಆಗ ಅದರ ಫಲವು ಅನ್ಯಥಾ ಪರ್ಯವಸಾನವಾದರಿಂದ ಸಿದ್ಧಿಯು ತಾರತಮ್ಯಾನುಗುಣವಾಗಿ ವಿಚಾರ ಮಾಡಬೇಕಾಗುತ್ತದೆ. ಪ್ರಕೃತ ಸಂದರ್ಭದಲ್ಲಿ ಮೈಸೂರು ಮಹಾರಾಜರವರಿಗೆ ತಮ್ಮ ಪ್ರಜೆಗಳು ಸುಖವಾಗಿರಬೇಕೆಂತಲೂ, ನ್ಯಾಯವಾದ ಪಾಲನೆಯಲ್ಲಿ ಸಂತೃಪ್ತರಾಗಿರಬೇಕೆಂತಲೂ, ಎಲ್ಲರೂ ವಿದ್ಯಾವಂತರಾಗಿಯೂ ಧನವಂತರಾಗಿಯೂ ಇರಬೇಕೆಂತಲೂ ಕೋರಿಕೆಯುಂಟಾಗಿದೆ ಎಂಬದಕ್ಕೆ ಅವರ ಪ್ರಜೆಗಳ ಪ್ರಕೃತ ಸ್ಥಿತಿಯೇ ದೃಷ್ಟಾಂತವಾಗಿರುತ್ತದೆ. ಆದರೆ ಈಗ ಈ ದೇಶದಲ್ಲಿ ಸ್ವದೇಶಾನ್ಯದೇಶೀಯರಿಬ್ಬರೂ ವಾಸಮಾಡುತಲಿರುವದರಿಂದ ಸ್ವದೇಶೀಯರ ಅಧಿಕಾರಕ್ಕೆ ಅನ್ಯದೇಶೀಯರು ಒಳಪಟ್ಟಿರಬೇಕಾದ್ದೇ ಅಥವಾ ವಿದೇಶೀಯರ ಅಧಿಕಾರಕ್ಕೆ ಸ್ವದೇಶೀಯರು ಒಳಪಟ್ಟಿರತಕ್ಕದ್ದೇ ಎಂಬ ಅಂಶದಲ್ಲಿ ಮಹಾರಾಜರವರ ಅಂತರವಾದ ಅಭಿಪ್ರಾಯವು ಇದುವರಿವಿಗೆ ವ್ಯಕ್ತವಾಗದೆ ಇರುವದರಿಂದಲೇ, ಜನಗಳಲ್ಲಿ ಪರಸ್ಪರ ವೈಮನಸ್ಯ ವೈಷಮ್ಯಗಳುಂಟಾಗಲಿಕ್ಕೆ ಕಾರಣವಾಗಿದೆ. ಹೀಗೆ ಮಹಾರಾಜರವರ ಅಭಿಪ್ರಾಯವು ವ್ಯಕ್ತವಾಗದಿರುವದರಿಂದ ಸ್ವಪರ ಭೇದಗಳು ಗಣಿಸಲ್ಪಡುವದಿಲ್ಲವೆಂದು ಸ್ವೀಯರು ಹೇಳಿಕೊಳ್ಳಲಿಕ್ಕೆ ಅವಕಾಶವುಂಟಾಗಿದೆ. ಮಸಲಾ ಕಾಗೆಗೂ ಕೋಗಿಲೆಗೂ ಯಾವವಿಧ ಭೇದವೂ ತೋರದೆ ಅವು ಒಂದೇ ಗೂಡಿನಲ್ಲಿ ಬೆಳದಾಗ್ಯೂ ಅಂತಾ ಸಹವಾಸವು ವಸಂತಕಾಲದ ತನಕ ಇದ್ದು ಅದು ಪ್ರಾಪ್ತವಾದಕೂಡಲೇ ಹ್ಯಾಗೆ ಬಿಟ್ಟುಹೋಗುವದೋ ಹಾಗೆಯೇ ಈಗ ಪ್ರಚುರಗೊಂಡಿರುವ ಅಧಿಕಾರ ಪ್ರಯುಕ್ತವಾದ ಸ್ವದೇಶಾನ್ಯದೇಶೀಯರ ವಿವಾದವು ಮಹಾರಾಜರವರ ಸಾಕ್ಷಾದ್ವಿಚಾರ ವುಂಟಾಗುವತನಕ ನೆಲಗೊಂಡಿದ್ದು ಬಳಿಕ ವ್ಯವಸ್ಥೆಯಾಗುವದು. ಆದಕಾರಣ ನಮ್ಮ ವಿಚಾರಗಳೂ, ಅಭಿಪ್ರಾಯಗಳೂ, ಲೇಖನಗಳೂ, ಅಂತಾ ಕಾಲವು ನಿರೀಕ್ಷಿಸತಕ್ಕವಾಗಿಯೂ, ಅಂತಾ ಅದಂ ಕೋರತಕ್ಕವಾಗಿಯೂ ಇರುತ್ತವೆ. ಏತನ್ಮಧ್ಯೆ ನಮ್ಮ ಉದ್ದೇಶವನ್ನರಿಯದೆ ಕಾರಣಾಂತರಗಳಿಂದ ಯಾರು ಎಷ್ಟು ದೂಷಿಸಿದಾಗ್ಯೂ ಅದಕ್ಕಾಗಿ ನಾವು ಸ್ವಲ್ಪವೂ ಅಂಜಲಾರೆವು.

NATIVE JEWELS

ಮಾಹೇಮುಜಕೂರ್ ೨೨ನೇ ತಾರೀಖಿನ ಮದರಾಸ್ ಮೆಯಿಲ್ ಪತ್ರಿಕೆಗೆ ವಿಶಾಖಪಟ್ಟಣದಿಂದ ಒಬ್ಬ ಜಮೀನುದಾರರು ಆಭರಣಗಳ ವಿಷಯದಲ್ಲಿ ಬರೆಯುತ್ತಾರೇನಂದರೆ—ಹಿಂದೂಗಳು ಆಭರಣಗಳನ್ನು ಸಂಪಾದಿಸುವದರೊಳು ಅತ್ಯಾಸಕ್ತರಾಗಿರುತ್ತಾರೆ. ಮಸಲಾ ಒಬ್ಬ ಮನುಷ್ಯನ ಸ್ಥಿತಿಯು ಅವನ ಭಾರ್ಯೆಯು ಧರಿಸತಕ್ಕ ಒಡವೆಗಳ ಬೆಲೆಯಮೇಲೆ ನಿರ್ಧರಿಸತಕ್ಕದ್ದಾಗಿರುತ್ತದೆ. ಮಹಮ್ಮದಿಯರ ಪ್ರಭುತ್ವದಲ್ಲಿ ಸಹ ನವೀನಗಳಾದ ಕೆಲವು ಆಭರಣಗಳು ಬಳಕೆಯಲ್ಲಿ ತರಲ್ಪಟ್ಟವು. ಇದಕ್ಕೆ ದೃಷ್ಟಾಂತವಾಗಿ ಹಿಂದೂಗಳ ಆಭರಣಗಳನೇಕಕ್ಕೆ ಹಿಂದುಸ್ತಾನಿ ಹೆಸರುಗಳು ಉಪಯೋಗಿಸಲ್ಪಡುತ್ತವೆ. ಒಬ್ಬನು ವಿಶೇಷ ಸಾಲಗಾರನಾಗಿದ್ದರೂ, ಅವನ ಭಾರ್ಯೆಯ ಮೈಮೇಲೆ ಅರ್ಧಲಕ್ಷ ೨೦೦ ರೂಪಾಯಿಗಳಿಗೆ ಕಡಮೆಯಿಲ್ಲದಂತೆ ಒಡವೆಗಳಿರುತ್ತವೆ. ಆ ಮೊಬಲಗನ್ನು ಹತ್ತುವರುಷಗಳ ತನಕ ಬಡ್ಡಿಗೆ ಕೊಟ್ಟಿದ್ದರೆ ಆ ಮೊಬಲಗು ದ್ವಿಗುಣವಾಗುತ್ತದೆ. ಆಭರಣಗಳನ್ನು ಮಾಡಿಸುವದರಿಂದ ಅಕ್ಕಸಾಲಿಗರ ಕಸಬನ್ನು ಪ್ರೋತ್ಸಾಹಗೊಳಿಸುವ ಮಾತೆಯಾದಾಗ್ಯೂ, ತನ್ಮೂಲಕ ವುಂಟಾಗುವ ಲಾಭಕ್ಕಿಂತಲೂ ಕೆಡುಕು ಅಧಿಕವಾಗಿರುತ್ತದೆ. ಊರಿಗೆ ಹೊರಗೆ ಪ್ರತ್ಯೇಕವಾಗಿರುವ ಗೃಹಗಳಲ್ಲಿ ಉತ್ಪನ್ನರಾದ ನೇಟಿವ್ ದೊಡ್ಡಮನುಷ್ಯರು ವಾಸವಾಗಲು ಭಯಪಡತಕ್ಕ ಉಂಟಾದ ಅನೇಕ ಕಾರಣಗಳಲ್ಲಿ ಇದೂ ಒಂದಾಗಿರುತ್ತದೆ. ಯಾಕೆಂದರೆ, ಅವರಬಳಿ ನಾನಾವಿಧ ಬೆಲೆಯುಳ್ಳ ಆಭರಣಗಳು ಅಧಿಕವಾಗಿರುವದರಿಂದ ಅವುಗಳಿಗೆ ನಷ್ಟ ಉಪಹತಿಯುಂಟಾಗುವದೋ ಎಂಬ ಭೀತಿಯಿಂದ ಅವರು ಯಾವಾಗಲೂ ಗ್ರಾಮ ಮಧ್ಯದಲ್ಲಿನ ವಾಸವನ್ನೇ ಅಪೇಕ್ಷಿಸುವರು. ಅಂತಾ ವಾಸದಿಂದ ಉಂಟಾಗುವ ಶರೀರಾನಾರೋಗ್ಯವನ್ನು ಸಹ ಅವರು ವಿಶೇಷತಃ ಪರಿಭಾವಿಸುವದಿಲ್ಲವು. ಮಕ್ಕಳಿಗೆ ಒಡವೆಗಳನ್ನು ವಿಶೇಷವಾಗಿ ಹಾಕುವದರಿಂದಲೇ ಖೂನಿಗಳು ಬಹಳವಾಗಿ ನಡೆಯಲಿಕ್ಕೆ ಕಾರಣವಾಗುತ್ತದೆ. ಹೆಂಗಸರೊಂದುವೇಳೆ ಒಡವೆಗಳನ್ನು ಆಶಿಸಿದಾಗ್ಯೂ ಗಂಡುಸರ್ಯಾತಕ್ಕೆ ಭಂಗಾರದ ಉಡುದಾರ, ಭಾರೀ ಉಂಗುರಗಳು ಹಸ್ತಕಡಕು ಇವುಗಳನ್ನು ಧರಿಸಿಕೊಂಡು ಮೆರೆಯುತ್ತಾರೆ? ಇಂತಾ ವಿಷಯಗಳಲ್ಲಿ ವಿನಿಯೋಗಿಸುವ ದ್ರವ್ಯವನ್ನು ದೇಶ ಕ್ಷೇಮಾಭಿವೃದ್ಧಿಗೆ ಕಾರಣಗಳಾದ ನೀರಾವರಿ ಮುಂತಾದ ಕಾಮಗಾರಿಗಳಿಗೆ ವಿನಿಯೋಗಿಸಿ ತನ್ಮೂಲಕ ಯಾತಕ್ಕೆ ಪ್ರಯೋಜನವನ್ನು ಪಡೆಯಬಾರದೆಂಬದು.

ಆಭರಣಗಳನ್ನು ಜವಾಯಿಸುವ ಕ್ರಮವು ತಪ್ಪೆಂದಾಗಲಿ, ನುಕ್ಸಾನಕರವೆಂದಾಗಲಿ ನಾವೆಣಿಸುವದಿಲ್ಲವು. ಆಭರಣಗಳು ಒಂದುಕುಟುಂಬದ ಮೂಲಧನವಾಗಿರುತ್ತವೆ, ತಥಾಪಿ ಹಿಂದೂ ಹೆಂಗಸರಿಗೆ ಮರ್ಯಾದೆಯನ್ನುಂಟುಮಾಡತಕ್ಕವಾಗಿಯೂ, ಜೀವನಾಧಾರವಾಗಿಯೂ ಕನ್ಯಾಶುಲ್ಕವಾಗಿಯೂ ಇರುತ್ತವೆ. ಈ ವಿಧವಾದ ಮೂಲಧನವನ್ನು ಸುಲಭವಾಗಿ ಕಾಪಾಡಬಹುದು. ಇದನ್ನು ಅವಕಾಶಕ್ಕೆ ತಕ್ಕಂತೆ ಕೊಂಚ ಕೊಂಚವಾಗಿ ಜವಾಯಿಸಲೂ ಬಹುದು. ಇದು ಅತ್ಯಧಿಕವಾಗಿ ಇಲ್ಲದಿದ್ದರೆ ಸಾಲಗಾರರ ತಗಾದೆಗೂ ಜಪ್ತಿಗಳ ವಿಭಾಗಕ್ಕೂ ಒಳಪಡುವದಿಲ್ಲವು. ಇವನ್ನು ಇಟ್ಟುಕೊಂಡವರು ಕಳ್ಳರಿಂದಲೂ ದುಂದಿನಿಂದಲೂ ವ್ಯಥೆ ಪಡುವದಕ್ಕೆ ಕಾರಣವಾಗುವದರಿಂದ ಅಯೋಗ್ಯವೆಂದು ಎಣಿಸಕೂಡದು. ಹಾಗೆ ಎಣಿಸಿದರೆ-ಅಜೀರ್ಣದಿಂದ ಕೆಲವರಿಗೆ ಪ್ರಾಣಹೋಗಿರುವದರಿಂದ ಭೋಜನ ಮಾಡತಕ್ಕ ಕ್ರಮವು ಅಕ್ರಮವೆಂದು ಹೇಳಿದಹಾಗೆ ಆಗುವದು. ಇವುಗಳನ್ನು ಮಾರಿ ಲಾಭಕರವಾದ ವ್ಯಾಪಾರದಲ್ಲಿ ಆ ಹಣವನ್ನುಪಯೋಗಿಸಿದರೆ ಲಾಭ ಬರುವದೆಂದರೆ, ಯಲ್ಲಿ ಪ್ರಯೋಜನ ವುಂಟೋ ಅಲ್ಲಿ ಮೂಲಧನಕ್ಕೆ ಹಾನಿ ವುಂಟಾಗುವದಾದ್ದರಿಂದ ಆ ಆಲೋಚನೆಯು ಶುದ್ಧವಾಗಿ ಬಿಟ್ಟು ಈವಿಷಯದಲ್ಲಿ ಈಗಇರುವ ನಡವಳಿಕೆಗೆ ಪ್ರೋತ್ಸಾಹವುಂಟುಮಾಡುವದೇ ಒಳ್ಳೇದಾಗಿದೆ. ಯಾವ ಯೂರೋಪಿಯನ್ನರ ನಡತೆಯನ್ನು ನೋಡಿ ಈಪ್ರಕಾರ ತಾತ್ಪರ್ಯ ಪಡುತ್ತಿದ್ದರೋ ಅಂತಾವರು ಸಹ ಈಗ ನಮ್ಮ ನಡತೆಯನ್ನು ಅನುಸರಿಸುವರಾಗಿದಾರೆ.

DEPARTURE OF DEWAN BAHADUR RAGHUNATHA ROW

ಈಗ್ಯೆ ಕೆಲವು ವಾರಗಳ ಹಿಂದೆ ನಾವು ಈ ಪತ್ರಿಕಾಮೂಲಕ ತಿಳಿಸಿದ್ದಂತೆ, ಮದರಾಸ್ ಡೆಪ್ಯುಟಿ ಕಲೆಕ್ಟರಾದ ಮಹಾರಾಜಶ್ರೀ ದಿವಾನ್ ಬಹದೂರ್ ರಘುನಾಥರಾಯರವರು ಇಂದೂರ್ ಮಹಾರಾಜರವರ ಪ್ರಧಾನ ಮಂತ್ರಿಯಾಗಿ ನಿಯಮಿಸಲ್ಪಟ್ಟು ಗತ ಸೋಮವಾರದದಿನ ಸಾಯಂಕಾಲ ಮೆಯಿಲ್ ಟ್ರೈನ್‌ನಲ್ಲಿ ಮುಂಬೈ ಮಾರ್ಗವಾಗಿ ಮಾಳವದೇಶಕ್ಕೆ ಪ್ರಯಾಣವಾದರೆಂದು ತಿಳಿಯಲಾದೆವು. ದಿವಾನ್ ಬಹದೂರವರಿಗೆ ಪ್ರಾಪ್ತವಾದ ಉನ್ನತ ಪದವಿಗಾಗಿ ನಾವೊಂದು ದೆಸೆಯೊಳು ಬಹಳ ಸಂತೋಷಿಸಿದಾಗ್ಯೂ ರಾಯರ ವಿಶ್ಲೇಷಪ್ರಯುಕ್ತವಾದ ವಿಷಾದವು ನಮ್ಮನ್ನು ಮತ್ತೊಂದುಕಡೆ ಬಾಧಿಸದಿರಲಿಲ್ಲವು. ಈ ತಾದೃಶ ಭಾವನೆಯೇ ಅವರ ಇಷ್ಟಮಿತ್ರರಿಗೆಲ್ಲ ವುಂಟಾಗಿದೆಯೆಂದು ಧಾರಾಳವಾಗಿ ಹೇಳಬಹುದು. ಬಹುಮಂದಿ ಪ್ರಶಂಸೆಗೆ ವಿಷಯರಾದ ಸದರೀ ದೊಡ್ಡಮನುಷ್ಯರ ಅಸಾಧಾರಣಗಳಾದ ಸುಗುಣಗಳು ಎಲ್ಲರಮನಸ್ಸು ಆಕರ್ಷಿಸತಕ್ಕವಾದದರಿಂದ ಅವರ ಪ್ರಯಾಣ ವೃತ್ತಾಂತವನ್ನು ತಿಳಿದಕೂಡಲೇ ಅವರ ಇಷ್ಟಮಿತ್ರರು ತಮ್ಮ ಹೃದಯಂಗಮಗಳಾದ ಪ್ರೀತಿ ಗೌರವ ವಿಶ್ವಾಸಾದಿಭಾವಗಳನ್ನು ಸ್ವತಏವ ನಾನಾಪ್ರಕಾರದಿಂ ವ್ಯಕ್ತಪಡಿಸಲಾರಂಭಿಸಿದರು. ಇವರಿಗೆ ಆಯಾ ಸಾಮಾಜಿಕರಿಂದಲೂ, ಮಾನನೀಯರಾದ ದೊಡ್ಡಮನುಷ್ಯರಿಂದಲೂ ಮಾಡಲ್ಪಟ್ಟ ಸತ್ಕಾರಗಳೂ, ರಾಯರವರ ವಿಷಯವಾಗಿ ತಿಳಿಸಲ್ಪಟ್ಟ ಅಂಶಗಳೂ, ಸಂದರ್ಭೋಚಿತಗಳಾದ ಅವರ ಉತ್ತರಗಳೂ, ಪ್ರತಿಯೊಬ್ಬರ ನಿಜಗಳಾದನುಭಾವಗಳನ್ನು ವ್ಯಕ್ತಪಡಿಸುತಲಿದ್ದವು. ಹೀಗೆ ಸ್ವಸ್ಥಾನದೊಳು ನಡೆದ ಮರ್ಯಾದೆಗಳು ಮಾತ್ರವಲ್ಲದೆ ಮಾರ್ಗವಾತ್ರ ಹೋದ ಸ್ಥಳಗಳಲ್ಲಿ ಸಹ ಅಲ್ಲಿನ ಪ್ರಜೆಗಳು ಅವರು ಬಹಳವಾಗಿ ಸತ್ಕರಿಸಿದರೆಂದು ತಿಳಿದುಬರುತ್ತದೆ. ಮುಖ್ಯವಾಗಿ ಮಹಾರಾಜಶ್ರೀ ರಘುನಾಥರಾಯರವರ ಪ್ರಖ್ಯಾತವಾದ ಮಂತ್ರಿತ್ವವನ್ನು ಉಚಿತಜ್ಞತೆಯೊಡನೆ ಅಪೇಕ್ಷಿಸಿದ ಇಂದೂರ್ ಮಹಾರಾಜರವರಿಗೂ ಅವರ ಪ್ರಜೆಗಳಿಗೂ ಅದರು ಸುತೃಪ್ತಿಯನ್ನುಂಟುಮಾಡಿ ಸ್ವದೇಶೀಯರ ಪ್ರತಿಷ್ಠೆಯಂ ಕಾಪಾಡುವರೆಂಬ ನಂಬಿಕೆಯು ನಮಗೆ ಸಂಪೂರ್ಣವಾಗಿ ವುಂಟಾಗಿದೆ. ವಿದ್ಯಾ ಬುದ್ಧಿ ವಿವೇಕ ಚಾತುರ್ಯೈಶ್ವರ್ಯಾದಿಗಳಿಂ ಪರಿಪೂರ್ಣರಾಗಿರುವ ರಾಯರವರಿಗೆ ಇನ್ನು ಅಪೇಕ್ಷಿತವಾದದ್ದು ಆಯುರಾರೋಗ್ಯ ಭಾಗ್ಯ ವೊಂದೇಯಾದದರಿಂದ ಅದನ್ನು ಅವರ ಉಪಾಸ್ಯನಾದ ಕಂಸಾರಿಯು ಅನುಗ್ರಹಿಸಿ ಈಗ ಪ್ರಾಪ್ತವಾದ ಉನ್ನತಾಧಿಕಾರದಲ್ಲಿ ಅವರಿಗೆ ಸಂಪೂರ್ಣ ಕೀರ್ತಿಯನ್ನುಂಟುಮಾಡಬೇಕೆಂಬ ಪ್ರಾರ್ಥನಾಪೂರ್ವಕವಾದ ಏತದ್ದೇಶೀಯರ ಶುಭವಾದನವನ್ನು ಈ ಪತ್ರಿಕಾಮೂಲಕ ಅವರಿಗೆ ತಿಳಿಸುವೆವು.

ಮ|| ರಾ|| ದಿವಾನ್ ಬಹದೂರ್ ರಘುನಾಥರಾಯರವರಿಗೆ ಪಚ್ಚೆಯಪ್ಪ ಮೊದಲಿಯಾರ್ರವರ ಸ್ಕೂಲ್ ಸೌಧದಲ್ಲಿ ಇದರಡಿಕಂಡ ಸಂಸ್ಕೃತ ವಿಜ್ಞಾಪನ ಪತ್ರಿಕೆಯು ಒಪ್ಪಿಸಲ್ಪಟ್ಟಿತು:

ಶಾಂಯಾಚಿಟ್ಟೀರಘುನಾಥರಾಯಮನಘಂ ಖ್ಯಾತಿರ್ಹಾರೀಸದಾ ಐಯ್ಯಾದರ್ಶಬ್ರಿಟಿಷಜನಸ್ಯಜನಕಃ ಬುಧಸ್ಸನರ್ಪಕ್ಷ್ವರಃ ರಾಜ್ಞಾಂ ಸರ್ವಜನೇಶ್ವರೀಂಚ ಸಚಿವೈಸ್ಸ್ಥಯಿರ್ರ್ಮಂಡಲಾಧೀಶ್ವರೈಃ ಶ್ರೀಮದ್ಭಾರತಖಂಡಲೋಕ ನಿವಹೈಸದ್ಧರ್ಮಜಿಜ್ಞಾಸುಭಿಃ ||೧||

ಭಾರದ್ವಾಜಕುಲಾರ್ಣವೆಂದುರು ಶಾಸ್ತ್ರಾಗ್ರಿಃ ಬುಧಾಹ್ಲಾದಕಃ ಶ್ರೀಮದ್ವೆಂಕಟರಾಯರಾಯ ಇತಿವಿಖ್ಯಾತೋ ನಿಕಂರಾಜಧೀಸೋಯಂಹೂ

[illegible] ಶಾಸ್ತ್ರ [illegible] ಶುಭೂಪತಿ [illegible] ವಾತ್ಯೈಕುಸುಮ್ಯಾ ನುತ್ಯೈರಳ [illegible] ತಿವರ್ಗ ||

[illegible] ತನಯೊವಿಶುದ್ಧಚರಿತಃ ಶ್ರೀಕಾರ [illegible] ಕೊಲ್ಹರಕ್ಷ್ಮಾಪತಿಶಾಲಿತಃ ಸಚಿವತಾ ದಾಗಧ [illegible] ಸನ್ಮಾನಿತಃ ಕುಪ್ರತ್ಯಕ್ಷ [illegible] ವಿಚಾರ ವಾರೊಣ [illegible] ಸತ್ಯಮಾರ್ಗನಿಷ್ಣಾತುದಃ ಸದ್ಧ ಣಿನಟುಮತಿಃ [illegible] ಮಾರ್ಗನಮುದಾರಗುಣನಿಯತಂ [illegible] ಸುಜಗ್ || ೩ ||

ಆಪದ್ಯತ್ಕ್ಷತಯೊನಿಕಾಪರಿಣಯ [illegible] ಯೊನುಸ್ಮೃತಿವಿದೆಸುಸ್ಮೃತಿಸು [illegible] ತಃ ಶಾಲಿನಲುಕ್ಟೊ [illegible] ದ್ದದಾರಮುಹಿಳಾಪ್ಯತ್ರಾ [illegible] ನಿರ್ಬನಿವೃತ್ತಿಯೆಗನ ಕರ [illegible] ಧ್ರೃವಸ್ಯಯಂ ಭೂಗಿಸಿಃ || ೪ ||

ವಿದ್ಯಾಕ್ಷೇತ್ರ [illegible] ನಾರುಕೆಂಮು ದ್ರಾಸ್ಯ [illegible] ಪ್ರಕಟೀವಕಾರದ [illegible] ಹೃದ್ಗತಮೆವಚಾಸಿ [illegible] ದ್ದದಾರ ||೫||

[illegible]

Occasional Notes.
ನೈಮಿತ್ತಿಕ ಟಿಪ್ಪಣ್ಯಸ

A princely donation —[illegible] ನದ ಮಹಾರಾಜವರರ [illegible] ಳ ಸಾಕೀಜವಿ [illegible] ಯವಲ್ಲಿ [illegible] ದಾನಮುಬಗ್ಯೆ ೫೦೦೦ ರೂಪಾಯಿಗಳ [illegible] ರೆಂದು ತಿಳಿಯುರುತಿದೆ.

The young Tuckoji [illegible]
ಗಾಂವಲ್ಸು [illegible] ಡಿಂಜನ್ [illegible] ಗಿ ವಾಖಲಾಗಿ [illegible] ವಿಳಿಯಂ ಮೂರ [illegible] ವಬಗ್ಯೆ ಅಲ್ಲಿಗೆ [illegible]

The Viceroy [illegible]
ಮಾಹೇಮಜಕೋ [illegible] ದಬನ ಮೈಸ್ಕಾಮಿಯವರ ದಕ್ಷಣದೇಶ ಸಂಚಾರವಾಡಿಕೊ [illegible] ಲ್ಲಿನ ಪ್ರಜೆಗಳು ಅವರು [illegible] ದೊತನೆಬರವಾ [illegible]

The Maharaja of Travancore — ತಿರುವಾಂಕೂರು ಮಹಾರಾಜರವರು [illegible] ವಾನರು ಮುಂತಾದ [illegible] ಪರಿವಾರದೊಡನೆ ಕ್ಷಿಪ್ರದೊಳು ಮದರಾಸಿಗೆ ಪ್ರಯಾಣಮಾಡಿ ಅಲ್ಲಿ ದ ಮುಂಬೈಸ್ನಾಸ್ತಂದ್ಲಿ ಕೆಲವು [illegible] ಬಳಿಕ ಮಾರ್ಚ್ ಆಖ್ಯರಿಗೆ ರಾಜಧಾನಿಗೆ ದಯ ಮಾಡುವರೆಂತಲೂ, ಮದರಾಸ್‌ನಲ್ಲಿ [illegible] ದಿನಗಳೂ, ಮುಂಬೈಯಲ್ಲಿ ಹದಿನಾಲ್ಕು ದಿನಗ ಳೂ, ಪೂನಾಬೇಲಿಯಲ್ಲಿ ಒಂದುವಾರವೂ ಮೊಕ್ಕಾಂ ಮಾಡುವರೆಂತಲೂ, ಮದರಾಸು ಪತ್ರಿಕೆ ಯೊಂದು ತಿಳಿಸುತಿದೆ. ತರುವಾಯ ಮೈಸೂರು ಯುವರಾಜ ನೇಟಿಯಬಗ್ಯೆ ಕಲ್ಕತ್ತೆಗೆ ಹೋಗುವ ಆಲೋಚನೆ ಸಹ ಮಹಾರಾಜರವರಿಗೆ ಉಂಟೆಂದು ಕೇಳುತ್ತೇವೆ

The License Tax —೧೮೮೫-೮೬ನೇ ಇಸವಿಯಲ್ಲಿ ಬಂಗಾಳದೊಳು ೨೫೮೨೬ ಮಂದಿಗೆ ಲೈಸೆನ್ಸ್ ಟ್ಯಾಕ್ಸ್ ಯೆಂಬ ತೆರಿಗೆ ಹಾಕಲ್ಪಟ್ಟು ಆ ಸ್ಮತಿ ತಗರಾರ್‌ಗಳಮೇಲೆ ೫೦೦೫ಮಂದಿ ತೆರಿಗೆ ವಸೂಲಿಯಿಂದ ವಿನಾಯಿಸಲ್ಪಟ್ಟರು. [illegible] ಮಂದಿ ಅಪೀಲಿನಲ್ಲಿ ತೆರಿಗೆಯಿಂದ ತಪ್ಪಿಸಲ್ಪಟ್ಟರು, ಅವ್ವರಿಗೆ ೬೯,೮೮೨ ಮಂದಿಯಿಂದ ಸದರೀ ತೆರಿಗೆ ವಸೂಲ್ಮಾಡಲ್ಪಟ್ಟರು. ಸದರೀ ಸಾಲಿನಲ್ಲಿ ಹಿಂದಿನವರುಗಳಿಗಿಂತಲೂ, ೩೫೦ ಮಂದಿ ಮಂದ ಜಾಸ್ತೀಯಾಗಿ ವಸೂಲಾಯಿತು. ಬಂಗಾಳ್ ಪ್ರೆಸಿಡೆನ್ಸಿಯಲ್ಲಿರುವ ಆರುಕೋಟಿ ಅರವತ್ತುನಾಲಕ್ಷ ಪ್ರಜೆಗಳಲ್ಲಿ ಪಾಪಾಸಾಯಿಯಂತೆ [illegible] ಒಂದು ಇಸುಂವ ಪ್ರಕಾರ ತೆರಿಗೆ ವಸೂಲಾಯಿತು ಮತ್ತು [illegible] ಗೆ ೧ ರೂಪಾಯಿಯಂತೆ ಸರ್ಕಾರಕ್ಕೆ ವಸೂಲಾಗಿ ೧೮ ೬೯,೧೨೦ ರೂಪಾಯಿಗಳು ಜಮೆ ಬಂದಿರುತ್ತ ವೆಯಂತೆ

LOCAL AND PROVINCIAL NEWS
ಒಳದೇಶವರ್ತ್ತಮಾನ ತಾಲ್ಲೂಕಿಜಾತಿವೃತ್ತಾಂತಗಳು

Rampur channel.—ನಂಜನಗೂಡು ತಾಲ್ಲೂಕು ರಾಮಪುರದ ನಾಲೆಯನ್ನು ವೃದ್ಧಿಪಡಿಸು ವುದಕ್ಕೆ ೨,೩೨,೦೦೦ ರೂಪಾಯಿಗಳ ಕಾಮಗಾರಿ ಯನ್ನು ಮಹಾರಾಜರವರು ಮಂಜೂರ್ಮಾಡಿದಾ ರೆಂದು ತಿಳಿಯಬರುತಿದೆ

A meeting.— ಬೆಂಗಳೂರು ಮ್ಯಾವರ್ಸ್ಲೆ ತ [illegible] ಮತ್ತು ಬೌರಿಂಗ್ ಆಸ್ಪತ್ರೆಗೆ [illegible] ನ [illegible] ತೀವರ್ಮಾನಿಸಲು ಸಿರುವವ್ವರಿಂದ ಈವಿಷಯದಲ್ಲಿ ಯೋಚಿಸಿ ಮೈಸೂರು ಸರ್ಕಾರಕ್ಕೆ ವಿಜ್ಞಾಪಿಸಿಕೊಳ್ಳುವದಕ್ಕೆ [illegible] ಕೂಡುವ [illegible] ಮುಂದಿನ [illegible] ಇರುವ ಗರ್ಲ್ಸ್ ಸ್ಕೂಲ್ ಹಾಲಿನಲ್ಲಿ [illegible] ಬರುವಂ [illegible]

H. Mysore Gazette —ಗವರ್ಮೆಂಟ್ ಮೈಸೂರು [illegible] ಅತಿ [illegible] ಗಳ [illegible]

A medical [illegible] —ಸುಸಿಕ್ಷಿತಯ ಡಿಸೆಂಬರ್ ಆಸ್ಪತ್ರೆಗಳ ಕೋರ್ಟ್ ಸದಸ್ಯರುಗಳಿಗೆ ೧೮೮೬ನೇ ಇಸವಿ ಡಿಸಂಬರ್ ೧೩ನೇ ಮೈಸೂರು [illegible] ೧೮೮೧ನೇ [illegible] ಸರ್ಕ್ಯುಲರನ್ನು ಕೊಟ್ಟಿರುತ್ತಾರೆನಂದರೆ—ಹೇಳಲ್ಪಟ್ಟ ದರ್ಜೇ ನೌಕರರ ಸರ್ವಿಸ್ ರಿಜಿಸ್ಟರ್‌ಗಳು ಪೂರ್ತಿ ಜಾರಿ ಯಲ್ಲಿ ತಪ್ಪದನ್ನು ಕೇಳ್ಪಟ್ಟ ದರ್ಜೇಯ ನೌಕರ ಸರ್ವಿಸ್ ರಿಜಿಸ್ಟರ್ ಇತಲ್ಪಡುವ ದಿಲ್ಲವೆಂಬ ದಾಗಿ ತಿಳಿಯಬರುವದರಿಂದ ಕಂಟ್ರೋಲರ್ ಯವರು ತಿಳಿಸುವದೇನಂದರೆ, ಡಿಪಾರ್ಟ್‌ಮೆಂಟುಗಳ ನಾಯಕರೂ, ಮೇಲ್ಪಟ್ಟ ಮತ್ತು ಕೀಳ್ಪಟ್ಟ ದರ್ಜೆಯ ನೌಕರರ ಸರ್ವಿಸ್ ರಿಜಿಸ್ಟರ್‌ಗಳು ಇವಲ್ಲವರೆಗ್ವದ್ದೇಂದು [illegible] ಸಿವಿಲ್ ಅಕೌಂಟ್ ಕೋಡಿನ ೬ನೇ ಅಧ್ಯಾಯದ ೧೬೭ನೇ ರೂಲಿಗೆ ನಿಗಕೊಡಬೇಕಾಗಿರುತದಲ್ಲದೆ ಕೀಳ್ಪಟ್ಟ ದರ್ಜೆಯ ನೌಕರರು ಉದ್ಯೋಗದಲ್ಲಿರತಕ್ಕಂಥಾ ಆಫೀಸುಗಳಲ್ಲಿ ಅವರುಗಳ ಸರ್ವಿಸ್ ರಿಜಿಸ್ಟರ್‌ಗಳನ್ನು ಬರೆದು ದೃಢಪಡಿಸಿ ಇಡಬೇಕಾದ ವಿಷಯದಲ್ಲಿ ಜಾಗ್ರತೆಯಾಗಿ ತಕ್ಕ ಯೋಚನೆ ನಡಿಸಬೇಕಾಗಿರುತ್ತೆ—ಎಂಬದು.

CORRESPONDENCE.

ಮಹಾರಾಜಶ್ರೀ ಕರ್ನಾಟಕ ಪ್ರಕಾಶಿಕಾ ಎಡಿಟರವರ ಸಮಕ್ಷಮಕ್ಕೆ.

ಅಯ್ಯಾ,—ಈ ಪುರದಲ್ಲಿ ನೆಲಗೊಂಡಿರುವ ಶ್ರೀಚಾಮರಾಜೇಂದ್ರ ಕರ್ನಾಟಕ ನಾಟಕ ಸಭೆಯವರು ಇದೇತಿಂಗಳ ೨೦ ಮತ್ತು ೨೨ ರಲ್ಲು ನೂತನವಾಗಿ ಮಾಡಿರುವ ಶ್ರೀಮದ್ರಾಮಾಯಣ ನಾಟಕವನ್ನೂ ಮತ್ತು ಮಾಲತೀ ಮಾಧವೀಯವೆಂಬುವ ನಾಟಕವನ್ನೂ ಮೈಸೂರು ಕಲ್ಯಾಣಿ ಮೈದಾನದಲ್ಲಿ ಇರುವ ಲೇಟ್ ರಂಗಾಚಾರ್ಯರ ಮೆಮೊರಿಯಲ್ ಹಾಲ್‌ನಲ್ಲಿ ಆಡಿದರು. ಆದರೆ ಈ ನಾಟಕ [illegible] ವರಿಗೆ ಇದುವರಿಗೂ ಆಲೋಚನೆ [illegible] ಸ್ವಲ್ಪವಾ ದರಲಿಲ್ಲ ಇನ್ನು ಮುಂದೆ ಅವು ಪ್ರಸಿದ್ಧವಾಗು [illegible] ಆದೇನಂದರೆ ಪ್ರಾರ್ಥದಲ್ಲಿ ಈ ಸಭೆಯವರು ನೂತನವಾದ ನಾಟಕಗಳನ್ನಾಡುವ ರಾತ್ರಿಯಲ್ಲಿ ಎಲ್ಲರಿಗೂ ತಿಳಿವಹಾಗೆ ೩೦೦—೪೦೦ ರೂ||ಸಾಧಾರಣವಾಗಿಬರುತ್ತಾ ಇದ್ದದ್ದು ಸರಿಯಷ್ಟೆ. ಈಗ್ಯೆ ಆಡುವ ಹೊಸ ನಾಟಕಗಳಿಗೆ ಮೂರು ೩೦—೪೦ ರೂಪಾಯಿಗಳಿಗೆ ಇಳಿಯಿತು ಇದಕ್ಕಾಗಿ ಮೇಲಿಕಂಡ ಸಭೆಯವರಿಗೆ ಆಲೋಚನೆ ಇಲ್ಲ [illegible] ಹೊಸ ನಾಟಕಗಳಿಗೆ ಈ ರೀತಿಯಾದಮೇಲೆ ಬರುವ ಕಲಿವಾರನಂದರೆ, ಡಿಸಂಬರ್ ೨೦ ರಲ್ಲಿ ಬೋಳೇ ವಿ [illegible] ದರ್ಶನವನ್ನು ಆಮುಖವಾಗಿ ಹೇಳಿರುತ್ತಾರಷ್ಟೆ, ಅದಕ್ಕೆ [illegible] ನಾವರಿಯೆವು. ಯಾಕಂದರೆ ಹೊಸ ನಾಟಕಕ್ಕೆ ೩೦ತ್ತಾವರೆ ಹಳೇದಕ್ಕೆ ಯೆಷ್ಟು ಬರಬಹುದೆಂದು ಯೋಚಿಸಬಹುದು. ಈ ನಾಟಕ ಸಭೆಯವರಿಗೆ ಈ ರೀತಿಯಾಗುವದಕ್ಕೆ ಕಾರಣವೇನಂದರೆ—ಇವರು ವ್ಯಾಗೆ ಆಡಿದರೂ ನಮಗೆ ಉಂಟಾದ ಹೆಸರಿನಿಂದ ದುಡ್ಡು ಬರುತದೆಂಬ ನಂಬ್ಯವಾದನೆಯುಂಟಾಗಿರುವದೆ. ಅದು ಹ್ಯಾಗುವದೆ, ಮುಂದ್ಯದ ರಂಗಾಚಾರ್ಯರು ರತ್ನಾವಳೀ ಎಂಬ ನಾಟಕವನ್ನು ಪ್ರದರ್ಶಿಸಿದ್ದರು. ಅಗ್ಯೆ ಒಬ್ಬರನ್ನೊಬ್ಬರು ವಿಚಾರಿಸಬೇಕೆಂಬ [illegible] ಚೆನ್ನಾಗಿ ಆಡುತಲಿದ್ದರು, ಈಗ್ಯೆ ಆದು ಹೋಯಿತು ಹಾಳೂರಿಗೆ ಉಳಿದವನೇ ಗೌಡನೆಂಬುವ ಗಾದೆಗೆ ಸರಿಯಾಗಿ ಕುಪರಿದೆ. ಶ್ರೀಮದ್ರಾಮಾಯಣವೆಂಬ ನಾಟಕವನ್ನು ಬರಿದಾಗ್ಯೆ ಪಾಮರರಾದ ನಾವು ರಾಮಾಯಣವಂದರೆ ರಾಮನು ಹುಟ್ಟಿದ್ದು ಮೊದಲು ಪಟ್ಟಾಭಿಷೇಕದ ವರಿವಿಗೂ ಬರಬಹುದೆಂದು ನಂಬಿ ನಾವಿವನ್ನಾದರೂ ನೋಡಬೇಕೆಂಬ [illegible] ಹೋಗಿ ನೋಡ್ಯು, ಹೆಚ್ಚಾಗಿ ಕೊನೆ ಯರತಾ ಇಲ್ಲದ್ದನ್ನು ನೋಡಿ, ದುಡ್ಡುಗಳಿಗೆ [illegible] ವಾತ್ರವೆನ್ನಲ್ಪ [illegible] ವಾಗಿ ನಿರಾಶೆಗವಾಯಿತೆಂದು ಪ್ರಸನ್ನದ ತಲಿದ್ದೆವು [illegible] ಮತ್ತೊಂದು ಹೊಸನಾಟಕವನ್ನಾಡಿದರು. ಅವನ್ನಾದರೂ ನೋಡಿ ಸುಖೋಪ [illegible] ಈ ನಾಟಕದವರ್ನು ಮಾಡುವರಿಗೆ ಸಹ ಅವರ ಅರ್ಥವನ್ನು ತಿಳಿದುಕೊಳ್ಳುವದು ಅಸಾಧ್ಯವಾಗಿದ್ದು ನಮ್ಮಂತಾ ಮೂಢರು ಹ್ಯಾಗೆ ತಿಳಿದು ಸುಖಿಸಬಹುದು, ಅವರಲ್ಲಿ ಸಹ ೩ ಎಂತ ವಿಕಾದಂತಾಗಿ ಬಿ [illegible] ಹಾಗಾದರೂ ಅಗಲಿ, ಹಾಡುಗಾರಿಕೆಯಿಂದಲಾದರೂ ಸಂತೋಷ ಪಡೋಣವಂದರೆ ಅವರಲ್ಲಿ ಚೆನ್ನಾಗಿ ಹಾಡುತಲಿದ್ದವರೊಬ್ಬರ ಕಣ್ಣಿಗೂ ಕಾಣಿಸಲಿಲ್ಲವು. ಸೀನರಿಗಳನ್ನಾದರೂ ನೋಡಿ ಸಂತೋಷ ಪಡೋಣವಂದರೆ ಅವುಗಳ ನಿರ್ಮಾಣಮಾಡುವವರು ಯಾರಲೀಇಲ್ಲ ಈ ರೀತಿಯಾಗಿ ಆಡಿದರೆ ನಾವುಗಳು ಹ್ಯಾಗೆ ತಾನೆ ದುಡ್ಡು ಕಳೆದುಕೊಂಡು ಸುಮ್ಮನಿರಬಲ್ಲೆವು ಹೀಗೆಲ್ಲಾ ಅದಿ ದುಡ್ಡು ಸಂಪಾದಿಸುವದಕ್ಕಿಂತಲೂ ಸುಮ್ಮನಿರುವದು ಚೆನ್ನಾಗಿ ತೋರುತದೆ. ಮತ್ತು ಉಪಾಧ್ಯಾಯರೂ ಇತರ ಕೆಲಸಗಳಲ್ಲಿ ಈ ನಾಟಕಕ್ಕೆ ಸೇರಿರುವ ಹುಡುಗರನ್ನು ಪ್ರೋತ್ಸಾಹಗೊಳಿಸಿ ಬದುಕುವ ಮಾರ್ಗವನ್ನು ಅವರಿಗೆ ಹೇಳಿಕೊಡುವದು ಯುಕ್ತವಾಗಿದೆ ಹಾಗಿಲ್ಲದಿದ್ದರೆ ಅನ್ಯಾಯವಾಗಿ ಇದಕ್ಕಾಗಿಯೇ ವಿದ್ಯೆಯನ್ನು ಕಳೆದುಕೊಂಡು ಹುಡುಗರು ಮುಂದಕ್ಕೆ ವ್ಯಸನಪಡುವದರಲ್ಲಿ ಸಂದೇಹವೇ ಇಲ್ಲ. ಈಗ್ಯೆ ಮೈಸೂರಲ್ಲಿ ವೇ ಶ್ಯಾಸ್ತ್ರೀಯರು ನಾಟಕಗಳನ್ನು ಮಾಡುತ ಇರುವರೆಂದು ವರ್ತಮಾನವಿದೆ ಮುಂದ್ಯದ ರಂಗಾಚಾರ್ಯರು ಪುನಃ ನಾಟಕಗಳನ್ನು ಮಾಡಿ ಮರಳಿ ಆಡುವರೆಂಬದಾಗಿಯೂ ವರ್ತಮಾನವಿದೆ. ಈ ಯರಡೂ ಆದನಂತರ ಅವುಗಳ ಸ್ಥಿತಿ ಯೆಂತಿರುವಲ್ಲೋ ನೋಡಬೇಕು

ಅಯ್ಯಾ—ನಮ್ಮ ಪೋಲೀಸ್ ಆ|| ಕೆ|| ಮಿ. ನ ಸರುದರ್ ಸಾಹೆಬರವರು ಖುದ್ದು ವಕ್ತೀಗೋಸ್ಕರ ಪ್ರವರ್ತಿಸಿದ್ದ ಒಂದು ಖೂನಿ ಮೊಕದ್ದಮೆಯು ಅದ್ಯಾಪಿ ಮುನಸಫೆ ಕೋರ್ಟನಲ್ಲಿ ತೂಗಡಿಸುತ್ತಾ ಇದೆಯೆಂದು ಗತವಾರದಲ್ಲಿ ಪ್ರಕಟಪಡಿಸಿದ್ದೆನಷ್ಟೆ; ಸದರೀ ಮೊಕದ್ದಮೆಯು ಸೆಷನ್‌ಕೋರ್ಟಿಗೆ ಕಮಿಟ್ ಆಗಿ ಈಗ ಬೈಡಿಗೆ ಖುಲಾಸೆ ಆಯಿತು. ನಾನು ತಿಳಿಸಿದ್ದ ಭಯಂಕರಗಳಾದ ನಾಲ್ಕು ಮೊಕದ್ದಮೆಗಳು ನಾಲ್ಕುದಾರಿಯಾದವು ಮೆ|| ನಸುರುದ್ದೀ ಸಾಹೆಬರವರು ಈ ಡಿಸ್ಟ್ರಿಕ್ಟಿನಿಂದ ವರ್ಗವಾಗಿ ಹ ಯವಷ್ಟಾದ ಒಂಬತ್ತು ತಿಂಗಳಲ್ಲಿ ಪುನಃ ಯೆರಡು ಖೂನಿಗಳು ನಡೆದವು. ಈ ಪೈಕಿ ಒಂದು ಮೊಕದ್ದಮೆಯಲ್ಲಿ ಬೈಡಿಗೆ ಹತ್ತುವರುಷಗಳ ಕಠಿಣ ಸಜಾ ಆಯಿತು. ಮತ್ತೊಂದು ಕೇಸ್ ಶಾಲಿ ಸಾಗರದ ಮುನಸಫ್ ಕೋರ್ಟನಲ್ಲಿ ವಿಚಾರಣೆಯಲ್ಲಿದೆ. ನ್ಯಾಯವು ದುಜವಾಗುವ ಸಂದರ್ಭದಲ್ಲಿ [illegible] ಹೇಳುತ್ತಾರೆ ಈ ಮಲ್ನಾಡು ತಾಲ್ಲೂಕುಗಳಲ್ಲಿ ದುಷ್ಕರಣಗಳು ಅನೇಕನಡೆಯುತಿವೆ. ಈ ಪೈಕಿ ಕೆಲವು ಕೇಸಿನಲ್ಲಿ ಅನುಮಾನ ಸುಚವಿಸಿ ಅಪರಾಧಿಗಳಿಗೋಸ್ಕರ ಮುದ್ದೆಗಳು ಆಸ್ಪತ್ರೆಗಳಿಗೆ ಕಳುಹಿಸಿದ್ದರೆಂತ ಕೇಳುತ್ತೇನೆ ಹಾಜಿವೀ ತಲವದಾರರಾದ ಆಸ್ಪತ್ರೆಯು ಅಸಿಸ್ಟೆಂಟರ ಸರಟಫಿಕೇಟಿನಲ್ಲಿ ಗವರ್ನ್‌ಮೆಂಟಿನವರು ವಿಶೇಷ ನಂಬಿಕೆ ಇಡುವದಕ್ಕಿಂತಲೂ ಸಂದೇಹಾಸ್ಪದವಾದವನ್ನು ಅಪರಾಧಿಗಳಿಬಗ್ಯೆ ಸಿವಿಲ್ ಸರ್ಜನ್‌ರುಗಳಿಗೆ ಕಳುಹಿಸುವದು ಉತ್ತಮವಲ್ಲವೆ? ಮಸಲಾಪ್ರೋಸ್ಟಮಾರ್ಟಂಪರೀಕ್ಷೆಯಾದಾಗ ವಿಷಪ್ರಯೋಗಿಸಿದ ಮೊಕದ್ದಮೆಯಲ್ಲಿ ಕರಳನ್ನು ಕೆಮಿಕಲ್ ಪರೀಕ್ಷೆಗೋಸ್ಕರ ಡಾಕ್ಟರ್ ಬಳಿಗೆ ಕಳುಹಿಸುವ ಸಬಬ್ ಮೋಸ ನಡೆಯಲು ಅವಕಾಶವಿರುವದಿಲ್ಲ. ಹೊಡೆಯುವದರಿಂದ ಖೂನಿಯಾಗಿದ್ದರೆ ಡ್ರೆಸ್ಸರ ಅಪರಾಧಿಯಾದ ತರುವಾಯ ಶವವನ್ನು ದರ್ಶನಮಾಡಿ ಬಿಡುತ್ತಾರೆ ಇಂತಾ ವಿಷಯದಲ್ಲಿ ಡ್ರೆಸ್ಸರು ಕೊಡುವ ಅಭಿಪ್ರಾಯವೇ ಸ್ಥಿರವಾಗಿ ನಿಲ್ಲುತ್ತೆ. ಮತ್ತು ಇವರಮೇಲೆ ತನಿಖೆಗೆ ಅವಕಾಶವಿಲ್ಲವು. ಈ ಪ್ರಾಂತ್ಯ ಒಂದು ತಾಲ್ಲೂಕಿನಲ್ಲಿ ನಡೆದ ಒಂದು ದುಷ್ಕರಣದಕೇಸಿನಲ್ಲಿ ಪೋಲೀಸ್ ಆಫಸರರು ತತ್ಕಾಲದಲ್ಲಿ ಮಾಡಿಸಿದ ಮಹಜರ್ ಮತ್ತು ದರ್ಶನವಾಡಿದ ಕೆಲವು ದಿವಸಗಳ ತರುವಾಯ ಡ್ರೆಸ್ಸರು ಅಪರಾಧಿಗಳಿ ಮಾಡಿಕೊಟ್ಟ ಇರಾದೆಸಹ ಬಿನ್ನಾರ್ಥ ಕೊಟ್ಟ ಸಬಬ್ ಸದರೀ ಮೊಕದ್ದಮೆಯು ಪುನಃ ವಿಚಾರಣೆಗೋಸ್ಕರ ಆರ್ಡರ್ ಕೊಟ್ಟಿರುವದಾಗಿ ಕೇಳುತ್ತೇನೆ. ಇದಲ್ಲದೆ ಪೋಲಿಸ್ ಆಫಸರರಿಗೂ ಡ್ರೆಸ್ಸರಿಗೂ ಪ್ರೈವೇಟ್ ಸಂಬಂಧವಾದ ಮನಃಕಷಾಯ ಇದ್ದ ಸಬಬ್ ಡ್ರೆಸ್ಸರು ಸುಳ್ಳು ಅಭಿಪ್ರಾಯ ಪಟ್ಟಿರುವದಾಗಿ ಹೇಳಿಕೊಳ್ಳುತ್ತಾರಲ್ಲದೆ ವಿರೋಧಕ್ಕೆ ಕಾರಣವಾದ ಕೆಲವು ಕಾಗದಗಳು ಸಹ ದರ್ಯಾಪ್ತೀಕಾಲದಲ್ಲಿ ಹಾಜರಾಗುವದಾಗಿ ಕೇಳುತ್ತೇನೆ.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಪೈಕಿ ಒಂದು ತಾಲ್ಲೂಕಿನ ಪೋಲೀಸ್ ಇನ್ಸ್‌ಪೆಕ್ಟರವರು ನ್ಯಾಯ ದಪ್ಪ ದ್ವ್ಯಾಕರ್ಷಣೆ ಮಾಡಿದ್ದಕ್ಕಾಗಿ ಎಂತೆನೋ [illegible] ದಂಡನೆಗೆ ಗುರಿಯಾದರೆಂತಲೂ, ಮತ್ತೆರಡು ತಾಲ್ಲೂಕು ಇನ್ಸ್‌ಪೆಕ್ಟರ್‌ಗಳು ಕೆಲವು ಕಾಗದಗಳನ್ನ ಸೃಷ್ಟನೆ ಮಾಡಿದರೆಂದು ತೆಳ್ಳ್ಯಟೀಕನ್ನಿಸನವರ ಸಾಕ್ಷಾತ್ ದರಿಯಾಫ್ತಿಯಲ್ಲಿರುವದಾಗಿಯೂ ಕೇಳುತ್ತೇನೆ. "ಉಪ್ಪುತಿಂದವ್ನು ನೀರಡಿಕೆ ಪಡುವ"

ನಮ್ಮ ಡೆಪ್ಯುಟೀಕಮಿಷನರವರು ಹರೆಮೇಜಸ್ಟೀ ಕಿಮಿಯಾದ ಉಡಪಿ ಕುಂದಾಪುರ ತಾಲ್ಲೂಕುಗಳ ಆತಳತವನ್ನು ನೋಡಿಕೊಂಡು ಹಾಲೀ ನಗರಕ್ಕೆ ದಯಮಾಡಿರುತ್ತಾರೆ ಪ್ರಾಯಶಃ ಇವರು ಮಲ್ನಾಡು ತಾಲ್ಲೂಕುಗಳಿಗೂ

ಬುಡೀಳಿಸಿ ಪ್ರಾರ್ಥಿಸುವವರಿವಿಗೂ ಶಿವನೊಗ್ಗ ಗೆ ಹೋಗುವ ಸಂಭವ ಕಾಣುವದಿಲ್ಲವು.

ಇಲ್ಲಿನ ಜನಗಳಿಗೆ ಜ್ವರೋಪದ್ರವವು ಅತಿಶಯವಾಗಿದೆ. ದನಗಳ ನಷ್ಟವಾದರೋ ಯೆಣಿಕೆಯೇ ಇಲ್ಲವು. ಕಟುಗರಿಗೆ ಚರ್ಮ ಸುಲಿಯುವ ಕೆಲಸವೂ, ಲಬ್ಬೆಯವರಿಗೆ ಚರ್ಮಗಳನ್ನು ದೇಶಾಂತರಕ್ಕೆ ಸಾಗಿಸುವ ಕೆಲಸವೂ ತುಂಬಾ ಇರುತದಲ್ಲದೆ ಅವರ ಅದೃಷ್ಟವು ಉನ್ನತವಾಗಿದೆ

ಘನವನ್ನುಹೊಂದಿದ ನಮ್ಮ ಬ್ರಿಟಿಷ್ ರೆಸಿಡೆಂಟರವರು ಮತ್ತು ಚೀಫಜೆಡ್ಜಿಯವರು ಸದಹಿಡಿಸೆಂಬರ್ ತಿಂಗಳಲ್ಲಿ ಬೇಟೆಗೆ (ಗೆಸೇರ ಸುಂಗಫಾಲ್ಸ್) ನೋಡುವದಕ್ಕಾಗಿ ಬರುತ್ತಾರೆಂತ ಮಂಟಪ ಮೊದಲಾದ್ದು ಕಟ್ಟಲು ಆರಂಭವಾಗಿದೆ. ಮತ್ತು ಶೇಕದಾರ್ ಮೊದಲಾದ ಚಿಲ್ಲರೆ ನೌಕರರು ಕಟ್ಟಿಗೆ ಹುಲ್ಲು ವಗೈರೆ ಸಾಮಗ್ರಿ ಜವಾಯಿಸುವ ದರಲ್ಲಿ ಮುತುವರ್ಜಿಯುಳ್ಳವರಾಗಿದಾರೆ. ಯದ್ಯಪಿ ಸರಕಾರಿಯಾಗಿ ಯಾವದೊಂದು ಹುಕುಂ ಇಲ್ಲವಾದಾಗ್ಯೂ ನೌಕರರು ಮುಂಜಾಗರೂಕರಾಗಿರುವದು ಒಳ್ಳೇದಲ್ಲವೆ.

ಅಧಿಕೆ ತೋಟಗಳಿಗೆ ಜಾಸ್ತಿಯಾಗಿ ಕಂದಾಯ ದಾಖಲಾಗಿ ಇರುವದಲ್ಲದೆ ಅಡಿಕೆಗೆ ಸಹ ಹಾಸಲು ತೆಗೆದುಕೊಳ್ಳುವದು ಅನ್ಯಾಯವಾದ್ದರಿಂದ ತೋಟಗಳಿಗೆ ಕಂದಾಯ ಕಡಿಮೆಮಾಡಿ ಕೊಡುವ ಬಗ್ಗೆ ದಿವಾನ್ ಸಾಹೇಬರವರಿಗೆ ಅರ್ಜಿ ಬರೆದುಕೊಳ್ಳುತ್ತೇವೆ ಅದನ್ನ ತಮ್ಮ ಶಿಫಾರಸಿನಿಂದ ರವಾನೆ ಮಾಡಿಸಬೇಕೆಂದು ರೈತರುಗಳು ಒಬ್ಬ ಅಮಲ್ದಾರರನ್ನು ಕೇಳಿಕೊಳ್ಳಲಾಗಿ ಘನವನ್ನು ಹೊಂದಿದ ದೊಡ್ಡ ಸರದಾರರುಗಳ ಗೌರವಕ್ಕೋಸ್ಕರ ಹಾಕಬೇಕಾಗಿರುವ ಮಂಟಪಕ್ಕೆ ನಿಮ್ಮ ತೋಟಗಳಲ್ಲಿರುವ ಅಡಿಕೆ ಮರವನ್ನೆಲ್ಲ ಇನ್ನು ಕೆಲವು ವರುಷಗಳಲ್ಲಿ ನಾವು ಖರೀದಿಗೆ ತೆಗೆದುಕೊಳ್ಳುತ್ತೇವೆ ಆ ತರುವಾಯ ತೋಟಗಳು ಸುಲಭವಾದ ತರೀಕಂದಾಯಕ್ಕೆ ನಿಮಗೆ ದೊರೆಯುವದೆಂದು ಅಮಲ್ದಾರು ಉತ್ತರ ಕೊಟ್ಟರಂತೆ. ಇದು ನಿಜವಾಗಿದ್ದರೆ ಸವಾಲಿಗೆ ಸರಿಯಾದ ಜವಾಬ್ ಆಗಿದೆಯಲ್ಲವೆ?

ಶಿರವಂತಿ, ತಮ್ಮ ವಿಧೇಯನಾದ,

೧೭-೧೨-೮೬. ಬಾತಮಿದಾರ.

. ಮೇಲ್ಕಂಡ ಬಾತಮಿದಾರರ ಕಾಗದದಲ್ಲಿ ತಿಳಿಸಿರುವ ಪೋಲೀಸ್ ವಿಷಯಗಳು ಪ್ರಾಯೇಣ ಎಲ್ಲರೂ ಅರಿತವೇ. ಪೋಲೀಸ್ ಇಲಾಖೆಯವರು ತಾವು ಮಾಡುವ ಮೆಹನತ್ತು ವ್ಯರ್ಥ ಆಗುತ್ತೆಂದು ಹೇಳುವದೂ, ಮ್ಯಾಜಿಸ್ಟ್ರೇಟರು ನ್ಯಾಯಸಾಲದ್ದರಿಂದ ಅಪರಾಧಿಗಳನ್ನು ಖುಲಾಸೆಮಾಡುತ್ತಾರೆಂಬದೂ ಪ್ರಸಿದ್ಧವಿಷಯಗಳಾಗಿರುತಿವೆ ಸದರೀ ಕಾಗದದ ಕಡೆಭಾಗದಲ್ಲಿ ತಿಳಿಸಿದ ಬಾಗಾಯತ್ ಕಂದಾಯವು ಜಾಸ್ತಿ ಎಂಬುವ ವಿಷಯದಲ್ಲಿ ಅಮಲ್ದಾರರ ಜವಾಬ್ ಬಹಳ ತಾರೀಫಾದ್ದು ಅವರ ಹೆಸರನ್ನು ನಮ್ಮ ಬಾತಮಿದಾರರು ದಯವಿಟ್ಟು ಮುಂದಿನ ಸವಾರದಲ್ಲಿ ತಿಳಿಸುವರಾದರೆ, ಅವನ್ನು ಇಂದ್ಯಗೆಜೆಟಿನ ಪ್ರಥಮಪುಟದಲ್ಲಿ ದೊಡ್ಡ ಅಕ್ಷರಗಳಿಂದ ಮುದ್ರಿಸಿ ಪ್ರಕಟಿಸಲಿಕ್ಕೆ ತಕ್ಕ ಪ್ರಯತ್ನ ಮಾಡಬಹುದು. ಬಾಗಾಯತ್ ಮತ್ತು ತರೀಕಂದಾಯಗಳ ತಾರತಮ್ಯವೂ, ರೈತ ಸಂಪಾದಿಸುವ ಕ್ರಮವೂ ಸದರೀ ಅಮಲ್ದಾರರಿಗೆ ಚೆನ್ನಾಗಿ ತಿಳಿದಿವೆಯೆಂಬುವದಕ್ಕೆ ಬೇರೆ ನಿದರ್ಶನವೇನಿಲ್ಲವು. ಮಲೆನಾಡಿನಲ್ಲಿ ಇಂತಾ ಅಮಲ್ದಾರರು ಸೇರಿರುವದರಿಂದಲೇ ಅಲ್ಲಿ ಅಗತ್ಯಕ್ಕ ಬಾಳತಜನಗಳಿರುವರೆ ಅಡಿಕೆ ಮೆಣಸು ಮೊದಲಾದ ಸಸ್ಯೋಪಯೋಗಿ ಸದರೀ ಪದಾರ್ಥಗಳ ಕ್ರಯವು ಒಂದಕ್ಕೆ ಹತ್ತರಷ್ಟು ಹೆಚ್ಚಲಿಕ್ಕೆ ಕಾರಣವಾಯಿತು. ಇನ್ನೂ ಇಂತ ವರು ಕೆಲವರು ಸೇರಿದರೆ ಮಲೆನಾಡು ಮೈದಾನಾಗಲಿಕ್ಕೇನೂ ಸಂದೇಹವಿಲ್ಲವು—ಎಡಿಟರ್. ಕ. ಪ್ರ.

SUMMARY OF NEWS
ವೃತ್ತಾಂತ ಸಂಗ್ರಹವು.

ಬುಖಾರದ ಅಮೀರನ ಅಳಿಯ ಸಹೋದರನ ರಷ್ಯಾದವರ ಒಂದು ಪಟಾಲಮಿನೊಳಗಿನ ಅಮಲ್ದಾರನಾಗಿದಾನೆ. ಅವನು ರಜಾಮೇಲೆ ಕೆಲವು ದಿವಸ ಸ್ವದೇಶಕ್ಕೆ ಬಂದವನು ತನ್ನ ಚಿಕ್ಕತಂದೆಯ ಇಬ್ಬರು ಮಕ್ಕಳಸಂಗಡ ಮರಳಿ ರಷ್ಯಾದೇಶಕ್ಕೆ ಹೊರಟು ಹೋದನಂತೆ.

ಚೀನಾದೇಶದಲ್ಲಿ ಕ್ಯಾಂಟನ್ ಎಂಬ ಪಟ್ಟಣದ ಗವರ್ನರವರು ಸೂಳೆಯರ ಪೋಷಾಕಿನ ವಿಷಯವಾಗಿ ಕಟ್ಟಳೆಮಾಡಿದ್ದಾರೇನಂದರೆ-ಈ ಸ್ತ್ರೀಯರು ತೆಲೆಯ ಟೋಪಿ ಮತ್ತು ಕಸೇರದ ಪೋಷಾಕ ಇತರ ಸ್ತ್ರೀಯರು ಉಪಯೋಗಿಸುವಂತಾ ಬಣ್ಣದ್ದು ಧರಿಸಬೇಕು. ಅವರು ತಮ್ಮ ಮನೆಯ ಹೆಬ್ಬಾಗಿಲನ್ನು ೭ ಫೂಟು ಎತ್ತರ, ೩ ಫೂಟು ಅಗಲ ಇಡಬೇಕು

ರಾಕ್ಷಸಾಕೃತಿಯಶಿಖರವು—ಕೊಲ್ಲೂರುದೇವಸ್ಥಾನದ ಸಮೀಪ ನಿಂತು ಅದರ ಪೂರ್ವದಿಕ್ಕಿಗಿರುವ ಕೋಟಿಶ್ಯಾದ್ರಿ ಪರ್ವತದ ಒಂದು ಶಿಖರವನ್ನು ನೋಡಿದರೆ ಗಂಟ್ಲು, ಗದ್ದ, ಮೂಗು, ತುಟಿ, ದವಡೆ, ಕಣ್ಣು, ಕಿವಿ, ಹುಬ್ಬು, ಮುಂದಲೆ, ಹೆಡಿತಲೆ ಮುಂತಾದ್ದುಳ್ಳ ರಾಕ್ಷಸ ಮುಖವಾಗಿ ಭಾವನೆಯಾಗುತದೆ. ಅಮ್ಮನವರು ಆ ಕೋಟಿಶ್ಯಾ ಯೆಂಬ ರಾಕ್ಷಸನನ್ನು ಸಂಹರಿಸಿ ಆ ಪರ್ವತದಲ್ಲಿ ಡ್ಡಾರೆಂದು ಅಲ್ಲಿಯ ಟೋಳೆ ಭಾವಿಕರು ನಂಬುತ್ತಾರೆ.

ಕಾರ್ವಾಸ ಖುಷಾಲ್—ಪ್ರತಿದಿನ ಸಾಯಂಕಾಲ ಇಲ್ಲಿಯ ಹೆಣ್ಣುಹುಡಿಗಿಯರ ಶಾಲೆಯ ವಿದ್ಯಾರ್ಥಿನಿಯರು ಕಲೆಕ್ಟರ್ ಕಚ್ಚೇರಿಯ ಮುಂದಿನ ಮೈದಾನದಲ್ಲಿ ಚೆಂಡಿನ ಆಟವನ್ನು ಆಡುತ್ತ ಆ ಶಾಲೆಯ ಉಪಾಧ್ಯಾಯನಿಯಳು ಸಹ ತನ್ನ ಇಬ್ಬರ ಅಸಿಸ್ಟೆಂಟರೊಡನೆ ಹಾಜರಿರುತ್ತಾಳೆ. ಈ ಖುಷಾಲ್ ನಡೆಯಲಿಕ್ಕೆ ಸುರುವಾಗಿ ಒಂದು ವಾರವಾಯಿತು. ಆದರ ಹತ್ತರವೇ ಇನ್ನೊಂದು ಬದಿಯಲ್ಲಿ ಚಿಕ್ಕಹುಡುಗರ ಆಟವು ನಡೆದಿರುತದೆ. ಖುಷಾಲಿಗಾರರ ಹಾಗೂ ನಿರುದ್ಯೋಗಿ ಜನರ ಸಮೂಹವು ಈ ಕೌತುಕ ನೋಡುವದಕ್ಕೆ ನೆರದೇ ನೆರೆಯುತದೆ. ಧಾ. ವೃ

ಮೆಕ್ಸಿಕೋ ಯೆಂಬ ಪಟ್ಟಣದೊಳಗೆ ಒಂದು ದೇವರ ಮೂರ್ತಿ ಇರುತದೆ. ಅದು ಜಗದೊಳಗಿನ ಎಲ್ಲಾ ಮೂರ್ತಿಗಳಗಿಂತಲೂ ದೊಡ್ಡದು ಅಂದರೆ ೩೬ ಫೂಟ ಎತ್ತರ, ೧೮ ಫೂಟ ಘೇರರ ಮತ್ತು ೧೮ ಫೂಟ ಅಗಲ ಈ ರೀತಿ ಇದ್ದು ೧೦೦ ಟನ್ನಿನ ಭಾರ ಇರುತದೆ. ಇದು ಒಳಗ ಪೊಳ್ಳಾಗಿರುವದರಿಂದ ಅರ್ಧ ಚಟ್ಟೆಯಲ್ಲಿಯು ನೀರು ತುಂಬಲಿಕ್ಕೆ ನಡಿಸುತ್ತಾರಂತೆ. ಪಂಗೂ ಮಳೆಗಾಲದಲ್ಲಿ ಮಳೆ ಬಾರದಿದ್ದರೆ ಅಲ್ಲಿಯ ಜನರಿಗೆ ಮಳೆಯನ್ನುಂಟುಮಾಡುವ ಸಜ್ಜನದೇವರೆ ಯೆಂದು ಆ ದೇಶದ ಜನರು ತಿಳಿದುಕೊಂಡಿರುತ್ತಾರಂತೆ.

ಅನೇಕ ಹಿಂದೂಜನರು ಏನೂ ಕಾರಣವಿಲ್ಲದವಾದದೆ ತುಪ್ಪ ಮತ್ತು ಸಕ್ಕರೆ ಭಕ್ಷಗಳನ್ನು ಅನುದಿನವೂ ಮಿತಿಮೀರಿ ಸ್ವೀಕರಿಸುವದು ನೋಡುವಾಗ್ಗೆ ಬಹುಮೂತ್ರಾದಿ ಮಹಾರೋಗಗಳು ಅವರಲ್ಲಿ ಹೆಚ್ಚಾಗಿಬಂದದ್ದು ಏನೂ ಆಶ್ಚರ್ಯವಲ್ಲ. ಒಬ್ಬರು ಇಂಗ್ಲಿಷ ಗ್ರಂಥಕರ್ತರು ಒಂದು ದಿವಸಕ್ಕೆ ಆಮಂತ್ರಣ ಹೊಂದಿ ಅಲ್ಲಿ ಮೇಜಿನಮೇಲಿಟ್ಟ ಭಕ್ಷಗಳನ್ನು ಕಂಡು ಅಹೋ ಈ ಒಂದೊಂದು ಪಿಂಗಾಣಿಯಲ್ಲಿ ಎಷ್ಟು ರೋಗಗಳುಂಟು ಅಂದಿದ್ದರಂತೆ. ಈ ಬುದ್ಧಿಮಾತನ್ನು ದೇಶಳಗೆ ಗುಳ್ಳೇರಿಗೆ ಹಾಯಿಸು ಇತ್ಯಾದಿ ಉಪಾಸಕರು ನೆನಪಿನಲ್ಲಿಟ್ಟುಕೊಳ್ಳಲಿ, ಸುದರ್ಶನ.

ಅಹಮದನಗರದ ಒಬ್ಬ ಗೃಹಸ್ಥನ ಎಂಟುವರುಷದ ಹುಡಿಗಿಯ ಗಂಡನು ಶಿವಾಧೀನನಾದನಂತರ ಅವಳಿಗೆ ವಪನ ಮಾಡುವಪ್ರಸ್ತದಲ್ಲಿ ಅವಳು ಓಡಿಹೋಗಿ ಯೆಲ್ಲಿಯೂ ಆಶ್ರಯ ಸಿಕ್ಕದೆ ಅಲ್ಲಿಯ ಸುಧಾರಣಾಸಭೆಯ ಮಂಡಳಿಯ ಅಧ್ಯಕ್ಷ ಲಾಲ್ ಶಂಕರ ಎಂಬವರ ಮನೆಹೊಕ್ಕಳು. ಕೂಡಲೇ ಅವನು ಅವಳಿಗೆ ಟಿಕ್ಕೆಟ್ ತೆಗೆಸಿಕೊಟ್ಟು ಮುಂಬ್ಯೆಗೆ ಕಳುಹಿಸಿದನು. ಈಗ ಇಲ್ಲಿ ಅವಳು ತನ್ನ ಮಿತ್ರನನ್ನು ಲಗ್ನಮಾಡಿಕೊಳ್ಳಬೇಕೆಂಬ ರಹವಿಷ ಮಾಡಿದಾಳೆ. ಅಹಮ್ಮದನಗರದಲ್ಲಿ ಆ ಬಡ ತಂದೆಯು ಅಲ್ಲಿನ ಬ್ರಾಹ್ಮಣರು ಅವನ ಮಗಳಿಗೆ ಶಾಸ್ತ್ರವಿರುದ್ಧವಾಗಿ ನಡೆಯಲಿಕ್ಕೆ ಆಸ್ಪದ ಕೊಟ್ಟದ್ದರಿಂದ ಬಹಿಷ್ಕರಿಸಲ್ಪಟ್ಟದ್ದಾನೆ ಅವನು ಲಾಲಶಂಕರ ಯೆಂಬವನಮೇಲೆ ತನಗೆ ಆದ ಅಪಮಾನಿಗೋಸ್ಕರ ಚಾರ್ಜ ತಂದಿದಾನೆ ಸ್ತ್ರೀಯರಿಗೆ ಸ್ವಾತಂತ್ರ್ಯಸಿಕ್ಕದೆ ಇಷ್ಟು ಮಾಡುತ್ತಾರೆ, ಸಿಕ್ಕಿದರೆ ಏನೇನು ಮಾಡ್ಯಾರು?

ಅದ್ವೈತ ಏನೆಂಬದು ಈಚೆಗೆ ಒಬ್ಬ ವೈರಾಗಿಯಿಂದ ದೃಷ್ಟಾಂತವಾಯಿತು ಒಬ್ಬ ಅರಸನಿಗೆ ಪಟ್ಟವಾಗಿ ಅವನು ಆನೆಯಮೇಲೆ ನಗರ ಪ್ರದಕ್ಷಣ ಮಾಡುತಿದ್ದನು. ಅರಣ್ಯದಿಂದ ಆಗಲೇ ಅಲ್ಲಿ ತಪ್ಪಿದ ಆ ವೈರಾಗಿಯು ಒಬ್ಬ ಗೃಹಸ್ಥನು ಕುರಿತು «ಇದೇನು?» ಅಂದನು. «ಇದನಿಗೆ ಪಟ್ಟವಾಯಿತು?» ಯೆಂದು ಗಹಸ್ತನು ಹೇಳಿದನು ವೈ|| ಅರಸನ್ಯಾರು? ಗೃ|| ಆನೆಯಮೇಲಿರುವವನು. ವೈ|| ಆನೆಯಾವದು? ಗೃ|| ಅರಸನ ಕೆಳಗಿರುವದು. ವೈ|| ಮೇಲೆ ಅಂದರೇನು? ಕೆಳಗೆ ಅಂದರೇನು? ಗೃಹಸ್ಥನು ಸಿಟ್ಟುಮಾಡಿ ವೈರಾಗಿಯ ಕುತ್ತಿಗೆಯಮೇಲೆ ಹತ್ತಿ ನಾನುಮೇಲೆ ನೀನು ಕೆಳಗೆ ಅಂದನು. ವೈರಾಗಿಯು ತಾಳ್ಮೆಯಿಂದಲೇ ನಾನು ಅಂದರೇನು? ನೀನು ಅಂದರೇನು? ಅಂದನು ಗೃಹಸ್ಥನೂ ಸುತ್ತುಮುತ್ತಲಿನ ಜನರೂ ಇವನು ಯಥಾರ್ಥ ಅದ್ವೈತಿ ಯೆಂದು ವೈರಾಗಿಗೆ ಸನ್ಮಾನಿಸಿದರು, ಸುದರ್ಶನ

ಸೋಲಾಪುರದಲ್ಲಿ ಒಂದು ಸೇತುವೆಯಮೇಲಿ ಬಹುದಿವಸದಿಂದ ಒಂದುಭೂತವು ಅದರಮೇಲಿಂದ ಸಂಚರಿಸುವ ಯಾತ್ರಿಕಜನರನ್ನು ಪೀಡಿಸುತ್ತಿತ್ತಲ್ಲವೆ, ಇದರನ್ನು ನೋಡಿ ಕೆಲವು ಜನರು ಪ್ರಾಣಬಿಟ್ಟರು ಇದನ್ನು ಪರೀಕ್ಷಿಸಬೇಕೆಂಬ ಮನದಿಂದ ಇಬ್ಬರು ಇಂಗ್ಲಿಷರವರು ರಾತ್ರಿ ವೇಳೆಯಲ್ಲಿ ಅಲ್ಲಿಹೋಗಿ ಅವಿತು ಕೂತರು ರಾತ್ರಿ ೧ಘಂಟೆಯಾದಕೂಡಲೇ ಯಾರೋ ಒಬ್ಬ ಸ್ಥೂಲಕಾಯದವನು ಕಾಲಲ್ಲಿ ಯೇನೋ ಕಟ್ಟಿಕೊಂಡು ರಸ್ತೆಯಲ್ಲಿ ಬರುವದನ್ನು ಇವರು ನೋಡಿ ಇದೇ ಭೂತವಿರಬಹುದೆಂದು ತಿಳಿದು ಅವರಲ್ಲೊಬ್ಬನು ಬಂದೂಖಿನಿಂದ ಹೊಡೆದನು ಆ ಧ್ವನಿಯನ್ನು ಕೇಳಿ ಆ ಮಾರಕಾಲಿನ ಭೂತವು ಹೆದರಿ ಕೆಳಗೆ ಬೀಳಲು ಕಾಲಿಗೆ ಕಟ್ಟಿದ ಮರದಕಾಲು ಮುರಿದುಹೋಯಿತು. ಅನಂತರ ಬೇಗ ಓಡಲು ಸಾಧ್ಯವಾಗಲಿಲ್ಲ. ಆ ಕೂಡಲೇ ಇವರು ಅವನನ್ನು ಹಿಡಿದು ಪೋಲೀಸರವರ ವಶಮಾಡಿದರು ಮುಂದಕ್ಕೆ ಮಸಿ ಬಳಿದು ಕೂದಲು ಬಿಡಿಸಿ ಕೊಂಡು ಭೂತವೇಷಧಾರಿ ದಾರಿಗರನ್ನು ಬೆದರಿಸಿ ತಂದ ಹಣವೆಲ್ಲ ಕರಗುವ ಕಾಲಬಂತು.

ಪಿರುವದಿ ಇಸ್ಕೂಲಿನ ಮತ್ತು ಸುಜ್ಞಾನಪೋಷಕ ಸಭೆಯವರು ಹೇಳಿದ ಉಪನ್ಯಾಸವು ಬಹಳ ಶ್ಲಾಘ್ಯವಾಗಿಯೇ ಇದೆ, ಇದಕ್ಕನುಕೂಲವಾಗಿ ಮೇ ನಾನು ಕೊಂಚ ಹೇಳುತ್ತೇನೆ.

ನಮ್ಮ ಹಿಂದೂರಾಜ್ಯ ದ್ವೀಪಾಂತರವಾಸಿಗಳಾದ ಇಂಗ್ಲಿಷರವರ ಆಳ್ವಿಕೆಗೆ ಬಂದದಕ್ಕೂ ನಾವು ಇಷ್ಟು ವ್ಯರ್ಥಹೀನರಾಗಿ ನಿರ್ಧನರಾಗಿ ಅವರಲ್ಲೇ ಸೇವಾವೃತ್ತಿಯನ್ನು ಮಾಡುತ್ತಾ ಇರುವದಕ್ಕೂ ನಮಗೆ ಬೇಕಾದ ಸಾಮಗ್ರಿ ಇಲ್ಲ ಅವರಿಂದಲೇ ಕೊಂಡುಕೊಳ್ಳುವದಕ್ಕೂ ನಮ್ಮ ವಿದ್ಯಾಭ್ಯಾಸವಿಲ್ಲದೆ ಹೋಗಿರುವದೇ ಮುಖ್ಯ ಕಾರಣವಾಗಿದೆ. ನಮ್ಮ ವೇದಗಳಲ್ಲಿ ಎಲ್ಲಾ ಸಂಗತಿಗಳು ಸ್ಪಷ್ಟವಾಗುತಲಿದೆ, ಆವೇದಗಳು ದುರವಗಾಹವಾಗಿದ್ದುದರಿಂದ ಮನ್ವಾದಿಗಳು ಆ ಅರ್ಥವನ್ನೇ ಸ್ಮೃತಿರೂಪವಾಗಿ ಹೇಳಿದರು. ಆ ಸ್ಮೃತಿಗಳ ಅರ್ಥತಿಳಿಯಲಿಕ್ಕೆ ಸಹ ನಮ್ಮ ಜನಗಳು ಅಸಮರ್ಥರಾದರು, ಅನಂತರ ಅದೇ ಅರ್ಥವನ್ನೇ ಇಟ್ಟು ವ್ಯಾಸಾದಿ ಮಹರ್ಷಿಗಳು ಭಾರತಾದಿ ಪುರಾಣಗಳನ್ನ ಮಾಡಿದರು ಆ ಪುರಾಣಾರ್ಥಗಳನ್ನ ತಿಳಿಯುವದಕ್ಕು ಸಹ ಜ್ಞಾನವಿಲ್ಲದವರಾದರು. ಈಚಗೆ ಕೆಲವರು ಅದೇ ಅರ್ಥವನ್ನೇ ಸಣ್ಣ ಸಣ್ಣದಾಗಿ ಭಾಷಾಂತರಗಳಲ್ಲಿ ಸಹ ಗ್ರಂಥಗಳನ್ನು ಮಾಡತೊಡಗಿದರು. ಈಗಿನ ಜನಗಳು ಕೇವಲ ಅರ್ಥಕಷ್ಟರರಾಗಿ ಆ ಸಣ್ಣ ಗ್ರಂಥಗಳನ್ನು ಸಹ ನೋಡುವದೇ ಬಿಟ್ಟುಬಿಟ್ಟರು ಅಂದೂ ಹೀಗೆ ಕೆಲವು ದಿನಗಳು ನಡೆದಬಳಿಕ ನಮ್ಮ ಸ್ವಭಾಷೆ ಅಂದರೆ, ಸಂಸ್ಕೃತವು ಮತರಾಂ ಕ್ಷೀಣವಾಗುತಬಂತು. ಸಣ್ಣದಾಗಿ ಭಾಷಾಂತರಗಳಿಂದ ಮಾಡಲ್ಪಟ್ಟಿರುವ ಗ್ರಂಥಗಳನ್ನ ನೋಡುವದಕ್ಕೆ ಅವುಗಳಲ್ಲಿ ಗೌರವ ಕಡಿಮೆಯಾಗಿದೆ. ಸಂಸ್ಕೃತದಲ್ಲಿರತಕ್ಕ ಗ್ರಂಥಗಳನ್ನ ನೋಡುವದಕ್ಕೆ ಜ್ಞಾನಸಾಲದವಾಯಿತು ಹೀಗೆ ಆದದರಿಂದಲೇ ನಮ್ಮ ಗೌರವಕ್ಕೆ ಹಾನಿಬಂತು. ನೀತಿಯು ಕಡಿಮೆಯಾಯಿತು ಐಶ್ವರ್ಯವು ತಗ್ಗುತ್ತಬಂತು. ದಾರಿದ್ರ್ಯವೆಂಬುವದು ಅಪಾರವಾಗಿ ನಮ್ಮಲ್ಲೇ ನೆಲಗೊಂಡಿತು. ದರಿದ್ರಲಕ್ಷ್ಮಿಗೆ ನಿಲಯರೂಪರಾದ ನಮ್ಮಿಂದ ಏನೇನು ಕೆಲಸಗಳಾದೀತು. ನಿರ್ಧನಪುರುಷಃ ಶವಸಮಾನಃ ಯೆಂಬುವದು ನಮಗೆ ಹೇಳಲಾಯಿತು. ಈ ರೀತಿಯಿಂದಲೇ ಬಹಳ ಕಾಲ ಕಳೆಯುತ ಬಂತು ಈಚೆಗೆ ಸ್ವಲ್ಪಮಟ್ಟಿಗೆ ಯೆಚ್ಚರಗೊಂಡಿರುವ ನಾವುಗಳೆಲ್ಲರೂ ಸಂಸ್ಕೃತವನ್ನು ವೃದ್ಧಿಪಡಿಸಿ ನಮ್ಮ ಹಿಂದೂ ಗ್ರಂಥಗಳನ್ನ ವೃದ್ಧಿಗೆ ತಂದರೆ ನಮ್ಮ ಪೂರ್ವಿಕರಿದ್ದ ಒಳ್ಳೇರೀತಿಯಲ್ಲಿ ಕೊಂಚವಾದರೂ ನಮಗೆ ಅವಕಾಶಸಿಕ್ಕೀತೆಂಬದಾಗಿ ವಗೈರೆ ಕೆಲವು ಉಪನ್ಯಾಸಗಳನ್ನು ಹೇಳಿ ಮುಗಿಸಿಕೊಂಡರು.—ವಿಜಯಧ್ವಜ.

ಈ ಡಿಸೆಂಬರ್ ತಾರೀಖ್ ೧೬ರಲ್ಲಿ ಈ ಬಳ್ಳಾರಿಯೊಳು ಏರ್ಪಾಟಾಗಿರುವ ಅಸೋಸಿಯೇಷನ್ ಎಂಬ ಸಭಾಪ್ರದೇಶದಲ್ಲಿ ಮದರಾಸಿನಿಂದ ಬಂದಿರುವ ಸುಜ್ಞಾನಪೋಷಕ ಸಭೆಯವರು ಬಾದುರಾಗ್ರಾಮದಲ್ಲಿರುವ ಕೆಲವರು ವರ್ತಕರೂ, ಅನೇಕಜನ ದೊಡ್ಡಮನುಷ್ಯರೂ, ದೊಡ್ಡ ಉದ್ಯೋಗಸ್ಥರನ್ನು ಸಹ ಸೇರಿಸಿ ಆ ಸಭೆಯಲ್ಲಿ ನಡೆಸಿದ ಉಪನ್ಯಾಸವೇನಂದರೆ—ನಮ್ಮ ಹುಡುಗರಿಗೆ ಯೋಗ್ಯವಾದ ನೀತಿಗಳೂ, ಒಳ್ಳೆಯನಡತೆಗಳು ಮುಂತಾದ್ದನ್ನು ನಾವು ಕಲಿಸದೇ ಇದ್ದುದರಿಂದ ನಮ್ಮ ಮಕ್ಕಳು ಕೆಟ್ಟು ಹೋದದ್ದಕ್ಕೆ ಕಾರಣವಾಯಿತು ಬಾಲ್ಯದಾರಭ್ಯಾದಿ ಕೇವಲ ಇಂಗ್ಲಿಷವಿದ್ಯದಮೇಲೆ ಪ್ರೀತಿ ಇಟ್ಟು ಇದರ ಸಂಗತಿಗಳನ್ನು ತಿಳಿಸದೇಲೆ ಶೀಘ್ರವಾಗಿ ದೊಡ್ಡ ವ್ಯಾಸಂಗಗಳು ಆಗಬೇಕೆಂತ ಆಲೋಚಿಸುವದು ಕೇವಲ ಅರ್ಧವಾಶೆಯಿಂದ ಮಾಡುವಂತಾದ್ದೇಸರಿ. ನಮ್ಮ ಹಿಂದೂ ಮತಸಂಬಂಧವಾದ ಗ್ರಂಥಗಳು ಓದಬೇಕೆಂಬ ಇರಾದೆ ನಮಗೇನೇ ಇಲ್ಲವಾದರೆ ನಮ್ಮ ಹುಡುಗರಿಗೆ ಯಾಕೆ ಬಂದೀತು. ನೀತಿವಂತರಾಗಿಯೂ, ಸತ್ಯವಂತರಾಗಿಯೂ ಸ್ವೈರ್ಯವಂತರಾಗಿಯೂ ಇರಬೇಕಾದರೆ ನಮ್ಮ ಹಿಂದೂ ಶಾಸ್ತ್ರಾಭ್ಯಾಸ ಮಾಡಿದ ಹೊರತು ಆಗುವದಿಲ್ಲ ಹೀಗೆ ಮಾಡದಿದ್ದದರಿಂದ ನಮ್ಮ ದೊಡ್ಡವರು ನಮಗೆ ಇಟ್ಟು ಜ್ಞಾನತ್ವವನ್ನುಂಟುಮಾಡಿದರೂ ನಾವು ಈಗಲೂ ಇದೇರೀಯಲ್ಲಿದ್ದರೆ ಮುಂದೆ ನಮ್ಮ ಹುಡುಗರು ನಮಗಿಂತಲೂ ಹೀನತ್ವವನ್ನು ಹೊಂದುವರು ಇಂಗ್ಲಿಷ್ ಪ್ರಭುತ್ವದವರು ಇಲ್ಲಿಗೆ ದಯಮಾಡಿದ ಆಗಾರಭ್ಯ ನಮಗೆ ಇಂತಾ ದುರ್ಬುದ್ಧಿ ಹುಟ್ಟಿ ನಮ್ಮ ಗ್ರಂಥಗಳನ್ನು ಬಯಲ್ತಬರುವದಕ್ಕೆ ಕಾರಣವಾಯಿತು. ಇದೇ ನಮ್ಮ ಹೀನದಶೆಗೆ ಮುಖ್ಯವಾದ ಕಾರಣವಾಗಿದೆ. ಇಂಗ್ಲಿಷರವರು ನಮ್ಮನ್ನು ನೋಡಿ ಅನೇಕ ಕೈಗಾರಿಕೆ ಕೆಲಸಗಳನ್ನೂ ಅನೇಕವಾದ ನಮ್ಮ ಗ್ರಂಥಗಳನ್ನು ಕಲಿತುಕೊಂಡರೆಂಬುವದಕ್ಕೆ ಯೇನೂ ಸಂಶಯವಿಲ್ಲವು ಬುದ್ಧಿಹೀನತೆಯಿಂದ ನಮ್ಮ ಸ್ಥಿತಿಯು ಹೀನವಾಯಿತು, ಬಾಲ್ಯದಿಂದ ಅವರವು ಶ್ಲಾಘ್ಯವಾಯಿತಾದ್ದರಿಂದ ನಾವು ಒಳ್ಳೇರೀತಿಯಲ್ಲಿದ್ದು ನಮ್ಮ ಮಕ್ಕಳನ್ನು ಚೆನ್ನಾಗಿ ಶಿಕ್ಷಿಸಿದರೆ ಅವರು ಉತ್ತಮಾವಸ್ಥೆಗೆ ಬರುತ್ತಾರೆ. ಹೀಗೆ ಮಾಡದೆ ಹೋಗುವದರಿಂದ ನಮಗೆ ಪಾಪವು ಸಹ ಉಂಟು. ಅಜ್ಞಾನಿಗಳಾದ ಬಾಲಕರನ್ನು ಒಳ್ಳೇರೀತಿಗೆ ತಾರದೆ ಹೋದರೆ ಅವರುಗಳಿಂದ ಏನೇನೂ ತಪ್ಪಿಲ್ಲ, ಆ ದೋಷವು ನಮ್ಮದೇಸರಿ. ಆದ್ದರಿಂದ ನಾವೆಲ್ಲರೂ ದಯೆಯಿಂದ ಹುಡುಗರನ್ನ ಬುದ್ಧಿವಂತರಾಗಿ ಮಾಡುವದೆಂಬದಾಗಿ ವಗೈರೆ ಕೆಲವು ಉಪನ್ಯಾಸವನ್ನು ಹೇಳಿ ಸುಮ್ಮಗೆ ಆದರು. ಆ ತರುವಾಯ ಮಹಾರಾಜಶ್ರೀ ವಕೀಲ್ ಕೃಷ್ಣಮಾಚಾರ್ಯರವರು ನಿಂತುಕೊಂಡು ಉಪನ್ಯಾಸವನ್ನು ಹೇಳ ತೊಡಗಿದರು.

BANGALORE.—Printed and published for the Proprietor, at the KARNATIC PRESS.—1886.